ಕೊಡಗು

KODAGU KANNADA WEEKLY MERCARA

ವಾರದ ಕಥೆಗಳು.

೧. ಪ್ರತಿಧ್ವನಿಯ ನಿಯಮ.

ನಾನು ಸಣ್ಣ ಹುಡುಗನಾಗಿದ್ದಾಗ ಒಂದು ದಿನ ಶಾಲೆಯಲ್ಲಿ ಒಂದು ಜಗಳದಲ್ಲಿ ಸಿಲುಕಿಕೊಂಡೆ. ನನ್ನ ದೇಹವೂ ಮನಸ್ಸೂ ಬೆಂದುಕೊಂಡಿದ್ದುದು ಈಗಲೂ ಸ್ಪಷ್ಟವಾಗಿ ನೆನಸಿದೆ.

ನನ್ನ ಎದುರಾಳಿಯು ಭೇಟಿಯಾಗುವ ಮುಂದಿನ ಸಂದರ್ಭದಲ್ಲಿ ನಾನು ಮೊದಲು ವ್ಯಕ್ತನಾದುನರ ಬೆದರಿಕೆಗಳನ್ನು ನಾನು ಮನೆ ಸೇರಿದ ಮೇಲೂ ಗುಣುಗುಣಿಸುತ್ತಿದ್ದೆ. ಶಾಲೆಯ ಕೆಲವು ಹಿರಿಯ ಹುಡುಗರು, "ತಿಗೌರಶಿಯು ಗಂಡು ಸತ್ವದ ಗುರುತು," ಎಂದು ಭಾವಿಸುತ್ತಿದ್ದರು. ಅಂಥವರಿಂದಲೇ ನನ್ನ ಶಬ್ದ ಸಂಪತ್ತಿಯನ್ನು, ಅಂಶಮಾತ್ರವಾದರೂ, ನಾನು ಗಳಿಸಿದ್ದಿರಬೇಕು.

ನನ್ನ ತಾಯಿಯು ವಿಶೇಷ ಗಮನವನ್ನೂ ಕೊಡುವಂತೆ ತೋರಿಸಿ ಕೊಳ್ಳದೆ, ಅವಳ ಸ್ವಾಭಾವಿಕ, ಪ್ರಶಾಂತ ರೀತಿಯಲ್ಲಿ ತನ್ನ ಕೆಲಸಗಳನ್ನು ಮಾಡುತ್ತಲೇ ಇದ್ದಳು.

ಆದರೆ ಮರು ದಿವಸ ಹಳ್ಳಿಗಾಡಿನಲ್ಲಿ ನಮ್ಮ ಮನೆಯವರ ಬಯಲೂಟದ ಸಮಯದಲ್ಲಿ ಅವಳು ನನ್ನನ್ನು ಪಕ್ಕಕ್ಕೆ ಕರೆದಾಗ ನನಗೆ ಆಶ್ಚರ್ಯವಾಯಿತು. ಅವಳು ಹೇಳಿದಳು 'ಲೂವಿಸ್, ಇತ್ತ ಬಾ. ನಿನಗೆ ಏನೋ ಒಂದು ತೋರಿಸಬೇಕೆಂದಿದ್ದೇನೆ.'

ಕೆನಡಾದ ನ್ಯೂ ಬರ್ನ್‌ಸ್ವಿಕ್ ಬಳಿಯ ಆ ಹಳ್ಳಿ ಪ್ರದೇಶವು, ಸುತ್ತಲೂ ಒರಟೊರಟಾದ ಉನ್ನತ ಬೆಟ್ಟಗಳಿರುವ ಒಂದು ರಮಣೀಯ ಕಣಿವೆಯಲ್ಲಿದ್ದು, ಪ್ರತಿಧ್ವನಿಗೆ ಅನ್ವರ್ಥವಾಗಿತ್ತು. ನನ್ನ ತಾಯಿಯು ನನ್ನನ್ನು ಆ "ಬೆಟ್ಟದ ಗೋ... ಎದುರಿಸುವ ಒಂದು ಸ್ಥಳಕ್ಕೆ ಕರೆದೊ...

"ಲೂವಿಸ್, ನಿನ್ನೆ ನೀನು ಹೇಳಿದುದನ್ನು ನಾನು ಕೇಳಿರುವಂತೆ, ಈಗ ಹೇಳು,,

ನಾನು ಪೇಚಿನಲ್ಲಿ ಸಿಲುಕಿದೆ. "ನನಗೆ ನೆನಪಿಲ್ಲ" ಎಂದು ಹೇಳಿದೆ.

ನನ್ನ ತಾಯಿಯು ನಿವಾದಾಂಶವನ್ನು ಹೊರಳಿಸಿ ನೂತನ ಪದವನ್ನಲ್ಲ. ಅವಳು ಹೇಳಿದಳು "ನನಗೆ ನೆನಪಿದೆ. 'ಹಾಳಾಗಿ ಹೋಗು, ಎಂದು ನೀನು ಹೇಳಿದ್ದಿ.'

ನಾನು ಒಪ್ಪಿಕೊಂಡೆ. ಹೌದು, "ಈಗ ನೆನಪಾಯಿತು."

ಅವಳು ಆಜ್ಞಾಪಿಸಿದಳು. "ಈಗ ಅದನ್ನು ಹೇಳು"

ನಾನು ಅದನ್ನು ಅವಸ್ಥೆ ಸೌಮ್ಯದಿಂದ ಅನುಕರಿಸಿದೆ.

ಆ ಶಬ್ದಗಳು ಪ್ರತಿಧ್ವನಿಯಾಗಿ, ಬೆಟ್ಟ ಬೀಳಿಸುವ ಧ್ವನಿಯು ತುಂಬುವಿನಲ್ಲಿ ಮರಳಿ ಉರುಳಿದವು

"ಗಟ್ಟಿಯಾಗಿ ಮಗೂ, ಅದನ್ನು ಇನ್ನೂ ಗಟ್ಟಿಯಾಗಿ ಹೇಳು! ನೀನು ಹೇಳುವದನ್ನು ನಿನ್ನಿಂದ ಕೂಡಿದಷ್ಟು ಗಟ್ಟಿಯಾಗಿ ಹೇಳಲು, ಎಲ್ಲರಿಗೂ ಕೇಳಿಸುವಂತೆ ಗಟ್ಟಿಯಾಗಿ ಕೂಗಲು, ನೀನು ಸಿದ್ಧವಾಗಿರಬೇಕು!"

ಹಾಗೆ ಮಾಡುವದು ನನಗೆ ಬೇಕಾಗಿರಲಿಲ್ಲ. ಆದರೆ, ನನ್ನ ತಾಯಿಗೆ ಅವಿಧೇಯನಾಗಿರುವದು ನನ್ನ ಮನಸ್ಸಿಗೆ ಬರಲಿಲ್ಲ. ಆದುದರಿಂದ ಆ ಬೆಟ್ಟಗಳನ್ನೆದುರಿಸಿ, 'ನೀನು ಹಾಳಾಗಿ ಹೋಗು,'' ಎಂದು ನನ್ನ ಶ್ವಾಸ ಕೋಶದ ಬಲವನ್ನೆಲ್ಲ ಹಾಕಿ ಕೂಗಿದೆ.

ಆ ಕೂಗು ಸಿಡಿಲಿನಂತೆ ಮರಳಿ ಬಂತು. ಒಂದು ಆಕಾಶವಾಣಿಯಂತೆ ಅದು ನನ್ನನ್ನು ದೂಷಿಸಿತು.

"ಈಗ ನೋಡು," ನನ್ನ ತಾಯಿಯು ಹೇಳಿದಳು, ,,ಜೀವನವು ಇದೇ ರೀತಿ ಇರುವದು. ನಾವು ಅದಕ್ಕೆ ಹೇಳುವದನ್ನೇ ಅದು ನಮಗೆ ಹಿಂತಿರುಗಿಸುತ್ತದೆ. ಜನರಿಗೆ ನೀನು ಹೇಳಿದುದನ್ನೇ ಅವರು ಮರಳಿ ನಿನಗೆ ಕೂಗುವರು. ನೀನು ಜೀವನಕ್ಕೆ, ಮನುಷ್ಯ ಸ್ವಭಾವಕ್ಕೆ, 'ನೀನು ಧನ್ಯನಾಗು,' ಎಂದು ಹೇಳಿದರೆ, ಆಗ ನಿನ್ನ ಜೀವನವು ಅದೇ 'ನೀನು ಧನ್ಯನಾಗು' ಎಂಬ ಶಬ್ದಗಳ ಪ್ರತಿಧ್ವನಿಯಾಗುವದು...."

"ಲೂವಿಸ್, ನೀನು ಯಾರ ಸೇವೆ ಮಾಡಬೇಕೆಂದಿರುವಿಯೋ ಅವನನ್ನು ನೀನು ಆಯ್ದುಕೋ. ನಿನಗೆ ಆರಿಸುವ ಅಧಿಕಾರ ಶಕ್ತಿ ಇದೆ. ನೀನು ಜೀವಿಸಿರುವಷ್ಟು ಕಾಲ ನಿನಗೆ ಆ ಆಯ್ಕೆ ಇದೇ. ಪ್ರತಿ ದಿನದಲ್ಲಿ, ಬಹು ಮಟ್ಟಿಗೆ ಪ್ರತಿ ಗಂಟೆಯಲ್ಲಿ ಯಾವುದೊಂದು ರೀತಿಯಲ್ಲಿ ಒಂದು ಆಯ್ಕೆಯು ನಿನಗೆ ಒಪ್ಪಿಸಲ್ಪಡುವದು."

ಆ ಸಮಯದಲ್ಲಿ ವಿಸ್ಮಯಗೊಳಿಸುವ ಆ ದೃಷ್ಟಾಂತದಿಂದ ನನ್ನ ಮನಸ್ಸಿನ ಮೇಲೆ ನಿಸ್ಸಂದೇಹವಾಗಿ ಹೆಚ್ಚಿನ ಪರಿಣಾಮ ಉಂಟಾಗಿರದ್ದರೂ, ನನ್ನ ತಾಯಿಯು ನನಗೊಂದು ಬೆಳಕನ್ನು ತೋರಿಸಿ ಕೊಟ್ಟಿದ್ದಳು ದಿಟವಾದ ಸ್ಫೂರ್ತಿಕೊಡುವ ತತ್ವವನ್ನು ತೋರಿಸಿಕೊಟ್ಟಿದ್ದಳು, ಎಂದು ನಿಜರೂಪದಲ್ಲಿ ನಾನು ಗ್ರಹಿಸಿದ್ದೇನೆಂದು ಎಣಿಸುವದಿಲ್ಲ. ಪ್ರತಿ ಮಾನವ ಜೀವಿಯಂತೆ, ನಾನು ಕೆಲವೊಮ್ಮೆ ಜೀವನದಲ್ಲಿ ಮುಚ್ಚು ಮರೆ ಮಾಡಿ ಆ ಪ್ರತಿಧ್ವನಿಯ ನಿಯಮವನ್ನು ಮುರಿದು ಹಾಕಲು ಪ್ರಯತ್ನ ಪಟ್ಟಿರುತ್ತೇನೆ. ಆದರೆ, ನಾನು ಎಂದಿಗೂ, ಒಮ್ಮೆಯೂ ಜಯಶೀಲನಾಗಲಿಲ್ಲ.

[ಲೂವಿಸ್ ಬಿ. ಮೇಯರ್]

೨. ತಣ್ಣನೆಯ ಆಘಾತ.

ಮನೆಯಲ್ಲಿ ಪ್ರತಿಯೊಂದೂ ಪ್ರಶಾಂತವಾಗಿತ್ತು. ಮನೆಯ ಆಳುಗಳು ಪಿಸುಗುಟ್ಟಿ ಮಾತಾಡುತ್ತಿದ್ದರು. ಇವರು ನನ್ನನ್ನು ನಿಧಾನವಾಗಿ ತೋಟದ ಕಡೆಗೆ ಹೋಗಲು ಮತ್ತು ಅಲ್ಲಿ ಸದ್ದು ಮಾಡದೆ ಇರಲು ಹೇಳಿದರು.

ಅಂದು ಸಾಯಂಕಾಲ 'ಪಪ್ಪ'ನು ನನ್ನ ಬಳಿಗೆ ಬಂದನು. ಆವನು ಅಳುತ್ತಿ... ...ನು ತಿಳಿದುಕೊಂಡೆನು.

ನಾನು ಪಿಸುಗುಟ್ಟಿದೆನು. 'ನನ್ನ 'ಮಮ್ಮಿ'ಯು ವಿಶೇಷ ಅಸ್ವಸ್ಥಳಾಗಿರುವಳೇ?' ಭೀಕರವೇನೋ ಬಂದು ಸಂಭವಿಸಿರಬೇಕೆಂದು ನಾನು ಭಾವಿಸಿದೆನು.

'ನನ್ನ ಮಗೂ, ನಿನ್ನ ದುರದುಷ್ಟ ಶಾಲಿಯೊನೆ 'ಮಮ್ಮಿ'ಯು ಇನ್ನು ಮುಂದೆ ನರಳುವುದಿಲ್ಲ; ಅವಳು ದೇವರ ಬಳಿಯಲ್ಲಿ ನೆಮ್ಮದಿಯಿಂದ ಇದ್ದಾಳೆ. ನೀನು ಅವಳನ್ನು ಬೀಳ್ಕೊಡಬೇಕೆಂದು ನಾನು ಆಶಿಸುತ್ತೇನೆ. ಏಕೆಂದರೆ ನೀನು ಅವಳನ್ನು ಪುನಹ ಎಂದೂ ಕಾಣಲಾರೆ. ಅವಳು ನಿನ್ನನ್ನು ಎಷ್ಟೊಂದು ಪ್ರೀತಿಸುತ್ತಿದ್ದಳು! ಮತ್ತು ಅವಳಿಗೆ (ಪ್ರೀತಿ, ಗೌರವ ತೋರಿಸುವುದಕ್ಕಾಗಿ ತುಟಿ ಮಟ್ಟಿಸಿ ಕೊಡುವ) ಮುತ್ತು ಕೊಡುವವರಲ್ಲಿ ನೀನೇ ಕೊನೆಯವಳಾಗಿರಬೇಕು.

ನಾನು ಮರಣವನು ಪಿದು ಕೋಣೆಯಲ್ಲಿ ಒಂದು ಪಂಜರದೊಳಗಿದ್ದ ನನ್ನ ಚಿಕ್ಕ ಪಕ್ಷಿಗಳಲ್ಲೊಂದಕ್ಕೆ ಬಂದ ಹಾಗೆ ಮಾತ್ರ ತಿಳಿದಿದ್ದೆನು. ನಾನು ಬಹಳ ಭಯಪಟ್ಟೆನು. ಆದರೆ ವಿಧೇಯಳಾಗಿ, 'ಪಪ್ಪ'ನ ಕೈಹಿಡಿದುಕೊಂಡು ಹೋದೆನು.

ಕೋಣೆ ಎಲ್ಲಾ ಕಪ್ಪಾಗಿತ್ತು. ಹಾಸಿಗೆಯ ಬಳಿಯಲ್ಲಿ ಒಂದು ಮೇಜಿನ ಮೇಲೆ, ಬೆಳ್ಳಿಯ ದೊಡ್ಡದೊಂದು ಕ್ರೂಜೆ ಮತ್ತು ಉರಿಯುವ ಮೇಣದ ಬತ್ತಿಗಳುಳ್ಳ ಕನಲು ದೀಪ ಸ್ತಂಭದಿಂದ, ಒಂದು ಆರಾಧನಾ ಮಂದಿರವು ರಚಿಸಲ್ಪಟ್ಟಿತ್ತು.

'ಮಮ್ಮಿ'ಯು ಮಲಗಿದ್ದಳು. ಅವಳು ತನ್ನ ತೋಳುಗಳನ್ನು ಪೂರ್ಣ ಚಾಚಿದ್ದಳು. ಅವಳ ಕೈಗಳು ಗೋಡೆಯ ಮೇಲೆ ಯಾವಾಗಲೂ ತೂಗಾಡುತ್ತಿದ್ದ ರಜತ ಕ್ರೈಸ್ತ ಪ್ರತಿಮೆಯ ಕಪ್ಪು ಶಿಲುಬೆಯನ್ನು ಅಪ್ಪಿ ಹಿಡಿದುಕೊಂಡಿದ್ದವು. ಅವಳ ಭುಜಗಳ ಮೇಲೆ ಹರಡಿ ಬಿದ್ದ, ಒಂದು ಬಿಳಿಯ ಗುಂಡು ರಂಧ್ರಗಳ ಮುಖಾವರಣವು ಅವಳ ಕೂದಲನ್ನು ಆವರಿಸಿತ್ತು. ಆ ಮನೋಹರವಾದ (ಮುಖದ) ಪಾರ್ಶ್ವ ದೃಶ್ಯವು, ಕೃಷ್ಣವರ್ಣದಂಶದೆದುರು, ಸ್ಪಷ್ಟವಾಗಿ ಎದ್ದು ಕಾಣುತ್ತಿತ್ತು. ಅವಳ ಕಣ್ಣುಗಳು ಮುಚ್ಚಿ ಕೊಂಡಿದ್ದವು ಮತ್ತು ಅವಳು ಶಾಂತತೆಯಿಂದ ಪ್ರಸನ್ನಳಾಗಿದ್ದಳು

ನಾನು ಅವಳ ಬಳಿಯಲ್ಲಿ, ಮತ್ತೆ ಭಯ ಪಡದೆ, ನಿಂತು ಕೊಂಡೆನು. ಆದರೆ, ನಾನು 'ಮಮ್ಮಿ'ಯನ್ನು ಮುತ್ತಿಡುವಂತೆ 'ಪಪ್ಪ'ನು ನನ್ನನ್ನು ಎತ್ತಿ ಹಿಡಿದು ಕೊಂಡಾಗ, ಮತ್ತು ನನ್ನ ತುಟಿಗಳು ಅವಳ ಹಣೆಯನ್ನು ಸ್ಪರ್ಶಿಸಿದಾಗ, ಒಂದು ದೊಡ್ಡ ಆಘಾತವು ನನ್ನನ್ನು ಭೇದಿಸಿಕೊಂಡು ಹೋಯಿತು.

ಹಾಯ್, ನನ್ನ ಮುದ್ದಿನ 'ಮಮ್ಮಿ'! ಅವಳು ಎಷ್ಟು ತಣ್ಣಗಾಗಿದ್ದಳು!

ಈಗಲೂ, ಬಹು ವರುಷಗಳ ನಂತರ ನಾನು ಆ ಮುತ್ತಿನ ತಣ್ಣನೆಯನ್ನು ಅನುಭವಿಸುತ್ತೇನೆ.

[ಎನ್ನೆ ಡೌಗ್ಲಾಸ್ ಸೆಡ್ಜ್‌ವಿಕ್]

೩. ಮರೆಯಲಾಗದ್ದು.

ನನ್ನ ಶೈಶವದಲ್ಲಿ ನಡೆದ ಆ ಮಹಾ ದುರಂತವನ್ನು ನಾನು ಈಗಲೂ ಪ್ರಸನ್ನತೆಯಿಂದ ಸ್ಮರಿಸಲಾರೆ.

ಒಮ್ಮೆ, ನಾಲ್ಕು ಶಿಲ್ಲಿಂಗಿನ ಬೆಳ್ಳಿಯ ನಾಣ್ಯವೊಂದಕ್ಕೆ ನಾನು ಒಡೆಯನಾಗಿದ್ದೆ. ಅದನ್ನು ನಾನು, ನನ್ನ ಇಚ್ಛೆಯಂತೆ ಖರ್ಚುಮಾಡಬಹುದಾಗಿತ್ತು. ಅದೊಂದು ಮಹತ್ವದ ಜೋಪಾನಿಕೆಯೂ ಆಗಿತ್ತು. ಏಕೆಂದರೆ ಅಪಾರವಾದ ಆ ಸಂಪತ್ತಿನಿಂದ ನಾನು ಬಹುಮಟ್ಟಿಗೆ ಯಾವುದೇ ವಸ್ತುವನ್ನು ಕೊಂಡುಕೊಳ್ಳಬಹುದಾಗಿತ್ತು.

ನಾನು 'ಲಾಂಗ್' ಸೇತುವೆಯ ಮಾರ್ಗ ಹಿಡಿದೆ. ನಾನು ಕೊಂಡುಕೊಳ್ಳಬೇಕಾದುದನ್ನು ನಿರ್ಧರಿಸಲು, ಅಲ್ಲಿ ನಾನೊಬ್ಬನೇ ಇರಬೇಕಾಗಿತ್ತು.

ನನ್ನ ಕಿಸೆಯ ಆಳದಲ್ಲಿ ಆ ಅದ್ಭುತ ನಾಣ್ಯವು ಆರಾಮ ಪಡೆಯುತ್ತಿತ್ತು. ಅದರೊಂದಿಗೆ ಸಣ್ಣ ಕಲ್ಲುಗಳ ಒಂದು ಸಂಗ್ರಹವೂ ಇತ್ತು.

ನಾನು ಸೇತುವೆಯ ಮೇಲೆ ನಿಂತು ನನ್ನ ಯೋಜನೆಗಳ ವಿರಾಮ ಚಿಹ್ನೆಗಳನ್ನು ಹಾಕಲು, ಆ ಸಣ್ಣ ಕಲ್ಲುಗಳನ್ನು ನೀರಿಗೆ ಎಸೆಯುತಿದ್ದೆ, ಮತ್ತು ಅವುಗಳು ಮಾಡಿದ, ಆವರಿಸುತಿದ್ದ ವಲಯಗಳನ್ನು ನೋಡುತಿದ್ದೆ.

ಕೊನೆಗೆ ನಾನು, ಉಳಿದಿರುವ ಒಂದೇ ಸಣ್ಣ ಕಲ್ಲನ್ನು ಎಸೆದೆ; ಮತ್ತು ಅದು ಬಿಸಿಲಿನಲ್ಲಿ ಚುರುಕಾಗಿ ಮುಂದೆ ಹೋಗುತ್ತಿದ್ದಾಗ, ಅದು ನನ್ನ ನಾಲ್ಕು ಶಿಲ್ಲಿಂಗ್ ನಾಣ್ಯವೆಂದು ಗುರುತಿಸಿದೆ. ಒಂದು ಸಣ್ಣ ಶಬ್ದದಿಂದ, ಆ ಶಬ್ದವನ್ನು ನಾನು ಈಗಲೂ ಕೇಳಬಲ್ಲೆ, ನೀರು ಅದನ್ನು ಆವರಿಸಿತು ಅದು ತಿರುಗುತ್ತಾ ಮುಳುಗುವಾಗ, ಅದರ ಮಿಂಚು ಹೊಳಪನ್ನು ನಾನು ನೋಡಿದೆ.

ನಾನು ರೋದಿಸಲಿಲ್ಲ. ವಿಷಯ ಬಹಳ ದೊಡ್ಡದಾಗಿತ್ತು. ನಾನು ಸ್ವಲ್ಪ ಹೊತ್ತು ಮೂಕನಾಗಿ ನಿಂತುಕೊಂಡೆ. ಆ ಮೇಲೆ ಮನೆಗೆ ಹೋದೆ. ಆ ದುರಂತವನ್ನು ಯಾರೊಡನೆಯೂ ಹೇಳಲಿಲ್ಲ.

ನನ್ನ ಜೀವದ ಮೇಲೆ ನೆಲೆಗೊಂಡ ಅಂಧಾಕಾರದ ಕ್ಲೇಶವು, ಅದರಲ್ಲಿ ಒಂದುತರದ ಗಾಂಭೀರ್ಯವೂ ಇರುವದೆಂದು ನಾನು ಅನುಭವಿಸುವಷ್ಟು, ಅಸಾಧಾರಣವಾಗಿತ್ತು. ಅದೊಂದು ಪರಿಹರಿಸಲಾಗದ ದುರದೃಷ್ಟವಾಗಿತ್ತು. ಎಂದಿಗೂ ಮರೆಯಲಾಗದಷ್ಟು ಭೀಷಣವಾಗಿತ್ತು.

[ಜೆಕೋಬ್ ರೀಸ್]

ಮಕ್ಕಳ ಪುಟ

ದುಡುಕಬಾರದು.

(ಮಕ್ಕಳ ಮನರಂಜನೆಗಾಗಿಯೂ, ಯೋಗ್ಯ ಬೋಧನೆಗಾಗಿಯೂ ಶ್ರೀ 'ಪ್ರೇಮಯೋಗಿ' ಯವರು ಪ್ರಖ್ಯಾತವಾದ ಪಂಚತಂತ್ರದಿಂದ ಕಥೆಗಳನ್ನು ಕನ್ನಡಕ್ಕೆ ಪರಿವರ್ತಿಸಿ ಕೊಡಲಿರುವರು. ನಮ್ಮ ವಾಚಕರಾದ ದೊಡ್ಡವರೂ ಮಕ್ಕಳೂ ಇದರಿಂದ ಲಾಭ ಹೊಂದುವರೆಂದು ಆಶಿಸಲಾಗಿದೆ.

ಸಂ.)

ಒಂದು ಊರಿನಲ್ಲಿ ದೇವಶ್ರ್ಮನೆಂಬ ಬ್ರಾಹ್ಮಣನಿದ್ದನು. ಆತನ ಹೆಂಡತಿಯು ಒಬ್ಬನೇ ಒಬ್ಬನಾದ ಮಗನನ್ನೂ ಒಂದು ಮುಂಗುಸಿಯನ್ನೂ ಸಾಕಿಕೊಂಡಿದ್ದಳು. ಆಕೆಯು ಮುಂಗುಸಿಯನ್ನು ತನ್ನ ಮಗನಂತೆಯೇ ಪ್ರೀತಿಯಿಂದ ಕಾಣುತಿದ್ದಳು. ಆ ಚಿಕ್ಕ ಮುಂಗುಸಿಗೆ ತನ್ನ ಮೊಲೆ ಹಾಲು ಕೊಡುತ್ತಿದ್ದಳು. ಸ್ನಾನ ಮಾಡಿಸುತಿದ್ದಳು. ಹೀಗೆಲ್ಲ ಮಾಡಿದರೂ ಆಕೆಗೆ ಮುಂಗುಸಿಯ ಮೇಲೆ ಪೂರ್ಣ ವಿಶ್ವಾಸವಿರಲಿಲ್ಲ. ಏಕೆಂದರೆ ಮುಂಗುಸಿಗಳು ಕೆಟ್ಟ ಪ್ರಾಣಿಗಳೆಂದು ಹೇಳುವ ಮಾತು ಆಕೆಗೂ ಕೇಳಿತ್ತು. ಆದ್ದರಿಂದ ಎಂದಾದರೂ ತನ್ನ ಮಗುವಿಗೆ ಅದು ಉಪದ್ರ ಮಾಡಬಹುದೆಂದು ಆಕೆ ನೆನಸಿದ್ದಳು. ಏಕೆಂದರೆ ಮಗನು ಎಷ್ಟೇ ಕೆಟ್ಟವನಾಗಿರಲಿ, ಕುಡುಕನಾಗಿರಲೀ, ವ್ಯಭಿಚಾರಿಯಾಗಿರಲಿ ಹೇಗಿದ್ದರೂ ಆತನು ತಾಯಿಗೆ ಎಲ್ಲದಕ್ಕಿಂತಲೂ ಪ್ರಿಯವೂ, ಸಂತೋಷಕರವೂ ಎಂಬುದು ಜ್ಞಾನಿಗಳ ಮಾತು.

ಒಂದು ದಿನ ಆಕೆಯ ಮಗನನ್ನು ಹಾಸಿಗೆಯಲ್ಲಿ ಮಲಗಿಸಿ, ನೀರಿನ ಕೊಡವನ್ನು ತೆಗೆದುಕೊಂಡು ತನ್ನ ಗಂಡನಿಗೆ 'ನಾನು ನೀರಿಗೆ ಹೋಗಬೇಕಾಗಿದೆ. ಮುಂಗುಸಿಯು ಮಗುವಿಗೆ ತೊಂದರೆ ಕೊಡದಂತೆ ನೀವು ನೋಡಿಕೊಳ್ಳಿ' ಎಂದು ಹೇಳಿದಳು. ಆಕೆಯು ನೀರಿಗೆ ಹೋದ ಕೆಲವು ಸಮಯದ ಮೇಲೆ ಭಿಕ್ಷಾಟನೆಗಾಗಿ ಬ್ರಾಹ್ಮಣನು ಮನೆ ಬಿಟ್ಟು ಹೋಗಬೇಕಾಯಿತು. ಆತನು ಹೊರಟು ಹೋದ ಕೆಲ ಸಮಯದಲ್ಲಿ ಹತ್ತಿರದ ಬಿಲವೊಂದರಿಂದ ಕಪ್ಪು ಬಣ್ಣದ ಹಾವೊಂದು ಹೊರಗೆ ಬಂದಿತು. ಅದು ಮಗುವಿನ ಹಾಸಿಗೆಯ ಹತ್ತಿರ ಸಮೀಪ ಬಂದಿತು. ಆದರೆ ಹತ್ತಿರದಲ್ಲಿದ್ದ ಮುಂಗುಸಿಯು ತನ್ನ ಸ್ವಾಭಾವಿಕ ಶತ್ರುವನ್ನು ಕಂಡು ಆ ಹಾವಿನ ಮೇಲೆ ಬಿದ್ದು ಅದರೊಡನೆ ಹೋರಾಡಿ ಅದನ್ನು ಕಚ್ಚಿ ಪುಡಿಪುಡಿ ಮಾಡಿತು. ಹಾವಿನ ರಕ್ತವು ಕೋಣೆಯಲ್ಲಿ ಅಲ್ಲಲ್ಲಿ ಬಿದ್ದಿತ್ತು. ಹಾಗೆ ಹಾವನ್ನು ಕೊಂದು ಹಾಕಿದ ಸಂತೋಷದಲ್ಲಿ ಮುಂಗುಸಿಯು ಹೊರಗೆ ಓಡಿತು. ಅದರ ಬಾಯಲ್ಲಿ ರಕ್ತ ಇನ್ನೂ ಹರಿಯುತಿತ್ತು.

ಅಷ್ಟರಲ್ಲಿ ನೀರಿಗೆ ಹೋಗಿದ್ದ ತಾಯಿಯು ಬಂದಳು. ಮುಂಗುಸಿಯ ಮುಖತುಂಬಾ ರಕ್ತವಿರುವದನ್ನು ಕಂಡು ಮಗುವನ್ನು ಅದು ಕಚ್ಚಿ ಕೊಂದಿರಬಹುದೆಂದು ಗಾಬರಿಗೊಂಡಳು. ಆಕೆಯು ಹಿಂದುಮುಂದು ಆಲೋಚಿಸದೆ ತನ್ನ ಕೈಯಲ್ಲಿದ್ದ ನೀರಿನ ಪಾತ್ರೆಯನ್ನು ಮುಂಗುಸಿಯ ಮೇಲೆ ಹಾಕಿದಳು. ಮುಂಗಸಿಯು ಅಲ್ಲೇ ಸ್ವತವಾಯಿತು. ನಂತರ ಆಕೆಯು ಮನೆಯೊಳಗೆ ಓಡಿದಳ. ಹಾಸಿಗೆಯ ಹತ್ತಿರ ಹೋಗಲು ಕೋಣೆಯಲ್ಲಿ ಕಪ್ಪು ಹಾವೊಂದು ಸತ್ತು ಬಿದ್ದಿರುವುದನ್ನೂ, ಸುತ್ತಲೂ ರಕ್ತ ಚೆಲ್ಲಿರುವದನ್ನೂ ಕಂಡಳು. ಮಗುವು ಹಾಸಿಗೆಯಲ್ಲಿ ಸುಖ ನಿದ್ರೆ ಮಾಡುತ್ತಿತ್ತು. ಮುಂದಾಲೋಚನೆಯಿಲ್ಲದೆ ತಾನು ಮುಂಗುಸಿಯನ್ನು ಕೊಂದುದಕ್ಕಾಗಿ ಆಕೆಯು ಎದೆ ಬಡಿದುಕೊಂಡು ಅಳ ತೊಡಗಿದಳು.

ಕೆಲ ಸಮಯದ ಮೇಲೆ ಹೊರಗೆ ಭಿಕ್ಷಾಟನೆಗೆ ಹೋಗಿದ್ದ ಬ್ರಾಹ್ಮಣನು ಕೈಯಲ್ಲಿ ಅಕ್ಕಿಯ ಗಂಟು ಹಿಡಿದು ಮನೆಗೆ ಬಂದನು. ಮನೆಯಲ್ಲಿ ತನ್ನ ಪತ್ನಿಯು ತನ್ನ ಮಗುವಾದ ಮುಂಗುಸಿಯ ನಿಧನಕ್ಕೆ ರೋಧಿಸುವದನ್ನು ನೋಡಿದನು. ಆತನನ್ನು ಕಂಡೊಡನೆಯೇ ಪತ್ನಿಯು, 'ಆಶೆಯ ಪಿಶಾಚಿ' ಎಂದು ಕೂಗಿದಳು. 'ನಾನು ಹೇಳಿದಂತೆ ನೀನು ಮಾಡದ ಕಾರಣ ಮಗನ ಮರಣದ ದುಃಖವನ್ನು ಅನುಭವಿಸಬೇಕಾಗಿ ಬಂದಿದೆ. ಆಸೆಯಿಂದ ಕಣ್ಣು ಕುರುಡಾದವರಿಗೆ ಹೀಗೆಯೇ ಆಗುವದು. ಏಕೆಂದರೆ ಆಸೆಯ ಕಾರಣದಿಂದ ಈ ಪ್ರಪಂಚದಲ್ಲಿ ಆಸೆಗಾರನೊಬ್ಬನು ತನ್ನ ತಲೆಯ ಮೇಲೆ ತಿರುಗುವ ಚಕ್ರವೊಂದನ್ನು ನಿರ್ಮಿಸಿಕೊಂಡ' ಎಂದಳು.

ಇದನ್ನು ಕೇಳುತ್ತಿದ್ದ ಬ್ರಾಹ್ಮಣನು. ಅದಾವ ಕಥೆಯೆಂದು ಕೇಳಿದನು. ಮುಂದಿನ ವಾರ ಬ್ರಾಹ್ಮಣ ಪತ್ನಿಯು ನಾಲ್ಕು ಅತಿಯಾಸೆ ತುಂಬಿದ ಬ್ರಾಹ್ಮಣರ ಕತೆಯನ್ನು ಹೇಳುವಳು.

ರಷ್ಯದ ಯುದ್ಧ ಸಿದ್ಧತೆ.

೧೯೫೫ರೊಳಗೆ ಯೂರೋಪಿನೊಡನೆ ಯುದ್ಧ ಹೂಡಲು ರಷ್ಯವು ಸನ್ನಾಹಗಳನ್ನು ಮಾಡುತ್ತಿದೆಯೆಂದು ಸೋವಿಯೆಟ್ ಮಿಲಿಟರಿಯಲ್ಲಿ ತರಬೇತು ಹೊಂದಿದ ಮಾಜಿ ಚೆಕ್ ಅಧಿಕಾರಿಯೊಬ್ಬನು ತಿಳಿಸಿರುವನೆಂದು ಪ್ರಕಟವಾಗಿರುವುದು. ಇದೇ ಶಿಂಗಳ ಮಧ್ಯಭಾಗದಲ್ಲಿ ಪ್ರಕಟಿಸಲಾದ ಒಂದು ಗ್ರಂಥದಲ್ಲಿ ಯೂರೋಪನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳಲು ರಷ್ಯವು ಹವಣಿಸುತ್ತಿರುವ ಉಲ್ಲೇಖವೂ ೧೯೫೫ರ ಯುದ್ಧಪ್ರಕರಣದ ವಿವರವೂ ಇದೆ.ಕೊರಿಯಾ ಯುದ್ಧ ಮೊದಲಾದುವುಗಳ ವಿಷಯಗಳೂ ಆ ಗ್ರಂಥದಲ್ಲಿವೆ.

ಗಡಿನಾಡಿನ ಗಾಂಧಿ ಆಸ್ಪತ್ರೆಯಲ್ಲಿ

೧೯೪೮ ರಿಂದಲೂ ಡಿಟೆನ್ಷನ್ನಿನಲ್ಲಿರುವ ಗಡಿನಾಡಿನ ಮುಖಂಡರಾದ ಖಾನ್ ಅಬ್ದುಲ್ ಗಫಾರ್ ಖಾನರವರನ್ನು ಲಾಹೋರ್ ಆಸ್ಪತ್ರೆಗೆ ದಾಖಲ್ಮಾಡಲಾಗಿದೆ.

ಅವರನ್ನು 'ಸಾಮಾನ್ಯ ವೈದ್ಯಕೀಯ ಪರೀಕ್ಷೆಗಾಗಿ' ಇಲ್ಲಿಗೆ ಕರೆತರಲಾಗಿದೆಯೆಂದು ವರದಿಯಾಗಿದೆ.

ಗಡಿನಾಡಿನ ರೆಡ್‌ಶರ್ಟ್ ಮುಖಂಡರಾದ ಖಾನ್ ಅಬ್ದುಲ್ ಗಫಾರ್ ಖಾನರ ಬಂಧನದಿಂದಾಗಿ ಅವರ ಘನತೆ ಹೆಚ್ಚಿದೆಯೆಂದೂ ಜಿನ್ನಾ ಅವಾಮಿ ಲೀಗ್ ಕನ್ವೀನರಾದ ಶ್ರೀ ಹೆಚ್. ಎಸ್. ಸುಹ್ರವರ್ದಿಯವರು ಲಾಹೋರಿನಲ್ಲಿ ತಿಳಿಸಿದರು.

ಗಫಾರ್ ಖಾನರನ್ನು ಡಿಟೆನ್ಷನ್ನಿನಿಂದ ಬಿಡುಗಡೆ ಮಾಡಬೇಕೆಂದೂ ಅವರು ಹೇಳಿಕೆಯೊಂದನ್ನಿತ್ತು ಮನವಿ ಮಾಡಿಕೊಂಡಿದ್ದಾರೆ.

ಡಿಟೆನ್ಷನ್ನಿನಲ್ಲಿದ್ದಾಗ ಗಫಾರ್ ಖಾನರಿಗೇನಾದರೂ ಆದಲ್ಲಿ ಸರಕಾರದ ವಿರುದ್ಧ ಅಸಮಧಾನ ಉಗ್ರರೂಪ ತಾಳಬಹುದೆಂದೂ ಎಚ್ಚರಿಸಿದ್ದಾರೆ.

ಲಂಡನ್ನಿನಲ್ಲಿ ಪಂ|| ನೆಹರು

ರಾಣಿ ಎಲಿಜಬೆತ್‌ರ ಕಿರೀಟ ಧಾರಣೋತ್ಸವಕ್ಕಾಗಿ ತಾ. ೨೭ರ ಮಧ್ಯಾಹ್ನ ಲಂಡನ್ನಿಗೆ ಹೋದ ಪ್ರಧಾನಿ ಪಂಡಿತ ನೆಹರೂರವರು ಕೊರಿಯಾದಲ್ಲೂ ಮತ್ತಿತರ ಕಡೆಗಳಲ್ಲೂ ಬೇಗ ಶಾಂತಿ ಸ್ಥಾಪನೆಯಾಗಲೆಂದು ಹಾರೈಸಿದರು.

ಕೊರಿಯಾದಲ್ಲಿ ಶಾಂತಿಯುತ ಬಹುಮಟ್ಟಿಗೆ ಪ್ರಗತಿ ಕಂಡುಬರುವದಾಗಿ ಪ್ರಧಾನಿ ನೆಹ್ರೂ ತಿಳಿಸಿದರು. ಈ ಪ್ರಗತಿ ಒಪ್ಪಂದದಲ್ಲಿ ಮುಕ್ತಾಯವಾಗುವದೆಂದು ತಾವು ಭಾವಿಸಿರುವದಾಗಿಯೂ ಅವರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತಾಡುತ್ತಾ ತಿಳಿಸಿದರು

'ಇದಕ್ಕಿಂತ ಹೆಚ್ಚಾಗಿ ನಾನೇನನ್ನೂ ಹೇಳಲಾರೆ. ಒಪ್ಪಂದಕ್ಕಾಗಿ ನಾವೆಲ್ಲರೂ ಪ್ರಯತ್ನಿಸಬೇಕು' ಎಂಬುದಾಗಿ ಅವರು ತಿಳಿಸಿದರು.

ಪಾಕಿಸ್ಥಾನದ ಪ್ರಧಾನಿ ಮಿ|| ಮಹಮ್ಮದ ಅಲಿಯವರೊಡನೆ ತಾವು ನಡೆಸಲಿರುವ ಮಾತುಕತೆಗಳ ಬಗ್ಗೆ ಕೇಳಲ್ಪಟ್ಟ ಪ್ರಶ್ನೆಯೊಂದಕ್ಕೆ ಪಂ|| ನೆಹ್ರೂ ಉತ್ತರ ಕೊಡುತ್ತಾ, ತಾವು ಅವರೊಡನೆ ಸೌಹಾರ್ದಪೂರಿತ ಮಾತುಕತೆಗಳನ್ನು ನಡೆಸುವ ಆಸೆಯೊಂದಿರುವದಾಗಿಯೂ, ಹಲವಾರು ಸಲ ಮಾತುಕತೆ ನಡೆಸುವ ನಿರೀಕ್ಷೆ ಇರುವದಾಗಿಯೂ ತಿಳಿಸಿದರು.

೧,೦೨,೦೦೧ ಎಕ್ರೆ ಭೂದಾನ!

ಪಲಮೌ ಜಿಲ್ಲೆಯ ರಂಕಾ ಎಂಬಲ್ಲಿಯ ರಾಜ ಶ್ರೀ ಗಿರಿವಾರ ಪ್ರಸಾದ ನಾರಾಯಣ ಸಿಂಘರು ಆಚಾರ್ಯ ವಿನೋಬಾ ಭಾವೆಯವರ ಭೂದಾನ ಯಜ್ಞಕ್ಕೆ ೧೦೨೦೦೧ ಎಕ್ರೆ ಭೂಮಿಯನ್ನು ಕೊಟ್ಟಿರುವರು. ಭಾರತದಲ್ಲಿ ಭೂಧಾನ ಚಳವಳಿಕ್ಕೆ ಸಿಕ್ಕಿದ ಭೂಮಿಗಳಲ್ಲಿ ಇದೇ ಅತ್ಯಂತ ಹೆಚ್ಚಿನದು.

ಬುದ್ಧನ ಜನ್ಮೋತ್ಸವ ದಿನವಾದ ತಾ ೨೮ರಲ್ಲಿ ಆಚಾರ್ಯ ಭಾವೆಯವರು ಶ್ರೀ ಸಿಂಘರನ್ನು ಕಂಡಾಗ ಅವರು ಈ ಭೂದಾನವನ್ನು ಕೊಟ್ಟರು. ಶ್ರೀ ಸಿಂಘರು ತಮ್ಮ ಕೃಷಿಯೋಗ್ಯ ಭೂಮಿಯ ಆರನೇ ಒಂದಂಶವನ್ನೂ ಇತರ ಎಲ್ಲಾ ಆಸ್ತಿಯನ್ನೂ ಕೊಟ್ಟದ್ದರಿಂದ ಇದು ನಿಜವಾದ ದಾನವೆಂದು ಶ್ರೀ ಭಾವೆಯವರು ಹೇಳಿದರು.

ಆಚಾರ್ಯ ಭಾವೆಯವರು ಅಲ್ಲಿ ಒಂದು ಪ್ರಾರ್ಥನಾ ಸಭೆಯಲ್ಲಿ ಮಾತನಾಡುತ್ತಾ, "ಇದು ಹೃದಯವನ್ನು ಶುದ್ಧಗೊಳಿಸುವ ದಾನವಾಗಿದೆ. ಯಜ್ಞ, ದಾನ ಮತ್ತು ತಪಸ್ಸಿನ ತತ್ವದಿಂದ ಸಮಾಜವನ್ನು ಉತ್ತಮಗೊಳಿಸಲು ಸಾಧ್ಯವಿದೆಯೆಂದು ಗೀತೆಯಲ್ಲಿ ಹೇಳಲಾಗಿದೆ. ಆದರೆ ಪಾಶ್ಚಾತ್ಯ ಶಿಕ್ಷಣವನ್ನು ಪಡೆದವರು ದಾನದ ತತ್ವದಲ್ಲಿರುವ ಕ್ರಾಂತಿಕಾರೀ ಪ್ರಭಾವವನ್ನು ತಿಳಿದಿಲ್ಲ," ಎಂದು ಹೇಳಿದರು.

ಈಜಿಪ್ಟಿನಲ್ಲಿ.

ಆಂಗ್ಲೋ–ಈಜಿಪ್ಟ್ ವೈಷಮ್ಯವು ದಿನೇ ಹೆಚ್ಚುತ್ತ ಹೋಗುವ ಲಕ್ಷಣಗಳೇ ಕಂಡು ಬರುತ್ತವೆ. ಕಳೆದ ವಾರದಲ್ಲಿ ಇವರೊಳಗೆ ಎರಡು ಬಾರಿ ಘರ್ಷಣೆ ಉಂಟಾದ ವರದಿ ಬಂದಿದೆ. ಈಜಿಪ್ಶಿಯನರು ಹೋಗುತ್ತಿದ್ದ ಸಾಮಾನ್ಯ ನಾಗರಿಕರ ವೇಷದಲ್ಲಿ ಇದ್ದ ಇಬ್ಬರು ಬ್ರಿಟಿಷ್ ಸೈನಿಕರ ಮೇಲೆ ಅರಬಿ ಉಡುಪಿನಲ್ಲಿದ್ದ ಇಬ್ಬರು ಹಿಂದಿನಿಂದ ಆಕ್ರಮಣ ಮಾಡಿ ಒಬ್ಬನನ್ನು ತಿವಿದಿರುವರೆಂದು ತಿಳಿದು ಬರುತ್ತದೆ.

ಹೆಂಗಸರು ಹಾಲು ಮಾರಲು ಹೋಗಬಾರದು.

ಗುಜರಾತದ ಪ್ರಾಂತೀಕ ವಿಭಾಗದ ಹಳ್ಳಿಗಳ ಗೌಳಿಗರು ತಮ್ಮ ಸಂಘದ ದ್ವಾರಾ 'ಇನ್ನು ಮೇಲೆ ಹೆಂಗಸರು ಹಾಲು ಮಾರಲು ಅಹಮ್ಮದಾಬಾದ್ ಪಟ್ಟಣಕ್ಕೆ ಹೋಗಬಾರದು' ಎಂಬ ಗೊತ್ತುವಳಿಯನ್ನು ಮಾಡಿದ್ದಾರೆ. ಗಂಡಸರೇ ಹೋಗಹತ್ತಿದ್ದಾರೆ. ಪಟ್ಟಣದ ಜನರಿಂದ ಹೆಂಗಸರಿಗೆ ಅವಮಾನವಾಗುತ್ತಿದೆಯೆಂದು ಅವರ ಅಂಬೋಣವಿದೆ. ಈ ಗೊತ್ತುವಳಿಗೆ ವಿರೋಧವಾಗಿ ವರ್ತಿಸುವವರಿಗೆ ದಂಡ ಮಾಡುವ ಪರಿಪಾಠವನ್ನು ಅವರು ಹಾಕಿದ್ದಾರೆ.

ಕಾಂಗ್ರೆಸ್ ಸದಸ್ಯತನದ ಶುಲ್ಕ

ಪೂರ್ತಿ ಸಮಯದ ವಿಧಾಯಕ ಕಾರ್ಯಕರ್ತರಿಗೆ ವೇತನ ಕೊಡಲು ನಿಧಿ ಸಂಗ್ರಹಿಸುವ ಉದ್ದೇಶದಿಂದ ಕಾಂಗ್ರೆಸ್ ಸದಸ್ಯತ್ವದ ವಂತಿಗೆಯನ್ನು ಶೀಘ್ರದಲ್ಲಿಯೇ ನಾಲ್ಕಾಣೆಯಿಂದ ಎಂಟಾಣೆಗೆ ಏರಿಸಲಾಗುವದೆಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರೊ. ಎಸ್. ಎನ್. ಅಗರವಾಲರು ಕೊಯಮುತ್ತೂರು ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತಾಡುತ್ತಾ ಹೇಳಿದರು.

ಸುಶೀಲ ಸಂಪನ್ನತೆಯೇ ದೇಶದ ಹಿರಿಮೆ.

ಜನತೆಗೆ ಡಾ. ಪ್ರಸಾದರ ಉಪದೇಶ.

"ಜನತೆಯು ಅವಿಶ್ರಾಂತವಾದ ಸತತ ಪ್ರಯತ್ನದ ಮುಡಿತ ಮತ್ತು ಜನರ ಉತ್ತಮ ನಡತೆ ಇವೆರಡರಿಂದ ಮಾತ್ರವೇ ಒಂದು ರಾಷ್ಟ್ರದ ಘನತೆಯನ್ನು ವರ್ಧಿಸಲು ಶಕ್ಯವಿದೆ" ಎಂಬದಾಗಿ ತಾ. ೨೯ರಲ್ಲಿ ಭಾರತದ ರಾಷ್ಟ್ರಾಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರು ತಿಳಿಸಿದರು.

"ಜನತೆಯು ಅವಿಶ್ರಾಂತವಾದ ಸತತ ಪ್ರಯತ್ನದ ಮುಡಿತ ಮತ್ತು ಜನರ ಉತ್ತಮ ನಡತೆ ಇವೆರಡರಿಂದ ಮಾತ್ರವೇ ಒಂದು ರಾಷ್ಟ್ರದ ಘನತೆಯನ್ನು ವರ್ಧಿಸಲು ಶಕ್ಯವಿದೆ" ಎಂಬುದಾಗಿ ತಾ. ೨೯ರಲ್ಲಿ ಭಾರತದ ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದರು ತಿಳಿಸಿದರು.

ಪಟ್ಟಾಮಹಿಯ ಸಾರ್ವಜನಿಕ ಸ್ವಾಗತಪತ್ರಕ್ಕೆ ಉತ್ತರವೀಯುತ್ತ ತಾ. ೨೯ರ ರಾತ್ರಿ ರಾಜೇಂದ್ರ ಪ್ರಸಾದರು, "ಸ್ವರಾಜ್ಯ ಸಾಧನೆಯ ಬಳಿಕ ಜನತೆಯ ಮೇಲೆ ಹೊಸ ಹೊಸ ಹೊಣೆಗಾರಿಕೆಗಳು ಬಿದ್ದಿವೆ. ದೇಶದಲ್ಲಿ ತಾಂಡವವಾಡುತ್ತಿರುವ ಬಡತನದ ಭೂತದ ಆಟೋಪವನ್ನು ಹತ್ತಿಕ್ಕಲು ದೇಶದ ಅನೇಕ ಕೊರತೆಗಳ ಪೀಡೆಯನ್ನು ತೊಳೆದು ಹಾಕಲು ಮತ್ತು ಅನಾರೋಗ್ಯದ ಹಾವಳಿಯನ್ನು ತಡೆಗಟ್ಟಲು ನಮ್ಮ ಸರಕಾರ ಬದ್ಧಕಂಕಣ ಕಟ್ಟಿದೆ. ಈ ಗುರಿಗಳನ್ನು ಜಯಿಸಬೇಕಾದರೆ ಜನರು ಸ್ಫೂರ್ತಿಭರಿತರಾಗಿ ಸೊಂಟ ಬಿಗಿಯಲೇಬೇಕು.

"ಪ್ರತಿಯೊಂದು ವಿಚಾರದಲ್ಲೂ ಸರಕಾರವನ್ನು ಎದುರು ನೋಡುವದು ಸಾಧ್ಯವಿಲ್ಲ. ಸ್ವತಂತ್ರ ಎನಿಸುವ ರಾಜ್ಯದಲ್ಲಿ ಇದು ಸಾಧ್ಯವಲ್ಲ. ಸರಕಾರ ಯೋಜನಾ ಕಾರ್ಯಕ್ರಮಗಳನ್ನು ಕೈಕೊಂಡಿದ್ದರೆ ಅದು ಜನತೆಯ ಬೆಂಬಲದಿಂದ ಎಂದು ತಿಳಿಯಬೇಕು. ಆದುದರಿಂದ ಜನರ ಸಹಕಾರವಿಲ್ಲದೆ ಸರಕಾರ ಮುಂದುವರಿಯುವದು ಅಸಾಧ್ಯ. ನೂತನವಾದ ಭವ್ಯ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಪ್ರತಿಯೊಬ್ಬನೂ ತನ್ನ ಜವಾಬ್ದಾರಿಯನ್ನರಿತು ಬಹಳ ಹುಮ್ಮಸ್ಸಿನಿಂದ ಕಾರ್ಯಸಾಧನೆಗೆ ತೊಡಗುವುದು ಅತ್ಯಾವಶ್ಯಕ" ಎಂದು ಉಪದೇಶಿಸಿದರು.

"ಅಪಾರ ಸಂಪತ್ತಿನಿಂದ ಮಾತ್ರವೇ ದೇಶವು ಮಹಾರಾಷ್ಟ್ರವೆಂದು ತೀರ್ಮಾನಿಸಲು ಬರುವುದಿಲ್ಲ. ದೇಶದ ಜನರ ಗುಣ, ನಡತೆಗಳು ಅತ್ಯುನ್ನತವಾಗಬೇಕು. ಎಳೆಯ ಮಕ್ಕಳ ಗುಣವನ್ನು ಈಗಲೇ ಸತ್ಪಥವನ್ನು ಅನುಸರಿಸುವಂತೆ ಮಾಡುವ ಮಹಾ ಜಾಣಚಾತುರ್ಯತೆ ಶಾಲಾ ಅಧ್ಯಾಪಕರ ಮೇಲೆ ಬಿದ್ದಿರುವ ಹೊಣೆಯಾಗಿದೆ. ಅವರು ದೇಶಕ್ಕೆ ಉತ್ತಮ ನಾಗರಿಕರನ್ನು ಸಿದ್ಧಮಾಡಿ ಕೊಡಬೇಕು" ಎಂದು ಪ್ರಸಾದರು ಕರೆಯಿತ್ತರು.

ಭಾರತ ಸರಕಾರದ ಸಾಲ ಎತ್ತುವುದು

ಭಾರತ ಸರಕಾರವು ೭೫ ಕೋಟಿ ರೂ.ಗಳ ಸಾಲ ಎತ್ತಲು ನಿರ್ಧರಿಸಿರುವುದು, ಎಂದು ರಿಸರ್ವ್ ಬ್ಯಾಂಕ್ ಹೊರಡಿಸಿದ ಒಂದು ಪ್ರಕಟಣೆಯಿಂದ ತಿಳಿದು ಬರುತ್ತದೆ.

ಪಂಚವಾರ್ಷಿಕ ಯೋಜನೆಯು ಪೂರ್ಣವಾದ ನಂತರ ಭಾರತ ಸರಕಾರವು ಎತ್ತುವ ಪ್ರಥಮ ಸಾಲ ಇದಾಗಿದ್ದು, ಇದಕ್ಕೆ 'ನೇಶನಲ್ ಪ್ಲೇನ್ ಬಾಂಡ್ಸ್' ಎಂದು ಕರೆಯಲಾಗುವುದು. ಬಡ್ಡಿ ದರವು ಸಾಲಿಯಾನ ಶೇಕಡ ೩॥ ರೂ. ೧೦೦ರ ಬಾಂಡಿಗೆ ರೂ. ೯೮-೪-೦ ಕೊಡಬೇಕಾಗುವುದು. ೧೯೬೧ರ ಜೂನ್ ಒಂದರಂದು ಸಾಲವನ್ನು ಹಿಂದೆ ಕೊಡಲಾಗುವುದು.

ಬರುವ ಜೂನ್ ೭ರಿಂದ ೧೦ರ ತನಕ ರಿಸರ್ವ್ ಬೇಂಕ್‌ಗಳಲ್ಲೂ, ಇಂಪೀರಿಯಲ್ ಬ್ಯಾಂಕುಗಳಲ್ಲೂ ಹಣವನ್ನು ಸ್ವೀಕರಿಸಲಾಗುವುದು.

ಮಳೆಗಾಲದ ಮಾರುತ

ಈ ವರ್ಷದ ಮಳೆ ಮಾರುತವು ಇನ್ನೂ ಕ್ಷೀಣವಾಗಿಯೇ ಇದೆಯೆಂದೂ, ಬರ್ಮಾ ಪಶ್ಚಿಮ ತೀರದ ಟೆನಾಸರಿಂ ಕಡೆಯಲ್ಲೂ, ಅಂಡಮಾನ್ ಪ್ರದೇಶದಲ್ಲೂ ಬಂಗಾಳ ಕೊಲ್ಲಿಯ ಆಗ್ನೇಯ ಪ್ರದೇಶದಲ್ಲೂ ಆ ಮಾರುತವು ಚಲಿಸದೆ ಇದೆಯೆಂದೂ, ಆ ಮಾರುತವು ಅಲ್ಲಿಂದ ಕದಲಿ ಇನ್ನೂ ಸಿಂಹಳ ದ್ವೀಪಕ್ಕಾಗಲಿ, ಭಾರತ ತೀರಕ್ಕಾಗಲೀ ಬರಲಿಲ್ಲವೆಂದು ಪೂನಾ ಅಬ್ಸರ್‌ವೇಟರಿಯವರು ಹೇಳುತ್ತಿದ್ದಾರೆ.

ಮಾಮೂಲಾಗಿ ಮೇ ೨೦ನೇ ತಾರೀಖಿನ ಹೊತ್ತಿಗೆ ಮಳೆ ಮಾರುತವು ಟೆನಾಸೆರಿಂ ತೀರ ಮತ್ತು ಅಂಡಮಾನ್ ಪ್ರದೇಶದಲ್ಲಿ ಆರಂಭವಾಗುವದು ತಿಳಿದ ವಿಷಯ. ಹಿಂದಿನ ವರ್ಷಗಳಂತೆಯೇ ಈ ವರ್ಷವೂ ಈ ಪ್ರದೇಶಗಳಲ್ಲಿ ಮಳೆ ಮಾರುತವು ವ್ಯಾಪಿಸಿಕೊಂಡಿದೆ.

ಆದರೆ ಅದರ ಚಲನವು ಸ್ವಲ್ಪ ತಡೆಯಾಗಿದೆ. ನಿಧಾನವಾಗಿ ಚಲಿಸುತ್ತಿದೆ. ಮೇ ೨೫ನೇ ತಾರೀಖಿನ ಹೊತ್ತಿಗೆ ಮಳೆ ಮಾರುತವು ಕೊಲಂಬೋದಲ್ಲಿ ಕಾಣಿಸಿಕೊಳ್ಳಬೇಕಾಗಿತ್ತು. ಆದರೆ ಇನ್ನೂ ಅದರ ಸೂಚನೆ ಇಲ್ಲ. ನಾಲ್ಕು ದಿವಸಗಳ ಕಾಲ ತಡೆಯಾಗಿದೆ.

ಇನ್ನೂ ಒಂದೆರಡು ದಿವಸಗಳಲ್ಲಿ ಸಿಂಹಳ ದ್ವೀಪದಲ್ಲಿ ಮಳೆ ಆರಂಭವಾಗುವ ಸೂಚನೆಗಳಿವೆ.

ಸಿಂಹಳ ದ್ವೀಪದ ದಕ್ಷಿಣದಲ್ಲಾಗಲೀ ಅಥವಾ ಭಾರತದ ದಕ್ಷಿಣ ಕೊನೆಯಲ್ಲಾಗಲಿ, ಮಳೆ ಮಾರುತವು ತಡವಾಗಿ ಕಾಣಿಸಿಕೊಂಡರೆ ಮಳೆಗಾಲ ಪಶ್ಚಿಮ ತೀರದಲ್ಲಿ ಶುರುವಾಗುವದು ಸ್ವಲ್ಪ ಕಾಲವಾಗಬಹುದೆಂದು ಹೇಳಲಾಗದು.

೧೯೫೨ರಲ್ಲಿ ಮಳೆ ಮಾರುತದ ಅರಬೀ ಸಮುದ್ರದ ಶಾಖೆಯು ಜೂನ್ ೧೦ರ ವೇಳೆಗೆ ಮಲಬಾರ್ ತೀರದಲ್ಲಿ ಕಾಣಿಸಿಕೊಂಡಿತು. ಮಾಮೂಲಿಗಿಂತ ಹತ್ತು ದಿವಸಗಳು ತಡವಾಯಿತು. ಆದರೆ ಅದರ ಚಲನವಲನವು ತೀವ್ರವಾಗಿ ಕೊಂಕಣ, ಡೆಕ್ಕನ್ ದೇಶ್, ಪಶ್ಚಿಮ ತೀರದಲ್ಲಿ ವ್ಯಾಪಿಸಿತು.

ಮಳೆ ಮಾರುತವು ಚಕ್ರಾಕಾರದಲ್ಲಿ ಸುತ್ತುತ್ತ ಬಲು ಬೇಗ ತೀವ್ರತೆಯನ್ನು ಹೊಂದಿ ನುಗ್ಗಬಹುದು ಎಂಬುದಾಗಿ ಒಬ್ಬ ಪ್ರವೀಣರು ಹೇಳಿದರು.

ಮಳೆ ಮಾರುತವು ದಕ್ಷಿಣದ ಕೊನೆಯಲ್ಲಿ ಕಾಣಿಸಿಕೊಂಡ ಮೇಲೆ ಅದರ ಚಲನವಲನದ ಪ್ರತಿಕ್ರಿಯೆಗಳನ್ನು ಸ್ಪಷ್ಟವಾಗಿ ತಿಳಿಯಬಹುದೆಂದು ಬಲ್ಲವರು ಹೇಳುತ್ತಾರೆ.

ರಾಣಿ ಎಲಿಜಬೆತ್ತರಿಗೆ ಭಾರತದ ಕಾಣಿಕೆ

ಭಾರತದ ಸಸ್ಯಗಳಿಂದ ತಯಾರಿಸಿದ ಒಂದು ಕೊಡೆ ಮತ್ತು ವಿವಿಧ ಹೂಗಳಿಂದ ರಚಿಸಿದ ೭ ಬುಟ್ಟಿಗಳನ್ನು ಬೊಂಬಾಯಿಯಿಂದ ವಿಮಾನದ ಮೂಲಕ ಲಂಡನಿಗೆ ಕೊಂಡು ಹೋಗಲಾಗಿದೆ. ಪಟ್ಟಾಭಿಷೇಕ ಮೆರವಣಿಗೆಯ ದಾರಿಯಲ್ಲಿ ಭಾರತಕ್ಕೆಂದು ಪ್ರತ್ಯೇಕಿಸಲ್ಪಟ್ಟ ಸ್ಥಳವನ್ನು ಇವುಗಳಿಂದ ಅಲಂಕರಿಸಲಾಗುವದು. ಸಿಂಹಾಸನಾರೋಹಣಕ್ಕಾಗಿ ವೆಸ್ಟ್ ಮಿನಿಸ್ಟರ್ ಎಬೆಗೆ ರಾಣಿಯವರು ಹೋಗುವಾಗ ಇವನ್ನು ನೋಡಲಿರುವರು.

ಭಾಷಾವಾರು ಪ್ರಾಂತೀಕರಣ

ಶ್ರೀ ಅಗರ್ವಾಲರ ವಿವರಣೆ

"ಭಾರತ ಸರಕಾರವು ಉಚ್ಚಮಟ್ಟದ ಕಮಿಷನನ್ನು ರಚಿಸಿ ಭಾಷಾವಾರು ಪ್ರಾಂತಗಳನ್ನಾಗಿ ದೇಶವನ್ನು ಪುನರ್ವಿಂಗಡಿಸುವ ಉದ್ದೇಶದಿಂದಿರುವದು. ಅನಿಶ್ಚಿತ ಸಮಯದ ತನಕ ಈ ಭಾಷಾ ಸಮಸ್ಯೆಯನ್ನು ಮೂಲೆಗೊತ್ತಲು ಅಥವಾ ಮುಂದುವರಿಸುವ ಉದ್ದೇಶ ಸರಕಾರಕ್ಕೆ ಇಲ್ಲ" ಎಂದು ಎ. ಐ. ಸಿ. ಸಿ. ಯ ಜನರಲ್ ಸೆಕ್ರೆಟರಿಗಳಾದ ಶ್ರೀ ಅಗರವಾಲರು ಹುಬ್ಬಳ್ಳಿಯ ಬಹಿರಂಗ ಸಭೆಯಲ್ಲಿ ತಿಳಿಸಿದರು.

"ಭಾರತದ ಆರ್ಥಿಕ ಮತ್ತಿತರ ಭದ್ರತೆಗಳಿಗೆ ಧಕ್ಕೆ ಬಾರದಂತೆ ಕಾಂಗ್ರೆಸು ಹಿಂದಿನಿಂದಲೂ ದೇಶವನ್ನು ಭಾಷಾವಾರು ತಳಹದಿಯಲ್ಲಿ ಪುನರ್ವ್ಯವಸ್ಥೆಗೊಳಿಸಲು ಇಚ್ಛಿಸಿದ್ದಿದೆ. ಆಂಧ್ರಪ್ರಾಂತವು ರಚಿತವಾದೊಡನೆ ಸರಕಾರದಿಂದ ನೇಮಿತವಾದ ಈ ಕಮಿಷನು ಈ ವರ್ಷಾಂತ್ಯದಲ್ಲಿ ಕಾರ್ಯಕ್ಕೆ ತೊಡಗುವದು.

"ಒಂದು ಕ್ರಮವನ್ನನುಸರಿಸಿ ದೇಶದ ನಾನಾ ಭಾಷಾ ಪ್ರಾಂತಗಳನ್ನು ರೂಪಿಸಲಾಗುವದು. ಈ ಕಮಿಷನು ಒಂದು ವರ್ಷದೊಳಗಾಗಿ ತನ್ನ ವರದಿಯನ್ನು ಸರಕಾರಕ್ಕೆ ಒಪ್ಪಿಸಬಹುದು. ಆದುದರಿಂದ ಬೇಕಂತಲೇ ಕಾಲಕಳೆಯುವದಿಲ್ಲ. ದೇಶದ ಉಪವಾಸದ ಬೆದರಿಕೆ ಅಥವಾ ಕಾನೂನು ಉಲ್ಲಂಘನೆಯ ಅಕ್ರಮ ವರ್ತನೆಗಳು ತಲೆದೋರದಂತೆ ಸರಕಾರ ಮಾಡಬೇಕಾಗಿದೆ. ಆ ಹಾದಿಯಲ್ಲಿ ಮುಂದುವರಿಯುವವರು ದೇಶದ ಹಾನಿಬಯಸಿದಂತಾಗುವದು.

"ಚಾರಿತ್ರಿಕ ಅವಶ್ಯಕತೆಯಿಂದಾಗಿ ತಲೆದೋರಿದ 'ಸಿ' ವಿಭಾಗದ ಪ್ರಾಂತ್ಯಗಳನ್ನು 'ಎ' ಅಥವಾ 'ಬಿ' ವಿಭಾಗಗಳೊಡನೆ ವಿಲೀನಗೊಳಿಸಲು ಕೂಡ ಈ ಕಮಿಷನು ಪ್ರಯತ್ನಿಸುವದು. ದೇಶದ ಭೂಪಟವನ್ನೇ ಬೇರೆಯಾಗಿ ಬರೆಯಲಾಗುವದು.

"ಭಾಷಾವಾರು ಪ್ರಾಂತೀಕರಣದಿಂದಲೇ ನಮ್ಮ ಸಮಸ್ಯೆಗಳು ಮುಗಿದಂತಾಗಿಲ್ಲ. ನಮ್ಮಲ್ಲಿ ಬೆಳೆದಿರುವ ಬಡತನ ಮತ್ತು ನಿರುದ್ಯೋಗವನ್ನು ಹೋಗಲಾಡಿಸಬೇಕಾಗಿದೆ. ಆದುದರಿಂದ ಅಖಂಡ ಭಾರತವು ರಾಷ್ಟ್ರೀಯ ಐಕ್ಯತೆಯಿಂದ ಮುಂದಕ್ಕೆ ಸಾಗಬೇಕು" ಎಂದು ಅಗರ್ವಾಲರು ತಿಳಿಸಿದರು.

INSURE WITH
OR REPRESENT
INDIA'S OLDEST LIFE OFFICE:
THE BOMBAY MUTUAL LIFE ASSURANCE SOCIETY, LTD.

BUSINESS IN FORCE OVER 40 CRORES
ASSETS .... OVER 12 CRORES

Applications from energetic youngmen are invited for representation.

25-11

Head Office; BOMBAY.
Branch: 172. 3. Narasimharaja Road. BANGALORE 2.

Edited Printed and Published by P. I. BELLIAPPA at 'KODAGU' Press Mercara, for Kod g Ltd.

ಎರಡನೇ ಎಲಿಝಬೆತ್.

ಕಿರೀಟ ಧಾರಣೋತ್ಸವ.

ಇಂಗ್ಲೆಂಡಿನ ೨೭ ವಯಸ್ಸಿನ ಮಹಾರಾಣಿಯಾದ ಎಲಿಝಬೆತರ ಕಿರೀಟಧಾರಣಾ ಮಹೋತ್ಸವವು ತಾ. ೨ರಲ್ಲಿ ಅತೀ ವಿಜೃಂಭಣೆಯಿಂದ ನಡೆಯಿತು. ಸಾವಿರ ವರ್ಷಗಳ ಹಿಂದಿನ ಹಳೆಯ ಈಗರ್ಜಿಯಾದ ವೆಸ್ಟ್‌ಮಿನಿಸ್ಟರ್ ಚರ್ಚಿನಲ್ಲಿ ಈ ಸಮಾರಂಭವು ನಡೆಯಿತು. ೩॥ ಗಂಟೆಗಳ ವರೆಗೆ ಸಾವಿರ ವರ್ಷಗಳ ಹಿಂದಿನ ಪದ್ಧತಿಯ ಮೇರೆ ಈ ಕಾರ್ಯಕಲಾಪ ನಡೆಯಿತು. ಈ ವಿಚಾರವಾಗಿ ಪತ್ರಿಕಾ ಪ್ರತಿನಿಧಿಗಳಾದ ಶ್ರೀ ಸುಂದರ ಕಬಾಡಿಯವರು ಹೀಗೆ ಬರೆಯುತ್ತಾರೆ:

ಈ ಸಮಾರಂಭವನ್ನು ನೋಡಲು ಅಲ್ಲಿ ಹಾಜರಿರಬೇಕಿತ್ತು. ಅದನ್ನು ವರ್ಣಿಸಲೆಳಿಸುವದು ಹುಚ್ಚುತನ. ವರ್ಣಿಸಬೇಕಾದರೂ ಕವಿಯೊಬ್ಬನು ಮಾಡಬೇಕೇ ವಿನಾ ಬೇರೆಯವರಿಂದ ಸಾಧ್ಯವಾಗದು. ಆ ನಗಗಳು, ಆಡಂಬರದ ಉಡಿಗೆ ತೊಡಿಗೆ, ಹಿಂದಿನ ಕಾಲದ ಜೀವನವನ್ನು ಈ ಆಧುನಿಕ ಯುಗದಲ್ಲಿ ಜ್ಞಾಪಕಕ್ಕೆ ತರುವ ದೃಶ್ಯಗಳು, ಗುರುಗಳು ಉಚ್ಛರಿಸುತ್ತಿದ್ದ ಆ ಬೈಬಲಿನ ಮನೋಹರನಾದ ಇವೆಲ್ಲವುಗಳಿಂದ ವಾತಾವರಣವು ಗಂಭೀರವೂ, ಸಂದರ್ಭಕ್ಕೆ ತಕ್ಕಂತೆ ಉಚಿತವೂ ಆಗಿತ್ತು.

ಇನ್ನೂ ಎಳೆ ಪ್ರಾಯದ ರಾಣಿಯು ಚಿನ್ನದ ವರ್ಣದ ವಸನಗಳನ್ನು ಧರಿಸಿ ಎರಡು ಕೈಗಳಲ್ಲಿ ರಾಜದಂಡಗಳನ್ನು ಹಿಡಿದು ಕಿರೀಟಧಾರಣೆಯ ಸಮಯಕ್ಕಾಗಿ ಕಾದು ಕುಳಿತ ದೃಶ್ಯವು ನನಗೆ ಮಾತ್ರವಲ್ಲ, ಇತರ ಹಲವರಿಗೂ ಪಾಪ ಎನಿಸಿರಬೇಕು. ವೆಸ್ಟ್ ಮಿನಿಸ್ಟರ್ ಈಗರ್ಜಿಯ ಡೀನರು ಕೈಯಲ್ಲಿ ಕಿರೀಟವನ್ನು ಹಿಡಿದು ಗಂಭೀರ ಹೆಜ್ಜೆಯಿಂದ ಹತ್ತಿರ ಬಂದರು. ಕಿರೀಟವನ್ನು ಕೆಲ ಸಮಯ ಮೇಲೆತ್ತಿ ಹಿಡಿದು ನಂತರ ರಾಣಿಯ ತಲೆಯ ಮೇಲೆ ಅತೀ ಭಕ್ತಿ ಗೌರವಗಳಿಂದ ಇರಿಸಿದರು.

ಈ ಸಮಾರಂಭದ ವ್ಯವಸ್ಥೆ ಯಾರನ್ನಾದರೂ ಬೆರಗುಗೊಳಿಸುವಂತಿತ್ತು. ಎಲ್ಲಿ ಯಾವ ದಿಕ್ಕಿಗೆ ನೋಡಿದರೂ ಇದು ೨೦ನೇ ಶತಮಾನವೆಂಬ ಭಾವನೆ ಬಾರದ ರೀತಿ ಆ ೧೭ನೇ ಶತಮಾನದ ವಾತಾವರಣವೇ ತೋರಬರುತ್ತಿತ್ತು. ಆ ಉಡಿಗೆ ತೊಡಿಗೆ, ಗುರುಗಳ ಸಮೂಹ, ಆ ಹಳೇ ರೀತಿಯ ಗಣ್ಯ ವ್ಯಕ್ತಿಗಳು ಎಲ್ಲವೂ ಕೂಡ ೧೭ನೇ ಶತಮಾನವನ್ನು ಇಂದು ಚಿತ್ರಿಸುವಂತಿತ್ತು. ರಾಣಿಯವರ ಕಿರೀಟ ಧಾರಣೋತ್ಸವವನ್ನು ಜಗತ್ತಿನ ಮಿಲಿಯಾಂತರ ಜನರು ನೋಡಲು ಅನುವಾಗುವಂತೆ ಇರಿಸಿದ್ದ ಟೆಲಿವಿಜನ್ ಯಂತ್ರಗಳು ಮಾತ್ರ ಆಧುನಿಕ ಯುಗವನ್ನು ಜ್ಞಾಪಿಸುವಂತಿದ್ದವು.

ಇಂಗ್ಲೆಂಡಿನ ಮಹಾರಾಣಿಯವರ ಕಿರೀಟಧಾರಣ ಮಹೋತ್ಸವವನ್ನು ನೋಡುತ್ತಿದ್ದ ಹಾಗೆಯೇ ನಮ್ಮ ಆರ್ಯರ ಭರತಖಂಡದಲ್ಲಿ ನಾವು ಹಿಂದೆ ನಡೆಸಿದ ರಾಜ ಮಹಾರಾಜರುಗಳ ಪಟ್ಟಾಭಿಷೇಕದ ನೆನಪಾಯಿತು. ಗಂಗಾ, ಯಮುನಾ, ಸರಸ್ವತಿ ನದಿಗಳ ಪುಣ್ಯ ತೀರ್ಥದಿಂದ ಸ್ನಾನಿಸಿ ದೇವ ದೇವತೆಗಳ ಅರ್ಚನೆಯನ್ನು ಮಾಡಿ ಅರಸನು ಜನಹಿತಕರವಾಗಿ ಆಡಳಿತ ನಡೆಸಲಿ, ಅತನು ಚಿರಾಯುವಾಗಿ ಬಾಳಲೀ ಎಂದು ಹರಸುತ್ತಿದ್ದ ನೆನಪಾಯಿತು. ಅದೇ ಪದ್ಧತಿ ಇಂದು ಬ್ರಿಟನಿನಲ್ಲಿ ಒಂದಿಷ್ಟು ತಪ್ಪಿಲ್ಲದೆ ಆಚರಿಸಲ್ಪಟ್ಟಿತು.

ಜಗತ್ತಿನ ಚರಿತ್ರೆಯಲ್ಲಿ ಅನೇಕ ರಾಜ ಕುಟುಂಬಗಳು ನಾಶವಾಗಿವೆ. ಹಾಪ್ಸ್‌ಬರ್ಗ್ ಹೌಸ್, ಹೊಯೆನ್‌ಝೋಲರ್ನ್, ಹೇಪ್ಸಬರ್ಗ್, ರೋಮನೋವ್ ಮೊದಲಾದ ರಾಜಮನೆತನಗಳು ನಿರ್ನಾಮವಾಗಿದ್ದರೂ ಬ್ರಿಟನಿನ ವಿಂಡ್ಸರ್ ಮನೆತನವು ಇಂದಿಗೂ ಭದ್ರ ತಳಹದಿಯಲ್ಲಿದೆ. ಜಗತ್ತಿನಲ್ಲಿ ಭಾರತದಲ್ಲಿ ನಡೆದಂತೆಯೇ ರಾಜಮಹಾರಾಜರ ಗದ್ದುಗೆಗಳುರುಳಿ ಹೋಗಿದ್ದರೂ ಬ್ರಿಟನಿನಲ್ಲಿ ಈ ರಾಜಮನೆತನವು ರಾಷ್ಟ್ರದ ಐಕ್ಯತೆಗೂ, ಶಕ್ತಿಗೂ ಕಾರಣವಾಗಿ ಇಂದೂ ಕೂಡ ಗೌರವ ಪಡೆಯುತ್ತಿದೆ.

ಕಿರೀಟಧಾರಣಾ ಮಹೋತ್ಸವಕ್ಕಾಗಿ ಬಕಿಂಗ್‌ಹಾಮ್ ಅರಮನೆಯಿಂದ ವೆಸ್ಟ್‌ಮಿನಿಸ್ಟರ್ ಚರ್ಚಿಗೆ ಹೊರಟ ರಾಣಿಯವರ ಮಹಾ ಮೆರವಣಿಗೆಯಲ್ಲಿ ಪಂಡಿತ ನೆಹರೂರವರು ತಮ್ಮ ಮಗಳು ಇಂದಿರಾಗಾಂಧಿಯವರೊಡನಿದ್ದರು. ಕಾಮನ್‌ವೆಲ್ತ್ ಮುಖ್ಯ ಮಂತ್ರಿಗಳಿಗೆ ಏರ್ಪಡಿಸಿದ್ದ ಎರಡು ಕುದುರೆಗಳ ರಥವೊಂದರಲ್ಲಿ ನೆಹರೂ ಇದ್ದರು. ಇವರ ಹಿಂದೆ ಅದೇ ರೀತಿಯ ರಥದಲ್ಲಿ ಪಾಕಿಸ್ತಾನದ ಮುಖ್ಯ ಮಂತ್ರಿ ಮಹಮ್ಮದಾಲಿಯವರೂ ಅವರ ಪತ್ನಿಯೂ ಇದ್ದರು. ಅವರ ಹಿಂದೆ ಸಿಲೋನಿನ ಮುಖ್ಯ ಮಂತ್ರಿಗಳಿದ್ದರು. ಇತರ ಕಾಮನ್‌ವೆಲ್ತ್ ಮುಖ್ಯ ಮಂತ್ರಿಗಳಂತೆಯೇ ವೆಸ್ಟ್‌ಮಿನಿಸ್ಟರ್ ಚರ್ಚಿನೊಳಗಾದ ರಾಣಿಯವರ ಮೆರವಣಿಗೆಯಲ್ಲಿ ನೆಹರೂರವರು ಭಾಗವಹಿಸಿದ್ದರೂ ಭಾರತವು ಪ್ರಜಾರಾಜ್ಯವಾದ ಕಾರಣ ಇತರ ಕಾಮನ್‌ವೆಲ್ತ್ ರಾಷ್ಟ್ರಗಳಂತೆ ತಮ್ಮ ಧ್ವಜವನ್ನು ಮೆರವಣಿಗೆಯಲ್ಲಿ ಉಪಯೋಗಿಸಲಿಲ್ಲ.

ಈ ಮಹಾ ಸಮಾರಂಭದಲ್ಲಿ ಜನರ ನೂಕುನುಗ್ಗಾಟ ವಿಪರೀತವಿತ್ತೆಂದೂ, ವಾಹನಗಳು ಮೂರು ಮಿನಿಟಿನಲ್ಲಿ ತಲಪುವ ದಾರಿಯನ್ನು ಮುಟ್ಟಲು ನಲುವತ್ತು ಮಿನಿಟು ಹಿಡಿಯುತ್ತಿತ್ತೆಂದೂ ತಿಳಿಯಬರುತ್ತದೆ. ಲಂಡನಿನ ಟ್ರಫಾಲ್ಗರ್ ಚೌಕದಲ್ಲಿ ಸುಮಾರು ಐದು ಸಾವಿರಕ್ಕೂ ಮಿಕ್ಕಿ ಜನರು ಹೊರಗೆ ರಾತ್ರಿ ಹಾಸಿಗೆ ಹಾಕಿಕೊಂಡು ಊಟ ಮೊದಲಾದುವನ್ನು ಜೊತೆಯಲ್ಲಿ ತೆಗೆದುಕೊಂಡು ಕಾಲ ಕಳೆದರಂತೆ!

ಎವರೆಸ್ಟ್ ಶಿಖರವನ್ನೇರಿದರು.

ನ್ಯೂಝಿಲೆಂಡಿನ ಹಿಲರಿ ಮತ್ತು ನೇಪಾಲಿನ ಟೆನ್‌ಸಿಂಗರ ಸಾಹಸ.

ಜಗತ್ತಿನಲ್ಲೇ ಅತೀ ಎತ್ತರ ಪರ್ವತ ಶಿಖರವಾದ ಹಿಮಾಲಯದ ೨೯೦೦೨ ಅಡಿ ಎತ್ತರದ ಎವರೆಸ್ಟನ್ನು ಏರಲು ಅನೇಕ ವರ್ಷಗಳಿಂದ ಜಗತ್ತಿನ ವಿವಿಧ ರಾಷ್ಟ್ರಗಳು ಪ್ರಯತ್ನಪಡುತ್ತಿದ್ದರೂ ಈ ವರೆಗೆ ಅದನ್ನು ಏರುವದು ಸಾಧ್ಯವಾಗಿರಲಿಲ್ಲ. ೧೯೨೧ ರಲ್ಲಿ ಬ್ರಿಟನಿನ ಲೆ. ಕ. ಹೊವಾರ್ಡರ ಮುಂದಾಳ್ತನದಲ್ಲಿ ನಡೆದ ಪ್ರಯತ್ನದಲ್ಲಿ ೨೩,೦೦೦ ಅಡಿಗಳ ವರೆಗೆ ಏರಲಾಯಿತು. ೧೯೨೨ ರಲ್ಲಿ ಬ್ರಿಟನಿನ ಬ್ರಿಗೇಡಿಯರ್ ಜಾರ್ಲ್ಸ್ ಬ್ರೂಸ್‌ರವರ ಮುಂದಾಳ್ತನದಲ್ಲಿ ನಡೆದ ಪ್ರಯತ್ನದಲ್ಲಿ ೨೭,೩೦೦ ಅಡಿಗಳ ವರೆಗೆ ಏರಲಾಯಿತ್ತು. ೧೯೨೪ ರಲ್ಲಿ ನಾರ್ಟನ್ ಎಂಬವರ ಮುಂದಾಳ್ತನದಲ್ಲಿ ನಡೆದ ಬ್ರಿಟಿಷ್ ಪ್ರಯತ್ನದಲ್ಲಿ ೨೮,೧೦೦ ಅಡಿ ಏರಲಾಯಿತು. ಆದರೆ ಈ ಪ್ರಯತ್ನದಲ್ಲಿ ಇರ್ವಿನ್ ಮತ್ತು ಮೆಲೋರಿ ಎಂಬವರು ಪ್ರಾಣ ಕಳಕೊಂಡರು. ೧೯೩೩ ರ ರಟ್ಲೆಡ್ಜ್‌ರವರ ಪ್ರಯತ್ನದಲ್ಲಿ ೨೮,೧೦೦ ಅಡಿಗಳನ್ನು ಮೀರುವದಾಗಲಿಲ್ಲ. ೧೯೩೬, ೧೯೩೮ ರಲ್ಲಿ ೨೩,೦೦೦ಕ್ಕೆ ಹೆಚ್ಚು ಏರುವದು ಅಸಾಧ್ಯವಾಯಿತು. ೧೯೩೮ ರಲ್ಲಿ ೨೭,೦೦೦ ಅಡಿ ಏರಲಾಯಿತು. ೧೯೫೧ ರಲ್ಲಿ ಕೇವಲ ೨೦,೬೦೦ ಅಡಿಗಳಿಂದಲೇ ಹಿಂತಿರುಗಬೇಕಾಯಿತು. ೧೯೫೨ ರಲ್ಲಿ ಎಡ್ವರ್ಡ್ ವಿಸೆಟರ ಮುಂದಾಳ್ತನದಲ್ಲಿ ನಡೆದ ಸ್ವಿಸ್ ಪ್ರಯತ್ನದಲ್ಲಿ ೨೮,೨೧೫ ಅಡಿ ಏರಲಾಯಿತು. ೧೯೫೨ ರಲ್ಲಿ ಪುನಹ ನಡೆದ ಸ್ವಿಸ್ ಪ್ರಯತ್ನದಲ್ಲಿ ೨೮,೫೭೫ ಅಡಿ ಏರಲಾಗಿತ್ತು. ಆದರೆ ಈ ವರ್ಷ ಮಾರ್ಚ್ ತಿಂಗಳಿಂದ ಕರ್ನಲ್ ಹಂಟ್‌ರವರ ಮುಂದಾಳ್ತನದಲ್ಲಿ ಬ್ರಿಟಿಷ್ ಪ್ರಯತ್ನವೊಂದು ನಡೆಯುತ್ತಿತ್ತು. ಈ ಮೂರು ತಿಂಗಳುಗಳಲ್ಲಿ ಪ್ರಕೃತಿಯ ವಿರುದ್ಧವಾಗಿ ಇವರು ಪ್ರಯತ್ನಿಸಿ ಮೇ ತಾರೀಕು ೨೯ ರಲ್ಲಿ ಈ ತಂಡದಲ್ಲಿದ್ದ ನ್ಯೂಝಿಲೆಂಡಿನ ಹಿಲ್ಲರಿ ಮತ್ತು ನೇಪಾಲಿನ ಟೆರ್ಸಾ ಟೆನ್‌ಸಿಂಗ್ ಎಂಬವರು ಹಿಮಾಲಯದ ಅತ್ಯುಚ್ಚ ಶಿಖರ ಎವರೆಸ್ಟ್ (೨೯೦೦೨) ಅಡಿಗಳನ್ನು ಏರಲು ಶಕ್ತರಾದರು. ಇವರು ಅಲ್ಲಿಗೆ ತಲಪಿ ಬ್ರಿಟನಿನ ಯೂನಿಯನ್ ಜಾಕ್, ನೇಪಾಲ್ ಮತ್ತು ಸಂಯುಕ್ತ ರಾಷ್ಟ್ರಗಳ ಮೂರು ಧ್ವಜಗಳನ್ನು ಆ ಶಿಖರದ ಮೇಲೆ ನೆಟ್ಟಿರುವರು.

ಪ್ರಕೃತಿಯನ್ನು ಸ್ವಾಧೀನಪಡಿಸಲು ಮಾನವನು ಅನಾದಿಯಿಂದಲೇ ಮಹಾ ಪ್ರಯತ್ನಗಳನ್ನು ಮಾಡುತ್ತಾ ಕೃತಕೃತ್ಯನಾಗಿದ್ದಾನೆ. ಹಿಮಾಲಯವು ಮಾನವನ ಈ ಪ್ರಯತ್ನಗಳಿಗೆ ಮೀರಿ ಅಜೇಯವಾಗಿ ನಿಂತಿತ್ತು. ಆದರೆ ಮಾನವನು ತನ್ನ ಸತತ ಪ್ರಯತ್ನದಿಂದ ಈ ಶಿಖರವನ್ನೇರಿ ತನ್ನ ಧ್ವಜವನ್ನಲ್ಲಿ ಹಾರಿಸಿದ್ದಾನೆ. ಬ್ರಿಟನಿನ ರಾಣಿಯಾದ ಎಲಿಝಬೆತ್ತರ ಕಿರೀಟ ಧಾರಣೋತ್ಸವದ ಪೂರ್ವಕಾಣಿಕೆಯಾಗಿ ಈ ದಾಖಲೆಯನ್ನು ಬ್ರಿಟನು ಸ್ಥಾಪಿಸಿ ಜಗತ್ಕೀರ್ತಿಯನ್ನು ಪಡೆದಿದೆ.

ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿ ಮೀಟಿಂಗು

ತಾ. ೩೦ರಲ್ಲಿ ಜಿಲ್ಲಾ ಕಾಂಗ್ರೆಸ್ ಮೀಟಿಂಗು ಶ್ರೀ ಕೆ. ಸಿ. ಕರುಂಬಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಈ ನಿರ್ಣಯಗಳಾದವು.

(೧) ಕೇಂದ್ರದ ರಕ್ಷಣಾ ಮಂತ್ರಿ ಶ್ರೀ ಗೋಪಾಲಸ್ವಾಮಿ ಐಯ್ಯಂಗಾರ್ ವಿದೇಶದ ರಾಯಭಾರಿ ಅಸಾಫ್ ಅಲಿಖಾನ್, ಅಲ್ಲದೆ ಕೊಡಗಿನ ಸೆಶನ್ಸ್ ಜಡ್ಜ್ ಶ್ರೀ ಎಸ್. ಮುದ್ದಪ್ಪ ಈ ಮೂರು ಜನರ ನಿಧನಕ್ಕಾಗಿ ಕಮಿಟಿಯಲ್ಲಿ ಸಂತಾಪ ಸೂಚಕ ಠರಾವನ್ನು ಮಂಜೂರು ಮಾಡಲಾಯಿತು.

(೨) ಜಿಲ್ಲಾ ಕಾಂಗ್ರೆಸ್ ಕಮಿಟಿಯ ಲೆಕ್ಕ ಪತ್ರವನ್ನು ಸಭೆಯ ಮುಂದಿಟ್ಟು, ಕಾಂಗ್ರೆಸ್ ಮೆಂಬರರ ಲೆಕ್ಕದ ವಿವರವನ್ನು ಪತ್ರಿಕೆಯಲ್ಲಿ ಪ್ರಕಟಿಸುವಂತೆಯೂ, ಮತ್ತು ಈ ವರೆಗಿನ ಲೆಕ್ಕ ಪತ್ರಗಳನ್ನು ಹೊಸ ಚುನಾವಣೆಯ ಮುಂಚಿತವಾಗಿ ಶ್ರೀ ಪಿ. ಡಿ. ಸುಬ್ಬೈಯ್ಯನವರು ಆಡಿಟ್ ಮಾಡುವಂತೆಯೂ ಕೇಳಿಕೊಂಡು ಒಪ್ಪಿಕೊಳ್ಳಲಾಯಿತು.

(೩) ಜಿಲ್ಲಾ ಕಾಂಗ್ರೆಸ್ ಕಮಿಟಿ ಹಾಗೂ ನಾಡು ಕಾಂಗ್ರೆಸ್ ಕಮಿಟಿಗಳ ಹೊಸ ಚುನಾವಣೆಯ ದಿನ ಮೊದಲಾದುವನ್ನು ನಿಶ್ಚಯ ಮಾಡುವರೆ ತಾ. ೧೫—೬—೫೩ ರಲ್ಲಿ ಕಾರ್ಯ ನಿರ್ವಾಹಕ ಸಮಿತಿಯ ಮೀಟಿಂಗನ್ನು ಜರಗಿಸುವಂತೆ ತೀರ್ಮಾನಿಸಲಾಯಿತು.

(೪) ಪಾರ್ಲ್ಯಾಮೆಂಟಿನಲ್ಲಿ ಇತ್ತೀಚೆಗೆ ಜರಗಿದ ರಾಜಕೀಯ ಪರಿಷತ್ತಿನಲ್ಲಿ ಕೊಡಗು ಸ್ವಾತಂತ್ರ್ಯ ಮದ್ರಾಸು ಪ್ರಾಂತದ ಒಂದು ಭಾಗವಾಗಿ ಇರಬೇಕೆಂದು ಮಾಡಿದ ನಿರ್ಣಯವನ್ನು ಬಹಳ ಅಸಮಾಧಾನದಿಂದ [illegible] ಕೊಡಗಿನ ವಿಷ್ಯದ ತೀರ್ಮಾನದ ವಿಷಯ ಬರುವ ಸಂಧರ್ಭದಲ್ಲಿ ಕೊಡಗಿನ ಜನತೆಯ ಅಭಿಪ್ರಾಯವನ್ನು ಕೇಳಿಕೊಂಡೇ ತೀರ್ಮಾನಿಸತಕ್ಕದೆಂಬದಾಗಿ ಈ ಮೊದಲು ಮಹಾ ಚುನಾವಣೆಯ ಕಾಲದಲ್ಲಿ ಕೊಡಗು ಕಾಂಗ್ರೆಸ್ಸು ಜನತೆಗೆ ಕೊಟ್ಟಿದ್ದ ಭರವಸೆಯನ್ನು ಪುನಃರುಕ್ತ ಪಡಿಸುತ್ತಾ ಮೇಲ್ಕಾಣಿಸಿದ ರಾಜಕೀಯ ಪರಿಷತ್ತಿನ ತೀರ್ಮಾನವನ್ನು ತೀವ್ರವಾಗಿ ವಿರೋಧಿಸಲಾಯಿತು.

ಇಂಟರ್ ಮೀಡಿಯೇಟ್ ಪರೀಕ್ಷಾ ಫಲಿತಾಂಶ.

ಪ್ರಥಮ ತರಗತಿ.

ಶ್ರೀಗಳಾದ ಬಿ. ಎ. ಈಶ್ವರ, ಎ. ಎಸ್. ಗೋವಿಂದ ಶರ್ಮ, ಎಚ್. ವಿ. ಕೃಷ್ಣ, ಎಚ್. ಆರ್. ಪಾರ್ಥಸಾರಥಿ, ಎ. ಸಿ. ಪೆನ್ನಯ್ಯ, ಅಬ್ದುಲ್ ಸತ್ತಾರ್, ಕೆ. ಎಂ. ಭೀಮಯ್ಯ, ಎಸ್ ಎಂ. ಬಿದ್ದಪ್ಪ, ಎಂ. ಎಸ್ ಭೂರನ್, ಕೆ. ಬಿ. ಶಿವರುದ್ರಪ್ಪ, ಎಂ ಶ್ರೀಕಂಠರಾವ್, ರೋಝಿ ಡಿಸೋಜ, ಕೆ. ಬಿ. ಸುಬ್ಬಯ್ಯ, ಎನ್. ಪಿ. ಪಾರ್ವತಿ

ಪಾಸಾದವರು.

ಶ್ರೀಗಳಾದ ಸಿ ಡಿ. ಅಪ್ಪಯ್ಯ, ಎನ್. ಕೃಷ್ಣರಾಜ, ಸಿ. ಎಸ್. ಮುತ್ತಣ್ಣ, ಪಿ. ಡಿ. ಬೋಜಮ್ಮ, ಸದಾನಂದ ಪಾಕಲ, ಸಿ. ಎಂ. ಗಣಪತಿ, ಜಿ. ಟಿ. ಕುಶಾಲಪ್ಪ, ಕೆ. ಎಸ್. ಕುಶಾಲಪ್ಪ, ಜಿ. ಸಿ. ಪೆರುಮಾಳ್, ಡಿ. ಎ. ರಾಮಯ್ಯ, ಪಿ. ಯು. ಚಿತ್ರ, ಕೆ. ವಿಟಲರೈ, ಎಸ್. ಬಿ. ಲೀಲ, ಕೆ. ಎಸ್. ಚಂಪಾವತಿ, ಎಂ. ಎಂ. ಗಂಗಮ್ಮ ಎನ್. ಪಿ. ಕನಕ, ಬಿ. ಕೆ. ಸಿತಾರ, ಕೆ. ಎಸ್. ನಾಣಯ್ಯ, ಬಿ. ಎಂ. ನಂಜಪ್ಪ' ರಾಧಾಕೃಷ್ಣ ಗೌಡ, ಬಿ. ಶಂಕರಭಟ್ಟ, ಟಿ. ಎ ಸಿದ್ದಾರ್ಥ, ಎ. ಕೆ. ಸುವರ್ಣ, ಶಂಕರರಾಜಪ್ಪ ಮತ್ತು ಕೆ. ಕೆ. ಮಂಜುಳ.

ವಿವಿಧ ಭಾಗವಲ್ಲಿ ತೇರ್ಗಡೆಯಾದವರ ಪಟ್ಟಿಯನ್ನು ಮುಂದಿನ ವಾರ ಕೊಡಲಾಗುವದು.

ಕೊಡಗು

ತಾರೀಕು ೫ ಜೂನ್ ೧೯೫೩ನೇ ಶುಕ್ರವಾರ

ಸ್ಕೂಲ್ ಫೈನಲ್ ಪರೀಕ್ಷಾ ಫಲಿತಾಂಶ.

ಈ ವರ್ಷದ ಸ್ಕೂಲ್ ಫೈನಲ್ ಪರೀಕ್ಷಾ ಫಲಿತಾಂಶವು ಹೊರಬಿದ್ದಿದೆ. ಈ ವರ್ಷದ ಫಲಿತಾಂಶವು ಕಳೆದ ವರ್ಷಕ್ಕಿಂಥಾ ಉತ್ತಮವಾಗಿಲ್ಲ. ಕಳೆದ ವರ್ಷ ಪರೀಕ್ಷೆಗೆ ಕೂತ ೩೯೭ ವಿದ್ಯಾರ್ಥಿಗಳಲ್ಲಿ ೧೯೯ ಜನರು ಅಂದರೆ ಶೇಕಡ ೫೦ ರಂತೆ ವಿದ್ಯಾರ್ಥಿಗಳು ಪಾಸಾಗಿದ್ದರು. ಆದರೆ ಈ ವರ್ಷ ೨೧೬ ವಿದ್ಯಾರ್ಥಿಗಳು ತೇರ್ಗಡೆಯಾಗಿರುವರು. ಇದು ಶೇಕಡ ೪೫ನ್ನು ಮೀರುವಂತೆ ತೋರುವದಿಲ್ಲ. ೧೯೫೧ ರಲ್ಲಿ ಕೊಡಗಿನ ಫಲಿತಾಂಶ ಶೇಕಡ ೫೩ ರಂತೆ ಇತ್ತು. ೧೯೫೨ ರಲ್ಲಿ ೫೦ ಕ್ಕೆ ಇಳಿಯಿತು. ಈ ವರ್ಷ ಪುನಹ ಅದು ಕೆಳಗಿಳಿದಿದೆ. ಈ ರೀತಿ ವರ್ಷ ವರ್ಷ ಫಲಿತಾಂಶವು ಕೆಳಗಿಳಿಯುತ್ತಿರುವದು ನಿಜವಾಗಿಯೂ ಖೇದಕರ ಸಂಗತಿಯಾಗಿದೆ.

ಈ ವರ್ಷದ ಫಲಿತಾಂಶದಲ್ಲಿ ಮಡಿಕೇರಿ ಹುಡುಗಿಯರ ಶಾಲೆಯು ನೂರಕ್ಕೆ ೬೭ ರಂತೆ ಜಯವನ್ನು ಪಡೆದು ಪ್ರಥಮ ಬಂದಿದೆ. ಆದರೆ ಕಳೆದ ವರ್ಷ ಈ ಶಾಲೆಯ ಫಲಿತಾಂಶವು ಶೇಕಡ ೮೫ ರಂತೆ ಇತ್ತು. ಈ ದೃಷ್ಟಿಯಿಂದ ಇದರ ಫಲಿತಾಂಶ ತೃಪ್ತಿಕರವಲ್ಲವೆಂದೇ ಹೇಳಬೇಕು. ಸೈಂಟ್ ಮೈಕೇಲ್ ಶಾಲೆಯು ಈ ವರ್ಷ ದ್ವಿತೀಯ ಸ್ಥಾನವನ್ನು ಪಡೆದಿದೆ. ಕಳೆದ ವರ್ಷದ ಶೇಕಡ ೪೬ ರ ಬದಲು ಈ ವರ್ಷ ಶೇಕಡ ೬೩ ರಂತೆ ತೇರ್ಗಡೆಯಾಗಿರುವರು. ಮಡಿಕೇರಿ ಮತ್ತು ವೀರಾಜಪೇಟೆ ಹೈಸ್ಕೂಲುಗಳು ಈ ವರ್ಷ ಮುಂದಿವೆ. ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಕಳೆದ ವರ್ಷದ ಫಲಿತಾಂಶ ಶೇಕಡ [illegible] ರ ಬದಲು ಈ ವರ್ಷ [illegible] ಬಂದಿದೆ. ವೀರಾಜಪೇಟೆಯ ಕಳೆದ ವರ್ಷದ ಫಲಿತಾಂಶ ೩೭ ರ ಬದಲು ಈ ವರ್ಷ ಶೇಕಡ ೫೧ ರಂತೆ ಪಾಸಾಗಿರುವರು. ಕಳೆದ ವರ್ಷ ಹೊಸ ಹೈಸ್ಕೂಲುಗಳಾದ ನಾಪೋಕ್ಲು, ಪೊನ್ನಂಪೇಟೆ, ಸೋಮವಾರಪೇಟೆಗಳ ಫಲಿತಾಂಶ ಚೆನ್ನಾಗಿತ್ತು. ಪೊನ್ನಂಪೇಟೆಯ ಫಲಿತಾಂಶ ೬೪ ರ ಬದಲು ಈ ವರ್ಷ ೨೫ ಕ್ಕೆ ಇಳಿದಿದೆ. ಸೋಮವಾರಪೇಟೆಯು ೭೦ ರ ಬದಲು ೪೭ಕ್ಕೆ ಇಳಿದಿದೆ. ನಾಪೋಕ್ಲಿನ ಶೇಕಡ ೭೧ರ ಬದಲು ೩೩ ಕ್ಕೆ ಇಳಿದಿದೆ. ಇದು ಎಂದೂ ತೃಪ್ತಿಕರವಾಗಿಲ್ಲ. ಈ ಹೊಸ ಹೈಸ್ಕೂಲುಗಳು ಇನ್ನೂ ಹೆಚ್ಚಿನ ಹುರುಪಿನಿಂದ ಕೆಲಸ ಮಾಡಿ ಉತ್ತಮ ಫಲಿತಾಂಶವನ್ನು ಕೊಡುವವೆಂದು ಜನತೆ ಭಾವಿಸಿತ್ತು. ಆದರೆ ಈ ವರ್ಷದ ಫಲಿತಾಂಶವು ಎಲ್ಲರನ್ನೂ ಅತೃಪ್ತಿಗೊಳಿಸಿದೆ.

ಖಾಸಗಿ ಶಾಲೆಗಳಾದ ಶಾತೂರು, ಹುದಿಕೇರಿಗಳ ಫಲಿತಾಂಶವೂ ಪ್ರೋತ್ಸಾಹಕರವಾಗಿಲ್ಲ. ಒಂದು ವರ್ಷವಿಡೀ, ಅನೇಕ ತ್ಯಾಗ, ಕಷ್ಟಗಳಿಂದ ವಿದ್ಯಾರ್ಜನೆ ಮಾಡುವ ಈ ವಿದ್ಯಾರ್ಥಿಗಳಲ್ಲಿ ನೂರಕ್ಕೆ ೫೦ ಕೂಡ ತೇರ್ಗಡೆಯಾಗುವದಿಲ್ಲವೆಂದರೆ ಇದರಿಂದ ದೇಶಕ್ಕಾಗುತ್ತಿರುವ ನಷ್ಟವು ದೊಡ್ಡದಾಗಿದೆ. ಇಂದಿನ ವಿದ್ಯೆಯ ಬೆಲೆಯು ಕೇವಲ ಪರೀಕ್ಷೆಗಳಲ್ಲಿ ಪಾಸಾದ ಅಳತೆ ಕೋಲಿನಿಂದಲೇ ಅಳೆಯಲ್ಪಡುತ್ತಿರುವದರಿಂದ ಈ ಬಗ್ಗೆ ಹೆಚ್ಚಿನ ಆಸ್ಥೆ ವಹಿಸಿ ದೇಶದ ಸಂಪತ್ತು ಹಾಗೂ ವಿದ್ಯಾರ್ಥಿಗಳ ಚೇತನವು ಈ ರೀತಿ ದುರುಪಯೋಗವಾಗದಂತೆ ನೋಡುವದು ಅಧಿಕಾರಿಗಳ ಮತ್ತು ಅಧ್ಯಾಪಕರ ಕರ್ತವ್ಯ. ತಮ್ಮ ಮಕ್ಕಳಿಗೆ ಹೆಚ್ಚಿನ ವಿದ್ಯಾಭ್ಯಾಸ ಕೊಡಬೇಕೆಂದು ಹೊಟ್ಟೆ ಬಾಯಿಕಟ್ಟಿ, ಶಕ್ತಿಮೀರಿ ಸಹಾಯ ಮಾಡಿ ತಾವೇ ಖಾಸಗಿ ಶಾಲೆ, ಬೋರ್ಡಿಂಗು ಕಟ್ಟಿ ಪ್ರಯತ್ನಿಸುತ್ತಿರುವ ಪೋಷಕರಿಗೆ ಈ ರೀತಿಯ ಪರೀಕ್ಷಾ ಫಲಿತಾಂಶವನ್ನು ಅಧ್ಯಾಪಕರು ಒದಗಿಸುವದೆಂದರೆ ಅದು ಹರ್ಷದಾಯಕವಾಗಿಲ್ಲ, ಮಕ್ಕಳ ತೇರ್ಗಡೆಯ ಜವಾಬ್ದಾರಿ ಅಧ್ಯಾಪಕರೊಬ್ಬರದ್ದಲ್ಲವೆಂದು ಹೇಳಬಹುದಾದರೂ ಕೂಡ ಅಧ್ಯಾಪಕರ ಕರ್ತವ್ಯ ಭಾರ ಈ ಬಾಬಿನಲ್ಲಿ ದೊಡ್ಡದೆಂಬುದನ್ನು ಎಲ್ಲರೂ ಒಪ್ಪಬೇಕು.

ವಿದ್ಯಾರ್ಥಿಗಳ ಮಟ್ಟ ಉತ್ತಮವಾಗಬೇಕಾದರೆ ಅಧ್ಯಾಪಕರೂ, ಪೋಷಕರೂ ಸಹಕರಿಸಿ ಕೆಲಸಮಾಡಬೇಕು. ಸರಕಾರವು ಯೋಗ್ಯ ಸಲಹತ್ತು ಸಹಾಯಗಳನ್ನು ಒದಗಿಸಬೇಕು. ಈ ರೀತಿಯ ಒಂದು ಸಮರ್ಪಕ ಏರ್ಪಾಡಿಗಾಗಿ ಅಧ್ಯಾಪಕ ಮತ್ತು ಪೋಷಕರ ಸಂಬಂಧ ಇನ್ನೂ ನಿಕಟವಾಗುವಂತೆ ತಕ್ಕ ಏರ್ಪಾಡು ಮಾಡಬೇಕು. ಈ ಬಗ್ಗೆ ವಿದ್ಯಾರಂಗದಲ್ಲಿ ನುರಿತವರೂ, ಬುದ್ಧಿವಂತರೂ, ಸೇರಿ ಒಂದು ಯೋಗ್ಯ ಯೋಜನೆ ಪ್ರಕಾರ ವಿದ್ಯಾ ಇಲಾಖೆ ಕೆಲಸ ಮಾಡುವಂತೆ ಏರ್ಪಡಿಸುವದು ಹಿತವೆಂದು ತೋರುತ್ತದೆ.

ವರ್ತಮಾನ.

ಕೊಯಮುತ್ತೂರು ಎಗ್ರಿಕಲ್ಚರಲ್ ಕಾಲೇಜಿನಲ್ಲಿ ಓದುತಿದ್ದ ಶ್ರೀ ಹಂಚೆಟ್ಟಿ ಎ. ಚಂಗಪ್ಪನವರು ಮದ್ರಾಸು ವಿಶ್ವವಿದ್ಯಾಲಯದ ಬಿ. ಎಸ್‌ಸಿ (ಎಜಿ) ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು.

ಮದ್ರಾಸು ವಿಶ್ವವಿದ್ಯಾಲಯದ ಕಳೆದ ಎಂ. ಎ. ಪರೀಕ್ಷೆಯಲ್ಲಿ ಶ್ರೀ ಅಜ್ಜಿಕುಟ್ಟಿರ ಪಿ. ಅಪ್ಪಣ್ಣನವರು ದ್ವಿತೀಯ ಶ್ರೇಣಿಯಲ್ಲೂ, ಬಿ. ಎ., (ಆನರ್ಸ್) ಪರೀಕ್ಷೆಯಲ್ಲಿ ಸೋಮವಾರಪೇಟೆಯ ಶ್ರೀ ಬಸಪ್ಪನವರೂ (ದ್ವಿತೀಯ ಶ್ರೇಣಿ), ಶ್ರೀ ಬಿಜೆಟ್ಟಿರ ಬೋಪಣ್ಣನವರೂ ತೇರ್ಗಡೆಯಾಗಿರುವರು.

ಕೊಡಗು ಉಪಾಧ್ಯಾಯರ ತರಬೇತು ಶಾಲೆಯಲ್ಲಿ ತರಬೇತು ಹೊಂದುತ್ತಿರುವ ಶ್ರೀಗಳಾದ ಕೆ. ಕೆ. ಮಾದಪ್ಪ, ಎನ್. ಬಿ. ಬಸವಣ್ಣಯ್ಯನವರು ಹಿಂದೀ ಪ್ರಾಥಮಿಕ ಪರೀಕ್ಷೆಯಲ್ಲೂ ಎಂ. ಕೆ. ಶಾರದಮ್ಮನವರು ರಾಷ್ಟ್ರಭಾಷಾ ಪರೀಕ್ಷೆಯಲ್ಲೂ ತೇರ್ಗಡೆಯಾಗಿರುವರು.

ತಾರೀಕು ೨೯ ರಲ್ಲಿ ಶಿವಂಗಾಲ ಮಯ್ಯರ ಶಿಕ್ಷಣ ಶಾಲೆಯ ಆಶ್ರಯದಲ್ಲಿ ಗ್ರಾಮಸ್ಥರ ಸಹಕಾರದಿಂದ 'ಭೂಕೈಲಾಸ' ಎಂಬ ಶಿವಕಥಾಶ್ರವಣ ನಡೆಯಿತು.

ತಾರೀಕು ೩೦-೫-೫೩ ರಲ್ಲಿ ಬಾಡಗರಕೇರಿ ಸಹಕಾರ ಸಂಘದ ಕಟ್ಟಡದ ಪ್ರಾರಂಭೋತ್ಸವವು ಕೊಡಗಿನ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಗೃಹ ಮಂತ್ರಿಯವರು ಕಟ್ಟಡವನ್ನು ತೆರೆದರು. ಕೊಡಗು ಶಾಸನ ಸಭೆಯ ಸ್ಪೀಕರೂ ಹಾಜರಿದ್ದರು. ಸಂಘದ ಮೆಂಬರುಗಳು ಮಂತ್ರಿಗಳಿಗೆ ಒಂದು ಬಿನ್ನವತ್ತಳೆಯನ್ನು ಅರ್ಪಿಸಿದರು.

ಈ ಮೊದಲೇ ಏರ್ಪಟ್ಟಿದ್ದಂತೆ ಹಿಂದುಳಿದ ಜಿಲ್ಲೆಗಳ ಸಾಮೂಹಿಕ ವಿಕಾಸ ಕೇಂದ್ರಗಳನ್ನು ಹೆಚ್ಚಿಸುವ ದ್ವಿತೀಯ ಹೆಜ್ಜೆಯಂತೆ ಕೊಡಗಿನಲ್ಲಿ ಮತ್ತೊಂದು ಬ್ಲಾಕನ್ನು ತೆರೆಯಲಿರುವರೆಂದು ತಿಳಿಯಬರುತ್ತದೆ.

ಬೊಂಬಾಯಿಯ 'ಬ್ಲಿಟ್ಸ್' ಪತ್ರಿಕೆಯ ಸಂಪಾದಕರಾದ ಶ್ರೀ. ಆರ್. ಕೆ. ಕರಾಂಜಿಯಾರವರು ತಮ್ಮ ಪತ್ನಿಯೊಡನೆ ತಾರೀಕು ೮ ರಲ್ಲಿ ಮಡಿಕೇರಿಗೆ ಬರುವರೆಂದೂ ಆ ಸಮಯದಲ್ಲಿ ಅವರು ಜನರಲ್ ಕಾರ್ಯಪ್ಪನವರ ಅತಿಥಿಯಾಗಿರುವರೆಂದೂ ತಿಳಿದುಬಂದಿದೆ.

ಮೈಸೂರು ಒಂಟಿಕೊಪ್ಪಲದಲ್ಲಿರುವ ಶ್ರೀರಾಮಕೃಷ್ಣ ಆಶ್ರಮದವರ ವಿದ್ಯಾರ್ಥಿ ನಿವಾಸಗೃಹದಲ್ಲಿ ಹೊಸದಾಗಿ ಹೈಸ್ಕೂಲು ಈ ತಾರೀಕು ೧ ರಿಂದ ತೆರೆಯಲ್ಪಟ್ಟಿದೆಯೆಂದೂ, ಕೊಡಗಿನ ನಿವೃತ್ತ ಹೈಸ್ಕೂಲು ಮುಖ್ಯೋಪಾಧ್ಯಾಯರಾದ ಶ್ರೀ ಪಟ್ಟಡ ಉತ್ತಪ್ಪನವರು ಆ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿ ನೇಮಿಸಲ್ಪಟ್ಟಿರುವರೆಂದೂ ತಿಳಿಯಬರುತ್ತದೆ.

ವೀರಾಜಪೇಟೆ ಹೈಸ್ಕೂಲಿನ ಅಧ್ಯಾಪಕರಾಗಿದ್ದು ನಿವೃತ್ತರಾದ ಶ್ರೀ. ತೇಲಪಂಡ ಕಾರ್ಯಪ್ಪನವರು ಹುದಿಕೇರಿ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿ ನೇಮಿಸಲ್ಪಟ್ಟಿರುವರು.

ನಾಪೋಕ್ಲಿನ ಸರಕಾರಿ ಸಾರಾಯಿ ಡಿಪೋದಲ್ಲಿ ಸುಮಾರು ೯೦೦ ರೂಪಾಯಿ ಸಾರಾಯಿ ಕಾಣೆಯಾಗಿದೆಯೆಂದೂ ಇದರ ಸಂಬಂಧ ಅಲ್ಲಿಯ ಗುಮಾಸ್ತರಾದ ಶ್ರೀ ಎಂ. ಐಯ್ಯಪ್ಪನವರನ್ನು ದಸ್ತಗಿರಿ ಮಾಡಿರುವರೆಂದೂ ತಿಳಿಯ ಬಂದಿದೆ.

ತಾ. ೨೬ರಲ್ಲಿ ಬಲ್ಲಮಾವಟಿ ಗ್ರಾಮದ ಮಡಿವಾಳರ ಸುಬ್ಬಯ್ಯನವರ ಮನೆಗೆ ಬೆಂಕಿ ಬಿದ್ದು ತುಂಬಾ ನಷ್ಟವಾಗಿದೆಯೆಂದು ತಿಳಿಯ ಬರುತ್ತದೆ.

ಕೊಡಗಿನ ಇನ್‌ಕಮ್‌ಟ್ಯಾಕ್ಸ್ ಆಫೀಸರಾದ ಶ್ರೀ ರಘೋತ್ತಮರವರನ್ನು ಬೆಂಗಳೂರಿಗೆ ವರ್ಗಮಾಡಿರುವರೆಂದೂ ಅವರ ಬದಲು ಮೈಸೂರಿನ ಶ್ರೀ ಆಂಜನೇಯಲುರವರು ಬರುವರೆಂದೂ, ಕೊಡಗಿನ ವ್ಯವಸಾಯ ಆದಾಯ ತೆರಿಗೆ ಇಲಾಖೆಗೆ ಮೊದಲಿದ್ದಂತೆ ಪ್ರತ್ಯೇಕ ಆಫೀಸರೊಬ್ಬರ ನೇಮಕವಾಗಲಿದೆಯೆಂದೂ ವರ್ತಮಾನ

ಕೊಡಗು ಶಾಸನ ಸಭೆಯ ರಿಪೋರ್ಟರಾಗಿದ್ದ ಶ್ರೀ ಆಲ್ಬರ್ಟರನ್ನು ಟ್ರೆಜರಿ ಆಫೀಸರಾಗಿ ನೇಮಿಸಿರುವರು. ಟ್ರೆಜರಿ ಆಫೀಸರಾಗಿದ್ದ ಶ್ರೀ ಶ್ರೀನಿವಾಸರವರು ಕೊಡಗು ಫೈನಾನ್ಸ್ ಸೆಕ್ರೆಟರಿಯ ಡೆಪ್ಯುಟಿಯ ಚಾರ್ಜನ್ನು ತಾ. ೧ರಿಂದ ವಹಿಸಿಕೊಂಡಿರುವರು. ಶ್ರೀ ಎಂ. ಎಸ್. ಅನಂತಪದ್ಮನಾಭರಾಯರನ್ನು ಶ್ರೀ ಆಲ್ಬರ್ಟರ ಬದಲಿಗೆ ಶಾಸನ ಸಭೆಯ ಸೀನಿಯರ್ ರಿಪೋರ್ಟರಾಗಿ ನೇಮಿಸಲಾಗಿದೆ.

ಚೀಫ್‌ಕಮಿಷನರು ಡೇರಾಡೂನಿನಲ್ಲಿ ತಾರೀಕು ೩ರಿಂದ ಪ್ರಾರಂಭವಾಗಿರುವ ಫಾರೆಸ್ಟ್ ಇಲಾಖಾ ಸಮ್ಮೇಳನಕ್ಕೆ ತಾ. ೧ ರಲ್ಲಿ ಹೋಗಿರುವರು.

ಇಗ್ಗುತಪ್ಪ ದೇವರ ಆರಾಧನೆ ಬಗ್ಗೆ ಜನರಲ್ ಕಾರ್ಯಪ್ಪನವರು ಕಳೆದ ತಾ. ೩೧ರಲ್ಲಿ ದೇವಸ್ಥಾನಕ್ಕೆ ಹೋಗಿದ್ದರೆಂದೂ ಅಲ್ಲಿ ನೆರೆದಿದ್ದ ಭಕ್ತಾದಿ ಜನರಿಗೆ ಅವರ ಕರ್ತವ್ಯದ ಕುರಿತು ಚಿಕ್ಕ ಭಾಷಣ ಮಾಡಿದರೆಂದೂ ತಿಳಿಯಬರುತ್ತದೆ.

ಸ್ಕೂಲ್ ಫೈನಲ್ ಪರೀಕ್ಷಾ ಫಲಿತಾಂಶಗಳು.

ಕಳೆದ ಮಾರ್ಚ್ ತಿಂಗಳಲ್ಲಿ ನಡೆದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಈ ಕೆಳಗಿನ ವಿದ್ಯಾರ್ಥಿಗಳು ತೇರ್ಗಡೆಯಾಗಿರುವರು.

ವೀರಾಜಪೇಟೆ ಹೈಸ್ಕೂಲು

ಶ್ರೀಗಳಾದ ಕಬ್ಬಚೀರ ಬೆಳ್ಯಪ್ಪ, ಟಿ. ಎನ್. ಭಾಸ್ಕರ, ಎಚ್. ಎಸ್. ರಾಧಾಕೃಷ್ಣ, ಟಿ. ಆರ್. ಕೃಷ್ಣಮೂರ್ತಿ, ಕಲ್ಯಾಟಂಡ ಚಿಣ್ಣಪ್ಪ, ಕುಪ್ಪಂಡ ಗಣೇಶ್ ಕೆ. ಎ. ಲಿಂಗಪ್ಪ, ಬೊಮ್ಮಂಡ ಅಪ್ಪಚ್ಚು, ಮಾಳೇಟಿರ ಮಾದಪ್ಪ, ಅನ್ನಾಟಂಡ ಕುಶಾಲಪ್ಪ, ಕೋದಂಡ ಸೀತಮ್ಮ, ಥಾಮಸ್ ಡಿಸಿಲ್ವ, ಕೊಕ್ಕಲೇರ ಕುಟ್ಟಪ್ಪ, ಚೊಟ್ಟೆಂಗಂಡ ಪೆಮ್ಮಯ್ಯ, ಪೆಮ್ಮಂಡ ಗಣಪತಿ, ಕೋಡಿರ ಅಪ್ಪಯ್ಯ, ಬಲ್ಲಣಮಾಡ ಬೋಪಯ್ಯ, ನೆಲ್ಲಮಕ್ಕಳ ಮಾದಯ್ಯ, ಚೊಟ್ಟೆಯಂಡ ಮೇದಪ್ಪ, ಕಟ್ಟೇರ ಪಾರ್ವತಿ, ಪಾಲಚಂಡ ದೇವಯ್ಯ, ಕಂಬೀರಂಡ ಭೀಮಯ್ಯ, ಐಚೆಟ್ಟಿರ ತಂಗಮ್ಮ, ಪಟ್ಟಡ ವಿಮಲ, ಪೂದ್ರಿಮಾಡ ಗಣಪತಿ, ಐಚೆಟ್ಟಿರ ನಂಜಪ್ಪ, ಕೊಡಂದೆರ ಪೂವಣ್ಣ, ಚೋಕಂಡ ಐಯ್ಯಪ್ಪ, ಸಂದಿಕಂಡ ದೇವಯ್ಯ, ಪುಲಿಯಂಡ ದೇಚಮ್ಮ, ನೆಲ್ಲಮಕ್ಕಳ ಐಯ್ಯಂಣ, ಕೋಡಿರ ಕುಶಾಲಪ್ಪ, ಕಾಳೇಂಗಡ ಮುದ್ದಪ್ಪ, ಕಂಪ್ರತಂಡ ಮುತ್ತಣ್ಣ, ಕಬ್ಬಚೀರ ಪೆಮ್ಮಯ್ಯ, ಬಲ್ಲಡಿಚಂಡ ಪೊನ್ನಪ್ಪ, ಮೇರಿಯಂಡ ಪೂವಯ್ಯ, ಪೊಡ ನೋಳಂಡ ಗೋಪಾಲ, ಪಂದಿಕಂಡ ಬಿದ್ದಪ್ಪ, ಚೆರಿಯಪಂಡ ಚಿಣ್ಣಪ್ಪ, ಮಾಚಿಮಂಡ ಪಾರ್ವತಿ, ನೆಲ್ಲಮಕ್ಕಳ ಕಾಳಪ್ಪ, ಕಾಳೇಂಗಡ ಸೋಮಯ್ಯ, ಕುಪ್ಪಂಡ ಮುದ್ದಪ್ಪ, ಪುಟ್ಟಿಚಂಡ ಐಯ್ಯಂಣ, ಕರ್ತಚೀರ ಗಣಪತಿ, ಗುಮ್ಮಟೀರ ಮಂದಣ, ರಾಬರ್ಟ್ ಪಾಸ್, ಶೀತಿರ ಪೂಣಚ್ಚ, ಅಲ್ಲಪಂಡ ಕುಶಾಲಪ್ಪ, ಪಳಂಗಂಡ ಬಿದ್ದಪ್ಪ, ಚೇಂದ್ರಿಮಾಡ ಮುತ್ತಂಣ, ಪಳಂಗಂಡ ಮೇದಪ್ಪ, ಬಂಟ್ರ ರಾಮಯ್ಯ, ಮತ್ತು ಪಟ್ಟಡ ಅಪ್ಪಚ್ಚು ಇವರುಗಳು. ಪರೀಕ್ಷೆಗೆ ಕೂತ ೧೧೭. ವಿದ್ಯಾರ್ಥಿಗಳಲ್ಲಿ ೫೫ ಅಂದರೆ ಶೇಕಡ ೫೧ರಂತೆ.

ಪೊನ್ನಂಪೇಟೆ ಹೈಸ್ಕೂಲು

ಶ್ರೀಗಳಾದ ಕೆ. ಎನ್. ಗಣಪತಿ, ಕೆ. ಕೆ. ಉತ್ತಪ್ಪ, ಎಂ. ಕಾವೇರಮ್ಮ, ಜಿ. ಕೆ. ನೀಲಮ್ಮ, ಎಂ. ಎಂ. ತಂಗಮ್ಮ, ಕೆ. ಡಿ. ಬೆಳ್ಯಪ್ಪ, ಕೆ. ಪಿ. ಅಪ್ಪಯ್ಯ, ಕೆ ಕೆ. ಮುತ್ತಂಣ, ಎಂ. ಎಂ. ಉತ್ತಯ್ಯ, ಬಿ. ಯಸ್. ಅಕ್ಕಮ್ಮ, ಜಿ. ಎಸ್. ನಂಜಪ್ಪ, ಐ. ಎಂ. ಪೊನ್ನಪ್ಪ, ಯು. ಎಸ್. ಸುಬ್ಬಯ್ಯ, ಎಂ. ಎನ್. ಪೂವಯ್ಯ, ಸಿ ಬಿ. ಸರಸ್ವತಿ, ಎ. ಬಿ ಪೊನ್ನಪ್ಪ ಮತ್ತು ಕೆ. ವಿ. ನಾರಾಯಣರಾವ್ ಇವರುಗಳು. ೭೮ ವಿದ್ಯಾರ್ಥಿಗಳಲ್ಲಿ ೧೭. ಶೇಕಡ ೨೨ರಂತೆ.

ನಾಪೋಕ್ಲು ಹೈಸ್ಕೂಲು

ಶ್ರೀಗಳಾದ ಕೇಕಡ ಪೊಂಣಯ್ಯ, ಪಾಲಂದಿರ ಪೂಣಚ್ಚ, ಬಾಡಿಯಂಡ ಉತ್ತಪ್ಪ, ಪಳಂಗೋಟು ಅಮ್ಮಂಣ, ಬೊಳ್ಳಚೆಟ್ಟೀರ ಅಪ್ಪಚ್ಚು, ಚೇಯಂಡಿರ ಬಸವಪ್ಪ, ಮಡೆಯಂಡ ಭೀಮಯ್ಯ, ಗುಡ್ಡೆರ ಚಂಗಪ್ಪ, ಚೌರಿರ ಕಾವೇರಪ್ಪ, ಮುಕ್ಕಾಟಿರ ಮುತ್ತಪ್ಪ, ಕೇಕಡ ನಾಣಯ್ಯ, ಮಂಡಿರ ನೀಲಮ್ಮ, ಚೇಯಂಡ ಪಾರ್ವತಿ, ಮೂವೆರ ಪೂವಯ್ಯ, ಪಾಂಡಂಡ ಪೂವಯ್ಯ, ಪಕ್ಕಲಿಗರ ಪುಟ್ಟಣ್ಣ, ಬ್ರಾಹ್ಮಣರ ಶೇಷಾದ್ರಿ, ಅಲ್ಲಾರಂಡ ಮಾಚಯ್ಯ, ಕೆರೆಮನೆ ಗೋಪಾಲಕೃಷ್ಣ ಮತ್ತು ಮುಂಡನೆರ ವಂಡ ಚಿಟ್ಟಿಚ್ಚ ಇವರುಗಳು. ೬೧ ವಿದ್ಯಾರ್ಥಿಗಳಲ್ಲಿ ೨೦ ಅಂದರೆ ಶೇಕಡ ೩೨ರಂತೆ

ಸೋಮವಾರಪೇಟೆ ಹೈಸ್ಕೂಲು

ಶ್ರೀಗಳಾದ ಎಚ್. ಆರ್. ಬಸಪ್ಪ, ಬಿ. ಪಿ. ರಾಧಾಕೃಷ್ಣ, ಜಿ. ಎಂ. ಸುಬ್ಬಮ್ಮ, ಎ. ಸಿ. ಮುತ್ತಮ್ಮ, ಕೆ ಎ. ನಾಗರಾಜರಾವ್, ಎ ವಿ ನೀಲಕಂಠಪ್ಪ, ಎಚ್. ಡಿ. ಬಸಲಿಂಗಯ್ಯ, ಬಿ. ಎಸ್. ಗಣಪತಿ, ಸಿ. ಎನ್. ಕುಟ್ಟಯ್ಯ, ಎಚ್. ಈ. ಪುಟ್ಟಸ್ವಾಮಿ, ಎಚ್. ಎಲ್. ವಿಮಲ, ಕೆ. ಎನ್. ಮೇದಪ್ಪ, ಎಚ್. ಎಂ. ಮುತ್ತಂಣ, ಜಿ. ಎಂ. ಲೀಲಾವತಿ, ಎಚ್. ಸಿ. ಸಿಂಗ್ರಪ್ಪ, ಬಿ. ಕೆ. ಉತ್ತಪ್ಪ, ಮತ್ತು ಕೆ. ಡಿ. ಬೋಪಂಣ. ೪೦ ವಿದ್ಯಾರ್ಥಿಗಳಲ್ಲಿ ೧೭ ಅಂದರೆ ಶೇಕಡ ೪೩ ರಂತೆ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲ್

ಶ್ರೀಗಳಾದ ಬಿ. ಆರ್. ಮಾಚಯ್ಯ, ಎಂ. ಎಸ್. ತಂಗಮ್ಮ, ಕೆ. ಕೆ. ಈಶ್ವರ, ಎಚ್. ಬಿ. ಪೊಣ್ಣಪ್ಪ, ಸಮ್ಶೀರ್ ಅಹಮ್ಮದ್, ಬಿ ಜಿ ಮುತ್ತಪ್ಪಶೆಟ್ಟಿ, ಅಲ್ಲಾರಂಡ ತಿಮ್ಮಯ್ಯ, ಮುಕ್ಕಾಟಿರ ಚಿಣ್ಣಪ್ಪ, ಪೊನ್ನಚೆಟ್ಟಿರ ಈರಪ್ಪ, ಟಿ. ರೋಹಿಣಿಬಾಯಿ, ಎಂ. ಎಂ. ಮುತ್ತಣ್ಣ, ಸಿ. ಎಲ್ ಗಂಗಾಧರ ಶಾಸ್ತ್ರಿ, ಸಿ. ಆರ್. ಪದ್ಮಾಕ್ಷಿ, ಎಚ್. ವಿ. ಪಾರ್ಥಸಾರಥಿ, ಜಿ. ಆರ್. ಪುಂಡರಿಕ, ಕೆ. ಎಸ್. ಗೌರಿಶಂಕರ್, ಎಚ್. ಎಸ್. ಮಾಲತಿ, ಕೆ. ಎಂ. ಪೂವಯ್ಯ, ಮಹಮ್ಮದ್ ಸಾಬ, ಎ. ಎನ್. ರಮೇಶಚಂದ್ರ, ಎನ್. ಜಿ ವಾಸುದೇವ, ಸಿ. ವಿ. ವರದ, ಎ. ಟಿ. ಕಾರ್ಯಪ್ಪ, ಕೆ. ಬಿ. ಉದಯಕುಮಾರಿ, ಕೆ. ಜಿ. ವಾಸಂತಿ, ಕೆ. ಕೆ. ನೀಟಯ್ಯ, ಕೆ. ಎಂ. ಕರುಂಬಯ್ಯ, ಕೆ. ಬಿ. ಬಸಪ್ಪ, ಎಂ. ಎಂ. ಮಾದಪ್ಪ, ಎಂ. ಸಿ. ಪೊನ್ನಪ್ಪ, ಎ. ಎಸ್. ಮುದ್ದಮ್ಮ, ಕೆ. ಎಂ. ಪೊನ್ನಪ್ಪ, ಬಿ. ಪಿ. ಬೋಪಯ್ಯ, ಡಿ. ಎಸ್. ಮುದ್ದಪ್ಪ, ಐಂ. ಕೆ. ಪೊನ್ನಪ್ಪ, ಕೆ. ಪಿ. ಸುಬ್ರಮಣ್ಯ, ಎ. ಕೆ. ಉತ್ತಯ್ಯ, ಪಿ. ಕೆ. ಆನಂದ, ಟಿ. ಎಂ. ಪ್ರಹ್ಲಾದ ಶೈ, ಎಂ. ಎ. ಕರುಂಬಯ್ಯ, ಐ. ಕೆ. ನಾಣಯ್ಯ, ಎಂ. ಕೆ. ನಂಜುಂಡ ಮತ್ತು ಸಿ. ಬಿ. ಮುದ್ದಪ್ಪ ಇವರುಗಳು. ೭೩ ರಲ್ಲಿ ೪೩ ಅಂದರೆ ಶೇಕಡ ೫೩ ರಂತೆ.

ಸೈಂಟ್ ಮೈಕೇಲ್ ಶಾಲೆ.

ಶ್ರೀಗಳಾದ ಕೆ, ಎಸ್. ನಾಗರತ್ನ, ಎ. ಪಿ. ಬಾಲಕೃಷ್ಣನಾಯುಡು, ಪಟ್ಟಮಾಡ ಬೋಪಯ್ಯ, ಬೊಳ್ಳೇರಿಯಂಡ ಬೋಪಯ್ಯ, ಕೂಪದಿರ ಮಾಚಯ್ಯ, ಆಸ್ವಾಲ್ಡ್ ಡಯಾಸ್, ಕೆ. ಸಿ. ಸದಾಶಿವರಾವ್, ಜಿ. ಎಸ್. ವೆಂಕಟರಾಮ ಭಟ್ಟ, ವಿ. ಕೆ. ಕುಪ್ಪುಸ್ವಾಮಿ, ಮಂಡಿರ ಮುತ್ತಪ್ಪ, ಕೆ. ಬಿ ರಾಮಪ್ಪ, ಎ. ಎಂ. ಬಸಪ್ಪ, ಬಿಟ್ಟಿಯಂಡ ಭೀಮಯ್ಯ, ಮುಕ್ಕಾಟಿರ ಬೋಪಯ್ಯ, ಬಿ. ಪಿ. ಮಂದಪ್ಪ, ಕೆ. ಟಿ ಸೋಮಯ್ಯ ಮತ್ತು ಪಿ ಯು. ತಿಮ್ಮಯ್ಯ ಇವರುಗಳು. ೨೭ ರಲ್ಲಿ ೧೭ ಅಂದರೆ ಶೇಕಡ ೬೩ ರಂತೆ.

ಖಾಸಗಿಯಾಗಿ ಮಡಿಕೇರಿ ಕೇಂದ್ರದಲ್ಲಿ ಕುಳಿತವರಲ್ಲಿ ಶ್ರೀಗಳಾದ ಪೊಡನೋಳಂಡ ರಾಮಕೃಷ್ಣ. ಬಾಚರಣಿಯಂಡ ಅಪ್ಪಂಣ್ಣ, ಓಡಿಯಂಡ ಈರಪ್ಪ, ಮಚ್ಚಾಮಾಡ ಉತ್ತಯ್ಯ, ಬಿ. ಕೆ. ರಾಮಕೃಷ್ಣ ಶರ್ಮ, ಸ್ಯಾಮುವೆಲ್ ಕೋಟ್ಯಾನ್ ಇವರು ತೇರ್ಗಡೆಯಾಗಿರುವರು.

ಸೆಂಟ್ ಎನ್ಸ್ ಹೈಸ್ಕೂಲು:—85403, 85404, 85408, 85410, 85411, 85413, 85414.

ಶಾತೂರು ಹೈಸ್ಕೂಲು:—85740, 85751, 85758, 85760, 85762, 85766.

ಮಡಿಕೇರಿ ಹೈಸ್ಕೂಲು: – 85769, 85775, 85777, 85782, 85783, 85786.

ಮಡಿಕೇರಿ ಹುಡುಗಿಯರ (ಕಾನ್ವೆಂಟ್) ಶಾಲೆ

ಕಾನ್ವೆಂಟಿನಲ್ಲಿ ಪಾಸಾದ ಹುಡುಗಿಯರ ನಂಬರು ಹೀಗಿದೆ:— 85527, 85528, 85529, 85532, 85533, 85534, 85537, 85538, 85539, 85540, 85541, 85542, 85543, 85545, 85549, 85550, 85552, 85553, 85554 ಮತ್ತು 85555. ಪರೀಕ್ಷೆಗೆ ಕೂತ 30 ರಲ್ಲಿ 20 ಜನರು ತೇರ್ಗಡೆಯಾಗಿರುವರು. ಅಂದರೆ ಶೇಕಡ 66ರಂತೆ.

ಈ ಶಾಲೆಯಲ್ಲಿ ತೇರ್ಗಡೆಯಾದವರ ಹೆಸರುಗಳನ್ನು ಪತ್ರಿಕೆಯಲ್ಲಿ ಪ್ರಕಟಿಸುವ ಬಗ್ಗೆ ಶಾಲಾ ಅಧ್ಯಾಪಕರನ್ನು ಕೇಳಿದಾಗ "ಕೊಡಗು" ಪತ್ರಿಕೆಯು ಹುಡುಗಿಯರ ಹೈಸ್ಕೂಲಿನ ಆಡಳಿತದ ವಿಚಾರ ವಿರೋಧವಾದ ಲೇಖನ ಪ್ರಕಟಿಸುವುದರಿಂದ ವಿದ್ಯಾರ್ಥಿಗಳ ಹೆಸರು ಪ್ರಕಟಿಸಲು ಕೊಡುವುದಿಲ್ಲವೆಂದು ಹೇಳಿದ ಕಾರಣ ಕಾನ್ವೆಂಟಿನ ಅಧಿಕಾರಿಗಳ ಕಿಂಚಿತ್ ವೃತ್ತಿಯ. ಫಲಿತಾಂಶವಾಗಿ ತೇರ್ಗಡೆಯಾದ ಬಾಲಕಿಯರ ಹೆಸರುಗಳನ್ನು ಪ್ರಕಟಿಸಲಾಗಲಿಲ್ಲವೆಂದು ಹೇಳಲು ವಿಷಾದವೆನಿಸುತ್ತದೆ. [ಸಂ.

ನೋಟೀಸು

ನಿಡತದ ದಿವಂಗತ ಸುಬ್ಬಣ್ಣಯ್ಯನವರ ಮಗ ಶ್ರೀ ಮಂಜುನಾಥ ಮೂರ್ತಿಯು ಸರ್ವ ಜನರಿಗೆ ತಿಳಿಯಪಡಿಸುವದೇನಂದರೆ: —

ನಾನು ಮತ್ತು ಬಿ. ಯಸ್. ಕೃಷ್ಣಪ್ಪ ಎಂಬವರ ಪಾಲುಗಾರಿಕೆಯಲ್ಲಿ ನಡೆಸುತಿದ್ದ ಉತ್ತರ ಕೊಡಗು ಶನಿವಾರಸಂತೆ ಹೋಬಳಿ ಮಾಲಂಬಿ ಗ್ರಾಮಕ್ಕೆ ಸೇರಿದ ಮಾಳ್ಳೇಶ್ವರ ಎಂಬ ತೋಟವನ್ನು, ನಾನು ತೋಟ ಕೊಂಡುಕೊಳ್ಳಲು ಮತ್ತು ಇತರ ಖರ್ಚಿಗೆ ಕೊಟ್ಟ ಹಣದ ಬಾಕಿಗಾಗಿ ನನಗೆ ಬರಬೇಕಾದ ರೂ. 50000 -ಗಳಿಗೆ ಎರವರ್ತಿ ಗಿರ್ವಿ ಮಾಡಿಸಿಕೊಂಡು ತೋಟದ ಸಂಪೂರ್ಣ ಹಕ್ಕನ್ನು ಕೃಷ್ಣಪ್ಪನವರಿಗೆ ವಹಿಸಿದ್ದೇನೆ. ನಾವು ತೋಟ ತೆಗೆದ ತಾ. 31-10-49ರ ಲಾಗಾಯತಿನಿಂದ ಆಗಿರುವ ಮತ್ತು ಮುಂದೆ ಆಗುವ ಸಕಲ ವ್ಯವಹಾರಗಳಿಗೂ ಕೃಷ್ಣಪ್ಪನವರೇ ಜವಾಬ್ದಾರರಾಗಿರುತ್ತಾರಲ್ಲದೆ ನಾನು ಜವಾಬ್ದಾರನಲ್ಲವೆಂದು ಈ ಮೂಲಕ ತಿಳಿಸುತ್ತೇನೆ.

ಎಂ. ಎಸ್. ಮಂಜುನಾಥಮೂರ್ತಿ

Coorg Assistant Commissioner's Office,
Mercara, dated 29th May, 1953.

Notice.

It is hereby notified for general information that a 1951 model murphy Radio set with six valves, in very good condition is for sale. The original list price was Rs. 750/-. Tenders are invited for the purchase of the same. Tenderers for the purchase of the Radio should send up quoting the purchase price so as to reach the office of the Assistant Commissioner by 11 A. M. on 8—6—1953. Further particulars may be had from the Office of the Assistant Commissioner

(Sd) I. C. Subbiah
Assistant Commissioner.

ಮಾನ ಪತ್ರ ಕೊಡುವ ಕಾಲ ಮುಗಿದು ಹೋಯಿತು.

ಮಾನ್ಯ ಮುರಾರಜಿ ದೇಸಾಯಿಯವರ ಅಭಿಪ್ರಾಯ.

ಆಡಳಿತಗಾರರಿಗೆ ಮಾನ ಪತ್ರಗಳನ್ನು ಕೊಡುವ ಪದ್ಧತಿಯನ್ನು ತಾವು ವಿರೋಧಿಸುವದಾಗಿ ಮುಂಬಯಿ ಸರಕಾರದ ಮುಖ್ಯ ಮಂತ್ರಿಗಳಾದ ಶ್ರೀ. ಮುರಾರಜಿ ದೇಸಾಯಿಯವರು ಬುಲಸಾರಿನಲ್ಲಿ ಭಾಷಣ ಮಾಡುತ್ತ ಹೇಳಿದರು.

ಬುಲಸಾರ ನಗರ ಸಭೆಯವರು ಮುಖ್ಯ ಮಂತ್ರಿಗಳಿಗೆ ಕೊಟ್ಟ ಮಾನ ಪತ್ರಕ್ಕೆ ಉತ್ತರ ಕೊಡುತ್ತ ಶ್ರೀ. ಮುರಾರಜಿಯವರು ಈ ರೀತಿ ಹೇಳಿದರು.

ಇಂದೀಗ ಮಾನಪತ್ರಗಳನ್ನು ಕೊಡುವ ಆವಶ್ಯಕತೆಯುಳಿದಿಲ್ಲ. ಇಂಥ ಮಾನ ಪತ್ರಗಳ ಮೂಲಕವೇ ಆಡಳಿತಗಾರರನ್ನು ಹೊಗಳುವ ಕಾಲವೊಂದಿದ್ದಿತು. ಸ್ವತಂತ್ರ ರಾಷ್ಟ್ರಗಳಲ್ಲಿ ಈ ಬಗೆಯ ಮಾನಪತ್ರಗಳಿಗೆ ಸ್ಥಾನವಿದೆಯೇ ಎಂಬುದೊಂದು ಪ್ರಶ್ನೆ—ವ್ಯಕ್ತಿಶಃ ನನಗೆ ಮಾನಪತ್ರಗಳನ್ನು ಸ್ವೀಕರಿಸುವ ಈ ಚಟವು ಸೇರುವದಿಲ್ಲ. ಕೆಲವೊಂದು ವಿಶೇಷ ಪರಿಸ್ಥಿತಿಗಾಗಿ ನಾನು ಮಾನಪತ್ರಗಳನ್ನು ಸ್ವೀಕರಿಸಬೇಕಾಗುತ್ತದೆ. ಪ್ರತಿಯೊಬ್ಬರನ್ನು ಅಸಂತೋಷಗೊಳಿಸುವದು ಸರಿಯಲ್ಲ. ನನ್ನಲ್ಲಿಯ ಅನೇಕ ಸದ್ಗುಣಗಳನ್ನು ನೀವು ಉಲ್ಲೇಖಿಸಿರುವಿರಿ. ಅಂಥ ಎಲ್ಲ ಗುಣಗಳು ನನ್ನಲ್ಲಿವೆಯೆಂದು ನಾನು ಹೇಳಿಕೊಳ್ಳುವದಿಲ್ಲ.

ನನ್ನಲ್ಲಿ ಅಂಥ ಸದ್ಗುಣಗಳು ಇದ್ದರೂ ಸ್ವಂತ ಮನೆಯಲ್ಲಿಯೇ ಅವನ್ನು ಎತ್ತಿ ಹೇಳುವದರಿಂದ ಅವನಿಗೆ ಒಳಿತನ್ನು ಮಾಡದೆ ಅವನಿಗೆ ಕೆಡಕನ್ನು ಮಾಡುವವು. ಉಳಿದ ಅನೇಕ ಕೆಲಸಗಳಿಗಾಗಿ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಹಣ ಆವಶ್ಯವಾಗಿರುವದರಿಂದ ಇಂಥ ಮಾನಪತ್ರಗಳಿಗೆ ಕೇವಲ ೧೫ ರೂಪಾಯಿಗಳನ್ನು ವೆಚ್ಚ ಮಾಡಬೇಕೆಂದು ನಿರ್ಬಂಧ ಹಾಕಲಾಗಿದೆ.

ಯಾವನೊಬ್ಬ ವ್ಯಕ್ತಿಯು ಈ ವೆಚ್ಚವನ್ನು ವಹಿಸುತ್ತಿದ್ದರೆ ಈ ನಿರ್ಬಂಧ ಅನ್ವಯಿಸುವದಿಲ್ಲ. ಆದರೂ ವ್ಯಕ್ತಿಯ ಹಣವಾದರೂ ಅದಕ್ಕಿಂತ ಹೆಚ್ಚು ಉಪಯುಕ್ತ ಕಾರ್ಯಗಳಿಗೆ ವೆಚ್ಚವಾಗುವದು ಅವಶ್ಯವಾಗಿದೆ ಎಂದು ಶ್ರೀ. ಮುರಾರಜಿಯವರು ಅಭಿಪ್ರಾಯಪಟ್ಟರು.

ಹೊಸದಾಗಿ ಆರಿಸಲ್ಪಟ್ಟ ಮುನ್ಸಿಪಾಲಿಟಿ ಸದಸ್ಯರ ಒಮ್ಮತದ ನಿರ್ಣಯಕ್ಕನುಸಾರವಾಗಿ ಮುಖ್ಯ ಮಂತ್ರಿಗಳಿಗೆ ಮಾನಪತ್ರ ಸಮರ್ಪಿಸಲ್ಪಟ್ಟಿತ್ತು.

ವೀರಾಜಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಟಿ. ಎನ್. ಗೋವಿಂದರಾಜು

ಕಮಿಷನರ ಹಾಕಿ ಟ್ರಾಫಿ ಪಂದ್ಯಾಟ

ತಾರೀಕು ೨೪ರಿಂದ ಪ್ರಾರಂಭವಾದ ಕಮಿಷನರ ಹಾಕಿ ಕಪ್ ಪಂದ್ಯಾಟದಲ್ಲಿ ಒಟ್ಟು ಆರು ಟೀಮುಗಳು ಭಾಗವಹಿಸಿದ್ದವು. ತಾ. ೨೭ರಲ್ಲಿ ಸೆಂಟ್ರಲ್ ಹೈಸ್ಕೂಲು ಟೀಮು ಜಾಲಿ ವಾಯಲೆಟ್ ಟೀಮನ್ನು ಒಂದು ಗೋಲಿನಿಂದ ಸೋಲಿಸಿತು. ತಾ. ೨೮ರಲ್ಲಿ ವಾಂಡರ್ಸ್ ಟೀಮು ಪೋಲೀಸ್ ಟೀಮನ್ನು ಸೋಲಿಸಿತು. ತಾ. ೨೯ ರಲ್ಲಿ ವಿ ೯ ರಾ ಜ ಪೇ ೯ ಟೆ ಪರಗನ್ ಹಾಕಿ ಕ್ಲಬ್ ಟೀಮಿನವರು ಸೆಂಟ್ರಲ್ ಹೈಸ್ಕೂಲು ಟೀಮನ್ನು ಒಂದು ಗೋಲಿನಿಂದ ಸೋಲಿಸಿದರು. ತಾ ೩೦ ರಲ್ಲಿ ಜಾಲಿರೋಸಸ್ ಟೀಮಿಗೂ ವಾಂಡರ್ಸ್ ಟೀಮಿಗೂ ಆಟ ನಡೆದು ಡ್ರಾ ಆಗಿ ಪುನಃ ತಾ. ೧ರಲ್ಲಿ ಆಡಲಾಗಿ ಜಾಲಿರೋಸಸ್ ಟೀಮು ವಾಂಡರ್ಸ್ ಟೀಮನ್ನು ೨ ಗೋಲುಗಳಿಂದ ಸೋಲಿಸಿದರು. ಕಡೇ ಆಟವು ತಾ. ೩ರಲ್ಲಿ ಜಾಲಿರೋಸಸ್ ಟೀಮಿಗೂ, ಪರಗನ್ ಕ್ಲಬ್ ಟೀಮಿಗೂ ನಡೆದು ಪರಗನ್ ಕ್ಲಬ್ ಟೀಮು ಒಂದು ಗೋಲಿನಿಂದ ಜಯಶೀಲವಾಗಿ ಟ್ರಾಫಿಯನ್ನು ಗೆದ್ದಿತು. ಜನರಲ್ ಕಾರ್ಯಪ್ಪನವರು ಗೆದ್ದವರಿಗೆ ಟ್ರಾಫಿಯನ್ನು ಕೊಟ್ಟರು.

ಕೊಡಗಿನಲ್ಲಿ ಧ್ಯಾನಚಂದರು

ಜಗದ್ವಿಖ್ಯಾತ ಹಾಕಿ ಆಟಗಾರರಾದ ಧ್ಯಾನಚಂದರವರು ಅಖಿಲ ಭಾರತ ಸರ್ವಿಸಸ್ ಟೀಮಿನೊಡನೆ ತಾ. ೭ರ ಮಧ್ಯಾಹ್ನ ಮಡಿಕೇರಿಗೆ ಬರುವರು. ತಾ. ೮ರಲ್ಲಿ ಅಖಿಲ ಕೊಡಗು ಹಾಕಿ ಟೀಮಿನೊಡನೆ ಆಟ ನಡೆಯುವುದು. ಮಾರನೆ ದಿನ ಧ್ಯಾನಚಂದರ ಕೆಪ್ಟನ್‌ತನದಲ್ಲಿ ಜನರಲ್ ಕಾರ್ಯಪ್ಪನವರ ಟೀಮಿಗೂ, ಸರ್ವಿಸ್ ಟೀಮಿನ ಕೆಪ್ಟನ್ ಬಕ್ಷಿಯವರ ಕೆಪ್ಟನ್‌ತನದಲ್ಲಿ ಚೀಫ್ ಕಮಿಷನರ ಟೀಮಿಗೂ ಒಂದು ಪ್ರದರ್ಶನ ಆಟವು ನಡೆಯುವದು. ತಾ. ೧೦ರಲ್ಲಿ ಸರ್ವಿಸಸ್ ಟೀಮು ವೀರಾಜಪೇಟೆಯಲ್ಲಿ ದಕ್ಷಿಣ ಕೊಡಗು ಟೀಮಿನೊಡನೆ ಆಡಲಿರುವದು.

ಶನಿವಾರಸಂತೆಗೆ
'ಕೊಡಗು' ಏಜೆಂಟರು,
ಶ್ರೀ ಎಸ್. ಎನ್. ಸಿದ್ದಪ್ಪನವರು

ಧರ್ಮ ರಹಸ್ಯ.

ವಿ ರ ಕ್ತಿ ಇ ರ ಲಿ.

== ಭರ್ತೃಹರಿಯ ವೈರಾಗ್ಯ ಶತಕದಿಂದ ==

(೧) ಗುಹೆಗಳಲ್ಲಿ ಏಕಾಂತ ವಾಸಮಾಡಿ ಪರಮಾತ್ಮನ ಧ್ಯಾನ ಮಾಡುತ್ತಾ ಆನಂದಭಾಷ್ಪ ಸುರಿಸುವವರೇ ಪುಣ್ಯಶಾಲಿಗಳು. ಆ ಕಣ್ಣೀರೇ ಅಲ್ಲಿಯ ಹಕ್ಕಿಗಳ ಪಾನ ಜಲವಾಗುವದು. ನಾವಿಲ್ಲಿ ನಮ್ಮಲ್ಲೇನೂ ಧನವಿಲ್ಲದಿದ್ದರೂ ಮನದಲ್ಲಿ ಮಂಡಿಗೆಯುಣ್ಣುತ್ತಾ, ಗಾಳಿಗೋಪುರ ಕಟ್ಟಿ ಅಲ್ಲಿಯ ಉದ್ಯಾನದಲ್ಲಿ ವಿಹರಿಸುತ್ತಾ ಆಯುಷ್ಯ ಕಳೆದೆವು. ತತ್ವವನ್ನರಿಯಲು ಹವಣಿಸಲೇ ಇಲ್ಲ. ನಮ್ಮ ಬಾಳು ವ್ಯರ್ಥವಾಯಿತು.

(೨) ಭಿಕ್ಷೆ ಬೇಡಿ ಉಣ್ಣುತ್ತಾನೆ. ರುಚಿಯಿಲ್ಲ. ಅದೂ ಒಪ್ಪತ್ತು. ನೆಲದಲ್ಲಿ ಶಯನ. ಹಾಸಿಗೆಯೆಲ್ಲಿ? ದೇಹವೇ ಪರಿಚಾರಕ. ಒಂದೇ ಹರಕು ಬಟ್ಟೆಯಿದೆ. ಅಂತಹ ಅವಸ್ಥೆಯಲ್ಲಿಯೂ ಅವನಿಗೆ ಸುಖಭೋಗದ ಕುತೂಹಲ ಬಿಟ್ಟು ಹೋಗುವದಿಲ್ಲ. ಹಾ! ಈ ಭೋಗ ಲಾಲಸೆಯು ಕಂಗಾಲಾದವನನ್ನೂ ಮರುಳುಗೊಳಿಸಿ ಕೊಲ್ಲುತಿದೆಯಲ್ಲವೇ!

(೩) ಸ್ತನಗಳೂ ಮಾಂಸಖಂಡಗಳೇ. ಅವನ್ನು ಕವಿಗಳು ಸುಂದರ ಸುವರ್ಣ ಕಲಶಗಳಿಗೆ ಹೋಲಿಸುತ್ತಾರೆ. ಕಫವನ್ನು ಹೊರಗೆಡುವ ಮುಖವನ್ನು ಅಮೃತವನ್ನು ಹೊರಸೂಸುವ ಚಂದ್ರನಂತೆ ಕಾಣುತ್ತಾರೆ. ನಿತಂಬವು ಮದಗಜದ ತಲೆಯಂತಿದೆಯಂತೆ. ಇಂತು ನಾರಿಯರ ಅಂಗಾಂಗಗಳನ್ನು ಕವಿಗಳು ಬಣ್ಣಿಸಿ ದೊಡ್ಡದು ಮಾಡಿ ಬಿಟ್ಟರೇನೋ ನಿಜ. ಅದರ ಆಕರ್ಷಣೆ ಕಾವ್ಯದೊಳಗೆ ಮಾತ್ರವೇ ಹೊರತು ಸ್ವತಃ ಅಲ್ಲ ಎಂಬ ಭಾವನೆ ಬರಬೇಡವೇ ಮನುಜ!

(೪) ಗಿರಿಬಾಲೆಯ ದೇಹಾರ್ಧವನ್ನೇ ಸೂರೆಗೊಂಡ ಪರಮ ಶಿವನೊಬ್ಬನೇ ಕಾಮುಕರ ಪೈಕಿ ಅಗ್ರಗಣ್ಯನು. ನಾರೀ ಸಂಗವನ್ನೇ ತ್ಯಜಿಸಿ, ಮನ್ಮಥನನ್ನೇ ಸುಟ್ಟ ಪರಮ ವಿರಕ್ತನೆಂದರೆ—ಅವನು, ಆ ಪರಮಶಿವನು ಮಾತ್ರ. ಕಾಮಬಾಣಗಳೆಂಬ ನಾಗಗಳ ವಿಷದಿಂದ ದೂರವಾಗಲು ಯಾರು ಸಮರ್ಥರು? ಅಂತೂ ಅದೊಂದು ತ್ಯಾಗವು ಕಷ್ಟಾತ್ಕಷ್ಟತರವೆಂದು ಒಪ್ಪಿಕೊಳ್ಳಬೇಕು.

(೫) ಬೆಂಕಿಯ ಶಕ್ತಿಯನ್ನು ತಿಳಿಯದೆ ಭ್ರಮೆಯಿಂದ ಪತಂಗವು ಅದರಲ್ಲೇ ಬೀಳುತ್ತದೆ. ಮೀನು ಅವಿವೇಕದಿಂದ ಗಾಳದ ಮಾಂಸವನ್ನು ನುಂಗುತ್ತದೆ. ಮನುಜನೋ ವಿವೇಕವುಳ್ಳವನು. ಆದರೂ ಅಪಸ್ವರವಾದ ವಿಷಯವಾಲೆಯನ್ನು ಬಿಡದೆ ಅದರಲ್ಲೇ ಬಿದ್ದುಬಿಡುತ್ತಾನೆ. ಅಹಹ! ಅಜ್ಞಾನದ ಮಹಿಮೆಯೋ!

(೬) ನೀರಡಿಸಿದಾಗ ತಂಪಾದ ಮಧುರ ಜಲವನ್ನು ಕುಡಿಯುತ್ತಾನೆ. ಹಸಿದಾಗ ಮಾಂಸ, ತುಪ್ಪ ಮೊದಲಾದ ರುಚಿಕರ ಪದಾರ್ಥದೊಂದಿಗೆ ಉಣ್ಣುತ್ತಾನೆ. ಹಾಗೆಯೇ ಕಾಮಾಗ್ನಿಯು ಪ್ರಜ್ವಲಿಸುವಾಗ ಸ್ತ್ರೀಯನ್ನು ಆಲಂಗಿಸುತ್ತಾನೆ. ಆದರೆ ಒಮ್ಮೆ ಇವನ್ನನುಭವಿಸಿ ಬಿಟ್ಟನಂತರ ಪುನರಪಿ ಆ ಬಾಧೆ ಬಾರದಿರುವದಿಲ್ಲ. ಅವನ್ನು ನಿವಾರಿಸಲು ಅರಿಯದವರು ಮಾತ್ರ ಆ ಉಪಯೋಗವನ್ನು ಮಾಡಿಕೊಳ್ಳುತ್ತಾರೆ. ಇದರಿಂದ ಆ ಬಾಧೆಯು ನಿತ್ಯ ಶಾಂತವಾಗಲಾರದು.

(೭) ಮೋಳಿಗೆ ಮನೆ, ಸಂತತಿ, ವಿದ್ಯೆ, ಸಂಪತ್ತು, ಯೋಗ್ಯ ಪತ್ನಿ, ಯೌವನ ಇವನ್ನೇ ನೆನೆದು, ಅಜ್ಞಾನದಿಂದ ವಿವೇಕ ಕಳೆದ ಜನರು ಇವು ನಿತ್ಯವೆಂದು ತಿಳಿದವರಂತೆ ಈ ಸಂಸಾರವೆಂಬ ಕಾರಾಗೃಹದಲ್ಲೇ ಇದ್ದುಬಿಡುತ್ತಾರೆ. ಅನರ್ಥಕ್ಕೆ ಮೂಲವೆಂದವರು ತಿಳಿಯುವುದೇ ಇಲ್ಲ. ತಿಳಿದವನು ವಿರಕ್ತನಾಗುವನು. ವಿರಕ್ತನಾದರೆ ಮಾತ್ರ ಸುಖ.

ಒಳದೇಶ.

ವೀರಾಜಪೇಟೆ ಮುನ್ಸಿಪಾಲಿಟಿಯ ನೀರು ಸರಬರಾಯಿ ಯೋಜನೆಗಾಗಿ ೩॥ ಲಕ್ಷ ರೂಪಾಯಿಗಳನ್ನೂ, ಸೋಮವಾರಪೇಟೆ ನೋಟಿಫೈಡ್ ಏರಿಯಾದ ನೀರು ಸರಬರಾಯಿ ಯೋಜನೆಗಾಗಿ ೧॥ ಲಕ್ಷ ರೂಪಾಯಿಗಳನ್ನೂ ಕೇಂದ್ರ ಸರಕಾರವು ಸಾಲವಾಗಿ ಕೊಡಲು ಒಪ್ಪಿದೆಯೆಂದು ತಿಳಿದು ಬಂದಿದೆ.

ಕೊಡಗಿನ ಜಿಲ್ಲಾ ನ್ಯಾಯಧೀಶರಾಗಿ ನೇಮಕದ ಆರ್ಡರು ಇನ್ನೂ ಹೊರಪಡದಿದ್ದರೂ ಶ್ರೀ ಎನ್. ಆರ್. ಗೋಪಾಲಕೃಷ್ಣರವರನ್ನು ನ್ಯಾಯಧೀಶರಾಗಿ ನೇಮಕ ಮಾಡುವರೆಂದು ತಿಳಿದುಬಂದಿದೆ.

ಜನರಲ್ ಕಾರ್ಯಪ್ಪನವರು ತಾರೀಕು ೨೭ರಲ್ಲಿ ಕೊಡಗಿನ ಸಾಮೂಹಿಕ ವಿಕಾಸ ಯೋಜನೆಯ ಕೆಲಸ ನೋಡಲು ಹೊಗಿದ್ದಾಗ್ಗೆ ನಿಡ್ತ ಬಸಪ್ಪ ಎಂಬುವವರು ಅವರ ಭೇಟಿಯ ಗೌರವಾರ್ಥವಾಗಿ ರೂಪಾಯಿ ೫೦೦/-ನ್ನು ಸಾರ್ವಜನಿಕ ಕೆಲಸಕ್ಕೆಂದು ಕೊಟ್ಟಿರುವರು.

ಈಜಿಪ್ಟಿನ ಭವಿಷ್ಯ ರಾಜ್ಯಭಾರ ಸ್ವರೂಪವನ್ನು ನಿಶ್ಚಯಿಸುವದಕ್ಕೆ ೫೦ ಮಂದಿ ಸದಸ್ಯರನ್ನೊಳಗೊಂಡ ಸಮಿತಿಯೊಂದು ರಚಿತವಾಗಿದೆ. ಅದರ ಸೂಚನೆಗಳಂತೆ ರಾಜಸತ್ತೆ ಅಂತ್ಯ ಹೊಂದುವದು ಅಮೇರಿಕದ ರಾಜ್ಯಭಾರದ ಮಾದರಿಯಲ್ಲಿ ಪ್ರಜಾರಾಜ್ಯದ ಸಂಸ್ಥಾಪನೆಯಾಗುವದು. ಫರೂಕ್‌ರಂತಹ ರಾಜರು ಆಡಳಿತ ನಡೆಸಿ ಪ್ರಜೆಗಳಿಗೆ ದೊಡ್ಡ ಪಾಠಕಲಿಸಿದ್ದಾರೆ. ರಾಜತ್ವವು ಹೇಯವೆಂಬ ಬುದ್ಧಿ ಬಹು ಮಂದಿಗೆ ಬಂದಿದೆ.

ಹರಟೆ.

ಅಗ್ನಿಷ್ಟಿಕೆಯ ಎದುರಿನಲ್ಲಿ.

ಲೇ:—ಶ್ರೀ ಮಧುಗಿರಿ ವಾಸುದೇವಮೂರ್ತಿ, ಬೆಂಗಳೂರು.

ಅಗ್ನಿಷ್ಟಿಕೆಯ ಎದುರಿನಲ್ಲಿ ಕುಳಿತ್ತಿದ್ದೆ. ಅಡಿಗೆ ಮನೆಯಲ್ಲಿ ಕಾಫಿ ಕಾಯಿಸಿಕೊಳ್ಳುವ ಕೆಲಸ ಸುಗಮವಾಗಿ ಸಾಗಿತ್ತು. ಹಾಲು ಸಕ್ಕರೆ, ಕಾಫಿಪುಡಿ, ಅಗ್ನಿಷ್ಟಿಕೆ, ಇದ್ದಲು, ತಟ್ಟೆ, ಬಟ್ಟಲು, ಎಲ್ಲ ಅಲ್ಲೆ ಕೈಯ ಹತ್ತಿರ ಅಣಿಯಾಗಿ ಇರುವುದು ಎಷ್ಟು ಸೊಗಸು! ಇಷ್ಟೆಲ್ಲ ಪದಾರ್ಥ ಸಿದ್ಧಪಡಿಸಿ ಕೊಡಲು ಎಷ್ಟೊಂದು ಮಂದಿ ನಮ್ಮನ್ನು ನೋಡಿಕೊಳ್ಳುತ್ತಿದ್ದಾರೆ ಎಂಬ ಧೈರ್ಯದಲ್ಲಿ ಆ ಸಮಯ ಮನೆಯಲ್ಲಿ ನಾನು ಒಬ್ಬನೇ ಇದ್ದೇನೆ ಎಂಬುದು ಮನಸ್ಸಿಗೆ ಅಷ್ಟಾಗಿ ತಟ್ಟಲಿಲ್ಲ. ಮನೆ ಬಾಗಿಲು ತೆರೆದಿತ್ತು. ಇದನ್ನು ನೆನೆಸಿಕೊಳ್ಳುವಾಗ ಇಂಗ್ಲೀಷಿನ ಸಂಪ್ರದಾಯಗಳ ಸರಣಿಯಲ್ಲಿ 'ಒಳಗೆ ಬರುವಾಗ ಬಾಗಿಲು ಹಾಕಿಕೊಂಡು ಬಾ' ಎಂಬುದೊಂದು ಮಾತು ಇದೆ ಎಂದು ನನಗೆ ಪಾಠ ಆಗುತ್ತಾ ಇದ್ದದ್ದು ಜ್ಞಾಪಕಕ್ಕೆ ಬರುತ್ತಿದೆ. ಅದರೊಂದಿಗೇ ಸತ್ಸಂಪ್ರದಾಯದ ಮಾತು 'ನಿಮ್ಮ ಹೃದಯಗಳು ತೆರೆದಿರಲಿ' ಎಂಬುದೂ ಒಂದು ಉಂಟು ಎಂದು ನೆನಪಾಗುತ್ತದೆ. ಸೂಕ್ಷ್ಮವಾಗಿ ಈ ಎರಡು ಅಭಿಪ್ರಾಯಗಳ ನಡುವೆ ಮನಸ್ಸು ಯಾವುದೋ ನಿಲುವಿನಲ್ಲಿ ನಿಂತು ಆ ದಿನ ಮನೆಯಲ್ಲಿ ಅಗ್ನಿಷ್ಟಿಕೆಯ ಎದುರಿನಲ್ಲಿ ಮಣೆಯ ಮೇಲೆ ಕುಳಿತಿದ್ದೆ. ಕೆಂಡ ಅಗ್ನಿಷ್ಟಿಕೆಯಲ್ಲಿ ಥಳಥಳಿಸುತಿತ್ತು. ಅದನ್ನು ನೋಡುತ್ತಾ ನೋಡುತ್ತ ಏನೇನೋ ಆಲೋಚನೆಗಳು ಮನಸಿನಲ್ಲಿ ಹಾದು ಹೋಗುತಿದ್ದವು.

ಕಾಫಿ ಮಾಡಿಕೊಂಡು ಕುಡಿಯುವುದು ಒಳ್ಳೆಯದೆ? ಹೋಟೆಲಿಗೆ ಹೋಗಿ ಕುಡಿಯುವುದೊಳ್ಳೆಯದೆ?

ಹೆಂಗಸರು ಕೂಡ ಅಡಿಗೆಗೆ ಕುಳಿತುಕೊಳ್ಳಬಾಗದು ಎಂದು ರಷ್ಯಾದಲ್ಲಿ ಕ್ಯಾಂಟೀನುಗಳ ಏರ್ಪಾಡನ್ನು ವ್ಯವಸಾಯದ ಕ್ಷೇತ್ರಗಳಲ್ಲೆಲ್ಲ ಏರ್ಪಡಿಸಿದ್ದಾರಂತಲ್ಲ ಹೌದೆ?

ಕೆಲಸ, ಕೆಲಸ, ಕೆಲಸ!

ಎಷ್ಟು ಜನ ಹೇಗೆ ಕೆಲಸ ಮಾಡಿದರೂ ಈ ಜಗತ್ತಿನ ಹೊಟ್ಟೆ ತುಂಬುವುದಿಲ್ಲ.

ಜಮೀನು ಇದ್ದಷ್ಟೆ ಇದೆ; ಬೆಳೆ ಹೆಚ್ಚಬೇಕಾದಷ್ಟು ಹೆಚ್ಚಿಲ್ಲ; ತಿನ್ನುವವರ ಸಂಖ್ಯೆ ಒಂದಕ್ಕೆ ಎರಡರಷ್ಟು, ಎರಡಕ್ಕೆ ನಾಲ್ಕರಷ್ಟು ಏರಿತು.

ಅದಕ್ಕೇ ನನಗೆ ಕಾಫಿ, ಹಾಲು, ಸಕ್ಕರೆ ಎಲ್ಲದಕ್ಕೂ ಅಭಾವ ಆಗುತ್ತಾ ಬಂದಿತು.

ಬೆಳೆದ ಬೆಳೆಗೆ ತಕ್ಕ ರೊಕ್ಕ ಬರದಿದ್ದರೆ ಬೆಳೆ ಏಕೆ ಬೆಳೆಯಬೇಕು ಎನ್ನುತ್ತಾರೆ ಬೆಳೆಯುವವರು.

ತೊಡಕೂ, ತೊಡಕು!

ಈ ಕಾಫಿ ಬೆಳೆಯುವವರಿಗೆ, ಈ ಸಕ್ಕರೆ ತಯಾರು ಮಾಡುವವರಿಗೆ ರೊಕ್ಕ ಬರುತ್ತಿದೆ ನೋಡಿರಿ; ಕಾಳುಕಡ್ಡಿ ಬೆಳೆಯುವವರಿಗೆ ಬರುತ್ತ ಇಲ್ಲ.

ಅಲ್ಲ ಈ ಕಾಫೀನೇ ಏಕೆ ಕುಡಿಯಬೇಕು? ರಾಗಿ ಮಾಲ್ಟ್ ಸ್ವಲ್ಪ ಹಾಲಿಗೆ ಹಾಕಿಕೊಂಡು ಕುಡಿದರೆ ಆಗುವುದಿಲ್ಲ?

ಕಾಫಿಯಾದರೂ ಉಳಿದಿದೆ. ರಾಗಿ ಎನ್ನುವುದು ಕನಸಾಗಿ ಹೋಯಿತು.

ಹೀಗೆ ಒಂದು ಲಕ್ಷ ವಿಷಯಗಳು ಮನಸ್ಸಿನಲ್ಲಿ ಹಾದು ಹೋದರೆ ಏನಾಗುತ್ತದೆ ಗೊತ್ತೆ? (೧) ಹುಚ್ಚು ಹಿಡಿಯುತ್ತದೆ. (೨) ಯಾವ ಒಂದು ಕೆಲಸವನ್ನೂ ಹಿಡಿದು ಮಾಡುವುದಕ್ಕಾಗುವುದಿಲ್ಲ. (೩) ನಮ್ಮ ಸುತ್ತಲೂ ಏನಿದೆ ಎನ್ನುವುದು ಕಾಣದೆ ಹೋಗುತ್ತದೆ. ನನಗೇಕಿಷ್ಟು ಈ ದೊಡ್ಡ ಪ್ರಪಂಚದ ವಿಚಾರ, ಸದ್ಯ ಈ ಕಾಫಿ ಮಾಡಿ ಮುಗಿಸೋಣ ಎಂದು ಕಾಡು ಮೇಯುವುದಕ್ಕೆ ಹೋಗಿದ್ದ ಮನಸ್ಸನ್ನು ಸದ್ಯದ ಕೆಲಸಕ್ಕೆ ತಿರುಗಿಸಿದ ಕೂಡಲೇ ಆ ಮನಸ್ಸನ್ನು ಕುರಿತ ಪದ್ಯವೇ ಒಂದು ಮತ್ತೆ ಜ್ಞಾಪಕಕ್ಕೆ ಬಂದಿತು.—'ಮೊದಲೆ ಮರ್ಕಟ' ಇತ್ಯಾದಿ. ಮಗ್ಗುಲಲ್ಲಿ ನೋಡುತ್ತೇನೆ, ನಿಜವಾಗಿ ಒಂದು ಕೋತಿ ಬಂದು ಬಿಟ್ಟಿತ್ತು.

ಅಯ್ಯೊಯ್ಯೋ ಕೋತಿ! ಮನೆ ಒಳಗೆ! ಅಡಿಗೆ ಮನೆಯಲ್ಲಿ! ಹತ್ತಿರ ಒಂದು ಕೋಲು ಇತ್ತು ನೋಡಿರಿ. ತೆಗೆದುಕೊಂಡು ಓಡಿಸಿದೆ. ಹೊರಗೆ ಬಂದು ನೋಡುತ್ತೇನೆ ಗದ್ದಲವೋ ಗದ್ದಲ. ನೂರು ಕೋತಿಗಳು ಬಂದಿವೆ. ಸೀಬೆಯ ಕಾಯಿಗಳನ್ನೆಲ್ಲ ಉದುರಿಸಿವೆ, ಹೀರೆ ಕಾಯಿಗಳನ್ನೆಲ್ಲ ಕಿತ್ತು ಹಾಕಿವೆ, ಅಷ್ಟು ಇಷ್ಟು ಚಿಗುರುಗಳನ್ನೆಲ್ಲ ಕಿತ್ತು ಹಾಕಿವೆ ಸರಿ, ಕಲ್ಲೆಸೆದದ್ದಾಯಿತು, ದಡಬಡ ಶಬ್ದ ಮಾಡಿದ್ದಾಯಿತು; ಕೋತಿಗಳು ಮಗ್ಗುಲು ಮನೆಗೆ ಹೊರಟು ಹೋದವು. ನಾನು ಒಳಕ್ಕೆ ಬಂದೆ.

ಹಾಗೇ ಸುಭಾಷಿತದ ಒಂದು ಪದ್ಯ ನೆನಪಿಗೆ ಬಂದಿತು: 'ಏಕಸ್ಮಿನ್ನೋ, ದ್ವಿರಧ್ಯಾಯಿನ, ತ್ರಿಭಿರ್ಗೀರ್ವಾಣ್, ಚತುಃಪದಸ್ ಸಪ್ತಪಂಚಕೃಷೀನಾಮ್ ಚ, ಸಂಗ್ರಾಮೋ ಬಹುಭಿರ್ಜನ್ಯೇ' ಆ ಕೋತಿ ಒಂದೇ ಸಿಕ್ಕಿಕೊಂಡರೆ ಏಟು ಬಿದ್ದೀತು ಎಂದೇ ಬೇಗ ಓಡಿ ಹೋಗಿ ಗುಂಪು ಸೇರಿಕೊಂಡಿರಬೇಕು. ಹೌದು, ಸಂಗ್ರಾಮ ಹೂಡುವುದಕ್ಕೆ ಆ ಪ್ರಾಣಿಗಳು ಅಷ್ಟು ಸಂಖ್ಯೆಯಲ್ಲಿ ಬಂದಿದ್ದವಷ್ಟೆ. ಕೋತಿಗೆ ಮಾತು ಬರುತ್ತದೆಯೆ! ಬರಬಹುದು. ನನ್ನ ಜ್ಞಾಪಕಕ್ಕೆ ಬಂದ ಪದ್ಯದ ಅರ್ಥವನ್ನೇ ಅದು ತನ್ನ ಭಾಷೆಯಲ್ಲಿ ಹೇಳಿ ಹೋಗಿರಬೇಕು. ಹೌದು. ಅಡಿಗೆ ಮನೆಯಿಂದ ಹೊರಕ್ಕೆ ಹೋದಾಗ ಆ ಕೋತಿ ಸುಮ್ಮನೆ ಹೋಗಲಿಲ್ಲ ಹಲ್ಲು ಕಿರಿದು ಪ್ರದರ್ಶಿಸಿಯೇ ಹೋಯಿತು. ಆದರೆ ಈ ಕೋತಿಗಳು ಹೀಗೆ ಬಹು ಸಂಖ್ಯೆಯಲ್ಲಿ ಮುತ್ತಿಗೆ ಹಾಕುವುದಕ್ಕೆ ನಾವು ಅವಕ್ಕೆ ಮಾಡಿದ್ದೇನು

ಒಂದು ಮಾತು ಕಿವಿಯಲಿ ಹೊಕ್ಕು ಕೇಳಿಸಿತು: ಹೊಟ್ಟೆ! ಹೊಟ್ಟೆ! ಹೊಟ್ಟೆ!

ಆದರೆ ಹೊಟ್ಟೆಗಾದರೆ ಅವು ಬೇಕಾದಷ್ಟು ಹಣ್ಣು ತಿಂದು ಹೋಗಲಿ; ಹೀಚುಗಳನ್ನೆಲ್ಲ ಉದುರಿಸಿ ಹಾಳುಮಾಡಿ ಹೋಗುವುದೇಕೆ? ಇದೇನೋ ಬರೀ ಹಸಿವಿನ ಮಾತಲ್ಲ, ಇನ್ನೊಬ್ಬರಿಗೆ ಹಿಂಸೆ ಕೊಡುವ ಮನೋಭಾವ ಕೂಡ ಇದರಲ್ಲಿ ಇದೆ ಎನ್ನಿಸಿತು. ಪಾಪ, ಕೋತಿ ಇದೆಲ್ಲ ಒಂದು ಆಟ ಎಂದೇ ತಿಳಿದುಕೊಂಡಿರಬಹುದು. ಬಹುಶಃ ಅವುಗಳ ಊಟಕ್ಕೆ, ಆಟಕ್ಕೆ ಬೇರೆ ಸ್ಥಳ ಅವಕಾಶ ಇದ್ದಿದ್ದರೆ ಈ ಕೋತಿಗಳು ಇಲ್ಲಿಗೆ ಬರುತ್ತಲೇ ಇಲ್ಲಿರಲಿಲ್ಲ. ಅವಕಾಶ ತಪ್ಪಿಸಿದವರು ಯಾರು?

ಮರ, ಕೋತಿ! ಹಾಂ ತಿಳಿಯಿತು. ಮರಗಳು ಬೇಕಾದ ಹಾಗೆ ಇದ್ದರೆ ಕೋತಿಗಳು ಅಲ್ಲಿ ಆಡಿಕೊಳ್ಳುತಿದ್ದವು. ಈಗ ಜನ ಕಾಡುಗಳನ್ನೆಲ್ಲ ಕಡಿದಿದ್ದಾರೆ. ಕೋತಿಗಳು ಊರು ನುಗ್ಗಿವೆ. ಏನೂ ತಪ್ಪಿಲ್ಲ

'ನಮ್ಮ ಜನಕ್ಕೆಲ್ಲ ಹಂಚುವಷ್ಟು ಜಮೀನು ನಮಗಿಲ್ಲವಲ್ಲ; ಏನು ಮಾಡುವುದು?' ಎಂಬ ಒಂದು ಆರ್ಥಿಕ ಪ್ರಶ್ನೆ ಇದೆ ಎಂದು ಮೊನ್ನೆ ಯಾರೋ ಮಾತನಾಡಿಕೊಳ್ಳುತ್ತಿದ್ದುದು ಕೇಳಿಸಿತು. ಹಾಗೇ ಇದೂ ಒಂದು ನಮ್ಮ ಜೀವನಕ್ಕೆ ಸಂಬಂಧಪಟ್ಟ, ನಮ್ಮ ಜೀವದ ಸುತ್ತಲೂ ಬಂದಿರುವ ಒಂದು ಪ್ರಶ್ನೆ 'ಕೋತಿಗಳೆಲ್ಲ ಹೋಗಿ ಸೇರಿಕೊಳ್ಳುವಷ್ಟು ಮರಗಳಿಲ್ಲವಲ್ಲ; ಏನು ಮಾಡುವುದು?' ಎನ್ನುವುದು ಒಂದು ಅಬ್ಬರ ಕೇಳಿಬಂತು: ಬಂದ ಕೋತಿಗಳನ್ನು ಬಡಿದು ಹಾಕುವುದು.'

ಹೋ, ಹೋ, ಕೋತಿ ಕಾಳಗ! ಮಾಮಾ ಸಾಹಸಿಗಳಹುದಹುದು! ಎಚ್ಚರಿಕೆ!

'ಕಾಡಿದೊಡೆ ಹಲ್ಲು ಕಿರಿದೀತು!
ಕೊಲ್ಲಮೊಡೆ ಹಾರಿ ಕಚ್ಚೀತು'!

ಆದರೆ ಎತ್ತಿದರೆ, ಅಡಿದರೆ, ಈ ಕೊಲ್ಲುವ ಮನೋಭಾವ ಏಕಪ್ಪ? ಅದು ಮನಶಾಸ್ತ್ರಜ್ಞರು ಹೇಳುವಂತೆ ಕಾಡುಜೀವನದಿಂದ ಹರಿದು ಬಂದಿರುವ ಒಂದು ತಾನಾಗಿ ತಾನು ಹೊರಹೊಮ್ಮುವ ಚೇಷ್ಟೆ. ಕೋತಿ ಬಂತು, ಕೋಲು ತೆಗೆದುಕೊ. ಆಗ ಕೋತಿ ಹೇಳುತ್ತದೆ 'ಕೋಲು ಕಂಡೆ, ಹಲ್ಲು ಕಿರಿದೆ' ಎಂದು. ದುಷ್ಟ ಜೀವಕ್ಕೆ ಸುಖವಿಲ್ಲ. ನಿಜ. ಆದರೆ ಇದೆಲ್ಲ ಒಂದು ಭೂತ ಚೇಷ್ಟೆ ಕಂಡ ಹಾಗೆ ಕಾಣುವುದಿಲ್ಲವೆ?

ಭೂತ ಎಂದ ಕೂಡಲೆ ನಮ್ಮ ಹಿರಿಯರು ಬೆಳಸಿಕೊಂಡಿದ್ದ ಒಂದು ತತ್ವ ಹೊಳೆಯಿತು. 'ಭೂತ ತೃಪ್ತಿ' ಎಂಬ ತತ್ವ.

ಸುಪ್ರಭಾತಂ ಭಗವತಃ ಪರಸ್ಯ ಬ್ರಹ್ಮಣೋ ವಿಭೋಃ ಸುಪ್ರಭಾತಂ ಮದಾರಭ್ಯ ಣಾಂ ಸರ್ವೇಷಾಂ ಪ್ರಾಣಿನಾಮಪಿ.

ಎಲ್ಲ ಪ್ರಾಣಿಗಳಿಗೂ ಸುಪ್ರಭಾತವನ್ನು ಬಯಸಿದರು ಅವರು. ಇದನ್ನು ಹೇಳಿಕೊಳ್ಳುತ್ತಾ ಹಿರಿಯರೊಬ್ಬರು ಮಾಡುತ್ತಿದ್ದ ಕೆಲಸ ಕಣ್ಣೆದುರಿಗೆ ಬಂದಿತು. ದಿನ ಬೆಳಿಗ್ಗೆ ಅವರು ಗ್ರಾಮ ಪ್ರದಕ್ಷಿಣೆಗೆ ಹೋಗುತಿದ್ದರು. ಹೋಗುವಾಗ ಸ್ವಲ್ಪ ಅಕ್ಕಿಯ ನುಚ್ಚನ್ನು ತೆಗೆದುಕೊಂಡು ಹೋಗುತಿದ್ದರು. ಇರುವೆಯ ಗೂಡು ಎಲ್ಲಿ ಕಂಡರೆ ಅಲ್ಲಿ ಸ್ವಲ್ಪ ನುಚ್ಚು ಉದುರಿಸುತ್ತಿದ್ದರು. ಭೂತ ತೃಪ್ತಿಗೆ ಇದೊಂದು ಉದಾಹರಣೆ.

ಇದರಲ್ಲಿ ಏನೋ ಶಾಸ್ತ್ರ ಇರಬೇಕು ಎನ್ನಿಸಿತು. ಇರುವೆಗಳು ನೋಡಿ, ಯಾವಾಗಲು ಕಾಳಿಗೆ ಮುತ್ತಿಗೆ ಹಾಕಿ ಗೂಡಿಗೆ ತೆಗೆದುಕೊಂಡು ಹೋಗುತ್ತಿರುತ್ತವೆ. ಅವುಗಳಿರುವ ಕಡೆಯಲ್ಲೇ ಸ್ವಲ್ಪ ಕಾಳು ಉದುರಿಸಿಬಿಟ್ಟರೆ ನಾವು ಹಾಕಿ ಕೂಡಿರುವ ಕಾಳಿನ ರಾಶಿಯನ್ನು ಹುಡುಕಿಕೊಂಡು ಬರಲಾರವು. ಬಹುಶಃ ಹಾವಿಗೆ ಹಾಲು ಎರೆಯುವುದರಲ್ಲಿ, ಕೋತಿಗಳಿಗೆ ಕಡಲೆಕಾಯಿ ಹಾಕುವುದರಲ್ಲಿ ಇದೇ ತತ್ವವೇ ಅಡಕವಾಗಿರಬೇಕು. ಆದರೆ ಒಂದು ಹಿಡಿ ಕುಚ್ಚಿನಲ್ಲಿ, ಒಂದು ಉದ್ದರಣೆ ಹಾಲಿನಲ್ಲಿ, ಒಂದು ಪಾವು ನೆಲಗಡಲೆ ಕಾಯಿಯಲ್ಲಿ ಯಾವ ಕೀಟವನ್ನು, ಯಾವ ಜಂತುವನ್ನು, ಯಾವ ಪ್ರಾಣಿಯನ್ನು ತೃಪ್ತಿಗೊಳಿಸುವುದಕ್ಕಾದೀತು? ಆ ಮನೋಭಾವ ನೋಡಬೇಕಾದದ್ದು. ಒಟ್ಟಿನಲ್ಲಿ ಆಯಾ ಭೂತಗಳಿಗೆ ಅಲ್ಲಲ್ಲಿ ತೃಪ್ತಿಯಾಗುವ ಒಂದು ಸನ್ನಿವೇಶ ಇದ್ದರೆ ಅವುಗಳ ಚೇಷ್ಟೆ ಬೇಡವಾದ ಕಡೆಗೆ ಪಸರಿಸಲಾರದು.

ಆದರೆ ಮನುಷ್ಯಕೃತ ಉಪಾಯಗಳು ವಿಲಕ್ಷಣವಾದವು. ಗೋಹತ್ಯ ಮಾಡಬಾರದು. ಕೂಡದು, ಕೂಡದು, ಕೂಡದು. ವಿಚಾರ ಒಳ್ಳೆಯದು. ಆದರೆ ಆ ಮೂರನೆಯ ಸಲ ಕೂಡದು ಎಂದು ಹೇಳುವ ಹೊತ್ತಿಗೆ ಉಂಟಾಗುವ ತಾವು ಯಾವ ಪ್ರಾಣಿಯನ್ನು ಕಾಪಾಡಬೇಕೆಂದು ಹೊರಟಿರುವೆವೊ ಆ ಗೋಮಾತೆ ಆ ಹಸುವಿನಲ್ಲಿ ಮೂರ್ತೀಭವಿಸಿರುವ ಸಾಧುತನವನ್ನು ಯಾವ ಬಗೆಯಲ್ಲೂ ಹೋಲದು, ಚಿತ್ರಿಸದು. ನೋವು ಉಂಟುಮಾಡದೆ ಪ್ರಾಣಿಯನ್ನು ಕೊಲ್ಲುವುದು ಎನ್ನುವುದು ಒಂದು ಉಪಾಯ. ಕನಿಕರದ ಪರಮಾವಧಿ ಕಾಣಿಸುವುದು ಈ ಉಪಾಯದಲ್ಲಿಯೋ, ಅಥವಾ ಪ್ರಾಣಿಯನ್ನು ಕೊಲ್ಲಬೇಡಿ ಎಂಬ ಒಂದು ಆರ್ಭಟದಲ್ಲಿಯೋ ವಿಚಾರ ಮಾತಹೊರಟಾಗ ಸ್ವಲ್ಪ ತಬ್ಬಿಬ್ಬಾಗುತ್ತದೆ.

ಇದಕ್ಕೇ ಯಾವ ಮಂತ್ರದ ಕೊನೆಯಲ್ಲಿಯೂ ನಮ್ಮ ಹಿರಿಯರು 'ಶಾಂತಿ, ಶಾಂತಿ, ಶಾಂತಿ' ಎಂಬ ಮಾತನ್ನು ಸೇರಿಸಿದರು.

ಆದರೆ ಹೇಳದೆ ಕೇಳದೆ ಒಂದು ಕೋತಿ, ಗಡವ, ಅಡಿಗೆ ಮನೆಗೆ ಬಂದಿರುವಾಗ ಕೋಲು ತೆಗೆದುಕೊಂಡು ಹೆದರಿಸುವುದು ಬಿಟ್ಟು 'ಶಾಂತಿ' ಎಂದರೆ ಎಂತಹ ಶಾಂತಿ? ಅದು ಓಡಿ ಹೋಗುವಾಗ ಸರಿಹೋಯಿತು; ಮೈಮೇಲೆ ಬಿದ್ದಿದ್ದರೆ?

ಆ ಮೇಲೆ ಅನ್ನಿಸಿತು, ಕೋತಿ ನನಗೆ ಹೇಗೆ ಕಂಡಿತೋ, ನಾನು ಕೋತಿಗೆ ಹಾಗೆ ಕಂಡಿ-ಬಾರದೇಕೆ? ಅದಕ್ಕೆ ಅದು ಹೆದರಿಕೆ ಬೇಕು.

ಮತ್ತೆ ನನ್ನ ಕೆಲಸಗಳಲ್ಲಿ ಒಂದು ಬಗೆಯಲ್ಲಿ ವಾನರ ಸ್ವರೂಪವಾಗಿರುವುದರಿಂದಲೇ ಈ ವಾನರ ದರ್ಶನ ಪ್ರಾಪ್ತಿ ಎನ್ನಿಸಿತು.

'ವಿನಾಯಕಂ ಪ್ರಕುರ್ವಾಣೋ
ರಚಯಾಮಾಸವಾನರಃ'

ಕೊಡಗಿನ ಸಾಮೂಹಿಕ ವಿಕಾಸ ಯೋಜನೆ.

ಶ್ರೀ ಕೆ. ಜಿ. ಶಿವಸ್ವಾಮಿಯವರ ಅಭಿಪ್ರಾಯ.

ಹಿಂದೂದೇಶದ ಸಾಮೂಹಿಕ ವಿಕಾಸ ಯೋಜನೆಯ ಕೇಂದ್ರಗಳನ್ನು ಸಂದರ್ಶಿಸಿ ಅವುಗಳು ಹೇಗೆ ಕೆಲಸ ಮಾಡುತ್ತಿವೆಯೆಂಬ ವಿಚಾರವಲ್ಲ, ಅವು ಯಶಸ್ವಿಯಾಗಿ ಜಾರಿಯಲ್ಲಿ ಬಂದರೆ ಜನ ಜೀವನದಲ್ಲಿ ಸಾಮೂಹಿಕ ಐಕ್ಯತೆಯನ್ನು ನೆಲೆಗೊಳಿಸಿ ಯೋಗ್ಯ ಸಮಾಜ ರಚನೆಗೆ ಸಹಾಯಕವಾಗುವವೇ ಎಂದು ಪರೀಶೀಲಿಸಲು ನಿಯೋಜಿತರಾದ ಶ್ರೀ ಕೆ. ಜಿ ಶಿವಸ್ವಾಮಿಯವರು ದಕ್ಷಿಣ ಕನ್ನಡದ ಸಹಕಾರ ಚಳವಳ ಮತ್ತು ಸಾಮೂಹಿಕ ವಿಕಾಸ ಯೋಜನೆಯ ಕಾರ್ಯಕಲಾಪಗಳನ್ನು ಪರೀಶೀಲಿಸಿ ಕೊಡಗಿಗೆ ಬಂದು ಕೊಡಗಿನಲ್ಲಿ ಸಮಾಜ ವಿಕಾಸಯೋಜನೆಯ ಕಾರ್ಯಕಲಾಪಗಳನ್ನೂ ಸಹಕಾರ ಚಳವಳದ ಪ್ರಗತಿಯನ್ನೂ ಪರೀಶೀಲಿಸಿ ತಾಗರಲ್ಲಿ ಹಿಂತಿರಳಿದರು, ಅವರು ಉತ್ತರ ಕೊಡಗು ಮತ್ತು ದಕ್ಷಿಣ ಕೊಡಗಿನ ಕೆಲವು ಗ್ರಾಮಗಳನ್ನು ಸ್ವತಹ ಕಾಲ್ನಡಿಗೆಯಲ್ಲಿ ಪರೀಶೀಲಿಸಿದರು.

ಕೊಡಗಿನ ಸಾಮೂಹಿಕ ವಿಕಾಸಯೋಜನೆಯ ಕೆಲಸ ಮತ್ತು ಸಹಕಾರ ಚಳವಳದ ವಿಚಾರ ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡುತ್ತಾ "ಸಾಮೂಹಿಕ ಭಾವನೆಯು ಕೊಡಗಿನ ಪಾರಂಪರಿಕ ಸಂಸ್ಥೆಗಳಲ್ಲಿಯೂ ಸಹಕಾರ ಸಂಸ್ಥೆಯಲ್ಲಿಯೂ ಸಾಮೂಹಿಕ ವಿಕಾಸ ಕೇಂದ್ರದಲ್ಲಿ ಕಂಡು ಬರುವದಕ್ಕಿಂಥಾ ಹೆಚ್ಚು ತೋರಿ ಬರುತ್ತದೆ. ದಕ್ಷಿಣ ಕೊಡಗಿನ ಅವಿಭಕ್ತ ಕುಟುಂಬಗಳಲ್ಲಿ, ಶತಮಾನಗಳಿಂದ ಭೂಸ್ವತ್ತುಗಳನ್ನು ಮಾರಾಟ ಮಾಡಲಾರದ ನಿರೋಧಕ ಕಾಯಿದೆಗಳಲ್ಲಿ, ಮದುವೆ, ಮೃತ್ಯು ಶುಭಶೋಭನಗಳಲ್ಲಿ ಇಂದಿಗೂ ಪರಿಪಾಲಿಸುತ್ತಿರುವ ಪರಸ್ಪರ ಸಹಾಯಕ ಪದ್ಧತಿಗಳಲ್ಲಿ ಎಲ್ಲರೂ ಸೇರಿ ಕೆರೆ ರಿಪೇರಿ, ನಾಟಿ, ಕುಯಿಲು ಕೆಲಸಗಳಲ್ಲಿ ಪರಸ್ಪರ ಸಹಾಯ ಮಾಡುವ ಮುಯ್ಯಾಳು ಪದ್ಧತಿಯಲ್ಲಿ ಸಾಮೂಹಿಕ ವಿಕಾಸ ಯೋಜನೆಯಲ್ಲಿ ತೋರಿ ಬರುವುದಕ್ಕಿಂಥಾ ಹೆಚ್ಚಿನ ಸಾಮೂಹಿಕ ಭಾವನೆಯು ಕಂಡು ಬರುತ್ತದೆ. ಎರಡನೆಯದಾಗಿ ಕೊಡಗಿನ ಪ್ರತಿ ಗ್ರಾಮಗಳಿಗೂ ಒಂದೊಂದರಂತಿರುವ ಹಲವು ವೇಳೆ ವಿವಿದೋದ್ದೇಶ ಕಾರ್ಯಕಲಾಪಗಳನ್ನು ಕೈಕೊಂಡು ವಿಸ್ತೃತವಾಗಿ ಹಬ್ಬಿರುವ ಸಹಕಾರ ಸಂಘಗಳು, ಮಾರ್ಕೆಟಿಂಗ್ ಫೆಡರೇಶನ್, ಬತ್ತ, ಏಲಕ್ಕಿ, ಕಿತ್ತಳೆ ಜೇನು ಮೊದಲಾದವುಗಳ ಸರಬರಾಜು ಮತ್ತು ಮಾರಾಟಕ್ಕಾಗಿರುವ ಕೇಂದ್ರ ಸಂಘಗಳು ಇವುಗಳ ಸಹಕಾರ ಸಹಾಯಗಳಿಲ್ಲದೆ ಸಾಮೂಹಿಕ ವಿಕಾಸ ಯೋಜನಾ ಕೇಂದ್ರಗಳಲ್ಲಿ ಬೀಜ, ಗೊಬ್ಬರ ವ್ಯವಸಾಯ ಹತ್ಯಾರು, ಸೀಮೆಣ್ಣೆ, ಬಟ್ಟೆ ಮೊದಲಾದವುಗಳ ಸರಬರಾಯಿ ಮತ್ತು ಆ ಭಾಗದ ಫೈತರ ಬೆಳಸುಗಳನ್ನು ಮಾರಾಟ ಮಾಡುವ ವ್ಯವಸ್ಥೆಗಳಲ್ಲಿ ಹೆಚ್ಚಾಗಿ ಮುಂದುವರಿಯುವದು ಸಾಧ್ಯವಿಲ್ಲ. ಸರಕಾರದವರು ಇತ್ತೀಚೆಗೆ ನೇಮಿಸಿರುವ ಸಹಕಾರ ವಿಚಾರಣಾ ಸಮಿತಿಯು ಸ್ಟೇಟ್ ಸಹಕಾರ ಬ್ಯಾಂಕಿಗೂ, ಮಾರಾಟ ಮತ್ತು ವಿತರಣಾ ಸಹಕಾರ ಸಂಘಗಳಿಗೂ ಯೋಗ್ಯ ಬೆಂಬಲಕೊಟ್ಟು ಸಹಾಯ ಬೇಕಿರುವ ಪ್ರಾಥಮಿಕ ಸಂಘಗಳ ಹಿತ ಬಯಸುವರೆಂದು ಆಶಿಸಲಾಗಿದೆ.

ದುರಾದೃಷ್ಟವಶಾತ್ ದಕ್ಷಿಣ ಕೊಡಗಿನಲ್ಲಿ ಸಹಕಾರ ಸಂಘಗಳು ಹೆಚ್ಚು ಅಭಿವೃದ್ಧಿ ಸ್ಥಿತಿಯಲ್ಲಿದ್ದು ಅವರ ಪ್ರತಿನಿಧಿಗಳು ಕರ್ನಾಟಕ ಏಕೀಕರಣದ ವಿರುದ್ಧ ಕಳೆದ ಚುನಾವಣೆಯಲ್ಲಿ ಆಡಳಿತ ನಡೆಸುವ ಪಕ್ಷದ ವಿರುದ್ಧ ನಿಂತು ಆ ಭಾಗದಲ್ಲಿ ಹೆಚ್ಚಿನ ಸ್ಥಳಗಳನ್ನು ಸಂಪಾದಿಸಿದ ಪರಿಣಾಮವಾಗಿ ಆಡಳಿತ ನಡೆಸುವ ಪಕ್ಷ ಮತ್ತು ಸಹಕಾರಿಗಳೊಳಗೆ ಭಿನ್ನಬೇಧ ಬಂದಂತೆ ತೋರುತ್ತದೆ. ಪರಿಣಾಮಕರವಾದ ವ್ಯವಸಾಯ ವ್ಯವಸ್ಥೆಯಲ್ಲಿ ವ್ಯವಸಾಯ ಇಲಾಖೆಯ ಪಾತ್ರವು ಪ್ರಾಮುಖ್ಯವಾದರೂ ಕೊಡಗಿನ ಸಾಮೂಹಿಕ ಯೋಜನೆಯಲ್ಲಿ ಇಲ್ಲಿಯ ವ್ಯವಸಾಯ ಇಲಾಖೆಗೆ ನಿಶ್ಚಿತ ಪಾತ್ರವಿಲ್ಲ. ಈ ಕಾರಣಗಳಿಂದಾಗಿ ಕೊಡಗಿನ ಸಾಮೂಹಿಕ ಯೋಜನೆಯು ಹಳ್ಳಿಯ ಕೆಲವು ಉದ್ಯೋಗಸ್ಥರಲ್ಲದವರ ಸಹಾಯದಿಂದ ನಿಶ್ಚಿತ ಕೆಲವು ಕೆಲಸಗಳಾದ ಆಣೆಕಟ್ಟು, ಕೆರೆ ರಿಪೇರಿ, ರಸ್ತೆ, ಬಾವಿ ಮೊದಲಾದವುಗಳನ್ನು ತೀವ್ರ ಗತಿಯಿಂದ ಮುಗಿಸುವ ಸರಕಾರಿ ಇಲಾಖಾ ಕೆಲಸಗಳಾಗಿವೆಯೇ ವಿನಾ ಬೇರಿಲ್ಲ. ಕೆರೆ ಮೊದಲಾದ್ದು ನೀರಾವರಿ ಕೆಲಸಗಳು ಕೇವಲ ಭೂಮಿ ಇರುವ ಪಟ್ಟೆದಾರರಿಗೇ ಪ್ರಯೋಜನಕರವಾಗುದರಿಂದ ವೇತನವಿಲ್ಲದೆ ಸೇವಾದೃಷ್ಟಿಯಿಂದ ಕೆಲಸ ಮಾಡುವವರು ದೊರೆಯುವದು ಕಡಿಮೆ. ಸ್ಥಿತಿವಂತರ ಮತ್ತು ಬಡವರ ಕೆಲಸಗಳಲ್ಲಿ ತಾರತಮ್ಯವನ್ನಿಡದಿದ್ದರೆ ಬಡವರಿಂದ ಬಲಕ್ಕಾರದ ಕೆಲಸ ಮಾಡಿಸಿದಂತಾಗುವುದು. ಈ ಕಾರಣವಾಗಿಯೇ ಒಂದು ಕೆರೆ, ಯಾ ರಸ್ತೆ ಕೆಲಸಕ್ಕೆ ಒಂದೆರಡು ದಿನ ಎಲ್ಲರೂ ಸೇರಿ ದುಡಿದರೂ ನಂತರ ಈ ರೀತಿಯ ಸಹಕಾರ ದೊರೆಯದಿರುವದಾಗಿದೆ. ಸರಕಾರವೇ ಕೈಕೊಂಡು ಮಾಡಬೇಕಾದ ಆಣೆ ಕಟ್ಟು ಮೊದಲಾದ ದೊಡ್ಡ ಕೆಲಸಗಳಿಗೂ ಉಪಕ್ರುತರು ಯಾ ಸಾಮೂಹಿಕ ಪ್ರಯತ್ನದಿಂದ ಕೈಕೊಳ್ಳ ಬಲ್ಲ ಚಿಕ್ಕ ಕೆಲಸಗಳಿಗೂ ಸ್ಪಷ್ಟವಾದ ಪ್ರತ್ಯೇಕೀಕರಣವಿಲ್ಲದಾಗಿದೆ. ಭೂಮಾಲಿಕರು ವರ್ಷಂಪ್ರತಿ ಎಕರೆಗೆ ನಿರ್ದಿಷ್ಟವಾದ ನೀರು ಕಂದಾಯ ಕೊಡಲು ತಯಾರಿರುವರು. ಇದರಿಂದ ಸರಕಾರಕ್ಕೂ ಆದಾಯ ಬರಬಹುದು. ಸಣ್ಣ ಕೆಲಸಗಳಿಗೆ ಸಹಾಯ ದೊರೆಯಲ್ಕು ಅದಕ್ಕೆ ಸಂಬಂಧಿಸಿದವರು ಶೇಕಡ ೨೫ರಷ್ಟು ನಿಧಿ ಸಂಗ್ರಹಿಸಬೇಕೆಂದು ವಿಧಿಸಿದ್ದರೂ ಲಾಬಿನಲ್ಲಿ ಸಾಕಷ್ಟು ಸಂಗ್ರಹವಾಗುತ್ತಿಲ್ಲ. ಮದ್ರಾಸು ಸಂಸ್ಥಾನದಲ್ಲಿ ಗ್ರಾಮ ಪಂಚಾಯಿತಗಳು ಸರಕಾರಿ ಗ್ರಾಂಟು ದೊರೆಯಲು ಸಂಗ್ರಹಿಸುತ್ತಿದ್ದ ಪರಿಮಾಣದಲ್ಲಿ ಕೊಡಗಿನಲ್ಲಿಯೂ ಸಂಗ್ರಹಿಸಬಹುದು. ಆದರೆ ಅಂಥಾ ಕೆಲಸಗಳು ಸಾಮೂಹಿಕವಾಗಿ ನಿಶ್ಚಯಿಸಲ್ಪಡಬೇಕಲ್ಲದೆ, ಅದಕ್ಕೆ ಬೇಕಾದ ಗ್ರಾಮಿಣ ವಂತಿಗೆಯನ್ನು ಜನತೆಯು ತಾರತಮ್ಯವರಿತು ಹಣ ಯಾ ಇತರರವಸ್ತುಗಳನ್ನು ಸಂಗ್ರಹಿಸಬೇಕಾಗಿದೆ. ಈಗಿನ ಪದ್ಧತಿ ಮೇರೆ ಗ್ರಾಮದಲ್ಲಿ ವಾಸವಿಲ್ಲದ ಭೂಮಾಲಿಕರು ಈ ರೀತಿಯ ವಂತಿಗೆಯಿಂದ ವಿನಾಯಿತಿ ಪಡೆಯುವರು. ತಮ್ಮ ಸಹಕಾರ ಕೆಲಸದಿಂದ ಭೂಮಿಯಲ್ಲಿ ಹೆಚ್ಚು ಉತ್ಪನ್ನವಾಗಿ ಕೆಲಸ ಮಾಡ್ದವರು ಭೂಮಾಲಿಕರಿಗೆ ಹೆಚ್ಚಿನ ದರದ ಕಂದಾಯ ಯಾ ವಾರ ಕೊಡಬೇಕಾಗಿರುವದರಿಂದ ಈ ಜನರಿಗೆ ಅಂಥ ಕಾರ್ಯಗಳಲ್ಲಿ ಉತ್ಸಾಹ ಕಡಿಮೆಯಾಗಿದೆ. ಕೊಡಗಿನಂಥಾ ಚಿಕ್ಕ ಸಂಸ್ಥಾನದಲ್ಲಿ ಸಾಮೂಹಿಕ ವಿಕಾಸ ಯೋಜನಾ ಆಡಳಿತ ರಚನೆಯನ್ನು ಡೆವಲಪ್‌ಮೆಂಟ್ ಕಮಿಷನರ ಹುದ್ದೆಯನ್ನು ತೆಗದು ಹಾಕಿ ಪ್ರಾಜೆಕ್ಟ್ ಆಫೀಸರನ್ನು ಮಾತ್ರ ಇಟ್ಟು ಕೊಂಡು ಉತ್ತಮಗೊಳಿಸಬಹುದು. ಒಟ್ಟಾಗಿ ಕೈಗೊಂಡಿರುವ ಕೆಲಸಗಳು ಹೃದಯಂಗಮವಾಗಿದ್ದರೂ ಉದ್ಯೋಗಸ್ಥರ ಒತ್ತಾಯ ಬಲತ್ಕಾರದ ಪರಿಣಾಮ ತೋರುವದಲ್ಲದೆ ಸಾಮೂಹಿಕ ಭಾವನೆಯಲ್ಲ.

ಅಂದರೆ ವಿನಾಯಕನನ್ನು ಮಾಡುವದಕ್ಕೆ ಹೋಗಿ ವಾನರನನ್ನು ಕೂಡಿಸುತ್ತಿದ್ದೇವೆ. ಹಾಗೆ ನೋಡಿದರೆ ನಾವು ವಿನಾಯಕ ಎಂದುಕೊಂಡಿರುವ ಮೂರ್ತಿಯ ವಿನಾಯಕರ್ತ ತಾನೇ ಏನು?

ನಾನು ಇನ್ನೂ ಕಾಫಿಯನ್ನು ಮಾಡಿ ಮುಗಿಸಿರಲಿಲ್ಲ, ಎಲ್ಲಿಗೋ ಹೋಗಿದ್ದ ಮನೆಯವರೆಲ್ಲ ಬಂದು ಸೇರಿದರು. ಪಾಠ ಶಾಲೆಗೆ ಹೋಗಿದ್ದ ಸಣ್ಣ ಹುಡುಗ ಮೊದಲು ಇಣಿಕಿ ನೋಡಿದ. "ಮತ್ತೆ ಬಂದೆಯಾ ಕೋತಿ? ಹುಶ್" ಎಂದೆ. ಎಲ್ಲರೂ ಚೆನ್ನಾಗಿ ನಕ್ಕೆವು. ಕಾಫಿ ಮಾಡಿಕೊಂಡು ಕುಡಿದೆವು.

Specialists in Tailoring! Prompt Service!!

FOR **English Felt Hats,**

Wedding Suits, Ladies Over Coats

AND

Latest Designs in Wollen Suitings

— CALL ON —

25-16 **PATTU BROTHERS,**

OPP.— Town Hall, MYSORE.

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಶೇಕಡ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ ಅಪ್ಪಯ್ಯ, ಪ್ರೆಸಿಡೆಂಟ್ & ಖಜಾಂಚಿ.

ಭೂಮಿಯ ಆದಿ--ಅಂತ್ಯ.

ಲೇ:—ಶ್ರೀ ಕೆ. ಬಿ. ಐಯ್ಯಪ್ಪ, ನಾಪ್ಪೋಕ್ಲು ಶಾಲೆ.

ಶುಭ್ರ ಬೆಳದಿಂಗಳಿನ ವೇಳೆಯಲ್ಲಿ, ವಿಶಾಲವಾದ ಮೈದಾನದಲ್ಲಾಗಲೀ, ಅಥವಾ ಸಮುದ್ರ ಪ್ರಯಾಣ ಮಾಡುತ್ತಿರುವಾಗಲೀ, ಒಮ್ಮೆ ನಾವು ಈ ಭೂಮಂಡಲವನ್ನು ನೆನಪಿಗೆ ತಂದದ್ದೇ ಆದರೆ ಆಶ್ಚರ್ಯವಾಗದಿರದು. ಯಾವ ರೀತಿಯಲ್ಲಿ ಈ ಭೂಮಿಯು ಸೃಷ್ಟಿಸಲ್ಪಟ್ಟಿರಬಹುದು? ಯಾವಾಗ ಇಂದಿನ ಆಕಾರವನ್ನು ತಳೆದಿರಬಹುದು? ಮುಂದಿನ ಸ್ಥಿತಿ ಎಂತಹದ್ದು? ಇವೇ ಮೊದಲಾದ ಸೋಜಿಗ ಪ್ರಶ್ನಾವಳಿಗಳು ಮನಸ್ಸಿನಲ್ಲಿ ಉಂಟಾಗದಿರವು.

ಒಂದೇ ಕ್ಷಣದಲ್ಲಿ ಈ ವಿಶ್ವವು ಉದ್ಭವವಾಗಿರಬಹುದೆಂಬ ಕಲ್ಪನೆ ಆಧಾರರಹಿತ ಹಾಗೂ ಅರ್ಥರಹಿತವಾದದ್ದು. ಪ್ರತಿಯೊಂದು ವಸ್ತು ನಿರ್ಮಾಣಕ್ಕೂ ಆದಿ, ಅಭಿವೃದ್ಧಿ ಮತ್ತು ಅಂತ್ಯ ಎಂಬ ತ್ರಿಗುಣ ಅವಸ್ಥೆಗಳಿರುವ ಪ್ರಯುಕ್ತ, ನಾವು ವಾಸಿಸುತ್ತಿರುವ ಗೃಹವೂ ಸಹ ಪ್ರಕೃತಿಯ ಬಗೆಬಗೆಯ ಶಕ್ತಿಗಳ ಘರ್ಷಣೆ ಮತ್ತು ಸಂಘಟನೆಯಿಂದ ಉತ್ಪನ್ನವಾಗಿರಬೇಕಾಗಿದೆ. ಆದರೆ ಮಾನವನು ಇದಕ್ಕೆ ಸಕಾರಣ ನೀಡಲು ಅಶಕ್ತನಾಗಿ ಭೂಮಂಡಲದ ಸೃಷ್ಟಿಯನ್ನು ಸುಮ್ಮನೆ ವಿವರಿಸುತ್ತಿದ್ದಾನೆ. ಆದಿಯಲ್ಲಿ ಪರಮಾತ್ಮನು ಸ್ವರ್ಗವನ್ನೂ ಮತ್ತು ಭೂಮಿಯನ್ನೂ ನಿರ್ಮಿಸಿದನೆಂದೂ; ಆದರೆ ಭೂಮಿಗೆ ನಿರ್ದಿಷ್ಟ ಆಕಾರವಿರಲಿಲ್ಲೆಂದೂ, ಮತ್ತು ಇಡೀ ಭೂಗ್ರಹವನ್ನು ಕಗ್ಗತ್ತಲೆಯು ವ್ಯಾಪಿಸಿತ್ತೆಂದೂ, ಬೈಬಲಿನ ಆದಿಗ್ರಂಥವು ಸಾರುತ್ತಿದೆ. ಈ ಸಿಕಟ ಸಮಸ್ಯೆಯನ್ನು ಬಗೆಹರಿಸಲೆಂದೇ ಆಧುನಿಕ ಸೃಷ್ಟಿ ಶಾಸ್ತ್ರವು ಪ್ರಾಚೀನ ಧಾರ್ಮಿಕ ಸೂತ್ರಗಳನ್ನು ಬಯಲಿಗೆಳೆಯುತ್ತಿದೆ. ವಿಜ್ಞಾನ ಮತ್ತು ಧರ್ಮವು ಸೂಚಿಸುತ್ತಿರುವ ಪ್ರತಿಯೊಂದು ನವೀನ ವಿಷಯಗಳು ನಮ್ಮನ್ನೆಲ್ಲಾ ಮತ್ತಷ್ಟು ಭ್ರಾಂತಿಗೊಳಿಸುತ್ತಿವೆ.

ತಾನು ನೆಲಸಿರುವ ಗೃಹವು ತನಗಿಂತ ಸ್ವಲ್ಪ ಹಿರಿದಾದದ್ದು ಎಂದು ಮಾನವನ ಊಹನೆಯಾಗಿತ್ತು. ೧೬೫೪ರಲ್ಲಿ ಐರ್ಲೆಂಡಿನ ಸುಪ್ರಸಿದ್ಧ ಪಾದ್ರಿಯೊಬ್ಬನು ಬೈಬಲ್ ಗ್ರಂಥವನ್ನು ಶೋಧನೆ ಮಾಡಿ "ಈ ಭೂಮಂಡಲವು ಕ್ರಿ. ಪೂ. ೪೦೦೪ನೇ ಇಸವಿ ಅಕ್ಟೋಬರ್ ೨೬ನೇ ತಾರೀಕು ಬೆಳಗ್ಗೆ ೯ ಗಂಟೆಗೆ ಸೃಷ್ಟಿಸಲ್ಪಟ್ಟಿತು" ಎಂದು ಪ್ರಚುರ ಪಡಿಸಿದನು. ಅಂದಿನಿಂದ ಸಾಧಾರಣ ೧ ಶತಮಾನದ ತನಕ ಈ ಅಭಿಪ್ರಾಯವೇ ಸರ್ವಸಮ್ಮತವಾಗಿತ್ತು.

ಆದರೆ ೧೯ನೇ ಶತಮಾನಕ್ಕಿಳಿಯುತ್ತಲೇ ಜನರಲ್ಲಿ ಭಿನ್ನಾಭಿಪ್ರಾಯಗಳು ಮೂಡಿದವು. ಕೆಲವು ಮೂಲ ಶೋಧಕರು ನವೀನ ವಿಜ್ಞಾನ ಭೂಗರ್ಭ ಶಾಸ್ತ್ರವನ್ನು ಮೊದಲು ಮಾಡಿದರು. ಒಡೆದ ದೊಡ್ಡದೊಡ್ಡ ಶಿಲಾ ಪದರುಗಳನ್ನೆಲ್ಲಾ ಪರಿಶೀಲಿಸುವಾಗ್ಗೆ ಒಂದೊಂದರಲ್ಲಿ ಒಂದೊಂದು ಜಾತಿಯ ಪ್ರಾಣಿ ಮತ್ತು ಸಸ್ಯವರ್ಗಗಳ ಅವಶೇಷಗಳು ಕಾಣಿಸಿಕೊಂಡವು. ಇದರಿಂದ ಭೂಮಿಯು ಉದ್ಭವವಾಗಿ ದೀರ್ಘ ಅವಧಿ ಸಂದು ಹೋಗಿದೆಯೆಂದು ಭಾವಿಸತೊಡಗಿದರು. ನಾನಾ ಹವಬದಲಾವಣೆಯಿಂದಲೂ, ಮೇಲೆ ವ್ಯತ್ಯಾಸದಿಂದಲೂ ಈ ರೀತಿಯ ವರ್ಗಗಳಾಗಿರಬಹುದೆಂದು ತಿಳಿದರು. ಇಲ್ಲದಿದ್ದರೆ ಬೆಟ್ಟಗಳ ತುದಿಯಲ್ಲಿ ಸಮುದ್ರ ಮೀನುಗಳ (ವೇಲ್ ಮತ್ತು ಹೆಲಿಬಟ್) ಎಲುಬುಗಳು ಇರಲಿಕ್ಕೆ ಕಾರಣವೇನು? ಇಂಗ್ಲೆಂಡಿನಲ್ಲಿ ತಾಳೆ ಮರಗಳ ಅವಶೇಷಗಳು ತೋರಿಬರಲಿಕ್ಕೆ ಕಾರಣಗಳೇನು? ಬ್ರೇಝಿಲ್‌ನಲ್ಲಿ ಹಿಮಪ್ರಾಣಿಗಳ ಅಸ್ಥಿಪಂಜರ ಹೇಗೆ ದೊರಕಿದವು? ಇವುಗಳಿಂದ ಭೂಮಂಡಲವು ನಿರ್ಮಿತವಾಗಿ ಲಕ್ಷಗಟ್ಟಲೆ ವರ್ಷಗಳು ಕಳೆದು ಹೋಗಿವೆಯೆಂದು ದೃಢವಾಗುವದು.

ಇದನ್ನು ಸ್ಪಷ್ಟೀಕರಿಸಲೆಂದು ೧೮೫೯ರಲ್ಲಿ ಡಾರ್ವಿನನ ಮಹಾಕೃತಿಯಾದ ವಿಕಾಸವಾದವು, ಸಮನ್ವಿತ ಕಾಲಗಣನಾ ಶಾಸ್ತ್ರವನ್ನು ರಚಿಸಿ, ಪ್ರಾಣಿಗಳ ಅವಶೇಷಗಳ ನಿಜಸ್ವರೂಪವನ್ನು ಮಿಲಿಯಾಂತರ ವರ್ಷಗಳ ವರೆಗೆ ಹಿಂದೂಡಿತು. ೧೯೦೦ರಿಂದ ಈಚೆಗೆ ಭೂಮಿಯ ವಯಸ್ಸನ್ನು ಅತೀ ಸುಲಭದಲ್ಲಿ ಅಳೆಯಲಾಯಿತು. ಹೇಗೆಂದರೆ, ರೇಡಿಯೋ ಪ್ರಚಲಿತ ವಸ್ತುಗಳಾದ, ರೇಡಿಯಂ, ಯುರೇನಿಯಂ ಮತ್ತು ತೋರಿಯಮ್ ಲವಣಗಳು ಇಂತಿಷ್ಟೇ ನಿರ್ದಿಷ್ಟ ಅವಧಿಯಲ್ಲಿ ಕೊಳೆತು ಅನೇಕ ರೂಪಾಂತರ ಹೊಂದಿ ಕೊನೆಗೆ ಸೀಸವಾಗುತ್ತವೆ. ಆದ್ದರಿಂದ ಈ ರೀತಿಯ ಶಿಲೆಗಳಲ್ಲಿ ಇರತಕ್ಕ ಯುರೇನಿಯಮ್ ಮತ್ತು ಸೀಸದ ಪರಿಮಾಣವನ್ನು ಕಂಡುಹಿಡಿದು, ಯಾವಾಗ ಈ ಲೋಹಗಳು ಅಲ್ಲಿ ಪ್ರಾಪ್ತಿಯಾಗಿದೆಯೆಂದು ಹೇಳಬಹುದು. ಭೂಲೋಕದ ನಾನಾ ಭಾಗಗಳಲ್ಲಿರುವ ಈ ರೀತಿಯ ಶಿಲೆಗಳನ್ನು ಶೋಧಿಸಿದ ನಂತರ, ಭೂಮಿಯ ಮೇಲ್ಭಾಗವು ಸಾಧಾರಣ ಮೂರು ಸಾವಿರ ಮಿಲಿಯ ವರ್ಷಗಳ ಹಿಂದೆ ಗಟ್ಟಿಯಾಗಿರಬಹುದೆಂದು ಊಹಿಸಿದ್ದಾರೆ. ಸಾಗರಗಳಲ್ಲಿರುವ ಉಪ್ಪಿನ ಅಂಶ ಮತ್ತು ಪ್ರತಿ ವರ್ಷ ನದಿಗಳು ಸಾಗರಕ್ಕೆ ಕೊಂಡೊಯ್ಯುತ್ತಿರುವ ಉಪ್ಪಿನ ಅಂಶ–ಇವುಗಳನ್ನೆಲ್ಲಾ ಲೆಕ್ಕ ಹಾಕಿ ನೋಡುವಾಗ ಕಡಿಮೆ ಪಕ್ಷ ಮೂರು ಮತ್ತು ನಾಲ್ಕು ಸಾವಿರ ಮಿಲಿಯ ವರ್ಷಗಳೊಳಗೆ ಭೂಮಿಯು ಉದ್ಭವಿಸಿರಬಹುದೆಂದು ಹೇಳುತ್ತಾರೆ. ಆದ್ದರಿಂದ ಭೂಮಿಯು ಕೇವಲ ಇತ್ತೀಚೆಗೆ ಸೃಷ್ಟಿಯಾಯಿತೆಂಬ ವಾದ ನಿರ್ನಾಮವಾಗುತ್ತದೆ.

ಭೂಮಿಯು ಯಾವಾಗ ರಚನೆಯಾಯಿತು ಎಂಬುದನ್ನು ಬಿಟ್ಟು ಹೇಗೆ ರಚನೆಯಾಯಿತು? ಎಂಬುದನ್ನು ಅವಲೋಕಿಸಿದರೆ ವಿಜ್ಞಾನದ ಶೋಧೆಯು ಮಹತ್ತರವಾದ ಪಾತ್ರವನ್ನು ವಹಿಸುವುದು. ಭೂಮಂಡಲದ ಈಗಿನ ಪರಿಸ್ಥಿತಿಯನ್ನೇ ಭೂಸೃಷ್ಟಿಯ ಪ್ರಾರಂಭದ ಅನ್ವೇಷಣೆಯು ಹೊಂದಿಕೊಂಡಿದೆ. ಖಗೋಳ ಶಾಸ್ತ್ರವು ವಿಶ್ವದ ಪರಿಚಯವನ್ನು ಮಾಡಿಕೊಟ್ಟಿದ್ದರೂ, ಭೂಗರ್ಭದೊಳಗಡಗಿರುವ ವಸ್ತುಗಳ ಅರಿವು ಇನ್ನೂ ನಮಗಾಗಿಲ್ಲ. ಅತೀ ಆಳಕ್ಕೆ ಭೂಮಿಯೊಳಗೆ ಮಾನವನು ಹೊಕ್ಕಿದ್ದರೆ, ಅದು ವಯೋಮಿಂಗ್ ಎಂಬಲ್ಲಿರುವ ಕಲ್ಲಿನೆಣ್ಣೆ ಬಾವಿಯಲ್ಲಾಗಿದೆ. ಇದರ ಆಳ ೨೦,೫೨೧ ಅಡಿಯಾಗಿದೆ. ಇದು ಭೂಮಿಯ ಹೊರಚಿಪ್ಪಿನಿಂದ ಭೂಕೇಂದ್ರಕ್ಕಿರುವ ದೂರದ ೧/೧೦೦೦ದಷ್ಟು ಮಾತ್ರ ಆಯಿತಷ್ಟೆ.

ಆದರೆ ಒಂದು ಮಾತ್ರ ಸರಿಯೆಂದು ಅನಿಸಿದೆ. ಭೂಗರ್ಭದಲ್ಲಿ ಬೆಂಕಿ ಉರಿಯುತ್ತಿದೆ. ಪ್ರತಿ ೬೦ ಅಡಿ ಆಳಕ್ಕೆ ಹೋದಂತೆ ೧° ಫ ಉಷ್ಣ ಹೆಚ್ಚಾಗುತ್ತದೆ. ಎರಡು ಮೈಲು ಕೆಳಕ್ಕೆ ಹೋದರೆ ನೀರು ಕುದಿಯುವ ಉಷ್ಣಕ್ಕೆ ಏರುತ್ತದೆ. ೩೦ ಮೈಲಿನ ಕೆಳಗೆ ಶಿಲೆಗಳು ದ್ರವರೂಪವಾಗುತ್ತವೆ. ಅಂದರೆ ೨,೨೦೦° ಫ ಗಿಂತಲೂ ಉಷ್ಣವಿದೆ. ಈ ಮಟ್ಟದಲ್ಲಿಯೇ ಜ್ವಾಲಾಮುಖಿಯ ಶಿಲಾರಸವು ತಯಾರಾಗುವುದು. ಭೂಗರ್ಭದ ಕೇಂದ್ರದಲ್ಲಿ ೧೦,೦೦೦° ಫ ಗಿಂತ ಅಧಿಕ ಉಷ್ಣವಿದೆಯೆಂದು ಊಹಿಸಲಾಗಿದೆ. ಅಂದರೆ ಸೂರ್ಯನ ಹೊರಮೈಯಷ್ಟು ಇದೆ.

ಈ ಭೂಮಿಯಲ್ಲಿ ಒಂದೇ ಕೇಂದ್ರಬಿಂದುವುಳ್ಳ ಮೂರು ಮಂಡಲಗಳಿವೆಯೆಂದು ಭೂಗರ್ಭ ಶಾಸ್ತ್ರಜ್ಞರು ಗ್ರಹಿಸಿದ್ದಾರೆ. ಭೂಮಿಯು ಬರೇ ಶಿಲೆ ಮತ್ತು ಮಣ್ಣಿನ ಮಿಶ್ರಣವಲ್ಲ. ಭೂಮಿಯ ಕೇಂದ್ರವನ್ನು ಆವರಿಸಿರುವ ಅಂತರ್ಭಾಗವು ದೊಡ್ಡದೊಂದು ಕಬ್ಬಿಣ ದ್ರವದ ಉಂಡೆಯಾಗಿದ್ದು ಇದರಲ್ಲಿ ತವರ ಮತ್ತು ಇನ್ನಿತರ ಲೋಹಗಳು ಇರಬಹುದು–ಅದು ೪೦೦೦ ಮೈಲು ವ್ಯಾಸವುಳ್ಳದ್ದಾಗಿದೆ. ಸಾಧಾರಣ ಮಾರ್ಸ್ ಗ್ರಹವಷ್ಟಿರಬಹುದು. ಇಲ್ಲಿಯ ಲಕ್ಷಣಗಳು ಯಾರಿಗೂ ತಿಳಿದಿಲ್ಲ. ಇಲ್ಲಿ ಒಂದು ಚದರ ಅಂಗುಲದ ಮೇಲಿನ ಒತ್ತಡ ೪೫,೫೦೦,೦೦೦ ಪೌಂಡುಗಳಷ್ಟಿದೆ.

ಇದನ್ನು ಆವರಿಸಿಕೊಂಡು, ಸಾಧಾರಣ ೨೦೦೦ ಮೈಲು ದಪ್ಪದಲ್ಲಿ ಮತ್ತೊಂದು ವಲಯವಿದೆ. ಇಲ್ಲಿ 'ಓಲಿವೈನ್', ಎಂಬ ಹಸುರು ಹಸುರು ಬಣ್ಣದ ಶಿಲೆಗಳ ಸಮೂಹವಿದೆ. ಅನೇಕ ರೀತಿಯ ಲೋಹ ಮಿಶ್ರವಾಗಿರುವದು ಮಾತ್ರವಲ್ಲ, ಒಳಮಂಡಲದ ಹತ್ತಿರ ಕೆಂಪು ಕೆಂಡದಂತೆಯೂ, ಮೇಲಕ್ಕೇರಿದ ಹಾಗೆ ಬಹಳ ಬಿಸಿಯಾಗಿಯೂ ಇದೆ. ಇದರ ಮೇಲೆ, ಮೂರನೆಯದಾಗಿ ಮಾನವನ ಲೋಕ ಅತೀ ತೆಳ್ಳಗಾಗಿ ಆವರಿಸಲ್ಪಟ್ಟಿದೆ. ಸಾಧಾರಣ ೧೦ರಿಂದ ೨೦ ಮೈಲುಗಳಷ್ಟು ಮಂದವಾಗಿದೆ. ಈ ಮೇಲಿನ ಪದರನ್ನು ಮುಖ್ಯವಾಗಿ ಎರಡು ವಿಭಾಗ ಮಾಡಿರುವರು. ಒಂದನೆಯ ಭಾಗ ಬೆಸಾಲ್ಟ್ ಎಂಬ ಕರಿ ಶಿಲೆಯ ಸ್ತರ; ಎರಡನೆಯದು ಇದರ ಹೆಚ್ಚಾಂಶ ಗ್ರೆನೈಟ್ ಎಂಬ ಶಿಲೆಯಿಂದ ಕೂಡಿದೆ. ಹೊರ ಚಿಪ್ಪು ಎಲ್ಲದಕ್ಕಿಂತಲೂ ಹಗುರವಾಗಿದೆ.

ಈ ಕ್ರಮದಲ್ಲಿ, ಭೂಮಿಯೊಳಗೆ ಹೊಕ್ಕಿದ ಹಾಗೆ, ವಸ್ತುಗಳ ಭಾರವು ಹೆಚ್ಚಾಗುತ್ತಲೂ ಮತ್ತು ಅವುಗಳ ಶಾಖವು ಅಧಿಕವಾಗುತ್ತಲೂ ಇರುವ ಈ ವಿಚಿತ್ರ ವಿಚ್ಛೇದನವನ್ನು ನೋಡುವಾಗ್ಗೆ, ಈ ಭೂಮಂಡಲವು ಒಂದಾನೊಂದು ವೇಳೆಯಲ್ಲಿ ದ್ರವರೂಪವಾಗಿದ್ದು, ಈಗ ಸಾವಕಾಶವಾಗಿ ತಣಿಯುತ್ತಿದೆಯೆಂದು ಹೇಳಬಹುದು.

ಚಿಕಾಗೋ ವಿಶ್ವವಿದ್ಯಾಲಯದ ಗೆರಿಡೊ ಕೂಪರ್ ಎಂಬ ಗಣಿತ ಶಾಸ್ತ್ರಜ್ಞನು ೧೯೫೧ರಲ್ಲಿ ಭೂಸೃಷ್ಟಿಯನ್ನು ಈ ರೀತಿಯಲ್ಲಿ ವಿವರಿಸಿದ್ದಾನೆ. ಈತನ ಹೇಳಿಕೆ ಸಮಾಧಾನಕರವಾಗಿ ತೋರುತ್ತದೆ. ವಿರಳ ಚದರಿದ ಮತ್ತು ವಿಶ್ವಕ್ಕೆ ಸಂಬಂಧಿಸಿದ ಧೂಳಿನಿಂದ ಕೂಡಿದ ಮೂಲ ಪ್ರಕೃತಿಯ ಮೋಡಗಳು ಅತ್ತಿತ್ತ ವೇಗವಾಗಿ ಚಲಿಸುತ್ತಿರುವಾಗ್ಗೆ, ನಕ್ಷತ್ರಗಳು ಒಂದೊಂದಾಗಿ ಜನ್ಮತಾಳಿದವು. ಆಕರ್ಷಣ ಶಕ್ತಿಯ ದೆಸೆಯಿಂದ ಅವುಗಳು ಗುಂಪುಗೂಡಿದುವು; ಸಂಕೋಚವಾಗತೊಡಗಿದವು; ನಂತರ ಸುತ್ತಲಾರಂಭಿಸಿದವು. ಅಂತರಿಕ್ಷ ಒತ್ತಡ ಮತ್ತು ಉಷ್ಣ ಆವಾಗ ಮೇಲೇರುತ್ತಾ ಬಂದು ಕೊನೆಗೆ ಬೆಂಕಿ ಜ್ವಾಲೆಗಳಾಗಿ ಮಿನುಗುವ ನಕ್ಷತ್ರಗಳಾದವು. ನಕ್ಷತ್ರಪುಂಗವು, ತನ್ನ ಅಕ್ಷದ ಸುತ್ತಲೂ ಅತೀ ವೇಗವಾಗಿ ಸುತ್ತುತ್ತಿರಲು ಅನೇಕ ನಕ್ಷತ್ರಗಳು ಎರಡು, ಮೂರು ಮತ್ತು ಐದು ಜೊತೆಗಳಾಗಿ ವಿಂಗಡಿಸಲ್ಪಟ್ಟವು. ಈ ರೀತಿಯ ಒಂದು ಜೋಡು ಸೂರ್ಯಗ್ರಹವಾಗಿದೆ. ಇದು ಅತೀ ಸಣ್ಣ ನಕ್ಷತ್ರವಾಗಿದೆ. ಇದು ಗಿರ್ರನೆ ತಿರುಗುತ್ತಲೂ, ಜ್ವಲಿಸುತ್ತಲೂ, ಬೆಳೆಯುತ್ತಲೂ ಇದೆ.

[ಸಶೇಷ]

THE CANARA BANKING CORPORATION LIMITED.
ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್.
ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)
ಚಿಕ್ಕ ಠೇವಣಿಯ ಠೇವಣಾತಿಗಳು:
3 ರಿಂದ 6 ತಿಂಗಳುಗಳ ವರೆಗೆ— ಸಾಲಿಯಾನ ಶೇಕಡ 3
7 ರಿಂದ 12 ತಿಂಗಳುಗಳ ವರೆಗೆ— ಸಾಲಿಯಾನ ಶೇಕಡ 3½
ಪಂಚವಾರ್ಷಿಕ ಸುವರ್ಣ ಠೇವಣಾತಿಗಳು— „ „ 4 „
— ಕೊಡಗು ಸಂಸ್ಥಾನದಲ್ಲಿ ನಮ್ಮ ಶಾಖೆಗಳು :—
ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು
ಸೋಮವಾರಪೇಟೆ.

ಕಡಲ ರಾಣಿಯ ಕಿರೀಟಧಾರಣೆ

ಇಂಗ್ಲೆಂಡಿನ ಇತಿಹಾಸದಲ್ಲಿ · ಚಿರಸ್ಮರಣೀಯವಾದ ಸನ್ನಿವೇಶ.

ಇತಿಹಾಸದ ಪುಟಗಳಲ್ಲಿ ಬ್ರಿಟನನ್ನು "ಕಡಲರಾಣಿ" ಎಂಬುವುದಾಗಿ ಗೌರವದಿಂದ ವರ್ಣಿಸಿರುವುದನ್ನು ಕಾಣುತ್ತೇವೆ ಬ್ರಿಟನಿಗೆ ಈ ಸಂಬೋಧನೆ ತುಂಬ ಒಪ್ಪುತ್ತದೆ. ಇಂದಿಗೂ ಬ್ರಿಟಿಷ್ ನೌಕಾ ಪಡೆಯೊಡನೆ ಸ್ಪರ್ಧಿಸಬಲ್ಲ ಸಾಮರ್ಥ್ಯ ಇತರ ರಾಷ್ಟ್ರಗಳಿಗಿರುವುದಿಲ್ಲ. ಕಡಲ ಮೇಲಿನ ಸ್ವಾಮಿತ್ವದ ಬಲದಿಂದಲೇ 'ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸೂರ್ಯ ಮುಳುಗುವುದಿಲ್ಲ" ಎಂಬಷ್ಟು ವಿಶಾಲವಾದ ರಾಜ್ಯವನ್ನು ಬ್ರಿಟಿಷರು ಕಟ್ಟಿಕೊಂಡು ಮೊನ್ನೆ ಮೊನ್ನೆಯ ವರೆಗೆ ಆಳಿದರು. ಆದರೆ ಕಾಲಗತಿಯ ಪರಿಣಾಮವೆಂದೇ ಹೇಳಬೇಕು.—ಬ್ರಿಟನಿನಲ್ಲಿ ಅರಸೊತ್ತಿಗೆಯೊಂದು ಉಳಿದಿದೆಯಲ್ಲದೆ, ಸಾರ್ವಭೌಮಾಧಿಕಾರವೆಲ್ಲ ಕಳೆದು ಹೋಗಿದೆ. ಭಾರತಕ್ಕೆ ಸ್ವಾತಂತ್ರ್ಯ ನೀಡುವುದಕ್ಕೆ ಮುಂಚೆ ಇದ್ದ ಸಾಮ್ರಾಜ್ಯ ಸಾಹಿತ್ವದ ಅಹಂಕಾರ ಇಂದು ಮಣ್ಣು ಮುಕ್ಕಿದೆ ಆದರೂ ಲೋಕದಲ್ಲಿ ಬೇರಾವುದೇ ರಾಷ್ಟ್ರದಲ್ಲಿ ಬ್ರಿಟನಿಗೆ ಸರಿ ಜೋಡಿಯಾಗಬಲ್ಲ ರಾಜವಂಶ ಉಳಿದಿಲ್ಲವೆಂಬ ಹೆಮ್ಮೆ ಇನ್ನೂ ಬ್ರಿಟಿಷರಿಗೆ ಇದೆ. ಈಚಿನ ಒಂದು ತಲೆಮಾರಿನ ಕಾಲಾವಧಿಯಲ್ಲಿ ನಾವು ಕಂಡ ರಾಜವಂಶದ ಪತನ ಚಿತ್ರವನ್ನು ವಿಮರ್ಶಿಸಿದರೆ—ಈ ಮಾತು ಸತ್ಯವೆಂದೇ ತೋರುತ್ತದೆ.

ರಾಜವಂಶದ ಪತನ.

ಈಗ ಯೂರೋಪಿನಲ್ಲಿ ರಾಜ ವಂಶಗಳು ಉಳಿದಿರುವುದು (೧) ಬ್ರಿಟನ್, (೨) ಬೆಲ್ಜಿಯಂ, (೩) ನೆದರ್‌ಲೆಂಡ್ಸ್, (೪) ಗ್ರೀಸ್, (೫) ಸ್ವೀಡನ್ ಮತ್ತು (೬) ನಾರ್ವೆ ದೇಶಗಳಲ್ಲಿ ಮಾತ್ರ. ಇತ್ತೀಚೆಗೆ ಉರುಳಿದ ಅರಸೊತ್ತಿಗೆಗಳಲ್ಲಿ ಮುಖ್ಯವಾದುವು. (೧) ಫ್ರಾನ್ಸ್, (೨) ಜರ್ಮನಿ, (೩) ಇಟಲಿ, (೪) ರಷ್ಯಾ (೫) ಆಸ್ಟ್ರಿಯಾ, (೬) ಸ್ಪೈನ್, (೭) ಪೋರ್ಚುಗಲ್, (೮) ಯುಗೊಸ್ಲಾವಿಯಾ, (೯) ಬಲ್ಗೇರಿಯಾ, (೧೦) ರುಮೇನಿಯಾ, (೧೧) ಟರ್ಕಿ, (೧೨) ಆಲ್ಬೇನಿಯಾ, (೧೩ ಬ್ರೇಜಿಲ್ ಮತ್ತು ಮೊನ್ನೆ ತಾನೇ (೧೪) ಈಜಿಪ್ಟ್. ಮಧ್ಯಪೂರ್ವದಲ್ಲಿ ಹಬ್ಬಿರುವ ಕ್ಷೋಭೆಯನ್ನು ನೋಡಿದರೆ ಅಲ್ಲಿರುವ ಮುಸ್ಲಿಂ ರಾಜರ ಭವಿಷ್ಯ ತೀರ ಅನಿಶ್ಚಿತವೆಂದು ಗೋಚರಿಸುತ್ತದೆ. ಕಳಿತ ಹಣ್ಣುಗಳಂತೆ ಯಾವ ಕ್ಷಣಕ್ಕೂ ಇಲ್ಲಿಯ ಅರಸೊತ್ತಿಗೆ ನೆಲಕ್ಕುರುಳಬಹುದು. ಆದರೆ ಇತರೆಲ್ಲ ದೇಶಗಳಿಗಿಂತ ಹೆಚ್ಚು ಭದ್ರವಾದ ರಾಜಪೀಠ ಬ್ರಿಟನಿನದ್ದು ಎನ್ನುವುದರಲ್ಲಿ ಸಂದೇಹವಿಲ್ಲ. ಇದಕ್ಕೆ ಬ್ರಿಟನಿನಲ್ಲಿ ನಡೆದುಕೊಂಡು ಬಂದಿರುವ ಪಾರ್ಲಿಮೆಂಟರಿ ಪದ್ಧತಿ ಮತ್ತು ಸಾಂಸ್ಕೃತಿಕ ಮಹತ್ವವೇ ಕಾರಣವೆನ್ನಬಹುದು. ಬ್ರಿಟಿಷರಿಗೆ ಅರಸು ಮನೆತನದ ಮೇಲೆ ಈಗಲೂ ಗೌರವವಿದೆ. ಬ್ರಿಟಿಷ್ ಸಾಹಸಿಗರು ಕಟ್ಟಿದ ವಿಶಾಲವಾದ ಸಾಮ್ರಾಜ್ಯದ ವರಿಷ್ಠ ಸ್ಥಾನದಲ್ಲಿ ರಾರಾಜಿಸುವ ರಾಜ ಮನೆತನದ ಬ್ರಿಟಿಷರ ನರನಾಡಿಯಲ್ಲಿ ಭಕ್ತಿ ಶ್ರದ್ಧೆಯನ್ನು ಉಕ್ಕೇರಿಸುತ್ತದೆ. ಧಾರ್ಮಿಕವಾಗಿ ಅರಸರ "ದೈವೀ ಅಧಿಕಾರ"ವನ್ನು ಒಪ್ಪಿಕೊಂಡ ಬ್ರಿಟಿಷರು ರಾಜನಿಷ್ಠೆಯನ್ನು ತೋರಿಸುತ್ತಾ ಬಂದಿರುವರು. ಇದರಂತೆ, ಕಾಲಗತಿಯನ್ನು ಹೊಂದಿಕೊಂಡು ನಡೆದ ಪರಿವರ್ತನೆಗಳನ್ನು ರಾಜನಿಷ್ಠೆಗೆ ಕುಂದು ಉಂಟಾಗದಂತೆ ಸ್ವೀಕರಿಸುವ ಕೆಚ್ಚನ್ನೂ ಬ್ರಿಟಿಷರು ತೋರಿಸಿರುವರು. ಪ್ರಜಾಪ್ರಭುತ್ವದ ಈ ದಿನಮಾನದಲ್ಲಿ ಬ್ರಿಟನಿನಲ್ಲಿ ಅಸ್ತಿತ್ವದಲ್ಲಿರುವ ಪಾರ್ಲಿಮೆಂಟರಿ ರೀತಿಯ ಆಡಳಿತ ಜನರ ಆಶೋತ್ತರಗಳನ್ನು ಪೂರೈಸಿರುತ್ತದೆ. ಘಟನಾತ್ಮಕವಾಗಿ ವರಿಷ್ಠಾಧಿಕಾರವನ್ನು ಮಾತ್ರ ಕಿರೀಟ ಧರಿಸಿದ ರಾಜ (ಅಥವಾ ರಾಣಿ) ಪಡೆದಿರುವನೇ ಹೊರತು—ನಿಜವಾದ ಅಧಿಕಾರವು ಜನರಿಂದ ಚುನಾಯಿತನಾದ ಪ್ರಧಾನ ಮಂತ್ರಿಯ ಕೈಯಲ್ಲಿರುತ್ತದೆ.

ಧಾರ್ಮಿಕ ವಿಧಿ.

ಇದೇ ಜೂನ್ ತಾ. ೨ನೇ ದಿನಾಂಕ ಬ್ರಿಟಿಷರ ರಾಣಿ ಎರಡನೇ ಎಲಿಜಬೆಥಳ ಕಿರೀಟ ಧಾರಣಾ ಮಹೋತ್ಸವವು ನೆರವೇರುತ್ತದೆ. ದೇಶ ವಿದೇಶಗಳ ಸಾವಿರಾರು ಜನರು ಈ ಅಭೂತಪೂರ್ವ ಉತ್ಸವದಲ್ಲಿ ಭಾಗಿಯಾಗುವರು. ಭಾರತದ ಪರವಾಗಿ ಪ್ರಧಾನ ಮಂತ್ರಿ ಶ್ರೀ ಜವಾಹರಲಾಲ ನೆಹರೂ ಈ ಉತ್ಸವದಲ್ಲಿ ಉಪಸ್ಥಿತರಿರುವರು. ರಾಷ್ಟ್ರ ಕೂಟದ ಸದಸ್ಯ ರಾಷ್ಟ್ರಗಳ ಪ್ರಧಾನ ಮಂತ್ರಿಗಳೂ ವಿದೇಶಗಳ ರಾಯಭಾರೀ ವರ್ಗ ಮತ್ತು ಪ್ರತಿನಿಧಿಗಳೂ ಇತರ ಉನ್ನತ ಅಧಿಕಾರಿಗಳೂ ಐತಿಹಾಸಿಕ ಮಹತ್ವದಿಂದ ಕೂಡಿದ ಈ ಉತ್ಸವದಲ್ಲಿ ಭಾಗವಹಿಸುವರು. ಅಂದು ರಾಣಿಯು ಬಕಿಂಗ್‌ಹಾಮ್ ಅರಮನೆಯಿಂದ ವೆಸ್ಟ್‌ಮಿನಿಸ್ಟರ್ ಚರ್ಚಿಗೆ ಸವಾರಿ ಹೊರಡುವಳು. ಈ ಅರ್ಚಾಜನ ಕಾಲದಲ್ಲಿ ಅನಾದೃಶ್ಯಗಳ ನಡುವೆ ಗಂಭೀರವಾದ ಸನ್ನಿವೇಶಗಳಲ್ಲಿ ಕಡಲ ರಾಣಿಯ ಕಿರೀಟ ಧಾರಣೆ ನೆರವೇರುವುದು. ಇಂಥ ಉತ್ಸವ ಮೊದಲು ಬ್ರಿಟನಿನಲ್ಲಿ ನಡೆದುದು ಕ್ರಿ. ಶ. ೧೦೬೬ನೇ ಇಸವಿಯಲ್ಲಿ. ಅಂದು ವಿಜಯಿ ವಿಲಿಯಮನು ತನ್ನ ಜೈತ ಯಾತ್ರೆಯ ಗುರುತಾಗಿ ಈ ಉತ್ಸವವನ್ನು ವೆಸ್ಟ್ ಮಿನಿಸ್ಟರ್ ಚರ್ಚಿನಲ್ಲಿ ನಡೆಸಿದನು. ಹೊರಗೆ ಸಾಕ್ಸನ್ ಸೋಲ್ಜರುಗಳು ಗುಲ್ಲೆಬ್ಬಿಸುತ್ತಿದ್ದರು. ನಾರ್ಮನರು ತಮ್ಮ ಅರಸರನ್ನು ಸಂರಕ್ಷಿಸುವುದಕ್ಕೆ ಇನ್ನಿಲ್ಲದ ಸಾಹಸ ಮಾಡುತ್ತಿದ್ದರು. ರಾಜರ ಕಿರೀಟ ಧಾರಣೆಯನ್ನು ಒಂದು ಧಾರ್ಮಿಕ ವಿಧಿಯಾಗಿಯೇ ಅಂದಿನಿಂದ ಆಚರಿಸಲಾಗುತ್ತಿದೆ. ರಾಜಕೀಯ ಮಹತ್ವಕ್ಕಿಂತಲೂ ಧಾರ್ಮಿಕ ನಿಷ್ಠೆಯು ಪ್ರಸಂಗದಲ್ಲಿ ಎದ್ದುಕಾಣುತ್ತದೆ. ಅರಸರನ್ನು ಧರ್ಮರಕ್ಷಕನೆಂದು ಈ ಸಂದರ್ಭದಲ್ಲಿ ಕರೆಯಲಾಗುತ್ತದೆ. ದೇವರ ಅವತಾರವೆಂದೇ ತಿಳಿದು ಗೌರವಿಸಲಾಗುತ್ತದೆ. ರಾಜನಿಗೇ (ಅಥವಾ ರಾಣಿಗೆ) ತೈಲ ಲೇಪನ ಮಾಡಿ, ದೇವರು ನೀಡಿದ ಅಸಂಖ್ಯಾತ ಪ್ರಜರನ್ನು ಆಳುವ ದೀಕ್ಷೆ ಕೊಟ್ಟು ಪ್ರತಿಷ್ಠಾಪನಾ ಕಾರ್ಯವನ್ನು ನೆರವೇರಿಸಿ ಧರ್ಮಾಧಿಕಾರಿಗಳು ಆಶೀರ್ವದಿಸುವರು. ತೈಲ ಲೇಪನದಿಂದ ತೊಡಗಿ ಕಿರೀಟ ಧಾರಣೆಯ ವರೆಗಿನ ಪ್ರತಿಯೊಂದು ವಿಧಿಯು ಧಾರ್ಮಿಕ ಸ್ವರೂಪದ್ದಿರುತ್ತದೆ. ಆದುದರಿಂದಲೇ ಇರಬೇಕು ರಾಜಕೀಯ ಕ್ರಾಂತಿ ಉತ್ಕ್ರಾಂತಿಗಳಿಗೆ, ಯುದ್ಧದ ಕೋಲಾಹಲಕ್ಕೆ ಎಂದಿಗೂ ಭಯಭೀತರಾಗದ ಜನರು, ಕಿರೀಟಧಾರಣೆಯ ಸಮಯ ಅತ್ಯಂತ ಗಂಭೀರರಾಗಿದ್ದುಕೊಂಡು ನಯ ಭಯ, ಭಕ್ತಿ ವಿಶ್ವಾಸಗಳಿಂದ ನಡೆದುಕೊಳ್ಳುವರು.

ಸ್ವಾರಸ್ಯ ಪ್ರಸಂಗ.

ಬ್ರಿಟಿಷ್ ಸಿಂಹಾಸನವೇರಿದ ರಾಜರಾಣಿಯರಲ್ಲಿ ಮೂರನೇ ಮತ್ತು ಎಂಟನೇ ಎಡ್ವರ್ಡ್ ದೊರೆಗಳು ಮಾತ್ರ ಕಿರೀಟ ಧರಿಸಿರಲಿಲ್ಲ. ಐದನೇ ಜಾರ್ಜರ ನಿಧನಾನಂತರ ಎಂಟನೇ ಎಡ್ವರ್ಡ್ ದೊರೆ ಏತಕ್ಕಾಗಿ ರಾಜ್ಯತ್ಯಾಗ ಮಾಡಿದರೆಂಬುವುದು ಸ್ವಾರಸ್ಯವಾದ ಕಥಾ ಪ್ರಸಂಗವಾಗಿ ಲೋಕದಲ್ಲಿ ಜನಜನಿತವಾಗಿದೆ. ಸ್ವತಃ ಎಡ್ವರ್ಡರು ತಮ್ಮ ಪ್ರೇಯಸಿಯ ಒಲುಮೆ ಸಂಪಾದನೆಗಾಗಿ ತಾವು ಮಾಡಿದ ತ್ಯಾಗದ ವರ್ಣನೆಯನ್ನು ಮಾಡಿರುವರು ಇಷ್ಟು ದೊಡ್ಡ ಸಾಮ್ರಾಜ್ಯದ ಅಧಿಕಾರವನ್ನು ತನ್ನ ಪ್ರೇಯಸಿಯ ಪ್ರಿಯನಾಗುವುದಕ್ಕೋಸ್ಕರ ತ್ಯಜಿಸಿಕೊಟ್ಟು ತಾನು ಕರ್ತವ್ಯ ಪಾಲಿಸಿದೆ ಎಂದವರು ತಮ್ಮ ಬರಹದಲ್ಲಿ ಹೇಳಿರುವರು. ವಿಲಿಯಂ ಶೇಕ್ಸ್‌ಪಿಯರನೋ ಕಾಳಿದಾಸನೋ ಇನ್ನೊಮ್ಮೆ ಜನಿಸಿದಲ್ಲಿ ಡ್ಯೂಕ್ ಆಫ್ ವಿಂಡ್ಸರರ ಪ್ರಣಯ ಚಿತ್ರವನ್ನು ಅತ್ಯಂತ ರೋಮಾಂಚಕವಾದ ಸಾಹಿತ್ಯ ಕೃತಿಯ ರೂಪದಲ್ಲಿ ಇಳಿಸಿಯಾನು. ಅದೇನೇ ಇರಲಿ, ಧರ್ಮಕ್ಕೂ ರಾಜಕಾರಣಕ್ಕೂ ಬ್ರಿಟನಿನಲ್ಲಿ ನಿಕಟ ಸಂಬಂಧವಿದೆ. ರಾಜನಿಗೂ ಧರ್ಮಾಧಿಕಾರಿಗಳಿಗೂ ಜಗಳಗಳು ಅನೇಕ ಸಂದರ್ಭಗಳಲ್ಲಿ ಹಿಂದಿನಿಂದಲೂ ನಡೆಯುತ್ತಿದ್ದವು. ಮೊದಲನೇ ಜಾರ್ಜನ ಕಿರೀಟಧಾರಣಾ ಪ್ರಸಂಗವು ತುಂಬ ಮೋಜಿನದಾಗಿತ್ತು. ಅರಸನಿಗೆ ಜರ್ಮನಿ ಹೊರತು ಇಂಗ್ಲಿಷ್ ಭಾಷೆಯ ಒಂದಕ್ಷರವೂ ತಿಳಿಯುತ್ತಿರಲಿಲ್ಲ. ಆದುದರಿಂದ ಅರ್ಚಬಿಷಪರು ಕಷ್ಟಪಟ್ಟು ಜರ್ಮನಿಯ ಕೆಲವು ಶಬ್ದಗಳನ್ನು ಕಲಿತು ಅರಸನಿಗೆ ವಿಧಿ ನಿಯಮಗಳನ್ನು ವಿವರಿಸಿ ಹೇಳಲು ನೋಡಿದರು. ಆದರೆ ಧರ್ಮಾಧಿಕಾರಿಗಳ ಜರ್ಮನ್ ಉಚ್ಚಾರಣೆ ಎಷ್ಟು ಅಬದ್ಧವಿತ್ತೆಂದರೆ ಜಾರ್ಜ್ ಅರಸನಿಗೆ ಒಂದೇ ಒಂದು ಶಬ್ದದ ಆಶಯವನ್ನೂ ಅರಿಯುವುದಾಗಲಿಲ್ಲ. ವಿಕ್ಟೋರಿಯಾ ಮಹಾರಾಣಿಯನ್ನು ಭಾರತದ ಸಾಮ್ರಾಜ್ಞಿ ಎಂಬುವುದಾಗಿ ಗೌರವಿಸಿದಂತೆ, ಐದನೇ ಜಾರ್ಜರನ್ನೂ ಭಾರತವು ಆದರಿಸಿದ್ದಿತು ನವದೆಹಲಿಯಲ್ಲಿ ನಡೆದ ದರ್ಬಾರು (೧೯೧೧) ಚಿರಸ್ಮರಣೀಯವಾದ ಸನ್ನಿವೇಶ. ಇದು ಗಣರಾಜ್ಯದ ನಾಗರೀಕರಾಗಿರುವ ನಮಗೆ ರಾಜವಂಶದ ಇತಿಹಾಸದ ವರ್ಣನೆ ಕೇಳುವುದು ಸಹ್ಯವೆನಿಸಲಿಕ್ಕಿಲ್ಲವಾದರೂ—ಬ್ರಿಟಿಷ್ ಜನತೆಗೆ ಇದು ಪುಣ್ಯಕಥಾ ಶ್ರವಣವೇ ನಿಜ.

"ನವಯುಗ"

ಕೊಡಗು ಪ್ರಾಂತೀಯ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸ :—ವೀರಾಜಪೇಟೆ.

ಶಾಖೆ :—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟಗಳು
2. 12 ನೇ ನಂಬರಿನ ಒಂಟಿ ಕೊಳವಿನ ತೋಟದ ಕೋವಿಗಳು.
3. ಒಂಟಿ ಮತ್ತು ಜೋಡಿ ಕೊಳವಿನ ಕೇಪಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
5. $\frac{5}{8}''$, $\frac{1}{2}''$ ಮತ್ತು $\frac{3}{8}''$ ಕಬ್ಬಿಣದ ಸರಳುಗಳು
6. $2''$, $1\frac{1}{4}''$, $1''$ $\frac{3}{4}''$ ಮತ್ತು $\frac{1}{2}''$ ಕೊಳಾಯಿಗಳು. (G. I. Pepsi)
7. $1\frac{3}{4}'' \times \frac{5}{16}''$ ಉಕ್ಕಿನ ಪಟ್ಟಿಗಳು (Spring Steel flats)
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
9. ಕೋವಿ ಮತ್ತು ಆನೆ ಮಾರ್ಕಿನ ಸಿಮೆಂಟ್ ಟಿನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೆಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ,
(ಗೌ. ಕಾರ್ಯದರ್ಶಿ)

ಪಿ. ಬಿ. ಬೆಳ್ಯಪ್ಪ,
(ಪ್ರೆಸಿಡೆಂಟ್)

ಕೊಡಗು

ಮಕ್ಕಳ ಗಾಂಧಿ.

ವಾರ್ಷಿಕ ಚಂದಾ ರೂ. ೫—೦—೦

ಸಂಪುಟ ೨೨ ಸಂಚಿಕೆ ೭

ಶುಕ್ರವಾರ

೧೯--೬--೧೯೫೩

19/7/12

KODAGU KANNADA WEEKLY MERCARA

ವಾರದ ಕಥೆ.

ಯಾರಿಗೆ ಯಾವುದು?

ಲೇ: ಶ್ರೀಮತಿ ಜಿ. ನ. ಮಂಗಳ.

"ಹೊಸ ವರುಷ. ಹೌದು ನಾಳೆಯೇ ಹೊಸ ವರುಷ. ಕಾಲ ಪುರುಷ ಹಳೆಯ ಪೋಷಾಕು ತೊಡೆದು ಹಾಕಿ ಹೊಸ ಉಡುಪನ್ನು ತೊಟ್ಟು ಬರುವ ದಿನ. ನಾವಿಬ್ಬರೂ ಹತ್ತು ವರುಷದಿಂದ ಒಟ್ಟಿಗಿದ್ದರೂ ನಾನು ಅವಳಿಗೆ ಒಂದು ನಾಮೂನಸ್ನಾದರೂ ತಂದು ಕೊಟ್ಟಿಲ್ಲ. ಎಂತಹ ನಿರ್ಭಾಗ್ಯ ನಾನು". ಆನಂದ ಆಫೀಸಿನ ಮೇಲೆ ಕುಳಿತು ಯೋಚಿಸುತ್ತಿದ್ದ.

ಆನಂದ ಆತಾರ ಕಛೇರಿಯ ಗುಮಾಸ್ತ. ರಮು ಆನಂದನ ಒಲವಿನ ಮಡದಿ. ಆನಂದನಿಗೆ ಬರುತ್ತಿದ್ದ ಆರುವತ್ತು ರೂಪಾಯಿ ಸಂಬಳ ಮನೆಬಾಡಿಗೆ ಲೈಟು, ನೀರು ಇವುಗಳ ಬಿಲ್ ಕೊಡುವಲ್ಲಿಯೇ ಅರ್ಧ ಖರ್ಚಾಗುತ್ತಿದ್ದಿತು. ಇನ್ನುಳಿದದ್ದು ಉದರ ಪೋಷಣೆಗೆ ವಿನಿಯೋಗವಾಗುತ್ತಿತ್ತು. ಇನ್ನು ರಮು ಆನಂದರ ಸುಖಜೀವನದ ಪೆಟ್ಟಿಗೆಯ ಮಾತು? ರಮು ಬಡತನದ ಬೇಗೆಯಲ್ಲಿ ಬೆಂದವಳಾಗಿರಲಿಲ್ಲವಾದರೂ ಎಂದೂ ಸ್ನೋ, ಪೌಡರ್, ಸಿನೆಮ, ಕ್ಲಬ್ಬುಗಳ ಗುಲಾಮಳಾಗಿರಲಿಲ್ಲ. ಆನಂದ ಗ್ರಾಜುಯೇಟ್ ಆಗಿ ಕಾಲೇಜು ಸುಖವನ್ನನುಭವಿಸಿದರೂ ಪ್ಯಾಂಟು, ಬೂಟು, ಸಿಗಾರುಗಳ ದಾಸನಾಗಿರಲಿಲ್ಲ. ಅಂತೆಯೇ ರಮೂ ಆನಂದರಿಬ್ಬರೂ ಆಡಂಬರದ ಆಸ್ತಿರಹಸವಿಲ್ಲದ ಮಧುರ ಆದರ್ಶ ಜೀವನವನ್ನು ನಡೆಸುತ್ತಿದ್ದರು. ಆದರೂ ಪ್ರಿಯಳಿಗೆ ಪ್ರೀತಿಯಿಂದ ಯಾವ ಸಾಮಾನನ್ನೂ ತಂದು ಕೊಡಲು ತಾನು ಅಸಮರ್ಥನೆಂಬ ಚಿಂತೆ ಆನಂದನನ್ನು ಕಾಡುತ್ತಲೇ ಇತ್ತು.

ಹೊಸ ವರುಷದ ದಿನ ರಮೆಗೆ ಏನಾದರೊಂದು ಪದಾರ್ಥ ತಂದು ಕೊಡಬೇಕೆಂಬ ನಿರ್ಧಾರ ಆನಂದನಿಗೆ ಬಲವಾಯಿತು. ಆಫೀಸಿನಲ್ಲಿ ಮಲಗಿದ್ದವನು ಎದ್ದು ಕುಳಿತು ಯೋಚಿಸತೊಡಗಿದ. ಆದರೆ ದುಡ್ಡಿಗೇನು ಮಾಡುವುದು? ತನ್ನ ಮದುವೆಯಲ್ಲಿ ಮಾವ ತನಗೆ ಕೊಟ್ಟಿದ್ದ ಚೈನಿಲ್ಲದ ಗಡಿಯಾರ ನೆನಪಿಗೆ ಬಂದಿತು. ಅದನ್ನು ಮಾರಿ ದುಡ್ಡು ಪಡೆಯುವುದೇ ಸರಿಯಾದ ಮಾರ್ಗವೆಂದೆಣಿಸಿ ಬಹು ಪ್ರಯಾಸದಿಂದ ಹಣದ ಮುಗ್ಗಟ್ಟಿನ ಪ್ರಶ್ನೆಯನ್ನು ಬಗೆಹರಿಸಿದ.

"ಮದುವೆಗೆ ಮಾವನ ಮನೆಯಲ್ಲಿ ಕೊಟ್ಟ ಗಡಿಯಾರ ಮಾರುವಂಥಾ ಮೂರ್ಖನಾಗುತ್ತೀಯೋ?" ಎಂದಿತು ಒಂದು ವಾಣಿ.

"ಮಾವನ ಒಡವೆಗಿಂತ ಮಡದಿಯ ಒಲುಮೆ ಹೆಚ್ಚಲ್ಲವೇ?" ಎಂದಿತು ಮತ್ತೊಂದು ವಾಣಿ.

"ಆದರೂ" ಎಂದು ಆನಂದ ಯೋಚಿಸುತ್ತಿದ್ದಲ್ಲಿಯೇ ಒಳಗಿನಿಂದ ಕಾಫಿಗೆ ಕರೆ ಬಂದಿತು. ಕಾಫಿ ಬಟ್ಟಲು ಹಿಡಿದು ರಮೂ ಬಂದಳು.

ಆನಂದನ ಮುಖದಲ್ಲಿ ಎಲ್ಲಿಲ್ಲದ ಸಂತೋಷ ತುಂಬಿ ತುಳುಕುತ್ತಿದ್ದಿತು.

"ಏನು ಬಹಳ ಖುಷಿಯಾಗಿದ್ದೀರಲ್ಲಾ?"

"ಖುಷಿಯೂ ಇಲ್ಲ ಏನೂ ಇಲ್ಲ. ನಿನಗೆಲ್ಲೋ ಹಾಗೆ ಕಾಣುತ್ತಾ ಇದೆ ಅಷ್ಟೆ",

"ಒಳಗೊಳಗೇ ಬಹಳ ನಗುತ್ತಾ ಇದ್ದೀರಿ!"

"ಇಲ್ಲವಲ್ಲ." ಉಕ್ಕಿ ಬರುತ್ತಿದ್ದ ನಗುವನ್ನು ತಡೆದು ಹೇಳಿದ ಆನಂದ.

"ಸರಿ, ಹೇಳದೆ ಇದ್ದರೆ ನಾನ್ಯಾಕೆ ಪೀಡಿಸಲಿ." ಹುಸಿ ಮುನಿಸು ರಮೆಯನ್ನು ಮತ್ತಷ್ಟು ಚೆಲುವೆಯನ್ನಾಗಿ ಮಾಡಿತು.

ಆನಂದನ ಕಣ್ಣುಗಳು ಆದಷ್ಟು ಚೆಲುವನ್ನು ಸಂಗ್ರಹಿಸುತ್ತಿದ್ದುವು.

"ರಮೂ ನಾಳೆ ಹೊಸ ವರುಷವಲ್ಲವೇ?"

"ಹೌದು, ನಾಳೆಗೆ ನಾವು ಈ ಮನೆಗೆ ಬಂದು ಹತ್ತು ವರುಷಗಳಾದವು."

"ಕಾಲ ಎಷ್ಟು ಬೇಗ ಕಳೆದು ಹೋಗುತ್ತದೆ."

"ರಮೂ ಇಂದು ಸಂಜೆಗೆ ನಾನು ಬರುವುದು ಸ್ವಲ್ಪ ತಡವಾಗುತ್ತದೆ. ಮನೆಯಲ್ಲಿ ಜಾಗ್ರತೆ" ಎಂದು ಹೇಳುತ್ತಾ ಆನಂದ ಬಟ್ಟೆ ಬದಲಿಸಿ ಹೊರಡಲನುವಾದ. ರಮೆಗೆ ಆನಂದನ ಮಾತು ಅರ್ಥವಾಗಲಿಲ್ಲ. ಹತ್ತು ವರುಷಗಳಲ್ಲಿ ಒಂದು ದಿನವೂ ಆನಂದ ಹೊತ್ತಾಗಿ ಮನೆಗೆ ಬರುತ್ತೇನೆಂದು ಹೇಳಿರಲಿಲ್ಲ.

"ಇಂದೂ ಅಷ್ಟೇಕೆ ಇಂದೇಕೆ ಹೊತ್ತಾಗುತ್ತದೆ?" ಕುತೂಹಲ ಆಶ್ಚರ್ಯದಿಂದ ಕೂಡಿದ ಪ್ರಶ್ನೆ ರಮೆಯ ಬಾಯಿಂದ ಹಿಂದೆ ಬಂದಿತು.

"ಎಂದೂ ನಡೆಯುವಂತೆಯೇ ಇಂದೂ ನಡೆಯಬೇಕೇ?"

"ಹಾಗೇನಿಲ್ಲ. ಸುಮ್ಮನೆ ಕೇಳಿದೆ."

"ಸ್ನೇಹಿತ ಸ್ವಪ್ನಮೂರ್ತಿ ಬಹು ದಿನಗಳಿಂದ ಕರೆಯುತ್ತಿದ್ದ. ನಾಳೆ ಹೊಸ ವರುಷ; ಇಂದು ಹೋಗಿ ಶುಭಾಶಯಗಳನ್ನು ಹೇಳಿ ಬರೋಣವೆಂದಿದ್ದೇನೆ. ಆದಕ್ಕೆ ಸ್ವಲ್ಪ ಹೊತ್ತಾಗಬಹುದೆಂದೆ ಅಷ್ಟೆ." ಸುಳ್ಳು ಉತ್ತರವೊಂದನ್ನು ಆನಂದ ಪ್ರಯತ್ನ ಪೂರ್ವಕವಾಗಿ ನುಡಿದು ಬಿಟ್ಟ.

ಆನಂದ ಹೊರಗೆ ಹೊರಟು ಹೋದ ಮೇಲೆ ಬಾಗಿಲು ಮುಚ್ಚಿ ರಮೆ ಒಳಗೆ ಬಂದಳು. ಒಂದು ವಿಧವಾದ ಸಂತೋಷ ಅವಳನ್ನು ಸಂಪೂರ್ಣವಾಗಿ ಆವರಿಸಿತ್ತು.

ಕ್ಷಣಕಾಲ ಮಂತ್ರ ಮುಗ್ಧಳಂತೆ ಕುಳಿತಿದ್ದ ರಮು ಒಮ್ಮೆಗೇ ಎಚ್ಚೆತ್ತು ಉಳಿದಿದ್ದ ಅಲ್ಪ ಸ್ವಲ್ಪ ಕೆಲಸಗಳನ್ನು ಯಂತ್ರದಂತೆ ಮಾಡಿ ಮುಗಿಸಿದಳು. ಕೂದಲನ್ನು ಅಂದವಾಗಿ ಬಾಚಿ ಗಂಟು ಹಾಕಿಕೊಂಡು ಗಂಟಿನ ತುದಿಗೆ ಒಂದು ಗುಲಾಬಿ ಹೂವನ್ನು ಸಿಕ್ಕಿಸಿ ಗಗನ ವರ್ಣದ ಸತ್ತಾಲವನ್ನೂ ಆದಕ್ಕೊಪ್ಪುವ ಕುಪ್ಪಸವನ್ನೂ ತೊಟ್ಟು, ಕೈಚೀಲದಲ್ಲಿ ಒಂದು ಪೊಟ್ಟಣವನ್ನು ಹಾಕಿಕೊಂಡು ರಮು ಹೊರಗೆ ಹೊರಡಲು ಸಿದ್ಧಳಾದಳು. ಅವಳ ಚರ್ಯೆ ಅವಳಿಗೇ ಆಶ್ಚರ್ಯವನ್ನುಂಟು ಮಾಡುತಿತ್ತು. ಆನಂದ ಹೊತ್ತಾಗಿ ಮನೆಗೆ ಬರುವೆನೆಂದುದು ಅವಳಿಗೆ ಮತ್ತಷ್ಟು ಧೈರ್ಯ ತಂದಿತು.

ಆನಂದ ಹತ್ತಾರು ಅಂಗಡಿಗಳನ್ನು ಅಲೆದು ಕೊನೆಗೆ ಒಂದು ಕಡೆ ತನ್ನ ಚೈನಿಲ್ಲದ ಗಡಿಯಾರವನ್ನು ಇನ್ನೂರು ರೂಪಾಯಿಗಳಿಗೆ ಮಾರಿ ಹಣವನ್ನು ಪರ್ಸಿನಲ್ಲಿ ಹಾಕಿ ಅತ್ಯಾನಂದದಿಂದ ಹೊರಬಿದ್ದನು. ಹಣ ಕೈಗೆ ಬಂದ ಮೇಲೆ ರಮೆಗೆಯೂ ವಸಾಮಾನು ಕೊಳ್ಳಬೇಕೆಂಬ ಆಸೆ ಬಲವಾಗ ಹತ್ತಿತು. ಕೊನೆಗೆ ಯಾವುದೋ ಒಂದು ದೊಡ್ಡ ಜವಳಿ ಅಂಗಡಿಗೆ ಹೋದನು. ಅತ್ಯದ್ಭುತ ಪದಾರ್ಥಗಳನ್ನು ಎಂದೂ ಕೊಂಡಿಲ್ಲದ ಆವನಿಗೆ ಯಾವುದನ್ನು ಕೊಳ್ಳಬೇಕೆಂಬುದೇ ತಿಳಿಯದೆ ಚಿಕ್ಕಮಗುವಿನಂತೆ ಆಶ್ಚರ್ಯದಿಂದ ನೋಡತೊಡಗಿದನು. ಬಂದ ಗಿರಾಕಿ ಏನನ್ನೂ ತೆಗೆಯದಿದ್ದುದನ್ನು ನೋಡಿ ಯಜಮಾನನೇ ಕೆಲವು ಸಾಮಾನುಗಳನ್ನು ಆರಿಸಿ ತೋರಿಸಿದನು. ಆನಂದ ಮಾತ್ರ ಯಾವುದನ್ನೂ ಒಪ್ಪಲಿಲ್ಲ.

ಇದ್ದಕ್ಕಿದ್ದಂತೆಯೇ ಆನಂದನ ದೃಷ್ಟಿ ಎದುರು ಬೀರುವಿನಲ್ಲಿದ್ದ ಮುತ್ತಿನ ಬ್ರೋಚಿನ ಮೇಲೆ ಹರಿಯಿತು. ಜವಳಿ ಅಂಗಡಿಯಲ್ಲಿ ಈ ಪದಾರ್ಥ ಹೇಗೆ ಬಂದಿತೆಂದು ಕ್ಷಣಕಾಲ ಯೋಚಿಸಿದರೂ ನೋಡಿದೊಡನೆಯೇ ಮೆಚ್ಚುಗೆಯನ್ನು ಪಡೆದಿದ್ದ ಬ್ರೋಚು ಯೋಜನೆಯನ್ನು ತಳ್ಳಿ ಹಾಕಿತು. ತೆಗೆಸಿ ನೋಡಿದ. ಆಹ! ಎಷ್ಟು ಸುಂದರವಾದ ಬ್ರೋಚು! ರಮೆಯ ಬಳಿಯಿದ್ದ ಏಕಮಾತ್ರ ಕಪ್ಪು ಬಣ್ಣದ ಜಾರ್ಜೆಟ್ ಸೀರೆಗೆ ಆ ಮುತ್ತಿನ ಬ್ರೋಚು ಬಹು ಚೆನ್ನಾಗಿ ಒಪ್ಪುತ್ತಿತ್ತು. ನಿಜ, ಆ ಸೀರೆಗೆ ಆ ಬ್ರೋಚೇ ಸರಿಯಾದ ಜೊತೆ. ಅಂತೂ ಆನಂದನ ಎಷ್ಟೋ ದಿನದ ಕನಸು ನನಸಾಯಿತು. ಶೀಘ್ರದ ಪತ್ತಿರ ಚೌಕಾಸಿ ಮಾಡಿ ನೂರೈವತ್ತು ರೂಪಾಯಿಗಳಿಗೆ ಅದನ್ನು ಕೊಂಡು ಮನೆಗೆ ದಾರಿಹಿಡಿದನು.

"ರಮೂ, ಬಾಗಿಲು ತೆಗೆ."

ಆಗತಾನೇ ಹೊರಗಿನಿಂದ ಬಂದು ಬಟ್ಟೆ ಬದಲಿಸಿದ್ದ ರಮು ಪತಿಯ ಕರೆಯಿಂದ ಬೆಚ್ಚಿ ಕೈ ಚೀಲವನ್ನು ಬೇಗ ಬೀರುವಿನಲ್ಲಿ ತುರುಕಿ ಓಡಿಬಂದು ಬಾಗಿಲು ತೆರೆದಳು.

ಬೆವರು ಹನಿಗಳು ಹಣೆಯಲ್ಲಿ ಎದ್ದು ಕಾಣುತ್ತಿದ್ದವು.

"ಏನು, ಬಹಳ ಸುಸ್ತಾಗಿರುವ ಹಾಗಿದೆಯಲ್ಲಾ?"

"ಮನೆಯೆಲ್ಲಾ ತೊಳೆದೆ. ನಾಳೆ ಯುಗಾದಿ ಹಬ್ಬವಲ್ಲವೇ?" ಎಂತಹ ಸುಳ್ಳು.

ಸುಮ್ಮನೆ ಆಯಾಸಮಾಡಿಕೊಳ್ಳುತಿಯಲ್ಲ, ತೊಳೆಯದಿದ್ದರೆ ಏನಾಗುತ್ತಿತ್ತು ರಾಣಿ?"

ಕರುಣೆ ತುಂಬಿದ ಪ್ರೀತಿಯ ಧ್ವನಿಯಲ್ಲಿ ಆನಂದ ನುಡಿದು ಹೋದನು. ನಸುನಗುವೊಂದು ರಮೆಯ ಮುಖದ ಮೇಲೆ ಸುಳಿದು ಮಾಯವಾಯಿತು.

ರಾತ್ರಿ ಕಳೆದು ಬೆಳಗು ಹರಿಯಿತು. ಯುಗಾದಿಯ ಸಂಭ್ರಮವು ನಾದನಾದವಾಗಿ ಎಲ್ಲೆಲ್ಲೂ ಮಿಡಿಯತೊಡಗಿತು. ಆನಂದ ಅಭ್ಯಂಜನ ಮಾಡಿ ಹೊರ ಬಂದ. ಮೊದಲೇ ಸ್ನಾನ ಮುಗಿಸಿದ್ದ ರಮು ಒಂದು ತಟ್ಟೆಯಲ್ಲಿ ಬೇವು ಬೆಲ್ಲವನ್ನೂ ಒಂದು ಕಾಗದದ ಪೊಟ್ಟಣವನ್ನೂ ಹಿಡಿದು ಬಂದಳು. ರಮು ಬರುತ್ತಿರುವುದನ್ನು ಕಂಡ ಆನಂದ ತಾನು ಪ್ರಿಯೆಗೆ ತಂದ ಉಡುಗೊರೆಯನ್ನು ಕೈಯಲ್ಲಿ ಹಿಡಿದು ಇನಿಯಳನ್ನು ಎದುರುಗೊಂಡನು.

"ರಮು, ನಿನ್ನ ಕರಿಯ ಸೀರೆ ಉಟ್ಟು ಬರುವೆಯಾ?"

ರಮು ಸ್ವಲ್ಪ ಚಕಿತಳಾದಳು. ಆದರೂ ಅದನ್ನು ತೋರ್ಪಡಿಸದೆ, "ನೀವು ಮೊದಲು ಪ್ರಸಾದ ತೆಗೆದು ಕೊಳ್ಳಿ ನಂತರ ನಾನು ಸೀರೆ ಉಟ್ಟು ಬರುತ್ತೇನೆ" ಎಂದು ಹೇಳಿ ತಟ್ಟೆ ಮುಂದೆ ಹಿಡಿದಳು. ಪ್ರಸಾದವನ್ನು ತೆಗೆದುಕೊಂಡು ಕಾಗದದಲ್ಲಿದ್ದ ಚೈನನ್ನು ನೋಡಿ ಆನಂದ ವಿಸ್ಮಿತನಾದ.

"ಏನಿದು ಚೈನು ರಮು?"

"ನಾನೊಂದು ತಪ್ಪು ಮಾಡಿದೆ ದೊರೆಯೇ. ನನ್ನನ್ನು ಕ್ಷಮಿಸುವಿರಾ?"

"ನಿನ್ನನ್ನು ಎಂದು ನಾನು ಕ್ಷಮಿಸಿಲ್ಲ ರಮು. ಅದಿರಲಿ, ಏನಿದು ಹೇಳಬಾರದೇ?

ನಿಟ್ಟುಸಿರೊಂದನ್ನು ಬಿಟ್ಟು ರಮು ಹತ್ತಿರವಿದ್ದ ಮೇಜಿನ ಮೇಲೆ ಕುಳಿತು ಹೇಳತೊಡಗಿದಳು "ನಿನ್ನೆ ನೀವು ಹೊತ್ತಾಗಿ ಬರುವೆನೆಂದು ಹೇಳಿದಿರಿ. ನಾವು ಹತ್ತು ವರ್ಷಗಳಿಂದ ಒಟ್ಟಿಗಿದ್ದರೂ ನಾನು ಏನನ್ನೂ ಕೊಡಲಿಲ್ಲ. ನಿಮಗೆ ಪ್ರೀತಿಯಿಂದ ಯಾವ ಪದಾರ್ಥವನ್ನೂ ತೆಗೆಯಿರೆಂದು ಹೇಳಲು ಅಶಕ್ತಳಾಗಿದ್ದೆ. ನಮ್ಮ ಮದುವೆಯಲ್ಲಿ ನನ್ನ ತಂದೆ ನಿಮಗೆ ಕೊಟ್ಟಿದ್ದ ಚೈನಿಲ್ಲದ ಗಡಿಯಾರದ ನೆನಪಾಯಿತು. ಇಂದು ಹೇಗಿದ್ದರೂ ಹೊಸ ವರ್ಷ, ಇಂದಾದರೂ ನನ್ನ ಆಸೆ ಕೈಗೂಡಿಸಬೇಕೆಂದು ಮನಸ್ಸು ಮಾಡಿದೆ. ಆದರೆ ಲಕ್ಷ್ಮಿಯ ಕಟಾಕ್ಷವಿಲ್ಲದೆ ಏನು ಮಾಡಲು ಸಾಧ್ಯ? ನಾನ್ನ ಆಸ್ತಿಯಿಂದ ನನ್ನಲ್ಲಿ ಇದ್ದ ಕಪ್ಪು ಜಾರ್ಜೆಟ್ ಸೀರೆ ಮಾರಿ ನಿಮ್ಮ.... ಗಡಿಯಾರಕ್ಕೆ.... ಚೈನು.. ತಂದೆ. ಎಲ್ಲಿ ನಿಮ್ಮ ಗಡಿಯಾರ ತನ್ನಿ."

"ಹಾ! ಗಡಿಯಾರಕ್ಕೆ ಚೈನು! ಸೀರೆ ಮಾರಿ ಬಿಟ್ಟೆಯಾ ರಮು? ಅಯ್ಯೋ! ಎಂತಹ ಅಚಾತುರ್ಯವಾಯಿತು! ನಾನು ಇಷ್ಟು ಕಷ್ಟ ಪಟ್ಟದ್ದೂ ವ್ಯರ್ಥವಾಯಿತಲ್ಲ, ರಮೂ, ರಮೂ!"

ಆನಂದ ರಮೆಯ ಭುಜದ ಮೇಲೊರಗಿದ. ರಮೆಗೆ ಪರಿಸ್ಥಿತಿಯ ಅರಿವಾಗಲಿಲ್ಲ.

"ಅದಕ್ಕೇನು, ಇನ್ನೊಂದು ಸೀರೆ ಯಾವಾಗಲಾದರೂ ತಂದರೆ ಆಯಿತು. ಗಡಿಯಾರವೆಲ್ಲಿ?"

"ಇಲ್ಲ ರಮು, ಮೋಸವಾಯಿತು; ಹೀಗಾಗುವುದೆಂದು ನಾನು ಎಣಿಸಿರಲಿಲ್ಲ. ಇಂದು ಹೊಸ ವರ್ಷದ ಶುಭಾಶಯಗಳೊಂದಿಗೆ ನಿನಗೆ ನನ್ನ ಪ್ರೇಮದ ಕಾಣಿಕೆ ಅರ್ಪಿಸಲೋಸುಗ ಆ ಗಡಿಯಾರ ಮಾರಿ ನಿನ್ನ ಕಪ್ಪು ಸೀರೆಗೆ ಒಪ್ಪುವ ಈ ಬ್ರೋಚು ತಂದೆ. ಅನ್ಯಾಯವಾಯಿತು."

"ಹಾ, ಗಡಿಯಾರ ಮಾರಿದಿರಾ? ಛೆ! ಎಂತಹ ಕೆಲಸ ಮಾಡಿಬಿಟ್ಟಿರಿ. ನನಗಾದರೂ ಮೊದಲು ಹೇಳಬಾರದಿತ್ತೇ?"

"ನೀನಾದರೂ ಹೇಳಬಾರದಿತ್ತೇ? ಹೋಗಲಿ ಬಿಡು. ಇನ್ನು ಮುಂದೆ ಈ ರೀತಿ ಗುಟ್ಟಾಗಿ ಕೆಲಸ ಮಾಡುವುದು ಬೇಡ."

"ಹಾಗಾದರೆ ಚೈನು, ಬ್ರೋಚಿನಲ್ಲಿ ಯಾರಿಗೆ ಯಾವುದು?" ಎಂದು ನಗುತ್ತ ರಮು ಆನಂದನ ಪಕ್ಕದಲ್ಲಿ ಕುಳಿತಳು.

ರಮೂ ಆನಂದರನ್ನು ಒಂದು ಅವ್ಯಕ್ತ ಆನಂದ ಆವರಿಸಿತ್ತು.

(ಓ ಹೆನ್ರಿಯವ ಕಥೆಯೊಂದರ ಆಧಾರದಿಂದ)

ಮಕ್ಕಳ ಪುಟ

ನಾಲ್ವರು ಹಣದಾಸೆಯವರು

(ಮಕ್ಕಳ ಮನರಂಜನೆಗಾಗಿಯೂ, ಬುದ್ಧಿ ವಿಕಾಸಕ್ಕಾಗಿಯೂ ಶ್ರೀ 'ಪ್ರೇಮಯೋಗಿ' ಯವರು ಪ್ರಖ್ಯಾತವಾದ ಪಂಚತಂತ್ರದಿಂದ ಕಥೆಗಳನ್ನು ಕನ್ನಡಕ್ಕೆ ಪರಿವರ್ತಿಸಿ ಕೊಡುತ್ತಿರುವರು. ನಮ್ಮ ವಾಚಕರಾದ ದೊಡ್ಡವರೂ ಮಕ್ಕಳೂ ಇದರಿಂದ ಲಾಭ ಹೊಂದುವರೆಂದು ಆಶಿಸುತ್ತೇವೆ.

ಸಂ.)

ಒಂದು ಪಟ್ಟಣದಲ್ಲಿ ನಾಲ್ಕು ಜನ ಬ್ರಾಹ್ಮಣರಿದ್ದರು. ಅವರು ಒಬ್ಬೊಬ್ಬರೊಳಗೆ ಪ್ರೀತಿಯಿಂದಿದ್ದು ಉತ್ತಮ ಗೆಳೆಯರೆನಿಸಿದ್ದರು. ಆದರೆ ಅವರೆಲ್ಲರೂ ತೀರಾ ಬಡವರಾದ್ದರಿಂದ ಹೇಗೆ ಹಣ ಸಂಪಾದಿಸುವದೆಂದು ನಾಲ್ಕು ಜನರೂ ಕುಳಿತು ಆಲೋಚಿಸತೊಡಗಿದರು. ಏಕೆಂದರೆ ಬಡವರಾಗಿರುವವರ ಸ್ಥಿತಿಯು ಚಿಂತಾಜನಕ. ಬಡವರನ್ನು ಹಣವಂತರು ತಿರಸ್ಕರಿಸುತ್ತಾರೆ. ಬಂಧು ಬಳಗದವರು ದೂರಮಾಡುತ್ತಾರೆ. ಬಡತನದಲ್ಲಿ ಕಷ್ಟ ಇಮ್ಮಡಿಸುತ್ತದೆ. ಸ್ನೇಹಿತರು ಕೈ ಬಿಡುತ್ತಾರೆ. ಹೆಂಡತಿಯೂ ಕೂಡ ಮುನಿಯುತ್ತಾಳೆ. ನೀತಿ ಕುಗ್ಗುತ್ತದೆ. ಧೈರ್ಯ ಉಡುಗುತ್ತದೆ. ಅದೇ ಅಲ್ಲ, ಸೌಂದರ್ಯವಿದ್ದರೂ ನಿಷ್ಪ್ರಯೋಜನವಾಗುತ್ತದೆ. ಬುದ್ಧಿ ಇದ್ದರೂ ಮೂಢನಾಗುತ್ತಾನೆ. ಸಮಾಜದಲ್ಲಿ ಸ್ಥಾನವಿಲ್ಲವಾಗುತ್ತದೆ. ಬಡವನಾಗಿರುವದಕ್ಕಿಂತ ಮೃತ್ಯುವೇ ಸುಖ. ಈ ರೀತಿ ಆಲೋಚನೆ ಮಾಡಿ ಆ ನಾಲ್ಕು ಬ್ರಾಹ್ಮಣರು ತಾವು ಹಣವಂತರಾಗಬೇಕೆಂಬ ನಿರ್ಧಾರ ಮಾಡಿದರು. ಆದರೆ ಹಣ ಸಂಪಾದನೆ ಮಾಡುವದು ಹೇಗೆ?

ಹಣ ಸಂಪಾದನೆಗೆ ಆರು ಮಾರ್ಗಗಳು. (೧) ಸಾರ್ವಜನಿಕ ಕೆಲಸಕ್ಕೆಂದು ಚಂದ ಎತ್ತುವದು. (೨) ಕೋರ್ಟಿನಲ್ಲಿ ಮೋಸದ ಮೊಕದ್ದಮೆ ಹೂಡುವದು. (೩) ವ್ಯವಸಾಯ ಕೈಕೊಳ್ಳುವದು (೪) ವಿದ್ಯೆ ಕಲಿತು ಉದ್ಯೋಗ ಕೈಕೊಳ್ಳುವದು (೫) ಸಿರಿವಂತರ ಪಕ್ಕದಾರನಾಗುವದು. (೬) ವ್ಯಾಪಾರ ಮಾಡುವದು. ಈ ಆರು ಮಾರ್ಗಗಳಲ್ಲಿ ತೊಂದರೆ ಇಲ್ಲದ ಮಾರ್ಗವೆಂದರೆ ವ್ಯಾಪಾರ ಮಾಡುವದು ಏಕೆಂದರೆ ಅಧಿಕಾರದಲ್ಲಿರುವವರ ಕೃಪೆಯನ್ನು ಸದಾ ನಂಬಲಾಗುವದಿಲ್ಲ. ದಾನ ಮಾಡುವವರು ಬಹು ಜನರಿಲ್ಲ. ಉದ್ಯೋಗದಲ್ಲೂ ಹೆಚ್ಚಿನ ಲಾಭವಿಲ್ಲ. ವ್ಯವಸಾಯವು ತುಂಬಾ ಶರೀರ ಸವೆಸುವ ಕೆಲಸ. ಯಾವುದರಲ್ಲಿಯೂ ಸುಖವಿಲ್ಲ. ವ್ಯಾಪಾರದಿಂದಲೇ ಹಣಗಳಿಸಲು ಇರುವ ರಾಜಮಾರ್ಗವೆಂದು ಅವರು ತೀರ್ಮಾನಿಸಿದರು.

ಆದರೆ ಲಾಭದಾಯಕ ವ್ಯಾಪಾರದಲ್ಲಿ ಏಳು ಅಂಗಗಳಿವೆ. (೧) ತೂಕ ಅಳತೆಗಳಲ್ಲಿ ಮೋಸ (೨) ಹದ್ದು ಮೀರಿ ಬೆಲೆ ಏರಿಸುವದು (೩) ದಲ್ಲಾಳಿ ವ್ಯಾಪಾರ (೪) ಶಾಶ್ವತ ಗಿರಾಕಿಗಳನ್ನು ಪಡೆಯುವದು (೫) ಕಂಪೆನಿ ತೆರೆಯುವದು (೬) ಸೌಂದರ್ಯ ಸುವಾಸನಾ ವಸ್ತುಗಳ ವ್ಯಾಪಾರ (೭) ವಿದೇಶ ವ್ಯಾಪಾರ. ಆದರೆ ಅರ್ಥಶಾಸ್ತ್ರಜ್ಞರು ಏನು ಹೇಳಿದ್ದಾರೆಂದರೆ ಅಳತೆಯಲ್ಲಿ ಮೋಸಮಾಡುವವರು ಸಮಾಜದಿಂದ ಇಂದಲ್ಲ ನಾಳೆ ಗೌರವ ಕಳೆದುಕೊಳ್ಳುತ್ತಾರೆ. ವಿದೇಶ ವ್ಯಾಪಾರಕ್ಕೆ ವಿಪರೀತ ಬಂಡವಾಳಬೇಕು. ಸಾಧುವಾದ ಆನೆಯ ಸಹಾಯದಿಂದ ಹೊಸ ಆನೆಯನ್ನು ಹಿಡಿದಂತೆ ಆ ವ್ಯಾಪಾರ. ಆದರೆ ವಿವಿಧ ಕಡೆ ಸುತ್ತಿ, ಸಂತೆಯ ಹಿಡಿತವನ್ನು ತಿಳಿದು ವ್ಯಾಪಾರ ಮಾಡುವವನು ಸುಲಭದಲ್ಲಿ ಧನ ಸಂಪಾದಿಸುವನು. ಹೀಗೆ ಆಲೋಚಿಸಿ ಅವರು ವ್ಯಾಪಾರ ದೃಷ್ಟಿಯಿಂದ ದೇಶ ವಿದೇಶ ಸುತ್ತಲು ನಿರ್ಣಯಿಸಿ ಹೊರಟರು. ಬುದ್ಧಿವಂತರು ಹೇಳಿದಂತೆ ಹಣದ ಆಸೆಯಿಂದ ಹುಚ್ಚು ಹಿಡಿದ ಮನುಷ್ಯನು ನೆಂಟರಿಷ್ಟರನ್ನು, ಪ್ರಿಯಜನರನ್ನು ಬಿಟ್ಟು ದೂರ ಹೋಗುತ್ತಾನೆ. ಮಾತಿಗೆ ತಪ್ಪುತ್ತಾನೆ. ತಮ್ಮ ದೇಶವನ್ನೇ ಬಿಟ್ಟು ತೊಲಗುತ್ತಾನೆ.

ಈ ರೀತಿ ಹೊರಟ ಈ ನಾಲ್ಕು ಬ್ರಾಹ್ಮಣರು ಅವಂತಿ ದೇಶಕ್ಕೆ ಬಂದು ಸಿಪ್ರಾ ನದಿಯಲ್ಲಿ ಸ್ನಾನಮಾಡಿ ಶಿವಪೂಜೆಯನ್ನು ತೀರಿಸಿ, ಊಟ ಮುಗಿಸಿ ಮುಂದರಿದರು. ದಾರಿಯಲ್ಲಿ ಅವರಿಗೆ ಭಯಂಕರಾನಂದನೆಂಬ ಮಂತ್ರವಾದಿಯ ಪರಿಚಯವಾಯಿತು. ಅವರು ಆತನ ಆಶ್ರಮಕ್ಕೆ ಹೋದರು. ಮಂತ್ರವಾದಿಯು ಅವರ ಕ್ಷೇಮ ಸಮಾಚಾರವನ್ನು ಕೇಳಿ ಅವರ ಗುರಿಯೇನೆಂದು ವಿಚಾರಿಸಿದನು. ಆಗ ಬ್ರಾಹ್ಮಣರು ಹೇಳಿದರು, 'ನಾವು ಯಾತ್ರಿಗಳು. ಮಂತ್ರಶಕ್ತಿಯನ್ನು ಕಲಿಯಲಿಚ್ಛೆ ಉಳ್ಳವರು. ನಾವು ತುಂಬಾ ಹಣ ಸಂಪಾದಿಸುವ ಗುರಿ ಉಳ್ಳವರು. ಒಂದೋ ನಾವು ಹಣಗಾರರಾಗಬೇಕು. ಇಲ್ಲವೇ ಪ್ರಾಣಬಿಡಬೇಕು. ಏಕೆಂದರೆ, ಮಳೆಯಿಂದ ನೀರು ದೊರೆಯುವದು ನಿಜವಾದರೂ ನಮಗೆ ಬೇಕಾದಾಗ ಮಳೆ ಬರಲಾರದು. ಆದ್ದರಿಂದ ಮನುಷ್ಯನು ಸ್ವಪ್ರಯತ್ನದಿಂದ ಭೂಮಿಯನ್ನು ಅಗೆದು ಬಾವಿ ತೋಡಿ ನೀರು ಪಡೆಯಬೇಕು. ನಿಜವಾಗಿಯೂ ಮನುಷ್ಯನ ಪ್ರಯತ್ನದಲ್ಲೇ ಅದೃಷ್ಟ ನಿಂತಿದೆ. ಜ್ಞಾನಿಗಳು ಹೇಳುವಂತೆ ತನ್ನ ಸತಿಯನ್ನು ಅಪ್ಪಿಕೊಳ್ಳುವ ವಿಷ್ಣುವಿನ ಕೈಗಳೂ ಕೂಡ ಹಾಲನ್ನು ಕಡೆಯುವ ಕೆಲಸ ಮಾಡಿದ ಕೈಗಳೇ ಆಗಿವೆ.

ಆದ್ದರಿಂದ ಹಣಗಳಿಸುವ ಮಾರ್ಗವನ್ನು ನಮಗೆ ನೀನು ಹೇಳಿಕೊಡಬೇಕು. ಹಣಕ್ಕಾಗಿ ಬಿಲದೊಳಗೆ ನುಸುಳುವೆವು. ಕುಟಿಲಗಿತ್ತಿಯನ್ನು ಆರಾಧಿಸುವೆವು. ಸ್ಮಶಾನದಲ್ಲಿ ಜೀವಿಸುವೆವು. ಮನುಷ್ಯನ ಮಾಂಸವನ್ನು ಬೇಕಾದರೆ ಮಾರುವೆವು. ಹಣಕ್ಕಾಗಿ ಏನು ಮಾಡಲೂ ಸಿದ್ಧರಿದ್ದೇವೆ. ನಿನಗೆ ಮಂತ್ರದ ಮಹಾಬಲವಿದೆ. ನಮಗೆ ಹಣಗಳಿಸಬೇಕೆಂಬ ಛಲವಿದೆ. ಏಕೆಂದರೆ ಅವರವರ ಆತ್ಮದ ಬಯಕೆಯನ್ನು ಪಡೆಯಲು ಶೂರರೇ ಶೂರರಿಗೆ ಸಹಾಯಕರಲ್ಲದೆ ಬೇರಿಲ್ಲ. ಜಲದೊಳಗಿರುವ ಅಗ್ನಿಯನ್ನು ನಂದಿಸಲು ಸಮುದ್ರಕ್ಕಲ್ಲದೆ ಬೇರೆ ಯಾರಿಗೆ ಶಕ್ತಿ ಇದೆ?"

ಮಂತ್ರವಾದಿಯು ತನ್ನ ಶಿಷ್ಯರ ಯೋಗ್ಯತೆಯನ್ನು ಅರಿತು ನಾಲ್ಕುಜನರಿಗೂ ಮುಳ್ಳು ಹಂದಿಯ ನಾಲ್ಕು ಮುಳ್ಳುಗಳನ್ನು ಕೊಟ್ಟು 'ನೀವು ಹಿಮಾಲಯದ ಕಡೆ ಉತ್ತರಕ್ಕೆ ಹೊರಡಿರಿ. ಎಲ್ಲಿ ಈ ಮುಳ್ಳುಗಳು ನಿಮ್ಮ ಕೈಯಿಂದ ಬೀಳುವವೋ ಅಲ್ಲಿ ಆ ಮುಳ್ಳಿನ ಮಾಲಿಕನು ದೊಡ್ಡ ನಿಧಿಯನ್ನು ಪಡೆಯುತ್ತಾನೆ ಎಂದನು.

ಮಂತ್ರವಾದಿಯು ಆಜ್ಞೆಯಂತೆ ಬ್ರಾಹ್ಮಣರು ಹೊರಟರು. ಹೋಗುತ್ತಿರುವಾಗ ಒಬ್ಬನ ಕೈಯಲ್ಲಿದ್ದ ಮುಳ್ಳು ಕೆಳಗೆ ಬಿದ್ದಿತು. ಅದು ಬಿದ್ದ ಸ್ಥಳವನ್ನು ಪರಿಶೀಲಿಸಲು ಅದು ತಾಮ್ರದ ಗನಿಯಾಗಿತ್ತು. ಅದನ್ನು ನೋಡಿ ಆತನೆಂದನು "ನೋಡಿ ಇಲ್ಲಿ ಬೇಕಾದಷ್ಟು ತಾಮ್ರವಿದೆ. ತೆಗೆದುಕೊಳ್ಳಿ'

ಆಗ ಉಳಿದವರು ಹೇಳಿದರು "ಇದರಿಂದ ಪ್ರಯೋಜನವಿಲ್ಲ. ಹೊರಲಾರದಷ್ಟು ತಾಮ್ರವನ್ನು ಹೇರಿಕೊಂಡರೂ ನಾವು ಹಣಗಾರರಾಗಲಾರೆವು. ತಾಮ್ರಕ್ಕೆ ಬೆಲೆ ಕಡಿಮೆ. ಆದ್ದರಿಂದ ನಾವು ಮುಂದುವರಿಯುವೆವು." "ನೀವು ಹೋಗಿರಿ. ನಾನು ಬರಲಾರೆ." ಎಂದು ತಾಮ್ರ ದೊರಕಿದ ಬ್ರಾಹ್ಮಣನು ಅಲ್ಲೇ ನಿಂತನು.

ಉಳಿದ ಮೂವರು ಮುಂದರಿದರು. ಕೆಲವು ದೂರದಲ್ಲಿ ಒಬ್ಬನ ಮುಳ್ಳು ಬಿದ್ದಿತು. ಅಲ್ಲಿಯ ನೆಲವು ಬೆಳ್ಳಿಯಿಂದ ತುಂಬಿತ್ತು. ಬೆಳ್ಳಿ ದೊರಕಿದವನು ಉಳಿದವರನ್ನು ಅದರಿಂದಲೇ ತೃಪ್ತಿಪಡಲು ಆಗ್ರಹಿಸಿದರೂ ಅವರೊಪ್ಪಲಿಲ್ಲ. ಆತನು ಅಲ್ಲೇ ಉಳಿದನು. ಉಳಿದ ಇಬ್ಬರು ಮುಂದರಿದರು. ಮತ್ತೊಬ್ಬನಲ್ಲಿದ್ದ ಮುಳ್ಳು ಬೀಳುವವರೆಗೆ ನಡೆದರು. ಅಲ್ಲಿ ಚಿನ್ನದ ಗನಿ ದೊರೆಯಿತು. ಆತನ ಸಂತೋಷಕ್ಕೆ ಪಾರವೇ ಇಲ್ಲ. ಉಳಿದವನನ್ನು ಬೇಕಾದಷ್ಟು ತೆಗೆದುಕೊಳ್ಳಲು ಹೇಳಿದನು. ಆದರೆ ಆತನು ಕೇಳದೆ ಮುಂದರಿದನು. ಆತನು ಒಬ್ಬಂಟಿಗನಾಗಿ ಸಾಗುತ್ತಿರಲು ಬಿಸಿ ಜೋರಾಯಿತು. ಆತನಿಗೆ ಬಾಯಾರಿಕೆ ಹೆಚ್ಚಿತು. ಆತನು ದಕ್ಷಿಣ ದೇಶಕ್ಕೆ ಬಂದನು ಆ ದೇಶದಲ್ಲಿ ಅತ್ತಿಂದಿತ್ತ ಸುತ್ತಿದನು. ಅಲ್ಲಿ ಸುತ್ತು ತಿರುಗುವ ವೇದಿಕೆಯೊಂದರಲ್ಲಿ ಒಬ್ಬ ಮನುಷ್ಯನನ್ನು ಕಂಡನು. ಆತನ ಶರೀರವಿಡೀ ರಕ್ತದಿಂದ ತೊಯ್ದಿತ್ತು. ಆ ವೇದಿಕೆಯ ಚಕ್ರವು ಆತನ ತಲೆಯ ಮೇಲೆ ಜಾಡಿಸುತಿತ್ತು. ಅದನ್ನು ಕಂಡ ನಮ್ಮ ಬ್ರಾಹ್ಮಣನು ಆಶ್ಚರ್ಯದಿಂದ ಕೇಳಿದನು "ಹೇ ಮನುಷ್ಯ, ಆ ಚಕ್ರಕ್ಕೆ ತಲೆಯೊಡ್ಡಿ ಏಕೆ ನಿಂತಿರುವೆ? ದೂರ ಸರಿ. ನನಗೆ ತುಂಬಾ ಬಾಯಾರಿಕೆಯಾಗಿದೆ. ಹತ್ತಿರದಲ್ಲಿ ನೀರೆಲ್ಲಿದೆಯೆಂದು ಹೇಳು'

ಇಷ್ಟು ಹೇಳಿದ್ದೇ ತಡ ಆ ಚಕ್ರವು ಆ ಮನುಷ್ಯನ ತಲೆಯನ್ನು ಬಿಟ್ಟು ನಮ್ಮ ಬ್ರಾಹ್ಮಣನ ತಲೆಯ ಮೇಲೇರಿ ಘಾತಿಸತೊಡಗಿತು. ಬ್ರಾಹ್ಮಣನಿಗೆ ವಿಪರೀತ ನೋವಾಯಿತು. ಬಿಡುಗಡೆಹೊಂದಿದವನು ಸಂತೋಷದಿಂದ ನನಗೂ ಇದೇ ರೀತಿ ಈ ಚಕ್ರ ತಲೆಗೆ ಅಂಟಿತು ಎಂದನು. 'ಆದರೆ ಬಿಡುಗಡೆಯಾಗುವದು ಯಾವಾಗ?' ಎಂದು ನೋವನ್ನು ಸಹಿಸಲಾರದ ಬ್ರಾಹ್ಮಣನು ಕೇಳಿದನು. 'ಯಾವಾಗ ಮತ್ತೊಬ್ಬನು ಮಂತ್ರದ ಮುಳ್ಳನ್ನು ಹಿಡಿದು ನೀನು ಬಂದಂತೆ ಇಲ್ಲಿಗೆ ಬಂದು ನೀನಾಡಿದಂತೆ ಮಾತಾಡುವನೋ ಆಗ ಅದು ಆತನ ತಲೆಗೆ ಹೋಗುವದು.' ಎಂದು ಬಿಡುಗಡೆ ಹೊಂದಿದವನೆಂದನು. 'ಹಾಗಾದರೆ ನೀನು ಇಲ್ಲಿ ಎಷ್ಟು ಸಮಯದಿಂದ ಈ ನೋವು ಅನುಭವಿಸುತ್ತಿದ್ದೆ?' ಎಂದು ಬ್ರಾಹ್ಮಣನು ಕೇಳಿದನು. ಈಗ ಈ ದೇಶದ ಅರಸನು ಯಾರೆಂದು ಹೊಸಬನು ಕೇಳಿದುದಕ್ಕೆ 'ವಿನವತ್ಸ' ನೆಂದು ಬ್ರಾಹ್ಮಣನು ಹೇಳಲು ಆತನು ಹೇಳತೊಡಗಿದನು. 'ಹಿಂದೆ ರಾಮನು ರಾಜ್ಯಭಾರ ಮಾಡುತ್ತಿದ್ದಾಗ ನಾನು ಬಡವನಾಗಿ ಹಣದ ಆಸೆಯಿಂದ ಇದೇ ಆ ಮಂತ್ರವಾದಿಯಿಂದ ಮುಳ್ಳನ್ನು ಪಡೆದು ನಿನ್ನಂತೆ ಬಂದೆನು. ಆಗ ಇಲ್ಲಿ ಒಬ್ಬನು ಈ ಚಕ್ರದಿಂದ ನರಳುತ್ತಿದ್ದನು. ನಿನ್ನ ಹಾಗೆಯೇ ನಾನು ಮಾತಾಡಲು ಚಕ್ರವು ನನ್ನ ತಲೆಗೆ ಬಂದಿತು. ಅಂದಿನಿಂದ ಶತಮಾನಗಳು ಕಳೆದವು.

ಆಗ ಬ್ರಾಹ್ಮಣನು ಹೇಳಿದನು, 'ಮಹಾರಾಜ, ಹಾಗಾದರೆ ನೀನು ಹೀಗೆ ಕಷ್ಟಪಡುತ್ತಿದ್ದಾಗ ನಿನಗೆ ಅನ್ನಾಹಾರಗಳೆಲ್ಲಿಂದ?'

'ಸಂಪತ್ತಿನ ದೇವತೆಯು ಸಂಪತ್ತು ಖರ್ಚಾಗುವದೆಂದು ಅಂಥವರಿಗೆ ಹಸಿವು ಬಾಯಾರಿಕೆಗಳನ್ನು ಇಲ್ಲದಂತೆ ಮಾಡಿರುವಳು. ಇಲ್ಲಿ ಸಾವು ಬರುವಂತಿಲ್ಲ. ಕೇವಲ ಈ ಚಕ್ರದ ಪೆಟ್ಟೊಂದನ್ನು ಮಾತ್ರ ಸತತ ಅನುಭವಿಸಬೇಕು. ಆದ್ದರಿಂದ ನಾನಿನ್ನು ಬರುತ್ತೇನೆ. ನನ್ನ ನರಕಯಾತನೆಯಿಂದ ಬಿಡುಗಡೆ ಮಾಡಿದ ನಿನಗೆ ವಂದನೆ' ಎಂದು ಹೇಳಿ ಆತನು ಹೊರಟನು.

ಕೆಲವು ಸಮಯದ ನಂತರ ನಾಲ್ಕನೇ ಬ್ರಾಹ್ಮಣನು ಹಿಂತಿರುಗದ್ದನ್ನು ಕಂಡು ಚಿನ್ನದ ಗನಿದೊರೆತವನು ಆತನ ಹೆಜ್ಜೆಯನ್ನನುಸರಿಸಿ ಮುಂದೆ ನಡೆದನು. ಕೆಲವು ಸಮಯ ನಡೆದ ನಂತರ ಆತನು ಬ್ರಾಹ್ಮಣನು ಚಕ್ರಕ್ಕೆ ಸಿಕ್ಕಿ ನರಳುತ್ತಿರುವಲ್ಲಿಗೆ ಬಂದನು ಆತನ ಶರೀರವೆಲ್ಲ ರಕ್ತದಿಂದ ಒದ್ದೆಯಾಗಿತ್ತು. ಚಿನ್ನ ದೊರೆತ ಬ್ರಾಹ್ಮಣನು ಇದನ್ನು ಕಂಡು ಭಯದಿಂದ "ಇದೇನು? ಈ ಚಕ್ರದ ಅರ್ಥವೇನು? ಈ ಪಟ್ಟೇಕೆ? ನಿನ್ನ ಅವಸ್ಥೆ ಹೀಗೇಕೆ [illegible]" ಕೇಳಿದನು. ಚಕ್ರಕ್ಕೆ ಸಿಕ್ಕಿದ ಬ್ರಾಹ್ಮಣನು ಆ ಚಕ್ರದ [illegible] ಹೇಳಿದನು. ಇದನ್ನು ಕೇಳಿ ಆತನು ಕೋಪದಿಂದ ಹೇಳಿದನು. "ನಾನು ನಿನಗೆ ಎಷ್ಟು ಸಾರಿ ಹೇಳಿಲ್ಲ. ವಿದ್ಯೆ ಇದ್ದರೆ ಸಾಲದು. ಬುದ್ಧಿ ಇರಬೇಕು. ಬುದ್ಧಿ ಇಲ್ಲದ ವಿದ್ಯಾವಂತರು ತಮ್ಮ ವಿದ್ಯೆಯಿಂದ ಸಿಂಹವನ್ನು ರೂಪಿಸಿ ನಾಶಗೊಂಡಂತೆ ನಿನ್ನ ಕತೆಯಾಯಿತು" ಎಂದನು. "ಅದು ಹೇಗೆ?" ಎಂದು ಕೇಳಲು ಮುಂದಿನ ವಾರ ಚಿನ್ನ ದೊರೆತ ಬ್ರಾಹ್ಮಣನು ಸಿಂಹದ ಕತೆಯನ್ನು ಹೇಳುವನು.

** ಓದುಗರ ಓಲೆಗಳು. **

ಬಾಣೆ ಕಂದಾಯ

ಕೊಡಗಿನಲ್ಲಿ ಬಾಣೆ ಜಾಗಕ್ಕೆ ಕಂದಾಯ ಹಾಕುವ ಅಭಿಪ್ರಾಯದಿಂದ ಕೊಡಗು ರೆವಿನ್ಯೂ ರೆಗ್ಯುಲೇಶನಿನಲ್ಲಿ ಸಂಬಂಧಪಟ್ಟ ರೂಲುಗಳನ್ನು ತಿದ್ದುಪಡಿ ಮಾಡುವ ನಿಮಿತ್ತ ತಯಾರಿಸಿ ಸದ್ರಿ ತಿದ್ದುಪಡಿಯು ಅನ್ವಯಿಸುವವರ ವಿರೋಧವೇನಾದರೂ ಇದೆಯೋ ಎಂಬುವನ್ನು ತಿಳಿಯುವ ಉದ್ದೇಶ್ಯದಿಂದ ಕೊಡಗು ಗಜೆಟ್ಟಿನಲ್ಲಿ ಪ್ರಕಟಿಸಿರುವ ಕರಡು ನಿಬಂಧನೆಯನ್ನು ನೋಡಲಾಯಿತು. ಈ ವಿಷಯದಲ್ಲಿ ಬಾಣೆಗಳಿರತಕ್ಕವರು ತಮ್ಮ ಅಭಿಪ್ರಾಯವನ್ನು ಸರಕಾರದ ಮುಂದಿಡುವುದಕ್ಕಿಂತ ಮೊದಲು, ಸರಕಾರವನ್ನು ಒಂದೆರಡು ಮನವಿಗಳನ್ನು ಮಾಡಿಕೊಳ್ಳಬೇಕಾಗಿದೆ.

ಒಂದನೇಯದಾಗಿ, ನಮ್ಮ ವಿರೋಧಗಳನ್ನು ಆಗಸ್ಟ್ ತಿಂಗಳ ಒಂದರ ವಳಗೆ ಚೀಫ್ ಸೆಕ್ರೆಟರಿಯವರಿಗೆ ತಲುಪುವಂತೆ, ಕೊಡಗು ಚೀ. ಕಮಿಷನರ್ ಸಾಹೇಬರ ಮುಖಾಂತರ ಕಳುಹಿಸಬೇಕೆಂದಿದೆ. ಕೊಡಗಿನಲ್ಲಿ ಎಲ್ಲರಿಗೂ ತಿಳಿದಂತೆ ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳುಗಳೆಂದರೆ ಹೆಂಕಿಗೆ ಬಿದ್ದ ದುಗುಣವನ್ನು ಸಹ ನೋಡಲು ಸಾಧ್ಯವಿಲ್ಲದಂತ ಸಮಯ. ಅದರಲ್ಲೂ ಈ ವರ್ಷ ಜೂನ್ ೧೫ ಆದರೂ ಮಳೆ ಬಾರದೆ ಯಾವನೊಬ್ಬನೂ ಆರಂಭದ ಕೆಲಸಕ್ಕೆ ಇನ್ನೂ ತೊಡಗಲು ಮಾಡಿರುವದಿಲ್ಲ. ಇನ್ನು ಬೇಗನೆ ಮಳೆ ಹಿಡಿದರೆ ಹಗಲು ರಾತ್ರಿ ಆಗುವಷ್ಟು ಪ್ರಯತ್ನ ಮಾಡಿ ತಮ್ಮ ವ್ಯವಸಾಯದ ಕೆಲಸವನ್ನು ಮುಗಿಸುವ ಪ್ರಯತ್ನ ಮಾಡಬೇಕಲ್ಲದೆ ಬೇರೊಂದ ವಿಷಯದಲ್ಲಿ ಮೀಟಿಂಗುಗಳನ್ನು ಜರುಗಿಸಲಿಕ್ಕೆ ಸಾಧ್ಯವೇ ಇರಲಾರದು. ಸರಕಾರದವರೂ ಸಹ ಈಗಾಗಲೇ ತಡವಾಗಿರುವ ವ್ಯವಸಾಯದ ಕೆಲಸವನ್ನು ಆಗುವಷ್ಟು ಬೇಗನೆ ರೈತರು ತೀರಿಸುವ ಪ್ರಯತ್ನಕ್ಕೆ ಒತ್ತಾಸೆ ಕೊಡಬೇಕೇ ಹೊರತು, ಈ ಸಮಯದಲ್ಲಿ ರೈತರು ಮೀಟಿಂಗುಗಳನ್ನು ಜರುಗಿಸಿ ಅವರ ಅಭಿಪ್ರಾಯಗಳನ್ನು ಸರಕಾರಕ್ಕೆ ತಿಳಿಸುವ ಸಂದರ್ಭಗಳನ್ನು ಅವರ ಮೇಲೆ ಹೊರಿಸುವದು ಯಾರ ಹಿತದೃಷ್ಟಿಯಿಂದಲೂ ಸಮಂಜಸವಲ್ಲ. ಈ ತಿದ್ದುಪಡಿಯು ಪ್ರತಿಯೊಬ್ಬ ವ್ಯವಸಾಯಗಾರನಿಗೂ ಅನ್ವಯಿಸುವದರಿಂದ ಪ್ರತಿಯೊಬ್ಬ ಬಾಣೆಯಿರತಕ್ಕವನೂ ತನ್ನ ನಿರ್ದಿಷ್ಟವಾದ ಅಭಿಪ್ರಾಯವನ್ನು ಸರಕಾರದವರ ಮುಂದೆ ತರಲು ತಕ್ಕಷ್ಟು ಅನುವನ್ನು ಪ್ರಜಾಸರಕಾರವು ಖಂಡಿತವಾಗಿಯೂ ಕಲ್ಪಿಸಿ ಕೊಡಲೇಬೇಕು. ಅದೂ ಅಲ್ಲದೆ ಇನ್ನು ಮಳೆ ತೊಡಗಿದರೆ, ಸೆಪ್ಟಂಬರ್ ತಿಂಗಳ ವರೆಗೆ ಕೊಡಗಿನಲ್ಲಿ ಸಾರ್ವಜನಿಕ ಮೀಟಿಂಗುಗಳನ್ನು ನಡೆಸುವದೇ ಮಳೆ ದೆಸೆಯಿಂದ ಅಸಾಧ್ಯವಾಗುವುದು. ಒಂದು ವೇಳೆ ಮಳೆ ಕಡಿಮೆಯಾದರೂ ಜನರಿಗೆ ಕೆಲಸ ಬಿಟ್ಟು ಮೀಟಿಂಗಿಗೆ ಹಾಜರಾಗಲು ಸಾಧ್ಯವೇ ಇಲ್ಲ. ಸೆಪ್ಟಂಬರ್ ತಿಂಗಳಲ್ಲಿ ಕೊಡಗಿನಲ್ಲಿ ಹೆಚ್ಚಿನ ಜನರ ಕೆಲಸವು ಮುಗಿಯುವದರಿಂದಲೂ, ಈ ವಿಷಯದಲ್ಲಿ ದೇಶಸ್ಥರ ಅಭಿಪ್ರಾಯಗಳನ್ನು ಸರಕಾರಕ್ಕೆ ತಲುಪಿಸುವದಕ್ಕಿರುವ ಅವಧಿಯನ್ನು ೧೯೫೩ನೇ ಇಸವಿ ಅಕ್ಟೋಬರ್ ೧೫ರ ವರೆಗೆ ಮುಂದುವರಿಸುವುದು ಬಹು ಯುಕ್ತವಾಗಿ ಕಾಣುತ್ತದೆ.

ಎರಡನೆಯದಾಗಿ ಕೊಡಗಿಗೆ ಈಗ ಸ್ಥಳೀಯ ಸ್ವಾತಂತ್ರ್ಯ ಸಿಕ್ಕಿ ನಮ್ಮ ವಿಧಾಯಕ ಸಭೆಗೆ ಪ್ರಾಂತೀಕ ಎಲ್ಲ ವಿಷಯಗಳಲ್ಲೂ ಕಾನೂನು ಮಾಡುವ ಅಧಿಕಾರ ವಿರುವಾಗ್ಯೆ ಪೂರ್ವದಲ್ಲಿ ರೆವಿನ್ಯೂ ರೆಗ್ಯುಲೇಷನ್ ಪ್ರಕಾರ ರೆವಿನ್ಯೂ ಆಫೀಸರುಗಳಿಗಿದ್ದ ಈ ತರದ ಸಮರಿ ತಿದ್ದುಪಡಿಗಳಿಗೆ ಈಗ ಆಸ್ಪದವಿದೆಯೊ ಎಂಬುವದು ಒಂದು ಸಂಶಯಾಸ್ಪದದ ಸಂಗತಿಯಾಗಿದೆ. ಪೂರ್ವದಲ್ಲಿದ್ದಂತೆ ಈಗಲೂ ಈ ತರದ ಅಧಿಕಾರವು ಚೀಫ್ ಕಮಿಷನರಿಗೆ ಇರುವದಾದರೆ, ನಮ್ಮ ವಿಧಾಯಕ ಸಭೆಯ ಕರ್ತವ್ಯವೇನು? ಮತ್ತು ನಮಗೆ ಪ್ರಜಾ ಸ್ವಾತಂತ್ರ್ಯವಿದೆ ಎಂಬುವದರ ಅರ್ಥವಾದರೂ ಏನು? ಈ ಕಾಲದಲ್ಲಿ ಈ ತರದ ಹೊಸ ಕಂದಾಯಗಳನ್ನು ಜಾರಿಗೆ ತರುವದು ಎಸೆಂಬ್ಲಿಯ ಮೂಲಕ ಬಿಲ್ ರೂಪದಲ್ಲಿ ಬರಬೇಡವೇ? ಹಾಗೆ ಮಾಡಿದರೆ ನಮ್ಮ ಮುಂದಾಳುಗಳಿಗೆ ಈ ವಿಷಯದಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಆಸ್ಪದ ಸಿಕ್ಕುವದಲ್ಲದೆ, ದೇಶದ ಪ್ರತಿ ಒಬ್ಬನಿಗೂ ಸದ್ರಿ ಬಿಲ್ಲಿನ ಮೇಲೆ ಅಭಿಪ್ರಾಯ ಕೊಡಲು ಆಸ್ಪದ ದೊರಕುತ್ತದೆ. ಇದಲ್ಲದೆ ಪೂರ್ವಕಾಲದ ಈ ದಾರಿಯನ್ನು ನಾವು ಈಗಲೂ ಅನುಸರಿಸುವವರಾದರೆ ಇದನ್ನು ಹೇಗೆ ಪ್ರಜಾ ಸರಕಾರವೆನ್ನುವದು? ನಾವು ಏನೇ ಅಭಿಪ್ರಾಯ ಕೊಟ್ಟರೂ ಎಷ್ಟು ವಿರೋಧಿಸಿದರೂ, ಅದನ್ನು ಲಕ್ಷಿಸದೆ ಸಂಬಂಧಪಟ್ಟ ಅಧಿಕಾರಿಗಳು ತಮ್ಮ ತಿದ್ದುಪಡಿಯನ್ನು ಜಾರಿಗೆ ತಂದದ್ದಾದರೆ, ಅವರ ಅಧಿಕಾರವನ್ನು ಪ್ರಶ್ನಿಸುವವರು ಯಾರು? ದಯಮಾಡಿ ಸರಕಾರದವರು ಇದಕ್ಕೆ ತಕ್ಕ ಸಮಾಧಾನವನ್ನು ಕೊಡುವರೆಂದು ಆಶಿಸಲಾಗಿದೆ.

ಪಿ. ಜಿ. ಅಯ್ಯಪ್ಪ.

THE CANARA BANKING CORPORATION LIMITED.
ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್.
ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)
ಚಿಕ್ಕ ವಾಯಿದೆಯ ಠೇವಣಾತಿಗಳು :
3 ರಿಂದ 6 ತಿಂಗಳುಗಳ ವರೆಗೆ— ಸಾಲಿಯಾನ ಶೇಕಡ 3
7 ರಿಂದ 12 ತಿಂಗಳುಗಳ ವರೆಗೆ— ಸಾಲಿಯಾನ ಶೇಕಡ 3½
ಪಂಚವಾರ್ಷಿಕ ಪುನರ್ಗ ಠೇವಣಾತಿಗಳು— ,, ,, 4
—: ಕೊಡಗು ಸಂಸ್ಥಾನದಲ್ಲಿ ನಮ್ಮ ಶಾಖೆಗಳು :—
ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,
ಹೆಡ್ ಆಫೀಸ್ :—ವೀರಾಜಪೇಟೆ.
ಬ್ರಾಂಚ್ :—ಸ್ಕೂಲು ಬಳಿ ಬಿಲ್ಡಿಂಗ್ಸ್, ಮಡಿಕೇರಿ.
ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.
1. 32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟಗಳು
2. 12 ನೇ ನಂಬರಿನ ಒಂಟಿ ಹೊಳವಿನ ತೋಟದ ಕೋವಿಗಳು.
3. ಒಂಟಿ ಮತ್ತು ಜೋಡಿ ಹೊಳವಿನ ಕೇಪಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
5. $\frac{5}{8}$", $\frac{1}{2}$" ಮತ್ತು $\frac{3}{8}$" ಕಬ್ಬಿಣದ ಸರಳುಗಳು
6. 2", $1\frac{1}{4}$", 1" $\frac{3}{4}$" ಮತ್ತು $\frac{1}{2}$" ಕೊಳಾಯಿಗಳು. (G. I. Pipes)
7. $1\frac{3}{4}$" × $\frac{5}{16}$" ಉಕ್ಕಿನ ಪಟ್ಟಿಗಳು (Spring Steel flats)
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
9. ಕೋತಿ ಮತ್ತು ಆನೆ ಮಾರ್ಕಿನ ಸೀಮೆಣ್ಣೆ ಟಿನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.
ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.
(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.
ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)
ಪಿ. ಐ. ಬೆಳ್ಳಿಯಪ್ಪ, (ಪ್ರೆಸಿಡೆಂಟ್)

ವರ್ಗಾಯಿಸುವದು ಬೇಡ

ವೀರಾಜಪೇಟೆಯಲ್ಲಿರುವ ಅಧ್ಯಾಪಕರ ತರಬೇತು ಶಾಲೆಯ ವರ್ಗಾವರ್ಗಿಯ ವಿಚಾರ ಕೇಳುತ್ತಿದೆ. ಅದನ್ನು ಮಡಿಕೇರಿಗೆ ವರ್ಗಾಯಿಸುವರಂತೆ. ಕಳೆದ ಮೂರು ವರ್ಷದಿಂದ ವೀರಾಜಪೇಟೆಯಲ್ಲಿರುವ ತರಬೇತಿ ಕೇಂದ್ರದಲ್ಲಿ ಒಂದಾವರ್ತಿ ಅರುವತ್ತರ ಮೇಲ್ಪಟ್ಟು ಅಧ್ಯಾಪಕರು ತರಬೇತಾಗಿ ಹೋದರು. ಎರಡನೆಯ ತಂಗಡವು ತರಬೇತಾಗುತ್ತ ಇದೆ. ಇದರಲ್ಲಿ ಸಾಧಾರಣ ಎಂಭತ್ತರಷ್ಟು ಅಧ್ಯಾಪಕರಿದ್ದಾರೆ. ಇವರೆಲ್ಲರೂ ಕೊಡಗಿನ ನಾನಾ ಭಾಗಗಳಿಂದ ಬಂದು ತರಬೇತಾಗುತಿದ್ದಾರೆ. ಮಡಿಕೇರಿಯಲ್ಲಿ ಸ್ಥಳಾವಕಾಶ ತುಂಬಾ ಇದೆ, ವೀರಾಜಪೇಟೆಯಲ್ಲಿ ಇಲ್ಲ ಎಂಬದೊಂದು ಕಾರಣದಿಂದ ಶಾಲೆಯನ್ನು ಮಡಿಕೇರಿಗೆ ವರ್ಗಾಯಿಸುವರೆಂಬ ವಾರ್ತೆ. ತರಬೇತಿಯ ಅವಧಿಯ ದಿನದ ಹದಿನೈದು ಗಂಟೆಗಳಷ್ಟು ಕಳೆದು ಹೋಯಿತು. ಉಳಿದಿರುವದು ಬರೇ ಒಂಭತ್ತು ತಿಂಗಳು ಮಾತ್ರ. ಈ ಅಲ್ಪಾವಧಿಗಾಗಿ ಶಾಲೆಯನ್ನು ವರ್ಗಾಯಿಸುವದರಿಂದ ಆಗುವ ಪರಿಣಾಮವನ್ನು ಯೋಚಿಸಬೇಡವೇ?

ತರಬೇತು ಪಡೆಯುತ್ತಿರುವ ಅಧ್ಯಾಪಕರ ಸ್ಥಿತಿ ತುಂಬಾ ಬೇಸರಕರ. ಇದರೆಡೆಯಲ್ಲಿ ಸ್ಥಳಾಂತರವೆಂದರೆ ಎಲ್ಲರಿಗೂ ನಿರುತ್ಸಾಹ. ವಾಸಯೋಗ್ಯ ಸ್ಥಳ ಪಡೆಯುವದಾಗಲೀ ಏರ್ಪಡಿಸುವದಾಗಲೀ ಮಳೆಗಾಲ ಪ್ರಾರಂಭವಾಗಲಿರುವ ದಿನಗಳಲ್ಲಿ ಬಲು ಕಷ್ಟ. ಕಂಬಳಿಗಳನ್ನೊದಗಿಸಲಿಕ್ಕಾಗಿಯೇ ಹಲವು ರೂಪಾಯಿಗಳು ಬೇಕು. ಕಾಲೇಜು ತೆರೆಯಲಿರುವ ಈ ಸಮಯದಲ್ಲಿ ಮಡಿಕೇರಿಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುವುದರಲ್ಲಿ ಸಂಶಯವಿಲ್ಲ. ಈ ರೀತಿ ತೋರಿಬರುವ ತೊಂದರೆಗಳಿಂದ ಅಧ್ಯಾಪಕರನ್ನು ಉಳಿಸಬೇಕು. ಅದರಲ್ಲೂ ತರಬೇತಾಗುತ್ತಲಿರುವ ಅಧ್ಯಾಪಕಿಯರ ವಿಷಯವಂತೂ ಶೋಚನೀಯವಾಗುವದು. ಮಡಿಕೇರಿಗೆ ಹೋದದ್ದೇ ಆದರೆ ಅವರಿಗೆ ಬೇಕಾದ ಬೋರ್ಡಿಂಗನ್ನು ತತ್ಕಾಲಕ್ಕೆ ನಿರ್ಮಿಸುವದಂತೂ ಆಗದ ಹೋಗದ ಮಾತು.

ಮುಂದಿನ ವರ್ಷ ಪ್ರಾರಂಭವಾದಾಗಲೇ ಬೇಕಿದ್ದರೆ ಮಡಿಕೇರಿಯಲ್ಲೇ ಕ್ಲಾಸು ತೆರೆಯಬಹುದು. ಅದರಿಂದ ಇಕ್ಕಡೆಗೂ ಹಿತವಿದೆ. ಜವಾಬ್ದಾರಿ ಹೊತ್ತವರು ಈ ಕಡೆಗೆ ಗಮನಿಸಿ ನಮ್ಮ ಸೂಚನೆಯನ್ನು ಸ್ವೀಕರಿಸಬೇಕಾಗಿ ಕೋರಿಕೆ.

'ವಿದ್ಯಾಭಿಮಾನಿ'

ವನಮಹೋತ್ಸವ.

ಕಳೆದ ಮೂರು ವರ್ಷಗಳಲ್ಲಿ ನಡೆದಂತೆ, ಪ್ರತಿ ವರ್ಷದಲ್ಲಿಯೂ ವನಮಹೋತ್ಸವವು ಇನ್ನು ನಡೆಯುವುದು. ಇದೊಂದು ಹಬ್ಬದಿಂದ ದೇಶಕ್ಕೆ ಎಷ್ಟು ಒಳ್ಳೆಯದೆನಿಸುವುದೆಂದು ಮುಂಬರುವ ಜನಾಂಗವೇ ಹೇಳಬೇಕಿದೆ.

ಕೊಡಗಿನಲ್ಲಿಯೂ ಕೂಡ ಈ ಮಹೋತ್ಸವವು ನಡೆಯುವುದು. ಮೊದಲು ಉತ್ಸಾಹದಲ್ಲಿ ಜನರು ಯಾವು ಯಾವುದೋ

ಜಾತಿ ಮರಗಳನ್ನು ನೆಟ್ಟರು. ಮುನಿಸಿಪಾಲಿಟಿಯವರು ಕೂಡ ಯಾವುದೊಂದೂ ಪ್ರಯೋಜನಕ್ಕೆ ಬಾರದ, ಕೇವಲ ಪಕ್ಕದಲ್ಲಿಯ ಕಟ್ಟಡಗಳಿಗೆ ಮುಂದೆ ಅಪಾಯತರುವಂತಹ ಫೈನ್ ಟ್ರೀ ಮತ್ತು ಗೋಲ್ಡ್ ಮೊಹರ್ ಮರಗಳನ್ನು ಹೆಚ್ಚಾಗಿ ನೆಟ್ಟಿರುವರು. ಈ ತರದ ವನಮಹೋತ್ಸವವು ಕೊಡಗಿನಲ್ಲಿ ಪ್ರಯೋಜನಕಾರಿಯಾಗಲಾರದು.

ಬದಲಾಗಿ ಎಲ್ಲಾ ವಿಧದಲ್ಲಿಯೂ ಪ್ರಯೋಜನಕಾರಿಯಾಗುವಂತಹ ಮರಗಳನ್ನು ನೆಡಲು ಪ್ರೋತ್ಸಾಹಿಸಿದರೆ, ದೇಶಕ್ಕೂ ದೇಶದ ಜನರಿಗೂ ಮುಂದಿನ ಭವಿಷ್ಯದಲ್ಲಿ ಪ್ರಯೋಜನವಾದೀತು. ಉದಾಹರಣೆಯಾಗಿ ಹೇಳುವದಾದರೆ ಗ್ರಾಮಗಳಲ್ಲಿ ಹಲಸಿನ ಮರ ಮತ್ತು ಹುಣಸೆ ಮರಗಳನ್ನು ನೆಟ್ಟಲ್ಲಿ, ಅವು ಕ್ರಮೇಣವಾಗಿ ಗ್ರಾಮವಾಸಿಗಳಿಗೆ ಯಾವ ಕಾಲದಲ್ಲಿಯೂ ಪ್ರಯೋಜನವೆನಿಸುವುದು. ಕಮ್ಯೂನಿಟಿ ಪ್ರೋಜೆಕ್ಟಿನ ಆಶ್ರಯದಲ್ಲಿಯೂ, ಬೇರೆಯಾಗಿಯೂ ಇಂತಹ ಮರಗಳ ನೆಡುವಿಕೆಗೆ ಪ್ರೋತ್ಸಾಹಕೊಟ್ಟು. ಮೂರು ವರ್ಷಗಳ ಅಂತ್ಯದಲ್ಲಿ ಹೆಚ್ಚು ಇಂತಹ ಮರಗಳನ್ನು ನೆಟ್ಟು ಪೋಷಿಸಿದ ಗ್ರಾಮಗಳಿಗೆ ಬಹುಮಾನವನ್ನು ಕೊಡುವುದರಿಂದ ಜನರ ಉತ್ಸಾಹವು ಹೆಚ್ಚಾಗಿ ಕಾರ್ಯೋರ್ಥವಾಗುವ ಸಾಧ್ಯತೆ ಇದೆ. ಇದರ ವಿಷಯ ಸಮ್ಮಂಧಪಟ್ಟ ಅಧಿಕಾರಿಗಳು ಗಮನಿಸುವರಾಗಿ ಕೋರಿಕೆ.

ಕೆ. ಯಂ. ಪಿ.

ವಾರ್ ಮೆಮೋರಿಯಲ್.

೧೯೩೯ ರಿಂದ ೧೯೪೫ ರ ವರೆಗೆ ನಡೆದ ದ್ವಿತಿಯ ಯುದ್ಧದಲ್ಲಿ ಜೀವತೆತ್ತ ಕೊಡಗಿನ ವೀರಯೋಧರ ಜ್ಞಾಪಕಕ್ಕಾಗಿ ಮಡಿಕೇರಿಯಲ್ಲಿ ಒಂದು ಸ್ಮಾರಕವನ್ನು ಕಟ್ಟಿರುವರು. ಆ ಸ್ಮಾರಕವನ್ನು ಸರಿಯಾದ ಸ್ಥಳದಲ್ಲಿ ಕಟ್ಟಲಿಲ್ಲವೆಂಬುದನ್ನು ಈಗ ಹೇಳಿ ಪ್ರಯೋಜನವಿಲ್ಲ. ಕಟ್ಟಿ ಸಿದ್ಧವಾಗಿರುವ ಅದನ್ನು ಅದರ ಯೋಗ್ಯತೆಗೆ ಸರಿಯಾಗಿ ಮುನ್ಸಿಪಾಲಿಟಿಯವರು ಇಟ್ಟುಕೊಂಡಿರುವದಿಲ್ಲ. ಅವರೊಳಗೆ ಕಾಡು ಬೆಳೆದು ಹಾಳುಬಿದ್ದ ಸ್ಥಳದಂತೆ ಅದು ಇತ್ತು. ಜನರಲ್ ಕಾರ್ಯಪ್ಪನವರು ಅದನ್ನು ಕಂಡು ತನ್ನ ಸ್ವಂತ ಆಳುಗಳನ್ನು ಬಿಟ್ಟು ಅದನ್ನು ಸರಿಪಡಿಸಿರುವರು. ಮುನ್ಸಿಪಾಲಿಟಿಯವರು ಇನ್ನಾದರೂ ಕಣ್ತೆರೆಯಬಾರದೆ ? ಜೊತೆಗೆ ಮುನ್ಸಿಪಾಲಿಟಿಯವರು ಈ ಮೆಮೋರಿಯಲ್ ಹತ್ತಿರವೇ ಕಸದ ತೊಟ್ಟಿಯೊಂದನ್ನು ಇಟ್ಟಿದ್ದು ಅದರಲ್ಲಿ ತುಂಬುವ ಕಸವು ಮೆಮೋರಿಯಲಿಗೆ ಮುನ್ಸಿಪಾಲಿಟಿಯವರು ಇತ್ತ ಪುರಸ್ಕಾರದಂತಿದೆ! ಇನ್ನಾದರೂ ಮುನ್ಸಿಪಾಲಿಟಿಯವರು ಈ ಕಡೆ ಗಮನವೀಯಬೇಕು. ಸ್ಮಾರಕಗಳು ಗೌರವದ ಸ್ಥಳಗಳು. ಅವು ಎಂದೂ ಕೊಳಚೆ ಕೊಂಪೆಗಳಂತೆ ಕೂಡಿರಬಾರದು.

ಪಟ್ಟಣಿಗ.

ಎಚ್ಚರಗೊಳ್ಳಬೇಕು.

ಕಳೆದ ವಾರದ ಪತ್ರಿಕೆಯಲ್ಲಿ ಕೊಡಗಿನಲ್ಲಿ ಬಾಣೆ ಕಂದಾಯ ಹಾಕುವ ಬಗ್ಗೆ ರಿವಿಸ್ಯು ರೂಲ್ ತಿದ್ದುಪಡಿ ಮಾಡುವ ಕರಡು ಗಜೆಟಿನಲ್ಲಿ ಪ್ರಕಟವಾಗಿದೆಯೆಂದು ಓದಿದೆವು. ಸರಕಾರವು ಈ ಮಳೆಗಾಲದಲ್ಲಿ ಇದನ್ನು ಜನರ ಅಭಿಪ್ರಾಯಕ್ಕಾಗಿ ಪ್ರಕಟಿಸಬಾರದಿತ್ತು. ಹೇಗಿದ್ದರೂ ಜನರು ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಮೀಟಿಂಗು, ಪತ್ರ, ಪ್ರತ್ಯಕ್ಷ ಭೇಟಿ ಮೊದಲಾದ ವಿಧಾನಗಳಿಂದ ಸರಕಾರಕ್ಕೆ ತಿಳಿಸಲೇ ಬೇಕು. ಮಳೆಗಾಲವೆಂದು ಕೂತರೆ ಪ್ರಯೋಜನವಿಲ್ಲ. ಕಂದಾಯ ಹಾಕಿದ ಮೇಲೆ ಎಷ್ಟು ಕೂಗಿಕೊಂಡರೂ ನಿಷ್ಫಲ. ಆದ್ದರಿಂದ ಪ್ರತಿ ಗ್ರಾಮದವರು ತಮ್ಮ ತಮ್ಮ ಗ್ರಾಮದ ಅಭಿಪ್ರಾಯಗಳನ್ನು ಒಡನೆ ಸರಕಾರಕ್ಕೆ ತಿಳಿಸುವದು ಅತ್ಯಗತ್ಯವಾಗಿದೆ.

ಗ್ರಾಮಸ್ಥ.

ರೈತನಿಗೆ ಅನ್ಯಾಯ

ಮಲಬಾರಿಗೆ ಕೊಡಗಿನಿಂದ ಭತ್ತ, ಅಕ್ಕಿ, ತವುಡು ಇತ್ಯಾದಿಗಳ ಸಾಗಾಣಿಕೆಯನ್ನು ಸರಕಾರ ನಿರೋಧಿಸಿದೆ. ಆದರೆ ಇವುಗಳ ಸಾಗಣಿಕೆ ನಿಂತಕೂಡಲೇ ಲಾಭಬಡಕರು ಹುಲ್ಲಿನ ಸಾಗಿಸುವಿಕೆಯನ್ನು ಆರಂಭಿಸಿದ್ದಾರೆ. ಲಾರಿ ಲಾರಿ ಹುಲ್ಲು ಹೋಗುತ್ತಿರುವದು ಇತ್ತೀಚೆಗೆ ಕಂಡುಬರುತ್ತಿದೆ ಸರಿಯಾಗಿ ಮಳೆಬಾರದೆ ಹಸಿಹುಲ್ಲಿಗೆ ಅಭಾವ; ಮಲಬಾರಿಗೆ ಒಣಹುಲ್ಲು ಸಾಗಿಸುವದರಿಂದ ಒಣ ಹುಲ್ಲಿಗೆ ಅಭಾವ. ಈ ರೀತಿಯ ಅಡಿಕೆ ಕತ್ತರಿಯಲ್ಲಿ ಇಂದಿನ ಕೊಡಗಿನ ರೈತನು ವೇದನೆ ಅನುಭವಿಸುತ್ತಿದ್ದಾನೆ. ನಾನಾ ತರದ ಕಷ್ಟಗಳ ಜತೆಗೆ ಇದು ಗಾಯದ ಮೇಲಿನ ಬರೆಯೆಂದರೆ ಅತಿಶಯೋಕ್ತಿಯಾಗಲಾರದು. ಅಲ್ಲದೆ ಕೊಡಗಿನ ಕೆಲ ಭಾಗಗಳಲ್ಲಿ ಹುಲ್ಲಿನ ಕ್ರಯ ವಿಪರೀತವಾಗಿದೆ. ಈ ತೆರನಾಗಿ ಇಮ್ಮಡಿಸುತ್ತಿರುವ ರೈತನ ಕಷ್ಟವನ್ನು ಪರಿಹರಿಸಲು ಸಂಬಂಧ ಪಟ್ಟ ಅಧಿಕಾರಿಗಳು ತಕ್ಷಣ ಯೋಗ್ಯ ಕಾರ್ಯಕ್ರಮ ಕೈಕೊಳ್ಳಬೇಕಾಗಿ ವಿನಂತಿ

ಕೊಡಗಿನ ನಿವಾಸಿ.

ನಮ್ಮ ಪ್ರೌಢಶಾಲಾ ಮುಖ್ಯೋಪಧ್ಯಾಯರು

ನಮ್ಮ ಪ್ರೌಢಶಾಲಾ ಮುಖ್ಯೋಪಧ್ಯಾಯರ ದರ್ಶನವು ಈಗಾಗಲೇ ಎಲ್ಲರ ಅವಗಾಹನೆಗೆ ಬಂದಿದೆ. ಪೋಷಕರಾಗಲೀ ಇತರರೇ ಆಗಲೀ ಇವರನ್ನು ಕಾಣಲು ಪುಧ್ಯಾಪ್ತವೇನಾದರೂ ಬಂದರೆ ಸಾಧ್ಯವಿಲ್ಲ. ಇವರು ಶಾಲೆಗೆ ಬರುವದು ಮಧ್ಯಾಹ್ನದ ಮೇಲೆ ಮೂರು ಯಾ ನಾಲ್ಕು ಗಂಟೆಗೆ! ಶಾಲಾ ಉಪಾಧ್ಯಾಯರುಗಳಿಗೆ ಇವರು ಯಾವ ತರದ ಮರ್ಯಾದೆಯನ್ನೂ ಕೊಡುತ್ತಿಲ್ಲ. ಪಾಪದ ಉಪಾಧ್ಯಾಯರುಗಳು ಹೇಗೂ ಸಹಿಸಿಕೊಂಡು ಹೋಗುತ್ತಿದ್ದಾರೆ. ಶಾಲೆಯಲ್ಲಿ ಮೂರು ಪಿವನುಗಳಿದ್ದಾರೆ. ಅವರಲ್ಲಿ ಇಬ್ಬರು ಸದಾ ಮುಖ್ಯೋಪಧ್ಯಾಯರ ಮನೆಗೆಲಸ ಮಾಡುತ್ತಾರೆಂಬ ವರ್ತಮಾನವಿದೆ. ಸರ್ಕ್ಯುಲೇಶನ್ ಮುಂತಾದುವನ್ನು ತರಗತಿಗಳಿಗೆ ಕೊಂಡೊಯ್ಯದೇ ಇದ್ದರೆ ವಿದ್ಯಾರ್ಥಿಗಳೇ ಹೋಗಬೇಕು.

ಶಾಲೆಯ ವಿದ್ಯಾರ್ಥಿಗಳಿಗೆ ಬಿಡು ಸಮಯದಲ್ಲಿ ವಾರ್ತೆಗಳನ್ನು ಮತ್ತು ಸಂಗೀತವನ್ನು ಕೇಳಲು ಮಹನೀಯರೊಬ್ಬರು ಒಂದು ರೇಡಿಯೋವನ್ನು ಉದಾರವಾಗಿ ಶಾಲೆಗೆ ದಾನಮಾಡಿ ನಾಲ್ಕು ವರ್ಷಗಳು ಸಂದವು. ಆದರೆ ಈ ವರ್ಷ ಇದನ್ನು ಮುಖ್ಯೋಪಧ್ಯಾಯರು ತಮ್ಮದನ್ನಾಗಿ ಮಾಡಿಕೊಂಡಿದ್ದಾರೆಂಬ ವಾರ್ತೆ ಇದೆ. ಇದು ಸರಿಯೇ?

ಇನ್ನಾದರೂ ವಿದ್ಯಾ ಇಲಾಖೆಯವರು ಇದನ್ನು ವಿಚಾರಿಸಿ ಸರಿಪಡಿಸುವರೇ? ಯಾ ಇವರನ್ನು ಈ ಶಾಲೆಯಿಂದ ವರ್ಗಮಾಡುವರೆ?

'ನೊಂದ ಪೋಷಕ'

ಸೆಂಟ್ರಲ್ ಹೈಸ್ಕೂಲ್ ಬೋರ್ಡಿಂಗ್.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ವಿದ್ಯಾರ್ಥಿ ನಿವಾಸಗೃಹದ ದುಃಸ್ಥಿತಿಯನ್ನು ವಿವರಿಸುವದು ಅಸಾಧ್ಯ. ಈ ಬೋರ್ಡಿಂಗ್ ಕಟ್ಟಿ ಅರುವತ್ತು ವರ್ಷಗಳಾಗಿರಬಹುದು. ಆದರೆ ಅದನ್ನು ಇಂದು ನೋಡಿದರೆ ಹಾಳುಬಿದ್ದ ಮನೆಯಂತಿದೆ. ಕಿಟಕಿಗೆ ಬಾಗಿಲುಗಳಿಲ್ಲ. ಬಾಗಿಲಿಗೆ ಕನ್ನಡಿಗಳಿಲ್ಲ. ಗೋಡೆಗೆ ಸುಣ್ಣ ಬಳಿದಿಲ್ಲ. ಮಾಡಿನ ಹಂಚು ಸರಿಯಾಗಿಲ್ಲ. ಹೀಗಾಗಿ ಅದರ ಅವಸ್ಥೆ ನೋಡಿದವರಿಗೇ ಗೊತ್ತು. ಪ್ರತಿ ವರ್ಷ ಮದುವೆಯ ಸಮಯದಲ್ಲಿ ಬೋರ್ಡಿಂಗನ್ನು ಬಾಡಿಗೆಗೆ ಕೊಡಲಾಗುತ್ತದೆ. ಏನೆಂದರೂ ಹತ್ತು ಮದುವೆಗಳು ಪ್ರತಿ ವರ್ಷ ಆಗುತ್ತವೆ. ಮದುವೆ ಕಳೆದ ಮೇಲೆ ಆ ಮನೆಯ ಅವಸ್ಥೆಯನ್ನು ಹೇಳ ತೀರದು. ಹಾಗಿರುವಾಗ ಕಳೆದ ಏಳೆಂಟು ವರ್ಷಗಳಿಂದ ಸುಣ್ಣ, ರಿಪೇರಿ ಕಾಣದ ಈ ಬೋರ್ಡಿಂಗಿನಲ್ಲಿ ನೂರಾರು ಮದುವೆಗಳು ಕಳೆದಿವೆ. ಹಾಗಿರುವಾಗ ಬೋರ್ಡಿಂಗಿನ ಸ್ಥಿತಿ ಹೇಗಿರಬೇಡ ?

ಬೋರ್ಡಿಂಗನ್ನು ಮದುವೆಗಳಿಗೆ ಕೊಡಲು ಅಪ್ಪಣೆ ಕೊಡುವ ಅಧಿಕಾರಿಗಳಿದ್ದಾರೆ. ಬಾಡಿಗೆಯನ್ನು ತಪ್ಪದೆ ವಸೂಲ್ಮಾಡುವ ಅಧಿಕಾರಿಗಳಿದ್ದಾರೆ. ಆದರೆ ಈ ಕಟ್ಟಡದ ರಿಪೇರಿ ಕೆಲಸ ಮಾಡಲು ಅಧಿಕಾರಿಗಳಿಲ್ಲವೇ? ಪ್ರತಿ ವರ್ಷ ಮದುವೆಗಳಿಂದ ಬಾಡಿಗೆಯಾಗಿ ಕನಿಷ್ಟ ರೂ. ೫೦೦ ಬರುತ್ತದೆ. ಒಂದು ವರ್ಷದ ಬಾಡಿಗೆಯನ್ನು ಖರ್ಚು ಮಾಡಿದರೆ ಕಟ್ಟಡದ ರಿಪೇರಿಯಾಗುವದಿಲ್ಲವೇ ? ಕಣ್ಣಿದ್ದೂ ಕುರುಡರಂತೆ, ಕಿವಿ ಇದ್ದು ಬಧಿರರಂತೆ ಅಧಿಕಾರಿಗಳು ವರ್ತಿಸಲೇಕೆ ? ಮುಂದಿನ ನಾಗರಿಕರಾದ ಇಂದಿನ ಮಕ್ಕಳು ವಾಸಿಸುವ ವಿದ್ಯಾರ್ಥಿ ನಿವಾಸದ ಸ್ಥಿತಿ ಹೀಗಿರಬೇಕೆ ? ಮಳೆಗಾಲದಲ್ಲಿ ಕಿಟಕಿ ಬಾಗಿಲ ಗಳಿಲ್ಲದ ಈ ಮನೆಯಲ್ಲಿ ವಿದ್ಯಾರ್ಥಿಗಳು ಬಹು ತೊಂದರೆಪಡುತ್ತಾರೆ. ಇನ್ನಾದರೂ ಅಧಿಕಾರಿಗಳು ಕಣ್ತೆರೆಯುವರೇ ?

ಮಕ್ಕಳ ತಂದೆ.

ಕೈಗಳಿಲ್ಲದವನ ಕಲಾಕಾಣಿಕೆ.

ಜನ್ಮಾರಭ್ಯ ಕೈಕಾಲುಗಳಿಗೆ ಬಲವಿಲ್ಲದೆ ಅಂಗಹೀನನಾಗಿರುವ ರಿಚರ್ಡ್ ಹೆಕ್ಸ್ ಎಂಬ ಕಲಾಕಾರನೊಬ್ಬನು ಹಲ್ಲುಗಳೆಡೆಯಲ್ಲಿ ಕಲಾ ಕುಂಚವನ್ನಿಟ್ಟು ಬಿಡಿಸಿದ ಸುಂದರ ಚಿತ್ರವೊಂದನ್ನು ಬ್ರಿಟಿಷ್ ರಾಣಿ ಎರಡನೆ ಎಲಿಜಬೆತ್‌ಗೆ ಪಟ್ಟಾಭಿಷೇಕದ ಕಾಣಿಕೆಯಾಗಿ ಕಳಿಸಿಕೊಟ್ಟಿದ್ದನು. ಆ ಚಿತ್ರದೊಂದಿಗೆ "ನಿಮ್ಮ ಆಳ್ವಿಕೆಯು ವಿಕ್ಟೋರಿಯಾ ಮಹಾರಾಣಿಯ ಆಳ್ವಿಕೆಯಂತೆ ಕೀರ್ತಿದಾಯಕವೂ, ಸುದೀರ್ಘವೂ ಆಗಿರಲಿ" ಎಂದೂ ಇಚ್ಛಿಸಿದ್ದಾನೆ.

ಶನಿವಾರಸಂತೆಗೆ
'ಕೊಡಗು' ಏಜೆಂಟರು,
ಶ್ರೀ ಎಸ್. ಎಸ್. ಸಿದ್ದಪ್ಪನವರು

ಕೊಡಗು ಸ್ಟೇಟ್ ಸಹಕಾರ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

— ಪ್ರ ಕ ಟ ಣೆ —

ಈ ಕೆಳಗೆ ನಮೂದಿಸಿರುವ ಬಾಕಿದಾರರುಗಳು ಮೇಲ್ಕಂಡ ಬ್ಯಾಂಕಿನಲ್ಲಿ ಅಡವಿಟ್ಟಿರುವ ಚಿನ್ನದ ಆಭರಣಗಳು ತಾ. 26-6-53ನೇ ಶುಕ್ರವಾರ ಹಗಲು 11 ಗಂಟೆಗೆ ಬ್ಯಾಂಕಿನ ಆಫೀಸಿನ ಮುಂದೆ ಬಹಿರಂಗವಾಗಿ ಹರಾಜು ಮಾಡಲ್ಪಡುವುವು. ಖಾಯಿಸ್‌ದಾರರು ಧಡದರಶಾಸ್ತಿನಿಂದ ಮಾಲುಗಳನ್ನು ಪಡೆದು ಆ ಕೂಡಲೆ ಕೂಗಿದ ಮೊಬಲಗನ್ನು ಪಾವತಿ ಮಾಡತಕ್ಕದ್ದು. ಬ್ಯಾಂಕಿಗೆ ಸಲ್ಲಬೇಕಾಗಿರುವುದಕ್ಕಿಂತ ಕಡಿಮೆ ಮೊಬಲಗಿಗೆ ಕೂಗಿದಲ್ಲಿ ಅಂಥಾ ಮಾಲುಗಳ ಹರಾಜನ್ನು ನಿಲ್ಲಿಸುವ ಅಧಿಕಾರವು ಬ್ಯಾಂಕಿಗೆ ಇರುತ್ತೆ.

ಕೆ. ಪಿ. ಅಪ್ಪಯ್ಯ,
ಪ್ರೆಸಿಡೆಂಟ್.

ತಾ. 16-6-53.

ಬಾಕಿದಾರನ ಹೆಸರು ಮತ್ತು ವಿಳಾಸ.	ಮೊಬಲಗು.
1. ಕೊಕ್ಕೆರ ಎಂ. ಕಾಳಪ್ಪ, ರುದ್ರಗುಪ್ಪೆ ಗ್ರಾಮ, ವಿರಾಜಪೇಟೆ.	ರೂ. 25-0-0
2. ಬಿ. ಬಿ. ಎಲ್ ನರಹರಿ ಸೇಟ್, C/o. ಬಿ ಎ. ಲಕ್ಷ್ಮಣ ಸೇಟ್, ಜ್ಯುವೆಲರ್ಸ್, ಮಡಿಕೇರಿ.	ರೂ. 50-0-0

ಜ್ಞಾನ ದೀಪ.

(೧)

ಗೂನು ಬೆನ್ನಿನವ ಗುಡಿಸಲಿನಂತೆಯೇ ಗುಡಿಸಲಿನೆದುರೂ ಬಗ್ಗಿಯೇ ನಿಲ್ಲಬೇಕು. ಅಂತೆಯೇ ಸಂದೇಹ ಬುದ್ಧಿಯವನಿಂದ ಸತ್ಯ, ಅಸತ್ಯಗಳೆರಡಕ್ಕೂ ಒಂದೇ ಪುರಸ್ಕಾರ.

(೨)

ಅಕ್ಕಿಯ ಕೊರತೆ ಇದ್ದರೆ ಹಸುಗೆ ಚಿಟಿ; ಆರೋಗ್ಯದ ಅಭಾವವಿದ್ದಲ್ಲಿ ಹಾಸಿಗೆ ಶಯನ, ಅನುಕೂಲತೆ ಕಡಿಮೆ ಇದ್ದಲ್ಲಿ ಮಿತವ್ಯಯ, ಅನುಭವ ಕಡಿಮೆ ಇದ್ದಲ್ಲಿ ನೂತನಗಾರಿಕೆ!

(೩)

ದುರ್ವಾಸನೆ ಇದ್ದಲ್ಲಿ ಮೂಗೊತ್ತಿ ಹಿಡಿದು ನಿಂತುಬಿಡುವದಕ್ಕಿಂತ ಮುಂದೊತ್ತಿ ಹೋಗಿಬಿಡುವದು ವಾಸಿ. ದುರ್ಜನರ ನಡುವೆ ದೂಷಿಸುತ್ತಾ ಉಳಿಯುವದಕ್ಕಿಂಥಾ ದೂರವಾಗುವದು ಉತ್ತಮ. —ನುಡಿಮುತ್ತು

ಕೊಡಗು

ತಾರೀಕು ೧೯ ಜೂನ್ ೧೯೫೩ನೇ ಶುಕ್ರವಾರ

ಎವರೆಸ್ಟ್ ಆರೋಹಣ

ಜಗತ್ತಿನಲ್ಲೇ ಅತೀ ಎತ್ತರವಾದ ಹಿಮಾಲಯದ ಎವರೆಸ್ಟ್ ಶಿಖರವನ್ನು ಹತ್ತಲು ಕಳೆದ ೩೦ ವರ್ಷಗಳಿಂದಲೂ ಪ್ರಯತ್ನ ನಡೆದಿದ್ದರೂ ಶಿಖರವನ್ನೇರುವದು ಸಾಧ್ಯವಾಗದೆ ಎವರೆಸ್ಟ್ ಶಿಖರವು ಅಜೇಯವಾದುದೆಂಬಂತೆ ನಿಂತಿತ್ತು. ಆದರೆ ಈ ವರ್ಷ ಬ್ರಿಟನಿನ ಸರ್ ಜಾನ್ ಹಂಟ್‌ರವರ ಪರ್ವತಾರೋಹಣ ಪಾರ್ಟಿಯವರು ಕಳೆದ ಎರಡು ತಿಂಗಳುಗಳಿಂದ ಈ ಶಿಖರವನ್ನು ಹತ್ತುವ ಪ್ರಯತ್ನ ಮಾಡುತ್ತಿದ್ದರು. ಉಚ್ಚವಾದ ಹಿಮಾಲಯದಲ್ಲಿ ಅಲ್ಲಲ್ಲಿ ತಮ್ಮ ಕೇಂಪುಗಳನ್ನು ಸ್ಥಾಪಿಸಿ, ಆಹಾರ ನೀರು ಮೊದಲಾದುವನ್ನು ಒದಗಿಸಿಕೊಂಡು ಗಾಳಿಯನ್ನು ಸರಬರಾಯಿ ಮಾಡುವ ಯಂತ್ರವನ್ನು ಕಟ್ಟಿಕೊಂಡು ಪ್ರಯತ್ನ ಸಾಗಿತು. ಹೀಗೆ ಒಂಭತ್ತು ಕೇಂಪುಗಳು ಸ್ಥಾಪಿಸಲ್ಪಟ್ಟು ಕಡೆಯ ಶಿಬಿರವನ್ನು ಸುಮಾರು ೨೭,೯೦೦ ಅಡಿ ಎತ್ತರದಲ್ಲಿ ಸ್ಥಾಪಿಸಲಾಗಿತ್ತು. ಅಲ್ಲಿಂದ ವಿಖ್ಯಾತ ಪರ್ವತಾರೋಹಿಗಳ ಒಂದೆರಡು ತಂಡಗಳು ಶಿಖರವನ್ನೇರಲು ಯತ್ನಿಸಿ ವಿಫಲರಾಗಿದ್ದರು. ಆದರೆ ಕಡೆಯ ಪ್ರಯತ್ನ ಮಾಡಿದ ನೇಪಾಲಿನ ಶೇರ್ಪಾ ಟೇನ್‌ಸಿಂಗ್ ಮತ್ತು ನ್ಯೂಜಿಲೇಂಡಿನ ಹಿಲರಿಯವರು ತಮ್ಮ ಯತ್ನದಲ್ಲಿ ಜಯಶೀಲರಾಗಿ ಎವರೆಸ್ಟನ್ನು ಏರಲು ಶಕ್ತರಾದರು. ಜಗತ್ತಿನ ಅತೀ ಎತ್ತರದ ಎಂದರೆ ೨೯,೦೦೨ ಅಡಿ ಎತ್ತರದ ಈ ಶಿಖರವು ಕಟ್ಟಕಡೆಗೆ ಮನುಷ್ಯನ ಪ್ರಯತ್ನಕ್ಕೆ ಮಣಿಯಬೇಕಾಯಿತು.

ಎವರೆಸ್ಟನ್ನು ಏರಿದ ಇವರಿಬ್ಬರ ಪೈಕಿ ಯಾರು ಮೊದಲು ಶಿಖರವನ್ನು ಹತ್ತಿದವರೆಂಬ ಬಗ್ಗೆ ಅಲ್ಲಲ್ಲಿ ವಿವಾದ ಕೇಳಿಬರುತ್ತದೆ. ಪೂರ್ವ ದೇಶಗಳ ಪತ್ರಿಕೆಗಳು ಟೇನ್‌ಸಿಂಗರೆಂದೂ, ಪಶ್ಚಿಮದ ಪತ್ರಿಕೆಗಳು ಹಿಲರಿಯೆಂದೂ ಹೇಳುತ್ತಿವೆ. ಆದರೆ ಈ ಪಾರ್ಟಿಯ ಮುಂದಾಳಾಗಿದ್ದ ಸರ್ ಜಾನ್ ಹಂಟ್‌ರವರು ಈ ವಿಚಾರದಲ್ಲಿ ಒಂದು ಹೇಳಿಕೆ ಹೊರಡಿಸಿ ಟೇನ್‌ಸಿಂಗರವರ ಅದ್ವಿತೀಯ ಧೈರ್ಯ, ನಿಶ್ಚಲತೆ, ಶಾರೀರಿಕ ಶಕ್ತಿ ಮೊದಲಾದುವನ್ನು ಪ್ರಶಂಸಿಸಿ ಅವರ ಅನುಭವ ಮತ್ತು ಸಾಹಸವು ವಿಶೇಷವಾದುದೆಂದೂ, ಆ ತಂಡದಲ್ಲಿ ಎರಡನೆಯವರೆಂದು ಗಣಿಸಲ್ಪಟ್ಟಿದ್ದರೂ ಕೂಡ ಶಿಖರವನ್ನೇರಿದುದರಲ್ಲಿ ಎರಡನೆಯವರೆಂದು ಹೇಳಲು ಸಾಧ್ಯವಿಲ್ಲವೆಂದೂ ಹೇಳಿರುವರು. ಹೇಗಿದ್ದರೂ ಈ ಜಯದ ಕೀರ್ತಿಯನ್ನು ಒಬ್ಬ ವ್ಯಕ್ತಿಗೆ ಕೊಡುವದರ ಬದಲು ಈ ಪಾರ್ಟಿಯಲ್ಲಿದ್ದವರೆಲ್ಲರೂ ಸಹಕರಿಸಿ ಯತ್ನಿಸಿದ ಕಾರಣವೇ ಈ ಜಯ ಲಭ್ಯವಾಯಿತೆಂದೂ ಅವರು ಹೇಳಿದ್ದಾರೆ.

ಶೇರ್ಪಾ ಟೇನ್‌ಸಿಂಗರ ಬಗ್ಗೆ ಸರ್ ಜಾನ್ ಹಂಟ್‌ರವರ ಪ್ರಶಂಸೆ, ಮತ್ತೆ ಟೇನ್‌ಸಿಂಗರಿಗೆ ಈ ಮೊದಲಿನ ಹನ್ನೊಂದು ಪ್ರಯತ್ನಗಳ ಪೈಕಿ ಒಂಭತ್ತರಲ್ಲಿ ಭಾಗವಹಿಸಿದ ಅನುಭವ ಮೊದಲಾದುವುಗಳಿಂದ ಹೇಳುವದಾದರೆ ಟೇನ್‌ಸಿಂಗರು ಎವರೆಸ್ಟನ್ನು ಪ್ರಥಮ ಏರಿರಬೇಕು. ಅವರೂ ಎವರೆಸ್ಟನ್ನು ಏರಿದ ಕೀರ್ತಿ ಸರ್ ಜಾನರ ಇಡೀ ಪಾರ್ಟಿಗೇ ಸಲ್ಲಬೇಕು. ಈ ಪಾರ್ಟಿಯಲ್ಲಿ ಭಾರತೀಯರೊಬ್ಬರಾದ ಟೇನ್‌ಸಿಂಗರೂ ಅವರ ಶೇರ್ಪಾ ಕೆಲಸಗಾರರೂ ಸೇರಿ ಅವರೇ ಎವರೆಸ್ಟನ್ನು ಹತ್ತಲು ಶಕ್ತರಾದರೆಂಬುದು ಭಾರತೀಯರೆಲ್ಲರಿಗೆ ಕೀರ್ತಿದಾಯಕವಾದ ವಿಚಾರ.

ಟೇನ್‌ಸಿಂಗರ ಸಾಹಸ, ಧೈರ್ಯಗಳನ್ನು ಗಮನಿಸಿ ಇಂಗ್ಲೆಂಡಿನ ಮಹಾರಾಣಿಯವರು ಎಲಿಝಬೆತ್ ಮೆಡಲನ್ನೂ, ನೇಪಾಲ್ ಸರಕಾರವು 'ಸ್ಟಾರ್ ಆಫ್ ನೇಪಾಲ್' ಗೌರವವನ್ನೂ ಕೊಡಲು ನಿರ್ಧರಿಸಿರುವದು ಯೋಗ್ಯವಾಗಿದೆ.

ವರ್ತಮಾನ.

ಕೊಡಗು ಸ್ಟೇಟ್ ಸಹಕಾರ ಬ್ಯಾಂಕಿನ ವಾರ್ಷಿಕ ಮಹಾಸಭೆ ಮತ್ತು ಪ್ರಾಂತೀಕ ಸಹಕಾರ ಸಮ್ಮೇಳನ ಇವುಗಳನ್ನು ಕಳೆದ ತಿಂಗಳ ಆಖೈರಿನ ಒಳಗೆ ಜರಗಿಸಬೇಕೆಂದು ಹಿಂದೆ ತೀರ್ಮಾನವಾಗಿದ್ದರೂ ಬ್ಯಾಂಕಿನ ೧೯೫೨ನೇ ಜೂನ್ ೩೦ಕ್ಕೆ ಅಂತ್ಯವಾದ ೧೯೫೧–೫೨ನೇ ಸಂವತ್ಸರದ ಲೆಕ್ಕಗಳ ಪರಿಶೋಧನೆಯು ಇನ್ನೂ ಪೂರೈಸದ್ದರಿಂದಲೂ ಮತ್ತು ಮಳೆಯು ಪ್ರಾರಂಭವಾದದರಿಂದಲೂ ಮಹಾ ಸಭೆಯನ್ನು ಮಾತ್ರ ಬರುವ ಅಗಸ್ಟ್ ಅಥವಾ ಸೆಪ್ಟೆಂಬರ್ ತಿಂಗಳಲ್ಲಿ ಜರಗಿಸಲಾಗುವುದೆಂದೂ, ಹಾಗೆ ಮುಂದರಿಸುವುದಕ್ಕೆ ರಿಜಿಸ್ಟ್ರಾರರವರ ಮಂಜೂರಾತಿಯನ್ನು ಕೇಳುತ್ತಾರೆಂದೂ, ಸಮ್ಮೇಳನವನ್ನು ೧೯೫೩-೫೪ರಲ್ಲಿ ಜರುಗಿಸಲಾಗುವುದೆಂದೂ ತಿಳಿಯುತ್ತೇವೆ.

ವೀರಾಜಪೇಟೆ ಕಡಂಗಮುರೂರು ಗ್ರಾಮದ ಶ್ರೀ. ಮಂಡೇಪಂಡ ಮುದ್ದಪ್ಪನವರ ದನಗಳ ಜೊತೆಯಲ್ಲಿ ಒಂದು ಎತ್ತು ಕೆಲವು ದಿನಗಳಿಂದ ಸೇರಿಕೊಂಡಿದೆಯೆಂದೂ ತಕ್ಕ ರುಜುವಾತು ಕೊಟ್ಟು ಮಾಲಿಕರು ಹೊತಕೊಂಡು ಹೋಗಬಹುದಾಗಿಯೂ ತಿಳಿಸುತ್ತಾರೆ.

ಕಳೆದ ಏಪ್ರಿಲ್ ಮೇ ತಿಂಗಳಲ್ಲಿ ನಡೆದ ಮೈಸೂರು ವಿಶ್ವವಿದ್ಯಾಲಯದ ಎಂ. ಬಿ. ಬಿ. ಎಸ್ ಪರೀಕ್ಷೆಯಲ್ಲಿ ಶ್ರೀಮತಿ ಚರಿಯಪಂಡ ಬೋಳ್ಳಮ್ಮ ಮಾದಯ್ಯನವರೂ ಬಿ. ಎಸ್. ಸಿ ಪರೀಕ್ಷೆಯಲ್ಲಿ ಶ್ರೀ. ಅಮ್ಮಟಂಡ ಎ. ಪೂವಯ್ಯ ಮತ್ತು ಎನ್. ಎಸ್. ನಾರಾಯಣನವರೂ ಬಿ. ಎ. ಪರೀಕ್ಷೆಯಲ್ಲಿ ಶ್ರೀ. ಬಶೀರ್ ಅಹಮ್ಮದ್‌ರವರೂ ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ಶ್ರೀ. ಕೊತಂಡ ಪಿ ಉತ್ತಪ್ಪ (ಪ್ರಥಮ ಶ್ರೇಣಿಯಲ್ಲಿ) ನವರೂ ತೇರ್ಗಡೆಯಾಗಿರುವರು.

ಮದ್ರಾಸು ವಿಶ್ವವಿದ್ಯಾಲಯದ ಬಿ. ಕಾಂ. ಪರೀಕ್ಷೆಯಲ್ಲಿ ಶ್ರೀ. ಮಾದೇಟಿರ ಪೂಣಚ್ಚ ಮತ್ತು ಟಿ. ಗೋಪಾಲಕೃಷ್ಣಾಚಾರ್‌ರವರೂ ಬಿ. ಎ. (ಆನರ್ಸ್) ಪರೀಕ್ಷೆಯಲ್ಲಿ ಶ್ರೀ. ಕೆ. ಕ. ಕುಟ್ಟಪ್ಪ ಮತ್ತು ಎನ್. ಎಸ್. ಚಿಣ್ಣಪ್ಪನವರೂ, ಬಿ. ಎ. ಪರೀಕ್ಷೆಯಲ್ಲಿ ಶ್ರೀ. ಕೆ. ಕೆ. ಅನಂತರವರೂ, ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ಶ್ರೀ ಕೆ. ಟಿ. ಪಳಂಗಪ್ಪ ಎಸ್. ಶ್ರೀಪತಿ, ಎನ್. ಎಸ್. ನಂಜಪ್ಪ, ಮತ್ತು ಎನ್. ಎ. ಸೀತಮ್ಮ ಇವರುಗಳೂ ತೇರ್ಗಡೆಯಾಗಿರುವರು.

ಮಡಿಕೇರಿ ಹೈಸ್ಕೂಲಿನ ವಿದ್ಯಾರ್ಥಿಗಳ ಒಕ್ಕೂಟದ ಈ ನವವರ್ಷದ ಉದ್ಘಾಟನಾ ಭಾಷಣವನ್ನು ಶ್ರೀಮಾನ್ ಸೂರ್ಯನಾರಾಯಣರಾವ್, ದಕ್ಷಿಣ ಕೊಡಗಿನ ಡೆಪ್ಯುಟಿ ಇನ್‌ಸ್ಪೆಕ್ಟರ್ ಇವರು ತಾ. ೧೫–೬–೫೩ ರ ಅಪರಾಹ್ನ ಮಾಡಿದರು.

ಶ್ರೀಮಂಗಲನಾಡು ಮಂಚಳ್ಳಿ ಗ್ರಾಮದ ಶ್ರೀ ಚೋಡುಮಾಡ ಕುಟ್ಟಪ್ಪನವರು ಬೆಟ್ಟಕ್ಕೆ ಮೇಯಲು ಹೋಗುತಿದ್ದ ಜಾನುವಾರಗಳನ್ನು ಹೊಡೆದು ಕೊಲ್ಲುತಿದ್ದ ಒಂದು ಕರೀ ಹುಲಿಯನ್ನು ತಾ. ೮–೬–೫೩ ರಲ್ಲಿ ಗುಂಡಿಕ್ಕಿ ಕೊಂದು ನೆರೆಯವರ ದನಕರುಗಳಿಗೆ ಉಪಕಾರ ಮಾಡಿರುತ್ತಾರೆ.

ತಾ. ೯–೬–೫೩ ರಲ್ಲು ಹೊದ್ದೂರು ವಯಸ್ಕರ ಶಿಕ್ಷಣ ಶಾಲಾ ವಿದ್ಯಾರ್ಥಿಗಳ ಪ್ರಥಮ ಪರೀಕ್ಷೆ ನಡೆಯಿತು. ಶಾಲೆಯಲ್ಲಿ ಒಟ್ಟು ೧೮ ವಯಸ್ಕರು ಅಕ್ಷರಗಳನ್ನು ಕಲಿಯುತ್ತಿದ್ದರು. ಅವರೆಲ್ಲರು ತೇರ್ಗಡೆಯಾಗಿರುತ್ತಾರೆ. ತಾರೀಕು ೧೦–೬–೫೩ ರಲ್ಲಿ ವಯಸ್ಕರ ಶಿಕ್ಷಣದ ವ್ಯವಸ್ಥಾಪಕರು ಹೊದ್ದೂರು ಶಾಲೆಯಲ್ಲಿ ವಯಸ್ಕರ ಶಿಕ್ಷಣದ ಪರವಾಗಿ ಒಂದು ಚಲನ ಚಿತ್ರ ಪ್ರದರ್ಶನವನ್ನು ಏರ್ಪಡಿಸಿದ್ದರು.

ತಾರೀಕು ೩೧–೫–೫೩ ನೇ ಆದಿತ್ಯವಾರ ದಿನ ಅಪರಾಹ್ನ ೪ ಗಂಟೆಗೆ ಬಿರ್ನಾಣಿ ಹೊಸ ಶಾಲಾ ಕಟ್ಟಡದ ಪ್ರವೇಶೋತ್ಸವ ಸಂದರ್ಭದಲ್ಲಿ ಗೃಹಮಂತ್ರಿಯವರಿಂದ ಧ್ವಜಾರೋಹಣವೂ, ಮುಖ್ಯಮಂತ್ರಿಯವರಿಂದ ಕಟ್ಟಡ ತೆರೆಯುವ ಸಮಾರಂಭವೂ ನಡೆದ ನಂತರ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ನೆರೆಯಿತು. ಶಾಸನ ಸಭಾಧ್ಯಕ್ಷರು, ಸ್ವಾತಂತ್ರ ಮತ್ತು ಸ್ವಾವಲಂಭನದ ವಿಷಯ ಭಾಷಣ ಮಾಡಿದರು. ಅಸಿಸ್ಟೆಂಟ್ ಕಮಿಷನರ್ ಜಿಲ್ಲಾ ವಿದ್ಯಾಧಿಕಾರಿ, ಸಹಕಾರ ಸಂಘಗಳ ರಿಜಿಸ್ಟ್ರಾರ್ ಮತ್ತು ಶಾಸನ ಸಭಾ ಸದಸ್ಯರಾದ ಶ್ರೀ. ಕೆ. ಪಿ. ಕರುಂಬಯ್ಯನವರೂ ಹಾಜರಿದ್ದರು.

ವ್ಯವಸಾಯ ಇಲಾಖಾ ಆಫೀಸಿನ ಹೆಡ್ ಗುಮಾಸ್ತರಾಗಿದ್ದ ಶ್ರೀ. ಶೇಷಗಿರಿಯವರನ್ನು ಕೊಡಗು ಸೆಕ್ರೆಟರಿಯೇಟಿಗೆ ಸಂಬಂಧಿಸಿ ಸ್ಪೆಷಲ್ ಆಫೀಸರಾಗಿ ರೂ. ೧೪೦–೨೩೦ ರ ಸ್ಕೇಲಿನಲ್ಲಿ ನೇಮಿಸಿರುವರು.

ಕೊಡಗಿನ ಸರಕಾರದ ಮುಖ್ಯ ಸೆಕ್ರೆಟರಿಯಾಗಿ ಶಿವಮೊಗ್ಗ ಜಿಲೆಯ ಜಿಲ್ಲಾ ಕಮಿಷನರಾದ ಶ್ರೀ. ಎನ್. ಎಸ್. ರಾಮಚಂದ್ರ ಇವರನ್ನು ಒಂದು ವರ್ಷದ ಮಟ್ಟಿಗೆ ನೇಮಿಸಲಾಗಿದೆಯೆಂದು ಗೊತ್ತಾಗಿದೆ.

ಕಾಫಿ ಪ್ಲಾಂಟರುಗಳು ಪ್ರತಿ ಪಾಯಿಂಟಿಗೆ ಯಾವ ದರದಲ್ಲಿ ಕೊಡಗಿನಲ್ಲಿ ಕಾಫಿ ವ್ಯವಸಾಯಕ್ಕೆ ಖರ್ಚು ಮಾಡುತ್ತಿರುವರೆಂಬುದನ್ನು ಪರಿಶೀಲಿಸಿ ತಿಳಿಯಲು ಇಂಡಿಯಾ ಸರಕಾರದ ಆಫೀಸರೊಬ್ಬರಾದ ಶ್ರೀ. ನಾಗಸ್ವಾಮಿಯವರು ಕೊಡಗಿಗೆ ಬಂದಿರುವರು ಈ ತಿಂಗಳ ಅಂತ್ಯದ ವರೆಗೆ ಅವರು ತಮ್ಮ ಪರಿಶೀಲನೆ ನಡೆಸಿ ಕೇಂದ್ರ ಸರಕಾರಕ್ಕೆ ವರದಿ ಮಾಡಲಿರುವರು.

ಟೇನ್‌ಸಿಂಗರಿಗೆ ಗೌರವ

ಅಜೇಯ ಗೌರಿಶಂಕರ ಶಿಖರವನ್ನು ನ್ಯೂಜಿಲೆಂಡಿನ ಹಿಲರಿಯವರೊನೆ ಮೆಟ್ಟಿದ ಶೆರ್ಪಾ ಟೇನ್‌ಸಿಂಗರಿಗೆ 'ಅಪೂರ್ವ ಧೈರ್ಯ ಸಾಹಸ'ಗಳ ಬಗ್ಗೆ ಒಂದು ವಿಶೇಷ ಪದಕ ಕೊಟ್ಟು ಗೌರವಿಸಲು ಭಾರತ ಸರಕಾರವು ನಿರ್ಣಯಿಸಿರುವದು. ಜುಲೈ ತಿಂಗಳಲ್ಲಿ ಈ ಬಗ್ಗೆ ಒಂದು ಸಾರ್ವಜನಿಕ ಕೂಟವು ಜರಗಲಿದ್ದು, ಭಾರತದ ಅಧ್ಯಕ್ಷರು ಗೌರವ ಪದಕವನ್ನು ಟೇನ್‌ಸಿಂಗರಿಗೆ ಅರ್ಪಿಸಲಿರುವರು.

ಈ ಬಾಣೆ ಕಂದಾಯ ಸಮರ್ಪಕವಾದುದಲ್ಲ

ಲೇ:— ಶ್ರೀ ಪಿ. ಜಿ. ಐಯ್ಯಪ್ಪ, ಮಡಿಕೇರಿ.

ಜೂನ್ ತಿಂಗಳ ಕೊಡಗು ಗಜೆಟ್ಟಿನಲ್ಲಿ, ಸರಕಾರದವರು ಕೊಡಗಿನಲ್ಲಿ ಬಾಣೆ ಜಾಗಕ್ಕೆ ಕಂದಾಯ ವಿಧಿಸುವ ದೃಷ್ಟಿಯಿಂದ, ಕೊಡಗು ರೆವಿನ್ಯೂ ರೆಗ್ಯುಲೇಶನ್‌ನಲ್ಲಿ ಅವಶ್ಯವಿರುವ ತಿದ್ದುಪಡಿಯನ್ನು ಮಾಡಲು ಕರಡು ನಿಬಂಧನೆಯನ್ನು ತಯಾರಿಸಿ, ಇದಕ್ಕೆ ದೇಶಸ್ಥರ ವಿರೋಧ ಅಥವಾ ಸಲಹೆಗಳೇನಾದರೂ ಇದ್ದರೆ ಅಂತಹ ವಿರೋಧ ಯಾ ಸಲಹೆಗಳನ್ನು ಚೀಫ್ ಸೆಕ್ರೆಟರಿಯವರಿಗೆ, ಕೊ. ಅ. ಕಮಿಶನರ ಮುಖೇನ, ಈ ಬಾಗಾಯಿತು ೬೦ ದಿವಸಗಳ ಒಳಗೆ ಕಳುಹಿಸಿದರೆ, ಅಂತಹ ಸಲಹೆ ಯಾ ವಿರೋಧಗಳನ್ನು ವಿಮರ್ಶಿಸಲಾಗುವುದೆಂದು ಪ್ರಕಟಿಸಿದುದನ್ನು ನೋಡಿದೆನು.

ನಮ್ಮ ವಿಧಾಯಕ ಸಭೆಯ ಮೀಟಿಂಗು ಮಾರ್ಚಿ ತಿಂಗಳಲ್ಲೇ ನಡೆದಿದೆ. ಆ ಸಭೆಯಲ್ಲೇ ಬಾಣೆಗೆ ಕಂದಾಯ ಹಾಕಬೇಕೆಂಬ ಸೂಚನೆಯನ್ನು ಕಳೆದ ಬಜೆಟ್ಟಿನಲ್ಲೇ, ಸರಕಾರದವರು ಸೂಚಿಸಿದ್ದರೂ, ಸಹ ಈ ಕರಡು ನಿಬಂಧನೆಯನ್ನು ರೈತರಿಗೆಲ್ಲಾ ನಿಂತು ನೀರು ಕುಡಿಯಲು ಸಹ ಸಮಯವಿಲ್ಲದಿರುವ ಈ ವೇಳೆಯಲ್ಲಿ ಪ್ರಕಟಿಸಿ, ಜನರ ಅಭಿಪ್ರಾಯವನ್ನು ಇನ್ನು ೨ ತಿಂಗಳುಗಳಲ್ಲಿ ಕಳುಹಿಸಿಕೊಡಬೇಕೆಂದು ಕೇಳಿದ್ದಕ್ಕೆ ಬಹು ವಿಷಾದಿಸಬೇಕಾಗಿದೆ. ಹಳೆ ಸರಕಾರದವರು ಹೀಗೆ ಮಾಡಿದ್ದರೆ ಅವರಲ್ಲಿ ವಿಶೇಷವೇನೂ ಇರಲಿಲ್ಲ. ಯಾಕೆಂದರೆ, ಆಗಿನ ಸರಕಾರವು ಜನರ ಹಿತದೃಷ್ಟಿ ಇಲ್ಲದ ಬೇಜವಾಬ್ದಾರಿ ಸರಕಾರವಾಗಿತ್ತು. ಆದರೆ ನಮ್ಮ ಈಗಿನ ಸರಕಾರವಾದರೋ, ಜನರಿಂದ, ಜನರ ಹಿತಕ್ಕಾಗಿ, ಜನರು ಚುನಾಯಿಸಿದ ಮುಂದಾಳುಗಳಿಂದ ರಚಿಸಲ್ಪಟ್ಟು, ಆಳುವ ಸರಕಾರವಾಗಿದ್ದರೂ ಸಹ ಹಳೆ ಬೇಜವಾಬ್ದಾರಿ ಸರಕಾರದಂತೆ, ವರ್ತಿಸುವುದು ನಿಜವಾಗಿಯೂ ಶೋಚನೀಯವೆಂದೇ ಹೇಳಬೇಕಾಗಿದೆ. ಯಾತಕ್ಕೆಂದರೆ, ಈ ಕಾನೂನು ಕೊಡಗಿನ ಎಲ್ಲಾ ರೈತರಿಗೂ ಅನ್ವಯಿಸುತ್ತದೆ. ಹಾಗಿರುವಾಗ್ಯೆ, ಪ್ರತಿಯೊಬ್ಬನಿಗೂ ಈ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ಕೊಡುವುದಕ್ಕೆ ತಕ್ಕ ಅನು ಮತ್ತು ಸಮಯವನ್ನು ಕಲ್ಪಿಸಿಕೊಡುವುದು ಜನಜವಾಬ್ದಾರಿಯನ್ನು ಪಡೆದ ಸರಕಾರದ ಮುಖ್ಯ ಧರ್ಮವೆಂದು ಹೇಳಬೇಕಾಗಿಲ್ಲ. ಹಾಗಿರುವಾಗ್ಯೆ ಪ್ರತಿಯೊಬ್ಬ ರೈತನಿಗೆ, ವಾರಕ್ಕೊಮ್ಮೆ ಸಂತೆಗೆ ಹೋಗಲಿಕ್ಕೂ ಸಹ ಸಮಯವಿಲ್ಲದಿರುವ ಈ ಸಮಯದಲ್ಲಿ ಇಂತಹ ವಿಷಯವನ್ನು ಸರಕಾರವು ತೆಗೆದುಕೊಂಡದ್ದು ಎಲ್ಲರಲ್ಲೂ ವ್ಯಸನವನ್ನುಂಟುಮಾಡದಿರಲಿಕ್ಕಿಲ್ಲ. ಎರಡನೆಯದಾಗಿ, ಸರಕಾರದವರು ನಿಜವಾಗಿಯೂ ಜನರ ಅಭಿಪ್ರಾಯವನ್ನು ತಿಳಿಯಬೇಕೆಂಬ ಕುತೂಹಲಪೂರ್ಣರಾಗಿದ್ದರೆ ಈ ಸಂಗತಿಯನ್ನು ಸ್ಥಳೀಯ ಪತ್ರಿಕೆಗಳಲ್ಲಿ ಕನ್ನಡದಲ್ಲಿ ಪ್ರಕಟಿಸುವುದನ್ನು ಬಿಟ್ಟು, ಬರಿ ಗಜೆಟಿನಲ್ಲಿ ಇಂಗ್ಲೀಷಿನಲ್ಲಿ ಪ್ರಕಟಿಸಿದುದರ ಅರ್ಥವೇನು? ಈ ಹೊಸ ಕಂದಾಯ ವಿಧಿಸುವಿಕೆಯು ಬಹಳ ಜನರಿಗೆ ಅನ್ವಯಿಸುವುದರಿಂದ ಇದರ ಅವಧಿಯನ್ನು ನಾಟಿ ಕೆಲಸ ತೀರಿ ಎರಡು ತಿಂಗಳ ವರೆಗೆ ಮುಂದುವರಿಸುವುದು ಎಲ್ಲರ ಹಿತದೃಷ್ಟಿಯಿಂದಲೂ ಒಳ್ಳೆಯದಾಗಿ ಕಾಣುವುದರಿಂದ, ಮಾನ್ಯ ಸರಕಾರದವರು ಈ ಕೋರಿಕೆಯನ್ನು ನಡೆಸಿಯಾರೆಂದು ಆಶಿಸುತ್ತೇನೆ.

ಈಗ ಪ್ರಕಟಿಸಿರುವ ಸರಕಾರದವರ ಕರಡು ನಿಬಂಧನೆಯನ್ನು ಎಂದರೆ 'ರೂಢಿಸದಿರುವ ಬಾಣೆ ಜಾಗಕ್ಕೆ ಏಕರೆಗೆ ನಾಲ್ಕಾಣೆಯಂತೆ ಕಂದಾಯ ವಿಧಿಸಲಾಗುವುದು' ಎಂಬ ಸರಕಾರದವರ ಈ ಅಭಿಪ್ರಾಯಕ್ಕೆ ತಮ್ಮ ವಿರೋಧ, ಯಾ ಪತ್ಯಾಶೆಯನ್ನು ಕೊಡುವವರು, ಇದನ್ನು ಎಲ್ಲಾ ದೃಷ್ಟಿಯಿಂದಲೂ ಕೂಲಂಕುಷವಾಗಿ ಪರೀಕ್ಷಿಸಿಯೇ ಕೊಡಬೇಕಾಗಿದೆ. ಈ ನಾನಾ ದೃಷ್ಟಿಗಳು ಯಾವುವೆಂದರೆ (೧) ಕಾನೂನಿನ (೨) ನ್ಯಾಯದ (೩) ಸರಕಾರದ (೪) ಜನರ ಈ ಎಲ್ಲಾ ದೃಷ್ಟಿಕೋನಗಳಿಂದ ಅಜಮಾಯಿಸಿದಲ್ಲಿ, ಸರಕಾರದವರ ಈ ಯೋಜನೆಗೆ ಬೆಂಬಲವೀಯಲು ಯಾವುದೊಂದೂ ಕಾರಣ ನನಗೆ ಕಂಡುಬರುವುದಿಲ್ಲ. ಆದುದರಿಂದ ನನ್ನ ವಿರೋಧವನ್ನು ಸರಕಾರದವರ ಮುಂದೆ ಈ ಪತ್ರಿಕೆ ಮುಖೇನ ಪ್ರಕಟಿಸಿರುತ್ತೇನೆ. ಪತ್ರಿಕೆ ಮುಖೇನ ಪ್ರಕಟಿಸಲು ಕಾರಣವಿಷ್ಟೆ. ನಮ್ಮ ಬಜೆಟ್ ಮೀಟಿಂಗಿನಲ್ಲಿ ಸರಕಾರದವರು ಈ ಕಂದಾಯ ವಿಧಿಸುವ ಅಭಿಪ್ರಾಯವನ್ನು ಸೂಚಿಸಿದ ನಂತರ ಅನೇಕ ಮಹನೀಯರು ಈ ವಿಷಯವನ್ನು ಕುರಿತು ನನ್ನ ಅಭಿಪ್ರಾಯವನ್ನು ಸ್ಥಳೀಯ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಕೇಳಿಕೊಂಡಿದ್ದರು. ಆದರೆ ಸರಕಾರದವರು ಈ ವಿಷಯ ಮುಂದುವರಿಸುವುದಿಲ್ಲವೆಂಬುದಾಗಿ ಕೆಲವರು ನನಗೆ ಹೇಳಿದ್ದ ಪ್ರಕಾರ ನಾನು ಅವರ ಪ್ರೀತಿಯಂತೆ ಅವರ ಕೋರಿಕೆಗಳನ್ನು ಈ ವರೆಗೆ ನಡೆಸಲಿಲ್ಲ. ಈಗ ಸರಕಾರದವರು ತಮ್ಮ ಅಭಿಪ್ರಾಯವನ್ನು ಪ್ರಕಟಿಸಿ, ದೇಶಸ್ಥರ ವಿರೋಧ ಸೂಚನೆಗಳೇನಾದರೂ ಇದ್ದರೆ, ಅದನ್ನು ಕೊಡಬೇಕೆಂದು ಕೇಳಿಕೊಂಡದ್ದರಿಂದ ಸರಕಾರಕ್ಕೂ ನನ್ನ ಸ್ನೇಹಿತರಿಗೂ ನನ್ನ ಅಭಿಪ್ರಾಯವನ್ನು ಒಟ್ಟಿಗೆ ಕೊಡುವ ದೃಷ್ಟಿಯಿಂದ ನಾನು ಹೀಗೆ ಪ್ರಕಟಿಸುವುದಾಗಿದೆ.

ಈ ವಿಷಯವನ್ನು ಕಾನೂನಿನ ದೃಷ್ಟಿಯಿಂದ ಅಜಮಾಯಿಸಿದಲ್ಲಿ, ನನಗೆ ಈ ಸಂಶಯಗಳು ತಲೆದೋರುತ್ತವೆ. ೧೯೫೧ನೇ ಇಸವಿಯ ಗವರ್ನಮೆಂಟ್ ಆಫ್ ಪಾರ್ಟ್ ಸಿ ಸ್ಟೇಟ್ಸ್ ಆಕ್ಟ್ ಜಾರಿಗೆ ಬಂದ ಮೇಲೆ ಈ ತರದ ಸಮರಿ ಕಾನೂನು ಮಾಡುವ ಅಧಿಕಾರವು ಈ ಕೊಡಗು ರೆವಿನ್ಯೂ ರೆಗ್ಯುಲೇಶನ್ ಮೇರೆ ಚೀಫ್ ಕಮಿಷನರಿಗಾಗಲಿ ಅಥವಾ ಇನ್ನಿತರ ರೆವಿನ್ಯೂ ಆಫೀಸರಿಗಾಗಲೀ ಇದೆಯೇ ಎಂಬುದು ಸಂಶಯಾಸ್ಪದ ವಿಷಯ. ಒಂದು ವೇಳೆ ಅಂಥಾ ಅಧಿಕಾರವಿದೆಯೆಂದಾದರೂ ಸಹ, ರೆವಿನ್ಯೂ ರೆಗ್ಯುಲೇಶನ್ ೫೫ ಮತ್ತು (೧) ಎಫ್ ಪ್ರಕಾರ ಈ ಕರಡು ನಿಬಂಧನೆಯನ್ನು ಮಾಡಲು ಅವರಿಗೆ ಅಧಿಕಾರವಿಲ್ಲವೆಂಬೇ ನನ್ನ ಅಭಿಪ್ರಾಯ. ಏಕೆಂದರೆ ಸೆಕ್ಷನ್ ೫೫ರ ಮೇರೆ ಚೀಫ್ ಕಮಿಷನರಿಗೆ 'ಸ್ಪೆಷಲ್ ಎಸೆಸ್‌ಮೆಂಟ್' ವಿಶೇಷ ಕಂದಾಯ ಯಾವ ಯಾವ ಸಂದರ್ಭಗಳಲ್ಲಿ ಮಾಡುವ ಅಧಿಕಾರವಿದೆಯೆಂಬುದು ಸೂಚಿಸಲಾಗಿದೆ. ಈ ವರೆಗೆ ವಿನಾಯಿಸಲ್ಪಟ್ಟಿದ್ದ ಬಾಣೆಗೆ ಕಂದಾಯ ವಿಧಿಸುವವು ವಿಶೇಷ ಕಂದಾಯವಲ್ಲ. ಇದು ಒಂದು ಹೊಸ ಕಂದಾಯ. ಆದುದರಿಂದ ಈ ಸೆಕ್ಷನ್, ಈ ಕರಡು ನಿಬಂಧನೆಗೆ ಅನ್ವಯಿಸುವದಿಲ್ಲ. ಹಾಗೆಯೇ ಸೆಕ್ಷನ್ ೧೪೩ (೧) ಎಫ್ ಸಹ ಅನ್ವಯಿಸುವದಿಲ್ಲ. ಏಕೆಂದರೆ ಈ ಸೆಕ್ಷನ್ ಮೇರೆ ಮಾಡಬಹುದಾದ ಚೀಫ್ ಕಮಿಷನರ್ ಸಾಹೇಬರ ರೂಲ್‌ಗಳು ರೆವಿನ್ಯೂ ರೆಗ್ಯುಲೇಶನಿನ ಇತರ ಸೆಕ್ಷನ್‌ಗಳಿಗೆ ಒಳಪಟ್ಟಿರಬೇಕೇ ಹೊರತು ವಿರೋಧವಾಗಿರಕೂಡದು. (The Chief Commissioner may.... make Rules, not inconsistant with this regulation) ಎಂದಿದೆ. ರೆವಿನ್ಯೂ ರೆಗ್ಯುಲೇಶನಿನಲ್ಲಿ ಬಾಣೆ ಎಂದರೆ (Forest land granted for the service of the holding of wet land to which it is alloted, to be held free of revenue by the cultivator fo grazing etc.,) ಎಂದಿದೆ. ಆದುದರಿಂದ ಬಾಣೆ ಎಂದರೆ ಕಂದಾಯವಿಲ್ಲದ ಜಾಗ ಯಾ ಆಸ್ತಿ ಎಂದರ್ಥವಾಯ್ತು. ಹಾಗಿರುವಾಗ ಚೀಫ್ ಕಮಿಷನರು ಇದರ ವಿರೋಧವಾಗಿ ಬಾಣೆಗೆ ಕಂದಾಯ ವಿಧಿಸುವ ಒಂದು ರೂಲನ್ನು ಮೇಲ್ಕಂಡ ಸೆಕ್ಷನ್ ೧೪೩ರ ಪ್ರಕಾರ ಮಾಡಲು ಸಾಧ್ಯವಿಲ್ಲ. ಅಂಥಾ ರೂಲ್ ರೆವಿನ್ಯೂ ರೆಗ್ಯುಲೇಶನಿನ ಇತರ ಸೆಕ್ಷನುಗಳಿಗೆ ಇನ್‌ಕನ್ಸಿಸ್ಟೆಂಟ್ (Inconsistant) ಯಾ ವಿರೋಧವಾಗುವುದರಿಂದ ಅಂಥಾ ರೂಲ್ "ಅಲ್ಟ್ರಾವೈರ್ಸ್" (Ultravires) ಕಾನೂನಿಗೆ ಅತೀತವಾದುದು ಆಗುತ್ತೆ.

ಎರಡನೇಯದಾಗಿ ನ್ಯಾಯದ ದೃಷ್ಟಿಯಿಂದ ಅಜಮಾಯಿಸಿದರೂ ಸಹ ಸರಕಾರದ ಈ ಅಭಿಪ್ರಾಯಕ್ಕೆ ಜನರಿಂದ ಒಪ್ಪಿಗೆ ಕೊಡಲು ಯೋಗ್ಯವಾದುದೆಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಸರಕಾರದವರು ಯಾವಾಗಲೂ ಒಂದು ಹೊಸ ಕಾನೂನು ಮಾಡಲಿಕ್ಕೆ ಕಾರಣಗಳನ್ನು (Objects and reasons)ನ್ನು ಜನರ ಅವಗಾಹನೆಗಾಗಿ ಪ್ರಕಟಿಸುವದು ವಾಡಿಕೆಯಾದ ಸಂಗತಿಯಾಗಿದೆ. ಆದರೆ ಇಲ್ಲಿ ಅಂಥಾ ಗುರಿ ಮತ್ತು ಕಾರಣಗಳನ್ನು ಏನೂ ಕೊಟ್ಟಿರುವುದಿಲ್ಲ. ಆದರೆ ಬಜೆಟ್ ಅಧಿವೇಶನದಲ್ಲಿ ಚೀಫ್ ಮಿನಿಸ್ಟರವರು ಹೇಳಿದ ಕಾರಣ ಅಂದರೆ ಸರಕಾರದವರು ಈಗ ಕೈಕೊಂಡಿರುವ ನಾನಾ ಯೋಜನೆಗಳಿಗೆ ಹಣ ಬೇಕಾಗಿದೆ. ಆದುದರಿಂದ ಈ ಬಾಣೆ ಜಾಗಕ್ಕೆ ಕಂದಾಯ ವಿಧಿಸುವ ಅಭಿಪ್ರಾಯಪಟ್ಟಿದ್ದೇವೆ ಎಂದು ಹೇಳಿದ ಕಾರಣವನ್ನೇ ನಾವು ಅಂಗೀಕರಿಸುವುದಾದರೂ ಈ ಬಾಬಿನಿಂದ ಹೆಚ್ಚಿನ ಹಣ ವಸೂಲಿ ಮಾಡುವದು ಸಮಂಜಸವಲ್ಲ. ಏತಕ್ಕೆಂದರೆ ನಮ್ಮ ಸರಕಾರದವರು ಕೈಕೊಂಡಿರುವ ಹೊಸ ಯೋಜನೆಗಳು ದೇಶದ ಎಲ್ಲರಿಗೂ ಪ್ರಯೋಜನಕಾರಿಯಾಗಿರುವಾಗ ಅದನ್ನು ಕಾರ್ಯರೂಪಕ್ಕೆ ತರಲು ಬೇಕಾಗುವ ಹಣವನ್ನು ದೇಶದ ಒಂದು ಭಾಗದ ಜನರಿಂದ ಭರ್ತಿ ಮಾಡಲು ಪ್ರಯತ್ನಿಸುವದು ಸರಿಯಾದ ಮಾರ್ಗವಲ್ಲ. ಅಷ್ಟೇ ಅಲ್ಲ; ಸರಕಾರದವರ ಈ ಹೊಸ ಕಂದಾಯದ ರೀತಿಯೂ ಸಹ ಒಂದು ರೀತಿಯ ಪಕ್ಷಭೇದವನ್ನು ತೋರಿಸುವಂತೆ ಕಾಣುತ್ತದೆ. ಏಕೆಂದರೆ ಇವರು ಈ ಕಂದಾಯ ವಿಧಿಸುವಿಕೆಯಿಂದ ಜಹಗೀರು ಬಾಣೆಯನ್ನು ವಿನಾಯಿಸಿದ್ದಾರೆ. "ಬಾಣೆ ಜಾಗದಿಂದ ಬಾಣೆ ಮಾಲೀಕನಿಗೆ ಹುಲ್ಲು ಮತ್ತು ಇತರ ಪ್ರಯೋಜನಗಳು ಬಾಣೆಯಿಂದ ಬರಲಿವೆ ರಿಂದ ಈ ಕಂದಾಯವನ್ನು ವಿಧಿಸುವುದಾಗಿದೆ" ಎಂಬುದಾಗಿ ಈ ಕರಡು ನಿಬಂಧನೆಯಲ್ಲಿ ಹೇಳಲ್ಪಟ್ಟಿರುವಾಗ್ಯೆ ಜಹಗೀರು ಬಾಣೆಯ ಮಾಲೀಕರಿಗೆ ಈ ಪ್ರಯೋಜನಗಳು ಇಲ್ಲವೆಂದಾಯಿತೇ? ಬೇರೆ ಕಡೆಗಳಲ್ಲಿ ಜಮೀನ್ದಾರಿ ಮತ್ತು ಜಹಗೀರುಗಳನ್ನು ರದ್ದುಪಡಿಸುವ ಕಾನೂನುಗಳನ್ನು ಜಾರಿಗೆ ತರುತ್ತಿರುವಲ್ಲಿ ನಮ್ಮ ಸರಕಾರದವರು ಜಹಗೀರುದಾರರನ್ನು ಈ ಕಂದಾಯದಿಂದ ವಿನಾಯಿಸಲೇಕೆ? ಈಗಾಗಲೇ ತಾವು ಕೆರುತ್ತಿರುವ ಕಂದಾಯಗಳನ್ನು ಕೊಡಲಾರದೆ ಕಷ್ಟಪಡುತ್ತಿರುವ ರೈತವಾರಿ ಜನರ ಮೇಲೆ ಪುನಃ ಈ ಹೊಸ ಕಂದಾಯವನ್ನು ಹೊರಿಸುವುದು ನಿಜವಾಗಿಯೂ ವ್ಯಸನಕರ. ಈಗಾಗಲೇ ಕಾಲಕ್ಕೆ ಸರಿಯಾಗಿ ಮಳೆ ಸಿಕ್ಕದೆ, ಸರಿಯಾಗಿ ಬೆಳೆಗಳಾಗದೆ ಅನ್ನ ಬಟ್ಟೆಗೂ ತಕ್ಕ ಉತ್ಪತ್ತಿಯಿಲ್ಲದೆ ಕಷ್ಟಪಡುತ್ತಿರುವ ರೈತರಿಗೆ ಹೊಸ ಕಂದಾಯವನ್ನು ಏರಿಸುವುದು, ಜಾರಿ ಬಿದ್ದವನಿಗೆ ಮತ್ತೊಂದು ಏಟು ಕೊಟ್ಟಂತಾಗುವುದು ಮತ್ತು ಬಾಣೆ ಜಾಗದಿಂದ ಹುಲ್ಲು ಯಾ ಸೌದೆ ಬಾಣೆ ಮಾಲೀಕನಿಗೆ ಸಿಕ್ಕುವುದಾದರೂ ಇವುಗಳನ್ನು ಇತರರಿಗೆ ಮಾರುವ ಯಾ ಕೊಡುವ ಹಕ್ಕನ್ನು ಸರಕಾರದವರು ಕೊಟ್ಟಿರುವುದಿಲ್ಲವಾದ ಕಾರಣ ರೈತನು ಈ ಹೊಸ ಕಂದಾಯವನ್ನು ಎಲ್ಲಿಂದ ಕಟ್ಟಬೇಕು?

ಸರಕಾರದವರು ತರುವ ಹೊಸ ಕಂದಾಯದ ಯಾವುದೇ ಒಂದು ರೀತಿಯು ದೇಶದ ಎಲ್ಲಾ ಜನರಿಗೂ ಮತ್ತು ಎಲ್ಲಾ ಭಾಗಕ್ಕೂ ಒಂದೇ ರೀತಿ ಅನ್ವಯಿಸುವಂತಿರಬೇಕು. ಈ ಹೊಸ ಕಾನೂನು ಬಾಣೆ ಜಾಗಗಳಿಗಿರುವ ದಕ್ಷಿಣ ಮತ್ತು ಪಶ್ಚಿಮ

ಜನತಾ ಸರಕಾರಕ್ಕೆ ಸಲ್ಲದ ಕ್ರಮ.

ಕೊಡಗಿನವರಿಗೆ ಮಾತ್ರ ಅನ್ವಯಿಸಿ, ಉತ್ತರ ಕೊಡಗಿನವರಿಗೆ ಇದರಿಂದ ಬಾಧಕ ಬಾರದಂತಿರುವದರಿಂದ ಸರಕಾರದ ಈ ಧೋರಣೆಯು ದೇಶದಲ್ಲಿ ಐಕ್ಯಮತ್ಯವನ್ನು ಹಾಳು ಮಾಡಿ ಒಡಕು ತಂದು ಜನರಲ್ಲಿ ಅಸ್ವಸ್ಥತೆಯನ್ನುಂಟು ಮಾಡದಿರಲಿಕ್ಕಿಲ್ಲ. ಏಕೆಂದರೆ ಉತ್ತರ ಕೊಡಗಿನಲ್ಲಿ ರೈತರಿಗೆ ಹುಲ್ಲು, ಸೌದೆ, ಸೊಪ್ಪು ಒದಗಿಸಲು ಊರುಗುಪ್ಪೆಗಳನ್ನು ಕೊಟ್ಟಿರುತ್ತಾರೆ. ಈ ಊರುಗುಪ್ಪೆಗಳು ಸರಕಾರದ ಜಾಗವಾಹುದರಿಂದ ಈ ರೈತರಿಗೆ ಬೇಕಾದ ಹುಲ್ಲು, ಸೌದೆ, ಸೊಪ್ಪು ಕಂದಾಯವಿಕ್ಕದೆ ಸಿಕ್ಕಿದಂತಾಗುತ್ತದೆ. ದಕ್ಷಿಣ ಕೊಡಗಿನಲ್ಲಾದರೋ ಈ ಸೌಕರ್ಯಗಳಿಗಾಗಿ ಎಂದರೆ ಹುಲ್ಲು, ಸೌದೆ, ಒದಗಿಸಿಕೊಳ್ಳುವದಕ್ಕಾಗಿ ರಾಜರ ಕಾಲದಿಂದಲೇ ಕಂದಾಯವಿಲ್ಲದೆ ಈ ಬಾಣೆ ಜಾಗಗಳನ್ನು ಕೊಟ್ಟಿದ್ದಾಗಿದೆ. ಈಗ ಅಂಥಾ ಬಾಣೆ ಜಾಗಕ್ಕೆ ಕಂದಾಯ ವಿಧಿಸಿದರೆ ಸರಕಾರದವರ ನೀತಿಯು ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣವೆಂಬಂತೆ ತೋರಬಹುದು.

ಬಾಣೆ ಜಾಗಕ್ಕೆ ಅವುಗಳನ್ನು ಎಷ್ಟರ ವರೆಗೆ ರೂಢಿಸದೆ ಬರೀ ದನ ಮೇಯಿಸಲಿಕ್ಕೂ, ಸೊಪ್ಪು, ಸದೆ ಜಮಾಯಿಸಲಿಕ್ಕೂ ಉಪಯೋಗಿಸುತ್ತಾರೋ, ಅಷ್ಟರವರೆಗೆ ಆ ಜಮೀನುಗಳಿಗೆ ಕಂದಾಯ ವಿಧಿಸಲಾಗುವದಿಲ್ಲವೆಂಬ ಈ ಧೋರಣೆಯು ರಾಜರ ಕಾಲದಿಂದಲೇ ಬಂದುದಲ್ಲದೆ ಈ ವಿಷಯದಲ್ಲಿ ಬ್ರಿಟೀಷ್ ಸರಕಾರದವರು ಕೈಹಾಕಿರುವದಿಲ್ಲ. ೧೮೫೪ ರಿಂದ ಕೊಡಗು ದೇಶಕ್ಕೆ ಕಾಫಿ ವ್ಯವಸಾಯವು ಬಂದ ನಂತರ ಅನೇಕ ಜನರು ತಮ್ಮ ಬಾಣೆಗಳಲ್ಲಿ ಕಾಫಿ ತೋಟಗಳನ್ನು ಮಾಡಿದರು. ಆ ಸಮಯದಲ್ಲಿ ಬ್ರಿಟೀಷ್ ಸರಕಾರದವರು ಬಾಣೆ ಜಾಗವನ್ನು ಅದರ ನಿಬಂಧನೆಗೆ ವಿರೋಧವಾಗಿ ರೂಢಿಸಿದ ಪ್ರಯುಕ್ತ ಹೆಚ್ಚಿನ ಕಂದಾಯ ಹಾಕಬೇಕೆಂದು ಪ್ರಯತ್ನಪಟ್ಟಾಗಲೂ ಸಹ ಜನರು ಅವಕ್ಕೆ ವಿರೋಧಿಸಿದಾಗ ಪರಕೀಯ ಸರಕಾರದವರಾಗಿದ್ದ ಅವರು ಸಹ ಪ್ರತಿಯೊಂದು ವರ್ಗಕ್ಕೆ ರೂಢಿಸಿದ್ದ ಜಾಗಗಳ ಪೈಕಿ ಹತ್ತತ್ತು ಎಕ್ರೆಗಳನ್ನು ವಿನಾಯಿಸಿ ರೂಢಿಸಲ್ಪಟ್ಟ ಹೆಚ್ಚಿನ ಭಾಗಗಳಿಗೆ ಮಾತ್ರ ಕಂದಾಯ ವಿಧಿಸಿರುತ್ತಾರೆ. ಅಲ್ಲದೆ ರೂಢಿಸದ ಜಾಗಗಳಿಗೆ ಕಂದಾಯವೇ ಇಲ್ಲ. ಬೇರೆ ಸರಕಾರದವರೇ ಇಂಥಾ ಕಂದಾಯವನ್ನು ವಿಧಿಸಿಲ್ಲವಾಗಿರುವಾಗ ನಮ್ಮದೇ ಆಗಿದ್ದು ರೈತನ ಕಷ್ಟಸುಖಗಳು ಚೆನ್ನಾಗಿ ತಿಳಿದಿರುವ ನಮ್ಮ ಈಗಿನ ಸರಕಾರದವರು ಈ ಕಾರ್ಯವನ್ನು ಕೈಕೊಂಡದ್ದು ನಿಜವಾಗಿಯೂ ವ್ಯಸನಕರವಾಗಿದೆ. ಒಂದು ವೇಳೆ ಜನರಿಗೆ ಈ ಬಾಣೆಗಳಿಂದ ಹೆಚ್ಚಿನ ಉತ್ಪತ್ತಿ ಬರುವಂತಿದ್ದರೆ ಆಗ್ಯೆ ಇಂಥಾ ಕಂದಾಯಗಳನ್ನು ಹಾಕಿದ್ದರೆ ಒಪ್ಪಬಹುದಾಗಿತ್ತು. ಆದರೆ ಬಡವರು ಬಾಣೆ ಜಾಗದಲ್ಲಿಷ್ಟ ಕೆಲವು ಮರಗಳನ್ನು ಕತ್ತಿಕಾಣಿಕೆ ಕಟ್ಟಿ, ಒಬ್ಬೊಬ್ಬರು ತೊಗೊಂಡು ಸ್ವಲ್ಪವಾದರೂ ಉತ್ಪತ್ತಿ ಮಾಡಿಕೊಳ್ಳುತ್ತಿದ್ದರು. ಅಂಥಾ ಕುತ್ತಿ ಕಾಣಿಕೆಯನ್ನು ಸಹ ಈಗ ಬಹಳವಾಗಿ ಹೆಚ್ಚಿಸಿಬಿಟ್ಟು ಆ ದಾರಿಯ ಉತ್ಪತ್ತಿಯನ್ನು ಸಹ ಇಲ್ಲದಂತೆ ಮಾಡಿರುವಾಗ್ಯೆ ಈ ರೀತಿಯ ಹೊಸ ಕಂದಾಯ ಬಾಣೆಯ ಮೇಲೆ ಹಾಕುವದನ್ನು "ಹುಣ್ಣಿನ ಮೇಲೆ ಬರೆ" ಯಂತೆಯೇ ಭಾವಿಸಬೇಕಾಗುತ್ತದೆ. ಜಾಗೀರು ಬಾಣೆಯನ್ನು ಈ ಹೊಸ ಕಂದಾಯದಿಂದ ವಿನಾಯಿಸಿದುದಕ್ಕೆ ಏನೊಂದು ಕಾರಣವನ್ನು ಸರಕಾರದವರು ಕೊಟ್ಟಿರುವದಿಲ್ಲ. ಇದು ನಿಜವಾಗಿಯೂ ವ್ಯಸನಕರವಲ್ಲದೆ ಒಬ್ಬೊಬ್ಬರಲ್ಲಿ ಒಂದೊಂದು ತರದ ಊಹನೆಗೆ ಆಸ್ಪದವನ್ನುಂಟುಮಾಡಿದೆ.

ಸರಕಾರದವರ ಹಿತದೃಷ್ಟಿಯಿಂದಲೂ ಸಹ ಈ ಕಾನೂನು ಪ್ರಯೋಜನಕಾರಿಯಾಗಲಾರದು, ಎಂಬುದೇ ನನ್ನ ಭಾವನೆ. ಈ ಹೊಸ ಕಾನೂನಿನ ಪ್ರತಿಫಲವಾಗಿ ಸಿಕ್ಕಬಹುದಾದ ಉತ್ಪತ್ತಿ ಯಾವ ರೂಪ ಎಷ್ಟು? ನಮ್ಮ ಮಾನ್ಯ ಮುಖ್ಯ ಮಂತ್ರಿಯವರ ಅಂದಾಜು ಮೇರೆ ಬರೇ ೫೦ ಸಾವಿರ ರೂಪಾಯಿ ಮಾತ್ರ. ೭೫ ಲಕ್ಷ ಉತ್ಪತ್ತಿ ಇರುವ ನಮ್ಮ ಸರಕಾರಕ್ಕೆ ಇದೊಂದು ದೊಡ್ಡ ಹಣವಲ್ಲ. ಈ ಹಣವನ್ನು ಉತ್ಪತ್ತಿ ಮಾಡುವದಕ್ಕೆ ಬೇರೆ ಯಾವ ದಾರಿಯೂ ಇಲ್ಲವೆ, ಈ ಹಣವು ಬಾರದಿದ್ದರೆ ಸರಕಾರದ ದೈನಂದಿನದ ಖರ್ಚುಗಳನ್ನು ಸಾಗಿಸುವದೇ ಕಷ್ಟವೆಂದಾಗಿದ್ದರೆ ನಾವು ಈ ಹೆಚ್ಚಿನ ಭಾರವನ್ನು ವಹಿಸಿಕೊಳ್ಳಬಹುದಾಗಿತ್ತು. ಆದರೆ ೧೫ ಲಕ್ಷ ಉತ್ಪತ್ತಿ ಇದ್ದ ಸರಕಾರದ ಹುಟ್ಟುವಳಿಯು ೭೫ ಲಕ್ಷಕ್ಕೇರಿದೆ. ಆದರೆ ರೈತನ ಉತ್ಪತ್ತಿಯೂ ಹತ್ತು ವರ್ಷಕ್ಕೆ ಹಿಂದೆ ಇದ್ದದಕ್ಕಿಂತಲೂ ಯಾವ ರೀತಿಯುಲ್ಲಿ ಹೆಚ್ಚಾಗಿದೆ ಎನ್ನಲಾಗುವದಿಲ್ಲ. ಸ್ಥಿತಿಯು ಹೀಗಿರುವಾಗ್ಯೆ ಸರಕಾರದವರು ಈ ಹೆಚ್ಚಿನ ಭಾರವನ್ನು ರೈತನು ಹೊತ್ತುಕೊಳ್ಳಬೇಕೆಂದು ಹೇಳುವದು ಸರಿಯಲ್ಲ. ಒಬ್ಬ ಚೀಫ್ ಕಮಿಷನರು ಮತ್ತು ಒಬ್ಬ ಅಸಿಸ್ಟೆಂಟ್ ಕಮಿಷನರು ನಡೆಸುತ್ತಿದ್ದ ಸರಕಾರವನ್ನು ಈಗ ಇವರ ಜೊತೆಗೆ ಎರಡು ಮಂತ್ರಿಗಳು, ಅದೆಷ್ಟೋ ಸೆಕ್ರೆಟರಿಗಳು ಸೇರಿ ನಡೆಸುತ್ತಿದ್ದಾರೆ. ಹೊಸ ಮಂತ್ರಿಗಳಿಗೆ ದಾರಿ ತೋರಿಸಲಿಕ್ಕಾಗಿ ಈ ಸೆಕ್ರೆಟರಿಗಳನ್ನೂ, ಅವರ ಸಿಬ್ಬಂದಿಗಳನ್ನೂ, ತಂದವೆಂದೂ, ಮತ್ತು ಇದೆಲ್ಲ ಬರೆ ಒಂದು ವರ್ಷದ ವರೆಗೆ ಮಾತ್ರವೆಂಬದಾಗಿಯೂ ಹೇಳಿದ್ದರು. ಈಗ ಮಂತ್ರಿಗಳು ಒಂದು ವರ್ಷದ ಅನುಭವದಿಂದ ರಾಜ್ಯಾಡಳಿತದ ಮಾಹಿತಿಯನ್ನು ತಿಳಿದ ಮೇಲೆ ಹೆಚ್ಚಿನ ಸಿಬ್ಬಂದಿಗಳನ್ನು ತೆಗೆದು ಹಾಕಿದರೆ ಅದರಿಂದ ಎಷ್ಟೋ ಹಣ ಉಳಿವರಿಯಾಗಬಹುದು. ನಮಗೆ ಸ್ವಾತಂತ್ರ್ಯ ಬರುವ ಮೊದಲು ನ್ಯಾಯವಿಧಾಯಕ ಮೆಂಬರುಗಳಿಗೆ ಮೀಟಿಂಗಿಗೆ ಹಾಜರಾದ ದಿನಗಳಲ್ಲಿ ದಿನಕ್ಕೆ ೬ ರೂಪಾಯಿ ಬತ್ಯ ಕೊಡುತ್ತಿದ್ದರು. ಆಗಲೂ ಸಹ ವರ್ಷಕ್ಕೆ ೩ ಕೌನ್ಸಿಲ್ ಮೀಟಿಂಗುಗಳಾಗುತ್ತಿದ್ದವು. ಅವರು ಒಂದೊಂದು ವೇಳೆ ಒಂದೊಂದು ವಾರದ ವರೆಗೂ ಮಡಿಕೇರಿಯಲ್ಲಿ ಇರುತ್ತಿದ್ದರು. ಈಗಿನ ಮೆಂಬರುಗಳು ಸಹ ವರ್ಷಕ್ಕೆ ೩ ಮೀಟಿಂಗಿಗೆ ಮಾತ್ರ ಬರುವದಾಗಿದೆ. ಆದರೆ ಇವರಿಗೆ ತಿಂಗಳಿಗೆ ೧೫೦ ರೂ. ಸಂಬಳ ಮತ್ತು ಮೀಟಿಂಗಿಗೆ ಪ್ರತ್ಯೇಕ ಬತ್ಯಗಳು ಕೊಡುತ್ತಿದ್ದಾರಂತೆ. ಬಡವರಾದ ರೈತರಿಂದ ಏನು ಉತ್ಪತ್ತಿಯಿಲ್ಲದ ಬಾಣೆ ಜಾಗಕ್ಕೆ ಕಂದಾಯ ಹಾಕಿ, ಈ ಹಣವನ್ನು ಸಂಪಾದಿಸುವದರ ಬದಲು ಸರಕಾರದ ನೌಕರರ ಪೈಕಿ ೨೦೦ ರೂ. ಮೇಲ್ಪಟ್ಟು ಸಂಬಳವಿರುವ ನೌಕರರಿಗೆ ತುಟ್ಟಿ ಬತ್ಯವನ್ನು ಕೊಡುವದನ್ನು ನಿಲ್ಲಿಸಿ, ಕೌನ್ಸಿಲ್ ಮೆಂಬರುಗಳ ಸಂಬಳವನ್ನು ದಿವಸಕ್ಕೆ ೩ ರೂಪಾಯಿಯಂತೆ ತಿಂಗಳಿಗೆ ೬೦ ರೂ. ಗೆ ಇಳಿಸಿ, ಮಂತ್ರಿಗಳಿಗೆ ರಾಜ್ಯಭಾರದ ರಹಸ್ಯವನ್ನು ತಿಳಿಸುವುದಕೋಸ್ಕರವಾಗಿ ನೇಮಿಸಿದ ದೊಡ್ಡ ವೇತನದ ಸೆಕ್ರೆಟರಿಗಳನ್ನು ವಜಾಮಾಡಿ ಹೆಚ್ಚು ಸಂಬಳದ ಹೊರಗಿನಿಂದ ಬಂದ ಉದ್ಯೋಗಸ್ಥರನ್ನು ಬಿಟ್ಟು, ಕಡಮೆ ಸಂಬಳದ ಸ್ಥಳೀಕ ವಿದ್ಯಾವಂತರನ್ನೇ ಆಯಾಯ ಉದ್ಯೋಗಗಳಿಗೆ ನೇಮಿಸಿದರೆ, ವರ್ಷಕ್ಕೆ ೫೦ ಸಾವಿರ ಅಲ್ಲ, ೩ ಲಕ್ಷಕ್ಕೆ ಮೇಲ್ಪಟ್ಟು ಉಳಿತಾಯ ಮಾಡಬಹುದು.

ಎಕರೆಗೆ ನಾಲ್ಕಾಣೆ ಕೊಡುವದು ನಮ್ಮ ರೈತರಿಗೆ ಹೆಚ್ಚಿನ ಒಂದು ಭಾರವಾಗಲಾರದು ಎಂಬದಾಗಿ ಹೇಳಿದ ನಮ್ಮ ಮುಖ್ಯ ಮಂತ್ರಿಯವರ ಮಾತು ನನಗೆ ಹೇಗೆ ಕಾಣುತ್ತದೆಯೆಂದರೆ ಕಾರಿನಲ್ಲಿ ಸಂಚರಿಸುವವರು ತಮ್ಮ ಲಗ್ಗೇಜನ್ನು ತಮ್ಮ ಕಾರಿನಲ್ಲಿಟ್ಟು ಕೊಂಡರೆ ತಮ್ಮ ಸುಖಕ್ಕೆ ಅದು ಬಂಗ ತರುವದರಿಂದ ನಡೆದುಕೊಂಡು ಹೋಗುತ್ತಿರುವ ಪ್ರಯಾಣಿಕರು ಅವರ ಲಗ್ಗೇಜಿನ ಜತೆಗೆ ಈ ಲಗ್ಗೇಜನ್ನು ಹೊತ್ತುಕೊಂಡರೆ ಅವರಿಗೆ ಲಗ್ಗೇಜು ಹೊತ್ತು ಅಭ್ಯಾಸವಿರುವದರಿಂದ ಇದಿಷ್ಟನ್ನು ಹೊತ್ತುಕೊಳ್ಳುವದು ಹೆಚ್ಚಿನ ಭಾರವಾಗಲಿಕ್ಕಿಲ್ಲವೆಂಬದಾಗಿ ಹೇಳುವಂತೆ ಅನ್ನಿಸುತ್ತದೆ.

ಆದುದರಿಂದ ಬಡವನಾದ ರೈತನ ಮೇಲೆ ಹೆಚ್ಚಿನ ಕಂದಾಯ ಹಾಕುವುದರ ಬದಲು ಸರಕಾರದ ಖರ್ಚನ್ನು ಕಮ್ಮಿ ಮಾಡುವುದು ಒಳ್ಳೆಯದಲ್ಲವೇ?

ಮಾರಾಟಕ್ಕೆ.

ಮಡಿಕೇರಿನಾಡು ಸೊದ್ದೂರು ಕಟ್ಟೆ ಮಾಡು ಗ್ರಾಮದಲ್ಲಿ ಅಂದಾಜು 9. ಏಕ್ರೆ ಗದ್ದೆ, ಇದಕ್ಕೆ ಸೇರಿದ ಕಾಫಿ, ಕಿತ್ತಳೆ ವಗೈರೆಗೆ ಲಾಯಕ್ಕಾದ ಅಂದಾಜು 60 ಎಕ್ರೆ ಬಾಣೆ, ಹಿತ್ತಲು, ಮನೆಗಳು, ಕೊಟ್ಟಿಗೆಗಳು ವಗೈರೆ ಮಾರಾಟಕ್ಕೆ ಇವೆ. ಖಾಯಿಸ್‌ದಾರರು ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

"M"

C/o. ಕೊಡಗು ಆಫೀಸು,
ಮಡಿಕೇರಿ.

ಜನರಲ್ ಕಾರ್ಯಪ್ಪನವರು

ಭಾರತದ ನಿವೃತ್ತ ಸೇನಾನಿ ಶ್ರೀ ಕೆ. ಎಂ. ಕಾರ್ಯಪ್ಪನವರಿಗೆ ಒಂದು ಸತ್ಕಾರ ಕೂಟವು ತಾ. ೧೨-೬-೫೩ರಲ್ಲಿ ಹಾತೂರು ಶಾಲೆಯಲ್ಲಿ ನೆರವೇರಿತು. ಶ್ರೀಯುತರು ಪಂಕ್ತಿಬದ್ಧರಾಗಿ ನಿಂತ ವಿದ್ಯಾರ್ಥಿವೃಂದದಿಂದಲೂ ಅಧ್ಯಾಪಕರು, ಹೈಸ್ಕೂಲು ಸಮಿತಿ ಮತ್ತು ಗ್ರಾಮಸ್ಥರಿಂದಲೂ ಕೋಲುಬಾದ್ಯಗಳ ಘೋಷದಿಂದಲೂ ಸ್ವಾಗತಿಸಲ್ಪಟ್ಟರು.

ಸಭಾ ಭವನದಲ್ಲಿ ಎಲ್ಲರೂ ಸೇರಿದ ಮೇಲೆ ಹೈಸ್ಕೂಲು ಸಮಿತಿಯ ಅಧ್ಯಕ್ಷರು ಶ್ರೀಯುತರಿಗೆ ಮಾನಪತ್ರವನ್ನು ಓದಿ ಸಮರ್ಪಿಸಿದರು. ಶ್ರೀಯುತರು ಕನ್ನಡದಲ್ಲಿ ಉತ್ತರ ಕೊಡುತ್ತಾ ಈ ಶಾಲೆಗೆ ತಾನು ಕೈಲಾಗುವಷ್ಟು ಆರ್ಥಿಕ ಸಹಾಯವನ್ನು ನೀಡುವೆನೆಂದೂ ಸರಕಾರವು ಈ ವರೆಗೆ ನೀಡಿದುದಕ್ಕಿಂಥ ಹೆಚ್ಚಿನ ದೊಡ್ಡ ಮೊತ್ತದ ಸಹಾಯವನ್ನು ನೀಡಬೇಕೆಂದೂ ಹೇಳಿದರು. ವಂದನಾರ್ಪಣ ನಂತರ ಶ್ರೀ ಕಾರ್ಯಪ್ಪನವರು ಶಾಲೆಯ ಮಕ್ಕಳನ್ನು ಕರೆದು ತನ್ನ ಇದಿರು ಶಾಲಾಂಗಣದಲ್ಲಿ ಕುಳ್ಳಿರಿಸಿ ಅವರಿಗೆ ವಿಧೇಯತೆ, ಶಿಸ್ತು, ನಡತೆ ಮತ್ತು ಪರಿಶ್ರಮದ ಕುರಿತು ಹಿತೋಪದೇಶ ಮಾಡಿದರು. ಪಂದ್ಯಾಟಗಳಲ್ಲಿ ಗೆದ್ದುದಕ್ಕೆ ಪ್ರಶಂಸೆ ಮಾಡಿ ತಾನು ಈ ಶಾಲೆಗೆ ಒಂದು ಬಟ್ಟಲನ್ನು ಕೊಡುವೆನೆಂದೂ ಶಾಲಾ ಮಕ್ಕಳಿಗಾಗಿ ಒಂದು ಜೊತೆ ತೂಗುಉಯ್ಯಾಲೆಗಳನ್ನೂ ಕೊಡುವೆನೆಂದೂ ಹೇಳಿದರು.

ಶ್ರೀಯುತರು ಮಕ್ಕಳೆಲ್ಲರಿಗೂ ಮಿಠಾಯಿಗಳನ್ನು ಕೊಡಿಸಿ ಹರ್ಷಗೊಳಿಸಿ ಏರ್ಪಡಿಸಲಾಗಿದ್ದ ಉಪಹಾರ ಕೂಟದಲ್ಲಿ ಭಾಗವಹಿಸಿದರು. ಆ ಮೇಲೆ ಶ್ರೀಯುತರನ್ನು ಬೀಳ್ಕೊಡಲಾಯಿತು.

ಹುದಿಕೇರಿ ಹೈಸ್ಕೂಲು

ಈ ಶಾಲೆಯ ಕಾರ್ಯಕಾರಿ ಮಂಡಳಿಯ ಸಭೆಯೊಂದರಲ್ಲಿ ದೂರದಿಂದ ಶಾಲೆಗೆ ಬರುವ ಹುಡುಗರ ಅನುಕೂಲತೆಗಾಗಿ ವಿದ್ಯಾರ್ಥಿ ವಸತಿ ಗೃಹವೊಂದನ್ನು ಇಪ್ಪತ್ತು ವಿದ್ಯಾರ್ಥಿಗಳ ವಾಸಕ್ಕೆ ಅನುಕೂಲವಾಗುವಂತೆ ತೆರೆಯುವದೆಂದು ತೀರ್ಮಾನವಾಯಿತು. ಸಭೆಯಲ್ಲಿ ಹಾಜರಿದ್ದ ಶ್ರೀಮತಿ ಜೋಡಿರ ಪೊನ್ನಪ್ಪನವರು ತನ್ನ ಹೆಸರಿನಲ್ಲಿ ಕೊಯಮುತ್ತೂರು ಪಂಕಜ ಕಾಟನ್ ಮಿಲ್ಲಿನಲ್ಲಿರುವ ಶೇರು ಹಣದ ಡಿವಿಡೆಂಡನ್ನು ಈ ಶಾಲೆಗಾಗಿ ವರ್ಷಂಪ್ರತಿ ಕೊಡುತ್ತೇನೆಂದೂ ಆ ಮೊಬಲಗಿನಲ್ಲಿ ರೂ. ೧೦೦ನ್ನು ಬಡವಿದ್ಯಾರ್ಥಿಗಳ ಫೀಜಿಗಾಗಿಯೂ ಉಳಿದುದನ್ನು ವಸತಿ ಗೃಹಕ್ಕಾಗಿಯೂ ಉಪಯೋಗಿಸಬೇಕೆಂದೂ ಕೋರಿದ ಮೇರೆ ಹಾಗೆಯೇ ಒಪ್ಪಿ ತೀರ್ಮಾನಿಸಲಾಯಿತು. ಈ ಉದಾರ ಸಹಾಯಕ್ಕಾಗಿ ಇವರ ಪತಿ ಶ್ರೀಮಾನ್ ಬೆಳ್ಯಪ್ಪನವರ ಛಾಯಾ ಚಿತ್ರವನ್ನು ಹೈಸ್ಕೂಲ್ ಹಾಲಿನಲ್ಲಿ ಇಡುವದೆಂದು ತೀರ್ಮಾನವಾಯಿತು. ಅಲ್ಲದೆ ಶ್ರೀಮತಿಯವರನ್ನು ಒಬ್ಬ ಸದಸ್ಯಳನ್ನಾಗಿ ಕಾರ್ಯಕಾರಿ ಮಂಡಳಿಗೆ ಚುನಾಯಿಸಿಕೊಳ್ಳಲಾಯಿತು.

ವಾರ್ತಾ ವ್ಯಕ್ತಿಗಳು.

ಪ್ರೊ॥ ಎಸ್. ಎನ್. ಬೋಸ್

ವಿಜ್ಞಾನ ಪ್ರಪಂಚದಲ್ಲಿ ಭಾರತಕ್ಕೆ ಶ್ರೇಷ್ಠವಾದ ಸ್ಥಾನವನ್ನು ದೊರಕಿಸಿಕೊಡುವದರಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಪ್ರೊ. ಎಸ್. ಎನ್. ಬೋಸ್‌ರವರು ಪ್ರಾಮುಖ್ಯ ಸಂಶೋಧನೆಯನ್ನು ಮಾಡಿರುತ್ತಾರೆ. ಕೆಲವು ವರ್ಷಗಳಿಂದ ಪ್ರೊ! ಐನ್‌ಸ್ಟೀನರ ರಿಲೆಟಿವಿಟಿ ತತ್ವಕ್ಕೆ ಕೆಲವು ಗಣಿತಶಾಸ್ತ್ರ ನೀತಿಯ ಸಹಕಾರ ಸಿಗದೆ ಕೊರತೆಯಾಗಿದ್ದಿತು. ಈ ಕೊರತೆಯನ್ನು ನೀಗಿಸಿರುವ ಬಂಗಾಲದ ವಿಜ್ಞಾನಿಗಳಾದ ಪ್ರೊ ಎಸ್. ಎನ್ ಬೋಸರವರು ತಮ್ಮ ಸಂಶೋಧನೆಗಳಲ್ಲಿ ವಿಜಯ ಪಡೆದು ಇದೀಗ ಬುಡಾಪೆಸ್ಟಿನಲ್ಲಿ ನಡೆಯುತ್ತಿರುವ ವಿಶ್ವಶಾಂತಿ ಸಮ್ಮೇಳನದಲ್ಲಿ ಭಾಗವಹಿಸುತ್ತಿದ್ದಾರೆ ೫೯ ವರ್ಷ ವಯಸ್ಸಿನ ವಿಶ್ವವಿಖ್ಯಾತರಾದ ಪ್ರೊ॥ ಬೋಸ್‌ರವರು ಪ್ರೊ॥ ಐನ್‌ಸ್ಟೀನರೊಡನೆ ಸಂಶೋಧನೆ ನಡೆಸಿದವರು. ಹಾಗೂ ಅವರಂತೆಯೇ ವಿಜ್ಞಾನದ ಶಾಂತಿ ನೀತಿಯಲ್ಲಿ ನಂಬಿಕೆಯುಳ್ಳವರು.

ಶ್ರೀಮಜ್ಜಯಚಾಮರಾಜ ಒಡೆಯರ್.

ಭಾರತದ ಮಹಾರಾಜರುಗಳ ಸಂಘದಲ್ಲಿ ಸಮಯೋಚಿತವಾಗಿ ನಡೆದು ಕಾಲದ ಪದ್ಧತಿಗೆ ಬೆಲೆ ಕೊಟ್ಟು, ಜನತೆಯ ವಿಶ್ವಾಸವನ್ನು ಏಕರೀತಿ ಪಡೆದ ಕೀರ್ತಿಯು ಮೈಸೂರಿನ ರಾಜ ಪ್ರಮುಖರಾದ ಶ್ರೀಮನ್ಮಹಾರಾಜ ಶ್ರೀಮಜ್ಜಯಚಾಮರಾಜ ಒಡೆಯರಿಗೆ ಸೂಕ್ತವಾಗಿಯೇ ಸೇರುತ್ತದೆ. ಕಠಿಣವಾದ ಸಮಯದಲ್ಲಿ ರಾಜ್ಯ ಸೂತ್ರವಹಿಸಿದ ಶ್ರೀಮನ್ಮಹಾರಾಜರು ತಮ್ಮ ಮುಂದಿನ ಎಲ್ಲಾ ಸಮಸ್ಯೆಗಳಲ್ಲಿ ಸಾಮಾನ್ಯ ಜನರಂತೆ ಸಾಮಾನ್ಯ ಶಾಲಾ ಕಾಲೇಜುಗಳಲ್ಲಿ ಪಡೆದ ಆಳವಾದ ಜ್ಞಾನವನ್ನು ಉಪಯೋಗಿಸಿ ಅಖಂಡ ಕನ್ನಡ ಜನತೆಯ ಅವರ ವಿಶ್ವಾಸಗಳಿಗೆ ಪಾತ್ರರಾಗಿದ್ದಾರೆ. ತತ್ವಶಾಸ್ತ್ರ, ರಾಜನೀತಿ, ಅರ್ಥಶಾಸ್ತ್ರ ಇವುಗಳಲ್ಲಿ ವಿಶೇಷ ಪರಿಶ್ರಮ ಪಡೆದ ನಮ್ಮ ರಾಜ ಪ್ರಮುಖರು ಯಾವುದೇ ಸಭೆಯಲ್ಲಿ ಮಾತನಾಡಿದರೂ, ವಿಚಾರ ಪೂರಿತ ಪ್ರಜ್ವಲಿತ ಭಾಷಣ ಮಾಡುತ್ತಾರೆ. ಸಾಧಾರಣವಾಗಿ ರಾಜರ ಭಾಷಣವೆಂದರೆ ರಾಜ್ಯದಲ್ಲಿನ ಪಂಡಿತೋತ್ತಮರ ಜ್ಞಾನ ಪ್ರದರ್ಶನವೆಂಬ ನಾಣ್ನುಡಿ ಬಂದು ಬಿಟ್ಟಿದೆ. ಆದರೆ ನಮ್ಮ ರಾಜ ಪ್ರಮುಖರ ವಿಷಯದಲ್ಲಿ ಈ ನಾಣ್ನುಡಿಯಲ್ಲಿ ಸತ್ಯಾಂಶವಿಲ್ಲ. ತಮ್ಮ ಖಾಸಗಿ ಲೈಬ್ರರಿಯಲ್ಲಿ ಕುಳಿತು ವಿಶೇಷ ಜ್ಞಾನಾರ್ಜನೆ ಮಾಡಿ, ತಾವೇ ತಮ್ಮ ಪ್ರತಿ ಭಾಷಣವನ್ನು ಮನ ಮುಟ್ಟುವಂತೆ ಬರೆಯುತ್ತಾರೆ. ಪ್ರಪಂಚದ ವಿಶ್ವವಿದ್ಯಾನಿಲಯಗಳ ಸೆನಿಟರನ್ನು ಉದ್ದೇಶಿಸುತ್ತಾ ಮೈಸೂರಿನಲ್ಲಿ ಕಳೆದವಾರ ಅವರು ಮಾಡಿದ ಭಾಷಣವು ಅಲ್ಲಿ ನೆರೆದಿದ್ದ ವಿಖ್ಯಾತ ಪ್ರೊಫೆಸರುಗಳ ಮುಂದೆ ಹೊಸ ಬೆಳಕನ್ನು ತಂದೊತ್ತಿತು.

ರಾಜನೀತಿಯಲ್ಲಿನ ಅವರ ವೈಶಿಷ್ಟ್ಯತೆಗೆ ಮೈಸೂರಿನ ಇತ್ತೀಚಿನ ಚರಿತ್ರೆಯೇ ನಿದರ್ಶನ ಜನರ ಆಶೆ ಆಕಾಂಕ್ಷೆಗಳಿಗೆ ಮನ್ನಣೆಯಿತ್ತು ಶ್ರೀಮಜ್ಜಯಚಾಮರಾಜ ಒಡೆಯರು ಜನಪ್ರಿಯ ರಾಜಪ್ರಮುಖರಾದರು ರಾಜ್ಯಾಂಗದಲ್ಲಿನ ತಮ್ಮ ವಿಶೇಷ ಜವಾಬ್ದಾರಿಯನ್ನರಿತ ಅವರು ಮೈಸೂರಿನ ರಾಜಕಾರಣಿಗಳೊಡನೆ ಆಗಾಗ್ಗೆ ಸಮಾಲೋಚನೆ ನಡೆಸುತ್ತಲಿದ್ದಾರೆ. ಇದೀಗ ಬೆಂಗಳೂರಿನಲ್ಲಿ ಅವರು ಮಾಡಿದ ಭೇಟಿಗಳು ಜನರ ಕುತೂಹಲವನ್ನು ಕೆರಳಿಸಿವೆ ಇದರಿಂದ ಮೈಸೂರಿನ ರಾಜಕೀಯ ನಿರ್ಮಲವಾಗುವ ಆಶೋತ್ತರಗಳು ಜನರಲ್ಲಿ ಬಲವಾಗಿವೆ

ಮಿ॥ ರಾಬರ್ಟ್ ಎ ಟಾಫ್ಟ್.

ಒರಟು ಮಾತಿನ ಮಲ್ಲರಾದ ಸೆನೆಟರ್ ರಾಬರ್ಟ್ ಅಲ್‌ಫ್ರೋನ್ಸ್ ಟಾಫ್ಟರವರು ಇಂದು ಅಮೇರಿಕಾವನ್ನು ಆಳುತ್ತಿರುವ ಬಲ ಪಕ್ಷವಾದ ರಿಪಬ್ಲಿಕನ್ ಪಾರ್ಟಿಯ ಅತಿ ಸಂಪ್ರದಾಯಕ ಮನೋವೃತ್ತಿಯ ಪ್ರಗತಿ ವಿರೋಧ ವ್ಯಕ್ತಿ. ವೈಯುಕ್ತಿಕ ರೀತಿಯಲ್ಲಿ ತೀರಾ ನಂಬಿಕೆಯುಳ್ಳ ಸೆನೆಟರ್ ಟಾಫ್ಟರವರು ಸಾರ್ವಜನಿಕ ಸಂಬಂಧವಿರುವ ಯಾವುದೇ ವಿಷಯವನ್ನಾದರೂ ತೆಗಳುವರು. ಕಾರ್ಮಿಕರ ಆರೋಗ್ಯ, ವಿಮಾ ಪದ್ಧತಿಗೂ ಅವರು ತೀವ್ರ ವಿರೋಧ ಸೂಚಿಸಿದರು ತಮಗೆ ತೋರಿದ್ದನ್ನು ಖಚಿತವಾಗಿ ಹಾಗೂ ಒಕ್ಕಟಾಗಿ ಮರಾಲೋಚನೆಯಿಲ್ಲದೆ ಹೇಳಿಬಿಡುವ ಟಾಫ್ಟರವರು ಚರ್ಚೆಯನ್ನು ಇಷ್ಟಪಡದ ಮತ್ತು ಬಳಕೆಗೆ ಎಟುಕದ ವ್ಯಕ್ತಿ. ಗಾಲ್ಫ ಆಟದಲ್ಲಿ ಇವರು ಗೆಳೆಯರಲ್ಲಿ ಸರಳವಾಗಿ ಬೆರೆತು ಸಂಭಾಷಿಸಲಿಲ್ಲವೆಂದು ಇವರ ಸಹಪಾಠಿಗಳೇ ಹೇಳುತ್ತಾರೆ.

೬೪ ವರ್ಷ ವಯಸ್ಸಿನ ಸೆನೆಟರ್ ಟಾಫ್ಟರವರಿಗೆ ಹೊಂದಲಿಲ್ಲದ ಅಧ್ಯಕ್ಷಗಿರಿಯ ಕನಸು ತೀವ್ರವಾಗಿದೆ. ಇವರ ತಂದೆ ವಿ॥ ವಿಲಿಯಂ ಹೋವರ್ಡ್ ಟಾಫ್ಟರವರು ಅಮೇರಿಕಾದ ೨೭ನೇ ಅಧ್ಯಕ್ಷರಾಗಿದ್ದರು ೧೯೪೦ರಲ್ಲಿ ಟಾಫ್ಟರವರು ತಮ್ಮ ಪಕ್ಷದಿಂದ ಅಧ್ಯಕ್ಷಗಿರಿಗೆ ನಾಮಕರಣ ಪಡೆಯಲು ಮೊದಲಾಗಿ ಸ್ಪರ್ಧಿಸಿದರು. ಆದರೆ ವಿಶ್ವಪ್ರಖ್ಯಾತರಾಗಿದ್ದ ವಿ॥ ವೆಂಡೆಲ್ ವಿಲ್ಕಿಯವರು ಇವರನ್ನು ಸೋಲಿಸಿದರು ೧೯೪೪ ಮತ್ತು ೧೯೪೮ರಲ್ಲಿ ಮಿ॥ ರಾಬರ್ಟ್ ಟಾಫ್ಟರವರು ಮತ್ತೆ ಪ್ರಯತ್ನಿಸಿದಾಗ ಮಿ॥ ಥಾಮಸ್ ಡ್ಯೂಯಿರವರು ಇವರನ್ನು ಸೋಲಿಸಿದರು. ೧೯೫೨ರಲ್ಲಿ ಮತ್ತೆ ಇಂದಿನ ಅಧ್ಯಕ್ಷರಾದ ಮಿ॥ ಐಸನ್‌ಹೋವರ್‌ರವರಿಂದಲೇ ಪರಾಜಯ ಪಡೆದರು. ಹೀಗಾಗಿ ೧೯-೦ರಿಂದೀಚೆಗೆ ಬಂದ ಅಧ್ಯಕ್ಷರ ನೀತಿಯನ್ನೆಲ್ಲಾ ವಿರೋಧಿಸುತ್ತಿದ್ದಾರೆ. ಮಿ॥ ರೂಸ್ವೆಲ್ಟರಿಗಾಗಲೀ, ಮಿ ಟ್ರೂಮನ್ನರಿಗಾಗಲೀ ಟಾಫ್ಟರ ವಿರೋಧದಿಂದ ಹೇಚಾಟವಿರಲಿಲ್ಲ; ಅವರುಗಳು ಪ್ರತಿ ಪಕ್ಷದವರಾಗಿದ್ದುದೇ ಇದಕ್ಕೆ ಕಾರಣ. ಆದರೆ ಈಗ ಟಾಫ್ಟರವರು ದೂರಾಲೋಚನೆ ಇಲ್ಲದೆ ವಿಚಿತ್ರವಾಗಿ ಮಾತನಾಡುತ್ತಿರುವುದು ಮಿ॥ ಐಸನ್‌ಹೋವರ್‌ರವರಿಗೆ ತಲೆನೋವನ್ನುಂಟು ಮಾಡಿದೆ. ಇಬ್ಬರೂ ರಿಪಬ್ಲಿಕ್ ಪಕ್ಷದವರಾಗಿರುವುದೇ ಇದಕ್ಕೆ ಕಾರಣ. ವಿಶ್ವ ಸಂಸ್ಥೆಯಿಂದಾಗಿ ಕೊರಿಯಾದಲ್ಲಿ ಶಾಂತಿ ನೆಲಸುವ ಇಂದಿನ ವಾತಾವರಣದಲ್ಲಿ ಮಿ॥ ರಾಬರ್ಟ್ ಟಾಫ್ಟರವರು ಅಮೇರಿಕಾವು ವಿಶ್ವಸಂಸ್ಥೆಯನ್ನು ತ್ಯಜಿಸಬೇಕೆಂದು ಗಟ್ಟಿ ಮಾತನಾಡುತ್ತಿದ್ದಾರೆ.

ಇಷ್ಟಾಗಿ, ಸಿಗರೇಟನ್ನೂ ಸೇವಿಸದೆ ನೀತಿವಂತ ಟಾಫ್ಟರವರು ತಮಗೆ ತಾವು ಪ್ರೋಹವೆಸಗುವವರಲ್ಲ; ಪ್ರಚಾರ ಕೀರ್ತಿಯನ್ನು ಅಪೇಕ್ಷಿಸುವವರೂ ಅಲ್ಲ. ಅಮೇರಿಕಾದಲ್ಲಿ 'ಮಿ॥ ರಿಪಬ್ಲಿಕನ್' ಎಂದು ಪ್ರಖ್ಯಾತರಾಗಿರುವ ಟಾಫ್ಟರವರ ಹಿತವಲ್ಲದ ಅಭಿಪ್ರಾಯವೆಲ್ಲಾ ಅವರ ನಂಬಿಕೆಯಿಂದಲೇ ಬಂದಿವೆ.

—ರಾಷ್ಟ್ರ ಪ್ರೆಸ್ ಫೀಚರ್ಸ್

ಧರ್ಮ ರಹಸ್ಯ.

ಈ ನಾಡಿಗಿಂಥಾ ಕಾಡು ಹಿತ.

= ಭರ್ತೃಹರಿಯ ವೈರಾಗ್ಯ ಶತಕದಿಂದ =

(೧) ಈ ಹೊಟ್ಟೆಯು ಯೋಚಿಸಲಿಕ್ಕೆ ಪ್ರೇರೇಪಿಸುತ್ತದೆ. ಇದನ್ನು ತುಂಬ ಸ್ವಸ್ಥ ಕುಳಿತುಕೊಳ್ಳುವದು ಸಾಧ್ಯವಿಲ್ಲ. ಲಜ್ಜೆಯೆಂಬ ಲತಾ ವಿತಾನಕ್ಕೆ ಈ ಹೊಟ್ಟೆಯ ಚಿಂತೆ ಒಂದು ಕೊಡಲಿಯಂತಿದೆ. ಈ ಹೊಟ್ಟೆಯೇ ಕೀರ್ತಿ ಗೌರವಗಳನ್ನು ನಾಶಮಾಡುವದು. ಉದರವೇ ಪರತಂತ್ರ್ಯಕ್ಕೆ ಮೂಲ.

(೨) ಪ್ರಶಾಂತವಾದ ಗ್ರಾಮದಲ್ಲೋ, ವನದಲ್ಲೋ ತಂಗಿ ಹಸಿದ ಅಭಿಮಾನ ಪುರುಷನು ಭಿಕ್ಷಾ ಪಾತ್ರೆಯನ್ನು ಹರಿಸಿಯಾದರೂ ಆ ನಾಡಿನ ಮನೆ ಮನೆಗೆ ನಡೆದು ಜೀವಿಸುವದು ಉತ್ತಮವೆನ್ನಬಹುದು. ಆದರೆ ಬಂಧುಗಳೆಡೆಯಲ್ಲಿದ್ದು ಕಾಡಿ, ಬೇಡಿ, ಸಹಾಯ ಕೇಳಿ ಜೀವನ ಮಾಡುವದು ಉತ್ತಮವಲ್ಲ. ಬಂಧುಗಳೆಡೆಯಲ್ಲಿ ಮಾನ ಉಳಿಯದು.

(೩) ಗಂಗಾತೀರದ ತಂಪಾದ ಸ್ಥಳ, ವಿದ್ಯಾಧರರು ಕುಳಿತು ಆನಂದಿಸಿದ ಪವಿತ್ರ ಸ್ಥಳಗಳು ಇಂದೂ ಇವೆ ಮಾಯವಾಗಿಲ್ಲ. ಹೀಗಿದ್ದು ಬಡತನ ಬಂತೆಂದು ಮಾನ ತೊರೆದು ಅನ್ಯರ ಕಾಲಿಗೆ ಬಾಯ್ಬಿಡುತ್ತಾ ಜನರೇಕೆ ತಿರುಗುವರು? ಲಜ್ಜಾಹೀನನಾಗಿ ನಾಗರಿಕನೆನಿಸುವದಕ್ಕಿಂತಾ ಅಭಿಮಾನಿಯಾಗಿ ವನವಾಸಿಯಾಗಿರುವದು ಮೇಲು.

(೪) ಹಸಿವೆ ದಾಹಗಳನ್ನು ತಣಿಸಲಿಕ್ಕೆ ಅಂದಿದ್ದ ಗಿರಿಗುಹೆಗಳಲ್ಲಿನ ಕಂದಮೂಲಗಳೂ, ನದಿಗಳೂ ಇಂದು ಮಾಯವಾಗಿರುವವೇ? ಮಧುರ ಫಲಗಳನ್ನೀಯುವ ಮರಗಳಿಗೇನು ಕೊರತೆ ಇದೆಯೆ? ಮತ್ತೇಕೆ ವಿನಯಶೂನ್ಯರಾದ ದುಷ್ಟ ಅಧಿಪತಿಗಳ ಹತ್ತಿರದಲ್ಲಿ, ಬಹಳ ಕಷ್ಟಕ್ಕೊಳಗಾದುದನ್ನು ಕಂಡು ಅಲ್ಪ ಹಣ ಕೊಟ್ಟು ಹುಬ್ಬು ಹಾರಿಸುವ ಸರಾಫರಲ್ಲಿ ಆಶ್ರಯ ಬೇಡಿ ನಿಲ್ಲುವಿರಿ?

(೫) ಮನುಜಾ, ಈಗಲೇ ಪರಿಪಕ್ವವಾದ ಕಂದ ಮೂಲಗಳಿಂದ ಜೀವನ ನಡೆಸಲು ಅಭ್ಯಾಸಮಾಡು. ನಿನ್ನ ಬೆಡಿಕೆಗಳನ್ನು ಕಡಿಮೆ ಮಾಡು. ಎಳೆ ತಳಿರಿನ ಹಾಸಿಗೆಯಲ್ಲಿ ಸುಖ ಪಡಲು ಕಲಿ. ನಡೆ ಕಾಡಿಗೆ. ಅವಿವೇಕಿಗಳಾಗಿ, ಹಣ-ಹಣವೆಂಬ ಆಕಾರೋಗದಲ್ಲಿ ಬಿದ್ದ ಪನಿಕರ, ರಾಜರ ಹೆಸರಿಲ್ಲದ ಕಾಡು ಆವರಿರುವ ನಾಡಿಗಿಂಥಾ ಉತ್ತಮ.

DALU'S TUTORIAL SCHOOL,
NAPOKLU, (South Coorg).
SPECIAL COACHING FOR MADRAS SUPPLEMENTARY,
S· S· L· C· STUDENTS,
CLASSES FROM 1st JULY, 1953.
Efficient coaching by Experienced Tutors.
Hostel for Mofussil Students
Lady Students admitted but no Hostel accomodation
EASY SUCCESS
Don't miss the Golden opportunity
Apply with Four Annas Stamps for details
o Contact the undersigned in person.
M. M. Machaiah
DIRECTOR.
2-1

ನಗು ಮಲ್ಲಿಗೆ

ತಂಗಿ—ಅದೇನು, ಅಕ್ಕಾ?
ಅಕ್ಕ—ಅದು ಕೋಣ!
ತಂಗಿ—ಕೋಣ ಎಂದರೇನು?
ಅಕ್ಕ—ಆ ದಡ್ಡ ಹುಡುಗ, ಎಮ್ಮೆ.

• • •

ತಂಗಿ—ಬಸ್ಸು ಬೆಟ್ಟ ಹತ್ತುವಾಗ ಯಾಕೆ ಅಷ್ಟು ಶಬ್ದ ಮಾಡುವದು?

ಅಕ್ಕ—ಅದು ಬೆಟ್ಟ ಹತ್ತಲು ಕೂಡದೆ ಅಳುವದು.

* • •

ಟೆನ್‌ಸಿಂಗ್ ಹಿಲರಿಯವರು ಎವರೆಸ್ಟ್ ಶಿಖರದ ತುದಿಯ ಪಕ್ಕಕ್ಕೆ ಮುಟ್ಟುವಾಗ ಅವರಿಗೆ ಈ ಆಕಾಶಧ್ವನಿಯು ಕೇಳಿತಂತೆ—"ಛಾಯ, ಛಾಯ! ನಾರಂಜ್, ನಾರಂಜ!"

ಅಲ್ಲಿ ಯಾರನ್ನೂ ಕಾಣಲಿಲ್ಲ. ಅದರಿಂದ ಅವರಿಗೆ, ತಮಗಿಂತಲೂ ಮೊದಲಾಗಿ, ಯಾರೋ ಇಲ್ಲಿಗೆ ತಲಪಿರಬಹುದೆಂದೂ ಅವರು ಅಲ್ಲಿಂದ Marsಗೆ ಪಯಣ ಹೊರಟಿರಬಹುದೆಂದೂ ಸಂಶಯವು ಹುಟ್ಟಿದೆ.

• • •

ಉಪಾಧ್ಯಾಯ— ಮೊನ್ನೆ ಹುಟ್ಟಿದ ಆ ಎಲಿಝಬೆತ್ ಹುಡುಗಿ, ಈಗ ಇಂಗ್ಲೆಂಡಿನ ರಾಣಿಯಾದಳಲ್ಲ, ಏನು ಆಶ್ಚರ್ಯ. ಈ ಜಗತ್ತಿನಲ್ಲಿ ಏನೆಲ್ಲ ಆಗುವದು!

ವಿದ್ಯಾರ್ಥಿ—ಹಾಗಾದರೆ ನಾನು ಏನು ಆಗಬಹುದು ಸಾರ್.

* * *

ಒಬ್ಬ ಹುಡುಗ—ಅದೇಕೆ, ಬೆಂಗಳೂರಿನಿಂದ ಬಂದ ಆಟಗಾರರೆಲ್ಲ ಕಪ್ಪಗೆ ಇದ್ದಾರೆ?

ಮತ್ತೊಬ್ಬ ಹುಡುಗ—ಅಲ್ಲಿ ಮಳೆಯು ಬಹಳ ಕಮ್ಮಿಯಾಗಿ ನೀರಿಗೆ ತೊಂದರೆ!

K. M. P.

• * *

ಅತ—ಒಬ್ಬ ಮನುಷ್ಯನು ಕಳವು ಮಾಡಿದರೆ ಅದಕ್ಕಾಗಿ ನಂತರ ಆತನು ಪಶ್ಚಾತ್ತಾಪ ಪಡಲೇಬೇಕಾಗುತ್ತದೆ.

ಆಕೆ—ನಾವು ಮದುವೆಯಾಗುವ ಮೊದಲು ನೀವು ಕದ್ದು ಕೊಟ್ಟ ಮುತ್ತುಗಳ ವಿಚಾರವೇನು?

ಅತ—ಅದಕ್ಕಾಗಿ ಜೀವನವಿಡೀ ಪಶ್ಚಾತ್ತಾಪಡುತ್ತಿರುವೆನು.

• • •

ಆಕೆ—ಯುದ್ಧದಲ್ಲಿ ನೀನು ಗಾಯಗೊಂಡೆ. ಎಲ್ಲಿ ಗಾಯವಾದುದು?
ಅತ— ಡಾರ್ಡೆನೆಲ್ಸ್‌ನಲ್ಲಿ.
ಆಕೆ—ಎಷ್ಟು ಭಯಂಕರ!

• • •

ಕೆಲಸಗಾರ—ಅಯ್ಯೋ, ನಾನಿನ್ನು ಕೆಲಸದಲ್ಲಿರಲಾರೆ. ಯಜಮಾನಿಯ ಮಾತು ಸಹಿಸಲಾಗುವದಿಲ್ಲ.

ಯಜಮಾನ—ಆಕೆ ಬಹು ಕಠಿಣಳೆಂದು ಹೇಳುವೆಯಾ? ಏನು ತೊಂದರೆ ಕೊಡುತ್ತಾಳೆ?

ಕೆಲಸಗಾರ—ನಿಮ್ಮ ಹಾಗೆ ಅವರನ್ನು ಬಿಟ್ಟು ಹೋಗಲು ನನಗೆ ಸಾಧ್ಯವಿಲ್ಲವೆಂದು ಅವರು ತಿಳಿದಂತಿದೆ. ಆದ್ದರಿಂದ ನನ್ನನ್ನು ನಿಮ್ಮಂತೆ ತಿಳಿದುಕೊಂಡು ಯಜಮಾನಿಕೆ ನಡೆಸುತಿದ್ದಾರೆ. ಅದು ನಡೆಯದು.

* * *

ನಗರದ ಶಾಲೆಯೊಂದರಲ್ಲಿ ಪಕ್ಷಿಗಳ ವಿಚಾರವಾಗಿ ಪಾಠ ಹೇಳಿಕೊಡಲಾಗುತಿತ್ತು. ಅಧ್ಯಾಪಕಿಯು ಹೇಳಿದಳು— ಮಕ್ಕಳೇ ಪಕ್ಷಿಗಳು ಹಣ್ಣುಹಂಪಲುಗಳನ್ನು ತಿನ್ನುತ್ತವೆ.

ಇದನ್ನು ಕೇಳಿ ಒಂದು ಚಿಕ್ಕ ಮಗು ಎದ್ದು ನಿಂತು ಕೇಳಿತು—ಟೀಚರ್, ಹಾಗಾದರೆ ಪಕ್ಷಿಗಳು ಹಣ್ಣಿರುವ ಟಿನ್ನುಗಳನ್ನು ಒಡೆಯುವದು ಹೇಗೆ?

* * *

ಗಣೇಶ—ಜಿಮ್ಮನ್ನು ಆಸ್ಪತ್ರೆಯಲ್ಲಿ ಬಹು ದಿನಗಳ ವರೆಗೆ ಇರುವನು.

ರಾಮ—ಏಕೆ ಆತನು ಡಾಕ್ಟರರನ್ನು ಕಂಡಿರುವನೇ?

ಗ-ಇಲ್ಲ. ನರ್ಸನ್ನು!

ಹುಚ್ಚರ ಪಟ್ಟಿ

ಗಾನರತ್ನಾ

ಕನ್ನಡದ ನುಡಿಯೆತ್ತಿ, ಕವನಗಳ ಸ್ವರವೆತ್ತಿ,
ಹಾಡುವೆಯದೇನ ನೀ ಗಾನರತ್ನಾ!
ತಂಬೂರಿಯಂ ಪಿಡಿದು, ಉಚ್ಚಶ್ರುತಿಯಂ ಮಿಡಿದು
ಆಲಾಪಿಸುವದೇನ ಗಾನರತ್ನಾ!

ಕವಿವರರು ಪೆಂಪುಗಳ ಅಂಬಿಕಾತನಯರರ
ರಸಿಕತೆಯನೆತ್ತಿ ನೀ ಸಾರಲೆಳಸುವಿಯೇಂ?
ಕನ್ನಡದ ಜನತೆಯಲಿ, ಅತೀವ ಮಮತೆಯಲಿ,
ಕನ್ನಡದ ಶೋಭೆಯನು ಬೀರಲೆಳಸುವಿಯೇಂ?

ಅದು ಮರುಳು ನೋಡಿತ್ತ, ಪಾಶ್ಚಿತ್ತ್ಯ ಮದಲತ್ತ
ಜನರ ಜಂಗುಳಿ ನೆರೆದು ಮೊರೆಯುತಿದೆ ನೋಡು!
ಪಾಶ್ಚಿತ್ತ್ಯ ಗಾನಗಳ, ತಾರೆಯರ ಮೇಳಗಳ
ಸಂಭ್ರಮದಿ ಪ್ರೈಮದಿಮ ಮೆರೆಯುತಿದೆ ನೋಡು

ಬೇಲೂರು ಹಳೆಬೀಡು, ಹಾಳು ಹಂಪೆಗಳೆಲ್ಲ,
ರುಚಿಸುವವು ಅಲ್ಲ ತಿಳಿ ಗಾನರತ್ನಾ!
ಆಧುನಿಕ ನಾಗರಿಕ ಬಿರುಗಾಳಿ ಮುಕ್ಕಿದ್ದು
ರಸಿಕತೆಯ ಮರೆಸುತಿದೆ ಗಾನರತ್ನಾ!

"ಸಮೀರ ಕುಮಾರ"

ರಾಷ್ಟ್ರಭಾಷೆಯೊದ ಹಿಂದೀ ಪಂಡಿತರು.

ಕಳೆದ ಶಾಮನ್ ಎಂಟ್ರೆನ್ಸ್ ಪರೀಕ್ಷೆಯ ಹಿಂದೀ ಪ್ರಶ್ನ ಪತ್ರವೊಂದು ನನ್ನ ಕೈಗೆ ಬಂದಿತು. ಅದನ್ನು ಪರಿಶೀಲಿಸುವಾಗ ಅನೇಕ ವ್ಯಾಕರಣ ದೋಷಗಳನ್ನು ಕಂಡು ನನಗೆ ಬಹಳ ಖೇದವೆನಿಸಿತು. ಹಿಂದೀ ಪಂಡಿತರ ಭಾಷಾ ಜ್ಞಾನವೇ ಈ ರೀತಿಯಾದರೆ ವಿದ್ಯಾರ್ಥಿಗಳ ಗತಿ ಏನೆಂದು ಊಹಿಸುವದು ಕಷ್ಟವಲ್ಲ. ಮಾಧ್ಯಮಿಕ ಶಾಲೆಗಳ ಯಾರೋ ಒಬ್ಬ ಹಿಂದೀ ಪಂಡಿತರು ಆ ಪ್ರಶ್ನ ಪತ್ರವನ್ನು ಮಾಡಿರಬಹುದೆಂದು ಊಹಿಸುತ್ತೇನೆ. ಅವರು ಅದನ್ನು ಮುದ್ರಣಕ್ಕೆ ಕಳುಹಿಸುವದಕ್ಕೆ ಮೊದಲು ತನಗಿಂತ ಹೆಚ್ಚು ಹಿಂದೀ ಬಲ್ಲವರಿಗೆ ತೋರಿಸಿದ್ದರೆ ಉತ್ತಮವಿತ್ತು. ತನ್ನನ್ನು ಹಿಂದೀ ಪಂಡಿತನೆಂದು ವಿದ್ಯಾ ಇಲಾಖೆಯೇ ಪರಿಗಣಿಸಿರುವಾಗ ತನ್ನ ಭಾಷೆಯಲ್ಲಿ ಕುಂದುಕೊರತೆಗಳೆಂದರೇನೆಂದು ಅವರು ಯೋಚಿಸಿದರೇ ಅಥವಾ ಹಿಂದೀ ಎಂಬುದು ಶಾಲೆಗಳಲ್ಲಿ ಒಂದು ನಗಣ್ಯ ವಿಷಯ; ಅದರಲ್ಲಿ ವಿದ್ಯಾರ್ಥಿಯು ಪಾಸಾಗದಿದ್ದರೂ ಚಿಂತೆಯಿಲ್ಲ; ಮುಂದಕ್ಕೂ ಅತ್ಯಲ್ಪ ಮಾರ್ಕುಗಳು ದೊರೆತರೂ ಫೈಲಾಗುವ ಭಯವಿಲ್ಲವೆಂದಿರುವಾಗ ಪ್ರಶ್ನ ಪತ್ರವು ಹೇಗಿದ್ದರೇನು, ಉತ್ತರ ಪತ್ರವನ್ನು ಹೇಗೆ ತಿದ್ದಿದರೇನು ಮತ್ತು ಹಿಂದಿಯನ್ನು ಹೇಗೆ ಕಲಿಸಿದರೇನೆಂದು ಈ ಉಕ್ತ ಪಂಡಿತರೇ ಅಲ್ಲ ಇತರ ಹಿಂದೀ ಪಂಡಿತರೂ ಯೋಚಿಸುತ್ತಿರಬಹುದು.

ಮೇಲೆ ಹೇಳಿದ ಹಿಂದೀ ಪಂಡಿತನಿಗಿಂತ ಉತ್ತಮ ಜ್ಞಾನ ಉಳ್ಳವನು ವಿದ್ಯಾ ಇಲಾಖೆಗೆ ದೊರೆಯುವದಾದರೂ ಹೇಗೆ? ಹಿಂದೀಯಲ್ಲಿ ಕೇವಲ ರಾಷ್ಟ್ರಭಾಷೆಯಾಗಿದ್ದರೆ ಸಾಕಂತೆ. ಹಿಂದೀ ಪಂಡಿತನು ಮೆಟ್ರಿಕ್ಕೋ ಅಥವಾ ನಾನ್ ಮೆಟ್ರಿಕ್ಕೋ ಎಂಬುದನ್ನು ನೋಡಿಯೇ ಆತನ ಸಂಬಳವು ನಿಶ್ಚಿತವಾಗುವುದು. ಹಿಂದಿಯ ವಿಶೇಷ ಯೋಗ್ಯತೆಯ ದೆಸೆಯಿಂದ ಆತನಿಗೆ ದೊರೆತ ಪ್ರಯೋಜನವೇನೆಂದರೆ ಆತನು ಉಪಾಧ್ಯಾಯರ ತರಬೇತನ್ನು ಹೊಂದಬೇಕಾದುದು ಅಗತ್ಯವಿಲ್ಲ. ಅದರ ಪರಿಣಾಮವಾಗಿ ಆತನು ಮಾಡಿದುದೇ ಪಾಠ; ಇನ್ಸ್‌ಪೆಕ್ಟರಿಗೆ ಹಿಂದೀ ತಿಳಿಯದ ಭಾಷೆಯಾಗಿರುವಾಗ ಉಪಾಧ್ಯಾಯನನ್ನು ಎಚ್ಚರಿಸುವವರು ಯಾರು? ಹಿಂದೀ ಗೊತ್ತಿಲ್ಲದ ತನ್ನಷ್ಟೇ ವಿದ್ಯಾಭ್ಯಾಸವನ್ನು ಪಡೆದ ಇತರ ಉಪಾಧ್ಯಾಯನಿಗಿಂತ ತನಗೆ ಹೆಚ್ಚಿಗೆ ಸಂಬಳವಿಲ್ಲದಿರುವಾಗ ತನ್ನ ಭಾಷಾಜ್ಞಾನವನ್ನು ಹೆಚ್ಚಿಸಿಕೊಳ್ಳುವದರಲ್ಲಿ ಯಾವ ಪುರುಷಾರ್ಥವೂ ಇಲ್ಲವೆಂದು ಹಿಂದೀ ಶಿಕ್ಷಕನು ಯೋಚಿಸುತ್ತಿರಬಹುದು. ವಿದ್ಯಾ ಇಲಾಖೆಗೆ ತಾನು ಕೊಡುವ ಸಂಬಳಕ್ಕೆ ಬರಲು ಸಿದ್ಧನಿರುವ ಹಿಂದೀ ಪಂಡಿತನು ಬೇಕು; ನಿರುದ್ಯೋಗಿಯಾದವನಿಗೆ ಸಂಬಳ ಎಷ್ಟಿದ್ದರೂ ಸರಿಯೆ, ಉದ್ಯೋಗ ಬೇಕು. ಆಗ ವಿದ್ಯಾರ್ಥಿಗಳ ಪಾಲಿಗೆ ದೊರೆಯುವ ಹಿಂದೀ ಉಪಾಧ್ಯಾಯನು ಪ್ರಾರಂಭದಲ್ಲಿ ಹೇಳಿದ ಉಪಾಧ್ಯಾಯನಿಗಿಂತ ಉತ್ತಮನಾದವನು ದೊರೆಯುವದು ಕಷ್ಟ; ಒಂದು ವೇಳೆ ದೊರೆತರೂ ಆತನು ಕೆಳಮಟ್ಟಕ್ಕೆ ಇಳಿಯುವ ಸಂಭವವೇ ಹೆಚ್ಚು.

ಆದುದರಿಂದ ವಿದ್ಯಾರ್ಥಿಗಳಿಗೆ ತುಂಬಾ ಕೇಡಿದೆ ಎಂದು ಹೇಳಬೇಕಾಗಿಲ್ಲವಷ್ಟೇ. ರಾಷ್ಟ್ರಭಾಷೆಯಾದ ಹಿಂದಿಯು ಗಣ್ಯವಲ್ಲದ ವಿಷಯವೆಂದು ಯಾರಾದರೂ ತಿಳಿದಿದ್ದರೆ ಅವರನ್ನು ಮೂರ್ಖರೆಂದು ಹೇಳಲು ಯಾವ ಸಂಕೋಚವೂ ಇಲ್ಲ.

ಆದುದರಿಂದ ನಮ್ಮ ಶಾಲೆಗಳಲ್ಲಿ ಹಿಂದೀಯ ಶಿಕ್ಷಣವು ಸಮರ್ಪಕವಾಗಿ ಆಗಬೇಕೆಂದಿದ್ದರೆ ವಿದ್ಯಾ ಇಲಾಖೆಯು ಈ ಕೆಳಗಿನ ನಮ್ರ ಸೂಚನೆಗಳಿಗೆ ಗಮನಕೊಡಬೇಕೆಂದು ಪ್ರಾರ್ಥನೆ,

(೧) ಮಾಧ್ಯಮಿಕ ಶಾಲೆಗಳ ಪ್ರತಿಯೊಬ್ಬ ಹಿಂದೀ ಪಂಡಿತರೂ ಇನ್ನು ಎರಡು ವರೆ ವರ್ಷಗಳೊಳಗೆ "ರಾಷ್ಟ್ರಭಾಷಾವಿಶಾರದ" ಪರೀಕ್ಷೆಯಲ್ಲಿ ತೇರ್ಗಡೆಯಾಗದಿದ್ದರೆ ಆತನನ್ನು ಕೆಲಸದಿಂದ ತೆಗೆದು ಹಾಕಬೇಕು. (೨) ಹಿಂದೀ ಪಂಡಿತನು ಶಿಕ್ಷಣಶಾಲೆಯಲ್ಲಿ ತರಬೇತು ಹೊಂದಬೇಕು. (೩) ಮದ್ರಾಸು, ಮೈಸೂರು ಮೊದಲಾದ ರಾಜ್ಯಗಳಲ್ಲಿ ಯಾವ ರೀತಿ ಹಿಂದೀ ಪಂಡಿತರ ಸ್ಥಾನ ಮಾನಗಳು ಇತರ ಉಪಾಧ್ಯಾಯರುಗಳಿಗಿಂತ ಮೇಲಿನ ಮಟ್ಟದವುಗಳಾಗಿವೆಯೋ ಹಾಗೆಯೇ ಕೊಡಗಿನಲ್ಲೂ ಹಿಂದೀ ಪಂಡಿತರ ಸ್ಥಾನ ಮಾನಗಳನ್ನು ಮೇಲಕ್ಕೆತ್ತಬೇಕು. (೪) ವರ್ಷದಲ್ಲಿ ಒಟ್ಟು ೧೫ ದಿವಸಗಳಾದರೂ ಕೊಡಗಿನ ಎಲ್ಲಾ ಹಿಂದೀ ಉಪಾಧ್ಯಾಯರುಗಳಿಗೆ ರಿಫ್ರೆಶರ್ ಕೋರ್ಸನ್ನು ತೆರೆಯಬೇಕು. (೫) ವರ್ಷದಲ್ಲಿ ಪದೇ ಪದೇ ಒಂದೊಂದು ಕೇಂದ್ರದ ಹಿಂದೀ ಪಂಡಿತರು ಒಡೆದೆ ಕಲೆತು ವಿಚಾರ ವಿನಿಮಯ, ಹಿಂದಿಯಲ್ಲಿ ಚರ್ಚೆ, ಆದರ್ಶ ಪಾಠ ಮೊದಲಾದುವುಗಳನ್ನು ಕೂಡ ತಕ್ಕ ವ್ಯವಸ್ಥೆಯನ್ನು ಮಾಡಬೇಕು. (೬) ಹಿಂದೀ ಪಾಠವಿರುವ ಯಾವ ತರಗತಿಯಲ್ಲೂ ಕಡಿಮೆ ಪಕ್ಷ ೨೫ ಮಾರ್ಕುಗಳಿಗೆ ಕಡಿಮೆ ತೆಗೆದ ವಿದ್ಯಾರ್ಥಿಗಳನ್ನು ಮುಂದಿನ ತರಗತಿಗೆ ಹಾಕಕೂಡದೆಂದು ಒತ್ತಾಯಪಡಿಸಬೇಕು.

ಪಾ. ಭಗವಾನ್‌ದಾಸ್.

॥ ಶೆರ್ಪಾ ತೇನಸಿಂಗರ ಸಾಹಸ ಜೀವನ ॥

ಟಿಬೇಟಿನ ನಿವಾಸಿಗಳು ಹಿಮಾಲಯದ ಉತ್ತುಂಗ ಶಿಖರವಾದ ಗೌರೀಶಂಕರವನ್ನು ಕುರಿತು ಹೀಗೆ ವರ್ಣಿಸುವುದುಂಟು '....ಸ್ವರ್ಗದ ಈ ದಿವ್ಯ ಶಿಖರದಲ್ಲಿ ದೇವಾಧಿ ದೇವನ ವಜ್ರ ಶಕ್ತಿನಿವಾಸವಾಗಿದೆ. ಸಪ್ತ ಲೋಕದ ಆಕಾಶಗಳು ಇಲ್ಲಿ ಬಂದು ಪ್ರತಿ ಅರುಣೋದಯಕ್ಕೂ ಶ್ರದ್ಧಾಂಜಲಿ ಅರ್ಪಿಸುತ್ತವೆ....ಈ ದಿವ್ಯಧಾಮದಲ್ಲಿ ಪದಾರ್ಪಣ ಮಾಡುವ ಸಾಹಸ ಅಮರರಲ್ಲಿ ಸಹ ಇಲ್ಲ' ಮೊನ್ನೆಯ ವರೆಗೆಬಂದರೆ ಹಿಂದೊಂದೆಂಬಂತೆ ಗೌರೀಶಂಕರವನ್ನು ಆರೋಹಿಸುವ ಪ್ರಯತ್ನಗಳು ವಿಫಲಗೊಂಡುದನ್ನು ಕಂಡು ಟಿಬ್ಬತೀಯರ ಈ ವಿಶ್ವಾಸವೇ ನಿಜವಿದ್ದೀತೆಂದು ನಂಬಿದ್ದರು. ಆದರೆ ಇಂದು ಬಂದಿರುವ ಸಂತೋಷ ವಾರ್ತೆಯಂತೆ ಗೌರೀಶಂಕರ ಮನುಷ್ಯನ ಅದಮ್ಯ ಉತ್ಸಾಹಕ್ಕೂ ಅದ್ಭುತ ತಪಸ್ಸಿಗೂ ತಲೆಬಾಗಿ ಇಷ್ಟಾರ್ಥವನ್ನು ಅನುಗ್ರಹಿಸಿರುತ್ತದೆ ಅಜೇಯವೆನಿಸಿದ್ದ ಶಿಖರ ಮಾನವನ ಪದತಲಹತಿಗೆ ಇಂಬುಗೊಟ್ಟಿದೆ. ಬ್ರಿಟಿಷ್ ಪರ್ವತಾರೋಹಿ ತಂಡದ ನ್ಯೂಜೀಲೆಂಡ್ ಸದಸ್ಯ ಮಿಸ್ಟರ್ ಇ. ಪಿ. ಹಿಲಾರಿ ಮತ್ತು ನೇಪಾಳದಲ್ಲಿ ಹಿಮಾಲಯದ ಹುಲಿ ಎಂದು ಹೆಸರಾದ ಶ್ರೀ. ತೇನ ಸಿಂಗರು ಈ ಅಭೂತಪೂರ್ವ ದಾಖಲೆಯನ್ನು ಸ್ಥಾಪಿಸಿ, ಚಿರಂತನ ಕೀರ್ತಿ ಸಂಪಾದಿಸಿರುವರು.

ಹಿಮಾಲಯದ ಹುಲಿ.

[illegible] ತೇನಸಿಂಗರ ಹೆಸರು ಭಾರತದಲ್ಲಿ ಇದೇ ಈಗ ಪ್ರಸಿದ್ಧಗೊಂಡಿರುವುದಾದರೂ ಪಾಶ್ಚಾತ್ಯ ದೇಶಗಳಲ್ಲಿ ತೇನಸಿಂಗರ ಹೆಸರು ಹಿಮಾಲಯದಷ್ಟೇ ಚಿರಪರಿಚಿತವಾಗಿರುತ್ತದೆ. ವಿದೇಶಗಳಲ್ಲಿ ರಾಜಕೀಯ ಧುರೀಣರು ಪಡೆಯುವಷ್ಟೇ ಸಮಾಧಾನವನ್ನು ಕವಿಗಳು ಕಲಾಕಾರರು, ಆಟಗಾರರು ಮತ್ತು ತೇನಸಿಂಗರಂಥ ಸಾಹಸಿಗಳು ಪಡೆಯುವರೆಂಬುದು ಅಭಿನಂದನೀಯವಾದಂತೆ ಅನುಕರಣೀಯವಾದ ವಿಷಯ. ಇಂಥ ಸಾಹಸಿಗಳ ಜೀವನ ಚರಿತ್ರವನ್ನೊಳಗೊಂಡ ಪುಸ್ತಕಗಳು ಅಚ್ಚಾಗಿ ಪ್ರಕಟಗೊಂಡಾಗ, ಅವುಗಳನ್ನು ಅತ್ಯಂತ ಆಸ್ಥೆಯಿಂದ ಕೊಂಡು ಓದುವ ಜನರಿಗೆ ಮಿತಿ ಇಲ್ಲ. ಆದರೆ ನಮ್ಮ ಜಡ ಪ್ರಕೃತಿಗೆ ಏನೆನ್ನೋಣ. ಅನ್ಯಥಾ ತೇನ ಸಿಂಗರಂಥ ಸಾಹಸಿಯ ಹೆಸರನ್ನು ಇದೀಗ ಮೊದಲನೇ ಬಾರಿ ನಾವು ಕೇಳುತ್ತಿರುವುದಕ್ಕೆ ಬೇರೇನು ಸ್ಪಷ್ಟೀಕರಣವಿದೆ?

ತೇನ ಸಿಂಗರನ್ನು ಗೌರೀಶಂಕರ ವಿಜಯಿಯೆಂದು ಸನ್ಮಾನಿಸಲು ಭಾರತದಲ್ಲಿಯೂ ನೇಪಾಳದಲ್ಲಿಯೂ ಈಗ ಭರದಿಂದ ಸಿದ್ಧತೆಗಳು ನಡೆದಿವೆ. ಆದರೆ ನಮಗಿಂತ ನೂರಾರು ಪಾಲು ಹೆಚ್ಚು ಸಂಭ್ರಮದ ಸ್ವಾಗತ ಈ ಸಾಹಸಿಗೆ ಪಾಶ್ಚಾತ್ಯ ದೇಶಗಳಲ್ಲಿ ಕಾದಿರುತ್ತದೆ ಎಂಬುದು ನಿರ್ವಿವಾದ. ತೇನ ಸಿಂಗರಿಗೆ ಈಗ ೩೯ ವಯಸ್ಸು. ಪೂರ್ವ ನೇಪಾಳದ ಸೋಲೋಖುಂಬ ಎಂಬ ಹಳ್ಳಿಯಲ್ಲಿ ಜನ್ಮವೆತ್ತಿದ ಗೂರ್ಖಾ. ಬಾಲ್ಯದಿಂದಲ ತೇನ ಸಿಂಗರಿಗೆ ಶಾಂತಿಮಯ ಜೀವನ ನೀರಸವೆಂದೇ ಭಾಸವಾಗುತಿತ್ತು. ಹೀಗಾಗಿ ಮನೆಯಿಂದ ಓಡಿಹೋಗಿ ಡಾರ್ಜಿಲಿಂಗದಲ್ಲಿ ಹಿಮಾಲಯಾರೋಹಣ ಪ್ರ-

ಗೌರೀಶಂಕರವನ್ನೇರಿ ಶಿಖರದಲ್ಲಿ ಶಿರಸ್ಸಿಟ್ಟ ಪುಣ್ಯಜೀವಿ.

ಯತ್ನ ಮಾಡುತ್ತಿದ್ದ ಒಂದು ದಳವನ್ನು ಸೇರಿಕೊಂಡರು. ಈ ದಳದಲ್ಲಿ ಕೂಲಿಯಾಗಿ ಶೆರ್ಪಾ ತೇನ ಸಿಂಗರು ಕೆಲಸ ಮಾಡಿದರು. ಅಂದಿನಿಂದ ತೊಡಗಿ ಈ ಸಾಹಸಮಯ ಜೀವನದಲ್ಲಿ ತೇನ ಸಿಂಗರು ಹಿಮಾಲಯದ ಎಷ್ಟೋ ಸಣ್ಣ ದೊಡ್ಡ ಗಿರಿ ಶಿಖರಗಳನ್ನು ತುಳಿದು ಏರಿ ಬಂದಿರುವರು. ಆದರೆ ಗೌರೀ ಶಂಕರದ ಮುಂದೆ ಶಿರಬಾಗಿಯೇ ಬೇಕೆಂಬ ಏಕಮಾತ್ರ ಅಭಿಲಾಷೆ ಕೈಗೂಡಿರಲಿಲ್ಲ. ಮೊನ್ನೆ ತಾನೆ ಶೆರ್ಪಾ ತೇನಸಿಂಗರು ಆ ದಿವ್ಯಧಾಮದ ದರ್ಶನ ಭಾಗ್ಯ ಪಡೆದರು.

ದೃಢ ಸಂಕಲ್ಪ.

೧೯೩೫ ರಲ್ಲಿ ಪ್ರಸಿದ್ಧ ಆಂಗ್ಲ ಪರ್ವತಾರೋಹಿ ಎರಿಕ್ ಶಿಪ್ಟನರ ದಳದಲ್ಲಿ ಸೇರಿಕೊಂಡು ಶೆರ್ಪಾ ತೇನ ಸಿಂಗರು ೨೪ ಸಾವಿರ ಅಡಿ ಎತ್ತರಕ್ಕೆ ಮುಟ್ಟಿದ್ದರು. ಆದರೆ ಸಾಮಾನು ಹೊರುವ ಸಾಮಾನ್ಯ ಕೂಲಿಯಾಗಿದ್ದುದರಿಂದ ತೇನ ಸಿಂಗರಿಗೆ ಈ ವಿಜಯದ ಶ್ರೇಯ ದೊರಕುವಂತಿರಲಿಲ್ಲ! ಆದರೆ ಈ ಆರೋಹಣ ಕಾಲದಲ್ಲಿ ತೇನ ಸಿಂಗರ ಮಹತ್ವಾಕಾಂಕ್ಷೆ ನಿಶ್ಚಯವಾಗಿಯೂ ಜಾಗೃತಗೊಂಡಿತು. ೨೧ ಸಾವಿರ ಅಡಿ ಎತ್ತರ ಹೋದಾಗ ಹಿಮಾಚ್ಛಾದಿತ ಶರೀರವೊಂದು ಅವರಿಗೆ ಕಾಣಿಸಿತು. ಇದು ವಿಲಿಯಂ ಎಂಬ ಹೆಸರಿನ ೨೭-೨೮ ವರ್ಷ ವಯಸ್ಸಿನ ತರುಣನ ಹೆಣವಾಗಿತ್ತು. ಒಂದು ವರ್ಷಕ್ಕೆ ಮುಂಚೆ ಧನ ಮತ್ತು ಸಾಧನ ವಿಹೀನನಾಗಿ ಭಾರತಕ್ಕೆ ಬಂದು ಕೇವಲ ಇಚ್ಛಾಶಕ್ತಿಯ ಬಲದಿಂದ ಸಂಕಷ್ಟಗಳನ್ನು ಕಡೆಗಣಿಸಿ ಇಷ್ಟು ಎತ್ತರದ ವರೆಗೆ ಈ ಸಾಹಸಿ ತರುಣ ಏರಿಬಂದಿದ್ದನು! ದುರ್ಜಯ ಲಕ್ಷ್ಯದ ಪೂರ್ತಿಗಾಗಿ ಅದಮ್ಯ ಉತ್ಸಾಹವನ್ನು ಪ್ರಕಟಪಡಿಸಿ, ಗೌರೀ ಶಂಕರದ ಸಮ್ಮುಖದಲ್ಲಿ ಪ್ರಾಣತ್ಯಜಿಸಿದ ಈ ಉದಾಹರಣೆಯನ್ನು ಪ್ರತ್ಯಕ್ಷ ಕಂಡು ಶೆರ್ಪಾ ತೇನಸಿಂಗರು ಅಲ್ಲಿಯೇ ಸಂಕಲ್ಪ ಕೈಗೊಂಡರು-'ನನ್ನ ಬದುಕಿನ ಧ್ಯೇಯ ಗೌರೀ ಶಂಕರವನ್ನು ಏರಿ ಆ ದೇವಾಧಿದೇವನ ಚರಣರಜವನ್ನು ಸ್ಪರ್ಶಿಸುವುದೇ ನಿಜ!' ಈ ದೃಢ ಸಂಕಲ್ಪದೊಂದಿಗೆ ವಿಲಿಯಮನ ಮೃತದೇಹಕ್ಕೆ ಸಮ್ಮಾನಪೂರ್ವಕ ವಂದನೆಗೈದರು.

ಮುಂದೆ ಎರಡು ವರ್ಷಗಳಲ್ಲಿ ಸ್ವಿಸ್ ಆರೋಹಣಾದಳದೊಂದಿಗೆ ಕೇದಾರನಾಥ ಸತ್ತೋಪಾನ ಮತ್ತು ಬದರೀನಾಥಗಳಿಗೆ ತೇನ ಸಿಂಗರು ಹೋದರು. ೧೯೩೯ ರಲ್ಲಿ ಅವರು ಇಟಾಲಿಯನ್ ಪ್ರೊಫೆಸರರೊಬ್ಬರ ಮಾರ್ಗದರ್ಶಕನಾಗಿ ಕೆಲಸ ಮಾಡಿದರು. ಇನ್ನೊಂದು ಆಂಗ್ಲ ದಳವನ್ನು ಕೂಡಿಕೊಂಡು ನಂಗಾ ಪರ್ವತವನ್ನು ಏರಿದರು. ಆದರೆ ಈ ಪ್ರಥಮ ಪ್ರಯತ್ನ ಅಸಫಲಗೊಂಡಿತಲ್ಲದೆ ಇಬ್ಬರು ಸದಸ್ಯರು ಮೃತ್ಯುವನ್ನಪ್ಪಿದರು. ೧೯೫೦ ರಲ್ಲಿ ಫ್ರಾನ್ಸಿನಿಂದ ಮೂಲೆಯವರ ನೇತೃತ್ವದಲ್ಲಿ ಇನ್ನೊಂದು ದಳ ನಂಗಾ ಪರ್ವತಾರೋಹಣ ಮಾಡಿದಾಗಲೂ ಶೆರ್ಪಾ ತೇನ ಸಿಂಗರು ಮಾರ್ಗದರ್ಶನ ಕಾರ್ಯ ಕೈಗೊಂಡರು. ದುರ್ದೈವದಿಂದ ಈ ದಳವೂ ಧ್ಯೇಯ ಸಾಧನೆಯಲ್ಲಿ ಹಿಂದುಳಿಯಿತು; ಮಾತ್ರವಲ್ಲ ಮೂಲೆಯವರೂ ಮಾರ್ಗ ಮಧ್ಯದಲ್ಲಿಯೇ ತೀರಿಕೊಂಡರು.

ಗೌರೀಶಂಕರ ದರ್ಶನ.

ತೇನ ಸಿಂಗರ ಪತ್ನಿ ಮತ್ತು ಇಬ್ಬರು ಹೆಣ್ಣು ಮಕ್ಕಳು ಡಾರ್ಜಲಿಂಗದಲ್ಲಿರುವರು. ಮನೆಯ ಯಾರೇ ಬಂದರೂ ಅವರಿಗೆ ಭವ್ಯ ಸ್ವಾಗತ ದೊರೆಯುತ್ತದೆ. ಚಾ ಕುಡಿಸದೆ ಕಳಿಸುವ ಪರಿಪಾಟವೇ ಇಲ್ಲ. ಪೂರ್ವಜರು ನೇಪಾಳಿಗಳಾದರೂ ಡಾರ್ಜಿಲಿಂಗದಲ್ಲಿಯೇ ತೇನ ಸಿಂಗರು ನೆಲಸಿರುವರು. ಇವರ ಲೋಕಪ್ರಿಯತೆಗೆ ವಿನೋದಪ್ರಿಯತೆಯೂ ಒಂದು ಕಾರಣ. ಎಷ್ಟೇ ದುರ್ಗಮ ಪ್ರದೇಶವಿರಲಿ, ದಾರಿಯು ಎಷ್ಟೇ ಕಠಿಣವಾಗಿರಲಿ, ನಗುಮುಖದಿಂದ ಈ ಸಾಹಸಿ ಅವುಗಳನ್ನೆದುರಿಸಿ ಪಾರಾಗಿ ಹೋಗುವರು. ಎಂಥ ಭಯಂಕರ ಪರಿಸ್ಥಿತಿಯಲ್ಲೂ ಕುಗ್ಗದೆ ಮುನ್ನಡೆಯುವ ಮನೋಧಾರ್ಢ್ಯ ತೇನಸಿಂಗರಿಗಿದೆ. ಕಳೆದ ವರ್ಷ ಸ್ವಿಸ್ ಪರ್ವತಾರೋಹೀ ತಂಡದೊಂದಿಗೆ ಸೇರಿಕೊಂಡು ಗೌರೀ ಶಂಕರದ ೨೮,೩೦೦ ಅಡಿ ಎತ್ತರವನ್ನು ಸೇರಿದ ತೇನಸಿಂಗರಿಗೆ ಆಗ ಅವರ ಸಂಗಾತಿಯಾಗಿದ್ದ ರಮೊಂಡ್ ಲಂಬರ್ಟರು ಸ್ವಿಜರ್‌ಲೆಂಡಿನಿಂದ ಬರೆದ ಪತ್ರ ಹೀಗಿತ್ತು. 'ನೀವು ಯುರೋಪಿಗೆ ಬಂದ ಪಕ್ಷದಲ್ಲಿ ಸರ್ವತ್ರ ನಿಮಗೆ ಭವ್ಯ ಸ್ವಾಗತ ಕಾದಿರುತ್ತದೆ. ನಿಮ್ಮ ಹೆಸರು ಇಲ್ಲಿ ಎಲ್ಲ ಪರ್ವತಾರೋಹಿಗಳಿಗೂ ಚೆನ್ನಾಗಿ ತಿಳಿದಿರುತ್ತದೆ.'

ನೇಪಾಳ ಸರಕಾರವು ಈ ಶೂರನಿಗೆ ನೇಪಾಳ ಪ್ರತಾಪವರ್ಧಕನೆಂಬ ಉಪಾಧಿಯನ್ನು ಅನುಗ್ರಹಿಸಿ ಕಳೆದ ವರ್ಷ ಗೌರವಿಸಿತು.

೧೯೫೨ ರಲ್ಲಿ ತೇನಸಿಂಗರು ಶಿಖರವನ್ನು ಮುಟ್ಟಲು ಇನ್ನು ೭೦೦ ಅಡಿ ಮುನ್ನಡೆಯಬೇಕೆಂದಿರುವಾಗಲೇ ಪ್ರಾಣವಾಯುವಿನ ಅಭಾವ ಕಂಡುಬಂದುದರಿಂದ ಮರಳಬೇಕಾಯಿತು. ನಲುವತ್ತು ಡಿಗ್ರಿ ಶೂನ್ಯ ತಾಪಮಾನದ ಈ ಅನಿವಾರ್ಯ ಪರಿಸ್ಥಿತಿಯಲ್ಲಿ ಕೂಡ ತೇನಸಿಂಗರು ಹನ್ನೆರಡು ತಾಸುಗಳ ಕಾಲ ಜೀವ ಹಿಡಿದುಕೊಂಡಿದ್ದರೆಂಬುದು ನಿಜವಾಗಿಯೂ ಆಶ್ಚರ್ಯದ ಸಂಗತಿ!

ಮೊನ್ನಿನದು ಕೂಡಿ ಶೆರ್ಪಾ ತೇನಸಿಂಗರು ಒಂಭತ್ತು ಸಲ ಗೌರೀ ಶಂಕರವನ್ನು ಏರಿದಂತಾಯಿತು. ಆದರೆ ಯಾವ ಕಾಲಕ್ಕೂ ವಿದೇಶಿಯರಂತೆ ವಿಜಯಾಭಿಲಾಷೆಯು ಅವರನ್ನು ಮದೋನ್ಮತ್ತರನ್ನಾಗಿ ಮಾಡಿರಲಿಲ್ಲ. ಧರ್ಮಪರಾಯಣತೆಯ ಪರಿಣಾಮದಿಂದೆಂಬಂತೆ ತೇನ ಸಿಂಗರು ತಮ್ಮ ಸಾಹಸವನ್ನು ಹಿಮಾಲಯ ವಿಜಯವೆಂದು ವರ್ಣಿಸದೆ ಗೌರೀ ಶಂಕರ ದರ್ಶನವೆಂದು ವಿನಯದಿಂದ ಹೇಳುವರು. ದೇವಭೂಮಿ ಎನಿಸಿದ ಈ ಉತ್ತುಂಗ ಶಿಖರದಲ್ಲಿ ಪಾದಾರ್ಪಣ ಮಾಡಿ ಅಲ್ಲಿಯ ಮಹಾತ್ಮ್ಯವನ್ನು ತನ್ನ ಕಣ್ಣುಗಳಿಂದ ಕಂಡು ಧನ್ಯವಾಗಬೇಕೆಂಬ ಅಭಿಲಾಷೆ ತೇನಸಿಂಗರದು. ೧೯೫೨ ನೇ ಅಕ್ಟೋಬರದಲ್ಲಿ ನಡೆದ ಪ್ರಯತ್ನದ ಮುಖ್ಯಸ್ಥರಾದ ಡಾ. ಗೆಬ್ರಿಯಲ್ ಶಿವೆಲರ್ರು ತೇನ ಸಿಂಗರ ಮನೋವಾಂಛೆಯನ್ನು ಹೀಗೆ ಕರೆದಿರುವರು-'ತೇನ ಸಿಂಗರು ಹಿಮಾಲಯ ವಿಜಯದಂಥ ಅಪಮಾನ ಜನಕ ಮಾತನ್ನಾಡುವುದಿಲ್ಲ. ಗೌರೀ ಶಂಕರದ ಶಿಖರದಲ್ಲಿ ತಲೆಬಾಗಿ ವಂದಿಸುವುದೇ ಅವರ ಬಯಕೆ. ಈಶ್ವರನು ಈ ಪುಣ್ಯವನ್ನು ಕೊಟ್ಟು ರಕ್ಷಿಸಲೆಂಬುದೇ ಅವರ ಪ್ರಾರ್ಥನೆ.'

ಮಾನವ ಧರ್ಮ.

ತೇನ ಸಿಂಗರಿಗೆ ವಿಶ್ವವ್ಯಾಪಿ ಕೀರ್ತಿಯನ್ನು ಸಂಪಾದಿಸಿಕೊಟ್ಟ ಪುಣ್ಯ ಸ್ವಿಸ್ ಪರ್ವತಾರೋಹಿ ಲಂಬರ್ಟರಿಗೆ ಸೇರಿದೆ. ಅವರ ಪ್ರಯತ್ನದಿಂದ ತೇನ ಸಿಂಗರಿಗೆ ಸ್ವಿಸ್ ಅಲ್ಪ್ಯಾಯಿಯನ್ಸ್ ಕ್ಲಬ್ಬಿನ ಸದಸ್ಯತ್ವ ದೊರೆಯಿತು. ವಿದೇಶಗಳಲ್ಲಿ ಈ ಗೌರವ ದೊರೆತುದನ್ನು ಕಂಡು ದಿಲ್ಲಿಯ ಇಂಡಿಯನ್ ಹಿಮಾಲಯನ್ ಕ್ಲಬ್ಬು ತೇನ ಸಿಂಗರನ್ನು ತನ್ನ ಸಂಸ್ಥೆಯ ಸದಸ್ಯರಾಗಿ ಸ್ವೀಕರಿಸಿತು. ಇದರಂತೆ ತೇನಸಿಂಗರಲ್ಲಿ ಸುಪ್ತವಾಗಿದ್ದ ಅಸಾಧಾರಣ ಯೋಗ್ಯತೆ ಮತ್ತು ಪ್ರತಿಭೆಯನ್ನು ಬೆಳಕಿಗೆ ತಂದ ಶ್ರೇಯಸ್ಸು ಯಾವನೊಬ್ಬ ದೇಶೀಯನಿಗಿರದೆ ಟಿಲ್‌ಮೋನನೆಂಬ ವಿದೇಶೀಯನಿಗೆ ಅದು ಸೇರಿದೆ. ಅವರೊಂದಿಗೆ ತೇನಸಿಂಗರು ೧೯೩೮ ರಲ್ಲಿ ೨೭,೦೦೦ ಅಡಿ ಎತ್ತರವನ್ನು ಮುಟ್ಟಿದ್ದರು.

ಗೌರೀಶಂಕರವನ್ನು ಮುಟ್ಟಲು ೧೯೨೧ ರಿಂದ ಇದು ವರೆಗೆ ೧೧ ಪ್ರಯತ್ನಗಳು ನಡೆದುವು. ಅಂಥ ಒಂಭತ್ತು ಪ್ರಯತ್ನಗಳಲ್ಲಿ ತೇನಸಿಂಗರು ಭಾಗವಹಿಸಿದರು. ಪ್ರತಿಯೊಂದು ದಳವೂ ಹಿಂದಿನವರು ಗಳಿಸಿದ ಅನುಭವದ ಬಲದಿಂದ ಹೊಸ ಹೊಸ ಸಾಧನ ಸಲಕರಣೆಗಳನ್ನು ಉಪಯೋಗಿಸಿ ವಿಜಯ ಗಳಿಸುವ ಅಭಿಲಾಷೆಯಿಂದ ಕಾರ್ಯಾರಂಭಿಸುತಿತ್ತು. ಇವರಿಗೆ ಶೆರ್ಪಾತೇನ ಸಿಂಗರ ಸ್ವಾನುಭವವು ಅಮೂಲ್ಯ ಕೈಪಿಡಿಯಾಗಿತ್ತು. ೧೯೫೦ ರ ನವಂಬರದಲ್ಲಿ ನಂಗಾ ಪರ್ವತವನ್ನು ಏರಿ ಹೋಗಲು ಬಯಸಿ ಬಂದ ಆಂಗ್ಲ ಪರ್ವತಾರೋಹಿ ತಂಡದಲ್ಲಿ ತೇನ ಸಿಂಗರಿದ್ದರು. ಆ ಕಾಲದಲ್ಲಿ ಮಾನವ ಧರ್ಮದ ಪಾಲನೆಯನ್ನು ತೇನ ಸಿಂಗರು ಹೇಗೆ ಮಾಡಿದರೆಂಬುದನ್ನು ಆ ದಳದ ಏಕಮಾತ್ರ ಜೀವಿತ ಸದಸ್ಯ ಮಿ. ಮಾರ್ಶರು ಮಾರ್ಮಿಕವಾಗಿ ವರ್ಣಿಸಿರುವರು. ಡಿಸೆಂಬರ ೫ ರಲ್ಲಿ ದಳದ ಉಳಿದ ಸದಸ್ಯರನ್ನು ಹುಡುಕಾಡುವ ಸಾಹಸಕ್ಕೆ ತೇನ ಸಿಂಗರೇ ಪ್ರೋತ್ಸಾಹ ಕೊಟ್ಟರು. ಅದೇ ದಿನಾಂಕ ಮಾರ್ಶರನ್ನು ಹಿಮಪಾತವೊಂದು ಮೃತ್ಯುವಿನ ಅಪ್ಪುಗೆಯಲ್ಲಿಳಿಸಲು ನೋಡಿದಾಗ ಸತರ್ಕ ತೇನ ಸಿಂಗರೇ ಜೀವವುಳಿಸಿದರು. ನಿದ್ದೆಯಲ್ಲಿದ್ದಾಗ ಹಿಮಶಿಲೆಯೊಂದು ಪರ್ವತವನ್ನೆ ನಡುಗಿಸಿ ಕೆಳಗೆ ಉರುಳಿ ಬರುತ್ತಿದ್ದುದನ್ನು ತೇನಸಿಂಗರು ನೋಡಿ ಮಾರ್ಶರನ್ನು ಎಚ್ಚರಿಸಿ ಎಬ್ಬಿಸಿ, ಸಂರಕ್ಷಿಸಿದರು. ಈ ಉಪಕಾರಕ್ಕೆ ಎಷ್ಟು ಕೃತಜ್ಞತೆಗಳನ್ನು ಅರ್ಪಿಸಿದರೂ ಕಡಿಮೆಯೇ ಸೈ.

'ನವಯುಗ'

* ಗಡಿಯಾರ ಪ್ರಪಂಚ *

ಗಡಿಯಾರ ವ್ಯವಸಾಯವನ್ನು ಹೆಚ್ಚಾಗಿ ಬೆಳಸಿ ಸಾಗುತ್ತಿರುವ ದೇಶವೆಂದರೆ ಸ್ವಿಟ್ಜರ್‌ಲೇಂಡ್. ಅಲ್ಲಿಯ ಗುಡ್ಡಗಾಡು ಭಾಗದಲ್ಲಿ ಈ ವ್ಯವಸಾಯಗಾರರು ಶಾಂತ ವಾತಾವರಣದಲ್ಲಿದ್ದು ಈ ವ್ಯವಸಾಯವನ್ನು ಮಾಡುತ್ತಾರೆ. ಅವರು ಕೇವಲ ದೈಹಿಕ ಶ್ರಮ ಮಾಡುವಂಥವರಲ್ಲ. ವರ್ಷಗಟ್ಟಲೆ ಸಂಶೋಧನೆ ನಡೆಸಿ ಹೊಸ ಮಾದರಿಯ ಗಡಿಯಾರಗಳನ್ನು ಮಾಡುವವರೂ ಅಲ್ಲಿ ಇದ್ದಾರೆ. ತಮ್ಮ ಸಂಶೋಧನೆಯಲ್ಲಿ ಯಶ ದೊರೆತ ಕೂಡಲೇ ಅವರು ಆನಂದದಲ್ಲಿ ಕುಣಿಯುತ್ತಾರೆ.

ಅವರ ಬುದ್ಧಿ ಕೌಶಲ್ಯದ ಮೂಲಕ ಅವರಿಂದ ಅತ್ಯಾಧುನಿಕ ಗಡಿಯಾರಗಳು ಹುಟ್ಟಿವೆ. ಶಾಸ್ತ್ರೀಯ ಸಂಶೋಧನೆಯಿಂದ ದೊರಬಿದ್ದ ಅನುಕೂಲತೆಗಳ ಜ್ಞಾನವು ಅವರಿಗಿರುತ್ತದೆ. ಅವುಗಳ ಪ್ರಯೋಜನ ಪಡೆದು ಅವರು ನವೀನ ಮಾದರಿಯ ಗಡಿಯಾರಗಳನ್ನು ರಚಿಸುತ್ತಾರೆ. ನಮಗೆ ಗೊತ್ತಿದ್ದ ಅನೇಕ ಗಡಿಯಾರಗಳಲ್ಲಿಯ ವೈಚಿತ್ರ್ಯಗಳು ಅವರ ಬುದ್ಧಿ ಶಕ್ತಿಯ ಫಲವಾಗಿವೆ. ಅವರಿಂದ ಸಿದ್ಧವಾದ ಗಡಿಯಾರಗಳ ವಿಶೇಷ ವೈಚಿತ್ರ್ಯಗಳನ್ನು ಈ ಕೆಳಗೆ ಕೊಟ್ಟ ಸಂಗತಿಗಳಿಂದ ತಿಳಿಯಬಹುದು.

ಇರಾಕಿನ ರಾಜಕುಮಾರರು ಲಂಡನ್ನಿನಲ್ಲಿದ್ದಾಗ ವೆಸ್ಟ ಮಿನಿಸ್ಟರ ಎಬ್ಬೇದಲ್ಲಿಯ ದೊಡ್ಡ ಗಡಿಯಾರದ ಗಂಟೆಯನ್ನು ಕೇಳಿದರು. ಅಂತಹ ಧ್ವನಿಯ ಗಡಿಯಾರವನ್ನು ಕೊಡುವಿರಾ ಎಂದು ಅವರು ಸ್ವಿಟ್ಜರ್ಲಂಡದ ವ್ಯವಸಾಯಗಾರರಿಗೆ ಕೇಳಿದರು. ಓಹೋ ಸಿದ್ಧವಿದೆಯೆಂದು ಹೇಳಿ ಆ ವ್ಯವಸಾಯಗಾರರು ಅದನ್ನು ರಾಜಕುಮಾರರಿಗೆ ಕಳಿಸಿದರು.

ಒಂದೇ ತರದ ಗಡಿಯಾರಗಳನ್ನು ಸಿದ್ಧಮಾಡಿ ವೇಳೆ ತಿಳಿಸಿದರಾಯಿತು ಎಂದು ಸ್ವಿಸ್ ವ್ಯವಸಾಯಗಾರರು ಅನ್ನುವದಿಲ್ಲ. ಬೇರೆ ಬೇರೆ ಉದ್ಯೋಗದ ಜನರಿಗೆ ಕೆಲಸ ಕೊಡುವ ಗಡಿಯಾರಗಳನ್ನು ಅವರು ಸಿದ್ಧ ಮಾಡುತ್ತಾರೆ.

ದಿ ವರ್ಲ್ಡ್ ಟ್ಯಾಯಿಮರ್

ಇದು ಜಗತ್ತಿನ ಯಾವುದೇ ಭಾಗದ ಸ್ಟ್ಯಾಂಡರ್ಡ್ ಟಾಯಿಮನ್ನು ತೋರಿಸುತ್ತದೆ. ಅದರ ಮುಖದ ಸುತ್ತಲೂ ತಿರುಗಿಸಬಲ್ಲ ಮತ್ತೊಂದು ಬಳೆಯಿರುತ್ತದೆ. ಆ ಬಳೆಯ ಮೇಲೆ ಊರುಗಳ ಹೆಸರುಗಳಿರುತ್ತವೆ. ಮತ್ತು ಅದು ೨೪ ಗಂಟೆಗೆ ಒಂದು ಸುತ್ತು ತಿರುಗುತ್ತದೆ. ಆಯಾ ಊರಿನ ಹೆಸರನ್ನು ನಡುವಿನ ಗಡಿಯಾರದ ೧೨ ಅಂಕಿಗೆ ತಂದು ಹಚ್ಚಿದರೆ ಆ ಸುತ್ತಲಿನ ಬಳೆಯಲ್ಲಿ ಅಲ್ಲಿಯ ಸ್ಟ್ಯಾಂಡರ್ಡ್ ಟಾಯಿಮ್ ತೋರಿಸುತ್ತದೆ.

ಬ್ರೈಲ್ ವಾಚು.

ಇದು ಕುರುಡರಿಗೆ ಉಪಯೋಗ ಬೀಳುವ ಗಡಿಯಾರ. ಅಂಕಿಗಳು ಮತ್ತು ಮುಳ್ಳುಗಳು ಕೈಗೆ ಹತ್ತುವಂತೆ ಇರುತ್ತವೆ

ವಿವಿಧ ವಿವರಗಳ ಗಡಿಯಾರಗಳು.

ಇದು ಗಂಟೆ, ನಿಮಿಷ, ಸೆಕಂಡು, ತಾರೀಕು, ತಿಂಗಳು, ವರ್ಷ, ಅಧಿಕ ವರ್ಷ ಚಂದ್ರನ ಗತಿ, ಅವನ ಆಕಾರ ಇವೆಲ್ಲವುಗಳನ್ನು ತೋರಿಸುತ್ತದೆ. ಇದರಲ್ಲಿ ಒಮ್ಮೆ ಪ್ರಾರಂಭ ಮಾಡಿದರೆ, ಮುಂದೆ ಒಂದು ಶತಮಾನದ ವರೆಗೆ ಅದಕ್ಕೆ ಕೀಲೀ ಕೊಡುವ ಆವಶ್ಯಕತೆ ಇಲ್ಲ. ಅದರ ರಚನೆಯು ಬಹು ಕುಶಲತೆಯಿಂದ ಕೂಡಿದೆ. ಅಧಿಕ ವರ್ಷವನ್ನು ತೋರಿಸುವ ಮುಳ್ಳು, ಒಂದು ಸುತ್ತು ಹಾಕಲು ನಾಲ್ಕು ವರ್ಷಗಳು ತೆಗೆದುಕೊಳ್ಳುತ್ತದೆ.

ಅತಿ ಸಣ್ಣ ವಾಚು.

ಒಂದು ಉಂಗುರದಲ್ಲಿ ಕೂಡಿಸುವಷ್ಟು ಸಣ್ಣ ವಾಚನ್ನೂ ಅವರು ರಚಿಸಿದ್ದಾರೆ. ಒಂದು ಸಿಗರೇಟಿನ ತುದಿಯಷ್ಟು ಆಕಾರವನ್ನು ಅದು ಇದೆ. ಅತೀ ಕಿರಿದಾದ ಗಡಿಯಾರವನ್ನೂ ಸಿದ್ಧಮಾಡಿದ್ದಾರೆ. ಅದನ್ನು ಹಣಿಗೆಯ ಹಲ್ಲುಗಳ ನಡುವೆ ಹಾಯಿಸಬಹುದು. ಅಂಗಿಯ ಗುಂಡಿಗಳಲ್ಲಿ ಕೂಡ ಗಡಿಯಾರಗಳನ್ನು ಕೂಡಿಸಬಹುದು. ಅಲ್ಯುಮಿನಿಯಮ್ಮಿನಲ್ಲಿ ಎಲ್ಲ ಭಾಗಗಳನ್ನು ಮಾಡಿ ಕೂಡಿಸಿದ ಗಡಿಯಾರವೊಂದಿದ್ದು ಅದರ ತೂಕವು ೧|| ತೊಲ ಇದೆ.

ಲೆಕ್ಕ ಮಾಡುವ ಗಡಿಯಾರ.

ಗುಣಾಕಾರ ಭಾಗಾಕಾರ ಮತ್ತು ವರ್ಗಮೂಲ ಲೆಕ್ಕಗಳನ್ನು ತೋರಿಸುವ ಗಡಿಯಾರಗಳಿವೆ.

ಪ್ಯಾರಾಚ್ಯೂಟ್ ಗಡಿಯಾರ-

ವಿಮಾನದಿಂದ ಸುರಕ್ಷಿತತೆಗಾಗಿ ಹಾರಲು ಉಪಯೋಗಿಸುವ ಕೊಡೆಗಳಿಗೆ ಈ ಗಡಿಯಾರಗಳನ್ನು ಹಚ್ಚಿರುತ್ತಾರೆ. ಕೊಡೆ ತೆರೆಯಲು ಸಹಾಯ ಮಾಡುವ ಗುಂಡಿಗಳಂತೆ ಈ ಗಡಿಯಾರಗಳು ಆಗ ಕೆಲಸ ಮಾಡುತ್ತವೆ. ಮತ್ತು ಕೊಡೆಯು ತೆರೆದಾಗ ಅದನ್ನು ಗಾಳಿಯು ಹಾರಿಸಿಕೊಂಡು ಬೇಕಾದತ್ತ ಹೋಗದಂತೆ ಸರಿಯಾಗಿ ನೆಲಕ್ಕೆ ಇಳಿಸಲೂ ಇವು ನೆರವಾಗುತ್ತವೆ.

ಎಲೆಕ್ಟ್ರಾನಿಕ್ ಕ್ಲಾಕ್

ಎಲೆಕ್ಟ್ರಿಕ್ ಶಕ್ತಿಯಿಂದ ಈ ಗಡಿಯಾರವು ನಡೆಯುತ್ತಿದ್ದು ಅತೀ ಸೂಕ್ಷ್ಮವಾಗಿ ವೇಳೆಯನ್ನು ತೋರಿಸುತ್ತದೆ.

ಫೋಟೋಫಿನಿಶ್ ಸ್ಪೋರ್ಟ್ ಟ್ಯಾಮರ್.

ಆಟಗಳಲ್ಲಿ ಈ ಗಡಿಯಾರವನ್ನು ಉಪಯೋಗಿಸುತ್ತಾರೆ. ಹೋದ ವರ್ಷ ಹೆಲ್ಸಿಂಕಿನಲ್ಲಿ ಒಲಿಂಪಿಕ ಪಂದ್ಯಾಟಗಳು ನಡೆದಾಗ ಇದನ್ನು ಉಪಯೋಗಿಸಿದರು. ಅವದ ಗೆರೆಗಳು ಅವುಗಳನ್ನು ಮುಟ್ಟಿದ ಕಾಲ ಮುಟ್ಟಿದವರ ಫೋಟೋ ಇವೆಲ್ಲವನ್ನು ಈ ಗಡಿಯಾರವು ತೋರಿಸುತ್ತದೆ. ಆದ್ದರಿಂದ ನಿರ್ಣಯಕಾರರಿಗೆ ಇದರಿಂದ ಬಹು ಸಹಾಯವಾಗುವುದು.

'ಜೆ. ಕಿಂದ್'

Specialists in Tailoring! Prompt Service!!

FOR **English Felt Hats,**
Wedding Suits, Ladies Over Coats
AND
Latest Designs in Wollen Suitings
— CALL ON —
25-18 PATTU BROTHERS,
OPP.— Town Hall, MYSORE.

INSURE WITH
OR REPRESENT
INDIA'S OLDEST LIFE OFFICE:
THE BOMBAY MUTUAL LIFE ASSURANCE SOCIETY, LTD.

BUSINESS IN FORCE OVER 40 CRORES
ASSETS .... OVER 12 CRORES

Applications from energetic youngmen are invited for representation.

25-13
Head Office; BOMBAY.
Branch: 172. 3, Narasimharaja Road. BANGALORE 2.

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.
[ಸ್ಥಾಪನೆ: 1921]
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಶೇಕಡ (Current Deposits)	ರೂ.	0-8-0
ಸೇವಿಂಗ್ಸ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಆಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.
ಕೆ. ಪಿ. ಅಪ್ಪಯ್ಯ. ಪ್ರೆಸಿಡೆಂಟ್ & ಖಜಾನ್ಚಿ.

Edited Printed and Published by P. I. BELLIAPPA at 'KODAGU' Press Mercara, for Kodagu Ltd.,

ಕೊಡಗು

ಶಾಲೆ ಮುಗಿಯಿತು, ಮತ್ತೆ ಆಟ!

ವಾರ್ಷಿಕ ಚಂದಾ ರೂ. ೫—೦—೦ ಶುಕ್ರವಾರ
ಸಂಪುಟ ೩೨) (ಸಂಚಿಕೆ ೮ ೨೬--೬--೧೯೫೩

KODAGU KANNADA WEEKLY MERCARA

Licence No. 60.
Licenced to Post without Prepayment

Reg. No. M. 1550.
"KODAGU" MERCARA (Coorg)

* ಗಡಿಯಾರ ಪ್ರಪಂಚ *

ಗಡಿಯಾರ ವ್ಯವಸಾಯವನ್ನು ಹೆಚ್ಚಾಗಿ ಬೆಳಸಿ ಸಾಗುತ್ತಿರುವ ದೇಶವೆಂದರೆ ಸ್ವಿಟ್ಜರ್‌ಲೇಂಡ್. ಅಲ್ಲಿಯ ಗುಡ್ಡಗಾಡು ಭಾಗದಲ್ಲಿ ಈ ವ್ಯವಸಾಯಗಾರರು ಶಾಂತ ವಾತಾವರಣದಲ್ಲಿದ್ದು ಈ ವ್ಯವಸಾಯವನ್ನು ಮಾಡುತ್ತಾರೆ. ಅವರು ಕೇವಲ ದೈಹಿಕ ಶ್ರಮ ಮಾಡುವಂಥವರಲ್ಲ. ವರ್ಷಗಟ್ಟಲೆ ಸಂಶೋಧನೆ ನಡೆಸಿ ಹೊಸ ಮಾದರಿಯ ಗಡಿಯಾರಗಳನ್ನು ಮಾಡುವವರೂ ಅಲ್ಲಿ ಇದ್ದಾರೆ. ತಮ್ಮ ಸಂಶೋಧನೆಯಲ್ಲಿ ಯಶ ದೊರೆತ ಕೂಡಲೇ ಅವರು ಆನಂದದಲ್ಲಿ ಕುಣಿಯುತ್ತಾರೆ.

ಅವರ ಬುದ್ಧಿ ಕೌಶಲ್ಯದ ಮೂಲಕ ಅವರಿಂದ ಅತ್ಯಾಧುನಿಕ ಗಡಿಯಾರಗಳು ಹುಟ್ಟಿವೆ. ಶಾಸ್ತ್ರೀಯ ಸಂಶೋಧನೆಯಿಂದ ಹೊರಬಿದ್ದ ಅನುಕೂಲತೆಗಳ ಜ್ಞಾನವು ಅವರಿಗಿರುತ್ತದೆ. ಅವುಗಳ ಪ್ರಯೋಜನ ಪಡೆದು ಅವರು ನವೀನ ಮಾದರಿಯ ಗಡಿಯಾರಗಳನ್ನು ರಚಿಸುತ್ತಾರೆ. ನಮಗೆ ಗೊತ್ತಿದ್ದ ಅನೇಕ ಗಡಿಯಾರಗಳಲ್ಲಿಯ ವೈಚಿತ್ರ್ಯಗಳು ಅವರ ಬುದ್ಧಿ ಶಕ್ತಿಯ ಫಲವಾಗಿವೆ. ಅವರಿಂದ ಸಿದ್ಧವಾದ ಗಡಿಯಾರಗಳ ವಿಶೇಷ ವೈಚಿತ್ರ್ಯಗಳನ್ನು ಈ ಕೆಳಗೆ ಕೊಟ್ಟ ಸಂಗತಿಗಳಿಂದ ತಿಳಿಯಬಹುದು.

ಇರಾಕಿನ ರಾಜಕುಮಾರರು ಲಂಡನ್ನಿನಲ್ಲಿದ್ದಾಗ ವೆಸ್ಟ ಮಿನಿಸ್ಟರ ಎಬ್ಬೇದಲ್ಲಿಯ ದೊಡ್ಡ ಗಡಿಯಾರದ ಗಂಟೆಯನ್ನು ಕೇಳಿದರು. ಅಂತಹ ಧ್ವನಿಯ ಗಡಿಯಾರವನ್ನು ಕೊಡುವಿರಾ ಎಂದು ಅವರು ಸ್ವಿಟ್ಜರ್‌ಲೆಂಡದ ವ್ಯವಸಾಯಗಾರರಿಗೆ ಕೇಳಿದರು. ಒಹೋ ಸಿದ್ಧವಿದೆಯೆಂದು ಹೇಳಿ ಆ ವ್ಯವಸಾಯಗಾರರು ಅದನ್ನು ರಾಜಕುಮಾರರಿಗೆ ಕಳಿಸಿದರು.

ಒಂದೇ ತರದ ಗಡಿಯಾರಗಳನ್ನು ಸಿದ್ಧಮಾಡಿ ವೇಳೆ ತಿಳಿಸಿದರಾಯಿತು ಎಂದು ಸ್ವಿಸ್ ವ್ಯವಸಾಯಗಾರರು ಅನ್ನುವದಿಲ್ಲ. ಬೇರೆ ಬೇರೆ ಉದ್ಯೋಗದ ಜನರಿಗೆ ಕೆಲಸ ಕೊಡುವ ಗಡಿಯಾರಗಳನ್ನು ಅವರು ಸಿದ್ಧ ಮಾಡುತ್ತಾರೆ.

ದಿ ವರ್ಲ್ಡ್ ಟೈಮಿಸ್

ಇದು ಜಗತ್ತಿನ ಯಾವುದೇ ಭಾಗದ ಸ್ಟ್ಯಾಂಡರ್ಡ್ ಟಾಯಿಮನ್ನು ತೋರಿಸುತ್ತದೆ. ಅದರ ಮುಖದ ಸುತ್ತಲೂ ತಿರುಗಿಸಬಲ್ಲ ಮತ್ತೊಂದು ಬಳೆಯಿರುತ್ತದೆ. ಆ ಬಳೆಯ ಮೇಲೆ ಊರುಗಳ ಹೆಸರುಗಳಿರುತ್ತವೆ. ಮತ್ತು ಅದು ೨೪ ಗಂಟೆಗೆ ಒಂದು ಸುತ್ತು ತಿರುಗುತ್ತದೆ. ಆಯಾ ಊರಿನ ಹೆಸರನ್ನು ನಡುವಿನ ಗಡಿಯಾರದ ೧೨ ಅಂಕಿಗೆ ತಂದು ಹಚ್ಚಿದರೆ ಆ ಸುತ್ತಲಿನ ಬಳೆಯಲ್ಲಿ ಅಕ್ಷಿಯ ಸ್ಟ್ಯಾಂಡರ್ಡ್ ಟಾಯಿಮ್ ತೋರಿಸುತ್ತದೆ.

ಬ್ರೈಲ್ ವಾಚು.

ಇದು ಕುರುಡರಿಗೆ ಉಪಯೋಗ ಬೀಳುವ ಗಡಿಯಾರ. ಅಂಕಿಗಳು ಮತ್ತು ಮುಳ್ಳುಗಳು ಕೈಗೆ ಹತ್ತುವಂತೆ ಇರುತ್ತವೆ ವಿವಿಧ ವಿವರಗಳ ಗಡಿಯಾರಗಳು.

ಇದು ಗಂಟೆ, ನಿಮಿಷ, ಸೆಕಂಡು, ತಾರೀಕು, ತಿಂಗಳು, ವರ್ಷ, ಅಧಿಕ ವರ್ಷ ಚಂದ್ರನ ಗತಿ, ಅವನ ಆಕಾರ ಇವೆಲ್ಲವುಗಳನ್ನು ತೋರಿಸುತ್ತದೆ. ಇದರಲ್ಲಿ ಒಮ್ಮೆ ಪ್ರಾರಂಭ ಮಾಡಿದರೆ, ಮುಂದೆ ಒಂದು ಶತಮಾನದ ವರೆಗೆ ಅದಕ್ಕೆ ಕೀಲೀ ಕೊಡುವ ಆವಶ್ಯಕತೆ ಇಲ್ಲ. ಅದರ ರಚನೆಯು ಬಹು ಕುಶಲತೆಯಿಂದ ಕೂಡಿದೆ. ಅಧಿಕ ವರ್ಷವನ್ನು ತೋರಿಸುವ ಮುಳ್ಳು ಒಂದು ಸುತ್ತು ಹಾಕಲು ನಾಲ್ಕು ವರ್ಷಗಳು ತೆಗೆದುಕೊಳ್ಳುತ್ತದೆ.

ಅತಿ ಸಣ್ಣ ವಾಚು.

ಒಂದು ಉಂಗುರದಲ್ಲಿ ಕೂಡಿಸುವಷ್ಟು ಸಣ್ಣ ವಾಚನ್ನೂ ಅವರು ರಚಿಸಿದ್ದಾರೆ. ಒಂದು ಸಿಗರೇಟಿನ ತುದಿಯಷ್ಟು ಆಕಾರವನ್ನು ಅದು ಇದೆ. ಅತೀ ತೆಳುವಾದ ಗಡಿಯಾರವನ್ನೂ ಸಿದ್ಧಮಾಡಿದ್ದಾರೆ. ಅದನ್ನು ಹಣಿಗೆಯ ಹಲ್ಲುಗಳ ನಡುವೆ ಹಾಯಿಸಬಹುದು. ಅಂಗಿಯ ಗುಂಡಿಗಳಲ್ಲಿ ಕೂಡ ಗಡಿಯಾರಗಳನ್ನು ಕೂಡಿಸಬಹುದು. ಅಲ್ಯೂಮಿನಿಯಮ್ಮಿನಲ್ಲಿ ಎಲ್ಲ ಭಾಗಗಳನ್ನು ಮಾಡಿ ಕೂಡಿಸಿದ ಗಡಿಯಾರವೊಂದಿದ್ದು ಅದರ ತೂಕವು ೧॥ ತೊಲ ಇದೆ.

ಲೆಕ್ಕ ಮಾಡುವ ಗಡಿಯಾರ.

ಗುಣಾಕಾರ ಭಾಗಾಕಾರ ಮತ್ತು ವರ್ಗಮೂಲ ಲೆಕ್ಕಗಳನ್ನು ತೋರಿಸುವ ಗಡಿಯಾರಗಳಿವೆ.

ಪ್ಯಾರಾಚ್ಯೂಟ್ ಗಡಿಯಾರ-

ವಿಮಾನದಿಂದ ಸುರಕ್ಷಿತತೆಗಾಗಿ ಹಾರಲು ಉಪಯೋಗಿಸುವ ಕೊಡೆಗಳಿಗೆ ಈ ಗಡಿಯಾರಗಳನ್ನು ಹಚ್ಚಿರುತ್ತಾರೆ. ಕೊಡೆ ತೆರೆಯಲು ಸಹಾಯ ಮಾಡುವ ಗುಂಡಿಗಳಂತೆ ಈ ಗಡಿಯಾರಗಳು ಆಗ ಕೆಲಸ ಮಾಡುತ್ತವೆ. ಮತ್ತು ಕೊಡೆಯು ತೆರೆದಾಗ ಅದನ್ನು ಗಾಳಿಯು ಹಾರಿಸಿಕೊಂಡು ಬೇರೆ ಕಡೆತ್ತ ಹೋಗದಂತೆ ಸರಿಯಾಗಿ ನೆಲಕ್ಕೆ ಇಳಿಸಲೂ ಇವು ನೆರವಾಗುತ್ತವೆ.

ಎಲೆಕ್ಟ್ರಿಕ್ ಕ್ಲಾಕ್

ಎಲೆಕ್ಟ್ರಿಕ್ ಶಕ್ತಿಯಿಂದ ಈ ಗಡಿಯಾರವು ನಡೆಯುತ್ತಿದ್ದು ಅತೀ ಸೂಕ್ಷ್ಮವಾಗಿ ವೇಳೆಯನ್ನು ತೋರಿಸುತ್ತದೆ.

ಫೋಟೋಫಿನಿಶ್ ಸ್ಟೋರ್ಟ್ ಟ್ಯಾಮರ್.

ಆಟಗಳಲ್ಲಿ ಈ ಗಡಿಯಾರವನ್ನು ಉಪಯೋಗಿಸುತ್ತಾರೆ. ಹೋದ ವರ್ಷ ಹೆಲ್ಸಿಂಕಿನಲ್ಲಿ ಒಲಿಂಪಿಕ ಸಂದ್ಯಾಟಗಳು ನಡೆದಾಗ ಇದನ್ನು ಉಪಯೋಗಿಸಿದರು. ಆವದ ಗೆರೆಗಳು ಅವುಗಳನ್ನು ಮುಟ್ಟಿದ ಕಾಲ ಮುಟ್ಟಿದವರ ಫೋಟೋ ಇವೆಲ್ಲವನ್ನು ಈ ಗಡಿಯಾರವು ತೋರಿಸುತ್ತದೆ. ಆದ್ದರಿಂದ ನಿರ್ಣಯಕಾರರಿಗೆ ಇದರಿಂದ ಬಹು ಸಹಾಯವಾಗುವುದು.

'ಜೈ ಹಿಂದ್'

Specialists in Tailoring! Prompt Service!!

FOR **English Felt Hats,**

Wedding Suits, Ladies Over Coats

AND

Latest Designs in Wollen Suitings

— CALL ON —

25-18 **PATTU BROTHERS,**

OPP.— Town Hall, MYSORE.

INSURE WITH
OR REPRESENT

INDIA'S OLDEST LIFE OFFICE:

THE BOMBAY MUTUAL LIFE ASSURANCE SOCIETY, LTD.

BUSINESS IN FORCE OVER 40 CRORES
ASSETS ... OVER 12 CRORES

Applications from energetic youngmen are invited for representation.

25–13

Head Office:
BOMBAY.

Branch:
172. 3, Narasimharaja Road.
BANGALORE 2.

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1931]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಖಾತೆ (Current Deposits)	ರೂ.	0-8-0
ಸೇವಿಂಗ್ಸ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಗಳ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ನಾರ್ದನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ,
ಪ್ರೆಸಿಡೆಂಟ್ & ಖಜಾನ್ಜಿ.

Edited Printed and Published by P. I. BELLIAPPA at 'KODAGU' Press Mercara, for Kodagu Ltd.,

ಕೊಡಗು

ಶಾಲೆ ಮುಗಿಯಿತು, ಮತ್ತೆ ಆಟ!

ವಾರ್ಷಿಕ ಚಂದಾ ರೂ. ೫—೦—೦
ಸಂಪುಟ ೩೨) (ಸಂಚಿಕೆ ೮
ಶುಕ್ರವಾರ
೨೭--೬--೧೯೬೩

KODAGU KANNADA WEEKLY MERCARA

ಗಾಂಧೀಜಿ ಹೇಗೆ ಮಹಾತ್ಮರಾದರು?

ಲೇ:—ಶ್ರೀ ಡಿ. ಪುಟ್ಟಸ್ವಾಮಿ, ಸಂಪಾದಕ, "ವಿವೇಕಾಭ್ಯುದಯ" ಮಂಗಳೂರು.

ಭಾರತದ ಮಹಾನ್ ರತ್ನಗಳಲ್ಲಿ ಮಹಾತ್ಮಾ ಮೋಹನದಾಸ ಕರಮಚಂದ ಗಾಂಧೀಜಿಯವರೊಬ್ಬರು ಅವರು ಭಾರತರಾಷ್ಟ್ರದ "ಬಾಪು"ಗಳಾಗಿದ್ದರು. ಅವರು ಭಾರತಮಾತೆಯ ಕಾಲುಗಳಿಗೆ ತೊಡಿಸಿದ ದಾಸ್ಯಶೃಂಖಲೆಗಳನ್ನು ಮುರಿದುದು ಮಾತ್ರವಲ್ಲ. ಭಾರತೀಯರಲ್ಲಿ ಆತ್ಮವಿಶ್ವಾಸವನ್ನೂ ಜಾಗೃತಗೊಳಿಸಿದರು. ಭಾರತೀಯ ಹೃದಯ ಮಂದಿರಗಳಲ್ಲಿ ತೀರ್ಥಂಕರ ಮಹಾವೀರ ಮತ್ತು ಮಹಾತ್ಮಾ ಬುದ್ಧರ ಅಹಿಂಸೆ ಮತ್ತು ಸತ್ಯಸದೃಶ ಪಾವನ ಸಿದ್ಧಾಂತಗಳ ಪುಣ್ಯ ಪ್ರತಿಷ್ಠೆ ಮಾಡಿದರು. ಆ ಸಿದ್ಧಾಂತಗಳನ್ನು ತಮ್ಮ ಜೀವನದಲ್ಲಿ ಕ್ರಿಯಾತ್ಮಕ ರೂಪ ಕೊಟ್ಟು ಮೂರ್ತಿಮತ್ತವನ್ನಾಗಿ ಮಾಡಿದರು. ಅವರ ಅಹಿಂಸಾ ಮಾರ್ಗದ ಮಹತ್ವಕ್ಕೆ ವಿದೇಶಿಯರೂ ತಲೆದೂಗಿ ಅವರ ಆದರ್ಶದಲ್ಲಿ ತಮ್ಮ ಸ್ವಂತ ಹಿತದ ಸತ್ಯವನ್ನು ಕಂಡುಕೊಂಡರು.

ಗಾಂಧೀಜಿಯವರು ಜನಿಸಿರುವಾಗಲೇ ಮಹಾತ್ಮರಾಗಿ ಹುಟ್ಟಿದುದಲ್ಲ. ಸಾಕಷ್ಟು ಖ್ಯಾತಿ ಪಡೆದ ನಂತರವೂ ತನ್ನನ್ನು ತಾನು ಮಹಾತ್ಮನೆಂದವರು ತಿಳಿದುಕೊಂಡಿರಲಿಲ್ಲ. ಆದರೆ ಅವರ ಗುಣಗಳು ಮತ್ತು ಕರ್ಮಗಳು ಎಷ್ಟರ ಮಟ್ಟಿಗೆ ವಿಕಸಿತ ಮತ್ತು ಸಾರ್ವಭೌಮಿಕವಾಗಿದ್ದುವೆಂದರೆ, ಅವರಲ್ಲಿ ಜನತೆ ಮಹಾತ್ಮನ ಸಾಕ್ಷಾತ್ಕಾರ ಕಂಡಿತು. ದೈನಿಕ ಜೀವನದ ಪ್ರತಿಯೊಂದು ಕಾರ್ಯವನ್ನು ಧರ್ಮದಿಂದ ಅನುರಂಜಿತವನ್ನಾಗಿಟ್ಟುಕೊಂಡಿದ್ದರು. "ಧರ್ಮವೇ ಜೀವನ. ಜೀವನವೇ ಧರ್ಮ" ಎಂಬ ಉಚ್ಚ ತತ್ವವನ್ನು ಅವರು ಪ್ರತಿಪಾದಿಸಿದ್ದರು. ಧರ್ಮವನ್ನು ಮರೆತು ಯಾರೂ ಉನ್ನತಿಯನ್ನು ಹೊಂದಲಾರರು. ಜೀವನದ ಮೌಲಿಕ ಸಿದ್ಧಾಂತಗಳಿಗೂ ಧರ್ಮದ ಆಧಾರವಾಗಿದೆ ಎಂಬುದನ್ನು ಅವರು ಒಂದುಕ್ಷಣವೂ ಮರೆತುದಿಲ್ಲ.

ಜನ್ಮತಃ ಮಹಾತ್ಮರಾಗಿರದಿದ್ದರೂ ಜೀವನದಲ್ಲಿನ ಎಂತಹ ಕಠಿಣ ಪ್ರಸಂಗಗಳಲ್ಲಿಯೂ, ಸಂಕಟಕಾಲದಲ್ಲಿಯೂ ಸತ್ಯವನ್ನು ಬಿಡದಂತಹ ಉಚ್ಚಶ್ರೇಣಿಯ ವಿವೇಕವನ್ನು ಪೂರ್ವಜನ್ಮದ ಸುಕೃತಫಲವಾಗಿ ಹುಟ್ಟಿನಲ್ಲಿಯೇ ಪಡಕೊಂಡು ಬಂದಿದ್ದರು. ಅವರ ಸೌಭಾಗ್ಯಾತಿಶಯದಿಂದಲೋ ಎಂಬಂತೆ, ವಿವೇಕದ ಪ್ರತಿಮೂರ್ತಿಯಂತಿದ್ದ ಪುತ್ಳಿಬಾಯಿಯ ಉದರದಲ್ಲೇ ಜನಿಸಿ, ಅವರ ಲಾಲನೆಪಾಲನೆಯಲ್ಲೇ ಬೆಳೆಯುವ ಸುಕೃತ ಗಾಂಧೀಜಿಯವರಿಗೆ ಲಭಿಸಿತು. ಪುತ್ಳಿಬಾಯಿಯಿಂದ ಹೊಂದಿದ ಆ ಸಂಸ್ಕಾರ ಬಲದಿಂದಲೇ ಲೋಕವೆಲ್ಲೆಲ್ಲಾ "ಮಹಾತ್ಮ" ಖ್ಯಾತಿಯನ್ನು ಅವರು ಪಡೆದರೆಂದರೂ ಅತಿಶಯೋಕ್ತಿಯಾಗಲಾರದು

ಪುತ್ಳಿಬಾಯಿಯ ಗುರು ಶ್ರೀ ಬೇಚರ ಸ್ವಾಮಿಯು ಓರ್ವ ಜೈನ ಸಾಧುಗಳಾಗಿದ್ದರು. ಅವರಿಂದ ಧರ್ಮದ ವೈಜ್ಞಾನಿಕ ಸ್ವರೂಪವನ್ನು ಪುತ್ಳಿಬಾಯಿ ತಿಳಿದುಕೊಂಡಿದ್ದರು. ಗಾಂಧೀಜಿಯವರು ಕೂಡ ಅವರ ಪ್ರಭಾವದಿಂದ ವಂಚಿತರಾಗಲಿಲ್ಲ. ತನ್ನ "ಆತ್ಮಕಥೆ"ಯಲ್ಲಿ ಗಾಂಧೀಜಿಯವರೇ ಸ್ವತಹ ಬರೆದಿದ್ದಾರೆ. "ನನಗೆ ವಿಲಾಯಿತಿಗೆ ಹೋಗುವ ಪ್ರಸಂಗ ಬಂದಾಗ ನನ್ನ ಮಾತೆಯು ಈ ರೀತಿ ಹೇಳಿದರು. "ನನಗೆ ನಿನ್ನ ಮೇಲೆ ವಿಶ್ವಾಸವಿದೆ ಕಂದಾ! ಆದರೆ ದೂರ ವಿದೇಶದಲಿ ಹೇಗೆ ನಡೆಯಬೇಕು? ಈ ಕಡೆ ಏನು ಹೇಳುವದೆಂದು ನನ್ನ ಮಂದಮತಿಗೆ ಹೊಳೆಯುವದಿಲ್ಲ. ನಾನು ಬೇಚರಜೀ ಸ್ವಾಮಿಯವರೊಡನೆ ಕೇಳುತ್ತೇನೆ"

ಬೇಚರ ಸ್ವಾಮಿಜಿಯವರು ಬನಿಯರಾಗಿದ್ದು ಆ ಮೇಲೆ ಜೈನಸಾಧುಗಳಾಗಿದ್ದರು. ಅವರು ನನ್ನ ತಾಯಿಯ ಸಲಹೆಗಾರರೂ ಆಗಿದ್ದರು. ಅವರು ನನಗೆ ತುಂಬಾ ಸಹಾಯ ಮಾಡಿದ್ದಾರೆ ಅವರು ಹೇಳಿದರು, 'ನಾನು ಇವನಿಂದ ಮೂರು ಮೂರು ವಿಷಯಗಳ ಕುರಿತು ಪ್ರತಿಜ್ಞೆ ಪಡೆಯುತ್ತೇನೆ. ಅನಂತರ ಇವನನ್ನು ಕಳುಹಿಸಿ ಕೊಡಲು ಯಾವುದೇ ಅಡ್ಡಿ ಇರಲಾರದು" ತದನುಸಾರ ಮಾಂಸ, ಮದಿರೆ ಮತ್ತು ಸ್ತ್ರೀ ಈ ಮೂರು ವಿಷಯಗಳಿಂದ ದೂರವಿರುವೆನೆಂದು ನಾನು ಪ್ರತಿಜ್ಞೆ ಕೈಕೊಂಡೆ '

ಗಾಂಧೀಜಿಯವರು ಈ ಪ್ರತಿಜ್ಞೆಗಳ ಪಾಲನೆಯನ್ನು ಆಜನ್ಮ ಮಾಡಿದರು. ಆ ಕಾರಣದಿಂದಲೇ ಅವರ ಯಶಸ್ಸು ಜಗದ್ವ್ಯಾಪಿಯಾಯಿತು. ಗಾಂಧೀಜಿಯವರ ಅಹಿಂಸಾ ಜೀವನ ನಿರ್ಮಾಣ ನಿಸ್ಸಂದೇಹವಾಗಿಯೂ ಭಗವಾನ್ ಮಹಾವೀರೋಪದಿಷ್ಟ ಅಹಿಂಸಾದಿ ಅಣುವ್ರತಗಳ ಆಧಾರದ ಮೇಲೆ ಆಯಿತು.

ವಿಲಾಯಿತಿಯಿಂದ ಮರಳಿದ ನಂತರ ಅವರಿಗೆ ಜೈನಕವಿ ಶತಾವಧಾನಿ ರಾಯಚಂದ್ರಜಿಯವರ ಸಂಪರ್ಕವಾಯಿತು ಮತ್ತು ಆ ಮಹಿಮರ ಸತ್ಸಂಗದ ಲಾಭವನ್ನು ಗಾಂಧೀಜಿಯವರು ಪಡೆಯದಿರಲಿಲ್ಲ. ಗಾಂಧೀಜಿಯವರೇ ಸ್ವತಹ ಬರೆದಿದ್ದಾರೆ "ಅನೇಕ ಮಂದಿ ಧರ್ಮಾಚಾರ್ಯರ ಸಂಪರ್ಕವು ನನಗಾಗಿದೆ. ಪ್ರತಿಯೊಂದು ಧರ್ಮದ ಆಚಾರ್ಯರನ್ನು ಭೇಟಿಯಾಗುವ ಪ್ರಯತ್ನವನ್ನೂ ನಾನು ಮಾಡಿರುತ್ತೇನೆ. ಆದರೆ ರಾಯಚಂದಭಾಯಿಯ ಸಮಾಗಮದಿಂದ ನನ್ನ ಮನಸ್ಸಿನ ಮೇಲೆ ಉಂಟಾದ ಚಿರಸ್ಮರಣೀಯ ಅನುಭವ ಬೇರಾವ ಧರ್ಮಗುರುಗಳ ಸಾನಿಧ್ಯದಿಂದಲೂ ಉಂಟಾದುದಿಲ್ಲ.... ರಾಯಚಂದಭಾಯಿಯು ತನ್ನ ಸಜೀವ ಸಂಸರ್ಗದಿಂದ, ಟಾಲ್‌ಸ್ಟಾಯಿಯು "ದೇವತ್ವವು ನಿಮ್ಮ ಹೃದಯದಲ್ಲಿದೆ" ಎಂಬ ಪುಸ್ತಕದಿಂದ ಮತ್ತು ರಸ್ಕಿನನು "ಅಂಟು ದಿಸ್ ಲಾಸ್ಟ್" ಎಂಬ ಪುಸ್ತಕದಿಂದ ಚಕಿತಗೊಳಿಸಿದ್ದಕ್ಕಿಂತಲೂ ಅತಿಶಯವಾಗಿ ನನ್ನನ್ನು ಚಕಿತನನ್ನಾಗಿ ಮಾಡಿರುತ್ತಾರೆ.

ಶ್ರೀಮಾನ್ ರಾಯಚಂದ್ರಜೀಯವರ ವಿಷಯದಲ್ಲಿ ಮಹಾತ್ಮಾಗಾಂಧೀಜಿಯವರು ಇನ್ನೂ ಹೇಳಿದುದೇನೆಂದರೆ ನಾವೆಲ್ಲರೂ ಪ್ರಾಸಂಗಿಕ ಸಂಸಾರಿಗಳಾಗಿದ್ದರೆ ಶ್ರೀ ರಾಯಚಂದ್ರರು ಸಂಸಾರ ಬಾಹಿರರಾಗಿದ್ದರು. ನಾವು ಅಸ್ತಿತ್ವಕ್ಕಾಗಿ ಅನೇಕ ಪರಿಸ್ಥಿತಿಗಳಲ್ಲಿ ಚಡಪಡಿಸುತ್ತಿದ್ದರೆ, ಶ್ರೀಯವರು ಬಿರುಗಾಳಿಯೋಪಾದಿ ಮೋಕ್ಷದ ಕಡೆಗೆ ಸೆಳೆಯಲ್ಪಡುತ್ತಿದ್ದರು. ಅವರ ಲೇಖನಗಳಲ್ಲೆಲ್ಲಾ ಜೀವನದ ಸ್ವಾನುಭವಗಳು ಒಡೆದು ಹೊರಹೊಮ್ಮುತ್ತಿದ್ದುವು. ಹಿಂದೂಧರ್ಮಿಯನಾಗಲೀ ಅಥವಾ ಇನ್ನಿತರ ಧರ್ಮಣ ವ್ಯಕ್ತಿಯಾಗಲೀ ರಾಯಚಂದ್ರರ ಲೇಖನಗಳನ್ನೋದುವವರಿಂದ ಸಂಸಾರದ ಕಷ್ಟಕ್ಲೇಶಗಳನ್ನು ತೊಲಗಿಸಿ, ಕರ್ತವ್ಯನಿಷ್ಠನಾಗಲು ಅವನನ್ನು ಈ ಲೇಖನಗಳು ಪ್ರೇರೇಪಿಸಿದ್ದುವು."

ಜೈನಗುರುಗಳ ಮತ್ತು ಕವಿಗಳ ಸತ್ಸಂಗ ಮತ್ತು ಆದರ್ಶ ಜೀವನಗಳ ಪ್ರಭಾವ ಗಾಂಧೀಜಿಯವರ ಜೀವನದ ಮೇಲೆ ತುಂಬಾ ಆಗಿತ್ತೆಂಬುದು ನಿರ್ವಿವಾದ. ಜೈನಧರ್ಮದ ಸಹಾಯದಿಂದ ಸತ್ಯದ ದರ್ಶನ ಪಡೆಯುವದರ ಕಡೆ ಗಾಂಧೀಜಿ ಸಾಫಲ್ಯ ಹೊಂದಿದರು. ಜೈನ ತತ್ವಜ್ಞಾನದ ಜ್ಯೋತಿಯ ಸಹಾಯದಿಂದ ಗಾಂಧೀಜಿಯವರು ಎಲ್ಲಾ ಮತಮತಾಂತರಗಳ ಸಮನ್ವಯದೃಷ್ಟಿ ಪ್ರಧಾನವಾಗುವಂತೆ ಮಾಡಿದರು. ಪರಸ್ಪರ ಸಹಯೋಗ, ಸಹಿಷ್ಣು ಭಾವ ಮತ್ತು ಸತ್ಯನಿಷ್ಠೆಗಳಿಂದಲೇ ಮಾನವನು ತನ್ನ ಹಾಗೂ ಲೋಕದ ಕಲ್ಯಾಣವನ್ನುಂಟುಮಾಡಲು ಶಕ್ತನಾಗುತ್ತಾನೆ ಎಂಬ ವಿಶಾಲ ತತ್ವವನ್ನು ಜಗತ್ತಿಗೆ ಸಾರಿದರು.

ಇಚ್ಛಾ ನಿರೋಧದಲ್ಲೇ ಸುಖವಿದೆಯೆಂಬುದನ್ನರಿತು ಗಾಂಧೀಜಿಯವರು ತಮ್ಮ ಜೀವನದಲ್ಲಿ ಇಚ್ಛೆಗಳನ್ನು ಸಂಪೂರ್ಣ ಜಯಿಸಿದ್ದರು. ತನ್ನೊಂದಿಗೆ ಬರೀ ನಾಲ್ಕು ಕಾಸುಗಳನ್ನು ಸಹ ಇಟ್ಟುಕೊಳ್ಳುತ್ತಿರಲಿಲ್ಲ. ಆದರೆ ಇಂದು ಬಾಯಲ್ಲಿ "ಜೈ" ಎನ್ನುತ್ತ ಭಾರತೀಯರು ಹುಚ್ಚರಂತೆ ಹಣದ ಬೆನ್ನುಹತ್ತುತ್ತಿರುವ ದೃಶ್ಯ ಕಣ್ಣು ಕುಕ್ಕಿಸುತ್ತಿದೆ. ಹಣಕ್ಕಾಗಿ ದೇಶ ಮತ್ತು ಧರ್ಮಗಳ ಕಡೆಗೆ ಕಣ್ಮುಚ್ಚಿ ಕುಳಿತುಕೊಳ್ಳುವದಕ್ಕೂ ಅವರು ಹೇಸುವದಿಲ್ಲ. ಸುಖ ಮತ್ತು ಮಹತ್ವಿಕೆಯನ್ನು ಹೊಂದುವ ಸಾಧನೆ ಇದಲ್ಲ. ಸತ್ಯವಾದ ಸುಖವು ಮಹಾತ್ಮಾಜಿಯವರು ಹೇಳಿರುವ ಆದರ್ಶ ಪಥವನ್ನು ಅನುಸರಿಸಿದರೆ ಮಾತ್ರ ದೊರಕಬಲ್ಲುದು.

ನೀವು ಜೀವಿಸಿಕೊಂಡಿರಬೇಕು; ಎಲ್ಲರನ್ನೂ ಪ್ರೇಮದಿಂದ ಕಾಣಬೇಕು. ಎಲ್ಲರನ್ನೂ ನಮ್ಮಂತೆಯೇ ಎಣಿಸಬೇಕು. ಈ ಸಿದ್ಧಾಂತಗಳನ್ನು ಅನುಸರಿಸಿ ಜೀವನ ಪಥದಲ್ಲಿ ಮುಂದುವರಿದುದರಿಂದಲೇ ಗಾಂಧೀಜಿ ಮಹಾತ್ಮರಾದರು. ಈ ಸಿದ್ಧಾಂತಗಳನ್ನೇ ಅನುಷ್ಠಾನಕ್ಕೆ ತರಲು ಪ್ರತಿಯೊಬ್ಬನೂ ಯತ್ನಿಸಬೇಕು. "ಪ್ರಭಾತ"

॥ ಮಧುಪರ್ಕ ॥

೧೯೩೬ನೇ ಇಸವಿ ಗಾಂಧೀಜಿ ವಾರ್ಧಾದಲ್ಲಿ ಇದ್ದರು. ಆಗ ಜಪಾನಿನ ರಾಷ್ಟ್ರಕವಿ ನಾಗುಚಿಯವರು ಅವರನ್ನು ನೋಡಲು ಬಂದಿದ್ದರು. ಆಗ ಗಾಂಧೀಜಿಗೆ ಸೌಖ್ಯವಿರಲಿಲ್ಲ. ಅಲ್ಲಿಯ ಸತ್ಯಾಗ್ರಹಾಶ್ರಮ ಕಟ್ಟಡದ ಮಾಳಿಗೆಯ ಮೇಲೆ ಚಪ್ಪರ ಹಾಕಿ ಅದರ ನೆರಳಿನಲ್ಲಿ ಗಾಂಧೀಜಿಯನ್ನು ಮಲಗಿಸಲಾಗಿತ್ತು. ಗಾಂಧೀಜಿಯ ತುಟಿ ಸಾತ್ವಿಕ ಭಾವ ತುಂಬಿದ ಮುಗುಳು ನಗೆಯಿಂದ ಅರಬಿರಿದಿತ್ತು. ಎಲುಬುಗಳು ಉಬ್ಬಿ ತೋರುವುದು ಕಾಣುತ್ತಿತ್ತು. ಕಾಲುಗಳು ಒಣಗಿದ ಕಡ್ಡಿಯ ಹಾಗೆ ಇದ್ದವು. ಅವರು ಕಾಲು ಚಾಚಿಕೊಂಡಿದ್ದರು. ಕಾಲಿಗೆ ಯಾರೋ ಎಣ್ಣೆ ಹಾಕಿ ನೀವುತ್ತಿದ್ದರು.

ಆ ಬಡಕಲು ಶರೀರ ಧಾರಿ ಗಾಂಧೀಜಿಯನ್ನು ಕಂಡ ಜಪಾನೀ ಕವಿಗೆ ಈ ಬಡಕಲು ಶರೀರಿಯೇ, ಈ ಸಾಮಾನ್ಯ ಮನುಷ್ಯನೆಯೇ ಅಖಂಡ ಇಂಗ್ಲೆಂಡಿನ ಅದ್ಭುತ ಜೀವನವನ್ನು ನಡುಗಿಸಿದಾತ ಎಂದೆನಿಸಿರಬೇಕು. ಗಾಂಧೀಜಿಯ ತಲೆಯ ಮೇಲೆ ಏನನ್ನೋ ಬಟ್ಟೆಯಲ್ಲಿ ಸುತ್ತಿ ಇಟ್ಟಂತಿತ್ತು.

ಕವಿ ಕೇಳಿದರು. "ತಲೆಯ ಮೇಲಿರುವದೇನು" ಎಂದು. ಅದು ಮಣ್ಣಿನ ಪಟ್ಟಿ, ಪೋಲ್ಟೀಸು ಆಗಿತ್ತು. ಎರೆ ಮಣ್ಣನ್ನು ಒದ್ದೆ ಮಾಡಿ ಹಾಗೆ ತಲೆಯ ಮೇಲೆ ಇಟ್ಟಿದ್ದರು. ಗಾಂಧೀಜಿಗೆ ರಕ್ತದ ಒತ್ತಡ ಹೆಚ್ಚಿತ್ತು. ಆದ್ದರಿಂದ ಈ ಮಣ್ಣಿನ ಪೋಲ್ಟೀಸು ಉತ್ತಮವೆಂದು ವೈದ್ಯರು ಹೇಳಿದ್ದರಂತೆ. ಆದರೆ ಗಾಂಧೀಜಿ ನಗುತ್ತಾ ಹೇಳಿದರು. "ಹಿಂದೂಸ್ಥಾನದ ಮಣ್ಣಿನಲ್ಲಿ ನಾನು ಹುಟ್ಟಿದ್ದೇನೆ. ಆ ಮಣ್ಣೇ ಈಗ ನನ್ನ ಕಿರೀಟ". ಅವರ ಆ ಮಾತಿನಲ್ಲಿ ಎಷ್ಟು ನಗೆಯೋ ಅಷ್ಟೇ ತತ್ವವೂ ಅಡಕವಾಗಿತ್ತು.

ನಗು ಮಲ್ಲಿಗೆ.

ಆತ—ಯಾವುದೇ ಲಾಭದ ಆಸೆಯಿಲ್ಲದೆ ಸರಕಾರವು ಶಾಸನ ಸಭಾ ಸದಸ್ಯರ ಭಾಷಣಗಳನ್ನು ಅಚ್ಚು ಹಾಕಿ ಗಜೆಟ್ಟಿನಲ್ಲಿ ಪ್ರಕಟಿಸುವದಲ್ಲ!

ಈತ—ಅದನ್ನು ಓದುವವರೂ ಹಾಗೆಯೇ!

* * *

ಡಾಕ್ಟರ್—ಈ ನೋವು ಎಷ್ಟು ಸಮಯಕ್ಕೆ ಒಮ್ಮೆ ಬರುತ್ತದೆ?

ರೋಗಿ—ಪ್ರತಿ ಐದು ನಿಮಿಷಕ್ಕೆ.

ಡಾಕ್ಟರು—ಎಷ್ಟು ಸಮಯದ ವರೆಗೆ ನೋವಿರುತ್ತದೆ?

ರೋಗಿ—ಹದಿನೈದು ನಿಮಿಷಗಳ ವರೆಗೆ.

* * *

ಅಧ್ಯಾಪಕ—ಹಾಬ್ಸನನ 'ಖುಶಿ' ಎಂದರೇನು?

ವಿದ್ಯಾರ್ಥಿ—ಆತನ ಹೆಂಡತಿ ಸಾರ್!

* * *

ರಾಮು—ಭಾರತದ ಫಿಲ್ಮ್ ಶೂಟಿಂಗ್ ವಿಚಾರ ಏನು ಹೇಳುವೆ?

ಕೃಷ್ಣ—ಕಡಿಮೆ ಚಿತ್ರಗಳನ್ನೂ, ಹೆಚ್ಚು ನಟ ನಟಿಯರನ್ನೂ 'ಶೂಟ್' ಮಾಡಿದರೆ ಹಿತವಾಗುತ್ತಿತ್ತು.

* * *

ನ್ಯಾಯಾಧೀಶ—ಈ ಕೇಸಿನಲ್ಲಿ ನೀವು ಸಾಕ್ಷಿಯಾಗಿ ಬಂದಿರುವಿರಿ. ಈ ಗಂಡ ಹೆಂಡಿರ ಜಗಳ ಪ್ರಾರಂಭವಾಗುವಾಗಲೇ ನೀವು ಇದ್ದಿರಾ?

ಸಾಕ್ಷಿ—ನಿಜವಾಗಿಯೂ ಅವರ ಮದುವೆಗೆ ನಾನೇ ಸಾಕ್ಷಿಯಾಗಿದ್ದೆ!

* * *

ಪತ್ನಿ—ಈ ಪೋಲೀಸನು ನಿಮ್ಮ ಜೀವ ಉಳಿಸಿದನು. ಆತನಿಗೆ ಹತ್ತು ರೂಪಾಯಿಗಳನ್ನು ಬಹುಮಾನವಾಗಿ ಕೊಡಲೇ?

ಪತಿ—ಆತನು ನನ್ನನ್ನು ರಕ್ಷಿಸಿದಾಗ ನನ್ನ ಅರ್ಧ ಜೀವವೇ ಇದ್ದುದು. ಅದ್ದರಿಂದ ಐದು ರೂಪಾಯಿ ಕೊಡು.

* * *

ಅಧ್ಯಾಪಕ—ಹಿಮಾಲಯದ ಎವರೆಸ್ಟ್, ಉತ್ತರ ಧ್ರುವ ಮೊದಲಾದುವನ್ನು ಮನುಷ್ಯನು ಕಂಡು ಹಿಡಿದುದರಿಂದ ಏನು ಪ್ರಯೋಜನವಾಯಿತು?

ವಿದ್ಯಾರ್ಥಿ—ಭೂಗೋಳ ಪಾಠ ಇಷ್ಟು ಕಷ್ಟವಾಯಿತು ಸಾರ್.

* * *

ವ್ಯಾಪಾರಿ—ಮನೆ ಮನೆಗೆ ಹೋಗಿ ವ್ಯಾಪಾರ ಮಾಡುವ ನಿನ್ನ ಈ ಅಪೂರ್ವ ಜಯಕ್ಕೆ ಕಾರಣವೇನು?

ಏಜೆಂಟ್—ಮನೆಯ ಯಾವುದೇ ಹೆಂಗಸು ಬಾಗಿಲು ತೆರೆದಾಗ ನಾನು ಹೇಳುವ ನಾಲ್ಕು ಶಬ್ದಗಳೇ ನನ್ನ ವ್ಯಾಪಾರಕ್ಕೆ ಮೂಲ ಕಾರಣ.

ವ್ಯಾಪಾರಿ—ಏನವು?

ಏಜೆಂಟ್—ಕುಮಾರಿ, ನಿಮ್ಮ ತಾಯಿಯು ಒಳಗಿರುವರೇ?

* * *

ಧರ್ಮ ರಹಸ್ಯ.

ವೈರಾಗ್ಯವಿರಲಿ.

ಭರ್ತೃಹರಿಯ ವೈರಾಗ್ಯ ಶತಕದಿಂದ

(೧) ಕೆಲವರು ಧನಿಕರ ಮುಂದೆ ಬೇಡಿ ಕಾಡಿ ದುಃಖ ಜೀವನ ನಡೆಸುತ್ತಾರೆ. ಹಲವರು ಭೋಗಾಸಕ್ತಿಯಿಂದ ಬುದ್ಧಿ ವೈಪರೀತ್ಯ ಹೊಂದುತ್ತಾರೆ. ಇವ್ವದರಲ್ಲಿ ತೃಪ್ತನಾಗಿ ಈಶ್ವರ ಕೃಪೆಯಿಂದ ಗಿರಿಗುಹೆಯ ಶಿಲಾತಲದಲ್ಲಿ ಕುಳಿತ ನನ್ನ ಆನಂದವೇ ಅನಂತವಾದುದು. ನನ್ನ ಧ್ಯಾನ ಮುಗಿದೊಡನೆ ಈ ಜನರ ನೆನಪಾಗುವದು. ಅವರ ಪಾಡಿನ ಜೀವನವನ್ನು ನೋಡಿ ನನಗೆ ನಗುಬರುವದು.

(೨) ಯಾರು ನಿತ್ಯ ಸಂತೋಷಪಡುತ್ತಾರೋ ಅವರ ಆನಂದವು ವೃದ್ಧಿಹೊಂದುತ್ತದೆ. ಎಷ್ಟು ದೊರೆತರೂ ತೃಪ್ತಿ ಇಲ್ಲದ ಧನ ಮೊದಲಾದ ಆಶೆಗೆ ಅಂತ್ಯವಿಲ್ಲ. ನಿತ್ಯತೃಪ್ತರಿಗೆ ಹೆಚ್ಚು ಬೇಕಿಲ್ಲ. ಅತೃಪ್ತರಿಗೆ ಎಷ್ಟು ಕೊಟ್ಟರೂ ಸಾಲದು.

(೩) ವಿರಕ್ತನು ದೀನಭಾವ ತಾಳದೆ ಇಷ್ಟವಿದ್ದರೆ ಕೊಡು, ಇಲ್ಲವಾದರೆ ಬಿಡು ಎಂಬ ಭಾವದಿಂದ ಭಿಕ್ಷೆ ಬೇಡುತ್ತಾರೆ. ಜನರೂ ಗೌರವ ಪೂರ್ವಕ ಕೊಡುತ್ತಾರೆ. ವಿರಕ್ತರು ಸಿಕ್ಕಿದ್ದರಲ್ಲಿ ಆನಂದ ಪಡುತ್ತಾರೆ. ಅವರಿಗೆ ಭಯವಿಲ್ಲ. ದೊರೆಯದ್ದಾದೀತೆಂಬ ಭೀತಿ ಇಲ್ಲ. ಮಾತ್ಸರ್ಯಾದಿ ಸಂಸಾರಿಕ ದೋಷಗಳಿಲ್ಲ ಗರ್ವಾಹಂಕಾರಗಳಿಗೆ ಅವರಲ್ಲಿ ಬೆಲೆ ಇಲ್ಲ.

(೪) ಸುಖವನ್ನು ಭೋಗಿಸುವಾಗ ರೋಗದ ಭಯವಾಗುತ್ತದೆ. ಕುಲಾಭಿಮಾನ ತಾಳುವಾಗ ಅಗೌರವಾದಿಗಳು ಬರುವವೋ ಎಂಬ ಭಯಬರುತ್ತದೆ. ಹಣ ತುಂಬುವಾಗ ಇತರರ ಭಯವಿರುತ್ತದೆ. ಹೆಮ್ಮೆ ಪಡುವಾಗ ದಾರಿದ್ರ್ಯದ ಭಯವಿರುತ್ತದೆ ಬಲವಿರುವಾಗ ಶತ್ರುಭಯವಿರುತ್ತದೆ. ಸೌಂದರ್ಯವಿದ್ದರೆ ಮುದಿತನದ ಭಯವಿರುತ್ತದೆ. ಶಾಸ್ತ್ರ ನಿಪುಣರಿಗೆ ವಾದಿಗಳ ಭಯವಿರುತ್ತದೆ. ಇದೀ ದೇಹವನ್ನೇ ನೆನೆದಾಗ ಅಂತಕನ ಭಯ ಇದ್ದೇ ಇದೆ. ವೈರಾಗ್ಯವೊಂದೇ ಭಯವಿಲ್ಲದದು.

(೫) ಜನನವು ಮರಣದಿಂದಲೂ, ಸೊಗಸಿನ ಯೌವನವು ಮುದಿತನದಿಂದಲೂ, ಸಂತೋಷವು ಹಣದಾಸೆಯಿಂದಲೂ; ಇಂದ್ರಿಯ ನಿಗ್ರಹದ ಸುಖವು ಪ್ರೌಢಾಂಗನೆಯ ವಿಲಾಸದಿಂದಲೂ ವಿನಯಾದಿಗುಣಗಳು ಅಸೂಯಾಪರರಿಂದಲೂ, ವನವು ಕ್ರೂರ ಮೃಗಗಳಿಂದಲೂ, ರಾಜರು ದುರ್ಜನರಿಂದಲೂ, ಸಂಪತ್ತು, ಅಸ್ಥಿರತೆಯಿಂದಲೂ ಆಕ್ರಮಿಸಲ್ಪಡುವದರಿಂದ ಯಾವುದನ್ನೂ ನಿತ್ಯ ಸುಖಕರವೆಂದು ತಿಳಿಯಬೇಡ.

(೬) ಬಗೆ ಬಗೆಯ ವ್ಯಾಧಿಗಳಿಂದ ಆರೋಗ್ಯವು ಕೆಡುತ್ತಲೇ ಇದೆ. ಸಂಪತ್ತಿದ್ದಲ್ಲಿ ಆಪತ್ತಿಗೆ ಸುಸ್ವಾಗತವೇ ಇದೆ. ಹುಟ್ಟಿದ ಜಂತುಗಳನ್ನೆಲ್ಲಾ ಮೃತ್ಯು ತನ್ನೆಡೆಗೆ ಎಳೆಯುತ್ತಲೇ ಇದೆ. ಪ್ರತಿಯೊಂದಕ್ಕೂ ನಾಶವಿದೆ. ಯಾವುದೂ ಸ್ಥಿರವಿಲ್ಲ.

(೭) ಭೋಗ ಸಾಮುಗ್ರಿಗಳು ಜಲತರಂಗದ ಕಣಗಳಂತೆ, ಸ್ಥಿರವಲ್ಲ. ಯೌವನದ ವಿಷಯಲಾಲಸೆಯೂ ಕೆಲ ದಿನಗಳ ವರೆಗೆ ಮಾತ್ರ. ಆದ್ದರಿಂದ ವಿದ್ವಾಂಸರೇ, ಕ್ಷಣಿಕ ಈ ಸುಖಗಳು ನಿಸ್ಸಾರವೆಂದರಿತು ಲೋಕಹಿತ ಕಾರ್ಯಮಾಡಿರಿ.

(೮) ಭೋಗವಿಲಾಸಗಳು ಮೋಡದೆಡೆಯ ಬೆಳಕಿನಂತೆ ಚಂಚಲ. ನರನ ಆಯುಷ್ಯವು ಗಾಳಿಯ ಹೊಡೆತಕ್ಕೆ ಸಿಲುಕಿದ ಕಮಲದೆಲೆಯ ಜಲಕಣದಂತೆ. ವಿದ್ವಾಂಸರು ತಡಮಾಡದೆ ಧೈರ್ಯಸ್ಥೈರ್ಯ ಉಳ್ಳವರಾಗಿ ಬ್ರಹ್ಮಧ್ಯಾನದಲ್ಲಿ ಬುದ್ಧಿಯನ್ನಿರಿಸಬೇಕು.

(೯) ಆಯುಷ್ಯವು ಕ್ಷಣಿಕ. ಯೌವನ ಸಂಪತ್ತು ತಾತ್ಕಾಲಿಕ. ಧನವು ಸಂಕಲ್ಪದಲ್ಲಿ ಮಾತ್ರ. ಕಾಮ್ಯವಸ್ತುಗಳು ಮಳೆಗಾಲದ ಮಿಂಚಿನಂತೆ. ಅಂಗನಾಲಿಂಗನ ಸುಖವೂ ಬಹುಕಾಲ ಇರಲಾರದು. ಆದ್ದರಿಂದ ನರರೇ, ಧ್ಯಾನನಿರತರಾಗಿ, ಆತ್ಮಸಾಕ್ಷಾತ್ಕಾರ ಪಡೆಯಿರಿ.

ಗಂಡ—ಕಳೆದ ಐದು ವರ್ಷಗಳಿಂದ ನಾನು ನನ್ನ ಹೆಂಡತಿಯೊಡನೆ ಮಾತಾಡಿಲ್ಲವೆಂಬುದು ನಿಜ.

ನ್ಯಾಯಾಧೀಶ—ಹಾಗೆ ಐದು ವರ್ಷಗಳ ವರೆಗೆ ಹೆಂಡತಿಯೊಡನೆ ಮಾತಾಡದಿರಲು ನಿನ್ನ ವಿವರಣೆ ಏನು?

ಗಂಡ—ಆಕೆ ಮಾತಾಡುತ್ತಿರುವಾಗ ಮಧ್ಯೆ ಬಾಯಿ ಹಾಕಲು ನಾನು ಇಚ್ಛಿಸಲಿಲ್ಲ.

* * *

ಹೆಂಡತಿ—ನಾವು ಮದುವೆಯಾಗಿ ಹನ್ನೆರಡು ವರ್ಷಗಳಾದವು. ಇದು ಹನ್ನೆರಡನೇ ವರ್ಷೋತ್ಸವ. ಪ್ರತೀ ವರ್ಷೋತ್ಸವಗಳಲ್ಲೂ ನಾನು ನಿಮಗಾಗಿ ಕೇಕ್ ಮಾಡಲು ತಪ್ಪಿರುವೆನೇ?

ಗಂಡ—ನೀನು ಮಾಡಿದ ಕೇಕುಗಳು ನಮ್ಮ ವೈವಾಹಿಕ ಜೀವನದ ರಸ್ತೆಯಲ್ಲಿ ಮೈಲು ಕಲ್ಲುಗಳೆಂದು ನಾನು ಗಣಿಸಿದ್ದೇನೆ.

* * *

ರೋಸೆನ್‌ಬರ್ಗ್ ದಂಪತಿಗಳಿಗೆ ಮರಣ ಶಿಕ್ಷೆ.

ಕಳೆದ ಯುದ್ಧದ ಕಾಲಕ್ಕೆ ಪರಮಾಣು ಬಾಂಬಿನ ಗುಟ್ಟನ್ನು ರಷ್ಯಾಕ್ಕೆ ಕೊಡಲು ಯತ್ನಿಸಿದರೆಂಬ ತಪ್ಪಿನ ಮೇಲೆ ಮರಣ ದಂಡನೆಗೆ ಗುರಿಯಾಗಿದ್ದ ಜೂಲಿಯಸ್ ರೋಸೆನ್‌ಬರ್ಗ್ ಮತ್ತು ಅವರ ಪತ್ನಿಯವರಾದ ಎಥೆಲ್ ರೋಸೆನ್‌ಬರ್ಗ್‌ರವರನ್ನು ನ್ಯೂಯಾರ್ಕಿನ ಸಿಂಗ್ ಸಿಂಗ್ ಜೈಲಿನ 'ಮೃತ್ಯು ಕೋಣೆ'ಯಲ್ಲಿ ವಿದ್ಯುತ್ ಕುರ್ಚಿಯ ಮೇಲೆ ಕೂರಿಸಿ ಅವರ ಶರೀರಗಳಿಗೆ ವಿದ್ಯುತ್ ಪ್ರವಾಹವನ್ನು ಹರಿಸಿ ಮರಣ ದಂಡನೆ ವಿಧಿಸಲಾಯಿತು.

ಆ ದಂಪತಿಗಳಿಬ್ಬರಲ್ಲಿ ಯಾರೂ ಸಾಯುವ ಮುನ್ನ ಏನೂ ಹೇಳಲಿಲ್ಲ ಅವರನ್ನು ವಿದ್ಯುತ್ ಕುರ್ಚಿಯಲ್ಲಿ ಕುಳ್ಳಿರಿಸಿ ಕೊಂದ ಮೇಲೆ, ಆ ಸುದ್ದಿಯನ್ನು ಮಾತ್ರ ಜೈಲಿನ ಅಧಿಕಾರಿಗಳು ತಿಳಿಸಿದರು.

ರೋಸೆನ್‌ಬರ್ಗ್ ದಂಪತಿಗಳ ವಕೀಲರು ಅವರ ಪ್ರಾಣವನ್ನು ಉಳಿಸಲು ಮಾಡಿದ ಪ್ರಯತ್ನಗಳೆಲ್ಲವೂ ವಿಫಲವಾದವೆಂದು ತಿಳಿಸಿದರು. ಅವರನ್ನು ವಿದ್ಯುತ್ ಕುರ್ಚಿಯಲ್ಲಿ ಕುಳ್ಳಿರಿಸುವುದಕ್ಕೆ ೧೦ ನಿಮಿಷಗಳ ಹಿಂದೆ ಅವರ ಲಾಯರುಗಳು ಪ್ರಕಟಣೆ ಹೊರಡಿಸಿ 'ನಮ್ಮ ಪ್ರಯತ್ನಗಳೆಲ್ಲವೂ ವಿಫಲವಾದವು. ನಾವಿನ್ನೇನೂ ಮಾಡುವ್ರದಕ್ಕಾಗುವುದಿಲ್ಲ. ಅವರನ್ನು ಉಳಿಸುವುದು ಬಹು ಕಷ್ಟ' ಎಂದರು.

ಆ ಇಬ್ಬರು ದಂಪತಿಗಳೂ ಯೆಹೂದ್ಯ ಮತಾಚಾರದ ಸಂಜೆಯ ಪೂಜೆಯ ಹೊತ್ತಿಗೆ ಇಹಲೋಕವನ್ನು ಬಿಟ್ಟು ಹೋಗಿದ್ದರು. ದೇವರಲ್ಲಿ ಅವರು ಪ್ರಾರ್ಥಿಸಿಕೊಳ್ಳಬಹುದೆಂದು ಹೇಳಿ ವಿದ್ಯುತ್ ಕುರ್ಚಿ ಮೇಲಿನ ಶಿಕ್ಷೆಯನ್ನು ಸ್ವಲ್ಪ ತಡಮಾಡಿದ್ದರು.

ಈ ದಂಪತಿಗಳಿಗೆ ಅಧ್ಯಕ್ಷ ಐಸೆನ್‌ಹೋವರ್‌ರವರಿಂದ ಕ್ಷಮಾ ಭಿಕ್ಷೆ ಪಡೆಯಬೇಕೆಂದು ಅವರ ವಕೀಲರಾದ ಮಿ. ಎಮಾನ್ಯುಯಲ್ ಬ್ಲಾಕ್‌ರವರು ತಾವೇ ಪುನಃ ವಾಷಿಂಗ್‌ಟನ್ನಿನಲ್ಲಿರುವ ವೈಟ್ ಹೌಸಿಗೆ ಹೋದರು ಅವರ ಕೈಯಲ್ಲಿ ಕ್ಷಮಾ ಯಾಚನೆಯ ಪತ್ರವಿತ್ತು.

ವೈಟ್ ಹೌಸ್ ಮಹಾ ದ್ವಾರಗಳಲ್ಲಿರುವ ಶಿಪಾಯಿಗಳು ಈ ವಕೀಲರಿಗೆ ಒಳಗೆ ಹೋಗಲು ಅವಕಾಶ ಕೊಡಲಿಲ್ಲ. ಅವರನ್ನು ಹತ್ತಿರಕ್ಕೂ ಬರಗೊಡಲಿಲ್ಲ.

'ಇನ್ನೆಲ್ಲಾ ಮುಗಿಯಿತು. ಇನ್ನೇನಿದೆ' ಎಂಬುದಾಗಿ ಮಿ. ಬ್ಲಾಕ್‌ರವರು ಅಲ್ಲಿದ್ದ ಪತ್ರಿಕೋದ್ಯೋಗಿಗಳಿಗೆ ಹೇಳಿದರು.

ಆ ಅಟಂ ಗೂಢಚಾರ ದಂಪತಿಗಳಲ್ಲಿ ಮೊದಲು ಗಂಡನಿಗೆ ವಿದ್ಯುತ್ ಪ್ರವಾಹವನ್ನು ಹಾಯಿಸಲಾಯಿತು. ಆತನಿಗೆ ಈಗ ೩೫ ವರ್ಷ ವಯಸ್ಸಾಗಿದೆ. ಆತ ಕುರ್ಚಿಯ ಮೇಲೆ ಕೂತ ಮೇಲೆ ಪ್ರಾಣವನ್ನು ನೀಗಿದ.

ಗಂಡನಿಗೆ ವಿದ್ಯುತ್ ಪ್ರವಾಹ ಹರಿಸಿ ಆತನನ್ನು ಕೊಂದ ೧೦ ನಿಮಿಷಗಳ ಮೇಲೆ ಜೂಲಿಯಸ್ ರೋಸೆನ್ ಬರ್ಗ್‌ನ ಹೆಂಡತಿ ಮಿಸೆಸ್ ಎಥೆಲ್ ರೋಸೆನ್‌ಬರ್ಗ್‌ರ ವಿದ್ಯುತ್ ಕುರ್ಚಿಯ ಮೇಲೆ ಕೂರಿಸಿ ಪ್ರಾಣವನ್ನು ತೆಗೆದರು.

ಮಕ್ಕಳ ಪುಟ

ಸಿಂಹದ ಕಥೆ

ಒಂದು ಪಟ್ಟಣದಲ್ಲಿ ನಾಲ್ಕು ಬ್ರಾಹ್ಮಣರಿದ್ದರು. ಅವರು ಬಹು ಸ್ನೇಹದಿಂದ ಇರುತ್ತಿದ್ದರು. ಅವರಲ್ಲಿ ಮೂರು ಜನರು ತುಂಬಾ ವಿದ್ಯಾವಂತರಾಗಿ ಜ್ಞಾನ ಸಮುದ್ರದ ಆಚೆ ದಡವನ್ನು ಸೇರಿದ್ದರು. ಅವರಲ್ಲಿ ತುಂಬಾ ಜ್ಞಾನವಿತ್ತೇ ವಿನಹ ವಿವೇಚನಾ ಬುದ್ಧಿ ಇರಲಿಲ್ಲ. ಆದರೆ ನಾಲ್ಕನೆಯವನಿಗೆ ಜ್ಞಾನಾರ್ಜನೆಯು ರುಚಿಸುತ್ತಿರಲಿಲ್ಲ. ಪ್ರತಿಯೊಂದನ್ನೂ ಪರಿಶೀಲಿಸಿ, ವಿವೇಚಿಸಿ ಕೆಲಸ ಮಾಡುವವನಾಗಿದ್ದನು.

ಒಂದು ದಿನ ಆ ನಾಲ್ಕು ಜನರು ಕೂತು ಹಾಗೆಯೇ ಮಾತಾಡುತ್ತಿದ್ದರು. ಅವರು ಹೇಳಿದರು. 'ನಮಗೆ ವಿದ್ಯೆ, ಅತುಳವಾದ ಈ ಜ್ಞಾನ ಇದ್ದು ಏನು ಪ್ರಯೋಜನ? ನಾವು ದೇಶದೇಶಗಳನ್ನು ಸುತ್ತಬೇಕು. ನಮ್ಮ ಪಾಂಡಿತ್ಯದಿಂದ ರಾಜಮಹಾರಾಜರಿಂದ ಗೌರವ ಪಡೆಯಬೇಕು. ಬೇಕಾದಷ್ಟು ಹಣ ಸಂಪಾದಿಸಬೇಕು. ಹೇಗೂ ಇಷ್ಟೊಂದು ವಿದ್ಯೆ ಕಲಿತಿರುವ ನಾವುಗಳು ಈ ಪಟ್ಟಣದಲ್ಲಿ ಕೂತು ಕಾಲಕಳೆಯುವದರಲ್ಲಿ ಪ್ರಯೋಜನವಿಲ್ಲ. ಆದ್ದರಿಂದ ನಾವು ದೇಶಸುತ್ತಬೇಕು' ಎಂದು ನಿರ್ಣಯಿಸಿ ಹೊರಟರು.

ಕೆಲವು ಸಮಯ ದಾರಿ ನಡೆದ ಮೇಲೆ ಅವರಲ್ಲಿ ಹಿರಿಯವನಾದವನು ಹೇಳಿದನು. 'ನಾವು ನಾಲ್ಕು ಜನರಲ್ಲಿ ಒಬ್ಬನು ಏನೂ ಜ್ಞಾನವಿಲ್ಲದ ನಿರಕ್ಷರ ಕುಕ್ಷಿ. ಆತನು ಬುದ್ಧಿವಂತನೇನೋ ನಿಜ. ಆದರೆ ವಿದ್ಯೆ ಇಲ್ಲದವನ ಬುದ್ಧಿ ಯಾರನ್ನೂ ಮೆಚ್ಚಿಸದು. ರಾಜರ ಕೃಪೆಯನ್ನು ಪಡೆಯಲಾರದು. ಆದ್ದರಿಂದ ಮುಂದೆ ನಮಗಾಗಬಹುದಾದ ಸಂಪಾದನೆಯಲ್ಲಿ ಆತನನ್ನು ಸಮಪಾಲುಗಾರನಾಗಿ ಸೇರಿಸಿಕೊಳ್ಳುವದರಲ್ಲಿ ಅರ್ಥವಿಲ್ಲ. ಆದ್ದರಿಂದ ಆತನನ್ನು ನಮ್ಮ ಜೊತೆಯಲ್ಲಿ ಸೇರಿಸಿಕೊಳ್ಳುವದು ಬೇಡ. ಆತನನ್ನು ಹಿಂದಕ್ಕೆ ಕಳುಹಿಸುವದು ಲೇಸು.'

ಅದಕ್ಕನುಸಾರವಾಗಿ ಎರಡನೆಯವನು ಹೇಳಿದನು. 'ಎಲೈ ನಮ್ಮ ಬುದ್ಧಿವಂತನಾದ ಸ್ನೇಹಿತನೆ. ನಿನಗೆ ವಿದ್ಯೆ ಇಲ್ಲ. ಪ್ರಪಂಚದ ಜ್ಞಾನವಿಲ್ಲ. ನೀನು ನಮ್ಮೊಡನೆ ಬರುವದು ಬೇಡ. ದಯವಿಟ್ಟು ಹಿಂತಿರುಗು.'

ಮೂರನೆಯವನೆಂದನು, 'ಇಲ್ಲ. ಈ ರೀತಿ ನಾವು ವರ್ತಿಸಬಾರದು. ಚಿಕ್ಕಂದಿನಿಂದಲೇ ಜೊತೆಯಲ್ಲಿ ಬೆಳೆದವರು ನಾವು. ನಮ್ಮ ಜೊತೆಯಲ್ಲಿ ಆತನೂ ಬರಲಿ. ನಾವು ಸಂಪಾದಿಸುವ ಸಂಪತ್ತಿನಲ್ಲಿ ಆತನಿಗೂ ಒಂದು ಪಾಲು ದೊರೆಯಬೇಕು.'

ಸ್ವಲ್ಪ ಚರ್ಚೆಯ ನಂತರ ಎಲ್ಲರೂ ಒಪ್ಪಿದರು. ನಾಲ್ವರೂ ಮುಂದೆ ಸಾಗತೊಡಗಿದರು. ದಾರಿಯಲ್ಲಿ ಅವರಿಗೆ ದೊಡ್ಡದೊಂದು ಕಾಡು ಸಿಕ್ಕಿತು. ಆ ಕಾಡಿನಲ್ಲಿ ಅವರು ಸತ್ತು ಬಿದ್ದಿದ್ದ ಸಿಂಹವೊಂದನ್ನು ಕಂಡರು. ಅದನ್ನು ಕಂಡು ಒಬ್ಬ ಬ್ರಾಹ್ಮಣನು ಹೇಳಿದನು. 'ನಮ್ಮ ಜ್ಞಾನದ ಮಿತಿಯನ್ನು ಪರೀಕ್ಷಿಸಲು ನಮಗೊಂದು ಸಂದರ್ಭದೊರೆಯಿತು. ಅಸಾಧಾರಣ ಪ್ರಯತ್ನದಿಂದ ನಾವು ಸಂಪಾದಿಸಿರುವ ವಿದ್ಯೆಯನ್ನು ಪರೀಕ್ಷಿಸಿ ನೋಡುವ. ಈ ಪ್ರಾಣಿಯ ಶರೀರಕ್ಕೆ ಜೀವ ನೀಡಿ ಅದನ್ನು ಬದುಕಿಸುವಾ. ನಮ್ಮ ಕೌಶಲವನ್ನು ಪ್ರದರ್ಶಿಸುವಾ' ಎಂದನು.

ಹಿರಿಯ ಬ್ರಾಹ್ಮಣನು ಹೇಳಿದನು 'ನನಗೆ ಮೂಳೆಗಳನ್ನು ಜೋಡಿಸಲು ಗೊತ್ತಿದೆ.'

ಎರಡನೆಯವನು ಹೇಳಿದನು 'ನಾನು ಮಾಂಸ, ಚರ್ಮ, ರಕ್ತಗಳ ರಚನೆ ಮಾಡಬಲ್ಲೆ.'

ಮೂರನೆಯವನೆಂದನು, 'ನಾನು ಅದಕ್ಕೆ ಜೀವಕೊಡಿಸಬಲ್ಲೆ.'

ಅದೇ ರೀತಿ ಮೊದಲನೆಯವನು ಮೂಳೆಗಳನ್ನು ಕ್ರಮಪ್ರಕಾರ ಜೋಡಿಸಿದನು. ಎರಡನೆಯವನು ಚರ್ಮ, ಮಾಂಸ, ರಕ್ತಗಳನ್ನು ಒದಗಿಸಿದನು. ಮೂರನೆಯವನು ಆ ಶರೀರಕ್ಕೆ ಪ್ರಾಣ ಕೊಡಿಸುವದರಲ್ಲಿದ್ದಾಗ ಬುದ್ಧಿವಂತನಾದ ನಾಲ್ಕನೇ ಬ್ರಾಹ್ಮಣನು ಹೇಳಿದನು. 'ಇದು ಸಿಂಹವಾಗಿದೆ. ಅದನ್ನು ಜೀವಂತವಾಗಿ ಮಾಡಿದರೆ ಅದು ನಮ್ಮನ್ನೆಲ್ಲಾ ಕೊಂದು ಹಾಕೀತು.'

'ಅಯ್ಯೋ ಜ್ಞಾನವಿಲ್ಲದವನೆ! ನಮ್ಮ ಜ್ಞಾನದ ಮಹಿಮೆ ನಿನಗರಿಯದು. ಅದನ್ನು ನೋಡಿ ಸಹಿಸಲಾರದೆ ನೀನು ಹೀಗೆ ಹೇಳುತ್ತಿರುವೆ' ಎಂದು ಉಳಿದವರು ನುಡಿದರು.

ಆಗ ನಾಲ್ಕನೇ ಬ್ರಾಹ್ಮಣನು "ನೀವು ಸ್ವಲ್ಪ ತಡೆಯಿರಿ. ನಾನು ಅನುಕೂಲವಾದ ಮರವೊಂದನ್ನು ಹತ್ತಿಕೊಳ್ಳುವೆನು. ನಂತರ ಸಿಂಹಕ್ಕೆ ಜೀವ ಕೊಡಿಸಿರಿ" ಎಂದು ಹೇಳಿ ಒಂದು ಮರವೇರಿ ಕುಳಿತುಕೊಂಡನು.

ವಿದ್ವಾಂಸರ ಜ್ಞಾನಶಕ್ತಿಯಿಂದ ಸಿಂಹಕ್ಕೆ ಜೀವ ಬಂತು. ಅದು ಕಣ್ತೆರೆದು ನೋಡಿದೊಡನೆಯೇ ಮುಂದಿದ್ದ ಮೂರು ಬ್ರಾಹ್ಮಣರನ್ನು ಹೊಡೆದು ಕೊಂದು ಹಾಕಿತು. ಬುದ್ಧಿಶಾಲಿಯಾದ ಬ್ರಾಹ್ಮಣನು ಸಿಂಹವು ಕಣ್ಮರೆಯಾಗುವ ವರೆಗೆ ಕಾದಿದ್ದು ನಂತರ ಮರದಿಂದ ಇಳಿದು ಮನೆಗೆ ಹೋದನು. ಆದ್ದರಿಂದಲೇ ಜ್ಞಾನವಿದ್ದರೆ ಪ್ರಯೋಜನವಿಲ್ಲ. ಬುದ್ಧಿವಂತಿಕೆ ಇರಲಿ ಎಂದು ಹೇಳುವದಾಗಿದೆ ಎಂದು ಚಿನ್ನ ದೊರೆತ ಬ್ರಾಹ್ಮಣನು ಹೇಳಿದನು.

ತಲೆಯಲ್ಲಿ ಚಕ್ರವಿರುವ ಬ್ರಾಹ್ಮಣನು ಈ ಕಥೆಯನ್ನು ಕೇಳಿ ಹೇಳಿದನು. "ನಾನೊಪ್ಪಲಾರೆ. ನಿನ್ನ ವಾದವು ಸರಿ ಇಲ್ಲ. ಎಷ್ಟೇ ಬುದ್ಧಿ ಇದ್ದರೂ ಕೂಡ ಅದೃಷ್ಟವಿಲ್ಲದಿದ್ದರೆ ಪ್ರಯೋಜನವಿಲ್ಲ. ಅದೃಷ್ಟವಿದ್ದರೆ ವಿದ್ಯೆ, ಜ್ಞಾನ, ಬುದ್ಧಿ ಯಾವುದೂ ಬೇಕಿಲ್ಲ. ಏಕೆಂದರೆ ಒಂದು ತಲೆಯಲ್ಲಿ ನೂರಾರು ಜಾಣ್ಮೆಗಳಿರಬಹುದು. ಮತ್ತೊಂದರಲ್ಲಿ ಸಾವಿರಾರು ವಿಷಯದ ಜ್ಞಾನವಿರಬಹುದು. ಆದರೆ ಒಂದೇ ವಿಷಯ ತಿಳಿದವನು ಸುರಕ್ಷಿತವಾಗಿ ಬಾಳಿದ ಕತೆ ಗೊತ್ತಿಲ್ಲವೇ?" ಎಂದು ಕೇಳಿದನು. ಚಿನ್ನ ದೊರೆತ ಬ್ರಾಹ್ಮಣನು ಇಲ್ಲವೆಂದು ಹೇಳಿದ ಕಾರಣ ಮುಂದಿನ ವಾರ ಚಕ್ರದ ಹೊಡೆತ ತಿನ್ನುತ್ತಿರುವ ಬ್ರಾಹ್ಮಣನು ನೂರು ಬುದ್ಧಿ, ಸಾವಿರ ಬುದ್ಧಿ ಮತ್ತು ಒಂದು ಬುದ್ಧಿಯ ಕಥೆಯನ್ನು ಹೇಳುವನು.

THE CANARA BANKING CORPORATION LIMITED.

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ 1906]   [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ಚಿಕ್ಕ ಮಾಯಿದೆಯ ಠೇವಣಾತಿಗಳು :

3 ರಿಂದ 6 ತಿಂಗಳುಗಳ ವರೆಗೆ— ಸಾಲಿಯಾನ ಶೇಕಡ 3
7 ರಿಂದ 12 ತಿಂಗಳುಗಳ ವರೆಗೆ—ಸಾಲಿಯಾನ ಶೇಕಡ 3¼
ಪಂಚವಾರ್ಷಿಕ ಸುವರ್ಣ ಠೇವಣಾತಿಗಳು— ,, ,, 4

—: ಕೊಡಗು ಸಂಸ್ಥಾನದಲ್ಲಿ ನಮ್ಮ ಶಾಖೆಗಳು :—

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

INSURE WITH
OR REPRESENT

INDIA'S OLDEST LIFE OFFICE.

THE BOMBAY MUTUAL LIFE ASSURANCE SOCIETY, LTD.

BUSINESS IN FORCE OVER 40 CRORES
ASSETS .... OVER 12 CRORES

Applications from energetic youngmen are invited for representation.

25–14

Head Office; BOMBAY.

Branch: 172. 3, Narasimharaja Road. BANGALORE 2.

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸ್ :— ವೀರಾಜಪೇಟೆ.

ಶಾಖೆ :— ನ್ಯೂ, ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ಕೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟೆಗಳು
2. 12 ನೇ ನಂಬರಿನ ಒಂಟಿ ಹೊಳವಿನ ತೋಟೆದ ಕೋವಿಗಳು.
3. ಒಂಟಿ ಮತ್ತು ಜೋಡಿ ಹೊಳವಿನ ಕೇಪಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟೆಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
5. ⅝", ½" ಮತ್ತು ¾" ಕಬ್ಬಿಣದ ಸರಳುಗಳು
6. 2", 1¼", 1" ¾" ಮತ್ತು ½" ಕೊಳಾಯಿಗಳು. (G. I. Peps)
7. 1¾" × 5/16" ಉಕ್ಕಿನ ಪಟ್ಟಿಗಳು (Spring Steel flats)
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
9. ಕೋಳಿ ಮತ್ತು ಆನೆ ಮಾರ್ಕಿನ ಸಿಮೆಂಟ್ ಟಿನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)   ಪಿ. ಬಿ. ಬೆಳ್ಯಪ್ಪ, (ಪ್ರೆಸಿಡೆಂಟ್)

ಡಾ. ಶ್ಯಾಮಪ್ರಸಾದ ಮುಖರ್ಜಿ ಇವರ ನಿಧನ.

ಶ್ರೀನಗರ ಜೈಲಿನಲ್ಲಿ ಮೃತರಾದರು.

ಭಾರತೀಯ ಜನಸಂಘದ ಪ್ರೆಸಿಡೆಂಟರೂ ಕೇಂದ್ರ ಜನತಾಸಭೆಯಲ್ಲಿ ನೇಶನಲ್ ಡೆಮೊಕ್ರೆಟಿಕ್ ಪಕ್ಷದ ಮುಂದಾಳೂ ಆಗಿದ್ದ ಡಾಕ್ಟರ್ ಶ್ಯಾಮಪ್ರಸಾದ ಮುಖರ್ಜಿಯವರು ತಾ. ೨೩ರ ಬೆಳಿಗ್ಗೆ, ಶ್ರೀನಗರ ಸ್ಟೇಟ್ ಆಸ್ಪತ್ರೆಯಲ್ಲಿ ನಿಧನರಾದರು. ಶ್ರೀಯುತರು ಕಾಶ್ಮೀರ ಸರಕಾರದ ಬಂಧನದಲ್ಲಿದ್ದರು. ಡಾ. ಮುಖರ್ಜಿಯವರು ಕಳೆದ ಹತ್ತು ದಿನಗಳಿಂದ ಅಸ್ವಸ್ಥರಾಗಿದ್ದರೂ ಅವರ ಕಾಯಿಲೆಯ ವಾರ್ತೆಯು ತಾ. ೨೨ರಲ್ಲಿ ಅವರನ್ನು ಜೈಲಿನಿಂದ ಆಸ್ಪತ್ರೆಗೆ ಸಾಗಿಸಿದಾಗ ಮಾತ್ರ ಪ್ರಕಟವಾಯಿತು. ಆಸ್ಪತ್ರೆಗೆ ಬೆಳಿಗ್ಗೆ ೯ ಗಂಟೆಗೆ ಸೇರಿಸಿದವರು ಮರುದಿನ ಅಂದರೆ ತಾರೀಕು ೨೩ರ ಬೆಳಿಗ್ಗೆ ೩.೪೦ ಗಂಟೆ ಶಿವಾಧೀನರಾದರು. ಮುಖರ್ಜಿಯವರಿಗೆ ೫೨ ವಯಸ್ಸಾಗಿತ್ತು.

ಡಾ. ಮುಖರ್ಜಿಯವರು ಜಮ್ಮು ಪ್ರಾಂತದಲ್ಲಿ ಪ್ರಖರವಾಗಿ ನಡೆಯುತ್ತಿರುವ ಪ್ರಜಾಪರಿಷತ್ ಚಳವಳಿಯು ಶಾಂತರೀತಿಯಿಂದ ನಡೆಯುವಂತೆ ನೋಡಲು ಕಳೆದ ಮೇ ತಿಂಗಳು ೧೧ರಲ್ಲಿ ಜಮ್ಮುವಿಗೆ ತಮ್ಮ ಕೆಲವು ಸಹಕಾರ್ಯಕರ್ತರೊಡನೆ ಹೊರಟರು. ಕಾಶ್ಮೀರ ಸರಕಾರವು ಅವರಿಗೆ ನೋಟೀಸು ಕೊಟ್ಟು ಕಾಶ್ಮೀರದೊಳಗೆ ಬರಕೂಡದೆಂದು ನಿರ್ಬಂಧಿಸಿತು. ಆದರೆ ಭಾರತ ರಾಜ್ಯಘಟನೆ ಪ್ರಕಾರ ದೇಶದ ನಾಗರಿಕನಿಗೆ ಯಾವುದೇ ಭಾಗದಲ್ಲಿ ನಿರ್ಬಾಧಕವಾಗಿ ಸಂಚರಿಸುವ ಹಕ್ಕಿದೆಯೆಂದು ಮುಖರ್ಜಿಯವರು ಕಾಶ್ಮೀರ ಸರಕಾರದ ಆಜ್ಞೆಯನ್ನು ಮೀರಿ ಕಾಶ್ಮೀರದೊಳಗೆ ಪ್ರವೇಶಿಸಿದರು. ಆಗ ಅವರನ್ನೂ ಅವರ ಸಹಕಾರ್ಯಕರ್ತರನ್ನೂ ಕಾಶ್ಮೀರದ ಶೇಕ್ ಅಬ್ದುಲ್ಲಾ ಸರಕಾರ ಬಂಧಿಸಿ ವಿಚಾರಣೆ ಇಲ್ಲದೆ ಜೈಲಿನಲ್ಲಿಟ್ಟಿತ್ತು.

ಡಾ. ಶ್ಯಾಮಪ್ರಸಾದರ ಮೃತದೇಹವನ್ನು, ಇಂಡಿಯಾ ಸರಕಾರದ ವಿಮಾನವೊಂದರಲ್ಲಿ ಶ್ರೀನಗರದಿಂದ ಕಲ್ಕತ್ತಾಕ್ಕೆ ತರಲಾಯಿತು. ಪ್ರಜಾಪರಿಷತ್ತಿನ ಮುಂದಾಳು ಶ್ರೀ ಪ್ರೇಮನಾಥ ಡೋಗ್ರ, ಗುರುದತ್, ತೇಕ್‌ಚಂದ್ ಮೊದಲಾದವರು ಶವದ ಜೊತೆಯಲ್ಲಿ ಕಲ್ಕತ್ತಾಕ್ಕೆ ಹೋದರು. ವಿಮಾನಕ್ಕೆ ಶವವನ್ನು ಹಾಕುವ ಮೊದಲು ಜಮ್ಮು ಮತ್ತು ಕಾಶ್ಮೀರ ಸರಕಾರದ ಪರವಾಗಿಯೂ, ಬೇಗಂ ಅಬ್ದುಲ್ಲರ ಪರವಾಗಿಯೂ ಹೂವಿನಹಾರಗಳನ್ನು ಶವಕ್ಕೆ ಕಾಶ್ಮೀರದ ಮುಖ್ಯಮಂತ್ರಿ ಶೇಕ್ ಅಬ್ದುಲ್ಲಾರು ಅರ್ಪಿಸಿದರು. ಅವರ ಶವ ಸಂಸ್ಕಾರವು ತಾ. ೨೪ರಲ್ಲಿ ನಡೆಯಿತು. ಇಡೀ ಹಿಂದೂದೇಶದ ಮುಂದಾಳುಗಳೆಲ್ಲಾ ಶ್ರೀಯುತರ ನಿಧನದ ಬಗ್ಗೆ ಸಂತಾಪ ವ್ಯಕ್ತಮಾಡಿದ್ದಾರೆ.

ಶ್ಯಾಮಪ್ರಸಾದರ ನಿಧನದಿಂದ ಭಾರತದ ರಾಜಕೀಯ ರಂಗದ ಅತೀ ಅಗ್ರಗಣ್ಯ ವ್ಯಕ್ತಿಯ ಕಣ್ಮರೆಯಾದಂತಾಯಿತು. ಕೇಂದ್ರ ಜನತಾ ಸಭೆಯಲ್ಲಿ ಅವರ ಸ್ಥಳವು ಎಂದೂ ತುಂಬಿಬರಲಾರದು. ಅವರು ಪ್ರಸಿದ್ಧ ವಾಗ್ಮಿಗಳೂ, ಹೃದಯಪೂರ್ವಕ ಜನತೆಯ ಹಿತಕಾಂಕ್ಷಿಗಳೂ ಆಗಿದ್ದರು. ಅವರು ಅನೇಕ ಬಾರಿ ನೆಹರೂರವರನ್ನು ಈ ನಂಬಿಕೆಯಿಂದಲೇ ಕಟುವಾಗಿ ಟೀಕಿಸಿದ್ದಾರೆ. ಅವರ ಪ್ರತಿ ಮಾತಿನಲ್ಲೂ ವಿಶ್ವಾಸ, ಜನಹಿತದ ಬಯಕೆ ಮೂರ್ತಿ ಮತ್ತಾಗಿರುತಿತ್ತು. ಜನತಾ ಸಭೆಯಲ್ಲಿ ಅವರ ಭಾಷಣವೆಂದರೆ ವಿರೋಧಿಗಳೂ ಕೂಡ ತಲೆದೂಗುತ್ತಿದ್ದರು.

ಡಾ|| ಮುಖರ್ಜಿಯವರು ಪ್ರಖ್ಯಾತರಾದ ಸರ್ ಆಶುತೋಶ್ ಮುಖರ್ಜಿಯವರ ಪುತ್ರರು. ಅವರು ಭವಾನಿಪುರ, ಕಲ್ಕತ್ತಾ ಮತ್ತು ಲಂಡನಿನಲ್ಲಿ ತಮ್ಮ ವಿದ್ಯೆಯನ್ನು ಮುಗಿಸಿ ಬ್ಯಾರಿಸ್ಟರಾದರು. ತಮ್ಮ ವಿಖ್ಯಾತ ತಂದೆಯಂತೆಯೇ ಕಲ್ಕತ್ತಾ ವಿಶ್ವವಿದ್ಯಾಲಯದ ಉಪಕುಲಪತಿ (ವೈಸ್ ಚಾನ್ಸಲರ್) ಗಳಾಗಿದ್ದರು. ೧೯೩೭ರಲ್ಲಿ ಅವರು ಬಂಗಾಳ ಶಾಸನ ಸಭೆಗೆ ಆರಿಸಲ್ಪಟ್ಟನಂತರ ಅವರು ರಾಜಕೀಯದಲ್ಲಿ ಹೆಚ್ಚು ಆಸಕ್ತಿ ತೆಗೆದುಕೊಳ್ಳತೊಡಗಿದರು. ಅವರು ಸ್ವತಂತ್ರ ಮನೋಭಾವದವರು. ಮೊದಲು ಹಿಂದೂ ಮಹಾಸಭೆಯಲ್ಲಿದ್ದರು. ಮಹಾತ್ಮರ ಕೊಲೆಯಾದ ನಂತರ ಕಾಂಗ್ರೆಸಿಗೆ ಸೇರಿದ್ದರು. ಆದರೆ ಕಾಂಗ್ರೆಸಿನ ನಿರ್ನೀತಿಯಿಂದ ತೃಪ್ತರಾಗದೆ ತಮ್ಮದೇ ಸ್ವಂತ ಪಕ್ಷವನ್ನು ಕಟ್ಟಿದರು. ಅವರು ೧೯೪೨ರಲ್ಲಿ ಬಂಗಾಳದ ಮಂತ್ರಿ ಮಂಡಳದಲ್ಲಿ ಮಂತ್ರಿಯಾಗಿದ್ದರು. ಕೇಂದ್ರ ಸರಕಾರದ ನೆಹರೂರವರ ಪ್ರಥಮ ಮಂತ್ರಿಮಂಡಳದಲ್ಲಿ ಅವರು ಮಂತ್ರಿಯಾಗಿದ್ದರು. ನಂತರ ಕಾಶ್ಮೀರದ ವಿಚಾರದಲ್ಲೂ ರಾಜಕೀಯದಲ್ಲೂ ಅತೃಪ್ತಿಗೊಂಡು ರಾಜಿನಾಮೆ ಕೊಟ್ಟು ಹೊರಬಂದರು. ಮುಖರ್ಜಿಯವರು ೧೯೪೩ರಲ್ಲಾದ ಬಂಗಾಲ ಬರಗಾಲದಲ್ಲಿ ಮಾಡಿದ ಸೇವೆಯು ಜನಜನಿತವಾದುದು. ರಾಜ್ಯಘಟನಾ ಸಭೆಯಲ್ಲೂ ನಂತರ ಜನತಾ ಸಭೆಯಲ್ಲೂ ಅವರು ಸರಕಾರಕ್ಕೆ ಒಂದು ಕಡಿವಾಣದಂತೆ ಪರಿಣಾಮಕಾರಿಯಾದ ಶಕ್ತಿಯಾಗಿದ್ದರು. ಇವರ ನಿಧನದಿಂದ ದೇಶಕ್ಕಾದ ನಷ್ಟವು ಎಂದೂ ತುಂಬಿಬಾರದಂಥಾದ್ದು. ಬಂಗಾಳದ ಜೀವತಂತುವಾಗಿದ್ದ ಹಾಗೂ ಭಾರತದ ಮಹಾಪುತ್ರರಲ್ಲಿ ಪ್ರಖ್ಯಾತರಾಗಿದ್ದ ಇವರ ಕುಟುಂಬಕ್ಕೆ ದುಃಖ ಸಹನಾ ಶಕ್ತಿಯನ್ನು ಭಗವಂತನು ಕೊಡಲಿ.

ಕೊರಿಯಾ ಸಂಧಾನದ ಆಸೆ ತಗ್ಗಿತು.

ಒಪ್ಪಂದಕ್ಕೆ ವ್ಯತಿರಿಕ್ತವಾಗಿ ಕೈದಿಗಳನ್ನು ಬಿಟ್ಟುಬಿಟ್ಟರು

ಕೊರಿಯಾದಲ್ಲಿ ಸಂಯುಕ್ತ ರಾಷ್ಟ್ರ ಸಂಘಗಳ ವರಿಷ್ಠ ಸೇನಾಪತಿಗಳಾದ ಜನರಲ್ ಮಾರ್ಕ್ ಕ್ಲಾರ್ಕರು ದ. ಕೊರಿಯದ ಅಧ್ಯಕ್ಷ ಸಿಂಗ್ಮನ್ ರ್ಹೀ ಅವರು ಕಮ್ಯುನಿಸ್ಟೇತರ ಕೈದಿಗಳ ಬಿಡುಗಡೆ ಮಾಡಿ ವಚನ ಭಂಗ ಮಾಡಿದ್ದಾರೆಂದು ಒಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ದ. ಕೊರಿಯಾವು ಪಾರಾಗಿ ಹೋಗಿರುವ ಉತ್ತರ ಕೊರಿಯನ್ ಕೈದಿಗಳನ್ನು ತನ್ನ ಸೈನ್ಯದಲ್ಲಿ ಸೇರಿಸಿಕೊಳ್ಳುವದಾಗಿ ಸಾರಿದ್ದು ಇದರಿಂದ ಕೊರಿಯಾ ಸಂಧಾನದ ಆಶೆ ಹಾಳಾದಂತಾಗಿದೆ. ಇದುವರೆಗೆ ೨೭ ಸಾವಿರ ಕೈದಿಗಳು ತಪ್ಪಿಸಿಕೊಂಡು ಹೋಗಿದ್ದಾರೆ. ಇವರಲ್ಲಿ ಪಾರಾಗಿ ಹೋಗುವಾಗ ಸಂ. ರಾಷ್ಟ್ರ ಸಂಘದ ಕಾವಲುಗಾರರಿಂದ ೪೪ ಜನರು ಕೊಲ್ಲಲ್ಪಟ್ಟಿದ್ದು ೧೧೫ ಜನರು ಗಾಯಗೊಳಿಸಲ್ಪಟ್ಟಿದ್ದಾರೆ. ಸಾವಿರ ಜನರನ್ನು ಪುನಃ ಸೆರೆ ಹಿಡಿಯಲಾಗಿದೆ ಎಂದು ತಿಳಿದಿದೆ.

ಈ ಕೈದಿಗಳ ಬಿಡುಗಡೆಯು ಹೊಣೆ ವೈಯಕ್ತಿಕವಾಗಿ ನಿಮ್ಮದು ಎಂದು ಅಮೇರಿಕೆಯ ಅಧ್ಯಕ್ಷ ಐಸೆನ್ ಹೋವರರು ಸಿಂಗ್ಮನ್ ರ್ಹೀಯವರಿಗೆ ಪತ್ರ ಬರೆದಿದ್ದಾರೆಂದು ತಿಳಿದಿದೆ.

ದಕ್ಷಿಣ ಕೊರಿಯದ ತಾತ್ಕಾಲಿಕ ಮುಖ್ಯ ಮಂತ್ರಿ ಪುಂಗಯುಂಗಲಾಯ್ ಅವರು ಜನರಲ್ ಮಾರ್ಕ ಕ್ಲಾರ್ಕರು ಇನ್ನೂ ಬಂಧನದಲ್ಲಿರುವ ಎಲ್ಲ ಕಮ್ಯೂನಿಸ್ಟ್ ವಿರೋಧಿ ಉತ್ತರ ಕೊರಿಯನ್ ಸೆರೆಯಾಳುಗಳನ್ನು ಬಿಡುಗಡೆ ಮಾಡಬೇಕೆಂದು ಹೇಳಿದ್ದಾರೆ.

ಉತ್ತರ ಕೊರಿಯದ ಮುಖ್ಯ ಮಂತ್ರಿ ಕಿಮ್ ಇಲ್‌ರು ಸಿಂಗ್ಮನ್ ರ್ಹೀಯವರು ಬಿಡುಗಡೆ ಮಾಡಿರುವ ಕೈದಿಗಳನ್ನು ಪುನಃ ಸೆರೆ ಹಿಡಿಯುವ ಹೊಣೆ ಸಂಯುಕ್ತ ರಾ. ಸಂಘದ ಮೇಲಿದೆಯೆಂದು ತಿಳಿಸಿದ್ದಾರೆ.

ದಕ್ಷಿಣ ಕೊರಿಯ ಕೈದಿ ಶಿಬಿರಗಳಿಂದ ಪುನಹ ನೂರಾರು ಕಮ್ಯುನಿಸ್ಟ ವಿರೋಧಿ ಕೈದಿಗಳು ಪಾರಾಗಿದ್ದಾರೆಂದು ಸುದ್ದಿ ಬಂದಿದೆ. ಟೋಕಿಯೋದಿಂದ ಕೊರಿಯಕ್ಕೆ ೧೮೭ ನೆಯ ದಂಡು ಹೋಗಿದ್ದು ಅದು ಬಹುಶಃ ಯುದ್ಧ ಶಿಬಿರಗಳ ಕಾವಲನ್ನು ಭದ್ರಪಡಿಸಲು ಹೋಗಿರಬೇಕೆಂದು ತಿಳಿದಿದೆ

ದಕ್ಷಿಣ ಕೊರಿಯದ ಮಂತ್ರಿ ಮಂಡಳವು ನಿನ್ನೆ ಎಂಟು ತಾಸು ಸಭೆ ಸೇರಿ ಬಿಡುಗಡೆ ಹೊಂದಿದ್ದ ಕೈದಿಗಳನ್ನು ಪುನಃ ಸೆರೆಹಿಡಿಯುವ ಕ್ರಮಗಳನ್ನು ಪ್ರತಿಭಟಿಸುವ ವಿಚಾರವಾಗಿ ಚರ್ಚೆ ಮಾಡಿತು. ಈ ಕೈದಿಗಳಿಗೆ ಅವರು ದೇಶಾದ್ಯಂತ ಪಸರಿಸಿಕೊಳ್ಳಲು ವಾಹನಾನುಕೂಲ ಮಾಡಿ ಕೊಡುವದು, ಅವರಿಗೆ ಆಹಾರ-ಬಟ್ಟೆ ಪೂರೈಸುವದು, ಗುರುತಿನ ಕಾರ್ಡ ಕೊಡುವದು, ಕೆಲಸ ಕೊಡಿಸುವದು ಅವರನ್ನು ಪೋಲೀಸ್ ಕಾವಲಿನಲ್ಲಿಡುವದು ಇತ್ಯಾದಿ ವಿಷಯಗಳ ಚರ್ಚೆ ನಡೆಯಿತು.

ಸಿಂದ್ರಿ ಸಸ್ಯಗೊಬ್ಬರ ಕಾರ್ಖಾನೆ.

ಸಿಂದ್ರಿಯಲ್ಲಿ ಸ್ಥಾಪಿಸಿರುವ ಸಸ್ಯಗೊಬ್ಬರ ಕಾರ್ಖಾನೆಯು ವಿಶ್ವಾದಲ್ಲೇ ದೊಡ್ಡದು. ಈ ಕಾರ್ಖಾನೆಯು ಖಾಸಗೀ ಲಿಮಿಟೆಡ್ ಕಂಪೆನಿಯಾಗಿ, ಮೂವತ್ತು ಕೋಟಿ ರೂಪಾಯಿ ಬಂಡವಾಳದಿಂದ ಆರಂಭಿಸಲ್ಪಟ್ಟಿದ್ದರೂ ಭಾರತ ಸರಕಾರವು ಒಂದು ಸಾವಿರ ರೂಪಾಯಿ ಮೌಲ್ಯದ ೧೫೦,೦೦೦ ಪಾಲುಗಳನ್ನು ಕೊಂಡುಕೊಂಡಿದೆ. ಈಗ, ಈ ಕಾರ್ಖಾನೆಯಿಂದ ರೈತರಿಗೆ ಟನ್ನಿಗೆ ೩೫೦ ರಂತೆ ಗೊಬ್ಬರ ಒದಗಿಸಲಾಗುತಿದ್ದು, ಈ ಧಾರಣೆಯು ಈ ಮೊದಲು ಆಮದು ಮಾಡಲ್ಪಡುತ್ತಿದ್ದ ಇಂಥ ಗೊಬ್ಬರದ ಧಾರಣೆಗಿಂತ ಕಡಿಮೆಯಿದೆ. ಉತ್ಪತ್ತಿಯು ಅಧಿಕವಾದಂತೆ ಧಾರಣೆಯೂ ಕಡಿಮೆಯಾಗಬಹುದು.

ಮದನಪಲ್ಲಿ ಬಳಿ ನಡೆದ ರೈಲ್ವೆ ದುರಂತ

ಮದನಪಲ್ಲಿಯ ಸಮೀಪದಲ್ಲಿ ಕಳೆದ ವಾರ ಒಂದು ಪ್ರಯಾಣಿಕರ ರೈಲು ಬಂಡಿ ಮತ್ತು ಒಂದು 'ಗೂಡ್ಸ್' ಬಂಡಿಯು ಎದುರು ಬದುರಾಗಿ ಬರುತ್ತ ಡಿಕ್ಕಿ ಹೊಡೆದು ಸಂಭವಿಸಿದ ಅನಾಹುತವು ದಕ್ಷಿಣ ಭಾರತದಲ್ಲಿ ನಡೆದ ದುರಂತದಲ್ಲಿ ಅತ್ಯಂತ ಭಯಾನಕವಾದುದು. ಎಪ್ಪತ್ತು ಮಂದಿ ಪ್ರಯಾಣಿಕರು ಈ ಭೀಕರ ಘರ್ಷಣೆಯಲ್ಲಿ ಆಹುತಿಯಾದರಲ್ಲದೆ ಸುಮಾರು ೭೦ಕ್ಕೂ ಮಿಕ್ಕಿ ಜಖಂಗೊಂಡರು. ರೈಲ್ವೆ ಇಂಜಿನುಗಳ ಡ್ರೈವರುಗಳು ನುಚ್ಚುನೂರಾಗಿ ಹೋದರು. ಇಂಜಿನುಗಳು ಅನೇಕ ಗಾಡಿಗಳೂ ಕಂಬಿಗಳಿಂದುರುಳಿದವು. ಕೆಲವು ಗಾಡಿಗಳು ಚೂರುಚೂರಾಗಿ, ಚಿಕ್ಕ ಹಲಗೆ ತುಂಡುಗಳಾಗಿ ಚೆಲ್ಲಿ ಹೋದವು. ಅನಾಹುತದ ವಾರ್ತೆ ತಲುಪಿ ಅನತಿ ದೂರದ ಸ್ಟೇಷನುಗಳಿಂದ ವೈದ್ಯಕೀಯ ಸಹಾಯವೂ ಕಳುಹಲ್ಪಟ್ಟು ಜಖಂಗೊಂಡವರನ್ನು ಮದನಪಲ್ಲಿ ಆಸ್ಪತ್ರೆಗೆ ಸಾಗಿಸಲಾಯಿತು. ರೈಲುಬಂಡಿಗಳು ಬಳಿಯ ಮುಲಾಕಲುಚೆರುವು ಮತ್ತು ಬಟ್ಟುಲಾಪುರದಿಂದ ಒಮ್ಮೆಲೆ ಮುಂಚಿತವಾಗಿ ಕೊಡುವ ಸಂಕೇತ ಮತ್ತು ಮುನ್ನದಿನ ಅಪ್ಪಣೆಯ ವಿಷಯದಲ್ಲುಂಟಾದ ಬದಲಾವಣೆ ಅಥವಾ ಅಕ್ರಮವೇ ದುರಂತಕ್ಕೆ ಕಾರಣವಾಯಿತೆಂದೂಹಿಸಲಾಗಿದೆ. ದುರಂತದ ಕುರಿತು ತನಿಖೆ ನಡೆದಿದೆ.

ವೀರಾಜಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಟಿ. ಎಸ್. ಗೋವಿಂದರಾಜು

ಕೊಡಗು

ತಾರೀಕು ೨೬ ಜೂನ್ ೧೯೫೩ನೇ ಶುಕ್ರವಾರ

ತುಂಬಲಾರದ ನಷ್ಟ.

ಕೇಂದ್ರದ ಜನತಾ ಸಭೆಯಲ್ಲಿ ಕಮ್ಯೂನಿಸ್ಟ್ ಪಕ್ಷವನ್ನು ಬಿಟ್ಟು ಉಳಿದ ಎಲ್ಲ ವಿರೋಧ ಪಕ್ಷಗಳ ಅಂದರೆ ನೇಶನಲ್ ಡೆಮೊಕ್ರೆಟಿಕ್ ಗ್ರೂಪಿನ ಮುಂದಾಳಾಗಿದ್ದ ಡಾಕ್ಟರ್ ಶ್ಯಾಮಪ್ರಸಾದ್ ಮುಖರ್ಜಿಯವರ ಅಕಾಲ ಮರಣವು ಹಿಂದೂದೇಶಕ್ಕೆ ತುಂಬಾ ದುಃಖವನ್ನೂ ನಷ್ಟವನ್ನೂ ಉಂಟು ಮಾಡಿದೆ. ನಿಷ್ಣಾತ ವಿದ್ಯಾಸಂಪನ್ನರಾದ ಇವರು ತಮ್ಮ ಕೀರ್ತಿಶೇಷ ತಂದೆಯವರಂತೆ ಕಲ್ಕತ್ತಾ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದರು. ಅವರು ಪ್ರಖ್ಯಾತ ವಾಗ್ಮಿಗಳಾಗಿದ್ದರು. ಜನತಾ ಸಭೆಯಲ್ಲಿ ಅವರು ಮಾತಾಡಲು ಎದ್ದು ನಿಂತರೆ ಎಲ್ಲರೂ ನಿಶಬ್ದವಾಗಿ ಕೇಳುತಿದ್ದರು. ಕೇಂದ್ರ ಸರಕಾರದ ದೃಷ್ಟಿಯನ್ನು ತನ್ನೆಡೆಗೆ ಅವರು ತನ್ನ ಮಾತುಗಾರಿಕೆ, ತೀಕ್ಷ್ಣ ಟೀಕೆ, ಅಗಾಧ ಜ್ಞಾನಗಳಿಂದ ಸೆಳೆಯುತಿದ್ದರು. ವಿರೋಧ ಪಕ್ಷದ ಅದ್ವಿತೀಯ ಮುಂದಾಳಾಗಿದ್ದ ಇವರ ನಿಧನದಿಂದ ಶೈಶವದಲ್ಲಿರುವ ನಮ್ಮ ಕೇಂದ್ರ ಜನತಾ ಸಭೆಗೆ ತುಂಬಲಾರದ ನಷ್ಟವಾಯಿತು.

೧೯೪೨ ರ ಸತ್ಯಾಗ್ರಹದ ಕಾಲದಲ್ಲಿ ಇವರು ಬಂಗಾಳ ಸರಕಾರದ ತಮ್ಮ ಮಂತ್ರಿಪದವಿಗೆ ರಾಜೀನಾಮೆ ಇತ್ತು ಅಲ್ಲಿಯ ಗವರ್ನರರಿಗೆ ಬರೆದ ಬಹಿರಂಗ ಪತ್ರವು ಚರಿತ್ರಾರ್ಹವಾದುದು. ಈ ಪತ್ರದಿಂದ ಅವರಿಗಿದ್ದ ದೇಶಪ್ರೇಮ, ಧೈರ್ಯಗಳು ವ್ಯಕ್ತವಾದುವು. ೧೯೪೩ ರ ಬಂಗಾಳ ಬರಗಾಲದ ಸಮಯದಲ್ಲಿ ಅವರು ಸಲ್ಲಿಸಿದ ಸೇವೆಯಿಂದಾಗಿ ಯಾವುದೇ ಜಾತಿ ಮತಭೇದವಿಲ್ಲದೆ ಇಡೀ ಬಂಗಾಳದ ಜನತೆಯ ಹೃದಯದಲ್ಲಿ ಅವರು ಸ್ಥಾನಪಡೆದರು. ೧೯೪೭ ರಿಂದ ೫೦ ರ ವರೆಗೆ ಕೇಂದ್ರ ಸರಕಾರದ ಮಂತ್ರಿಯಾಗಿದ್ದು ಅವರು ಮಾಡಿದ ಅವಿರತ ಕೆಲಸದಿಂದಾಗಿ ಅವರು ಜವಾಬ್ದಾರಿ ಹೊತ್ತಿದ್ದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯು ಇತರ ಎಲ್ಲಾ ಇಲಾಖೆಗಳಿಗಿಂತ ದಕ್ಷವಾದುದೆನಿಸಿತ್ತು. ಕೆಲವು ವಿಚಾರಗಳಲ್ಲಿ ಅವರು ಕಾಂಗ್ರೆಸಿನ ನೀತಿಯನ್ನು ಮೆಚ್ಚದಿದ್ದರೂ ಅವರು ತಮ್ಮ ಅಭಿಪ್ರಾಯದಂತೆ ನಿರ್ವಂಚನೆಯಿಂದ ದೇಶದ ಹಿತಕ್ಕಾಗಿ ದುಡಿದರು. ತಾನು ನಂಬಿದ ವಿಚಾರಕ್ಕಾಗಿ ದುಡಿಯಲು ಅಡ್ಡ ಬಂದ ಯಾವುದೇ ವಿರೋಧವನ್ನೂ ಲೆಕ್ಕಿಸದೆ ದೃಢಭಾವದಿಂದ ಮುಂದರಿದರು. ಈ ದೃಷ್ಟಿಯಿಂದಲೇ ಅವರು ಜನಸಂಘವೆಂಬ ಹೊಸದೊಂದು ಪಕ್ಷವನ್ನು ಸ್ಥಾಪಿಸಿ ಅದರ ಅಧ್ಯಕ್ಷರಾಗಿ ದೇಶಕ್ಕೆ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದರು. ಅವರು ವೀರ ಯೋಧರಂತೆ ದೇಶದ ಹಿತಕ್ಕಾಗಿಯೇ ಜೈಲಿನಲ್ಲಿ ಪ್ರಾಣತೊರೆದರು.

ಕಾಶ್ಮೀರ ಸರಕಾರದ ಕೈದಿಯಾಗಿದ್ದ ಅವರು ಕಳೆದ ಹತ್ತು ದಿನಗಳಿಂದ ಕಾಯಿಲೆಬಿದ್ದರಾಗಿದ್ದರೂ ಆ ವಿಚಾರ ಜನತೆಗೆ ತಿಳಿಯದಿದ್ದುದು ವ್ಯಸನಕರವಾದುದು. ತನ್ನ ಕಡೆ ಉಸಿರಿನ ವರೆಗೂ ಜನಹಿತಕ್ಕಾಗಿ ದುಡಿದು ಅದಕ್ಕಾಗಿಯೇ ಮುಖರ್ಜಿಯವರು ಜೈಲಿನಲ್ಲಿ ಜೀವ ತೊರೆದುದು ಅವರ ಕೀರ್ತಿಯನ್ನು ಇಮ್ಮಡಿಸಿತು. ಹಿಂದೂದೇಶವು ಪ್ರಜಾಪ್ರಭುತ್ವವಾಗಿ ಮುಂದರಿಯುತ್ತಿರುವ ಈ ಸಮಯದಲ್ಲಿ ಮುಖರ್ಜಿಯವರಂಥ ಮಹಾ ಮೇಧಾವಿಗಳ ಮಾರ್ಗದರ್ಶನ ಅತ್ಯಾವಶ್ಯಕವಿತ್ತು. ಆದರೆ ಭರತಮಾತೆಯು ಇವರ ಅಕಾಲ ನಿಧನದಿಂದ ತನ್ನ ಅಮೂಲ್ಯ ಪುತ್ರರತ್ನಗಳಲ್ಲಿ ಒಬ್ಬರನ್ನು ಕಳೆದುಕೊಂಡಿತು.

ವರ್ತಮಾನ.

ಕೊಡಗು ಸರಕಾರಿ ಕಾಲೇಜಿಗೆ ಅಧ್ಯಾಪಕರನ್ನು ಆರಿಸುವದಕ್ಕಾಗಿ ಕೊಡಗು ಸರಕಾರದ ಮುಖ್ಯ ಸೆಕ್ರೆಟರಿ, ಫಾರೆಸ್ಟ್ ಆಫೀಸರು ಮತ್ತು ಕಾಲೇಜ್ ಪ್ರಿನ್ಸಿಪಲರಿಂದ ಕೂಡಿದ ಒಂದು ಸ್ಟಾಫ್ ಸಿಲೆಕ್ಷನ್ ಬೋರ್ಡನ್ನು ನೇಮಿಸಲಾಗಿದೆ.

ಅಖಿಲ ಕೊಡವ ವಿದ್ಯಾನಿಧಿಯ ವಾರ್ಷಿಕ ಮಹಾಸಭೆಯು ಈ ತಾ. ೨೮ರಲ್ಲಿ ಸಂಘದ ಮಡಿಕೇರಿ ಕಟ್ಟಡದಲ್ಲಿ ನಡೆಯುವುದು.

೧೯೫೩ರ ವರೆಗೆ ತಯಾರಿಸಲ್ಪಟ್ಟ ಶ್ರೀಮಂಗಲ, ಹುದಿಕೇರಿ, ಪೊನ್ನಂಪೇಟೆ, ಬಿಟ್ಟತ್ತುನಾಡು, ವೀರಾಜಪೇಟೆ ಮತ್ತು ಮಡಿಕೇರಿ ಮುನಿಸಿಪಾಲಿಟಿ, ವೀರಾಜಪೇಟೆ ನಾಡು, ಅಮ್ಮತ್ತಿ ನಾಡು, ಸಿದ್ದಾಪುರ, ಮೂರ್ನಾಡು, ನಾಪೋಕ್ಲು, ಭಾಗಮಂಡಲ ಇವುಗಳ ಕರಡು ಓಟರುಗಳ ಪಟ್ಟಿಯನ್ನು ತಾ. ೨೨ರಲ್ಲಿ ಓಟರುಗಳ ಹೆಸರು ರಿಜಿಸ್ಟರು ಮಾಡುವ ಆಫೀಸರರ ಆಫೀಸಿನಲ್ಲೂ ತಾಲೋಕು ಆಫೀಸಿನಲ್ಲೂ ಮತ್ತು ಸಂಬಂಧಪಟ್ಟ ನಾಡು ಕಚೇರಿಗಳಲ್ಲಿ ಪ್ರಕಟಿಸಲಾಗಿದೆ. ದಕ್ಷಿಣ ಸೋಮವಾರಪೇಟೆ, ಫ್ರೇಜರ್‌ಪೇಟೆ, ಶನಿವಾರಸಂತೆ, ಸುಂಟಿಕೊಪ್ಪ ಉತ್ತರ ಸೋಮವಾರಪೇಟೆ, ಮಡಿಕೇರಿನಾಡು ಇವುಗಳ ಓಟರುಗಳ ಪಟ್ಟಿಗೆ ತಿದ್ದುಪಡಿಗಳನ್ನು ಸಹ ಮೇಲೆ ಹೇಳಿದ ತಾರೀಕಿನಲ್ಲಿ ಮತ್ತು ಸ್ಥಳಗಳಲ್ಲಿ ಪ್ರಕಟಿಸಲಾಗಿದೆ. ಇವುಗಳ ಮೇಲೆ ಆಕ್ಷೇಪಗಳಾಗಲೀ ಅಥವ ಸಲಹೆಗಳಾಗಲೀ ಇದ್ದರೆ ತಾ. ೧೩-೭-೫೩ರ ಒಳಗೆ ಕಳುಹಿಸಿ ಕೊಡಬೇಕೆಂದು ಪ್ರಕಟವಾಗಿದೆ.

ಕೊಡಗು ಸರಕಾರಿ ಕಾಲೇಜಿನಲ್ಲಿ ಬಿ. ಎ., ಮತ್ತು ಬಿ ಎಸ್‌ಸಿ. ತರಗತಿಗಳಿಗೆ ಪ್ರತಿ ಟರ್ಮಿಗೆ ರೂ. ೬೧ರಂತೆಯೂ ಮತ್ತು ವರ್ಷಕ್ಕೆ ಫಿಜಿಕಲ್ ಟ್ರೈನಿಂಗ್ ಮತ್ತು ಆಟಕ್ಕೆ ರೂ. ೬-೦-೦, ಮೆಡಿಕಲ್ ಇನ್ಸ್‌ಪೆಕ್ಷನಿಗೆ ರೂ. ೧-೦-೦, ಲೈಬ್ರರಿ ಫೀಸು ರೂ. ೩-೦-೦, ಲೆಬೋರೆಟರಿ ಫೀಸು (ಸೈನ್ಸ್ ವಿದ್ಯಾರ್ಥಿಗಳಿಗೆ ಮಾತ್ರ) ರೂ. ೧೨-೦-೦, ಕಾಲೇಜ್ ಪತ್ರಿಕೆಗೆ ರೂ. ೨-೦-೦, ಲೈಬ್ರರಿ ಕೆಟಲಾಗಿಗೆ ೦-೬-೦, ಕಾಲೇಜು ಸಂಘಗಳಿಗೆ ಫೀಸು ರೂ. ೪-೦-೦, ಕಾಲೇಜು ಕ್ಯಾಲೆಂಡರ್‌ಗೆ ರೂ. ೧-೦-೦ (ಕೊಡಗಿನ ಹೊರಗಿನ ಕಾಲೇಜುಗಳಿಂದ ಬರುವ ವಿದ್ಯಾರ್ಥಿಗಳಿಗೆ ಮಾತ್ರ) ರಿಜಿಸ್ಟ್ರೇಷನ್ ಫೀಜು ರೂ. ೩ ಕಾಲೇಜು ದಿನಾಚರಣೆಗೆ ರೂ. ೧-೦-೦ ಹೀಗೆ ಫೀಜು ಕೊಡಬೇಕೆಂದು ಪ್ರಕಟವಾಗಿದೆ.

ವೀರಾಜಪೇಟೆ ಮೂಲ ಶಿಕ್ಷಣ ತರಬೇತು ಶಾಲೆಯಲ್ಲಿ ಉಪಾಧ್ಯಾಯರ ತರಬೇತಾಗುತ್ತಿರುವ ಶ್ರೀ ಕೆ. ಕೆ. ಮಾದಪ್ಪನವರು ಮತ್ತು ಎಸ್. ಬಿ ಬಸವಣ್ಣಯ್ಯನವರು ಹಿಂದೀ ಮಾಧ್ಯಮಿಕ ಪರೀಕ್ಷೆಯಲ್ಲಿ ಪಾಸಾಗಿರುವರು.

ನಾಪೋಕ್ಲು ಹೈಸ್ಕೂಲಿನಲ್ಲಿ ಯಂ. ಜಿ ಸುಬ್ರಮಣ್ಯನವರು ಎಸ್. ಎಸ್. ಎಲ್. ಸಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುತ್ತಾರೆ. ಇವರ ವಯಸ್ಸು ಕಡಿಮೆಯಾದ್ದರಿಂದ ಈ ಹಿಂದೆ ನಂಬರು ಪ್ರಕಟವಾಗಿರಲಿಲ್ಲ.

ಸೋಮವಾರಪೇಟೆಯಲ್ಲಿ ಮಹಿಳಾ ಸಮಾಜದಲ್ಲಿ ಹಿಂದಿ ವ್ಯಾಸಂಗ ಮಾಡಿದವರ ಪೈಕಿ ಕಳೆದ ಪ್ರಾಥಮಿಕ ಪರೀಕ್ಷೆಯಲ್ಲಿ ಶ್ರೀಗಳಾದ ಬಿ. ಎಸ್. ರಾಧಮ್ಮ, ಬಿ. ಎಸ್. ಸುಮಿತ್ರ, ಎಚ್. ಆರ್. ನಾಗೇಶ, ಯು. ಎಂ. ಪದ್ಮಕುಮಾರಿ, ಬಿ. ಎಸ್. ಕೃಷ್ಣಪ್ಪ ಇವರುಗಳೂ ಮಾಧ್ಯಮಿಕದಲ್ಲಿ ಮಿಸೆಸ್ ಲೋಬಾ ಮತ್ತು ಜಾರ್ಜ್ ಇವರುಗಳೂ ತೇರ್ಗಡೆಯಾಗಿರುವರು.

ಈ ವರ್ಷ ನಡೆದ ಮದ್ರಾಸು ಯುನಿವರ್ಸಿಟಿ ಬಿ. ಟಿ. ಪರೀಕ್ಷೆಯಲ್ಲಿ ಶ್ರೀಗಳಾದ ಕೆ. ಬಿ. ಸೋಮಯ್ಯ, (ದ್ವಿತೀಯ ಶ್ರೇಣಿ) ಟಿ ಗುಂಡಾಚಾರ್ಯ, (ದ್ವಿತೀಯ ಶ್ರೇಣಿ) ಯಂ. ಪಿ. ಮಂಜುನಾಥ್, ಯಂ. ಯಂ. ಪೂವಯ್ಯ, ಕೆ ಕೆ. ವೀರಪ್ಪ, ಪಿ. ಪಿ. ಚಂಗಪ್ಪ, ಪಿ. ಪಿ. ಅಯ್ಯಣ್ಣ, ಯಂ. ಕೆ. ಉತ್ತಪ್ಪ ಮತ್ತು ಕೆ. ಟಿ. ಮಂದಣ್ಣನವರು ತೇರ್ಗಡೆಯಾಗಿರುವರು.

ತಾ. ೧೮ರಲ್ಲಿ ಮೂಲ ಶಿಕ್ಷಣ ನಡಾವಳಿಕೆಗಳಿಗನುಸಾರವಾಗಿ ವೀರಾಜಪೇಟೆ ಮೂಲಶಿಕ್ಷಣ ತರಬೇತು ಶಾಲೆಯಲ್ಲಿ ಚುನಾವಣೆ ನಡೆದು ಶ್ರೀಮಾನ್. ಎಂ. ಮಹಲಿಂಗಪ್ಪನವರನ್ನು ಮುಖ್ಯ ಮಂತ್ರಿಯನ್ನಾಗಿಯೂ, ಶ್ರೀ ಬಿ. ಬಿ. ಸುಬ್ಬರಾಯರನ್ನು ಸ್ಪೀಕರ್‌ರಾಗಿಯೂ ಕುಮಾರಿ ಎಂ. ಜಿ. ಇಂದಿರನವರನ್ನು ಸಾಂಸ್ಕೃತಿಕ ಮಂತ್ರಿಯಾಗಿಯೂ, ಶ್ರೀ ಬಿ. ಸಿ. ಸೋಮಣ್ಣನವರನ್ನು ವ್ಯವಸಾಯದ ಮಂತ್ರಿಯನ್ನಾಗಿಯೂ ನೇಮಿಸಲಾಗಿದೆ. ಇದರ ಜೊತೆಯಲ್ಲಿಯೇ ಶ್ರೀ. ಕೆ. ಎ. ಪೆಮ್ಮಯ್ಯನವರನ್ನು ಆಡಿಟರ್ ಜನರಲ್‌ರಾಗಿಯೂ ಶ್ರೀಮತಿ. ಮುತ್ತಮ್ಮನವರನ್ನು ಸೆಕ್ರೆಟರಿಯಾಗಿಯೂ ಮತ್ತು ಶ್ರೀ. ಎಂ. ಎಸ್. ಚಂಗಪ್ಪನವರನ್ನು ಆಟೋಟಗಳ ಕ್ಯಾಪ್ಟನ್ನಾಗಿಯೂ ಚುನಾಯಿಸಿರುವರೆಂದು ತಿಳಿದುಬಂದಿದೆ.

ಕೊಡಗು ಸರಕಾರದ ಮುಖ್ಯ ಸೆಕ್ರೆಟರಿಯಾಗಿ ನೇಮಿಸಲ್ಪಟ್ಟಿರುವ ಶ್ರೀ ಎನ್. ಎಸ್. ರಾಮಚಂದ್ರನ್‌ರವರು ತಾ. ೨೫ರಲ್ಲಿ ಮಡಿಕೇರಿಗೆ ಬಂದು ಕೆಲಸದ ಚಾರ್ಜನ್ನು ವಹಿಸಿಕೊಂಡಿರುವರು.

ಅಮ್ಮತ್ತಿ ಶಾಲೆಯಿಂದ ಮನೆಗೆ ಹೋಗುತ್ತಿರುವಾಗ ಶ್ರೀ ಮನೆಯಪಂಡ ಮಾದಪ್ಪನವರ ಮಗುವಿನ ತಲೆಗೆ ಮರಬಿದ್ದು ಗಾಯವಾಗಿದೆಯೆಂದು ತಿಳಿದು ಬಂದಿದೆ.

ಮೈಸೂರು ವಿಶ್ವವಿದ್ಯಾಲಯದ ಬಿ. ಎ. ಪರೀಕ್ಷೆಯಲ್ಲಿ ಶ್ರೀ ಕೇಲಪಂಡ ಕೆ. ಶಾರದ ಇವರು ತೇರ್ಗಡೆಯಾಗಿರುವರು. ಮದ್ರಾಸು ವಿಶ್ವವಿದ್ಯಾಲಯದ ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ಶ್ರೀ. ಕೊಕ್ಕಲೆರ ಉತ್ತಯ್ಯನವರು ಪಾಸಾಗಿರುವರು

ಕಳೆದ ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನಿನ ಐ. ಎ. ಎಸ್. ಮತ್ತು ಐ. ಪಿ. ಎಸ್. ಪರೀಕ್ಷೆಗಳಲ್ಲಿ ಶ್ರೀ. ಕೋದಂಡ ಗಣಪತಿ ಸೋಮಯ್ಯನವರು ತೇರ್ಗಡೆಯಾಗಿರುವರು.

ಕೊಡಗು ವ್ಯವಸಾಯ ಆದಾಯ ತೆರಿಗೆಯ ನಿಬಂಧನೆಗಳಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡುವ ಬಗ್ಗೆ ಕರಡು ತಿದ್ದುಪಡಿಗಳು ಈ ತಾ. ೨೦ರ ವಿಶೇಷ ಗಜೆಟಿನಲ್ಲಿ ಪ್ರಕಟವಾಗಿವೆ. ಆ ಬಗ್ಗೆ ಟೀಕೆ ಯಾ ಸೂಚನೆಗಳನ್ನು ಕೊಡಲಿರುವವರು ಒಂದು ತಿಂಗಳ ಅವಧಿಯೊಳಗೆ ಕೊಡಗು ಸರಕಾರದ ಫೈನಾನ್ಸ್ ಸೆಕ್ರೆಟರಿಯವರಿಗೆ ಕಳುಹಿಸಬೇಕೆಂದು ಪ್ರಕಟವಾಗಿದೆ.

ಕುಕ್ಲೂರು ಗ್ರಾಮದಲ್ಲಿ ದನಗಳಿಗೆ ಗಂಟಲು ಕಟ್ಟುವ ಕಾಯಿಲೆಯು ಪ್ರಾರಂಭವಾಗಿ ಈಗಾಗಲೇ ಕೆಲವು ರಾಸುಗಳು ಸತ್ತಿವೆಯೆಂದು ವರ್ತಮಾನ.

ಮಡಿಕೇರಿ ಮುನ್ಸಿಪಾಲಿಟಿಯೊಳಗೆ ಕಟ್ಟಡ ಕಟ್ಟುವ ಸಂಬಂಧದ ಕರಡು ನಿಬಂಧನೆಗಳು ಈ ತಾ. ೨೦ರ ಗಜೆಟಿನಲ್ಲಿ ಪ್ರಕಟವಾಗಿವೆ. ಇದಕ್ಕೆ ಹೆಚ್ಚಿನ ಸೂಚನೆ ಯಾ ವಿರೋಧ ಮಾಡುವವರು ಒಂದು ತಿಂಗಳೊಳಗೆ ತಮ್ಮ ಅಭಿಪ್ರಾಯಗಳನ್ನು ಬರಹ ಮೂಲಕ ಮುನ್ಸಿಪಲ್ ಪ್ರೆಸಿಡೆಂಟರಿಗೆ ತಿಳಿಸಬೇಕಾಗಿದೆ.

ತಿತಿಮತಿಯ ಹತ್ತಿರ ಮಳೆಗಾಗಿ ಮರದಡಿಯಲ್ಲಿ ನಿಂತಿದ್ದ ಮೂರು ಜನ ಮಾಪಿಳ್ಳೆಯರ ಮೇಲೆ ಆ ಮರವು ಗಾಳಿಗೆ ಬಿದ್ದು ಮೂರು ಜನರೂ ಮೃತರಾದರೆಂದು ತಿಳಿಯಬರುತ್ತದೆ.

ಶ್ರೀ. ಆದೇಂಗಡ ಪಿ. ರಾಜು ಇವರ ದನದ ಕೊಟ್ಟಿಗೆಗೆ ರಾತ್ರಿ ಮಳೆಯಲ್ಲಿ ಒಂದು ಮರಬಿದ್ದು ಕೊಟ್ಟಿಗೆಯೊಳಗಿದ್ದ ದನಗಳಲ್ಲಿ ಆರು ರಾಸುಗಳು ಸತ್ತು ಹೋದವೆಂದು ತಿಳಿದುಬಂದಿದೆ.

ಹೊರಗಿನ ಔದ್ಯೋಗಿಕ ಮತ್ತು ಕಲಾ ಕಾಲೇಜುಗಳಲ್ಲಿ ಕೊಡಗಿಗಿರುವ ಸ್ಥಳಗಳಿಗೆ ಯೋಗ್ಯ ವಿದ್ಯಾರ್ಥಿಗಳನ್ನು ಆರಿಸಲು ಶ್ರೀಗಳಾದ ಐ. ಸಿ. ಸುಬ್ಬಯ್ಯ ಅ. ಕಮಿಷನರು (ಅಧ್ಯಕ್ಷ) ಎಸ್. ತಿರುಮೂರ್ತಿ ಫಾರೆಸ್ಟ್ ಆಫೀಸರ್, ಎಸ್. ಎಚ್. ಅಭಯಂಕರ್ ಎಗ್ಸಿಕ್ಯೂಟಿವ್ ಇಂಜಿನಿಯರ್, ಕೆ. ಪಿ. ಅಚ್ಯುತನ್ ಪಿಳ್ಳೆ ಕಾಲೇಜ್ ಪ್ರಿನ್ಸಿಪಲ್, ಶ್ರೀ. ಕೆ. ಸಿ. ಕರುಂಬಯ್ಯ ಮತ್ತು ಸಿ. ಕೆ. ಕಾಳಪ್ಪ ಇವರಿಂದ ಕೂಡಿದ ಸಮಿತಿಯನ್ನು ನೇಮಿಸಿರುವರು. ಇವರ ಮೀಟಿಂಗು ಈ ತಾ. ೩೦ ರಲ್ಲಿ ನಡೆಯುವದು.

ಕಳೆದ ವಾರ ಕೊಡಗಿನಿಂದ ಮೈಸೂರಿಗೆ ಹೋಗುತ್ತಿದ್ದ ಬಸ್ಸೊಂದು ಎಳವಾಳದ ಹತ್ತಿರ ಬರುತ್ತಿದ್ದ ಗಾಡಿಯೊಂದಕ್ಕೆ ಡಿಕ್ಕಿ ಹೊಡೆದು ಗಾಡಿಯ ಎತ್ತುಗಳೂ, ಗಾಡಿಯವನೂ ಮೃತನಾಗಿ ಗಾಡಿಯಲ್ಲಿದ್ದ ಹೆಂಗಸೊಬ್ಬಳಿಗೆ ಜಖಂ ಆಯಿತೆಂದೂ ಡ್ರೈವರನ ದಸ್ತಗಿರಿಯಾಗಿ ಜಾಮೀನು ಮೇಲೆ ಬಿಡಲಾಗಿದೆಯೆಂದೂ ತಿಳಿದುಬಂದಿದೆ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ವಿದ್ಯಾರ್ಥಿ ಸಮಾಜದ ವಾರ್ಷಿಕ ಚುನಾವಣೆಯು ತಾರೀಕು ೨೬—೬—೫೩ ನೇ ಮಂಗಳವಾರ ನವೀನ ಮತದಾನ ಪದ್ಧತಿಯ ರೀತಿಯಾಗಿ ನಡೆದು ಶ್ರೀ. ಎಚ್. ಎಂ. ಮಹಮ್ಮದರವರು ಶಾಲೆಯ ಪ್ರಧಾನ ನಾಯಕರಾಗಿಯೂ ಶ್ರೀ. ಯಂ. ಪಿ. ಗಣಪತಿಯವರು ಉಪನಾಯಕರಾಗಿಯೂ ಶ್ರೀ. ಪಿ. ಟಿ. ನಾಣಯ್ಯನವರು ವಾರ್ತಾ ಪತ್ರಿಕಾ ಕಾರ್ಯದರ್ಶಿಯಾಗಿಯೂ ಶ್ರೀ. ಎಂ. ಎ. ಬೋಪಣ್ಣನವರು ಕ್ರೀಡಾರಂಗದ ಕಾರ್ಯದರ್ಶಿಗಳಾಗಿ ಮೂ ಶ್ರೀಮತಿ ಚೌರೀರ ಎಂ. ಪೊನ್ನಮ್ಮನವರು ಬಾಲಿಕೆಯರ ಪ್ರತಿನಿಧಿಯಾಗಿಯೂ ಆರಿಸಲ್ಪಟ್ಟರು.

ಸೋಮವಾರಪೇಟೆಯಲ್ಲಿರುವ ಕೊಡಗಿನವರು ರಾಣಿ ಎಲಿಝಬೆತರ ಕಾರೋನೇಶನ್ ಸಂಬಂಧ ನಡೆದ ಸೋಮವಾರಪೇಟ್ ಪ್ರೊಟೆಕ್ಟರೇಟ್ ಹಾಕಿ ಪಂದ್ಯಾಟದಲ್ಲಿ ಭಾಗವಹಿಸಿ ಕಡೇ ಆಟಕ್ಕೆ ನಿಂತ ಅಲ್ಲಿಯ ಪೊಲೀಸ್ ಟೀಮನ್ನು ಸೋಲಿಸಿ ಕಪ್ಪನ್ನು ಗೆದ್ದರು. ಕೊಡಗಿನವರ ಟೀಮಿನಲ್ಲಿ ಶ್ರೀಗಳಾದ ಬಿ. ಎಂ. ಮಾದಪ್ಪ, ಎಂ ಎ. ಮಂದಣ್ಣ, ಸಿ. ಎ ನಾಣಯ್ಯ, ಪಿ. ಐ. ನಂಜಪ್ಪ, ಬಿ. ಟಿ. ನಾಚಪ್ಪ, ಬಿ ಎ. ಕಾರ್‍ಯಪ್ಪ (ಕೆಪ್ಟನ್), ಸಿ ಎ. ಮುದ್ದಪ್ಪ, ಕೆ. ಎಂ ಕಾವೇರಪ್ಪ, ಬಿ. ಸಿ. ಪೂವಪ್ಪ, ಜಾನ್ ಮಥ್ಯೂಸ್ ಮತ್ತು ಜೆ ಪರ್ಶನ್ ಇವರು ಆಟಗಾರರಾಗಿದ್ದರು.

ಕೊಡಗಿನ ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ಜಡ್ಜರಾಗಿ ಶ್ರೀ ಎಸ್. ಆರ್ ಗೋಪಾಲಕೃಷ್ಣ ಇವರನ್ನು ನೇಮಿಸಲಾಗಿದೆ. ಅವರು ತಾ. ೨೪ರ ಮಧ್ಯಾಹ್ನ ತಮ್ಮ ಹೊಸ ಹುದ್ದೆಯ ಚಾರ್ಜನ್ನು ವಹಿಸಿಕೊಂಡರು.

ಶ್ರೀ ಗೋಪಾಲಕೃಷ್ಣ ಇವರನ್ನು ಜಿಲ್ಲಾ ಜಡ್ಜರಾಗಿ ಮಾಡಿದ್ದರಿಂದ ಅವರು ಲಾಯರಾಗಿ ವಾದಿಸಿದ್ದ ಕೇಸುಗಳ ಅಪೀಲನ್ನು ತೀರ್ಮಾನಿಸಲು ಶ್ರೀ ಎಂ ಎಸ್. ಗುಂಡುರಾಯರನ್ನು ಎಡಿಶನಲ್ ಡಿಸ್ಟ್ರಿಕ್ಟ್ ಜಡ್ಜರಾಗಿ ನೇಮಿಸಲಾಗಿದೆ.

ಈ ವರ್ಷ ಜನವರಿ ಒಂದನೇ ತಾರೀಕಿನಿಂದ ಈ ವರೆಗೆ ಒಟ್ಟು ೨೧ ಇಂಚು ೭೫ ಸೆಂಟು ಮಳೆಯಾಗಿದೆ. ಹೆಚ್ಚಾಗಿ ಮಳೆ ಬಿದ್ದ ತಾ. ೨೧ರಲ್ಲಿ ಮಡಿಕೇರಿಗೆ ೪ ಇಂಚು ೮೦ ಸೆಂಟು ಮಳೆಬಿತ್ತು. ಅದೇ ದಿವಸ ವೀರಾಜಪೇಟೆಗೂ ಕುಟ್ಟಕ್ಕೂ ೭ ಇಂಚಿನಷ್ಟು ಮಳೆ ಹೊಡೆಯಿತು. ಬಿರುಗಾಳಿಯಿಂದಾಗಿ ಅನೇಕ ಕಡೆ ಮರಬಿದ್ದು ಕಾಫಿ, ಕಿತ್ತಳೆ, ಬಾಳೆ ಮೊದಲಾದುವಕ್ಕೆ ಹಾನಿಯಾಗಿದೆ.

ವೀರಾಜಪೇಟೆ ಪೋಲೀಸ್ ಸರ್ಕಲ್ ಆಫೀಸಿನಲ್ಲಿ ಕಾನ್‌ಸ್ಟೇಬಲ್ ಗುಮಾಸ್ತರಾಗಿದ್ದ ಶ್ರೀ ಕುಂಞಾರ ಸೋಮಯ್ಯನವರು ತಾ. ೧೬ರಲ್ಲಿ ಕಾಣೆಯಾದವರ ಶವವು ಮರುದಿನ ಸಾಯಂಕಾಲ ಪೂರಾಗಿ ಮಂದಿನ ಬಳಿ ಕಾಣಸಿಕ್ಕಿತೆಂದೂ, ಆಫೀಸಿನಲ್ಲಿದ್ದ ಪಿಸ್ತೂಲಿನಿಂದ ಗುಂಡು ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡರೆಂದೂ, ಆಫೀಸಿನಲ್ಲಿ ಸುಮಾರು ರೂ. ೮೦೦ — ರವರೆಗೆ ಕಾಣೆಯಾಗಿದೆಯೆಂದೂ ವರ್ತಮಾನ.

ಈ ಮೊದಲು ಜೋರಾಗಿ ಬಿದ್ದ ಮಳೆಯು ಬಂಗಾಳಕೊಲ್ಲಿಯಲ್ಲಿ ಎದ್ದ ಬಿರುಗಾಳಿಯ ದೆಸೆಯಿಂದ ಎಂಬೂ ನಿಜವಾಗಿಯೂ ಸಿಂಹಳ ದ್ವೀಪದಲ್ಲಿ ಮಳೆಗಾಲದ ಚಿಹ್ನೆಗಳು ಇನ್ನೂ ಕಂಡುಬರುವದಿಲ್ಲವೆಂದೂ ಅಲ್ಲಿ ನೀರಿನ ಅಭಾವದಿಂದ ಜನರು ತೊಂದರೆ ಪಡುತ್ತಿರುವರೆಂದೂ ಕೊಲೊಂಬೊದ ವರ್ತಮಾನವಾಗಿದೆ. ಸಿಂಹಳದಲ್ಲಿ ಮಳೆಗಾಲ ಪ್ರಾರಂಭವಾಗಿ ಒಂದುವಾರದಲ್ಲಿ ಕೊಡಗಿನಲ್ಲಿ ಮಳೆಗಾಲ ಪ್ರಾರಂಭವಾಗುವದು ವಾಡಿಕೆ.

ಬಾಣೆ ಕಂದಾಯಕ್ಕೆ ವಿರೋಧ.

ಸಾರ್ವಜನಿಕ ಸಭೆಗಳು

ತೊಚಮಕೇರಿ

ತಾ. ೨೦ರಲ್ಲಿ ಶ್ರೀಮಂಗಲನಾಡು ತೊಚಮಕೇರಿ ಮತ್ತು ಚಿಕ್ಕಮಂಡೂರು ಗ್ರಾಮಸ್ಥರು ಶ್ರೀ ಕಳ್ಳಿಚಂಡ ಮುದ್ದಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಈಗ ಸರಕಾರವು ಹಾಕಲು ಹೊರಟಿರುವ ಬಾಣೆ ಕಂದಾಯವನ್ನು ವಿರೋಧಿಸಿ ಠರಾವು ಮಾಡಿ ಠರಾವಿನ ನಕಲನ್ನು ಕೊಡಗು ಸರಕಾರದ ಮುಖ್ಯ ಸೆಕ್ರೆಟರಿಯವರಿಗೆ ಡೆ. ಕಮಿಷನರ ಮೂಲಕ ಕಳುಹಿಸಿರುವರು.

ಕುಕ್ಲೂರು

ವೀರಾಜಪೇಟೆ ಕುಕ್ಲೂರು ಗ್ರಾಮದವರು ಶ್ರೀ ಎಂ. ಬಿ. ಕಾಳಪ್ಪನವರ ಅಧ್ಯಕ್ಷತೆಯಲ್ಲಿ ತಾ ೨೭ರಲ್ಲಿ ಸಭೆ ಸೇರಿ ಸರಕಾರವು ಬಾಣೆ ಜಾಗಕ್ಕೆ ಎಕ್ರೆಗೆ ನಾಲ್ಕಾಣೆಯಂತೆ ಕಂದಾಯ ಹಾಕಲು ನಿರ್ಧರಿಸಿರುವದನ್ನು ವಿರೋಧಿಸಿ ಹಾಗೆ ಕಂದಾಯ ಹಾಕಕೂಡದೆಂದು ಠರಾವು ಮಾಡಿರುವರು.

ನೋಟಿಸು

ಇದೇ ಜುಲೈ ತಿಂಗಳು ೩ನೇ ಶುಕ್ರವಾರ ದಿವಸ ಬೆಳಿಗ್ಗೆ ೧೧ ಗಂಟೆಯಿಂದ ಇನ್ನೂ ಉಳಿಕೆ ಇರುವ ಗೇಣಿ ಮುಲೆಗಳ ಹಾಲಿ ವರ್ಷದ ಫಸಲು ಎತ್ತಾವಳಿ ಮಾಡುವ ಹಕ್ಕನ್ನು ಕೊಡಗಿನ ಕಸ್ಟೋಡಿಯನ್ ರವರ ಮಡಿಕೇರಿ ಆಫೀಸು ಮುಂದುಗಡೆ ಹರಾಜು ಮಾಡಲ್ಪಡುವದು.

ಹೆಚ್ಚಿನ ವಿವರವನ್ನು ಕಸ್ಟೋಡಿಯನ್ ರವರ ಆಫೀಸಿನಿಂದಾಗಲೀ ಅಲ್ಲವೇ ರೇಂಜು ಮತ್ತು ನಾಡುಕಚೇರಿಯಿಂದಾಗಲೀ ತಿಳಿದುಕೊಳ್ಳತಕ್ಕದ್ದು.

ಐ. ಜಿ. ಕುಂದರಾ.

ಕಸ್ಟೋಡಿಯನ್ ರವರಿಗಾಗಿ.

ಓದುಗರ ಓಲೆಗಳು.

ರಾಜಕೀಯ ದಿವಾಳಿಖೋರತನ

ಕಳೆದ ಚುನಾವಣೆಗೆ ಮೊದಲು ಕೊಡಗಿನ ಭವಿಷ್ಯದ ವಿಚಾರದಲ್ಲಿ ದೇಶದಲ್ಲಿ ತರ್ಕವಿತರ್ಕವಾಗುತ್ತಿದ್ದಾಗ ಇಂದು ಕಾಂಗ್ರೆಸಿನ ಹೆಸರಿನಲ್ಲಿ ಅಧಿಕಾರಕ್ಕೆ ಬಂದಿರುವ ಅಂದು ಕೊಡಗು ಬೇರೆ ಪ್ರಾಂತದೊಡನೆ ಸೇರುವದರಲ್ಲೇ ಅದರ ಹಿತವೆಂದು ವಾದಿಸುತ್ತಿದ್ದ ಜನರು ಹೇಳುತ್ತಿದ್ದ ಕೆಲವು ಮಾತುಗಳು ಜ್ಞಾಪಕಕ್ಕೆ ಬರುತ್ತವೆ. ದೇಶದಲ್ಲಿ ಆದ ಆಗುಹೋಗುಗಳನ್ನು ಜನತೆ ಬೇಗ ಮರೆತು ಬಿಡುತ್ತದೆ. ಅದ್ದರಿಂದಲೇ 'ಪಬ್ಲಿಕ್ ಮೆಮರಿ ಈಸ್ ಶಾರ್ಟ್' ಎಂಬುದಾಗಿ ಹೇಳಲ್ಪಟ್ಟಿದೆ. ಕೊಡಗನ್ನು ಪ್ರತ್ಯೇಕವಿಟ್ಟರೆ ಹೆಚ್ಚಿನ ಕಂದಾಯ ಹೇರುವರು. ಆದ್ದರಿಂದ ಕೊಡಗನ್ನು ಬೇರೆ ಪ್ರಾಂತದೊಡನೆ ಸಂಯೋಜನೆ ಮಾಡುವದೇ ಹಿತವೆಂದು ವಾದಿಸಿದವರು ಇಂದು ಸರಕಾರಿ ಪಕ್ಷದವರಾಗಿದ್ದಾರೆ. ಕೊಡಗು ಪ್ರತ್ಯೇಕವಿದ್ದು ಹಣಕ್ಕೆ ತೊಂದರೆ ಬಂದಾಗ ಹೆಚ್ಚಿನ ಕಂದಾಯ ಹಾಕುವದು ತಪ್ಪಲ್ಲವೆಂದು ಕೆಲವರು ವಾದಿಸಿದಾಗ 'ಕೊಡಗು ಪ್ರತ್ಯೇಕವಿದ್ದರೂ ರೈತರು ಶಕ್ತಿಮೀರಿ ಕಂದಾಯ ಕೊಡಲಾರರು ಎಂಬುದನ್ನು ತಿಳಿದುಕೊಳ್ಳದಿರುವದು ಅವಿವೇಕವಾಗಿದೆ' ಎಂದು ಇಂದು ಅಧಿಕಾರ ವಹಿಸಿರುವ ಪಕ್ಷದ ಮುಖಪತ್ರವಾದ 'ಜನ್ಮಭೂಮಿ' ಪತ್ರಿಕೆ ತಾ. ೧೭—೧—೫೧ ರ ತನ್ನ ಅಗ್ರಲೇಖನದಲ್ಲಿ ಬರೆದಿದೆ. ಆದರೆ ಇಂದು ಅದೇ ಪಕ್ಷದವರು ಅಧಿಕಾರಕ್ಕೆ ಬಂದಿದ್ದು ಅವರೇ ಇಂದು ರೈತರ ಮೇಲೆ ಎಕರೆಗೆ ನಾಲ್ಕಾಣೆಯ ಬಾಣೆ ಕಂದಾಯ ಹಾಕಿದ್ದಾರೆ. ಸಂದರ್ಭ ಬಂದ ಹಾಗೆ ವರ್ತಿಸುವ ಈ ರಾಜಕಾರಣಕ್ಕೆ ಏನು ಹೇಳಬೇಕು ? ಅಂದು ಹೊಸ ಕಂದಾಯ ತೆರಲು ಶಕ್ತಿ ಇಲ್ಲದಿದ್ದ ರೈತನಿಗೆ ಇಂದು ಕಂದಾಯ ತೆರುವ ಶಕ್ತಿ ಎಲ್ಲಿಂದ ಬಂತು ? ಇಂದು ಮುಖ್ಯ ಮಂತ್ರಿಯ ಸ್ಥಾನದಿಂದ ಎಕರೆಗೆ ರೈತನು ನಾಲ್ಕಾಣೆ ಹೆಚ್ಚಿನ ಕಂದಾಯ ಕೊಡುವದು ಅವನಿಗೆ ಭಾರವೇನಲ್ಲವೆಂದು ಹೇಳುವದನ್ನು ನೋಡಿದರೆ ವ್ಯಸನಪಡಬೇಕಾಗುತ್ತದೆ. ಮನುಷ್ಯನಿಗೆ ಅಧಿಕಾರ, ಸಂಪತ್ತು ಬಂದಾಗ ಇತರರ ಕಷ್ಟ ಸುಖಗಳ ಪರಿವೆ ಮರೆತು ಹೋಗುತ್ತದೆ ಎಂಬುದಕ್ಕೆ ಇದೊಂದು ನಿದರ್ಶನ. ಅಂದು ಕೊಡಗು ಪ್ರತ್ಯೇಕವಿದ್ದರೆ ಕಂದಾಯ ಹೆಚ್ಚು ತೆರಬೇಕಾಗುವದೆಂದು ಹೇಳಿ ಆದ್ದರಿಂದ ಕೊಡಗು ಬೇರೆ ಪ್ರಾಂತದೊಡನೆ ಸೇರಿಹೋಗಲಿ ಎಂದು ವಾದಿಸಿದ ಪಂಗಡವೇ ಇಂದು ನಿಷ್ಕಾರಣವಾಗಿ ಈ ತೆರಿಗೆ ಹೇರುತಿದ್ದೂ ಕೂಡ ಜನತೆ ಅರಿಯದಿರುವದು ವಿಷಾದಕರ. ನಮ್ಮ ಸರಕಾರದಲ್ಲಿ ಹಣವಿಲ್ಲದೆ ತೊಂದರೆಯಾಗಿ ಹೊಸ ಕಂದಾಯ ಹಾಕಿದ್ದರೆ ಸಹಿಸಬಹುದಿತ್ತು. ಅಂಥಾ ಸ್ಥಿತಿ ಬಂದಿಲ್ಲ. ಹಾಗೆ ಬಂದರೂ ಕೂಡ ಬಡ ರೈತನಿಗೆ ಈ ಹೊರೆ ಹಾಕಬೇಕೆ ? ಸರಕಾರದ ಆದಾಯ ಹೆಚ್ಚಿಸಲು ಬೇರೆ ಮಾರ್ಗಗಳಿಲ್ಲವೇ ?

ಬಿ. ಕುಶಾಲಪ್ಪ.

ಸೆಂಟ್ರಲ್ ಹೈಸ್ಕೂಲ್ ಕಮರ್ಶಿಯಲ್ ತರಗತಿ

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಕಮರ್ಶಿಯಲ್ ತರಗತಿಯೊಂದಿದೆ. ಮೂರನೇ ಫಾರಮ್ ಪಾಸಾದ ನಂತರ ಹಲವು ವಿದ್ಯಾರ್ಥಿಗಳನ್ನು 'ಕಮರ್ಶಿಯಲ್' ವಿಷಯವನ್ನು ಇಚ್ಛಿಕ ಪಾಠವಾಗಿ ತೆಗೆದುಕೊಳ್ಳಲು ಒತ್ತಾಯ ಮಾಡಿ ಆ ಪ್ರಯತ್ನದ ಫಲವಾಗಿಯೇ ಈ ತರಗತಿ ನಡೆಯುತ್ತಾ ಬರುತ್ತಿದೆಯೆನ್ನಬಹುದು. ಆದರೆ ಕಳೆದ ಮಾರ್ಚ್ ತಿಂಗಳಲ್ಲಿ ಈ ಶಾಲೆಯಲ್ಲಿ ಪರೀಕ್ಷೆಗೆ ಕುಳಿತ ೮ ಕಮರ್ಶಿಯಲ್ ವಿಷಯ ತೆಗೆದುಕೊಂಡ ವಿದ್ಯಾರ್ಥಿಗಳಲ್ಲಿ ಯಾರೂ ತೇರ್ಗಡೆಯಾಗಿಲ್ಲವೆಂದು ತಿಳಿದು ಬಂದಿದೆ. ಇದು ನಿಜವಾದರೆ ಈ ತರಗತಿಯ ಅವಶ್ಯಕತೆಯೇನು ? ಮತ್ತು ಇಲ್ಲಿ ಪಾಠ ಮಾಡುವ ಅಧ್ಯಾಪಕರು ಮಾಡುತ್ತಿರುವ ಕೆಲಸವೇನು ?

ಈ ರೀತಿ ಒಬ್ಬನೇ ಒಬ್ಬ ವಿದ್ಯಾರ್ಥಿಯು ಪಾಸಾಗದಿರಲು ಅಧ್ಯಾಪಕರೇ ಕಾರಣರಿರಬೇಕು. ವಿಚಾರಿಸಿದಾಗ ಒಬ್ಬರು ಅನಾರೋಗ್ಯ ಆಸ್ಪತ್ರೆಯಲ್ಲಿರುವವರೆಂದೂ ಇನ್ನೊಬ್ಬರು ಸರಿಯಾಗಿ ಪಾಠ ನಡೆಸುತ್ತಿಲ್ಲವೆಂದೂ, ವರ್ತಮಾನವಿದೆ. ಮತ್ತೆ ಕಮರ್ಶಿಯಲ್ ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ತರಿಸಿಕೊಡುವೆನೆಂದು ಹೇಳಿ ವಿದ್ಯಾರ್ಥಿಗಳಿಂದ ಹಣ ಪಡೆದು ಪುಸ್ತಕ ತರಿಸಿದಂತೆ ತೋರುವದಿಲ್ಲವೆಂದೂ ಸೂಚಿದೆ. ಈ ವರ್ಷವೂ ಅದೇ ರೀತಿ ಹಿಂದಿನ ವರ್ಷದಂತೆಯೇ ಪಾಠ ಮಾಡುತಿದ್ದಾರೆ. ಆದ್ದರಿಂದ ವಿದ್ಯಾಧಿಕಾರಿಗಳು ಈ ತರಗತಿಯ ವಿಚಾರವಾಗಿಯೂ, ಅಲ್ಲಿಯ ಅಧ್ಯಾಪಕರ ವಿಚಾರವಾಗಿಯೂ ತನಿಖೆ ಮಾಡಿ ನ್ಯಾಯ ತೆಗೆದುಕೊಳ್ಳಬೇಕೆಂದು ಅರಿಕೆ.

'ಕಂಡೆ'

ಸರಕಾರದ ಗಮನ

ಬತ್ತ ಬೇಕು

ಸಾಮೂಹಿಕ ವಿಕಾಸ ಯೋಜನೆಯ ಕಾರ್ಯಕ್ರಮದಂತೆ ಮಾದಾಪುರದಲ್ಲಿರುವ ಈಗಿನ ಪೋಸ್ಟ್ ಆಫೀಸನ್ನು ಬ್ರಾಂಚ್ ಪೋಸ್ಟ್ ಆಫೀಸಾಗಿ ಮಾಡುವ ವರ್ತಮಾನವನ್ನು ಕೇಳಿದೆನು. ಸದ್ರಿ ಪೋಸ್ಟಾಫೀಸಿಗೆ ತರುವ ಟೆಲಿಗ್ರಾಫ್ ತಂತಿಯನ್ನು ಸೋಮವಾರಪೇಟೆಯಿಂದ ಒಂಟಿಯಂಗಡಿ ಬಿಳಿಗೇರಿ ರಸ್ತೆಗಾಗಿ ಮಾದಾಪುರಕ್ಕೆ ತರುವದು ಯುಕ್ತವೆಂದು ಸೂಚಿಸಬಯಸುತ್ತೇನೆ. ಸರಕಾರಿ ರಸ್ತೆಗಿಂಥಾ ಈ ರಸ್ತೆಯು ಬಹು ಹತ್ತಿರದ ದಾರಿಯಾದುದರಿಂದ ಖರ್ಚು ಕಡಿಮೆಯಾಗುವದು ಅಲ್ಲದೆ ಮಾದಾಪುರದಿಂದ ಭೂತನಕಾಡು ತೋಟಕ್ಕಾಗಿ ಬಿಳಿಗೇರಿ ಗ್ರಾಮದ ವರೆಗೆ ಜಲ್ಲಿ ಕಲ್ಲು ಹಾಕಿದ ರಸ್ತೆ ಇರುವದರಿಂದ ಈ ರಸ್ತೆಯಲ್ಲಿ ಒಂದು ಬಸ್ಸು ಲೈನು ಓಡಾಡುವ ಏರ್ಪಾಡು ಮಾಡಬೇಕಾಗಿ ಸರಕಾರವನ್ನು ಕೇಳಿಕೊಳ್ಳುವದಾಗಿದೆ.

ಬಿ. ಕೆ. ಕುಟ್ಟಪ್ಪ

ಇವರ ವರ್ಗವಾಗಬೇಕು.

ನಮ್ಮೂರಲ್ಲಿ ಒಬ್ಬ ಆಫೀಸರಿದ್ದಾರೆ. ಬಾಯಲ್ಲಿ ಸದಾ ಸವಿನಯ ಪ್ರಜಾ ಪ್ರೀತಿಯ ಮಾತುಗಳು. ಕೃತಿಯಲ್ಲಿ ಪಕ್ಷಬೇಧ, ಸ್ವಾರ್ಥತೆ. ಅವರನ್ನು ಆಫೀಸಿನಲ್ಲಿ ಕಂಡರೆ ದೀರ್ಘ ಸಮಯ ಹಿಡಿದರೂ ಆಗದ ಕೆಲಸ ಮನೆಯಲ್ಲಿ ಕಂಡರೆ ಶೀಘ್ರ ಆಗುವದು. ಆಫೀಸಿನ ಚಾಕರಿಗೆ ಮೂವರು ಶಿಪಾಯಿಗಳಿದ್ದಾರೆಂದರೂ ಚಾಕರಿಯೆಲ್ಲ ಬಿಡಾರದಲ್ಲಿ! ನಾಡಿನ ಜವಾಬ್ದಾರಿ ಇರುವ ಆಫೀಸರಿವರು. ಆದರೆ ಆಫೀಸಿನಲ್ಲಿ ವಾರಕ್ಕೆ ಒಂದು ದಿನ ದೊರೆಯುವದು ಕಷ್ಟ. ಇವರ ಹೆಚ್ಚಿನ ಕಾಲಯಾಪನೆ ಆ ನಾಡಿನ ಈಗಿನ ಲೀಡರುಗಳ ಮನೆಯಲ್ಲಿ. ಇಂಥಾ ಅಧಿಕಾರಿಗಳು ನಾಡಿನಲ್ಲಿ ಬೇಕಿಲ್ಲ. ಇವರನ್ನು ರಾಜಧಾನಿಯಲ್ಲಿ ಮೇಲಧಿಕಾರಿಗಳ ದೃಷ್ಟಿಯ ಮುಂದೆ ಇಟ್ಟುಕೊಳ್ಳುವದು ಉಚಿತ. ಸರಕಾರದವರು ಈ ವಿಚಾರ ವಿಚಾರ ಮಾಡುವವಾದರೆ ಸರಕಾರಕ್ಕೆ ಅವರ ಹೆಸರನ್ನು ಕೊಡಲಾಗುವದು. ಸರಕಾರ ಗಮನವೀಯದಿದ್ದರೆ ನೊಂದವರು ಮತ್ತು ನಾಡಿನ ಹಿತಚಿಂತಕರು ಸರಕಾರದ ಮುಂದೆ ಖುದ್ದು ಬಂದು ಬಿಚ್ಚಿ ಹೇಳಬೇಕಾಗುವದು. ಹೇಗೂ ಸರಕಾರ ಈ ಕಡೆ ಗಮನವೀಯುವದೆಂದು ನಂಬಲಾಗಿದೆ.

'ನೊಂದವ.'

ಕಾಲೇಜು ಹಾಸ್ಟೆಲ್

ಕೊಡಗು ಸರಕಾರಿ ಕಾಲೇಜಿಗೆ ಸೇರಲು ವಿದ್ಯಾರ್ಥಿಗಳು ಅರ್ಜಿ ಬರಕೊಳ್ಳುತ್ತಾರೆ. ಕಾಲೇಜು ತಾ. ೨೧ರಿಂದ ಪ್ರಾರಂಭವಾಗುವದೆಂದು ತಿಳಿಯಬರುತ್ತದೆ. ಆದರೆ ಕಾಲೇಜಿನ ಹೊಸ ಕಟ್ಟಡ ಇನ್ನೂ ಸಿದ್ಧವಾಗಿಲ್ಲ. ಇಷ್ಟು ವರ್ಷ ಕಾಲೇಜಿನಲ್ಲಿ ಓದಲು ಇಚ್ಛಿಸುವ ವಿದ್ಯಾರ್ಥಿನಿಯರಿಗೆ ಮಡಿಕೇರಿ ಹುಡುಗಿಯರ ಹೈಸ್ಕೂಲು ಬೋರ್ಡಿಂಗಿನಲ್ಲಿ ಉಳಿದುಕೊಳ್ಳುವ ವ್ಯವಸ್ಥೆ ಇತ್ತು. ಈ ವರ್ಷ ಹುಡುಗಿಯರ ಶಾಲೆಯವರು ಅಂಥಾ ವ್ಯವಸ್ಥೆಗೆ ಒಪ್ಪದ ಕಾರಣ ಕಾಲೇಜಿನಲ್ಲಿ ಓದಲು ಬಯಸುವ ವಿದ್ಯಾರ್ಥಿನಿಯರಿಗೆ ತುಂಬಾ ತೊಂದರೆಯಾಗಿದೆ. ಮಡಿಕೇರಿಯಲ್ಲಿ ನೆಂಟರಿಷ್ಟರಿರುವವರು ಕಾಲೇಜಿನಲ್ಲಿ ಓದಬಹುದೇ ವಿನಾ ಉಳಿದವರಿಗೆ ಯಾವ ಆಸ್ಪದವೂ ಇಲ್ಲ. ಇಂಥಾ ಪರಿಸ್ಥಿತಿ ಉಂಟಾಗದಂತೆ ಸರಕಾರವು ಎಚ್ಚರ ವಹಿಸಬೇಕಿತ್ತು. ನನಗೆ ತಿಳಿದಿರುವಂತೆ ಒಂದೆರಡು ವಿದ್ಯಾರ್ಥಿನಿಯರು ಇಲ್ಲಿ ಬೋರ್ಡಿಂಗ್ ವ್ಯವಸ್ಥೆ ಇಲ್ಲದ ಕಾರಣ ಮೈಸೂರಿಗೆ ಹೋಗಿರುವರು. ಇನ್ನಾದರೂ ಅಧಿಕಾರಿಗಳು ಇದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕಾದ್ದು ಅತೀ ಅವಶ್ಯ. ಕಾನ್ವೆಂಟ್ ಅಧಿಕಾರಿಗಳನ್ನು ಒಪ್ಪಿಸಿ ಅಲ್ಲಿಯ ನಿವಾಸಗೃಹದಲ್ಲಿ ಸ್ಥಳ ಮಾಡುವದು ಸೂಕ್ತವೆಂದು ನನ್ನ ಅಭಿಪ್ರಾಯವಾಗಿದೆ.

ಲೀಲಾ.

ಬಾಣೆ ಕಂದಾಯ.

ನಮ್ಮ ಕಾಂಗ್ರೆಸ್ ಸರಕಾರ ಈ ಕಂದಾಯ ಹಾಕಬೇಕಿರಲಿಲ್ಲ. ಅಂದರೆ ಕಂದಾಯ ಹಾಕುವದು ತಪ್ಪು ಎಂದು ನನ್ನ ಅಭಿಪ್ರಾಯವಲ್ಲ. ಬಡಜನರ ಹಿತಚಿಂತಕನೆನಿಸಿದ ಕಾಂಗ್ರೆಸ್ ಸರಕಾರವು ಬಡಜನರಿಗೆ ಭಾರವಾಗುವ ಈ ಹೊಸ ಕಂದಾಯ ಹಾಕಬಾರದಿತ್ತು. ಬಾಣೆ ಜಾಗಕ್ಕೆ ಕಂದಾಯ ಹಾಕಲಿ ಅದರಲ್ಲಿ ತಪ್ಪಿಲ್ಲ. ಆದರೆ ಅದನ್ನು ಬಡವರಿಗೂ ಅನ್ವಯಿಸುವಂತೆ ಹಾಕಿದ್ದು ಸರಿಯಲ್ಲ. ಒಂದೆರಡು ಎಕ್ರೆ ಬಾಣೆ ಇರುವ ಬಡವನೂ ಕೂಡ ಅದನ್ನು ತೆರಬೇಕಾಗುತ್ತದೆ. ಬಡವನ ಜೀವನದಲ್ಲಿ ಒಂದು ರೂಪಾಯಿ ಎಂದರೆ ಹೊರಲಾರದ ಹೊರೆ ಎಂಬುದನ್ನು ಕಾಂಗ್ರೆಸ್ ಸರಕಾರ ತಿಳಿಯಬೇಡವೇ? ಜೊತೆಗೆ ಬೇರೆಯಾವುದೇ ಆದಾಯವಿಲ್ಲದೆ ನೂರು ಬಟ್ಟಿ ಭೂಮಿಯಿಂದಲೇ ಸಂಸಾರ ಸಾಕಬೇಕಾದ ನನಗಿರುವ ೨೦ ಎಕರೆ ಬಂಜರು ಬಾಣೆಗೆ ನಾನು ನನ್ನ ಈಗಿನ ಕರಭಾರದ ಜೊತೆಗೆ ಐದು ರೂಪಾಯಿ ತರುವದು ಸುಲಭವಲ್ಲ. ನೂರು ಬಟ್ಟಿ ಭೂಮಿಗೆ ಇಷ್ಟೇ ಬಾಣೆಯೆಂದು ವಿಧಿಸಿ ಹೆಚ್ಚಿಗೆ ಇರುವದಕ್ಕೆ ಕಂದಾಯ ಹಾಕಲಿ ಯಾ ಅದನ್ನು ಸರಕಾರವೇ ವಶಪಡಿಸಿಕೊಂಡು ಏನಾದರೂ ಮಾಡಲಿ. ಅವರೆ ಭೂಮಿಗೆ ಅನುಗುಣವಾಗಿ ನಿಶ್ಚಿತ ಬಾಣೆ ಜಾಗಕ್ಕೆ ಹೆಚ್ಚೆಂದರೆ ವರ್ಗಕ್ಕೆ ಹತ್ತು ಎಕರೆ ವರೆಗೆ ಕಂದಾಯದಿಂದ ವಿನಾಯಿತಿ ಬೇಕೇ ಬೇಕು. ಸರಕಾರವು ಬಡ ಜನರ ಕಷ್ಟವನ್ನು ಅರಿಯುವದೇ?

'ಶಂಕರ'

ಪಕ್ಷಪಾತವೇಕೆ?

ಕಳೆದ ವಾರದ ಪತ್ರಿಕೆಯಲ್ಲಿ ಶ್ರೀ ಪಿ. ಜಿ. ಐಯ್ಯಪ್ಪನವರು ಬರೆದ ಲೇಖನವನ್ನು ಓದಿದೆನು. ಸರಕಾರವು ಬಾಣೆ ಕಂದಾಯ ಹಾಕಲು ನಿಶ್ಚೈಸಿ ಜಹಗೀರು ಮೊದಲಾದ ಬಾಣೆಗಳನ್ನು ವಿನಾಯಿಸಿದೆಯೆಂದು ತಿಳಿದು ವಿಸ್ಮಯವಾಯಿತು. ಕಳೆದ ಕೌನ್ಸಿಲ್ ಸಭೆಯಲ್ಲಿ ಮುಖ್ಯಮಂತ್ರಿಯವರು ಈ ವಿಚಾರ ಮಾತಾಡಿದ್ದರ ವರದಿಯನ್ನು ಪತ್ರಿಕೆಯಲ್ಲಿ ಓದಿದ ನೆನಪು ನನಗೆ ಈಗಲೂ ಇದೆ. ಅದರ ಸಾರಾಂಶ ವಿದು. ಹಿಂದೂದೇಶದ ಭೂವಿತರಣಾ ಪದ್ಧತಿ ಸರಿಯಿಲ್ಲ. ಇಂಡಿಯಾ ಸರಕಾರವು ಈ ಬಗ್ಗೆ ಆಲೋಚಿಸುತ್ತಿದೆ. ಬಹುವಿಸ್ತಾರಭೂಮಿ ಇರುವವರಿಂದ ಹೆಚ್ಚಿರುವದನ್ನು ತೆಗೆದು ಹಂಚುವ ಸಮಯ ಬರಲಿದೆ ಈ ಕಂದಾಯ ಸೂಚನೆಯನ್ನು ನಾನು ವಿನೋಬಭಾವೆಯವರ ಭೂದಾನ ಚಳವಳದ ದೃಷ್ಟಿಯಿಂದ ನೋಡುತ್ತಿದ್ದೇನೆ. ಹೊರಗಿನ ಹಲವು ಸರಕಾರಗಳು ಇನಾಮ್, ಜಮೀನ್ದಾರಿ ಪದ್ಧತಿಗಳನ್ನು ರದ್ದು ಮಾಡಿವೆ. ಮಾಡುತ್ತಿವೆ. ಅದು ಆಗಬೇಕಾದ್ದೆ. ತುಂಬಾ ಭೂಮಿ, ಜಾಗ ಇಟ್ಟುಕೊಂಡು ಯೋಗ್ಯ ವ್ಯವಸಾಯ ಮಾಡದವರ ಹೆಚ್ಚಿನ ಆಸ್ತಿಯನ್ನು ಸರಕಾರ ವಶಪಡಿಸಿಕೊಂಡರೂ ಸರಿಯೆ? ಆ ರೀತಿಯ ಪ್ರಗತಿ ಶೀಲ ಮನೋಭಾವದಲ್ಲಿ ಮಾತಾಡಿದ ಮಂತ್ರಿಗಳು ಜಹಗೀರು, ಉಂಬಳಿ ಜಾಗವನ್ನು ವಿನಾಯಿಸುವದರ ಅರ್ಥವೇನು? ನನಗೆ ತಿಳಿದಿರುವ ಹಾಗೆ ಶೈವ ಮಠಗಳಿಗೆ ವಿಸ್ತಾರ ಜಹಗೀರು ಭೂಮಿ ಇದೆ. ಇವರಿಗೆ ತೊಂದರೆಯಾಗಬಾರದೆಂದೇ? ಭೂವಿತರಣಾ ಪದ್ಧತಿಯನ್ನು ಪ್ರಗತಿಶೀಲ ದೃಷ್ಟಿಯಿಂದ ನೋಡುವದೆಂದರೆ ಇದೇ ಮಾದರಿಯೇ? ಈ ಬಾಣೆ ಕಂದಾಯ ಬಡವನ ಹೆಗಲಿಗೇ ಹೆಚ್ಚಾಗಿ ಬೀಳುವದರಿಂದ (ಏಕೆಂದರೆ ಕೊಡಗಿನಲ್ಲಿ ದೊಡ್ಡ ಜಮೀನ್ದಾರರ ಸಂಖ್ಯೆ ಕಡಿಮೆ) ಅದನ್ನು ಪ್ರತಿಯೊಬ್ಬನೂ ವಿರೋಧಿಸಲೇಬೇಕು. ಸರಕಾರಕ್ಕೆ ಅಗತ್ಯವಾಗಿ ಹಣ ಬೇಕಿದ್ದರೆ ಸಿರಿವಂತರಿಂದ ವಸೂಲ್ಮಾಡುವ ಏರ್ಪಾಡು ಮಾಡಲಿ. ಬಡವನ ಹೆಗಲಿಗೆ ಭಾರ ಹೇರುವ ಈ ಭೂಕಂದಾಯದ ಬದಲು ಬೇರೆ ವಿಧಾನ ಹುಡುಕಲಿ. ಅದಕ್ಕಾಗಿ ಒಂದು ಸಮಿತಿಯನ್ನು ರಚಿಸಿ ಆಲೋಚಿಸಲಿ.

"B"

ಹೆಸರಿಲ್ಲದ ನಗರವಾಸಿಯೇ,

ನಿಮ್ಮ ತಾರೀಕು ೧೭-೬-೫೩ರ 'ಜನ್ಮಭೂಮಿ' ಪತ್ರಿಕೆಯಲ್ಲಿಯ 'ಮಡಿಕೇರಿ ಮುನ್ಸಿಪಾಲಿಟಿ' ಎಂಬ ಶಿರೋನಾಮೆಯ ಚೌಚೌ ಬಾತ್ಮಿಯನ್ನು ಓದಿದೆನು. ನೀವು ನನ್ನ ಬಾತ್ಮಿಗೂ ಮತ್ತು ಇನ್ನಿತರ ಹಲವಾರು ಬಾತ್ಮಿಗಳಿಗೂ ಸೇರಿಸಿ ಒಂದೇ ಜವಾಬು ಕೊಡಲು ಪ್ರಯತ್ನಿಸಿ ಕೆಳಗೆ ಜಾರಿದುದಕ್ಕೆ ವ್ಯಸನಪಡಬೇಕಾಗಿದೆ. ನಿಮ್ಮಂಥ ಮಹನಿಯರುಗಳು ಹಲವಾರು ಜನರು ಬ್ರಿಟಿಷರ ಸಮಯದಲ್ಲಿ ಸಹ ಈ ತರಹ ಅಧಿಕಾರ ವರ್ಗದ ಬಾಲ ಹಿಡಿದು ಹೊಟ್ಟೆ ಹೊರೆದುಕೊಳ್ಳುತ್ತಿದ್ದರು. ಆದುದರಿಂದ ನಿಮ್ಮ ಅವಸ್ಥೆ ಈಗ ಹೊಸದೇನೂ ಅಲ್ಲ. ನೀವು ನನ್ನ 'ಮನೆಯ ಹಿಂಭಾಗ ದ್ಯಾಗ ಇಟ್ಟುಕೊಂಡಿರುತ್ತಾರೆಂಬ ತಿಳುವಳಿಕೆಯನ್ನಾದರೂ ಇಟ್ಟುಕೊಂಡಿರುವರೇ' ಎಂದು ಕೇಳುವಿರಿ. ಆದರೆ ನನ್ನ ಒಂದೇ ಕೋರಿಕೆ ನಿಮಗೆ. ನನ್ನ ಮನೆಯ ಹಿಂಭಾಗದಷ್ಟು ಸ್ವಚ್ಛವಾಗಿ ನಿಮ್ಮ ಹೃದಯವನ್ನು ಇಟ್ಟುಕೊಳ್ಳುವಿರಾ? ನೀರಿನ ವಿಷಯ ಬರೆದುದಕ್ಕೆ ಪ್ರಕೃತಿಯೇ ನಿಮ್ಮ ನೆರವಿಗೆ ಬರಲಿಲ್ಲವೆಂದು ಹೇಳುವಿರಿ. ಇಡೀ ಪಟ್ಟಣದಲ್ಲಿ ನೀರಿಲ್ಲವೆಂದು ಬೊಬ್ಬೆ ಹೊಡೆಯುತ್ತಿರುವಾಗ ನಿಮಗೂ ನಿಮ್ಮ ಪ್ರೆಸಿಡೆಂಟರಿಗೂ ನಿಮ್ಮ ಬೀದಿಯ ನಳ್ಳಿಗಳಲ್ಲಿ ಬೇಕಾದಷ್ಟು ನೀರು ದೊರಕುತ್ತಿತ್ತು. ಇದನ್ನು ಆಗ ನಾನು ಎತ್ತಿ ಕೇಳಬೇಕಿತ್ತು. ಹಾಗೆ ಮಾಡದ್ದರಿಂದಲೇ ನಿಮ್ಮ ಪ್ರಸಂಗ ಹೆಚ್ಚಿತು. ಕಟ್ಟಡಕ್ಕೆಂದು ಬಂದ ಸಿಮೆಂಟನ್ನು ಕಳ್ಳಸಂತೆಯಲ್ಲಿ ಮಾರಿ ಸೀಮೆಂಟ್ ಬರಲಿಲ್ಲವೆಂದು ಹೇಳಿ ಕಟ್ಟಡ ಕೆಲಸಕ್ಕೆ ತೊಂದರೆಯಾಗಿದ್ದು ನಿಜವೋ ಸುಳ್ಳೋ ಎಂದು ತಿಳಿಸುವಿರಾ?

ಹೆಸರಿಲ್ಲದೆ ಬಾತ್ಮಿ, ಮೂಕ ಅರ್ಜಿ ಬರೆಯತಕ್ಕ ನಿಮ್ಮಂಥಾ ಧುರೀಣರಿಂದ ದೇಶದ ಏಳಿಗೆ ಆಗಬಹುದೆಂದು ಜನರು ತಿಳಿಯುವರೇ ಇನ್ನು ಮುಂದಕ್ಕಾದರೂ ಬಾತ್ಮಿಗಳಿಗೆ ನಿಮ್ಮ ಹೆಸರು ಕೊಟ್ಟು ಪ್ರಕಟಿಸಿ. ನ್ಯಾಯಾನ್ಯಾಯಗಳನ್ನು ಜನರು ತಿಳಿಯಲಿ.

ಕೆ. ಕೆ. ತಿಮ್ಮಯ್ಯ.

ಬಹುಮಾನ.

ತಾರೀಕು 26–4–53 ರಲ್ಲು ನನ್ನ (M. M. Bhat) ಟ್ರಂಕೊಂದು ಸೋಮವಾರಪೇಟೆ ಬಸ್ ಸ್ಟೇಂಡಿನಲ್ಲಿ ಕಳುವಾಗಿದ್ದು, ಅದರಲ್ಲಿದ್ದ ಮೂರು ಇನ್ಶೂರೆನ್ಸ್ ಪಾಲಿಸಿಗಳು (M. Madhava Bhat ಎಂಬ ಹೆಸರಿನಲ್ಲಿ) ಮತ್ತು ಕೆಲವು ರಿಕಾರ್ಡು ಮತ್ತು ಚಿಲ್ಲರೆ ಸ್ಟೇಷನರಿ ಸಾಮಾನುಗಳನ್ನು ಮತ್ತು ಟ್ರಂಕನ್ನು ಸೋಮವಾರಪೇಟೆಯಿಂದ ಸುಮಾರು ಮೂರು ಮೈಲಿ ಕಾಡಿನಲ್ಲಿ ಬಿಸಾಡಿದ್ದಾಗಿ ಮೈಸೂರಲ್ಲಿ ಸಿಕ್ಕಿ ಬಿದ್ದ ಆ ಕಳ್ಳನಿಂದ ತಿಳಿಯಲಾಗಿದೆ. ಆ ಟ್ರಂಕ್ ಸಹಿತವಾಗಲಿ, ವಿನಹ ಅದರಲ್ಲಿದ್ದ ಆ ಇನ್ಶೂರೆನ್ಸ್ ಪಾಲಿಸಿಗಳನ್ನು ಯಾರಾದರೂ ಸಿಕ್ಕಿದವರು ಬಿ. ಪುಟ್ಟಯ್ಯಶೆಟ್ಟಿ ಸನ್ಸ್, ಜನರಲ್ ಮರ್ಚೆಂಟ್ಸ್, ಸೋಮವಾರಪೇಟೆ ಇವರಿಗೆ ತಲ್ಪಿಸಿದಲ್ಲಿ ತಕ್ಕ ಬಹುಮಾನ ಕೊಡಲಾಗುವುದು.

ಎಂ. ಎಂ. ಭಟ್.

ನಾಜಿಮುದ್ದೀನರ ರಾಜಿನಾಮೆ

ಪಾಕಿಸ್ತಾನದ ಅತ್ಯಂತ ಪ್ರಬಲ ಪಕ್ಷವಾದ ಮುಸ್ಲಿಂ ಲೀಗಿನ ಅಧ್ಯಕ್ಷಸ್ಥಾನಕ್ಕೆ ಮಾಜಿ ಪ್ರಧಾನಿ ಖ್ವಾಜಾ ನಾಜಿಮುದ್ದೀನರು ತಾ. ೨೦ರಲ್ಲಿ ರಾಜಿನಾಮೆ ಸಲ್ಲಿಸಿದರು.

ನಾಜಿಮುದ್ದೀನರು ಅನರ್ಹರೆಂದು ಪ್ರಧಾನಿ ಪದವಿಯಿಂದ ಅವರನ್ನು ಎರಡು ತಿಂಗಳ ಹಿಂದೆ ಗವರ್ನರ್ ಜನರಲರು ತಳ್ಳಿಹಾಕಿದ್ದರು. ಲಿಯಾಖತಾಲಿ ಖಾನರ ಕೊಲೆಯಾದ ಬಳಿಕ ೧೯೫೧ರ ಅಕ್ಟೋಬರ್ ತಿಂಗಳಲ್ಲಿ ಆಗ ಗವರ್ನರ್ ಜನರಲರಾಗಿದ್ದ ನಾಜಿಮುದ್ದೀನರು ಪ್ರಧಾನಿ ಪಟ್ಟವೇರಿದ್ದರು. ಒಂದು ತಿಂಗಳ ಬಳಿಕ ಮುಸ್ಲಿಂ ಲೀಗಿನ ಅಧ್ಯಕ್ಷರಾಗಿಯೂ ಆಯ್ಕೆಗೊಂಡಿದ್ದರು.

ಸೌರಾಷ್ಟ್ರದಲ್ಲಿ ಭೂಸುಧಾರಣೆ.

ಕೃಷಿಗೆ ಯೋಗ್ಯವಾದ ೪ ಲಕ್ಷ ಎಕ್ರೆ ಭೂಮಿಯನ್ನು ಆರ್ಥಿಕ ದೃಷ್ಟಿಯಿಂದ ಸ್ವಾವಲಂಬಿಯಾಗಲು ಕಡಿಮೆ ಭೂಮಿ ಇರುವ ಗಿರಾಸದಾರರಿಗೂ, ಒಕ್ಕಲುಗಳಿಗೂ ಹಂಚಿಕೊಡಲು ಸೌರಾಷ್ಟ್ರ ಸರಕಾರವು ನಿರ್ಧರಿಸಿದೆ. ಈ ಭೂಸುಧಾರಣೆಯನ್ನು ಜಾರಿಗೆ ತಂದುದರ ಪರಿಣಾಮವಾಗಿ ಹಲವು ಗಿರಾಸದಾರರು ಹಾಗೂ ಒಕ್ಕಲಿಗರಿಗೆ ಸ್ವಾವಲಂಬಿಯಾಗಲು ಬೇಕಾದಷ್ಟು ಭೂಮಿಯನ್ನು ಒದಗಿಸುವರೆ ಸರಕಾರವು ಇದುವರೆಗೆ ಉಪಯೋಗಕ್ಕೆ ಬಾರದಿರುವ ೪ ಲಕ್ಷ ಎಕ್ರೆ ಕೃಷಿಯೋಗ್ಯ ಭೂಮಿಯನ್ನು ಹಂಚಿಕೊಡುವ ಅವಕಾಶವಾಗಿದೆ.

ಶನಿವಾರಸಂತೆಗೆ
'ಕೊಡಗು' ಏಜೆಂಟರು,
ಶ್ರೀ ಎಸ್. ಎನ್. ಸಿದ್ದಪ್ಪನವರು.

ಆರೋಗ್ಯ ಕ್ಷೇತ್ರದಲ್ಲಿ ರಷ್ಯಾದ ಪ್ರಗತಿ.

ರಾಜಕುಮಾರಿ ಅಮೃತ ಕೌರರ ಅಭಿಪ್ರಾಯ.

ಈಗಾಗಲೇ ರಷ್ಯಾದಿಂದ ಹಿಂತಿರುಗಿರುವ ರಾಜಕುಮಾರಿ ಅಮೃತಕೌರವರು ತಾರೀಕು ೧೯ರಲ್ಲಿ ರಷ್ಯಾದಲ್ಲಾದ ಆರೋಗ್ಯ ಪ್ರಗತಿಯ ವಿಚಾರ ಡೆಲ್ಲಿಯಲ್ಲಿ ಒಂದು ಪತ್ರಿಕಾ ಗೋಷ್ಠಿಯಲ್ಲಿ ಮಾತಾಡುತ್ತಾ ಹೀಗೆ ಹೇಳಿದರು. 'ಕಳೆದ ಮೂವತ್ತೈದು ವರ್ಷಗಳಿಂದ ರಷ್ಯಾವು ಆರೋಗ್ಯದ ವಿಚಾರದಲ್ಲಿ ಬಹುಮಟ್ಟಿಗೆ ಮುಂದುವರಿದು ಅದ್ಭುತ ಪವಾಡವನ್ನೇ ಸಾಧಿಸಿದೆ. ಅಮೇರಿಕಾ, ಬ್ರಿಟನ್ನುಗಳ ಪ್ರಗತಿಯನ್ನು ರಷ್ಯಾದೊಂದಿಗೆ ತುಲನೆ ಮಾಡುವದಾದರೆ ಯಾವುದೇ ವ್ಯವಸ್ಥೆ ಇಲ್ಲದಿದ್ದ ರಷ್ಯಾವು ಇಂದಿನ ಮಟ್ಟಿನ ಪ್ರಗತಿಯನ್ನು ಪಡೆದುದು ಯಾವ ರಾಷ್ಟ್ರಕ್ಕೂ ಕೂಡ ಆದರ್ಶವಾಗಿದೆ. ರಷ್ಯಾದಲ್ಲಿ ಸೈನ್ಯ ಮತ್ತಿತರ ಖರ್ಚಿಗೆ ದೇಶದ ಸಂಪತ್ತಿನ ಶೇಕಡ ೨೫ರಷ್ಟು ಖರ್ಚಾದರೆ ಆರೋಗ್ಯ ಮತ್ತು ವಿದ್ಯೆಗಾಗಿ ಶೇಕಡ ೨೭ರಷ್ಟಾಗುತ್ತಿದೆ. ರಷ್ಯಾದ ಕೇಂದ್ರ ಆರೋಗ್ಯ ಇಲಾಖೆಯವರು ಆರೋಗ್ಯ ಅಂದರೆ ರೋಗ ಬಾರದಂತೆ ತಡೆಯಲು ಹಾಗೂ ಬಂದದ್ದನ್ನು ನಿವಾರಿಸಲು, ಶಾರೀರಿಕ ಶಿಕ್ಷಣ, ಸಾಮಾಜಿಕ ವಿಮಾ ಪದ್ಧತಿ, ತಾಯಿಂದಿಯರಿಗೆ ಸಹಾಯ ಮೊದಲಾದವುಗಳಿಗೆ ೭೩ ಬಿಲಿಯ ರೂಬಲ್‌ಗಳನ್ನೂ, ವಿದ್ಯೆಗಾಗಿ ೬೦ ಬಿಲಿಯ ರೂಬಲ್‌ಗಳನ್ನು ವ್ಯಯ ಮಾಡುತ್ತಾರೆ.

ಕೇಂದ್ರ ಆರೋಗ್ಯ ಖಾತೆಯು ಆರೋಗ್ಯಕ್ಕೆ ಸಂಬಂಧಿಸಿದ ಪುಸ್ತಕ ಪತ್ರಿಕೆಗಳನ್ನು ಪ್ರಕಟಿಸುವದಲ್ಲದೆ ವೈದ್ಯಕೀಯ ಪ್ರಪಂಚದಲ್ಲಿ ಆಗೀದಾಗ್ಗೆ ಆಗುವ ಮುನ್ನಡೆಯನ್ನು ತಿಳಿಸುವದು. ರಷ್ಯಾದಲ್ಲಿ ಒಟ್ಟು ೭೨ ಮೆಡಿಕಲ್ ಕಾಲೇಜುಗಳಿದ್ದು ವರ್ಷಕ್ಕೆ ೨೦ ಸಾವಿರದಿಂದ ೨೫ ಸಾವಿರದ ವರೆಗೆ ಡಾಕ್ಟರುಗಳನ್ನು ತಯಾರು ಮಾಡಲಾಗುತ್ತಿದೆ. ಇಂದು ರಷ್ಯಾದಲ್ಲಿ ಎರಡು ಲಕ್ಷ ಡಾಕ್ಟರುಗಳಿರುವರು.

೧೯೧೭ರ ಕ್ರಾಂತಿಗೆ ಮೊದಲು ರಷ್ಯಾದಲ್ಲಿ ಪ್ರತಿ ೩೯,೦೦೦ ಜನ ಸಂಖ್ಯೆಗೆ ಒಬ್ಬರಂತೆ ಡಾಕ್ಟರರಿದ್ದರು. ಇಂದು ಉಸ್‌ಬೆಕಿಸ್ತಾನದಲ್ಲಿ ಪ್ರತಿ ೮೯೦ ಜನರಿಗೆ ಒಬ್ಬರಂತೆ ಡಾಕ್ಟರರಿರುವರು. ಅಸರ್‌ಬೈಜಾನದಲ್ಲಿ ಪ್ರತಿ ೪೯೦ ಜನರಿಗೆ ಒಬ್ಬರಂತೆ ಡಾಕ್ಟರಿರುವರು. ಜಾರ್ಜಿಯಾದಲ್ಲಿ ಪ್ರತಿ ೩೪೩ ಜನರಿಗೆ ಒಬ್ಬರಂತೆ ಇರುವರು. ಪ್ರತಿ ಹಳ್ಳಿಗೂ ಒಂದೊಂದು ಔಷಧ ಗೃಹಗಳು ಇವೆ. ಗ್ರಾಮಗಳ ಗುಂಪಿಗೆ ಗುಡಿ ಆಸ್ಪತ್ರೆಗಳಿವೆ. ೫೦೦೦ ಜನಸಂಖ್ಯೆಯ ಹದಿಮೂರು ಗ್ರಾಮಗಳಿಗಿರುವ ಒಂದು ಆಸ್ಪತ್ರೆಯನ್ನು ನಾನು ಸಂದರ್ಶಿಸಿದೆ. ಅದರಲ್ಲಿ ಎಕ್ಸ್‌ರೇ, ಕ್ಲಿನಿಕಲ್ ಲೇಬರೇಟರಿ, ದಂತ ಚಿಕಿತ್ಸೆ ಮೊದಲಾದ ಏರ್ಪಾಡುಗಳಿದ್ದವು. ನಾಲ್ಕು ಹಾಸಿಗೆಯ ಈ ಡಾಕ್ಟರುಗಳು, ೧೭ ಅಸಿಸ್ಟೆಂಟರು, ೧೭ ನರ್ಸುಗಳೂ, ೧೬ ಚಿಕಿತ್ಸಕರುಗಳೂ ಇದ್ದರು. ಅಲ್ಲಿಯ ಮುಖ್ಯ ಡಾಕ್ಟರಿಗೆ ೧೫೦೦ ರೂಬಲ್ ವೇತನವಿತ್ತು. ಇವರ ಮೇಲೆ ೭೦೦೦೦ ಜನರಿಗೊಂದು ಜಿಲ್ಲಾ ಆಸ್ಪತ್ರೆಗಳಿವೆ. ಅವುಗಳಲ್ಲಿ ಆಧುನಿಕ ಎಲ್ಲಾ ಚಿಕಿತ್ಸಾ ಏರ್ಪಾಡುಗಳಿವೆ.

ರಷ್ಯಾದಲ್ಲಿ ಒಬ್ಬ ಸಾಮಾನ್ಯ ಡಾಕ್ಟರರ ಮಾಸಿಕ ವೇತನ ರೂ. ೭೯೦ ರಿಂದ ೫೫೦ ರೂಬೆಲ್‌ಗಳು. ಬಹು ದೂರದ ಹಳ್ಳಿಗಳಲ್ಲಿ ಕೆಲಸ ಮಾಡುವವರಿಗೆ ಶೇಕಡ ೭೦ರಷ್ಟು ಹೆಚ್ಚಿಗೆ ಕೊಡಲ್ಪಡುವದಲ್ಲದೆ ಮನೆ ವಿದ್ಯುಚ್ಛಕ್ತಿ ಮೊದಲಾದವು ಪುಕ್ಕಟೆ ದೊರೆಯುವದು. ವಿಶೇಷ ತಜ್ಞನಾದರೆ ಮಾಸಿಕ ೩೦,೦೦೦ ರೂಬೆಲ್ ವೇತನದ ಕೆಲಸವೂ ದೊರೆಯುವದು. ನರ್ಸುಗಳ ವೇತನವು ೪೦೦ರಿಂದ ೫೫೦ ರೂಬೆಲ್‌ಗಳು. ರಷ್ಯಾದಲ್ಲಿ ಟೈಫಸ್, ಕಾಂತಿಬೇಧಿ, ಮಲೇರಿಯಾ ಕಾಯಿಲೆಗಳ ಸುಳಿವಿಲ್ಲ.

ಸಸ್ಯ ಶಕ್ತಿಯನ್ನು ಹೆಚ್ಚು ಸೆಳೆದ ವಸ್ತು ಎಂದರೆ ಅಲ್ಲಿಯ ಕೆಲಸಗಾರರಿಗಿರುವ ಆರೋಗ್ಯಧಾಮಗಳು. ಕಪ್ಪು ಸಮುದ್ರದ ಪತ್ತಿರದ ಒಂದು ಆರೋಗ್ಯಧಾಮದಲ್ಲಿ ನಾನು ಕೆಲವು ದಿನವಿದ್ದೆ. ರಷ್ಯಾದಲ್ಲಿ ಒಟ್ಟು ೫೦೦ ಇಂತಾ ಆರೋಗ್ಯಧಾಮಗಳಿವೆ. ಈ ಸಂಸ್ಥೆಗಳಲ್ಲಿ ರಷ್ಯಾದ ೮ ರಿಂದ ೯ ಮಿಲಿಯ ಶ್ರಮಜೀವಿಗಳು ತಮ್ಮ ರಜಾ ದಿನಗಳನ್ನು ಕಳೆಯುತ್ತಾರೆ. ನಿಜವಾಗಿಯೂ ಈ ಸ್ಥಳಗಳು ಅತ್ಯಾಕರ್ಷಕರ ಸ್ಥಳವಾಗಿವೆ. ಅಲ್ಲಿ ಸಿನೇಮಾ, ನೃತ್ಯ, ನಾಟಕ ಮೊದಲಾದುವುಗಳಿದ್ದು ಸಿನಿ ಹೊಟೇಲು, ವಿಹಾರ ಸ್ಥಳಗಳೂ ಇವೆ.

ರಷ್ಯಾದಲ್ಲಿ ಮಸೆಬಾದಿಗೆಯ ವೇತನದ ಶೇಕಡ ಐದರಷ್ಟನ್ನು ಎಲ್ಲಿಯೂ ದಾಟಿಲ್ಲ. ಆದರೆ ಒಂದು ಜೊತೆ ಪಾದರಕ್ಷೆಗೆ ಸುಮಾರು ೬೦, ೫೦ ರೂಬೆಲ್‌ಗಳಾಗ ಬಹುದಾದರೂ ಈಗ ಈ ಪರಿಸ್ಥಿತಿ ಸುಧಾರಿಸಿದೆ.

ನಾಲ್ಕಕ್ಕ ಮಕ್ಕಳಿಗೆ ಬಹು ಹೆಚ್ಚಿನ ಆಸಕ್ತಿಯನ್ನು ರಷ್ಯನ್ ಸರಕಾರ ಇಟ್ಟಿದೆ. ಕಾರ್ಖಾನೆಗಳಿಗೂ ಸಾಮೂಹಿಕ ವ್ಯವಸಾಯ ಕೇಂದ್ರಗಳಿಗೂ ಸಂಬಂಧಿಸಿ ಶಿಶು ವಿಹಾರಗಳಿವೆ. ತಂದೆ ತಾಯಿಯರು ಕೆಲಸ ಮಾಡುತ್ತಿದ್ದರೆ ಸರಕಾರವೇ ಮಕ್ಕಳ ಲಾಲನೆ, ಪಾಲನೆ, ವಿದ್ಯಾಭ್ಯಾಸಗಳ ಜವಾಬ್ದಾರಿ ಹೊರುತ್ತದೆ. ಏಳು ವಯಸ್ಸಿನಿಂದ ೧೭ ವರ್ಷದ ವರೆಗೆ ಮಕ್ಕಳು ಶಾಲೆಗೆ ಹೋಗುವ ವಯಸ್ಸು. ಹತ್ತು ವರ್ಷದೊಳಗಿನ ಮಕ್ಕಳಿಗೆ ಯಾವುದೇ ರೀತಿಯ ಫೀಜು ಇಲ್ಲ. ೧೭ ವಯಸ್ಸಿನ ಮೇಲೆ ಪೋಷಕರು ವರ್ಷಕ್ಕೆ ೨೦೦ ರೂಬೆಲುಗಳನ್ನು ಸರಕಾರಕ್ಕೆ ಕೊಡಬೇಕು. ಇದನ್ನು ಕೊಡಲಾಗದವರಿಗೆ ಸರಕಾರವೇ ನೆರವು ಕೊಡುತ್ತದೆ. ಪ್ರೌಢ ವಿದ್ಯಾ ಕಾಲಕ್ಕೆ ಪ್ರತಿ ವಿದ್ಯಾರ್ಥಿಗೆ ವರ್ಷಕ್ಕೆ ೪೦೦ ರೂಬೆಲ್ ಖರ್ಚು ತಗಲುವದು. ಶಾಲೆಗಳ ಹೊರಗೆ ವಿದ್ಯೆ, ಮನೋರಂಜನೆಗಳಿಗಾಗಿ ವಿದ್ಯಾರ್ಥಿಗಳಿಗೆ 'ಪಯನಿಯರ್' ಮನೆಗಳಿವೆ. ಇಲ್ಲಿ ಆಟಕಟ್ಟು, ವಿದ್ಯುಚ್ಛಕ್ತಿ ಮೊದಲಾದವುಗಳ ನಮೂನೆಗಳನ್ನು ತಯಾರಿಸಿಟ್ಟಿರುತ್ತಾರೆ.

ಯಾವುದೇ ಕೆಲಸಗಾರನಿಗೆ ೭೦೦ ರಿಂದ ೮೦೦ ರೂಬೆಲ್‌ಗಳಿಗಿಂತಾ ಕಡಿಮೆ ವರಮಾನವಿಲ್ಲ. ಒಬ್ಬ ಕೆಲಸಗಾರನು ೫೫ ವರ್ಷದವನಾಗಿದ್ದರೆ ಯಾ ೩೦ ವರ್ಷ ಕೆಲಸ ಮಾಡಿದ್ದರೆ ಆತನಿಗೆ ಪೆನ್ಶನ್ ಕೊಡುವರು. ಆತನು ಇನ್ನೂ ಕೆಲಸ ಮಾಡಲು ಇಚ್ಛಿಪಟ್ಟರೆ ಪೆನ್ಶನಿನ ಜೊತೆಗೆ ಆತನ ಮಾಮೂಲು ವೇತನವನ್ನೂ ಕೊಡಲಾಗುವದು. ದೇಶಕ್ಕಾಗಿ ತನ್ನ ಇಳಿವಯಸ್ಸಿನಲ್ಲೂ ದುಡಿಯಲು ಇಚ್ಛಿಸುವ ಆತನ ಇಚ್ಛೆಗೆ ಸರಕಾರಕೊಡುವ ಪುರಸ್ಕಾರವದು.

ನಾನು ರಷ್ಯಾದಲ್ಲಿದ್ದ ಸಮಯದಲ್ಲಿ ಒಂದೇ ದಿನವಾಗಲೀ ಒಬ್ಬನೇ ಒಬ್ಬ ರೊಟ್ಟಿಯಾಗಿಲ್ಲದ ಹಸಿವೆಗೆ ಬಳಲಿ ದಣಿಸಿದವನನ್ನು ಕಾಣಲಿಲ್ಲ. ಭೂಗರ್ಭ ರಸ್ತೆಯಲ್ಲಿ ಪ್ರಯಾಣ ಮಾಡುತ್ತಿದ್ದಾಗ ಒಬ್ಬ ಮುದುಕಿ ಮತ್ತೊಬ್ಬ ಮುದುಕನನ್ನು ಮಾತ್ರ ಕಂಡೆ. ರಷ್ಯದಲ್ಲಿ ಭಿಕ್ಷಾಟನೆ ಇಲ್ಲ. ಅಲ್ಲಿ ನಿರುದ್ಯೋಗವೂ ಇಲ್ಲ. ಇಂಗ್ಲೆಂಡ್ ಫ್ರಾನ್ಸುಗಳ ರಸ್ತೆಯಲ್ಲಿ ಕಾಣಬಹುದಾದ ಬಡತನದ ಲಲನೆಯರನ್ನು ರಷ್ಯಾದಲ್ಲಿ ಕಾಣುವದಿ

ಗಾಂಧಿ ವಿಚಾರದೋಹನ.

ಸಾಧುವೂ ಅಲ್ಲ; ಪಾಪಿಯೂ ಅಲ್ಲ.

ಸಾಧು ಸಂತರು ಎಂಬ ಶಬ್ದಗಳನ್ನು ಇಂದಿನ ನಮ್ಮ ಜೀವನದಿಂದ ದೂರವಿರಿಸುವದು ಉತ್ತಮ. ಏಕೆಂದರೆ ಅವು ತುಂಬ ಪವಿತ್ರ ಶಬ್ದಗಳು. ನಾನು ಕೇವಲ ಸತ್ಯದ ಶೋಧಕನು. ನನ್ನ ತಪ್ಪುಗಳು ನನಗೆ ಗೊತ್ತಿವೆ. ವಿಜ್ಞಾನಿಯು ಶೋಧಕನಿರುವಂತೆ ನಾನೂ ಸತ್ಯದ ಶೋಧಕನು. ತಪ್ಪು ಮಾಡಿಯೇ ಸತ್ಯದ ನೆಲೆ ತಿಳಿಯಬೇಕಾಗಿದೆ. ನಾನು ಸಂತನಲ್ಲ. ನನ್ನನ್ನು ಸಾಧುವೆನ್ನುವದು ಸರಿಯಲ್ಲ. ಆದರೆ ನನ್ನಲ್ಲಿ ಏನೇ ತಪ್ಪಿದ್ದರೂ ಸತ್ಯದ ಶೋಧಕನು ನಾನು.

ನಾನು ಸನ್ಯಾಸಿಯ ವೇಷದಲ್ಲಿರುವ ರಾಜಕಾರಣಿಯಲ್ಲ. ಸತ್ಯವೇ ಸರ್ವಶ್ರೇಷ್ಠವು ಎಂಬುದರ ಕಾರಣ ಕೆಲವು ವೇಳೆ ನನ್ನನ್ನು ರಾಜಕಾರಣಿಯಂತೆ ತೋರಬಹುದು. ಆದರೆ ಸತ್ಯ ಅಹಿಂಸೆಗಳ ವಿನಹ ನನಗೆ ರಾಜಕಾರಣವಿಲ್ಲ. ನನ್ನ ದೇಶದ ಸ್ವಾತಂತ್ರ್ಯಕ್ಕಾದರೂ ಕೂಡ ಸತ್ಯ ಮತ್ತು ಅಹಿಂಸೆಯನ್ನು ಬಿಡಲಾರೆ.

ಮನುಷ್ಯನು ತನ್ನ ಬೆನ್ನನ್ನು ತಾನೇ ನೋಡಲಾರ. ಅದೇ ರೀತಿ ನನ್ನ ತಪ್ಪುಗಳು ನನಗೆ ತಿಳಿಯದಿರಬಹುದು. ಜ್ಞಾನಿಗಳು ಧರ್ಮನಿರತರನ್ನು ಹುಚ್ಚರಂತೆ ಎಂದಿದ್ದಾರೆ. ನಾನು ಹುಚ್ಚನಾಗದೆ ಧರ್ಮನಿರತನಾಗಬೇಕೆಂದು ಯತ್ನಿಸಿದ್ದೇನೆ. ನನ್ನ ಮರಣದ ನಂತರವೇ ನಿಜವಾಗಿಯೂ ನಾನೇನಾಗಿದ್ದೆಯೆಂಬುದು ತಿಳಿಯುವದು.

ನಾನು ಸನ್ಯಾಸಿಯಲ್ಲ. ಸನ್ಯಾಸಿಗಳ ಜೀವನವೇ ಕಠಿಣ. ನಾನು ಗೃಹಸ್ಥನು. ಸೇವೆಯ ಸರಳ ಜೀವನವನ್ನು ನನ್ನ ಜೊತೆ ಕೆಲಸಗಾರರೊಡನೆ ನಡೆಸಲು ಯತ್ನಿಸಿದವನು. ನಾನು ಜೀವಿಸುವ ವಿಧಾನವು ಮಾನಸಿಕ ಸ್ಥಿತಿಯ ಆಧಾರದ ಮೇಲೆ ಹೇಳುವದಾದರೆ ಹೆಚ್ಚು ಸುಖಕರವಾಗಿದೆ. ಏಕೆಂದರೆ ಬೇಕು ಬೇಡಿಕೆಗಳ ಬೇಸರವಾಗಲಿ, ಸಂಪತ್ತು ಮೊದಲಾದುವುಗಳ ದುಃಖವಾಗಲೀ ಇಲ್ಲ.

ಈ ಜಗತ್ತನ್ನೇ ನಶ್ವರವೆಂದೂ, ಅದಕ್ಕೆ ಅಸ್ತಿತ್ವ ಇಲ್ಲವೆಂದೂ ಹೇಳಿ ನಿರಾಕರಿಸಿ ಜೀವಿಸಬಲ್ಲೆ. ಆದರೆ ನನ್ನ ದೇವರ ಅಸ್ತಿತ್ವವನ್ನು ಇಲ್ಲವೆಂದು ಹೇಳಿ ಕ್ಷಣ ಕಾಲ ಜೀವಿಸಲಾರೆ.

ನಾನೂ ಇತರರಂತೆಯೇ ತಪ್ಪು ಮಾಡುವವನು. ಆದರೆ ನನ್ನ ತಪ್ಪುಗಳನ್ನು ಒಪ್ಪಿ ನನ್ನ ದಾರಿ ಬದಲಾಯಿಸುವವನು ನಾನು. ನನಗೆ ದೇವರ ಮೇಲೆ ಅಚಲ ವಿಶ್ವಾಸವಿದೆ. ಸತ್ಯ, ಪ್ರೇಮಗಳೇ ಜಗತ್ತಿನ ಜೀವ ತಂತುಗಳು. ಈ ಸತ್ಯ, ಪ್ರೇಮಗಳೇ ಪ್ರತಿಯೊಬ್ಬನ ಜೀವದ ಜೀವಾಳವಲ್ಲವೇ?

ತಪ್ಪು ಮಾಡಿದ ಮನುಷ್ಯನನ್ನು ಕಂಡಾಗ ನಾನೂ ಅಂತಾ ತಪ್ಪು ಮಾಡುವವನೆಂದು ಜ್ಞಾಪಿಸಿಕೊಳ್ಳುವೆ. ಅತಿ ಕಾಮುಕನನ್ನು ಕಂಡಾಗ ನಾನು ಒಮ್ಮೆ ಹಾಗಿದ್ದೆ ಎಂದುಕೊಳ್ಳುವೆ. ಈ ರೀತಿ ನಾನು ಪ್ರತಿಯೊಬ್ಬನಲ್ಲಿ ನನ್ನನ್ನು ಕಂಡು ಜೀವಿಸುವೆ. ನಮ್ಮಲ್ಲಿಯ ಅತೀ ದೀನರು ಸುಖಿಗಳಾಗಿರದಿದ್ದರೆ ನಾವು ಸುಖಿಗಳಾಗಿರುವದು ಸಾಧ್ಯವಿಲ್ಲ.

—ಎಂ. ಕೆ. ಗಾಂಧಿ.

ಲ್ಲ. ಅಲ್ಲಿ ಬೇರೆ ರಾಷ್ಟ್ರಗಳಂತೆ ಬಡವಬಲ್ಲಿದರ ಅಂತರ ದೊಡ್ಡದಾಗಿಲ್ಲ.

ಪತ್ತೇದಾರಿ ಕಾದಂಬರಿ, ಅಶ್ಲೀಲಸಾಹಿತ್ಯ, ಕಡಿಮೆ ಬೆಲೆಯ ನಾಟಕ, ಅಮೇರಿಕಾ ಚಲನ ಚಿತ್ರ ಮೊದಲಾದುವುಗಳಿಗೆ ರಷ್ಯಾದೊಳಗೆ ಪ್ರವೇಶವಿಲ್ಲ. ಜನರು ರಷ್ಯನ್ ಅಲ್ಲದ ಪುಸ್ತಕಗಳನ್ನು ಓದುತ್ತಾರೆ. ಒಬ್ಬಾಕೆ ತನ್ನ ಪ್ರೀತಿಯ ಲೇಖಕ ಜಾರ್ಜ್‌ಬರ್ನಾರ್ಡ್ ಶಾ ಎಂಬುದಾಗಿ ಹೇಳಿದಳು.

ಹಿಂದೂದೇಶವು ತನ್ನ ಹೆಚ್ಚುತ್ತಿರುವ ಜನಸಂಖ್ಯೆಯನ್ನು ಒಂದು ಸಮಸ್ಯೆಯೆಂದು ತಲೆತುರಿಸುವದನ್ನು ಕೇಳಿ ರಷ್ಯಾದವರು ನಗುತ್ತಾರೆ. ಗರ್ಭನಿರೋಧ ವಿಧಾನಗಳಲ್ಲಿ ಅವರಿಗೆ ನಂಬಿಕೆ ಇಲ್ಲ. ಜನಸಂಖ್ಯೆ ಇನ್ನೂ ಹೆಚ್ಚಬೇಕೆಂಬುದು ಅವರ ಇಚ್ಛೆ. ಹಿಂದೂದೇಶದ ಬಗ್ಗೆ ರಷ್ಯಾದವರ ಸ್ನೇಹವು ಮಧುರವಾದುದು. ಭಾರತದ ಮೇಲೆ ಅವರಿಗೆ ತುಂಬಾ ವಿಶ್ವಾಸವಿದೆ. ಜಗತ್ತಿನಲ್ಲಿ ಶಾಂತಿ ಬೇಕೆಂಬ ಅವರ ಬಯಕೆ ಬಲವಾದುದಾಗಿದೆ.

ಹಿಮಾಲಯಾರೋಹಿಗಳಿಗೆ ಸತ್ಕಾರ.

ತೇನ್‌ಸಿಂಗರ ಹೇಳಿಕೆ.

ನೇಪಾಲದ ಅರಸರಾದ ತ್ರಿಭುವನರು ತಾ. ೨೦ರಲ್ಲಿ ನೇಪಾಲಿನ ರಾಜಧಾನಿ ಕಾಟ್‌ಮಂಡೂವಿಗೆ ತಲಪಿದ ಹಿಮಾಲಯಾರೋಹಿಗಳಾದ ಕರ್ನಲ್ ಹಂಟ್, ತೇನ್‌ಸಿಂಗ್, ಹಿಲರಿ ಮೊದಲಾದವರಿಗೆ ಅಭೂತಪೂರ್ವ ಸ್ವಾಗತನಿತ್ತು ಸತ್ಕರಿಸಿದರು. ತೇನ್‌ಸಿಂಗರಿಗೆ "ನೇಪಾಲ್ ತಾರೆ" ಎಂಬ ಬಿರುದನ್ನು ಕೊಡಲಾಯಿತು. ಕರ್ನಲ್ ಹಂಟ್ ಮತ್ತು ಹಿಲರಿಯವರಿಗೆ "ಗೋರ್ಖಾ ದಕ್ಷಿಣ ಬಾಹು" ಎಂಬ ಬಿರುದು ಕೊಡಲಾಯಿತು.

ಇವರನ್ನು ಸ್ವಾಗತಿಸಲು ನೇಪಾಲಿನ ಮುಖ್ಯಮಂತ್ರಿ, ಬ್ರಿಟನ್, ಇಂಡಿಯಾಗಳ ರಾಯಭಾರಿಗಳು ಹಾಜರಿದ್ದರು. ಕಾಟ್‌ಮಂಡುವಿನಲ್ಲಿ ವೃದ್ಧರು, ಮಕ್ಕಳು ಆದಿಯಾಗಿ ಜನರು ಕಿಕ್ಕಿರಿದು ನೆರೆದಿದ್ದರು. ಹಿಮಾಲಯಾರೋಹಿಗಳ ಮೆರವಣಿಗೆಯು ಐದು ಮೈಲುಗಳ ಉದ್ದವಿತ್ತು. ತೆರೆದ ಜೀಪಿನಲ್ಲಿ ತೇನ್‌ಸಿಂಗ್ ಮತ್ತು ಇತರರು ನಿಂತು ಜನತೆಯ ಸ್ವಾಗತವನ್ನು ಸ್ವೀಕರಿಸಿದರು. ಎಲ್ಲೆಡೆಯಲ್ಲೂ "ತೇನ್‌ಸಿಂಗ್ ಚಿರಾಯುವಾಗಲಿ" ಎಂಬ ಹರ್ಷಧ್ವನಿ ಕೇಳಿಬರುತ್ತಿತ್ತು. ತೇನ್‌ಸಿಂಗರು ತಮ್ಮ ಪತ್ನಿ ಮತ್ತು ಎರಡು ಮಕ್ಕಳು ಸಮೇತ ನೇಪಾಲ್ ಸರಕಾರದ ಅತಿಥಿಯಾಗಿರುವರು.

ಪ್ರೆಸ್ ಪ್ರತಿನಿಧಿಗಳೊಡನೆ ಮಾತಾಡುತ್ತಾ ತೇನ್‌ಸಿಂಗರು ಹೀಗೆ ಹೇಳಿರುವರು. "ಹಿಮಾಲಯವನ್ನು ಹತ್ತುವ ಈ ಪ್ರಯತ್ನದಲ್ಲಿ ತನ್ನ ಜನಾಂಗದವರಾದ ಶೆರ್ಪಾರನ್ನು ಸರಿಯಾಗಿ ನೋಡಲಿಲ್ಲ. ಅವರಿಗೆ ಊಟ, ವಸತಿಯ ಏರ್ಪಾಡು ಚೆನ್ನಾಗಿರಲಿಲ್ಲ. ಅವರನ್ನು ನಿಕೃಷ್ಟ ಭಾವದಿಂದ ನೋಡಿದ ಕಾರಣ ಅವರು ಮುಷ್ಕರ ಹಿಡಿದಿದ್ದರು. ಆದರೆ ನನ್ನನ್ನು ಮಧ್ಯದಲ್ಲಿ ಕೈಬಿಡ ಬಾರದು ಎಂಬ ಭಾವನೆಯಿಂದ ಅವರು ನನ್ನ ಸಮಾಧಾನಗಳಿಗೆ ಒಪ್ಪಿ ಕೆಲಸ ಮಾಡಿದರು. ಅವರ ಸೇವೆ ಅಮೂಲ್ಯವಾದುದು."

ತನಗೆ ಇಂಗ್ಲೆಂಡು ಕೊಡಲು ಒಪ್ಪಿರುವ ಜಾರ್ಜ್ ಪದಕ ಕರ್ನಲ್ ಹಂಟ್ ಮತ್ತು ಹಿಲರಿಯವರಿಗೆ ಕೊಡುವದಕ್ಕಿಂತ ಕಡಿಮೆಯಾದರೆ ತಾನು ಇಂಗ್ಲೆಂಡಿಗೆ ಹೋಗುವದಿಲ್ಲವೆಂದು ಅವರು ಹೇಳಿದರು.

ಎವರೆಸ್ಟ್ ಶಿಖರವನ್ನು ಮೊದಲು ಯಾರು ತಲಪಿದುದೆಂಬುದರ ಬಗ್ಗೆ ಹೇಳುತ್ತಾ "ಹಿಲರಿಯು ಒಳ್ಳೆ ಜೊತೆಗಾರನಾದರೂ ನನಗೆ ಗೊತ್ತಿರುವ ಪ್ರಸಿದ್ಧರಲ್ಲಿ ಮೂರನೆಯವರೆನ್ನಬಹುದು. ಸ್ಮಿತ್ ಮತ್ತು ಲೇಂಬರ್ಟನರ ಬಹು ನಿಪುಣರು. ಈ ಸಾರೆಯ ಗಾಳಿಯ ಯಂತ್ರಗಳು, ಶೆರ್ಪಾರ ಸಹಕಾರ ಮೊದಲಾದವು ಜಯಕ್ಕೆ ಕಾರಣ. ಬೆಟ್ಟದ ತುದಿಯಲ್ಲಿ ಹತ್ತುವಾಗ ನಾಲ್ಕಾರು ಹೆಜ್ಜೆಯು ಪ್ರಥಮ ದ್ವಿತೀಯವೆಂಬುದನ್ನು ವಿಂಗಡಿಸುವದಾದರೆ ನಾನೇ ಪ್ರಥಮ ಏರಿದವನು. ನಾನೇ ವಿವಿಧ ಪತಾಕೆಗಳನ್ನು ಅಲ್ಲಿ ನೆಟ್ಟವನು. ಆದರೆ ಅದು ಪ್ರಾಮುಖ್ಯವಲ್ಲ. ನಮ್ಮೆಲ್ಲರ ಐಕ್ಯ ಪ್ರಯತ್ನದಿಂದ ಇದು ಸಾಧ್ಯವಾಯಿತು. ಆದ್ದರಿಂದ ಗೌರವ ಎಲ್ಲರಿಗೂ ಸೇರಬೇಕು."

ತೇನ್‌ಸಿಂಗರು ಈ ಬಾರಿಯ ಪರ್ವತಾರೋಹಣಕ್ಕೆ ಹೋಗುವ ಮೊದಲು ತನ್ನ ಪತ್ನಿ ಮತ್ತು ಮಕ್ಕಳೊಡನೆ ತಾನು ಈ ಕಡೇ ಪ್ರಯತ್ನದಲ್ಲಿ ಜಯಶೀಲನಾಗಬೇಕು ಇಲ್ಲವೇ ಪ್ರಾಣ ಬಿಡಬೇಕು ಎಂಬ ನಿರ್ಧಾರವನ್ನು ಹೇಳಿ ಹೊರಟಿದ್ದರಂತೆ. "ದೇವರನ್ನು ವಂದಿಸಬೇಕು. ನನ್ನ ಪ್ರಾರ್ಥನೆಯನ್ನು ಕೈಗೂಡಿಸಿ ನನ್ನ ಜೀವನದ ಗುರಿಯನ್ನು ಸಾರ್ಥಕ ಗೊಳಿಸಿದನು" ಎಂದು ತೇನ್‌ಸಿಂಗರು ಹೇಳಿದರು. ಇನ್ನು ಮುಂದೆ ತಾನು ಬೆಟ್ಟವೇರುವದನ್ನು ಬಿಡುವದಾಗಿಯೂ ತನ್ನ ಹೆಂಡತಿ ಮಕ್ಕಳೊಡನೆ ಡಾರ್ಜಲಿಂಗಿನಲ್ಲಿ ಶಾಂತ ಜೀವನ ನಡೆಸುವದಾಗಿಯೂ ಅವರು ಹೇಳಿದರು.

ಗಾಂಧೀ ದೃಷ್ಟಿಕೋನ

'ರಾಷ್ಟ್ರದಲ್ಲಿ ಮತ್ತು ರಾಷ್ಟ್ರಗಳೊಳಗೆ ಉಂಟಾಗುವ ಉದ್ರೇಕಗಳನ್ನು ಬಗೆಹರಿಸಲು 'ಗಾಂಧೀ ದೃಷ್ಟಿಕೋನ ಮತ್ತು ಗಾಂಧೀ ಉಪಾಯಗಳು ನೀಡುವ ಸಹಾಯ, ಎಂಬ ವಿಷಯ ಸಂಯುಕ್ತರಾಷ್ಟ್ರ ಸಂಘದ ಜನರಲ್ ಕಾನ್‌ಫರೆನ್ಸಿನ ವಿಶೇಷ ಅಧಿವೇಶನದ ವಿಷಯಪಟ್ಟಿಯಲ್ಲಿ ಸೇರಿಸಲಾಗುವದು ಎಂದು ತಿಳಿದು ಬಂದಿದೆ. ಈ ಅಧಿವೇಶನ ಪೇರಿಸಿನಲ್ಲಿ ಜುಲಾಯಿ ೧ರಿಂದ ೮ರ ವರೆಗೆ ನಡೆಯುವದು.

ಅಮೇರಿಕದ ಸಹಾಯವಿಲ್ಲದ ಆರ್ಥಿಕ ಯೋಜನೆ

ಬ್ರಿಟನಿನ ಲೇಬರ್ ಪಕ್ಷವು, ಅಮೇರಿಕದ ಸಹಾಯವಿಲ್ಲದೆ ಪುನರ್ಜೀವಿತಗೊಳಿಸಿಕೊಳ್ಳುವ ದಶವಾರ್ಷಿಕ ಯೋಜನೆಯೊಂದನ್ನು ಜಾಹಿರುಪಡಿಸಿದೆ. ಈ ಯೋಜನೆಯಿಂದ, ಮುಂದಿನ ಮಹಾಚುನಾವಣೆಗಳಲ್ಲಿ ಸರ್ ವಿನ್ಸಟನ್ ಚರ್ಚಿಲ್ಲರ ಕನ್ಸರ್ವೇಟಿವರನ್ನು ಪದಚ್ಯುತರನ್ನಾಗಿ ಮಾಡುವ ಭರವಸೆಯೂ ಆ ಪಕ್ಷಕ್ಕಿದೆ. ಔದ್ಯೋಗಿಕ ವಿಮೆ, ಇಂಜಿನಿಯರಿಂಗ್ ಮೊದಲಾದುದರ ರಾಷ್ಟ್ರೀಕರಣ, ಅಧಿಕ ಕೃಷಿಯುತ್ಪತ್ತಿ ಮೊದಲಾದುವು ಆ ಯೋಜನೆಯಲ್ಲಿವೆ.

ಭಾರತ ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆ

ಭಾರತದ ಸ್ವಾತಂತ್ರ್ಯ ಸಾಧನೆಯ ಚರಿತ್ರವನ್ನು ಬರೆಯಲು, ಅಮೇರಿಕದ "ರಾಕ್ ಫೆಲ್ಲರ್ ಫೌಂಡೇಶನ್" ಸಂಸ್ಥೆಯು, ಶ್ರೀ ವಿ. ಪಿ. ಮೆನನ್ (ಸಂಸ್ಥಾನಿಕ ಇಲಾಖೆಯ ಮಾಜಿ ಕಾರ್ಯದರ್ಶಿ) ರವರಿಗೆ, ೪೨,೮೯೦ ಡಾಲರುಗಳನ್ನು, ಅಂದರೆ, ರೂ ೨ ಲಕ್ಷದಷ್ಟನ್ನು ಗ್ರಾಂಟ್ ಆಗಿ ಕೊಡುವದೆಂದು ಪ್ರಕಟವಾಗಿದೆ. ಶ್ರೀ ಮೆನನ್ನರು ಅದನ್ನು ಬರೆವ ಕೆಲಸವಾರಂಭಿಸಿರುವರು. ಈ ಹಣವು ೧೯೫೫ನೇ ದಶಂಬರ ತಾ. ೩೧ರ ಒಳಗಿನ ಅವಧಿಯಲ್ಲಿ ಉಪಯೋಗಿಸಲ್ಪಡುವದು.

ಐದು ಕೋಟಿ ರೂಪಾಯಿಗಳ ಸಾಲ

ಮದರಾಸು ಸರಕಾರವು, ಪಂಚವಾರ್ಷಿಕ ಯೋಜನೆಯ ಕಾಮಗಾರಿಗಳನ್ನು ಮುಂದುವರಿಸಲು ಸದ್ಯದಲ್ಲೇ ಐದು ಕೋಟಿ ರೂಪಾಯಿಗಳ ಸಾಲವೆತ್ತುವದಾಗಿ ಮದರಾಸಿನ ಪ್ರಧಾನ ಸಚಿವರಾದ ಶ್ರೀ ಸಿ. ರಾಜಗೋಪಾಲಚಾರಿಯವರು, ಇತ್ತೀಚೆಗೆ ಪತ್ರಿಕಾ ಪ್ರತಿನಿಧಿಗಳಿಗೆ ಭೇಟಿ ಇತ್ತಾಗ ತಿಳಿಸಿರುವರು. ಸಂಸ್ಥಾನದ ಪ್ರತಿಯೊಂದು ಜಿಲ್ಲೆಯೂ ಇಪ್ಪತ್ತೈದು ಲಕ್ಷ ರೂಪಾಯಿಗಳಂತೆ ಈ ಸಾಲಕ್ಕೆ ವಂತಿಗೆ ತೆರುವದಾಗಿ ತಾನು ಭರವಸೆ ಪಡುವೆನೆಂಬುದಾಗಿಯೂ ಹೇಳುತ್ತಾ ಪ್ರಧಾನಾಮಾತ್ಯರು, "ಭಾರತದ ಪ್ರಧಾನರ ವಿದೇಶಿ ಧೋರಣೆಯ ಸಲುವಾಗಿ ನಾವು ಮಿಲಿಟರಿ ವ್ಯಯಗಳನ್ನು ಕಡಿಮೆ ಮಾಡಿ, ಅಧಿಕ ಹಣವನ್ನು ದೇಶದ ಸಂಪದಭ್ಯುದಯ ಸಾಧಕ ಕಾಮಗಾರಿಗಳಲ್ಲಿ ವಿನಿಯೋಗಿಸುವ ಭರವಸೆಯುಳ್ಳವರಾಗಿರುವೆವು" ಎಂದು ವಿವರಿಸಿದರು.

ಸೋಮವಾರಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಕೆ. ಎಂ. ಮೊಗಪ್ಪನವರು

Specialists in Tailoring! Prompt Service!!

FOR **English Felt Hats,**

Wedding Suits, Ladies Over Coats

AND

Latest Designs in Wollen Suitings

— CALL ON —

25-19 **PATTU BROTHERS,**

OPP.— Town Hall, MYSORE.

DALU'S TUTORIAL SCHOOL,

NAPOKLU, (South Coorg).

SPECIAL COACHING FOR MADRAS SUPPLEMENTARY.

S. S. L. C. STUDENTS,

CLASSES FROM 1st JULY, 1953.

Efficient coaching by Experienced Tutors.

Hostel for Mofussil Students,

Lady Students admitted but no Hostel accomodation

EASY SUCCESS

Don't miss the Golden opportunity

Apply with Four Annas Stamps for details

or Contact the undersigned in person.

M. M. Machaiah

2-2 *DIRECTOR.*

ವಾರದ ಕಥೆ.

ಲೇಖಕಿ:—ಕುಮಾರಿ ಎಸ್. ಕೆ. ಚಂದ್ರಿಕಾ.	# ಲಿಜಾ	ಮೊರಿಸ್ ಹಿಂಡಸ್‌ನ "ಮದರ್ ರಷ್ಯಾ"ದ ಆಧಾರದಿಂದ

ಕಾಲಿನಿನ್ ಪ್ರಾಂತದ ರುನಾ ಹಳ್ಳಿಯಲ್ಲಿ ಸ್ಥಿತ್ಯ ವಿಪರೀತವಾಗಿತ್ತು. ಹಿಮ ಅಸಾಧ್ಯವಾಗಿ ಬಿದ್ದು ಮನೆ, ರಸ್ತೆಗಳನ್ನೆಲ್ಲ ಮುಚ್ಚಿತ್ತು. ನಾಯಿಗಳು ಕೂಡ ಹೊರಕ್ಕೆ ಬರಲು ಹೆದರುತ್ತಿದ್ದವು. ಹಿಮದ ಪಾಳಿ ಹೀಗೆ ಅಸಾಧ್ಯವಾಗಿರುವಾಗ ಮುಚ್ಚಂಜೆಯ ಸಮಯದಲ್ಲಿ ಬೆಚ್ಚಗೆ ಮಲಗಿಕೊಳ್ಳಲು ಹೊರಟ್ಟಿದ್ದ. ಮಧ್ಯ ವಯಸ್ಸಿನ ನಿರಕ್ಷರ ಕುಕ್ಷಿ ಅಕ್ಸಿನ, ತನ್ನ ಪತಿಯನ್ನು ಕೇಳಿದಳು—'ಲಿಜಾ ಎಲ್ಲಿ?' ಅತನಿಗೂ ಸಹ ಗೊತ್ತಿರಲಿಲ್ಲ. ಅಂತಹ ಚಳಿಯಲ್ಲೇ ಹೊರಗಡೆ ಹೋಗಿ ಅಕ್ಕ ಪಕ್ಕದಲ್ಲೆಲ್ಲ ವಿಚಾರಿಸಿದಳು. ಲಿಜಾಳ ಸುಳಿವು ಯಾರಿಗೂ ತಿಳಿದಿರಲಿಲ್ಲ. ಮನೆಗೆ ಹಿಂದಿರುಗಿ ಗಾಬರಿಯಿಂದ ಅಳುತ್ತ ಕುಳಿತಳು. ಹುಟ್ಟಿದ್ದ ಮಕ್ಕಳಲ್ಲಿ ಉಳಿದಿದ್ದವು ನಾಲ್ಕೇ ಜಕೆಗೆ. ಅವರಲ್ಲಿ ಲಿಜಾ ಅವಳಿಗೆ ಅಚ್ಚು ಮೆಚ್ಚಿನ ಮಗಳು. ಉಲ್ಲಾಸಮಯಿಯೂ ಭಾವನಾ ಜೀವಿಯೂಗಿದ್ದ ಲಿಜಾಗೆ ಪುಸ್ತಕಗಳೆಂದರೆ ಪ್ರಾಣ. ಸಾಹಿತ್ಯದಲ್ಲಿ ಅಸಾಧಾರಣ ಅಭಿರುಚಿಯುಳ್ಳ ಇವಳು ಒಂದಲ್ಲ ಒಂದು ದಿನ ಟೈಕಿನ್ಸ್‌ನ ಮನೆತನಕ್ಕೇ ಕೀರ್ತಿ ತರುವಳೆಂದು ತಂದೆ ತಾಯಿಗಳು ಅರಿತಿದ್ದರು. ಅಂತಹ ಲಿಜಾ! ಮನೆಯ ಮುದ್ದುಗುವರಿ ಲಿಜಾ ಎಲ್ಲಿ? ತಾಯಿ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು. ತಂದೆಗೂ ವಿಪರೀತ ಯೋಚನೆಯಾಯಿತು. ಎದ್ದು ಮುಂಬಾಗಿಲಿನ ಹೊರಗೇಟಿಗೆ ದೊಡ್ಡ ಕೆಂಪು ದೀಪವೊಂದನ್ನು ಕಟ್ಟಿ—'ಅಳಬೇಡ, ಲಿಜಾ ಮಂಜಿನ ದಾಳಿಯಲ್ಲೇನಾದರೂ ದಾರಿ ತಪ್ಪಿದ್ದರೆ ಈ ದೀಪವನ್ನು ನೋಡಿ ಹಿಂತಿರುಗುವಳು' ಎಂದು ಪತ್ನಿಯನ್ನು ಸಮಾಧಾನಗೊಳಿಸಿದ.

ರಾತ್ರಿ ಬಹಳ ಹೊತ್ತಿನ ನಂತರ ಲಿಜಾ ಮನೆಗೆ ಬಂದಳು. ಕೋಟಿನಲ್ಲಿ ಹುದುಗಿಸಿದ್ದ ಕೆಲವು ಪುಸ್ತಕಗಳನ್ನು ತೆಗೆದು ತಂದೆ ತಾಯಿಗೆ ತೋರಿಸಿದಳು. ವಾಚನಾಲಯದಿಂದ ಪುಸ್ತಕಗಳನ್ನು ತರಲು ಪಕ್ಕದ ಹಳ್ಳಿಯಾದ ಜಲೆನ್ಸ್‌ಕಾಯೂಕ್ಕೆ ಹೋಗಿದ್ದಳು. ಯುವಕರ ಸಭೆಯೊಂದು ಅಲ್ಲಿ ನಡೆದಿತ್ತು. ಅದನ್ನು ಮುಗಿಸಿಕೊಂಡು ಬರುವ ಹೊತ್ತಿಗೆ ಇಷ್ಟು ಹೊತ್ತಾಗಿತ್ತು. ಬಹಳ ಹುರುಪಿನಿಂದ ತಾನು ತಂದಿಂದ ಪುಸ್ತಕಗಳು ಮತ್ತು ಹೋಗಿದ್ದ ಸಭೆಯ ವಿಷಯವಾಗಿ ತಂದೆ ತಾಯಿಗೆ ಒಂದು ಪುಟ್ಟ ಭಾಷಣವನ್ನು ಮಾಡಿದಳು. ಹೇಳದೆ ಕೇಳದೆ ಹೋದದ್ದಕ್ಕಾಗಿ ಅವಳಿಗೆ ಬೈಯುವುದನ್ನೂ ತಂದೆ ತಾಯಿ ಮರೆತುಬಿಟ್ಟರು.

ಇದಾದ ಏಳು ವರ್ಷಗಳ ನಂತರ ಲಿಜಾಳ ವಿಷಯವಾಗಿ ರಶಿಯಾದಲ್ಲೆಲ್ಲ ಸುದ್ದಿ. ಅವಳ ಭಾಷಣಕ್ಕಾಗಿ ಕಾಯುವವರು ಅಸಂಖ್ಯಾತರು. ದೊಡ್ಡ ದೊಡ್ಡ ಮ್ಯೂಸಿಯಂ, ಶಾಲೆಗಳು, ಮಿಲಿಟರಿ ಕಚೇರಿಗಳು, ಸೇನೆಗಳ ಬಿಡಾರಗಳು ಮತ್ತು ಲಕ್ಷಾಂತರ ಮನೆಗಳಲ್ಲಿ ಅವಳ ಚಿತ್ರವನ್ನು ಕಾಣಬಹುದಾಗಿತ್ತು. ಸಮರದ ಶ್ರೇಷ್ಠ ನಾಯಕಿಯಾಗಿ ರಶಿಯಾ ಸ್ತ್ರೀ ವೃಂದಕ್ಕೇ ಕೀರ್ತಿಯನ್ನು ತಂದ ವ್ಯಕ್ತಿಯೆಂದು ಜನತೆ ಅವಳನ್ನು ಪೂಜಿಸುತ್ತಿತ್ತು. ಚಿಕ್ಕ ವಯಸ್ಸಿನಲ್ಲೇ ಅವಳಲ್ಲಿ ಅಸಾಧಾರಣ ಪ್ರೌಢಿಮೆ ಬೆಳೆದು ಬಂದಿತ್ತು. ಎಲ್ಲವನ್ನೂ ಅರಿಯಬೇಕೆಂಬ ಅತಿಶಯವಾದ ಕುತೂಹಲ ಅವಳಲ್ಲಿ ಮನೆ ಮಾಡಿತ್ತು. ತನ್ನ ತಂದೆ ಆಗಾಗ ಹೇಳುತ್ತಿದ್ದ. ರಶಿಯನ್ನರ ಕಥೆ ಮತ್ತು ಅವರ ಮೇಲಿನ ಹಾಡುಗಳೆಂದರೆ ಅವಳಿಗೆ ಪಂಚಪ್ರಾಣ. ಎಷ್ಟೋ ಸಲ ಈ ಪದ್ಯಗಳನ್ನು ಕೇಳಿದಾಗ 'ಎಂತಹ ಪದ್ಯ!' ಎಂದು ಕಣ್ಣೀರು ಸುರಿಸುತ್ತಿದ್ದಳು. ಅವಳನ್ನು ಮತ್ತೆ ನಗುವ ಹಾಗೆ ಮಾಡಬೇಕಾದರೆ ತಂದೆ ಎಷ್ಟೋ ನಕ್ಕು ನಗುವಂತಹ ಕಥೆಗಳನ್ನು ಹೇಳಿ ಸಮಾಧಾನಗೊಳಿಸಬೇಕಾಗುತ್ತಿತ್ತು. ಆ ಹಳ್ಳಿಯಲ್ಲಿದ್ದುದು ಒಂದೇ ಒಂದು ಶಾಲೆ. ಅಲ್ಲಿಯ ಶಿಕ್ಷಣ ಪೂರ್ಣ ಲಿಜಾಗೆ ದೊರೆಯಿತು. ಇನ್ನೂ ಓದಬೇಕೆಂಬ ಹಂಬಲ ಅವಳಲ್ಲಿ ಅತ್ಯಧಿಕವಾಗಿತ್ತು. ಆದಕೋಸ್ಕರವೇ ಅಂತಹ ಹಿಮದ ಗಾಳಿಯಲ್ಲೂ ಸಹ ತಂದೆ ತಾಯಿಗೆ ತಿಳಿಸದೆ ಅಕ್ಕಪಕ್ಕದ ಹಳ್ಳಿಗೆ ಹೋಗಿ ಪುಸ್ತಕಗಳನ್ನು ತಂದು ಓದುತ್ತಿದ್ದಳು. ಹದಿನೈದು ವರ್ಷದ ಲಿಜಾಳನ್ನು ಆಗ ರುನಾ ಹಳ್ಳಿಯ ಹೊರಗಡೆ ಕಾಲಿನಿನ್ ಪ್ರಾಂತದಲ್ಲಿ ಯಾರೂ ಅರಿತಿರಲಿಲ್ಲ. ಎಲ್ಲ ಸೋವಿಯಟ್ ರೈತ ಮಕ್ಕಳಂತೆ ಅವಳೂ ಆಶೆ ಆಕಾಂಕ್ಷೆಗಳನ್ನು ಹೊಂದಿದ ಪುಷ್ಟಕಾಯಳಾದ ಹುಡುಗಿಯಾಗಿದ್ದಳು

ಇವಳ ಅಕ್ಕ ಮೊನ್ಯ, ಶಾಲೆಗೆ ಹೋಗುತ್ತಿದ್ದಾಗ ಲಿಜಾ ಇನ್ನೂ ಚಿಕ್ಕವಳು. ತನ್ನ ಅಕ್ಕನ ಪುಸ್ತಕದಲ್ಲಿರುವ ಅಕ್ಷರಗಳನ್ನು ತಾಯಿಗೆ ತೋರಿಸಿ ಅದೇನೆಂಬುವನ್ನು ಕೇಳುತ್ತಿದ್ದಳು. ನಿರಕ್ಷರ ಕುಕ್ಷಿ ಅಕ್ಸಿನ, ಅವಳೇನು ತಾನೇ ಹೇಳಬಲ್ಲಳು? ತಾಯಿಯ ಅಜ್ಞಾನ ಲಿಜಾಳ ಕುತೂಹಲವನ್ನು ಇನ್ನೂ ಕೆರಳಿಸಲು ಕಾರಣವಾಯಿತು. ತನ್ನನ್ನೂ ಶಾಲೆಗೆ ಕಳುಹಿಸು ಎಂದು ತಾಯಿಯನ್ನು ಪೀಡಿಸಲಾರಂಭಿಸಿದಳು. ಅವಳ ಎಂಟನೆಯ ವಯಸ್ಸಿನಲ್ಲಿ ಅವಳ ಈ ಆಸೆ ಪೂರ್ಣವಾಯಿತು. ಚುರುಕಾದ ಹುಡುಗಿಯಾಗಿ ಉನ್ನತ ಮಟ್ಟದಲ್ಲೇ ತನ್ನ ವ್ಯಾಸಂಗವನ್ನು ಮುಗಿಸಿದಳು. ಶಾಲೆಯ ಓದು ಮುಗಿದ ನಂತರ ಭೂಮಿ ಸಾಗುವಳಿಯ ಕೆಲಸದಲ್ಲಿ ತೊಡಗಿದಳು. ಮನೆಗೆಲಸದಲ್ಲಿ ತಾಯಿಗೆ ನೆರವಾಗುತ್ತಿದ್ದಳು. ಉಳಿದ ಸಮಯದಲ್ಲಿ ಪುಸ್ತಕಗಳನ್ನು ಓದುತ್ತಿದ್ದಳು. ರುನಾದಲ್ಲಿ ಯಾವ ವಾಚನಾಲಯವೂ ಇರಲಿಲ್ಲ ಜಲೆನ್ಸ್‌ಕಾಯೂಕ್ಕೆ ಆಗಾಗ್ಗೆ ಹೋಗಿ ಪುಸ್ತಕ ಮತ್ತು ವರ್ತಮಾನ ಪತ್ರಿಕೆಗಳನ್ನು ಎರವಲಾಗಿ ತಂದು ಓದುತ್ತಿದ್ದಳು. ವಿದ್ಯೆಯ ಆಸೆ ಹೆಚ್ಚು ಆದಂತೆ ಸಾಮಾಜಿಕ ಕಾರ್ಯಗಳಲ್ಲಿ ಆಸಕ್ತಿಯೂ ತೊಡಗಿತು. ಲಿಜಾಳು ಪತ್ರಿಕೆಯ ಸುದ್ದಿ ಸಮಾಚಾರಗಳನ್ನು ತಂದೆ ತಾಯಿಗೂ ಹಳ್ಳಿಯ ಇತರರಿಗೂ ಓದಿ ಹೇಳುತ್ತಿದ್ದಳು. ಹಳ್ಳಿಗರಿಗೆಲ್ಲಾ ಹೊಸದಾಗಿದ್ದ ಕೋಲ್ ಖೋಜ್ ಪದ್ಧತಿಯನ್ನು ವಿವರಿಸಿ ಹೇಳುತ್ತಿದ್ದಳು. ದಿನ ದಿನಕ್ಕೂ ರುನಾ ಸಂಸ್ಕೃತಿಯ ಕೇಂದ್ರವಾಗತೊಡಗಿತು. ಈ ಎಲ್ಲ ಕೆಲಸಗಳಿಗೆ ಅವಳ ಮಮತೆಯ ತಾಯಿ ಅಕ್ಸಿನ್ಯಳ ನೆರವೂ ಇತ್ತು.

ಹತ್ತು ಕೋಟಿಗಿಂತ ಹೆಚ್ಚು ಪ್ರಜಾಸಂಖ್ಯೆ ಇರುವ ಅಂಥ ರಶಿಯಾ ರಾಷ್ಟ್ರದಲ್ಲಿ ಕೇವಲ ಕೆಲವೇ ದಿನಗಳಲ್ಲಿ ರಾಜಕೀಯ, ಸಾಮಾಜಿಕ, ಆರ್ಥಿಕ, ವ್ಯವಸಾಯಕ ಸ್ಥಿತಿಗತಿಗಳನ್ನು ಸುಧಾರಿಸಿ, ದೊಡ್ಡ ಕ್ರಾಂತಿಯನ್ನೇ ಎಬ್ಬಿಸಿದ ಈ ಕೋಲ್ ಖೋಜ್ ಪದ್ಧತಿಗೆ ಲಿಜಾಳಂತಹ ಯುವಕರ ಕೆಲಸ ಕಾರ್ಯಗಳೇ ಕಾರಣವಾಗಿದ್ದವು. ಈ ಕಾರ್ಯವು ಇಂಗ್ಲಿಷರು ಮತ್ತು ಅಮೇರಿಕನ್ನರನ್ನು ಆಶ್ಚರ್ಯಗೊಳಿಸಿತು. ಸ್ತ್ರೀ ಪುರುಷರೆಂಬ ಭೇದವಿಲ್ಲದೆ ರುನಾ ಹಳ್ಳಿಯ ಮಕ್ಕಳನ್ನು ಪುರೋಗಾಮಿ ಸಂಘಟನೆಯ ಸದಸ್ಯರನ್ನಾಗಿ ಮಾಡಿ ಶಿಕ್ಷಣವನ್ನಿತ್ತಳು. ರೈತ ಸಂಘವೊಂದನ್ನು ಸ್ಥಾಪಿಸಿ ವ್ಯವಸಾಯದ ವಿಷಯದಲ್ಲಿ ಹಳ್ಳಿಯವರಿಗೆ ಹೊಸ ಹೊಸ ಸಲಹೆಗಳನ್ನೊಳಗೊಂಡ ಉಪನ್ಯಾಸಗಳನ್ನು ಕೊಡುತ್ತಿದ್ದಳು.

ಅವಳು ಭಾಷಣಗಳಲ್ಲಿ ಉಪಯೋಗಿಸುತಿದ್ದ 'ಕಲ್ಟಿವೇಟರ್' 'ಟ್ರ್ಯಾಕ್ಟರ್' ಮೊದಲಾದ ಪದಗಳು ಅವರಿಗೆ ರಹಸ್ಯಮಯವಾಗಿದ್ದವು. ಇನ್ನೂ ಹೆಚ್ಚು ಹೆಚ್ಚಾದ ಪುಸ್ತಕಗಳನ್ನು ತರಿಸಿ ಓದಿ ಹೆಚ್ಚಿ

ಹುಚ್ಚರ ಹಟ್ಟಿ

ಮಡಿಕೇರಿ ಮಳೆ.

ಮಡಿಕೇರಿ ಮಳೆಗಾಳಿ
ಬಿಡಿಬಿಡಿದು ಸುರಿಯುತಿದೆ
ಕಣ್ ಮೊಗವ ಕಾಣದೊಲು
ಕಾರ್ಮೋಡ ಜಡಿಯುತಿದೆ.

ಅತ್ತಿತ್ತ ಸುಳಿದಾಟ
ಪೇಟೆ ಕೋಟೆಯ ಕೆಲಸ
ಬಣ್ಣಿಸದ ಕಿರುಕುಳವೊ
ಎಂಬಂತೆ ತೋರುತ್ತಿದೆ.

ಕಾರಿನಲಿ ತಿರುಗಲೇ?
ಮಂತ್ರಿ ನಾನಾಗಿಲ್ಲ!
ಮಳೆಕೋಟು ಬೂಟುಗಳೇ?
ಕೊಡಲು ಕಾಸಿಲ್ಲ!

ಬೆಚ್ಚಗಿನ ಮನೆಯಿಲ್ಲ.
ಪಚ್ಚಡಿಕೆ ಗತಿಯಿಲ್ಲ
ಬರಿಗಾಲ ಜೀವನವು
ಸಹಿಸಲಳವಲ್ಲ.

ಮಳೆಗಾಲ ಮಡಿಕೇರಿ
ಬಡಜನರ ತಾವಲ್ಲ.
ಕುಡಿಮಂಜು ಪೈಮರೆವ
ಸಿರಿಸುತಗೆ ಮಡಿಕೇರಿ

ಮಡಿಕೇರಿ ಚೋಡೆನಗು
ಒಡಲ ಬಯಕೆಯು ಬಿಡದು
ಎಡೆ ಬೇರೆ ಕಾಣದಿರೆ
ನಡುನಡುಗಿ ಮಡಿಜೀವ!

ಅಯ್ಯೊ! ಬಾರದು ಮಾತು
ಮಳೆಗಾಳಿ ಬೀಸುತ್ತಿದೆ
ಮರಹಿಡಿಸಿ ಬರಿಮೈಯ
ಯಾತನೆಯ ಮರೆಸುತ್ತಿದೆ!

ಗೆ ಧಾನ್ಯ ಬೆಳೆಯುವ ವಿಧಾನವನ್ನು ಎಲ್ಲರಿಗೂ ತಿಳಿಯಹೇಳಿ ಅವರೊಂದಿಗೆ ಚರ್ಚೆ ನಡೆಸುತಿದ್ದಳು. ಇನ್ನೂ ಹದಿನೈದು ವರ್ಷದ ಹುಡುಗಿ! ಇಷ್ಟೆಲ್ಲ ಕೆಲಸಗಳ ಜೊತೆಗೆ ಜಲಿನ್ಸ್‌ಕಾಯ ಹಳ್ಳಿಯ ವಾಚನಾಲಯದ ಕಾರ್ಯದರ್ಶಿತ್ವಕ್ಕೆ ಬೇರೆ ಒಪ್ಪಿಕೊಂಡಳು. ಅಂದಿನಿಂದ ಆ ವಾಚನಾಲಯ ಸಾಂಸ್ಕೃತಿಕ ಕೇಂದ್ರವಾಯಿತು. ವ್ಯಾಪಾರಿಗಳು, ರೈತರು, ಶಾಲಾ ಉಪಾಧ್ಯಾಯರು ಮತ್ತು ವೈದ್ಯರಾದಿಯಾಗಿ ಅನೇಕ ಜನ ಸಾಯಂಕಾಲದ ಹೊತ್ತು ಮತ್ತು ಬಿಡುವಿನ ದಿನಗಳಲ್ಲಿ ಬಂದು ಅಂದಂದಿನ ಸಮಸ್ಯೆಗಳನ್ನು ಪತ್ರಿಕೆಗಳಲ್ಲಿ ಓದಿ ಅದರ ವಿಷಯವಾಗಿ ಚರ್ಚೆ ನಡೆಸಿ ಹೋಗುತಿದ್ದರು. ಇವರಿಗಾಗಿ ಲಿಜಾ ಭಾಷಣಗಳನ್ನು ಚರ್ಚಾಕೂಟಗಳನ್ನು ಏರ್ಪಡಿಸುತ್ತಿದ್ದಳು. ನಾಟಕ, ಸಂಗೀತ ಮತ್ತು ರಾಜಕಾರ್ಯಕ್ಕೆ ಸಂಬಂಧಪಟ್ಟ ಸಂಸ್ಥೆಗಳನ್ನು ತೆರೆದಳು. ಕೋಲ್‌ಕ್ಹೋಜ್ ಸಂಸ್ಥೆಯ ಹೊರೆ ಬೇರೆ ಅವಳ ಮೇಲೆ ಇತ್ತು. ಇಷ್ಟೆಲ್ಲದರ ಮಧ್ಯೆ ತನ್ನ ಸ್ವಂತ ವ್ಯಾಸಂಗಕ್ಕೆ ಬೇರೆ ಸಮಯ ದೊರಕಿಸಿಕೊಂಡು ಲೆರಮನ್‌ಟೋವ್ ಪುಷ್ಕಿನ್, ಟಾಲ್‌ಸ್ಟಾಯ್, ಗಾರ್ಕಿ ಮೊದಲಾದ ಹೆಸರಾಂತ ಸೋವಿಯಟ್ ಸಾಹಿತಿಗಳ ಗ್ರಂಥಗಳನ್ನು ಓದುತಿದ್ದಳು. ನಾಟಕ, ನೃತ್ಯ, ವಿಹಾರ ಮೊದಲಾದ ಸಾಮಾಜಿಕ ಕಾರ್ಯಗಳಲ್ಲಿ ಭಾಗವಹಿಸಿದರೂ ಇನ್ನಿತರ ಯುವಕರಲ್ಲಿರುವಂತೆ ಆಟಗಳಲ್ಲಿ ಅವಳಿಗೆ ಅಷ್ಟು ವಿಶೇಷ ಆಸಕ್ತಿಯಿರಲಿಲ್ಲ.

೧೯೩೯ರಲ್ಲಿ ಇಪ್ಪತ್ತು ವಯಸ್ಸಿನ ಲಿಜಾ ಜಿಲ್ಲೆಯ ಕೊಮೊಸೊ ಮೊಲ್ ಸೆಕ್ರೆಟರಿಯಾಗಿ ನೇಮಕವಾದಳು. ಹಳ್ಳಿ ಹಳ್ಳಿಗೂ ಹೋಗಿ ಸಂಸ್ಥೆಯ ಕಾರ್ಯಗಳನ್ನು ವಿವರಿಸಿ ಅದರ ಸಂಘಟನೆಯ ವಿಚಾರವಾಗಿ ಪ್ರಚಾರ ಭಾಷಣ ಮಾಡುತ್ತಾ ಎಳೆ ತನದಿಂದ ಹಿಡಿದು ವೃದ್ಧರ ವರೆಗೆ ಎಲ್ಲರಲ್ಲಿಯೂ ಕ್ರಾಂತಿಯ ಬೀಜವನ್ನು ಬಿತ್ತಿದಳು. ಅಲ್ಲಲ್ಲಿ ಸಂಘಗಳನ್ನು ಸ್ಥಾಪಿಸಿ ಸಂಸ್ಕೃತಿಯ ಮಟ್ಟವನ್ನು ಹೆಚ್ಚಿಸಲು ನೆರವಾಗುವ ಶಿಕ್ಷಣವನ್ನು ಕೊಡುತಿದ್ದಳು. ಅವಳ ಗಮನವನ್ನಾಗಲೀ ಅವಳ ಹೆಸರನ್ನಾಗಲೀ ಕಾಣದ ಕೇಳದ ಹಳ್ಳಿ ಒಂದಾದರೂ ಆ ಜಿಲ್ಲೆಯಲ್ಲಿ ಇರಲಿಲ್ಲ. ಶಾಲೆಗಳು, ಅಂಗಡಿಗಳು, ಟ್ರ್ಯಾಕ್ಟರ್ ಸ್ಟೇಷನ್ನುಗಳು ರೈತರ ಹೊಲಗಳು ಎಲ್ಲೆಡೆಗೂ ತನ್ನ ಬೆಟ್ಟಿಯಿತ್ತು ಅವರ ಕೆಲಸಗಳನ್ನು ಸಾವಧಾನವಾಗಿ ಪರೀಕ್ಷಿಸಿ ಅವರ ಕಷ್ಟಸುಖಗಳನ್ನು ಕೂಲಂಕುಶವಾಗಿ ಚರ್ಚಿಸಿ ತಕ್ಕ ಸಲಹೆಗಳನ್ನು ಕೊಡುತ್ತಿದ್ದಳು. ಇನ್ನೂ ಕೇವಲ ಇಪ್ಪತ್ತು ವರ್ಷದ ಲಿಜಾ! ಅವಳ ಕಾರ್ಯದರ್ಶಿತ್ವದ ಎರಡು ವರ್ಷಗಳ ಅವಧಿಯಲ್ಲಿ ಸಂಸ್ಥೆಯ ಸದಸ್ಯತ್ವ ಇಮ್ಮಡಿ ಮುಮ್ಮಡಿಯಾಗಿ ಹೆಚ್ಚಿತು.

ಯುದ್ಧ ಪ್ರಾರಂಭವಾಗುವದಕ್ಕೆ ಸ್ವಲ್ಪ ದಿನಗಳ ಮೊದಲು ತಾಯಿ, ಮಗಳನ್ನು ಕರೆದು ಕೇಳಿದಳು. "ಲಿಜೋಕಾ, ಆಗಲೇ ನಿನಗೆ ಇಪ್ಪತ್ತೆರಡು ವರ್ಷಗಳಾದವು ಇಷ್ಟೊತ್ತಿಗಾಗಲೇ ನಿನಗೆ ಮದುವೆ ಆಗಬೇಕಿತ್ತು. ಯಾರನ್ನಾದರೂ ಮಾಡಿಕೊಳ್ಳಲಿಚ್ಛಿಯಿದೆಯೇನು?

ರೈತ ವರ್ಗಕ್ಕೆ ಸೇರಿದ ಹಳೆಯಕಾಲದ ತಾಯಿ. ಇಪ್ಪತ್ತೆರಡು ವರ್ಷದ ಮಗಳು. ಮದುವೆ ಆಗದೆ ಹಾಗೇ ಇರುವದು ಅವಳಿಗೆ ಅನುಮಾನವೆಂಧಿನಿಸಿತ್ತು! ಮಗಳ ಹೊಸ ಹೊಸ ಚಟುವಟಿಕೆಗಳಲ್ಲಿ ತಾನು ಭಾಗಿಯಾಗಿದ್ದರೂ ಮಗಳ ಸಂಸಾರದ ಸುಖವನ್ನು ಅಲಕ್ಷ್ಯಮಾಡುವ ಇಚ್ಛೆಯಿರಲಿಲ್ಲ. ತಾಯಿಯ ಮಾತಿಗೆ ಲಿಜಾ ನಗುತ್ತಾ 'ನನಗೆ ಸರಿಯಾದ ವರಸಿಕ್ಕಾಗ ಆತನನ್ನು ಮನೆಗೆ ಕರೆತರುತ್ತೇನಮ್ಮ! ಈಗ ನನಗೆ ಅವನ್ನೆಲ್ಲ ಯೋಚಿಸಲು ಬಿಡುವೇ ಇಲ್ಲ' ಎಂದಳು.

ಮದುವೆಯ ಬಗ್ಗೆ ಯೋಚಿಸದೆ ಕಾಲೇಜಿಗೆ ಸೇರಬೇಕೆಂದು ಲಿಜಾ ಯೋಚಿಸಿದ್ದಳು. ೧೯೪೧ರಲ್ಲಿ ತನ್ನ ಎಲ್ಲಾ ಚಟುವಟಿಕೆಗಳಿಗೂ ವಂದನೆ ಸಲ್ಲಿಸಿ ಕಾಲಿನಿನ್‌ನಲ್ಲಿರುವ ಬೇಸಿಗೆ ಸ್ಕೂಲಿಗೆ ಹೋಗಿ ಸೇರಿದಳು. ಯುದ್ಧ ಪ್ರಾರಂಭವಾಗುವದಕ್ಕೆ ಸ್ವಲ್ಪ ಮೊದಲು ಅವಳಿಗೆ ಓದಿನ ಮೇಲಲ್ಲದೆ ಇನ್ಯಾವುದರ ಮೇಲೂ ಲಕ್ಷ್ಯವಿರಲಿಲ್ಲ ಯುದ್ಧ ಪ್ರಾರಂಭವಾದ ಸುದ್ದಿ ಅವಳಿಗೆ ತಿಳಿದೊಡನೆ ಕಾಲಿನಿನ್‌ನಿಂದ ತನ್ನ ಜಿಲ್ಲೆಗೆ ಹಿಂತಿರುಗಿ ಯುವಕ ಸಂಘಟನೆಯ ಕೆಲಸದಲ್ಲಿ ತೊಡಗಿದಳು. ಆಗ ಸುಗ್ಗಿಯ ಸಮಯ. ಆಲೂ, ಆಗಸೇನಾರು ಮತ್ತು ಗೋಧಿ ಹೇರಳವಾಗಿ ಇತರ ಬೆಳೆಗಿಂತ ಹೆಚ್ಚು ಬೆಳೆದಿದ್ದವು. ಮನುಷ್ಯರು, ಪ್ರಾಣಿಗಳು, ಯಂತ್ರಗಳು ಮೊದಲಾಗಿ ಎಲ್ಲ ರೀತಿಯಿಂದ ದುಡಿದರೂ ಸಾಲದಾಗಿತ್ತು. ಸ್ಥಳೀಯ ಆಯಾತ ನಿರ್ಯಾತಗಳ ವ್ಯವಸ್ಥೆ ವೃದ್ಧಿಗೊಳ್ಳಬೇಕಾಗಿತ್ತು. ಇದೆಲ್ಲಕ್ಕಿಂತ ಹೆಚ್ಚಾಗಿ ಕಾದಿರುವ ಸಮರವನ್ನೆದುರಿಸಲು ಯುವಕರ ಸಂಘಟನೆ ಆಗಬೇಕಿತ್ತು. ಈ ಕೆಲಸಗಳಿಗೆ ಕಂಕಣ ತೊಟ್ಟಳು ಲಿಜಾ. ಎಲ್ಲರಿಗೂ ಮಿಲಿಟರಿ ಶಿಕ್ಷಣ ಕೊಟ್ಟಳು. ರೈಫಲ್ಸ್, ಕೈಬಾಂಬುಗಳು, ಮಿಶಿನ್‌ಗನ್ ಮೊದಲಾದುವುಗಳನ್ನು ಉಪಯೋಗಿಸುವ ಬಗೆಯನ್ನು ತಾನೂ ಕಲಿತು ಇತರರಿಗೂ ಹೇಳಿ ಕೊಟ್ಟಳು. ತನಗೆ ಚಿಕ್ಕಂದಿನ ಸಂಗಾತಿಯಾದ ನುರಾಚಾರ್ನು ಕೋವಾಗೆ ಬರೆದ ಪತ್ರವೊಂದರಲ್ಲಿ 'ನಾನೂ ಒಬ್ಬ ಯೋಧಳಾಗುತ್ತೇನೆ, ನಿಜವಾದ ಯೋಧಳು ಆದೋ ಈಗ ನನ್ನ ಅತಿ ಮಹತ್ತರ ಆಸೆ' ಎಂದಿದ್ದಳು.

ಕೊಲೂಸೊಮೊಲ್ ಕಚೇರಿಯನ್ನು ಮಿಲಿಟರಿ ಕೇಂದ್ರವನ್ನಾಗಿ ಉಪಯೋಗಿಸಿಕೊಂಡರು. ಸುತ್ತು ಮುತ್ತಲಿನ ಎಲ್ಲಾ ಹಳ್ಳಿಗಳಿಂದಲೂ ಯುವಕರು ತಂಡ ತಂಡವಾಗಿ ಬಂದು ಸೇರಿದರು. ಲಿಜಾ ಎಲ್ಲರಿಗೂ ನಾಯಕಿಯಾಗಿ, ಉಪದೇಶಕಿಯಾಗಿ ಶಿಕ್ಷಣ ಕೊಡುತಿದ್ದಳು. ತನ್ನ ಪ್ರತಿಯೊಂದು ಭಾಷಣದಲ್ಲೂ 'ದೇಶಪ್ರೇಮಿಗಳು ನಾವು! ನಮ್ಮ ದೇಶವನ್ನು ನಾವು ರಕ್ಷಿಸುತ್ತೇವೆ, ಎತ್ತಿ ಹಿಡಿಯುತ್ತೇವೆ. ಸೋವಿಯಟ್ ಪ್ರಜೆಗಳನ್ನೆದುರಿಸುವದು ಅಷ್ಟು ಸುಲಭ ಸಾಧ್ಯವಲ್ಲವೆಂಬುದನ್ನರಿತು ಬರಲಿ ನಮ್ಮ ಶತ್ರುಗಳು' ಎಂದು ನುಡಿಯುತ್ತಿದ್ದಳು. ಈ ರೀತಿ ಪೆನೋ ಜಿಲ್ಲೆಯನ್ನು ರಾಷ್ಟ್ರದ ರಕ್ಷಣೆಗೆ ಸಂಘಟಿತ ಸೈನ್ಯದ ಆಗರವನ್ನಾಗಿ ಮಾರ್ಪಡಿಸುತ್ತಿರುವಾಗ, ಪಾಶ್ಚಿಮಾತ್ಯ ಗಡಿಗಳಲ್ಲಿ ಹೋರಾಡುತ್ತಿದ್ದ ರೆಡ್ ಸೈನ್ಯವು ಜರ್ಮನರಿಗೆ ಹಿಮ್ಮೆಟ್ಟಿ ಪೆನೋ ಜಿಲ್ಲೆಯ ಕಡೆ ಆಗಮಿಸುತ್ತಿತ್ತು.

೧೯೪೧ರ ಆಗಸ್ಟ್‌ದಲ್ಲಿ ಸಂಜೆ ಬೀದಿಯಲ್ಲಿ ಏನೋ ಗದ್ದಲವಾದಹಾಗಾಯಿತು ಲಿಜಾ ಹೊರಗೆ ಬಂದು ನೋಡಿದಳು ನಿರಾಶ್ರಿತರು ಗುಂಪುಗುಂಪಾಗಿ ಸಾಮಾನು ಸರಂಜಾಮುಗಳನ್ನು ಹೇರಿಕೊಂಡು ಬರುತಿದ್ದಳು. ಒಬ್ಬ ಸಣ್ಣ ಹುಡುಗನನ್ನು ಕರೆದು ಲಿಜಾ ಕೇಳಿದಳು—'ನೀವೆಲ್ಲಿಂದ ಬರುತ್ತಿರುವಿರಿ? ಬಿಸ್ಸನಾಂವ ಆ ಹುಡುಗ 'ಜರ್ಮನರಿಂದ ಓಡಿಸಲ್ಪಟ್ಟು' ಎಂದು ಉತ್ತರಿಸಿದ.

ಲಿಜಾಗೆ ವಿಪರೀತ ದುಃಖವಾಯಿತು. ಏನೂ ಅರಿಯದೆ ಹಸುಳೆಗಳಂತೆ ಬೆವರು ಸುರಿಸಿ ದುಡಿಯುತಿದ್ದ ಈ ರೈತ ಮನೆಗಳ ಬಾಗಿಲಿಗೂ ಸಮರದ ಮಾರಿ ಹೊಕ್ಕಿತು. ಅವರಿಗಾಗಿ ಹೊಸ ಜೀವನವನ್ನೇ ನಿರ್ಮಿಸಿ ವಿದ್ಯೆ ಹೇಳಿ, ಊಳಲು ಹೊಸ ಹೊಸ ವಿಧಾನಗಳನ್ನು ಹೇಳಿಕೊಟ್ಟು ಅದೇ ತಾನೆ ಟ್ರ್ಯಾಕ್ಟರ್, ಕಲ್ಟಿವೇಟರ್ ಮೊದಲಾದುವುಗಳನ್ನು ಆಚರಣೆಗೆ ತಂದು ಬೆಳೆಯ ಅಭಿವೃದ್ಧಿಗೆ ತನ್ನ ರಕ್ತ ಸುರಿಸಿದ್ದಳು ಲಿಜಾ. ಅದಕ್ಕೆಲ್ಲ ಕೊನೆ ಆಗಮಿಸಿತ್ತು. ತಾನು ಪ್ರೀತಿಯಿಂದ ನಲಿದು ಬೆಳೆಸಿದ ಹೊಲಗಳೆಲ್ಲ ಜರ್ಮನರ ಸಮರ ಪ್ರಲಯದ ನರ್ತನಕ್ಕೆ ಆಹುತಿಯಾದಲ್ಲಿ ತನಗೆ ಶಾಂತಿಯೆಲ್ಲಿ? ನಾಡಿಗೆ ತನ್ನ ಸೇವೆ ಇನ್ನೂ ಬಹಳವಿದೆ, ಇಷ್ಟೇ ಸಾಲದು ಎಂದು ಯೋಚಿಸಿದಳು.

ಅಂದು ಲಿಜಾ ರೂಮಾಕ್ಕೆ ಹೋದಾಗ ರಾತ್ರಿಯಾಗಿತ್ತು. ತಾಯಿಗೆ ಮಗಳನ್ನು ನೋಡಿ ಆನಂದವಾಯಿತು. ರೊಟ್ಟಿ ಹಾಲನ್ನು ಕೊಟ್ಟಳು. ಸದಾ ಹರಟುತ್ತಲೇ ಕಾಲ ಕಳೆಯುತ್ತಿದ್ದ ಲಿಜಾಳ ಗಂಭೀರ ವದನವನ್ನು ನೋಡಿ ತಾಯಿಗೆ ಆಶ್ಚರ್ಯವೆನಿಸಿತು. ಲಿಜಾಳ ಮನಸ್ಸಿನಲ್ಲಿ ಖಡ್ಗಕ್ಕೆ ಖಡ್ಗ ಕೊಟ್ಟು ಹೊಡೆದಾಡುವ ಹೋಯ್ದಾಟವೆದ್ದಿತ್ತು. ತನ್ನ ಹಳ್ಳಿಗಳ ಮೇಲೆ ಬೀಳುತ್ತಿರುವ ಆಕಸ್ಮಿಕ ಅಪಾಯ ಮತ್ತು ಅವುಗಳಿಂದ ತಪ್ಪಿಸಿಕೊಳ್ಳುವ ಬಗೆ ಇವುಗಳ ವಿಷಯವಾಗಿ ಮಾತನಾಡಬಲ್ಲಳಾಗಿದ್ದಳೇ ಹೊರತು ಇನ್ನಾವ ರೀತಿಯ ಮಾತಿಗೂ ಅವಳಲ್ಲಿ ಅವಕಾಶವಿರಲಿಲ್ಲ.

'ಜೈಹಿಂದ್'

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಅಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು ...	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಛಾಲ್ತಿ ಠೇವಣಾತಿ ಶೇಕಡ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ,
ಪ್ರೆಸಿಡೆಂಟ್ & ಖಜಾಂಚಿ.

Edited Printed and Published by P. I. BELLIAPPA at 'KODAGU' Press Mercara, for 'Koda[illegible]' Ltd.,

ಕೊಡಗು

ದೇವರಿಲ್ಲವೇ?

ವಾರ್ಷಿಕ ಚಂದಾ ರೂ. ೫—೦—೦

ಸಂಪುಟ ೨೨) (ಸಂಚಿಕೆ ೫

ಶುಕ್ರವಾರ

೩--೭--೧೯೫

KODAGU KANNADA WEEKLY **MERCAR**

ಬಡ ರೈತನ ಸುಮಾರು ೨೦ ಸಾವಿರ ರೂಪಾಯಿಗಳ ಜಲ ಹೋಮ.

ಸ್ವಾತಂತ್ರ್ಯ ಸಿಕ್ಕಿತು. ಚುನಾವಣೆ ಬಂತು. ಅಧಿಕಾರ ಲಭಿಸಿತು. ಆದರೆ ಇದರಿಂದ ಬದುಕಿದವರಾರು? ನಮ್ಮ ದೇಶ ಪನ್ನಾಳುವ ಹಕ್ಕು ನಮಗೆ ಬೇಕಾಗಿತ್ತು. ಅದರಂತೆ ಲಕ್ಷಗಟ್ಟಲೆ ಜನರ ಸತತ ಪ್ರಯತ್ನದಿಂದ ಸ್ವಾತಂತ್ರ್ಯೋದಯವಾಯಿತು. ಅದರ ಜತೆಯಲ್ಲಿ ಸ್ವಾತಂತ್ರ್ಯದ [illegible] ದೇಶವನ್ನು ಸುಖ ಸಂಪತ್ತು ಸಮೃದ್ಧಿಯಿಂದ ಮುಂದಕ್ಕೆ ತರಲು ಬೇಕಾದ ಮೇಧಾವಿಗಳನ್ನು ಆರಿಸಬೇಕಾಗಿಬಂತು. ಅದಕ್ಕಾಗಿ ಚುನಾವಣೆಗಳಾದವು. ಅಂದು ಓಟಿನ ಭಿಕ್ಷಾಪಾತ್ರೆಯನ್ನು ಈಗ ನಾವೇ ಸರ್ವ ಎನ್ನುವ ಮುಂದಾಳುಗಳು ಹಿಡಿದಿದ್ದರು. ಸರಳ ಸ್ವಭಾವದ ಬಡರೈತರು, ಕಾರ್ಮಿಕರು ತಮ್ಮ ಬಾಳ್ವೆಗೊಂದು ಗೆಲುಬಂದೀತೆಂದು ಹೆಚ್ಚು ಆಸೆ ತೋರಿದ ಪೂರ್ಣಾಲ ಸನ್ಯಾಸಿಗಳಿಗೆ ತಮ್ಮ ಅಮೂಲ್ಯ ಓಟು ಕೊಟ್ಟಾಯಿತು. ಚುನಾವಣೆಯಾಯಿತು. ಜಯ ದೊರಕಿತು. ಅಧಿಕಾರ ಬಂತು. ಈ ಅಧಿಕಾರದಿಂದ ಬದುಕಿದವರು ಚುನಾಯಿಸಲ್ಪಟ್ಟ ನಿಸ್ಸೀಮರೋ ಯಾ ಓಟು ಕೊಟ್ಟ ಬಡನಾಡಿಗರೊ? ಓಟುಗಳನ್ನು ಪಡೆಯಲು ತಡೆಯಿಲ್ಲದೆ ಹಣವನ್ನು ನೀರಿನಂತೆ ವ್ಯಯ ಮಾಡಿ, ಬಡ ಜನರನ್ನು ಮೋಹಿಸಿ, ವೇದಿಕೆಗಳಲ್ಲಿ ನಿಂತು ಬಾಯಿಪಾರ ಮಾಡಿದ ಭಾಗ್ಯವಾನರೂ ಉತ್ಸಾಹದ ಆಶೆ ಅಭಿಲಾಷೆಗಳನ್ನು ತೋರಿ, ಓಟುಗಳ ಸೆರೆಹಿಡಿಯಲು ಮುಖದಲ್ಲಿ ಮುಗುಳ್ನಗೆಯನ್ನು ಬೀರಿ, ಕಾಲಕ್ಕೆ ತಕ್ಕಂತೆ ಪಾತ್ರವನ್ನು ವಹಿಸಿ, ಜಯ ಪಡೆದ ಇವರು ಸಿನೇಮಾ ನಾಟಕ ಕಂಪೆನಿಗಳಲ್ಲಿ ಒಳ್ಳೆಯ ನಟರಾಗುತ್ತಿದ್ದರಲ್ಲದೆ ಇವರಿಂದ ಯಾವ ದೇಶದ ಕಲ್ಯಾಣವಾಗಲಿಕ್ಕಿಲ್ಲ. ಇಂತಹ ವೇಷಧಾರಿಗಳ ವೇಷಕ್ಕೆ ಮರುಳಾಗಿ ಓಟಿನ ಅಮೂಲ್ಯತೆ ಅರಿಯದೆ ಓಟುಕೊಟ್ಟಾಯಿತು. ಆ ತಪ್ಪಿಗೆ ಪಾತ್ರ ನಾವೆ. ಪಶ್ಚಾತ್ತಾಪ ಪಡುತ್ತೇವೆ. ಇವರ ನೋಡಿ ನಾಡಗೌಡನಿಗೆ ಅಕ್ಕಂತ ಜವನಸೆಯಿತ್ತು. ತನ್ನ ಕಲ್ಯಾಣವಾದೀತೆಂಬ ಹೆಬ್ಬಯಕೆಯಿತ್ತು. ಆದರೆ ಆ ನಂಬಿಕೆಯನ್ನು ಇಂದು ಇವರಿಂದ ಉಳಿಸಿಕೊಳ್ಳಬಾಗಲಿಲ್ಲ. 'ಹೂವಿನ ಮರದ ಹೌಸೆಯಿಂದ ಗಂಧದ ವಾಸನೆ ಹುಟ್ಟೀತೇ?'

ಚುನಾಯಿತ ಮೇಧಾವಿಗಳು ತಮ್ಮ ಧ್ಯೇಯವನ್ನು ಮರೆತು ಬಡ ಜನರು ಏತಕ್ಕಾಗಿ ಭರವಸೆ, ಆಶೆಯನ್ನಿಟ್ಟು ಚುನಾಯಿಸಿದರು ಎಂಬುದನ್ನು ಮೂಲೆಗೊತ್ತಿ ಎಲ್ಲಿ ಹಣ ದೊರೆತೀತು, [illegible] ಗಳ ಕರೆಯಿರುವದೋ ಎಲ್ಲಿ ದಿನದ ಬೇಟೆವು ಸುಲಭವಾಗಿ ಬೇಗ ಸೇರುವದೋ, ಅಲ್ಲಿಗೆ ಹಸನ್ಮುಖರಾಗಿ ಬಂದು, ತಮ್ಮ ತಮ್ಮ ಹಕ್ಕುಗಳನ್ನು ಪಡೆಯಲು ಪ್ರತ್ಯಕ್ಷರಾಗುವರು. ತಮಗೆ ಸಿಕ್ಕಿದ ಅಮೂಲ್ಯ ಅಪೂರ್ವ ಅಧಿಕಾರವನ್ನು ಸಂದರ್ಭವರಿತು, ಉಪಯೋಗಿಸಿ ತಮ್ಮ ತಮ್ಮ ಮನೆ, ಆಸ್ತಿಪಾಸ್ತಿಗಳನ್ನು ಪುನರುಜ್ಜೀವನಗೊಳಿಸಲು ಪ್ರತಿಜ್ಞೆ ತೊಟ್ಟಂತಿದೆ. ಬಡ ರೈತನ ಜೀವನದ ಎಡರು ತೊಡರುಗಳನ್ನರಿಯದೆ ಅವರ ಜೀವನವನ್ನು ತಮ್ಮ ಆಟದ ಗೊಂಬೆಯಂತೆ ಮಾಡಿ, ಮೆರೆಯುತ್ತಿರುವ ಇವರ ದೇಶಸೇವೆ ಯಾವ ದೇವರಿಗೆ ತೃಪ್ತಿ? ಈ ಮೇಲಿನ ನಮ್ಮ ಆಕ್ಷೇಪಕ್ಕೆ ಒಂದು ಉದಾಹರಣೆ ಕೊಡಬೇಕಿದೆ.

ಬೆಸಗೂರು ಮತ್ತು ಬೆಕ್ಕೆಸೊಡ್ಲೂರು ಕಟ್ಟೆಗಳ ಕಥೆ.

ಈ ನಷ್ಟಕ್ಕೆ ಜವಾಬ್ದಾರರಾರು?

ಕಳೆದ ಐದಾರು ವರ್ಷಗಳಿಂದ ಬೆಸಗೂರು ಮತ್ತು ಬೆಕ್ಕೆಸೊಡ್ಲೂರು ಗ್ರಾಮದವರ ಸತತ ಪ್ರಯತ್ನದಿಂದ ಗವರ್ನ್‌ಮೆಂಟಿನವರು ಒಂದೊಂದು ಕಟ್ಟೆ ಕಟ್ಟಲು ಒಪ್ಪಿದರು. ಕಳೆದ ವರ್ಷ ಬೆಕ್ಕೆಸೊಡ್ಲೂರಿಗೆ ಹತ್ತು ಹನ್ನೆರಡು ಸಾವಿರ ರೂಪಾಯಿ ವ್ಯಯಮಾಡಿ, ಇಪ್ಪತ್ತಡಿ ಉದ್ದದ ಹೊಳೆಗೆ ಕಟ್ಟೆ ಕಟ್ಟಿದರು. ಆದರೆ ಆ ಹನ್ನೆರಡು ಸಾವಿರ ರೂಪಾಯಿಯು ನೀರಿಗೆ ಹೋಮವಾಗಿ ಹೋಯಿತು. ಇದರ ಜವಾಬ್ದಾರರಾದ ಇಂಜಿನಿಯರ್ ಸಾಹೇಬರು ಯಾವ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಡಿಗ್ರಿ ಪಡೆದರೊ ಹೇಳಬಾಗುವದಿಲ್ಲ. ಹೊಳೆಯ ಅಷ್ಟಪಾಗಿ ಐದಾರಡಿ ಎತ್ತರದಲ್ಲಿ ನೆಟ್ಟಗೆ ಕಟ್ಟೆ ಕಟ್ಟಿ, ನೀರುವಾಬೆಲು ಐದಾರು ಇಲಿ ಬಿಲಗಳಂತೆ ಕೆಳಗೆ ತೂತಗಳನ್ನು ಮಾಡಿ, ಎರಡು ಕರೆಗಳಿಗೂ ಸಿಮೆಂಟು ಹಾಕದೆ ಕಟ್ಟೆಯು ಮುಕ್ತಾಯವಾಯಿತು. ಮಳೆಗಾಲದಲ್ಲಿ ಉಬ್ಬಿ ಉಕ್ಕಿ ಬರುವ ಈ ಹೊಳೆಯು ಪಡದ ಮರಳನ್ನು ಹೊಡೆದೇಳಿಸುವದೆಂಬ ವಿಷಯ ಆ ಇಂಜಿನೀಯರ್ ಸಾಹೇಬರ ಚತುರ ತಲೆಗೆ ಹೊಕ್ಕಲಿಲ್ಲ. ಅಂತೂ ಹನ್ನೆರಡು ಸಾವಿರ ರೂಪಾಯಿ ಜಲ ಹೋಮವಾಯಿತು.

ಆ ಕಟ್ಟೆಯು ಹೊಳೆಪಾಲಾಗಲು ಮತ್ತೆ ಬೆಸಗೂರು ಗ್ರಾಮದವರ ಹೆಬ್ಬಯಕೆಯನ್ನು ಕೊನೆಗಾಣಿಸಲು ಅದೇ ಹೊಳೆಗೆ ಸ್ವಲ್ಪ ಮೇಲೆ ಸುಮಾರು ಆರೇ ವೆಚ್ಚ ಮಾಡಿ ಕಟ್ಟೆ ಕಟ್ಟಲಾಯಿತು. ಆದರೆ ಆ ಕಟ್ಟೆಯ ಜವಾಬ್ದಾರಿ ಮೇಲಿನ ಇಂಜಿನಿಯರ್ ಸಾಹೇಬರದಲ್ಲ. ಅಂದರೂ ಇವರಿರ್ವ ಮಹನೀಯರೂ ಒಂದೇ ಕಾಲೇಜಿನಲ್ಲಿ ಶಿಕ್ಷಣ ಪಡೆದ ಶಿಷ್ಯರೆಂದು ಕಾಣುತ್ತದೆ. ಹಳ್ಳಿಯ ರೈತನು ಯಾವ ಕಾಲೇಜಿನಲ್ಲೂ ವ್ಯಾಸಂಗ ಮಾಡದಿದ್ದರೂ, ಆತನಿಗೆ ತನ್ನ ಸುತ್ತು ಮುತ್ತಲಿನ ಹೊಳೆಕೆರೆ, ಗುಡ್ಡಬೆಟ್ಟಗಳ ಪೂರ್ಣ ಪರಿಚಯವಿರುತ್ತದೆ. ಆತನಿಗೆ ಯಾವ ಕಾಲದಲ್ಲಿ ಯಾವ ಕೆಲಸ ಹೇಗೆ ಆಗಬೇಕೆಂಬ ಅರಿವು ಪ್ರಕೃತಿ ಸ್ವಭಾವವಾಗಿ ಬಂದಿದೆ. ಈ ಹೊಳೆಗೆ ಪ್ರತೀ ವರ್ಷ ರೈತರು ಸೊಪ್ಪಿನ ಕಟ್ಟೆ ಕಟ್ಟಿ, ಗದ್ದೆಗಳಿಗೆ ನೀರು ಹಾಯಿಸಿ ವ್ಯವಸಾಯ ಮಾಡುತ್ತಿದ್ದಾರೆ. ಅವರಿಗೆ ಯಾವುದೇ ಮೇಧಾವಿ ಇಂಜಿನೀಯರರ ಸಲಹೆ ಶಿಕ್ಷಣಗಳ ಅವಶ್ಯವಿಲ್ಲ. ಆ ಕಟ್ಟೆಯಲ್ಲಿದ್ದ ಎಷ್ಟೋ ನ್ಯೂನತೆಗಳನ್ನು ಕಣ್ಣ ಮುಂದೆ ಎತ್ತಿ ತೋರಿಸಿದರೂ, ನಮ್ಮ ಸಲಹೆಗಳಿಗೆ ಗಮನಕೊಡದೆ, 'ನಾಡಿನ ಗೌಡನಿಗೆ ಈ ಅಗಾಧವಾದ ವಿಚಾರವೇಕೆಂದು ಬೆದರಿಸಿಬಿಟ್ಟರು. ಅಂತೂ ಕಟ್ಟೆಯಾದೀತೆಂಬ ಭರವಸೆಯಿಂದ ಹೇಳಿದ್ದನ್ನು ಕೇಳಿ, ಪಿಟ್ಟೆನ್ನದೆ ಸುಮ್ಮನಾದೆವು. ಕಟ್ಟೆ ಕಟ್ಟಿದರು ಗ್ರಾಮದವರ ಎಚ್ಚರಿಕೆಯನ್ನು ಗಮನಿಸದ ಕಾರಣ ಈ ಮಳೆಗಾಲದಲ್ಲಿ ಅಂದರೆ ತಾ. ೨೨ರಲ್ಲಿ ಈ ಹೊಸ ಕಟ್ಟೆಯೂ ಜಲ ಹೋಮವಾಗಿ ಹೋಯಿತು. ಕರೆಗಳನ್ನು ಕಟ್ಟದೆ ಹೊಳೆಯ ಮಧ್ಯೆ ಕಾಂಕ್ರೀಟ್ ಕಟ್ಟೆ ಕಟ್ಟಿ ನಿಲ್ಲಿಸುವ ಶಿಕ್ಷಣ ಈ ಇಂಜಿನೀಯರ್ ಸಾಹೇಬರುಗಳಿಗೆ ಸ್ವತಃ [illegible] ಬೇಕಲ್ಲದೆ, ಯಾವ ಕಾಲೇಜಿನ ತಪ್ಪಲ್ಲ! ರೈತಾಪಿ ಜನರ ಒಟ್ಟು ಸುಮಾರು ೨೦ ಸಾವಿರ ರೂಪಾಯಿಷ್ಟು ಹೊಳೆ ಪಾಲಾಯಿತು. ಆದರೆ ಆಗಾಗ ಆಗಮಿಸುತ್ತಿದ್ದ ಮಂತ್ರಿಗಳ, ಮೆಂಬರುಗಳ ಮತ್ತು ಇಂಜಿನಿಯರ್ ಸಾಹೇಬರುಗಳ ವೇತನ ಮತ್ತು ಭೇಟಿಗಳಲ್ಲಿ ಒಂದು ಪೈಯೂ ಕಡಿಮೆಯಾಗಿರಲಿಕ್ಕಿಲ್ಲ. ಇದು ಯಾರ ಹಣ? ಯಾರಿಗೆ ನಷ್ಟ? ಇಂತಹ ಫಲರಹಿತ ರೀತಿಯಲ್ಲಿ ಹಣ ಖರ್ಚು ಮಾಡಿ, ಗವರ್ನ್‌ಮೆಂಟಿಗೆ ನಷ್ಟ ಮಾಡಿದ ಅಧಿಕಾರಿಗಳನ್ನು ವಿಚಾರಿಸಿ, ಗವರ್ನ್‌ಮೆಂಟಿನವರು ತಕ್ಕ ಕಾನೂನು ಕಾಯಿದೆ ನಡೆಸಬೇಕೆಂದು ಗ್ರಾಮದವರ ಬಲವತ್ತರ ಕೋರಿಕೆಯಾಗಿದೆ. ಈ ನಷ್ಟಕ್ಕೆ ಜವಾಬ್ದಾರರು ಅಧಿಕಾರಿಗಳಲ್ಲದೆ ಬೇರೆ ಯಾರೂ ಅಲ್ಲ. ತಪ್ಪು ಮಾಡಿದವನಿಗೆ ಶಿಕ್ಷೆ ಕೊಡುವದು ದೇವನಿಯಮವಾದುದರಿಂದ ಈ ವಿಷಯದ ತಪಸೀಲ್ ವಿಚಾರಣೆಯಾಗಬೇಕು. ಇಪ್ಪತ್ತಡಿ ಉದ್ದದ ಹೊಳೆಗೊಂದು ಕಟ್ಟೆ ಕಟ್ಟಲು ಸಮರ್ಥರಲ್ಲದ ಇಂಜಿನಿಯರುಗಳನ್ನು ನೇಮಿಸಿ, ಅಧಿಕಾರವಿತ್ತ ಗವರ್ನ್‌ಮೆಂಟಿನ ದಕ್ಷತೆ ಇದರಿಂದಲೇ ತಿಳಿಯಬಹುದು. ಕಟ್ಟೆಯ ಒಗ್ಗೆ ವಿವಿಧ ಸಲಹೆ ಇತ್ತು ಬೇಡಿಕೊಂಡರೂ, ಗ್ರಾಮಸ್ಥರ ಬೇಡಿಕೆ ಅರಣ್ಯರೋಧನವಾಯಿತಷ್ಟೆ! ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಸ್ವತಹ ಬಂದು ಕಟ್ಟೆಯ ಸ್ಥಿತಿಯನ್ನೂ, ಈ ಅಜಾಗರೂಕತೆಯ ಕಟ್ಟಡದಿಂದ ಕಟ್ಟೆಯ ಹತ್ತಿರದ ಬಡ ರೈತನ ಭೂಮಿಗಾದ ನಷ್ಟವನ್ನೂ ಕಣ್ಣಾರೆ ನೋಡಿ, ಇದರ ವಿಚಾರಣೆಗೆ ಏರ್ಪಾಡು ಮಾಡಬೇಕೆಂದು ನಮ್ಮ ಅರಿಕೆ. "ಕೇರದವಳು ಹೆತ್ತರೆ........" ಎಂಬಂತೆ ಈ ಮೇಲಿನ ಕೆಲಸ ಕಾರ್ಯಗಳಿಂದ ವೇದ್ಯವಾಗುತ್ತದೆ.

"ನೊಂದ ಗ್ರಾಮಸ್ಥರು"

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು:—ವೀರಾಜಪೇಟೆ.

ಶಾಖೆ:—ನ್ಯೂ, ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟೆಗಳು
2. 12 ನೇ ನಂಬರಿನ ಒಂಟಿ ಹೊಳವಿನ ತೋಟದ ಕೋವಿಗಳು.
3. ಒಂಟಿ ಮತ್ತು ಜೋಡಿ ಹೊಳವಿನ ಕೇಪಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚಲ್ಲು ಮತ್ತು ಕೇಪುಗಳು.
5. $\frac{5}{8}$", $\frac{1}{2}$" ಮತ್ತು $\frac{3}{8}$" ಕಬ್ಬಿಣದ ಸರಳುಗಳು
6. 2", $1\frac{1}{4}$", 1" $\frac{3}{4}$" ಮತ್ತು $\frac{1}{2}$" ಕೊಳಾಯಿಗಳು. (G. I. Peps)
7. $1\frac{3}{4}$" × $\frac{5}{16}$" ಉಕ್ಕಿನ ಪಟ್ಟಿಗಳು (Spring Steel flats)
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಪಂಪುಗಳು.
9. ಕೋಚ ಮತ್ತು ಆನೆ ಮಾರ್ಕಿನ ಸಿಮೆಂಟ್ ಟಿನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರು ಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

[illegible]. ಎಸ್. ಸೋಮಯ್ಯ (ಗೌ ಕಾರ್ಯದರ್ಶಿ) ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

ಹರಟೆ.

॥ ವ್ಯರ್ಥಾಲಾಪ ॥

—. ಜಬಿಜ್ '—

'ಎಲ್ಲಿದ್ದೀರಿ.... ಮಿಸ್ಟರ್ ....ಇವರೆ ?, —ಎಂದು ಬಹು ಆತ್ಮೀಯವಾಗಿ ಕೇಳುತ್ತ ನನ್ನ ಹೆಸರನ್ನು ಜ್ಞಾಪಿಸಿಕೊಳ್ಳುವದಕ್ಕೆ ತಲೆ ಕೆರೆದುಕೊಂಡು, ನನ್ನ ದೃಷ್ಟಿಯಲ್ಲಿ ದೃಷ್ಟಿಯನ್ನು ಬೆರಸಿ ಏನೋ ಹುಡುಕಾಡುತ್ತ ದ್ರಾವಿಡಪ್ರಾಣಾಯಾಮ ಮಾಡಿದರು.

ಈಗಿನ ಕಾಲದಲ್ಲಿ ಆತ್ಮೀಯರಾಗಿರುವವರೇ ಅಪರೂಪ. ಅದಲ್ಲದೆ ಅವರನ್ನು ಎಲ್ಲೋ ನೋಡಿದಂತೆ ಇತ್ತು. ಎಲ್ಲಿ ಅನ್ನೋದು ಗೊತ್ತಿಲ್ಲ. ಹೀಗಾಗೋದು ಹೊಸದೇನಲ್ಲ. ಗಂಡನಿಗೆ ಪ್ರೇಯಸಿಯ ಹೆಸರೇ ಮರೆತುಹೋಗೋಲ್ವೇ ? (ಆಧಾರ: ದುಷ್ಯಂತ ಶಕುಂತಲೆಯನ್ನು ಮರೆತದ್ದು!)

ಅವರ ಒಡನಾಟ ನೋಡಲಾಗಲಿಲ್ಲ. ಅವರಿಗೆ ಹೆಸರು ಗೊತ್ತಿಲ್ಲದೆ ಇರುವದಿಲ್ಲ. ಆದರೆ ಯಾವ ವ್ಯಕ್ತಿಗೆ ಯಾವ ಹೆಸರು ಅನ್ನೋದು ಗೊತ್ತಿರುವದಿಲ್ಲ. ಒಂದೊಂದು ವೇಳೆ ವ್ಯಕ್ತಿಯೇ ಬೇರೆ, ಹೆಸರೇ ಬೇರೆ ಆಗಿಬಿಡುತ್ತದೆ. ಉದಾಹರಣೆಗೆ: ನಾನೇ ಒಂದು ಸಲ ಜನಗಣತಿ ಅಧಿಕಾರಿ ಬಂದು ನನ್ನ ಹೆಸರು ಕೇಳಿದಾಗ 'ಸದಾನಂದ ಎಂದೆ. ಹತ್ತಿರದಲ್ಲೇ ಆಡುತಿದ್ದ ನನ್ನ ಹುಡುಗ 'ಅಪ್ಪಾಜಿ, ಅದು ನನ್ನ ಹೆಸರು. ನಿಮ್ಮ ಹೆಸರು ಬಸವರಾಜ್ ಅಂತ—ಎಂದು ಜಗಳಕ್ಕೆ ಬಂದ. ಆಗ ತಿದ್ದಿಕೊಂಡು ನಾನು ನನ್ನ ಹೆಸರನ್ನು ಹೇಳಿದೆ. ಸೆನ್ಸಸ್ ಅಧಿಕಾರಿಗಳು ಬೆರಗಾದರು. ಅವರ ಅಸಿಸ್ಟೆಂಟ್ ತುಟಿಯಿಂದ ನಗುವಿನ ಹುಚ್ಚು ಹೊಳೆ ಕಿಸಕಿಸನೆ ನುಗ್ಗುತಿತ್ತು. ಏನು ಮಾಡೋದು! ಮನುಷ್ಯನಿಗೆ ಮರವೆ ಅಂಟಿದ್ದು. ಇದನ್ನು ಯಾವ ರೀತಿ ಅಂಟಿಸಿದನೋ, ಆ ಅಂಟಿಸಿದವನಿಗೇ ಗೊತ್ತು!

ಸದ್ಯ ಆಗ ನನ್ನ ಹೆಸರನ್ನು ನಾನು ಮರೆತಿರಲಿಲ್ಲ. ಹೇಳಿದೆ. ಅವರು ಆಗ ಮಿಡುನಗುತ್ತ (ಇದು ಹೊಸ ರೀತಿಯ ನಗೆ, ದೇಶಾವರಿ ಜಾತಿಗೆ ಸೇರಿದ್ದು; ಒಂದು ಸಾರಿ ಆ ನಗು ನಕ್ಕದ್ದು ನೋಡಿದರೆ ಸಾಕು, ಅದೇ ರೀತಿಯ ನಗು ನಿಮ್ಮ 'ತುಟಿಗಳ'ವಾಗುತ್ತದೆ) ನಾನು ಹೇಳಿದ ರೀತಿಯಲ್ಲೇ ಮಿಂಚಿನ ವೇಗದಲ್ಲಿ 'ನನ್ನ ಹೆಸರನ್ನು ಹೇಳಿ 'ಏನ್ಮಾಡ್ಕೊಂಡಿದ್ದೀರಿ' ಎಂಬ ಪ್ರಶ್ನೆಯನ್ನು ಸೇರಿಸಿದರು.

ನಿಜವಾಗಿ ಹೇಳಬೇಕೆಂದಿದ್ದರೆ 'ಉಂಡ್ಕೊಂಡಿದ್ದೇನೆ' ಅನ್ನಬೇಕು. ಅದೇ ಆ ಪ್ರಶ್ನೆಗೆ ಉತ್ತರ. ಆದರೆ ಮಾನವ ಯಾವತ್ತೂ ಈ ಸತ್ಯವನ್ನು ಮರೆಮಾಡಿಕೊಂಡು ಬಂದಿದ್ದಾನೆ, ಬರುತ್ತಿದ್ದಾನೆ, ಬರುತ್ತಾನೆ. ಅದರಂತೆ ನಾನೂ ಅದನ್ನು ಮರೆ ಮಾಡಿ 'ಆಥರ್' ಎಂದೆ.

ಆ ತರಹ ಜನರಿಗೆ ಅರ್ಥವಾಗಬೇಕಾದರೆ, 'ಆಥರ್' ಎಂತಲೇ ಹೇಳಬೇಕು. ನಮ್ಮ ಕರ್ನಾಟಕದ ಜನಕ್ಕೆ ಕನ್ನಡಕ್ಕಿಂಥಾ ಇಂಗ್ಲೀಷು ಚೆನ್ನಾಗಿ ಅರ್ಥವಾಗುತ್ತದೆ ಎಂಬುದು ನನ್ನ ಅನುಭವವೇದ್ಯ (ವಿಷಾದಕರ) ವಾದ ವಿಚಾರ.

ಅದೂ ಅಲ್ಲದೆ 'ಲೇಖಕ' ಎಂಬ ಶಬ್ದವನ್ನು ನಾನು ಉಪಯೋಗಿಸುವದಿಲ್ಲ. ಲೇಖಕ ಅನ್ನೋದು ಸೂಕ್ತವಾದ ಶಬ್ದವಲ್ಲವೆಂದು ಹೇಗೋ ಮುಂದಟ್ಟಾಗಿಬಿಟ್ಟಿದೆ. ಭೂಪ ಎಂಬ ಶಬ್ದದಲ್ಲಿ ಭೂ—ಭೂಮಿಯನ್ನು, ಪ—ಪಾಲಿಸುವವನು, ಎಂದು ಅರ್ಥ ಮಾಡುವಂತೆ ಲೇಖಕ ಎಂಬ ಶಬ್ದದಲ್ಲಿ ಲೇಖ—ಬರಹವನ್ನು, ಯಾ ಬರಹದಿಂದ, ಕ—ಕಾಪಾಡುವವನು, ಅಥವಾ ಅದರಿಂದ ಕಾಪಿಡಲ್ಪಡುವವನು ಎಂಬ ಅರ್ಥ ಮಾಡಬಹುದು. ಇವೆರಡೂ ಅಸಂಭವವೆಂಬುದು ನನಗೆ ಗೊತ್ತು. ನಿಮಗೂ ಗೊತ್ತು. ಬರೆದವನು ಬರೆದುದನ್ನು ಜತನಗೊಳಿಸುವದಿಲ್ಲವೆಂಬುದು ಸ್ವತಃಸಿದ್ಧ. ಬರವಣಿಗೆ ಬರೆದವನನ್ನು ಕಾಪಾಡೋದು, ಮಹಾಜನಗಳು 'ಆಲದ ಹೂ' 'ಮೊಲದ ಕೊಂಬು' ನೋಡಿದಾಗ!

ಇನ್ನುಳಿದ ಮಾರ್ಗ—ಸಂಪಾದಕೀಯ ಬಹುವಚನದ ಪ್ರಯೋಗ ಹಾಕಿಕೊಂಡು 'ಲೇಖಕರು' ಅನ್ನಬೇಕು. ಅದಕ್ಕೆ ನನ್ನ ಅಭ್ಯಂತರವೇನೂ ಇರಲಿಲ್ಲ. ಆದರೆ ಮೊನ್ನೆ ಮೊನ್ನೆ ಎರಡು ಘಟನೆಗಳಾದ ಮೇಲೆ 'ಲೇಖಕರು' ಎಂಬ ಶಬ್ದಕ್ಕೂ ನಾನು ಶರಣು ಹೊಡೆಯಬೇಕಾಯಿತು. ಅದರಲ್ಲಿ ಒಂದು ನಾನು ಕಣ್ಣಾರೆ ನೋಡಿದ್ದು. ಇನ್ನೊಂದು ಕಿವಿಯಾರೆ ಕೇಳಿದ್ದು!

ಕಣ್ಣಾರೆ ಕಂಡಿದ್ದು: ನಮ್ಮ ಮಿತ್ರರೊಬ್ಬರು 'ಪಶುಪಾಲ' ಎಂಬ ಕಾವ್ಯನಾಮದಲ್ಲಿ ಬರೆಯುತ್ತಾರೆ. ಅವರ ಇತ್ತೀಚಿನ ಒಂದು ಪುಸ್ತಕದಲ್ಲಿ ಲೇಖಕರು 'ಪಶುಪಾಲ' ಎಂದಿರಬೇಕಾಗಿದ್ದುದು 'ಲೇ ಕರು: ಪಶುಪಾಲ' ಎಂದು ಮುದ್ರಿಸಲ್ಪಟ್ಟಿತ್ತು. ಇದಕ್ಕೇನು ಕಾರಣ ಎಂದು ವಿಚಾರಿಸಿದಲ್ಲಿ ಆ 'ಫಾರಂ' ಲಾಕ್ ಮಾಡುವಾಗ 'ಖ' ಅಕ್ಷರ ಕಳಚಿಕೊಂಡು ಕೆಳಗೆ ಬಿದ್ದುಹೋಗಿದೆ. ಮುದ್ರಕನಿಗೆ ಆ ಒಂದಕ್ಷರ ಹೋದರೇನು, ಪುಸ್ತಕದಲ್ಲಿ ಇನ್ನೂ ಬೇಕಾದಷ್ಟು ಅಕ್ಷರಗಳಿವೆಯಲ್ಲಾ ಎಂದು ತೃಪ್ತಿ! ಹಾಗೆಯೇ ಮುದ್ರಿಸಿಬಿಟ್ಟ. ಅಂದಿನಿಂದ 'ಪಶುಪಾಲ'ರನ್ನು ಅವರ ಸ್ನೇಹಿತರೆಲ್ಲಾ 'ಲೇ ಕರು!' ಎಂದೇ ಕೂಗುತ್ತಿದ್ದಾರೆ. ಇನ್ನು ನಾನೂ 'ಲೇ ಕರು' ಎಂದು ಕರೆಸಿಕೊಳ್ಳಲೇ ?

ಕಿವಿಯಾರೆ ಕೇಳಿದ್ದು; ಇದು ಪುಸ್ತಕದ ಅಂಗಡಿಯಲ್ಲಿ ಒಂದು ಭಾನುವಾರ ಸಂಜೆ ನಡೆದ ಘಟನೆಯೆಂದು ನಂಬಲರ್ಹ (!) ಸೂತ್ರಗಳಿಂದ ಗೊತ್ತಾಗಿದೆ. ಒಬ್ಬ ಸಾಹಿತಿಯನ್ನು ಮತ್ತೊಬ್ಬ ಗಣ್ಯ ವ್ಯಕ್ತಿಗೆ ಪರಿಚಯ ಮಾಡಿಕೊಡುತ್ತ ಅವರಿಬ್ಬರ ಉಭಯಸಾಮಾನ್ಯ ಸ್ನೇಹಿತರು, ಇವರು ಒಳ್ಳೇ 'ಲೇಖಕರು' ಎಂದರು. ಆ ಗಣ್ಯ ವ್ಯಕ್ತಿಗೆ ಈ ಮಾತುಗಳು ಕೇಳಿಸಿತೊ ಇಲ್ಲವೊ ಅಥವಾ ಬೇಕಂತಲೇ ಕುಚೋದ್ಯಕ್ಕಾಗೋ, ಎಂಥ 'ಕರು' ಎಂದು ಚುಚ್ಚುಗನ್ನಡದಲ್ಲಿ ಪ್ರಶ್ನಿಸಿಬಿಟ್ಟರು. ಆ ಸಾಹಿತಿಗೆ ಉಂಗುಷ್ಠದಿಂದ ನೆತ್ತಿಯ ವರೆಗೆ ರೇಗಿತಂತೆ. ಅವರು 'ಗಂಡು—ಕರು' ಎಂದು ಅಬ್ಬರಿಸಿ ತೊಡೆತಟ್ಟಿ ಗಣ್ಯವ್ಯಕ್ತಿಯ ಕುತ್ತಿಗೆಗೆ ಕೈಯೇರಿಸಿದರಂತೆ. ಸಾಹಿತಿ ದೊಡ್ಡ ದೇಹ, ಬೊಜ್ಜು ಹೊಟ್ಟೆಯ ಗುಂಡು ಮೂಗಿನ ಆಸಾಮಿ; ಗಣ್ಯ ವ್ಯಕ್ತಿಯೂ ಸಾಧಾರಣವಾಗಿ ಬಲಿಷ್ಠ. ತಮ್ಮ ರಕ್ಷಣೆಗಾಗಿ ಸಾಹಿತಿಯ ಸೊಂಟವನ್ನು ಸುತ್ತಿ ಹಿಡಿದುಕೊಂಡರು. ರಸ್ತೆಯ ಜನರೆಲ್ಲ ಪುಸ್ತಕದ ಅಂಗಡಿಯೊಳಗೆ ಗೇರಾಯಿಸಿದರು. ಗಲಾಟೆಯೋ ಗಲಾಟೆ

ಕೊನೆಗೆ ಯಾರೋ ಬುದ್ಧಿವಂತರು—ಅಂಗಡಿಯವನೇ ಅಂತ ಕಾಣುತ್ತೆ—ಎರಡು ಹೂವಿನ ಹಾರಗಳನ್ನು ತರಿಸಿ ಇಬ್ಬರಿಗೂ ಹಾಕಿ, ನೆರೆದಿದ್ದ ಜನರ ಸಹಾಯ ಪಡೆದು ಒಬ್ಬೊಬ್ಬರನ್ನೇ ಅನಾಮತ್ ಎತ್ತಿಕೊಂಡು, ಅಜಾನುಬಾಹುಗಳಿಬ್ಬರ ಕುತ್ತಿಗೆಯ ಮೇಲೆ ಕೂಡಿಸಿಬಿಟ್ಟು ವಿರುದ್ಧ ದಿಕ್ಕಿಗೆ ರವಾನಿಸಿಬಿಟ್ಟರಂತೆ. ನೆರೆದಿದ್ದ ಜನರಿಗೆ ದೊಡ್ಡಣ್ಣ 'ಹಾಲ್'ಗೆ ಹೋಗುವಂತೆ ಹೇಳಿದರಂತೆ. ಇಂಥಾ ಘಟನೆ ನಡೆದಿರುವಲ್ಲಿ 'ಲೇಖಕರು' ಎಂದು ಹೇಳಿಕೊಳ್ಳುವದಕ್ಕೆ ನನ್ನಂಥವನಿಗೆ ಎಲ್ಲಿಯ ಧೈರ್ಯ!

ಅಂದಿನಿಂದ ಆ ಸಾಹಿತಿ 'ಕರವೀರ' ಎಂದು ಜನಪ್ರಿಯನಾದನಂತೆ. ಆ ಘಟನೆಯನ್ನೇ ಆಧಾರವಾಗಿಟ್ಟುಕೊಂಡು 'ಗೆದ್ದೆತ್ತು' ಎಂಬ 'ಕುಸ್ತ್ಯಾತ್ಮಕ ಕಾದಂಬರಿ' ಯೊಂದನ್ನು ಬರೆದಿದ್ದಾರಂತೆ. ಕನ್ನಡದಲ್ಲಿ ಇದೊಂದು ಹೊಸ ಪ್ರಯೋಗವೆಂದೂ ಹೇಳುತ್ತಾರೆ!

ಈ ಘಟನೆ ಅಚ್ಚಳಿಯದೆ (ಅಚ್ಚಿಗೆ ಏರಿಯದೆ) ನನ್ನ ಮನಸ್ಸಿನಲ್ಲಿ ಮೂಡಿರುವಾಗ ನಾನು ಹೇಗೆ 'ಲೇಖಕರು' ಎಂದು ಉಪಯೋಗಿಸಲಿ. ಆ ಶಬ್ದ ಉಪಯೋಗಿಸಿ ನಾನೆಲ್ಲಿ 'ಸೋತ ಕೈ' ಎಂಬ ಕುಸ್ತ್ಯಾತ್ಮಕ ಕಾದಂಬರಿ ಬರೆಯಬೇಕಾಗುತ್ತೋ ಎಂದು ಹೆದರಿದ್ದೇನೆ. ಅದಕ್ಕಾಗಿ ಅವರ ಪ್ರಶ್ನೆಗೆ 'ಆಥರ್' ಎಂದು ಉತ್ತರಿಸಿದೆ.

ಅವರು ಎಷ್ಟೇ ಆಗಲಿ ಗುರುತು ಕಂಡವರು :

'ಅದು ಸರೀರಿ....ಜೀವನಕ್ಕೇನು ಮಾಡಿಕೊಂಡಿದ್ದೀರಿ?' ಎಂದು ಮತ್ತೊಂದು ಪ್ರಶ್ನೆ ಹಾಕಿದರು.

ನನಗೆ ದುಃಖವಾಯಿತು, ಆಶ್ಚರ್ಯವಾಯಿತು, ಎರಡೂ ಒಟ್ಟಿಗೆ ಆಯಿತು. ಬೇರೆ ಬೇರೆಯೂ ಆಯಿತು. ಇವರಿಗೆ ಅಲ್ಲ ಅವರಿಗೂ (ಜನಸಾಮಾನ್ಯಕ್ಕೂ) ವನ್ನು ಅರ್ಥಾತ್ 'ಆಥರ್'ಗಳ ಒಳ-ಹೊರಗು ಗೊತ್ತಾಗಿ ಹೋಗಿದೆಯಲ್ಲಾ! ಹಾ ವಿಧಿಯೇ! ಲೇಖಕನಾದವನಿಗೆ ಜೀವನಕ್ಕೆ ಆತ್ಮಹತ್ಯೆಯನ್ನೊಂದು ಬಿಟ್ಟು, ಇನ್ನೇನಾದರೂ ದಾರಿ ತೋರಿಸಿ ಕಾಪಿಡಬಾರದೆ ? ಎಂದುಕೊಂಡೆ ಮನಸ್ಸಿನಲ್ಲಿ. ಹೇಗಾದರೂ ಅವರ ಪ್ರಶ್ನೆಗೆ ಉತ್ತರ ಕೊಡಬೇಕಲ್ಲ. ನನ್ನ ಬಿಗುಮಾನ ಬಿಟ್ಟು ಕೊಡದೆ, 'ಅದರಿಂದಲೇ ಜೀವನ' ಎಂದೆ.

'ಅಂದರೆ ?' ಎಂದು ಅವರು ವಿವರಣೆ ಪಡೆಯುವ 'ಮುಖಭಂಗಿಯಲ್ಲಿದ್ದು ನನ್ನ ನೋಡಿದರು.

'ಅಂದರೆ....ಪುಸ್ತಕ ಬರೆಯೋದು. ಅದರಿಂದ ಬರುವ ಗೌರವ ಧನದಿಂದ ಜೀ....ವನ ನಡೆಸೋದು.'

'ಓಹೋ.... ಆ ಥರವೊ.... ಅದನ್ನೇನೋ ನೀವು ಆಥರ್ ಆಥರ್ ಅನ್ನೋದು'

ನಾನು ಪಿಸುನಕ್ಕೆ. ಅಷ್ಟರಲ್ಲಿ ಈ ಹಾಳಾದ ಮಿಡುನಗು ನನಗೂ ಗಂಟು ಬಿದ್ದಿತು. ನನ್ನ ಮಿಡುನಗೆಯನ್ನೇ 'ಸಮ್ಮತಿ' ಎಂದು ಅರ್ಥ ಮಾಡಿಕೊಂಡು ಅವರು ಬರ್ತೀನಪ್ಪಾ ಎಂದು ಹೇಳಿ ಅಲ್ಲಿ ನಿಲ್ಲದೆ ಹೊರಟು ಹೋದರು.

ಅವರು ಹೋದ ಮೇಲೆ ನನಗನ್ನಿಸಿತು ಅರರೆ, ಅವರ ಹೆಸರನ್ನು ಕೇಳಿ ತಿಳಿದುಕೊಳ್ಳಬೇಕಾಗಿತ್ತು ಎಂದು. ನನ್ನ ಈ 'ಬೆಪ್ಪ'ನ್ನು ನೋಡಿ ನಿಮಗೆ ಮಿಡುನಗು ಬರುತ್ತದೆ-ಅಲ್ಲವೇ ?

ಸಾಹಿತ್ಯ ಪ್ರಗತಿ.

Specialists in Tailoring! Prompt Service!!

FOR **English Felt Hats,**

Wedding Suits, Ladies Over Coats

AND

Latest Designs in Wollen Suitings

— CALL ON —

25-20 **PATTU BROTHERS**

OPP.— **Town Hall, MYSORE.**

ವೀರಾಜಪೇಟೆಗೆ

'ಕೊಡಗು' ಏಜೆಂಟರು,

ಶ್ರೀ ಟಿ. ಎಸ್. ಗೋವಿಂದರಾಜು

ಬೇಜವಾಬ್ದಾರಿ ನೀತಿಯ ಕಾರುಬಾರು

ಬಾಣೆ ಕಂದಾಯ ಹಾಕ ಕೂಡದು

ಲೇ:— " ಜೋರೇಗೌಡ "

ಕಳೆದ ವಾರದ ಅಂದರೆ ತಾ. ೨೪ರ 'ಜನ್ಮಭೂಮಿ' ಪತ್ರಿಕೆಯು ನನ್ನ ಗೆಳೆಯರೊಬ್ಬರಲ್ಲಿ ಓದಲು ದೊರೆಯಿತು. ಅದರಲ್ಲಿ "ಬಾಣೆ ಕಂದಾಯ"ವೆಂಬುದಾಗಿ ಒಂದು ಪೂರ್ಣಭಾಗದ ಪತ್ರ ಪ್ರಕಟವಾಗಿತ್ತು. ಅದರಲ್ಲಿ ಬರೆದವರ ಹೆಸರಾಗಲೀ ಹೊರಗಿನವರು ಬರೆದಿರಬೇಕೆನ್ನಲು ಬೇರೆ ಯಾವುದೇ ಚಿಹ್ನೆಯಾಗಲೀ ಇಲ್ಲದ ಕಾರಣದಿಂದ ಅದು ಪತ್ರಿಕೆಯ ಸಂಪಾದಕರದ್ದೇ ಇರಬೇಕೆಂದು ಊಹಿಸುತ್ತೇನೆ. ಅದರಲ್ಲಿ ಅವರು ಬರೆದ ವಿಚಾರಗಳನ್ನು ನೋಡಿದರೆ ಶಾಸನ ಸಭೆಯಲ್ಲಿ ತಯಾರಿಸಿಟ್ಟ ಸರಕಾರಿ ಮೆಂಬರರ ಉತ್ತರದಂತೆ ತೋರುವದಲ್ಲದೆ ಅದರಲ್ಲಿ ಬರೆದವನ ತಲೆ, ಹೃದಯಗಳ ಪರಿಚಯವಾಗುವಂತಿಲ್ಲ. ಆದರೆ ಒಂದು ಮಾತ್ರ ತೋರುತ್ತದೆ. ಆ ಪತ್ರ ಶ್ರೀ ಪಿ. ಜಿ. ಐಯ್ಯಪ್ಪನವರು 'ಕೊಡಗು' ಪತ್ರಿಕೆಯಲ್ಲಿ ಬರೆದ ಲೇಖನಕ್ಕೆ ಉತ್ತರದಂತಿದೆ. ಸ್ವಾರಸ್ಯವೆಂದರೆ ಶ್ರೀ ಐಯ್ಯಪ್ಪನವರ ಸವಾಲಿಗೆ ಜವಾಬು ಕೊಡುವದರ ಬದಲು ಪ್ರತಿ ವಾಕ್ಯಗುಚ್ಛದ ಅಂತ್ಯದಲ್ಲಿ "ಐಯ್ಯಪ್ಪನವರು ಲಾಯರು, ಕಾನೂನು ತಿಳಿದವರು ಜನರನ್ನು ತಪ್ಪು ದಾರಿಗೆ ಎಳೆಯುವದು ವ್ಯಸನಕರ"ವೆಂಬ ಪಲ್ಲವಿಯನ್ನು ಹಾಡಿದ್ದಾರೆ. If the reasoning is weak the voice will be louder ಎಂಬಂತೆ ಸಕಾರಣವಾಗಿ ವಾದಿಸಲು ಎಡೆ ಇಲ್ಲದ ಕಾರಣ ಅವರ ಈ ಪಲ್ಲವಿರಾಗ ಇರಬೇಕು.

ಬಾಣೆಗೆ ಕಂದಾಯ ಹಾಕಲು ನಿರ್ಧರಿಸಿದ ರೀತಿಯು ಪ್ರಜಾ ಸರಕಾರಕ್ಕೆ ಸರಿಯಾದುದಲ್ಲ. ೧೯೫೩–೫೪ರ ಬಜೆಟ್ಟಿನಲ್ಲಿ ಈ ಕಂದಾಯದಿಂದ ರೂ. ೫೦ ಸಾವಿರ ಆದಾಯ ಬರುವದೆಂದು ಸೇರಿಸಿದ್ದಾರೆ. ಶಾಸನ ಸಭೆಯ ಮುಂದಿಡುವ ಬಜೆಟ್ಟಿಗೆ ಏನಾದರೂ ಅರ್ಥವಿರುವದೇ ಆದರೆ ಈ ಹಣವು ಆ ವರ್ಷದಲ್ಲಿ ವಸೂಲ್ಮಾಡಲ್ಪಡಬೇಕು. ಹಾಗೆ ಒಂದು ಹೊಸ ಕಂದಾಯವನ್ನು ಯಾರನ್ನೂ ಕೇಳದೆ ಹಾಕುವದು ಪ್ರಜಾ ಸರಕಾರದ ನೀತಿಯೇ? ಜನತೆಯನ್ನು ಕೇಳುವ ವಿಚಾರವಿರಲಿ, ಕಡೆಗೆ ಅವರ ಪ್ರತಿನಿಧಿಗಳನ್ನಾದರೂ ಕೇಳಬೇಡವೇ? ಒಂದು ಹೊಸ ಕಂದಾಯವನ್ನು ಹಾಕುವ ಮೊದಲು ಅಂಥಾ ಕಂದಾಯವನ್ನು ಹಾಕುವ ಬಗ್ಗೆ ಶಾಸನ ಸಭೆಯಲ್ಲಿ ಮಸೂದೆ ಬರಬೇಡವೇ? ಅಂಥಾ ಮಸೂದೆಯನ್ನು ಜನತೆಯ ಅಭಿಪ್ರಾಯಕ್ಕಾಗಿ ಪ್ರಕಟಿಸಿ ಅವರ ಸಲಹೆಯೂ ವಿರೋಧಾಭಿಪ್ರಾಯಗಳನ್ನು ತಿಳಿಯಬೇಡವೇ? ಇದಾವುದನ್ನೂ ಮಾಡದೆ ಬಜೆಟ್ಟಿನಲ್ಲಿ ಏಕಾಏಕಿ ನಾಲ್ಕನೆಯಂತೆ ಕಂದಾಯದಿಂದ ಉತ್ಪತ್ತಿ ರೂ. ೫೦ ಸಾವಿರವೆಂದು ಸೇರಿಸಿಬಿಡುವ ಅಧಿಕಾರ ಎಲ್ಲಿಂದ? ಹಾಗೆ ಜನರನ್ನೂ, ಜನಪ್ರತಿನಿಧಿಗಳನ್ನೂ ಕೇಳದೆ ತಮ್ಮ ಸ್ವ ಇಚ್ಛೆಯಿಂದ ಹೊಸ ಕಂದಾಯವನ್ನು ಅಧಿಕಾರ ಹೊತ್ತವರು ಹಾಕುವದಾದರೆ ಹಿಂದಿನ ಆಳರಸರ ನಿರಂಕುಶ ಆಡಳಿತಕ್ಕೂ ಈ ಸೋಗಿನ ಪ್ರಜಾ ಪ್ರಭುತ್ವಕ್ಕೂ ಇರುವ ವ್ಯತ್ಯಾಸವೇನು?

ಬಜೆಟಿನಲ್ಲಿ ಇದನ್ನು ಸೇರಿಸಿ ಬಿಡಲಾಗಿದೆ. ಇದನ್ನು ಸೇರಿಸಿಯೇ ಖರ್ಚಿನ ಪಟ್ಟಿಯನ್ನು ತಯಾರಿಸಲಾಗಿದೆ. ಆ ಬಜೆಟ್ಟು ಕೌನ್ಸಿಲಿನಲ್ಲಿ ಬಹುಮತದಿಂದ ಪಾಸಾಗಿದೆ. ಆದ್ದರಿಂದ ಅದು ಸರಿಯೆಂದು ಹೇಳುವ ವಾದವು ಕುರುಡುವಾದವಲ್ಲದೆ ಬೇರಲ್ಲ. ಚುನಾವಣೆಯಲ್ಲಿ ಬಹುಮತ ದೊರೆಯಿತು. ಶಾಸನ ಸಭೆಯಲ್ಲಿ ಬಹುಮತವಿದೆಯೆಂದಾಕ್ಷಣ ಯಾರನ್ನೂ ಕೇಳದೆ ತಮ್ಮ ಮನಸ್ಸಿಗೆ ಬಂದ ಹಾಗೆ ತಮ್ಮ ಐದು ವರ್ಷಗಳ ವರೆಗೆ ವರ್ತಿಸುವದು ಸರಿ ಎಂದು ಇವರ ವಾದವೇ? ೧೯೫೩ರಲ್ಲಿ ಬಾಣೆ ಕಂದಾಯವನ್ನು ಒಳಗೊಂಡ ಬಜೆಟು ಪಾಸಾಗಿದೆ. ಅಲ್ಲಿಂದ ಮಳೆ ಪ್ರಾರಂಭವಾಗುವ ವರೆಗೆ ಜನರಿಗೆ ಯಾವ ಕೆಲಸವೂ ಇರಲಿಲ್ಲ. ತಮ್ಮ ಅಭಿಪ್ರಾಯಗಳನ್ನು ತಿಳಿಸಲು ಸಮಯವಿತ್ತಲ್ಲ ಎಂಬುದಾಗಿ ಅವರು ಕೇಳುತ್ತಾರೆ. ಮಡಿಕೇರಿ ಕೋಟೆಯಲ್ಲಿ ಕೂತು ಜನರಿಗೆ ತಿಳಿಯದೆ ಭಾಷೆಯಲ್ಲಿ ಬಜೆಟ್ಟು ತಯಾರಿಸಿ ಅದರೊಳಗೆ ಬಾಣೆ ಕಂದಾಯವನ್ನು ಹೇರಬೇಕೆಂದು ಬರಕೊಂಡದ್ದು ಬಡ ರೈತನಿಗೆ ಹೇಗೆ ಗೊತ್ತಾಗಬೇಕು. ಶಾಸನ ಸಭೆಯ ಮುಂದೆ ಆ ಕಂದಾಯವನ್ನು ವಿರೋಧಿಸುವ ಠರಾವು ಬರುವ ವರೆಗೆ ಆ ರೀತಿಯ ಒಂದು ಕಂದಾಯ ಬಜೆಟ್ಟಿನಲ್ಲಿ ಸೂಚಿತವಾಗಿದೆಯೆಂದು ತಿಳಿಯದ ಶಾಸನ ಸಭಾ ಸದಸ್ಯರಿದ್ದರೆಂದರೆ ಮತ್ತೆ ಹಳ್ಳಿಗಾಡಿನ ಜನರಿಗೆ ಹೇಗೆ ತಿಳಿಯಬೇಕು? ಶಾಸನ ಸಭೆಯಲ್ಲಿ ಪಕ್ಷದ ಹಿಡಿತದಲ್ಲಿ ಬಿದ್ದಿರುವ ಸದಸ್ಯರು ತಮ್ಮ ಸ್ವಂತ ಅಭಿಪ್ರಾಯಗಳನ್ನು ಮೂಲೆಗೊತ್ತಿ ಮುಂದಾಳು ಹೇಳಿದಂತೆ ಕೈ ಎತ್ತಬೇಕಿರುವಾಗ ಎಸೆಂಬ್ಲಿಯಲ್ಲಿ ಸದಸ್ಯರು ಪಟ್ಟ ಅಭಿಪ್ರಾಯವೇ ಎಲ್ಲಾ ವಿಚಾರಗಳಲ್ಲಿ ದೇಶದ ಅಭಿಪ್ರಾಯವಾಗಲಾರದು.

ಚೀಫ್ ಕಮಿಷನರು ಮಂತ್ರಿಗಳ ಸಲಹೆ ಮೇರೆ ಸರಕಾರಿ ಪ್ರಕಟಣೆಗಳನ್ನು ಪ್ರಕಟಿಸುವದೆಂದೂ ಆದ್ದರಿಂದ ಈ ಬಾಣೆ ಕಂದಾಯವು ಮಂತ್ರಿಗಳ ಶಿಫಾರಸ್ಸಿನಂತೆಯೇ ಬಜೆಟ್ಟಿನಲ್ಲಿ ಸೇರಿಸಲ್ಪಟ್ಟಿದೆಯೆಂದೂ ಹೇಳುವದನ್ನು ನೋಡಿದರೆ ಆಶ್ಚರ್ಯವಾಗುತ್ತೆ. ಆದರೆ ಅವರು ಮಂತ್ರಿಗಳೇ ಇರಲೀಯೂ ಯಾವ ಕುಬೇರರೇ ಇರಲೀ, ಒಂದು ಹೊಸ ಕಂದಾಯವನ್ನು ಜಾರಿಗೆ ತರುವಾಗ ಆ ಬಗ್ಗೆ ಒಂದು ಮಸೂದೆಯನ್ನು ಶಾಸನ ಸಭೆಯಲ್ಲಿ ಮಂಡಿಸದೆ ಏಕಾಏಕಿ ಸ್ವಯಂ ಅಧಿಕಾರದಿಂದ ಬಜೆಟ್ಟಿನಲ್ಲಿ ಅದನ್ನು ಸೇರಿಸಿ ಬಿಡುವ ಅಧಿಕಾರ ಎಲ್ಲಿದೆ ಎಂಬುದೇ ಪ್ರಶ್ನೆ! ಹಾಗೆ ಮಂತ್ರಿಗಳು ಸೇರಿಸಿ ಬಿಡಬಹುದಾದರೆ ಅವರ ಅಧಿಕಾರ ಅವಧಿ ಮುಗಿಯುವ ವರೆಗೆ ಅವರು ಯಾವ ಅಪರಾಧ ಮಾಡಿದರೂ ಅವರ ಅಧಿಕಾರವನ್ನು ಕಿತ್ತೆಗೆಯಲು ಯಾವುದೇ ಅಧಿಕಾರವಿಲ್ಲದ ಭಾರತದ ಪ್ರಜೆಯು ಅದನ್ನು ಬಾಯಿಮುಚ್ಚಿ ಸಹಿಸಬೇಕೆಂದು ಇವರ ಅಭಿಪ್ರಾಯವೇ? ಒಬ್ಬನು ತನ್ನ ಸ್ವಇಚ್ಛೆ ಬಂದಂತೆ ಮಾಡಲೆಂದು ಈ ಸೋಗಿನ ಪ್ರಜಾಜವಾಬ್ದಾರಿ ಸರಕಾರವೇ?

ಕೊಡಗು ರೆವಿನ್ಯೂ ಮ್ಯಾನ್ಯುವಲಿನ ನಿಯಮದಂತೆ ಇದು ನಡೆದಿದೆ. ಅದನ್ನು ಬದಲು ಮಾಡುವ ವರೆಗೆ ಅದಕ್ಕೆ ಕಾನೂನಿನ ಬೆಂಬಲವಿದೆ. ಆದ್ದರಿಂದ ಅದನ್ನು ಅನುಸರಿಸಿ ನಡೆಯುವದು ಸರಿಯಾಗಿದೆಯೆಂದು ಇಂದಿನ ಜನ ಸರಕಾರವೆನ್ನುವ ಮಂತ್ರಿಗಳೂ ಅವರ ಅನುಯಾಯಿಗಳೂ ಹೇಳುವದಾದರೆ ಇವರಿಗೂ ಇವರಿಗೆ ಮೊದಲು ಅದೇ ಖಾನೂನುಗಳ ಮೇಲೆ ಆಡಳಿತ ನಡೆಸುತ್ತಿದ್ದ ಬಿಳಿ ಜನರಿಗೂ ಇರುವ ವ್ಯತ್ಯಾಸವೇನು? ಇಂದಿನ ಜನತಾ ಯುಗಕ್ಕೆ ಸರಿಯಲ್ಲದ ಓಬೀರಾಯನ ಕಾಲದ ನಿಯಮಗಳಿದ್ದರೆ ಅದನ್ನು ಇಂದಿನ ಪ್ರಜಾನೀತಿಗೆ ಸರಿಯಾಗಿ ಮಾರ್ಪಡಿಸುವ ಜವಾಬ್ದಾರಿ ಯಾರದು? ಅದು ಬಿಟ್ಟು, ಹಳೆಯ ಕಾನೂನಿದೆ. ಅದರಂತೆ ಆಡಳಿತ ನಡೆಯಲಿ ಎನ್ನುವದಾದರೆ ಅದು ಬೇಜವಾಬ್ದಾರಿಯ ಮಾತಲ್ಲವೇ?

ಮತ್ತೆ ರೆವಿನ್ಯೂ ರೆಗ್ಯುಲೇಶನ್‌ನಲ್ಲಿ ಬಾಣೆ ಕಂದಾಯ ಹಾಕಬಹುದೆಂಬ ನಿಯಮವೆಲ್ಲಿದೆ? ಇಲ್ಲದ ಕಾನೂನನ್ನು ಈಗ ಅದರಲ್ಲಿ ಸೇರಿಸಲು ಹೊರಟಿರುವವರು ಯಾರು? ರೆವಿನ್ಯೂ ರೂಲಿನಲ್ಲಿ ಬಾಣೆ ಕಂದಾಯ ಹಾಕಲು ಅನು ಇಲ್ಲದ ಕಾರಣದಿಂದಲೇ ಇಂದಿನ ಕರಡು ತಿದ್ದುಪಡಿಯನ್ನು ಸರಕಾರ ಪ್ರಕಟಿಸಿರುವದಾಗಿದೆ. ಹಾಗಿರುವಾಗ ಹಳೇ ಕಾಲದ ನಿಯಮದಂತೆ ಇದನ್ನು ಮಾಡಲಾಗುತ್ತಿದೆ. ಇದಕ್ಕೆ ಕಾನೂನಿನ ಬೆಂಬಲವಿದೆಯೆಂದು ಹೇಳುವದು ಕೇವಲ ಜನರನ್ನು ಮರುಳುಗೊಳಿಸುವ ಮಾತಾಗಿದೆ.

"ಜನ್ಮಭೂಮಿ"ಯ ಅನಾಮಧೇಯ ಲೇಖಕರು ಹೇಳುವಂತೆ ಅದು ಬಜೆಟ್ಟಿನಲ್ಲಿ ಸೇರಿ ಹೋಗಿದೆ. ಶಾಸನ ಸಭೆಯು ಅದನ್ನು ಅಂಗೀಕರಿಸಿದೆಯೆಂದು ಹೇಳುವದಾದರೆ ಬಾಣೆಕಂದಾಯದ ಈ ತಿದ್ದುಪಡಿಯ ಬಗ್ಗೆ ಪುನಹ ಜನತೆಯ ಅಭಿಪ್ರಾಯವನ್ನು ಕೇಳುವದರ ಅಭಿಪ್ರಾಯವೇನು? ರೆವಿನ್ಯೂ ರೆಗ್ಯುಲೇಶನಿನಲ್ಲಿ ತಿದ್ದುಪಡಿ ಮಾಡಲು ಸೂಚಿತವಾದ ಕರಡಿನ ಬಗ್ಗೆ ವಿರೋಧ ಅಭಿಪ್ರಾಯವಿರುವವರು ೬೦ ದಿನಗಳೊಳಗೆ ಸರಕಾರಕ್ಕೆ ಬರೆದುಕೊಳ್ಳಬೇಕೆಂದು ಕೇಳಿರುವದೇಕೆ? ಬಜೆಟ್ಟಿನಲ್ಲಿ ಪಾಸಾಗಿರುವ ಈ ವಿಚಾರಕ್ಕೆ ವಿರೋಧವಾಗಿ ಜನತೆ ಅಭಿಪ್ರಾಯ ಕೊಟ್ಟು ರೆವಿನ್ಯೂ ರೆಗ್ಯು

೯ನೇ ಪುಟ ನೋಡಿ

ಧರ್ಮ ರಹಸ್ಯ.

ನಿತ್ಯ ಸತ್ಯದೆಡೆ ಗಮನವಿರಲಿ.

== ಭರ್ತೃಹರಿಯ ವೈರಾಗ್ಯ ಶತಕದಿಂದ ==

(೧) ಗರ್ಭವಾಸ ಕಾಲದಲ್ಲಿ ತಾಯಿಯ ಉದರದಲ್ಲಿ ಅಂಗಾಂಗಗಳನ್ನು ಮುದುಡಿಕೊಂಡು ಕಷ್ಟಪಡಬೇಕಾಗುತ್ತದೆ. ಯೌವನದಲ್ಲಿ ಕಾಂತಾ ಸಂಯೋಗ ಒದಗುತ್ತಲೇ ಅವಳ ವಿಯೋಗವಾದೀತೋ ಎಂಬ ಶಂಕೆ ಇರುತ್ತದೆ. ವೃದ್ಧಾಪ್ಯದಲ್ಲಿ ನಾರೀ ಸುಖಪ್ರಾಪ್ತಿಯಿಲ್ಲವೆಂಬ ದುಃಖವೊಂದಿದೆ. ಹೇ ಮನುಜಾ, ಸಂಸಾರದಲ್ಲಿ ಸುಖವೆಲ್ಲಿದೆ ಹೇಳು?

(೨) ವೃದ್ಧಾಪ್ಯವು ಗರ್ಜಿಸುತ್ತಾ ಮುಂದೆ ಸದಾ ನಿಂತಿದೆ. ರೋಗಗಳು ಶತ್ರುಗಳಂತೆ ದೇಹವನ್ನು ಹೊಡೆಯುತ್ತಲೇ ಇವೆ. ಒಡೆದ ಕೊಡದಿಂದ ಹರಿವ ನೀರಿನಂತೆ ಆಯುಷ್ಯವು ಕಡಿಮೆಯಾಗುತ್ತಿದೆ. ಆದರೂ ಅನ್ಯಾಯ, ಅಹಿತಗಳನ್ನು ಮಾಡುತ್ತಿರುವೆಯಲ್ಲಾ, ಇನ್ನಾದರೂ ಎಚ್ಚರಗೊಳ್ಳಬೇಡವೇ?

(೩) ಯಾವ ಸುಖದ ದಾರಿಯ ಸಾಧನೆಯಿಂದ ಮನುಷ್ಯನು ಬ್ರಹ್ಮಾದಿ ದೇವತೆಗಳನ್ನೂ ಕೂಡ ಕಡೆಗಣಿಸಲು ಶಕ್ತನಾಗುವನೋ ಯಾವುದರಿಂದ ಮೂರು ಲೋಕದ ಅಧಿಪತ್ಯದ ಸಂಪತ್ತನ್ನೂ ನಿಸ್ಸಾರವೆಂದು ಕಡೆಗಣಿಸುವನೋ ಅದೇ ಸತ್ಯಪಥದಿಂದ ದೊರೆಯುವ ಬ್ರಹ್ಮಾನಂದವು. ಆದ್ದರಿಂದ ಸತ್ಪುರುಷರೇ ಅನಿತ್ಯವೂ, ದುಃಖಕರವೂ ಆದುದನ್ನು ತ್ಯಜಿಸಿರಿ.

(೪) ಸುಂದರವಾದಂಥಾ ನಗರ, ಹೆಸರಾಂತ ಅರಸರು, ಸಾಮಂತರಾಜರ ಕೂಟ, ವಿದ್ವತ್ಸಭೆಗಳು, ಸುಂದರಾಂಗಿಯರು, ಸ್ತುತಿ ಪಾಠಕರು, ಸಂಗೀತ, ಐಶ್ವರ್ಯ, ಪ್ರತಿಯೊಂದೂ ಕೂಡ ಒಂದೊಂದೆಡೆ ಕೆಲಕಾಲವಿದ್ದು ಕಾಲನ ಅಧೀನವಾಗುವವು. ನಿಯಮಿತ ಕಾಲಕ್ಕಿಂಥಾ ಹೆಚ್ಚು ಅವು ಬಾಳಲಾರವು. ಆದ್ದರಿಂದ ಚಿರವಾದುವರ ಕಡೆಗೆ ಗಮನವಿರಲಿ.

(೫) ಒಂದು ಮನೆಯಲ್ಲಿ ಒಮ್ಮೆ ತುಂಬಾ ಜನರಿರುವರು. ಸ್ವಲ್ಪ ಕಾಲದ ತರುವಾಯ ಒಬ್ಬನೇ ಆಗಬಹುದು. ಒಬ್ಬನೇ ಇದ್ದಲ್ಲಿ ಮತ್ತೆ ಹೆಚ್ಚು ಜನರು ಸೇರಬಹುದು. ಕೊನೆಗೆ ಯಾರೂ ಇರುವದಿಲ್ಲ. ಕಾಲವೆಂಬ ಜೂಜುಗಾರನು ಭುವನವೂ ಭವನವೆಂಬ ರಂಗದ ಮೇಲೆ ಇರುಳು ಹಗಲಾಟವಾಡುವನು. ಪ್ರಾಣಿಗಳೇ ಪಗಡೆಗಳು. ಉಳಿವು ಮತ್ತು ಅಳಿವು ಎರಡೂ ಕಾಲಾಧೀನ. ಕೊನೆಗೆ ಎಲ್ಲವೂ ಮುಗಿದು ನಾಮಾವಶೇಷವಾಗುವದು.

ಮಕ್ಕಳ ಪುಟ

ಒಂದು ಬುದ್ಧಿ, ನೂರು ಬುದ್ಧಿ, ಸಾವಿರ ಬುದ್ಧಿ.

ಒಂದು ಕೆರೆಯಲ್ಲಿ ನೂರು ಬುದ್ಧಿ ಮತ್ತು ಸಾವಿರ ಬುದ್ಧಿ ಎಂಬ ಎರಡು ಮೀನುಗಳಿದ್ದವು. ಅವುಗಳೊಡನೆ ಒಂದು ಬುದ್ಧಿಯೆಂಬ ಕಪ್ಪೆಯೊಂದು ಸ್ನೇಹ ಬೆಳೆಸಿಕೊಂಡಿತು. ಈ ಮೂರು ಮಿತ್ರರು ಆಗಾಗ್ಗೆ ಒಂದೆಡೆ ಸೇರಿ ಮಾತಾಡಿಕೊಳ್ಳುತ್ತಿದ್ದರು. ಅವರ ಮಾತುಗಳಲ್ಲಿ, ಜಾಣ್ಮೆ, ಕುಶಲತೆ, ಹಾಸ್ಯಗಳು ತುಂಬಿರುತಿದ್ದವು.

ಒಂದು ದಿನ ಸಾಯಂಕಾಲದ ಹೊತ್ತಿಗೆ ಅವರು ಹೀಗೆ ಮಾತಾಡುತ್ತಿರುವಾಗ ಬೆಸ್ತರು ಆ ದಾರಿಗಾಗಿ ಹೋಗುತ್ತಾ ಕೆರೆಯನ್ನು ನೋಡಿದರು. ಅವರಲ್ಲಿ ಒಬ್ಬನು ಮತ್ತೊಬ್ಬನೊಡನೆ ಹೇಳಿದನು, 'ನೋಡು. ಈ ಕೆರೆಯಲ್ಲಿ ಬೇಕಾದಷ್ಟು ಮೀನುಗಳಿರುವಂತೆ ತೋರುತ್ತದೆ. ನೀರೂ ಬಹಳ ಇಲ್ಲ. ನಾಳೆ ಬೆಳಗ್ಗೆ ಇಲ್ಲಿಗೆ ಬರಬೇಕು' ಎಂದನು. ಇಬ್ಬರೂ ಒಪ್ಪಿ ಮುಂದೆ ಸಾಗಿದರು.

ಮಾತಾಡುತ್ತಿದ್ದ ಕೆರೆಯೊಳಗಿನ ಮೂವರು ಮಿತ್ರರು ಈ ಭಯಂಕರ ವಾರ್ತೆಯನ್ನು ಕೇಳಿದರು. ಅವರಿಗೆ ಸಿಡಿಲು ಬಡಿದಂತಾಯಿತು. ಈ ವಿಚಾರವಾಗಿ ಅವರು ಆಲೋಚಿಸಿದರು. ಕಪ್ಪೆಯು ಹೇಳಿತು—"ನನ್ನ ನಚ್ಚಿನ ಗೆಳೆಯರಾದ ನೂರು ಬುದ್ಧಿ, ಸಾವಿರ ಬುದ್ಧಿಗಳೇ, ನಾವೀಗ ಏನು ಮಾಡುವದು. ಈ ಕೆರೆಯಿಂದ ಓಡಿ ಹೋಗುವದೇ? ಅಲ್ಲ ಇಲ್ಲಿ ಇರೋಣವೇ?"

ಸಾವಿರ ಬುದ್ಧಿಯು ಈ ಮಾತನ್ನು ಕೇಳಿ ನಗಾಡುತ್ತಾ ಹೇಳಿತು—"ನನ್ನ ಒಳ್ಳೆಯ ಸ್ನೇಹಿತನೇ, ಕೆಲವು ಮಾತುಗಳನ್ನು ಕೇಳಿದಾಕ್ಷಣ ಗಾಬರಿಗೊಳ್ಳದಿರು. ಅವರು ಕೆರೆಯ ಮೇಲೆ ಧಾಳಿ ಮಾಡುವ ಸಂಭವ ಈಗ ಇಲ್ಲ. ಒಂದು ವೇಳೆ ಅವರು ಬಂದರೆ ನನ್ನ ಬುದ್ಧಿಯ ಬಲದಿಂದ ನಿನ್ನನ್ನೂ ನನ್ನನ್ನೂ ರಕ್ಷಿಸಬಲ್ಲೆನು. ಏಕೆಂದರೆ ನನಗೆ ನೀರಿನಲ್ಲಿ ಬೇಕಾದಷ್ಟು ಉಪಾಯಗಳು ತಿಳಿದಿವೆ.

ಆಗ ನೂರು ಬುದ್ಧಿಯು ಅದನ್ನು ಪುಷ್ಟೀಕರಿಸಿ 'ಹೌದು, ಸಾವಿರ ಬುದ್ಧಿ ಹೇಳುವದು ನಿಜ. ಏಕೆಂದರೆ ಗಾಳಿಗೆ ಎಡೆ ಇಲ್ಲದ ಸ್ಥಳವಾಗಲೀ ಯಾ ದಿನದ ಬೆಳಕಿಗೆ ಆಸ್ಪದವಿಲ್ಲದ ಎಡೆಯಾಗಲೀ ಬುದ್ಧಿವಂತನ ಚತುರತೆಯು ಅಲ್ಲಿ ದಾರಿಯನ್ನು ಕಂಡು ಹಿಡಿಯಬಲ್ಲದು. ಕೆಲವು ಜನರು ಆಡಿಕೊಂಡ ಮಾತಿಗಾಗಿ ಒಬ್ಬರು ಹುಟ್ಟಿದ ಸ್ಥಳವನ್ನು, ಮನೆಯನ್ನು, ವಂಶಪರಂಪರೆಯನ್ನು ಬಿಟ್ಟು ಹೋಗುವದಾಗಲಾರದು. ನೀನು ಹೆದರಬೇಡ. ನಮ್ಮೊಡನೆಯೇ ಇರು. ನನ್ನ ಬುದ್ಧಿ ಬಲದಿಂದ ಆಪತ್ತು ಬಂದಾಗ ನಿನ್ನನ್ನು ರಕ್ಷಿಸುವೆನು' ಎಂದು ಹೇಳಿತು.

'ಆದರೆ' ಕಪ್ಪೆ ಹೇಳತೊಡಗಿತು 'ನನಗೆ ಒಂದೇ ಬುದ್ಧಿ ಇರುವದಾಗಿದೆ. ಅದು ಇಲ್ಲಿಂದ ಓಡಿ ಹೋಗಲು ಹೇಳುತ್ತಿದೆ. ಈ ರಾತ್ರಿಯೇ ನಾನು ಮತ್ತು ನನ್ನ ಹೆಂಡತಿಯು ಪಕ್ಕದ ಬೇರೆ ಯಾವುದಾದರೂ ನೀರಿರುವ ಸ್ಥಳಕ್ಕೆ ಹೋಗಿ ಬಿಡುವೆವು.'

ಕಪ್ಪೆಯು ಆ ರೀತಿ ಹೇಳಿ ಅದೇ ರಾತ್ರಿ ಹತ್ತಿರದ ಬೇರೊಂದು ಕೆರೆಗೆ ತನ್ನ ಸಂಸಾರ ಸಮೇತ ಹೊರಟುಹೋಯಿತು.

ಮರುದಿನ ಬೆಳಗ್ಗೆ ಬೆಸ್ತರು ಯಮದೂತರಂತೆ ಆ ಕೆರೆಗೆ ಬಂದರು. ತಮ್ಮ ಬಲೆಗಳನ್ನು ಕೆರೆಯಲ್ಲಿ ಹಾಕಿದರು. ಕೆರೆಯ ಎಲ್ಲಾ ಮೀನುಗಳು, ಆಮೆಗಳು, ಕಪ್ಪೆ, ಏಡಿ ಮೊದಲಾದ ನೀರಿನಲ್ಲಿ ವಾಸಿಸುವ ಪ್ರಾಣಿಗಳೆಲ್ಲವನ್ನೂ ಅವರು ಹಿಡಿದು ಹಾಕಿದರು. ಸಾವಿರ ಬುದ್ಧಿ ಮತ್ತು ನೂರು ಬುದ್ಧಿಗಳೂ ಕೂಡ ಬಲೆಯಲ್ಲಿ ಸಿಕ್ಕಿದವು. ಎಷ್ಟೇ ರೀತಿಯಿಂದ ತಪ್ಪಿಸಿಕೊಳ್ಳಲು ಅವು ಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಎರಡೂ ಬೆಸ್ತರಿಂದ ಕೊಲ್ಲಲ್ಪಟ್ಟವು. ಬೆಸ್ತರು ಮೀನುಗಳನ್ನು ತೆಗೆದುಕೊಂಡು ಸಂತೋಷದಿಂದ ಹೊರಟರು. ನೂರು ಬುದ್ಧಿಯು ಬಹು ಭಾರವಿದ್ದುದರಿಂದ ಒಬ್ಬನು ಅದನ್ನು ತಲೆಯ ಮೇಲೆ ಹೊತ್ತಿದ್ದನು. ಸಾವಿರ ಬುದ್ಧಿಯ ಕುತ್ತಿಗೆಗಾಗಿ ಹಗ್ಗ ಹಾಕಿ ಮತ್ತೊಬ್ಬನು ತೆಗೆದುಕೊಂಡಿದ್ದನು. ಅವರು ಹಾಗೆ ಹೋಗುತ್ತಿದ್ದಾಗ ಪಕ್ಕದ ಕೆರೆಯಲ್ಲಿ ಸುರಕ್ಷಿತವಾಗಿದ್ದ ಒಂದೇ ಬುದ್ಧಿಯ ಕಪ್ಪೆಯು ತನ್ನ ಹೆಂಡತಿಯನ್ನು ಕರೆದು ಹೇಳಿತು. 'ನೋಡಲ್ಲಿ, ನೂರು ಬುದ್ಧಿ ತಲೆಯೇರಿದ್ದಾನೆ. ಸಾವಿರ ಬುದ್ಧಿಯು ನೇತು ತೂಗಾಡುತ್ತಿದ್ದಾನೆ. ಆದರೆ ನಿನ್ನ ದೀನ ಒಂದೇ ಬುದ್ಧಿಯವನು, ನನ್ನ ಪ್ರಿಯಳೇ, ಈ ಸ್ವಚ್ಛ ನೀರಿನಲ್ಲಿ ತನ್ನ ಹೆಂಡತಿಯೊಡನೆ ಸುಖದಿಂದಿದ್ದಾನೆ.'

ಆದ್ದರಿಂದಲೇ ನಾವು ಕೇವಲ ಚುರುಕು ಬುದ್ಧಿಯೊಂದೇ ಅದೃಷ್ಟವನ್ನು ರೂಪಿಸಲು ಸರ್ವಸ್ವವಲ್ಲವೆಂದು ಹೇಳುವುದಾಗಿದೆ' ಎಂದು ಚಕ್ರ ಹೊತ್ತ ಬ್ರಾಹ್ಮಣನು ಹೇಳಿದನು. ಆಗ ಚಿನ್ನ ಪಡೆದ ಬ್ರಾಹ್ಮಣನು 'ಅದು ಸರಿ, ಇರಬಹುದು. ಆದರೆ ಗೆಳೆಯರ ಸಲಹೆಯನ್ನು ನಿರಾಕರಿಸಬಾರದು. ನನ್ನ ಮಾತನ್ನು ನಿರಾಕರಿಸಿದ್ದರಿಂದ ಏನಾಯಿತು? ನೀನು ನಿಲ್ಲದೆ ಮುಂದೆ ಸಾಗಿದೆ. ನಿನ್ನ ಅತಿಯಾಸೆ, ಬುದ್ಧಿವಂತನೆಂಬ ಹೆಮ್ಮೆಯ ಕಾರಣ ತೊಂದರೆಗೊಳಗಾಗಿ ನರಳುತ್ತಿರುವೆ. ಯಾರೋ ಹೇಳಿದಂತೆ 'ಒಳ್ಳೆ ಚೆನ್ನಾಗಿ ಹಾಡಿದೆ. ನಾನು ಹೇಳಿದ್ದನ್ನು ಕೇಳಲಿಲ್ಲ. ಫಲಿತಾಂಶವಾಗಿ ಅಮೂಲ್ಯ ಕಂಠಹಾರ, ಎಂಥಾ ಸಂಗೀತದ ಮೆಡಲುಗಳು, ದೊರೆತವು' ಎಂದನು. ಚಕ್ರ ಹೊತ್ತವನು ತನಗೆ ಅರ್ಥವಾಗಲಿಲ್ಲವೆಂದ ಕಾರಣ ಮುಂದಿನ ವಾರ ಚಿನ್ನ ದೊರೆತ ಬ್ರಾಹ್ಮಣನು ಸಂಗೀತಗಾರ ಕತ್ತೆಯ ಕಥೆ ಹೇಳುವನು.

ಮಾನಸಿಕ ಮತ್ತು ಆಧ್ಯಾತ್ಮಿಕ ಕ್ರಾಂತಿಯಾಗಲಿ

ಗ್ರಾಮಸ್ಥರು ಖಾದಿಯನ್ನು ಧರಿಸುವ ಪ್ರತಿಜ್ಞೆ ಮಾಡಿ ಗ್ರಾಮದಿಂದ ಹೊರಗೆ ಹೋಗುವ ಐಶ್ವರ್ಯವನ್ನು ಉಳಿಸಬೇಕೆಂದು ಆಚಾರ್ಯ ವಿನೋಭಭಾವೆಯವರು ತೋಹಿಮ ಗ್ರಾಮದಲ್ಲಿ ಪ್ರಾರ್ಥನಾ ಸಭೆಯಲ್ಲಿ ಮಾತಾಡುತ್ತಾ ಹೇಳಿದರು.

"ಮಹಾತ್ಮಾ ಗಾಂಧಿಯವರು ಚರಖಾವನ್ನು ಪ್ರಾರಂಭಿಸಿದಾಗ ಅದರ ಕ್ರಾಂತಿಕಾರಿ ಪರಿಣಾಮಗಳನ್ನು ಕೆಲವೇ ಜನರು ಮನಗಂಡಿದ್ದರು. ಆದರೆ ಖಾದಿ ಚಳವಳವು ದೇಶದಲ್ಲೆಲ್ಲಾ ವ್ಯಾಪಿಸಿ ದೇಶಕ್ಕೆ ರಾಜಕೀಯ ಸ್ವಾತಂತ್ರ್ಯವನ್ನು ತಂದುಕೊಟ್ಟಿತು. ಆದರಲ್ಲಿ ಅಡಕವಾಗಿರುವ ಆರ್ಥಿಕ ಕ್ರಾಂತಿಯು ಇನ್ನೂ ಮರೆಯಲ್ಲಿದೆ ಏಕೆಂದರೆ ಜನರ ಸಾಮಾಜಿಕ ಜೀವನದಲ್ಲಿ ಖಾದಿ ಚಳವಳವು ಬೇರೂರಿದೆಯೆಂಬುದನ್ನು ನಾವು ನೋಡಲಿಲ್ಲ. ಭೂದಾನಯಜ್ಞ ಸಹ ಇಡೀ ದೇಶದಲ್ಲಿ ವ್ಯಾಪಿಸಿದೆ. ಒಡೆ ಭೂಮಿಯನ್ನು ಪುನಃ ಹಂಚುವದರಲ್ಲಿ ನನಗೆ ಆಸಕ್ತಿಯಿಲ್ಲ. ನಾನು ಮಾನಸಿಕ ಮತ್ತು ಆಧ್ಯಾತ್ಮಿಕ ಕ್ರಾಂತಿಯಲ್ಲಿ ಹೆಚ್ಚಿನ ಆಸಕ್ತಿಯುಳ್ಳವನಾಗಿರುತ್ತೇನೆ. ವ್ಯಕ್ತಿಗಳ ಹೃದಯ ಮತ್ತು ಜೀವನದಲ್ಲಿ ಬದಲಾವಣೆ ಮಾಡುವದೇ ಈ ಚಳವಳದ ಮಹತ್ವದ ಸಫಲತೆಯಾಗಿದೆ.

ನಾನು ಪ್ರತಿ ದಿನ ಶಾರೀರಿಕ ಶ್ರಮದ ಕೆಲಸ ಮಾಡುವದರಲ್ಲೂ ವಿಶೇಷ ಉದ್ದೇಶವಿದೆ. ಉತ್ಪಾದಕ ಕೆಲಸ ಮಾಡದೆ ಉಣ್ಣುವದು ಪಾಪವೆಂದು ನಾನೆಣಿಸುತ್ತೇನೆ. ಪ್ರತಿ ವ್ಯಕ್ತಿಗಳು ಶ್ರಮಮಾಡಲು ತೊಡಗದ ಹೊರತು ಭೂದಾನ ಯಜ್ಞವು ಸಫಲವಾಗದು. ಧನಿಕ ಬಡವರಲ್ಲಿ ಭೇದವು ಅಳಿಯದು, ಅಥವಾ ಸರ್ವೋದಯ ಸಮಾಜದ ಸ್ಥಾಪನೆಯಾಗದು.

ಆಹಾರವು ಪ್ರಥಮಾವಶ್ಯಕ, ಬಟ್ಟೆಯು ಎರಡನೆ ಆವಶ್ಯಕವೆಂದು ಜನ ಹೇಳುವರು. ಆದರೆ ನಾನು ಇದಕ್ಕೆ ವಿರುದ್ಧವಾದುದು ನಿಜವೆಂದೆಣಿಸುತ್ತೇನೆ. ಒಬ್ಬನು ಆಹಾರವಿಲ್ಲದೆ ಕೆಲ ದಿನಗಳ ವರೆಗೆ ಬದುಕಬಹುದು. ಆದರೆ ವಸ್ತ್ರಗಳಿಲ್ಲದೆ ಕೆಲ ನಿಮಿಷಗಳ ವರೆಗೆ ಇರಲಾರ. ಬಟ್ಟೆಗಳನ್ನುಟ್ಟು ಮಗು ಯಾವಾಗ ಹೊರಡುತ್ತದೋ ಆಗ ಅದು ಸುಸಂಸ್ಕೃತವಾಗುತ್ತದೆಂದು ವೇದಗಳು ಹೇಳುತ್ತವೆ. ಇಂದು ಚಿಕ್ಕ ಮಕ್ಕಳು ಸಹಿತವಾಗಿ ಪ್ರತಿಯೊಬ್ಬನೂ ಬಟ್ಟೆಯಿಲ್ಲದೆ ಇರಲಾರನು' ಎಂದು ಭಾವೆಯವರು ಹೇಳಿದರು.

ಅವರು 'ಭಾರತೀಯರು ಯಾವಾಗಲೂ ವೇದಾಂತದ ಕುರಿತು ಮಾತನಾಡುತ್ತಾರೆ, ಆದರೆ ನಿತ್ಯದ ಜೀವನವು ಉಪವಾಸದಿಂದ ನರಳುತ್ತಿರುವ ನೆರೆಯವರ ಕಡೆಗೆ ಲಕ್ಷ್ಯ ಸಹ ಕೊಡದ ಸ್ವಾರ್ಥಮಯವೂ ಸಂಕುಚಿತವೂ ಆಗಿದೆ. ಭೂದಾನ ಯಜ್ಞ [illegible] ಜನರ ನಿತ್ಯ ಜೀವನದಲ್ಲಿ ಆತ್ಮಜ್ಞಾನವನ್ನು ಒಳಪಡಿಸುವದು. ಜನರಿಗೆ ಆತ್ಮಜ್ಞಾನವನ್ನು ಕಲಿಸಲು ಇದು ಸಕ್ರಿಯ ಕಾರ್ಯಕ್ರಮ. ಭೂದಾನ ಕೊಡುವವನು ಹಸಿದ ನೆರೆಯವನ ಕಡೆಗೆ ಲಕ್ಷ್ಯ ಕೊಡುತ್ತಾನೆಂದರ್ಥ' ಎಂದರು.

ಪೊನ್ನಂಪೇಟೆ ಹೈಸ್ಕೂಲು

ಸಮಾಜ ವಿಕಾಸ ಯೋಜನೆಯ ಅಂಗವಾಗಿ ಪೊನ್ನಂಪೇಟೆ ಪ್ರೌಢ ಶಾಲಾ ವಿದ್ಯಾರ್ಥಿಗಳು ಕಳೆದ ತಾ ೧೮ರಿಂದ ೨೩ರ ವರೆಗೆ ವಿವಿಧ ಕ್ಷೇತ್ರಗಳಲ್ಲಿ ದುಡಿದು ತಮ್ಮ ಸೇವೆಯನ್ನು ಸಲ್ಲಿಸಿದರು.

೩೫ ವಿದ್ಯಾರ್ಥಿಗಳ ಒಂದು ತಂಡವು ಬಾಳಾಜಿ ನಾಲೆಯಲ್ಲಿದ್ದ ಬದಿ, ಕಸ ತೆಗೆದು ಹಾಕಿ ೭ ಮೈಲು ದೂರ ನಾಲೆಯನ್ನು ದುರಸ್ತುಗೊಳಿಸಿದರು. ೩೦ ವಿದ್ಯಾರ್ಥಿಗಳ ಮತ್ತೊಂದು ತಂಡವು ಪೊನ್ನಂಪೇಟೆ ಶ್ರೀ ರಾಮಕೃಷ್ಣ ಆಶ್ರಮಕ್ಕೆ ಸೇರಿದ ಭೂಮಿಯಲ್ಲಿ ೩೦ ಅಡಿ ಅಗಲದ ಮತ್ತು ೧೦ ಅಡಿ ಆಳವಿರುವ ಹೊಸದೊಂದು ಕೆರೆಯನ್ನು ತೋಡಿದರು. ಮಳೆ ಬರುವ ಮುಂಚೆಯೇ ಸುಮಾರು ಒಂದು ಅಡಿ ನೀರು ಬಂದಿತ್ತು. ೪೦ ವಿದ್ಯಾರ್ಥಿಗಳ ಇನ್ನೊಂದು ತಂಡವು ಶಾಲೆಯ ಸಮೀಪದಲ್ಲಿರುವ ಶಂಭಯ್ಯನ ಕೆರೆಯನ್ನು ಶುದ್ಧೀಕರಿಸಿ ಸರಿಪಡಿಸಿದರು. ಪೊನ್ನಂಪೇಟೆ ಬಸ್ ನಿಲ್ದಾಣದ ದಿಬ್ಬವನ್ನು ಸಮತಟ್ಟು ಮಾಡುವ ಕೆಲಸದಲ್ಲಿ ೩೫ ವಿದ್ಯಾರ್ಥಿಗಳ ತಂಡವು ಭಾಗವಹಿಸಿ ಬಹುಮಟ್ಟಿಗೆ ಅವರ ಕೆಲಸವನ್ನು ಪೂರೈಸಿತು. ಸರಕಾರಿ ಎಗ್ರಿಕಲ್ಚರ್ ಫಾರ್ಮಿನಲ್ಲಿ ೩ ಹೊಸ ಬಾವಿಗಳನ್ನು ತೋಡಿ ಊರಿನಲ್ಲಿ ನೀರಿನ ಅಭಾವವಿದ್ದ ಸಮಯದಲ್ಲಿ ಕುಡಿಯುವ ನೀರು ದೊರೆಯುವಂತೆ ಮಾಡಿದರು. ಮತ್ತು ಅಲ್ಲೇ ೪೦'×೫'×೬' ವಿಸ್ತಾರದ ಒಂದು ದಿಬ್ಬವನ್ನು ಕಡಿದು ಸಮತಟ್ಟು ಮಾಡಿದರು. ನೋಟಿಫೈಡ್ ಏರಿಯಾದ ಚರಂಡಿ ಕಟ್ಟೋಣದ ಸಂಬಂಧವಾಗಿ ರಸ್ತೆಯ ಪಕ್ಕದಲ್ಲಿದ್ದ ಮಣ್ಣಿನ ರಾಶಿಯನ್ನು ಎತ್ತಿ ಹಾಕಿ ಶುದ್ಧಗೊಳಿಸಿದರು. ಉಳಿದ ವಿದ್ಯಾರ್ಥಿಗಳು ಶಾಲೆಯ ಮೈದಾನವನ್ನು ಸಮತಟ್ಟು ಮಾಡುವ ಕೆಲಸದಲ್ಲಿ ನಿರತರಾಗಿದ್ದರು.

ಬರೆದು ಬಂದುದು.

ಓದುಗರ ಓಲೆ.

ಹರಕೊಲ್ಲಲ್ ಪರಕಾವನೆ

ಇಂದಿನ ಸರಕಾರವು ಬಡ ಪ್ರಜೆಗಳ ಶಾಂತಿ ಸ್ಥಾಪನೆಗೆ ಪ್ರಯತ್ನಿಸುತಿದ್ದರೂ ಕೆಲವರು ಅದರಲ್ಲಿ ಸೇರಿಕೊಂಡು ಸರಕಾರದ ಧ್ಯೇಯವನ್ನೇ ನುಂಗಲು ಹೊರಟಿದ್ದಾರೆ. ಬಡ ಪ್ರಜೆಗಳ ಕಷ್ಟ ಸುಖಗಳಿಗನುಸಾರವಾಗಿ ಕೆಲಸ ಕೊಡುವ ಅಭ್ಯಾಸವು ಇವರು ಹಲವರಲ್ಲಿ ಇಲ್ಲವೇ ಇಲ್ಲ. ನಾನು ಒಬ್ಬ ನಿರುದ್ಯೋಗಿ. ನಾನು ಸನ್ ಎಸ್. ಎಸ್. ಎಲ್. ಸಿ. ಪರೀಕ್ಷೆಯನ್ನು ೧೯೫೧ರಲ್ಲೇ ಪಾಸು ಮಾಡಿದೆನು. ಹೆಸರನ್ನೂ ರಿಜಿಸ್ಟರ್ ಮಾಡಿಸಿ ವರ್ಷವೊಂದು ಕಳೆದು ತಿಂಗಳುಗಳು ಕಾಲಿಡಲು ಹೊರಟಿವೆ. ಆದರೂ ಕೆಲಸ ಮಾತ್ರ ದೊರೆಯಲೇ ಇಲ್ಲ. 'ಇಂಟರ್‌ವ್ಯೂ'ಗಳೆಂಬವು ಲೆಕ್ಕವಿಲ್ಲದಷ್ಟು ಕಳೆದವು. ಮಡಿಕೇರಿಗೆ ಹಲವು ಬಾರಿ ತಿರುಗಿ ಅನಾವಶ್ಯಕವಾಗಿ ದುಡ್ಡನ್ನು ತೆತ್ತೂ ಆಯಿತು. ಮಿನಿಸ್ಟರನ್ನೂ ಆಯಾಯ ಇಲಾಖೆಯ ಆಫೀಸರನ್ನೂ ಕಂಡು ಸಲಾಂಗಳನ್ನು ಹಾಜರ್ ಮಾಡಿಯೂ ಆಯಿತು. ಆದರೂ ಪ್ರಯೋಜನವಾಗಲಿಲ್ಲ. ಹಲವು ಅಧಿಕಾರಿಗಳಲ್ಲಿ ನನ್ನ ತೊಂದರೆಯನ್ನು ನಾನು ಹೇಳಿಕೊಂಡಿದ್ದೇನೆ. ಒಬ್ಬ ಆಫೀಸರು 'ನಿನಗೆ ಕೆಲಸ ಸಿಕ್ಕದಿದ್ದರೆ ಕೋಟೆಬೆಟ್ಟದವರಿಗೆ ತೆಂಗಿನಕಾಯಿ ಒಡೆ' ಎಂದೂ ಸಹ ಉಸುರಿದರು. ತೆಂಗಿನಕಾಯಿ ಒಡೆದು ಕೆಲಸ ಪಡೆಯುವಷ್ಟು ಸುಲಭವಾಗಿದ್ದರೆ ಅವರಿಗೆ ಸಲಾಂ ಹೊಡೆಯುವ ಅವಶ್ಯಕತೆಯಾದರೂ ನಮಗೇನಿತ್ತು? ನಾನು ಕಳೆದ ವರ್ಷ ಪಾಸು ಮಾಡಿದರೂ ನನಗೆ ಕೆಲಸ ಇಲ್ಲ. ಆದರೆ ಈ ವರ್ಷ ಪಾಸು ಮಾಡಿದ, ನನಗಿಂತ ಕಡಿಮೆ ಮಾರ್ಕುಗಳನ್ನು ಪಡೆದವರಿಗೆ ಕೆಲಸ ಕೊಡಲಾಗಿದೆ. ಎಸ್. ಎಸ್. ಎಲ್. ಸಿ. ಪಾಸು ಮಾಡದವರಿಗೆ ಈ ಮೊದಲು ಟೀಚರ್ಸ್ ಪೋಸ್ಟನ್ನು ಕೊಟ್ಟಿರುತ್ತಾರೆ. ದುರಾದೃಷ್ಟಶಾಲಿಗಳಾದ ನಮ್ಮಂಥವರಿಗೆ ಈ ರೀತಿ ಮಾಡಲು ನಾವು ಸರಕಾರಕ್ಕೆ ಮಾಡಿದ ದ್ರೋಹವಾದರೂ ಏನು? "ಹರ ಕೊಲ್ಲಲ್ ಪರ ಕಾವನೆ" ಎಂಬಂತೆ ಸರಕಾರವೇ ಈ ರೀತಿ ಪಕ್ಷಪಾತ ಮಾಡಿದರೆ ನಾವು ನಮ್ಮ ಕಷ್ಟಗಳನ್ನು ಹೇಳುವುದಾದರೂ ಯಾರಿಗೆ? ಇನ್ನಾದರೂ ಸಂಬಂಧಿಸಿದವರು ಕೆಲಸ ಕೊಡುವ ವಿಚಾರದಲ್ಲಿ ಒಂದು ನಿರ್ದಿಷ್ಟ ನಿಯಮವನ್ನು ಅನುಸರಿಸುವರೇ?

ನಿರುದ್ಯೋಗಿ.

ಕೊಡಗು

ತಾರೀಕು ೩ ಜುಲೈ ೧೯೫೩ನೇ ಶುಕ್ರವಾರ

ಪಂಡಿತ ನೆಹರೂರವರ ವಿಜಯ ಯಾತ್ರೆ.

ಇಂಗ್ಲೆಂಡಿನ ರಾಣಿಯವರ ಕಿರೀಟಧಾರಣ ಮಹೋತ್ಸವಕ್ಕೆ ಪಂಡಿತ ಜವಾಹರಲಾಲರು ಹೋಗಿದ್ದು ತಾರೀಕು ೨೭ ರಲ್ಲಿ ಡೆಲ್ಲಿಗೆ ಹಿಂತಿರುಗಿ ಬಂದರು. ಅವರು ಇಂಗ್ಲೆಂಡಿನಲ್ಲಿದ್ದ ನಾಲ್ಕು ವಾರಗಳಲ್ಲಿ ಅವರು ಸಾಧಿಸಿದ ಸಾಧನೆ, ವಹಿಸಿದ ಪಾತ್ರ, ಭಾರತಕ್ಕೆ ಗಳಿಸಿದ ಕೀರ್ತಿ, ಜಗತ್ ಶಾಂತಿಗೆ ಸಲ್ಲಿಸಿದ ಸೇವೆ ಇವುಗಳನ್ನು ಪರಿಶೀಲಿಸಿದರೆ ಇದು ಪಂಡಿತರ ವಿಜಯಯಾತ್ರೆ ಎಂದು ಹೇಳಬೇಕಾಗಿದೆ. ಪಂಡಿತರು ಇಂಗ್ಲೆಂಡಿಗೆ ಹೋಗಲು ರಾಣಿಯವರ ಕಿರೀಟಧಾರಣೋತ್ಸವ ಒಂದು ನೆಪ ಮಾತ್ರ. ಆ ಸಂದರ್ಭದಲ್ಲಿ ಅವರು ವಹಿಸಿದ ಪಾತ್ರ ಚಿರಸ್ಮರಣೀಯವಾದದು.

ಅವರು ಬ್ರಿಟಿಷ್ ಕಾಮನ್‌ವೆಲ್ತ್ ಮಂತ್ರಿಗಳ ಸಮ್ಮೇಳನದಲ್ಲಿ ಭಾಗವಹಿಸಿ ಜಗತ್ತಿನ ಇಂದಿನ ಸಮಸ್ಯೆಗಳ ವಿಚಾರವಾಗಿಯೂ, ಕೊರಿಯಾ ಶಾಂತಿ ಸಂಧಾನಕ್ಕಾಗಿಯೂ ಕೊಟ್ಟ ಸಲಹೆ, ತೋರಿಸಿದ ಮಾರ್ಗಗಳು ಗಮನಾರ್ಹವಾದುವು. ನಂತರ ಸಿಂಹಳದಲ್ಲಿರುವ ಭಾರತೀಯರ ವಿಚಾರದಲ್ಲಿ ಸಿಂಹಳ ಸರಕಾರದ ಮಂತ್ರಿಗಳೊಡನೆ ನಡೆಸಿದ ಮಾತುಕತೆಯೂ ಸಿಂಹಳದಲ್ಲಿರುವ ಲಕ್ಷಾಂತರ ಭಾರತೀಯರ ದೃಷ್ಟಿಯಿಂದಲೂ, ಸಿಂಹಳ ಭಾರತಗಳ ಸಂಬಂಧದ ದೃಷ್ಟಿಯಿಂದಲೂ ಪ್ರಾಮುಖ್ಯವಾದುದಾಗಿದೆ. ನಂತರ ಪಾಕಿಸ್ತಾನ ಮುಖ್ಯ ಮಂತ್ರಿಯೊಡನೆ ನಡೆಸಿದ ಮಾತುಕತೆಯೂ ಫಲಪ್ರದವಾಗಿದೆ. ಪಾಕಿಸ್ತಾನ ಮತ್ತು ಹಿಂದೂಸ್ಥಾನಗಳೊಳಗೆ ಮೈತ್ರಿಯ ಅವಶ್ಯಕತೆಯನ್ನು ಪಾಕಿಸ್ತಾನ ಮುಖ್ಯ ಮಂತ್ರಿಯವರಿಗೆ ನೆಹರೂರವರು ಮನದಟ್ಟು ಮಾಡಿರುವರು. ಈ ಸಂಧಾನದ ಫಲವಾಗಿಯೇ ಪಂಡಿತ ಜವಾಹರರು ಪಾಕಿಸ್ತಾನದ ರಾಜಧಾನಿ ಕರಾಚಿಗೆ ಹೋಗಿ ಅಲ್ಲಿ ಪುನಹ ತಮ್ಮ ಮಾತುಕತೆಗಳನ್ನು ಮುಂದರಿಸುವ ಆಸ್ಪದ ಉಂಟಾಗಿದೆ. ಲಂಡನಿನಿಂದ ಹಿಂದಕ್ಕೆ ಬರುವಾಗ ಈಜಿಪ್ಟಿನಲ್ಲಿ ಅಲ್ಲಿಯ ಜನರಲ್ ನಗೀಬರೊಡನೆ ಮಾತುಕತೆ ನಡೆಸಿ ಈಜಿಪ್ಟಿನ ಗೆಳೆತನವನ್ನು ಸಂಪಾದಿಸಿದ್ದೂ ಪ್ರಶಂಶನಾರ್ಹವಾಗಿದೆ.

ನೆಹರೂರವರು ಇಂದು ಕೇವಲ ಭಾರತದ ಪ್ರಧಾನಿ ಮಾತ್ರವಲ್ಲ ಅಂತರಾಷ್ಟ್ರೀಯರಂಗದಲ್ಲಿ ಅವರ ವರ್ಚಸ್ಸು ಬಹು ಮಟ್ಟಿಗೆ ಹಬ್ಬಿದೆ. ಜಗತ್ತಿನ ಮಹಾ ವ್ಯಕ್ತಿಗಳಲ್ಲಿ ಅವರೊಬ್ಬರಾಗಿದ್ದಾರೆ. ಅವರ ವ್ಯಕ್ತಿತ್ವದಿಂದ, ಅವರು ಅನುಸರಿಸುತ್ತಿರುವ ವಿದೇಶ ನೀತಿಯಿಂದ ಭಾರತದ ಕೀರ್ತಿಯು ಬಹು ಮಟ್ಟಿಗೆ ಮೇಲೇರಿದೆ. ಜಗತ್ತಿನ ಶಾಂತಿ ಸಾಧನೆಯಾಗಬೇಕಾದರೆ ಭಾರತದ ಸಹಾಯ ಹಸ್ತವಿಲ್ಲದೆ ಸಾಧ್ಯವಾಗದು ಎಂಬನ್ನು ಭಾರತದ ವ್ಯಕ್ತಿತ್ವ ಬೆಳೆದಿದೆ. ಜವಾಹರರ ಈ ಲಂಡನ್ ವಿಜಯ ಯಾತ್ರೆಯು ಎಂದೆಂದಿಗೂ ಚಿರಸ್ಮರಣೀಯವಾದುದು. ಇವರು ದೀರ್ಘ ಯುಗಗಳಾಗಿ ಭಾರತದ ಹಿರಿಮೆಯನ್ನು ಇನ್ನೂ ಹೆಚ್ಚಿಸಲಿ.

ವರ್ತಮಾನ.

ಜ್ಯೆಯೂರ್ ಎಂಬಲ್ಲಿಂದ ಉದ್ಯೋಗ ಹುಡುಕಿಕೊಂಡು ಹೊರಟ ಸ್ಕೂಲ್ ಫೈನಲ್ ಪಾಸಾದ ಮಹದೇವನ್ ಎಂಬ ೧೯ ವರ್ಷದ ಯುವಕನು ಮೈಸೂರಿನಲ್ಲಿ ಸುತ್ತಾಡಿ ಅಲ್ಲಿ ಮಡಿಕ್ಕೇರಿಗೆ ಮೂರು ದಿನಗಳ ವರೆಗೆ ಅನ್ನಾಹಾರವಿಲ್ಲದೆ ದಾರಿ ನಡೆದು ಮಡಿಕೇರಿಯ ಡಿಪೋದ ಹತ್ತಿರ ಪ್ರಜ್ಞೆ ತಪ್ಪಿ ಬಿದ್ದಿದ್ದವನನ್ನು ಕಂಡು ಮಡಿಕೇರಿ ಆಸ್ಪತ್ರೆಗೆ ಸೇರಿಸಲಾಗಿದ್ದು ಆತನು ಗುಣ ಹೊಂದುತ್ತಿರುವನು.

ವೀರಾಜಪೇಟೆಯ ಮೂಲ ಶಿಕ್ಷಣ ಅಧ್ಯಾಪಕರ ತರಬೇತು ಶಾಲೆಯ ಚರ್ಚಾಕೂಟದ ಉದ್ಘಾಟನಾ ಸಮಾರಂಭವು ತಾ ೨೯ರಲ್ಲಿ ಕೊಡಗು ಜಿಲ್ಲಾ ವಿದ್ಯಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಕುಮಾರಿ ಎನ್. ಸಿ. ಕಾವೇರಮ್ಮನವರು ಪ್ರಾರ್ಥನೆ ಮಾಡಿದರು. ಶ್ರೀ ಮಹಲಿಂಗಪ್ಪನವರು ಕೂಟದ ಕಾರ್ಯಕಲಾಪಗಳ ಪರಿಚಯ ಮಾಡಿಕೊಟ್ಟರು. ಅಧ್ಯಕ್ಷರು ಅಧ್ಯಾಪಕನ ಕರ್ತವ್ಯವನ್ನು ಕುರಿತು ಭಾಷಣ ಮಾಡಿದರು. ಕುಮಾರಿ ಎಂ. ಜಿ. ಇಂದಿರಾರವರ ವಂದನಾರ್ಪಣೆ ಮಾಡಿದರು.

ನಿವೃತ್ತ ಪೋಲೀಸ್ ಸುಪರಿಂಟೆಂಡೆಂಟರಾಗಿದ್ದ ಪಟ್ಟಮಾಡ ದೇವಯ್ಯನವರು ತಾ. ೩೦ ರಲ್ಲಿ ತಮ್ಮ ೮೮ನೇ ವಯಸ್ಸಿನಲ್ಲಿ ಶಿವಾಧೀನರಾದರು.

ಅಖಿಲ ಭಾರತ ನಾಲ್ಕನೇ ವನಮಹೋತ್ಸವವನ್ನು ತಾ. ೧ರಲ್ಲಿ ಮಡಿಕೇರಿಯಲ್ಲಿ ಆಚರಿಸಲಾಯಿತು. ಚೀಫ್ ಕಮಿಷನರೂ, ಕೊಡಗಿನ ಮಂತ್ರಿಗಳೂ ಕಾಲೇಜ್ ಆವರಣದಲ್ಲಿ ಗಿಡಗಳನ್ನು ನೆಟ್ಟರು.

೧೯೫೩-೫೪ ನೇ ಇಸವಿಯ ಪೊನ್ನಂಪೇಟೆ ಪ್ರೌಢ ಶಾಲಾ ವಾರ್ಷಿಕ ಚುನಾವಣೆಯು ಆಧುನಿಕ ಮತದಾನ ಪದ್ಧತಿಯಂತೆ ತಾ ೨೬-೬-೫೩ ನೇ ಶುಕ್ರವಾರ ನಡೆದು ಈ ಕೆಳಗಿನವರು ಚುನಾಯಿತರಾದರು. ಬಿ. ಕೆ. ಅಪ್ಪಚ್ಚು ಯೂನಿಯನ್ ಸೆಕ್ರಟರಿ, ಕೆ. ಕೆ. ಭೀಮಯ್ಯ 'ಬಾಲಭಾರತಿ'ಯ ಸಂಪಾದಕ ಮತ್ತು ವಾರ್ತಾವಾಹಕ, ಎ. ಎ. ಪೊನ್ನಪ್ಪ ಜನರಲ್ ಕ್ಯಾಪ್ಟನ್ ಕೆ. ಎ. ಪೂವಯ್ಯ ಹಾಕಿ ಕ್ಯಾಪ್ಟನ್, ಎಂ. ಡಿ. ಉತ್ತಪ್ಪ ವಾಲಿಬಾಲ್ ಕ್ಯಾಪ್ಟನ್, ಕೆ. ಜಿ. ಅಪ್ಪಯ್ಯ ಕ್ರಿಕೆಟ್ ಕ್ಯಾಪ್ಟನ್, ಟಿ ಎಸ್. ಮನೋಹರ ಫುಟ್‌ಬಾಲ್ ಕ್ಯಾಪ್ಟನ್, ಎಂ. ಎಸ್. ಪೂಣಚ್ಚ ಬೇಡ್‌ಮಿಂಟನ್ ಕ್ಯಾಪ್ಟನ್, ಎ. ಡಬ್ಲ್ಯು. ಸುಬ್ಬಯ್ಯ ಜೂನಿಯರ್ ಶಾಲಾ ನಾಯಕರಾಗಿಯೂ ಚುನಾಯಿತರಾದರು. ಹುಡಗಿಯರಲ್ಲಿ ಕುಮಾರಿ ಕೆ. ಎಂ. ಸುಬ್ಬಮ್ಮ ನೆಟ್‌ಬಾಲ್ ಕ್ಯಾಪ್ಟನ್, ಎಂ. ಎಂ. ಬೊಳ್ಳಮ್ಮ ಬೇಡ್‌ಮಿಂಟನ್ ಕ್ಯಾಪ್ಟನ್, ಮತ್ತು ಎಂ ಪಿ. ಪೊನ್ನಮ್ಮ ರಿಂಗ್ ಟೆನ್ನಿಸ್ ಕ್ಯಾಪ್ಟನ್‌ರಾಗಿಯೂ ಚುನಾಯಿತರಾದರು.

ಈ ವಾರ ಅಂದರೆ ತಾ ೨೮ ವರೆಗೆ ಮಡಿಕೇರಿಯಲ್ಲಿ ೧೪ ಇಂಚು ೭೭ ಸೆಂಟು ಮಳೆಯಾಗಿದೆ. ಈ ವರ್ಷ ಈ ವರೆಗೆ ಒಟ್ಟು ೩೩ ಇಂಚು ೭೨ ಸೆಂಟು ಮಳೆಯಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ೩೦ ಇಂಚು ೯ ಸೆಂಟು ಮಳೆಯಾಗಿತ್ತು. ಹೆಚ್ಚು ಮಳೆ ಬಿದ್ದ ತಾ. ೩೦ರಲ್ಲಿ ೬ ಇಂಚು ೫ ಸೆಂಟೂ, ತಾ. ೧ರಲ್ಲಿ ೫ ಇಂಚು ೯ ಸೆಂಟು ಮಳೆಯಾಗಿದೆ.

ಕೊಡಗಿನ ಎಲ್ಲಾ ಶಾಲೆಗಳೂ ಈಗ ಸರಕಾರದ ಹಿಡಿತದಲ್ಲಿದ್ದು ಸರಕಾರಿ ಶಾಲೆಗಳಾಗಿರುವದರಿಂದ ಈ ವರೆಗಿನ ಪ್ರೈಮರ್ ಎಲಿಮೆಂಟರಿ ಶಾಲೆಗಳನ್ನು ಮಿಡ್ಲ್ ಸ್ಕೂಲುಗಳೆಂದೂ, ಲೋವರ್ ಎಲಿಮೆಂಟರಿ ಶಾಲೆಗಳನ್ನು ಸರಕಾರಿ ಪ್ರೈಮರಿ ಶಾಲೆಗಳೆಂದೂ ಕರೆಯಲಾಗುವದು.

ಮಡಿಕೇರಿ ಸರಕಾರಿ ಕಾಲೇಜಿನಲ್ಲಿ ಬಿ ಎ ತರಗತಿ ತೆರೆಯಲಾಗಿದೆ. ತಾ. ೨೯ರಿಂದ ಕಾಲೇಜು ಪ್ರಾರಂಭವಾಗಿದ್ದರೂ ಹೊಸ ಕಟ್ಟಡದ ವ್ಯವಸ್ಥೆ ಇನ್ನೂ ಆಗದ್ದರಿಂದಲೂ, ಹಳೆಯ ಕಾಲೇಜಿನಿಂದ ಸಾಗಿಸಿದ ಸಾಮಾನುಗಳ ತಕ್ಕ ವ್ಯವಸ್ಥೆ ಆಗದ್ದರಿಂದಲೂ ಹತ್ತು ದಿನಗಳ ವರೆಗೆ ರಜೆ ಬಿಡಲಾಗಿದೆ.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯವರು ತಮ್ಮ ಕಳೆದ ಮೀಟಿಂಗಿನಲ್ಲಿ ಕಾಂಗ್ರೆಸಿಗೆ ಪುನಃ ಸೇರುವದಾಗಿ ಅರ್ಜಿ ಬರೆದಿದ್ದ ಕೊಡಗು ಶಾಸನ ಸಭಾಸದರಾದ ಶ್ರೀಗಳಾದ ಪಿ. ಐ. ಬೆಳ್ಯಪ್ಪ, ಕೆ. ಪಿ. ಕರುಂಬಯ್ಯ, ಎಚ್. ಕೆ. ಮುತ್ತಣ್ಣ, ಕೆ. ಕೆ. ಗಣಪತಿ ಮತ್ತು ಸಿ. ಸಿ ಉತ್ತಯ್ಯ ಇವರುಗಳನ್ನು ಮುಂದಿನ ಎರಡು ವರ್ಷಗಳ ವರೆಗೆ ಕಾಂಗ್ರೆಸಿಗೆ ಸೇರಿಸಿಕೊಳ್ಳಲಾಗುವದಿಲ್ಲವೆಂದೂ, ವಿಧಾನ ಸಭೆಯಲ್ಲೂ ಅದರ ಹೊರಗೂ ಅವರ ಚಟುವಟಿಕೆಗಳನ್ನು ಈ ಸಮಯದಲ್ಲಿ ನಿರೀಕ್ಷಿಸಲಾಗುವದೆಂದೂ ನಿರ್ಣಯಿಸಿರುವರೆಂದು ತಿಳಿದು ಬಂದಿದೆ.

ಮಡಿಕೇರಿಯಲ್ಲಿರುವ ಡೈರಿ ಫಾರಮನ್ನು ತಾ. ೧ರಿಂದ ಕೂಡಿಗೆಗೆ ವರ್ಗಾಯಿಸಲು ಏರ್ಪಾಡಾಗಿದ್ದರೂ ಮಡಿಕೇರಿಯಲ್ಲಿ ವಿಪರೀತ ಮಳೆಯಾದ ಕಾರಣ ಮಳೆ ಬಿಡುವ ವರೆಗೆ ವರ್ಗಾಯಿಸುವದಿಲ್ಲ. ಮುಂದೆ ಸಾರ್ವಜನಿಕರಿಗೆ ಡೈರಿಫಾರಮಿನ ಹಾಲು ದೊರೆಯಲಾರದೆಂದೂ ಇರುವ ಸ್ವಲ್ಪ ಹಾಲನ್ನು ಸಾರ್ವಜನಿಕರಿಗೆ ಮಡಿಕೇರಿ ಅ. ಸರ್ಜನರ ಆಫೀಸಿನಲ್ಲಿ ಪ್ರತಿ ದಿನ ಬೆಳಗ್ಗೆ ಹಂಚಲಾಗುವದೆಂದೂ ತಿಳಿಯಬರುತ್ತದೆ.

ಅಮೇರಿಕಾದಲ್ಲಿರುವ ಶ್ರೀ ಚೇಯಂಡ ಪೂವಂಡ ಭೀಮಯ್ಯನವರ ಮಗ ಐಯ್ಯಪ್ಪನವರು ಜಾರ್ಜ್ ವಾಷಿಂಗ್‌ಟನ್ ವಿಶ್ವವಿದ್ಯಾಲಯದಲ್ಲಿ ಮೆಕಾನಿಕಲ್ ಇಂಜಿನಿಯರಿಂಗ್ ಪರೀಕ್ಷೆಯಲ್ಲಿ ಪಾಸಾಗಿದ್ದು ಪಿಟ್ಸಬರ್ಗಿನ ವೆಸ್ಟಿಂಗ್ ಹೌಸ್ ಇಲೆಕ್ಟ್ರಿಕ್ ಕಾರ್ಪೊರೇಶನಿನವರು ಉದ್ಯೋಗಕ್ಕೆ ನೇಮಿಸಿಕೊಂಡಿರುವರೆಂದು ತಿಳಿದು ಬಂದಿದೆ.

ಸಾರ್ವಜನಿಕ ಸಭೆಗಳು

ಬಾಣೆ ಕಂದಾಯ ಹಾಕುವದು ಬೇಡ

ನಾಲ್ಕೇರಿ

ತಾ. ೨೬ರಲ್ಲಿ ನಾಲ್ಕೇರಿ ಗ್ರಾಮಸ್ಥರು ಶ್ರೀ ಕಳ್ಳಿರ ಅಯ್ಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಈ ಠರಾವನ್ನು ಪಾಸು ಮಾಡಿದರು—"ನಮ್ಮ ಪ್ರಜಾ ಸರಕಾರವು ಕೈತರ ಮೇಲೆ ಹೊಸದಾಗಿ ಬಾಣೆ ಕಂದಾಯ ಹಾಕಲು ಹೊರಟ ವಿಚಾರಕ್ಕಾಗಿ ತುಂಬಾ ಅತೃಪ್ತಿಯುಂಟಾಗಿದೆ. ಈ ಕಂದಾಯವನ್ನು ವಿಧಿಸಬಾರದಾಗಿ ಸರಕಾರವನ್ನು ಈ ಸಭೆಯು ಕೇಳಿಕೊಳ್ಳುತ್ತದೆ".

ಹುದಿಕೇರಿ

ಶ್ರೀಮಂಗಲ ನಾಡಿನ ಸುಮಾರು ಮುನ್ನೂರು ಜನರು ತಾ. ೨೭ರಲ್ಲಿ ಹುದಿಕೇರಿಯಲ್ಲಿ ಶ್ರೀ ಕೆ. ಎಸ್. ನಂಜಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸರಕಾರದವರು ಬಾಣೆಗೆ ನಾಲ್ಕಾಣೆ ಕಂದಾಯ ವಿಧಿಸುವ ಸೂಚನೆಯನ್ನು ಪೂರ್ತಿ ವಿರೋಧಿಸುತ್ತೇವೆ. ಸರಕಾರವು ಹಾಗೆ ವಿಧಿಸಕೂಡದು ಎಂಬ ಠರಾವನ್ನು ಸರ್ವಸಮ್ಮತಿಯಿಂದ ಪಾಸು ಮಾಡಿದರು.

ದಿವಂಗತ ಪಟ್ಟಮಾಡ ದೇವಯ್ಯನವರು

ತಾ. ೩೦ರ ರಾತ್ರೆ ಕಣ್ಮರೆಯಾದ ಶ್ರೀ ಪಟ್ಟಮಾಡ ದೇವಯ್ಯನವರ ನಿಧನದಿಂದ ಕೊಡಗಿನ ಜನಜೀವನದಲ್ಲಿ ಒಮ್ಮೆ ವರ್ಣರಂಜಿತ ವ್ಯಕ್ತಿಯಾಗಿದ್ದವರೊಬ್ಬರ ಕಣ್ಮರೆಯಾದಂತಾಯಿತು. ೧೮೬೫ರಲ್ಲಿ ಹುಟ್ಟಿದ ಇವರು ಪ್ರಥಮ ಅಂದರೆ ೧೮೮೮ರಲ್ಲಿ ಮುನ್ಸಿಪಲ್ ಸರ್ವಿಸಿಗೆ ಸೇರಿ ನಂತರ ೧೮೯೦ರಲ್ಲಿ ಸರ್ವೆ ಇಲಾಖೆಯಲ್ಲಿದ್ದು ೧೮೯೩ರಲ್ಲಿ ಪೋಲೀಸ್ ಇಲಾಖೆಗೆ ಸೇರಿದರು. ಅವರು ತಮ್ಮ ಶ್ರಮ, ಶಿಸ್ತು, ಕಾರ್ಯದಕ್ಷತೆಗಳಿಂದಾಗಿ ೧೯೨೦ರಲ್ಲಿ ರಾವ್ ಸಾಹೇಬ್ ಬಿರುದನ್ನು ಪಡೆದರು. ೧೯೨೨ರಲ್ಲಿ ಅವರು ಪೋಲೀಸ್ ಸುಪರಿಂಟೆಂಡೆಂಟರಾಗಿ ೧೯೨೬ರಲ್ಲಿ ನಿವೃತ್ತರಾದರು. ಇವರ ಉತ್ತಮ ಕೆಲಸಕ್ಕಾಗಿ ಇವರಿಗೆ ಕಿಂಗ್ಸ್ ಪೋಲೀಸ್ ಮೆಡಲ್ ಕೊಡಲ್ಪಟ್ಟಿತು. ಇವರು ಪೋಲೀಸ್ ಇಲಾಖೆಯಲ್ಲಿ ಯಾವ ರೀತಿ ಕೆಲಸ ಮಾಡಿದರೆಂಬುದಕ್ಕೆ ಇಂದೂ ಕೂಡ ಅವರ ಹೆಸರು ಮನೆ ಮಾತಾಗಿದೆ.

ಸರಕಾರಿ ಕೆಲಸದಿಂದ ನಿವೃತ್ತರಾದ ಇವರು ಮಡಿಕೇರಿ ಪುರಸಭೆಯ ಅಧ್ಯಕ್ಷರಾಗಿ ಆರು ವರ್ಷಗಳ ವರೆಗೆ ಆದರ್ಶ ಸೇವೆ ಸಲ್ಲಿಸಿದರು. ಜಿಲ್ಲಾಬೋರ್ಡು ಮೆಂಬರಾಗಿ, ಬೆಂಚು ಕೋರ್ಟಿನ ಅಧ್ಯಕ್ಷರಾಗಿ ಸ್ಟೇಟ್ ಸಹಕಾರಿ ಬೇಂಕಿನ ಪ್ರೆಸಿಡೆಂಟರಾಗಿ, ಯೂನಿಯನುಗಳ ಫೆಡರೇಶನಿನ ಪ್ರೆಸಿಡೆಂಟರಾಗಿ ತುಂಬಾ ದುಡಿದರು. ೧೯೩೪ರಿಂದ ೧೯೪೭ರ ವರೆಗೆ ಸ್ಟೇಟ್ ಸಹಕಾರಿ ಬ್ಯಾಂಕಿನ ಡೈರೆಕ್ಟರು, ಪ್ರೆಸಿಡೆಂಟ್, ಟ್ರಸ್ಟಿ ಮೊದಲಾದ ಜವಾಬ್ದಾರಿಯನ್ನು ಹೊತ್ತು ಕೆಲಸ ಮಾಡಿದರು. ಇವರಿಗೆ ೧೯೩೦ರಲ್ಲಿ ರಾವ್ ಬಹದ್ದೂರ್ ಬಿರುದು ಕೊಡಲ್ಪಟ್ಟಿತು.

ದಿವಂಗತ ದೇವಯ್ಯನವರೆಂದರೆ ದರ್ಪ ಶಿಸ್ತುಗಳಿಗೆ ಎತ್ತಿದ ಕೈ. ಅವರು ಯಾವ ಕ್ಷೇತ್ರದಲ್ಲಿದ್ದರೂ ಅವರು ಕೈಕೆಳಗಿನವರಿಂದ ದಕ್ಷತೆಯ ಕೆಲಸ ಮಾಡಿಸುತ್ತಿದ್ದರು. ಅಂತು ತನ್ನದೇ ರೀತಿಯಲ್ಲಿ ತನ್ನ ಪಾಲಿನ ಕರ್ತವ್ಯವನ್ನು ಮಾಡಿ ತಮ್ಮ ೮೮ನೇ ವಯಸ್ಸಿನಲ್ಲಿ ಅವರು ಶಿವಾಧೀನರಾದರು. ಅವರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಕೊಡಲಿ.

** ಓದುಗರ ಓಲೆಗಳು. **

ಕಂದಾಯ ತೆರುವವರು ಯಾರು ?

ಸರಕಾರವು ತನ್ನ ವರಮಾನವನ್ನು ಹೆಚ್ಚಿಸುವ ದೃಷ್ಟಿಯಿಂದ ನಾನಾ ಕಂದಾಯವನ್ನು ಪ್ರಜೆಗಳ ಮೇಲೆ ಹಾಕುತ್ತದೆ. ಕೆಲವನ್ನು ಹೇಳುವದಾದರೆ ಭೂಮಿ ಕಂದಾಯ, ಹಿತ್ಲು ಕಂದಾಯ, ಕಾಫಿ, ಕಿತ್ತಳೆ, ಏಲಕ್ಕಿ, ಮೊದಲಾದ ಕಂದಾಯಗಳಿವೆ. ಅದೇ ಅಲ್ಲ ಆದಾಯ ಕಂದಾಯ, ವಾಹನ ಕಂದಾಯ, ಮಾರಾಟ ತೆರಿಗೆ, ಆಕ್ಟ್ರಾಯಿಗಳೂ ಇವೆ. ಮತ್ತೆ ಪಟ್ಟಣಗಳಲ್ಲಿ ಮನೆ ಕಂದಾಯ, ಉದ್ಯೋಗ ಕಂದಾಯ, ನೀರು ಕಂದಾಯ, ನಾಯಿ ಕಂದಾಯ, ಹೀಗೆ ಹಲವಿವೆ. ಇವುಗಳನ್ನು ಸರಕಾರವಾಗಲೀ, ಮುನ್ಸಿಪಾಲಿಟಿಗಳಾಗಲೀ ವಸೂಲ್ಮಾಡುವದು ತಮ್ಮ ಆಡಳಿತ ನಡೆಸಲು ಮತ್ತು ಕಂದಾಯ ಕೊಡುವವರಿಗೆ ಸೌಕರ್ಯ ಒದಗಿಸಿ ಕೊಡಲು ಆಗಿದೆ. ಕಂದಾಯ ಕೊಡುವವರಿಗೆ ಆಗುತ್ತಿರುವ ಸೌಕರ್ಯ, ಅನುಕೂಲತೆಗಳ ವಿಷಯ ನಾನಿಲ್ಲಿ ಬರೆಯುವದಿಲ್ಲ. ಆದರೆ ಈ ವಿಧದ ಕಂದಾಯವನ್ನು ತೆರುವವರಾರೆಂಬುದನ್ನು ಬರೆಯುವೆನು. ಭೂಮಿ, ಬಾಣೆ, ಹಿತ್ಲು, ಮೊದಲಾದ ಕಂದಾಯಗಳೆಲ್ಲ ರೈತನ ತಲೆಗೆ ನೇರವಾಗಿ ಬೀಳುವ ಹೊರೆಯಾಗಿವೆ ಮತ್ತೆ ಉಳಿದ ಬಹುತೇಕ ಕಂದಾಯಗಳನ್ನೂ ಆತನೇ ತೆರಬೇಕಾಗಿದೆ. ಮಾರಾಟ ತೆರಿಗೆ ಹಾಕಿದರೆ ಅದನ್ನು ವ್ಯಾಪಾರಸ್ಥರು ಅವರ ಗಿರಾಕಿಗಳಾದ ರೈತರಿಂದಲೇ ವಸೂಲ್ಮಾಡುತ್ತಾರೆ. ಆಕ್ಟ್ರಾಯಿ ತೆರಿಗೆಯನ್ನೂ ಪೇಟೆಯಿಂದ ಸಾಮಾನು ಪಡೆಯುವ ರೈತನೇ ಕೊಡಬೇಕಾಗುತ್ತದೆ. ಇವನ್ನೆಲ್ಲ ಆತನೇ ತೆತ್ತರೂ ಆತನಿಗೆ ದೊರೆಯುವ ಸೌಕರ್ಯವೇನು ? ವಿದ್ಯುತ್ ದೀಪ, ಡಾಮರು ಹಾಕಿದ ರಸ್ತೆ, ಇವು ವ್ಯಾಪಾರಿಗಳೂ, ಸರಕಾರಿ ಅಧಿಕಾರಿಗಳೂ ಇರುವ ಪಟ್ಟಣಗಳಲ್ಲಿ ಅಲ್ಲದೆ ಬಡರೈತನ ಗ್ರಾಮಕ್ಕೆ ಗಾಡಿ ಹೋಗುವ ರಸ್ತೆಯೂ ಕೂಡ ಇಲ್ಲ. ಆತನ ವ್ಯವಸಾಯ ಆತನ ಮಕ್ಕಳ ವಿದ್ಯಾಭ್ಯಾಸ, ಆತನ ಜೀವನ ಹೋರಾಟದಲ್ಲಿ ಸರಕಾರದಿಂದ ದೊರೆಯುವ ಸೌಕರ್ಯ ಬಹು ಕಿಂಚಿತವಾದುದು. ಆದರೆ ಆಡಂಭರದ ಆಡಳಿತ, ತೋರಿಕೆಯ ಕೋಟೆ ಕೊತ್ತಲು, ಮೆರೆಯುವ ನಗರಗಳು ಇವೆಲ್ಲವುಗಳ ಭಾರವನ್ನು ಹೊರುವವನು ಬಡ ರೈತ ಹಾಗೂ ಶ್ರಮಜೀವಿ. ಆದ್ದರಿಂದ ಬಡ ಜನರ ಕಷ್ಟ ಹೆಚ್ಚಾಗದಂತೆ ನೋಡುವದು ಸರಕಾರದ ಆದ್ಯ ಕರ್ತವ್ಯ.

ಬಡ ರೈತ.

ಈ ಬಸ್ ಲೈನು ಸರಿಯಾಗಿಲ್ಲ

ಬೆಳಿಗ್ಗೆ ವೀರಾಜಪೇಟೆಯಿಂದ ಹೊರಟು ಅಮ್ಮತ್ತಿಗಾಗಿ ಸಿದ್ದಾಪುರಕ್ಕೆ ಬಂದು ಮಡಿಕೇರಿ, ಮೈಸೂರು ಟಪಾಲು ತೆಗೆದುಕೊಂಡು ವೀರಾಜಪೇಟೆಗೆ ಬರುವ ಮತ್ತು ಮಧ್ಯಾಹ್ನ ೨. ೩೦ ಗಂಟೆಗೆ ಅದೇ ಮಾರ್ಗಕ್ಕಾಗಿ ಬಂದು ಸಿದ್ದಾಪುರದಿಂದ ಟಪಾಲು ತರುವ ಬಸ್ ಲೈನು ಸರಿಯಾಗಿ ನಡೆಯುತ್ತಿಲ್ಲ. ಇತ್ತಲಾಗಿ ಅದು ನಿಂತು ಹೋಗಿರುವಂತೆ ತೋರುತ್ತದೆ. ಇದರಿಂದ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗಿದೆ ಈ ಲೈನನ್ನು ನಡೆಸುತ್ತಿದ್ದ ಬಸ್ ಮಾಲಿಕರು ಹಾಗೆ ನಡೆಸಲಿಕ್ಕೆ ಅಶಕ್ತರಾಗಿದ್ದರೆ ಆ ಲೈನನ್ನು ಬೇರೆಯವರಿಗೆ ಕೊಟ್ಟು ಆ ಮಾರ್ಗವಾಗಿ ಬಸ್ ಲೈನು ಓಡಾಡುವಂತೆ ಮಾಡಬೇಕಾಗಿ ಕೊಡಗು ಟ್ರಾನ್ಸ್‌ಪೋರ್ಟ್ ಅತಾರಿಟಿಯವರಲ್ಲಿ ಕೇಳಿಕೆಯಾಗಿದೆ

ಪ್ರಯಾಣಿಕ

ಮಡಿಕೇರಿ ಪೌರಸಭೆಯ ಆಡಳಿತೆ.

ಈಗೀಗ ನಮ್ಮ ಪೌರಸಭೆಯ ಆಡಳಿತೆಯು ನ್ಯಾಯಮಾರ್ಗದಲ್ಲಿ ನಡೆಯದಿರುವುದು ಬಹು ಶೋಚನೀಯ. ಪ್ರತಿ ಮಾಸ ಪತ್ರಗಳಲ್ಲಿ ಪಟ್ಟಣದ ಅಭಿವೃದ್ಧಿಯ ಕುರಿತು ಹೊಗಳಿಕೊಳ್ಳುತ್ತಿರುವುದು ವಾಡಿಕೆಯಾಗಿದೆ. ಎಲಿಸೇಟಿಯ ಚರಂಡಿಯು ಸರಿಯಿಲ್ಲದೆ ನೀರು ನಿಂತು ಮನೆಗಳ ಭದ್ರತೆಗೆ ತೊಂದರೆಯಿದೆ ಎಂದು ಮನವಿಗಳೆಷ್ಟೋ ಆದರೂ ಈ ವಿಚಾರ ಪೌರಸಭೆಯವರು ಎಚ್ಚರ ತೆಗೆದುಕೊಳ್ಳದಿರುವುದು ವಿಚಾರರಹಿತ ಕಾರ್ಯ. ಮಹದೇವಪೇಟೆ ಎಲೆಪೇಟೆಗಳ ರಸ್ತೆ ಸರಿಯಿಲ್ಲದೆ ತಿಂಗಳುಗಳೆಷ್ಟೋ ಆದವು. ದುರಸ್ತಿ ಬಗ್ಗೆ ಕೆಲಸವೇನು ನಡೆಯುತ್ತಿರುವುದಿಲ್ಲ. ರಸ್ತೆಯಲ್ಲಿ ದೀಪವಿಲ್ಲದೆ ರಾತ್ರಿ ತಿರುಗಾಡುವುದು ಕಷ್ಟವೆಂದರೆ ಅಧಿಕಾರಿಗಳಿಗಾಗಲೀ, ವಾಹನಗಳಲ್ಲಿ ಚಲಿಸುವ ಗಜೆಟೆಡ್ ಅಧಿಕಾರಿಗಳಿಗಾಗಲೀ ಹೆಚ್ಚಾಗಿ ಮನವರಿಕೆಯಾಗಲಿಕ್ಕಿಲ್ಲ. ದುರಾದೃಷ್ಟದಿಂದ ಈ ಸ್ಥಳಗಳಲ್ಲಿ 'ಗಣ್ಯ ಮಹನೀಯರು' ವಾಸಮಾಡದಿರುವುದು ನಮ್ಮ ಅಭಾಗ್ಯ. ಒಂದು ತೊಟ್ಟು ನೀರು ಏಪ್ರಿಲ್ ಮೇಗಳಲ್ಲಿ ನಳ್ಳಿಗಳಲ್ಲಿ ಬಾರದಿದ್ದರೂ, ನೀರಿನ ಕರ ಕೊಡಬೇಕೆಂಬ ಖಿದ್ದಾಯ. ಅಧಿಕಾರಿಗಳೆಲ್ಲಾ ಜನರ ಸೇವಕರೆಂದು ತಿಳಿದು ಕಾರ್ಯ ಕೈಗೊಳ್ಳಬೇಕೇ ವಿನಹ ಅಧಿಕಾರ ವಾಣಿಯಿಂದಲ್ಲ. ಇನ್ನಾದರೂ ಈ ಕಡೆ ಗಮನವೀಯಬಾರದೇ ?

ನಾಗರಿಕ.

ಕಾಲೇಜೆಂದರೆ ಫಾರೆಸ್ಟ್?

ಕಳೆದ ವಾರದ 'ಕೊಡಗು' ಪತ್ರಿಕೆಯಲ್ಲಿಯ ವರ್ತಮಾನದಲ್ಲಿ ಕೊಡಗು ಫಾರೆಸ್ಟ್ ಆಫೀಸರನ್ನು ಕಾಲೇಜು ಸ್ಟಾಫ್ ಸಿಲೆಕ್ಷನ್ ಬೋರ್ಡು ಮತ್ತು ಔದ್ಯೋಗಿಕ ಕಾಲೇಜುಗಳಿಗೆ ಕೊಡಗಿನಿಂದ ವಿದ್ಯಾರ್ಥಿಗಳನ್ನು ಆರಿಸುವ ಎರಡು ಸಮಿತಿಗಳ ಸದಸ್ಯರಾಗಿ ಆರಿಸಿರುವದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಕೊಡಗಿನ ಕಾಲೇಜಿಗೆ ಅಧ್ಯಾಪಕರನ್ನು ಆರಿಸುವ ಸಮಿತಿಯಲ್ಲಿ ಫಾರೆಸ್ಟ್ ಆಫೀಸರರು ಏಕೆ ಇರಬೇಕು? ಕಾಲೇಜು ಎಂದರೆ ಫಾರೆಸ್ಟಿನ ಮೃಗಬೇಟೆ, ತೇಗದ ವ್ಯವಸಾಯವೆಂದು ತಿಳಿದು ಹಾಗೆ ಮಾಡಲಾಯಿತೇ? ಮತ್ತೆ ಇವರನ್ನು ಔದ್ಯೋಗಿಕ ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಆರಿಸಲು ಒಬ್ಬ ಮೆಂಬರನಾಗಿ ಆರಿಸಿದುದರ ಅರ್ಥವೇನು? ಫಾರೆಸ್ಟ್ ಕಾಲೇಜಿಗೆ ವಿದ್ಯಾರ್ಥಿಗಳನ್ನು ಆರಿಸುವದಾದರೆ ಚಿಂತೆಯಿಲ್ಲ. ಆದರೆ ಇಲ್ಲಿ ಯೋಗ್ಯ ವಿದ್ಯಾರ್ಥಿಗಳು ಬೇಕಿರುವದು ಮೆಡಿಕಲ್, ಎಗ್ರಿಕಲ್ಚರಲ್, ವೆಟರ್ನರಿ ಕಾಲೇಜುಗಳಿಗೆ. ಆದರೆ ಸಮಿತಿಯಲ್ಲಿ ಮೆಡಿಕಲ್ ಇಲಾಖೆಯ ಸಿವಿಲ್ ಸರ್ಜನರಾಗಲೀ, ವ್ಯವಸಾಯ ಇಲಾಖೆಯ ಅಧಿಕಾರಿಗಳಾಗಲೀ, ಚೀಫ್ ವೆಟರ್ನರಿ ಆಫೀಸರರಾಗಲೀ ಇಲ್ಲ. ಬದಲು ಏನೂ ಸಂಬಂಧವಿಲ್ಲದ ಫಾರೆಸ್ಟ್ ಅಧಿಕಾರಿಗಳು ಇದ್ದಾರೆ. ಯಾವ ವಿಶೇಷ ಕಾರಣಕ್ಕಾಗಿ ಇವರನ್ನು ಈ ಸಮಿತಿಗಳಲ್ಲಿ ಹಾಕಿದ್ದೆಂದು ತಿಳಿಯುವದಿಲ್ಲ ಕೊಡಗಿನ ಸರಕಾರಿ ಉದ್ಯೋಗಿಗಳಲ್ಲಿ ಎಲ್ಲರಿಗಿಂಥಾ ಹೆಚ್ಚು ವೇತನ ಪಡೆಯುವವರಿವರೆಂದು ಇವರನ್ನು ಸೇರಿಸಿರುವದೇ? ಕೊಡಗಿನ ಸರಕಾರದಲ್ಲಿ ಯಾರ್ಯಾರೋ ಏನೇನೋ ಮಾಡಲು ಸಮರ್ಥರು ಎಂಬುದು ಇದರಿಂದ ತಿಳಿಯುತ್ತದೆ.

ವಾಚಕ,

॥ ಮಧುಪರ್ಕ ॥

ವಿಖ್ಯಾತ ಲೇಖಕರಾದ ರೋಮೆರೋಲಾರವರನ್ನು ಕಾಣಲು ಗಾಂಧೀಜಿ ವಿಲಿನೊವ್ ಎಂಬಲ್ಲಿಗೆ ಹೋಗಿದ್ದರು ಅದು ಸ್ವಿಟ್ಜರ್ಲೆಂಡಿನ ಒಂದು ಹಳ್ಳಿ. ಅಲ್ಲಿಯ ಜನ ಗಾಂಧೀಜಿಗೆ ತೋರಿದ ಆದರ ಮರೆಯಲಾರದುದು. ಆ ಹಳ್ಳಿಯಲ್ಲಿ ಒಬ್ಬ ಮುದುಕ. ಸೋಡಾ ಮಾರಾಟ ಮಾಡಿ ಬದುಕುತಿದ್ದ ಬಡವ. ಗಾಂಧೀಜಿ ಉಳಿಕೊಂಡಿದ್ದ ಮನೆಯ ಹತ್ತಿರದಲ್ಲೇ ಆತನ ಮನೆ. ಗಾಂಧೀಜಿ ಪ್ರತಿ ದಿನ ಮನೆಯಿಂದ ಹೊರಟ ಕೂಡಲೇ ಆತನು ಒಂದು ಹೂವಿನ ಗೊಂಚಲನ್ನು ಅಂದವಾಗಿ ಕಟ್ಟಿ ಅವರಿಗೆ ತಂದು ಕೊಡುತ್ತಿದ್ದ. ಅವನ ಚಿಕ್ಕ ಮನೆಯ ಹಿಂದುಗಡೆ ಸುಮಾರು ಆರು ಅಡಿ ಜಾಗವಿತ್ತು. ಅಲ್ಲಿ ಆತನು ಅತ್ಯುತ್ತಮ ಹೂವುಗಳನ್ನು ಬೆಳೆಸಿದ್ದ. ಒಂದು ದಿನ ಅವನ್ನೆಲ್ಲಾ ಗಾಂಧೀಜಿಯವರ ಲಂಡನಿನ ಅತಿಥಿ ಲೆಸ್ಟರಿಗೆ ಆತನು ತೋರಿಸಿದ ನಂತರ ಸಿಳ್ಳು ಹೊಡೆದು ತಾನು ಸಾಕಿದ ಹಕ್ಕಿಗಳನ್ನು ಕರೆದ. ಪಕ್ಷಿಗಳು ಗುಂಪುಗುಂಪಾಗಿ ಹಾರಿ ಬಂದು ಮನೋಹರವಾಗಿ ಸುತ್ತುಮುತ್ತು ಕೂತುಕೊಂಡವು. "ಗಾಂಧೀಜಿ ಈ ಪಕ್ಷಿ ಸಮೂಹವನ್ನು ನೋಡಿದರೆ ಬಹಳ ಸಂತೋಷ ಪಡುತ್ತಾರೆ ನನಗೆ ಗೊತ್ತು. ಆದರೆ ಅವರ ಅಮೂಲ್ಯ ಸಮಯದ ಮೇಲೆ ಹೇಗೆ ನನ್ನ ಇಚ್ಛೆಯನ್ನು ಒತ್ತಲೀ" ಎಂದನಂತೆ ಆ ಮುದುಕ.

ಬಾಣೆ ಕಂದಾಯ

ಈ ವಿಚಾರವಾಗಿ ತಮ್ಮ ವಿರೋಧ ಅಭಿಪ್ರಾಯಗಳನ್ನಾಗಲೀ, ಸಲಹೆಗಳನ್ನಾಗಲೀ ಕೊಡಲು ಮಳೆಯ ದೆಸೆಯಿಂದಲೂ, ವ್ಯವಸಾಯದ ಸಮಯವಾದ್ದರಿಂದ ಬಿಡುವಿಲ್ಲದ್ದರಿಂದಲೂ, ಸಾಧ್ಯವಿಲ್ಲದ ಕಾರಣ ಅಭಿಪ್ರಾಯ ಕೊಡಲಿರುವ ಅವಧಿಯನ್ನು ಮಳೆಗಾಲ ಕಳೆಯುವವರೆಗೆ ಮುಂದರಿಸಿ ನಂತರ ಕಡಿಮೆ ಒಂದು ತಿಂಗಳ ಅವಧಿ ಕೊಡಬೇಕಾಗಿದೆ. ಈ ಬಗ್ಗೆ ಸರಕಾರವು ಮಾಡಿದ ತೀರ್ಮಾನಗಳು ಜನತೆಗೆ ತಿಳಿಯದ ಕಾರಣ ಪತ್ರಿಕೆಗಳ ಮೂಲಕ ಅವರು ತಮ್ಮ ನಿರ್ಧಾರವನ್ನು ತಿಳಿಸಿದರೆ ಹಿತವಾದೀತೆಂದು ಒಂದು ಸಲಹೆಯಾಗಿದೆ.

ಭೀಮಯ್ಯ.

ಕೊಡಗು ಕಾಂಗ್ರೆಸಿನ ನಿರ್ಧಾರ

ಪಾಲ್‌ಘಾಟಿನಲ್ಲಿ ನಡೆದ ರಾಜಕೀಯ ಸಮ್ಮೇಳನದಲ್ಲಿ ಕೊಡಗು ಕೊಚ್ಚಿನ್, ತಿರುವಂಕೂರುಗಳೊಡನೆ ಸೇರಬೇಕೆಂಬ ಠರಾವು ಮಾಡಿದುದನ್ನು ಕೊಡಗು ಕಾಂಗ್ರೆಸು ಖಂಡಿಸಿದ ಠರಾವನ್ನೂ, ಕೊಡಗಿನ ಭವಿಷ್ಯ ನಿರ್ಣಯವು ಕೊಡಗಿನ ಜನತೆಯ ಅಭಿಪ್ರಾಯದಂತೆ ಆಗಬೇಕೆಂಬುದನ್ನೂ ಓದಿದೆನು. ಆದರೆ ಈ ಮೊದಲು ಕಾಸರಗೋಡಿನಲ್ಲಿ, ನಂತರ ದಾವಣಗೆರೆಯಲ್ಲಿ ನಡೆದ ಪರಿಷತ್ತುಗಳಲ್ಲಿ ಕೊಡಗನ್ನು ಭಾವಿ ಕರ್ನಾಟಕದಲ್ಲಿ ಸೇರಿಸುವ ಠರಾವುಗಳಾದುದನ್ನು ನೋಡಿದ ನೆನಪು ನನಗಿದೆ. ಆದರೆ ಪಾಲ್‌ಘಾಟ್ ಠರಾವಿನ ಬಗ್ಗೆ ಎಚ್ಚೆತ್ತು ವರ್ತಿಸಿದ ಕೊಡಗು ಕಾಂಗ್ರೆಸಿಗರು ದಾವಣಗೆರೆ ಯಾ ಕಾಸರಗೋಡು ಠರಾವುಗಳ ಬಗ್ಗೆ ಪಿಟ್ಟೆನ್ನಲಿಲ್ಲ. ಹಾಗಾದರೆ ಇವರ ಅಭಿಪ್ರಾಯವೇನು? ಕರ್ನಾಟಕದೊಡನೆ ಕೊಡಗು ಸೇರುವವರ ಬಗ್ಗೆ ವಿರೋಧ ಅಭಿಪ್ರಾಯವನ್ನು ಇವರು ಹೊರಗೆಡಹದಿರಲು ಕಾರಣವೇನು?

Politico.

ಆಕ್ಟ್ರಾಯಿ.

ಮಡಿಕೇರಿಯಲ್ಲಿರುವ ಚಂದ್ರಾನ ಅಂಡ್ ಕಂಪೆನಿಯವರಿಂದ ತರುವ ಬಟ್ಟೆಗೆ ಸೋಮವಾರಪೇಟೆ ಆಕ್ಟ್ರಾಯಿ ಆಫೀಸಿನವರು ಆಕ್ಟ್ರಾಯಿ ವಸೂಲು ಮಾಡುತ್ತಿದ್ದಾರೆ. ನಾವು ಮಡಿಕೇರಿಯಿಂದ ತರುವ ಸಾಮಾನುಗಳಿಗೆ ಆಕ್ಟ್ರಾಯಿಯನ್ನು ಅಲ್ಲೇ ಕೊಟ್ಟು ತರುತ್ತಿರುವುದಾಗಿದೆ ಅದೇ ಸಾಮಾನುಗಳಿಗೆ ಪುನಃ ಇಲ್ಲಿ ಆಕ್ಟ್ರಾಯಿ ವಸೂಲು ಮಾಡುತ್ತಾರೆ. ಒಂದಾವೃತ್ತಿ ವಸೂಲು ಮಾಡಿದ ಆಕ್ಟ್ರಾಯಿಗೆ ಪುನಃ ಆಕ್ಟ್ರಾಯಿ ಹಾಕಕೂಡದೆಂದು ಸೋಮವಾರಪೇಟೆ ನೋಟಿಫೈಡ್ ಏರಿಯಾದ ಪ್ರಸಿಡೆಂಟರಿಗೆ ಬರಕೊಂಡ ಅರ್ಜಿಯನ್ನು ಚೀಫ್ ಕಮಿಷನರವರ ನೋಟಿಫಿಕೇಶನ್ ನಂಬ್ರ ಹಾಕಿ ತಿರಸ್ಕರಿಸಲಾಗಿದೆಯೆಂದು ಜವಾಬು ಬಂತು. ಹಾಗಾದರೆ ಒಂದು ಸಾರಿ ವಸೂಲು ಮಾಡಿದ ಸಾಮಾನುಗಳಿಗೆ ಆಕ್ಟ್ರಾಯಿ ಗೇಟು ಇರುವಲ್ಲೆಲ್ಲಾ ಆಕ್ಟ್ರಾಯಿ ವಸೂಲು ಮಾಡ

ಬೇಕೆಂದು ಚೀಫ್ ಕಮೀಷನರವರ ನೋಟಿಫಿಕೇಶನ್‌ನಲ್ಲಿ ಇದೆಯೆ ಎಂದು ಕೇಳಿದರೆ 'ಅದು ನಮ್ಮ ಕೆಲಸವಲ್ಲ. ನೀವೆ ಸರಕಾರಕ್ಕೆ ಅರ್ಜಿ ಬರೆದು ಹುಕುಂ ತನ್ನಿ' ಎಂದು ಅಧಿಕಾರವಾಣಿಯಿಂದ ಹೇಳುತ್ತಾರೆ.

ಮಡಿಕೇರಿಯಿಂದ ವೀರಾಜಪೇಟೆಯವರು ತೆಗೆದುಕೊಂಡು ಹೋಗುವ ಸಾಮಾನುಗಳಿಗೆ ವೀರಾಜಪೇಟೆ ಮುನ್ಸಿಪಾಲಿಟಿಯವರು ಆಕ್ಟ್ರಾಯಿ ವಸೂಲು ಮಾಡುತ್ತಿಲ್ಲ. ಈ ಸಂಬಂಧ ವೀರಾಜಪೇಟೆ ಮುನ್ಸಿಪಾಲಿಟಿ ಪ್ರೆಸಿಡೆಂಟರು ಮಡಿಕೇರಿ ಮುನ್ಸಿಪಾಲಿಟಿಯ ಪ್ರೆಸಿಡೆಂಟರಿಗೆ ಪತ್ರ ವ್ಯವಹಾರ ನಡೆಯಿಸಿ ಮಡಿಕೇರಿಯಿಂದ ವೀರಾಜಪೇಟೆಗೆ ಹೋಗುವ ಸಾಮಾನಿಗೆ ಮಡಿಕೇರಿಯಲ್ಲಿ ಹಾಕುವ ಆಕ್ಟ್ರಾಯಿಯಲ್ಲಿ ಶೇಕಡ ೯೫ನ್ನು ವೀರಾಜಪೇಟೆ ಮುನ್ಸಿಪಾಲ್ಟಿಯವರು ಮಡಿಕೇರಿ ಮುನ್ಸಿಪಾಲಿಟಿಯವರಿಂದ ಹೊಂದಿಕೊಳ್ಳುತ್ತಿದ್ದಾರೆ. ವೀರಾಜಪೇಟೆ ಮುನ್ಸಿಪಾಲಿಟಿಯ ಪ್ರೆಸಿಡೆಂಟರಿಗೆ ಈ ಸಂಬಂಧ ನಾನು ಪತ್ರವ್ಯವಹಾರ ನಡೆಯಿಸಿದ್ದೇನೆ. ಇದೇ ರೀತಿ ನೀವು ಮಡಿಕೇರಿ ಮುನ್ಸಿಪಾಲಿಟಿ ಪ್ರೆಸಿಡೆಂಟರಿಗೆ ಪತ್ರವ್ಯವಹಾರ ನಡೆಯಿಸಿ ಮಡಿಕೇರಿಯಿಂದ ತರುವ ಸಾಮಾನುಗಳಿಗೆ ಆಕ್ಟ್ರಾಯಿ ವಸೂಲು ಮಾಡದೆ ನಿಮಗೆ ಬರತಕ್ಕದ್ದನ್ನು ಮಡಿಕೇರಿ ಮುನ್ಸಿಪಾಲಿಟಿಯವರಿಂದ ಹೊಂದಿಕೊಳ್ಳಿ ಎಂದು ನಮ್ಮ ಪ್ರೆಸಿಡೆಂಟರಿಗೆ ಹೇಳಿದರೆ ಲಕ್ಷ್ಯಕ್ಕೆ ತೆಗೆದುಕೊಳ್ಳುತ್ತಿಲ್ಲ. ಮಡಿಕೇರಿ ಮತ್ತು ವೀರಾಜಪೇಟೆಯಿಂದ ತರುವ ಸಾಮಾನುಗಳಿಗೆ ಅಲ್ಲೇ ಆಕ್ಟ್ರಾಯಿ ಕೊಟ್ಟು ಸಾಮಾನು ತರುತ್ತಿರುವುದರಿಂದ ಪುನಃ ಸೋಮವಾರಪೇಟೆಯಲ್ಲಿ ಆಕ್ಟ್ರಾಯಿ ವಸೂಲು ಮಾಡುತ್ತಿರುವುದನ್ನು ಕೂಡ್ಲೆ ನಿಲ್ಲಿಸಬೇಕೆಂದು ಘನ ಸರಕಾರಕ್ಕೆ ಮೂರು ಸಲ ಅರ್ಜಿ ಬರೆಕೊಂಡೆವು ಒಂದಾವೃತ್ತಿ ಸಂಬಂಧಪಟ್ಟ ಮಂತ್ರಿಗಳನ್ನು ಕಂಡು ವಿನಂತಿಸಿಕೊಳ್ಳಲಾಯಿತು. ½ ವರ್ಷ ಉರುಳಿದರೂ ಯಾವುದೇ ತರಹದ ಜವಾಬು ಸರಕಾರದಿಂದ ಬಂದಿರುವುದಿಲ್ಲ. ಸಾರ್ವಜನಿಕರ ಸಂಸ್ಥೆಯಾದ ಸಹಕಾರ ಮಾರ್ಕೆಟಿಂಗ್ ಸಂಘವು ಮಾಡಿದ ಪತ್ರವ್ಯವಹಾರಕ್ಕೆ ಯಾವುದೊಂದು ಜವಾಬು ಸರಕಾರ ಕೊಡದೆ ಇರುವಾಗ ಜನತಾ ಸರಕಾರ ಎಷ್ಟರ ಮಟ್ಟಿಗೆ ಅಧಿಕಾರ ಚಲಾಯಿಸುತ್ತಿದೆಂದು ಜನತೆಯು ಊಹಿಸಬೇಕು. ಇನ್ನಾದರು ಸರಕಾರ ಬಡವರ ಹಿತದೃಷ್ಟಿಯಿಂದ ಕಣ್ಣು ತೆರೆದು ಕೊಡಗಿನ ಯಾವುದೇ ಆಕ್ಟ್ರಾಯಿ ವಸೂಲ್ಮಾಡುವ ಏರಿಯಾದಿಂದ ತರುವ ಸಾಮಾನುಗಳಿಗೆ ಪುನಃ ಆಕ್ಟ್ರಾಯಿ ವಸೂಲು ಮಾಡದಂತೆ ಕೂಡ್ಲೆ ಹುಕುಂ ಕೊಡಬೇಕೆಂದು ಘನ ಸರಕಾರದಲ್ಲಿ ವಿನಂತಿ.

ಎಚ್. ಎಂ. ಜಂಗಪ್ಪ.

ತಲೆನೋಡಿ ಪಟ್ಟವೇ?

ಏಪ್ರಿಲ್ ಒಂದರಿಂದ ಜಿಲ್ಲಾ ಬೋರ್ಡಿನ ಶಾಲೆಗಳನೆಲ್ಲಾ ಸರ್ಕಾರಕ್ಕೆ ತೆಗೆದುಕೊಳ್ಳಲಾಯಿತು. ಒಡನೆ ಕೊಡಗಿನ ಎಲ್ಲಾ ಶಾಲೆಗಳಿಗೂ ಸರಿಯಾದ ರೀತಿಯಲ್ಲಿ ಉಪಾಧ್ಯಾಯರನ್ನು ಹಂಚುತ್ತಾರೆಂದಾಯಿತು. ಏಪ್ರಿಲ್‌ನಿಂದ ಇಲ್ಲಿಯ ವರೆಗೂ ಕಾದದ್ದಾಯಿತ್ತು. ಪಾಪದ ಅಧ್ಯಾಪಕರು ದೂರಕ್ಕೆ ಹೋಗುವಾಗ ತೊಂದರೆ ಕೊಡಬಾರದೆಂಬಂತೆ ಮಳೆಯು ಸಹ ಹೊಡೆಯಲಿಲ್ಲ.

ಆದರೆ ಅಧಿಕಾರಿಗಳು ಮಳೆ ಹೊಡೆಯಲೆಂದೇ ಕಾದರೋ ಏನೋ? ೧೯ ನೇ ತಾರೀಕಿನಿಂದ ಮಳೆ ಪ್ರಾರಂಭವಾದದೇ ತಡ ತಾ. ೨೧ ರಲ್ಲಿ ಕೆಲವರಿಗೆ ಆರ್ಡರು ಬಂತೇ ಬಂತು. ಒಡನೆ ಕೆಲವು ಅಧ್ಯಾಪಕರು ಅಧಿಕಾರಿಗಳನ್ನು ಕಂಡು ತಮ್ಮ ಅನಾನುಕೂಲಗಳನ್ನು ಅರಿಕೆ ಮಾಡಲು ಹೊರಟರು. 'ಒಳಗೆ ಪ್ರವೇಶವಿಲ್ಲ' ಎಂಬ ಶಬ್ದ ಅಂಟಿಸಿದ ಕೋಣೆಯೊಂದರ ಒಳಗೆ ಎರಡನೇ ಅಧಿಕಾರಿಗಳು ಇಬ್ಬರು ಸಹಾಯಕರೊಡನೆ ಕುಳಿತು ಕಣ್ಣು ಮುಚ್ಚಿ ಆರ್ಡರು ಬರೆಯುತಿದ್ದರು. ಒಳಗೆ ಪ್ರವೇಶವಿರಲಿಲ್ಲ ಆದರೂ ಕೆಲವರು ಹುಕುಂ ಪಡೆದು ನುಗ್ಗಿ ಮಾತಾಡುತಿದ್ದರು. ಕೆಲವರೊಡನೆ ಮೆಲ್ಲಗೆಯೂ ಪಾಪದ ಸಾಧುಗಳಲ್ಲಿ ಮಹಾದರ್ಪದಿಂದಲೂ ವರ್ತಿಸುತ್ತಿದ್ದ ರೀತಿ ಮನೋವೇಧಕವಾಗಿತ್ತು.

ಇವರು ಅಧ್ಯಾಪಕರಾಗಿದ್ದು ಈಗಾಗಲೇ ಈ ವೃತ್ತಿಗೆ ಬಂದವರು. ಮಕ್ಕಳಿಗೆ ಬೈಯ್ಯುವಂತ ಚಾಳಿ ಇವರಲ್ಲಿರಬೇಕು. ತನ್ನ ಮುಂದಿರುವವರು ಮಕ್ಕಳಲ್ಲ ತನ್ನಂತೆ ಜವಾಬ್ದಾರಿ ಹೊತ್ತಂತ ಉಪಾಧ್ಯಾಯರೆಂದು ಅವರ ಕುರುಡು ಬುದ್ಧಿಗೆ ತಿಳಿಯಲಿಲ್ಲವೋ ಏನೋ?

ಎಷ್ಟೋ ಆರ್ಡರುಗಳು ಉಪಾಧ್ಯಾಯರ ಕೈ ಸೇರಿದವು. ಆದರೂ ಒಬ್ಬರಿಗೆ ಕೊಟ್ಟ ಆರ್ಡರನ್ನು ರದ್ದುಪಡಿಸಿ ಬೇರೊಬ್ಬರಿಗೆ ಕೊಡುತಿದ್ದಾರೆ. ಒಬ್ಬನಿಗೆ ಕೊಟ್ಟ ಸ್ಥಳವನ್ನು ಪುನಃ ಬದಲಾಯಿಸಿ ಅಧಿಕಾರಿಗಳನ್ನು ಕಂಡುಕೊಂಡವರಿಗೋ, ಅಥವಾ ಶಿಫಾರಸಿಗಳನ್ನು ಕರೆದುಕೊಂಡು ಹೋದವರಿಗೋ ಕೊಡುತಿದ್ದಾರೆ.

ಪ್ರಜಾಸರಕಾರದಲ್ಲಿ ಈ ರೀತಿಯ ಪಕ್ಷಪಾತ ಸಲ್ಲದು. ಈ ರೀತಿಯ ವಿಷಯಗಳು ಕಳೆದ ವರ್ಷದಿಂದಲೇ ಕೆಲವು ನಡೆಯುತ್ತಿದೆ. ಆದರೆ ಇದನ್ನು ಯಾರೂ ವಿಚಾರಿಸುತ್ತಿಲ್ಲ. ಬಹುಶಃ ಇದನ್ನು ವಿಚಾರಿಸಬೇಕಾದ ಅಧಿಕಾರಿಗಳಿಗೆ ಕಾಯಿಲೆಯೋ ಏನೋ ಯಾರಿಗೆ ಗೊತ್ತು.

ಪ್ರೇಕ್ಷಕ.

COORG.

COORG, a grand and pleasing name
And world wide is your fame,
You are known for your fish and game:
Your rice and coffee 'the best' I claim.

COORG, I love your luscious fruits,
They are the best without dispute ?
Many a man will give a salute
To any dame that passes your route.

COORG, where milk and honey flow,
Where the twinkling stars hang low,
Where sweet and scented breezes blow
Where neat and bonny babies grow.

COORG, your pig and chicken I relish;
With bamboos you cook a finer dish;
Pepper gives a sting without blemish;
And a peg of wine, it's all I wish.

COORG, you are a poor man's health resort,
Where rich and wealthy revel in art
Where a dumb fool can lose his heart
Over a damsel, witty and smart!

COORG, you make me slumber and dream:
Your beauty is heavenly and supreme;
A poet has got a real good theme
To sing and dance about your streams!

COORG, you send your men to the army,
Without a sea, you cannot have a navy
But, your boys are strong and happy.
Like toys they can beat any Tommy!

COORG, may your glory spread;
'Your sons are finest' it's said;
Give them their daily bread,
Keep them happy and welfed.

ಮಡಿಕೇರಿ ಕಾಲೇಜ್ ಬೋರ್ಡಿಂಗ್

ಕೊಡಗು ವಿದ್ಯಾ ಇಲಾಖಾ ಮಂತ್ರಿಯವರಲ್ಲಿ ಈ ಮೂಲಕ ವಿನಂತಿ ಮಾಡಿಕೊಳ್ಳುವದೇನೆಂದರೆ—

ಕಳೆದ ಜೂನ್ ತಾ. ೨೯ನೇ ಸೋಮವಾರ ಕಾಲೇಜು ತೆರೆಯುವದೆಂದಿದ್ದ ಕಾರಣ ಕೊಡಗಿನ ಹಲವು ವಿದ್ಯಾರ್ಥಿಗಳು ಕಾಲೇಜಿಗೂ, ಬೋರ್ಡಿಂಗಿಗೂ ಸೇರಬೇಕೆಂದು ಅವರ ಪೆಟ್ಟಿಗೆ ಹಾಸಿಗೆ ವಗೈರೆಯನ್ನು ಮಡಿಕೇರಿಗೆ ತಂದು ಬೋರ್ಡಿಂಗಿಗೆ ಸೇರಬೇಕೆಂದು ಕೇಳುವಾಗ ಅಲ್ಲಿಯ ಅಧಿಕಾರಿಗಳು ಈಗಾಗಲೇ ೧೫೦ ಜನರ ಅರ್ಜಿ ಇದೆಯೆಂದೂ ಅದರಲ್ಲಿ ಕೆಲವರಿಗೆ ಮಾತ್ರ ಸ್ಥಳ ದೊರೆಯಬಹುದೆಂದೂ, ಸರಿಯಾದ ಕಟ್ಟಡ ಇಲ್ಲದ್ದರಿಂದ ಎಲ್ಲರನ್ನೂ ಸೇರಿಸಲು ಸಾಧ್ಯವಿಲ್ಲವೆಂದೂ, ಹೇಳಿದರು. ಆದ್ದರಿಂದ ವಿದ್ಯಾರ್ಥಿಗಳು ಈ ಕಾಲೇಜಿನಲ್ಲಿ ಓದಬೇಕಿದ್ದರೆ ಹೋಟೆಲುಗಳಲ್ಲಿ ಇದ್ದು ಕಾಲಹರಣ ಮಾಡಬೇಕಾಗಿದೆ. ಇದು ವಿದ್ಯಾರ್ಥಿಗಳ ಹಿತಕ್ಕೂ, ಕಾಲೇಜಿನ ಗೌರವಕ್ಕೂ ಎಂದೂ ಪೋಷಕವಾಗಲಾರದು. ಆದ್ದರಿಂದ ಸೆಂಟ್ರಲ್ ಹೈಸ್ಕೂಲ್ ಬೋರ್ಡಿಂಗಿನಲ್ಲಿ ವಿದ್ಯಾರ್ಥಿಗಳು ಕಮ್ಮಿಯಾಗಿರುವದರಿಂದ ಗೌಡುಗಳ ಬೋರ್ಡಿಂಗಿನಲ್ಲಿರುವ ವಿದ್ಯಾರ್ಥಿಗಳನ್ನು ಹೈಸ್ಕೂಲ್ ಬೋರ್ಡಿಂಗಿಗೆ ವರ್ಗಾಯಿಸಿ, ಕಾಲೇಜು ಬೋರ್ಡಿಂಗ್ ತಯಾರಾಗುವ ವರೆಗೆ ಗೌಡುಗಳ ಬೋರ್ಡಿಂಗ್ ಕಟ್ಟಡವನ್ನು ಕಾಲೇಜ್ ಬೋರ್ಡಿಂಗಿಗೆ ಉಪಯೋಗಿಸಿದರೆ ಅರ್ಜಿ ಬರಕೊಂಡ ಎಲ್ಲ ವಿದ್ಯಾರ್ಥಿಗಳಿಗೂ ಸ್ಥಳ ಸಿಕ್ಕಿ ತೊಂದರೆಯು ಕಡಿಮೆಯಾಗುವದು. ಇದಕ್ಕೆ ಗಮನವಿಟ್ಟು ವಿದ್ಯಾ ಮಂತ್ರಿಗಳಾದ ನೀವು ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕೆಂದು ಆಗ್ರಹದ ಬೇಡಿಕೆಯಾಗಿದೆ.

'ಪೋಷಕ'

ಕುಟ್ಟ ವಯಸ್ಕರ ಶಾಲೆ

ಈ ಶಾಲೆಯನ್ನು ಪ್ರಥಮದಲ್ಲಿ ತೆರೆಯುವಾಗ ಒಟ್ಟು ೩೨ ವಿದ್ಯಾರ್ಥಿಗಳಿದ್ದರು. ಇವರೆಲ್ಲರೂ ಎರವ ಕುರುಬರಾಗಿದ್ದರು. ಶಾಲೆ ನಡೆಯುತ್ತಿದ್ದ ಹಾಗೆ ಕೆಲವು ವಿದ್ಯಾರ್ಥಿಗಳು ಅವರು ಕೆಲಸ ಮಾಡುತ್ತಿದ್ದ ಮನೆಯನ್ನು ಬಿಟ್ಟು ಹೋದದ್ದರಿಂದ ವಿದ್ಯಾರ್ಥಿಗಳ ಸಂಖ್ಯೆಯು ಕಡಿಮೆಯಾಗುತ್ತ ಬಂದಿತು.

ಪರೀಕ್ಷೆಯ ಸಮಯದಲ್ಲಿ ೧೩ ವಿದ್ಯಾರ್ಥಿಗಳು ಶಾಲೆಗೆ ಬರುತ್ತಿದ್ದರು. ತಾ ೨೯—೬—೫೩ರಲ್ಲಿ ಈ ಶಾಲೆಯ ವಿದ್ಯಾರ್ಥಿಗಳಿಗೆ ದಕ್ಷಿಣ ಕೊಡಗು ವಯಸ್ಕರ ಶಿಕ್ಷಣ ವ್ಯವಸ್ಥಾಪಕರಿಂದ ಪ್ರಥಮ ಪರೀಕ್ಷೆಯು ನಡೆಯಿತು. ಒಟ್ಟು ಇದ್ದ ವಿದ್ಯಾರ್ಥಿಗಳಲ್ಲಿ ಕೆಲವರಿಗೆ ಕಣ್ಣುನೋವು ಜ್ವರವಾಗಿ ಪರೀಕ್ಷೆಗೆ ೭ ವಿದ್ಯಾರ್ಥಿಗಳು ಮಾತ್ರ ಹಾಜರಿದ್ದರು. ಇವರೆಲ್ಲರೂ ಪರೀಕ್ಷೆಯಲ್ಲಿ ಪಾಸಾಗಿರುವರು. ಅವರ ಪೈಕಿ ಬೆಟ್ಟ ಕುರುಬರ ಎಸ್. ಸೋಮ ಎಂಬವರು ಪ್ರಥಮ ಶ್ರೇಣಿಯಲ್ಲಿ ಪಾಸಾಗಿರುವರು

ಸಿ. ಬಿ. ಮಂದಪ್ಪ.

ಬಿನ್ನವತ್ತಳೆ ಸ್ವಾಗತಗಳಿಗೆ ಕಾಲವಿದಲ್ಲ.

ಜವಾಬ್ದಾರಿಯನ್ನರಿತು ದುಡಿಯಿರಿ.

ಜನರಲ್ ತಿಮ್ಮಯ್ಯನವರ ಕರೆ

ಮಡಿಕೇರಿ ಪುರಸಭೆಯವರು ತಾ. ...ರಲ್ಲಿ ಪಶ್ಚಿಮ ಕಮಾಂಡಿನ ಕಮಾಂಡಿಂಗ್ ಆಫೀಸರರಾದ ಲೆ. ಜನರಲ್ ಕೊಡಂದೇರ ಎಸ್. ತಿಮ್ಮಯ್ಯನವರಿಗೆ ಒಂದು ಬಿನ್ನವತ್ತಳೆಯನ್ನು ಕೊಡಗು ಶಾಸನ ಸಭಾಂಗಣದಲ್ಲಿ ಕೊಟ್ಟರು. ಸಮಾರಂಭಕ್ಕೆ ಕೊಡಗಿನ ಚೀಫ್ ಕಮಿಷನರೂ, ಮಂತ್ರಿದ್ವಯರೂ, ಸ್ಪೀಕರು ಮತ್ತಿತರ ಹಲವು ಮಹನೀಯರೂ ಹಾಜರಾಗಿದ್ದರು. ಮುನ್ಸಿಪಾಲಿಟಿಯ ಪ್ರೆಸಿಡೆಂಟರಾದ ಜನಾಬ್ ಸಿ. ಮೋಹಿದ್ದೀನ್‌ರವರು ಬಿನ್ನವತ್ತಳೆಯನ್ನು ಓದಿದರು.

ಬಿನ್ನವತ್ತಳೆಯ ಸಾರಾಂಶ.

ಮಡಿಕೇರಿ ಪುರನಿವಾಸಿಗಳ ಪರವಾಗಿ ನಿಮಗೆ ಸುಸ್ವಾಗತವನ್ನು ಬಯಸುತ್ತೇವೆ. ಮಡಿಕೇರಿಯ 'ಸನ್ನಿಸೈಡ್' ನಲ್ಲಿ ಜನಿಸಿದ ನೀವು ನಿಮ್ಮ ವಿದ್ಯಾಭ್ಯಾಸವನ್ನು ಬೆಂಗಳೂರಿನಲ್ಲೂ ನಂತರ ಸೈನಿಕ ಶಿಕ್ಷಣವನ್ನು ಡೆರಡನಿನಮಿಲಿಟರಿ ಕಾಲೇಜಿನಲ್ಲೂ ಪಡೆದು ಇಂಗ್ಲೆಂಡಿನ ಸೇಂಡರ್ಸ್ಟ್‌ನಲ್ಲಿ ಹೆಚ್ಚಿನ ತರಬೇತು ಪಡೆದಿರಿ. ಸೈನ್ಯದ ವಿವಿಧ ಕ್ಷೇತ್ರಗಳಲ್ಲಿ ಮತ್ತು ಕಳೆದ ಯುದ್ಧದಲ್ಲಿ ಜಪಾನರನ್ನು ಎದುರಿಸಿ ಹೋರಾಡಿದ ನಿಮ್ಮ ಹಿರಿಮೆ ಜನಜನಿತವಾಗಿದೆ. ಯುದ್ಧರಂಗದಲ್ಲಿ ಕಾಲಾಳು ಬ್ರಿಗೇಡನ್ನು ನಡೆಸಲು ನೇಮಕರಾದ ಪ್ರಥಮ ಭಾರತೀಯ ಬ್ರಿಗೇಡಿಯರರು ನೀವು. ನಿಮ್ಮ ಮುಂದಾಳ್ತನದಲ್ಲಿ ನೀವು ಪಡೆದ ವಿಜಯ ಪರಂಪರೆಗಳು ಲಾರ್ಡ್ ಮೌಂಟ್ ಬೆಟನರಂಥಾವರಿಂದ ಹೊಗಳಿಕೆಗಳನ್ನು ಗಳಿಸಿವೆ. ನೀವು ಕಾಶ್ಮೀರ್ ಕ್ಷೇತ್ರದಲ್ಲಿ ತೋರಿಸಿದ ಅಸಾಮಾನ್ಯ ಶೌರ್ಯ, ಸಾಹಸ, ದಕ್ಷತೆಗಳನ್ನು ನಾವು ಗಮನಿಸಿದ್ದೇವೆ. ನಿಮ್ಮ ಸೈನಿಕ ಚಾಕಚಕ್ಯತೆಯು ಶತ್ರುಗಳನ್ನು ಸೋಲಿಸಿದುದು ಮಾತ್ರವಲ್ಲ ಅಲ್ಲಿ ಶಾಂತಿಯುತ ಪರಿಸ್ಥಿತಿಯನ್ನು ನೆಲೆಸಿ ಜನತೆಯ ಅನುರಾಗವನ್ನು ನೀವು ಪಡೆದಿರಿ. ಕಾಶ್ಮೀರದ ಜನತೆಯನ್ನು ನಿಮಗೆ ಯಾರ ಆಡಳಿತಬೇಕು. ಶೇಕ್ ಅಬ್ದುಲ್ಲಾರ ಸರಕಾರಬೇಕೋ ಯಾ ಪಾಕಿಸ್ತಾನ ಸರಕಾರ ಬೇಕೋ ಎಂದು ಕೇಳಿದಾಗ ಕಾಶ್ಮೀರದ ಜನರು ತಮಗೆ ಜನರಲ್ ತಿಮ್ಮಯ್ಯನವರ ಸರಕಾರಬೇಕೆಂದು ಹೇಳಿದುದು ನಿಮ್ಮ ಜನಾನುರಾಗವನ್ನು ಎತ್ತಿ ತೋರಿಸುತ್ತದೆ. ನಿಮ್ಮ ದಯೆ, ವಿಶಾಲತೆ, ಬಡಜನರ ಮೇಲಿರುವ ಪ್ರೀತಿ, ಸೈನಿಕರ ಮೇಲಿರುವ ಮಮತೆ ಇವು ನಿಮ್ಮನ್ನು ಕಾಶ್ಮೀರದ ವೀರನೆಂದೂ, ಸಿಪಾಯಿಗಳ ನೆಚ್ಚಿನ ಜನರಲರೆಂದೂ ಖ್ಯಾತಿಗೇರಿಸಿವೆ. ನೀವು ಮುಂದೆ ಹಿಂದೂದೇಶದ ಮುಖ್ಯ ಸೇನಾನಿಯಾಗುವಿರೆಂದು ನಮಗೆ ಭರವಸೆ ಇದೆ.

೧೯೪೭ ರಿಂದ ನಮ್ಮ ಪುರಸಭೆಯಲ್ಲಿ ಅಕ್ಟ್ರಾಯಿ ಕಂದಾಯ ವಿಧಿಸಿದ ನಂತರ ಪುರದ ಅಭಿವೃದ್ಧಿಗಾಗಿ ಅನೇಕ ಕೆಲಸ ಕೈಕೊಳ್ಳುವದು ಸಾಧ್ಯವಾಗಿದೆ. ರಸ್ತೆ, ಚರಂಡಿ, ಶುಚಿತ್ವ ಮೊದಲಾದವು ಅಭಿವೃದ್ಧಿಯಾಗಿದೆ. ಪುರಭವನ ಬಸ್ ಸ್ಟೇಂಡಿನ ಕೆಲಸಗಳು ನಡೆಯುತ್ತಿವೆ. ಗೃಹಮಂತ್ರಿಗಳು ಈ ಪುರಸಭೆಯ ಪ್ರೆಸಿಡೆಂಟರಾಗಿ ಮಾಡಿದ ಸೇವೆಗೂ, ಮುಖ್ಯ ಮಂತ್ರಿಗಳಿಗಳೂ ಚೀಫ್ ಕಮಿಷನರಿಗೂ ನಮ್ಮ ವಂದನೆಗಳು. ನಿಮಗೆ ದೇವರು ಆರೋಗ್ಯವನ್ನು, ದೀರ್ಘಾಯುಸ್ಸನ್ನು ಕೊಟ್ಟು ಇನ್ನೂ ದೇಶದ ಸೇವೆ ಮಾಡುವ ಅನುಕೂಲಿಸಲಿ.

ಜನರಲರ ಉತ್ತರ.

ಈ ಬಿನ್ನವತ್ತಳೆಯನ್ನು ಮನಸ್ಸಿಲ್ಲದೆ ಸ್ವೀಕರಿಸಲು ಒಪ್ಪಿದ್ದೇನೆ. ನನ್ನ ಹುಟ್ಟೂರು ಮಡಿಕೇರಿ ಎಂಬ ಕಾರಣದಿಂದ ಈ ಸಮಾರಂಭಕ್ಕೆ ಒಪ್ಪಿರುವೆನಲ್ಲದೆ ಹೃದಯಪೂರ್ವಕವಾಗಿ ಅಲ್ಲ. ಏಕೆಂದರೆ ಇಂದಿನ ಸಮಯದಲ್ಲಿ ಇಂಥಾ ಸ್ವಾಗತ ಬಿನ್ನವತ್ತಳೆಗಳಿಗೆಂದು ನಮ್ಮ ಅಮೂಲ್ಯ ಸಮಯ, ಹಣ, ಚೇತನಗಳನ್ನು ಖರ್ಚು ಮಾಡಬಾರದು. ನಮ್ಮ ಮೇಲಿರುವ ಜವಾಬ್ದಾರಿ ದೊಡ್ಡದಿದೆ. ಅದನ್ನು ಸರಿಯಾಗಿ ನಿರ್ವಹಿಸಲು ನಮ್ಮ ಚೇತನ, ಪ್ರತಿ ಕಾಸೂ ಕೂಡ ಆ ಮಾರ್ಗಕ್ಕಾಗಿ ವ್ಯಯವಾಗಬೇಕು. ನಾನು ನನ್ನ ಅಜ್ಜನು ಮಡಿಕೇರಿ ಪುರಸಭೆಯ ಪ್ರೆಸಿಡೆಂಟರಾಗಿದ್ದಾಗ ಅವರ ಜೊತೆಯಲ್ಲಿ ಪ್ರತಿ ಬೀದಿಯನ್ನು ಸುತ್ತುತ್ತಿದ್ದೆ. ನನಗೆ ಸೈನ್ಯದಲ್ಲಿ ಹಿಂದೂದೇಶದ ಬಹುತೇಕ ಕಂಟೋನ್ಮೆಂಟುಗಳ ಆಡಳಿತವನ್ನು ಪರಿಶೀಲಿಸುವ ಅನುದೊರೆಯಿತು. ಹಿಂದೂದೇಶದಲ್ಲಿ ಪುರಸಭೆಗಳಿಗಿಂಥಾ ಕಂಟೋನ್ಮೆಂಟುಗಳೇ ಹೆಚ್ಚು ಚೆನ್ನಾಗಿವೆ. ಆದರೆ ಅವುಗಳಲ್ಲಿ ಕೂಡ ಒಂದು ವ್ಯವಸ್ಥಿತ ಯೋಜನೆ ಇಲ್ಲ. ಕಟ್ಟಡಗಳೂ, ಇತರ ವ್ಯವಸ್ಥೆಗಳೂ ಚೆನ್ನಾಗಿಲ್ಲ. ಕುಮಾನ್ ಬೆಟ್ಟ ಪ್ರದೇಶದಲ್ಲಿ ರಾಣಿಖೇಟ್ ಎಂಬ ಕಂಟೋನ್ಮೆಂಟು ಒಂದಿದೆ. ಅದು ಭಾರತದ ಎಲ್ಲಾ ಕಂಟೋನ್ಮೆಂಟುಗಳಿಗಿಂಥಾ ಚೆನ್ನಾಗಿದೆ. ಮಡಿಕೇರಿ ಮಾರ್ಕೆಟು ಸ್ಟಾಲುಗಳು ರಾಣಿಖೇಟಿಗಿಂಥಾ ಚೆನ್ನಾಗಿವೆಯೆಂದು ಹೇಳಬಲ್ಲೆ. ಮಡಿಕೇರಿಯಲ್ಲಿ ಅನೇಕ ಅಭಿವೃದ್ಧಿಯ ಕೆಲಸಗಳಾಗುತ್ತಿವೆ. ಕಾಲೇಜು ಕಟ್ಟಡ, ಹತ್ತಿರದ ವ್ಯವಸಾಯ ಫಾರ್ಮು, ಅಲ್ಲಲ್ಲಿ ಏಳುತ್ತಿರುವ ಕಟ್ಟಡಗಳನ್ನು ನೋಡಿ ಸಂತೋಷವಾಯಿತು. ಫ್ರಾನ್ಸ್, ಜರ್ಮನಿ, ಇಂಗ್ಲೆಂಡ್ ಮೊದಲಾದೆಡೆ ನಾನು ತಿರುಗಿರುವೆನು. ಇಂಗ್ಲೆಂಡೊಂದನ್ನು ಬಿಟ್ಟು ಬೇರೆ ಎಡೆ ಹೊಸ ಕಟ್ಟಡಗಳೇ ಆಗುತ್ತಿಲ್ಲವೆನ್ನಬಹುದು. ಹೊಸ ಕಟ್ಟಡಗಳನ್ನು ಜನರು ಕಟ್ಟಿಸುತ್ತಿದ್ದರೆ, ಅಲ್ಲಿಯ ಸರಕಾರದ ಮೇಲೆ ಜನರಿಗೆ ವಿಶ್ವಾಸವಿದೆಯೆಂದು ಹೇಳಬಹುದು. ಜರ್ಮನಿ, ಫ್ರಾನ್ಸು ಮೊದಲಾದೆಡೆ ಭವಿಷ್ಯದಲ್ಲಿ ಏನಾಗುವದೋ ಎಂಬ ಶಂಕೆ ಎಲ್ಲರಿಗಿರುವದರಿಂದ ಯಾವುದೇ ಕಟ್ಟಡ ಕೆಲಸ ಕೈಕೊಳ್ಳುತ್ತಿಲ್ಲ. ಆದರೆ ಅಂಥಾ ಭಯ ನಮ್ಮ ಹಿಂದೂದೇಶದಲ್ಲಿಲ್ಲ. ಆದ್ದರಿಂದಲೇ ವಿವಿಧ ಯೋಜನೆಗಳು ಜಾರಿಯಲ್ಲಿ ಬರುತ್ತಿವೆ.

ಯಾವುದೇ ಪುರಸಭೆಯಾದರೂ ಅದಕ್ಕೊಂದು ಯೋಜನೆಬೇಕು. ಜನತೆಗೆ ಅತ್ಯವಶ್ಯವಾದ ನೀರು, ಶುಚಿಯಾದ ವಾತಾವರಣ, ಬೆಳಕಿನ ಏರ್ಪಾಡುಬೇಕು. ಪುರಸಭೆಯವರು ಹೆಚ್ಚಾಗಿ ಬಡ ಜನರಿರುವ ಕಡೆ ಗಮನಕೊಡಬೇಕು. ಬರ್ಮಾದ ಬೇಂಕಕಿನ ಯುದ್ಧ ಬೇಗೆ, ಡೆಲ್ಲಿಯ ಕುದಿಯುವ ಶೆಕೆ, ಕಾಶ್ಮೀರದ ಝೋಜಿಲಾ ಕಣಿವೆಯ ಚಳಿಹಿಡಿಸುವ ಶೀತ ಇವೆಲ್ಲ ಕಡೆಗಳಲ್ಲಿಯೂ ಕೂಡ ನನ್ನ ಊರಾದ ಮಡಿಕೇ...

ಗಾಂಧಿ ವಿಚಾರದೋಹನ.

ಸತ್ಯವೇ ದೇವರು

ಅಭಿಪ್ರಾಯ ಭೇದವೆಂದರೆ ಶತ್ರುವಲ್ಲ. ಹಾಗಿದ್ದಿದ್ದರೆ ನಾನೂ ನನ್ನ ಪತ್ನಿಯೂ ಒಬ್ಬರೊಬ್ಬರ ಶತ್ರುಗಳಾಗುತಿದ್ದೆವು. ಭಿನ್ನಾಭಿಪ್ರಾಯವಿಲ್ಲದ ಇಬ್ಬರು ಇರುವದು ಸಾಧ್ಯವಿಲ್ಲ. ಪ್ರತಿಯೊಬ್ಬನೂ ಇನ್ನೊಬ್ಬನಿಂದ ಭಿನ್ನವಾಗಿಯೇ ಆಲೋಚಿಸುತ್ತಾನೆ. ಆದ್ದರಿಂದ ನನ್ನ ವಿರೋಧ ಅಭಿಪ್ರಾಯವಿದ್ದ ಮಾತ್ರಕ್ಕೆ ಅವರನ್ನು ಶತ್ರುಗಳೆಂದು ಭಾವಿಸುವದು ತಪ್ಪು. ಗೀತೆಯ ಅನುಯಾಯಿಯಾದ ನಾನು ನನಗೆ ವಿರೋಧ ಅಭಿಪ್ರಾಯವಿರುವವರನ್ನೂ ನನ್ನ ಬಂಧು ಬಳಗದಂತೆಯೇ ಪ್ರೀತಿಯಿಂದ ನೋಡಲು ಯತ್ನಿಸಿದ್ದೇನೆ.

ಭಗವಂತನ ಇಚ್ಛೆಯಿಲ್ಲದ ಒಂದು ಹುಲ್ಲಿನ ಕಡ್ಡಿಯಾದರೂ ಅಲುಗಾಡಲಾರದು ಎಂಬ ಮಾತಿನ ಸತ್ಯತೆಯನ್ನು ನಾನು ನಂಬುತ್ತೇನೆ. ಜನತೆಯ ಸೇವೆಗೆ ಅವಶ್ಯವಿದೆಯೆಂದು ಆತನು ನನ್ನ ಜೀವವನ್ನು ಪರಿಗಣಿಸುವದಾದರೆ ಅದನ್ನು ಆತನು ರಕ್ಷಿಸುವನು. ಆತನ ಇಚ್ಛೆಗೆ ವಿರುದ್ಧವಾಗಿ ಅದನ್ನು ರಕ್ಷಿಸಲು ಯಾರಿಗೂ ಸಾಧ್ಯವಿಲ್ಲ.

ನನ್ನ ಚಿಕ್ಕಂದಿನಿಂದಲೂ ನಾನು ಸತ್ಯದ ಆರಾಧಕನೆಂದು ಹೇಳಿಕೊಂಡಿದ್ದೇನೆ. ಸತ್ಯದ ಬಗ್ಗೆಯ ನನ್ನ ಪ್ರಾರ್ಥನಾಪೂರ್ಣ ಶೋಧನೆಯಿಂದಾಗಿ ಪ್ರೇಮವೇ ದೇವರೆಂಬುದರ ಬದಲು ಸತ್ಯವೇ ದೇವರೆಂದು ನನಗೆ ತೋರಿಬಂದಿದೆ. ಸತ್ಯವೇ ದೇವರೆಂಬ ನಂಬಿಕೆಯು ದೇವರನ್ನು ಮುಖತಃವೂ ಎಂಬಂತೆ ನೋಡಲು ಶಕ್ತನಾಗಿ ನನ್ನನ್ನು ಮಾಡಿದೆ. ನನ್ನ ಶರೀರದ ಪ್ರತಿ ಕಣದಲ್ಲಿಯೂ ಆತನ ಪ್ರಭಾವವನ್ನು ಅನುಭವಿಸಬಲ್ಲೆ.

ಗುರಿಯನ್ನು ಮುಟ್ಟಲು ಇನ್ನೂ ದೂರದ ದಾರಿ ಇದೆಯೆಂದು ನನಗೆ ಗೊತ್ತು. ನನ್ನನ್ನು ನಾನು ಶೂನ್ಯಕ್ಕೆ ಇಳಿಸದಿದ್ದರೆ ಗುರಿ ಮುಟ್ಟುವದು ಕಷ್ಟವೆಂದೂ ನನಗೆ ಗೊತ್ತು. ತನ್ನ ಜೊತೆಯ ಜೀವಜಂತುಗಳಲ್ಲಿ ತಾನು ಕಡೆಯವನೆಂದು ಒಬ್ಬನು ಹೃತ್ಪೂರ್ವಕವಾಗಿ ಪರಿಗಣಿಸುವ ವರೆಗೆ ಆತನಿಗೆ ಮುಕ್ತಿ ದೊರೆಯದು.

ಸಮುದ್ರಕ್ಕೆ ಬಿದ್ದ ನೀರ ಹನಿಯು ತನ್ನ ಜನಕನೊಡನೆ ಸೇರಿ ಸಮನ್ವಯಗೊಂಡು ಅಖಂಡವೆನಿಸುವದು. ನೀರೊಡನೆ ಸೇರದೆ ಬೇರೆಡೆಗೆ ಬಿದ್ದ ನೀರ ಹನಿಯು ಶೀಘ್ರವಾಗಿ ಒಣಗಿ ಕಾಣೆಯಾಗುವದು. ಅದರಂತೆ ಸಮಗ್ರದಲ್ಲಿ ಐಕ್ಯವಾಗದ ಜೀವನವು ನೀರ ಮೇಲಿನ ಗುಳ್ಳೆಯಂತೆ ನಶ್ವರವೆನಿಸುವದು.

—ಎಂ. ಕೆ. ಗಾಂಧಿ.

೪ನೇ ಪುಟದಿಂದ

ಲೀಶನಿನ ತಿದ್ದುಪಡಿಗೆ ವಿರೋಧ ಮಾಡಿದರೆ ಪಾಸಾದ ಬಜೆಟ್ಟಿನ ಗತಿಯೇನು? ಜನತೆಯ ಅಭಿಪ್ರಾಯಕ್ಕೆ ವಿರುದ್ಧವಾಗಿ ಸರಕಾರವು ಕಂದಾಯ ವಸೂಲ್ಮಾಡಿ ಬಜೆಟ್ಟನ್ನು ಸರಿಗಟ್ಟುವದೇ?

ಒಟ್ಟಾರೆ ನೋಡಿದರೆ ಇದೆಲ್ಲ ಒಂದು ಮಕ್ಕಳ ಆಟದ ಅಂತಸ್ತಿಗೆ ಇಳಿದಿದೆ. ಪ್ರಜಾ ಪ್ರಭುತ್ವದ ಹೆಸರಿನಲ್ಲಿ ತಮಗೆ ಬಹುಮತವಿದೆಯೆಂಬ ಹೆಮ್ಮೆಯಲ್ಲಿ ಸರ್ವವೂ ಹದಗೆಟ್ಟು ಹೊಲಸು ಹೊಲಗೇರಿಯಾಗುತ್ತಿದೆ. 'ಜನ್ಮಭೂಮಿ'ಯ ಅನಾಮಧೇಯರು ಈ ವಿಚಾರ ಇದೇ ಪತ್ರಿಕೆಯಲ್ಲಿ ಬರೆದರೆ ಅವರ ಉತ್ತರವನ್ನು ನೋಡಿ ಅವಶ್ಯವಿದ್ದರೆ ಕಂದಾಯದ ತತ್ವಗಳು, ಅದನ್ನು ಹಾಕುವ ವಿಧಾನಗಳು, 'ಸಿ' ವರ್ಗದ ಸಂಸ್ಥಾನಗಳಲ್ಲಿ ಚೀಫ್ ಕಮಿಷನರಿಗೂ, ಮಂತ್ರಿಗಳಿಗೂ ಇರುವ ಹಕ್ಕು ಬಾಧ್ಯತೆಗಳು ಮೊದಲಾದ ವಿವರಗಳ ಪಾಠವನ್ನು ಅವರಿಗೆ—'ಕೊಡಗು' ಸಂಪಾದಕರು ಅವಕಾಶ ಕೊಟ್ಟರೆ—ಹೇಳಲಿರುವೆನು.

ತಿಯ ಶಾಂತ ವಾತಾವರಣದ ನೆನಪಾಗುತಿತ್ತು. ಈಗ ಮೂರು ತಿಂಗಳ ರಜೆಯಲ್ಲಿರುವೆನು. ಬೇಕಾದಷ್ಟು ಪರಿಶುದ್ಧ ಗಾಳಿ, ವಿವಿಧ ಭಕ್ಷ್ಯ ಭೋಜ್ಯಗಳು, ಬೇಕಾದಷ್ಟು ಸಂದರ್ಶಕರು, ಕಡೆಗೆ ರಾಜಕೀಯ ಇ, ವೆಲ್ಲ ನನ್ನ ಸಮಯವನ್ನು ತೆಗೆದುಕೊಳ್ಳುತ್ತಿವೆ. ಸೈನಿಕರಿಗೆ ರಾಜಕೀಯ ಬೇಕಿಲ್ಲವೆಂದು ಹೇಳುವವರಿದ್ದಾರೆ. ಆದರೆ ರಾಜಕೀಯ ವಿಚಾರಗಳನ್ನು ಸರಿಯಾಗಿ ತಿಳಿದುಕೊಂಡ ಸೈನಿಕನೇ ಯೋಗ್ಯ ರೀತಿಯ ಸೇವೆ ಸಲ್ಲಿಸಬಲ್ಲನು.

ನನಗೆ ೧೯೨೦ನೇ ಇಸವಿಯ ಜ್ಞಾಪಕ ಬರುತ್ತದೆ. ಆ ಸಮಯದಲ್ಲಿ ನಾವು ಕೆಲವು ಜನರು ಇರಾಖಿನಲ್ಲಿ ನಮ್ಮ ಕೆಲಸ ಮುಗಿಸಿ ಹಿಂದೂದೇಶಕ್ಕೆ ಬಂದು ಅಲಹಾಬಾದಿನಲ್ಲಿದ್ದೆವು. ಆ ಕಾಲದಲ್ಲಿ ಸೈನಿಕರೆಂದರೆ ಅನೀತಿವಂತರೆಂಬ ಅಭಿಪ್ರಾಯವಿದ್ದು ಯಾವ ಸಮಾಜದಲ್ಲೂ ಅವರಿಗೆ ಪ್ರವೇಶವಿರಲಿಲ್ಲ. ನಾವು ಆ ಕಾರಣದಿಂದ ಆಗಾಗ್ಗೆ ಸಿನಿಮಾಕ್ಕೆ ಹೋಗುತ್ತಿದ್ದೆವು. ಒಂದು ದಿನ ಸಿನಿಮಾದಲ್ಲಿ ಬಿಳೀ ಖಾದಿಧಾರಿಯಾದ ವ್ಯಕ್ತಿಯೊಬ್ಬರನ್ನು ಕಂಡೆವು. ಅವರು ನಮ್ಮ ಕ್ಷೇಮಸಮಾಚಾರ ವಿಚಾರಿಸಿದರು. ಕಡೆಗೆ ಅವರು ಮೋತಿಲಾಲ್ ನೆಹರೂರವರೆಂದು ನಮಗೆ ತಿಳಿಯಿತು. ಅವರು ನಮ್ಮನ್ನು ತಮ್ಮ ಆನಂದ ಭವನಕ್ಕೆ ಆಹ್ವಾನಿಸಿದರು. ಅಂದಿನಿಂದ ನಾವು ಆಗಾಗ್ಗೆ ಅಲ್ಲಿಗೆ ಹೋಗುತಿದ್ದೆವು. ೧೯೨೧ರಲ್ಲಿ ಒಂದು ದಿನ ನಾವು ಆನಂದ ಭವನದಲ್ಲಿ ಊಟ ಮಾಡುತಿದ್ದಾಗ ಮೋತಿಲಾಲಜಿಯವರು ಹೇಳಿದರು "ನೀವು ಇನ್ನು ಇಲ್ಲಿಗೆ ಬರಲಿಕ್ಕೆ ಕೂಡದು. ನಾಳೆಯಿಂದ ಕಾಂಗ್ರೆಸ್ ಕಾಯಿದೆ ಭಂಗ ಚಳವಳ ಪ್ರಾರಂಭಿಸುವದು. ನೀವು ಬಂದರೆ ಸೈನ್ಯದಿಂದ ಹೊರಹೋಗಬೇಕಾದೀತು." ನಾವು ಹಿಂದು ಮುಂದು ಆಲೋಚಿಸದೆ ಧೈರ್ಯದಿಂದ ಹೇಳಿದೆವು. "ಏನು ಬಂದರೂ ನಾವು ಹೆದರಲಾರೆವು. ಸೈನ್ಯವನ್ನು ಬಿಡಲೂ ನಾವು ತಯಾರಿರುವೆವು." ಆಗ ಮೋತಿಲಾಲರು ಹೀಗೆ ಹೇಳಿದರು: "ಹಾಗೆ ಮಾಡುವದರಿಂದ ಪ್ರಯೋಜನವಿಲ್ಲ. ಕಾಂಗ್ರೆಸಿನ ಚಳವಳ ನಡೆಸಲು ಬೇರೆ ಜನರಿದ್ದಾರೆ. ನಿಮ್ಮಂಥವರು ಸೈನ್ಯದಲ್ಲಿಯೇ ಇರಬೇಕು. ಮುಂದೆ ನಮ್ಮ ದೇಶದ ಜವಾಬ್ದಾರಿ ನಮಗೆ ಬಂದಾಗ ನಮ್ಮ ರಕ್ಷಣೆ, ಭದ್ರತೆಗಳನ್ನು ನಾವು ನೋಡಿಕೊಳ್ಳಬಲ್ಲೆವೆಂಬುದನ್ನು ತೋರಿಸಲು ಸಮರ್ಥರಾಗಬೇಕು." ಮೋತಿಲಾಲಜಿಯವರ ಬುದ್ಧಿವಾದವನ್ನು ನಾವು ತೆಗೆದುಕೊಂಡೆವು. ಆ ಬುದ್ಧಿವಾದದಂತೆಯೇ ಹಿಂದೂದೇಶದ ಸೈನ್ಯವು ಕ್ರಮಶಃ ಬೆಳೆದು ಇಂದು ಪೂರ್ಣ ಭಾರತೀಯರದ್ದಾಗಿ ಜಗತ್ತಿನ ಇತರ ಯಾರಿಗೂ ಘಾರತೀಯನು ಕಡಿಮೆಯಿಲ್ಲ ಎನಿಸಿದ್ದಾನೆ. ನನ್ನ ಕೈಕೆಳಗಿನವರಿಗೆಲ್ಲಾ ನಾನು ಮೋತಿಲಾಲರ ಉಪದೇಶಗಳನ್ನೇ ಹೇಳುತಿದ್ದೆನು. ಸೈನ್ಯವು ತನ್ನ ಪಾಲಿನ ಕರ್ತವ್ಯವನ್ನು ಯೋಗ್ಯ ರೀತಿ ಮಾಡಿದೆ. ನಮ್ಮಲ್ಲಿ ಇಂದು ಪರಸ್ಪರ ಸಹಕಾರ ಬೇಕು. ಇಂದಿನ ಈ ಸಮಾರಂಭಕ್ಕಾಗಿ ನಾನು ತುಂಬಾ ಕೃತಜ್ಞನಿದ್ದೇನೆ" ಎಂದರು.

ಹುಚ್ಚರ ಹಟ್ಟಿ

ಏನ ಮಾಡಲಿ ಮುಂದೆ !

'ಎಸೆಸ್. ಎಲ್. ಸಿ.' ಪಾಸಾಯ್ತು ಸ್ವಡೀಸೆಲ್ಲಾ ಮುಗಿದಾಯ್ತು
ಏನ ಮಾಡಲಿ ಮುಂದೆ, ಅಯ್ಯೋ ದೇವಾ !
ಬಿ. ಎ., ಬಿ. ಎಸ್ಸ್ಸಿಗೆ, ಇಂಜಿನಿಯರ್ ಡಾಕ್ಟರಿಗೆ......
ಕಾಸಿಲ್ಲ ಕಿಸೆಯೊಳಗೆ, ಅಯ್ಯೋ ದೇವಾ ! ॥ ೧ ॥

ರಿಜಿಸ್ಟ್ರಾಯಿತು ಹೆಸರಲ್ಲಿ, ಎಕ್ಸ್ಚೇಂಜಾಫೀಸಲ್ಲಿ
ಉದ್ಯೋಗ ದೊರಕುವುದೆ ? ನಾ ಕಾಣೆನಯ್ಯೋ !
ಸಿಲೆಕ್ಟಾಯಿತು ಬೋರ್ಡಲ್ಲಿ 'ಸ್ಟಾಫ್‌ಸೆಲೆಕ್ಷನ್'ನಲ್ಲಿ,
ನೌಕರಿಯು ದೊರಕುವೊಡೆ ಕಾಯಬೇಕಯ್ಯೋ! ॥೨॥

ಕಾಂಬವರ ಕಂಡಾಯ್ತು, ಕೇಳ್ವವರ ಕೇಳಾಯ್ತು,
'ವೆರಿ ಸಾರಿ' ಎಂಬುದೇ ಉತ್ತರವೆ ನನಗೆ !
ಎಸ್ಟೇಟ್‌ಗಳಲೆದಾಯ್ತು, ಮೇನೇಜರ್‌ಗಳ ನೋಡಾಯ್ತು,
'ನೋವೇಕೆನ್ಸಿ' ಬೋರ್ಡನ್ನೆ ತೋರಬೇಕೆನಗೆ ? ॥೩॥

ಏರ್‌ಫೋರ್ಸ್ ರಿಕ್ರೂಟ್‌ಮೆಂಟ್, ಆರ್ಮಿ ಎನ್ರೋಲ್‌ಮೆಂಟ್
ಎಂದೆನುತ ಅತ್ತಿತ್ತ ಸುತ್ತಿದೆನು ಅಯ್ಯೋ !
'ಫಿಝಿಕಲ್ ಫಿಟ್ನೆಸ್ಸು', ಇನ್ನಿತರ 'ಮೆಜರ್‌ಮೆಂಟು'
ಸಾಲದು 'ಅನ್‌ಫಿಟ್' ಎಂದೊರೆದರಯ್ಯೋ ॥೪॥

ಸಾಕಪ್ಪ ಈ ಬದುಕು, ಯಾಕಿತ್ತೆಯೋ ದೇವ
ಹರಣವನೆ ಕಾಯುವೊಡೆ ಗತಿಕಾಣದಿರಲು !
ದೀನದರಿದ್ರರಿಗೆಲ್ಲ ಈ ಬದುಕು ಬೇಕಿಲ್ಲ,
ಮುರಹರನ ಕೃಪೆಯೊಂದು ಇಲ್ಲದಿರಲೂ ! ॥೫॥

ಲೇಖಕ:— " ಸಮೀರ ಕುಮಾರ "

ಚರ್ಚಿಲರಿಗೆ ಅನಾರೋಗ್ಯ?

ಬ್ರಿಟನಿನ ಪ್ರಧಾನಿ ಸರ್ ವಿನ್‌ಸ್ಟನ್ ಚರ್ಚಿಲರು ಕಾರ್ಯ ಬಾಹುಳ್ಯದಿಂದ ಉಂಟಾದ ದುರ್ಬಲತೆಯಿಂದ ನರಳುತ್ತಿರುವದರಿಂದ ಜುಲೈ ೮ ರಂದು ಜರಗಬೇಕಾಗಿದ್ದ ಬೆರ್ಮುಡಾ ಪರಿಷತ್ತನ್ನು ಮುಂದುವರಿಸಲಾಗಿದೆ. ಚರ್ಚಿಲರಿಗೆ ಒಂದು ತಿಂಗಳ ಸಂಪೂರ್ಣ ವಿಶ್ರಾಂತಿ ಹೊಂದಲು ವೈದ್ಯರು ಸೂಚಿಸಿದ್ದಾರೆ. ಐಸೆನ್ ಹೋವರರು "ಈ ಮುಂದುವರಿಕೆಯು ಬರೇ ತಾತ್ಕಾಲಿಕವಾಗಿದೆ" ಎಂದು ಬೆರ್ಮುಡಾ ಪರಿಷತ್ತಿನ ವಿಚಾರವಾಗಿ ಹೇಳಿದ್ದಾರೆ. ಚರ್ಚಿಲರಿಗೆ ಈಗ ೭೮ ವರ್ಷ ವಯಸ್ಸು. ಒಂದು ೧ಂಗಳ ವಿಶ್ರಾಂತಿಗಾಗಿ ಅವರು ಕೆಂಟ್ ನಲ್ಲಿನ ಕಾಂಟ್‌ವೆಲ್ ಎಂಬ ತಮ್ಮ ತವರೂರಿಗೆ ಹೋಗುವರು. ಇವರ ಗೈರು ಹಾಜರಿಯಲ್ಲಿ ಮಿ|| ಆರ್. ಎ. ಬಟ್ಲರರು (ಆರ್ಥಿಕ ಕಾರ್ಯದರ್ಶಿ) ಮಂತ್ರಿ ಮಂಡಳದ ಸಭೆಯ ಅಧ್ಯಕ್ಷತೆ ವಹಿಸುವರು. ಚರ್ಚಿಲರಿಗೆ ಎರಡನೆಯವರಾದ ಅಂಥೋನಿ ಈಡನರು ಈಗ ಅಮೇರಿಕದಲ್ಲಿ ಶಸ್ತ್ರಚಿಕಿತ್ಸೆ ಹೊಂದಿ ಗುಣಮುಖರಾಗುತ್ತಿದ್ದಾರೆ.

ರೋಬರ್ಟ್‌ಸನರ ಆಶಾವಾದ

ತಾತ್ಕಾಲಿಕ ರಾಜಿಯನ್ನು ರಕ್ಷಿಸಲು ಅಧ್ಯಕ್ಷ ಐಸೆನ್ ಹೋವರರ ದೂತರಾಗಿ ಬಂದಿರುವ ವಾಲ್ಟರ್ ರಾಬರ್ಟ್‌ಸನರೂ ಜ. ಮಾರ್ಕ್ ಕ್ಲಾರ್ಕರೂ, ಡಾ. ಸಿಂಗ್ಮನ್ ರೀಯವರೊಡನೆ ೪೦ ನಿಮಿಷ ಮಾತುಕತೆ ನಡೆಸಿದರು. ರೀಯವರೊಡನೆ ಮಾತುಕತೆ ನಡೆಸುವ ಮೊದಲು ರೋಬರ್ಟ್‌ಸನರು ಎಲ್ಲವೂ ಸರಿಹೋದಿತೆಂಬ ಆಶೆಯನ್ನು ವ್ಯಕ್ತಪಡಿಸಿದರು. ಅವರು ಆಗಲೇ ದ. ಕೊರಿಯದ ಮುಖ್ಯ ಮಂತ್ರಿ ಪೈಕ್ ಟೂಚಿನರೊಡನೆ ಮಾತುಕತೆ ನಡೆಸಿ ಬಂದಿದ್ದರು. ಕಮ್ಯೂನಿಸ್ಟರ ಪೆಕಿಂಗ್ ಮತ್ತು ಪಾಯೋಂಗ್ ಯಾಂಗ್ ರೇಡಿಯೋಗಳು ಡಾ. ರೀಯವರ ವಿರೋಧವೇ ರಾಜಿ ಒಪ್ಪಂದಕ್ಕೆ ತಡೆಯಾಗುತ್ತಿದೆ ಎಂದು ಈಗ ಘೋಷಿಸುತ್ತ ಇವೆ. ನವಚೀನ ಸುದ್ದಿ ಸಂಸ್ಥೆಯು ರೋಬರ್ಟ್‌ಸನರು ದ. ಕೊರಿಯದೊಡನೆ ಅಮೇರಿಕವು ಸಂರಕ್ಷಣಾ ಒಪ್ಪಂದ ಮಾಡುವದೆಂಬ ಆಶ್ವಾಸನೆಯನ್ನು ತಂದಿದ್ದಾರೆ ಎಂದು ಪ್ರಚುರ ಪಡಿಸಿದೆ. ಯುದ್ಧರಂಗದಲ್ಲಿ ನಾಲ್ಕು ಕಡೆಯಲ್ಲಿ ಬಿರುಸಿನ ಯುದ್ಧವು ನಡೆಯುತ್ತಾ ಇದೆ.

ಜಪಾನಿನಲ್ಲಿ ಜಲಪ್ರಳಯ

ತಾ. ೨೬ರಲ್ಲಿ ಜಲಪ್ರಳಯದಲ್ಲಿ ಜಪಾನ್ ದ್ವೀಪಗುಚ್ಛದಲ್ಲೊಂದಾದ ಕ್ಯುಶು ದ್ವೀಪವು ಸಂಪೂರ್ಣ ಭಸ್ಮವಾಯಿತು. ಪೊಲೀಸರು ಎಣಿಕೆ ಹಾಕಿದ ಪ್ರಕಾರ ಸತ್ತವರ ಸಂಖ್ಯೆ ೫೦೦ಕ್ಕೇರಿದೆ. ಐನೂರಕ್ಕಿಂತಲೂ ಹೆಚ್ಚು ಜನರ ಪತ್ತೆಯೇ ಇಲ್ಲವಾಗಿದೆ. ೨೪೪ ಜನರು ಗಾಯಗೊಂಡಿದ್ದಾರೆ.

ಒಂದೇ ಸವನೆ ಧಾರಾಕಾರವಾಗಿ ಸುರಿದ ಮಳೆಯಿಂದಾಗಿ ದ್ವೀಪದಲ್ಲಿನ ಜನರೆಲ್ಲ ಕಂಗಾಲಾದರು. ಮೂವತ್ತು ಸಾವಿರ ಮಂದಿ ಊರು ಬಿಟ್ಟು ಹೊರಡಬೇಕಾಯಿತು. ೨೩೫ ಮನೆಗಳು ನೀರುಪಾಲಾದವು. ಉತ್ತಮ ಬೆಳೆ ಕೊಡುತಿದ್ದ ಅಕ್ಕಿ ಹೊಲಗಳೆಲ್ಲ ಸರೋವರಗಳಾಗಿ ಮಾರ್ಪಟ್ಟವೆ!

ಪಾರ್ಲೆಮೆಂಟ್ ಅಧಿವೇಶನ

ಆಗಸ್ಟ್ ಮೂರರಂದು ಪಾರ್ಲಿಮೆಂಟ್ ಅಧಿವೇಶನ ಆರಂಭವಾಗಲಿರುವದರಿಂ ಕಾರ್ಯಕ್ರಮಗಳನ್ನು ಚರ್ಚಿಸುವದಕ್ಕಾಗಿ ಶ್ರೀ ಸತ್ಯನಾರಾಯಣ ಸಿನ್ಹರವರು ಎಲ್ಲ ಸರಕಾರಿ ಕಾರ್ಯದರ್ಶಿಗಳ ಸಭೆ ಸೇರಿಸಿದರು. ೬೨ ಮಸೂದೆಗಳು ಮುಂಬರುವ ಅಧಿವೇಶನದಲ್ಲಿ ಮಂಡಿಸಲ್ಪಡಲಿವೆ. ಇವುಗಳಲ್ಲಿ ಬಹಳ ಪ್ರಮುಖವಾದವುಗಳು ೨೨.

IN MEMORIUM

In ever loving and treasured memory of Mr. J. Savaridas, (wodderkadu Estate) who entered into eternal rest on 24-6-53.

" His life's long day & death's dark night Ended with peaceful sleep and perpetual light ".

Inserted by his sorrowing brothers, wife & children.

ಆಸ್ತಿಗಳು ಮಾರಾಟಕ್ಕಿವೆ.

೧. ಪೊಳಿಬೆಟ್ಟದಿಂದ ಮೂರು ಮೈಲು ದೂರದಲ್ಲಿ ಹೈರೋಡಿನ ಬದಿಯಲ್ಲಿ ೭೦೦ ಬಟ್ಟಿ ಪೂರ್ತಿ ಸಾಗು ಭೂಮಿ, ೩೫ ಎಕರೆ ೭೦೦ ಚಿಕ್ಕ ಕಿತ್ತಳೆ ಗಿಡಗಳಿರುವ ಜಾಗ.

೨. ತಿತಿಮತಿ ಸಮೀಪ ಹೈರೋಡಿನ ಬಾಜು ೧೦೦೦ ಬಟ್ಟಿ ಭೂಮಿ ಮತ್ತು ೩೦ ಎಕರೆ ಫಸಲಿಗೆ ಬಂದ ಕಿತ್ತಳೆ ತೋಟ.

೩. ನಾಲ್ಕು ನಾಡು ಯುವಕಪಾಡಿ ಗ್ರಾಮದಲ್ಲು ೧೦೧.೮೮ ಎಕರೆ ಯಾಲಕ್ಕಿ ಮಲೆ.

ಈ ಸೊತ್ತುಗಳನ್ನು ಒಟ್ಟಿನಲ್ಲಾಗಲೀ ಬೇಕಾದರೆ ಬಿಂಗಡವಾಗಿಯಾಗಲಿ ಕೊಡಬಹುದು.

ಜೆ. ಬಿ. ಕೃಷ್ಣಸ್ವಾಮಿ ನಾಯ್ಡು,
ಸುಪರಿಂಟೆಂಡೆಂಟ್
ಪಳ್ಳೇರಿ
ಸಿದ್ದಾಪುರ.

ವಾರದ ಕಥೆ.

ಬೇಡುವ ಹುಡುಗನಲ್ಲ!

—: ಕತೆಗಾರರು :—
ಶ್ರೀ ಕೆ. ಶ್ರೀಕಂಠ. ಪುತ್ತೂರು.

ಇಲ್ಲ ಇಲ್ಲ ಸಾರ್, ಸುಮ್ಮನೆ ನಾನಿಲ್ಲಿ ಮಲಗಿಕೊಂಡಿದ್ದೇನೆ. ಸೊಂಟವನ್ನು ಸುತ್ತಿಕೊಂಡಿದ್ದ ಚಿಂದಿ ಬಟ್ಟೆ ನನ್ನದಿದು ಚೆಲ್ಲಿಕೊಂಡಿದೆ. ಅದನ್ನೆತ್ತಿ ಮೈಯನ್ನು ಮುಚ್ಚಿಕೊಳ್ಳಲೂ ತ್ರಾಣವಿಲ್ಲ ನನಗೆ. ಅಂತೆಯೇ ಅದು ಅಲ್ಲೇ ಇದೆ. ನನ್ನ ಸಂಗವೆಂದರೆ ಅದಕ್ಕೂ ಹಿತವಲ್ಲವೇನೋ! ನನ್ನಿಂದ ದೂರ ಸರಿದಿದೆ ಆ ಬಟ್ಟೆಯು ಚೂರು. ನಿಮ್ಮ ಕನಿಕರದ ಕಾಣಿಕೆಗಳನ್ನು ಕೂಡಿಸಲು ನಾನದನ್ನು ಹರಡಿಲ್ಲ. ಪುಡಿಕಾಸುಗಳನ್ನು ಅದರ ಮೇಲೆ ಚೆಲ್ಲಿ ನನ್ನ ಹೃದಯವನ್ನು ಹಿಂಡಬೇಡಿ. ಬೇಡಲೆಂದು ಈ ಬೀದಿಯಲ್ಲಿ ಬಿದ್ದುಕೊಂಡಿಲ್ಲ ನಾ. ಇಲ್ಲ ಸಾರ್....ನಾನು ಬೇಡುವ ಹುಡುಗನಲ್ಲ

ಆಶ್ಚರ್ಯಗೊಳ್ಳಬೇಡಿರಿ....ಮತ್ತೇಕೆ ಈ ಬೀದಿಯಲ್ಲಿ ಬಿದ್ದುಕೊಂಡಿರುವೆ ಎಂದು ಕೇಳುತ್ತೀರಾ? ತಂದೆ ತಾಯಿ ಬಿಟ್ಟು ಹೋದಂದಿನಿಂದಲೇ ಈ ಗತಿಗೇಡು ವಾಸ. ತನ್ನವನೆಂದು ನನ್ನನ್ನೆತ್ತಿಕೊಳ್ಳಲು ತಯಾರಿರುವ ಬಂಧುಗಳ ಅಭಾವದಿಂದಲೇ ಈ ಪ್ಲಾಟ್‌ಫಾರ್ಮ್ ನಿವಾಸ.

ಇಲ್ಲ ಸಾರ್, ನನಗೆ ಗೊತ್ತಿಲ್ಲ. ಕೆಲವೇ ಕೆಲವು ದಿನಗಳ ಹಿಂದೆ ಅವರು ಜೀವಂತರಾಗಿದ್ದರು. ಒಣಗಿದ ಕಡ್ಡಿಯಂತಿರುವ ನನ್ನ ತಂದೆ, ಸಹನಾತೀತ ನೋವಿನ ಪ್ರತಿಬಿಂಬದಂತಿರುವ ನನ್ನ ತಾಯಿ, ಬದುಕೇ ಬೇಸರಗೊಂಡಂತೆ ಕಾಣಿಸುವ ನನ್ನ ಪುಟ್ಟ ತಂಗಿ ಈ ಒಂದು ಕುಟುಂಬವನ್ನು ನೀವು ಮೊದಲು ಪಟ್ಟಣದ ಯಾವ ಮೂಲೆಯಲ್ಲಾದರೂ ನೋಡಿರಬಹುದು. ಒಂದು ದಿನ ಜೈನಾ ಬಜಾರ್, ಇನ್ನೊಂದು ದಿನ ಮೋರ್ ಮಾರ್ಕೆಟ್....ಮತ್ತೊಂದು ದಿನ ಮೌಂಟ್ ರೋಡು....ಮೆರೀನಾ.... ಮೈಲಾಪುರ! ಏನು ಸಾರ್? ನೋಡಿದಂತೆ ಅನಿಸುತ್ತಿದೆ ಅನ್ನುತ್ತೀರಾ? ನಮ್ಮಂತೆ ಎಷ್ಟೋ ಸಂಸಾರಗಳಿವೆ ಸಾರ್ ಈ ಮದರಾಸಿನಲ್ಲಿ. ನೀವು ಬೇರೆ ಯಾರನ್ನಾದರೂ ನೋಡಿರಬಹುದು.

ನಮ್ಮನ್ನೇ ಅನ್ನುತ್ತೀರಾ? ಇರಬಹುದು. ಒಂದು ವಕ್ಕೆ ನನ್ನ ತಂದೆ ಇನ್ನೊಂದು ವಕ್ಕ ತಂಗಿಯೊಡನೆ ತಾಯಿ, ಮಧ್ಯದಲ್ಲಿ ನಾನು–ತಲೆಯ ಮೇಲೆ ಹರಡಿದ ಒಂದು ಬಟ್ಟೆಯ ತುಂಡು. ಆಗಿರಬಹುದು. ನೀವು ನೋಡಿ ಕಾಸೆರಚಿರಬಹುದು. ನಮಗೇ ಆಗಿರಬಹುದು. ಕಾಸು ಕೊಡುವಾಗ ಗಂಟು ಮೂಟೆಯಲ್ಲಿ ನಾನು ತಲೆಯನ್ನು ಭದ್ರವಾಗಿ ಹುದುಗಿಕೊಂಡೆ ಅನ್ನುತ್ತೀರಾ? ಹೌದು. ಅದು ನಾನೇ. ನೀವು ನೋಡಿದುದು ನಮ್ಮನ್ನೇ. ಗತಿಗೆಟ್ಟ ಜೀವನದ ಕೂಟವನ್ನು ಸಹಿಸಲಾರದೆ ನಾನು ಮುಖವನ್ನು ಮುಚ್ಚಿಕೊಂಡೆ ಸಾರ್. ಬೇಡುವುದು ಅವಮಾನ ಅಲ್ಲವೇ ಸಾರ್? ಬೇಡುವುದು ನನ್ನಲ್ಲಿ ತನಗೇ ನಂಬಿಕೆಯಿಲ್ಲದಂತೆ; ತನ್ನನ್ನು ತಾನೇ ಕೊಂದಂತೆ. ಅಲ್ಲವೇ ಸಾರ್?

ಹಾಂ?....ಈ ವಿಚಾರ ಎಲ್ಲಿಂದ ದೊರೆಯಿತು ಎಂದು ಕೇಳುತ್ತೀರಾ? ನನಗೊಬ್ಬರು ಉಪಾಧ್ಯಾಯರಿದ್ದರು. ಅಂದರೆ ಒಂದು ಕಾಲದಲ್ಲಿ ನಾನೂ ಶಾಲೆಗೆ ಹೋಗುತ್ತಿದ್ದೆ. ಒಂದು ಕಾಲದಲ್ಲಿ ಅಂದರೆ ಬಹಳ ಹಿಂದೇನಲ್ಲ. ಒಂದು ವರ್ಷವಿರಬಹುದು. ಅಥವಾ ಸ್ವಲ್ಪ ಹೆಚ್ಚೇನೋ. ಆಗ ನನ್ನ ತಂದೆ ಜೈನಾ ಬಜಾರಿನ ಯಾವುದೋ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು. ನಸುಕಿನಲ್ಲಿದ್ದು ಊಟ ತೀರಿಸಿ ಮಧ್ಯಾಹ್ನದ ಬುತ್ತಿ ಕಟ್ಟಿಕೊಂಡು ಹೋದರೆ ರಾತ್ರಿ ಹಿಂದೆ ಬರುತಿದ್ದರು. ನಾನು ಶಾಲೆಗೆ ಹೋಗಿ ಓದು ಬರಹ ಕಲಿಯುತಿದ್ದೆ. ಅಲ್ಲಿ ಒಬ್ಬರು ಉಪಾಧ್ಯಾಯರು. ಬಹು ಒಳ್ಳೆಯವರು. ಪಾಠಗಳಿಗಿಂತಲೂ ಹೆಚ್ಚು, ಬಡ ಮಕ್ಕಳಿಂದ ತುಂಬಿದ ನಮ್ಮ ತರಗತಿಗೆ ಹಿತವಚನಗಳನ್ನು ಹೇಳಿ ಹುರಿದುಂಬಿಸುತ್ತಿದ್ದರು. ನಾನೆಂದರೆ ಅವರಿಗೆ ತುಂಬಾ ಪ್ರೀತಿ. ಚೆನ್ನಾಗಿ ಕಲಿತು ಮುಂದಕ್ಕೆ ಬರಬೇಕೆಂದು. ಓ, ಅದೆಲ್ಲ ಈಗೇಕೆ? ಇನ್ನು ಮುಂದಕ್ಕೆ ಬರಲಿಕ್ಕೂ ಇಲ್ಲ, ಹಿಂದೆ ಹೋಗಲಿಕ್ಕೂ ಇಲ್ಲ ..ಹಿಂದೆ ಹೋಗಿ ಆ ಹಳೆನೆನಪುಗಳಿಂದ ಪ್ರಯೋಜನವಾದರೂ ಏನು?

ಆಂ? ಅಷ್ಟು ಚೆನ್ನಾಗಿದ್ದು ಈ ಗತಿಯೇಕೆ ಎಂದು ಕೇಳುತ್ತೀರಾ? ಅಂಗಡಿಯಿಂದ ಹಿಂದೆ ಬಂದು ಒಂದು ರಾತ್ರಿ ವಿಪರೀತ ತಲೆ ನೋವೆಂದು ತಂದೆ ಮಲಗಿಬಿಟ್ಟರು. ಮೊದಲು ತಲೆ ನೋವು, ಮತ್ತೆ ಜ್ವರ, ಕೆಮ್ಮು, ನಿತ್ರಾಣತೆ....ಎರಡು ತಿಂಗಳು ಮನೆಯಿಂದ ಹೊರಬೀಳಲಿಲ್ಲ. ಹೇಗೋ ಗುಣವಾದ ಹಾಗೆ ಕಂಡಿತು. ಆಫೀಸಿಗೆ ಹೋದರು. ಆದರೆ ಎರಡು ತಿಂಗಳು ಇವರಿಗಾಗಿ ಅವರು ಕಾಯುವರೇ? ಬೇರೆಯವರ ನೇಮಕವಾಗಿತ್ತಂತೆ. ಆ ಕಳವಳದಲ್ಲಿ ಮನೆಗೆ ಬಂದವರು ಪುನಃ ಮಲಗಿದರು. ಕೈಯಲ್ಲಿದ್ದ ಹಣ ಕರಗಿಹೋಯಿತು. ಸ್ನೇಹಿತರು ಬಂಧುಗಳು, ಸಾಲಕೊಟ್ಟು ಕೊಟ್ಟು ಬೇಸರ ಹಿಡಿದು ತಂದೆಯ ಹೆಸರು ಕೇಳಿದರೇ ದೂರ ಓಡಿಹೋಗತೊಡಗಿದರು. ಬಾಡಿಗೆ ಕೊಡದಿದ್ದುದರಿಂದ ಮನೆಯವನು ನೋಟೀಸು ಕೊಟ್ಟ. ಒಂದು ಕುಟುಂಬ ಬೀದಿ ಪಾಲಾಯಿತು.

'ಹತ್ತು ವರ್ಷ ನಿರ್ವಂಚನೆಯಿಂದ ಸೇವೆ ಸಲ್ಲಿಸಿದರೂ ಎರಡು ತಿಂಗಳ ಕಾಯಿಲೆಯಿಂದ ಸೈರಿಸಲಾರದೆ ಯಜಮಾನರು ಕೆಲಸದಿಂದ ತೆಗೆದು ಹಾಕಿದರು. ನಾವೀಗ ನಿರ್ಗತಿಕರು. "ದಯವಿಟ್ಟು ಸಹಾಯ ಮಾಡಿರಿ'

—ಎಂದು ಪ್ಲಾಟ್ ಫಾರ್ಮಿನ ಮೇಲೆ ಬರೆದು ಅದರ ಹಿಂದೆ ತಂದೆ ತಾಯಿ ನನ್ನೊಡನೆ ಕೈ ನೀಡಿ ಕುಳಿತರು. ನಾವು ಬೇಡಲಾರಂಭಿಸಿದುದು ನನ್ನಿಂದ ಸಹಿಸಲಾಗಲಿಲ್ಲ.

'ನಾವು ಬೇಡಬಾರದು, ಅಪ್ಪಾ?' ನಾನು ಹೇಳಿದೆ.

'ಬೇರೇನು ಮಾಡಲಿ ಮಗೂ?'

'ಏನಾದರೂ ಕೆಲಸ ಮಾಡಿ ಸಂಪಾದಿಸಬೇಕು'

'ಕೆಲಸ ಮಾಡಲು ನನ್ನಲ್ಲಿ ಏನೂ ತ್ರಾಣ ಉಳಿದಿಲ್ಲ ಮಗೂ....'

ಹೌದು ನಡೆಯಲೂ ಆಗುತ್ತಿರಲಿಲ್ಲ ಅವರಿಂದ. ಬೆಳಗಿನಿಂದ ಸಂಜೆಯ ತನಕ ಕುಳಿತಿರುತಿದ್ದರು. ಕತ್ತಲು ಕವಿದೊಡನೆ ಅಲ್ಲೇ ಬಿದ್ದುಕೊಳ್ಳುತಿದ್ದರು. ದೊರೆತ ಕಾಸುಗಳಿಂದ ಒಂದಿಷ್ಟು ಅಕ್ಕಿ ಕೊಂಡು ಅಮ್ಮ ಗಂಜಿ ಬೇಯಿಸುತಿದ್ದಳು. ಪುಟ್ಟ ತಂಗಿಯನ್ನು ನೋಡಿಕೊಳ್ಳುತ್ತಾ ನಾನು ಕಾಲ ಕಳೆಯುತಿದ್ದೆ.

ಅವರೇ? ಎಲ್ಲಿರುವರೋ ಈಗ?— ಇಲ್ಲ ಸಾರ್, ನನಗೆ ಗೊತ್ತಿಲ್ಲ. ಅದಕ್ಕೆ ಸಾಯಲಿಲ್ಲ. ಖಂಡಿತ ಸಾಯಲಿಲ್ಲ. ನಾನೇನೂ ಬುದ್ಧಿಯಿಲ್ಲದ ಹುಡುಗನಲ್ಲ. ನನಗೆ ಗೊತ್ತಿದೆ, ಅವರಿನ್ನೂ ತೀರಿಹೋಗಿಲ್ಲ. ಅಪ್ಪ ಹೇಳಿದ್ದರು–ಅಮ್ಮ ಸತ್ತುಹೋದಳೆಂದು. ಆದರೆ ಅಮ್ಮನನ್ನು ಹುಡುಕಿಕೊಂಡು ಪುಟ್ಟ ತಂಗಿಯೊಡನೆ ಅವರೂ ಹೊರಟು ಹೋದರು. ಅಲ್ಲ ಸಾರ್, ಪರಲೋಕಕ್ಕಲ್ಲ. ಖಂಡಿತ ಆ ಭಾಗ್ಯ ಅಷ್ಟು ಬೇಗ ದೊರೆಯಲಾರದು.

ಅದೊಂದು ದಿನ ಜಟ್ಟಿಯಂತಿದ್ದ ಜನ್ನನೊಬ್ಬ ನಮ್ಮ ಸುತ್ತ ಸುಳಿಯುತಿದ್ದ. ಎದುರಿನ ಪ್ಲಾಟ್‌ಫಾರ್ಮಿನ ಮೂಲೆಯಲ್ಲಾತ ನಮ್ಮೆಡೆಗೆ ಎವೆಯಿಕ್ಕದೆ ನೋಡುತ್ತ ಗಂಟೆಗಟ್ಟಲೆ ಕುಳಿತುಕೊಂಡಿದ್ದುದನ್ನು ನಾನು ಗಮನಿಸಿದ್ದೆ. ಗಮನಿಸಿ ಭಯಭರಿತನಾಗಿ ತಂದೆಯೊಡನೆ ಕೇಳಿದ್ದೆ.

"ಅಪ್ಪಾ, ಅವನೇಕೆ ನಮ್ಮನ್ನು ಹಾಗೆ ನೋಡುತ್ತಾನೆ?"

'ಏಕೋ? ನನಗೇನು ಗೊತ್ತು ಮಗೂ?'

'ನನಗೆ ಭಯವಾಗುತ್ತದಪ್ಪಾ!'

'ಅವನನ್ನು ನೋಡಬೇಡ ನೀನು, ಅಷ್ಟೆ'.

'ಅವನನ್ನು ನೋಡದಿರಲು ನಾನು ಯತ್ನಿಸಿದ್ದೆ, ಸಾರ್. ಆದರೆ ಏಕೋ ಅವನ ರೂಪ ನನ್ನ ಕಣ್ಣೆದುರು ಭಯಂಕರವಾಗಿ ಕಾಣಿಸುತಿತ್ತು. ಒಂದು ದಿನ ರಾತ್ರಿ ನನಗೆ ಥಕ್ಕನೆ ಎಚ್ಚರವಾಯಿತು. ಆ ಮನುಷ್ಯನೂ ತಂದೆಯೂ ಪಿಸುಮಾತಾಡಿಕೊಳ್ಳುತಿದ್ದರು. ಅಳುತಿದ್ದ ಪುಟ್ಟ ತಂಗಿಯನ್ನೆತ್ತಿಕೊಂಡು ಥರ ಥರನೆ ನಡುಗುತ್ತಾ ನನ್ನ ತಾಯಿ ಮೂಲೆಯಲ್ಲಿ ಕುಳಿತುಕೊಂಡಿದ್ದಳು.

ಆ ದಿನ ಹಾಗೆ ಕಳೆದು ಹೋಯಿತು. ಮತ್ತೊಂದು ರಾತ್ರಿ ಕಳೆದು ಬೆಳಗಾದಾಗ ನನ್ನ ತಾಯಿ ನಮ್ಮೊಟ್ಟಿಗಿರಲಿಲ್ಲ. ತಾಯಿಯ ಒಡೆದು ಚೂರಾದ ಬಳೆಗಳು ನಮ್ಮೆದುರು ಚೆಲ್ಲಿಕೊಂಡಿದ್ದವು. ತಂದೆಯವರು ಕಣ್ಣೀರು ಸುರಿಸುತ್ತಿದ್ದರು. ನಾನು ವಿಚಾರಿಸಿದ್ದೆ.

'ಅಪ್ಪಾ, ಅಮ್ಮ ಎಲ್ಲಿ?'

'ಸತ್ತುಹೋದಳು, ಮಗೂ' ಎಂದವರ ಉತ್ತರ.

ಮೂರು ದಿನಗಳು ಕಳೆದವು. ತಾಯಿಲ್ಲದೆ ಪುಟ್ಟ ತಂಗಿ ಒಂದೇ ಸಮನೆ ಕಿರಿಚುತಿದ್ದಳು. ಅದನ್ನು ಸಮಾಧಾನಪಡಿಸಲು ಯತ್ನಿಸಿ ಸೋತು ತಂದೆಯವರೂ ಅಳತೊಡಗಿದಾಗ ನಾನು ಕೇಳಿದೆ.

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಛಾಲ್ತಿ ಠೇವಣಾತಿ ಲೆಕ್ಕದ (Current Deposits)	ರೂ.	0–8–0
ಸೇವಿಂಗ್ಸ್ (ತಾ. 1—1—1953 ರಿಂದ)	,,	1–8–0
ನಿಗದಿ (Fixed) 3 ರಿಂದ 11 ತಿಂಗಳ ಅವಧಿಗೆ	,,	1–8–0
1 ವರುಷ	,,	2–0–0
2 ವರುಷ	,,	2–8–0
3 ವರುಷ	,,	3–0–0
5 ವರುಷ	,,	3-12-0
10 ವರುಷ	,,	4–0–0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಬೆಳ್ಳಿಯ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶ್ಯೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ವಿವರಗಳನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ & ಖಜಾನ್ಚಿ.

ಜನಸಂಖ್ಯೆಗೆ ಹೆದರಬೇಕಾಗಿಲ್ಲ

ಜಗತ್ತಿನ ಜನಸಂಖ್ಯೆಯು ಬೆಳೆಯುರುವುದರಿಂದ ಆದರ ಮೂಲಕ ಆಹಾರ ಪ್ರಶ್ನೆಯು ಕಠಿಣವಾಗುತ್ತಿದೆ ಎಂಬ ಭಾವನೆಯು ಬೆಳೆಯುತ್ತಿದೆ. ಅದೇನೋ ನಿಜ ಆದರೆ ಅದಕ್ಕೆ ಉಪಾಯವೇನು ಎಂಬುದೇ ಇಂದಿನ ಸಂಖ್ಯಾಶಾಸ್ತ್ರಜ್ಞರ ಮುಂದಿರುವ ಪ್ರಮುಖ ಪ್ರಶ್ನೆಗಳಲ್ಲೊಂದಾಗಿದೆ.

ಕೆಲವರು ಜನಸಂಖ್ಯೆಯನ್ನು ನಿಯಂತ್ರಿಸಬೇಕು ಎಂದೆನ್ನುತ್ತಿದ್ದಾರೆ. ಆದರೆ ಇನ್ನು ಕೆಲವರು ಜನಸಂಖ್ಯೆಗೆ ಸಾಲುವಷ್ಟು ಆಹಾರ ಹುಟ್ಟಿಸಲು ಯತ್ನಿಸಬೇಕು ಎಂದೆನ್ನುತ್ತಿದ್ದಾರೆ.

ಅಮೇರಿಕೆಯ ಶಾಸ್ತ್ರಜ್ಞರಾದ ಶ್ರೀ ಆರ್. ಜಿ. ವೆನ್‌ಸ್ವರ್ಥ್ ಎಂಬವರು ಈ ವಿಷಯವನ್ನು ಅಭ್ಯಾಸಮಾಡಿ 'ಈ ಜಗತ್ತಿನಲ್ಲಿ ಮಾನವ ಸಂಖ್ಯೆಯು ಬೆಳೆಯುವುದಕ್ಕೂ ಮಿತಿಯಿದೆ. ಆದೂ ಕೂಡ ಬೇಕಾದಷ್ಟು ಬೆಳೆಯುವುದು ಶಕ್ಯವಿಲ್ಲ. ಆದರೆ ಅದು ಬೆಳೆದ ಹಾಗೆ ಅದಕ್ಕೆ ಅನ್ನ ಒದಗಿಸಲು ಈ ಜಗತ್ತಿಗೆ ಸಾಧ್ಯವಿದೆ. ಇಷ್ಟೇ ಅಲ್ಲದೆ ಇಂದಿನ ಜನಸಂಖ್ಯೆಯ ಮೂರುಪಟ್ಟು ಜನರನ್ನು ಅದು ಸಾಕಬಲ್ಲದು.' ಎಂದು ಹೇಳಿದ್ದಾರೆ. ಅವರು ಆ ವಿಷಯವಾಗಿ ಇನ್ನೂ ಕೆಲವು ಮಹತ್ವದ ಸಂಗತಿಗಳನ್ನು ಈ ಕೆಳಗಿನಂತೆ ಹೇಳಿದ್ದಾರೆ.

ಜನಸಂಖ್ಯೆಯ ದೃಷ್ಟಿಯಿಂದ ಜಗತ್ತಿನಲ್ಲಿ ಮೂರುಭಾಗಗಳನ್ನು ಮಾಡಬಹುದಾಗಿದೆ. ಮಾನವವರ್ಗದ ಐದರಲ್ಲಿಯ ಒಂದು ಪಾಲು ಪಶ್ಚಿಮ ಯೂರೋಪ, ಉತ್ತರ ಅಮೇರಿಕೆ, ಆಸ್ಟ್ರೇಲಿಯಾ, ನ್ಯೂಝೀಲಂಡ್ ಇವುಗಳಲ್ಲಿ ಇದೆ.

ಪ್ರಪಂಚದ ಜನಸಂಖ್ಯೆಯ ಐದರಲ್ಲಿಯ ಮತ್ತೊಂದು ಭಾಗವು, ಪೂರ್ವ ದಕ್ಷಿಣ ಯೂರೋಪ, ರಶಿಯಾ, ಜಪಾನ ಮತ್ತು ಏಶಿಯಾ, ಆಫ್ರಿಕಾ, ಲ್ಯಾಟಿನ್ ಅಮೇರಿಕಾದ ಕೆಲವು ಭಾಗಗಳು ಇವುಗಳಲ್ಲಿ ಇದೆ. ಈ ಭಾಗಗಳಲ್ಲಿ ಜನನ ಮರಣಗಳನ್ನು ನಿಯಂತ್ರಿಸುವ ಕಾರ್ಯವು ನಡೆದಿದ್ದರೂ ಜನಸಂಖ್ಯೆಯು ಬೆಳೆಯುತ್ತಲೇ ಇದೆ.

ಐದರಲ್ಲಿಯ ಉಳಿದ ಮೂರು ಭಾಗದ ಜನರು ಏಶಿಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕೆಯಲ್ಲಿ ಇರುತ್ತಾರೆ. ಈ ಪ್ರದೇಶಗಳಲ್ಲಿ ಜನನವು ಅಷ್ಟೊಂದು ನಿಯಂತ್ರಿತವಾಗಿಲ್ಲ. ಮರಣವು ಕೆಲ ಮಟ್ಟಿಗೆ ನಿಯಂತ್ರಿಸಲ್ಪಟ್ಟಿದೆ. ಆದ್ದರಿಂದ ಈ ಭಾಗಗಳ ಜನಸಂಖ್ಯೆಯು ಬಹಳವಾಗಿ ಬೆಳೆಯುತ್ತಿದೆ.

ಜಗತ್ತಿನಲ್ಲಿ ಸಾಗು ಮಾಡಲ್ಪಡಬಹುದಾದ ಒಟ್ಟು ಭೂಮಿಯು ೩,೬೦೦ ಕೋಟಿ ಏಕರೆ ಇದೆ. ಇದರಲ್ಲಿ ೫೫೦ ಕೋಟಿ ಏಕರೆ ಭೂಮಿ ಮಾತ್ರ ಸಾಗುವಳಿಯ ಕೆಳಗೆ ತರಲ್ಪಟ್ಟಿದೆ. ಜಗತ್ತಿನಲ್ಲಿರುವ ಪ್ರತಿಯೊಬ್ಬ ಮನುಷ್ಯನಿಗೆ ಸಾಗು ಮಾಡಲ್ಪಟ್ಟ ಭೂಮಿಯು ಒಂದೊಂದು ಏಕರೆ ಬರುತ್ತದೆ.

ತಮ್ಮಲ್ಲಿಯ ಭೂಮಿಯ ಹೆಚ್ಚು ಭಾಗವನ್ನು ಸಾಗು ಮಾಡಿದ ದೇಶಗಳೆಂದರೆ ಅಮೇರಿಕೆಯ ಸಂಯುಕ್ತ ಸಂಸ್ಥಾನಗಳು ಮತ್ತು ರಶಿಯಾ. ಅಮೇರಿಕೆಯು ತನ್ನಲ್ಲಿಯ ಭೂಮಿಯ ನೂರಕ್ಕೆ ೧೮॥ ಯಷ್ಟು, ರಶಿಯಾ ದೇಶವು ೧೭ ರಷ್ಟು ಸಾಗು ಮಾಡಿದೆ. ೫೦ ವರ್ಷಗಳ ಹಿಂದೆ ಸಂಯುಕ್ತ ಸಂಸ್ಥಾನಗಳಲ್ಲಿಯ ಸಾಗು ಮಾಡಲ್ಪಟ್ಟ ಭೂಮಿಯು ಅಲ್ಲಿಯ ಪ್ರತಿ ವ್ಯಕ್ತಿಗೆ ೫ ಏಕರೆಯಷ್ಟು ಇತ್ತು. ಇತ್ತ ಕಡೆಗೆ ಆ ದೇಶದ ಜನಸಂಖ್ಯೆಯು ಬೆಳೆದದ್ದರಿಂದ ಅದು ಈಗ ಪ್ರತಿ ವ್ಯಕ್ತಿಗೆ ೩ ಏಕರೆಯಷ್ಟು ಬೀಳುತ್ತದೆ. ಆದರೆ ಸಂಯುಕ್ತ ಸಂಸ್ಥಾನದಲ್ಲಿಯ ಅತ್ಯಾಧುನಿಕವಾದ ಸಾಗುವಳಿ ಪದ್ಧತಿ ಮೊದಲಾದ ಕಾರಣಗಳಿಂದ, ಅಷ್ಟೇ ಭೂಮಿಯಿಂದ ಈಗಿನ ಜನಸಂಖ್ಯೆಯ ಇಮ್ಮಡಿ ಜನರಿಗೆ ಆಗಾಗ ಪೂರೈಸುವಷ್ಟು ಉತ್ಪನ್ನವಾಗುತ್ತಿದೆ. ಇದಕ್ಕಾಗಿಯೇ ಆ ದೇಶವು ಹೊರಗೆ ಕೂಡ ಬೇಕಾದಷ್ಟು ಅನ್ನ ಸಾಮಗ್ರಿಯನ್ನು ಕಳುಹಿಸಲು ಸಮರ್ಥವಾಗಿದೆ.

ಸದ್ಯಕ್ಕೆ ೩೦ ಕೋಟಿ ಏಕರೆ ಭೂಮಿಗೆ ಜಗತ್ತಿನಲ್ಲಿ ನೀರು ಹಾಯುತ್ತಿದೆ. ಇದರಿಂದ ಜಗತ್ತಿನ ನೂರಕ್ಕೆ ೧೦ ರಷ್ಟು ಜನರಿಗೆ ಆಹಾರ ಒದಗುತ್ತಿದೆ. ಇನ್ನು ೨೦ ಕೋಟಿ ಏಕರೆ ಭೂಮಿಗೆ ನೀರು ಹಾಯಿಸುವುದು ಸಾಧ್ಯವಿದೆ. ಚೀನ, ಭಾರತ, ಅಮೇರಿಕೆಯ ಸಂಯುಕ್ತ ಸಂಸ್ಥಾನಗಳು ಮತ್ತು ಪಾಕಿಸ್ತಾನಗಳಲ್ಲಿ ನೀರು ಹಾಯಿಸುವ ಪ್ರದೇಶವನ್ನು ಹೆಚ್ಚಿಸುವ ಕಾರ್ಯವು ನಡೆದಿದೆ.

ಆಫ್ರಿಕಾ ಖಂಡವು ರೋಮನ್ ಸಾಮ್ರಾಜ್ಯದ ಆಹಾರದ ಕಣಜವಾಗಿತ್ತು. ಆದರೆ ಆ ಖಂಡದ ಇಷ್ಟೇ ಅಲ್ಲ ಆಸ್ಟ್ರೇಲಿಯಾ, ಅರ್ಜೆಂಟೈನಾ, ಕಾನಡಾ, ಭಾರತ, ಚೀನ ಮೊದಲಾದ ದೇಶಗಳ, ಮೊದಲು ಉತ್ತಮ ಬೆಳೆ ಕೊಡುತ್ತಿದ್ದ ಭಾಗಗಳು ಬರಬರುತ್ತ ತಮ್ಮ ಫಲವತ್ತತೆಯನ್ನು ಕಳೆದುಕೊಳ್ಳುತ್ತ ಬಂದವು. ಮತ್ತು ಅವುಗಳಲ್ಲಿಯ ಕೆಲವು ಭಾಗಗಳು ಮಳಲು ಭೂಮಿಗಳಾಗಿ ಪರಿವರ್ತನೆ ಹೊಂದಿದುದು ಕಂಡುಬರುತ್ತಿದೆ.

ಪ್ರಪಂಚದ ಜನಸಂಖ್ಯೆಯು ಒಂದೇ ಸವನೆ ಬೆಳೆಯುತ್ತಿದೆ. ಆದ ಕಾರಣ ಜನರ ಜೀವನ ಮಟ್ಟವು ಇಳಿಯುತ್ತದೆ. ಜನಸಂಖ್ಯೆಯ ಪ್ರಮಾಣದಲ್ಲಿ ಆಹಾರದ ಉತ್ಪನ್ನವೂ ಬೆಳೆಯುತ್ತ ಹೋಗಿದ್ದರೆ ಈ ತರಹದ ಪ್ರಶ್ನೆಯು ಏಳುವ ಕಾರಣವೇ ಇದ್ದಿಲ್ಲ.

ಆದ್ದರಿಂದ ಜನಸಂಖ್ಯೆಯು ಬೆಳೆಯದಂತೆ ನಿಯಂತ್ರಣ ಹಾಕಬೇಕೆಂಬ ವಿಚಾರಕ್ಕೆ ಈಗ ಪ್ರಾಧಾನ್ಯತೆ ಉಂಟಾಗಿದೆ. ಆದರೆ ಈ ದಾರಿಯು ಅಸ್ವಾಭಾವಿಕವಾದದ್ದು. ಜನಸಂಖ್ಯೆ ಬೆಳೆಯುವ ಕಾರಣವಿದೆ. ಜೀವನ ಮಟ್ಟವು ಇಳಿದಾಗ ಸಂತತಿ ಬೆಳೆಯುವುದು ಎಂಬುದು ಶಾಸ್ತ್ರಜ್ಞರ ಅಭಿಪ್ರಾಯವಾಗಿದೆ. ಆದರ ಮೇಲೆ ಜಗತ್ತಿನ ಉತ್ಪನ್ನವನ್ನು ಬೆಳೆಸಿ ಜನತೆಯ ಜೀವನ ಮಟ್ಟವನ್ನು ಹೆಚ್ಚಿಸಿ ಜನಸಂಖ್ಯೆಯನ್ನು ಬೆಳೆಯುವುದರಿಂದ ನಿಯಂತ್ರಿಸಬಹುದಾಗಿದೆ. ಇಷ್ಟೇ ಅಲ್ಲದೆ ಜನಸಂಖ್ಯೆಯು ಬೇಕಾದಷ್ಟು ಬೆಳೆದರೂ ಅದಕ್ಕೆ ಹೊಟ್ಟೆಗೆ ಹಾಕುವ ಶಕ್ತಿಯು ಜಗತ್ತಿಗಿದೆ. ಆದರ ಆ ಶಕ್ತಿಯನ್ನು ಬೆಳೆಸುವುದು ಶ್ರೇಯಸ್ಕರವಾಗಿದೆ.

ಜೈ ಹಿಂದ್.

'ಅಪ್ಪಾ! ಅವಳನ್ನು ಅಮ್ಮ ಇರುವಲ್ಲಿಗೆ ಕರೆದುಕೊಂಡು ಹೋಗಬಾರದೇ?'

ಅವರು ಮಾತನಾಡಲಿಲ್ಲ.

'ಅಮ್ಮ ಇದ್ದರೆ ಅವಳು ಅಳಲಾರಳು'

ತಂದೆಯವರು ನನ್ನನ್ನೊಂದು ಬಾರಿ ನೋಡಿ ತಂಗಿಯನ್ನೆತ್ತಿಕೊಂಡು ಹೊರಟು ಹೋದರು.

ಓ? ಹೌದು ಸಾರ್. ಮತ್ತೆ ಹಿಂದಿರುಗಲಿಲ್ಲ. ನಾನಿಲ್ಲಿ ಒಂಟಿಯಾಗಿ ಮಲಗಿದ್ದೇನೆ. ಊಟ? ಇಲ್ಲ ಸಾರ್, ಅವರು ಹೋದಂದಿನಿಂದ ನಾ ಊಟವೇ ಮಾಡಿಲ್ಲ. ಇಲ್ಲೇ ಬಿದ್ದುಕೊಂಡಿದ್ದೇನೆ ಅತ್ತಿತ್ತ ಚಲಿಸಲೂ ಸಾಧ್ಯವಾಗದೆ. ಸೊಂಟವನ್ನು ಸುತ್ತುವರಿದುಕೊಂಡಿದ್ದ ಬಟ್ಟೆಯು ಚೂರು ನನ್ನನಗಲಿ ಮುಂದೆ ಚೆಲ್ಲಿಕೊಂಡಿದೆ. ನಿಮ್ಮ ಕನಿಕರದ ಕಾಣಿಕೆಗಳನ್ನು ಕೂಡಿಸಲು ನಾನದನ್ನು ಹಂಡಿಲ್ಲ. ಪುಡಿಕಾಸುಗಳನ್ನು ಅದರ ಮೇಲೆ ಚೆಲ್ಲಿ ನನ್ನ ಹೃದಯವನ್ನು ಹಿಂಡಬೇಡಿ. ಬೇಡಲೆಂದು ಈ ಬೀದಿಯಲ್ಲಿ ಬಿದ್ದುಕೊಂಡಿಲ್ಲ ನಾ. ಇಲ್ಲ ಸಾರ್....ನಾನು ಬೇಡುವ ಹುಡುಗನಲ್ಲ!

ಸಾಹಿತ್ಯ ಪ್ರಗತಿ

ಪಾನಿವಾರಸಂತೆಗೆ
'ಕೊಡಗು' ಏಜೆಂಟರು,
ಶ್ರೀ ಎಸ್. ಎಸ್. ಸಿದ್ದಪ್ಪನವರು

ನಾಪೋಕ್ಲಿಗೆ
"ಕೊಡಗು" ಪತ್ರಿಕೆಯ ಏಜೆಂಟರು
ಸಹಕಾರಿ ಸ್ಟೋರ್ಸ್ ಮೇನೇಜರ್

INSURE WITH
OR REPRESENT
INDIA'S OLDEST LIFE OFFICE:
THE BOMBAY MUTUAL LIFE ASSURANCE SOCIETY, LTD.
BUSINESS IN FORCE OVER 40 CRORES
ASSETS .... OVER 12 CRORES
Applications from energetic youngmen are invited for representation.
25-15
Head Office; BOMBAY.
Branch: 172. 3. Narasimharaja Road. BANGALORE 2.

THE CANARA BANKING CORPORATION LIMITED.
ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್.
ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)
ಚಿಕ್ಕ ವಾಯಿದೆಯ ಠೇವಣಾತಿಗಳು:
3 ರಿಂದ 6 ತಿಂಗಳುಗಳ ವರೆಗೆ— ಸಾಲಿಯಾನ ಶೇಕಡ 3
7 ರಿಂದ 12 ತಿಂಗಳುಗಳ ವರೆಗೆ—ಸಾಲಿಯಾನ ಶೇಕಡ 3½
ಪಂಚವಾರ್ಷಿಕ ಸುವರ್ಣ ಠೇವಣಾತಿಗಳು— ,, ,, 4
—: ಕೊಡಗು ಸಂಸ್ಥಾನದಲ್ಲಿ ನಮ್ಮ ಶಾಖೆಗಳು :—
ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

Edited Printed and Published by P. I. BELLIAPPA at 'KODAGU' Press Mercara, for 'Kodagu' Ltd.

ಕೊಡಗು

ಬಾಳಿನ ಭಾಗ್ಯ

KODAGU KANNADA WEEKLY MERCARA

ವಾರದ ಕಥೆ.

ನಿರಪರಾಧಿ!

ಲೇ:—ಶ್ರೀ ಎಂ. ಎಸ್. ನಂಜಪ್ಪ, ಕಾನೂರು.

ಅವಳು ಆತನ ಹೃದಯ ಭೂಮಿಯಲ್ಲಿ ಪ್ರೇಮದ ಬಿತ್ತನ್ನು ನೆಟ್ಟ ಮೊದಲು ಬಿತ್ತಿದ್ದಳು; ಅದು ಮಾತ್ರ ಎಷ್ಟು ಕಂಬನಿ ನೀರೆರೆದರೂ ಮೊಳೆಯಲಿಲ್ಲ. ಅದು ಸುಸುಕ್ಷೇತ್ರವಾಗಿತ್ತು. ಕಾರಣ, ದ್ರವ್ಯ ಕೂಡ ಹಾಕುವ ಭರದಲ್ಲಿ ಆತನ ಹೃದಯದ ಫಲವತ್ತತೆಯು ನಾಶವಾಗಿ, ದ್ರವ್ಯದ ಕಾವೇರಿ, ಹೃದಯ ಬಂಜರಾಗಿ, ಎಷ್ಟು ನೀರು ಹೊಯ್ದರೂ ನಾಟ್ಯವು ಮೊಳೆಯಲಾರದ ರೀತಿಯಲ್ಲಿ ಆತನ ಹೃದಯ ಭೂಮಿಯಲ್ಲಿ ಆಕೆಯ ಪ್ರೇಮದ ಬಿತ್ತನ್ನು ಮೊಳೆಯಲಿಲ್ಲ. ಪ್ರಾಯದ ಮುದುಕನು ಸರಿಯಾದ ಹುಡುಗಿಯನ್ನು ದೂಡಿಯ ಕುಟುಂಬದಿಂದ ಲಗ್ನ ಮಾಡಿಕೊಂಡಿದ್ದನು. ಬೀದಿಯಲ್ಲಿ ಗೊಂಬೆಯೊಡನೆ ಮದುವೆಯಾಟವಾಡುತ್ತಿದ್ದ ಎಳೆ ಹುಡುಗಿಯನ್ನು ಆತನು ಮದುವೆಯೆಂದು ಮನೆಗೆ ಕರೆತಂದಿದ್ದನು.

ಕೆಲವೇ ತಿಂಗಳುಗಳಲ್ಲಿ ಕಮಲಳು ಋತುಮತಿಯಾಗಿ ಅರಳಿದ ಕಮಲದಂತೆ ಬೆಳೆದು, ಹದಿನಾರು ವಸಂತಗಳ ಸೊಬಗು, ಸೊಂಪು ಸೊಂಪುಗಳು ಒಟ್ಟುಗೂಡಿ ಪ್ರತ್ಯಕ್ಷ ಮನಮೋಹಕ ಮೂರ್ತಿಯಾದಳು. ಅವಳ ಕೇತಕಿಯ ಮೈಬಣ್ಣ, ಚೆಂದುಟಿಗಳ ಚಿರಮಂದಹಾಸ, ಮುಂಗುರುಳ ಲೀಲೆ, ವಿಶಾಲವಾದ ಸುಂದರ ಹಣೆ, ಅದರ ಮೇಲೆ ನೋಟವನ್ನು ಹಿಡಿದು ನಿಲ್ಲಿಸುವ ಕುಂಕುಮದ ಬೊಟ್ಟು, ಎರಡು ಕಡೆಗೂ ಸಮನಾಗಿ ನೀಳವಾಗಿ ಬಾಗಿದ್ದ ಹುಬ್ಬಿನ ರೇಖೆಗಳು, ಅವರಡಿಯಲ್ಲಿ ಕಪ್ಪನ್ನ ಕಾಡಿಗೆ ತೀಡಿದ ಬೊಗಸೆ ಕಣ್ಣುಗಳು, ಅವುಗಳಲ್ಲಿ ಮರಿಮಿಂಚುಗಳ ಚಂಚಲ ನರ್ತನ, ಇವುಗಳೆಲ್ಲವೂ ಸೃಷ್ಟಿಕರ್ತನ ಕಲಾಕೌಶಲ್ಯವನ್ನು ಎತ್ತಿ ತೋರಿಸುತ್ತಿತ್ತು. ಅವಳ ಸೌಂದರ್ಯವು ಪ್ರಕೃತಿಯಾಗಿತ್ತೇ ವಿನಃ ಸಂಸ್ಕೃತಿಯಾಗಿರಲಿಲ್ಲ. ಆಧುನಿಕ ವಿಲಾಸ ಸಾಮಗ್ರಿಗಳು ಅವಳಿಗೆ ಅನವಶ್ಯವಿರಲಿಲ್ಲ. ಅವಳ ರೂಪು ಲಾವಣ್ಯಗಳ ಏಕೀಕರಣ ಆಧುನಿಕ ಸ್ತ್ರೀಯರ ವೈಖರಿ, ನಡೆಯ ಬೆಡಗು, ವಲಿ ಬಳುಕು, ಕಣ್ಣು ಚೆಲುವು, ನಗೆಯ ಅಂದ, ಮೊಗದ ಚಂದ, ಅವಳಿಂದ ಪಡೆದ ದಾನವೆಂದೇ ಹೇಳಬೇಕು. ಆದರೂ ಬಡತನದ ಬೇಗೆಯಿಂದ ಆಕೆಯ ಬಾಳು ಹಾಳಾಯಿತು. ಋತುಮತಿಯಾದ ಕಮಲಳು ಪತಿಯ ಸನಿಹವನ್ನು ಬಯಸಿ ತಾನಾಗಿ ಬಳಿ ಸೇರಿದರೂ ಪತಿಯೆನಿಸಿಕೊಂಡ ಪ್ರಾಣಿ ಹಣವೆಣಿಸುವುದರಲ್ಲೇ ತಲ್ಲೀನವಾಗುತ್ತಿತ್ತು.

ಕಮಲಳ ತಂದೆಯು ಹುಟ್ಟು ಬಡವ. ತಿರುಮಣ್ಣನ ತಿರುಕನೆಂದೂ ಮುಟ್ಟಿಮೂದಲಿಸಬಹುದಿತ್ತು. ಅಂತಹವನ ಪುತ್ರಿಯನ್ನು ವಿವಾಹ ಮಾಡಿಕೊಳ್ಳಲು ಕನ್ಯಾಶುಲ್ಕವಿಲ್ಲದೆ ಯಾರೂ ಒಪ್ಪಲಿಲ್ಲ. ಅವರ ಸಮಾಜದಲ್ಲಿ ಬಾಲ್ಯವಿವಾಹ ಪದ್ಧತಿ. ಸುಧಾರಿಸಿದ ಯುವಕರಾರೂ ವರದಕ್ಷಿಣೆಯು ಇಲ್ಲದೆ ಆಕೆಯನ್ನು ಲಗ್ನ ಮಾಡಿಕೊಳ್ಳಲು ಒಪ್ಪಲಿಲ್ಲ. ಅದರಿಂದ ಧನವಂತ ಸುಬ್ಬರಾಯರಿಗೆ ಮೂರನೇ ಸಂಬಂಧವಾಗಿ ಕಮಲಳನ್ನು ಕೊಟ್ಟು ಲಗ್ನದ ನಾಟಕವಾಗಿತ್ತು. "ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ" ಎಂಬ ಗಾದೆಯಂತೆ ತಂದೆ ತಾಯಿಗಳು ಸಮಾಜದ ಕಟ್ಟಿನ ಬದಿತದಿಂದ ಬದುಕಿಕೊಂಡರು.

ಮದುವೆಯಾಗಿ ವರ್ಷಗಳು ಉರುಳಿದರೂ ಗಂಡನು 'ಕಮಲೂ' ಅನ್ನುವ ಸವಿನುಡಿಯನ್ನು ಆಕೆಯು ಕೇಳಲಿಲ್ಲ. ಚಿಕ್ಕಂದಿನ ಮಾತುಕತೆ ನಡೆಯಲಿಲ್ಲ. ಆತನು ಒಂದು ದಿನವಾದರೂ ತಾನು ಕಟ್ಟಿಕೊಂಡ ಹೆಣ್ಣು, ತನ್ನ ಜೀವನದ ಸಂಗಾತಿಯೆಂಬ ಭಾವನೆಯಿಂದ ಅವಳೊಡನೆ ವರ್ತಿಸಲಿಲ್ಲ. ಕೆಲಸದಾಳಾಗಿಯಂತೆ ದುಡಿಸಿಕೊಂಡನು. ಬೆಳಕು ಹರಿದು ಕತ್ತಲು ಕವಿಯುವವರೆಗೂ ಒಂದೇ ತೆರನಾಗಿ ಕೆಲಸ. ಒಂದು ನಿಮಿಷವೂ ಆಕೆಗೆ ವಿಶ್ರಾಂತಿಯಿಲ್ಲ. ಅವಳಿಗೆ ಸುಖವೆಂಬುವುದು ಕನ್ನಡಿಯೊಳಗಿನ ಗಂಟು. ಇಂದಲ್ಲ ನಾಳೆ ಅದು ದೊರೆಯಬಹುದೆಂಬುದು ಬರಿಯ ಬಯಕೆಯಾಗಿಯೇ ಉಳಿಯಿತು. ಕಮಲಳು ನೀರಿಗೆ ಹೋದಾಗಲೆಲ್ಲ ಪ್ರಕೃತಿಯ ನೇಮದಂತೆ ಮೃಗಪಕ್ಷಿಗಳಲ್ಲಿ ಪ್ರಣಯ ಪ್ರಸಂಗಗಳನ್ನು ನೋಡಿದಾಗಲೆಲ್ಲಾ ಭಾವನಾಲೋಕದಲ್ಲಿ ತಲ್ಲೀನಳಾಗುತ್ತಿದ್ದಳು. ತನ್ನ ಮೇಲೆ 'ಇವರಿಗೇ'ಕಿಷ್ಟು ಬೇಸರ? ಅಂಥ ಅಪರಾಧವನ್ನಾದರೂ ನಾನು ಮಾಡಿದ್ದೇನು' ಎಂಬದಾಗಿ ಚಿಂತಿಸಿ ಕೊರಗುತ್ತಿದ್ದಳು. ಕೊನೆಗೆ ತನ್ನ ವಿಧಿಯನ್ನೇ ಹಳಿದುಕೊಂಡು ಮನೆ ಸೇರುತ್ತಿದ್ದಳು.

ಮಿಂಚಿನಂತೆ ಹಿಂದಿನ ದಿನಗಳ ನೆನಪು ಮನದ ಕಣ್ಣುಗಳ ಮುಂದೆ ಹಾದು ಹೋಗುತ್ತಿದ್ದವು. ತಂದೆ ತಾಯಿಗಳು ತನ್ನನ್ನು ಗಂಡನೆಂಬ ಈ ಜಂತುವಿನೊಡನೆ ಬೀಳ್ಕೊಟ್ಟಾಗ "ಹೋಗಿ ಬಾ ಮಗಳೆ, ಸುಖಸಂತೋಷದಿಂದಿದ್ದು ಎಂಟು ಮಕ್ಕಳ ತಾಯಿಯಾಗು" ಎಂದು ತಂದೆ ಹರಸಿದ್ದು, ತಾಯಿಯ ಬಾಯಿಂದ ಮಾತುಗಳೇ ಹೊರಡದೆ ಮಗಳನ್ನು ಅಪ್ಪಿಕೊಂಡು ಅಳುತ್ತಿದ್ದುದೂ ಅವಳ ಕಣ್ಣಿಗೆ ಕಟ್ಟಿದಂತೆ ತೋರುತ್ತಿತ್ತು. ಆ ಮುಗ್ಧೆ ತಾಯಿಯ ಕಣ್ಣಿನಿಂದ ನೀರು ಹರಿದಾಗ ತಂದೆ ಅಪರಾಧಿಯಂತೆ ತಲೆತಗ್ಗಿಸಿದ್ದೂ ಈಗವಳಿಗೆ ಅರ್ಥವಾಗುತ್ತಿತ್ತು. ಕಮಲಳು ಸೇರಿದ್ದ ಕೊಳದ ಅಂತರಾಳದಲ್ಲೂ ಕೂಡ ಪ್ರೇಮದ ಹನಿಯಿಲ್ಲದೆ ಬತ್ತಿ ಬರಡಾಗಿತ್ತು. ಪತಿಯು ಪರಿಮಳವಿಲ್ಲದ ಪದ್ಮವಾಗಿದ್ದನು. ಕಮಲಳ ಒಳದನಿಯೊಂದು "ನಿನಗಿನ್ನು ಬಿಡುಗಡೆಯಿಲ್ಲ"ವೆಂದು ಹೇಳುತಿತ್ತು. ಪತಿಯು ಸಿರಿವಂತನಾದರೂ ಅವಳಿಗೆ ಸುಖ ಶಾಂತಿ ದೊರೆಯಲಿಲ್ಲ. ಉಂಡುಟ್ಟು ಸುಖವಾಗಿರುವುದೇ ಮೇಲೆಂದು ತಿಳಿದು ತನ್ನನ್ನೇ ಶೃಂಗರಿಸಿಕೊಳ್ಳುವುದರಲ್ಲಿದ್ದ ಕಮಲಳನ್ನು ನೋಡಿದ ಗಂಡನು ಅವಳ ವಿಷಯದಲ್ಲಿ ಸಂದೇಹಗೊಂಡು ದಂಡಿಸಿ ಇಲ್ಲಸಲ್ಲದ ಮಾತುಗಳನ್ನು ಆಡಿದನು. ಬೆಲೆವೆಣ್ಣುಗಳಂತೆ ಶೃಂಗರಿಸಿಕೊಂಡು ಬೀದಿ ಬೀದಿ ಅಲೆಯಬೇಕೆ? ಎಂದು ಗದ್ದರಿಸಿ ಹಾ....ಗಿತ್ತಿ ಶಬ್ದ ಉಪಯೋಗಿಸುತಿದ್ದನು. ಇದೆಲ್ಲವೂ ಕಮಲಳಿಗೆ ಕರ್ಣಕಠೋರವಾಗಿರುತಿದ್ದರೂ ಎದುರು ನುಡಿಯುತ್ತಿರಲಿಲ್ಲ. ಶೃಂಗಾರಗಳನ್ನು ಬದಿಗೊತ್ತಿದಳು. ಇದರಿಂದೊಂದು ಹೊಸ ಅಧ್ಯಾಯವೇ ಪ್ರಾರಂಭಿಸುವುದೆಂದು ತಿಳಿದಳು. ಅವಳು ನುಡಿದ ನುಡಿ, ನಡೆದದ್ದೆಲ್ಲವೂ ಆತನಿಗೆ ತಪ್ಪಾಗಿ ತೋರುತಿತ್ತು. ಒಮ್ಮೊಮ್ಮೆ ಆಕೆಯ ದುಃಖದ ಕಟ್ಟೆಯೊಡೆದು ಕಂಬನಿಯಾಗಿ ಹರಿಯ ತೊಡಗಿ ಶಾಂತಿಗೊಳ್ಳುತಿತ್ತು. ಗಂಡನಿಗೆ ಎಲ್ಲಿಗಾದರೂ ಹೋಗಬೇಕೆಂದಾಗ ಹೆಂಡತಿಯನ್ನು ಮನೆಯೊಳಗಿಟ್ಟು ಬೀಗ ಜಡಿದು ಹೋಗುವಂತಾಯಿತು. ಅದರೊಳಗೆ ಕಮಲಳು ತನ್ನ ತಂದೆ ತಾಯಿಗಳನ್ನು ಶಪಿಸುತ್ತಿದ್ದಳು. ಕಡೆಗೆ ತನ್ನ ಹಣೆಯ ಬರಹವೆಂದು ಸುಮ್ಮನಾಗುತ್ತಿದ್ದಳು. ಗಂಡನೆಂಬ ಗಾಣಿಗನ ಗಾಣದಲ್ಲಿ ಕಮಲಳೆಂಬ ಕಬ್ಬು ಹಿಂಡಿ ಹಿಪ್ಪೆಯಾಗಿ ಭಕ್ತಿಯೆಂಬ ರಸವು ಹೊರ ಬರತೊಡಗುತಿತ್ತು. 'ಪತಿಯೇ ಪ್ರತ್ಯಕ್ಷ ದೇವತಾ' ಎಂಬುದನ್ನು ನಂಬಿ ದೇವರನ್ನು ಪ್ರಾರ್ಥಿಸಿ ಸಮಾಧಾನಗೊಳ್ಳುತ್ತಿದ್ದಳು.

ಇಷ್ಟು ಪರಿಶುದ್ಧಳಾಗಿದ್ದರೂ ತನ್ನ ಮೇಲೆ ತನ್ನ ಪತಿಯು ಹೊರಿಸುತ್ತಿದ್ದ ಅಪರಾಧಗಳನ್ನು ಆಕೆಯು ತಡೆಯದಾದಳು. ಈಗವಳು ಹದಿನಾರು ಹದಿನೇಳು ವರ್ಷದ ಹರಿಯದ ಹೊಸ ಹುಡುಗಿ. ತುಂಬಾ ಸುಂದರವಾಗಿ ಬೆಳೆದಿದ್ದು ಅಂಗಾಂಗಗಳಲ್ಲಿ ಲಾವಣ್ಯ ಹೊರಸೂಸುತ್ತಿತ್ತು. ಅವಳ ಯೌವನದ ಆಶೆ ಆಕಾಂಕ್ಷೆಗಳೆಲ್ಲವೂ ಮರಳುಗಾಡಿನಲ್ಲಿಯ ಕುಸುಮದಂತಾಗಿದ್ದವು. ತಂದೆ ತಾಯಿಗಳು ಸಮಾಜದ ತಿವಿತವನ್ನು ತಪ್ಪಿಸಲೆಂದು ಸೌಂದರ್ಯವತಿಯಾದ ತಮ್ಮ ಮಗಳನ್ನು ಮನೆಯಿಂದ ಹೊರಾಟ ಮಾಡಿರುವರೆಂಬುದನ್ನು ಕಮಲಳು ಈಗ ತಿಳಿದುಕೊಂಡಳು. ಕಮಲಳ ಗಂಡನು ಆಕೆಗೆ ಕೊಡುತ್ತಿದ್ದ ಶಿಕ್ಷೆಯನ್ನು ನೋಡಿ ಸಮಾಜವೂ ನಕ್ಕಿತಲ್ಲದೆ ನರಳಲೂ ಇಲ್ಲ. ನಾಶವಾಗಲೂ ಇಲ್ಲ. ಅದರ ಬದಲು ಒಂದಕ್ಕೆ ಎರಡಾಗಿ ಅವರ ವಿಷಯದಲ್ಲಿ ಕಥೆ ಕಟ್ಟಿ ಗಾಳಿಯಲ್ಲಿ ತೂರಾಡಿಸಿತು. ಆಕೆಯ ಪತಿಯ ಪಾಶವೀತನವನ್ನು ತಡೆಯಲು ಯಾವದೊಂದು ಕಟ್ಟನ್ನು ಆ ಸಮಾಜವು ತಯಾರಿಸಲಿಲ್ಲ. ಒಮ್ಮೊಮ್ಮೆ ಕಮಲಳ ಮನಸ್ಸಿನಲ್ಲೂ ಕೀಳುಭಾವನೆಯು ತಲೆದೋರುತ್ತಿತ್ತು. ಆದರೂ ಪಾತಿವ್ರತ್ಯಕ್ಕೆ ಚ್ಯುತಿ ಬರಬಾರದೆಂದು ತನ್ನ ಮನವನ್ನು ಅದುಮಿ ಹಿಡಿಯುತ್ತಿದ್ದಳು. ಅವಳೂ ಮನುಷ್ಯಳಲ್ಲವೇ? ಎಲ್ಲರಂತೆಯೇ ಅವಳಿಗೂ ಆಶೆ ಆಕಾಂಕ್ಷೆಗಳಿಲ್ಲವೆ? ಯೌವನ ಸಹಜವಾದ ಹಲವು ಕನಸುಗಳು ಅವಳನ್ನೂ ಕೆಣಕುತ್ತಿದ್ದವು.

ಈಗವಳು ಹುಡುಗಾಟಿಕೆಯ ಹುಡುಗಿಯಾಗಿರಲಿಲ್ಲ. ದಾಂಪತ್ಯ ಜೀವನಕ್ಕೆ ಹಾತೊರೆಯುತ್ತಿದ್ದರೂ ಆಕೆಯ ಹೃದಯದ ಸಂದೇಶ ಆತನ ಹೃದಯಕ್ಕೆ ಮುಟ್ಟಲಿಲ್ಲ. ಮನೆಯ ಸುತ್ತಲಿನ ಗಿಡ ಬಳ್ಳಿಗಳು ದನಕರುಗಳು ಅವಳನ್ನು ನೋಡಿ ಸೊರಗುತ್ತಿದ್ದವಲ್ಲದೆ ನಿಷ್ಕರುಣಿ ಗಂಡನ ಹೃದಯವು ಕರಗುತ್ತಿರಲಿಲ್ಲ. ಪ್ರೇಮದ ಪ್ರಳಯ ಉಂಟಾಗಲಿಲ್ಲ. ಇದ್ದದ್ದು ಮರೆಯೋಣ, ಇಲ್ಲದ್ದು ತೆರೆಯೋಣ ಹಾಕ್ಕೀಸು ಸುರಿಸೋಣ ಎನ್ನುವ ಆಶೆಯಾಗುವುದು. ಆದರೆ ಈ ಹೆಣ್ಣು ಜೀವಿಗೆ ಹಣೆಯಲ್ಲಿ ಅದಾವುದೂ ಬ್ರಹ್ಮ ಬರೆಯಲಿಲ್ಲ. ಸೌಂದರ್ಯವನ್ನು ಕೆತ್ತುವುದರಲ್ಲಿಯೇ ಇದನ್ನೆಲ್ಲಾ ಬರೆಯಲು ಆತ ಮರೆತಿದ್ದ. ಅವಳ ಹಣೆಯಲ್ಲಿ ಬರೆದದ್ದು ಬರೀ ಬಡತನ! ಕಷ್ಟ! ದುಃಖ! ಸುಖ ಸಂತೋಷವನ್ನು ಕೊಡದೆ ಅನ್ಯಾಯ ಮಾಡಿ ತನ್ನ ಸೌಂದರ್ಯದ ಕಲಾಕೌಶಲ್ಯವನ್ನು ನಾಶ ಪಡಿಸಿಕೊಂಡ ಆಕೆಯು ತನ್ನ ದುಃಖ ಕಳೆದುಕೊಂಡು ಅವಳು ಹಸಿವು ಕಳೆಯಬೇಕು. ತಾನೇ ಅತ್ತು ಹಾಡಿಕೊಂಡು ತನ್ನನ್ನು ತಾನೇ ರಮಿಸಬೇಕು. ತನ್ನ ಸೌಂದರ್ಯವನ್ನು ಕನ್ನಡಿಯಲ್ಲಿ ತಾನೇ ನೋಡಿಕೊಂಡು ತಾನೇ ಮುತ್ತಿಡಬೇಕು. ತನ್ನ ದುಃಖವನ್ನು ನೋಡಿಕೊಳ್ಳಲು ನೆರೆಮನೆಗೆ ಹೋಗಲು ಅಪ್ಪಣೆಯಿಲ್ಲ. ತಂದೆತಾಯಿಗಳಿಗೆ ಇವಾವುವದರ ಅರಿವೂ ಹತ್ತದು. ಗಂಡ ಬಂಡೆ ಕಲ್ಲಿಗಿಂತಲೂ ಕಠಿಣನಾಗಿದ್ದನು.

ಒಂದು ದಿನ ಕಮಲೆಯ ಗಂಡನು ಅವಳನ್ನು ಮನೆಯೊಳಗೆ ಸೇರಿಸಿ ಬೀಗ ಜಡಿದು ಹೋಗಿದ್ದನು. ಅವಳು ತನ್ನ ದುರಾದೃಷ್ಟಕ್ಕೆ ಹಳಿದುಕೊಂಡು ದೇವರ ಕೋಣೆಗೆ ಬಂದು ಪ್ರಾರ್ಥಿಸಿದಳು. ದೇವರ ಬಿಂಬವನ್ನು ನೋಡಿ 'ತನ್ನ ಕಷ್ಟವನ್ನು ನೋಡಿ ಕಣ್ಣು ತೆರೆಯಬಾರದೆ ಕರುಣಾ ಮೂರ್ತಿ' ಯೆಂದು ಕಂಬನಿಗರೆದಳು. ಆ ಮನೆಯೊಳಗೆ ದೇವನಿಲ್ಲವೆಂದು ಆಕೆಗೆ ತಿಳಿಯಿತು. ಕಲ್ಲು ಮೂರ್ತಿಗೆ ಕರುಣೆ ಬರಲಾರದೆಂದು ನೊಂದ ಹೃದಯ ಚಿಂದನುಡಿಗಳನ್ನಾಡಿತು. ಆಗಲೇ ಕತ್ತಲೆ ಕವಿಯಿತು. ಅವಳ ಬಾಳಿನಲ್ಲೂ ಕತ್ತಲೆ ಕವಿಯುವದಿತ್ತು. 'ಇಲ್ಲಿ ನಿಲ್ಲಬೇಡ ಕಮಲೂ, ಈ ಲೋಕದಲ್ಲಿ ನೀನು ಬಯಸಿದ ಸುಖ ದೊರೆಯದು ಓಡು ಕಮಲೂ, ಅದನ್ನು ಬೇಗ ಓಡು. ಈ ನರಕದಲ್ಲಿ ಒಂದು ಕ್ಷಣವೂ ನಿಲ್ಲಬೇಡ, ಹೊರಟು ಹೋಗು' ಎಂದು ಆತ್ಮವಾಣಿ ನುಡಿಯಿತು.

ಕಮಲಳು ತನ್ನ ಗಂಡನು ಮದುವೆಯ ಕಾಣಿಕೆಯಾಗಿ ಕೊಟ್ಟಿದ್ದ ವಜ್ರದ ಉಂಗುರವನ್ನೇ ನುಂಗಿಕೊಂಡಳು. ಆಕೆಯ ಗಂಡನು ವೈದ್ಯರಿಗೆ ಲಂಚ ಕೊಟ್ಟು 'ಹೃದಯ ಕ್ರಿಯೆ ನಿಂತು ಮಡಿದಳೆಂದು' ಬರೆಸಿ ನಿರಪರಾಧಿಯೆನಿಸಿಕೊಂಡನು. ಆತನ ದುಡ್ಡಿನ ವ್ಯಾಪಾರ ನಡೆಯುತ್ತಲೇ ಇದೆ. ಸಮಾಜವೂ ಹೆಡೆಯೆತ್ತಿ ನಿಂತೇ ಇದೆ.

ಕೊಡ್ಲಿಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಕೆ. ಸಿ. ಸೀತಾಂಬರನವರು

ಬಾಣೆ ಕಂದಾಯ.

[ಲೇ:—ರೈತ]

ಕೊಡಗಿನಲ್ಲಿ, ನಮ್ಮ ಕಾಂಗ್ರೆಸು ಸರಕಾರವು ರೈತರ ಅನುಭವದಲ್ಲಿರುವ ಬಾಣೆ ಜಾಗಕ್ಕೆ ಕಂದಾಯ ಹಾಕಲು ಮಾಡಿದ ತೀರ್ಮಾನದಿಂದ ನಮ್ಮ ಕಾಂಗ್ರೆಸು ಸರಕಾರದ ತತ್ವವೇನೆಂದೇ ತಿಳಿಯಲಸಾಧ್ಯವಾಗಿದೆ.

ಸಾಡಿಕೆಯಾಗಿ ಕಾಂಗ್ರೆಸಿಗನೆಂದರೆ ಸತ್ಯವಾದಿ, ತ್ಯಾಗಿ, ಬಡವರ ಮಿತ್ರ ಅಂಥಾವರಿಂದ ಕೂಡಿದ ಸರಕಾರಕ್ಕಾದರೂ ಬಡವರನ್ನು ಮೇಲಕ್ಕೆತ್ತುವದು, ಬರೀ ಒಂದು ಟೊಳ್ಳಿನ ಮಾತಲ್ಲ. ಅದೊಂದು ಜೀವಮಾನದ ತತ್ವ; ಅಲ್ಲ, ಅದಕ್ಕಿಂತಲೂ ಮೇಲು, ಅದೊಂದು Faith. ಹೀಗಿರುವಾಗ, ೩–೪ ವರ್ಷಗಳ ಹಿಂದೆ ಸಮರಿ ಕಂದಾಯದ ಒಂದು ಅಭಿಪ್ರಾಯವು ಬಂದಿದ್ದಾಗ ಇಂದು ಅಧಿಕಾರದಲ್ಲಿರುವ ಕಾಂಗ್ರೆಸಿನವರ ಮಿತ್ರರು ಹೂಡಿದ ಚಳವಳವನ್ನೂ, ಕಳೆದ ಚುನಾವಣೆಗೆ ಮೊದಲು ಬರೇ ಐಶ್ವರ್ಯವಂತರಿಗೆ ಅನ್ವಯಿಸುವ ವ್ಯವಸಾಯ ಆದಾಯ ತೆರಿಗೆಯ ವಿಷಯದಲ್ಲಿ ಇವರ ವರ್ತನೆಯನ್ನೂ ಇಂದು ಬಡವರ ಮೇಲೆ ಇವರು ಹಾಕಲು ಹೊರಟಿರುವ ಬಾಣೆ ಕಂದಾಯವನ್ನೂ, ಕಂದಾಯವಿಲ್ಲದೆ ಅನುಭವದಲ್ಲಿರುವ ಜಹಗೀರು ಭೂಮಿಗಳಿಗೆ ತಮ್ಮ ಆಶೀರ್ವಾದವನ್ನು ಇನ್ನೂ ಕೊಡುತ್ತಿರುವದನ್ನೂ ನೋಡುವಾಗ, ಈ ಸರಕಾರವು ಯಾವುದಾದರು ತತ್ವವನ್ನು ಪರಿಪಾಲಿಸಲಿರುವದೇ ಎಂಬ ಸಂಶಯವು ಯಾರಿಗೂ ಹುಟ್ಟದಿರದು. ಕಾಣುವದನ್ನು ಹೇಳುವದಾದರೆ ಇವರಲ್ಲಿ ತತ್ವವಿಲ್ಲ, ನ್ಯಾಯವಿಲ್ಲ; ಸಂಧರ್ಭಕ್ಕೆ ಸರಿಯಾಗಿ ನಡೆಯುವಂತೆ ತೋರುತ್ತೆ.

"There are usually two ways of doing things; the politically expedient way, or the right way. Some times they do not coincide, but in the long run, the right way is the best"

ಇದು ಓರ್ವ ದೊಡ್ಡ ವ್ಯಕ್ತಿಯ ಮಾತು. ಇದನ್ನು ನಮ್ಮ ಸರಕಾರದವರು ಅರಿತುಕೊಳ್ಳಲಿರುವರೇ?

ದೇಶದಲ್ಲಿ ಹೆಚ್ಚು ಕಮ್ಮಿ ಐದು ತರಗತಿಯ ಜನರಿದ್ದಾರೆ. ಕೂಲಿಗಾರರು ಮಜದೂರರು, ರೈತಾಪಿ ಜನರು, ವ್ಯಾಪಾರಿಗಳು, ಕೈಗಾರಿಕೆಯವರು ಮತ್ತು ಸರಕಾರಿ ಮತ್ತಿತರ ಹುದ್ದೆಗಾರರು, ಇವರಿಂದ ಕೂಡಿದ್ದೇ ದೇಶವು. ಇವರಿಂದಲೇ ದೇಶದ ಬೊಕ್ಕಸಕ್ಕೆ ಹಣವು ಬರಬೇಕಿದೆ

ಇವರಲ್ಲಿ ಮೊದಲನೆಯ ಪಂಗಡವನ್ನು ಬಿಡೋಣ, ಐದನೆಯ ಪಂಗಡವನ್ನೂ ಸದ್ಯಕ್ಕೆ ಬಿಡೋಣ ಬಾಕಿಯ ಮೂರು, ರೈತಾಪಿ, ವ್ಯಾಪಾರಿ ಮತ್ತು ಕೈಗಾರಿಕೋದ್ಯಮ ಪಂಗಡದವರು ಪ್ರಾಂತೀಕ ಸರಕಾರದ ಹೊರೆಯನ್ನು ಅವರ ಶಕ್ತಿಗೆ ಮತ್ತು ಸರಕಾರದಿಂದ ಅವರು ಪಡೆಯುವ ಪ್ರಯೋಜನಕ್ಕೆ ಸರಿಯಾಗಿ ಹೊತ್ತಿರುವರೆ?

ಕಾಲೇಜುಗಳು, ಪಟ್ಟಣಗಳಲ್ಲಿ ಹೈಸ್ಕೂಲುಗಳು, ಆಸ್ಪತ್ರೆಗಳು, ಸಿನೇಮಾ, ನಾಟಕಗಳು, ಕಾರು ರಸ್ತೆಗಳು, ಪೋಲೀಸು ಬಂದೋಬಸ್ತು ಮತ್ತು ವಿದ್ಯುಚ್ಛಕ್ತಿ ಮುಂತಾದ ಸಲಕರಣೆಗಳು ಪುರವಾಸಿಗಳಾದ ವ್ಯಾಪಾರಿಗಳಿಗೆ ಮತ್ತು ಕೈಗಾರಿಕಾ ವೃತ್ತಿಯವರಿಗೆ. ಇದಕ್ಕೆ ಪ್ರತ್ಯುತ್ತರವಾಗಿ ಇವರು ಸರಕಾರಕ್ಕೆ ಕೊಡುತ್ತಿರುವದು ಸರಕಾರಿ ಉತ್ಪತ್ತಿಯ ಎಷ್ಟಂಶ? ಇವರು ನ್ಯಾಯವಾಗಿಯೂ ಕೊಡಬೇಕಾದದ್ದು ಇವರಿಂದ ಸರಕಾರಕ್ಕೆ ಸಿಕ್ಕುವದಿಲ್ಲವಲ್ಲದೆ, ಇವರ ಸುಖ ಜೀವನಕ್ಕೆ ಗ್ರಾಮವಾಸಿಗಳು ಅದೆಷ್ಟೋ ಹಣವನ್ನು ಅಕ್ಕಾಯಿ ಮತ್ತಿತರ ಕಂದಾಯ ರೂಪದಲ್ಲಿ ತೆರುವರು.

ಗ್ರಾಮವಾಸಿಯಾದ ರೈತನು ಶಾಲೆ, ಕಾಲೇಜು, ಆಸ್ಪತ್ರೆಗಳಿಗೆ ಅದೆಷ್ಟೋ ಮೈಲು ನಡೆಯಬೇಕು. ಪೋಲೀಸು ಬಂದೋಬಸ್ತು ಇಲ್ಲ, ಕಾರು ರಸ್ತೆ, ವಿದ್ಯುಚ್ಛಕ್ತಿ, ಮುಂತಾದುವುಗಳನ್ನು ಸಂತೆಯಲ್ಲಿ ನೋಡಿಕೊಳ್ಳುತ್ತಾನೆ. ಆದರೂ, ಐದು ರೂಪಾಯಿ ಉತ್ಪತ್ತಿ ಇರುವ ರೈತನು ಸರಕಾರದ ಬೊಕ್ಕಸಕ್ಕೆ ಒಂದು ಕಾಸನ್ನಾದರೂ ತೆರುವವನಾಗಿದ್ದಾನೆ. ರೈತನ ಸ್ಥಿತಿಯಾದರೂ ಏನು? ಮೈಗೆ ಸರಿಯಾದ ಬಟ್ಟೆಯಿಲ್ಲ, ಮಕ್ಕಳಿಗೆ ಸರಿಯಾದ ವಿದ್ಯೆಯಿಲ್ಲ, ಆರೋಗ್ಯವಿಲ್ಲ, ಹೊಟ್ಟೆ ತುಂಬ ಅನ್ನವಿಲ್ಲ. ಇಂತಹ ರೈತನು ಹೆಚ್ಚಿನ ದರದ ಭೂಕಂದಾಯ ಕೊಡುವದು ಸಾಲದೆ ಈಗ ಬಾಣೆಗೂ ಕಂದಾಯ ಕೊಡಬೇಕೆ?

"Incomes must be taxed on the basis of ability to pay", is a fundamental principele of taxation. ಈ ತತ್ವಕ್ಕನುಸಾರವಾಗಿ ರೈತಾಪಿ ಜನರು ಇನ್ನೂ ಕಂದಾವನ್ನು ತೆರಲಿರುವ ಸ್ಥಿತಿಯಲ್ಲಿರುವರೆ?

ಬದಲಾಗಿ ಚಿಕ್ಕ ಭೂಮಾಲಿಕರಿಗೆ ಕಂದಾಯದ ಹೊರೆಯನ್ನು ಕಮ್ಮಿ ಮಾಡಿಯೂರೇದು ಕಾಂಗ್ರೆಸ್ ಸರಕಾರವನ್ನು ಜನರು ನೋಡುತ್ತಿರುವರು. ಪ್ರಪಂಚವೇ ಈ ದಾರಿಯಲ್ಲಿ ನಡೆಯುತ್ತಿದೆ.

"To seek to increase slowly the standard of the less well paid section of the community, by stepping up production and productivity and by some measure of reditribution of wealth thro taxation and the welfare services."

ಈ ದಾರಿಯಲ್ಲಿ ನಡೆಯಬೇಕಾದರೆ, ದೇಶದ ಹೆಮ್ಮೆಯಾಗಿರುವ, ಬೆನ್ನೆಲುಬು ಆಗಿರುವ ರೈತಾಪಿ ವರ್ಗವನ್ನು ಕಾಪಾಡಬೇಕಿದೆ. ದೇಶದ ಏಳಿಗೆಯು, ಸುಂದರವಾದ ಪಟ್ಟಣವಲ್ಲಿಯಾಗಲೀ, ಸಂತುಷ್ಟರಾದ ಪುರನಿವಾಸಿಗಳಲ್ಲಾಗಲೀ, ಯಾ ಕೆಲವು ದೊಡ್ಡ ಸೇತುವೆ, ರಸ್ತೆ ಮತ್ತಿತರ ಕಟ್ಟಡಗಳಲ್ಲಾಗಲೀ ಇರುವದಿಲ್ಲ. ಬದಲಾಗಿ ದೇಶದ ಏಳಿಗೆಯು, ಸರಕಾರದ ಕೀರ್ತಿಯು ದೇಶದಲ್ಲಿ ಸುಭಿಕ್ಷದಾಗಿ ಜೀವಿಸುವ ರೈತಾಪಿ ಜನರಲ್ಲಿದೆ. ಈ ರೈತಾಪಿ ಜನರನ್ನು ಹಾಳುಮಾಡಿದ್ದಲ್ಲಿ ಸರಕಾರವು ಕೂಡ ಅದರೊಂದಿಗೆ ಹಾಳಾಗುವದರಲ್ಲಿ ಸಂದೇಹವಿಲ್ಲ.

ಸರಕಾರಕ್ಕೆ ಹಣದ ಅವಶ್ಯಕತೆಯು ಇರಬಹುದು. ಆದರೆ ಈ ಹಣವು ತೆರ ಬಾರದ ರೈತನಿಂದ ಬರಬೇಕಾದುದಲ್ಲ. ಕೊಡಗಿನಲ್ಲಿರುವಂತಹ ಚಿಕ್ಕ ಪಟ್ಟಣಗಳ ಮಟ್ಟಿಗೆ, ಪುರಗಳ ಸಂಪೂರ್ಣ ಅಕ್ಕಾಯಿ ಉತ್ಪತ್ತಿಯು ಪುರಗಳಿಗೆ ಆಗುವದರಲ್ಲಿ ಯಾವ ನ್ಯಾಯವೂ ಇಲ್ಲ; ಎಂದರೆ ದುಡಿಯುವ ಗ್ರಾಮವಾಸಿಗಳು ಪುರನಿವಾಸಿಗಳ ಸುಖ ಜೀವನಕ್ಕೋಸ್ಕರವಾಗಿ ಅಕ್ಕಾಯಿಯನ್ನು ಯಾತಕ್ಕೆ ಕೊಡಬೇಕು? ಈ ವಿಷಯವಾಗಿ, ಸರಕಾರದವರು ಒಂದು ಕಮಿಟಿಯನ್ನು ಏರ್ಪಡಿಸಿ, ಮುನಿಸಿಪಾಲಿಟಿಗಳ ಎಷ್ಟರಷ್ಟು ಉತ್ಪತ್ತಿಯು ಪುರನಿವಾಸಿಗಳೇ ತೆರುತ್ತಿರುವರೆಂದು ಕಂಡುಹಿಡಿದು ಅಷ್ಟನ್ನು ಮಾತ್ರ ಮುನಿಸಿಪಾಲಿಟಿಗಳಿಗೆ ಬಿಟ್ಟು ಬಾಕಿಯನ್ನು ಸರಕಾರಕ್ಕೆ ತೆಗೆದು ಕೊಳ್ಳುವದು ನ್ಯಾಯವು.

ಎರಡನೆಯದಾಗಿ ವಾಣಿಜ್ಯ ವರ್ಗದವರು ಅವರ ನ್ಯಾಯವಾದ ಹೊರೆಯನ್ನು ಹೊತ್ತಿರುವದಿಲ್ಲ. ಬರೇ ಐದು ರೂಪಾಯಿಯ ಉತ್ಪತ್ತಿಯನ್ನು ದುಡಿದು ಸಂಪಾದಿಸಿದ ರೈತನು ಸರಕಾರಕ್ಕೆ ಕಂದಾಯ ಕೊಡುವಾಗ, ಅದೆಷ್ಟೋ ಚಿಕ್ಕ ವ್ಯಾಪಾರಿಗಳು, ದೊಡ್ಡ ವ್ಯಾಪಾರಿಗಳು, ಲಕ್ಷಗಟ್ಟೆ ವ್ಯಾಪಾರ ಮಾಡುವ ಕಿತ್ತಳೆ, ಮೆಣಸು ಏಲಕ್ಕಿ, ಕಾಫಿ ಮತ್ತು ಮರ ವ್ಯಾಪಾರಿಗಳು ಸರಕಾರಕ್ಕೆ ಏನು ಕೊಡುತ್ತಿರುವರ ? ಹೋಟೇಲು ಮಡಗಲು ಲೈಸೆನ್ಸು ಬೇಕು. ಆಗ ಬೇರೆ ವ್ಯಾಪಾರಗಳನ್ನು ಲೈಸೆನ್ಸಿನಿಂದ ಯಾಕೆ ವಿನಾಯಿಸಬೇಕು? ಈ ವ್ಯಾಪಾರ ಜನಾಂಗದ ಸಂರಕ್ಷಣೆಗೂ, ಮತ್ತಿತರ ಅನೇಕ ಅನುಕೂಲತೆಗಳಿಗೂ ಸರಕಾರವು ಅದೆಷ್ಟು ಹಣ ಖರ್ಚು ಮಾಡುತ್ತೆ. ಅವನ್ನು ಆ ವರ್ಗದವರು ಕೊಡಬೇಡವೆ?

ಸರಕಾರವು ಹೆಚ್ಚೆಚ್ಚಾಗಿ ಹಣ ಪಡಗಿಸಿಕೊಂಡು ಅದನ್ನು ದೇಶದ ಏಳಿಗೆಗಾಗಿ ಖರ್ಚುಮಾಡಬೇಕು. ಆದರೆ, ಈ ಹಣ ಸೇರಿಸುವದರಲ್ಲಿ ಬಡವನ ಮಣ್ಣಿನ ಮಡಿಕೆಯಲ್ಲಿರುವ ತಂಗಳು ಅನ್ನಕ್ಕೆ ಕೈ ಹಾಕುವದರ ಬದಲು, ಚಿನ್ನದ ಪದಕವನ್ನು ಧರಿಸಿರುವ ಶ್ರೀಮಂತನನ್ನು ಓರೆಗಣ್ಣಿನಿಂದ ನೋಡುವದು ಉತ್ತಮ.

ಗಾಂಧಿ ವಿಚಾರದೋಹನ.

ನಾನು 'ಮಹಾತ್ಮ'ನಲ್ಲ

ಸತ್ಯದ ಉಪಾಸಕನು ಅಹಂಕಾರಿಯಾಗಿ ನಾನೇ ತಾನೆಂದು ಇರಲು ಸಾಧ್ಯವಿಲ್ಲ. ಇನ್ನೊಬ್ಬರಿಗಾಗಿ ತನ್ನ ಪ್ರಾಣವನ್ನು ಧಾರೆ ಎರೆಯಲು ಸಿದ್ಧನಿರುವವನಿಗೆ ಪ್ರಪಂಚದಲ್ಲಿ ತನಗಾಗಿ ಒಂದು ಸ್ಥಳ ಪ್ರತ್ಯೇಕ ನಿಶ್ಚೇಪಿಸಿಕೊಳ್ಳುವದು ಸಾಧ್ಯವಿಲ್ಲ.

ನಮ್ಮ ರಾಜಕೀಯ, ಧರ್ಮ, ಅರ್ಥ ಶಾಸ್ತ್ರಗಳಿಂದ 'ನಾನು' ಮತ್ತು 'ನನ್ನದು' ಎಂಬುದನ್ನು ಕಿತ್ತೆಗೆಯಬಲ್ಲೆವಾದರೆ ನಾವು ಭೂಲೋಕದಲ್ಲಿ ಆ ಕ್ಷಣ ಸ್ವರ್ಗವನ್ನು ನೆಲೆಸಲು ಶಕ್ತರಾಗುವೆವು.

ನಾನು ನನ್ನ ತಪ್ಪುಗಳನ್ನು ಒಪ್ಪಿಕೊಳ್ಳುವದರಿಂದ ಆ ತಪ್ಪುಗಳ ಭಾರವು ನನ್ನ ಹೆಗಲೇರಿ ನಿಲ್ಲದು. ನಾನು ದೇವರೆಡೆಗೆ ನಾನು ನಂಬಿರುವಂತೆ ಪ್ರಯಾಣ ಬೆಳೆಸುತ್ತಿರುವದಾದರೆ ಹಾಗೆ ಭಾರವನ್ನು ತ್ಯಜಿಸುವದೇ ನನಗೆ ಸುಖಕರ.

ನನಗೆ ವಿಶ್ವವಿದ್ಯಾಲಯದ ಪ್ರಶಸ್ತಿ ಗೌರವಗಳಿಲ್ಲ. ನನ್ನ ಮಿತಿ ನನಗೆ ಗೊತ್ತಿದೆ. ನನ್ನ ಹೈಸ್ಕೂಲು ಜೀವನವೂ ಕೂಡ ಆಕರ್ಷಕವಾಗಿರಲಿಲ್ಲ. ಏನೋ ಪ್ರಯಾಸದಿಂದ ಪರೀಕ್ಷೆಗಳಲ್ಲಿ ಪಾಸಾಗುತ್ತಿದ್ದೆ ಅಷ್ಟೆ. ಯಾವುದರಲ್ಲೂ ನಾನು ಖ್ಯಾತಿ ಪಡೆದವನಲ್ಲ. ನಾನು ಸಾಮಾನ್ಯನಾದ ಒಬ್ಬ ವ್ಯಕ್ತಿ.

ನನ್ನನ್ನು ಜನರು 'ಮಹಾತ್ಮಾ' ಎನ್ನುತ್ತಾರೆ. ಆದರೆ ನಾನು ಮಹಾತ್ಮನೆಂದು ನನಗನಿಸುವದಿಲ್ಲ. ಆದರೆ ದೇವರ ಅತೀ ನಿಕೃಷ್ಟ ಜೀವಿಗಳಲ್ಲಿ ನಾನೊಬ್ಬನೆಂಬುದು ನನಗೆ ತಿಳಿದಿದೆ.

ಜನರು ನನ್ನನ್ನು 'ಮಹಾತ್ಮಾ' ಎನ್ನುವದು ನನ್ನ ರಾಜಕೀಯಕ್ಕಾಗಿ, ನನ್ನ ಅಲ್ಪ ಸೇವೆಗಾಗಿ. ಆದರೆ ಅವು ನನ್ನ ಅಮೂಲ್ಯ ವಸ್ತುಗಳಲ್ಲ. ಸತ್ಯ, ಅಹಿಂಸೆ ಬ್ರಹ್ಮಚರ್ಯಗಳಲ್ಲಿರುವ ವಿಶ್ವಾಸವೇ ನನ್ನ ಜೀವನದ ಜೀವಾಳ.

—ಎಂ. ಕೆ. ಗಾಂಧಿ.

ಶನಿವಾರಸಂತೆಗೆ
'ಕೊಡಗು' ಏಜೆಂಟರು,
ಶ್ರೀ ಎಸ್. ಎನ್. ಸಿದ್ದಪ್ಪನವರು

ಉಪಾಧ್ಯಾಯರು ರಾಷ್ಟ್ರ ನಿರ್ಮಾಪಕರು

ದೆಹಲಿ ಪಟ್ಟಣದ ಶ್ರೀ ರಾಮಕೃಷ್ಣಾಶ್ರಮದ ಅಧ್ಯಕ್ಷರಾದ ಸ್ವಾಮಿ ಶ್ರೀ ರಂಗನಾಥಾನಂದರವರು ಕಳೆದ ಗುರುವಾರ ಪ್ರಾತಃಕಾಲ ವಿನ್ಯಾನಗರದ ಶಿಕ್ಷಣ ಕೇಂದ್ರದ ಸಂಸ್ಕೃತಿ ಶಾಲೆಯ ಈ ವರ್ಷದ ಆರಂಭ ಭಾಷಣ ಮಾಡಿದರು. "ಇದುವರೆಗೂ ಉಪಾಧ್ಯಾಯರು ಬರೇ ಶಿಕ್ಷಕರಾಗಿದ್ದರು. ಶಾಲೆಗಳು ವಿಷಯಗ್ರಹಣಕ್ಕೆ ಮಾತ್ರ ತಕ್ಕ ಕಾರ್ಖಾನೆಗಳಾಗಿ ಚೈತನ್ಯವಿಲ್ಲದ ಜಡವಸ್ತುಗಳಾಗಿದ್ದವು. ಯಾವ ಮಹಾಪುರುಷನೂ ಈ ಶಾಲೆಗಳಲ್ಲಿ ಸ್ಫೂರ್ತಿ ಪಡೆಯಲು ಸಾಧ್ಯವಾಗಿರಲಿಲ್ಲ. ಉಪಾಧ್ಯಾಯರ ವ್ಯಕ್ತಿತ್ವ ದ್ವಿಮುಖವಾದದ್ದು. ಆತನು ಶಿಕ್ಷಕನೂ, ಗುರುವೂ ಆಗಬೇಕು. ಬರೇ ಸಂಬಳಕ್ಕಾಗಿ ಕೆಲಸ ಮಾಡುವವನ ದೃಷ್ಟಿ ಸಂಕುಚಿತ, ಮನಶ್ಶಕ್ತಿಯೂ ಅಲ್ಪ. ಉಪಾಧ್ಯಾಯರು ರಾಷ್ಟ್ರನಿರ್ಮಾಪಕರು. ಸಮಾಜದ ಬೇರೆಲ್ಲ ಉದ್ಯೋಗದವರಿಗಿಂತ ಅಧ್ಯಾಪಕರ ವ್ಯಕ್ತಿತ್ವದ ಪರಿಣಾಮ ಸಮಾಜದ ಮೇಲೆ ವಿಶೇಷವಾಗಿ ಬೀಳುತ್ತದೆ.

ಸ್ವತಂತ್ರವಾಗಿರುವ ನಮ್ಮ ನಾಡು ಉನ್ನತ ಪ್ರಗತಿಯನ್ನು ಹೊಂದಲು ತಾವೇ ಕಾರಣರೆಂಬ ಭಾವನೆಯಿಂದ ಉಪಾಧ್ಯಾಯರು ಕೆಲಸ ಮಾಡಬೇಕು. ಆಗ ಅವರ ಆತ್ಮಶಕ್ತಿ ವಿಶೇಷವಾಗಿ ವಿದ್ಯಾರ್ಥಿಗಳಲ್ಲಿ ಚೈತನ್ಯವನ್ನೂ, ಸ್ಫೂರ್ತಿಯನ್ನೂ ಕೊಡಬಲ್ಲುದು. ಆಗಲೇ ಅವರು ವಿದ್ಯಾರ್ಥಿಯ ಸಕಲ ಶೃಂಖಲೆಗಳನ್ನು ಬಿಡಿಸುವ ಗುರುಗಳಾಗುವರು. ಇಂತಹ ಶಿಕ್ಷಣವನ್ನು ಕೊಡಲು ತಕ್ಕ ಯೋಗ್ಯತೆಯನ್ನು ಪಡೆಯಲು ಈ ಶಿಕ್ಷಣ ಕೇಂದ್ರವೇರ್ಪಟ್ಟಿದೆ. ಇಂತಹ ಕೇಂದ್ರಗಳು ಹೇರಳವಾಗಿ ದೇಶದಲ್ಲಿ ಏರ್ಪಟ್ಟು ವಿಸ್ತಾರವಾಗುತ್ತಿರುವ ವಿದ್ಯಾ ಕ್ಷೇತ್ರದಲ್ಲಿ ಕೆಲಸ ಮಾಡಲು ಅರ್ಹರಾದ ಅಧ್ಯಾಪಕರ ಪಡೆಗಳನ್ನು ತಯಾರಿಸಬೇಕು. ಜೀವನಕ್ಕೆ ಉಪಯುಕ್ತವಾದ ಎಲ್ಲಾ ವಿಚಾರಗಳಲ್ಲೂ ಈ ಕೇಂದ್ರದಲ್ಲಿ ಶಿಕ್ಷಣ ದೊರೆಯುತ್ತದೆ. ಜೀವನವೇ ಶಿಕ್ಷಣ ಎಂಬ ತತ್ವದ ಆಚರಣೆಯಿಂದ ಹಳ್ಳಿಗಳಿಗೆ ನಾಯಕರಾಗಿರಲು ಯೋಗ್ಯರಾದ ವ್ಯಕ್ತಿಗಳಾಗಿ ನೀವು ಈ ಕೇಂದ್ರದಿಂದ ಹೋಗುತ್ತೀರೆಂದು ನನ್ನ ಪೂರ್ಣ ನಂಬಿಕೆಯಿದೆ. ಇಲ್ಲಿ ನೀವಿರುವ ಹತ್ತು ತಿಂಗಳಲ್ಲಿ ನಿಮ್ಮ ವ್ಯಕ್ತಿತ್ವವನ್ನು ವಿಕಾಸಗೊಳಿಸುವ ಮಾರ್ಗವನ್ನರಿತು, ಮುಂದೆ ತಪ್ಪದೆ ಶ್ರದ್ಧೆಯಿಂದ, ಸಾಧನೆಯಿಂದ ಆತ್ಮೋದ್ಧಾರವನ್ನೂ, ದೇಶೋದ್ಧಾರವನ್ನೂ ಮಾಡುವಿರೆಂದು ಹಾರೈಸುತ್ತೇನೆ" ಎಂದು ಹೇಳಿ ಸ್ವಾಮಿಗಳವರು ಉಪಾಧ್ಯಾಯ ವಿದ್ಯಾರ್ಥಿಗಳನ್ನೂ ಶಿಕ್ಷಕವೃಂದವನ್ನೂ ಆಶೀರ್ವದಿಸಿದರು.

ಶ್ರೀ ಶಂಕರಲಾಲರ ನಿಧನ

ಫಾರ್ವರ್ಡ್ ಬ್ಲಾಕ್ ಮುಖಂಡರಾಗಿ ಪುರಿಕೇರಿಯಲ್ಲಿ ಶೈಲಿನಲ್ಲಿ ಪರಿತಾಪಕ್ಕೆ ದಬ್ಬೋಪರೋಕ್ಷನಿದ್ದ ಲಾಲಾ ಶಂಕರಲಾಲ್‌ರವರು ಈ ತಾ. ೮ರಲ್ಲಿ ದೆಹಲಿಯಲ್ಲಿ ಮೃತಪಟ್ಟರು.

ನೂತನ ಧರ್ಮವೊಂದು ಅಗತ್ಯವಾಗಿದೆ.

ಆಧುನಿಕ ಜಗತ್ತಿಗೆ ಆಧುನಿಕ ಧರ್ಮವೊಂದರ ಆವಶ್ಯಕತೆ ಇದೆಯೆಂದು ಭಾರತದ ಉಪರಾಷ್ಟ್ರಪತಿ ಡಾ ಸರ್ವಪಲ್ಲಿ ರಾಧಾಕೃಷ್ಣನ್ ಅಭಿಪ್ರಾಯಪಡುತ್ತಾರೆ.

« ವಿಶ್ವದ ಸಮಸ್ಯೆಗಳಿಗೆ ಇರುವ ಏಕಮಾತ್ರ ಉತ್ತರವೆಂದರೆ ವಿಶ್ವಧರ್ಮ. ಇದು ಪ್ರಾಬಲ್ಯದ ಮೂಲಕ ಸಾಧಿಸಲ್ಪಡಬೇಕಲ್ಲದೆ ಸಂಯೋಜನೆಯ ಮೂಲಕವಲ್ಲ'' ಎಂಬುದಾಗಿ ಈ ವಾರ ಪ್ರಸಿದ್ಧ ತತ್ವಜ್ಞಾನಿ ರಾಜಕಾರಣಿ ರಾಧಾಕೃಷ್ಣನ್ ಚಿಕಾಗೋದಲ್ಲಿ ಹೇಳಿದರು.

ಮಂಗಳವಾರ ರಾತ್ರಿ ಚಿಕಾಗೋ ವಿಶ್ವವಿದ್ಯಾಲಯದಲ್ಲೂ, ಬುಧವಾರ ಇಲ್ಲಿನಾಯ್ಸ್ ವಿಶ್ವವಿದ್ಯಾಲಯದಲ್ಲೂ ಡಾ. ರಾಧಾಕೃಷ್ಣನ್ ಭಾಷಣ ಮಾಡಿದರು.

ವಿಶ್ವದ ಪ್ರಮುಖ ಸಂಘಟಿತ ಧರ್ಮಗಳು ಈಗಿನಂತೆಯೇ ಮುಂದುವರಿದರೆ ಅವುಗಳಿಂದ ಜಗತ್ತಿನ ಐಕ್ಯ ಸಾಧಿಸಲ್ಪಡಲಾರದೆಂದೂ ಅದು ಸಾಧ್ಯವಾಗಬೇಕಾದರೆ ಸತ್ಯ, ಪ್ರೇಮಗಳ ತಳಹದಿಯಿರುವ ಸಂಪ್ರದಾಯ ಅವಶ್ಯವೆಂದೂ ಡಾ. ರಾಧಾಕೃಷ್ಣನ್ ಹೇಳಿದರು.

---

೮೨ ಸಾವಿರ ಜರ್ಮನ್ ಯುದ್ಧ ಕೈದಿಗಳು

ಎರಡನೇ ಮಹಾಯುದ್ಧ ಮುಗಿದು ಎಂಟು ವರ್ಷಗಳಾಗಿ ಹೋಗಿದ್ದರೂ ಸೋವಿಯಟ್ ರಷ್ಯಾ ಇನ್ನೂ ೮೨ ಸಾವಿರ ಮಂದಿ ಜರ್ಮನ್ ಯುದ್ಧ ಕೈದಿಗಳನ್ನು ಯೂರೋಪಿನಲ್ಲಿ ಬಂಧನದಲ್ಲಿಟ್ಟಿದೆಯೆಂದು ಜರ್ಮನ್ ಜೂನಿಯರ್ ರೆಡ್‌ಕ್ರಾಸಿನ ರಾಷ್ಟ್ರೀಯ ಡೈರೆಕ್ಟರ್ ಗೊಯೆಟ್ಸ್ ಫೆಧ್ರರವರು ಇತ್ತೀಚೆಗೆ ಅಮೇರಿಕನ್ ರೆಡ್‌ಕ್ರಾಸಿಗೆ ತಿಳಿಸಿದರು.

ಜರ್ಮನ್ ರೆಡ್‌ಕ್ರಾಸ್ ಸೊಸೈಟಿ ಈ ಕೈದಿಗಳಿಗೆ ಆಹಾರ ಪಾರ್ಸಲುಗಳನ್ನು ಕಳಿಸುತ್ತಿದೆಯೆಂದೂ, ಅನೇಕ ಪಾರ್ಸಲುಗಳು ಸ್ವೀಕೃತವಾದ ದಾಖಲೆಗಳು ಬರುತ್ತಿವೆಯೆಂದೂ ಅವರು ನುಡಿದರು.

ರಷ್ಯಾದಲ್ಲಿ ಪ್ರಗತಿ ಏಕೆ?

ರಷ್ಯಾ ದೇಶದಲ್ಲಿ ಹೆಚ್ಚು ಹೆಚ್ಚು ಉತ್ಪನ್ನ ಮಾಡುವವರಿಗೂ, ನಿರ್ದಿಷ್ಟ ಅವಧಿಗೆ ಮುನ್ನವೇ ನಾನಾ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತ ಮಾಡುತ್ತಿರುವುದಕ್ಕೂ ಕಾರಣವೆಂದರೆ ಎಲ್ಲರಲ್ಲೂ ಇರುವ ಸಹಕಾರ ಬುದ್ಧಿ ಎಂಬುದಾಗಿ ಇತ್ತೀಚೆಗೆ ತಾನೇ ರಷ್ಯಾ ಮತ್ತು ಚೀಣಾ ದೇಶಗಳಲ್ಲಿ ಪ್ರವಾಸ ಮಾಡಿ ಬಂದ ಕಮ್ಯೂನಿಸ್ಟ್ ಪಾರ್ಲಿಮೆಂಟರಿ ಗುಂಪಿನ ಮುಖಂಡ ಶ್ರೀ ಎ. ಕೆ. ಗೋಪಾಲನ್ ಹೇಳಿದ್ದಾರೆ.

ರಷ್ಯಾದಲ್ಲಿ ಕಾರ್ಮಿಕರಿಗೂ ಕಾರ್ಖಾನೆಗಳಿಗೂ, ಸಾಮೂಹಿಕ ಫಾರ್ಮುಗಳಿಗೂ ಪರಸ್ಪರ ಸಹಕಾರ ಮನೋಭಾವವು ತುಂಬಾ ಚೆನ್ನಾಗಿದೆಯೆಂದೂ, ಅನ್ಯರಿಂದಲೇ ಈ ಪ್ರಗತಿಗೆ ಕಾರಣವಾಗಿದೆಯೆಂದೂ ಶ್ರೀ ಗೋಪಾಲನ್ ನುಡಿದರು.

ರಷ್ಯಾ ಸರಕಾರವೂ ಜನತೆಯೂ ಪ್ರವೀಣ ಕಾರ್ಮಿಕನನ್ನು ಗೌರವಿಸುವುದೆಂದೂ ಪೂಜ್ಯಭಾವನೆ ತೋರಿಸುವುದೆಂದೂ ಆತನಿಗೆ ಎಲ್ಲಾ ಬಗೆಯ ಉತ್ತೇಜನವನ್ನೂ ಕೊಡುವುದೆಂದೂ ಆತನ ಬುದ್ಧಿಶಕ್ತಿಯನ್ನು ವೃತ್ತಿಯ ಪ್ರಗತಿಗಾಗಿ ಉಪಯೋಗಿಸಿಕೊಳ್ಳುವುದೆಂದೂ ಶ್ರೀ ಗೋಪಾಲನ್ ತಿಳಿಸಿದರು. ಅಲ್ಲಿನ ಜನತೆಯು ತೋರಿಸುತ್ತಿರುವ ಉತ್ಸಾಹವನ್ನು ಗಮನಿಸಿದರೆ ಆ ಜನರಿಗೆ ತಮ್ಮ ಸರಕಾರದಲ್ಲೂ ತಮ್ಮ ಭವಿಷ್ಯದಲ್ಲೂ ಇರುವ ಅಪಾರ ಶ್ರದ್ಧೆ ಗೋಚರವಾಗುವುದೆಂದೂ ಶ್ರೀ ಗೋಪಾಲನ್ ಹೇಳಿದರು.

ರಷ್ಯಾದಲ್ಲಿ 'ವೈದ್ಯಕೀಯ ವ್ಯವಸ್ಥೆಗಳ ಗುರಿಯು ಕಾಯಿಲೆಯನ್ನು ವಾಸಿ ಮಾಡುವುದಷ್ಟೇ ಅಲ್ಲ. ಕಾಯಿಲೆಗಳು ಬಾರದಂತೆಯೇ ತಡೆಗಟ್ಟುವುದಾಗಿದೆ ಎಂದು ಗೋಪಾಲನ್ ತಿಳಿಸಿದರು. ರಾಷ್ಟ್ರದ ನರ್ಸರಿಗಳಿಗೂ ಕಿಂಡರ್‌ಗಾರ್ಟನ್ ಕೇಂದ್ರಗಳೂ, ಮಕ್ಕಳ ಆಹಾರ, ವಿದ್ಯಾಭ್ಯಾಸ ಮತ್ತು ಆರೋಗ್ಯದ ಬಗ್ಗೆ ವಿಶೇಷ ಎಚ್ಚರಿಕೆ ವಹಿಸುವುದೆಂದೂ ಶ್ರೀ ಗೋಪಾಲನ್ ನುಡಿದರು

ರಷ್ಯಾದಲ್ಲಿ ವ್ಯವಸಾಯ ಕೆಲಸವೆಲ್ಲಾ ಸಂಪೂರ್ಣವಾಗಿ ಯಾಂತ್ರೀಕರಣ ಮಾಡಲಾಗಿದೆಯೆಂದೂ, ಆದರೆ ಚೀಣಾದಲ್ಲಿನ್ನೂ ಆ ಕೆಲಸ ಆಗಬೇಕಾಗಿದೆಯೆಂದೂ ಶ್ರೀ ಗೋಪಾಲನ್ ಹೇಳಿದರು. ರಷ್ಯಾದಲ್ಲಿ ಭಾರಿ ಮತ್ತು ಸಣ್ಣ ಪುಟ್ಟ ಕೈಗಾರಿಕೆಗಳೆಲ್ಲಾ ರಾಷ್ಟ್ರದ ಸ್ವತ್ತಾಗಿವೆಯೆಂದೂ ಆದರೆ ಚೀಣಾದಲ್ಲಿ ಸದ್ಯಕ್ಕೆ ಭಾರೀ ಕೈಗಾರಿಕೆಗಳನ್ನು ಮಾತ್ರ ರಾಷ್ಟ್ರೀಕರಣ ಮಾಡಲಾಗಿದೆಯೆಂದೂ ಶ್ರೀ ಗೋಪಾಲನ್ ತಿಳಿಸಿದರು.

Government of India. Ministry of Labour.

TRAINING SCHEME FOR ADULT CIVILIANS.

ADMISSION FOR VOCATIONAL TRADES.

1. Industrial Training Institute, Kakinada (Men and Women.)
   (1) Manufacture of footwear (2) Cutting and Tailoring (3) Hand weaving etc.
2. Industrial Training Centre for Women, Andhra Mahila Sabha, Mylapore, Madras (Women only).
   (1) Bleaching, Dyeing and Printing.
3. Industrial Training Centre for Women Sterlinig Road, Madras. (Women only)
   (1) Cutting and Tailoring. (2) Hand Weaving etc. (3) knitting.
4. Industrial Training Institute, Virajpet. (Men & Women)
   (1) Cutting and Tailoring (2) Cane and Willow work.
5. Industrial Training Institute, Jalahalli. (Men & Women).
   (1) Bleaching, Dyeing & Printing. (2) Cutting and Tailoring.
6. Industrial Training Centre, School of Arts, Trivandrum (Men & Women)
   (1) Fretwork and wooden toys (2) Wood Turning and Lacquering (3) Clay Modelling & Plaster of Paris Moulding.

The next session of Training will commence from 1st week of August. Both Men and Women are entitled to admission. This year Defence Ministry has offered Rs. 25/- per month to Ex-servicemen and Women who undertake the training These awards are besides the 50% scholarships awarded by the Ministry of Labour to deserving candidates. Application forms and other particulars can be had direct from the Principals of the Centres/Institutes concerned on requisition, with a Stamped and self addressed envelope. Further particulars can be had by contacting the nearest Employment Exchange.

Last date for the receipt by the Principal of the Institute concerned of applications duly filled in by the applicant is 20th July 1953 Candidates called for interview will have to attend at their own expense.

ಬಾಣೆ ಕಂದಾಯದ ಭಾರ.

ಲೇ:—ಶ್ರೀ. ಎ. ಕೆ. ಎಸ್. ಮೈಸೂರು.

ಇಂಡಿಯಾ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಕಾಂಗ್ರೆಸ್ ಆಡಳಿತವು ಅನೇಕ ವಿಧದ ಸಲಕರಣೆ, ರಿಯಾಯಿತಿಗಳನ್ನು ಒದಗಿಸಿಕೊಡಬಹುದೆಂದು ಜನರೆಲ್ಲರೂ ಆಶೆಯಿಂದ ಯೋಚಿಸಿದ್ದಾಯಿತು. ಆದರೆ ಅದೇ ಮಾದರಿಯ ಅಸುಧಾರಿತ ಸಲಕರಣೆಗಳು ಈಗೀಗ ನಮ್ಮ ಕೊಡಗಿನ ಕಾಂಗ್ರೆಸ್ ಆಡಳಿತದಲ್ಲಿ ಕಾಣುತ್ತಿವೆ. ಸರಕಾರದ ಕಾರ್ಯಕಲಾಪಗಳನ್ನು ಆಡಂಬರದಲ್ಲಿ ನಡೆಸಲಿಕ್ಕಾಗಿ ಅಸಾಧ್ಯವಾದ ತಲೆ ಹೊರೆಗಳನ್ನು ಜನರ ಮೇಲೆ ಹೊರಿಸುತ್ತಿದ್ದಾರೆ. ಅದೇ ಈ ಬಾಣೆ ಕಂದಾಯ. ಕ್ರಮೇಣ ಮಾರಾಟ ತೆರಿಗೆ, ಕುಡಿತ ಕಂದಾಯ ಮತ್ತೂ ಸಾಲದಿದ್ದರೆ ತಲೆ ಕಂದಾಯ ಸಹ ಹಾಕಬಹುದೇನೋ?

೧೯೪೮ ನೇ ಇಸವಿ ತನಕ ನಿಜವಾಗಿಯೂ ಸರಿಯಾದ ಮಳೆ ಬೆಳೆ, ಪದಾರ್ಥಗಳ ಧಾರಣೆವಾಸಿ ಸರಿಯಾಗಿದ್ದ ಕಾಲದಲ್ಲಿ ಅನೇಕ ಜನರಿಗೆ ತಮ್ಮ ಜೀವನ ಸಾಗಿಸಲು ಸಾಧ್ಯವಿಲ್ಲದೆ ತಮ್ಮ ಭೂಮಿ ಕಂದಾಯ ಕಟ್ಟದೆ ಎಷ್ಟೋ ಜನರು ತಮ್ಮ ಆಸ್ತಿ ಸಹ ಕಳಕೊಂಡದಿದೆ. ಈಗಲಂತೂ ಮಳೆ ಬೆಳೆ ಸರಿ ಇಲ್ಲದೆ ಬರಗಾಲದ ಕಷ್ಟದಲ್ಲಿ ಪ್ರಾಣ ಜೀವನ ಸಾಗಿಸತಕ್ಕ ಸಮಯದಲ್ಲಿ ಹಣಕ್ಕೆ ತಲೆಗಂದಾಯ ವಿಧಿಸಿದ ಮಾದರಿಯಲ್ಲಿ ಬಾಣೆ ಕಂದಾಯ ಬರುವ ಸೂಚನೆ ಇದೆ. ಈಗಲೇ ತಡವಾಗಿ ಪ್ರಾರಂಭಿಸಿದ ಮಳೆಗಾಲದಿಂದ ಅದೆಷ್ಟೋ ನಷ್ಟ ಕಷ್ಟ ಸಂಭವಿಸಿ ದುಃಖಿಸುವ ವೇಳೆಯಲ್ಲಿ ಇದು ಸರಿಯಲ್ಲ. ಬಡವರ ಕಷ್ಟದ ಸಮಯವು ಲಾಭ ಬಡಕರ ಸಂಪಾದನೆಯ ಕಾಲ. ಆ ಕಾಲದಲ್ಲೇ ಆಸ್ತಿ ಆಭರಣಸಂಗ್ರಹಿಸಲು ಬಂಡವಾಳದಾರರು ಸಮಯ ಕಾದಿರುವರು. ಇಂದು ಬಂಡವಳದಾರರು ಕಾಂಗ್ರೆಸಿನ ಹಿತಸಾಧಕರು. ಅವರಿಗೆ ಈ ಸರಕಾರ ತಕ್ಕುದಾದ ಸಹಾಯ ಸಲಕರಣೆ ನೀಡುತ್ತಿದೆ. ಮಧ್ಯಮ ತರಗತಿಯ ಬಡ ಜನರ ಸ್ಥಿತಿ ಮಾತ್ರ ಹಾಳಾಗುತ್ತಿದೆ. ಅವರಿಗೆ ಈ ಬಾಣೆ ಕಂದಾಯ ಹೊರಲಾರದ ಹೊರೆ.

ಈ ಕಾಂಗ್ರೆಸ್ ಆಡಳಿತದಲ್ಲಿ ವರ್ಷ ವರ್ಷ ದೇಶದಲ್ಲಿ ಉತ್ಪತ್ತಿಗಿಂತ ಖರ್ಚು ಹೆಚ್ಚಾಗುತ್ತಿರುವ ಕಾರಣ ಈ ತರಹದ ಒಣ ಕಂದಾಯದಿಂದ ಭರ್ತಿ ಮಾಡುವ ಅಸುಧಾರಿತ ಕ್ರಮಗಳನ್ನು ಅನುಸರಿಸಬೇಕಾಗಿ ಬಂದಿವೆ. ಆದರೆ ಇದು ಆಸ್ಪತ್ರೆಗೆ ಬಂದ ರೋಗಿಯ ಶರೀರದಿಂದ ಅಲ್ಪ ಸ್ವಲ್ಪ ಇರತಕ್ಕ ರಕ್ತವನ್ನು ಬ್ಲಡ್ ಬೇಂಕಿನಲ್ಲಿ ಶೇಖರಿಸಿ ಅರಮನೆಯಲ್ಲಿ ನಲಿದಾಡುವ ಯೌವನಸ್ಥರಿಗೆ ಕೊಡುವಂತಾಗಬಾರದು. ಓಟು ಸಿಕ್ಕಿ ಅಧಿಕಾರಕ್ಕೆ ಬರುವ ತನಕ ಆಡಿದ ಆ ರಾಮರಾಜ್ಯಭಾರ ಕ್ರಮದ ಗಿಣಿಯೋಪದೇಶದ ಪ್ರತಿಫಲವೇ ಇದು? ನಿಜವಾಗಿಯೂ ಮಹಾತ್ಮ ಗಾಂಧೀಜಿಯ ಕಾಂಗ್ರೆಸಿನ ತತ್ವಕ್ಕನುಗುಣವಾಗಿ ಸತ್ಯ, ಧರ್ಮ, ಮತ್ತು ನ್ಯಾಯದಿಂದ ಅಧಿಕಾರ ನಡೆಸತಕ್ಕ ಸರಕಾರವಾದರೆ ಬಡವರಿಗೆ ತೊಂದರೆ ತರುವ ಕಂದಾಯ ಹಾಕುತ್ತಿರಲಿಲ್ಲ. ಅಂಥಾ ಸಹೃದಯ ಗಾಂಧೀವಾದಿ ಸರಕಾರವಾಗಿದ್ದರೆ ದೇಶದಲ್ಲಿ ಈಗಿರುವಂಥಾ ಪಕ್ಷ ಪಾರ್ಟಿಗಳೂ ಇರುತ್ತಿರಲಿಲ್ಲ. ಸರಿಯಾದ ಹಿತಸರಕಾರವಾದರೆ ತಮ್ಮ ಆಡಳಿತ ವರ್ಗದಲ್ಲಿರತಕ್ಕ ಲೋಪದೋಷಗಳನ್ನು ಸರಿಪಡಿಸಿಕೊಂಡು ಅನಾವಶ್ಯದ ಖರ್ಚು, ಹೆಚ್ಚಿನ ವೇತನ, ಅವಶ್ಯವಿಲ್ಲದ ಅಧಿಕಾರಿಗಳನ್ನೆಲ್ಲಾ ತೆಗೆದುಹಾಕಿ ಉಳಿತಾಯ ಮಾಡಿ ಬಜೆಟ್ ಸರಿತೂಗಿಸಬಹುದು. ಉದಾಹರಣೆಗಾಗಿ ಈ ಪ್ರಜಾಸರಕಾರದ ಚುನಾಯಿತ ಮಂತ್ರಿವರ್ಯರ ವೇತನ ಗಾಂಧಿ ಅನುಯಾಯಿಗಳಿಗೆ ಸಲ್ಲತಕ್ಕದ್ದೇ? ಅದರೊಂದಿಗೆ ಪ್ರಯಾಣ ಭತ್ಯ, ವಸತಿ, ಮುಂತಾದ ಖರ್ಚು ವೊದಲಾದುವು. ಇವುಗಳಲ್ಲಿ ಖೋತೆಮಾಡಿ ಮಾದರಿ ಸುಧಾರಣೆಯ ಆಡಳಿತ ತರಬಹುದಿತ್ತು. ಅಲ್ಲದೆ ಶಾಸನ ಸಭೆಯ ಚುನಾಯಿತ ಮೆಂಬರುಗಳಿಗೆಲ್ಲಾ ಬ್ರಿಟಿಷರ ಆಡಳಿತದಲ್ಲಿ ತಿಂಗಳ ಸಂಬಳವಿಲ್ಲದಿದ್ದರೂ 'ರಾಮರಾಜ್ಯ'ದಲ್ಲಿ ಇದೆ. ಅಂದು ಎಲ್ಲರೂ ಧರ್ಮಾರ್ಥ ಕೆಲಸ ಮಾಡುವವರಾಗಿದ್ದರೆ ಇಂದು ಹಣಕ್ಕಾಗಿ! ಹೀಗೆ ಇನ್ನೂ ಅನೇಕ ವಿಧದ ಅನಾವಶ್ಯದ ಖರ್ಚಿನ ಬಾಬುಗಳಿವೆ. ಈ ಚುನಾಯಿತ ಮೆಂಬರುಗಳಲ್ಲಾಗಲೀ, ಜವಾಬ್ದಾರಿ ಹೊತ್ತವರಲ್ಲಾಗಲೀ ಚುನಾಯಿತರಾಗುವುದಕ್ಕೆ ಮೊದಲು ಈ ಆಡಂಭರ ಜೀವನ, ಅಧಿಕಾರ ದರ್ಪ ಇತ್ತೇ ಎಂಬವನ್ನು ಅವರೇ ಯೋಚಿಸಿಕೊಳ್ಳಲಿ. ಜನಸಾಮಾನ್ಯರಾಗಿದ್ದ ಇವರೆಲ್ಲಾ ಚುನಾಯಿತರಾದ ಗೌರವಕ್ಕೆ ತೃಪ್ತಿಪಟ್ಟು ಸರಳ ಜೀವನದ ದೇಶಸೇವೆ ಸಲ್ಲಿಸಿದ್ದರೆ ನಾಡಿಗೂ ಹಿತವಿತ್ತು. ಇವರಿಗೂ ಕೀರ್ತಿ ಇತ್ತು. ಕಾಂಗ್ರೆಸಿನ ಆಡಳಿತದಲ್ಲಿ ಅರಸರನ್ನು ಸಾಮಾನ್ಯರ ಅಂತಸ್ಥಿಗೆ ಇಳಿಸಿರುವಾಗ ಅಧಿಕಾರಕ್ಕೇರಿದ ಸಾಮಾನ್ಯರು ಅರಸರಂತೆ ಜೀವನ ನಡೆಸಲು ಯತ್ನಿಸಲೇಕೆ? ಸೃಷ್ಟಿಕರ್ತನು ಪ್ರಪಂಚದ ಎಲ್ಲಾ ಜೀವ ಜಂತುಗಳಿಗೆ ಆವಶ್ಯವಾದ ಗಾಳಿ ಬೆಳಕು, ನೀರು ಮುಂತಾದ ವಸ್ತುವನ್ನು ಬೇಧವಿಲ್ಲದೆ ಎಲ್ಲರಿಗೂ ಒಂದೇಯಾಗಿ ಉಂಟುಮಾಡಿದ್ದಾನೆ. ಆಡಳಿತ ವರ್ಗಕ್ಕೆ, ಬಂಡವಾಳ ಶಾಹಿಗಳಿಗೆ ಬೇರೆ ಮಾಡಿಲ್ಲ. ಹಾಗಿರುವಾಗ ಮಂತ್ರಿಗಳು ಅಧಿಕಾರಿಗಳು ಇತರರು ಹೆಚ್ಚಿನ ಅಂತಸ್ತನ್ನು ಬಯಸಲೇಕೆ? ಸರ್ವರನ್ನು ಒಂದೇ ದೃಷ್ಟಿಯಿಂದ ನೋಡಬೇಕಾದ ಸರಕಾರದಲ್ಲಿ ಜಾಗಿರು ಭೂಮಿಗಳ ಬಾಣೆ ಜಾಗಕ್ಕೆ ಕಂದಾಯವಿಲ್ಲದಿರಲು ಕಾರಣವೇನು? ಈ ಭೂಮಾಲಿಕರು ಕಾಂಗ್ರೆಸ್ ಸರಕಾರದ ಹಿತ ಸಾಧಕರಿರಬಹುದೇ? ಉಳಿದವರು ಅಹಿತ ಸಾಧಕರೇ?

ಕೊಡಗಿನಲ್ಲಿ ಈ ತನಕ ಇಲ್ಲದ ಈ ತರದ ಇಲ್ಲದ ಸಲ್ಲದ ಈ ತಲೆ ಬಾರ ಕಂದಾಯ ನಾಡಿನ ಜನರಿಗೆ ಹೊರಿಸುವದೇ ನಮ್ಮ ಓಟಿಗೆ ಪ್ರತಿಫಲವೇ? ಅನ್ನವಸ್ತ್ರಿಯ ಆಡಳಿತವಾದರೆ ಜನರ ಪ್ರೀತಿ ವಿಶ್ವಾಸ ಬೇಗ ಕಳೆದು ಹೋಗುವದು. ಜನರೆಲ್ಲರೂ ಪತ್ರಿಕೆಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಇದೇ ಸುಸಮಯವೆಂದು ತಮ್ಮ ವರ್ಗದ ಆಡಳಿತದಿಂದ ಎದುರಾಳಿಗಳ ಬಲ ಮುರಿದು ತಮ್ಮದೇ ಆದ ಬಂಡವಾಳ ಶಾಹಿ ಪಾರ್ಟಿಯ ಹಿತಸಾಧಿಸಲಿರುವ ಅಭಿಪ್ರಾಯಕ್ಕೆ ವಿರೋಧ ಮಾಡಲೇಬೇಕು. ಇದಕ್ಕೋಸ್ಕರ ನಾವೆಲ್ಲ ಉದಾಸೀನ ಮಾಡದೆ ಆರಂಭ ಕಾಲವಾದರೂ ಸಹ ಒಂದೆರಡು ದಿನಗಳ ಮಟ್ಟಿಗೆ ಪ್ರಯತ್ನ ಪಟ್ಟು ಊರು ನಾಡಿನ ಜನರೆಲ್ಲ ಸೇರಿ ತಕ್ಕುದಾದ ತಮ್ಮ ತಮ್ಮ ಹವಾಲುಗಳನ್ನು ಘನ ಸರಕಾರದಲ್ಲಿ ಮುಂದಿಟ್ಟು ಈ ರೀತಿಯ ಒಂದು ಕಂದಾಯ ಜಾರಿಯಲ್ಲಿ ಬಾರದಂತೆ ನೋಡುವದು ಕರ್ತವ್ಯವಾಗಿದೆ.

ಬಾಣೆ ಕಂದಾಯ ಕುರಿತು

ಸಾರ್ವಜನಿಕ ಸಭೆಗಳು

ಕಡಂಗ ಮುರೂರು

ತಾರೀಕು ೭ರಲ್ಲಿ ಕಡಂಗ ಮುರೂರು ಗ್ರಾಮಸ್ಥರು ಊರು ಮಂದಿನಲ್ಲಿ ಶ್ರೀ ಪಳಂಗಂಡ ನಂಜಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಕೊಡಗು ಸರಕಾರವು ರೈತರ ಮೇಲೆ ಬಾಣೆ ಕಂದಾಯ ವಿಧಿಸುವುದನ್ನು ಸಭೆಯು ನಿಷೇಧಿಸುವುದೆಂದೂ ಈ ತರದ ಕಂದಾಯ ಹಾಕಕೂಡದೆಂದು ಸರಕಾರವನ್ನು ಕೇಳಿಕೊಳ್ಳುವಂತೆಯೂ ಠರಾವುಗಳಾದವು.

ಬೆಳ್ಳೂರು

ತಾ. ೩೦ರಲ್ಲಿ ಶ್ರೀಮಂಗಲ ನಾಡಿನ ಬೆಳ್ಳೂರು ಗ್ರಾಮಸ್ಥರು ಶ್ರೀ ಬಿ. ಐ. ತಿಮ್ಮಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಭೂಮಿ ಕಂದಾಯವನ್ನೇ ಕಟ್ಟಲು ಅಶಕ್ತನಾಗಿರುವ ರೈತನ ಮೇಲೆ ಬಾಣೆ ಕಂದಾಯವನ್ನೂ ಹಾಕಲಿರುವುದು ತೀರಾ ವ್ಯಸನಕರವೆಂದೂ, ಸರಕಾರವು ಈ ಕಂದಾಯ ಹಾಕಕೂಡದೆಂದೂ ಠರಾವು ಮಾಡಲಾಯಿತು.

ಕಂಡಂಗಾಲ

ತಾ. ೨ರಲ್ಲಿ ಕಂಡಂಗಾಲ, ರುದ್ರಗುಪ್ಪೆ ಗ್ರಾಮಸ್ಥರು ಶ್ರೀ ಮಾಂಗೇರ ಗಣಪತಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಈಗ ಸೂಚಿತವಾಗಿರುವ ಎಕರೆಗೆ ನಾಲ್ಕಾಣೆ ದರದ ಬಾಣೆ ಕಂದಾಯ ಹಾಕಕೂಡದೆಂದು ಸರಕಾರವನ್ನು ಕೇಳಿಕೊಳ್ಳುವ ಠರಾವು ಪಾಸಾಯಿತು.

ನೆಹರೂರವರ ತೂಕ ೧೪೦ ರಾತ್ಲು.

ಲಂಡನ್‌ನಿಂದ ಭಾರತಕ್ಕೆ ಮರಳುವ ಕಾಲದಲ್ಲಿ ಭಾರತ ಪ್ರಧಾನ ನೆಹರೂರವರು ಮುಂಬಾಯಿಯ ಸಾಂತಾಕ್ರೂಜ್ ವಿಮಾನ ನಿಲ್ದಾಣದಲ್ಲಿ ತಂಗಿದಾಗ ತೂಕ ತೋರಿಸುವ ಯಂತ್ರದ ಮೇಲೊಮ್ಮೆ ನಿಂತಿದ್ದರು. ಯಂತ್ರದ ಮುಳ್ಳು ೧೪೦ ರಾತ್ಲು ತೋರಿಸುವುದನ್ನು ಬಳಿಯಲ್ಲೇ ನಿಂತಿದ್ದ ಮುಂಬಾಯಿಯ ಮುಖ್ಯಾಮಾತ್ಯ ಶ್ರೀ. ಮೊರಾರ್ಜಿ ದೇಸಾಯಿಯವರು ಕಂಡರು. ಆ ವೇಳೆ ಸ್ವತಹ ಮೊರಾರ್ಜಿಯವರೇ ಯಂತ್ರದ ಮೇಲೆ ನಿಂತಾಗ ಮುಳ್ಳು ೧೩೫ ರಾತ್ಲು ತೋರಿಸಿತು. ತೂಕ ನೋಡುವ ಈ ವಿನೋದವನ್ನು ಮೊದಲು ಹೂಡಿದವರು ಮುಂಬಾಯಿಯ ಗವರ್ನರ್ ಮಾನ್ಯ ಜಿ. ಎಸ್. ಬಾಜಪೇಯಿರವರು. ಬೇಗ ಹಾಕಿದ್ದ ಯಂತ್ರದ ಬೇಗ ತೆಗೆದು ಮೊದಲು ಅವರು ತಮ್ಮ ತೂಕ ಪರೀಕ್ಷಿಸಿದರು. ಅದು ೧೪೦ ರಾತ್ಲುಗಳಿತ್ತು. ಯೂನಿಯನ್ ಕೆಬಿನೆಟ್ ಸೆಕ್ರೆಟರಿ ಶ್ರೀ. ವೈ. ಎನ್. ಸುಕ್ಥಂಕರ್‌ರವರು ಯಂತ್ರದ ಮೇಲೆ ನಿಂತಾಗ ಮುಳ್ಳು ೨೧೦ ರಾತ್ಲಿನ ಗುರುತು ದಾಟಿತ್ತು.

ಪಾಕಿಸ್ಥಾನಕ್ಕೆ ಜಾತ್ಯಾತೀತ ಮಧ್ಯವರ್ತಿ ಘಟನೆ.

ಲಂಡನ್ ಸಮ್ಮೇಳನದಿಂದ ಕರಾಚಿಗೆ ಮರಳಿದ ಪಾಕಿಸ್ತಾನ ಪ್ರಧಾನ ಮಿ. ಮಹಮ್ಮದ ಅಲಿಯವರು ಪಾಕಿಸ್ತಾನದಲ್ಲಿ ಶೀಘ್ರ ಗಣರಾಜ್ಯ ರಚಿಸುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ. ಕರಾಚಿಯಲ್ಲಿ ಬಂದಿಳಿದ ೧೨ ತಾಸುಗಳೊಳಗೆ ಕಾನೂನು ಮಂತ್ರಿ ಮಿ. ಎ. ಕೆ. ಬ್ರೋಹಿರವರನ್ನು ಕರೆಸಿ ಅವರೊಡನೆ ಮಧ್ಯವರ್ತಿ ರಾಜ್ಯಾಂಗ ಘಟನೆಯನ್ನು ತಯಾರಿಸುವುದರ ಕುರಿತು ಸಮಾಲೋಚನೆ ನಡೆಸಿದರು. ಆ ಮೇಲೆ ಪಾಕಿಸ್ಥಾನದ ಗವರ್ನರರನ್ನು ಕಂಡು ಅವರೊಡನೆಯೂ ತಾತ್ಕಾಲಿಕ ಘಟನೆಯ ಕುರಿತು ಚರ್ಚಿಸಿದರು. ಮುಖ್ಯವಾಗಿ ಪಾಕಿಸ್ತಾನದ ಈಗಿನ ಘಟನೆಯಲ್ಲಿ ಈ ಎರಡು ಬದಲಾವಣೆಗಳು ಸದ್ಯದಲ್ಲೇ ಜಾರಿಗೆ ಬರಲಿವೆ. ೧, ನ್ಯಾಯವಿಧಾಯಕ ಸಭೆಗಳ ಮೇಲೆ ಮುಲ್ಲಾರವರ ಮಂಡಲವೆಂಬುದು ಪ್ರತ್ಯೇಕ ಇರಲಾರದು. ೨ ಪಾಕಿಸ್ತಾನ ಸಂಸ್ಥಾನದ ಮುಖ್ಯಾಧಿಕಾರಿ ಮುಸ್ಲೀಮನಾಗಿರತಕ್ಕದ್ದು ಎಂಬ ಶರ್ತ ತೆಗೆದು ಹಾಕಲಾಗುವುದು. ಈಗಿನ ಯೋಜನೆಯಂತೆ ಕಾರ್ಯಕ್ರಮ ಶೀಘ್ರಗತಿಯಲ್ಲಿ ಮುಂದುವರಿದರೆ ಪಾಕಿಸ್ತಾನದಲ್ಲಿ ಗಣರಾಜ್ಯದ ಉದಯವು ಬರುವ ಸ್ವಾತಂತ್ರ್ಯ ದಿನವಂದು (ಆಗಸ್ಟ ೧೪) ಆಗಬಹುದೆಂದು ನಿರೀಕ್ಷಿಸಲಾಗಿದೆ.

ಕರ್ನಾಟಕ ಪ್ರಾಂತಕ್ಕಾಗಿ ಸತ್ಯಾಗ್ರಹ

ಮೈಸೂರು ಮತ್ತು ಕರ್ನಾಟಕದ ಪ್ರಮುಖ ಕಾಂಗ್ರೆಸ್ ಮುಖಂಡರು ಇತ್ತೀಚಿಗೆ ಬೆಂಗಳೂರಿನ 'ಕ್ರಿಸೆಂಟ್ ಹೌಸ್'ದಲ್ಲಿ ಶ್ರೀ. ಕೆ. ಆರ್. ಕಾರಂತ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಕರ್ನಾಟಕ ಪ್ರಾಂತ ನಿರ್ಮಾಣದ ಬಗ್ಗೆ ಕೇಂದ್ರ ಸರಕಾರವು ತನ್ನ ಈಗಿನ ಧೋರಣೆಯನ್ನು ಬದಲಾಯಿಸದಿದ್ದರೆ ಸತ್ಯಾಗ್ರಹ ಹೂಡುವುದೆಂದು ನಿರ್ಣಯಕ್ಕೆ ಬಂದಿರುವರು. ಈ ತಿಂಗಳ ಅಂತ್ಯದಲ್ಲಿ ಸತ್ಯಾಗ್ರಹ ಕಾರ್ಯಕ್ರಮವನ್ನು ಆರಂಭಿಸುವುದೆಂದು ತಾತ್ಕಾಲಿಕವಾಗಿ ನಿರ್ಣಯಿಸಿಯೂ ಆಗಿದೆ. ಈ ಬಗ್ಗೆ ಅವಶ್ಯವಿರುವ ಕಾರ್ಯಕ್ರಮಗಳನ್ನು ನಿರ್ಣಯಿಸುವರೆ ಕ್ರಿಯಾಸಮಿತಿಯು ಶೀಘ್ರ ಹುಬ್ಬಳ್ಳಿಯಲ್ಲಿ ಸಭೆ ಸೇರಲಿದೆ.

ಕೊಡಗು

ತಾರೀಕು ೧೦ ಜುಲೈ ೧೯೫೩ನೇ ಶುಕ್ರವಾರ

ಸರಕಾರಿ ಉದ್ಯೋಗಸ್ಥರು

ಅಖಿಲ ಭಾರತ ಕಾಂಗ್ರೆಸಿನ ಕಾರ್ಯದರ್ಶಿಯವರಾದ ಶ್ರೀ ಎಸ್. ಎನ್. ಅಗರವಾಲರವರು ಒಂದು ಲೇಖನವನ್ನು ಬರೆಯುತ್ತಾ ಸರಕಾರಿ ಅಧಿಕಾರಿಗಳ ದೃಷ್ಟಿ, ಅವರ ಕೆಲಸ ಕಾರ್ಯಗಳ ಪುನರ್ಘಟನೆ ಹೇಗಾಗಬೇಕೆಂಬುದನ್ನು ಸೂಚಿಸಿರುವರು. ಬ್ರಿಟಿಷರ ಆಡಳಿತ ನಡೆಯುತ್ತಿದ್ದ ಕಾಲಕ್ಕೆ ಸರಕಾರಿ ಕೆಲಸಗಾರರಿಗೆ ಇದ್ದ ಕೆಲಸ ಕಾರ್ಯಗಳೆಂದರೆ ಕೇವಲ ಕಂದಾಯ ವಸೂಲ್ಮಾಡುವುದು ಮತ್ತು ದೇಶದಲ್ಲಿ ಶಿಸ್ತು, ನ್ಯಾಯಗಳನ್ನು ಪರಿಪಾಲಿಸುವುದಾಗಿತ್ತು. ಆದ್ದರಿಂದ ಅಂದು ಸರಕಾರಿ ನೌಕರರೆಂದರೆ ಅಧಿಕಾರ ಚಲಾಯಿಸಿ, ಜನರನ್ನು ಗದರಿಸಿ, ವಿರೋಧರನ್ನು ಬಗ್ಗು ಬಡಿಯುವವರ ಗುಂಪಾಗಿತ್ತು. ಆದಿನ ಕಾಲಕ್ಕೆ ಅತೀ ನಿಕೃಷ್ಟ ಸರಕಾರಿ ನೌಕರನೂ ಕೂಡ ಸರಕಾರದ ದೃಷ್ಟಿಯಲ್ಲಿ ಅತ್ಯುಚ್ಚ ನಾಗರಿಕನಿಗಿಂಥಾ ಮಿಗಿಲೆನಿಸಿದ್ದ. ಇದರಿಂದಾಗಿ ಸರಕಾರಿ ಉದ್ಯೋಗಿಗಳೆಂದರೆ ತನಗೆ ವಿರೋಧವಿರುವ ಪ್ರತ್ಯೇಕ ಸಂಗತ, ಸರಕಾರವೆಂದರೆ ತನಗೆ ಸಂಬಂಧವಿಲ್ಲದ ಒಂದು ಸಂಸ್ಥೆ ಎಂಬ ಭಾವನೆ ಜನತೆಯಲ್ಲಿ ಮೂಡಿ ಸರಕಾರಕ್ಕೂ ಜನತೆಗೂ ಸಂಬಂಧ ತಪ್ಪಿಹೋಗಿತ್ತು. ಪರಿಣಾಮವಾಗಿ ಸರಕಾರವು ಹೇಳಿದುದನ್ನು ಮಾಡಿದುದನ್ನು ವಿರೋಧಿಸುವುದೇ ತನ್ನ ಕರ್ತವ್ಯವೆಂದು ಜನತೆ ಭಾವಿಸಿತ್ತು.

ಈಗ ಹಿಂದೂದೇಶಕ್ಕೆ ಸ್ವರಾಜ್ಯದೊರೆತು ಆರು ವರ್ಷಗಳಾದರೂ ಕೂಡ ಇಂದಿನದು ಜನತಾ ಸರಕಾರವೆಂದರೂ ಕೂಡ ಬ್ರಿಟಿಷ್ ಕಾಲದ ಆ ಮನೋವೃತ್ತಿಯೇ ಇಂದಿನ ಹಲವು ಅಧಿಕಾರಿಗಳಲ್ಲಿದ್ದು ಜನತೆಯು ಮತ್ತು ಸರಕಾರದ ಸಂಬಂಧ ಇರಬೇಕಿರುವಷ್ಟು ಅನ್ಯೋನ್ಯವಾಗಿರುವದಿಲ್ಲ. ಈ ವಿಚಾರವಾಗಿ ತಾರೀಕು ೭ರಲ್ಲಿ ಆಗ್ರಾದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸಿನ ಸಭೆಯಲ್ಲಿ ತಮ್ಮೊಂದು ಠರಾವನ್ನು ಮಂಡಿಸುತ್ತಾ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳು ಈ ರೀತಿ ಹೇಳಿರುವರು. "ಸರಕಾರಿ ನೌಕರರು ತಮ್ಮ ಕೆಲಸ ಹಾಗೂ ತಮ್ಮ ದೇಶದಲ್ಲಿ ತನಗಿರುವ ಜವಾಬ್ದಾರಿಯ ಬಗ್ಗೆ ತಮ್ಮ ದೃಷ್ಟಿಯನ್ನು ಬದಲಾಯಿಸಬೇಕು. ಕೆಲವು ಸರಕಾರಿ ನೌಕರರು ಈಗಿನ ಪರಿವರ್ತಿತ ಸಮಯಕ್ಕೆ ಸರಿಯಾಗಿ ಹೊಂದಿಕೊಂಡಿರುವರಾದರೂ ಹಲವರು ತಮ್ಮ ದೃಷ್ಟಿಯನ್ನು ಬದಲಾಯಿಸದೆ ಹಳೇ ಕಾಲದ ರೀತಿಯಲ್ಲಿಯೇ ಅಧಿಕಾರ ನಡೆಸುತ್ತಿರುವರು" ಶಾಸ್ತ್ರಿಗಳ ಈ ಮಾತು ಅಕ್ಷರಶಃ ನಿಜವಾದುದು. ಇದು ಕೊಡಗಿನಲ್ಲೇ ಇರಲೀ ಯಾ ಹೊರಪ್ರಾಂತ್ಯಗಳಲ್ಲೆ ಇರಲೀ ಸರಕಾರಿ ನೌಕರರಲ್ಲಿ ಹಲವರು ತಾವು ಅಧಿಕಾರ ನಡೆಸಲಿರುವವರೆಂಬ ದರ್ಪದಲ್ಲೇ ಇಂದೂ ಇದ್ದಾರೆ. ಜನತೆಯ ನಂಬನ್ನುಣ್ಣುತ್ತಿರುವವರೆಂಬ ಭಾವನೆ ಬಂದಿರುವದಿಲ್ಲ. ಈ ಭಾವನೆ ಬಾರದೆ ಸರಕಾರವು ಜನಾನುರಾಗಿಯಾಗಲಾರದು.

ಮತ್ತೆ ಯೋಗ್ಯ ಆಡಳಿತ ನಿರ್ವಹಣೆಗೆ ಇರುವ ದೊಡ್ಡ ಎಡರನ್ನು ಅಗರ್‌ವಾಲಾರು ಎತ್ತಿ ಹೇಳಿರುವರು. ಆಡಳಿತ ಅಧಿಕಾರ ವಹಿಸಿದ ರಾಜಕೀಯ ಪಕ್ಷದ ಮುಂದಾಳುಗಳು ಆಡಳಿತದಲ್ಲಿ ಆಗಾಗ್ಗೆ ಮಾಡುವ ಹಸ್ತಕ್ಷೇಪ. ರಾಜಕೀಯ ಮುಂದಾಳುಗಳು ತಮ್ಮವರು ಮಂತ್ರಿಗಳಾಗಿರುವರು, ಅಧಿಕಾರದಲ್ಲಿರುವರೆಂದು ಆಡಳಿತದಲ್ಲಿ ಕೈ ಹಾಕಿ ಸರಕಾರಿ ಉದ್ಯೋಗಿಗಳು ನ್ಯಾಯ ಮತ್ತು ದಕ್ಷ ರೀತಿಯಿಂದ ತನ್ನ ಜವಾಬ್ದಾರಿ ನಿರ್ವಹಿಸುವದನ್ನು ದುಃಸ್ಸಾಧ್ಯವಾಗಿ ಮಾಡುತ್ತಾರೆ. ಇದರ ಅನುಭವ ಪ್ರತಿ ಆಡಳಿತದಲ್ಲಿಯೂ ಕಂಡು ಬರುತ್ತಿದೆ. ಈ ರೀತಿ ಹೊರಗಿನ ಶಕ್ತಿಗಳು ಆಡಳಿತದಲ್ಲಿ ಕೈಹಾಕುವುದು ಅಧಿಕಾರಿಗಳ ನೈತಿಕ ಶಿಥಿಲತೆಗೂ, ಕರ್ತವ್ಯ ಶೂನ್ಯತೆಗೂ ಕಾರಣಗಳಾಗಿವೆ. ಇದನ್ನು ಪರಿಹರಿಸಲು ರಾಜಕೀಯ ಮುಂದಾಳುಗಳೂ ತಮ್ಮ ಜವಾಬ್ದಾರಿಯನ್ನರಿತು ವರ್ತಿಸಬೇಕು. ಹಾಗಾದರೆ ಮಾತ್ರ ಆಡಳಿತವು ಜನರಿಗೆ ಹಿತಕರವಾಗಿ, ಜನಾನುರಾಗಿಯಾಗುವುದು.

ವರ್ತಮಾನ.

ತಾ. ೮–೭–೫೩ನೇ ಶನಿವಾರ ಸೋಮವಾರಪೇಟೆ ಹೈಸ್ಕೂಲಿನಲ್ಲಿ ನೂತನ ಮತದಾನ ಪದ್ಧತಿಯಂತೆ ಹೆರಗದ ಯಂ. ತಮ್ಮಯ್ಯನವರನ್ನು ಶಾಲಾ ನಾಯಕನಾಗಿಯೂ, ಎ. ಸಿ. ಬಸಪ್ಪನವರನ್ನು ಉಪ ಶಾಲಾ ನಾಯಕನಾಗಿಯೂ, ಮಿಸ್. ನೆರವಂಡ ಕೆ. ಪೂರ ಇವರನ್ನು ಶಾರದ ಸಮಾಜದ ಸೆಕ್ರೆಟರಿಯಾಗಿಯೂ, ಬಿ. ಎಸ್. ಲಕ್ಷ್ಮಮ್ಮಯ್ಯನವರನ್ನು ಕ್ರೀಡಾರಂಗದ ನಾಯಕನಾಗಿಯೂ, ಮತ್ತು ಕೆ. ಕಮಲಮ್ಮನವರನ್ನು ಹುಡುಗಿಯರ ಕ್ರೀಡಾರಂಗದ ನಾಯಕಿಯಾಗಿಯೂ ಮತ್ತು ಹೈಯರ್ ಎಲಿಮೆಂಟರಿ ಶಾಲೆಗೆ ಬಿ. ಪಿ. ನಾರಾಯಣನವರನ್ನು ಶಾರದ ಸಮಾಜದ ಸೆಕ್ರೆಟರಿಯಾಗಿಯೂ ಆರಿಸಲಾಯಿತು.

ಮಂಗಳೂರಿನಲ್ಲಿ ಸೀನಿಯರ್ ಇಂಟರಿನಲ್ಲಿ ಕಲಿಯುತ್ತಿದ್ದ ಮಡಿಕೇರಿ ಕಾಳತಮನೆ ರಘುನಾಥಶೈಯವರ ಪ್ರಥಮ ಪುತ್ರ ಚಾಮರಾಜ ಶೈಯವರು ಇಂಡಿಯನ್ ನೇವಿಗೆ ಇದೇ ಜೂನ್ ತಿಂಗಳಲ್ಲಿ ಆರಿಸಲ್ಪಟ್ಟಿದ್ದು ಕೊಚ್ಚಿನ್ ನೇವಲ್ ಬೇಸಿಗೆ ಟ್ರೈನಿಂಗಿಗೆ ಹೋಗಿರುವರು. ಮುಂದಿನ ನವಂಬರಿನಲ್ಲಿ ಹೆಚ್ಚಿನ ಟ್ರೈನಿಂಗಿಗೆ ಇಂಗ್ಲೆಂಡಿನ "ಡಿವನ್‌ಶಯರಿ"ಗೆ ಕಳುಹಲ್ಪಡುವರು

ಕೊಡಗು ಕರ್ನಾಟಕ ಸಂಘದ ವಾರ್ಷಿಕ ಮಹಾ ಸಭೆಯು ಜುಲೈ ೫ ರಂದು ಮಡಿಕೇರಿಯಲ್ಲಿ ಶ್ರೀ ಬಿ. ಎಸ್. ಕುಶಾಲಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀಯುತರು ಬರಲು ತಡವಾದುದರಿಂದ ಶ್ರೀ ಸಿ. ಎ. ರಾಮರಾಯರು ತಾತ್ಕಾಲಿಕವಾಗಿ ಅಧ್ಯಕ್ಷತೆ ವಹಿಸಿದ್ದರು. ಮುಂದಿನ ವರ್ಷದಲ್ಲಿ ಕಾರ್ಯ ನಿರ್ವಹಿಸಲು ಇವರುಗಳನ್ನು ಆರಿಸಲಾಯಿತು. ಶ್ರೀ ಬಿ. ಎಸ್. ಕುಶಾಲಪ್ಪನವರು (ಅಧ್ಯಕ್ಷ) ಶ್ರೀ ಸಿ. ಎಂ. ರಾಮರಾಯರು (ಉಪಾಧ್ಯಕ್ಷ) ಶ್ರೀ ಜಿ. ಎಸ್. ಕೇಶವಾಚಾರ್ಯರು ಮತ್ತು ಶ್ರೀ ಜಿ. ಟಿ. ನಾರಾಯಣರಾಯರು (ಸಹಕಾರ್ಯದರ್ಶಿಗಳು). ಶ್ರೀಗಳಾದ ಎಂ. ಎಸ್. ಅನಂತಪದ್ಮನಾಭರಾವ್, ಡಿ. ವೆಂಕೋಬರಾವ್, ಎನ್. ಸುಬ್ರಹ್ಮಣ್ಯಂ, ಡಿ. ಎನ್. ಕೃಷ್ಣಯ್ಯ, ಹೆಚ್. ಎಸ್. ವೆಂಕಟಸುಬ್ಬಯ್ಯ (ಸಮಿತಿಯ ಸದಸ್ಯರು) ಶ್ರೀ ಗೋಪಾಲಕೃಷ್ಣರಾಯರು (ಲೈಬ್ರೇರಿಯನ್).

ಕಾನೂರು ಗ್ರಾಮದ ಶ್ರೀ ಎಚ್. ಎಂ ನಂಜುಂಡಸ್ವಾಮಿಯವರ ವನಗಳ ಜೊತೆಯಲ್ಲಿ ಕಳೆದ ೩ ವಾರಗಳಿಂದ ಒಂದು ಕೋಣ ಸೇರಿಕೊಂಡಿದೆಯೆಂದೂ ವಾರೀಸುದಾರರು ತಕ್ಕ ರುಜುವಾತಿನಿಂದ ಅದನ್ನು ಹೊಡಕೊಂಡು ಹೋಗಬಹುದಾಗಿಯೂ ತಿಳಿಸುತ್ತಾರೆ.

ಮಡಿಕೇರಿಗೆ ಈ ವಾರ ಅಂದರೆ ತಾ. ೩ರಿಂದ ೮ರ ವರೆಗೆ ೨೭ ಇಂಚು ೩೮ ಸೆಂಟು ಮಳೆಯಾಗಿದೆ. ಹೆಚ್ಚು ಮಳೆಯಾದ ತಾ. ೫ರಲ್ಲಿ ೯ ಇಂಚು ೧೭ ಸೆಂಟು ಮಳೆ ಬಿತ್ತು. ಈ ವರೆಗೆ ಅಂದರೆ ತಾ. ೮ಕ್ಕೆ ಮಡಿಕೇರಿಗೆ ಒಟ್ಟು ೬೩ ಇಂಚು ೯೯ ಸೆಂಟು ಮಳೆಯಾಗಿದೆ. ಕಳೆದ ವರ್ಷ ಇದೇ ತಾರೀಕಿಗೆ ೩೨ ಇಂಚು ೩೩ ಸೆಂಟು ಮಳೆಯಾಗಿತ್ತು. ಈ ವರ್ಷ ಈ ವರೆಗೆ ಕಳೆದ ವರ್ಷಕ್ಕಿಂಥಾ ೩೧ ಇಂಚು ೬೬ ಸೆಂಟು ಮಳೆ ಹೆಚ್ಚಾಗಿದೆ.

ಡೆಹ್ರಾಡೂನಿನ ಡಿಫೆನ್ಸ್ ಎಕೆಡೆಮಿ ಜಾಯಿಂಟ್ ಸರ್ವಿಸಸ್ ವಿಂಗಿಗೆ ನಡೆದ ಪ್ರವೇಶ ಪರೀಕ್ಷೆಯಲ್ಲಿ ಶ್ರೀಗಳಾದ ಕೋಟೆರ ಭೀಮಯ್ಯ ಮತ್ತು ಕೊಂಗಾಂಡ ಮುತ್ತಣ್ಣ ಇವರುಗಳು ಉತ್ತೀರ್ಣರಾಗಿರುವರು.

ಮಡಿಕೇರಿಯಲ್ಲಿ ಮೆಕ್‌ಲಿಕ್ ಇಂಜಿನಿಯರಿಂಗ್ ಕಂಪೆನಿಯವರು ನಡೆಸುತ್ತಿದ್ದ ಇಲೆಕ್ಟ್ರಿಕ್ ಕಂಪೆನಿಯನ್ನು ರೂ. ೭೫ ಸಾವಿರಕ್ಕೆ ಪಡೆಕೊಂಡು ಅದನ್ನು ಉತ್ತಮಗೊಳಿಸಲು ಕೇಂದ್ರ ಸರಕಾರವು ಸ್ಥಳೀಯ ಸರಕಾರಕ್ಕೆ ಅನುಮತಿ ಇತ್ತಿರುವದೆಂದು ವರ್ತಮಾನ.

'ಸಿ' ಪ್ರಾಂತಗಳ ಪಕ್ಕಿನ ಮೇರೆ ಅಜಮೀರ್, ಭೋಪಾಲ್, ಡೆಲ್ಲಿ, ಕೊಡಗು, ಹಿಮಾಚಲ ಮತ್ತು ವಿಂದ್ಯಾ ಪ್ರದೇಶಗಳ ಕನ್ಸಾಲಿಡೇಟೆಡ್ ಫಂಡುಗಳಲ್ಲಿ ಯಾವ ಕಾಲಕ್ಕೂ ರೂ. ೫ ಲಕ್ಷಕ್ಕಿಂಥಾ ಕಡಿಮೆ ಶಿಲ್ಕು ಇರಲಿಕ್ಕಾಗದೆಂದು ಒಕ್ಕೂಟದ ಪ್ರೆಸಿಡೆಂಟರು ವಿಧಿಸಿರುವರು.

ಕೊಡಗಿನ ಸ್ಟಾಫ್ ಸಿಲೆಕ್ಷನ್ ಬೋರ್ಡಾಗಿ ಒಂದು ವರ್ಷದ ವರೆಗೆ ಕೊಡಗಿನ ಚೀಫ್ ಸೆಕ್ರೆಟರಿ (ಅಧ್ಯಕ್ಷ), ಶ್ರೀ ಐ. ಸಿ. ಸುಬ್ಬಯ್ಯ, ಶ್ರೀ ಎನ್. ತಿರುಮೂರ್ತಿ ಮತ್ತು ಎಂ. ಎಸ್. ಅನಂತಪದ್ಮನಾಭರಾವ್ (ಸೆಕ್ರೆಟರಿ) ಇವರುಗಳನ್ನು ಆರಿಸಲಾಗಿದೆ.

ಕೊಡಗಿನಲ್ಲಿ ಏಪ್ರಿಲ್ ತಿಂಗಳಲ್ಲಿ ೩೭೭ ಜನನಗಳೂ ೧೩೫ ಮರಣಗಳೂ ಸಂಭವಿಸಿವೆ.

ಫ್ರೇಜರ್‌ಪೇಟೆ ನೋಟಿಫೈಡ್ ಏರಿಯಾದ ಸದಸ್ಯರಾಗಿ ಶ್ರೀಗಳಾದ ಇಸ್ಮೈಲ್ ಲಬ್ಬೆ, ಜವರಪ್ಪ ಪಿರಂಗಾಲ, ಲಕ್ಷ್ಮಣಶೆಟ್ಟಿ, ಡಿ. ಎಸ್. ಮಲ್ಲಪ್ಪ, ಕೆ. ಡಿ. ರಾಜಗೋಪಾಲ ಮತ್ತು ಎಂ. ಆರ್. ವೆಂಕಟರಮಣ ಶೆಟ್ಟಿಯವರುಗಳನ್ನು ೧–೮–೫೩ರಿಂದ ಮೂರು ವರ್ಷಗಳ ವರೆಗೆ ಆರಿಸಲಾಗಿದೆ.

ಸಂಯುಕ್ತ ರಾಷ್ಟ್ರ ಸಂಘದ ಮಕ್ಕಳ ಸಂಸ್ಥೆಯ ಆಶ್ರಯದಲ್ಲಿ ಕೆಲಸ ಮಾಡುತ್ತಿರುವ ಕೊಡಗು ಸಂಸ್ಥಾನದ ಮಕ್ಕಳ ಹಿತ ಬಯಸುವ ಸಮಿತಿಯ ಮೀಟಿಂಗು ತಾ. ೧೭ನೇ ಶುಕ್ರವಾರ ಕೊಡಗು ಎಸೆಂಬ್ಲಿ ಹಾಲ್‌ನಲ್ಲಿ ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ನಡೆಯುವದು.

ತಾ. ೭ರಲ್ಲಿ ಕೊಡಗು ಜಿಲ್ಲಾ ಕಾಂಗ್ರೆಸಿನ ಸಭೆಯು ಶ್ರೀ ಎಸ್. ಸೋಮಣ್ಣನವರ ಅಧ್ಯಕ್ಷತೆಯಲ್ಲಿ ನಡೆದು ಶ್ರೀ ಎನ್. ಎಸ್. ಕಿಲ್ಲೆಯವರ ನಿಧನಕ್ಕೆ ಸಂತಾಪ ಸೂಚಿಸುವ ಠರಾವು ಮಾಡಿದುದಲ್ಲದೆ ಕಾಂಗ್ರೆಸ್ ಆಫೀಸಿನಲ್ಲಿ ಅವರದೊಂದು ಛಾಯಾಚಿತ್ರವನ್ನಿಡಲು ನಿರ್ಣಯಿಸಿರುವರು.

ತಾ. ೨೯ರಲ್ಲಿ ಬೇಂಗೂರು ಗ್ರಾಮಸ್ಥರು ಒಂದು ಸಭೆ ಸೇರಿ ಸಹಕಾರಿ ಇನ್ಸ್‌ಪೆಕ್ಟರಾಗಿ ನಿವೃತ್ತರಾಗಿರುವ ಶ್ರೀ ಪಟ್ಟಮಾಡ ಪೊನ್ನಪ್ಪನವರು ಗ್ರಾಮಕ್ಕೂ, ನಾಡಿಗೂ ಮಾಡಿರುವ ಮತ್ತು ಮಾಡುತ್ತಿರುವ ಅಮೂಲ್ಯ ಸೇವೆಗಾಗಿ ಅವರ ಹೆಸರಿನಲ್ಲಿ ಕಡನಾಲಪ್ಪ ದೇವಸ್ಥಾನದಲ್ಲಿ ಪೂಜೆ ನಡೆಸಿ ಅವರನ್ನು ಒಡ್ಡೋಲಗ, ಪುಷ್ಪಹಾರ, ಭೋಜನಕೂಟದಿಂದ ಸತ್ಕರಿಸಿದರು.

ರುದ್ರಗುಪ್ಪೆ ಗ್ರಾಮದ ಬಲ್ಲಚಂಡ ಕುಟುಂಬದ ಪಟ್ಟೆದಾರ ಶ್ರೀ ಬಿದ್ದಪ್ಪನವರು ತಾ. ೩ ರಲ್ಲಿ ತಮ್ಮ ೮೫ನೇ ವಯಸ್ಸಿನಲ್ಲಿ ಶಿವಾಧೀನರಾದರು.

ಮೈಸೂರು ವಿಶ್ವವಿದ್ಯಾಲಯದ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಶ್ರೀಗಳಾದ ಮುರುವಂಡ ಎ. ಚಿಮ್ಮಿ, ಕೊರವಂಡ ಮುತ್ತಣ್ಣ ಮತ್ತು ಕೊಂಗಾಂಡ ಮಿಸ್ ಮೀನಾ ಚಿಟ್ಟಿಯಣ್ಣನವರು ತೇರ್ಗಡೆಯಾಗಿರುವರು.

ಕೊಡಗಿನಲ್ಲಿ ಈ ವಾರ ಮಳೆಯಿಂದಾಗಿ ವಿಪರೀತ ಹಾನಿಯಾಗಿದೆ. ತಾ. ೫ ರಲ್ಲಿ ಭಾಗಮಂಡಲಕ್ಕೆ ೧೭ ಇಂಚೂ, ನಾಪ್ಪೋಕ್ಲಿಗೆ ೧೪ ಇಂಚೂ, ವೀರಾಜಪೇಟೆಗೆ ೧೨ ಇಂಚೂ, ಈ ರೀತಿ ಮಳೆ ಬಿದ್ದಿದೆ. ಈ ವಿಪರೀತ ಮಳೆಯಿಂದಾಗಿ ಭಾಗಮಂಡಲದ ಸಂಗಮದಲ್ಲಿ ಕಾವೇರಿ ನದಿಯ ನೀರು ಏರಿ ದೇವಸ್ಥಾನದ ಒಳನುಗ್ಗಿತ್ತೆಂದೂ, ಭಾಗಮಂಡಲ ಟೌನಿಗೂ ನೀರು ನುಗ್ಗಿತ್ತೆಂದೂ, ಕಾವೇರಿ ದೇವಸ್ಥಾನದ ಪೌಳಿಯ ನಾಲ್ಕು ಕೋಡೆಗಳು ಬಿದ್ದು ಹೋಗಿರುವದಾಗಿಯೂ ವರ್ತಮಾನ. ಅನೇಕ ಕಡೆ ಶಾಲಾ ಕಟ್ಟಡಗಳು, ಸೇತುವೆಗಳು, ಮೈನರ್ ಇರಿಗೇಶನ್ ಇಲಾಖೆಯವರು ಕಟ್ಟಿಸಿದ ಕಟ್ಟೆಗಳು ನಿರ್ನಾಮವಾಗಿವೆ. ಹೊಳೆಗಳ ಅನಾಹುತದಿಂದಲೂ, ಕೆರೆ ತೋಡುಗಳ ಪ್ರವಾಹದಿಂದಲೂ ರೈತರಿಗೆ ವಿಪರೀತ ನಷ್ಟವಾಗಿದೆ. ಕೊಡಗು ಸರಕಾರವು ಇಂಥಾ ನಷ್ಟ ಹೊಂದಿದವರಿಗೆ ಟಕಾವಿ ಸಾಲ ಕೊಡುವ ಏರ್ಪಾಡು ಮಾಡಿದೆಯೆಂದು ವರ್ತಮಾನ.

✽✽ ಓದುಗರ ಓಲೆಗಳು. ✽✽

ಜಾತೀಯವಾದಕ್ಕೆ ಬೆಂಬಲ ?

ಕೊಡಗು ಸರಕಾರಿ ಕಾಲೇಜಿನ ವಿದ್ಯಾರ್ಥಿಗಳಿಗೆ ನಿವಾಸಗ್ರಹದ ಏರ್ಪಾಡು ಏನೂ ಚೆನ್ನಾಗಿಲ್ಲ. ಹಿಂದಿನ ಪೋಲೀಸ್ ಟ್ರೈನಿಂಗ್ ಶಾಲೆಯನ್ನು ಈಗ ನಿವಾಸಗ್ರಹವಾಗಿ ಮಾಡಿರುವರು. ಅದರಲ್ಲಿ ಹೆಚ್ಚೆಂದರೆ ೪೦ ವಿದ್ಯಾರ್ಥಿಗಳನ್ನು ತುಂಬಬಹುದು. ಅದೂ ಕೂಡ ಆರೋಗ್ಯಕರ ಕಟ್ಟಡವಲ್ಲ. ಮಳೆಗಾಲಗಳ ಈ ಸಮಯದಲ್ಲಿ ವಿದ್ಯಾರ್ಥಿಗಳಿಗೆ ವಿಪರೀತ ತೊಂದರೆ ಇದೆ. ಉಳಿದ ವಿದ್ಯಾರ್ಥಿಗಳು ಏನುಮಾಡಬೇಕು? ಕಳೆದ ವಾರದ ಕೊಡಗು ಪತ್ರಿಕೆಯಲ್ಲಿ ಪತ್ರಗಾರರೊಬ್ಬರು ಗೌಡ ಬೋರ್ಡಿಂಗಿನ ವಿದ್ಯಾರ್ಥಿಗಳನ್ನು ಕೆಳಗಿನ ಬೋರ್ಡಿಂಗಿಗೆ ವರ್ಗಾಯಿಸಿ ಅದನ್ನು ಕಾಲೇಜು ವಿದ್ಯಾರ್ಥಿಗಳಿಗೆ ಬೋರ್ಡಿಂಗ್ ಆಗಿ ಮಾಡಬೇಕೆಂಬ ಅತ್ಯುತ್ತಮ ಸೂಚನೆಯನ್ನು ಕೊಟ್ಟಿದ್ದರು. ಆದರೆ ಬಾಯಲ್ಲಿ ಜಾತ್ಯಾತೀತ ಸರಕಾರವೆಂದು ಕೂಗಿಕೊಂಡರೂ ಜಾತೀಯವಾದದ ಅಭಿಪ್ರಾಯದ ಮೇಲೆ ನಿಂತಿರುವವರಿಗೆ ಹಾಗೆ ಮಾಡುವ ಎದೆಗಾರಿಕೆ ಎಲ್ಲಿದೆ? ಬದಲು ಕಾಲೇಜು ವಿದ್ಯಾರ್ಥಿಗಳು ಹೈಸ್ಕೂಲು ಲೋವರ್ ಹಾಸ್ಟೆಲಿನಲ್ಲಿ ಇರಬಹುದೆಂದು ಏರ್ಪಡಿಸಿ ಈಗಾಗಲೇ ಸುಮಾರು ಐವತ್ತು ವಿದ್ಯಾರ್ಥಿಗಳು ಅಲ್ಲಿ ಸೇರಿರುವರು

ಮೇಲಿನ ಬೋರ್ಡಿಂಗಿನಲ್ಲಿ ಕೇವಲ ೧೦ ಜನ ವಿದ್ಯಾರ್ಥಿಗಳಿರುವದಾಗಿದೆ. ಈ ಬೋರ್ಡಿಂಗು ಗೌಡ ಕೋಮಿನವರಿಗೆ ಮೀಸಲಾದುದು. ಹಿಂದಿನಿಂದಲೂ ಅದು ಹಾಗೆಯೇ ನಡೆದುಬಂದಿದೆ ಕೆಳಗಿನ ಬೋರ್ಡಿಂಗಿನಲ್ಲಿ ಹೈಸ್ಕೂಲಿನ ಸುಮಾರು ೫೦ ವಿದ್ಯಾರ್ಥಿಗಳಿದ್ದಾರೆ. ಗೌಡ ಬೋರ್ಡಿಂಗಿನಲ್ಲಿರುವ ಹತ್ತು ಹೈಸ್ಕೂಲು ವಿದ್ಯಾರ್ಥಿಗಳನ್ನು ಕೆಳಗಿನ ಬೋರ್ಡಿಂಗಿಗೆ ವರ್ಗಾಯಿಸಿ ಹೈಸ್ಕೂಲು ವಿದ್ಯಾರ್ಥಿಗಳು ಒಂದೆಡೆ ಇರುವಂತೆ ಮಾಡಿ ಕಾಲೇಜು ವಿದ್ಯಾರ್ಥಿಗಳನ್ನು ಪ್ರತ್ಯೇಕವಾಗಿರುವ ಮೇಲಿನ ಬೋರ್ಡಿಂಗಿಗೆ ಕಳುಹಿಸಿದ್ದರೆ ಎಲ್ಲವೂ ಸರಿಯಾಗುತ್ತಿತ್ತು. ಹೈಸ್ಕೂಲು ಮತ್ತು ಕಾಲೇಜು ವಿದ್ಯಾರ್ಥಿಗಳನ್ನು ಜೊತೆಯಲ್ಲಿ ಒಂದೇ ಬೋರ್ಡಿಂಗಿನಲ್ಲಿಡುವದು ಎಂದೂ ಸರಿಯಲ್ಲ. ಇದರಿಂದ ಇಬ್ಬರಿಗೂ ಹಾನಿ ಇದೆ. ಆದರೆ ಜಾತೀಯವಾದ, ಒಳಗೊಳಗಿನ ಸಂಕುಚಿತಗಳಿಗೆ ಬೆಲೆ ಕೊಡಬೇಕಾಗಿರುವ ಈ ಕಾಲದಲ್ಲಿ ವಿಶಾಲ ದೃಷ್ಟಿಯಿಂದ ವರ್ತಿಸುವದು ಸಾಧ್ಯವಿಲ್ಲ. ಆದ್ದರಿಂದ ಕೆಳಗಿನ ಬೋರ್ಡಿಂಗಿನಲ್ಲಿರುವ ೫೦ ವಿದ್ಯಾರ್ಥಿಗಳಿಗೆ ತೊಂದರೆ ಆದರೂ ಚಿಂತೆ ಇಲ್ಲ ಅಂಥಾ ಮೇಲಿನ ಕೋಮುವಾರು ತಳಹದಿಯಲ್ಲಿ ನಿಂತಿರುವ ಬೋರ್ಡಿಂಗಿನ ಹತ್ತು ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದೆಂದು ಭಾವಿಸಿದಂತಿದೆ. ಇನ್ನಾದರೂ ಕಾಲ ವಿಳಂಬವಾಗಿಲ್ಲ. ನಮ್ಮ ಸರಕಾರವು ಮೇಲಿನ ಬೋರ್ಡಿಂಗಿನ ಹತ್ತು ವಿದ್ಯಾರ್ಥಿಗಳನ್ನು ಕೆಳಗಿನ ಬೋರ್ಡಿಂಗಿಗೆ ವರ್ಗಾಯಿಸಿ ಅಲ್ಲಿ ಕಾಲೇಜು ವಿದ್ಯಾರ್ಥಿಗಳು ಹೈಸ್ಕೂಲಿನ ಸಂಬಂಧವಿಲ್ಲದೆ ಪ್ರತ್ಯೇಕ ಇರುವಂತೆ ಮಾಡುವರೆ?

ಅಪ್ಪಯ್ಯ.

ವಿದ್ಯಾಧಿಕಾರಿಗಳ ದಬ್ಬಾಳಿಕೆ.

ವಿದ್ಯಾಧಿಕಾರಿಗಳು ಅಧ್ಯಾಪಕರನ್ನು ತಮ್ಮ ಇಷ್ಟ ಬಂದಂತೆ ವರ್ಗಾಯಿಸುವುದು ನ್ಯಾಯವೇ? ಯಾವುದಾದರೊಂದು ಉದ್ಯೋಗದಲ್ಲಿ ಮಳೆಗಾಲದಲ್ಲಿ ವರ್ಗಾಯಿಸುವ ರೂಢಿ ಇದೆಯೇ? ವರ್ಗಾಯಿಸುವ ಹಕ್ಕು ಉತ್ತರ ಕೊಡಗಿನ ಡೆಪ್ಯುಟಿ ಇನ್ಸ್‌ಪೆಕ್ಟರಿಗೆ ಮೀಸಲಿರುವಂತೆ ತೋರುತ್ತಿದೆ. ವಿದ್ಯಾಧಿಕಾರಿಗಳ ಬಲಗೈಯಾಗಿ ಅವರಿರುವರು. ದಕ್ಷಿಣ ಕೊಡಗಿನ ಡೆಪ್ಯುಟಿ ಇನ್ಸ್‌ಪೆಕ್ಟರು ಈ ಹಕ್ಕಿಗೆ ಅಯೋಗ್ಯರೇ? ಇವರಿಗೆ ಅವರಷ್ಟೇ ಅಧಿಕಾರವಿಲ್ಲವೇ? ಇತರ ವರ್ತನೆಯಿಂದ ಅಧ್ಯಾಪಕ ವರ್ಗಕ್ಕೆ ಸಾಕೋ ಸಾಕಾಗಿ ಹೋಗಿದೆ. ವಿದ್ಯಾಧಿಕಾರಿಗಳು ಇರುವದು ನಿಜ. ಆದರೆ ಬೇಕಾದವರಿಗೆ ಕೇಳಿದ ಸ್ಥಳದಲ್ಲಿಯೂ ಬೇಡದವರಿಗೆ ಕೊಡಗಿನ ಗಡಿಪ್ರಾಂತದಲ್ಲಿಯೂ ಕೆಲಸ ಕೊಡುವದಾದರೆ ಅತ್ತ ಮಗುವಿಗೆ ಮಾತ್ರ ಹಾಲೆಂಬ ನಾಣ್ಣುಡಿಯಂತಾಗದೇ? ಇದು ಪ್ರಜಾ ಸರಕಾರದ ನೀತಿಗೆ ಸರಿಯೇ? ಈ ರೀತಿ ವರ್ಗಮಾಡುವುದು ಅಧ್ಯಾಪಕರು ಎಂದಾದರೂ ಮಕ್ಕಳ ಅಭಿವೃದ್ಧಿಗಾಗಿ ಪಾಟುಪಡಬಲ್ಲರೆ? ಅಲ್ಲದೆ ಇಂತಹ ಮಳೆಗಾಲದಲ್ಲಿ ಯಾರಾದರೂ ಸಂಸಾರ ಹಾಗೂ ತನ್ನ ಸಾಮಾನುಗಳನ್ನು ಬೇರೆ ಕಡೆಗೆ ಸಾಗಿಸಬಲ್ಲರೇ? ಒ ಕಾರಣ ಅಧ್ಯಾಪಕರು ರಜೆ ತೆಗೆಯುವುದರಲ್ಲಿ ಅನ್ಯಾಯವಿದೆಯೇ? ಇದರಿಂದ ಮಕ್ಕಳ ಅಭಿವೃದ್ಧಿ ಯಾಗುವುದೇ? ಈ ರೀತಿ ವರ್ಗ ಮಾಡುತ್ತಿರುವವರನ್ನು ಕೇಳಲು ಮೇಲಧಿಕಾರಿಗಳಿಲ್ಲವೇ? ಈ ಮಳೆಗಾಲದಲ್ಲಿ ಆರ್ಡರ್ ಮಾಡುತ್ತಿರುವವರಲ್ಲೊಬ್ಬರನ್ನು ಅಂಡಮಾನಿಗೆ ವರ್ಗ ಮಾಡಿದರೆ ಅವರಿಗೆ ಹೇಗಾಗಬಹುದು? ಅಧ್ಯಾಪಕರಿಗೆ ಈ ರೀತಿ ಉಪದ್ರವವಾಗದಂತೆ ವಿದ್ಯಾಮಂತ್ರಿಗಳು ಚೆನ್ನಾಗಿ ಪರಿಶೀಲಿಸಿ ಅಧ್ಯಾಪಕರ ಹಾಗೂ ಮಕ್ಕಳ ಅಭಿವೃದ್ಧಿಯನ್ನು ಬಯಸಲಿ.

ಓ. ಎಲ್. ಕೆ.

ನಾಡುಗುಂಡಿ ಸೇತುವೆ

ತಾರೀಕು ೧೩-೬-೧೯೫೩ರ ಪತ್ರಿಕೆಯಲ್ಲಿ ನಾಡುಗುಂಡಿ ಸೇತುವೆ ಎಂದು ಒಂದು ಬಾತ್ಮಿಯನ್ನು ನೋಡಿದೆನು. ಆದರೆ ಆ ಬಾತ್ಮಿಯಲ್ಲಿ ನಿಜಾಂಶ ಬಿಟ್ಟು ಹೋದುದರಿಂದ ದೇಶದ ಮುಂದಿಡುವುದು ನನ್ನ ಕರ್ತವ್ಯವಾಗಿದೆ. ಈ ಸೇತುವೆಯು ಕುತ್ತುನಾಡಿಗೆ ಸಂಬಂಧಪಟ್ಟದ್ದಾಗಿದೆ. ಕುತ್ತುನಾಡಿನ ಸುತ್ತಲೂ ಹೊಳೆ ಸುತ್ತಿಕೊಂಡು ಮಳೆಗಾಲದಲ್ಲಿ ಜನರು ಪೇಟೆ ಕೋಟೆಗಳಿಗೆ ತಿರುಗಾಡಲು ತೊಂದರೆ ಇರುವುದು ದೇಶದ ಮುಂದಾಳುಗಳಿಗೆ ಚೆನ್ನಾಗಿ ಗೊತ್ತಿರುವ ಸಂಗತಿಯಾಗಿದೆ. ೧೯೩೬ನೇ ಇಸವಿಯಲ್ಲೇ ಕೇಂದರೆ ಕಮ ಎಂಬ ಸ್ಥಳಕ್ಕಾಗಿ ಲೋಕಲ್‌ಫಂಡ್ ರೋಡು ಕೈಮುಡಿಕೆಬಾಣೆಗಾಗಿ ಹಾತೂರು, ಪೊನ್ನಂಪೇಟೆ, ಗೋಣಿಕೊಪ್ಪಲುಗಳಿಗೆ ಹೋಗಲು ಸುಲಭವಾಗುವಂತೆ ಈ ಸೇತುವೆ ಮಾಡಿಸಿ ಕೊಡಬೇಕೆಂದು ನಾಡಿನವರ ಹೋರಾಟದಂತೆ ಸರಕಾರದವರು ಅರ್ಧ ಹಣ ಹಾಕುವಂತೆಯೂ ನಾಡಿನವರು ಅರ್ಧ ಹಣ ಹಾಕುವಂತೆಯೂ ಒಪ್ಪಿಗೆಯಾಗಿತ್ತು. ಅವರನಂತರ ಕೊಂಗಣಗ್ರಾಮದ ಕಡೇನೂರ ಮನೆಯವರು ಅವರಿಗೆ ಹತ್ತಿರ ಆಗುವ ರೀತಿಯಲ್ಲಿ ನಾಡುಗುಂಡಿಗಾಗಿ ಪಾಲ ಕಟ್ಟಬೇಕೆಂದು ತಕರಾರು ಮಾಡಿದರು. ಇಡೀ ನಾಡಿಗೆ ಅನುಕೂಲ ಆಗುವ ರೀತಿ ರಸ್ತೆಗಾಗಿ ಪಾಲ ಆಗಬೇಕೆಂದು ನಾಡಿನವರು ಹೇಳಿದರು. ಹೇಗೂ ತಕರಾರಿನಲ್ಲೇ ಒಂದು ವರ್ಷ ಕಳೆಯಿತು. ಯುದ್ಧವು ಶುರುವಾಯಿತು. ಪಾಲ ಕಟ್ಟುವುದು ನಿಂತು ಹೋಯಿತು. ಈಚೆಗೆ ೧೯೪೯ನೇ ಇಸವಿಯಲ್ಲಿ ನಾಡಿನವರೇ ಕಲ್ಲಿನ ಕಂಬ ಮಾಡಿ ಪಾಲ ಹಾಕಿಸುವಂತೆ ಕಲ್ಲು ಒಡೆಸಿ ಹಾಕಿದ ಕಲ್ಲು ಈಗಲೂ ಅಲ್ಲೇ ಇದೆ. ಆ ಸ್ಟರಲ್ಲಿ ನಮ್ಮ ಎಲೆಂಬಿ ಚುನಾವಣೆ ಬಂದು ನಮ್ಮ ಪ್ರಜಾಪ್ರಭುತ್ವ ಸರಕಾರ ಬರುತ್ತಿ ಸರಕಾರದವರೇ ಪಾಲ ಮಾಡಿ ಕೊಡುತ್ತಾರೆಂದು ಕಾದಿದ್ದೆವು. ಚುನಾವಣೆ ಮುಗಿಯಿತು. ಚುನಾವಣೆಯಲ್ಲಿ ಕಾಂಗ್ರೆಸ್ ಪಾರ್ಟಿ ಪ್ರತ್ಯೇಕ ಪಾರ್ಟಿಗಳ ಸೃಷ್ಟಿ ನಡೆಯಿತು. ಪ್ರತ್ಯೇಕ ಪಾರ್ಟಿಯಲ್ಲಿ ಕಡೇನೂರ ಬೆಳ್ಯಪ್ಪನವರು ನಿಲ್ಲಬೇಕೆಂದು ಆಶಿಸಿದ್ದರು. ಕಾರಣಾಂತರದಿಂದ ಅವರನ್ನು ನಿಲ್ಲಿಸಲಿಲ್ಲ. ಕಾಂಗ್ರೆಸಿಗೆ ದೇಶದಲ್ಲಿ ಬಹುಮತ ದೊರೆಯಿತು. ಮಂತ್ರಿಮಂಡಳ ಸ್ಥಾಪಿತವಾಯಿತು. ಮಂತ್ರಿಗಳನ್ನು ಕರೆಸಿ ಕಡೇನೂರ ಕುಟುಂಬದವರು ಮೈದಾನದಲ್ಲಿ ಊಟ ಕೊಟ್ಟರು. ಅಲ್ಲಿ ಅವರಿಗೆ ಅನುಕೂಲವಾಗುವ ನಾಡುಗುಂಡಿಗಾಗಿ ಕಾಂಕ್ರಿಟ್ ಪಾಲ ಹಾಕುವಂತೆ ಭರವಸೆ ತೆಗೆದುಕೊಂಡರು. ಒಂದೇ ತಿಂಗಳಲ್ಲಿ ಪಾಲ ಆಗಿಯೇ ಹೋಯ್ತು. ಪಾಲ ನಾಡುಗುಂಡಿಗಾಗಿ ಕಟ್ಟಲಿಕ್ಕೆ ಭರವಸೆ ಮಂತ್ರಿಗಳು ಕೊಟ್ಟಿದ್ದಾರೆ ಎಂದು ತಿಳಿದ ಕೂಡಲೇ ನಾಡಿನ ಜನರು ಮುಖ್ಯ ಮಂತ್ರಿ ಪೂಣಚ್ಚನವರ ಮನೆಗೆ ಹೋಗಿ ನಾಡುಗುಂಡಿಗಾಗಿ ಪಾಲ ಹಾಕಿದರೆ ಅಲ್ಲಿಗೆ ಹೋಗಲು ಬೇರೆ ದಾರಿ ಇಲ್ಲ. ಸನ್ನಾ ತೆವರಿಗಾಗಿ ಗದ್ದೆಗಾಗಿ ಹೋಗಬೇಕು ಗೋಣಿಕೊಪ್ಪಲಿನಿಂದ ವನಕರ ತರಲಿಕ್ಕೆ ಬಹಳ ತೊಂದರೆಯಾಗುತ್ತೆ. ಇಡೀ ನಾಡಿನ ಜನರಿಗೇ ತೊಂದರೆಯಾಗುತ್ತೆ. ರಸ್ತೆಗಾಗಿ ಮಕ್ಕಳು ಶಾಲೆಗೆ ಹೋಗಲು ಬಹಳ ಅನುಕೂಲವಾಗಿದೆ. ಹಾತೂರು ಹೈಸ್ಕೂಲಿಗೆ ರಸ್ತೆಗಾಗಿ ಪಾಲ ಹಾಕಿದರೆ ಕುತ್ತುನಾಡಿನ ಜನರಿಗೆ ಅನುಕೂಲ ಅಲ್ಲದೆ ಬಾಡಗ ಗ್ರಾಮಸ್ಥರ ಮಕ್ಕಳು ಹಾತೂರು ಶಾಲೆಗೆ ಹೋಗಲು ಅನುಕೂಲವಿದೆ ಎಂದು ಬೇಡಿಕೊಂಡರು. ಆ ಬೇಡಿಕೆ ಪ್ರಯೋಜನವಾಗಲಿಲ್ಲ. ನಾಡುಗುಂಡಿಗಾಗಿ ಒಂದು ತಿಂಗಳಲ್ಲಿಯೇ ಪಾಲ ಹಾಕಿಸಿಬಿಟ್ಟರು. ಆ ಪಾಲವನ್ನು ತೆರೆಯಲಿಕ್ಕೆ ಜನರಲ್ ಕಾರ್ಯಪ್ಪನವರು ಒಪ್ಪಿಕೊಂಡದ್ದಕ್ಕೆ ಸಂತೋಷಪಡಬೇಕಾಗಿದೆ. ನಾಡಿನ ಮುಖ್ಯಪಟ್ಟ ಜನರಿಗೆ ಯಾರಿಗೂ ತಿಳಿಯದಂತೆ ಉಪಾಧ್ಯಾಯರಾದಂಥವರೊಬ್ಬರ ಮೂಲಕ ಈ ಏರ್ಪಾಡು ಮಾಡಿದರು. ಎಲ್ಲರಿಗೂ ತಿಳಿಸಿದ್ದ ಪಕ್ಷದಲ್ಲಿ ಜನರಲ್ ಬರುತ್ತಾರೆಂದು ಗೊತ್ತಾಗಿದ್ದರೆ ಅವರ ದರ್ಶನಕ್ಕೆಂದು ಕಾದು ನಿಂತ ನಾಡಿನವರು ಸಹಕರಿಸದೆ ಎಂದೂ ಹಿಂದಕ್ಕೆ ನಿಲ್ಲುತ್ತಿರಲಿಲ್ಲ. ಜ.ಕಾರ್ಯಪ್ಪನವರಲ್ಲಿ ಅಧ್ಯಾಪಕ ಶ್ರೀ ಪೂವಯ್ಯನವರು ಪ್ರತ್ಯೇಕ ಪಕ್ಷದವರು ಬರಲಿಲ್ಲನೆಂದು ಒಡಕು ಹುಟ್ಟಿಸುವ ಸುಳ್ಳು ವರ್ತಮಾನ ಕೊಟ್ಟದ್ದಕ್ಕೆ ವ್ಯಸನ ಪಡುತ್ತೇನೆ. ಇನ್ನಾದರೂ ಕೇಂದರೆ ಕಮವಿಗಾಗಿ ಒಂದು ಸೇತುವೆ ಕಟ್ಟಿಸಿ ಇಡೀ ನಾಡಿಗೆ ಅನುಕೂಲ ಮಾಡಿಕೊಡಬೇಕಾಗಿ ಮಂತ್ರಿಮಂಡಲವನ್ನು ಈ ನಾಡಿನವರು ಪ್ರಾರ್ಥಿಸುವದಾಗಿದೆ.

ಕುತ್ತುನಾಡಿನವ.

ಜಪಾನಿನ ವ್ಯವಸಾಯ ಕ್ರಮ.

ಜಪಾನಿನ ವ್ಯವಸಾಯ ಕ್ರಮವು ಇಂದಿಯೂ ದೇಶದ ಅನೇಕ ಸ್ಥಳಗಳಿಗೆ ಪ್ರಾಚೀನ ತರದ ವ್ಯವಸಾಯ ಕ್ರಮವಾದರೂ, ಕೊಡಗಿನ ಮಟ್ಟಿಗೆ ಇದು ಪ್ರಾಚೀನ ತರವಲ್ಲ. ಜಪಾನಿನ ಮುಖ್ಯಾಂಶ ಕ್ರಮಗಳೆಲ್ಲವೂ ಕೊಡಗಿನಲ್ಲಿ ತಕ್ಕ ಮಟ್ಟಿಗೆ ರೂಢಿಯಲ್ಲಿಯೇ ಇದೆ. ಸರಳವಾಗಿ ಹೇಳುವದಾದರೆ, 'ಹೆಚ್ಚಿನ ಆರಂಭ ಗೊಬ್ಬರದಲ್ಲಿ' ಎಂಬಂತೆ, ಈ ವ್ಯವಸಾಯ ಕ್ರಮಕ್ಕೆ ಹೆಚ್ಚಾಗಿ ಬೇಕಾದದ್ದು ಗೊಬ್ಬರವೇ!

ಆದುದರಿಂದ ಯಾವ ಬೆಳೆ ಬೆಳೆಯುವ ಕ್ರಮಕ್ಕೂ ಪ್ರಾಮುಖ್ಯವಾದದ್ದು ನೀರು ಮತ್ತು ಗೊಬ್ಬರ. ಕೊಡಗಿನ ಮಟ್ಟಿಗೆ ಗೊಬ್ಬರದ ಪ್ರಶ್ನೆಗೆ ಪ್ರಾಮುಖ್ಯತೆಯನ್ನು ಕೊಡಬೇಕಿದೆ. ಕೊಡಗಿನ ಗದ್ದೆಗಳಿಗೆ ಬೇಕಾದ ಮುಖ್ಯವಾದ ದನಗಳ ಗೊಬ್ಬರದ ದೊರೆಯುವಿಕೆಯು ಬಹು ಕಮ್ಮಿ. ರಸಾಯನ (Artificial) ಗೊಬ್ಬರದಲ್ಲಿ ಜನರಿಗೆ ವಿಶ್ವಾಸವು ಇನ್ನೂ ಬಂದಿರುವದಿಲ್ಲ.

ದನದ ಗೊಬ್ಬರ ದೊರಕದಲ್ಲಿ ಹಸಿರು ಸೊಪ್ಪನ್ನು (Green manure) ಒಂದು ಎಕ್ರೆಗೆ ನಾಲ್ಕು ಗಾಡಿಯಷ್ಟು ಹಾಕಿದರೆ ಬೆಳೆಯು ಹೆಚ್ಚಾಗುವದೆಂದು ಅಭಿಪ್ರಾಯ ಪಡುವವರಿದ್ದಾರೆ. ಆದುದರಿಂದ ಕೊಡಗಿನ ವ್ಯವಸಾಯ ಇಲಾಖೆಯವರು ಹಸಿರುಸೊಪ್ಪಿನ ಬೆಳವಣಿಗೆಗೆ ಹೆಚ್ಚಿನ ಪ್ರೋತ್ಸಾಹ ಕೊಡುವದರಿಂದ ಪ್ರಯೋಜನಕಾರಿಯಾದೀತು. ಗದ್ದೆಗಳ ಪಕ್ಕದ ಬದುಗಳಲ್ಲಿ ಯಥೇಷ್ಟವಾಗಿ ನೀಲಿ ಮರ, ಯಾ ಗೊಬ್ಬರ ಸೊಪ್ಪಿನ ಮರವನ್ನು ಬೇಕಷ್ಟು ನೆಡಬೇಕು. ಈ ಮರವು ೧೦ ವರ್ಷಗಳ ಬೆಳವಣಿಗೆಯಲ್ಲಿ ಕಮ್ಮಿ ಅರ್ಧ ಗಾಡಿ ಸೊಪ್ಪನ್ನು ಕೊಡಬಲ್ಲದು ಮತ್ತು ಇದರ ಸೊಪ್ಪು ಬಹಳ ಪುಂಡವಾಗುತ್ತೆ.

ಮತ್ತು ಜೂನ್ ತಾ. ೨೧ರ ಪತ್ರಿಕೆಯಲ್ಲಿ ಶ್ರೀ ಕೆ. ವೆಂಕಟರಮಣರು Glyricdia Maculeta ಎಂಬ

ಹು ಸುಲಭದಲ್ಲಿಯೇ ಗಸ್ಸಿಯ ತಿನರಿಗಳಲ್ಲಿಯೂ ಕೂಡ ಬೆಳೆಸಬಹುದಾದಂತ ಒಂದು Green Manure Tree ಯು ಗೊಬ್ಬರಕ್ಕೆ ಯೋಗ್ಯವಾದ ಮರವೆಂದು ಸೂಚಿಸಿರುತ್ತಾರೆ. ಇಲಾಖೆಯವರು ಇದನ್ನು ಪರಿಶೀಲಿಸುವದು ಉತ್ತಮ.

ಕೆ. ಎಂ. ಪೂವಯ್ಯ.

ಬಾಣೆ ಕಂದಾಯ.

ಪೂರ್ವಕಾಲದ ತುಂಡು ಪಾಳೆಯಗಾರರ ಕಾಲದಲ್ಲಾಗಲೀ, ಲಿಂಗಾಯಿತ ಅರಸರ ಕಾಲದಲ್ಲಾಗಲೀ ನಂತರ ಬ್ರಿಟಿಷರ ಕಾಲದಲ್ಲಾಗಲೀ ಬಾಣೆ ಕಂದಾಯ ವಿರಲಿಲ್ಲವೆಂದು ನಮಗೆಲ್ಲರಿಗೂ ಗೊತ್ತು. ಇತ್ತಲಾಗಿ ನಮ್ಮ ಕಾಲಿನಲ್ಲಿ ನಾವು ನಿಂತು ನಮ್ಮ ಕೋರಿಕೆಗಳನ್ನು ಸರಿಯಾದ ರೀತಿಯಿಂದ ನಡೆಸಲು ಮಂತ್ರಿ ಮಂಡಳವನ್ನು ಸ್ಥಾಪಿಸಿ ನಮ್ಮದು ಪ್ರಜಾ ಸರಕಾರವೆಂದೆವು. ಆದರೆ ಜವಾಬ್ದಾರಿ ಸರಕಾರವು ಜನರನ್ನು ಕೇಳದೆ ಕಂದಾಯ ಹಾಕಿದ್ದು ಬೇಲಿಯೆ ಹೊಲಮೇಯುವಂತಾಗಿದೆ. ಸರಕಾರದ ಪಕ್ಷಿಲುಬಾದಕಬಡ ರೈತರ ಬಾಣೆ ಜಾಗಕ್ಕೆ ಕಂದಾಯ ಹಾಕುವ ವೇಳೆಯಲ್ಲೂ ಅಂದು ಅರಸರು ಮತ್ತು ತುಂಡು ಪಾಳೆಯಗಾರರಿಂದ ಸಂಪಾದಿಸಿದ ಜಹಗೀರು ಭೂಮಿಯನ್ನು ವಿನಾಯಿಸಿದ್ದು ಇನ್ನೂ ವ್ಯಸನಕರ. ಈ ಮೊದ್ದಲಿನ ಆಡಳತದಲ್ಲಿ ಬಿಳಿ ಮತ್ತು ಕಪ್ಪು ಎಂಬ ವರ್ಣ ಭೇಧ ಇತ್ತು. ಆದರೆ ಇಂದಿನ ಈ ಪ್ರಜಾ ಸರಕಾರದಲ್ಲಿ ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಎಂಬಂತೆ ತೋರುತ್ತಿದೆ.

ಇವರ ನಟನೆಗೆ ಮರುಳಾಗಿ ಅಧಿಕಾರವನ್ನು ಕೆಲವರ ಕೈಗೆ ಕೊಟ್ಟು ಇಂದು ಇವರ ಹಸ್ತ ನಮ್ಮ ಹೆವಾಲು ಹೇಳಿದರೆ ಕೇಳಿಯೂ ಕೇಳದೆ ನಟಿಸುವದು ಸರಿಯಾದುದಲ್ಲ. ಆದರೆ ನಮ್ಮ ಕೂಗು ಅರಣ್ಯರೋದನವಾಗಿದೆ. ಕೋಳಿ ಕೂಗಿದರೆ ಗಗನಕ್ಕೆ ಕೇಳೀತೇ? ಎಂಬಂತೆ ನಮ್ಮ ಪರಿಸ್ಥಿತಿಯಾಗಿದೆ.   ಮನನೊಂದ ರೈತ.

ನಾಪೋಕ್ಲು ನಾಡಿನ ಪಾರುಪತ್ತೆಗಾರರು

ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಸಾಹೇಬರಿಗಿಂತ ನಾಡಿನ ಅಧಿಕಾರಿಗಳಿಗೆ ಅಧಿಕಾರ ಹೆಚ್ಚಿದೆಯೇ? ನಾಪೋಕ್ಲು ನಾಡಿನಲ್ಲಿ ನಾಪೋಕ್ಲು ಗ್ರಾಮದ ಅಯ್ಯಪ್ಪ ದೇವರ ಕಾಡಾಗಿರುವ ಪೈಸಾರಿಯನ್ನು ಬೇರೆ ಜನರಿಗೆ ಮನೆ ಕಟ್ಟಲು ಮತ್ತು ತೋಟ ಮಾಡಲು ಹುಕುಂ ಆಗಬೇಕೆಂದು ಡಿ. ಮೆ. ಸಾಹೇಬರಿಗೆ ಕೆಲವು ವರ್ಷಗಳ ಹಿಂದೆ ಅರ್ಜಿ ಬರಕೊಂಡ ಮೇರೆ ಜೂನೇ ಇಸವಿಯಲ್ಲಿ ಡಿ. ಮೆ. ಸಾಹೇಬರು ಐಯ್ಯಪ್ಪದೇವರ ಕಾಡಾಗಿದ್ದರಿಂದ ಸದ್ರಿ ಅರ್ಜಿಯನ್ನು ತಿರಸ್ಕರಿಸಿ ಬೇರೆ ಜಾಗಕ್ಕೆ ಅರ್ಜಿ ಬರಕೊಳ್ಳಬೇಕೆಂದು ಹುಕುಂ ಮಾಡಿದ ನಂತರ ಸದ್ರಿ ಜಾಗದಲ್ಲಿ ಒಂದು ಸಣ್ಣ ಗುಡಿಸಲು ಕಟ್ಟಿಕೊಂಡು ಒಬ್ಬ ಎರ್ಡ್‌ಹಾಕ್ ಕಮಿಟಿಯವರನ್ನು ಶಿಫಾರಸ್ಸಿಗೆ ಬಿಟ್ಟು ಈಗ್ಗೆ ಕೆಲವು ದಿವಸಗಳ ಹಿಂದೆ ಸದ್ರಿ ಐಯ್ಯಪ್ಪದೇವರ ಜಾಗವನ್ನು ಅರ್ಜಿದಾರರಿಗೆ ಮಂಜೂರು ಮಾಡಬೇಕೆಂದು ಪಾರುಪತ್ತೆಗಾರರು ಬರೆದಿರುತ್ತಾರಂತೆ. ಪುರಾತನ ಕಾಲದಿಂದ ಇಟ್ಟಿದ್ದ ಐಯ್ಯಪ್ಪದೇವರ ಕಾಡನ್ನು ಕೊಡಬಹುದೇ? ಇದು ಪ್ರಜಾ ಸರಕಾರದ ಧೋರಣೆಯೇ? ಇದನ್ನು ಮೇಲಧಿಕಾರಿಗಳು ಪರಿಶೀಲಿಸಿ ಈ ದೇವರ ಕಾಡನ್ನು ಕಾಪಾಡಬೇಕೆಂದು ಬೇಡಿಕೊಳ್ಳುವುದಾಗಿದೆ.   ಓ. ಎಲ್. ಕೆ.

ಅಳ್ಳಿದೆಯ ಪ್ರಯತ್ನ

ಕೊಡಗು ಸರಕಾರಿ ಕಾಲೇಜಿನ ವಿಚಾರದಲ್ಲಿ ಕೊಡಗು ಸರಕಾರವು ವಹಿಸಿರುವ ನೀತಿಯನ್ನು ಪರಿಶೀಲಿಸಿದರೆ ಅದೊಂದು ಅಳ್ಳಿದೆಯ ಪ್ರಯತ್ನವೆಂದು ಹೇಳಬೇಕಾಗಿದೆ. ಕಾಲೇಜು ಕಟ್ಟಡ ಕಟ್ಟಲು ಪ್ರಾರಂಭಿಸಿ ವರ್ಷಗಳಾದರೂ ಕಟ್ಟಡ ಕೆಲಸ ಪೂರ್ತಿಯಾಗಿಲ್ಲ. ಬಹುಶಃ ಇನ್ನೊಂದು ವರ್ಷ ಬೇಕಾದೀತು. ಕಟ್ಟಡಕ್ಕೆ ಬೇಕಾದ ಹಣವಿದೆ. ಈಗ ಬೇಕಾದದ್ದು ಮಂಜೂರರು ಕೆಲಸಕ್ಕೆ ದೂರೆಯುತ್ತಾರೆ. ಸಾಧನ ಸಾಹಿತ್ಯಗಳಿಗೂ ಹಿಂದಿನಂತೆ ಕೊರತೆ ಇಲ್ಲ. ಖಾಸಗಿ ಕಂಟ್ರಾಕ್ಟರುಗಳು ವರ್ಷಕ್ಕೆ ಎರಡು ಮೂರರಂತೆ ದೊಡ್ಡ ದೊಡ್ಡ ಕಟ್ಟಡ ಕಟ್ಟುತ್ತಿರುವಾಗ ಒಂದು ಸರಕಾರಕ್ಕೆ ಒಂದು ಕಾಲೇಜು ಕಟ್ಟಿಸುವುದು ಆಗಿಲ್ಲವೆಂಬುದು ಬೇಸರದ ಸಂಗತಿ. ಕಾಲೇಜು ಕಟ್ಟಡದ ಸಂಗತಿ ಹಾಗಾದರೆ ಮತ್ತೆ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಏರ್ಪಡಿಸದೆ ತೊಂದರೆ ಬೇರೆ. ಹುಡುಗಿಯರಿಗೆ ಯಾವುದೇ ವ್ಯವಸ್ಥೆ ಮಾಡದೆ ಮಡಿಕೇರಿಯಲ್ಲಿ ನೆಂಟರಿಲ್ಲದವರು ಕಾಲೇಜಿನಲ್ಲಿ ಓದುವದೇ ಅಸಾಧ್ಯವಾಯಿತು, ಹುಡುಗರಲ್ಲಿಯೂ ಅನೇಕರು ಹೊರಗೆ ಹೋಗಬೇಕಾಯಿತು. ಮತ್ತೆ ಬಿ. ಎ., ಬಿ. ಎಸ್‌ಸಿ. ತರಗತಿ ತೆರೆಯುವ ವರ್ತಮಾನ ಬಂತು. ಕಡೆಗೆ ಅದು ಬಿ. ಎ. ಮಾತ್ರ ಎಂದಾಯಿತು. ಕಾಲೇಜಿನ ವ್ಯಾಸಂಗಕ್ಕೆ ಯಾವುದೇ ಅನುಕೂಲ ಮಾಡದೆ ಮತ್ತೆ ವಿದ್ಯಾರ್ಥಿಗಳ ಸಂಖ್ಯೆ ಬಿ. ಎಸ್‌ಸಿ, ಬಿ. ಎ. ಗಳಿಗೆ ಕಡಿಮೆ ಎನ್ನಲಾಗುತ್ತಿದೆಯಂತೆ! ತಾ. ೨೯ರಲ್ಲಿ ಕಾಲೇಜು ತೆರೆಯುವದೆಂದಾಯಿತು. ಅದಕ್ಕೆ ಮೊದಲು ಅಧ್ಯಾಪಕರ ಅಯ್ಕೆಮಾಡದೆ ತಾ. ೩೧ರ ನಂತರ ಇಟ್ಟುಕೊಂಡರು. ಅರ್ಜಿದಾರರನ್ನು ಪರಿಶೀಲಿಸಿ ಒಂದು ವಾರವಾದರೂ ಇದನ್ನು ಬರೆಯುವ ತಾ. ೮ರವರೆಗೆ ಯಾವ ಫಲಿತಾಂಶವೂ ಹೊರಬಿದ್ದಿರುವದಿಲ್ಲವೆಂದು ನನಗೆ ತಿಳಿದು ಬಂತು. ಮತ್ತೆ ತಾ. ೮ರಿಂದ ಕಾಲೇಜು ಪ್ರಾರಂಭವಾಗಿದೆ. ಯಥಾಸ್ಥಿತಿ ವಿದ್ಯಾರ್ಥಿಗಳಿಗೆ ಸ್ಥಳವಿಲ್ಲ. ಕಾಲೇಜು ಕಟ್ಟಡದ ವ್ಯವಸ್ಥೆಯಾಗಿಲ್ಲ. ಮತ್ತೆ ಅಧ್ಯಾಪಕರ ಅಯ್ಕೆಯೂ ಆಗಿಲ್ಲ. ಈ ರೀತಿಯ ಒಂದು ಅವ್ಯವಸ್ಥೆ ಕೊಡಗಿಗೆ ಒಂದೇ ಒಂದಾಗಿರುವ ಸರಕಾರಿ ಕಾಲೇಜಿನಲ್ಲೇಕೆ? ಹಾಸ್ಟಲಿನ ವ್ಯವಸ್ಥೆ ಇಲ್ಲದಿರುವ, ಕಡೆಗೆ ತರಗತಿಗಳಿಗೂ ಸರಿಯಾದ ಏರ್ಪಾಡಿಲ್ಲದ ಈ ಕಾಲೇಜಿನಲ್ಲಿ ಬಿ. ಎ. ತರಗತಿಯನ್ನು ತೆರೆಯಲು ವಿಶ್ವವಿದ್ಯಾಲಯದವರು ಹೇಗೆ ಅನುಮತಿ ಕೊಟ್ಟರೋ ನನಗೆ ತಿಳಿಯದು. ಹೇಗೂ ಕಾಲೇಜಿನ ಬಗ್ಗೆ ಸರಕಾರದ ವರ್ತನೆಯು ಶೀರಾ ಅಳ್ಳಿದೆಯ ಯತ್ನವೆಂದು ಯಾರಿಗೂ ಅನಿಸದಿರದು.   ನಿರೀಕ್ಷಕ.

॥ ಮಧುಪರ್ಕ ॥

ಸಂಜೆಯ ಮಸುಕಿನ ಬೆಳಕು. ದಕ್ಷಿಣ ಆಫ್ರಿಕಾದ ಫೀನಿಕ್ಸ್ ಆಶ್ರಮದಲ್ಲಿ ಗಾಂಧಿಯವರಿದ್ದರು. ಹಗಲೆಲ್ಲ ಬಿಸಿ ಬಗ್ಗರ ನಡುವೆ ದುಡಿದೂ ದುಡಿದು ದಣಿದಿದ್ದ ಗಾಂಧೀಜಿ ಬಯಲಲ್ಲಿ ಚಾಪೆಯಲ್ಲಿ ಕುಳಿತಿದ್ದರು. ಅಷ್ಟಾದರೂ ಕಾಯಿಲೆಯಾದ ಮಗುವೊಂದನ್ನು ಮಡಿಲಲ್ಲಿ ಮಲಗಿಸಿಕೊಂಡು ಉಪಚರಿಸುತ್ತಿದ್ದರು. ಮಗುವಿನ ಪ್ರೀತಿ ಹೇಳತೀರದು. ಮರ್ಕಟಕಿಶೋರದಂತೆ ಅದು ಗಾಂಧೀಜಿಯನ್ನು ತಬ್ಬಿಕೊಂಡಿತ್ತು. ಪಕ್ಕದಲ್ಲಿಯೇ ಜೂಲು ಹುಡುಗಿಯೊಬ್ಬಳು ಕೂತಿದ್ದಳು. ಆಶ್ರಮದ ಪಕ್ಕದಲ್ಲಿದ್ದ ಶಾಲೆಯ ಹುಡುಗಿಯವಳು. ಕತ್ತಲು ಕವಿದಂತೆ 'ಕರುಣಾಳು ಬಾ ಬೆಳಕೆ' ಎಂಬ ಗೀತವನ್ನು ಹಾಡಲು ಹೇಳಿದರು. ದೀನಬಂಧು ಆಂಡ್ರ್ಯೂಸರು ಗೀತ ಹೇಳತೊಡಗಿದರು. ಆಗಿನ್ನೂ ಗಾಂಧೀಜಿ ಮುದುಕರಾಗಿರಲಿಲ್ಲ. ಆದರೆ ತಪೋಜೀವನದಿಂದ ಮೈ ಮುದುಡಿತ್ತು. ಒಳಗಿನ ಜೀವ ಮಾತ್ರ ದಿವ್ಯತೇಜದಿಂದ ಮೆರುಗುತ್ತಿತ್ತು. ಮಗುವನ್ನೆತ್ತಿ ಆಂಡ್ರ್ಯೂಸರ ಗಾನದಲ್ಲಿ ತನ್ಮಯರಾಗಿ ಕುಳಿತಿದ್ದ ಗಾಂಧಿಜಿಯವರ ಆ ದೃಶ್ಯವು ಕುರಿಯನ್ನು ಎದೆಗಪ್ಪಿಕೊಂಡ ಕ್ರಿಸ್ತನಂತಿತ್ತು. ಹಾಡು ಮುಗಿಯಿತು. ಆದರೂ ಮೆಲುದನಿಯಲ್ಲಿ ಗಾಂಧೀಜಿಯವರು ಗುಣುಗುಣಿಸುತ್ತಿದ್ದರು.

'ಬೆಳಗಾಗ ಹೊಳೆಯದೇ ಹಿಂದೊಮ್ಮೆ ನಾನೊಲಿದು
ಈ ನಡುವೆ ಕಳೆಕೊಂಡ ದಿವ್ಯಮುಖ ನಗುತಾ'

ಶ್ರೀ ಕಿಲ್ಲೆಯವರ ಶೋಚನೀಯ ನಿಧನ

ಕೊಡಗಿನವರಿಗೆ ಚಿರ ಪರಿಚಿತರಾಗಿದ್ದ ಶ್ರೀ. ಕಿಲ್ಲೆಯವರು ತಾ. ೯ ರಲ್ಲಿ ಶಿವಾಧೀನರಾದರು. ದಿವಂಗತ ನಾರಾಯಣ ಕಿಲ್ಲೆಯವರು ದಕ್ಷಿಣ ಕನ್ನಡ ಜಿಲ್ಲೆಯ ಒಂದು ಬಂಟ ಕುಟುಂಬಕ್ಕೆ ಸೇರಿದವರು. ಅವರು ಬಾಲ್ಯದಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ಆ ಮೇಲೆ ಮಂಗಳೂರಿನ ಹೈಸ್ಕೂಲ್ ವಿದ್ಯಾಭ್ಯಾಸವನ್ನು ಪೂರೈಸಿದರು.

ದಿವಂಗತ ಕಿಲ್ಲೆಯವರಿಗೆ ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡುವದರಲ್ಲಿ ತುಂಬಾ ಆಸಕ್ತಿ ಇದ್ದಿತು. ಅದಕ್ಕೆ ಅನುಕೂಲವಾಗುವಂತೆ ಅವರು ತಮ್ಮ ಜಿಲ್ಲೆಯ ಮುಖ್ಯ ಒಂದು ಕಲೆಯಾದ ಯಕ್ಷಗಾನದಲ್ಲಿ ಅರ್ಥ ಹೇಳುವ ಅಭ್ಯಾಸ ಮಾಡಿದ್ದರು. ಆದರಿಂದ ಅವರು ಸುಪ್ರಸಿದ್ಧ ವಾಗ್ಮಿಗಳಾದರು. ಜನತೆಯ ಮನೋಗತವನ್ನರಿತು ಅವರಿಗೆ ತಿಳಿಯುವ ರೀತಿಯಲ್ಲಿ, ಅವರ ಮನಸ್ಸನ್ನಾಕರ್ಷಿಸುವ ರೀತಿಯಲ್ಲಿ ಭಾಷಣ ಮಾಡುತ್ತಿದ್ದರು.

ಮಹಾತ್ಮಾಗಾಂಧಿಯವರು ಕಾಂಗ್ರೆಸಿನ ನಾಯಕತ್ವವನ್ನು ವಹಿಸಿದಾಗ ಕಿಲ್ಲೆಯವರು ಕಾಂಗ್ರೆಸ್ಸನ್ನು ಸೇರಿದರು. ಕಾಂಗ್ರೆಸಿನ ಮೂಲಕ ಸೇವೆ ಮಾಡಿದರು. ಅವರ ಕಾಂಗ್ರೆಸ್ ನಿಷ್ಠೆಯು ಅವರ ಅಂತ್ಯದವರೆಗೂ ಅಚ್ಚಳಿಯದೆ ಉಳಿದಿತ್ತು.

ದಿವಂಗತರು ದೇಶದ ಸ್ವಾತಂತ್ರ್ಯಕ್ಕಾಗಿ ದುಡಿದು ಎರಡು ಬಾರಿ ಜೈಲುವಾಸವನ್ನು ಅನುಭವಿಸಿದ್ದರು. ಅವರು ಕಾಂಗ್ರೆಸಿನಲ್ಲಿ ಸ್ಥಾನಮಾನಗಳಿಗೆ ಹಾತೊರೆಯಲಿಲ್ಲ. ಕಳೆದ ಚುನಾವಣೆಯಲ್ಲಿ ಮದರಾಸ್ ಎಸೆಂಬ್ಲಿಗಾಗಲೀ, ಕೌನ್ಸಿಲ್ ಆಫ್ ಸ್ಟೇಟ್ಸಿಗಾಗಲೀ ಅವರಿಗೆ ಸದಸ್ಯರಾಗಿ ಹೋಗಲು ಸಾಧ್ಯವಿತ್ತು. ಆದರೆ ಅವರು ಆ ಗೌರವದ ಸ್ಥಾನವನ್ನು ತಾವು ಪಡೆಯಬೇಕೆಂದು ಇಚ್ಛಿಸಲಿಲ್ಲ.

ನಾರಾಯಣ ಕಿಲ್ಲೆಯವರು ಅನೇಕ ಸಾರ್ವಜನಿಕ ಸಂಸ್ಥೆಗಳಲ್ಲಿ ದುಡಿದಿದ್ದರು. ಅವರು ಹಿಂದೆ "ಟೆಂಪರೆನ್ಸ್ ಲೀಗ್"ನಲ್ಲಿ ಕೆಲಸ ಮಾಡಿದರು. ಹರಿಜನ ಸೇವಾಕಾರ್ಯಕ್ಕಾಗಿ ದುಡಿದರು. ಅನಂತರ ಹರಿಜನ ಸೇವಕರಾಗಿ ಹಲವು ವರ್ಷಗಳ ತನಕ ಕೆಲಸ ಮಾಡಿದರು. ಜಿಲ್ಲಾ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿಯೂ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿಯೂ, ಇದ್ದು ಇತ್ತೀಚೆಗೆ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳೂ ಆದರು. ಅವರು ಮಂಗಳೂರು ನಗರ ಸಭೆಯ ಸದಸ್ಯರಾಗಿ ನಗರದ ಸೇವೆಮಾಡಿದ್ದರು. ಭಗವಂತನು ಮೃತರ ಆತ್ಮಕ್ಕೆ ಚಿರಶಾಂತಿಯನ್ನೀಯಲಿ!

'ನವಭಾರತ'

ಕೃತಜ್ಞತಾ ವಂದನೆ.

ಕಳೆದ ಜೂನ್ ತಾರೀಕು ೪ ರಲ್ಲಿ ಶಿವಾಧೀನರಾದ ನನ್ನ ಪತಿ ಮುದ್ದಪ್ಪನವರ ನಿಧನದಿಂದ ನನಗೂ ನನ್ನ ಮಕ್ಕಳಿಗೂ ಉಂಟಾದ ದುಃಖದ ಕಾಲದಲ್ಲಿ ಖುದ್ದಾಗಿ ಬಂದು ಮತ್ತು ಸಂತಾಪ ಸೂಚನಾ ಪತ್ರಗಳ ಮೂಲಕವಾಗಿ ನಮ್ಮ ದುಃಖದಲ್ಲಿ ಭಾಗಿಗಳಾದ ಬಂಧು ಮಿತ್ರರಿಗೆ ನಮ್ಮ ಕೃತಜ್ಞತೆಯನ್ನು ಪ್ರತ್ಯೇಕ ಪ್ರತ್ಯೇಕ ಬರೆದು ತಿಳಿಸುವದು ಅಸಾಧ್ಯವಾದ ಕಾರಣ ಅವರೆಲ್ಲರಿಗೂ ಈ ಮೂಲಕ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಬೆಳ್ಳಿಮಾಡು   ಪುಟ್ಟಿಚಂಡ ಮುತ್ತವ್ವ.
ವೀರಾಜಪೇಟೆ.

ನಗು ಮಲ್ಲಿಗೆ

ಯುದ್ಧರಂಗದಿಂದ ಓರ್ವ ಸಿಪಾಯಿ-ಯು ಮೆಲ್ಲಮೆಲ್ಲಗೆ ಹಿಂದಕ್ಕೆ ಸಾಗುತ್ತಿದ್ದನು.

ಅವನ ಕಮಾಂಡರನು ಅವನನ್ನು ಪ್ರಶ್ನಿಸಿದಾಗ, ನಾನು ಒಳ್ಳೆಯ ಗುಂಡುಗಾರನಲ್ಲ (2nd class shot) ವಾದುದರಿಂದ ನಾನು ಯುದ್ಧರಂಗದ ಮುಂಭಾಗದಲ್ಲಿ ನಿಂತಿಲ್ಲ ಎಂದನು.

ಕಮಾಂಡರ್:— ಹಾಗೋ, ನಿನ್ನ ಗುಂಡುಗಳು ಸರಿಯಾಗಿ ತಗಲಲು, ನಿನ್ನನ್ನು, ಅವಷ್ಟು ಶತ್ರುಗಳ ಹತ್ತಿರ ನಿಲ್ಲಿಸಬೇಕಲ್ಲವೇ?

* * *

ಚರ್ಚಿಲ್ಲರವರು ಯುವಕರಾಗಿದ್ದಾಗ ತಮ್ಮ ಒಬ್ಬ ರಾಜಕೀಯ ವಿರೋಧಿಯ ಭಾಷಣವನ್ನು ಕೇಳುತ್ತ ತಮ್ಮ ತಲೆಯನ್ನು ಅಲ್ಲಾಡಿಸುತ್ತಿದ್ದರು.

ಅದನ್ನು ನೋಡಿ ಭಾಷಣ ಕರ್ತರು: ನಾನು ನನ್ನ ಸ್ವಂತ ಅಭಿಪ್ರಾಯವನ್ನೇ ಸೂಚಿಸುತ್ತಿದ್ದೇನೆ

ಚರ್ಚಿಲ್:— ನಾನು ನನ್ನ ಸ್ವಂತ ತಲೆಯನ್ನೇ ಅಲ್ಲಾಡಿಸುತ್ತಿದ್ದೇನೆ!

* * *

ಓರ್ವ ಜೇಬು ಕಳ್ಳನು ಅದೇ ವೃತ್ತಿಯ ಒಬ್ಬ ತರುಣಿಯನ್ನು ಮದುವೆಯಾದನು. ಅವರಿಗೆ ಒಂದು ಮಗುವು ಹುಟ್ಟಿದಾಗ ತಮ್ಮ ಈ ಮಗುವು ಜೇಬು ಕಳ್ಳತನ ಕಸಬಿನಲ್ಲಿ ಅದೆಷ್ಟು ನಿಪುಣನಾಗುವನೆಂದು ಬಹು ಆಶೆಯಿಂದಿದ್ದರು.

ಮಗುವು ಜನಿಸಿದಾಗ ಮಗುವಿನ ಒಂದು ಕೈಯು ಮುಷ್ಟಿ ಹಿಡಿದಿದ್ದು ಬಿಡದ ಕಾರಣ ತಂದೆ ತಾಯಿಗಳು ದುಃಖಿಕ್ಕೊಳಗಾದರು. ಪಟ್ಟಣದಲ್ಲಿಯ ದೊಡ್ಡ ಡಾಕ್ಟರರ ಹತ್ತಿರ ತೆಗೆದುಕೊಂಡು ಹೋಗಿ ಕೈಮುಷ್ಟಿಯನ್ನು ಬಿಚ್ಚಿಸಲು ಸಾಧ್ಯವಾಗದೆ ಬಂದರು.

ಆಶಾಭಂಗದಿಂದ ಅವರು ಮಗುವನ್ನು ಒಂದು ತೊಟ್ಟಿಲಲ್ಲಿ ಮಲಗಿಸಿ, ಮೇಲಿನಿಂದ ಒಂದು ದಾರದಲ್ಲಿ ಚಿನ್ನದ ಒಂದು ಉಂಗುರವನ್ನ ತೂಗಾಡಲು ಬಿಟ್ಟರು. ಮಗುವು ಅದನ್ನು ಹಿಡಿಯುವ ಪ್ರಯತ್ನದಲ್ಲಿ ತನ್ನ ಮುಷ್ಟಿಯನ್ನು ಮೆಲ್ಲಗೆ ಬಿಚ್ಚಿತು. ಮುಷ್ಟಿ ಬಿಡುವಾಗ ಕೈಯಲ್ಲಿ ಇದ್ದದ್ದಾದರೂ ಏನು? ತಾಯಿಯ ಹೆರಿಗೆಯ ಸಮಯಕ್ಕೆ ಬಂದ ಸೂಲಗಿತ್ತಿಯ ಮದುವೆಯ ಉಂಗುರ. ಕೆ. ಎಂ. ಪಿ.

* * *

ಆತ:— 'ಫುಲನ್ ಟ್ರೌಜರ್', ಇಸ್ತ್ರಿ ಮಾಡಲಿಕ್ಕೆ ಚಾರ್ಜೆಷ್ಟು ಆಗುತ್ತದೆ?

ಡೋಬಿ:— ಒಂದು ರೂಪಾಯಿ ಸ್ವಾಮಿ.

ಆತ:— ಹಾಗಾದರೆ ಎಂಟಾಣೆ ಕೊಡುತ್ತೇನೆ. ಒಂದು ಕಾಲನ್ನು ಮಾತ್ರ ಮಾಡು. ಫೋಟೋ ತೆಗೆಯುವಾಗ ಎದುರಾಗಿ ನಿಲ್ಲದೆ 'ಸೈಡ್ ಫೋಝ್' ಕೊಡುತ್ತೇನೆ.

* * *

ದೊಡ್ಡ ಹೋಟೇಲೊಂದರಲ್ಲಿ ಊಟ ಮಾಡಿ ತನ್ನ ಬಿಲ್ಲನ್ನು ಕೊಟ್ಟು ಹೊರಡುವಾಗ ಬಾಗಿಲ ಬದಿಯಲ್ಲಿ "ಏನಾದರೂ ಮರೆವೆಯಿಂದ ಬಿಟ್ಟಿದ್ದೀರಾ?" ಎಂಬ ಬೋರ್ಡನ್ನು ನೋಡಿ ಗಿರಾಕಿಯು ಹೇಳಿದನು "ನೀವು ಬೋರ್ಡು ಬರೆದುದು ತಪ್ಪು ನಿಮ್ಮ ಈ ಹೊಟೇಲಿನ ಯೋಗ್ಯತೆಗೆ ಸರಿಯಾಗಬೇಕಾದರೆ "ಮರೆವೆಯಿಂದಲಾದರೂ ಏನಾದರೂ ನಿಮ್ಮಲ್ಲಿ ಉಳಿದಿದೆಯೇ?" ಎಂದು ಬರೆಯಬೇಕೆಂದನು.

* * *

"ಒಟ್ಟಾರೆ ಆತನು ನಿನ್ನ ಪ್ರೇಮ ಹೃದಯವನ್ನು ಒಡೆದು ಹಾಕಿದನು!" ಗೆಳತಿಯು ದುಃಖಿಸುತ್ತಿದ್ದ ಆಕೆಯನ್ನು ಕೇಳಿದಳು.

"ಅದೇ ಅಲ. ಆತನು ತಂದೆಯವರೊಡನೆ ಜಗಳಾಡಿ ಅವರನ್ನೂ ದಿವಾಳಿ ಎಬ್ಬಿಸಿದನು." ಆಕೆ ಎಂದಳು

* * *

ಆತ:— ನನ್ನನ್ನು ಮದುವೆಯಾಗುವೆನೆಂದು ಹೇಳಲಾರೆಯಾ?

ಆಕೆ:— ಕೇವಲ ವೈವಸ್ತ್ರಗಳ ಬಹುಮಾನದಿಂದಲೇ ನನ್ನನ್ನು ಪ್ರೋತ್ಸಾಹಿಸುವಂತೆ ತೋರುವುದರಿಂದ ಹೆದರಿಕೆ.

ಆತ:— ನಿನ್ನ ಜೀವನದ ಉಳಿದ ಭಾಗದಲ್ಲಿ ನಿನಗೆ ನೆಗಡಿ, ಕೆಮ್ಮು ಆಗಲಾರದೆಂದು ನಿನ್ನ ಭಾವನೆ ಏನು?

* * *

ಇನ್ಸ್‌ಪೆಕ್ಟರು:— ನಿಮ್ಮ ತರಗತಿಯಲ್ಲಿ ಅಸ್ವಾಭಾವಿಕವಾದ ವಿದ್ಯಾರ್ಥಿಗಳು ಇದ್ದಾರೆಯೇ?

ಅಧ್ಯಾಪಕ:— ಇತರರಿಗಿಂತಾ ಭಿನ್ನವಾಗಿ ಒಳ್ಳೆ ಗುಣಗಳಿರುವ ಇಬ್ಬರು ಇದ್ದಾರೆ.

* * *

ಎರಡು ಗೆಳೆಯರು ಒಬ್ಬರೊಬ್ಬರನ್ನು ಕಾಣದೆ ಬಹಳ ವರ್ಷಗಳಾಗಿದ್ದವು. ಈ ಅವಧಿಯಲ್ಲಿ ಇಬ್ಬರೂ ಮದುವೆಯಾಗಿದ್ದರು.

"ನಿನಗೆ ದೊರೆತ ಹೆಂಡತಿ ಹೇಗಿರುವಳು?" ಒಬ್ಬನು ಕೇಳಿದನು.

"ಆಕೆ ದೇವತೆ. ನಿಜವಾಗಿಯೂ ದೇವತೆ" ಇನ್ನೊಬ್ಬನೆಂದನು.

"ಗೆಳೆಯಾ, ನೀನು ನಿಜವಾಗಿಯೂ ಅದೃಷ್ಟವಂತನು. ನನ್ನ ಹೆಂಡತಿ ಇನ್ನೂ ಜೀವಂತ ಇರುವಳು" ಭಾರವಾದ ಮನಸ್ಸಿನಿಂದ ಆತನೆಂದನು.

* * *

ಧರ್ಮ ರಹಸ್ಯ.

ಅಯ್ಯೊ, ನಶ್ವರ ಜೀವನವೇ!

== ಭರ್ತೃಹರಿಯ ವೈರಾಗ್ಯ ಶತಕದಿಂದ ==

ಸೂರ್ಯನ ಉದಯಾಸ್ತಮಾನಗಳಿಂದ ದಿನದಿಂದ ದಿನಕ್ಕೆ ಆಯುಷ್ಯವು ಕ್ಷೀಣವಾಗುತ್ತದೆ ಅನೇಕ ವ್ಯಾಪಾರ ವ್ಯವಹಾರಗಳಿಂದ ಕಾಲವು ಗತಿಸುವದು ತಿಳಿಯುವದೇ ಇಲ್ಲ. ಮರಣಗಳನ್ನು ದಿನ ನಿತ್ಯವೋ ಎಂಬಂತೆ ಕಂಡರೂ ಜನರಿಗೆ ಜ್ಞಾನೋದಯವಾಗುವದಿಲ್ಲ. ಜಗತ್ತೇ ಅಜ್ಞಾನಮಯವಾದ ಪ್ರಮಾದವೆಂಬ ಮದ್ಯವನ್ನು ಕುಡಿದು ಭ್ರಾಂತಿ ಹೊಂದಿದಂತಿದೆ.

ಹಿಂದೆ ನಡೆದ ರಾತ್ರಿ ಹಗಲುಗಳೇ ಈಗಲೂ ಇವೆ. ಆದರೆ ಜನರು ಮಾತ್ರ ಲಾಭೋತ್ಸುಕರಾಗಿ, ಗಡಿಬಿಡಿಯವರಾಗಿ ಗುಪ್ತವಾಗಿಯೋ, ಬಹಿರಂಗವಾಗಿಯೋ ಲಾಭಕ್ಕಾಗಿ ಕೆಲಸ ಮಾಡುತ್ತಾರೆ. ಅವರಿಗೆ ದೊರೆಯುವ ಫಲವೇನು ಹೊಸದಲ್ಲ. ಹಿಂದಿನಂತೆಯೇ ಇಂದೂ ಅವರು ದಿನ ದೂಡುತ್ತಾರೆ. ಈ ಸಂಸಾರದಲ್ಲಿ ಹಿಂದಿಗಿಂಥಾ ಉತ್ತಮ ಹಾಗೂ ಹೊಸ ಸಾಧನವನ್ನು ಪಡೆಯದಿರಲು ಲಜ್ಜೆಯಾಗುವದಿಲ್ಲವೇ?

ಸಂಸಾರ ಬಂಧನದ ನಾಶಕ್ಕಾಗಿ ಪರಮೇಶ್ವರನನ್ನು ಧ್ಯಾನಿಸಲಿಲ್ಲ. ಸ್ವರ್ಗದ ಬಾಗಿಲನ್ನು ತೆರೆಯಲು ಸಮರ್ಥವಾದ ಧರ್ಮಾಚರಣೆಯನ್ನೂ ಮಾಡಲಿಲ್ಲ. ಮಾತೆಯ ತಾರುಣ್ಯವನಕ್ಕೆ ಕುಠಾರ ಪ್ರಾಯವಾದುದು ಮಾತ್ರ ನನ್ನ ಜನ್ಮದ ಫಲವಾಯಿತು.

ಪ್ರತಿ ವಾದಿಗಳನ್ನು ಜೈಸಬಲ್ಲ ವಿದ್ಯೆ ಕಲಿಯಲಿಲ್ಲ. ರಣರಂಗದಲ್ಲಿಳಿದು ಕೀರ್ತಿತರಲಾಗಲಿಲ್ಲ ಕಾಂತೆಯೊಡನೆ ಬೆಳದಿಂಗಳಲ್ಲಿ ವಿಹರಿಸಿ ಸುಖಾನುಭವವನ್ನೂ ಪಡೆಯಲಿಲ್ಲ. ನನ್ನ ತಾರುಣ್ಯವು ಜನರಿಲ್ಲದ ಮನೆಯಲ್ಲಿಟ್ಟ ದೀಪದಂತಾಯಿತು.

ಉತ್ತಮ ವಿದ್ಯಾಭ್ಯಾಸವಾಗಲಿಲ್ಲ. ಧನವನ್ನೂ ಸಂಪಾದಿಸಲಿಲ್ಲ. ತಾಯಿ ತಂದೆಯವರ ಶುಶ್ರೂಷೆಯನ್ನೂ ಮನಸ್ಸಿಟ್ಟು ಮಾಡಲಿಲ್ಲ. ನನ್ನ ಕಾಲವೆಲ್ಲ ಅಪಮಾನಕರವಾಗಿ ಪರಾನ್ನಕ್ಕಾಗಿ ಕಾಗೆಯಂತೆ ಕಳೆಯಿತು. ಧರ್ಮ, ಅರ್ಥ, ಕಾಮಗಳ ಸಾಧನೆಯಾದರೂ ಆಗಲಿಲ್ಲ.

ಯಾವ ತಾಯಿ ತಂದೆಯರಿಂದ ನನ್ನ ಜನನವಾಯಿತೋ ಅವರೂ ಕೆಲಕಾಲ ಇದ್ದು ನಮ್ಮನ್ನು ಬಿಟ್ಟು ತೆರಳಿದರು. ಯಾರೊಡನೆ ನಾವು ಬೆಳೆದೆವೋ ಅವರೂ ಕೂಡ ಈಗ ಇಲ್ಲ. ಮುದುಕರಾಗಿ ನಾವೂ ಬೀಳುವ ಕಾಲ ಬಂತು. ಹೊಳೆಯ ದಂಡೆಯ ಮರಗಳಂತೆ ನಮ್ಮ ಪಾಡು.

ನೂರು ವರ್ಷ ಮನುಜನಿಗೆ ಆಯುಷ್ಯ. ಅರ್ಧ ಅಂದರೆ ರಾತ್ರಿ ನಿದ್ರೆ, ವಿಶ್ರಾಂತಿಗಳಿಗಾಗಿ ಹೋದವು. ಉಳಿದುದು ಐವತ್ತು. ಅದರ ಅರ್ಧವು ಬಾಲತ್ವ ಹಾಗೂ ವೃದ್ಧಾಪ್ಯಕ್ಕಾಗಿ ಸಂದವು. ಮತ್ತಿರುವ ಸರಿಯಾದ ೨೫ ವರ್ಷಗಳನ್ನು ರೋಗ, ವಿರಹ, ದುಃಖ, ತಾಪತ್ರಯ, ಜವಾಬ್ದಾರಿಕೆಗಳಿಂದ ಕಳೆಯಬೇಕಾಗಿದೆ. ಚಂಚಲವಾದ ಈ ಜೀವನದಲ್ಲಿ ಸುಖ ಯಾವಾಗ?

ಸ್ವಲ್ಪ ಕಾಲ ಮಗುವಾಗಿ, ಮತ್ತೆ ಶೃಂಗಾರಿ ತರುಣನಾಗಿ, ಬಳಿಕ ಧನಹೀನನಾಗಿ, ಮತ್ತೊಂದು ಕ್ಷಣ ಧನಿಕನಾಗಿ, ಆ ಮೇಲೆ ಜರಾ ಪೀಡಿತನಾಗಿ, ಮನುಜನು ವೇಷಧಾರಿ ನಟನಾಗಿ ಈ ಸಂಸಾರ ನಾಟಕದಲ್ಲಿ ನಟಿಸಿ ಕಡೆಗೆ ಯಮನಗರವೆಂಬ ಪರದೆಯಿಂದ ಮರೆಯಾಗುತ್ತಾನೆ. ಅಯ್ಯೋ ಜೀವನವೆ!

INSURE WITH
OR REPRESENT
INDIA'S OLDEST LIFE OFFICE.
THE BOMBAY MUTUAL LIFE ASSURANCE SOCIETY, LTD.

BUSINESS IN FORCE OVER 40 CRORES
ASSETS .... OVER 12 CRORES

Applications from energetic youngmen are invited for representation.

25-16

Head Office; BOMBAY.

Branch: 172. 3, Narasimharaja Road, BANGALORE 2.

ಮಕ್ಕಳ ಪುಟ

ಸಂಗೀತಗಾರ ಕತ್ತೆ.

ಒಂದು ಪಟ್ಟಣದಲ್ಲಿ ಅಹಂಕಾರಿ ಎಂಬ ಹೆಸರಿನ ಒಂದು ಕತ್ತೆ ಇತ್ತು. ಹಗಲು ಹೊತ್ತು ತನ್ನ ಯಜಮಾನನಾದ ಅಗಸನು ಹೊರಿಸಿದ ಬಟ್ಟೆಗಳನ್ನು ಹೊರುವುದು ಅದರ ಕೆಲಸವಾಗಿತ್ತು. ರಾತ್ರಿ ಅದಕ್ಕೆ ಪೂರ್ಣ ಬಿಡುವು ಮತ್ತು ಸ್ವಾತಂತ್ರ್ಯ. ಬೇಕಾದ ಕಡೆಯಲ್ಲೆಲ್ಲಾ ಅದು ರಾತ್ರಿ ಸುತ್ತಾಡುತಿತ್ತು. ಒಂದು ದಿನ ರಾತ್ರಿ ಹೀಗೆ ಸುತ್ತುತಿರುಗುವಾಗ ಗುಳ್ಳೆನರಿಯೊಂದನ್ನು ಅದು ಕಂಡಿತು. ಅವರೊಳಗೆ ಮಾತುಕತೆಯಾಗಿ ಕಡೆಗೆ ಇಬ್ಬರೂ ಪರಸ್ಪರ ಮಿತ್ರರಾದರು. ಇಬ್ಬರೂ ಜೊತೆ ಸೇರಿ ಸೌತೆಕಾಯಿ ತೋಟವೊಂದನ್ನು ಬೇಲಿ ಮುರಿದು ಬೇಕಾದಷ್ಟನ್ನು ತಿಂದವು. ನಂತರ ಬೆಳಗಾಗುವ ಹೊತ್ತಿಗೆ ಇಬ್ಬರೂ ತಮ್ಮ ತಮ್ಮ ಮನೆಗೆ ಹೊರಟವು. ಹೀಗೆ ಕೆಲವು ದಿನಗಳು ಕಳೆದವು. ಒಂದು ದಿನ ನಾನೇ ತಾನೆಂಬ ಅಹಂಕಾರಿಯಾದ ಕತ್ತೆಯು ಸೌತೆಕಾಯಿ ತೋಟದಲ್ಲಿ ಹಾಗೆ ಒರಗಿ ನಿಂತು ನರಿಗೆ ಹೇಳಿತು. "ಗೆಳೆಯಾ, ಈ ರಾತ್ರಿ ಬಹಳ ಸುಂದರವಾಗಿದೆ. ನನಗೆ ಹಾಡಬೇಕೆನಿಸುತ್ತದೆ. ನನ್ನ ಹಾಡು ಹಾಸ್ಯಪ್ರದವಾಗಿರಬೇಕೆ? ಭಾವಪ್ರಧಾನವಾಗಿರಬೇಕೆ ಹೇಳು?"

"ಹಾಡುವುದು ಬೇಡ ಗೆಳೆಯಾ. ಅದರಿಂದ ನಮಗೆ ತೊಂದರೆ ಬಂದೀತು. ಕದಿಯುವ ಕೆಲಸದವರು ಹಾಡುವುದು ಎಂದೂ ಹಿತವಲ್ಲ. ಕಳ್ಳತನ ಮಾಡುವವರೂ ಪ್ರೇಮಿಗಳೂ ಯಾವಾಗಲೂ ಶಬ್ದ ಮಾಡಬಾರದು. ಹೆಚ್ಚು ನಿದ್ರೆಯವರು ಕಂಬಳಿ ಕದಿಯುವುದೂ, ಅಂಗವಿಹೀನರಿಗೆ ಸೌಷ್ಟವ ಆಹಾರ ಕೊಡುವುದೂ, ಕೆಮ್ಮಲು ಇರುವವನು ಕದಿಯಲು ಹೋಗುವುದೂ ಸಲ್ಲದು. ಜೊತೆಗೆ ನಿನ್ನ ಹಾಡುಗಾರಿಕೆಯು ತೃಪ್ತಿಕರವೇನಲ್ಲ. ಶಂಕಧ್ವನಿಯಂತೆ ಕೇಳುವುದರಿಂದ ರೈತರು ಎಚ್ಚೆತ್ತು ಓಡಿಬಂದು ನಿನ್ನನ್ನು ಕಟ್ಟಿ, ಹೊಡೆದು ಕೊಂದು ಹಾಕುವರು. ಆದ್ದರಿಂದ ಮೌನವಾಗಿ ತಿನ್ನು" ಎಂದು ನರಿಯು ಹೇಳಿತು

"ನಿನ್ನ ಮಾತುಗಳನ್ನು ಕೇಳುವಾಗಲೇ ನೀನು ಕಾಡಿನವನು ಎಂದು ತಿಳಿಯುತ್ತದೆ. ನಿನಗೆ ಸಂಗೀತದ ಅಭಿರುಚಿ ಇಲ್ಲ. ಮೆಲುಧ್ವನಿಯಲ್ಲಿ ಕಿವಿಯ ಹತ್ತಿರ ಹೇಳುವ ಮಾತು ಅಮೃತದಂಥಾ ಸಂಗೀತ, ಬೆಳದಿಂಗಳ ರಾತ್ರಿ ಇವು ತನಗೆ ಪ್ರಿಯವಾದದು ಹತ್ತಿರ ಇರುವಾಗ ಸ್ವರ್ಗಸಮಾನ" ಎಂದು ಕತ್ತೆ ಹೇಳಿತು.

"ನಿಜವಿರಬಹುದು" ನರಿಯು ಹೇಳತೊಡಗಿತು. "ಆದರೆ ನಿನ್ನ ಕೂಗು ಕಠಿಣ. ನೀನು ಹಾಡಲು ಪ್ರಾರಂಭಿಸಿದರೆ ಮತ್ತೆ ತೀರಿತು"

"ಅಯ್ಯೋ ತಿಳಿಗೇಡಿ ನರಿಯೇ. ನನಗೆ ಶಾಸ್ತ್ರೀಯ ಹಾಡುಗಾರಿಕೆ ಬರುವುದಿಲ್ಲವೆಂದು ತಿಳಿದೆಯಾ. ಸ್ವಲ್ಪ ವರ್ಣನೆಯನ್ನು ಕೇಳು. ಏಳು ಸ್ವರಗಳು, ಮೂರು ಸಕಳೆಗಳು ಈ ಇಪ್ಪತ್ತೊಂದು ಸ್ವರಮೇಳವೆನಿಸುತ್ತವೆ. ನಲುವತ್ತೊಂಭತ್ತು ಶೃತಿಗಳೂ, ಮೂರು ಚರಣಗಳೂ ಮತ್ತೆ ನೂರು ಯತಿಗಳು ಉತ್ತಮ ಸಂಗೀತಕ್ಕಿರಬೇಕು. ಭೂಲೋಕದಲ್ಲಾಗಲೀ, ಸ್ವರ್ಗದಲ್ಲಾಗಲೀ ಸಂಗೀತಕ್ಕಿಂಥಾ ಮಿಗಿಲಾದುದಿಲ್ಲ ಪಿಶಾಚಿಯೇ ಇರಲಿ, ಅದು ಹಾಡುತಿದ್ದರೆ ಅದರಿಂದ - ಮನುಷ್ಯನ ಮಾತಿರಲಿ ದೇವದೇವನಿಗೂ ತೃಪ್ತಿ ಇದೆ. ಈ ವಿವರಣೆ ಸಾಕೆ? ನಾನು ವಿದ್ಯಾವಂತನಲ್ಲವೆಂದು ಭಾವಿಸಿದೆಯಾ? ಇನ್ನು ನನ್ನ ಸಂಗೀತವನ್ನು ಕರ್ಕಶವೆಂದು ಹೇಗೆ ಹೇಳುವಿ?" ಎಂದು ಕತ್ತೆಯು ಹೇಳಿತು.

"ಆಗಲಿ, ನೀನು ನಿನ್ನ ಹೃದಯ ತೃಪ್ತಿಯಾಗುವಂತೆ ಹಾಡು. ನಾನು ಹೊರಗೆ ನಿಂತು ರೈತರು ಬಂದಾರೋ ಎಂದು ನೋಡುತ್ತಿರುವೆನು" ಎಂದು ಹೇಳಿ ನರಿಯು ಹೊರಗೆ ಹೋಯಿತು.

ಕತ್ತೆಯು ತನ್ನ ಕತ್ತನ್ನು ಮೇಲಕೆತ್ತಿತು. ತನ್ನ ವಿಚಿತ್ರ ಸಂಗೀತ ಪ್ರಾರಂಭಿಸಿತು. ಈ ಕೂಗಿನಿಂದ ಎಚ್ಚರಗೊಂಡ ರೈತರು ಎಚ್ಚೆತ್ತು, ಹಲ್ಲು ಕಡಿಯುತ್ತಾ ದೊಣ್ಣೆ, ಕೋಲು ಹಿಡಿದು ಓಡಿ ಬಂದು ಕತ್ತೆಯನ್ನು ಸುತ್ತುಗಟ್ಟಿ ಬಡೆದರು. ಕತ್ತೆಯು ನೆಲದಲ್ಲಿ ಬಿದ್ದಿತು. ರೈತರು ಅದರ ಕುತ್ತಿಗೆಗೆ ಒಂದು ಒರಳನ್ನು ಕಟ್ಟಿ ಹೊರಟು ಹೋದರು. ಕೆಲವು ಸಮಯದ ನಂತರ ಕತ್ತೆಗಳ ಸ್ವಭಾವದಂತೆ ಅಹಂಕಾರಿಯು ತನ್ನ ನೋವನ್ನು ಮರೆತು ಎದ್ದು ನಿಂತಿತು. ಏಕೆಂದರೆ ನಾಯಿ, ಕತ್ತೆ, ಕುದುರೆಗಳು ಹೊಡೆದ ನೋವನ್ನು ಅವು ಬೇಗ ಮರೆತುಬಿಡುವುವು. ಅದರಂತೆ ಎದ್ದು ನಿಂತ ಅಹಂಕಾರಿಯು ಒರಳಿನೊಂದಿಗೆ ಓಡಿಹೋಗಲು ಯತ್ನಿಸಿತು. ಆಗ ಸುರಕ್ಷಿತ ದೂರದಲ್ಲಿ ನಿಂತು ನೋಡುತಿದ್ದ ನರಿಯು ಹೇಳತೊಡಗಿತು.

"ಗೆಳೆಯಾ ಚೆನ್ನಾಗಿ ಹಾಡಿದೆ. ನಾನು ಹೇಳಿದ ಹಾಗೆ ಸುಮ್ಮನಿದ್ದಿದ್ದರೆ ನಿನಗೇನು ದೊರೆಯುತಿತ್ತು? ಆದರೆ ಈಗ ನಿನಗೆ ಎಂಥಾ ಕುತ್ತಿಗೆ ಸರ! ನಿನ್ನ ಸಂಗೀತಕ್ಕೆ ಯೋಗ್ಯ ಮೆಡಲುಗಳು ದೊರೆತವು." ಎಂದಿತು.

ಅದೇ ರೀತಿಯಲ್ಲಿ ನಾನು ನಿನಗೆ ಬುದ್ಧಿವಾದ ಹೇಳಿದರೂ ನೀನು ಕೇಳಲಿಲ್ಲ. ಆದ್ದರಿಂದ ಈಗ ತೊಂದರೆಗೊಳಗಾಗಿರುವೆ ಎಂದು ಚಿನ್ನ ದೊರೆತ ಬ್ರಾಹ್ಮಣನು ಹೇಳಿದನು.

ಆಗ ತಲೆಗೆ ಚಕ್ರ ತಾಗುತ್ತಿರುವ ಬ್ರಾಹ್ಮಣನು "ಗೆಳೆಯಾ, ನೀನು ಹೇಳುವದು ನಿಜ. ಏಕೆಂದರೆ ಬುದ್ಧಿ ಇಲ್ಲದೆ ಗೆಳೆಯನ ಹಿತವಚನಗಳನ್ನು ಕೇಳದವರು ಮಂದಬುದ್ಧಿಯ ನೆಯಿಗೆಯುವನಂತೆ ತನ್ನ ಅಂತ್ಯವನ್ನು ಕಾಣುವರು" ಎಂದನು. 'ಅದು ಹೇಗೆ' ಎಂದು ಚಿನ್ನ ದೊರೆತ ಬ್ರಾಹ್ಮಣನು ಕೇಳಲು ಚಕ್ರ ಹೊತ್ತ ಬ್ರಾಹ್ಮಣನು ಸೋಮಾರಿಯಾದ ನೆಯಿಗೆಯುವನ ಕತೆಯನ್ನು ಮುಂದಿನ ವಾರ ಹೇಳುವನು.

ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ಶಾಲಾ ಸಮಾಜದ ಉದ್ಘಾಟನೋತ್ಸವ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ಶಾಲಾ ಸಮಾಜದ ಉದ್ಘಾಟನೋತ್ಸವವು ಮಾನ್ಯ ಗೃಹಮಂತ್ರಿಯವರಿಂದ ಜುಲೈ ೨ ರಲ್ಲಿ ನೆರವೇರಿಸಲ್ಪಟ್ಟಿತು. ಮಾನ್ಯ ಮುಖ್ಯ ಮಂತ್ರಿಯವರು ಅಧ್ಯಕ್ಷತೆಯನ್ನು ವಹಿಸಿದ್ದರು. ಗೃಹ ಮಂತ್ರಿಗಳು ರಾಷ್ಟ್ರೀಯ ಬಾಲ ಸೈನ್ಯದವರು ಪ್ರದರ್ಶಿಸಿದ ಗೌರವಯುಕ್ತ ವಂದನೆಯನ್ನು ಸ್ವೀಕರಿಸಿ ದಳವನ್ನು ಪರಿಶೀಲಿಸಿದರು. ಸೆಂಟ್ರಲ್ ಹೈಸ್ಕೂಲ್ ಪ್ರಧಾನಾಧ್ಯಾಪಕರಾದ ಶ್ರೀ. ಪಿ. ಎ. ಪೂವಯ್ಯನವರು ಅತಿಥಿಗಳನ್ನು ಆದರದಿಂದ ಸ್ವಾಗತಿಸಿದರು. ಗೃಹ ಮಂತ್ರಿಗಳು ಉದ್ಘಾಟನೆಯ ಸಮಾರಂಭವನ್ನು ಮಾಡುತ್ತಾ ವಿದ್ಯಾರ್ಥಿಗಳು ಜಗತ್ತಿನ ನಾನಾ ಸಾಮಾನ್ಯ ವಿಷಯಗಳ ಬಗ್ಗೆ ಸಾಕಷ್ಟು ಜ್ಞಾನವನ್ನು ಸಂಪಾದಿಸಿಕೊಳ್ಳಬೇಕೆಂದೂ, ಸಮಾಜಸೇವೆಯನ್ನು ಮಾಡಿ ಗ್ರಾಮಾಂತರ ಜೀವಿಗಳ ಸುಖದುಃಖದಲ್ಲಿ ಭಾಗವಹಿಸಿ ಅವರಿಗೆ ಸಾಂಸ್ಕೃತಿಕ ಜೀವನವನ್ನು ತಿಳಿಸಬೇಕೆಂದೂ ಕೈ ಕೆಲಸದ ಮಹತ್ವವನ್ನು ಸಕಲ ವಿದ್ಯಾರ್ಥಿಗಳೂ ಅರಿಯಬೇಕೆಂದೂ, ಭಾಷಣ ಮಾಡಿದರು. ಮುಖ್ಯ ಮಂತ್ರಿಗಳು ಅಧ್ಯಕ್ಷಪೀಠದಿಂದ ಮಾತಾಡುತ್ತಾ ಸರಕಾರದ ನೌಕರಿ ಎಲ್ಲಾ ವಿದ್ಯಾವಂತ ಯುವಕರಿಗೆ ಇನ್ನು ಮುಂದೆ ಸಿಗಲಾರದೆಂದೂ, ವಿದ್ಯಾವಂತ ಯುವಕರು ಗ್ರಾಮಾಂತರಗಳಲ್ಲಿ ನೆಲೆಸಿ ನಾಡಿನ ಕೃಷಿ, ಕೈಗಾರಿಕೆ, ವ್ಯಾಪಾರಗಳನ್ನು ಅಭಿವೃದ್ಧಿಪಡಿಸಿಕೊಂಡು ರಾಷ್ಟ್ರದ ಅಭ್ಯುದಯವನ್ನು ಸಾಧಿಸಬೇಕೆಂದೂ, ಇಂಗ್ಲೆಂಡ್, ಅಮೇರಿಕಾ ಮುಂತಾದ ರಾಷ್ಟ್ರಗಳಲ್ಲಿ ಔದ್ಯೋಗಿಕ ಕ್ರಾಂತಿಯಾದ ತರುವಾಯ ಆ ರಾಷ್ಟ್ರಗಳ ಜನರು ಕೈಗಾರಿಕೆ ವಾಣಿಜ್ಯ ಮುಂತಾದುವುಗಳಿಗೆ ಹೆಚ್ಚಿನ ಪ್ರೋತ್ಸಾಹವಿತ್ತುದರಿಂದಲೇ ಆ ರಾಷ್ಟ್ರಗಳು ಉನ್ನತಿಯ ಶಿಖರಕ್ಕೆ ಏರಿವೆ ಎಂದೂ ನುಡಿದರು. ವಿಶ್ವವಿದ್ಯಾನಿಲಯದ ತರಗತಿಗಳಿಗೆ ಪ್ರವೇಶಿಸಬೇಕಾದರೆ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದರೆ ಮಾತ್ರ ಇನ್ನು ಪ್ರವೇಶ ಸಿಗಬಹುದೆಂದೂ. ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿ ವಿದ್ಯಾರ್ಥಿನಿಯೂ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಗೊಳ್ಳಲು ಸಾಧಿಸಬೇಕೆಂದೂ ಬೋಧಿಸಿದರು ಮಾತ್ರವಲ್ಲದೆ ಇಂದಿನ ಸಮಾಜದಲ್ಲಿ ಮೂರ್ಖರಿಗೆ ಢಾಂಬಿಕರಿಗೆ ಇತರರನ್ನು ದೂಷಿಸುವವರಿಗೆ ಸ್ಥಳವಿಲ್ಲವಾದುದರಿಂದ ವಿದ್ಯಾರ್ಥಿಗಳು ಉತ್ತಮವಾದ ನಡತೆ ಶೀಲ ವಿನಯಗಳನ್ನು ಗಳಿಸಿ ನಾಡಿನ ಕೀರ್ತಿಯನ್ನು ಎಲ್ಲೆಡೆಗಳಲ್ಲೂ ಹರಡಬೇಕೆಂದು ಭಾಷಣ ಮಾಡಿದರು. ವಂದನಾರ್ಪಣೆಯ ನಂತರ ರಾಷ್ಟ್ರಗೀತೆ ಮತ್ತು ಜಯಕಾರಗಳೊಡನೆ ಸಭೆ ಮುಕ್ತಾಯಗೊಂಡಿತು.

ಪ್ರಕಟಣೆ.

ಉತ್ತಮ ತರದ ಆರಿಸಿದ ಎರಡು ವರ್ಷದ ಕಿತ್ತಳೆ ಗಿಡಗಳು ಕೊಡಗು ವ್ಯವಸಾಯ ಇಲಾಖೆಯ ಒಡ್ಡರ ಮೊಟ್ಟೆಯಲ್ಲಿರುವ ಕಿತ್ತಳೆ ಪರೀಕ್ಷಾಕ್ಷೇತ್ರದಲ್ಲಿ ನೂರಕ್ಕೆ ರೂ. 20 ರ ದರದಲ್ಲಿ ಮಾರಾಟಕ್ಕೆ ತಯಾರಾಗಿರುವುದು. ಬೇಕಾಗದವರು ಆರೆಂಜ್ ರಿಸರ್ಚ್ ಆಫೀಸರು, ಚೆಟ್ಟಳ್ಳಿ ಪೋಸ್ಟು, ಇವರಿಗೆ ಬರೆಕೊಳ್ಳಬಹುದು.

Specialists in Tailoring! Prompt Service!!

FOR English Felt Hats,

Wedding Suits, Ladies Over Coats

AND

Latest Designs in Wollen Suitings

— CALL ON —

25-21 PATTU BROTHERS,

OPP.— Town Hall. MYSORE.

THE CANARA BANKING CORPORATION LIMITED.

ದಿ ಕೆನರಾ ಬ್ಯಾಂಕಿಂಗ್ ಕೋಪೋರೇಶನ್ ಲಿಮಿಟೆಡ್.

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ಚಿಕ್ಕ ವಾಯಿದೆಯ ಠೇವಣಾತಿಗಳು :

3 ರಿಂದ 6 ತಿಂಗಳುಗಳ ವರೆಗೆ— ಸಾಲಿಯಾನ ಶೇಕಡ 3

7 ರಿಂದ 12 ತಿಂಗಳುಗಳ ವರೆಗೆ— ಸಾಲಿಯಾನ ಶೇಕಡ 3¼

ಪಂಚವಾರ್ಷಿಕ ಸುವರ್ಣ ಠೇವಣಾತಿಗಳು— ,, ,, 4

—: ಕೊಡಗು ಸಂಸ್ಥಾನದಲ್ಲಿ ನಮ್ಮ ಶಾಖೆಗಳು :—

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

॥ ಸಾಹಿತ್ಯ ಪರಿಚಯ ॥

ಲೇ.—ಕುಮಾರಿ ಡಿ. ಎಸ್. ಸರೋಜಿನಿ, ಮಡಿಕೇರಿ.

ಸಾಹಿತ್ಯವು ಪ್ರಪಂಚದಲ್ಲಿ ಎಲ್ಲಾ ಕಲೆಗಳಿಗಿಂತಲೂ ಅತ್ಯುತ್ತಮವಾದ ಕಲೆ ಎನ್ನಿಸಿಕೊಂಡಿದೆ. ಈ ಅಮೋಘವಾದ ಕಲೆಯ ಪರಿಚಯ ಪ್ರತಿಯೊಬ್ಬ ಮಾನವನಿಗೂ ಇರಬೇಕು. ಇಷ್ಟೇ ಇರುತ್ತದೆ. ಸಾಹಿತ್ಯವು ಗತಕಾಲದ ವೈಭವವನ್ನೂ, ಜನಜೀವನದ ವೈವಿಧ್ಯವನ್ನೂ ಇತಿಹಾಸ ಪ್ರಸಿದ್ಧತೆಯನ್ನೂ ಪ್ರತಿಬಿಂಬಿಸಿಟ್ಟಿರುವ ಕೈಗನ್ನಡಿ ಇದ್ದಂತೆ. ಪುರಾತನ ಇತಿಹಾಸವನ್ನೂ, ನಾಗರಿಕತೆಯನ್ನೂ ಅಚ್ಚಳಿಯದಂತೆ ಕೃತಿಗೆ ಇಟ್ಟಿರುವ ಅಮರ ಕಲಾಕೃತಿ ಸಾಹಿತ್ಯ.

ಆಯಾಯ ಕಾಲದ ಸಮಾಜಕಲಾ ಸಾಹಿತ್ಯಕ್ಕೂ ನಿಕಟ ಸಂಬಂಧವಿದ್ದೇ ಇರುತ್ತದೆ. ಸಮಾಜದಲ್ಲಿ ಧರ್ಮಾಧರ್ಮಗಳು ಮಿಲನವಾಗಿಯೇ ಮುನ್ನಡೆದಿವೆ. ಸಾಹಿತ್ಯವೂ ಅಯಾ ರೀತಿಯಲ್ಲಿ ಸಾಗಿದೆ. ಅದಕ್ಕೆ ಯಾವ ಪಕ್ಷಪಾತವೂ ಇಲ್ಲ. ಧರ್ಮವನ್ನು ಎತ್ತಿ ಹಿಡಿದು ತೋರಿಸಿ ಜನಜೀವನಕ್ಕೆ ಜ್ಞಾನದ ಬೆಳಕನ್ನೀಯಬೇಕೆಂದೂ ಅದೇ ರೀತಿ ಅಧರ್ಮವನ್ನೂ ಎತ್ತಿ ತೋರಿಸಿ ಅನರಿಂದಾಗುವ ಹಾನಿಯನ್ನು ತಡೆಗಟ್ಟಿ ಮಾರ್ಗ ದರ್ಶಕನಾಗಬೇಕೆಂದೂ ಅದರ ಉದ್ದೇಶ್ಯ. ಸಾಹಿತ್ಯವು ಕೆಸರಿನಲ್ಲಿರುವ ಕಮಲದಂತೆ.

ಸಾಹಿತ್ಯವು ಸಮಾಜದ ಲೋಪದೋಷಗಳನ್ನೆತ್ತಿ ತೋರಿಸಬೇಕು. ಆದರೆ ಪ್ರಚೋದಕವಾಗಿರಬಾರದು. ಇಂದು ಸಾಹಿತ್ಯ ರಾಜಕೀಯ, ಆರ್ಥಿಕ, ಸ್ತ್ರೀ, ಸೇವಾ, ಬಡವ–ಬಲ್ಲಿದ ತಾರತಮ್ಯ ಮೊದಲಾದ ಇಂದಿನ ಸಮಾಜದಲ್ಲಿ ನಿತ್ಯ ತೊಡಕಾಗಿರುವ ಸಮಸ್ಯೆಗಳ ಮೇಲೆ ತನ್ನ ದೃಷ್ಟಿಯನ್ನು ಬೀರಿದೆ. ಆದರೆ ಹೆಚ್ಚಿನ ಮಟ್ಟಿಗೆ ಈ ಸಮಸ್ಯೆಗಳ ಮೇಲೆ ರಚಿತವಾಗಿರುವ ಕೃತಿಗಳು ಪ್ರಚೋದಕವಾಗಿರುವುದು ಶೋಚನೀಯವಾಗಿದೆ. ಎಂಥಾ ಸಮಸ್ಯೆಯೇ ಆಗಲಿ ಅದರ ದೃಷ್ಟಿಕೋನ ಮತ್ತು ಆದರಿಂದ ಜನತೆಗೆ ಆಗತಕ್ಕಂಥಾ ಪರಿಣಾಮದ ಮೇಲೆ ಸಾಹಿತ್ಯದ ಫಲಾಫಲತೆ ಅವಲಂಬಿಸಿಕೊಂಡಿದೆ.

ಸಾಹಿತ್ಯವು ವಾಸ್ತವಿಕವಾಗದಿದ್ದರೆ ಅದು ಅಮರ ಕೃತಿ ಎನಿಸದು. ಕೇವಲ ಭಾವನಾವರ್ಣನೆಯಿಂದ ಯಾವ ಪ್ರಯೋಜನವೂ ಓದುಗರ ಮೇಲೆ ಆಗಲಾರದು. ಅಂದರೆ ಭಾವನಾವರ್ಣನೆಯೇ ಬೇಡವೆಂದಲ್ಲ. ಅದು ಸಂಧರ್ಭಾನುಸಾರ ಇತಿಮಿತಿಯಾಗಿರಬೇಕು. ಸಾಹಿತ್ಯದಲ್ಲಿ ನಿತ್ಯಜೀವನದ ಸಮಸ್ಯೆಗಳಿಗೆ ಹೆಚ್ಚು ಪ್ರಾಧಾನ್ಯವಿರಬೇಕು. ಅಂದರೆ ನಿತ್ಯ ಜೀವನದಲ್ಲಿರುವ ತೊಡಕುಗಳನ್ನು ಪರಿಹಾರರೂಪದೊಡನೆ ಬೆಳಕಿಗೆ ತರಬೇಕು. ಸಾಹಿತ್ಯದಲ್ಲೇ ಇವನ್ನು ಹೋಗಲಾಡಿಸಲು ಸಾಧ್ಯ. ಇದರಿಂದ ಸಮಾಜಕ್ಕೂ ಸಾಹಿತ್ಯಕಲೆಗೂ ನಿಕಟ ಸಂಬಂಧ ಏರ್ಪಡುವುದು ಮಾತ್ರವಲ್ಲದೆ, ಅಂದಿನ ಜನತೆಯ ನಾಗರೀಕತೆ ವೈಭವೇತ್ಯಾದಿಗಳನ್ನು ಶಾಶ್ವತವಾಗಿ ಗಳಿಸಿ–ಉಳಿಸಿಕೊಡುವುದು. ಸಾಹಿತ್ಯವು ಜನಾನುರಾಗ ಗಳಿಸಲು ಕೃತಿಗಳಲ್ಲಿ ಸಜೀವ ಪಾತ್ರರಚನೆ ಇರಬೇಕು.

ಸಾಹಿತ್ಯ ಕಲೆಯಿಂದ ಮಾನವನ ಜೀವಿತಕ್ಕೆ ಬಹಳ ಉಪಯೋಗ ಇದೆ. ಸಾಹಿತ್ಯ ಕಲಾಭ್ಯಾಸದಿಂದ ಕೇವಲ ಸಾಹಿತ್ಯ ಕಲೆಯ ಅಭಿವೃದ್ಧಿ ಮಾತ್ರವಲ್ಲ, ಭಾಷಣ ಕಲೆಯ ಅಭಿವೃದ್ಧಿಯೂ ಆಗುತ್ತದೆ. ಒಬ್ಬ ಸಾಹಿತಿ ಅಥವಾ ಪ್ರಗತಿಶೀಲ ಲೇಖಕರು ಕೇವಲ ಲೇಖಕರಾಗಿರದೆ. ಪ್ರಚಂಡ ಭಾಷಣಕಾರರೂ ಆಗಿರುತ್ತಾರೆ. ಸಾಹಿತ್ಯವು ಇತರ ಕಲೆಗಳ ಏಳಿಗೆಗೆ ಸಹಾಯವಾಗುತ್ತದೆ. ಸಾಹಿತ್ಯೇತರ ಕಲೆಗಳ ಅಭ್ಯಾಸ ಕ್ರಮಗಳನ್ನು ತಿಳಿಸಲು ಗುರುವಿನೋಪಾದಿಯಲ್ಲಿ ಸಹಾಯಕವಾಗಿದೆ. ಸಾಹಿತ್ಯದಿಂದ ಕೇವಲ ಸಾಹಿತ ಸೇವೆ ಮಾತ್ರವಲ್ಲ, ದೇಶಸೇವೆ ಕೂಡ ಸಾಗುತ್ತದೆ. ಭಾರತ ಪೂಜ್ಯಪಿತ ಗಾಂಧೀಜಿಯವರು ಅಸ್ಪೃಶ್ಯತೆಯ ನಿವಾರಣೆಗಾಗಿ ಹಲವಾರು ಕಡೆ ಮಹಾಸಭೆಗಳಲ್ಲಿ ಪ್ರಚಂಡ ಭಾಷಣ ಮಾಡಿ ಕಾರ್ಯತಃ ಮಾಡಿ ತೋರಿಸಿಯೂ ಸಾಧ್ಯವಾಗದ ಕಾರ್ಯವನ್ನು ತಮ್ಮ ಅಮೋಘವಾದ ಲೇಖನಿಯ ಸಹಾಯದಿಂದ ಪೂರೈಸಿದರು. 'ಹರಿಜನ' ಪತ್ರಿಕೆಯನ್ನು ಸ್ಥಾಪಿಸಿ ಸಾಹಿತ್ಯದ ಮೂಲಕ ಜನತೆಗೆ ತಿಳಿಯಹೇಳಿ ತಮ್ಮ ಕಾರ್ಯ ಸಾಧಿಸಿದರು. ಆದ್ದರಿಂದ ಸಾಹಿತ್ಯದಿಂದ ಆರ್ಥಿಕ, ಸಾಮಾಜಿಕ, ರಾಜಕೀಯ ಕೆಲಸಗಳೆಲ್ಲವೂ ನಡೆಯುವುವು.

ಇನ್ನು ಸಾಹಿತಿಯ ವಿಚಾರ ಸಾಹಿತಿಯು ಆಯಾ ಕಾಲ, ದೇಶ, ಭಾಷೆ, ಜನಜೀವನ ನಾಗರೀಕತೆಯನ್ನು ಭವ್ಯ ಅಮರ ಕೃತಿಗಳಲ್ಲಿ ಗಳಿಸಿಡುವ ಓರ್ವ ಅಮರ ಸಾಮಾಜ ಶಿಲ್ಪಿ. ಎಲ್ಲರೂ ಸಾಹಿತಿಯಾಗಿ ಮೆರೆಯಲು ಸಾಧ್ಯವಿಲ್ಲ. ಸಾಹಿತಿಯಾಗಬೇಕಾದರೆ ಯೋಗ್ಯ ಪ್ರೋತ್ಸಾಹ ಆಗತ್ಯ. ಸಾಹಿತಿ ಜನತೆಯಿಂದ ಬೇರಿಲ್ಲ. ಸಾಹಿತಿಗೆ ಜನತಾ ಬೆಂಬಲ ಅತ್ಯಗತ್ಯ. ಸಾಹಿತಿಯಿಂದ ಸಮಾಜ ಏನನ್ನು ಬಯಸುತ್ತದೋ ಅದೇ ರೀತಿ ಅತನ ಜೀವನೋಪಾಯಕ್ಕೆ ತಕ್ಕ ಪರಿಹಾರವನ್ನೊದಗಿಸಲೇಬೇಕು. ಸಾಹಿತಿಯ ಕೃತಿಗಳು ಮಾತ್ರ ಸಮಾಜಕ್ಕೆ ಬೇಕು. ಅತನ ವ್ಯಕ್ತಿ ಜೀವನದ ರಕ್ಷಣೆ ಮಾತ್ರ ಬೇಕಿಲ್ಲವೆಂದರೆ ಅದು ಸಾಹಿತಿಗೆ ದ್ರೋಹವೆಸಗಿದಂತೆಯೇ ಸರಿ. ಕಾರಣ ಅತನ ಜೀವನೋಪಾಯ ಸಾಹಿತ್ಯದಿಂದಲೇ ಆಗಬೇಕಲ್ಲದೆ ಅನ್ಯರೀತಿಯಲ್ಲಿ ಜೀವನ ಸಾಗಿಸಿಕೊಂಡು ಸಾಹಿತ, ಸೇವೆಮಾಡಲು ಯಾವ ಸಾಹಿತಿಯಿಂದಲೂ ಸಾಧ್ಯವಿಲ್ಲ.

ಪ್ರಸ್ತುತ ನಮ್ಮ ಸಮಾಜದಲ್ಲಿ ಅಂದರೆ ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಕನ್ನಡಿಗರು ಕೊಟ್ಟಿರುವ ಸ್ಥಾನಮಾನಗಳು ಏನೇನೂ ಸಾಲದು. ಕೇವಲ ಕರ್ನಾಟಕ ಸಮಾಜವೇ ಏಕೆ? ಹಲವಾರು ಭಾಷಾವೈವಿಧ್ಯತೆಯಿಂದ ಕೂಡಿರುವ ಭಾರತ ಸಮಾಜವೇ ಸಾಹಿತಿಗಳಿಗೆ ಪ್ರೋತ್ಸಾಹವನ್ನೀಯುತ್ತಿಲ್ಲ. ಆದ್ದರಿಂದಲೇ ಭಾರತದಲ್ಲಿ ಯಾವ ಭಾಷೆಯ ಸಾಹಿತ್ಯವೂ ಏಳ್ಗೆ ಹೊಂದಿಲ್ಲ. ಈ ಕೊರತೆಯಿಂದ ಇಂದು ಸಾಹಿತಿಗಳು ಉತ್ತಮ ಕೃತಿಗಳನ್ನು ರಚಿಸಲಾರದೆ ಕೊರಗುತ್ತಿದ್ದಾರೆ. ಹೀಗೆ ಪ್ರಗತಿಶೀಲ, ಪ್ರಭಾವಯುತ ಸಾಹಿತ್ಯದ ನ್ಯೂನತೆಯಿಂದಲೇ ಜನತೆ ಪರಭಾಷಾವ್ಯಾಮೋಹಿತವಾಗಿದೆ. ಅಷ್ಟೇ ಅಲ್ಲದೆ ಸಂಸ್ಕೃತಿಯನ್ನೂ ತೊರೆದು ಪರಕೀಯರ ನಡೆನುಡಿ ನಾಗರೀಕತೆಯನ್ನು ಅನುಸರಿಸುತ್ತಿದೆ.

ಇನ್ನು ಸಾಹಿತಿಯ ಕೀರ್ತಿ ಎಂದೆಂದಿಗೂ ಅಮರ. ಕವೀಂದ್ರ ರವೀಂದ್ರರು ಸಾಹಿತ್ಯದಲ್ಲಿ 'ನೋಬೆಲ್' ಪಾರಿತೋಷಕವನ್ನು ಪಡೆದು ಸಾಹಿತ್ಯ ಪ್ರಪಂಚದಲ್ಲಿ ಅಜರಾಮರವಾಗಿ ವಿರಾಜಿಸುತ್ತಿದ್ದಾರೆ. ಅಲ್ಲದೆ ಇದೇ ರೀತಿ ವಿಶ್ವಸಾಹಿತ್ಯ ಕಾದಂಬರಿಗಳೆನಿಸಿರುವ, 'Les Miserables ಮತ್ತು 'Count of Mounteeristo ಮೊದಲಾದ ಆಂಗ್ಲಕೃತಿಗಳೂ ಅವುಗಳನ್ನು ಬರೆದ ಸಾಹಿತಿಗಳೂ ವಿಶ್ವದಲ್ಲೇ ಇಂದಿಗೂ ವಿರಾಜಿಸುತ್ತಿದ್ದಾರೆ. ಇವುಗಳನ್ನು ನಮ್ಮ ಚೆಲುಗನ್ನಡ ಸಾಹಿತ್ಯಕ್ಕೆ ಅನುವಾದಿಸಿದ ಲೇಖಕರು ವಂದನಾರ್ಹರು.

ಇನ್ನು ಕೇವಲ ನಮ್ಮ ಕನ್ನಡ ಸಾಹಿತ್ಯದ ವಿಷಯ ತೆಗೆದುಕೊಳ್ಳೋಣ. ಮೊತ್ತ ಮೊದಲು ಕನ್ನಡಿಗರಿಗೆ ಸಾಹಿತ್ಯ ಪರಿಚಯ ಮಾಡಿಕೊಟ್ಟವರು 'ಗಳಗನಾಥರು'. ಒಂದು ಶತಮಾನದ ಹಿಂದಿನಿಂದಲೂ ತಲೆ ಎತ್ತಿದ ಏಕೆ? ರನ್ನಪಂಪರ ಕಾಲದಿಂದಲೂ ಬೆಳೆದು ಬಂದಿರುವ ಕನ್ನಡ ಸಾಹಿತ್ಯ ಇನ್ನೂ ಚೇತರಿಸಿಕೊಳ್ಳದೆ ಇರುವುದು ತುಂಬ ಶೋಚನೀಯ ಸಂಗತಿ. ಇದನ್ನು ಗಮನಿಸುವಾಗ ನಮ್ಮ ಚೆಲುಗನ್ನಡ ಸಾಹಿತ್ಯಕ್ಕೆ ಕನ್ನಡಿಗರು ಎಷ್ಟು ಪ್ರೋತ್ಸಾಹ ಕೊಡುತ್ತಾರೆಂಬುದು ತಿಳಿಯುವುದಲ್ಲವೆ?

ಆದ್ದರಿಂದಲೇ ಕಳೆದ ೨ ವರ್ಷಗಳ ಹಿಂದೆ ನಡೆದ ವಿಶ್ವವಿದ್ಯಾನಿಲಯದ ಕನ್ನಡ ಮಾಧ್ಯಮದ ವಿಷಯದಲ್ಲಿ ಶ್ರೀ. ಎ. ಆರ್. ವಾಡಿಯವರ ಪ್ರಶ್ನೆಗೆ ಕರ್ನಾಟಕದ ಹಿರಿಯ ಹಾಗೂ ಪ್ರಗತಿಶೀಲ ಸಾಹಿತಿಗಳಾದ ಅ. ನ. ಕೃ. ಕುವೆಂಪು, ಬಸವರಾಜ್ ಕಟ್ಟೀಮನಿ, ತರಾಸು, ಕಾರಂತ ಮೊದಲಾದವರು ಪಾಶ್ಚಾತ್ಯ ದೇಶಗಳಲ್ಲಿ ಸಾಹಿತಿಗಳಿಗೆ ಸಮಾಜದಲ್ಲಿ ದೊರಕಿರುವ ಆರ್ಥಿಕ ಮತ್ತು ಸಾಮಾಜಿಕ ಹಕ್ಕು ಭಾಧ್ಯತೆಗಳು ದೊರಕಿದಲ್ಲಿ, ಅವುಗಳಿಗಿಂತಲೂ ಅಮೋಘವಾದ ಕೃತಿಗಳನ್ನು ರಚಿಸಬಲ್ಲೆವೆಂದು ಘಂಟಾಘೋಷವಾಗಿ ಹೇಳಿದರು. ಇಂದು ಕನ್ನಡ ಸಾಹಿತ್ಯದ ಅತ್ಯುತ್ತಮ ಕೃತಿಗಳೆನಿಸಿರುವ ಕಟ್ಟೀಮನಿಯವರ 'ಜ್ವಾಲಾಮುಖಿ, ಸ್ವಾತಂತ್ರ್ಯದೆಡೆಗೆ' ತ. ರಾ. ಸುರವರ 'ಚಂಕಿಯ ಬಲೆ' ಅ. ನ. ಕೃ. ರವರ ಸಂಧ್ಯಾರಾಗ, ತಾಯಿಯ ಕರುಳು, ಕುವೆಂಪುರವರ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಕಾರಂತರ 'ಸನ್ಯಾಸಿಯ ಬದುಕು, ಚೋಮನ ದುಡಿ' ಮೊದಲಾದ ಅಮೋಘ ಕೃತಿಗಳ ಸಾಕ್ಷಿಯಿಂದ ಈ ಮಹನೀಯರುಗಳ ಹಾರೈಕೆ ಕೈಗೂಡಬಹುದೆಂದು ಆಶಿಸಬಹುದು. ಅವರ ಹಾರೈಕೆ ಕೈಗೂಡಲೆಂದು ನಾವೂ ಜಗನ್ನಿಯಾಮಕನನ್ನು ಪ್ರಾರ್ಥಿಸೋಣ.

ಸೋಮವಾರಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಕೆ. ಎಂ. ನಾಗಪ್ಪನವರು

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು:—ವೀರಾಜಪೇಟೆ.

ಶಾಖೆ:—ಸಾ. ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟಗಳು
2. 12 ನೇ ನಂಬರಿನ ಒಂಟಿ ಕೊಳವಿನ ತೋಟದ ಕೋವಿಗಳು.
3. ಒಂಟಿ ಮತ್ತು ಜೋಡಿ ಕೊಳವಿನ ಕೇಸಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
5. $\frac{5}{8}$", $\frac{1}{2}$" ಮತ್ತು $\frac{3}{8}$" ಕಬ್ಬಿಣದ ಸರಳುಗಳು
6. 2", $1\frac{1}{4}$", 1" $\frac{3}{4}$" ಮತ್ತು $\frac{1}{2}$" ಕೊಳಾಯಿಗಳು. (G. I. Peps)
7. $1\frac{3}{4}$" × $\frac{5}{16}$" ಉಕ್ಕಿನ ಪಟ್ಟಿಗಳು (Spring Steel flats)
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
9. ಕೋತಿ ಮತ್ತು ಆನೆ ಮಾರ್ಕಿನ ಸಿಮೆಂಟ್ ಟಿನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮರ್ಕೆರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ
(ಗೌ. ಕಾರ್ಯದರ್ಶಿ)

ಪಿ. ಐ. ಬೆಳ್ಯಪ್ಪ,
(ಪ್ರೆಸಿಡೆಂಟ್)

ಸೀಸೆಗಳ ಜಲಪ್ರಯಾಣ.

ಲೇ:—ಶ್ರೀ ಕೆ. ಬಿ. ಐಯ್ಯಪ್ಪ, ಬಿ. ಎ., ಬಿ. ಟಿ.

ಅಪರಿಚಿತ ಪ್ರಯಾಣಿಕನೊಬ್ಬನು ಆಸ್ಟ್ರೇಲಿಯಖಂಡದಿಂದ ಹೊರಟು ನಾಲ್ಕು ವರ್ಷಗಳ ನಂತರ ಬ್ರಿಟನಿನ ಯಾರ್‌ಷೈರ್ ಕರಾವಳಿಯಲ್ಲಿ ಬಂದಿಳಿದನು. ಈ ಇಪ್ಪತ್ತನೆಯ ಶತಮಾನದ ಯಾಂತ್ರಿಕ ಪ್ರಪಂಚದಲ್ಲಿ ಆಸ್ಟ್ರೇಲಿಯದಿಂದ ಬ್ರಿಟನಿಗೆ ಬರೇ ೨೪ ತಾಸುಗಳಲ್ಲಿ ಜೆಟ್ ಪ್ಲೇನ್‌ಗಳಲ್ಲಿ ತಲಪಬಹುದಾಗಿದೆ. ಹಡಗದಲ್ಲಿ ಸಹ ಎರಡು ತಿಂಗಳುಗಳಲ್ಲಿ ತಲಪಬಹುದು. ಈ ಪ್ರಯಾಣಿಕನು ಬಹಳ ಹೆಚ್ಚು ಸಮಯವನ್ನು ತೆಗೆದುಕೊಂಡಿದ್ದಾನೆ. ಇವನ್ಯಾರೆಂದು ಬಲ್ಲಿರಾ! ಬರೇ ಒಂದು ಸೀಸೆ. (bottle) ಜೆಕ್ಯುಸ್ ಸ್ವಾರ್ಸ್ ಎಂಬಾತನು ೧೯೪೯ನೇ ಇಸವಿ ಜನವರಿ ೧ರಲ್ಲಿ ಆಸ್ಟ್ರೇಲಿಯದ ಮೇಲ್ಬ್ಬಾ ಕರಾವಳಿಯಲ್ಲಿ ಒಂದು ಸೀಸೆಯನ್ನು ಸಮುದ್ರಕ್ಕೆ ಬಿಸಾಡಿದ್ದನು. "ಈ ಸೀಸೆ ಯಾರ ಕೈಸೇರುತ್ತದೋ ಅವನು ಈ ಕೆಳಗಿನ ವಿಳಾಸಕ್ಕೆ ತಿಳಿಸಬೇಕು" ಎಂಬ ಸಂದೇಶದ ಕಾಗದ ಅದರೊಳಗಿತ್ತು. ಈ ಸೀಸೆಯನ್ನು ಪಡೆದ ಇಂಗ್ಲೆಂಡಿನ ವ್ಯಕ್ತಿ ಅದರಂತೆ ಮಾಡಿದನು.

ಸೀಸೆಗಳನ್ನು ಈ ವಿಧವಾಗಿ ತೇಲಲು ಬಿಡುವ ಕಾರಣಗಳು ಬಹುವಿಧವಾಗಿವೆ. ಢಿಕ್ಕಿ ಹೊಡೆದ ಹಡಗಿನ ನಾವಿಕರು ರಕ್ಷಣೆ ಬೇಡಿಕೆಗಾಗಿ ಈ ರೀತಿ ಮಾಡುತ್ತಾರೆ; ಸಮುದ್ರ ಪ್ರವಾಹಗಳ ದಿಕ್ಕುಗಳನ್ನು ಕಂಡುಹಿಡಿಯಲಿಕ್ಕಾಗಿಯೂ ಮತ್ತು ಮೀನುಗಳು ವಲಸೆ ಹೋಗುವದನ್ನು ಅನ್ವೇಷಿಸುವದಕ್ಕಾಗಿಯೂ ವಿಜ್ಞಾನಿಗಳು ಸೀಸೆಗಳನ್ನು ಬಿಸಾಡುವರು ತಮಾಷೆಗಾಗಿ ಸಹ ಬಿಸ್ಸಾಡುವವರಿದ್ದಾರೆ. ಇಲ್ಲಿಯ ವರೆಗೆ ಈ ಕೆಲಸದಲ್ಲಿ ಅಧಿಕವಾಗಿ ಪ್ರವರ್ತರಾಗಿರುವ ರಾಷ್ಟ್ರವೆಂದರೆ ಆಸ್ಟ್ರೇಲಿಯ ಖಂಡ. ಅಮೇರಿಕದಿಂದ ಬಿಟ್ಟ ಸೀಸೆಗಳು ಆಸ್ಟ್ರೇಲಿಯಾ ಅಥವಾ ಇಂಡಿಯಾದಲ್ಲಿ ಸಿಗುವದೆಂದರೆ ದುರ್ಲಭವೇ ಸರಿ. ಆದರೆ ಹಲವು ದೊರೆತಿವೆ; ಮಾತ್ರವಲ್ಲ, ಇಂತಹ ಸಣ್ಣ ವಸ್ತುಗಳು ಬಹು ವರ್ಷಗಳ ವರೆಗೆ ಸಮುದ್ರದ ನಾನಾ ರೀತಿಯ ಹವೆ ಮತ್ತು ಅಲೆಗಳೆಡೆಯಲ್ಲಿದ್ದು ಕೊಂಡು ಬಹು ದೂರ ಪ್ರಯಾಣ ಮಾಡಿ ಇನ್ನೊಬ್ಬರ ಕೈಸೇರುವದೆಂದರೆ ಅತ್ಯಾಶ್ಚರ್ಯವೇ ಸರಿ.

೧೯೩೩ನೇ ವರ್ಷದಲ್ಲಿ ಡೋರ್‌ಸೆಟ್ಸ್‌ನ ಸ್ವೈಡ್‌ವೇಂಡ್ ಕೊಲ್ಲಿಯಲ್ಲಿ ಒಂದು ಸೀಸೆಯನ್ನು ಬಿಡಲಾಯಿತು. ಹನ್ನೊಂದು ತಿಂಗಳ ನಂತರ ನ್ಯೂಜಿಲೇಂಡಿನ ಕ್ರೈಸ್ಟ್‌ಚರ್ಚ್ ಕೊಲ್ಲಿಯಲ್ಲಿ ಇದನ್ನು ತೆಗೆಯಲಾಯಿತು. ಯುವಕನೊಬ್ಬನು ತನ್ನ ವಿಳಾಸವನ್ನು ಕಾಗದದಲ್ಲಿ ಬರೆದು, ಅದನ್ನು ಒಂದು ಸೋಡಾ ಸೀಸೆಯಲ್ಲಿಟ್ಟು ಭದ್ರಪಡಿಸಿ, ಎವನ್ ನದಿಗೆ ಬಿಸಾಡಿದನು. ಹತ್ತು ತಿಂಗಳ ನಂತರ ವೆಲ್ಲಿಂಗ್‌ಟನ್ ಬಂದರದಲ್ಲಿ ಬೆಸ್ತನಿಗೆ ಇದು ಸಿಕ್ಕಿತು. ಈ ಬೆಸ್ತನು ಹುಡುಗನಿಗೆ ಈ ಕೆಳಗಿನಂತೆ ತಿಳಿಸಿದನು.

"ನಾನು ನನ್ನ ದೋಣಿಯಲ್ಲಿರುವಾಗ ತೇಲುತ್ತಿರುವ ಸೀಸೆಯೊಂದು ನೀರಿನಲ್ಲಿ ಗೋಚರವಾಯಿತು. ತೇಲುತ್ತಿರುವ ಬಾಟ್ಲಿಗಳಲ್ಲಿ ಸಂದೇಶಗಳಿರುತ್ತವೆಂದು ನಾನು ಕೇಳಿದ್ದರಿಂದ ಅತೀ ಕುತೂಹಲದಿಂದ ಹೆಕ್ಕಿ ತೆಗೆದು ನೋಡಲು ಮಾಸಿದ ಕಾಗದ ಚೂರಿನಲ್ಲಿ ನಿನ್ನ ವಿಳಾಸ ಬರೆದಿತ್ತು. ಇದನ್ನು ನೀನು ಎವನ್ ನದಿ ತೀರದಲ್ಲಿ ಸ್ನಾನಮಾಡುವಾಗ್ಯೆ ಬಿಸಾಡಿದ್ದಿರಬಹುದೆಂದು ನಾನು ತಿಳಿಯುತ್ತೇನೆ"

ಉತ್ತರ ಐರ್‌ಲೇಂಡಿನ ಬೆಲ್‌ಫಾಸ್ಟ್ ನಗರದ ಸಂಸ್ಥೆಯು ಒಂದು ಸೋಡಾ ಸೀಸೆಯನ್ನು ತೇಲಲು ಬಿಟ್ಟರು. ಅದು ಆಸ್ಟ್ರೇಲಿಯಾದತ್ತ ಪ್ರಯಾಣ ಮಾಡುತ್ತ ಟಾಸ್ಮೇನಿಯ ದ್ವೀಪದ ದಕ್ಷಿಣ ಭಾಗದಲ್ಲಿ ಅಂದಾಜು ಒಂದು ಸಾವಿರ ಮೈಲು ದೂರದಲ್ಲಿರುವ ಮೆಕ್ವಾ ದ್ವೀಪದಲ್ಲಿ ತಂಗಿದ್ದ ಅಂಟಾರ್ಕಟಿಕ್ ಪ್ರದೇಶದ ಶೋಧಕರಿಗೆ ಸಿಕ್ಕಿತು. ಬೈಬಲ್ಲಿನ ಕೆಲವು ಸಾರಾಂಶವನ್ನು ೧೯ ಭಾಷೆಗಳಲ್ಲಿ ತರ್ಜುಮೆ ಮಾಡಿ ಬರೆದ ಕಾಗದಗಳಿದ್ದುವು ಅದರೊಳಗೆ.

೧೯೩೫ರಲ್ಲಿ ಒಂದು ಸೀಸೆಯು ಅಂದಾಜು ೨೪೪೭ ದಿನಗಳ ತನಕ ಸಮುದ್ರದಲ್ಲಿ ತೇಲುತಿದ್ದು ಕೊನೆಗೆ ಆಸ್ಟ್ರೇಲಿಯಕ್ಕೆ ಬಂದು ತಲಪಿತು. ಮೆಗಲನು ಭೂಪ್ರದಕ್ಷಿಣೆ ಬರಲು ಮೂರು ವರ್ಷ ಸಮಯ ತೆಗೆದು ಕೊಂಡನು. ಆದರೆ ಈಗ ಆಸ್ಟ್ರೇಲಿಯದಿಂದ ಇಂಗ್ಲೆಂಡಿಗೆ ಎರಡು ದಿನಗಳೊಳಗೆ ವಿಮಾನದಲ್ಲಿ ತಲಪಬಹುದು ಹಡಗದಲ್ಲಿ ಒಂದು ತಿಂಗಳಲ್ಲಿ ಮುಟ್ಟಬಹುದು. ಆದರೆ ಈ ಸೀಸೆಯು ತನ್ನ ಸ್ವಂತ ಸಮಯವನ್ನು ತೆಗೆದುಕೊಂಡಿತು. ಅಂದಾಜು ಏಳು ವರ್ಷ.

ಇವು ವಿಜ್ಞಾನಿಗಳು ಸಮುದ್ರದ ಪ್ರವಾಹಗಳನ್ನು ಕಂಡು ಹಿಡಿಯಲು ಬಿಟ್ಟದ್ದಾಗಿದೆ.

ನ್ಯೂಸೌತ್‌ವೇಲ್ಸ್ ಸಿಪಾಯಿಯೊಬ್ಬನು ಒಂದು ಸೋಡಾಸೀಸೆಯೊಳಗೆ ಒಂದು ಸಂದೇಶವನ್ನು ಹಾಕಿ ೧೯೧೬ನೇ ಏಪ್ರಿಲ್‌ನಲ್ಲಿ (ಒಂದನೇ ಜಾಗತಿಕ ಯುದ್ಧದಲ್ಲಿ) ಸಮುದ್ರದಲ್ಲಿ ಬಿಸಾಡಿದ್ದನು. ೩೭ ವರ್ಷಗಳ ನಂತರ ಈ ಸೀಸೆಯು ಟಾಸ್ಮೇನಿಯ ದ್ವೀಪದ ನಿವಾಸಿಯೊಬ್ಬಳ ಕೈಸೇರಿತು ಅವಳು ಅದರೊಳಗಿದ್ದ ಸಂದೇಶಗಾರನಿಗೆ ಈ ಸೀಸೆಯನ್ನು ರವಾನಿಸಿದಳು. ಇದರ ಪರಿಣಾಮವೇನೆಂದರೆ ಅವರಿಬ್ಬರ ವಿವಾಹವಾಯಿತು.

ಯುದ್ಧ ಹಡಗದಿಂದ ಬಿಸಾಡಲ್ಪಟ್ಟ ಸೀಸೆಯೊಂದು ಆಸ್ಟ್ರೇಲಿಯದ ಒಬ್ಬ ಮಹಿಳೆಗೆ ರಿಚ್ ಭೂಶಿರದ ಹತ್ತಿರ ಸಿಕ್ಕಿತು. ಮಿಸ್ ಸೆವರಿನ್ ಎಂಬಾಕೆ ಲೆಫ್ಟಿನೆಂಟ್ ಹೆರಿಬ್ಲಂಟ್ ಎಂಬವನ ಪತ್ನಿಯಾಗಿದ್ದಳು. ಇವಳಿಗೆ ಈತನು ಸಾಮಾನ್ಯವಾಗಿ "ಸೀಸೆ ಟಪ್ಪಾಲಿನ" ಮುಖಾಂತರವಾಗಿ ಪತ್ರ ಕಳುಹಿಸುತ್ತಿದ್ದನು. ಆದರೆ ಈ ಪತ್ರ ಸಿಕ್ಕಲು ೨೨॥ ವರ್ಷವಾಯಿತು. ಯೂಲಿಸಸ್ "Ulysses" ಎಂಬ ಯುದ್ಧ ಹಡಗ ಯುದ್ಧರಂಗಕ್ಕೆ ತೆರಳುತ್ತಿರುವಾಗ ಒಂದು ಸಂದೇಶವನ್ನು ಸೀಸೆಯೊಳಗೆ ತುರುಕಿ ತನ್ನ ಪತ್ನಿಗೆ ಪೋಸ್ಟು ಮಾಡಿದ್ದನು. ಸಂದೇಶದ ಸಾರಾಂಶ ಹೀಗಿತ್ತು.

"ದಕ್ಷಿಣ ಅಕ್ಷಾಂಶ ೩೦° ಕೋಲಿ. ಶನಿವಾರ, ಯೂಲಿಸಸ್ ನಂ. A ೩೮. ಹಡಗದಲ್ಲಿ ಪ್ರಯಾಣ ಸಾಗುತ್ತಿದೆ. ಈಗ ತಾನೇ ಸಂತುಷ್ಟವಾದ ಭೋಜನವಾಯಿತು. ಈಗ ಹೊಟ್ಟೆ ಉಬ್ಬಿದೆ ಈ ರಾತ್ರಿ ಸಂಗೀತ ಮೇಳವಿದೆ. ನನ್ನ ಪಾತ್ರ ಅದರಲ್ಲಿ ಸರಿಯಾಗಬಹುದೆಂದು ತೋರುತ್ತದೆ. ಆಸ್ಟ್ರೇಲಿಯ ಹೇಗಿದೆ. ಕೈಸರನ್ನು ಹಿಡಿದು ತರುತ್ತೇವೆ. ಹೆಚ್. ಎಸ್. ಬ್ಲಂಟ್, ೭ನೇ ಪಂಗಡ, ನಂ. ೩, ಸಂದೇಶ ಖಾತೆ, ಎ. ಐ. ಎಫ್ ಈಜಿಪ್ಟಿಗೆ ಪ್ರಯಾಣ." ಪತ್ರದ ಮೂಲೆಯಲ್ಲಿ ಈ ಕೆಳಗಿನಂತೆ ಬರೆದಿತ್ತು.

"ಈ ಸಂದೇಶವನ್ನು ದಯವಿಟ್ಟು ಜಿ. ಎಲ್. ಸೆವರಿನ್, ನಂ. ೯, ಯ್ಯೂಡಂಡ್ಸ್, ದ, ಆಸ್ಟ್ರೇಲಿಯ. ಇದಕ್ಕೆ ತಲಪಿಸಿ" ಈ ಸೀಸೆಯನ್ನು ಪಡೆದ ಹೆಂಗಸು ಸ್ವತಃ ಈ ಪತ್ರಿಗೆ ಕಳುಹಿಸಿದಳು. ಆವಾಗ ಸೀಸೆಯ ಯಜಮಾನನು ತೀರಿಹೋಗಿದ್ದನು.

ಬೋರ್ ಯುದ್ಧ ಸಮಯದಲ್ಲಿ "ಓರಿಯಂಜ್" ಎಂಬ ಹಡಗದಿಂದ ಜೋನ್ಸ್ ಎಂಬ ಸಿಪಾಯಿಯು ಒಂದು ಸೋಡಾ ಸೀಸೆಯನ್ನು ಸಮುದ್ರದಲ್ಲಿ ಬಿಟ್ಟಿದ್ದನು. ೩೫ ವರ್ಷಗಳ ನಂತರ ಇದು ಆಲ್ಬೇನಿಯಾಕ್ಕೆ ತಲಪಿತು. ಸೀಸೆಯು ಸರಿಯಾಗಿತ್ತು. ಜೋನ್ಸನಿಗೆ ಈ ವರ್ತಮಾನ ತಲಪುವಾಗ ೭೦ ವಯಸ್ಸಾಗಿತ್ತು.

ಈ ರೀತಿಯಾಗಿ ತಮಾಷೆಗಾಗಿಯೂ ಶೋಧನೆಗಾಗಿಯೂ ಸೀಸೆಗಳನ್ನು ಸಮುದ್ರದಲ್ಲಿ ಬಿಡುವರು. ಆದರೆ ಅಲ್ಲೋಲಕಲ್ಲೋಲವಾಗಿ ಬಿರುಗಾಳಿಯಿಂದಲೂ, ಬಿರುಸಾದ ಅಲೆಗಳಿಂದಲೂ ಕೂಡಿರುವ ಸಾಗರಗಳಲ್ಲಿ ಈ ಸಣ್ಣ ಸೀಸೆಗಳು ಹಾಳಾಗದೆ ಉಳಿಯುವದು ನಮಗೆಲ್ಲಾ ಆಶ್ಚರ್ಯವಾಗಿ ತೋರುತ್ತದೆ

—ಧರ್ಮಯುಗದಿಂದ.

Coorg Forest Department

Auction Sale Notice:

About 1,?0,000 cft of Teak, Rosewood, Honne, Nandi, (Venteak) etc will be sold by auction at the Coorg Timber Depot, Hunsur. on Saturday the 8th August 1953, at 11 A. M.

For conditions of the sale etc apply to the Conservator of Forests Coorg, Mercara.

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಶೇಕಡ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ಸಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ,
ಪ್ರೆಸಿಡೆಂಟ್ & ಖಜಾಂಚಿ.

Edited Printed and Published by P. I. BELLIAPPA at 'KODAGU' Press Mercara, for 'Kodagu' Ltd

ಕೊಡಗು

ಮೇಜರ್ ಜನರಲ್ ಕೊಡಂಡೆರ ಸುಬ್ಬಯ್ಯ ತಿಮ್ಮಯ್ಯನವರು

ಪಶ್ಚಿಮ ಕಮಾಂಡಿನ ಸೇನಾ ನಾಯಕರಾದ ಇವರು ಮೂರು ತಿಂಗಳ ರಜೆಯಲ್ಲಿ ಮಡಿಕೇರಿಯಲ್ಲಿರುವರು. ಕೊರಿಯಾ ಯುದ್ಧ ಕೈದಿಗಳ ವಿನಿಮಯ ಒಪ್ಪಂದವು ಕಾರ್ಯಕಾರಿ ಆದರೆ ಇಂಡಿಯಾ ಸರಕಾರವು ಇವರನ್ನು ಕೊರಿಯಾ ಯುದ್ಧ ಕೈದಿ ಸಂಧಾನ ಸಮಿತಿಯ ಅಧ್ಯಕ್ಷರಾಗಿ ನಿಯುಕ್ತ ಕಳುಹಿಸಲಿದೆಯೆಂದು ದಿಲ್ಲಿಯಿಂದ ವರದಿ ಬಂದಿದೆ.

ವಾರ್ಷಿಕ ಚಂದಾ ರೂ. ೫—೦—೦

ಸಂಪುಟ ೩೨) (ಸಂಚಿಕೆ ೮

ಶುಕ್ರವಾರ

೨೪-೭-೧೯೫೩

24/11

KODAGU KANNADA WEEKLY MERCARA

ಸಾರದ ಕಥೆ.

ತಲೆ ಬುರುಡೆ!

ಲೇ:- "ಸಮೀರ ಕುಮಾರ"

"ಅಂಣ್ಣಯ್ಯಾ, ಅಂಣ್ಣಯ್ಯಾ, ಅಲ್ಲಿ ಯಾರೋ ಸತ್ತು ಹೋಗಿದ್ದಾರೆ. ನೋಡು ಬಾ. ಬೇಗ ಬಾ" ಎಂದು ಕೂಗುತ್ತಾ ಶಾಂತಿ ಓಡಿ ಬಂದಳು. ಕುವೆಂಪುರವರ "ಕಾನೂರು ಸುಬ್ಬಮ್ಮ ಹೆಗ್ಗಡತಿ"ಯಲ್ಲಿ ತಲ್ಲೀನನಾಗಿ ಹೋಗಿದ್ದ ಸಮೀರನಿಗೆ ಅವನ ಪುಟ್ಟ ತಂಗಿಯ ಆ ಕೂಗು ಕೇಳಿಸಲೇ ಇಲ್ಲ. ಅವಳು ಪುನಃ ಕೂಗತೊಡಗಿದಳು. "ಏನೇ ಅದು" ಎಂದು ಪ್ರಶ್ನಿಸುತ್ತಾ. ಮನಸ್ಸಿಲ್ಲದ ಮನಸ್ಸಿನಿಂದ ಪುಸ್ತಕವನ್ನು ಮುಚ್ಚಿ ಯಾಂತ್ರಿಕವಾಗಿ ಎದ್ದು ಅವಳನ್ನು ಹಿಂಬಾಲಿಸತೊಡಗಿದನು. "ಬೇಗ ಓಡಿ ಬಾ ಅಂಣ್ಣಯ್ಯಾ. ಯಾರೋ ಸತ್ತು ಹೋಗಿದ್ದಾರೆ ಅವರ ತಲೆ ಮಾತ್ರ ಅಲ್ಲಿ ಇದೆ." ಎಂದೆನ್ನುತ್ತಾ ಅವಳು ಪುನಃ ಬಂದ ದಾರಿ ಹಿಡಿದು ಓಡ ತೊಡಗಿದಳು! "ಎಲ್ಲಿಯೇ" ಎಂದು ಪ್ರಶ್ನಿಸುತ್ತಾ, ಅವಳ ಉತ್ತರವನ್ನು ಕಾಯದೆ ಸಮೀರನು ಗಾಬರಿಯಿಂದ ಅವಳನ್ನು ಹಿಂಬಿಟ್ಟು ವೇಗವಾಗಿ ಅವಳು ಕೈ ತೋರಿಸಿದತ್ತ ಧಾವಿಸಿದನು. ತೋಟದಲ್ಲಿ ಕೆಲಸ ಮಾಡುತ್ತಿದ್ದ ಆಳುಗಳೇನಾದರೂ ಹೊಡೆದಾಡಿ ಏನಾದರೂ ಅನಾಹುತವಾಗಿಹೋಯಿತೇ ಎಂಬುದೇ ಅವನ ಶಂಕೆಯಾಗಿತ್ತು!

ಆದರೆ ದೂರದಲ್ಲಿ ಕಿತ್ತಳೆ ತೋಟದಂಚಿನಲ್ಲಿ ಅವರ ಮಕ್ಕಳೆಲ್ಲರೂ ಪರ್ಸುಲಾಕಾರದಲ್ಲಿ ಕುಳಿತು ಎಲೆ ಅಡಿಕೆಗಳನ್ನು ಹಾಕಿಕೊಳ್ಳುತ್ತಾ (ತಾಂಬೂಲ ಸೇವಿಸುವದು ಎಂದರ್ಥ) ಏನೇನೋ ಹರಟೆ ಕೊಚ್ಚುತ್ತಿರುವದು ಸಮೀರನಿಗೆ ಗೋಚರವಾಗಿ ತುಸು ಸಮಾಧಾನವಾಯಿತು. "ಏನಾದರೂ ಕೊಲ್ಲು ಕೊಲೆಯಾಗಿದ್ದರೆ ಅವರು ಇಷ್ಟು ಹಾಯಾಗಿ ಕುಳಿತಿರುತ್ತಿದ್ದರೇ" ಎಂದು ತನ್ನ ಮನದ ಉದ್ವೇಗವನ್ನು ಬದಿಗೊತ್ತಿ, ವೇಗವನ್ನು ಕಡಿಮೆ ಮಾಡಿ ಸಮಾಧಾನದಿಂದ ಮುಂದುವರಿಯತೊಡಗಿದನು. ಶಾಂತಿಯು ಹಿಂದಿನಿಂದ ಇನ್ನೂ ಏನೇನೋ ಹೇಳುತ್ತಾ ಓಡಿಯೋಡಿ ಬರುತ್ತಿದ್ದಳು. ಯಜಮಾನರು ಅನಿರೀಕ್ಷಿತವಾಗಿ ತಮ್ಮತ್ತ ಬರುತ್ತಿರುವದನ್ನು ಕಂಡ ಸೇವಕರು ಬೆಚ್ಚಿಬಿದ್ದು, ಥಿಗ್ಗನೆ ಜಿಗಿದು, ಕತ್ತಿ ಗುದ್ದಲಿಗಳನ್ನು ಕೈಗೆತ್ತಿಕೊಂಡು ತಮ್ಮ ತಮ್ಮ ಕರ್ತವ್ಯಗಳಲ್ಲಿ ತೊಡಗಿದರು.

ಸಮೀರನು ಬಂದವನೇ ಬೋಳನನ್ನು ಪ್ರಶ್ನಿಸಿ "ಮೂಪ, (ಆಳುಗಳ ಗುಂಪಿನ ಗುರಿಕಾರನೆಂದರ್ಥ!) ಇಲ್ಲೆಲ್ಲಿಯೋ ಯಾರೋ ಸತ್ತು ಹೋಗಿದ್ದಾರಂತೆ ಹೌದೇ? ನೋಡು, ಈ ಮಗುವು ಏನೆನ್ನೋ ಹೇಳುತ್ತಿದೆ" ಎಂದು ಪ್ರಶ್ನಿಸುತ್ತಾ, ಅಷ್ಟರಲ್ಲಾಗಲೇ ಬಂದು ತನ್ನ ಹಿಂಬದಿಯಲ್ಲಿ ನಿಂತಿದ್ದ ಶಾಂತಿಯನ್ನು "ಏನೇ ನೀನು ಹೇಳುತ್ತಿರುವದು" ಎಂದು ಅವನ ಎದುರಿಗೆ ಅವಳನ್ನು ನಿಲ್ಲಿಸಿದನು. ಬೋಳನು ದೇಶಾವರದ ನಗೆಯೊಂದನ್ನು ಬೀರುತ್ತಾ, ತನ್ನ ಬಾಯಲ್ಲಿದ್ದ ತಾಂಬೂಲವನ್ನು ಪಿಚಕ್ಕನೆ ನೆಲಕ್ಕುಗುಳಿ ಎರಡು ಹೆಜ್ಜೆ ಮುಂದೆ ಬಂದು "ಅಯ್ಯೋ, ಏನೂ ಇಲ್ಲ ಒಡೆಯಾ! ಕಿತ್ತಳೆ ಗಿಡಗಳನ್ನು ನೆಡಲು ನಾವು ಕುಣಿತೋಡುತ್ತಿದ್ದಾಗ ಯಾರದೋ ಒಂದು ತಲೆ ಬುರುಡೆಯು ನನ್ನ ಗುದ್ದಲಿಯ ಬಾಯಿಗೆ ಸಿಕ್ಕಿ, ಅದೋ ನೋಡಿ ಅಲ್ಲಿ ತೆಗೆದಿಟ್ಟಿದ್ದೇನೆ. ಆಗ ಇಲ್ಲಿ ಆಟವಾಡುತ್ತಿದ್ದ ಮಗುವು ಅದನ್ನು ಕಂಡು ಅದು ಏನು ಎಂದು ಕೇಳಿತು. ಅದು ಯಾರದೋ ಸತ್ತವರ ತಲೆ ಬುರುಡೆ ಎಂದು ನಾನು ಹೇಳಿದೆ. ಅದನ್ನೇ ಅವಳು ನಿಮ್ಮೊಡನೆ 'ಯಾರೋ ಸತ್ತು ಹೋಗಿದ್ದಾರೆ' ಎಂದು ಹೇಳಿರಬೇಕು" ಎಂದು ನಡೆದ ವೃತ್ತಾಂತವನ್ನು ವಿವರಿಸಿದನು. ಅವನು ಮಾತು ನಿಲ್ಲಿಸುವದನ್ನೇ ಕಾಯುತ್ತಿದ್ದ ಶಾಂತಿಯು ಅಲ್ಲಿಯೇ ಪಕ್ಕದ ಮಣ್ಣಿನ ದಿಣ್ಣೆಯ ಮೇಲಿರಿಸಿದ್ದ ಆ ಬುರುಡೆಯನ್ನು ಕೈಯಿಂದ ಮುಟ್ಟಿ "ನೋಡಿಲ್ಲಿ ಸತ್ತ ಮನುಷ್ಯ" ಎಂದು ತನ್ನ ಆಶ್ಚರ್ಯವನ್ನೆಲ್ಲಾ ವ್ಯಕ್ತಗೊಳಿಸಿದಳು! ಆಳು ಮಕ್ಕಳೆಲ್ಲರೂ ಗೊಳ್ಳೆಂದು ನಕ್ಕುಬಿಟ್ಟರು. ಶಾಂತಿಗೆ ತುಸು ಮಾನಭಂಗವಾದಂತಾಯಿತು. ಹಾಗೆಯೇ ಅಣ್ಣನ ಮುಖವನ್ನೊಮ್ಮೆ ಈಕ್ಷಿಸಿದಳು. ಆದರೆ ಅವನು ಮಾತ್ರ ನಗುತ್ತಿರಲಿಲ್ಲ. ಬದಲು ಅವನ ವದನವು ಗಂಭೀರವಾಗಿ ತೋರುತ್ತಿತ್ತು. ಅದನ್ನರಿತ ಶಾಂತಿಗೆ ತಾನು ಅಣ್ಣನಿಗೆ ತಿಳಿಸಿದುದು ನಿಜವಾಗಿಯೂ ಒಂದು ಮುಖ್ಯವಾದ ವಿಷಯವೇ ಎಂದು ಸಮಾಧಾನವಾಯಿತು.

ಕ್ಷಣಕಾಲ ಹಾಗೆಯೇ ಧ್ವಜಸ್ತಂಭದಂತೆ ಮೌನವಾಗಿ ನಿಂತಿದ್ದು ಅನಂತರ "ಶೂಂ, ಏಳಮ್ಮ ಮನೆಗೆ ಹೋಗೋಣ" ಎಂದೆನ್ನುತ್ತಾ ನಿಟ್ಟುಸಿರೊಂದನ್ನು ಅವನು ಹೊರಸೂಸಿದನು ಹಿಂತಿರುಗುತ್ತಾ ದಾರಿಯಲ್ಲಿ "ಯಾರದಣ್ಣಯ್ಯಾ ಅಷ್ಟು ಬಿಳಿದಾದ ಆ ತಲೆ?" ಎಂದು ಶಾಂತಿಯು ಪ್ರಶ್ನಿಸಿದಳು. ಅವಳ ಮುಗ್ಧ ಹಾಗೂ ಮಾರ್ಮಿಕವಾದ ಆ ಪ್ರಶ್ನೆಯು ಸಮೀರನನ್ನು ಒಮ್ಮೆ ಚಿಂತಾಂಬುಧಿಯಲ್ಲಿ ಮುಳುಗಿಸಿತು. ಅಂತೂ "ಅದು ನಿನ್ನ ಅಕ್ಕಯ್ಯನದು ಮಗೂ" ಎಂದಷ್ಟೇ ಹೇಳಿ ಅವಳು ಆ ವಿಷಯದಲ್ಲಿ ಹೆಚ್ಚು ಪ್ರಶ್ನಿಸದಂತೆ ತಡೆಗಟ್ಟಲು "ಹೋಗಮ್ಮಾ ಒಳಗೆ ಅಮ್ಮ ಕರೆದರು" ಎಂದು ಅವಳನ್ನು ಅಡುಗೆ ಕೋಣೆಯತ್ತ ಕಳುಹಿಸಿಕೊಟ್ಟು, ಮೇಜಿನ ಮೇಲಿದ್ದ ಪುಸ್ತಕವನ್ನು ಕೈಗೆತ್ತಿಕೊಂಡು, ತಾನು ಉಪ್ಪರಿಗೆಯನ್ನೇರಿ, ಆರಾಮಾಸನದಲ್ಲಿ ಕುಳಿತು ಪುನಃ ಓದಲುಪಕ್ರಮಿಸಿದನು. ಆದರೆ ಆ ಪುಸ್ತಕದ ಪುಟಗಳಲ್ಲಿ ಅಕ್ಷರಗಳು ಕಾಣಿಸುವದರ ಬದಲು ಅವನ ಕಣ್ಣುಗಳಿಗೆ ಆ ತಲೆ ಬುರುಡೆಯೇ ಎದ್ದು ಕಾಣಿಸತೊಡಗಿತು. ನೋಡುತ್ತಿದ್ದಂತೆಯೇ ಅದು ಮನುಷ್ಯಾಕಾರವನ್ನೂ ತಾಳಿತು! ಅನಂತರ ಸ್ತ್ರೀರೂಪವನ್ನೂ ತಾಳಿತು!. ಕಿಲಕಿಲನೆ ನಗತೊಡಗಿತು! ಮಾತನಾಡಲೂ ಪ್ರಾರಂಭಿಸಿತು!

"ಅಂಣ್ಣಯ್ಯಾ, ಇಷ್ಟು ಬೇಗ ಮರೆವಾಯಿತೇ ನಿನಗೆ? ನಾನು ಯಾರೆಂದು ತಿಳಿಯಿತೇ? ನಾನು ನಿನ್ನ ತಂಗಿ ಶಕುಂತಲೆಯಲ್ಲವೇ! ನೋಡು ನನ್ನನ್ನು ಚೆನ್ನಾಗಿ ನೋಡು!"

"ಹೌದು, ನೀನು ನನ್ನ ದಿವಂಗತ ತಂಗಿ ಶಕುಂತಲೆಯೆಂದು ನನಗಾಗಲೇ ತಿಳಿಯಿತು. ನಮ್ಮನ್ನೆಲ್ಲಾ ತೊರೆದು ಇಷ್ಟು ಬೇಗನೆ ನೀನು ಪರಲೋಕ ಪ್ರಯಾಣ ಮಾಡುವದೇ? ಯಾಕೆ ತಂಗಿ, ನಮ್ಮನ್ನೆಲ್ಲಾ ನಿನಗೆ ಬೇಡವಾಗಿ ಹೋಯಿತೇ?"

ಅಂಣ್ಣಯ್ಯಾ, ಎಲ್ಲವೂ ಭಗವಂತನಾಟ! ನಿಮ್ಮೆಲ್ಲರನ್ನು ಬೇಡವಾಗಿ ನಾನು ಹೋದುದಲ್ಲ. ಆದರೆ ಆ ಭಗವಂತನಿಗೆ ನನ್ನನ್ನು ಬೇಕಾಯಿತು! ಅಗ್ನಿಯ ರೂಪದಲ್ಲಿ ಕರೆ ಕಳುಹಿದ! ನಾನು ಹೋದೆ! ಆ ಕಥೆಯೆಲ್ಲವೂ ನಿನಗೆ ಚೆನ್ನಾಗಿ ತಿಳಿದಿರಬಹುದಲ್ಲವೇ?"

"ಇಲ್ಲ. ಅದನ್ನು ಇನ್ನೂ ಚೆನ್ನಾಗಿ ಅಮ್ಮ ನನಗೆ ಹೇಳಿಕೊಟ್ಟಿಲ್ಲ. ಕೇಳಿ ಅವಳ ದುಃಖವನ್ನು ಕುದುರಿಸುವದು ಬೇಡವೆಂದು ಅದನ್ನು ನಾನು ಕೇಳಲೂ ಇಲ್ಲ"

ಹಾಗಾದರೆ ಕೇಳು. ನೀನು ಅಂದೊಮ್ಮೆ ರಜೆಯಲ್ಲಿ ಮನೆಗೆ ಬಂದು ಹೋದೆಯಲ್ಲವೇ? ಹೋಗುವಾಗ ನನ್ನ ಗಲ್ಲವನ್ನು ತಟ್ಟಿ, ಪ್ರೀತಿಯಿಂದ 'ನಾನು ಹೋಗಿ ಬರುವೆ ಶಾಕೂ' ಎಂದು ಕೇಳಿದೆ. ಆಗ ಇನ್ನೊಮ್ಮೆ ಬರುವಾಗ ನನಗೇನನ್ನು ತರುವೆ ಎಂದು ಪ್ರಶ್ನಿಸಿದೆ. 'ನಿನಗೊಬ್ಬ ದುಷ್ಯಂತನನ್ನು ತರುವೆ' ಎಂದು ತಮಾಷೆ ಮಾಡಿದೆ ನೀನು, ಅದಕ್ಕೆ ನಾನು ಮುನಿದು 'ನಿನಗೆ ನನ್ನನ್ನೊಮ್ಮೆ ಈ ಮನೆಯಿಂದ ಯಾರೊಡನಾದರೂ ಹೊರದೂಡಿ ಬಿಟ್ಟರೆ ಸಾಕು ಎಂದಿದೆ ಏನೋ' ಎಂದು ಕೊಂಕು ನುಡಿದು ನಿನ್ನನ್ನು ಬೀಳ್ಕೊಟ್ಟು ನಾನೂ ಅಮ್ಮನೂ ಹಿಂತಿರುಗಿದೆವು"

"ನಿಜ, ಅದೆಲ್ಲವೂ ಗೊತ್ತು" ಸಮೀರನೆಂದ.

"ನೀನು ಅತ್ತ ಹೋದಂದಿನಿಂದಲೇ ನನಗೆ ಹಿಂದೆ ಎಂದೂ ಉಂಟಾಗದಷ್ಟು ಅಸಮಾಧಾನ, ಬೇಸರಿಕೆಗಳು ತಲೆದೋರಿದ್ದವು. ಕುಳಿತರೂ ಸಮಾಧಾನವಿಲ್ಲ, ನಿಂತರೂ ಸಮಾಧಾನವಿಲ್ಲ; ಮಲಗಿಕೊಂಡರೂ ಸಮಾಧಾನವಿಲ್ಲ. ಹಾಗೆಯೇ ಕೆಲವು ದಿವಸಗಳು ಕಳೆದವು. ಒಂದು ದಿವಸ ಅಭ್ಯಂಜನವನ್ನು ಮಾಡಿ ಬಂದು, ವೃತ್ತಿಯ ನ್ಯಾರಿಸುತ್ತ ನಾನು ಅಡಿಗೆ ಕೋಣೆಯಲ್ಲಿ ಒಲೆಯ ಮುಂದೆ ಕುಳಿತಿದ್ದೆ. ಅಮ್ಮ ನೀರು ತರುವದಕ್ಕೆ ಹಿತ್ತಿಲ ಬಾವಿಯ ಕಡೆ ಹೋಗಿದ್ದಳು. ಮನೆಯಲ್ಲಿ ಇನ್ನು ಯಾರೂ ಇರಲಿಲ್ಲ. ಇದ್ದಕ್ಕಿದ್ದಂತೆಯೇ ಎಲ್ಲಿಯೋ ಬಟ್ಟೆಯು ಬೇಯುತ್ತಿರುವಂತೆ ನನ್ನ ನಾಸಿಕಕ್ಕೆ ವಾಸನೆ ಹೊಡೆಯಿತು! ಜಗ್ಗನೆ ಎದ್ದು ನಾನುಟ್ಟಿದ್ದ ಸೀರೆಯನ್ನು ಪರೀಕ್ಷಿಸಿದೆ. ಅಯ್ಯೋ! ಹೇಳುವದೇನು? ನನ್ನ ಸೀರೆಯ ನೆರಿಗೆಗೆ ಬೆಂಕಿ ಹತ್ತಿ ಜೋರು ಜೋರಾಗಿ ಮೇಲೇರಿ ಬರುತ್ತಿತ್ತು! ಭಯಭ್ರಾಂತಳಾದ ನನಗೆ ಆ ಸಂದಿಗ್ಧ ಪರಿಸ್ಥಿತಿಯಲ್ಲಿ ಏನು ಮಾಡುವದಕ್ಕೂ ತೋಚದಾಯಿತು! 'ಅಯ್ಯೋ ಅಮ್ಮಾ! ಅಮ್ಮಾ, ಬೆಂಕಿ, ಬೆಂಕಿ, ಸತ್ತೆ, ಸತ್ತೆ, ಎಂದು ಆರ್ಭಟಿಸುತ್ತಾ, ನಿಸ್ಸಹಾಯಕಳಾಗಿ ಅಡುಗೆ ಕೋಣೆಯಿಂದ ಹೊರಗೋಡಿ ಬಂದೆ! ಆ ಸ್ಥಳದಲ್ಲಿ ಆ ಅಗ್ನಿಯು ಧಗಧಗನೆ ಉರಿಯುತ್ತಾ ಮೇಲೆದ್ದು ನನ್ನ ಶರೀರವನ್ನೆಲ್ಲಾ ಆವರಿಸಿಯೇ ಬಿಟ್ಟಿತು! ನನ್ನ ಆರ್ಭಟನವನ್ನು ಆಲಿಸಿದ ಅಮ್ಮನು ತಾನೂ ಆರ್ಭಟಿಸುತ್ತಾ ತಲೆಯ ಮೇಲಿದ್ದ ತಂಬಿಗೆಯನ್ನು ಅಲ್ಲಿಯೇ ಬಿಸುಟು ವಾಯುವೇಗದಿಂದ ಧಾವಿಸಿ ಬಂದು ನನ್ನ ಮೈಮೇಲೆ ಬೇಯುತ್ತಿದ್ದ ಸೀರೆ, ರವಕೆಗಳನ್ನೆಲ್ಲಾ ಬೆಂಕಿಗೂ ಬೆದರದೆ ತನ್ನ ಕೈಗಳಿಂದಲೇ ಕಿತ್ತೊಗೆದು ಪರಪರನೆ ಬೇಯುತ್ತಿದ್ದ ನನ್ನ ತಲೆ ಕೂದಲುಗಳನ್ನು ಸವರಿ ಬೆಂಕಿಯನ್ನು ನಂದಿಸಿ ನನ್ನನ್ನು ಒಳಗೊಯ್ದು ತನ್ನ ರೋಧನಾಶ್ರು ಬಿಂದುಗಳೊಡನೆಯೇ ಏನೇನೋ ಔಷಧೋಪಚಾರಗಳನ್ನು ಮಾಡಿದಳು! ನೆರೆ ಹೊರೆಯವರೆಲ್ಲಾ ಬಂದು ನೆರೆದರು! ಏನೇನೋ ಹರಕೆ ಹೊತ್ತರು! ಮುಡುಪು ಕಟ್ಟಿದರು! ಇನ್ನೂ ಏನೇನೋ ಮಾಡುತ್ತಿದ್ದರು! ಆದರೆ ಅಷ್ಟರಲ್ಲಾಗಲೇ ನನಗೆ ಪ್ರಜ್ಞೆಯು ಹೋಗಿತ್ತು. ಅದೇ ಅವಸ್ಥೆಯಲ್ಲಿಯೇ ಚಿತ್ರಹಿಂಸೆಗಳಿಂದೊಡಗೂಡಿದ ಎರಡು ದಿನಗಳು ಕಳೆದವು! ಮೂರನೆಯ ದಿನದಲ್ಲಿ ಬಂತು ಭಗವಂತನ ಆಹ್ವಾನ! ಅದನ್ನು ಸ್ವೀಕರಿಸಿ ನೇರೆ ಹೋದೆ! ಆದರೆ ಮನೆಯವರು ಮಾತ್ರ ನನ್ನ ಶರೀರವನ್ನು ಶೃಂಗಾರ ಮಾಡಿ, ಮದುವಣಗಿತ್ತಿಯಂತೆ ಹೊರಡಿಸಿ, ಸುಸಣ ಮಂಟಪದತ್ತ ದಿಬ್ಬಣ ಹೊರಟು, ನನ್ನ ಕಳೇಬರದ ಮೇಲೆ ಬಿದ್ದು ಒದ್ದಾಡುತ್ತಾ ಆರ್ಭಟಿಸುತ್ತಿದ್ದ ನಮ್ಮ ಅಮ್ಮನನ್ನೂ ಲೆಕ್ಕಿಸದೆ, ಅಷ್ಟರಲ್ಲಾಗಲೇ ಸಿದ್ಧವಾಗಿದ್ದ ಕುಣಿಯಲ್ಲಿಟ್ಟು ಮಣ್ಣುಮುಚ್ಚಿ ಹಿಂತೆರಳಿದರು! ಇದೀಗ ಗೆದ್ದಲು ಹಿಡಿದ ಆ ನನ್ನ ಅಸ್ಥಿಪಂಜರದಿಂದ ಬೇರ್ಪಟ್ಟು, ಈ ತಲೆ ಬುರುಡೆಯು ನಿನ್ನ ಮುಂದೆ ನಿಂತಿದೆ. ಸ್ಮಶಾನವೆಂಬುದರ ಅರಿವಿಲ್ಲದೆ ಅಗೆಯುತ್ತಿರುವ ನಿನ್ನ ಆಳುಗಳ ಅಜಾಗರೂಕತೆಯ ಫಲ ಇದು."

ನಿದ್ರೆಯಿಂದೆಚ್ಚೆತ್ತವನಂತೆ ಫಕ್ಕನೆ ಸಮೀರನು ಕಣ್ಣುಗಳನ್ನೊರಸುತ್ತಾ ಎದ್ದು ನಿಂತನು. ಅವನ ಕಣ್ಣುಗಳಲ್ಲಿ ಬಳಬಳನೆ ನೀರು ಹರಿಯುತ್ತಿತ್ತು. ಅವನ ಮನವು ಮಮ್ಮಲ ಮರುಗುತ್ತಿತ್ತು. ಹೃದಯವು ಪರಿತಪಿಸುತ್ತಿತ್ತು. ಪುಸ್ತಕವನ್ನು ಮುಚ್ಚಿ ಹುಚ್ಚನಂತೆ ಮೇಜಿನ ಮೇಲೆಸೆದು ಉಪ್ಪರಿಗೆಯಿಂದಿಳಿದು ಹಿತ್ತಲನ್ನು ದಾಟಿ ಗದ್ದೆಗಳಿರುವತ್ತ ಧಾವಿಸಿದನು. ಸುಗ್ಗಿಯಕಾಲದ ಸೊಗಸನ್ನು ಬೀರುತ್ತಾ ಪೈರುಪಚ್ಚೆಗಳಿಂದ ಕಂಗೊಳಿಸುತ್ತಾ, ತಂಬೆಲರು ಸೂಸಲು ಅತ್ತೊಮ್ಮೆ ಇತ್ತೊಮ್ಮೆ ಬಾಗುತ್ತಾ ಬಳುಕುತ್ತ ತೆರೆತೆರೆಯಾಗಿ ಸರಿದು ಹೋಗುತ್ತಿದ್ದ ಪ್ರಕೃತಿ ಮಾತೆಯ ಪ್ರಶಾಂತಮಯ ತಾಣವೊಂದನ್ನು ಸೇರಿ ತಪಸನ್ನಾಚರಿಸ ಹೊರಟಿರುವ ಯೋಗಿಯಂತೆ ಸಮೀರನು ಕುಳಿತು ಬಿಟ್ಟನು. ಅಂತೂ ಕಡೆಯಲ್ಲಿ ಚಿಂತಾ ಭಾರದಿಂದ ಬೀಗಿಹೋಗಿದ್ದ ಅವನ ಹೃದಯ ಚಿತ್ರಗಳು ಆ ಮಾತೆಯ ಲೀಲಾಜಾಲದಲ್ಲಿ ಲೀನವಾಗಿ ಹಗುರವಾದವು.

ಎತ್ತಿನ ಕಾಯಿಲೆಗೆ ಕೊಟ್ಟಿಗೆಗೆ ಬರೆ ಹಾಕುವುದೇ?

"ಬೋರ್ಲಿಂಗೇಗೌಡ"ರ ವಿಚಿತ್ರ ವಾದ.

— ಲೇಖಕ: —"ಸುದಾರ" —

ಬಾಣೆ ಕಂದಾಯವನ್ನು ವಿಧಿಸುವ ವಿಚಾರದಲ್ಲಿ ಅದು ಕೂಡದೆಂದೂ, ನ್ಯಾಯ ಬಾಹಿರವೆಂದೂ ಹಲವು ಲೇಖನಗಳನ್ನು "ಕೊಡಗು" ಪತ್ರಿಕೆಯಲ್ಲಿ ಓದಿದುದಲ್ಲದೆ ಮಳೆಗಾಲವಾದರೂ ಅಲ್ಲಲ್ಲಿ ಸಾರ್ವಜನಿಕ ಸಭೆ ನಡೆಸಿ ಜನರು ಮಾಡಿದ ನಿರ್ಣಯಗಳ ವಿವರಗಳನ್ನೂ ಓದಿರುವೆನು. ಪ್ರಾಮುಖ್ಯವಾಗಿ ಈ ನಿಷೇಧ ಮೀಟಿಂಗುಗಳು ಕೇವಲ ದಕ್ಷಿಣ ಕೊಡಗಿನಲ್ಲೇ ನಡೆದಂತೆ ತೋರುತ್ತದೆ. ಉತ್ತರ ಕೊಡಗಿನಲ್ಲಿ ಒಂದು ಮೀಟಿಂಗೂ ಆದ ವರದಿ ಈ ವರೆಗೆ ಪ್ರಕಟವಾಗಿಲ್ಲ. ಇದನ್ನು ನೋಡುವಾಗ ಶ್ರೀ ಪಿ. ಜಿ. ಐಯ್ಯಪ್ಪನವರು ತಮ್ಮೊಂದು ಲೇಖನದಲ್ಲಿ ಈ ಬಾಣೆ ಕಂದಾಯವು ಉತ್ತರ ಕೊಡಗಿನವರಿಗೆ ಹೆಚ್ಚಾಗಿ ಅನ್ವಯಿಸಲಾರದು ಎಂದು ಹೇಳಿದ ಮಾತು ಸತ್ಯವೆಂಬಂತೆ ತೋರುತ್ತಿದೆ. ಹೇಗೂ ಈ ಕಂದಾಯವು ಅನಾವಶ್ಯದ್ದು ಎಂಬ ಅಭಿಪ್ರಾಯವೇ ದೇಶದಲ್ಲಿ ಕೇಳಿಬರುತ್ತಿದೆಯಲ್ಲದೆ ಈ ಕಂದಾಯ ನ್ಯಾಯವಾದುದೆಂದು ಹೇಳಿದ ವರ್ತಮಾನ ಎಲ್ಲಿಯೂ ಕೇಳಿಬಂದಿಲ್ಲ.

ಆದರೆ ಕೊಡಗಿನ ರಾಜಕೀಯ ಕ್ಷೇತ್ರದಲ್ಲಿ ಚುನಾವಣೆಯ ಕಾಲಕ್ಕೆ ಕೋಟು ಬದಲಾಯಿಸಿ ತಾವೂ ಕಾಂಗ್ರೆಸ್ ಎಂದು ಹೇಳಿಕೊಂಡು ಇಂದು ಕಾಂಗ್ರೆಸಿಗರು, ಮುಂದಾಳುಗಳೆಂದು ಹೇಳಿಕೊಳ್ಳುತ್ತಿರುವ ಹಲವರಂತೆ ಇತ್ತಲಾಗಿ ಕೊಡಗು ಕಾಂಗ್ರೆಸಿನ ಮುಖಪತ್ರವಾಗಿ ಬದಲಾವಣೆ ಹೊಂದಿರುವ "ಜನ್ಮಭೂಮಿ" ಪತ್ರಿಕೆಯಲ್ಲಿ ಕಂದಾಯ ಹಾಕುವುದು ಸರಿ; ಅದು ಅನಿವಾರ್ಯವಾದುದು; ಸರಕಾರವು ಯೋಚಿಸಿಯೇ ಈ ಕಂದಾಯ ಹಾಕಿದೆಯೆಂಬ ಅರ್ಥದ ಒಂದೆರಡು ಲೇಖನಗಳು ಬಂದದ್ದನ್ನು ನಾನು ನೋಡಿರುವೆನು. ಇತ್ತಲಾಗಿ ಅದೇ ಪತ್ರಿಕೆಯಲ್ಲಿ ತಾ. ೧೫ರ ಸಂಚಿಕೆಯಲ್ಲಿ "ಬೋರ್ಲಿಂಗೇಗೌಡ"ರೆಂಬುವವರು ೧೯೫೦ನೇ ಇಸವಿಯಲ್ಲಿ ಸಮರಿ ಕಂದಾಯದ ವಿಚಾರದಲ್ಲಿ ಶ್ರೀಗಳಾದ ಪಿ. ಐ. ಬೆಳ್ಯಪ್ಪ, ಕೆ. ಎಂ. ಕುಶಾಲಪ್ಪ, ಕೆ. ಪಿ. ಕರುಂಬಯ್ಯ ಮೊದಲಾದವರು ಏನು ಹೇಳಿದರೆಂಬ ಹಳೇ ಪುರಾಣವನ್ನು ಪ್ರಕಟಿಸಿ "ಈ ಕಂದಾಯ ಹಾಕಲು ಸರಕಾರಕ್ಕೆ ಹಕ್ಕಿದೆಯೆಂದೂ ಒಟ್ಟಾರೆ ಚುನಾವಣೆಯಲ್ಲಿ ಜಯಹೊಂದದೆ ಅಧಿಕಾರ ದೊರಕದ ಕೆಲವು ಪ್ರತ್ಯೇಕವಾದಿ ಮುಂದಾಳುಗಳು ಕಂದಾಯ ಹಾಕಬಾರದೆಂಬ ಈ ಹೊಟ್ಟೆಕಿಚ್ಚಿನ ಚಳವಳ ಹೂಡಿರುವರೆಂ"ದೂ ಹೇಳಿರುವರು.

ಕಳೆದ ವಾರದ "ಕೊಡಗು" ಪತ್ರಿಕೆಯಲ್ಲಿ ಬೆಸಗೂರು ಗ್ರಾಮದ ಕಟ್ಟೆಯ ವಿಚಾರವಾಗಿ ಬರೆದ "ನೊಂದ ಗ್ರಾಮಸ್ಥರು" ಉತ್ತರವೀಯುತ್ತಾ ಪ್ರತಿಯೊಂದನ್ನು ಪಾರ್ಟಿಯ ದೃಷ್ಟಿಯಿಂದ ನೋಡಿ ವರ್ತಿಸುವ ಹೀನ ಸುಳಿ ಅಧಿಕಾರದಲ್ಲಿರುವವರನ್ನು ಬೆನ್ನುತಟ್ಟುತ್ತಿರುವ ಹಲವರಿಗಿದೆಯೆಂದು ಬರೆದಿದ್ದರು. ಈ "ಬೋರ್ಲಿಂಗೇಗೌಡ"ರೂ ಆ ಹೀನ ಸುಳಿಯ ಗುಂಪಿನವರೊಬ್ಬರೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಬಾಣೆ ಕಂದಾಯ ಹಾಕಬಾರದೆನ್ನುವ ಕೂಗು ಕೇವಲ ಚುನಾವಣೆಯಲ್ಲಿ ಸೋತ ಪ್ರತ್ಯೇಕ ಪಾರ್ಟಿಯವರ ಕೂಗೆಂದು ಹೇಳುವ "ಬೋರ್ಲಿಂಗೇಗೌಡ"ರು ತಮ್ಮ ಕಾಂಗ್ರೆಸ್ ಪಕ್ಷಕ್ಕೆ ಮತವಿತ್ತವರೆಲ್ಲ ತಮ್ಮ ಬೆನ್ನು ತಟ್ಟುವ, ಹೇಳಿದುದಕ್ಕೆಲ್ಲ ತಲೆದೂಗುವ "ಬಸವಣ್ಣ"ಗಳೆಂದು ಭಾವಿಸಿದಂತಿದೆ. ಚುನಾವಣೆಯಲ್ಲಿ ಎರಡು ಪಕ್ಷಗಳೂ ಹೋರಾಡಿರಬಹುದು ಚುನಾವಣೆ ಕಳೆದ ಮೇಲೂ ಆ ಪಕ್ಷಗಳು ಹಾಗೆಯೇ ವಿರೋಧಿಗಳಾಗಿ ಉಳಿದಿರುವವೆಂದು ಊಹಿಸುವುದು ತಪ್ಪಾದೀತು. ಅಧಿಕಾರದಲ್ಲಿರುವವರನ್ನು ಓಲೈಸುವ, ಅವರಿಂದ ಲಾಭ ಪಡೆಯಲಿಚ್ಛಿಸುವವರು ಪ್ರತ್ಯೇಕ ಪಕ್ಷವನ್ನು ಬಿಟ್ಟು ಕಾಂಗ್ರೆಸಿಗೆ ಸೇರಿರಬಹುದು. ಕಾಂಗ್ರೆಸಿನವರ ಕಿರುಕುಳ, ಅಧಿಕಾರ, ಅಹಂಭಾವಗಳಿಂದ ಅಸಮಾಧಾನಗೊಂಡವರು ಕಾಂಗ್ರೆಸಿಗೆ ವಿರೋಧ ಆಗಿರಬಹುದು. ಯಾವುದೋ ಉತ್ತಮ ಕಲ್ಪನೆಯನ್ನು ಮಾಡಿಕೊಂಡು, ಸರ್ವರ ಹಿತವಾದೀತೆಂದು ಭರವಸೆಯಿಂದ ಮಹಾತ್ಮರ ಕೈಗೂಸು ಕಾಂಗ್ರೆಸೆಂದು ಗೌರವದಿಂದ ಕಾಂಗ್ರೆಸಿಗೆ ಓಟುಮಾಡಿ ಅಧಿಕಾರಕ್ಕೆ ಬಂದ ಇಂದಿನ ಕಾಂಗ್ರೆಸಿನ ವರ್ತನೆಯಿಂದ ನಿರಾಶರಾದವರಲ್ಲಿ ನಾನೊಬ್ಬನೆಂದು ನಿಮಗೆ ಜ್ಞಾಪಕವಿರಲಿ. ಇಂದು ನನ್ನಂತೆ ನಿರಾಶರಾದವರ ಸಂಖ್ಯೆ ಕಡಿಮೆ ಇರಬಹುದು. ನಿಮ್ಮಂಥವರ ತಲೆಯಿಲ್ಲದ ಲೇಖನ, ವರ್ತನೆಗಳಿಂದ ದಿನ ಕಳೆದಂತೆ ಹೆಚ್ಚು ವಿರೋಧಿಗಳನ್ನು ನೀವು ಮಾಡಿಕೊಳ್ಳುವಿರೆಂಬುದು ಈಗಾಗಲೇ ಸಿದ್ಧವಾಗಿದೆ. ಅಧಿಕಾರಕ್ಕಾಗಿ ಕಾಂಗ್ರೆಸಿಗೆ ಸೇರಿ ಅಧಿಕಾರ ದೊರೆಯದೆ ನಿರಾಶನಾಗಿ ಹೊರಬಂದವನು ನಾನಲ್ಲ. ಬದಲು ಹೋರಾಟದ ಕಾಲದಿಂದಲೇ ಕಾಂಗ್ರೆಸಿಗೆ ಸಾಧ್ಯವಾದ ಸೇವೆಸಲ್ಲಿಸಿ, ಕಾಂಗ್ರೆಸ್ಸನ್ನು ಅಧಿಕಾರದಲ್ಲಿ ಕುಳ್ಳಿರಿಸಲು ನನ್ನಷ್ಟಕ್ಕೆ ಯತ್ನಿಸಿದವನು. ಆದರೆ ಅಂದು ಕಾಂಗ್ರೆಸು ಹೇಳಿಕೊಳ್ಳುತ್ತಿದ್ದ ತತ್ವ ಇಂದು ಎಲ್ಲಿದೆ?

ಸರಕಾರದ ವರ್ತನೆಗೆ ವಿರೋಧದ ಅಭಿಪ್ರಾಯ ಹೊರಪಟ್ಟರೆ—ಅದು ಯಾರೇ ಆ ವಿರೋಧ ಮಾಡಿರಲಿ— ಅದು ಪ್ರತ್ಯೇಕವಾದಿಗಳ ಕೂಗು; ಶ್ರೀ ಬೆಳ್ಯಪ್ಪನವರ ಪ್ರಯತ್ನವೆಂದು ಹೇಳುತ್ತಿರುವ ಇಂದು ಊರು ಬೋರೇಗೌಡನೆನಿಸಿ ಬಾಲ ಬೀಸುವ ನಿಮ್ಮಂಥವರು ಎಲ್ಲೆಲ್ಲೂ ಶ್ರೀ ಬೆಳ್ಯಪ್ಪನವರ ಭೂತವನ್ನೇ ಕಂಡು ಬೆಚ್ಚಿ ಬೀಳುವಂತಿದೆ. ಸರಕಾರದ ತಪ್ಪಿದ್ದರೂ ತಪ್ಪನ್ನು ಎತ್ತಿ ತೋರಿಸಿ ಸರಕಾರವನ್ನು ಸರಿ ಮಾರ್ಗದಲ್ಲಿ ನಡೆಯುವಂತೆ ಮಾಡದ ನಿಮ್ಮಂಥ ಹೊಗಳು ಭಟ್ಟರಿಂದ ಸರಕಾರಕ್ಕೆ ಅನಾಹುತವಲ್ಲದೆ ಹಿತವಿಲ್ಲ. ಸರಕಾರಕ್ಕೆ ಅನಾಹುತವೆಂದರೆ ಅದು ಜನರಿಗೂ ಅನಾಹುತವಲ್ಲವೆ? ಸರಕಾರವು ಮಾಡದ್ದನ್ನು, ಮಾಡಿದ್ದನ್ನು ಎಲ್ಲವನ್ನೂ ನಾಜೂಕಾಗಿ ಹೊಗಳಿ, ನಮ್ಮ ಸರಕಾರ ಆದರ್ಶವಾದುದು. ಅಶೋಕನ ರಾಜ್ಯಭಾರವೆಂದು ನಿಮ್ಮಂಥವರು ಎಷ್ಟು ಬರೆದುಕೊಂಡರೂ, ಬಾಯ್ಬಡಿದರೂ ಬಡಜನರಾದ ನಮ್ಮಂಥವರು ನಮಗೊದಗಿದ ರಸ್ತೆ, ಕೆರೆ, ವೈದ್ಯಕೀಯ, ವಿದ್ಯಾಭ್ಯಾಸ ಮೊದಲಾದ ಸವಲತ್ತುಗಳಿಂದಲೇ ಸರಕಾರದ ಯೋಗ್ಯತೆಯನ್ನು ತಿಳಿಯುವದಲ್ಲದೆ ಪಟ್ಟಣದಲ್ಲಿ ಕುಳಿತು ದೊರೆಯುವ ವೇತನಕ್ಕೋ ಸಲ್ಲುವ ಸತ್ಕಾರ, ಗೌರವಗಳಿಗೋ ಆಶಿಸಿ ಬಾಡಿಗೆ ಎತ್ತಿನ ಕೆಲಸ ಮಾಡುವವರ ಮಾತಿನ ಮೇಲೆ ವಿಶ್ವಾಸವಿರಿಸಿಲ್ಲ. ಮಾತಿನ, ಪ್ರಚಾರದ ಕಾಲ ಕಳೆದು ಹೋಯಿತು. ಜನತಾ ಸರಕಾರದಿಂದ ನಮ್ಮ ದೈನಂದಿನ ಜೀವನ ಎಷ್ಟರ ಮಟ್ಟಿಗೆ ಉತ್ತಮವಾಯಿತೆಂದು ನೋಡುವೆವಲ್ಲದೆ ಅತ್ತಿತ್ತ ಓಡಾಡುವ ಕಾರುಗಳಲ್ಲಿ ಹಾರಾಡುವ ಕಾಂಗ್ರೆಸ್ ಧ್ವಜವನ್ನು ನೋಡಿ "ರಾಮರಾಜ್ಯ"ದ ಬೆಲೆ ಕಟ್ಟುವವರಲ್ಲ.

ಈ ದೃಷ್ಟಿಯಿಂದ ಬಾಣೆ ಜಾಗಕ್ಕೆ ವಿಧಿಸಲೆಳಸಿರುವ ಎಕರೆಗೆ ನಾಲ್ಕಾಣೆ ಕಂದಾಯವು ಬಡ ಜನರ ಸ್ಥಿತಿಯನ್ನು ಯಾವ ರೀತಿ ಉತ್ತಮಗೊಳಿಸುವದೆಂಬುದನ್ನು ಕಾಂಗ್ರೆಸ್ ಸರಕಾರದ ಪರ ವಾದಿಸಲು ನಿಂತಿರುವ "ಬೋರ್ಲಿಂಗೇಗೌಡ"ರಾದ ನೀವು ವಿವರಿಸುವಿರಾ? ಅಯ್ಯಾ, ಬೋರ್ಲಿಂಗಯ್ಯನವರೇ, ೧೯೫೦ನೇ ಇಸವಿಯಲ್ಲಿ ಸಮರಿ ಕಂದಾಯ ವಿಧಿಸುವ ವಿಚಾರದಲ್ಲಿ ಶ್ರೀ ಸಿ. ಐ. ಬೆಳ್ಯಪ್ಪನವರಾಗಲೀ, ಕೆ. ಪಿ. ಕರುಂಬಯ್ಯನವರಾಗಲೀ ಬೇರೆ ಯಾರೇ ಇರಲಿ ಹೇಳಿದ ಮಾತಿಗೂ ಇಂದಿನ ಬಾಣೆ ಕಂದಾಯಕ್ಕೂ ಸಂಬಂಧವೇನು? ಈ ಬಾಣೆ ಕಂದಾಯದ ವಿಚಾರದಲ್ಲಿ ಕೊಡಗು ಶಾಸನ ಸಭೆಯಲ್ಲಿ ಶ್ರೀ ಬೆಳ್ಯಪ್ಪನವರು ವಿರೋಧ ಮಾಡಿರುವರೇ? ಶ್ರೀ ಕೆ. ಪಿ. ಕರುಂಬಯ್ಯನವರು ಹೇಳಿದ ಮಾತುಗಳನ್ನು ಜ್ಞಾಪಿಸಿಕೊಳ್ಳುವಿರಾ? ಅವರು ಹೇಳಿದ ಮಾತುಗಳನ್ನು ಇಲ್ಲಿ ನಿಮಗಾಗಿ ಕೊಡಲಿರುವೆನು. —"ದೇಶದ ಮುಂದಿರುವ ಹಲವಾರು ರಾಷ್ಟ್ರರಚನಾ ಕೆಲಸಗಳಿಗೆ ನಮ್ಮ ಸಹಕಾರವು ಸರಕಾರಕ್ಕಿದೆ. ಆದರೆ ಪ್ರತಿ ಕೃಷಿಕನಿಗೂ ಬಾಣೆಗೆ ಎಕ್ರೆ ಒಂದರ ನಾಲ್ಕಾಣೆಯಂತೆ ಕಂದಾಯ ವಿಧಿಸುವುದು ಸರಿಯಿಲ್ಲ. ವ್ಯವಸಾಯ ಆದಾಯ ತೆರಿಗೆಯಲ್ಲಿ ಒಂದು ನಿಶ್ಚಿತ ವರಮಾನದ ಕೆಳಗಿನವರಿಗೆ ವಿನಾಯಿತಿ ಇರುವಂತ ಇದರಲ್ಲೂ ಹತ್ತು ಎಕ್ರೆಗಳಿಗೆ ಒಳಗಿನ ಬಡಜನರಿಗೆ ಕಂದಾಯ ವಿನಾಯಿತಿ ಕೊಡಬೇಕು. ಕಂದಾಯ ತೆರಲಾರದವರಿಗೂ, ಶಕ್ತಿ ಇರುವವರಿಗೂ ಒಂದೇ ರೀತಿ ಇದನ್ನು ವಿಧಿಸುವುದು ಸರಿಯಲ್ಲ. ಈ ಕಂದಾಯವನ್ನು ಜಾರಿಗೆ ತರುವ ಮೊದಲು ಒಂದು ಮಸೂದೆಯನ್ನು ತಂದು ದೇಶದ ಅಭಿಪ್ರಾಯ ತೆಗೆಯುವುದು ಹಿತ. ಈ ಏರ್ಪಾಡು ಆಗುವ ವರೆಗೆ ಕಂದಾಯ ಹಾಕುವುದನ್ನು ಮುಂದರಿಸಿದುದರಲ್ಲಿ ಯಾರಿಗೂ ಹಾನಿಯಾಗದು."

ಇವನ್ನು ಓದಿದರೆ ಹೆಚ್ಚಿಗೆ ಕಂದಾಯ ಹಾಕುವ ವಿಚಾರಕ್ಕೆ ಯಾರೂ ವಿರೋಧಿಸಿಲ್ಲವೆಂಬುದು ವ್ಯಕ್ತವಾಗುತ್ತದೆ. ಇದರಿಂದ ನಿಮಗೆ ಮನದಟ್ಟಾಗದಿದ್ದರೆ ಮಾರ್ಚಿ ತಿಂಗಳಲ್ಲಿ ನಡೆದ ಬಜೆಟ್ ಅಧಿವೇಶನದ ಪ್ರೊಸೀಡಿಂಗ್ಸನ್ನು ಓದಿ ನೋಡಿ. ಅವರು ಹೊಸ ಕಂದಾಯಕ್ಕೆ ವಿರೋಧಿಸಿಲ್ಲ. ಬಜೆಟ್ ಅಧಿವೇಶನದಲ್ಲಿ ತಂದ ಠರಾವು ಕೂಡ ಕಂದಾಯ ಬೇಡವೆಂದಲ್ಲ. ಬಡಜನರಿಗೆ ಅಹಿತವಾಗದಂತೆ ಅದನ್ನು ಅಳವಡಿಸಲು ಅನುಕೂಲವಾಗುವಂತೆ ಮುಂದರಿಸಬೇಕೆಂದು ಅವರ ವಾದವಾಗಿತ್ತು. ಆದರೆ ಈ ಸೂಚನೆಯನ್ನು ಸರಕಾರ ಒಪ್ಪಲಿಲ್ಲ. ತಮಗೆ ಬಹುಮತವಿದೆಯೆಂಬ ಕಾರಣದಿಂದ ಓಟಿಗೆ ಹಾಕಿದರು. ಶ್ರೀ ಬೆಳ್ಯಪ್ಪ ಮೊದಲಾದವರು ಬಡ ಜನರಿಗೆ ಅಹಿತವಾಗುವ ಅಭಿಪ್ರಾಯಕ್ಕೆ ವಿರೋಧ ಓಟು ಮಾಡಿದರು. ಆದರೆ ಕಂದಾಯ ಹಾಕಲೇಬೇಕೆಂದೂ, ಅದು ಪ್ರತಿ ಬಡವನ ಎಕರೆಗೂ ಬೀಳಬೇಕೆಂದೂ, ಜನಹಿತ ಕಾಂಗ್ರೆಸ್ ಸರಕಾರವೇ ನಿರ್ಣಯಿಸಿತು.

'ಬೋರ್ಲಿಂಗೇಗೌಡ'ರು ೧೯೫೦ನೇ ಇಸವಿಯ ವಿಚಾರಗಳನ್ನು ಉದ್ಧರಿಸಿ ಬರೆದು ಜನರ ಕಣ್ಣು ಕಟ್ಟಲು ಯತ್ನಿಸಲೇಕೆ? ಅಂದು ಕಂದಾಯ ಹಾಕಬೇಕೆಂದು ಹೇಳಿದ ಶ್ರೀ. ಬೆಳ್ಯಪ್ಪನವರು, ಕರುಂಬಯ್ಯನವರು ಮೊದಲಾದವರು ಇಂದೂ ಕಂದಾಯದ ಮೂಲಕ ದೇಶದ ಸಂಪತ್ತನ್ನು ಹೆಚ್ಚಿಸಿ, ಬೇಕಾದ ರಾಷ್ಟ್ರ ರಚನಾ ಕೆಲಸ ಕೈಗೊಳ್ಳಬೇಕೆಂದು ಹೇಳುತ್ತಿದ್ದಾರೆ ಆದರೆ ಜನತೆಯ ಪರಿಸ್ಥಿತಿಯ ಪರ್ಯಾಲೋಚನೆ ಇಲ್ಲದೆ ಎಲ್ಲರಿಗೂ ಒಂದೇ ರೀತಿಯಲ್ಲಿ ಭಾರ ಹೇರಲು ಉದ್ಯುಕ್ತರಾದ ಜನಹಿತ ಚಿಂತಕರೆಂದು ಬಾಯಲ್ಲಿ ಹೇಳುವ ಕಾಂಗ್ರೆಸ್ ಸರಕಾರದ ಈ ನೀತಿಗೆ ಮಾತ್ರ ಅವರ ವಿರೋಧ. ಉದಾಹರಣೆಗೆ ಬಜೆಟ್ ಮೀಟಿಂಗಿನಲ್ಲಿ ಶ್ರೀ. ಪಿ. ಸಿ. ಉತ್ತಯ್ಯನವರು ಹೇಳಿದ ಮಾತುಗಳಿವು—"ಸರಕಾರದ ಆದಾಯವು ಹೆಚ್ಚಾಗುವ ವಿಚಾರದಲ್ಲಿ ನಮಗೆ ಯಾವಾಗಲೂ ಸಂತೋಷ. ನಮ್ಮ ಮುಂದಿರುವ ಕೆಲಸಗಳಿಗೆ ಹಣ ಒದಗಿಸುವುದು ಅವಶ್ಯವು. ಆದರೆ ಬಾಣೆ ಕಂದಾಯವನ್ನು ಹೇರಲು ಅನುಸರಿಸಿದ ಮಾರ್ಗವನ್ನು ನಾನು [illegible]ವಾಗಿದೆ. ಜನತೆಯನ್ನು ಕೇಳದೆ ಈ ರೀತಿ ಏಕಾಏಕಿ ಕಂದಾಯ ಹೇರುವುದು ಯಾವ ಪ್ರಜಾಪ್ರಭುತ್ವವೆಂದೇ ನನ್ನ ಪ್ರಶ್ನೆಯಾಗಿದೆ.' ಇದರಿಂದ ಕಂದಾಯ ಹಾಕಲು ಹೊರಟ ನಿರಂಕುಶ ನೀತಿ, ಮತ್ತು ಬಡವ ಬಲ್ಲಿದರೆಂಬುದರ ಹಾಗೂ ಕಂದಾಯ ಪಾವತಿ ಮಾಡುವ ಶಕ್ತಿಯ ವಿವೇಚನೆ ಮಾಡದೆ ಎಲ್ಲರ ತಲೆಯ ಮೇಲೆಯೂ ಹೊರಿಸಲು ಹೊರಟ ಈ ಕಂದಾಯಕ್ಕೆ ವಿರೋಧವಲ್ಲದೆ ಹೊಸ ಕಂದಾ

ಯ ಹಾಕಬಾರದೆಂದು ಅವರ ಅಭಿಪ್ರಾಯವಲ್ಲ. ಆದ್ದರಿಂದ ೧೯೫೦ ನೇ ವರ್ಷದ ಅವರ ಕೌನ್ಸಿಲು ಭಾಷಣವನ್ನು ಉದ್ಧರಿಸಿ ಪ್ರಕಟಿಸಿ ಪ್ರಯೋಜನವಿಲ್ಲ. ಕಂದಾಯ ತೆರಲು ಶಕ್ತರಾಗಿರುವವರಿಗೆ, ಶ್ರೀಮಂತರಿಗೆ ಕಂದಾಯ ಹಾಕಲ್ಪಡಲಿ. ಆದರೆ ಬಡವನ ಹೊರಲಾರದ ಹೊರೆಯ ಜೊತೆಗೆ ಇದೊಂದನ್ನು ಸೇರಿಸಬಾರದೆಂಬುದೇ ಅವರ ವಾದ. ಬಡವರ ಹಿತಚಿಂತನೆಯನ್ನು ಮಾಡಬೇಕಾಗಿದ್ದ ಕಾಂಗ್ರೆಸ್ ಸರಕಾರವು ತಾರತಮ್ಯವರಿಯದೆ ಬಡವನ ಹೆಗಲೇರಲು ಸಿದ್ಧವಿರುವಾಗ ಇವರು ವಿರೋಧ ಮಾಡಿದ್ದು "ಚುನಾವಣೆಯಲ್ಲಿ ಸೋತು ಹೋದದಕ್ಕಾಗಿ ಹೊಟ್ಟೆಕಿಚ್ಚಿನ ಚಳವಳ"ವೆನ್ನುವ ನಿಮ್ಮ ತಲೆಯಲ್ಲಿ ಒಂದೋ ಸಾಮಾನಿಲ್ಲದಿರಬೇಕು. ಇಲ್ಲವೇ ಅತ್ತಿತ್ತ ನೋಡಲಾರದಂತೆ ಕಣ್ಣಿಗೆ ಮರೆಕಟ್ಟಿದ ಜಾಟಕಾ ಕುದುರೆಯಂತೆ ಸರಕಾರವನ್ನು ಹೊಗಳುವದನ್ನೇ ಉದ್ಯಮವಾಗಿ ನೀವು ಇಟ್ಟುಕೊಂಡಿರಬೇಕು.

ಬೋರಲಿಂಗೇಗೌಡರೇ, ಸರಕಾರ ಈ ವರ್ಷ ಮಾಡಲು ನಿಶ್ಚಯಿಸಿರುವ ಖರ್ಚಿನ ಪಟ್ಟಿಯನ್ನು ನೀವು ಕೊಟ್ಟಿರುವಿರಿ. ಸರಕಾರ ಹಣ ಖರ್ಚು ಮಾಡುತ್ತಿಲ್ಲವೆಂದು ಯಾರಾದರು ಹೇಳಿದರೆ? ನಮ್ಮ ಸರಕಾರದ ಖರ್ಚು ಹಿತವೋ ಅಹಿತವೋ ಹೇಗೂ ೯೦ ಲಕ್ಷದ ವರೆಗೆ ತಲಪಿದೆಯೆಂಬುದು ನಮಗೂ ತಿಳಿದಿದೆ. ಈ ಖರ್ಚನ್ನು ಸಮಗಟ್ಟಲು ಬೇರೆ ಕಂದಾಯ ಹಾಕಲಿ. ದೊಡ್ಡವರಿಂದ ಸರಕಾರದ ಆದಾಯ ಹೆಚ್ಚಿಸಲಿ. ಅದಕ್ಕಾಗಿಯೇ ಪ್ರತ್ಯೇಕ ಸಮಿತಿ ಏರ್ಪಡಿಸಿ ಸೂಚನೆಗಳನ್ನು ಪಡೆದು ಕಂದಾಯ ವಿಧಿಸಿ ದೇಶದ ಉತ್ಪತ್ತಿ ಹೆಚ್ಚಿಸಲಿ. ಆದರೆ ಬಾಣೆ ಕಂದಾಯದಂಥಾ ಕಂದಾಯವನ್ನು ಹಾಕಿ ಬಡವನ ಬೆನ್ನು ಮೂಳೆ ಮುರಿಯಬೇಕೆ? ಬಡವನು ಈ ಕಂದಾಯದಿಂದ ಉಸಿರು ಕಟ್ಟಿ ಸತ್ತರೂ ಬರುವ ಆದಾಯವೆಷ್ಟು? ನಿಮ್ಮ ಮುಖ್ಯಮಂತ್ರಿಯವರೇ ಹೇಳುವಂತೆ ಅರ್ಧಲಕ್ಷ. ಈ ಅರ್ಧ ಲಕ್ಷ ರೂಪಾಯಿ ವ್ಯವಸಾಯ ಆದಾಯ ತೆರಿಗೆ ತೆರದೆ ಸರಿಯಲ್ಲದ ಲೆಕ್ಕ ಕೊಡಬಹುದಾದ ಒಬ್ಬನೇ ಶ್ರೀಮಂತನಿಂದ ಬರಬಹುದು. ಅದು ಬಿಟ್ಟು ಹೊಟ್ಟೆಗೆ ಹಿಟ್ಟಿಲ್ಲದ ಸಾವಿರ ಬಡ ಜನರ ಹೊಟ್ಟೆಗೆ ಹೊಡೆಯಬೇಕೆ?

ಬೋರಲಿಂಗೇಗೌಡರೇ, ಶ್ರೀ ಪಿ. ಐ. ಬೆಳ್ಳಿಯಪ್ಪ ಮೊದಲಾದವರು ೧೯೫೦ರಲ್ಲಿ ಹೇಳಿದಂತೆ ಇಂದೂ ಕಂದಾಯ ಹಾಕಬೇಕೆಂದು ಹೇಳುತ್ತಾರೆ. ಆದರೆ ಬಡವರಿಗೆ ಆ ಹೊರೆ ಹಾಕಬಾರದೆಂದೇ ಅವರ ವಾದ. ಆದರೆ ೧೯೫೦ರಲ್ಲಿ ಸಮರಿ ಕಂದಾಯ ಹಾಕಕೂಡದೆಂದು ಜನರ ಪರ ವಾದಿಸಿ ಮೆರವಣಿಗೆ ತಂದ ನೀವು ಮತ್ತು ನಿಮ್ಮ ಕಾಂಗ್ರೆಸಿಗರು ಇಂದು ಅಧಿಕಾರದಲ್ಲಿ ಕುಳಿತು ಆಡಳಿತ ಸೂತ್ರ ಕೈಗೆ ಬಂದಿರಲು ಅದೇ ಬಡವನ ಮೇಲೆ ಕಂದಾಯ ಹೇರಿದ್ದೇಕೆ ಎಂಬುದನ್ನು ವಿವರಿಸುವಿರಾ? ಅಧಿಕಾರದಲ್ಲಿಲ್ಲದಿದ್ದಾಗ ಬಡಜನರ ಮೇಲೆ ಕಂದಾಯ ಹಾಕಕೂಡದೆಂದು ಬೊಬ್ಬಿರಿದ ನೀವೇ ಇಂದು ಅಧಿಕಾರದಲ್ಲಿ ಕುಳಿತು ಅದೇ ಬಡಜನರ ಗಂಟಲು ಹಿಡಿಯಬೇಕೆ? ಅಧಿಕಾರಕ್ಕೆ ಏರುವ ವರೆಗೆ ನಿಮಗೆ ಜನತೆಯ ಬಡಜನರ ಸಹಾಯ ಬೇಕಿತ್ತಲ್ಲವೇ? ಈಗ ಅವರು ನಿರ್ನಾಮಗೊಂಡರೂ ನಿಮಗೆ ಬೇಸರವಿಲ್ಲ, ಹೌದಲ್ಲವೇ?

ನಿಮ್ಮ ವಾದದಂತೆ ಇಂದು ಶ್ರೀ ಪಿ. ಐ. ಬೆಳ್ಳಿಯಪ್ಪ ಮೊದಲಾದವರು ಕಂದಾಯ ಹಾಕಬೇಕೆಂದರು. ಇಂದು ಅಧಿಕಾರದಲ್ಲಿರುವ ಕಾಂಗ್ರೆಸ್ ಸರಕಾರ ಅದನ್ನೇ ಮಾಡುತ್ತಿದೆಯೆಂದು ನೀವು ಹೇಳುವವರಾದರೆ ನಿಮ್ಮ ಕಾಂಗ್ರೆಸ್ ಸರಕಾರಕ್ಕೆ ಸ್ವಂತ ಬುದ್ಧಿ ಇಲ್ಲವೇ? ಹಿತಾಹಿತಗಳನ್ನು ವಿವೇಚಿಸುವ ಶಕ್ತಿ ಇಲ್ಲವೇ? ಬಡವರಿಗೆ ಭಾರವಾಗಬಾರದೆಂಬ ಕಲ್ಪನೆ ಇಲ್ಲವೇ? ಇದೆ ಎನ್ನುವವರಾದರೆ ಶ್ರೀ ಪಿ. ಐ. ಬೆಳ್ಳಿಯಪ್ಪ ಮೊದಲಾದವರು ಅಂದು ಹೇಳಿದ್ದಾರೆ ಅದನ್ನೇ ಇಂದು ಈ ಸರಕಾರ ಮಾಡುತ್ತಿದೆಯೆನ್ನುವ ನಿಮ್ಮ ಸರಕಾರಕ್ಕೆ ಬೆನ್ನೆಲುಬಿಲ್ಲದೆ? ಶ್ರೀ. ಪಿ. ಐ. ಬೆಳ್ಳಿಯಪ್ಪನವರು ಬಡವರ ಮೇಲೆಯೂ ಹೊರೆ ಹಾಕಬೇಕೆಂದು ಎಲ್ಲಿ, ಯಾವಾಗ ಹೇಳಿರುವರು?

ಬಡವರ ತಲೆಹೊರೆಯ ಕಂದಾಯ ಬೇಕಿಲ್ಲ ಎನ್ನುವ ಶ್ರೀ ಪಿ. ಐ. ಬೆಳ್ಳಿಯಪ್ಪ ಮೊದಲಾದವರನ್ನು ಬಯಲಿಗೆಳೆದು ಮಸಿಬಳಿಯಬೇಕೆಂದು ಹೇಳುವ ನಿಮ್ಮಂಥವರು ಹಾಗೂ ನಿಮ್ಮ ಸರಕಾರವು ಬಡವರ ಜೀವರ ಪ್ರತಿಫಲವನ್ನುಣ್ಣುತ್ತಿದ್ದು ಅವರ ಕುತ್ತಿಗೆ ಹಿಡಿಯಲುದ್ಯುಕ್ತರಾಗಿರುವದನ್ನು ಎಷ್ಟು ಖಂಡಿಸಬೇಡ? ನಿಮ್ಮಂಥ ಗೋಮುಖ ವ್ಯಾಘ್ರರನ್ನು ಎಷ್ಟು ಬಯಲಿಗೆಳೆಯಬೇಡ? ಪಾಪದ ಶ್ರೀ ಬೆಳ್ಳಿಯಪ್ಪನವರು ಈ ಕಂದಾಯದ ವಿಚಾರ ಎಲ್ಲೂ ಬಾಯಿತ್ತಿ ಮಾತಾಡಿಲ್ಲ. ಅವರಷ್ಟಕ್ಕೆ ಅವರು ಯಾವುದೋ ಯತ್ನದಲ್ಲಿದ್ದಾರೆ. ಅಂಥಾವರನ್ನು ಎತ್ತಿ ಕಟ್ಟಿ ಸೋತ ಪ್ರತ್ಯೇಕ ಪಕ್ಷದ ಹೊಟ್ಟೇಕಿಚ್ಚಿನ ಚಳವಳ ಇದೆಂದು ಹೇಳುವ ನಿಮ್ಮಂಥಾವರು ಸಾರ್ವಜನಿಕ ವೇದಿಕೆಯಲ್ಲಿ ಜನತೆಗೆ ಉತ್ತರಿಸಬೇಕಾದ ದಿನ ಬಂದೇ ಬರುತ್ತದೆ. ಆ ವಿಚಾರ ಈಗ ಬೇಕಿಲ್ಲ.

ಈ ಲೇಖನದ ಮೂಲಕ ಶ್ರೀ ಪಿ. ಐ. ಬೆಳ್ಳಿಯಪ್ಪ ಮತ್ತವರ ಅನುಯಾಯಿಗಳಿಗೆ ನನ್ನ ಆಹ್ವಾನ ವಿಷ್ಟೇ. ಬಾಣೆ ಕಂದಾಯದ ವಿಚಾರದಲ್ಲಿ ಶಾಸನ ಸಭೆಯಲ್ಲಿ ನೀವು ತೆಗೆದುಕೊಂಡ ನಿಲುವು ಸಮಂಜಸವಾಗಿದೆ. ಅದನ್ನು ದೇಶದ ಉದ್ದಗಲಕ್ಕೂ ಮೀಟಿಂಗು ನಡೆಸಿ ಪ್ರಚಾರ ಮಾಡಬೇಕು. ಕಾಂಗ್ರೆಸ್ ಸರಕಾರದ ನಿರಂಕುಶ ನೀತಿಯನ್ನು ವಿವರಿಸಬೇಕು. ದೇಶದ ಬಹುಮತ ಸಂಖ್ಯೆಯಲ್ಲಿರುವ ಬಡಜನರ ಹಿತಕ್ಕಾಗಿ ದುಡಿಯಿರಿ. ಜನತೆಯ ಸಹಾನುಭೂತಿ ಇಂದಲ್ಲ ನಾಳೆ ನಿಮಗೆ ದೊರೆಯದಿರದು. ಮಹಾತ್ಯಾಗಿಗಳೂ, ನಿಸ್ವಾರ್ಥ ಸೇವಕರೂ ಎಂದು ಓಡಾಡಿದ ಮಹಾವ್ಯಕ್ತಿಗಳ ಅಂತರ್ಯ ಈಗೀಗ ಜನರಿಗೆ ಅರಿವಾಗತೊಡಗಿದೆ.

— —

ಆಧುನಿಕ ಯುವಕ ಯುವತಿ.

ಇಂದಿನ ತರುಣಿಯು ಹಿಂದೂ ಸಮಾಜದಲ್ಲಿ ಬಹುತರ ಟೀಕೆಗೆ ಒಳಗಾಗಿರುವಳು.

ಅವಳು ತನ್ನ ತಾಯಿಯಂತೆ ಅಥವಾ ಅಜ್ಜಿಯಂತೆ, ಮನೆಯೊಳಗೇ ಕಾಲಹರಣ ಮಾಡುತ್ತಿದ್ದರೆ, ವಿಶ್ವವಿದ್ಯಾಲಯ ಅಥವಾ ಕಾಲೇಜುಗಳಿಂದ ಹೊರಬಿದ್ದ ಆಧುನಿಕ ಯುವಕನು ಅವಳನ್ನು ಅಸಂಸ್ಕೃತಳೆಂದೋ ಅನಾಗರಿಕಳೆಂದೋ, ಹೆಡ್ಡಿಯೆಂದೋ ಕರೆವನು. ಆಕೆ, ತನ್ನ ಪಾಶ್ಚಿಮಾತ್ಯ ಸಹೋದರಿಯಂತೆ ಹೊರಗೆ ಬಂದು ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರೆ ಅವಳನ್ನು ಅನಾರ್ಯ ಲಜ್ಜಾಹೀನ ಗಂಡುಬೀರಿ ಎನ್ನುವನು.

ನಿಜಸ್ಥಿತಿಯೇನೆಂದರೆ, ಆಧುನಿಕ ಯುವಕನು ತನ್ನ ಸ್ಥಾನ, ತನ್ನವಳ ಸ್ಥಾನ, ದಾಂಪತ್ಯದ ರಹಸ್ಯ, ಇದನ್ನು ತಿಳಿಯದೆ ಗಲಿಬಿಲಿಹೊಂದಿಯೇ ಇರುವನು, ಅಥವಾ ಆಳವಾಗಿ ಚಿಂತಿಸದೆ ಇರುವನು. ಇದರಿಂದ ಅನೇಕ ಗೃಹಗಳಲ್ಲಿ ದಾಂಪತ್ಯ ಸುಖವು ಮಣ್ಣುಪಾಲಾಗಿದೆ.

ಆಧುನಿಕ ತರುಣರಲ್ಲಿ ಹೆಚ್ಚಿನವರು ಎರಡು ಜೀವನಗಳನ್ನು ನಡೆಸಿದ್ದಾರೆ. ಒಂದು ಮನೆಯೊಳಗೆ, ಮತ್ತೊಂದು ಮನೆ ಹೊರಗೆ. ಹಿಂದೂ ಸ್ತ್ರೀಯು 'ಗೃಹಲಕ್ಷ್ಮಿ'ಯಾಗಿದ್ದಾಳೆ. ಅದಕ್ಕಿಂತ ಹೆಚ್ಚಿಲ್ಲ. ಇಂದಿನ ಸಮಾಜದ ರೂಪವು ಬದಲಾಗುತ್ತಿದೆ ಎಂಬುದು ನಿಜವಾದರೂ, ನಮ್ಮ ತರುಣತರುಣಿಯರಲ್ಲಿನ ಮನೋವೃತ್ತಿಯಲ್ಲಿ ಎಲ್ಲವೂ ಸರಿಯಾಗಿಲ್ಲ.

ಹೆಚ್ಚಿನವರು ಮಧ್ಯತರಗತಿಯವರು. ಈ ಮಧ್ಯ ತರಗತಿಯವರು ಶ್ರೀಮಂತರ ಅನುಕರಣೆ ಮಾಡಲು ಯತ್ನಿಸುತ್ತಾ, ಬಡತರಗತಿಯವರನ್ನು ಅಲಕ್ಷಿಸುತ್ತಾರೆ. ತಾವೂ ಬಡವರಾಗಿದ್ದು, ಮತ್ತೆ ಮುಂದುವರಿದವರು ಎಂಬುದನ್ನು ಮರೆಯುತ್ತಾರೆ.

ತರುಣಿಯು ತರುಣನ ಅಪೇಕ್ಷೆಯಂತೆ ಅತ್ಯಾಧುನಿಕಳಾಗುತ್ತಾಳೆ. ತೆಳ್ಳಗಿನ ಚಮಕಿನ ಸೀರೆ, ಕೂದಲನ್ನು ಕತ್ತರಿಸಿದ ತಲೆ, ಕಣ್ಣಿಗೆ ಬಿಸಿಲ್ಗನ್ನಡಕ, ಕೈಯಲ್ಲಿ ಅಲಂಕಾರದ ಚೀಲ, ಮುಖಕ್ಕೆ ತುಂಬಾ ಸ್ನೋ, ಪೌಡರು, ಬಣ್ಣ.

ಆಧುನಿಕ ಯುವಕನು ಇಂಥವಳನ್ನು ನೋಡಿ ಲಗ್ನವಾಗಲು ಇಚ್ಛಿಸುತ್ತಾನೆಯೇ? ಬಹುಶಃ ಇಲ್ಲ.

ಕೆಲವು ಯುವಕರು, ವಿಶೇಷ ಲಜ್ಜಾಭಾವದ ಹುಡುಗಿಯರು ಲಜ್ಜೆ ತೊರೆದು ಹುಡುಗರಂತೆ ವರ್ತಿಸಬೇಕೆಂದು ಇಚ್ಛಿಸುತ್ತಾರೆ. ಹುಡುಗಿಯು ವಿಚಿತ್ರ ಪೋಷಾಕುಗಳನ್ನು ಧರಿಸಿ, ಹುಡುಗರೊಡನೆ ಬೇಡ್ಮಿಂಟನ್ ಅಥವಾ ಟೆನ್ನಿಸನ್ನು, ಇಲ್ಲವೇ ಇತರ ಆಟಗಳನ್ನು ಆಡತೊಡಗಿದರೆ, ಹಾಗೆಯೇ ಹುಡುಗರೊಡನೆ 'ಪಿಕ್ನಿಕ್' (ವನಭೋಜನ)ಕ್ಕೆ ಹೋದರೆ ಎಷ್ಟು ಮಂದಿ ಅವಳಂಥವಳನ್ನು ಧರ್ಮಪತ್ನಿಯಾಗಿ ಸ್ವೀಕರಿಸಲು ಸಿದ್ಧರು?

ನೃತ್ಯ ಕಲಿವುದೊಂದು ಆಧುನಿಕ ಬೆಡಗು. ಆದರೆ ಅವಿವಾಹಿತರು ತರುಣಿಯು ಪ್ರಾಯಕ್ಕೆ ಬಂದ ಮೇಲೂ ಕಲಾಪ್ರೇಮದಿಂದ ಕಲಾಪೂರ್ಣವಾಗಿ ನರ್ತಿಸುತ್ತಿದ್ದರೆ ಆಧುನಿಕ ಯುವಕರಲ್ಲಿ ಎಷ್ಟು ಮಂದಿ ಅವಳನ್ನು ಕೈಹಿಡಿಯಲು ಸಿದ್ಧರು? ಒಂದು ವೇಳೆ ವಿವಾಹವಾದರೂ ತನ್ನ ಹೆಂಡತಿಯನ್ನು ನೃತ್ಯಪ್ರದರ್ಶನದ ಬಗ್ಗೆ ಕಳುಹಿಸುವವರಾರು?

ತನ್ನ ದುಡಿತವು ಜೀವನಕ್ಕೆ ಸಾಕಾಗದಾದರೆ, ಯುವಕನು ಹೆಂಡತಿಗೂ ಯೋಗ್ಯ ಉದ್ಯೋಗವಿದ್ದರಾಗುತಿತ್ತೆಂದು ಭಾವಿಸಬಹುದು. ಅವಳು ಉದ್ಯೋಗ ದೊರಕಿಸಿಕೊಂಡು ಜೀವನವು ಸುಖಮಯವಾಗಿ ಸಾಗುತ್ತಿದೆ ಎನ್ನುವಾಗ, ಮನೆಯ ಯಜಮಾನ್ಯದಲ್ಲಿ ಆ ಯುವಕನು ತನ್ನಾಕೆಯ ಮೇಲ್ಗೈ ಕಾಣಬಹುದು. ಇದೂ ಒಂದು ಹೊಸ ಸಮಸ್ಯೆಯಾಗುವದು.

ಇದನ್ನೆಲ್ಲ ಯೋಚಿಸಿ, ಮಿ। ಡಿ. ಎಚ್. ಲಾರೆನ್ಸರು ಹೀಗೆ ಅಭಿಪ್ರಾಯ ಪಡುತ್ತಾರೆ. ಮಹಿಳೆಯು ಯಾವಾಗಲೂ ತನ್ನ ಪತಿಯ ಇಂಗಿತ ಅಭಿಪ್ರಾಯಗಳನ್ನು ತಿಳಿದುಕೊಳ್ಳಲೆತ್ನಿಸಿ, ಅದಕ್ಕನುಸಾರವಾಗಿ ನಡೆಕೊಳ್ಳಲು ನೋಡುವದೇ ಒಳ್ಳೆಯದು.

ಏಕೆಂದರೆ, ಹೆಚ್ಚಿನ ಮಹಿಳೆಯರು ಸಮಾನತ್ವ ಅಥವಾ ಹೆಚ್ಚಿನ ಹಕ್ಕುಗಳ ಸ್ಥಾಪನೆಗೆ ಸ್ವಭಾವತಃ ಇಚ್ಛಿಸುವವರಲ್ಲ. ಅವರು ತಮ್ಮೊಳಗೇ ತಕ್ಕಷ್ಟು ಬುದ್ಧಿಶಾಲಿಗಳಾಗಿದ್ದರೂ ಹಲವು ವಿಷಯಗಳಲ್ಲಿ ಗಂಡಸಿನ ಮೇಲೆ ಹೊಂದಿಕೊಂಡಿರುವರು.

ಆಧುನಿಕ ಯುವಕನು, ತಾನು ತನ್ನ ಸ್ತ್ರೀಯನ್ನು ಹೇಗೆ ನಡೆಸಿಕೊಳ್ಳಬೇಕೆಂಬುದನ್ನು ತಿಳಿದಿರಲೇಬೇಕು. ಅವಳು ಅವನ ಸಹಧರ್ಮಿಣಿ; ದಾಸಿಯಲ್ಲ. ಅವಳಿಗೆ ಸಲ್ಲುವ ಗೌರವವನ್ನು ಸಲ್ಲಿಸಲೇಬೇಕು. "ಯತ್ರನಾರ್ಯಸ್ತು ಪೂಜ್ಯಂತೇ ರಮತೇ ತತ್ರ ದೇವತಾ."

'ಪ್ರಭಾತ'

—

Specialists in Tailoring! Prompt Service!!

FOR **English Felt Hats,**

Wedding Suits, Ladies COver oats

AND

Latest Designs in Wollen Suitings

— CALL ON —

25-23 **PATTU BROTHERS,**

OPP.— Town Hall, MYSORE.

ಮೈಸೂರಿನಲ್ಲಿ ನೂತನ ತಾರೆ!

ಲೇ—ಶ್ರೀ. ಪಾರ್ಥ ಸಾರಥಿ, ಮೈಸೂರು.

ತಾರೆ!!? ಹೌದು ತಾರೆಯೆಂದೊಡನೆ ಸಾಮಾನ್ಯವಾಗಿ ಎಲ್ಲರ ಮನಸ್ಸೂ ಉತ್ಸಾಹದಿಂದ ಕೂಡುವುದು. ಏಕೆ? ಇಪ್ಪತ್ತನೆಯ ಶತಮಾನದ ಮಧ್ಯಮ ಕಾಲದಲ್ಲಿ, ತಾರೆ ಎಂಬ ಶಬ್ದಕ್ಕೆ ನಾನಾರ್ಥಗಳಿದ್ದರೂ ಸಹ, ಕೂಡಲೇ....ಸಿನಿಮಾ ನಟಿ ಎಂಬ ಭಾವ ಹೊಳೆಯುತ್ತದೆ. ಹೀಗೇಕೆ ಆಯಿತು? ಎಂಬ ಪ್ರಶ್ನೆಗೆ ಉತ್ತರ ಹೇಳುವುದು ಕಷ್ಟವಾಗಿ ತೋರಿ ಬಂದರೂ ಸಹ, ತಾರೆ ಎಂಬ ಶಬ್ದಕ್ಕೆ ಸಿನಿಮಾ ನಟಿ ಎಂಬ ಸಾಮಾನ್ಯವಾದ ಅರ್ಥ ಜನಸಾಮಾನ್ಯರ ಬಳಕೆಯಲ್ಲಿ ಬಂದು ಬಿಟ್ಟಿದೆ. ಎಲ್ಲಿ ಸಕ್ಕರೆ ಇದೆಯೋ ಅಲ್ಲಿಗೆ ಇರುವೆ ಮುತ್ತುವುದು ಸಹಜವಲ್ಲವೇ? ಆದರೆ ನಮ್ಮ ತಾರೆ ಈ ತಾರೆಗಳಿಂದ ಬಲು ದೂರವಾದುದು. ತಾರೆ ಎಂಬ ಶಬ್ದಕ್ಕೆ ನಕ್ಷತ್ರ ಎಂಬ ಅರ್ಥವಿದ್ದರೂ ನಮ್ಮ ತಾರೆ ಖಗೋಲ ಶಾಸ್ತ್ರಕ್ಕೆ ಸಂಬಂಧಿಸಿದ್ದಲ್ಲ. ಎಂದ ಮೇಲೆ ತಾರೆ ಎನ್ನುವುದು ಕೇವಲ ಅನ್ವರ್ಥ ನಾಮ. ಈ ತಾರೆಯು ಹೊಸದಾಗಿ ಜನ್ಮತಾಳಿ ತನ್ನ ಕಾಂತಿಯಿಂದ ಎಲ್ಲರನ್ನೂ ಆಕರ್ಷಿಸುತ್ತಲಿದೆ. ಹೊಸದಾಗಿ ಜನ್ಮತಾಳಿದ್ದರಿಂದ ನೂತನವೆಂದೂ ನಕ್ಷತ್ರದಂತೆ ಮಿನುಗುತ್ತಲಿರುವುದರಿಂದ ತಾರೆಯೆಂದೂ ಕರೆಯಬಹುದಾಗಿದೆ.

ಹೊಸದಾಗಿ ಹುಟ್ಟಿದ ಇಲ್ಲವೆ ಆರಂಭವಾದವುಗಳಿಗೆಲ್ಲಾ ತಾರೆಯೆಂಬ ಅನ್ವರ್ಥ ನಾಮ ಅನ್ವಯಿಸಬಹುದಾದರೆ ಈ ನಮ್ಮ ತಾರೆಯಾವುದಾಗಿರಬಹುದು? ಉತ್ತಮವಾದ ಫಲಹಾರಮಂದಿರವೇ? ಇಲ್ಲ ಸಿನಿಮಾ ಮಂದಿರವೇ?....ಎರಡೂ ಅಲ್ಲ ನಮ್ಮ ತಾರೆಯು ಒಂದು ವಿದ್ಯಾಮಂದಿರ!—ಈ ಮಾತನ್ನು ಕೇಳಿ ಓದುಗರು ಆಶ್ಚರ್ಯಪಡಬಹುದು.

ಈ ವಿದ್ಯಾ ಶಾಲೆಯು ಮಿಕ್ಕ ಅನೇಕ ಶಾಲೆಗಳಂತೆ ಅಲ್ಲವಾದ್ದರಿಂದ ಇದಕ್ಕೆ ಇಷ್ಟೊಂದು ಒಕ್ಕಣೆ ಬರೆಯಬೇಕಾಯಿತು. ಹಾಗಾದರೆ ಈ ಶಾಲೆಯ ವೈಶಿಷ್ಟ್ಯತೆ ಏನು? ಎಂಬ ಪ್ರಶ್ನೆ ಸಹಜವಾಗಿಯೇ ಬರುತ್ತದೆ? ನಿಜ. ಕಣ್ಮರೆಯಾಗುತ್ತಿರುವ ಭಾರತಿಯ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಿ ಆ ಮೂಲಕ ಹಿಂದಿನ ಗುರುಕುಲಗಳನ್ನು ನೆನಪಿಗೆ ತರುವಂತಹ ಶಾಲೆಯೊಂದು ಮೈಸೂರು ಪಟ್ಟಣದಲ್ಲಿ ಹೊಸದಾಗಿ ಆರಂಭವಾಗಿರುವುದು ವಿಶೇಷ ಸಂಗತಿಯಲ್ಲದೆ ಮತ್ತೇನು!

ಬಿ. ಎಂ. ಶ್ರೀಕಂಠಯ್ಯನವರು ಹೇಳಿದುವಂತೆ 'ಗುರು' ಎನ್ನುವ ಶಬ್ದವೇ ಬಹು ಪವಿತ್ರವಾದುದು. ಅಂತಹ ಗುರುಕುಲವೊಂದು ಹೊಸದಾಗಿ ಶ್ರೀರಾಮಕೃಷ್ಣ ಪರಮಹಂಸ, ವಿವೇಕಾನಂದರ ಆಶೀರ್ವಾದ ಬಲದಿಂದ ಮೈಸೂರಿನಲ್ಲಿ ಆರಂಭವಾಗಿದೆ. ಆಧುನಿಕ ರೀತಿ ನೀತಿಗಳಿಗನುಗುಣವಾದ ಸೌಕರ್ಯಗಳು ಕಂಡುಬಂದರೂ ಸಹ ನಮ್ಮ ಹಿಂದಿನ ಸಂಸ್ಕೃತಿಯನ್ನೇ ಆಧಾರವಾಗಿಟ್ಟುಕೊಂಡಿದೆ ಈ ಶಾಲೆ. ಶಾಲೆಯು ಉತ್ತಮವಾದ ಸನ್ನಿವೇಶದಲ್ಲಿ ನಿರ್ಮಿಸಲ್ಪಟ್ಟಿದೆ. ಶಾಲೆಯ ಸುತ್ತಲೂ ಸುಂದರವಾದ ಪ್ರಕೃತಿಯ ಸೊಬಗು ನೋಡುವವರ ಹೃದಯವನ್ನು ಸೂರೆಗೊಳ್ಳುತ್ತದೆ.

ಶಾಲೆಯ ಎದುರಿನಲ್ಲಿ ಸುಮಾರು ಐವತ್ತು ಎಕರೆ ವಿಸ್ತೀರ್ಣವುಳ್ಳ ಭೂಮಿಯು ಶಾಲೆಯ ಆವರಣಕ್ಕೆ ಸೇರಿದೆ. ಈ ಸ್ಥಳದಲ್ಲಿ ವಿವಿಧ ಆಟಗಳಿಗೆ ಬೇಕಾದ ಮೈದಾನಗಳನ್ನು ರಚಿಸಿ ವಿದ್ಯಾರ್ಥಿಗಳ ದೈಹಿಕ ಬೆಳವಣಿಗೆಗೆ ಸೂಕ್ತ ಸೌಕರ್ಯಗಳನ್ನು ಏರ್ಪಡಿಸಿದೆ.

ಶಾಲೆಯ ವಿದ್ಯಾರ್ಥಿಗಳು ಹಗಲಿರುಳು ಆಶ್ರಮದ ಶಾಲೆಯಲ್ಲೇ ಇದ್ದು ಕಾಲ ಕಾಲಕ್ಕೆ ನಿಯಮಿತವಾದ ಕೆಲಸಗಳನ್ನು ಮಾಡಬೇಕು. ಕಾಲ ವಿಳಂಬನಕ್ಕೆ ಎಡೆಯಿಲ್ಲ. ಸಂಜೆ ತೋಟದಲ್ಲಿ ಕೆಲಸ ಮಾಡಬೇಕು. ಇದರಿಂದ ವಿದ್ಯಾರ್ಥಿಗಳಲ್ಲಿ ಉಚ್ಚ ನೀಚ ಭಾವನೆ ಹೋಗಿ ಸಮರಸ ಭಾವನೆ ಬೆಳೆಯುತ್ತದೆ. ಸಾಮೂಹಿಕ ಪ್ರಾರ್ಥನೆಯು ವಿದ್ಯಾರ್ಥಿಗಳ ಮನಸ್ಸು ಮತ್ತು ಆ ವರಣವನ್ನು ಶಾಂತವಾಗಿಡುತ್ತದೆ. ನಿಯಮಿತ ಕಾಲಗಳಲ್ಲಿ ಆಟ ಪಾಠಗಳು, ಸತ್ಸಂಗ, ಊಟ ಉಪಚಾರಗಳು ನಡೆಯುತ್ತವೆ. ವಿದ್ಯಾರ್ಥಿಗಳು ಬೆಳಗಿನ್ನು ತಣ್ಣೀರಿನಲ್ಲಿ ಸ್ನಾನ ಮಾಡಿ ತಮ್ಮ ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳಬೇಕು. ಮನರಂಜಕವಾದ ಕಾರ್ಯಕ್ರಮಗಳಿಗೆ ಪ್ರತಿವಾರದಲ್ಲಿ ಒಂದು ದಿನವನ್ನು ಮೀಸಲಾಗಿರಿಸಿ ಆ ಮೂಲಕ ವಿದ್ಯಾರ್ಥಿಗಳಲ್ಲಡಗಿರುವ ಸುಪ್ತ ಚೇತನವನ್ನು ಹೊರಗೆಡಹಲು ಅವಕಾಶವನ್ನುಂಟು ಮಾಡಿಕೊಟ್ಟಿದೆ. ವಿದ್ಯಾರ್ಥಿ ಸಂಘ, ಅಧ್ಯಾಪಕ ಸಂಘ, ಸತ್ಸಂಗ ಗೋಷ್ಠಿ, ರೇಡಿಯೋ ಶಿಕ್ಷಣ, ಸಂಗೀತ ಮತ್ತು ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಚಲನ ಚಿತ್ರ ಪ್ರದರ್ಶನ ಇವೇ ಮೊದಲಾದ ವಿಶೇಷ ಕಾರ್ಯಕ್ರಮಗಳೂ ಸಹ ಶಾಲೆಯ ವಿದ್ಯಾರ್ಥಿಗಳ ಕಾರ್ಯ ಚಟುವಟಿಕೆಯಲ್ಲಿ ಮುಖ್ಯ ಅಂಗಗಳಾಗಿವೆ. ತಪ್ಪಿತಸ್ಥರನ್ನು ತಿದ್ದಲು, ಕುಂದು ಕೊರತೆಗಳನ್ನು ನಿವಾರಿಸಲು ವಿದ್ಯಾರ್ಥಿಗಳೇ ಸೇರಿ ನ್ಯಾಯಾಲಯವನ್ನು ಏರ್ಪಡಿಸಿರುವರು. ವಿದ್ಯಾರ್ಥಿಗಳ ಪಾಲನೆ ಪೋಷಣೆ ವಿದ್ಯಾಭ್ಯಾಸಗಳಲ್ಲಿ ವೈಯಕ್ತಿಕ ಗಮನ ಕೊಟ್ಟು ಸೌಕರ್ಯಗಳನ್ನು ಕಲ್ಪಿಸಿದೆ. ಈ ಕಾರ್ಯಗಳ ಮೇಲ್ವಿಚಾರಣೆಯನ್ನು ಆಶ್ರಮವಾಸಿಗಳೂ, ಅಧ್ಯಾಪಕರೂ ನಡೆಸುತ್ತಿರುವರು. ಮಾಧ್ಯಮಿಕ ಹಾಗೂ ಪ್ರೌಢ ತರಗತಿಗಳಲ್ಲಿವೂ ಕ್ರಮವಾದ ರೀತಿಯಲ್ಲಿ ನಡೆಯುತ್ತಿರುವವು. ಇಂತಹ ರೆಸಿಡೆನ್ಷಿಯಲ್ ಶಾಲೆಗಳನ್ನು ಆರಂಭ ಮಾಡುವದು ಎಷ್ಟು ಶ್ರಮ ಸಾಧ್ಯವೋ ಅದನ್ನು ಜಯ ಪ್ರದವಾಗಿ ನಡೆಸುವದೂ ಅಷ್ಟೇ ಕಷ್ಟ. ಇಂಥಾ ಪವಿತ್ರವಾದ ಶಾಲೆಗಳನ್ನು ಜನರು ಪ್ರತ್ಯಕ್ಷವಾಗಿ ಕಂಡು ಆನಂದಿಸಿ ಅದರ ಪೂರ್ಣ ಪ್ರಯೋಜನ ಪಡೆಯುವರೆಂದು ಆಶಿಸಲಾಗಿದೆ.

—

ಗಾಂಧಿ ವಿಚಾರದೋಹನ.

ಬೆಳಕಿನ ಕರು[illegible]ವು.

ಸೋಲಾಯಿತೆಂದು ಧೈರ್ಯಗೆಡುವವನು ನಾನಲ್ಲ. ದೇವರು ನನ್ನನ್ನು ಪರಿಶುದ್ಧಗೊಳಿಸುವನೇ ವಿನಾ ನನ್ನಲ್ಲಿ ದ್ವೇಷವನ್ನು [illegible]. ಯಾವಾಗಲೂ ಎಂದಾದರೂ ಮಾನವನ ಜ್ಞಾನಶಕ್ತಿಗಿಂಥಾ ನ್ಯೂನವೇ ಮಿಗಿಲಾದುದು.

ಸುತ್ತು ಆವರಿಸಿರುವ ಕಗ್ಗತ್ತಲ ಈ ಜಗತ್ತಿನಲ್ಲಿ ಬೆಳಕಿನತ್ತ ನನ್ನ ದಾರಿಯನ್ನು ತಡವರಿಸಿ ತಿಳಿದುಕೊಂಡು ಹೋಗಬೇಕೆನ್ನಿಸಿರುವೆನು. ಆಗಾಗ ನನ್ನದು ತಪ್ಪು ಹೆಜ್ಜೆಗಳಾಗಬಹುದು. ಆದರೆ ಅದನ್ನು ಸರಿಪಡಿಸಿ ಬೆಳಕಿನತ್ತ ತಡವರಿಸಿ ಸಾಗುವದೇ ನನ್ನ ಜೀವನದ ಗುರಿ.

ನಾನು ಪರಿಪೂರ್ಣನಾದ ಮಾನವನಾಗಿದ್ದರೆ ನನ್ನ ನೆರೆಯವರ ಕಷ್ಟ ಸುಖಗಳ ಅನುಭವ ಸ್ವತಃ ನನಗಾಗಬೇಕಿತ್ತು. ಪರಿಪೂರ್ಣನಾದ, ಅತಿ ಮಾನವನಾದ ನಾನು ಆ ಕಷ್ಟ ಸುಖಗಳನ್ನು ತಿಳಿದು ಪರಿಹಾರ ಪಡಿಸಲು ಶಕ್ತನಾಗಬೇಕಿತ್ತು. ಆದರೆ ನಾನು ಇನ್ನೂ ಅಂಥಾ ಅತಿ ಮಾನವನಾಗಿಲ್ಲ. ಅಂಥಾ ಪರಿಪೂರ್ಣತೆಯು ಒಂದು ಮಬ್ಬು ನನಗೆ ತೋರುತ್ತಿದೆಯಾದರೂ ಆ ಗುರಿಗೆ ಮುಟ್ಟಲು ಕಷ್ಟ ನಿಷ್ಠುರಗಳು ತುಂಬಾ ಇವೆ.

ಈ ಪ್ರಪಂಚದಲ್ಲಿ ನನ್ನ ಚಿಕ್ಕತನ ಹಾಗೂ ಸಾಮರ್ಥ್ಯದ ಮಿತಿಯನ್ನು ಯೋಚಿಸಿ ಜನತೆ ನನ್ನಿಂದ ಅಪೇಕ್ಷಿಸುವುದನ್ನು ನೆನೆಯುವಾಗ ನಾಚಿಕೆಯಾಗುತ್ತದೆ. ಆದರೆ ನನ್ನಲ್ಲಿರುವ ಸತ್ಯ ಮತ್ತು ಅಹಿಂಸೆಗಳೆಂಬ ಎರಡು ರತ್ನಗಳ ಬಲ ಮತ್ತು ಬೆಳಕಿನಿಂದ ನನ್ನ ಜವಾಬ್ದಾರಿಯನ್ನು ನಿರ್ವಹಿಸಲು ಶಕ್ತನಾದೇನೆಂಬ ವಿಶ್ವಾಸವಿದೆ.

ಜಗತ್ತನ್ನು ಮೆಚ್ಚಿಸಲಿಕ್ಕಾಗಿ ಎಂದೂ ಕೂಡ ನಾನು ದೇವರಿಗೆ ದ್ರೋಹಿಯಾಗಿ ವರ್ತಿಸಿಲ್ಲ. ನನ್ನ ಮುಂದಿರುವ ಕರ್ತವ್ಯವನ್ನು ಮಾಡುವದರಲ್ಲಿ ನಾನು ತೃಪ್ತನಲ್ಲದೆ ನಾಳೆಯ ಯೋಜನೆಯಲ್ಲಿ ನಾನು ಆಸಕ್ತನಲ್ಲ. ಕೆಲಸ ಗೊತ್ತಿಲ್ಲದವನು ತನ್ನ ಸಾಧನಗಳೊಡನೆ ಜಗಳವಾಡುವಂತೆ, ಅಯೋಗ್ಯ ಜನರಲನು ತನ್ನ ಸಿಪಾಯಿಗಳನ್ನು ದೂರುತ್ತಾನೆ. ಆದರೆ ನಾನು ಅಂಥಾ ನಿಕೃಷ್ಟ ಜನರಲನಲ್ಲ. ನನಗೆ ತನ್ನ ಮಿತಿ ಗೊತ್ತಿದೆ. ಸಾಧ್ಯವಿಲ್ಲದ್ದನ್ನು ಸಾಧ್ಯವಿಲ್ಲವೆಂದು ಹೇಳಿ ನನ್ನ ನಿರ್ಬಲತೆಯನ್ನು ಒಪ್ಪಿಕೊಳ್ಳುವ ಧೃತಿ ಇದೆ. ಆದರೆ ಸಂದಿಗ್ಧ ಸಮಯದಲ್ಲಿ ಆ ದಿವ್ಯ ಬೆಳಕು ದಾರಿ ತೋರಿಸುತ್ತದೆ. ಆ ಬೆಳಕಿಗಾಗಿಯೇ ಸದಾ ನನ್ನ ಪ್ರಾರ್ಥನೆ.

ಜನರು ಏನೇ ಹೇಳಲಿ, ಯಾರು ಬೇಕಾದರೂ ವಿರೋಧಿಸಲಿ, ನಿನ್ನನ್ನು ಹುಚ್ಚರ ಗುಂಪಿಗೆ ಸೇರಿಸಲಿ; ನೀನೊಬ್ಬನೇ ಒಂದು ಕಡೆಯಾಗಿ ಇಡೀ ಪ್ರಪಂಚವೇ ನಿನಗೆ ಎದುರಾಗಿ ನಿಲ್ಲಲಿ ಆದರೂ ಕೂಡ ಚಿಂತೆ ಬೇಕಿಲ್ಲ. ನಿನ್ನ ಅಂತರಾಳದಲ್ಲಿ ಕೇಳಿಬರುವ ಮೃದುನುಡಿಯನ್ನು ನಂಬಿ ಅದರಂತೆ ವರ್ತಿಸು. ಅದು ಸಾರಿ ಹೇಳುತ್ತಿದೆ 'ಸ್ನೇಹಿತರನ್ನು ಪತ್ನೀಸುತರನ್ನು ತ್ಯಜಿಸು. ಆದರೆ ಯಾವುದಕ್ಕಾಗಿ ಜೀವಿಸಿವೆಯೋ, ಯಾವುದಕ್ಕಾಗಿ ಸಾಯಬೇಕಾಗಿ ಬರುವದೋ ಆ ಅಂತರಾತ್ಮನ ಕರೆಗೆ ವಿರುದ್ಧ ವರ್ತಿಸದಿರು" ಎಂದು.

— ಎಂ. ಕೆ. ಗಾಂಧಿ.

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	3,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಲೆಕ್ಕ (Current Deposits)	ರೂ.	0-3-0
ಸೇವಿಂಗ್ಸ್ (ತಾ. 1—1—1953 ರಿಂ)	,,	1-3-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶ್ಯೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ & ಖಜಾಂಚಿ.

ಜ್ಞಾನ ದೀಪ.

(೧)

ಶಾಯಿಯ ಬಲದಿಂದ ಸಾಗುವ ನಾವೆ, ಬಾಯಿಯ ಬಲದಿಂದ ಬಾಳುವ ಮನುಷ್ಯ— ಎರಡೂ ಗಾಳಿ ಬೀಸಿದತ್ತ.

(೨)

ಧ್ವಜದ ಬಣ್ಣಕ್ಕೆ ಅರ್ಥವಿದೆ. ಆದರೆ ಸೆರಗಿನ ಬಣ್ಣಕ್ಕೆ ಅಂಥಾ ಅರ್ಥ ಎಲ್ಲೀದ? ಅದರಂತೆ ಪವಿತ್ರ ಭಾವನೆಗಿರುವ ಬೆಲೆ ನಿತ್ಯ ಲಾಲಸೆಗೆ ಹೇಗ ಬಂದೀತು?

(೩)

ಲೋಕದಲ್ಲಿ ಹೂವುಗಳಿದ್ದಷ್ಟು ಹಾವುಗಳಿಲ್ಲ. ನಗುವವರನ್ನು ಕಾಣುವಷ್ಟು ಕಣ್ಣೀರಿಳಿಸುವವರನ್ನು ಕಾಣುವದಿಲ್ಲ ಸಜ್ಜನರಿರುವಷ್ಟು ದುರ್ಜನರಿಲ್ಲ.

—

ಕೊಡಗು

ತಾರೀಕು ೨೪ ಜುಲೈ ೧೯೫೩ನೇ ಶುಕ್ರವಾರ

ಮದರಾಸಿನ ಪ್ರಾಥಮಿಕ ವಿದ್ಯಾ ಯೋಜನೆ.

ಮದ್ರಾಸಿನ ಮುಖ್ಯ ಮಂತ್ರಿ ರಾಜಗೋಪಾಲಾಚಾರಿಯವರು ಮದ್ರಾಸ್ ಪ್ರಾಂತದಲ್ಲಿ ಹೊಸ ರೀತಿಯ ಪ್ರಾಥಮಿಕ ವಿದ್ಯಾಭ್ಯಾಸ ಕ್ರಮವನ್ನು ಜಾರಿಯಲ್ಲಿ ತಂದಿದ್ದಾರೆ. ಈ ಹೊಸ ವಿದ್ಯಾವಿಧಾನದ ವಿಚಾರದಲ್ಲಿ ತರ್ಕವಿತರ್ಕಗಳು ಹಲವೆಡೆ ನಡೆಯುತ್ತಿವೆ. ಈ ವಿದ್ಯಾ ಯೋಜನೆಯನ್ನು ಜನಹಿತ ದೃಷ್ಟಿಯಿಂದ ರೂಪಿಸಿದವರದೆನ್ನುವದರಲ್ಲಿ ಸಂಶಯವಿಲ್ಲದಿದ್ದರೂ ಇದೊಂದು ಹೊಸ ಪ್ರಯೋಗವಾಗಿರುವದರಿಂದ ಸಾಕಷ್ಟು ಎಚ್ಚರಿಕೆಯಿಂದ ವರ್ತಿಸದಿದ್ದರೆ ಅನಾಹುತವಾದೀತು.

ಈ ಹೊಸ ಯೋಜನೆಯಲ್ಲಿ ಕಂಡುಬರುವ ಪ್ರಾಮುಖ್ಯ ವಿಷಯಗಳಿವು. ಮದ್ರಾಸಿನಲ್ಲಿ ೩೮,೦೦೦ ಪ್ರಾಥಮಿಕ ಶಾಲೆಗಳೂ ಅವುಗಳಲ್ಲಿ ಸುಮಾರು ೧,೮೦,೦೦೦ ಅಧ್ಯಾಪಕರೂ ಇದ್ದಾರೆ. ಆದರೆ ಶಾಲೆಗೆ ಹೋಗುವ ಪ್ರಾಯದ ಮಕ್ಕಳಲ್ಲಿ ಶೇಕಡ ೫೦ರಷ್ಟು ಶಾಲೆಗೆ ಹೋಗುತ್ತಿಲ್ಲ. ಇವರನ್ನು ಶಾಲೆಗೆ ಹೋಗುವಂತೆ ಮಾಡುವದು ಒಂದನೇ ಉದ್ದೇಶ. ಈಗ ಮದ್ರಾಸ್ ಸರಕಾರವು ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುತ್ತಿರುವ ೯ ಕೋಟಿ ರೂಪಾಯಿಗಳ ಖರ್ಚಿನಲ್ಲೇ ಹೆಚ್ಚಿಗೆ ಸೇರುವ ಮಕ್ಕಳ ವಿದ್ಯೆ ನಡೆಯಬೇಕು ಅಧ್ಯಾಪಕರ ವೇತನ ಸಲ್ಲಬೇಕು. ಎಳೆ ಮಕ್ಕಳಿಗೆ ದಿನ ಒಂದರ ಬರೀ ಮೂರು ತಾಸು ವಿದ್ಯೆ ಕಲಿಸಿದರೆ ಸಾಕು. ಅಧ್ಯಾಪಕರು ಈಗ ಮಾಡುತ್ತಿರುವ ಕೆಲಸದ ಜೊತೆಗೆ ಒಂದು ತಾಸು ಹೆಚ್ಚಿಗೆ ಕೆಲಸ ಮಾಡಬೇಕು. ವಿದ್ಯಾರ್ಥಿಗಳು ಮೂರು ಗಂಟೆ ಶಾಲೆಯಲ್ಲಿ ಕಲಿತು ಮಿಕ್ಕ ಸಮಯದಲ್ಲಿ ಮನೆಯಲ್ಲಿ ತಮ್ಮ ಹಿರಿಯರ ಕಸುಬುಗಳನ್ನು ಕಲಿತು ತಂದೆ ತಾಯಿಗಳಿಗೆ ಸಹಾಯ ಮಾಡಬೇಕು ಇಲ್ಲವೇ ಹಳ್ಳಿಯ ಕೆಲಸದ ವಿಚಾರ ತಿಳಿದುಕೊಳ್ಳಬೇಕು.

ಇವುಗಳ ವಿಚಾರದಲ್ಲಿ ನಮ್ಮ ಅಭಿಪ್ರಾಯವನ್ನು ಹೇಳುವದಾದರೆ ಶಾಲೆಗೆ ಹೋಗತಕ್ಕ ವಯಸ್ಸಿನ ಮಕ್ಕಳನ್ನೆಲ್ಲಾ ಶಾಲೆಗೆ ಹೋಗುವಂತೆ ಮಾಡಬೇಕಾದುದು ಕರ್ತವ್ಯವಾದರೂ ಹೆಚ್ಚಿನ ವಿದ್ಯಾರ್ಥಿಗಳು ಬಂದರೂ ಖರ್ಚುಮಾತ್ರ ಹೆಚ್ಚು ಮಾಡಲಾಗವದಿಲ್ಲವೆಂಬುದು ಸರಿಹೋಗದ ಮಾತು. ಐವತ್ತು ವಿದ್ಯಾರ್ಥಿಗಳಿಗೆ ಇಂದು ಇಬ್ಬರು ಅಧ್ಯಾಪಕರಿದ್ದರೆ ನೂರು ವಿದ್ಯಾರ್ಥಿಗಳಿಗೆ ಇಬ್ಬರೇ ಪಾಠ ಹೇಳಲು ಸಾಧ್ಯವಾಗಲಾರದು. ಅಧ್ಯಾಪಕರು ಹಿಂದೆ ಐದು ಗಂಟೆ ಕೆಲಸ ಮಾಡುತ್ತಿದ್ದರೆ ಈ ಯೋಜನೆ ಪ್ರಕಾರ ಮೊದಲಿನ ವೇತನದಲ್ಲಿಯೇ ಒಂದು ಗಂಟೆ ಹೆಚ್ಚಿನ ಕೆಲಸ ಮಾಡಬೇಕಾಗುವದು. ದಿನಕ್ಕೆ ಆರು ಗಂಟೆ ಚಿಕ್ಕ ಮಕ್ಕಳಿಗೆ ಪಾಠ ಹೇಳುವ ಕೆಲಸ ಕಠಿಣವೆಂದು ಬೇರೆ ಹೇಳಬೇಕಿಲ್ಲ. ಕಾಲೇಜು ಹೈಸ್ಕೂಲುಗಳಲ್ಲಿ ದಿನಕ್ಕೆ ಮೂರು ಗಂಟೆಗಳಿಗಿಂಥಾ ಹೆಚ್ಚು ಸಮಯ ಪಾಠ ಹೇಳುವದಿಲ್ಲ. ಆದ್ದರಿಂದ ಈ ಯೋಜನೆಯಿಂದ ಅಧ್ಯಾಪಕ ವರ್ಗದ ಹುರುಪು ಕಡಿಮೆಯಾಗದಿರದು.

ಮಕ್ಕಳು ಮನೆಯಲ್ಲಿ ತಂದೆ ತಾಯಿಯರಿಗೆ ಸಹಾಯಕರಾಗಬೇಕೆಂಬ ಆಸೆಯೂ ಫಲಿಸಲಾರದು. ಪ್ರಾಥಮಿಕ ಶಾಲೆಯ ಮಕ್ಕಳು ಹತ್ತು ವಯಸ್ಸಿನ ಒಳಗಿನವರು. ಇವರು ಮನೆಯಲ್ಲಿದ್ದರೆ ಕೆಲಸಕ್ಕೆ ತೊಂದರೆ ವಿನಾ ಲಾಭವಿಲ್ಲ. ಇವರ ತೊಂದರೆ ನಿವಾರಣೆಗಾಗಿ ಶಾಲೆಗೆ ಕಳುಹಿಸುವ ತಂದೆ ತಾಯಿಗಳು ಎಷ್ಟಿಲ್ಲ? ಆದ್ದರಿಂದ ಆ ದೃಷ್ಟಿಯಿಂದಲೂ ಹೆಚ್ಚಿನ ಹಿತವಾಗುವಂತೆ ತೋರುವದಿಲ್ಲ.

ಮತ್ತೆ ಈ ಚಿಕ್ಕ ಮಕ್ಕಳು ಬೇರೆ ವೃತ್ತಿಗಳನ್ನು ಸ್ವಇಚ್ಛೆಯಿಂದ ಕಲಿಯುವರೆಂಬುದು ದೂರದ ಮಾತು. ಪ್ರತಿ ನಿಮಿಷ ಜೊತೆಯಲ್ಲಿದ್ದು ದಿನವಿಡೀ ಪಾಠ ಹೇಳಿಕೊಟ್ಟರೂ ಕಲಿಯದ ಮಕ್ಕಳು ೩!!! ತಾಸಿನ ಪಾಠದಿಂದ ಹೇಗೆ ಸಾಕಷ್ಟು ಅಕ್ಷರಭ್ಯಾಸ ಮಾಡಿಯಾರೆಂಬುದು ಸಂಶಯದ ಮಾತು. ಮತ್ತೆ ಅವರು ಶಾರೀರಿಕ ಪರಿಶ್ರಮದ ಶಿಕ್ಷಣವನ್ನು ಮನೆಯಲ್ಲಿ ಕಲಿಯುವದು ದೂರದ ಮಾತೇ ಆಗಿದೆ. ಹೀಗಾಗಿ ಈ ಹೊಸ ವಿದ್ಯಾಕ್ರಮದಿಂದ ಶಾಲಾಶಿಕ್ಷಣವೂ ಇಲ್ಲ; ಕಡೆಗೆ ವೃತ್ತಿ ಶಿಕ್ಷಣವೂ ಇಲ್ಲ ಎಂಬಂತಾಗುವದೇ ಎಂಬ ಶಂಕೆ ನಮಗಿದೆ. ಮದ್ರಾಸಿನಂಥಾ ವ್ಯವಸಾಯ ಪ್ರಧಾನ ಪ್ರಾಂತದಲ್ಲಿ ದೇಶದ ವಿದ್ಯಾರ್ಥಿಗಳೆಲ್ಲ ವ್ಯವಸಾಯ ಕಲಿತರೆ ಅದರಿಂದ ಶುಭವಾಗುವದೇ? ಈ ವಿದ್ಯಾಯೋಜನೆಯಲ್ಲಿ ಇತರ ಕಸುಬು ಕಲಿಯುವ ಅವಕಾಶವಾದರೂ ಎಲ್ಲಿದೆ? ಹೀಗಿರುವದರಿಂದ ರಾಜಾಜಿಯವರ ಈ ಹೊಸ ಪ್ರಯೋಗದಿಂದ ನಿರೀಕ್ಷಿಸಿದ ಲಾಭ ಆದೀತೆನ್ನುವದು ಸಂಶಯದ ಮಾತಾಗಿದೆ.

ವರ್ತಮಾನ.

ಶ್ರೀ ಬೇರೆರ ಬಿ. ಐಯ್ಯಪ್ಪನವರು (ಟಿ. ಎಸ್. ಎಲ್. ಸಿ) ಸೆಕೆಂಡರಿಗ್ರೇಡ್ ಅಧ್ಯಾಪಕರ ತರಬೇತು ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು.

ಮೈಸೂರು ವಿಶ್ವವಿದ್ಯಾಲಯದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಶ್ರೀ ಪ್ರೋಡಾಮಾಡ ಸಿ. ಸುಬ್ಬಯ್ಯ ಮತ್ತು ಚೇಂದಂಡ ಜಿ. ತಿಮ್ಮಯ್ಯನವರು ತೇರ್ಗಡೆಯಾಗಿರುವರು.

ಸರ್ವೆ ಆಫ್ ಇಂಡಿಯಾ ಇಲಾಖೆಯಲ್ಲಿ ಟೊಪ್ರೋಗ್ರಾಫಿಕಲ್ ತರಬೇತಿನ ಬಿ. ತರಗತಿಯ ನೌಕರಿಗೆ ಎಸ್. ಎಸ್. ಎಲ್. ಸಿ. ಪಾಸಾದ ಅಥವಾ ಎಸ್. ಎಸ್. ಎಲ್. ಸಿ. ವರೆಗೆ ಓದಿದ ತರುಣರು ಬೇಕಾಗಿದ್ದಾರೆ ಕುತೂಹಲವುಳ್ಳವರು ತಮ್ಮ ಅರ್ಜಿಗಳನ್ನು ಮಡಿಕೇರಿ ಎಂಪ್ಲಾಯಿಮೆಂಟ್ ಆಫೀಸಿಗೆ ಆಗಸ್ಟ್ ತಾ. ೧೦ ರೊಳಗೆ ತಲಪುವಂತೆ ಬರೆಕೊಳ್ಳತಕ್ಕದ್ದು.

ವೀರಾಜಪೇಟೆಯ ಪ್ರೌಢ ಶಾಲೆಯ ಪಾರ್ಲಿಮೆಂಟಿನ ಪ್ರಧಾನ ಮತ್ತು ಉಪ ಪ್ರಧಾನ ಮಂತ್ರಿಗಳ ಚುನಾವಣೆಯು ಆಧುನಿಕ ಮತ ಪದ್ಧತಿ ಮೇರೆ ನಡೆದು ಮಂಡೇಪಂಡ್ರ ಕುಶಾಲಪ್ಪನವರು ಪ್ರಧಾನ ಮಂತ್ರಿಯಾಗಿಯೂ, ಕುಂಡ್ರಂಡ ಮುತ್ತಣ್ಣನವರು ಉಪಪ್ರಧಾನ ಮಂತ್ರಿಯಾಗಿಯೂ ಆರಿಸಲ್ಪಟ್ಟರು. ನಂತರ ಇವರು ಮತ್ತು ಶಾಲಾ ಪ್ರೆಸಿಡೆಂಟರು ಸೇರಿ ಶ್ರೀ ಟಿ. ಎಸ್. ಗೌರಮ್ಮನವರನ್ನು ಆರೋಗ್ಯ ಮಂತ್ರಿಯಾಗಿಯೂ, ಎ. ಎಸ್. ಕಾವೇರಪ್ಪನವರನ್ನು ಆಹಾರ ಮಂತ್ರಿಯಾಗಿಯೂ, ಬಿ. ಯಂ. ತಿಮ್ಮಯ್ಯನವರನ್ನು ದೈಹಿಕ ಚಟುವಟಿಕೆಯ ಮಂತ್ರಿಯಾಗಿಯೂ ಮತ್ತು ಟಿ. ಎಸ್. ಶ್ರೀಕಂಠಶೆಟ್ಟಿಯವರನ್ನು ಕಾನೂನು ಕಾಯಿದೆಯ ಮಂತ್ರಿಯನ್ನಾಗಿಯೂ ನೇಮಿಸಿರುವರು.

ಆಧುನಿಕ ಮತದಾನ ಪದ್ಧತಿಯಂತೆ ಸಾಪ್ತೋಕ್ಳು ಶಾಲೆಯಲ್ಲಿ ಶ್ರೀಗಳಾದ, ಬಿ. ಡಿ, ಪೂಣಚ್ಚನವರನ್ನು ಶಾಲಾ ನಾಯಕರಾಗಿಯೂ, ಯಂ. ಯಂ. ಸುಬ್ಬಯ್ಯನವರನ್ನು ಉಪನಾಯಕರನ್ನಾಗಿಯೂ, ಮತ್ತು ಬಿ. ಎಂ. ಅಯ್ಯಪ್ಪನವರನ್ನು ಕಾರ್ಯದರ್ಶಿಯಾಗಿಯೂ ಚುನಾಯಿಸಲಾಗಿದೆ.

ಸಾಪ್ತೋಕ್ಳು ಸೆಂಟ್ರ್ ಗೌರ್ನಮೆಂಟ್ ಮಿಡಲ್ ಶಾಲೆಗಳ ಮಾಸಿಕ ಮೀಟಿಂಗಿನಲ್ಲಿ ಸಾಪ್ತೋಕ್ಳು ಶಾಲೆಯ ಹೆಡ್ ಮಾಸ್ಟರಾದ ಶ್ರೀ ಡಿ. ಎನ್. ದೇವಯ್ಯ. ಇವರು ಸಿಮ್ಲಾದಲ್ಲಿ ನಡೆದ ಅಖಿಲ ಭಾರತ ಹೆಡ್ ಮಾಸ್ಟರುಗಳ ಸೆಮಿನರಿನ ವಿಷಯ ವಿವರಿಸಿ ಭಾಷಣವಿತ್ತರು.

ವೀರಾಜಪೇಟೆ ಸರಕಾರಿ ಕೈಗಾರಿಕಾ ಶಾಲೆಗೆ ಉಮೇದುವಾರನ್ನು ಆರಿಸಲು ಅ. ಕಮಿಷನರು, ಕೂರ್ಗ್ ಪ್ಲಾಂಟರ್ಸ್ ಮತ್ತು ಇಂಡಿಯನ್ ಪ್ಲಾಂಟರುಗಳ ಸಂಘಗಳ ಪ್ರೆಸಿಡೆಂಟರುಗಳು, ಶ್ರೀಗಳಾದ ಎಸ್. ಎಸ್. ನಾರಾಯಣಮೂರ್ತಿ, ಪಿ. ಲಕ್ಷ್ಮಯ್ಯ ಮತ್ತು ಪಿ. ಕೆ. ಚೆನ್ನಯ್ಯ ಇವರುಗಳ ಸಮಿತಿಯೊಂದನ್ನು ನೇಮಿಸಲಾಗಿದೆ. ಈ ಸಮಿತಿಯ ಮೀಟಿಂಗು ತಾ. ೨೮ರಲ್ಲಿ ನಡೆಯುವುದು

ತಾರೀಕು ೨೧ ರಲ್ಲಿ ಕೊಡಗು ಸರಕಾರ ಸೆಕ್ರೆಟರಿಯೇಟ್ ರಿಕಾರ್ಡ್ ಶಾಖೆಯ ಗುಮಾಸ್ತರಾಗಿದ್ದ ಶ್ರೀ. ಸಿ ವೆಂಕಟರಮಣನವರು ಹೃದಯ ಸ್ತಂಭನದಿಂದ ನಿಧನರಾದರು.

ಹೊರಗಿನ ಔದ್ಯೋಗಿಕ ಕಾಲೇಜುಗಳಲ್ಲಿ ಕೊಡಗಿಗಿರುವ ಸ್ಥಳಗಳಿಗೆ ಕೊಡಗಿನಿಂದ ಈ ವರ್ಷ ಇವರುಗಳನ್ನು ಆರಿಸಲಾಗಿದೆ.

ಮದ್ರಾಸು ಮೆಡಿಕಲ್ ಕಾಲೇಜ್— ಶ್ರೀಮತಿ ಐಚೆಟ್ಟಿರ ಎಸ್. ಸರಸ್ವತಿ ಮತ್ತು ದೇವಜನ ರಾಮಯ್ಯ.

ಮೈಸೂರು ಮೆಡಿಕಲ್ ಕಾಲೇಜ್— ಶ್ರೀ. ಕಲ್ಯಾಟಂಡ ಸುಬ್ಬಯ್ಯ.

ಮದ್ರಾಸ್ ಇಂಜನಿಯರಿಂಗ್ ಕಾಲೇಜಿಗೆ ಶ್ರೀ. ಬಿ. ಅಬ್ದುಲ್ ಸತ್ತಾರ್ ಮತ್ತು ಬಿ. ಶಿವರುದ್ರಪ್ಪ.

ಬೆಂಗಳೂರು ಇಂಜಿನಿಯರಿಂಗ್ ಕಾಲೇಜಿಗೆ—ಶ್ರೀ. ಎನ್. ಎಸ್. ನಂಜಪ್ಪ ಮತ್ತು ಬೆಂಗಳೂರು ಬಿ. ಎಂ. ಎಸ್. ಇಂಜಿನಿಯರಿಂಗ್ ಕಾಲೇಜಿಗೆ—ಶ್ರೀ. ನೆಲ್ಲಮಕ್ಕಡ ಬಿದ್ದಪ್ಪ.

ವೆಟರ್ನರಿ ಕಾಲೇಜಿಗೆ—ಶ್ರೀ ಕೆ. ಎಸ್. ಕುಶಾಲಪ್ಪ.

ಕೊಡಗು ಸಹಕಾರ ಸಂಘಗಳ ರಿಜಿಸ್ಟ್ರಾರವರಾದ ಶ್ರೀ ಪಿ. ಎಂ. ಚಂಗಪ್ಪನವರ ಸರ್ವಿಸನ್ನು ಮೈಸೂರು ಸರಕಾರದ ಸಹಕಾರಿ ಇಲಾಖೆಗೆ ವರ್ಗಾಯಿಸಿ, ಬೇಗನೆ ಅವರು ಬೆಂಗಳೂರಿಗೆ ಹೋಗಿ ಚಾರ್ಜು ತೆಗೆದುಕೊಳ್ಳುವಂತೆ ಕೊಡಗು ಸರಕಾರವು ಏರ್ಪಡಿಸಿದೆಯೆಂದೂ, ಅವರ ಬದಲು ಕೊಡಗಿನ ಸಹಕಾರ ಸಂಘಗಳ ರಿಜಿಸ್ಟ್ರಾರಾಗಿ ಶಿವಮೊಗ್ಗದ ಶ್ರೀ. ಗಿರಿಯಪ್ಪ ಎಂಬವರು ಬರಲಿದ್ದಾರೆಂದೂ ತಿಳಿಯಬಂದಿದೆ.

ಬಲಮುರಿ ಗ್ರಾಮದಲ್ಲಿ ಕಾವೇರಿ ನದಿಯ ಪ್ರವಾಹದಿಂದ ಮನೆಮಾರು ಕಳಕೊಂಡ ಮೊಸಿಳ್ಳೆ ಮಮ್ಮ ಎಂಬವರು ದುಃಖಭಾರದಿಂದ ಹೃದಯ ಒಡೆದು ಮೂನಾರ್ಡು ಮೊಪಿಳ್ಳೆ ಮಸೀದಿಯಲ್ಲಿ ಪ್ರಾರ್ಥನೆಗೆ ಹೋದವರು ಅಲ್ಲೇ ಮೃತಪಟ್ಟರೆಂದು ತಿಳಿಯಬಂದಿದೆ.

ಕೊಡಗು ಪೋಲೀಸ್ ದಳಕ್ಕೆ ಸೇರಲು ಎಂಟನೇ ತರಗತಿ ಓದಿದ ಮತ್ತು ಎಂಟನೇ ತರಗತಿ ಪಾಸಾಗಿ ದೃಢಕಾಯರಾಗಿರುವ ಯುವಕರು ಬೇಕಾಗಿರುವರು. ಸೇರಲು ಕುತೂಹಲವುಳ್ಳವರು ಆಗಸ್ಟ್ ತಾ: ೧೦ ರೊಳಗಾಗಿ ಮಡಿಕೇರಿ ಎಂಪ್ಲಾಯ್‌ಮೆಂಟ್ ಆಫೀಸಿನಲ್ಲಿ ಖುದ್ದಾಗಿ ಬಂದು ತಮ್ಮ ಹೆಸರನ್ನು ರಿಜಿಸ್ಟರ್ ಮಾಡಿಸಿಕೊಳ್ಳತಕ್ಕದ್ದು. ಎಸ್. ಎಸ್. ಎಲ್. ಸಿ. ಪಾಸಾದ ತರುಣರಿಗೆ ಹೆಚ್ಚಿನ ಅಭಿವೃದ್ಧಿಗೆ ಆಸ್ಪದವಿರುತ್ತೆ.

—

ಬಾಣೆ ಕಂದಾಯ ಕೂಡದು.

ಸಾರ್ವಜನಿಕ ಸಭೆಗಳು.

ನಾಪೋಕ್ಲು.

ತಾ|| ೧೯-೭-೫೩ರಲ್ಲಿ ನಾಪೋಕ್ಲು ಗ್ರಾಮದ ರೈತರು ಶ್ರೀ. ಕುಲ್ಲೇಟಿರ ಮಾಚಯ್ಯನವರ ಅಧ್ಯಕ್ಷತೆಯಲ್ಲಿ ನಾಪೋಕ್ಲು ನಾಡು ಸಹಕಾರಿ ಸ್ಟೋರ್ ಮಹಡಿಯಲ್ಲಿ ಸಭೆ ಸೇರಿ ಈಗ ಸರಕಾರವು ಹಾಕಲಿರುವ ಬಾಣೆ ಕಂದಾಯವನ್ನು ವಿರೋಧಿಸಿ ಕೊಡಗು ಅ. ಕ. ಸಾಹೇಬರವರ ಮೂಲಕ ಚೀಫ್ ಸೆಕ್ರೆಟರಿಯವರಿಗೆ ತಮ್ಮ ಗ್ರಾಮದ ಜನರ ಅಭಿಪ್ರಾಯವನ್ನು ಕಳುಹಿಸುವಂತೆ ತೀರ್ಮಾನಿಸಲಾಯಿತು.

ಬಿರುನಾಣಿ.

ತಾರೀಕು ೧೩-೭-೫೩ರಲ್ಲಿ ಬಿರುನಾಣಿ ಗ್ರಾಮದ ಕಟ್ಟೆಮಾಡಲ್ಲಿ ಶ್ರೀ. ಪಳಂಗಂಡ ಐಯ್ಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಕಾಂಗ್ರೆಸ್ ಸರಕಾರವು ರೈತರ ಮೇಲೆ ಹೊಸದಾಗಿ ಹೊರಿಸಿರುವ ಬಾಣೆ ಕಂದಾಯಕ್ಕೆ ಈ ಸಭೆಯು ತುಂಬಾ ಅಸಮ್ಮತಿ ಪಡುತ್ತದೆ. ಅಂಥಾ ಕಂದಾಯ ಸೂಚನೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಸರಕಾರವನ್ನು ಕೇಳಿಕೊಳ್ಳುತ್ತದೆ ಎಂಬ ಠರಾವು ಸರ್ವಾನುಮತದಿಂದ ಮಂಜೂರಾಯಿತು.

ಮಾದಾಪುರ.

ಮಾದಾಪುರದಲ್ಲಿ ಬಾವಲಿ, ಬಲಮುರಿ, ಕೊಂಬಂಡಗೇರಿ ಮತ್ತು ಕುಂಜಿಲಗೇರಿ ಗ್ರಾಮದ ಜನರು ಶ್ರೀ. ಪಳಂಗಂಡ ಐಯ್ಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸರಕಾರವು ಹೊಸದಾಗಿ ಹೊರಿಸಲಿಚ್ಛಿಸಿರುವ ಬಾಣೆ ಕಂದಾಯದ ಸೂಚನೆಯನ್ನು ಹಿಂತೆಗೆಯಬೇಕೆಂಬ ಠರಾವು ಪಾಸಾಯಿತು.

ಎಮ್ಮೆಮಾಡು.

ತಾರೀಕು ೧೭ರಲ್ಲಿ ಎಮ್ಮೆಮಾಡು ಗ್ರಾಮಸ್ಥರು ಶ್ರೀ. ಕನ್ನಂಡಿಯಂಡ ಮೂನೆಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ರೈತರ ಬಾಣೆ ಜಾಗಕ್ಕೆ ಎಕರೆಗೆ ನಾಲ್ಕಾಣೆಯಂತೆ ಕಂದಾಯ ಹಾಕಲು ಸರಕಾರವು ನಿಶ್ಚಯಿಸಿರುವದನ್ನು ವಿರೋಧಿಸಿ ರೈತರ ಹಿತಬಯಸುವ ಸರಕಾರವು ಈ ಕಂದಾಯವನ್ನು ಮನ್ನಾಮಾಡಬೇಕೆಂದು ಠರಾವು ಪಾಸಾಯಿತು.

ಬಲ್ಲಮಾವಟಿ.

ತಾರೀಕು ೧೯ರಲ್ಲಿ ಬಲ್ಲಮಾವಟಿ ಮತ್ತು ದೊಡ್ಡ ಪುಲಿಕೋಟು ಗ್ರಾಮಸ್ಥರು ಶ್ರೀ. ಮೂವೇರ ಬೋಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ರೈತರ ಬಾಣೆ ಜಾಗಕ್ಕೆ ಕಂದಾಯ ವಿಧಿಸುವದನ್ನು ಈ ಗ್ರಾಮಸ್ಥರು ತುಂಬಾ ವಿರೋಧಿಸುತ್ತಾರೆ. ಆ ರೀತಿಯ ಕಂದಾಯವನ್ನು ಸರಕಾರವು ವಿಧಿಸಬಾರದಾಗಿ ಈ ಸಭೆಯು ಕೇಳಿಕೊಳ್ಳುತ್ತದೆ ಎಂಬ ಠರಾವನ್ನು ಪಾಸುಮಾಡಲಾಯಿತು.

ಕೊಳಕೇರಿ

ನಾಪೋಕ್ಲು ನಾಡು ಕೊಳಕೇರಿ ಗ್ರಾಮಸ್ಥರು ತಾ. ೨೦-೭-೫೩ನೇ ಸೋಮವಾರ ದಿನ ನಾಡು ಮಂದು ಬಿದ್ದಾಟಂಡ ಪೋಡೆಯಲ್ಲಿ ಶ್ರೀ ಬಿದ್ದಾಟಂಡ ದೇವಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಕೊಡಗಿನ ಈಗಿನ ಸರಕಾರವು ಬಾಣೆ ಜಾಗಕ್ಕೆ ಎಕರೆಗೆ ನಾಲ್ಕಾಣೆಯಂತೆ ಕಂದಾಯ ವಿಧಿಸುವುದು ರೈತರಿಗೆ ಘೋರಾ ಅನ್ಯಾಯವಾಗಿದೆ. ಭೂಮಿ ಕಂದಾಯ ಸಹ ಕಟ್ಟಲಿಕ್ಕೆ ಕೆಲವು ಬಡ ರೈತರ ಭೂಮಿ ಹರಾಜು ಆಗುತ್ತಿರುವುದು ಸರಕಾರವು ತಿಳಿಯದಲ್ಲ. ಈ ದೇಶದಲ್ಲಿ ಬಹಳ ಪೂರ್ವದಿಂದಲೇ [illegible] ರೈತರ ದನ ಮೇಯಲಿಕ್ಕಾಗಿ ಬಿಟ್ಟಿರುವ ಬಾಣೆ ಜಾಗಕ್ಕೆ ಈಗಿನ ಪ್ರಜಾ ಸರಕಾರವು ಬಾಣೆ ಕಂದಾಯ ಹಾಕಬೇಕೆಂದು ಯೋಚಿಸಿರುವದು ನ್ಯಾಯವಲ್ಲ. ಈ ರೀತಿ ಕಂದಾಯ ವಿಧಿಸಕೂಡದಾಗಿ ಠರಾವು ಮಂಜೂರು ಮಾಡಲಾಯಿತು.

ಮೂರ್ನಾಡಿನವರ ಅರ್ಜಿ.

ಮೂರ್ನಾಡಿನ ಸುಮಾರು ನೂರು ಜನರು ಸಹಿಮಾಡಿ ಅ. ಕಮಿಷನರಿಗೆ ಒಂದು ಅರ್ಜಿಯನ್ನು ಬರೆದು ಕಂದಾಯ ಹಾಕಕೂಡದೆಂದು ಕೇಳಿಕೊಂಡಿದ್ದಾರೆ. ಅರ್ಜಿಯ ನಕಲು ಹೀಗಿದೆ. "ಕೊಡಗು ಸರಕಾರವು ಇತ್ತೀಚೆಗೆ ಜಾಗೀರ್ ಬಾಣೆಯನ್ನು ವಿನಾಯಿಸಿ ಬಾಕಿ ರೈತರ ಬಾಣೆಗಳಿಗೆ ಕಂದಾಯವನ್ನು ಹಾಕುವ ನಿರ್ಣಯ ಮಾಡಿ ಈಗ ಜನರು ತಮ್ಮ ಅಭಿಪ್ರಾಯವನ್ನು ಸೂಚಿಸಬೇಕೆಂದು ಕೇಳುತ್ತಾರೆ. ಆದಪ್ರಯುಕ್ತ ಈ ಕೆಳಗೆ ಸೈನು ಮಾಡಿದ ಮೂರ್ನಾಡಿನ ರೈತಾಪಿ ಜನರಾದ ನಾವು ಬಾಣೆಗಳಿಗೆ ಕಂದಾಯ ಹಾಕುವ ಮಸೂದೆಯನ್ನು ಈ ಕಾರಣಗಳಿಂದ ವಿರೋಧಿಸುತ್ತೇವೆ.

ಕೊಡಗನ್ನು ಪರಕೀಯರು ಆಳುತ್ತಿದ್ದಾಗ ದನ ಮೇಯಿಸುವುದಕ್ಕಾಗಿ ಮತ್ತು ಸೌದೆ ಒದಗಿಸಲು ಪ್ರತಿಯೊಂದು ಕುಟುಂಬಕ್ಕೂ ಬಾಣೆ ಸ್ಥಳಗಳಿಗೆ ಕಂದಾಯವನ್ನು ಹಾಕದೆ ಮಾಫಿ ಬಿಡಲಾಗಿತ್ತು. ಸ್ವಾತಂತ್ರ್ಯ ದೊರಕಿ ಪ್ರಜಾಸರ್ಕಾರ ಸ್ಥಾಪನೆಯಾದ ಈ ಸಮಯದಲ್ಲಿ ಸರಕಾರವು ರೈತರಿಗೆ ಹೆಚ್ಚಿನ ಮಟ್ಟಿಗೆ ಸಹಾಯ ಮತ್ತು ಸುಧಾರಣೆ ಕೊಡಬಹುದೆಂದು ಬಯಸುವ ವೇಳೆಯಲ್ಲಿ ಈ ಕಂದಾಯವು ಸರಿಯಲ್ಲ. ಈ ಹೊಸ ಕಂದಾಯವು ರೈತರ ಆರ್ಥಿಕ ಸ್ಥಿತಿಯನ್ನು ಹಾಳುಮಾಡಿ ಗ್ರಾಮಾಂತರದಲ್ಲಿ ಹೊಸ ಜಗಳವನ್ನು ಉಂಟುಮಾಡಲು ಮಾತ್ರ ಸಹಾಯವಾಗುತ್ತದೆ. ಈಗ ಗ್ರಾಮಾಂತರದಲ್ಲಿ ಪ್ರತಿಯೊಬ್ಬನ ಬಾಣೆಗಳಲ್ಲಿ ಭೇದವಿಲ್ಲದೆ ಮೇಯಿಸುತ್ತಿರುವ ದನಗಳನ್ನು ಕಂದಾಯ ಹಾಕಿದ ಮೇಲೆ ಬಿಡಲು ಸಾಧ್ಯವಿರಲಿಕ್ಕಿಲ್ಲ. ಅದೇ ರೀತಿಯಲ್ಲಿ ಸೈಸಾರಿ ಜಾಗ ಕಡಿಮೆ ಇರುವ ಗ್ರಾಮಗಳಲ್ಲಿ ಸೌದೆಯನ್ನು ಕಡಿಯಲು ಬಿಡಲಿಕ್ಕಿಲ್ಲ. ಈ ಕಾರಣಗಳಿಂದ ಗ್ರಾಮಾಂತರಗಳಲ್ಲಿ ಹೊಸ ಜಗಳಗಳು ಸಂಭವಿಸುವುದರಲ್ಲಿ ಸಂದೇಹವಿಲ್ಲ. ಈ ಹೊಸ ಕಂದಾಯದಿಂದ ಬರುವ ಉತ್ಪತ್ತಿಯಾದರು ಬಹಳ ಕಡಿಮೆಯಾಗಿರುವುದರಿಂದ, ಹೆಚ್ಚಿನ ತೊಂದರೆಯನ್ನುಂಟುಮಾಡುವ ಈ ಮಸೂದೆಯನ್ನು ಜಾರಿಗೆ ತರಬಾರದಾಗಿ ಸರಕಾರವನ್ನು ನಾವು ಕೇಳಿಕೊಳ್ಳುತ್ತೇವೆ.

ಅಲ್ಲದೆ ಈಗಿನ ಈ ಸೂಚನೆಯಲ್ಲಿ ಯಾವುದೊಂದು ಕಂದಾಯವನ್ನು ಕೊಡದೆ ತುಂಬಾ ಸ್ಥಳವನ್ನು ಜಾಗೀರ್ ಆಗಿ ಪಡೆದವರನ್ನು ಬಾಣೆ ಕಂದಾಯದಿಂದ ವಿನಾಯಿಸಿರುವುದರಿಂದ ಕಾಂಗ್ರೆಸ್ ಸರಕಾರವು ಬಡ ರೈತರಿಗೆ ಕ್ಷೇಮವನ್ನುಂಟುಮಾಡುತ್ತೇನೆಂದು ಸಾರಿದ ಧೋರಣೆಗೆ ವಿರೋಧವರ್ತಿಸಿದಂತಾಗಿದೆಯೆಂದು ಹೇಳುವುದರಲ್ಲಿ ಯಾವ ಸಂದೇಹವೂ ಇಲ್ಲ".

(ಸಹಿ) ಸುಮಾರು ನೂರು ಜನರು.

** ಓದುಗರ ಓಲೆಗಳು. **

ಸಿಪ್ಪೆಯವರ ಮುಖಕ್ಕೆ ಕನ್ನಡಿ ಹಿಡಿಯುವಿರಾ?

ಕಳೆದ 'ಜನ್ಮಭೂಮಿ' ಪತ್ರಿಕೆಯಲ್ಲಿ ಓರ್ವ ಮಿತ್ರರು ಬಾಣೆ ಕಂದಾಯ ಹಾಕುವುದು ಎಷ್ಟು ನ್ಯಾಯವೆಂದು ಪ್ರಶ್ನಿಸಿರುವರು. ಶ್ರೀ ಸಿ ಐ ಬೆಳ್ಯಪ್ಪನವರು ಮಿತ್ರರು ೧೯೫೦ನೇ ಇಸವಿಯಲ್ಲಿ ಕೊಡಗು ಕೌನ್ಸಿಲಿನಲ್ಲಿ ಮಾಡಿದ ಭಾಷಣವನ್ನು ನಾಂದಿಯಾಗಿ ಪ್ರಕಟಿಸಿದ್ದು ಸಂತೋಷಕರ. Devil quoting scriptures for its purpose ಎಂಬ ನಾಣ್ಣುಡಿಯಂತಾದರೂ ಕೂಡ ಶ್ರೀ. ಬೆಳ್ಯಪ್ಪನವರು ಮತ್ತು ಅವರ ಮಿತ್ರರು ಆ ಕಾಲದಲ್ಲಿ ಮಾಡಿದ ಭಾಷಣಕ್ಕೆ ಇಂದಾದರೂ ಕೂಡ ಆ ಪತ್ರಿಕೆಯ ಬಾತ್ಮಿದಾರರು ಮೆಚ್ಚಿಕೆಯನ್ನು ತೋರಿಸಿರುವರಲ್ಲವೇ?

ಅವರು ಅಂದು ಭಾಷಣದಲ್ಲಿ ತೋರಿಸಿದ ಕಾರ್ಯಕ್ರಮ ಪಟ್ಟಿಯನ್ನು ಇಂದಿನ ಸರಕಾರವು ಜಾರಿಗೆ ತರಲು ಪ್ರಯತ್ನಿಸುತ್ತಿರುವುದು ಸಂತೋಷಕರ. ಇವೆಲ್ಲಕ್ಕೂ ಹಣವೆಲ್ಲಿ ಎಂದು ಬಾತ್ಮಿದಾರರು ಕೇಳುತ್ತಾರೆ. ಬೆಳ್ಯಪ್ಪನವರು ಮತ್ತು ಅವರ ಮಿತ್ರರು, ಸರಕಾರಕ್ಕೆ, ಕಳೆದ ಚುನಾವಣೆಯ ಮುಂದಿನ ದಿವಸಗಳಲ್ಲಿ, ಐಶ್ವರ್ಯವಂತರ ಕೋಪಕ್ಕೆ ಒಳಪಟ್ಟುಕೊಂಡೂ ಕೂಡ, ಹೆಚ್ಚು ಕಮ್ಮಿ ವರ್ಷಕ್ಕೆ ೧೫ ಲಕ್ಷ ರೂಪಾಯಿ ಸಂಪಾದಿಸಿಕೊಟ್ಟಿರುವರಲ್ಲವೇ? ಇದನ್ನು ಅರಿತು, ಇವನ್ನು ಶ್ಲಾಘಿಸುವವರೆಲ್ಲಿ? ಈಗ ಆ ೧೫ ಲಕ್ಷ ರೂಪಾಯಿ ಬಾರದಿದ್ದಿದ್ದರೆ ಇಂದಿನ ಸರಕಾರದ ಬೊಕ್ಕಸದ ಸ್ಥಿತಿ ಏನಾಗುತ್ತಿತ್ತು?

ಹೇಗೂ ಎಲ್ಲದಕ್ಕೂ ಹಣವೆಲ್ಲಿ ಎಂಬ ಪ್ರಶ್ನೆಗೆ ಉತ್ತರ ಇಷ್ಟೇ— ಹಣವಿರುವಲ್ಲಿಂದ. ಈ ದೇಶದಲ್ಲಿಯಾಗಲೀ, ಯಾ ಇಡೀ ಇಂಡಿಯಾ ದೇಶದಲ್ಲಿಯಾಗಲೀ ರೈತಾಪಿ ಜನರು ಹಣವಿರುವವರೇ?

ಆ ಬಾತ್ಮಿದಾರರಿಗೆ ಇನ್ನೊಂದು ಕೋರಿಕೆ—ಶ್ರೀ. ಬೆಳ್ಯಪ್ಪನವರ ಮಿತ್ರರ ಭಾಷಣಗಳನ್ನು ಪ್ರಕಟಿಸುವಾಗ, ಅದೇ ಸಂದರ್ಭದಲ್ಲಿ ಇಂದಿನ ಅಧಿಕಾರದಲ್ಲಿರುವ ಕಾಂಗ್ರೆಸು ಮಿತ್ರರ ಅಂದಿನ ಭಾಷಣವನ್ನೂ ಕೂಡ ಪ್ರಕಟಿಸಿದರೆ, "ತಿಳಿಗೇಡಿಗಳಾದ" ದೇಶದ ಜನರಿಗೆ ಸ್ವಲ್ಪ ಮಟ್ಟಿಗೆ ಜ್ಞಾನವು ಉದಯಿಸಬಹುದು. ಇದನ್ನು ಅವರು ಮಾಡುವರೇ?

"ರೈತ"

ಕಾಲೇಜ್ ಬೋರ್ಡಿಂಗ್

ಹೊಸ ಕಾಲೇಜೇನೋ ಆಯಿತು. ಆದರೆ ಕಾಲೇಜಿನ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಹಾಸ್ಟಲು ಆಗಲಿಲ್ಲ. ಕಾಲೇಜಿಗೆ ಈ ವರ್ಷ ಸೇರಿದ ಹುಡುಗರಿಗೆ ಹಳೇ ಪೋಲೀಸ್ ಟ್ರೈನಿಂಗ್ ಶಾಲಾ ಕಟ್ಟಡವನ್ನು ರಿಪೇರಿ ಮಾಡಿ ಒಂದೊಂದು ಕೋಣೆಯಲ್ಲಿ ನಾಲ್ಕೈದು ವಿದ್ಯಾರ್ಥಿಗಳಂತೆ ಐವತ್ತರಷ್ಟು ಜೂನಿಯರ್ ವಿದ್ಯಾರ್ಥಿಗಳಲ್ಲಿರುವರು. ಆದರೆ ಸೀನಿಯರ್ ವಿದ್ಯಾರ್ಥಿಗಳ ಪಾಡು ದೇವರಿಗೆ ಗೊತ್ತು.

ಸೀನಿಯರ್ ವಿದ್ಯಾರ್ಥಿಗಳು ಸೆಂಟ್ರಲ್ ಹೈಸ್ಕೂಲಿನ ಕಾಂಪೌಂಡಿನಲ್ಲಿರುವ ಕಾಲೇಜ್ ಆಫೀಸನ್ನೂ ಅದರ ಜೊತೆಯಲ್ಲಿರುವ ಒಂದು ಸಣ್ಣ ಕಟ್ಟಡವನ್ನು ತಮ್ಮ ಹಾಸ್ಟಲನ್ನಾಗಿ ಮಾಡಿಕೊಂಡಿರುವರು. ಇವರು ಸಾಧಾರಣ ೪೦ ಮಂದಿ ಇರುವರು.

ಇವರಲ್ಲಿ ಕೇವಲ ೩೦ರಷ್ಟು ಜನರಿಗೆ ಮಲಗಲು ಮಂಚವಿಲ್ಲ, ಕೂರಲು ಕುರ್ಚಿ ಇಲ್ಲ, ಓದಲು ಮೇಜಿಲ್ಲದೆ ಬಹಳ ತೊಂದರೆಯಲ್ಲಿರುವರು. ಕೆಲವು ಕೋಣೆಗಳು ಯಾವಾಗಲೂ ಕತ್ತಲೆ ಕವಿದಂತಿರುವವು. ಗೋಡೆಗಳಿಗೆ ಸುಣ್ಣ ಬಳಿಯದೆ ಬಹುಕಾಲವಾದಂತಿರುವದು.

ಅಷ್ಟೇ ಅಲ್ಲ. ಇವರು ತಮ್ಮ ಊಟ ಉಪಹಾರವನ್ನು ಹೋಟೇಲಿನಲ್ಲೇ ಮಾಡುವರು. ಹೋಟೇಲು ಊಟ, ಈ ಕಟ್ಟಡದಲ್ಲಿ ನಿವಾಸ, ಈ ಕಷ್ಟ ದೇವರಿಗೇ ಗೊತ್ತು. ಈ ತೋರಿಕೆಯ ವಿದ್ಯಾರ್ಥಿನಿಲಯ ಕಟ್ಟಡದಲ್ಲಿ ಸ್ನಾನಮಾಡಲು ಅನುಕೂಲವಿಲ್ಲ. ಅವರು ಹೋಟೇಲಿನಲ್ಲಿಯೇ ಒಂದು ಬಕೆಟ್ ನೀರಿಗೆ ದುಡ್ಡು ಕೊಟ್ಟು ಸ್ನಾನಮಾಡಬೇಕು. ಕೆಲವರು ಅಲ್ಲಿಯ ಅಸ್ವಚ್ಛತೆಗೋಸ್ಕರ ವಾರಕ್ಕೊಮ್ಮೆಯೂ ಸ್ನಾನಮಾಡದೆ ಇರುವರು! ಯಾಕೆಂದರೆ ಮಡಿಕೇರಿಯಲ್ಲಿ ಹೇಳಿಕೊಳ್ಳಬಹುದಾದ ಒಂದೇ ಒಂದು ಒಳ್ಳೆಯ ಹೋಟೇಲಿಲ್ಲ.

ಈಗಿನ ಹಾಸ್ಟಲಿನಿಂದ ಕೆಲವೇ ಅರ್ಧ ಫರ್ಲಾಂಗ್ ದೂರದಲ್ಲಿರುವ ಗೌಡ ಬೋರ್ಡಿಂಗ್ ಎಂದೆಣಿಸಿರುವ ಸರಕಾರಿ ಬಿಲ್ಡಿಂಗಿನಲ್ಲಿ ಕಡಿಮೆ ಪಕ್ಷ ನೂರು ಮಂದಿ ವಿದ್ಯಾರ್ಥಿಗಳು ಇರಬಹುದು. ಆದರೆ ಅಲ್ಲಿ ಇಂದು ಕೇವಲ ೧೦ ಮಂದಿ ಗೌಡ ವಿದ್ಯಾರ್ಥಿಗಳಿರುವರು.

ಇನ್ನಾದರೂ ಸರಕಾರದವರು ಅಲ್ಲಿರುವ ಕಾಲೇಜ್ ವಿದ್ಯಾರ್ಥಿಗಳೊಡನೆ ದಿಕ್ಕುಪಾಲಾದ ಈ ವಿದ್ಯಾರ್ಥಿಗಳನ್ನು ಸೇರಿಸಿ ಒಂದೇ ಬೋರ್ಡಿಂಗ್ ಮಾಡುವರೆ? ಹೀಗಾದರೆ ನಾ ಕೊಡಗ, ಅವ ಬಡಗ ಎಂಬ ಅಹಂಭಾವನೆಯು ಹೋಗಿ ಎಲ್ಲರೂ ಒಂದಾಗುವರು. ಮನುಷ್ಯರಿಗೂ ಸುಖ, ದೇಶಕ್ಕೂ ಹಿತ.

ಮಕ್ಕಳ ತಂದೆ.

ಮಂತ್ರಿಗಳ ಸಂದರ್ಶನ.

ತಾರೀಖು ೨೧ ರಲ್ಲಿ ಕೊಡಗಿನ ಗೃಹ ಮಂತ್ರಿ ಮಲ್ಲಪ್ಪನವರು, ಶಾಸನ ಸಭೆಯ ಡಿಪ್ಯುಟಿ ಸ್ಪೀಕರ್ ದೇವಯ್ಯನವರು, ಡಿ. ಕಮಿಷನರ್ ಐ. ಸಿ. ಸುಬ್ಬಯ್ಯನವರು ಮೂರ್ನಾಡಿಗೆ ಬಂದಿದ್ದರು. ಬಲಮುರಿ ಮತ್ತು ಸುತ್ತುಮುತ್ತಲಿನ ಗ್ರಾಮದಲ್ಲಿ ಕಾವೇರಿನದಿಯ ಪ್ರವಾಹದಿಂದಾಗಿ ಮನೆ ಕಳಕೊಂಡು ನಷ್ಟಕಷ್ಟವಾದುದನ್ನು ನೋಡಲು ಅವರು ಬಂದುದಂತೆ. ಆದರೆ ಅವರು ಮೂರ್ನಾಡು ಪಟ್ಟಣ ಬಿಟ್ಟು ಅತ್ತಿತ್ತ ಹೋಗಲಿಲ್ಲ. ನೆರೆಯಿಂದ ತೊಂದರೆಗೊಳಗಾದವರಲ್ಲಿ ಹಲವರು ಮೂರ್ನಾಡಿಗೆ ಬಂದಿದ್ದರು. ತಮ್ಮ ತೊಂದರೆಗಳನ್ನು ಅವರ ಮುಂದೆ ಹೇಳಿಕೊಂಡರು. ಮತ್ತೆ ಕಣ್ಣಬಲಮುರಿಯಲ್ಲಿ ನೆರೆಯಿಂದಾಗಿ ನಿರ್ನಾಮವಾದ ಹರಿಜನರ, ಮಾಪಿಳ್ಳೆ ಮೊದಲಾದವರ ಹತ್ತಿಪ್ಪತ್ತು ಮನೆಗಳಿದ್ದ ಸ್ಥಳವನ್ನು ಸಂದರ್ಶಿಸಬೇಕೆಂದೂ ಅದು ಮೂರ್ನಾಡಿನಿಂದ ಕೇವಲ ಎರಡು ಮೈಲು ದೂರವಿದೆಯೆಂದೂ, ಜೀಪು ಹೋಗುವ ರಸ್ತೆಯಿದೆಯೆಂದು ಹೇಳಿದರೂ ಆ ಕಷ್ಟವನ್ನು ನೋಡುವ ಮನಸ್ಸು ಅವರಿಗೆ ಬಂದಂತೆ ತೋರಲಿಲ್ಲ. ಬದಲು ಆ ಸ್ಥಳವನ್ನು ಬಿಟ್ಟು ಬೇರೆ ಹೋಗುವವರಿಗೆ ಮನೆಕಟ್ಟಲು ೧೦ ಸೆಂಟಿನಂತೆ ಜಾಗ ಕೊಡುವದಾಗಿಯೂ, ಸೈಸಾರಿಯಿಂದ ಬಿದಿರು ಮೊದಲಾದುವನ್ನು ಕಡಿದುಕೊಳ್ಳಲು ಬಿಡುವದಾಗಿಯೂ ಪ್ರತಿ ಮನೆಗೆ ಒಂದು ಬಾಗಿಲು ಮತ್ತು ಒಂದು ಕಿಟಕಿಯಂತೆ ಒದಗಿಸಿಕೊಡುವದಾಗಿಯೂ ಹೇಳಿದರಂತೆ. ಹಣ ಸಹಾಯದ ಬಗ್ಗೆ ಒಂದು ನಿಧಿ ಸಂಗ್ರಹಿಸುವ ಅಭಿಪ್ರಾಯ ಹೇಳಿದರಂತೆ. ಮತ್ತೆ ಯೋಗ್ಯ ಭೂಮಾಲಿಕರ ಜಾಮೀನು ಮೇಲೆ ತಕಾವಿ ಸಾಲ ಕೊಡಲಾಗುವದೆಂದೂ ನುಡಿದರಂತೆ. ಇದರಿಂದ ಸರ್ವಸ್ವವನ್ನೂ ಕಳಕೊಂಡ ಜನರ ತೊಂದರೆ ನಿವಾರಣೆಯಾದಂತಾಯಿತೇ? ಹಲವು ವರ್ಷಗಳಿಂದ ಜೀವಿಸುತ್ತಿದ್ದ ಇಂದು ನಿರ್ನಾಮವಾಗಿರುವ ಅವರ ಮನೆ. ಅವರಿಗಾದ ನಷ್ಟವನ್ನು ಅವರು ಸ್ವತಹ ಹೋಗಿ ನೋಡಿ ಅವರಿಗೆ ತಕ್ಕುದಾದ ಸಹಾಯ ಕೊಡುವದು ಅಗತ್ಯವಿರಲಿಲ್ಲವೇ? ಹಲವು ವರ್ಷಗಳಿಂದ ಜೀವಿಸುತ್ತಿದ್ದ ಸ್ಥಳ ಬಿಟ್ಟು ಬೇರೆಡೆ ಹೋಗಿ ಮನೆಕಟ್ಟಿ ಜೀವನ ಮಾಡುವದು ಕೈಯಲ್ಲಿ ಕಾಸಿಲ್ಲದವರಿಗೆ ಸುಲಭದ ಕೆಲಸವೇ? ಹೀಗೆ ನಿರಾಶ್ರಿತರಾದವರಿಗೆ ಮನೆಕಟ್ಟಿ ಕೊಡುವ ಪೂರ್ಣ ಜವಾಬ್ದಾರಿಯನ್ನು ಸರಕಾರ ವಹಿಸಬೇಕಿತ್ತಲ್ಲವೇ?

ಕಣ್ಣಾರೆ ಕಂಡವ.

ಇದು ನಿಜವೇ ?

ನಮ್ಮ ದೇಶದ ಗಾಳಿಯೂ, ಮಳೆಯೂ ಶರೀರಕ್ಕೆ ಸರಿಯಾಗಿ ಹಿಡಿಯದ ಅಧಿಕಾರಿಗಳೊಬ್ಬರಿಗೆ 'ಹಾರ್ಲಿಕ್ಸ್' ಕುಡಿಯುವದೆಂದರೆ ತುಂಬಾ ಪ್ರೀತಿ. ತನ್ನ ಜೇಬಿನಿಂದ ದುಡ್ಡು ತೆತ್ತು ಕುಡಿಯುವದರಲ್ಲಿ ಯಾರಿಗೂ ಹೊಟ್ಟೆ ಉರಿ ಇಲ್ಲ. ಆದರೆ ಇವರು ಆಸ್ಪತ್ರೆಯಿಂದ ಕಾಯಿಲಸ್ತರ ಲೆಕ್ಕದಲ್ಲಿ ಬರಾಯಿಸಿ 'ಹಾರ್ಲಿಕ್ಸ್' ಒದಗಿಸಿಕೊಳ್ಳುತ್ತಿರುವ ವರ್ತಮಾನವಿದೆ. ಹೀಗೆ ಮಾಡುತ್ತಿರುವ ಅಧಿಕಾರಿಯನ್ನು ಈ ಮಾಲಿಕ ಕೇಳುವದಿಷ್ಟೆ. ಪ್ರಜಾಪ್ರಭುತ್ವದ ಸರಕಾರದ ಅಡಿಯಲ್ಲಿ ಈ ರೀತಿ ಬಡ ರೋಗಿಗಳ ಹೊಟ್ಟೆಗೆ ಹೊಡೆದು ತಮ್ಮ ಹೊಟ್ಟೆ ಬೆಳೆಸಲು ಯತ್ನಿಸಿದ್ದರೆ ದೇವರು ನಿಮಗೆ ಸುಖ ಮಾಡಲಿಕ್ಕಿಲ್ಲ. ಆದ್ದರಿಂದ ಇನ್ನಾದರೂ ಅಧಿಕಾರವಿದೆಯೆಂದು ಕಣ್ಣು ಕೆಂಪಗೆ ಮಾಡಿ ಈ ರೀತಿಯ ಲಾಭ ಹೊಂದುವ ನೀಚ ಸ್ವಭಾವವನ್ನು ಬಿಡುವಿರಾ?

'ಮಾಲಿಕ'

ಕೋಣ ಕರ ಹಾಕಿದ ಪ್ರಸಂಗ!

ಸಣ್ಣ ಕುಟುಂಬದ ವಾರ್ಷಿಕ ಉತ್ಪತ್ತಿಯೆಷ್ಟೆಂಬ ಲೆಕ್ಕ ಸರಕಾರಕ್ಕೆ ಒಂದು ಸಂದರ್ಭದಲ್ಲಿ ಬೇಕಾಯಿತು. ಸರಕಾರದವರು ನಾಡಿನ ಅಧಿಕಾರಿಯೊಬ್ಬರನ್ನು ಅಂದಾಜು ಮಾಡಲು ಕಳುಹಿಸಿದರು. ನಾಡಿನ ಅಧಿಕಾರಿಯು ಪಟ್ಟಿ ಮಾಡಿ ಕಳುಹಿಸಿದರು. ಆ ಪಟ್ಟಿಯಲ್ಲಿ ಹಲವು ವರ್ಷಗಳಿಂದ ಪಾಳು ಬಿದ್ದಿರುವ ಸುಮಾರು ನೂರು ಬಟ್ಟಿ ಭೂಮಿಯಿಂದ ಗುತ್ತಿಗೆ ವಾರ ಉತ್ಪತ್ತಿ ವರ್ಷಕ್ಕೆ ೩೧ ಬಟ್ಟಿ ಬತ್ತ ಎಂದು ಅವರು ಸೇರಿಸಿರುವದು ನನಗೆ ಗೊತ್ತಾಯಿತು. ಭೂಮಿ ನೆಡಲ್ಪಟ್ಟಿದೆಯೋ ಇಲ್ಲವೋ ಎಂಬುದನ್ನೂ ವಿಚಾರಿಸದೆ ರಿಪೋರ್ಟ್ ಬರೆಯುವ ಇಂಥಾ ಅಧಿಕಾರಿಗಳಿಂದ ಬಡ ಜನರ ಹಿತ ಹೇಗಾಗಬಹುದು ?

ನಾಪೋಕ್ಲಿನ ಹಿತ

ಉತ್ತಮ ಭಾಷಣಕಾರರಾಗಿರಿ.

ವಿದ್ಯಾರ್ಥಿಗಳಿಗೆ ಕೊಡಗು ಸರಕಾರದ ಮುಖ್ಯ ಸೆಕ್ರೆಟರಿಯವರ ಹಿತೋಕ್ತಿ.

ತಾ. ೧೮ರಲ್ಲಿ ಕೊಡಗು ಸರಕಾರದ ಮುಖ್ಯ ಸೆಕ್ರೆಟರಿಯವರಾದ ಶ್ರೀ ಎನ್. ಎಸ್. ರಾಮಚಂದ್ರರವರು ವೀರಾಜಪೇಟೆ ಸರಕಾರಿ ಪ್ರೌಢ ಶಾಲಾ ಚರ್ಚಾಕೂಟವನ್ನು ಉದ್ಘಾಟಿಸುವ ಮೊದಲು ಶಾಲಾ ನಡುಮನೆಯಲ್ಲಿ ಹೊಸದಾಗಿ ಸ್ಥಾಪಿಸಿರುವ ವಿದ್ಯುದ್ದೀಪಗಳನ್ನು ಬೆಳಗಿಸಿ, "ಈ ವಿದ್ಯುದ್ದೀಪಗಳು ಮಂದಿರವನ್ನು ಪ್ರಭಾಯುಕ್ತವಾಗಿ ಮಾಡುವಂತೆ ವಿದ್ಯಾದೇವತೆಯಾದ ಸರಸ್ವತಿಯು ನಿಮ್ಮ ಬುದ್ಧಿಯನ್ನು ಬೆಳಗಿಸಲಿ" ಎಂದು ಹಾರೈಸಿದರು.

ನಂತರ ಅವರು ತಮ್ಮ ಉದ್ಘಾಟನಾ ಭಾಷಣವನ್ನು ಆರಂಭಿಸುತ್ತಾ, ತಾವು ತಡವಾಗಿ ಬಂದುದಕ್ಕೆ ಕಾರಣವನ್ನು ತಿಳಿಸಿ ಕ್ಷಮೆಯನ್ನು ಕೋರಿದರು. ತಮ್ಮ ಕುಟುಂಬಕ್ಕೂ ಅಧ್ಯಾಪಕ ವೃತ್ತಿಗೂ ಇರುವ ನಿಕಟ ಸಂಬಂಧವನ್ನು ತಿಳಿಸುತ್ತಾ, ತನ್ನ ಪೂಜ್ಯ ಪಿತೃ ಮತ್ತು ಪತ್ನಿ ಇವರು ಅಧ್ಯಾಪಕರಾಗಿದ್ದರೆಂದು ಹೇಳಿದರು. ಆದುದರಿಂದ ಅಧ್ಯಾಪಕರಿಗೂ ವಿದ್ಯಾರ್ಥಿಗಳಿಗೂ ತಮ್ಮ ಹೃದಯದಲ್ಲಿ ಒಂದು ಎಡೆಯಿದೆ ಎಂದು ನುಡಿದು, ಅವರ ಕರೆ ಬಂದಾಗ ಅದನ್ನು ಅಲ್ಲಗಳೆಯುವದು ತಮಗೆ ಅಶಕ್ಯವೆಂದು ತಿಳಿಸಿದರು.

"ಶಾಲಾ ಚರ್ಚಾಕೂಟಗಳು ಭಾಷಣ ಕಲೆಯನ್ನು ಅಭ್ಯಾಸ ಮಾಡಲು ಯೋಗ್ಯ ಸ್ಥಳಗಳಾಗಿವೆ" ಎಂದು, ಚರ್ಚಾಕೂಟದ ಅವಶ್ಯಕತೆಯನ್ನು ತಿಳಿಸುತ್ತಾ ಮುಖ್ಯ ವಕ್ತಾರರು ಭಾಷಣವನ್ನು ಮುಂದುವರಿಸಿದರು. "ಈಟನ್ ಮತ್ತು ಹ್ಯಾರೋ ಶಾಲೆಗಳ ಮತ್ತು ಆಕ್ಸಫರ್ಡ್, ಕೇಂಬ್ರಿಜ್ ವಿಶ್ವವಿದ್ಯಾಲಯಗಳ ಚರ್ಚಾಕೂಟಗಳಲ್ಲಿ ಮಾತಿನ ಮಲ್ಲರಾಗಿದ್ದವರೇ ಇಂಗ್ಲೆಂಡಿನ ಶ್ರೇಷ್ಠ ರಾಜಕಾರಿಣಿಗಳಾಗಿ ಮುಂದೆ ಮೆರೆದರು. ಈಗ ಇಂಗ್ಲೆಂಡಿನ ಮಹಾಪ್ರಧಾನಿಗಳಾಗಿರುವ ಸರ್. ವಿನ್‌ಸ್ಟನ್ ಚರ್ಚಿಲ್ಲರಿಗೆ ತರುಣರಾಗಿದ್ದಾಗ ತುಂಬಾ ಸಭಾಕಂಪನವಿದ್ದಿತು. ಅವರು ಚರ್ಚಾಕೂಟಗಳಲ್ಲಿ ಮಾತಾಡಿ ಸಭಾಕಂಪನದಿಂದ ಪಾರಾದರು. ಈ ಸಭಾಕಂಪನವನ್ನು ನಿವಾರಿಸಲು ಚರ್ಚಾಕೂಟಗಳೇ ಯೋಗ್ಯ ಸ್ಥಾನಗಳು" ಎಂದು ಹೇಳಿದರು. "ಚರ್ಚಾಕೂಟಗಳಲ್ಲಿ ಮಾತನಾಡಬೇಕಾದರೆ ವಿಷಯ ಜ್ಞಾನವಿರಬೇಕು. ಆದುದರಿಂದ ಭಾಷಣಕಾರನಾಗಲು ಬಯಸುವವನು ಅನೇಕ ಪುಸ್ತಕಗಳನ್ನು ಓದಿ ಜ್ಞಾನ ಸಂಗ್ರಹ ಮಾಡಬೇಕು. ಹೀಗೆ ವಿಷಯಗಳನ್ನು ಓದಿ ಅರಗಿಸಿ ಕೊಂಡು, ಸಭೆಗಳಲ್ಲಿ ಮಾತನಾಡುವದರಿಂದ ಸಂಪಾದಿಸಿದ ಅರಿವು ಕ್ರಮಬದ್ಧವಾಗುವದು. ಅರಿತ ವಿಷಯಗಳನ್ನು ಸುಸ್ಪಷ್ಟವಾಗಿ ಹೇಳಿ ತಿಳಿಸುವ ಅಳವು ಕೈಗೂಡುವದು. ಭಾಷಣಕಾರನು ಒಂದು ಮುಖ್ಯ ವಿಷಯವನ್ನು ಮನಸ್ಸಿನಲ್ಲಿಟ್ಟಿರಬೇಕು. ಅವನ ಭಾಷಣ ಅಧಿಕ ವೇಳೆಯನ್ನು ತೆಗೆದುಕೊಳ್ಳದೆ ಸಂಕ್ಷೇಪವಾಗಿರಬೇಕು. ಇಂದಿನ ದಿನದಲ್ಲಿ ಉದ್ದ ಭಾಷಣಗಳನ್ನು ಕೇಳಲು ದಪ್ಪ ಹೊತ್ತಿಗೆಗಳನ್ನು ಓದಲು ಯಾರಿಗೂ ಬಿಡುವು, ತಾಳ್ಮೆ ಇರುವದಿಲ್ಲ. ಮಾತು ಹಾಸ್ಯ ಮತ್ತು ಸರಸೋಕ್ತಿಗಳಿಂದ ಕೂಡಿದ್ದು, ಪಾಂಡಿತ್ಯ ಪ್ರದರ್ಶನವಿರಬಾರದು. ಈ ಸೂಚನೆಗಳನ್ನನುಸರಿಸಿ ಭಾಷಣ ಕಲೆ ಅಭ್ಯಾಸ ಮಾಡಿದರೆ ನೀವು ಒಳ್ಳೆಯ ಭಾಷಣಕಾರರಾಗುವಿರಿ" ಎಂದು ಅವರು ಹೇಳಿದರು.

ಶ್ರೀ. ನೆಹರೂರವರ ಸನ್ಮಾನ.

ನ್ಯೂಯಾರ್ಕಿನ ರಾಷ್ಟ್ರೀಯ ಕಲಾ ಮಂಡಳವು ತನ್ನ ಸಾರ್ವಜನಿಕ ಸಲಹಾ ಸಮಿತಿಗೆ ಭಾರತದ ಪ್ರಧಾನ ಮಂತ್ರಿ ನೆಹರೂರನ್ನು ನೇಮಿಸಿದೆ. ಈ ಮಂಡಳವು ಜಾಗತಿಕ ಕಲಾಕಾರರಿಗೆ ನೋಬೆಲ್ ಬಹುಮಾನದಂಥ ಬಹುಮಾನ ಕೊಡುವ ವಿಚಾರ ನಡೆಸಿದ್ದು ಸಲಹಾ ಸಮಿತಿಗೆ ಅದು ಅನೇಕ ಸುಪ್ರಸಿದ್ಧ ವ್ಯಕ್ತಿಗಳನ್ನು ನೇಮಿಸಿಕೊಂಡಿದೆ.

ರಾಮಚಂದ್ರ ಶರ್ಮರ ಉಪವಾಸ ಮುಕ್ತಾಯ.

೬೨ ದಿನಗಳಿಂದ ಉಪವಾಸ ಮಾಡುತ್ತಿದ್ದ ರಾಮಚಂದ್ರ ಶರ್ಮಾ ಇವರು ತಾ ೧೮ ರಲ್ಲಿ ಹಜಾರೀಬಾಗದಲ್ಲಿ ಆಚಾರ್ಯ ವಿನೋಬಾ ಭಾವೆಯವರ ಬಿನ್ನಹದ ಮೇರೆಗೆ ಉಪವಾಸವನ್ನು ಬಿಟ್ಟುಕೊಟ್ಟರೆಂದು ಅಧಿಕೃತವಾಗಿ ತಿಳಿದು ಬಂದಿದೆ. ಬಿಹಾರದಲ್ಲಿ ಗೋವಧ ಪ್ರತಿಬಂಧಿಸಬೇಕೆಂಬ ಬೇಡಿಕೆಯನ್ನು ಮಂಡಿಸಿ ಶರ್ಮಾ ಇವರು ಉಪವಾಸವನ್ನು ಪ್ರಾರಂಭಿಸಿದ್ದರು. ಭಾವೆಯವರ ಕೈಯಿಂದ ಒಂದು ಬಟ್ಟಲ ಮೋಸಂಬಿ ರಸವನ್ನು ತೆಗೆದುಕೊಂಡು ಶರ್ಮಾ ಇವರು ಉಪೋಷಣದ ಪಾರಣೆ ಮಾಡಿದರು. ಹಜಾರಿಬಾಗ್ ಆಸ್ಪತ್ರೆಯಲ್ಲಿ ತಾ. ೧೮ ಸಾಯಂಕಾಲ ೪ ಗಂಟೆಗೆ ಶರ್ಮರ ಉಪವಾಸದ ಪಾರಣೆಯಾಯಿತು.

ಬಿಹಾರ ವಿಧಾನ ಸಭೆಯ ಉಪಾಧ್ಯಕ್ಷರಾದ ಶ್ರೀ ಜಗತ ನರೇನಲಾಲ, ಹಿಂದು ಮಹಾ ಸಭೆಯ ಧುರೀಣರಾದ ಸೀತಾರಾಮ [illegible] ಮತ್ತು ಪಾರ್ಲಿಮೆಂಟ್ ಸದಸ್ಯರಾದ ರಾಮ ನರೇನ್‌ಸಿಂಗ ಇವರು ಶರ್ಮರ ಪಾರಣೆಯ ಕಾಲಕ್ಕೆ ಅವರ ಬಳಿಯಲ್ಲಿ ಉಪಸ್ಥಿತರಾಗಿದ್ದರು.

ಬ್ರಿಟಿಷ್ ಮುಖ್ಯ ಮಂತ್ರಿ ಪದ ಅಂಥೋನಿ ಈಡನ್ನರಿಗೆ?

ಈ ಶರದೃತುವಿನ ಕೊನೆಯಲ್ಲಿ ಬ್ರಿಟಿಷ್ ಮುಖ್ಯ ಮಂತ್ರಿ ಸರ್ ವಿನಸ್ಟನ್ ಚರ್ಚಿಲ್‌ರ ಸ್ಥಳದಲ್ಲಿ ಬ್ರಿಟಿಷ್ ವಿದೇಶ ಮಂತ್ರಿ ಅಂಥೋನಿ ಈಡನ್ನರು ಮುಖ್ಯ ಮಂತ್ರಿಗಳಾಗಬಹುದು ಎಂದು ಸಂಡೆ ಕ್ರಾನಿಕಲ್‌ನ ರಾಜಕೀಯ ಸುದ್ದಿಗಾರನು ಬರೆದಿದ್ದಾನೆ. ಈಡನ್ನರು ಈಗ ಶಸ್ತ್ರ ಕ್ರಿಯೆಯೊಂದರಿಂದ ಸುಧಾರಿಸಿಕೊಳ್ಳುತ್ತಿದ್ದಾರೆ. ಅವರು ಪೂರ್ಣ ಗುಣ ಹೊಂದಿದ ಮೇಲೆ ಚರ್ಚಿಲ್ಲರು ಅವರಿಗೆ ತಮ್ಮ ಅಧಿಕಾರ ವಹಿಸಿಕೊಡಬಹುದೆಂದು ಪಾರ್ಲಿಮೆಂಟಿನ ಎಲ್ಲ ಪಕ್ಷಗಳ ಸದಸ್ಯರು ಅಭಿಪ್ರಾಯಪಡುತ್ತಿದ್ದಾರೆ ಎಂದೂ ಈ ಸುದ್ದಿಗಾರನು ಹೇಳಿದ್ದಾನೆ.

ಪ್ರಜಾ ಜವಾಬ್ದಾರಿ!

ಲೇ:—ಮಿಸ್. ಕೆ. ಎಂ. ಭಾಗ್ಯಮ್ಮ. ಬೆಟ್ಟಕೇರಿ.

"ಹುಟ್ಟಿಸಿದ ದೇವರು ಹುಲ್ಲು ಮೇಯಿಸಲಾರ" ಎಂಬ ಒಂದು ನಾಣ್ನುಡಿ ಇದೆ. ಇಸ್ವರ ವರೆಗೆ ಅಂಥ ಪರಿಸ್ಥಿತಿ ನಮಗೆ ಬರಲಿಲ್ಲವಾದರೂ ಹುಲ್ಲು ತಿನ್ನುವಷ್ಟು ಬಡತನ ಭಾರತ ಸಹೋದರರಲ್ಲಿದೆ. ಇದನ್ನು ನಿವಾರಿಸಲಿಕ್ಕಾಗಿ ಭಾರತ ಸರಕಾರ ಹೋರಾಡುತ್ತಿದೆ. ಇದಕ್ಕಾಗಿ ಅನೇಕ ಯೋಜನೆಗಳನ್ನು ಕೈಗೊಂಡಿದೆ. ಆದರೆ ಈ ವರೆಗಿನ ಈ ಯಾವ ರೀತಿಯ ಯೋಜನೆಯಿಂದಲೂ ಹೆಚ್ಚಿನ ಪರಿಣಾಮ ಆದಂತೆ ತೋರುವದಿಲ್ಲ. ದಿನೇ ದಿನೇ ನಿರುದ್ಯೋಗ ಹೆಚ್ಚಾಗತೊಡಗಿದೆ. ನಿರಕ್ಷರಸ್ಥರಿಂದಲೇ ತುಂಬಿರುವ ಭಾರತ ದೇಶದಲ್ಲಿ ವಿದ್ಯಾವಂತರಿಗೆ ಉದ್ಯೋಗವಿಲ್ಲ! ಮತ್ತೆ ನಿರಕ್ಷರಸ್ಥರ ಪಾಡು ವರ್ಣಿಸಲು ಅಸದಳ. ವಿದ್ಯಾವಂತರು ನಿರುದ್ಯೋಗಿಗಳಾಗಲು ನಮ್ಮಲ್ಲಿ ವಿದ್ಯಾವಂತರು ಹೆಚ್ಚಿದುದು ಕಾರಣವಲ್ಲ. ನಮ್ಮಲ್ಲಿಯ ಉದ್ಯೋಗ ವಿತರಣೆಯೇ ಕಾರಣ. ಒಂದು, ಕುಟುಂಬದಲ್ಲಿ ತಂದೆಯಿಂದ ಹಿಡಿದು ಮಕ್ಕಳೆಲ್ಲಾ ಸರಕಾರಿ ನೌಕರರೇ. ಇದರ ಜೊತೆಗೆ ಗ್ರಾಮಗಳಲ್ಲಿ ಅವರಿಗೆ ಆಸ್ತಿಗಳು ಬೇರೆ. ಸರಕಾರಿ ನೌಕರಿಯಿಂದ ಒಂದೆಡೆ ಮತ್ತೆ ಗ್ರಾಮದ ಆಸ್ತಿಯ ಗೇಣಿ ಮೂಲಕ ಇನ್ನೊಂದೆಡೆ ಹೀಗೆ ಹಣ ಗಳಿಸಿ ಕೆಲವು ಕುಟುಂಬಗಳು ಪಟ್ಟಣದಲ್ಲಿ ಸುಖವಾಗಿ ಸಂಸಾರಸಾಗಿಸುವ ಹಾಗಿದ್ದರೆ ಅನಕ್ಷರಸ್ಥ ಕುಟುಂಬದವರೆಲ್ಲಾ ಕೆಲಸ ಮಾಡಿ ಅತಿ ಕಷ್ಟದಿಂದ ವಿದ್ಯಾಭ್ಯಾಸ ಮಾಡಿಸಿದ ತಮ್ಮ ಕುಟುಂಬದ ಒಂದು ಮಗುವಿಗೆ ಸರಕಾರಿ ನೌಕರಿ ದೊರಕಿಸುವುದು ಕಷ್ಟ ಎಂದಾದರೆ (ಸರಕಾರಿ ನೌಕರಿ ಸಾಮಾನ್ಯ ಶಿಫಾರಸ್ಸಿನ ಮೇಲೆ) ಅಧಿಕಾರವೆಲ್ಲ ಬಡಪಾಳ ಶಾಹಿಗಳ ಪಾಲಿಗೂ ಬಡತನ ಬಡವರ ಪಾಲಿಗೂ ಆಯಿತು.

ಗ್ರಾಮದ ರೈತರು ತಮಗೆ ಸಾಕಷ್ಟು ಸ್ಥಳ ಸಾಲದ ಕಾರಣ ಸರಕಾರದವರನ್ನು ಕೈಸಾರಿ ಜಾಗ ಕೇಳಿದರೆ ಎರಡು ವರ್ಷಗಳಿಂದಲೂ ಉತ್ತರವೇ ಇಲ್ಲ. ಹೆಚ್ಚು ಆಹಾರ ಬೆಳೆಸಿರಿ ಎಂದು ಸರಕಾರಿ ನೌಕರರು ಕೂಗಿದರೆ ಬಡವರು ಬೆಳೆಸುವದಾದರೂ ಎಲ್ಲಿ? ಏನನ್ನು? ಪ್ರತಿ ನಿರುದ್ಯೋಗಿಗೂ ಸಾಕಷ್ಟು ಸ್ಥಳ ಕೊಟ್ಟು ಅವನ್ನು ವೃದ್ಧಿಗೊಳಿಸುವ ಮಾರ್ಗ ತೋರಿದರಾಗದೇ? ಉದ್ಯೋಗ ಎಂದರೆ ಬರೇ ಆಫೀಸಿನೊಳಗಣ ಕೆಲಸವಲ್ಲ, ಭಾರತ ದೇಶ ರೈತರ ದೇಶ ಎಂಬ ಪ್ರತೀತಿ ಇದ್ದರೂ 'ಆಹಾರ ಬೆಳೆಸಿರಿ' ಎನ್ನುವವರು ಹೆಚ್ಚಿದ್ದಾರಲ್ಲದೆ 'ಬೆಳೆಸುತ್ತೇವೆ' ಎನ್ನುವವರೇ ಇಲ್ಲದಾಗಿದ್ದಾರೆ.

ಪ್ರತಿಯೊಬ್ಬರನ್ನೂ ಉಪದೇಶಿಸಲು ಬಿಟ್ಟರೆ ದುಡಿಯುವವರಾರು? ಗ್ರಾಮದ ರೈತರೆಲ್ಲಾ ಬನ್ನಬಟ್ಟು ತಮ್ಮ ಮಕ್ಕಳಿಗೆ ವಿದ್ಯೆ ಕಲಿಸಿ ಸರಕಾರಿ ನೌಕರಿಗಾಗಿ ಪಟ್ಟಣಕ್ಕೆ ಕಳುಹಿಸುತ್ತಿದ್ದಾರೆ. ಗ್ರಾಮದಲ್ಲಿನ ಜನಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಿದೆ. ಗ್ರಾಮದಲ್ಲಿ ತನ್ನ ಕಷ್ಟದಿಂದ ಜೀವಿಸುವ ಒಬ್ಬನೇ ಒಬ್ಬ ವಿದ್ಯಾವಂತನಿಲ್ಲ. ಫಲವತ್ತಾದ 'ವಸುಂಧರೆ' ಎನಿಸಿದ ಭಾರತ ದೇಶ ಇಂದು ಬೀಜರು ಬಯಲಾಗಿ ಹುಲ್ಲೂ ಬೆಳೆಯದ ರೀತಿಯಾಗಿ. ಯಾವ ಅಧಿಕಾರಿಗಳು ಗ್ರಾಮಕ್ಕೆ ಬಂದರೂ 'ನೀವು ಹಳ್ಳಿಯಲ್ಲಿ ಹುಟ್ಟಿ ಶುದ್ಧವಾಯು ಸೇವಿಸಿ ಗಟ್ಟಿಮುಟ್ಟಾಗಿಯೂ ಧೈರ್ಯಶಾಲಿಗಳಾಗಿಯೂ ಇದ್ದೀರಿ. ಭಾರತ ದೇಶಕ್ಕೆ ಶೂರಪುತ್ರರು ಹುಟ್ಟಬೇಕಾದರೆ ಅದು ನಿಮ್ಮಲ್ಲಿ ಹುಟ್ಟಬೇಕು. ನಾವೆಲ್ಲ ಪಟ್ಟಣದಲ್ಲೇ ಬೆಳೆದು ನಿರ್ಬಲರಾಗಿದ್ದೇವೆ ಎಂದು ಭೋಧಿಸುತ್ತಾರೆ. ತಮ್ಮಲ್ಲೂ ಶೂರಪುತ್ರ ಪುತ್ರಿಯರು ಹುಟ್ಟುವಂತೆ ಮಾಡಲು ಇವರೂ ಹಳ್ಳಿ ವಾಸಕ್ಕೆ ಗೊಂಡರಾಗುವದಿಲ್ಲವೇ?

ಪಟ್ಟಣದವರಿಗೆ ವರಮಾನ ಹಳ್ಳಿಯಿಂದಲೂ ಬರಬೇಕು. ಪಟ್ಟಣದಿಂದಲೂ ಬರಬೇಕು. ಹಳ್ಳಿಯ ಜನರು ತಮ್ಮ ರಕ್ತ ಹಿಂಡಿ ಸಂಪಾದಿಸಿದುದನ್ನೆಲ್ಲಾ ಸರಕಾರಕ್ಕೂ ಪಟ್ಟಣಗಳಲ್ಲಿರುವ ತಮ್ಮ ಜಮೀನುದಾರರಿಗೂ ಬಾಂಧವರಿಗೂ ಕೊಡಲಿಕ್ಕಾಯಿತು. ಒಂದು ದಿನ ಕುಳಿತು ಸಾವಕಾಶವಾಗಿ ಊಟ ಮಾಡಲೂ ಸಮಯ ಸಿಕ್ಕುವದಿಲ್ಲ. ಇಂಥ ಕಷ್ಟತರ ಜೀವನವನ್ನೇ ಅನುಭವಿಸಿ ಪಟ್ಟಣಗಳ ಆಡಂಬರ ಕೇಳಿ ತಿಳಿದ ಯಾವ ತಾಯಿ ತಂದೆಯವರಿಗೆ ತಮ್ಮ ಮಕ್ಕಳನ್ನು ತಮ್ಮ ಹಾಗೆ ಕಷ್ಟಪಡಿಸಲು ಮನಸ್ಸಾದೀತು? ಪಟ್ಟಣಿಗರೂ ತಮ್ಮ ಮಕ್ಕಳನ್ನು ಹಳ್ಳಿ ಜೀವನಮಾಡಿ ಆರೋಗ್ಯ ಭಾಗ್ಯ ಸಂಪಾದಿಸಲು ಕಳುಹಿಸಲಿ ಆಗ ಜನತೆಯ ದೃಷ್ಟಿಯೇ ಬದಲಾಗುವದು.

ಪೂರ್ವ ಕಾಲದಲ್ಲಿ ಜನರು ವಯಸ್ಸಾದಾಗ ವಾನಪ್ರಸ್ಥಾಶ್ರಮಕ್ಕೆ ಹೋಗುತ್ತಿದ್ದರೆಂಬುದು ಪುರಾಣ ಪ್ರಸಿದ್ಧವಾಗಿದೆ. ವಾನಪ್ರಸ್ಥಾಶ್ರಮವೆಂದರೆ ಕಾಡಿಗೆ ಹೋಗುವದು ಎಂದರ್ಥವಾಗಲಾರದು. ಅಧಿಕಾರಿಗಳೆಲ್ಲಾ ತಮ್ಮ ಅಧಿಕಾರದ ಅವಧಿ ಮುಗಿದ ಮೇಲೆ ಗ್ರಾಮಗಳಲ್ಲಿ ವಾಸಿಸಲು ರಾಜಧಾನಿಯಿಂದ ಹೋಗುತ್ತಿದ್ದಿರಬಹುದು! ಕವಿಗಳ ಅಲಂಕಾರ ಭಾಷೆಗೊಳಪಟ್ಟ ಆ ನಿಸ್ವಾರ್ಥ ಅಧಿಕಾರಿಗಳ ಪ್ರಶಂಸೆ ಈ ರೀತಿ ಬರೆಯಲ್ಪಟ್ಟಿರಬೇಕು! ಇಂಥಾ ವಾನಪ್ರಸ್ಥಾಶ್ರಮ ಜೀವನವನ್ನು ಇಂದಿನ ನಿವೃತ್ತ ಅಧಿಕಾರಿಗಳು ಕೈಕೊಳ್ಳ ಬಾರದೇಕೆ?

ನಮ್ಮ ಸರಕಾರದವರು ಇಂದು ಪಟ್ಟಣದಲ್ಲಿರುವ ಒಂದು ಕುಟುಂಬದ ಒಬ್ಬ ವಿದ್ಯಾವಂತನಿಗೆ ಮಾತ್ರ ಸರಕಾರಿ ನೌಕರಿ ದೊರೆಯುವಂತೆಯೂ ಉಳಿದವರಿಗೆ ಹಳ್ಳಿ ಜೀವನದಯೂ ಇತರ ಉದ್ಯಮದ ಏರ್ಪಾಡಾಗುವಂತೆಯೂ ಮಾಡಿದರೆ ಹಳ್ಳಿಯ ಉದ್ಧಾರವಾಗಬಹುದು.

ಭಾರತಾಂಬೆ ಸರ್ವರಿಗೂ ತಾಯಿಯಂತಿದ್ದರೆ ತಂದೆಯಂತಿರುವ ಸರಕಾರವು ಈ ರೀತಿಯ ಒಂದು ಏರ್ಪಾಡು ಮಾಡಬೇಕು. ಭಾರತ ಪ್ರಜೆಯು ಅತೃಪ್ತಿಯಿಂದ ಭಾರತ ದೇಶದಲ್ಲಿ ಬದುಕುವಂತಾದ ಪರಿಸ್ಥಿತಿಯನ್ನು ಬೇಗನೆ ಓಡಿಸಿ, ಪ್ರತಿಯೊಬ್ಬರೂ ಕೆಚ್ಚೆದೆಯಿಂದ ಬದುಕುವಂತಾಗುವಂತೆ ಮಾಡುವದೇ ಭಾರತ ಪ್ರಜೆಯಾಗಿರುವ ನಮ್ಮ ಹಾಗೂ ನಮ್ಮಿಂದ ರಚಿತವಾದ ಸರಕಾರದ ಕರ್ತವ್ಯವಾಗಿರಬೇಕು.

ಧರ್ಮ ರಹಸ್ಯ.

ಮನಸ್ಸಿಗೆ ಕಡಿವಾಣವಿರಲಿ

== ಭರ್ತೃಹರಿಯ ವೈರಾಗ್ಯ ಶತಕದಿಂದ ==

ಹೇ ಮನಸ್ಸೇ, ಅನುದಿನವೂ ಬಗೆ ಬಗೆಯಾಗಿ ಕಾಲೋಚಿತ ಕೃತ್ಯಗಳಿಂದ ಪರರ ಮನಸನ್ನೊಲಿಸಿ, ಕಷ್ಟಪಟ್ಟು ಅವರ ಅನುಗ್ರಹವನ್ನು ಹೊಂದಲು ಯತ್ನಿಸುವೆಯಲ್ಲವೇ? ಏಕೆ? ನಿನ್ನನ್ನೇ ನೀನು ಪ್ರಸನ್ನಗೊಳಿಸಿದರೆ ಅದರಿಂದ ದೊರೆಯುವ ಆನಂದವು ನಿನ್ನ ಬಯಕೆಯನ್ನು ಪೂರೈಸುವದಿಲ್ಲವೇ?

ಹೇ ಮನವೇ, ಸುಮ್ಮನೆ ಏಕೆ ಅಲೆದಾಡುತ್ತಿರುವೆ. ಇದ್ದಲ್ಲೇ ಸ್ಥಿರವಾಗಿರು. ಯಾವುದು ಹೇಗೆ ಆಗಬೇಕೋ ಹಾಗೆ ಆಗಿಯೇ ಹೋಗುತ್ತದೆ. ಕಳೆದುದನ್ನೂ, ಮುಂದೆ ಬರುವುದನ್ನೂ ಚಿಂತಿಸಿ ಕೊತುಕೊಳ್ಳುವುದರಿಂದ ಪ್ರಯೋಜನವಿಲ್ಲ. ಸಂಕಲ್ಪಿಸದೇನೇ ಬಂದುದನ್ನೆಲ್ಲಾ ಆನಂದದಿಂದ ಅನುಭವಿಸು.

ಮನವೇ, ಈಗ ಕಾಣುವುದು ಆಯಾಸ ದುಃಖಗಳನ್ನು ಉಂಟುಮಾಡುವ ಇಂದ್ರಿಯ ವಿಷಯವೆಂಬ ಅರಣ್ಯ. ಅಲ್ಲಿಂದ ಮರಳಿ ಬಾ. ಕ್ಷಣ ಮಾತ್ರದಿಂದಲೇ ಸರ್ವ ದುಃಖಗಳನ್ನು ನಾಶ ಮಾಡಲು ತಕ್ಕುದಾದ ಆ ಜ್ಞಾನ ಮಾರ್ಗದಲ್ಲಿ ಅಡಿ ಇಡು. ಚಂಚಲತೆ ಬೇಡ. ಕ್ಷಣಭಂಗುರವಾದ ಹೇಮ, ಪ್ರೇಮಗಳಲ್ಲಿ ಆಸಕ್ತಿ ಬೇಡ.

ಹೇ ಮನಸ್ಸೇ, ನಾನು ತಾನೆಂಬ ಮೋಹವನ್ನು ಬಿಡು. ಸಂಸಾರವೆಂಬುದು ತೆರೆಯಂತೆ, ನೀರ ಗುಳ್ಳೆಯಂತೆ, ಆಕಾಶ ಮಿಂಚಿನಂತೆ! ಅದನ್ನು ಶಾಶ್ವತವೆಂದು ನಂಬದಿರು.

ಅರಸರ ಇಲ್ಲವೇ ಅಧಿಕಾರದಲ್ಲಿರುವವರ ಕಟಾಕ್ಷವೆಂಬ ಮನೆಯೊಳಗಿನ ವೇಶ್ಯಾಸದೃಶವಾದ ನಶ್ವರ ಸಂಪತ್ತನ್ನು ಸಂಪಾದಿಸಲು ಹಾತೊರೆಯದಿರು. ಜೀವನದ ಗುರಿಯನ್ನು ತಿಳಿಯದೆ ಧನ, ಅಧಿಕಾರದ ಆಸೆಗೆ ಬಲಿಬೀಳುವದಕ್ಕಿಂಥಾ ಕಾಣ ಸಿಗುವ ಮನೆ ಬಾಗಿಲೆಡೆ ಕೈನೀಡಿದಾಗ ದೊರೆಯುವ ಭಿಕ್ಷೆ ಮೇಲು.

ಮನೋರಥಗಳನ್ನೆಲ್ಲಾ ಪೂರ್ತಿಗೊಳಿಸುವ ಸಂಪತ್ತು ದೊರೆತರೂ ಬಂದದ್ದೇನು? ಶತ್ರುಗಳನ್ನೆಲ್ಲಾ ನಾಶ ಮಾಡಿ ಮೆರೆದರೂ ಸಾಧಿಸಿದ ಪುರುಷಾರ್ಥವೇನು? ಐಶ್ವರ್ಯದ ಮೂಲಕ ಸಾವಿರ ಗೆಳೆಯರು ದೊರೆತರೂ ಲಾಭವೇನು? ಪ್ರಳಯ ಕಾಲದ ವರೆಗೂ ಬಾಳುವ ದೇಹಬಲ ದೊರೆತರೂ ಶ್ರೇಯಃಸಾಧನೆಗಾಗಿ ಯತ್ನಿಸದಿದ್ದರೆ ಬಂದ ಪ್ರಯೋಜನವೇನು?

ಮನಸ್ಸೇ ತಿಳಿ, ಮನುಷ್ಯನ ಕರ್ತವ್ಯಗಳೇನೆಂದು:—(೧) ಜಗತ್ತಿನ ಕಾರಣ ಶಕ್ತಿಯಲ್ಲಿ ವಿಶ್ವಾಸವಿರಬೇಕು. (೨) ಪುತ್ರ ಕುಟುಂಬದಲ್ಲಿ ಅತ್ಯಾದರವಿರಕೂಡದು. (೩) ಜೀವನದಲ್ಲಿ ವಿಕಾರ, ಕಾಮ, ಕ್ರೋಧಗಳಿಗೆಡೆಯಿರಬಾರದು. (೪) ಅಸತ್ಯ ಜೀವನ, ಆತ್ಮಕ್ಕೆ ವಿರೋಧವಾದ ವರ್ತನೆ ಕೂಡದು. ಈ ರೀತಿ ಜೀವನ ನಡೆಸಿದರೆ ಬೇಕಾದುದು ಬೇರೇನಿದೆ?

ವಿದ್ಯಾರ್ಥಿಗಳ ಪ್ರಗತಿ ವರದಿ

ವಿದ್ಯಾರ್ಥಿಗಳ ಸರ್ವತೋಮುಖ ಪ್ರಗತಿಯನ್ನು ಸಮುಚ್ಚಾಯಕವಾಗಿ ಕಾಣಿಸುವ ಬಗ್ಗೆ, ಮುಂಬಾಯಿ ಪ್ರಾಂತದಲ್ಲಿ, ಈ ವರುಷ, ಎಲ್ಲ ಸೆಕೆಂಡರಿ ಶಾಲೆಗಳಲ್ಲಿ 'ಕಾರ್ಡು' ಪದ್ಧತಿಯನ್ನು ಜಾರಿಗೆ ತರುವರು. ಆ ಕಾರ್ಡಿನಲ್ಲಿ, ವಿದ್ಯಾರ್ಥಿಯು ವರ್ಷದಿಂದ ವರ್ಷಕ್ಕೆ ಎಲ್ಲ ಪಾಠಗಳಲ್ಲಿ ತೋರಿದ ಪ್ರಗತಿ, ಅವನ ಬುದ್ಧಿಬಲ, ಶೈಹಿಕಶಕ್ತಿ, ಆಟಗಳಲ್ಲಿ ಯೋಗ್ಯತೆ, ಎಲ್ಲವೂ ನೋಡಿದ ಮಾತ್ರಕ್ಕೆ ತಿಳಿಯುವಂತೆ ಕಾಣಿಸಲ್ಪಡುವದು. ಮುಂದೆ ಪ್ರೌಢಶಿಕ್ಷಣಕ್ಕಾಗಿ ಆ ವಿದ್ಯಾರ್ಥಿಗಳು ಪ್ರವೇಶವನ್ನಪೇಕ್ಷಿಸುವಾಗಲೂ ಈ ಕಾರ್ಡುಗಳು ಸಹಾಯಕವಾಗುವವು. ಇಂಥ ಕಾರ್ಡು ಪದ್ಧತಿಯು ಬ್ರಿಟನ್ ಮತ್ತು ಅಮೇರಿಕದಲ್ಲಿದೆ.

ನಿಯಂತ್ರಣ ರದ್ದು

ಬಟ್ಟೆ ಮತ್ತು ನೂಲುಗಳ ಬೆಲೆ ಹಾಗು ವಿತರಣದ ಮೇಲೆ ಹೊರಿಸಲ್ಪಟ್ಟಿದ್ದ ಎಲ್ಲಾ ನಿಯಂತ್ರಣಗಳನ್ನು ಭಾರತ ಸರಕಾರವು ಕಳೆದ ದಿನಾಂಕ ೧೦ರಂದು ರದ್ದು ಮಾಡಿರುವದು. ಇತ್ತೀಚಿಗಿನ ಕೆಲವು ತಿಂಗಳುಗಳಲ್ಲಿ ಬಟ್ಟೆಯ ನಿರ್ಮಾಣವು ಅಂತ ಮಿಲಿಯಗಜಕ್ಕೂ ಮಿಕ್ಕಿದುದನ್ನು ಅವಲೋಕಿಸಿ ಸರಕಾರವು ಈ ನಿರ್ಣಯಕ್ಕೆ ಕೊಂಡುದಾಗಿದೆ. ಅಲ್ಲದೆ ನೂಲಿನ ಪೂರೈಕೆಯ ಪರಿಸ್ಥಿತಿಯೂ ತೃಪ್ತಿಕರವಾಗಿದೆ. ಸದ್ಯಃಪ್ರಾಯೋಗಿಕವಾಗಿ ನಿಯಂತ್ರಣವನ್ನು ತೆಗೆದುಹಾಕಲಾಗಿದೆಯೆಂದೂ ನಿಯಂತ್ರಣ ರದ್ದುಮಾಡಿದುದರಿಂದ ತಲೆದೋರುವ ಪರಿಸ್ಥಿತಿಯನ್ನು ಸರಕಾರವು ಸೂಕ್ಷ್ಮ ರೀತಿಯಲ್ಲಿ ಅವಲೋಕಿಸಲಿದೆಯೆಂದೂ ಪತ್ರಿಕಾ ಪ್ರಕಟಣೆಯೊಂದು ಸಾರಿರುವದು.

ಎಕ್ಕಳ ಪುಟ

ಬ್ರಾಹ್ಮಣನ ಸ್ವಪ್ನ.

ಒಂದು ಪಟ್ಟಣದಲ್ಲಿ ಒಬ್ಬ ಬ್ರಾಹ್ಮಣನಿದ್ದನು. ಆತನು ತೀರಾ ಬಡವನಾಗಿದ್ದು ಭಿಕ್ಷಾವೃತ್ತಿಯಿಂದ ಜೀವನ ಮಾಡುತ್ತಿದ್ದನು. ಒಂದು ದಿನ ಆತನಿಗೆ ಈ ರೀತಿಯ ಭಿಕ್ಷೆಯಲ್ಲಿ ದೊರೆತ ಅಕ್ಕಿಯಿಂದ ಸ್ವಲ್ಪವನ್ನು ಅನ್ನಮಾಡಿ ಊಟ ಮಾಡಿ ಉಳಿದುದನ್ನು ಒಂದು ಪಾತ್ರೆಯಲ್ಲಿ ತುಂಬಿಸಿ ಇಟ್ಟನು. ಆ ರಾತ್ರಿ ಆತನು ಅಕ್ಕಿ ತುಂಬಿದ ಆ ಪಾತ್ರೆಯನ್ನು ಒಂದು ಮೊಳೆಯಲ್ಲಿ ತೂಗಹಾಕಿ ಅದರಡಿಯಲ್ಲಿ ತನ್ನ ಹಾಸಿಗೆಯನ್ನು ಹಾಸಿ ಮಲಗಿದನು. ಮಲಗಿದಲ್ಲಿಗೆ ನೇರವಾಗಿ ಮೇಲೆ ಪಾತ್ರೆ ತೂಗಾಡುತಿತ್ತು. ಅದನ್ನು ನೋಡುತ್ತಾ ಬ್ರಾಹ್ಮಣನು ಯೋಚನಾ ತರಂಗದಲ್ಲಿ ಮೈಮರೆತನು. ಆತನ ಯೋಚನೆ ಈ ರೀತಿ ಸಾಗಿತ್ತು.

'ಇಲ್ಲಿ ತೂಗುತ್ತಿರುವ ಪಾತ್ರೆಯಲ್ಲಿ ಅಕ್ಕಿ ಇದೆ. ಈಗ ದೇಶಕ್ಕೆ ಬರಗಾಲ ಬಂದು ಬಿಟ್ಟರೆ ಈ ಅಕ್ಕಿಯನ್ನು ಹೆಚ್ಚಿನ ಲಾಭದಲ್ಲಿ ಮಾರಿ ನೂರು ರೂಪಾಯಿಗಳಿಸಬಹುದು. ನೂರು ರೂಪಾಯಿಗಳಿಂದ ನಾಲ್ಕಾರು ಆಡುಗಳನ್ನು ಕ್ರಯಕ್ಕೆ ಪಡೆಯಬಹುದು. ಈ ಆಡುಗಳು ಆರು ತಿಂಗಳಿಗೊಮ್ಮೆ ಮರಿ ಹಾಕುವವು. ಇವನ್ನು ಮಾರಿ ಒಂದು ಹಸುವನ್ನು ಕೊಂಡುಕೊಳ್ಳಬಹುದು. ಹಸುವಿಂದ ದನಗಳ ಸಂಖ್ಯೆ ಬೆಳೆಯುವದು. ಅವುಗಳನ್ನು ಮಾರಿ ಕುದುರೆಗಳನ್ನು ತೆಗೆಯುವೆನು. ಕುದುರೆಗಳ ಸಂಖ್ಯೆ ಹೆಚ್ಚಾದ ಮೇಲೆ ಅವುಗಳನ್ನು ಮಾರುವೆನು. ಇದರಿಂದ ತುಂಬಾ ಹಣ ಬರುವದು. ಈ ಹಣದಿಂದ ದೊಡ್ಡ ಮನೆಯೊಂದನ್ನು ಕ್ರಯಕ್ಕೆ ಪಡೆಯುವೆನು. ಮನೆಯ ಸುತ್ತು ಉದ್ಯಾನ, ಕೊಳ ಹೂತೋಟಗಳಿಂದ ಸುಂದರವಾಗುವದು.

ನನ್ನ ಮನೆಯ ಸೌಂದರ್ಯ, ಆಡಂಬರಗಳನ್ನು ಕಂಡು ಯಾರಾದರೊಬ್ಬರು ತಮ್ಮ ಸುಂದರಿಯಾದ ಮಗಳನ್ನು ಕೊಟ್ಟು ಮದುವೆ ಮಾಡುವ ಪ್ರಸ್ತಾಪ ಮಾಡುವರು. ಸಾಕಷ್ಟು ಕನ್ಯಾಶುಲ್ಕ ತೆಗೆದುಕೊಂಡು ಮದುವೆಗೆ ಒಪ್ಪುವೆನು. ನನಗೆ ಗಂಡು ಮಗುವೊಂದು ಹುಟ್ಟುವದು. ಆ ಮಗುವಿಗೆ ಚಂದ್ರರಾಜನೆಂದು ಹೆಸರಿಡುವೆನು. ಆತನು ನಡೆಯಲು ಪ್ರಾರಂಭಿಸಿದಾಗ ನಮ್ಮ ಕುದುರೆ ಲಾಯದ ಮಾಡಿನ ಮೇಲೆ ಒಂದು ಪುಸ್ತಕ ತೆಗೆದುಕೊಂಡು ನಾನು ಓದಲು ಕೂರುವೆನು. ಚಂದ್ರರಾಜನು ಇದನ್ನು ನೋಡಿ ತನ್ನ ತಾಯಿಯ ಬಳಿಯಿಂದ ನನ್ನೆಡೆಗೆ ಓಡಿ ಬರುವನು. ಕುದುರೆಗಳ ಹತ್ತಿರ ಬರುವದನ್ನು ಕಂಡು ಹೆಂಡತಿಯನ್ನು ಕರೆದು ಮಗುವನ್ನು ಎತ್ತಿಕೊಳ್ಳಲು ಹೇಳುವೆನು. ತನ್ನ ಕೆಲಸದಲ್ಲಿ ಮಗ್ನಳಾದ ಹೆಂಡತಿಗೆ ನಾನು ಹೇಳಿದ್ದು ಕೇಳಿಸಲಾರದು. ಆಗ ನಾನು ಸಿಟ್ಟಿನಿಂದ ಎದ್ದು ಅಕೆಗೆ ಹೀಗೆ ಒದೆದು ಬಿಡುವೆನು.'

ತನ್ನ ಯೋಚನಾ ಪ್ರವಾಹದಲ್ಲಿ ಮಗ್ನನಾದ ಬ್ರಾಹ್ಮಣನು 'ಒದೆದು ಬಿಡುವೆನು' ಎಂದು ಹೇಳಿ ತಾನು ಮಲಗಿದಲ್ಲಿಂದ ಒದೆದ ಪೆಟ್ಟಿಗೆ ಆತನ ಎದುರು ತೂಗುತ್ತಿದ್ದ ಮಣ್ಣಿನ ಮಡಕೆಯು ಚೂರು ಚೂರಾಗಿ ಇದ್ದ ಅಕ್ಕಿಯು ನೆಲದ ಧೂಳಿನೊಡನೆ ಮಿಶ್ರವಾಯಿತು. ಆದ್ದರಿಂದಲೇ ನಿಲುಕದ ಆಸೆಯನ್ನು ಕಟ್ಟಿಕೊಳ್ಳಬಾರದು. ಇಲ್ಲದಿದ್ದರೆ ಚಂದ್ರರಾಜನ ತಂದೆಯಾದ ಬ್ರಾಹ್ಮಣನ ಸ್ವಪ್ನದಂತಾದೀತು ಎಂದು ಹೇಳುವದಾಗಿದೆ' ಎಂದು ಹೇಳಲು ಚಿನ್ನ ದೊರೆತ ಬ್ರಾಹ್ಮನು ಹೇಳಿದನು. 'ನೀನು ಹೇಳುವದು ಸರಿ. ಆಸೆಯಿಂದ ಕುರುಡರಾದ ಜನರು ನಾಳೆ ಏನಾದೀತೆಂಬುದನ್ನು ವಿಚಾರಿಸುವದಿಲ್ಲ. ಅದ್ದರಿಂದ ಅವರು ನಂತರ ನಿರಾಶೆಗೆ ಒಳಗಾಗುವರು. ಉದಾಹರಣೆಗೆ ಶಶಿರಾಜನ ಕತೆಯನ್ನು ನೀನು ಕೇಳಲಿಲ್ಲವೇ'

ಆ ಕತೆ ತಾನು ಕೇಳಿಲ್ಲವೆಂದು ಚಕ್ರಹೊತ್ತ ಬ್ರಾಹ್ಮಣನು ಹೇಳಿದ್ದರಿಂದ ಮುಂದಿನ ವಾರ ಚಿನ್ನ ದೊರೆತ ಬ್ರಾಹ್ಮಣನು ಶಶಿರಾಜನ ಕತೆ ಹೇಳುವನು.

ಎಂಟು ವರ್ಷಗಳಿಂದ—

ಅನ್ನ ನೀರು ಮುಟ್ಟಿಲ್ಲ.

ಹೈದರಾಬಾದ್ ಸಂಸ್ಥಾನದಲ್ಲಿ ಸಿದ್ದೇಶ್ವರದ ಬಳಿಯ ಯನಗುಂಡಿಯಲ್ಲಿ ಕಳೆದ ಎಂಟು ವರ್ಷಗಳಿಂದ ಅನ್ನ ನೀರು ಮುಟ್ಟದೆ, ಪ್ರಾಪಂಚಿಕ ಪ್ರವೃತ್ತಿಯವರನ್ನೂ ಪಾರಮಾರ್ಥಿಕ ಪ್ರವೃತ್ತಿಯವರನ್ನೂ ಒಂದೇ ಸಮನೆ ಆಕರ್ಷಿಸುತ್ತಿರುವ ವ್ಯಕ್ತಿಯೊಬ್ಬಳಿದ್ದಾಳೆ. ಆಕೆಯೇ ಸಾಧ್ವಿ ಮಾಣಿಕ್ಯಮ್ಮ.

ಆಂಧ್ರ ರೈತ ಕುಟುಂಬವೊಂದಕ್ಕೆ ಸೇರಿದ ಮಾಣಿಕ್ಯಮ್ಮ, ದೇಹದ ಮೇಲೆ ಆತ್ಮದ ಬಲ ಎಷ್ಟರಮಟ್ಟಿಗೆ ವಿಜಯಿಯಾಗಬಹುದೆಂಬುದಕ್ಕೆ ಪ್ರತ್ಯಕ್ಷ ನಿದರ್ಶನವಾಗಿದ್ದಾಳೆ.

ಪ್ರಾಪಂಚಿಕ ವಾದದವರನ್ನೂ ಮಾಣಿಕ್ಯಮ್ಮ ದಿಗ್ಭ್ರಮೆಗೊಳಿಸಿದ್ದಾಳೆ. ಮಾನವನಿಗೆ ಆಹಾರ ಬೇಕೆ? ಬೇಡವೆಂದು ಆಕೆ ರುಜುವಾತು ಮಾಡಿಕೊಟ್ಟಿದ್ದಾಳೆ. ಆಕೆಗೆ ಈಗ ೨೩ ವರ್ಷ ವಯಸ್ಸು. ಕಳೆದ ಎಂಟು ವರ್ಷಗಳಿಂದ ಆಕೆ ಆಹಾರವನ್ನಾಗಲೀ ಕುಡಿಯುವ ನೀರನ್ನಾಗಲೀ ಸೇವಿಸಿಲ್ಲ. ಆಕೆಗೆ ಮಲಮೂತ್ರವಿಸರ್ಜನೆಯ ಅಗತ್ಯವೂ ಇಲ್ಲ. ಇಷ್ಟಾದರೂ ಆಕೆಯ ಅಂಗಾಂಗಗಳೆಲ್ಲ ಸ್ವಾಭಾವಿಕವಾಗಿಯೇ ಇವೆ. ನಮ್ಮ ಎ. ಬಿ. ಸಿ. ಡಿ. ವಿಟಮಿನ್ ಪ್ರವೀಣರೆಲ್ಲರಿಗೂ ಆಕೆ ಭಾರಿ ಸವಾಲಿನಂತಿದ್ದಾಳೆ.

ದಿನಚರಿ

ಮಧ್ಯರಾತ್ರಿಯ ಪ್ರಾರ್ಥನೆಯ ನಂತರ ಮಾಣಿಕ್ಯಮ್ಮ ಗುಡ್ಡದ ಮೇಲಿನ ದೇವಾಲಯದ ಶಿವಲಿಂಗ ಸಾನ್ನಿಧ್ಯದಲ್ಲಿ ನೆಲದ ಮೇಲೆ ಬಟ್ಟೆ ಹಾಸಿಕೊಂಡು ನಿದ್ರಿಸುತ್ತಾಳೆ. ಮುಂಜಾವ ಬ್ರಾಹ್ಮೀ ಮುಹೂರ್ತದಲ್ಲೇ ಎದ್ದು ಗುಡ್ಡದ ಕೆಳಗಿನ ಝರಿಗೆ ಸ್ನಾನಕ್ಕಾಗಿ ಹೋಗುತ್ತಾಳೆ. ಬಟ್ಟೆಗಳನ್ನು ಒಗೆದುಕೊಂಡು ನಂತರ ದೇವಾಲಯಕ್ಕೆ ಪ್ರಾರ್ಥನೆ ನಡೆಸಲು ಹಿಂದಿರುಗುತ್ತಾಳೆ.

ದಿನವೆಲ್ಲ ಸಂಜೆ ಮತ್ತು ರಾತ್ರಿ ಆಕೆ ಧ್ಯಾನಾಸಕ್ತಳಾಗಿರುತ್ತಾಳೆ. ಭೇಟಿಗಾಗಿ ಒಂದೆರಡು ಮಾತಿಗಾಗಿ ಯಾರಾದರೂ ಬಂದಾಗ ಮಾತ್ರ ಆಕೆಯ ಧ್ಯಾನಕ್ಕೆ ಸ್ವಲ್ಪ ಹೊತ್ತು ತಡೆಯಾಗುವುದು. ಪಾರಮಾರ್ಥಿಕ, ಮತೀಯ, ಸಾಮಾಜಿಕ, ಅಥವಾ ಸಂಸಾರಿಕ ಪ್ರಶ್ನೆಗಳನ್ನು ಕೇಳುವವರೂ ಆಕೆಯ ಬಳಿಗೆ ಬರುವರು. ಆಕೆಗೆ ಎಲ್ಲರೂ, ಅಪ್ಪ ಅಥವಾ ಅಮ್ಮ, ಸೋದರ ಅಥವಾ ಸೋದರಿ. ಆಕೆಯ ಮುಂದೆ ಎಲ್ಲರೂ ಸಮಾನರು. ಯಾರಿಗೂ ಯಾವ ಬೇಧವೂ ಇಲ್ಲ. ಆದರೆ ಗಂಡಸರೂ ಹೆಂಗಸರೂ ಔಚಿತ್ಯವಿಲ್ಲದೆ ಒಂದೆಡೆ ಸೇರಬಾರದೆಂದು ಆಕೆ ತಿಳಿಸುತ್ತಾಳೆ. ಯಾರಾದರೂ ಆಕಸ್ಮಾತ್ತಾಗಿ ತನ್ನ ಮೈಮುಟ್ಟಿದರೆ ಹಲವಾರು ದಿನ ಆಕೆ ದುಃಖಿಯಾಗಿರುತ್ತಾಳೆ.

ವಿವಾಹ ಆಗಿತ್ತು

೧೩ನೇ ವಯಸ್ಸಿನಲ್ಲೇ ಆಕೆಯ ತಂದೆ ತಾಯಿಗಳು ಆಕೆಗೆ ವಿವಾಹ ಮಾಡಿದ್ದರು. ೧೫ನೇ ವಯಸ್ಸಿನವರೆಗೆ ಆಕೆ ಎಲ್ಲರಂತೆಯೆ ಇದ್ದಳು. ಆದರೆ ಅನಂತರ ಅನ್ನ ಪಾನಾದಿಗಳಲ್ಲೂ ಜನರಲ್ಲೂ ಆಸಕ್ತಿ ತೊರೆಯುತ್ತಾ ಬಂದಳು. ಸ್ವಲ್ಪ ದಿನಗಳ ನಂತರ ಅನ್ನ ನೀರನ್ನು ಆಕೆ ಪೂರ್ಣವಾಗಿ ಪರಿತ್ಯಜಿಸಿದಳು. ಆಕೆ ಪ್ರಾಪ್ತ ವಯಸ್ಕಳಾದಾಗ ಗಂಡನೊಡನೆ ಸೇರಲು ನಿರಾಕರಿಸಿದಳು. ಆಕೆಯ ತಂದೆ ತಾಯಿಗಳೂ ಬಂಧುಗಳೂ ಇತರರೂ ಇದರಿಂದ ದಿಗ್ಭ್ರಮೆಗೊಂಡರು. ಆದರೆ ಕಾಲಕ್ರಮದಲ್ಲಿ ಅನ್ನ ನೀರನ್ನೇ ಮುಟ್ಟದೆ ಧ್ಯಾನಾಸಕ್ತಳಾಗಿದ್ದ ಆಕೆಯನ್ನು ನೋಡಿ ಅವರಿಗೆ ವಿಪರೀತ ಆಶ್ಚರ್ಯವಾಗಿ ಆಕೆಯಲ್ಲಿ ಗೌರವ ಹುಟ್ಟಿತು.

ಯನಗುಂಡಿಯಲ್ಲಿ ಮೊದಲು ಆಡುಕುರಿಗಳ ಸಾಮೂಹಿಕ ಕೊಲೆಯಾಗುತಿದ್ದುದು ಈಚೆಗೆ ನಿಂತು ಹೋಗಿದೆ. ತನ್ನಲ್ಲಿಗೆ ಬರುವವರಿಗೆಲ್ಲ ಸಾಧ್ವಿ ಮಾಣಿಕ್ಯಮ್ಮ ದೇವರ ಹೆಸರಿನಲ್ಲಿ ಪ್ರಾಣಿಗಳನ್ನು ಬಲಿ ಕೊಡಬಾರದೆಂದು ಬೋಧಿಸುತಿದ್ದಾಳೆ.

ಕಾ. ಸಾ.

THE CANARA BANKING CORPORATION LIMITED.

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ಚಿಕ್ಕ ವಾಯಿದೆಯ ಠೇವಣಾತಿಗಳು :

3 ರಿಂದ 6 ತಿಂಗಳುಗಳ ವರೆಗೆ— ನಾಲಿಯೂನ ಶೇಕಡ 3

7 ರಿಂದ 12 ತಿಂಗಳುಗಳ ವರೆಗೆ—ನಾಲಿಯೂನ ಶೇಕಡ 3¼

ಪಂಚವಾರ್ಷಿಕ ಸುವರ್ಣ ಠೇವಣಾತಿಗಳು— ,, ,, 4

—: ಕೊಡಗು ಸಂಸ್ಥಾನದಲ್ಲಿ ನಮ್ಮ ಶಾಖೆಗಳು :—

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು :—ವೀರಾಜಪೇಟೆ.

ಶಾಖೆ:—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ಕೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟೆಗಳು
2. 12 ನೇ ನಂಬರಿನ ಒಂಟಿ ಹೊಳವಿನ ತೋಟದ ಕೋವಿಗಳು.
3. ಒಂಟಿ ಮತ್ತು ಜೋಡಿ ಹೊಳವಿನ ಕೇಪಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟೆಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
5. ⅝", ½" ಮತ್ತು ⅜" ಕಬ್ಬಿಣದ ಸರಳುಗಳು
6. 2", 1¼", 1" ¾" ಮತ್ತು ½" ಕೊಳಾಯಿಗಳು. (G. I. Peps)
7. 1¾" × $\frac{5}{16}$" ಉಕ್ಕಿನ ಪಟ್ಟಿಗಳು (Spring Steel flats)
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
9. ಕೋಳಿ ಮತ್ತು ಆನೆ ಮಾರ್ಕಿನ ಸಿಮೆಂಟ್ಸ್ ಟಿನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ, ಜಿಲ್ಲಾ ಮೆಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

* ಕಾಶ್ಮೀರದ ಭವಿತವ್ಯ *

ಹಿಂದೂಸ್ಥಾನ—ಪಾಕಿಸ್ಥಾನ ಮುಖ್ಯ ಮಂತ್ರಿಗಳ ಸಮಾಲೋಚನೆ.

ಸುಮಾರು ಹತ್ತು ವರ್ಷಗಳಿಂದ ಭಾರತ ಮತ್ತು ಪಾಕಿಸ್ತಾನಗಳ ತಿಕ್ಕಾಟಕ್ಕೆ ಕಾರಣೀಭೂತವಾದ ಕಾಶ್ಮೀರ ಮತ್ತು ಜಮ್ಮುಗಳ ಭವಿತವ್ಯವು ಇವೆರಡೇ ರಾಷ್ಟ್ರಗಳಿಂದ ನಿರ್ಣಯಿಸಲ್ಪಡಬೇಕಾದ ಕಾಲವೀಗ ಸನ್ನಿಹಿತವಾಗಿದೆ. ಈ ಬಗ್ಗೆ ಎರಡೂ ರಾಜ್ಯಗಳ ಮುಖ್ಯ ಮಂತ್ರಿಗಳಲ್ಲಿ ಲಂಡನಿನಲ್ಲಿ ಮಾತುಕತೆಗಳಾಗಿವೆ ಮತ್ತು ಇದೇ ತಿಂಗಳ ೨೫ನೇ ತಾರೀಕಿಗೆ ಆ ಇಬ್ಬರು ಹೊಣೆಗಾರ ವ್ಯಕ್ತಿಗಳೂ ಕರಾಚಿಯಲ್ಲಿ ಆ ಮಾತುಕತೆಗಳನ್ನು ಮುಂದರಿಸಲು ಕೂಡುವವರಿದ್ದಾರೆ. ಈ ಪ್ರಶ್ನೆಯನ್ನು ಮುಗಿಸಿಬಿಡಲು ಅವರು ನಿರ್ಧರಿಸಿರುವುದಾಗಿ ತಿಳಿಯುತ್ತಿದೆ. ಮತ್ತು ಅವರು ತಮ್ಮಲ್ಲಿಯ ಮತಭೇದಗಳನ್ನು ಕಡಿಮೆ ಮಾಡಿಕೊಂಡಂತೆ ಸಹ ತೋರುತ್ತಿದೆ. ಹೀಗೆ ಎರಡೂ ಪಕ್ಷಗಳು ಸಂಧಾನಕ್ಕೆ ಬರಬೇಕಾದರೆ ಇಬ್ಬರಿಗೂ ಸಮಾಧಾನವಾಗುವಂತಹ ಒಂದು ದಾರಿಯು ಬೇಕಾಗುತ್ತದೆ. ಆ ದಾರಿಯೆಂದರೆ ಆ ಸಂಸ್ಥಾನವನ್ನು ಎರಡೂ ರಾಜ್ಯಗಳು ಹಂಚಿಕೊಳ್ಳುವುದೇ ಅಲ್ಲದೆ ಮತ್ತೇನು ?

ಬಹಳ ದಿವಸಗಳಿಂದಲೂ ಈ ಪರಿಸ್ಥಿತಿ ಬರಬಹುದೆಂಬ ಸಂಶಯವು ಎಲ್ಲೆಡೆಯವರಲ್ಲಿ ಹುಟ್ಟಿಯೇ ಇತ್ತು. ಆಗ ಭಾರತದ ಬಗ್ಗೆ ಹೆಚ್ಚಿನ ಅಭಿಮಾನ ತೋರಿಸುವವರು ಈ ವಿಚಾರದ ಬಗ್ಗೆ ಬರೆದಿದ್ದು ಮಾತಾಡುತಿದ್ದರು. ಕಾಶ್ಮೀರದ ಮುಖ್ಯ ಮಂತ್ರಿಗಳಾದ ಶೇಕ್ ಅಬ್ದುಲ್ಲಾ ಅವರಂತೂ "ಕಾಶ್ಮೀರವನ್ನು ಎಂದಿಗೂ ವಿಭಾಗಿಸಗೊಡಲಿಕ್ಕಿಲ್ಲ" ಎಂದು ವೀರಾವೇಶದಿಂದ ಎಂದಿನಿಂದಲೂ ಗರ್ಜಿಸುತಿದ್ದಾರೆ.

ಆದರೆ ಪಂಡಿತ ಜವಾಹರಲಾಲ ಮತ್ತು ಪಾಕಿಸ್ತಾನದ ಮುಖ್ಯ ಮಂತ್ರಿ ಶ್ರೀ ಮಹಮ್ಮದ್ ಆಲಿ ಇವರಂತೂ ಈ ಮುಂದೆ ಹೇಳುವ ಯೋಜನೆಯ ಮೇರೆಗೆ ಈ ವಿಷಯದಲ್ಲಿ ಪರಸ್ಪರ ಒಡಂಬಡಿಕೆಗೆ ಬರಲು ಯತ್ನಿಸುತಿದ್ದಾರೆಂಬ ವದಂತಿ ಇದೆ.

ಆ ಯೋಜನೆಯನ್ನು ತಿಳಿದುಕೊಳ್ಳುವ ಮೊದಲು ಕಾಶ್ಮೀರದ ಸ್ಥಾನ, ಅದರ ವಿಭಾಗಗಳ ವಿವರಣೆ ಮತ್ತು ಜನಸಂಖ್ಯೆ ಮೊದಲಾದ ಸಂಗತಿಗಳ ಕಡೆಗಿಷ್ಟು ನೋಡೋಣ.

ಕಾಶ್ಮೀರ ಜಮ್ಮುಗಳು, ಭಾರತದ ತಲೆಯ ಮೇಲೆ ಪೂರ್ವ ಪಂಜಾಬಕ್ಕೆ ಹತ್ತಿ ಇವೆ. ಕಾಶ್ಮೀರದ ಉತ್ತರ ದಿಕ್ಕಿಗೆ ರಷ್ಯ, ಚೀನಗಳು ಹತ್ತಿವೆ. ಪೂರ್ವಕ್ಕೆ ಟಿಬೇಟಿದೆ. ಪಶ್ಚಿಮಕ್ಕೆ ಅಫಗಾನಿಸ್ತಾನ ಮತ್ತು ಪಾಕಿಸ್ತಾನಗಳಿವೆ. ಜಮ್ಮು ವಿಭಾಗವು ಕಾಶ್ಮೀರದ ನೈಋತ್ಯ (ದಕ್ಷಿಣ ಪಶ್ಚಿಮ) ದಿಕ್ಕಿಗೆ ಕೆಳಗೆ, ಪಶ್ಚಿಮ ಪಂಜಾಬ (ಪಾಕಿಸ್ತಾನ) ಕ್ಕೆ ಹತ್ತಿಕೊಂಡಿದೆ. ಕಾಶ್ಮೀರ ಮತ್ತು ಜಮ್ಮು ಎರಡೂಗಳಲ್ಲಿಯ ಒಟ್ಟು ಜನಸಂಖ್ಯೆಯು ೪೦ ಲಕ್ಷವಿದೆ.

ಸಂಧಾನಕ್ಕೆ ಬರುವ ಮಾರ್ಗವನ್ನು, ಈ ಪರಿಸ್ಥಿತಿಯಲ್ಲಿ ಹುಡುಕಿದುದೆಂದರೆ, ಉತ್ತರ ಪಶ್ಚಿಮ (ವಾಯವ್ಯ) ಗಳ ಮೂಲೆಯಲ್ಲಿ ಪಾಕಿಸ್ತಾನದ ಅಜಾದ್ ಕಾಶ್ಮೀರ (ಪಾಕಿಸ್ತಾನ ಸಂಸ್ಥೆಯು) ಹಿಡಿದುಕೊಂಡಿದ್ದ ಒಟ್ಟು ಕ್ಷೇತ್ರದ ಕಾಲುಭಾಗ ಪ್ರದೇಶವು ಪಾಕಿಸ್ತಾನಕ್ಕೆ ಹೋಗಬೇಕು. ಜಮ್ಮು ಮತ್ತು ಲಡಾಕ ಭಾಗಗಳು ಭಾರತಕ್ಕೆ ಕೊಡಲ್ಪಡಬೇಕು ಮತ್ತು ಕಾಶ್ಮೀರದ ಕಂದರದ ಭಾಗವು ಸ್ವತಂತ್ರವಾಗಿ ಉಳಿಯುವುದು. ಈ ರೀತಿಯ ಒಡಂಬಡಿಕೆಯ ತಳಹದಿಯು ರಚಿಸಲ್ಪಟ್ಟಿದೆ.

ಪಾಕಿಸ್ತಾನಕ್ಕೆ ಹೋಗುವ ಭಾಗದ ಜನಸಂಖ್ಯೆಯು, ಐದರಲ್ಲಿ ಒಂದು ಪಾಲು ಅಂದರೆ ಎಂಟು ಲಕ್ಷ ಆಗುವುದು. ಆ ಭಾಗದಲ್ಲಿ ಮುಸಲ್ಮಾನರೇ ಹೆಚ್ಚಾಗಿ ಇದ್ದು ನಾಳೆ ಮತಗಣನೆ ನಡೆದರೆ ಅವರೆಲ್ಲ ಪಾಕಿಸ್ತಾನದಲ್ಲಿ ಸೇರುವದಕ್ಕೇ ಅಭಿಪ್ರಾಯಪಡುವ ಸಂಭವವಿದೆ.

ಭಾರತಕ್ಕೆ ಬರಲಿರುವ ಜಮ್ಮುವಿನಲ್ಲಿ ಹಿಂದುಗಳೇ ಹೆಚ್ಚಾಗಿದ್ದಾರೆ. ೧೯೪೭ರಲ್ಲಿ ನಡೆದ ಜಾತೀಯ ಗಲಭೆಯಲ್ಲಿ ಇಲ್ಲಿಯ ಮುಸಲ್ಮಾನರೆಲ್ಲ ಪಾಕಿಸ್ತಾನಕ್ಕೆ ಅಂದರೆ ಅದಕ್ಕೆ ಹತ್ತಿಕೊಂಡಿದ್ದ ಪಶ್ಚಿಮ ಪಂಜಾಬ ಭಾಗಕ್ಕೆ ಓಡಿ ಹೋದರು. ಪೂರ್ವ ಪಂಜಾಬ ಭಾಗದಂತೆಯೇ ಜಮ್ಮು ಇದೆ. ಆದರೆ ಅದರ ಮತ್ತು ಪೂರ್ವ ಪಂಜಾಬ್ ಪ್ರಾಂತದ ನಡುವೆ ಗುಡ್ಡದ ಸಾಲು ಮಾತ್ರ ಇದೆ.

ಲಡಾಕ ಭಾಗವು, ಕಾಶ್ಮೀರದ ಪೂರ್ವ ಅಂಚಾಗಿದ್ದು ಅದಕ್ಕೆ ಮುಂದೆ ಟಿಬೇಟ್ ಹತ್ತಿಕೊಂಡಿದೆ. ಲಡಾಕದಲ್ಲಿ ಬುದ್ಧಧರ್ಮದ ಪ್ರಭಾವವಿದ್ದು ಅದರ ಸಂಬಂಧವು ಭಾರತೀಯ ಸಂಸ್ಕೃತಿಗೆ ಬಹಳ ಹಿಂದಿನ ಕಾಲದಿಂದ ಜೋಡಿಸಲ್ಪಟ್ಟಿದೆ. ಟಿಬೇಟಿನಲ್ಲಿ ಕಮ್ಯೂನಿಸ್ಟರು ಪ್ರವೇಶಮಾಡಿದ್ದು, ಅವರನ್ನು ಮುಂದೆ ಬಿಡದಂತೆ ನೋಡಲಿಕ್ಕೆ, ಈ ಭಾಗದ ಪ್ರಭುತ್ವದಿಂದ ಭಾರತವು ಹೆಚ್ಚು ಶಕ್ತವಾಗುವುದಿದೆ.

ನಡುವೆ ಸ್ವತಂತ್ರ ಭಾಗವಾಗಿ ಉಳಿಯುವ ಪ್ರದೇಶವು ೧೬ ಲಕ್ಷ ಜನಸಂಖ್ಯೆಯಿಂದ ಕೂಡಿದ್ದಾಗುವುದು. ಅದರಲ್ಲಿ ಒಂದು ಲಕ್ಷದಷ್ಟು ಮುಸಲ್ಮಾನರಿದ್ದಾರೆ. ಈ ಭಾಗದ ಸರಕಾರದೊಡನೆ ಪಾಕಿಸ್ತಾನ ಮತ್ತು ಭಾರತ ಸರಕಾರಗಳು ಒಡಂಬಡಿಕೆ ಮಾಡಿಕೊಂಡು ಅದರ ಸಂರಕ್ಷಣೆ ಮತ್ತು ಸಂಬಂಧಗಳನ್ನು ನಡೆಸಿ ಕೊಡಲು ಭಾರ ಹೊರುವವು.

ಇದರ ಮೇಲಿಂದ ಭಾರತಕ್ಕೆ ಬರುವ ಜಮ್ಮು ಮತ್ತು ಲಡಾಕ ಭಾಗಗಳ ಜನಸಂಖ್ಯೆ ೧೬ ಲಕ್ಷವಾಗುವುದೆಂಬುದು ಸ್ಪಷ್ಟವಿದೆ.

ಇದುವರೆಗೆ ನಡೆದು ಬಂದ ವಿಚಾರದಲ್ಲಿ, ಕಾಶ್ಮೀರ ಜಮ್ಮು ಜನರ ಮತಗಳನ್ನು ತೆಗೆದುಕೊಂಡು ಆ ಭಾಗಗಳು ಎತ್ತಕಡೆಗೆ ಹೋಗಬೇಕೆಂಬುದನ್ನು ನಿರ್ಧರಿಸಬೇಕು ಎಂಬ ಆಲೋಚನೆಯನ್ನು ಇಟ್ಟುಕೊಂಡಿದ್ದರು. ಆದರೆ ಅದು ಮಹಾ ತೊಡಕಿನ ದಾರಿಯಾಗಿದೆಯೆಂಬುದು ಕಂಡುಬಂದಿದೆ. ಅದರಿಂದ ಎರಡೂ ದೇಶಗಳಿಗೆ ಲಾಭವಿಲ್ಲ. ಆದರೆ ಹಾನಿಯು ಮಾತ್ರ ಕಟ್ಟಿಟ್ಟದ್ದು. ಮತಗಣನೆಯ ನಿರ್ಣಯವು ಏನೇ ಆದರೂ ಅದರ ಬಗ್ಗೆ ಎರಡೂ ಭಾಗಗಳು ಜಗಳ ತೆಗೆಯದೆ ಇರಲಾರವು. ಮತ್ತು ಅಲ್ಲಿಯ ಜನತೆಯಲ್ಲಿ ಕೂಡ ಅದರ ಪರಿಣಾಮದಿಂದ ಅನೇಕ ತರಹದ ವಿತುಷ್ಟಿಯು ಹುಟ್ಟದೆ ಇರಲಾರದು.

ಆ ಪರಿಸ್ಥಿತಿಗಿಂತ ಈ ವ್ಯವಸ್ಥೆಯೇ ಹೆಚ್ಚು ಲಾಭದಾಯಕವೆಂಬ ನಿರ್ಧಾರಕ್ಕೆ ಎರಡೂ ಭಾಗಗಳು ಬಂದಂತೆ ತೋರುತ್ತಿದೆ. ಅಷ್ಟೇ ಅಲ್ಲದೆ ಅಮೇರಿಕೆಯ ವಿದೇಶ ಮಂತ್ರಿಗಳಾದ ಶ್ರೀ ಜಾನ್ ಫಾಸ್ಟರ ಡಲೇಸರು ಮೊನ್ನೆ ಭಾರತ ಪಾಕಿಸ್ತಾನಗಳಿಗೆ ಭೇಟಿ ಕೊಟ್ಟಾಗ್ಗೆ, ಮೇಲೆ ಹೇಳಿದ ವ್ಯವಸ್ಥೆಯ ಮೂಲಕ, ಬಹು ದಿವಸಗಳಿಂದ ನಡೆದು ಬಂದ ಈ ಜಗಳವನ್ನು ಎರಡೂ ರಾಜ್ಯಗಳು ಬಗೆಹರಿಸಿಕೊಳ್ಳುವದು ಹಿತವಾದದ್ದು ಎಂದು ಹೇಳಿದರೆಂದೂ ತಿಳಿದು ಬರುತ್ತದೆ.

ಏನೇ ಆದರೂ ಆಯಾ ಭಾಗದಲ್ಲಿರುವ ವಿಧರ್ಮೀಯರು ಅಸಂತುಷ್ಟರಾಗುವುದು ಖಂಡಿತ. ಅದನ್ನು ಆಯಾ ಸರಕಾರಗಳು ತಮ್ಮ ಸಮಂಜಸ ಮತ್ತು ಸಮಾನ ದೃಷ್ಟಿಯ ಧೋರಣೆಯಿಂದ ಕಡಿಮೆ ಮಾಡುವುದೊಂದೇ ಮಾರ್ಗವು ಉಳಿಯುತ್ತದೆ.

ಶೇಕ್ ಅಬ್ದುಲ್ಲಾ ಇವರ ಮಾತೊಂದು ಇದರ ನಡುವೆ ಬರುತ್ತದೆ. ಅವರು ಕಾಶ್ಮೀರ ಜಮ್ಮುಗಳನ್ನು ಯಾವುದೇ ರೀತಿಯಿಂದ ವಿಭಾಗ ಮಾಡಲು ಕೊಡಲಿಕ್ಕಿಲ್ಲವೆಂದು ಸಾರುತ್ತಾ ಬಂದಿದ್ದಾರೆ. ನಾಳೆ ಪಾಕಿಸ್ತಾನ ಮತ್ತು ಭಾರತಗಳೆರಡೂ ಅವರನ್ನು ನಿಯಂತ್ರಿಸುವ ಸರತಿ ಬರದೆ ಇರಲಾರದು.

ವಿಭಾಗವಾದರೆ ಶೇಕ್ ಅಬ್ದುಲ್ಲಾ ಇವರ ಸ್ಥಾನವೇ ಮಾಯವಾಗಿ ಹೋಗುತ್ತದೆ. ಅದಕ್ಕಾಗಿ ಅವರು ಅದನ್ನು ವಿರೋಧಿಸುವುದು ಸ್ವಾಭಾವಿಕವಾಗಿಯೇ ಇದೆ.

ಆದರೆ ಶೇಕ್ ಅಬ್ದುಲ್ಲಾ ಇವರ ಬಗ್ಗೆ ಪಾಕಿಸ್ತಾನ ಮತ್ತು ಭಾರತ ಇವೆರಡೂ ರಾಜ್ಯಗಳ ಆತ್ಮೀಯತೆಯು ಉಳಿದಿಲ್ಲ. ತಾವು ಮುಸಲ್ಮಾನರೆಂಬ ಕಾರಣದಿಂದ ಅವರು ಪಾಕಿಸ್ತಾನದ ಕಡೆಗೂ ಒಲಿಯುತ್ತಿಲ್ಲ, ಭಾರತವು ಸಹಾಯ ಮಾಡಿದೆ ಎಂದು ಅವರ ಕಡೆಗೂ ಅಭಿಮಾನವನ್ನಿಟ್ಟುಕೊಂಡಿಲ್ಲ. ಎರಡೂ ಭಾಗಗಳಿಗೂ ಕೈಕೊಟ್ಟು ತಮ್ಮ ಪ್ರಾಂತವನ್ನು ಸ್ವತಂತ್ರಗೊಳಿಸಿಕೊಂಡು ಅದನ್ನು ಆಳಬೇಕೆಂದು ಅವರು ಹಾತೊರೆಯುತಿದ್ದಾರೆ.

ಪಾಕಿಸ್ತಾನವಂತೂ ಶೇಕ್ ಅಬ್ದುಲ್ಲಾರವರ ಬಗ್ಗೆ ಏನೂ ಮಾಡುವಂತಿಲ್ಲ. ಹೇಳಿ ಕೇಳಿ ಅವರು ಆ ರಾಜ್ಯವನ್ನು ವಿರೋಧಿಸುತ್ತಲೇ ಇದ್ದಾರೆ. ಬಹಳವಾದರೆ ಭಾರತವು ಶೇಕ್ ಅಬ್ದುಲ್ಲಾರವರ ಬಗ್ಗೆ ಸಿಟ್ಟಿಗೇಳಬೇಕಾಗಿತ್ತು. ಅದು ರಾಜಕಾರಣ ನಿಪುಣರಿಗೆ ಶೋಭಿಸುವ ಮಾತಾಗುವುದಿಲ್ಲ. ಇಂತಹ ಪ್ರಸಂಗಗಳಲ್ಲಿ ಸಿಟ್ಟಿನಿಂದ ಪ್ರಯೋಜನವಾಗುವುದಿಲ್ಲ. ನಾಳೆ ನಮಗೇ ಕೂಡಬೇಕೆಂಬ ಗೊತ್ತುಮಾಡಿಕೊಂಡು ಭಾರತವು ಕಾಶ್ಮೀರಕ್ಕೆ ಸಹಾಯ ಮಾಡಿಲ್ಲ. ಅಲ್ಲಿಯ ಜನರು ಹೇಗೆ ಅಭಿಪ್ರಾಯಪಡುವರೋ ಅದರಂತೆ ಆಗಲಿ ಎಂಬ ಧೋರಣೆಯನ್ನು ಭಾರತವು ಇಟ್ಟುಕೊಂಡಿದೆ. ಆದರೆ ಶೇಕ್ ಅಬ್ದುಲ್ಲಾರವರ ಅನಿಶ್ಚಿತ ಧೋರಣದ ಮೂಲಕ ಭಾರತವು ಬೇಸತ್ತಿದೆ, ಎಂಬ ಬಗ್ಗೆ ಯಾವ ಸಂಶಯವೂ ಇಲ್ಲ. ಮೇಲೆ ಹೇಳಿದ ವ್ಯವಸ್ಥೆಯು ಕಾರ್ಯದಲ್ಲಿ ಬಂದರೆ ಶೇಕ್ ಅಬ್ದುಲ್ಲಾರವರ ಕನಸು ತನ್ನಿಂದ ತಾನೆ ಮಾಯವಾಗುವ ಪ್ರಸಂಗವು ಬರುವುದಿದೆ.

ಒಂದು ವೇಳೆ ನಾಳಿನ ವ್ಯವಸ್ಥೆಯಲ್ಲಿ ಸ್ವತಂತ್ರವಾಗಿ ಉಳಿಯುವ ಕಾಶ್ಮೀರ ಕಂದರವನ್ನೊಳಗೊಂಡ ಭಾಗದ ಆಡಳಿತವನ್ನು ಶೇಕ್ ಅಬ್ದುಲ್ಲಾರವರ ಕೈಯಲ್ಲಿ ಕೊಡಬಹುದೇನೋ ನೋಡಬೇಕು.

ಇನ್ನು ಉಳಿದವರ ವಿಚಾರ. ಕಾಶ್ಮೀರವನ್ನು ವಿಭಾಗಿಸುವ ವಿಚಾರವು ಭಾರತದಲ್ಲಿ ಅನೇಕರಿಗೆ ಸೇರಲಿಕ್ಕಿಲ್ಲ. ಕಾಂಗ್ರೆಸಿನೇತರ ಪಕ್ಷಗಳಂತೂ ಆ ಬಗ್ಗೆ ಕೂಗಾಟವನ್ನು ಎಬ್ಬಿಸದೆ ಇರಲಾರವು. ಪ್ರಜಾ ಸೋಶಲಿಸ್ಟ ಪಕ್ಷದ ಕೆಲವು ಮುಖಂಡರು ಪಂಡಿತ ಜವಾಹರಲಾಲರನ್ನು ಬೆಟ್ಟಿಯಾಗಿ ಕಾಶ್ಮೀರದ ಬಗ್ಗೆ ಮೊದಲಾಗಿ ಮಾತಾಡಿದರೆಂದು ತಿಳಿದಿದೆ. ಆಗ ಅವರಲ್ಲಿ ಏನು ಮಾತು ನಡೆಯಿತೋ ಸ್ಪಷ್ಟವಾಗಿಲ್ಲ. ಮೇಲೆ ಹೇಳಿದ ವಿಭಾಗೀಕರಣದ ವಿಷಯವು ಅವರ ಎದುರಿಗೆ ಬಂದಿದ್ದರೆ ಅವರು ಸುಮ್ಮನಿದ್ದುದೇ ಆಶ್ಚರ್ಯ.

ಆದರೆ ಮಾಡುವುದೇನು ? ಎಲ್ಲ ಕಾಶ್ಮೀರವೂ ನಮಗೇ ಉಳಿದಿದ್ದರೆ ಬಹಳ ಸಂತೋಷವೇ ಆಗುತಿತ್ತು. ಆದರೆ ನಮ್ಮ ಮನಸ್ಸಿನಂತೆ ಎಲ್ಲವೂ ನಡೆಯುವುದು ಕಠಿಣ. ಪ್ರಸಂಗ ಬಂದಂತೆ ಯುಕ್ತಿ ಹುಡುಕಿ ಪರಿಸ್ಥಿತಿಗೆ ತಕ್ಕಂತೆ ನಮಗೆ ಹೆಚ್ಚಿನ ಲಾಭವಾಗುವಂತೆ ಮಾಡಿಕೊಳ್ಳುವದೇ ಜಾಣತನ.

ಪಂಡಿತ ಜವಾಹರಲಾಲರಿಗೆ, ಇಡೀ ಕಾಶ್ಮೀರವು ಭಾರತಕ್ಕೆ ಬರುವುದು ಬೇಡವಾಗಿದೆಯೆಂದು ಯಾರೂ ತಿಳಿಯಬಾರದು. ಅವರು ಶೇಕ್ ಅಬ್ದುಲ್ಲಾರವರ ಬಗ್ಗೆ ಹೆಚ್ಚಿನ ಆತ್ಮೀಯತೆ ವಹಿಸಿ ಭಾರತಕ್ಕೆ ಹಾನಿ ಮಾಡುತಿದ್ದಾರೆ ಎಂದು ಹೇಳುವ ಮಾತಿನಲ್ಲಿ ಏನೂ ಅರ್ಥವಿಲ್ಲ. ಹೊಣೆಗಾರ ಸ್ಥಳದಲ್ಲಿ ಇರುವ ಮನುಷ್ಯನು ಮಾಡಬೇಕಾದ ಕಾರ್ಯದಲ್ಲಿ ಪಂಡಿತ ಜವಾಹರಲಾಲರು ಎಳ್ಳಷ್ಟು ಹಿಂದೆ ಬೀಳರು ಎಂಬ ವಿಷಯದಲ್ಲಿ ಸಿದ್ಧ ಮಾಡುವ ಮಾತೇನೂ ಇರುವುದಿಲ್ಲ.

ಒಟ್ಟಿನಲ್ಲಿ ಭಾರತವು ಕಾಶ್ಮೀರದ ಬಗ್ಗೆ ಈ ಹೊಸ ಪರಿಸ್ಥಿತಿಯ ದೃಷ್ಟಿಯಿಂದ ವಿಚಾರ ಮಾಡುವ ಪ್ರಸಂಗ ಬಂದಿದೆ. ಆ ಬಗ್ಗೆ ನಾವು ವಿವಂಚನೆಗೆ ಎಡೆಗೊಡದೆ, ರಾಜಕಾರಣದ ಹೊಯಿಲುಗಳ ಗುರುತು ಹಿಡಿದು, ನಡೆಯುತ್ತಿರುವ ಘಟನೆಗಳನ್ನು ವಿಮರ್ಶಿಸಲು ಕಲಿಯಬೇಕಾಗಿದೆ. ಇದೂ ಕೂಡ ಪ್ರಜೆಗಳು ತಮ್ಮ ತಮ್ಮ ಸರಕಾರಕ್ಕೆ ನೀಡುವ ಮೊತ್ತ ಸಹಾಯವೇ ಆಗಿದೆ.

'ಜೈಹಿಂದ'

॥ ಸರಕಾರ ಮತ್ತು ಜನತೆ ॥

ಇಂದಿಗೆ ಸುಮಾರು ಆರು ವರ್ಷಗಳ ಹಿಂದೆಯೂ ಭಾರತದ ಜನತೆ ಈಗಿನದೇ—ಆದರೆ ಸರಕಾರ ಮಾತ್ರ ಪರಕೀಯರ ಕೈಯಲ್ಲಿದ್ದಿತು. ಬ್ರಿಟಿಷರು ರಾಜ್ಯಾಧಿಕಾರದ ಸೂತ್ರವನ್ನು ತಮ್ಮ ಕೈಯಲ್ಲಿ ಇಟ್ಟುಕೊಂಡಿದ್ದರು, ಮತ್ತು ಭಾರತೀಯ ಜನತೆಯ ಮೇಲೆ ಶಾಸನ ನಡೆಸುತಿದ್ದರು. ಈ ಶಾಸನಕ್ಕೆ ಜನತೆಯ ಸಮ್ಮತಿ ಇದ್ದಿತೊ? ನಿಶ್ಚಯವಾಗಿಯೂ ಇರಲಿಲ್ಲ. ಜನತೆ ಮತ್ತು ಜನಸಾಮಾನ್ಯರ ಏಕಮೇವಾದ್ವಿತೀಯವಾದ ಪ್ರತಿನಿಧಿ ಸಂಸ್ಥೆ ಕಾಂಗ್ರೆಸು ಮಹಾತ್ಮಾ ಗಾಂಧೀಯವರ ನೇತೃತ್ವದಲ್ಲಿ ಸ್ವಾತಂತ್ರ್ಯದ ಚಳುವಳಿಯನ್ನು ನಡೆಸಿತು. ಬ್ರಿಟಿಷ್ ಆಡಳಿತದಿಂದ ಸಾವಿರ ಪಾಲು ಒಳ್ಳೆಯದು ಉಂಟಾಗುತಿದ್ದರೂ—ಅದನ್ನು ಜನತೆ ಧಿಕ್ಕರಿಸುತಿತ್ತು. ಏಕೆಂದರೆ, ಜನತೆಯ ಇಚ್ಛೆಗೆ ವಿರುದ್ಧವಾಗಿ ಸರಕಾರ ತನ್ನ ಅಧಿಕಾರವನ್ನು ಚಲಾಯಿಸುತಿತ್ತು. ಹೀಗೆ ಜನತೆಯನ್ನು ಮೀರಿ ನಡೆಯುವ ಸರಕಾರಕ್ಕೆ ಅಳಿವೇ ನಿಶ್ಚಯ ಹೊರತು ಉಳಿಗಾಲವಿಲ್ಲ. ಕೊನೆಗೆ ಆದುದಾದರೂ ಹಾಗೆಯೇ—ಬ್ರಿಟಿಷರಿಗೆ ಭಾರತದಿಂದ ಸ್ನೇಹಪೂರ್ವಕವಾಗಿ ಕಾಲ್ತೆಗೆಯುವುದು ಅನಿವಾರ್ಯವೆನಿಸಿತು. ಜನತೆಯ ಕೃಪಾಛತ್ರದಲ್ಲಿ ಸರಕಾರವಿರಬೇಕೇ ಹೊರತು, ಸರಕಾರ ಜನತೆಯಿಂದ ಪ್ರತ್ಯೇಕಗೊಂಡಲ್ಲಿ, ತನ್ನ ಹಿರಿಮೆ ಮತ್ತು ಉನ್ನತ ಸ್ಥಾನದ ಅಹಂಕಾರದಿಂದ ಜನತೆಯನ್ನು ಮೆಟ್ಟಿದಲ್ಲಿ—ಸರಕಾರ ಕ್ಷಣಕಾಲವೂ ಉಳಿಯದು.

ಭಾರತದ ಆಂದೋಲನ ಶಾಂತಿಪೂರ್ವಕ ನಡೆದಿದ್ದರೆ—ಈಗ ಕಂಬೋಡಿಯೊ, ವೀಟನಾಮು ಇತ್ಯಾದಿ ದೇಶಗಳಲ್ಲಿ, ಅದು ಸರಕಾರದ ವಿರುದ್ಧ ಜನತೆಯ ಯುದ್ಧದ ರೂಪವನ್ನು ತಳೆದಿರುತ್ತದೆ. ಈಜಿಪ್ಟದಲ್ಲಿ ಕಳೆದ ವರ್ಷ ಸರಕಾರವನ್ನು ಉರುಳಿಸಿದ್ದಲ್ಲದೆ, ಈ ವರ್ಷ ಅರಸೊತ್ತಿಗೆಯನ್ನು ನಿರ್ಮೂಲಿಸಿ, ನಿರಂಕುಶಾಧಿಕಾರವನ್ನು ಕೊನೆಗೊಳಿಸಲಾಗಿದೆ. ಇರಾಣಿನಂಥ ಮಧ್ಯಪೂರ್ವದ ರಾಷ್ಟ್ರದಲ್ಲಿ ಸಹ ಇಂದು ಜನತೆ ಹಾಗೂ ಸರಕಾರದ ನಡುವೆ ಘರ್ಷಣೆಯುಂಟಾಗಿದೆ. ಮುಸಾದಿಕರ ಸರಕಾರಕ್ಕೆ ಒಮ್ಮೆ ಬೆಂಬಲವನ್ನು ಇನ್ನೊಮ್ಮೆ ವಿರೋಧವನ್ನೂ ಅಲ್ಲಿಯ ಜನತೆ ಪ್ರದರ್ಶಿಸುತ್ತಿರುವುದನ್ನು ನೋಡುವಾಗ—ಇರಾಣದ ಸರಕಾರ ಗಡಗಡನೆ ನಡಗುತ್ತಿರುವಂತೆ ಭಾಸವಾಗುತ್ತದೆ. ದಕ್ಷಿಣ ಆಫ್ರಿಕಾದಲ್ಲಂತೂ ವರ್ಣೀಯರನ್ನು ಸದೆಬಡಿಯಲು ಅಲ್ಲಿಯ ಸರಕಾರ ನಡೆಸುತ್ತಿರುವ ದಬ್ಬಾಳಿಕೆ, ಜನತೆಯ ಕೆಚ್ಚು ಮತ್ತು ಸಾಮರ್ಥ್ಯಕ್ಕೊಂದು ರಣಾಹ್ವಾನವನ್ನು ನೀಡುತ್ತಿದೆ. ಇಲ್ಲೆಲ್ಲ ಜನತೆಯನ್ನು ದಮನಿಸುವ ಸರಕಾರದ ಕುಟಿಲ ನೀತಿ ತಾಂಡವವಾಡುತ್ತಿದೆ. ಹಾಗೆಂದು ಇತಿಹಾಸ ನಮಗೆ ಏನು ಹೇಳುತ್ತದೆ? ಜನತೆಯನ್ನು ಬಿಟ್ಟು ತಾನೇ ತಾನಾಗಿ ನಿಂತ ಸರಕಾರವು ಇಂದಿಲ್ಲ ನಾಳೆ ಉರುಳಿ ಬೀಳುತ್ತದೆಂಬುದು ಸ್ವಯಂಸಿದ್ಧ. ಜನತೆಯ ಹೃದಯ ಸಿಂಹಾಸನದಲ್ಲಿ ಸರಕಾರ ನೆಲೆಗೊಳ್ಳಬೇಕಲ್ಲದೆ, ದರ್ಪ ಅಹಂಕಾರಗಳ, ಸೈನ್ಯ ಹಾಗೂ ಬಾಂಬುಗಳ ಬಲದಿಂದ ಸರಕಾರ ಸುರಕ್ಷಿತವಾಗಲಾರದು.

ದೇವರ ದಯೆಯಿಂದ ಭಾರತಕ್ಕೆ ಜನತೆಯ ಇಚ್ಛೆಯನ್ನು ಪ್ರತಿನಿಧೀಕರಿಸುವ ಸರಕಾರವೇ ದೊರೆತಿದೆ. ಕಳೆದ ಮಹಾ ಚುನಾವಣೆಗಳು ಜನತೆ ಏನು ಬಯಸುತ್ತದೆಂಬುದನ್ನು ಸ್ಪಷ್ಟವಾಗಿ ತಿಳಿಯುವ ಅಪೂರ್ವ ಸಾಧನವಾಗಿದ್ದಿತು. ಪ್ರಜಾಪ್ರಭುತ್ವ ಪದ್ಧತಿಯನ್ನು ಭಾರತವು ಅಂಗೀಕರಿಸಿರುವುದರಿಂದ, ಜನತೆ ತನಗೆ ಹಿತಕಂಡ ಪಕ್ಷಕ್ಕೆ ಸರಕಾರವನ್ನು ನಡೆಸುವ ಗೌರವ ಹಾಗೂ ಹೊಣೆಗಾರಿಕೆಯನ್ನು ಕೊಡಲು ಅನುಕೂಲವುಂಟು. ಜನತೆಯು ತನಗೆ ಹಿತವುಂಟುಮಾಡುವ ಸರಕಾರವನ್ನು ಎಂದಿಗೂ ಕೈ ಬಿಡುವುದಿಲ್ಲ. ಅದನ್ನು ಮೆಚ್ಚುತ್ತದೆ; ಮತ್ತು ಆದರಿಸುತ್ತದೆ. ಅದೇ ಕಾಲಕ್ಕೆ ತನಗೆ ಅಹಿತವುಂಟು ಮಾಡಿದ ಸರಕಾರವನ್ನು ಕಿತ್ತೆಸೆದು, ಎಡಗಾಲಿಂದ ಒದೆಯುತ್ತದೆ!

ಸರಕಾರದ ಜವಾಬ್ದಾರಿ ಸ್ಥಾನಗಳಲ್ಲಿರುವ ವ್ಯಕ್ತಿಗಳು ಜನತೆಯ ಇಚ್ಛೆ, ಅನಿಚ್ಛೆಗಳನ್ನು ತಿಳಿದುಕೊಳ್ಳುವುದರಲ್ಲಿ ಬುದ್ಧಿವಂತರಿದ್ದರೆ, ಮತ್ತು ಜನತೆಯ ಒಲವಿನ ಓಘವನ್ನು ಮನಗಂಡು ಅದರಂತೆ ಪ್ರವರ್ತಿಸಿದರೆ, ಆಗ ರಾಷ್ಟ್ರ ಕಲ್ಯಾಣ ಕೈಗೂಡುತ್ತದೆ. ಪ್ರತಿಯಾಗಿ ಸೋಮಾರಿಗಳೂ ಜನಪೀಡಿತರೂ ಆಗಿ ಪರಿಣಮಿಸಿದರೆ, ಜನತೆಯ ಸಾಮೂಹಿಕ ಭರ್ತ್ಸನೆ ಮತ್ತು ಕ್ರೋಧಕ್ಕೆ ಅವರು ಬಲಿಯಾಗಬೇಕಾಗುವುದು. ಕೇವಲ ನಿರಂಕುಶಾಧಿಕಾರವುಳ್ಳ ರಾಜ್ಯದಲ್ಲಿಯ ಅವಸ್ಥೆಯೇ ಈ ತೆರನಾಗಿದೆ ಎಂದ ಮೇಲೆ—ಪ್ರಜಾಪ್ರಭುತ್ವ ಪದ್ಧತಿ ಜಾರಿಯಲ್ಲಿರುವ ದೇಶದಲ್ಲಿ ಸರಕಾರ ಮತ್ತು ಜನತೆಯ ಸಂಬಂಧ ಬಹಳ ನಾಜೂಕಾಗಿರಬೇಕು ಎನ್ನುವುದು ಸ್ವಯಂವ್ಯಕ್ತ. ಪ್ರಜಾಪ್ರಭುತ್ವ ಪದ್ಧತಿಯಂತೆ ಮೀನು—ನೀರುಗಳ ಸಂಬಂಧವೇ ಸರಕಾರ ಮತ್ತು ಜನತೆಯ ನಡುವೆ ಇರುವುದವಶ್ಯ. ಒಂದು ಸರಕಾರ ಉರುಳಿ, ಇನ್ನೊಂದು ತಲೆ ಎತ್ತುತ್ತದೆ; ಆದರೆ ಜನತೆ ಮೊದಲಿನದೇ. ಸರಕಾರಕ್ಕೆ ಚ್ಯುತಿ ಬಂದೀತು ಆದರೆ ಜನತೆ ಅಳಿವು ಕಾಣದು.

ಈ ರಹಸ್ಯವನ್ನು ತಿಳಿದುಕೊಂಡೇ ನಮ್ಮ ಸರಕಾರವು ರಾಷ್ಟ್ರೀಯ ಅಭಿವೃದ್ಧಿ ಮುಂತಾದ ಯೋಜನೆಗಳಲ್ಲಿ ಸಾಕಷ್ಟು ಸರಕಾರೀ ನಿಯಂತ್ರಣವನ್ನು ಹೇರಿದಾಗ್ಯೂ ಜನತೆಯ ಸರಕಾರಕ್ಕೆ ವಿಶೇಷ ಮಾರ್ಗವನ್ನು ಕಲ್ಪಿಸಿಕೊಟ್ಟಿರುತ್ತದೆ. ಸರಕಾರದ ಅಭಿಪ್ರಾಯವು ಜನತೆಯ ಸಾಮಾನ್ಯಾಭಿಪ್ರಾಯವೆನ್ನುವಂತೆ, ಜನಪ್ರತಿನಿಧಿಗಳ ಸಮ್ಮತಿ ಮುದ್ರೆ ಪಂಚವಾರ್ಷಿಕ ಯೋಜನೆಗೆ ಬಿದ್ದಿರುತ್ತದೆ. ಜನತೆ ನೇರಾಗಿ ನೆರವಾಗಬಲ್ಲ ವಿಧಾನವೇನೆಂಬುದನ್ನು ಮಾತ್ರ ಅದು ತಿಳಿದಿರುವಂತೆ ಕಾಣುವುದಿಲ್ಲ. ಇದನ್ನು ತಿಳಿಯಪಡಿಸುವುದಕ್ಕೆ ಸರಕಾರೀ ಅಧಿಕಾರಿಗಳು ಪ್ರಯತ್ನ ಪಡುತ್ತಿರುವರು. ಹಾಗೆ ಮಾಡುವಾಗ, ಅವರು ದರ್ಪ ಹಾಗೂ ತಾವು ಮೇಲೆನ್ನುವ ಅಹಂಕಾರವನ್ನು ತಿಲಾಂಶವೂ ತೋರಿಸಲಾಗದೆಂದು ಯೋಜನಾ ಆಯೋಗ ಅಪೇಕ್ಷಿಸುತ್ತದೆ. ಏಕೆಂದರೆ ಜನತೆಯ ಸಮ್ಮತಿ—ಅಥವಾ ಅಸಮ್ಮತಿಯನ್ನು ಉಪೇಕ್ಷೆಯಿಂದ ಕಾಣುವ ಕಾಲ ಎಂದೋ ಸಂದು ಹೋಗಿದೆ. ಸರಕಾರ ತನಗೆ ಖುಶಿ ತೋರಿದಂತೆ ವರ್ತಿಸುವ ಕಾಲ ಇದಲ್ಲ. ಜನತೆಯ ಮನವೊಲಿಸಿಕೊಂಡರೆ ಮಾತ್ರ ಸರಕಾರ ಮತ್ತು ರಾಜ್ಯಾಧಿಕಾರಿಗಳು ತಮ್ಮ ಕರ್ತವ್ಯವನ್ನು ನಿರ್ವಹಿಸಲು ಇಂದು ಸಾಧ್ಯವುಂಟೇ ಹೊರತು—ಅನ್ಯಥಾ ಅವರು ಸ್ಥಾನಭ್ರಷ್ಟರಾಗಬೇಕಾಗುವುದು. ಜನತೆಯೇ ಸ್ವಾಮಿ; ಸರಕಾರ ಅದರ ಸೇವಕನೆಂಬುದು ಪ್ರಜಾಪ್ರಭುತ್ವದ ಪಲ್ಲವಿ. ಇದನ್ನು ಸರಕಾರೀ ಅಧಿಕಾರಿಗಳು ಅರಿತುಕೊಂಡು ವಿನಯಶೀಲರಾಗಿ ಸಹೃದಯತೆಯಿಂದ ನಡೆದುಕೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚನೆ ಕೊಡುವುದಕ್ಕೆ ಯೋಜನಾ ಆಯೋಗ ಮುಂದೆ ಬಂದಿದೆ. ಮಾತ್ರವಲ್ಲ—ಇಡೀ ಆಡಳಿತ ಘಟಕವನ್ನು ಪುನಃ ವ್ಯವಸ್ಥೆಗೆ ಗುರಿಮಾಡುವ ವಿಚಾರವೂ ನಡೆದಿದೆ.

ಹೀಗೆಂದ ಮಾತ್ರಕ್ಕೆ ಜನತೆ ಮನಬಂದಂತೆ ಸರಕಾರವನ್ನು ಕುಣಿಸಬಹುದೆಂದು ತಿಳಿಯಲಾಗದು. ಹಾಗೆ ಕುಣಿಸುವ ಶಕ್ತಿ ಸಾಮರ್ಥ್ಯ ನಿಜಕ್ಕೂ ಜನತೆಗುಂಟು. ೧೮೫೭ ರಲ್ಲಿ ಭಾರತದಲ್ಲಿ ನಡೆದ ಸಿಪಾಯಿ ದಂಗೆಯನ್ನು ಸ್ವಾತಂತ್ರ್ಯಾಂದೋಲನದ ಪ್ರಥಮ ಹೋರಾಟವೆಂದು ಕರೆಯುವ ನಮಗೆ ಭಾರತೀಯರು ಕುರಿಗಳಲ್ಲ—ಹೇಡಿಗಳಲ್ಲ ಎನ್ನುವ ಹೆಮ್ಮೆಯುಂಟು. ಸರಕಾರದ ವಿರುದ್ಧ ಜನಮತವನ್ನು ಸಂಘಟಿಸುವ ಅಸಾಧಾರಣ ಕಾರ್ಯವನ್ನು ಅಂದಿನ ಕೆಲವು ಜನತಾಧುರೀಣರು ಕೈ ಗೂಡಿಸಿದ್ದರು. ಆಗ ಎಲ್ಲಿಯ ವರೆಗೆ ಜನತೆಯ ಬೆಂಬಲ ಪಡೆಯಲು ಯತ್ನಿಸಿದ್ದರೆಂದರೆ—ಝಾನ್ಸಿಯ ರಾಣಿ ಲಕ್ಷ್ಮೀ ಬಾಯಿಯು ಜಗನ್ನಾಥಪುರಿಯ ಪಂಡರೊಬ್ಬರಿಗೆ ಕಾಗದ ಬರೆದು, ತೀರ್ಥಕ್ಷೇತ್ರಕ್ಕೆ ಬರುವ ಯಾತ್ರಾರ್ಥಿಗಳಲ್ಲಿ ಬ್ರಿಟಿಷರ ವಿರುದ್ಧ ಭಾವನೆಯನ್ನು ಪ್ರಚೋದಿಸಲು ಈ ಪಂಡರು ನೆರವಾಗಬೇಕೆಂದು ಕೇಳಿದ್ದಳು. ಜನತೆಯ ಅಭಿಪ್ರಾಯವನ್ನು ರೂಪಿಸುವಲ್ಲಿ ಮತ್ತು ಅವರಿಗೆ ಮಾರ್ಗದರ್ಶನ ಮಾಡುವಲ್ಲಿ ಆ ಕಾಲದ ಪಂಡರ ವರ್ಚಸ್ಸು ಗಣನೀಯವಾಗಿದ್ದಿತು. ಆದುದರಿಂದ ಜನತೆಯನ್ನು ಸದೆಬಡಿಯುವ ಸರಕಾರವಿದ್ದರೆ ಅದನ್ನು ನಿರ್ಮೂಲಿಸುವುದು ದೊಡ್ಡ ಮಾತಲ್ಲ. ಆದರೆ ಭಾರತದಲ್ಲಿ ಪರಿಸ್ಥಿತಿ ಹೇಗಿದೆ—ಜನತೆ ಮತ್ತು ಸರಕಾರವು ಒಂದೇ ನಾಣ್ಯದ ಎರಡು ಮುಖಗಳಂತೆ ಕೆಲಸ ಮಾಡಬೇಕು.

ನೀರು ಅನೇಕ ಕಾರಣಗಳಿಂದ ಹೊಲಸಾಗಿ ನಾರುತ್ತದೆ; ಪಾಚಿ ಹಾಗು ಹುಲ್ಲುಕಡ್ಡಿಗಳಿಂದ ತನ್ನ ನೈರ್ಮಲ್ಯವನ್ನು ಕಳೆದುಕೊಳ್ಳುತ್ತದೆ. ಅಂಥಾ ಕಾಲದಲ್ಲಿ ಮೀನು ಇವೆಲ್ಲ ಕಶ್ಮಲಗಳನ್ನು ದೂರೀಕರಿಸಲು ತುಂಬ ನೆರವಾಗುತ್ತದೆ. ಮೀನು ಆಗ ನೀರಿನ ಪರಮ ಮಿತ್ರ, ನೀರನ್ನು ಶುದ್ಧೀಕರಿಸುವ ಸಾಧನ. ಭಾರತದಲ್ಲಿ ಇಂದು ಸ್ಥಾಪಿಸಲ್ಪಟ್ಟಿರುವ ಸರಕಾರವು ಜನತೆಯಲ್ಲಿರುವ ಜಡತ್ವವನ್ನು ಕಳೆಯಲು ಪ್ರಯತ್ನಶೀಲವಾಗಿದೆ; ಆಲಸಿ ಹಾಗೂ ಸೋಮಾರಿ ಜನಾಂಗದ ಸ್ಥಾನದಲ್ಲಿ ಲವಲವಿಕೆಯಿಂದ ತುಂಬಿದ, ಸತತೋತ್ಸಾಹ ಪೂರ್ಣವಾದ, ಚೈತನ್ಯದಿಂದ ತುಳುಕಾಡುವ ನೂತನ ಜನಾಂಗವನ್ನು ನಿರ್ಮಿಸಿ, ಪ್ರತಿಷ್ಠಾಪಿಸುವ ಹಂಬಲ ನಮ್ಮ ಸರಕಾರಕ್ಕೆ ಬೇಕು. ಸ್ವಾದಿಷ್ಟವಾದ ನಿರ್ಮಲೋದಕವನ್ನು ಭಾರತದಲ್ಲಿ ನೆಲೆಗೊಳಿಸಲು ಸರಕಾರ ಮೀನಿನೋಪಾದಿಯಲ್ಲಿ ಪರಿಶ್ರಮವಹಿಸಬೇಕು.

'ನವಯುಗ.'

INSURE WITH
OR REPRESENT
INDIA'S OLDEST LIFE OFFICE:
THE BOMBAY MUTUAL LIFE ASSURANCE SOCIETY, LTD.

BUSINESS IN FORCE OVER 40 CRORES
ASSETS .... OVER 12 CRORES

Applications from energetic youngmen are invited for representation.

25–18

Head Office; BOMBAY.
Branch: 172. 3. Narasimharaja Road. BANGALORE 2.

Edited Printed and Published by P. I. BELLIAPPA at 'KODAGU' Press Mercara, for 'Kodagu' Ltd.,

ಕೊಡಗು



ಶ್ರವಣಬೆಳಗೊಳದ ಗೋಮಟೇಶ್ವರ.

KODAGU KANNADA WEEKLY MERCARA

ಈ ವಾರದ ಕಥೆ.

ಮೂರನೇ ಕ್ರಾಸ್, ನಾಲ್ಕನೇ ಮನೆ.

ಲೇ:—ಶ್ರೀ ಎ. ಜಿ. ಪ್ರಹ್ಲಾದರಾವ್.

ರಾಜಣ್ಣ ಎಲ್ಲರ ಹಾಗೆ ಎಂದು ನಂಬಿದ್ದೆ ..ಇಲ್ಲ, ನನ್ನ ಭಾವನೆ ತಪ್ಪು!

ರಾಜಣ್ಣನ ಹೆಂತತಿ ಮುತ್ತೈದೆ ಹೆಂತತಿ, ಯಾರು ಇಲ್ಲ ಎಂದಾರು? ಹೋಗಬಾರದಿತ್ತು, ಆದರೆ ಯಾರು ಏನು ಮಾಡಬಲ್ಲರು? ರಾಜಣ್ಣನ ಕಣ್ಣೀರಿಗೆ ನನ್ನ ಕಣ್ಣೀರು ಬೆರೆಸಿದೆ. ರಾಜಣ್ಣ ಆವನ ಪ್ರೀತಿಯ ಮಡದಿಯ ಒಂದೊಂದು ನೆನಪನ್ನು ಬಿಸಿಯುಸಿರಲ್ಲಿ ಕಾಸಿ ಹೊರ ಹಾಕಿದಾಗಲೂ, ನನ್ನ ಹೃದಯ ಹಿಂಡಿಹೋಗುತ್ತಿತ್ತು. ನಾನು ನೋಡಿದ್ದೆ ಆ ಮುತ್ತಿನಂಥ ಸಂಸಾರ. ರಾಜಣ್ಣ ..

ಹಾಗಾಗಬಾರದಿತ್ತು, ನಿಜ: ಆದರೆ ಆಯಿತು. ಮುಂದೆ?

ನನಗೆ ಬಾಯಿ ಬಾರದು ಯಾವ ಬಾಯಿಂದ ರಾಜಣ್ಣನಿಗೆ ಹೇಳಲಿ?

ಆದರೆ ಬೀದಿಯ ಬಾಯಿಗೆ ಬೀಗವಿಲ್ಲ. ಅದು ಹೆಂಡತಕುಡಿದ ಬಾಯಂತೆ ಬಗುಳಿತು.

ಇನ್ನೊಂದು ಹೆಣ!

ರಾಜಣ್ಣ ನಕ್ಕು ಹೇಳಿದ

“ನನ್ನ ಹೆಂತತಿಯ ಹೆಣ ಇನ್ನೂ ಸ್ವಲ್ಪ ತಣ್ಣಗಾಗಿರಲಿಲ್ಲ, ರಾಮು. ಅದನ್ನು ಸುಡುವುದಕ್ಕೆ ಏರ್ಪಾಟು ಸಹ ಆರಂಭವಾಗಿರಲಿಲ್ಲ. ಆಗಲೇ ಈ ಸುದ್ದಿ ನನ್ನ ಕಿವಿಗೆ ಬಿತ್ತು.” ‘ರಂಡೆಗಂಡ ಬಿದ್ರೆ ಒಂದು ಹೋದ್ರೆ ಇನ್ನೊಂದು ಬರುತ್ತೆ!’, ಆಗ ನನಗೆ ನಗು ಬರಲಿಲ್ಲ, ಈಗ ನಗ ಬಲ್ಲೆ”.

ಅವನ ಹೆಂಡತಿಯ ಎಲ್ಲಾ ಸ್ಮೃತಿ ಮಣ್ಣಾಗಿರುವುದಿಲ್ಲವೋ ರಾಜಣ್ಣನಿಗೆ ಆಹ್ವಾನಗಳು ಬರಲು ಆರಂಭವಾದುವು. ರಾಜಣ್ಣನ ಸ್ವಭಾವ ಮಿದು. ಅದಕ್ಕಾಗಿ ಅವನು ಸಮಾಧಾನದಿಂದ ಏನೋ ಸುಳ್ಳು ಹೇಳಿ ಕಳಿಸುತ್ತಿದ್ದ ಆ ಸೇನೆಯನ್ನು.

“ನೀವು ವಿವಾಹಯೋಗ್ಯನಾಗಿದ್ದೀರೆಂದು ತಿಳಿದಿದ್ದೇನೆ. ನನ್ನ ಮಗಳನ್ನು ನೋಡಿ ಒಪ್ಪಿದಲ್ಲಿ, ಶೀಘ್ರದಲ್ಲೇ....”— ಇದು ಅವನ ವಿವಾಹಕ್ಕೆ ಬರಲು ಆರಂಭವಾದ ಪತ್ರಗಳ ಒಕ್ಕಣಿಕೆಯ ಸರಣಿ.

ರಾಜಣ್ಣ ನನ್ನಿಂದ ಯಾವುದನ್ನೂ ಮುಚ್ಚಿಡುತ್ತಿರಲಿಲ್ಲ. ನನ್ನ ಸ್ನೇಹಕ್ಕೆ ಅವನು ಇಷ್ಟು ಬೆಲೆ ಇತ್ತ.

ರಾಜಣ್ಣ ...

ಹೌದು, ರಾಜಣ್ಣನ ಮನಸ್ಸು ನಾನು ಬಲ್ಲೆ, ಅವನ ಬಾಯಿಂದಲೇ ಕೇಳಿದ್ದೇನೆ.

“ಇನ್ನೊಂದು ಮದುವೆಯಾಗು ಎನ್ನುತ್ತಾರೆ ಜನ, ರಾಮು! ಹೆಣ್ಣು ಎಂದರೆ ಹರಕು ಅಂಗಿಯೇ–ಕಿತ್ತು ಬಿಸಾಕಲು? ನೆನಪು ಎನ್ನುವುದೊಂದಿಲ್ಲವೆ? ಅದನ್ನು ಎಲ್ಲಿ ಎಸೆದು ಬರೋಣ?”

ಮತ್ತೊಮ್ಮೆ:

“ಇಲ್ಲ ರಾಮು, ಇನ್ನೊಂದು ಹೆಣ್ಣಿನ ವಿಚಾರವಾಗಿ ನಾನು ಚಿಂತಿಸಲಾರೆ. ಅದು ನನ್ನ ಹೃದಯವನ್ನು ನನ್ನ ಒಲವಿನಿಂದ ಸಂಪೂರ್ಣವಾಗಿ ಗೆದ್ದವಳಿಗೆ ಅನ್ಯಾಯ, ಅಪಚಾರ ಮಾತ್ರ ಅಲ್ಲ. ನನ್ನ ಹೃದಯ ಯಾವುದೋ ಭೀತಿಯ ಮಂಜಿಗೆ ಸಿಕ್ಕಿ ಹೋಗುತ್ತಿದೆ. ಯಾವ ಹೆಣ್ಣು ಆಕೆಯನ್ನು ಹೋಲಬಲ್ಲದು....”

ರಾಜಣ್ಣನ ಮಾತಿಗೆ ನನ್ನ ಪ್ರತಿಮಾತು ಇಲ್ಲ. ಆದರೂ....

ರಾಜಣ್ಣನ ಬಗ್ಗೆ ನನ್ನ ಕಾತರ ಹೆಚ್ಚಿತು. ಅವನ ಮನಸ್ಸನ್ನು ಯಾವುದೋ ಹುಳು ಕೊರೆದು ಹಾಕುತ್ತಿದೆಯೇನೋ ಎಂದು ದಿಗಿಲಾಯಿತು. ಅವನ ವರ್ತನೆಯಲ್ಲೇ ಇನ್ನಿಲ್ಲದ ಬದಲಾವಣೆ ತೋರಿತು. ಮಾತನಾಡಿದಾಗ ಆಡಿದ, ಬಿಟ್ಟಾಗ ಬಿಟ್ಟ. ಒಮ್ಮೊಮ್ಮೆ ಹೇಳದೆ ಕೇಳದೆ, ಊಟ ಯಾಗಿ ಆರಿಸಲು ಹೊರಟ ಸಿಗರೇಟು ಸೇದಲು ಆ ಅಭ್ಯಾಸದ ಲಕ್ಷಣವೇ ಇಲ್ಲ. ಕಾಫಿ ಬಟ್ಟಲಿಂಗಟ್ಟಲೆ ಬಸಿದುಬಿಡುವ. ಊಟ? ಉಹುಂ, ಅದರ ರುಚಿಯೇ ಇಲ್ಲ ಎನ್ನುತ್ತಾನೆ.

ರಾಜಣ್ಣನ ಬಗ್ಗೆ ನನ್ನಲ್ಲಿ ಭಯವುಂಟಾಗದೆ ಇನ್ನೇನು? ನನಗೆ ಗೊತ್ತು, ರಾಜಣ್ಣನ ಮನಸ್ಸಿನ ಬೇನೆ. ಆದರೆ ಅದಕ್ಕೆ ಔಷಧ?

ಅವನಿಗೆ ತೀರಾ ಹತ್ತಿರದ ಬೇಕಾದ ಗೆಳೆಯನೆನಿಸಿ, ಅವನ ಹೃದಯ ಅರಿತವನು ಸೂಕ್ಷ್ಮದವನು ಎನಿಸಿಕೊಂಡ ನಾನು! ರಾಜಣ್ಣ ಏನೆಂದುಕೊಂಡಾನು?

ಇಲ್ಲ, ನನಗೆ ಬಾಯಿ ಬರಲಿಲ್ಲ. ತೆಪ್ಪನಿದ್ದೆ.

ಒಂದು ವರ್ಷ ಕಳೆಯಿತು.

ರಾಜಣ್ಣನ ಸಿಗರೇಟು ಕಾಫಿ ಬಿಲ್ಲು ಏರಿತು ಅಷ್ಟೆ.

ಇನ್ನೊಂದು ವರ್ಷ ಕಳೆಯಿತು.

ರಾಜಣ್ಣನನ್ನು ನಾನು ನೋಡಲಾರೆನೆನಿಸಿತು. ಹೋಟಲು ‘ಊಟ’, ಕಾಫಿ-ಸಿಗರೇಟು ಅವನ ಕೊಲೆ ಮಾಡಿದ್ದುವು. ಅವನ ಕಣ್ಣುಗಳು ಸಿಗರೇಟಿನ ತುದಿಯಂತೆ ಕಿಡಿಯಾಗಿದ್ದುವು. ತಲೆಯು ಎಣ್ಣೆ ಕಾಣದೆ ಬಂಡಾಯವೆದ್ದಿತ್ತು.

‘ರಾಜಣ್ಣ-ಹೇಗಿದ್ದವನು, ಹೇಗಾದ? ಹೇಳಲೆ, ಬಿಡಲೆ?

ಅವತ್ತು ಬಹಳ ಹೊತ್ತು ಮಾತನಾಡಿದೆವು. ಮೂರು ವರ್ಷದ ಹಿಂದಿನ ನೆನಪೆಲ್ಲ ಹೊಸ ಜೀವ ತಳೆದು ಬಂದುವು. ನಾನು ಸುಮ್ಮನೆ ಅಳಿಸಿದೆ ಕಡೆಗೊಮ್ಮೆ—‘ಈಗ ಎಷ್ಟು ವರ್ಷವಾಯಿತು, ರಾಜಣ್ಣ?’ ಎಂದೆ.

‘ಏಕೆ, ಮೂರು ವರ್ಷ”

‘ಬರುವ ವರ್ಷಕ್ಕೆ?’

“ನಾಲ್ಕು”

‘ಆ ಮೇಲೆ?’

ನನ್ನ ಮಾತಿನ ಗುರಿ ಮುಟ್ಟಿತು. ರಾಜಣ್ಣ ಸಿಟ್ಟಾಗಬಹುದೆಂದು ಹೆದರಿದ್ದೆ. ಇಲ್ಲ, ನಕ್ಕ.

“ನಾನೂ ಅದನ್ನೇ ಯೋಚಿಸುತ್ತಿದ್ದೆ, ರಾಮು. ಹೀಗೆ ಒಂದೊಂದು ವರ್ಷವನ್ನೂ ಕಳೆದು, ಹತ್ತು, ಇಪ್ಪತ್ತು ಎಂದು ಆಯುಷ್ಯವೆಲ್ಲ ಕಳೆಯಬಹುದು. ಆದರೆ” ಕಣ್ಣೀರು ಒತ್ತರಿಸಿ ಬಂದು ಮಾತನ್ನು ಅಡ್ಡ ಹಾಕಿತು.

“ನಿನ್ನ ಸಂಕಟ ನಾನು ಬಲ್ಲೆ, ರಾಜಣ್ಣ. ನೀನು ಮದುವೆಯಾದೆಯೆಂದು ನಿನ್ನ ಹೆಂಡತಿಯ ಬಗ್ಗೆ ಪ್ರೀತಿ ಕಡಿಮೆಯೆಂದು ಯಾರೂ ಹೇಳುವುದಿಲ್ಲ ನೀನು ನಿನ್ನ ಆಯುಸ್ಸೆಲ್ಲಾ ಹೀಗೇ ಇದ್ದು ಅದರಿಂದ ಸಾಧಿಸುವುದೇನು?”

ನನ್ನ ಧೈರ್ಯಕ್ಕೆ ನಾನೇ ಮೆಚ್ಚಿಕೊಂಡೆ. ರಾಜಣ್ಣ ಸಿಟ್ಟಾಗಲಿಲ್ಲ. ನನ್ನ ಅದೃಷ್ಟ.

ರಾಜಣ್ಣನಿಗೆ ಬೇಕು, ತನ್ನ ಸುಟ್ಟ ತಳೆಯನ್ನು ಮಡಿಲೊಳಗಿರಿಸಲಿಕ್ಕೆ, ಪ್ರೀತಿಯ ಒಂದು ಮಾತು ಆಡಲಿಕ್ಕೆ ಒಂದು ಹೆಣ್ಣು. “ತುಂಬ ಸ್ವಾತಂತ್ರ್ಯ ವಹಿಸುತ್ತಿದ್ದೇನೆ, ಕ್ಷಮಿಸು. ನಮ್ಮ ಮನೆಯ ಹತ್ತಿರದಲ್ಲೇ ಮೂರನೇ ಕ್ರಾಸ್, ನಾಲ್ಕನೆ ಮನೆ....”

ನನ್ನ ಮಾತು ಮುಗಿಯುವದರಲ್ಲೇ ತಲೆ ಕೊಡವಿದ.

“ಇಲ್ಲ ರಾಮು, ನನ್ನ ದೌರ್ಬಲ್ಯಕ್ಕೆ ಬಲಿಯಾಗಲಾರೆ, ಕ್ಷಮಿಸು” ಎಂದು, ಒಂದು ಸಿಗರೇಟು ಹೊತ್ತಿಸಿದ. ಕಡ್ಡಿಯ ಬೆಳಕಿನಲ್ಲಿ ಅವನ ಮುಖದಲ್ಲಿ ಮಾನವನ ಆಸೆ-ಬಯಕೆ, ಸಂಕಟ-ವೇದನೆಗಳ ಕೋಲಾಹಲ ಕಂಡೆ.

ನಮ್ಮ ಮನೆಗೆ ರಾಜಣ್ಣ ಆಗಾಗ ಬಂದು ಹೋಗುತ್ತಿದ್ದ. ಮೂರನೇ ಕ್ರಾಸ್, ನಾಲ್ಕನೇ ಮನೆಯವರು ರಾಜಣ್ಣನ ಬಗ್ಗೆ ಹೆಚ್ಚು ಹೆಚ್ಚು ಕುತೂಹಲ ತಾಳಲಾರಂಭಿಸಿದರು. ರಾಜಣ್ಣನಿಗೆ ಹೇಗೆ ಹೇಳಲಿ?

ಒಂದು ದಿನ ಆ ಹೆಣ್ಣಿನ ಕತೆ ಹೇಳಿದೆ. ಅದೊಂದು ಹೃದಯ ಕರಗಿಸುವ ಕತೆ. ತಾಯಿ ಇಲ್ಲದ ಹೆಣ್ಣು....

ರಾಜಣ್ಣನ ಹೃದಯ ಮಿದು, ಆ ಕತೆಯ ಕಾವಿಗೆ ಕರಗಿಹೋಯಿತು.

ಮೂರನೇ ಕ್ರಾಸ್, ನಾಲ್ಕನೇ ಮನೆಯವರ ಬಲವಂತ ಹೆಚ್ಚಾಯಿತು ರಾಜಣ್ಣನಲ್ಲಿ ಬೇಡಿಕೊಂಡೆ, ಆದರೂ ಅವನು ಒಪ್ಪಲಿಲ್ಲ.

ನಾನು ಏನೋ ಕೆಲಸದ ಮೇಲೆ ಊರು ಬಿಟ್ಟು ಹೊರಟೆ.

ಮೊನ್ನೆ ಒಂದು ತಿಂಗಳಾದ ಮೇಲೆ ವಾಪಸು ಬಂದೆ. ಸಂಜೆ ರಾಜಣ್ಣ ಸಿಕ್ಕ.

ಅವನಿಂದ ಏನೂ ಮಾತು ಹೊರಡದು ಸಿಗರೇಟಿನ ಹೊಗೆಯಂತೆ, ಅವನ ತಲೆಯಲ್ಲಿ ಯಾವುದೋ ಯೋಚನೆ ಸುರುಳಿ ಸುರುಳಿ ಸುತ್ತುತ್ತಿತ್ತು.

“ಏನು ರಾಜಣ್ಣ, ಏನಾದರೂ ಯೋಚನೆ ಮಾಡಿದೆಯೊ?”

ರಾಜಣ್ಣ ಫಳಾರನೆ ನಕ್ಕುಬಿಟ್ಟ.

“ಅದೇ ನಿಮ್ಮ ಮೂರನೆ ಕ್ರಾಸ್, ನಾಲ್ಕನೆ ಮನೆ ತಾನೆ? ಅದು ಒಳ್ಳೆ ‘ಟ್ರ್ಯಾಜಿಕ್ ಜೋಕ್’ ಆಯಿತು ರಾಮು” ಎಂದು ಮತ್ತೆ ನಗಲಾರಂಭಿಸಿದ.

ನಾನು ಕಕ್ಕಾಬಿಕ್ಕಿಯಾದೆ.

ಅವನು ಹೇಳಿದ,

“ನೀನು ಕೇಳಿ ಮೂರ್ಖತನ ಎಂದು ತೀರ್ಪು ಕೊಡುತ್ತೀಯೆ, ನಾನು ಬಲ್ಲೆ. ಆದರೆ ಇದು ನಿಜ. ನಡೆದುದನ್ನು ನಡೆದಂತೆ ಹೇಳುತ್ತೇನೆ ಕೇಳು.”

‘ನಿನ್ನಿಂದ ಏನಾದರೂ ಕಾಗದ ಬಂದಿದೆಯೇನೋ ಎಂದು ನಿಮ್ಮ ಮನೆಗೆ ಬರುತ್ತಿದ್ದೆ. ಬರುವಾಗ ಏಕೋ ಮನಸ್ಸಾಯಿತು; ಆ ಮೂರನೇ ಕ್ರಾಸ್ ಹಾದು ಬಂದೆ. ಒಂದು, ಎರಡು, ಮೂರು, ನಾಲ್ಕು–ಹೂಂ, ಅದೇ ನೀನು ಹೇಳಿದ ಮನೆ. ಮನಸ್ಸು ಸಡಿಲವಾಗಿ ಆ ಕಡೆ ತಿರುಗಿದೆ. ಬಾಗಿಲಲ್ಲಿ ಒಂದು ಹುಡುಗಿ ನಿಂತಿತ್ತು. ನನ್ನ ಮುಖ ನೋಡಿ ಸರಕ್ಕನೆ ತಿರುಗಿತು, ಏನೋ ನಕ್ಕಂತೆ ಭಾಸವಾಯಿತು. ನಿಮ್ಮ ಮನೆಗೆ ಹೋಗಿ ವಾಪಸಾದೆ. ಆದರೆ ಆ ದಿನವೆಲ್ಲ, ಆ ಮುಖ, ಸರಕ್ಕನೆ ತಿರುಗಿದುದು, ನಕ್ಕುದು ನನ್ನ ಮನಸ್ಸನ್ನು ಕಾಡಿತು.

“ಮಾರನೆಯ ದಿನ ಮತ್ತೆ ಆ ಹಾದಿಯಲ್ಲೇ ಬರುವ ಚಪಲವಾಯಿತು, ಆದರೆ ಸಿನಿಮಾದ ಎಂಗೇಜ್‌ಮೆಂಟ್ ಒಬ್ಬ ಸ್ನೇಹಿತರಿಗೆ ಕೊಟ್ಟಿದ್ದೆ ಟಿಕೆಟ್ ಕೊಂಡು ಒಳಕ್ಕೆ ಹೋದೆವು. ನೀನು ನಂಬುತ್ತೀಯೋ ಇಲ್ಲವೋ. ಮೂರನೇ ಕ್ರಾಸ್....!”

ನಗು ತಡೆಯಲಾರದೆ ನಕ್ಕೆ. ನಾನು ಮಾತ್ರ ಮುಂದೇನು ಹೇಳುತ್ತಾನೋ ಎಂದು ನೋಡುತ್ತಿದ್ದೆ.

“ಮೂರು ವರ್ಷದ ನನ್ನ ಸನ್ಯಾಸ ಒಣಗಿದ ಮರ ಬಿರುಗಾಳಿ ಎದುರು ಉರುಳಿದಂತೆ ಕಡಿದು ಬಿತ್ತು. ಆ ಮುಖ ನನ್ನ ಹೃದಯವನ್ನು ಕಲಕಿತು. ಓ!

“ಆ ರಾತ್ರಿಯೆಲ್ಲ ಕನಸಿನಲ್ಲಿ ಆ ಮುಖ ನನ್ನನ್ನು ಕಾಡಿತು. ಬೆಳಗಾದ ಮೇಲೆ ಆ ಮುಖ, ಸರಕ್ಕನೆ ತಿರುಗಿದುದು, ನಕ್ಕುದು, ಇದರ ಚಿಂತನೆ. ಆ ಮುಖದ ಚೆಲುವೋ ತುಂಟ ಚೆಲುವು, ಮನಸ್ಸಿನ ಬೆರಳುಗಳ ಸಂದಿನಲ್ಲಿ ತೂರಿ ಹೋಗುತ್ತಿತ್ತು. ಆಗೋ ಸಿಕ್ಕಿತು ಎಂದು ಒಂದು ಕ್ಷಣ ಎನಿಸಿದರೆ, ಇಗೋ ಓಡಿದೆ ಎಂದು ಇನ್ನೊಂದು ಕ್ಷಣ ಆಗುತ್ತಿತ್ತು. ನಿನ್ನನ್ನು ಬಹುವಾಗಿ ನೆನೆದೆ. ಆದರೆ ನೀನು ಬೇಗ ಬರುವಂತಿರಲಿಲ್ಲ. ಆಗಲೇ ನಾನು ಮೂರ್ಖ ಕೆಲಸ ಮಾಡಿದುದು!”

‘ಏನು?’ ಎಂದು ಅಗಲ ಬಾಯಿ ಹಾಕಿದೆ.

“ಇನ್ನೇನು–ಮೂರನೇ ಕ್ರಾಸ್ ನಾಲ್ಕನೇ ಮನೆಗೊಂದು ಪತ್ರ ಹಾಕಿದೆ.”

“ಆ ಮೇಲೆ?”

“ಸೊನ್ನೆ!”

ಏನೋ ತಪ್ಪಿರಬೇಕು. ಪ್ರಾಯಶಃ ಅವನ ಕಾಗದ ತಲಪಿರಲಾರದು. ಎಂದು

(ಕಡೇ ಪುಟ ನೋಡಿ)

ಖಾನ್ ಸಹೋದರರ ಬಿಡುಗಡೆಯ ನಿರೀಕ್ಷೆ

ನೆಹರೂ–ಮಹಮ್ಮದಾಲಿ ಮಾತುಕತೆಗಳ ಪರಿಣಾಮವಾಗಿ ಈಗ ಬಂಧನದಲ್ಲಿರುವ ಗಡಿನಾಡಿನ ಖಾನ್ ಸಹೋದರರು ಶೀಘ್ರವಾಗಿ ಬಿಡುಗಡೆಯಾಗುವರೆಂದು ದೆಹಲಿಯ ರಾಜಕೀಯ ವೃತ್ತಗಳು ಆಶಾಭಾವನೆಯಿಂದ ಕೂಡಿವೆ.

ಲಂಡನಿನಲ್ಲಿ ಪ್ರಧಾನಿ ನೆಹರೂ ಮತ್ತು ಪಾಕಿಸ್ತಾನ್ ಪ್ರಧಾನಿ ಮಿ॥ ಮಹಮದ್ ಅಲಿಯವರು ಸಂಧಿಸಿ ಮಾತುಕತೆ ನಡೆಸಿದಾಗಲೇ ಖಾನ್ ಅಬ್ದುಲ್ ಗಫಾರ್ ಖಾನ್‌ರವರು ಪಾಕಿಸ್ತಾನ ನಿರ್ಮಾಣವಾದಂದಿನಿಂದಲೂ ಒಂದೇ ಸಮನೆ ಬಂಧನದಲ್ಲಿಡಲ್ಪಟ್ಟಿರುವ ವಿಚಾರ ಪ್ರಸ್ತಾಪಿಸಲ್ಪಟ್ಟಿತ್ತು. ಪಾಕಿಸ್ತಾನದ ಪ್ರಧಾನಿಗಳು ಈ ವಿಚಾರವಾಗಿ ಸಹಾನುಭೂತಿಯಿಂದ ಕೂಡಿದ್ದಾರೆಂದೂ ವರದಿಯಾಗಿತ್ತು. ಕರಾಚಿಗೆ ಹಿಂದಿರುಗಿದ ನಂತರವೂ ಗಫಾರ್ ಖಾನರ ಬಿಡುಗಡೆಯ ವಿಚಾರ ಮಹಮದ್ ಅಲಿಯವರು ಪರಿಶೀಲನೆಯಲ್ಲಿದ್ದುದಾಗಿ ವರದಿಯಾಗಿದೆ.

ಭಾರತ ಮತ್ತು ಪಾಕಿಸ್ತಾನಗಳ ಸಂಬಂಧ ಉತ್ತಮಗೊಂಡಿರುವ ಮತ್ತು ಭಾರತದೊಡನೆ ಮೈತ್ರಿಯಿಂದಿರಬೇಕಾದ ಅಗತ್ಯವನ್ನು ಪಾಕಿಸ್ತಾನ ಮನಗಂಡಿರುವ ಇಂದಿನ ಸಂದರ್ಭದಲ್ಲಿ, ನೆಹರೂ–ಮಹಮ್ಮದಾಲಿ ಮಾತುಕತೆಗಳಾದ ನಂತರ ಶೀಘ್ರದಲ್ಲೇ ಗಡಿನಾಡಿನ ಗಾಂಧಿಯ ಬಿಡುಗಡೆಗೆ ಆಜ್ಞೆ ಹೊರಬಿದ್ದರೆ, ಆಶ್ಚರ್ಯವೇನೂ ಇಲ್ಲ.

ಕಮಲಿದೇವಿ– ಚಂದ್ರ ಪ್ರಕಾಶ

ಬೆಲ್ಜಿಯಮಿನ ಕ್ಲಾರಾಸ್ಪೆಲ್ಟನ್ ಆಸ್ಪತ್ರೆಯಲ್ಲಿ ಇತ್ತೀಚೆಗೆ ವಿಶಿಷ್ಟ ರೀತಿಯ ಒಂದು ಶಸ್ತ್ರ ಚಿಕಿತ್ಸೆ ನಡೆದು ೧೯ ವರ್ಷದ ಹುಡುಗಿಯೋರ್ವಳು ಹುಡುಗನಾಗಿ ಮಾರ್ಪಟ್ಟಿರುವಳು. ಬ್ರಾಬೌನ ಜಿಲ್ಲೆಯ ಶಾಲೆಯಲ್ಲಿ ಆಕೆ ಅಧ್ಯಾಪಕಿಯ ವೃತ್ತಿ ನಡೆಸಿಕೊಂಡಿದ್ದಳು. ಮಗಳು ವಿವಾಹ ವಯಸ್ಕಳಾದುದನ್ನು ಕಂಡು ಅವಳ ಹೆತ್ತವರು ಅವಳಿಗಾಗಿ ವರಾನ್ವೇಷಣೆಗೆ ತೊಡಗಿದರು. ಆದರೆ ಅವಳ ದೇಹ ಬೆಳವಣಿಗೆಯಲ್ಲಿ ಅದೊಂದು ರೀತಿಯ ವೈಶಿಷ್ಟ್ಯ ಕಂಡುಬಂದುದರಿಂದ ಅವರು ಈ ಕಾರ್ಯದಲ್ಲಿ ಹಿಂಜರಿದರು. ಕೊನೆಗೆ ಚಿಕಿತ್ಸೆಗೆಂದು ಒಂದು ಆಸ್ಪತ್ರೆಗೆ ಅವಳನ್ನು ದಾಖಲುಮಾಡಲಾಯಿತು. ಅಲ್ಲಿ ಅನೇಕ ದಿನಗಳ ವರೆಗೆ ವೈದ್ಯರು ಆಕೆಯ ಪರೀಕ್ಷೆ ನಡೆಸಿ ಶಸ್ತ್ರಕ್ರಿಯೆಯ ಮೂಲಕ ಅವಳನ್ನು ಹುಡುಗನನ್ನಾಗಿ ಮಾರ್ಪಡಿಸುವದು ಸಾಧ್ಯವಿದೆ ಎಂದು ನಿಶ್ಚಿತಾಭಿಪ್ರಾಯಪಟ್ಟರು. ಶಸ್ತ್ರಕ್ರಿಯೆಯು ಯಶಸ್ವಿಯಾಯಿತು. ಕಮಲಿ ದೇವಿಯೆಂದು ಹೆಸರಿದ್ದ ಆಕೆಗೆ ಈಗ ಚಂದ್ರ ಪ್ರಕಾಶ ಎಂದು ನಾಮಕರಣ ಮಾಡಲಾಗಿದೆ. (ಈ ಶರೀರ ವಿಕಾರವನ್ನು ಇಂಗ್ಲೀಷಿನಲ್ಲಿ Metamorphosis ಎಂದು ಹೇಳುತ್ತಾರೆ. ಇಂಥ ಸ್ವಭಾವ ಪಲ್ಲಟನಗಳು ಅನೇಕ ಕಡೆಗಳಲ್ಲಿ ನಡೆದುದುಂಟು.)

—ಲಂಚ ತಿನ್ನದವನಾರು?—

ಹಣ ಪಡೆಕೊಂಡರೆ ಮಾತ್ರ 'ಲಂಚ'ವೆನಿಸುವುದೇ?

ಶಾಲೆಗೆ ಬರುವಾಗ ಮನೆಯ ತೋಟದಿಂದ ಎರಡು ಸೌತೆಕಾಯಿ ಮತ್ತು ಒಂದಿಷ್ಟು ತರಕಾರಿ ಹಿಡಕೊಂಡು ಬಾ ಎಂದು ವಿದ್ಯಾರ್ಥಿಯೊಡನೆ ಹೇಳುವ ಹಳ್ಳಿಯ ಅಧ್ಯಾಪಕನೊಬ್ಬನು ಲಂಚಕೋರನಲ್ಲವೇ?

ಆಫೀಸಿನಿಂದ ಒಂದು 'ರಿಕಾರ್ಡು' ಬೇಕೆಂದು ಅಥವಾ ದಾಖಲೆ ಬೇಕೆಂದು ಬಂದವನಿಂದ ಒಂದು ಕಪ್ ಕಾಫಿ ಅಥವಾ ಒಂದು ಸಿಗರೇಟು ಪಡೆಯುವ ಕಾರಕೂನನು ಲಂಚ ಪಡೆದಂತಾಗಲಿಲ್ಲವೇ?

ರೈಲ್ವೆ ಸ್ಟೇಷನಿನಲ್ಲಿ ರೂ. ೪–೧೩–೦ ರ ಒಂದು ಟಿಕೇಟು ಪಡಕೊಳ್ಳಲು ಐದು ರೂಪಾಯಿಯ ನೋಟನ್ನು ಕೊಟ್ಟಾಗ, ಚಿಲ್ಲರೆ ಇಲ್ಲವೆಂದು ಮೂರಾಣೆಗಳನ್ನು ತಡೆದಿರಿಸುವ 'ಬುಕ್ಕಿಂಗ್ ಕ್ಲಾರ್ಕ' ಸಂಭಾವಿತನೇ?

ನಿಮಗೆ ಯಾವುದಾದರೊಂದು 'ಪರ್ಮಿಟ್' ಅಥವಾ ಸರಕಾರೀ ಕಂಟ್ರಾಕ್ಟು ದೊರಕಿಸಿಕೊಡಲು ತನ್ನ ಚಾತುರ್ಯವನ್ನು ಉಪಯೋಗಿಸುವ ಮಂತ್ರಿಯೂ ಅಪ್ರಾಮಾಣಿಕನಲ್ಲವೆ?

ಯುದ್ಧನಿಧಿಗೆ ಹೇರಳ ಧನ ತೆತ್ತು ದೊಡ್ಡ ಪದವಿಯನ್ನು ಪಡೆಯುವ ಕಸಾಯಿಯು, ಸರಕಾರೀ ಕಾರ್ಯದರ್ಶಿಗೆ ಬಂಗಲೆ ಕಟ್ಟಿಸಿಕೊಟ್ಟು 'ಪರ್ಮಿಟು' ಪಡೆಯುವ ವ್ಯಾಪಾರಿಗಿಂತ ಪ್ರತ್ಯೇಕವೇನಲ್ಲ.

'ಕೈ ಬಿಸಿಮಾಡು'ವುದು ಜಗತ್ತಿನ ಅತಿ ಪ್ರಾಚೀನ ವ್ಯಾಪಾರಗಳಲ್ಲೊಂದು. ಒಂದಲ್ಲ ಒಂದು ರೀತಿಯಲ್ಲಿ ಮತ್ತೊಬ್ಬನನ್ನು ತೃಪ್ತಿಪಡಿಸಿ, ತನ್ಮೂಲಕ ಲಾಭ ಪಡೆಯುವ ಹೀನ ಮನೋವೃತ್ತಿಯು ಹಲವು ಕಡೆಗಳಲ್ಲಿ ಅಸ್ತಿತ್ವದಲ್ಲಿದೆ.

ತನ್ನ ಕೈಕೆಳಗಿನ ಅಧಿಕಾರಿಗಳೆಲ್ಲರೂ ಲಂಚಖೋರತನ ಮತ್ತು ವಂಚನೆಗಳಿಂದ ದೂರವಾಗಿರುವರು ಎಂದು ಒಬ್ಬ ದೊರೆಯು ವಿಶ್ವಾಸಪಟ್ಟುಕೊಂಡಿದ್ದನು. ಅರಸನಲ್ಲಿ ದೀರ್ಘಕಾಲದಿಂದ ಸೇವೆಮಾಡಿಕೊಂಡಿದ್ದ ಪ್ರಾಮಾಣಿಕ ಸೇವಕನೊಬ್ಬನು, "ಪ್ರಭೂ, ನಿನ್ನ ಈ ವಿಶ್ವಾಸವು ಸರಿಯಲ್ಲ; ಲಂಚಖೋರತನವು ಧಾರಾಳವಾಗಿ ನಡೆಯುತ್ತಿದೆ" ಎಂದನು.

ಅರಸನು ಒಪ್ಪಲಿಲ್ಲ. ಆಗ "ನನಗೊಂದು ಸರಕಾರೀ ಉದ್ಯೋಗ ಕೊಡಿಸಿರಿ; ಎಷ್ಟು ಅಲ್ಪ ಅವಧಿಯೊಳಗೆ ಶ್ರೀಮಂತನಾಗುವೆನೆಂದು ನೋಡಿರಿ" ಎಂದು, ಸೇವಕನು ಹೇಳಲು, ಅರಸನು, ಅವನನ್ನು, ಮಹಾದ್ವಾರದ ಮುಂದೆ ಕಾವಲುಗಾರ ಮುಖಂಡನಾಗಿ ನೇಮಿಸಿದನು.

ಅರಸನ ಭೇಟಿಗೆ ಬರುವವರನ್ನು ಈ ಸೇವಕನು, ಒಂದಲ್ಲ ಒಂದು ನೆವನದಿಂದ ತಡೆದು, ಪ್ರವೇಶವನ್ನು ತಿರಸ್ಕರಿಸಹತ್ತಿದನು. ಅವನ ಈ ಉಪಾಯವು ಫಲಬಿಟ್ಟಿತು. ಭೇಟಿಗೆ ಬಂದವರು, ಅವನ ಕೈಗಳಲ್ಲಿ ನಾಣ್ಯಗಳನ್ನಿಡಲು ಆರಂಭಿಸಿದರು. ಸೇವಕನು, ತನ್ನೊಡನೆ ಕೂಡಿಕೆಯಾದ ಹಣದ ಮೊತ್ತವನ್ನು, ಅಂದು ಸಾಯಂಕಾಲ, ಅರಸನ ಮುಂದಿರಿಸಿದನು. ಅರಸನು ನೀರವ!

ಆ ಒಂದು ಉದ್ಯೋಗದಲ್ಲಿ ಲಂಚ ತಿನ್ನುವ ಸಾಧ್ಯತೆ ಇರಬಹುದು, ಇನ್ನೊಂದರಲ್ಲಿ ಇವನನ್ನು ಪರೀಕ್ಷಿಸೋಣ ಎಂದು, ಅರಸನು, ಅವನನ್ನು "ಸಮುದ್ರ ದಂಡೆಯಲ್ಲಿ ನಿಂತು, ತೆರೆಗಳನ್ನು ಲೆಕ್ಕ ಮಾಡಿ ವರದಿಯೊಪ್ಪಿಸುವಂತೆ" ಆಜ್ಞಾಪಿಸಿದನು.

ಸೇವಕನು ಈ ಹೊಸ ಹುದ್ದೆಯನ್ನು ಸಂತೋಷದಿಂದ ಅಂಗೀಕರಿಸಿ, ಸಮುದ್ರ ದಂಡೆಗೆ ಹೋಗಿ ಏನೋ ಲೆಕ್ಕ ಹಾಕುವವನಂತೆ ನಟಿಸಿ ಕುಳಿತನು. ಮೀನು ಹಿಡಿವ ಬೆಸ್ತರು ಇದನ್ನು ನೋಡಿ ಸಂದೇಹಗೊಂಡು, ಅವನ ಬಳಿಗೆ ಬಂದು ವಿಚಾರಿಸಿದರು. ಸೇವಕನು ಹೀಗೆಂದನು; "ಬೆಸ್ತರ ಆದಾಯವೆಷ್ಟೆಂದು ತಿಳಿದು, ಅವರಿಗೆ ಧಾರಾಳ ತೆರಿಗೆ ಹಾಕು ಎಂದು ಅರಸನ ಅಪ್ಪಣೆಯಾಗಿದೆ."

ಬೆಸ್ತರು ಗಾಬರಿಗೊಂಡರು. ಈ ಸೇವಕನನ್ನು ಒಲಿಸಿಕೊಳ್ಳಲು, ಅವನಿಗೆ ಧಾರಾಳ ಹಣ ಕೊಟ್ಟರು.

ಸಾಯಂಕಾಲ ರಾಜಭವನಕ್ಕೆ ತೆರಳಿ, ಸೇವಕನು, "ಪ್ರಭೋ, ಐದು ಲಕ್ಷ ತೆರೆಗಳು–ಐದು ಲಕ್ಷ ರೂಪಾಯಿ ನಗದಿ–ಮತ್ತೆ ಬೆಸ್ತರಿಂದ ರಾಜಭಂಡಾರಕ್ಕೆ ಐದು ಲಕ್ಷ ರೂಪಾಯಿ ತೆರಿಗೆ........" ಎಂದನು.

ಲಂಚ ತೆಗೆದುಕೊಳ್ಳುವವನೂ ಪಾಪಿ, ಕೊಡುವವನೂ ಪಾಪಿ. ಸಂಭಾವಿತರೆನಿಸಿಕೊಳ್ಳುವವರಲ್ಲಿ, ಲಂಚ ಕೊಡದೆ ಇರುವವರೆಷ್ಟು?

ಅಧಿಕಾರಿಯ ಬಳಿಗೆ ಯಾವುದಾದರೂ ಕೆಲಸದಲ್ಲಿ ಬಂದವರಿಂದ ಯಾವ ರೂಪದಲ್ಲಿ ಏನನ್ನು ಪಡೆದರೂ ಅದು ಲಂಚವೆನಿಸುವುದು. ಈ ವಿಷಯದಲ್ಲಿ ತಮ್ಮೊಳಗೇ ಸಮಾಧಾನ ಮಾಡಿಕೊಳ್ಳುವ ಅವಶ್ಯವಿಲ್ಲ.

"ಪ್ರಭಾತದಿಂದ"

ರಾಷ್ಟ್ರಗೀತೆಗೆ ಗೌರವ

ಅಲ್ಲಹಾಬಾದಿನಲ್ಲಿ ಒಂದು ಬೃಹತ್ಸಭೆಯನ್ನು ಉದ್ದೇಶಿಸಿ ಭಾಷಣ ಮಾಡುತ್ತ ಭಾರತದ ಪ್ರಧಾನ ನೆಹರೂರವರು, ರಾಷ್ಟ್ರಗೀತ ಹಾಡಲ್ಪಡುವಾಗ ಜನರು ಸೂಕ್ತ ಯೋಚಿತ ಗೌರವ ಸಲ್ಲಿಸಲು ಮರೆಯಬಾರದೆಂದು ಎಚ್ಚರಿಸಿದರು. ಇತರ ರಾಷ್ಟ್ರಗಳಲ್ಲಿ ಜನರು ತಂತಮ್ಮ ರಾಷ್ಟ್ರಗೀತೆಗಳಿಗೆ ಯೋಗ್ಯ ಗೌರವ ಸಲ್ಲಿಸುತ್ತಿರುವರೆಂದೂ, ಹಿಂದೂದೇಶದಲ್ಲಿ ಮಾತ್ರ ಹಲವು ಜನರು ಈ ಕಡೆ ಅಲಕ್ಷ್ಯ ಭಾವ ಪ್ರದರ್ಶಿಸುತ್ತಿರುವದು ತೀವ್ರ ವಿಷಾದಕರವೆಂದೂ ಟೀಕಿಸುತ್ತ, "ರಾಷ್ಟ್ರಗೀತೆಯು ಹಾಡಲ್ಪಡುವಾಗ ಜನರು ನಿಂತಲ್ಲಿಯೇ ನಿಲ್ಲುವದನ್ನು ಬಿಟ್ಟು ಅತ್ತಿತ್ತ ಚಲಿಸದೆ, ಯೋಗ್ಯರಂತೆ ನಿಂತು ಗಂಭೀರತೆಯನ್ನು ಪ್ರದರ್ಶಿಸುವದು ಆವಶ್ಯ" ಎಂದು ಒತ್ತಿ ಹೇಳಿದರು.

ವಿಶ್ವ ಸುಂದರಿ

ಈ ಬಾರಿಯ 'ವಿಶ್ವ ಸುಂದರಿ' ಆಯ್ಕೆಯಲ್ಲಿ ಫ್ರಾನ್ಸಿನ ೨೦ ವರ್ಷದ ತರುಣಿ ಮಿಲೆಕ್ರಿಶ್ಚಿನ್ ಎಂಬಾಕೆ ಪ್ರಥಮ ಸ್ಥಾನಗಳಿಸಿದಳು. ತಾ. ೧೮ರಂದು ಈ ಬಗ್ಗೆ ಆಯ್ಕೆಯು ಅಮೇರಿಕಾದ ಕೆಲಿಫೋರ್ನಿಯದಲ್ಲಿ ನಡೆಯಿತು. ಜಗತ್ತಿನ ಬೇರೆ ಬೇರೆ ದೇಶಗಳಿಂದ ೨೯ ಮಂದಿ ಸುಂದರಿಯರು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಗೆದ್ದ ಫ್ರಾನ್ಸ್ ಯುವತಿಗೆ ಒಂದು ಕಾರು, ಎರಡುವರೆ ಸಾವಿರ ಡಾಲರು ಮೌಲ್ಯದ ಒಂದು ವಜ್ರಮುಂಗುರ, ವಾರಕ್ಕೆ ೨೫೦ ಡಾಲರ್ ಸಂಬಳದಲ್ಲಿ ೬ ತಿಂಗಳುಗಳ ವರೆಗೆ ಸಿನೆಮಾ ಸ್ಟುಡಿಯೋ ಒಂದರಲ್ಲಿ ಕೆಲಸ ಇತ್ಯಾದಿಗಳು ಕಾಣಿಕೆಯಾಗಿ ಅರ್ಪಿಸಲ್ಪಟ್ಟಿವು.

ಕರ್ನಾಟಕ ಪ್ರಾಂತದ ಕುರಿತು ಹನುಮಂತಯ್ಯ.

ಮೈಸೂರು ಶಾಸನ ಸಭೆಯಲ್ಲಿ ಪ್ರಾತನಾಡುತ್ತ ಮುಖ್ಯ ಮಂತ್ರಿ ಶ್ರೀ. ಕೆ. ಹನುಮಂತಯ್ಯನವರು ಈ ರೀತಿ ಹೇಳಿರುವರೆಂದು ವರದಿಯಾಗಿದೆ.

"ಕರ್ನಾಟಕ ಏಕೀಕರಣದ ವಿಷಯದಲ್ಲಿ ಸಾವಧಾನದಿಂದ ಮುಂದೊತ್ತಬೇಕೆಂದು ಸರಕಾರದ ಧೋರಣೆ ಹಾಗೂ ಸಂಸ್ಥಾನದ ಜನತೆಯ ಭಾವನೆಯಾಗಿದೆ. ಈ ಧೋರಣೆಯೇ ಕಟ್ಟ ಕಡೆಗೆ ನಮ್ಮ ಧ್ಯೇಯ ಪೂರ್ತಿ ಮಾಡೀತು. ಈಗ ನಿಶ್ಚಿತ ನಾನು ಏನೂ ಹೇಳುವಂತಿಲ್ಲ. ಪ್ರಧಾನಿಗಳು ಭಾಷಾವಾರು ಪ್ರಾಂತಗಳ ಪ್ರಶ್ನೆ ಪರಿಶೀಲಿಸಲು ಉಚ್ಚ ಮಟ್ಟದ ಸಮಿತಿಯನ್ನು ನೇಮಿಸುವುದಾಗಿ ಹೇಳಿದ್ದಾರೆ. ಆ ಸಮಿತಿ ರಚನೆಯಾದೊಡನೆ ಅದರೊಂದಿಗೆ ಮಾತುಕತೆ ನಡೆಸಿ ನಾವು ನಮ್ಮ ಒಮ್ಮತದ ಕೇಳಿಕೆಯನ್ನು ಅದರ ಮುಂದಿಡೋಣ. ಚಿಕ್ಕಪುಟ್ಟ ಮತಭೇದಗಳನ್ನು ನೀಗಿಸಬಹುದು. ಆದುದರಿಂದ ಈ ಸಮಸ್ಯೆ ಬಗೆಹರಿಸಿ ಈಗಲೇ ಇಲ್ಲಿಯೇ ಯಾವ ನಿರ್ಣಯಕ್ಕೂ ಬರಬೇಕೆಂದಿಲ್ಲ."

ಧರ್ಮರಹಸ್ಯ

ಭರ್ತೃಹರಿಯ ವೈರಾಗ್ಯ ಶತಕದಿಂದ

ಮನಸ್ಸೇ! ನೀನು ವಿಷಯ ಸುಖದ ಚಪಲತೆಯಿಂದ ಪಾತಾಳಕ್ಕೂ ಇಳಿಯುತ್ತಿ ಅಂತರಿಕ್ಷವನ್ನು ದಾಟಿ ದಿಗಂತವಲ್ಲೂ ವಿಹರಿಸುತ್ತಿ. ಆದರೆ ಅದೇ ರೀತಿಯ ಇಚ್ಛಾ ಶಕ್ತಿಯಿಂದ ಒಮ್ಮೆಯಾದರೂ ತನ್ನಾತ್ಮನಲ್ಲೇ ಗೂಢವಾಗಿರುವ ಆ ಜ್ಯೋತಿಯನ್ನು ನೆನೆದು ಆದೇಕೆ ಸುಖ ಪಡೆಯುವದಿಲ್ಲ?

ವೇದ, ಸ್ಮೃತಿ, ಪುರಾಣ ಶಾಸ್ತ್ರಗಳ ಅಭ್ಯಾಸದಿಂದ ಮಾತ್ರ ಪ್ರಯೋಜನವೇನಿದೆ? ವೈಭವದ ನಗರ ಗ್ರಾಮಗಳಲ್ಲಿದ್ದು ಐಹಿಕ ಕ್ರಿಯೆ ಕರ್ಮಗಳಲ್ಲಿ ನಿರತರಾಗುವದರಲ್ಲೂ ಫಲವೇನಿದೆ? ಜನನಮರಣಾತ್ಮಕವಾದ ಈ ಸಂಸಾರದಲ್ಲಿ ಬಂಧು ನಾಶವೇ ಮೊದಲಾದ ದುಃಖವನ್ನು ನಾಶಮಾಡಬಲ್ಲ ಆತ್ಮಾನಂದಾನುಭವಕ್ಕೆ ಪ್ರವೇಶಿಸದ ವಿದ್ಯೆ ವ್ಯಾಪಾರಗಳಿಂದ ಪ್ರಯೋಜನವಿಲ್ಲ. ಆತ್ಮ ತತ್ವವನ್ನರಿಯದವನ ವಿದ್ಯೆಯು ವ್ಯರ್ಥ.

ಕನಕಮಯವಾದ ಮೇರು ಪರ್ವತವಾದರೂ ಕೂಡ ಪ್ರಳಯಾಗ್ನಿ ಎದ್ದಾಗ ಉರುಳಿ ಬೀಳುತ್ತದೆ. ನಾನಾ ಕ್ರೂರ ಮೃಗ ಜಂತುಗಳಿಂದ ತುಂಬಿದ ಮೇರೆಯರಿಯದ ಸಮುದ್ರವೂ ಬತ್ತಿ ಹೋಗುತ್ತದೆ. ಪರ್ವತಗಳಿಂದ ಆಧರಿಸಲ್ಪಟ್ಟ ಭೂಮಿಯೇ ನಾಶಗೊಳ್ಳುತ್ತದೆ. ಮರಿಯಾನೆಯ ಕಿವಿಯಂತೆ ಚಪಲತೆಯುಳ್ಳ ಈ ನಶ್ವರ ದೇಹದ ಅವಸ್ಥೆಯನ್ನು ಬೇರೆ ಹೇಳಬೇಕೆ?

ಎಂದಿನ ವರೆಗೆ ಈ ಶರೀರ ಆರೋಗ್ಯದಿಂದಿರುವದೋ, ಎಂದಿನ ವರೆಗೆ ವೃದ್ಧಾಪ್ಯ ಬರಲಿಲ್ಲವೋ, ಎಂದಿನ ವರೆಗೆ ಇಂದ್ರಿಯಗಳಿಗೆ ಶಕ್ತಿ ಇರುವದೋ ಅಷ್ಟರೊಳಗೆ ವಿವೇಕಿಯು ಆತ್ಮಶ್ರೇಯಸ್ಸಿಗಾಗಿ, ಅನಂತ ಸುಖಕ್ಕಾಗಿ ಜ್ಞಾನ, ವೈರಾಗ್ಯ-ತಪಸ್ಸಾಧನೆಗಳನ್ನು ಕೈಕೊಳ್ಳಬೇಕು. ನಾಳೆಗೆಂದರೆ ಬಾಳುಗೆಡುವುದು. ಮನೆಗೆ ಬೆಂಕಿ ಹಿಡಿದ ನಂತರ ನೀರಿಗೆಂದು ಬಾವಿ ತೋಡಲು ತೊಡಗುವದು ಮೂರ್ಖ.

ವಿಲಾಸ ಭಾವನೆಯನ್ನು ಉದ್ರೇಕಿಸುವ ಚಂದ್ರಿಕೆಯು ಆನಂದದಾಯಕವಾದುದು. ಎಳೆ ಹುಲ್ಲಿನಿಂದ ಕಂಗೊಳಿಸುವ ಮೈದಾನವೂ ರಮಿಸಲಿಕ್ಕೆ ಚಂದವಾದುದು. ಕಾವ್ಯಕಥೆಗಳೂ ಮನೋರಂಜನೆಯನ್ನುಂಟುಮಾಡುತ್ತವೆ. ಪ್ರಣಯ ಕೋಪದ ಕಂಬನಿಯಿಂದ ತೊಯ್ದ ಬಿಂಬಾಧರೆಯ ಮುಖಕಮಲವೂ ನೋಡಲು ಚಂದವಾಗಿರುತ್ತದೆ. ಆದರೇನು? ಎಂದು ಮನಸ್ಸು ನಿತ್ಯಾನಿತ್ಯ ವಿವೇಚನೆಗೆ ತೊಡಗುವದೋ ಅಂದು ಇವೊಂದೂ ರಮ್ಯವೆನಿಸುವುದಿಲ್ಲ. ಬ್ರಹ್ಮಾನಂದವೇ ನಿತ್ಯ ಸುಖ.

ನಗುಮಲ್ಲಿಗೆ.

ಅಮೇರಿಕಾ ದೇಶದ ಓರ್ವನು ಜರ್ಮನಿಗೆ ಹೋದಲ್ಲು, ಅವನಂತೆಯೇ ಇದ್ದ ಒಬ್ಬನನ್ನು ಅಲ್ಲಿ ಕಂಡು ಬಹು ಆಶ್ಚರ್ಯದಿಂದ ಹೀಗೆಂದ.

ಅಮೇರಿಕಾದವಃ— ಇದು ಬಹು ಆಶ್ಚರ್ಯ! ನಾವಿಬ್ಬರು ಅಣ್ಣ ತಮ್ಮಂದಿರಿಗಿಂತಲೂ ಮಿಗಿಲಾಗಿ ಒಂದೇ ರೀತಿ ಇರುವೆವಲ್ಲಾ! ನಿಮ್ಮ ತಾಯಿ ಅಮೇರಿಕಕ್ಕೆ ಹೋಗಿದ್ದಳೆ!

ಜರ್ಮನಿಯವಃ— ಇಲ್ಲ, ನನ್ನ ತಂದೆ ಹೋಗಿದ್ದರು.

* * *

ಇಬ್ಬರು ಒಂದು ಸ್ಥಳದಲ್ಲಿ ಜಗಳವಾಡುತ್ತಾ ಕುಳಿತಿದ್ದು ಒಬ್ಬನು ಕೋಪದಿಂದ ಇನ್ನೊಬ್ಬನನ್ನು ಕೋಲಿನಿಂದ ಮುಟ್ಟಿ "ನನ್ನ ಕೋಲಿನ ತುದಿಯಲ್ಲಿ ಒಬ್ಬ ಮೂರ್ಖನು ಕೂತಿದ್ದಾನೆ" ಎಂದನು.

ಮತ್ತೊಬ್ಬಃ— "ಯಾವ ತುದಿಯಲ್ಲಿ?"

* * *

ಮುತ್ತಣ್ಣಃ— ಏನಪ್ಪಾ! ನೀನೂ ಹೋಗಿ ಸಮುದ್ರದಲ್ಲಿ ಕೆಲಸಕ್ಕೆ ಸೇರಿದಿಯೊ? ನಿನ್ನ ತಂದೆ ಸತ್ತದ್ದು ಸಮುದ್ರದಲ್ಲಿ ನಿನ್ನ ಅಜ್ಜ ಸತ್ತದ್ದು ಸಮುದ್ರದಲ್ಲಿ. ಇದೆಲ್ಲ ಗೊತ್ತಿಲ್ಲವೆ?

ಕಾರ್ಯಪ್ಪಃ— ಅದು ಸರಿ. ನಿನ್ನ ತಂದೆ ಸತ್ತದ್ದು ಈ ಮನೆಯಲ್ಲಿ, ನಿನ್ನ ಅಜ್ಜ ಸತ್ತದ್ದು ಈ ಮನೆಯಲ್ಲಿ. ಅದೆಲ್ಲ ತಿಳಿದು ನೀನೂ ಈ ಮನೆಯಲ್ಲಿ ವಾಸಿಸುತ್ತೀಯೇನು?

ಕೆ. ಎಂ. ಪಿ.

• • •

ಆಕೆಃ— ರೇಡಿಯೋ ಹೇಗೆ ಕೆಲಸ ಮಾಡುವದೆಂದು ವಿವರಿಸುವೆಯೊ?

ಆತಃ— ಉದ್ದದ ಒಂದು ನಾಯಿ ಇದೆಯೆಂದು ತಿಳಿಯುವ. ಅದರ ಬಾಲವು ಮಡಿಕೇರಿಯಲ್ಲಿದ್ದು ತಲೆಯು ಮೈಸೂರಿನಲ್ಲಿದೆಯೆನ್ನೋಣ ಮಡಿಕೇರಿಯಲ್ಲಿ ಆ ನಾಯಿಯ ಬಾಲ ಮೆಟ್ಟಿದರೆ ಅದು ಮೈಸೂರಿನಲ್ಲಿ ಕೂಗುವದಲ್ಲವೆ? ಅದೇ ಟೆಲಿಗ್ರಾಫ್. ರೇಡಿಯೋಕ್ಕೂ ಇದಕ್ಕೂ ಇರುವ ವ್ಯತ್ಯಾಸವೆಂದರೆ ರೇಡಿಯೋದಲ್ಲಿ ಆ ನಾಯಿ ಇಲ್ಲ!

• • •

ತನ್ನ ಕೇಸಿನ ವಿಚಾರಣೆಯು ತನಗೆ ಅಹಿತವಾಗಿ ಪರಿಣಮಿಸುತ್ತಿದೆಯೆಂದು ತಿಳಿದ ಕೈದಿಯು ಕೂಗಿಕೊಂಡನು. "ನ್ಯಾಯ, ನನಗೆ ಬೇಕಾದ್ದು ನ್ಯಾಯ, ನಾನು ನ್ಯಾಯಕ್ಕಾಗಿ ಚೀರುವೆನು."

"ಸುಮ್ಮನಿರು" ನ್ಯಾಯಾಧೀಶರು ಗರ್ಜಿಸಿದನು. "ಇದು ಕೋರ್ಟ್ ರೂಮ್ ತಿಳಿಯಿತೆ?"

* * *

ರಾಮೂ, ಕಮಲಳನ್ನು ನಿನ್ನ ಗೆಳತಿಯಾಗಿ ಮಾಡಿಕೊಂಡಿರುವೆಯಲ್ಲಾ ಕಾರಣ ವೇನೋ?

ಶ್ಯಾಮೂ, ಆಕೆ ಇತರ ಹುಡುಗಿಯರಿಗಿಂತಾ ಭಿನ್ನವಾಗಿ ಸ್ವತಂತ್ರ ಬುದ್ಧಿಯವಳು ಕಣೋ,

ಏನೋ! ಆಕೆಯ ಸ್ವತಂತ್ರ ಬುದ್ಧಿ?

ನನ್ನನ್ನು ಗೆಳೆಯನಾಗಿ ಒಪ್ಪಿದವಳು ಅವಳೊಬ್ಬಳೇ ಕಣೋ!

• • •

ರೈಲು ಅಪಘಾತವಾಗಿತ್ತು. ಹೆಂಗಸೊಬ್ಬಳು ಮೂರ್ಛಿತಳಾಗಿ ಬಿದ್ದಿದ್ದಳು. ಅದನ್ನು ನೋಡುತ್ತಿದ್ದ ಗಣೇಶನು "ಇಲ್ಲಿರುವವರಲ್ಲಿ ಯಾರ ಹತ್ತಿರನಾದರೂ ಬ್ರಾಂಡಿ ಇದೆಯೇ?" ಎಂದು ಕೂಗಿದನು.

ಪ್ರಯಾಣಿಕರಲ್ಲಿ ಅನೇಕರು ಬ್ರಾಂಡಿ ಬಾಟ್ಲುಗಳನ್ನು ಹೊರಗೆ ತಂದರು. ಗಣೇಶನು ಒಂದನ್ನು ತೆಗೆದುಕೊಂಡು ಮನತೃಪ್ತಿಯಾಗುವಂತೆ ಕುಡಿದು, "ತುಂಬಾ ವಂದನೆ. ಮೂರ್ಛಿತರಾದ ಹೆಂಗಸರನ್ನು ಕಂಡಾಗ ನನಗೆ ತುಂಬಾ ಸಂಕಟವಾಗುತ್ತದೆ" ಎಂದನು.

• • •

ಸೀತೆ ತನ್ನ ನಾಯಿಯನ್ನು ಜೊತೆಯಲ್ಲಿ ಕರಕೊಂಡು ವಾಕಿಂಗ್ ಹೋಗಿದ್ದಳು. ರಾಮನು ಆಕೆಯನ್ನು ಬೇಟಿಯಾಗಿ ಸಿನೇಮಕ್ಕೆ ಹೋಗುವ ಸೂಚನೆ ಮಾಡಿದನು ಆದರೆ ನಾಯಿಯನ್ನು ಏನುಮಾಡುವದೆಂದು ಯೋಚನೆ ಹುಟ್ಟಿತು. ರಾಮನು ನಾಯಿಯನ್ನು ಪೋಲೀಸ್ ಸ್ಟೇಶನಿಗೆ ತೆಗೆದುಕೊಂಡು ಹೋಗಿ "ಯಾರದೋ ನಾಯಿ ದೊರೆತಿದೆ"ಯೆಂದು ಕೊಟ್ಟು ಬಂದನು. ಇಬ್ಬರೂ ಸಿನೇಮಾ ನೋಡಿದರು. ಹಿಂತಿರುಗುವಾಗ ಸೀತೆ ಪೋಲೀಸ್ ಸ್ಟೇಶನಿಗೆ ಹೋಗಿ ತನ್ನ ನಾಯಿ ಕಾಣೆಯಾಗಿದೆಯೆಂದಳು. ನಾಯಿ ತಂದವರಿಗೆ ಐದು ರೂಪಾಯಿ ಬಹುಮಾನ ಕೊಡಬೇಕೆಂದು ಪೋಲೀಸರೆಂದರು. ಸೀತೆಯು ಕೊಟ್ಟು ನಾಯಿಯನ್ನು ತಂದಳು. ಮಾರಣೆ ದಿನ ರಾಮನು ಹೋಗಿ ಬಹುಮಾನ ಐದು ರೂಪಾಯಿಯನ್ನು ತಂದು ಸೀತೆಗೆ ಕೊಟ್ಟನು. ಎಲ್ಲವೂ ಸರಿಹೋಯಿತು.

ಮುಖರ್ಜಿಯವರಿಗೆ ಸ್ಮಾರಕ

ಪಂಜಾಬ್ ಜನ ಸಂಘದ ಕಾರ್ಯಕಾರಿ ಸಮಿತಿಯು ಇತ್ತೀಚೆಗೆ ಜಲಂಧರದಲ್ಲಿ ಕೂಡಿ, ಡಾ|| ಶ್ಯಾಮಪ್ರಸಾದ ಮುಖರ್ಜಿಯವರ ಅಕಾಲ ನಿಧನಕ್ಕೆ ಕುರಿತು ಸ್ವತಂತ್ರ ತನಿಖೆಯೊಂದು ಭಾರತ ಸರಕಾರದ ಕಡೆಯಿಂದ ನಡೆಯುವದು ಅತ್ಯವಶ್ಯವಿದೆ ಎಂಬ ನಿರ್ಣಯ ಕೈಕೊಂಡಿತು. ಡಾ|| ಮುಖರ್ಜಿಯವರಿಗೊಂದು ಯೋಗ್ಯ ಸ್ಮಾರಕವನ್ನು ರಚಿಸಲು ಪಂಜಾಬದಿಂದ ೧ ಲಕ್ಷ ರೂಪಾಯಿ ಸಂಗ್ರಹಿಸಬೇಕೆಂದು ಸಮಿತಿಯು ನಿರ್ಧರಿಸಿದೆ.

ಪಂಡಿತ ನೆಹರೂ ಕರಾಚಿಯಲ್ಲಿ

ಪಾಕಿಸ್ತಾನದ ಪ್ರಧಾನ ಮಂತ್ರಿಯೊಡನೆ ಮಹತ್ವಪೂರಿತ ಸಮಾಲೋಚನೆಗಳಿಗಾಗಿ ಪ್ರಧಾನ ಮಂತ್ರಿ ಪಂ. ನೆಹರೂ ತಾ. ೨೫ರ ಬೆಳಗ್ಗೆ ವಿಮಾನದಲ್ಲಿ ಕರಾಚಿಗೆ ಹೋಗಿರುವರು.

ಪಂಡಿತ ನೆಹರೂರವರ ಜತೆಯಲ್ಲಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್ ವಿದೇಶಾಂಗ ಇಲಾಖೆ ಉಪಮಂತ್ರಿ ಶ್ರೀ ಎ. ಕೆ. ಚಂದಾ, ವಿದೇಶಾಂಗ ಇಲಾಖೆ ಸೆಕ್ರೆಟರಿ ಶ್ರೀ ಎನ್. ಆರ್. ಪಿಳ್ಳೆ, ಕಾಮನ್ವೆಲ್ತ್ ಸೆಕ್ರೆಟರಿ ಶ್ರೀ ತ ಯಾಬ್ಜೀ ಮತ್ತು ಪಬ್ಲಿಕ್ ರಿಲೇಷನ್ಸ್ ಅಧಿಕಾರಿ ಶ್ರೀ ವಿ. ಆರ್. ಭಟ್‌ರೂ ಆಗಮಿಸಿದರು.

ಕರಾಚಿ ಮಾತುಕತೆಗಳ ಯಶಸ್ಸಿನ ಬಗ್ಗೆ ತಾವು ಸದಾ ಆಶಾಭಾವನೆಯಿಂದಿರುವುದಾಗಿಯೂ, ಶೀಘ್ರದಲ್ಲೇ ಈ ಸಂಧಾನ ಮುಂದುವರಿಸಲು ದೆಹಲಿಗೆ ಪಾಕಿಸ್ತಾನ ಪ್ರಧಾನ ಮಂತ್ರಿ ಮಿ|| ಮಹಮದಾಲಿಯವರೂ ಬರುವ ನಿರೀಕ್ಷೆಯನ್ನು ತಾವು ಹೊಂದಿರುವದಾಗಿಯೂ ಪಂಡಿತ ನೆಹರೂ ದೆಹಲಿಯಿಂದ ವಿಮಾನದಲ್ಲಿ ಹೊರಡುವ ಮುನ್ನ ಪತ್ರಿಕಾ ಪ್ರತಿನಿಧಿಗಳಿಗೆ ಹೇಳಿದರು.

ನೆಹರೂರವರನ್ನು ದೆಹಲಿ ವಿಮಾನ ನಿಲ್ದಾಣದಲ್ಲಿ ಭಾರತ ಸರಕಾರದ ಮಂತ್ರಿಗಳೂ, ಪಾಕಿಸ್ತಾನದ ಹೈಕಮಿಷನರೂ, ನೇಪಾಳಿ ರಾಯಭಾರಿಯೂ, ಭಾರತ ಸೈನ್ಯದ ಕಮಾಂಡರ್ ಇನ್ ಚೀಫ್‌ರೂ, ಇತರ ಅಧಿಕಾರಿಗಳೂ, ಖಾಸಗಿ ಮುಖಂಡರುಗಳೂ ಬೀಳ್ಕೊಟ್ಟರು.

ಕಾಶ್ಮೀರ ಪ್ರಶ್ನೆ, ದೇಶಬಿಟ್ಟು ಹೋದವರ ಆಸ್ತಿಪಾಸ್ತಿ ವಿಷಯ, ಕಾಲುವೆ ನೀರಿನ ವಿವಾದ ಮತ್ತು ಬಂಗಾಳಗಳ ಸಮಸ್ಯೆ ಇವುಗಳ ವಿಷಯವಾಗಿಯೇ ಮುಖ್ಯವಾಗಿ ತಮ್ಮ ಮಾತುಕತೆ ಕೇಂದ್ರೀಕೃತವಾಗಿರುವುದೆಂದು ನೆಹರೂ ಹೇಳಿದರು.

ಮಾತುಕತೆಯು ಬಹುತೇಕವಾಗಿ ಪ್ರಾಸ್ತಾವಿಕವಾಗಿರುವದೆಂದೂ, ಅನಂತರ ಅನತಿ ಶೀಘ್ರವೇ ಮಿ. ಮಹಮದಾಲಿಯವರ ದೆಹಲಿ ಭೇಟಿ ಹಿಂಬಾಲಿಸುವದೆಂದೂ ನೆಹರೂ ಹೇಳಿದರು.

ಮಳೆ ಎಂದರೇನೆಂದೇ ಗೊತ್ತಿಲ್ಲ!

ಮೈಸೂರು ಪ್ರಾಂತದ ಕೋಲಾರ ಜಿಲ್ಲೆಯ ಕೆಲವು ಭಾಗಗಳಲ್ಲಿ ೩ ಮತ್ತು ೪ ವರ್ಷ ಪ್ರಾಯದೊಳಗಿನ ಮಕ್ಕಳಿಗೆ ಮಳೆ ಎಂದರೆ ಏನೆಂಬುದೇ ತಿಳಿಯದು—ಎಂದು ಬಿ. ಬಿ. ನಾರಾಯಣ ರೆಡ್ಡಿಯವರು ಮೈಸೂರಿನ ಶಾಸನ ಸಭೆಯಲ್ಲಿ ಹೇಳಿದರು. ಹಿರಿಯರು ಮಳೆಯ ವಿಷಯ ಮಾತನಾಡುವಾಗ ಮಕ್ಕಳು "ಮಳೆಯೆಂದರೇನು?" ಎಂದು ಪ್ರಶ್ನಿಸುತ್ತಾರೆ. ಈ ಜಿಲ್ಲೆಯ ಕೆಲವು ಪ್ರದೇಶಗಳು ಮಳೆಯನ್ನು ಕಾಣದೆ ನಾಲ್ಕು ವರ್ಷಗಳಾದುವು—ಎಂದೂ ಅವರು ತಿಳಿಸಿದರು.

ಕೊಡಗಿನ ಸಹಕಾರದ ಹಿರಿಮೆಯ ಮೂಲ ಕರ್ತರಾದ

ಶ್ರೀ ಪಿ. ಎಂ. ಚಂಗಪ್ಪನವರು.

ಪರಿಚಯ.

೧೯೦೨ ರಲ್ಲಿ ಜನಿಸಿದ ಇವರು ತಮ್ಮ ವಿದ್ಯಾಭ್ಯಾಸವನ್ನು ಮಡಿಕೇರಿ ಸೆಂಟ್ರಲ್ ಹೈಸ್ಕೂಲು ಮತ್ತು ಕೊಯಮುತ್ತೂರು ವ್ಯವಸಾಯ ಕಾಲೇಜಿನಲ್ಲಿ ಮುಗಿಸಿ ೧೯೨೪ ರಲ್ಲಿ ಕೊಡಗು ಸಹಕಾರ ಇಲಾಖೆಯಲ್ಲಿ ಇನ್ಸ್‌ಪೆಕ್ಟರಾಗಿ ಸೇರಿದರು. ೧೯೩೭ ರಲ್ಲಿ ಅವರು ಇಂಗ್ಲೆಂಡಿನ ಮಂಚೆಸ್ಟರ್ ಕಾಲೇಜಿನಲ್ಲಿ ಸಹಕಾರ ಮತ್ತು ಸಾಮಾಜಿಕ ಸೇವೆಯ ವಿಷಯ ಹೆಚ್ಚಿನ ತರಬೇತು ಪಡೆದು ಬಂದರು. ಇವರು ಸಹಕಾರ ಕ್ಷೇತ್ರಕ್ಕೆ ಕೊಡಗಿನಲ್ಲಿ ಪ್ರವೇಶಿಸಿದಂದಿನಿಂದ ಕೊಡಗು ಸಹಕಾರ ರಂಗದ ವಿಸ್ತರಣೆಗಾಗಿಯೂ, ಅದರ ದಕ್ಷ ಕಾರ್ಯನಿರ್ವಹಣೆಗಾಗಿಯೂ ದುಡಿದು ಕ್ರಮವಾಗಿ ಸೀನಿಯರ್ ಇನ್ಸ್‌ಪೆಕ್ಟರ್, ಅ. ರಿಜಿಸ್ಟ್ರಾರ್ ಆಗಿ ಕಡೆಗೆ ೧೯೪೧ ರಲ್ಲಿ ರಿಜಿಸ್ಟ್ರಾರಾದರು.

ಚಳವಳದಲ್ಲಾದ ಪ್ರಗತಿ.

೧೯೨೪ ರ ಕಾಲಕ್ಕೆ ಕೊಡಗಿನಲ್ಲಿ ೧೮೮ ಸಹಕಾರ ಸಂಘಗಳಿದ್ದವು. ಇವುಗಳ ಸದಸ್ಯರ ಸಂಖ್ಯೆ ೯,೨೭೯ ಇತ್ತು. ಬಂಡವಾಳವು ರೂ. ೫ ಲಕ್ಷವಿತ್ತು. ಕ್ರಮಶಃ ಇದು ಬೆಳೆಯಿತು. ಕೇವಲ ಲೇವಾದೇವಿಯ ಒಂದು ಕೆಲಸವನ್ನು ಮಾಡುತ್ತಿದ್ದ ಸಹಕಾರ ಇಲಾಖೆಯು ವಿವಿಧ ಕಾರ್ಯಕ್ರಮಗಳನ್ನು ಕೈಕೊಂಡಿತು. ಎಲ್ಲಾ ಬ್ಯಾಂಕಿಂಗ್ ಕೆಲಸಗಳನ್ನು ಮಾಡುವ ಕೇಂದ್ರ ಬೇಂಕು, ಅದಕ್ಕೆ ಸಂಯೋಜಿತವಾದ ಹತ್ತಾರು ಪ್ರಾದೇಶಿಕ ಬ್ಯಾಂಕುಗಳು, ಸಹಕಾರ ಮಾರ್ಕೆಟಿಂಗ್ ಫೆಡರೇಶನ್, ಜೇನು, ಕಿತ್ತಳೆ, ಏಲಕ್ಕಿ, ಬತ್ತ ಮೊದಲಾದುವುಗಳ ಮಾರ್ಕೆಟಿಂಗ್ ಸಂಘಗಳು, ವಿದ್ಯಾರ್ಥಿ ಸಂಘಗಳು, ವಿನಿಯೋಗಿಸುವವರ ಸ್ಟೋರುಗಳು, ಉತ್ತಮ ಜೀವನ ಸಂಘಗಳು, ಮಿತವ್ಯಯ, ಕಟ್ಟಡ, ಹರಿಜನೋದ್ಧಾರ ಸಂಘಗಳು, ಮಹಿಳಾ ಸಮಾಜಗಳು, ಈ ರೀತಿ ವಿವಿಧ ಮುಖವಾಗಿ ಕೊಡಗಿನ ಸಹಕಾರ ಚಳವಳವು ಹಬ್ಬತೊಡಗಿತು. ೧೯೫೩ ರ ಕಾಲಕ್ಕೆ ಕೊಡಗಿನಲ್ಲಿ ೩೯೦ ಸಂಘಗಳಾದವು. ಸದಸ್ಯರ ಸಂಖ್ಯೆಯು ೪೮,೦೦೦ ಕ್ಕೇರಿತು. ಬಂಡವಾಳವು ೭೩ ಲಕ್ಷಕ್ಕೇರಿತು. ಒಟ್ಟು ವ್ಯವಹಾರ ಬಂಡವಾಳವು ಒಂದೂವರೆ ಕೋಟಿಯನ್ನು ಮೀರಿತು. ಪ್ರತಿ ಗ್ರಾಮಕ್ಕೊಂದರಂತೆ, ಕೆಲವು ಗ್ರಾಮಗಳಿಗೆ ಎರಡರಂತೆ ಸ್ಥಾಪಿತವಾದ ೩೯೦ ಸಂಘಗಳಲ್ಲಿ ೧೯೫ ಎ. ತರಗತಿಯಲ್ಲೂ, ೧೩೭ ಬಿ. ತರಗತಿಯಲ್ಲೂ, ಕೆಲಸ ಮಾಡುತ್ತಿವೆ. ಇವುಗಳಲ್ಲಿ ೨೩೪ ಸಂಘಗಳಿಗೆ ಸ್ವಂತ ಕಟ್ಟಡಗಳಿವೆ. ೭೩೫ ಸಂಘಗಳು ವಿವಿಧೋದ್ದೇಶ ಸಂಘಗಳಾಗಿವೆ. ಆದರೂ ಕೂಡ ಈ ವಿಶಾಲ ಪ್ರಯತ್ನದಲ್ಲಿ ಸಹಕಾರಂಗಳಿಗಿರುವ ಸರಕಾರಿ ಸಾಲ ಕೇವಲ ೭೫೦. ಇದರಲ್ಲೂ ರೂ. ೫೦೦೦ ಮಾಜಿ ಸಿಪಾಯಿಗಳ ಸಂಘಕ್ಕೆ ಕೊಟ್ಟದ್ದು. ಇದು ಕೊಡಗಿನ ಸಹಕಾರ ಚಳವಳದ ಉತ್ತಮ ಪ್ರಗತಿಯನ್ನು ತೋರಿಸುತ್ತದೆ.

ಕೊಡಗು-'ಸಹಕಾರ ಸಂಸ್ಥಾನ'

ಸಹಕಾರ ರಿಜಿಸ್ಟ್ರಾರಾದ ಶ್ರೀ ಪಿ. ಎಂ. ಚಂಗಪ್ಪನವರ ಮಾರ್ಗದರ್ಶನ ಮತ್ತು ಪರಿಶ್ರಮಗಳ ಅಲ್ಲದೆ ಅವರಿಗೆ ದೊರೆತ ಸಾರ್ವಜನಿಕರ ಬೆಂಬಲದಿಂದ ಕೊಡಗು ಹೆಜ್ಜೆ ಮುಂದಿಡುತ್ತಾ, ಸಹಕಾರ ಚಳವಳದ ಮಟ್ಟಿಗೆ ಹಿಂದೂ ದೇಶದಲ್ಲಿ ಅಗ್ರಸ್ಥಾನ ಪಡೆದಿದೆ. ೧೯೫೦-೫೧ ರಲ್ಲಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದವರು ಪ್ರಕಟಿಸಿರುವ ಸ್ಟೇಟ್‌ಮೆಂಟಿನಿಂದ ಈ ಕೆಳಗಿನ ಕೆಲವು ಸಂಖ್ಯೆಗಳನ್ನು ವಾಚಕರಿಗಾಗಿ ಕೊಡಲಾಗಿದೆ. ಹಿಂದೂದೇಶದ ಎಲ್ಲಾ ಪ್ರಾಂತಗಳ ಲೆಕ್ಕ ಅದರಲ್ಲಿ ಕೊಡಲ್ಪಟ್ಟಿದೆ. ಒಟ್ಟಾರೆ ಕೊಡಗು ಸಹಕಾರ ಚಳವಳದಲ್ಲಿ ಅಗ್ರಸ್ಥಾನ ಪಡೆದಿದೆ. ಎಲ್ಲಾ ಸಂಸ್ಥಾನಗಳ ಅಂಕೆ ಸಂಖ್ಯೆಗಳನ್ನು ಕೊಡುವದು ಅಸಾಧ್ಯವಾದುದರಿಂದ ಕೊಡಗಿನ ಮತ್ತು ನಮ್ಮ ನೆರೆಯ ಪ್ರಾಂತಗಳಾದ ಮದ್ರಾಸು ಮತ್ತು ಮೈಸೂರಿನ ಕೆಲವು ಅಂಕೆಸಂಖ್ಯೆಗಳನ್ನು ತುಲನಾತ್ಮಕ ದೃಷ್ಟಿಯಿಂದ ಇಲ್ಲಿ ಕೊಡಲಾಗಿದೆ.

ಪ್ರತಿ ಲಕ್ಷ ಜನಸಂಖ್ಯೆಗೆ ಕೊಡಗಿನಲ್ಲಿ ೧೭೭ ಸಹಕಾರ ಸಂಘಗಳಿದ್ದರೆ ಮದ್ರಾಸಿನಲ್ಲಿ ೪೩, ಮೈಸೂರಿನಲ್ಲಿ ೫೭.

ಪ್ರತಿ ಸಾವಿರ ಜನಕ್ಕೆ ಸಹಕಾರಿ ಸದಸ್ಯರ ಸಂಖ್ಯೆ ಕೊಡಗಿನಲ್ಲಿ ೨೪೧, ಮದ್ರಾಸಿನಲ್ಲಿ ೫೯, ಮೈಸೂರಿನಲ್ಲಿ ೫೪.

ವ್ಯವಹಾರಧನ ಪ್ರತಿ ತಲೆಗೆ ಬರುವ ಆಣೆಗಳ ಲೆಕ್ಕದಲ್ಲಿ ಕೊಡಗಿನಲ್ಲಿ ೪೬೭ ಮದ್ರಾಸು ೨೩೫, ಮೈಸೂರು ೧೨೧.

ಮೆಂಬರುತನದ ವಿಚಾರದಲ್ಲಿ ಕೊಡಗಿನ ಜನಸಂಖ್ಯೆಯ ಶೇಕಡ ೨೫ ರಷ್ಟು ಸಹಕಾರ ಸಂಘಗಳ ಸದಸ್ಯರಾಗಿದ್ದರೆ ಮದ್ರಾಸಿನಲ್ಲಿ ಶೇಕಡ ೬, ಮೈಸೂರಿನಲ್ಲಿ ಶೇಕಡ ೫.

ಸಾಲ ಪಡಕೊಂಡದ್ದು ಪ್ರತಿಯೊಬ್ಬನಿಗೆ ದಾಮಾಶಾಯಿರೂಪದಲ್ಲಿ ಕೊಡಗಿನಲ್ಲಿ ೪೯ ರೂಪಾಯಿಗಳಾದರೆ ಮದ್ರಾಸಿನಲ್ಲಿ ೬೪, ಮೈಸೂರಿನಲ್ಲಿ ೩೭.

ಕಳೆದ ಮೂವತ್ತು ವರ್ಷಗಳಿಂದ ಕೊಡಗಿನ ಸಹಕಾರ ಇಲಾಖೆಯಲ್ಲಿ ಅವಿರತ ದುಡಿದ ಶ್ರೀ. ಪಿ. ಎಂ. ಚಂಗಪ್ಪನವರ ಸೇವೆಯನ್ನು ಮೈಸೂರು ಸರಕಾರಕ್ಕೆ ಕೊಡಲಾಗಿದೆ ಅವರು ಬರುವ ವಾರದಲ್ಲಿ ಮೈಸೂರಿಗೆ ಹೋಗುವರು. ಅವರು ಈ ಮೂವತ್ತು ವರ್ಷಗಳಲ್ಲಿ ಮಾಡಿದ ಕೆಲಸಗಳ ಒಂದು ವಿಹಂಗಮ ನೋಟವು ಅಪ್ರಸ್ತುತವಾಗಲಾರದು.

ಈ ರೀತಿ ಕೊಡಗು, ಸಹಕಾರ ಚಳವಳದಲ್ಲಿ ಮುಂದರಿದು ಮದ್ರಾಸಿನ ಮಂತ್ರಿಯೋರ್ವರು ಹೇಳಿದಂತೆ ಕೊಡಗು 'ಸಹಕಾರ ಸಂಸ್ಥಾನ'ವಾಗಿದೆ.

ಪ್ರಶಂಸೆಗಳು.

ಕೊಡಗು ಸಹಕಾರ ರಂಗಸ್ಥಳದಲ್ಲಿ ಶ್ರೀ. ಚಂಗಪ್ಪನವರು ಮಾಡಿದ ಕೆಲಸವನ್ನು ಕೊಡಗಿನ ಚೀಫ್ ಕಮಿಷನರಾಗಿದ್ದ ಜೆ. ಡಬ್ಲ್ಯು ಪ್ರಿಚಾರ್ಡ್, ಕರ್ನಲ್ ಗಾರ್ಡನ್, ದಿವಾನ್ ಬಹದೂರ್ ಚಂಗಪ್ಪ, ಸಿ. ಟಿ. ಮೊದಲಿಯಾರ್ ಮೊದಲಾದವರು ವ್ಯಕ್ತಿಗತವಾಗಿ ಪ್ರಶಂಸಿಸಿದ್ದಾರೆ. ಅದೇ ಸಮಯದಲ್ಲಿ ಇಂಡಿಯನ್ ಟೇರಿಫ್ ಬೋರ್ಡಿನ ಮೆಂಬರಾದ ಡಾ. ಬಿ. ವಿ. ನಾರಾಯಣಸ್ವಾಮಿ ನಾಯುಡುರವರು, ಸಂಯುಕ್ತ ರಾಷ್ಟ್ರ ಸಂಘದ "ಇಕೆಫೆ"ಯ ಸೆಕ್ರೆಟರಿಯವರಾದ ಡಾ. ಪಿ. ಎಸ್. ಲೋಕನಾಥನ್, ಮದ್ರಾಸಿನ ರಿಜಿಸ್ಟ್ರಾರಾದ ಶ್ರೀ ಜೆ. ಸಿ ರಾಯನ್, ಮದ್ರಾಸ್ ಸೆಂಟ್ರಲ್ ಭೂಮಿಅಡಮಾನ ಬೇಂಕಿನ ಪ್ರೆಸಿಡೆಂಟರಾದ ಬಿ. ವೆಂಕಟರಮಣ, ಮದ್ರಾಸಿನ ಸಹಕಾರ ಮಂತ್ರಿಗಳಾಗಿದ್ದ ಶ್ರೀ ಕೆ. ಚಂದ್ರಮೌಳಿ, ರಿಜರ್ವ್ ಬೇಂಕಿನ ಆಫೀಸರಾದ ಶ್ರೀ ಶಿವರಾಮ ಮೊದಲಾದವರು ಮುಕ್ತಕಂಠದಿಂದ ಕೊಡಗಿನ ಸಹಕಾರ ಚಳವಳವನ್ನು ಹೊಗಳಿರುವದಲ್ಲದೆ ಕೊಡಗಿನ ಚೀಫ್ ಕಮಿಷನರುಗಳಿಗೂ ಬರೆದಿರುವರು.

ಕೊಡಗಿನ ಸಹಕಾರ ಚಳವಳದ ವಿಚಾರದಲ್ಲಿ ಶ್ರೀ. ಕೆ. ಚಂದ್ರಮೌಳಿಯವರು ಚೀಫ್ ಕಮಿಷನರಿಗೆ ಬರೆದ ಪತ್ರ (೧೯೪೯ ನೇ ಏಪ್ರಿಲ್ ತಿಂಗಳ ಮದ್ರಾಸ್ ಜರ್ನಲ್ ಆಫ್ ಕೋಆಪರೇಶನ್, ಇದರಲ್ಲಿ ಪ್ರಕಟವಾಗಿದೆ) ದಲ್ಲಿ ಹೀಗೆ ಹೇಳಿರುವರು. 'ಕೊಡಗಿನ ಸಹಕಾರ ರಂಗದ ಕಾರ್ಯಕಲಾಪಗಳು ಅನೇಕ ದೊಡ್ಡ ಪ್ರಾಂತಗಳನ್ನು ತಲೆ ಬಾಗಿಸುವಂತೆ ಮಾಡಿವೆ. ಮದ್ರಾಸು ಯಾವಾಗಲೂ ಸಹಕಾರದಲ್ಲಿ ಮುಂದರಿದಿದೆಯೆಂದು ಹೆಮ್ಮೆಪಡುತಿತ್ತು. ಆದರೆ ನಿಮ್ಮ ಸುಂದರವಾದ ಚಿಕ್ಕ ಪ್ರಾಂತವು ಮದ್ರಾಸಿಗಿಂಥಾ ಸಹಕಾರ ತತ್ವದಲ್ಲಿ ಸಮರಸವಾಗಿ ಬೆರೆತಿದೆ.....ಯಾವುದೇ ವಿರೋಧದ ಭಯವಿಲ್ಲದೆ ನಾನು ಹೇಳುವದಾದರೆ ರಿಜಿಸ್ಟ್ರಾರಾದ ಶ್ರೀ ಪಿ. ಎಂ. ಚಂಗಪ್ಪನವರು ಅಪಾರ ಶ್ರಮವನ್ನು ತೆಗೆದುಕೊಂಡು ಸಹಕಾರ ಚಳವಳವು ವಿವಿಧ ಮುಖವಾಗಿ ಹಬ್ಬುವಂತೆ ಮಾಡಿರುವದಲ್ಲದೆ ಅವರು ಜನತೆಯೊಡನೆ ಸಮರಸರಾಗಿ ಬೆರೆತು ಅತುಳ ಸೇವೆಯನ್ನು ಕೊಡಗಿಗೆ ಸಲ್ಲಿಸಿರುವರು.'

ಉತ್ತಮ ಆದರ್ಶ.

ಈ ರೀತಿಯಲ್ಲಿ ಕೊಡಗು, ಸಹಕಾರ ಕ್ಷೇತ್ರದಲ್ಲಿ ತನ್ನ ವಿಜಯ ಪತಾಕೆಯನ್ನು ಎತ್ತಿ ಹಿಡಿದು ಇಡೀ ಹಿಂದೂಸ್ಥಾನಕ್ಕೆ ಆದರ್ಶವಾಗಲು ದೇಶದ ಜನರಲ್ಲಿರುವ ಸಹಕಾರ ಬುದ್ಧಿ, ಜಾಗೃತಿ ಮತ್ತು ಕಾರ್ಯದಕ್ಷತೆಗಳು ಕಾರಣವಾದರೂ ಈ ಸುಪ್ತಶಕ್ತಿಗಳಿಗೆ ಚಾಲನೆಯನ್ನು ಕೊಟ್ಟು ಯೋಗ್ಯ ಮಾರ್ಗದಲ್ಲಿ ಅವು ಕೆಲಸ ಮಾಡುವಂತೆ ಪ್ರೇರೇಪಿಸಿ, ಸಹಕಾರದ ವಿಮಲ ತತ್ವವು ಪ್ರತಿ ಮನೆಮಾತಾಗುವಂತೆ ಮಾಡಿದ ಗೌರವವು ಮುಖ್ಯವಾಗಿ ಶ್ರೀ ಚಂಗಪ್ಪನವರಿಗೆ ಸಲ್ಲುತ್ತದೆ. ಶ್ರೀಯುತರು ಆಯಾಸವಿಲ್ಲದೆ ದುಡಿಯುವ ಕೆಲಸಗಾರರು. ತತ್ವಪ್ರಚಾರಕ್ಕೆ ಆವಶ್ಯವಾದ ಉತ್ತಮ ಮಾತುಗಾರರು. ಜನರೊಡನೆ ಒಂದಾಗಿ ಬೆರೆಯಬಲ್ಲವರು. ಈ ರೀತಿಯ ಗುಣಗಳಿರುವ ಅಚ್ಚ ಸಹಕಾರಿಯಾದ ಇವರು ಕೊಡಗಿಗೆ ಅಪಾರ ಸೇವೆ ಸಲ್ಲಿಸಿ, ಅದಕ್ಕೆ ಒಂದು ಕೀರ್ತಿಯನ್ನು ತಂದು ಈಗ ಮೈಸೂರಿಗೆ ಹೋಗುವವರಿದ್ದಾರೆ. ಇವರ ವರ್ಗಾವರ್ಗಿಯಿಂದ ಕೊಡಗಿನ ಸಹಕಾರಿ ಚಳವಳಕ್ಕೆ ತುಂಬಲಾರದ ನಷ್ಟವಾಗಿದೆ ಎಂಬುವುದರಲ್ಲಿ ಸಂಶಯವಿಲ್ಲ. ಮೈಸೂರಿನಲ್ಲೂ ಇವರು ತಮ್ಮ ಕರ್ತವ್ಯದಕ್ಷತೆಯಿಂದ ಸರ್ವರ ಮೆಚ್ಚುಗೆಗೆ ಪಾತ್ರರಾಗುವರೆಂದು ಹೇಳುವದರಲ್ಲಿ ಸಂಶಯವಿಲ್ಲ. ಇವರಿಗೆ ಶುಭವಾಗಲಿ.

ಜೂನ್ ತಿಂಗಳಲ್ಲಿ ಮಿತ್ರ ಸೈನ್ಯಗಳಿಗೆ ಹೆಚ್ಚು ನಷ್ಟ

ಕೊರಿಯಾದಲ್ಲಿ ಕಳೆದ ಜೂನ್ ತಿಂಗಳಲ್ಲಿ ೭೦,೧೭೩ ಮಂದಿ ಶತ್ರು ಸೈನಿಕರನ್ನು ನಾಶ ಮಾಡಲಾಯಿತೆಂದು ಪೆಕಿಂಗ್ ರೇಡಿಯೋ ತಾ. ೨೪ರಲ್ಲಿ ಪ್ರಕಟಿಸಿದೆ.

ನವಚೀನಾ ವಾರ್ತಾ ಸಂಸ್ಥೆಯ ಸುದ್ದಿಯನ್ನು ಪೆಕಿಂಗ್ ರೇಡಿಯೋ ಉಲ್ಲೇಖಿಸಿ, ಕಮ್ಯೂನಿಸ್ಟರು ೧೯೧ ಫಿರಂಗಿಗಳನ್ನೂ, ೫೪೪೧ ಬಂದೂಕಗಳನ್ನೂ, ೧೭ ಟ್ಯಾಂಕುಗಳನ್ನೂ ೨೮ ಮೋಟಾರು ವಾಹನಗಳನ್ನೂ ಮತ್ತು ೩೭೫ ವಾರ್ತಾವಾಹಕ ಯಂತ್ರೋಪಕರಣಗಳನ್ನೂ ವಶಪಡಿಸಿಕೊಂಡರೆಂದು ತಿಳಿಸಿದೆ. ಶತ್ರುಗಳ ೫೮೦ ವಿಮಾನಗಳನ್ನೂ, ೭೭ ಟ್ಯಾಂಕುಗಳನ್ನೂ, ೭೫೪ ಫಿರಂಗಿಗಳನ್ನೂ ಕಮ್ಯೂನಿಸ್ಟರು ನಾಶ ಮಾಡಿದುದಾಗಿಯೂ ಅದು ತಿಳಿಸಿದೆ.

ಆಗತ್ಯವಾದರೆ ಕಾವ್ವೊಬ್ಬರೇ ಯುದ್ಧ ನಡೆಸಿ, ಯಾಲು ನದಿಯ ವರೆಗೂ ನುಗ್ಗುವುದಾಗಿ ಕೂಗುತ್ತಿರುವ ದಕ್ಷಿಣ ಕೊರಿಯ ಸೈನ್ಯಕ್ಕೆ ಜೂನ್ ತಿಂಗಳ ಯುದ್ಧದಲ್ಲಿ ಬಹಳ ನಷ್ಟವಾಗಿರುವುದಾಗಿಯೂ ಪೆಕಿಂಗ್ ರೇಡಿಯೋ ಪ್ರಕಟಿಸಿದೆ. ದಕ್ಷಿಣ ಕೊರಿಯಾದ ಏಡನೆಯ ಮತ್ತು ಎಂಟನೆಯ ಡಿವಿಷನ್‌ಗಳನ್ನು ಗುರುತು ಸಿಗದಂತೆ ಹೊಡೆದು ಹಾಕಲಾಗಿದೆಯೆಂದು ತಿಳಿಸಿದೆ.

ಜ್ಞಾನ ದೀಪ.

(೧)

ಉಣ್ಣೆ ಹೊದ್ದವನಿಗೆ ಛಳಿ—ಉದ್ವೇಗ ಗೆದ್ದವನಿಗೆ ಛಲ—ಉದ್ರೇಕವಿದ್ದವನಿಗೆ ಬಲ—ಕಡಿಮೆ.

(೨)

ಕಾರ್ಯಸಾಧನೆಗಾಗಿ ತೋರಿಸುವ ಕರುಣೆ, ನರ್ತನದಲ್ಲಿ ತೋರಿಸುವ ನಾಚಿಕೆ ಸಮಾಜದಲ್ಲಿ ತೋರಿಸುವ ಆಡಂಬರ—ಕೇವಲ ಕೃತಕ.

(೩)

ತಗಣೆ ಇರುವ ಮಂಚಕ್ಕಿಂತಲೂ ಸಗಣಿ ಸಾರಿಸಿದ ನೆಲವೇ ವಾಸಿ. ಸಂಕಟದಾಯಕ ಅರಮನೆ ವಾಸಕ್ಕಿಂಥಾ ಶಾಂತಿದಾಯಕ ಅಜ್ಞಾತವಾಸ ಲೇಸು.

—

ಕೊಡಗು

ತಾರೀಕು ೩೧ ಜುಲೈ ೧೯೫೩ನೇ ಶುಕ್ರವಾರ

ಕೊರಿಯಾ ಯುದ್ಧ ನಿಂತಿತು.

ಈ ತಾರೀಕು ೨೭ ರಲ್ಲಿ ಕೊರಿಯಾ ಶಾಂತಿ ಪ್ರಯತ್ನವು ಸಫಲವಾಗಿ ಯುದ್ಧ ನಿಂತಿತು. ಇದರಿಂದ ಇಡೀ ಜಗತ್ತಿಗೇ ಹರ್ಷವಾಗಿದೆ. ಕೊರಿಯಾ ಯುದ್ಧವು ಪ್ರಾರಂಭವಾಗಿ ಇಂದಿಗೆ ೩೭ ತಿಂಗಳುಗಳಾದವು. ಯುದ್ಧ ಪ್ರಾರಂಭವಾದ ಒಂದು ವರ್ಷದ ನಂತರವೇ ಶಾಂತಿಯ ಯತ್ನವು ನಡೆದರೂ ಅದು ಫಲಕಾರಿಯಾಗಿ ಕಡೆಗೊಮ್ಮೆ ಶಾಂತಿಯ ಬಗ್ಗೆ ಒಪ್ಪಂದವಾಗಿ ಇಕ್ಕಡೆಯವರೂ ಪತ್ರಗಳಿಗೆ ಸಹಿ ಹಾಕಲು ೨೪ ತಿಂಗಳು ೧೭ ದಿನಗಳು ಹಿಡಿದವು. ಹೇಗೂ ತಾ. ೨೭ ಜಗತ್ತಿನ ಚರಿತ್ರೆಯಲ್ಲಿ ಒಂದು ಶುಭ ದಿನವಾಯಿತು. ಸಂಯುಕ್ತ ರಾಷ್ಟ್ರಸಂಘದ ಪರವಾಗಿ ಜನರಲ್ ಹೇರಿಸನರೂ, ಕಮ್ಯೂನಿಸ್ಟ್ ದಳದ ಪರವಾಗಿ ಜನರಲ್ ನಾಮ್ ಇಲ್‌ರವರೂ ರಾಜಿ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ.

ಕೊರಿಯಾ ಯುದ್ಧವು ಬಹುದೂರದಲ್ಲಿ ನಡೆಯುತಿದ್ದು ಅದರ ವಿವರಗಳು ಸಾಕಷ್ಟು ಪೂರ್ಣತೆಯಿಂದ ಪ್ರಕಟವಾಗದ ಕಾರಣ ಆ ಯುದ್ಧದಲ್ಲಾದ ನಷ್ಟಕಷ್ಟಗಳ ಸರಿಯಾದ ಪರಿಜ್ಞಾನ ಬಹು ಜನರಿಗೆ ಆಗಿಲ್ಲ. ಕೊರಿಯಾದ ಜನರು ಆ ಯುದ್ಧದಲ್ಲಿ ಎರಡು ಮಹಾ ಶಕ್ತಿಗಳ ನಡುವೆ ಸಿಕ್ಕಿ ಹುಡಿ ಹುಡಿ ಆದರು. ಕಳೆದ ಮೇ ತಿಂಗಳಲ್ಲಿ ಪ್ರಕಟಿಸಿದ ಅಂಕೆಸಂಖ್ಯೆಗಳಂತೆ ಇಕ್ಕಡೆಯ ಸೈನ್ಯದಲ್ಲಿ ೨,೫೦೦,೦೦೦ ಸೈನಿಕರು ಹತರಾಗಿರುವರು. ದಕ್ಷಿಣ ಕೊರಿಯಾ ಒಂದರಲ್ಲೇ ಹತ್ತು ಮಿಲಿಯ ಜನರು ಮನೆ ಮಠ ಕಳೆದುಕೊಂಡು ನಿರಾಶ್ರಿತರಾದರು. ಯೋಗ್ಯ ಆಹಾರ ಉಣ್ಣಲು ಇಲ್ಲದೆ ನಿರಾಶ್ರಿತರಾದ ಜನರಲ್ಲಿ ಸುಮಾರು ನಾಲ್ಕು ಮಿಲಿಯ ನಾಗರಿಕರು ಮೃತರಾಗಿರುವರು. ಉತ್ತರ ಕೊರಿಯದಲ್ಲಾದ ನಷ್ಟವನ್ನು ಸಂಯುಕ್ತ ಅಮೇರಿಕದ ಸ್ಟೇಟ್ ಸೆಕ್ರೆಟರಿ ಡಲ್ಲೆಸರು ಈ ರೀತಿ ಹೇಳಿರುವರು. "ಕಮ್ಯೂನಿಸ್ಟ್ ದಳಗಳಿಗೆ ಭಯಂಕರ ನಷ್ಟವಾಯಿತು. ಕಮ್ಯೂನಿಸ್ಟ್ ದಳದ ಸುಮಾರು ಎರಡು ಮಿಲಿಯ ಜನರು ಹತರಾಗಿದ್ದಾರೆ. ಪ್ರತಿ ಮೂರು ಜನರಿಗೆ ಒಬ್ಬರಂತೆ ಉತ್ತರ ಕೊರಿಯದ ಒಟ್ಟು ಹತ್ತು ಮಿಲಿಯ ನಾಗರಿಕರಲ್ಲಿ ಜನರು ಯುದ್ಧದ ಪರಿಣಾಮವಾಗಿ ಮತ್ತು ಯುದ್ಧದಿಂದ ಉಪಸ್ಥಿತವಾದ ಆಹಾರಾಭಾವ ಮೊದಲಾದುವುಗಳಿಂದ ನಾಶವಾಗಿದ್ದಾರೆ" ಈ ರೀತಿ ಜನಸಂಖ್ಯೆಯಲ್ಲದೆ ಕಟ್ಟಡ, ಆಸ್ತಿ ಮೊದಲಾದುವುಗಳ ನಾಶದಿಂದ ಆದ ನಷ್ಟ ಗಣನಾತೀತವಾದುದು.

ಈ ಮೇಲಿನ ಅಂಕೆ ಸಂಖ್ಯೆಗಳು ಕೊರಿಯಾ ಯುದ್ಧದ ಭಯಂಕರತೆಯನ್ನು ಸ್ವಲ್ಪ ಮಟ್ಟಿಗೆ ತಿಳಿಸುತ್ತವೆ. ಇಂಥಾ ಭಯಾನಕ ಯುದ್ಧವು ಕೊನೆಗೊಂಡಿತ್ತೆಂದು ಹೇಳುವಾಗ ಪ್ರತಿಯೊಬ್ಬ ವ್ಯಕ್ತಿಗೂ ಸಂತೋಷವಾಗಲೇಬೇಕು. ಆದರೂ ಇದರಿಂದ ಸಂತೋಷಗೊಳ್ಳದ ಕೆಲವು ಜನರಿದ್ದಾರೆ. ದಕ್ಷಿಣ ಕೊರಿಯಾದ ಪ್ರೆಸಿಡೆಂಟರಾದ ಡಾ. ಸಿಂಗ್‌ಮನ್ ರೀ ಯವರಿಗೆ ಈ ಒಪ್ಪಂದ ತೃಪ್ತಿಯಿಲ್ಲ. ಉತ್ತರ ಮತ್ತು ದಕ್ಷಿಣವೆಂದು ವಿಭಾಗವಾಗಿರುವ ಕೊರಿಯಾವನ್ನು ಒಂದು ಗೂಡಿಸದೆ ಶಾಂತಿಯಿಲ್ಲವೆಂದು ಅವರ ವಾದವಾಗಿದೆ ಆ ಕಾರಣದಿಂದಲೇ ಕೆಲವು ತಿಂಗಳುಗಳ ಹಿಂದೆಯೇ ಆಗಲಿದ್ದ ಈ ಒಪ್ಪಂದವನ್ನು ಆಗಗೊಡದೆ ಯುದ್ಧ ಕೈದಿಗಳನ್ನು ಬಿಡುಗಡೆ ಮಾಡಿ ಇಲ್ಲದ ತೊಂದರೆ ತಂದೊಡ್ಡಿದರು. ಈಗಲೂ ಕೂಡ ತಮ್ಮ ಪ್ರತ್ಯೇಕ ಸೈನ್ಯವನ್ನು ಸಂಘಟಿಸಿ ಕೊರಿಯಾದ ಐಕ್ಯತೆಗಾಗಿ ಹೋರಾಡುವ ಸಂಕಲ್ಪದಿಂದಿದ್ದಾರೆ. ಆದರೆ ಸಂಯುಕ್ತ ಅಮೇರಿಕಾದ ಒತ್ತಡದ ಕಾರಣ ಮುಂಬರುವ ಆರು ತಿಂಗಳುಗಳ ವರೆಗೆ ತಾನು ಯಾವ ಕಾರ್ಯಕ್ರಮವನ್ನೂ ಕೈಕೊಳ್ಳದೆ ತಟಸ್ಥ ಉಳಿಯುವ ನಿರ್ಧಾರ ಮಾಡಿದ ಕಾರಣ ಈಗ ಸಂಧಾನ ಆಗುವದು ಸಾಧ್ಯವಾಯಿತು. ಆರು ತಿಂಗಳ ನಂತರ ಸಿಂಗ್‌ಮನರು ಕೈಕೊಳ್ಳುವ ವರ್ತನೆಯ ಮೇಲೆ ಈ ಸಂಧಾನದ ಭವಿಷ್ಯ ನಿಂತಿದೆ.

ಸದ್ಯಕ್ಕೆ ಆಗಿರುವ ಸಂಧಾನದ ಶರತುಗಳಂತೆ ಎರಡೂ ಸೇನೆಗಳ ಮಧ್ಯೆ ೨½ ಮೈಲು ಅಗಲದ ತಟಸ್ಥವಲಯವನ್ನು ರಚಿಸಲಾಗಿದೆ ಅಲ್ಲದೆ ಎರಡೂ ಕಡೆಯವರಿಂದ ಕೂಡಿದ ಹತ್ತು ಜನರ ಸಂಧಾನ ಸಮಿತಿಯ ರಚನೆಯಾಗಿದೆ. ಇವರ ಜೊತೆಗೆ ಎರಡು ಕಡೆಯ, ಕೆಲವು ಸೈನಿಕ ಪ್ರತಿನಿಧಿಗಳನ್ನೂ ಆಯ್ದುಕೊಂಡು ಸಂಧಾನ ಶರತುಗಳನ್ನು ಜಾರಿಯಲ್ಲಿ ತರುವ ಯತ್ನ ನಡೆದಿದೆ.

ಈ ರೀತಿ ಒಪ್ಪಂದವಾದ್ದರಿಂದ ಅಂತರಾಷ್ಟ್ರೀಯ ರಂಗದಲ್ಲಿ ಬದಲಾವಣೆಯಾಗುವದೆಂದು ಆಶಿಸಲಾಗಿದೆ. ಸಂಯುಕ್ತರಾಷ್ಟ್ರ ಸಭೆಯಲ್ಲಿ ಕಮ್ಯೂನಿಸ್ಟ್ ಚೀನದ ಬಗ್ಗೆ ಈ ವರೆಗೆ ಇದ್ದ ಭಾವನೆಯು ಬದಲಾಗಿ ಪ್ರಮುಖ ರಾಷ್ಟ್ರಗಳಲ್ಲಿರುವ ಮನಕ್ಲೇಶ ಘರ್ಷಣೆಗಳು ಕಡಿಮೆಯಾಗಿ ಜಗತ್ತು ಶಾಂತಿಯ ಗುರಿಯತ್ತ ಕ್ರಮಶಃ ಮುಂದರಿದು ಜಗತ್ತಿನ ಆಕಾಶದಲ್ಲಿ ಕವಿದಿರುವ ಯುದ್ಧ ಕಾರ್ಮೋಡಗಳು ದೂರ ಸರಿದು ಶಾಂತಿಯ ಸೂರ್ಯನ ಉದಯವಾಗಲೆಂದು ನಮ್ಮ ಆಸೆ.

ವರ್ತಮಾನ.

ಈ ವರೆಗೆ ಎಂದರೆ ತಾ. ೩೦-೭-೫೩ ರ ವರೆಗೆ ಮಡಿಕೇರಿಗೆ ಒಟ್ಟು ೭೫ ಇಂಚು ೪೦ ಸೆಂಟು ಮಳೆಯಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ೫೭ ಇಂಚು ೬೧ ಸೆಂಟು ಆಗಿತ್ತು.

ಸಿದ್ದಾಪುರ ಗಟ್ಟದಳ್ಳ ಗ್ರಾಮದ ಶ್ರೀ ಕೀರ್ತಿಯಂತ ಜೆ. ಮುದ್ದಪ್ಪನವರು ತಾ. ೨೦ರಲ್ಲಿ ತಮ್ಮ ೬೨ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರು.

ಇಂಡಿಯಾ ಸರಕಾರದ ಅರಣ್ಯಶಾಖೆಯ ಇನ್ಸ್‌ಪೆಕ್ಟರ್ ಜನರಲರಾದ ಶ್ರೀ ಚತುರ್ವೇದಿಯವರು ತಾ. ೩೧ರಲ್ಲಿ ಮಡಿಕೇರಿಗೆ ಬಂದು ತಾ ೪ರಲ್ಲಿ ಹಿಂತೆರಳುವರು

ಕೊಡಗು ಸರಕಾರಿ ಕಾಲೇಜಿನ ಇತಿಹಾಸ ಪ್ರೊಫೆಸರಾಗಿ ಜನಾಬ್ ಹಮೀದ್‌ರವರನ್ನು ನೇಮಿಸಿರುವರು. ಇಂಗ್ಲಿಷ್ ಪ್ರೊಫೆಸರಾಗಿ ನೇಮಕವಾಗಿದ್ದ ಶ್ರೀ ಗೋವಿಂದರಾಯರ ಕಾರಣಾಂತರ ಕೆಲಸಕ್ಕೆ ಬಾರದ ಕಾರಣ ಅವರ ಬದಲು ಶ್ರೀ ಎಲ್. ಎಸ್. ಶೇಷಗಿರಿಯವರನ್ನು ನೇಮಿಸಿರುವದಾಗಿ ವಾರ್ತೆ.

ಬಿ. ಎಸ್. ಸಿ. ಪರೀಕ್ಷೆಯಲ್ಲಿ ಸಸ್ಯಶಾಸ್ತ್ರವನ್ನು ಮುಖ್ಯ ಭಾಗವಾಗಿ ತೆಗೆದುಕೊಂಡು ೧ನೇ ಅಥವಾ ಎರಡನೇ ತರಗತಿಯಲ್ಲಿ ಪಾಸಾದವರು ಇಲ್ಲವೇ ಎಂ. ಎಸ್. ಸಿ. ಯಲ್ಲಿ ಸಸ್ಯ ಶಾಸ್ತ್ರವನ್ನು ಮುಖ್ಯ ಭಾಗವಾಗಿ ತೆಗೆದುಕೊಂಡು ಪಾಸಾದವರು ಡೆಮೊನ್‌ಸ್ಟ್ರೇಟರ್ ಕೆಲಸಕ್ಕೆ ಬೇಕಾಗಿರುವರು. ಅರ್ಹರಾದವರು ಮಡಿಕೇರಿ ಎಂಪ್ಲಾಯ್‌ಮೆಂಟ್ ಆಫೀಸಿನಿಂದ ಹೆಚ್ಚಿನ ವಿಷಯವನ್ನು ಖುದ್ದಾಗಿ ಕೂಡ್ಲೆ ತಿಳಿದುಕೊಳ್ಳಬಹುದು.

ತಾ. ೨೦ ರಲ್ಲಿ ಶನಿವಾರಸಂತೆಯ ಕಟ್ಟೆ ಹಳ್ಳಿಯಲ್ಲಿ ಶ್ರೀ ಪಿ. ಕೆ. ಚೆನ್ನಯ್ಯನವರಿಂದ ಒಂದು ಫೀಡರ್ ಶಾಲೆಯು ತೆರೆಯಲ್ಪಟ್ಟಿತು. ಸಮಾರಂಭಕ್ಕೆ ಶ್ರೀ ಯು. ಬಿ. ಮಲ್ಲಪ್ಪನವರು ಅಧ್ಯಕ್ಷರಾಗಿದ್ದರು. ಶಾಲಾ ಕಟ್ಟಡಕ್ಕಾಗಿ ತಮ್ಮ ಸಹೋದರ ಪುಟ್ಟಸ್ವಾಮಿಗೌಡರ ಹೆಸರಿನಲ್ಲಿ ರೂ. ೫೦೧ ಧರ್ಮಾರ್ಥ ಕೊಡುವದಾಗಿ. ಶ್ರೀ ಕೆ. ಎಸ್. ಶಾಂತಮಲ್ಲಪ್ಪನವರು ವಾಗ್ದಾನ ಮಾಡಿದರು.

—

ಸಾರ್ವಜನಿಕ ಸಭೆಗಳು

ಕಾವಾಡಿ

ತಾ. ೨೦-೭-೫೩ರಲ್ಲಿ ಕಾವಾಡಿ ಭಗವತಿ ದೇವಸ್ಥಾನದಲ್ಲಿ ಶ್ರೀ ನೆಲ್ಲಮಕ್ಕಳ ದೇವಯ್ಯನವರ ಅಧ್ಯಕ್ಷತೆಯಲ್ಲಿ ಕಾವಾಡಿ ಗ್ರಾಮಸ್ಥರು ಸಭೆಸೇರಿ ಕೊಡಗು ಸರಕಾರವು ಕಂದಾಯವಿಲ್ಲದ ರೈತನ ಬಾಣೆ ಜಾಗಕ್ಕೆ ಎಕರೆಗೆ ನಾಲ್ಕಾಣೆಯಂತೆ ಕಂದಾಯ ನಿಶ್ಚಯಿಸಿ ೫೩-೫೪ರ ಬಜೆಟ್ಟಿನಲ್ಲಿ ಸೇರಿಸಿದ್ದು ನ್ಯಾಯವಲ್ಲವೆಂದೂ, ಈಗ ರೆವಿನ್ಯೂ ರೂಲ್ ತಿದ್ದುಪಡಿಯ ಬಗ್ಗೆ ಜನರ ಅಭಿಪ್ರಾಯ ಹೇಳುವದು ಯೋಗ್ಯ ನೀತಿ ಅಲ್ಲವೆಂದೂ ಸರಕಾರವು ಈ ಕಂದಾಯ ಹಾಕಕೂಡದೆಂದೂ ಠರಾವು ಪಾಸು ಮಾಡಲಾಯಿತು.

ನೂಕೆಕಂಡಿ

ಬೇಟೋಳಿ ಹೆಗ್ಗಳ, ಆರ್ಜಿ ಗ್ರಾಮಸ್ಥರು ನೂಕೆ ಕಂಡಿ ಪಬ್ಲಿಕ್ ರಸ್ತೆಯ ಬಳಿ ತಾ. ೨೬ರಲ್ಲಿ ಶ್ರೀ ಗುಡ್ಡಂಡ ಭೀಮಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಈ ಕೆಳಗಿನ ಠರಾವುಗಳನ್ನು ಪಾಸು ಮಾಡಿರುವರು.

(೧) ಕೊಡಗು ಸರಕಾರವು ಬಾಣೆ ಜಾಗಕ್ಕೆ ಎಕ್ರೆಗೆ ನಾಲ್ಕಾಣೆಯಂತೆ ಕಂದಾಯ ವಿಧಿಸಲು ನಿಶ್ಚಯಿಸಿದ್ದನ್ನು ಈ ಸಭೆಯು ವಿರೋಧಿಸುತ್ತದೆ.

(೨) ಬಾಣೆ ಜಾಗಕ್ಕೆ ಎಕ್ರೆಗೆ ನಾಲ್ಕಾಣೆ ಕಂದಾಯ ವಿಧಿಸುವದೆಂದು ರೆವಿನ್ಯೂ ರೆಗ್ಯುಲೇಶನ್ ತಿದ್ದುಪಡಿ ಮಾಡಕೂಡದೆಂದು ಚೀಫ್ ಕಮಿಷನರನ್ನು ಕೇಳಿಕೊಳ್ಳುತ್ತದೆ.

—

** ಓದುಗರ ಓಲೆಗಳು. **

ತಪ್ಪು ಸರಕಾರಿ ನೌಕರರದ್ದೆ ?

ಜೂನ್ ೩೦. ೨೪ರ 'ಜನ್ಮಭೂಮಿ' ಪತ್ರಿಕೆಯಲ್ಲಿ "ವಸಿಷ್ಠ"ರು ದೇಶದ ಅಭಿವೃದ್ಧಿಯಲ್ಲಿ ಸರಕಾರಿ ನೌಕರರ ಮತ್ತು ಸಾರ್ವಜನಿಕರ ಕರ್ತವ್ಯವನ್ನು ಕುರಿತು ದೀರ್ಘವಾಗಿ ಬರೆದಿರುವರು. ಈ ಸಂದರ್ಭದಲ್ಲಿ ಅವರು ಸರಕಾರಿ ನೌಕರರ ಟೀಕೆಯನ್ನು ಯಥೇಚ್ಛವಾಗಿ, ಕಟುವಾಗಿ ಮಾಡಿರುತ್ತಾರೆ. ಈ ಟೀಕೆಯು ಎಷ್ಟರ ಮಟ್ಟಿಗೆ ನ್ಯಾಯ ?

ದೇಶೋದ್ಧಾರಕ್ಕೆ ಸರಕಾರವನ್ನು ನಡೆಸುವವರೂ ಜನರೂ ನಿಸ್ವಾರ್ಥ ದೃಷ್ಟಿಯಿಂದ ಮತ್ತು ಸೇವಾಭಾವನೆಯಿಂದ ಕೆಲಸ ಮಾಡಬೇಕೆಂಬುದೂ, ಸರಕಾರಿ ನೌಕರ ವರ್ಗದವರು ಇಂದಿನ ಬದಲಾಯಿಸಿದ ವಾತಾವರಣವನ್ನು ತಿಳಿದುಕೊಂಡು ತಮ್ಮ ವರ್ತನೆಯನ್ನು ಬದಲಾಯಿಸಿಕೊಳ್ಳಬೇಕೆಂಬುದೂ ಎಲ್ಲರೂ ಒಪ್ಪತಕ್ಕದ್ದೇ. ಆದರೆ 'ವಸಿಷ್ಠ'ರು ಸರಕಾರಿ ನೌಕರರು ಪ್ರಜೆಗಳ ಹಿತವನ್ನು ದುರ್ಲಕ್ಷಿಸುವ ಸಂದರ್ಭಗಳು ಇನ್ನೂ ಹಚ್ಚಾಗಿವೆಯೆಂದೂ, ಅವರು ತಮ್ಮ ಕಾರ್ಯವನ್ನು ಸರಿಯಾಗಿ ನಿರ್ವಹಿಸದೆ ನಿಸಕಳೆಯುತ್ತಿರುವರೆಂದೂ, ತಮ್ಮ ಸಂಬಳ ಹೆಚ್ಚುವ ದಾರಿಯನ್ನು ಮಾತ್ರ ನೋಡುತ್ತಿರುವರೆಂದೂ ಬರೆದಿರುತ್ತಾರೆ. ಇಂತಹ ಅಪವಾದವನ್ನು ಯಾವ ಆಧಾರದ ಮೇಲೆ 'ವಸಿಷ್ಠ'ರು ಮಾಡಿರುವರೋ ತಿಳಿಯದು. ಆದರೆ ನೌಕರರು ಪಾಲುಪೂರಿಕೆಗೆ ಎಡೆಗೊಡದೆ ಕೆಲಸ ಮಾಡುತ್ತಿರುವರೆಂಬುದನ್ನು ನಮ್ಮ ಮಂತ್ರಿಗಳ ಭಾಷಣಗಳಿಂದಲೇ ತಿಳಿಯಬಹುದು. ಎಲ್ಲೋ ಒಬ್ಬೊಬ್ಬರು ಹಾಗೆ ಮಾಡಿದ್ದಲ್ಲಿ ಇಡೀ ನೌಕರವೃಂದಕ್ಕೇ ಅಪವಾದ ಹೊರಿಸುವುದು ಸರಿಕಾಣುವುದಿಲ್ಲ. ಸರಕಾರಿ ನೌಕರನು ತನ್ನ ಸಂಬಳವಾರಿಗೆಯನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುವುದು ಹಟಮಾರಿತನ ಅಥವಾ ಅನ್ಯಾಯವೆಂದು ಹೇಗೆ ಹೇಳಬೇಕು ? ಪ್ರತಿಯೊಬ್ಬನಿಗೂ ತನ್ನ ಆದಾಯವನ್ನು ವೃದ್ಧಿಗೊಳಿಸಿಕೊಳ್ಳಲು ಹಕ್ಕಿಲ್ಲವೇ ? ಹಾಗಾದರೆ ರೈತರು ಯಾಕೆ ಪ್ರತಿವರ್ಷವೂ ತಮ್ಮ ಬತ್ತಕ್ಕೆ ಹೆಚ್ಚಿನ ಕ್ರಯ ಬೇಕೆಂದು ಕೂಗಿಕೊಳ್ಳುತ್ತಿರುವುದು ?

ಅಲ್ಲದೆ ಸರ್ಕಾರವನ್ನು ನಡೆಸುವವರು ನ್ಯಾಯವಾಗಿ ಆಡಳಿತವನ್ನು ನಿರ್ವಹಿಸಿದರೆ, ಅವರೂ ಸತ್ಯ ಧರ್ಮವನ್ನು ಪರಿಪಾಲಿಸಿ ನೌಕರರಿಗೆ ಮಾದರಿಯಾದರೆ ಬಡ ನೌಕರರು ಹಳೆಯ ರೀತಿಯಲ್ಲೇ ಇರಲು ಸಾಧ್ಯವೇ ? ಸರಕಾರವು ನೌಕರರ ಕಾರ್ಯದಕ್ಷತೆ ಮತ್ತು ಪ್ರಾಮಾಣಿಕತೆಗೆ ಸರಿಯಾದ ಪ್ರೋತ್ಸಾಹ ನೀಡುತ್ತಿದೆಯೋ ? ಅವರಲ್ಲಿ ಇನ್ನೂ 'ಹೊಗಳು ಭಟ'ರಿಗೆ ಮಾತ್ರ ಬಡ್ತಿ, ಮೇಲಿನ ದರ್ಜೆಯ ಅಧಿಕಾರಿಗಳ ಹಿಡಿತದಲ್ಲಿರುವಿಕೆ, ಅವರನ್ನು ಸಂತೋಷಪಡಿಸಲು ಎಂತಹ ಅನ್ಯಾಯವನ್ನಾದರೂ ಮಾಡುವ ಮನೋವೃತ್ತಿ ಬ್ರಿಟಿಷರ ಕಾಲದಂತೆಯೇ ಇರುವುದು ಎಲ್ಲರಿಗೂ ತಿಳಿದ ವಿಷಯ. ಇಷ್ಟರ ವರೆಗೆ ಜನರಿಗೆ ಸರ್ಕಾರ ತಮ್ಮದೆಂದು ಅನಿಸದಿರಲು ಕಾರಣ ಸರಕಾರಿ ನೌಕರರ ವರ್ತನೆಯಲ್ಲ, ಸರಕಾರ ಬದಲು "ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ" ಎಂಬ ವರ್ತನೆ. ಈ ವರ್ತನೆ ಬದಲಾಯಿಸಿ, ವಿನೋಬಾ ಭಾವೆಯವರು ಹೇಳಿರುವಂತೆ ಮಂತ್ರಿಗಳು ತಮ್ಮ ಕುರ್ಚಿಯಲ್ಲಿ ಕಾಯಂ ಕುಳಿತಿರಲು ಪ್ರಯತ್ನಿಸದೆ ಆಡಳಿತವನ್ನು ಸರ್ವಪ್ರಿಯವಾಗಿ, ನಿಷ್ಪಕ್ಷಪಾತವಾಗಿ, ದಕ್ಷತೆಯಿಂದ ನಡೆಸಲು ಪ್ರಯತ್ನಿಸಿದ ಹೊರತು ದೇಶದ ಅಭಿವೃದ್ಧಿ ಬರೇ ಕನಸೆಂದು ನನಗನಿಸುತ್ತೆ.

"ವಿಶ್ವಾಮಿತ್ರ"

ಅವಧಿ ಮುಂದರಿಸಬೇಕೆಂದು ಎಂ. ಎಲ್. ಎ. ಗಳ ಪತ್ರ

ಈ ಕೆಳಗೆ ಸಹಿ ಮಾಡಿದ ಕೊಡಗು ಶಾಸನ ಸಭೆಯ ಮೆಂಬರುಗಳು ಬಾಣೆ ಕಂದಾಯ ವಿಧಿಸುವ ಬಗ್ಗೆ ಸರಕಾರವು ರೆವಿನ್ಯೂ ರೆಗ್ಯುಲೇಶನಿಗೆ ಸೂಚಿಸಿರುವ ತಿದ್ದುಪಡಿಯ ಬಗ್ಗೆ ಅಭಿಪ್ರಾಯ ವ್ಯಕ್ತಮಾಡಲಿರುವ ಸಮಯದ ಅವಧಿಯನ್ನು ಮುಂದರಿಸಬೇಕೆಂದು ಕೊಡಗು ಸರಕಾರದ ಚೀಫ್ ಸೆಕ್ರೆಟರಿಯವರಿಗೆ ಕಾಗದ ಬರೆದಿರುವರೆಂದು ತಿಳಿಯಬರುತ್ತದೆ. ಅದರ ಸಾರಾಂಶವಿದು.

"ಈ ಕೆಳಗೆ ಸಹಿ ಮಾಡಿದ ಕೊಡಗು ಶಾಸನ ಸಭೆಯ ಸದಸ್ಯರಾದ ನಾವು ಈ ಕೆಳಗಿನ ಕೋರಿಕೆಯನ್ನು ಸರಕಾರದ ಮುಂದಿಡ ಬಯಸುವೆವು.

ಬಾಣೆ ಜಾಗಕ್ಕೆ ಏಕರೆಗೆ ನಾಲ್ಕಾಣೆ ಕಂದಾಯ ವಿಧಿಸಲನುವಾಗುವಂತೆ ಕೊಡಗು ರೆವಿನ್ಯೂ ರೆಗ್ಯುಲೇಶನ್ ತಿದ್ದುಪಡಿ ಮಾಡುವ ಕರಡು ಜೂನ್ ತಿಂಗಳ ಗಜೆಟ್ಟಿನಲ್ಲಿ ಪ್ರಕಟವಾಗಿದ್ದು ಆ ವಿಚಾರ ಅಭಿಪ್ರಾಯ ಕೊಡಲು ಜುಲೈ ಅಂತ್ಯದ ವರೆಗೆ ಅವಧಿಕೊಡಲಾಗಿದೆ. ಆದರೆ ಇದು ಮಳೆಗಾಲವಾದುದರಿಂದಲೂ ಗ್ರಾಮಸ್ಥರು ತಮ್ಮ ವ್ಯವಸಾಯ ಕೆಲಸದಲ್ಲಿ ಮಗ್ನರಾಗಿರುವುದರಿಂದಲೂ ಈ ಬಗ್ಗೆ ತಮ್ಮಭಿಪ್ರಾಯವನ್ನು ಸಾರ್ವಜನಿಕ ಸಭೆ ಯಾ ಮೆಮೋರಿಯಲ್ ಮೂಲಕ ವ್ಯಕ್ತಮಾಡುವುದು ಅಸಾಧ್ಯವಾಗಿದೆ. ನಮ್ಮ ಮತದಾರ ಕ್ಷೇತ್ರದ ಅನೇಕ ಓಟರುಗಳು ಈ ಅವಧಿಯನ್ನು ಜುಲೈ ಅಂತ್ಯದಿಂದ ಅಕ್ಟೋಬರ್ ಅಂತ್ಯದ ವರೆಗೆ ಮುಂದರಿಸಿ ಈ ವಿಚಾರ ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಲು ಅನುಮಾಡಬೇಕೆಂದು ಕೇಳಿಕೊಂಡಿರುವರು. ಒಂದು ವೇಳೆ ಈ ಕಂದಾಯ ವಿಧಿಸಿದರೂ ಕೂಡ ೧೯೫೪ರ ಫೆಬ್ರವರಿ ಮತ್ತು ಮಾರ್ಚ ತಿಂಗಳಲ್ಲೇ ಇದರ ವಸೂಲಾತಿಯಾಗಬೇಕಾದ್ದರಿಂದ ಸರಕಾರವು ಯಾವುದೇ ತೊಂದರೆ ಇಲ್ಲದೆ ಈ ಅವಧಿಯನ್ನು ಈ ಕೋರಿಕೆಯಂತೆ ಮುಂದರಿಸಬಹುದಾಗಿದೆ.

ಕೆ. ಕೆ. ಗಣಪತಿ,
ಎನ್. ಜಿ. ಅಪಮ್ಮಯ್ಯ,
ಪಿ. ಐ. ಬೆಳ್ಯಪ್ಪ,
ಹರಿಜನ ನಂಜ,
ಪಿ. ಸಿ ಉತ್ತಯ್ಯ,
ಎ. ಸಿ ತಿಮ್ಮಯ್ಯ,
ಕೆ ಪಿ. ಕರುಂಬಯ್ಯ,

ರೇಶನ್ ಅಂಗಡಿ ಅಕ್ಕಿ

ಕೊಡಗಿನ ಮುಖ್ಯ ಮಂತ್ರಿ ಹಾಗೂ ಆಹಾರ ಮಂತ್ರಿ ಶ್ರೀ ಸಿ ಎಂ. ಪೂಣಚ್ಚನವರಿಗೆ ಮಡಿಕೇರಿ ಪುರನಿವಾಸಿಗಳಲ್ಲಿ ಸುಮಾರು ೧೫೦ ಜನರು ಸಹಿ ಹಾಕಿ ಬರಕೊಂಡ ಹವಾಲ್ ಅರ್ಜಿಯ ಸಾರಾಂಶವಿದು.

"ಮಡಿಕೇರಿಯಲ್ಲಿರುವ ಎರಡು ರೇಶನ್ ಡಿಪೋಗಳಲ್ಲಿ ಸಿಕ್ಕುತ್ತಿರುವ ರೇಶನ್ ಅಕ್ಕಿ ಬಹಳ ಅತೃಪ್ತಿಕರವಾಗಿದೆ. ಅದರಲ್ಲಿ ಬತ್ತ, ಉಮಿ, ಕಲ್ಲು ಮತ್ತು ಇತರ ಹೊಲಸು ಪದಾರ್ಥಗಳು ಸೇರಿ, ಒಂದು ರೂಪಾಯಿಗೆ ಸಿಕ್ಕುವ ಎರಡುವರೆ ಸೇರು ಅಕ್ಕಿ ಶುದ್ಧಪಡಿಸಿದ ನಂತರ ಬರೇ ಎರಡು ಸೇರು ಮಾತ್ರ ಆಗುತ್ತದೆ.

ಅಲ್ಲದೆ ಗ್ರಾಮಸ್ಥರು ಒಂದು ರೂಪಾಯಿಗೆ ಒಂದುಮುಕ್ಕಾಲು ಸೇರಿನಂತೆ ಅಕ್ಕಿ ಮಾರಾಟ ಮಾಡುತಿದ್ದಾರೆ. ಆದ್ದರಿಂದ ಘನ ಸರಕಾರದವರು, ರೇಶನ್ ಡಿಪೋಗಳಲ್ಲಿ ವಿತರಣೆಯಾಗುತ್ತಿರುವ ಅಕ್ಕಿಯು ಹೊಲಸು ಪದಾರ್ಥಗಳಿಂದ ಮಿಶ್ರಿತವಲ್ಲದೆ ಒಳ್ಳೆಯ ಸುರುದ್ಧವಾದದ್ದಾಗಿರುವಂತೆ ಮಾಡಿದಲ್ಲಿ, ಬಡ ರೇಶನ್ ಕಾರ್ಡುದಾರರಿಗೆ ತುಂಬಾ ಉಪಯೋಗಕರವಾಗುವದಲ್ಲದೆ, ಗ್ರಾಮಸ್ಥರ ಮಾರಾಟ ಮಾಡುವ ಅಕ್ಕಿಯ ಬೆಲೆಯೂ ಕಡಿಮೆಯಾಗುವುದು. ಮತ್ತು ಅಕ್ಕಿ ವ್ಯಾಪಾರದಿಂದ ಲಾಭಬಡಕತನಕ್ಕೆ ಅವಕಾಶವಿಲ್ಲದಾಗುವದು.

ಜನರಿಗೆ ನಿತ್ಯೋಪಯೋಗಕ್ಕೆ ಬೇಕಾದ ಅತ್ಯವಶ್ಯಕಾದ ಜಿನಸು ಸಾಮಾನುಗಳ ಬೆಲೆ ದಿನದಿಂದ ದಿನಕ್ಕೆ ಏರುತ್ತಿರುವುದರಿಂದ ಬಡಜನರಿಗೆ ಬದುಕುವುದೇ ಅಸಾಧ್ಯವಾಗಿ ಪರಿಣಮಿಸಿದೆ. ಕಳೆದ ವರ್ಷ ಹೀಗಾಗುತಿದ್ದಾಗ ಚೀಫ್ ಕಮಿಷನರೂ ಮತ್ತಿತರ ಅಧಿಕಾರಿಗಳು ಲಾಭಬಡಕತನವನ್ನು ನಿಲ್ಲಿಸಲು ಕೈಕೊಂಡ ಕೆಲವು ಕ್ರಮಗಳು ಪರಿಣಾಮಕಾರಿಯಾಗಿ ಬಡ ಜನರಿಗೆ ಸ್ವಲ್ಪ ಪ್ರಯೋಜನವಾಯಿತು. ತದ್ರೀತಿ ಈ ವರ್ಷವೂ ಘನ ಮಂತ್ರಿಯವರು ತಕ್ಕ ಕ್ರಮ ಜರಗಿಸಿ ಬೆಲೆ ಇಳಿಸುವ ವ್ಯವಸ್ಥೆ ಮಾಡಬೇಕಾಗಿ ನಾವು ಅತಿ ವಿನಯದಿಂದ ಪ್ರಾರ್ಥಿಸುತ್ತೇವೆ.

ಇದೇ ಅಲ್ಲ; ರೇಶನ್ ಅಂಗಡಿಯ ಅಳತೆಯಲ್ಲೂ ಕೂಡ ವ್ಯತ್ಯಾಸವಿರುವದು ಹಲವರ ಅವಗಾಹನೆಗೆ ಬಂದಿದೆ. ಗಾಳಿ ಬೆಳಕಿಲ್ಲದ ಕತ್ತಲೆ ಕೋಣೆಯಲ್ಲಿ ಅಳತೆ ನಡೆಯುವದರಿಂದ ಗ್ರಾಹಕರಿಗೆ ಗೊತ್ತಾಗುವದೂ ಕಷ್ಟ. ಮನೆಗೆ ಬಂದಾಗ ಮಾತ್ರ ನಷ್ಟದ ಅರಿವಾಗುವದು.

ಕಾರ್ಡುದಾರರಿಗಾಗುವ ಈ ಕಷ್ಟಗಳನ್ನು ಪರಿಹರಿಸಲು ಜನಹಿತ ಬಯಸುವ ಮುಖ್ಯ ಮಂತ್ರಿಯವರು ರೇಶನ್ ಡಿಪೋದಲ್ಲಿ ಸಿಗುವ ಅಕ್ಕಿಯು ಪರಿಶುದ್ಧವಾಗಿರುವಂತೆಯೂ ಮತ್ತು ಜಿನಸು ಸಾಮಗ್ರಿಗಳ ಬೆಲೆ ಇಳಿಮುಖವಾಗುವಂತೆಯೂ ತಕ್ಕ ಕ್ರಮ ಜರಗಿಸುವರೆಂದು ನಾವು ನಂಬುತ್ತೇವೆ"

ಕಾರ್ಡುದಾರರು.

ಗಜೆಟೆಡ್ ಅಧಿಕಾರಿಗಳ ವರ್ಗಾವರ್ಗಿ

ಇತ್ತೀಚೆಗೆ ಕೊಡಗು ಸರ್ಕಾರವು ಸುಮಾರು ೩೦ ಗಜೆಟೆಡ್ ಉದ್ಯೋಗಿಗಳನ್ನು ಮೈಸೂರಿನೊಡನೆ ಪರಸ್ಪರ ವರ್ಗಾವರ್ಗಿ ಮಾಡುವ ಏರ್ಪಾಡನ್ನು ಇಂಡಿಯಾ ಸರಕಾರದ ಅನುಮತಿಯಿಂದ ಮಾಡಿರುವರೆಂದು ತಿಳಿಯಬಂತು. ದೇಶದಲ್ಲಿ ಅದರಲ್ಲೂ ಕೊಡಗಿನಂಥಾ ಚಿಕ್ಕ ಸಂಸ್ಥಾನದಲ್ಲಿ ಅಧಿಕಾರಿಯೊಬ್ಬನು ಒಂದೇ ಸ್ಥಳದಲ್ಲಿ ಬಹು ವರ್ಷ ಇರಬೇಕಾದ ಸಂದರ್ಭ ಒದಗುವದರಿಂದಲೂ ದೇಶದ ಜನರನ್ನು ಅವರಿಗೆ ಚೆನ್ನಾಗಿ ತಿಳಿದಿರುವದರಿಂದಲೂ ತಮಗೆ ಬೇಡವಾದವರಿಗೆ ತೊಂದರೆ ಕೊಡುವ ಪರಿಸ್ಥಿತಿ ಇದೆಯೆಂಬುದು ಸುಳ್ಳಲ್ಲ. ಆ ದೃಷ್ಟಿಯಿಂದಲೇ ಈ ಮೊದಲು ಗಜೆಟೆಡ್ ಉದ್ಯೋಗಸ್ಥರ ವರ್ಗಾವರ್ಗಿಯ ಏರ್ಪಾಡು ಅವಶ್ಯ ಬೇಕೆಂದು ಹಲವರ ಅಭಿಪ್ರಾಯವಿತ್ತು. ಆದರೆ ಅಂದಿನ ಪರಿಸ್ಥಿತಿಗೂ ಇಂದಿನದಕ್ಕೂ ತುಂಬಾ ವ್ಯತ್ಯಾಸವಿದೆ. ಅಂದು ಅಧಿಕಾರಿಗಳು ಕೇವಲ ಚೀಫ್ ಕಮಿಷನರಿಗೋ ಯಾ ಮೇಲಧಿಕಾರಿಗೋ ಜವಾಬ್ದಾರರಾಗಿದ್ದರಲ್ಲದೆ, ಅವರ ಹಿತಕ್ಕಾಗಿ, ಸಂತೋಷಕ್ಕಾಗಿ ಕೆಲಸ ಮಾಡುತಿದ್ದರಲ್ಲದೆ ಜನತೆಗೆ ಜವಾಬ್ದಾರರಾಗಿ, ಜನಹಿತಕ್ಕಾಗಿ ದುಡಿಯುತ್ತಿರಲಿಲ್ಲ. ಆದರೆ ಇಂದು ದೇಶದ ಸರ್ವ ಸರಕಾರಿ ಅಧಿಕಾರಿಯೂ ಕೂಡ ಜನಪ್ರತಿನಿಧಿಗಳಾದ ಮಂತ್ರಿಗಳಿಗೆ ಜವಾಬ್ದಾರರು. ಮಂತ್ರಿಗಳು ಜನರಿಗೆ ಜವಾಬ್ದಾರರಾಗಿರುವರು. ಹೀಗಿರುವದರಿಂದ ತಪ್ಪು ಮಾಡಿದರೂ ಕಿರುಕುಳ ಕೊಡುವ ಅಧಿಕಾರಿಯನ್ನು ಶಿಕ್ಷಿಸುವ ಯಾ ಕಿತ್ತೆಸೆಯುವ ಅಧಿಕಾರ ಜನತೆ ಪ್ರತಿನಿಧಿಗಳಾದ ಮಂತ್ರಿಗಳ ಕೈಯಲ್ಲಿದೆ. ಆದ್ದರಿಂದ ಇಂದಿನ ಪರಿಸ್ಥಿತಿಯಲ್ಲಿ ಈ ವರ್ಗಾವರ್ಗಿಯು ಬೇಕಿಲ್ಲ.

ಏಕೆಂದರೆ ದೇಶದ ಮಗುವಾಗಿ ಹುಟ್ಟಿದ ಅಧಿಕಾರಿಗೆ ಆತನ ದೇಶದ ಮೇಲೆ ಒಂದು ಮಮತೆ ಇದ್ದೇ ಇರುತ್ತದೆ. ಆತನು ದೇಶದ ಪ್ರಜೆಗಳ ಮತ್ತು ದೇಶದ ಹಿತಕ್ಕಾಗಿ ದುಡಿಯುತ್ತಾನೆ. ನಾಳೆ ನಿವೃತ್ತನಾದ ಮೇಲೂ ಇದೇ ದೇಶದಲ್ಲಿ ಬಾಳಬೇಕಿರುವದರಿಂದ ಎಚ್ಚರಿಕೆಯಿಂದ ಕೆಲಸ ಮಾಡುತ್ತಾನೆ. ಈ ಕಾರಣದಿಂದಲೇ ಕೊಡಗಿನಲ್ಲಿ ಲಂಚರುಷುವತ್ತುಗಳು ಹೆಚ್ಚದಿರುವದಾಗಿದೆ. ಬೇರೆ ಪ್ರದೇಶದಿಂದ ಇಲ್ಲಿಗೆ ಬರುವ ಅಧಿಕಾರಿಗಳಾಗಲೀ, ಇಲ್ಲಿಂದ ಹೊರಗೆ ಹೋಗುವವರಾಗಲೀ ಹಾಗಿರಲಾರರು. ಇಷ್ಟಿಷ್ಟು ಕಾಲವಿದ್ದು ಸಾಧ್ಯವಾದ ಲಾಭ ಮಾಡಿಕೊಂಡು ಹಿಂತಿರುಗುವದೇ ಅವರ ಗುರಿಯಾಗಿರುತ್ತದೆ. ಈ ಅನುಭವ ಭಾರತೀಯರಾದ ನಮಗೆ ಹೊಸದಲ್ಲ. ಆದ್ದರಿಂದಲೇ ಪ್ರತಿ ಪ್ರಾಂತಗಳಲ್ಲೂ ಕೂಡ ಆಯಾಯ ಪ್ರಾಂತದ ಜನರಿಗೇ ಹೆಚ್ಚಿನ ಪ್ರಾಶಸ್ತ್ಯ ಕೊಡುವದಾಗಿದೆ. ಆದರೆ ಕೊಡಗಿನಲ್ಲಿ ಆ ರೀತಿಯ ಒಂದು ಭಾವನೆ ಜನತಾ ಸರಕಾರಕ್ಕೆ ಬಾರದಿರುವದು ವಿಷಾದಕರ. ಭೂಮಿ ವಾರ ಮಾಡುವ ರೈತನು ಯಾವ ರೀತಿ ಭೂಮಿಯ ರೂಪಿತಕ್ಕೆ ಹೆಚ್ಚಿನ ಆಸಕ್ತಿ ವಹಿಸುವದಿಲ್ಲವೋ ಅದೇ ರೀತಿ ಹೊರಗೆ ಹೋಗುವ ಯಾ ಹೊರ

ಗನಿಂದ ಬರುವ ಅಧಿಕಾರಿಗಳು! ತನ್ನ ಸ್ವಂತ ಭೂಮಿಯನ್ನು ಖಾಸೇ ವ್ಯವಸಾಯ ಮಾಡುವವನು ಅತೀ ಎಚ್ಚರಿಕೆಯಿಂದಿರುವಂತೆ ತನ್ನ ದೇಶದಲ್ಲಿ ಕೆಲಸ ಮಾಡಿ, ಅಲ್ಲೇ ನಿವೃತ್ತನಾಗಿ ಇರಬೇಕಾದ ಪೇಶನ್ನನು ಅನ್ಯಾಯದಿಂದ ವರ್ಜಿಸುವದು ಕಡಿಮೆ. ಆದ್ದರಿಂದ ಸರಕಾರದ ಇಂದಿನ ವರ್ಗಾವರ್ಗಿಯ ವ್ಯವಸ್ಥೆ ಇಂದಿನ ಜನ ಜವಾಬ್ದಾರಿ ಸರಕಾರದ ಈ ಸಮಯದಲ್ಲಿ ಯೋಗ್ಯವಾದುದಲ್ಲ.

ನಿರೀಕ್ಷಕ.

ಕಂದಾಯ ಬೇಡವೆಂಬ ಕೂಗು ಅರಣ್ಯರೋದನವಾಗದಿರಲಿ

ರೈತಾಪಿ ಜನರ ಮೇಲೆ ಹಾಕುವ ಬಾಣೆ ಕಂದಾಯದ ವಿಷಯ ವಿವರವಾದ ಹವಾಲುಗಳು ಹೊರಬೀಳುತ್ತಿವೆ. ರೈತರು ಸ್ವಪ್ನದಲ್ಲೂ ಈ ರೀತಿಯಲ್ಲಿ ಬಾಣೆ ಜಾಗಕ್ಕೆ ಕಂದಾಯವನ್ನು ಅವರದ್ದೇ ಪ್ರಜಾ ಸರಕಾರವು ಹಾಕುತ್ತದೆಂದು ತಿಳಿದಿರಲಿಲ್ಲವೆಂಬುದೇ ಈ ವಿರೋಧದ ಮೀಟಿಂಗುಗಳಿಗೂ ಪತ್ರಗಳಿಗೂ ಕಾರಣವೆಂದು ತೋರುತ್ತದೆ.

ಹೆಚ್ಚಿನ ಉತ್ಪತ್ತಿ ಹೆಚ್ಚಿನ ಸಂಪಾದನೆ ಮಾಡುವವರೆಲ್ಲಾ ಒಂದಲ್ಲ ಒಂದು ದಿವಸ ತೆರಿಗೆ ಬಂದೇ ಬರುವದೆಂದೂ ಅದು ಸಾಧಾರಣ ಎಲ್ಲಾ ಕಡೆಯಲ್ಲೂ ನಡೆಯುತ್ತಿದೆಯೆಂದೂ ತಿಳಿದುಕೊಳ್ಳುವದು ಸಹಜ. ಆದರೆ ಬಡ ರೈತರಿಗೆ ದನ ಮೇಯಿಸಲು ಸೊಪ್ಪು, ಹುಲ್ಲು, ಸೌದೆ ಮುಂತಾದ್ದಕ್ಕಾಗಿ ಪುರಾತನದಿಂದಲೇ ಏನೊಂದೂ ತೆರಿಗೆ ಇಲ್ಲದೆ ಬಿಟ್ಟು ಕೊಟ್ಟಂಥಾ ಖಾಲಿ ಬಾಣೆ ಜಾಗಕ್ಕೆ ಕಂದಾಯ ಹಾಕುವುದೆಂದರೆ ಒಂದು ಆಶ್ಚರ್ಯ. ಒಬ್ಬ ಚೀಫ್ ಕಮೀಷನರ ಅಧಿಕಾರದಲ್ಲಿ ಸರಕಾರ ನಡೆಯುತ್ತಿದ್ದಾಗಲೂ ಮತ್ತು ಬರೀ ಸಿಫಾರಸಿನ ಕೌನ್ಸಿಲು ಇದ್ದಾಗಲೂ ಯಾವದೇ ಹೊಸ ಕಂದಾಯ ಹಾಕುವದಾದರೆ ದೇಶದ ಅಭಿಪ್ರಾಯಕ್ಕೆ ಬಿಟ್ಟು ಕೌನ್ಸಿಲಿನಲ್ಲಿ ಬಿಲ್ಲು ತಂದು ನಂತರವೇ ಅದು ಒಂದು ತೀರ್ಮಾನಕ್ಕೆ ಬರುತ್ತಿದ್ದುದು. ಆದರೆ ಈಗಿನ ಜವಾಬ್ದಾರಿ ಸರಕಾರವು ಪ್ರಜೆಗಳ ಮೇಲೆ ಬೀಳುವಂತ ಹೊಸ ಕಂದಾಯಕ್ಕೂ ಸಹ ಎಸೆಂಬ್ಲಿ ಮೆಂಬರುಗಳ ಮತ್ತು ಸಾರ್ವಜನಿಕರ ಅಭಿಪ್ರಾಯವನ್ನೂ ತಿಳಿಯದೆ ಏಕಾಏಕಿ ಬಡ್ಜೆಟ್ಟಿಗೆ ಸೇರಿಸಿಯೇ ಬಿಟ್ಟರೆಂದರೆ ಇದು ನಿಜಕ್ಕೂ ಜವಾಬ್ದಾರಿ ಸರಕಾರದ ನೀತಿಯೆಂದು ಹೇಳಲು ಸಾಧ್ಯವೇ ಇಲ್ಲ.

ಅದರಲ್ಲೂ ನಮ್ಮ ಸರಕಾರದ ಬಹುಮತ ಪಕ್ಷದ ಮೆಂಬರುಗಳಾದರೂ ಮೆಂಬರುಗಳಾಗುವದಕ್ಕೆ ಮೊದಲೇ ಇಂಥಾ ಹೊಸ ಕಂದಾಯ ಇನ್‌ಕಂಟ್ಯಾಕ್ಸ್ ಮೊದಲಾದ ತೆರಿಗೆಗಳನ್ನೆಲ್ಲ ಪೂರ್ತಿ ವಿರೋಧಿಸುವವರಾಗಿದ್ದು ಈಗ ಈ ರೀತಿ ಮಾಡುವದು ಓಟರುಗಳಿಗೆ ನಿಜಕ್ಕೂ ಗಾಬರಿ ಆಗಿದೆ. ಅಲ್ಲದೆ ಕಾಂಗ್ರೆಸ್ ಸರ್ಕಾರ ಬಡಬಗ್ಗರು ಎಂದರೆ ಒಂದು ಎಕರೆ ಜಾಗದವನಿಗೂ ಸಹ ಈ ತೆರಿಗೆ ವ್ಯಾಪಿಸುವಂತೆ ಮಾಡಿದ್ದು ಕಾಂಗ್ರೆಸ್ ತತ್ವಕ್ಕೂ ಕೂಡ ಸರಿ ಆಗಲಾರದು. ಬದಲು ತಲೆಭಾರ ಆಡಳಿತ ಕರ್ಚನ್ನು ಖೋತೆ ಮಾಡಿ ಪ್ರಜೆಗಳ ಸಹಾಯಕ್ಕೆ ನೆರವಾಗುವದು ಸರಿ ಎಂದು ಹೇಳಬೇಕಾಗಿದೆ.

ಜನತಾ ಸರ್ಕಾರ ಇಂದು ಪ್ರತಿ ಹಿಡುವಳಿದಾರರಿಗೆ ಅವರವರ ಬಾಣೆಜಾಗವನ್ನು ಹದ್ದುಬಸ್ತು ತೋರಿಸಿ ಗೋವುಗಳಿಗೂ ಹುಲ್ಲು ಸೊಪ್ಪು ಸೌದೆಗಳಿಗೂ ಇಂತಿಷ್ಟು ಎಕರೆಯನ್ನು ಲಾಯಕ್ಕಾಗಿ ಇಟ್ಟುಕೊಂಡು ಬಾಕಿ ಜಾಗವನ್ನು ತೋಟ ವಗೈರೆ ಮಾಡಲು ತಕ್ಕ ಸಹಾಯ ಕೊಟ್ಟಲ್ಲಿ ಖಂಡಿತಾ ಈ ರೀತಿ ರೂಢಿಸಿದ ಜಾಗದಿಂದ ಹೆಚ್ಚಿನ ಕಂದಾಯ ಸರಕಾರಕ್ಕೆ ಬರುವದು ಖಂಡಿತ.

ಪ್ರಜಾ ಸರಕಾರ ಸ್ಥಾಪನೆಯಾಗುವದಕ್ಕೆ ಮೊದಲು ಅಂದಿನ ಸರಕಾರವು ಸಾರ್ವಜನಿಕರ ಅಭಿಪ್ರಾಯವನ್ನು ಪತ್ರಿಕೆಗಳ ಮೂಲಕ ಪ್ರಚುರಿಸಿದ್ದನ್ನು ಪರಿಶೀಲಿಸಿ ಬಹು ಶೀಘ್ರದಲ್ಲಿ ಪ್ರಜೆಗಳ ಹಿತವನ್ನು ಬಯಸುತ್ತಿತ್ತು. ಆದರೆ ಈಗ ನಮ್ಮ ಪ್ರತಿನಿಧಿಗಳೇ ಸರಕಾರವನ್ನು ನಡೆಸುವದಾದರೂ ದೇಶದಲ್ಲಿ ಇತರಕ್ಕೂ ಹಲವು ಕುಂದು ಕೊರತೆಗಳನ್ನು ಪ್ರಕಾಶಕ್ಕೆ ತಂದರೆ ಯಾವ ನಿಗವನ್ನು ವಹಿಸದೆ ಇರುವದನ್ನು ನೋಡುವಾಗ್ಯೆ ಜನರ ರೋಧನೆ ಬರೀ ಅರಣ್ಯ ರೋಧನಕ್ಕೆ ಸರಿಗಟ್ಟುವಂತಿದೆ

ಈ ಅನುಭವದ ಮೇರೆ ನೇಗಿಲು ಯೋಗಿಯ ಮೇಲೆ ಬೀಳುವ ಬಾಣೆ ಕಂದಾಯದ ವಿಷಯ ಜನರ ವಿರೋಧವನ್ನು ಅಲ್ಲಗಳೆಯಲಿಕ್ಕಿಲ್ಲನೆಂದು ನಂಬಿಕೊಂಡು ಸುಮ್ಮನಿದ್ದರೆ ಖಂಡಿತ ಇಂಥಾ ಕಂದಾಯ ತೆರಬೇಕಾಗುತ್ತೆ. ಈಗಲೇ ಪ್ರತೀ ರೈತನು ಎಚ್ಚತ್ತು ರೈತರಿಗೆ ಸಮಂಜಸವಿಲ್ಲದಂತಹ ಕಂದಾಯವನ್ನು ಹಾಕದಂತೆ ಸರಕಾರಕ್ಕೆ ಮಂದಟ್ಟು ಮಾಡುವದು ಪ್ರತಿಯೊಬ್ಬನ ಆದ್ಯ ಕರ್ತವ್ಯ. ಪ್ರಜಾ ಸರಕಾರವನ್ನು ನಡೆಸುವ ಜನಪ್ರತಿನಿಧಿಗಳೂ ಸಹ ತಾನೂ ಒಬ್ಬ ರೈತ ಎಂಬದನ್ನು ತಿಳಿದು ಇಂಥಾ ತೆರಿಗೆಯನ್ನು ರದ್ದು ಮಾಡುವದು ಧರ್ಮವಲ್ಲವೇ?

ಬೋಪಯ್ಯ.

ಅಜಾಗ್ರತೆಯ ದೋಷಾರೋಪಣೆಗೆ ಕ್ಷಮೆ

ತಾ. ೨೦-೩-೫೩ ರಲ್ಲಿ "ಕೊಡಗು" ಪತ್ರಿಕೆಯ ಓದುಗರ ಓಲೆಯ ವಿಭಾಗದಲ್ಲಿ "ಅಧಿಕಾರದ ದುರುಪಯೋಗ" ವೆಂಬ ಪತ್ರವನ್ನು ನಾನು ಬರೆದಿದ್ದೆನು. ಅದರಲ್ಲಿ ಪೋಲೀಸ್ ಇಲಾಖೆಯ ಅಧಿಕಾರಿಗಳು ಕಾನ್‌ಸ್ಟೇಬಲರನ್ನು ಸರಕಾರಕ್ಕೆ ಸಂಬಂಧಿಸದ ತಮ್ಮ ಇತರ ಹಲವು ಖಾಸಗಿ ಕೆಲಸಗಳಿಗೆ ಉಪಯೋಗಿಸಿಕೊಳ್ಳುವ ಪರಿಪಾಠವಿದೆಯೆಂದೂ ಈ ಅನ್ಯಾಯವನ್ನು ಸಂಬಂಧಿಸಿದ ಅಧಿಕಾರಿಗಳು ವಿಚಾರಿಸಿ ನಿವಾರಿಸಬೇಕೆಂದೂ ನನ್ನ ಅಭಿಪ್ರಾಯವಾಗಿತ್ತು. ಆ ಪತ್ರದಲ್ಲಿ "ಈ ರೀತಿಯ ಅನ್ಯಾಯವನ್ನು ಪ್ರಾಮುಖ್ಯವಾಗಿ ವೀರಾಜಪೇಟೆಯಲ್ಲಿ ನೋಡಬಹುದು. ಧೈರಿಯಲ್ಲಿ ಡೇಡ್ಯೂಟಿ ಎಂದಿದ್ದರೂ ಕೆಲಸ ಸರ್ಕಲ್ ಇನ್ಸ್‌ಪೆಕ್ಟರ ಮನೆಯಲ್ಲಿ" ಎಂದು ಪ್ರಕಟವಾದುದು ಕೇವಲ ಅಜಾಗ್ರತೆಯಿಂದ (Inadvertently) ಆಗಿದೆಯೇ ವಿನಾ ಆ ಸರ್ಕಲ್ ಇನ್ಸ್‌ಪೆಕ್ಟರನ್ನಾಗಲೀ ಯಾ ಅಲ್ಲಿಯ ಸಬ್ ಇನ್ಸ್‌ಪೆಕ್ಟರನ್ನಾಗಲೀ ಪ್ರತ್ಯೇಕಿಸಿ ಅವರ ಮೇಲೆ ದೋಷಾರೋಪಿಸುವ ಅಭಿಪ್ರಾಯ ನನ್ನಲ್ಲಿರಲಿಲ್ಲ. ಅವರು ಆ ರೀತಿಯ ಖಾಸಗಿ ಕೆಲಸವನ್ನು ಮಾಡಿಸಿಕೊಳ್ಳದಿರಬಹುದು. ಏಕೆಂದರೆ ಇಲಾಖೆಯ ಅಧಿಕಾರಿಗಳೆಲ್ಲ ಒಂದೇ ರೀತಿಯವರಲ್ಲ. ಆದ್ದರಿಂದ ಒಂದು ಪದ್ಧತಿಯಲ್ಲಿರುವ ನ್ಯೂನತೆಗೆ ವ್ಯಕ್ತಿಗಳು ಜವಾಬ್ದಾರರಾಗುವದಿಲ್ಲ. ಸಾಮೂಹಿಕವಾದ ದೃಷ್ಟಿಯಿಂದ ಬರೆದ ನನ್ನ ಪತ್ರದಿಂದ ವೀರಾಜಪೇಟೆಯ ಸರ್ಕಲ್ ಇನ್ಸ್‌ಪೆಕ್ಟರಿಗಾಗಲೀ ಇತರ ಯಾರಿಗಾಗಲೀ ನೋವಾಗಿದ್ದರೆ ಆ ತಪ್ಪು ಬೇಕೆಂದು ಮಾಡಿದುದಲ್ಲವಾದ್ದರಿಂದ ಅಂಥಾವರು ನನ್ನನ್ನು ಕ್ಷಮಿಸಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ. ಏಕೆಂದರೆ ವ್ಯಕ್ತಿಗತವಾಗಿ ತಪ್ಪು ಹೊರಿಸುವ ಯಾ ದೂಷಿಸುವ ಅಭಿಪ್ರಾಯ ನನ್ನಲ್ಲಿರಲಿಲ್ಲ. ಅಜಾಗ್ರತೆಯಿಂದಾದ ಈ ದೋಷಾರೋಪಣೆಗೆ ನಾನು ವಿಷಾದಿಸುತ್ತೇನೆ.

ಸತ್ಯಕುಮಾರ.

ಔದ್ಯೋಗಿಕ ಕಾಲೇಜುಗಳಿಗೆ ವಿದ್ಯಾರ್ಥಿಗಳ ಆಯ್ಕೆ

ಕಳೆದ ವಾರದ ಪತ್ರಿಕೆಯಲ್ಲಿ ಮದರಾಸು, ಮೈಸೂರು ಮೊದಲಾದೆಯ ಔದ್ಯೋಗಿಕ ಯಾ ವೃತ್ತಿ ಶಿಕ್ಷಣದ ಕಾಲೇಜುಗಳಿಗೆ ಕೊಡಗಿನಿಂದ ಆರಿಸಲ್ಪಟ್ಟ ವಿದ್ಯಾರ್ಥಿಗಳ ಹೆಸರುಗಳನ್ನು ನೋಡಲಾಯಿತು. ಪ್ರತಿ ವರ್ಷವೂ ಕೂಡ ಈ ಆಯ್ಕೆಯಲ್ಲಿ ಹಲಕೆಲವು ವಿದ್ಯಾರ್ಥಿಗಳಿಗೆ ಅನ್ಯಾಯವಾದಂತೆ ಈ ವರ್ಷವೂ ಆಗಿದೆಯೆನ್ನಬಹುದು. ಜಾತೀಯವಾದ ದೃಷ್ಟಿಯಿಂದ ವಿದ್ಯಾರ್ಥಿಗಳನ್ನು ಆರಿಸಬಾರದೆಂದರೂ ಅದನ್ನು ಗಮನಿಸದೆ ಆರಿಸಲಾಗುತ್ತಿದೆ. ಪರಿಣಾಮವಾಗಿ ಈ ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಪಾಸಾಗದೆ ದೇಶಕ್ಕೆ ನಷ್ಟವಾಗುತ್ತಿದೆ.

ಈ ವರ್ಷ ಮೆಡಿಕಲ್ ಕಾಲೇಜಿನ ಸೀಟಿಗೆ ಹೊರಗಿನ ಕಾಲೇಜಿನಲ್ಲಿ ಓದಿದ ಮತ್ತು ಪ್ರಥಮ ತರಗತಿಯಲ್ಲಿ ಪಾಸಾಗದ ಒಬ್ಬರನ್ನು ಆರಿಸಲಾಗಿದೆಯೆಂದು ತಿಳಿದೆನು. ಆ ವಿದ್ಯಾರ್ಥಿಯು ಸಿಲೆಕ್ಷನ್ ಕಮಿಟಿಯ ಅಧ್ಯಕ್ಷರ ಮಗಳೆಂದೂ ತಿಳಿಯಬಂದಿದೆ. ಕೊಡಗಿನ ಕಾಲೇಜಿನಲ್ಲಿ ಓದಿ ಪ್ರಥಮ ತರಗತಿಯಲ್ಲಿ ತೇರ್ಗಡೆಯಾದ ಹುಡುಗಿಯರು ಅರ್ಜಿ ಹಾಕಿದ್ದರೂ ಕೂಡ ಅವರಿಗೆ ಕೊಡದೆ ಹೊರಗಿನ ಕಾಲೇಜಿನಲ್ಲಿ ಓದಿ ದ್ವಿತೀಯ ತರಗತಿಯಲ್ಲಿ ಪಾಸಾದವರಿಗೆ ಅದರಲ್ಲೂ ಸಿಲೆಕ್ಷನ್ ಸಮಿತಿಯ ಅಧ್ಯಕ್ಷರ ಮಗಳಿಗೆ ಸೀಟು ಕೊಟ್ಟದ್ದು ಸರಿಯೆ? ಈ ರೀತಿಯ ಭಿನ್ನಬೇಧ ಏಕೆ? ಸರಕಾರಿ ನೌಕರರ ಮಗಳೆಂದು ಸೀಟು ಕೊಡಲಾಯಿತೆ? ಹಾಗಾದರೆ ರೈತರ ಮಕ್ಕಳು ಅದರಲ್ಲೂ ಹೆಚ್ಚಿನ ಯೋಗ್ಯತೆ ಇರುವವರು ಎಲ್ಲಿಗೆ ಹೋಗಬೇಕು? ಹೇಗೂ ಈ ರೀತಿಯ ಆಯ್ಕೆಯು ದೇಶೀಯರಲ್ಲಿ ತುಂಬ ಅತೃಪ್ತಿಗೆ ಎಡೆ ಮಾಡಿದೆ.

'ಮಕ್ಕಳ ತಂದೆ'

ಬಾಣೆ ಕಂದಾಯ

ಸರಕಾರದವರು ರೈತರ ಹಿಡುವಳಿಯಲ್ಲು ಇರುವ ಬಾಣೆ ಜಾಗಕ್ಕೆ ಎಕರು ಒಂದರ ೪ ಆಣೆ ದರದಲ್ಲು ಕಂದಾಯ ವಿಧಿಸಲು ಅಭಿಪ್ರಾಯಪಟ್ಟಿರುವಂತೆ ತಿಳಿಯಲು ತುಂಬಾ ವಿಷಾದಿಸುತ್ತೇವೆ. ಬಡ ರೈತರ ಸ್ಥಿತಿಗತಿಯನ್ನು ಮತ್ತು ಬಾಣೆ ಜಾಗವು ಕಂದಾಯವಿಲ್ಲದೆ ಮಾಡಲು ಕಾರಣವೇನೆಂಬದನ್ನು ಕೂಲಂಕುಶವಾಗಿ ಪರಿಶೀಲಿಸದೆ ಈ ಅಭಿಪ್ರಾಯಪಟ್ಟಿರುವದು ತುಂಬಾ ವ್ಯಸನಕರ. ಈ ದೇಶದ ಮೂಲನಿವಾಸಿಗಳಾದ ನಮ್ಮ ಪೂರ್ವಿಕರು ತಮ್ಮ ದುಡಿತದಿಂದ ಬೆಟ್ಟಗುಡ್ಡಗಳನ್ನು ಅಗೆದು ಮಾಡಿದ ಭೂಮಿಗೆ ರಾಜರ ಆಳುವಿಕೆಯು ಬಾಗಾಯಿತು ಕಂದಾಯ ವಿಧಿಸುವ ಸಂದರ್ಭ ಬಂದಲ್ಲು ವ್ಯವಸಾಯದ ಸಲಕರಣೆಗಾಗಿ ಗೋಡುಗೊಬ್ಬರ ಸೌದೆ ಸೊಪ್ಪು ಹತ್ಯಾರ, ದನ ಮೇಯಿಸುವ ಉದ್ದಿಶ್ಯ ವಗೈರೆಗಾಗಿ ಬಾಣೆ ಜಾಗಕ್ಕೆ ಕಂದಾಯವಿಲ್ಲದೆ ವಿನಾಯಿಸಿ ಇಟ್ಟಿರುವದು ಸರಿಯಷ್ಟೆ. ಈಚೆಗೆ ಬ್ರಿಟಿಷರ ಕಾಲದಲ್ಲು ಸಹ ಈ ರಿಯಾತಿಯನ್ನು ಅಲ್ಲಗಳೆಯದೆ ಇದ್ದ ಸಂಗ್ತಿ ಸರಕಾರಕ್ಕೆ ತಿಳಿಯದಲ್ಲ. ಆದರೆ ನಮ್ಮ ಸರಕಾರವಾಗಿ ನಮ್ಮ ಜನರೇ ನಮ್ಮನ್ನು ಆಳುತ್ತಿರುವಾಗ ಸರಕಾರದ ಬೆನ್ನೆಲಬು ಆದ ಬಡ ರೈತರ ಕಷ್ಟ ಸುಖಗಳನ್ನು ಬದಿಗೊತ್ತಿ ರೈತರಿಗೆ ಹೆಚ್ಚಿನ ಸಲಕರಣೆ ಕೊಡುವವರ ಬದಲು ಇರುವ ರಿಯಾಯಿತಿಯನ್ನು ತೆಗೆ-ಹಾಕುವವರ ಅರ್ಥವೇನೆಂಬುದು ತಿಳಿಯುವದಿಲ್ಲ. ಭೂಮಿ ಮಾಲಿಕರಾದ ಎಷ್ಟೋ ಬಡ ರೈತರು ಹರಿಜನರು "ಬೇಕ್‌ವರ್ಡ್" ಕ್ಲಾಸಿಗಿಂತ ಕಡೆ ಆಗಿ ತಮಗಿರುವ ಅಲ್ಪ ಕಂದಾಯವನ್ನು ಸಹ ತೆರಲಾರದೆ ಕಷ್ಟಪಡುವಲ್ಲಿ ಇದಕ್ಕೆ ಹೆಚ್ಚಿನ ಹೊರೆ ಹೊರಿಸುವದೆಂದರೆ ಅವರ ಪಾಡೇನಾಗಬಹುದೆಂಬದನ್ನು ಹೇಳಲಸಾಧ್ಯ. ಸರಕಾರ ನಡೆಸಲು ಹಣವಿಲ್ಲವೆಂಬ ನೆಪದಿಂದ ಬಡ ರೈತನಿಗೆ ಹೊರಬಾರದ ಹೊರೆ ಹೊರಿಸುವದರ ಬದಲು ಅನಾವಶ್ಯಕದ ಎಷ್ಟೋ ಉದ್ಯೋಗವನ್ನು ಖೋತೆಮಾಡಿದಲ್ಲು ಈ ಕಂದಾಯದಿಂದ ಬರಬಹುದಾದ ೫೦,೦೦೦ ರೂಪಾಯಿ ಸುಲಭದಲ್ಲಿ ಉಳಿಕೆ ಆಗುವದರಲ್ಲಿ ಸಂಶಯವಿಲ್ಲ. ಒಂದು ವೇಳೆ ಹೆಚ್ಚಿನ ಹಣ ಬೇಕೆಂದು ಆದಲ್ಲು ಕಂದಾಯವಿಲ್ಲದೆ ಇರುವ ಮಠ ಉತ್ತಾರ ವಗೈರೆ ತರಿ ಜಮೀನಿಗೆ ಕಂದಾಯವಿಧಿಸಿದಲ್ಲು ಈ ಬಾಣೆ ಕಂದಾಯದಿಂದ ಬರುವ ಕಂದಾಯಕ್ಕಿಂತ ಹೆಚ್ಚಿನ ಉತ್ಪತ್ತಿ ಆಗಬಹುದಲ್ಲವೆ? ರಾಜರ ಕಾಲದಿಂದಲೂ ನಿರೂಪದೇಶೆ ರೈತರ ಜೀವನದ ಬಗ್ಗೆ ಕಂದಾಯದಿಂದ ವಿನಾಯಿಸಲ್ಪಟ್ಟ ಬಾಣೆಗೆ ನಿರೂಪಕ್ಕೆ ವಿರೋಧವಾಗಿ ಈಗ ಕಂದಾಯ ವಿಧಿಸಿದಲ್ಲು ಪರಕೀಯರ ಕಾಲದಲ್ಲು ಸಹ ಸದರಿ ನಿರೂಪಕ್ಕೆ ಕೊಟ್ಟ ಬೆಲೆಯನ್ನು ನಮ್ಮ ದೇಶದ ಸರಕಾರವು ಕೊಡದಂತೆ ಆಗುವದಿಲ್ಲವೊ? ಆದುದರಿಂದ ಸರಕಾರದವರು ಬಡ ರೈತರ ಹಾಲುಹವಾಲುಗಳನ್ನು ಗಣನೆಗೆ ತಂದು ಭೂಮಿ ಹುಟ್ಟಿದ ಲಾಗಾಯಿತಿನಿಂದಲೂ ಕಂದಾಯವಿಲ್ಲದೆ ಇದ್ದ ಬಾಣೆಗೆ ಕಂದಾಯ ಹಾಕುವ ಅಭಿಪ್ರಾಯವನ್ನು ವಜಮಾಡಬೇಕಾಗಿದೆ.

ಕುಟ್ಟಪ್ಪ ಕೆ.

ಮಕ್ಕಳ ಪುಟ

ಕ್ಷಮಿಸಲಾರದ ಮಂಗನ ಕಥೆ.

ಒಂದು ದೇಶದಲ್ಲಿ ಚಂದ್ರಸೇನೆಂಬ ಅರಸನಿದ್ದನು. ಆತನು ತನ್ನ ಮಗನೊಡನೆ ಆಟವಾಡಲಿಕ್ಕಾಗಿಯೂ ಆತನ ಮನೋರಂಜನೆಗಾಗಿಯೂ ಕೆಲವು ಮಂಗಗಳನ್ನು ಇಟ್ಟು ಅವುಗಳನ್ನು ಬಹು ಆದರದಿಂದ ಸಾಕುತ್ತಿದ್ದನು. ರಾಜಕುಮಾರನ ಮನೋರಂಜನೆಗಾಗಿ ಕೆಲವು ಟಗರುಗಳನ್ನೂ ಸಾಕಲಾಗಿತ್ತು. ಇವುಗಳಲ್ಲಿ ಒಂದು ಟಗರು ಬಹಳ ತಿಂಡಿಪೋತನಾಗಿ ದಿನವೆಲ್ಲಾ ಸಮಯದಲ್ಲೂ ರಾತ್ರಿ ಹಗಲೆನ್ನದೆ ಅಡಿಗೆ ಮನೆಗೆ ನುಗ್ಗಿ ಸಿಕ್ಕಿದ್ದನ್ನೆಲ್ಲಾ ತಿಂದುಬಿಡುತಿತ್ತು. ಆದ್ದರಿಂದ ಅಡಿಗೆಯವರು ಸಿಕ್ಕಿದ ಸಾಧನದಿಂದ ಅದನ್ನು ಹೊಡೆಯುತ್ತಿದ್ದರು.

ಒಂದು ದಿನ ಮಂಗಗಳ ಯಜಮಾನನು ಇದನ್ನು ನೋಡಿ ಹೀಗೆ ಆಲೋಚಿಸಿತು "ಅಡಿಗೆಯವರ ಮತ್ತು ಟಗರಿನ ಈ ಹೋರಾಟದಿಂದ ಒಂದು ದಿನ ಮಂಗಗಳಾದ ನಮ್ಮ ಸರ್ವನಾಶವಾಗದಿರದು. ಏಕೆಂದರೆ ಈ ಟಗರು ಬಹಳ ತಿಂಡಿ ಪೋತ. ಇದರಿಂದ ಅಡಿಗೆಯವರು ಸಿಟ್ಟುಗೊಂಡು ಸಿಕ್ಕಿದ್ದರಿಂದ ಹೊಡೆಯುವರು. ಒಂದು ದಿನ ಉರಿಯುವ ಕೊಳ್ಳಿಯಿಂದಲೂ ಹೊಡೆಯುವದು ಅಸಂಭವವಲ್ಲ. ಹಾಗೆ ಹೊಡೆದರೆ ಟಗರಿನ ಮೈಮೇಲಿನ ಉಣ್ಣೆಗೆ ಬೆಂಕಿ ಹತ್ತುವದು. ಟಗರು ಅದರಿಂದ ಗಾಬರಿಯಾಗಿ ಕೊಟ್ಟಿಗೆಗೆ ಓಡುವದು. ಕೊಟ್ಟಿಗೆ ಬಿದಿರಿನದಾದ್ದರಿಂದ ಬೇಗ ಅದಕ್ಕೆ ಬೆಂಕಿ ಹಿಡಿಯುವದು. ಇದರಿಂದ ಹತ್ತಿರದಲ್ಲಿರುವ ಕುದುರೆಲಾಯವೂ ಬೆಂದು ಕುದುರೆಗಳಿಗೆ ಜಖಂ ಆಗುವದು. ಬೆಂದ ಗಾಯಕ್ಕೆ ಮಂಗನ ತುಪ್ಪ ಹೊರತಾಗಿ ಔಷಧಿಯೊಂದಿಲ್ಲದ್ದರಿಂದ ನಮಗೆ ಅವಸಾನ ಬಾರದಿರದು" ಈ ರೀತಿಯು ಒಂದು ತೀರ್ಮಾನಕ್ಕೆ ಬಂದು ಆ ಮಂಗನು ತನ್ನ ಜೊತೆಯವರನ್ನು ಕರೆದು ಹೀಗೆಂದಿತು.

"ಈ ಮನೆಯಲ್ಲಿ ಟಗರು ಮತ್ತು ಅಡಿಗೆಯವರ ಹೊಡೆದಾಟದ ಸಂಭವವಿದ್ದು ನಮ್ಮ ಆಹುತಿಯಾಗುವಂತಿದೆ. ಏಕೆಂದರೆ ಜಗಳವಿರುವ ಮನೆಯನ್ನು ಬುದ್ಧಿವಂತರು ಆ ಕ್ಷಣ ಬಿಡಬೇಕು. ಜಗಳದಿಂದ ಮನೆ ಒಡೆದು ಹೋಗುವದು. ಅಪಮಾನದಿಂದ ಗೆಳೆತನ ಹಾಳಾಗುವದು. ದುಷ್ಟ ರಾಜನಿಂದ ರಾಜ್ಯ ಹಾಳಾಗುವದು. ಚಿಕ್ಕತನದಿಂದ ಮನುಷ್ಯನ ಗೌರವ ಹಾಳಾಗುವದು. ಆದ್ದರಿಂದ ಈ ಮನೆಯನ್ನು ಬಿಟ್ಟು ಕಾಡಿಗೆ ಹೋಗುವದು ಹಿತ."

ಆದರೆ ಇತರ ಮಂಗಗಳು ಇದನ್ನು ಕೇಳಿ ನಗಾಡಿದವು. "ನಿನಗೆ ವಯಸ್ಸಾಗಿರುವದರಿಂದ ಬುದ್ಧಿ ಸರಿಯಾಗಿಲ್ಲ. ಅರಮನೆಯಲ್ಲಿ ದೊರೆಯುವ ಸುಭೋಜನವನ್ನು ಈ ಆನಂದಗಳನ್ನು ಬಿಟ್ಟು ಕಾಡಿನ ಹಣ್ಣುಹಂಪಲುಗಳನ್ನು ತಿಂದು ಜೀವಿಸಲು ನಾವು ತಯಾರಿಲ್ಲ" ಎಂದು ಅವು ಹೇಳಿದವು.

ಇದನ್ನು ಕೇಳಿ ಮಂಗಗಳ ಯಜಮಾನನು ಕೋಪದಿಂದ, "ನೀವು ತಿಳಿಗೇಡಿಗಳು. ಈಗ ನಿಮಗೆ ಈ ಜೀವನ ಸುಖವಾಗಿ ತೋರಬಹುದು. ಅದೇ ನಿಮಗೆ ವಿಷವಾಗಿ ಪರಿಣಮಿಸುವ ದಿನ ದೂರವಿರಲಾರದು. ಆದರೆ ನಾನು ನನ್ನ ಕುಟುಂಬ ನಿರ್ನಾಮವಾಗುವದನ್ನು ನೋಡಲಾರೆ. ಅವರೊಡನೆ ಕಾಡಿಗೆ ನಾನು ಹೋಗುವೆನು. ಏಕೆಂದರೆ ಕುಟುಂಬದಲ್ಲಿ ಮರಣವನ್ನೂ, ತೊಂದರೆಯಲ್ಲಿರುವ ಸ್ನೇಹಿತನನ್ನೂ, ಪರಾರಿಯಾದ ಹೆಂಡತಿಯನ್ನೂ, ರಾಷ್ಟ್ರದ ಜೀವನ ನಾಶವಾಗುವದನ್ನೂ ನೋಡದವನೇ ಸುಕೃತನು." ಹೀಗೆ ಹೇಳಿ ಆ ಕಪಿಯು ಗೆಳೆಯರನ್ನು ಬಿಟ್ಟು ಕಾಡಿಗೆ ತನ್ನ ಸಂಸಾರದೊಂದಿಗೆ ಹೋಯಿತು.

ಇದಾದ ಕೆಲವು ದಿನಗಳ ನಂತರ ಒಂದು ದಿನ ಟಗರು ಎಂದಿನಂತೆ ಅಡಿಗೆ ಮನೆಗೆ ನುಗ್ಗಿತ್ತು. ಅಡಿಗೆಯವನು ಬೇರೇನೂ ದೊರೆಯದ ಕಾರಣ ಉರಿಯುವ ಕೊಳ್ಳಿಯಿಂದ ಹೊಡೆದನು. ಅದರಿಂದ ಟಗರಿನ ಉಣ್ಣೆಗೆ ಬೆಂಕಿ ಹತ್ತಿ ಆ ಮಂಗವು ಯೋಚಿಸಿದಂತೆ ಎಲ್ಲವೂ ಉರಿದು ಕುದುರೆಲಾಯವು ಬೆಂದು ಕುದುರೆಗಳು ಜಖಂಗೊಂಡವು. ರಾಜನು ಚಿಂತಾ ಕ್ರಾಂತನಾಗಿ ತನ್ನ ಪಶುವೈದ್ಯರನ್ನು ಕರೆಸಿ ಚಿಕಿತ್ಸೆ ಮಾಡಲು ಹೇಳಿದನು. ಪಶುವೈದ್ಯರು ರಾಜನನ್ನು ಕುರಿತು "ಹೇ ರಾಜ, ಸುಟ್ಟಗಾಯಕ್ಕೆ ಮಂಗನ ತುಪ್ಪ ಹಾಕಿದರೆ ಬೆಳಕಿನ ಎದುರು ಕತ್ತಲೆ ಓಡಿ ಹೋಗುವಂತೆ ಕುದುರೆಗಳ ಗಾಯವು ಮಾಯವಾಗುವದು" ಎಂದು ಸೂಚಿಸಿದರು.

ಇದನ್ನು ಕೇಳಿದ ಅರಸನು ಅರಮನೆಯಲ್ಲಿರುವ ಮಂಗಗಳನ್ನು ಕೊಲ್ಲಲು ಹೇಳಿದನು. ಅದರಂತೆ ಎಲ್ಲವೂ ನಡೆಯಿತು. ಮಂಗಗಳ ಯಜಮಾನನು ಇದನ್ನು ಕಣ್ಣಾರೆ ನೋಡದಿದ್ದರೂ ಈ ಕತೆಯನ್ನು ಕೇಳಿತು. ಅದಕ್ಕೆ ತುಂಬಾ ದುಃಖವಾಯಿತು. ಅದು ಆಲೋಚಿಸಿತು, "ಮನೆಯನ್ನು ನಾಶಮಾಡಿದ ಶತ್ರುವನ್ನು ಕ್ಷಮಿಸುವವನು, ಅದು ಹೆದರಿಕೆ ಯಾ ಆಶೆಯಿಂದಲೇ ಆಗಿದ್ದರೂ ಜೀವಿಸಲು ಅಯೋಗ್ಯನು ಎಂದು ನುಡಿಯಿದೆ; ಆದ್ದರಿಂದ ನಾನು ಸುಮ್ಮನಿರಬಾರದು" ಎಂದು ಆಲೋಚಿಸಿ ಹೊರಟಿತು.

ಹೀಗೆಯೇ ದಾರಿನಡೆಯುತ್ತಾ ಬಾಯಾರಿಕೆ ಹೆಚ್ಚಾಗಿ ಅದು ಒಂದು ಕೆರೆಯ ಹತ್ತಿರ ಬಂದಿತು. ಆ ಕೆರೆಯು ಅತೀ ಸುಂದರವಾಗಿತ್ತು. ವಿಧವಿಧದ ತಾವರೆಗಳು ಮನೋಹರವಾಗಿದ್ದವು. ನೀರು ಶುಭ್ರವಾಗಿತ್ತು. ಆದರೆ ಆ ಕೆರೆಯ ದಂಡೆಯ ಮರಳಿನಲ್ಲಿ ಪಶುಪಕ್ಷಿ ಮೊದಲಾದುವು ಕೆರೆಗೆ ಹೋದ ಹೆಜ್ಜೆಗಳಿದ್ದುವಲ್ಲದೆ ಕೆರೆಯಿಂದ ಹಿಂತಿರುಗಿದ ಹೆಜ್ಜೆಗಳಿರಲಿಲ್ಲ. ಇದನ್ನು ನೋಡಿ ಮಂಗವು ಆಲೋಚಿಸಿತು. 'ಈ ಕೆರೆಯ ನೀರಿನಲ್ಲಿ ಯಾವುದೋ ಭಯಂಕರ ಪ್ರಾಣಿ ಇರಬೇಕು. ಆದ್ದರಿಂದ ನಾನು ದೂರದಲ್ಲಿ ಕುಳಿತು ಟೊಳ್ಳಾದ ತಾವರೆ ದಂಟಿನ ಮೂಲಕ ನೀರು ಕುಡಿಯುವೆನು' ಎಂದು ಹೇಳಿ ದೂರದಲ್ಲಿ ಕುಳಿತು ನೀರು ಕುಡಿಯತೊಡಗಿತು.

ತಕ್ಷಣ ಕೆರೆಯೊಳಗಿನ್ದ ನರಭಕ್ಷಕ ಭೂತವೊಂದು ನೀರಿನಿಂದ ಎದ್ದು ನಿಂತಿತು. ಅದರ ಕುತ್ತಿಗೆಯಲ್ಲಿ ಮಿನುಗುವ ಮುತ್ತಿನ ಹಾರವೊಂದಿತ್ತು. ಅದು "ಈ ನೀರಿಗೆ ಕಾಲಿಕ್ಕುವ ಪ್ರತಿಯೊಂದು ಪ್ರಾಣಿಯನ್ನೂ ನಾನು ಭಕ್ಷಿಸುವೆನು. ಆದರೆ ನೀನು ಎಲ್ಲರಿಗಿಂಥಾ ಬುದ್ಧಿವಂತನಾಗಿ ತೋರುತ್ತಿರುವೆ. ನಿನ್ನ ಚಾತುರ್ಯಕ್ಕೆ ನಾನು ಮೆಚ್ಚಿದೆ. ನಿನಗೇನು ಬೇಕು ಆ ವರವನ್ನು ಕೇಳು" ಎಂದು ಹೇಳಿತು.

"ಅಯ್ಯಾ, ನೀನು ಎಷ್ಟು ಜನರನ್ನು ತಿನ್ನಬಲ್ಲೆ?" ಎಂದು ಮಂಗನು ಕೇಳಲು ಪಿಶಾಚಿಯು "ನೂರು, ಸಾವಿರ, ಲಕ್ಷ ಲಕ್ಷಾಂತರಗಳನ್ನು ಕ್ಷಣ ಮಾತ್ರದಲ್ಲಿ ತಿನ್ನಬಲ್ಲೆ. ಆದರೆ ಅವರು ನೀರಿಗಿಳಿಯಬೇಕು. ನೀರಿನ ಹೊರಗೆ ಒಂದು ಗುಳ್ಳೆನರಿಯು ನನ್ನನ್ನು ಸೋಲಿಸಿ ಬಿಡಬಹುದು" ಎಂದಿತು.

"ಹಾಗಾದರೆ ನನಗೆ ಮಹಾಶತ್ರುವೊಬ್ಬನಿದ್ದಾನೆ. ನಿನ್ನ ಕುತ್ತಿಗೆಯಲ್ಲಿರುವ ರತ್ನಹಾರವನ್ನು ನನಗೆ ಕೊಟ್ಟರೆ ಆತನ ಆಶೆಯನ್ನು ಅದರಿಂದ ಕೆರಳಿಸಿ ಆ ಅರಸನು ತನ್ನ ಪರಿವಾರ ಸಮೇತ ಈ ಕೆರೆಗೆ ಇಳಿಯುವಂತೆ ಮಾಡುವೆನು." ಎಂದು ಮಂಗನು ಹೇಳಲು ಪಿಶಾಚಿಯು ರತ್ನಹಾರವನ್ನು ಮಂಗನಿಗೆ ಕೊಟ್ಟಿತು.

ದೇಶದ ಜನರು ಕುತ್ತಿಗೆಯಲ್ಲಿ ಅತ್ಯಮೂಲ್ಯ ರತ್ನಹಾರವಿರುವ ಮಂಗನನ್ನು ಕಂಡು, "ಎಲೈ ಮಂಗನೇ ನಿನಗೆ ಆ ಮುತ್ತಿನ ಸರ ಹೇಗೆ ಎಲ್ಲಿ ದೊರೆಯಿತು? ಅದರ ಪ್ರಕಾಶ ನೂರು ಸೂರ್ಯರನ್ನು ಮೀರುವಂತಿದೆ" ಎಂದು ಕೇಳಿದರು.

"ಈ ಕಾಡಿನ ಮಧ್ಯದಲ್ಲಿ ಗೋಪ್ಯವಾದ ಒಂದು ಕೆರೆಯಿದೆ. ಆ ಕೆರೆಯು ಸಂಪತ್ತಿನ ದೇವತೆಯಾದ ಲಕ್ಷ್ಮಿಯಿಂದ ನಿರ್ಮಿತವಾದುದು. ಆ ದೇವತೆಯ ಕೃಪೆಯಿಂದ ಯಾರಾದರೂ ಬೆಳಗಿನ ಜಾವದಲ್ಲಿ ಆ ಕೆರೆಯಲ್ಲಿ ಸ್ನಾನ ಮಾಡಿದರೆ ಅವರ ಕೊರಳಿಗೆ ಇಂಥಾ ರತ್ನಹಾರ ಬರುವದು" ಎಂದು ಮಂಗನು ಹೇಳಿತು.

ಈ ಮಾತು ಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ ಹೋಗಿ ದೇಶದ ಅರಸನ ಕಿವಿಗೂ ಮುಟ್ಟಿತು. ಅರಸನು ಮಂಗನನ್ನು ಕರೆಕಳುಹಿಸಿದನು. ಮಂಗನು ಸರ್ವ ವೃತ್ತಾಂತವನ್ನೂ ಜನರಿಗೆ ಹೇಳಿದಂತೆ ಅರಸನಿಗೂ ಹೇಳಿ ತನ್ನ ಕುತ್ತಿಗೆಯ ಸರವನ್ನು ತೋರಿಸಿತು. ಇದನ್ನು ಕೇಳಿ ಅರಸನು "ಆಗಲಿ ನಾನು ನನ್ನ ಪರಿವಾರದೊಂದಿಗೆ ನಿನ್ನೊಡನೆ ಆ ಕೆರೆಗೆ ಬರುವೆನು ಪ್ರತಿಯೊಬ್ಬರಿಗೂ ಒಂದೊಂದರಂತೆ ಆ ರತ್ನಹಾರ ದೊರೆಯಲಿ" ಎಂದು ಹೇಳಿ ಎಲ್ಲರೂ ಹೊರಟರು. ಅರಸನು ಪಲ್ಲಕ್ಕಿಯಲ್ಲಿ ಮಂಗನೊಡನೆ ಕುಳಿತಿದ್ದನು. ಆಗಾಗ ಮಂಗನ ಜಾಣ್ಮೆ ಸಹಾಯಗಳನ್ನು ಅರಸನು ಹೊಗಳುತಿದ್ದನು. ಏಕೆಂದರೆ ಧನವಂತರೂ ವಿದ್ಯಾವಂತರೂ ಆಸೆಯಿಂದ ಕುರುಡರಾದಾಗ ಹೀನರಾಗಿ ವರ್ತಿಸುತ್ತಾರೆ. ನೂರು ತನ್ನದಾದರೆ ಸಾವಿರ ಬೇಕೆನ್ನುತ್ತಾರೆ. ಸಾವಿರವಾದರೆ ಲಕ್ಷವೆನ್ನುತ್ತಾರೆ. ಅರಸನಿಗೆ ರಾಜ್ಯ ಸಾಲದು. ಆಕಾಶವೂ ಬೇಕಾಗುತ್ತದೆ. ವಯಸ್ಸು ಹೆಚ್ಚಿದಂತೆ ಕೂದಲು ಬಿಳುಪೇರುತ್ತದೆ. ಹಲ್ಲು ಉದುರುತ್ತವೆ. ಕಣ್ಣು ಕಾಣದಾಗುತ್ತದೆ. ಕಿವಿ ಕೇಳದಾಗುತ್ತದೆ. ಆದರೆ ಆಶೆಯೊಂದು ಮಾತ್ರ ಇನ್ನೂ ಬಲಗೊಳ್ಳುತ್ತದೆ.

ಬೆಳಗಾಗುವ ಹೊತ್ತಿಗೆ ಎಲ್ಲರೂ ಕೆರೆಯ ಹತ್ತಿರ ತಲುಪಿದರು. ಆಗ ಮಂಗನು ರಾಜನನ್ನು ಕುರಿತು, "ರಾಜ, ಯಾರು ಸೂರ್ಯೋದಯ ಕಾಲಕ್ಕೆ ಕೆರೆಗಿಳಿಯುವರೋ ಅವರೇ ಸಫಲರಾಗುವರು. ಆದ್ದರಿಂದ ಎಲ್ಲರಿಗೂ ಹೇಳಿರಿ. ಎಲ್ಲರೂ ಒಂದೇ ಸಮಯದಲ್ಲಿ ನುಗ್ಗಲಿ. ನೀವು ಮಾತ್ರ ನನ್ನ ಜೊತೆಯಲ್ಲಿ ಬನ್ನಿ. ನಾನು ಮೊದಲು ಸ್ನಾನ ಮಾಡಿದ ಸ್ಥಳವನ್ನು ನಿಮಗೆ ತೋರಿಸುವೆನು. ಅಲ್ಲಿ ಹೇರಳ ರತ್ನಾಹಾರಗಳಿವೆ" ಎಂದಿತು.

ರಾಜನೂ ಮತ್ತು ಮಂಗನೂ ದಂಡೆಯಲ್ಲಿ ನಿಂತರು. ಉಳಿದವರೆಲ್ಲ ನೀರಿಗಿಳಿದರು. ಎಲ್ಲರೂ ಕ್ಷಣಕಾಲದಲ್ಲಿ ಕಣ್ಮರೆಯಾದರು. ಆಗ ರಾಜನು ಅಷ್ಟರಲ್ಲೇ ಮರವೇರಿರುವ ಮಂಗನನ್ನು ಕುರಿತು, "ಗೆಳೆಯಾ, ನನ್ನ ಜನರಾರೂ ಹೊರಗೆ ಬರುತ್ತಿಲ್ಲವೇಕೆ?" ಎಂದು ಕೇಳಿದನು.

'ದುಷ್ಟನಾದ ರಾಜ, ನೀನು ಅರಮನೆಯಲ್ಲಿದ್ದ ನನ್ನ ಸಂಬಂಧಿಕರನ್ನೆಲ್ಲಾ ಕೊಲ್ಲಿಸಿದೆಯಲ್ಲವೇ? ಅದಕ್ಕೆ ಪ್ರತೀಕಾರವಿದು. ನಿನ್ನ ಸಂಬಂಧಿಕರು ಕೆರೆಯೊಳಗಿನ ಪಿಶಾಚಿಗೆ ಆಹುತಿಯಾದರು. ಹೋಗಿನ್ನು. ನೀನು ಕೆರೆಯೊಳಗಿಳಿಯುವದು ನನಗಿಷ್ಟವಿಲ್ಲ. ಏಕೆಂದರೆ ನೀನು ಮಾಡಿದ್ದಕ್ಕೆ ಸರಿಯಾದ ಪ್ರತೀಕಾರ ಮಾಡಬೇಕಲ್ಲದೆ ಹೆಚ್ಚಿಗೆ ಮಾಡಬಾರದು" ಎಂದು ಮಂಗನು ಹೇಳಿತು.

ಇದನ್ನು ಕೇಳಿದ ಅರಸನು ದುಃಖದಿಂದ ಅರಮನೆಗೆ ಹಿಂತಿರುಗಿದನು. ಅರಸನು ಹೋದ ಮೇಲೆ ತೃಪ್ತಿಗೊಂಡ ಪಿಶಾಚಿಯು ಕಾಣಿಸಿಕೊಂಡು ಸಂತೋಷದಿಂದ ಹೇಳಿತು. "ಒಳ್ಳೇದು ಮಾಡಿದೆ ಗೆಳೆಯಾ, ನೀನು ಒಬ್ಬ ಗೆಳೆಯನನ್ನು ಸಂಪಾದಿಸಿ ಶತ್ರುವೊಬ್ಬನನ್ನು ಸಂಹರಿಸಿದೆ. ನಾನು ಕೊಟ್ಟ ಮುತ್ತಿನ ಹಾರವನ್ನು ಹಾಳುಮಾಡದೆ ಸುರಕ್ಷಿತ ಉಳಿಸಿದೆ. ನೀನೇ ಜಾಣನು".

ಆದ್ದರಿಂದಲೇ—'ತನ್ನ ಕೆಲಸದ ಪರಿಣಾಮವೇನೆಂದು ಅರಿತುಕೊಳ್ಳದ ಅತಿಯಾಸೆಯವರು ಚಂದ್ರರಾಜನಂತೆ ನಿರಾಶರಾಗುವರು' ಎಂದು ಹೇಳುವದಾಗಿದೆ. ಆದ್ದರಿಂದ ನನ್ನನ್ನು ಮನೆಗೆ ಹೋಗಲು ಬಿಡು. ನನಗೆ ಹಿಂತಿರುಗಬೇಕು ಎಂದು ಚಿನ್ನ ದೊರೆತ ಬ್ರಾಹ್ಮಣನು ಹೇಳಲು ಚಕ್ರ ಹೊತ್ತವನು ಹೇಳಿದನು "ನನ್ನನ್ನು ಈ ಸ್ಥಿತಿಯಲ್ಲಿ ಬಿಟ್ಟು ನೀನು ಹೇಗೆ ಹೋಗುವೆ? ಏಕೆಂದರೆ ಯಾರೇ ಆಗಲಿ ಕಠಿಣ ಹೃದಯದ ಕಾರಣ ಕಷ್ಟದಲ್ಲಿರುವ ಗೆಳೆಯನನ್ನು ಕೈ ಬಿಡುವದಾದರೆ ಅಂಥಾವರಿಗೆ ನರಕದಲ್ಲಿ ಪ್ರತ್ಯೇಕ ಸ್ವಾಗತ ದೊರೆಯುವದು.'

ಇದನ್ನು ಕೇಳಿ "ಅದೇನೋ ಸರಿ. ಗೆಳೆಯನಿಗೆ ಸಹಾಯ ಮಾಡುವ ಶಕ್ತಿ ಇದ್ದು ಮಾಡದವನಿಗೆ ನೀನು ಹೇಳಿದ ಶಿಕ್ಷೆ ದೊರೆಯಬಹುದು. ಆದರೆ ಇಲ್ಲಿ ನಾನೇನು ಮಾಡಲಾರೆ. ನಿನ್ನನ್ನು ಬಿಡಿಸುವ ಶಕ್ತಿ ನನಗಿಲ್ಲ. ಬದಲು ನಿನ್ನನ್ನು ನೋಡಿದಷ್ಟು ನನಗೆ ಸಹಿಸಲಾಗುವದಿಲ್ಲ. ನನಗೂ ಆ ಸ್ಥಿತಿ ಬರಬಹುದು. ಏಕೆಂದರೆ ಮುಖದ ಭಾವನೆಯಿಂದಲೇ ಸಂಗತಿ ತಿಳಿದವನು ಮುಂಬೆಚ್ಚರಿಕೆಯಂತೆ ಜಯ ಪಡೆಯುವನು. ಅದು ಹೇಗೆಂದು ಚಕ್ರ ಹೊತ್ತವನು ಕೇಳಲು ಮುಂದಿನ ವಾರ ಚಿನ್ನ ದೊರೆತ ಬ್ರಾಹ್ಮಣನು ವಿಚಾರವಿಲ್ಲದೆ ಮುಟ್ಠಾಳ ಪಿಶಾಚಿಯ ಕತೆ ಹೇಳುವನು.

—

ಕೊರಿಯ ಯುದ್ಧವಿರಾಮ ಒಪ್ಪಂದವಾಯಿತು

ತಾರೀಕು ೨೭ರ ಮುಂಜಾನೆ ಸಹಿ ಹಾಕಲ್ಪಟ್ಟಿತು.

ಸೋಮವಾರ ಮುಂಜಾನೆ ಕೊರಿಯ ವೇಳೆ ೧೦ ಗಂಟೆಗೆ ಪಾನಮುಂಜಾನದಲ್ಲಿ ಕೊರಿಯ ಯುದ್ಧವಿರಾಮ ಒಪ್ಪಂದಕ್ಕೆ ಸಹಿ ಹಾಕಲ್ಪಟ್ಟಿತೆಂದು ಯುಕ್ತರಾಷ್ಟ್ರ ಸಂಘದ ವರಿಷ್ಠ ಸೇನಾಪತಿಗಳಾದ ಜನರಲ್ ಮಾರ್ಕ ಕ್ಲಾರ್ಕ ಇವರು ಸಾರಿರುವರು.

ಮಿತ್ರರಾಷ್ಟ್ರಗಳ ಹಿರಿ ಸಂಧಾನಾಧಿಕಾರಿ ಲೆಫ್ಟನೆಂಟ್ ಜನರಲ್ ವಿಲಿಯಂ ಹ್ಯಾರಿಸನ್ ಮತ್ತು ಮುಖ್ಯ ಕಮ್ಯುನಿಸ್ಟ ಪ್ರತಿನಿಧಿ ಜನರಲ್ ನಾಮ ಇಲ್‌ರು ಪ್ರಥಮತಃ ಯುದ್ಧ ವಿರಾಮ ಒಪ್ಪಂದಕ್ಕೆ ಅಂಕಿತ ಹಾಕಿದರು. ನಂತರ ಕಾಗದಗಳು ಆ ಆ ಪಕ್ಷದ ಮುಖ್ಯ ಸೇನಾಪತಿಗಳಿಗೆ ಅಂಕಿತ ಹಾಕುವದಕ್ಕಾಗಿ ಕಳಿಸಲ್ಪಟ್ಟವು. ಮುಂಜಾನದಲ್ಲಿ ಸಂ. ರಾ. ಸಂಘದ ವರಿಷ್ಠ ಸೇನಾಪತಿ ಜನರಲ್ ಮಾರ್ಕ ಕ್ಲಾರ್ಕರು ಇದಕ್ಕೆ ಅಂಕಿತ ಹಾಕಿದರು.

ಯುದ್ಧ ವಿರಾಮ ಒಪ್ಪಂದಕ್ಕೆ ಅಂಕಿತ ಬಿದ್ದ ಬಳಿಕ ೧೨ ತಾಸುಗಳ ನಂತರ ಯುದ್ಧ ನಿಲ್ಲುವದು. ಎರಡೂ ಸೇನೆಗಳು ಆಗ ೨॥ ಮೈಲು ಅಗಲದ ನಿಸ್ಸೈನೀಕರಣ ಪ್ರದೇಶವನ್ನು ರಚಿಸಲು ಹಿಂದೆ ಸರಿಯಬೇಕಾಗುವದು.

ಹೀಗೆ ಈ ಸೈನ್ಯಗಳು ಹಿಂದೆ ಸರಿದ ಬಳಿಕ ಆ ಪ್ರದೇಶಕ್ಕೆ ಮಿತ್ರ ರಾಷ್ಟ್ರಗಳ ಇಂಜಿನಿಯರರು ಹೋಗಿ ೨೦೦೦೦ ಕ್ಕಿಂತ ಹೆಚ್ಚು ಕೈದಿಗಳಿಗಾಗಿ ಹಾಗೂ ೫೦೦೦ ಹಿಂದೀ ಸೈನಿಕರಿಗಾಗಿ ಶಿಬಿರಗಳನ್ನು ರಚಿಸುವರೆಂದು ಸಂ. ರಾ. ಸಂಘದ ವೃತ್ತಗಳು ಹೇಳುವೆ

ಭಾರತದ ಸೈನ್ಯ ಬರುವದನ್ನು ವಿರೋಧಿಸುವೆನೆಂದಿದ್ದ ದಕ್ಷಿಣ ಕೊರಿಯವು ಈಗ ನಿಸ್ಸೈನೀಕರಣ ಪ್ರದೇಶದಲ್ಲಿ ಅದು ಇರುವದನ್ನು ವಿರೋಧಿಸುವದಿಲ್ಲೆಂದು ದಕ್ಷಿಣ ಕೊರಿಯದ ಓರ್ವ ಜನರಲ್ಲರು ಹೇಳಿದ್ದಾರೆ.

ಹಾಂಗಕಾಂಗದಿಂದ ಕಮ್ಯುನಿಸ್ಟ ಆಕಾಶವಾಣಿಯು ಯುದ್ಧ ವಿರಾಮ ಒಪ್ಪಂದ ಕಾಗದಗಳು ಪ್ರತ್ಯೇಕವಾಗಿ ಮಾರ್ಶಲ್ ಕಿಂಇಲ್ ಸುಂಗ, ಜನರಲ್ ಪೆನ್‌ತೆ ಹುವಾಯ ಮತ್ತು ಜನರಲ್ ಮಾರ್ಕ ಕ್ಲಾರ್ಕರಿಗೆ ಅವರ ಅಂಕಿತ ಹಾಕಿಸುವದಕ್ಕಾಗಿ ಕಳಿಸಲ್ಪಡುವದು ಎಂದು ಸಾರಿದೆ.

ಕೊರಿಯ ಯುದ್ಧ ವಿರಾಮ ಒಪ್ಪಂದಕ್ಕೆ ಅಂಕಿತ ದದ್ದ ಸುದ್ದಿಯನ್ನು ಚಿಲ್ಟ್ ಹಿಲ್‌ದಲ್ಲಿಯ ಸರಕಾರೀ ಭವನದಲ್ಲಿರುವ ಮುಖ್ಯ ಮಂತ್ರಿ ಚರ್ಚಿಲ್ಲರಿಗೆ ತಿಳಿಸಲಾಯಿತು.

ಪಾರ್ಲಿಮೆಂಟಿನ ವಿರೋಧಿ ಪಕ್ಷದ ಧುರೀಣರಾದ ಶ್ರೀ ಮೆಂಟ ಅಟ್ಲೀಯವರು ಈ ಸುದ್ದಿ ಕೇಳಿ 'ಇದಕ್ಕಾಗಿ ನಾವು ಬಹು ಸಮಯದಿಂದ ಹಾದಿ ಕಾಯುತ್ತಿದ್ದೆವು. ಇದು ಸಮಾಧಾನಕರವಾದ ಸುದ್ದಿ' ಎಂದು ಹೇಳಿದರು.

ಅಮೇರಿಕೆಯಲ್ಲಿ ಶಸ್ತ್ರಚಿಕಿತ್ಸೆ ಪಡೆದು ಗುಣಮುಖರಾಗಿ ಇದೇ ತಿರುಗಿ ಇಂಗ್ಲೆಂಡಿಗೆ ಬಂದು ತಲುಪಿರುವ ಬ್ರಿಟಿಷ ವಿದೇಶ ಮಂತ್ರಿ, ಅಂಥೊನಿ ಈಡನ್ನರು ಈ ಸುದ್ದಿ ಮಹತ್ವದ್ದು ಎಂದು ಹೇಳಿರುವರು.

ರಾಷ್ಟ್ರೀಯ ಚೀನ ಸರಕಾರದಲ್ಲಿ ದಕ್ಷಿಣ ಕೊರಿಯದ ರಾಯಭಾರಿಗಳಾಗಿರುವ ಕಿಮ್‌ಹಂಗಇಲ್‌ರು ಕೊರಿಯ ಯುದ್ಧ ವಿರಾಮ ಒಪ್ಪಂದಕ್ಕೆ ಅಂಕಿತ ಬೀಳುವ ಸುದ್ದಿ ಕೇಳಿ 'ಇದು ಅಯೋಗ್ಯ ಒಪ್ಪಂದ. ಇದು ಕೇವಲ ಕಮ್ಯುನಿಸ್ಟರಿಗಷ್ಟೇ ಗೌರವಾರ್ಹವಾದುದು. ದಕ್ಷಿಣ ಕೊರಿಯವು ಈ ಒಪ್ಪಂದಕ್ಕೆ ಅಂಕಿತ ಹಾಕುವದಿಲ್ಲ. ಇವರಿಂದ ಆಗಬಹುದಾದ ಯಾವ ಪರಿಣಾಮದ ಹೊಣೆಯನ್ನೂ ಅದು ಹೊರುವದಿಲ್ಲ. ಕಮ್ಯುನಿಸ್ಟರು ಇನ್ನು ಮುಂದಿನ ರಾಜಕೀಯ ಪರಿಷತ್ತಿನ ಕಾರ್ಯಕ್ಕೆ ಅತಂಕವುಂಟುಮಾಡಿದರೆ ದಕ್ಷಿಣ ಕೊರಿಯವು ಸ್ವತಂತ್ರವಾಗಿ ಕಾರ್ಯಾಚರಣೆ ಕೈಕೊಳ್ಳುವದು. ಈ ಒಪ್ಪಂದವು ಅವಮಾನಕರವಿದ್ದು ಸ್ವತಂತ್ರ ಜಗತ್ತಿನ ಒಕ್ಕಟ್ಟು ಮತ್ತು ಸಂಘಟನೆಯನ್ನು ಕಾಪಾಡಿಕೊಳ್ಳಲೆಂದು ಮಾತ್ರ ದಕ್ಷಿಣ ಕೊರಿಯವು ಈ ಸಂಧಾನ ವಿಚಾರದಲ್ಲಿ ಸವಲತ್ತು ತೋರಿಸಿದೆ' ಎಂದು ಹೇಳಿದರು.

ಪಾನಮುಂಜಾನದಲ್ಲಿ ಕೊರಿಯ ಯುದ್ಧ ವಿರಾಮ ಒಪ್ಪಂದಕ್ಕೆ ಅಂಕಿತ ಬಿದ್ದೊಡನೆ ಅಮೇರಿಕೆಯ ಅಧ್ಯಕ್ಷ ಐಸೆನಹಾವರರು ಅಮೇರಿಕೆಯ ಜನರನ್ನುದ್ದೇಶಿಸಿ ರೇಡಿಯೊ ಮತ್ತು ಟೆಲಿವಿಜನ್ ಮೂಲಕ ಭಾಷಣ ಮಾಡುವರೆಂದು ತಿಳಿದಿದೆ.

ಈ ಒಪ್ಪಂದವನ್ನು ತೀವ್ರವಾಗಿ ವಿರೋಧಿಸಿದ ಹಾಗೂ ಯುದ್ಧ ಕೈದಿಗಳ ಬಿಡುಗಡೆಮಾಡಿ ಹೆಚ್ಚು ಕಡಿಮೆ ಅದನ್ನು ಮುರಿದು ಹೋಗುವಂತೆ ಮಾಡಿದ ದ. ಕೊರಿಯ ಅಧ್ಯಕ್ಷ ರ್ಹೀ ಅವರಿಗೆ ಒಪ್ಪಂದಕೆ ಅಂಕಿತ ಬೀಳುವ ವಿಚಾರವನ್ನು ಅದರ ಪ್ರಕಟನೆಗೆ ಕೇವಲ ೨೪ ನಿಮಿಷ ಮುಂಚಿತವಾಗಿ ತಿಳಿಸಲಾಯಿತು. ರ್ಹಿ ಅವರು ಕೂಡಲೆ ತಮ್ಮ ವಿದೇಶ ಮಂತ್ರಿಗಳೊಂದಿಗೆ ಚರ್ಚಿಸಿ ನಂತರ ಅವಸರದಿಂದ ತಮ್ಮ ಮಂತ್ರಿಮಂಡಳದ ಸಭೆ ಕರೆದರು. ದಕ್ಷಿಣ ಕೊರಿಯನ್ ಸೈನ್ಯವು ಯುದ್ಧ ರೇಖೆಯಿಂದ ಹಿಂದೆ ಸರಿಯುವದೆಂದು ದ. ಕೊರಿಯ ಸಂರಕ್ಷಣ ಮಂತ್ರಿಗಳು ಹೇಳಿದ್ದಾರೆ. ನಾಳೆ ಪ್ರಾರಂಭವಾಗುವ ಯುದ್ಧ ವಿರಾಮವು ಶಾಶ್ವತವಾಗುವದು ಬಿಡುವದು ರ್ಹಿ ಅವರ ಸೈನ್ಯವನ್ನೇ ಕೂಡಿದೆ.

THE CANARA BANKING CORPORATION LIMITED.

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ 1906]   [ಪ್ರಧಾನ ಕಾರ್ಯಾಲಯ. ಉಡುಪಿ (ದ. ಭಾರತ)

ಚಿಕ್ಕ ವಾಯಿದೆಯ ಠೇವಣಾತಿಗಳು :

3 ರಿಂದ 6 ತಿಂಗಳುಗಳ ವರೆಗೆ— ನೂರಿಯೊನ ಶೇಕಡ 3
7 ರಿಂದ 12 ತಿಂಗಳುಗಳ ವರೆಗೆ—ನೂರಿಯೊನ ಶೇಕಡ 3¼
ಪಂಚವಾರ್ಷಿಕ ಸುವರ್ಣ ಠೇವಣಾತಿಗಳು— ,, ,, 4

—: ಕೊಡಗು ಸಂಸ್ಥಾನದಲ್ಲಿ ನಮ್ಮ ಶಾಖೆಗಳು :—

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಖಾಲ್ತಿ ಠೇವಣಾತಿ ಶೇಕಡ (Current Deposits)	ರೂ.	0-8-0
ಸೇವಿಂಗ್ (ತಾ. 1—1—1953 ರಿಂದ)	,,	1-8-0
ಫಿಕ್ಸಡು (Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಬೆಳ್ಳಿಯ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಬಿಲ್ ಹುಂಡಿಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸ್ಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ
ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ
ಪ್ರೆಸಿಡೆಂಟ್ & ಮ್ಯಾನೇಜರ್.

ಟೆಂಡರು ನೋಟೀಸು

ಸಿ. ಜಿ. ಎ. 637 ರಿಜಿಸ್ಟರ್ಡ ನಂಬರಿನ ಜೀಪು ಮಾರಾಟಕ್ಕಿದೆ. ಕೊಂಡುಕೊಳ್ಳುವ ಖಾಯಿಶ್‌ದಾರರು ತಮ್ಮ ಕೇಳಿಕೆಯನ್ನು ನೂರು ರೂಪಾಯಿ ಅಸಕ್ತ ಹಣದೊಂದಿಗೆ ಸೀಲು ಹಾಕಿದ ಕವರುಗಳಲ್ಲಿ ಈ ಕೆಳಗೆ ಸಹಿ ಮಾಡಿದವರಿಗೆ ತಾ. 15-8-1953ರೊಳಗೆ ತಲಪುವಂತೆ ಕಳುಹಿಸಬೇಕು. ಆಫೀಸು ಕೆಲಸದ ಸಮಯದಲ್ಲಿ ಜೀಪನ್ನು ಖುದ್ದು ಪರಿಶೀಲಿಸಬಹುದಾಗಿದೆ

ಸುಪರಿಂಟೆಂಡೆಂಟ್,
ಕಾಫಿ ರಿಸರ್ಚ ಸಬ್ ಸ್ಟೇಷನ್
ಚೆಟ್ಟಳ್ಳಿ ಪೋಸ್ಟು, ಕೊಡಗು,

ಪ್ರಕಟಣೆ.

ಕೊಡಗು ಮುಜ್ರಾಯಿ ಇಲಾಖೆಗೆ ಸೇರಿದ ನಂಜರಾಯಪಟ್ಣ ಏಳುಸಾವಿರ ಶೀಮೆ ತಾಲೋಕುಗಳ ಪರ ಮೆಂಬರಾಗಿದ್ದ ಮೆ. ಎ. ಪಿ. ಗೋಪಾಲಕೃಷ್ಣ ಬಿ. ಎ. ಬಿ. ಎಲ್, ರವರ ಮೆಂಬರುತನದ ಅವಧಿಯು ಪೂರೈಸಿ ಕಾಲಿ ಬಿದ್ದಿದೆ. ಪಾಡಿನಾಲ್ಕುನಾಡು ಮಡಿಕೇರಿ ತಾಲೋಕುಗಳ ಪರ ಮೆಂಬರಾಗಿದ್ದ ಶ್ರೀ ಕೆ. ಎ. ಐಯ್ಯಣ್ಣನವರು ಮೀಟಿಂಗುಗಳಿಗೆ ಹಾಜರಾಗದ್ದರಿಂದ ಇವರ ಮೆಂಬರುತನದ ಅವಧಿಗೆ ಮುಂದಾಗಿ ವಜಮಾಡಿ ಕಾಲಿ ಬಿದ್ದಿದೆ. ಮತ್ತು ಸದರಿ ತಾಲೋಕುಗಳ ಪರ ಮೆಂಬರಾಗಿದ್ದ ಮೆ. ಯಂ. ಸಿ. ಶಾಂತುಮಲ್ಲಪ್ಪನವರ ಮೆಂಬರುತನದ ಅವಧಿ ಪೂರೈಸಿ ಕಾಲಿ ಬಿದ್ದಿದೆ. ಈ ಮೇರೆ ಕಾಲಿಯಾಗಿರುವ ಮೆಂಬರುತನಕೆ ನಿಲ್ಲಲು ಇರಾದೆಪಡುವವರು ಅವರ ಅರ್ಜಿಯನ್ನು ಇಲಾಖಾ ಪ್ರೆಸಿಡೆಂಟ್‌ರವರ ಹೆಸರಿಗೆ ಬರುವ ತಾರೀಕು 20-8-53ರ ಒಳಗೆ ತಲಪುವಂತೆ ಅರ್ಜಿ ಬರೆದು ಕಳುಹಿಸತಕ್ಕದ್ದು. ವಾಯಿದೆ ದಾಟಿ ಬರುವ ಅರ್ಜಿಯನ್ನು ಅಂಗೀಕರಿಸಲಾಗುವದಿಲ್ಲ. ನಂಜರಾಯಪಟ್ಟಣ ಏಳುಸಾವಿರ ಶೀಮೆ ತಾಲೋಕುಗಳ ಪರ ಬಂದ ಅರ್ಜಿದಾರರ ಪರ ತಾರೀಕು 24-8-53 ರಲ್ಲು ಸೋಮವಾರಪೇಟೆ ತಾಲೋಕು ಕಚೇರಿ ಬಳಿ ಹಗಲು 12 ಗಂಟೆಯಿಂದ ಸಾಯಂಕಾಲ 5 ಗಂಟೆ ವರೆಗೆ ಓಟು ತೆಗೆಯಲಾಗುತ್ತೆ. ಮಡಿಕೇರಿ ಪಾಡಿನಾಲ್ಕುನಾಡು ತಾಲೋಕುಗಳ ಪರ ಬಂದ ಅರ್ಜಿದಾರರ ಪರ ತಾರೀಕು 28-8-53 ರಲ್ಲು ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಹಾಲಿನಲ್ಲು ಹಗಲು 12 ಗಂಟೆಯಿಂದ ಸಾಯಂಕಾಲ 5 ಗಂಟೆ ವರೆಗೆ ಓಟು ತೆಗೆಯಲಾಗುತ್ತೆ. ಓಟರರ ಪಟ್ಟಿಯಲ್ಲು ಹೆಸರು ರಿಜಿಸ್ಟರ್ ಮಾಡಿಸಿಕೊಂಡವರ್ಯಾರೂ ಬಂದು ಓಟು ಕೊಡಬಹುದು.

ಮಡಿಕೇರಿ,   ರಾ ಬ. ಪಿ. ಎ. ಚಂಗಪ್ಪ,
27-7-53.   ಪ್ರೆಸಿಡೆಂಟ್.

॥ ಮಹಾಸಂತ ಕಗಾವ ॥

ಸರ್ವೋದಯ ರೀತಿಯ ಜೀವನ ನಡೆಸುವ ಜಪಾನಿನ "ಗಾಂಧಿ"

ಜಗತ್ತಿನ ಪುಣ್ಯಶ್ಲೋಕರ ಸಾಲಿನಲ್ಲಿ ನಾವು ಮಹಾತ್ಮಾ ಗಾಂಧೀಯವರನ್ನು ಅತ್ಯಗತ್ಯವಾಗಿ ಸೇರಿಸುತ್ತೇವೆ. ಮಾನವತೆಯ ಪೂಜಾರಿಯಾಗಿ ಬಾಳಿದ ಕರ್ಮಯೋಗಿ ಗಾಂಧಿಜಿ—ಆಗುದರಿಂದ, ಲೋಕದ ಜನತೆ ಅವರನ್ನು ಗೌರವಾದರಗಳಿಂದ ಕಂಡು ಶಿರಬಾಗಿ ನಮಿಸುತ್ತದೆ. ಗಾಂಧೀಜಿ ನಮ್ಮನ್ನೆಲ್ಲ ಅಗಲಿಹೋದ ಬಳಿಕ, ಅವರ ಮಾರ್ಗದರ್ಶನದ ಬೆಳಕಿನ ನೆರವು ದೊರೆಯದೆ ನಾವೂ ಲೋಕದ ಇತರ ದೇಶಗಳ ಜನತೆಯೂ ತಬ್ಬಿಬ್ಬಾಗಿರುತ್ತೇವೆ. ಎಲ್ಲಿಯೋ ಒಬ್ಬ ವಿನೋಬಾ ಭಾವೆ ಭಾರತೀಯರ ಮುಂದೆ ಗಾಂಧೀಜಿಯವರಿಟ್ಟ ಆದರ್ಶವನ್ನು ಸರ್ವೋದಯ ಸಿದ್ಧಾಂತದ ರೂಪದಲ್ಲಿ ಎಲ್ಲರೂ ತಿಳಿದುಕೊಳ್ಳುವಂತೆ ಅಹೋರಾತ್ರಿ ಪರಿಭ್ರಮಿಸುತ್ತಿರಬಹುದು. ಕಾಕಾ ಕಾಲೇಲ್ಕರರಂಥವರು ತಮ್ಮ ಪಾದರಕ್ಷೆಗಳನ್ನು ಕದ್ದ ಕಳ್ಳನಿಗೆ ಗಾಂಧೀ ತತ್ವೋಪದೇಶಮಾಡಿ, ಅವನಲ್ಲಿ ಸುಪ್ತವಾಗಿರುವ ಮಾನವತೆಯನ್ನು ಜಾಗೃತಗೊಳಿಸಲು ನೋಡಬಹುದು. ಅಂಥ ಕಾರ್ಯಪಟುಗಳಿಗೆ ವಿಚಾರವಂತರ ಸಹಾನುಭೂತಿ ಯಾವಾಗಲೂ ಉಂಟು; ಯಾವ ದೇಶದಲ್ಲಿದ್ದರೂ ಉಂಟು. ಆದುದರಿಂದ ಪೂರ್ವದೇಶದ, ಸೂರ್ಯನು ಮೊದಲಾಗಿ ಉದಿಸುವ ಆ ಪುಣ್ಯ ಭೂಮಿ ಜಪಾನಿನಲ್ಲಿ, ಸಂತ ಕಗಾವಾರನ್ನು ಅತ್ಯಂತ ಶ್ರದ್ಧೆ ಮತ್ತು ಭಕ್ತಿಯಿಂದ ಕಾಣುತ್ತಿರುವುದು ಸಹಜವೇ ಆಗಿದೆ. ಸಂತ ಕಗಾವಾ ವರ್ತಮಾನ ಕಾಲದ ಜಪಾನಿನಲ್ಲಿ ಸಾಮಾಜಿಕ ಉತ್ಕರ್ಷವನ್ನುಂಟುಮಾಡಲು ಹೆಣಗಿದ ಮಹಾಜೀವ—ಕರ್ಮಶಕ್ತಿಯ ಅಮೃತ ಸೇಚನದಿಂದ ಜನಮನವನ್ನು ಮಾನವತೆಯ ಉಚ್ಚ ಆದರ್ಶದೆಡೆಗೆ ಆಕರ್ಷಿಸಿಕೊಂಡ ಪುಣ್ಯಾತ್ಮ. ಜಪಾನು ದೇಶದ ಗಾಂಧೀಜಿ ಎನ್ನುವ ಅಭಿಧಾನವನ್ನು ಅವರ ವ್ಯಕ್ತಿತ್ವದ ಔನ್ನತ್ಯವನ್ನು ಕಂಡೇ ನೀಡಲಾಗಿದೆ ಎನ್ನಬೇಕು. ಕಗಾವಾ ನಿಜಕ್ಕೂ ಮಾನವತೆಯ ಪ್ರತಿವಾದಕ—'ನಾವು ಮನುಷ್ಯನನ್ನು ಕಡೆಗಣಿಸಿ ಸಮಾಜಕ್ಕೆ ಅಧಿಕ ಮಹತ್ವವನ್ನು ಕೊಟ್ಟಿರುವುದೇ ನಮ್ಮ ದೊಡ್ಡ ಪ್ರಮಾದ. ಮನುಷ್ಯನನ್ನು ನಾವು ಸಣ್ಣವನನ್ನಾಗಿಸಿ, ಸಮಾಜವನ್ನೇ ಭೂತಾಕಾರವಾಗಿ ಬೆಳೆಸಿಕೊಂಡಿದ್ದೇವೆ. ಫಲಸ್ವರೂಪದಲ್ಲಿ ಮನುಷ್ಯನ ಉನ್ನತಿಯ ಸಾಧನವಾಗಿ ಸಮಾಜ ರೂಪುಗೊಳ್ಳುವ ಬದಲು ಮಹತ್ವಮಂತೆ ಆ ಪದವನ್ನು ಸೆರೆಯಲ್ಲಿಟ್ಟಿದೆ. ನಮ್ಮ ನಿರುಪಾಯ ದೌರ್ಬಲ್ಯಕ್ಕೆ ಇದೇ ಕಾರಣ. ಮನುಷ್ಯನನ್ನು—ಹೃದಯದಲ್ಲಿ ಸದಾ ಅಂತರ್ಯಾಮಿಯು ನೆಲಸಿರುವ ಆ ಮನುಷ್ಯನನ್ನು—ದೊಡ್ಡವನಾಗಿ ಮಾಡುವುದರಲ್ಲಿಯೇ ನಮ್ಮ ಶಕ್ತಿ ಸಾಮರ್ಥ್ಯಗಳಿವೆ' ಇದೇ ಸಂತ ಕಗಾವಾ ಲೋಕಕ್ಕೆ ನೀಡುವ ಅಮರ ಸಂದೇಶದ ಪಲ್ಲವಿ.

ದ್ವಿತೀಯ ಮಹಾ ಯುದ್ಧದಲ್ಲಿ ಅಣುಬಾಂಬನ್ನು ಪ್ರಯೋಗಿಸಿದುದರಿಂದ ಜಪಾನೀ ಸೇನೆಗಳು ಆತ್ಮ ಸಮರ್ಪಣವನ್ನು ಮಾಡಿದವು. ಇದು ವೀರ ಯೋಧರಾದ ಜಪಾನೀಯರ ಪರಾಜಯ ಮಾತ್ರವಾಗಿರಲಿಲ್ಲ—ದೇವತ್ವದ ಜಂಭ ಕೊಚ್ಚಿಕೊಳ್ಳುತಿದ್ದ ಸಾಮ್ರಾಟ ಹಿರೋ ಹಿಟೋ ಅನುಭವಿಸಿದ ವ್ಯಕ್ತಿಗತ ಸೋಲೆಂದರೂ ಸಲ್ಲುವುದು. ತನ್ನ ದೇಶದಲ್ಲಿ ಭಗವಂತನ ಅವತಾರವೆಂದೇ ತಿಳಿಯಲ್ಪಡುತಿದ್ದ ಆ ಮಹಾನುಭಾವ ತನ್ನ ದೈವೀ ಪದವಿಯನ್ನೂ ಸಿಂಹಾಸನವನ್ನೂ ತ್ಯಜಿಸಿ ಸಾಮಾನ್ಯ ನಾಗರಿಕರ ಸಾಲಿನಲ್ಲಿ ಬಂದು ನಿಂತುಕೊಳ್ಳುವಂತೆ ಅಂದಿನ ಘಟನೆ ಮಾಡಿತು. ಜಪಾನಿನ ಸಾಮ್ರಾಟನು ಅಂದು ದೂರ ದರ್ಶಿತ್ವದಿಂದ ನಡೆದುಕೊಳ್ಳದಿರುತಿದ್ದರೆ, ಅದರ ಪರಿಣಾಮ ಅತ್ಯಂತ ಭೀಕರವಾಗುತಿತ್ತೆನ್ನುವುದರಲ್ಲಿ ತಿಲಾಂಶವೂ ಸಂದೇಹವಿಲ್ಲ. ಸಮಸ್ತ ಪ್ರಬುದ್ಧ ಸಮಾಜವು ಈ ಮುಂದಾಲೋಚನೆಯನ್ನು ಮೆಚ್ಚಿ ಇಂದು ಕೊಂಡಾಡುತ್ತದೆ. ಆದರೆ ಜಪಾನು ದೇಶದ ಸುಪ್ರಸಿದ್ಧ ಸಂತ ಕಗಾವಾರ ಬಲಯುತವಾದ ಪ್ರೇರಣೆಯ ಆಧಾರ ದೊರಕದಿರುತಿದ್ದರೆ ಚಕ್ರವರ್ತಿ ಹಿರೋ ಹಿಟೋ ಈ ಐತಿಹಾಸಿಕ ನಿರ್ಣಯವನ್ನು ಕೈಗೊಳ್ಳುತ್ತಿರಲಿಲ್ಲ. ಪರಿಸ್ಥಿತಿಯ ನಗ್ನ ಸ್ವರೂಪವನ್ನು ಕಂಡು ಕರ್ತವ್ಯವೇನೆಂಬುದನ್ನು ತಿಳಿಯದೆ ದಿಙ್ಮೂಢನಾಗಿ ಕುಳಿತ ಹಿರೋ ಹಿಟೋ ಸಂತ ಕಗಾವಾರನ್ನು ಕರೆಸಿ, ಜಪಾನಿನ ಜನತೆಯ ವಾಸ್ತವಿಕ ಸ್ವಾಮಿಯಾಗಲು ತಾನೇನು ಮಾಡಲೆಂದು ಪರಾಮರ್ಶೆ ಕೇಳಿದಾಗ, ಕಗಾವಾ ಹೀಗೆಂದರು:—'ಮಹಾ ಸ್ವಾಮಿ, ಪ್ರಜೆಗಳ ಹೃದಯದಲ್ಲಿ ನಿವಾಸಿಸುವಾತನೇ ನಿಜವಾದ ಅರಸನು. ಯಾವುದಾದರೊಂದು ರಾಷ್ಟ್ರದ ಉತ್ಕರ್ಷಕ್ಕೂ ಅಲ್ಲಿಯ ರಾಜನ ಪ್ರಜಾ ವಾತ್ಸಲ್ಯಕ್ಕೂ ಪ್ರತ್ಯಕ್ಷ ಸಂಬಂಧವಿದೆ. ತನ್ನ ಜನತೆಯ ನಿಜವಾದ ಸೇವಕನೆಂದು ತಿಳಿದುಕೊಳ್ಳುವ ರಾಜನೇ ವಸ್ತುತಃ ಜನತೆಯ ಸ್ವಾಮಿಯಾಗಿರುತ್ತಾನೆ.' ಈ ಮಾನವವಾದೀ ದೃಷ್ಟಿ ಕೋಣವೇ ಸಂತ ಕಗಾವಾರ ಜೀವನದಲ್ಲಿ ಹೆಜ್ಜೆ ಹೆಜ್ಜೆಗೂ ನೋಡಸಿಗುತ್ತದೆ. ಅವರು ರಾಜ್ಯ, ರಾಜ್ಯಾಧಿಕಾರಿ, ರಾಷ್ಟ್ರ, ರಾಜನೀತಿ ಇವೆಲ್ಲವನ್ನೂ ಮನುಷ್ಯನ ಕಲ್ಯಾಣದ ಸಾಧನ ಮಾತ್ರವೆಂದು ತಿಳಿಯುತ್ತಾರೆ; ಮತ್ತು ಮಾನವನಿಗೆ ಸರ್ವೋಚ್ಚ ಸ್ಥಾನವನ್ನು ಕೊಡುತ್ತಾರೆ. ಭಾರತೀಯ ವಿಚಾರ ಪರಂಪರೆಯಲ್ಲಿ ಮಾನವನನ್ನು ವಿರಾಟ್ ಸ್ವರೂಪಿಯೆಂದು ವರ್ಣಿಸುವ ಹಾಗೆ ಕಗಾವಾ ಸಹ ಮನುಷ್ಯನನ್ನು ಈಶ್ವರನ ಭೌತಿಕ ರೂಪವೆಂದು ನಂಬಿ, ಕರ್ಮ ಸತ್ಯರವಾದ ನದಿಯು ಅವನನ್ನು ನಾಲ್ಕು ದಿಕ್ಕಿನಿಂದ ಆವರಿಸಿ, ಕಲ್ಯಾಣ ಸಿಂಧುವಿನಿಂದಾವೃತನಾದ ಪುನೀತನನ್ನಾಗಿ ಮಾಡಲಿ ಎನ್ನುತ್ತಾರೆ.

ಗಾಂಧೀಜಿಯಂತೆ ಕಗಾವಾ ಸಹ ಜೀವನವನ್ನು ವಿಭಜಿಸುವುದಿಲ್ಲ. ಬದುಕನ್ನು ಅವಿಭಾಜ್ಯ ಅಂಗವನ್ನಾಗಿ ಕಗಾವಾ ಸ್ವೀಕರಿಸುತ್ತಾರೆ. ರಾಜನೀತಿ, ಅರ್ಥ ಶಾಸ್ತ್ರ, ಧರ್ಮ ಎಲ್ಲವನ್ನೂ ಜೀವನದಲ್ಲಿ ಪರಸ್ಪರ ಪೋಷಕಾಂಗಗಳಾಗಿ ಕಗಾವಾ ಭಾವಿಸುತ್ತಾರೆ. ಅದುದರಿಂದಲೇ ಅವರ ಬಾಳ್ವೆಯಂತೆ ರಾಜಕೀಯ ಕೂಡ ನಿಚ್ಚಳವೂ ಸ್ಪಷ್ಟವೂ ಆಗಿರುತ್ತದೆ. ಕಮ್ಯೂನಿಸ್ಟ್ ತತ್ತ್ವದ ಕೆಲವು ಅಂಶವನ್ನು ಅವರು ಮಾನವ ಕಲ್ಯಾಣ ಹಾಗೂ ಸಾಮಾಜಿಕ ಹಿತ ದೃಷ್ಟಿಯಿಂದ ಒಳ್ಳೆಯದೆನ್ನುತ್ತಾರೆ. ಪ್ರಾಚೀನ ವೇದಗಳು ಕೂಡ ಸಮಾನತೆಯ ಮಂತ್ರವನ್ನು ಜಪಿಸುತಿದ್ದುವೆಂಬುದು ಭಾರತೀಯ ವಿಚಾರಕರಿಗೆ ತಿಳಿದೇ ಇದೆ. 'ವ್ಯವಹಾರಿಕ ಜೀವನ ದರ್ಶನವೆಂದು ಕಮ್ಯೂನಿಸವನ್ನು ತಿಳಿದುಕೊಳ್ಳುವ ಬದಲು—ಸಂಪೂರ್ಣವಾಗಿ ಮಾನವನೇ ನಿರ್ಮಿಸಿದ ವಿಕೃತಿ ಹಾಗೂ ಅಸಮಾನತೆಯ ಬೆಳಕಿನಲ್ಲಿ ಸಾಮಯಿಕ ಎಚ್ಚರಿಕೆ ಎಂದೇ ಅದನ್ನು ನಾನು ತಿಳಿಯುತ್ತೇನೆ. ಇಂದಿನ ಮನುಷ್ಯನು ತನಗೆ ತಾನೇ ಭ್ರಷ್ಟಗೊಂಡಿರುವನೆಂದೂ ತನ್ನ ನೆರೆಯವನನ್ನು ಸಹೋದರನೆಂದು ತಿಳಿಯುವ ಭಾವನೆ ಅವನಲ್ಲಿ ಉಳಿದಿಲ್ಲವೆಂದೂ ಈ ಎಚ್ಚರಿಕೆಗೆ ಅರ್ಥವಿರುತ್ತದೆ. ಮನುಷ್ಯನಲ್ಲಿರುವ ದೇವತ್ವವು ಸಂಪೂರ್ಣ ಕ್ಷೀಣವಾಗಿರುತ್ತದೆ; ಮತ್ತದರ ಸ್ಥಾನದಲ್ಲಿ ಪಶುತ್ವ ತನ್ನ ಆಕ್ರಮಣವನ್ನು ಮಾಡತೊಡಗಿದೆ. ಪ್ರಾಯಶಃ ನಿಕಟ ಭವಿಷ್ಯದಲ್ಲಿಯೇ ಮಾನವನ ನಾಗರಿಕತೆ ಕೊಡಲಿಯೇಟಿಗೆ ಬಲಿಯಾದೀತೆಂದು ಭಯವುಂಟಾಗಿದೆ.... ಹೀಗಿದ್ದರೂ ಆತ್ಮಿಕ ವಿಕಾಸದ ದಿಶೆಯಲ್ಲಿ ಕಮ್ಯೂನಿಸಂ ಕೇವಲ ಅಸಫಲಗೊಂಡಿದೆ. ರಶಿಯಾದಲ್ಲಿ ಧರ್ಮ ಹಾಗೂ ಭಗವಂತನ ಮೇಲೆ ಹೇರಿದ ನಿರ್ಬಂಧವನ್ನು ನೋಡಿದರೆ, ಕಮ್ಯೂನಿಸಮ್ಮಿನಲ್ಲಿ ನೈತಿಕ ಶಕ್ತಿ ಕೇವಲ ಲುಪ್ತ ಪ್ರಾಯವಾಗಿರುವುದು ಗೋಚರಿಸುತ್ತದೆ.' ಈ ಮಾತು ಸಂತ ಕಗಾವಾರ ಭಾವನೆ ಹೇಗೆ ಹರಿಯುತ್ತದೆಂಬುದನ್ನು ಸ್ಪಷ್ಟವಾಗಿ ನಿರ್ದೇಶಿಸುತ್ತದೆ. ಅವರು ಮಾನವತೆಯ ಪೂಜಾರಿಯಾದುದರಿಂದ, ಸೇವೆಗೆ ಅತ್ಯಂತ ಮಹತ್ವ ಕೊಡುವರು. ತನ್ನ ಜೀವನವನ್ನವರು ಇದಕ್ಕೋಸ್ಕರವೇ ವ್ಯಯಿಸಿದರು. ಜಪಾನು ದೇಶದ ಸಾಮಾಜಿಕ ವ್ಯವಸ್ಥೆಯನ್ನು ಸುಧಾರಿಸುವ ಸಂಕಲ್ಪ ಕೈಗೊಂಡು ಅದಕ್ಕಾಗಿ ಅವರೇನು ಬಲಿದಾನ ಮಾಡಿದರೋ ಅದರ ಬೆಲೆಯನ್ನು ಗೊತ್ತುಪಡಿಸುವುದು ಇತಿಹಾಸಕ್ಕೆ ಮಾತ್ರ ಸಾಧ್ಯ.

ಒಬ್ಬ ಸಫಲ ಲೇಖಕ ಹಾಗೂ ಕಾದಂಬರಿಕಾರನೆಂದು ಕಗಾವಾ ತನ್ನ ಜೀವನದ ಕಳೆದ ೩೦ ವರ್ಷಗಳಲ್ಲಿ ಸಾಕಷ್ಟು ಅಧಿಕ ಸಂಪತ್ತನ್ನು ಗಳಿಸಿರುವರು. ಆದರೆ ತನ್ನ ಸ್ವಂತದ ಸುಖ ಅಥವಾ ಅನುಕೂಲತೆಗೋಸ್ಕರ ಅವರೊಂದು ಕವಡೆಯನ್ನೂ ವೆಚ್ಚಮಾಡಿಲ್ಲ.

ಟೋಕಿಯೋ ನಗರದ ಹೊರಗೆ ಒಂದು ಚಿಕ್ಕ ಸ್ಥಳದಲ್ಲಿ ಅವರು ತನ್ನ ಕೈಯಿಂದಲೇ ಹಳೆಯ ಮರದ ದಿಮ್ಮಿ ಮತ್ತಿತರ ಅಗ್ಗದ ವಸ್ತುಗಳಿಂದ ಒಂದು ಕಾಷ್ಠಗೃಹವನ್ನು ರಚಿಸಿಕೊಂಡಿದ್ದಾರೆ. ಇಲ್ಲಿಯೇ ಅವರು ತನ್ನ ಕೌಟುಂಬಿಕರೊಡನೆ ನೆಲೆಸಿದ್ದು, ಜೀವನಯಾಪನೆಗಾಗಿ ತಿಂಗಳಿಗೆ ನೂರು ರೂಪಾಯಿಗಳನ್ನು ಮಾತ್ರ ತೆಗೆದುಕೊಳ್ಳುತ್ತಾರೆ. ಜೀವನ ನಿರ್ವಾಹದ ಸಂಬಂಧದಲ್ಲಿ ಅವರ ವಿಚಾರವು ಗಾಂಧೀಜಿಯಂತೆ ಆಧ್ಯಾತ್ಮ ಪರವಾಗಿದೆ—"ಪ್ರತಿಯೊಬ್ಬ ವ್ಯಕ್ತಿಯೂ ತನ್ನೆಲ್ಲ ಕೆಲಸವನ್ನು ಸ್ವತಮಾಡಿ ಕೊಳ್ಳುವಷ್ಟು ಇನ್ನೊಬ್ಬನನ್ನು ಎಷ್ಟೇ ಅಲ್ಪಾಂಶಕ್ಕಾಗಲೀ ಅವಲಂಬಿಸದಷ್ಟು ಸರಲತೆಯಿಂದ ಬದುಕಬೇಕು. ತಮ್ಮ ಕೈಯಿಂದಲೇ ಕಟ್ಟಿದ ಮನೆಯಲ್ಲಿ ಇರುವ ತನ್ನ ಕೈಯಿಂದಲೇ ಬೆಳೆಸಿದ ತರಕಾರಿ ಉಣ್ಣುವ ಮತ್ತು ತನ್ನ ಕೈಯಿಂದಲೇ ನೇದ ಬಟ್ಟೆಯನ್ನು ಉಡುವ ಜನರೂ ಮಾತ್ರ ಸ್ವಾತಂತ್ರ್ಯದ ನಿಜಾನುಭವವನ್ನು ಹಡೆಯಲು ಶಕ್ತರು" ಕಗಾವಾರ ಈ ಸ್ವಾವಲಂಭನ ಸೂತ್ರ ಎಂಥ ಸೋಮಾರಿಯನ್ನೂ ಹೊಡೆದೆಬ್ಬಿಸುವಂತಿದೆ. ಈ ಭಾವನೆಯನ್ನು ಕಗಾವಾರಲ್ಲಿ ಅವರ ಬಾಲ್ಯದ ದಿನಗಳೇ ರೂಪಿಸಿದವೆನ್ನಬಹುದು. ಈಗ ಅವರಿಗೆ ೬೫ ವಯಸ್ಸು. ಜಾಪಾನಿನ ಕೋಬೆ ದ್ವೀಪದಲ್ಲಿ ಅವರು ಜನಿಸಿದರು. ಅವರ ತಂದೆಗೆ ಧಾರಾಳ ಸಂಪತ್ತಿದ್ದಿತು. ಆದರೆ ವಿಶಾಲವಾದ ವಿಶ್ವಗೃಹದಲ್ಲಿ ಸ್ವತಃ ಕಗಾವಾರಿಗೆ ಏನೇನೂ ಸುಖ ದೊರೆಯಲಿಲ್ಲ. ಇನ್ನೂ ನಾಲ್ಕು ವರ್ಷದವರಿದ್ದಾಗ ತಂದೆ ಮರಣಹೊಂದಿದರು. ಆ ನಂತರ ಇವರು ತನ್ನ ಸೋದರಿಯೊಂದಿಗೆ ಮಲತಾಯಿಯ ಬಳಿಗೆ ಹೋದರು. ಅಲ್ಲಿ ಇವರನ್ನು ಬಹಳ ನಿರ್ದಯತೆಯಿಂದ ನಡೆಸಿಕೊಂಡರು. ಒಂದು ಸಣ್ಣ ತಪ್ಪು ಘಟಿಸಿದರೂ ಅದಕ್ಕೆ ಬಿಸಿ ಮಾಡಿದ ಲೋಹದಿಂದ ಬರೆ ಹಚ್ಚುತ್ತಿದ್ದರು! ಈ ವಿಪತ್ತುಗಳು ಕಗಾವಾರ ಬಾಲ್ಯ ದಿನಗಳಲ್ಲಿ ಇನ್ನೂ ಹೆಚ್ಚಿಕೊಂಡವು. ಹೊಟ್ಟೆಗೆ ಸಾಕಷ್ಟು ಹಿಟ್ಟಿಲ್ಲದೆ, ಅವರ ಜೀವನ ಮುಗಿಯುವಂತೆಯೇ ಆಯಿತು. ಆದರೆ ಸುದೈವದಿಂದ ಕೆಲವು ಅಮೇರಿಕನ್ ಪಾದ್ರಿಗಳ ಸಂಪರ್ಕ ಕಗಾವಾರಿಗಾಗಲು ಮುಂದೆ ಅವರ ಜೀವನ ಗತಿಯೇ ಮಾರ್ಪಾಡು ಹೊಂದಿತು. ಈ ಪಾದ್ರಿಗಳ ದೆಸೆಯಿಂದ ಕಗಾವಾರ ನೂತನ ಸಿಕ ಭಾವನೆಗಳು ಪರಿಪಕ್ವಗೊಂಡವು, ಪಾದ್ರಿಗಳು ಅವರನ್ನು ಒಬ್ಬ ವಿಶೇಷಿಯನೆಂದು ತಿಳಿಯದೆ, ತನ್ನ ಪರಿವಾರದಲ್ಲಿ ಒಬ್ಬನೆಂದು ಭಾವಿಸಿದರು.

ಇಪ್ಪತ್ತನೆಯ ಶತಮಾನದಲ್ಲಿ ಜಾಪಾನಿನ ದೈಹಿಕ ಶಕ್ತಿಯು ಸಂಘಟಿತಗೊಂಡಿತು. ಹಾಗೆಯೇ ನೈತಿಕ ಶಕ್ತಿ ಮಾತ್ರ ಪೂರ್ಣ ಛಿನ್ನ ವಿಚ್ಛಿನ್ನವಾಗಿತ್ತು. ಜಪಾನಿನ ನಾಲ್ಕು ದೊಡ್ಡ ನಗರಗಳಾದ ಟೋಕಿಯೋ, ನಾಗಸಾಕಿ, ಹಿರೋಶಿಮಾ ಮತ್ತು ಕೋಬೆಗಳು ದುರಾಚಾರದ ಕೇಂದ್ರಸ್ಥಾನಗಳಾಗಿದ್ದವು. ಸಣ್ಣ ಪಟ್ಟಣಗಳಲ್ಲಿ ಸಹ ಸಾಕಷ್ಟು ಹೆಚ್ಚು ವ್ಯಾಭಿಚಾರಗೃಹಗಳೂ ಮಾದಕ ಪೇಯಗಳ ಅಂಗಡಿಗಳೂ ಇದ್ದವು. ಜನತೆಯಲ್ಲಿ ಅಧಿಕಾಂಶ ಕಾರ್ಖಾನೆಗಳಲ್ಲಿ ಅತಿ ಕಡಿಮೆ ಕೂಲಿಯ ಮೇಲೆ ಕೆಲಸ ಮಾಡುತ್ತಿದ್ದರು. ಯೋಗ್ಯ ಶಿಕ್ಷಣ ಹಾಗೂ ಪುಸ್ತಕಾಲಯ, ವ್ಯವಸಾಯ ಶಾಲೆ, ಉದ್ಯಾನವನ ಮುಂತಾದ ಏನೊಂದೂ ಸೌಲಭ್ಯಗಳಿರಲಿಲ್ಲ. ದೇಶದಲ್ಲಿ ನೈತಿಕ ಸನ್ನಿವೇಶವಾದ ಪರಿಸ್ಥಿತಿಯೇ ಇತ್ತೆನ್ನಬ

Licence No. 60.
Licenced to Post without Prepayment

Reg. No. M. 1550.
"KODAGU" *MERCARA (Coorg)*

ಹುದು. ಜಪಾನು ಪೂರ್ವದೇಶದ ನರಕವೆಂದು ಪಾಶ್ಚಾತ್ಯರು ಕರೆಯುತ್ತಿದ್ದರು. ಈ ನಾಚಿಕೆಗೇಡು ಪರಿಸ್ಥಿತಿಯನ್ನು ಕಗಾವಾ ಒಬ್ಬ ಸುಧಾರಕನ ದೃಷ್ಟಿಯಿಂದ ನೋಡಿದರು. ಮತ್ತು ಕೂಲಿಕಾರರ ಸಾರ್ವಾಂಗಿಕ ಏಳಿಗೆಯೇ ಜಪಾನು ದೇಶದ ಉದ್ಧಾರ ಮಾರ್ಗವೆಂದು ನಿರ್ಣಯಿಸಿದರು. ಅವರ ನೇತೃತ್ವದಲ್ಲಿ ಕೂಲಿಕಾರರು ಸರ್ವಪ್ರಥಮವಾಗಿ ಹರತಾಳವನ್ನು ಆಚರಿಸಿ, ಜನಬೆಂಬಲವನ್ನು ಪಡೆದರು ಸರಕಾರವು ಕೂಲಿಕಾರರ ಬೇಡಿಕೆಯನ್ನು ಮನ್ನಿಸುವದು ಅನಿವಾರ್ಯವಾಯಿತು ಈ ಆಂದೋಲನದಲ್ಲಿ ಕಗಾವಾರನ್ನು ಪೋಲೀಸರು ಎಷ್ಟರ ಮಟ್ಟಿಗೆ ಬಡಿದರೆಂದರೆ, ಕಠಿಣ ಪರಿಶ್ರಮವನ್ನು ಇನ್ನುಮುಂದೆ ಅವರಿಗೆ ಮಾಡುವದೇ ಅಸಾಧ್ಯವಾಯಿತು. ಕಗಾವಾರು ಜಪಾನಿನಲ್ಲಿ ದುರ್ಗಂಧಮಯವಾದ ನಿವಾಸಗಳೇ ಇಲ್ಲದಂತೆ ಮಾಡಿದರು. "ಮನುಷ್ಯನಿಗೆ ಸ್ವಚ್ಛ ನೀರು ಹಾಗೂ ಗಾಳಿ ಬೆಳಕು ಬರುವ ಮನೆ, ನಿಯಮಿತ ಉದ್ಯೋಗ ಹಾಗೂ ಯೋಗ್ಯವೇತನ ಈ ಮೂಲಭೂತ ಅಧಿಕಾರಕ್ಕೋಸ್ಕರ ಸರಕಾರವನ್ನು ಕೇಳುವ ಅಧಿಕಾರವಿದೆ. ಈ ಅವಶ್ಯಕತೆಗಳನ್ನು ಪೂರೈಸಲು ಅಶಕ್ಯವಾದ ಸರಕಾರವನ್ನು ಸ್ವಶಕ್ತಿಯಿಂದ ದೂರಮಾಡಲು ಜನತೆಗೆ ಹಕ್ಕುಂಟು." ಹೀಗೆ ಕಗಾವಾ ಹೇಳುತ್ತಿದ್ದಂತೆಯೇ, ದುರ್ಗಂಧಮಯವಾದ ವಸತಿಗಳನ್ನೆಲ್ಲಾ ನಿರ್ಮೂಲ ಮಾಡಿದರು. ಇದರೊಡನೆ ದ್ಯೂತಗೃಹಗಳೂ ಮದ್ಯದಂಗಡಿಗಳೂ ಕಾಣೆಯಾದವು. ಸಮಾಜೋದ್ಧಾರಕ್ಕಾಗಿ ತನ್ನ ಜೀವನವನ್ನೇ ಅರ್ಪಿಸಿದ ಮಹಾನುಭಾವ ಕಗಾವಾ ಎಂಬುದನ್ನು ಒಂದು ಉದಾಹರಣೆಯಿಂದ ಸ್ಪಷ್ಟೀಕರಿಸಬಹುದು. ಕೆಲ ವರ್ಷಗಳ ಹಿಂದ ಟೋಕಿಯೋದ ಮೇಯರರು ದೊಡ್ಡ ಸಂಬಳದ ಮೇಲೆ ಸಮಾಜ ಸೇವೆ ಮಾಡಲಿಕ್ಕೋಸ್ಕರ ಕಗಾವಾರನ್ನು ಕೇಳಿಕೊಂಡರು. ಆಗ ಕಗಾವಾರು ಬಹಳ ಸರಳತೆಯಿಂದ "ನಾನು ಜನತೆಯ ಪ್ರತಿಯೊಂದು ಸೇವೆಯನ್ನು ನಿಃಶುಲ್ಕ (ದುಡ್ಡಿಲ್ಲದ) ಮಾಡುತ್ತೇನೆ. ಸೇವೆಯೇ ನನ್ನ ಏಕಮೇವ ಧ್ಯೇಯವಾಗಿರುತ್ತದೆ" ಎಂದು ಹೇಳಿದರು.

ಜಪಾನಿನ ಜನತೆಯ ಹೃದಯದಲ್ಲಿ ಸನ್ಮಾನನೀಯ ಲೇಖಕನೆಂಬ ಗೌರವಸ್ಥಾನ ಕಗಾವರಿಗೆ ಲಭಿಸಿರುತ್ತದೆ. ಅವರ ಪುಸ್ತಕಗಳ ೩೦ಲಕ್ಷ ಪ್ರತಿಗಳು ಇಷ್ಟರೊಳಗೆ ಮಾರಿಹೋಗಿವೆ. ಈ ಅಸಾಧಾರಣ ಸಫಲತೆಯ ಕಾರಣವಿಷ್ಟೆ; ಅವರು ಏನೇ ಬರೆಯಲಿ, ಹಾರ್ದಿಕ ಭಾವನೆಯಿಂದ ಬರೆಯುತ್ತಾರೆ; ಲೋಕ ಕಲ್ಯಾಣವನ್ನು ಸಂವರ್ಧಿಸುವ ಉಚ್ಚ ಉದ್ದೇಶವನ್ನಿಟ್ಟುಕೊಂಡೇ ಬರೆಯುತ್ತಾರೆ. ತನ್ನ ಭಾಷಣಗಳ ಸಂಗ್ರಹವೊಂದರ ಭೂಮಿಕೆಯಲ್ಲಿ ಅವರು ಹೀಗೆ ನಿವೇದಿಸಿಕೊಂಡಿರುವರು:– "ನಾನೊಬ್ಬ ಲೇಖಕ ಹೌದು; ಆದರೆ ಗ್ರಂಥ ರಚನೆಯೊಂದೇ ನನ್ನ ಜೀವನದ ಉದ್ದೇಶವಲ್ಲ. ನಾನೊರ್ವ ಸೈನಿಕ. ಸರ್ವಸಾಧಾರಣ ಜನತೆಯ ಅಂತಃಕರಣವನ್ನು ಜಾಗೃತಗೊಳಿಸುವದಕ್ಕೋಸ್ಕರ ಆಂದೋಲನ ನಡೆಸುವದೇ ನನ್ನ ಕೆಲಸ. ನನ್ನ ಗ್ರಂಥಗಳಲ್ಲಿ ನನ್ನ ಅಂತರಾತ್ಮವೇ ಅಳುತ್ತದೆ. ಆ ರೋಧನವನ್ನು ಕೇಳುವವರೇ ನಿಜವಾಗಿಯೂ ನನ್ನ ಪ್ರಶಂಸಕರು–" ಹೀಗೆನ್ನುವ ಕಗಾವಾರ ಜೀವನ ತರುಣ ವರ್ಗಕ್ಕೆಯೇ ಆದರ್ಶಪ್ರಾಯವಾದುದು. ಕೇವಲ ಹೃಷ್ಟಪುಷ್ಟ ಶರೀರದ ತರುಣರಿಗಷ್ಟೇ ಅಲ್ಲ ಶಾರೀರಕ ವ್ಯಾಧಿ ಅಥವಾ ಅಸ್ವಾಸ್ಥ್ಯದ ಕಾರಣದಿಂದ ಬದುಕಿನಲ್ಲಿ ಎಲ್ಲವನ್ನೂ ಕಳೆದುಕೊಂಡೆವೆನ್ನುವ ಜನಕ್ಕೂ ಕಗಾವಾರ ಜೀವನವೊಂದು ಮಾದರಿಯಾಗಬಲ್ಲುದು. ಈಗ ಎಪ್ಪತ್ತರ ಗಡಿ ಸಮೀಪಿಸುತ್ತಿರುವ ಈ ಮುದುಕ ಕಳೆದ ಮೂವತ್ತು ವರ್ಷಗಳಿಂದ ಚೆನ್ನಾಗಿ ನೋಡಲಾರದವರಾಗಿದ್ದಾರೆ. ಅವರ ಪುಪ್ಪುಸಗಳೂ ಅನೇಕ ದಿನಗಳಿಂದ ದುರ್ಬಲಗೊಂಡಿವೆ. ತೀವ್ರ ರಕ್ತದ ಒತ್ತಡದಿಂದ ಅವರ ಹೃದಯ ಗತಿ ಯಾವ ಕ್ಷಣಕ್ಕೂ ನಿಂತುಹೋದೀತು. ಹೀಗಿದ್ದರೂ ನಿಜವಾದ ಮಾನವ ಹಿತೈಷಿಯಂತೆ ಸಂತ ಕಗಾವಾ ಜಪಾನೀ ಜನತೆಯ ಸೇವೆಯಲ್ಲಿ ಸದಾ ಮಗ್ನರಾಗಿರುವರು. ತನ್ನ ತೀವ್ರ ಜೀವನ ಗತಿಯನ್ನು ಕುರಿತು ಆಕ್ಷೇಪವೆತ್ತುವ ಮಿತ್ರರೊಡನೆ ಅವರು ಹೀಗೆನ್ನುತ್ತಾರೆ– "ಈ ಓಟದ ಕೊನೆಯ ಹಂತದ ವರೆಗೂ ನಾನು ನಡೆದು ಸಾಗುವೆನು ಮೃತ್ಯುಗಿಂತ ಮುಂಚೆಯೇ ಹೆದರಿ ನಿಷ್ಕ್ರಿಯರಾಗಿ ಕೂಡುವದು ಮಾನವ ಧರ್ಮವಲ್ಲ. ಪ್ರವಾಹವನ್ನು ಬಿಟ್ಟು ಬದಿಗೆ ಸರಿವೆವೆಂದರೆ ಆಗದು. ಪ್ರಗತಿ ಇದ್ದಲ್ಲಿಯೇ ಜೀವನದ ಸಾರ್ಥಕ್ಯವೂ ಇದೆ. ಜಡ ಜೀವನವು ಕೇವಲ ಶವ ಜೀವನ' ಸೋಮಾರಿಗಳಾದ ನಮಗೆ ಇದು ಅಮರ ಸಂದೇಶವೇ ಸರಿ.

(ನವಯುಗದಿಂದ)

ಪಾಪದ ಕಥೆ.

೨ನೇ ಪುಟದಿಂದ ಸಾಗಿದ್ದು.

ಸಮಾಧಾನ ತಾಳಿದೆ. ನಾನೇ ಏಕೆ ಸ್ವತಃ ವಿಚಾರಿಸಿ ನೋಡಬಾರದು ಎಂದುಕೊಂಡೆ.

ರಾಜಣ್ಣ ಮತ್ತೆ ನಕ್ಕ.

"ನೀನು ಕಾಗದದಲ್ಲಿ ಏನು ಬರೆದಿದ್ದೆಯೋ?" ಎಂದು ಕೇಳಿದೆ.

"ನಾನು ನನ್ನದೊಂದು ಕವನ ಕಳಿಸಿದೆ ಕಣೋ, ಓದಿ ಮೆಚ್ಚಲಿ ಅಂತ. ಅದರಲ್ಲಿ ನನಗೆ ದೇವರಲ್ಲಿ ನಂಬಿಕೆ ಇಲ್ಲ ಎಂದು ಬರೆದಿದ್ದೆ...."

ಮಂಕನಂತೆ ನೋಡಿದೆ.

"ನಿನಗೆ ಯಾರು ಹೇಳಿಕೊಟ್ಟರೋ, ನಿನಗೆ ದೇವರಲ್ಲಿ ನಂಬಿಕೆ ಇಲ್ಲದಿದ್ದರೆ, ಅದನ್ನು ಬರೆಯಬೇಕು ಎಂದು ಹೇಳಿದರೇನೊ."

ರಾಜಣ್ಣ ಬಿದ್ದು ಬಿದ್ದು ನಕ್ಕ. ಮತ್ತೆ ನಗಲಾರಂಭಿಸಿದ.

ನನಗೆ ಮಾತ್ರ ನಗು ಬರಲಿಲ್ಲ.

ಈಗಲೂ ರಾಜಣ್ಣ ನಮ್ಮ ಮನೆಗೆ ಬರುತ್ತಾನೆ, ಬರುವಾಗಲೆಲ್ಲ ಮೂರನೇ ಕ್ಲಾಸ್ ಹಾದೇ ಬರುತ್ತಾನೆ.

ಮೇಲೆ ನಗುತ್ತಾನೆ, ಆದರೆ ಅವನ ಒಡೆದ ಹೃದಯದ ಮೇಲೆ ಇದು ಒಂದು ಬರೆ ಎಂಬುದನ್ನು ನಾನು ಬಲ್ಲೆ.

ಮೊನ್ನೆ ಅವನೇ ಹೇಳಿದ.

"ಇದು ತುಂಬ ಅನ್ಯಾಯ ರಾಮು, ನಮ್ಮ ಆಸೆಯೊಡನೆ ಚಕ್ಕಂದವಾಡಿ, ಕಡೆಗೆ ಕತ್ತು ಹಿಸುಕಿ ಹಾಕುವ ಅಧಿಕಾರ ಯಾರಿಗೂ ಇಲ್ಲ. ನಾನು ಏನೇನೊ ಕನಸು ಕಂಡೆ. ಆ ಕನಸಿನ ಮಹಲು ಉರುಳಿ ಮಣ್ಣುಗೂಡಿತು. ನಾನು ಇದನ್ನು ಮರೆಯಲಾರೆ. ಕ್ಷಮಿಸಲಾರೆ."

ನನ್ನ ಕಣ್ಣು ಹನಿಗೂಡಿತು.

—ಪ್ರಜಾವಾಣಿ.

Specialists in Tailoring! Prompt Service!!

FOR **English Felt Hats,**
Wedding Suits, Ladies BOver oats
AND
Latest Designs in Wollen Suitings
— CALL ON —
25–24
PATTU BROTHERS,
OPP.— Town Hall, MYSORE.

INSURE WITH
OR REPRESENT
INDIA'S OLDEST LIFE OFFICE:
THE BOMBAY MUTUAL LIFE ASSURANCE SOCIETY, LTD.

BUSINESS IN FORCE OVER 40 CRORES
ASSETS .... OVER 12 CRORES

Applications from energetic youngmen are invited for representation.

25–19

Head Office;
BOMBAY.

Branch:
172. 3, Narasimharaja Road.
BANGALORE 2.

ಕೊಡಗು ಪ್ರಾಂತೀಯ ಸಹಕಾರಿ ಮಾರ್ಕೆಟಿಂಗ್
ಫೆಡರೇಶನ್ ಲಿಮಿಟೆಡ್.,
ಹೆಡ್ ಆಫೀಸ್ :— ವೀರಾಜಪೇಟೆ.
ಶಾಖೆ :— ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟಗಳು
2. 12 ನೇ ನಂಬರಿನ ಒಂಟಿ ಹೊಳವಿನ ತೋಟದ ಕೋವಿಗಳು.
3. ಒಂಟಿ ಮತ್ತು ಜೋಡಿ ಹೊಳವಿನ ಕೇಪಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
5. $\frac{5}{8}''$, $\frac{1}{2}''$ ಮತ್ತು $\frac{3}{8}''$ ಕಬ್ಬಿಣದ ಸರಳುಗಳು
6. 2", $1\frac{1}{4}''$, 1" $\frac{3}{4}''$ ಮತ್ತು $\frac{1}{2}''$ ಕೊಳಾಯಿಗಳು. (G. I. Peps)
7. $1\frac{3}{4}'' \times \frac{5}{16}''$ ಉಕ್ಕಿನ ಪಟ್ಟಿಗಳು (Spring Steel flats)
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
9. ಕೋವಿ ಮತ್ತು ಆನೆ ಮಾರ್ಕಿನ ಸೀಮೆಣ್ಣೆ ಟಿನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೆಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)
ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

Edited Printed and Published by P. I. BELLIAPPA at 'KODAGU' Press Mercara, for 'Kodagu' Ltd.,

ಕೊಡಗು

ವಿಶ್ವಕವಿ ರವೀಂದ್ರನಾಥರು.

ಇವರ ಪುಣ್ಯ ತಿಥಿಯು ಇಂದು ಭಾರತವಾದ್ಯಂತ ಆಚರಿಸಲ್ಪಡುತ್ತದೆ.

"ಸೂರ್ಯನ, [illegible] ಕಣ್ಣೀರು [illegible] ಕಳೆದುಕೊಂಡೆಯಾದರೆ ನಕ್ಷತ್ರಗಳನ್ನು ನೋಡಲಾರೆ." — ಠಾಗೂರ್.

ವಾರ್ಷಿಕ ಚಂದಾ ರೂ. ೫—೦—೦

ಸಂಪುಟ ೩೨) (ಸಂಚಿಕೆ ೧೦

ಶುಕ್ರವಾರ ೭--೮--೧೯೫೩

KODAGU KANNADA WEEKLY MERCARA

ಕೊಡಗು ಸರ್ಕಾರದ ಪ್ರಕಟಣೆ.

ನಾಗರಹೊಳೆ ಫಾರೆಸ್ಟು ರೇಂಜಿನಿಂದ ಮರದ ತೊಲೆಗಳು ಸೌದೆಯ ರೂಪದಲ್ಲಿ ಮಾರಾಟವಾಗುತ್ತಿವೆಯೆಂಬ ಸಂಬಂಧ ೭-೬-೧೯೫೩ನೇ ತಾರೀಕಿನ 'ಜನಶಕ್ತಿ' ಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನವು ಸರಕಾರದ ಗಮನಕ್ಕೆ ಬಂದಿದೆ. ಕೊಡಗಿನಲ್ಲಿನ ಕೆಲವು ಟೀಕಾಕಾರರು ಈ ರೀತಿಯಾದ ಪ್ರಚಾರವನ್ನು ಮಾಡುತ್ತಿದ್ದು ಆ ಮೂಲಕ ಸಾರ್ವಜನಿಕರಲ್ಲಿ ತಪ್ಪಭಿಪ್ರಾಯಗಳನ್ನು ಹರಡುತ್ತಿರುವರೆಂದು ಸರಕಾರಕ್ಕೆ ತಿಳಿದುಬಂದಿದೆ. ಆದ ಕಾರಣ, ಸಾರ್ವಜನಿಕರ ಮನಸ್ಸಿನಲ್ಲಿ ಅಂತಹ ತಪ್ಪು ತಿಳುವಳಿಕೆಗಳೇನಾದರೂ ಇದ್ದರೆ, ಅವುಗಳನ್ನು ಹೋಗಲಾಡಿಸುವುದು ಈ ಪ್ರಕಟನೆಯ ಉದ್ದಿಶ್ಯವಾಗಿದೆ.

ಈ ಸಂಬಂಧವಾಗಿಯೂ, ಮತ್ತು ಫಾರೆಸ್ಟು ಇಲಾಖೆಯ ಇತರ ವಿಷಯವಾಗಿಯೂ ಕಳೆದ ಕೊಡಗು ವಿಧಾನ ಸಭೆಯ ಬಜೆಟ್ ಅಧಿವೇಶನದಲ್ಲಿ ಚರ್ಚೆ ನಡೆದಾಗ, ಮುಖ್ಯ ಮಂತ್ರಿಯವರು ಸೂಕ್ತವಾದ ಮತ್ತು ಸಮಾಧಾನಕರವಾದ ಉತ್ತರ ಕೊಟ್ಟಿರುವರು. ಕೆಲವು ಮರದ ತೊಲೆಗಳು ಸೌದೆಯಾಗಿ ಮಾರಾಟವಾಗುತ್ತಿದೆಯೆಂಬ ತಪ್ಪು ಅಭಿಪ್ರಾಯವನ್ನು ಹೋಗಲಾಡಿಸುವ ಪ್ರಯುಕ್ತ ಸಾರ್ವಜನಿಕರ ಅವಗಾಹನೆಗಾಗಿ ಈ ಕೆಳಗೆ ಹೇಳಲಾಗುವ ವಿಷಯಗಳನ್ನು ಪ್ರಕಟಿಸಲಾಗಿದೆ.

ಪ್ರತಿ ವರ್ಷವೂ ಫಾರೆಸ್ಟು ಇಲಾಖೆಯವರಿಂದಲೇ ಸಾಗಿಸಲ್ಪಟ್ಟು ಲಾಭದಾಯಕವಾಗಿ ಮಾರಬಹುದಾದಂಥಾ ಎಲ್ಲಾ ಟಿಂಬರುಗಳನ್ನೂ ಇಲಾಖೆಯ ಮುಖಾಂತರವೇ ಸಾಗಿಸಲಾಗುವದಾಗಿದೆ. ಅನಂತರ ಉಳಿದವುಗಳನ್ನು, ಟೆಂಡರುಗಳ ಮುಖೇನ ಮಾರಾಟ ಮಾಡಲಾಗುತ್ತಿತ್ತು. ಈ ಟೆಂಡರುದಾರರು ಈ ವರೆಗೂ ಅವರವರ ಅನುಕೂಲ್ಯದಂತೆ ಸೌದೆ, ಇದ್ದಲು ಅಥವ ಟಿಂಬರಾಗಿಯೂ ಸಹ ಈ ಎಲ್ಲಾ ವಸ್ತುಗಳನ್ನೂ ಸಾಗಿಸುವುದು ೧೯೫೨ನೇ ವರ್ಷದವರೆಗೆ ನಡೆದು ಬರುತ್ತಿದ್ದ ಪದ್ಧತಿಯಾಗಿತ್ತು. ೧೯೫೨-೫೩ ರಲ್ಲಿ ಸರಕಾರವು ಇನ್ನು ಒಂದು ಹೆಜ್ಜೆ ಮುಂದೆ ಹೋಗಿ, ಇಲಾಖೆಯ ಮುಖೇನ ಹುಣಸೂರಿಗೆ ಸಾಗಿಸಬಹುದಾದಂಥ ಎಲ್ಲಾ ಮರಗಳನ್ನು ಶೇಖರಿಸಿದ ನಂತರ ಸಾಮಾನ್ಯವಾಗಿ ತಿರಸ್ಕೃತವಾಗಿ ಕಂಟ್ರಾಕ್ಟುದಾರನಿಗೇನೇ ಹೋಗುತ್ತಿದ್ದ ಕೆಳದರ್ಜೆಯ ಮರಗಳನ್ನೂ ಸಹ ಶೇಖರಿಸಿ ಸುಮಾರು ೧೪,೦೦೦ ಘನ ಅಡಿಗಳಿಗೂ ಮೀರಿದ ಟಿಂಬರನ್ನು ಗುರುತು ಮಾಡಿ ಮಾರ್ಕೆಲ್ ಡಿಪೋಗೆ ಮಾರಾಟಕ್ಕಾಗಿ ಕಳುಹಿಸಲಾಯಿತು. ಅನಂತರ ಇಷ್ಟರಲ್ಲೇ ತೃಪ್ತರಾಗದೆ, ಸರಕಾರವು ಮರ ಕುಯ್ಯುವವರನ್ನು ನೇಮಿಸಿ ೩,೬೬೭ ಘನ ಅಡಿಗಳಷ್ಟು ಟಿಂಬರನ್ನು ಕೊಂಬೆಗಳಿಂದ ಸಂಗ್ರಹಿಸಿದೆ. ಈ ಪ್ರಕಾರವಾಗಿ, ಈ ವರ್ಷ ಕೂಪ್‌ಗಳಲ್ಲಿ ಬಾಕಿ ಉಳಿಕೆಯಾಗುತ್ತಿದ್ದ ಕೆಳದರ್ಜೆಯ ಟಿಂಬರುಗಳನ್ನು ಎರಡು ಸಲ ಶೋಧಿಸಿ ಸುಮಾರು ೨೨,೦೦೦ ಘನ ಅಡಿ ಮರಗಳನ್ನು ಅಂದರೆ ೧೨,೦೦೦ ರೂಪಾಯಿಗೆ ಮೇಲ್ಪಟ್ಟ ಬೆಲೆ ಬಾಳುವಷ್ಟು ಟಿಂಬರನ್ನು ಸಂಗ್ರಹಿಸಲಾಯಿತು: ಸಾಮಾನ್ಯವಾಗಿ ರಿಜಕ್ಷನ್ ಕಂಟ್ರಾಕ್ಟುದಾರನಿಗೆ ಹೋಗಬಹುದಾಗಿದ್ದ ಈ ೨೨,೦೦೦ ಘನ ಅಡಿ ಮರಗಳನ್ನು ಈ ರೀತಿಯಾಗಿ ಶೇಖರಿಸಿ, ಇನ್ನು ಇಲಾಖೆಯ ಮೂಲಕ ಯಾವ ರೀತಿಯಿಂದಲೂ ಲಾಭದಾಯಕವಾಗಿ ಸಂಗ್ರಹಿಸಲು ಸಾಧ್ಯವಾಗದಂಥ ಮತ್ತು ಸುಟ್ಟು ನಷ್ಟಪಡಿಸಲು ಯೋಗ್ಯವಾದಂಥ ಉಳಿಕೆಯ ಮರ ಎತ್ತಾವಳಿಗೆ ಟೆಂಡರುಗಳನ್ನು ತರಿಸಲಾಯಿತು.

ಈ ವರ್ಷ ಬಂದ ದೊಡ್ಡ ದರದ ಟೆಂಡರುಗಳನ್ನು ಕೆಳಗೆ ಕೊಡಲಾಗಿದೆ.

(೧) ಬಾಳೆಕೋವು—೭೫೪೦ ಏಕರುಗಳಿಗೆ ಟೆಂಡರುಗಳೇ ಬರಲಿಲ್ಲ.

(೨) ನಾಗರಹೊಳೆ—I ಬಿಟ್ ೭೫.೩೦ ಏಕರುಗಳಿಗೆ ಟೆಂಡರುಗಳೇ ಬರಲಿಲ್ಲ.

(೩) ನಾಗರಹೊಳೆ-II ಬಿಟ್ ೫೦.೩೦ ಏಕರುಗಳಿಗೆ ಏಕರು ಒಂದಕ್ಕೆ ೧೨/-ರೂ.

(೪) ಕೊಳಂಗೆರೆ—೬೫.೧೦ ಏಕರುಗಳಿಗೆ ಏಕರು ಒಂದಕ್ಕೆ ೨೦/-ರೂ.

(೫) ಕಲ್ಲಳ್ಳ—೧೦೧.೧೦ ಏಕರುಗಳಿಗೆ ಟೆಂಡರುಗಳೇ ಬರಲಿಲ್ಲ.

(೬) ಮದೆನಾಡು—೧೪೪.೫೦ ಏಕರುಗಳಿಗೆ ಏಕರು ಒಂದಕ್ಕೆ ೧೧/-ರೂ.

(೭) ದೇವಮಚ್ಚಿ—೧೧೪.೩೦ ಏಕರುಗಳಿಗೆ ಟೆಂಡರುಗಳೇ ಬರಲಿಲ್ಲ.

೩೬೬.೦೦ ಏಕರೆಗಳಿಗೂ ಮೇಲ್ಪಟ್ಟು ಸ್ಥಳದಲ್ಲಿರುವ ವಸ್ತುಗಳನ್ನು ಸಂಗ್ರಹಿಸಲು ಯಾರು ಒಂದು ಕಾಸನ್ನೂ ಕೊಡಲು ಮುಂದೆ ಬರಲಿಲ್ಲ. ಬಾಕಿ ಉಳಿದುದಕ್ಕೆ ೩,೯೭೦—ರೂಪಾಯಿಗಳನ್ನು ಮಾತ್ರ ಕೊಡಲೊಪ್ಪಿರುತ್ತಾರೆ. ಈ ಮೇಲಿನ ಪಟ್ಟಿಯಿಂದ ಸರಕಾರದವರು ಎಷ್ಟು ಜಾಗರೂಕತೆಯಿಂದ, ಎಲ್ಲಾ ಕೂಪುಗಳಿಂದ ಪ್ರತಿಯೊಂದು ತುಂಡನ್ನೂ ಶೇಖರಿಸಿದೆಯೆಂಬುದು ಸಂಪೂರ್ಣವಾಗಿ ವ್ಯಕ್ತವಾಗುವುದು. ಇಷ್ಟಿದ್ದರೆ ಇಂಥ ಕೂಪುಗಳಲ್ಲಿ ಬಾಕಿ ಬಿಟ್ಟ ಮರ ಸಂಗ್ರಹಿಸಿ ಲಾಭ ಪಡೆಯಲು ಎಷ್ಟೋ ವ್ಯಾಪಾರಿಗಳು ಈ ವರೆಗೆ ನಡೆದು ಬಂದಂತೆ ಉತ್ಸಾಹದಿಂದ ಟೆಂಡರು ಕಳುಹಿಸುತ್ತಿದ್ದರು.

ಉಳಿದ ವಸ್ತುಗಳನ್ನು ಈ ಟೆಂಡರುಗಳ ಮೂಲಕ ೩,೯೭೦| ರೂಪಾಯಿಗಳಿಗೆ ಮಾರುವುದರ ಬದಲು, ವ್ಯರ್ಥವಾಗಿ ಸುಟ್ಟು ನಾಶಪಡಿಸುವ ಮರಗಳನ್ನು ಸೌದೆಯಾಗಿ, ಮಾರುವಂತೆ ನಿಷ್ಕರ್ಷಿಸಲಾಯಿತು. ಈ ಸಂದರ್ಭದಲ್ಲಿ ಸರಕಾರದ ಟಿಂಬರುಗಳನ್ನು ತಯಾರು ಮಾಡುವುದರ ಜೊತೆಯಲ್ಲೇ ಖಾಸಗಿ ಕಂಟ್ರಾಕ್ಟರುಗಳು ಮಸ್ಸಾ ಜಂಗಲುಗಳ ಕೂಪ್‌ಗಳಲ್ಲಿ ಈ ಉಳಿಕೆ ಮರಗಳನ್ನು ಸಂಗ್ರಹ ಮಾಡುವ ಪದ್ಧತಿಯು ಹಿತಕರವಾದುದಲ್ಲವೆಂಬ ಅಭಿಪ್ರಾಯದಿಂದ ಈ ಕಂಟ್ರಾಕ್ಟು ಪದ್ಧತಿಯನ್ನು ಸಂಪೂರ್ಣವಾಗಿ ನಿಲ್ಲಿಸಲಾಯಿತು. ಈ ಮೊದಲು ಈ ಕಂಟ್ರಾಕ್ಟು ಪದ್ಧತಿಯು ದುರುಪಯೋಗವಾಗಿರುವ ಉದಾಹರಣೆಗಳು ಸರಕಾರದ ಗಮನಕ್ಕೆ ಬಂದಿವೆ. ಈ ಬಗ್ಗೆ ೩೭೧ ಲಾರಿಲೋಡು ಉಳಿಕೆ ಮರ ಪರ್ಮಿಟುದಾರರಿಂದ ಸಾಗಿಸಲ್ಪಟ್ಟು ೪,೭೦೦ ರೂಪಾಯಿ ಉತ್ಪತ್ತಿ ಸರಕಾರಕ್ಕೆ ಬಂದಿದೆ. ವಾಸ್ತವವಾಗಿ ಕೊಡಗು ಶಾಸನ ಸಭೆಯಲ್ಲಿ ಈ ವಸ್ತುಗಳು ಬಹು ಬೆಲೆಬಾಳತಕ್ಕವೆಂದು ಆಕ್ಷೇಪಣೆ ಬಂದ ಸಮಯದಲ್ಲಿ, ಮುಖ್ಯ ಮಂತ್ರಿಯವರು, ಆಕ್ಷೇಪಣೆ ಮಾಡಿದವರು ಹೇಳಿದ ಸಂಗತಿಗಳು ಸತ್ಯಾಂಶವಾಗಿದ್ದ ಪಕ್ಷದಲ್ಲಿ, ಯಾರು ಬೇಕಾದರೂ ಇವುಗಳನ್ನು ಅತ್ಯಲ್ಪ ಬೆಲೆಗೆ ಕೊಂಡು ಕೊಂಡು ಲಾಭ ಗಳಿಸಿಕೊಳ್ಳಬಹುದೆಂದು ಹೇಳಿದಾಗ್ಯೂ ಈ ವರೆಗೆ ಇವುಗಳನ್ನು ಕೊಂಡುಕೊಳ್ಳಲು ಯಾರು ಮುಂದೆ ಬಂದಿರುವುದಿಲ್ಲ ಇಷ್ಟು ಮಾತ್ರದಿಂದಲೇ ಈ ಆಕ್ಷೇಪಣೆಗಳೂ ಮತ್ತು ಅಪಪ್ರಚಾರಗಳೂ ಎಷ್ಟರ ಮಟ್ಟಿಗೆ ನಿರಾಧಾರವಾದವುಗಳೆಂಬುದು ವ್ಯಕ್ತವಾಗುವುದು. ಹಾಗೆ ಅವು ನಿಜವಾಗಿದ್ದ ಪಕ್ಷದಲ್ಲಿ ಅವುಗಳನ್ನು ಪಡೆದುಕೊಳ್ಳಲು ಯಾಕೆ ಯಾರು ಮುಂದೆ ಬರಲಿಲ್ಲವೆಂಬುದಕ್ಕೆ ಬೇರೆ ಕಾರಣವೇನು ಇರುವುದಿಲ್ಲ.

ಸೌದೆ ಲಾರಿಗಳು ಟಿಂಬರುಗಳನ್ನು ಕಳ್ಳತನದಿಂದ ಸಾಗಿಸುತ್ತಿವೆಯೆಂಬ ವರ್ತಮಾನವು ಮೊದಲನೆಯ ಸಲ ತಿಳಿದು ಬಂದ ಕೂಡಲೇ ಫಾರೆಸ್ಟು ಕನ್‌ಸರ್ವೇಟರವರು, ಖುದ್ದಾಗಿ ಹೋಗಿ, ಸಂಬಂಧಪಟ್ಟ ಸಮಸ್ತ ಜನರೊಡನೆಯೂ ತನಿಖೆ ನಡೆಸಿದುದರ ಫಲಿತಾಂಶವಾಗಿ, ಈ ಆಕ್ಷೇಪಣೆಗಳು ನಿರಾಧಾರವೆಂದು ಕಂಡು ಬಂದಿದೆ. ಇದನ್ನು ಇನ್ನೂ ತಡೆ ಗಟ್ಟುವ ಸಲುವಾಗಿ, ೯ ಅಡಿಗೆ ಮೀರಿದ ಯಾವ ಮರದ ತೊಲೆಯ ಸಾಗುವಿಕೆಯನ್ನು ೧೯೫೩ ಫೆಬ್ರವರಿಯಲ್ಲೇ ಮನ್ನಾಮಾಡಿನಿರ್ಬಂಧಿಸಲಾಗಿದೆ. ಈ ರೀತಿ ಎಲ್ಲಾ ಬಗೆಯಿಂದಲೂ ಎಚ್ಚರ ತೆಗೆಯಲಾಗಿದೆ

ಹಿಂದಿನ ವರ್ಷಗಳಲ್ಲಿ ಈ ಕೂಪ್‌ಗಳನ್ನು ಟೆಂಡರ್ ಮೂಲಕ ಕಂಟ್ರಾಕ್ಟ್ ಕೊಟ್ಟದರ ವಿವರಗಳನ್ನು ಈ ಕೆಳಗೆ ಕೊಡಲಾಗಿದೆ. ೧೯೫೦-೫೧ನೇ ಸಾಲಿಗೆ ಎಷ್ಟು ಏರಿಯಾದಿಂದ ಮಾರಾಟವಾಯಿತು ಮತ್ತು ರಿಜಕ್ಷನ್ ಕಂಟ್ರಾಕ್ಟರುಗಳಿಂದ ಎಷ್ಟು ಹಣ ಜಮ ಬಂತು ಎಂಬುದರ ವಿವರ:

(೧) ಜಂಗ್ಲೆವಾಡಿ, ದೇವಮಚ್ಚಿ ಮತ್ತು ಮದೆನಾಡು ಕೂಪುಗಳು ೭೭ ಏಕರುಗಳಿಗೆ ಏಕರೆ ಒಂದರ ರೂ. ೧೬-೧೦-೦ ಯಂತೆ ರೂ. ೧,೨೮೦

(೨) ನಾಗರಹೊಳೆ ಕೂಪು ೭೧೯ ಏಕರೆಗಳಿಗೆ ಏಕರು ಒಂದರ ರೂ. ೩೨-೪-೦ ಯಂತೆ ರೂ. ೨,೫೪೧

(೩) ಕೊಳಂಗೆರೆ, ಕಲ್ಲಳ್ಳ ಮತ್ತು ದುಬಾರೆ ಕೂಪುಗಳು ೧೪೯.೧ ಏಕರೆಗಳಿಗೆ ಏಕರೆ ಒಂದರ ರೂ. ೧೦ ರಂತೆ ರೂ. ೧೪೯೧-೮-೦ ಮೇರೆ ಜುಮ್ಲಾ ರೂಪಾಯಿ ೫,೩೧೩-೨-೦.

೧೯೫೧-೫೨ನೇ ಸಾಲಿಗೆ ಎಷ್ಟು ಏರಿಯಾದಿಂದ ಮಾರಾಟವಾಯಿತು ಮತ್ತು ರಿಜಕ್ಷನ್ ಕಂಟ್ರಾಕ್ಟರುಗಳಿಂದ ಎಷ್ಟು ಹಣ ಜಮೆ ಬಂತು ಎಂಬುದರ ವಿವರ:

(೧) ಕೊಳಂಗೆರೆ, ಕಲ್ಲಳ್ಳ ಮತ್ತು ನಾಗರಹೊಳೆಕೂಪುಗಳು ೧೯೦.೫ ಏಕರೆಗಳಿಗೆ, ಏಕರೆ ಒಂದರ ರೂ. ೧೧ರಂತೆ ರೂ. ೨೦೯೪-೧೨-೦.

(೨) ದೇವಮಚ್ಚಿಕೂಪು ೮೦.೬ ಏಕರೆ ಒಂದರ ರೂ. ೧೨-೮-೦ ಯಂತೆ ರೂ. ೧೦೦೭-೯-೦

(೩) ದುಬಾರೆ ಮತ್ತು ಮಾಲ್ದಾರೆ ಕೂಪುಗಳು ೨೮೫ ಏಕರೆಗಳಿಗೆ ಏಕರೆ ಒಂದರ ರೂ. ೧೩-೪-೦ ಯಂತೆ ರೂಪಾಯಿ ೩೭೯-೧೪-೦ ಮೇರೆ ಜುಮ್ಲಾ ರೂಪಾಯಿ ೩೫೩೭-೩-೦.

ಈ ಪ್ರಕಾರ ಲೀಸ್ ಮಾಡುವ ಶರತ್ತುಗಳ ಮೇರೆಗೆ, ಹಿಂದಿನ ವರ್ಷಗಳಲ್ಲಿ ಕಂಟ್ರಾಕ್ಟರುಗಳಿಗೆ, ಎಲ್ಲಾ ಟಿಂಬರುಗಳನ್ನೂ ಸೌದೆಯನ್ನೂ, ಬಿದಿರುಗಳನ್ನೂ ಮತ್ತು ಅದರಿಂದ ತಯಾರಿಸಲ್ಪಟ್ಟ ಇದ್ದಲನ್ನೂ ಮೇಲ್ಕಂಡ ಕೂಪುಗಳೊಳಗೆ ಶೇಖರಿಸುವುದಕ್ಕೂ, ಸ್ಕ್ವೇರ್ ಮಾಡುವುದಕ್ಕೂ, ಸಾಗಿಸುವುದಕ್ಕೂ ಮತ್ತು ಮಾರಾಟ ಮಾಡುವುದಕ್ಕೂ ಹಕ್ಕಿತ್ತು ಮತ್ತು ಎಲ್ಲಾ ಕಂಟ್ರಾಕ್ಟರುಗಳಿಗೂ ತೆಗೆದ ಮರಗಳನ್ನೂ ಸಹ ಸಾಗಿಸುವುದಕ್ಕೂ ಹಕ್ಕಿತ್ತು. ವಾಸ್ತವವಾಗಿ ಹಿಂದಿನ ವರ್ಷಗಳಲ್ಲಿ ಸಣ್ಣ ಸೈಜಿನ ತೆಗೆದ ಮರಗಳನ್ನು ಸಾಗಿಸುತ್ತಲೂ ಇದ್ದರು. ಇವೆಲ್ಲವನ್ನೂ ಈ ವರ್ಷ ನಿಲ್ಲಿಸಲಾಗಿದೆ. ಈ ಕಾರಣಗಳಿಗಾಗಿ ತೆರೆಯ ಮರೆಯಲ್ಲಿರುವ ಲಾಭಕೋರರಿಗೆ ತಮ್ಮ ಲಾಭದಾಯಕ ಕೂಪ್ ಕಂಟ್ರಾಕ್ಟ್ ತಪ್ಪಿದ್ದಕ್ಕಾಗಿ ಸ್ವಲ್ಪ ನಿರಾಶೆಯಾಗಿರಬೇಕು. ಅಂಥವರೇ ಈ ಟೀಕೆಗಳನ್ನು ಹೆಚ್ಚಾಗಿ ಹರಡುತ್ತಿರುವರೆಂದರೂ ತಪ್ಪಾಗಲಿಕ್ಕಿಲ್ಲ.

ಸರಕಾರಕ್ಕೆ ಈ ವರ್ಷ (೧೯೫೨-೫೩) ಎಲ್ಲಾ ಉಳಿಕೆಯ ಮರಗಳ ಸಂಗ್ರಹದಿಂದಲೂ ಸೌದೆ ಮಾರಾಟದಿಂದಲೂ ಮತ್ತು ಕೊಂಬೆಯ ತುಂಡುಗಳನ್ನು ಗರಗಸದಿಂದ ಕುಯಿಸಿದರಿಂದಲೂ (Sawings) ಬಂದ ಉತ್ಪತ್ತಿ:—

(೧) ಗುರುತು ಮಾಡಲ್ಪಟ್ಟ ಟಿಂಬರು ಸಾಗಿದ ನಂತರ ಕೂಪುಗಳಿಂದ ಶೋಧನೆ ಮಾಡಿದ ೧೪,೦೦೦ ಘನ ಅಡಿ ಟಿಂಬರು ಸಂಗ್ರಹದಿಂದ ರೂ. ೧೦,೦೦೦-೦-೦ಕ್ಕೆ ಮೇಲ್ಪಟ್ಟು

(೨) ಕೊಂಬೆಯ ತುಂಡುಗಳಿಂದ ಕೊಯ್ದು ತಯಾರಿಸಿದ ೩,೬೬೭ ಘನ ಅಡಿ ಟಿಂಬರಿನಿಂದ (ಕುಯ್ದಿದ ಖರ್ಚು ಕಳೆದು) ರೂ. ೨,೦೦೦ಕ್ಕೆ ಮೇಲ್ಪಟ್ಟು

(೩) ೩೭೧ ಲಾರಿ ಲೋಡು ಸೌದೆ ಮಾರಾಟದಿಂದ ರೂ. ೪,೭೦೦. ಜುಮ್ಲಾ ರೂ. ೧೬,೭೦೦.

ಈ ಅಂಕೆಗಳು ಕೂಪುಗಳಿಂದ ಎಲ್ಲಾ ಬಗೆಯಿಂದಲೂ ದೊರಕಬಹುದಾದ ಮರಗಳನ್ನು ಸಂಗ್ರಹಿಸಿ ಸರಕಾರಕ್ಕೆ ಹೆಚ್ಚು ಉತ್ಪತ್ತಿ ಸಾಧಿಸುವ ವಿಚಾರದಲ್ಲಿ ಸರಕಾರದವರು ಎಷ್ಟರ ಮಟ್ಟಿಗೆ ಶ್ರದ್ಧೆಯಿಂದ ಕೆಲಸ ನಡೆಸುತ್ತಿರುವರೆಂಬುದನ್ನು ವ್ಯಕ್ತಪಡಿಸುತ್ತವೆ.

ಬೆಂಕಿಯ ವಿಚಾರ:—ಇದೊಂದು ದುರಾದೃಷ್ಟದ ಅನಿರೀಕ್ಷಣೀಯವಾದ ವಿಚಾರ. ಈ ವರ್ಷ ದೀರ್ಘಕಾಲದ ಕಡು ಬೇಸಿಗೆಯ ಕಾರಣ ಕೊಡಗಿನಲ್ಲೆಲ್ಲ ಬೆಂಕಿಯ ಅನಾಹುತ ಹೆಚ್ಚಾಗಿತ್ತು. ಇದು ಫಾರೆಸ್ಟುಗಳಿಗೆ ಅಪರೂಪವಲ್ಲ. ಇಂಥ ಸಂದರ್ಭಗಳಲ್ಲಿ ಆ ಕ್ಷಣವೇ ಮುಖ್ಯ ಮಂತ್ರಿಗಳೇ ತನಿಖೆ ನಡೆಸಿದರು. ಅದರ ಫಲಿತಾಂಶವಾಗಿ ಸ್ಥಳೀಯ ಅಧಿಕಾರಿಗಳ ಮೇಲೆ ಯಾವ ಬಗೆಯಿಂದಲೂ ಸಂಶಯಪಡಲು ಕಾರಣ ಸಿಗಲಿಲ್ಲ.

ದುರ್ವ್ಯಾಪಾರಗಳನ್ನೂ, ಅಸಮರ್ಥತೆಯನ್ನೂ ನಿರ್ಮೂಲ ಮಾಡಲು ಸರಕಾರವು ಕಾರ್ಯಕ್ರಮ ಕೈಗೊಳ್ಳುತ್ತಿರುವಾಗ, ಆ ಸಂಬಂಧವಾದ ಮತ್ತು ಉದ್ದೇಶಿತವಾದ ಆಕ್ಷೇಪಣೆಗಳನ್ನು ಮಾಡುವುದರಿಂದ ಯಾವ ಪ್ರಯೋಜನವೂ ಇಲ್ಲ. ಸೂಕ್ತವಾದ ಸಂದರ್ಭಗಳಲ್ಲಿ, ಸರಿಯಾದ ವಿಚಾರಗಳನ್ನು ನೇರವಾಗಿ ಮತ್ತು ಸಕಾಲದಲ್ಲಿ ಮಂತ್ರಿಗಳಿಗೆ ತಿಳಿಸಿದರೆ, ಅವರೇ ಖುದ್ದಾಗಿ ಅಂಥ ಆಕ್ಷೇಪಣೆಗಳ ನಿಜಾಂಶವನ್ನು ಕಂಡು ಹಿಡಿಯಲು, ವಿಚಾರಣೆ ನಡೆಸಲು ಸಿದ್ಧರಾಗಿರುತ್ತಾರೆ.

ಸರಕಾರಿ ಪ್ರಕಟಣೆಯಲ್ಲಿ: ಮಿತಿ ಇಲ್ಲದ ಆತ್ಮಪ್ರಶಂಸೆ.

— ಲೇ:—ಶ್ರೀ ಪಿ. ಎ. ಸಂಜಪ್ಪ —

ತಾರೀಕು ೨೨–೭–೫೩ ರ 'ಜನ್ಮಭೂಮಿ' ಪತ್ರಿಕೆಯಲ್ಲಿ ಸರಕಾರದ ಫಾರೆಸ್ಟ್ ನೀತಿಯ ಬಗ್ಗೆ ಒಂದು ಪ್ರಕಟಣೆಯನ್ನು ಓದಿದೆನು. ಅದನ್ನು ಓದಿ ತುಂಬಾ ವ್ಯಸನವಾಯಿತು. ಸರಕಾರಿ ಪ್ರಕಟಣೆಯ ಭಾಷೆ ಅಸಹ್ಯವಾಗಿರಬಾರದು. ಪ್ರಕಟಣೆಯು ನಿಜಸ್ಥಿತಿಯನ್ನು ಎತ್ತಿ ತೋರಿಸುವ ದಾಖ್ಲೆಯಾಗಿರಬೇಕಲ್ಲದೆ ಪತ್ರ ವ್ಯವಹಾರಕ್ಕೆ ಉತ್ತರದಂತಿರಬಾರದು. ಮತ್ತೆ ನಿಜ ಸಂಗತಿಯನ್ನು ಜನತೆಯ ಮುಂದಿಟ್ಟು, ಅದರಿಂದ ತಮ್ಮ ಅಭಿಪ್ರಾಯಗಳನ್ನು ಜನರೇ ಮಾಡಿಕೊಳ್ಳುವಂತೆ ಇರಬೇಕಲ್ಲದೆ ಸರಕಾರ ಹಾಗೆ ಮಾಡಿದೆ; ಹೀಗೆ ಮಾಡುತ್ತಿದೆ. ಅಷ್ಟು ಕಷ್ಟಪಟ್ಟಿದೆ. ಇಷ್ಟು ಶ್ರಮವಹಿಸಿದೆಯೆಂದು ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳಬಾರದು. ಆದರೆ ಮೇಲ್ಕಂಡ ಸರಕಾರಿ ಪ್ರಕಟಣೆಯು ಆ ರೀತಿಯಲ್ಲಿಲ್ಲ.

ಕೊಡಗಿನ ಇಂದಿನ ಸರಕಾರವು ಪ್ರತಿ ಹೆಜ್ಜೆಯಲ್ಲಿಯೂ ಎಲ್ಲಿ ತಮ್ಮ ಕೈಯಲ್ಲಿರುವ ಅಧಿಕಾರ ಕಿತ್ತುಕೊಳ್ಳಲ್ಪಡುವದೋ ಎಂಬ ಹೆದರಿಕೆಯಲ್ಲಿ ವರ್ತಿಸುತ್ತಿರುವಂತೆ ತೋರುತ್ತದೆ. ಅದ್ದರಿಂದ ದೇಶದಲ್ಲಿ ಸರಕಾರದ ನೀತಿಗೆ ವಿರುದ್ಧದ ಅಭಿಪ್ರಾಯ ವ್ಯಕ್ತವಾದಲ್ಲೆಲ್ಲ ಅದು ತಮ್ಮನ್ನು ತಲೆ ಕೆಳಗೆ ಮಾಡಲು ಹೊರಟವರ ಪ್ರಯತ್ನವೆಂದು ತಿಳಿಯುವಂತಿದೆ. ದೇಶದ ಸರ್ವಜನರ ಹಿತಕ್ಕಾಗಿ ರಚಿಸಲ್ಪಟ್ಟ ಒಂದು ಸರಕಾರವು ಹೀಗೆ ವರ್ತಿಸುವದರಿಂದ ದೇಶಕ್ಕೆ ಅಹಿತವಲ್ಲದೆ ಶುಭವಾಗಲಾರದು.

ಫಾರೆಸ್ಟ್ ನೀತಿಯಲ್ಲಿ ನ್ಯೂನತೆ ಇದೆ. ಸೌದೆಯ ಹೆಸರಿನಲ್ಲಿ ಮರದ ತೊಲೆಗಳ ಕಳ್ಳವ್ಯಾಪಾರ ನಡೆಯುತ್ತಿದೆಯೆಂದು ಸರಕಾರಕ್ಕೆ ಫಿರ್ಯಾದು ಹೋದರೆ ಸರಕಾರ ಅದನ್ನು ಪರಿಶೀಲಿಸಿ ತಪ್ಪಿದ್ದರೆ ಸರಿಪಡಿಸುವ ಬದಲು 'ತೆರೆಯ ಮರೆಯಲ್ಲಿರುವ ಕೆಲವು ಲಾಭಖೋರರಿಗೆ ತಮ್ಮ ಲಾಭದಾಯಕವಾದ ಕೂಪ್ ಕಂಟ್ರಾಕ್ಟು ತಪ್ಪಿದ್ದಕ್ಕಾಗಿ ನಿರಾಶೆಯಾಗಿರಬೇಕು. ಅಂಥವರೇ ಈ ಟೀಕೆಗಳನ್ನು ಹರಡುತ್ತಿರುವರು' (ಜನ್ಮಭೂಮಿ ತಾ. ೨೨–೭–೫೩) ಎಂದು ಸರಕಾರಿ ಪ್ರಕಟಣೆಯಲ್ಲಿ ಹೇಳಿದರೆ ಇದರಿಂದ ಯಾವ ಲಾಭ ಆದಂತಾಯಿತು. ಫಿರ್ಯಾದು ಮಾಡಿದವರು ಒಂದು ವೇಳೆ ಸರಕಾರವು ಹೇಳುವಂಥಾ ಕಂಟ್ರಾಕ್ಟುದಾರರೇ ಆಗಿದ್ದರೂ ಕೂಡ ಫಾರೆಸ್ಟಿನಲ್ಲಿ ಕಳ್ಳತನ ಆಗುತ್ತಿದೆಯೆಂದು ದೂರು ಕೊಡುವದು ತಪ್ಪೆ? ಯಾರಿಂದಲೇ ಫಿರ್ಯಾದು ಬಂದಿರಲಿ ಸರಕಾರದ ಕರ್ತವ್ಯವೇನು? ಅದನ್ನು ವಿಚಾರಿಸಿ ಸರಿಪಡಿಸುವದಲ್ಲವೇ? ಮತ್ತೆ ಮೇಲೆ ಉದಾಹರಣೆಗೆ ಕೊಟ್ಟ ವಾಕ್ಯದ ಭಾಷೆ ಸರಕಾರಿ ಪ್ರಕಟಣೆಗೆ ಯೋಗ್ಯವಾದುದೇ?

ಸರಕಾರವೆಂದರೆ ತನ್ನ ತಾಳಕ್ಕೆ ಕುಣಿಯುವ ಕೆಲವು ಜನರ ಹಿತಕ್ಕಿರುವದೆಂದು ಭಾವಿಸಿದಂತಿದೆ. ಅದ್ದರಿಂದ ಕಂಟ್ರಾಕ್ಟುದಾರರು, ತನಗೆ ಬೇಡದವರು ದೂರು ಕೊಟ್ಟರೆ ಅದು 'ಸಾರ್ವಜನಿಕರಲ್ಲಿ ಸರಕಾರದ ವಿರುದ್ಧ ತಪ್ಪಭಿಪ್ರಾಯ ಹುಟ್ಟಿಸಲು ಮಾಡುವ ಪ್ರಚಾರ'ವೆಂದು ವರ್ಗೀಕರಿಸಿ ಅದು ಗಮನಕ್ಕೆ ತೆಗೆದುಕೊಳ್ಳುವಂಥಾದ್ದಲ್ಲವೆಂದು ಭಾವಿಸಿದಂತಿದೆ. ಪ್ರತಿ ಮಾತಿಗೂ ಸರಕಾರವು ತನ್ನ ಕುರ್ಚಿಯ ಯೋಚನೆಯಿಂದ ವರ್ತಿಸಲೇಕೆ?

'ಟಿಂಬರುಗಳನ್ನು ಕಳ್ಳತನದಿಂದ ಸಾಗಿಸಲಾಗುತ್ತಿದೆಯೆಂಬ ವರ್ತಮಾನವು ಮೊದಲನೇ ಸಲ ತಿಳಿದುಬಂದ ಕೂಡಲೇ ಫಾರೆಸ್ಟ್ ಕನ್ಸರ್ವೇಟರವರು ಖುದ್ದಾಗಿ ಹೋಗಿ ಸಂಬಂಧಿಸಿದ ಸಮಸ್ತ ಜನರೊಡನೆ ತನಿಖೆ ನಡೆಸಿದುದರ ಫಲಿತಾಂಶವಾಗಿ ಈ ಆಕ್ಷೇಪಣೆಗಳು ನಿರಾಧಾರವೆಂದು ಕಂಡುಬಂದಿವೆ. ಇದನ್ನು ಇನ್ನೂ ತಡೆಗಟ್ಟುವ ಸಲುವಾಗಿ ೯ ಅಡಿಗೆ ಮೀರಿದ ಯಾವ ಮರದ ಸಾಗುವಿಕೆಯನ್ನೂ ಮನ್ನಾಮಾಡಿ ನಿರ್ಬಂಧಿಸಲಾಗಿದೆ" (ಜನ್ಮಭೂಮಿ ೨೨–೭–೫೩) ಇದನ್ನು ಓದಿದರೆ ಸರಕಾರದ ಬಿಸ್ಕಿ ಹಸಿವಾದದ್ದು ತಿಳಿಯದಿರದು. ತನಿಖೆ ನಡೆಸಿ ಮಾಡಿ ಟಿಂಬರು ಕಳ್ಳತನದಿಂದ ಹೋಗುತ್ತಿಲ್ಲವೆಂದು ತಿಳಿದ ಮೇಲೆ "ಇದನ್ನು" ತಡೆಗಟ್ಟಲು ೯ ಅಡಿಗೆ ಮೀರಿದ ಮರ ಹೋಗಕೂಡದೆಂದು ನಿರ್ಬಂಧಿಸಲಾಗಿದೆಯೆನ್ನಲಾಗಿದೆ. ಕಳ್ಳತನವಿಲ್ಲದ ಮೇಲೆ ಯಾವುದನ್ನು ತಡೆಗಟ್ಟಲಿಕ್ಕಾಗಿ ೯ ಅಡಿಯ ನಿರ್ಬಂಧ? ಈ ಹೊಸ ಕಾನೂನು ಮಾಡಿದ್ದೇ ಕಳ್ಳತನ ನಡೆಯುತ್ತಿತ್ತೆಂಬುದಕ್ಕೆ ಸಾಕ್ಷಿಯಲ್ಲವೆ?

'ದುಷ್ಪ್ರೇರಿತ ಆಕ್ಷೇಪಣೆಗಳನ್ನು ಮಾಡದೆ ಸೂಕ್ಷ್ಮವಾದ ಸಂದರ್ಭಗಳಲ್ಲಿ ಸರಿಯಾದ ವಿಚಾರಗಳನ್ನು ನೇರವಾಗಿ ಮತ್ತು ಸಕಾಲದಲ್ಲಿ ಮಂತ್ರಿಗಳಿಗೆ ತಿಳಿಸಿದರೆ ಅವರೇ ಖುದ್ದಾಗಿ ಅಂಥಾ ಆಕ್ಷೇಪಗಳ ನಿಜಾಂಶವನ್ನು ಕಂಡು ಹಿಡಿಯಲು ವಿಚಾರಣೆ ನಡೆಸಲು ಬದ್ಧರಾಗಿರುತ್ತಾರೆ' (ಜನ್ಮಭೂಮಿ ತಾ. ೨೨–೭–೫೩.)

ಫಾರೆಸ್ಟಿನಲ್ಲಿಯ ನ್ಯೂನತೆಗಳ ಬಗ್ಗೆ ಫಿರ್ಯಾದು ಬಂದರೆ ಅದನ್ನು ವಿಚಾರಿಸಲು ಫಾರೆಸ್ಟ್ ಮಂತ್ರಿಗಳು 'ಬದ್ಧರು' ಎಂಬುದು ಎಲ್ಲರಿಗೂ ತಿಳಿದಿದೆ. ಆದರೆ ಅವರ 'ಬದ್ಧತೆ'ಯ ಕಟು ಅನುಭವ ದೇಶದಲ್ಲಿ ಹಲವರಿಗಿದೆ. ಮುಖ್ಯ ಮಂತ್ರಿ ಮಹನೀಯರೇ ಜನತೆಗೆ ಜವಾಬ್ದಾರರಾದ ಶಾಸನ ಸಭೆಯ ಚುನಾಯಿತ ಸದಸ್ಯರೊಬ್ಬರು ಕಳೆದ ಶಾಸನ ಸಭಾ ಮೀಟಿಂಗಿನಲ್ಲಿ ಮರದ ಕಳ್ಳಸಾಗಾಟದ ವಿಚಾರ ಎತ್ತಿದಾಗ ಮುಖ್ಯ ಮಂತ್ರಿಗಳು ಒಂದೋ 'ಅದನ್ನು ವಿಚಾರಿಸಿದ್ದೇವೆ. ಅದು ನಿರಾಧಾರವೆಂದು ಹೇಳಬೇಕಿತ್ತು. ಇಲ್ಲವೇ 'ವಿಚಾರಿಸುತ್ತೇವೆ, ತಪ್ಪು ಇದ್ದರೆ ಶಿಕ್ಷಿಸಿ ಸರಿಪಡಿಸುತ್ತೇವೆ' ಎನ್ನಬೇಕಿತ್ತು. ಬದಲು ವಿಚಾರಣೆ ನಡೆಸಲು 'ಬದ್ಧ'ರಾದ ಮಂತ್ರಿಯವರು ಹೇಳಿದ ಮಾತುಗಳಿವು 'ಶ್ರೀಯುತರು ತನ್ನ ಹತ ಹುಣಸೂರಿಗೆ ಹೋಗಿ ಕಳ್ಳಸಾಗಾಟದ ಮರಗಳನ್ನು ನೋಡಿ ಬಂದುದು ಸ್ವಾತ್ಯಕಾರ್ಯ. ಶ್ರೀಯುತರಿಗೆ ಇಷ್ಟು ಆಸಕ್ತಿ ಏಕೆಂದು ನಮಗೆ ತಿಳಿದಿದೆ. ಅವರ ಸಹೋದರರೂ ಮರವ್ಯಾಪಾರಿಗಳು.' ದೂರನ್ನು ವಿಚಾರಿಸಿ ಸರಿಪಡಿಸಲು 'ಬದ್ಧ'ರಾದ ಮಂತ್ರಿಗಳ ಮಾತೇ ಇದು? ತಮ್ಮ ವಿರುದ್ಧವಾಗಿ ಹೇಳುವ ಒಂದೇ ಮಾತನ್ನು ಕೂಡ ಸಹಿಸಲಾರದ ಅಸಹನೆ ಇರುವವರು, ಲೋಕದ ದೋಷಗಳಿದ್ದರೂ ಅದನ್ನು ಒಳಗಿಟ್ಟು ಮೇಲೆ ತೋರಿಕೆಗಾಗಿ ತಾವು ಹಾಗೆ ಮಾಡಲು ಸಿದ್ಧರು, ಹೀಗೆ ಮಾಡಲು 'ಬದ್ಧ'ರು ಎಂದು ಹೇಳುವದರಿಂದ ಪ್ರಯೋಜನವಿಲ್ಲ. ಸರಕಾರವು ತಮ್ಮ ಕೆಲಸದ ನ್ಯೂನತೆ ಅತಿರೇಕಗಳನ್ನು ಎತ್ತಿ ತೋರಿಸುವವರನ್ನು ತಮ್ಮ ಮಿತ್ರರೆಂದು ತಿಳಿಯುವ ವರೆಗೆ ಪ್ರಜಾಪ್ರಭುತ್ವವು ಕೇವಲ ಬೂಟಾಟಿಕೆಯಾಗದಿರದು.

ಕೊಡಗು ಫಾರೆಸ್ಟ್ ನೀತಿ.

ಮುಖ್ಯ ಮಂತ್ರಿಗಳಿಗೆ ಬಹಿರಂಗ ಪತ್ರ.

ನಮ್ಮ ಸರಕಾರದವರು ತಾರೀಕು ೨೨–೭–೫೩ರ 'ಜನ್ಮಭೂಮಿ' ಪತ್ರಿಕೆಯಲ್ಲಿ ಹೊರಡಿಸಿದ ಪ್ರಕಟಣೆಯನ್ನು ಓದಿ ನೋಡಿ ನಿಮಗೆ ಈ ಬಹಿರಂಗ ಪತ್ರ ಬರೆಯುತ್ತಿರುವೆನು. ಕಾರಣ, ನಾಗರಹೊಳೆ ಫಾರೆಸ್ಟಿನಿಂದ ಮರದ ತೊಲೆಗಳು ಸೌದೆಯ ರೂಪದಲ್ಲಿ ಸಾಗಾಟವಾಗುವುದನ್ನು ಕಂಡು ಹಿಡಿದವನು ನಾನು. ಮತ್ತು ತಾ. ೭–೬–೫೩ರ 'ಜನಶಕ್ತಿ' ಪತ್ರಿಕೆಯಲ್ಲಿನ ಲೇಖನವೂ ನನ್ನ ಆಧಾರದಿಂದಲೇ ಬರೆಯಲ್ಪಟ್ಟದಾಗಿದೆ. ಆದುದರಿಂದ ನಮ್ಮ ಫಾರೆಸ್ಟ್ ಇಲಾಖೆಯ ನಿಜಾಂಶವನ್ನು ಸಾರ್ವಜನಿಕರು ತಿಳಿಯಲಿಕ್ಕಾಗಿ ಕೆಲವು ಮಾಹಿತಿಗಳನ್ನು ನಿಮ್ಮಲ್ಲಿ ಕೇಳುತ್ತೇನೆ.

ನಾನು ಒಬ್ಬ ಮರ ವ್ಯಾಪಾರಿ. ಹೆಚ್ಚಾಗಿ ಹುಣಸೂರು ಮತ್ತು ಮೈಸೂರಿನಲ್ಲಿರುತ್ತೇನೆ. ಅದ್ದರಿಂದ ನನಗೆ ಹುಣಸೂರಿನ ಮರವ್ಯಾಪಾರಿಗಳಾದ ಮಾ. ಇಬ್ರಾಹಿಮ್ ಖಾನ್, ಸಯದ್ ಮೊಯಿದಿನ್ ಮತ್ತು ಹುಸೇನ್ ಎಂಬವರು ಕೊಡಗು ಫಾರೆಸ್ಟಿನಿಂದ ಸೌದೆಯ ಹೆಸರಿನಲ್ಲಿ ಮರದ ತೊಲೆಗಳನ್ನು ಸಾಗಿಸುವುದು ತಿಳಿಯಿತು. ಮಾರ್ಚ್ ತಾ. ೯ರಲ್ಲಿ ನಾನು ಸ್ವತಃ ಹುಣಸೂರಿಗೆ ಹೋಗಿ ಈ ಮೇಲಿನ ವಿಷಯವನ್ನು ಅಜಮಾಯಿಸಿ ಕಂಡುಹಿಡಿದಿರುತ್ತೇನೆ. ಅದೇ ದಿನ ಸಾಯಂಕಾಲ ಡಾ. ಪಿ. ಎಂ. ನಾಣಯ್ಯ ಎಂ. ಎಲ್. ಎ. ಇವರನ್ನು ಕಾಣುವುದಕ್ಕಾಗಿ ನಾನು ಪೊನ್ನಂಪೇಟೆಗೆ ಬಂದೆನು. ಆದರೆ ಅವರನ್ನು ಕಾಣುವುದಕ್ಕೆ ಸಿಗಲಿಲ್ಲ. ಅದ್ದರಿಂದ ಶ್ರೀ ಕೆ. ಕೆ. ಗಣಪತಿ ಎಂ. ಎಲ್. ಎ. ಇವರನ್ನು ಕಂಡು ಅವರಿಗೆ ಕೊಡಗು ಫಾರೆಸ್ಟ್ ಇಲಾಖೆಯಲ್ಲಿ ನಡೆಯುತ್ತಿರುವ ಅಕ್ರಮ ವ್ಯವಹಾರಗಳನ್ನು ತಿಳಿಸಿದೆನು. ತಾ. ೧೦–೩–೫೩ರಲ್ಲಿ ನಾನೂ ಶ್ರೀ ಕೆ. ಕೆ. ಗಣಪತಿ ಎಂ. ಎಲ್. ಎ. ಇವರೂ ಹುಣಸೂರಿನ ಮಾ. ಇಬ್ರಾಹಿಮ್ ಖಾನ್ ಮತ್ತು ಸಯದ್ ಮೊಯಿದಿನ್‌ರವರಲ್ಲಿ ಹೋಗಿ ಮರಗಳನ್ನು ಕ್ರಯ ಮಾಡಿದೆವು. ಈ ಇಬ್ಬರು ವ್ಯಾಪಾರಿಗಳಲ್ಲಿ ಸುಮಾರು ೧೦ ಸಾವಿರ ಅಡಿಗಳಷ್ಟು ಮರ ಇತ್ತು. ಆ ಮರಗಳಲ್ಲಿ C. R. S. ಸೀಲು ಹಾಕಲಾಗಿತ್ತು. ನಾವು ನೋಡಿದ ಮರಗಳಲ್ಲಿ ನಾಲ್ಕು ಅಡಿಯಿಂದ ಹಿಡಿದು ಒಂಭತ್ತು ಅಥವಾ ಹತ್ತು ಅಡಿ ಸುತ್ತಳತೆ ಮತ್ತು ೧೨ ಅಡಿಯಿಂದ ೨೦ ಅಡಿ ಉದ್ದವಿರುವ ನಂದಿ, ಮತ್ತಿ ಅರಸಿನ ತೇಗ ಮತ್ತು ತಡಸಲು ಮರಗಳಿದ್ದವು. ಹೊನ್ನೆ, ಬೀಟಿ ಯಾ ತೇಗದ ಮರಗಳಿರಲಿಲ್ಲ. ನಾನು ಈ ಮೊದಲು ಒಂದೆರಡು ಸಾರಿ ಮಾ. ಇಬ್ರಾಹಿಂಖಾನ್‌ರವರಿಂದ ಮರಗಳನ್ನು ಕ್ರಯಕ್ಕೆ ತೆಗೆದುಕೊಂಡದ್ದುಂಟು. ಅದೇ ಪ್ರಕಾರ ಆ ದಿನವೂ ಅವರ ಮೇನೇಜರರಲ್ಲಿ ೫೦೦ ಅಡಿ ಅರಸಿನ ತೇಗವನ್ನು ಅಡಿ ಒಂದರ ರೂ. ೨–೪–೦ರಂತೆ ಕ್ರಯ ನಿಶ್ಚಯಿಸಿ ಒಂದು ನೂರು ರೂಪಾಯಿ ಅಡ್ವಾನ್ಸು ಕೊಟ್ಟಾಗ, ಕ್ರಯದ ಪೂರ್ತಿ ಮೊಬಲಗು ಬಂದಲ್ಲದೆ ವ್ಯಾಪಾರ ಸಾಧ್ಯವಿಲ್ಲವೆಂದು ನನ್ನ ಅಂದಿನ ವ್ಯಾಪಾರವನ್ನು ನಿರಾಕರಿಸಿದರು. ಅದ್ದರಿಂದ ನಾವು ಹಿಂತಿರುಗಿದೆವು. ಈ ವಿಷಯವನ್ನು ನಿಮಗೂ, ಫಾರೆಸ್ಟ್ ಆಫೀಸರಿಗೂ ತಿಳಿಸುವಂತೆ ಶ್ರೀ ಕೆ. ಕೆ. ಗಣಪತಿಯವರನ್ನು ಕೇಳಿಕೊಂಡಿದ್ದೆನು. ಅವರು ಈ ವಿಚಾರ ನಿಮ್ಮಲ್ಲಿ ಮತ್ತು ಫಾರೆಸ್ಟ್ ಆಫೀಸರರಲ್ಲಿ ಪ್ರಸ್ತಾಪಿಸಿರುವರೋ ಇಲ್ಲವೂ ತಿಳಿಯದು.

ಮಾನ್ಯ ಮುಖ್ಯ ಮಂತ್ರಿಗಳು ಈ ಸಂಬಂಧವಾದ ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಸಮಾಧಾನವೀಯಬೇಕಾಗಿ ಕೋರಿಕೆ.

(೧) ಹುಣಸೂರಿನ ಮೇಲ್ಕಂಡ ಮೂವರು ವ್ಯಾಪಾರಿಗಳು C.R.S. ಸೀಲು ಇದ್ದ ಈ ಹಿಂದೆ ವಿವರಿಸಿರುವ ಮರಗಳನ್ನು ಕೊಡಗು ಫಾರೆಸ್ಟಿನಿಂದ ಹೇಗೆ ಸಾಗಿಸಿದರು?

(೨) ನಾವು ಮಾರ್ಚ್ ತಾ. ೧೦ರಲ್ಲಿ ಹುಣಸೂರಿನಲ್ಲಿ ನೋಡಿದ ಸುಮಾರು ೧೦ ಸಾವಿರ ಅಡಿ ಮರಗಳು ತಾ ೧೧–೩–೫೩ರ ರಾತ್ರಿ ಕಾಣೆಯಾದುದು ಹೇಗೆ? ಮತ್ತು ತಾ. ೧೧–೩–೫೩ರಲ್ಲಿ ಫಾರೆಸ್ಟರ್ ವೀರಪ್ಪನವರೂ, ಕಂಪೌಂಡರ್ ಮೈಕೇಲ್‌ರವರೂ ಯಾತಕ್ಕಾಗಿ ಹುಣಸೂರಿಗೆ ಬಂದಿದ್ದರು? ಅವರು ಆ ದಿನ ರಜೆ ಪಡೆದಿದ್ದರೋ?

(೩) ನಮ್ಮ ಸರಕಾರದಿಂದ ನಾಗರಹೊಳೆ ರೇಂಜರಿಗೆ ಯಾವುದಾದರೂ ವಾಹ

ನ ಕೊಡಲಾಗಿತ್ತೋ? ಇಲ್ಲದಿದ್ದರೆ ಅವರು ಸಂಚರಿಸುತ್ತಿದ್ದ MYZ — ಹೊಸ ಮೋಟಾರ್ ಬೈಸಿಕಲ್ ಯಾರದು?

(೪) ಫಾರೆಸ್ಟಿನಲ್ಲಿ ಆಕಸ್ಮಿಕವಾಗಿ ಬೆಂಕಿ ಬಿದ್ದರೆ ಮಾರನೆ ದಿನವೇ ಮಡಿಕೇರಿಗೆ ರಿಪೋರ್ಟು ಹೋಗುತಿತ್ತು. ಈ ಸಲ ಬೆಂಕಿ ಬಿದ್ದು ಕೆಲವಾರು ದಿನಗಳಾದರೂ ರಿಪೋರ್ಟು ಹೋಗದಿರಲು ಕಾರಣವೇನು?

(೫) ತಾ. ೫-೨-೫೩ರಲ್ಲಿ ಮತ್ತು ೯-೨-೫೩ರಲ್ಲಿ ಎರಡು ಲಾರಿ ಲೋಡು ಸೌದೆ ಪಾಸಿನ ಆಧಾರದಲ್ಲಿ ಕುಟ್ಟ ಗೇಟಿನ ಮೂಲಕ ಹೋದ ಮರಗಳ ಸುತ್ತಳತೆಯೆಷ್ಟು? ಇವುಗಳು ಮರದ ತೊಲೆಗಳಲ್ಲದಿದ್ದಲ್ಲಿ ಪೋಲೀಸಿನವರು ಲಾರಿಯನ್ನು ತಡೆ ಮಾಡಿ ಮಹಜರು ಮಾಡಲು ಕಾರಣವೇನು?

(೬) ಕಳ್ಳತನದಿಂದ....ಹೋಗುವುದು ನಿರಾಧಾರವಾದುದೆಂದು ಕಂಡು ಬಂದಿದೆ. ಇದನ್ನು ತಡೆಗಟ್ಟುವ ಸಲುವಾಗಿ....ಎಚ್ಚರ ತೆಗೆಯಲಾಗಿದೆ" (ಜನ್ಮಭೂಮಿ ತಾ. ೨೨-೭-೫೩) ನಿಮ್ಮ ಈ ಪ್ರಕಟಣೆಯಿಂದ ಸಾರ್ವಜನಿಕರು ಏನೆಂದು ಅಭಿಪ್ರಾಯಪಡಬೇಕು? ನಿರಾಧಾರವಾದ ಸಂಗತಿಯ ಬಗ್ಗೆ ಎಚ್ಚರ ತೆಗೆದುಕೊಳ್ಳುವ ಪ್ರಮೇಯವೇನು?

(೭) ನಾನು ಬರೆದುದೆಲ್ಲ ನಿರಾಧಾರವಾಗಿದ್ದರೆ ನಾಗರಹೊಳೆ ರೇಂಜರನ್ನು ವರ್ಗಾಯಿಸಲು ವಿಶೇಷ ಕಾರಣವೇನು?

"ಈ ಕಾರಣಗಳಿಗಾಗಿ ತೆರೆಯ ಮರೆಯಲ್ಲಿರುವ ಕೆಲವು ಲಾಭಕೋರರಿಗೆ....ನಿರಾಶೆಯಾಗಿರಬೇಕು" (ಜನ್ಮಭೂಮಿ ತಾರೀಕು ೨೨-೭-೫೩) ನಾನು ಎಂದೂ ಕೂಪ್ ಕಂಟ್ರಾಕ್ಟು ಮಾಡಿದವನಲ್ಲ. ಹೆಚ್ಚಾಗಿ ಕಂಟ್ರಾಕ್ಟು ಮಾಡುತಿದ್ದವರು ಹುಣಸೂರಿನ ಮರ ವ್ಯಾಪಾರಿಗಳು ಎಂಬುದನ್ನು ನಿಮಗೆ ಈ ಮೂಲಕ ತಿಳಿಸಬಯಸುತ್ತೇನೆ.

ಇಂತಿ ನಮಸ್ಕಾರಗಳು,

ಗಣಪತಿ ಪಿ. ಎಸ್.

(ಇದರ ಪ್ರತಿಯನ್ನು 'ಜನ್ಮಭೂಮಿ'ಗೂ, 'ಜನಶಕ್ತಿ'ಗೂ ಕಳುಹಿಸಲಾಗಿದೆ.)

ವೈಜ್ಞಾನಿಕ ಪ್ರಗತಿಯ ಓಟ.

ವಿಜ್ಞಾನವು ಈಗ ಎಷ್ಟರ ಮಟ್ಟಿಗೆ ಪ್ರಗತಿ ಹೊಂದಿದೆಯೆಂದರೆ ಹಲವು ವಸತೀಗೃಹಗಳು, ಶಾಲಾ ಕಟ್ಟಡಗಳು, ಅಂಗಡಿಗಳು, ಆಸ್ಪತ್ರೆ, ಟೌನ್-ಹಾಲ್, ಪೋಲೀಸ್ ಮತ್ತು ಫಯರ್ ಸ್ಟೇಶನ್‌ಗಳು ಇವಿಷ್ಟು ಸೌಕರ್ಯಗಳಿಂದೊಡಗೂಡಿದ ಒಂದು ಗ್ರಾಮವನ್ನೇ ಮಡಚಿ ಒಂದು ಕಟ್ಟನ್ನಾಗಿ ಮಾಡಿ, ಬೇಕಾದಾಗ ಜಗತ್ತಿನ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಸುಲಭವಾಗಿ ಸಾಗಿಸುವುದು ಸಾಧ್ಯವೆನಿಸಿದೆ. ಇತ್ತೀಚಿಗೆ ಲಂಡನ್‌ದಲ್ಲಿ ಜರಗಿದ ಒಂದು ವಸ್ತುಪ್ರದರ್ಶನದಲ್ಲಿ 'ಮಡಚುವ ಮನೆಗಳ' (ಪ್ರಿಪೇಬ್ರಿಕೇಟೆಡ್ ಹೌಸಸ್) ನಿರ್ಮಾಣ ಪ್ರಿಯರನ್ನು ಎಷ್ಟು ಸಗತಿ ಹೊಂದಿದೆ ಎಂದು ಪ್ರದರ್ಶಿಸಿದರು.

ಹುಚ್ಚರ ಹಟ್ಟಿ

"ಮೆರೇಜ್" ಸಮಸ್ಯೆ!

ಹರಯ ನಲುವತ್ತಾಯ್ತು ಶಿರವೆಲ್ಲ ಬಿಳುಪಾಯ್ತು,
'ಮ್ಯಾರೇಜ್' ಮಾತ್ರ ಇನ್ನಾಗಲಿಲ್ಲ!
ಹೆಣ್ಣರಸಿ ಸಾಕಾಯ್ತು, ಕಣ್ತುಂಬಾ ನೋಡಾಯ್ತು,
'ಸೂಟೆಬಲ್' ಹೆಣ್ಣೊಂದು ದೊರೆಯಲಿಲ್ಲ! ॥೧॥

ಆ ಹೆಣ್ಣು ಕಪ್ಪೆಂದು, ಈ ಹೆಣ್ಣು ಬೆಪ್ಪೆಂದು,
'ರೆಫ್ಯೂಸ್' ಮಾಡಿದುದು ಹಿತವಾಗಲಿಲ್ಲ!
ರತಿದೇವಿಯಿವಳೆಂದು, ಅಪ್ಸರೆಯೆ ಅವಳೆಂದು,
'ಆಫರ್ಸ್' ಕಳುಹಿದರೂ ಫಲವಾಗಲಿಲ್ಲ! ॥೨॥

ಮೋಟಾರು ಕಾರಿಲ್ಲ, ಉಪ್ಪರಿಗೆ ಹೊರೆಯಿಲ್ಲ,
'ಡಾಟರನು' ಕೊಡುವದೇ ಸಾಧ್ಯವಿಲ್ಲ,
ಆಸ್ತಿಪಾಸ್ತಿಗಳಿಲ್ಲ, ವೇತನವು ಹೆಚ್ಚಿಲ್ಲ,
'ಪೇರೆಂಟ್ಸ್' ವಾದಗಳು ಇದುವೆ ಎಲ್ಲ! ॥೩॥

ಕಾಲೇಜು ಪಠಿಸಿಲ್ಲ, ಸರ್ಜ್ ಸೂಟು"ಗಳಿಲ್ಲ,
'ವಾಚ್ ಟೈ'ಗಳ ಆಯ್ಕೆ ಮೊದಲೆ ಇಲ್ಲ!
ಹಿರಿಯ ನೌಕರಿಯಿಲ್ಲ, ರೊಕ್ಕ ಕಿಸೆಯೊಳಗಿಲ್ಲ,
'ಐ ಕಾಂಟ್' ಎಂದೊರೆವ ತರುಣಿಯರೇ ಎಲ್ಲ! ॥೪॥

ಸುಂದರಿಯು ಬೇಕೆಂದು ದಾರಿ ಬೇರಿರಲೆಂದು,
'ಕಂಡೀಶನ್' ಹಾಕಿದುದು ತಪ್ಪಾಯಿತಲ್ಲ!
ಆಧುನಿಕ ನಾಗರಿಕ ಯುವತಿ ಯುವಕರಿಗೆಲ್ಲ,
'ಮೆರೇಜ್' ಪ್ರಶ್ನೆಯಿದು ಬಲವಾಯಿತಲ್ಲ! ॥೫॥

ಲೇ:— "ಸಮೀರ ಕುಮಾರ"

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸ್ :— ವೀರಾಜಪೇಟೆ.

ಶಾಖೆ :— ನ್ಯೂ ಜುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟೆಗಳು
2. 12 ನೇ ನಂಬರಿನ ಒಂಟಿ ಹೊಳವಿನ ತೋಟದ ಕೋವಿಗಳು.
3. ಒಂಟಿ ಮತ್ತು ಜೋಡಿ ಹೊಳವಿನ ಕೇಸಿನ (ತುಂಬಿದ) ಕೋವಿಗಳು
4 12, 16 ಮತ್ತು 20 ನೇ ನಂಬರಿನ ತೋಟೆಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
5. $\frac{5}{8}$", $\frac{1}{2}$" ಮತ್ತು $\frac{3}{8}$" ಕಬ್ಬಿಣದ ಸರಳುಗಳು
6. 2", $1\frac{1}{4}$", 1" $\frac{3}{4}$" ಮತ್ತು $\frac{1}{2}$" ಕೊಳಾಯಿಗಳು. (G. I. Peps)
7. $1\frac{3}{4}$" × $\frac{5}{16}$" ಉಕ್ಕಿನ ಪಟ್ಟಿಗಳು (Spring Steel flats),
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
9. ಕೋಳಿ ಮತ್ತು ಆನೆ ಮಾರ್ಕಿನ ಸೀಮೆಣ್ಣೆ ಟಿನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ, ಜಿಲ್ಲಾ ಮೆಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ. ಐ. ಬೆಳ್ಳಪ್ಪ, (ಪ್ರೆಸಿಡೆಂಟ್)

ಟಿಬೇಟಿನಲ್ಲಿ ಆಹಾರದ ಅಭಾವ.

ಟಿಬೇಟಿನಲ್ಲಿ ಆಹಾರದ ಅತೀವ ಅಭಾವವುಂಟಾಗಿದೆ. ಟಿಬೇಟಿನ ಕಡೆಯಿಂದ ಬರುವವರು ಅಲ್ಲಿಯ ಕ್ಷಾಮಸ್ಥಿತಿಯನ್ನು ವಿವರಿಸಿರುವರು.

ಚೀನಾ ಸರಕಾರವು ಭಾರತದ ಮೂಲಕ ಟಿಬೇಟಿಗೆ ಆಹಾರ ಧಾನ್ಯಗಳನ್ನು ಸಾಗಿಸತೊಡಗಿದೆ. ಕಳೆದವಾರ ಒಂದು ಸಾವಿರ ಟನ್ ಅಕ್ಕಿಯು ಟಿಬೇಟಿನ ರಾಜಧಾನಿ ಲ್ಹಾಸಕ್ಕೆ ಕಳುಹಲ್ಪಟ್ಟಿದೆ.

ಟಿಬೇಟಿನವರು ಅಕ್ಕಿಗಿಂತ ಅಧಿಕ ಬಾರ್ಲಿ ತಿನ್ನುವರು. ಬಾರ್ಲಿಗೆ ಈಗ ಮಣಕ್ಕೆ ರೂ ೧೫೦ ಧಾರಣೆಯಿದೆ. ಹೆಚ್ಚಾಗಿ ಅಕ್ಕಿ ತಿನ್ನುವಂತೆ ಟಿಬೇಟಿನವರನ್ನು ಪ್ರೋತ್ಸಾಹಿಸುತ್ತಿರುವರು.

ಸಲಭ ಬೆಲೆಯ ಚಹಾ ಗಟ್ಟಿಗಳು (ಇಟ್ಟಿಂಗಿಗಳಂತಿರುವ ಚೌಕಗಳು) ಹತ್ತು ಸಾವಿರ ಟನ್ ಕಳುಹಲ್ಪಟ್ಟಿವೆ. ಈ ಚಹಕ್ಕೆ ಈಗ ಅಲ್ಲಿ ಒಂದು ಹೊರೆಗೆ ರೂ. ೪೫೦ ವರೆವಿದೆ. ಸರಕಾರಿ ನಿಯಂತ್ರಿತ ಧಾರಣೆ ರೂ ೧೫೦.

ಟಿಬೇಟಿನವರು ಚಹಪಾನದಲ್ಲಿ ಜಗತ್ತಿನಲ್ಲೆಲ್ಲಾ ಪ್ರಥಮ ಸ್ಥಾನ ಪಡೆದಿರುವರು. ಸಾಮಾನ್ಯವಾಗಿ ಒಬ್ಬನು ದಿನಕ್ಕೆ ಮೂವತ್ತರಿಂದ ನಲ್ವತ್ತು ಕಪ್ ಚಹ ಕುಡಿಯುತ್ತಾನೆ. ಅತಿಯಾಗಿ ಕುಡಿಸುವವರು ದಿನಕ್ಕೆ ಎಂಭತ್ತರಿಂದ ನೂರು ಕಪ್‌ಗಳ ವರೆಗೆ ಕುಡಿದ ದಾಖಲೆಯಿದೆ! ಈ ಚಹಕ್ಕೆ, ಚಮರಿ ಮೃಗದ ಹಾಲನ್ನು ಸೇರಿಸಿ ಕುಡಿಯುತ್ತಾರೆ. ಅಲ್ಲಿ ಹಸುಗಳಿಲ್ಲ

ಆಹಾರ ಕ್ಷಾಮವು ನೀಗುವ ವರೆಗೆ, ಟಿಬೇಟಿನೊಳಗೆ ವಿಲಾಸೀ ಸಾಮಗ್ರಿಗಳ ಆಮದನ್ನು ಬಹುತರ ನಿಯಂತ್ರಿಸಲಾಗುವದು.

ಸುಳ್ಳು ಪ್ರಾಯ ಕೊಡುವ ಸುಂದರಿಯರು

ಈ ವರ್ಷದ ಆರಂಭದಿಂದ ಈ ವರೆಗೆ ಸುಮಾರು ೧೮ ಮಂದಿ ಮಹಿಳೆಯರನ್ನು ಆಸ್ಟ್ರೇಲಿಯನ್ ಪಬ್ಲಿಕ್ ಸರ್ವಿಸ್‌ನಿಂದ ತಳ್ಳಿಹಾಕಲಾಯಿತು. ಅವರು ತಮ್ಮ ನಿಜವಾದ ಪ್ರಾಯವನ್ನು ಬಚ್ಚಿಟ್ಟು ಸುಳ್ಳು ಪ್ರಾಯ ಕೊಟ್ಟುದೇ ಕಾರಣವೆನ್ನಲಾಗಿದೆ. ಉದ್ಯೋಗ ದೊರೆವಾಗ ಕೊಟ್ಟ ಹೇಳಿಕೆಯಲ್ಲಿ ಹೆಚ್ಚಿನವರು ಸುಳ್ಳು ಪ್ರಾಯ ಕೊಟ್ಟಿರುವರೆಂದು ಪಬ್ಲಿಕ್ ಸರ್ವಿಸ್ ಬೋರ್ಡ್ ಚೇರ್ಮೇನರಾದ ಪಿ. ಡಿ. ಡಿ. ಪ್ಲೈನ್ ಅವರ ದೂರು. ಕೆಲವರ ಜನನ ಪತ್ರಿಕೆ (ಬರ್ತ್ ಸರ್ಟಿಫಿಕೇಟ್) ಬಹಿರಂಗವಾದಾಗ, 'ನಾವು ಅದರಲ್ಲಿ ತೋರುವ ಪ್ರಾಯಕ್ಕಿಂತ ಎಳೆಯವರಾಗಿ ಕಂಡುಬರುವುದಿಲ್ಲವೇ? ಎಂದು ಧೈರ್ಯದಿಂದ ಪ್ರಶ್ನಿಸಿದರಂತೆ. ಮತ್ತೆ ಕೆಲವರು 'ನಮಗೆ ನಮ್ಮ ಪ್ರಾಯವೇ ಮರೆತು ಹೋಗಿದೆ' ಎಂದರು.

ನಮ್ಮ ಜನರ ದೈನ್ಯಾವಸ್ಥೆ.

..... ಶ್ರೀ ಜೆ. ಸಿ. ಕುಮಾರಪ್ಪ —

ಕಳೆದ ಕೆಲವು ತಿಂಗಳುಗಳಲ್ಲಿ ನಾನು ನಮ್ಮ ದೇಶದಾದ್ಯಂತ ಬಹುದೂರ ಪ್ರವಾಸ ಮಾಡಿ ಸಹಸ್ರಾರು ಹಳ್ಳಿಗರನ್ನು ಕಂಡಿದ್ದೇನೆ. ಎಲ್ಲೆಲ್ಲಿಯೂ ಒಂದೇ ಒಂದು ಸರ್ವವ್ಯಾಪಿಯಾದ ದೂರು ನೀರು ಮತ್ತು ಆಹಾರದ ಅಭಾವ ಇದೆ. ಎಲ್ಲಿಯೇ ಹೋಗಲಿ, ಇದೊಂದೇ ಕರುಣ ಕಥೆ ಕಿವಿಗೆ ಬೀಳುತ್ತದೆ.

ಇದು ಕೇವಲ ಇತ್ತೀಚಿನ ಆಕ್ರೋಶವಾಗಿರದೆ ಕಳೆದ ಕೆಲವು ವರ್ಷಗಳದ್ದಾಗಿದೆ. ಯೋಚಿಸಿದ ನಿವಾರಣೋಪಾಯಗಳು ಇಚ್ಛಿತ ಪರಿಹಾರವನ್ನು ಒದಗಿಸಿಕೊಟ್ಟಿಲ್ಲ. ನಿಸರ್ಗದ ಕೊಡುಗೆಗಳನ್ನೆಲ್ಲಾ ವ್ಯಾಪಾರಿ ವಸ್ತುಗಳನ್ನಾಗಿ ಮಾರ್ಪಡಿಸುವದಕ್ಕೆ ನಾವು ಅಪೇಕ್ಷಿಸುತ್ತಿದ್ದೇವೆ. ಇಂದು ನೀರು ಎಷ್ಟೋ ಕಡೆಗಳಲ್ಲಿ ಮಾರಾಟದ ವಸ್ತುವಾಗಿದೆ.

ಸಾಮಾನ್ಯವಾಗಿ ಇದಕ್ಕೆ ನಿಸರ್ಗವೇ ಹೊಣೆಯೆಂದು ಹೇಳುವ ವಾಡಿಕೆಯಿದೆ. ಆದರೆ ನಿಸರ್ಗದೊಡನೆ ಹೋರಾಡದಿದ್ದರೆ ಪುರುಷಾರ್ಥವಾದರೂ ಏನು? ಈಗಿನ ದುರವಸ್ಥೆ ಇತ್ತೀಚೆ ಪ್ರಾಪ್ತವಾದುದಲ್ಲ. ಇದು ಎಂದಿನಿಂದಲೂ ಇರುವದಾಗಿದ್ದು ನಮ್ಮ ಪೂರ್ವಜರು ಹಿಂದೆ ಅವುಗಳೊಡನೆ ಹೋರಾಡಿದ್ದಾರೆ. ಇಂದು ಆಧುನಿಕ ಉಪಾಯಗಳ ಬಗ್ಗೆ ಇಷ್ಟೆಲ್ಲ ಮಾತನಾಡುವ ನಾವು ನಮ್ಮ ಮುಂದಿರುವ ಅದ್ಭುತದೆದುರು ಮಂಕರಾಗಿದ್ದೇವೆ.

ಪೂರ್ವಕಾಲದಲ್ಲಿ ಅಡವಿಗಳನ್ನು ಸೃಷ್ಟಿಸಿ, ಕೆರೆಗಳನ್ನು ಕಟ್ಟಿ, ಬಾವಿಗಳನ್ನು ತೋಡಿ ಮತ್ತು ಕಡಿಮೆ ಮಳೆ ಬೀಳುವಲ್ಲಿಗೆ ನೀರಿನ ಕಾಲುವೆ ಕಡಿದು ನೀರಿನ ಸಂಗ್ರಹವು ಮಾಡಲ್ಪಡುತ್ತಿತ್ತು. ಕಾವೇರಿ, ಗಂಗಾ ಮೊದಲಾದ ನದಿಗಳ ದಡೆಗುಂಟ ಜನವಸತಿಯಿದ್ದ ಹಿಂದಿನ ಪ್ರದೇಶಗಳಲ್ಲಿ ಈ ಅದ್ಭುತ ಕಾರ್‍ಯದ ಅವಶೇಷದ ಸಾಕ್ಷಿಗಳನ್ನು ಕಾಣುತ್ತೇವೆ.

ಇಂದು ಇವುಗಳಲ್ಲಿ ಅನೇಕ ಪ್ರದೇಶಗಳು ಹೂತು ಹೋಗಿವೆ. ನಾನು ಕೆಲವು ದಿನಗಳ ಹಿಂದೆ ಹೋಗಿದ್ದ ಒಂದು ಹಳ್ಳಿಯಲ್ಲಿ ಒಂದು ಕೆರೆ ಹಳ್ಳಿಯ ಬಹು ಭಾಗವನ್ನಾಕ್ರಮಿಸಿತ್ತು. ಈ ಆಕ್ರಮಿತ ಪ್ರದೇಶದಲ್ಲಿ ಈಗ ಹತ್ತಿಪ್ಪತ್ತು ವರ್ಷಗಳ ಹಿಂದೆ ಬೇವಿನ ಗಿಡಗಳು ಅತ್ಯಧಿಕ ಸಂಖ್ಯೆಯಲ್ಲಿದ್ದವು. ಯುದ್ಧ ಕಾರ್‍ಯಕ್ಕಾಗಿ ಇವುಗಳಲ್ಲಿ ಒಂದನ್ನೂ ಬಿಡದೆ ಬೇರು ಸಹಿತ ಕಡಿಯಲಾಯಿತು. ಕೆಸರು ತುಂಬಿ ಕೆರೆಯ ಪಾತಾಳವು ಈಗ ಮೊದಲಿಗಿಂತ ೬-೭ ಅಡಿ ಏರಿದೆ. ಮನುಷ್ಯ ನಿಸರ್ಗದ ಮೇಲೆ ನಡೆಸಿರುವ ನೂರಾರು ಅತ್ಯಾಚಾರಗಳಲ್ಲಿ ಇದೊಂದು. ಹೀಗಿರುವಾಗ ನಮ್ಮ ದುರವಸ್ಥೆಯಲ್ಲಿ ಆಶ್ಚರ್ಯಪಡುವಂಥ ದೇನಿದೆ!

ಎಲ್ಲಿಂದಲೋ ಬಂದ ಆಧುನಿಕ ಸ್ವಾರ್ಥಪೂರ್ಣ ಆರ್ಥಿಕ ವ್ಯವಸ್ಥೆಯ ಮೂಲಕ ಹಳ್ಳಿಗಳಲ್ಲಿ ಜೀವನ ನಡೆಸುವದಸಾಧ್ಯವಾಗಿ ಹಳ್ಳಿಯ ಧುರೀಣರಾಗಬಹುದಾಗಿದ್ದವರು ತಮ್ಮ ಚರಿತಾರ್ಥಕ್ಕಾಗಿ ಪಟ್ಟಣಗಳಿಗೆ ಹೋಗಿದ್ದಾರೆ. ಇಷ್ಟೊಂದು ಸಾಹಸಿಗಳಿಲ್ಲದ ತಮ್ಮ ಅಭಿವೃದ್ಧಿಗಾಗಿ ಸಹಕರಿಸಿ ಕೆಲಸ ಮಾಡುವಷ್ಟು ಬಲ ಪಡೆದಿಲ್ಲ. ಇದರ ಪರಿಣಾಮವೇ ನಾವಿಂದು ನೋಡುತ್ತಿರುವ ದೃಶ್ಯವಾಗಿದೆ.

ನಾವು ನೀರಿನ ಸಮಸ್ಯೆಯನ್ನು ಬಿಡಿಸಿದರೆ ಆಹಾರದ ಸಮಸ್ಯೆಯು ಬಿಡುವದು. ಯೋಗ್ಯ ಬೆಳೆಗೆ ಮಹತ್ವವಿತ್ತು ಸಮಾಜ ವಿಕಾಸಯೋಜನೆಯಂತೆ ವ್ಯಾಪಾರ ಸರಕುಗಳಿಗೆ ಮಹತ್ವವೀಯದೆ ಹೋದರೆ ಬಹುಪಾಲಿಗೆ ತಂತಾನೇ ಬಿಡಿಸಲ್ಪಡುವದು.

ಭಾರತದ ಅನೇಕ ಕಡೆಗಳಲ್ಲಿ ಮಳೆಯು ಸುರಿಸುವ ನೀರಿನಲ್ಲಿ ನೂರಕ್ಕೆ ೯೫ರಷ್ಟು ಸಮುದ್ರದ ಪಾಲಾಗುತ್ತದೆ ಎಂದು ಹೇಳಿದೆ ಮತ್ತು ಉಳಿದ ೫ರಷ್ಟು ನೀರಿನಲ್ಲಿ ಹೆಚ್ಚಿನ ಭಾಗ ಕೆಸರು ತುಂಬಿದ ಕೆರೆಗಳಲ್ಲಿ ಸಂಗ್ರಹವಾಗುವದು. ಈ ಕೆರೆಗಳು ಆಳವಿರದ್ದರಿಂದ ನೀರು ಬಹು ಬೇಗ ಉಗಿಯಾಗಿ ಆರಿಹೋಗುತ್ತದೆ. ಇದರಿಂದ ನಮಗಾಗುವ ನಷ್ಟ ಅಪಾರವಾದುದು. ಅಡವಿ ಹೆಚ್ಚಿಸಿ, ಕೆರೆಗಳಲ್ಲಿ ತುಂಬಿಸಿ, ಕೆರೆಗಳನ್ನು ಆಳವಾಗಿ ತೋಡಿಸಿ ಕ್ರಮ ಕೈಕೊಳ್ಳುವದರಲ್ಲಿಯೇ ಮಳೆ ನೀರನ್ನು ಸಂಗ್ರಹಿಸಿಟ್ಟುಕೊಳ್ಳುವ ಉಪಾಯವಿದೆ.

ಈ ಕಾರ್‍ಯಕ್ರಮವು ಜನರಿಗೆ ಸುಗ್ಗಿಯ ಹೊರತಿನ ಉಳಿದ ಸಮಯದಲ್ಲಿ ಕೆಲಸ ಕೊಡುವದಲ್ಲದೆ ಹಳ್ಳಿಗರಿಗೆ ತಮಗೆ ಸಹಾಯ ಮಾಡಿಕೊಳ್ಳುವ ಅವಕಾಶಕೊಡುವದು.

ಕೆರೆಗಳಿಂದ ಹೊರತೆಗೆದ ರಾಡಿ ಮಣ್ಣನ್ನು ಬಂಜರು ಭೂಮಿಗೆ ಹರಡಿ ಅದನ್ನು ಸಾಗುವಳಿಗೆ ತರಬಹುದು. ಈಗ ಸದ್ಯಕ್ಕೆ ಪ್ರತಿಯೊಂದು ಹಳ್ಳಿಯಲ್ಲೂ ವರ್ಷದಲ್ಲಿ ಕೆಲವಾರಗಳ ವರೆಗೆ ಮಾತ್ರ ನೀರಿರುವ ಕೆರೆಗಳಿವೆ. ಇದು ನಮ್ಮಲ್ಲಿಯ ಭೂಮಿಯ ದುರುಪಯೋಗ. ಅವು ನೀರಿನ ಸಂಗ್ರಹಗಳಲ್ಲ; ಸಾಗುವಳಿ ಭೂಮಿಯೂ ಅಲ್ಲ. ಇವೆರಡರಲ್ಲಿ ಅದು ಒಂದಾಗಬೇಕು. ವರ್ಷದ ೧೨ ತಿಂಗಳೂ ಅವುಗಳಿಂದ ಪ್ರಯೋಜನ ಸಿಗಬೇಕು. ವಿದ್ಯುಚ್ಛಕ್ತಿ ಉತ್ಪಾದನೆಗಾಗಿ ದೊಡ್ಡ ನೀರಿನ ಸಂಗ್ರಹಾಲಯಗಳನ್ನು ಕಟ್ಟುವ ಬದಲು ಟ್ಯೂಬ್ ವೆಲ್ ಮುಖಾಂತರ ಈ ಕೆರೆಗಳನ್ನು ಪುನಃ ಉಪಯೋಗಕ್ಕೆ ತಂದುಕೊಳ್ಳಬಹುದು. ಕೇವಲ ಬಾವಿಗಳನ್ನು ಆಳವಾಗಿ ತೋಡಿ ಅವುಗಳಿಗೆ ಇಲೆಕ್ಟ್ರಿಕ್ ಪಂಪುಗಳನ್ನು ಹಚ್ಚುವದರಿಂದ, ಅದೇ ಸಮಯದಲ್ಲಿ ನೀರಿನ ಸಂಗ್ರಹವನ್ನು ಹೆಚ್ಚಿಸದಿದ್ದರೆ ವಿಶೇಷ ಪ್ರಯೋಜನವಾಗದು.

"ಹರಿಜನ"

ಲೋಕಮಾನ್ಯ ತಿಲಕರ ಆದರ್ಶ ಜೀವನ.

೫೦೦ ಮಂದಿ ಕಾಂಗ್ರೆಸಿಗರು ತಾ. ೧ರಲ್ಲಿ ಬೊಂಬಾಯಿ ನಗರದಾದ್ಯಂತ ಪ್ರಚಂಡ ಮೆರವಣಿಗೆ ನಡೆಸಿ ಲೋಕಮಾನ್ಯ ತಿಲಕರ ನಿಧನದ ದಿನವನ್ನು ಆಚರಿಸಿದರು. ಬಳಿಕ ಚೌಪಾಟಿ ಸಮುದ್ರ ತೀರದಲ್ಲಿ ಲೋಕಮಾನ್ಯ ತಿಲಕರ ಪ್ರತಿಮೆಗೆ ಕಾಂಗ್ರೆಸ್ ಅಧ್ಯಕ್ಷ ಶ್ರೀ. ಎಸ್. ಕೆ. ಪಾಟೀಲರು ಹೂಮಾಲೆ ಹಾಕಿ ಗೌರವಿಸಿದರು. ಲೋಕಮಾನ್ಯ ತಿಲಕರ ಉತ್ತಮ ಗುಣಗಳನ್ನು ಮನನಮಾಡಿಕೊಂಡು ಕಾಂಗ್ರೆಸಿಗರು ಜನರೊಂದಿಗೆ ಸಂಪರ್ಕ ಬೆಳೆಸಿಕೊಳ್ಳಬೇಕೆಂದು ಪಾಟೀಲರು ಉಪದೇಶಿಸಿದರು.

ರಾಜಸ್ಥಾನದಲ್ಲಿ ಸರ್ವೋದಯ ಸರಕಾರ

ಜಯಪುರದ ಚರಖಾ ಪರಿಷತ್ತಿನವರು ಮುಂದಿನ ಎಂಟು ವರ್ಷಗಳ ಯೋಜನೆಯೊಂದನ್ನು ತಯಾರಿಸಿ ಅದಕ್ಕೆ ತಗಲುವ ೫೦ ಕೋಟಿ ರೂಪಾಯಿಗಳ ವಿಶೇಷ ವಂತಿಗೆಯನ್ನು ಕೇಂದ್ರ ಸರಕಾರವು ಕೊಡಬೇಕೆಂದು ಕೇಳಿರುವರು. ಗಾಂಧೀಜಿಯವರ "ಸರ್ವೋದಯ ತತ್ವ" ದಂತೆ ರಾಜಸ್ಥಾನದ ಆಡಳಿತ ಮತ್ತು ಜನಜೀವನದ ರಚನೆಯೆ ಈ ಯೋಜನೆಯ ಗುರಿ. ಗ್ರಾಮದಲ್ಲಿ ಗುಡಿಕೈಗಾರಿಕೆಗಳನ್ನು ಊರ್ಜಿತಗೊಳಿಸಲು, ಅವರು ಉತ್ಪಾದಿಸಿದುದನ್ನು ಯೋಗ್ಯ ಮಾರಾಟ ಮಾಡಲು ಒಂದು ಧನ ಸಹಾಯಕೊಡುವ ಮತ್ತು ಮಾರಾಟ ಮಾಡುವ ಕಾರ್ಪೊರೇಶನ್‌ನನ್ನು ರೂ. ೫ ಕೋಟಿ ಬಂಡವಾಳದಿಂದ ರಚಿಸಬೇಕೆಂದೂ ಅವರು ಸೂಚಿಸಿರುವರು.

ರಕ್ತಪಾತವಾಗದಂತೆ ಎಚ್ಚರವಾಗಿರಿ.

'ಸಂಗ್ರಹವಾಗುವ ಜಮೀನನ್ನು ಮತ್ತು ಇನ್ನಿತರ ಸೊತ್ತುಗಳನ್ನು ಯಾವೊಂದು ವಿವಾದಕ್ಕೂ ಎಡೆಕೊಡದೆ ದೇಶದಲ್ಲಿ ಹಂಚಿ ಬಡತನವನ್ನು ತೊಲಗಿಸಬೇಕು. ಇದು ಆಗದೆ ಹೋದರೆ ರಕ್ತಪಾತವೇ ಹರಿದು ದೇಶದ ಹೆಸರಿಗೆ ಕಳಂಕಬಂದೀತು!' ಎಂದು ಸರ್ವಸೇವಾ ಸಂಘದ ಕಾರ್‍ಯದರ್ಶಿಗಳಾದ ಶ್ರೀ. ಶಂಕರರಾವ್ ದೇವರು ತಿಳಿಸಿದರು.

'ದುಡ್ಡಿದ್ದವರ ದಬ್ಬಾಳಿಕೆಗೆ ಇದು ಸಮಯವಲ್ಲ. ರಾಜರ ದೌಲತ್ತು, ಜಮೀನ್ದಾರರ ದರ್ಪ, ಮುಂತಾದುವುಗಳ ಕಾಲ ಕಳೆದು ಹೋಯಿತು. ಬಡ ದುಡಿಮೆಗಾರನು ಬೆವರು ಹರಿಸುವಾಗ ಶ್ರೀಮಂತರು ಸಂತೋಷಪಡುತ್ತಿರುವುದು ಸಲ್ಲದು. ಭೂಮಾಲಿಕರು ತಾವಾಗಿಯೇ ಉಳುವವನಿಗೆ ಭೂಸ್ವಾಮ್ಯನೀಡಬೇಕು ಯಾವ ಕಾನೂನು ಹೊರಿಸಿದರೂ ಕಮ್ಯುನಿಸಮನ್ನು ತಡೆಹಿಡಿಯಲು ಸಾಧ್ಯವಾಗದು. ಅಮೇರಿಕದ ಯಾವತ್ತೂ ಪ್ರಯತ್ನಗಳು ಸಫಲವಾಗಲಿಲ್ಲ. ಆದುದರಿಂದ ಸರ್ವೋದಯ ತತ್ವದ ಮೂಲ ಆಧಾರದ ಮೇಲೆ ಜಾಗತಿಕ ಶಾಂತಿ ಸ್ಥಾಪಿಸಲು ಸಾಧ್ಯವಿದೆ' ಎಂದವರು ನುಡಿದರು.

ಮದರಾಸು ಸಮುದ್ರ ತೀರದ ಚೆಲುವು

ಮದರಾಸು ಸಮುದ್ರ ತೀರದ ಚೆಲುವನ್ನು ರಕ್ಷಿಸುವ ಉದ್ದೇಶದಿಂದ ಅಲ್ಲಿ ಪಾನ್ ಬೀಡಾ ಅಂಗಡಿಗಳನ್ನು ಕಟ್ಟಿಸಲು ಪ್ರಾಂತ್ಯ ಸರಕಾರ ಅನುಮತಿ ಕೊಡುವುದಿಲ್ಲವೆಂದೂ ತಿಳಿದು ಬಂದಿದೆ. ಈಗ ಇರುವ ಲೈಸನ್ಸುದಾರರಿಗೆ ಅವಧಿ ಮುಗಿದ ಬಳಿಕ ಅದನ್ನು ಮುಂದುವರಿಸಲು ಬಿಡಲಾಗುವುದಿಲ್ಲ. ಮದರಾಸು ಸಮುದ್ರ ಕಿನಾರೆಯು ಉದ್ದದಲ್ಲಿ ಜಗತ್ತಿನಲ್ಲೇ ಎರಡನೆಯದೆಂದು ಹೇಳಲಾಗಿದೆ.

ಆಧುನಿಕ ಮತ್ತು ಆಯುರ್ವೇದ ಔಷಧಗಳು.

ಆಧುನಿಕ ಮತ್ತು ಆಯುರ್ವೇದ ಈ ಎರಡು ತರದ ಔಷಧ ಹಾಗೂ ಚಿಕಿತ್ಸೆಯ ಉಪಯೋಗ ಮಾಡಿಕೊಳ್ಳಬೇಕು ಎಂಬುದಾಗಿ ಭಾರತದ ಆರೋಗ್ಯ ಸಚಿವೆ ಶ್ರೀಮತಿ ರಾಜಕುಮಾರಿ ಅಮೃತಕೌರರು ತಾ. ೨೧ ರಲ್ಲಿ ಡೇರಾಡೂನಿನಲ್ಲಿ ತಿಳಿಸಿದರು.

ಅಹಿಂಸೆಯ ಮುಂದೆ ವಿಜ್ಞಾನದ ಸೋಲು.

ವಿಜ್ಞಾನ ಮತ್ತು ಅಹಿಂಸೆ-ಇವುಗಳೊಳಗೆ ಘರ್ಷಣೆ ನಡೆದರೆ ವಿಜ್ಞಾನವು ಶರಣಾಗತವಾಗಬೇಕಾಗುವುದು, ಇಲ್ಲವಾದರೆ ವಿಜ್ಞಾನವು ವಿಜ್ಞಾನದಿಂದಲೇ ನಾಶವಾಗುವುದು, ಎಂದು ಆಚಾರ್‍ಯ ವಿನೋಬಾ ಭಾವೆಯವರು ಭಾಧ್ಯ ಎಂಬ ಹಳ್ಳಿಯಲ್ಲಿ ಕೆನಡ, ಅಮೇರಿಕ, ಮಲಯ ಮತ್ತು ಯುಗೋಸ್ಲಾವಿಯದ ೧೮ ವಿದ್ಯಾರ್ಥಿಗಳೊಡನೆ ಮಾತನಾಡುತ್ತಾ ಹೇಳಿದರು. ವಿಜ್ಞಾನ ಯುಗದಲ್ಲಿ ಜನರು ವಿಶಾಲ ಭಾವನೆಯನ್ನಿಟ್ಟುಕೊಳ್ಳಬೇಕೆಂದೂ ಅವರು ಹೇಳಿದರು.

ಭೂದಾನ ಯಜ್ಞಕ್ಕೆ ಜನರು ತೋರಿಸುವ ಆದರವನ್ನು ನೋಡಲು ಈ ವಿದ್ಯಾರ್ಥಿಗಳು ಬಂದಿದ್ದರು ಭೂದಾನ ಯಜ್ಞದಿಂದ ಭೂಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾದೀತೇ ಎಂಬ ಪ್ರಶ್ನೆಗೆ ಭಾವೆಯವರು ಉತ್ತರ ಕೊಡುತ್ತಾ. ಒಂದು ಹಳ್ಳಿಯಲ್ಲಿ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾದರೆ ಇಡೀ ಜಗತ್ತಿನಲ್ಲೇ ಆ ಸಮಸ್ಯೆಯನ್ನು ಬಗೆಹರಿಸುವುದೂ ಸಾಧ್ಯವಾದೀತು. ಆದರೆ ನಾವು ಸಂಕುಚಿತ ದೃಷ್ಟಿಯವರಾಗಿರಬಾರದು, ಎಂದರು. ಭೂಮಿಯನ್ನು ಚಿಕ್ಕ ಚಿಕ್ಕ ತುಂಡಾಗಿ ಮಾಡುವುದರ ಕುರಿತು ಮಾತನಾಡುತ್ತ, 'ಜನರ ಮನಸ್ಸಿನೊಳಗಿನ ಭೇದಗಳನ್ನು ನಿವಾರಿಸಲು ನಾನು ಹೆಚ್ಚು ಆತುರನಾಗಿದ್ದೇನೆ. ಅದೇ ಈ ಚಳವಳಿಯ ಮೂಲ ಉದ್ದೇಶವಾಗಿದೆ. ಮನಸ್ಸು ಸರಿಯಾಗಿ ಕೆಲಸ ಮಾಡಿದರೆ ಕೈಗಳೂ ಕೆಲಸ ಮಾಡುವುವು' ಎಂದರು. ದೊಡ್ಡ ಕೈಗಾರಿಕೆಗಳ ಕುರಿತು ಮಾತನಾಡುತ್ತಾ, 'ಭಾರತದಲ್ಲಿ ಮನುಷ್ಯ ಶಕ್ತಿಯು ಹೆಚ್ಚು ಇದೆ. ಭಾರತದೊಂದಿಗೆ ಹೋಲಿಸಿದರೆ ಅಮೇರಿಕದಲ್ಲಿ ಆ ಶಕ್ತಿ ಇಲ್ಲಿಯಷ್ಟು ಇಲ್ಲ. ಆದುದರಿಂದ ಅಮೇರಿಕದಲ್ಲಿ ದೊಡ್ಡ ಕೈಗಾರಿಕೆಗಳಿರಬೇಕಾದುದು ಸಹಜ. ಆರ್ಥಿಕ ವಿಷಯವೆಂದರೆ ಕೇವಲ ಗಣಿತವಲ್ಲ. ದೊಡ್ಡ ರೀತಿಯ ಕೈಗಾರಿಕೆಗಳ ಸಮಾಜೀಕರಣಕ್ಕೆ ನನ್ನ ಬೆಂಬಲವಿದೆ, ಎಂದರು

ಜ್ಞಾನ ದೀಪ.

(೧)

ಎರಡಂಗುಲ ಸೂಜಿ ಎಷ್ಟುದ್ದದ ದಾರಕ್ಕೂ ಸಾಕು. ನಾಲ್ಕಂಗುಲದ ನಾಲಗೆ ಎಂಥಾ ವಾದಕ್ಕೂ ಸಾಕು.

(೨)

ಬಜೆಟ್ ಮತ್ತು ಬಾಳುವೆ ಒಂದೇ. ಮೊದಲನೆಯದರಲ್ಲಿ ಆಯವ್ಯಯ ಸಮತೂಗಿಸಲ್ಪಟ್ಟಿದ್ದರೆ ಎರಡನೆಯದರಲ್ಲಿ ಸುಖದುಃಖ ಸೇರಿರುತ್ತದೆ.

(೩)

ಧೂಳು ದೂಸರಿಗಳನ್ನು ಮೈಗೆ ಹಚ್ಚಿಕೊಂಡು ಕುಣಿಯುತ್ತಾನಾದರೆ ಆತನು ಹುಚ್ಚ. ದೂರು ದೂಷಣೆಗಳನ್ನು ಮನಸ್ಸಿಗೆ ಹಚ್ಚಿಕೊಂಡು ಕೂಗುತ್ತಾನಾದರೆ ಆತನು ಉಚ್ಚ 'ನುಡಿಮುತ್ತು.

ಕೊಡಗು

ತಾರೀಕು ೪ ಜುಲೈ ೧೯೫೨ನೇ ಶುಕ್ರವಾರ

ಕಾಶ್ಮೀರ ಸಮಸ್ಯೆ.

ಕಾಶ್ಮೀರದ ಪ್ರಶ್ನೆಯು ಬಗೆಹರಿಯದೆ ಅನೇಕ ವರ್ಷಗಳಿಂದ ಹಾಗೆಯೇ ಉಳಿದಿದೆ. ಈ ಪ್ರಶ್ನೆಯನ್ನು ಬಗೆಹರಿಸುವ ಪ್ರಯತ್ನವನ್ನು ಭಾರತ ಮತ್ತು ಕಾಶ್ಮೀರದ ಮುಖ್ಯ ಮಂತ್ರಿಗಳು ಮಾಡುತ್ತಿರುವ ಈ ಸಮಯದಲ್ಲಿ ಕಾಶ್ಮೀರವು ಭಾರತ ಯಾ ಪಾಕಿಸ್ಥಾನಕ್ಕೆ ಸೇರದೆ ಸ್ವತಂತ್ರ ರಾಜ್ಯವಾಗಿರುವದು ಸಾಧ್ಯವಿಲ್ಲವೇ ಎಂಬೊಂದು ವಿಚಾರ ಕೆಲವರಲ್ಲಿ ತಲೆದೋರಿದೆ. ಇಂಥಾ ಒಂದು ಅಭಿಪ್ರಾಯವು ಜನತೆಯ ಮುಂದೆ ಬರಲು ಕಾಶ್ಮೀರದ ರಾಷ್ಟ್ರೀಯ ಸಮ್ಮೇಳನಾ ಸಭೆಯ ಕೆಲವೊಂದು ಮುಂದಾಳುಗಳ ಹೇಳಿಕೆಗಳೇ ಕಾರಣವಾಗಿವೆ.

ಕಾಶ್ಮೀರವು ಸ್ವತಂತ್ರ ರಾಷ್ಟ್ರವಾಗಿರಬಾರದೇಕೆ ಎಂಬುದು ಪಂಡಿತ ನೆಹರೂರವರು ಹೇಳುವಂತೆ ಹೊಸ ವಿಚಾರವಲ್ಲ. ೧೯೪೭ರ ಡೆಲ್ಲಿ ಒಪ್ಪಂದದ ಕಾಲಕ್ಕೆ ಈ ವಿಚಾರ ಪರ್ಯಾಲೋಚಿಸಲ್ಪಟ್ಟು ಕಾಶ್ಮೀರದಂಥಾ ಒಂದು ರಾಷ್ಟ್ರವು ಸ್ವತಂತ್ರವಿರುವದು ಸಾಧ್ಯವಿಲ್ಲವೆಂದೇ ಒಪ್ಪಂದವಾಗಿ ಸಂರಕ್ಷಣೆ, ವಹಿವಾಟು ಮತ್ತು ವಿದೇಶ ನೀತಿಗಳ ಬಗ್ಗೆ ಭಾರತದೊಡನೆ ಹೊಂದಿಕೊಂಡಿರಬೇಕೆಂದು ನಿರ್ಣಯವಾಗಿದೆ. ಆ ಒಪ್ಪಂದದ ಕಾಲಕ್ಕೆ ಭಾರತವು ಪರಿಸ್ಥಿತಿಯನ್ನು ಸ್ಪಷ್ಟಪಡಿಸಿ ಕಾಶ್ಮೀರದ ಭವಿಷ್ಯವು ಯಾವ ರೀತಿ ನಿರ್ಣಯವಾಗಬೇಕೆಂಬ ಬಗ್ಗೆ ಕಾಶ್ಮೀರ ಜನತೆಯ ಅಭಿಪ್ರಾಯವನ್ನು ತೆಗೆದು ಅದರಂತೆ ವರ್ತಿಸುವದರಲ್ಲಿ ಅಭ್ಯಂತರವಿಲ್ಲವೆಂದು ಹೇಳಿದೆ. ಈ ಒಪ್ಪಂದದಂತೆ ನಡೆಯಲು ಇಂದೂ ಕೂಡ ಇಂಡಿಯಾ ಸರಕಾರವು ತಯಾರಿದೆ. ಆದರೆ ಕಾಶ್ಮೀರ ರಾಷ್ಟ್ರೀಯ ಸಮ್ಮೇಳನದ ಕಾರ್ಯದರ್ಶಿಯವರಾದ ಜನಾಬ್ ಮಸೂದಿಯವರು ಸ್ವತಂತ್ರ ಕಾಶ್ಮೀರದ ವಿಚಾರವನ್ನು ಕಾಶ್ಮೀರ ಜನತೆಯ ಮುಂದಿಡಬಹುದೆಂದು ಹೇಳಿದರೂ ಮೇಲಿನ ಡೆಲ್ಲಿ ಒಪ್ಪಂದದಂತೆ ಸದ್ಯಕ್ಕೆ ನಡೆಯಲು ಸಿದ್ಧರಿರುವರೆಂದು ಸ್ಪಷ್ಟಪಡಿಸಿರುವರು.

ಕಾಶ್ಮೀರದಂಥಾ ಒಂದು ರಾಷ್ಟ್ರವು ಸ್ವತಂತ್ರವಾಗಿರುವ ವಿಚಾರವನ್ನು ಇಂದೇ ವಿಚಾರಿಸಲೀ ಯಾ ಮಸೂದಿಯವರು ಹೇಳುವಂತೆ ನಾಳಿನ ಭವಿಷ್ಯದಲ್ಲಿ ಜನತೆಯ ಮುಂದಿಡಲಿ ಹೇಗಿದ್ದರೂ ಇಂದಿನ ಜಗತ್ತಿನ ಪರಿಸ್ಥಿತಿ ಹಾಗೂ ವಿದ್ಯಮಾನಗಳ ಅನುಭವದಿಂದ ಹೇಳುವದಾದರೆ ಕಾಶ್ಮೀರವು ಸ್ವತಂತ್ರ ರಾಷ್ಟ್ರವಾಗಿರಲು ಸಾಧ್ಯವಿಲ್ಲ. ಪ್ರಪಂಚದ ಮಹಾ ಮಹಾ ರಾಷ್ಟ್ರಗಳು ಒಂದಕ್ಕೊಂದು ಹೊಂದಿಕೊಂಡು ನಿರ್ಬಾಧಕ ಸ್ವಾತಂತ್ರ್ಯವನ್ನು ಸರ್ವಾಂಗೀಣ ಐಕ್ಯತೆ ಹಿತಗಳಿಗೆ ಬಿಟ್ಟುಕೊಡಬೇಕಾಗಿ ಬಂದಿರುವ ಇಂದಿನ ಜಗತ್ತಿನಲ್ಲಿ ಈ ರೀತಿಯ ಅಭಿಪ್ರಾಯವು ಸಮಂಜಸವಲ್ಲ. ಒಂದೋ ಕಾಶ್ಮೀರವು ಪಾಕಿಸ್ಥಾನದೊಡನೆ ಸೇರಬೇಕು, ಇಲ್ಲವೇ ಈ ಮೊದಲೇ ನಿರ್ಣಯಿಸಿರುವಂತೆ ಭಾರತದೊಡನೆ ಸೇರಬೇಕು. ಭಾರತದೊಡನೆ ಸೇರಲು ಈ ಮೊದಲು ಮಾಡಿದ ನಿರ್ಣಯವು ಪರಿಸ್ಥಿತಿಯ ಒತ್ತಡದಿಂದ ಆತುರದಲ್ಲಿ ಮಾಡಿದ್ದೆಂದು ಹೇಳುವದರಲ್ಲಿ ಅರ್ಥವಿಲ್ಲ. ಹೇಗೂ ಡೆಲ್ಲಿ ಒಪ್ಪಂದದಂತೆ ಜನತೆಯ ಅಭಿಪ್ರಾಯವನ್ನು ತೆಗೆದು ಅದರಂತೆ ಕಾಶ್ಮೀರದ ಭವಿಷ್ಯ ನಿರ್ಣಯವಾಗುವದು ಹಿತಕರವಾಗಿದೆ. ಈ ಬಗ್ಗೆ ಪಾಕಿಸ್ಥಾನ, ಭಾರತದ ಮಂತ್ರಿಗಳು ನಡೆಸುತ್ತಿರುವ ಮಾತುಕತೆಗಳು ಜಯಪ್ರದವಾಗಿ ಶಾಂತವಾತಾವರಣದಲ್ಲಿ ಈ ಪ್ರಶ್ನೆ ಬಗೆಹರಿಸಲ್ಪಡಲೆಂದು ಹಾರೈಸುವೆವು.

ಪೈಗಂಬರವಾಸಿ ಎಂ. ಎಂ. ಸಿದ್ದೀಕರು.

ಕೊಡಗಿನ ಒಬ್ಬ ಪ್ರಾಮುಖ್ಯ ವ್ಯಕ್ತಿಗಳೂ, ಮುಸ್ಲಿಂ ಜನಾಂಗದ ಮುಂದಾಳೊಬ್ಬರೂ ಆಗಿದ್ದ ಶ್ರೀ ಎಂ. ಎಂ. ಸಿದ್ದೀಕ್‌ರವರು ಭಟ್ಕಳದಲ್ಲಿ ತಾರೀಕು ೫ನೇ ಮಂಗಳವಾರ ಪೈಗಂಬರವಾಸಿಗಳಾದರು. ಶ್ರೀಯುತರು ರಾಜಕೀಯದಲ್ಲಿ ಆಸಕ್ತಿ ಇದ್ದವರಾಗಿ ಹಲವು ಸಾಮಾಜಿಕ ಕೆಲಸಗಳನ್ನು ಮಾಡಿರುವರು. ಭಟ್ಕಳದಲ್ಲಿ ಸ್ಥಾಪಿತವಾಗಿರುವ ಹೈಸ್ಕೂಲು ಇವರ ಪ್ರಯತ್ನದಿಂದಲೇ ಆಯಿತೆನ್ನಬಹುದು. ಕೊಡಗಿನಲ್ಲಿ ಪ್ರಥಮವಾಗಿ ವ್ಯಾಪಾರ ಉದ್ಯಮವನ್ನು ನಂತರ ವೈದ್ಯಕೀಯ ವೃತ್ತಿಯನ್ನು ಕೈಕೊಂಡ ಇವರು ಒಬ್ಬ ಪ್ಲಾಂಟರರಾಗಿದ್ದರು. ಇವರು ಉರ್ದುವಿನಲ್ಲಿ ಉತ್ತಮ ಭಾಷಣಕಾರರಿದ್ದರು. ಕೊಡಗು ಮುಸ್ಲಿಂ ಬಾಂಧವರ ಒಬ್ಬ ಮುಂದಾಳಾಗಿದ್ದ ಇವರು ಕೊಡಗು ಮುಸ್ಲಿಂ ಲೀಗಿನ ಅಧ್ಯಕ್ಷರೂ ಆಗಿದ್ದರು. ಇವರು ಖಿಲಾಫತ್ ಚಳವಳದಲ್ಲಿ ತುಂಬಾ ಶ್ರದ್ಧೆ ವಹಿಸಿದ್ದಲ್ಲದೆ ಕೊಡಗು ಜಮೀನ್ದಾರರ ಸಂಘದ ಸಮಿತಿಯ ಸದಸ್ಯರಾಗಿ ದೇಶಕ್ಕೆ ತಮ್ಮ ಸೇವೆ ಸಲ್ಲಿಸಿದರು.

'ಕೊಡಗು' ಪತ್ರಿಕೆಗೂ ಇವರಿಗೂ ನಿಕಟ ಸಂಬಂಧವಿತ್ತು. ಅವರು ಅನೇಕ ವರ್ಷಗಳ ವರೆಗೆ "ಕೊಡಗು" ಕಂಪೆನಿಯ ಡೈರೆಕ್ಟರಾಗಿ ನಂತರ ಅಧ್ಯಕ್ಷರೂ ಆಗಿ ಪತ್ರಿಕೆಯ ಅಭಿವೃದ್ಧಿಗಾಗಿ ಕೆಲಸ ಮಾಡಿದವರು. ಅವರ ನಿಧನದ ಕಾಲಕ್ಕೆ ಅವರಿಗೆ ೬೩ ವರ್ಷ ವಯಸ್ಸಾಗಿತ್ತು. ಶರೀರ ಆರೋಗ್ಯ ಚೆನ್ನಾಗಿದ್ದರೂ ಹೃದಯಸ್ತಂಭನದಿಂದ ಅವರು ನಿಧನರಾದರು. ಅವರ ನಿಧನದಿಂದ ಗಣ್ಯ ವ್ಯಕ್ತಿಯೊಬ್ಬರ ಕಣ್ಮರೆಯಾದಂತಾಯಿತು. ಅವರ ಆತ್ಮಕ್ಕೆ ಅಲ್ಲಾನು ಶಾಂತಿಯನ್ನೂ ಕುಟುಂಬಕ್ಕೆ ದುಃಖ ಸಹನಾ ಶಕ್ತಿಯನ್ನೂ ಕೊಡಲಿ.

ವರ್ತಮಾನ.

ಮಡಿಕೇರಿ ನಾಡಿನ ಬೆಂಚ್ ಮ್ಯಾಜಿಸ್ಟ್ರೇಟರಾಗಿ ಶ್ರೀ ಎಂ. ಎಂ. ಬೆಳ್ಯಪ್ಪ (ಅಧ್ಯಕ್ಷ) ಶ್ರೀ ಸಿ. ಡಿ. ಬೋಸಯ್ಯ ಮತ್ತು ಜನಾಬ್ ಎ. ಮಹಮ್ಮದ್ ಹುಸೇನ್ ಖಾನರನ್ನು ನೇಮಿಸಲಾಗಿದೆ.

ಟಿಂಬರು ಮತ್ತು ಇತರ ಫಾರೆಸ್ಟ್ ಉತ್ಪತ್ತಿಯ ಎತ್ತುವಳಿ ಮತ್ತು ಮಾರಾಟದ ಬಗ್ಗೆ ಕರಡು ನಿಬಂಧನೆಯು ಆಗಸ್ಟ್ ತಿಂಗಳ ಗಜೆಟ್ಟಿನಲ್ಲಿ ಪ್ರಕಟವಾಗಿದೆ. ಆ ತಿದ್ದುಪಡಿಗಳ ಬಗ್ಗೆ ಅಭಿಪ್ರಾಯ ಕೊಡುವವರು ೬೦ ದಿನಗಳೊಳಗೆ ಚೀಫ್ ಕಮಿಷನರಿಗೆ ಕಳುಹಿಸಬೇಕಾಗಿದೆ.

ತಾ. ೨೯-೬-೫೨ರಲ್ಲಿ ದೇವಣಗೇರಿ ಗ್ರಾಮಸ್ಥರು ಶ್ರೀ ಪುಗ್ಗೇರ ಸೋಮಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಕೊಡಗು ಸರಕಾರವು ಬಾಣೆ ಕಂದಾಯವನ್ನು ಹಾಕಕೂಡದೆಂದೂ ಸರಕಾರವು ತಮ್ಮ ಸೂಚನೆಯನ್ನು ವಾಪಾಸು ತೆಗೆದುಕೊಳ್ಳಬೇಕೆಂದೂ ಠರಾವು ಮಾಡಿದರು.

ಏಲಕ್ಕಿ ವ್ಯವಸಾಯಕ್ಕೆ ಲೀಸ್ ಮಾಡಿಕೊಟ್ಟ ಎ. ತರಗತಿಯ ಮಲೆಗಳಿಗೆ ಏಲಕ್ಕಿಗೆ ದೊರೆಯುವ ಬೆಲೆಯ ಪ್ರಥಮ ನೂರು ರೂಪಾಯಿಗೆ ಏಕರೆಗೆ ರೂಪಾಯಿ ಮೂರು ತೆರೆಯಂತೆಯೂ ಬಿ. ತರಗತಿಯ ಮಲೆಗೆ ರೂಪಾಯಿ ಮೂರರಂತೆಯೂ, ನೂರು ರೂಪಾಯಿಗಳ ಮೇಲೆ ಹೆಚ್ಚಾಗುವ ಯಾ ಕಡಿಮೆಯಾಗುವ ಪ್ರತಿ ಹತ್ತು ರೂಪಾಯಿಗಳಿಗೆ ಎರಡು ಆಣೆಯಂತೆ ಹೆಚ್ಚು ಯಾ ಕಡಿಮೆ ಮಾಡುವಂತೆಯೂ ಕಂದಾಯದ ಏರ್ಪಾಡಾಗಿದೆ.

ಇನ್ನು ಮುಂದೆ ಸಿವಿಲ್ ಆಸ್ಪತ್ರೆಗಳಲ್ಲಿ ಕಾಯಿಲಸ್ಥರನ್ನು ನಾಲ್ಕು ಗಂಟೆಯಿಂದ ಆರು ಗಂಟೆಯ ವರೆಗೆ ಮಾತ್ರ ನೋಡಲು ಬಿಡುವದೆಂದೂ ಶುಕ್ರವಾರ ಮಡಿಕೇರಿ ಆಸ್ಪತ್ರೆಯಲ್ಲಿ ಬುಧವಾರ ವೀರಾಜಪೇಟೆ ಆಸ್ಪತ್ರೆಯಲ್ಲಿ ಬೆಳಿಗ್ಗೆ ೧೧ ಗಂಟೆಯಿಂದ ಒಂದು ಗಂಟೆಯ ವರೆಗೆ ಬಿಡಲಾಗುವದೆಂದೂ ಬೇರೆ ಸಮಯದಲ್ಲಿ ಕಾಯಿಲಸ್ಥರನ್ನು ಕಾಣಲೇಬೇಕಾದವರು ಆ. ಸರ್ಜನ್ ಯಾ ಡ್ಯೂಟಿಯಲ್ಲಿರುವ ಮೆಡಿಕಲ್ ಆಫೀಸರಿಂದ ಪಾಸು ಪಡೆದುಕೊಂಡು ಹೋಗಬಹುದೆಂದೂ ತಿಳಿಸುತ್ತಾರೆ.

ಕೊಡಗಿನ ಚೀಫ್ ಕಮಿಷನರು (ಅಧ್ಯಕ್ಷ) ಗೃಹ ಮಂತ್ರಿಗಳು (ಉಪಾಧ್ಯಕ್ಷ) ಸಿವಿಲ್ ಸರ್ಜನರು (ಕಾರ್ಯದರ್ಶಿ) ಕ್ಷಯ ರೋಗಾಧಿಕಾರಿಗಳು, ಟ್ರೆಜರಿ ಆಫೀಸರು, ಮಿಸೆಸ್. ಬಿ. ಎಸ್. ಕುಶಾಲಪ್ಪ, ಹುಡುಗಿಯರ ಹೈಸ್ಕೂಲಿನ ರೆವರೆಂಡ್ ಮದರ್, ಐ. ಸಿ. ಸುಬ್ಬಯ್ಯ, ಜಿ. ಯಂ. ಮಂಜುನಾಥಯ್ಯ, ಕೆ. ಟಿ. ಉತ್ತಪ್ಪ ಇವರಿಂದ ಕೂಡಿದ ಕೊಡಗು ಮಕ್ಕಳ ಹಿತರಕ್ಷಕ ಸಮಿತಿಯೊಂದನ್ನು ರಚಿಸಲಾಗಿದೆ. ಸಂಯುಕ್ತರಾಷ್ಟ್ರ ಸಂಘದ ಮಕ್ಕಳ ಹಿತಶಾಖೆಯ ಹೂವುಗಳ ಸಂಕೇತವನ್ನು ಮಾರಿದುದರ ಪ್ರತಿ ರೂಪವಾಗಿ ಕೊಡಗಿಗೆ ದೊರೆತಿರುವ ಸುಮಾರು ೧೭ ಸಾವಿರ ರೂಪಾಯಿಗಳ ಖರ್ಚಿನಿಂದ ವೀರಾಜಪೇಟೆ ಮತ್ತು ಸೋಮವಾರಪೇಟೆ ಆಸ್ಪತ್ರೆಗಳಲ್ಲಿ ಮಕ್ಕಳ ವಾರ್ಡು ಕಟ್ಟಲು ನಿರ್ಣಯವಾಗಿದೆ.

ಕೊಡಗಿನಲ್ಲಿ ಕೊಂಡು ಕೊಂಡು ಮೈಸೂರಿನಲ್ಲಿ ಯಾ ಇತರ ಸಂಸ್ಥಾನಗಳಲ್ಲಿ ಉಪಯೋಗಿಸುವ ಪೆಟ್ರೋಲ್ ಮತ್ತು ಮೋಟಾರು ಎಣ್ಣೆಗಳ ಮೇಲೆ ಕೊಡಗು ಸರಕಾರದವರು ವಿಧಿಸುವ ತೆರಿಗೆಯು ಅಕ್ರಮವೆಂದೂ ಈ ಸಂಬಂಧವಾದ ಖಾನೂನು ರಾಜ್ಯಘಟನೆಯ ೨೮೬ನೇ ನಿಬಂಧನೆಗೆ ವ್ಯತಿರಿಕ್ತವೆಂದೂ, ಆ ರೀತಿ ತೆರಿಗೆ ಹಾಕುವದನ್ನು ಇಂಜಂಕ್ಷನ್ ಕೊಡಿಸಿ ತಡೆಯಬೇಕೆಂದೂ ವೀರಾಜಪೇಟೆ ಮುನ್ಸೀಫ್ ಕೋರ್ಟಿನಲ್ಲಿ ಗೋಣಿಕೊಪ್ಪ ಅಕ್ಕಿ ಗಿರಣಿ ಮತ್ತು ಲಾರಿ ಮಾಲೀಕರಾದ ಶ್ರೀ ಪಾಪಯ್ಯ ನಾಯ್ಡುರವರ ಪರ ಮೈಸೂರಿನ ಶ್ರೀ ಎ. ಎಸ್. ರಾಮಯ್ಯನವರು ದಾವಾ ದಾಕಲ್ಮಾಡಿದ್ದಾರೆಂದೂ, ಈ ಸಂಬಂಧದ ನಡವಳಿಕೆಯ ಬಗ್ಗೆ ಕೋರ್ಟಿನವರಿಗೆ ಸಂಶಯ ಬಂದರೆ ಮೈಸೂರು ಹೈಕೋರ್ಟಿಗೆ ಅದನ್ನು ಕಳುಹಿಸುವಂತೆ ಪ್ರಾರ್ಥಿಸಿರುವರೆಂದೂ ತಿಳಿಯಬಂದಿದೆ.

ವೀರಾಜಪೇಟೆ ನಾಡಿನ ಬೆಂಚ್ ಮೇಜಿಸ್ಟ್ರೇಟರುಗಳಾಗಿ ಶ್ರೀ ಕೆ. ಕೆ. ಬೆಳ್ಯಪ್ಪ (ಅಧ್ಯಕ್ಷ) ಶ್ರೀಗಳಾದ ಪರ್ಸಿ ಓಟೊ ಮತ್ತು ಎ. ಕೃಷ್ಣರಾವ್ ಇವರುಗಳನ್ನು ನೇಮಿಸಲಾಗಿದೆ.

ರಾಜ್ಯಘಟನೆಯ ಆರ್ಟಿಕಲ್ ೧೫೮ ರ ಮೇರೆ ಸರಕಾರವು ಯಾವುದೇ ಕೋಮುವಾರು ನಿಧಿಯ ಆಡಳಿತ ಜವಾಬ್ದಾರಿಯನ್ನು ವಹಿಸಿಕೊಳ್ಳಕೂಡದಾದ್ದರಿಂದ ಮಡಿಕೇರಿ ಸ್ಕೂಲ್ ಎಂಡೋಮೆಂಟ್ ಪ್ಲಾಂಟೇಶನ್ ಫಂಡ್, ಮತ್ತು ಕಾಬ್ ಸ್ಕಾಲರ್ ಶೀಪ್ ಫಂಡ್‌ಗಳ ಜವಾಬ್ದಾರಿ ಮತ್ತು ಆಡಳಿತವನ್ನು ಆಯಾ ಫಂಡಿನ ಟ್ರಸ್ಟಿಗಳಿಗೆ ಸರಕಾರವು ಬಿಟ್ಟುಕೊಟ್ಟಿದೆ.

ಕೊಡಗಿನಲ್ಲಿ ಮೇ ತಿಂಗಳಲ್ಲಿ ೨೩೩ ಜನನಗಳೂ ೧೭೦ ಮರಣಗಳೂ, ಜೂನ್ ತಿಂಗಳಲ್ಲಿ ೩೦೭ ಜನನಗಳೂ ೩೧೬ ಮರಣಗಳೂ ಸಂಭವಿಸಿರುವದಾಗಿ ಪ್ರಕಟವಾಗಿದೆ.

ಸಿನೆಮಾ, ಸಾರ್ವಜನಿಕ ಹಾಲ್ ಮೊದಲಾದೆಡೆ ಬೀಡಿ ಸಿಗರೇಟ್ ಸೇದಕೂಡದೆಂದು ಕೊಡಗು ಶಾಸನ ಸಭೆಯು ಮಂಜೂರ್ಮಾಡಿದ ಮಸೂದೆಗೆ ಒಕ್ಕೂಟದ ಪ್ರೆಸಿಡೆಂಟರ ಒಪ್ಪಿಗೆ ದೊರೆತು ಈ ತಿಂಗಳ ಗೆಜೆಟ್ಟಿನಲ್ಲಿ ಪ್ರಕಟವಾಗಿದೆ.

ಚೆಂಬೆಬೆಳ್ಳೂರು ಗ್ರಾಮದ ಶ್ರೀ ಚಾರಿಮಂಡ ನಾಣಯ್ಯನವರ ಮನೆಯೊಳಗೆ ಜಲಹುಟ್ಟಿ ತಾ. ೧೮ರಲ್ಲಿ ಮನೆಯು ಕುಸಿದು ಬಿದ್ದುಹೋಯಿತೆಂದೂ ಮನೆಯವರು ಆಗಲೇ ಮನೆಬಿಟ್ಟಿದ್ದಕಾರಣ ಯಾರಿಗೂ ಅಪಾಯವಾಗಲಿಲ್ಲವೆಂದೂ ತಿಳಿದು ಬಂದಿದೆ.

ಶ್ರೀ ಮಾದೇಟಿರ ಎಂ. ತಮ್ಮಯ್ಯನವರು ಬೊಂಬಾಯಿಯ ಸ್ಯಾನಿಟರಿ ಇನ್ಸ್‌ಪೆಕ್ಟರ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು.

ಸಾಮೂಹಿಕ ವಿಕಾಸಯೋಜನೆಯ ಅಂಗವಾಗಿ ಸೋಮವಾರಪೇಟೆಯ ಪಟ್ಟಣದ ಜನರ ಅನುಕೂಲತೆಗಾಗಿ ಒಂದು ಸಹಕಾರ ಹಾಲು ಸರಬರಾಜು ಕೇಂದ್ರವನ್ನು ತೆರೆಯಲಾಗಿದೆಯೆಂದು ತಿಳಿಯಬಂದಿದೆ.

ತಾ. ೧೩-೮-೫೩ರಿಂದ ಭಗವತಿ ಬಸ್ ಮಾಲೀಕರು ಸಂಪಾಜೆಯಿಂದ ಬೆಳಿಗ್ಗೆ ೭-೩೦ಕ್ಕೆ ಹೊರಟು ಮಡಿಕೇರಿ, ಸಿದ್ದಾಪುರ, ಪಾಲಿಬೆಟ್ಟ, ಗೋಣಿಕೊಪ್ಪ, ಪೊನ್ನಂಪೇಟೆಗೆ ಹೋಗಿ ಅದೇ ಮಾರ್ಗವಾಗಿ ವಾಪಾಸು ಸಾಯಂಕಾಲ ೫-೩೦ ಗಂಟೆಗೆ ಸಂಪಾಜೆಗೆ ತಲಪುವಂತೆ-ಬಸ್ಸ್ ಲೈನು ಓಡಿಸಬಹುದೆಂದು ಅನುಮತಿ ಕೊಡಲಾಗಿದೆ.

ಸಮಾಜ ಶಿಕ್ಷಣದಲ್ಲಿ ಆರು ತಿಂಗಳುಗಳ ತರಬೇತಿಗಾಗಿ ಕೊಟ್ಟೂರು ಶಾಲೆಯ ಶ್ರೀ ಎಚ್. ಶ್ರೀಪತಿಯವರನ್ನೂ, ಶನಿವಾರಸಂತೆ ಶಾಲೆಯ ಶ್ರೀ ಎ ಎ ಬಸವರಾಜರನ್ನೂ ಸರಕಾರವು ಆರಿಸಿರುವದು. ಇವರು ಮಧುರೆಯ ಸಮೀಪದ ಸಮಾಜ ಶಿಕ್ಷಣ ಕೇಂದ್ರದಲ್ಲಿ ತರಬೇತು ಪಡೆಯುವರು.

ತಾ. ೩೦-೭-೫೩ರಲ್ಲಿ ಮುಂಚಳ್ಳಿಯಲ್ಲಿ ಶ್ರೀ ಶೀತಿರ ನಂಜಪ್ಪನವರ ಅಧ್ಯಕ್ಷತೆಯಲ್ಲಿ ವನಮಹೋತ್ಸವವು ನಡೆಯಿತು. ಶ್ರೀಗಳಾದ ಎಚ್. ಬಿ. ಕುಶಾಲಪ್ಪ, ಎಂ. ಕೆ. ಪೆಮ್ಮಯ್ಯ, ಸಿ. ಕೆ. ಮಂದಣ್ಣ, ಕೆ. ಎನ್. ಬೋಪಯ್ಯ, ಎಂ. ಎನ್. ಭೀಮಯ್ಯ ಮೊದಲಾದವರು ಭಾಷಣಮಾಡಿದರು.

ಡೆರಾಡೂನಿನಲ್ಲಿರುವ ಪ್ರಿನ್ಸ್ ಆಫ್ ವೇಲ್ಸ್ ಮಿಲಿಟರಿ ಕಾಲೇಜಿಗೆ ೧೯೫೪ನೇ ಜನವರಿ ಟರ್ಮಿಗೆ ಉಮೇದುವಾರರನ್ನು ಆರಿಸಲು ಪರೀಕ್ಷೆಗಳು ೧೬-೯-೫೩ರಲ್ಲು ಮಡಿಕೇರಿ ಸರಕಾರಿ ಕಾಲೇಜಿನಲ್ಲಿ ನಡೆಯುವದು. ಅರ್ಜಿಯನ್ನು ಎರಡು ಪ್ರತಿಯಾಗಿ ೧೬-೮-೫೩ರ ಒಳಗೆ ಕೊಡಗಿನ ಸರಕಾರದ ಚೀಫ್ ಸೆಕ್ರೆಟರಿಯವರಿಗೆ ತಲಪುವಂತೆ ಕಳುಹಿಸಬೇಕು.

ಸೋಮವಾರಪೇಟೆ ನಾಡಿನ ಬೆಂಚ್ ಮೇಜಿಸ್ಟ್ರೇಟರಾಗಿ ಶ್ರೀ ಕೆ. ಚಂದ್ರಶೇಖರಯ್ಯ (ಅಧ್ಯಕ್ಷ) ಶ್ರೀ ಎಂ. ಪಿ. ಅಪ್ಪಯ್ಯ ಮತ್ತು ಡಿ. ಬಿ. ಜೋಯಪ್ಪ ಇವರುಗಳನ್ನು ನೇಮಿಸಲಾಗಿದೆ.

ಪೊನ್ನಂಪೇಟೆ ನಾಡಿನ ಬೆಂಚ್ ಮೇಜಿಸ್ಟ್ರೇಟರಾಗಿ ಶ್ರೀ ಎಂ. ಎಂ. ತಿಮ್ಮಯ್ಯ (ಅಧ್ಯಕ್ಷ) ಕೆ. ಎಂ. ಕಾರ್ಯಪ್ಪ ಮತ್ತು ಎಚ್. ಬಿ. ಅಣ್ಣಯ್ಯನವರನ್ನು ನೇಮಿಸಿರುವರು.

ಕೊಡಗು ಸರಕಾರಿ ಕಾಲೇಜಿನ ಎಂಡೋಮೆಂಟುಗಳು.

ಕೊಡಗು ಸರಕಾರಿ ಕಾಲೇಜಿನಲ್ಲಿ ವ್ಯಾಸಂಗಮಾಡುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಡಲಾಗುವನ್ನು ಕೊಡುವಂತೆ ಕೊಡಗು ಅಕ್ಕಿ ಗಿರಣಿ ಮಾಲೀಕರ ಸಂಘ ರೂ. ೧೦,೦೦೦, ಶ್ರೀ ಜಿ ಎಂ. ಮಂಜುನಾಥಯ್ಯನವರು ರೂ ೫೦೦೦, ಶ್ರೀ ವಿ ಜಿ. ನಾರಾಯಣಸ್ವಾಮಿ ಮುದಲಿಯಾರ್ ರೂ. ೫೦೦೦, ಕಿತ್ತಳೆ ಸಹಕಾರಿ ಸಂಘ ರೂ. ೧೫೦೦, ಸ್ಟೇಟ್ ಸಹಕಾರ ಬ್ಯಾಂಕ್ ರೂ. ೧೦೦೦, ಪ್ರಾಂತೀಕ ಸಹಕಾರ ಫೆಡರೇಶನ್ ರೂ. ೧೦೦೦, ಜೇನು ಮೇಣ ಸಂಘ ರೂ ೧೦೦೦, ಮತ್ತು ಉಪಾಧ್ಯಾಯರ ಸಹಕಾರ ಸ್ಟೋರ್ ರೂ. ೫೦೦ ಹೀಗೆ ಕೊಟ್ಟ ಒಟ್ಟು ರೂ. ೨೫೦೦೦ ಗಳ ಎಂಡೋಮೆಂಟಿನಿಂದ ಬರತಕ್ಕ ಬಡ್ಡಿಯಿಂದ ವಿದ್ಯಾರ್ಥಿವೇತನಗಳನ್ನು ಕೊಡಲು ಕಾಲೇಜಿನ ಪ್ರಿನ್ಸಿಪಲರು, ಜಿಲ್ಲಾ ವಿದ್ಯಾಧಿಕಾರಿಗಳು, ಶ್ರೀ. ಜಿ. ಎಂ. ಮಂಜನಾಥಯ್ಯನವರು, ಶ್ರೀ. ವಿ. ಜಿ. ನಾರಾಯಣಸ್ವಾಮಿ ಮುದಲಿಯಾರರು ಅಕ್ಕಿ ಗಿರಣಿ ಮಾಲಿಕರ ಸಂಘದ ಪ್ರತಿನಿಧಿ ಮತ್ತು ಮೇಲ್ಕಂಡ ಸಹಕಾರ ಸಂಘಗಳ ಪರ ಒಬ್ಬ ಪ್ರತಿನಿಧಿ ಇವರುಗಳಿಂದ ಕೂಡಿದ ಒಂದು ಸಮಿತಿಯನ್ನು ನೇಮಿಸಲಾಗಿದೆ.

ವಿದ್ಯಾರ್ಥಿ ವೇತನಗಳು:

'ಕೊಡಗು ಅಕ್ಕಿ ಗಿರಣಿ ಮಾಲೀಕರ ಸಂಘದ ವಿದ್ಯಾರ್ಥಿವೇತನ'ವೆಂಬ ಹೆಸರಿನ ರೂ. ೧೫ ಮತ್ತು ರೂ. ೧೦ ರ ಎರಡು ವೇತನಗಳೂ ಮತ್ತು 'ಶ್ರೀ ಜಿ ಎಂ ಮಂಜುನಾಥಯ್ಯ ಸ್ಕಾಲರ್ ಶಿಪ್' ಎಂಬುದಾಗಿ ರೂ. ೧೫ ಮತ್ತು ರೂ. ೧೦ ರ ಎರಡು ವಿದ್ಯಾರ್ಥಿ ವೇತನಗಳೂ, ಜೂನಿಯರ್ ಇಂಟರ್ ಮೀಡಿಯೇಟಿನಲ್ಲಿ ವ್ಯಾಸಂಗಮಾಡುವ (ಪೋಷಕರಿಗೆ ತಿಂಗಳಿಗೆ ರೂ ೧೫೦ ಕ್ಕೆ ಹೆಚ್ಚಿಗೆ ಆದಾಯವಿಲ್ಲದ) ಉತ್ತಮ ವಿದ್ಯಾರ್ಥಿಗಳಿಗೆ ಕೊಡಲ್ಪಡುವವು.

'ಶ್ರೀ ವಿ. ಜಿ. ನಾರಾಯಣಸ್ವಾಮಿ ಮುದಲಿಯಾರ್ ವಿದ್ಯಾರ್ಥಿವೇತನ'ವೆಂಬ ಹೆಸರಿನಲ್ಲಿ ತಿಂಗಳಿಗೆ ರೂ. ೧೫ ಮತ್ತು ೧೦ ರ ಎರಡು ವೇತನಗಳೂ ಮತ್ತು 'ಕೊಡಗು ಸಹಕಾರ ವಿದ್ಯಾರ್ಥಿವೇತನ'ವೆಂಬ ಹೆಸರಿನಲ್ಲಿ ರೂ. ೧೫ ಮತ್ತು ರೂ. ೧೦ ರ ಎರಡು ವಿದ್ಯಾರ್ಥಿವೇತನಗಳೂ ಜೂನಿಯರ್ ಬಿ. ಎ. ಮತ್ತು ಬಿ. ಎಸ್‌ಸಿ ತರಗತಿಯ ಉತ್ತಮ ವಿದ್ಯಾರ್ಥಿಗಳಿಗೆ ಕೊಡಲ್ಪಡುವವು.

ದಿವಂಗತ
ಯಂ. ಯಂ. ಸಿದ್ದೀಕರು.

ಕೊಡಗಿನ ಮುಸಲ್ಮಾನರುಗಳ ಪೈಕಿ ದಿವಂಗತ ಅಬ್ದುಲ್ ಗಫಾರ್ ಖಾನ್ ಮೈಶ್ರಿ (ಅಮ್ಮತ್ತಿ) ಮತ್ತು ಶ್ರೀ ಎಂ. ಎಂ ಸಿದ್ದೀಕರನ್ನು ನಮ್ಮ ದೇಶದ ಜನರಲ್ಲಿ ತಿಳಿಯದವರು ಬಹಳ ಕಡಿಮೆ. ಇವರಿಬ್ಬರೂ ಕಳೆದ ಮೂವತ್ತೈದು ವರ್ಷಗಳಿಂದ ನಮ್ಮ ದೇಶದ ರಾಜಕೀಯ ಮತ್ತು ಸಾಮಾಜಿಕ ಕೆಲಸಗಳಲ್ಲಿ ಮುಂದಾಳುಗಳಾಗಿ ಕೆಲಸ ಮಾಡಿದರು. ಶ್ರೀ ಸಿದ್ದೀಕರಾದರೋ ಕೊಡಗಿನಲ್ಲಿ ಖಿಲಾಫತ್ ಚಳವಳಿವನ್ನು ಶುರು ಮಾಡಿ ದೇಶದ ಉದ್ದಗಲಕ್ಕೂ ಉಪನ್ಯಾಸ ಮಾಡಿ ತಿರುಗಿದರು ಅಲ್ಲದೆ "ಕೊಡಗು" ಪತ್ರಿಕೆಯ ಡೈರೆಕ್ಟರಾಗಿಯೂ, ಕೊಡಗು ಜಮೀನುದಾರರ ಸಂಘದ ಕಮಿಟಿ ಮೆಂಬರಾಗಿಯೂ ಬಹಳ ವರ್ಷ ಕೆಲಸ ಮಾಡಿದರು ಬಟ್ಟಲ್ (ಇವರು ಹುಟ್ಟಿದ ಸ್ಥಳ) ದಲ್ಲಿ ವಿದ್ಯಾಭ್ಯಾಸಕ್ಕೆ ಮೊದಲಾಗಿ ಪ್ರೋತ್ಸಾಹ ಕೊಟ್ಟು ತನ್ನ ತನು ಮನ ಧನವನ್ನು ಅರ್ಪಿಸಿ ಒಂದು ಹೈಸ್ಕೂಲನ್ನು ಸ್ಥಾಪನೆ ಮಾಡಿದವರೂ ಇವರೇ. ಅಲ್ಲದೆ ಕಷ್ಟ ಕಾಲದಲ್ಲಿ ತಮ್ಮ ಜನರಿಗೆ ಸಹಾಯ ಮಾಡಲಿಕ್ಕೆ ಯಾವಾಗಲೂ ಮುಂದೆ ಬರುತಿದ್ದುದರಿಂದ ಅವರನ್ನು ಭಟ್ಕಳದಲ್ಲಿ ಒಬ್ಬ ಶ್ರೇಷ್ಠ ಮಹಾ ವ್ಯಕ್ತಿಯೆಂದೇ ತಿಳಿದಿದ್ದರು. ಅಲ್ಲಿ ಅವರ ಹೆಸರನ್ನು ತಿಳಿಯದವರಿಲ್ಲ

ಕೊಡಗಿನಲ್ಲಿ ಅವರ ಕುಟುಂಬವು ಬಹಳ ಹೆಸರುಗೊಂಡದ್ದಾಗಿದೆ. ಅವರ ತಂದೆ ತಾತಂದಿರು ವ್ಯಾಪಾರಸ್ಥರಾಗಿ ಬಹಳ ಕರುಣೆ, ಸತ್ಯ, ದಯೆಯಿಂದ ಕೆಲಸ ಮಾಡಿದರೆಂದು ಅವರ ಕುಟುಂಬವನ್ನು ತಿಳಿದವರು ಹೇಳುತ್ತಾರೆ. ಈಗಲೂ ಅವರ ಕುಟುಂಬದ ಕೆಲವರು ಕಾಫಿ ಪ್ಲಾಂಟರುಗಳಾಗಿದ್ದಾರೆ. ದಿವಂಗತ ಸಿದ್ದೀಕರು ಕಳೆದ ಆರೇಳು ವರ್ಷಗಳಿಂದ ಹೃದಯವೇದನೆಯಲ್ಲಿ ನರಳುತಿದ್ದರು. ಆದರೂ ತಮ್ಮ ಕೆಲಸವನ್ನು ಯಾವಾಗಲೂ ಸರಿಯಾಗಿ ಮಾಡಿಕೊಂಡೇ ಹೋಗುತ್ತಿದ್ದರು. ಕಳೆದ ಆದಿತ್ಯವಾರ ಬೆಳಿಗ್ಗೆ ಮಡಿಕೇರಿಯಿಂದ ಭಟ್ಕಲಕ್ಕೆ ಹೊರಟು, ಅಲ್ಲಿಗೆ ಮಂಗಳವಾರ ಸಾಯಂಕಾಲಕ್ಕೆ ತಲಪಿದರು. ಅದೇ ರಾತ್ರಿ ಥಟ್ಟನೆ ಹೃದಯವೇದನೆಯಿಂದ ತಮ್ಮ ೬೩ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರು. ಇವರ ಮರಣದಿಂದ ಭಟ್ಕಲದ ಜನರಿಗೆಲ್ಲಾ ತುಂಬಾ ನಷ್ಟವಾಗಿದೆಯಲ್ಲದೆ ಕೊಡಗಿನ ಮುಸಲ್ಮಾನರುಗಳಿಗೂ ಮತ್ತು ಅನೇಕ ಹಿತೈಷಿಗಳವರಿಗೂ ತುಂಬಾ ನಷ್ಟವಾಗಿದೆ. ಅವರ ಕುಟುಂಬಕ್ಕೆ ಈ ಮೂಲಕ ಸಂತಾಪವನ್ನು ಸೂಚಿಸುವುದಲ್ಲದೆ, ದೇವರು ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲಿ.

— ಕೆ. ಪಿ. ಚಿಣ್ಣಪ್ಪ

ರಾಜಿನಾಮೆ ಕೊಡಬೇಡಿ
ಪಂ|| ನೆಹರೂರವರ ಸಲಹೆ

ಹೈದರಾಬಾದಿನಲ್ಲಿ ನಡೆಯುತ್ತಿರುವ ಕಾಂಗ್ರೆಸ್ ಆಡಳಿತವು ಸರಿಯಾಗಿ ನಡೆಯುತ್ತಿಲ್ಲವೆಂದೂ ಆಡಳಿತದ ಎಲ್ಲಾ ಕ್ಷೇತ್ರಗಳಲ್ಲಿ ಲಂಚಗುಳಿತನ ಹಬ್ಬಿದೆಯೆಂದೂ ಆದ್ದರಿಂದ ಅಂಥಾ ಆಡಳಿತದಲ್ಲಿ ಭಾಗಿಗಳಾಗಿರಲು ಇಷ್ಟ ತಮಗಿಲ್ಲವೆಂದೂ ಆ ಕಾರಣ ತಾವಿರುವ ಶಾಸನ ಸಭಾ ಸದಸ್ಯತನಕ್ಕೆ ರಾಜಿನಾಮೆ ಕೊಡಲು ಅನುಮತಿ ಕೊಡಬೇಕೆಂದೂ ಹೈದರಾಬಾದಿನ ೨೪ ಜನ ಕಾಂಗ್ರೆಸ್ ಎಂ. ಎಲ್. ಎ ಗಳು ಕಾಂಗ್ರೆಸ್ ಪ್ರೆಸಿಡೆಂಟರಿಗೆ ಬರೆದುಕೊಂಡಿದ್ದರು. ತಮ್ಮ ಪತ್ರದಲ್ಲಿ ತಮ್ಮ ನೀತಿಯನ್ನು ವಿವರಿಸುತ್ತಾ ತಾವು ನಿಷ್ಠಾವಂತ ಕಾಂಗ್ರೆಸಿಗರೆಂದೂ, ಕಾಂಗ್ರೆಸಿನ ಮೇಲೆ ತಮಗೆ ಅಚಲ ವಿಶ್ವಾಸವಿದೆಯೆಂದೂ ಆದರೆ ಶಾಸನ ಸಭೆಯಲ್ಲಿದ್ದು ಈಗ ನಡೆಯುತ್ತಿರುವ ಆಡಳಿತಕ್ಕೆ ಸಹಾಯ ಮಾಡುವದಾಗಲೀ ಯಾ ಕಾಂಗ್ರೆಸಿಗರಾಗಿ ವಿರೋಧ ಮಾಡುವದಾಗಲೀ ಸಾಧ್ಯವಾಗದ್ದರಿಂದ ಹೊರ ಬರುವ ಅನುಕೊಡಬೇಕೆಂದೂ ಕೇಳಿದ್ದರು.

ಪಂ|| ನೆಹರೂರವರು ಉತ್ತರವೀಯುತ್ತಾ ಶಾಸನ ಸಭೆಗೆ ಅವರು ರಾಜಿನಾಮೆ ಕೊಡಕೂಡದೆಂದೂ ಅವರ ಲಿಖಿತ ದೂರನ್ನು ಹೈದರಾಬಾದಿನ ಮುಖ್ಯ ಮಂತ್ರಿಯವರಿಗೆ ತಿಳಿಸಿ ಅವರು ಎಷ್ಟರ ಮಟ್ಟಿಗೆ ಆಡಳಿತವನ್ನು ಸುಧಾರಿಸುವರೆಂಬುದನ್ನು ನೋಡಿ ಯೋಗ್ಯ ಅವಧಿಯೊಳಗೆ ಸರಿಪಡಿಸಲ್ಪಡದಿದ್ದರೆ ಆಗ ಮಾತ್ರ ರಾಜಿನಾಮೆಯ ಆಲೋಚನೆ ಮಾಡುವದು ಹಿತವೆಂದೂ ಸೂಚಿಸಿರುವರು.

ಕೃತಜ್ಞತಾ ವಂದನೆ.

ತಾರೀಕು ೯-೭-೫೩ ನೇ ಗುರುವಾರ ದಿನ ಶಿವಾಧೀನರಾದ ನಮ್ಮ ಮಾತೋ ಶ್ರೀ ತಂಗಮ್ಮನವರ ವಿಯೋಗದ ಕಾಲದಲ್ಲಿ ಖುದ್ದಾಗಿ ಬಂದು ಮತ್ತು ಸಂತಾಪ ಸೂಚನಾ ಪತ್ರ ಮುಖೇನ ನಮ್ಮ ದುಃಖದಲ್ಲಿ ಭಾಗಿಗಳಾದ ಬಂಧು ಬಳಗದವರಿಗೂ, ಸ್ನೇಹಮಿತ್ರರಿಗೂ ಪ್ರತ್ಯೇಕ ಪ್ರತ್ಯೇಕ ಪತ್ರ ಬರೆದು ನಮ್ಮ ಕೃತಜ್ಞತೆಯನ್ನು ಅರ್ಪಿಸಲು ಅಸಾಧ್ಯವಾದ ಕಾರಣ ಅವರೆಲ್ಲರಿಗೂ ಈ ಮೂಲಕ ನಮ್ಮ ಹಾರ್ದಿಕ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ

ಕಂಬೆಯಂಡ ಎ ಕುಶಾಲಪ್ಪ
ಮತ್ತು ಸಹೋದರರು.

ಕೊಡಗು ವಿದ್ಯಾನಿಧಿ ಸಾಲಕ್ಕೆ ಅರ್ಜಿಗಳು

ಕೊಡಗು ವಿದ್ಯಾನಿಧಿಯಿಂದ ಸಾಲಯಾ ವಿದ್ಯಾರ್ಥಿವೇತನಗಳಿಗೆ ಅರ್ಜಿಯನ್ನು ಈ ಕೆಳಗೆ ಸಹಿ ಹಾಕಿದವರಿಗೆ ತಾರೀಕು ೨೫ರೊಳಗೆ ಕಳುಹಿಸಬೇಕಾಗಿದೆ. ಅದರ ನಂತರ ಬಂದ ಅರ್ಜಿಗಳನ್ನು ಗಮನಕ್ಕೆ ತೆಗೆದುಕೊಳ್ಳಲಾಗುವುದಿಲ್ಲ.

ತಮ್ಮ ತಂದೆ ಯಾ ಪೋಷಕರು ಫಂಡಿನ ವಾರ್ಷಿಕ ಚಂದಾ ಪಾವತಿ ಮಾಡಲು ಬಾಕಿ ಇದ್ದರೆ ಅದನ್ನು ಶೀಘ್ರ ಪಾವತಿ ಮಾಡುವಂತೆ ಪ್ರತಿ ಅರ್ಜಿದಾರನೂ ಕೂಡ ಅವರನ್ನು ಒತ್ತಾಯಿಸಬೇಕಾಗಿ ಈ ಮೂಲಕ ಕೇಳಿಕೊಳ್ಳಲಾಗಿದೆ.

ಸಿ. ಡಿ. ಅಪ್ಪಯ್ಯ
ಕೊಡಗು ವಿದ್ಯಾನಿಧಿ, ಕಾರ್ಯದರ್ಶಿ.
ಮಡಿಕೇರಿ. ೫-೮-೫೩.

ನಗು ಮಲ್ಲಿಗೆ

ಮಗು—ಅಮ್ಮಾ, ನಮ್ಮ ಮನೆಯಷ್ಟು ದೊಡ್ಡ ಬಸ್ಸೊಂದು ಈಗ ರಸ್ತೆಗಾಗಿ ಹೋಯಿತು.

ತಾಯಿ—ಏಕೆ ಉತ್ಪ್ರೇಕ್ಷೆ ಮಾಡಿ ಹೇಳುವೆ. ಹಾಗೆ ಮಾಡಬಾರದೆಂದು ನಿನಗೆ ಸಾವಿರ ಬಾರಿ ಹೇಳಿಯೂ ಬುದ್ಧಿ ಬರಲಿಲ್ಲವೇ?

* * *

ಏಳು ವಯಸ್ಸಿನ ಚಿಕ್ಕ ಹುಡುಗಿಯೊಬ್ಬಳು ಬಟ್ಟೆ ಅಂಗಡಿಯೊಳಗೆ ಬಂದು ಹೇಳಿದಳು 'ನನ್ನ ಗೊಂಬೆಗೆ ಉಡುಪು ಹೊಲಿಯಲಿಕ್ಕಾಗಿ ಸ್ವಲ್ಪ ಬಟ್ಟೆ ಬೇಕು'

ಅಂಗಡಿಯವನು ಅಂಗಡಿಯಲ್ಲಿದ್ದ ಕೆಲವು ಚೂರು ಬಟ್ಟೆಗಳನ್ನು ಕಟ್ಟಿಕೊಟ್ಟನು.

ಹುಡುಗಿ—ಏನು ಬೆಲೆಯಾಗುವದು?

ಅಂಗಡಿಯವ—ಬೇಬೀ ಒಂದು ಮುತ್ತು ಅಷ್ಟೆ!

ಹುಡುಗಿ—ನಾಳೆ ತಾಯಿ ಈ ಅಂಗಡಿಗೆ ಬರುತ್ತಾಳೆ. ಆಗ ನಿನ್ನ ಬಿಲ್ ಕೊಡುತ್ತಾಳೆ!

• • •

ಯಜಮಾನ—ನನಗೆ ನಿನ್ನ ಸುಳ್ಳನ್ನು ಕೇಳಿ ಆಶ್ಚರ್ಯವಾಗುತ್ತದೆ. ಸುಳ್ಳು ಹೇಳುವವನಿಗೆ ಶಿಕ್ಷೆ ಏನೆಂದು ಗೊತ್ತಿದೆಯೇ?

ಅಂಗಡಿಯ ಗುಮಾಸ್ತ—ಹೌದು, ಅವರನ್ನು 'ಸೇಲ್ಸ್‌ಮೆನ್' ಆಗಿ ಫೀಲ್ಡಿಗೆ ಕಳುಹಿಸುತ್ತಾರೆ.

• • •

ಹಳೆಯ ಕಾರೊಂದನ್ನು ನೂಕುತ್ತಾ, ಸೇತುವೆಯ ಹತ್ತಿರ ಡ್ರೈವರನು ಬಂದನು.

ಸೇತುವೆಯ ಪಹರೆಯವ—ಒಂದು ಆಣೆ ಕೊಡಬೇಕು.

ಡ್ರೈವರು—ಸಂತೋಷದಿಂದ ಆಗಲಿ ಕಾರು ಮಾರಾಟವಾಯಿತು!

• • •

'ಅಪರಾಧಿಯು ನಿನಗೆ ಅವಮಾನ ಮಾಡಿದನೇ? ಆತನು ಏನು ಹೇಳಿದನು?' ಲಾಯರು ಕೇಳಿದರು

ಫಿರ್ಯಾದಿ—ನಾನು ಹೇಳಲಾರೆ. ಆತನು ಹೇಳಿದ ಮಾತುಗಳು ಸಭ್ಯರು ಕೇಳುವಂಥಾವಲ್ಲ.

ಲಾಯರು—ಹಾಗಾದರೆ ನ್ಯಾಯಾಧೀಶರ ಕಿವಿಗೆ ಮೆಲ್ಲನೆ ಹೇಳು.

• • •

ಅಂಗಡಿಯವ—ಈ ಸಿಗಾರು ಅಪೂರ್ವವಾದುದು. ನಿಮ್ಮಂಥವರು ಕೊಳ್ಳಲೇಬೇಕು.

ಕ್ರಯಕ್ಕೆ ಒಂದನ್ನು ಪಡೆದ ಗಿರಾಕಿಯು ಅದನ್ನು ಹಚ್ಚಿ ಸ್ವಲ್ಪ ಸಮಯದ ನಂತರ ವಾಪಾಸು ಬಂದು, 'ಈ ಸಿಗಾರು ಭಯಂಕರವಾದುದು. ಮನುಷ್ಯರು ಇದನ್ನು ಸೇದುವಂಥಾದ್ದಲ್ಲ' ಎಂದು ರೇಗಿದನು.

ಅಂಗಡಿಯವ—ನೀವು ಒಂದು ಸಿಗಾರಿಗೆ ಇಷ್ಟು ದೂರು ಹೇಳುವದಾದರೆ ಸಾವಿರ ಸಿಗಾರು ಇಟ್ಟುಕೊಂಡಿರುವ ನಾವೆಷ್ಟು ದೂರು ಹೇಳಬೇಕು!

ಮೇಜಿಸ್ಟ್ರೇಟ್—ಈ ಕೈದಿಯು ಕುಡಿದಿದ್ದನೆಂಬುದಕ್ಕೆ ಏನು ರುಜುವಾತು ಕೊಡಬಲ್ಲೆ.

ಪೋಲೀಸಿನವ—ಆತನು ಟೇಕ್ಸಿ ಡ್ರೈವರನೊಬ್ಬನೊಡನೆ ಭಯಂಕರ ಜಗಳ ಪ್ರಾರಂಭಿಸಿದ್ದ.

ಮೇಜಿಸ್ಟ್ರೇಟ್—ಅದರಿಂದ ಆತನು ಕುಡುಕನೆಂದು ಹೇಗೆ ರುಜುವಾತಾಗುವದು?

ಪೋಲೀಸಿನವ—ಅಲ್ಲಿ ಟೇಕ್ಸಿ ಡ್ರೈವರರಾರೂ ಇರಲಿಲ್ಲ!

* * *

ಸಿಪಾಯಿ—ನನಗೆ ಮದುವೆಯಾಗಲಿಕ್ಕಿದೆ ಆದ್ದರಿಂದ ರಜೆ ಬೇಕು.

ಅಧಿಕಾರಿ—ನೀನು ಮದುವೆಯಾಗಲಿರುವ ಹುಡುಗಿಯನ್ನು ಎಷ್ಟು ದಿನಗಳಿಂದ ನಿನಗೆ ಪರಿಚಯ?

ಸಿಪಾಯಿ—ಒಂದು ವಾರದಿಂದ.

ಅಧಿಕಾರಿ—ಇಷ್ಟು ಅಲ್ಪ ಸಮಯದಲ್ಲಿ ಆಕೆಯ ಗುಣನಡತೆ ಏನು ಗೊತ್ತು? ಕೆಲವು ತಿಂಗಳುಗಳು ಕಳೆಯಲಿ. ನಂತರ ಅವಳನ್ನೇ ಮದುವೆಯಾಗುವುದಾದರೆ ನಿನಗೆ ರಜೆ ಕೊಡಲಾಗುವದು

ಎರಡು ತಿಂಗಳು ಕಳೆದ ನಂತರ ಸಿಪಾಯಿ ಪುನಹ ಬಂದು ರಜೆ ಕೇಳಿದನು.

'ಹಾಗಾದರೆ ಆಕೆಯನ್ನು ನೀನು ಮದುವೆಯಾಗಲು ನಿಶ್ಚಯಿಸಿರುವೆಯೋ? ಈಗಿನ ೨೦ ನೇ ಶತಮಾನದಲ್ಲಿ ಹಲವು ತಿಂಗಳುಗಳ ವರೆಗೆ ಒಬ್ಬಾಕೆಯಲ್ಲಿಯೇ ಆಸಕ್ತಿಯಿಂದ ಯಾರಾದರೂ ಇರುವರೇ?

ಸಿಪಾಯಿ—ಅದು ನನಗೆ ಗೊತ್ತು ಸಾರ್, ಆದರೆ ಈಕೆ ಬೇರೆ ಹುಡುಗಿ!

ಧರ್ಮರಹಸ್ಯ

= ಭರ್ತೃಹರಿಯ ವೈರಾಗ್ಯ ಶತಕದಿಂದ =

ಬ್ರಹ್ಮಾಂಡವೇ ಯೋಗಿಯ ಮನಸ್ಸನ್ನು ಕದಲಿಸಲು ಶಕ್ಯವಾಗದು. ಒಂದು ರಾಜ್ಯಾಧಿಕಾರ ಸಂಪತ್ತಿಗೇನು ಆ ಶಕ್ತಿ ಇದೆಯೇ? ಮೀನಿನ ಓಡಾಟದಿಂದ ಸಮುದ್ರ ಕ್ಷೋಭಿಸುವದೇ?

ಹೇ ಲಕ್ಷ್ಮೀ! ನೀನು ಬೇರೆಯವರನ್ನು ಆಶ್ರಯಿಸಬಹುದು ನನ್ನನ್ನು ಕಾಂಕ್ಷಿಸಬೇಡ. ಭೋಗಸಕ್ತರೇ ನಿನ್ನ ವಂಶದವರಾಗುವರು. ಅನಾಸಕ್ತರಿಗೆ ನಿನ್ನ ಮೇಲೆ ಮಮತೆಯಿಲ್ಲ ಪಾಲಾಶದೆಲೆಯನ್ನು ದೊನ್ನೆಮಾಡಿ ಅದರಲ್ಲಿ ಸಿಕ್ಕಿದ ಅನ್ನದಿಂದ ಜೀವನ ಮಾಡುವ ನಮಗೆ ನಿನ್ನ ಕೃಪೆ ಬೇಕಿಲ್ಲ

ಈ ರೀತಿ ಅನ್ನವನ್ನುಂಡು ಜನಮಧ್ಯದ ವಾಸವನ್ನು ತೊರೆದು ಸ್ವತಂತ್ರ ಸಂಚರಿಸುವವನೇ ಯೋಗಿಯು. ತ್ಯಾಗಿಯಾದ ಆತನು ವೈರಾಗ್ಯದ ಹಾದಿಯಲ್ಲೇ ಆಸಕ್ತನು. ದಾರಿಯಲ್ಲಿ ಬಿದ್ದ ಹಳೇ ಚಿಂದಿ ಬಟ್ಟೆಯೂ ಆತನಿಗೆ ಸಾಕು. ಆತನಿಗೆ ಅಭಿಮಾನ ಅಹಂಕಾರಗಳಿಲ್ಲ. ಮನೋವಿಕಾರಗಳಿಲ್ಲದವನು ಆತ. ಆತನೇ ಅವಧೂತನು.

ಅವನು ಪಂಚಮನೋ, ಬ್ರಾಹ್ಮಣನೋ, ಶೂದ್ರನೋ, ತಪಸ್ವಿಯೋ ಅಥವಾ ಮಹಾ ಯೋಗೀಶ್ವರನೋ ಎಂದು ಆ ಪರಿಯಾಗಿ ಜನರು ತನ್ನನ್ನು ಕುರಿತು ಮಾತಾಡುವದನ್ನು ಕೇಳಿದರೂ ಕೂಡ ಯೋಗಿಯು ಬೇಸರ ಯಾ ಸಂತೋಷ ಪಡಲಾರನು.

ಮನಸ್ಸೆಂಬ ಮದ್ದಾನೆಯು ಕಾಮ್ಯ ವಸ್ತುಗಳೆಂಬ ಹೆಣ್ಣಾನೆಯಲ್ಲಿ ಆಸಕ್ತಿತಾಳಿ ದಾರಿತಪ್ಪಿ ವರ್ತಿಸುತ್ತದೆ. ಇಂದ್ರಿಯ ನಿಗ್ರಹವೆಂಬ ತಂತ್ರದಿಂದ ಆ ಮದ್ದಾನೆಯನ್ನು ಬಂಧಿಸಬೇಕು. ಹಾಗೆ ಬಂಧಿಸಿದ ಜನರು ದುರ್ಲಭರು.

ವಾಸಕ್ಕೆ ಸುಂದರ ಭವನಗಳೂ, ಗಾನ ನರ್ತನಗಳ ವ್ಯವಸ್ಥೆಯೂ, ಆನಂದವೀಯುವ ಪ್ರಾಣಕಾಂತೆಯರೂ ಇದ್ದರೂ ಕೂಡ ಮನಸ್ಸಿಗೆ ತೃಪ್ತಿ ಬಾರದು. ಪತಂಗದ ರೆಕ್ಕೆಯು ಬಡಿತದಿಂದ ನೊಂದುವ ಕಿರುದೀಪದಂತೆ ಈ ಭೋಗವಿಲಾಸಗಳ ಮಧ್ಯೆ ಆತ್ಮಸಾಕ್ಷಾತ್ಕಾರದ ಕಿರುದೀಪವು ನಂದಿ ಅಂಧಕಾರ ಕವಿದು ಮನುಷ್ಯನು ದಾರಿ ತಪ್ಪುವನು.

ತಿರು-ಕೊಚ್ಚಿಯಲ್ಲಿ ಪಂಚಾಯಿತ ರಾಜ್ಯ.

ಬರುವ ಸ್ವಾತಂತ್ರ್ಯ ದಿನದಿಂದ ತಿರುವಾಂಕೂರು- ಕೊಚ್ಚಿನ್‌ಗಳಲ್ಲಿ ಪ್ರತಿ ಗ್ರಾಮದಲ್ಲಿ ಪಂಚಾಯಿತ ರಾಜ್ಯ ಸ್ಥಾಪನೆಯಾಗುವದು. ಗ್ರಾಮ ಪಂಚಾಯಿತಗಳಲ್ಲಿರುವ ಕಮಿಟಿ ಪ್ರೆಸಿಡೆಂಟರ ಚುನಾವಣೆ ಈಗಾಗಲೇ ನಡೆಯುತ್ತಿದ್ದು ಆಗಸ್ಟ ೧೫ರೊಳಗೆ ಈ ಕೆಲಸ ಮುಗಿಯುವದೆಂದು ತಿಳಿದುಬಂದಿದೆ. ಅದರ ನಂತರ ಗ್ರಾಮ ಸಮಿತಿಯವರು ಭೂದಾನ ಯಜ್ಞ ಪ್ರಾರಂಭಿಸಲಿರುವರು. ಹಳ್ಳಿಯ ಜಗಳ, ಕಲಹ, ಕಚ್ಚಾಟ ಬಡಿದಾಟ ಮೊದಲಾದ ಅವಾಚ್ಯಗಳನ್ನು ಕ್ರಮಶಃ ಅವರು ವಹಿಸಿಕೊಳ್ಳಲಿರುವರು.

ಉಪವಾಸದ ಹೊಸ ದಾಖಲೆ

ಏಲ್ಲಿ ಸ್ಮೀಚ್ ಎಂಬ ೫೨ ವರ್ಷ ಪ್ರಾಯದ ಜರ್ಮನನು ಕಳೆದ ವಾರ ನಿರಶನ ವ್ರತದ ಹೊಸ ದಾಖಲೆಯನ್ನು ಸ್ಥಾಪಿಸಿದನು. ೮೦ ದಿನ ಹಗಲು ರಾತ್ರಿ ಆಹಾರವನ್ನು ಮುಟ್ಟದೆ ಒಂದು ಗಾಜಿನ ಪೆಟ್ಟಿಗೆಯಲ್ಲಿ ಅವನು ವಿರಮಿಸಿದನು. ಮೇ ೫ರಲ್ಲಿ ಆ ಪೆಟ್ಟಿಗೆಯಲ್ಲಿ ಆಶ್ರಯ ಹೊಂದಿದವನು ಜುಲೈ ೨೪ ರಲ್ಲಿ ಎದ್ದನು. ಏಳುವಾಗ ತೂಕದಲ್ಲಿ ೬೯ ರಾತ್ಲು ಕಡಿಮೆಯಾಗಿದ್ದನು. ಇಷ್ಟು ಅವಧಿಯಲ್ಲಿ ೩೦ ಬಾಟ್ಲಿಗಳಷ್ಟು ಖನಿಜ ಮಿಶ್ರ ಜಲಪಾನ ಮಾಡಿದ್ದನು. ೩,೫೦೦ ಸಿಗರೇಟುಗಳನ್ನೂ ಆ ಅವಧಿಯಲ್ಲಿ ಸೇದಿದ್ದನು!

೧೯೫೩–೫೪ರಲ್ಲಿ ೨೦೦ ಸಾಮೂಹಿಕ ವಿಕಾಸ ಕೇಂದ್ರಗಳು

ಕೇಂದ್ರ ಪ್ಲಾನಿಂಗ್ ಸಮಿತಿಯ ಪ್ರಕಟಣೆ.

ಹಿಂದೂದೇಶದ ಆಯೋಜನಾ ಸಮಿತಿಯು ೧೯೫೩–೫೪ರಲ್ಲಿ ಹಿಂದೂದೇಶದ ಉದ್ದಗಲಕ್ಕೂ ೨೦೦ ಸಾಮೂಹಿಕ ವಿಕಾಸ ಯೋಜನಾ ಕೇಂದ್ರಗಳನ್ನು ತೆರೆಯಲು ನಿಶ್ಚಯಿಸಿದೆ. ಅವುಗಳು ಹೀಗಿವೆ. ಅಸಾಮ್ ೧೩, ಬಿಹಾರ್ ೧೪, ಬೊಂಬಾಯಿ ೨೦, ಮಧ್ಯ ಪ್ರದೇಶ ೩೦, ಪಂಜಾಬ್ ೭, ಉತ್ತರ ಪ್ರದೇಶ ೩೭, ಹೈದರಾಬಾದ್ ೧೧ ಮೈಸೂರು ೭, ಪೆಪ್ಸು ೪, ರಾಜಸ್ಥಾನ ೧೦ ಸೌರಾಷ್ಟ್ರ ೩, ತಿರುವಾಂಕೂರು ಕೊಚಿನ್ ೩, ಅಜಮೀರ್ ೧, ಭೋಪಾಲ್ ೨, ಬಿಲಾಸಪುರ ೧, ಕೊಡಗು ೧, ಹಿಮಾಚಲ ಪ್ರದೇಶ ೪, ಕಚ್ ೧, ವಿಂಧ್ಯ ಪ್ರದೇಶ ೩. ಹೀಗೆ ೧೮೦. ಉಳಿದ ೨೦ ಬ್ಲಾಕ್‌ಗಳನ್ನು ಪಶ್ಚಿಮ ಬಂಗಾಳ, ಮದ್ರಾಸು, ಡೆಲ್ಲಿ, ತ್ರಿಪುರಗಳಲ್ಲಿ ತೆರೆಯಲಾಗುವುದು. ಈ ಪ್ರಾಂತಗಳಲ್ಲಿ ಎಲ್ಲಿ ತೆರೆಯುವದು, ಎಷ್ಟು ಸಂಖ್ಯೆ ಎಂಬೀ ವಿವರಗಳು ಬಾರದ್ದರಿಂದ ಇನ್ನೂ ನಿಶ್ಚಯವಾಗಿಲ್ಲ.

ಈ ೨೦೦ ಬ್ಲಾಕುಗಳಿಗೆ ಸುಮಾರು ೨೦ ಸಾವಿರ ಗ್ರಾಮಗಳೂ, ೧ ಕೋಟಿ ೩೨ ಲಕ್ಷ ಜನಸಂಖ್ಯೆಯೂ ಅಡಗುವುದು. ಈ ಬ್ಲಾಕುಗಳ ಕೆಲಸವು ಬರುವ ಅಕ್ಟೋಬರ್ ೨ರಿಂದ ಪ್ರಾರಂಭವಾಗುವುದು ಪ್ರತಿ ವರ್ಷ ಈ ರೀತಿಯ ಯೋಜನೆ ವಿಸ್ತರಿಸಲ್ಪಡುವದಲ್ಲದೆ ಪಂಚವಾರ್ಷಿಕ ಯೋಜನೆಯ ಐದು ವರ್ಷಗಳ ಅವಧಿಯಲ್ಲಿ ಹಿಂದೂದೇಶದ ನಾಲ್ಕರಲ್ಲಿ ಒಂದು ಭಾಗವನ್ನು ಆವರಿಸಬೇಕೆಂಬುದು ಆಕಾಂಕ್ಷೆಯಾಗಿದೆ.

ಕಳೆದ ಅಕ್ಟೋಬರ್ ೨ರಲ್ಲಿ ಪ್ರಥಮವಾಗಿ ೫೫ ಕೇಂದ್ರಗಳನ್ನು ತೆರೆಯಲಾಯಿತು. ನಂತರ ಪುನಃ ೫೫ ಕೇಂದ್ರಗಳಲ್ಲಿ ಕೆಲಸ ಪ್ರಾರಂಭಿಸಲಾಯಿತು. ಈ ಎರಡು ಪ್ರಯತ್ನದಿಂದಾಗಿ ಸುಮಾರು ೨೪ ಸಾವಿರ ಗ್ರಾಮಗಳೂ ೨೦ ಮಿಲಿಯ ಜನರೂ ಈ ಯೋಜನೆಯ ಅಡಿಯಲ್ಲಿ ಬಂದಂತಾಯಿತು.

ಈ ೨೦೦ ಬ್ಲಾಕುಗಳಿಗೆ ಮೂರು ವರ್ಷಕ್ಕೆ ೧೫ ಕೋಟಿ ಹಣ ವೆಚ್ಚವಾಗುವುದೆಂದು ಅಂದಾಜು ಮಾಡಲಾಗಿದೆ. ಪ್ರತಿ ಬ್ಲಾಕಿಗೂ ೭॥ ಲಕ್ಷ ರೂಪಾಯಿ ವೆಚ್ಚವಾಗುವುದು. ಈಗಿರುವ ಪಂಚವಾರ್ಷಿಕ ಯೋಜನೆ ಮೇರೆ ಈ ಐದು ವರ್ಷಗಳ ಅವಧಿಯಲ್ಲಿ ಹಿಂದೂದೇಶದಲ್ಲಿ ಒಟ್ಟು ೧,೨೦೦ ಕೇಂದ್ರಗಳನ್ನು ತೆರೆಯಲಾಗುವುದೆಂದೂ ಇವುಗಳಲ್ಲಿ ೭೦೦ ಕೇಂದ್ರಗಳು ಎಂದರೆ ಸುಮಾರು ೭೦ ಸಾವಿರ ಗ್ರಾಮಗಳು ಸಾರ್ವತ್ರಿಕ ಅಭಿವೃದ್ಧಿಯ ಸಾಮೂಹಿಕ ಕೇಂದ್ರಗಳಾಗುವವೆಂದೂ ಉಳಿದ ೫೦೦ ಅಥವಾ ೫೦ ಸಾವಿರ ಗ್ರಾಮಗಳು ರಾಷ್ಟ್ರೀಯ ವಿಸ್ತರಣಾ ಯೋಜನೆಯ ಕೇಂದ್ರಗಳಾಗಿ ಮೇಲಿನ ಕೇಂದ್ರಗಳಷ್ಟು ತತ್ಪರ ಕೆಲಸ ಇಲ್ಲಿ ನಡೆಯಲಾರದೆಂದೂ ಪ್ರಕಟವಾಗಿದೆ

ಸಮಾಜ ವಿಕಾಸಯೋಜನೆ ಮತ್ತು ಚಿಕಿತ್ಸಾ ಧೋರಣೆ.

ಲೇ:—ಡಾ. ಐ. ಆರ್. ಅಪ್ಪಣ.

ನವ್ಯ ಭವ್ಯ ಭಾರತವು ಉದಿಸಿ ಬರುವ ಯುಗದಲ್ಲಿ ನಾವು ಇಂದು ಇದ್ದೇವೆ. ನಾವು ಈ ನವೋದಯ ಪ್ರೇಕ್ಷಕರು ಮಾತ್ರವೇ ಅಲ್ಲ, ನಾವೇ ಈ ಮಹತ್ಕಾರ್ಯ ಸಾಧನೆಗಾಗಿ ಶ್ರಮಿಸಲಿರುವ ಸ್ವಯಂ ಸೇವಕರು. ಸರಕಾರವು ಹತ್ತು ಹಲವು ಯೋಜನೆಗಳನ್ನು ಜಾರಿಗೆ ತಂದಿದೆ. ಅದರಲ್ಲಿ ಸಮಾಜ ವಿಕಾಸ ಯೋಜನೆ ಒಂದು. ಇದು ಬಹುಕಾಲದಿಂದ ಶೋಷಣೆಗೆ ತುತ್ತಾಗಿ ಕಡೆಗಣಿಸಲ್ಪಟ್ಟ ಹಳ್ಳಿಗಳ ಉದ್ಧಾರಕ್ಕಾಗಿರುವ ಯೋಜನೆ. ಇದು ಇಂದು ನಿಃಸತ್ವವಾಗಿ ಬಡಕಲಾಗಿರುವ ಗ್ರಾಮಗಳಲ್ಲಿ ನವಚೈತನ್ಯವನ್ನು ತುಂಬಿ ತುಳುಕಿಸಲಿಕ್ಕಿರುವ ಕಾಯಕಲ್ಪ.

ಈ ಯೋಜನೆಯು ಬಹುಮುಖ ಉಳ್ಳದ್ದಿದೆ. ಅದರಲ್ಲಿ ಸರಕಾರವು ವಹಿಸುತ್ತಿರುವ ಚಿಕಿತ್ಸಾ ಧೋರಣೆಯ ವಿಷಯದಲ್ಲಿ ನನ್ನ ಪ್ರಾಂಜಲ ಮತವನ್ನು ಜನತೆಯ ಮುಂದಿಡುವದೇ ಈ ಲೇಖನದ ಉದ್ದೇಶ. ನಮ್ಮ ಜನ್ಮಭೂಮಿಯು ಪರರಾಷ್ಟ್ರದ ಸೆರಗು ಹಿಡಿದು ಜೀವಿಸುವ ರಾಷ್ಟ್ರವಾಗಿರದೆ ಜಗತ್ತಿನಲ್ಲಿ ಪ್ರಥಮ ಶ್ರೇಣಿಯ ರಾಷ್ಟ್ರವಾಗಿ ಬಾಳುವ ಭಾಗ್ಯವನ್ನು ಕಣ್ತುಂಬಾ ನೋಡಿ, ಮನತುಂಬಾ ಹಿಗ್ಗಿ, ಆತ್ಮತುಂಬಾ ಆನಂದಿಸುವ ಅತಿ ಆಕಾಂಕ್ಷೆ ಪ್ರತಿಯೊಬ್ಬ ಭಾರತೀಯನಿಗಿರುವದು ಸ್ವಾಭಾವಿಕ ಮತ್ತು ಸಹಜ. ಯಾಕೆಂದರೆ ಭಾರತವು ಚೀನಾವನ್ನು ಹೊರತು ಪ್ರಪಂಚದಲ್ಲೇ ಹಿರಿಯ ಸಂಸ್ಕೃತಿ ಉಳ್ಳದ್ದು. ಇತಿಹಾಸದಲ್ಲಿ ಎಷ್ಟೋ ನಾಗರೀಕತೆಗಳು ಮೂಡಿ ಬಂದವು, ಕೆಲಕಾಲ ಬೆಳಗಿದವು, ನಂದಿದವು ಸಹ. ಧರ್ಮವೇ ಜೀವಾಳವಾಗಿರುವ ಭಾರತೀಯ ಸಂಸ್ಕೃತಿಯೊಂದೇ ಬಹು ಪುರಾತನ ಕಾಲದಿಂದ ಇಂದೂ ಅಳಿಯದೆ ಉಳಿದಿದೆ. ಅದು ಕಾಂತಿ ಹೀನವಾಗಿರಬಹುದು ಆದಾಗೂ ಇಂದು ಜನಜೀವನದಲ್ಲಿ ಹಾಸುಹೊಕ್ಕಾಗಿದೆ. ಹಿರಿಯದಾಗಿ ತಾಯ್ನಾಡಿನ ಗರಿಮೆಯ ಸ್ಥಾನದ ಗಳಿಕೆಯ ಬಯಕೆಯು ಫಲಿಸಬೇಕಿದ್ದರೆ, ನಮ್ಮ ಸಂಸ್ಕೃತಿಯಲ್ಲಿ ಉತ್ಕೃಷ್ಟವಾದುದಕ್ಕೆ ಅಗ್ರಸ್ಥಾನವಲಿತ್ತು, ಇಂದಿನ ವಿಜ್ಞಾನ ಯುಗದ ಕೊಡುಗೆಯಲ್ಲಿ ಉತ್ಕೃಷ್ಟವಾದುದನ್ನು ಜೀರ್ಣಿಸಿ ಅರಗಿಸಿ ನಮ್ಮದನ್ನಾಗಿರುವ ನಮ್ಮ ಧೋರಣೆಯನ್ನು ದಿಟ್ಟತನವಾಗಿ ಒಪ್ಪಬೇಕು. ಈ ದೃಷ್ಟಿಯಿಂದ ವಿಮರ್ಶಿಸಿದರೆ ಸಮಾಜ ವಿಕಾಸ ಯೋಜನೆಯು ಎಷ್ಟು ಲೋಪದೋಷವುಳ್ಳದಾಗಿದೆಯೆಂಬುದು ಸ್ವಯಂ ವ್ಯಕ್ತವಾಗುವದು. ಈ ಯೋಜನೆಯನ್ವಯ ಕೇವಲ ಪಾಶ್ಚಾತ್ಯ (ಆಧುನಿಕ) ಚಿಕಿತ್ಸಾ ಸೌಕರ್ಯವನ್ನಷ್ಟೇ ಒದಗಿಸಲಾಗುವದು. ಇಷ್ಟರಲ್ಲಿಯೇ ಸರಕಾರವು ಕೃತಕೃತ್ಯತೆಯೇ? ಚಿರಕಾಲ ಬಾಳಿ ಬಂದಿರುವ ದೇಶೀಯ ವೈದ್ಯದ ಗೊಡವೆಯೇ ಇಲ್ಲ. ಆಧುನಿಕ ಚಿಕಿತ್ಸಾ ಪದ್ಧತಿಯು ವಿಜ್ಞಾನದ ತಳಹದಿಯಲ್ಲಿ ಕಟ್ಟಲ್ಪಟ್ಟಿರುವದೇನೋ ಹೌದು. ತುಲನಾತ್ಮಕ ದೃಷ್ಟಿಯಿಂದ ದೇಶೀಯ ವೈದ್ಯ ಪದ್ಧತಿ ಎಷ್ಟು ಮಹತ್ವ ಉಳ್ಳದಿದೆ ಎಂಬುದನ್ನು Bernard Phillips, M.A. Phd ಇವರು "Philosophy and Medicine" "ದರ್ಶನ ಶಾಸ್ತ್ರ ಮತ್ತು ಚಿಕಿತ್ಸಾ ಶಾಸ್ತ್ರ" ಎಂಬ ವಿಚಾರ ಪ್ರಚೋದಕ, ವಿಮರ್ಶಾತ್ಮಕ ಉಪನ್ಯಾಸದಲ್ಲಿ ಪ್ರತಿಪಾದಿಸುತ್ತಾ ಈ ರೀತಿ ತನ್ನ ಅಭಿಮತವನ್ನು ವ್ಯಕ್ತಪಡಿಸಿರುವರು. "An adequate system will not merely be a Science of Medicine. It will be an Ayurveda literally a wisdom of life. Its concern will be with persons and not simply with diseases .... A system of Medicine which would deal with man in his wholeness will be ever mindful of the multidimensionality of human life."

'ಸ್ವಯಂ ಪೂರ್ಣವಾದ ವೈದ್ಯಕೀಯ ಪದ್ಧತಿಯು ಕೇವಲ ಚಿಕಿತ್ಸಾ ಶಾಸ್ತ್ರವಿರದು. ಇದು ಆಯುರ್ವೇದವಿರುವದು. ಜೀವಿತದ ಮರ್ಮವನ್ನು ಅರುಹುವ ಶಾಸ್ತ್ರವಿರುವದು. ಇದು ರೋಗವನ್ನಷ್ಟೇ ಅಲ್ಲ, ರೋಗಿಯನ್ನು ತನ್ನ ಗಮನದಲ್ಲಿಟ್ಟಿರುವದು. ಮಾನವನನ್ನು ಪರಿಪೂರ್ಣತೆಯ ದೃಷ್ಟಿಯಿಂದ ನೋಡುವ ಈ ಚಿಕಿತ್ಸಾ ಪದ್ಧತಿಯು ಸದಾ ನಿರಂತರವೂ ಜೀವಿತದ ವಿವಿಧ ಸ್ವರೂಪದ ಜಿಜ್ಞಾಸೆ ಉಳ್ಳದ್ದಿರುವದು.

ಚರಕಾಚಾರ್ಯರು "ಸತ್ವಮಾತ್ಮಾ ಶರೀರಂಚ ತ್ರಯಮೇತತ್ ತ್ರಿದಂಡವತ್ ಲೋಕಸ್ತಿಷ್ಠತಿ ಸಂಯೋಗಾತ್ತತ್ರ ಸರ್ವಂ ಪ್ರತಿಷ್ಠಿತಂ" ಯಾವತ್ತು ಜಂಗಮಾತ್ಮಕ ಜಗತ್ತು ಮನಸ್ಸು ಆತ್ಮ ದೇಹ ಇವು ಮೂರರ ಸಂಯೋಗವೆಂದಿರುವರು.

ಸ್ವಾಸ್ಥ್ಯ ಸಂರಕ್ಷಣೆ, ಸ್ವಾಸ್ಥ್ಯ ಅರ್ಜನೆಯಲ್ಲಿ ರತವಾಗಿರುವ ಚಿಕಿತ್ಸಾ ಪದ್ಧತಿಯು, ಜೀವಿತವು ಈ ಮೂರರ ಸಂಯೋಗವೆಂಬುದನ್ನು ಮರೆಯಲಾಗದು. ಒಂದರ ವಿಕಾರ ಇನ್ನೊಂದರ ವಿಕಾರದ ಕಾರಣವಾಗುವದು. ಜೀವರಾಶಿಯ ಜೀವಿತವು ಕೇವಲ ಭೌತಿಕ ಶಕ್ತಿಗಳಾದ ಫಿಜಿಕ್ಸ್, ಕೆಮಿಸ್ಟ್ರಿಗಳ ಕೈಗೊಂಬೆ ಎಂಬ ತತ್ವದ ತಳಹದಿಯಲ್ಲಿ ಕಟ್ಟಲ್ಪಟ್ಟ ಆಧುನಿಕ ಚಿಕಿತ್ಸಾ ಪದ್ಧತಿಯ ಕಟ್ಟಡವು ಕುಸಿದು ಬೀಳುತ್ತಿದೆ. ಬದಲು ಚಿಕಿತ್ಸೆಯ ರೀತಿ ನೀತಿ (Psycho-somatic) ಶರೀರ ಮನೋದೋಷ ವೈಶಿಷ್ಟ್ಯಜ ವಾದವನ್ನು ಅಳವಡಿಸಿಕೊಳ್ಳುತ್ತ ರೂಪಾಂತರವನ್ನು ಹೊಂದುತಿದೆ. ಅನ್ನಮಯ ಪ್ರಪಂಚದಿಂದ ಆನಂದಮಯ ಪ್ರಪಂಚದತ್ತ ಹೆಜ್ಜೆಯಿಡುತ್ತಿದೆ. ಆಯುರ್ವೇದದ ಮತದತ್ತ ಧಾವಿಸುತ್ತಿದೆ. ಮಾತ್ರವಲ್ಲದೆ ಹೆಚ್ಚು ಕಡಿಮೆ ಎಲ್ಲಾ ರಾಜ್ಯ ಸರಕಾರಗಳೂ, ಕೇಂದ್ರ ಸರಕಾರವೂ ಆಗಿಂದಾಗ್ಗೆ ಅನೇಕ ಕಮಿಟಿಗಳನ್ನು ರಚಿಸಿದ್ದವು. ಇವು ಯಾವವೂ ದೇಶೀಯ ವೈದ್ಯಪದ್ಧತಿಯಲ್ಲೇನೂ ಹುರುಳಿಲ್ಲವೆಂದು ಸಾರಿಲ್ಲ. ಹಾಗಿರುವಲ್ಲಿ ಈ ಔದಾಸೀನ್ಯ ಮಲತಾಯಿ ಧೋರಣೆ ಏಕೆ? ಅಮೂಲ್ಯ ಪರಂಪರೆಯುಳ್ಳೊಂದಾದ ಈ ಉಪವೇದವನ್ನು ನಷ್ಟವಾಗಗೊಡುವದೇ?

ಆಧುನಿಕ ಚಿಕಿತ್ಸಾ ಪದ್ಧತಿಯನ್ನು ತೆಗಳುವ ಮತ್ತು ಚಿಕ್ಕದನ್ನಾಗಿಸುವದಲ್ಲ ನನ್ನ ಧ್ಯೇಯ. ಚಿಕ್ಕದಾಗಿ ಪರಿಗಣಿಸಲ್ಪಟ್ಟಿರುವದರಲ್ಲಿ ಹುದುಗಿರುವ ಹೆಚ್ಚುಗಾರಿಕೆಯನ್ನು ಬಯಲು ಮಾಡುವದೇ ನನ್ನ ಲೇಖನಿಯ ಸೆಣಸಾಟ. ಆಯುರ್ವೇದದಲ್ಲಿ ಉತ್ಕೃಷ್ಟವಾದುದರ ಮತ್ತು ಆಧುನಿಕ ಚಿಕಿತ್ಸಾ ಪದ್ಧತಿಯಲ್ಲಿ ಉತ್ಕೃಷ್ಟವಾದುದರ ಎರಕದಿಂದ ರಾಷ್ಟ್ರೀಯ ಚಿಕಿತ್ಸಾಪದ್ಧತಿಯ ಹೊಸ ಸೃಷ್ಟಿಗಾಗಿ ದುಡಿಯಬೇಕೆಂಬುದೇ ನನ್ನ ವಾದದ ತಿರುಳು. ಅದಕ್ಕಾಗಿ ಈ ಯೋಜನೆಯಲ್ಲಿ ದೇಶೀಯ ಚಿಕಿತ್ಸಾ ಪದ್ಧತಿಯ ಔಷಧೋಪಚಾರದ ಸೌಕರ್ಯವನ್ನೂ ಕಲ್ಪಿಸಬೇಕಾಗಿ ಮಾನ್ಯ ಸರಕಾರವನ್ನು ಬೇಡಿಕೊಳ್ಳುತ್ತೇನೆ.

ವಿಮಾನಗಳ ರಾಷ್ಟ್ರೀಕರಣ ಸಮಾರಂಭ.

— ಪಂಡಿತ ನೆಹರೂ ರವರ ಹೇಳಿಕೆ —

ಭಾರತದಲ್ಲಿ ವಿಮಾನ ಪ್ರಯಾಣ ವ್ಯವಸ್ಥೆಯನ್ನು ಆಗಸ್ಟ್ ಒಂದರಿಂದ ರಾಷ್ಟ್ರೀಕರಣ ಮಾಡಲಾಯಿತು.

ದೆಹಲಿಯ ಹತ್ತಿರದ ಸಫ್ದರ್‌ಜಂಗ್ ವಿಮಾನ ನಿಲ್ದಾಣದಲ್ಲಿ ಈ ಸಂಬಂಧವಾಗಿ ವಿಶೇಷ ಸಮಾರಂಭ ನಡೆದು ಎರಡು ಪ್ರಥಮ ಹಾರಾಟಗಳನ್ನು ಪ್ರಧಾನ ಮಂತ್ರಿ ಪಂಡಿತ್ ನೆಹ್ರೂರವರು ಪ್ರಾರಂಭಿಸಿದರು. ನೆಹರೂರವರು ಗುಂಡಿಯನ್ನೊತ್ತಿದಾಗ ವಿಮಾನಗಳ ಮೇಲಿನ ನೀಲಿಯ ಮುಸುಕು ತೆರೆದು 'ಇಂಡಿಯನ್ ಏರ್ ಲೈನ್ಸ್' ಎಂಬ ಹೆಸರು ಕಂಗೊಳಿಸಲಾರಂಭವಾಯಿತು. ವಿಮಾನಗಳ ಮೇಲಿನ ನೂತನ ಸಂಕೇತಗಳು ಗೋಚರವಾದವು. ನೆಹ್ರೂರವರು ಹಾರಾಟಕ್ಕೆ ಕಳಿಸಿದ ಎರಡು ವಿಮಾನಗಳಲ್ಲಿ ಸ್ಕೈಕಿಂಗ್ ವಿಮಾನ ಕರಾಚಿಗೂ, ಡಕೋಟಾ ವಿಮಾನ ಶ್ರೀನಗರಕ್ಕೂ ತೆರಳಿದವು.

ವಿಮಾನ ಕೈಗಾರಿಕೆಯ ಅಭಿವೃದ್ಧಿ ಸಾಧನೆಗಾಗಿ ಭಾರತದಲ್ಲಿ ಖಾಸಗಿ ಉದ್ಯಮಿಗಳು ಸಲ್ಲಿಸಿರುವ ಸೇವೆಯನ್ನು ಪಂ। ನೆಹ್ರೂರವರು ಕೃತಜ್ಞತೆಯಿಂದ ಸ್ಮರಿಸಿ ಪ್ರಶಂಸೆ ಸಲ್ಲಿಸಿದರು. ಮುಖ್ಯವಾಗಿ ಟಾಟಾ ಕಂಪೆನಿಯವರೂ, ಇಂಡಿಯನ್ ನ್ಯಾಷನಲ್ ಏರ್‌ವೇಸ್‌ನವರೂ ಭಾರತದಲ್ಲಿ ವಿಮಾನ ಸಂಚಾರ ವ್ಯವಸ್ಥೆಯ ಅಡಿಪಾಯವನ್ನು ಹಾಕಿದರೆಂದೂ, ಈ ಶಿಶು ಈಗ ಬೇರೊಂದು ಮನೆಗೆ ಚಲಿಸಬೇಕಾಗಿದೆಯೆಂದೂ, ಅಲ್ಲಿ ಅದು ಚೆನ್ನಾಗಿ ಬೆಳೆಯುವುದರಲ್ಲಿ ಸಂಶಯವಿಲ್ಲವೆಂದೂ ನೆಹ್ರೂ ನುಡಿದರು.

'ನಾವು ಭಾರತದಲ್ಲಿ ಭಾರಿಭಾರೀ ಕೆಲಸಗಳನ್ನು ಪರಸ್ಪರ ತಿಳುವಳಿಕೆಯಿಂದಲೂ ಸಂಧಾನಗಳಿಂದಲೂ ಸಾಧಿಸಬಹುದೆಂಬುದು ಇದೀಗ ಶತಃಸಿದ್ಧವಾಗಿದೆ. ನಮಗೆ ಸ್ವಾತಂತ್ರ್ಯವೇ ಶಾಂತಿಯುತ ಮಾರ್ಗಗಳಿಂದ ಬಂದಿತು. ಇನ್ನು ಸಣ್ಣ ಪುಟ್ಟ ಕೆಲಸಗಳನ್ನಂತೂ ನಾವು ಖಂಡಿತವಾಗಿಯೂ ಇದೇ ರೀತಿಯಲ್ಲೇ ಸಾಧಿಸಬಹುದು' ಎಂಬುದಾಗಿ ನೆಹ್ರೂ ನುಡಿದರು.

ಈ ಕೈಗಾರಿಕೆಯ ಮೇಲೆ ಪಿತೃಸಹಜ ವಾತ್ಸಲ್ಯವನ್ನಿಟ್ಟು ಬೆಳೆಸಿದವರಿಗೆ ಅದನ್ನು ಬಿಟ್ಟು ಕೊಡುವಾಗ ಎಷ್ಟೊಂದು ದುಃಖವಾಗುವುದೆಂಬುದು ತಮಗೆ ಗೊತ್ತೆಂದೂ, ಆದರೆ ಮಗು ಯೌವನಕ್ಕೆ ಬಂದ ಮೇಲೆ ಅದು ತನ್ನ ಶಕ್ತಿಯ ಮೇಲೇ ತಾನು ನಿಲ್ಲಬೇಕಾಗುವುದೆಂದೂ, ತನ್ನ ಜೀವನದ ಬೆಳವಣಿಗೆಯಾಗಬೇಕಾದಂತಹ ವಿಶಾಲ ಅವಕಾಶ ಕ್ಷೇತ್ರಗಳಿರುವ ಬೇರೊಂದೆಡೆಗೆ ಪ್ರವೇಶಿಸಬೇಕಾಗುವುದೆಂದೂ ನೆಹ್ರೂ ನುಡಿದರು.

ಖಾಸಗಿ ಉದ್ಯಮವಾಗಿದ್ದಾಗ ಹಿಂದೆ ಈ ಕೈಗಾರಿಕೆಗೆ ಸೇವೆ ಸಲ್ಲಿಸಿದ ನೌಕರರುಗಳೂ, ಟೆಕ್ನೀಷಿಯನ್ನುಗಳೂ ಮುಂದೆಯೂ ಇದರ ಜವಾಬ್ದಾರಿಯನ್ನು ಮುಂದುವರಿಸುವರೆಂದೂ, ರಾಷ್ಟ್ರೀಕೃತ ಕೈಗಾರಿಕೆಯು ನಿಸ್ಸಂದೇಹವಾಗಿ ಅಭಿವೃದ್ಧಿಹೊಂದುವುದರಿಂದ ಅವರೂ ಅಭಿವೃದ್ಧಿ ಹೊಂದುವುದರಲ್ಲಿ ಸಂಶಯವಿಲ್ಲವೆಂದೂ ನೆಹ್ರೂ ಒತ್ತಿ ನುಡಿದರು.

'ಕಳೆದ ಐದಾರು ವರ್ಷಗಳಲ್ಲಿ ಭಾರತದಲ್ಲಿ ನನ್ನಷ್ಟು ಬಾರಿ ಮತ್ತಾರೂ ವಿಮಾನದಲ್ಲಿ ಸಂಚರಿಸಿರುವವರು ಹೆಚ್ಚು ಮಂದಿ ಇರಲಾರರು. ಆದ್ದರಿಂದ ನನಗೆ ಈ ಕೈಗಾರಿಕೆಯಲ್ಲಿ ತುಂಬಾ ಆಸಕ್ತಿ ಉಂಟಾಗಿದೆ. ಎಳೆಯ ಮಗು ಆಗಿದ್ದಾಗಿನಿಂದಲೂ ನನಗೆ ವಿಮಾನ ಹಾರಾಟವೆಂದರೆ ಆಸೆ. ಈಗಿನ ಯುಗದಲ್ಲಿ ವಿಮಾನ ಸಂಚಾರಕ್ಕೆ ಬಹಳ ಪ್ರಾಶಸ್ತ್ಯವಿದೆ. ಒಂದು ರಾಷ್ಟ್ರದ ಪ್ರಗತಿಯನ್ನು ಅಳೆಯಬೇಕಾದರೆ ಅದು ವಿಮಾನ ಸಂಚಾರ ವ್ಯವಸ್ಥೆಯಲ್ಲಿ ಎಷ್ಟು ಮುನ್ನಡೆದಿದೆಯೆಂಬುದರ ಆಧಾರದ ಮೇಲೆ ನಿರ್ಣಯಿಸಬಹುದಾಗಿದೆ. ಈ ಅಳತೆಯಿಂದ ನೋಡಿದರೆ ಭಾರತವು ಜಗತ್ತಿನ ಪ್ರಗತಿಪರ ರಾಷ್ಟ್ರಗಳಲ್ಲಿ ಒಂದಾಗಿದೆ

ಯೆಂದು ಅನುಮಾನವಿಲ್ಲದೆ ಹೇಳಬಹುದು' ಎಂದು ನೆಹ್ರೂ ನುಡಿದರು.

೨೧ ವರ್ಷಗಳ ಹಿಂದೆ ಶ್ರೀ. ಟಾಟಾರವರು ಅಲಹಾಬಾದಿಗೆ ಸಣ್ಣ ವಿಮಾನವೊಂದರಲ್ಲಿ ಬಂದು ತಮ್ಮನ್ನು ಭೇಟಿ ಮಾಡಿದರೆಂದೂ, ಆಗಿನಿಂದಲೇ ತಮಗೆ ವಿಮಾನ ಸಂಚಾರ ವ್ಯವಸ್ಥೆಯಲ್ಲಿರುವ ಪ್ರಗತಿ ಸಾಧ್ಯತೆಗಳ ಬಗ್ಗೆ ತುಂಬಾ ನಂಬಿಕೆಯುಂಟಾಯಿತೆಂದೂ, ಎರಡೇ ವರ್ಷಗಳ ನಂತರ 'ಇಂಡಿಯನ್ ನ್ಯಾಷನಲ್ ಏರ್‌ವೇಸ್' ಪ್ರಾರಂಭವಾಯಿಯೆಂದೂ, ಹೀಗೆ ಟಾಟಾರವರೂ ಇಂಡಿಯನ್ ನ್ಯಾಷನಲ್ ಏರ್‌ವೇಸ್‌ನವರೂ ಕೈಗಾರಿಕೆಯ ಅಡಿಪಾಯ ಹಾಕಿದರೆಂದೂ ನೆಹ್ರೂ ಉಲ್ಲೇಖಿಸಿದರು.

'ಈ ದಿನ ನಾವು ಹೊಸ ಕೆಲಸವೇನನ್ನೂ ಮಾಡುತ್ತಿಲ್ಲ. ಈ ಕೈಗಾರಿಕೆಯ ಮೊದಲಿಗರು ಪ್ರಾರಂಭಿಸಿದ ಕೆಲಸವನ್ನೆ ಮುಂದುವರಿಸುತ್ತಿದ್ದೇವೆ, ಜತೆಗೆ ಅವರು ಕಟ್ಟಿದ ರಚನೆಗೆ ಪುಷ್ಟ ಸ್ವರೂಪವನ್ನು ಕೊಡುತ್ತಿದ್ದೇವೆ ಅಷ್ಟೆ. ಈ ಸಂದರ್ಭದಲ್ಲಿ ಆ ಮೊದಲಿಗರನ್ನು ನಾನು ಮನಸಾರೆ ವಂದಿಸುತ್ತೇನೆ' ಎಂಬುದಾಗಿ ನೆಹ್ರೂ ಹೇಳಿದರು.

ಹಿಂದೆ ಗಳಿಸಿದ ಪ್ರಗತಿ ತೃಪ್ತಿಕರವಾಗಿದೆಯಾದರೂ ತಮಗೆ ಗತಕಾಲಕ್ಕಿಂತ ಭವಿಷ್ಯದಲ್ಲಿ ತುಂಬಾ ಆಸಕ್ತಿಯೆಂದೂ, ಭಾರತೀಯರಲ್ಲಿ ಎಷ್ಟೇ ದೌರ್ಬಲ್ಯವಿರಲಿ ಅವರು ಭಾರೀ ಕೆಲಸಗಳನ್ನು ಕೈಗೊಳ್ಳುವುದರಲ್ಲಿ ಸಾಮರ್ಥ್ಯ ಉಳ್ಳವರೆಂಬ ನಂಬಿಕೆ ತಮಗಿದೆಯೆಂದೂ ನೆಹ್ರೂ ಸ್ಪಷ್ಟಪಡಿಸಿದರು.

'ಹಳೆಯ ಕಾಲದ ಜನರಿಗೆ ಯಾವುದೇ ಕೆಲಸ ಮಾಡಬೇಕಾದರೂ ಭಾರಿ ಶಬ್ದ ಮಾಡಬೇಕೆಂಬ ಭಾವನೆ ಇದೆ. ಈಗಲೂ ಕೂಡ ಅನೇಕರಿಗೆ ಶಬ್ದ ಮತ್ತು ಉದ್ರೇಕದಲ್ಲಿಯೇ ನಂಬಿಕೆ. ಆದರೆ ವಿಮಾನ ರಾಷ್ಟ್ರೀಕರಣದ ಈ ಮಹಾ ಕಾರ್ಯವನ್ನು ನಾವು ಹೆಚ್ಚಿಗೆ ಶಬ್ದ ಅಥವಾ ಆಡಂಬರವಿಲ್ಲದೆ ಸಾಧಿಸಲು ಸಾಧ್ಯವಾಗಿರುವುದಕ್ಕಾಗಿ ತುಂಬಾ ಹರ್ಷಿಸುತ್ತೇವೆ' ಎಂದೂ ನೆಹ್ರೂ ನುಡಿದರು.

ಕಮ್ಯೂನಿಕೇಷನ್ಸ್ ಮಂತ್ರಿ ಶ್ರೀ ಜಗಜೀವನರಾಂರವರೂ, ಇಂಡಿಯನ್ ಏರ್‌ಲೈನ್ಸ್ ಕಾರ್ಪೊರೇಷನ್ನಿನ ಅಧ್ಯಕ್ಷ ಶ್ರೀ. ಬಿ. ಸಿ. ಮುಖರ್ಜಿಯವರೂ ಭಾಷಣಗಳನ್ನು ಮಾಡಿ ನೂತನ ವ್ಯವಸ್ಥೆಯ ವಿವರಗಳನ್ನು ತಿಳಿಸಿದರು. "ಚೇತನಾ"

ಮಕ್ಕಳ ಪುಟ

ವಿಚಾರವಿಲ್ಲದ ಪಿಶಾಚಿ.

ಒಂದು ದೇಶದಲ್ಲಿ ಒಬ್ಬ ಅರಸನಿದ್ದನು. ಆತನ ಹೆಸರು ಉತ್ತಮಸೇನನೆಂದು. ಆತನಿಗೆ ಮುಕ್ತಾ ಎಂಬ ಹೆಸರಿನ ಮಗಳಿದ್ದಳು. ಆಕೆಯು ಸೌಂದರ್ಯದ ಮೂವತ್ತೆರಡು ಲಕ್ಷಣಗಳಿಂದ ಕೂಡಿದ ಅಪ್ಸರೆಯಂತಿದ್ದಳು. ಈಕೆಯನ್ನು ಅಪಹರಿಸಬೇಕೆಂದು ಪಿಶಾಚಿಯೊಂದು ಕೆಲವು ದಿನಗಳಿಂದ ಪ್ರಯತ್ನಿಸುತಿತ್ತು. ಏಕೆಂದರೆ ಪಿಶಾಚಿಯೂ ಕೂಡ ಆಕೆಯ ಸೌಂದರ್ಯಕ್ಕೆ ಮರುಳಾಗಿ ಹೋಗಿತ್ತು. ಆದ್ದರಿಂದ ಪ್ರತಿದಿನ ಸಾಯಂಕಾಲ ಪಿಶಾಚಿಯು ಬಂದು ಆಕೆಯನ್ನು ಸಿಕ್ಕಿ ಸಿಕ್ಕಿದ ಹಾಗೆ ಬಯ್ಯುತಿತ್ತು. ಆದರೆ ಆಕೆಯು ಪಿಶಾಚಿಯ ಬಯ್ಯುವಿಕೆಯಿಂದ ಸಿಟ್ಟುಗೊಂಡು ಹೊರಗೆ ಬಾರದ ಕಾರಣ ಆಕೆಯನ್ನು ಎತ್ತಿಕೊಂಡು ಹೋಗುವದು ಪಿಶಾಚಿಗೆ ಅಸಾಧ್ಯವಾಗಿತ್ತು. ಏಕೆಂದರೆ ಆಕೆಯು ತನ್ನ ಮಂತ್ರದ ಬಲದಿಂದ ತನ್ನ ಸುತ್ತಲೂ ಒಂದು ಯಕ್ಷಿಣಿ ವೃತ್ತವನ್ನು ರಚಿಸಿಕೊಳ್ಳುತಿದ್ದುದರಿಂದ ಆ ವೃತ್ತದೊಳಗೆ ಪ್ರವೇಶಿಸುವುದು ಯಾರಿಗೂ ಸಾಧ್ಯವಾಗುತ್ತಿರಲಿಲ್ಲ.

ಹೀಗಿರುತ್ತ ಒಂದು ದಿನ ಪಿಶಾಚಿಯು ರಾಜಕುಮಾರಿ ಇದ್ದ ಕೋಣೆಯ ಒಂದು ಮೂಲೆಯಲ್ಲಿ ನಿಂತು ರಾಜಕುಮಾರಿಗೆ ಕಾಣಿಸಿಕೊಂಡಿತು. ಆಗ ರಾಜಕುಮಾರಿಯು ತನ್ನ ಗೆಳತಿಯೊಬ್ಬಳನ್ನು ಕರೆದು "ನೋಡು ಪ್ರಿಯಳೇ, ಅದೊಂದು ಪಿಶಾಚಿಯು ಪ್ರತಿ ದಿನ ಮುಂಬೆಳಕಿನ ಸಮಯಕ್ಕೆ ನನ್ನ ಹತ್ತಿರ ಬಂದು ನನಗೆ ಇಲ್ಲದ ತೊಂದರೆ ಮಾಡುತ್ತದೆ. ಅದನ್ನು ಬಾರದಂತೆ ದೂರ ಸರಿಸಲು ಉಪಾಯ ಏನಾದರೂ ಇದೆಯೇ?" ಎಂದು ಕೇಳಿದಳು.

ಈ ಮಾತುಗಳನ್ನು ಕೇಳಿದ ಈರ್ಷೆಯಿಂದ ಕೂಡಿದ ವಿಳಿಗೇಡಿ ಪಿಶಾಚಿಯು "ಓಹೋ, ನಾನೊಬ್ಬನೇ ಇಲ್ಲಿಗೆ ಬರುವದಿಲ್ಲ; ಬೇರೆ ಯಾರೋ ಈಕೆಯಲ್ಲಿಗೆ ಬರುತ್ತಾರೆ. ಆತನ ಹೆಸರು ಮುಂಬೆಳಕೆಂದು. ಆತನೂ ಈಕೆಯನ್ನು ತೆಗೆದುಕೊಂಡು ಹೋಗಲು ಯತ್ನಿಸುತ್ತಿರಬೇಕು. ಆತನು ಹೇಗಿರುವನೋ ತಿಳಿಯದು. ಹೇಗೂ ನಾನು ಕುದುರೆಯೊಂದರ ರೂಪನ್ನು ಧರಿಸಿ ಕೊಟ್ಟಿಗೆಯಲ್ಲಿ ನಿಂತು ನೋಡುತ್ತಿರುವೆನು. ಆ ಮುಂಬೆಳಕು ಎಷ್ಟು ಹೊತ್ತಿಗೆ ಬರುವನು? ಅವನು ಹೇಗಿರುವನು? ಆತನಿಗೆ ಶಕ್ತಿ ಎಷ್ಟಿರುವುದೆಂದು ತಿಳಿದುಕೊಳ್ಳುವೆನು" ಎಂದು ಆಲೋಚಿಸಿ ಕುದುರೆಯ ರೂಪನ್ನು ತಾಳಿ ಹತ್ತಿರದಲ್ಲಿದ್ದ ಕೊಟ್ಟಿಗೆಯಲ್ಲಿ ನಿಂತಿತು.

ಸ್ವಲ್ಪ ಸಮಯದ ನಂತರ ಕಗ್ಗತ್ತಲಿನಲ್ಲಿ ಕೊಟ್ಟಿಗೆಗೆ ಕುದುರೆ ಕಳ್ಳನೊಬ್ಬನು ಬಂದನು. ಆತನು ಕುದುರೆಗಳನ್ನು ಪರಿಶೀಲಿಸಿ ಕುದುರೆಯ ರೂಪು ತಾಳಿದ ಪಿಶಾಚಿಯೇ ಅತೀ ಉತ್ತಮವಾದುದೆಂದು ಕಂಡು ಬಂದುದರಿಂದ ಅದರ ಬಾಯಿಗೆ ಕಡಿವಾಣ ಹಾಕಿ ಅದನ್ನು ಹತ್ತಿ ಹೊರಗೆ ಹೊರಟನು. ತನ್ನ ಬೆನ್ನು ಹತ್ತಿ ಹೊರಟವನನ್ನು ನೆನೆದು ಪಿಶಾಚಿಯು, "ಮುಂಬೆಳಕು ಎನ್ನುವವನು ಇವನೇ ಇರಬೇಕು. ಆತನು ನನ್ನನ್ನು ಕೆಟ್ಟ ಪ್ರಾಣಿಯೆಂದು ತಿಳಿದುಕೊಂಡಿರಬೇಕು. ಆದ್ದರಿಂದಲೇ ಇಷ್ಟೊಂದು ಕುದುರೆಗಳ ಮಧ್ಯದಿಂದ ನನ್ನನ್ನೇ ಹೆಕ್ಕಿಕೊಂಡಿರುವನು. ಬಹುಶಃ ನನ್ನನ್ನು ದೂರ ತೆಗೆದುಕೊಂಡು ಹೋಗಿ ಆತನು ಕೊಂದು ಹಾಕಬಹುದು. ನಾನೇನ ಮಾಡಲಿ?" ಎಂದು ಆಲೋಚಿಸತೊಡಗಿತು.

ಹೀಗೆ ಆಲೋಚಿಸುತ್ತಿರುವಾಗ ಕುದುರೆ ಕಳ್ಳನು ಕುದುರೆಗೆ ಚಡಿ ಏಟೊಂದನ್ನು ಕೊಟ್ಟನು. ಇದರಿಂದ ಗಾಬರಿಗೊಂಡ ಪಿಶಾಚಿಯು ವೇಗವಾಗಿ ಓಡತೊಡಗಿತು. ಕುದುರೆ ಕಳ್ಳನು ಈ ರೀತಿ ಕೆಲವು ದೂರ ಪ್ರಯಾಣ ಮಾಡಿ ಕುದುರೆಯನ್ನು ನಿಲ್ಲಿಸಲು ಕಡಿವಾಣ ಹಿಡಿದು ಜಗ್ಗಿದನು. ಆದರೆ ಕುದುರೆ ನಿಲ್ಲಲಿಲ್ಲ. ಆತನಿಗೆ ಗಾಬರಿಯಾಯಿತು. "ಇದು ಕುದುರೆಯಾಗಿದ್ದರೆ ಕಡಿವಾಣ ಹಿಡಿದು ಎಳೆಯುವಾಗ ನಿಲ್ಲಬೇಕಿತ್ತು. ಬದಲು ತನ್ನ ವೇಗವನ್ನು ಹೆಚ್ಚಿಸುತ್ತಿದೆ. ಕುದುರೆಗಳು ಹಾಗೆ ಓಡುವುದಿಲ್ಲ. ಇದು ಕುದುರೆಯ ರೂಪದಲ್ಲಿರುವ ಪಿಶಾಚಿ ಇರಬೇಕು. ಆದ್ದರಿಂದ ತುಂಬಾ ಹುಲ್ಲು ಯಾ ಮರಳು ಇರುವ ಸ್ಥಳ ಕಂಡಲ್ಲಿ ಕುದುರೆಯಿಂದ ಕೆಳಗೆ ಹಾರಿಬಿಡುವದೇ ನನಗೆ ಉಚಿತ. ಇಲ್ಲದಿದ್ದರೆ ನನ್ನ ಜೀವಕ್ಕೆ ಅಪಾಯ ಬರುವದು ಖಂಡಿತ" ಎಂದು ಆತನು ಆಲೋಚಿಸಿದನು.

ಈ ರೀತಿ ಆಲೋಚಿಸುತ್ತ, ತನ್ನ ಪ್ರಿಯ ದೇವತೆಯ ಹೆಸರು ಜಪಿಸುತ್ತಿರಲು ಕುದುರೆಯು ಆಲದ ಮರವೊಂದರ ಕೆಳಗಡೆಗಾಗಿ ಓಡತೊಡಗಿತು. ಆಲದ ಮರದ ಕೊಂಬೆಗಳು ಕೆಳಗೆ ಬಾಗಿದ್ದವು. ಕಳ್ಳನು ಒಂದು ಕೊಂಬೆಯನ್ನು ಹಿಡಿದು ಮರ ಹತ್ತಿಕೊಂಡನು. ಕುದುರೆಯು ಮುಂದೆ ಓಡಿಹೋಯಿತು. ಈ ರೀತಿ ಭೀತಿಯಿಂದ ಗತಪ್ರಾಣರಾಗಿದ್ದ ಕಳ್ಳನೂ, ಪಿಶಾಚಿಯೂ ಬೇರೆ ಬೇರೆಯಾದರು. ಇಬ್ಬರಿಗೂ ತುಂಬಾ ಸಂತೋಷವಾಯಿತು.

ಕಳ್ಳನು ಹತ್ತಿದ ಆಲದ ಮರದಲ್ಲಿ ಒಂದು ಮಂಗನು ವಾಸ ಮಾಡಿಕೊಂಡಿತ್ತು. ಆ ಮಂಗನು ಪಿಶಾಚಿಯ ಪರಮ ಮಿತ್ರನಾಗಿತ್ತು. ಓಡಿಹೋಗುತ್ತಿದ್ದ ಪಿಶಾಚಿಯನ್ನು ಕರೆದು, 'ಗೆಳೆಯಾ, ಎಲ್ಲಿಗೆ ಓಡುತ್ತಿರುವೆ. ಕೇವಲ ಕಲ್ಪಿತ ಭಯಕ್ಕಾಗಿ ತಲೆ ಕೆಡಿಸಿಕೊಂಡು ಓಡಬಾರದು. ನಿನ್ನ ಮೇಲೆ ಹತ್ತಿ ಈ ವರೆಗೆ ಬಂದವನು ನಿನ್ನ ಸ್ವಾಭಾವಿಕ ಆಹಾರವಾದ ಮನುಷ್ಯನು. ಆದ್ದರಿಂದ ಭಯಗೊಳ್ಳದೆ ಆತನನ್ನು ತಿಂದು ಹಾಕು' ಎಂದಿತು.

ಇದನ್ನು ಕೇಳಿ ಪಿಶಾಚಿಯು ಕುದುರೆಯ ರೂಪವನ್ನು ಬಿಟ್ಟು ತನ್ನ ನಿಜರೂಪವನ್ನು ಧರಿಸಿ ಹಿಂದಕ್ಕೆ ಮರದಡಿಗೆ ಬಂತು. ಇದನ್ನು ನೋಡಿ ಮನುಷ್ಯನಿಗೆ ಗಾಬರಿಯಾಯಿತು. ಮರದ ಮೇಲಿನ ಮಂಗನು ಅದನ್ನು ಕರೆದು ಹಿಂದಕ್ಕೆ ಬರುವಂತೆ ಮಾಡಿದುದರಿಂದ ಆತನಿಗೆ ಮಂಗನ ಮೇಲೆ ವಿಪರೀತ ಸಿಟ್ಟು ಬಂತು. ಮಂಗನು ಮೇಲಿನ ಕೊಂಬೆಯೊಂದರಲ್ಲಿ ಕುಳಿತು ತನ್ನ ಬಾಲವನ್ನು ಕೆಳಗೆ ಬಿಟ್ಟಿತ್ತು. ಕಳ್ಳನು ಸಿಟ್ಟಿನಿಂದ ಆ ಬಾಲವನ್ನು ಬಲವಾಗಿ ಕಚ್ಚಿ ಹಿಡಿದನು. ಇದರಿಂದ ಮಂಗನಿಗೆ ವಿಪರೀತ ನೋವಾಯಿತು. ಅದರ ಬಾಯಿಂದ ಮಾತು ಹೊರಡದಾಯಿತು. ಕಣ್ಣುಗಳು ಮಿಟಮಿಟ ನೋಡುತ್ತಾ ಕಂಬನಿ ಸುರಿಸತೊಡಗಿದವು. ಈ ಸ್ಥಿತಿಯನ್ನು ಪಿಶಾಚಿಯು ಕಂಡು 'ನಿನ್ನ ಮುಖದ ಮೇಲಿನ ಭಾವನೆಯಿಂದ ಹೇಳುವದಾದರೆ ಮುಂಬೆಳಕು ನಿನ್ನನ್ನು ಕೊಲ್ಲುತ್ತಿರುವನೆಂಬುದು ಗೊತ್ತಾಗುತ್ತದೆ. ಆದ್ದರಿಂದ ಯಾರು ತಲೆ ಮರೆಸಿ ಓಡುವರೋ ಅವರೇ ಜೀವಿಸುವರು' ಎಂದು ಹೇಳಿ ಓಡಿಹೋಯಿತು.

ಆದ್ದರಿಂದ 'ನನಗೆ ಮನೆಗೆ ಹೋಗಬೇಕಾಗಿದೆ. ದಯವಿಟ್ಟು ಹೋಗಗೊಡು. ನೀನು ಇಷ್ಟಿದ್ದು ನನ್ನ ಬುದ್ಧಿವಾದ ತೆಗೆಯದ ಕಾರಣ ದೊರೆತ ಶಿಕ್ಷೆಯನ್ನನುಭವಿಸುತ್ತಿರು' ಎಂದು ಚಿನ್ನ ದೊರೆತ ಬ್ರಾಹ್ಮಣನು ಹೇಳಿದನು

'ಈ ವಿವರಣೆ ಬೇಕಿಲ್ಲ. ಒಳ್ಳೇದು ಕೆಟ್ಟದ್ದು ಅದೃಷ್ಟವಂತೆ ಮನುಷ್ಯನಿಗೆ ಬರುವದಲ್ಲದೆ ಆತನ ಒಳ್ಳೆತನ ಯಾ ಕೆಟ್ಟತನ ದಶೆಗಳಿಂದಲ್ಲ. ಕುರುಡನು, ಗೂನುಬೆನ್ನಿನವನು, ಮೂರು ಮೊಲೆಯ ರಾಜಕುಮಾರಿ ಮೊದಲಾದವರೂ ಕೂಡ ಅದೃಷ್ಟದ ಬಲದಿಂದ ಸುಖಪಡೆದಿದ್ದಾರೆ' ಎಂದು ಚಕ್ರಹೊತ್ತವನು ಹೇಳಲು ಚಿನ್ನ ದೊರೆತ ಬ್ರಾಹ್ಮಣನು ಅದು ಹೇಗೆಂದು ಕೇಳಲು ಮುಂದಿನ ವಾರ ಚಕ್ರಹೊತ್ತವನು ಮೂರು ಮೊಲೆಯ ರಾಜಕುಮಾರಿಯ ಕತೆ ಹೇಳುವನು.

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1931]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಶೇಕಡ (Current Deposits)	ರೂ.	0–8–0
ಸೇವಿಂಗ್ಸ್ (ತಾ. 1—1—1953 ರಿಂದ)	,,	1–8–0
ಸ್ಥಿರ (Fixed) 3 ರಿಂದ 11 ತಿಂಗಳ ಅವಧಿಗೆ	,,	1–8–0
1 ವರುಷ	,,	2–0–0
2 ವರುಷ	,,	2–8–0
3 ವರುಷ	,,	3–0–0
5 ವರುಷ	,,	3-12-0
10 ವರುಷ	,,	4–0–0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ & ಖಜಾನ್ಚಿ.

ಲಘು ಹಾಸ್ಯ.

ಮೀಸೆ

ಬೋಳಿಸಿದವರು:- ಶ್ರೀ ಬಿ. ಡಿ. ಸುಬ್ಬಯ್ಯ.

"ಮುಖಕೆ ಮೀಸೆಯೇ ಭೂಷಣಂ" ಎಂದೊಬ್ಬ ವಿಕಟಕವಿಯು ಮೀಸೆಯನ್ನು ಕೊಂಡಾಡಿದ್ದಾನೆ. ಗಂಡಸಿನ ಗಂಡಸುತನ ಈ ಮೀಸೆಯನ್ನು ಹೊಂದಿಕೊಂಡಿದೆ ಎಂದರೆ ತಪ್ಪಾಗಲಾರದು. ಮೀಸೆಗೆ ಪೂರ್ವಕಾಲದಲ್ಲಿ ಬಹಳ ದೊಡ್ಡ ಗೌರವವಿತ್ತು. ಅಂದು ಎಲ್ಲರೂ ಮೀಸೆಯನ್ನು ಇಡಲಾಗುತ್ತಿರಲಿಲ್ಲ. ಮದುವೆಯಾಗಿ ಒಂದು ಕುಟುಂಬದ ಜವಾಬ್ದಾರಿಕೆಯನ್ನು ಹೊತ್ತವನಿಗೆ ಮಾತ್ರ ಮೀಸೆ ಇಡುವ ಹಕ್ಕಿತ್ತು! ಆ ಕಾಲದಲ್ಲಿ ಮೀಸೆನೋಡಿ ಆತನಿಗೆ ಸಲ್ಲತಕ್ಕ ಗೌರವಗಳು ಸಲ್ಲುತಿದ್ದುವಂತೆ! ಆಗ ಮದುವೆಗೆ ಸರಿಯಾದ ವಯಸ್ಸೆಂದರೆ ಯುವಕರಿಗೆ ಇಪ್ಪತ್ತೈದರಿಂದ ಮೂವತ್ತರ ವರೆಗೆ, ಯುವತಿಯರಿಗೆ ಇಪ್ಪತ್ತರಿಂದ ಇಪ್ಪತ್ತೈದರ ವರೆಗೆ! ಈಗ ಎಳೆ ಪ್ರಾಯದಲ್ಲಿ ಮೀಸೆಬಾರದ ಮಕ್ಕಳಿಗೆ, ತಾವು ಸಾಯುವ ಮೊದಲೇ ತಮ್ಮ ಮಕ್ಕಳು ವಿವಾಹಿತರಾಗಿರಬೇಕೆಂಬ ಹುಚ್ಚುಬಯಕೆಯಿಂದ ತಂದೆತಾಯಿಗಳು ಮದುವೆ ಮಾಡುವ ಪದ್ಧತಿಯು ಮೀಸೆಯ ಗೌರವವನ್ನು ಮಣ್ಣುಗೂಡಿಸಿತು. ಪೂರ್ವದ ರಾಜರುಗಳ ಆಸ್ಥಾನದಲ್ಲಿ ವೀರರುಗಳು ರಾಜರ ಎಡಬಲಗಳಲ್ಲಿಯೂ ಇರುವರು ತಮ್ಮ ಅಂತಸ್ತಿಗೆ ಸರಿಯಾಗಿ ಉಚಿತ ಮೀಸೆಯನ್ನು ಮಡಗುತ್ತಿದ್ದರು. ಯಾವುದಾದರೊಂದು ಸಾಹಸ ರಾಜಕಾರ್ಯಮಾಡಿ ಗೌರವಿತನಾದರೆ ಆತನು ಗಲ್ಲ ಮೀಸೆಯ ಹಕ್ಕುದಾರನಾಗುತ್ತಿದ್ದನು. ಈಗಿನ ಕಾಲದಂತೆ 'ವಿಕ್ಟೋರಿಯಾ ಕ್ರಾಸ್', ವೀರಚಕ್ರ, ಪರಮವೀರ ಚಕ್ರದ ಗೌರವವೇ ಆ ಗಲ್ಲ ಮೀಸೆಗಿತ್ತು! ಈ ಮೀಸೆ ಇಟ್ಟವನು ರಾಜಮರ್ಯಾದೆಗೆ ಅರ್ಹನಾಗುತ್ತಿದ್ದನು.

ಕಾಲಚಕ್ರವು ಉರುಳಿದಂತೆ ಮನುಷ್ಯನ ರೀತಿ ನೀತಿ, ಉಡಿಗೆ, ತೊಡಿಗೆ ಆಚಾರ ವಿಚಾರಗಳೆಲ್ಲವೂ ಪಲ್ಲಟಗೊಳ್ಳುತ್ತಾ, ಒಂದು ಮಿತಿಮೀರಿದ ಎಲ್ಲೆಯಲ್ಲಿ ಬಂದು ನಿಂತಿವೆ. ಈ ಸಂಸ್ಕೃತಿಯ ಕಾರಣ ಮೀಸೆಯ ಅಧಃಪತನವಾಗಿ, ಅಲ್ಲಿ ಇಲ್ಲಿ ಅದರ ಕುರುಹುಗಳು ಕಾಣುತಿವೆಯಷ್ಟೆ!

ವ್ಯಕ್ತಿಯ ಮೀಸೆ ಮುಂತಾದುವುಗಳನ್ನು ನೋಡಿ, ಅವನ ಅಂತಸ್ತು ತಿಳಿದುಕೊಳ್ಳುವ ಕಾಲವೊಂದಿತ್ತು. ಈಗ ವ್ಯಕ್ತಿಯ ಮೀಸೆಯಿಂದ ಗಣ್ಯತೆಯನ್ನು ತಿಳಿದುಕೊಳ್ಳಲಾಗದಿದ್ದರೂ, ಮೀಸೆಯ ಮಾದರಿಯಿಂದ, ಆತನು ಎಂತಹ ವರ್ಗದವನು, ಆತನ ರುಚಿ ಅಭಿರುಚಿ ಗುಣ ನಡತೆಗಳನ್ನು ಅಂದಾಜುಮಾಡಬಹುದು. ವ್ಯಕ್ತಿಯ ಒಳಗುಟ್ಟನ್ನು ಸ್ವಲ್ಪ ಚುರುಕು ಬುದ್ಧಿ ಉಪಯೋಗಿಸಿದರೆ ಅರಿತುಕೊಳ್ಳುವ ಸಾಧ್ಯತೆ ಈ ಮಾರ್ಗದಲ್ಲಿದೆ.

ಎಲ್ಲಾ ವಸ್ತುಗಳಲ್ಲಿ ವಿಂಗಡ ಸಂಗತಗಳಿರುವಂತೆ ಮೀಸೆಗಳಿಗೂ ಸಹ ತಾರತಮ್ಯದ ನಾಮಕರಣಗಳಿವೆ. ಯಾವುದೇ ಒಂದು ಆಯುಷ್ಕರ್ಮ ಶಾಲೆಗೆ ಕ್ರಾಫ್ ಮಾಡಲು ಹೋದರೆ, ಅಲ್ಲಿಯ ಕೆಲಸಗಾರನು, ಹೊಟೇಲು ಮಾಣಿಯನ್ನು 'ತಿಂಡಿಯೇನಿದೆಯಪ್ಪಾ' ಎಂದು ಕೇಳಿದರೆ ಹೇಗೆ ಇಡ್ಲಿ ಬಾದುಷಾದಿಂದ ಹಿಡಿದು ಮೈಸೂರು ಪಾಕ ಮಸಾಲೆ ದೋಸೆಯ ವರೆಗೆ ಉಸಿರು ಕಟ್ಟಿ ಹೇಳುವನೋ ಅದೇ ರೀತಿ "ಹಿಟ್ಲರ್ ಕಟ್, ಯಾಕ್ಸರ್ ಕಟ್, ಆರ್ಟಿಸ್ಟ್ ಕಟ್, ಡಿಸ್ಲಮೇಟಿಕ್ ಕಟ್, ರಾಯಲ್ ಕಟ್, ಡಾನ್ಸರ್ ಕಟ್ ಎಂಬ ತರತರದ ಕಟ್ಟಿಂಗ್‌ಗಳಿವೆ, ತಮಗೆ ಯಾವ ಕಟ್ಟಿಂಗ್ ಮಾಡಲಿ?" ಎಂದು ಕೇಳುತ್ತಾನೆ. ಅಂತೆಯೇ ಮೀಸೆಗೂ ಸಹ ತರತರದ ಹೆಸರುಗಳಿವೆ. ಅವರೆ ಅನೇಕವೂ ಗಣ್ಯ ವ್ಯಕ್ತಿಗಳ ಹೆಸರುಗಳಿಂದಲೇ ಹುಟ್ಟಿದವುಗಳು. ಪೃಥ್ವೀರಾಜ ಮೀಸೆ, ಹಿಟ್ಲರ್ ಮೀಸೆ, ಸ್ಟಾಲಿನ್ ಮೀಸೆ, ಫ್ರೆಂಚ್‌ಕಟ್ ಮೀಸೆ, ತಲವಾರ್‌ಕಟ್ ಮೀಸೆ, ಕೊಕ್ರೆ ಮೀಸೆ, ಸ್ಪೈಡರ್ ಮೀಸೆ, ಎಂಬ ಹೆಸರುಗಳಿವೆ. ಸಾಧಾರಣ ಈಗಿನ ಯುವಕ ಸಂಗಡದವರಿಗೆ ಪೃಥ್ವೀರಾಜ ಮತ್ತು ತಲವಾರ್ ಕಟ್ಟು ಒಂದು ರೂಢಿಯಾಗಿ ಹೋಗಿದೆ. ಸಣ್ಣ ಒಂದು ಮಸಿಯ ಉದ್ದಗೆರೆಯಂತೆ, ಕಂಡೂ ಕಾಣದೆ, ಸ್ವಲ್ಪ ಬದಿಗಳಲ್ಲಿ ಬಾಗಿ ಇರುವ ಮೀಸೆಗಳೇ ಈಗಿನ ಯುವಕರ ಮುಖಗಳಲ್ಲಿ ರಾರಾಜಿಸುತ್ತಿರುವವು. ಈ ಮೀಸೆಯವರು ಬರೀ ಜಂಭಗಾರರು. ಹೊಸ ಹೊಸ ಪೋಷಾಕು, ಜೋಕು ಶೋಕುಗಳಲ್ಲಿಯೇ ಅವರಿಗೆ ಅಭಿರುಚಿ. ಈ ವರ್ಗದವರು ಸ್ಥಿರ ಮನಸ್ಸಿನವರಲ್ಲ. ಒಂದು ಕೆಲಸವನ್ನೂ ಪೂರ್ತಿಗೊಳಿಸುವವರಲ್ಲ.

ತೋರು ಬೆರಳು ಮತ್ತು ನಡುಬೆರಳನ್ನು ಮೂಗಿನ ಸೊಳ್ಳೆಗಳಿಗೆ ಹಾಕಿ, ಬೆರಳ ಎರಡು ಕಡೆಗಳಲ್ಲಿರುವ ಮೀಸೆಯನ್ನು ಬೋಳಿಸಿಬಿಟ್ಟರೆ ಉಳಿಯುವ ಮೀಸೆಯೇ ಹಿಟ್ಲರ್ ಕಟ್! ಇದನ್ನು ಮಡಗುವವರು ಸ್ವಲ್ಪ ಕೋಪಿಷ್ಟರೆಂದೇ ಹೇಳಬೇಕು. ಇವರುಗಳು ಉದಾರಿಗಳಲ್ಲ. ಸ್ವಲ್ಪ ದುಡುಕು ಸ್ವಭಾವದವರು. ಎಂದೂ ಯಾರ ಮಾತಿಗೂ ಬೆಲೆಕೊಡುವವರಲ್ಲ. ಸ್ಟಾಲಿನ್ ಕಟ್ಟಿನವರೆಂದರೆ ಕೆಂಪು ಪಕ್ಷನೆಂದು ತಿಳಿಯಬೇಡಿ. ಇವರು ಸ್ವಲ್ಪ ಬೆಲೆ ಬಾಳತಕ್ಕ ಮಹನೀಯರುಗಳೇ! ಜಮೀನ್ದಾರರು, ದೊಡ್ಡ ಸೇನಾನಿಗಳು ಮತ್ತು ಬಂಡವಾಳಶಾಹಿಗಳ ಗುರುತ್ತೆನ್ನಬಹುದು. ಈ ಮಾತು ನೂರಕ್ಕೆ ನೂರು ಸರಿಯೆಂದು ಹೇಳಲಾಗುವದಿಲ್ಲ. ಅಂತು, ಈ ಮೀಸೆಯ ಮನುಷ್ಯರು ಸ್ವಬುದ್ಧಿಯಿಂದ, ಸತ್ಯಧರ್ಮಗಳಿಗೆ ಹೆದರಿ ಜೀವಿಸುತ್ತಾರೆ. ಇವರು ಉದಾರಿಗಳು ಹೇಗೋ ಹಾಗೆ ಯೋಚಿಸಿದನ್ನು ಮಾಡಿಯೇ ಮಾಡುವ ಹಟವಾದಿಗಳು. ಹಿಟ್ಲರ್ ಮೀಸೆಯ ತಮ್ಮನೆಂದರೆ ಅದೇ ಫ್ರೆಂಚ್ ಕಟ್, ಗೊತ್ತಿಲ್ಲದವರು ಮೂಗಿನ ಕೆಳಗೆ ನೊಣ ಕೂತಿದೆಯೋ ಎಂಬ ಸಂಶಯಕ್ಕೂ ಸಹ ಬೀಳಬಹುದು. ಆದರೆ ಇವರು ಹಿಟ್ಲರ್ ಮೀಸೆಯವರಷ್ಟು ಕೋಪಿಷ್ಟರಲ್ಲ, ಬದಲು ಮಹಾ ಚಾಣಕ್ಯರು. ಸಮಯ ಬಂದಾಗ ಕತ್ತೆಯ ಕಾಲನ್ನೂ ಸಹ ಹಿಡಿಯ ಬಲ್ಲ ನಿಸ್ಸೀಮರು. ಇವರು ಹೇಳಿದ ಹತ್ತು ಮಾತುಗಳಲ್ಲಿ ಎರಡನ್ನೂ ಸಹ ನಂಬುವದು ಕಷ್ಟವೆಂದೇ ಹೇಳಬೇಕು. ಎಂದೂ ಎದುರುಗಡೆ ಮುಖನೋಡಿ ಮಾತಾಡುವ ವರ್ಗ ಇದಲ್ಲ. ಉಳಿದುದೆಂದರೆ ಫಿಲ್ಟರ್ ಮೀಸೆಯವರ ಸಂಗಡ. ಇವರೆಂದರೆ ಆತ್ಮಗೌರವಕ್ಕಾಗಿ ಪ್ರಾಣ ತ್ಯಜಿಸುವಂತವರು. ಹತ್ತು ಜನರ ಮುಂದೆ ಮೀಸೆ ತಿರುಗಿಸುವದೆಂದರೆ ಅವರಿಗೊಂದು ಹೆಮ್ಮೆ. ಈ ವರ್ಗದವರೆಂದೂ ಐಶ್ವರ್ಯದ ಮೆಟ್ಟಲು ಹತ್ತಲಶಕ್ತರು. ಕುಡುಕರವರೊಂದೇ ಅವರ ಜೀವಾಳ. ಮೀಸೆಯನ್ನು ಕೆಳತುಟಿಯನ್ನು ಮುಚ್ಚುವಂತೆ ಕೆಳಗಿಳಿಸಿ ಇಡೀ ಸೇರು ಮಡಿಕೆಯನ್ನ ಗಡಗಡನೆ ಒಂದೇ ಧಮ್ಮಿಗೆ ಖಾಲಿ ಮಾಡುವ ಕಲಿಪುರುಷರಿವರು. ಮಡಿಕೆಯು ಬರಿದಾದ ಮೇಲೆ ಮದ್ಯಪಾನದ ಮತ್ತಿನಿಂದ ಮೀಸೆಗೆ ಅಂಟಿದ ಕಶ್ಮಲಗಳನ್ನು 'ಫೂ' ಎಂದು ಹಾರಿಸಿ, ಮೀಸೆಯನ್ನು ತೀಡುವ ಆನಂದಿಗಳಿವರು. ಮಳೆಯೇ ಹೊಡೆಯಲಿ ಯಾ ಕ್ಷಾಮವೇ ಬರಲಿ, ಕುಡಿಯಲಿಕ್ಕೆ ಇವರಿಗೆ ಮಡಿಕೆಗಟ್ಟಲೆ ಬೇಕು!

ಗಲ್ಲ ಮೀಸೆಯವರು ಈಗೀಗ ಬಹಳ ವಿರಳರಾಗಿದ್ದಾರೆ. ಈಗ ಈ ಮೀಸೆಗೆ ಪ್ರಾಮುಖ್ಯತೆಯಿಲ್ಲ. ಕಲ್ಕತ್ತದಲ್ಲಿ ಪೋಲೀಸ್ ಸಾರ್ಜಂಟನೊಬ್ಬನು ಹದಿನೆಂಟು ಇಂಚಿನ ಗಲ್ಲ ಮೀಸೆಯನ್ನು ಬೆಳಸಿ ಜಗತ್ಪ್ರಖ್ಯಾತನಾಗಿದ್ದಾನೆ. ಅಂತೂ ಗಲ್ಲ ಮೀಸೆಯವರೆಂದರೆ ಸ್ವಲ್ಪ ವ್ಯಕ್ತಿತ್ವವಿರುವವರೇ! ಮೀಸೆಗಳಲ್ಲಿ ಮತ್ತೆಷ್ಟೋ ಮಾದರಿಗಳಿವೆ. ನಿಶಾಚರ ಪ್ರಾಣಿಗಳೆಷ್ಟೋ ತಮ್ಮ ಮೀಸೆಯ ಸಹಾಯದಿಂದ ದಾರಿ ಹುಡುಕಿಕೊಂಡು ಹೋಗುತ್ತವೆ. ಅಂತೆಯೇ ಕೆಲವರು ತಮ್ಮ ಮೀಸೆಯ ಸಹಾಯದಿಂದ ತನ್ನ ಕೈಕೆಳಗಿರುವವರನ್ನು ಯಾ ನೆರೆಹೊರೆಯವರನ್ನು ಹೆದರಿಸಿ ಬೆದರಿಸಿ ಜೀವನಮಾರ್ಗ ಹಿಡಿದದ್ದೂ ಇದೆ. ಅವುಗಳನ್ನೆಲ್ಲಾ ಬರೆಯುತ್ತಾ ನಡೆದರೆ ಅದು ಒಂದು ಮೀಸೆ ಪುರಾಣವಾದೀತು.

ಮೀಸೆ ರಹಿತ ಮಹನೀಯರನ್ನು ವರ್ಗೀಕರಿಸುವದು ಆಗದ ಸಾಗದ ಕೆಲಸ. ಇವರು ಮೀಸೆಧಾರಿಗಳ ಮಧ್ಯೆ ಹರಿದು ಹಂಚಾಗಿ ಹೋಗಿರುವರು. ಇವರು ಮೀಸೆ ಇಡುವದನ್ನು ಖಂಡಿಸಿದರೂ, ಇಟ್ಟವರನ್ನು ಕಂಡು ತೃಪ್ತಿಪಟ್ಟುಕೊಳ್ಳುತ್ತಾರೆ. ಇದರಲ್ಲಿ ಮತ್ತೊಂದು ಗುಟ್ಟೆಂದರೆ ಮೀಸೆ ಇಟ್ಟವನ ವಯಸ್ಸನ್ನು ಸಾಧಾರಣವಾಗಿ ಕಂಡುಕೊಳ್ಳಬಹುದು. ಮೀಸೆ ರಹಿತನಾದರೆ ಯಾವಾಗಲೂ ಹದಿನಾರೇ ವಯಸ್ಸು! ಈ ಲಾಭವನ್ನು ಕಂಡು ಅನೇಕರು ನುಣ್ಣನೆ ಮುಖಕ್ಷೌರಮಾಡುತ್ತಾರೆ. ನಮ್ಮ ಹಿಂದೂ ದೇವರಲ್ಲಿ ಭಗವಾನ್ ಶಂಕರನಲ್ಲದೆ ಮೀಸೆಧಾರಿಗಳೇ ಇಲ್ಲ. ಯಾವ ಚಿತ್ರದಲ್ಲಿಯೇ ಆಗಲೀ ಯಾ ಪ್ರತಿಮೆಗಳಲ್ಲಿಯೇ ಆಗಲೀ ಚಿತ್ರಿಸುವ ಕಲಾವಿದನು ನುಣ್ಣನೆಯ ಮುಖವನ್ನೇ ಚಿತ್ರಿಸುವನು. ಶ್ರೀರಾಮ, ಶ್ರೀಕೃಷ್ಣ ಮೊದಲಾದ ದೇವತಾ ಪುರುಷರುಗಳು ಸಾವಿರಾರು ವರ್ಷ ಬಾಳಿ ರಾಜ್ಯ ಪರಿಪಾಲಿಸಿದರೆಂದು ವೇದಪುರಾಣಗಳು ಹೇಳುತ್ತವೆ. ಆದರೆ ಯಾವ ಪುರಾಣದಲ್ಲಿಯೂ ಅವರು ಮೀಸೆ ಬಿಟ್ಟ ಆಧಾರವಿಲ್ಲ. ಅಷ್ಟು ವರ್ಷವಿದ್ದರೂ ಅವರಿಗೆ ಮೀಸೆ ಬರುತಿರಲಿಲ್ಲವೆಂದರ್ಥವಲ್ಲ. ಈಗಿನ ಕಾಲದಂತೆ ಸೇಫ್ಟಿರೇಜರು (Safey Razar 7' O'clock Blade) ಗಳಿಲ್ಲದಿದ್ದರೂ, ಹೇಗೋ ಮುಖವನ್ನು ನುಣ್ಣಗಿರಿಸಿ ಅಂದಚಂದವನ್ನು ಹೆಚ್ಚಿಸಿಕೊಂಡಿರಬಹುದು. ಇಲ್ಲವೇ ಅವರಿಗೆ ಯಾವಾಗಲೂ ಹದಿನಾರು ವಯಸ್ಸೇ ಇರಬೇಕು! ಅದನ್ನು ಕಂಡೇ ಈ ಸಂಗಡಕ್ಕೆ ದಿನೇ ದಿನೇ ಜನರು ಹೆಚ್ಚುತ್ತಿರುವರು. ಈಗ ಮೀಸೆರಹಿತರೇ ಹೆಚ್ಚಿರುವರು. ಕೆಲವು ಕಾಲದಲ್ಲಿ ಮೀಸೆಯ ಉಳಿದಿರುವ ಕುರುಹುಗಳೇ ನಶಿಸಿ ಅದರ ಅಧಃಪತನವಾಗಿ, ಸ್ತ್ರೀಪುರುಷರನ್ನು ಥಕ್ಕನೆ ಗುರುತಿಸುವದೇ ಕಷ್ಟವಾದೀತು. ಮೀಸೆಯು ಒಂದು ಅಜ್ಞಾತತೆಯಾಗಲಿಕ್ಕೂ ಸಾಕು. ಮೂಢರೇ ಇರಲಿ ಮುಟ್ಠಾಳರೇ ಇರಲಿ "ಹೆಚ್ಚು ಜನವಿರುವ ಕಡೆ ಮೆಚ್ಚು ಮತವನ್ನೀಯು" ಎಂಬುದು ಈಗಿನ ವಾಡಿಕೆಯಾದುದರಿಂದ ನಾನೂ ನುಣ್ಣನೆ ಬೋಳಿಸಲು ಪ್ರಯತ್ನಿಸುತ್ತೇನೆ!!

ಸೋಮವಾರಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಕೆ. ಎಂ. ಸೋಮಣ್ಣನವರು

INSURE WITH
OR REPRESENT
INDIA'S OLDEST LIFE OFFICE:
THE BOMBAY MUTUAL LIFE ASSURANCE SOCIETY, LTD.
BUSINESS IN FORCE OVER 40 CRORES
ASSETS .... OVER 12 CRORES
Applications from energetic youngmen are invited for representation.
25-20
Head Office; BOMBAY.
Branch: 172. 3, Narasimharaja Road. BANGALORE 2.

ನಾ ಕಲಿತ ಪಾಠ.

ಲೇ:— ಕುಮಾರಿ ಪಿ. ಎಂ. ಕಮಲ, ಮತ್ತೂರು.

ಆಗಸ್ಟ್ ಎಂಟು, ಸುದಿನವೋ ದುರ್ದಿನವೋ ನಾ ಹೇಳಲಾರೆ. ನನ್ನ ಮಟ್ಟಿಗೆ ಅಂದು ಚಿರಸ್ಮರಣೀಯವಾಗಿದೆ. ನಾನು ಜನ್ಮವೆತ್ತಿದ ದಿನವಾದಾಗ ಸುದಿನವೆಂದೇ ಹೇಳಬೇಕು. ನನಗೆ ಸಾಧಾರಣ ತಿಳುವಳಿಕೆ ಬಂದಲ್ಲಿಂದ ಇಂದಿನ ತನಕ ಹುಟ್ಟಿದ ದಿನವನ್ನು ನೆನೆದು ಗೌರವಿಸಿಕೊಳ್ಳುವದು ಸ್ವಾಭಾವಿಕವಾಗಿದೆ. ಯಾವ ಉದ್ದೇಶದಿಂದ ಹುಟ್ಟುಹಬ್ಬವನ್ನು ಆಚರಿಸುತ್ತಿರುವರೋ ನನಗೇ ತಿಳಿಯದು. ಅಂತೂ ನಮ್ಮಲ್ಲಿ ನನಗಿಂತ ಹಿರಿಯವರಾರೂ ಆಚರಿಸದಿದ್ದರೂ ಕಿರಿಯವರೆಲ್ಲಾ ಆಚರಿಸುತ್ತಾರೆ. ಅಂದು ಅವರವರ ಗೆಳತಿಯರಿಗೆ ಔತಣ! ಮನೆಯಲ್ಲಿ ಪಾಯಸದೂಟ. ಹೊಸ ಬಟ್ಟೆ ಹಾಕುವ ಪದ್ಧತಿ. ಜತೆಗೆ ಉಡುಗರೆಯನ್ನೂ ಕೊಡಬಹುದು. ಅಂತೂ ಆ ದಿನವನ್ನು ಎಂದಿಗಿಂತಲೂ ಸಂತೋಷದಿಂದಲೇ ಕಳೆಯಬೇಕೆಂಬುದೇ ಸರ್ವರ ಬಯಕೆ.

ನಮ್ಮ ಮನೆಯಲ್ಲಿ ಯಾರದಾದರೂ ಹುಟ್ಟು ಹಬ್ಬ ಬರಲು ಇನ್ನೂ ನಾಲ್ಕೈದು ದಿನವಿರುವಾಗಲೇ ಮನೆ ಮಕ್ಕಳಲ್ಲಿ ಲೆಕ್ಕಾಚಾರ. ನಾನೇನು ಉಡುಗೊರೆ ಕೊಡಲಿ? ಅವನದೇನು; ಆಕೆಯದೇನಿರಬಹುದು? ಇದೇ ಚರ್ಚೆ. ಅಂತೂ ಆಡಂಬರ, ದರ್ಬಾರವೇ ನಡೆದಿರುತ್ತೆ. ಹಾಗೂ ಈ ಬಗೆ ಅತಿಯಾದರೆ ಮಾತಾಪಿತೃಗಳಿಂದ ಇನ್ನು ಮುಂದೆ ಯಾರೂ ಉಡುಗರೆ ಕೊಡಕೂಡದೆಂಬ ಕಟ್ಟಪ್ಪಣೆಯೂ ಆಗುವ ಸಂಭವವು ಕೆಲವೊಮ್ಮೆ ಬರುತ್ತದೆ.

ಈಗ ಐದಾರು ವರ್ಷದ ಹಿಂದಿನ ಮಾತು. ಆಗ ನಮ್ಮ ಅಜ್ಜಿಯೂ ಇದ್ದರು. "ಈ ಸಾರಿ ನಿನ್ನ ಹುಟ್ಟಿದ ಹಬ್ಬಕ್ಕೆ ನಮ್ಮಲ್ಲಿಗೆ ಬರಬೇಕೆಂದು" ಮೇಲಿಂದ ಮೇಲೆ ಚಿಕ್ಕಮ್ಮನ ಕರೆಯೋಲೆ ಬಂದಿತ್ತು. ನನಗೂ ಹೋಗಬೇಕೆಂಬ ಆಸೆ ಸ್ವಲ್ಪ ಇತ್ತು. ಆದರೆ ನಮ್ಮಜ್ಜಿ ಹಳೆಯ ಸಂಪ್ರದಾಯದವರು. "ಹುಟ್ಟಿದ ದಿನ ಮನೆ ಬಿಟ್ಟು ಕದಲಬಾರದು. ಮನೆಮಕ್ಕಳ ಅಲ್ಲಿಗೆ ಹಾಗೆ ಹೀಗೆ ಎಂದೆಲ್ಲಾ ಹೇಳತೊಡಗಿದರು. ತಂದೆ ತಾಯಿ ಪಿತೃಗಳಿಲ್ಲದ ಇನ್ನು ನನ್ನ ಆಟ ನಡೆದೀತೇ? ಕೊನೆಗೆ ಚಿಕ್ಕಮ್ಮನಿಗೆ ನಾನೇ ಓಲೆ ಬರೆದೆ. 'ನೀನೇ ಮನೆಯವರಿಗೆ ಓಲೆ ಬರೆ. ಕಾಂತಿಯು ಕರೆಗೆ ಬಿಡುವಂತಿಲ್ಲವೆಂದು!' ಹಾಗೇ ಚಿಕ್ಕಮ್ಮ ಬರೆದರೂ ನಿಷ್ಪ್ರಯೋಜನವಾಯಿತು. ನಮ್ಮ ಭವನದ ಪಾರ್ಲಿಮೆಂಟಿನಲ್ಲಿ ಆ ವಿಷಯ ಪಾಸಾಗಲೇ ಇಲ್ಲ.

ಅಂದು ಶನಿವಾರವೆಂದು ತೋರುತ್ತೆ. ಮನಸ್ಸಿಗೆ ಹರ್ಷವಿಲ್ಲದ್ದರಿಂದ ಯಾವುದರಲ್ಲೂ ಒಂದು ಉತ್ಸಾಹವೇ ಇರಲಿಲ್ಲ. ಮುದುಡಿದ ಮನಸ್ಸಿನಿಂದ ಹಾಗೇ ಮಂಚದ ಮೇಲೊರಗಿ 'ಕಣ್ಣೀರು' ಕಾದಂಬರಿ ಓದುತ್ತಿದ್ದೆ. ಹೊರಗೆ ಶಂಖ ಜಾಗಟೆಯ ನಾದ ಒಂದೇ ಸವನೆ ಕಿವಿಯನ್ನು ಕೊರೆಯುತಿತ್ತು. ಯಾರಿರಬಹುದೆಂದು ಹೊರ ಬಂದೆ. ದಾಸಯ್ಯನೊಬ್ಬನು ದೇವರ ನಾಮ ಹಾಡುತ್ತಾ ನಿಂತಿದ್ದನು. ಆತನ ವೇಷಭೂಷಣ ನೋಡಿ "ಈತನಿಗೇನು ದೃಢಕಾಯನಾಗಿದ್ದಾನೆ. ಒಂದು ಹಿಡಿ ಅಕ್ಕಿಯನ್ನೂ ಹಾಕದೆ ಓಡಿಸಬೇಕೆಂದು, ಮನ ಸ್ಪಂದಿಸಿತು. ಆದರೆ ಹಿಂದೂ ಧರ್ಮದ ಪ್ರಕಾರ ಮನೆಬಾಗಿಲಿಗೆ ಬಂದವರನ್ನು ಅಟ್ಟಬಾರದೆಂಬ ಮೂಢನಂಬಿಕೆಯೊಂದು ಒಂದು ಹಿಡಿ ಭಿಕ್ಷೆ ಹಾಕಿಸಿತು. ಆತನು ಅದರಲ್ಲಿ ತೃಪ್ತನಾಗದೆ "ತಿರುಪತಿ ಯಾತ್ರೆ ಹೊರಟಿದ್ದೇನೆ ತಾಯಿ? ಏನಾದರೂ ಕಾಣಿಕೆ ಕೊಡಬೇಕು ಅದಕ್ಕಾಗಿ ನಾಲ್ಕು ಮನೆ ಭಿಕ್ಷೆ ಎತ್ತುತ್ತಿದ್ದೇನೆ. ತಾಯೀ' ಎಂದು ಬೇಡತೊಡಗಿದ. ಮನೆಯಲ್ಲಿ ಮಾತಾಪಿತೃಗಳಿರಲಿಲ್ಲ. ಆಗ ನನ್ನಲ್ಲಿ ಬಿಡಿಕಾಸೂ ಓಡಿಯಾಡುತ್ತಿರಲಿಲ್ಲ. ಮನೆಯೆಲ್ಲಾ ಹುಡುಕಿದೆ. ಕಿರಿಯವರನ್ನೆಲ್ಲಾ ಕೇಳಿದೆ. ಕೊನೆಗೆ ಬೀಗ ಮುದ್ರೆಯಿಲ್ಲದೆ ಬಿಕೋ ಎನ್ನುತ್ತಿದ್ದ ಪೆಟ್ಟಿಗೆಯೊಂದನ್ನು ತೆಗೆದು ಹುಡುಕಿದೆ. ದುಡ್ಡಿನ ಬದಲು ಅದರಲ್ಲಿದ್ದು ಬರೀ ನಾಲ್ಕಾರು ಪುಸ್ತಕ, ಒಂದಷ್ಟು ಯಾರದೋ ಪತ್ರಗಳು! ಕೊನೆಗೆ ಪೆಟ್ಟಿಗೆಯನ್ನೇ [illegible] ಮಗುಚಿದೆ. ಎಲ್ಲೋ 'ಟನ್' ಎಂಬ ಶಬ್ದ ಕೇಳಿಸಿತು. ದೇವರೇ, ಎಲ್ಲೋ ಮೂರು ಕಾಸಿರಬೇಕು. ಮಾನ ಉಳಿಯಿತೆಂದು ಹೆಕ್ಕಿ [illegible] ಆತನಿಗಿತ್ತೆ. ಸಾಧಾರಣ ನಾಲ್ಕಾಣೆಯಾದರೂ ಪರರ ಮಾಡುವ [illegible] ಶೇಕಡಾ ತೊಂಭತ್ತೊಂಭತ್ತರಷ್ಟು ಮಂದಿ ಹೊಟ್ಟೆಗಾಗಿಯೇ ಹೊರತು ಪರರ ಉಪಕಾರಕ್ಕಾಗಿ ಅಲ್ಲ! ಅಂತೂ ಆತ ಕಣ್ಮರೆಯಾಗುವ ವರೆಗೂ ಅಲ್ಲೇ ನಿಂತು ಒಳಬಂದೆ. ಪೆಟ್ಟಿಗೆಯಲ್ಲಿದ್ದ ಕಾಗದಗಳನ್ನೆಲ್ಲಾ ಒಂದೊಂದಾಗಿ ಓದುತ್ತಿದ್ದಂತೇ ನನ್ನ ಕಣ್ಣಿಗೆ ಆಗಲೇ ಮಹಾತ್ಮರ 'ಸತ್ಯಾಗ್ರಹ' ವೆಂಬ ಪುಸ್ತಕ ಕಾಣಿಸಿತು. ಮೊದಲ ಪುಟ ಮಗುಚಿದೆ. 'ಜೀವನವೇ ಒಂದು ಸತ್ಯಾಗ್ರಹ, ಅದಕ್ಕಾಗಿ ನಿನ್ನ ಹುಟ್ಟು ಹಬ್ಬಕ್ಕೆ ಈ ಪುಸ್ತಕವನ್ನು ಉಡುಗರೆಯಾಗಿ ಕಳುಹಿಸಿದ್ದೇನೆ. ನೀನು ಸಂತೋಷದಿಂದ ಸ್ವೀಕರಿಸುವೆಯೆಂದೇ ನಂಬಿರುವ, ನಿನ್ನ ಸಹೋದರ, ರಮೇಶ' ಎಂದು ಕಾಣಿಸಿತು. ಮನಸ್ಸು ಎಲ್ಲೋ ಲೀನವಾಗಿತ್ತು. ನನಗರಿವಿಲ್ಲದಂತೆಯೇ ಪುಟಗಳನ್ನು ಮಗುಚತೊಡಗಿದೆ. ಪುಸ್ತಕದ ಮಧ್ಯದಲ್ಲಿ ಪತ್ರವೊಂದಿತ್ತು. ಅದನ್ನು ಓದಿದೆ. 'ತಂಗೀ, ನಿನ್ನ ಹುಟ್ಟು ಹಬ್ಬಕ್ಕೆ ಬರಲಾಗಲಿಲ್ಲ. ನಿನ್ನ ಕರೆಗೆ ಚಿರಋಣಿ. ಅದಕ್ಕಾಗಿಯೇ ಇಂದು ಈ ಓಲೆ ಬರೆಯುತ್ತಿರುವೆನು. ಇಂದಿಗೆ ನಿನ್ನ ಒಂದು ವರ್ಷದ ಆಯುಸ್ಸು ಮುಗಿಯಿತು. ನಾಳೆಯಿಂದ ಹೊಸ ವರ್ಷಕ್ಕೆ ಕಾಲಿಡುತ್ತಿರುವೆ. ಈ ಹುಟ್ಟು ಹಬ್ಬವನ್ನು ಆಚರಿಸುವದರ ಮಹತ್ವವಾದರೂ ಏನಿರಬಹುದು? ನರಿ ನಾಯಿಯ ಹಾಗೆ ನೂರು ವರ್ಷ ಬಾಳಿ ಪ್ರಯೋಜನವೇನು? ಜೀವನದಲ್ಲಿ ಒಂದು ಧ್ಯೇಯವಿರಬೇಕು. ಜವಹರಲಾಲರ ಮಾತಿನಂತೆ 'ಬದುಕಿಗೆ ಒಂದು ಗುರಿಯಿರಬೇಕು. ಉದಾತ್ತವಾದ ಮಹೋನ್ನತವಾದ ಧ್ಯೇಯದ ಸಿದ್ಧಿಗಾಗಿ ಹಗಲಿರುಳೆನ್ನದೆ ದುಡಿಯಿರಿ. ಅದು ಸಿದ್ಧಿಸದಿದ್ದರೂ ಪ್ರಯತ್ನ ಮಾಡಿದ ತೃಪ್ತಿ ನಿಮಗಿರುತ್ತದೆ' ಆದ್ದರಿಂದ ನಿನ್ನ ಕರ್ತವ್ಯ ನೀನು ಮಾಡು. ಸಮಾಜಕ್ಕೂ, ದೀನ ದಲಿತರಿಗೂ ಸೇವೆಸಲ್ಲಿಸುವ ಗುರಿಯಿಂದ ನೀನು ದುಡಿಯಬೇಕು. ಆದರ್ಶ ಜೀವನವನ್ನು ನಡೆಸಲು ನೀನು ಇಂದೇ ಅಡಿಪಾಯ ಹಾಕಬೇಕು. ನಿನ್ನ ಮುಂದಿನ ಹುಟ್ಟು ಹಬ್ಬ ಬರುವ ವರೆಗೆ ಮಾಡಬೇಕೆಂದ [illegible] ನೀನು ಇಂದೇ ದೃಢ ಮನಸ್ಸು ಮಾಡಬೇಕು. ನೀನೇ ಸಂತೋಷ ಸಾಗರದಲ್ಲಿ ಮುಳುಗಿ ನಿನ್ನ ಜೀವನವನ್ನು ಕಳೆದರೆ ನಿನ್ನನ್ನು ಹೆತ್ತ ಮಾತಾಪಿತೃಗಳಿಗೂ ನೀನು ಜನ್ಮವೆತ್ತಿದ ಮನೆಗೂ, ದೇಶಕ್ಕೂ ನೀನು ಮಾಡಿದಂತಾಯಿತು? ಸರ್ವರಿಗೂ ಆದರ್ಶಳಾಗಿ ಕೀರ್ತಿ ತರುವವಳಾಗೆಂದು ಹಾರೈಸುವ, ನಿನ್ನ ದೊಡ್ಡಣ್ಣ, ರಮೇಶ.' ಎಂದು ಆ ಪತ್ರದಲ್ಲಿ ಬರೆದಿತ್ತು.

ನನ್ನ ತಿಳಿಗೇಡಿ ತನಕ್ಕೆ ನಾನೇ ನಾಚಿಕೊಂಡೆ. ಆರು ವರ್ಷಗಳ ಹಿಂದೆ ಚಿಕ್ಕಮ್ಮನಲ್ಲಿಗೆ ಕಳುಹಿಸಲಿಲ್ಲವೆಂದು ಯಾರ ಉಡುಗರೆಯನ್ನೂ ಮುಟ್ಟದೆ ಮೂಲೆಯಲ್ಲಿ ಹಾಕಿದ ಪುಸ್ತಕ ಅದಾಗಿತ್ತು. ಚಿಕ್ಕಮ್ಮನ ಹಿರೇ ಮಗನೇ ರಮೇಶ. ಬೊಂಬಾಯಿಂದ ಆತನು ಬರೆದ ಪತ್ರವದು. ಆ ದಿನದಿಂದ ನನ್ನ ಜೀವನದಲ್ಲಿ ಪುನರ್ ಜನ್ಮ ಆರಂಭವಾಗಿದೆ. ಅಂದಿನ ನನ್ನ ಮೂರ್ಖತನಕ್ಕಾಗಿ ಪಶ್ಚಾತ್ತಾಪ ಪಟ್ಟೆ. ಈಗ ಪ್ರತಿ ಆಗಸ್ಟ್ ಎಂಟಾಗಲೆಲ್ಲಾ ರಮೇಶಣ್ಣನನ್ನು ನೆನೆಸಿ, ಆತನಿಗೆ ಚಿರಋಣಿಯೆಂದು ನುಡಿಯದಿರಲಾರೆ! ಉಡುಗರೆಗಳು ಹಲವು ವೇಳೆ ಮನುಷ್ಯನಲ್ಲಿ ಮಾರ್ಪಾಡು ತರುತ್ತವೆ. ಚಿನ್ನ ಬೆಳ್ಳಿಗಳನ್ನು ಕರಗಿಸಿಬಿಡಬಹುದು. ಜರತಾರಿ ಬಟ್ಟೆ ಒಂದೆರಡು [illegible] ಹೋಗಬಹುದು. ಆದರೆ ಆದರ್ಶ ಪುಸ್ತಕ ಹಾಗೂ ಉಪದೇಶಗಳು ಹೃದಯದ ಬಾಗಿಲನ್ನು ತೆರೆದು ಅಚ್ಚಳಿಯದ ಸ್ಮೃತಿಯನ್ನಿತ್ತು ಚಿರಸ್ಮರಣೀಯವಾಗುತ್ತವೆ.

[illegible] ಕಾಂತಿಗೆ

'ಕೊಡಗು' ಏಜೆಂಟರು,

[illegible]

THE CANARA BANKING CORPORATION LIMITED.
ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ಚಿಕ್ಕ ಠಾಯಿದೆಯ ಠೇವಣಾತಿಗಳು:

3 ರಿಂದ 6 ತಿಂಗಳುಗಳ ವರೆಗೆ— ಸಾಲಿಯಾನ ಶೇಕಡ 3
7 ರಿಂದ 12 ತಿಂಗಳುಗಳ ವರೆಗೆ—ಸಾಲಿಯಾನ ಶೇಕಡ $3\frac{1}{4}$
ಪಂಚವಾರ್ಷಿಕ ಮುದ್ದತಿನ ಠೇವಣಾತಿಗಳು— ,, ,, 4

—: ಕೊಡಗು ಸಂಸ್ಥಾನದಲ್ಲಿ ನಮ್ಮ ಶಾಖೆಗಳು :—

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

Specialists in Tailoring! Prompt Service!!

FOR English Felt Hats, Wedding Suits, Ladies Over coats AND Latest Designs in Wollen Suitings

— CALL ON —

25-25 PATTU BROTHERS, OPP.— Town Hall, MYSORE.

Edited Printed and Published by P. I. BELLIAPPA at 'KODAGU' Press Mercara, for 'Kodagu' Ltd.,

ಕೊಡಗು

ನಲಿದು ಬರುತ್ತಿರುವ ಸ್ವಾತಂತ್ರ್ಯ ಶಿಶು

ವಾರ್ಷಿಕ ಚಂದಾ ರೂ. ೫—೦—೦ ಶುಕ್ರವಾರ

ಸಂಪುಟ ೨೨) (ಸಂಚಿಕೆ ೧೧ ೧೪--೮--೧೯೫೩

ಸ್ವಾತಂತ್ರ್ಯ ಸಂಚಿಕೆ.

KODAGU KANNADA WEEKLY MERCARA

ಈ ವಾರದ ಕಥೆ.

ಬದುಕಿನಲ್ಲಿ ಭಗವಂತ.

ಲೇ:— "ಪ್ರೇಮಯೋಗಿ"

ಆಕೆಯ ಮುಖ ಕೆಂಪಡರಿತ್ತು. ಆ ಕಲ್ಲೋಲಕಲ್ಲೋಲ ಭಾವನೆಯು ಹೃದಯದಲ್ಲಿ ತುಂಬಿದ್ದು ಗೋಚರವಾಗುತಿತ್ತು. ತನ್ನನ್ನು ಮದುವೆಯಾಗಬೇಕೆಂದು ಗಣೇಶನು ಆಕೆಯನ್ನು ಕೇಳಿದ್ದ. ಆಕೆಯ ಅಸಹಾಯ ಪರಿಸ್ಥಿತಿಯನ್ನು ನೋಡಿ ಗಣೇಶನು, "ನನ್ನ ಕೇಳಿಕೆ ಅನಿರೀಕ್ಷಿತವಾದುದೆ? ಜಾಜಿ, ನಾನು, ನನ್ನ ಸೋದರ ಬಾಬು ಮತ್ತು ನೀನು ಜೊತೆಯಲ್ಲಿ ಚಿಕ್ಕಂದಿನಿಂದಲೂ ಬೆಳೆದವರು. ನಾನು ನಿನ್ನನ್ನು ಅಂದಿನಿಂದಲೇ ಪ್ರೀತಿಸುತ್ತಿರುವೆನೆಂಬುದು ನಿನಗೆ ತಿಳಿದಿರಬೇಕು' ಎಂದನು.

ಜಾಜಿಯು ಬಲಾತ್ಕಾರದ ನಗುವನ್ನು ಬೀರಿ 'ನೀನು ಪ್ರೇಮಿಸಬಲ್ಲೆಯೆಂದು ನಾನು ತಿಳಿದಿಲ್ಲ. ನೀನು ಆ ರೀತಿಯವನೇ ಅಲ್ಲ. ನಿನ್ನ ಸ್ವಭಾವವೇ ಮಂಜುಗಡ್ಡೆಯಂತೆ. ಜನರ ಸಂಪರ್ಕ ನಿನಗೆ ಬೇಕಿಲ್ಲ. ನೀನು ಏಕಾಕಿಯಾದ ಜೀವಿ. ನಿನ್ನನ್ನು ಯೋಚಿಸುವಾಗ ಹಲವು ಬಾರಿ ನನಗೆ ಹೆದರಿಕೆಯಾಗುವದು' ಎಂದು ಹೇಳಿದಳು.

ಆಕೆಯ ಮಾತು ನಿಜವಾದುದು. ಗಣೇಶನು ಗಂಭೀರ ಸ್ವಭಾವದವನು. ಅವನಲ್ಲಿ ಹಾಸ್ಯ, ನಗುಗಳಿಗೆಡೆಯಿಲ್ಲ ಆತನ ಅವಳಿ ಸಹೋದರ ಬಾಬುವಿನಂತೆ ನಗುಮುಖದವನಲ್ಲ ಅವರಿಬ್ಬರೂ ಅವಳಿಜವಳಿ ಮಕ್ಕಳಾದರೂ ಸ್ವಭಾವದಲ್ಲಿ ಒಬ್ಬರಿಗೊಬ್ಬರು ವಿರೋಧ. ಗಣೇಶನು ಮಾನವತೆಯಲ್ಲಿ ವಿಶ್ವಾಸವಿಲ್ಲದ ವಿರಕ್ತ ಸ್ವಭಾವದವನಾದರೆ ಬಾಬುವು ಜನತೆಯೊಡನಾಟವೇ ಜೀವನವೆಂದು ನಂಬಿದವನು.

ಜಾಜಿಯು ಗಣೇಶನನ್ನು ಇಚ್ಛಿಸಲಿಲ್ಲ ಆಕೆಯು ಆದಾಗಲೇ ತನ್ನ ಹೃದಯದಲ್ಲಿ ಬಾಬುವಿಗೆ ಸ್ಥಳಕೊಟ್ಟಿದ್ದಳು. 'ಗಣೇಶ, ನಾನು ನಿನ್ನನ್ನು ಪ್ರೀತಿಸುತ್ತೇನೆ ಅವರೆ ಸಹೋದರನಂತೆ' ಎಂದು ಆಕೆ ಉತ್ತರವಿತ್ತಳು. ಗಣೇಶನಿಗೆ ನಿರಾಶೆಯಾಯಿತೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಈ ನಿರಾಶೆಯಲ್ಲಿ ಗಣೇಶನ ವಿರಕ್ತಿಯು ಹೆಚ್ಚಾಯಿತು. ಆತನು ತನ್ನೊಳಗೆ ಆಲೋಚಿಸಿದನು. 'ನಾನೆಂಥಾ ಹುಚ್ಚನು. ನನ್ನ ಜೀವನ ಈ ನಶ್ವರ ಪ್ರಪಂಚಕ್ಕಾಗಿ ಅಲ್ಲ. ಆ ಶಾಶ್ವತ ಸತ್ಯದ ಅನ್ವೇಷಣೆಯೇ ನನ್ನ ಜೀವನದ ಗುರಿ. ಈ ವಿಷಯಸುಖಗಳ ಪಾಶದಿಂದ ನಾನು ಮುಕ್ತನಾಗಬೇಕು. ಜೀವನದ ಗುರಿ ಸಂಸಾರ ಸುಖವಲ್ಲ. ನಾನು ವಿರಾಗಿಯಾಗುವೆನು ಆತ್ಮನ ಅನುಸಂಧಾನ ಮಾಡಿ ಪಾರಮಾರ್ಥಿಕ ಸಾಯುಜ್ಯಪಡೆಯುವೆನು' ಹೀಗೆ ಯೋಚಿಸಿದ ಗಣೇಶನು ಕ್ರಮಶಃ ತನ್ನ ಪ್ರಾಪಂಚಿಕ ಆಸಕ್ತಿಯನ್ನು ತೊರೆಯತೊಡಗಿದನು. ಒಂದು ದಿನ ಕುಟುಂಬ ಸೋದರರನ್ನು ಬಿಟ್ಟು ಮನೆಯಿಂದ ಹೊರಟು ಹೋದನು.

* * *

ಬಾಬು ಮತ್ತು ಜಾಜಿಯರ ವಿವಾಹವಾಯಿತು. ಅವರು ಸಂಸಾರದ ಭಾರ ಹೊತ್ತು ಅದರಲ್ಲಿ ತಲ್ಲೀನರಾದರು. ಕ್ರಮಶಃ ಅವರಿಗೆ ಮೂರು ಮಕ್ಕಳಾದರು. ಅವರ ಜೀವನವು ಸಮುದ್ರದಲ್ಲಿ ಮಿಲನಹೊಂದುವ ಹನಿಯಂತೆ ಯಾ ನದಿಯಂತೆ ಮಾನವ ಸಮಾಜವೆಂಬ ಸಾಗರದಲ್ಲಿ ಸಮರಸಗೊಂಡು ಸಮಾಜದ ಒಂದು ಅಂಗವಾಗಿ ಬೆರೆಯಿತು. ಬಾಬುವು ತುಂಬಾ ಜನಪ್ರಿಯನು ಆತನಿಗೆ ಅವನಿವನೆಂದಿಲ್ಲ. ಎಲ್ಲರಿಗೂ ಬೇಕಾದವನವನು. ಆಯಸ್ಕಾಂತದ ಸೆಳವಿಗೆ ಬಿದ್ದ ಕಬ್ಬಿಣದ ಸಾಮಾನು ಆ ಕಡೆ ಸೆಳೆಯಲ್ಪಡುವಂತೆ ಬಾಬುವಿನ ದಯೆ, ಕರುಣೆಗಳು ಜನರನ್ನು ಆಕರ್ಷಿಸಿದ್ದವು. ಜನತೆಯ ಸುಖದುಃಖಗಳಲ್ಲೂ, ಭಾಗಿಯಾಗಿ ದೇಶದ ಆಗುಹೋಗುಗಳಲ್ಲಿ ಆಸಕ್ತಿಯಿಟ್ಟು ಆತನು ಜೀವನ ನಡೆಸುತ್ತಿದ್ದನು.

'ನನಗೆ ಮಾರ್ಗ ಕಾಣುತ್ತಿದೆ ಜಾಜಿ' ಒಂದು ದಿನ ಬಾಬು ನುಡಿದನು. 'ದಾರಿ ಇದು. ನಾನಾಗಲೀ, ನೀನಾಗಲೀ ಈ ಪ್ರಪಂಚದಲ್ಲಿ ಪ್ರತ್ಯೇಕ ಅರ್ಥವಿರುವ ವಸ್ತುಗಳಲ್ಲ ಅಖಂಡವಾದ ಜಗತ್ತಿನ ಅಣುಗಳು ನಾವು. ಈ ಸಮಗ್ರತೆಯಿಂದ ಬೇರ್ಪಟ್ಟು ನಮ್ಮ ಜೀವನಕ್ಕೆ ಅರ್ಥವಿರಲಾರದು ಜಾಜಿ, ಒಬ್ಬನು ದೇವರನ್ನು ಪ್ರೀತಿಸುವದಾದರೆ ಆತನು ಮನುಷ್ಯನನ್ನು ಪ್ರೀತಿಸಲೇಬೇಕು. ಏಕೆಂದರೆ ಮನುಷ್ಯನು ದೇವನ ರಚನೆ. ಪ್ರತ್ಯಕ್ಷಕಾಣುವ ಸಹೋದರರನ್ನು ಪ್ರೀತಿಸಲಾರದವನು ಕಣ್ಣಿಗೆ ಕಾಣದ ದೇವರನ್ನು ಪ್ರೀತಿಸಲಾರ ನನಗೆ ಹೆಚ್ಚು ವಿಚಾರ ತಿಳಿಯದು. ಆದರೆ ದೇವರು ನಮ್ಮನ್ನು ಮನುಷ್ಯರಾಗಿ ಮಾಡಿದ್ದಾನೆ. ಆದ್ದರಿಂದ ಮನುಷ್ಯರಂತೆ ಜೀವಿಸಿ ನಮ್ಮ ಪಾಲಿನ ಕರ್ತವ್ಯವನ್ನು ಯೋಗ್ಯ ರೀತಿ ನಿರ್ವಹಿಸುವದೇ ಈ ಬಾಳಿನ ಅರ್ಥ.'

ಜಾಜಿಯು ಸುಖದಿಂದ ಬಾಬುವಿನೊಡನಿದ್ದರೂ ಒಮ್ಮೊಮ್ಮೆ ಗಣೇಶನ ಯೋಚನೆಯಾಗುತಿತ್ತು. ಆತನು ತನ್ನನ್ನು ಪತ್ನಿಯಾಗಲು ಕೇಳಿದ ನಿವೇದ, ಚಿಕ್ಕಂದಿನಿಂದಲೂ ಆತನು ತೋರ್ಪಡಿಸಿದ ಮಮತೆ, ಆತನ ವಿರಕ್ತ ಸ್ವಭಾವ, ಒಬ್ಬಂಟಿಗನಾಗಿ ಪ್ರಪಂಚದ ಆಸಕ್ತಿ ಇಲ್ಲದವನಂತೆ ವರ್ತಿಸುತ್ತಿದ್ದ ರೀತಿ ಇವು ಒಮ್ಮೊಮ್ಮೆ ಆಕೆಯ ಸ್ಮೃತಿಪಟಲದಲ್ಲಿ ಬರುತ್ತಿದ್ದವು. ಆದರೂ ಆತನ ವಿಚಾರವಾಗಲೀ ಆತನು ಎಲ್ಲಿರುವನೆಂಬುದಾಗಲೀ ತಿಳಿದಿರಲಿಲ್ಲ.

* * *

ಒಂದು ದಿನ ಅವರ ಮನೆಗೆ ಬಂದ ಕೆಲವು ಮಿತ್ರರು ಹೇಳಿದರು. **'ಇಲ್ಲಿಂದ ಬಹು ದೂರದ ಪರ್ವತದ ಹತ್ತಿರ ಮೌನ ಸನ್ಯಾಸಿಯೊಬ್ಬನಿರುವನು. ಆತನು ಆ ಪರ್ವತದ ಗುಹೆಯೊಂದರಲ್ಲಿ ಕಲ್ಲಿನಂತೆ ಕುಳಿತಿರುವನು. ಆತನು ಜೀವಂತನಾಗಿ**ದ್ದರೂ ಈ ಪ್ರಪಂಚದ ಗೊಡವೆ ಅವನಿಗಿಲ್ಲ. ಆತನು ಯೋಗಿಗಳಲ್ಲಿ ಯೋಗಿಯು. ಶಾರೀರಿಕ ವಾಸನೆಗಳನ್ನು ತೊರೆದು ಮಳೆಬಿಸಿಲೆನ್ನದೆ ಆತನ ಉಗ್ರ ತಪಸು ನಡೆಯುತ್ತಿದೆ ಆತನ ಜೀವನವು ಭಕ್ತರು ತಂದೊಪ್ಪಿಸುವ ಹಣ್ಣು ಹಂಪಲುಗಳಿಂದ ನಡೆಯುವದು. ಆತನು ಯಾರೊಡನೆಯೂ ಮಾತಾಡುವದಿಲ್ಲ. ಆತನು ಸಾಕ್ಷಾತ್ ಮನುಷ್ಯ ರೂಪಿನ ಪರಮಾತ್ಮನೇ ಇರಬೇಕು ಆತನ ಅಸಾಮಾನ್ಯ ಶಕ್ತಿಯನ್ನು ಕಂಡು ಅನೇಕರು ಆತನೆಡೆಗೆ ಧಾವಿಸಿ ತಮ್ಮ ಕಷ್ಟ ಸುಖಗಳನ್ನು ಹೇಳಿಕೊಳ್ಳುತ್ತಾರೆ. ಕಾಯಿಲೆ ಕಸಾಲೆಯವರು ಆತನ ಆಶೀರ್ವಾದಕ್ಕಾಗಿ ಹೋಗುತ್ತಾರೆ. ಆದರೂ ಆತನು ಜನರನ್ನು ಕಣ್ಣೆತ್ತಿನೋಡುವದಿಲ್ಲ. ಜನರ ವಿಶ್ವಾಸಕ್ಕನುಗುಣ ಕೆಲವರಿಗೆ ಗುಣವಾದರೆ ಯೋಗಿಯ ಪ್ರಭಾವದಿಂದ ಎಂದು ನಂಬುತ್ತಾರೆ. ಅಹಿತವಾದರೆ ತಮ್ಮ ದುರಾದೃಷ್ಟವೆಂದುಕೊಳ್ಳುತ್ತಾರೆ ಹೇಗೂ ಈ ಮೌನ ಯೋಗಿಯ ಖ್ಯಾತಿ ಎಲ್ಲಾ ದಿಕ್ಕುಗಳಲ್ಲಿಯೂ ಹಬ್ಬಿದೆ. ಆತನ ದರ್ಶನಕ್ಕಾಗಿ ನೂರಾರು ಜನರು ಹೋಗುತ್ತಿದ್ದಾರೆ' ಎಂದರು.

'ಆತನು ನನ್ನ ಸಹೋದರ ಗಣೇಶನಿರಬೇಕು. ಈ ವಿಚಾರ ಈ ಮೊದಲೇ ಅಲ್ಪಸ್ವಲ್ಪ ನಾನು ಕೇಳಿದ್ದೇನೆ' ಎಂದು ಬಾಬು ಹೇಳಿದನು.

'ಆತನು ಬಹಳ ಪವಿತ್ರನೆನಿಸಿದ್ದಾನೆ. ಆತನ ಶಕ್ತಿಯು ಮಹಾ ಶಕ್ತಿ ಇರಬೇಕು' ಜಾಜಿ ಎಂದಳು.

'ಅಲ್ಲ ಜಾಜಿ, ಆತನ ಶಕ್ತಿ ಆತನಲ್ಲಿಲ್ಲ. ಜನರ ವಿಶ್ವಾಸದ ಮೇಲೆ ನಿಂತಿದೆ. ಏಕೆಂದರೆ ಮನುಷ್ಯನ ಮೇಲಿನ ವಿಶ್ವಾಸವೇ ದೇವರ ಮೇಲಿನ ವಿಶ್ವಾಸ' ಬಾಬು ನುಡಿದನು.

• •

ಅದೃಷ್ಟದ ಆಟ ಚೆನ್ನಾಗಿದ್ದ ಬಾಬು ಜಾಜಿಯರ ಹಿರೇ ಮಗ ಪ್ರೇಮನಿಗೆ ಪಾರ್ಶ್ವವಾಯು ರೋಗ ಪ್ರಾರಂಭವಾಗಿ ಆತನಿಗೆ ನಡೆಯುವದು ಕಷ್ಟವಾಯಿತು ಕ್ರಮೇಣ ಇದು ಹೆಚ್ಚಾಗಿ ಏನೇ ಔಷಧಿ ಮಾಡಿದರೂ ಉಪಯೋಗವಾಗಲಿಲ್ಲ. ಕಡೆಗೆ ಜಾಜಿಯು ಗಣೇಶನ ಅಮಾನುಷ ಶಕ್ತಿಯನ್ನು ನೆನೆದು ಆತನಿಂದ ಇದು ನಿವಾರಣೆಯಾಗಬಹುದೆಂದು ಬಾಬುವಿಗೆ ಸೂಚಿಸಿದಳು. ಇದರಿಂದ ಪ್ರಯೋಜನವಾಗುವದಿಲ್ಲವೆಂದು ಬಾಬು ಹೇಳಿದರೂ ಕಡೆಗೆ ತನ್ನ ಪ್ರೀತಿಯ ಮಡದಿಯ ಮಾತಿಗೂ, ಮಗನ ಸ್ಥಿತಿಗೂ ಒಪ್ಪಬೇಕಾಯಿತು. ಕಡೆಗೆ ಅವರು ಮಗುವನ್ನು ಪ್ರಸಿದ್ಧ ಯೋಗಿಯೆಡೆಗೆ ತಂದರು.

ಯೋಗಿಯ ಪರಿಚಯ ಆಗುವಂತಿರಲಿಲ್ಲ. ಆತನ ಸೊರಗಿದ ಶರೀರ, ಬಳುವೇರುತ್ತಿರುವ ಗಡ್ಡ, ಕೇವಲ ಕೌಪೀನಧಾರಿ ಶರೀರ ಇವುಗಳಿಂದ ಹಿಂದಿನ ಗಣೇಶನ ಗುರುತು ಹತ್ತುವಂತಿರಲಿಲ್ಲ. ಬಾಬುವು ಆತನ ಕಣ್ಣುಗಳಿಂದ ಆತನು ಗಣೇಶನೇ ಎಂದು ತಿಳಿದುಕೊಂಡನು. ಆತನ ಮಗುವಿನ ರೋಗದ ವಿಚಾರವನ್ನು ಹೇಳಲಾಯಿತು.

ಯೋಗಿಯು ಕಣ್ತೆರೆದು ನೋಡಿದನು. "ಬಾಬು, ನೀನು ನನ್ನ ಪ್ರತಿಜ್ಞೆಗೆ ಭಂಗ ಮಾಡುತ್ತಿರುವೆ. ಮೌನಧರಿಸಿದ ನನ್ನ ಶಪಥವನ್ನು ಪ್ರಥಮ ಬಾರಿ ಮುರಿಯಬೇಕಾಯಿತು. ಏಕೆ ಇಲ್ಲಿಯ ವರೆಗೆ ಬಂದಿರುವೆ? ನನ್ನಿಂದ ಇದು ಗುಣವಾಗಲಾರದೆಂದು ನಿನಗೆ ತಿಳಿಯದೇ? ಕರ್ಮದ ಫಲವನ್ನು ಭೋಗಿಸಲೇಬೇಕು. ನನಗೆ ಭಗವಂತನ ಆರಾಧನೆ ವಿನಾ ಬೇರೆ ಆಸಕ್ತಿಯಿಲ್ಲ. ಭಗವಂತನ ಮೇಲಲ್ಲದೆ ಬೇರೆ ಪ್ರೀತಿಯೂ ಇಲ್ಲ" ಇಷ್ಟು ಹೇಳಿ ಯೋಗಿಯು ಕಣ್ಮುಚ್ಚಿದನು. ಬಾಬುವು ವಿವಿಧ ರೀತಿಯಿಂದ ಬೇಡಿದನು, ಕಣ್ತೆರೆಯಲಿಲ್ಲ ಅವರು ನಿರಾಶರಾಗಿ ಹಿಂತಿರುಗಿದರು. ಮನೆಗೆ ಬಂದ ಕೆಲವು ದಿನಗಳಲ್ಲಿ ಮಗುವು ಮೃತವಾಯಿತು. ಜಾಜಿಯ ಹೃದಯದಲ್ಲಿ ಯೋಗಿಯ ವಿಚಾರವಾಗಿ ದ್ವೇಷ ತುಂಬಿತ್ತು. ಆತನು ಮನಸ್ಸು ಮಾಡಿದ್ದರೆ ಮಗುವನ್ನು ರಕ್ಷಿಸಬಹುದೆಂಬುದೇ ಆಕೆಯ ವಿಶ್ವಾಸವಾಗಿತ್ತು.

• • •

ಈ ಪಾರ್ಶ್ವವಾಯು ಕಾಯಿಲೆ ರಕ್ತಗತವಾದ ಪರಂಪರೆಯ ರೋಗವೆಂದು ತೋರುತ್ತೆ. ಬಾಬುವು ನಲವತ್ತೈದು ವರ್ಷ ಮುಟ್ಟುವಾಗ ಆತನಿಗೆ ಅದೇ ಕಾಯಿಲೆ ತಲೆದೋರಿತು. ಏನೇ ಔಷಧಿ ಮಾಡಿದರೂ ಪ್ರಯೋಜನವಾಗಲಿಲ್ಲ ಬಾಬುವಿಗೆ ನಾಲಗೆ ಬಾರದು. ತಲೆ ತಿರುಗಿ ಹೋಗಿತ್ತು. ಜಾಜಿಗೆ ಇದನ್ನು ನೋಡಲು ಸಾಧ್ಯವಾಗುತ್ತಿರಲಿಲ್ಲ. ಅನೇಕ ರೀತಿಯ ಔಷಧೋಪಚಾರ ನಡೆದರೂ ಪ್ರಯೋಜನವಾಗಲಿಲ್ಲ ಕಡೆಗೊಮ್ಮೆ ಆಕೆಗೆ ಗಣೇಶನ ಯೋಚನೆಯಾಯಿತು. ಮಗನ ರೋಗ ನಿವಾರಣೆಯ ಬಗ್ಗೆ ನಿರಾಕರಿಸಿದರೂ ತನ್ನ ತಮ್ಮನ ಈ ಕಷ್ಟವನ್ನು ನಿವಾರಿಸುವ ಮನಸ್ಸು ಮಾಡಬಹುದೆಂಬ ವಿಶ್ವಾಸದಿಂದ ಆಕೆ ಯೋಗಿಯಲ್ಲಿಗೆ ಹೋದಳು. ಯೋಗಿಯು ಈಗ ಇನ್ನಷ್ಟು ಕೀರ್ತಿಶಿಖರಕ್ಕೇರಿದ್ದನು. ಆತನನ್ನು ಕಾಣುವದೇ ದುರ್ಲಭವಾಗಿತ್ತು. ಬೆಳಗಿನ ಬ್ರಹ್ಮಮುಹೂರ್ತದಲ್ಲಿ ಮಾತ್ರ ಒಮ್ಮೆ ಆತನು ಹೊರಗೆ ಬರುತ್ತಿದ್ದನು. ಜಾಜಿಯು ರಾತ್ರೆ ಇಡೀ ಕಾದು ಕುಳಿತಳು. ಬ್ರಹ್ಮಮುಹೂರ್ತಕ್ಕೆ ಯೋಗಿಯು ಹೊರಬಂದನು. ಜಾಜಿಯು ಕೈಜೋಡಿಸಿ ಎಲ್ಲಾ ವೃತ್ತಾಂತವನ್ನೂ ಹೇಳಿದಳು ಯೋಗಿಯು ಕುಪಿತನಾಗಿ "ನನ್ನ ಪ್ರತಿಜ್ಞೆಗೆ ಆತಂಕ ತರುತ್ತಿರುವೆ. ಮತ್ತೊಮ್ಮೆ ಮೌನವನ್ನು ಮುರಿಯಬೇಕಾಯಿತು. ನನ್ನಿಂದ ಪ್ರಯೋಜನವಾಗದು ಇಲ್ಲಿಂದ ಹೋಗು" ಎಂದನು.

ಆದರೆ ಜಾಜಿ ಅಲುಗಾಡಲಿಲ್ಲ. ಆಕೆ ಹೇಳಿದಳು, " ನಾನೊಬ್ಬಳೇ ಹೋಗಲಾರೆ.

(ಕಡೇ ಪುಟವನ್ನು ನೋಡಿ)

ಆಚಾರ್ಯ ವಿನೋಬಾ ಭಾವೆ ಮತ್ತವರ ಭೂದಾನ ಯಜ್ಞ.

ಸಾಧು ಸಂತರಿಗೂ, ಋಷಿ ಮುನಿಗಳಿಗೂ ತವರು ಮನೆಯಾದ ಈ ಭರತಖಂಡದಲ್ಲಿ ಈ ಇಪ್ಪತ್ತನೆ ಶತಮಾನದಲ್ಲಿ ಮಹಾತ್ಮಾಗಾಂಧಿಯವರಂಥಾ ಆಧುನಿಕ ಯೋಗಿಗಳು ಜನ್ಮವೆತ್ತಿ ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಹೇಳಿದ "ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ಅಭ್ಯುತ್ಥಾನ ಮಧರ್ಮಸ್ಯ ತದಾತ್ಮಾನಾಂ ಸೃಜಾಮ್ಯಹಂ" ಎಂಬ ಮಾತನ್ನು ಸಾರ್ಥಕಗೊಳಿಸಿದಂತೆ ಮಹಾತ್ಮರವರ ಹಜ್ಜೆಯಲ್ಲಿಯೇ ಹಜ್ಜೆ ಇಟ್ಟು ಮತ್ತೊಬ್ಬ ವ್ಯಕ್ತಿಯು ಇದೇ ಭಾರತದಲ್ಲಿ ತಲೆ ಎತ್ತಿ ಜಗತ್ತಿನ ಅತೀ ಜಟಿಲವಾದ ಸಮಸ್ಯೆಗೆ ಸುಲಭ-ಸರಳವಾದ ಉತ್ತರವನ್ನು ಕಾರ್ಯತಃ ಮಾಡಿ ತೋರಿಸುತ್ತಿರುವನು. ವಿನೋಬಾ ಭಾವೆ ಪುರಾಣಕಾಲದ ಋಷಿಮುನಿಗಳಂತೆ ಗಿರಿಗುಹೆಗಳಲ್ಲಿ ನಿಂತು ಕಣ್ಣು, ಮೂಗು ಮುಚ್ಚಿ ಜನತೆಯಿಂದ ದೂರ ಉಳಿದು ಅನಂತ ತಪಸ್ಸು ಮಾಡುತ್ತಿದ್ದ ಪಂಥದವರಲ್ಲ. ಪ್ರತಿ ದಿನ ಬೆಳಗಿನ ನಾಲ್ಕು ಗಂಟೆಗೆ ಎದ್ದು ಆ ಸುಪ್ರಭಾತದ ಸುಂದರ ಸಮಾರೋಹದಲ್ಲಿ ತನ್ನ ಜೊತೆಗಾರರೊಡನೆ ಹಳ್ಳಿಹಳ್ಳಿ ಸುತ್ತುವ ಅವರನ್ನು ಎಲ್ಲರೂ ನೋಡಬಹುದು. ಹಿನ್ನೆಲೆಯಲ್ಲಿ ಅವರ ಸಹಕೆಲಸಗಾರರ ಸಾಧನ ಸಾಹಿತ್ಯಗಳ ಗಾಡಿ ಇರುತ್ತದೆ. ಗಾಡಿಯೊಳಗಿರುವ ವಸ್ತುಗಳನ್ನು ನೋಡಿದರೆ ವಿನೋಬರು ಹಿಂದಿನ ಸಾಧುಸಂತರಂತೆ ಯಾತ್ರೆ ಹೊರಟಿರುವರೆಂಬುದು ತಿಳಿಯುವದು. ಶಾರೀರಿಕವಾಗಿ ವಿನೋಬಾರು ಭಾರತದ ಆರ್ಯ ಯೋಗಿಗಳಂತೆಯೇ ಇರುವರು. ಒಣಗಿದ ಶರೀರ ಬಗ್ಗಿದ ದೇಹ, ಉದ್ದವಾಗಿ ಬೆಳೆದ ತಲೆಗೂದಲು, ಬರಿಗಾಲು, ದೊರಗು ಖಾದಿ ಇವುಗಳಿಂದ ಈ ೨೦ನೇ ಶತಮಾನದ ಉಗ್ರ ತಪಸ್ವಿಯು ಹೋದಡೆಯಲ್ಲೆಲ್ಲಾ ಜನಮನವನ್ನು ಸೂರೆಗೊಳ್ಳುತ್ತಾ ವಿರಾಜಿಸುತ್ತಾರೆ. ಅವರ ಹಾಸಿಗೆಯ ಜೊತೆಯಲ್ಲಿ ಆಧುನಿಕ ಟೈಪ್ ರೈಟರ್, ಬರವಣಿಗೆಯ ಸಾಧನಗಳು ಇದ್ದು ಆ ಗಾಡಿಯೇ ಅವರ ಸಂಚರಿಸುವ ಕಾರ್ಯಾಲಯವಾಗಿದೆ. ಎರಡು ವರ್ಷಗಳಿಂದ ಇವರು ಕೈಕೊಂಡಿರುವ ಈ ಯಾತ್ರೆಯಲ್ಲಿ ಭೂಮಿ ಇಲ್ಲದ ನಿರ್ಗತಿಕರಿಗೆ ಹಂಚಲು ಒಂಬತ್ತರೆ ಮಿಲಿಯ ಎಕರೆ ಭೂಮಿಯನ್ನು ಸಂಗ್ರಹಿಸಿರುವರು. ಈ ಯಾತ್ರಾರ್ಥಿಗಳು ಆಶಿಸಿದಂತೆ ಭಾರತದಲ್ಲಿ ಈ ರೀತಿ ೫೦ ಮಿಲಿಯ ಎಕರೆ ಭೂಮಿಯನ್ನು ಸಂಗ್ರಹಿಸಿದ್ದಾದರೆ ಚರಿತ್ರೆಯಲ್ಲಿ ಎಂದೂ ಕಂಡು ಕೇಳದ ಅಹಿಂಸಾತ್ಮಕ ಕ್ರಾಂತಿಯನ್ನು ಸಾಧಿಸಿದಂತಾಗುವದು.

ಭೂದಾನ ಯಜ್ಞದ ಪ್ರಾರಂಭ

೧೯೫೧ರಲ್ಲಿ ಪ್ರಥಮತವಾಗಿ ಈ ಭೂದಾನ ಚಳವಳ ಪ್ರಾರಂಭವಾಯಿತು. ಕಮ್ಯೂನಿಸ್ಟ್ ಚಳವಳಿಗಾರರು ಭೂಮಾಲಿಕರ ಕೊಲೆ ಪ್ರಾರಂಭಿಸಿದ್ದ ಹೈದರಾಬಾದಿನ ತೆಲಂಗಾಣದಲ್ಲಿ ಗ್ರಾಮೀಣ ಕೆಲಸಗಾರರ ಸಭೆಯೊಂದು ಸೇರಿತ್ತು. ಹಣದ ಉಪಯೋಗ ಮಾಡದ ವಿನೋಬಾರವರು ಈ ಸಭೆಗೆ ೩೦೦ ಮೈಲು ನಡೆದುಕೊಂಡು ಹೋದರು. ದಾರಿಯಲ್ಲಿ ಅವರು ಹಳ್ಳಿಯ ಬಡಜನರ ಸ್ಥಿತಿಯನ್ನು ಸ್ವತಃ ನೋಡಿದರು. ವ್ಯವಸಾಯ ಮಾಡಲು ಭೂಮಿ ಇಲ್ಲದೆ, ಕೆಲಸ ಮಾಡಲು ಉದ್ಯೋಗವಿಲ್ಲದೆ ಕಷ್ಟಪಡುತ್ತಿರುವ ಬಡಜನರನ್ನು ಕಂಡರು. ಹೈದರಾಬಾದಿಗೆ ತಲುಪಿದೊಡನೆ ಕಮ್ಯೂನಿಸ್ಟ್ ಉಪಟಳ ನಡೆಯುತ್ತಿರುವ ಗ್ರಾಮವೊಂದಕ್ಕೆ ಹೋಗಿ ಅಲ್ಲಿಯ ಭೂಮಾಲಿಕರಿಗೆ ಈ ರೀತಿ ವಿನಂತಿ ಮಾಡಿದರು: "ನಿಮಗೆ ನಾಲ್ಕು ಮಕ್ಕಳಿದ್ದು ಐದನೇ ಮಗನೊಂದು ಜನಿಸಿದರೆ ನಿಮ್ಮ ಭೂಮಿಯ ಒಂದು ಪಾಲನ್ನು ಆತನಿಗೂ ಕೊಡುವದಿಲ್ಲವೇ? ಅದೇ ರೀತಿ ನನ್ನನ್ನು ನಿಮ್ಮ ಐದನೇ ಮಗನೆಂದು ಭಾವಿಸಿ ಐದನೇ ಒಂದು ಪಾಲು ಭೂಮಿಯನ್ನು ನನಗೆ ಕೊಡಿ." ಈ ಅಪೇಕ್ಷೆಯು ಕಮ್ಯೂನಿಸ್ಟ್ ಭಯದಿಂದ ಪೀಡಿತರಾಗಿದ್ದ ಭೂಮಾಲಿಕರ ಹೃದಯವನ್ನು ತಟ್ಟಿತು. ಭೂದಾನ ಚಳವಳವು ಪ್ರಾರಂಭವಾಯಿತು. ಹೈದರಾಬಾದಿನಲ್ಲಿ ಅವರು ಸಂಚರಿಸಿದ ಎರಡು ತಿಂಗಳಲ್ಲಿ ೧೨,೦೦೦ ಎಕರೆ ಭೂಮಿಯು ಅವರಿಗೆ ದೊರೆಯಿತು. ಕಮ್ಯೂನಿಸ್ಟರ ಪ್ರಭಾವವು ಆ ಭಾಗದಲ್ಲಿ ಕಡಿಮೆಯಾಗ ತೊಡಗಿತು. ಹೈದರಾಬಾದಿನಿಂದ ವಿನೋಬಾರು ಪ್ಲಾನಿಂಗ್ ಕಮಿಷನಿನ ಸಂಬಂಧ ನೆಹರೂರವರನ್ನು ಕಾಣಲು ಡೆಲ್ಲಿಗೆ ಹೋದರು. ಡೆಲ್ಲಿಗಿರುವ ೬೦೦ ಮೈಲುಗಳನ್ನು ನಡೆಯಲು ಅವರಿಗೆ ೨ ತಿಂಗಳು ಬೇಕಾಯಿತು. ಈ ಪ್ರವಾಸದಲ್ಲಿ ಅವರು ತಮ್ಮ ಭೂದಾನ ಯಜ್ಞದ ವಿಚಾರವಾಗಿ ಪ್ರಚಾರ ಮಾಡುತ್ತಾ ೧೮,೦೦೦ ಎಕರೆ ಭೂಮಿಯನ್ನು ಬಡಜನರಿಗಾಗಿ ಸಂಗ್ರಹಿಸಿದರು. ವಿನೋಬಾರ ಈ ಪ್ರಭಾವವನ್ನು ಕಂಡು ವಿವಿಧ ಪ್ರಾಂತಗಳು ಅವರ ಈ ಯಜ್ಞದಲ್ಲಿ ಸಹಕರಿಸಲು ನಾನು ತಾನೆಂದು ಮುಂದಾದವು.

ಛಾ: ಶ್ರೀ ಬಿ. ಪಿ. ಗಣಪತಿ.

ಜನರೇಕೆ ಗೌರವಿಸುವರು?

ವಿನೋಬಾರ ಈ ಆಶ್ಚರ್ಯಕರ ಪ್ರಭಾವಕ್ಕೆ ಕಾರಣವೇನು? ಆರು ವರ್ಷಗಳಿಗೆ ಮೊದಲು ಅವರು ಮಧ್ಯಭಾರತದ ಹಳ್ಳಿಯಲ್ಲಿ ಆಗಾಧ ರೈತನಾಗಿ ಜೀವಿಸುತ್ತಿದ್ದರು. ಆದ ಭಾರತದ ಅಸದಾಸೀಯ ರಕೆಯಾದಾಗ ತನ್ನ ಚರಕವನ್ನಾಗಲೀ ಪೈನಂದಿನ ನಿತ್ಯಕರ್ಮಗಳನ್ನಾಗಲೀ ಬಿಟ್ಟವರಲ್ಲ. ಆದರ ಗುಡಿಸಲಿನಲ್ಲಿ ಅವರು ನಡೆಸುತ್ತಿದ್ದ ಪ್ರಾರ್ಥನೆಯು ತತ್ವ ಜಯಪ್ರದವಾಗಿ ತೋರುಬಂದಿದೆ. ಹಿಂದೂದೇಶದ ದಾರಿದ್ರ್ಯ ಬಡತನದ ಪ್ರತೀಕವಂತಿರುವ ಅವರ ಬಡಕಲು ದೇಹ, ಅವರ ಅಸ್ಪಷ್ಟ ಕನ್ನಡಕದ ಹಿನ್ನಲೆ ಹೊಳೆಯುತ್ತಿರುವ ದಯಾಪೂರ್ಣ ಕಣ್ಣುಗಳು, ಬಾಯ ಬದಿಯಲ್ಲಿ ತಿರುಗಿರುವ ಅವರ ಮುಗುಳ್ನಗೆ, ಶತ್ರುವನ್ನೂ ಕೂಡ ಸಮಾಧಾನ ಗೊಳಿಸಬಲ್ಲ ಅವರ ನಿರ್ಮಲ ನಗು ಈ ರೀತಿಯ ಸರಳ ಜೀವನವು ಜನತೆಯ ಹೃದಯದಲ್ಲಿ ಅವರಿಗೆ ಸ್ಥಾನಗಳಿಸಿವೆ.

ವಿನೋಬಾರು ಸಂಸ್ಕೃತ, ಮರಾಠಿ ಇವುಗಳಲ್ಲಿ ಉಚ್ಚಶ್ರೇಣಿಯ ಪಂಡಿತರು. ಇಂಗ್ಲಿಷ್ ಭಾಷೆಯ ಮೇಲೂ ಅವರಿಗೆ ಅಸಾಧಾರಣ ಹಿಡಿತವಿದೆ. ಈ ಪಾಂಡಿತ್ಯವನ್ನೆಲ್ಲಾ ತ್ಯಜಿಸಿ ಹಳ್ಳಿಯ ರೈತನ ಜೀವನವನ್ನು ಅವರು ಸ್ವೀಕರಿಸಿದ್ದಾರೆ. ಇಂಥಾ ಹಳ್ಳಿಯ ಜೀವನ ಮಾರ್ಗದಿಂದ ಇಡೀ ಜಗತ್ತಿನ ದೃಷ್ಟಿಯನ್ನು ತನ್ನೆಡೆಗೆ ಎಳೆದಿರುವ ಇವರ ಆತ್ಮಬಲ ಅವರ್ಣನೀಯವಾದುದು. ಭರತಖಂಡವು ವಿವಿಧ ಸಂಸ್ಕೃತಿ, ನೀತಿಗಳ ಕಲಸು ಮೇಲೋಗರವಾಗಿ ತನ್ನ ಆರ್ಯ ಧರ್ಮ ನೀತಿಗಳ ಬಗ್ಗೆ ಅನಾಸಕ್ತಿಯಿಂದಿದ್ದರೂ ಕೂಡ ಇಂದಿನ ೨೦ನೇ ಶತಮಾನದಲ್ಲೂ ಅದು ತ್ಯಾಗಕ್ಕೆ ಬಹು ದೊಡ್ಡ ಬೆಲೆಯನ್ನು ಕೊಟ್ಟಿದೆ; ಕೊಡುತ್ತಿದೆ. ಮಹಾತ್ಮಾಗಾಂಧಿಯವರು ತಮ್ಮ ಸರ್ವಸ್ವವನ್ನು ತೊರೆದು ಬಡ ರೈತನ ಸಾಲಿನಲ್ಲಿ ಸಮಾನರಾಗಿ ನಿಂತಾಗಲೇ ಜನತೆ ಅವರನ್ನು "ಮಹಾತ್ಮಾ" ಎಂದಿತು. ಅದೇ ರೀತಿ ತನ್ನ ಸರ್ವಸ್ವವನ್ನೂ ತ್ಯಾಗ ಮಾಡಿ ಹಳ್ಳಿಯ ರೈತಬಂಧುವರಲ್ಲಿ ಒಂದಾಗಿ ವಿಲೀನವಾಗಿರುವ ಇವರು ಜನಹೃದಯಾಕಾಶದಲ್ಲಿ ಉದಿಸಿದ ಹೊಸ ತಾರಕೆಯಾಗಿದ್ದಾರೆ. ಹರೆಯದಲ್ಲಿ ಸುಖಭೋಗವನ್ನು ಭೋಗಿಸಿ, ಜಗತ್ತಿನ ಕಾರ್ಯರಂಗದಲ್ಲಿ ಮಾಡಬೇಕಾದುದನ್ನು ಮಾಡಿ ಕಡೆಗೆ ವಯಸ್ಸಾದಾಗ ಜೀವನದಿಂದ ನಿವೃತ್ತರಾಗಿ ಗಂಗಾತಟ, ಹಿಮಾಲಯಗಳಲ್ಲಿ ವಾನಪ್ರಸ್ಥಾಶ್ರಮ ಕೈಕೊಳ್ಳುವ ಪದ್ಧತಿಯನ್ನು ಬದಲು ಮಾಡಿ ವಿನೋಬಾರು ಹೊಸ ಹಾದಿ ತುಳಿದಿರುವರು. ತನ್ನ ಬಾಲ್ಯ ಜೀವನಗಳನ್ನು ಹಳ್ಳಿಯ ತ್ಯಾಗಮಯ ಜೀವನವೆಂಬ ತಪಸ್ಸಿನಲ್ಲಿ ಕಳೆದು ಇಂದು ತನ್ನ ೫೭ನೇ ವಯಸ್ಸಿನಲ್ಲಿ ಅವರು ತನ್ನ ಆದರ್ಶ ತತ್ವಗಳನ್ನು ಜಗತ್ತಿನ ಮುಂದಿಟ್ಟು ಜಗತ್ತಿನ ಕಾರ್ಯರಂಗಕ್ಕೆ ಕಾಲಿಕ್ಕಿದ್ದಾರೆ.

ತ್ಯಾಗದ ಪರಮಾವಧಿ

ಹಿಂದೂದೇಶದ ನೂರಾರು ಶ್ರೀಮಂತರು ವಿನೋಬರಿಗೆ ತಮ್ಮ ಕಾರುಗಳನ್ನು ಮುಫತ್ತಾಗಿ ಕೊಡಲು ಮುಂದೆ ಬಂದಿದ್ದಾರೆ. ಅವರಿಗೆ ಬೇಕಾದ ಅನುಕೂಲತೆಗಳನ್ನು ಒದಗಿಸಲು ನಾನು ತಾನೆಂದು ಸ್ಪರ್ಧೆ ನಡೆಸುತ್ತಿದ್ದಾರೆ. ಆದರೆ ಈ ಪ್ರಪಂಚದಲ್ಲಿ ನೂಲು ನೂಲುವ ಚರಖಾವೊಂದು ಮತ್ತು ಕೈಯಿಂದ ನೂತ ಕೆಲವು ಬಟ್ಟೆಗಳು ಬಿಟ್ಟರೆ ವಿನೋಬಾರಿಗೆ ಆಸ್ತಿಯಿಲ್ಲ. ಕಾರುಗಳಲ್ಲಿ ಸುತ್ತಿ ಕೆಲಸ ಮಾಡಿದರೆ ಸ್ವಲ್ಪ ಸಮಯದಲ್ಲಿ ಹೆಚ್ಚಿನ ಕೆಲಸ ಮಾಡಬಹುದೆಂದು ಅನೇಕರು ಅವರಿಗೆ ಸೂಚಿಸಿದ್ದಾರೆ. ಆದರೆ ಹಳ್ಳಿಯ ರೈತನಿಗೆ ಉಪಯೋಗಿಸಲು ದೊರೆಯದ, ಆತನ ಶಕ್ತಿಗೆ ಮೀರಿದ ಯಾವ ವಸ್ತುವೂ ಅವರಿಗೆ ಬೇಕಿಲ್ಲ. ವಿನೋಬಾರ ಆರೋಗ್ಯ ಚೆನ್ನಾಗಿಲ್ಲ. ರಕ್ತಾತಿಸಾರದಿಂದ ಅವರು ಆಗಾಗ್ಗೆ ನರಳುತ್ತಾರೆ. ಇದರಿಂದಾಗಿ ಅವರು ವಯಸ್ಸಿಗೆ ಮೊದಲೇ ವೃದ್ಧರಾಗಿರುವರು. ಆದರೂ ಕಾಯಿಲೆ ಬಿದ್ದಾಗ ರೈತನಿಗೆ ದೊರೆಯದ ಯಾವ ಔಷಧಿಯನ್ನೂ ಅವರು ಉಪಯೋಗಿಸರು. ಈ ರೀತಿಯಾಗಿ ಆದರ್ಶ ರೈತನಾಗಿ ಆ ತ್ಯಾಗದ ಫಲವಾಗಿ ದಿನೇ ದಿನೇ ಅವರ ಶರೀರ ಕೃಶವಾಗುತ್ತಿದ್ದರೆ ಅದು ಆಶ್ಚರ್ಯವಲ್ಲ. ಆದ್ದರಿಂದ ದೇಶದ ಬಡವರು, ದೀನದರಿದ್ರರು ಇವರನ್ನು ದೇವರ ಮನುಷ್ಯರೆಂದು ಗಣಿಸಿ ಗೌರವಿಸುತ್ತಾರೆ. ಸಹೋದರರಿಗೆ ದಾನವಾಗಿ ಕೊಡುವಂಥಾ ಸ್ಥಿತಿಯಲ್ಲಿರುವವರು ಅದೃಷ್ಟವಂತರು. ತಮ್ಮ ಹಕ್ಕಾಗಿರುವದನ್ನು ಹೊಂದಿಕೊಳ್ಳುವಾಗಲೂ ನಾಚಿಕೆ ಪಡಬೇಕಿಲ್ಲವೆಂದು ಅವರು ಹೇಳುತ್ತಾರೆ. ದೊಡ್ಡ ಜಮೀನ್ದಾರರಿಂದ ಅವರ ಆಸ್ತಿಯ ಆರನೇ ಒಂದಂಶಕ್ಕಿಂಥಾ ಕಡಿಮೆ ತೆಗೆದುಕೊಳ್ಳಲು ಅವರು ನಿರಾಕರಿಸುತ್ತಾರೆ. ಹೊಗಳಿಕೆ, ಪ್ರಶಂಸೆಯ ದೃಷ್ಟಿಯಿಂದ ಭೂಮಿ ಕೊಡುವವರಿಗೆ ವಿನೋಬಾರ ಗೌರವವಿಲ್ಲ. ಹೃದಯ ಪರಿವರ್ತನೆಯಿಂದ ಆ ದಾನ ಬರಬೇಕು.

ವಿಶ್ವಪ್ರೇಮಿ

ವಿನೋಬರ ಅಖಂಡ ಪ್ರೇಮವು ತಾರ ತಮ್ಯ ರಹಿತವಾದುದು. ಅವರ ದೃಷ್ಟಿಯಲ್ಲಿ ಮೇಲು, ಕೀಳು, ಧನಿಕ ಬಡವರೆಂದಿಲ್ಲ. ಎಲ್ಲರೂ ಸಮಾನ ಹಕ್ಕುದಾರರು. ಪ್ರಪಂಚವು ಸರ್ವರ ಹಿತಕ್ಕಲ್ಲದೆ ಧನವಂತರ, ವಿದ್ಯಾವಂತರ ಹಿತಕ್ಕೆ ಮಾತ್ರವಲ್ಲ. ಅವರಿಗೆ ರಾಜಕೀಯ ಭಿನ್ನಭೇದವೂ ಇಲ್ಲ. ಕಮ್ಯೂನಿಸ್ಟರಿರಲಿ, ಕಾಂಗ್ರೆಸಿಗರಿರಲಿ ಎಲ್ಲರೂ ಅವರಿಗೆ ಒಂದೇ. ಕಮ್ಯುನಿಸ್ಟರನ್ನು ಕುರಿತು ಅವರು ಪ್ರೇಮದಿಂದ ಹೀಗೆ ಹೇಳುತ್ತಾರೆ ' ನನ್ನ ದ್ವೇಷಕ್ಕೆ ಎಡೆ ಕೊಡದೆ ಸರ್ವರ ಹಿತಕ್ಕಾಗಿ ನೀವು ದುಡಿಯುವದಾದರೆ ನಿಮ್ಮನ್ನು ಸೇರಿ ನಿಮ್ಮೊಡನೆ ಕೆಲಸ ಮಾಡಲು ನಾನು ಸದಾ ತಯಾರಿರುವೆನು" ಕಮ್ಯೂನಿಸ್ಟರು ವಿನೋಬಾರ ಈ ಭೂದಾನ ಚಳವಳವನ್ನು ಟೀಕಿಸಿದರೂ ಕೂಡ ಅನೇಕ ಕಡೆ ಪ್ರಾಮುಖ್ಯ ಕಮ್ಯುನಿಷ್ಟ್ ನಾಯಕರುಗಳು ತಮ್ಮ ಭೂಮಿಯನ್ನು ದಾನವಾಗಿ ಕೊಟ್ಟ ಉದಾಹರಣೆಗಳಿವೆ. ಪ್ರತಿಯೊಬ್ಬನ ಹೃದಯದಲ್ಲಿ ಸುಪ್ತವಾಗಿರುವ ಅಖಂಡ ಪ್ರೇಮಜ್ಯೋತಿಯನ್ನು ಜಾಗೃತಿಗೊಳಿಸಿ ಎಲ್ಲರನ್ನು ಸಮಾನತೆಯಲ್ಲಿ ಬದುಕುವಂತೆ ಪ್ರೇರೇಪಿಸುವ ಹೃದಯ ಪರಿವರ್ತನೆಯ ಮಾರ್ಗ ಅವರದು.

ವಿನೋಬಾರದು ಸರ್ವಗ್ರಾಹಿಯಾದ ವ್ಯಕ್ತಿತ್ವ. ಅವರು ೧೬ ಭಾಷೆಗಳನ್ನು ಬಲ್ಲರು. ತಮ್ಮ ೪೬ನೇ ವಯಸ್ಸಿನಲಿ ಅವರು ಪರ್ಶಿಯನ್ ಮತ್ತು ಅರೇಬಿಕ್ ಭಾಷೆಗಳನ್ನು ಕಲಿತರು. ಇವುಗಳ ಸಹಾಯದಿಂದ ಸರ್ವ ಜನರೊಡನೆ ಅವರವರ ಭಾಷೆಯಿಂದ ಅವರು ಮಾತಾಡಿ ಅವರ ಕಷ್ಟ ಸುಖಗಳನ್ನು ಅರಿತುಕೊಳ್ಳಬಲ್ಲರು. ಅವರ ದೃಢ ಸಂಕಲ್ಪದ ಬಗ್ಗೆ ಅನೇಕ ಕಥೆಗಳಿವೆ. ತಮ್ಮ ಹತ್ತನೇ ವಯಸ್ಸಿನಲ್ಲಿ ಕೈಕೊಂಡ ಬ್ರಹ್ಮಚರ್ಯ ವ್ರತವು ಇಂದು ಅವರ ಜೀವನದ ಜೀವಾಳವಾಗಿದೆ. ತನ್ನ ೨೦ನೇ ವಯಸ್ಸಿನಲ್ಲಿ ಗಾಂಧೀಜಿಯ ಅನುಯಾಯಿಯಾಗಿ ಜನಸೇವಕನಾದಾಗ ತನಗೆ ವಿದ್ಯಾರ್ಥಿ ಜೀವನದಲ್ಲಿ ದೊರೆತಿದ್ದ ಸರ್ಟಿಫಿಕೇಟ್, ಡಿಪ್ಲೊಮಾ—ಅವರು ತೀಕ್ಷ್ಣಮತಿಯ ವಿದ್ಯಾರ್ಥಿಯೂ ಪ್ರಸಿದ್ಧ ಗಣಿತ ಶಾಸ್ತ್ರಜ್ಞರೂ ಆಗಿದ್ದರು ಮೊದಲಾದುವನ್ನು ಅಗ್ನಿಗಾಹುತಿ ಮಾಡಿ ಸಾಮಾನ್ಯ ರೈತರ ಸಾಲಿನಲ್ಲಿ ಸೇರಿದರು. ಕೆಲವು ವರ್ಷಗಳ ನಂತರ ತನ್ನ ತಾಯಿ ಮೃತಳಾದಾಗ ಆಕೆಯ ಚಿತಾಗ್ನಿಯು ಬ್ರಾಹ್ಮಣ ಪುರೋಹಿತರಿಂದ ಹಾಕಲ್ಪಡಬಾರದೆಂದು ವಿರೋಧಿಸಿದರೂ ಕುಟುಂಬದವರು ಕೇಳದ್ದರಿಂದ ಶವಸಂಸ್ಕಾರಕ್ಕೆ ಕೂಡ ಅವರು ಹೋಗಲಿಲ್ಲ! ಅವರು ಇಂದಿಗೂ ಕೂಡ ಬರಿ ಹಾಲು ಬತ್ತಿ ಉಡುವವರು. ಆಹಾರದಲ್ಲಿ ಯಾವ ಮಸಾಲೆಯನ್ನು ಕಡೆಗೆ ಉಪ್ಪನ್ನೂ ಸೇವಿಸದವರು! ಈ ರೀತಿಯ ವೈರಾಗಿ ಜೀವನ ನಡೆಸುವ ವಿನೋಬರು ಬಹಳ ಅನುಭಾವವನ್ನು ತೋರಿದ ಮಹಾ ಪುರುಷರು. ತನ್ನಂತೆ ವರ್ತಿಸಬೇಕೆಂದು ಅವರು ಯಾರಿಗೂ ಹೇಳುವವರಲ್ಲ. ಹಾಗೆ ಉಪದೇಶ



ಭೂದಾನ ಯಜ್ಞಕ್ಕಾಗಿ ಪ್ರತ್ಯಕ್ಷವಾಗಿ ದುಡಿಯುತ್ತಿರುವ ಶ್ರೀ ಜಯಪ್ರಕಾಶ ನಾರಾಯಣ

ಏಕೆ ಮಾಡಬಾರದೆಂದು ಕೇಳಿದವರಿಗೆ, "ಚಿಂಕೆಯು ತನಗಾಗಿ ಉಪ್ಪು ತರುತ್ತದೆ. ಆದರೆ ಮೇಲೆ ಯಾರಾದರೂ ಮಡಕೆ ನೀರು ಇಟ್ಟು ಅನ್ನ ಬೇಯಿಸಿ ಊಟ ಮಾಡುವದು ಚಿಂಕೆಗೆ ಸಂಬಂಧಿಸಿದ ಕೆಲಸವಲ್ಲ. ಚಿಂಕೆಯ ಕರ್ತವ್ಯದ ಮಿತಿ ಎಂದರೆ ಉರಿಯುವದು ಮಾತ್ರ' ಎನ್ನುತ್ತಾರೆ.

ಅವರ ದಿನಚರಿ

ಹರಿಜನ ಬಡ ಕುಟುಂಬದ, ಎಡೆ ಮುಸ್ಲಿಮನೊಬ್ಬನ ಯಾ ಕಾವು ರೈತ ಪರಿವಾರದವರೊಬ್ಬರ ಮನೆಯಲ್ಲಿ ಅವರು ಉಳಕೊಂಡಿರುತ್ತಾರೆ. ಎಲ್ಲ ಕಾಲ ವಿಸ್ತಾರ ಬೆಳಿಗ್ಗೆ ೩.೩೦ ಗಂಟೆಗೆ ಅವರು ಏಳುತ್ತಾರೆ. ಜೊತೆಗಾರರ ಎರಡು ನಾಲ್ಕು ಗಂಟೆಯ ಸಮಯಕ್ಕೆ ತಮ್ಮ ಕಾರ್ಯಕ್ರಮಗಳನ್ನು ಗಂಟು ಮೂಟೆ ಕಟ್ಟುತ್ತಾರೆ. ೪ ಗಂಟೆಯಿಂದ ಪ್ರಾರ್ಥನೆ ಮತ್ತು ನಾಮ ಸೂತ್ರಯಜ್ಞದ ನಂತರ ಎಲ್ಲರೂ ತಮ್ಮ ಮುಂದಿನ ಠಾಣೆಗೆ ಹೊರಡುವರು. ಅವಾಗಾಗ ವಾಗ ತಾವು ತಲುಪಿದ ದಾರಿಯ ಪಕ್ಕದಲ್ಲಿ ತಮ್ಮ ಬೆಳಗಿನ ಉಪಹಾರವನ್ನು ಮುಗಿಸುವರು. ಉಪಹಾರ ಮಾಡುತ್ತ, ವಿನೋಬರು ಬಂದ ಹಳ್ಳಿಗರೊಡನೆ ಅವರ ಕಷ್ಟಸುಖಗಳನ್ನು ತಿಳಿದುಕೊಳ್ಳುವರು. ಬೆಳಿಗ್ಗೆ ಹತ್ತು ಗಂಟೆಗೆ ಅವರು ತಮ್ಮ ನಿಶ್ಚಿತ ಸ್ಥಳಕ್ಕೆ ಬರುವರು. ಅಲ್ಲಿ ಅವರು ಮರುದಿನ ಬೆಳಗಿನ ನಾಲ್ಕು ಗಂಟೆಯವರೆಗೆ ತಂಗುವರು. ಅಲ್ಲಿ ಮರದಡಿಯಲ್ಲಿ ನೂಲಲು ಪ್ರಾರಂಭಿಸಿ ಜಮೀನ್ದಾರರನ್ನು ಭೇಟಿಯಾಗುವರು. ಜಮೀನ್ದಾರರು ಗಡುಸಾಗಿದ್ದರೆ ತನ್ನ ಎಚ್ಚರಿಕೆಯ ಬೆರಳನ್ನು ಅವರೆಡೆಗೆ ತೋರಿಸಿ, ಬಡಜನರಿಗೆ ಸಲ್ಲಬೇಕಾದ ಪಾಲು ಅವರಿಗೆ ದೊರೆಯದಿದ್ದರೆ ದೇಶದಲ್ಲಿ ಎಂಥಾ ರಕ್ತಕ್ರಾಂತಿಯಾದೀತು, ಜಮೀನ್ದಾರರ ವಿನಾಶ ಹೇಗಾದೀತು, ಎಂಬುದನ್ನು ಹೇಳುವರು. ಸಾಯಂಕಾಲದ ೫ ಗಂಟೆಗೆ ಕಾಲು ಹೆಂಗಸರಿಂದ ಅಲಂಕೃತವಾದ ಜನ್ಮಸ್ಥಳದಲ್ಲಿ ಸಂಧ್ಯಾಪ್ರಾರ್ಥನ ನಡೆಯುವುದು. ಅಲ್ಲಿ ಜಮೀನ್ದಾರರ ತಮ್ಮ ಕಾಣಿಕೆಯನ್ನು ವಿನೋಬಾರ ಮುಂದಿಡುವರು. ಅವರ ಮಾತು, ಅವರ ಸಂಕೇತದ ಆದರ್ಶ ಹೃದಯ ಸ್ಪರ್ಶವರ್ತನೆ ಇವು ಸಂಪದದಲ್ಲಿ ಕೆಲವರು ದಾನವು ಪ್ರತಿಸಂಸ್ಕಾರ ತನ್ನ ಸ್ವಂತದುದನ್ನು ನೀಡಲು ಮುಂದೆ ಬರುವನು. ವಿನೋಬರಿಗೆ ಆಗ ದಾನದ ದಾನ ದೊರೆಯಿತೆಂದು ಸಂತೋಷವಿಲ್ಲ, ದೊರೆಯಲಿಲ್ಲವೆಂದು ವ್ಯಸನವಿಲ್ಲ. ಪ್ರತಿ ಗ್ರಾಮದಲ್ಲಿ ಭೂವಿತರಣೆಗೆ ಯೋಗ್ಯ ಸಮಿತಿಯನ್ನು ನೇಮಿಸಿ ಬರಿ ಸದೆಸ ಬಡಜನರಿಂದ ಹತ್ತು ವರ್ಷಗಳ ವರೆಗೆ ಆ ಭೂಮಿಯನ್ನು ಮಾರಬಾರದೆಂದೂ, ದೇವರ ಪ್ರಸಾದವೆಂದು ತಿಳಿದು ಭಕ್ತಿಯಿಂದ ವ್ಯವಸಾಯ ಮಾಡುವವೆಂದೂ ಭರವಸೆ ತೆಗೆದುಕೊಳ್ಳುವರು. ಎರಡು ಕಾಲದ ಗಂಟೆಗೆ ಈ ಕೆಲಸವೆಲ್ಲಾ ಮುಗಿದು ವಿನೋಬಾರು ಎಂಟು ಗಂಟೆಗೆ ಶಯನ ಮಾಡುವರು.

ವಿನೋಬರಿಗೆ ಪ್ರಚಾರದ ಬಯಕೆ ಇಲ್ಲ. ಪತ್ರಿಕೆಯ ಒಂದು ಲೇಖನ ಅವರ ವಿಚಾರದ ಬರೆಯಲ್ಪಟ್ಟಿದೆಯೆಂದರೆ ಅವರು ನೊಂದುಕೊಳ್ಳಬಹುದು. ಅವರ ಭಾವ ಚಿತ್ರಗಳನ್ನು ಕಾಣಿಸದೇ ಅಪರೂಪ. ಗಾಂಧೀಜಿಯವರ ಕಾಲೆಯಾಗದಿರುತಿದ್ದರೆ ತಾನು ತನ್ನ ಗ್ರಾಮದಿಂದ ಹೊರ ಬರುತ್ತಿಲ್ಲವೆಂದು ಅವರು ಹೇಳುತ್ತಾರೆ. ಅವರು ಗಾಂಧಿಭಕ್ತರಾದರೂ ಗಾಂಧೀಜಿಯವರನ್ನು ಅನುಕರಿಸುವವರಲ್ಲ. ಸಾರ್ವಜನಿಕ ಭಾಷಣಗಳಲ್ಲಿ ಗಾಂಧೀಜಿಯವರ ವಿಚಾರ ಅವರು ಮಾತಾಡುವದೇ ಇಲ್ಲ. ಗಾಂಧೀಜಿಯವರ ಸರಳ ಜೀವನ ತತ್ವವನ್ನು ಪ್ರತಿದಿನ ಅನುಷ್ಠಾನದಲ್ಲಿ ಪರಿಪಾಲಿಸುವವರಾದರೂ ಗಾಂಧೀ ತತ್ವ ಬೋಧಿಸುವವರಲ್ಲ. ಬೆಳಗುತ್ತಿರುವ ಒಂದು ದೀಪದಿಂದ ಮತ್ತೊಂದು ದೀಪವು ಹಚ್ಚಲ್ಪಟ್ಟು ಎರಡೂ ಪ್ರತ್ಯೇಕವಾಗಿ ಬೆಳಗುವಂತೆ ಗಾಂಧಿ ಮತ್ತು ವಿನೋಬಾರ ಜೀವನ.

ಭರತಖಂಡದ ಆಶಾಜ್ಯೋತಿ

ವಿನೋಬರಿಗೆ ಜನತೆಯ ಮೇಲೆ ಅಳಿಯಲಾರದ ವಿಶ್ವಾಸವಿದೆ. ಜನತೆ ದಿನದಿಂದ ದಿನಕ್ಕೆ ಉತ್ತಮರಾಗುತ್ತಿರುವರೆಂಬುದು ಅವರ ನಂಬಿಕೆ. ಬುದ್ಧದೇವನ ಕಾಲದಲ್ಲಿ ಮಹಾತ್ಯಾಗಿ ಬುದ್ಧನು ಸ್ವಲ್ಪ ಸ್ಥಳವನ್ನು ಹಣ ಕೊಟ್ಟು ಪಡೆಯಬೇಕಾದ ಪರಿಸ್ಥಿತಿ ಬಂದಿತ್ತೆಂದೂ ಆದರೆ ಇಂದು ತನ್ನಂಥ ಬಡ ವ್ಯಕ್ತಿಯ ಕರೆಗೆ ಕಿವಿಗೊಟ್ಟು ಸಾವಿರಾರು ಎಕರೆ ಭೂಮಿಗಳನ್ನು ಕೊಡುವಷ್ಟು ಜನರು ಒಳ್ಳೆಯವರಾಗಿದ್ದಾರೆಂದೂ, ಅವರು ಹೇಳುತ್ತಾರೆ. ವಿನೋಬರು ಭಾರತದ ಆರ್ಷೇಯ ಋಷಿ ಮುನಿಗಳ, ವಿಶ್ವ ಸಂಸ್ಕೃತಿಯ ಮೂರ್ತಿಸ್ವರೂಪರು. ಅವರ ಮಾತಿನಲ್ಲಿ ಆಡಂಬರವಿರಲಿಲ್ಲ. ಅದು ಇಂದಿನ ನಾಗರಿಕ ಕಿವಿಗೆ ರುಚಿಸ ಬಂದಾದ್ದೂ ಅಲ್ಲ. ಆದರೆ ಅವರ ಹೃದಯದ ಪಾವಿತ್ರ್ಯವು ಅವರ ಮಾತಿಗೆ ಅಂಥಾ ಶಕ್ತಿಯನ್ನು ಕೊಟ್ಟಿದೆ. ಅವರ ಈ ಯಾತ್ರೆಯು ಅವರ ಕೃತಿಮದ ವರೆಗೆ ನಡೆಯುವದು. ಅವರು ತಮ್ಮ ಜೀವಮಾನದಲ್ಲಿ ತಾನು ಯೋಚಿಸಿದಂತೆ ೫೦ ಮಿಲಿಯ ಎಕರೆ ಭೂಮಿಯನ್ನು ಸಂಗ್ರಹಿಸಿ ಭಾರತದ ಭೂ ಸಮಸ್ಯೆಯನ್ನೂ, ಕಮ್ಯೂನಿಸ್ಟರ ವಿನಾಶ ಮಾರ್ಗವನ್ನೂ ತಪ್ಪಿಸಲು ಅಶಕ್ತರಾಗಬಹುದು. ಆದರೆ ಅವರು ತೋರಿಸಿರುವ ಹೃದಯ ಪರಿವರ್ತನೆಯ ಮಾರ್ಗದಿಂದಲೇ ಜಗತ್ತಿನ ಶಾಂತಿ ಎಂಬುದು ಇಂದಲ್ಲ ನಾಳೆ ಜಗಜ್ಜನಕ್ಕೆ ಮನವರಿಕೆಯಾಗದಿರದು. ೨೦ನೇ ಶತಮಾನವು, ರಾಕೆಟ್, ಪರಮಾಣು ಬಾಂಬು, ಮೊದಲಾದುವುಗಳಿಂದ ಪರಿಪ್ಲುತವಾಗಿದ್ದರೂ ಸಾದು ಸಂತರಿಲ್ಲದ ಬಡಯುಗವಾಗಿದೆ. ೨೦ನೇ ಶತಮಾನದ ನಾವು ನುಡಿಯುವ ಯಾವ ಪ್ರಗತಿ, ನಾಗರಿಕತೆಗಳೂ ಕೂಡ ಹೃದಯ ಪರಿವರ್ತನೆಯ ತಳಹದಿಯಲ್ಲಿ ನಿಲ್ಲದಿದ್ದರೆ ಆವುಗಳ ಅಸ್ತಿತ್ವವು ಸ್ಥಿರವಲ್ಲ. ವಿನೋಬಾರವರು ತಮ್ಮ ಅನುದಿನದ ಜೀವನದಲ್ಲಿ ಜನತೆಯ ಸೇವೆಗಾಗಿಯೂ, ಅಂತರಾತ್ಮನ ತೃಪ್ತಿಗಾಗಿಯೂ ನಡೆಸುತ್ತಿರುವ ಕೆಲಸಕಾರ್ಯಗಳ ಮೂಲಕ ಜಗತ್ತಿನ ಸರ್ವ ತೊಂದರೆಗಳನ್ನು ಪರಿಹಾರ ಮಾಡಬಲ್ಲ ಅವತಾರಕರಾಗಿರುವರು. ಈ ಅಹಿಂಸಾ ಕ್ರಾಂತಿಕಾರನ ಕರೆಗೆ ಕಿವಿಗೊಟ್ಟು ವರ್ತಿಸುವದೇ ಭಾರತೀಯರ ಇಂದಿನ ಆದ್ಯ ಕರ್ತವ್ಯವಾಗಿದೆ.

— ಆಧಾರದಿಂದ.

ವೀರಾಜಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಟಿ ಎನ್. ಗೋವಿಂದರಾಜು

ಆಗಸ್ಟ್ ೧೫ — ಒಂದು ಅಂತರ್ನೋಟ!

ನಾನು ಈ ಆರು ವರ್ಷಗಳಲ್ಲಿ ಮಾಡಿದ್ದು ಪಾಪವೋ, ಪುಣ್ಯವೋ?

ಶ್ರೀ— "ಗುಪ್ತ", ಮಡಿಕೇರಿ.

ಆಗಸ್ಟ್ ೧೫ ಪುನಹ ಬಂತು. ಕಳೆದ ಆರು ವರ್ಷಗಳಿಂದಲೂ ಆಗಸ್ಟ್ ೧೫ ರಂದು ನಾನು ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಗವಹಿಸಿದ್ದೇನೆ. ಆದರೆ ಪ್ರಥಮ ೧೯೪೭ ನೇ ಆಗಸ್ಟ್ ೧೫ ರಲ್ಲಿ ಇದ್ದ ಉತ್ಸಾಹ ಕ್ರಮಶಃ ಕಡಿಮೆಯಾಗುತ್ತಾ ಈಗ ಆಗಸ್ಟ್ ೧೫ ಬಂದಾಗ ಹೆಚ್ಚಿನ ಸಂತೋಷ ಯಾ ಆನಂದ ಹೃದಯದಲ್ಲಿ ಉತ್ಪನ್ನವಾಗುತ್ತಿಲ್ಲ. ನನಗೆ ಇಂದೂ ೧೯೪೭ ನೇ ಆಗಸ್ಟಿನ ಆ ಆನಂದ, ಸಂಭ್ರಮ, ಉತ್ಸಾಹ ಕಣ್ಣಿಗೆ ಕಟ್ಟಿದಂತಿದೆ. ಪ್ರತಿ ಮನೆಯಲ್ಲಿ ತೋರಣ, ತ್ರಿವರ್ಣ ಭಾವುಟ, ಪ್ರತಿ ಬೀದಿ ಕೋಟೆ ಪೇಟೆಗಳಲ್ಲೂ ಮೆರವಣಿಗೆ, ವಾದ್ಯ ಘೋಷ, ನಡೆಯಲಾರದ ವೃದ್ಧರಿಂದ ಹಿಡಿದು ಹಾಲುಕೆನ್ನೆಯ ಹಸುಗೂಸುಗಳ ವರೆಗೆ ಸರ್ವರೂ ಕೂಗುತ್ತಿದ್ದ ಜಯಜಯಕಾರ, ವರ್ಣಿಸಲು ಸಾಧ್ಯವಿಲ್ಲದ ಆ ದೃಶ್ಯ ಇಂದೂ ಮನೋಭಿತ್ತಿಯಲ್ಲಿ ಅಚ್ಚಳಿಯದೆ ಚಿತ್ರಿತವಾಗಿದೆ ಆದರೆ ಅಂದಿದ್ದ ಹುರುಪು, ಎರಡನೇ ಸ್ವಾತಂತ್ರ್ಯೋತ್ಸವದಲ್ಲಿರಲಿಲ್ಲ. ಹೀಗೆ ಉತ್ಸಾಹ ಕಡಿಮೆಯಾಗುತ್ತಾ ಇಂದು ಆರನೇ ಸ್ವಾತಂತ್ರ್ಯೋತ್ಸವದ ಶುಭಮುಹೂರ್ತ ಬಂದಿದ್ದರೂ ನನಗೆ ಉತ್ಸಾಹವೂ ಇಲ್ಲ, ಯಾವುದೇ ಆನಂದವೂ ಇಲ್ಲ ತೋರಿಕೆಗೆ ಎಲ್ಲರಂತೆ ಕೋಟೆಯವರೆಗೆ ಹೋಗಿ ಚೀಫ್ ಕಮಿಷನರು ಧ್ವಜಾರೋಹಣ ಮಾಡಿ, ಪೋಲೀಸರ 'ಮಾರ್ಚ್ ಫಾಸ್ಟ್' ಸ್ವೀಕರಿಸುವ ಇಂದಿನ ಮಾದರಿಯ ಸ್ವಾತಂತ್ರ್ಯ ದಿನಾಚರಣೆಯನ್ನು ನೋಡಲೂ ಕೂಡ ನಾನು ಯೋಗ್ಯನೋ ಎಂಬ ಸಂಶಯ ಬಂದಿದೆ. ಏಕೆಂದರೆ ಈ ಆರು ವರ್ಷಗಳಲ್ಲಿ ನಾನು ಮಾಡಿದ್ದು ಪಾಪವೋ ಪುಣ್ಯವೋ ನನಗೇ ತಿಳಿದಿಲ್ಲ. ಕೆಲವು ವಿಷಯಗಳನ್ನು ವಾಚಕರ ಮುಂದಿಡುತ್ತೇನೆ. ನೀವೇ ನಿರ್ಧರಿಸಿ

'ಬ್ಲೇಕ್ ಮಾರ್ಕೆಟ್' ಹಣ.

ಸ್ವಾತಂತ್ರ್ಯ ಉತ್ಸವದ ಈ ದಿನ ಮಡಿಕೇರಿಯಲ್ಲಿರುವ ಬಡ ಬಗ್ಗರಿಗೆ, ಭಿಕ್ಷುಕರಿಗೆ ಅನ್ನಸಂತರ್ಪಣೆ ಮಾಡುವ ಯತ್ನವೊಂದನ್ನು ಸರಕಾರಿ ಕಾಲೇಜಿನ ವಿದ್ಯಾರ್ಥಿಗಳು ಕೈಕೊಂಡು ಅದಕ್ಕಾಗಿ ಅಕ್ಕಿ, ಹಣವನ್ನು ಸಾರ್ವಜನಿಕರಿಂದ ಎತ್ತುತ್ತಿದ್ದರು. ನನ್ನಲ್ಲಿಗೂ ಬಂದರು. ನಾನು ರೇಶನ್ ಅಂಗಡಿಯ ಗಿರಾಕಿಯಾದ್ದರಿಂದ ಅಕ್ಕಿ ದಾನ ಮಾಡುವ ಸೌಭಾಗ್ಯವಿರಲಿಲ್ಲ. ಸ್ವಾತಂತ್ರ್ಯದೊರೆತು ಆರು ವರ್ಷವಾದರೂ ಕೊಡಗಿನಂಥಾ ಸುಭಿಕ್ಷ ನಾಡಿನಲ್ಲೂ ಕೂಡ ಜನರನ್ನ ಹೊಟ್ಟೆಯ ಅನ್ನದ ಪ್ರಶ್ನೆ ಬಗೆಹರಿಯಲಿಲ್ಲವಲ್ಲಾ ಎಂದು ಯೋಚಿಸುತ್ತಿದ್ದೆ ವಿದ್ಯಾರ್ಥಿಯೊಬ್ಬನು ಪಟ್ಟಿಯನ್ನು ಮುಂದಿಟ್ಟನು. ನಾನು ವಿದ್ಯಾರ್ಥಿಯಿಂದ ಚಂದಾ ಪಟ್ಟಿ ಕೇಳಿಕೊಂಡು ನನ್ನ ಹೆಸರು ಹಾಕಿ ಐದು ರೂಪಾಯಿಗಳನ್ನು ಹೆಮ್ಮೆಯಿಂದ ಸುತ್ತುಮುತ್ತಿರುವವರೆಲ್ಲ ನೋಡುವಂತೆ ಎತ್ತಿ ಕೊಟ್ಟೆನು. ಆದರೆ ನನ್ನ ಆ ಹಣ ಬೆವರಿಳಿಸಿ ದುಡಿದುದಲ್ಲ. ಒಂದಕ್ಕೆ ಎರಡಾಗಿ ಔಷಧಿ ಮಾರಿದ 'ಬ್ಲೇಕ್ ಮಾರ್ಕೆಟ್' ಹಣ. ಆದರೆ ನನ್ನ ಈ ಉದಾರ ದಾನದಿಂದ ನನಗೆ ಬರುವದು ಪಾಪವೋ ಪುಣ್ಯವೋ?

ಕರುಣೆಗೆ ಶಿಕ್ಷೆ.

ನಾನು ಸೈಕಲ್‌ನಲ್ಲಿ ಹೋಗುತ್ತಿದ್ದೆ. ರಸ್ತೆಯ ಪಕ್ಕದಲ್ಲಿ ಯುವಕನೊಬ್ಬನು ನಿಸ್ಸಹಾಯಕನಾಗಿ ಕೂತಿದ್ದನು. ಆತನು ಭಿಕ್ಷುಕನಿರಬೇಕು ಆತನಿಗೆ ವಿಪರೀತ ಜ್ವರವಿತ್ತು. ನಡೆಯಲು ಸಾಧ್ಯವಾಗುತ್ತಿರಲಿಲ್ಲ. ಹತ್ತಿರದಲ್ಲಿ ಯಾರೂ ಇರಲಿಲ್ಲ. ಆಸ್ಪತ್ರೆಗೆ ಆತನನ್ನು ಸಾಗಿಸಬೇಕಿತ್ತು. ಆತನನ್ನು ನನ್ನ ಸೈಕಲಿನಲ್ಲಿ ಕೂರಲು ಹೇಳಿದೆ. ಆತನು ಹೆದರಿಕೊಂಡನು ಆದರೆ ನನ್ನ ಒತ್ತಾಯಕ್ಕಾಗಿ ಒಪ್ಪಿದನು. ಆತನನ್ನು ಮುಂದ ಕೂರಿಸಿಕೊಂಡು ನಾನು ಸೈಕಲ್ ಬಿಡುತ್ತಿದ್ದೆ. ದಾರಿಯಲ್ಲಿ ಪೋಲೀಸನೊಬ್ಬನು ನನ್ನನ್ನು ತಡೆದು ನಿಲ್ಲಿಸಿದನು. ಸೈಕಲಿನಲ್ಲಿ ಇಬ್ಬರು ಸವಾರಿ ಮಾಡಬಾರದೆಂಬ ಕಾನೂನು ಕೊಡಗಿನಲ್ಲಿದೆ. ನನ್ನನ್ನು ಮೇಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ಆ ದಿನ ಮೇಜಿಸ್ಟ್ರೇಟರು ಕೋರ್ಟಿಗೆ ಬರಲು ಬಹಳ ಹೊತ್ತಾಯಿತು. ಇಡೀ ದಿನ ಕೋರ್ಟಿನಲ್ಲಿ ಕಳೆಯಬೇಕಾಯಿತು. ಕಡೆಗೆ ನನಗೆ ರೂಪಾಯಿ ಐದು ಜುಲ್ಮಾನೆ ವಿಧಿಸಲ್ಪಟ್ಟಿತು. ಸರಕಾರಿ ಕಾನೂನು ಮೀರಿ ಸೈಕಲಿನಲ್ಲಿ ಇಬ್ಬರು ಸವಾರಿ ಮಾಡುವದು ತಪ್ಪಿರಬಹುದು. ಆದರೆ ನಾನು ಮಾಡಿದ ತಪ್ಪಿನ(?) ಬಗ್ಗೆ ಮನಸ್ಸಿನಲ್ಲಿ ಶಾಂತಿ ಇದೆ. ಕಾನೂನು ಮುರಿದು ಭಿಕ್ಷುಕನಿಗೆ ಸಹಾಯಮಾಡಿದ್ದು ಪಾಪವೋ ಪುಣ್ಯವೋ?

ಚುನಾವಣೆಯಲ್ಲಿ ವಿಶ್ವಾಸ.

೧೯೫೨ ನೇ ಜನವರಿ. ಚುನಾವಣೆಯ ಗೊಂದಲ ದೇಶದ ಉದ್ದಗಲಕ್ಕೂ ಕೇಳಬರುತಿತ್ತು. ನನ್ನ ನಾಡಿಗಿದ್ದ ಒಂದು ಸ್ಥಾನಕ್ಕೆ ರಾಮು ಮತ್ತು ಭೀಮರು ಉಮೇದುವಾರರಾಗಿ ನಿಂತಿದ್ದರು. ಭೀಮನು ನನ್ನ ಗೆಳೆಯನು. ಬಾಲ್ಯದಿಂದಲೇ ಶಾಲೆಯಲ್ಲಿ ಕೂಡಿ ಆಡಿ ಬೆಳೆದವನು. ವಿದ್ಯೆಯ ನಂತರ ವ್ಯಾಪಾರವನ್ನು ಕೈಗೊಂಡು ಆತನು ಲಕ್ಷ್ಮೀಪತಿಯಾಗಿದ್ದ. ವ್ಯಾಪಾರದಲ್ಲಿ ಹಣಗಾರನಾಗಲು ಅಡ್ಡದಾರಿ ಹಿಡಿಯದೆ ಸಾಧ್ಯವಿಲ್ಲವೆಂಬುದೇ ಆತನ ಸಿದ್ಧಾಂತವಾಗಿತ್ತು. ಕೇವಲ ಬಂಡವಳದಾರನೆಂಬ ಒಂದು ಯೋಗ್ಯತೆ ವಿನಾ ಚುನಾವಣೆಗೆ ಉಮೇದುವಾರನಾಗಲು ಆತನಿಗೆ ಬೇರೆ ಯೋಗ್ಯತೆಗಳಿರಲಿಲ್ಲ. ಆದರೆ ರಾಮನು ಹಾಗಲ್ಲ. ಹೆಸರಿಗಾಗಿ ಚುನಾವಣೆಗೆ ನಿಂತವನಲ್ಲ. ಜನಸೇವೆಯ ಕಾಂಕ್ಷೆ ಆತನಲ್ಲಿತ್ತು. ಶಾಸನ ಸಭಾ ಕ್ರಮದ ಪೂರ್ಣ ಅರಿವಿದ್ದಿತು. ರಾಜಕೀಯ ಜ್ಞಾನವಿತ್ತು. ಒಂದು ದಿನ ಭೀಮನು ಬಂದು ಹೇಳಿದನು, 'ನೋಡು, ನಾನು ಚುನಾವಣೆಗೆ ನಿಂತಿದ್ದೇನೆ. ನಿಮ್ಮಂಥಾ ಗೆಳೆಯರಿಂದ ನನಗೆ ಜಯಬರಬೇಕು. ನಿನ್ನ ಮಾತು ಗ್ರಾಮದಲ್ಲಿ ನಡೆಯುತ್ತೆ. ನಿಮ್ಮ ಗ್ರಾಮದ ಶಾಲೆಗಾಗಿ ರೂ. ೫೦೦೦ ಕೊಡುವೆನು. ಜನರನ್ನು ನನಗಾಗಿ ಒಪ್ಪಿಸಬೇಕು.'

ನನ್ನ ಹೃದಯದಲ್ಲಿ ಒಂದು ತುಮುಲ ಯುದ್ಧ ನಡೆದಿತ್ತು. ಒಂದೆಡೆ ಬಾಲ್ಯದ ಗೆಳೆಯ ಭೀಮ. ಜೊತೆಗೆ ರೂ. ೫೦೦೦. ಓಟು ಆತನಿಗೇ ಕೊಡೋಣವೆಂದರೆ ಮತ್ತೊಂದು ಹೃದಯದ ವಾಣಿ "ತಿಳಿದ ನೀನೇ ಹೀಗೆ ಮಾಡಿದರೆ ಪ್ರಜಾಪ್ರಭುತ್ವದ ರಕ್ಷಣೆ ಹೇಗೆ' ಎನ್ನುತಿತ್ತು. ಓಟಿನ ದಿನ ಹತ್ತಿರ ಬಂತು. ನನ್ನ ಮಾತು ಕೇಳುವವರೂ ನಾನೂ ಎಲ್ಲರೂ ರಾಮುವಿಗೇ ಮತವಿತ್ತೆವು ಗ್ರಾಮದ ಶಾಲೆಗೆ ದೊರೆಯುವದೆಂದಿದ್ದ ರೂ. ೫೦೦೦ ನ್ನು ಕಳಕೊಂಡೆವು. ಜೊತೆಗೆ ಮಿತ್ರನಾಗಿದ್ದ ಭೀಮನು ಇಂದು ಶತ್ರುವಾಗಿದ್ದಾನೆ. ರಾಮುವಿಗೆ ಓಟು ಕೊಟ್ಟದ್ದು ಪಾಪವೋ ಪುಣ್ಯವೋ?

ಅನ್ಯಾಯದ ಸಹನೆ.

ನಮ್ಮ ನೆರೆಮನೆಯಲ್ಲಿ ಒಂದು ಚಿಕ್ಕ ಕಳವಾಯಿತೆಂದು ಪೋಲೀಸರು ಬಂದು ಸಿಕ್ಕ ಸಿಕ್ಕಿದವರನ್ನು ಹಿಡಿದು ವಿಚಾರಿಸುತ್ತಿದ್ದರು. ನರೇಂದ್ರನು ತುಂಬಾ ಸಾಧು ಸ್ವಭಾವದವನೂ ಮಿತಭಾಷಿಯೂ ಆಗಿದ್ದನು. ಆತನನ್ನು ವಿಚಾರಿಸಿದರು. ತಾನು ಕಳವು ಮಾಡಲಿಲ್ಲ ಎಂಬ ಒಂದು ಮಾತಲ್ಲದೆ ಬೇರೆ ಮಾತು ಆತನ ಬಾಯಿಂದ ಹೊರಡುತ್ತಿರಲಿಲ್ಲ. ಪೋಲೀಸರು ಆತನನ್ನು ಹಿಡಿದುಕೊಂಡು ಹೋದರು. ನನಗೆ ಚಿಕ್ಕಂದಿನಿಂದಲೇ ಆತನನ್ನು ಗೊತ್ತಿತ್ತು. ಆತನು ಸತ್ಯಪ್ರಿಯನೂ, ನಂಬಿಕೆಯುಳ್ಳವನೂ ಆಗಿದ್ದನು ಆತನು ಕಳವು ಮಾಡಿರಲಾರನೆಂಬುದರಲ್ಲಿ ನನಗೆ ನೂರಕ್ಕೆ ನೂರರಷ್ಟು ವಿಶ್ವಾಸವಿತ್ತು. ಆದರೆ ಸರಕಾರದ ಮುಂದೆ ನಿಂತು ವಾದಿಸಿ ಆತನು ತಪ್ಪುಗಾರನಲ್ಲವೆಂದು ಹೇಳಲು ನಾನು ತಯಾರಿರಲಿಲ್ಲ. ಪೋಲೀಸ್ ಸ್ಟೇಶನಿನಿಂದ ಮಾರನೆ ದಿನ ಪುನಹ ಆತನನ್ನು ಕರೆತಂದರು. ದಾರಿಯಲ್ಲಿ ನರೇಂದ್ರನು ನನ್ನನ್ನು ಕಂಡು ಅಶ್ರು ತುಂಬಿದ ನಯನ ಉಳ್ಳವನಾಗಿ ಪೋಲೀಸರ ಹಾವಳಿಯನ್ನು ಹೇಳಿದನು. ರಾತ್ರಿ ಅವರು ಕೊಟ್ಟ ಶಿಕ್ಷೆಯನ್ನು ವಿವರಿಸಿದನು. ತಾನು ಕದಿಯಲಿಲ್ಲವೆಂದು ಸತ್ಯ ನುಡಿದನು. ಆದರೆ ನಾನು ಪೋಲೀಸರ ವಿರೋಧ ನಾಲ್ಕು ಮಾತು ಹೇಳಿ ನರೇಂದ್ರನ ಪರ ವಾದಿಸಲಿಲ್ಲ. ತಪ್ಪುಗಾರನಲ್ಲದಿದ್ದರೂ ನರಕಯಾತನೆಗೆ ಗುರಿಯಾದವನನ್ನು ತಪ್ಪಿಸುವ ಎದೆಗಾರಿಕೆ ನನಗೆ ಬಾರಲಿಲ್ಲ ಇಂದೂ ಕೂಡ ಪೋಲೀಸರನ್ನು ಕಂಡಾಗ ನರೇಂದ್ರನ ನೆನಪಾಗುತ್ತದೆ ನಾನು ಮಾಡಿದ್ದು ಪಾಪವೋ ಪುಣ್ಯವೋ?

ಸತ್ಯಕ್ಕಾಗಿ.

ಶಂಕರನು ನನ್ನ ಪ್ರಾಣಮಿತ್ರನಾಗಿದ್ದನು. ಆತನು ಜವಳಿ ವ್ಯಾಪಾರಿಯಾಗಿದ್ದನು. ನನಗೆ ಸ್ವಲ್ಪ ಬಟ್ಟೆ ಬೇಕಾಗಿ ಆತನಲ್ಲಿಗೆ ಹೋದೆನು ನಿನಗಾಗಿ ಗಜಕ್ಕೆ ಎರಡು ರೂಪಾಯಿ ಎಂದು ಹೇಳಿ ಬಟ್ಟೆ ಅಳೆಯತೊಡಗಿದನು. ಅಷ್ಟರಲ್ಲಿ ಸಜ್ಜನರೊಬ್ಬರು ಬಂದು ಅದೇ ಬಟ್ಟೆಯ ಕ್ರಯ ಕೇಳಿದರು. ನನ್ನ ಮಿತ್ರನು ಗಜಕ್ಕೆ ಮೂರುವರೆ ರೂಪಾಯಿಯೆಂದನು. ನನಗೆ ಆಶ್ಚರ್ಯವಾಯಿತು. ಈ ಸುಳ್ಳನ್ನು ಕೇಳಿ ಸಹಿಸಲಾಗಲಿಲ್ಲ. ಆದರೆ ಶಂಕರನು ನನ್ನ ಪರಮ ಮಿತ್ರ. ನಾನು ಸುಮ್ಮನಿದ್ದೆ. ಬಂದ ಸಜ್ಜನರು ಆರು ಗಜ ಬಟ್ಟೆ ಕತ್ತರಿಸಿ ಕೊಡಲು ಹೇಳಿದರು. ಶಂಕರನು ಬಟ್ಟೆ ಅಳೆದು ಕೊಟ್ಟನು. ಸಜ್ಜನರು ೨೧ ರೂಪಾಯಿ ಕೊಟ್ಟರು. ನನಗೆ ಈ ಮೋಸವನ್ನು ನೋಡಿ ತಡೆಯಲಾರದಾಯಿತು. ನಾನು ದೃಢಮಾಡಿ ಹೇಳಿದೆ. 'ನನಗೆ ಗಜಕ್ಕೆ ಎರಡು ರೂಪಾಯಿಯಲ್ಲಿ ಕೊಡಲೊಪ್ಪಿದ್ದಾರೆ.' ನನ್ನ ಮಿತ್ರನು ತುಂಬಾ ನಾಚಿಕೊಂಡು ಹೆಚ್ಚು ಮಾತಾಡದೆ ಸಜ್ಜನರಿಗೆ ೯ ರೂ. ವಾಪಾಸುಕೊಟ್ಟನು. ಸಜ್ಜನರು ಹೋದ ವೇಳೆ ನನ್ನನ್ನು ಕುರಿತು 'ನಾನ್ನೆಂದೂ ನಿನಗೆ ಕೇಡು ಮಾಡಿಲ್ಲ. ನಿನ್ನನ್ನು ನನ್ನ ಸಹೋದರನೆಂದೇ ಭಾವಿಸಿರುವೆನು. ಆದರೆ ನೀನು ಎಂಥಾ ಆಘಾತ ಮಾಡಿದೆ. ಎಂಥಾ ಘಾತುಕತನ ನಿನ್ನದು?' ಎಂದನು. ನನ್ನ ಮನಸ್ಸಿನಲ್ಲಿ ಇಂದೂ ಈ ಸಂಶಯವಿದೆ. ಶಂಕರನ ಮಿತ್ರತೆಯನ್ನು ಲೆಕ್ಕಿಸದೆ ಸತ್ಯವನ್ನಾಡಿ ಆತನ ಧನ ಹಾಗೂ ಮಾನಹಾನಿಗೆ ಕಾರಣನಾದುದು ಪುಣ್ಯವೋ ಪಾಪವೋ?

ಇವು ನನ್ನ ಕೆಲವು ಅನುಭವಗಳು. ಇಂಥಾ ಅನುಭವಗಳಿಗೆ ಆಸ್ಪದವನ್ನು ನಮಗೆ ದೊರೆತ ಸ್ವಾತಂತ್ರ್ಯವೇ ಕೊಟ್ಟಿದ್ದರೆ ಆ ಉತ್ಸವದಲ್ಲಿ ಭಾಗವಹಿಸದಿದ್ದರೆ ಅದರಿಂದ ಬರುವದು ಪಾಪವೋ ಪುಣ್ಯವೋ?

ಗಾಡಿಗೆ ಕಟ್ಟಿದ ಎತ್ತುಗಳ ಹೆಜ್ಜೆಯನ್ನನುಸರಿಸಿಯೇ ಗಾಡಿಯ ಚಕ್ರವೂ ಸುತ್ತುವಂತೆ ಮನುಷ್ಯನ ಮನಸ್ಸಿನ ಭಾವನೆಗಳನ್ನನುಸರಿಸಿಯೇ ಆತನ ಕೃತಿಯೂ ನಡೆಯುವುದು

ಮನುಷ್ಯನು ತನ್ನ ಮನಸ್ಸಿನ ಭಾವನೆಯಂತೆಯೇ, ತಾನು ಯೋಚಿಸಿ ಸರಿಯೆಂದು ನಿರ್ಣಯಿಸಿದಂತೆಯೇ, ಆತ್ಮಸಾಕ್ಷಿಯಾಗಿ ಕೆಲಸ ಮಾಡುವನಾದರೆ ಶರೀರದೊಡನೆ ನೆರಳು ಹಿಂಬಾಲಿಸುವಂತೆ ಸುಖವು ಆತನ ಹೆಜ್ಜೆಯನ್ನು ಬಿಡದು.

"ಆತನು ನನ್ನನ್ನು ಬೈದನು, ಆತನು ಹೊಡೆದನು, ಈತನು ಸೋಲಿಸಿದನು, ಆತನು ಕದ್ದನು" ಎಂಬೀ ರೀತಿ ಸದಾ ಯೋಚಿಸುವವರು ತಮ್ಮ ಸಿಟ್ಟನ್ನು ಹಿತದಲ್ಲಿ ಇಟ್ಟುಕೊಳ್ಳಲಾರರು.

ಈ ಜಗತ್ತಿನಲ್ಲಿ ದ್ವೇಷವನ್ನು ದ್ವೇಷದಿಂದ ಗೆಲ್ಲಲಾಗುವದಿಲ್ಲ. ಆದರೆ ದ್ವೇಷವನ್ನು ಪ್ರೀತಿಯಿಂದ ಗೆಲ್ಲಬಹುದು. ಅದೇ ಶಾಶ್ವತವಾದ ಅಮರವಾದ ಧರ್ಮ.

ಜಗಳ ಮಾಡುವವರಲ್ಲಿ ಹಲವರು ಈ ಜಗತ್ತಿನ ನಮ್ಮ ಬಾಳುವೆ ಕೆಲ ದಿನಗಳನ್ನು ನಂತರ ಈ ಜಗತ್ತನ್ನು ಬಿಡಬೇಕಾಗುತ್ತದೆ ಎಂಬುದನ್ನು ತಿಳಿಯುವುದಿಲ್ಲ. ಇದನ್ನು ತಿಳಿಯುವವರು ಜಗಳ ಆಡಿದರೂ ಪುನಹ ಪಶ್ಚಾತ್ತಾಪ ಪಟ್ಟು ಸ್ನೇಹಗಳಿಸುತ್ತಾರೆ.

ವಿಷಯ ಆಸಕ್ತಿಯನ್ನು ಹಿತದಲ್ಲಿಡದವನು, ಊಟ ಉಪಚಾರದಲ್ಲಿ ಮಿತಿ ಇಲ್ಲದವನು, ತನ್ನ ಜೀವವನ್ನು ಕಡಿವಾಣವಿಲ್ಲದ ಕುದುರೆಯಂತೆ ಸಿಕ್ಕಿದತ್ತ ಹಾಯಿಸುವವನು ಬೇರು ಬಲವಿಲ್ಲದ ಗಿಡವು ಬಿರುಗಾಳಿಗೆ ಬೀಳುವಂತೆ ನಾಶವಾಗುವನು.

ತನ್ನ ಸರ್ವ ಕಾರ್ಯಕಲಾಪಗಳ ಮೇಲೆ ಹಿಡಿತವಿಟ್ಟು, ಭೋಗ ವಿಲಾಸಗಳಿಗೆ ಮನಸೋಲದೆ, ನಾಲಗೆಯ ಚಪಲಕ್ಕೆ ಬಲಿಯಾಗದೆ, ವಿಶ್ವಾಸವಿಟ್ಟು ಶಕ್ತಿವೃದ್ಧಿಗೊಳಿಸುವ ಇರುವ ಮನುಷ್ಯನು ಎಂಥಾ ಬಿರುಗಾಳಿ ಬಂದರೂ ಅಲ್ಲಾಡದ ಬೆಟ್ಟದಂತೆ ಸುಖ ದುಃಖಗಳಿಂದ ನಿರ್ಲಿಪ್ತನಾಗಿ ಶಾಂತಚಿತ್ತನಾಗಿರುವನು.

ಸತ್ಯದ ಘನತೆಯನ್ನು, ಸತ್ಯದ ಸಾಮರ್ಥ್ಯವನ್ನು ತಿಳಿಯದೆ, ಮನದಲ್ಲಿ ಅಶುದ್ಧ ಭಾವನೆಗಳಿಗೆ ಎಡೆ ಕೊಟ್ಟು ಕಾವಿ ಬಟ್ಟೆ ಧರಿಸಿದವನು ಆ ಕಾವಿ ಉಡುಪಿಗೆ ಅವನೊಬ್ಬ ಮಾತ್ರವಲ್ಲದೆ ಹಲವರನ್ನು ಮೋಸಗೊಳಿಸುತ್ತಾನೆ.

ಪರಿಶುದ್ಧನಾಗಿ, ನೈತಿಕ ತಳಹದಿಯಲ್ಲಿ ನಿಂತವನಾಗಿ, ಸತ್ಯ ಪ್ರೇಮಗಳ ಮಹಿಮೆಯನ್ನು ಅರಿತವನಾಗಿ, ಜಗತ್ತಿನ ಸಚರಾಚರಗಳ ಬಾಂಧವ್ಯವನ್ನು ಕಾರ್ಯತಃ ಕಾಣುವವನು ಕಾವಿ ಧರಿಸದಿದ್ದರೂ ಆತನು ಯೋಗಿಯೇ ಸೈ.

ಅನಾವಶ್ಯಕವನ್ನು ಆವಶ್ಯಕವೆಂದೂ, ಆವಶ್ಯಕವನ್ನು ಅನಾವಶ್ಯಕವೆಂದೂ ತಿಳಿಯುವವನು ಆ ಪರಮಪದವನ್ನು ಮುಟ್ಟಲಾರನು. ಮಾಡು ಸರಿ ಇಲ್ಲದ ಮನೆಯೊಳಗೆ ಮಳೆ ನೀರೆಲ್ಲ ಬೀಳುವಂತೆ ಹಿಡಿತವಿಲ್ಲದ ಮನಸ್ಸಿಗೆ ವಿಷಯಾಭಿಲಾಷೆ ನುಗ್ಗುವುದು.

ತಪ್ಪಿಂದ ತಿರುಗಿ ತಪ್ಪು ಮಾಡುವವನಿಗೆ ಆತ್ಮಶಾಂತಿ ಇರಲಾರದು. ಸುಖವೆಂಬುದನ್ನು ತಿಳಿದೂ ಅದಕ್ಕಾಗಿ ಯತ್ನಿಸದವನಿಗೂ ಶಾಂತಿ ಇರಲಾರದು. ಮನಸ್ಸೆಂಬ ದೀಪದ ಬೆಳಕಿಗೆ ಸರಿಯಾಗಿ ನಡೆಯುವವನೇ ಶಾಂತಿ ಪಡೆಯುವನು

ದಿನವೆಲ್ಲ ಗುಟ್ಟಿನಿಂದ, ರಾಮನಾಮ, ದೇವರ ಸಂಕೀರ್ತನೆ, ಪೂಜೆ ಪುರಸ್ಕಾರಗಳನ್ನು ಮಾಡುತ್ತಾ, ಆ ಪುಣ್ಯ ಪುರುಷರ ಗುಣ ನಡತೆಗಳನ್ನು ಆಚರಣೆಯಲ್ಲಿ ತರಲಾರದವನು ಇತರರ ಕೊಟ್ಟಿಗೆಯ ದನಗಳನ್ನು ಲೆಕ್ಕ ಮಾಡುವವನಂತೆ ಯಾವ ರೀತಿ ಅದು ತನ್ನದಾಗಲಾರದೋ ಅದರಂತೆ ಆ ಪೂಜಾ ವಿಧಿಗಳಿಂದ ಪ್ರತಿ ಫಲ ಪಡೆಯಲಾರನು.

ಜಾಗತಿಕ ವಿಚಾರ ವಿಮರ್ಶೆ.

ಜಗತ್ತು ಎತ್ತ ಸಾಗಿದೆ?

ಲೇ:- ಶ್ರೀ. ಪಿ. ಮನಮೋಹನ ಕಾಮತ್, ಉಪಸಂಪಾದಕ, "ನವಭಾರತ"

ಮಾನವ ವರ್ಗದ ವಿನಾಶಕಾರಿ ಪರಿಣಾಮಪೂರ್ಣವಾದ ಯುದ್ಧವು ಬೆಳೆದು ನಿಂತಿರುವ ಸಂಸ್ಕೃತಿಗೆ ಗೆದ್ದಲು ಹಿಡಿದಂತೆ ಜಗತ್ತಿಗೆ ವಿಪತ್ಕಾರಿಯಾಗಿದೆ. ಇದನ್ನು ತಿಳಿದೂ ತಿಳಿದೂ ಮನುಷ್ಯತ್ವದ ಅಬಲತೆಯ ದುಷ್ಪರಿಣಾಮವೋ ಅಥವಾ ನೈತಿಕ ಅಧಃಪತನದ ಕುರುಹೋ ಎನ್ನುವಂತೆ, ಪದೇ ಪದೇ ಎಂಬಂತೆ ಯುದ್ಧಗಳು ಜೇಡನೆಂದರೆ ಉಂಟಾಗುತ್ತಿವೆ. ಯುದ್ಧಗಳಿಂದ ಒಂದು ದೇಶ ನಶಿಸುತ್ತದೆ; ಇನ್ನೊಂದು ಅದರ ಹೆಡೆಯೇರಿ ಕಾಳಿಂಗ ಮರ್ದನದಂತೆ ತನ್ನ ಲೀಲೆಯನ್ನು ಪ್ರದರ್ಶಿಸುತ್ತದೆ. ಇದು ವಿಶ್ವದ ಇತಿಹಾಸದಿಂದ ಕಲಿಯುವ ಪಾಠ

ಸ್ವಾರ್ಥದ ಪರಮಾವಧಿಯಾಗಿ ಒಂದು ದೇಶ ಇನ್ನೊಂದನ್ನು ತುಳಿದು ಮಾನವತೆಯ ಹಿರಿತನವನ್ನು ಮರೆತು ಕಾಡಿನಲ್ಲಿನ ಕ್ರೂರ ಜಂತುಗಳಂತೆ ಹೋರಾಡುವದು ಪುನರಾವರ್ತನೆ ಗೊಳ್ಳುತ್ತಿರುವದು ಕಂಡು ಬರುತ್ತಿದೆ. ಯುದ್ಧಗಳ ಪರಂಪರೆಯು ಬೆಳೆಯುತ್ತಾ ಬಂದು ಅದು ಇಂದು ಆಧುನಿಕವೆನಿಸಿ ವಿಜ್ಞಾನದ ದುರುಪಯೋಗವೋ ಎಂಬಂತೆ ಭಯಂಕರ ರೂಪವನ್ನು ತಾಳುತ್ತಿದೆ. ವಿಶ್ವದ ಯಾವುದೋ ಒಂದು ಕೊನೆಯಲ್ಲಿ ಕಾಳಗದ ಕಿಡಿಯೊಂದು ಸ್ಫೋಟಿಸಿದರೆ ಹುಲ್ಲಿನ ಮೆದೆಗೆ ಹಿಡಿದ ಬೆಂಕಿಯಂತೆ ವ್ಯಾಪಿಸಿ ಅಖಂಡ ವಿಶ್ವದ ಧ್ವಂಸಕ್ಕೆ ಕಾರಣ ಪ್ರಾಯವಾಗುವದು. ಇಂಥ ಯುದ್ಧದಿಂದ ಉದ್ಧಾರವಿಲ್ಲವೆಂದು ಮೊತ್ತಮೊದಲು ಕಂಡುಕೊಂಡುದು ಭಾರತವೆಂದು ಹೇಳಲು ನಮಗೊಂದು ಹೆಮ್ಮೆ. ಕಳಿಂಗ ಯುದ್ಧದಲ್ಲಿ ಆದ ನರಬಲಿಯ ಘೋರ ಪಾತಕವನ್ನು ಕಣ್ಣಾರೆ ಕಂಡ ಸಾಮ್ರಾಟ್ ಅಶೋಕನು ಯುದ್ಧಕ್ಕೆ ಬಹಿಷ್ಕಾರ ಹಾಕಿದ ಪ್ರಥಮ ಚಕ್ರವರ್ತಿಯು. ಬುದ್ಧನ ಮಹಾನ್ ಅಹಿಂಸಾ ತತ್ವವಿತ್ತೀ ಅದಕ್ಕೆ ಅಶೋಕನು ಮಾರುಹೋದನು. ಹಿಂಸೆಯಿಂದ ಸಾಧಿಸಲಾಗದುದನ್ನು ಅಹಿಂಸೆಯಿಂದ ಗಳಿಸಲು ಶಕ್ಯವಿದೆಯೆಂದು ಸಾರಿದನು.

ಭಾರತವು ಬುದ್ಧ, ಅಶೋಕ, ಗಾಂಧಿಯಂಥಾದ ಮಹಿಮರ ತವರೂರು. ಅಹಿಂಸಾ ತತ್ವ ಎಲ್ಲಿ ಸ್ಫುರಿಸಿತೋ ಆ ಹೆಗ್ಗಳಿಕೆಯ ನಾಡು ಇಂದು ಜಾಗತಿಕ ಶಾಂತಿ ಸಂದೇಶವನ್ನು ಕೊಡುತ್ತಲಿದೆ. ಜಗತ್ತಿನಲ್ಲಿ ತಮ್ಮ ಸಾಮ್ರಾಜ್ಯ ಬೆಳೆಸಿಕೊಳ್ಳಬೇಕೆಂಬ ಹಂಬಲದಿಂದ ಶಕ್ತಿ ರಾಷ್ಟ್ರಗಳು ತಮ್ಮ ತಮ್ಮ ಬಣಗಳನ್ನು ಕಟ್ಟಿಕೊಂಡು ತಮ್ಮ ತಮ್ಮ ಶಕ್ತಿ ಅಳೆಯುವ ಆಟ ಆಡುತ್ತಿವೆ. ಪಾಶ್ಚಿಮಾತ್ಯ ರಾಷ್ಟ್ರಗಳ ಯುದ್ಧ ದಾಹಕ್ಕೆ ವಿಶ್ವವು ಬಲಿಬೀಳಬೇಕಾಗಿದೆ. ಇದನ್ನು ವಿಶ್ವದ ಜಾಗತಿಕ ಹಿತದೃಷ್ಟಿಯಿಂದ ಎಂದಿಗೂ ಸಹಿಸಲಾರದು. ವಿಶ್ವದ ಪರವಾಗಿ ಭಾರತವು ತನ್ನ ಸ್ವರವೆತ್ತಿದೆ. ಶಾಂತ ರೀತಿಯಿಂದ ಬಾಳಿ ಮಾನವ ಕಲ್ಯಾಣಕ್ಕಾಗಿ ದುಡಿಯೋಣವೆಂದು ಭಾರತ ಜಗತ್ತಿಗೆ ಕರೆ ಕೊಡುತ್ತಿದೆ.

ಇಂದು ಅಂತರರಾಷ್ಟ್ರೀಯ ವಿಚಾರಗಳನ್ನು ವಿಮರ್ಶಿಸಿದರೆ ಪರಸ್ಪರ ನಂಬಿಕೆ ಕೆಟ್ಟು ಹೋಗಿದೆ ಎಂಬುದು ವ್ಯಕ್ತವಾಗುವದು. ಒಂದು ದೇಶ ಇನ್ನೊಂದರ ಮೇಲೆ ಸಂಶಯಾತ್ಮಕ ದೃಷ್ಟಿ ಬೀರುತ್ತದೆ. ರಾಜಕೀಯ ಸಂಬಂಧ ಅಷ್ಟೊಂದು ಸಮಂಜಸವಾಗಿಲ್ಲ. ವಿಶ್ವಶಾಂತಿಗಾಗಿ ಜೊತೆಗೂಡಿ ಶ್ರಮಿಸೋಣವೆಂಬ ಪವಿತ್ರ ಭಾವನೆಗೆ ಎಡೆಯಿಲ್ಲದಾಗಿದೆ. ತನ್ನ ಗೋರಿಯನ್ನು ತಾನೇ ಕಟ್ಟಿಕೊಳ್ಳಬಾರದೆಂಬ ವಿವೇಚನೆಯಿಲ್ಲ. ಈ ರೀತಿಯಾಗಿ ಇಡೀ ಪ್ರಪಂಚವು ಅಸಮಾಧಾನದ ಒಗಟಾಗಿಬಿಟ್ಟಿದೆ. ಇದನ್ನು ಬಗೆಹರಿಸಲೂ ಮುಂದೆ ಬರುವವರಿಲ್ಲ, ಬಂದವರಿಗೆ ಎದೆಗಾರಿಕೆಯಿಂದ ಮುಂದುವರಿವ ಸಾಮರ್ಥ್ಯವಿಲ್ಲ. ಇಂಥ ಸಂದಿಗ್ಧ ವಾತಾವರಣದಲ್ಲಿ ಈಗ ತಾನೆ ದಾಸ್ಯತನದ ದೀರ್ಘ ಅನಾರೋಗ್ಯದಿಂದ ಚೇತರಿಸಿದ ಭಾರತವು ತನ್ನ ನಾಡಿನ ವೈಶಿಷ್ಟ್ಯವಾದ ಶಾಂತಿಪ್ರಿಯತೆಯ ಸುವರ್ಣ ಸಂದೇಶವನ್ನು ಸಾರುತ್ತಲಿದೆ. ಪ್ರಥಮತಃ ಭಾರತದತ್ತ ಗಮನಿಸುವವರು ಯಾರಿರಲಿಲ್ಲವಾದರೂ ಕ್ರಮೇಣ ಜಗತ್ತು ಆ ಸಂದೇಶದ ಮಹತ್ವದ ಬಗ್ಗೆ ಕುತೂಹಲ ಪಡತೊಡಗಿದೆ. ಇದಕ್ಕೆ ಕೊರಿಯದ ಪ್ರಕರಣವೇ ಒಂದು ಸಾಕ್ಷಿ.

ಕಳೆದೆರಡು ಮಹಾ ಸಂಗ್ರಾಮಗಳ ಬೇನೆಯಿಂದ ಜಗತ್ತು ಚೇತರಿಸಿಕೊಳ್ಳುವದರೊಳಗೆ ಕೊರಿಯದಲ್ಲಿ ಕೋಳಿಕಟ್ಟಿದ ರೂಪದಲ್ಲಿ ಜಾಗತಿಕ ಶಕ್ತಿ ಇಬ್ಬಗೆಯಾಗಿ ಚೇತನಗೊಂಡು ತಮ್ಮ ತಮ್ಮ ಪರಾಕ್ರಮವನ್ನು ಅಳೆಯ ತೊಡಗಿತು. ಮೂರು ವರ್ಷಗಳ ಬಳಿಕ ಇಕ್ಕಡೆಯವರೂ ದಣಿದರೋ ಎಂಬಂತೆ ರಾಜಿ ಪ್ರಸ್ತಾಪವಾಯಿತು. ಆದರೂ ರಾಜಕೀಯ ಬಿಕ್ಕಟ್ಟು ಇನ್ನೂ ಬಗೆಹರಿದಿಲ್ಲ. ಇದು ಎಲ್ಲಿ ಜ್ವಾಲಾಮುಖಿಯಂತೆ ಇನ್ನೊಮ್ಮೆ ಸ್ಫೋಟನವಾಗುವದೋ ಎಂದು ಶಾಂತಿ ಪ್ರಿಯರು ಭೀತರಾಗಿದ್ದಾರೆ

ಕೊರಿಯದ ಪ್ರಕರಣ ಸ್ವಲ್ಪ ಸಮಾಧಾನಕ್ಕೆ ತಲಪುವ ಹೊತ್ತಿಗೆ ಇಂಡೋಚೀನದಲ್ಲಿ, ಈಜಿಪ್ಟಿನಲ್ಲಿ, ಮಲಯದಲ್ಲಿ, ಬರ್ಮಾದಲ್ಲಿ ಹೋರಾಟ ಆರಂಭವಾಗಿದೆ. ಅಥವಾ ಹೋರಾಡಲು ಸಿದ್ಧರಾಗಿದ್ದಾರೆ. ಆದರೆ ಯುದ್ಧದಿಂದ ದೊರೆತ ಜಯ ಎಂದಿಗೂ ಶಾಶ್ವತವಲ್ಲವೆಂದು ಯಾರು ಮರೆಯಬಾರದು. ಭಾರತವು ಸಾರಿ ಸಾರಿ ಹೇಳುತ್ತಿರುವಂತೆ ಪರಸ್ಪರ ಒಡಂಬಡಿಕೆಗಳಿಂದಲೇ ವೈಷಮ್ಯದ ಪ್ರಸಂಗಗಳು ಪರಿಹಾರವಾಗಬೇಕು. ಪ್ರಪಂಚದಲ್ಲಿ ಸುಖಶಾಂತಿ ನೆಲಸಬೇಕು. ಮಾನವತೆಯ ಶ್ರೇಯಸ್ಸು ಉಂಟಾಗಬೇಕು.



ದುರ್ಬೀನನ್ನು ಕೆಳಗಿಡಲು ಕಾರಣವೇನು? ದುರ್ಬೀನು ನೋಡಲು ಈಗ ಬಂದಿರುವ ಆತಂಕವೇನು? ಪತ್ರಿಕೆಯಲ್ಲಿ ಏಕೆ ಈಗ ಆ ವಿಚಾರ ಬರುತ್ತಿಲ್ಲ? ಎಂಬೀ ಹಲವು ಪ್ರಶ್ನೆಗಳು ಪ್ರತಿ ವಾರ ಕೇಳಿಬರುತ್ತವೆ.

ದುರ್ಬೀನನ್ನು ಕೆಲವು ದಿನ ಕೆಳಗಿಟ್ಟು ಅದರ ಬಗ್ಗೆ ವಾಚಕರ ಅಭಿಪ್ರಾಯ ತಿಳಿಯುವದೇ ಉದ್ದೇಶವಲ್ಲದೆ ಬೇರೆ ಯಾವ ಆತಂಕವಿರಲಿಲ್ಲ. ಏಕೆಂದರೆ ದುರ್ಬೀನು ನೋಡಲು ದೂರದ ಬೆಟ್ಟ, ಜನರಿಲ್ಲದ ಕಾಡು ಇವೇ ಸಾಕು. ಅಲ್ಲಿ ಗಲಾಟೆ ಮಾಡುವವರು ಯಾರು? ವಾಚಕರು ದುರ್ಬೀನ್ ನೋಟವು ಅವಶ್ಯವೆಂದ ಕಾರಣ ಹೊಸ ದುರ್ಬೀನು ಕೊಂಡಿದ್ದೇವೆ. ಮುಂದೆ ವಾರ ವಾರ ಕಂಡದನ್ನು ಇಲ್ಲಿ ಹೇಳಲಾಗುವದು.

—ದುರ್ಬೀನ್ ಧಾರಿ

ಈ ವರ್ಷ ಮಳೆ ಹೆಚ್ಚಾಯಿತು. ಮಳೆ ಹೆಚ್ಚಿಂದು ಹಲವರಿಗೆ ಸಂತೋಷವಾದರೂ ಹಲವರಿಗೆ ನಷ್ಟವಾಗಿದೆ. 'ಮಳೆ ಹೊಡೆದು, ಮಕ್ಕಳಾಗಿ ಹಾಳಾದವರಾರು?' ಎಂಬ ನಾಣ್ನುಡಿಯು ಈಗ ಪೂರ್ಣ ಸತ್ಯವಾಗಿ ಉಳಿದಿಲ್ಲ. ಮಳೆ ಹೊಡೆದು ಲಕ್ಷಾಂತರ ಜನರು ನಿರ್ಗತಿಕರಾಗಿದ್ದಾರೆ. ಹೆಚ್ಚಿಗೆ ಮಕ್ಕಳಾಗಿ ಉಪವಾಸ ಸತ್ತವರಿದ್ದಾರೆ. ಏಕೆಂದರೆ ಗಂಗಾನದಿಯಿಂದಾಕ್ಷಣ ಅದರೊಳಗೆ ಗಂಟೆಗಟ್ಲೆ ಉಸಿರುಕಟ್ಟಿ ಮುಳುಗುವದು ಸಾಧ್ಯವೇ? ಆದ್ದರಿಂದ ಪ್ರತಿಯೊಂದೂ ಗಡಿಮೀರಿದರೆ ಅನಾಹುತವೇ!

• * •

'ನನ್ನ ಗ್ರಾಮದಲ್ಲಿ ಕೆಲವು ಅನಾಚಾರಗಳು ನಡೆಯುತ್ತಿವೆ. ನಿಮ್ಮ ದುರ್ಬೀನು ಇತ್ತ ತಿರುಗಿಸಿ ನೋಡಬಾರದೇಕೆ?' ಎಂದೊಬ್ಬರು ಕೇಳಿ 'ಅದಕ್ಕೇನಾದರೂ ಖರ್ಚು ತೆರಬೇಕಿದ್ದರೆ ತೆರುವೆನು' ಎಂದಿರುವರು. ಅಲ್ಲದೆ 'ದುರ್ಬೀನಿನ ಅನುಭವ ಓದುವದು ಸಿಹಿತಿಂಡಿ ತಿಂದಂತೆ' ಎಂದೂ ಹೊಗಳಿದ್ದಾರೆ.

ದುರ್ಬೀನಿಗೂ ಒಂದು ಮಿತಿ ಇದೆ. ದೂರದ ದಿಗಂತದಲ್ಲಿರುವ ವಸ್ತು ಅದಕ್ಕೆ ತೋರಲಾರದು. ಅಂದರಂತೆ ಎಲ್ಲೆಡೆಯ ವಿಚಾರಗಳನ್ನು ಅದು ನೋಡಲಾರದು. ದುರ್ಬೀನು ನೋಡುವವರು ಒಬ್ಬರೇ ಇಲ್ಲ. ದೇಶಕ್ಕೆ ಹಿತ ಆಗಬೇಕು, ಶೀಲ ಸಭ್ಯತೆ ಹೆಚ್ಚಿ ನಾವು ಉತ್ತಮರಾಗಿ, ಕಾರ್ಯಕುಶಲರೂ ಆಗಬೇಕೆಂಬುವವರೆಲ್ಲರೂ ದುರ್ಬೀನಿನ್ನು ತಮ್ಮ ಸ್ವಾನುಭವಗಳನ್ನು ಬಹಿರಂಗವಾಗಿ ಆಡಿ ತಿದ್ದಿಕೊಳ್ಳಬೇಕು. ಆದ್ದರಿಂದ ಪಸ್ಸಿನಲ್ಲಿ ತಿಂದ ತಿಂಡಿಗೆ ಕಾಸು ಕೇಳುವವರು ಹೇಗಿಲ್ಲವೋ ಅದರಂತೆ ಮನಸ್ಸಿಗಾದ ಅನುಭವನ್ನು, ಇಲ್ಲಿ ಪ್ರಕಟವಾಗುವ ವಿಚಾರಕ್ಕೂ ದುಡ್ಡು ಕೊಡಬೇಕಿಲ್ಲ.

* * *

ಕೊಡಗಿನ ರೈತರ ಸ್ಥಿತಿ ಉತ್ತಮವಾಗಿದೆ. ಏಕರಿಗೆ ನಾಲ್ಕಾಣೆ ಕಂದಾಯ ಕೊಡುವದು ಯಾರಿಗೂ ಕಷ್ಟವಲ್ಲವೆಂದು ಪೇಟೆಯಲ್ಲಿರುವ ಕೆಲವರು ಹೇಳುತ್ತಿದ್ದಾರೆ. ನಾಲ್ಕು ಹೊಟ್ಟೆಬಿಟ್ಟು ಜೇಬು ತುಂಬಿಕೊಳ್ಳುವ, ಇಲ್ಲವೇ ಇನ್ನೊಬ್ಬರ ಹೆಗಲೇರಿ ಜೀವಿಸುವ ಜನರಿಗೆ ಬಡ ರೈತನ ಕಷ್ಟದ ಅರಿವು ಹೇಗೆ? ನಾಲೆ ಹತ್ತಿದವನಿಗೆ ನದಿಯ ಆಳ ತಿಳಿಯದು. ಗಾಳಿಗೋಪುರವಾಗಿ ಬಾಯಿ ಹಾರಿಸುವವನಿಗೆ ವಿಷಯದ ಗಾಢ ಯೋಚನೆ ಇರದು. ಅದರಂತೆ ಸುಖ ಜೀವಿಗಳಿಗೆ ಬಡವನ ಬವಣೆ ಅರಿಯದು.

* * *

ಸರಕಾರ ಬಾಣೆ ಕಂದಾಯವನ್ನು ಹಾಕದೆ ನಿಲ್ಲಿಸಬಹುದೇ? ದುರ್ಬೀನು ನೋಡಿ ಹೇಳಿರೆಂದು ಒಬ್ಬರು ಕೇಳಿರುವರು.

ನಿಲ್ದಾಣ ಬಂದಾಗ ಬಂಡಿಯೂ, ನಿಜರೂಪ ತಿಳಿದಾಗ ಬಡಾಯಿಯೂ ನಿಲ್ಲುವಂತೆ ಜನತೆಯು ತನ್ನ ಬಹುಮತ ವಿರೋಧ ಪ್ರಕಟಿಸಿದಾಗ ಸರಕಾರವೂ ನಿಲ್ಲಬೇಕಾಗುತ್ತದೆ.

• • *

ಸ್ವಂತ ಸಂಪಾದನೆಯಲ್ಲಿ ನಿರತರಾಗಿ ಹೊರಗಿದ್ದು, ಈಗ ಬಂದವರು ಚುನಾವಣೆ ಕಾಲಕ್ಕೆ ನಾನಿರಲಿಲ್ಲವಲ್ಲಾ ಎಂದು ಬೇಸರಪಡುತ್ತಾ, ದೊಡ್ಡ ಕೆಲಸಗಾರರಂತೆ ಏನೇನೋ ಪ್ರಯತ್ನಿಸುತ್ತಿದ್ದಾರೆ. ಗಾಡಿ ಹೊಡೆಯುವವೆಂದರೆ ಗಾಡಿಗೆ ಕಟ್ಟಿದ ಪ್ರಾಣಿಗಳನ್ನು ಓಡಿಸುವದೆಂಬುದನ್ನು ತಿಳಿದ ಇವರು ಹಾಡಿನುಡಿಯುವದರಿಂದ ಅದನ್ನು ನಂಬಿ ಮುಂದೊತ್ತುವ ಪ್ರಾಣಿಗಳನ್ನು ಆಡಿಸುತ್ತಿದ್ದಾರೆ. ಆದರೆ ಒಂದು ಮಾತನು ಎಲ್ಲರೂ ತಿಳಿಯಬೇಕು. ಹಿಂದಿನ ಕಾಲದಲ್ಲಿ ಕಲ್ಲಿನಲ್ಲಿ ಕೆತ್ತಿದ ನಾಗನಿಗೆ ಪೂಜೆ ಪುರಸ್ಕಾರವಿತ್ತು. ಲೋಕ ಸಂಚಾರಿ ನಾರದರಿಗೂ ಅಗ್ರಪೂಜೆ ಸಲ್ಲುತ್ತಿತ್ತು. ಆದರೆ ಈಗ ಜೀವಂತ ನಾಗನಿಗೂ, ಆಧುನಿಕ ನಾರದರಿಗೂ (ಚಾಡಿಕೋರರು) ತಿರಸ್ಕಾರವೇ!

* * *

ದಿ ವಿಜಯಾ ಬೇಂಕ್ ಲಿ.,

ಮಡಿಕೇರಿ (ಕೊಡಗು)

ಹೆಡ್ ಆಫೀಸು:— ಕದ್ರಿ, ಮಂಗಳೂರು (ದ. ಕ.)

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಮೇಲ್ಕಂಡ ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಸಾಲ ಪಡಕೊಂಡು ಪಡೆದ ಸಾಲದ ಮೊಬಲಗನ್ನಾಗಲೀ, ಅವುಗಳ ಬಡ್ಡಿಯನ್ನಾಗಲೀ ವ್ಯಾದೆಗೆ ಕೊಡದೆ ಇರುವುದರಿಂದ ಸದ್ರಿಯವರಿಗೆ ರಿಜಿಸ್ಟ್ರ ನೋಟೀಸುಗಳನ್ನು ಕಳುಹಿಸಿರುವಲ್ಲಿ ಆ ಪೈಕಿ ಕೆಲವರು ನೋಟೀಸು ಪಡೆದು ವ ಬಾಕಿಯವರು ನೋಟೀಸು ಪಡೆಯದೆ ಸಿಕ್ಕದೆ ಸದ್ರಿ ಸಾಲದ ಅಸಲು ಬಡ್ಡಿ ವಗೈರೆಗಳನ್ನು ಇನ್ನೂ ಬಾಕಿ ಇಟ್ಟುಕೊಂಡಿರುವುದರಿಂದ ಅವರು ಈಡಿಟ್ಟ ನಗಗಳನ್ನು ಇದೇ ತಾರೀಕು 28-8-1953ನೇ ಶುಕ್ರವಾರ ದಿನ ಹಗಲು 3 ಗಂಟೆ ಸಮಯಕ್ಕೆ ಸರಿಯಾಗಿ ಅಥವಾ ಬೇಂಕಿಗೆ ಯುಕ್ತ ಕಂಡು ಬರುವ ಯಾವುದೇ ಇನ್ನಿತರ ದಿನಗಳಲ್ಲಿ ಪುನಹ ನೋಟೀಸು ಕೊಡದೇನೇ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಏಲಂನಲ್ಲಿ ಸಿಕ್ಕಿದ ಐವೇಜು ಸಾಲದ ಮೊಬಲಗಿಗೆ ಕಡಿಮೆಯಾದಲ್ಲಿ ಸಂಬಂಧ ಪಟ್ಟವರಿಂದ ಬೇಂಕಿಗೆ ಬರತಕ್ಕ ಐವೇಜನ್ನು ವಸೂಲು ಮಾಡಲಾಗುವದೆಂಬುವದನ್ನು ಈ ಮೂಲಕ ತಿಳಿಸಲಾಗಿದೆ.

ಸಾಲದ ತಾರೀಕು	ಜುವೆಲ್ ಲೋ. ನಂ.	ಹೆಸರು ಮತ್ತು ವಿಳಾಸ	ತಾ. 30-6-53ಕ್ಕಾಗುವ ಬಡ್ಡಿ ಸಮೇತ ಸಾಲ.
3-2-51	92/51	ಬಿ. ಪಾಂಡುರಂಗ ಶೇಟ್, ಶೇಷು ಶೆಟ್ಟರ ಮಗ, ಚಿನ್ನದ ಕೆಲಸಗಾರ, ಮಹದೇವಪೇಟೆ, ಮಡಿಕೇರಿ	110-15-0
16-3-51	203/51	ಡಿ. ಯಸ್. ರಾಮಚಂದ್ರ ಶೆಟ್ಟಿ, ಸೂರಪ್ಪ ಶೆಟ್ಟರ ಮಗ, ಮರ್ಚೆಂಟ್, ಮಡಿಕೇರಿ	61--3-0
28-3-51	243/51	ಎಂ. ಗೋಪಾಲ ಆಚಾರಿ, ಮಂಜಯ್ಯ ಆಚಾರಿಯವರ ಮಗ, ಚಿನ್ನದ ಕೆಲಸಗಾರ, ಮಡಿಕೇರಿ.	62-12-0
25-4-51	332/51	ಎಸ್. ಇದಿನಬ್ಬ, ಮುಹಮ್ಮದ್‌ನವರ ಮಗ, ಮರ್ಚೆಂಟ್, ಗಣಪತಿ ಬೀದಿ, ಮಡಿಕೇರಿ	95-1-0
21-5-51	417/51	— Do —	100-1-0
8-6-51	486/51	ಎಂ ಎ ಹಸನ್, ಏಲಕ್ಕಿ ವ್ಯಾಪಾರಿ, ಭಾಗಮಂಡಲ	383-10-0
3-8-51	673/51	ಕೆ. ಎಂ. ಮಂದಣ್ಣ, ಪೊಣ್ಣಪ್ಪನವರ ಮಗ, ಕೋರೋನೇಶನ್ ಗಾರ್ಡನ್ ಬಳಿ ಮಡಿಕೇರಿ.	113-10-0
6-12-51	1075/51	— Do — ...	144-11-0
11-12-51	1094/51	ಎಂ. ಎ. ಹಸನ್, ಅಬ್ಬಾಸ್ ಮುಸಾಲಿಯವರ ಮಗ, ಮರ್ಚೆಂಟ್, ಭಾಗಮಂಡಲ.	66-10-0
8-2-52	111/52	ಶೇಕ್ ಅಹಮ್ಮದ್, ಹಸನೆಯವರ ಮಗ, ಬೊದವಾಡೆ ಗ್ರಾಮ, ಬೆಟ್ಟಗೇರಿ	32-5-0
11-2-52	115/52	ಪಿ. ಎಂ. ಕಾಶ್ಯಪ್ಪ, ಮುತ್ತಣ್ಣನವರ ಮಗ, ಕೆಂಚೆಟ್ಟಿ ತೋಟ, ಕುಂದಿಕೊಪ್ಪ	59-11-0
25-9-52	705/52	— Do —	246-5-0
11-4-53	199/53	ಕೆ. ಪಿ. ಪೋಕರ್ ಬ್ಯಾರಿ, ಟಿಂಬರ್ ಮರ್ಚೆಂಟ್, ಮಡಿಕೇರಿ	162-5-0
16-6-53	373/53	ಪಿ. ಸಿ. ಸೋಮಣ್ಣ, ಪ್ಲಾಂಟರ್ ಪೊದ್ದಾಣಿ ತೋಟ, ಪಕೋಳ ಗ್ರಾಮ, ಮೂರ್ನಾಡು.	1053-0-0

M. SHIVAPPA ALVA,
AGENT.

The Vijaya Bank Ltd ,
MERCARA.
12—8—1953.

ಜ್ಞಾನದೀಪ

(೧)

ಅಣಕಿಸುವದರಲ್ಲಿ ಮರ್ಕಟನನ್ನು ಮನುಷ್ಯ ಗೆಲ್ಲುವಂತಿಲ್ಲ. ನಿಂದಿಸುವಲ್ಲಿ ಅಧಮನಿಗೆ ಸರಿ ಸಾಟಿ ಇಲ್ಲ.

(೨)

ಕಡವು ಬಿಟ್ಟು ಎಷ್ಟು ಹೊತ್ತು ಕಾದರೂ ದೋಣಿ ದೊರೆಯುವಂತಿಲ್ಲ. ಕಾರಣ ಬಿಟ್ಟು ಎಷ್ಟೇ ವಾದಿಸಿದರೂ ಒಪ್ಪಿಗೆ ದೊರೆಯುವಂತಿಲ್ಲ.

(೩)

ಹಾರವನ್ನು ಕ್ರಯಕ್ಕೆ ಪಡೆದಂತೆ ಒಯ್ಯಾರವನ್ನು ಪಡೆಯಲಾರೆ. ಸಂಪತ್ತನ್ನು ದುಡಿದು ಗಳಿಸುವಂತೆ ಪ್ರತಿಭೆಯನ್ನು ಗಳಿಸಲಾರೆ. — ನುಡಿಮುತ್ತು.

೧೪-೮-'೫೩ನೇ **ಕೊಡಗು** ಶುಕ್ರವಾರ.

ಕಾಶ್ಮೀರದಲ್ಲಿ ಸ್ಫೋಟನ

ಕಳೆದವಾರ ಕಾಶ್ಮೀರದ ವಿಚಾರವಾಗಿ ಬರೆಯುತ್ತಾ ಕಾಶ್ಮೀರದ ಕೆಲವು ಮುಂದಾಳುಗಳು ಸ್ವತಂತ್ರ ಕಾಶ್ಮೀರದ ಮೊತನ್ನೆತ್ತಿ ಪ್ರಚಾರ ಪ್ರಾರಂಭಿಸಿ ಅಲ್ಲಲ್ಲಿ ಭಿನ್ನಾಭಿಪ್ರಾಯಕ್ಕೆ ಕಾರಣರಾಗಿದ್ದಾರೆಂದು ಸೂಚಿಸಿದ್ದೆವು. ಆದರೆ ಈ ವಾರದಲ್ಲಿ ಯಾರೂ ಊಹಿಸಲಾರದಂಥಾ ಘಟನೆಯು ಕಾಶ್ಮೀರದಲ್ಲಿ ನಡೆದು ಕಾಶ್ಮೀರದ ಪ್ರಧಾನಿ ಶೇಕ್ ಅಬ್ದುಲ್ಲಾ ಮಂತ್ರಿಮಂಡಳವನ್ನು ಸಾದರ್-ಈ-ರಿಯೊಸತ್ ಕರಣಸಿಂಗರು ವಿಸರ್ಜಿಸಬೇಕಾಗಿ ಬಂದುದಲ್ಲದೆ ಶೇಕ್ ಅಬ್ದುಲ್ಲಾ ಮಂತ್ರಿ ಮಂಡಳದಲ್ಲಿ ಉಪಪ್ರಧಾನ ಮಂತ್ರಿಯಾಗಿದ್ದ ಶ್ರೀ ಗುಲಾಮ್ ಮಹಮ್ಮದ್ ಭಕ್ಷಿಯವರು ಪ್ರಧಾನ ಮಂತ್ರಿಯಾಗಿರುವರು. ಇದರ ವಿಸ್ತೃತ ವಿವರಗಳನ್ನು ವಾಚಕರಿಗಾಗಿ ಬೇರೆಡೆ ಕೊಟ್ಟಿರುವೆವು.

ಕಳೆದ ಎರಡು ವರ್ಷಗಳಿಂದ ಶೇಕ್ ಅಬ್ದುಲ್ಲಾರವರ ಮಂತ್ರಿ ಮಂಡಳವು ದಕ್ಷತೆಯಿಂದ ಕೆಲಸ ಮಾಡಿಲ್ಲವೆಂದೂ ಇತ್ತಲಾಗಿ ತಿಳಿದುಬಂದಿದೆ. ಲಂಚಗುಳಿತನ, ಪಕ್ಷ ಪಾತಿತ್ವ, ಶಿಥಿಲ ಆಡಳಿತದಿಂದಾಗಿಯೂ, ಮತ್ತು ಇತ್ತೀಚೆಗೆ ಹೆಚ್ಚಾಗುತ್ತಿದ್ದ ಜಾತೀಯ ದೃಷ್ಟಿಯ ಕಾರಣದಿಂದಲೂ ಮಂತ್ರಿ ಮಂಡಳದೊಳಗೆ ಅನೈಕ್ಯತೆಯುಂಟಾಗಿ ಎರಡು ಪಂಗಡಗಳಾದುದಲ್ಲದೆ ಮಂತ್ರಿ ಮಂಡಳವು ಜನತೆಯ ವಿಶ್ವಾಸವನ್ನೂ ಕಳಕೊಂಡಿತ್ತು. ಈ ಪರಿಸ್ಥಿತಿಯನ್ನು ತಪ್ಪಿಸಿ ಜನತೆಯ ಹಿತ ಸಾಧಿಸುವ ದೃಷ್ಟಿಯಿಂದ ಕಾಶ್ಮೀರದ ಸಾದರ್-ಈ-ರಿಯಾಸತರು ಮಂತ್ರಿ ಮಂಡಳದ ವಿಸರ್ಜನೆ ಮಾಡಿ ಹೊಸ ಮಂತ್ರಿ ಮಂಡಳದ ರಚನೆಗೆ ಅನುಮಾಡಿದ್ದು ಯೋಗ್ಯವಾಯಿತು.

ಈಗಿನ ಮುಖ್ಯ ಮಂತ್ರಿಯಾಗಿರುವ ಗುಲಾಮಭಕ್ಷಿಯವರು ತಮ್ಮ ಹೇಳಿಕೆಯಲ್ಲಿ ಜಾತೀಯತೆಗೆ ಕಾಶ್ಮೀರದಲ್ಲಿ ತಾನು ಅನುಕೊಡಲಿಕ್ಕಿಲ್ಲವೆಂದೂ ಹಿಂದೂ ದೇಶದ ವಿದೇಶ ನೀತಿಯಾಶ್ರಯವನ್ನು ಪಡೆದು ಅದರೊಂದಿಗೆ ಸಖ್ಯತೆಯಿಂದಿರುವದರಲ್ಲೇ ಕಾಶ್ಮೀರದ ಸುಗಮ ಭವಿಷ್ಯವಿದೆಯೆಂದೂ ಹೇಳಿರುವರು. ಭಾರತವು ಕಾಶ್ಮೀರದ ಬಗ್ಗೆ ತುಂಬಾ ಸಹಾಯ ಮಾಡಿದ್ದಲ್ಲದೆ ಕಾಶ್ಮೀರದಲ್ಲಿ ಭಾರತೀಯ ಸೈನಿಕರು ಹೊರರಾಷ್ಟ್ರಗಳ ಧಾಳಿಯಾಗದಂತೆ ತಮ್ಮನ್ನು ಆದರ್ಶ ರೀತಿ ರಕ್ಷಿಸುತ್ತಿರುವರೆಂದಿರುವರು.

ಕಾಶ್ಮೀರವು ಪ್ರತ್ಯೇಕ ಒಂದು ರಾಷ್ಟ್ರವಾಗಿ ಇರುವ ಯಾ ಪಾಕಿಸ್ಥಾನದೊಡನೆ ಸೇರುವ ವಿಚಾರವು ಕಾಶ್ಮೀರದ ಹಿತದೃಷ್ಟಿಯಿಂದಲ್ಲವೆಂದೂ ಪಾಕಿಸ್ಥಾನದೊಡನೆ ಸೇರಿದರೆ ಕಾಶ್ಮೀರದ ಅಸ್ತಿತ್ವವೇ ಉಳಿಯಲಾರದೆಂದೂ ಹೇಳಿರುವರು.

ಪಂಡಿತ ಜವಾಹರ್‌ಲಾಲ್ ನೆಹರೂರವರು ಜನತಾ ಸಭೆಯಲ್ಲಿ ಕಾಶ್ಮೀರದ ಘಟನೆಯ ಬಗ್ಗೆ ಒಂದು ಹೇಳಿಕೆಯನ್ನು ಕೊಡುತ್ತಾ ಕಾಶ್ಮೀರದಲ್ಲಾದ ಘಟನೆಗಳು ಕಾಶ್ಮೀರಕ್ಕೆ ಸಂಬಂಧಿಸಿದ ಅಂತರಿಕ ವ್ಯವಹಾರವೆಂದೂ, ಹೊಸ ಮಂತ್ರಿ ಮಂಡಳವು ಭಾರತದೊಡನೆ ಸೌಹಾರ್ದತೆಯನ್ನು ಹೆಚ್ಚಿಸಿಕೊಂಡು ಶಾಂತ ಮತ್ತು ಜನಹಿತ ಆಡಳಿತ ನಡೆಸುವದೆಂದೂ ಆಶಿಸಿರುವರು.

ಕಾಶ್ಮೀರದಲ್ಲಾದ ಘಟನೆಗಳಿಂದಾಗಿ ಪಾಕಿಸ್ಥಾನದ ಮನೋಭಾವವೂ ಬದಲಾಗಿರಬೇಕು. ಏಕೆಂದರೆ ಈ ಘಟನೆಯ ಕೆಲಸಮಯದಲ್ಲಿಯೇ ಪಾಕಿಸ್ಥಾನದ ಮುಖ್ಯ ಮಂತ್ರಿ ಮಹಮ್ಮದ್ ಅಲಿಯವರು ಪಂಡಿತ ನೆಹರೂರವರಿಗೆ ಒಂದು ತಂತಿ ಕಳುಹಿಸಿ ತಾವು ಕಾಶ್ಮೀರದ ವಿಚಾರ ಮಾತುಕತೆ ಮುಂದರಿಸಲು ತಯಾರಿರುವದಾಗಿಯೂ ಒಂದು ವಾರದೊಳಗೇ ಅಂಥಾ ಅನುಮಾಡಬೇಕೆಂದೂ ಕೇಳಿಕೊಂಡಿರುವರು. ಕಾಶ್ಮೀರದಲ್ಲಿ ಆಗಿರುವ ಹೊಸ ವಾತಾವರಣದಲ್ಲಿ ಪಾಕಿಸ್ಥಾನ-ಭಾರತಗಳೊಳಗಿರುವ ಕಾಶ್ಮೀರ ಪ್ರಶ್ನೆಯು ಶಾಂತಿದಾಯಕವಾಗಿ ಬಗೆಹರಿಯಲೀ ಎಂಬುದೇ ನಮ್ಮ ಹಾರೈಕೆಯು.

ವರ್ತಮಾನ.

ಸ್ವಾತಂತ್ರ್ಯ ದಿನಾಚರಣೆಯ ನಿಮಿತ್ತ ತಾ. ೧೫ರಲ್ಲಿ ಮಡಿಕೇರಿ ಕೋಟೆಯಲ್ಲಿ ಚೀಫ್‌ಕಮಿಷನರೂ, ವೀರಾಜಪೇಟೆಯಲ್ಲಿ ಅ. ಕಮಿಷನರೂ, ಸೋಮವಾರಪೇಟೆಯಲ್ಲಿ ಕೊಡಗು ಶಾಸನ ಸಭೆಯ ಸ್ಪೀಕರರೂ ಧ್ವಜಾರೋಹಣ ಮಾಡುವದಲ್ಲದೆ ಪೋಲೀಸರ ಮತ್ತು ಎನ್. ಸಿ. ಸಿ. ದಳದವರ 'ಮಾರ್ಚ್‌ಫಾಸ್ಟ್' ಸ್ವೀಕರಿಸುವರು.

ಕೈಲ್ ಮುಹೂರ್ತ ಹಬ್ಬದ ನಿಮಿತ್ತ ಕೂಪನ್ ದಾರರಿಗೆ ತಾ. ೫-೯-೫೩ರ ವರೆಗೆ ಒಂದು ಕುಪ್ಪಿ ಹೆಚ್ಚಿನ ಸಾರಾಯಿ ಕೊಡಲಾಗುವದೆಂದು ಪ್ರಕಟಿಸಿದ್ದಾರೆ.

ಪೈಗಂಬರವಾಸಿ ಶ್ರೀ ಎಂ. ಎಂ. ಸಿದ್ದೀಕರ ನಿಧನದ ಬಗ್ಗೆ ಸಂತಾಪ ಸೂಚಕ ಸಭೆಯೊಂದು ಕೊಡಗಿನ ಮುಖ್ಯ ಮಂತ್ರಿ ಶ್ರೀ ಸಿ. ಎಂ. ಪೂಣಚ್ಚನವರ ಅಧ್ಯಕ್ಷತೆಯಲ್ಲಿ ನಡೆದು ಶ್ರೀ ಕೆ. ಪಿ. ಚಿಣಪ್ಪನವರು ಅವರ ಗುಣಗಾನ ಮಾಡಿದರು. ಸಂತಾಪ ಸೂಚಕ ಠರಾವಿನ ನಂತರ ಅಧ್ಯಕ್ಷರು ಮೃತರ ಜೀವನವನ್ನು ವಿವರಿಸಿದರು. ನಂತರ ಎರಡು ನಿಮಿಷಗಳ ಮೌನ ಪ್ರಾರ್ಥನೆಯಿಂದ ಅವರ ಆತ್ಮಕ್ಕೆ ಚಿರಶಾಂತಿಯನ್ನು ಬಯಸಲಾಯಿತು.

ಮದ್ರಾಸು ವಿಶ್ವವಿದ್ಯಾಲಯದ ಎಕಾಡೆಮಿ ಕೌನ್ಸಿಲಿಗೆ ಕೊಡಗು ಸರಕಾರಿ ಕಾಲೇಜಿನಿಂದ ಶ್ರೀ ಸಿ. ಪೌಲಸ್ ಮತ್ತು ಶ್ರೀಮತಿ ರಾಜೀವಿಬಾಯಿಯವರನ್ನು ಸದಸ್ಯರಾಗಿ ಆರಿಸಿರುವರು.

ಈ ವರೆಗೆ ಅಂದರೆ ಜನವರಿ ೧ರಿಂದ ಆಗಸ್ಟ್ ೧೩ರ ವರೆಗೆ ೯೭ ಇಂಚು ೧೩ ಸೆಂಟು ಮಳೆಯಾಗಿದೆ. ಕಳೆದ ವರ್ಷ ಈ ಅವಧಿಯಲ್ಲಿ ೭೦. ೮೮ ಸೆಂಟು ಮಳೆಯಾಗಿತ್ತು.

ವೀರಾಜಪೇಟೆಯ ಪುರಸಭೆಯವರು ತಾ ೧೦-೮-೫೩ರಲ್ಲಿಯ ತಮ್ಮ ಸಭೆಯಲ್ಲಿ ವೀರಾಜಪೇಟೆ ಟೌನ್‌ಹಾಲನ್ನು ಬದಲಾವಣೆ ಮಾಡಲು ಮತ್ತು ಬಸ್ ಸ್ಟೇಂಡಿನಲ್ಲಿ ಪೋಲೀಸರಿಗೆ ನಿಲ್ಲಲು ಅನುಕೂಲ ಸ್ಥಳ ಮಾಡಲು ನಿರ್ಣಯಿಸಿರುವರು.

ಶ್ರೀ ಬಾಚರಣಿಯಂಡ ನಾಣೈಯ್ಯನವರನ್ನು ಮದ್ರಾಸಿನ ವೈ. ಎಂ. ಸಿ. ಎ. ಕಾಲೇಜಿನ ಹಾಕಿ ಕೇಪ್ಟನರಾಗಿ ಆರಿಸಿರುವರು

ತಾ. ೩೦-೭-೫೩ರಲ್ಲಿ ಬೆಟ್ಟದಗುಡ್ಡೆ ಗ್ರಾಮದಲ್ಲಿ ಶ್ರೀ ಪಿ. ಬಿ. ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ "ಡೆಮೊನ್ ಸ್ಟ್ರೇಶನ್ ಫೀಲ್ಡ್ ಡೇ" ನಡೆಯಿತು. ಶ್ರೀಗಳಾದ ಕೆ. ಆರ್. ಮಲ್ಲಪ್ಪ ಮೊದಲಾದವರು ಭಾಷಣ ಮಾಡಿದ್ದಲ್ಲದೆ ಜಪಾನಿನ ಪದ್ಧತಿಯಂತೆ ೨ ಏಕರೆ ಭೂಮಿಯನ್ನು ನೆಡಲಾಯಿತು.

ಸ್ವಾತಂತ್ರ್ಯ ದಿನಾಚರಣೆಯ ಸಂಬಂಧ ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಕೊಡಗಿನ ಗೃಹ ಮಂತ್ರಿಯವರಿಂದ ಮಡಿಕೇರಿ ಮಾರ್ಕೆಟ್ ಬಳಿ ಧ್ವಜಾರೋಹಣವೂ, ಮಧ್ಯಾಹ್ನದ ಮೇಲೆ ೩. ೩೦ ಗಂಟೆಗೆ ಮೇನ್ಸ್ ಕಾಂಪೌಂಡಿನಲ್ಲಿ ಆಟೋಟಗಳ ಸ್ಪರ್ಧೆಯೂ ೩.೩೦ ಗಂಟೆಗೆ ಕಾವೇರಿ ಮಹಲ್‌ನಲ್ಲಿ ಗೃಹ ಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೂ ನಡೆಯುವದು.

ಕೊಡಗು ಪ್ರಾಂತ್ಯದ ಸಹಕಾರ ಸಂಘಗಳ ರಿಜಿಸ್ಟ್ರಾರ್ ಆಗಿದ್ದು, ಮೈಸೂರು ಸರಕಾರಕ್ಕೆ ವರ್ಗಾಯಿಸಲ್ಪಟ್ಟಿದ್ದ ಶ್ರೀ. ಪಿ. ಎಂ. ಚಂಗಪ್ಪನವರನ್ನು ಮೈಸೂರಿನಲ್ಲಿ ಅಸಿಸ್ಟೆಂಟ್ ರಿಜಿಸ್ಟ್ರಾರ್ ಹುದ್ದೆಗೆ ನೇಮಿಸಿದ್ದರಿಂದ ಶ್ರೀ. ಚಂಗಪ್ಪನವರು ತಮ್ಮ ಅಧಿಕಾರದ ದರ್ಜೆಗೆ ತಕ್ಕ ಪುರಸ್ಕಾರ ದೊರೆಯಲಿಲ್ಲವೆಂದು ಆ ಹುದ್ದೆಯನ್ನು ನಿರಾಕರಿಸಿ ನಿವೃತ್ತರಾಗುವುದಕ್ಕೆ ಮುಂಚಿತ ರಜಾಕ್ಕೆ ಬರೆದಿರುವರೆಂದು ತಿಳಿಯಬರುತ್ತದೆ.

ಹುಚ್ಚರ ಪಟ್ಟಿ.

ನಾಗರಿಕತೆ

ಮಕ್ಕಳಿಗೆ ಬಂದೆ ಬಾಲ್ಯದೊ
ಅಕ್ಕರೆಯ ಸವಿಮಾತುಗಳ ತೋರದಿದ್ದೊಡೆ
ಚಿಕ್ಕಂದಿನಲಿ ಮಕ್ಕಳಿಗೆ ರೊಕ್ಕವನು
ಮುಕ್ತಲರುಹದಿದ್ದೊಡೆ
ವೃಕ್ಕಸವನಾದರೂ ಒಕ್ಕೊರಳಿನಿಂ ಪೊಗಳದಿರ್ದೊಡೆ
ಅದು ವ್ಯರ್ಥ ತಿಳಿ ಮಾನವಾ ||

ಓದವ Boy ಐಸ್ಕ್ರೀಮನು ಮೋದದ ಬಾಯಿ
ಬೀಡಿ ಸಿಗರೇಟುಗಳ ಸೇದದಾ ಬಾಯಿ
ಉಪಕಾರ ಗೈದವನ ಹಳಿಯದಾ ಬಾಯಿ
ಸ್ನೇಹದಿಂ ಮೋಸವನು ಮಾಡದಾ 'ಭಾಯ್'
ಆಡಂಬರವ ತೋರಿ ಮೆರೆಯದಿರೆ ಹಾಯ್
ಅದು ತಾಂ ಬಿಲದ ಬಾಯಿ ತಿಳಿ ಮಾನವಾ ||

ಬರೆಯದ ಕೈ, ಗೆಳೆಯರಂ ಕೊರೆಯದ ಕೈ
ವಿಶ್ವಾಸ ತೋರಿಸುತ ಕೈ ಕೊಡದ ಕೈ
ಹಾಸ್ಟೆಲ್ ಕ್ಲಬ್ಬುಗಳಲ್ಲಿಸ್ಪೇಟ್ ಆಡದಾ ಕೈ
ಪರ ಸತಿಯ ಆಗಾಗ ಮುಟ್ಟದಾ ಕೈ
ಕುಲಗೆಟ್ಟರೂ ಹಣವ ಗಳಿಸದಾ ಕೈ
ಅದು ತಾಂ ಬೆಲೆರಹಿತ ಮರಗೈ ತಿಳಿ ಮಾನವಾ ||

— ದಾಸ್.



ಇದು ಯೋಗ್ಯತೆಯಲ್ಲ

ಕೊಡಗು ಸರಕಾರದ ಮಂತ್ರಿಗಳಿಗೆ ಸರಕಾರದ ಖರ್ಚಿನಿಂದ ಕಾರುಗಳನ್ನು ಕೊಟ್ಟಿರುವುದು ಸರಕಾರಿ ಕೆಲಸಗಳಿಗಲ್ಲದೆ ಅವರ ಸ್ವಂತ ಉಪಯೋಗಕ್ಕಲ್ಲ. ದೇಶದ ಬಡಜನರ ಸ್ವತ್ತಾಗಿರುವ ಕಾರನ್ನು ಸಾರ್ವಜನಿಕ ಹಾಗೂ ಸರಕಾರಿ ಕೆಲಸಕ್ಕೆ ಉಪಯೋಗಿಸಬೇಕಲ್ಲದೆ ತಮ್ಮ ಸ್ವಾರ್ಥಕ್ಕಾಗಿ ಅಂದರೆ ಮಕ್ಕಳನ್ನು ಶಾಲೆಗೆ ಕಳುಹಿಸಲು ಮನೆಗೆ ಬಂದ ನೆಂಟರನ್ನು ಬಿಡಲು ಮೊದಲಾದುವುಗಳಿಗೆ ಉಪಯೋಗಿಸಬಾರದು. ಜನಪ್ರಿಯ ಮಂತ್ರಿಗಳು ಈ ವಿಚಾರದಲ್ಲಿ ಎಚ್ಚರ ವಹಿಸಿ ದೇಶಕ್ಕೆ ಉತ್ತಮ ಆದರ್ಶವನ್ನು ಹಾಕಬೇಕೆಂದು ನನ್ನ ಬಯಕೆ.

ಕುಶಾಲಪ್ಪ.

ಕಾಲೇಜ್ ಹಾಸ್ಟೆಲ್

ಎಷ್ಟೇ ಕೂಗಿಕೊಂಡರೂ ಕಾಲೇಜ್ ವಿದ್ಯಾರ್ಥಿಗಳಿಗೆ ಉಳಕೊಳ್ಳಲು ಹಾಸ್ಟೆಲ್ ಆಗಲಿಲ್ಲ. ಹೋಟೆಲಿನಲ್ಲಿ ಊಟ, ಹಾಳು ಬಿದ್ದ ಶಾಲಾ ಆವರಣದ ಮನೆಯಲ್ಲಿ ವಾಸ, ಕಾಲೇಜ್ ವಿದ್ಯಾರ್ಥಿಗಳ ಇಂದಿನ ಸೌಭಾಗ್ಯವಾಗಿದೆ. ಕೆಲವು ವಿದ್ಯಾರ್ಥಿಗಳು ಈ ವಿಚಾರವಾಗಿ ಮಂತ್ರಿಗಳೊಡನೆ ಮಾತಾಡಲು ಹೋಗಿದ್ದಾಗ "You don't bother about it, the parents will look to that" ಎಂದು ಹೇಳಿದರು. ಆದರೆ ಯಾವ ತಂದೆಯಾಗಲೀ, ಸರಕಾರವಾಗಲೀ ಬಡ ಕಾಲೇಜು ವಿದ್ಯಾರ್ಥಿಗಳ ಸಹಾಯಕ್ಕೆ ಬಂದಿರುವದಿಲ್ಲ. ಇನ್ನಾದರೂ ಸರಕಾರವು ತಕ್ಕ ಏರ್ಪಾಡು ಮಾಡಬಾರದೇಕೆ?

ವಿದ್ಯಾರ್ಥಿ.

ಇದು ಅನ್ಯಾಯ

ಕೊಡಗಿನಲ್ಲಿ ಸ್ಕೂಲ್ ಫೈನಲ್ ಪಾಸಾಗಿ ಕೆಲಸ ದೊರೆಯದೆ ಕಷ್ಟಪಡುತ್ತಿರುವ ಯುವಕರ ಸಂಖ್ಯೆ ತುಂಬಾ ಇದೆ. ಸ್ಕೂಲ್ ಫೈನಲ್ ಆಗಿ ಹಲವಾರು ವರ್ಷಗಳಾದರೂ ಹಳ್ಳಿಯಲ್ಲಿರುವವರಿಗೆ ಉದ್ಯೋಗ ದೊರೆಯುವದೇ ಇಲ್ಲ. ಮಡಿಕೇರಿಯಲ್ಲಿದ್ದು ಆಗಾಗ ಅಧಿಕಾರಿಗಳನ್ನು ಕಾಣುತ್ತಿರುವವರ ರೊಟ್ಟಿಗೆ ಬೆಣ್ಣೆ ಬೀಳುತ್ತಿರುವುದು ಅನುಭವದ ಮಾತು. ಏಕೆಂದರೆ ಸರಕಾರಿ ಉದ್ಯೋಗಗಳನ್ನು ಕೊಡುವಾಗ ಒಂದು ತತ್ವವನ್ನು ಅನುಸರಿಸಿದಂತೆ ತೋರುವದಿಲ್ಲ. ಸ್ಟಾಫ್ ಸಿಲೆಕ್ಷನ್ ಬೋರ್ಡಿನಲ್ಲಿ ಆರಿಸಲ್ಪಟ್ಟಿದ್ದರೂ ಅದರಂತೆ ಉದ್ಯೋಗ ದೊರೆಯುವದಿಲ್ಲ. ಮೇಲಾಗಿ ಮಡಿಕೇರಿಯ ಖಚೇರಿಗಳಲ್ಲಿ ಇತ್ತಲಾಗಿ ಹುಡುಗಿಯರ ಸಂಖ್ಯೆ ವಿಪರೀತವಾಗಿದೆ. ಇದರಿಂದ ಹಳ್ಳಿಗಳಿಂದ ಖಚೇರಿಗೆ ಹೋಗುವವರಿಗೆ ತೊಂದರೆ ಇದೆ. ಅಲ್ಲದೆ ಅನೇಕ ವಿದ್ಯಾವಂತ ಯುವಕರ ಉದ್ಯೋಗಗಳನ್ನು ಇವರು ಅಪಹರಿಸುತಿದ್ದಾರೆ. ಸರಕಾರವು ಈ ಬಗ್ಗೆ ನಿಗ ವಹಿಸಬೇಕು. ನಿರುದ್ಯೋಗಿಯಾದ ಯುವಕನು ಸುಲಭವಾಗಿ ಎಡಪಕ್ಷಕ್ಕೆ ಬಲಿಬೀಳುವನೆಂಬುದನ್ನು ಗಮನಿಸಬೇಕು.

T. K.

ಕೊಡಗಿನಲ್ಲಿ ನಿರುದ್ಯೋಗ.

ಕೊಡಗಿನ ಸರಕಾರಿ ಖಚೇರಿಗಳು ಬಡಾವಣೆಯಾಗುತ್ತಿದ್ದು ಹೆಚ್ಚು ಹೆಚ್ಚು ಜನ ಸರಕಾರಿ ಕೆಲಸಕ್ಕೆ ಸೇರುತ್ತಿದ್ದರೂ ನಿರುದ್ಯೋಗವು ದಿನೇ ದಿನೇ ಹೆಚ್ಚುತ್ತಿದೆ. ವಿದ್ಯಾವಂತರಿಗೆಲ್ಲ ಸರಕಾರಿ ಕೆಲಸ ದೊರೆಯುವದಿಲ್ಲ ನಿಜ. ಆದರೆ ಸರಕಾರವು ಅಂಥಾವರಿಗೆ ಬೇರೆ ಉದ್ಯೋಗದ ಅನುವಾಡದಿರುವದು ವಿಷಾದಕರ. ಯಾವುದೇ ಕೈಗಾರಿಕೆಯೂ ಕೊಡಗಿನಲ್ಲಿ ಇಲ್ಲದಿರುವದು ನಿರುದ್ಯೋಗಕ್ಕೆ ಕಾರಣ. ಮತ್ತೆ ಇನ್ನೊಂದು ಪ್ರಾಮುಖ್ಯ ಕಾರಣವಿದೆ. ಸರಕಾರವು ಸರಕಾರಿ ಉದ್ಯೋಗಕ್ಕೆ ಹೊರಗಿನಿಂದ ಜನರನ್ನು ತರುತ್ತಿರುವ ನೀತಿ. ಕೊಡಗಿನಲ್ಲಿ ಯಾವುದಾದರೂ ಹುದ್ದೆಗೆ ಯೋಗ್ಯರಾದ ಕೊಡಗಿನವರೇ ದೊರೆಯದಿದ್ದರೆ ಹೊರಗಿನಿಂದ ತರುವದರಲ್ಲಿ ಅರ್ಥವಿದೆ. ಆದರೆ ಚಿಕ್ಕ ಚಿಕ್ಕ ಕೆಲಸಗಳಿಗೂ ಕೊಡಗಿನಲ್ಲಿ ವಿದ್ಯಾವಂತ ಯುವಕರಿದ್ದೂ ಹೊರಗಿನವರನ್ನು ನೇಮಿಸಲಾಗುತ್ತಿದೆ. ಸರಕಾರವು ಇದನ್ನು ಮನ್ನಾ ಮಾಡಬೇಕು. ಕೊಡಗಿನ ಸರಕಾರವು ಈ ವಿಚಾರದಲ್ಲಿ 'ವಿಶಾಲ ದೃಷ್ಟಿ'ಯಿಂದ ಎಲ್ಲರೂ ಭಾರತೀಯರೆಂದು ವರ್ತಿಸುವದರೆ ಆಗದು. ಏಕೆಂದರೆ ಇದೇ ದೃಷ್ಟಿ ನೆರೆಕರೆಯ ರಾಜ್ಯಗಳಲ್ಲಿ ಇಲ್ಲ. ಅಲ್ಲಿ ಕೊಡಗಿನವರಿಗೆ ಸ್ಥಳವಿಲ್ಲ. ಆದ್ದರಿಂದ ಈ ವಿಚಾರದಲ್ಲಿ ಸರಕಾರವು ಸ್ವಲ್ಪ ಕಟ್ಟರೆದು ವರ್ತಿಸಬೇಕು.

'ನಿರುದ್ಯೋಗಿ.'

ಬಾಣೆ ಕಂದಾಯ

ಬಾಣೆ ಕಂದಾಯದ ವಿಚಾರವಾಗಿ ಸಾರ್ವಜನಿಕರು ಅಭಿಪ್ರಾಯ ಕೊಡಲು ಸರಕಾರವು ನಿಶ್ಚಯಿಸಿದ್ದ ಅವಧಿ ಈಗ ಮುಗಿದು ಹೋಯಿತೆಂದು ತೋರುತ್ತದೆ. ಆದರೆ ಅನೇಕರು ಈ ಅವಧಿಯನ್ನು ಮುಂದರಿಸಬೇಕೆಂದು ಸರಕಾರವನ್ನು ಕೇಳಿಕೊಂಡಿದ್ದರು. ಕಳೆದ ವಾರದ ಪತ್ರಿಕೆಯಲ್ಲೂ ಕೆಲವು ಎಂ. ಎಲ್. ಎ. ಗಳೂ ಕೂಡ ಆ ರೀತಿ ಸಮಯವನ್ನು ಮಳೆಗಾಲ ಕಳೆಯುವ ವರೆಗೆ ಮುಂದರಿಸಬೇಕೆಂದು ಕೇಳಿಕೊಂಡ ಪತ್ರವಿತ್ತು. ಸರಕಾರವು ಈ ವಿಚಾರದಲ್ಲಿ ಏನು ನಿರ್ಣಯ ಮಾಡಿರುವದೆಂಬುದು ಜನತೆಗೆ ತಿಳಿಯಬೇಕು. ಅವಧಿ ಕೊಟ್ಟಿದ್ದರೆ ಎಲ್ಲಿಯ ವರೆಗೆ ಎಂಬುವನ್ನೂ, ಇಲ್ಲವಾದರೆ ಆ ವಿಚಾರವನ್ನು ಪತ್ರಿಕೆಗಳ ಮೂಲಕ ಜನತೆಗೆ ತಿಳಿಸಬೇಕಾಗಿ ಈ ಮೂಲಕ ಕೇಳಿಕೊಳ್ಳುವದಾಗಿದೆ.

ರೈತ.

ಧೂಮಪಾನ

ಸಿನೆಮಾ ಮಂದಿರಗಳಲ್ಲಿ, ಸಾರ್ವಜನಿಕ ಸಭೆ ಮತ್ತು ಹಾಲ್‌ಗಳಲ್ಲಿ ಹೊಗೆಬತ್ತಿ ಸೇದಕೂಡದೆಂಬ ಮಸೂದೆಯೊಂದನ್ನು ಕೊಡಗು ಶಾಸನ ಸಭೆಯು ಪಾಸು ಮಾಡಿ ಅದಕ್ಕೆ ಕೇಂದ್ರದ ಪ್ರೆಸಿಡೆಂಟರ ಸಹಿ ದೊರೆತು ಅದು ತಾ. ೧–೮–೫೩ರ ಗಜೆಟ್ಟಿನಲ್ಲಿ ಪ್ರಕಟವಾಗಿದೆ. ಆ ತಾರೀಖಿನಿಂದ ಅದು ಕೊಡಗಿನಲ್ಲಿ ಜಾರಿಗೆ ಬಂದಿದೆಯೆಂದಾಯಿತು. ಆದರೆ ಸಿನೆಮಾ ಮಂದಿರದಲ್ಲಿ ಸಿಗರೇಟು, ಬೀಡಿ ಸೇದುವವರು ಅದನ್ನು ನಿಲ್ಲಿಸಿರುವುದಿಲ್ಲ. ಕೇವಲ ಒಂದು ಕಾನೂನು ಪಾಸು ಮಾಡಿದರೆ ಸಾಲದು. ಅದು ಜಾರಿಯಲ್ಲಿ ಬರುವಂತೆ ಸರಕಾರ ನೋಡಬೇಕು. ಕಾನೂನು ಪಾಸು ಮಾಡಿದಾಕ್ಷಣ ಎಲ್ಲವೂ ಸರಿಯಾಯಿತೆಂದು ಭಾವಿಸಬಾರದು. ಅದನ್ನು ಜಾರಿಯಲ್ಲಿ ತರುವಲ್ಲಿ ಸರಕಾರವು ಖಡ್ಡಾಯವಾಗಿ ವರ್ತಿಸಬೇಕು. ಸರಕಾರ ಇತ್ತ ಗಮನಿಸುವದೇ?

'ಹೊಗೆಬತ್ತಿ ವಿರೋಧಿ'

ನಿಮ್ನ ವರ್ಗದವರು

ಮಹಾತ್ಮಾಗಾಂಧೀಯವರು ಈ ವರ್ಗದ ಹಿತವನ್ನು ಸರಕಾರದ ಆದ್ಯಕರ್ತವ್ಯಗಳೊಂದಾಗಿ ಮಾರ್ಪಡಿಸಿದ್ದಾರೆ. ಅದರಿಂದಲೇ ಕಾಂಗ್ರೆಸ್ ಸರಕಾರ ಬಂದ ಮೇಲೆ ಹರಿಜನರ ಹಿತದ ಬಗ್ಗೆ ಅಲ್ಪ ಸ್ವಲ್ಪ ಕೆಲಸಗಳು ಕೈಕೊಳ್ಳಲ್ಪಟ್ಟಿವೆ. ಆದರೂ ಆಶಿಸಿದಷ್ಟು ಆಗಿಲ್ಲ. ಹರಿಜನರ ಸ್ಥಿತಿ ಈ ಹಿಂದಿನದಕ್ಕಿಂಥಾ ಹೆಚ್ಚೇನು ಸುಧಾರಿಸಿಲ್ಲ. ಮತ್ತೆ ಇತರ ನಿಮ್ನ ವರ್ಗದವರಾದ ಎರವರು, ಕುರುಬರು ಮೊದಲಾದವರ ಸ್ಥಿತಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಈ ವರ್ಗದವರ ಹಿತಕ್ಕಾಗಿ ಬಡ್ಜೆಟ್ಟಿನಲ್ಲಿ ಹಣವಿರಿಸಿದೆ ಎಂದರೂ ಕಾರ್ಯತಃ ಹೆಚ್ಚೇನೂ ಆದದ್ದು ಕಾಣುವದಿಲ್ಲ. ಅಲ್ಲೊಂದು ಶಾಲೆ, ಇಲ್ಲೊಬ್ಬರಿಗೆ ಜಾಗ ಕೊಟ್ಟುದರಿಂದ ಪ್ರಶ್ನೆ ಬಗೆಹರಿಯಲಿಲ್ಲ. ಇಂದೂ ಕೂಡ ಬಹುತೇಕ ಎಲ್ಲಾ ಎರವರು, ಕುರುಬರಿಗೆ ಮನೆಕಟ್ಟಿಕೊಳ್ಳಲು ಜಾಗವಿಲ್ಲ. ಸ್ವಂತ ಉದ್ಯಮದ ಮಾರ್ಗವಿಲ್ಲ. ದೇಶದಲ್ಲಿ ಇರುವ ವ್ಯವಸಾಯ ಮಾಡಬಹುದಾದ ಪೈಸಾರಿಯನ್ನು ಈ ಜನರಿಗೆ ಹಂಚಿ ಹೊಸ ವಸಾಹತು ಅಲ್ಲಲ್ಲಿ ಮಾಡುವ ಮಾತು ಒಮ್ಮೆ ನಡೆದಿತ್ತು. ಆದರೆ ಅದು ಅಲ್ಲೇ ನಿಂತಿತು. ಸರಕಾರವು ಈ ವಿಚಾರದಲ್ಲಿ ಹೆಚ್ಚಿನ ನಿಗವಹಿಸಬೇಕಾದುದು ಅತೀ ಅವಶ್ಯ.

'ದಳಿತ ಬಂಧು'

ಈ ಯೋಜನೆಬೇಕು.

ಇದು ಯೋಜನೆಗಳ ಕಾಲ. ಪಂಚವಾರ್ಷಿಕ ಯೋಜನೆ, ಸಮಾಜ ವಿಕಾಸ ಯೋಜನೆ ಈ ರೀತಿ ಹಲವು ಯೋಜನೆಗಳನ್ನು ಸರಕಾರವು ಮಾಡುತ್ತಿದೆ. ಆದರೆ ದೇಶದಲ್ಲಿರುವ ಅಂಗಹೀನರು, ಕುರುಡರು, ಭಿಕ್ಷುಕರು ಮೊದಲಾದವರ ಬಗ್ಗೆ ಸರಕಾರವು ಒಂದು ಯೋಜನೆಯನ್ನು ಮಾಡಬೇಕು. ಸಾಮೂಜಿಕ ವಿಕಾಸ ಯೋಜನೆಯ ಅಂಗವಾಗಿ ದೇಶದಲ್ಲಿರುವ ಈ ಜನ ಸಂಕುಲವನ್ನು ಸಂಗ್ರಹಿಸಿ ಅವರವರಿಗೆ ಮಾಡಲು ಶಕ್ತವಾದ ಕೈಗಾರಿಕೆ ಮೊದಲಾದುವನ್ನು ಕಲಿಸಿ ಅವರದೊಂದು ವಸಾಹತನ್ನು ರಚಿಸುವ ಯೋಜನೆಯನ್ನು ಸರಕಾರವು ಅಗತ್ಯವಾಗಿ ಮಾಡಬೇಕು. ಭಿಕ್ಷುಕರಲ್ಲಿ ಹಲವರು ಕೆಲಸ ಮಾಡಲು ಶಕ್ತರಿರುವರು. ಅವರಿಗೆ ಯೋಗ್ಯ ತರಬೇತು ಕೊಟ್ಟು ಜೀವನದ ಮಾರ್ಗ ತೋರಿಸಿ ಕೊಟ್ಟರೆ ದೇಶದ ಯೋಗ್ಯ ಪ್ರಜೆಗಳಾಗುವದರಲ್ಲಿ ಸಂಶಯವಿಲ್ಲ. ಈ ವಿಚಾರವನ್ನು ಪರಿಶೀಲಿಸಿ ಸರಕಾರವು ತಕ್ಕ ಏರ್ಪಾಡು ಮಾಡುವದೇ?

[ನಾಗರಿಕ.

ಮಧುಪರ್ಕ

ಅಣ್ಣನ ಪ್ರಥಮ ಪೆಂಡತಿಯು ಅಕಾಲ ಮರಣಕ್ಕೆ ತುತ್ತಾದ ಒಂದು ವರ್ಷದ ನಂತರ ಪುನಹ ಅವನಿಗೆ ಲಗ್ನವಾಯಿತು. ಹೊಸ ಅತ್ತಿಗೆಯು ಸ್ಫುರದ್ರೂಪಿಯೂ, ಕಲಿತವಳೂ ಆಗಿದ್ದಳು. ಮನೆಗೆ ಬಂದ ಮರುದಿನದಿಂದಲೇ ಗೃಹಕೃತ್ಯದ ಸರ್ವಭಾರವನ್ನೂ ಹೊತ್ತು ದಕ್ಷತೆಯಿಂದ ವರ್ತಿಸತೊಡಗಿದಳು. ಅಣ್ಣನ ಹಿರಿಯ ಹೆಂಡತಿಯ ಬೆಲೆ ಬಾಳುವ ಬಟ್ಟೆ ಬರೆಗಳೂ, ಆಭರಣ ಮೊದಲಾದುವೂ ಕ್ರಮಶಃ ಆಕೆಯ ಪಾಲಿಕ್ಕೆ ಬಂದುವು. ಆಕೆ ಸಂತೋಷದಿಂದ ಅವುಗಳನ್ನು ಉಪಯೋಗಿಸುತ್ತಿದ್ದಳು. ಆದರೆ ಅಣ್ಣನಿಗೆ ಪ್ರಥಮ ಹೆಂಡತಿಯಲ್ಲಿ ಒಂದು ಹೆಣ್ಣು ಮಗುವಿತ್ತು. ಆ ಮಗುವನ್ನು ಕಂಡರೆ ಹೊಸ ಅತ್ತಿಗೆಗೆ ಆಗುತ್ತಿರಲಿಲ್ಲ. ಅದರೊಡನೆ ಯಾವಾಗಲೂ ಸಿಡಿಸಿಡಿಯಾಗಿ ಮಾತಾಡುವದು, ಅದರ ಶಕ್ತಿಗೆ ಮೀರಿದ ಕೆಲಸ ಮಾಡಿಸುವದು ಪರಿಪಾಟವಾಗಿತ್ತು. ಒಂದು ದಿನ ಆ ಮಗುವಿಗೆ ವಿಪರೀತ ಜ್ವರ ಬಂದಿತ್ತು. ಅತ್ತಿಗೆಯು ಅದರ ವಿಚಾರ ಗಮನವನ್ನೇ ಕೊಡಲಿಲ್ಲ. ಸಾಯಂಕಾಲ ಅಣ್ಣನು ಬಂದಾಗ ಬಹು ಒಯ್ಯಾರ ಪ್ರೇಮಗಳಿಂದ ಕಾಫಿ ಕೊಟ್ಟು ಉಲ್ಲಾಸದ ಮಾತಿನಲ್ಲಿ ಮುಳುಗಿದ್ದಳು. ನನಗೆ ಸಹಿಸಲಾಗಲಿಲ್ಲ. ಅಣ್ಣನೆದುರು ಬಂದು ಹೇಳಿದೆ. 'ಅತ್ತಿಗೆ, ಯಾವ ರೀತಿ ಅಣ್ಣನ ಮೃತಳಾದ ಹೆಂಡತಿಯ ಆಭರಣ ಬಟ್ಟೆ ಬರೆಗಳನ್ನು ಪ್ರೀತಿ ಸಂತೋಷಗಳಿಂದ ನಿನ್ನದೇ ಎನ್ನುವ ಹಾಗೆ ಉಪಯೋಗಿಸುತ್ತಿರುವೆಯೋ ಅದೇ ರೀತಿ ಆಕೆಯ ಮಗುವನ್ನೂ ನಿನ್ನದೆಂದು ಏಕೆ ಭಾವಿಸಿ ಅದರೊಡನೆ ಪ್ರೇಮದಿಂದ ವರ್ತಿಸಬಾರದು? ಅದಕ್ಕೆ ಜ್ವರ ಬಂದು ಇಡೀ ದಿನ ಮಲಗಿದೆ. ಆದರೆ ನೀನು ಆ ಕಡೆ ಗಮನವೀಯಲಿಲ್ಲ' ಎಂದೆ. ಇಷ್ಟು ಹೇಳುವಾಗ ನನ್ನ ಕಣ್ಣಲ್ಲಿ ಕಂಬನಿದುಂಬಿತ್ತು. ನನ್ನ ಬಾಣ ಗುರಿಗೆ ತಗಲಿತು. ಅಂದಿನಿಂದ ಅತ್ತಿಗೆಯು ಆ ಮಗುವನ್ನು ತನ್ನ ಮಗುವಿನಂತೆಯೇ ಪ್ರೀತಿಸುತ್ತಿದ್ದಾಳೆ.

— ಶೇಷಾರಾಣಿ.

ಕಾಶ್ಮೀರದ ಪ್ರಧಾನ ಮಂತ್ರಿ ಶೇಕ್ ಅಬ್ದುಲ್ಲಾರ ಪದಚ್ಯುತಿ.

ಕಾಶ್ಮೀರದಲ್ಲಿ ಯಾರೂ ಊಹಿಸದಂಥಾ ಘಟನೆಗಳು ಈ ವಾರ ನಡೆದು ಹೋದವು. ಕಾಶ್ಮೀರದ ಭವಿತವ್ಯದ ಬಗ್ಗೆ ಶೇಕ್ ಅಬ್ದುಲ್ಲಾ ಮಂತ್ರಿಮಂಡಳದಲ್ಲಿ ಭಿನ್ನಾಭಿಪ್ರಾಯವಿತ್ತು. ಶೇಕ್ ಅಬ್ದುಲ್ಲಾ ಮತ್ತವರ ಗೆಳೆಯರಾದ ಮಿರ್ಝಾ ಅಫ್ಝುಲ್ ಬೇಗ್ ಇವರಿಬ್ಬರು ಒಂದು ಕಡೆಯಾಗಿ ಮಂತ್ರಿ ಮಂಡಳದ ಉಳಿದ ಮೂರು ಜನರು ಮತ್ತೊಂದು ಪಕ್ಷವಾದರು. ಇದರಿಂದ ಕಾಶ್ಮೀರ ಆಡಳಿತವು ಅಸ್ತವ್ಯಸ್ತಗೊಂಡು ಮಂತ್ರಿ ಮಂಡಳದ ಮೇಲೆ ಲಂಚಗುಳಿತನ, ಸ್ವಜನ ಸಮರ್ಥನೆ ಮೊದಲಾದ ಆರೋಪಗಳು ಹೆಚ್ಚಾಗಿ ಅದು ದಿನೇ ದಿನೇ ಜನತೆಯ ಬೆಂಬಲವನ್ನು ಕಳೆದುಕೊಂಡಿತು.

ತಾರೀಕು ೭ರಲ್ಲಿ ನಡೆದ ಕಾಶ್ಮೀರ ಕೇಬಿನೆಟ್ ಮೀಟಿಂಗಿನಲ್ಲಿ ಶೇಕ್ ಅಬ್ದುಲ್ಲಾರವರು ಮಂತ್ರಿಮಂಡಳದಲ್ಲಿ ಐಕ್ಯತೆ ಇಲ್ಲವೆಂದೂ ಆರೋಗ್ಯ ಮಂತ್ರಿಯವರಾದ ಶಾಮ್‌ಲಾಲ್ ಶರಾಫರ ಮೇಲೆ ನಾನಾ ಆರೋಪಗಳಿವೆಯೆಂದೂ ಆದ್ದರಿಂದ ಅವರು ಮಂತ್ರಿ ಮಂಡಳಕ್ಕೆ ರಾಜಿನಾಮೆ ಕೊಡಬೇಕೆಂದೂ ಕೇಳಿದರು. ಅವರು ರಾಜಿನಾಮೆ ಕೊಡದ್ದರಿಂದ ಮಂತ್ರಿಮಂಡಳದಲ್ಲಿ ಬಿಕ್ಕಟ್ಟಾಗಿ ಉಪಪ್ರಧಾನಿಯಾಗಿದ್ದ ಗುಲಾಂ ಭಕ್ಷಿ ಮತ್ತಿತರ ಮೂರು ಜನರು ಒಂದು ಕಡೆಯೂ, ಶೇಕ್ ಅಬ್ದುಲ್ಲಾ ಮತ್ತವರ ಗೆಳೆಯರೊಬ್ಬರು ಇನ್ನೊಂದು ಕಡೆಯೂ ಆಗಿ ಮಂತ್ರಿಮಂಡಳ ಇಬ್ಭಾಗವಾಯಿತು.

ಕರನ್‌ಸಿಂಗರ ಆಜ್ಞೆ.

ಈ ಸಂಬಂಧದಲ್ಲಿ ಕಾಶ್ಮೀರದ ರಾಜಪ್ರಮುಖ ಕರನ್‌ಸಿಂಗರು ಹೊರಡಿಸಿದ ಪ್ರಕಟನೆಯಲ್ಲಿ, ಮಂತ್ರಿಮಂಡಳದಲ್ಲಿ ವಿಶೇಷ ಮತಭೇದವಿರುವದಲ್ಲದೆ ಜನತೆಯ ಬೆಂಬಲವು ಅದಕ್ಕೆ ಇಲ್ಲದಂತಾಗಿದೆ. ಆದರಿಂದ ಪ್ರಾಮಾಣಿಕವಾಗಿ ಮತ್ತು ದಕ್ಷತೆಯಿಂದ ಆಡಳಿತೆಯನ್ನು ಸಾಗಿಸುವದು ಅಶಕ್ಯವೆನಿಸಿದ್ದರಿಂದ ಶೇಕ್ ಅಬ್ದುಲ್ಲಾ ಇವರನ್ನು ಪದಚ್ಯುತಗೊಳಿಸಿ ಅವರ ಹಿರಿಯತನದಲ್ಲಿ ಸ್ಥಾಪಿತವಾಗಿದ್ದ ಮಂತ್ರಿಮಂಡಳವನ್ನು ವಿಸರ್ಜಿಸಲಾಗಿದೆ ಎಂದು ಹೇಳಿದೆ. ಸದ್ಯದ ಮಂತ್ರಿಮಂಡಳವು ಹೊಣೆಗಾರಿಕೆಯಿಂದ ಆಡಳಿತೆಯನ್ನು ನಡೆಸುವದು ಅಶಕ್ಯವಾಗಿದ್ದು ಪರಸ್ಪರರಲ್ಲಿಯ ಬಿಕ್ಕಟ್ಟಿನಿಂದ ರಾಜ್ಯದ ಏಕಮಾತ್ರ ಅಭಿವೃದ್ಧಿ ಮತ್ತು ಭದ್ರತೆಗೆ ಧಕ್ಕೆ ಬಂದಂತಾಗಿದೆಂದೂ ಹೇಳಿದೆ. ಅಬ್ದುಲ್ಲಾರ ಪದಚ್ಯುತಿಯ ನಂತರ ಬಕ್ಷಿ ಗುಲಾಮ ಮಹಮ್ಮದರು ಪ್ರಧಾನ ಮಂತ್ರಿಗಳೆಂದು ಪ್ರತಿಜ್ಞೆ ತೆಗೆದುಕೊಂಡ ಬಳಿಕ ಅವರ ಸಲಹೆಯ ಮೇರೆಗೆ ಶ್ರೀ. ಗಿರಿಧರಲಾಲ ಡೋಗ್ರ ಇವರು ಸ್ಟೇಟುಮಿನಿಸ್ಟರೆಂದು ಪ್ರತಿಜ್ಞೆ ತೆಗೆದುಕೊಂಡರು.

ಅಬ್ದುಲ್ಲಾರಿಗೆ ಮಂತ್ರಿಗಳ ಮನವಿ

ಅಬ್ದುಲ್ಲಾ ಮಂತ್ರಿ ಮಂಡಳದ ಮೂರು ಮಂತ್ರಿಗಳು ಅಬ್ದುಲ್ಲರಿಗೆ ಒಂದು ಪತ್ರ ಬರೆದು ಅವರ ಮೇಲೆ ಈ ಆರೋಪ ಹೊರಿಸಿದ್ದರು. ಭಾರತ ಮತ್ತು ಜಮ್ಮು ಮತ್ತು ಕಾಶ್ಮೀರಗಳಲ್ಲಿ ಅವಿಚ್ಛಿನ್ನ ಬಂಧನವನ್ನು ಕಲ್ಪಿಸುವ ದಿಲ್ಲಿ ಒಪ್ಪಂದವನ್ನು ಸಿದ್ಧಪಡಿಸಿದವರೇ ನೀವು. ಆಗ ನಿಮ್ಮ ನಿಲುಮೆಯನ್ನು ಸರಕಾರವು ರಾಷ್ಟ್ರೀಯ ಪರಿಷತ್ತು, ರಾಜ್ಯಘಟನಾ ಸಮಿತಿ ಮತ್ತು ಭಾರತದ ಪಾರ್ಲಿಮೆಂಟುಗಳೆಲ್ಲ ಬೆಂಬಲಿಸಿದವು. ಆದರೆ ನೀವು ಈ ಒಪ್ಪಂದವನ್ನು ಕಾರ್ಯಗತಗೊಳಿಸಲು ಉದ್ದೇಶಪೂರ್ವಕವಾಗಿ ವಿಲಂಬ ಮಾಡಿದ್ದಲ್ಲದೆ ಸಾರ್ವಜನಿಕವಾಗಿ ಇದನ್ನು ಖಂಡಿಸಿರುವಿರಿ. ಭಾರತ-ಕಾಶ್ಮೀರ ಸಂಬಂಧದಲ್ಲಿ ಬಿರುಕನ್ನು ಹುಟ್ಟಿಸಲು ನೀವು ಪ್ರಯತ್ನಿಸಿದಿರಿ.

ಸಂಸ್ಥಾನದ ಜನತೆಯ ಭವಿಷ್ಯವನ್ನು ಜನತೆಯೇ ನಿರ್ಧರಿಸಬೇಕೆಂಬುದು ನಿಜವಾದರೂ ನೀವು ಈಗ ಹುಟ್ಟಿಸಿರುವ ಗೊಂದಲ ಮತ್ತು ಅರಾಜಕತೆಯಿಂದ ಜನತೆಯು ತನ್ನ ಆ ಹಕ್ಕನ್ನು ಚಲಾಯಿಸಲು ಅಡ್ಡಿ ಬರುವದು. ಇಂತಹ ಪರಿಸ್ಥಿತಿಯನ್ನು ವಿದೇಶೀ ಸರಕಾರಗಳು ತಮ್ಮ ಸ್ವಾರ್ಥ ಸಾಧನೆಗೆ ಇದರ ಲಾಭ ಪಡೆಯುವವೆಂಬುದು ಅನಿವಾರ್ಯ ಪರಿಸ್ಥಿತಿಯಾಗುವದು.

ಮಿರ್ಝಾ ಅಫಝುಲ್ ಬೇಗರು ಅವ್ಯಾಹತ್ಯವಾಗಿ ಸಂಕುಚಿತ ಪಕ್ಷ ಮತ್ತು ಜಾತೀಯ ಧೋರಣೆಯನ್ನು ತಳೆಯುತ್ತ ಬಂದಿದ್ದು ನೀವು ಮಂತ್ರಿಮಂಡಳದಲ್ಲಿ ಹಾಗೂ ಸಾರ್ವಜನಿಕವಾಗಿ ಅವರಿಗೆ ಬೆಂಬಲ ಕೊಡುತ್ತಿದ್ದಿರಿ" ಎಂದು ಮುಂತಾಗಿ ಹೇಳಲಾಗಿದೆ.

ಅವರ ಬಂಧನ ಮತ್ತು ಆರೋಪಗಳು

ತಾ. ೮ರಲ್ಲಿ ಪ್ರಧಾನ ಮಂತ್ರಿ ಪದವಿಯಿಂದ ಪದಚ್ಯುತಗೊಳಿಸಲ್ಪಟ್ಟ ಶೇಖ್ ಮಹಮ್ಮದ್ ಅಬ್ದುಲ್ಲಾರನ್ನು ತಾ. ೯ರ ಬೆಳಿಗ್ಗೆ ಸುಮಾರು ಹತ್ತು ಗಂಟೆಗೆ ಗುಲ್‌ಮಾರ್ಗದಲ್ಲಿ ಬಂಧಿಸಲಾಯಿತು. ಅವರ ಹಿಂದಿನ ಸಹಕಾರಿಗಳಾದ ಮಿರ್ಜಾ ಅಫಜುಲ್ ಬೇಗ ಮತ್ತು ಇನ್ನಿತರ ಸುಮಾರು ೩೦ ಜನರನ್ನೂ ಅವರೊಡನೆ ಬಂಧಿಸಲಾಗಿದೆ.

ಉಧಮಪುರ ಜಿಲ್ಲೆಯಲ್ಲಿ ಒಂದೆಡೆ ಶೇಖ್ ಅಬ್ದುಲ್ಲಾರನ್ನು ಜೈಲಿನಲ್ಲಿರಿಸುವ ಏರ್ಪಾಡು ನಡೆದಿದೆಯೆಂದು ತಿಳಿದಿದೆ.

ಸಾರ್ವಜನಿಕ ಭದ್ರತಾ ಕಾನೂನಿನನ್ವಯ ಬಂಧಿಸಲ್ಪಟ್ಟ ಇವರೆಲ್ಲರ ಮೇಲೆ ಒಡಕು ಹುಟ್ಟಿಸಿದ, ಲಂಚ ತಿಂದ, ಜ್ಞಾತಿಪಕ್ಷಪಾತತನ ನಡೆಸಿದ, ದುರಾಡಳಿತದ ಮತ್ತು ರಾಷ್ಟ್ರದ ಶಾಂತಿ ಭದ್ರತೆಗಳಿಗೆ ಗಂಡಾಂತರಕಾರಕವಾಗಬಹುದಾದ ಸ್ವರೂಪದಲ್ಲಿ ವಿದೇಶಗಳೊಡನೆ ಸಂಬಂಧವಿಟ್ಟುಕೊಂಡ ಆರೋಪ ಹೊರಿಸಲಾಗಿದೆಯೆಂದು ತಿಳಿದು ಬಂದಿದೆ.

ಬಕ್ಷಿಗುಲಾಮರ ಹೇಳಿಕೆ

ಜಮ್ಮು ಮತ್ತು ಕಾಶ್ಮೀರದ ಹೊಸ ಪ್ರಧಾನ ಮಂತ್ರಿ ಬಕ್ಷಿ ಗುಲಾಮ ಮಹಮ್ಮದರು ತಾ. ೯ರಲ್ಲಿ ಕಾಶ್ಮೀರ ಆಕಾಶವಾಣಿಯಲ್ಲಿ ಮಾತಾಡುತ್ತ ರಾಷ್ಟ್ರೀಯ ವಿಪತ್ತನ್ನು ತಪ್ಪಿಸುವ ಅನಿವಾರ್ಯ ಪ್ರಸಂಗದ ಮೂಲಕ ತಾವು ಸರಕಾರದ ಹೊಣೆ ವಹಿಸಬೇಕಾಗಿಬಂದಿತೆಂದು ಹೇಳಿದರು.

ಅವರಿನ್ನೂ ಮುಂದುವರಿಯುತ್ತಾ "ಕಳೆದ ಕೆಲ ದಿನಗಳಿಂದಲೂ ಸಂಸ್ಥಾನದ ನಡೆದ ಕೆಲ ಘಟನೆಗಳಿಂದ ದೇಶದ ಹಿತಸಂಬಂಧಕ್ಕೆ ಮತ್ತು ನಮ್ಮ ಪ್ರಜಾಸತ್ತಾತ್ಮಕ ಹೋರಾಟಕ್ಕೆ ದ್ರೋಹವನ್ನೆಸಗುವ ಪ್ರಯತ್ನಗಳು ನಡೆದಿವೆಯೆಂದೂ ಅವುಗಳಿಂದ ಗಂಭೀರ ದುಷ್ಪರಿಣಾಮಗಳು ಅನಿವಾರ್ಯವೆಂದೂ ಸ್ಪಷ್ಟವಾಗಿ ತೋರುತ್ತಿತ್ತು.

ನಮ್ಮ ಕೆಲ ಸಹೋದ್ಯೋಗಿಗಳು ನಮ್ಮ ನಾಡಿನ ಕೆಲ ಅಂಶವನ್ನು ಎತ್ತಿಕೊಂಡು ಅದನ್ನು ಸ್ವತಂತ್ರ ರಾಷ್ಟ್ರವೆಂದು ರಚಿಸುವ ವಿಚಾರದಲ್ಲಿ ತೊಡಗಿದ್ದು ಅವರ ಭಾಷಣ ಮತ್ತು ಚಟುವಟಿಕೆಗಳು ಇದರ ಸ್ಪಷ್ಟ ಸ್ವರೂಪಗಳಾಗಿದ್ದವು.

ಈ ಚಟುವಟಿಕೆಗಳಿಗೆ ವಿಶಿಷ್ಟ ಹಿತಸಂಬಂಧವುಳ್ಳ ವಿದೇಶಗಳ ಬೆಂಬಲವಿರುವದು ಸ್ವಾಭಾವಿಕವಾಗಿದೆ. ಆದರೆ ಇದೇ ವಿದೇಶೀಯರು ಕಾಶ್ಮೀರ ಜನತೆಯ ಸ್ವಾತಂತ್ರ್ಯ ಮತ್ತು ಸ್ವಯಂನಿರ್ಣಯಾಧಿಕಾರಗಳ ಚಲಾವಣೆಗೆ ಮುಖ್ಯ ತೊಂದರೆಯಾಗಿದ್ದಾರೆಂಬುದನ್ನು ನಾವು ಲಕ್ಷ್ಯದಲ್ಲಿಡಬೇಕು.

ನಮ್ಮ ರಾಷ್ಟ್ರೀಯ ಚಳವಳಿಯು ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಪರಂಪರೆ ಹಾಗೂ ವಿಚಾರ ಪ್ರಣಾಲಿಯಿಂದಾಗಿ ನಮಗೆ ಭಾರತದ ಪ್ರಜಾಸತ್ತಾತ್ಮಕ ಚಳವಳಿಯೊಡನೆ ಅವಿಭಾಜ್ಯ ಸಂಬಂಧವು ಬೆಳೆದು ಬಂದಿದೆ. ಜಮ್ಮು ಮತ್ತು ಕಾಶ್ಮೀರದ ಹಿತ ಸಂಬಂಧ ಹಾಗೂ ಗೌರವಗಳು ಭಾರತದ ವಿದೇಶಧೋರಣೆಯೊಡನೆ ಹೊಂದಿಕೊಳ್ಳುವದರಿಂದ ಭದ್ರವಾಗುತ್ತಿದ್ದು ಭಾರತದಲ್ಲಿಯ ಪ್ರಜಾಸತ್ತಾತ್ಮಕ ಶಕ್ತಿಗಳ ಪ್ರಗತಿಯೊಡನೆಯೇ ನಮ್ಮ ನಾಡನ್ನು ವಿದೇಶಗಳ ಆಕ್ರಮಣದಿಂದ ರಕ್ಷಿಸಲು ಸಾಧ್ಯವಿದೆ. ಕಳೆದ ಆರು ವರ್ಷಗಳಲ್ಲಿ ನಮ್ಮ ಜನತೆಯ ಅನುಭವವೇ ಭಾರತೀಯ ಸೈನ್ಯದಾಡಳಿತೆಯಲ್ಲಿ ನಮ್ಮಗೆ ಹಿತವಾಗಿದೆಂಬುದಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿದೆ.

ಕಾಶ್ಮೀರವನ್ನು ಪಾಕಿಸ್ತಾನದಲ್ಲಿ ವಿಲೀನಗೊಳಿಸುವ ಯಾವದೇ ಪ್ರಯತ್ನ ನಡೆದರೆ ಅದರ ಪರಿಣಾಮವಾಗಿ ಕಾಶ್ಮೀರವು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವದರಲ್ಲಿ ಸಂದೇಹವಿಲ್ಲ" ಎಂದರು.

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೇಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು :—ವಿರಾಜಪೇಟೆ.

ಶಾಖೆ:—ನ್ಯೂ ಮುನಿಸಿಪಲ್ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟಗಳು
2. 12 ನೇ ನಂಬರಿನ ಒಂಟಿ ಹೊಳವಿನ ತೋಟದ ಕೋವಿಗಳು.
3. ಒಂಟಿ ಮತ್ತು ಜೋಡಿ ಹೊಳವಿನ ಕೇಪಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
5. $\frac{5}{8}$", $\frac{1}{2}$" ಮತ್ತು $\frac{3}{8}$" ಕಬ್ಬಿಣದ ಸರಳುಗಳು
6. 2", $1\frac{1}{4}$", 1" $\frac{3}{4}$" ಮತ್ತು $\frac{1}{2}$" ಕೊಳಾಯಿಗಳು. (G. I. Peps)
7. $1\frac{3}{4}$" × $\frac{5}{16}$" ಉಕ್ಕಿನ ಪಟ್ಟಿಗಳು (Spring Steel flats).
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಪಂಪುಗಳು.
9. ಕೋತಿ ಮತ್ತು ಆನೆ ಮಾರ್ಕಿನ ಸಿಮೆಂಟ್ ಟಿನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ) — ಪಿ. ಪಿ. ಬೆಳ್ಯಪ್ಪ, (ಪ್ರೆಸಿಡೆಂಟ್)

ಕೃತಜ್ಞತಾ ವಂದನೆ.

ತಾ. ೯—೭—೫೩ನೇ ಗುರುವಾರ ದಿನ ಶಿವಾಧೀನರಾದ ನಮ್ಮ ಮಾತೋಶ್ರೀ ನೀಲಮ್ಮನವರ ವಿಯೋಗದ ಕಾಲದಲ್ಲಿ ನಮಗೆ ಖುದ್ದಾಗಿ ಮತ್ತು ಪತ್ರ ಮುಖೇನ ಸಂತಾಪ ಸೂಚಿಸಿದವರಿಗೆ ಪ್ರತ್ಯೇಕ ಪತ್ರ ಬರೆದು ನಮ್ಮ ಕೃತಜ್ಞತೆಯನ್ನು ಸೂಚಿಸಲು ಅನಾನುಕೂಲವಾದ್ದರಿಂದ ಈ ಮೂಲಕ ನಮ್ಮ ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸುತ್ತೇವೆ.

ಮನೆಯಪಂಡ ಗಣಪತಿ ಮತ್ತು ಸಹೋದರರು

ತಿತಿಮತಿ.

"ರಷ್ಯಾದ ಶಾಂತಿ ಬಯಕೆ ನಿರ್ಬಲತೆ ಎಂದು ತಿಳಿಯದಿರಿ"

ಪ್ರಧಾನಿ ಮಲಂಕೋವ್‌ರವರ ಉದ್ಗಾರ.

— ಲೇಖಕ:— "ಗಣೇಶ್" —

ಮಾರ್ಶಲ್ ಸ್ಟಾಲಿನರ ನಿಧನದ ನಂತರ ರಷ್ಯಾದಲ್ಲಿ ತುಂಬಾ ಬದಲಾವಣೆಗಳಾಗಿವೆ. ಜಾರ್ಜ್ ಮಲಂಕೋವ್‌ರವರು ರಷ್ಯಾದ ಮುಖ್ಯ ಮಂತ್ರಿಯಾಗಿ ಸ್ಟಾಲಿನರು ಅನುಸರಿಸುತ್ತಿದ್ದ ಕಟ್ಟುನಿಟ್ಟಿನ ಕಬ್ಬಿಣ ರಾಜಕೀಯದಲ್ಲಿ ಅಲ್ಪ ಸ್ವಲ್ಪ ಬದಲಾವಣೆಯನ್ನು ಮಾಡಿ ರಷ್ಯಾದ ಪ್ರಾಮುಖ್ಯ ಗುರಿಯು ಯುದ್ಧವಲ್ಲ ಜಗತ್ತಿನ ಶಾಂತಿ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಈ ಪ್ರಯತ್ನಕ್ಕೆ ವಿರುದ್ಧವಿದ್ದ ಅನೇಕ ರಷ್ಯಾ ಮುಂದಾಳುಗಳನ್ನು ಪದಚ್ಯುತಗೊಳಿಸಿದ್ದಾರೆ. ಇವರಲ್ಲಿ ಪ್ರಾಮುಖ್ಯರೆಂದರೆ ಸ್ಟಾಲಿನರ ಬಲಗೈಯಂತಿದ್ದ ಬೆರಿಯಾರವರು. ಬೆರಿಯಾರವರನ್ನು ಮಾತ್ರವಲ್ಲ, ಅವರ ಅನುಯಾಯಿಗಳಾದ ಹಲವರನ್ನು ಅಧಿಕಾರದಿಂದ ಕಿತ್ತು ಹಾಕಿರುವರು. ರಷ್ಯಾದಲ್ಲಾದ ಈ ಬದಲಾವಣೆಗಳಿಂದ ಹೊರಗಿನ ಅನೇಕ ರಾಷ್ಟ್ರಗಳು ರಷ್ಯಾದೊಳಗೆ ಅಧಿಕಾರದ ಸ್ಫೋಟ ಬಂದಿದೆಯೆಂದೂ ಸ್ಟಾಲಿನರ ನಂತರ ರಷ್ಯಾದಲ್ಲಿ ಭದ್ರ ಆಡಳಿತ ನಡೆಯುತ್ತಿಲ್ಲವೆಂದೂ ತಿಳಿದುಕೊಂಡಿದ್ದರು. ಅವರೆಲ್ಲ ಮಾತುಗಳಿಗೆ ಉತ್ತರವಾಗಿ ಮಲಂಕೋವ್ ಹೀಗೆ ಹೇಳಿರುವರು. 'ಸಾಮ್ರಾಜ್ಯಶಾಹಿತ್ವದ ಏಜಂಟರಾಗಿ ಕೆಲಸ ಮಾಡುತ್ತಿದ್ದವರನ್ನು ಕಿತ್ತುಹಾಕಿದ್ದು ನಿರ್ಬಲತೆಯ ಲಕ್ಷಣವಾಗದು ಬದಲು ನಮ್ಮ ಆಂತರಿಕ ಶಕ್ತಿಯ ದ್ಯೋತಕವಾಗಿದೆ.'

ರಷ್ಯಾದ ಬಜೆಟ್.

ರಷ್ಯಾದ ಆಯವ್ಯಯ ಹೊಸ ರೀತಿ ಆರೋಗ್ಯಕರವಾಗಿದೆಯೆಂಬ ಬಗ್ಗೆ ಮಲಂಕೋವ್‌ರವರು ಹೇಳುತ್ತಾ 'ಕೊರಿಯಾದ ನಿರಾಶ್ರಿತರ ಪುನರ್ನಿವೇಶನಕ್ಕಾಗಿ ರಷ್ಯಾವು ೧೦೦೦ ಮಿಲಿಯ ರೂಬಲ್‌ಗಳನ್ನು ಕೊಡಲೊಪ್ಪಿದೆ' ಎಂದರು. ಈ ವರ್ಷದ ರಷ್ಯಾದ ಸಂರಕ್ಷಣಾ ಖರ್ಚು ೧೧೦,೨೦೦ ಮಿಲಿಯ ರೂಬಲ್‌ಗಳು ಅಂದರೆ ೧೦,೦೦೦ ಮಿಲಿಯ ಪೌಂಡುಗಳೆಂದೂ ಇದು ರಷ್ಯಾದ ವಾರ್ಷಿಕ ಉತ್ಪತ್ತಿಯ ಶೇಕಡ ಬರೇ ೨೦.೮ ರಷ್ಟೆಂದೂ ಹೇಳಿದರು. ಕಳೆದ ವರ್ಷ ಸಂರಕ್ಷಣಾ ಖರ್ಚಿಗಾಗಿ ವಾರ್ಷಿಕ ಉತ್ಪತ್ತಿಯ ಶೇಕಡ ೨೩.೬ ರಷ್ಟು ಖರ್ಚಾಗಿತ್ತೆಂದೂ ಈ ಬಾಬಿನಲ್ಲಿ ಕಡಿಮೆ ಖರ್ಚು ಈ ವರ್ಷ ಮಾಡಲಿರುವುದು ರಷ್ಯಾದ ಶಾಂತಿಪ್ರಿಯತೆಯನ್ನು ಪ್ರದರ್ಶಿಸುವುದೆಂದೂ ಹೇಳಿದರು. ರಷ್ಯಾದ [illegible] ಆರ್ಥಿಕ ಅಭಿವೃದ್ಧಿಯು ಬಹು ಹೆಚ್ಚಿನ ಗತಿಯಲ್ಲಿ ನಡೆಯುತ್ತಿದೆ. ಸರಕಾರವು ಉತ್ಪಾದನೆಗಾಗಿ ಬಹು ಹೆಚ್ಚಿನ ಗಮನವಿರಿಸಿದೆ.

ಈ ವರ್ಷದ ಗುರಿ.

ಕ್ರಾಂತಿಯು ಸಫಲವಾಗಿ ರಷ್ಯಾವು ತನ್ನ ಕಾಲಲ್ಲಿ ನಿಂತು ತನ್ನ ಅಭಿವೃದ್ಧಿಗಾಗಿ ಹೋರಾಡಲಾರಂಭಿಸಿದಂದಿನಿಂದ ಅದು ತಾನು ಪಂಚವಾರ್ಷಿಕ ಕಾರ್ಯಗಳ ಯೋಜನೆಯನ್ನು ತಯಾರಿಸಿ ಆಶ್ಚರ್ಯಜನಕ ರೀತಿಯಿಂದ ದೇಶದ ಪ್ರಗತಿಯನ್ನು ಸಾಧಿಸಿದೆ. ಇವರ ಪ್ರಥಮ ಪಂಚವಾರ್ಷಿಕ ಯೋಜನೆ, ದ್ವಿತೀಯ ಯೋಜನೆಗಳು ಜಯಪ್ರದವಾಗಿವೆ. ಅದೇ ರೀತಿ ರಷ್ಯಾವು ತನ್ನ ಈ ವರ್ಷದ ಉತ್ಪಾದನಾಗುರಿಯನ್ನು ಈ ರೀತಿ ಸ್ಪಷ್ಟಪಡಿಸಿದೆ. ಉಕ್ಕಿನ ತಯಾರಿ ೩೮ ಮಿಲಿಯ ಟನ್ನುಗಳಿಗೆ ಮುಟ್ಟಬೇಕು. ಕಲ್ಲಿದ್ದಲು ೩೨೦ ಮಿಲಿಯ ಟನ್ನುಗಳು, ಎಣ್ಣೆ ೫೩ ಮಿಲಿಯ ಟನ್ನುಗಳು, ಸಿಮೆಂಟ್ ೧೬ ಮಿಲಿಯ ಟನ್ನುಗಳು, ವಿದ್ಯುಚ್ಛಕ್ತಿ ೧೩೩ ಮಿಲಿಯ ಕಿಲೋವಾಟ್‌ಗಳು. ಈ ರೀತಿಯ ಯೋಜನೆ ಮಾಡಿ ರಷ್ಯಾವು ತನ್ನ ವಾರ್ಷಿಕ ಆದಾಯದ ಬಹು ಭಾಗವನ್ನು ರಾಷ್ಟ್ರೀಯ ಅಭಿವೃದ್ಧಿಗಾಗಿ ವಿನಿಯೋಗಿಸಿದೆ.

ವಿದೇಶ ನೀತಿ

ರಷ್ಯಾವು ಏನೂ ಶಾಂತಿಗಾಗಿ ಪ್ರಯತ್ನಿಸುವುದು ಎಂದು ಹೇಳುತ್ತಾ ಮಲಂಕೋವರು "ಹೊರಗಿನಿಂದ ರಷ್ಯಾದ ಶಾಂತಿ ಜೀವನಕ್ಕೆ ಭಂಗ ತರುವ ಶತ್ರುವನ್ನು ರಷ್ಯಾವು ಹುಡಿ ಮಾಡುವುದು" ಎಂದರು. ಜಗತ್ತಿನ ಯಾವುದೇ ಪ್ರಶ್ನೆಯನ್ನು, ಪ್ರಾಮುಖ್ಯವಾಗಿ ರಷ್ಯ–ಅಮೇರಿಕಾ ಗಳೊಳಗಿರುವ ಸಮಸ್ಯೆಗಳನ್ನು ಶಾಂತ ರೀತಿಯಿಂದ ಬಗೆಹರಿಸಿಕೊಳ್ಳುವಸಾಧ್ಯತೆಯ ಬಗ್ಗೆ ತಮ್ಮ ವಿಶ್ವಾಸವನ್ನು ಅವರು ವ್ಯಕ್ತ ಪಡಿಸುತ್ತಾ, "ಯುದ್ಧವನ್ನು ಒಂದು ಲಾಭದಾಯಕ ವ್ಯವಸಾಯವಾಗಿ ಮಾಡಿಕೊಂಡು ಅದರಿಂದ ಲಾಭ ಪಡೆಯುತ್ತಿರುವವರು ಶಾಂತಿಯು ನೆಲೆಸಿದಾಗ ತಮ್ಮ ಲಾಭವು ಕೈಬಿಡುವದೆಂದು ಅಂಜುತ್ತಾರೆ. ಅಂಥಾವರಿಗೆ ಶಾಂತಿ ಬೇಕಿಲ್ಲ" ಎಂದರು. ರಷ್ಯಾ ಮತ್ತಿತರ ಅನೇಕ ರಾಷ್ಟ್ರಗಳ ಶಾಂತಿಯ ಯತ್ನದಿಂದಾಗಿ ಮಿಲಿಯಗಟ್ಟಲೆ ಜನರಿಗೆ ಪಶ್ಚಿಮ ರಾಷ್ಟ್ರಗಳು ರಚಿಸಿರುವ ಅಟ್ಲಾಂಟಿಕ್ ಬ್ಲಾಕ್ ಜಗತ್ತಿನ ಶಾಂತಿಗಿರುವ ಪ್ರಥಮ ಗಂಡಾಂತರವೆಂದು ತಿಳಿದಿದೆಯೆಂದೂ ಕೊರಿಯದ ಶಾಂತಿ ಯತ್ನವು ಪೂರ್ವ ಭಾಗದ ಶಾಶ್ವತ ಶಾಂತಿಗೆ ಸಹಾಯಕವಾಗಬಹುದಿತ್ತಾದರೂ ಅಮೇರಿಕಾವು ಯುದ್ಧೋತ್ತರ ಒಪ್ಪಂದ ಕಾಲುಗಳನ್ನು ಲೆಕ್ಕಿಸದೆ ಜಪಾನನ್ನು ತನ್ನ ಸೈನ್ಯ ಹಾಗೂ ಶಸ್ತ್ರಾಸ್ತ್ರಗಳ ಕಾರ್ಖಾನೆಯನ್ನಾಗಿ ಮಾಡಿಕೊಂಡಿರುವುದು ಶಾಂತಿಗೆ ಕುಠಾರಪ್ರಾಯವಾಗಿದೆಯೆಂದೂ ಹೇಳಿದರು.

ಹೈಡ್ರೋಜನ್ ಬಾಂಬು

ಮಲಂಕೋವ್‌ರವರು ತಮ್ಮ ಭಾಷಣವನ್ನು ಮುಂದುವರಿಸುತ್ತಾ "ಹೈಡ್ರೋಜನ್ ಬಾಂಬಿನ ಹಕ್ಕು ಅಮೇರಿಕಕ್ಕೆ ಮಾತ್ರ ಸೀಮಿತವಾದುದಲ್ಲ; ರಷ್ಯಾದಲ್ಲಿಯೂ ಕೂಡ ಹೈಡ್ರೋಜನ್ ಬಾಂಬುಗಳು ತಯಾರಾಗಿವೆ. ಅಮೇರಿಕದ ಮುಂದಾಳುಗಳು ಆಟಮ್ ಬಾಂಬು ಅದರ ಮುನ್ನಡೆಯಾಗಿ ಹೈಡ್ರೋಜನ್ ಬಾಂಬು ತಮ್ಮಲ್ಲಿ ಮಾತ್ರ ಇವೆಯೆಂಬ ಆತ್ಮ ತೃಪ್ತಿಯಿಂದ ಜಗತ್ತನ್ನು ಬೆದರಿಸುತ್ತಿದ್ದರು. ಆದರೆ ಈ ವಿಚಾರದಲ್ಲಿ ಎಂದೋ ರಷ್ಯವು ಮರ್ಮದ ಗುಟ್ಟನ್ನು ತಿಳಿದು ಬಾಂಬುಗಳನ್ನು ತಯಾರಿಸಿ ಸಿದ್ಧವಾಗಿದೆ. ಆದ್ದರಿಂದ ರಷ್ಯಾದ ಶಾಂತಿ ಯತ್ನವು ಅದರ ನಿರ್ಬಲತೆಯ ಕಾರಣದಿಂದ ಎಂಬುದಾಗಿ ಯಾರಾದರೂ ತಿಳಿದುಕೊಂಡಿದ್ದರೆ ಅವರಂಥಾ ತಿಳಿಗೇಡಿತನ ಬೇರಿರಲಾರದು" ಎಂದು ಹೇಳಿರುವರು. ಜಗತ್ತಿನಲ್ಲಿ ಎಲ್ಲಾ ರಾಷ್ಟ್ರಗಳಿಗಿಂತಲೂ ದೊಡ್ಡದಾದ ಚೈನಾಕ್ಕೆ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಸ್ಥಾನ ಕೊಡದಿರುವ ನೀತಿಯನ್ನು ಟೀಕಿಸುತ್ತಾ ಚೈನಾಕ್ಕೆ ಅಲ್ಲಿ ಸ್ಥಳ ಕೊಡದಿದ್ದರೆ ಅದರಿಂದ ಗಂಡಾಂತರವಲ್ಲದೆ ಹಿತವಿಲ್ಲವೆಂದು ಹೇಳಿರುವರು.

ಭಾರತದ ಪ್ರಶಂಸೆ

ಹಿಂದೂದೇಶವು ಶಾಂತಿಗಾಗಿ ಮಾಡಿದ ಮತ್ತು ಮಾಡುತ್ತಿರುವ ಯತ್ನವನ್ನು ಹೊಗಳುತ್ತಾ ಕೊರಿಯಾದಲ್ಲಿ ಭಾರತವು ಕೈಗೊಂಡ ಜವಾಬ್ದಾರಿಯನ್ನು ವಿವರಿಸಿ "ಕೊರಿಯಾ ಯುದ್ಧವನ್ನು ನಿಲ್ಲಿಸಲು ಭಾರತವು ಮಾಡಿದ ಯತ್ನವು ಚಿಕ್ಕದೇನಲ್ಲ"ವೆಂದು ಹೇಳಿದರು. ಕೊರಿಯಾ ಯುದ್ಧ ನಿಂತದ್ದು ಶಾಂತಿ ಪ್ರಿಯ ರಾಷ್ಟ್ರಗಳಿಗೆ ದೊಡ್ಡ ಜಯವೆಂದು ಹೇಳುತ್ತಾ, ಶಾಂತಿಯನ್ನು ನಿರ್ನಾಮ ಮಾಡಿ ಕೊರಿಯಾಕ್ಕೆ ಕಾಲಿಕ್ಕಿದವರು ಕೊರಿಯಾ ಜನತೆಯ ನಿರ್ದಿಷ್ಟ ನಿರ್ಧಾರವೇನೆಂದು ಸೋಲನ್ನೊಪ್ಪಬೇಕಾಯಿತೆಂದೂ ಹೇಳಿದರು "ಭವಿಷ್ಯದಲ್ಲಿಯೂ ಕೂಡ ಹಿಂದೂದೇಶ ಮತ್ತು ರಷ್ಯಾ ಸಂಬಂಧವು ಸ್ನೇಹಪೂರ್ವಕ ಸಹಕಾರದಿಂದ ಬೆಳೆಯಲಿ" ಎಂದು ಅವರು ಆಶಿಸಿದರು. ಹಿಂದೂದೇಶ ಮತ್ತು ರಷ್ಯಾಗಳೊಳಗೆ ಸಾಂಸ್ಕೃತಿಕ ಮತ್ತು ಆರ್ಥಿಕ ಸಂಬಂಧಗಳು ದಿನೇ ದಿನೇ ಬೆಳೆಯುತ್ತಿವೆಯೆಂದೂ ಹೇಳಿದರು. ಪಾಕಿಸ್ತಾನದೊಡನೆಯೂ ತಮ್ಮ ಸಂಬಂಧ ಸ್ನೇಹಪೂರ್ಣವಾಗಿದೆಯೆಂದೂ ಈ ಬಾಂಧವ್ಯವು ಏಶಿಯಾದಲ್ಲಿ ಶಾಂತಿಯನ್ನು ನೆಲೆಗೊಳಿಸಲು ಸಹಾಯಕವಾಗುವದೆಂದೂ ಆಶಿಸಿದರು.

ರಷ್ಯಾದ ಪ್ರಧಾನಿ ಮಲಂಕೋವ್‌ರವರು ಆ. ೮ರಲ್ಲಿ ರಷ್ಯಾದ ಎರಡು ಶಾಸನ ಸಭೆಗಳ (ಯೂನಿಯನಿನ ಮತ್ತು ನೇಶನಾಲಿಟಿಗಳ ಸೋವಿಯಟ್‌ಗಳು) ಸಮ್ಮಿಶ್ರ ಸಭೆಯಲ್ಲಿ ಅನಿರೀಕ್ಷಿತವಾಗಿ ಭಾಷಣ ಮಾಡುತ್ತಾ ಮೇಲಿನ ವಿವರಗಳನ್ನು ತಿಳಿಸಿದರು.

INSURE WITH
OR REPRESENT
INDIA'S OLDEST LIFE OFFICE:
THE BOMBAY MUTUAL LIFE ASSURANCE SOCIETY, LTD.
BUSINESS IN FORCE OVER 40 CRORES
ASSETS .. OVER 12 CRORES
Applications from energetic youngmen are invitedfor representation.
Head Office; 25-21 BOMBAY.
Branch: 172 3, Narasimharaja Road. BANGALORE 2.

ನಗುಮಲ್ಲಿಗೆ

ಪಕ್ಷಿಗಳಿಗೆ ಗುಂಡು ಹೊಡೆಯಲೆಂದು ಯಜಮಾನನು ಚಿಕ್ಕ ಹುಡುಗನೊಬ್ಬನನ್ನು ಜೊತೆಯಲ್ಲಿ ಕರೆದುಕೊಂಡು ಹೋದನು. ದಿನವಿಡೀ ಪ್ರಯತ್ನಿಸಿ ನೂರಾರು ಗುಂಡು ಹಾಕಿದರೂ ಒಂದು ಪಕ್ಷಿಯೂ ದೊರೆಯದೆ ಕಾರಣ ಅವರು ಹಿಂತಿರುಗುತ್ತಿದ್ದರು.

ಯಜಮಾನ– ನಾನು ಒಳ್ಳೆಯ ಗುಂಡುಗಾರನಲ್ಲವೆಂದು ತಿಳಿಯಿತು.

ಹುಡುಗ– ಇಲ್ಲ ಸಾರ್, ನೀವು ಗುಂಡು ಹೊಡೆಯುವದನ್ನು ಚೆನ್ನಾಗಿ ಗುರಿಯಿಟ್ಟು ಹೊಡೆದಿರಿ. ಆದರೆ ಈ ದಿನ ದೇವರು ಪಕ್ಷಿಗಳ ಕಡೆ ತುಂಬಾ ದಯಾವಂತನಾಗಿದ್ದಾನೆ.

* * *

"ಕ್ಷಮಿಸಿರಿ, ಹೊಸ ನೋಟುಗಳಿಲ್ಲ" ಎಂದು ಹೇಳುತ್ತಾ ಬ್ಯಾಂಕ್ ಗುಮಾಸ್ತನು ತೀರ ಕೊಳೆಹಿಡಿದ ಹಳೆಯ ನೋಟುಗಳನ್ನು ಅಧ್ಯಾಪಕನಿಗೆ ಕೊಟ್ಟು "ನಿಮಗೆ ಮೈಕ್ರೋಬ್ (ಪರಮಾಣು ರೂಪಿ ಪ್ರಾಣಿ) ಗಳ ಹೆದರಿಕೆ ಇಲ್ಲವೆಂದು ಆಶಿಸುತ್ತೇನೆ" ಎಂದನು.

ಅಧ್ಯಾಪಕ– ನೀವು ತೊಂದರೆ ಪಟ್ಟುಕೊಳ್ಳಬೇಡಿ. ನನ್ನ ವೇತನದಲ್ಲಿ ಮೈಕ್ರೋಬ್ ಕೂಡ ಬಾಳಲಾರದು!

* *

ರಾಜಕೀಯ ಮುಂದಾಳೊಬ್ಬರು ಪತ್ರಿಕಾ ಸಂಪಾದಕರ ಮೇಲೆ ರೇಗಿ "ನಿಮಗೆ ಬುದ್ಧಿ ಸ್ವಾಸ್ಥ್ಯವಿಲ್ಲ. ನನ್ನ ವಿಚಾರದಲ್ಲಿ ಪ್ರಕಟಿಸಿರುವ ಸುಳ್ಳು ಕತೆಗಳಿಗೆ ಏನು ಹೇಳುವಿರಿ?

ಸಂಪಾದಕ– ಅಯ್ಯೋ, ನಿಮ್ಮ ವಿಚಾರದ ಸುಳ್ಳು ಕತೆಗಳಿಗೇ ಇಷ್ಟು ಹಾರಾಡುವಿರಾದರೆ ಮತ್ತೆ ಸತ್ಯಕತೆಗಳನ್ನು ಪ್ರಕಟಿಸಿದರೆ ಮತ್ತೆಷ್ಟು ಕೂಗಾಡಲಾರಿರಿ!

* * *

ಹೆಂಗಸು– ನನ್ನ ಮಗನ ಈ ಚಿಕ್ಕ ಭಾವಚಿತ್ರವನ್ನು ದೊಡ್ಡದು ಮಾಡಿ ಕೊಡಲಾಗುತ್ತದೋ?

ಫೋಟೋಗ್ರಾಫರ್– ಆಗಬಹುದು.

ಹೆಂಗಸು– ದೊಡ್ಡದು ಮಾಡುವಾಗ ಆತನ ತಲೆಯ ಮೇಲಿನ ಹ್ಯಾಟನ್ನು ತೆಗೆಯಬಹುದೇ?

ಫೋಟೋಗ್ರಾಫರ್– ಆಗಬಹುದು. ಆದರೆ ಆತನ ತಲೆಯ ಕೂದಲು ಹೇಗಿತ್ತು, ಗುಂಗುರೋ, ಕೋಂಬು ಮಾಡಿದ್ದೋ, ಯಾ ಬೈತಲೆ ಯಾವ ಬದಿಗೆ ಎಂಬುದನ್ನು ಹೇಳಿಕೊಟ್ಟರೆ ಒಳಿತು.

ಹೆಂಗಸು– ಹುಚ್ಚರಂತೆ ಮಾತಾಡದಿರಿ. ಹ್ಯಾಟ್ ತೆಗೆಯುವಾಗ ಒಳಗಿರುವ ಕೂದಲು ಹೇಗಿದೆಯೆಂದು ಕಾಣುವದಿಲ್ಲವೇ?

ಭಿಕ್ಷುಕನೊಬ್ಬನು ಕೈಯಲ್ಲಿ ಔಷಧಿಯ ಕುಪ್ಪಿಯನ್ನು ಹಿಡಿದು ಮನೆಯೊಂದರ ಮುಂದೆ ನಿಂತು ಕೂಗಿದನು. ಮನೆಯಾಕೆ ಬಾಗಿಲು ತೆರೆದು ಏನು ಬೇಕೆಂದು ಕೇಳಲು "ಡಾಕ್ಟರು ಹೇಳಿದ್ದಾರೆ, ಈ ಔಷಧಿಯನ್ನು ತೆಗೆದು ಕೊಳ್ಳುವ ಮೊದಲು ಏನೋ ಬೇಕೆಂದು"

ಹೆಂಗಸು– ದಯಾದೃಷ್ಟಿಯಿಂದ ಏನದು, ಗ್ಲಾಸು ಬೇಕೆ?

ಭಿಕ್ಷುಕ– ಇಲ್ಲ ಅಮ್ಮ, ಔಷಧಿಯನ್ನು ಊಟದ ನಂತರ ತೆಗೆದು ಕೊಳ್ಳಬೇಕೆಂದಿದ್ದಾರೆ. ದಯಮಾಡಿ ಈ ಔಷಧಿ ಕುಡಿಯುವ ಅನುಕೂಲ ಮಾಡಿಕೊಡಿ.

* * *

ಒಬ್ಬ ಮನುಷ್ಯನು ತನ್ನ ಹೆಂಡತಿ ಮತ್ತು ತನ್ನ ಹದಿನಾರು ಮಕ್ಕಳೊಡನೆ ಬಸ್ಸಿನಿಂದಿಳಿದು ಹೊರಟನು. ದಾರಿಯಲ್ಲಿ ಪೋಲೀಸನು ಆತನನ್ನು ನಿಲ್ಲಿಸಿ "ಸ್ಟೇಷನಿಗೆ ಬಾ" ಎಂದನು.

"ನಾನೇನು ತಪ್ಪು ಮಾಡಿರುವೆ?" ಎಂದು ಆತನು ಗಾಬರಿಯಿಂದ ಕೇಳಲು "ಅದು ನನಗೆ ಗೊತ್ತಿಲ್ಲ. ಈ ಬಸ್ಸಿನ ಜನರೆಲ್ಲಾ ನಿನ್ನನ್ನು ಹಿಂಬಾಲಿಸಲು ಕಾರಣವೇನೆಂದು ಮತ್ತೆ ವಿಚಾರಿಸುವೆ. ಈಗ ಸ್ಟೇಷನಿಗೆ ನಡೆ" ಎಂದನು.

* * *

"ಏನು ಸೆಕೆಯಪ್ಪ ಸಾಕೋ ಸಾಕು" ಎಂದು ಮಡಿಕೇರಿಯ ಮನುಷ್ಯನೊಬ್ಬನು ಹೇಳುತ್ತಿದ್ದನು. ಮದ್ರಾಸಿನಿಂದ ಬಂದ ಮತ್ತೊಬ್ಬನು ಅದನ್ನು ಕೇಳಿ ಹೇಳಿದನು. "ಇದನ್ನು ನೀವು ಸೆಕೆಯೆಂದು ಹೇಳುವಿರಾ? ನಾನು ಮದ್ರಾಸಿನಿಂದ ಹೊರಟ ದಿನ ಮದ್ರಾಸಿನ ಸೆಕೆ ಎಷ್ಟಿತ್ತೆಂದರೆ ಒಂದು ಮೊಲವನ್ನು ಒಂದು ನಾಯಿಯು ಹಿಂಬಾಲಿಸಿ ಓಡಿಸುತ್ತಿದ್ದರೂ ಸೆಕೆಯ ಕಾರಣದಿಂದ ಎರಡೂ ಸಮಾಧಾನದಿಂದ ನಡೆಯುತ್ತಿದ್ದವು!

* * *

ಕುಡುಕ– ಮಾದಕ ಪದಾರ್ಥಗಳಾದ ಸೇಂದಿ, ಸಾರಾಯಿಗಳಿಗಿಂತಾ ನೀರು ಹೆಚ್ಚು ಜನರನ್ನು ನಿರ್ನಾಮಗೊಳಿಸಿತು.

ಕುಡಿಯದವ– ಅದು ಹೇಗೆ?

ಕುಡುಕ– ಈ ವರ್ಷದ ನೆರೆಯ ವಿಚಾರವನ್ನೇ ತೆಗೆದುಕೊಳ್ಳಿರಿ. ಎಷ್ಟು ಜನರು ಸಾಯಲಿಲ್ಲ?

* * *

ವಿಜುವು ತನ್ನ ಸಹೋದರಿಯ ಗೆಳತಿಯನ್ನು ಕಂಡು "ನಿನ್ನ ರಾಗವಾಲಿಗೆ ತುಂಬಾ ಮಧುರ. ಅದರಂಥಾ ಬಹುಮಾನವನ್ನು ಈ ವರೆಗೆ ಯಾರೂ ನನಗೆ ಕೊಡಲಿಲ್ಲ."

"ಅದು ಸರಿ, ಹಾಗಾದರೆ ಅದರಲ್ಲಿ ಹಾಡಲು ನಿನಗೆ ಚೆನ್ನಾಗಿ ಬರುವದೋ?"

ವಿಜು– ಅದರಲ್ಲಿ ನಾನು ಶಬ್ದ ಮಾಡುವದೇ ಇಲ್ಲ. ಹಗಲು ಅದನ್ನು ಬಾರಿಸಬೇಡವೆಂದು ತಾಯಿಯು ವಾರಕ್ಕೆ ಒಂದು ರೂಪಾಯಿಯನ್ನೂ, ರಾತ್ರಿ ಬಾರಿಸಬಾರದೆಂದು ತಂದೆ ವಾರಕ್ಕೆ ಎರಡು ರೂಪಾಯಿಯನ್ನೂ ಕೊಡುತ್ತಾರೆ!

* * *

ಅತಿಥಿ– ಬಾಗಿಲಿನ ವರೆಗೆ ಬಂದು ಬೀಳ್ಕೊಡುವ ತೊಂದರೆ ತೆಗೆದುಕೊಳ್ಳಬೇಡಿ. ನಿಮ್ಮ ಸೌಜನ್ಯಕ್ಕೆ ವಂದನೆ.

ಗೃಹಸ್ಥ– (ಆಕಳಿಸುತ್ತಾ) 'ನಿಮ್ಮನ್ನು ಬಾಗಿಲಿನ ವರೆಗೆ ಬಿಟ್ಟು ಬರುವದು ತೊಂದರೆ ಏನಲ್ಲ. ಅಮಿತ ಆನಂದ!

* * *

"ನಿನ್ನರೊಟ್ಟಿಯ ಯಾವ ಬದಿಗೆ ತುಪ್ಪ ಹಚ್ಚಲ್ಪಟ್ಟಿದೆಯೆಂಬುದೇ ನಿನಗೆ ತಿಳಿಯದು"

"ಹೇಗಾದರೇನು? ಎರಡು ಕಡೆಯನ್ನೂ ತಿನ್ನುವ ನನಗೇನಾಗಬೇಕು"

* * *

"ಹೇಗಿದೆ ನಿನ್ನ ಈ ವರ್ಷದ ವ್ಯಾಪಾರ?" ಗೆಳೆಯನೊಬ್ಬನು ಕೇಳಿದನು.

ವ್ಯಾಪಾರಿ– ಎಲ್ಲರೂ ನನ್ನ ವ್ಯಾಪಾರದಲ್ಲಿ ಮೂಗು ಹಾಕುವವರೇ!

ಗೆಳೆಯ– ಅದಕ್ಕಾಗಿ ಬೇಸರವೇಕೆ?"

ವ್ಯಾಪಾರಿ– ಬೇಸರವಿಲ್ಲ, ನಾನು ಕೈವಸ್ತ್ರ ವ್ಯಾಪಾರಿಯಾಗಿದ್ದೇನೆ.

* * *

ಅತ್ತೆ ಸೊಸೆಯನ್ನು ಕುರಿತು– ಈ ದಿನ ಗಂಡನಿಗೆ ಊಟ ಬಡಿಸುವಾಗ ಚೆನ್ನಾಗಿ ಡ್ರೆಸ್ ಮಾಡಿಕೊಂಡು, ಮುಖಕ್ಕೆ ಸ್ವಲ್ಪ ಪೌಡರು ಕ್ರೀಂ ಹಾಕಿಕೋ?

ಸೊಸೆ– ಏಕೆ ಅತ್ತೆ?

ಅತ್ತೆ– ಏಕೆಂದರೆ ಸಾರಿನ ಪಾಂಕ ಚೆನ್ನಾಗಿ ಬೆಂದಿಲ್ಲ!

ಕೊಡಗಿನ ಧನಲಕ್ಷ್ಮಿ

ಕಳೆದ ಸುಮಾರು ಒಂದು ವರ್ಷದಿಂದ ಅನ್ನ ನೀರಿಲ್ಲದೆ ಆರೋಗ್ಯಕರವಾಗಿ ಜೀವಿಸುತ್ತಿರುವ ಸುಂಟಿಕೊಪ್ಪದ ಹದಿನೆಂಟು ವಯಸ್ಸಿನ ಧನಲಕ್ಷ್ಮಿಯ ಈ ವಿಶೇಷ ಜೀವನವನ್ನು ಪರಿಶೀಲಿಸಿ ತಿಳಿಯಲಿಕ್ಕಾಗಿ ಇಂಡಿಯಾ ಸರಕಾರವು ಆಕೆಯನ್ನು ಬೆಂಗಳೂರಿಗೆ ಆಹ್ವಾನಿಸಿದೆ. ಈ ವಿಚಾರವನ್ನು ಪ್ರಕಟಗೊಳಿಸುತ್ತಾ ಕೊಡಗಿನ ಗೃಹಮಂತ್ರಿ ಶ್ರೀ ಮಲ್ಲಪ್ಪನವರು ಹೀಗೆ ಹೇಳಿರುವರು: "ಬೆಂಗಳೂರು ಜನರಲ್ ಆಸ್ಪತ್ರೆಯ ಸುಪರಿಂಟೆಂಡೆಂಟರ ಮೇಲ್ವಿಚಾರಣೆಯಲ್ಲಿ ಧನಲಕ್ಷ್ಮಿಯನ್ನು ವೈದ್ಯಕೀಯ ಪರೀಕ್ಷೆಗೊಳಪಡಿಸಲು ಅನುವುಗೊಳಿಸಬೇಕೆಂದು ಸ್ಥಳೀಯ ಸರಕಾರಕ್ಕೆ ಕೇಂದ್ರ ಸರಕಾರವು ನಿರ್ದೇಶಿಸಿದೆ. ಆಕೆಯ ಮತ್ತಾಕೆಯ ತಂದೆಯ ಪ್ರಯಾಣ ಹಾಗೂ ಪರೀಕ್ಷೆಯ ಅವಧಿಯ ವರೆಗಿನ ಖರ್ಚಿಗಾಗಿ ಕೇಂದ್ರ ಸರಕಾರವು ರೂ. ೧,೨೦೦/–ನ್ನು ಮಂಜೂರ್ಮಾಡಿದೆ".

ಧನಲಕ್ಷ್ಮಿಯನ್ನು ಕೆಲವು ದಿನಗಳ ವರೆಗೆ ಕಳೆದ ವರ್ಷ ಮಡಿಕೇರಿ ಸಿವಿಲ್ ಆಸ್ಪತ್ರೆಯಲ್ಲಿಟ್ಟು ಪರೀಕ್ಷೆ ನಡೆಸಿದರೂ ಆಕೆಯ ಅನ್ನ ನೀರಿಲ್ಲದ ಅದ್ಭುತ ಜೀವನದ ಗುಟ್ಟನ್ನು ಕಂಡು ಹಿಡಿಯುವದು ಅಸಾಧ್ಯವಾಯಿತು.

ಈ ವರ್ತಮಾನವನ್ನು ಪ್ರಕಟಣೆಗಾಗಿ ಪ್ರೆಸ್ಸಿಗೆ ಕೊಡುತ್ತಾ ಮಲ್ಲಪ್ಪನವರು ಹೀಗೆಂದರು: "ಅನ್ನ ನೀರಿಲ್ಲದ ಆರೋಗ್ಯಕರ ಜೀವನ ನಡೆಸುವ ಗುಟ್ಟನ್ನು ಅರಿಯುವದು ಜಗತ್ತಿನ ಹಿತದೃಷ್ಟಿಯಿಂದ ಪ್ರಾಮುಖ್ಯವಾಗಿದೆ. ನಾವು ಪರಮಾಣು ಯುಗದಲ್ಲಿ ಜೀವಿಸುತ್ತಿರುವೆವು. ಚಿಕ್ಕ ಅಣುಗಳು ನಮಗೆ ತಿಳಿದಿರುವಂತೆ ಅಖಂಡ ಶಕ್ತಿಯನ್ನು ಹೊರಗೆಡಹಬಲ್ಲವಾದರೆ ಅದೇ ರೀತಿಯ ಯಾವುದೋ ಅಣುವು ಆಕೆಗೆ ಈ ಶಕ್ತಿಯನ್ನು ಕೊಟ್ಟಿರಬಾರದೇಕೆ? ಇಲ್ಲವೇ ಗಾಳಿ, ಬೆಳಕುಗಳಿಂದ ತನಗೆ ಬೇಕಿರುವ ಶಕ್ತಿಯನ್ನು ಹೀರಿಕೊಳ್ಳುವ ವಿಶೇಷ ನರನಾಳಗಳನ್ನು ಆಕೆ ಪಡೆದಿರಬಾರದೇಕೆ? ಈ ವಿಚಾರವನ್ನೇ ತಿಳಿಯಬೇಕಿದೆ. ಆಧುನಿಕ ವೈದ್ಯಕೀಯ ಶಾಸ್ತ್ರವು ಧನಲಕ್ಷ್ಮಿಯ ವಿಶೇಷ ಜೀವನದ ಗುಟ್ಟನ್ನು ತಿಳಿಯಲು ಶಕ್ತವಾಗುವುದೆಂದು ಆಶಿಸುತ್ತೇನೆ."

ಕೇಂದ್ರ ಸರಕಾರದ ನಿರ್ಣಯವನ್ನು ತಾ. ೮ರಲ್ಲಿ ಧನಲಕ್ಷ್ಮಿಯ ತಂದೆಗೆ ತಿಳಿಸಲಾಗಿದೆ. ಆಕೆ ಶೀಘ್ರದಲ್ಲೇ ಬೆಂಗಳೂರಿಗೆ ತಂದೆಯವರೊಡನೆ ಹೋಗಬಹುದು.

THE CANARA BANKING CORPORATION LIMITED.
ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್.
ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)
ಚಿಕ್ಕ ಮಾಯಿದೆಯ ಠೇವಣಾತಿಗಳು:
3 ರಿಂದ 6 ತಿಂಗಳುಗಳ ವರೆಗೆ— ಸಾಲಿಯಾನ ಶೇಕಡ 3
7 ರಿಂದ 12 ತಿಂಗಳುಗಳ ವರೆಗೆ— ಸಾಲಿಯಾನ ಶೇಕಡ 3¼
ಪಂಚವಾರ್ಷಿಕ ಸುವರ್ಣ ಠೇವಣಾತಿಗಳು— " " 4
—: ಕೊಡಗು ಸಂಸ್ಥಾನದಲ್ಲಿ ನಮ್ಮ ಶಾಖೆಗಳು :—
ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

ಮೂರು ಮೊಲೆಯ ರಾಜಕುಮಾರಿಯ ಕಥೆ

ಉತ್ತರ ದೇಶದಲ್ಲಿ ಮಧುನಗರವೆಂಬ ಪಟ್ಟಣವಿದ್ದಿತು. ಅಲ್ಲಿ ಮಾಧವನೆಂಬ ಅರಸನು ರಾಜ್ಯಭಾರ ಮಾಡುತ್ತಿದ್ದನು. ಆತನಿಗೆ ಮೂರು ಮೊಲೆ ಇರುವ ಪುತ್ರಿಯೊಬ್ಬಳು ಜನಿಸಿದಳು. ಇಂಥಾ ಮಗುವಿನ ಜನನದಿಂದ ಆಶ್ಚರ್ಯಗೊಂಡ ಅರಸನು ತನ್ನ ದೇಶದ ಬುದ್ಧಿವಂತರನ್ನು ಕರೆದು ವಿಚಾರಿಸಿದನು. ಆ ಬುದ್ಧಿವಂತರಲ್ಲೊಬ್ಬನು—ಮೂರು ಮೊಲೆಗಳ ಮಗುವು ಅರಸ ಕುಟುಂಬಕ್ಕೂ, ದೇಶಕ್ಕೂ, ಅಶುಭವನ್ನು ತರುವ ಕಾರಣ ಯಾರಿಗೂ ತಿಳಿಯದಂತೆ ಆ ಮಗುವನ್ನು ದೊಡ್ಡ ಕಾಡಿನಲ್ಲಿ ಬಿಸಾಡಿಬಿಡಬೇಕೆಂದು ತನ್ನ ಅಭಿಪ್ರಾಯವೆಂದೂ ಆದರೂ ದೇಶದಲ್ಲಿರುವ ಇತರ ಜ್ಞಾನಿಗಳನ್ನು ಕರೆಸಿ ಅವರ ಅಭಿಪ್ರಾಯ ತೆಗೆದುಕೊಳ್ಳಬೇಕೆಂದೂ ಏಕೆಂದರೆ ಎಚ್ಚರಿಕೆಯಿಂದ ವರ್ತಿಸುವ ಮನುಷ್ಯನು ಯಾವಾಗಲೂ ಇತರರ ಸಲಹೆ ತೆಗೆದುಕೊಳ್ಳಬೇಕೆಂದೂ, ಹಾಗೆ ಮಾಡದ್ದರೆ ಭಯಂಕರ ಪಿಶಾಚಿಯೊಂದು ಬ್ರಾಹ್ಮಣನೊಬ್ಬನನ್ನು ಹಿಡಿದು ನಂತರ ಬಿಟ್ಟು ಕೊಟ್ಟಂತಾಗ ಬಹುದೆಂದೂ ಹೇಳಿದನು

ಆ ಕಥೆ ಏನೆಂದು ಅರಸನು ಕೇಳಿದ್ದರಿಂದ ಬುದ್ಧಿವಂತನು ಹೇಳ ತೊಡಗಿದನು. "ಒಂದು ಕಾಡಿನಲ್ಲಿ ಕ್ರೂರಿ ಎಂಬ ಹೆಸರಿನ ಪಿಶಾಚಿಯೊಂದಿತ್ತು. ಅದು ಕಾಡಿನಲ್ಲಿ ಹಾಗೆ ತಿರುಗಾಡುತಿದ್ದಾಗ ಒಬ್ಬ ಬ್ರಾಹ್ಮಣನನ್ನು ಕಂಡಿತು. ಕಂಡೊಡನೆ ಪಿಶಾಚಿಯು ಬ್ರಾಹ್ಮಣನನ್ನು ಹಿಡಿದು ಆತನ ಹೆಗಲೇರಿ ಕೂತುಕೊಂಡು 'ಮುಂದೆ ನಡೆ' ಎಂದಿತು.

ಬ್ರಾಹ್ಮಣನು ಅಪಾರಭಯದಿಂದ ಪಿಶಾಚಿಯ ಆಜ್ಞೆಯಂತೆ ಅದನ್ನು ಹೊತ್ತುಕೊಂಡು ಮುಂದೆ ನಡೆಯತೊಡಗಿದನು. ಸ್ವಲ್ಪ ದೂರ ನಡೆದ ಬ್ರಾಹ್ಮಣನು ಕಮಲ ದಳದಂತಿರುವ ಪಿಶಾಚಿಯ ಕಾಲುಗಳನ್ನು ಕಂಡು ಹೇಳಿದನು, 'ಮಹಾಶಯ, ನಿನ್ನ ಕಾಲುಗಳು ಇಷ್ಟು ಮೃದುವಾಗಿರಲು ಕಾರಣವೇನು ?

ಆಗ ಪಿಶಾಚಿಯು, 'ನನ್ನ ಕಾಲುಗಳನ್ನು ತೊಳೆಯದೆ ಭೂಮಿಯ ಮೇಲೆ ಕಾಲಿಡೆನೆಂದು ಶಪಥ ಮಾಡಿಕೊಂಡಿರುವೆನು. ಈ ವರೆಗೆ ಪಾದಗಳನ್ನು ತೊಳೆಯುವದಾಗಿಲ್ಲ ಆದುದರಿಂದ ಭೂಮಿ ಮುಟ್ಟದ ಕಾಲು ಮೃದುವಾಗಿವೆ,' ಎಂದು ಹೇಳಿತು.

ಇದನ್ನು ಕೇಳಿದ ಬ್ರಾಹ್ಮಣನು ಹೇಗಾದರೂ ಮಾಡಿ ಪಿಶಾಚಿಯಿಂದ ಬಿಡುಗಡೆಯೊಂದುವ ಆಸೆಯಿಂದ ಒಂದು ಕೆರೆಯ ಹತ್ತಿರ ಬಂದನು. ಪಿಶಾಚಿಯು ಕೆರೆಯನ್ನು ಕಂಡು,' ಅಯ್ಯಾ, ಈ ಸ್ಥಳದಿಂದ ಅತ್ತಿಂದಿತ್ತ ಅಲುಗಾಡದೆ ಇಲ್ಲೇ ನಿಂತಿರು. ನಾನು ಕೆರೆಯಲ್ಲಿ ಸ್ನಾನ ಮಾಡಿ ದೇವರ ಪ್ರಾರ್ಥನೆ ಮಾಡಿ ಬರುವ ವರೆಗೆ ಇಲ್ಲೇ ಇರಬೇಕು' ಎಂದಿತು.

ಇದನ್ನು ಕೇಳಿ ಬ್ರಾಹ್ಮಣನು ಆಲೋಚಿಸಿದನು. 'ಈ ಪಿಶಾಚಿಯು ಸ್ನಾನ ಮಾಡಿದ ಮೇಲೆ ನನ್ನನ್ನು ತಿನ್ನದೆ ಬಿಡುವುದಿಲ್ಲ. ಆದ್ದರಿಂದ ಅದು ಕೆಳಗಿಳಿದ ನಂತರ ನಾನು ಓಡಿ ಹೋಗುವೆನು. ಏಕೆಂದರೆ ಕಾಲು ತೊಳೆಯದೆ ಅದು ನನ್ನನ್ನು ಹಿಂಬಾಲಿಸಲಾರದು.'

ಅದರಂತೆ ಬ್ರಾಹ್ಮಣನು ಪಿಶಾಚಿಯು ಕೆಳಗಿಳಿದೊಡನೆಯೇ ಓಡಿ ಹೋದನು. ಪಿಶಾಚಿಯು ತನ್ನ ಶಪಥವನ್ನು ಮುರಿಯಲಾರದೆ ನಿರಾಶವಾಯಿತು.' ಆದ್ದರಿಂದ ಇತರರ ಸಲಹೆಯನ್ನು ಕೇಳಿ ವರ್ತಿಸುವದು ಹಿತವೆಂದು ಬುದ್ಧಿವಂತನು ಹೇಳಿದನು.

ಆದ್ದರಿಂದ ಅರಸನು ಬುದ್ಧಿವಂತರಾದ ಬ್ರಾಹ್ಮಣರನ್ನು ಕರೆಸಿ ಹೇಳಿದನು, 'ಹೇ ವಿಪ್ರರೇ, ನನಗೆ ಮೂರು ಮೊಲೆಯ ಮಗುವಿನ ಜನನವಾಗಿದೆ. ಈ ವಿಚಾರದಲ್ಲಿ ನಿಮ್ಮ ಅಭಿಪ್ರಾಯವೇನು ?''

'ಹೇ ಅರಸಾ, ಕೇಳು, ಇರಬೇಕಾದ್ದಕ್ಕಿಂತಾ ಹೆಚ್ಚು ಯಾ ಕಡಿಮೆ ಅವಯವಗಳುಳ್ಳ ಮಗಳು ತನ್ನ ಶೀಲವನ್ನು ಕಳೆದುಕೊಳ್ಳುವದರಿಂದ ತನ್ನ ಗಂಡನಿಗೆ ಆಪತ್ತು ತರುವಳು. ಒಬ್ಬ ತಂದೆಯು ತನಗೆ ಮೂರು ಮೊಲೆಯ ಮಗು ಹುಟ್ಟಿದ್ದನ್ನು ಕಂಡರೆ ಆಕೆ ತಂದೆಗೆ ಶೀಘ್ರ ಮರಣವನ್ನು ತರುವಳು ಎಂದು ಶಾಸ್ತ್ರವಿದೆ. ಆದ್ದರಿಂದ ಅರಸಾ, ಆಕೆಯನ್ನು ತ್ಯಜಿಸಿಬಿಡು. ಯಾರು ಆಕೆಯನ್ನು ಲಗ್ನವಾಗುವರೋ ಅಂಥಾವರಿಗೆ ಕೊಟ್ಟುಬಿಡು. ಹಾಗೆ ಲಗ್ನವಾದವನನ್ನೂ ಈಕೆಯನ್ನೂ ನಿನ್ನ ದೇಶದೊಳಗೆ ಇರಲು ಮಾತ್ರ ಬಿಡಬಾರದು' ಎಂದು ಬ್ರಾಹ್ಮಣರು ಸಲಹೆ ಕೊಟ್ಟರು.

ಇದನ್ನು ಕೇಳಿದ ಅರಸನು ದೇಶದ ಉದ್ದಗಲಕ್ಕೂ ಒಂದು ಜಾಹೀರ ಪ್ರಕಟಣೆ ಮಾಡಿಸಿದನು. ಅದರ ಸಾರಾಂಶವಿದು, "ದೇಶದ ಜನರೇ ಕೇಳಿರಿ. ಮೂರು ಮೊಲೆಯ ಅರಸುಮಗಳೊಬ್ಬಳಿದ್ದಾಳೆ. ಆಕೆಯನ್ನು ಮದುವೆಯಾಗುವವರಿಗೆ ಅರಸರು ಒಂದು ಮಿಲಿಯ ಚಿನ್ನದ ನಾಣ್ಯಗಳನ್ನು ಕೊಡುತ್ತಾರೆ. ಆದರೆ ಅವರು ಈ ದೇಶದೊಳಗೆ ಮಾತ್ರ ಇರಲಿಕ್ಕಾಗದು.' ಈ ಜಾಹೀರ್ ಪ್ರಕಟಣೆ ಆಗಿ ಅನೇಕ ವರ್ಷಗಳಾದರೂ ರಾಜಕುಮಾರಿಯನ್ನು ಮದುವೆಯಾಗಲು ಯಾರೂ ಮುಂದೆ ಬರಲಿಲ್ಲ. ಈ ಮಧ್ಯೆ ರಾಜಕುಮಾರಿಯು ಬೆಳೆದು ಯೌವನಕ್ಕೆ ಬಂದಳು.

ಆ ಪಟ್ಟಣದಲ್ಲಿ ಕುರುಡನೊಬ್ಬನಿದ್ದನು. ಆತನ ಗೆಳೆಯನಾಗಿ ಗೂನುಬೆನ್ನಿನ ನಿಧಾನಿ ಎಂಬುವನೊಬ್ಬನಿದ್ದನು. ಆತನು ಒಂದು ಕೋಲನ್ನು ಹಿಡಿದು ಕುರುಡನನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದನು. ಅವರಿಗೆ ಅರಸನು ಮಾಡಿದ ಜಾಹೀರ ಪ್ರಕಟಣೆಯ ವಿಚಾರ ತಿಳಿಯಿತು. 'ನಾವು ಆಕೆಯನ್ನು ಮದುವೆಯಾದರೆ ನಮಗೆ ದೊರೆಯುವ ಸಂಪತ್ತಿನಿಂದ ನಾವು ಸುಖಿಗಳಾಗಿರಬಹುದು. ಅಸಹ್ಯಕರವಾದ ರಾಜಕುಮಾರಿಯನ್ನು ಮದುವೆಯಾಗುವದರಿಂದ ನಮಗೆ ಮೃತ್ಯು ಬಂದರೂ ಕೂಡ ನಮ್ಮ ಈ ಬಡತನದ ಜೀವನದಿಂದ ಮುಕ್ತರಾಗುವೆವು. ಏಕೆಂದರೆ ಮನುಷ್ಯನ ಹೊಟ್ಟೆಯೆಂಬ ಮಡಿಕೆಯು ತುಂಬುವ ವರೆಗೆ ಪ್ರೇಮ, ಸಂಗೀತ, ಜ್ಞಾನ, ನಾಚಿಕೆ ಯಾವುದಕ್ಕೂ ಆತನು ಗಮನಕೊಡಲಾರನು. ಒಳ್ಳೆ ಹೆಸರಿಗಾಗಲೀ, ಗುಣ ನಡತೆಗಳಿಗಾಗಲೀ, ಸಾಮಾಜಿಕ ಸ್ಥಾನಕ್ಕಾಗಲೀ ಹೊಟ್ಟೆ ತುಂಬದವನು ಪ್ರಾಮುಖ್ಯತೆ ಕೊಡಲಾರನು ಪರಿಪುಷ್ಟತೆ, ಸೌಂದರ್ಯ, ಯಾವುದಕ್ಕೂ ಬೆಲೆ ಕೊಡನು'. ಈ ರೀತಿ ಆಲೋಚನೆ ಮಾಡಿ ಕುರುಡನಾದವನು ತಾನು ರಾಜಕುಮಾರಿಯನ್ನು ಮದುವೆಯಾಗುವವನಾಗಿ ಅರಸನ ಕಡೆಯ ಜನರಿಗೆ ತಿಳಿಸಿದನು. ಇದು ಅರಸನಿಗೆ ತಿಳಿಯಲು ಅರಸನು 'ಕುರುಡ, ಕಿವುಡ ಯಾ ನೀಚನೇ ಆಗಿರಲೀ, ಆತನು ಕುಷ್ಟರೋಗಿಯೇ ಆಗಿರಲಿ ಆತನು ಈ ಹುಡುಗಿಯನ್ನು ಮದುವೆಯಾಗಿ ಹಣವನ್ನು ತೆಗೆದುಕೊಂಡು ಈ ರಾಜ್ಯವನ್ನು ಬಿಟ್ಟು ಹೊರಡಲೀ' ಎಂದು ಆಜ್ಞೆ ಮಾಡಿದನು.

ಅದೇ ರೀತಿ ಮದುವೆ ನಡೆಯಿತು. ಕುರುಡನಿಗೆ ಧನ ಸಿಕ್ಕಿತು. ನಂತರ ಅವರನ್ನು ಒಂದು ದೋಣಿಯಲ್ಲಿ ಕುಳ್ಳಿರಿಸಿ ಬೇರೆ ದೇಶಕ್ಕೆ ಕಳುಹಿಸಲಾಯಿತು. ರಾಜಕುಮಾರಿ, ಕುರುಡ ಮತ್ತು ಗೂನುಬೆನ್ನಿನ ವ್ಯಕ್ತಿ ಈ ಮೂರು ಜನರು ಹೊರಟರು. ಅವರು ದೂರದ ಬೇರೊಂದು ದೇಶಕ್ಕೆ ತಲುಪಿ ಅಲ್ಲಿಯ ಪಟ್ಟಣ ಒಂದರಲ್ಲಿ ಒಂದು ಮನೆಯನ್ನು ಕ್ರಯಕ್ಕೆ ಪಡಕೊಂಡು ಸುಖವಾಗಿರಲು ತೊಡಗಿದರು. ಕುರುಡನು ಯಾವಾಗಲೂ ಸೋಫಾದಲ್ಲಿ ಕುಳಿತು ನಿದ್ರಿಸಿ ಕಾಲ ಕಳೆಯುತ್ತಿದ್ದನು. ಗೂನುಬೆನ್ನಿನವನು ಮನೆಯ ಕೆಲಸಗಳನ್ನು ನೋಡಿಕೊಳ್ಳುತ್ತಿದ್ದನು.

ಕ್ರಮೇಣ ರಾಜನ ಮಗಳಿಗೂ ಗೂನುಬೆನ್ನಿನವನಿಗೂ ಸಂಬಂಧ ಹೆಚ್ಚಾಯಿತು. ಒಂದು ದಿನ 'ಈ ಕುರುಡನನ್ನು ಕೊಂದು ಹಾಕಿದರೆ ನಾವು ಸುಖದಿಂದ ಬದುಕಬಹುದು. ಆದ್ದರಿಂದ ದಯವಿಟ್ಟು ಎಲ್ಲಿಂದಾದರೂ ಸ್ವಲ್ಪ ವಿಷ ತಂದುಕೊಡು. ನಾನು ಅದನ್ನು ಆತನಿಗೆ ಕೊಡುವೆನು. ನಂತರ ನಾವು ಸತಿಪತಿಯರಾಗಿ ಸುಖ ಪಡಬಹುದು' ಎಂದು ರಾಜಕುಮಾರಿಯು ಹೇಳಿದಳು.

ಆದ್ದರಿಂದ ಗೂನುಬೆನ್ನಿನವನು ಸತ್ತುಬಿದ್ದಿದ್ದ ಕಪ್ಪು ಹಾವೊಂದನ್ನು ತಂದು, 'ಪ್ರಿಯಳೇ ಈ ಹಾವನ್ನು ಕತ್ತರಿಸಿ ಯೋಗ್ಯವಾಗಿ ಅಡಿಗೆ ಮಾಡಿ ಮೀನಿನ ಸಾರೆಂದು ಆತನಿಗೆ ಕೊಡು. ಆತನು ಕ್ಷಣದಲ್ಲಿ ಸಾಯುವನು' ಎಂದನು.

ಅದರಂತೆ ಆಕೆಯು ಅದನ್ನು ಕತರಿಸಿ ಬೇಯಲು ಒಲೆಗೆ ಹಾಕಿ ವಯ್ಯಾರದಿಂದ ತನ್ನ ಪತಿಯನ್ನು ಕರೆದು 'ನನ್ನ ಸರ್ವಸ್ವವಾದ ಪ್ರಿಯನೇ, ಇಂದು ನಿನಗೆ ಅತೀ ಮೆಚ್ಚಿನ ಮೀನು ದೊರೆತಿದೆ. ನಾನು ಅದನ್ನು ಬೇಯಲು ಒಲೆಗೆ ಹಾಕಿದ್ದೇನೆ. ನೀನು, ಬಂದು ಹತ್ತಿರ ಕುಳಿತುಕೊಂಡು ಅದನ್ನು ಸಟ್ಟುಗದಿಂದ ಅಡಿಹಿಡಿಯದಂತೆ ಅಲ್ಲಾಡಿಸುತ್ತಿರು. ನಾನು ಬೇರೆ ಕೆಲಸ ಬೇಗ ಮುಗಿಸುವೆನು' ಎಂದಳು.

ಕುರುಡನಿಗೆ ಅಮಿತ ಆನಂದವಾಯಿತು. ಆತನು ಹತ್ತಿರ ಕುಳಿತು, ಸಾರನ್ನು ಸಟ್ಟುಗದಿಂದ ಅಲ್ಲಾಡಿಸುತ್ತಿರಲು ಅದರಿಂದ ಹುಟ್ಟಿದ ವಿಷದ ಆವಿಯು ಕುರುಡನ ಕಣ್ಣಾಲಿಗಳಿಗೆ ತಗಲಿತು. ಈ ವಿಷದ ಪ್ರಭಾವದಿಂದ ಕ್ರಮೇಣ ಕುರುಡನ ಕಣ್ಣಿನ ಪರೆಯು ಇಳಿದು ಆತನಿಗೆ ಕಣ್ಣು ಕಾಣತೊಡಗಿತು. ಹೊಸದಾಗಿ ದೃಷ್ಟಿ ದೊರೆತ ಆತನಿಗೆ ಒಲೆಯಲ್ಲಿ ಬೇಯಲು ಹಾಕಿದ್ದು ಹಾವಿನ ಮಾಂಸವೆಂದು ತಿಳಿಯಿತು. ಆತನು ಆಲೋಚಿಸಿದನು. 'ಇದರ ಅರ್ಥವೇನು ? ಆಕೆ ಇದನ್ನು ಮೀನೆಂದು ಹೇಳಲು ಕಾರಣವೇನು ? ಇದು ಮೂರು ಮೊಲೆಯ ಈಕೆಯ ಕುತಂತ್ರವೋ ಯಾ ಗೂನುಬೆನ್ನಿನ ನಿಧಾನಿಯು ನನ್ನನ್ನು ಕೊಲ್ಲಲು ಮಾಡಿದ ಉಪಾಯವೋ ತಿಳಿಯಬೇಕು.' ಎಂದು ದೃಢ ಮಾಡಿಕೊಂಡು ಕಣ್ಣು ಕಾಣುತ್ತಿದ್ದರೂ ಹಿಂದಿನಂತೆಯೇ ಕುರುಡನಂತೆ ವರ್ತಿಸತೊಡಗಿದನು.

ಸ್ವಲ್ಪ ಸಮಯದ ನಂತರ ಪೇಟೆಗೆ ಹೋಗಿದ್ದ ಗೂನುಬೆನ್ನಿನ ನಿಧಾನಿಯು ಮನೆಗೆ ಬಂದನು. ಮನೆಗೆ ಬಂದೊಡನೆ ಯಾವುದೇ ಹೆದರಿಕೆಯಿಲ್ಲದೆ ರಾಜಕುಮಾರಿಯನ್ನು ಆಲಿಂಗಿಸಿ ಮುತ್ತಿಕ್ಕಿದನು. ಕುರುಡನು ಇದನ್ನೆಲ್ಲಾ ನೋಡಿದನು. ಹತ್ತಿರದಲ್ಲಿ ಯಾವುದೇ ಚೂರಿ, ಕತ್ತಿ ದೊರೆಯದ ಕಾರಣ ಆತನು ಹಿಂದಿನಂತೆಯೇ ತಡವರಿಸುವ ನಟನೆ ಮಾಡುತ್ತಾ ನಿಧಾನಿಯ ಹತ್ತಿರ ಹೋದನು. ಆತನು ಸಿಟ್ಟಿನಿಂದ ನಿಧಾನಿಯ ಕಾಲು ಹಿಡಿದು ತನ್ನ ಸರ್ವಶಕ್ತಿಯನ್ನು ಉಪಯೋಗಿಸಿ ಆತನನ್ನು ಸುತ್ತಿ ಹತ್ತಿರದಲ್ಲಿ ನಿಂತಿದ್ದ ರಾಜಕುಮಾರಿಯ ಎದೆಗೆ ಬಡಿದನು. ಈ ಪೆಟ್ಟಿನಿಂದ ರಾಜಕುಮಾರಿಯ ಒಂದು ಮೊಲೆಯು ಒಳಗಿಳಿದು ಮಾಯವಾಯಿತು. ನಿಧಾನಿಯ ಗೂನುಬೆನ್ನು ನೆಟ್ಟಗಾಯಿತು. ಆದ್ದರಿಂದಲೇ ಅದೃಷ್ಟ ಸರಿಯಾಗಿದ್ದರೆ ಎಲ್ಲವೂ ಸರಿಹೋಗುವದೆಂದು ಹೇಳುವದಾಗಿದೆ' ಎಂದು ಚಕ್ರಮೌತ್ತವನು ಹೇಳಲು ಚಿನ್ನ ದೊರೆತ ಬ್ರಾಹ್ಮಣನು ಹೇಳಿದನು, 'ನೀನು ಹೇಳುವದು ಸರಿ. ಅದೃಷ್ಟದ ಮೂಲಕ ಅನೇಕ ಕೆಲಸಗಳಾಗಬಹುದು. ಆದರೆ ಮಾ

ಉದ್ದವಾದ ತಲೆಕೂದಲು ಯುವತಿಯ ಭಾಗ್ಯ.

ಮನುಷ್ಯನ ತಲೆಯಲ್ಲಿ ಒಂದರಿಂದ ಒಂದೂವರೆ ಲಕ್ಷದಷ್ಟು ತಲೆಕೂದಲುಗಳಿರುತ್ತವೆ. ಒಂದು ಇಂಚು ಚಚ್ಚೌಕ ಸ್ಥಳದಲ್ಲಿ ಸುಮಾರು ಒಂದು ಸಾವಿರಕ್ಕಿಂತಾ ಹೆಚ್ಚು ಕೂದಲುಗಳಿರುತ್ತವೆ. ತಲೆಕೂದಲನ್ನು ಕತ್ತರಿಸದಿದ್ದರೆ ಅದು ಇಪ್ಪತ್ತು ಇಂಚಿನಿಂದ ಹಿಡಿದು ಒಂದು ಗಜದ ವರೆಗೆ ಇರುತ್ತದೆ. ಕೂದಲಿಗೆ ಸರಿಯಾದ ಪೋಷಣೆ ಕೊಟ್ಟು ಬೆಳೆಸಿದರೆ ಅದು ಎಂಟು ಅಡಿಗಳಿಗಿಂತಾ ಹೆಚ್ಚು ಬೆಳೆದ ನಿದರ್ಶನಗಳಿವೆ. ತಲೆಯ ಕೂದಲಿನ ದಪ್ಪ ಒಂದು ಇಂಚಿನ ನಾನೂರು ಯಾ ಐನೂರು ಅಂಶದಷ್ಟಿರುತ್ತದೆ. ಕೂದಲಿನ ಬುಡದಲ್ಲಿ ಒಂದು ಚಿಕ್ಕ ಮಂಡಲವಿರುತ್ತದೆ. ಅದರಿಂದ ಒಂದು ರೀತಿಯ ಎಣ್ಣೆಯು ಜಿನುಗುತ್ತಿರುತ್ತದೆ. ಇದು ಕೂದಲನ್ನು ಕೋಮಲವಾಗಿರಿಸುತ್ತದೆ.

ಕೂದಲಿನಿಂದ ಸ್ವಭಾವ

ಮೃದುವಾಗಿ, ಉದ್ದವಾಗಿ ಹಾಗೂ ದಟ್ಟವಾಗಿ ಕೂದಲು ಬೆಳೆದಿದ್ದರೆ ಆ ವ್ಯಕ್ತಿಯು ಒಳ್ಳೆ ಆರೋಗ್ಯದಲ್ಲಿರುವನೆಂದು ತಿಳಿಯಬಹುದು. ಆರೋಗ್ಯದಲ್ಲಿರುವವರ ತಲೆ ಕೂದಲು ಸುಂದರವಾದುದೂ ದೃಢವಾದುದೂ ಆಗಿರುತ್ತದೆ. ಭಾರತೀಯರಾದ ನಮ್ಮ ತಲೆಯ ಕೂದಲು ಸಾಧಾರಣವಾಗಿ ಅಚ್ಚ ಕಪ್ಪು ಬಣ್ಣದ್ದಿರುತ್ತದೆ. ಈ ಕಪ್ಪು ಬಣ್ಣವು ಹೊರಗಿನ ಉಷ್ಣತೆಯನ್ನು ಹೀರಿಕೊಂಡು ಮನುಷ್ಯನ ಶರೀರವನ್ನು ತಂಪಾಗಿರಿಸುತ್ತದೆ. ಕೂದಲಿನಲ್ಲಿ ಒಂದು ವಿದ್ಯುತ್ ಶಕ್ತಿ ಇದೆ. ಸ್ನೇಹ, ಪ್ರೇಮಗಳಿಂದ ತಲೆಕೂದಲನ್ನು ನೇವರಿಸಿದರೆ ಅಪೂರ್ವ ಆನಂದ ಅನುಭವವಾಗುತ್ತದೆ. ಸಿಟ್ಟು, ಭಯವಾದಾಗ ಕೂದಲು ಎದ್ದು ನಿಲ್ಲುತ್ತದೆ. ಯಾವ ಪುರುಷ ಯಾ ಸ್ತ್ರೀಯ ಕೂದಲು ನಯವೂ, ಸುಂದರವೂ, ದೃಢವೂ, ಹೊಳೆಯುವಂಥಾದ್ದೂ ಅಲ್ಲವೋ ಅಂಥಾವರ ಸ್ವಭಾವವೂ ಉತ್ತಮವಲ್ಲವೆಂದು ತಿಳಿಯಬೇಕು.

ಆತುರ ಶೀಲನಾದ ಮನುಷ್ಯನು ಅದೃಷ್ಟವನ್ನು ತನ್ನದಾಗಿ ಮಾಡಿಕೊಳ್ಳಬೇಕು. ನಿನ್ನ ಹಾಗೆ ನನ್ನ ಬುದ್ಧಿವಾದವನ್ನು ಕೇಳದೆ ವರ್ತಿಸಿ ಈ ರೀತಿ ಚಕ್ರಕ್ಕೆ ಸಿಕ್ಕಿಕೊಂಡರೆ ಅದೃಷ್ಟವೇನು ಮಾಡೀತು?' ಹೀಗೆ ಹೇಳಿ ಚಿನ್ನ ದೊರೆತ ಬ್ರಾಹ್ಮಣನು ತನ್ನ ಮನೆಗೆ ಹೊರಟನು. ಆದ್ದರಿಂದ ಗೊತ್ತಿಲ್ಲದ ಕೆಲಸ, ಯೋಗ್ಯ ಯೋಜನೆ ಇಲ್ಲದ ಉದ್ಯಮ, ಯಾರೂ ಗಮನಿಸದ ಹಾಗೂ ಪೂರ್ತಿಯಾಗಲಾರದ ಪ್ರಯತ್ನಗಳನ್ನು ಯಾರು ಮಾಡಬಾರದೆಂದೂ, ಅಂಥಾವರು ಕ್ಷೌರಿಕನ ಅನುಭವದಿಂದ ಎಚ್ಚರ ತೆಗೆದುಕೊಳ್ಳಬೇಕೆಂದೂ ಬೋಧಿಸುವದಾಗಿದೆ. ಇಲ್ಲಿಗೆ ಪಂಚತಂತ್ರದ 'ವಿವೇಚಿಸದ ಕೃತ್ಯಗಳು' ಎಂಬ ಕಥಾ ಸಂಗ್ರಹವು ಮುಕ್ತಾಯವಾಯಿತು.

ಆದರೆ ಎಚ್ಚರಿಕೆ ವಹಿಸುವವರು ಎಷ್ಟು?

(ಮೂಲ ಲೇಖಕ:— ಆಚಾರ್ಯ ಚತುರಸೇನ ಶಾಸ್ತ್ರಿ)

ವ್ಯಾಯಾಮ

ಕೂದಲಿಗೆ ವ್ಯಾಯಾಮವೆಂದಾಗ ಅನೇಕರು ಹಾಸ್ಯ ಮಾಡಬಹುದು. ಆದರೆ ನಿಮ್ಮ ಕೂದಲು ಉದ್ದವಾಗಿಯೂ, ಸುಂದರವಾಗಿಯೂ ಆಗಬೇಕಾದರೆ ಈ ಕೆಳಗಿನ ನಿಯಮದಂತೆ ಕೂದಲಿಗೆ ವ್ಯಾಯಾಮ ಕೊಡಬೇಕು. (೧) ಕೈಯ ಬೆರಳಿನ ತುದಿಗಳನ್ನು ತಣ್ಣೀರಿನಲ್ಲಿ ಮುಳುಗಿಸಿ ನೀರಿನಿಂದ ಕೂಡಿದ ಬೆರಳುಗಳಿಂದ ಕೂದಲಿನ ಬುಡವನ್ನು ಅಂದರೆ ತಲೆಯ ಚರ್ಮವನ್ನು ಸಮವಾಗಿ ಉಜ್ಜುವದು. (೨) ಕೂದಲನ್ನು ಬೆರಳುಗಳಲ್ಲಿ ಸುತ್ತಿ ಕೆಲವು ಸಮಯದ ವರೆಗೆ ಹಾಗೆಯೇ ಇಡುವದು. (೩) ಕೂದಲನ್ನು ಮುಷ್ಟಿಯಲ್ಲಿ ಹಿಡಿದು ನಯವಾಗಿ ಎಳೆಯುವದು. (೪) ತಲೆಯ ಕೂದಲನ್ನು ಬ್ರಶ್ಶಿನಿಂದ ಯೋಗ್ಯವಾಗಿ ಬಾಚಿಕೊಳ್ಳುವದು. (೫) ತಲೆಯ ಕೂದಲಲ್ಲಿ ಕೊಳೆ ಇಲ್ಲದಂತೆಯೂ, ತಲೆಯ ಚರ್ಮ ಶುಭ್ರವಾಗಿರುವಂತೆಯೂ ನೋಡುವದು. (೬) ತಲೆಗೆ ಸಿಕ್ಕಿಸಿಕ್ಕಿದ ಎಣ್ಣೆ ಹಾಕುವ ಅಗತ್ಯವಿಲ್ಲ. ಹೆಚ್ಚು ಬೆಲೆಯ ಎಣ್ಣೆಗಳ ಅಗತ್ಯವೂ ಇಲ್ಲ. ಚೆನ್ನಾಗಿ ಕಾಸಿದ ತೆಂಗಿನೆಣ್ಣೆ ಉಪಯೋಗಿಸುವದು. ಪೇಟೆಯಲ್ಲಿ ದೊರೆಯುವ ವಿವಿಧ ಎಣ್ಣೆಗಳಿಗಾಗಿ ಹಣ ಖರ್ಚು ಮಾಡುವದರಿಂದ ಕೂದಲು ಉತ್ತಮವಾಗಲಾರದು.

ಉತ್ತಮ ಸ್ವಭಾವ ಮತ್ತು ಉತ್ತಮ ಆರೋಗ್ಯದಿಂದಲೇ ಕೂದಲು ಉತ್ತಮವಾಗುತ್ತದೆ. ಆದ್ದರಿಂದ ಪ್ರಥಮವಾಗಿ ಆರೋಗ್ಯವನ್ನು ಸುಧಾರಿಸಿಕೊಳ್ಳಬೇಕು. ಯಾವ ಸ್ತ್ರೀ ಪುರುಷರ ಜೀರ್ಣ ಶಕ್ತಿ ಚೆನ್ನಾಗಿಲ್ಲವೋ, ಯಾರ ತಲೆಯಲ್ಲಿ ಹೇನು ನಿರಂತರವಿರುವುದೋ, ಅವರ ಕೂದಲು ಶೀಘ್ರ ಉದುರಿ ಹೋಗಿ ಅವರು ಬೋಳು ತಲೆಯವರಾಗುವರು.

ಜೀರ್ಣಶಕ್ತಿಯ ವಿಚಾರ

ಮನುಷ್ಯನ ಹೊಟ್ಟೆ ಮತ್ತು ಲಿವರ್ ಇವೆರಡರ ಪ್ರಭಾವ ಕೂದಲಿನ ಮೇಲೆ ದೊಡ್ಡದಿದೆ. ಯಾರು ಹೆಚ್ಚಾಗಿ ಬೆಣ್ಣೆ, ಮೊಟ್ಟೆ, ಮಾಂಸ, ಮಿಠಾಯಿ, ತುಪ್ಪ ತಿನ್ನುವರೋ ಮತ್ತೆ ಯಾರು ತಿಂದದ್ದನ್ನು ಕರಗಿಸಲು ತಕ್ಕ ವ್ಯಾಯಾಮ ಮಾಡುವುದಿಲ್ಲವೋ ಅಂಥಾವರ ತಲೆಯು ಬೋಳಾಗುವುದು ಇಲ್ಲವೇ ಸಮಯಕ್ಕೆ ಮೊದಲೇ ಹಣ್ಣಾಗುವುದು. ಶರೀರದಲ್ಲಿ ನಾಲ್ಕು ಕ್ರಿಯಾಶೀಲ ಯಂತ್ರಗಳಿವೆ. ಇವುಗಳಲ್ಲಿ ಲಿವರ್ ಯಾ ಯಕೃತ್‌ನಿಂದ ಜಿನುಗುವ ಪಿತ್ತ ರಸವು ಸರಿಯಾಗಿ ಬಾರದಿದ್ದರೆ ಅಜೀರ್ಣವಾಗುವುದು. ಇದರಿಂದ ಶಕ್ತಿ ಕುಂದುವುದು ಎದೆಯಲ್ಲಿ ಉರಿ ಹೆಚ್ಚುವುದು. ಹುಳಿ ತೇಗು ಬರುವುದು. ಫಲಿತಾಂಶವಾಗಿ ತಲೆಕೂದಲು ಬೆಳ್ಳಗಾಗುವುದು. ಯಾರ ತಲೆ ಕೂದಲು ಬೀಳಲು ತೊಡಗುವುದೋ, ಯಾರ ತಲೆಯ ಕೂದಲು ವಯಸ್ಸಿಗೆ ಮೊದಲೇ ಹಣ್ಣಾಗ ತೊಡಗುವುದೋ ಅಂಥಾವರಿಗೆ ಸುಂದರ ಕಪ್ಪಾದ ತಲೆಕೂದಲನ್ನು ಪಡೆಯುವುದು ಕಷ್ಟವಿದೆ. ಏಕೆಂದರೆ ಅವರ ಪಚನಾಂಗಗಳ ಕ್ರಿಯಾಲೋಪವೇ ಇವುಗಳಿಗೆ ಕಾರಣ. ಆದರೂ ಕೂಡ ಕೆಲವು ಉಪಾಯಗಳಿಂದ ಈ ತೊಂದರೆಯನ್ನು ನಿವಾರಿಸಿಕೊಳ್ಳುವದು ಸಾಧ್ಯವಿದೆ.

(೧) ಹಿಟ್ಟು (starch) ತುಂಬಾ ಇರುವ, ಪ್ರೋಟೀನ್ ಹೆಚ್ಚಿರುವ ಆಹಾರ ಕಡಿಮೆ ಮಾಡಬೇಕು. (೨) ಬೆಳಗಿನ ಕಾಫಿ ಕುಡಿಯುವದನ್ನು ಬಿಡಿರಿ. ಕುಡಿದರೂ ಕೇವಲ ಪಾನೀಯಗಳನ್ನು ತೆಗೆದುಕೊಳ್ಳಿರಿ. (೩) ಭೋಜನವು ಸರಳವೂ, ಪೇಯ ಪದಾರ್ಥಗಳಿಂದ ಕೂಡಿದ್ದೂ ಇರಲಿ. ಮಿಠಾಯಿ ಮೊದಲಾದ ಸಿಹಿ ಪದಾರ್ಥಗಳನ್ನು ತ್ಯಜಿಸಿರಿ. (೪) ಕೂದಲನ್ನು ಬಿಗಿಯಾಗಿ ಕಟ್ಟಬೇಡಿ. ಪ್ರತಿ ದಿನ ಕೋಂಬ್ ಮಾಡಿಕೊಳ್ಳಿರಿ. ರಾತ್ರಿ ಕೂದಲನ್ನು ಬಿಡಿಸಿ ನಿದ್ರಿಸಿರಿ. ಜಡೆ ಹಾಕಿ ಬಿಗಿದು ಕಟ್ಟುವುದರಿಂದ ದುಃಸ್ವಪ್ನ ಬೀಳುತ್ತದೆ.

ತಲೆಯಲ್ಲಿ ಹಳೆ ಕೂದಲು ಬೀಳುವುದೂ ಹೊಸದು ಬೆಳೆಯುವುದೂ ನಿರಂತರ ನಡೆದಿರುತ್ತದೆ. ಹೊಸದು ಹುಟ್ಟದೆ ಹಳೆಯದು ಬೀಳುವದು ಹೆಚ್ಚಾದರೆ ಅದು ರೋಗ ಚಿಹ್ನೆ. ರಕ್ತದ ಅಭಾವ, ಚರ್ಮ ರೋಗ, ಉಷ್ಣ, ಜೀರ್ಣ ಜ್ವರ ಮೊದಲಾದವುಗಳಿಂದಲೂ ಕೂದಲು ಬೀಳುತ್ತದೆ. ಕೆಲವು ವೇಳೆ ಕೂದಲಿನಲ್ಲಿ ಕೊಳೆ ಹೆಚ್ಚಾದರೆ ಕೂದಲು ಬೀಳುತ್ತದೆ. ಆದ್ದರಿಂದ ಯಾವ ಕಾರಣಗಳಿಂದ ತನ್ನ ತಲೆ ಕೂದಲು ಬೀಳುತ್ತಿದೆಯೆಂಬುದನ್ನು ಪರಿಶೀಲಿಸಿ ತಿಳಿದುಕೊಳ್ಳಬೇಕು. ಪ್ರತಿ ದಿನ ಬೆಳಿಗ್ಗೆ ಮಲಶುದ್ಧಿಯಾಗುವಂತೆ ಎಚ್ಚರಿಕೆ ವಹಿಸಬೇಕು. ಹೆಚ್ಚು ನೀರು ಕುಡಿಯಬೇಕು. ಹಣ್ಣು ಹಂಪಲು ಹೆಚ್ಚು ತಿನ್ನಬೇಕು. ಶಿರಶಾಸನವು ತುಂಬಾ ಹಿತಕರ. ಬೆಳಿಗ್ಗೆ ಬರಿಗಾಲಿನಿಂದ ಹಸುರು ಹುಲ್ಲಿನ ಮೇಲೆ ಓಡಬೇಕು. ರಾತ್ರಿ ಸರಿಯಾಗಿ ನಿದ್ರೆ ಬಾರದಿದ್ದರೆ ಮಲಗುವ ಮೊದಲು ಇಪ್ಪತ್ತು ನಿಮಿಷಗಳ ವರೆಗೆ ಮೊಣಕಾಲಿನ ವರೆಗೆ ಬಿಸಿನೀರ ಸ್ನಾನ ಮಾಡಬೇಕು. ಪ್ರತಿ ದಿನ ಒಂದು ಪಾವು ಮೊಸರು ಕುಡಿಯುವುದು ಹಿತ.

ಸಾಬೂನು ಬಿಡಬೇಕು

ಇಷ್ಟು ಮಾಡಿಯೂ ತಲೆ ಕೂದಲು ಆರೋಗ್ಯಕರವಾಗಿ ಬೆಳೆಯದಿದ್ದರೆ ಕೆಲವು ದಿನಗಳ ವರೆಗೆ ಅನ್ನವನ್ನು ಬಿಟ್ಟು ಬಿಡಿರಿ. ಹಣ್ಣು, ತರಕಾರಿ ಹೆಚ್ಚು ಉಪಯೋಗಿಸಿರಿ. ಇದಲ್ಲದೆ ನಿಮ್ಮ ಶರೀರದಲ್ಲಿ ಯಾವುದಾದರೂ ರೋಗವಿದ್ದು, ಜೀವಸತ್ವಗಳ ಅಭಾವವಿದ್ದು, ರಕ್ತ ಕಡಿಮೆ ಇದ್ದು, ಕೂದಲು ಬೀಳುತಿದ್ದರೆ ಯೋಗ್ಯ ಡಾಕ್ಟರನ್ನು ಕಂಡು ಚಿಕಿತ್ಸೆ ಪಡೆಯುವುದು ಹಿತಕರ. ತಲೆಯ ಕೂದಲಿಗೆ ಎಂದೂ ಸಾಬೂನು ಉಪಯೋಗಿಸಬೇಡಿ. ಶೀಗೆಕಾಯಿ ಯಾ ಅಂಟುವಾಳಕಾಯಿಯನ್ನು ಹುಡಿ ಮಾಡಿ ರಾತ್ರಿ ನೀರಿಗೆ ಹಾಕಿಡಿರಿ. ಸ್ನಾನ ಮಾಡುವ ಮೊದಲು ತಲೆ ಕೂದಲಿಗೆ ಸ್ವಲ್ಪ ಎಣ್ಣೆ ಹಾಕಿ ಚೆನ್ನಾಗಿ ತಿಕ್ಕಿಕೊಳ್ಳಿರಿ. ನಂತರ ಶೀಗೆಕಾಯಿ ನೀರಿನಿಂದ ತೊಳೆಯಿರಿ. ಅದರ ಮೇಲೆ ಶೀತಲ ಯಾ ಸ್ವಲ್ಪ ಬಿಸಿ ಇರುವ ನೀರಿನಿಂದ ಸ್ನಾನ ಮಾಡಿರಿ. ಸ್ನಾನದ ನಂತರ ತಲೆ ಒಣಗಿದ ಮೇಲೆ ಶುದ್ಧ ತೆಂಗಿನೆಣ್ಣೆಯನ್ನು ಸ್ವಲ್ಪ ಹಾಕಿಕೊಳ್ಳಿರಿ.

ತಲೆ ಕೂದಲನ್ನು ಸುಂದರವಾಗಿ ಇಟ್ಟುಕೊಳ್ಳಲು ಇದನ್ನು ಜ್ಞಾಪಕದಲ್ಲಿಡಬೇಕು. ಯಾವಾಗಲೂ ಹೆಚ್ಚು ಬಿಸಿನೀರು ಹಾಕಬಾರದು. ನಿಂಬೆ ರಸ ಕೂದಲಿಗೆ ಹಿತಕರ. ತಲೆ ಕೂದಲಿನ ನೀರು ಒಣಗುವ ಮೊದಲು ಬಾಚಣಿಗೆ ಯಾ ಕೋಂಬು ಉಪಯೋಗಿಸಕೂಡದು.

ಸೋಮವಾರಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಕೆ. ಎಂ. ಮೊಗಪ್ಪನವರು

ನಿನಗಿಲ್ಲಿ ಸ್ಥಳವಿಲ್ಲ ಬಾಪು!

ಲೇ:— ಪಿ. ಡಿ. ಗಣಪತಿ.

ಬಾಪು,

ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರೆತು ಇಂದಿಗೆ ಆರು ವರ್ಷಗಳು ತುಂಬಿದವು. ಸ್ವಾತಂತ್ರ್ಯ ಪಡೆದ ಈ ಭಾರತ ದೇಶದಲ್ಲಿ ನಿನ್ನನ್ನು ಬದುಕಲು ಬಿಡದೆ ನಿನ್ನೆದೆಗೆ ಗುಂಡಿಕ್ಕಿದೆವು. ಆ ಭಯಾನಕ ಜನವರಿ ತಿಂಗಳ ನಂತರ ೫॥ ವರ್ಷ ಸ್ವತಂತ್ರ ಭಾರತದಲ್ಲಿ ಏನೇನು ನಡೆದಿದೆ; ನಿನ್ನ ನಚ್ಚಿನ ಸಂಸ್ಥೆಯಾದ ಕಾಂಗ್ರೆಸು ಅಧಿಕಾರ ವಹಿಸಿ ಏನು ಮಾಡಿದೆ; ನೀನು ಕಲ್ಪಿಸಿದ 'ರಾಮರಾಜ್ಯ' ಎಷ್ಟರ ಮಟ್ಟಿಗೆ ಕರಗತವಾಗಿದೆ ಎಂಬೀ ವಿಚಾರ ಈ ಸ್ವಾತಂತ್ರ್ಯ ಹಬ್ಬದ ಸಂದರ್ಭದಲ್ಲಿ ಹೃದಯಭಾರದಿಂದ ವರದಿ ಒಪ್ಪಿಸುವವನಾಗಿದೆ. ಓ ಬಾಪು, ನಿನ್ನ ಸಮಕಾಲೀನರಾಗಿ ನಿನ್ನನ್ನು ಶರೀರಧಾರಿಯಾಗಿ ಕಂಡ, ನಿನ್ನ ಮಾತುಗಳನ್ನು ಕಿವಿಯಾರೆ ಕೇಳಿದ, ನೀನು ಮಾಡಿದ ಅದ್ಭುತ ಕೆಲಸಗಳನ್ನು ಕಣ್ಣಾರೆ ನೋಡಿದ, ನಿನ್ನ ಶಿಷ್ಯರೆಂದುಕೊಂಡು ಇಂದೂ ಕೂಡ ಮಾತು ಮಾತಿಗೆ ನಿನ್ನ ಹೆಸರೆತ್ತಿ ನುಡಿಯುವವರಾದ ನಾವು ಎಷ್ಟರ ಮಟ್ಟಿಗೆ ನಿನ್ನನ್ನು ಅನುಸರಿಸುತ್ತಿರುವೆವು ಎಂಬ ಆತ್ಮಾನುಸಂಧಾನದ ಪ್ರತಿಫಲ ಈ ನನ್ನ ವರದಿಯಾಗಿದೆ.

ಹೌದು ಬಾಪು, ನೀನು ಅಂದು ಹೇಳಿದ ಮಾತುಗಳು ಇಂದೂ ಕಿವಿಯಲ್ಲಿ ಪ್ರತಿಧ್ವನಿಸುತ್ತಿವೆ. ಸ್ವರಾಜ್ಯದ ಅರ್ಥವನ್ನು ವಿವರಿಸುತ್ತಾ ನೀನು ಹೇಳಿದೆ. "The Swaraj of my dream recognises no race or religious distinctions. Nor is it to be the monopoly of the lettered persons nor of monied men. Swaraj is to be for all including the former but emphatically including the maimed, the blind, the starving and toiling millions" ನನ್ನ ಕನಸಿನ ಸ್ವರಾಜ್ಯದಲ್ಲಿ ಜಾತಿ ಧರ್ಮದ ಭೇದವಿರದು. ಅದು ವಿದ್ಯಾವಂತರ ಯಾ ದುಡ್ಡಿರುವವರ ಹಕ್ಕಾಗದು ಸ್ವರಾಜ್ಯಕ್ಕೆ ಇವರೂ ಹಕ್ಕುದಾರರಾದರೂ ಅಂಗಹೀನರು, ಕುರುಡರು, ಉಪವಾಸವಿರುವವರು, ಅಹೋರಾತ್ರಿ ಶ್ರಮ ವಹಿಸಿ ದುಡಿಯುವವರು ಇವರು ಪ್ರಾಮುಖ್ಯವಾಗಿ ಅದಕ್ಕೆ ಹಕ್ಕುದಾರರು" ಎಂಬರ್ಥದ ಮಾತು ನುಡಿದೆ ಆದರೆ ವಾಸ್ತವವಾಗಿ ಇಂದು ಭರತಖಂಡದಲ್ಲಿ ಬಂದಿದೆಯೆಂದು ಹೇಳುವ ಸ್ವರಾಜ್ಯ ಯಾರಿಗೆ? ಅಯ್ಯೋ ಬಾಪು, ಹೇಳಲು ದುಃಖವಾಗುತ್ತದೆ. ಭಾರತಕ್ಕೆ ಸ್ವರಾಜ್ಯ ಬಂದಿದೆಯೆಂದರೂ ಬ್ರಿಟಿಷ್ ಕಾಲದ ಆತಳಿತ ಪದ್ಧತಿ ಹೋಗಲಿಲ್ಲ. ಅಧಿಕಾರಿಗಳ ದರ್ಪ ಕೆಳಗಿಳಿಯಲಿಲ್ಲ. ದುಡ್ಡಿರುವವರ ಪ್ರಭಾವ ಕಡಿಮೆಯಾಗಲಿಲ್ಲ. ಇದು ನಿನ್ನ ಕಲ್ಪನೆಯ ಬಡವರ ಸ್ವರಾಜ್ಯವಲ್ಲ ಬಾಪು ದಾಲ್ಮಿಯಾ, ಬಿರ್ಲಾ ಮೊದಲಾದವರ ಸ್ವರಾಜ್ಯವಿದು. ಮಿಲ್ ಮಾಲೀಕರ, ಬಂಡವಳದಾರರ ಸ್ವರಾಜ್ಯವಿದು. ಸ್ವರಾಜ್ಯ ಬಂದು ಆರು ವರ್ಷಗಳಾದರೂ ಬಡವನ ಮನೆಗೆ ಬೆಳಕು ಬರಲಿಲ್ಲ. ಬಡವನು ಇಂದೂ ಕೂಡ ನಿನ್ನ ಮಾತಿನಲ್ಲೇ ಹೇಳುವದಾದರೆ "A hewer of wood and drawer of water for the rich" ಸಿರಿವಂತನ ಸೌದೆ ಒಡೆಯುವ ನೀರು ಸೇದುವ ಪರಿಸ್ಥಿತಿಯಲ್ಲೇ ಇದ್ದಾನೆ.

ಸ್ವರಾಜ್ಯ ಬಂದನಂತರ ಜಾತಿ ಮತಗಳ ಹಾವಳಿಗೆಡೆಯಿರಬಾರದೆಂದು ನೀನು ಆಶಿಸಿದ್ದೆ. ಆ ಆಶೆಯನ್ನು ಕಟ್ಟಿಕೊಂಡು ಹಿಂದೂದೇಶವು ಜಾತ್ಯಾತೀತ ರಾಷ್ಟ್ರವೆಂದು ಸಾರಲ್ಪಟ್ಟಿತು. ಆದರೆ ನಿಜ ಪರಿಸ್ಥಿತಿ ಹೇಗಿದೆ? ಸರಕಾರಿ ಉದ್ಯೋಗವಿರಲಿ ಬೇರೆ ಯಾವುದೇ ಇರಲಿ ಜಾತಿ ಧರ್ಮಗಳ ತಳಹದಿಯಲ್ಲಿಯೇ ವಿತರಣೆಯಾಗುತ್ತಿದೆ. ಸ್ವರಾಜ್ಯವು ಭಾರತೀಯರನ್ನು ಐಕ್ಯಗೊಳಿಸಿ ಒಂದಾಗಿಸುವ ಬದಲು, ಆ ಜಾತಿ, ಈ ಧರ್ಮವೆಂದು ಹಲದಾರಿ ಹಿಡಿಸಿದೆ. ಜಾತಿ ಮತಗಳ ಸ್ಫೋಟ ಇಂದಿರುವಷ್ಟು ಭಾರತದಲ್ಲಿ ಈ ಹಿಂದೆ ಎಂದೂ ಇರಲಿಲ್ಲ.

ಹಿಂದುಳಿದವರನ್ನು ಅಸ್ಪೃಶ್ಯರನ್ನು ಮೇಲೆತ್ತುವ ಉದ್ದೇಶದಿಂದ "ಹರಿಜನರು" ಅಂದರೆ ದೇವರ ಮಕ್ಕಳೆಂದು ಕರೆದು ಅವರಿಗಾಗಿ ಅವಿರತ ದುಡಿದೆ. ಆದರೆ ಸ್ವರಾಜ್ಯದಲ್ಲಿ ಅವರ ಸ್ಥಿತಿ ಏನಾಗಿದೆ? ಪ್ರತಿಯೊಬ್ಬರ ಬಾಯಲ್ಲಿ ಉಪದೇಶ ಕಡಿಮೆಯಾಗಿಲ್ಲವಾದರೂ ಆ ವರ್ಗದವರ ಭಾಗ್ಯ ಇನ್ನೊಬ್ಬರ ಮನೆಯ ಜೀತ ಮಾಡುವುದು ವಿನಾ ಬೇರೆ ಇಲ್ಲ. ನೀನು ಆಶಿಸಿದಂತೆ ಸ್ವರಾಜ್ಯವು ಬಡವರದ್ದು ಆಗಿಲ್ಲ ಬಾಪು. ಸ್ವರಾಜ್ಯ ಅವರಿಗೆ ಬಂದಿಲ್ಲ. ಸ್ವರಾಜ್ಯ ಬಂದಿರುವದು ವಿದ್ಯಾವಂತರಿಗೆ, ದುಡ್ಡಿರುವವರಿಗೆ, ಕೋಮುವಾರು ಭಾವನೆಯವರಿಗೆ, ಧರ್ಮಾಂಧರಿಗೆ! ಪರಿಣಾಮವಾಗಿ ಬಡಜನರ ಬವಣೆ ಹಿಂದಿಗಿಂಥಾ ಇಂದು ಹೆಚ್ಚಾಗಿದೆ.

"India is essentially Karmabhumi in contradiction to Bhogabhumi. We want character and not enjoyment." ಭರತ ಖಂಡವು ಅವಶ್ಯಕವಾಗಿ ಕರ್ಮಭೂಮಿ. ಅದು ಭೋಗಭೂಮಿಯಲ್ಲ. ನಮಗೆ ಬೇಕಿರುವದು ಶೀಲ ನೀತಿಗಳು; ಭೋಗವಿಲಾಸಗಳಲ್ಲ" ವೆಂಬುದಾಗಿ ನೀನು ಹೇಳಿದೆ ಬಾಪು. ಆದರೆ ಇತ್ತ ನೋಡು. ನಿನ್ನ ಶಿಷ್ಯರೆಂದು ಕೊಂಡವರು, ನಿನ್ನ ಭಕ್ತರೆಂದು ಕೊಂಡವರು ನಿನ್ನ ಹೆಸರೆತ್ತಿ ಇಂದು ಅಧಿಕಾರಕ್ಕೆ ಬಂದಿದ್ದಾರೆ. ಪ್ರತಿ ಮಾತಿಗೂ ನಿನ್ನ ಆದರ್ಶವನ್ನು ಹೇಳುತ್ತಾರೆ ಜನಹಿತ ಚಿಂತಕರೆಂದೂ, ಜನತಾ ಸೇವಕರೆಂದೂ ಹೇಳಿಕೊಳ್ಳುತ್ತಿದ್ದಾರೆ. ಆದರೆ ಅವರ ಜೀವನ, ವರ್ತನೆ, ದರ್ಶನಗಳನ್ನೊಮ್ಮೆ ಸ್ವರ್ಗದಿಂದ ನೋಡು ಬಾಪು. ಸಯಿಗುಟ್ಟುವ, ಮಿನುಗಿ ಮೆರೆಯುವ ಅವರ ಕಾರುಗಳು, ಕಿಸೆಗೆ ಹಿಡಿಸದ ಅವರ ಮಾಸಿಕ ವೇತನ, ಅವರು ಜೀವಿಸುವ ಬಂಗ್ಲೆಗಳು, ಅವರ ಊಟ ಉಪಚಾರಗಳು, ಅವರು ಕೊಡುವ ಔತಣ ಚಹಾ ಕೂಟಗಳು! ಎಲ್ಲಿದೆ ಬಾಪು ನಿನ್ನ ಕಲ್ಪನೆಯ ಕರ್ಮಭೂಮಿ? ಭರತ ಖಂಡವು ಇಂದು ಅಧಿಕಾರದಲ್ಲಿರುವವರ ಭೋಗಭೂಮಿಯಾಗಿದೆ. ಹಿಂದೆ ಇದ್ದ ಪರಕೀಯರ ಬದಲು ಇಂದು ನಮ್ಮವರೇ ಆ ಭೋಗ ವಿಲಾಸಕ್ಕೆ ತೊಡಗಿ ಬಡಜನರ ಹೆಗಲ ಭಾರವಾಗಿದ್ದಾರೆ.

ಎಲ್ಲಿದೆ ಬಾಪು ಶೀಲ? ಬಡಜನರ ಸುಲಿಗೆ ಮಾಡಿ, ಕಪ್ಪು ಸಂತೆಯ ವ್ಯಾಪಾರ ಮಾಡಿ, ಇನ್ನೊಬ್ಬರ ಸುಲಿಗೆಯನ್ನೇ ಉದ್ಯಮವಾಗಿಟ್ಟುಕೊಂಡಿರುವ ಬಂಡವಳದಾರರ ಬೆನ್ನು ತಟ್ಟಿ, ಅವರನ್ನು ಕರೆದು ಓಲೈಸಿ, ಅವರ ಸಲಹೆಯಂತೆ ವರ್ತಿಸುವ ಬಂಡವಳದಾರರ ಬೆಂಬಲಕ್ಕಿರುವ ಸರಕಾರಕ್ಕೆ ಶೀಲ ಎಲ್ಲಿದೆ? ಬಡಜನರು ಮಜೂರರು ಹತ್ತಿರ ಬರಲಾರದ ಕೋಟೆ ಬಾಗಿಲುಗಳು, ಫೈರ್ ಮಾಡಿ ಹೋದರೂ ಒಳಗೆ ಬಿಡದೆ ತಡೆಯಲಿರುವ ವಿಚಿತ್ರ ಉಡುಗೆಯ ಪಹರೆದಾರರು ಅವರನ್ನು ದಾಟಿ ಒಳಗೆ ಹೋದರೂ ಬಿಡುವಿಲ್ಲದ ಮಂತ್ರಿಗಳು ಹೋ ಬಾಪು, ಇದೇ ಇಂದಿನ ಪ್ರಜಾಪ್ರಭುತ್ವ ಸರಕಾರ!

"Plain living and High thinking must be the motto" ಸರಳ ಜೀವನ ಮತ್ತು ಉತ್ತುಂಗ ಭಾವನೆಯೇ ಗುರಿಯಾಗಿರಬೇಕೆಂದು ನೀನು ನಿನ್ನ ಅನುಯಾಯಿಗಳಿಗೆ ಹೇಳಿದೆ. ಅದರಂತೆ ಇದನ್ನು ಪರಿಪಾಲಿಸುವವರೆಷ್ಟಿದ್ದಾರೆ? ಅಲ್ಲೊಬ್ಬ ವಿನೋಬ ಭಾವೆ, ಇಲ್ಲೊಬ್ಬ ಕುಮಾರಪ್ಪ ಇವರಲ್ಲದೆ ಯಾರಿದ್ದಾರೆ ನೋಡು ಬಾಪು! ಅಧಿಕಾರಕ್ಕೇರಿದ ಪ್ರತಿ ಕಾಂಗ್ರೆಸಿಗನೂ ಜನಸೇವಕನ ಬದಲು "ಸಾಹೇಬ"ನಾಗಿದ್ದಾನೆ. ಮತ್ತೆ ನಿನ್ನ ಜೀವದ ಜೀವಾಳವಾದ ಸ್ವದೇಶಿ ಎಲ್ಲಿ? ಖಾದಿ, ತಕಲಿಗಳೆಲ್ಲಿ? ಕಾಂಗ್ರೆಸ್ ಮಂತ್ರಿಗಳು, ಕಾಂಗ್ರೆಸ್ ಕೆಲಸಗಾರರು "ಗೇಬರ್‌ಡೀನ್ ಸೂಟ್"ನವರಾಗಿದ್ದಾರೆ. ಖಾದಿಯ ವಿಮಲ ತತ್ವ ಎಲ್ಲಿದೆ? ಖಾದಿಗೆ ಪ್ರೋತ್ಸಾಹ ಎಲ್ಲಿದೆ? ಸ್ವದೇಶಿ ವಸ್ತುಗಳ ಪ್ರೇಮ ಯಾರಿಗಿದೆ?

An India prostrate at the feet of a foreigner can give no hope for humanity. India must develop on her hoary tradition of village panchayats and her ancient culture. "ವಿದೇಶದ ಪದತಳದಲ್ಲಿ ಬಿದ್ದ ಭಾರತವು ಮಾನವ ಗಣಕ್ಕೆ ಯಾವ ಭರವಸೆಯನ್ನೂ ಕೊಡಲಾರದು. ಭರತಖಂಡವು ತನ್ನ ಆರ್ಷೇಯ ಪರಂಪರೆಯಂತೆ ಗ್ರಾಮಪಂಚಾಯಿತಗಳ ರಾಜ್ಯವಾಗಿ, ಅಧಿಕಾರ, ಕೈಗಾರಿಕೆಗಳ ವಿಕೇಂದ್ರೀಕರಣದಿಂದ ಸತ್ಯ ಮತ್ತು ಅಹಿಂಸೆಯ ತಳಹದಿಯಲ್ಲಿ ಬೆಳೆದು ಜಗತ್ತಿಗೆ ಆದರ್ಶವಾಗಬೇಕೆಂದು ನೀನು ಆಶಿಸಿದೆ ಬಾಪು. ಆದರೆ ನೋಡು, ಇಂದು ಭರತ ಖಂಡದಲ್ಲಿ ನಡೆಯುತ್ತಿರುವದನ್ನ ಜನತೆಯ ಅಭಿವೃದ್ಧಿಯಾಗಬೇಕೆಂದು ತಂದಿರುವ ಸಾಮೂಹಿಕ ವಿಕಾಸ ಯೋಜನೆಯು ಅಮೇರಿಕಾದಿಂದ ಆಮದಾಗಿ ಬಂದ ಅಭಿಪ್ರಾಯ. ಹಿಂದೂದೇಶದ ಹಳ್ಳಿಗಳು ಸತ್ಯನ್ಯಾಯಗಳ ತಳಹದಿಯಲ್ಲಿ ನಿಂತು ಸರಳ ಜೀವನದಿಂದ ಪವಿತ್ರವಾಗಿ ಬಾಳಿ ಆತ್ಮವನ್ನು ಬೆಳೆಸುವ ಮಾರ್ಗ ಇಂದು ಬೇಕಿಲ್ಲ. ಇಂದು ನಮ್ಮ ಗ್ರಾಮಗಳನ್ನು ಅಮೇರಿಕಾದ ಹಳ್ಳಿಗಳಾಗಿ ಮಾರ್ಪಡಿಸುವ ಯತ್ನ ನಡೆದಿದೆ. ಟ್ರ್ಯಾಕ್ಟರುಗಳು, ಪಂಪುಗಳು, ಕೃತಕ ಗೊಬ್ಬರ ಮೊದಲಾದುವನ್ನು ತಂದು ಹಳ್ಳಿಗಳಿಗೆ ತುಂಬಲಾಗುತ್ತಿದೆ. ಹಳ್ಳಿಯ ರಸ್ತೆ, ಹಳ್ಳಿಯ ಸೇತುವೆ, ಹಳ್ಳಿಯ ಪ್ರತಿಯೊಂದಕ್ಕೂ ಅಮೇರಿಕಾದ ಹಣವನ್ನು ಬಯಸುವ ಸ್ಥಿತಿಬಂದಿದೆ. ಈ ಆರ್ಥಿಕ ದಾಸ್ಯಕ್ಕಿಂಥಾ ಹೀನವಾದುದು ಬೇರೇನಿದೆ ಬಾಪು?

"Politics divorced from religion has absolutely no meaning. Politics is a means to serve and not a weapon to dominate" ಧರ್ಮರಹಿತವಾದ ರಾಜಕೀಯಕ್ಕೆ ಅರ್ಥವಿಲ್ಲ ರಾಜಕೀಯವು ಸೇವೆಮಾಡಲಿರುವ ಒಂದು ಮಾರ್ಗವಲ್ಲದೆ ಅಧಿಕಾರ ನಡೆಸುವ ಸಾಧನವಲ್ಲವೆಂಬುದಾಗಿ ನೀನು ಆಗಾಗ ನಮಗೆ ಉಪದೇಶ ಮಾಡುತ್ತಿದ್ದೆ ಬಾಪು. ಆದರೆ ನೋಡಿಲ್ಲಿ, ನಿನ್ನ ಅನುಯಾಯಿಗಳೆನ್ನುವರು ಅದನ್ನು ಗಾಳಿಗೆ ಚೆಲ್ಲಿದ್ದಾರೆ. ರಾಜಕೀಯವು ಕೇವಲ ಅಧಿಕಾರಕ್ಕೇರುವ ಒಂದು ಸಾಧನವಲ್ಲದೆ ಅದಕ್ಕೆ ಬೇರೆ ಅರ್ಥವಿಲ್ಲ. ಅಧಿಕಾರಕ್ಕೆ ಏರುವ ಸಾಧ್ಯತೆ ಇಲ್ಲವೆಂದರೆ ಅತನಿಗೆ ರಾಜಕೀಯದ ಅಗತ್ಯ ಇಲ್ಲ.

...ನಾವಣೆ ...ರಾಜಕೀಯ ಜಾ... ಉಳಿದ ಸಮಯದಲ್ಲಿ ...ಯನ್ನು ಹೊಂದುತ್ತದೆ. ಆ ...ಂದೆ ಸೇವೆಗಾಗಿ ರಾಜಕೀಯಕ್ಷೇತ್ರವು ವವರು ಕಡಿಮೆ. ಇಳಿದರೂ ಅಂಥಾವರು ಹಿನ್ನೆಲೆಯಲ್ಲಿ ಅನಾಮಧೇಯರಾಗಿ ಉಳಿದು ನಿರ್ನಾಮಗೊಳ್ಳಬೇಕಾಗುವದು

ಆದೇ ಅಲ್ಲ ಬಾಪು, ನೀನು ಹೇಳಿದ ಈ ಮಾತೂ ಜ್ಞಾಪಕಕ್ಕೆ ಬರುತ್ತದೆ. ನೀನು ಹೇಳಿದೆ. "I must not serve my distant neighbour at the expense of the nearest. India must learn to live before she can aspire to die for humanity" ನನ್ನ ಹತ್ತಿರದ ನೆರೆಯವನನ್ನು ಬಲಿಕೊಟ್ಟು ದೂರದ ನೆರೆಯವನಿಗೆ ನಾನು ಸೇವೆ ಸಲ್ಲಿಸಬಾರದು. ಮಾನವಗಣದ ಹಿತಕ್ಕಾಗಿ ಜೀವಾರ್ಪಣ ಮಾಡಲು ಯತ್ನಿಸುವ ಮೊದಲು ಭಾರತವು ತಾನು ಬದುಕಲು ತಿಳಿಯಬೇಕು" ಆದರೆ ನಿನ್ನ ಉತ್ತರಾಧಿಕಾರಿ ನೆಹ್ರೂ ನಹ ರೂರವರ ಏನು ಮಾಡುತ್ತಿರುವರು ನೋಡು ಬಾಪು? ಹಿಂದೂದೇಶದ ಮಿಲಿಯಾಂತರ ಜನರಿಗೆ ಹೊಟ್ಟೆಗೆ ಅನ್ನವಿಲ್ಲ, ಮೈಗೆ ಬಟ್ಟೆಯಿಲ್ಲ, ಮಾಡಲು ಕೆಲಸವಿಲ್ಲ, ಉಳಲು ಭೂಮಿಯಿಲ್ಲ. ಅವರ ಜೀವನದಲ್ಲಿ ಬೆಳಕೇ ಇಲ್ಲ. ಈ ರೀತಿ ಸ್ವತಂತ್ರ ಭಾರತದಲ್ಲಿ ಅವರ ದಾರುಣ ಸ್ಥಿತಿಯಾದರೂ ಅವರ ಬಗ್ಗೆ ಮಾಡುತ್ತಿರುವದೇನು? ಬಂಗಾಲ ಪೀಡಿತರಾಗಿ ದಿಕ್ಕಿಲ್ಲದೆ ನರಳುವವರ ಹಿತಕ್ಕಾಗಿ ಸರಕಾರದ ಧ್ಯಾನ ಪ್ರಥಮತ ಹೋಗಬೇಡವೆ? ದೇಶದ ಒಳಗಿರುವ ಬಡತನ, ತೊಂದರೆ, ಕಷ್ಟ ನಿಷ್ಟುರಗಳ ನಿವಾರಣೆ ಮಾಡಿ ನಂತರ ಇತರರ ವಿಚಾರವಲ್ಲವೆ? ಮನೆಯ ದನಕ್ಕೆ ಹುಲ್ಲು ಹಾಕದೆ ಕಟ್ಟಿಹಾಕಿ ಕಾಶಿಯ ದನಕ್ಕೆ ಹುಲ್ಲು ಹಾಕಲೆಳಿಸುವ ನೀತಿ ಸರಿಯೇ? ನಮ್ಮ ಮನೆಯನ್ನು ಸರಿಪಡಿಸದ ಮೇಲಲ್ಲವೇ ಇತರರ ಮನೆಯ ವಿಚಾರ? ಭಾರತದ ಸಮಸ್ಯೆಗಳು ನೂರಾರಿವೆ. ಬಡತನ, ನಿರುದ್ಯೋಗ, ಅಜ್ಞಾನ ಮೊದಲಾದ ಮಹಾಪ್ರಶ್ನೆಗಳನ್ನು ನಿವಾರಿಸದೆ ಅಂತರಾಷ್ಟ್ರೀಯ ರಂಗದಲ್ಲಿ ನೆಹರೂರವರ ತಲೆ ಎಷ್ಟು ಎತ್ತರಕ್ಕೆ ಏರಿದರೇನು? ಹೌದು, ನೆಹರೂರವರ ವ್ಯಕ್ತಿತ್ವದಿಂದಾಗಿ ಜಗತ್ತಿನ ರಾಷ್ಟ್ರಗಳಲ್ಲಿ ಭರತಖಂಡಕ್ಕೆ ಹೆಚ್ಚಿನ ಗೌರವ, ಉತ್ತಮ ಸ್ಥಾನವಿದೆಯೆಂಬುದು ನಿಜ. ಆದರೆ ಮನೆಮಟ ಹಾಳುಮಾಡಿ ಕೊಂಡು, ಮನೆಯಲ್ಲಿರುವವರನ್ನು ಉಪವಾಸ ಬೀಳಿಸಿ ಎಷ್ಟೇ ದೊಡ್ಡ ಊರು ಬೋರಯ್ಯ ಗೌಡನೆನಿಸಿಕೊಂಡರೂ ಪ್ರಯೋಜನವೇನು?

ಭರತಖಂಡದಷ್ಟು ಬಡತನವಲ್ಲಿರುವ ರಾಷ್ಟ್ರ ಜಗತ್ತಿನಲ್ಲಿಲ್ಲ. ಹೊಟ್ಟೆಗೆ ದಿನಕ್ಕೆ ಒಂದು ಹೊತ್ತು ಅನ್ನ ದೊರೆಯದ ಲಕ್ಷಾಂತರ ಜನರಿರುವ ದೇಶವಿದು. ಇಂಥಾ ದೇಶವು ಕೊರಿಯಾ ಸಂಧಾನಕ್ಕಾಗಿ ತನ್ನ ಖರ್ಚಿನಿಂದ ಸೇನೆ ಕಳುಹಿಸುವುದಂತೆ! ಇದು ಹೊಟ್ಟೆಗೆಯ ದನವನ್ನು ಉಪವಾಸ ಬೀಳಿಸಿ ದೂರದ ದನಕ್ಕೆ ಹುಲ್ಲು ಹಾಕುವ ಯತ್ನದಂತೆ ಅಲ್ಲವೇ?

ಅಯ್ಯೋ ಬಾಪು, ಹೀಗೆ ಒರೆಯುತ್ತಾ ಹೋದರೆ ಅದಕ್ಕೆ ಅಂತ್ಯವಿಲ್ಲ. ನಿನ್ನ ತತ್ವಬೋಧನೆ, ನಿನ್ನ ಕಾರ್ಯಮಾರ್ಗ ಯಾವುದೂ ಬೇಕಾಗಿಲ್ಲ. ನಿನ್ನನ್ನು ಗುಂಡಿಕ್ಕಿ ಕೊಂದು, ಅಹಿಂಸಾಮೂರ್ತಿಯಾದ ನಿನ್ನ ಕಳೇಬರವನ್ನು ಯುದ್ಧವಾಹನವಲ್ಲಿಟ್ಟು, ಮಿಲಿಟರಿ ಪೆರೇಡು ನಡೆಸಿ, ಆಕಾಶದಿಂದ ವಿಮಾನಗಳ ಸೆಲ್ಯೂಟ್ ಹೊಡೆಸಿದಾಗಲೇ ನಿನ್ನ ಅಹಿಂಸಾ ತತ್ವ ನಿನ್ನೊಡನೆ ಪರ್ಯವಸಾನಗೊಂಡಿತೆಂದು ತಿಳಿಯಬೇಕಾಗಿದೆ. ಇಲ್ಲದಿದ್ದರೆ ಶಾಂತಿಪ್ರಿಯ ಭಾರತದ ರಾಷ್ಟ್ರೀಕ ಸಂಪತ್ತಿನ ಬಹು ಅಂಶ ಸೈನ್ಯಕ್ಕಾಗಿ ಏಕೆ ವೆಚ್ಚವಾಗಬೇಕು? 'ರಾಮರಾಜ್ಯ'ದಲ್ಲಿ ಪೋಲೀಸರ ಅವಶ್ಯಕತೆ ಬರಲಾರದು ಎಂಬ ಕಲ್ಪನೆ ನಿನಗಿತ್ತು. ಆದರ ಇಂದಿನ ಈ "ಸ್ವ-ರಾಜ್ಯ"ದಲ್ಲಿ ಪೋಲೀಸರ ನೂತಿರಲಿ, ಪ್ರತಿ ವ್ಯಕ್ತಿಯ ಹಿನ್ನೆಲೆಯಲ್ಲಿ ಗುಪ್ತಾಚಾರ (ಸಿ. ಐ. ಡಿ.) ರಿದ್ದಾರೆ.

ದುಃಖವೇನೋ ತುಂಬಾ ಆಗುತ್ತಿದೆ ಬಾಪೂ. ಆದರೆ ಸತ್ಯವನ್ನು ಹೇಳಬೇಕಾಗುತ್ತದೆ. ಭಾರತಕ್ಕೆ ನೀನು ಸ್ವಾತಂತ್ರ್ಯ ದೊರಕಿಸಿದ ರಾಷ್ಟ್ರಪಿತನು ಹೌದು ಆದರೆ ಸ್ವತಂತ್ರ ಭಾರತಕ್ಕೆ ನಿನ್ನ ಅಗತ್ಯವಿಲ್ಲ. ಅದ್ದರಿಂದಲೇ ನಿನ್ನದೆಗೆ ಗುಂಡಿಕ್ಕಿದರು. ಆದರಿಂದ ತೃಪ್ತರಾಗದೆ ನಿನ್ನ ತತ್ವಗಳನ್ನೂ ಕಾರ್ಯವಿಧಾನವನ್ನೂ ಕೊಲೆಗೈದರು. ಏನಿನ್ನು ಭಾರತದಲ್ಲಿ ಸ್ಥಳವಿಲ್ಲ ಬಾಪು. ಬಾಯಲ್ಲಿ ನಿನ್ನ ಹೆಸರೆತ್ತದವರಿಲ್ಲ ನಿಜ. ಆದರೆ ನೇಶ್ಯಾಗೃಹವನ್ನು ಯೋಚಿಸುತ್ತಾ ಬಾಯಲ್ಲಿ ಹರಿನಾಮ ಹೇಳುವವರಂತೆ ಇಂದಿನ ಪರಿಸ್ಥಿತಿಯಾಗಿದೆ. ನಿನಗೂ ನಿನ್ನ ತತ್ವಗಳಿಗೂ ಇಂದಿನ ಭಾರತದಲ್ಲಿ ಸ್ಥಳವಿಲ್ಲ ಅದೇ ಅಲ್ಲ ಬಾಪು, ನಿನ್ನ ತತ್ವಗಳನ್ನು ತಮ್ಮ ಶಕ್ತಿಗೆ ತಕ್ಕಂತೆ ನಿಸ್ವಾರ್ಥಭಾವದಿಂದ ಅನುಸರಿಸಲೆತ್ನಿಸುವವರಿಗೂ ಸ್ಥಳವಿಲ್ಲ. ಹಾಯ್, ಬಾಪು, ಕ್ಷಮಿಸು. ಈ ದುಃಖವಾತೆರೆಯಿಂದ ನಿನ್ನ ಜಗದ್ವ್ಯಾಪಿ ಆತ್ಮಕ್ಕೆ ನೋವು ಮಾಡಿದ್ದರೆ ಕ್ಷಮಿಸು ಬಾಪು!

—

ಬದುಕಿನಲ್ಲಿ ಭಗವಂತ.

(೩ನೇ ಪುಟದಿಂದ ಸಾಗಿದ್ದು)

ನೀನು ಜೀವನವನ್ನು ತಿರಸ್ಕರಿಸಿರುವೆ. ಆದರೆ ಜೀವನವು ನಿನ್ನನ್ನು ಬಿಟ್ಟಿಲ್ಲ. ಬಾಬು ನಿನ್ನ ಸಹೋದರನು. ಆತನು ನಿನ್ನ ಒಂದು ಅಂಶ. ಆತನೇ ನೀನು ನೀನು ಹೊರಡಲು ಸನ್ನದ್ಧನಾಗುವ ವರೆಗೆ ನಾನಿಲ್ಲಿಂದ ತೊಲಗೆನು"

ಯೋಗಿಯು ಕಣ್ಣಿನಲ್ಲಿ ಅಪೂರ್ವ ತೇಜವೊಂದು ಹೊಳೆದು ಮಾಯವಾಯಿತು. ಆಕೆ ಪುನಹ ಹೇಳಿದಳು. "ನಾನು ಸರಳ ಹೆಂಗಸು ಸಹೋದರಾ. ನಾನು ದೇವರಿಗೆ ಮೆಚ್ಚನಂತೆ ಜೀವಿಸಿರುವೆನು. ನನಗೆ ಹೆಚ್ಚಿಗೆ ತಿಳಿಯದು. ಆದರೆ ಜ್ಞಾನದ ಮಹಾ ಮೇರುವನ್ನೇರಿ ಬೆಳಕಿನ ಜೀವನನ್ನು ಕಂಡಿರುವ ನಿನ್ನಲ್ಲಿ ನನಗೆ ವಿಶ್ವಾಸವಿದೆ. ಬಾಬುವಿನ ಕಾಯಿಲೆ ನಿನ್ನಿಂದ ಗುಣವಾಗುವದೆಂಬ ಭರವಸೆ ಇದೆ. ನಿನ್ನ ಸ್ವಭಾವವು ದೈವದತ್ತವಾದುದು. ಅದನ್ನು ತೆಗೆದು ಹಾಕುವುದು ಸಾಧ್ಯವಲ್ಲ. ಇಂದು ನೀನು ಅಸೀಮ ಸನ್ಯಾಸದಲ್ಲಿ ಆ ಸ್ವಭಾವವನ್ನು ಒತ್ತಿ ಹಿಡಿದಿರಬಹುದು. ಆದರೆ ಅದು ಸಾಧ್ಯವಾಗದು."

ಯೋಗಿಯು ಹಿಂತಿರುಗಿ ಗುಹೆಯನ್ನು ಹೊಕ್ಕನು. ಕೆಲವು ಸಮಯದ ನಂತರ ಹೊರಬಂದು "ಏಳು ಹೋಗುವ. ನಾನು ನಿನ್ನವನಾಗಿರುವೆ" ಎಂದನು. ಅವರು ಮನೆಗೆ ಬಂದರು. ಗಣೇಶನು ಬಾಬುವಿನ ಕೃಶ ಶರೀರವನ್ನು ನೋಡಿದನು. ಆದರೂ ಆತನ ಕಣ್ಣುಗಳಲ್ಲಿ ಅಪೂರ್ವ ತೇಜಸ್ಸು ತುಂಬಿತ್ತು. ಯೋಗಿಯ ಕಣ್ಣಿನಿಂದ ಎರಡು ತೊಟ್ಟು ಕಂಬನಿ ಕೆಳಗೆ ಬಿದ್ದವು. "ನಾನು ನಿನ್ನನ್ನು ಗುಣಪಡಿಸಲಾರೆ ಬಾಬು. ದೇವರ ಇಚ್ಛೆಗೆ ವಿರುದ್ಧ ಯಾವುದೂ ನಡೆಯದು" ಎಂದು ಆತನು ಹೇಳಿ ಬಾಬುವಿನ ಪಕ್ಕದಲ್ಲಿ ಕುಳಿತನು. ಆತನ ಹೃದಯವು ಭಾರವಾಗಿತ್ತು. ಆತನು ಹೇಳಿದನು, "ನೋಡರಾ, ನಿನ್ನ ಮಾರ್ಗವು ನನ್ನದಕ್ಕಿಂಥಾ ಉತ್ತಮ. ನಿನ್ನ ಕಣ್ಣುಗಳಿಂದ, ನಿನ್ನ ಕೃಶವಾದ ಶರೀರದಿಂದ ನನ್ನ ೨೦ ವರ್ಷಗಳ ಸತತ ತಪಸ್ಸಿನಿಂದ ಕಲಿಯಲಾರದ ಪಾಠವನ್ನು ಕಲಿತೆನು ಈ ಪ್ರಪಂಚವು ಭಗವಂತನದೆಂಬುದನ್ನು ಮರೆತು ನಾನು ಹುಡುಕಿದನು. ಮಾನವನೂ ಆತನ ಒಂದು ಅಂಶವೇ. ಈ ಪ್ರಪಂಚ ನಶ್ವರಬಂಧನಕಾರಿಯೆಂದು ಓಡಿಹೋಗಿ ತಲೆ ಮರೆಸಲೆತ್ನಿಸುವವನು ಹೇಡಿ. ಜಗತ್ತಿನ ಜೀವನ ಆತನ ಆಜ್ಞೆಯ ಜಲಪ್ರವಾಹದಂತೆ. ಈ ಪ್ರಪಂಚದ ಬಾಳಿನಲ್ಲೇ ಭಗವಂತನೂ ಕೂಡ!"

ಯೋಗಿಯು ತನ್ನ ತಮ್ಮನ ಕೈಗಳನ್ನು ಹಿಡಿದುಕೊಂಡನು. ಬಾಬುವಿನ ಕಣ್ಣಿನಿಂದ ಅನಂತ ಪ್ರೇಮದ ಅಶ್ರುಗಳುದುರಿದವು. ಅರಳಿರುವ ದೀಪದಂತೆ ಆತನ ಕಣ್ಣುಗಳು ತೇಜಸ್ಸಿನಿಂದ ಹೊಳೆದು ಮುಚ್ಚಿದವು.

ಗಣೇಶನು ಜಾಜಿಯನ್ನು ನೋಡಿ, "ನೀನು ದುಃಖಿಸಬಾರದು ತಂಗಿ. ಆತನು ಭಗವಂತನಲ್ಲಿ ಐಕ್ಯನಾಗಿದ್ದಾನೆ. ಆತನದೇ ಉತ್ತಮ ಮಾರ್ಗ ಜೀವನದಲ್ಲಿ ಜನರಿಂದ ದೂರ ಉಳಿದು, ಅವರಲ್ಲಿ ಭಯ ಹುಟ್ಟಿಸಿ ಟೊಳ್ಳು ರೀತಿಯ ಗೌರವವನ್ನು ನಾನು ಸಂಪಾದಿಸಿರಬಹುದು ಆದರೆ ಜನರಲ್ಲಿ ಒಂದಾಗಿ, ಅವರನ್ನು ಪ್ರೀತಿಸಿ ತನ್ನ ವಿಯೋಗದಿಂದ ಅವರನ್ನು ಅಳುವಂತೆ ಮಾಡಿದ ಬಾಬುವಿನ ಜೀವನವೇ ಪರಿಪೂರ್ಣವಾದುದು. ಅದ್ದರಿಂದ "ಆತನು ಪ್ರೀತಿಸಿದನು. ಆದೇ ರೀತಿ ಪ್ರೀತಿಸಲ್ಪಟ್ಟನು"

ಜಾಜಿಯು ಕಂಬನಿ ಮಿಡಿಯಲಿಲ್ಲ. ಆಕೆಯ ಮುಖದಲ್ಲಿ ಅಲೌಕಿಕ ತೇಜಸ್ಸು ತುಂಬಿತ್ತು. ಆಕೆ ಹೇಳಿದಳು. "ನಾನು ಅದೃಷ್ಟವಂತೆ. ಏಕಂದರೆ ಬಾಬುವಿನಲ್ಲಿ ಜೀವನದ ಗುಟ್ಟನ್ನು ಕಂಡೆ. ಪ್ರೇಮ ಸೇವೆ, ಜನತಾ ಬಾಂಧವ್ಯ, ಇವೇ ದೇವರ ಕೊಲಿಸಲಿರುವ ಮಾರ್ಗಗಳೆಂಬುದನ್ನು ಆತನು ತೋರಿಸಿದನು."

—

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ ...	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಖಾಲಿ ಠೇವಣಾತಿ ಶೇಕಡ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು. ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸ್ಟಿ, ನಾರ್ದನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ & ಖಜಾಂಚಿ.

Edited Printed and Published by P. I. BELLIAPPA at 'KODAGU' Press Mercara, for 'Kodagu' Ltd.

ಕೊಡಗು

ಅಪರಾಧಿ?

[illegible] ೨೧-೬-೧೯೫೩

KODAGU KANNADA WEEKLY MERCARA

ಈ ವಾರದ ಕಥೆ.

ಸ್ವಪ್ನ ಸುಂದರಿ.

ಲೇ:— ಶ್ರೀ ಪಾರ್ಥಸಾರಥಿ, ಬಿ. ಎ., ಮೈಸೂರು.

ಸುಂದರ್ ಏಳಿ....ಇದಕ್ಕಾಗಿ ಚಿಂತಿಸುತ್ತ ಕುಳಿತರೆ ಆಗುತ್ತದೆಯೇ? ಏಳಿರಿ.... ಮಾನವನೊಂದು ನೆನೆದರೆ ದೈವವೊಂದು ನೆನೆಯುವದು. ಈಸಬೇಕು ಇದ್ದು ಜೈಸಬೇಕು ಎಂದು ಹೇಳುತ್ತಿದ್ದ ನೀವೆ ಹೀಗೆ ಕುಳಿತರೆ ಹೇಗೆ? ಏಳಿರಿ....ನಾನು ಹೇಳಿದುದನ್ನಾದರೂ ಕಡೆಯದಾಗಿ ಪ್ರಯತ್ನಿಸಿ, ದೇವರು ದೊಡ್ಡವನು ಅವನು ನಮ್ಮ ಕೈ ಬಿಡುವದಿಲ್ಲ ಸುಂದರ್"

"ಸುಶೀಲಾ, ಈಗಿನ ಪ್ರಪಂಚದ ಬಾಳುವೆಯನ್ನು ನೀನರಿಯೇ....ಇದು ಸತ್ಯ ಧರ್ಮಗಳ ಕಾಲವಲ್ಲ. ನಿನ್ನ ಆಸೆಗಳಿಗೆ ಈ ಲೋಕದಲ್ಲಿ ಎಡೆಯಿಲ್ಲ. ಗೋಪಿಯೇನೋ ನನ್ನ ಗೆಳೆಯನೇ ಹೌದು, ಆದರೂ"

"ಆದರೇನು ಸುಂದರ್....ಹೇಳಿ"

'ಸುಶೀ, ಅವನೋ ಧನಿಕ, ನನ್ನ ನೆನಪಾದರೂ ಅವನಿಗಿದ್ದೀತೆ.... ಹಾಗಿದ್ದರೂ ನನಗವನು ಸಹಾಯ ಮಾಡುವನೇ"

"ಪ್ರಯತ್ನ ನಮ್ಮದು....ಆದರೆ ಫಲ ನಮ್ಮದಲ್ಲ, ಅಲ್ಲವೇ"

ನಿಟ್ಟುಸಿರು ಬಿಡುತ್ತಾ ಶ್ಯಾಮಸುಂದರನು ಗೋಪಿಯ ಮನೆಕಡೆ ಹೊರಟನು. ಸುಂದರ್ ಮತ್ತು ಗೋಪಿ ಇಬ್ಬರೂ ಕಾಲೇಜಿನಲ್ಲಿ ಓದುತ್ತಿರುವಾಗ ಗೆಳೆಯರಾಗಿದ್ದರು. ಸುಂದರನು ಬಿ. ಎ. ಡಿಗ್ರಿ ಪಡೆದಿದ್ದರೂ, ಸರಿಯಾದ ಕಡೆ ಕೆಲಸ ಸಿಕ್ಕದೆ ಕಡು ಬಡತನದಲ್ಲಿದ್ದನು. ಗೋಪಿಯಾದರೋ ತನ್ನ ತಂದೆ ತಾಯಿಗಳನ್ನೆಲ್ಲಾ ಕಳೆದುಕೊಂಡು ಅವರ ಆಸ್ತಿ ಪಾಸ್ತಿಗಳಿಗೆಲ್ಲಾ ಒಡೆಯನಾಗಿ ತನ್ನ ದುಷ್ಟ ಸಂಗದಿಂದ ಕೆಟ್ಟ ಹಾದಿ ಹಿಡಿದಿದ್ದಾನೆ. ಗೋಪಿಯು ತನ್ನ ಗೆಳೆಯ ರಾಜುವಿನೊಡನೆ ಹೊರಗೆ ಹೊರಡುವಷ್ಟರಲ್ಲಿ ಸುಂದರನನ್ನು ಕಂಡು, "ಯಾರದು?"

"ನಾನು ಗೋಪಿ,....ಸುಂದರ್....ಮರೆತುಬಿಟ್ಟೆಯಾ....ನಿನ್ನ ಕ್ಲಾಸ್ ಮೇಟ್ ಸುಂದರನಲ್ಲವೇ ನಾನು....?"

"ನೋಡಿದೆಯಾ ರಾಜು, ನೋಡಿದರೆ ಭಿಕಾರಿಯಂತಿದ್ದಾನೆ.... ನನ್ನ ಗೆಳೆಯನಂತೆ ಸುಂದರನಂತೆ.... ಹೋಗು ಹೋಗ."

"ಹೌದು ಗೋಪಿ, ನಿನಗೆ ಹೇಗೆ ಗೊತ್ತಾಗುತ್ತದೆ ಹೇಳು"

ನಾಲಿಗೆ ಹಿಡಿದು ಮಾತನಾಡು....ನನ್ನನ್ನು ಏಕ ವಚನದಲ್ಲಿ ಕರೆಯಲು ನಿನಗೆ ಎಷ್ಟು ಧೈರ್ಯವೋ? ಹೊಟ್ಟೆಗಿಲ್ಲದಿದ್ದರೆ ಬೇಡಿಕೋ. ಈ ರೀತಿ ನಾಟಕವಾಡಬೇಡ"

"ಹೋಗಲಿ ಬಿಡು ಗೋಪಿ, ಅವನೊಡನೆ ಏಕೆ ಜಗಳ....ಏ-ಈ ನಾಲ್ಕಾಣೆ ತೆಗೆದುಕೊಂಡು ಹೊರಡು ಕಾಡಬೇಡ"

"ನೋನೋ... ನಿಂಗೆ ಗೊತ್ತಿಲ್ಲ ರಾಜೂ, "ಯು ಮಸ್ಟ್ ನೆವರ್ ಎಂಕರೇಜ್ ಸಚ್ ಬೆಗ್ಗರ್ಸ್! ಹೋಗಿ ಕೆಲಸ ಮಾಡ್ಲಿ ಸೌದೆ ಒಡೆಯಲಿ.... ಈ ರೀತಿ ಬಾಳುವದಕ್ಕಿಂಥಾ...."

'ಹೌದು, ಗೋಪಾಲರಾಯರೇ....ತಾವು ಹೇಳಿದ ಮಾತು ಅಕ್ಷರಶಃ ನಿಜ.... ತಮ್ಮಲ್ಲಿಗೆ ನಾನು ಭಿಕ್ಷೆಬೇಡಲು ಬಂದವನಲ್ಲ. ಸ್ನೇಹ ವಾತ್ಸಲ್ಯದಿಂದ ಸಹಾಯ ಕೇಳಲು ಬಂದೆ...ನಿಮ್ಮಿಂದ ಒಳ್ಳೆಯ ಪಾಠವನ್ನೇ ಕಲಿತೆ.... ಆದರೆ ಗೋಪಾಲರಾಯರೇ, ನನ್ನ ಕಡೆಯ ಮಾತನ್ನಾದರೂ ನೆನಪಿಡಿ. ಪುಂಗಿಯ ನಾದಕ್ಕೆ ಮರುಳಾಗುವ ಹಾವಿನಂತೆ ಮಾತ್ರ ಆಗದಿರಿ....ನಿಮ್ಮ ಮೇಲೆ ನಿಮಗೆ ಎಚ್ಚರವಿರಲಿ.... ನಮಸ್ಕಾರ ಹೋಗಿ ಬರುತ್ತೇನೆ...."

ಸುಂದರನು ಹೋದ ಮೇಲೆ ಗೋಪಿಯು ರಾಜುವಿನೊಡನೆ ಚಿತ್ರ ಮಂದಿರದ ಕಡೆಗೆ ಹೊರಟನು.

ಗೋಪಿ-ರಾಜು.... ನಮ್ಮ ವಿಷಯ ಏನಪ್ಪ ತೀರ್ಮಾನ ಮಾಡಿದ್ದಿ, ಸ್ವಪ್ನಸುಂದರೀನ....ಸ್ವಪ್ನದಲ್ಲೇ ಕಾಣ್ತಿರ್ಬೇಕೇನು?"

"ಛೆ! ಛೆ! ಹಾಗೇನಿಲ್ಲ ಗೋಪಿ....ಆವತ್ತಿಂದ್ಲೂ ನಮ್ಮ ತಂದೇದು ಒಂದೇ ಹಟ. ನಾನು ಹೇಳಿದ್ದನ್ನ ನೀನು ಮಾಡಿದರೆ....ಒಡನೆ....ಮದ್ವೆ ಅಯ್ತು ಅಂತ್ಲೆ ತಿಳ್ಕೋ. ಇದರಲ್ಲಿ ಅನುಮಾನವೇ ಬೇಡ"

"ನಿಮ್ಮ ತಂದೆದು ಹಿಡಿದದ್ದೇ ಪಟ್ಟು ಅನ್ನು ಅಷ್ಟೇ ತಾನೆ....ನಾನು ಅನುಭವಿಸೋ ಈ ಆಸ್ತಿ ನನ್ನ ಮುದ್ದು ಸುಂದರಿ ಹೆಸರಿನಲ್ಲಿ ಮಾಡ್ಬೇಕು ಅಷ್ಟೇ ತಾನೇ....ಆಗ್ಲಿ ರಾಜು....ನೀನೇ ಬಾ, ನಾಳೆ ಬೆಳಿಗ್ಗೆ ಎಲ್ಲಾ ಬರ್ದು ನಾಳೇನೇ ರಿಜಿಸ್ಟರ್ ಮಾಡಿಬಿಡ್ತೀನಿ ...ಇನ್ನೇನಪ್ಪ...."

* * *

"ಯಾರದು, ಸುಶೀಲಾ ಯಾರೋ ಬಂದಿರುವ ಹಾಗಿದೆ ನೋಡು...."

"ಸುಂದರ್.... ಇದೋ ನೋಡಿ ಏನೋ ಕಾಗದಗಳು ಬಂದಿವೆ. ಪೋಸ್ಟ್ ಮ್ಯಾನ್ ಬಂದಿದ್ದ"

"ಕೊಡು ಸುಶಿ.... ನೋಡಿದೆಯಾ.... ದೇವರು ದೊಡ್ಡವನು ಸುಶಿ!....ನಿನ್ನ ತುಳಸಿ ಪೂಜೆಯ ಫಲ ನನಗೆ ಲಭಿಸಿದೆ.... ಕೆಲಸ ಸಿಕ್ಕಿತು. ಸುಶೀ ...ತಿಂಗಳಿಗೆ ಇನ್ನೂರು ರೂಪಾಯಿ ಸಂಬಳ ಸುಶೀ.... ನಾನೇ ಭಾಗ್ಯಶಾಲಿ"

ಹೌದು ಸುಂದರ್.... ಸನ್ಯಾಸಿಯು ಹೇಳಿದ ಮಾತುಗಳನ್ನು ನೆನೆಸಿಕೊಳ್ಳಿ.... ಮರೆತುಬಿಟ್ಟಿರಾ!"

"ಇಲ್ಲ ಸುಶೀ, ಹೇಗೆ ಮರೆಯಲು ಸಾಧ್ಯ.... ಅವನು ಅಂದು ಹೇಳಿದ ಮಾತುಗಳ ಪ್ರತಿ ಶಬ್ದವೂ ನನ್ನ ಕಿವಿಗಳಲ್ಲಿ ಮಾರ್ದನಿ ಕೊಡುತ್ತಿವೆ. ನಿಜ! ಬಡವನಿಗೆ ಬಡವನೇ ಆಧಾರ! ಭಾಗ್ಯ ಬಂದಾಗ ಬಡವರನ್ನು ದೀನರನ್ನು ರಕ್ಷಿಸು.... ಆಹಾ! ಎಂತಹ ಮುತ್ತಿನಂತಹ ಮಾತುಗಳು. ಭಾರತದ ಧನವಂತರು ಬಡವರ ಗೋಳನ್ನು ಕಡಿಮೆ ಮಾಡಲು ಯತ್ನಿಸಿದರೆ, ನಮ್ಮ ದೇಶ ಎಷ್ಟು ಉನ್ನತ ಮಟ್ಟಕ್ಕೆ ಏರಬಲ್ಲದು ಗೊತ್ತೇ ಸುಶೀ"

"ನೀವು ಹೇಳುವದು ನಿಜ ಸುಂದರ್. ಆದರೆ ಸ್ವಾರ್ಥತೆಯನ್ನು ತೊರೆದು ದುಡಿಯುವ ದಾನಿಗಳು ಧನಿಕರಲ್ಲಿ ಇರುವರೇ ಎಂಬುದು ಸಂದೇಹ"

"ನಿನ್ನ ಮಾತೂ ನಿಜ. ಆದರೆ ಭಗವಂತನು ನಮ್ಮ ಜೀವನ ಪಥದಲ್ಲಿ ಹೊಸದೊಂದು ಕಿರಣವನ್ನು ನೀಡಿದ್ದಾನೆ. ಉಮರ್ ಖಯಾಂ ಕವಿ ಹೇಳಿರುವದನ್ನು ಕೇಳು ಸುಶಿ, 'ಹಿಂದೆಸೆಯ ಬಾಗಿಲಿನ ಬೀಗಕ್ಕೆ ಕೈಯಿಲ್ಲ. ಮುಂದೆಸೆಯ ತೆರೆಯೆತ್ತಿ ನೋಡಲಳವಲ್ಲ ಈ ಎಡೆಯೊಳ್ ಎರಡು ದಿನ ನೀವು ನಾವೆಂಬ ನುಡಿಯಾಡುವೆವು, ಬಳಿಕಿಲ್ಲ ನೀವು ನಾವುಗಳು.' ನಮ್ಮ ಈ ಎರಡು ದಿನದ ಬಾಳುವೆಯಲ್ಲಿ ಸಮಾಜ ಸೇವೆ ಮಾಡಬೇಕು.

"ತಿಳಿಯಿತು ಸುಂದರ್, ನಾನೂ ನಿಮ್ಮೊಡನೆ ಸಹಭಾಗಿನಿ. ಸಮಾಜ ಸೇವೆಯೇ ನಮ್ಮ ಧ್ಯೇಯವಾಗಿರಲಿ"

• • •

ಕೆಲವು ದಿನಗಳು ಉರುಳಿದವು. ಸುಂದರನು ಸಮಾಜ ಸೇವಾರಂಗದಲ್ಲಿ ಉನ್ನತ ಪದವಿಗೇರಿ ಗಣ್ಯ ವ್ಯಕ್ತಿ ಎನಿಸಿರುವನು. ಸುಂದರನ ಹೆಸರು ಕೇಳಿದೊಡನೇ ಗ್ರಾಮವಾಸಿಗಳೆಲ್ಲರೂ ತಲೆ ಬಗ್ಗಿಸಿ ತಮ್ಮ ಕೃತಜ್ಞತೆ ಸೂಚಿಸುವರು. ಸುಂದರನು ಎಷ್ಟು ಕೀರ್ತಿ, ಐಶ್ವರ್ಯಗಳನ್ನು ಗಳಿಸಿರುವನೋ ಅಷ್ಟೇ ಸೌಜನ್ಯ ಸರಳತೆಯಿಂದ ಜೀವನ ನಡೆಸುತ್ತಿರುವನು.

ಒಂದು ದಿನ ಸುಂದರನು ತನ್ನ ಕೆಲಸವನ್ನು ಮುಗಿಸಿಕೊಂಡು ಮನೆಗೆ ಹಿಂತಿರುಗುತ್ತಿರುವಾಗ ದಾರಿಯಲ್ಲಿ ಒಬ್ಬ ಹುಚ್ಚನು ಹುಚ್ಚು ಮಾತುಗಳನ್ನಾಡುತ್ತಿರುವದನ್ನು ಸುಂದರನು ನೋಡಿದನು.

"ಅಯ್ಯೋ ಈ ಪ್ರಪಂಚದಲ್ಲಿ ಎಲ್ಲಿಂದ ಎಲ್ಲಿಗೆ ಹೋದರೂ ಅನ್ಯಾಯವೇ ತಾಂಡವವಾಡುತ್ತಿದೆಯಲ್ಲಾ ಹ....ಹ....ಹ.... ಸ್ವಪ್ನಸುಂದರೀ,ಹೌದು, ಅವಳು ಸ್ವಪ್ನಸುಂದರಿಯೇ. ನನ್ನ ಬಾಳು ಒಂದು ಕನಸೇ"

ಯಾರು!....ಯಾರು!.... ಈ ಮನುಷ್ಯನು ಹುಚ್ಚನೇ? ಇಲ್ಲ, ಗೋಪಿಯ ಹಾಗೆ ಕಾಣುತ್ತಿದ್ದಾನೆ. ಹೌದು, ಸಂದೇಹವೇ ಇಲ್ಲ. (ಓಡಿ ಹೋಗಿ ಆ ಹುಚ್ಚನನ್ನು ತಬ್ಬಿಕೊಂಡು) ಗೋಪಿ.... ಗೋಪಿ, ಇದೇನು ಹೀಗಿದ್ದೀಯೇ!"

"ಯಾರು.... ಯಾರು, ಸುಂದರ್ ಅಲ್ಲವೇ ನೀನು? ಸುಂದರ್ ನನ್ನನ್ನು ಬಿಡು. ನಾನು ಮಹಾಪಾಪಿ. ನಿನ್ನ ಪವಿತ್ರ ಕರಗಳಿಂದ ಈ ಪಾಪಿಯನ್ನು ಮುಟ್ಟಬೇಡ. ಬಿಡು.... ಬಿಡು ಸುಂದರ್"

"ಇಲ್ಲ ಗೋಪಿ, ಖಂಡಿತ ನೀನು ನನ್ನನ್ನು ನೋಯಿಸಿಲ್ಲ. ಒಳ್ಳೆಯ ಪಾಠವನ್ನು ಕಲಿಸಿದೆ. ನಿನ್ನಿಂದ ನಾನು ಸಹನೆಯನ್ನು ಕಲಿತೆ. ಭಗವಂತನ ದೃಷ್ಟಿಯಲ್ಲಿ ಯಾರೂ ಪಾಪಿಗಳಲ್ಲ ಬಾ. ನನ್ನೊಡನೆ ಮನೆಗೆ"

* * *

ಸುಶೀ....ಸುಶೀ.... ಬೇಗ ಬಾಗಿಲು ತೆಗೆ.

'ಬಂದೆ....ಇವರು ಯಾರು ಸುಂದರ್'

'ನಾನು....ನಾನೊಬ್ಬ ಪಾಪಿ....ನನ್ನನ್ನು ಕ್ಷಮಿಸು ತಾಯಿ....'

'ಸುಶೀ....ಇವನೇ ನನ್ನ ಗೆಳೆಯ ಗೋಪಿ....ಬೇಗ ಒಳಗೆ ಹೋಗಿ ನೀರು ಕಾಯಿಸು....ಹಾಗೆಯೇ ಕಾಫಿಗಿಡು....

'ಸುಂದರ್, ನಿನ್ನಲ್ಲಿ ಕೆಲವು ವಿಷಯಗಳನ್ನು ಹೇಳಬೇಕು....'

'ನಿಧಾನವಾಗಿ ಹೇಳುವೆಯಂತೆ.... ಮೊದಲು ಸ್ನಾನಮಾಡು.

'ಇಲ್ಲ ಸುಂದರ್, ತಲೆಯ ಆ ಭಾರವನ್ನು ಕಳೆದುಕೊಂಡು....'

'ಸರಿ ಹೇಳು ಗೋಪಿ...'

'ಸುಂದರ್....ಆ ದಿನ ನೀನು ಸಹಾಯ ಕೇಳುವುದಕ್ಕೆಂದು ನನ್ನಲ್ಲಿಗೆ ಬಂದ ದಿನ....ನನ್ನೊಡನೆ ಒಬ್ಬ ಇದ್ದುದನ್ನು ನೋಡಲಿಲ್ಲವೇ ?'

'ಹೌದು....ಅವನೇ....ರಾಜು'

'ಹಾಂ! ಹೌದು ಸುಂದರ್, ಆ ರಾಜುವೇ ನನ್ನ ಈ ಸ್ಥಿತಿಗೆ ಕಾರಣ....ನನಗೆ ಒಬ್ಬ ವೇಶ್ಯಾ ಕನ್ಯೆಯನ್ನು ತೋರಿಸಿ, ಅವಳು ತನ್ನ ತಂಗಿಯೆಂದು ಹೇಳಿ, ನನ್ನ ಆಸ್ತಿ ಪಾಸ್ತಿಗಳನ್ನೆಲ್ಲಾ ಅವಳ ಹೆಸರಿಗೆ ಮಾಡಿಸಿ ನಂತರ ನನ್ನನ್ನು ಈ ದುಃಸ್ಥಿತಿಗಿಳಿಸಿ ಹೊರಗಟ್ಟಿದರು. ನಾನು ಹುಚ್ಚನಂತೆ ನನ್ನ ಸರ್ವಸ್ವವನ್ನೂ ಆ ಸ್ವಪ್ನಸುಂದರಿಗೆ ಧಾರೆಯೆರೆದು....ಈ ಸ್ಥಿತಿಗೆ ಬಂದೆ. ನೀನು ಸಹಾಯಬೇಡಿದಾಗ ನಿನ್ನನ್ನು ಓಡಿಸಿ ಈ ವೇಶ್ಯೆಗೆ ಹಣವನ್ನು ನೀರಿನಂತೆ ಸುರಿದೆ....ಈಗ ನನ್ನ ಕಣ್ಣುಗಳು ತೆರೆದವು.... ನೀನು ಹೋಗುವ ಮುನ್ನ ಹೇಳಿದ ಆ ಮಾತುಗಳು ಇನ್ನೂ ಮರೆತಿಲ್ಲ ಸುಂದರ್. ಕೊನೆಗೂ ನೀನು ಹೇಳಿದಂತೆಯೇ 'ಪುಂಗಿಯ ನಾದಕ್ಕೆ ಮರುಳಾದ ಹಾವಿನಂತಾದೆ ... ನನ್ನ ಹಲ್ಲುಗಳನ್ನು ಅವರು ಕಿತ್ತು ಹಾಕಿದರು....'

" ದದ್ದು ಆಯಿತು ನನ್ನೊಡನೆ ನೀನು ಇರು ನನ್ನ ಜೊತೆಯಲ್ಲೇ ಗ್ರಾಮೋದ್ಧಾರ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿಸಿಬಿಡುತ್ತೇನೆ"

* * *

'ಅಲ್ಲಾ ಕಾಫೀ ಆರಿ ಹೋಗ್ತಾ ಇದೆ....ಇನ್ನೂ ಮಾತಾಡ್ತಾನೇ ಇದ್ದೀರಲ್ಲಾ....ಸುಂದರ್ ಈ ಫೋಟೋನ ಅವರಿಗೆ ತೋರಿಸಲಿಲ್ಲವೇ ?'

'ನೋಡಿದ್ಯಾ ಮರ್ತೇ ಹೋಯ್ತು.... ಗೋಪಿ ಈ ಫೋಟೋ ನೋಡು....ಹುಡುಗಿ ಚನ್ನಾಗಿದ್ದಾಳಾ! ನಿನ್ನ ಮನಸ್ಸಿಗೆ ಒಪ್ಪಿದೆಯಾ.'

'ಹಾಂ! ಇದೇನು ಅಣ್ಣಾ ಇದು ಅತ್ತಿಗೆಯ ಫೋಟೋ ಅಲ್ಲವೇ ?'

'ಗೋಪಿ....ಈ ಹುಡುಗಿ ನನ್ನ ನಾದಿನಿ....ಇವಳೂ ನಮ್ಮ ಸುಶಿ ಹಾಗೇ ಇದ್ದಾಳೆ....ಅವಳ ಮಕ್ಕಳು ಅಂದ್ರು ಒಪ್ಪುತ್ತೆ. ಹಾಗಿದ್ದರೆ ಇಬ್ರೂ ನನ್ನ ಮದುವೆಯಾದಾಗಲೇ ಕೂಡ ನಂಗೇ ದಿಗ್ಭ್ರಮೆಹಿಡಿದು ಹೋಯ್ತು ನೋಡಪ್ಪ ಹೆಣ್ಣಿನ ಕಥೆಯ. ನಾನು ಹೆಚ್ಚಾಗಿ ಹೇಳೋದಕ್ಕೆ ಆಗೋದಿಲ್ಲ.......

'ಅತ್ತಿಗೇ ನೀವೂ ಸುಂದರನೂ ನನ್ನ ತಂದೆ ತಾಯಿಗಳು. ಬೀದಿಯಲ್ಲಿ ಬಿದ್ದಿದ್ದ ನನ್ನನ್ನು ಕರೆತಂದು ಒಬ್ಬ ಮನುಷ್ಯನನ್ನಾಗಿ ಮಾಡಿದಿರಿ. ಸಮಾಜದಲ್ಲಿ ತಲೆಯೆತ್ತಿ ಓಡಾಡುವಂತೆ ಮಾಡಿದಿರಿ....ನಿಮ್ಮ ಮನೆಯ ರತ್ನವನ್ನು ನನಗೊಪ್ಪಿಸಲು ಶ್ರಮಪಡುತ್ತಿದ್ದೀರಿ. ನಿಮ್ಮ ಪ್ರೀತಿ ಆಶೀರ್ವಾದಗಳು ನನ್ನ ಭಾಗ್ಯ.'

'ಹಾಗೆಲ್ಲಾ ಹೇಳಬೇಡಿ ಗೋಪಿ ಅಣ್ಣಾ. ಏನೋ ಕಷ್ಟ ಕಾಲವೆಂಬುದು ಎಲ್ಲರಿಗೂ ಬರುತ್ತದೆ....ಆಗ ಸೈರಣೆ ತಂದುಕೊಳ್ಳಬೇಕು....ಲೀಲನ್ನ ನೀವು ಒಪ್ಪಿದ್ದು ನಮ್ಮ ಭಾಗ್ಯ.'

ಹಿಂದೂಧರ್ಮ ಮತ್ತು ವಿಶ್ವಶಾಂತಿ.

ಲೇಖಕರು—ಡಾ. ಜೆ. ಸಿ. ಕುಮಾರಪ್ಪನವರು.

ಗಾಂಧೀಜಿಯವರ 'ಅಹಿಂಸೆ' ಮತ್ತು 'ಸತ್ಯ'ಗಳ ತತ್ವವು, ಹಿಂದೂಗಳು ಸಹಸ್ರಾರು ವರ್ಷಗಳಿಂದ ಶಾಂತಿಯ ಹಾದಿಯಲ್ಲಿ ಬೆಳೆಸಿಕೊಂಡು ಬಂದಿರುವ ಜೀವನ ಕ್ರಮದಲ್ಲೇ ಬಲವಾಗಿ ಬೇರೂರಿಕೊಂಡಿದೆ. ಆದುದರಿಂದ ಶಾಂತಿಗಾಗಿ ಗಾಂಧೀಜಿ ಹಾಕಿಕೊಟ್ಟ ಮಾರ್ಗವನ್ನು ತಿಳಿಯಬೇಕಾದರೆ ಈ ಪುರಾತನ ಹಿನ್ನೆಲೆಯನ್ನು ನಾವು ಪರಿಶೀಲಿಸಿ ನೋಡಬೇಕಾದುದು ಅವಶ್ಯಕ.

ಸತ್ಯವೇ ದೇವರು; ಮಾನವ ಬದುಕಿರುವುದರ ಉದ್ದೇಶ 'ಧರ್ಮ'ದ ಆಚರಣೆ, ಎಂದು ಹಿಂದುಗಳು ಭಾವಿಸಿದ್ದರು. ಅಷ್ಟೇ ಅಲ್ಲ, ಪ್ರತಿಯೊಂದು ಜೀವಿಗೂ—ಅದು ಜ್ಞಾನಯುತವಾಗಲಿ ಅಥವಾ ಜ್ಞಾನರಹಿತವಾಗಲಿ—ತನ್ನದೇ ಆದ ಒಂದು ನಿರ್ದಿಷ್ಟವಾದ 'ಧರ್ಮ'ವಿದೆ, ಉದ್ದೇಶವಿದೆ ಎಂಬುದು ಅವರ ಅಭಿಪ್ರಾಯ. ತನ್ನ ಮಾನವೀಯತೆಯನ್ನು ಶಾಂತಿಯ ಮೂಲಕ ವ್ಯಕ್ತಪಡಿಸುವುದೇ ಮಾನವನ ಧರ್ಮವಾಗಿದೆ. ಶಾಂತಿಯೇ ಮಾನವ ಜೀವನದ ಗುರಿ. 'ಧರ್ಮ' ಎಂಬುವಕ್ಕೆ ಸಾಮಾನ್ಯವಾಗಿ ಒಂದು ಮತ ಇಲ್ಲವೆ ಕರ್ತವ್ಯ ಎಂದು ಉದಾಸೀನವಾದ ಅರ್ಥ ಕೊಡುತ್ತಾರೆ. ಇದು ತಪ್ಪು. ಧರ್ಮವು ಅವೆರಡರ ಮೂಲಕ ಪ್ರಕಾಶನಕ್ಕೆ ಬರುತ್ತದೆಯೇ ಹೊರತು ಅಷ್ಟಕ್ಕೇ ಅದು ಸೀಮಿತವಾಗುವುದಿಲ್ಲ. ಗುಲಾಬಿ ಗಿಡದ ಉದ್ದೇಶ ಗುಲಾಬಿ ಹೂವುಗಳನ್ನು ಬಿಡುವುದು ಹೇಗೋ, ಹೂವುಗಳ ಉದ್ದೇಶ ಸುವಾಸನೆ ಬೀರುವುದು ಹೇಗೋ, ಹಾಗೆ, ಮಾನವನ ಬಾಳ್ವೆಯ ಉದ್ದೇಶ ಶಾಂತಿಯನ್ನು ಸ್ಥಾಪಿಸುವುದು. ಈ ಆಧಾರದ ಮೇಲೆ ಹೇಳುವುದಾದರೆ, ಹೂವು ಬಿಡುವುದೇ ಗಿಡದ 'ಧರ್ಮ,' ಸುವಾಸನೆ ಬೀರುವುದೇ ಹೂವಿನ 'ಧರ್ಮ,' ಶಾಂತಿಯೇ ಮಾನವನ 'ಧರ್ಮ;' ಯಾವುದರಿಂದ ಜಗಳ, ಅಶಾಂತಿಗಳು ಹುಟ್ಟುತ್ತವೆಯೋ ಅದೇ 'ಅಧರ್ಮ'

ಜೀವನದ ಆಧುನಿಕ ತತ್ವಜ್ಞಾನದ ಪರಿಣಾಮವಾಗಿ ಮಾನವನು ಇಂದು ಒಂದು (Economic animal) 'ಆರ್ಥಿಕ ಜೀವಿ'ಯಾಗಿದ್ದಾನೆ. ಈ ಸಿದ್ಧಾಂತದ ಪ್ರಕಾರ ಮಾನವನ 'ಧರ್ಮ' ಕೇವಲ 'ವಸ್ತು'ಗಳನ್ನು ತಯಾರಿಸುವ ಮಟ್ಟಕ್ಕಿಳಿದಿದೆ. ಇದರಿಂದಾಗಿ ಮಾನವ ಜೀವನದ ಗುರಿ ಅಧಃಪತನಕ್ಕಿಳಿದಿದೆ ಎನ್ನಬಹುದು. ಈ ಸಂದರ್ಭದಲ್ಲಿ ಹೇಳುವುದಾದರೆ, ಒಂದು ಯಂತ್ರದ ಗುರಿ ಅಥವಾ 'ಧರ್ಮ' ವಸ್ತುಗಳನ್ನು ತಯಾರಿಸುವುದೇ ಆದರೆ ಮಾನವನು ಇವಕ್ಕಿಂತಲೂ ಉದಾತ್ತನಾದವನು; ಮಾನವ ಜೀವನದ ಗುರಿ ಬಹಳ ಉನ್ನತವಾದುದು. ವಸ್ತುಗಳ ಸಂಗ್ರಹಣೆಯೇ ಜೀವನವಲ್ಲ. ಹೊಟ್ಟೆ ಹೊರೆಯುವುದೇ ಮಾನವನ ಗುರಿಯಲ್ಲ. ಬಗೆ ಬಗೆಯ ಮಾರಾಟ ವಿಧಾನಗಳು ಮತ್ತು ಹೊಸ ಜಾಹಿರಾತುಗಳ ಕೃತಕ ಒತ್ತಡಗಳಿಂದ ಬೇಕಿಲ್ಲದ ವಸ್ತುಗಳೆಲ್ಲಾ ಅವಶ್ಯಕತೆಗಳ ರೂಪ ತಾಳಿರುವುವಾದರೂ ಅವುಗಳ ಸಂಗ್ರಹಣೆಯೇ ಮಾನವ ಜೀವನದ ಗುರಿಯೆಂಬುದು ಶುದ್ಧ ತಪ್ಪು. ಇವರ ಪರಿಣಾಮವಾಗಿಯೇ ಇಂದು ಮಾನವನು ತನ್ನ ನಿಜವಾದ ಧರ್ಮವನ್ನು ಮರೆತು ಹೋಗುವಂತಾಗಿದೆಯಲ್ಲದೆ, ಸುಳ್ಳು ಬೆಲೆಗಳನ್ನೂ ಪ್ರಾಮುಖ್ಯತೆಯನ್ನೂ ಕೊಡಲಾರಂಭಿಸಿದುದರಿಂದ ಬಾಳಿನಲ್ಲಿ ಒಂದು ಅಪಾರವಾದ ಅವ್ಯವಸ್ಥೆಯು ತಲೆದೋರಿದೆ. ನಾವು ಶಾಂತಿಯನ್ನು ಪುನರುತ್ಥಾನಗೊಳಿಸಿ ರಕ್ಷಿಸಬೇಕಾದರೆ ನಮ್ಮ ಜೀವನಗಳಲ್ಲಿ ನಿರ್ದಿಷ್ಟ ನೆಲೆಯುಳ್ಳ ಮೂಲಭೂತ ಸುಧಾರಣೆಗಳಾಗಲೇಬೇಕು. ಇದಕ್ಕಾಗಿ ನಾವು ಇಂದು ಯಾವ ಪ್ರಾಸಂಗಿಕ ವಸ್ತುಗಳನ್ನು ಅತ್ಯಾವಶ್ಯಕಗಳೆಂದು ಆದರಿಸುತ್ತಿರುವೆವೋ ಅಂತಹವುಗಳನ್ನೆಲ್ಲಾ ತ್ಯಜಿಸಬೇಕಾದ ಅಗತ್ಯ ಸಂದರ್ಭವೂ ಒದಗಿ ಬಂದೀತು. ಧರ್ಮದ ಪುನರುತ್ಥಾನದ ಮೂಲಕ ಮಾತ್ರವೇ ವಿಶ್ವಶಾಂತಿಯು ಸಾಧ್ಯ.

ದುರ್ಬಲರನ್ನು ರಕ್ಷಿಸುವುದೇ ಬಲಶಾಲಿಯಾದವರ ಧರ್ಮ. ಸರ್ವಶಕ್ತವಾದ ಅಮೇರಿಕಾ, ಕೊರಿಯಾದಂತಹ ಸಣ್ಣ ಪುಟ್ಟ ರಾಷ್ಟ್ರಗಳ ವಿರುದ್ಧ ಕತ್ತಿ ಎತ್ತಿರುವುದು ಅಧರ್ಮ. ಹೀಗಿರುವಲ್ಲಿ ಅದು ಪಶುವರ್ಗಕ್ಕೆ ಸೇರುತ್ತದೆ. ಕೊಲ್ಲುವುದು ಹುಲಿಯ ಧರ್ಮವಾಗಿರಬಹುದು; ಆದರೆ, ಅದು ಮಾನವನ ಧರ್ಮವಲ್ಲ. ರಾಷ್ಟ್ರ ರಾಷ್ಟ್ರಗಳ ಮಧ್ಯೆ ಕದನಕ್ಕೆ ಅವಕಾಶ ಮಾಡಿರುವ ಮತ್ತು ಬೆಟ್ಟದಂತಹ ಪ್ರಮಾಣದ ನಿತ್ಯೋಪಯೋಗ ವಸ್ತುಗಳ ಕುರಿತಾದ ಜಂಝಾಟದ ಮಧ್ಯೆ ಮಾನವನ ವ್ಯಕ್ತಿತ್ವವನ್ನೇ ಹಾಳುಮಾಡಿರುವ ಈ ವಿಷವೃಕ್ಷವನ್ನು ತಡೆಯಲು ತಕ್ಕ ಚಿಕಿತ್ಸೆಯನು ನಾವು ಯೋಚಿಸಬೇಕು. ಇಲ್ಲವಾದರೆ ಮಾನವನು ಈ ಪರ್ವತ ಪ್ರಮಾಣದ ಭೌತಿಕ ಹುಚ್ಚಿಗೆ ಬಲಿಬಿದ್ದಿರುವ ಪರಿಸ್ಥಿತಿಯಿಂದ ಹೊರಬರಲು ವಿನಾಶಾತ್ಮಕ ಶಸ್ತ್ರಗಳ ಉತ್ಪನ್ನವನ್ನೇ ತನ್ನ ಮುಖ್ಯ ಗುರಿಯನ್ನಾಗಿ ಮಾರ್ಪಡಿಸುವ ಮಟ್ಟಕ್ಕಿಳಿಯುತ್ತಾನೆ. ಆಟಂ ಬಾಂಬಿನ ತಯಾರಿಕೆ ಎಂತಹ ವಿವೇಚನಾರಹಿತ ಕಾರ್ಯ. ಎಂತಹ ವಿವೇಕಶೂನ್ಯವಾದ ಹಾಳು ಹುಚ್ಚು, ಎಂದು ಒಂದಿಷ್ಟು ತಾಳ್ಮೆಯಿರುವ ಯಾರಾದರೂ ವಿವೇಕಿಗಳು ಯೋಚಿಸದೆ ಇರರು. ಹೀಗಿರುವಲ್ಲಿ ಹೈಡ್ರೋಜನ್ ಬಾಂಬ್ ಮತ್ತು ಕ್ರಿಮಿಯುದ್ಧಗಳ ವಿಷಯವಾಗಿ ಇನ್ನೇನು ಹೇಳಬೇಕು. ಹೀಗೆ ಮಾನವನು ತನ್ನ ಧರ್ಮವನ್ನು ಸಂಪೂರ್ಣವಾಗಿ ಮರೆತು ಹಿಂಸೆಯ ಘೋರಾರಣ್ಯದಲ್ಲಿ ಇಂದು ಹುಚ್ಚನಂತೆ ಅಲೆಯುತ್ತಿದ್ದಾನೆ. ಆದುದರಿಂದ ಮಾನವನ ತುಂಬುಜೀವನಕ್ಕೆ ಹಾದಿ ಮಾಡುವಂತಹ ವಿಷಯಗಳ ಕಡೆಗೆ ಮತ್ತು ವ್ಯಕ್ತಿತ್ವದ ಸಂಪೂರ್ಣ ವಿಕಾಸದ ಕಡೆಗೆ ನಾವು ಜೀವನ ಗಮನವನ್ನು ಹರಿಸಬೇಕಾಗಿದೆ. ಇದಕ್ಕಾಗಿಯೇ ಗಾಂಧೀಜಿ ಸತ್ಯ ಮತ್ತು ಅಹಿಂಸೆಯುತ ಜೀವನ ಮಾರ್ಗಗಳ ಶೋಧನೆ ನಡೆಸಿದರು.

ವಿಶ್ವಕ್ಕೆ ಇಂದು ಹತ್ತಿರುವ ರೋಗಕ್ಕೆ ಮುಖ್ಯವಾಗಿ ಆರ್ಥಿಕ ಕಾರಣಗಳೇ ಹೆಚ್ಚು. ಜೀವನದಲ್ಲಿ ಮಾನವನ ಮುಖ್ಯ ಗುರಿ ಏನೆಂಬುದನ್ನು ಮರೆತು ಅನಾವಶ್ಯಕ ಅಸಂಬದ್ಧ ವಿಷಯಗಳ ಕುರಿತಾಗಿ ನಾವು ತಲೆಕೆಡಿಸಿಕೊಳ್ಳುತ್ತಿದ್ದೇವೆ. ನಮಗಿಲ್ಲಿರುವ ಕೊಂಚ ಅವಕಾಶದಲ್ಲಿ, ಈ ಪರಿಸ್ಥಿತಿಯನ್ನು ವಾಸ್ತವವಾಗಿ ರಚನಾತ್ಮಕ ರೂಪದಲ್ಲಿ ಬಿಡಿಸಿ ನೋಡಿ ಅದರ ಪರಿಹಾರವನ್ನು ಕುರಿತ ಕೆಲವು ಸಲಹೆಗಳನ್ನು ಪರ್ಯಾಲೋಚಿಸಿ ಪರಿಶೀಲಿಸಲು ನಾನು ಈ ಮುಂದೆ ಪ್ರಯತ್ನಪಡುತ್ತೇನೆ.

ಧರ್ಮವು ನಮ್ಮನ್ನು ಶಾಂತಿಯ ಹಾದಿಗೊಯ್ದರೆ ಅಧರ್ಮವು ನಮ್ಮನ್ನು ಹಿಂಸೆಯ ಹಾದಿಗೊಯ್ಯುತ್ತದೆ. ಇಂದು ನಾವು ನೋಡುತ್ತಿರುವ ಜಗದ ಹಗರಣಗಳು ಒಂದಕ್ಕೊಂದು ಸಂಬಂಧವಿಲ್ಲದ ಘಟನೆಗಳಲ್ಲ. ಸಾಮಾನ್ಯ ಜನರು ಏನೂ ತಿಳಿಯದೆ ಮಾಡುವ ಅಸಂಖ್ಯಾತ ಸಣ್ಣ ಪುಟ್ಟ ಕಾರ್ಯಗಳೇ ಕೊನೆಯಲ್ಲಿ ಈ ಹಗರಣಗಳಾಗಿ ಪರಿಣಮಿಸುತ್ತವೆ ಎನ್ನಬಹುದು. ಯುದ್ಧದ ಘೋಷಣೆಗಾರಿಕೆಯನ್ನು ಸಾಮಾನ್ಯವಾಗಿ ನಾವು ಒಮ್ಮೆಲೇ ಹಲ ಕೆಲವು ನಾಯಕರೇ ಕಾರಣರೆಂದು ಅವರ ತಲೆಗೇ ಕಟ್ಟುತ್ತೇವೆಯಾದರೂ ನಿಜವಾದ ಕಾರಣಗಳನ್ನು ನಾವು ನಮ್ಮ ಅನುದಿನದ ಕಾರ್ಯಕಲಾಪಗಳಲ್ಲೇ ಕಾಣಬಹುದು. ಉದಾಹರಣೆಗಾಗಿ ಹೇಳುವದಾದರೆ, ಪಟ್ಟಣದ ಜನ ಹಾಲನ್ನು ಕೊಳ್ಳುವಾಗ, ಆ ಹಾಲು ಕೊಡುವ ಹಸುಗಳ ಕರುಗಳಿಗೆ ಸಾಕಷ್ಟು ಹಾಲು ದೊರೆತಿದೆಯೇ ಅಥವಾ ಕಾವಾಡಿಗನ ಮಕ್ಕಳಿಗೆ ಅವರ ಪಾಲಿನ ಹಾಲು ದೊರೆತಿದೆಯೇ? ಎಂಬುದನ್ನು ಕೇಳಿಕೊಳ್ಳುವುದಿಲ್ಲ. ನಾವು ಕೊಳ್ಳುವ ಹಾಲು ಕರುವಿನ ಪಾಲಿನ ಹಾಲಾಗಿದ್ದು ಅದನ್ನು ನಾವು ಕಸಿದುಕೊಂಡಿರಬಹುದು; ತಮಗಿಂತಲೂ ಮೊದಲಿಗೇ ಲಭಿಸಬೇಕಾಗಿದ್ದ ಮಕ್ಕಳ ಪಾಲೂ ಆಗಿರಬಹುದು. ಹೀಗಾಗಿ ನಮ್ಮ 'ಕೊಳ್ಳುವಿಕೆ' ಒಂದು ವಿಧದಲ್ಲಿ ಅಧರ್ಮವಾಗಿದ್ದು ಹಿಂಸೆಯ ದ್ಯೋತಕವಾಗಿರಬಹುದು; ಪರಿಣಾಮವಾಗಿ ಅಂತ್ಯದಲ್ಲಿ ಅದು ಜಗತ್ತಿನ ದುರಂತಕ್ಕೆ ಹಾದಿಯಾಗಬಹುದು. ಆದುದರಿಂದ ಕೊಂಡು ಬಳಸುವವನಿಗೂ, ಉತ್ಪತ್ತಿಮಾಡುವ ತಯಾರಕನಿಗೂ ಹಂಚಿಕೆಗಾರನಿಗೂ ಮಧ್ಯೆ ನಿಕಟಸಂಬಂಧವಿರುವುದೇ ಉತ್ತಮ ಪರಿಹಾರ ಮಾರ್ಗವೆಂದು ನಾವು ಮನಗಾಣುತ್ತೇನೆ. ಇದರ ಅರ್ಥ, ತಯಾರಿಕೆಯ ವಿಕೇಂದ್ರೀಕರಣ ಮತ್ತು ಸ್ವಯಂ ಸಮೃದ್ಧಿ ಯುದ್ಧಗಳ ಮೂಲ ಕಾರಣಗಳ ನಿವಾರಣೆಗೆ ಗಾಂಧೀಜಿಯ ಸಲಹೆಯೂ ಇದೇ ಆಗಿದೆ.

ಇಂದು ತಯಾರಿಕಾ ಕ್ಷೇತ್ರದಲ್ಲಿ ಒಂದೇ ಬಗೆಯ ನಿರ್ದಿಷ್ಟ ವಿಧಾನಗಳ ಮೂಲಕ ಅಪಾರ ಪ್ರಮಾಣದ ವಸ್ತುಗಳ ತಯಾರಿಕೆಯಾಗುತ್ತಿದೆ. ಇದಕ್ಕೆ ಬೇಕಾಗುವ ಕಚ್ಚಾ ಪದಾರ್ಥಗಳನ್ನು ಪ್ರಪಂಚದ ಮೂಲೆ ಮೂಲೆಯಲ್ಲಿರುವ, ಜನ ಹಿಂದುಳಿದಿರುವ ಪ್ರದೇಶಗಳಿಂದ ಒದಗಿಸಿಕೊಳ್ಳಲಾಗುತ್ತಿದೆ. ಇದೆಲ್ಲವೂ ಅಧರ್ಮಿಕವಾದವುಗಳು.

ಅದೇ ರೀತಿಯಲ್ಲಿಯೇ ಹಂಚಿಕೆಯೂ ಸಹ ಸ್ವಾಭಾವಿಕವಾದ ಅವಶ್ಯಕತೆಗಳ ಆಧಾರದ ಮೇಲೆ ನಡೆಯುತ್ತಿಲ್ಲ. ನಿತ್ಯೋಪಯೋಗದ ವಸ್ತುಗಳನ್ನು ಗೊತ್ತುಗುರಿಯಿಲ್ಲದ ರೀತಿಯಲ್ಲಿ ಅಸ್ವಾಭಾವಿಕವಾದ ಬಯಕೆಗಳನ್ನು ಕೃತಕ ವಿಧಾನಗಳ ಮೂಲಕ ಹೆಚ್ಚಿಸುವ, ಮಾರಾಟ ವಿಧಾನಗಳನ್ನು ಅನುಸರಿಸಿ ನಡೆಯುತ್ತಿದೆ. ಇದೂ ಸಹ ಅಧರ್ಮ. ಅಷ್ಟೇ ಅಲ್ಲದೆ ಹಿಂಸೆಯ ಮಾರ್ಗಕ್ಕೆ ಒಯ್ಯುತ್ತದೆ.

ಇಂದು ಬಳಕೆಯ ವ್ಯವಸ್ಥೆಯೂ ಸಹ ಬಳಸುವವನ ನಿಜವಾದ ಅವಶ್ಯಕತೆಗಳಿಗೆ ಹೊಂದಿಕೊಳ್ಳದೆ ತೀರಾ ಅಸಂಬದ್ಧವಾದ ರೀತಿಯಲ್ಲಿದೆ. ಅದು ತಯಾರಕನ ಮತ್ತು ಹಂಚಿಕೆದಾರನ ಹಿತಗಳಿಗೆ ಅಧೀನ. ಇದೆಲ್ಲವನ್ನೂ ಸುವ್ಯವಸ್ಥಿತ ಹಾದಿಗೊಯ್ಯಲು ಆಗಾಗ ಘರ್ಷಣೆಗಳೂ ಅನಿವಾರ್ಯ. ಇದೆಲ್ಲವೂ ಸಹ ಯುದ್ಧದಲ್ಲಿ ಕೊನೆಗೊಳ್ಳುತ್ತದೆ.

ಎಲ್ಲಿಯ ವರೆಗೆ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಗಳ ಹಿತಗಳು ಪ್ರಭಾವಶಾಲಿಗಳಾಗಿದ್ದು, ತಯಾರಿಕೆಯು ಕೇಂದ್ರೀಕೃತ-ಹಾಗೂ ನಿರ್ದಿಷ್ಟ ಮಾದರಿಗನುಗುಣವಾಗಿ ಮುಂದುವರಿಯುತ್ತಲಿರುತ್ತದೆಯೋ ಅಲ್ಲಿಯ ವರೆಗೆ ಯುದ್ಧಗಳು ಮಾನವ ಜೀವಿತದಲ್ಲಿ ಅನಿವಾರ್ಯವಾಗುತ್ತವೆ ಅಲ್ಲದೆ ಶಾಶ್ವತವಾದ ಶಾಂತಿಗಾಗಿ ನಡೆಯುವ ಪ್ರಯತ್ನಗಳೆಲ್ಲವೂ ವಿಫಲವಾಗುತ್ತವೆ.

ಈ ಮೂಲ ಕಾರಣಗಳ ದೆಸೆಯಿಂದ ವಿಶ್ವದ ವಾತಾವರಣ ಒಂದು ರೀತಿಯ ಭಯಕ್ಕೊಳಗಾಗಿದೆ; ತತ್ಫಲವಾಗಿ ಹಬ್ಬುತ್ತಿರುವ ಸಾಮಾಜಿಕ ನ್ಯಾಯದ ಪ್ರತಿಪಾದನೆಯಿಂದ ಸ್ವಾರ್ಥಹಿತಗಳ ಅವನತಿಯ ಭಯವೂ ವಾತಾವರಣವನ್ನು ತುಂಬುತ್ತಿದೆ. ಅಮೇರಿಕಾ ಖಾಸಗಿ ಸ್ವತ್ತು ಮತ್ತು ವೈಯಕ್ತಿಕ ಲಾಭವನ್ನೂ ಪ್ರತಿನಿಧಿಸಿದರೆ, ರಷ್ಯ, ಚೀಣ ಮತ್ತು ಇತರ ರಾಷ್ಟ್ರಗಳು ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯುತ್ತವೆ. ಅಮೇರಿಕದ ಕೈ ಹಿಡಿದವು ಕೇವಲ ಕೆಲವೇ ಸ್ವಾರ್ಥ ಹಿತಗಳು ನ್ಯಾಯಕ್ಕಾಗಿ ಉಕ್ಕಿ ಏರುತ್ತಿರುವ ಜನಕೋಟಿಯ ಎಚ್ಚೆತ್ತ ಉತ್ಸಾಹಕ್ಕೆ ಅಡ್ಡಿ ತಂದೊಡ್ಡಲು ಆಶಿಸುತ್ತಿವೆ. ಇಂದು ವಿಶ್ವವಿರುವ ಪರಿಸ್ಥಿತಿಯ ಒಟ್ಟು ಸಾರಾಂಶವನ್ನು ಭಟ್ಟಿಯಿಳಿಸಿ ಹೇಳುವದಾದರೆ, ವಿಶ್ವದ ಜನ ಜಾಗೃತಿಯನ್ನು ಎಲ್ಲೆಲ್ಲಿಯೂ,—ಎಂದರೆ ಕೊರಿಯಾ, ಚೀಣಾ, ಬರ್ಮಾ, ಇಂಡಿಯಾ, ಇರಾಕ್ ಮತ್ತು ಜೋರ್ಡಾನಿನಿಂ

ದ ಹಿಡಿದು ಪಶ್ಚಿಮ ಜರ್ಮನಿ ವರೆಗೂ ತಡೆಯಲು ಅಮೇರಿಕವು ಯತ್ನಿಸುತ್ತಿದೆ. ಈ ಧ್ಯೇಯ ಸಾಧನೆಗಾಗಿ ಈ ದೇಶಗಳಲ್ಲೆಲ್ಲ ಸ್ಥಾನ ಪಡೆಯಲು, ನಿಲ್ಲಲು, ನ್ಯಾಯ ಮಾರ್ಗದಿಂದಾಗಲೀ ಅನ್ಯಾಯವಾಗಿಯಾಗಲೀ, ಸಾಮ, ದಾನ, ಭೇಧ, ದಂಡೋಪಾಯಗಳಿಂದಾಗಲೀ, ನಂಬಿಕೆಯ ಮತ್ತು ಸಾಮಾಜಿಕ ಸೇವೆಯ ಸೋಗಿನಿಂದಾಗಲೀ —ಎಲ್ಲಾ ಮಾರ್ಗಗಳಿಂದಲೂ ಸ್ಥಳವನ್ನಾಕ್ರಮಿಸಿಕೊಳ್ಳಲು ಅವಿಶ್ರಾಂತ ಸತತ ಪ್ರಯತ್ನವನ್ನು ನಡೆಸುತ್ತಿದೆ. ನಮ್ಮನ್ನಾವರಿಸಿರುವ ಈ ಭಯಂಕರ ಪರಿಸ್ಥಿತಿಯಲ್ಲಿ ಜಾಗರೂಕರಾಗಿರುವ ನಾವು ಮುನ್ನೆಚ್ಚರಿಕೆಯಿಂದಿರಬೇಕಾದುದು ಅತ್ಯಾವಶ್ಯಕ.

ಎಂದ ಮೇಲೆ ಇದಕ್ಕೆ ಪರಿಹಾರೋಪಾಯವೇನು? ಇದರ ಕಾರಣಗಳೇ ತಪ್ಪಿಸಿಕೊಳ್ಳುವ ಉಪಾಯಗಳನ್ನೂ ತೋರಿಸುತ್ತವೆ. ಗಾಂಧೀಜಿಯವರು ತೋರಿಸಿಕೊಟ್ಟ ಸ್ವಪರಿಪೂರ್ಣತೆ ಮತ್ತು ತಯಾರಿಕಾ ವಿಕೇಂದ್ರೀಕರಣಗಳು ಇದರ ಪರಿಹಾರೋಪಾಯಗಳೆಂದು ನಮಗಾಗಲೇ ತಿಳಿದಿದೆ.

ಅದರಲ್ಲಿ ಮೊದಲನೆಯದನ್ನು ರಷ್ಯ ದೇಶವು ಆಚರಣೆಯಲ್ಲಿ ತಂದಿದೆ. ಸರ್ಕಾರವು ಹೊರದೇಶದ ವ್ಯಾಪಾರವೆಲ್ಲವನ್ನೂ ತಾನೆ ವಹಿಸಿಕೊಂಡಿರುವದಲ್ಲದೆ ತನ್ನ ಅಗತ್ಯ ವಸ್ತುಗಳೆಲ್ಲವನ್ನೂ ತನ್ನ ದೇಶದಲ್ಲಿಯೇ ತಯಾರಿಸುವದರ ಮೂಲಕ ರಷ್ಯಾ ದೇಶವು ಸ್ವಪರಿಪೂರ್ಣತೆಯನ್ನು ಆಚರಣೆಗೆ ತಂದು ಸಾಧಿಸಿವೆ. ಇದು ಸ್ವಾಗತಾರ್ಹವಾದುದು. ಆದರೆ ಅದೂ ಸಹ ಕೇಂದ್ರೀಕೃತ ಉತ್ಪನ್ನ ವಿಧಾನಗಳನ್ನು ಬಿಟ್ಟಿಲ್ಲ. ಕೇಂದ್ರೀಕೃತ ಉತ್ಪನ್ನ ವಿಧಾನವೂ ಸಹ ಘರ್ಷಣೆಗೀಡುಮಾಡುತ್ತದೆಂಬುದನ್ನು ನಾವು ಈಗಾಗಲೇ ಮನಗಂಡಿದ್ದೇವೆ.

ಅಂತರಾಷ್ಟ್ರೀಯ ಘರ್ಷಣೆಯ ವಿಷಯದಲ್ಲಿ ಅಮೇರಿಕಾವು ನೇರವಾಗಿ ಮುನ್ನಡೆಯುತ್ತಿರುವ ಕೊನೆಯ ಗುರಿ ಹಣದ ಹಿತವೇ ಹೊರತು ಬೇರೊಂದಲ್ಲ. ಶಾಶ್ವತವಾಗಿ ಬಾಳುವದೇ ನಮ್ಮ ಗುರಿಯಾದರೆ ನಾವು ಧಾರ್ಮಿಕ ಮಾರ್ಗಗಳನ್ನು ಅವಲಂಭಿಸಿ ಇಂತಹ ಮುನ್ನಡೆಗಳನ್ನು ತಡೆಹಾಕಬೇಕು. ಇಂತಹ ಸಂದರ್ಭದಲ್ಲಿಯೂ ಸಹ ಗಾಂಧೀಜಿ ಶತ್ರುವಿನೊಡನೆ ಸೆಣಸಲು ಅಂತ್ಯದಲ್ಲಿ ಸತ್ಯಾಗ್ರಹದಲ್ಲಿ ಕೊನೆಗೊಳ್ಳುವ ಅಹಿಂಸಾಯುತವಾದ ಅಸಹಕಾರ ಮಾರ್ಗವನ್ನು ಸೂಚಿಸಿದ್ದರು.

ಇದರ ಪರಿಣಾಮ ನಾವು ಶತ್ರುವಿನೊಡನೆ ಆರ್ಥಿಕ ಕ್ಷೇತ್ರದ ಎಲ್ಲಾ ವ್ಯಾಪಾರ ವ್ಯವಹಾರಗಳನ್ನೂ ಬಹಿಷ್ಕರಿಸಿ, ಶತ್ರುವನ್ನು ಉಳಿದ ಮಾನವ ಸಮಾಜದಿಂದ ಬೇರ್ಪಡಿಸುವದು. ಈ ಒಪ್ಪಿಗೆಯ ತತ್ವವನ್ನು ಅನುಸರಿಸಿ, ಎಲ್ಲಾ ರಾಷ್ಟ್ರಗಳೂ ಅಮೇರಿಕಾದ ವಸ್ತುಗಳಿಗೆ ಬಹಿಷ್ಕಾರ ಹಾಕಬೇಕೆಂದು ಒತ್ತಾಯಪಡಿಸುತ್ತೇವೆ. ಉದಾಹರಣೆಗೆ ಹೇಳುವದಾದರೆ ಈಗ ಭಾರತವು ಮೋಟಾರು ವಾಹನಗಳಾದಿಯಾಗಿ, ವಿದ್ಯುತ್ ಸಲಕರಣೆಗಳು, ಫೌಂಟನ್ ಪೆನ್ನುಗಳು, ಔಷಧಿಗಳು, ಸೌಂದರ್ಯೋಪಯೋಗಿ ಸಲಕರಣೆಗಳು ಮತ್ತು ಎಲ್ಲಾ ಬಗೆಯ ಬಳಕೆಯ ಸಾಮಾನುಗಳ ವರೆಗೂ ಅಮೇರಿಕಾ ತಯಾರಿಕೆಯ ವಸ್ತುಗಳಿಂದ ತುಂಬಿಹೋಗಿದೆ. ಆದುದರಿಂದ ಈ ವಸ್ತುಗಳ ಮೇಲೆ ಸುಟ್ಟುಗೋಲು ಹಾಕಿ ಪ್ರತಿಬಂಧಿಸಿದರೆ, ಈ ಕಾರ್ಯವು, ಅಮೇರಿಕಾ ಸರಕಾರವು ಬಲು ಬೇಗನೆ ಪ್ರಶ್ನೆ ತಂದುಕೊಳ್ಳುವಂತೆ ಮಾಡುತ್ತದೆ.

ನಮ್ಮಲ್ಲಿ ಪ್ರತಿಯೊಬ್ಬರೂ ಈ ಮಾರ್ಗವನ್ನು ಅನುಸರಿಸುವದರಿಂದ ಪ್ರತಿಯೊಬ್ಬರೂ ವಿಶ್ವಶಾಂತಿಗಾಗಿ ಬೆಂಬಲ ನೀಡಬಲ್ಲವರಾಗುತ್ತೇವೆ. ನಾವು ಈ ಭೂಲೋಕದಲ್ಲಿ ಎಂತಹ ದೊಡ್ಡ ರಾಷ್ಟ್ರಗಳ ಮುಂದೆಯೂ ಅಸಹಾಯಕರೆಂದು ಭಾವಿಸಬೇಕಾದುದಿಲ್ಲ. ಪ್ರತಿಯೊಬ್ಬರೂ ತಮ ತಮಗೆ ಸಾಧ್ಯವಾದಷ್ಟು ಅಳಿಲು ಸೇವೆ ಮಾಡಬಹುದು. ಇದು ಎಲ್ಲರಿಗೂ ಸದವಕಾಶ ಮಾತ್ರವಲ್ಲದೆ ಮುಖ್ಯ ಕರ್ತವ್ಯವೂ ಆಗಿದೆ. ವಿಶ್ವಶಾಂತಿಗಾಗಿ ಕೈಕೊಳ್ಳುವ ಈ ಮಹತ್ ಕಾರ್ಯಕ್ಕಾಗಿ ಸಂಯಮ ಮತ್ತು ತ್ಯಾಗಗಳು ಅತ್ಯಾವಶ್ಯಕ. ಯೋಚಿಸಿ ನೋಡಿ; ನಾವು ನಮ್ಮ ಕಾರ್ಯಭಾರವನ್ನು ಹೊರಲು ಸಿದ್ಧರಾಗಿದ್ದೇವೆಯೇ?

ಪ್ರತಿ ರಾಷ್ಟ್ರವನ್ನೂ ಪ್ರಪಂಚದ ಇತರ ಎಲ್ಲಾ ರಾಷ್ಟ್ರಗಳೊಡನೆ ನೈತಿಕ ಮತ್ತು ಪಾರಮಾರ್ಥಿಕಗಳ ಅತ್ಯುನ್ನತ ಮಟ್ಟದಲ್ಲಿ ವರ್ತಿಸಿ ಸಹಕರಿಸುವಂತೆ ವ್ಯವಸ್ಥೆ ಮಾಡಲು ಅಗತ್ಯವಾಗಿ ಬೇಕಾದ ಮೂಲ ಗುಣಗಳು ನಮ್ಮಲ್ಲಿವೆಯೆಂಬ ನಂಬಿಕೆಯ ಮೇಲೆ ಇದೆಲ್ಲವೂ ನಿಂತಿದೆ. ಶಾಂತಿ ಸ್ಥಾಪನೆ ಮತ್ತು ರಕ್ಷಣೆಗಾಗಿ ಶಸ್ತ್ರಾಸ್ತ್ರಗಳಿಗಿಂತಲೂ ನೀತಿ ನಡವಳಿಕೆಗಳನ್ನೇ ಅವಲಂಭಿಸುವಂತೆ ಮಾಡುವ ಯೋಧರನ್ನಾಗಿ ಮಾಡುವ ಸುಧಾರಿತ ವಿದ್ಯಾಭ್ಯಾಸವನ್ನು ಮಕ್ಕಳಿಗೆ ಕೊಡಬೇಕು. ಪರಸ್ಪರ ಸಹಕಾರ ಸಹಾನುಭೂತಿ ಮತ್ತು ಒಳ್ಳೆಯ ನಂಬಿಕೆಗಳನ್ನು ಅವಲಂಬಿಸಿರುವ ಇಂತಹ ಶಾಂತಿಯುತ ಬಾಂಧವ್ಯಗಳೇ ನಮ್ಮನ್ನು ಶಾಶ್ವತವಾದ ಶಾಂತಿಯೆಡೆಗೆ ಒಯ್ಯುತ್ತವೆ.

ಅಂತಹ ಒಂದು ವಿಶ್ವದಲ್ಲಿ, ದುರ್ಬಲರನ್ನು ಬಲಿಷ್ಠರು ಸೂರೆಗೊಳ್ಳುವದಿಲ್ಲ; ಹಿಂದುಳಿದಿರುವವರನ್ನು ಬಲವಾಗಿ ವ್ಯವಸ್ಥಿತರಾಗಿರುವವರು ತುಳಿಯುವದಿಲ್ಲ. ಮತ್ತು ಬಹಳವಾದ ಬಲವುಳ್ಳ ದೊಡ್ಡವರು, ಬಲವಿಲ್ಲದ ಸಣ್ಣವರನ್ನು ಕಬಳಿಸುವದಿಲ್ಲ. ಇಂತಹ ಮಾನವೀಯ ಬಾಂಧವ್ಯ ಮಾತ್ರವೇ ಭೂಲೋಕವನ್ನು ಶಾಂತಿಯ ಕಡೆಗೊಯ್ಯಬಲ್ಲುದು ಮತ್ತು ಮಾನವ ಮಾನವರಲ್ಲಿ ಪರಸ್ಪರ ನಂಬುಗೆಯನ್ನು ಬೆಳೆಸಬಲ್ಲುದು.

ವೀರಾಜಪೇಟೆಗೆ
‘ಕೊಡಗು’ ಏಜೆಂಟರು,
ಶ್ರೀ ಟಿ. ಎಸ್. ಗೋವಿಂದರಾಜು

ಕೊಡಗಿನಲ್ಲಿ ಸ್ವಾತಂತ್ರ್ಯೋತ್ಸವ.

ನಾಪೋಕ್ಲು.

ನಾಪೋಕ್ಲುನಾಡು ಸಹಕಾರ ಸ್ಟೋರಿನ ಮುಂದೆ ಧ್ವಜಾರೋಹಣ ಮಾಡಿದ ನಂತರ ಜಯಘೋಷದೊಡನೆ ಮೆರವಣಿಗೆ ನಡೆದು ಸ್ಟೋರು ಮಹಡಿಯಲ್ಲಿ ಸಭೆ ಸೇರಲಾಯಿತು.

ಶ್ರೀ. ಕೆ. ಎಸ್. ನಂಜುಂಡನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ. ಹರಿಜನರಿ ಕುಟ್ಟಿರವರಿಂದ ಪ್ರಾರ್ಥನೆಯಾಯಿತು. ನಂತರ ಶ್ರೀ. ಯಂ. ಯಂ ಸಾದಿಲಿಯವರು ಭಾರತಕ್ಕೆ ಸ್ವಾತಂತ್ರ್ಯವು ಯಾರಿಂದ ಒದಗಿತು ಮತ್ತು ಸ್ವಾತಂತ್ರ್ಯದ ಹಕ್ಕು ಎಲ್ಲರಿಗೂ ಇರಬೇಕಾಗಿದ್ದರೂ ಆಚರಣೆಯಲ್ಲಿರುವ ಕುಂದುಕೊರತೆಗಳನ್ನು ಹೇಳಿದರು. ಶ್ರೀ. ಎಂ. ಎಂ. ಮಾಚಯ್ಯನವರು—ಭಾರತದಲ್ಲಿ ಹಾಗೂ ಕೊಡಗಿನಲ್ಲಿ ಕೆಲವರು ಸ್ವಾತಂತ್ರ್ಯಕ್ಕೆ ಧಕ್ಕೆ ಬರುವ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ನಾವು ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಪ್ರಯತ್ನಿಸಬೇಕೆಂದು ಹೇಳಿದರು. ಶ್ರೀ. ಕೆ. ಎ. ಸೋಮಯ್ಯನವರು—ಭಾರತೀಯರಾದ ನಮ್ಮ ಕರ್ತವ್ಯವನ್ನು ಸರಕಾರಕ್ಕೂ ಹಾಗೂ ನಮ್ಮ ನಾಡಿಗೂ ಸಲ್ಲಿಸತಕ್ಕ ರೀತಿಯನ್ನೂ ಕುರಿತು ಮಾತಾಡಿದರು. ಶ್ರೀ. ಕೆ. ಟಿ. ಉತ್ತಯ್ಯನವರು ನಮ್ಮ ಸರಕಾರವನ್ನು ಬಲಗೊಳಿಸುವ ಮತ್ತು ಪ್ರಜೆಗಳಿಗೆ ಸಹಾಯಕರಾಗಿರಬೇಕಾದ ವಿಷಯಗಳನ್ನು ಮಾತಾಡಿದರು. ಅಧ್ಯಕ್ಷರು ಮಾತಾಡುತ್ತಾ ಕಾಂಗ್ರೆಸ್ ಸರಕಾರವು ಬಂದ ನಂತರ ಈ ವರೆಗೆ ನಡೆಸಿದ ಮಹಾತ್ಕಾರ್ಯಗಳನ್ನೂ ಮತ್ತು ಈ ಸರಕಾರವನ್ನು ಸ್ಥಿರಗೊಳಿಸಿ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ವಿಧಾನಗಳನ್ನೂ ಕುರಿತು ಮಾತಾಡಿದರು. ಜಯ ಪಾನದಿಂದ ಸಭೆ ಬರಕಾಸ್ತಾಯಿತು.

ಮಾದಿಕೇರಿ.

ಸ್ಥಳೀಕ ಹೈಸ್ಕೂಲು ಮತ್ತು ಮಿಡಲ್ ಸ್ಕೂಲುಗಳು ಸಹಕರಿಸಿ ಈ ದಿವಸವನ್ನು ಆಚರಿಸಿದರು. ಶ್ರೀ. ಕೆ. ಎಸ್. ನಂಜಪ್ಪನವರು ಧ್ವಜಾರೋಹಣವನ್ನು ಮಾಡಿದ ನಂತರ ಶಾಲಾ ಬಾಲಕಿಯರು ‘ಜನಗಣಮನ’ ಹಾಡಿದರು. ಆ ಮೇಲೆ ಶಾಲಾ ಹಾಲಿನಲ್ಲಿ ಸಭೆ ಜರುಗಿತು. ಶ್ರೀಮಾನ್ ಕೆ. ಕೆ. ಗಣಪತಿ ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಹಲವು ಮಹನೀಯರು ಮತ್ತು ಕೆಲವು ವಿದ್ಯಾರ್ಥಿಗಳು ಸ್ವತಂತ್ರ ದಿನದ ಮಹತ್ವವನ್ನು ಕುರಿತು ಭಾಷಣ ಮಾಡಿದರು. ‘ವಂದೇ ಮಾತರಂ’ ಹಾಡಿ ಸಭೆಯು ಬರಕಾಸ್ತಾಯಿತು.

ಸೋಮವಾರಪೇಟೆ

ನಾಡು ಕಚೇರಿಯ ಎದುರು ಧ್ವಜಾರೋಹಣವು ಕೊಡಗಿನ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಎನ್. ಆರ್. ಗೋಪಾಲಕೃಷ್ಣರವರಿಂದ ನಡೆಯಿತು. ನಂತರ ಸಾರ್ವಜನಿಕ ಸಭೆ ಸೇರಿ ಸ್ವಾತಂತ್ರ್ಯ ದಿನಾಚರಣೆಯ ಮಹತ್ವದ ಕುರಿತು ಭಾಷಣಗಳಾದವು.

ಫ್ರೇಜರ್‌ಪೇಟೆ

ಫ್ರೇಜರ್‌ಪೇಟೆಯ ಪುರನಿವಾಸಿಗಳೂ ಮಾಧ್ಯಮಿಕ ಶಾಲೆಯ ಉಪಾಧ್ಯಾಯ ವರ್ಗದವರೂ, ವಿದ್ಯಾರ್ಥಿಗಳೂ ಸ್ವಾತಂತ್ರ್ಯ ದಿನಾಚರಣೆಯನ್ನು, ಅತ್ಯಂತ ವಿಜೃಂಭಣೆಯಿಂದ ಆಚರಿಸಿದರು.

ಬೆಳಿಗ್ಗೆ ೯ ಗಂಟೆಗೆ ಶಾಲೆಯ ಆವರಣದಲ್ಲಿ ಶ್ರೀಮಾನ್. ಎಸ್. ಡಿ. ಜವರಪ್ಪನವರಿಂದ ಧ್ವಜಾರೋಹಣದ ನಂತರ, ಅಲಂಕೃತವಾದ ರಾಷ್ಟ್ರಪಿತರವರ ಭಾವಚಿತ್ರ ಮತ್ತು ರಾಷ್ಟ್ರಧ್ವಜ ಸಮೇತ ಜಯಘೋಷಗಳೊಡನೆ ಮೆರವಣಿಗೆಯು ಪೇಟೆ ಬೀದಿಯ ಮಾರ್ಗವಾಗಿ ನಾಡು ಕಚೇರಿಗೆ ಸೇರಿತು. ಅಲ್ಲಿ ಅಧಿಕಾರಿ ವರ್ಗದವರೂ ವಯಸ್ಕರ ಶಿಕ್ಷಣ ಶಾಲೆಯವರು ಮುಳ್ಳುಸೋಗೆ(?) ಗೋಡು ನಾಡು ಪಾರುಪತ್ತೆಗಾರರು ಶ್ರೀ ಬಿ. ಟಿ. ಕುಟ್ಟಪ್ಪನವರ ಕೋರಿಕೆ ಮೇರೆ ಸ್ಥಳೀಯ ನೋಟಿಫೈಡ್ ಏರಿಯದ ಉಪಾಧ್ಯಕ್ಷರಾದ ಶ್ರೀ ಎಸ್. ಎನ್. ಲಕ್ಷ್ಮಣಶೆಟ್ಟರಿಂದ ಧ್ವಜಾರೋಹಣವೂ, ಬಾಲಕಿಯರಿಂದ ರಾಷ್ಟ್ರಗೀತೆಯು ನಡೆಯಿತು. ನಂತರ ಗಣಪತಿ ದೇವಸ್ಥಾನದಲ್ಲಿ ಪೂಜೆಯನ್ನು ಮಾಡಿಸಿ ಎಲ್ಲರೂ ಶಾಲೆಯ ಆವರಣಕ್ಕೆ ಸೇರಿ ಶ್ರೀ ಎಸ್. ಎನ್. ಲಕ್ಷ್ಮಣಶೆಟ್ಟರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಮುಖ್ಯೋಪಾಧ್ಯಾಯಿನಿ ಶ್ರೀಮತಿ ಡಿ. ಕಾವೇರಮ್ಮ, ಶ್ರೀಗಳಾದ ಕೆ. ಎನ್. ಚಂದ್ರಶೇಖರ, ಡಿ. ದೇವಯ್ಯ ಮತ್ತು ಜನಾಬ್ ಜಮಾಲ್ ಸಾಹೇಬರುಗಳು ವಿಚಾರ ಪೂರಿತವಾದ ಭಾಷಣಗಳನ್ನು ಮಾಡಿದರು. ಅಧ್ಯಕ್ಷರು ಆಗಸ್ಟ್ ೧೫ರ ಮಹತ್ವವನ್ನು ಕುರಿತ ಸ್ವಾರಸ್ಯವಾದ ಪುಟ್ಟ ಭಾಷಣ ಮಾಡಿ ಎಲ್ಲರನ್ನೂ ವಂದಿಸಿದರು. ಎಲ್ಲರಿಗೂ ಸಿಹಿ ಹಂಚಿದ ನಂತರ ರಾಷ್ಟ್ರಗೀತೆಯೊಡನೆ ಸಭೆಯು ಬರಕಾಸ್ತಾಯಿತು.

ಈ ಸಮ್ಬಂಧ ಮಧ್ಯಾಹ್ನದ ಮೇಲೆ ವಾಲಿಬಾಲ್ ಪಂದ್ಯಾಟವನ್ನೂ, ತೆಂಗಿನ ಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆಗಳನ್ನೂ ಸಹ ನಡೆಸಲಾಯಿತು. ಗೆದ್ದವರಿಗೆ ಬಹುಮಾನ ವಿತರಣೆಯು ಶ್ರೀಮಾನ್ ಕೆ. ರಾಮರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಲಘು ಉಪಾಹಾರದೊಡನೆ ಕಾರ್ಯಕ್ರಮವು ಕೊನೆಗೊಂಡಿತು.

ಮಡಿಕೇರಿ

ಮಡಿಕೇರಿ ಮಾರ್ಕೆಟಿನಲ್ಲಿ ಕೆ.ಪಿ.ಸಿ.ಸಿ. ಕಾರ್ಯದರ್ಶಿ ಶ್ರೀ ಹಳ್ಳಿಕೇರಿಯವರಿಂದ ಧ್ವಜಾರೋಹಣ ನಡೆಯಿತು. ನಂತರ ಕೋಟೆಯ ಆವರಣದಲ್ಲಿ ೧೧ ಗಂಟೆಗೆ ಚೀಫ್ ಕಮಿಷನರು ಧ್ವಜಾರೋಹಣ ಮಾಡಿ ಪೋಲೀಸರ ಮತ್ತು ಎನ್. ಸಿ. ಸಿ. ಯವರ ಸೆಲ್ಯೂಟ್ ಸ್ವೀಕರಿಸಿದರು. ಮಧ್ಯಾಹ್ನ ೩॥ ಗಂಟೆಗೆ ಕಾವೇರಿ ಮಹಲ್‌ನಲ್ಲಿ ಗೃಹ ಮಂತ್ರಿ ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಗುದ್ಲೆಪ್ಪ ಹಳ್ಳಿಕೇರಿ ಮೊದಲಾದವರು ಭಾಷಣ ಮಾಡಿದರು.

ವೀರಾಜಪೇಟೆ

ಧ್ವಜಾರೋಹಣವು ಅ. ಕಮಿಷನರಾ ಶ್ರೀ ಐ. ಸಿ. ಸುಬ್ಬಯ್ಯನವರಿಂದ ನಡೆಯಿತು. ಮಧ್ಯಾಹ್ನದ ಮೇಲೆ ಸಾರ್ವಜನಿಕ ಸಭೆಯು ಕೊಡಗಿನ ಮುಖ್ಯ ಮಂತ್ರಿ ಶ್ರೀ ಸಿ. ಎಂ. ಪೂಣಚ್ಚನವರ ಅಧ್ಯಕ್ಷತೆಯಲ್ಲಿ ನಡೆಯಿತು. ಹಲವರು ಭಾಷಣಗಳನ್ನು ಮಾಡಿದರು. ಶ್ರೀ ಅನಂತಪದ್ಮನಾಭರಾಯ್ರ ವಾಚನ ಇತ್ತು.

ಬಿ. ಶೆಟ್ಟಿಗೇರಿ

ಬಿ. ಶೆಟ್ಟಿಗೇರಿ ಶಾಲೆಯಲ್ಲಿ ಧ್ವಜವಂದನೆ ಪ್ರಾರ್ಥನೆಗಳಾದ ಮೇಲೆ ಶ್ರೀ ಕೆ. ಜಿ. ಪೂವಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಶ್ರೀಗಳಾದ ಕೆ. ಎಂ. ಗೌರಮ್ಮ, ಕೆ. ಎಂ ಕಾರ್ಯಪ್ಪ, ಕೆ ಪಿ. ಬೆಳ್ಯಪ್ಪ, ಗೋಪಾಲಕೃಷ್ಣ, ಸಿ. ಸಿ ತಿಮ್ಮಯ್ಯ ಮೊದಲಾದವರು ಭಾಷಣ ಮಾಡಿದರು.

ತೊರೆನೂರು

ಈ ಗ್ರಾಮಸ್ಥರೂ, ಶಾಲಾ ಅಧ್ಯಾಪಕ, ವಿದ್ಯಾರ್ಥಿಗಳೂ, ವಯಸ್ಕರ ಶಿಕ್ಷಣ ಶಾಲೆಯ ವಿದ್ಯಾರ್ಥಿಗಳೂ ತೊರೆನೂರು ಶಾಲಾ ಆವರಣದಲ್ಲಿ ಸಭೆಸೇರಿದರು. ಸ್ವಾತಂತ್ರ್ಯ ದಿನದ ಮಹತ್ವ ಮತ್ತು ಜನತೆಯ ಕರ್ತವ್ಯದ ಕುರಿತು ಕೆಲವರು ಭಾಷಣ ಮಾಡಿದರು.

ಅಮ್ಮತ್ತಿ

ಬೆಳಗ್ಗೆ ೧೦–೩೦ ಗಂಟೆಗೆ ಅಮ್ಮತ್ತಿ ಶಾಲಾ ಮೈದಾನದಲ್ಲಿ ಕೊಡಗಿನ ಅಸಿಸ್ಟೆಂಟ್ ಕಮಿಷನರಿಂದ ಧ್ವಜಾರೋಹಣ ಮಾಡಲ್ಪಟ್ಟು ಅಮ್ಮತ್ತಿ ಟೌನಿನಲ್ಲಿ ಮೆರವಣಿಗೆ ಮಾಡಿ ಪುನಹ ಸದರಿ ಶಾಲಾ ಮೈದಾನದಲ್ಲಿ ಮಕ್ಕಳ ಮತ್ತು ಪಬ್ಲಿಕ್‌ನವರ ಓಟ ಮತ್ತು ತೆಂಗಿನಕಾಯಿಗೆ ಗುಂಡು ಹಾರಿಸುವ ಸ್ಪರ್ಧೆ ಆದನಂತರ ಮೇಲ್ಕಂಡ ಆ ಕಮಿಷನರ್ ಸಾಹೇಬರವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಪ್ರಾರ್ಥನೆ ಆದನಂತರ ಇನಾಂ ಹಂಚುವಿಕೆಯಾಗಿ, ಮೈಸೂರು ದೇಶಸ್ಥಾನದ ಶ್ರೀ ವಿಷಕಂಠೇಶಯ್ಯನವರಿಂದ ಸ್ವತಂತ್ರ ಭಾರತದ ಲಾವಣಿ ಹಾಡುಗಳಾದವು. ಶ್ರೀ ಕೆ. ಡಿ. ಅಚ್ಚಪ್ಪ ಮತ್ತು ಶ್ರೀ ಎನ್. ಎಂ ಅಚ್ಚಯ್ಯನವರಿಂದ ಭಾಷಣಗಳಾದವು. ಅಧ್ಯಕ್ಷ ಭಾಷಣವಾದ ನಂತರ, ಅಧ್ಯಕ್ಷರಿಗೂ, ಅತಿಥಿಗಳಿಗೂ, ಶಾಲೆಯನ್ನು ಬಿಟ್ಟು ಕೊಟ್ಟ ಶಾಲೆ ಹೆಡ್ ಮಾಸ್ಟರವರಿಗೂ ವಂದನೆಯಿಂದ ಸಭೆಯು ಬರಕಾಸ್ತಾಯಿತು.

ಈ ಸಮಾರಂಭಕ್ಕೆ ಅಮ್ಮತ್ತಿ ಪುರಪ್ರಜೆಗಳಿಂದ ಚಂದಾರೂಪವಾಗಿ ಜಮ ಬಂದ ಐವತ್ತೇಳು ರೂಪಾಯಿ ಎಂಟಾಣೆಯಲ್ಲಿ ಮಕ್ಕಳಿಗೆ ಮಿಠಾಯಿ ಹಂಚಲಿಕ್ಕೂ ಸ್ಪರ್ಧೆಯಲ್ಲಿ ಗೆದ್ದವರಿಗೆ ಇನಾಂ ಹಂಚಲಿಕ್ಕೂ, ವಾಲಗದವರಿಗೂ, ಆಳುಗಳಿಗೂ ಆದ ಖರ್ಚು ಐವತ್ತೈದು ರೂಪಾಯಿ ಒಂದಾಣೆ ವಜಾಜಾತ ಬಾಕಿ ಎರಡು ರೂಪಾಯಿ ಏಳಾಣೆ ಅಮ್ಮತ್ತಿ ಕಾಂಗ್ರೆಸ್ ಎಡ್‌ಹಾಕ್ ಕಮಿಟಿ ಆಫೀಸಿನಲ್ಲಿ ಡಿಪಾಜಿಟ್ಟು ಇಡಲಾಗಿದೆ.

ಈ ಪ್ರಪಂಚವು ಮನ ಬಂದಂತೆ ವರ್ತಿಸಲಿರುವ ರಂಗಸ್ಥಳವಲ್ಲ. ಪ್ರತಿ ಹೆಜ್ಜೆಯಲ್ಲಿಯೂ ಎಚ್ಚರಿಕೆ ಬೇಕು. ಸತ್ಯ, ನ್ಯಾಯ, ನೀತಿ, ಸಹನ, ಧ... ಬೆಳಕಿನಲ್ಲಿ ಹೆಜ್ಜೆ ಇಡುವವನು ಚಿರಂಜೀವಿಯಾಗುವನು. ಇದಕ್ಕೆ ವಿರೋಧ ವರ್ತಿಸುವವನು ಶೀಘ್ರ ನಾಶವಾಗುವನು.

ತನ್ನನ್ನು ಹಿಡಿತದಲ್ಲಿಟ್ಟು, ಕಲಂಕರಹಿತ ಕೆಲಸ ಮಾಡುವ, ಧರ್ಮಕ್ಕೆ ಹೆದರು ...ನುಷ್ಯನು ತನ್ನ ಈ ಎಚ್ಚರಿಕೆಯ ಕಾರಣ ಪರಮ ಪದ (ಮೋಕ್ಷ) ವನ್ನು ಪಡೆಯುವನು.

ವ್ಯಾಪಾರಿಯು ತನ್ನ ಸಂಪತ್ತಿನ ರಕ್ಷಣೆಗಾಗಿ ಸರ್ವ ತ್ಯಾಗ ಮಾಡಲು ಸಿದ್ಧನಿರುವಂತೆ ಸತ್ಯಶೀಲನು ತನ್ನ ನೀತಿ ನಡತೆಗಳಿಗಾಗಿ ಸರ್ವ ತ್ಯಾಗ ಮಾಡುವನು. ಸುತ್ತಲೂ ನೀರು ಆವರಿಸಿದ್ದರೂ ಸಮುದ್ರ ಮಧ್ಯದ ದ್ವೀಪವು ಯಾವ ರೀತಿ ನಿರ್ಭಿಗಂಜದೋ ಅದೇ ರೀತಿ ಇಂಥಾ ಮಾನವನು ಜಗತ್ತಿನ ಕೋಟಲೆಗಳಿಗೆ ತುತ್ತಾಗನು.

ಎತ್ತರದ ಕಲ್ಲಿನ ಮೇಲೆ ನಿಂತವನು ಯಾವ ರೀತಿ ಕೆಳಗಿರುವ ಕೆಸರು ಕೊಳಕುಗಳಿಂದ ನಿರ್ಲಿಪ್ತನೋ ಅದೇ ರೀತಿ ಜ್ಞಾನದ ಶಿಖರವೇರಿದವನು ಅಜ್ಞಾನದಿಂದ ಮುಕ್ತನು.

ಇಂದ್ರನೂ, ನಾವು ಪೂಜಿಸುವ ಹಲವಾರು ದೇವ ದೇವತೆಗಳೂ ಕೂಡ ಮಾನವರೇ! ಆದರೆ ಅವರು ಸತ್ಯ, ನೀತಿ, ನಡತೆ, ಧರ್ಮಗಳನ್ನು ಆಚರಿಸಿ ದೇವಾಂಶರಾಗಿದ್ದಾರೆ ಆದ್ದರಿಂದ ಮಾನವನು ಈ ದೇವ ಪಥವನ್ನು ಹಿಡಿದು ನಡೆದರೆ ಅವರಂತೆಯೇ ಚಿರಂಜೀವಿಯಾಗುವನು.

ಸತ್ಯವೆಂಬ ಅಮೃತವು ಸರ್ವಪಾವನವಾದುದು. ಸತ್ಯದ ಜ್ಞಾನದಿಂದ ಸರ್ವವೂ ಪವಿತ್ರವಾಗುವುದು. ಆದ್ದರಿಂದ ಸತ್ಯವನ್ನೇ ತನ್ನ ಸಂಪತ್ತಾಗಿ ಮಾಡಿಕೊಳ್ಳುವವನು ಮಾನವರಲ್ಲಿ ದೇವತಾ ಮನುಷ್ಯನಾಗುವನು.

ಸತ್ಯವೆಂಬುದು ಸ್ವಚ್ಛವಾಗಿ ಮೇಲೆ ಹಾರುವ ಜಲ ಬುಗ್ಗೆಯಂತೆ. ಅದು ಕೆಸರನ್ನೂ ಮಲಿನತೆಯನ್ನೂ ತೊಳೆದು ಎಂದಿನಂತೆಯೇ ಶುಭ್ರತೆಯಿಂದ ಹೊಳೆಯುವದು. ಆದ್ದರಿಂದ ಈ ಜಗಜ್ಜೀವನದಲ್ಲಿ ಸತ್ಯವೇ ದೇವರು. ಸತ್ಯವೇ ಧರ್ಮ.

ಕೊಡಗು ಸ್ಟೇಟ್ ಸ... ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00 000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ ...	,,	63,000
ಇತರ ನಿಧಿಗಳು ...	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಶೇಕಡ (Current Deposits)	ರೂ.	0–8–0
ಸೇವಿಂಗ್ಸ್ (ತಾ. 1—1—1953 ರಿಂದ)	,,	1–8–0
ನಿಯಮಿ (Fixed) 3 ರಿಂದ 11 ತಿಂಗಳ ಅವಧಿಗೆ	,,	1–8–0
1 ವರುಷ	,,	2–0–0
2 ವರುಷ	,,	2–8–0
3 ವರುಷ	,,	3–0–0
5 ವರುಷ	,,	3-12-0
10 ವರುಷ	,,	4–0–0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್ ಸೋಮಯ್ಯ, ಗೌ. ಕಾರ್ಯದರ್ಶಿ. ಕೆ. ಪಿ ಅಪ್ಪಯ್ಯ, ಪ್ರೆಸಿಡೆಂಟ್ & ಖಜಾಂಚಿ.

ಗೋಣಿಕೊಪ್ಪ.

ಇಲ್ಲಿಯ ಶಾಲಾ ವಿದ್ಯಾರ್ಥಿಗಳೂ, ಅಧ್ಯಾಪಕರೂ ಸಾರ್ವಜನಿಕರೂ ಸೇರಿ ಧ್ವಜಾರೋಹಣ ನಡೆದ ನಂತರ ಶ್ರೀ. ಕೊಂಗಾಂಡ ಗಣಪತಿಯವರು ಭಾಷಣ ಮಾಡಿದರು

ಕೊಡ್ಲಿಪೇಟೆ.

ಇಲ್ಲಿಯ ಹೈಸ್ಕೂಲ್ ಆವರಣದಲಿ ಶ್ರೀ. ಸಿ. ಕೆ. ಚೆನ್ನಯ್ಯನವರಿಂದ ಧ್ವಜಾರೋಹಣದ ನಂತರ ಮೆರವಣಿಗೆ ಪೂಜೆಗಳು ನಡೆದವು. ಶಾಲೆಯಲ್ಲಿ ಶ್ರೀ. ಎ. ಕೆ. ಮಹಂತಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಶ್ರೀಗಳಾದ ಕೆ. ಮಲ್ಲಪ್ಪ, ಯು. ಬಿ. ಮಲ್ಲಪ್ಪ, ಕೆ. ಕರಿಬಸಪ್ಪ, ಅಬ್ದುಲ್ ಗೌಸ್, ಅಬ್ದುಲ್ ಅಲಿ, ಬಿ. ಪಿ. ಜೋಯಪ್ಪ, ಮೊದಲಾದವರು ಭಾಷಣ ಮಾಡಿದರು.

ಸಂಪಾಜೆ.

ಧ್ವಜಾರೋಹಣದ ನಂತರ ಶ್ರೀ. ಎನ್ ಸಣ್ಣಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಭಾಷಣಗಳಾದ ನಂತರ ನೆರೆದವರಿಗೆ ಸಿಹಿತಿಂಡಿ ಹಂಚಲಾಯಿತು.

ಬೋಯಿಕೇರಿ

ಈ ಶಾಲೆಯಲ್ಲಿ ಶ್ರೀ ಎನ್ ಗಣಪತಿಯವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಸಮಿತಿಯವರೂ, ಸಾರ್ವಜನಿಕರೂ ಮತ್ತು ಶಾಲಾ ವಿದ್ಯಾರ್ಥಿಗಳೂ ಕೂಡಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಿದರು. ಭಾಷಣಗಳಾದನಂತರ ಮಕ್ಕಳಿಗೆ ಸಿಹಿ ತಿಂಡಿ ಹಂಚಿ ವಂದನಾರ್ಪಣೆಯಿಂದ ಸಭೆ ಮುಕ್ತಾಯವಾಯಿತು.

ನಾಪೋಕ್ಲು.

ನಾಪೋಕ್ಲು ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾದ ಶ್ರೀ. ಡಿ. ಎಸ್. ದೇವಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶಾಲಾ ಆವರಣದಲ್ಲಿ ಮುಖ್ಯೋಪಾಧ್ಯಾಯರಿಂದ ಧ್ವಜಾರೋಹಣವಾದ ನಂತರ ಅವರು ಆ ದಿನದ ಮಹತ್ವದ ಕುರಿತು ಮಾತಾಡಿದರು. ಶ್ರೀ. ಎಂ. ಪರಮೇಶ್ವರಯ್ಯನವರು ಭಾಷಣ ಮಾಡಿದರು.

For Sale.

Tenders addressed to Coorg Transport Ltd., are invited for the Purchase of Popular Motor Works Mercara, Coorg on or before 4 P. M. on 18-9-1953, Spare parts of all Vehicles worth about Rs. 26,000/- are in stock and may be inspected.

Managing Director,
for THE COORG TRANSPORT LTD.

ಜ್ಞಾನದೀಪ

(೧)

ಕಾರ್ಯಾವಶ್ಯ ವಿಮರ್ಶೆ ಊಟ ಮಾಡುವ ಅಭ್ಯಾಸದಂತೆ; ಕಪಟ ಬುದ್ಧಿಯ ಟೀಕೆ ಉಗುರು ಕಚ್ಚುವ ದುರಭ್ಯಾಸದಂತೆ.

(೨)

ತಲೆ ತುಂಬ ಮಿದುಳಿರುವದು ತಲೆಭಾರವಾಗುವ ಸಂಗತಿಯಲ್ಲ; ಊರು ತುಂಬ ವಿಚಾರಿಗಳಿರುವದು ಊರ ಸುಲಿಗೆಗೆಂಬ ಭಾವನೆಯಲ್ಲ.

(೩)

ಕಳಚಿ ಬಿದ್ದ ಹಲ್ಲು ಮತ್ತೆ ಕಚ್ಚುವದೆಂದರೆ ಹೇಗೆ? ಸ್ಥಾನ ತಪ್ಪಿದ ಅಧಿಕಾರಿ ಆ ಮೇಲೆ ದಬಾಯಿಸುವುದೆಂದರೆ ಹೇಗೆ?

— ನುಡಿಮುತ್ತು.

೨೧—೮—'೫೩ನೇ ಕೊಡಗು ಶುಕ್ರವಾರ.

ಶಾಂತಿ ದೂತರು.

ಕೊರಿಯಾದ ಯುದ್ಧ ಶಾಂತಿಯಾಗಿದೆ. ಅಲ್ಲಿಯ ಯುದ್ಧ ಕೈದಿಗಳ ಪುನರ್ನಿವೇಶನದ ಏರ್ಪಾಡುಗಳಾಗಿವೆ. ಆ ಸಂಧಾನ ಶರತುಗಳ ಮೇಲೆ ಯುದ್ಧ ಕೈದಿಗಳ ಜವಾಬ್ದಾರಿ ವಹಿಸಿ ಸಂಧಾನದ ಶರತುಗಳು ಯಾವುದೇ ಘರ್ಷಣೆ ಇಲ್ಲದೆ ಜಾರಿಯಲ್ಲಿ ಬರುವ ಜವಾಬ್ದಾರಿಯನ್ನು ಭರತ ಖಂಡವು ಹೊತ್ತಿದೆ. ಆ ಜವಾಬ್ದಾರಿಯ ಮೇರೆ ಹಿಂದೂದೇಶವು ಕೊರಿಯಾಕ್ಕೆ ಸುಮಾರು ಐದು ಸಾವಿರ ಯೋಧರ ಶಾಂತಿ ಸೇನೆಯನ್ನೂ, ಪ್ರತ್ಯೇಕ ರೆಡ್ ಕ್ರಾಸ್ ದಳವನ್ನೂ ಕಳುಹಿಸುವ ನಿರ್ಧಾರ ಮಾಡಿ ಆ ಸೇನೆಗಳು ಕೊರಿಯಾಕ್ಕೆ ಹೋಗಿವೆ. ಇದಕ್ಕೆ ಮೊದಲು ಹಿಂದೂ ದೇಶದ ಪರಿಶೀಲಕರ ತಂಡವೊಂದು ಶ್ರೀ ಆರ್. ಕೆ. ನೆಹರೂರವರ ಮುಂದಾಳ್ತನದಲ್ಲಿ ಕೊರಿಯಾಕ್ಕೆ ಹೋಗಿ ಅಲ್ಲಿಯ ಪರಿಸ್ಥಿತಿಯನ್ನು ಪರಿಶೀಲಿಸಿ, ಹಿಂದೂದೇಶದ ಶಾಂತಿ ಸೇನೆಯು ಅಲ್ಲಿಗೆ ಹೋಗಲು ತೊಂದರೆ ಇಲ್ಲವೆಂದು ಅಭಿಪ್ರಾಯ ಪಟ್ಟಿರುವರು.

ಅದೇ ರೀತಿ ಭಾರತೀಯ ಈ ಶಾಂತಿ ದಳವನ್ನು ಬೀಳ್ಕೊಡುವ ಮುನ್ನ ಭಾರತದ ಮುಂದಾಳುಗಳು ಅವರನ್ನು ಹರಸಿ ಕಳುಹಿಸಿರುವರು. ಪ್ರಾಮುಖ್ಯವಾಗಿ ಪಂಡಿತ ನೆಹರೂರವರು ಈ ದಳಕ್ಕೆ ಆಶೀರ್ವಾದವನ್ನೀಯುತ್ತಾ "ಪ್ರತಿಯೊಬ್ಬ ಯೋಧನೂ ಕೂಡ ಭರತ ಖಂಡದ ಅನಧಿಕೃತ ರಾಯಭಾರಿಯೆಂದು ತಿಳಿಯಬೇಕು. ಹಿಂದೂದೇಶದ ಹಿರಿಮೆಗೆ ತಕ್ಕಂತೆ ವರ್ತಿಸಬೇಕು. ಏರುತ್ತಿರುವ ಭಾರತೀಯ ಗೌರವಕ್ಕೆ ಚ್ಯುತಿ ಬಾರದಂತೆ ಪ್ರಯತ್ನಿಸಬೇಕು" ಎಂದು ಹೇಳಿರುವರು.

ಪಂಡಿತ ನೆಹರೂರವರು ಹೇಳಿದಂತೆ ಇವರು ಶಾಂತಿಯ ದೂತರೆಂದು ಹೇಳುವದರಲ್ಲಿ ಸಂಶಯವಿಲ್ಲ. ತಮ್ಮ ಶಾಂತಿ ಪ್ರಿಯತೆ ಸೇವಾತತ್ಪರತೆಯಿಂದ ಅವರು ಆದರ್ಶರಾಗಿ ವರ್ತಿಸುವರೆಂಬುದರಲ್ಲಿ ಸಂಶಯವಿಲ್ಲ.

ಬಾ. ಕೊರಿಯಾ ಯುದ್ಧ ಸಂಧಾನವಾಗಿ ಜಗತ್ತಿಗೆ ಕವಿದಿದ್ದ ಒಂದು ಗಂಡಾಂತರವು ದೂರವಾದುದು ಸರ್ವರಿಗೂ ಆನಂದದ ವಿಚಾರವಾಗಿದೆ. ಇಂಥಾ ಒಂದು ಪರಿಸ್ಥಿತಿಯನ್ನು ಕಾರ್ಯರೂಪಕ್ಕೆ ತಂದವರಲ್ಲಿ ಹಿಂದೂದೇಶದ ಪ್ರಯತ್ನವು ಪ್ರಾಮುಖ್ಯವಾಗಿದೆ. ರಷ್ಯಾದ ಪ್ರಧಾನ ಮಂತ್ರಿ ಮಲಂಕೋವ್‌ರವರೇ ಹೇಳುವಂತೆ ಸಂಧಾನ ಸಾಧನೆಗಾಗಿ ಭಾರತವು ಹೊತ್ತ ಜವಾಬ್ದಾರಿ ಮತ್ತು ಮಾಡಿದ ಪ್ರಯತ್ನವು ಚಿಕ್ಕದೇನಲ್ಲ. ಯಾವುದೇ ದಾರಿ ಕಾಣದೆ ಸಂದಿಗ್ಧ ಪರಿಸ್ಥಿತಿಯಲ್ಲಿದ್ದು ಯುದ್ಧ ಮುಂದುವರಿಯುತಿದ್ದಾಗ ಮಧ್ಯಸ್ಥಿಕೆ ವಹಿಸಿ, ಸಂಧಾನದ ಸೂಚನೆ ಹಾಗೂ ಶರತುಗಳನ್ನು ಮುಂದಿರಿಸಿ ಯುದ್ಧಾಸಕ್ತ ರಾಷ್ಟ್ರಗಳು ಒಂದು ಒಪ್ಪಂದಕ್ಕೆ ಬರುವ ಅವಕಾಶವನ್ನು ಮಾಡಿದುದು ಹಿಂದೂದೇಶ. ಆದ್ದರಿಂದ ಕೊರಿಯಾ ಸಂಧಾನದ ಕೀರ್ತಿಯು ಅದಕ್ಕೆ ಸಲ್ಲಬೇಕಿದೆ.

ಈ ಕೀರ್ತಿಯ ಜೊತೆಗೆ ಅದಕ್ಕೆ ಜವಾಬ್ದಾರಿಯೂ ಇದೆ. ಆ ಜವಾಬ್ದಾರಿಯನ್ನು ಅದು ಹೊತ್ತು ಇಂದು ತನ್ನ ಶಾಂತಿ ಸೇನೆಯನ್ನು ಕಳುಹಿಸಿದೆ. ಜಗತ್ತಿನ ಮಹಾ ರಾಷ್ಟ್ರಗಳ ಮಧ್ಯೆ ನಿಂತು ಅವರ ಬಿಕ್ಕಟ್ಟ ಘರ್ಷಣೆಗಳನ್ನು ತಡೆದು ಅವರಿಗೆ ಶಾಂತಿಯ ಪಾಟ ಹೇಳುವ ಸೌಭಾಗ್ಯ ಭಾರತಕ್ಕೆ ದೊರೆತಿದೆ. ಆ ಗೌರವವನ್ನು ಅದು ಉಳಿಸಿಕೊಂಡು ತನ್ನ ಜೀವನ ಜೀವಾಳವಾಗಿರುವ ಹಾಗೂ ಮಹಾತ್ಮರ ಮನಸ್ಸಿನ ಕಲ್ಪನೆಯಾಗಿದ್ದ ಜಗತ್ತಿನ ಶಾಂತಿಯನ್ನು ಸಾಧಿಸುವಲ್ಲಿ ಅದು ಜಯಪ್ರದಗೊಳಲಿ.

ವರ್ತಮಾನ.

ಪ್ಲಾಂಟರೂ, ವ್ಯಾಪಾರಿಗಳೂ ಆದ ಫ್ರೇಜರ್‌ಪೇಟೆಯ ಶ್ರೀ ಎಸ್. ಎನ್. ರಾಮಶೆಟ್ಟಿಯವರು ಕೊಡಗು ಸರಕಾರಿ ಕಾಲೇಜಿಗೆ ರೂ. ೬೦೦೦/ ದ ಒಂದು ಎಂಡೋಮೆಂಟನ್ನು "ಶ್ರೀ ರಾಮಶೆಟ್ಟಿ ಸ್ಕಾಲರ್‌ಶಿಪ್" ಎಂದು ಕೊಟ್ಟಿರುವರೆಂದೂ ಇದರಿಂದ ದೊರೆಯುವ ಬಡ್ಡಿಯಿಂದ ಹಿಂದುಳಿದ ಪಂಗಡದ ಕಾಲೇಜಿನಲ್ಲಿ ವ್ಯಾಸಂಗ ಮಾಡುವ ಯೋಗ್ಯ ವಿದ್ಯಾರ್ಥಿಗಳಿಗೆ ಎರಡು ವಿದ್ಯಾರ್ಥಿವೇತನ ಕೊಡಲು ಈ ವರ್ಷದಿಂದಲೇ ಏರ್ಪಾಡಾಗಿದೆಯೆಂದೂ ತಿಳಿಯಬರುತ್ತದೆ. ಶ್ರೀಯುತರು ಈ ಮೊದಲು ರೂ. ೨೫೦೦/ ಖರ್ಚಿನಿಂದ ಫ್ರೇಜರ್‌ಪೇಟೆ ಆಸ್ಪತ್ರೆಗೆ ಒಂದು ವಾರ್ಡನ್ನು ಕಟ್ಟಿಸಿ ಕೊಟ್ಟಿರುವರು.

ಮೂರ್ನಾಡು ಸ್ಪೋರ್ಟ್ಸ್ ಸಹಕಾರ ಸಂಘದ ಆಶ್ರಯದಲ್ಲಿ ಕೈಲ್ ಮೂಹೂರ್ತ ಹಬ್ಬವು ತಾ ೩-೯-೫೩ರಲ್ಲಿ ಪಾಂಡಾಣೆ ಬಯಲಿನಲ್ಲಿ ಬ್ರಿಗೇಡಿಯರ್ ಚೆಪ್ಪುಡೀರ ಪೊನ್ನಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವದು.

ಕೈಲ್ ಮೂಹೂರ್ತ ಹಬ್ಬದ ಸಂಬಂಧ ಬೆಪ್ಪುನಾಡಿನವರು ತಾ. ೩ರಲ್ಲಿ ಕಾಕೋಟುಪರಂಬು ಮೈದಾನದಲ್ಲಿ ಮಧ್ಯಾಹ್ನ ೧ ಗಂಟೆಯ ನಂತರ ಆಟೋಟಗಳ ಸ್ಪರ್ಧೆ ಏರ್ಪಡಿಸಿರುವರು.

ಉತ್ತರ ಪ್ರದೇಶದ ಕಳೆದ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಕಾನ್‌ಪುರದಲ್ಲಿರುವ ಕುಮಾರಿ ದೇವಣಿರ ಸೀತಾ ಪೊನ್ನಪ್ಪನವರು ತೇರ್ಗಡೆಯಾಗಿರುವರು.

ಮದ್ರಾಸಿನ ಎಲೆಕ್ಟ್ರಿಕ್ ಇಂಜಿನಿಯರಿಂಗ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿ ವಿಮಾನ ದಳಕ್ಕೆ ಸೇರಿದ ಶ್ರೀ ತೇಲಪಂಡ ಡಿ. ತಮ್ಮಯ್ಯನವರು ಬೆಂಗಳೂರಿನ ಏರ್ ಫೋರ್ಸ್ ಟೆಕ್ನಿಕಲ್ ಟ್ರೈನಿಂಗ್ ಕಾಲೇಜಿನಲ್ಲಿ ಸಿಗ್ನಲ್ಸ್ ಮತ್ತು ರಾಡರ್ ಇಂಜಿನಿಯರಿಂಗ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿ ಈಗ ಪೂನಾದಲ್ಲಿ ಪೈಲಟ್ ಆಫೀಸರರಾಗಿ ನೇಮಿಸಲ್ಪಟ್ಟಿರುವರು

ಕೊರಿಯಾ ಯುದ್ಧ ಕೈದಿ ಕಮಿಷನಿನ ಅಧ್ಯಕ್ಷರಾಗಿ ನೇಮಿಸಲ್ಪಟ್ಟಿರುವ ಮೇಜರ್ ಜನರಲ್ ತಿಮ್ಮಯ್ಯನವರು ಡೆಲ್ಲಿಗೆ ತಲಪಿರುವರು. ಕೊರಿಯಾದಲ್ಲಿ ಭಾರತದ ಸೈನಿಕರು ಹೋಗಿ ಕೈಕೊಳ್ಳಬೇಕಾದ ಕೆಲಸದ ಬಗ್ಗೆ ಅಲ್ಲಿಯ ಪರಿಸ್ಥಿತಿ ಹೇಗಿದೆಯೆಂದು ಪರಿಶೀಲಿಸಲು ಶ್ರೀ ಆರ್. ಕೆ. ನೆಹರೂರವರ ಮುಂದಾಳ್ತನದಲ್ಲಿ ಹೋಗಿದ್ದ ಸಮಿತಿಯು ಹಿಂದಿರುಗಿದೆ. ಜನರಲ್ ತಿಮ್ಮಯ್ಯನವರು ಶೀಘ್ರ ಕೊರಿಯಾಕ್ಕೆ ಹೋಗಲಿದ್ದಾರೆ.

ಕೊಡಗಿನ ಸಹಕಾರಿ ರಿಜಿಸ್ಟ್ರಾರವರಾಗಿ ನೇಮಕವಾಗಿರುವ ಮೈಸೂರಿನ ಶ್ರೀ ಗಿರಿಯಪ್ಪನವರು ತಾ. ೧೮ರಲ್ಲಿ ಮಡಿಕೇರಿಗೆ ಬಂದು ೨೦ರಲ್ಲಿ ಕೆಲಸದ ಚಾರ್ಜು ವಹಿಸಿಕೊಂಡಿರುವರು.

ತಾ. ೧೭ರಲ್ಲಿ ದೊಡ್ಡ ಕೊಡ್ಲಿ ಗ್ರಾಮದ ಒಂದು ಮನೆಯಲ್ಲಿ ಜೂಜಾಡುತ್ತಿದ್ದ ೧೭ ಜನರನ್ನು ಸೋಮವಾರಪೇಟೆ ಪೊಲೀಸರು ಬಂಧಿಸಿ ಮಡಿಕೇರಿಗೆ ತಂದು ತನಿಖೆ ನಡೆಯುತ್ತಿದೆ.

ಮಿಲಿಟರಿ ಎ. ಎಸ್. ಸಿ. (ಸಪ್ಲೈ ಶಾಖೆ) ಯಿಂದ ನಿವೃತ್ತರಾಗಿರುವವರ ಮಕ್ಕಳನ್ನು ಕಿಂಗ್ ಜಾರ್ಜ್ ಸ್ಕೂಲಿಗೆ ಸೇರಿಸಲು ಅರ್ಜಿಗಳನ್ನು ಸೆಪ್ಟೆಂಬರ್ ಹದಿನೈದನೇ ತಾರೀಖಿನೊಳಗೆ ಕಳುಹಿಸಬೇಕು. ಹೆಚ್ಚಿನ ವಿಷಯಗಳನ್ನು ಮತ್ತು ಅಪ್ಲಿಕೇಶನ್ ಫಾರಂಗಳನ್ನು ಡಿ. ಎಸ್. ಎಸ್. ಎ ಬೋರ್ಡಿನ ಸೆಕ್ರೆಟರಿಯವರ ಆಫೀಸಿನಲ್ಲಿ ಪಡೆಯಬಹುದು.

ಮಿಲಿಟರಿಯಿಂದ ನಿವೃತ್ತರಾಗಿರತಕ್ಕವರು ತಮ್ಮ ಡಿಸ್ಚಾರ್ಜ್ ಸರ್ಟಿಫಿಕೇಟಿನ ಎರಡನೇ ಪ್ರತಿಯನ್ನು ಹೊಂದಲು, ಕಳೆದುಕೊಂಡ ಅಥವಾ ಹಾಳಾದ ಕಾರಣಗಳನ್ನು ತಿಳಿಸಿ ತಮ್ಮ ಅರ್ಜಿಗಳನ್ನು ಹತ್ತಿರದ ಡಿ. ಎಸ್. ಎಸ್. ಎ. ಬೋರ್ಡಿನ ಮೂಲಕವಾಗಲಿ, ಸ್ಥಳದ ಪೋಲೀಸ್ ಆಫೀಸರ ಮೂಲಕವಾಗಲೀ, ಅಥವಾ ಸಂಬಂಧಪಟ್ಟ ರಿಕ್ರೂಟಿಂಗ್ ಆಫೀಸರ ಮೂಲಕವಾಗಲೀ ಶಿಫಾರಸ್ಸು ಮಾಡಿಸಿ ಕಳುಹಿಸಬೇಕು. ಶಿಫಾರಸ್ಸಿಲ್ಲದೆ ಕಳುಹಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವದು.

ತಿತಿಮತಿ ಫಾರೆಸ್ಟ್ ರೇಂಜಿನಲ್ಲಿಯ ಕೆಲಸಗಾರರಿಗಾಗಿ ಇಟ್ಟಿದ್ದ ದಾಸ್ತಾನು ರಾಗಿಯ ಲೆಕ್ಕ ಸರಿಯಿಲ್ಲವೆಂಬ ಗುಮಾನಿ ಮೇರೆ ಸರಕಾರಿ ಆಡಿಟರವರು ಚೆಕ್ಕು ಮಾಡಿದಲ್ಲು ಸುಮಾರು ೩೮ ಪಲ್ಲ ರಾಗಿ ಕಾಣೆಯಾಗಿದೆಯೆಂದು ಸುದ್ದಿ.

ವಾಟೆಕೊಲ್ಲಿಯಲ್ಲಿ ಫಾರೆಸ್ಟ್‌ಗಾರ್ಡಾಗಿರುವ ನಾಣಯ್ಯನವರ ಪತ್ನಿಯವರು ತಾ ೧೭ರಲ್ಲಿ ಚೂರಿಯಿಂದ ಕುತ್ತಿಗೆ ಕುಯಿದುಕೊಂಡು ಮರುದಿನ ವೀರಾಜಪೇಟೆ ಆಸ್ಪತ್ರೆಯಲ್ಲಿ ಮೃತಳಾದಳೆಂದು ವರ್ತಮಾನ.

ಮಡಿಕೇರಿಯಲ್ಲಿರುವ ಗೌಡಬೋರ್ಡಿಂಗ್ ಮನೆಯನ್ನು ಕಾಲೇಜು ಹಾಸ್ಟೆಲ್ ಮಾಡಬೇಕೆಂದು ಕೆಲವು ಮಹನೀಯರು ಪ್ರಕಟಿಸಿದ ಹಾಳೆಯ ಸಂಬಂಧ ಶ್ರೀ ಸಿ. ಡಿ. ಅಪ್ಪಯ್ಯನವರ ಮೇಲೆ ಸುಳ್ಳು ಅಪವಾದಗಳನ್ನು ಬೇರೆ ಪತ್ರಿಕೆಯಲ್ಲಿ ಪ್ರಕಟಿಸಿದ ಕಾರಣ ಶ್ರೀ ಅಪ್ಪಯ್ಯನವರು ಶ್ರೀಗಳಾದ ಚೆಟ್ಟಿಮಾಡ ತಿಮ್ಮಯ್ಯ ಮತ್ತು ಸೋಮಯ್ಯನವರ ಮೇಲೆ ಲಾಯರು ಮೂಲಕ ರಿಜಿಸ್ಟ್ರಿ ನೋಟೀಸು ಕೊಡಿಸಿರುವರೆಂದು ವರ್ತಮಾನ.

ಜನಾಬ್ ಅಬ್ದುಲ್ ಮಜೀದ್ ಖಾನ್‌ರವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ವೀರಾಜಪೇಟೆಯಲ್ಲಿ ನಡೆದು ದಿವಂಗತರಾದ ಶ್ರೀ ಎಂ. ಎಂ. ಸಿದ್ದೀಕರ ಅಕಾಲ ಮರಣಕ್ಕಾಗಿ ಸಂತಾಪ ಸೂಚಿಸಿದ್ದಲ್ಲದೆ ಅವರ ಕುಟುಂಬಕ್ಕೆ ದುಃಖ ಸಹನಾಶಕ್ತಿಯನ್ನು ದೇವರು ಯದುಪಾಲಿಸಲೆಂದು ಕರಾವ್ರುಗಳಾದವು.

ಅಮ್ಮತ್ತಿ ನಾಡು ಕಾರ್ಮಾಡು ಗ್ರಾಮದ ಶ್ರೀ ಕುಟ್ಟಂಡ್ರ ಕರುಂಬಯ್ಯನವರ ದನದ ಹಟ್ಟಿಗೆಯು ತಾ ೧೮ನೇ ಆದಿತ್ಯವಾರ ಮಳೆ ಮತ್ತು ಗಾಳಿಯ ಅನಾಹುತದಿಂದ ಬಿದ್ದು ೪ ಊಳುವ ಎತ್ತುಗಳು ಸತ್ತು ಹೋದವು. ಮತ್ತು ೪ ಹಸುಗಳಿಗೆ ಪೂರಾ ಜಖಂ ಆಗಿದೆ ಎಂದು ತಿಳಿದು ಬಂದಿದೆ.

ಹೀನ ಸುಳಿ

ಸಹಕಾರ ಸಂಘಗಳ ರಿಜಿಸ್ಟ್ರಾರಾಗಿದ್ದ ಶ್ರೀ ಪಿ. ಎಂ. ಚಂಗಪ್ಪನವರು ಕಳೆದ ಮೂವತ್ತು ವರ್ಷಗಳಿಂದ ಸಹಕಾರ ಚಳವಳಿಕ್ಕೆ ಮಾಡಿದ ಕೆಲಸ ಕಾರ್ಯಗಳ ಬಗ್ಗೆ ಅವರು ಕೊಡಗನ್ನು ಬಿಟ್ಟು ಹೋಗುವ ಕಾಲಕ್ಕೆ 'ಕೊಡಗು' ಪತ್ರಿಕೆಯಲ್ಲಿ ಪ್ರಶಂಸನಾರ್ಥದ ಒಂದು ಲೇಖನ ಬರೆದುದನ್ನು ಸಹಿಸಲಾರದೆ 'ಜನ್ಮಭೂಮಿ' ಪತ್ರಿಕೆಯಲ್ಲಿ ಕೆಲವು ಲೇಖಕರು ಅಬದ್ಧ ಬರೆದುದನ್ನು ಓದಿರುವೆನು ಈ ಲೇಖನಗಳಲ್ಲಿ ಕೋಮುವಾರು ಭಾವನೆಯನ್ನು ಹೆಚ್ಚಿಸುವ ದೃಷ್ಟಿಯ ವಿಚಾರಗಳೂ ಇವೆ. ಶ್ರೀ ಪಿ ಎಂ. ಚಂಗಪ್ಪನವರ ಕಾಲದಲ್ಲಿ ಕೊಡಗಿನ ಸಹಕಾರಪ್ರಗತಿ ಹೇಗಾಗಿದೆಯೆಂದೂ ಇಂಡಿಯಾ ಸರಕಾರದ ರಿಜರ್ವ್ ಬ್ಯಾಂಕಿನ ವರದಿಯ ಆಧಾರದ ಮೇಲೆ ಹೇಳಿದರೆ ಆ ಲೇಖಕರಿಗೆ ಹೊಟ್ಟೆ ಕಿಚ್ಚೇಕೆ? ಚಂಗಪ್ಪನವರು ಚೆನ್ನಾಗಿ ಕೆಲಸ ಮಾಡಿದ್ದಾರೆಂದರೆ ಅವರ ಹಿಂದೆ ರಿಜಿಸ್ಟ್ರಾರಾಗಿದ್ದವರು ಕೆಲಸ ಮಾಡಿಲ್ಲವೆಂದು ಅರ್ಥವಾಗುವದೇ? ಶ್ರೀ ಗುಸ್ತಾವ್ ಹಾಲರ್‌ರವರಾಗಲೀ, ಶ್ರೀ ಸಿ. ಸುಬ್ರಾಯರಾಗಲೀ ಕೆಲಸ ಮಾಡಿಲ್ಲವೆಂದು ಯಾರಾದರೂ ಹೇಳಿದರೇ?

ಒಬ್ಬರು ನಿವೃತ್ತರಾಗುವಾಗ ಇಲ್ಲವೇ ಬೇರೆಡೆ ಹೋಗುವಾಗ ಅವರು ಮಾಡಿದ ಕೆಲಸದ ವಿಚಾರ ಹೇಳಬೇಕಲ್ಲದೆ ಅವರಿಗಿಂತ ಹಿಂದಿದ್ದವರ ಚರಿತ್ರೆ ಬರೆಯುವ ಅವಶ್ಯಕತೆ ಎಲ್ಲಿದೆ? ಕೊಡಗು ಪತ್ರಿಕೆಯು ಸಹಕಾರ ಚಳವಳದ ಚರಿತ್ರೆ ಬರೆಯುತ್ತಿಲ್ಲವೆಂಬುದು ಆ ಲೇಖಕರ ಮಡ್ಡ ತಲೆಗೆ ಅರಿವಾಗುವದಿಲ್ಲವೆ? ಹಾಗೆ ಹಾಲರ್‌ರವರಿಂದ ಹಿಡಿದು ಇಂದಿರುವವರ ವರೆಗೆ ರಿಜಿಸ್ಟ್ರಾರವರು ಮಾಡಿದ ಕೆಲಸಗಳ ತುಲನೆ ಮಾಡುವ ಪ್ರಮೇಯವೇನಿದೆ? ಹಾಗೆ ಮಾಡಿದರೆ ಅದು ಸಾವಿರ ಪುಟದ ಗ್ರಂಥವಾಗುವದಲ್ಲದೆ ಪತ್ರಿಕೆಯಾಗದು.

ಮತ್ತೆ ಚಂಗಪ್ಪನವರು ಕೆಲಸ ಮಾಡಿದ್ದರೆ ಅವರು ವೇತನ ಪಡೆಯುವ ಅಧಿಕಾರಿಯಾಗಿ ಮಾಡಬೇಕಾದ ಕರ್ತವ್ಯ ಮಾಡಿರುವರಲ್ಲದೆ ಬೇರಲ್ಲವೆನ್ನುವದಾದರೆ ಅದೇ ರೀತಿ ವೇತನ ಅದಕ್ಕಿಂತಲೂ ಹೆಚ್ಚಿನ ಅನುಕೂಲತೆಗಳನ್ನು ಸರಕಾರದಿಂದ ಪಡೆದು ತಿಂಗಳ ದಿನ ಲೆಕ್ಕ ಮಾಡುವವರೆಷ್ಟಿಲ್ಲ? ಯಾರೇ ಇರಲಿ ಮಾಡಿದ ಕೆಲಸವನ್ನು ಪ್ರಶಂಸಿಸುವದರಲ್ಲಿ ತಪ್ಪೇನಿದೆ?

ಮತ್ತೆ ಆ ಲೇಖಕರ ಹೀನ ಸುಳಿಯಂತೆ ಅಲ್ಲಿಗೆ ಶ್ರೀ ಬೆಳ್ಯಪ್ಪನವರನ್ನು ತಗಲ ಹಾಕಿಕೊಂಡು ಅವರ ವಿಚಾರ ಒಂದೆರಡು ಟೀಕೆ ಮಾಡದಿದ್ದರೆ ಸಾಧ್ಯವಿಲ್ಲ. ಶ್ರೀ ಪಿ ಎಂ ಚಂಗಪ್ಪನವರ ಕೆಲಸಕ್ಕೂ, ಶ್ರೀ ಸಿ. ಎನ್. ವೆಂಕಪ್ಪಯ್ಯನವರ ನಿಧನಕ್ಕೂ ಶ್ರೀ ಪಿ. ಐ. ಬೆಳ್ಯಪ್ಪನವರ ಅಸ್ತಿತ್ವಕ್ಕೂ ಸಂಬಂಧವೇನು? ಯಾರು ಏನು ಮಾಡಿದರೂ ಏನು ಹೇಳಿದರೂ ಅದನ್ನು ಬೆಳ್ಯಪ್ಪನವರ ಮೇಲೆ ಒರಸಿ ಅವರಿಗೆರಡು ಚುಚ್ಚು ಮಾತಾಡದಿದ್ದರೆ 'ಜನ್ಮಭೂಮಿ'ಗಾಗಲೀ ಅವರ ಲೇಖಕರ ಬಳಗದವರಿಗಾಗಲೀ ತೃಪ್ತಿ ಇರಲಾರದೆಂಬುದಕ್ಕೆ ಇಂಥಾ ನೂರಾರು ಉದಾಹರಣೆಗಳನ್ನು ಕೊಡಬಹುದು.

ಮಹಾತ್ಮಾ ಗಾಂಧೀಜಿಯವರು ನಿಧನರಾದಾಗ ಒಂದು ಕಲಮಿನ ಅಗ್ರಲೇಖನ ಬರೆದ ಜನ್ಮಭೂಮಿ ಪತ್ರಿಕೆಯು ಶ್ರೀ ವೆಂಕಪಯ್ಯನವರ ನಿಧನದ ಕಾಲಕ್ಕೆ ನಾಲ್ಕು ಕಲಂ ಏಕೆ ಬರೆಯಿತೆಂಬುದು ನಮಗೂ ಗೊತ್ತಿದೆ. ಇಂದೂ ಕೂಡ ಸುಬ್ರಾಯ, ವೆಂಕಪಯ್ಯನವರೆಂದು ಬಾಯ್ಬಡಿಯುವವರ ಅರ್ಥವೂ ತಿಳಿದಿದೆ. ಈ ರೀತಿಯ ಲೇಖನಗಳು ಲೇಖಕರ ಹೀನ ಸುಳಿಯನ್ನೇ ಅಲ್ಲ ಕಾಂಗ್ರೆಸಿನ ಮುಖ ಪತ್ರವಾದ ಪತ್ರಿಕೆಯ ನೀತಿಯನ್ನೂ ಎತ್ತಿ ಹೇಳುತ್ತವೆ.

"ಸಹಕಾರಿ"

ಕಾಲೇಜ್ ಪ್ರಿನ್ಸಿಪಲರು.

ಕೊಡಗು ಸರಕಾರಿ ಕಾಲೇಜಿನ ಪ್ರಿನ್ಸಿಪಲರನ್ನು ಬೇರೆಡೆಗೆ ವರ್ಗಾಯಿಸುವರೆಂಬ ವರ್ತಮಾನವೊಂದು ದಟ್ಟದಾಗಿ ಹಬ್ಬಿದೆ. ಇದು ನಿಜವಿದ್ದರೆ ಇದರಷ್ಟು ವಿಷಾದಕರವಾದ ಸಂಗತಿ ಬೇರಿರಲಾರದು. ಕೊಡಗು ಸರಕಾರಿ ಕಾಲೇಜು ಸ್ಥಾಪಿತವಾದಂದಿನಿಂದ ದೊರೆತ ಆದರ್ಶ ಪ್ರಿನ್ಸಿಪಲರುಗಳಲ್ಲಿ ಮಿ. ಹಾಲ್‌ಮನರು ಒಬ್ಬರು. ಅವರನ್ನು ಹೇಗೋ ಹಾಗೆ ಮಾಡಿ ವರ್ಗಾಯಿಸಲಾಯಿತು. ಜನರು ಕೂಗಿಕೊಂಡರೂ ಕೇಳಲಿಲ್ಲ. ಮತ್ತೆ, ಕೊಡಗು ಸರಕಾರಿ ಕಾಲೇಜಿನ ಸುದೈವಕ್ಕೆ ಈಗಿನ ಪ್ರಿನ್ಸಿಪಲರು ದೊರೆತಿರುವರು. ಒಬ್ಬ ಪ್ರಿನ್ಸಿಪಲರಿಗಿರಬೇಕಾದ ಗುಣಗಳೆಲ್ಲ ಇವರಲ್ಲಿವೆಯೆಂಬುದನ್ನು ಎಲ್ಲರೂ ಒಪ್ಪುತ್ತಾರೆ ಆದರೆ ಇಂದಿನ ಯುಗದಲ್ಲಿ ಸತ್ಯ ನುಡಿಯುವ, ಯಾರ ಹಂಗಿಗೂ ಮಣಿಯದೆ ನಿಭಾರ್ಯದವಾಗಿ ಕೆಲಸ ಮಾಡುವವರಿಗೆ ಸ್ಥಳವಿಲ್ಲದಂತೆ ತೋರುತ್ತದೆ. ಇಲ್ಲದ ಪಕ್ಷ ಕಾಲೇಜಿನ ವಿದ್ಯಾರ್ಥಿಗಳಿಗೆಲ್ಲ ಪ್ರಿಯರಾಗಿಯೂ, ದಕ್ಷತೆಯಿಂದಲೂ ಕೆಲಸ ಮಾಡುತ್ತಿರುವ ಇವರನ್ನು ಕೊಡಗಿನಿಂದ ಕಳುಹಿಸುವುದೆಂದರೆ ಅರ್ಥವೇನು ? ಕೊಡಗಿನ ಕಾಲೇಜು ಇನ್ನೂ ಶೈಶವದಲ್ಲಿರುವ ಸಂಸ್ಥೆಯಾದ್ದರಿಂದ ಇಂಥಾ ದಕ್ಷರ ಮಾರ್ಗದರ್ಶನ ಅದಕ್ಕೆ ಬೇಕು. ಆದ್ದರಿಂದ ಇವರನ್ನು ಕೊಡಗಿನಿಂದ ಕಳುಹಿಸಿಬಿಡುವ ಅಭಿಪ್ರಾಯವೇನಾದರೂ ಸರಕಾರಕ್ಕಿದ್ದರೆ ಕೊಡಗು ಕಾಲೇಜಿನ ಹಿತದೃಷ್ಟಿಯಿಂದಲೂ, ಕಾಲೇಜ್ ವಿದ್ಯಾರ್ಥಿಗಳ ಅಭಿವೃದ್ಧಿಯ ದೃಷ್ಟಿಯಿಂದಲೂ ಅಂಥಾ ಯೋಚನೆಯನ್ನು ಬಿಡಬೇಕಾಗಿ ಸರಕಾರದಲ್ಲಿ ವಿನಂತಿ.

'ವಿದ್ಯಾಭಿಮಾನಿ'

॥ ಊ ಹಾ ಪೋ ಹ ॥

— ಮಾಡಿದವರು—ಶ್ರೀ " ಅ " —

ದಕ್ಷಿಣ ಭಾರತದ ಇಂದಿನ ಅತೀ ಪ್ರಾಮುಖ್ಯ ಪ್ರಶ್ನೆಯೆಂದರೆ ಭಾಷಾವಾರು ಪ್ರಾಂತರಚನೆ. ಸ್ವಾತಂತ್ರ್ಯ ಸಿಗುತ್ತಲೇ ನಮ್ಮ ಸರಕಾರವು ಈ ಪ್ರಶ್ನೆಯನ್ನು ಬಗೆಹರಿಸುವುದೆಂದು ಸ್ವಾತಂತ್ರ್ಯ ಪೂರ್ವ ಕಂಡ ಕನಸು, ಸ್ವಾತಂತ್ರ್ಯದ ನಂತರ ಗಾಳಿಗೋಪುರವಾಗಿಯೇ ಉಳಿಯಿತು ಬದಲು ಕೇಂದ್ರ ಸರಕಾರವು ಈ ಪ್ರಶ್ನೆಯ ಕೊಲೆಯ ಯತ್ನವನ್ನೇ ಮಾಡಿತ್ತು ಆದರೆ ಶ್ರೀ ಶ್ರೀರಾಮುಲುರವರ ಆತ್ಮ ಸಮರ್ಪಣೆಯಿಂದ ಈ ಸಮಸ್ಯೆಯು ಮೃತ್ಯುಂಜಯವಾಯ್ತು. ನಮ್ಮನ್ನಾಳುವ ವರ್ಗ ಮಣಿಯಬೇಕಾಯಿತು. ಇಂದು ನಾಳೆಯೊಳಗೆ ಆಂಧ್ರ ಪ್ರಾಂತ್ಯವು ಸ್ಥಾಪಿಸಲ್ಪಡುವುದು. ಕರ್ನಾಟಕ ಪ್ರಾಂತ್ಯ ರಚನೆಯೂ ಒಡನೆಯೇ ಆಗಬೇಕೆಂಬ ಚಳವಳವು ಕರ್ನಾಟಕದಾದ್ಯಂತ ಇಂದು ಬಿರುಸಿನಿಂದ ನಡೆಯುತ್ತಿದೆ. ಸತ್ಯಾಗ್ರಹ, ಉಪವಾಸ, ವನವಾಸಗಳ ಧಳ್ಳುರಿಯನ್ನು ಕನ್ನಡ ಜನತೆ ಹೊಕ್ಕು ಹೊರಡುತಿದ್ದಾರೆ.

ಕೊಡಗು ಕಾಂಗ್ರೆಸ್ ಮಾತ್ರ "ಮೌನಸ್ಯ ಕಲಹಂ ನಾಸ್ತಿ" ಎಂಬಂತೆ ಮೌನವ್ರತ ಧಾರಿಗಳಾಗಿದ್ದಾರೆ. ಇಂದಿನ ಕಾಂಗ್ರೆಸ್ ಮುಖಂಡರು ಚುನಾವಣೆಯ ಮುಂಚೆ ಕೊಡಗಿನ ವಿಲಯನದ ತದ್ದ್ವಾರಾ ಭಾಷಾವಾರು ಪ್ರಾಂತ್ಯ ರಚನೆಯ ಚಳವಳದ ಪ್ರಮುಖ ನಾಯಕರಿದ್ದರು. ಅಂಥವರ ಇಂದು ಭಾಷಾವಾರು ಪ್ರಾಂತ್ಯ ರಚನೆ ಉದಿಸಿ ಬರುವ ಈ ಶುಭ ಮುಹೂರ್ತದಲ್ಲಿ ಈ ಮೌನ, ನಿಷ್ಕ್ರಿಯತೆಗೆ ಕಾರಣ ? ಈ ಮೌನದ ಅಂತರಾಳದಲ್ಲೇನಿದೆ ಎಂಬ ಕೇಳ್ವಿಕೆ, ನಾನಾ ಊಹಾಪೋಹೆಗೆ ಕಾರಣವಾಗಿದೆ.

ಕೆಲವರ ಊಹೆ ಮೇರೆಗೆ ಇಂದಿನ ಇವರು ಅಧಿಕಾರಾರೂಢರಾಗುತ್ತಲೇ, ಎಂದೆಂದೂ ಅಧಿಕಾರದಲ್ಲಿರಬಹುದಾದುದರಿಂದ ಕೊಡಗು ಪ್ರತ್ಯೇಕವಾಗಿಯೇ ಇರಲಿ ಎಂಬ ಆಶೆ. ಅದಕ್ಕಾಗಿ ಭಾಷಾವಾರು ಪ್ರಾಂತ್ಯ ರಚನೆಗೆ ಒತ್ತಾಸೆ ಇಲ್ಲ, ಅದಕ್ಕಾಗಿಯೇ ಈ ಮೌನ ನಿಷ್ಕ್ರಿಯತೆ.

ಕಾಂಗ್ರೆಸ್ಸಿನ ಇಂಗಿತವನ್ನು ಅಧಿಕೃತವಾಗಿ ತಿಳಿಸಲು ನನಗೆ ಅಧಿಕಾರವಿಲ್ಲ. ಆದರೆ ಊಹಾಪೋಹೆಗೆ ಯಾವ ಲೈಸನ್ಸ್ ಅವಶ್ಯ ಇಲ್ಲದುದರಿಂದ, ನನ್ನ ಈ ಊಹೆ. ಅದರ ಮೇರೆಗೆ ಮೇಲಿನ ಊಹೆ ಸರಿಯಲ್ಲ. ಬೇಟೆಯನ್ನು ಅಟ್ಟಿ ಹಿಡಿಯಲು ಸಹಕರಿಸಿ ಸಿಕ್ಕಿದ ಬೇಟೆಯನ್ನು ಯಜಮಾನನ ಬರುವಿಕೆಯನ್ನು ಇದಿರು ನೋಡುತ್ತಾ ಸದ್ದಿಲ್ಲದೆ ಕಾಯುತ್ತಿರುವ ಬೇಟೆಯ ನಾಯಿಯಂತೆ, ತಮ್ಮ ಪಾಲಿನ ಕರ್ತವ್ಯವನ್ನು ನಿರ್ವಹಿಸಿ ಕರ್ನಾಟಕ ಪ್ರಾಂತೀಕರಣದ ಶುಭ ಮುಹೂರ್ತವನ್ನು ಕೊಡಗು ಕಾಂಗ್ರೆಸ್ ಕಾಯುತ್ತಿರುವದೆಂದೇ ನನ್ನ ಊಹೆ. ಈ ಊಹೆಗೆ ಕೆಳಗಿನ ಕಾರಣ ಕೊಡಬಲ್ಲೆ.

೧ ಕೊಡಗು ಅಖಂಡ ಕರ್ನಾಟಕ ಪ್ರತ್ಯೇಕವಿರಬೇಕೆಂಬ ತತ್ವವನ್ನು ತಮ್ಮ ಗೊತ್ತುಗುರಿಯನ್ನಾಗಿಟ್ಟು ಚುನಾವಣೆಯಲ್ಲಿ ಸ್ಪರ್ಧಿಸಿದ ಪ್ರತ್ಯೇಕ ಪಕ್ಷವನ್ನು ಟೊಂಕ ಕಟ್ಟಿ ಸೋಲಿಸಿದ್ದು.

೨. ಚುನಾವಣೆಯ ನಂತರ ಪ್ರತ್ಯೇಕ ಪಕ್ಷದ ಮುಂದಾಳುಗಳು ಕಾಂಗ್ರೆಸ್ಸನ್ನು ಸೇರಲು ಪ್ರಯತ್ನಿಸಿದ್ದನ್ನು ನಿರಾಕರಿಸಿದ್ದು.

೩. ಕಾಂಗ್ರೆಸ್ಸಿನ ಚತುಸ್ತೋಣದೊಳಗಿದ್ದು ಕರ್ನಾಟಕ ಪ್ರಾಂತೀಕರಣಕ್ಕಾಗಿ ಭಗೀರಥ ಪ್ರಯತ್ನವನ್ನು ಮಾಡುತ್ತಿರುವ ಶ್ರೀ ನಿಜಲಿಂಗಪ್ಪನವರಿಗೆ ಏನೊಂದೂ ತೊಡಕನ್ನು ಒಡ್ಡದೆ ಇರುವುದು.

೪. ಪ್ರತ್ಯೇಕವಾದಿಗಳು ಕರ್ನಾಟಕ ಪ್ರಾಂತೀಯ ಕಾಂಗ್ರೆಸಿನೊಂದಿಗೆ ಜಗಳವಾಡುತ್ತಿರುವಲ್ಲಿ, ಇವರು, ಕೆ. ಪಿ. ಸಿ. ಯೊಂದಿಗೆ ಮಧುರ ಬಾಂಧವ್ಯವನ್ನು ವೃದ್ಧಿಗೊಳಿಸುತ್ತಾ ಸಂಪೂರ್ಣ ಸಹಕಾರ ಸೌಹಾರ್ದತೆಯನ್ನು ನೀಡುತ್ತಿರುವುದು.

೫. ಪಾರ್ಲ್ಯಾಮೆಂಟಿನಲ್ಲಿ ರಾಜಕೀಯ ಪತ್ತಿನಲ್ಲಿ ಕೊಡಗನ್ನು ಮದ್ರಾಸಿನೊಂದಿಗೆ ವಿಲಯನ ಮಾಡಬೇಕೆಂದು ಬಂದ ಠೀವಿಯನ್ನು ಒಡನೆ ಪ್ರತಿಭಟಿಸಿದ್ದರೂ, ಆಗಿಂದಾಗ್ಗೆ ಅಲ್ಲಲ್ಲಿ ಜರುಗುತ್ತಿರುವ ಏಕೀಕರಣ ಪರಿಷತ್ತುಗಳಲ್ಲಿ ಕೊಡಗನ್ನು ಕರ್ನಾಟಕದೊಂದಿಗೆ ಸೇರಿಸಬೇಕೆಂಬುವ ಗೊತ್ತುವಳಿಯನ್ನು ವಿರೋಧಿಸದಿರುವುದು.

೬. ರಾಷ್ಟ್ರದ ಮುಂದಾಳುಗಳು ಆಗಿಂದಾಗ್ಗೆ 'ಕ' ವರ್ಗದ ಪ್ರಾಂತ್ಯಗಳನ್ನು ನೆರೆ ಪ್ರಾಂತ್ಯದಲ್ಲಿ ವಿಲಯನಗೊಳಿಸಬೇಕೆಂಬುದಾಗಿ ಕೊಡುತ್ತಿರುವ ಹೇಳಿಕೆಯನ್ನು ಪ್ರತಿಭಟಿಸದಿರುವುದು.

೭. ಗಜೆಟೆಡ್ ಆಫೀಸರುಗಳನ್ನು ಮೈಸೂರಿನೊಂದಿಗೆ ವರ್ಗಾವರ್ಗ.

ಇವನ್ನು ಮನಸ್ಸಿಗೆ ತಂದುಕೊಂಡಲ್ಲಿ ಕೊಡಗು ಕಾಂಗ್ರೆಸ್ಸಿನ ಕೈಯಲ್ಲಿ ಕನ್ನಡ ನಾಡಿನ ಪ್ರಶ್ನೆಯು ಅರಗಿಣಿಯಂತೆ ರಕ್ಷಿಸಲ್ಪಡುತ್ತಿದೆ, ಎಂದು ಊಹಿಸಬಹುದಲ್ಲವೇ ? ಈ ಊಹೆಯೇ ನಿಜವಾಗಬೇಕು.

ಪಂಡಿತ ನೆಹರೂರವರ ವಿದೇಶ ರಾಜನೀತಿ.

ತಾ. ೧೪ರ 'ಕೊಡಗು' ಪತ್ರಿಕೆಯಲ್ಲಿ ಶ್ರೀ ಬಿ. ಡಿ. ಗಣಪತಿಯವರು "ನಿನಗಿಲ್ಲಿ ಸ್ಥಳವಿಲ್ಲ ಬಾಪು" ಎಂಬ ಶಿರೋನಾಮೆಯಲ್ಲಿ ಈಗ ಅಧಿಕಾರದಲ್ಲಿರುವ ಕಾಂಗ್ರೆಸ್ ಸರಕಾರದ ರಾಜನೀತಿಗೂ, ಮಹಾತ್ಮ ಗಾಂಧೀಜಿಯವರ ಧೋರಣೆಗೂ ಇರುವ ವ್ಯತ್ಯಾಸಗಳನ್ನು ಸೂಚಿತಪಡಿಸುತ್ತಾ ಬರೆದುದನ್ನು ಬಹು ಆದರದಿಂದ ಒಮ್ಮೆ ಅಲ್ಲ ಎರಡಾವರ್ತಿ ಓದಿದೆನು.

ಮಹಾತ್ಮಾಜಿಯವರ ಧ್ಯೇಯಗಳನ್ನು ಅಲ್ಲಲ್ಲಿ ಉತ್ತರಿಸಿ ಈಗ ಅಧಿಕಾರದಲ್ಲಿರುವ ಕಾಂಗ್ರೆಸಿಗರು ಹೇಗೆ ಆ ತತ್ವಗಳಿಗೆ ವ್ಯತಿರಿಕ್ತವಾಗಿ ನಡೆಯುತಿದ್ದಾರೆ ಎಂಬುದಕ್ಕೆ ಸಮಂಜಸವಾದ ಉದಾಹರಣೆಗಳನ್ನು ಕೊಡುತ್ತಾ ಬರೆದಿರುವ ಅವರ ಲೇಖನವು ನಮ್ಮ ದೇಶದ ಆರನೇ ಸ್ವಾತಂತ್ರ್ಯ ದಿನದ ಸಮಯಕ್ಕೆ ಹೊರಡಲು ಬಹು ಯೋಗ್ಯವಾದ ಮತ್ತು ಕಾಲೋಚಿತವಾದ ಲೇಖನ ಎಂದರೆ ಯಾರೂ ಅಲ್ಲವೆನ್ನಲಾರರು. ಮನುಷ್ಯನು ಯಾವಾಗಲೂ ತಪ್ಪು ಮಾಡುವ ಪ್ರಾಣಿ ಎಂಬುದು ನಿರ್ವಿವಾದದ ಮಾತು. ಎಷ್ಟೋ ತಪ್ಪುಗಳನ್ನು ನಾವು ತಿಳಿಯದೆ ಮಾಡುವುದುಂಟು. ಅಂತಹ ಸಂದರ್ಭದಲ್ಲಿ ಅಂತಹ ತಪ್ಪುಗಳನ್ನು ಕಂಡು ಹಿಡಿದವರು, ತಪ್ಪು ಮಾಡುವವರ ದೃಷ್ಟಿಪಥಕ್ಕೆ ಅದನ್ನು ತರುವುದು ಧರ್ಮವಾಗಿದೆ. ಹೀಗೆ ಅವರು ದೃಷ್ಟಿಗೆ ತಂದರೇನೇ ಆ ತಪ್ಪುಗಳನ್ನು ತಿದ್ದಿಕೊಳ್ಳಲು ತಪ್ಪು ಮಾಡಿದವರಿಗೆ ಅವಕಾಶ ದೊರಕಿದಂತಾಗುತ್ತದೆ. ಆದರೆ ಅನೇಕರು 'ನನಗೇಕೆ ಬೇಕು ಈ ತೊಂದರೆ' ಎಂಬ ಬೇಜವಾಬ್ದಾರಿಕೆಯ ಅಸಂಘತೆಯಿಂದಲೋ, ಅಲ್ಲ 'ಅಧಿಕಾರದಲ್ಲಿರುವವರ ತಪ್ಪನ್ನು ತೋರಿಸಿ, ನಾನೇಕೆ ಅವರ ದ್ವೇಷಕ್ಕೆ ಬೀಳಲಿ' ಎಂಬ ಹೆದರಿಕೆಯ ಭಾವನೆಯಿಂದಲೋ ಅಲ್ಲ 'ಹೇಗಾದರೂ ಮಾಡಿ ನನ್ನ ಸ್ವಂತ ಮುಂಬರುವಿಕೆಯನ್ನು ಸಾಧಿಸಿಕೊಳ್ಳುವುದೇ ನಮ್ಮ ಧ್ಯೇಯವಾಗಿರಬೇಕಲ್ಲದೆ, ಇತರರ ತಪ್ಪುನೆಪ್ಪುಗಳನ್ನು ನಾವೇಕೆ ಕಂಡು ಹಿಡಿಯಬೇಕು' ಎಂಬ ಸ್ವಾರ್ಥತೆಯಿಂದಲೋ ಸುಮ್ಮನಿರುವರು. ಸ್ವಾತಂತ್ರ್ಯ ಹೊಂದಿದ ದೇಶದ ವ್ಯಕ್ತಿಗಳ ಧರ್ಮವಾಗದು. ಶ್ರೀಯುತ ಗಣಪತಿಯವರು ದೃಷ್ಟಿಯಿಂದಲೂ, ದಿವಂಗತ ಮಹಾತ್ಮರವರ ಒಬ್ಬ ಅನುಯಾಯಿಯಾಗಿದ್ದು, ಈಗ ಅವರ ತತ್ವಗಳು, ಅವರ ಹೆಸರಿನಲ್ಲಿ ವ್ಯಭಿಚಾರ ನಡೆಸುವವರಿಂದ ಮರೆಯಲ್ಪಡುತ್ತಿವೆ ಎಂಬುದನ್ನು ಕಣ್ಣಾರೆ ಕಂಡು ಮನನೊಂದು ಅವರ ಅಂತರ್ಭಾವನೆಗಳನ್ನು ಸ್ಪಷ್ಟವಾಗಿ ನಿರ್ಭಯವಾಗಿ ಪ್ರಕಟಿಸಿ ದೇಶಕ್ಕೆ ಉಪಕಾರ ಮಾಡಿದ್ದಾರೆ. ಅದಕ್ಕೆ ನಾನು ಅವರನ್ನು ನಿಜವಾಗಿಯೂ ಅಭಿನಂದಿಸುತ್ತೇನೆ.

ಮಹಾತ್ಮ ಗಾಂಧಿಜಿಯವರು ಸಾಮಾನ್ಯ ಮನುಷ್ಯರಾಗಿದ್ದು, ಈ ರೀತಿಯ ರಾಷ್ಟ್ರದ ಮುಂದಾಳಾಗಲು ಅವರಲ್ಲಿದ್ದ ಅ

ಲೇ:– ಶ್ರೀ ಸಿ. ಜಿ. ಐಯ್ಯಪ್ಪ, ಮಡಿಕೇರಿ.

ನೇಕ ಗುಣಗಳ ಸೃಷ್ಟಿ ಒಂದಾದ ಪ್ರಾಮುಖ್ಯ ಗುಣವೆಂದರೆ ಅವರು ತಿಳಿದೋ ತಿಳಿಯದೆಯೋ ಮಾಡಿದ ತಪ್ಪನ್ನು ... ದೃಷ್ಟಿಗೆ ತಂದೊಡನೇ, ಅಂತಹ ತಪ್ಪುಗಳನ್ನು ತೋರಿಸಿಕೊಟ್ಟವರನ್ನು ಸ್ತುತಿಸಿ, ತಮ್ಮ ತಪ್ಪುಗಳನ್ನು ಬಹಿರಂಗವಾಗಿ ಒಪ್ಪಿಕೊಳ್ಳುತ್ತಿದ್ದುದು. ಈ ರೀತಿಯಲ್ಲಿ ತಮ್ಮ ತಪ್ಪುಗಳನ್ನು ಮನ ಪೂರ್ವಕವಾಗಿ ಒಪ್ಪಿ ಅಂತಹ ತಪ್ಪಿಗೆ ಪ್ರಾಯಶ್ಚಿತ್ತವಾಗುವ ರೀತಿಯಲ್ಲಿ ತಮ್ಮ ಮುಂದಿನ ನಡವಳಿಕೆಗಳನ್ನು ತಿದ್ದಿಕೊಳ್ಳುತ್ತಾ ಬಂದದ್ದೇ ಮಹಾತ್ಮರ ಪ್ರಾಮುಖ್ಯತೆಗೆ ಒಂದು ಒಳವಾದ ಕಾರಣವೆಂಬುವುದನ್ನು ಎಲ್ಲರೂ ಒಪ್ಪುತ್ತಾರೆ. ಆದುದರಿಂದ, ಸಾಮಾನ್ಯ ಮನುಷ್ಯರಾದ ಕಾಂಗ್ರೆಸ್ ಅಧಿಕಾರಿಗಳೂ ಸಹ ಅವರ ಅಧಿಕಾರ ನಡೆಸುವಿಕೆಯಲ್ಲಿ ಅವರು ತಿಳಿದೋ, ತಿಳಿಯದೆಯೋ, ಗಾಂಧಿಜಿಯವರ ಪ್ರಿಯತತ್ವಗಳಿಗೆ ವ್ಯತಿರೇಕವಾಗಿ ಕಾರ್ಯ ನಡೆಸಿದ್ದರೆ, ಇನ್ನು ಮುಂದಕ್ಕಾದರೂ, ಆ ತಪ್ಪುಗಳನ್ನು ಅವರ ದೃಷ್ಟಿಗೆ ತಂದ ನಂತರವಾದರೂ, ಗಾಂಧಿಜಿಯವರ ಮೇಲ್ಪಂಕ್ತಿಯನ್ನು ಅನುಸರಿಸಿ, ತಮ್ಮ ತಪ್ಪುದಾರಿಗಳನ್ನು ಬಿಟ್ಟು, ನಮ್ಮ ರಾಷ್ಟ್ರದ ಪಿತಾಮಹನ ತತ್ವಕ್ಕನುಗುಣವಾಗಿ ತಮ್ಮ ನಡಾವಳಿಗಳನ್ನೂ, ಆಡಳಿತ ಕ್ರಮಗಳನ್ನೂ ತಿದ್ದಿಕೊಳ್ಳುವುದು ಉತ್ತಮ.

ಆದರೆ ಪಂಡಿತ ನೆಹರೂರವರ ವಿದೇಶೀ ರಾಜನೀತಿಯನ್ನು ಕುರಿತ ಅವರ ಟೀಕೆಯು ಅಷ್ಟೊಂದು ಸರಿಯೆಂದು ನನಗೆ ತೋರಲಿಲ್ಲ. ಇಂದಿನ ದಿವಸದಲ್ಲಿ, ಮಹಾತ್ಮಗಾಂಧಿಜಿಯವರನ್ನು ಹೇಗೆ ಮುಕ್ತಕಂಠದಿಂದ ಪ್ರ... ರೂ ರಾಷ್ಟ್ರಪಿತಾಮಹನೆಂದು ಕರೆಯುವರೋ, ಅದೇ ರೀತಿಯಲ್ಲಿ ಯಾವ ಕೂಟದಲ್ಲೇ ಆಗಲೀ, ಸಭೆಯಲ್ಲೇ ಆಗಲೀ, 'ನಮ್ಮ ದೇಶದ ನಚ್ಚಿನ ಮುಂದಾಳು ಯಾರೆಂದು ಕೇಳಿದರೆ, ಆಬಾಲವೃದ್ಧರೂ ಏಕಕಂಠದಿಂದ 'ಶ್ರೀಯುತ ನೆಹರೂರವರು' ಎಂದು ಹೇಳದಿರಲಿಕ್ಕಿಲ್ಲ. ಅವರ ಅಂತಹ ಒಂದು ಅದ್ವಿತೀಯ ಸ್ಥಾನ ಸಂಪಾದನೆಗೆ ಪ್ರಾಮುಖ್ಯ ಕಾರಣವೆಂದರೆ, ಅವರು ಅನುಸರಿಸುತ್ತಿರುವ ರಾಜ ನೀತಿ. ಅವರ ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ರಾಜನೀತಿಯನ್ನು ಲೋಕದ ಪ್ರಸಿದ್ಧಿ ಪಟ್ಟ ಅನೇಕ ಗಣ್ಯ ವ್ಯಕ್ತಿಗಳು ಒಪ್ಪಿರುವರು. ಪ್ರಪಂಚದ ಶಾಂತಿ ಸ್ಥಾಪನೆಗಾಗಿ ಇವರ ಯತ್ನವು ಪ್ರಶಂಸನೀಯವಾಗಿದೆ. ಇವರು ತಮ್ಮ ರಾಜನೀತಿಯಿಂದ ಭಾರತಕ್ಕೆ ಗೌರವವನ್ನೂ, ಉನ್ನತ ಸ್ಥಾನವನ್ನೂ ಗಳಿಸಿರುವರು. ಕಾಂಗ್ರೆಸ್ ಆಡಳಿತಗಾರರಲ್ಲಿ ಕೆಲವು ಸ್ವಾರ್ಥಪರರು ಗಾಂಧೀತತ್ವಕ್ಕೆ ವಿರೋಧ ಹೋಗುತಿದ್ದರೂ, ಶ್ರೀಯುತ ನೆಹರೂರವರನ್ನು ಈ ಲೋಪಕ್ಕೆ ಕಾರಣಭೂತರಾಗಿ ಮಾಡುವುದು ನ್ಯಾಯವಲ್ಲ. ಅವರು ನಿಜವಾಗಿಯೂ ನಮಗೆಲ್ಲರಿಗೂ ಹೆಮ್ಮೆಯುಂಟಾಗುವ ರೀತಿಯಲ್ಲೇ ತಮ್ಮ ರಾಜನೀತಿಯನ್ನು, ಹೆಚ್ಚಾಗಿ ಅಂತರ್ರಾಷ್ಟ್ರೀಯ ರಾಜನೀತಿಯನ್ನು ಈ ವರೆಗ ನಡೆಸಿದ್ದಾರೆ.

ನಮಗೆ ಸ್ವಾತಂತ್ರ್ಯ ಸಿಕ್ಕಿದ ಬಳಿಕದ ಸನ್ನಿವೇಶವು ಎಲ್ಲರಿಗೂ ತಿಳಿದ ಸಂಗತಿ. ಹಿಂದೂದೇಶದ ವಿಭಾಗದ ಫಲಿತಾಂಶವಾಗಿ ಸಹಸ್ರಾರು ಜನರಿಗೆ ತಿನ್ನಲಿಕ್ಕೆ ಆಹಾರವಿಲ್ಲದೆ, ಇರಲಿಕ್ಕೆ ಮನೆಮಾರುಗಳಿಲ್ಲದೆ, ದೇಶದಲ್ಲೆಲ್ಲಾ ಆಹಾರಕ್ಕೆ ಗತಿಯಿಲ್ಲದೆ, ಬೇರೆ ದೇಶಗಳಲ್ಲಿ ಆಹಾರಕ್ಕಾಗಿ ಭಿಕ್ಷೆ ಬೇಡುವ ಪರಿಸ್ಥಿತಿಯಲ್ಲಿ ನಮ್ಮ ರಾಷ್ಟ್ರವು ಇದ್ದ ಸಂದಿಗ್ಧ ಸ್ಥಿತಿಯಲ್ಲೂ ಕೂಡ, ಶ್ರೀಯುತ ನೆಹರೂರವರು ಎದೆಗುಂದದೆ, Beggars are not choosers" ಎಂಬ ಹಳೆ ಮಾತಿನ ತತ್ವಕ್ಕೆ ಬಗ್ಗದೆ, ನಮ್ಮ ರಾಷ್ಟ್ರದ ವ್ಯಕ್ತಿತ್ವವನ್ನು ಸಂಪೂರ್ಣ ಉಳಿಸಿಕೊಂಡು ನಮ್ಮ ದೇಶದ ಆರ್ಥಿಕ ಮತ್ತು ಆಹಾರದ ತೊಂದರೆಗಳನ್ನು ಬಗೆಹರಿಸಿದ ರೀತಿಯು ಎಲ್ಲಿಲ್ಲಿಯೂ ಇವರನ್ನು ಕುರಿತು ಅಭಿಮಾನವನ್ನು ಹುಟ್ಟಿಸದೆ ಇರಲಾರದು.

ಭಾರತದಲ್ಲಿ ಬಡತನವಿರುವುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಇದು ಈಗ ನಮಗೆ ಸ್ವಾತಂತ್ರ್ಯ ಸಿಕ್ಕಿದ ನಂತರ ಉಂಟಾದ ಸಮಸ್ಯೆಯಲ್ಲ; ಇದಕ್ಕೆ ಹಲವಾರು ಕಾರಣಗಳಿವೆ. ಇವನ್ನೆಲ್ಲಾ ಬಗೆಹರಿಸಲು ನಾವೇ ಗುದ್ದಲಿ ಹಿಡಿದು ನಿಂತರೆ ಸಾಲದು. ಬೇರೆ ರಾಷ್ಟ್ರಗಳ ಸಹಾಯವೂ ಬೇಕು. ಹಾಗಿರುವಾಗ್ಯೆ ನಾವು ಸಂಪೂರ್ಣ ತಟಸ್ಥರಾಗಿರಲು ಸಾಧ್ಯವೇ ಇಲ್ಲ. ಲೋಕದ ಎರಡು ಮಹಾ ಪರಾಕ್ರಮಿಗಳಾದ 'ಪವರ್ ಬ್ಲಾಕು'ಗಳು ಅಂತರಾಷ್ಟ್ರೀಯ ಶಾಂತಿಯನ್ನು ಹಾಳು ಮಾಡಲು ಹವಣಿಸುತ್ತಿರುವಾಗ್ಗೆ, ಭಾರತವೂ ಸಹ ಒಂದು ಗಣ್ಯ ರಾಷ್ಟ್ರವಾಗಿ ಬಾಳಬೇಕಾದರೆ, ಅದು ಅಂತರಾಷ್ಟ್ರೀಯ ಸಮಸ್ಯೆಗಳಲ್ಲಿ ಭಾಗವಹಿಸದೆ ತಟಸ್ಥವಾಗಿರಲು ಹೇಗೆ ಸಾಧ್ಯ? ಹಾಗಿರುವಾಗ್ಗೆ ಕೊರಿಯಾ ಸಮಸ್ಯೆಗೆ ಹಿಂದೀ ಸೈನ್ಯವನ್ನು ಕಳುಹಿಸಿ ರಾಜಿಸ್ಥಾಪನೆಯಲ್ಲಿ ಭಾಗವಹಿಸಿದ್ದು ನಮ್ಮ ದೇಶದ ಹಿತದೃಷ್ಟಿಯಿಂದ ಮಾಡಬೇಕಾದ ಕೆಲಸವಾಗಿದೆ. ಯಾತಕ್ಕೆಂದರೆ ಹಿಂದೂದೇಶದ ಆಹಾರ ಸಮಸ್ಯೆಯನ್ನು ಮಾತ್ರ ಪರಿಹರಿಸುವ ಒಂದು ಪ್ರಯತ್ನವನ್ನು ಮಾತ್ರ ನಾವು ಮಾಡಿದರೆ ಸಾಲದು. ಈ ಸಮಸ್ಯೆಯು ಬಗೆ ಹರಿದರೂ ಸಹ, ಲೋಕದಲ್ಲಿ ಶಾಂತಿ ಇಲ್ಲದಿದ್ದರೆ ನಮ್ಮ ವ್ಯಕ್ತಿತ್ವವು ಹೇಗೆ ಉಳಿದೀತು? ಹಾಗಿರುವಾಗ್ಗೆ ಶ್ರೀಯುತ ನೆಹರೂರವರು ಈಗ ತಾನೇ ಹುಟ್ಟಿದ ಅಂಬೆಗಾಲು ಹಾಕುತ್ತಿರುವ ನಮ್ಮ ರಾಷ್ಟ್ರಕ್ಕೆ ನಮ್ಮ ಆಂತರೀಯ ತೊಂದರೆಗಳನ್ನು ಪರಿಹರಿಸುವ ದೃಷ್ಟಿಯಿಂದ ಪಂಚವಾರ್ಷಿಕ ಯೋಜನೆಗಳನ್ನು ಕೈಕೊಂಡಿರುವದರ ಜೊತೆಗೆ, ಅಂತರ್ರಾಷ್ಟ್ರೀಯ ಸಮ್ಮೇಳನಗಳಲ್ಲೂ ಕೂಡ ಎಲ್ಲರೂ ನಮ್ಮ ರಾಷ್ಟ್ರದ ಮೈತ್ರಿಗೆ ಹವಣಿಸುವಂತೆ ನಮಗೆ ಒಂದು ಅಗ್ರಸ್ಥಾನವನ್ನು ಗಳಿಸಿದ್ದಾರೆಂಬುದರಲ್ಲಿ ಸಂಶಯವಿಲ್ಲ.

ಮಹಮ್ಮದಆಲಿ ಇವರ ಆಗಮನ.

ಇಂದು ಹಿಂತೆರಳುವರು,

ಪಾಕಿಸ್ತಾನದ ಪ್ರಧಾನ ಮಂತ್ರಿಗಳಾದ ಮಹಮ್ಮದ ಆಲಿಯವರು ತಾ. ೧೮ರ ಸಾಯಂಕಾಲ ಡೆಲ್ಲಿಗೆ ಬಂದರು.

ವಿಮಾನ ನಿಲ್ದಾಣದಲ್ಲಿ ಮಹಮ್ಮದ್ ಆಲಿ ಮತ್ತು ಅವರ ಪತ್ನಿಯವರಿಗೆ ಅಭೂತ ಪೂರ್ವವಾದ ಸ್ವಾಗತವನ್ನು ನೀಡಲಾಯಿತು. ನಿಲ್ದಾಣದಲ್ಲಿ ಹತ್ತು ಸಾವಿರಕ್ಕಿಂತ ಮೇಲ್ಪಟ್ಟು ಜನರು ಮುಂದೆ ಬಂದು ಸ್ವಾಗತಿಸಿದುದರಿಂದ ಪೋಲೀಸ್ ಮತ್ತು ಮಿಲಿಟರಿಯವರಿಗೂ ಅವರನ್ನು ಹಿಂದೆ ತಡೆಹಿಡಿದು ನಿಲ್ಲಿಸಲಾಗಲಿಲ್ಲ. ಮಂತ್ರಿಗಳೂ ರಾಯಭಾರಿಗಳೂ ಪತ್ರಿಕೋದ್ಯೋಗಿಗಳೂ ತಂತಮ್ಮ ಸ್ಥಳದಲ್ಲೇ ಇದ್ದರು.

ಸಂಜೆ ೮-೩೦ಕ್ಕೆ ವಿಮಾನ ಬಂದಿಳಿಯಿತು ಮತ್ತು ಶ್ರೀ ನೆಹರುರುವರು ಹೂಮಾಲೆ ಹಾಕಿ. ಹಸ್ತಲಾಘವವನ್ನಿತ್ತು ಪಾಕಿಸ್ತಾನ ಪ್ರಧಾನ ಮಂತ್ರಿಯನ್ನು ಸ್ವಾಗತಿಸಿದರು. ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಶ್ರೀಮತಿ ಆಲಿಯವರನ್ನು ಆದರದಿಂದ ಬರಮಾಡಿಕೊಂಡರು. ಸೈನಿಕರು ಗೌರವ ರಕ್ಷೆಯನ್ನು ಕೊಟ್ಟರು. ನಿಲ್ದಾಣದಲ್ಲಿ ಜನರು ಕಿಕ್ಕಿರಿದು ತುಂಬಿದುದರಿಂದ ಅನೇಕರ ಪರಿಚಯನ್ನು ಮಾಡಿಕೊಡಲಾಗಲಿಲ್ಲ.

ನೆಹರುರವರು ಮಹಮ್ಮದಾಲಿ ದಂಪತಿಗಳನ್ನು ಒಂದು ಜೀಪ್ ಗಾಡಿಗೆ ಕರೆದುಕೊಂಡು ಹೋದರು. ಮತ್ತು ಉಭಯ ರಾಷ್ಟ್ರಗಳ ಪ್ರಧಾನ ಮಂತ್ರಿಗಳು ಒತ್ತೊತ್ತಿಗೆ ನಿಂತುಕೊಂಡರು. ಜನರು 'ಆಲಿ–ನೆಹರು ಝಿಂದಾಬಾದ್' ಎಂದು ಜಯ ಜಯಕಾರ ಮಾಡುತ್ತ ಅವರ ಮೇಲೆ ಹೂಮಳೆಗರೆದರು. ಜನರ ಸಂತೋಷ ಪ್ರದರ್ಶನ ಕಂಡು ಮಹಮ್ಮದಾಲಿಯವರೂ ಆನಂದತುಂದಿಲರಾದರು ಮತ್ತು ಜನರ ಅಪೇಕ್ಷೆಯಂತೆ ಮತ್ತೊಮ್ಮೆ ನಿಲ್ದಾಣದ ಸುತ್ತಲೂ ಗಾಡಿಯನ್ನು ಓಡಿಸಲಾಯಿತು. ಅಲ್ಲಿಂದ ಅವರು ರಾಷ್ಟ್ರಪತಿ ಭವನಕ್ಕೆ ತೆರಳಿದರು. ಅಲ್ಲಿಯೂ ಬಹಳ ಜನರು ನೆರೆದಿದ್ದರು.

ಪಾಕಿಸ್ತಾನ ಪ್ರಧಾನ ಮಂತ್ರಿಗಳೊಂದಿಗೆ ವಿದೇಶ ಮಂತ್ರಿ ಜಾಫರುಲ್ಲಾಖಾನ್, ಕಾಶ್ಮೀರ್ ಖಾತೆಯ ಉಪಮಂತ್ರಿ ಅಫಜಲ್ ಅಹ್ಮದ್‌ಖಾನ್, ಸರಕಾರದ ಕಾರ್ಯದರ್ಶಿ ಅಜೀಜ್ ಅಹ್ಮದ್, ಪ್ರಧಾನ ಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಸ್. ಎ. ಅಫಜಲ್, ಆಕಾಶವಾಣಿ ಖಾತೆಯ ಡೈರೆಕ್ಟರ್ ಬೊಖಾರಿ, ಇತ್ಯಾದಿ ಅಧಿಕಾರಿಗಳಿರುವರು.

ಪ್ರಧಾನ ಮಂತ್ರಿ, ಅವರ ಪತ್ನಿ ಮತ್ತು ವಿದೇಶ ಮಂತ್ರಿ ಭಾರತ ಸರಕಾರದ ಅತಿಥಿಗಳಾಗಿರುವುದರಿಂದ ರಾಷ್ಟ್ರ ಭವನದಲ್ಲಿ ಉಳಿದುಕೊಂಡಿರುವರು. ಕಾಶ್ಮೀರ ಪ್ರಶ್ನೆ, ಮತ್ತಿತರ ಸಮಸ್ಯೆಗಳ ಕುರಿತು ಮಾತುಕತೆಗಳು ನಡೆದಿವೆ. ವಿವರಗಳು ಇನ್ನೂ ತಿಳಿದುಬಂದಿಲ್ಲ. ಈ ದಿನ ಅಂದರೆ ತಾ. ೨೧ರಲ್ಲಿ ಅವರು ಹಿಂದಿರುಗಲಿರುವರು.

"ಶೇರ್—ಎ—ಕಾಶ್ಮೀರ್" ಶೇಕ್ ಅಬ್ದುಲ್ಲ.

ಅವರ ಉತ್ಥಾನ—ಪತನಗಳ ಸ್ಥೂಲ ಪರಿಚಯ.

ಒಂದು ಕಾಲದಲ್ಲಿ ಸಮಗ್ರ ಕಾಶ್ಮೀರದಲ್ಲಿ ಸರ್ವರ ಮನ್ನಣೆಗೆ ಪಾತ್ರರಾಗಿದ್ದು, ಕಾಶ್ಮೀರದ ಸ್ವಾತಂತ್ರ್ಯಾಂದೋಲನದಲ್ಲಿ ಪ್ರಮುಖ ಪಾತ್ರವಹಿಸಿ, ಕೊನೆಗೆ ಕಾಶ್ಮೀರದ ಪ್ರಧಾನ ಪೀಠವನ್ನಲಂಕರಿಸಿದ ಕಾಶ್ಮೀರದ 'ನರಕೇಸರಿ' ಶೇಕ್ ಅಬ್ದುಲ್ಲಾರವರು, ಪ್ರಸಿದ್ಧಿಗೆ ಬಂದಷ್ಟೇ ಶೀಘ್ರಗತಿಯಲ್ಲಿ ಪತನ ಹೊಂದಿ ಕಾಶ್ಮೀರ ಸರಕಾರದಿಂದಲೇ ಬಂಧಿಸಲ್ಪಟ್ಟರು. ಒಂದೇ ವ್ಯಕ್ತಿಯ ಜೀವನದಲ್ಲಿ ಈ ಉತ್ಥಾನ ಪತನಗಳ ಪ್ರಕರಣವು ರಂಗಭೂಮಿಯಲ್ಲಿ ಅಭಿನೀತವಾಗುವ ನಾಟಕದಂತೆ ನಡೆದುಹೋಯಿತು.

ಬೆಳ್ಳಿಯ ಚಮಚ ಬಾಯಲ್ಲಿಟ್ಟು ಆದ ಸುಮನೆತನದಲ್ಲಿ ಹುಟ್ಟಿದ ಶಿಕುವಲ್ಲ ಶೇಕ್ ಅಬುಲ್ಲಾ. ಉಣ್ಣೆ ಶಾಲು ಮಾರುವ ವ್ಯಾಪಾರಿಯೊಬ್ಬನಲ್ಲಿ ೧೯೦೫ ನೇ ದಸಂಬರ್ ೫ ರಲ್ಲಿ ಅವರು ಹುಟ್ಟಿದರು. ಹುಟ್ಟುವುದಕ್ಕೆ ಮೊದಲೇ ತಂದೆಯನ್ನು ಕಳಕೊಂಡಿದ್ದರು. ಅವರ ಉಚ್ಚ ಶಿಕ್ಷಣ ಜಮ್ಮೂವಿನಲ್ಲಿ ನಡೆಯಿತು. ಆಗಲೇ ಜಾತೀಯ ಮುಖಂಡರ ಸಂಪರ್ಕವಾಯಿತು. ಆಗಲೇ, ಮುಸ್ಲಿಮರಿಗೆ ಸರಕಾರೀ ಉದ್ಯೋಗಗಳಲ್ಲಿ, ಜನಸಂಖ್ಯೆಯ ಪ್ರಮಾಣದ ಮೇಲೆ ಉದ್ಯೋಗ ದೊರಕಿಸಿಕೊಡುವುದಕ್ಕಾಗಿ ಚಳವಳ ಹೂಡಿದ್ದರು. ಆ ಮೇಲೆ ಅಲಿಘರ್ ವಿಶ್ವವಿದ್ಯಾಲಯದಲ್ಲಿ ಎಂ. ಎಸ್ ಸಿ. ಪದವಿ ಪಡೆದು ೧೯೩೦ ರಲ್ಲಿ ಅಲ್ಲಿಂದ ಹೊರಬಿದ್ದರು. ಆ ವಿಶ್ವವಿದ್ಯಾಲಯಕ್ಕೆ ೧೯೩೧ ರಲ್ಲಿ ಮಿ. ಜಿನ್ನಾರವರು ಶೌಕತ್ತಾಲಿ ಮತ್ತು ಇತರ ಮುಸ್ಲಿಮ್ ಮುಖಂಡರೊಡನೆ ಸಂದರ್ಶನವಿತ್ತಾಗ ವಿದ್ಯಾರ್ಥಿ ಅಬ್ದುಲ್ಲಾರವರ ಪ್ರತಿಭೆ ಕಂಡು ತುಂಬಾ ಮೆಚ್ಚಿದ್ದರು.

ಶಾಲಾ ಶಿಕ್ಷಣ ಮುಗಿಸಿ ಹೊರಬಂದೊಡನೆ ತನ್ನಂತಹ ಬಿಸಿ ನೆತ್ತರಿನ ತರುಣರನ್ನು ಕೂಡಿಕೊಂಡು ಸಂಸ್ಥಾನದ ಆಗಿನ ಸ್ಥಿತಿಗತಿಗಳ ಸುಧಾರಣೆಯ ಬಗ್ಗೆ ಚಳವಳ ಹೂಡುವ ಒಂದು ಗುಂಪು ಕಟ್ಟಿಕೊಂಡಿದ್ದರು. ಶ್ರೀನಗರದ ಒಂದು ಚಿಕ್ಕ ವಾಚನಾಲಯವೇ ಈ ತಂಡದವರ ಆಗಿನ ಪ್ರಧಾನ ಕಚೇರಿಯಾಗಿತ್ತು. ಪ್ರತೀ ದಿನ ಸಾಯಂಕಾಲ ಈ ತರುಣರು ಆ ವಾಚನಾಲಯದಲ್ಲಿ ಕಲೆತು ದೇಶದಲ್ಲಿ ಕ್ರಾಂತಿಕಾರಕ ನವಸುಧಾರಣೆಗಳನ್ನು ತರುವುದರ ಕುರಿತು ಬಿರುಸಿನ ಚರ್ಚೆ ನಡೆಸುವುದು ಸಂಪ್ರದಾಯವಾಗಿತ್ತು. ಕ್ರಮೇಣ ಈ ಗುಂಪೇ ಬಲಿತು ಬಹಿರಂಗವಾಗಿ ತನ್ನ ಆಂದೋಲನವನ್ನು ಮುಂದುವರಿಸತೊಡಗಿತು. ಈ ಕ್ರಾಂತಿಯ ಬಗ್ಗೆ ಅಧಿಕಾರಿಗಳ ಅವಗಾಹನೆಗೆ ಬಾರದಿರಲಿಲ್ಲ. ಈ ಚಳವಳದ ಮುಖಂಡರಾಗಿದ್ದ ಅಬ್ದುಲ್ಲಾರನ್ನು ಸರಕಾರ ದಸ್ತಗಿರಿಮಾಡಿತು. ಈ ದಸ್ತಗಿರಿಯ ಪರಿಣಾಮ ಸರ್ಕಾರ ವಿಷಮಾವಸ್ಥೆಗೆ ಹೋಯಿತು. ದೇಶದಾದ್ಯಂತ ಜನತೆ ರೋಷ ಕಾರಿತು. ಅದರಿಂದಾಗಿ ಸರಕಾರ ಮೂರೇ ವಾರಗಳಲ್ಲಿ ಅಬ್ದುಲ್ಲಾರನ್ನು ಬಿಡುಗಡೆ ಮಾಡಬೇಕಾಗಿ ಬಂತು.

ಶೇಕ್ ಅಬ್ದುಲ್ಲಾರವರ ಕೂಟವೇ ಕ್ರಮೇಣ 'ಮುಸ್ಲಿಮ್ ಪರಿಷತ್ತಾಗಿ' ಬೃಹದ್ರೂಪವನ್ನೊಂದಿತು. ಆರಂಭದಲ್ಲಿ ಈ ಕೂಟ ಜಾತೀಯತೆಯ ಧ್ಯೇಯವಿಟ್ಟುಕೊಂಡಿತ್ತಾದರೂ ಶೇಕ್ ಅಬ್ದುಲ್ಲಾರವರಿಗದು ರುಚಿಸುತ್ತಿರಲಿಲ್ಲ. 'ಸರ್ವ ಜಾತೀಯ ಐಕ್ಯತೆಯಿಂದಲೇ ಸಂಸ್ಥಾನದೇಳ್ಗೆ' ಎಂಬ ಉದಾತ್ತ ತತ್ವ ಅವರದಾಗಿತ್ತು. ಅದನ್ನೇ ಅವರು ತಮ್ಮ ಮಾತು ಮತ್ತು ಕ್ರಿಯೆಗಳಲ್ಲಿ ಪ್ರದರ್ಶಿಸುತ್ತ ಬಂದರು. ಇದರಿಂದ ಅವರ ಗುಂಪು ಬೆಳೆಯಿತು. ಹಿಂದೂಗಳು, ಸಿಖರು ಅಧಿಕಾಧಿಕ ಸಂಖ್ಯೆಯಲ್ಲಿ ಅದಕ್ಕೆ ಸೇರಿಕೊಂಡರು. ಎಲ್ಲಾ ಜಾತಿಗಳ ಸಹಕಾರ ಪಡೆದ ಈ ತಂಡ ಕಾಶ್ಮೀರದಲ್ಲಿ ಜವಾಬ್ದಾರಿ ಸರಕಾರಕ್ಕಾಗಿ ೧೯೩೮ ರಲ್ಲಿ ಶೇಕ್ ಅಬ್ದುಲ್ಲಾರವರ ನೇತೃತ್ವದಲ್ಲಿ ಪ್ರಚಂಡ ಚಳವಳ ಹೂಡಿದಾಗ ಅಬ್ದುಲ್ಲಾರಿಗೆ ತಿರುಗಿ ಕಾರಾಗೃಹವಾಸ ಪ್ರಾಪ್ತವಾಯಿತು. ೧೯೩೯ ರಲ್ಲಿ ಅವರ ಬಿಡುಗಡೆಯಾದ ನಂತರ ಮುಸ್ಲಿಮ್ ಪರಿಷತ್ತನ್ನೇ ರಾಷ್ಟ್ರೀಯ ಪರಿಷತ್ತನ್ನಾಗಿ ಮಾರ್ಪಡಿಸಿ ಎಲ್ಲಾ ಕೋಮಿನವರಿಗೆ ಅದಕ್ಕೆ ಸೇರುವಂತೆ ಸುಸ್ವಾಗತವೀಯಲಾಯಿತು.

೧೯೪೪ ರಲ್ಲಿ ಈ ಪರಿಷತ್ತು ನೂತನ ಕಾಶ್ಮೀರ'ದ ಕಾರ್ಯಕ್ರಮವೊಂದನ್ನು ತಯಾರಿಸಿತು. ಅದೇ ವರ್ಷ ಶೇಕ್ ಅಬ್ದುಲ್ಲಾರವರು ರಚಿಸಿದ ಈ ಪ್ರಬಲ ಕೋಟೆಯನ್ನು ಒಡೆಯಲೆಂದು ಕಾಶ್ಮೀರ ಸಂದರ್ಶಿಸಿದ ಮುಸ್ಲಿಮ್ ಲೀಗ್ ಅಧ್ಯಕ್ಷ ಮಿ. ಜಿನ್ನಾರವರ ಯತ್ನ ನಿಷ್ಫಲವಾಯಿತು. ಮುಸ್ಲಿಮ್ ಲೀಗಿಗೆ ಸೇರುವಂತೆ ಶೇಕ್ ಅಬ್ದುಲ್ಲಾರವರ ಮೇಲೆ ಅವರು ಹೇರಿದ ಒತ್ತಾಯ ಸಫಲವಾಗದೆ ನೇರೆ ಜೇಲಮ್ ನಾಕೆ ಹಿಂದೆ ಹೋಗುವ ದುಸ್ಥಿತಿ ಜಿನ್ನಾ ಸಾಹೇಬರಿಗೆ ಒದಗಿತು. ೧೯೪೬ ರಲ್ಲಿ ರಾಷ್ಟ್ರೀಯ ಪರಿಷತ್ತು 'ಕಾಶ್ಮೀರದಿಂದ ತೊಲಗಿ' ಘೋಷಣೆಯನ್ನು ಹೊರಡಿಸುವನ್ನು ಮುಂದುವರಿಯಿತು. ಆಗಲೇ ಪರಿಷತ್ತಿನ ಮುಂದಾಳು ಶೇಕ್ ಅಬ್ದುಲ್ಲಾರವರು ಮೂರನೇ ಬಾರಿ ಸೆರೆಮನೆಯ ಅತಿಥಿಗಳಾದರು.

ಹದಿನೇಳು ತಿಂಗಳುಗಳ ನಂತರ ಅವರ ಬಂಧವಿಮೋಚನೆಯಾದಾಗ, ಕಾಶ್ಮೀರ ಕಣಿವೆಯಲ್ಲಿ ಪಾಕೀಸ್ತಾನಿ ದಾಳಿಗಾರರ ಕೋಲಾಹಲ ಮತ್ತು ಯುದ್ಧದ ಆರ್ಭಟೆ ಕೇಳಿಸುತ್ತಿತ್ತು. ಅವರ ಆಕ್ರಮಣದಿಂದ ಕಾಶ್ಮೀರವನ್ನು ಉಳಿಸಿ, ಕಾಶ್ಮೀರದ ಜನತೆಯನ್ನು ಕಾಪಾಡುವ ಕಾರ್ಯಭಾರ ಅವರ ಹೆಗಲ ಮೇಲಿತ್ತು. ಕಾಶ್ಮೀರದ ರಕ್ಷಣೆಗಾಗಿ ಅವರು ಕರೆ ಕೊಟ್ಟಾಗ ಕಾಶ್ಮೀರದ ಜನತೆ ಒಂದಾಗಿ ಅವರ ಧ್ವಜದಡಿಯಲ್ಲಿ ಸೇರಿತು. ಹಳೆಯ ಆಡಳ್ತಮಂಡಲ ಕುಸಿದುಬಿದ್ದು, ಶೇಕ್ ಅಬ್ದುಲ್ಲಾರವರ ನೇತೃತ್ವದಲ್ಲಿ ಹೊಸ ಆಡಳ್ತಮಂಡಲ ಒಡನೆ ರಚನೆಯಾಯಿತು. ಭಾರತ ಸೇನೆಯ ಸಹಾಯದಿಂದ ಶತ್ರುವನ್ನು ಕಾಶ್ಮೀರದಿಂದ ದೂರಕ್ಕೋಡಿಸಲು ಅಬ್ದುಲ್ಲಾರವರು ಸಮರ್ಥರಾದರು.

ಕಾಶ್ಮೀರದ ಪ್ರಧಾನ ಪ್ರಧಾನ ಪೀಠ ಅಲಂಕರಿಸಿದ ಮೊದಲ ಎರಡು ವರ್ಷಗಳಲ್ಲಿ ಶೇಕ್ ಅಬ್ದುಲ್ಲಾರವರು ಸಂಸ್ಥಾನದ ಭದ್ರತೆ ಮತ್ತು ಅಭ್ಯುದಯಗಳ ಬಗ್ಗೆ ಭಾರತದೊಡನೆ ನಿಕಟ ಸಂಪರ್ಕವಿಟ್ಟುಕೊಂಡೇ ಮುಂದುವರಿದರು. 'ಕಾಶ್ಮೀರ ಸಂಸ್ಥಾನದ ಭವಿಷ್ಯತ್ತನ್ನು ಕಾಶ್ಮೀರದ ಜನರೇ ನಿರ್ಧರಿಸತಕ್ಕದ್ದು' ಎಂಬ ವಾಗ್ದಾನವನ್ನು ಭಾರತ ಸರಕಾರ ಮರೆಯಲಿಲ್ಲ. ಕಾಶ್ಮೀರಕ್ಕೆ ನೂತನ ರಾಜ್ಯಾಂಗ ಘಟನೆಯನ್ನು ತಯಾರಿಸುವ ಬಗ್ಗೆ ಘಟನಾ ಸಮಿತಿಯೊಂದನ್ನು ಶೇಕ್ ಅಬ್ದುಲ್ಲಾರವರು ರಚಿಸಿದರು. ಯುಸ್ತರಾಷ್ಟ್ರ ಸಂಘದ ಮುಂದೆ ಕಾಶ್ಮೀರದ ಪ್ರಶ್ನೆ ಹೋದಾಗಲೂ ಪಾಕಿಸ್ತಾನದ ಆಕ್ರಮಣ ಧೋರಣೆಯನ್ನು ಶೇಕ್ ಅಬ್ದುಲ್ಲಾರವರು ಬಯಲು ಪಡಿಸಿದುದಲ್ಲದೆ, ಭಾರತ ಸೇನೆಯು ಕಾಶ್ಮೀರಕ್ಕೆ ಸಲ್ಲಿಸಿದ ಸಮಯೋಚಿತ ಸಹಾಯವನ್ನು ಎತ್ತಿ ಹಿಡಿದರು,

ಭಾರತದ ಕುರಿತು ಶೇಕ್ ಅಬ್ದುಲ್ಲಾರವರ ಧೋರಣೆಯಲ್ಲಿ ಬದಲಾವಣೆಯ ಮೊದಲ ಸೂಚನೆಗಳು ಕಂಡುಬಂದುದು ೧೯೫೨—೫೩ ನೇ ಚಳಿಗಾಲದಲ್ಲಿ, ಜಮ್ಮೂಗಳಲ್ಲಿ ಜನಸಂಘ ಮತ್ತು ಪ್ರಜಾಪರಿಷತ್ತುಗಳು ಚಳವಳ ಆರಂಭಮಾಡಿದಾಗ. ಹಿಂದೂ ಜಮ್ಮೂವನ್ನು ಭಾರತದೊಡನೆ ಸೇರಿಸಬೇಕೆಂಬ ಈ ಚಳವಳ ಭಾರತ ಸರಕಾರದ ಪ್ರೇರಣೆಯಿಂದಲೇ ನಡೆದುದಿರಬೇಕೆಂಬ ನಿರಾಧಾರ ಸಂದೇಹವೇ ಅವರ ಮನೋಮಾರ್ಪಾಟಕ್ಕೆ ಕಾರಣವಾದುದಿರಬೇಕು. ರಣಬೀರಸಿಂಘಪುರದಲ್ಲಿ ಕಳೆದ ವರ್ಷ ಏಪ್ರಿಲ್ ತಿಂಗಳಲ್ಲಿ ಮಾಡಿದ ಒಂದು ಸಾರ್ವಜನಿಕ ಭಾಷಣದಲ್ಲಿ ಈ ಸಂಬಂಧವಾಗಿ ಭಾರತದ ಮೇಲೆ ಅವರು ಉರಿ ಕಾರಿಯೇ ಬಿಟ್ಟರು. ಆದರೆ, ಜುಲೈ ತಿಂಗಳಲ್ಲಿ ಉಭಯ ಸರಕಾರಗಳೊಳಗೆ ತಿರುಗೊಮ್ಮೆ ಸ್ನೇಹಸೌಹಾರ್ದದ ಬಗ್ಗೆ ಒಪ್ಪಂದ ನಡೆದು, ರಕ್ಷಣೆ, ವಿದೇಶಾಂಗ ಚಟುವಟಿಕೆ ಮತ್ತು ಸಾರಿಗೆಗಳ ವಿಚಾರದಲ್ಲಿ ಭಾರತದೊಡನೆ ಸೇರುವ ನಿರ್ಧಾರ ಕಾಶ್ಮೀರ ಕೈಕೊಂಡಿತು.

ಸಂದೇಹದ ಗೆದ್ದಲು ಒಳಗಿಂದೊಳಗೆ ಮನಸ್ಸನ್ನು ಕೊರೆಯುತ್ತಲೇ ಇತ್ತು. ೧೯೫೨—೫೩ ನೇ ಚಳಿಗಾಲದಲ್ಲಿ ಜಮ್ಮೂವಿನಲ್ಲಿ ಪ್ರಜಾಪರಿಷದ ಮತ್ತು ಜನಸಂಘಗಳು ಜಮ್ಮೂವು ಸಂಪೂರ್ಣ ಭಾರತದೊಡನೆ ಸೇರ್ಪಡೆಯಾಗಬೇಕೆಂದು ಸತ್ಯಾಗ್ರಹ ಹೂಡಿದಾಗಲಂತು ಶೇಕ್ ಅಬ್ದುಲ್ಲಾರವರು ಭಾರತದ ಮೇಲೆ ಕಿಡಿಗಾರತೊಡಗಿದರು. ಭಾರತ ಸರಕಾರವೇ ಈ ಚಳವಳ ಹೂಡಿಸಿದುದೆಂಬ ಮೊದಲಿನ ಸಂದೇಹವೇ ಅವರ ಮನಸ್ಸಿನಲ್ಲಿ ದೃಢವಾಯಿತು. ಡಾ. ಶ್ಯಾಮಪ್ರಸಾದ ಮುಖರ್ಜಿಯವರನ್ನು ಕಾಶ್ಮೀರ ಸರಕಾರದಿಂದ ನಿರ್ಬಂಧಿಸಲ್ಪಟ್ಟು, ಸ್ಥಾನಬದ್ಧತೆಯಲ್ಲಿರುವಾಗಲೇ ಅಕಾಲ ನಿಧನಕ್ಕೊಳಗಾಗಲು, ಶೇಕ್ ಅಬ್ದುಲ್ಲಾರವರು ಬಹಿರಂಗವಾಗಿ ಭಾರತವನ್ನು ಜರೆಯಲು ತೊಡಗಿದರು. ಭಾರತದೊಡನೆ ಸಖ್ಯದ ಕುರಿತು ಮಾತೇ ನಿಂತುಹೋಯಿತು. ಬದಲು ಪಾಕೀಸ್ತಾನದೊಡನೆ ಕೂಡಿದರಾಗಬಹುದೆನ್ನುವ ಅಭಿಪ್ರಾಯವೂ ಅವರ ಅವಿವೇಕಪರವಾದ ಭಾಷಣಗಳಲ್ಲಿ ಸುಳಿಯತೊಡಗಿತು. ಅಬ್ದುಲ್ಲಾರವರ ಈ ಮನೋಮಾರ್ಪಾಟು ಕಾಶ್ಮೀರದ ಇತರ ಜನಪ್ರಿಯ ಮುಖಂಡರಿಗೆ ಹಾಗು ಜನತೆಗೆ ಮೆಚ್ಚಿಕೆಯಾಗಲಿಲ್ಲ. ಅವರನ್ನು ಸರಿದಾರಿಗೆ ತರಬೇಕೆನ್ನುವ ಮುಖಂಡರ ಯತ್ನ ನಿಷ್ಫಲವಾಯಿತು. ಬದಲು ಶೇಕ್ ಅಬ್ದುಲ್ಲಾರವರು ಜನರೊಳಗೆ ಅಭಿಪ್ರಾಯ ಭೇದದ ಕಲಹ ಬೀಜಗಳನ್ನು ಬಿತ್ತುತ್ತಿರುವುದೂ ವೇಳೆಗೆ ಬಂತು. ರಾಷ್ಟ್ರೀಯ ಪರಿಷತ್ತಿನೊಳಗೆ ಒಡಕು ತರುವ ಯತ್ನದಲ್ಲಿ ಶೇಕ್ ಅಬ್ದುಲ್ಲಾರವರು ಸಂಪೂರ್ಣ ಪರಾಜಯ ಹೊಂದಬೇಕಾಯಿತು. ಕಾಶ್ಮೀರದ ದೊರೆ ಸಾದರ್-ಇ-ರಿಯಾಸತ್‌ರವರು ಅವರನ್ನು ಪದಚ್ಯುತರನ್ನಾಗಿ ಮಾಡಿ ಉಪಪ್ರಧಾನರಾದ ಬಕ್ಷಿ ಗುಲಾಮ್ ಮಹಮ್ಮದರಿಗೆ ಹೊಸ ಮಂತ್ರಿ ಮಂಡಲ ರಚಿಸುವಂತೆ ಆಜ್ಞೆ ಕೊಟ್ಟರು.

ಆಗಸ್ಟ್ ೯, ಭಾರತದ ಸ್ವಾತಂತ್ರ್ಯ ಸಮರದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಲ್ಪಟ್ಟ ಆ ದಿನವೇ ಶೇರ್—ಎ—ಕಾಶ್ಮೀರರ ಪತನದ ದುರ್ದಿನವಾಯಿತು. ಕಾಶ್ಮೀರದೊಳಗೆ ಆಂತರಿಕ ವಿಪ್ಲವ ತರುವ ದೇಶವಿಘಾತುಕ ಆಕಾಂಕ್ಷೆ ಇಟ್ಟುಕೊಂಡ ಬಗ್ಗೆ ಶೇಕ್ ಅಬ್ದುಲ್ಲಾ ಮತ್ತು ಅವರ ಕೆಲಮಂದಿ ಆಪ್ತ ಅನುಯಾಯಿಗಳನ್ನು ಕಾಶ್ಮೀರ ಸರಕಾರವು ದಸ್ತಗಿರಿ ಮಾಡಿ ಸ್ಥಾನಬದ್ಧತೆಯಲ್ಲಿಟ್ಟಿತು. ಬಕ್ಷಿ ಗುಲಾಮ್ ಮಹಮ್ಮದರ ಹೊಸ ಸರಕಾರದ ಆಡಳ್ತ ವಾಘೆ ಹಿಡಿಯಿತು.

'ಪ್ರಭಾತ.'

ಸೋಮವಾರಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಕೆ. ಎಂ. ಮೊಗಪ್ಪನವರು

ನೆಹ್ರೂರವರ ಅಸಮಾನ ವ್ಯಕ್ತಿತ್ವ

ಲೇ:—"ಕವಿಕಿರಣ", ಮೈಸೂರು.

ಭಾರತ ದೇವಿಯ ಭವ್ಯ ಸಾಮ್ರಾಜ್ಯದ ಪ್ರಪ್ರಥಮ ಪ್ರಧಾನಿ ಪಟ್ಟವನ್ನು ಅಲಂಕರಿಸಿದ ಪಂಡಿತ ಜವಾಹರಲಾಲ್ ನೆಹ್ರೂರವರ ಚಾತುರ್ಯತೆ ಚಿರಸ್ಮರಣೀಯವಾದುದೊ, ಅಂತೆಯೇ ಇಡೀ ಪ್ರಪಂಚದ ದುರುಳ ಸಮಾಜದ ಜೀವಸಂಘದಲ್ಲಿ ಹೆರುಪು ನಾಡಿಯನ್ನು :ಮಿಡಿಯುವಂತಹದೂ ಆದ ಒಂದು ಅಮರ ತೇಜಸ್ಸೆನ್ನಬೇಕು.

ಅಖಂಡ ಹಿಂದೂಸ್ಥಾನದ ಪ್ರಜಾವರ್ಗವು ದಾಸ್ಯ ಶೃಂಖಲೆಯಿಂದ ತೋಯಿತವಾಗಿದ್ದನ್ನು ನೀತಿಯ ಉನ್ನತ ಮಟ್ಟದಲ್ಲಿ ಇಡೀ ವಿಶ್ವವೇ ಅಚ್ಚರಿ ಪಡೆಯುವಂತೆ ಸಡಲಿಸಿ ಸ್ವಾತಂತ್ರ್ಯ ವೈಭವ ಹಿನ್ನೆಲೆಯಲ್ಲಿ ತನ್ನ ಆದರ್ಶ ತತ್ವ ಸಾರಣಿಯನ್ನು ಸಾಧಿಸಿ "ಸ್ವಾತಂತ್ರ್ಯ ಶಿಲ್ಪಿ' ಯೆಂದು ಹೆಸರಾಂತು ಕಣ್ಮರೆಯಾದ ರಾಷ್ಟ್ರಪಿತ ಪೂಜ್ಯ ಮಹಾತ್ಮಾಜಿಯವರ ಹುರುಪು ಹಾದಿಯ ದಿವ್ಯ ಕಿರಣದಡಿಯಲ್ಲಿ ಉತ್ಸಾಹದಿಂದ ಪರಿಪೂರ್ಣತೆಯ ಕೆಚ್ಚೆದೆಯಿಂದ ತಾಯ್ನಾಡಿನ ಸ್ವಾತಂತ್ರ್ಯ ಸಾಮ್ರಾಜ್ಯಕ್ಕಾಗಿ ಹೋರಾಡಿ ವಿಜಯಗಳಿಸಿದ ದೇಶಪ್ರೇಮಿಗಳ ಸಮುದಾಯಕ್ಕೆ ಮೆಚ್ಚಿನ ನಾಯಕ ಶ್ರೇಷ್ಠರೆನಿಸಿ, ಮಹಾತ್ಮಾಜಿಯವರ 'ಉತ್ತರಾಧಿಕಾರಿ' ಸ್ಥಾನವನ್ನು ಅವರಿಂದಲೇ ಪಡೆದ ನೆಹರೂರವರ ಕೀರ್ತಿ ಕಳಶವು ಅವರು ಪೂರ್ವ ಜನ್ಮದಲ್ಲಿ ಎಸಗಿದ ಸಾಂಸ್ಕೃತಿಕ ಸಂಸ್ಕಾರದ ಯೋಗವೆನ್ನದೆ ವಿಧಿಯಿಲ್ಲ!

ಜವಹರರೇ ಏಕೆ?

ಜವಹರರೇ ಮಹಾತ್ಮಾಜೀಯವರ ಉತ್ತರಾಧಿಕಾರಿಗಳಾಗಬೇಕೇ? ಪಟೇಲ್, ರಾಜಾಜಿ, ರಾಜೇಂದ್ರ ಪ್ರಸಾದ ಮತ್ತು ಆಜಾದರು ಇವರಿಗಿಂತ ಯಾವುದರಲ್ಲಿ ತಾನೇ ಕಡಿಮೆಯಾಗಿದ್ದರು? ಒಡಲಿನಲ್ಲಿ ಒಲವಿನಿಂದ ಸಾಕಿ ಸಲಹಿದ ತಾಯನ್ನು ಸ್ವಾತಂತ್ರ್ಯ ಹೊನಲಿನಲ್ಲಿ ರಂಜಿಸಲು ಕಂಕಣ ಬದ್ಧರಾಗಿ ಘೋರ ಸಂಗ್ರಾಮದ ಹೆದ್ದಾರಿಗೆ ಹೆಜ್ಜೆಯಾಗಿ, ಭುಜಕ್ಕೆ ಭುಜ ನೀಡಿ, ಪ್ರಾಣಕ್ಕೆ ಪ್ರಾಣ ಕೊಡಲು ಮುಂದೆ ಬಂದವರಲ್ಲಿ ಇವರುಗಳಂತೆಯೇ ಜವಹರರೂ ಒಬ್ಬರು

ಇವರಲ್ಲಿ ಹುದುಗಿರುವ ಅಪಾರವಾದ ಸಾಹಿತ್ಯ ಶಕ್ತಿಯೇ ಈ ವೈಶಿಷ್ಟ್ಯಕ್ಕೆ ಕಾರಣವಿರಬಹುದೇ? ವಿಶ್ವದಲ್ಲಿ ಸಾವಿರಾರು ಮಂದಿ ಪ್ರವೀಣ ಕಲಾವಿದರ, ಕವಿಗಳ ಮತ್ತು ಮೇಧಾವಿಗಳ ಪಂಕ್ತಿಯಲ್ಲಿ ನೆಹರೂರವರ ವ್ಯಕ್ತಿತ್ವವೂ ಒಂದಾಗಿ ನಿಲ್ಲುತಿತ್ತು. ಆದರೆ ಅಖಂಡ ವಿಶ್ವವನ್ನೇ ತಲ್ಲಣಿಸಿ, ಎಲ್ಲೆಡೆಯೂ ಒಂದು ವಿಧವಾದ ಪ್ರಿಯತೆ, ವಿನಯ ಮತ್ತು ಭಕ್ತಿ ಪೂರ್ವಕವಾದ ಮನ್ನಣೆಯನ್ನು ಪಡೆಯುವಂತಹ ವ್ಯಕ್ತಿತ್ವವು ಸಾಹಿತ್ಯ ಪ್ರಪಂಚದಲ್ಲಿ ದೊರಕುವದೆಂದರೇನು?

ಅದೂ ಇರಲಿ, ಅವತಾರ ಪುರುಷರಾದ ಮಹಾತ್ಮಾಜಿಯವರ ಮನವನ್ನು ಒಲಿಸಿಕೊಳ್ಳುವಪೆಂನರೇನು! ಇದಕ್ಕೆ ಅವರಲ್ಲಿ ಒಂದು ಅಮರವಾದ ಗುಣ ಎದ್ದು ಕಾಣಲೇಬೇಕು. ಅದೇ ಜವಹರರಲ್ಲಿರುವ ಅಮೃದ್ಭುತವಾದ ಆಕರ್ಷಣ ಶಕ್ತಿ. ಇದೊಂದು ದೈವದತ್ತವಾಗಿ ಹುಟ್ಟಿನಿಂದಲೇ ರೂಪುಗೊಂಡು ವಿಕಾಸಗೊಂಡು ಪಡೆದ ಚಿರ ಭಾಗ್ಯ. ಈ ಗುಣಪ್ಪೆ ಒಂದು ಫಲಯುತವಾದ ವಾತಾವರಣ ಸಿಕ್ಕಿ ಮಹತ್ತರವಾದ ಅಪೂರ್ಣ ಹಿನ್ನೆಲೆಯಲ್ಲಿ ವಿಕಾಸವಾಗಿ ರೂಪುಗೊಂಡು ವಿವಿಧ ಕ್ಷೇತ್ರಗಳಲ್ಲಿ ತನ್ನ ವರ್ಚಸ್ಸನ್ನು ಬೀರುವಂತೆ ಪ್ರಚೋದನೆಯಾಗುವುದು ಅತ್ಯಲ್ಪ-ಬಹು ವಿರಳ.

ಜವಹರರಿಗೆ ದೊರೆತ ಹಿನ್ನೆಲೆ ಯಾವುದು, ವಾತಾವರಣ ಯಾವುದು? ಅದರ ಮಹತ್ವದ ಘನತೆಯಾದರೂ ಏನೆನ್ನಬಹುದು? ದಾಸ್ಯ ಜೀವನದಿಂದ ಬೇಸತ್ತು ಇಡೀ ರಾಷ್ಟ್ರವೇ ಕ್ರೋಧಗೊಂಡು, ಒಂದು ಕ್ರಾಂತಿಪೂರ್ಣವಾದ ಆವೇಶದ ಹೊಸಲಿನಲ್ಲಿ ಹೊರಳಿ, ಅಚಲ ಭಕ್ತಿಯಿಂದ ತಾಯ್ನಾಡಿನ ಕೀರ್ತಿಗಾಗಿ ತನ್ನ ರಕ್ತ ಚೆಲುಮೆಯನ್ನೇ ಮುದುಪಿನ ಕಾಣಿಕೆಯಾಗಿ ಅರ್ಪಿಸಲು ಪಣ ತೊಟ್ಟು ಸ್ವಾತಂತ್ರ್ಯ ಸಂಗ್ರಾಮದ ಕಡಲಿಗೆ ಧುಮುಕಿ ಎಸಗುತಿದ್ದ ಸಾಹಸದ ಮೆರಗು ಜವಹರರ ಹೃದಯ ನಾಡಿಯನ್ನು ಒಮ್ಮೆಲೇ ಮಿಡಿದು ಕ್ರಾಂತಿ ಪಥಕ್ಕೆ ಸೆಳೆದು ಅವರ ವ್ಯಕ್ತಿತ್ವದ ಭವ್ಯತೆ ಚಿರಮಯವಾಗುವಂತೆ ಮಾಡಿತು.

ನೆಹರೂರವರ ಅಸದಳವಾದ ವ್ಯಕ್ತಿತ್ವದ ಪ್ರತಿಭೆಯು ರಾಜಕೀಯ ಪ್ರಪಂಚದಲ್ಲಿ ಅಪ್ರೊಂದು ಉತ್ಸಾಹ ಹಿನ್ನೆಲೆಯಲ್ಲಿ ಪ್ರಚೋದಿತವಾಗಿ ತನ್ನ ವರ್ಚಸ್ಸನ್ನು ಬೀರಿದ್ದರೆ, ಏನಾಗುತ್ತಿತ್ತೋ ಹೇಳಲು ಸಾಧ್ಯವಿಲ್ಲ. ಅವರೆಂದು ಸ್ವಾತಂತ್ರ್ಯ ಸಂಗ್ರಾಮದಿಂದ ದೂರವಾಗಿ ಬೇರಾವ ರಂಗದಲ್ಲಾದರೂ ತಮ್ಮ ಪ್ರೌಢಿಮೆಯನ್ನು ಅಂಕುರಿಸುವೆನೆಂದು ಕುಳಿತಿದ್ದರೆ ಇಂದು ಅವರ ನಾಮಾಂಕಿತವು ಹೇಗಿರುತಿತ್ತೋ ಹೇಳಲಾಗುವುದಿಲ್ಲ. ಆದರೆ ಸರ್ವಸ್ವವನ್ನೂ ತ್ಯಜಿಸಿ ಕೇವಲ ಒಬ್ಬ ಬಡ ರೈತನಂತೆ ತೋರುತ್ತಲಿದ್ದ ಮಹಾತ್ಮಾಜಿಯವರ ವೀರ ವಚನವನ್ನು ಭಾರತಾಂಬೆಯು ಕಳುಹಿದ ವಾತ್ಸಲ್ಯವಾಣಿಯೆಂದರಿತು, ಭಾಗ್ಯಲಕ್ಷ್ಮಿಯ ಕುವರರಾದ ಜವಹರರು ಬಡಜನತೆಯ ಕಣ್ಣೀರಿಗಾಗಿ ಮರುಗಿ ಸ್ವಾತಂತ್ರ್ಯ ಸಂಗ್ರಾಮದ ಕಡಲಿಗೆ ಧುಮುಕಬೇಕಾದರೆ ಸಾಮಾನ್ಯ ಮಾನವನಿಂದ ಎಸಗಬಲ್ಲ ಸಾಹಸವೇ ಎಂಬುದನ್ನು ಗ್ರಹಿಸಿ ನೋಡಬೇಕು. ಈ ಸಾಹಸವು ಬಲಯುತವಾಗಿ ಅವರ ಮನದಲ್ಲಿ ಬೇರೂರಿ, ರಾಜಕೀಯದಲ್ಲಿ ಫಲವೀಯಬೇಕಾದರೆ ಅವರಿಗೆ ದೇವಾಂಶವಿಲ್ಲದಿದ್ದರೆ ಸಾಧ್ಯವೇ ಇರುತ್ತಿರಲಿಲ್ಲವೆಂದು ಬೇರೆ ಹೇಳಬೇಕಾಗಿಲ್ಲ. ಅಂದ ಮೇಲೆ ಇಂತಹ ಉತ್ಸಾಹಪೂರ್ಣರಾದ ನಾಯಕರಲ್ಲಿ "ಆಕರ್ಷಣ ಶಕ್ತಿ"ಯೊಂದು ಉದ್ಭವಿಸಿ ಎದ್ದು ತೋರುವುದರಲ್ಲೇನು ಅಚ್ಚರಿ?

ನೆಹ್ರೂರವರಲ್ಲಿ ವಿಕಾಸಗೊಂಡಿರುವುದು "ಆತ್ಮಾಕರ್ಷಣೆ" ಇವರ ಹೊರ ಹೊಮ್ಮಿಕೆಯಾಗುವುದು. ಕುಲ ಸಾಹಸದ ಪ್ರೌಢಿಮೆಯಿಂದ ಅದ್ವಿತೀಯವಾದ ಅಪೂರ್ವ ಸಾಮರ್ಥ್ಯದಿಂದ ಎಂತಹ ರಾಜಕಾರಣಿಯಲ್ಲೂ ಅಭಿಪ್ರಾಯವನ್ನು ಮಾಡಿಸಿ ತಮ್ಮ ಅಭಿಪ್ರಾಯವನ್ನು ಅತ ಒಪ್ಪುವಂತೆ ಮಾಡುವ ವ್ಯಕ್ತಿತ್ವ ಜವಹರರಲ್ಲಿದೆ. ಬರಿಯ ಆಕರ್ಷಣ ಶಕ್ತಿಯೊಂದೇ ಅಲ್ಲದೆ ಇವರೊಡನೆ ಇವರಲ್ಲಿರುವ ಅದ್ವಿತೀಯವಾದ ರಾಜಕಾರಣ ವಿಚಕ್ಷಣೆಯೊ ಸಮರಸವಾಗಿ ಭವ್ಯ ಭಾವೌನ್ನತ್ಯದಿಂದ ಸಂಗಮಗೊಂಡಿದೆ.

ಸ್ವತಂತ್ರ ರಾಷ್ಟ್ರದ ನೀತಿ ನಿಯಮಗಳ ತಿಳುವಿಲ್ಲದ ಕೋಟಿಗಟ್ಟಲೆ ಜನತೆಯಿಂದ ಕೂಡಿರುವ ಭಾರತವನ್ನು ಸ್ವಾತಂತ್ರ್ಯ ಸಾಮ್ರಾಜ್ಯದ ಅಡಿದಾವರೆಗೆ ಹೆಜ್ಜೆಯಾಗಿಸಿ ಕೇವಲ ಮೂರು ವರ್ಷಗಳ ಹಸುಳೆತನದಲ್ಲೇ 'ಗಣರಾಜ್ಯ' (ರಿಪಬ್ಲಿಕ್) ವೆಂದು ಘೋಷಿಸಿ ಒಮ್ಮೆಲೆ ವಿಶ್ವಸಂಸ್ಥೆ ಸಹ ತಲೆದೂಗುವಂತೆ ಮಾಡಿದರು. ನಮ್ಮ ಸರಕಾರದ ಹಿರಿಮೆಯ ಚಾಲಕರಾದ "ನೆಹರೂ" ರವರ ಪ್ರಭಾವ ಎಂತಹುದೆಂದು ಇದರಿಂದ ಊಹಿಸಬಹುದು.

ಸ್ವಾತಂತ್ರ್ಯಕ್ಕಾಗಿ ದೀರ್ಘ ಹೋರಾಟ

ಮೂವತ್ತು ವರ್ಷಗಳ ಕಾಲ ಸತತವಾಗಿ ಹಿಂದೂ ಮುಸ್ಲೀಮರು ಒಮ್ಮತದಿಂದ ತಾಯ್ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು ಅಂತೆಯೇ ಜಯವಾಯಿತು.

ಆದರೆ ಸ್ವಾತಂತ್ರ್ಯ ಉದಯವಾಗುವ ದಕ್ಕೆ ಮುಂಚೆ ಇದ್ದ ಒಮ್ಮತ ಸ್ವಾತಂತ್ರ್ಯ ಬಂದ ಮೇಲೆ ನುಚ್ಚು ನೂರಾಯಿತು. ದೇಶ ವಿಭಜನೆಯು ಸಂಭವಿಸಿತು. ಮೊದಲೇ ಆಹಾರಾಭಾವ ಮೊದಲಾದವುಗಳಿಂದ ಬಳಲುತ್ತಿದ್ದ ನಾಡು ಈ ಪ್ರಸಂಗದಿಂದ ತತ್ತರಿಸಿ ಹೋಯಿತು. ಕಷ್ಟ ಸನಿಹಿತವಾದಂತೆಲ್ಲ ಸರ್ಕಾರವೇನೂ ದಿಕ್ಕು ತೋಚದೆ ಕುಳಿತಿಲ್ಲ. ಕೈಮೀರಿ ಶ್ರಮಿಸುತ್ತಿದೆ. ಹೆಚ್ಚು ಬೆಳೆ ಬೆಳೆದವರಿಗೆ ಬಹುಮಾನವೆಂದು ಸಾರುತ್ತಿದೆ. ಉತ್ತಮ ಬೀಜ ರಸಾಯನ ಗೊಬ್ಬರಗಳ ಹಂಚಿಕೆ, ಹೆಚ್ಚಿನ ಭರವಸೆಯನ್ನು ಕಲ್ಪಿಸಿ ರೈತ ಬಾಂಧವರನ್ನು ಹುರಿದುಂಬಿಸುತ್ತಿದೆ. ಪರರಾಷ್ಟ್ರಗಳನ್ನಾಶ್ರಯಿಸಿ ಆಹಾರ ಸಮಗ್ರಿಗಳನ್ನು ರೂಢಿಸುತ್ತಿದೆ. ಯಾವುದೇ ಆಗಲೀ ಸನಿಯಲ್ಲಿ ಫಲವೀಯಲಾರದು. ಅಂತೆಯೇ ಒಮ್ಮೆಲೆ ಭುವಿಯಲ್ಲಿ ಸ್ವರ್ಗ ತೋರಲಾಗದು. ಕೆಲವೇ ವರ್ಷಗಳಲ್ಲಿ ತನ್ನ ನಿಜ ಸ್ಥಿತಿಯನ್ನು ತಾಳಿ ಭಾರತವು ಭಾಗ್ಯಲಕ್ಷ್ಮಿಯ ನೆಲೆವೀಡಾಗಿ ಬಾಳುವದು. ಇದು ಸತ್ಯಾಂಶಕ್ಕೆ ಲೇಶಾಂಶವೂ ದೂರವಾಗದು. ಕಾರ್ಯಗತವಾಗಿಯೇ ತೀರುವದು.

ಜನತೆ ಅರಿಯಬೇಕು

ಅಂದ ಮೇಲೆ ಜನ ಅರಿಯಬೇಕು. ಈಗಿನ ಕಷ್ಟ ಕಾರ್ಪಣ್ಯಕ್ಕೆ ಹೊಣೆ ನೆಹರೂರವರೇ, ಅವರ ಸರ್ಕಾರವೇ, ಕಾಂಗ್ರೆಸ್ ಸಂಸ್ಥೆಯೇ ಅಥವ ಮತಭೇದದ ಹಿನ್ನೆಲೆಯಲ್ಲಿ ಪ್ರಸರಿಸಿದ ಪ್ರಸಂಗವೇ ಎಂದು! ಇಂತಹ ಒಂದು ವಿಧವಾದ ವಿಷಪೂರಿತ ಹೊನಲಿನಲ್ಲಿ ನಾಡು ಹೊರಳುತ್ತಿರುವಾಗ ಕೆಚ್ಚೆದೆಯಿಂದ ನಮ್ಮ ರಾಷ್ಟ್ರವನ್ನು ಕೈಗಾರಿಕಾ ಬೀಡಾಗಿಸಲು ಬಯಸಿ, ಈಗಾಗಲೇ ಹಲವಾರು ಉಚ್ಚ ಕೈಗಾರಿಕಾ ಕೇಂದ್ರಗಳನ್ನು ಭಾರತದಲ್ಲಿ ತೆರೆಯುವಂತೆ ಮಾಡಿರುವ ಸಹಾಸವು ನೆಹರೂರವರ ವ್ಯಕ್ತಿತ್ವಕ್ಕೆ ಮೆರಗು ಕೊಡುತ್ತದೆಯೋ ಅಥವಾ ಮಂಕು ಕವಿಯಬಲ್ಲದೇ ಅರಿಯಬೇಕು.

ಅಣುಶಕ್ತಿಯಿಂದ ತಲ್ಲಣಿಸುತ್ತಿರುವ ಈ ಆಧುನಿಕ ಜಗತ್ತಿನಲ್ಲಿ ಗಾಂಧೀತತ್ವಾಚರಣೆಯನ್ನು ಎಲ್ಲೆಡೆಯೂ ಹರಡಿ ಅಖಂಡ ವಿಶ್ವದ ಶಾಂತಿಗಾಗಿ ಹಗಲಿರುಳೂ ಶ್ರಮಿಸುತ್ತಾ ನೆಹರೂರವರು ವಿಜಯಗಳಿಸುತ್ತಿರುವದು, ಮರಳು ಕಾಡಿನ ಬಂಜರು ಭೂಮಿಯನ್ನು ಕೃಷಿಮಾಡಿ ಉತ್ತಮ ಬೆಳೆ ತೋರಿ ಹೆಚ್ಚು ಬೆಳೆ ತೋರಿದುದಕ್ಕಾಗಿ ಸುವರ್ಣ ಪದಕವನ್ನು ಪಡೆಯುವಂತಹ ಎದೆಗಾರಿಕೆಗೆ ಹೋಲಿಸಲೇಬೇಕು! ಈ ವಿಧವಾದ ಇವರ ಶಾಂತಿ ರೀತಿಯ ನವ ಪ್ರಯೋಗವು ಇಡೀ ವಿಶ್ವದಲ್ಲೇ ಭಾರತದ ಕೀರ್ತಿಯ ಜ್ಯೋತಿಯನ್ನು ಎತ್ತಿ ಪ್ರಕಾಶಿಸಿದಂತಾಗಿದೆ. ಇಂತಹ ಹಿರಿಮೆಯ ವ್ಯಕ್ತಿಯನ್ನು ರಾಷ್ಟ್ರನಾಯಕನನ್ನಾಗಿ ಆರಿಸಿ ಪಡೆದುಕೊಂಡಿರುವ ಭಾಗ್ಯ, ಅವರ ಬೆಳಕಿನಲ್ಲಿ ಬಾಳ ಬೆಳೆಸುತ್ತಿರುವ ನಮ್ಮ ಭಾರತೀಯರಾದ ನಮ್ಮಗಳ ಸುಯೋಗವಲ್ಲವೇ?

ನೆಹರೂರವರ ವಿದೇಶ ನೀತಿಯ ರಹಸ್ಯವನ್ನು ಇಂದಿನ ತರುಣ ಸಮಾಜ ಅರಿತರೆ ಆದರೆ ಭಾರತವನ್ನು ಯುಗ ಯುಗಾಂತರವೂ ಸ್ವಾತಂತ್ರ್ಯದ ಬೀಡಾಗಿ ಬೆಳಗುವಂತೆ ಮಾಡಬಹುದು. ಅವರ ಅಗಾಂಭೀರ್ಯ ಭಾವ, ಶೀವಿಯುಂಶವಾದ ನಡತೆ, ಅಚ್ಚಳಿಯದ ವಾಕ್ಚಾತುರ್ಯತೆ, ಸುಂದರವಾದ ರೂಪು, ಆಳವಾದ ಭಾವ, ವೃದ್ಧಾಪ್ಯ ಹೊಂದಿದ್ದರೂ ಚಿರಯೌವನವನ್ನು ತಾಳಿರುವ ಭವ್ಯತೆ, ನಿಸ್ವಾರ್ಥತೆಯ ಹೃದಯ, ಕೆಚ್ಚೆದೆಯ ಸಾಹಸ, ಅಪಾರವಾದ ಸಾಹಿತ್ಯಜ್ಞಾನ, ಅದ್ವಿತೀಯವಾದ ರಾಜಕಾರಣತ್ವ, ಸರ್ವತಂತ್ರ ಸ್ವತಂತ್ರವಾಗಿ ಬಾಳಬೇಕೆಂಬ ಹೆಬ್ಬಯಕೆ ಅವರ ವ್ಯಕ್ತಿತ್ವದ ಹಿರಿಮೆಯ ಗುಣಗಳು. ಅಂದ ಮೇಲೆ ಅವರ ವ್ಯಕ್ತಿತ್ವದ ರಹಸ್ಯವು ಇದೆಂತಹ ಅಪೂರ್ವವಾದ ಹಾಗೂ ಆಂತರಿಕ ಪ್ರೌಢಿಮೆಯಿಂದ ಮಧುರವಾಗಿ ಮಿಲನಗೊಂಡಿದೆ?

ನೆಹರೂರವರ ವ್ಯಕ್ತಿತ್ವವು ಅಸದಳವಾದ ವೈಶಿಷ್ಟ್ಯ, ವೈಖರಿ, ವೈವಿಧ್ಯತೆ ವೈಚಿತ್ರ್ಯದಿಂದ ಸಂಯಮಗೊಂಡು ಕೀರ್ತಿ ಕಳಶದ ಮೇಲೆ ನಿಂತಿದೆ ಎಂಬುದನ್ನು ಭಾರತವಿಂದು ವೃಷ್ಟಾಂತ ಪೂರಿತವಾಗಿ ಕಣ್ಣೆದುರಿಗೆ ಎತ್ತಿ ತೋರುತ್ತಿದೆ ಎಂದು ಬೇರೆ ಹೇಳಬೇಕಾಗಿಲ್ಲ ಇಂತಹ ಮಹತ್ಮರನ್ನು ಈ 'ನವಯುಗದ ಮಹಾಪುರುಷ' ಎಂದು ಕರೆದರೆ ತಪ್ಪಾಗಲಾರದು.

—ಚೇತನಾ.

ಜಪಾನಿನಿಂದ ನಾವು ಕಲಿಯಬೇಕಾದ ಪಾಠ.

ಜನಸಂಖ್ಯೆ ಹೆಚ್ಚು — ಭೂಮಿ ಇಲ್ಲ.

— ಮೂಲ ಲೇಖಕ:—ಶ್ರೀ ಚಮನ್‌ಲಾಲ್ —

ಜಪಾನಿನ ಜೀವನ, ಅದರ ಕೈಗಾರಿಕೆ ಉದ್ಯಮಗಳನ್ನು ಜಪಾನಿನಲ್ಲಿ ಹಲವು ವರ್ಷಗಳಿದ್ದು ಅಭ್ಯಾಸ ಮಾಡಿದ ಶ್ರೀ ಚಮನಲಾಲರನ್ನು ಕೇಂದ್ರ ಸರಕಾರವು ಜಪಾನಿನ ಗುಡಿ ಕೈಗಾರಿಕೆಗಳ ವಿಚಾರ ಅಭ್ಯಾಸ ಮಾಡಿ ಕೇಂದ್ರ ಸರಕಾರಕ್ಕೆ ವರದಿ ನೀಡುವಂತೆ ಜಪಾನಿಗೆ ಕಳುಹಿಸಿತ್ತು. ಅವರು ಮಾಡಿದ ವರದಿಯಿಂದ ಈ ವಿಷಯಗಳನ್ನು ಶ್ರೀ "ಗುಪ್ತ"ರವರು ವಾಚಕರಿಗಾಗಿ ಸಂಗ್ರಹಿಸಿ ಕೊಡಲಿರುವರು.

ಜಗತ್ತು ಪ್ರಾರಂಭವಾದಾಗ ದೇವರ ಸೃಷ್ಟಿ ಎನಿಸಿದ ಈ ಜಗತ್ತು ಯಾವ ಒಂದು ಜನಾಂಗದ ಯಾ ವ್ಯಕ್ತಿಯ ಸ್ವಂತ ಆಸ್ತಿಯಾಗಿರಲಿಲ್ಲ. ವೇದಗಳು, ಪುರಾಣಗಳು, ಬೈಬಲು ಮತ್ತಿತರ ಧಾರ್ಮಿಕ ಗ್ರಂಥಗಳು „ಜನಸಂಖ್ಯೆಯು ಹೆಚ್ಚಿ ಭೂಮಿಯು ಸಮೃದ್ಧಶಾಲಿಯಾಗಬೇಕೆಂದು "Be faithful and multiply and replenish the eath" ಹೇಳುತ್ತಿವೆ ಈ ವೇದ ತತ್ವವನ್ನೇ ಜಪಾನು ಅನುಸರಿಸಿತು. ಅದರ ಜನಸಂಖ್ಯೆ ಹೆಚ್ಚಾಯಿತು. ಜೀವಿಸಲು ಸ್ಥಳವಿಲ್ಲದಾಯಿತು. ಬೇರೆ ಸ್ಥಳಕ್ಕಾಗಿ ಅದು ಕಾಲಿಕ್ಕಿತು. ಪರಿಣಾಮವಾಗಿ ಭಯಂಕರ ಹಾಗೂ ವಿನಾಶಕಾರಕ ಯುದ್ಧವಾಗಿ ಇಂದಿನ ಅದರ ಸ್ಥಿತಿಯು ಇನ್ನಷ್ಟು ಕಷ್ಟಪ್ರಾಯವಾಗಿದೆ. ಅದರ ಮೊರೆಂದರೆ ಜಪಾನಿನ ಜನಸಂಖ್ಯೆ ಹೆಚ್ಚಾಗಿದೆ. ಅದಕ್ಕನುಗುಣವಾಗಿ ಅವರಿಗೆ ಸ್ಥಳವಿಲ್ಲ. ಅವರಿ ಕೆನಡಾ, ಆಸ್ಟ್ರೇಲಿಯಾ, ಸಂಯುಕ್ತ ಅಮೇರಿಕಾ ಮೊದಲಾದ ಅನೇಕ ರಾಷ್ಟ್ರಗಳಲ್ಲಿ ಮಿಲಿಯಗಟ್ಟಲೆ ಎಕರೆ ಸ್ಥಳವು ಬಂಜರಾಗಿ, ವ್ಯವಸಾಯವಿಲ್ಲದೆ ಬಿದ್ದಿದೆ. ಅಲ್ಲಿ ಅವುಗಳನ್ನು ವ್ಯವಸಾಯ ಮಾಡುವರೆ ಜನಸಂಖ್ಯೆ ಇಲ್ಲ. ಆದ್ದರಿಂದ ಜಪಾನಿಗೆ ಹೆಚ್ಚಿನ ಸ್ಥಳ ಅದರ ಜನಸಂಖ್ಯೆಗನುಗುಣ ದೊರೆಯಬೇಕೆಂಬುದೇ ಅದರ ವಾದ

ಈ ವಾದದಲ್ಲಿ ಅದು ತನ್ನ ಗುರು-ಬ್ರಿಟನನ್ನು ಅನುಸರಿಸಿದೆಯೆನ್ನಬಹುದು. ಪರಿಣಾಮವಾಗಿ ಜಪಾನು ಇದ್ದದನ್ನೂ ಕಳಕೊಂಡು ವಿಪರೀತ ತೊಂದರೆಗೊಳಗಾಗಿದೆ. ಕಳೆದ ಯುದ್ಧದನಂತರ ಅದು ತನ್ನ ಹಿಂದಿನ ಪ್ರದೇಶಗಳ ಶೇಕಡ ೫೦ರಷ್ಟನ್ನು ಕಳೆದುಕೊಂಡಿದೆ. ಆದರೆ ಅದರ ಜನಸಂಖ್ಯೆಯು ಹತ್ತು ಮಿಲಿಯದಷ್ಟು ಹೆಚ್ಚಾಗಿದೆ.

ದಟ್ಟವಾದ ಜನಸಂಖ್ಯೆ

ಜಗತ್ತಿನ ಎಲ್ಲಾ ರಾಷ್ಟ್ರಗಳಿಗಿಂತಲೂ ಜಪಾನಿನಲ್ಲಿ ಜನಪಟ್ಟಣೆ ಹೆಚ್ಚಾಗಿದೆ. ಜಪಾನಿನ ವಿಸ್ತೀರ್ಣವು ೧,೪೭,೬೯೦ ಚದರ ಮೈಲು. ಇದು ಇಂಗ್ಲೆಂಡಿಗಿಂತಾ ಸ್ವಲ್ಪ ದೊಡ್ಡದಾದರೂ ಅಮೇರಿಕಾದ ಕೆಲಿಫೋರ್ನಿಯಾ ಸಂಸ್ಥಾನಕ್ಕಿಂತಾ ಚಿಕ್ಕದು. ಜಪಾನಿನ ವಿಸ್ತೀರ್ಣದ ಆರರಲ್ಲಿ ಐದಂಶ ವ್ಯವಸಾಯಕ್ಕೆ ಯೋಗ್ಯವಾದುದಲ್ಲ. ಬೆಟ್ಟಗುಡ್ಡಗಳು, ಜ್ವಾಲಾಮುಖಿಗಳಿಂದಾಗಿ ವ್ಯವಸಾಯಕ್ಕೆ ದೊರೆಯುವ ಪ್ರದೇಶವು ಬಹು ಕಡಿಮೆ.

ಸಂಯುಕ್ತ ಅಮೇರಿಕಾದಲ್ಲಿ ಚದರ ಮೈಲಿಗೆ ೨೮ ಜನರಿದ್ದರೆ, ಫ್ರಾನ್ಸಿನಲ್ಲಿ ೪೬೭; ಜರ್ಮನಿಯಲ್ಲಿ ೮೦೬, ಇಟಲಿಯಲ್ಲಿ ೮೫೯, ಬೆಲ್ಜಿಯಮಿನಲ್ಲಿ ೧೭೦೯, ಬ್ರಿಟನಿನಲ್ಲಿ ೨೧೭೦, ಆದರೆ ಜಪಾನಿನಲ್ಲಿ ೨೭೭೪! ಇದ್ದೇ ಇಲ್ಲ. ಜಪಾನಿನ ಜನಸಂಖ್ಯೆ ಬಹು ಬಿರುಸಿನಿಂದ ಏರುತ್ತಿದೆ. ೧೮೭೨ರಲ್ಲಿ ಇದ್ದ ೩೪,೬೦೦,೦೦೦ ಜನಸಂಖ್ಯೆಯು ೧೯೩೫ರಲ್ಲಿ ೬೯,೨೫೪,೦೦೦ಕ್ಕೆ ಏರಿ ೧೯೪೮ರಲ್ಲಿ ೮ ಕೋಟಿಯಾಗಿದೆ. ಜಪಾನಿನಲ್ಲಿ ಜನನ ಸಂಖ್ಯೆ ಹೆಚ್ಚಿದೆ. ಇಂಗ್ಲೆಂಡಿನಲ್ಲಿ ಸಾವಿರಕ್ಕೆ ೧೫ ಜನನ ಆದರೆ ಅಮೇರಿಕದಲ್ಲಿ ೧೭ ಆದರೆ ಜಪಾನಿನಲ್ಲಿ ೩೨. ವ್ಯವಸಾಯ ಮಾಡಲ್ಪಡುವ ಪ್ರತಿ ಹೆಕ್ಟರಿಗೆ ಇಂಡಿಯಾದಲ್ಲಿ ೩೯೦ ಜನರಿದ್ದರೆ, ಅಮೇರಿಕಾದಲ್ಲಿ ೧೧೦ ಆದರೆ, ಇಂಗ್ಲೆಂಡಿನಲ್ಲಿ ೮೯೦. ಆದರೆ ಜಪಾನಿನಲ್ಲಿ ೧೧,೭೦೦.

ಈ ಜನಸಂಖ್ಯೆಯ ಏರಿಕೆಯ ಕ್ರಮ ಪ್ರತಿ ವರ್ಷ ಜಪಾನಿನಲ್ಲಿ ೮ ಲಕ್ಷ ಜನರಿಗೆ ಹೊಸ ಉದ್ಯಮ ಕಲ್ಪಿಸಬೇಕಾಗುತ್ತದೆ ಈಗಿನ ರೀತಿಯು ದರದ ಜನಸಂಖ್ಯೆಯು ಏರಿದರೆ ೧೯೬೦ರಲ್ಲಿ ಜಪಾನಿನಲ್ಲಿ ವಾಸಕ್ಕೇ ಸ್ಥಳ ಇಲ್ಲದಾಗಬಹುದು ಪ್ರತಿ ವರ್ಷ ಜಪಾನಿನ ಯುವಕ ಯುವತಿಯರು ಸರಾಸರಿ ನಾಲ್ಕು ಲಕ್ಷ ಸಂಖ್ಯೆಯಲ್ಲಿ ಕೆಲಸಕ್ಕೆ ಯೋಗ್ಯರಾಗುತಾರೆ. ಅವರಿಗೆ ಕೆಲಸ ಒದಗಿಸುವದು ಪ್ರಯಾಸದ ಕೆಲಸವೇ ಸರಿ. ಜಪಾನಿನಲ್ಲಿ ಗರ್ಭನಿರೋಧವು ಯಶಸ್ವಿಯಾಗಲಾರದು. ಏಕೆಂದರೆ ಆ ವಿಚಾರದಲ್ಲಿ ಅಲ್ಲಿಯ ಜನರಿಗೆ ವಿಶ್ವಾಸ ಕಡಿಮೆ. ಜಪಾನೀ ಸರಕಾರವೂ ಈ ವಿಚಾರದಲ್ಲಿ ಶ್ರದ್ಧೆ ವಹಿಸುವಂತಿಲ್ಲ.

ಜಪಾನಿನ ಸಂಖ್ಯೆ ಈ ರೀತಿ ಹೆಚ್ಚಾಗಲು ಈ ಕೆಳಗಿನವು ಪ್ರಾಮುಖ್ಯ ಕಾರಣಗಳು (೧) ಅಲ್ಲಿಯ ಹೆಂಗಸರ ನೈಸರ್ಗಿಕವಾದ ಫಲವತ್ತತೆ (೨) ಮಕ್ಕಳ ಪೋಷಣೆಯಲ್ಲಿರುವ ಎಚ್ಚರಿಕೆ (೩) ಯೋಗ್ಯ ಆಹಾರ ವ್ಯವಸ್ಥೆ (೪) ಕೈಗಾರಿಕೆಯ ಪ್ರಗತಿ (೫) ಆರೋಗ್ಯಕರವಾದ ಜೀವನ ಮತ್ತು (೬) ಕುಟುಂಬ, ಮನೆಗಳ ಮೇಲಿನ ಪ್ರೇಮ.

ಜಪಾನಿನಲ್ಲಿ ವಿಪುಲವಾಗಿ ಏರುತ್ತಿರುವ ಜನಸಂಖ್ಯೆಯನ್ನು ಕಡಿಮೆ ಮಾಡಲು ಗರ್ಭನಿರೋಧದ ಯತ್ನಗಳು ನಡೆದವು. ಆದರೆ ಫಲಕಾರಿಯಾಗಿಲ್ಲ ಸಾಮಾನ್ಯ ಜನತೆಯು ಇದಕ್ಕೆ ವಿರುದ್ಧವಿದೆ. ಏಕೇಂದರೆ ಜಗತ್ತಿನ ಇತರ ರಾಷ್ಟ್ರಗಳಲ್ಲಿ ಬಿಳಿಯರು ಹೆಚ್ಚಿ ಸುಖವಾಗಿ ಬಿಳಿಯರ ರಾಜ್ಯಕಟ್ಟಿ ಬಾಳಬೇಕು ಎಂದು ಮೊದಲಾಗಿ ಪ್ರಯತ್ನಿಸುತ್ತಾ, ಆಫ್ರಿಕಾ, ಆಸ್ಟ್ರೇಲಿಯಾ. ಕೆನಡಾ ಮೊದಲಾದೆಡೆ ಯತ್ನಿಸುತ್ತಿರುವಾಗ ಜಪಾನರು ಗರ್ಭನಿರೋಧ ಮಾಡಿ ಜನಸಂಖ್ಯೆ ಕಡಿಮೆ ಮಾಡುವದರಲ್ಲಿ ಅರ್ಥವಿಲ್ಲ. ಏಕೆಂದರೆ ಭಗವಂತನ ಇಚ್ಛೆಯು 'ಸಾವಿರ ಸಂಖ್ಯೆಯಲ್ಲಿ ಹೆಚ್ಚಿ ಜಗತ್ತಿನ ಸಂಪತ್ತನ್ನು ಬೆಳೆಸಬೇಕೆಂಬುದೇ ಆಗಿದೆ.' ಎಂದು ಅವರ ವಿಶ್ವಾಸ.

ಉಳಿವಿನ ಮಾರ್ಗ

ಜಪಾನಿನ ಜನಸಂಖ್ಯೆ ಈ ರೀತಿ ಬೆಳೆಯುತಿದ್ದು ವ್ಯವಸಾಯಕ್ಕಿರುವ ಭೂಮಿಯು ತೀರಾ ಕಡಿಮೆಯಾಗಿರುವಾಗ ಜಪಾನಿಯರು ಅಭಿವೃದ್ಧಿಕಾರಕವಾದ ಜೀವನ ಹೇಗೆ ನಡೆಸಬೇಕೆಂಬುದನ್ನು ಆಲೋಚಿಸಿ ಗ್ರಾಮ ಕೈಗಾರಿಕೆಗಳಿಂದಲೇ ಅದು ಸಾಧ್ಯವೆಂಬುದನ್ನು ಮನಗಂಡ ಅದರಂತೆ ದುಡಿಯುತಿದ್ದಾರೆ. ಜಪಾನಿನ ಪ್ರೊಫೆಸರು ಚೌಜಿ ಎಂಬವರು ಆ ವಿಚಾರವಾಗಿ ಹೀಗೆ ಹೇಳುತ್ತಾರೆ. "ವ್ಯವಸಾಯವಾಗಲೀ, ದೊಡ್ಡ ಕೈಗಾರಿಕೆಗಳಾಗಲೀ ಜಪಾನಿನ ಹೆಚ್ಚುತ್ತಿರುವ ಜನಸಂಖ್ಯೆಗೆ ಉದ್ಯಮ ಕಲ್ಪಿಸಿ ಕೊಡಲಾರವು. ಗ್ರಾಮ ಯಾ ಗುಡಿ ಕೈಗಾರಿಕೆಗಳೇ ಜಪಾನಿನ ಈ ಪ್ರಶ್ನೆಗೆ ಉತ್ತರವೀಯಬಲ್ಲವು."

ಜಪಾನಿನ ಪ್ರತಿ ಗ್ರಾಮವು ಜನಸಂಖ್ಯೆಯಲ್ಲಿ ಮಿತಿ ಮೀರಿದೆ. ಇದನ್ನು ಕಂಡು ಸುಮಾರು ೭೫ ವರ್ಷಗಳ ಹಿಂದೆ ಜಪಾನಿನ ಅರಸರಾಗಿದ್ದ ಮೈಜಿ ಎಂಬುವರು ಕೈಗಾರಿಕೆಯ ಅಭಿವೃದ್ಧಿ ಮತ್ತು ಪ್ರಚಾರಕ್ಕೆ ಪ್ರೋತ್ಸಾಹ ಕೊಟ್ಟರು. ೧೮೭೫ರಲ್ಲಿ ಜಪಾನಿನ ನೂರು ಜನರಲ್ಲಿ ೭೮ ಜನರು ವ್ಯವಸಾಯದಿಂದ, ೪ ಜನರು ಕೈಗಾರಿಕೆಯಿಂದ, ೭ ಜನರು ವ್ಯಾಪಾರದಿಂದ ಜೀವಿಸುತಿದ್ದರೆ ಮೈಜಿಯವರ ಕೈಗಾರಿಕಾ ಯೋಜನೆಯ ಪರಿಣಾಮವಾಗಿ ೧೯೪೪ರಲ್ಲಿ ೪೩ ಜನರು ಮಾತ್ರ ವ್ಯವಸಾಯದಲ್ಲಿ ಜೀವಿಸುತಿದ್ದು ೩೦ ಜನರು ಕೈಗಾರಿಕೆಯಲ್ಲೂ ೭ ಜನರು ವ್ಯಾಪಾರದಲ್ಲೂ ಜೀವಿಸುತಿದ್ದರು. ೧೯೪೪ರ ಲೆಕ್ಕಪ್ರಕಾರ ಜಪಾನಿನ ೮ ಕೋಟಿ ಜನಸಂಖ್ಯೆಯಲ್ಲಿ ೧ ಕೋಟಿ ೪೦ ಲಕ್ಷ ಜನರು ವ್ಯವಸಾಯದಿಂದ ಜೀವಿಸುತಿದ್ದರೆ ೧ ಕೋಟಿ ಜನರು ಕೈಗಾರಿಕೆಯಲ್ಲಿ ಜೀವಿಸುತಿದ್ದಾರೆ. ವ್ಯಾಪಾರ, ಸರಕಾರ ಕೆಲಸ, ಇತರ ಉದ್ಯಮಗಳು ಹೀಗೆ ಜನಸಂಖ್ಯೆಯ ಶೇಕಡ ೫೦ರಷ್ಟು ಜನರು ಉದ್ಯಮಶೀಲರಾಗಿರುವರು. ಉಳಿದ ಅರ್ಧ ಜನರೆಂದರೆ ಮಕ್ಕಳು, ಅಂಗ ಹೀನರು ಮೊದಲಾದವರಾಗಿದ್ದಾರೆ. ಈ ರೀತಿ ಜಪಾನಿನ ಕೆಲಸ ಮಾಡಲು ಶಕ್ತರಾದವರಿಗೆಲ್ಲ ಉದ್ಯಮವಿರುವುದರಿಂದ ಜಪಾನು ಸಂಪತ್ತಿನ ರಾಷ್ಟ್ರವಾಗಿ ಜಗತ್ತಿನ ರಂಗದಲ್ಲಿ ತನ್ನದೇ ವ್ಯಕ್ತಿತ್ವ ಪಡೆದಿದೆ.

ಪ್ರಾಮುಖ್ಯ ಕಚ್ಚಾ ಮಾಲು

ಗುಡಿ ಕೈಗಾರಿಕೆಗಳು ಜಪಾನಿನ ಜೀವನಾಡಿ. ದೊಡ್ಡದಾದ ಕೇಂದ್ರೀಕೃತ ಕೈಗಾರಿಕೆಗಳಿಂದ ಅಪಾಯ ತುಂಬಾ ಇದೆ. ಕಳೆದ ಯುದ್ಧದಲ್ಲಿ ಜಪಾನಿನ ಇಂಥಾ ವಿಶಾಲ ಕೈಗಾರಿಕಾ ಕೇಂದ್ರಗಳೆಲ್ಲ ಹುಡಿಯಾದ ಕಾರಣ ಮತ್ತು ಉಳಿದ ದೊಡ್ಡ ಕಾರ್ಖಾನೆಗಳೆಲ್ಲ ಯುದ್ಧ ನಷ್ಟಕ್ಕಾಗಿ ಗೆದ್ದವರ ವಶವಾದುದರಿಂದ ಜಪಾನು ಇಂದು ಗುಡಿ ಕೈಗಾರಿಕೆಗಳ ಬಲದಿಂದಲೇ ಜೀವಿಸುತ್ತಿದೆ. ಜಪಾನರ ಈ ಉದ್ಯಮದ ಪ್ರಗತಿಗೆ ಮೂಲಭೂತವಾದ ಕಚ್ಚಾ ಮಾಲೆಂದರೆ ಅಲ್ಲಿಯ ಜನತೆ. ಕರ್ಮಕುಶಲರೂ, ಮೇಧಾವಿಗಳೂ ಆದ ಅಲ್ಲಿಯ ಜನತೆಯೇ ಜಪಾನಿನ ಅಮೂಲ್ಯ ಸಂಪತ್ತು. ಇಂಥಾ ಜನರಿರುವ ಕಾರಣ ಅಮೇರಿಕೆಯೂ ಕೂಡ ಅವರಿಗೆ ಬೇಕಾದ ಇತರ ಆವಶ್ಯಕ ಕಚ್ಚಾ ಮಾಲುಗಳನ್ನು ಎಂದರೆ ಹತ್ತಿ, ಉಕ್ಕು, ಕಲ್ಲಿದ್ದಲು, ಪೆಟ್ರೋಲ್ ಮೊದಲಾದುವನ್ನು ಸರಬರಾಯಿ ಮಾಡುವದು ಅನಿವಾರ್ಯವಾಗಿದೆ. ಯುದ್ಧದ ಆಘಾತದಿಂದ ಜಪಾನಿನ ಕೈಗಾರಿಕಾ ಉತ್ಪತ್ತಿಯು ಸರ್ವನಾಶವಾದರೂ ಈಗಾಗಲೇ ಶೇಕಡ ೫೦ರಷ್ಟು, ಅದು ಅಭಿವೃದ್ಧಿಗೊಂಡಿದೆ ಮುಂದಿನ ಕೆಲವೇ ವರ್ಷಗಳಲ್ಲಿ ಅದು ತನ್ನ ಹಿಂದಿನ ಗತ ವೈಭವದ ಶಿಖರಕ್ಕೆ ತಲುಪದಿರದು.

ಜಪಾನು ಕೇವಲ ವ್ಯವಸಾಯ ರಾಷ್ಟ್ರವಾಗಿದ್ದಾಗ ಅಲ್ಲಿಯ ಜನಸಂಖ್ಯೆ ಕೇವಲ ಮೂರು ಕೋಟಿ ಇದ್ದು ಹೆಚ್ಚಿನ ಜನಸಂಖ್ಯೆಯಾದರೆ ತೊಂದರೆಯಾದೀತೆಂಬ ಭಯವಿತ್ತು. ಈಗ ಅದರ ಜೊತೆಗೆ ೫ ಕೋಟಿಯಷ್ಟು ಜನಸಂಖ್ಯೆ ಹೆಚ್ಚಿದೆ. ಆದರೆ ಜಪಾನಿನ ಅಭಿವೃದ್ಧಿ ಪಡಿಸಿಕೊಂಡ ಕೈಗಾರಿಕೆಯು ಈ ಹೆಚ್ಚಿನ ಜನರನ್ನು ರಕ್ಷಿಸುತ್ತಿದೆ. ಪ್ರತಿ ಜಪಾನಿಯನು ಕೂಡ ತನ್ನ ಮನೆಯೇ ತನ್ನ ಕಾರ್ಖಾನೆಯೆಂದು ತಿಳಿದಿದ್ದಾನೆ.

ಮುಂದಿನ ವಾರ ಕೈಗಾರಿಕಾ ಅಭಿವೃದ್ಧಿಯ ವಿಚಾರ ಬರೆಯಲಾಗುವುದು.

ನಾಪೋಕ್ಲಿಗೆ
"ಕೊಡಗು" ಪತ್ರಿಕೆಯ ಏಜೆಂಟರು:
ಸಹಕಾರಿ ಸ್ಟೋರ್ಸ್ ಮೇನೇಜರ್

Licence No. 60,
Licenced to Post without Prepayment

Reg. No. M. 1550.
"KODAGU" *MERCARA (Coorg)*

ಪುಟ ಹನ್ನೆರಡು

ಜನರ ಸುಖಕ್ಕಾಗಿ ದುಡಿಯಿರಿ.

ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದರ ಸ್ವಾತಂತ್ರ್ಯ ಸಂದೇಶ.

"ಭಾರತವು ಸ್ವಾತಂತ್ರ್ಯ ಹೊಂದಿದ ಆರನೇ ವಾರ್ಷಿಕೋತ್ಸವದಲ್ಲಿ ಎಲ್ಲರೂ ತಮ್ಮ ಸ್ವಜನರ ಮತ್ತು ಲೋಕದ ಕಲ್ಯಾಣಕ್ಕಾಗಿ ಸಾಧ್ಯವಿದ್ದಷ್ಟು ಅಧಿಕ ಸಹಾಯವನ್ನು ನೀಡಬೇಕಾಗಿ ಕೇಳಿಕೊಳ್ಳುತ್ತೇನೆ" ಎಂದು ರಾಷ್ಟ್ರಾಧ್ಯಕ್ಷರಾದ ಡಾ|| ರಾಜೇಂದ್ರ ಪ್ರಸಾದರು ತಾ. ೧೫ರಲ್ಲಿ ಸಂದೇಶ ಕೊಟ್ಟಿರುವರು

ಸ್ವಾತಂತ್ರ್ಯವು ಒಂದು ದೊಡ್ಡ ಜವಾಬ್ದಾರಿ. ಅದೇ ಸಂದರ್ಭದಲ್ಲಿ ಒಂದು ಪಕ್ಷಿನ ಕರ್ತವ್ಯ ನಾವು ಶಾಂತಿಯ ಮತ್ತು ಆರ್ಥಿಕ ಉನ್ನತಿ ಸಾಧನಯ ತತ್ವಗಳಿಗಾಗಿ ದುಡಿಯಲು ದೃಢ ಸಂಕಲ್ಪ ಮಾಡಬೇಕು. ಇಂದು ನಮ್ಮ ಜನಾಂಗಕ್ಕಾಗಿ ಮಾತ್ರವೇ ಅಲ್ಲ ಮಾನವ ವರ್ಗಕ್ಕಾಗಿಯೇ ನಾವು ದುಡಿಯಬೇಕು. ಶಾಂತಿ ಸ್ಥಾಪನೆಗೆ ನಾವು ಮಾಡಿದ ಪ್ರಯತ್ನವು ಯಶಸ್ವಿಯಾಗುವ ಚಿಹ್ನೆಯು ಪ್ರಮುಖವಾಗಿ ಕೊರಿಯದಲ್ಲಿ ಕಂಡುಬರುತ್ತಿದೆ. ಇದರಿಂದ ನಮಗೆ ಸಮಾಧಾನವಾಗಿದೆ.

ಭಾರತದ ಸುತ್ತುಮುತ್ತಲಿನ ದೇಶಗಳೊಡನೆ ಮುಖ್ಯವಾಗಿ ಪಾಕಿಸ್ಥಾನದೊಡನೆ ಭಾರತದ ಸಂಬಂಧವು ಉತ್ತಮಗೊಳ್ಳುತ್ತಿರುವದು ಸಮಾಧಾನಕರ. ಈ ಎರಡು ದೇಶಗಳೊಳಗಿದ್ದ ಮನಸ್ತಾಪಗಳು ಬಹುಮಟ್ಟಿಗೆ ಕಡಿಮೆಯಾದುದು ಮಾತ್ರವೇ ಅಲ್ಲ; ನೆರೆಕರೆಯುವರಲ್ಲಿರಬೇಕಾದ ಭಾವನೆಯು ಈ ರಾಷ್ಟ್ರಗಳ ನಡುವೆ ತಲೆದೋರಿದೆ. ಇತ್ತೀಚೆಗೆ ಭಾರತ ಪಾಕಿಸ್ತಾನಗಳೊಳಗೆ ಆರಂಭವಾದ ಮಾತುಕತೆಯು ಎರಡು ಕಡೆಗಳಿಗೂ ಸಮಾಧಾನವಾಗುವ ರೀತಿಯಲ್ಲಿ ಈ ದೇಶದೊಳಗಿನ ಸಮಸ್ಯೆಗಳನ್ನು ಬಗೆಹರಿಸಲು ಸಾಧಕವಾಗುವದೆಂದು ಆಶಿಸೋಣ ಜಯವು ದೊರೆಯಲಿ ಅಥವಾ ಜಯವು ದೊರೆಯದೆ ಇರಲಿ ಅಂತರರಾಷ್ಟ್ರ ವಿವಾದಗಳನ್ನು ಬಗೆಹರಿಸುವ ಪ್ರಸಂಗ ಬಂದಾಗ ಶಾಂತ ರೀತಿಯಲ್ಲಿ ಮಾತುಕತೆಗಳನ್ನು ನಡೆಸುವದಕ್ಕೆ ದೃಢ ಸಂಕಲ್ಪ ಮಾಡಿದ್ದೇವೆ.

"ನಮ್ಮ ರಾಜ್ಯಾಂಗ ಘಟನೆಯು ಭಾರತವನ್ನು ಜನಹಿತ ರಾಷ್ಟ್ರವನ್ನಾಗಿ ಮಾಡಬೇಕೆಂದು ಸೂಚಿಸುತ್ತದೆ. ಈ ಕಾರ್ಯವನ್ನು ಸಾಧ್ಯವಿರುವಷ್ಟು ಬೇಗನೆ ಸಾಧಿಸುವದಕ್ಕೆ ಯಾವ ಪ್ರಯತ್ನಗಳನ್ನು ಮಾಡಬೇಕಾಗಿದೆಯೋ ಅವನ್ನು ಕೈಗೊಳ್ಳಲು ನಾವು ಸಿದ್ಧರಾಗಿದ್ದೇವೆ.

"ನಮ್ಮ ದೇಶದ ಹೆಚ್ಚಿನ ಪ್ರಾಂತಗಳಲ್ಲಿ ಕೃಷಿಕನ ಮತ್ತು ಸರಕಾರದ ಮಧ್ಯೆ ಇದ್ದ ದಲಾಲಿಗಳನ್ನು ತೆಗೆದುಹಾಕಿ ಆಯಿತು. ಅನೇಕ ಪ್ರಾಂತಗಳಲ್ಲಿ ಇಷ್ಟರಲ್ಲಿಯೇ ಜಮೀನ್ದಾರಿ ಪದ್ಧತಿ ರದ್ದಾಗಿದೆ, ಅಥವಾ ಆಗುವದರಲ್ಲಿದೆ. ಆರ್ಥಿಕ ಹಂಚೋಣದಲ್ಲಿರುವ ಭೇದವನ್ನು ಹೋಗಲಾಡಿಸಿ ಸಮಾನವಾಗಿ ವಿತರಣೆಯಾಗುವಂತೆ ಮಾಡಲು ಶಾಸನಗಳನ್ನು ಕೈಕೊಳ್ಳಲಾಗಿದೆ. ಮಜೂರ ವರ್ಗದ ಹಿತಕ್ಕಾಗಿ ಕಾನೂನುಗಳಾಗುತ್ತಿವೆ. ವಿಮಾನ ಸಾರಿಗೆಯ ರಾಷ್ಟ್ರೀಕರಣವಾಗಿದೆ.

"ಇಷ್ಟೆಲ್ಲಾ ಮಾಡಿದರೂ ಬಡತನವನ್ನು ನಿರ್ಮೂಲಮಾಡುವದಕ್ಕೂ ಹಸಿವೆಯನ್ನು ನೀಗಿಸುವದಕ್ಕೂ ನಿರಕ್ಷರತೆಯನ್ನು ಹೋಗಲಾಡಿಸುವದಕ್ಕೂ ನಾವಿನ್ನೆಷ್ಟೋ ಪ್ರಯತ್ನಪಡಬೇಕಾಗಿದೆ. ಆ ಉದ್ದೇಶ ಸಾಧನೆಗಾಗಿ ನಮ್ಮ ಸರಕಾರವೂ ದೇಶದ ಪ್ರತಿಯೊಬ್ಬ ವ್ಯಕ್ತಿಯೂ ಪ್ರಯತ್ನಿಸಬೇಕಾಗಿದೆ. ಪಂಚವಾರ್ಷಿಕ ಮತ್ತು ಜನಹಿತ ಯೋಜನೆಗಳನ್ನು ಆಗಲೇ ಕಾರ್ಯರೂಪಕ್ಕೆ ತರಲಾಗಿದೆ; ಅವು ಬಹಳ ರಭಸದಿಂದ ಮುಂದುವರಿಯುತ್ತಿವೆ. ಈ ಕಾರ್ಯಗಳು ಯಶಸ್ವಿಯಾಗುವದಕ್ಕೆ ಜನರ ಸಹಕಾರವು ಅಗತ್ಯವೆಂಬಂಬುದನ್ನು ಮರೆಯಬಾರದು.

"ಅನ್ಯದೇಶದಲ್ಲಿರುವ ನಮ್ಮ ಜನರ ಅನಧಿಕೃತ ರಾಯಭಾರಿಗಳು. ನಮ್ಮ ದೇಶದ ಕೀರ್ತಿಯು ಅವರ ಕೈಯಲ್ಲಿದೆ ಅವರ ಮಾತೃಭೂಮಿಯಾದ ಈ ದೇಶಕ್ಕೆ ಯಾವ ತರದ ಕಳಂಕವೂ ಬಾರದ ರೀತಿಯಲ್ಲಿ ಅವರು ವರ್ತಿಸಬೇಕೆಂದು ಅವರಲ್ಲಿ ನನ್ನ ವಿಜ್ಞಾಪನೆ. ಭಾರತದಲ್ಲಿ ಮತ್ತು ಅನ್ಯ ದೇಶದಲ್ಲಿರುವ ಎಲ್ಲಾ ಭಾರತೀಯರಿಗೂ ಸಂತೋಷದ ಈ ಮುಹೂರ್ತದಲ್ಲಿ ನನ್ನ ಹಾರ್ದಿಕ ಶುಭಾಶಯಗಳು" ಎಂದು ಹೇಳಿದರು.

—

ಕೊಡ್ಲಿಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಕೆ. ಸಿ. ಸೀತಾಂಬರನವರು

THE CANARA BANKING CORPORATION LIMITED.

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ ಉಡುಪಿ (ದ. ಭಾರತ)

ಚಿಕ್ಕ ವಾಯಿದೆಯ ಠೇವಣಾತಿಗಳು :

3 ರಿಂದ 6 ತಿಂಗಳುಗಳ ವರೆಗೆ— ನಾಲಿಯಾನ ಶೇಕಡ 3
7 ರಿಂದ 12 ತಿಂಗಳುಗಳ ವರೆಗೆ—ನಾಲಿಯಾನ ಶೇಕಡ 3¼
ಪಂಚವಾರ್ಷಿಕ ಸುವರ್ಣ ಠೇವಣಾತಿಗಳು— „ „ 4

—: ಕೊಡಗು ಸಂಸ್ಥಾನದಲ್ಲಿ ನಮ್ಮ ಶಾಖೆಗಳು —

ಮಡಿಕೇರಿ, ವಿರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

INSURE WITH
OR REPRESENT
INDIA'S OLDEST LIFE OFFICE
THE BOMBAY MUTUAL LIFE ASSURANCE SOCIETY, LTD.

BUSINESS IN FORCE OVER 40 CRORES
ASSETS · OVER 12 CRORES

Applications from energetic youngmen are invited for representation.

25-21	Branch
Head Office,	172 3, Narasimharaja Road
BOMBAY	BANGALORE 2.

ಕೊಡಗು ಪ್ರಾಂತೀಯ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು :—ವೀರಾಜಪೇಟೆ.

ಶಾಖೆ:—ನ್ಯೂ ಜುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟಗಳು
2. 12 ನೇ ನಂಬರಿನ ಒಂಟಿ ಹೊಳವಿನ ತೋಟದ ಕೋವಿಗಳು.
3. ಒಂಟಿ ಮತ್ತು ಜೋಡಿ ಹೊಳವಿನ ಕೇಪಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚೆಲ್ಲು ಮತ್ತು ಕೇಪುಗಳು.
5. ⅝", ½" ಮತ್ತು ⅜" ಕಬ್ಬಿಣದ ಸರಳುಗಳು
6. 2", 1¼", 1" ¾" ಮತ್ತು ⅓" ಕೊಳಾಯಿಗಳು. (G. I. Peps)
7. 1¾" × $\frac{5}{16}$" ಉಕ್ಕಿನ ಪಟ್ಟಿಗಳು (Spring Steel flats),
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಪಂಪುಗಳು.
9. ಕೋಳಿ ಮತ್ತು ಆನೆ ಮಾರ್ಕಿನ ಸಿಮೆಂಟ್ ಟನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೆಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)
ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

Edited Printed and Published by P. I. BELLIAPPA at 'KODAGU' Press Mercara, for 'Kodagu' Ltd.,

ಕೊಡಗು

ನಾಳಿನ ಸುಂದರಿ?

ವಾರ್ಷಿಕ ಚಂದಾ ರೂ. ೫—೦—೦

ಶುಕ್ರವಾರ

ಸಂಪುಟ ೩೨) (ಸಂಚಿಕೆ ೧೩

೨೮--೮--೧೯೫

KODAGU KANNADA WEEKLY MERCARA

ಈ ವಾರದ ಕಥೆ.

(ಆಸ್ಕರ್ ವಾಯಿಲ್ಡರ ಕತೆಯ ಅನುವಾದ)

ಗುಲಾಬಿ ಮತ್ತು ಬುಲ್‌ಬುಲ್.

(ಅನುವಾದಕ:—ಶ್ರೀ ಬಳ್ಳೂರು ಸುಬ್ರಾಯ ಅಡಿಗ)

'ಸಾಕು ಅವಳಿಗೆ ಕೆಂಪು ಗುಲಾಬಿ ಹೂ ತಂದು ಕೊಟ್ಟರೇನೇ ನನ್ನೊಂದಿಗೆ ನರ್ತಿಸುತ್ತೇನೆಂದು ಅವಳು ಮಾತು ಕೊಟ್ಟಿದ್ದಾಳೆ. ಆದರೆ ನನ್ನ ತೋಟದಲ್ಲಿ ಒಂದೇ ಒಂದು ಹೂವೂ ಕಾಣಿಸುವುದಿಲ್ಲ'—ಯುವಕ ವಿದ್ಯಾರ್ಥಿಯು ಹೇಳಿದ.

ಸಮೀಪದ ಮರದ ಗೂಡಿನಲ್ಲಿ ಕುಳಿತ ಬುಲ್‌ಬುಲ್ ಪಕ್ಷಿಯು ಎಲೆಗಳ ಮರೆಯಿಂದ ಹೊರಗಿಣುಕಿ ಇದನ್ನು ಕೇಳಿತು.

'ನನ್ನ ತೋಟದಲ್ಲಿ ಒಂದೂ ಗುಲಾಬಿಯಿಲ್ಲ'—ಅವನೆಂದ. ಆಗಲೇ ಅವನ ಕಂಗಳಿಂದ ನೀರು ಕೋಡಿಯಾಗಿ ಹರಿಯಿತು. 'ಆಃ, ಸುಖವು ಅದೆಷ್ಟು ಸಣ್ಣ ಸಣ್ಣ ಮಾತುಗಳನ್ನವಲಂಬಿಸಿದೆ! ನಾನು ಎಲ್ಲ ವಿದ್ಯೆಗಳನ್ನೂ ಕಲಿತೆ. ಎಲ್ಲಾ ದರ್ಶನ ಪುಸ್ತಕಗಳನ್ನೂ ಮುಗುಚಿ ಹಾಕಿದೆ. ಆದರೆ ಗುಲಾಬಿ ಹೂವಿನ ಅಭಾವವು ನನ್ನನ್ನು ದುಃಖಿಯನ್ನಾಗಿ ಮಾಡಿದೆ.'

'ಇವನೊಬ್ಬ ನಿಜವಾದ ಪ್ರೇಮಿ. ಪ್ರತಿ ದಿನವೂ ನಾನು ಪ್ರೇಮಿಯ ಹಾಡುಗಳನ್ನು ಹಾಡುತ್ತಿದ್ದೇನೆ. ಆದರೆ ಅಂತಹವನು ಇದುವರೆಗೂ ಕಾಣಸಿಗಲಿಲ್ಲ. ನಿತ್ಯವೂ ರಾತ್ರಿ ತಾರೆಗಳೊಡನೆ ಪ್ರೇಮಿಯ ಕತೆಯನ್ನು ಹೇಳುತ್ತಿದ್ದೆ. ಅಂತಹ ನಿಜವಾದ ಪ್ರೇಮಿ ಇಂದು ಎದುರಿಗಿದ್ದಾನೆ. ಅವನ ತಲೆಗೂದಲು ತುಂಬಿಯಂತೆ ಕಪ್ಪಾಗಿದೆ; ಮತ್ತು ತುಟಿಗಳು ಅವನಿಗೆ ಬೇಕಾದ ಗುಲಾಬಿ ಹೂವಿನಂತೆ ಕೆಂಪಾಗಿವೆ. ಆದರೆ ದುಃಖವು ಅವನ ಮುಖವನ್ನು ಕಳೆಗೆಡಿಸಿದೆ'—ಬುಲ್‌ಬುಲ್ ಹೇಳಿತು.

ತರುಣ ವಿದ್ಯಾರ್ಥಿ ಹೇಳುತ್ತ ಹೋದ—'ರಾಜಕುಮಾರನು ನಾಳೆ ನೃತ್ಯದ ಏರ್ಪಾಟುಮಾಡಿರುವ; ಮತ್ತು ನನ್ನ 'ರಾಣಿ'ಯೂ ಅದರಲ್ಲಿ ಭಾಗವಹಿಸುವಳು. ನಾನೊಂದು ಕೆಂಗುಲಾಬಿಯ ಹೂವನ್ನು ಅವಳಿಗೆ ತಂದು ಕೊಟ್ಟರೆ ಅವಳು ಬೆಳಗಿನ ವರೆಗೆ ನನ್ನೊಂದಿಗೆ ಕುಣಿಯುವಳು. ಆದರೆ ಹೂ ಕೊಡಲಾರೆನಾದರೆ ನನ್ನೆಡೆಗೆ ಅವಳು ಕಣ್ಣೆತ್ತಿಯೂ ನೋಡಲಾರಳು!'

'ಇವನೊಬ್ಬ ಗಂಭೀರ ಪ್ರೇಮಿ; ನನ್ನ ಹಾಡಿನಲ್ಲಿ ವ್ಯಕ್ತವಾಗುವ ಪ್ರೇಮಿಯ ಪೀಡೆಯನ್ನೇ ಇವನು ಅನುಭವಿಸುತ್ತಿದ್ದಾನೆ. ನನ್ನ ಆನಂದವೇ ಇವನ ಸುಖಕ್ಕೆ ಕಾರಣವಾಗಿದೆ. ಪ್ರೇಮವೂ ಎಂತಹ ವಿಚಿತ್ರ ವಸ್ತು! ನಾವು ವಜ್ರವೈಢೂರ್ಯಗಳಿಂದಲೂ ಅದನ್ನು ಕೊಳ್ಳಲಾರೆವು'—ಬುಲ್‌ಬುಲ್ ಎಂದಿತು.

'ನನ್ನ ಪ್ರೇಯಸಿಯು ಸಿತಾರಿನ ಗತಿಯ ಮೇಲೆ ನರ್ತಿಸುವಳು. ಕುಣಿಯುತ್ತ ಕುಣಿಯುತ್ತ ಅವಳು ನೆಲದಿಂದ ಮೇಲೇರುವಳು. ಅವಳ ಸುತ್ತಲೂ ಜನರು ಕುಣಿಯುವರು. ನಾನೊಬ್ಬನು ಮಾತ್ರ ಅವಳಿಂದ ದೂರಾಗಬೇಕಾಗುವುದು. ಏಕೆಂದರೆ ಅವಳಿಗೆ ಕಾಣಿಕೆಯಾಗಿ ಕೊಡಲು ನನ್ನ ಬಳಿ ಕೆಂಪು ಗುಲಾಬಿ ಹೂವಿಲ್ಲ'—ಹೀಗೆನ್ನುತ್ತ ಎನ್ನುತ್ತ ಅವನು ಹುಲ್ಲಿನ ಮೇಲೊರಗಿ ಮುಖಮುಚ್ಚಿಕೊಂಡು ಅಳತೊಡಗಿದ.

'ಅವನೇಕೆ ಅಳುತ್ತಿದ್ದಾನೆ?'—ಒಂದು ಪತಂಗವು ಪ್ರಶ್ನಿಸಿತು.

'ಏಕೋ ತಿಳಿಯದು'—ಸೂರ್ಯಕಿರಣದ ಮೇಲೆ ಈಜಾಡುತ್ತಿದ್ದ ಚಿಟ್ಟೆ ಹೇಳಿತು.

'ಅವನೊಂದು ಕೆಂಪು ಗುಲಾಬಿಗಾಗಿ ಅಳುತ್ತಿದ್ದಾನೆ'—ಬುಲ್‌ಬುಲ್ ತಿಳಿಸಿತು.

'ಕೆಂಪು ಗುಲಾಬಿಗಾಗಿ! ಎಂತಹ ಹುಚ್ಚುತನ!'—ಪತಂಗವು ಹೀಗೆಂದು ನಕ್ಕಿತು.

ಭಾವುಕತೆ ಹಾಗೂ ಕಲ್ಪನೆಯನ್ನು ಅದು ಯಾವಾಗಲೂ ಉಪಹಾಸ ಗೈಯುತ್ತಿತ್ತು.

ಆದರೆ ಬುಲ್‌ಬುಲ್ ಅವನ ದುಃಖದಾಳವನ್ನು ಅರಿತಿತ್ತು. ಆದ್ದರಿಂದಲೇ ಕೊಂಬೆಯ ಮೇಲೆ ಮೌನವಾಗಿ ಕುಳಿತು ಅದು ಪ್ರೇಮದ ರಹಸ್ಯವನ್ನು ಕುರಿತು ಯೋಚಿಸುತ್ತಿತ್ತು.

ಒಮ್ಮಿಂದೊಮ್ಮೆ ಅದು ರೆಕ್ಕೆಗಳನ್ನು ಹರಡಿ ನೆರಳಿನಂತೆ ಹಾರಿಬಿಟ್ಟಿತು. ವೈದಾನಿನ ನಡುವೆ ಒಂದು ಗುಲಾಬಿಯ ಗಿಡವಿತ್ತು. ಅದರ ಒಂದು ರೆಂಬೆಯ ಮೇಲೆ ಇಳಿಯಿತು. 'ನನಗೊಂದು ಕೆಂಪು ಹೂ ಕೊಡು. ನಾನು ನಿನಗಾಗಿ ಬಹು ಇಂಪಾದ ಹಾಡು ಹೇಳುವೆ!'

'ನನ್ನ ಹೂಗಳು ಹಾಲ್ನೊರೆಯಂತೆ ಬಿಳುಪಾಗಿವೆ. ಕೆಂಪು ಹೂ ಬೇಕಿದ್ದರೆ ಆ ಗಿಡದ ಬಳಿಗೆ ಹೋಗು.' ಬುಲ್‌ಬುಲ್ ಹಾರಿ ಆ ಗಿಡವನ್ನು ಸಮೀಪಿಸಿತು.

'ನನಗೊಂದು ಕೆಂಪು ಗುಲಾಬಿ ಕೊಡು. ನಾನು ನಿನಗಾಗಿ ಅತ್ಯಂತ ಸರಸವಾದ ಪದವೊಂದನ್ನು ಹಾಡುತ್ತೇನೆ.'

'ನನ್ನ ಹೂಗಳು ಬಂಗಾರದಂತೆ ಹಳದಿಯಾಗಿವೆ. ನೀನು ಆ ವಿದ್ಯಾರ್ಥಿಯ ಕಿಟಕಿಯ ಕೆಳಗಡೆಯಿರುವ ಗಿಡದ ಬಳಿಗೆ ಹೋಗು. ಆ ಗಿಡವು ನಿನ್ನ ಮನೋಭಿಲಾಷೆಯನ್ನು ಈಡೇರಿಸಬಹುದು'—ಗಿಡವು ತಲೆಯಲ್ಲಾಡಿಸುತ್ತ ಹೇಳಿತು. ಬುಲ್‌ಬುಲ್ ಆ ಗಿಡದ ಬಳಿ ಹಾರಿಹೋಯಿತು.

'ನನಗೊಂದು ಕೆಂಪು ಹೂ ಕೊಡು. ನಾನು ನಿನಗಾಗಿ ಬಹು ಇಂಪಾದ ಹಾಡು ಹಾಡುವೆ.'

'ಸಂಜೆಯ ಮೋಡಗಳಂತೆ ನನ್ನ ಹೂಗಳು ಕೆಂಪಾಗಿರುವುವೇನೋ ನಿಜ. ಆದರೆ ಈ ವರ್ಷ ಚಳಿಯಿಂದ ನನ್ನ ನಾಡಿಗಳೆಲ್ಲ ಮುದುರಿಹೋಗಿವೆ; ಬಿರುಗಾಳಿಯಿಂದ ಕೊಂಬೆಗಳೆಲ್ಲ ಮುರಿದುಹೋಗಿವೆ. ಹೀಗಾಗಿ ಈ ವರ್ಷ ಒಂದು ಹೂ ಅರಳಲಾರದು.'

'ಒಂದೇ ಒಂದು ಹೂ ಸಾಕು. ಯಾವ ರೀತಿಯಿಂದಾದರೂ ಸಿಗಲಾರದೆ?'—ಬುಲ್‌ಬುಲ್ ನಿಟ್ಟುಸಿರಿಡುತ್ತಾ ಪ್ರಶ್ನಿಸಿತು.

'ಉಪಾಯವೇನೋ ಇದೆ. ಆದರೆ ತುಂಬಾ ಭಯಂಕರವಾದುದು.'

'ಹೇಳು; ನಾನೇನೂ ಗಾಬರಿಯಾಗುವುದಿಲ್ಲ.'

'ಬೆಳದಿಂಗಳ ರಾತ್ರಿಯಲ್ಲಿ ನೀನು ಸಂಗೀತದಿಂದ ಹೂವಿನ ಎಸಳುಗಳನ್ನರಳಿಸಬೇಕಾಗುವದು. ನಿನ್ನೆದೆಯ ನೆತ್ತರಿಂದ ಅದಕ್ಕೆ ಕೆಂಬಣ್ಣ ಬಳಿಯಬೇಕಾಗುವುದು. ನೊನಚಾದ ಮುಳ್ಳಿಗೆ ನಿನ್ನೆದೆಯನ್ನೊಡ್ಡಿ ಇರುಳಿಡೀ ಹಾಡಬೇಕಾಗುವುದು. ರಾತ್ರಿಯಿಡೀ ನೀನು ಹಾಡುತ್ತಿದ್ದರೆ ನಿನ್ನ ನೆತ್ತರು ನನ್ನ ನಾಡಿಗಳಲ್ಲಿಳಿದು ಅದಕ್ಕೆ ಚೈತನ್ಯವನ್ನೀಯುವುದು.'

'ಒಂದು ಹೂವಿಗಾಗಿ ನಾನು ಸಾಯಬೇಕೆ? ಜೀವನವು ಅದೆಷ್ಟು ಪ್ರಿಯವಾದುದು! ಕಂಗೊಳಿಸುವ ಕಾಡುಗಳಲ್ಲಿನ ಆ ಹಾಡುಗಳು! ಸುವರ್ಣ ರಥದ ಮೇಲಿನ ಸೂರ್ಯ; ಮುತ್ತಿನ ರಥವನ್ನೇರಿದ ಆ ಚಂದ್ರ—ಇವೆಷ್ಟು ಆನಂದದಾಯಕ ವಸ್ತುಗಳು! ಆದರೆ ಪ್ರೇಮವು ಜೀವನಕ್ಕಿಂತಲೂ ಹೆಚ್ಚು ಬೆಲೆ ಬಾಳುವ ವಸ್ತು. ಅದರಲ್ಲೂ ಮನುಷ್ಯ ಹೃದಯದೆದುರಿಗೆ ಹಕ್ಕಿಗಳ ಹೃದಯಕ್ಕೆ ಬೆಲೆಯೆಲ್ಲಿ?'—ಅದು ತನ್ನ ರೆಕ್ಕೆಗಳನ್ನು ಚಾಚಿ ಹಾರಿ ಹೋಯಿತು.

ವಿದ್ಯಾರ್ಥಿ ಈಗಲೂ ಹುಲ್ಲಿನ ಮೇಲೊರಗಿ ಕಣ್ಣೀರು ಸುರಿಸುತ್ತಿದ್ದ.

'ಈಗ ನೀನು ಸಂತೋಷದಿಂದ ನಗು. ನಿನಗೆ ನಿನ್ನ ಕೆಂಪು ಗುಲಾಬಿ ಸಿಕ್ಕಿಬಿಡುವುದು. ನಾನದನ್ನು ಸಂಗೀತದ ನಾರಿನಿಂದ ಪೋಣಿಸಿ ನನ್ನೆದೆಯ ನೆತ್ತರಿಂದ ಬಣ್ಣಗೊಡುವೆ. ಆದರೆ ಅದರ ಬದಲಿಗೆ ನಿನ್ನೊಡನೆ ನನ್ನದೊಂದು ಬೇಡಿಕೆಯಿದೆ. ನೀನು ನಿಜವಾದ ಪ್ರೇಮಿಯೆನಿಸು. ಪ್ರೇಮವು ಧರ್ಮಕ್ಕಿಂತಲೂ ಹೆಚ್ಚು ಪವಿತ್ರವಾದುದು. ಅದರ ರೆಕ್ಕೆ, ಅದರ ಶರೀರ ಎಲ್ಲವೂ ಅಗ್ನಿಯ ವಿಚಿತ್ರ ಜ್ವಾಲೆಯಿಂದ ತಯಾರಾದುದು. ಅದರ ತುಟಿಗಳು ಜೇನಿನಂತೆ ಸವಿಯೂ ಉಸಿರು ಸೌರಭದಂತೆ ಮಾದಕವೂ ಆಗಿದೆ'—ಬುಲ್‌ಬುಲ್ ಎಂದಿತು.

ವಿದ್ಯಾರ್ಥಿಯು ತಲೆಯೆತ್ತಿ ಹಕ್ಕಿಯ ಮಾತನ್ನು ಆಲಿಸುತ್ತಿದ್ದ. ಆದರೆ ಅವನಿಗೇನೂ ಅರ್ಥವಾಗುತ್ತಿದ್ದಿಲ್ಲ. ಏಕೆಂದರೆ ಅವನು ಪುಸ್ತಕದ ವಿಚಾರಗಳನ್ನಷ್ಟೇ ತಿಳಿಯಬಲ್ಲವನಿದ್ದ. ಆದರೆ ಸಮೀಪದ ಮರವು ಹಕ್ಕಿಯ ಮಾತನ್ನು ಕೇಳಿ ಉದಾಸೀನವಾಯಿತು. ಬುಲ್‌ಬುಲ್ ಅದರ ಕೊಂಬೆಗಳಲ್ಲೇ ಗೂಡುಕಟ್ಟಿತ್ತು. ಅದು ಆ ಹಕ್ಕಿಯನ್ನು ಪ್ರೀತಿಸುತ್ತಿತ್ತು.

'ಆಗಲಿ, ಇಂದು ನಿನ್ನ ಕೊನೆಯ ಹಾಡನ್ನು ಹಾಡು. ನೀನಿಲ್ಲದ ಬಳಿಕ ವನಗೀಸ್ಥಳವು ನಿರ್ಜನವಾಗಿ ತೋರುವುದು'—ಮರವು ನಿಟ್ಟುಸಿರಿಡುತ್ತಾ ಹೇಳಿತು.

ಬುಲ್‌ಬುಲ್ ಹಾಡತೊಡಗಿತು. ಅದರ ದನಿಯಲ್ಲಿ ಶರಾಬಿನ ಮಾದಕತೆಯಿತ್ತು.

ಅದು ತನ್ನ ಹಾಡನ್ನು ಮುಗಿಸಿದೊಡನೆಯೇ ವಿದ್ಯಾರ್ಥಿಯು ಅಲ್ಲಿಂದೆದ್ದು ತನ್ನ ಕೋಣೆಗೆ ಹೊರಟುಹೋದ. ಅದರ ಹಾಡಿನಲ್ಲಿ ಸೌಂದರ್ಯವಿದೆಯೆಂದು ಅವನು ಒಪ್ಪಿದರೂ ಅದಕ್ಕೂ ಜೀವನಕ್ಕೂ ನಿಕಟ ಸಂಬಂಧವಿಲ್ಲವೆಂದು ಅವನು ಗೊಣಗುತ್ತಿದ್ದ. ಹಾಡಿನ ಕುರಿತು ಯೋಚಿಸುತ್ತ ಯೋಚಿಸುತ್ತ ಅವನು ನಿದ್ರೆಹೋದೆ.

ಆಕಾಶದಲ್ಲಿ ಚಂದ್ರನು ಮೂಡಿ ಬಂದಾಗ ಬುಲ್ ಬುಲ್ ಗುಲಾಬಿಯ ಬಳಿ ಹೋಗಿ ಮುಳ್ಳಿನಲ್ಲಿ ತನ್ನೆದೆಯನ್ನು ನಟ್ಟು ಇಡೀ ರಾತ್ರಿ ಹಾಡುತ್ತಿತ್ತು. ಚಂದ್ರನೂ ಆಕಾಶದಲ್ಲೇ ಕೆಳಗಿಳಿದು ಅದರ ಸಂಗೀತವನ್ನು ಕಿವಿಗೊಟ್ಟು ಆಲಿಸುತ್ತಿದ್ದ. ಅದು ಇರುಳಿಡೀ ಹಾಡುತ್ತಿತ್ತು. ಮತ್ತು ಮುಳ್ಳು ಮೆಲ್ಲ ಮೆಲ್ಲನೆ ಅದರ ಎದೆಯಲ್ಲಿ ನಡುತ್ತಿತ್ತು.

ಅದು ಮೊಟ್ಟ ಮೊದಲು ಕಿಶೋರ ಕಿಶೋರಿಯರ ಹೃದಯದಲ್ಲಿ ಅಕಸ್ಮಾತ್ ಪ್ರಾದುರ್ಭವಿಸುವ ಪ್ರೇಮ ಸಂಗೀತವನ್ನು ಹಾಡಿತು. ಗಿಡದ ರೆಂಬೆಯಲ್ಲಿ ಪ್ರತಿ ಹಾಡಿಗೂ ಗುಲಾಬಿಯ ಒಂದೊಂದು ಎಸಳೂ ಹುಟ್ಟುತ್ತಾ ಹೋಯಿತು. ಆ ಎಸಳುಗಳೆಲ್ಲ ಹಳದಿಯಾಗಿದ್ದವು.

'ಇನ್ನೂ ಹತ್ತಿರ ಬಾ; ಇಲ್ಲದಿದ್ದರೆ ಬೆಳಗಾಗಿ ಗುಲಾಬಿ ಅಪೂರ್ಣವಾಗಿಯೇ ಉಳಿದೀತು'—ಗಿಡ ಹೇಳಿತು.

ಬುಲ್ ಬುಲ್ ಇನ್ನೂ ಸಮೀಪಕ್ಕೆ ಹೋಯಿತು. ಅದರ ಸ್ವರ ಮತ್ತೂ ಉಚ್ಚ ಮಟ್ಟಕ್ಕೇರತೊಡಗಿತು. ಏಕೆಂದರೆ ಅದು ತರುಣ ತರುಣಿಯರ ವಾಸನಾಮಯ ಪ್ರೇಮವನ್ನೀಗ ಹಾಡಿನಲ್ಲಿ ವ್ಯಕ್ತಗೊಳಿಸುತಿತ್ತು.

ಗುಲಾಬಿಯ ಎಸಳುಗಳಲ್ಲಿ ಗುಲಾಬಿ ಬಣ್ಣವು ಮೆಲ್ಲಮೆಲ್ಲನೆ ಹರಡ ತೊಡಗಿತು ಆದರೆ ಮುಳ್ಳು ಇದುವರೆಗೂ ಹಕ್ಕಿಯ ಹೃದಯವನ್ನು ಭೇದಿಸಿರಲಿಲ್ಲ. ಆದ್ದರಿಂದಲೇ ಎಸಳುಗಳು ಇದುವರೆಗೆ ಕೆಂಬಣ್ಣವನ್ನು ತಳೆದಿರಲಿಲ್ಲ.

'ಇನ್ನೂ ಸಮೀಪಕ್ಕೆ ಬಾ, ಹೂಂ. ಬೇಗ ಬಾ. ಇಲ್ಲದಿದ್ದರೆ ಸ್ವಲ್ಪ ಹೊತ್ತಿನಲ್ಲೇ ಬೆಳಗಾಗುವುದು,—ಗಿಡ ಹೇಳಿತು.

ಬುಲ್ ಬುಲ್ ತನ್ನ ಶಕ್ತಿಯೆಲ್ಲವನ್ನೂ ಉಪಯೋಗಿಸಿತು; ಮುಳ್ಳು ನಾಡಿಗಳನ್ನು ಸೀಳುತ್ತಾ ಹೃದಯವನ್ನು ಚುಚ್ಚಿತು. ನೋವಿನ ವಿಷಭಂತ ಜ್ವಾಲೆಯೊಂದು ಅಲ್ಲಿ ಪ್ರತಿಧ್ವನಿಸಿತು. ನೋವು ಹೆಚ್ಚುತ್ತ ಹೋಗುತ್ತಿತ್ತು; ಮತ್ತು ಅದು ಹುಚ್ಚನಂತೆ ಹಾಡುತ್ತ ಕುಳಿತಿತ್ತು. ಈಗದು ಮೃತ್ಯುವಿನಲ್ಲಿ ಕೊನೆಗೊಳ್ಳುವ ಪ್ರೇಮ ಗೀತವನ್ನು ಹಾಡುತ್ತಿತ್ತು.

ಗುಲಾಬಿಯು ಥಕ್ಕನೆ ಕೆಂಪಾಯಿತು. ಆದರೆ ಬುಲ್ ಬುಲ್ ಪಕ್ಷಿಯ ಧ್ವನಿ ನಿಂತು ಹೋಯಿತು. ಗರಿಗಳು ಪಟಪಟನೆ ಸದ್ದು ಮಾಡಿ ಉದುರಿಹೋದವು. ಪ್ರಕೃತಿಯ ದೃಶ್ಯವೆಲ್ಲ ಅದರ ಕಂಗಳಿಗೆ ಮಸಕು ಮಸಕಾಗಿ ಕಾಣತೊಡಗಿದವು.

(ಕಡೇ ಪುಟವನ್ನು ನೋಡಿ)

ಜನಗಣತಿ (ಸೆನ್ಸಸ್) ೧೯೫೧

೧೯೫೧ರ ಜನಗಣತಿಯು ನಡೆದು ಈಗಾಗಲೇ ಎರಡು ವರ್ಷಗಳ ಮೇಲಾಯಿತು. ಕೊಡಗಿನಲ್ಲಿ ಪ್ರಜಾ ಸರಕಾರವೂ ಬಂದಿದೆ. ಆದರೆ ಅವಿಶ್ರಾಂತವಾಗಿ ಸುಮಾರು ಒಂದು ತಿಂಗಳು ದುಡಿದ ಎನ್ಯುಮರೇಟರ್ ಮತ್ತು ಸುಪರ್‌ವೈಜರುಗಳಿಗೆ ಮಾತ್ರ ಸರಕಾರದವರು ಪ್ರಕಟಿಸಿ ಭರವಸೆ ಇತ್ತ-ತೆ ಮೆಡಲುಗಳನ್ನಾಗಲೀ, ಬಹುಮಾನ ಪತ್ರಗಳನ್ನಾಗಲೀ ಈ ವರೆಗೆ ಕೊಡದಿರುವದು ವಿಷಾದಕರ. ಸ್ವತಂತ್ರ ಭಾರತದ ಮೊತ್ತ ಮೊದಲನೆಯದಾದ ಖಾನೆಸುಮಾರಿಯಾದ್ದರಿಂದ ಎನ್ಯುಮರೇಟರುಗಳು ಮತ್ತು ಸುಪರ್‌ವೈಜರುಗಳು ಬಹಳ ಉತ್ಸಾಹದಿಂದ ದುಡಿದಿದ್ದರು. ಕೆಲವು ದಿನಗಳಿಗೆ ಹಿಂದೆ ಸುಂಟಿಕೊಪ್ಪದ ಸೆನ್ಸಸ್ ಸುಪರ್‌ವೈಜರ್ ಮಹನೀಯರೊಬ್ಬರಿಗೆ ರಾಷ್ಟ್ರಪತಿಗಳ ನಾಮಾಂಕಿತದ ಒಂದು ಬೆಳ್ಳಿ ಮೆಡಲನ್ನು ಯಾವುದೋ ಕೆಲಸದ ಮೇಲೆ ಮಡಿಕೇರಿಗೆ ಅವರು ಹೋಗಿದ್ದಾಗ ಡಿ. ಕಮಿಷನರು ಆ ಮೆಡಲನ್ನು ಅವರ ಕೈಗಿತ್ತು 'ಶೇಕ್ ಹ್ಯಾಂಡ್' ಮಾಡಿ ಕಳುಹಿಸಿಕೊಟ್ಟರಂತೆ! ಇದು ಯಾವ ಕ್ರಮದ ಮರ್ಯಾದೆ? ರಾಷ್ಟ್ರಪತಿಗಳ ನಾಮಾಂಕಿತವಾದ ಇದೇ ಹಿಂದೂಸ್ಥಾನದಲ್ಲಿ ಗಣ್ಯವಾದ (ಸರಕಾರದ ಪ್ರಕಟಣೆಯ ವಾಕ್ಯ) ಖಾನೇಸುಮಾರಿ ಮೆಡಲನ್ನು ಯಾವದೊಂದು ಸಮಾರಂಭದಲ್ಲಿ ಕೊಡದೆ, ಹೀಗೆ ರಹಸ್ಯವಾಗಿ ಕೊಡುವದೇ? ಈಗ ಕೆಲವು ತಿಂಗಳುಗಳ ಹಿಂದೆ ಬಂಗಾಳದ ಗವರ್ನರರು ವಿಶೇಷ ಸಮಾರಂಭವೊಂದರಲ್ಲಿ ಪ್ರಾಂತ್ಯದ ಎನ್ಯುಮರೇಟರು ಮೊದಲಾದವರಿಗೆ ಮೆಡಲುಗಳನ್ನು ಕೊಟ್ಟದನ್ನು ನಾನು ಪೇಪರಿನಲ್ಲಿ ಓದಿದ್ದೇನೆ. ಬೇರೆ ಪ್ರಾಂತ್ಯಗಳಲ್ಲಿಯೂ ಹೀಗೆ ಕೊಟ್ಟಿರಬಹುದು. ಕೊಡಗಿನ ಸುಮಾರು ಆರುನೂರು ಜನ ಸೂಪರ್‌ವೈಜರು ಮತ್ತು ಎನ್ಯುಮರೇಟರುಗಳಲ್ಲಿ ಆ ಮಹನೀಯರು ವಿಶೇಷ ಮಾರ್ಕುಗಳನ್ನು ಪಡೆದದ್ದು ಮೆಚ್ಚಬೇಕಾದ ವಿಚಾರ. ಹಾಗಿದ್ದಲ್ಲು ಅವರಿಗೆ ಕೊಟ್ಟ ಮೆಡಲಿನ ವಿಚಾರ ಯಾರಿಗಾದರೂ ತಿಳಿದಿದೆಯೇ? ಯಾವ ಪೇಪರಿನಲ್ಲಾದರೂ ಸರಕಾರವು ಪ್ರಕಟಿಸಿದೆಯೇ? ಇಷ್ಟೊಂದು ರಹಸ್ಯವಾಗಿಡಲು ಕಾರಣವೇನು? ಸರಕಾರದ ನೋಟಿಫಿಕೇಶನ್‌ನಲ್ಲಿ ಕೊಡಗಿಗೆ ಒಂದನೇ ದರ್ಜೆಯ ಬೆಳ್ಳಿಯ ಮೆಡಲುಗಳು ಎರಡಿವೆ. ಒಂದು ಸೆನ್ಸಸ್ ಕ್ಲಾರ್ಕಿಗೂ, ಇನ್ನೊಂದು ಅತೀ ಹೆಚ್ಚಿನ ಯೋಗ್ಯತೆ ಪಡೆದವರಿಗೂ ಎರಡನೇ ದರ್ಜೆಯ ಆರು Bronze ಮೆಡಲುಗಳಿವೆ ಎಂತೆ. ಆ ಆರು ಮೆಡಲುಗಳ ಗತಿ ಏನಾಯಿತು? ಅವನ್ನೂ ಹೇಳಕೇಳಿಲ್ಲದಂತೆ ರಹಸ್ಯವಾಗಿ ಕೊಟ್ಟರೆ? ಸಾಮಾನ್ಯವಾಗಿ ಕೊಡುವ ಬಹುಮಾನ ಪತ್ರವನ್ನಾದರೂ ಎಲ್ಲಿ ಕೊಟ್ಟರು? ಸರಕಾರದ ಬುದ್ದಿವಂತರಲ್ಲವೆ? ಮಾಡಿದ ಉತ್ತಮ ಕೆಲಸಕ್ಕಾದರೂ ಸರಕಾರದವರು ಒಂದು ಕೃತಜ್ಞತೆಯನ್ನು ಸೂಚಿಸಬೇಕಲ್ಲವೇ? ತಮ್ಮ ಕೆಲಸವಾಯಿತು. ಇನ್ನೇನು ಎಂದೇ? ಹಿಂದೆ ಬ್ರಿಟಿಷರ ಕಾಲದಲ್ಲಿ ಸೆನ್ಸಸ್ ಕೆಲಸ ಮಾಡಿದವರಿಗೆ ಸರ್ಟಿಫಿಕೇಟುಗಳನ್ನು ಕೊಡುತ್ತಿದ್ದರು. ಪ್ರಜಾ ಸರಕಾರ ಬಂದ ನಂತರ ಹೀಗಾಗಲು ಕಾರಣವೇನು?

ಒಬ್ಬ ಎನ್ಯುಮರೇಟರ್

ತಿದ್ದಿಕೊಳ್ಳಬೇಕಾದವರಾರು?

'ಕೊಡಗು' ಪತ್ರಿಕೆಯಲ್ಲಿ ನಾಪೋಕ್ಲು ನಾಡಿನ ಅಧಿಕಾರಿಗಳೊಬ್ಬರ ವಿಚಾರದ ಎರಡು ಲೇಖನಗಳನ್ನೂ ತಾ. ೨೯-೭-೫೩ರ 'ಜನ್ಮಭೂಮಿ'ಯಲ್ಲಿ "ನಾಪೋಕ್ಲಿನ ರೈತರೂ ಮತ್ತು ನಾಡಿನ ಪಾರುಪತ್ತೆಗಾರರೂ" ಎಂಬ ಲೇಖನವನ್ನೂ ಓದಿದೆನು. ಜನ್ಮಭೂಮಿಯ ವಾತ್ಮೀದಾರರು ಒಂದೋ ಸಂಬಂಧಿಸಿದವರ ಮೆಚ್ಚಿಗೆಗೆ ಹಾಗೆ ಬರೆದಿರಬೇಕು, ಇಲ್ಲವೇ ಅವರ ಬಾಲ ಹಿಡಿದವರಾಗಿರಬೇಕು. ಏಕೆಂದರೆ ಗರೀಬರಿಗೆ ಮನೆ ಕಟ್ಟಲು ಸೈಸಾರಿ ಜಾಗ ಕೊಡಬಾರದೆಂದು ಯಾರು ಬರೆದಿದ್ದಾರೆ? ಹಾಲು ಎಂಬುದನ್ನು ಹಾವೆಂದು ಓದುವ ಕುರುಡು ದೃಷ್ಟಿಯ ಮತ್ಸರವಾದಿಗಳಾದವರಿಗೆ ಏನು ಬರೆದರೂ ಕಷ್ಟ! ದೇವರ ಕಾಡನ್ನು ಬೇರೆಯವರಿಗೆ ಕೊಡಬಾರದೆಂಬುದು ಸರಿ. ಏಕೆಂದರೆ ಅದರಲ್ಲಿ ನಾನಾ ವಿವಾದಗಳಿಗೂ ಘರ್ಷಣೆಗೂ ಆಸ್ಪದವಾಗಬಹುದು. ಇದನ್ನು ತಿಳಿದೇ ಜಮಾಬಂಧಿಯಲ್ಲಿ ಅ. ಕಮಿಷನರು ಆ ಜಾಗಕ್ಕಾಗಿ ಈ ಮೊದಲು ಅರ್ಜಿ ಬರೆದವರಿಗೆ ಆ ಜಾಗವನ್ನು ಕೊಡಲಾಗುವದಿಲ್ಲವೆಂದು ತಿರಸ್ಕರಿಸಿದ್ದಾಗಿದೆ. ಸುಬೇದಾರರು ಆ ಸ್ಥಳದ ಪರಿಶೀಲನೆಗೆ ಬಂದಾಗ ಹೊಳೆಯ ಕರೆಯ ಒಂದು ಜಾಗವನ್ನು ಅವರಿಗೆ ತೋರಿಸಿ ಒಬ್ಬ ಮಾಜಿ ಸಿಪಾಯಿಯ ಮೇಲೆ ಆರೋಪ ಹೊರಿಸಿದವರಾರು? ಎಡ್ ಹಾಕ್ ಸಮಿತಿಯವರು ಉದ್ಯೋಗಸ್ಥರನ್ನು ಕಾಣಬಾರದೆಂದು ಯಾರಾದರೂ ಹೇಳಿದರೆ? ಆದರೆ ಎಡ್ ಹಾಕ್ ಸಮಿತಿಯ ಸದಸ್ಯರ ಮಾತನ್ನು ವೇದವಾಕ್ಯವೆಂದು ನಂಬಿ ಅದರಂತೆ ಕುಣಿಯುವ ಅಧಿಕಾರಿಯನ್ನು ಖಂಡಿಸದಿರಲು ಸಾಧ್ಯವೇ?

ವಾಚಕರಾದ ನಮಗೆ ಕೊಡಗು ಪತ್ರಿಕೆಯ ಯೋಗ್ಯತೆಯೂ, ನಿಮ್ಮ ಪತ್ರಿಕೆಯ ಘನತೆಯೂ ತಿಳಿದಿದೆ. ನೀವು ಅದರ ವಿಚಾರ ಉದ್ದ ಬರೆಯುವ ಅಗತ್ಯವಿಲ್ಲ. ಬೇರೆಯವರನ್ನು ದೂರುವದನ್ನೇ ಧ್ಯೇಯವಾಗಿಟ್ಟುಕೊಂಡಿರುವ, ತಮ್ಮವರ ತಪ್ಪು ಕಂಡರೂ ಬಚ್ಚಿಟ್ಟುಕೊಳ್ಳುತ್ತಿರುವ ನೀವು ಮತ್ತು ನಿಮ್ಮ ಪತ್ರಿಕೆಯ ವಿಚಾರ ಪ್ರತ್ಯೇಕ ನೀವು ಬರೆದು ಹೇಳುವದು ಬೇಡ. ನಿಮ್ಮ ಅಸಂಬಂಧ ಲೇಖನ ಪ್ರಕಟಿಸುವದರಿಂದಲೇ ನಿಮ್ಮ ಪತ್ರಿಕೆಯ ಯೋಗ್ಯತೆಯನ್ನು ಅಳೆದಿದ್ದೇನೆ.

ನಾಡಿನವ.

ಈ ತಾರತಮ್ಯವೇಕೆ ?

ನಮ್ಮ ರಾಜ್ಯಘಟನೆಯಂತೆ ಕೊಡಗು ಸರಕಾರವೂ ಜಾತೀಯ ಸಂಘ ಸಂಸ್ಥೆಗಳಿಗೆ ಸಹಾಯ, ನೆರವು ಕೊಡಬಾರದೆಂಬ ಘೋಷಣೆಯನ್ನು ಅನುಸರಿಸಿದೆ. ಅದರಂತೆಯೇ ಕೊಡಗು ಸ್ಟಾಂಟೇಶನ್ ಫಂಡು ಮೊದಲಾದುವುಗಳ ಜವಾಬ್ದಾರಿಯನ್ನು ಆಯಾಯ ಕಮಿಟಿಗೆ ವಹಿಸಿದೆ. ಆದರೆ ಮಡಿಕೇರಿಯಲ್ಲಿರುವ ಗೌಡ ಬೋರ್ಡಿಂಗಿಗೆ ಸರಕಾರವು ವಾರ್ಷಿಕ ರೂ. ೬೦೦ರ ವಂತಿಗೆ ಕೊಡುತ್ತಿದೆಯೆಂಬ ವರ್ತಮಾನವಿದೆ. ಅಂಥಾ ಸಹಾಯ ಧನವನ್ನು ಮಡಿಕೇರಿಯಲ್ಲೇ ಇರುವ ಬ್ರಾಹ್ಮಣ ಬೋರ್ಡಿಂಗಿಗಾಗಲೀ ಇತರ ಯಾವುದೇ ಕೋಮಿನವರ ಬೋರ್ಡಿಂಗಿಗಾಗಲೀ ಕೊಡುತ್ತಿಲ್ಲ. ಗೌಡ ಬೋರ್ಡಿಂಗಿಗೆ ರೂ ೬೦೦ ಕೊಡುತ್ತಿರುವದು ನಿಜವಾದರೆ ಇದ ನ್ಯಾಯವೇ? ಜಾತ್ಯತೀತ ತತ್ವ ಬೋಧಿಸುವ ಸರಕಾರ ಈ ತಾರತಮ್ಯಕ್ಕೆ ಏನು ಉತ್ತರ ಕೊಡುವದು?

ನಿರೀಕ್ಷಕ.

ಕೊಡಗಿನ ವಿದ್ಯಾ ಇಲಾಖೆ

ತಾ ೧-೪-೫೧ರಿಂದ ಕೊಡಗಿನ ಜಿಲ್ಲಾ ಬೋರ್ಡ್ ಶಾಲೆಗಳನ್ನು ಸರಕಾರ ವಹಿಸಿಕೊಂಡ ವಿಚಾರವನ್ನು ಜೂನ್ ತಿಂಗಳಲ್ಲಿ ಅಧ್ಯಾಪಕರ ವರ್ಗಾವರ್ಗಿ ಮಾಡಿದ ವಿಚಾರವನ್ನು ಪತ್ರಿಕೆಗಳಲ್ಲಿ ನಾನು ಓದಿದೆನು. ಕೊಡಗಿನ ಸರಕಾರಿ ಸ್ಕೂಲುಗಳ ಅಧ್ಯಾಪಕರಿಗೆ ಹೊಸ ದರದ ವೇತನ ಕೊಟ್ಟಾಗ ತಾ. ೧-೧-೪೭ ರಿಂದಲೇ ಕೊಟ್ಟು ಹಿಂದಿನ ಬಾಕಿಯನ್ನು ಒಂದೇ ಗಂಟಿನಿಂದ ಪಾವತಿ ಮಾಡಿದರು.

ಅದೇಳು ವರ್ಷಗಳಿಂದ ಜಿಲ್ಲಾ ಬೋರ್ಡ್ ಶಾಲಾ ಉಪಾಧ್ಯಾಯರು ಭಗೀರಥ ಪ್ರಯತ್ನ ಮಾಡಿ ದೇವಲೋಕದ ಗಂಗೆಯನ್ನು ಭೂಮಿಗೆ ತಂದರು. ಆದರೆ ಗಂಗೆಯು ಶಿವನ ತಲೆಯ ಮೇಲೆಯೇ ನಿಂತಿದ್ದಾಳಲ್ಲದೆ ಭೂಮಿಗೆ ಇಳಿದಿರುವದಿಲ್ಲ. ಜಿಲ್ಲಾ ಬೋರ್ಡ್ ಅಧ್ಯಾಪಕರಿಗೆ ತಾ. ೧-೯-೫೩ ರಿಂದಲೇ ಹೆಚ್ಚಿನ ದರದ ವೇತನ ದೊರೆಯುವದೆಂಬ ವರ್ತಮಾನವಿತ್ತು. ಆದರೆ ಹಿಂದಿನ ಒಂದು ರೂಪಾಯಿಯೂ ಈ ವರೆಗೆ ದೊರೆತಿರುವದಿಲ್ಲ. ಬಾಕಿ ಇರಲಿ, ತಾ. ೧-೪-೫೩ರಿಂದ ವೇತನ ಕೂಡ ಸಕಾಲದಲ್ಲಿ ದೊರೆಯುತ್ತಿಲ್ಲ. ಜೂನ್ ತಿಂಗಳ ವೇತನ ಆಗಸ್ಟ್ ೨ರಲ್ಲಿ ದೊರೆತಿದೆ. ಮತ್ತೆ ಜುಲೈಯದು ಯಾವಾಗಲೋ?

ಈ ರೀತಿಯ ಅವ್ಯವಸ್ಥೆಗೆ ಕಾರಣವೇನು? ಇಲಾಖೆಯ ಮೇಲಧಿಕಾರಿಗಳು ಈ ವಿಚಾರ ನಿಗವಿಡುವದಿಲ್ಲವೇ? ವಿದ್ಯಾ ಇಲಾಖೆಗೆ ಬರಕೊಂಡ ಪತ್ರಕ್ಕೆ ಜವಾಬು ದೊರೆಯಲು ಎರಡು ಮೂರು ತಿಂಗಳು ಬೇಕು. ನಿವೃತ್ತರಾದ ಉಪಾಧ್ಯಾಯರಲ್ಲಿ ಹಲವರಿಗೆ ಒಂದು ವರ್ಷವಾದರೂ ಪೆನ್ಷನ್ ದೊರೆತಿರುವದಿಲ್ಲ. ವಿದ್ಯಾ ಇಲಾಖೆ ಆಫೀಸಿನಲ್ಲಿ ಕೆಲಸ ದಕ್ಷತೆಯಿಂದ ನಡೆಯುತ್ತಿಲ್ಲ. ಮಾನ್ಯ ಮಂತ್ರಿಗಳು ಒಮ್ಮೆ ಸಂದರ್ಶಿಸಿ ಅಲ್ಲಿಯ ಕೆಲಸ ಕಾರ್ಯಗಳನ್ನು ಅಜಮಾಯಿಸುವರೇ?

ವಿದ್ಯಾಭಿಮಾನಿ.

ಮಂತ್ರಿಗಳಿಗೆ ಕಾರು.

ಸರಕಾರದ ಕೆಲಸಕ್ಕಾಗಿ ಮಂತ್ರಿಗಳಿಗೆ ಕೊಟ್ಟಿರುವ ಕಾರುಗಳನ್ನು ಸರಕಾರಿ ಕೆಲಸಕ್ಕಾಗಿಯೇ ಉಪಯೋಗಿಸಬೇಕಲ್ಲದೆ ತಮ್ಮ ಮಕ್ಕಳು ನೆಂಟರನ್ನು ಕಳುಹಿಸುವ ಸ್ವಂತ ಕೆಲಸಗಳಿಗೆ ಉಪಯೋಗಿಸಬಾರದೆಂಬ ಪತ್ರವೊಂದು ತಾರೀಕು ೧೪ರ ಕೊಡಗು ಪತ್ರಿಕೆಯಲ್ಲಿ ಪ್ರಕಟಿಸಿದ್ದಕ್ಕಾಗಿ ಸದರಿ ಪತ್ರಿಕೆಯ ಸಂಪಾದಕರನ್ನು ಕೆಲವರು ದೂಷಿಸುತ್ತಿರುವರು. ಯಾವುದೇ ಪತ್ರಿಕೆಯಲ್ಲಿ ಸಂಪಾದಕೀಯ ಲೇಖನಗಳು ಮಾತ್ರ ಸಂಪಾದಕರ ಅಭಿಪ್ರಾಯವನ್ನು ಸೂಚಿಸುವದಾಗಿದೆಯೆಂಬುವದನ್ನೂ ಮುಖ್ಯವಾಗಿ ಓದುಗರು ಬರೆಯುವ ಅಭಿಪ್ರಾಯಗಳಿಗೆ ಸಂಪಾದಕರು ಜವಾಬ್ದಾರರಲ್ಲವೆಂಬುದನ್ನೂ ಕೆಲವರು ಮರೆತಂತೆ ಕಾಣುತ್ತದೆ. ಪತ್ರಿಕೆಯ ಕರ್ತವ್ಯ ಮತ್ತು ಘನತೆಯನ್ನು ಉಳಿಸಿಕೊಳ್ಳಲಿಕ್ಕಾಗಿ ಪತ್ರಿಕೆಯಲ್ಲಿ ಪ್ರಕಟವಾಗುವ ವಿಚಾರಗಳು ಅಸತ್ಯವಾದುವಾಗಿಯೂ, ಅವಮಾನ ಮಾಡುವಂಥಾವಾಗಿಯೂ ಇರದಂತೆ ಸಂಪಾದಕರು ನೋಡಿಕೊಳ್ಳಬೇಕಾಗಿದೆ. ಇತರ ವಿಷಯಗಳಲ್ಲಿ ಅಭಿಪ್ರಾಯಗಳು ಭಿನ್ನವಾಗಿದ್ದರೂ ಕೂಡ ಅಂಥಾ ಅಭಿಪ್ರಾಯಗಳನ್ನು ಪ್ರಕಟಿಸದೆ ಬಾಕಿ ಮಾಡುವ ಹಕ್ಕು ಸಂಪಾದಕರಿಗಿಲ್ಲ. ಏಕೆಂದರೆ ಒಂದು ಪತ್ರಿಕೆಯಲ್ಲಿ ಸಂಪಾದಕರ ಅಭಿಪ್ರಾಯ ಮಾತ್ರ ಪ್ರಕಟವಾಗಬೇಕಾದುದಲ್ಲ. ದೇಶೀಯರ ಹಲವು ತರದ ಅಭಿಪ್ರಾಯಗಳನ್ನೂ ಪತ್ರಿಕೆ ನ್ಯಾಯವಾಗಿ ಪ್ರಕಟಿಸಬೇಕು. ಅದರಲ್ಲೂ ಸಾರ್ವಜನಿಕ ಕಂಪೆನಿಯಾಗಿರುವ ಕೊಡಗು ಕಂಪೆನಿಯ ಪತ್ರಿಕೆಯಲ್ಲಿ ದೇಶದವರ ವಿವಿಧ ಅಭಿಪ್ರಾಯಗಳನ್ನು ಕೊಡಲೇಬೇಕಾಗಿದೆ. ಈ ರೀತಿ ಸಂಪಾದಕರ ಕರ್ತವ್ಯವನ್ನರಿತವರು ಸಂಪಾದಕರನ್ನು ದೂಷಿಸಲಾರರು. ಆದರೆ ಮಂತ್ರಿಗಳು ಸರಕಾರಿ ಕಾರಿನಲ್ಲಿ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವದು ನಿಜ ... ಯಾಗಿರಬಹುದು. ಹೀಗೆ ಸರಕಾರಿ ವಾಹನಗಳನ್ನು ಸ್ವಂತ ಉಪಯೋಗ ಮಾತ್ರ ಕೊಡದೆಂಬುದು ತತ್ವದ ಮೇರೆ ಸರಿಯಾಗಿರಬಹುದು. ಆದರೆ ತತ್ವಗಳನ್ನು ಅಕ್ಷರಶಃ ಪರಿಪಾಲಿಸುವವರು ಮಹಾತ್ಮಾಗಾಂಧಿ, ಆಚಾರ್ಯ ವಿನೋಬಭಾವೆ ಮತ್ತು ಪುರುಷೋತ್ತಮದಾಸ ಟಾಂಡನರಂಥವರಲ್ಲದೆ ಬೇರಿರಲಾರರು. ಈ ರೀತಿಯ ತತ್ವಪರಿಪಾಲನೆಯನ್ನು ನೂರಕ್ಕೆ ನೂರರಂತೆ ಮಾಡಬೇಕೆಂದು ಸಾಮಾನ್ಯರಾದವರಿಂದ ಬಯಸುವದು ಹೆಚ್ಚಾಯಿತೆಂದು ನನ್ನ ಅಭಿಪ್ರಾಯವಾಗಿದೆ. ಸಾಮಾನ್ಯ ಜನರಿಗೆ ಜಾರಿಗೆ ತರಲಾಗದಂಥಾ ಕಾರಿನ ಸ್ವಂತ ಉಪಯೋಗದ ವಿಷಯ ಪ್ರಕಟಿಸುವದಕ್ಕಿಂತ ದೊಡ್ಡ ಕುಂದು ಕೊರತೆಗಳನ್ನು ಕುರಿತು ಟೀಕಿಸುವದು ಹೆಚ್ಚಿನ ಪ್ರಯೋಜನಕಾರಿಯಾಗುವದೆಂದು ನನ್ನ ಭಾವನೆ. ಸಂಬಂಧಪಟ್ಟವರು ಟೀಕಾಕಾರರ ಯಾ ಸಂಪಾದಕರ ಮೇಲೆ ಅಪವಾದ ಹೊರಿಸುವದರ ಬದಲು ತಮ್ಮಲ್ಲಿ ಪಬ್ಲಿಕ್‌ನವರಿಗೆ ತೋರುವ ತಪ್ಪುಗಳು ನಿಜವಾಗಿದ್ದರೆ ಅವುಗಳನ್ನು ತಿದ್ದಿಕೊಳ್ಳಲು ಯತ್ನಿಸುವರಾಗಿ ಆಶಿಸುತ್ತೇನೆ 'ಕೊಡಗು' ಕಂಪೆನಿ ಶೇರುದಾರ.

ಇದು ಕೂಡದು

ಕೊಡಗಿನ ಸರಕಾರಿ ಕಾಲೇಜು ದಿನ ದಿನಕ್ಕೆ ಅಭಿವೃದ್ಧಿ ಪಥದಲ್ಲಿ ನಡೆಯುತ್ತಿದೆ ಶಾಲಾ ಪಾಟ ಪ್ರವಚನಗಳಲ್ಲೂ, ಆಟೋಟಗಳಲ್ಲೂ ಈಗಾಗಲೇ ಅದು ಹೆಮ್ಮೆ ಪಟ್ಟುಕೊಳ್ಳಬಹುದಾದಂತ ಕೀರ್ತಿಯನ್ನು ಪಡೆದಿದೆ. ಇದಕ್ಕೆ ಕಾರಣ ವಿದ್ಯಾರ್ಥಿ ಮತ್ತು ಅಧ್ಯಾಪಕ ವೃಂದವೆಂದರೂ ಹೆಚ್ಚಿನ ಜವಾಬ್ದಾರಿ ಪ್ರಿನ್ಸಿಪಲರದು. ಈಗಿನ ಪ್ರಿನ್ಸಿಪಲರು ಸ್ವತಂತ್ರ ದೇಶದ ಕಾಲೇಜಿಗೆ ಯೋಗ್ಯರು. ಇನ್ನೊಬ್ಬರನ್ನು ಅನುಕರಿಸುವ, ದೊಡ್ಡವರ ಬಾಲ ಹಿಡಿಯುವ ಹಾಗೂ ಇತರರ ಮೆಚ್ಚುಗೆಗಾಗಿ ತನ್ನ ಸ್ವಂತ ಅಭಿಪ್ರಾಯವನ್ನು ಬಲಿಕೊಡುವ ವ್ಯಕ್ತಿಗಳವರಲ್ಲ. ಅಂಥಾ ಗುಣಗಳೇ ನಾಳಿನ ಪ್ರಜೆಗಳಾದ 'ಇಂದಿನ ವಿದ್ಯಾರ್ಥಿಗಳಲ್ಲಿ ಬೆಳೆದು ಬರಬೇಕಾಗಿದೆ. ಅಂಥಾ ಆದರ್ಶರು ಕೊಡಗು ಕಾಲೇಜಿಗೆ ಪ್ರಿನ್ಸಿಪಲರಾಗಿ ದೊರೆತುದು ಸುದೈವ.

ಆದರೆ ಅವರನ್ನು ವರ್ಗಾಯಿಸುವ ವರ್ತಮಾನಗಳು ನನ್ನ ಕಿವಿಗೂ ಮುಟ್ಟಿ ಇದನ್ನು ಬರೆಯುತ್ತಿರುವುದಾಗಿದೆ. ಕಳೆದ ವಾರದ ಪತ್ರಿಕೆಯಲ್ಲಿ ಈ ವಿಚಾರ ಒಂದು ಓಲೆ ಪ್ರಕಟವಾಗಿತ್ತು. ಅದನ್ನು ಸಮರ್ಥಿಸಿ ಈ ಓಲೆಯನ್ನು ನಾನು ಬರೆಯುವ ಗುರಿ ಇಷ್ಟೇ. ಏನೆಂದರೆ ಪ್ರಿನ್ಸಿಪಲರನ್ನು ವರ್ಗಾಯಿಸುವ ವರ್ತಮಾನವು ನಿಜವಾಗಿರುವ ಪಕ್ಷದಲ್ಲಿ ಅದನ್ನು ವಿರೋಧಿಸಿ ದೇಶೀಯರು ತಮ್ಮ ಅಭಿಪ್ರಾಯವನ್ನು ಸರಕಾರಕ್ಕೆ ತಿಳಿಸಿ, ಕೆಲವೊಬ್ಬ ವ್ಯಕ್ತಿಗಳ ಖುಶಿಗಾಗಿ ದೇಶಕ್ಕೆ ಅಹಿತ ಮಾಡಬಾರದೆಂಬುದನ್ನು ಸರಕಾರಕ್ಕೆ ಮುಂದಿಟ್ಟು ಮಾಡಿ ಈ ವರ್ಗಾವರ್ಗಿ ಆಗದಂತೆ ನೋಡಬೇಕು. C. T. M.

ಕಾಲೇಜು ವಿದ್ಯಾರ್ಥಿಗಳಿಗೆ ವಸತಿ ಗೃಹ

ಕೊಡಗು ಸರಕಾರಿ ಕಾಲೇಜಿನ ವಿದ್ಯಾರ್ಥಿಗಳು, ಎಷ್ಟೋ ಕೂಗಿಕೊಂಡರೂ ಕೊಡಗು ಪತ್ರಿಕೆಯಲ್ಲಿ ಅನೇಕ ಪತ್ರಗಳು ಈ ವಿಚಾರ ಪ್ರಕಟವಾದರೂ ಕೊಡಗಿನ ಸರಕಾರ ಈ ವಿಚಾರದಲ್ಲಿ ಯಾವುದೇ ನಿಗವಹಿಸಿದಂತೆ ತೋರುವದಿಲ್ಲ. ಬಹುಶಃ 'ಕೊಡಗು' ಪತ್ರಿಕೆಯಲ್ಲಿ ಈ ವಿಚಾರಗಳು ಬಂದುದೆಂದು ಈ ಧೋರಣೆಯೋ? ಹೇಗೂ ನಾಳಿನ ನಾಗರಿಕರಾದ ಇಂದಿನ ವಿದ್ಯಾರ್ಥಿಗಳು ವಿಪರೀತ ಕಷ್ಟಕ್ಕೊಳಗಾಗಿರುವರೆಂದು ಸರಕಾರಕ್ಕೆ ಅರಿವಾಗುವುದಿಲ್ಲವೇ? ಸರಕಾರದ ಅಧಿಕಾರ ಪೀಟದ ಮೂಗಿನಡಿಯಲ್ಲಿರುವ ಕಾಲೇಜ್ ಹಾಸ್ಟೆಲಿನ ಕೂಗು ಹೀಗಾದರೆ ಮತ್ತೆ ದೂರದಲ್ಲಿರುವ ರೈತರ ಕೂಗು ಸರಕಾರದ ಕಿವಿಗೆ ಮುಟ್ಟೀತೇ?

ಈಗ ನಡೆಯುತ್ತಿರುವ ಬೋರ್ಡಿಂಗಿನ ಊಟದ ವ್ಯವಸ್ಥೆಯು ಸರಿಯಿಲ್ಲವೆಂದೂ ಬಡ ವಿದ್ಯಾರ್ಥಿಗಳು ತೆರುವ ರೂ. ೪೦/– ಕ್ಕೆ ಸರಿಯಾದ ಪ್ರತಿಫಲ ದೊರೆಯುತ್ತಿಲ್ಲವೆಂದೂ ಫಿರ್ಯಾದು ಮಾಡಿದರೆ "ಇಷ್ಟವಿದ್ದರೆ ಇರಿ ಇಲ್ಲದಿದ್ದರೆ ಬಿಟ್ಟು ಹೋಗಿ" ಎಂದು ಹೇಳುವ ಅಧಿಕಾರಿಗಳಿಂದಾಗಿ ತೊಂದರೆಯಾಗುತ್ತಿದೆಯೆಂದೂ ತಿಳಿಯಬರುತ್ತದೆ. ಸಂಬಂಧಿಸಿದ ಮೇಲಧಿಕಾರಿಗಳು ಬೋರ್ಡಿಂಗಿನ ಲೆಕ್ಕ ಪತ್ರಗಳನ್ನೂ, ಸಂಬಂಧಿಸಿದ ವಿದ್ಯಾರ್ಥಿಗಳನ್ನೂ ವಿಚಾರಿಸಿ ವ್ಯವಸ್ಥೆ ಹಾಳಾಗಿದೆಯೆಂದು ಖಚಿತವಾದರೆ ಸರಿಪಡಿಸಬೇಕಾಗಿ ಪ್ರಾರ್ಥನೆ. C. K.

ಗೌಡ ಬೋರ್ಡಿಂಗ್ ಮನೆ

ತಾ. ೫ರ 'ಜನ್ಮಭೂಮಿ' ಪತ್ರಿಕೆಯಲ್ಲಿ 'ನಿಷ್ಪಕ್ಷಪಾತಿ' ಎಂಬಭಿದಾನದಿಂದ ಒಬ್ಬರು ಒಂದು ಲೇಖನ ಬರೆದು ಗೌಡ ಬೋರ್ಡಿಂಗಿರುವ ಮನೆ ಆ ಕೋಮಿನವರ ಸ್ವಂತ ಕಟ್ಟಡವೆಂದು ಬರೆದಿದ್ದರು. ತಮಗೆ ಬೇಕಿರುವವರನ್ನು ಸಂತೋಷಗೊಳಿಸಲು ಏನನ್ನು ಬೇಕಾದರೂ ಬರೆಯಲೂ ಪ್ರಕಟಿಸಲು ಪತ್ರಿಕೆಗಳು ತಯಾರಿರುವಾಗ ಅಂಥಾ ಲೇಖನ ಪ್ರಕಟವಾದುದು ಆಶ್ಚರ್ಯವಲ್ಲ. ಆದರೆ ಸತ್ಯಾಂಶ ಹಾಗಿಲ್ಲ.

೨೫ ವರ್ಷಗಳ ಹಿಂದೆ ಈಗಿನ ಡಿ. ಕಮಿಷನರು ವಾಸ ಇರುವ ಮನೆಯ ಸಮೀಪದ ಕಟ್ಟಡದಲ್ಲಿ ಗೌಡ ವಿದ್ಯಾರ್ಥಿಗಳ ಬೋರ್ಡಿಂಗ್ ಮನೆ ಇತ್ತು. ಅದರಲ್ಲಿ ಸ್ಥಳ ಸಾಲದ್ದರಿಂದ ಈಗಿರುವ ಸರಕಾರಿ ಕಟ್ಟಡದ ಪಕ್ಕದಲ್ಲಿ ಸ್ಥಳ ಪಡೆದು ಸ್ವಂತ ಖರ್ಚಿನಿಂದ ಕಟ್ಟಡ ಕಟ್ಟಿ ಅದರಲ್ಲಿ ಬೋರ್ಡಿಂಗ್ ನಡೆಯುತಿತ್ತು. ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಬೋರ್ಡಿಂಗಿನಲ್ಲಿ ನೂರೈವತ್ತಕ್ಕೂ ಮಿಕ್ಕಿ ವಿದ್ಯಾರ್ಥಿಗಳಿದ್ದ ಸಮಯದಲ್ಲಿ ಈಗ ಗೌಡ ಬೋರ್ಡಿಂಗ್ ಇರುವ ಕಟ್ಟಡದಲ್ಲೂ ವಿದ್ಯಾರ್ಥಿಗಳಿದ್ದು ಎರಡೂ ಸೆಂಟ್ರಲ್ ಹೈಸ್ಕೂಲು ಬೋರ್ಡಿಂಗ್‌ಗಳಾಗಿದ್ದವು. ಆದರೆ ದೇಶದ ಬೇರೆಡೆ ಹೈಸ್ಕೂಲಾಗಿ ಬೋರ್ಡಿಂಗ್ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿ ಕೆಳಗಿನ ಕಟ್ಟಡವೇ ಸಾಕಾಗಿದ್ದುದರಿಂದ ಮೇಲೆ ಸರಕಾರಿ ಕಟ್ಟಡವನ್ನು ಖಾಲಿ ಬಿಡುವ ಬದಲು ಗೌಡ ಕೋಮಿನ ವಿದ್ಯಾರ್ಥಿಗಳಿಗೆ ಹಂಗಾಮಿಯಾಗಿ ಬಿಟ್ಟಿದ್ದಾಗಿದೆ. ಈಗಲೂ ಕೂಡ ಆ ಕಟ್ಟಡದ ರಿಪೇರಿ, ಮೇಲುಸ್ತುವಾರಿಯನ್ನು ಸರಕಾರವೇ ಮಾಡಿಸುತ್ತಿದೆಯಲ್ಲದೆ ಗೌಡ ಕೋಮಿನವರಲ್ಲ. ಗೌಡ ಕೋಮಿನವರು ತಮ್ಮ ಸ್ವಂತ ಕಟ್ಟಡವನ್ನು ಬೇರೆ ಜನರಿಗೆ ಬಾಡಿಗೆಗೆ ಕೊಟ್ಟಿದ್ದಾರೆ. ನಿಜ ಸಂಗತಿ ಹೀಗಿರುತ್ತಾ ಈಗ ಬೋರ್ಡಿಂಗ್ ಇರುವ ಕಟ್ಟಡವು ಗೌಡ ಕೋಮಿನವರ ಸ್ವಂತ ಕಟ್ಟಡವೆನ್ನುವದು ಕೆಲವರನ್ನು ಸಂತೋಷಗೊಳಿಸಲು ಬರೆದ ಬೇಜವಾಬ್ದಾರಿಯ ಲೇಖನವಲ್ಲದೆ ಬೇರಿಲ್ಲ.

ಸರಕಾರವು ಈ ಕಟ್ಟಡದಲ್ಲಿ ಕಾಲೇಜು ವಿದ್ಯಾರ್ಥಿ ನಿವಾಸಗೃಹ ತೆರೆಯಲು ಮೊದಲು ನಿಶ್ಚಯಿಸಿತ್ತೆಂದೂ ಆದರೆ ಕೆಲವು ಆಸಕ್ತ ಮುಂದಾಳುಗಳು ಇದರಲ್ಲಿ ಕೈಹಾಕಿ ಸರಕಾರವನ್ನು ತಡೆಯಲು ಸಮರ್ಥರಾದರೆಂದೂ ವರ್ತಮಾನವನ್ನು ನಾನು ಕೇಳಿರುವೆನು. ಒಂದು ವೇಳೆ ಇದು ನಿಜವಾದ್ದರೆ ಸರಕಾರದ ಜಾತ್ಯಾತೀತ ಧೋರಣೆಯ ಮಾತು ಕೇವಲ ಟೊಳ್ಳು ಅಲ್ಲವೇ?

—ಹಳೇ ವಿದ್ಯಾರ್ಥಿ.

ಕೊಡಗಿನಲ್ಲಿ ಹರಿಜನೋದ್ಧಾರ!

ಕೊಡಗಿನ ಹರಿಜನ, ನಿಮ್ನ ವರ್ಗ ಮತ್ತು ಮಜದೂರರು ಒಟ್ಟಿಗೆ ಸೇರಿ ೬೦ ಸಾವಿರಕ್ಕಿಂಥಾ ಹೆಚ್ಚು ಜನರಿದ್ದೇವೆ. ಆಯಾಯ ಜನಾಂಗದ ಲೆಕ್ಕ ತೆಗೆದರೆ ಇಷ್ಟು ಜನ ಸಂಖ್ಯೆಯ ಜನಾಂಗವು ಯಾವುದೂ ಇಲ್ಲ. ನಮ್ಮನ್ನು ವಿನಾಯಿಸಿ ಬೇರೆಯವರನ್ನು ತೆಗೆದುಕೊಂಡರೆ ದೇಶದ ಸರ್ವ ಹಕ್ಕೂ ಅವರದೇ ಆಗಿದೆ. ದೇಶದಲ್ಲಿರುವ ತರಿ ಜಮೀನೆಲ್ಲ ಅವರದೇ ಆಗಿದೆ. ಕಾಫಿ ತೋಟ, ಏಲಕ್ಕಿ ಮಲೆ, ಕಿತ್ತಳೆ ಮತ್ತು ಹುಲ್ಲು ಗಾವಲು ಸಹ ಅವರದೇ ಆಗಿದೆ. ಹೀಗಿರುವಾಗ ನಮಗೇನಿದೆ? ಸರ್ವ ಜನಾಂಗದವರ ಸೇವಾವೃತ್ತಿ ಮಾಡಿ ಅವರ ಕಣಜ ಖಜಾನೆಗಳನ್ನು ತುಂಬಿಸುತ್ತಿದ್ದೇವೆ. ಸ್ವತಂತ್ರ ಪ್ರಜಾ ರಾಜ್ಯದಲ್ಲೂ ನಮ್ಮ ಹಕ್ಕು ಬಾಧ್ಯತೆಗಳು ಇವೇ ಹೊರತು ಬೇರೆ ಇಲ್ಲ

ಬಡವನಿಗೂ ಬಲ್ಲಿದನಿಗೂ ಒಂದೇ ಬೆಲೆಯ ಓಟಿನಂತೆ. ಬಡವರ ಓಟು ದೊಡ್ಡವರಿಗೆ ಪಟ್ಟ ಕಟ್ಟುವುದಕ್ಕಲ್ಲವೇ? ಓಟಿನ ಸಮಯ ಬಂದಾಗ ನಮ್ಮ ಗುಡಿಸಲುಗಳ ಬಳಿಗೆ ಬಂದು 'ಸರಕಾರದವರ ಜೊತೆಯಲ್ಲಿ ಹೋರಾಡಿ ವೈಸೂರು ದೇಶದ ಹರಿಜನರಿಗೆ ಇರುವ ಅನುಕೂಲತೆ ನಿಮಗೂ ಕೊಡಿಸುತ್ತೇವೆ, ಭೂಮಿ ಕೊಡಿಸುತ್ತೇವೆ ಚಾಕರಿ ಕೊಡಿಸುತ್ತೇವೆ. ನೀವು ದೇಶದ ಸ್ವತಂತ್ರರು. ಎಲ್ಲರಿಗಿರುವ ಹಕ್ಕು ನಿಮಗೂ ಇದೆ' ಎಂಬುದಾಗಿ ಇಲ್ಲದ ಆಸೆಗಳನ್ನು ತೋರಿಸಿದರು ಇವುಗಳನ್ನೆಲ್ಲಾ ಕೇಳಿ ಕಿವಿ ಕಿವುಡಾಯಿತು. ಈ ಹೊತ್ತಿಗೆ ನಮ್ಮನ್ನು ಮಾತನಾಡಿಸುವವರೇ ಇಲ್ಲ. ನಮ್ಮನ್ನು ಕಣ್ಣೆತ್ತಿಯೂ ನೋಡುವವರಿಲ್ಲ. ಕೊಡಗಿನ ಹರಿಜನೋದ್ಧಾರವೆಲ್ಲಾ ಪುಸ್ತಕದೊಳಗೇ ಉಳಿದಿದೆ. ಮಾನ್ಯ ಮಂತ್ರಿವರ್ಯರ ಮತ್ತು ಎಂ. ಎಲ್. ಎ ಗಳ ಆತ್ಮದೊಳಗೂ ಬಾಯೊಳಗೂ ಅಡಕವಾಗಿವೆ. ನಮ್ಮ ಹೋಬಳಿಯಲ್ಲಿ ನಮ್ಮಿಂದ ಆರಿಸಿ ಬಂದವರಲ್ಲಿ ಒಬ್ಬರು ಮಂತ್ರಿಗಳು ತಮ್ಮ ಸ್ಥಾನದಲ್ಲಾದರು. ಎಂ. ಎಲ್. ಎ. ಗಳು ಮಂತ್ರಿಗಳ ಜೊತೆ ಊಟ, ಕಾರಿನಲ್ಲಿ ಪ್ರಯಾಣ, ಮಡಿಕೇರಿಗೂ ಮನೆಗೂ ಬಸ್ ಪ್ರಯಾಣ, ಇವೇ ಇವರು ಮಾಡುವ ದೇಶೋದ್ಧಾರ ಮತ್ತು ಸಮಾಜ ಸೇವೆ. ಹರಿಜನರಾದ ನಾವುಗಳು ೪–೫ ವರ್ಷಗಳಿಂದ ಭೂಮಿಗೂ, ಮನೆ ಕಟ್ಟುವ ಸ್ಥಳಕ್ಕೂ ಸಾವಿರಾರು ಅರ್ಜಿಗಳನ್ನು ಬರೆದುಕೊಂಡಿದ್ದೇವೆ. ಇನ್ನೂ ಅರ್ಜಿಗಳ ವಾಜ್ಯಾಲ ಆಗುವುದರಲ್ಲೂ, ಆದ ಅರ್ಜಿಗಳಿಗೆ ಎಂಡಾರ್ಸ್ ಬರುವುದರಲ್ಲೂ ಇದೆ.

ಪೈಸಾರಿ ಜಾಗಗಳಲ್ಲಿ ನಾವು ಕೇಳಿದ ಸ್ಥಳಗಳಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೂ ತರಿ ಯಾ ಕುಷ್ಕಿ ವ್ಯವಸಾಯಕ್ಕೂ ಸರಕಾರದವರು ಏಕೆ ೫–೧೦ ಏಕರೆಗಳನ್ನು ಕೊಡಬಾರದು? ದೊಡ್ಡವರಿಗೆ ಮಾತ್ರ ೨೫–೫೦ ಏಕರೆ ಕೊಡಬಹುದೋ? ನಾವು ಕಂದಾಯ ಕೊಡುವುದಿಲ್ಲವೇ? ಕೊಟ್ಟ ಭೂಮಿಯನ್ನು ಶಕ್ತಿ ಇದ್ದರೆ ಮಾಡುತ್ತೇವೆ ಶಕ್ತಿ ಇಲ್ಲದಿದ್ದರೆ ಸರಕಾರಕ್ಕೆ ವಹಿಸುತ್ತೇವೆ. ಸರಕಾರದವರು ಕೊಟ್ಟ ಭೂಮಿಯನ್ನು ತಿನ್ನುತ್ತೇವೊ? ಬಹುಶಃ ನಮಗೆ ಕೊಟ್ಟ ಭೂಮಿಗಳನ್ನು ಬೇರೆಯವರಿಗೆ ಮಾರಾಟ ಮಾಡದಂತೆ ಕಾನೂನು ಮಾಡಿಕೊಳ್ಳುವುದರಲ್ಲಿ ದೋಷವೇನಿದೆ?

ಸಮಾಜದಲ್ಲಿ ನಮಗೂ ಮಾನ್ಯತೆ ಇದೆಯಂತೆ! ಈ ಹೊತ್ತಿನ ವರೆಗೂ ಯಾವನೊಬ್ಬ ಹರಿಜನನೂ ತೆಂಗಿನ ಕರಟ ಹಿಡಿದು ಹೋಟೆಲಿನ ಹೊರಗೆ ನಿಂತು ಕಾಫಿ ಕುಡಿಯುವ ಪದ್ಧತಿ ನಿಲ್ಲಲಿಲ್ಲ. ಹರಿಜನ ಎಂ. ಎಲ್. ಎ. ಗಳು ಮಾತ್ರ ಹೋಟೆಲೊಳಗೆ ಹೋಗುತ್ತಾರೆ. ಎಲ್ಲರೂ ಅವರಂತೆ ಆಗಬೇಕಂತೆ!

ಸತ್ತ ದನ ತಿನ್ನ ಬೇಡಿ–ತಿಂದರೆ ಶಿಕ್ಷೆಯಾಗುತ್ತದೆ, ಕಾನೂನಾಗಿದೆ ಎಂದು ವರ್ತಮಾನ ಕೇಳಿದೆವು. ಪತ್ರಿಕೆಗಳಲ್ಲೂ ನೋಡಿದೆವು. ಈಗಲೂ ಪ್ರತಿಯೊಬ್ಬ ಹರಿಜನನೂ ತಿನ್ನುತ್ತಾನೆ. ಇದನ್ನು ಕೇಳುವವರೇ ಇಲ್ಲ? ಈ ಕಾನೂನು ಕತ್ತಲೆ ಕೋಣೆಯೊಳಗೆ ಮಲಗಿರಬಹುದೆಂದು ಯೋಚಿಸುತ್ತೇವೆ!

ಹರಿಜನರು ತಮ್ಮ ಗುಡಿಸಲುಗಳನ್ನು ಕಟ್ಟಿಕೊಳ್ಳುವುದಕ್ಕೆ ಸರಕಾರಿ ಪೈಸಾರಿಯಿಂದ ಬಿದಿರು ಮತ್ತು ಮರ ಮುಟ್ಟುಗಳು ಮುಫತ್ತಾಗಿ ಸಿಕ್ಕುವಂತಿಲ್ಲ. ಅಪ್ಪಿತಪ್ಪಿ ೫೦ ಬಿದಿರುಗಳನ್ನೋ ೧೦ ಕಂಬ ಹೊಡೆಗಳನ್ನೋ ಕಡಿದುಕೊಂಡರೆ ರೆವಿನ್ಯೂ ಅಧಿಕಾರಿಗಳು ಬಂದೇ ಬಂದರು! ಮಹಾತ್ಮಾ ಗಾಂಧೀಜಿಯವರು ಹಾಕಿಕೊಟ್ಟ ಯೋಜನೆ ಹಾಗೂ ಕಾಂಗ್ರೆಸ್ ಸರಕಾರದ ಹರಿಜನೋದ್ಧಾರವು ಇಷ್ಟರ ಮಟ್ಟಿಗೆ ನಡೆಯುತ್ತಿರುವುದಕ್ಕೆ ಸಂತೋಷಪಡಬೇಕಾಗಿದೆ. ನಮ್ಮ ಸುಧಾರಣೆಯು ದೊಡ್ಡ ದೊಡ್ಡ ಭಾಷಣಗಳ ಹಿತ ಬೋಧನೆಯಿಂದಲೇ ಆಗುತ್ತಾ ಇದೆ. ಇದೀಗ ಕೊಡಗಿನಲ್ಲಿಯ ಹರಿಜನೋದ್ಧಾರ!

"ಹರಿಜನ ಸುಧಾರಕ"

ಗುಜರಾತ್ ರೈತ ಸತ್ಯಾಗ್ರಹ.

ಗುಜರಾತಿನ ಅತ್ಯಂತ ದಕ್ಷಿಣದ ತಾಲೋಕಾದ ಪರ್ಡಿಯಲ್ಲಿ ಸೆಪ್ಟೆಂಬರ್ ೧೦ರಿಂದ ಆರಂಭವಾಗುವ ಭೂ ಸತ್ಯಾಗ್ರಹಿಗಳ ಚಳವಳಿಯ ನಾಯಕತ್ವವನ್ನು ಪ್ರಜಾ ಸೋಷಲಿಸ್ಟ್ ಮುಖಂಡರಾದ ಶ್ರೀ. ಅಶೋಕ ಮೆಹ್ತಾರವರು ವಹಿಸಲಿದ್ದಾರೆಂದು ತಿಳಿದುಬಂದಿದೆ.

ಭಾರಿ ಜಮೀನ್ದಾರರ ವಶದಲ್ಲಿರುವ ಈ ಜಮೀನುಗಳಲ್ಲಿ ಹೆಚ್ಚು ಭಾಗ ಈಗ ಬೀಡಾಗಿದೆ. ಇದಕ್ಕೆ ಪ್ರತಿಭಟನೆ ಸೂಚಿಸುವುದಕ್ಕಾಗಿಯೂ ಮತ್ತು ಕೇವಲ ಹಣಕ್ಕಾಗಿ ಬೆಳೆಯುವ ಬೆಳೆಗಳನ್ನಲ್ಲದೆ ಆಹಾರ ಬೆಳೆಗಳನ್ನು ಬೆಳೆಯಲು ರೈತರಿಗೆ ಹಕ್ಕಿದೆಯೆಂಬುದನ್ನು ಸ್ಥಾಪಿಸುವುದಕ್ಕಾಗಿಯೂ ಈ ಸತ್ಯಾಗ್ರಹ ನಡೆಯುವುದು.

ಸತ್ಯಾಗ್ರಹವನ್ನು ಆ ತಾಲೋಕಿನ ಜನರೇ ನಡೆಸುವರಾದರೂ ಬೊಂಬಾಯಿಯ ಕೆಲವು ಮಂದಿ ಪ್ರಜಾ ಸೋಷಲಿಸ್ಟ್ ಮುಖಂಡರು–ಬೊಂಬಾಯಿ ಅಸೆಂಬ್ಲಿಯ ಸದಸ್ಯರಾದ ಡಾ. ಅಮೂಲ್ ದೇಸಾಯಿಯವರೂ ಸೇರಿ–ಈ ಸತ್ಯಾಗ್ರಹದಲ್ಲಿ ಭಾಗವಹಿಸುವರು.

ಶ್ರೀ. ಅಶೋಕ ಮೆಹ್ತಾರವರು ಆಗಸ್ಟ್ ಕೊನೆಯ ವಾರದಲ್ಲಿ ಸೂರತ್ ಮತ್ತು ಪರ್ಡಿಗಳಿಗೆ ಭೇಟಿ ಕೊಡಲಿದ್ದಾರೆ. ಆಗಸ್ಟ್ ೨೭ ರಂದು ಪರ್ಡಿಯಲ್ಲಿ ನಡೆಯುವ ರೈತರ ಸಭೆಯೊಂದರಲ್ಲೂ, ಆಗಸ್ಟ್ ೨೮ ರಂದು ಸೂರತ್‌ನಲ್ಲಿ ನಡೆಯುವ ಸಾರ್ವಜನಿಕ ಸಭೆಯೊಂದರಲ್ಲೂ ಅವರು ಭಾಷಣ ಮಾಡುವರು.



ಮೇಲಿನ ಶೀರ್ಷಿಕೆಯನ್ನು ನೋಡಿ ಈ ಕಲಿಯುಗದಲ್ಲಿ ನಾರದರೆಲ್ಲಿಂದ ಬಂದ ರೆಂದು ಯಾರೂ ಗಾಬರಿ ಪಡಬೇಕಾಗಿಲ್ಲ. ಈ ನಾರದರು ಆಧುನಿಕ ನಾರದರೆಂದೆನಿಸಿ ರುವ ಮನೆಯಿಂದ ಮನೆಗೆ, ಕಿವಿಯಿಂದ ಕಿವಿಗೆ ಚಾಡಿ ಹೇಳುವವರ ಬಳಗಕ್ಕೆ ಸೇರಿದ ವರಲ್ಲ. ಇವರು ಆಧುನಿಕರಾದರೂ ಇವರ ಕೆಲಸ ದೇಶಸಂಚಾರ. ಇವರು ಈ ಸಂಚಾರದ ಸಮಯದಲ್ಲಿ ದೊರೆತ ವಿಶೇಷ ವಿಚಾರಗಳನ್ನು ತಮ್ಮ ತರ್ಕ ಬದ್ಧ ವಿವರ ಣೆಯೊಂದಿಗೆ ಈ ಪತ್ರಿಕೆಯಲ್ಲಿ ಮೇಲಿನ ಶಿರೋನಾಮೆಯ ಅಡಿಯಲ್ಲಿ ಆಗಾಗ್ಗೆ ವಾಚಕರ ಮುಂದಿಡುವರು. [ಸಂ.

ಸ್ವಾತಂತ್ರ್ಯ ದೊರೆತ ವರ್ಷೋತ್ಸವದ ಕಾಲದಲ್ಲಿ ಊರಿಂದೂರಿಗೆ ಸುತ್ತುತ್ತಿದ್ದೆ. ವಿವಿಧ ಜನರು ವಿವಿಧ ರೀತಿಯಿಂದ ಸ್ವಾತಂತ್ರ್ಯ ಹಬ್ಬವನ್ನು ಆಚರಿಸುತ್ತಿದ್ದರು. ನಗರದ ನಾಗರಿಕರು ಸ್ವಾತಂತ್ರ್ಯ ಹಬ್ಬ ಎಂದಾಗ ತಮ್ಮ ಪೂರ್ವಜರಾದ ಬ್ರಿಟಿಷರ ಆಚಾರದಂತೆ ಊಟ ಕುಡಿತ ಎಂದು ಅರ್ಥ ಮಾಡುವದರಿಂದ ಆ ದಿನ ತಮ್ಮ ಕ್ಲಬ್ಬು, ಹೋಟೇಲುಗಳಲ್ಲಿ ಔತಣ ಏರ್ಪಡಿಸಿ ಬೇಕಾದಷ್ಟು ಕುಡಿದು ಆನಂದ ಪಡುತ್ತಿದ್ದರು. ಪೇಟೆಯ ಕೆಲವರು ಮೆರವಣಿಗೆ ಭಾಷಣ ಗಳಲ್ಲಿದ್ದರು. ಹಳ್ಳಿಯ ಹತ್ತು ಜನಕ್ಕೆ ಆಗಸ್ಟ್ ೧೫ ಬಂದುದೇ ತಿಳಿಯದೆ ತಮ್ಮ ವ್ಯವಸಾಯ ಕಸಬಿನಲ್ಲಿ ಮಗ್ನರಾಗಿದ್ದರು.

* * *

ಪೇಟೆಯಲ್ಲಿರುವ ಸಾರ್ವಜನಿಕ ಸಂಸ್ಥೆಯೊಂದು ಆ ಶುಭ ದಿನದ ಹೆಸರಿನಿಂದ ಬೀದಿ ಬೀದಿಗಳಲ್ಲಿರುವ ಭಿಕಾರಿಗಳಿಗೆ ಅನ್ನಸಂತರ್ಪಣೆ ಮಾಡಬೇಕೆಂಬ ಕಾರ್ಯಕ್ರಮವನ್ನಿಟ್ಟುಕೊಂಡು ಅದಕ್ಕಾಗಿ ಸಾರ್ವಜನಿಕರಿಂದ ಚಂದಾ ಎತ್ತುತಿತ್ತು. ಹಬ್ಬ ಹುಣ್ಣಿಮೆಗಳ ದಿನ ದೀನ ದುಃಖಿತರನ್ನು ನೆನೆಸಿ ಅವರಿಗೆ ಕೈಯಲ್ಲಾದ ಸಹಾಯ ಸಂತೋಷಗಳನ್ನು ಮಾಡಿ ಕೊಡುವದು ಭಾರತೀಯರ ರಕ್ತಗತವಾಗಿ ಬಂದ ಸಂಪ್ರದಾಯ. ಅದರಂತೆ ಮೇಲಿನ ಸಂಸ್ಥೆಯು ಪರ ಚಂದಾ ಎತ್ತುವ ಒಬ್ಬೊಬ್ಬರು ದೊಡ್ಡ ಅಧಿಕಾರದಲ್ಲಿರುವವರೊಬ್ಬರ ಹತ್ತಿರ ಹೋದರು. ಚಂದಾ ಎತ್ತುವದೇಕೆಂದು ವಿಚಾರಿಸಿದ ನಂತರ ಕುಪಿತರಾದ ಆ ಅಧಿಕಾರಿಯು, "ಇದು ಭಿಕ್ಷುಕರ ರಾಜ್ಯವಲ್ಲ; ಇಲ್ಲಿ ಭಿಕ್ಷೆಯಿಂದ ಜೀವಿಸುವವರಾರಿದ್ದಾರೆ? ಹೀಗೆ ನೀವು ಚಂದಾ ಎತ್ತಲು ಯಾರ ಅಪ್ಪಣೆ ಪಡೆದಿರುವಿರಿ" ಎಂದು ಗರ್ಜಿಸಿ ಭಿಕ್ಷುಕರಿಗೆ ಅನ್ನಸಂತರ್ಪಣೆ ಕೂಡದೆಂದೂ ಸಂಗ್ರಹಿಸಿದ ಹಣವನ್ನು ವಾಪಸು ಕೊಡಬೇಕೆಂದೂ ಆಜ್ಞಾಪಿಸಿದರಂತೆ. ಇದಲ್ಲದೆ ಈ ಪಿಷಾರಿಗೆ ಜವಾಬ್ದಾರರಾದವರನ್ನು ಕರೆದು ಈ ವಿಚಾರ ಗದರಿಸಿದರಂತೆ.

ಅದಕೆ ಕರ್ತವ್ಯನಿಷ್ಠ ಹಾಗೂ ಸ್ವಯಂ ನಿರ್ಧಾರದ ಆ ಗೃಹಸ್ಥರು "ಮಾನ್ಯರೇ, ನಿಮ್ಮ ಬಂಗಲೆಯ ಗೇಟುಗಳಲ್ಲಿ ದೊಡ್ಡ ದೊಡ್ಡ ನಾಯಿಗಳನ್ನು ಕಟ್ಟಿ ಹಾಕಿ ನಿಮ್ಮ ಆವರಣದೊಳಗೆ ಭಿಕ್ಷುಕರಾಗಲೀ, ಬಡವರಾಗಲೀ ಬಾರದಂತೆ ತಡೆಗಟ್ಟಿದಾಕ್ಷಣ ದೇಶದಲ್ಲಿ ಭಿಕ್ಷುಕರಿಲ್ಲವೆಂದು ಭಾವಿಸಿಕೊಂಡರೆ ತಪ್ಪು ನಮ್ಮದಲ್ಲ. ಆದರೆ ಹೊರಗಿನ ಸ್ಥಿತಿ ಹಾಗಿಲ್ಲ" ಎಂಬರ್ಥದ ಉತ್ತರವಿತ್ತರಂತೆ!

* * *

ತಾವು ಅಧಿಕಾರದಲ್ಲಿರುವ ದೇಶದಲ್ಲಿ ಭಿಕ್ಷುಕರಿರಬಾರದೆಂಬ ಭಾವನೆ ಯಾ ಹೆಮ್ಮೆ ಹೊಗಳಲರ್ಹವಾದುದೆ! ಆ ಸ್ವಾಭಿಮಾನ ಗೌರವಾರ್ಹವಾದುದೆ. ಆದರೆ ಭಿಕ್ಷುಕರು ಇಲ್ಲದಂತಾಗಲು ಬೇಕಾದ ಕಾರ್ಯಗಳನ್ನು ಜಾರಿಯಲ್ಲಿ ತಂದು ದುಃಖಿತರ ಕಣ್ಣೀರೊರಸಿ ಎಲ್ಲರಿಗೂ ಉದ್ಯೋಗ, ಜೀವನದ ದಾರಿ ಕಲ್ಪಿಸಿ ಕೊಟ್ಟು ನಂತರ ಈ ಮಾತು ಬಂದಿದ್ದರೆ ಅದರ ಗೌರವವೇ ಬೇರೆ ಇತ್ತು. ಆದರೆ ನಿಜ ಪರಿಸ್ಥಿತಿಗೆ ಕಣ್ಮುಚ್ಚಿ "God is in heaven, we are in power and every thing must be right on earth" ದೇವರು ಸ್ವರ್ಗದಲ್ಲಿರುವನು. ನಾವು ಅಧಿಕಾರದಲ್ಲಿರುವೆವು. ಎಲ್ಲವೂ ಜಗತ್ತಿನಲ್ಲಿ ಸುಖಮಯವಾಗಿರಬೇಕೆಂದು ಆನಂದಿಸುತ್ತಿರುವವರಿಗೆ ಏನೆನ್ನಬೇಕು?

ದಿನವಹಿ ನೂರಾರು ಸಂಖ್ಯೆಯಲ್ಲಿ ಬೀದಿಯಲ್ಲಿ ಭಿಕ್ಷಾಪಾತ್ರೆ ಹಿಡಿದು ತಿರುಗುವ ಜನರಾರು? ವಿಮಾನ, ಕಾರುಗಳಲ್ಲಿ ಹಾರಾಡುವ ಜನಕ್ಕೆ ಧೂಳಿನಲ್ಲಿ ಹೊರಳಾಡುವವರನ್ನು ಬಹುಶಃ ಕಾಣಲಾರದು!

* * *

ಆದರೆ ಒಂದು ಎಚ್ಚರಿಕೆ ಅಧಿಕಾರದಲ್ಲಿರುವವರು ತಿಳಿದು ಕೊಳ್ಳಬೇಕು. ಈಗಿನ ದೇವರು ಕಾಣದ ಸ್ವರ್ಗದಲ್ಲಿಲ್ಲ. He is ther , where the tiller is tilling his soil and the road maker is breaking his stones" ಆತನು ರೈತನು ಭೂಮಿ ಉಳುವಲ್ಲಿ, ರಸ್ತೆ ಮಾಡುವವನು ಕಲ್ಲೊಡೆಯುವಲ್ಲಿ ಇದ್ದಾನೆ. ದೇವರ ವಿಚಾರವಿರಲಿ, ಅಧಿಕಾರವೂ ಕೂಡ ನಿಮ್ಮ ಕೈಯಲ್ಲಿಲ್ಲ. ಅದೂ ಬಡವನ ಕೈಯ ಲಾಗಿದೆ. ಆತನು ಒಬ್ಬರನ್ನು ಅಧಿಕಾರಕ್ಕೇರಿಸಬಲ್ಲನು ಯಾ ಕೆಳಗಿಳಿಸಬಲ್ಲನು. ಆದ್ದರಿಂದ "every thing is not right in earth specially with those who are in power" ಅಧಿಕಾರದಲ್ಲಿರುವವರ ಭಾಗ್ಯ ಬಹುಕಾಲ ತಾಳುವಂಥಾದ್ದಲ್ಲ.

* * *

ಬೆಳಗಿನ ಮನೆಯಲ್ಲಿ ಹತ್ತಾರು ಸೇವಕರ ಶಿಶ್ರೂಷೆಯಲ್ಲಿ ರಾಯಾಗಿ ನಿದ್ರಿಸುತ್ತಾ ಪ್ರಪಂಚವೇ ಹೀಗೆ ಸುಖಮಯವೆಂದು ಭಾವಿಸುವ ಕುಂಭಕರ್ಣರನ್ನು ಎಚ್ಚರಿಸುವ ವಾಸರದ ಪಡೆ ಇಂದಲ್ಲ ನಾಳೆ ಬಂದೇ ಬರುತ್ತದೆ. ಮಗು ಗೊಂಬೆಯನ್ನಾಟಿಸಿದಂತೆ ಯಾ ತಾಯಿ ಮಗುವನ್ನಾಡಿಸುವಂತೆ ಅಧಿಕಾರದಲ್ಲಿರುವವರು ಕೆಳಗಿನವರನ್ನು ಆಡಿಸುತ್ತಿರಬಹುದು. ಮೇಲಿದ್ದವರು ಕೆಳಗಿದ್ದವರನ್ನು ಆಡಿಸುವ ಆಟವೇ ಇಂದು ಸರಕಾರ, ಸಮಾಜ ಯಾ ಜೀವನ ಎನಿಸಿದೆ. ಆದರೆ 'ಬಡವರ ಬಗ್ಗರ ತುತ್ತಿತ ಚೀಲದ' ಕಗ್ಗವಿಯಲ್ಲಿ ಕೂಳಿನ ಕೂಗು ಭೀಕರವಾಗಿ ಬಡಿಯ ಭಿಕಾರಿಗಳ ತಂಡ ಬೆಳೆದಂತೆ 'ದೇವರದೊಂದು ಗೋರಿಯಂಕಟ್ಟಿ' ಧರ್ಮ, ಅಧಿಕಾರಗಳಿಗೆ ಬೆಂಕಿಯನಿಕ್ಕಲು ಶಕ್ತಿಯದೊಂದು ಏಳಲಿರುವದು ಏಳುತ್ತಿರುವದು!

ಸ್ವಾತಂತ್ರ್ಯ ದಿನಾಚರಣೆ

ಸ್ವಾತಂತ್ರ್ಯ ದಿನಾಚರಣೆಯು ಪೊನ್ನಂಪೇಟೆಯಲ್ಲಿ ಶ್ರೀ ಕೆ. ಸಿ. ಕರುಂಬಯ್ಯನವರ, ಒಂಟಿಯಂಗಡಿಯಲ್ಲಿ ಶ್ರೀ ಕೆ. ಎಂ. ಮುತ್ತಪ್ಪನವರ, ಭಾಗಮಂಡಲದಲ್ಲಿ ಶ್ರೀ ಬೋಜಪ್ಪನವರ, ಶ್ರೀಮಂಗಲದಲ್ಲಿ ಶ್ರೀ ಕೆ. ಬೋಪಣ್ಣನವರ, ಹಾತೂರಿನಲ್ಲಿ ಶ್ರೀ ಎಚ್. ಬಿ. ಅಂಕೈಯ್ಯನವರ, ಕಣಿವೆಯಲ್ಲಿ ಶ್ರೀ ಲಕ್ಷ್ಮೀಕಾಂತಯ್ಯನವರ, ಮೂರ್ನಾಡಿನಲ್ಲಿ ಶ್ರೀ ಬಿ. ಜಿ. ಮುತ್ತಣ್ಣನವರ, ಕಬ್ಬಾಲೆಯಲ್ಲಿ ಶ್ರೀ ಲಿಂಗರಾಜಯ್ಯನವರ, ಮಾದಾಪುರದಲ್ಲಿ ಶ್ರೀ ಎನ್. ಕೆ. ಗಣಪಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ವಿವರಗಳು ಬಂದಿವೆ. ಆದರೆ ಸ್ವಾತಂತ್ರ್ಯ ದಿನ ಕಳೆದು ಹದಿನೈದು ದಿನಗಳಾಗಿ ಇವು ಹಳೆಯ ವರ್ತಮಾನವಾದುದರಿಂದ ವಿವರಗಳನ್ನು ಪ್ರಕಟಿಸುವದು ಸಾಧ್ಯವಾಗಲಿಲ್ಲ.

[ಸಂ.

ಬಿಲ್ಲುಗಾರನು ತನ್ನ ಬಿಲ್ಲನ್ನು ಅಲುಗಾಡದಂತೆ ಹಿಡಿದು ತನ್ನ ಗುರಿಯೆಡೆಗೆ ಹೊಡೆಯುವಂತೆ ಮಾನವನು ತನ್ನ ಮನಸ್ಸನ್ನು ಸ್ಥಿರಗೊಳಿಸಿ ತನ್ನ ಗುರಿ ಮುಟ್ಟಬೇಕು. ಸ್ಥಿರವಲ್ಲದ ಮನಸ್ಸಿನವನಿಗೆ ಯಾವದೂ ಸಾಧ್ಯವಾಗಲಾರದು.

ನೀರಿನಿಂದ ಮೇಲೆತ್ತಿದ ಮೀನು ಯಾವ ರೀತಿ ನೀರಿಗೆ ಸೇರಲು ತವಕಪಡುವದೋ, ಯಾವ ರೀತಿ ತನ್ನ ಪ್ರಾಣವನ್ನಾದರೂ ಆ ಯತ್ನದಲಿ ತೊರೆಯುವದೋ ಅದೇ ರೀತಿ ನಶ್ವರ ಪ್ರಪಂಚದ ಬಿಡುಗಡೆಗಾಗಿ ನಿಶ್ಚಲ ಮನಸ್ಸು ಯತ್ನಿಸಬೇಕು.

ಬಿಡುಗಡೆಗೆ ಯತ್ನಿಸುವ ಮಾನವನು ತನ್ನ ಮನಸ್ಸಿನ ಕುದುರೆಗೆ ಪಹರೆ ಇಡಬೇಕು. ಏಕೆಂದರೆ ಮನಸ್ಸೆಂಬ ವಸ್ತುವು ಹಿತಕ್ಕೆ ಸಿಕ್ಕದ್ದು, ಚಂಚಲತೆಯುಳ್ಳದ್ದು ಆಗಿದೆ. ಅದರ ಮೇಲೆ ಪಹರೆ ಇಡದವನ ಜೀವನವು ಚುಕ್ಕಾಣಿಯಿಲ್ಲದ ದೋಣಿಯಂತಾಗುವದು.

ಮಾನವನ ಶರೀರವು ಕುಂಬಾರನ ಗಡಿಗೆಯಂತೆ. ಬಿದ್ದರೆ ಒಡೆಯುವಂತಾದ್ದು, ಸುಲಭದಲ್ಲಿ ನಾಶವಾಗುವಂಥಾದ್ದು. ಶರೀರ ನಾಶವಾಗುವಂತಾದ್ದಾದರೂ ಮನಸ್ಸು ಉಕ್ಕಿನ ಕೋಟೆಯಂತಿರಲಿ. ಅದನ್ನು ಇಲ್ಲಿನ ಲೋಭ, ಮೋಹಗಳು ಕಲುಷಿತಗೊಳಿಸದಿರಲಿ.

ಶತ್ರುವು ಮೇಲೇರಿ ಬಂದರೆ ಅದು ದೊಡ್ಡ ಅಪಾಯವಲ್ಲ. ಇನ್ನೊಬ್ಬರು ತೆಗಳುವದು ಕೇಡಲ್ಲ. ಆದರೆ ಮನಸ್ಸನ್ನು ಮಾಲಿನ್ಯಗೊಳಿಸುವದಕ್ಕಿಂಥಾ ದೊಡ್ಡ ಅಧಃಪತನ ಬೇರಿಲ್ಲ. ಏಕೆಂದರೆ ಹಿತವಲ್ಲದ ಮನಸ್ಸಿನವನಿಗೆ ಐಶ್ವರ್ಯವಿದ್ದರೂ ಪ್ರಯೋಜನವಿಲ್ಲ

ಮನಸ್ಸು ಕೆಡದೆ, ಪವಿತ್ರವಾಗಿರುವಂತೆ, ಉಚ್ಚ ಭಾವನೆಯು ತವರಾಗಿರುವಂತೆ ಯಾರು ಪ್ರೇರೇಪಿಸುವರೋ ಅವರು ಶರೀರವನ್ನು ಪೋಷಿಸುವ ತಂದೆ ತಾಯಿಗಳಿಗಿಂತಲೂ, ಐಹಿಕ ಸುಖ ಭಾಗ್ಯಗಳನ್ನು ಒದಗಿಸುವ ಬಂಧು ಬಳಗದವರಿಗಿಂಥಲೂ ಮಿಗಿಲಾದವರು.

ಜ್ಞಾನದೀಪ

(೧)

ನೆಲ್ಲಿ ಸ್ಥೂಕ್ಷ್ಮ ಕಳ್ಳನು ಯಾವ ರೀತಿ ಅತಿಥಿಯಲ್ಲವೋ ಅದೇ ರೀತಿ ಮನ ಹೊಕ್ಕ ಕಲ್ಪಿತವೂ ಆಲೋಚನೆಯಾಗಲಾರದು

(೨)

ಕಣ ಹಾರಾಡಿದಂತೆ ಕಲ್ಲು ಹಾರಾಡಲಾರದು. ಕಿರಿ ಬುದ್ಧಿಯ ಚಾಂಚಲ್ಯ ಘನ ಬುದ್ಧಿಗಿಲ್ಲ.

(೩)

ಉಳಿವ ಕೆಲಸವಿರುವವನು ಉಪವಾಸ ಹಾಡುತ್ತಾ ಕೂರಬಾರ. ಉದ್ಯೋಗತೀಲ ಉಪನ್ಯಾಸ ಭಾಷಣ ಮಾಡುತ್ತಾ ನಿಲ್ಲಬಾರ.

— ನುಡಿಮುತ್ತು.

೨೮—೮—'೫೩ನೇ **ಕೊಡಗು** ಶುಕ್ರವಾರ.

ಖಾದಿಗೆ ಪ್ರೋತ್ಸಾಹ.

ಪಾಕಿಸ್ತಾನ ಪಂಜಾಬಿನ ಮುಖ್ಯ ಮಂತ್ರಿಗಳಾದ ಮಲಿಕ್ ಫಿರೋಜ್ ಖಾನ್ ನೂನ್‌ರವರು ತಾರೀಕು ೨೪ರಲ್ಲಿ ಲಾಹೋರಿನಲ್ಲಿ ಮುಸ್ಲಿಂ ಲೀಗ್ ಕೆಲಸಗಾರರ ಸಭೆಯೊಂದರಲ್ಲಿ ಮಾತಾಡುತ್ತಾ "ಶತಮಾನಗಳ ಪರಕೀಯ ಆಡಳಿತದಿಂದ ದೇಶವು ಬಡತನದ ತವರೂರಾಗಿದೆ. ಜನತೆಯ ಜೀವನ ಮಟ್ಟವನ್ನು ಒಂದೆರಡು ವರ್ಷಗಳಲ್ಲಿ ಉತ್ತಮಗೊಳಿಸುವದು ಸಾಧ್ಯವಿಲ್ಲ. ದೇಶದ ಹಿತಚಿಂತನೆ ಮಾಡುವ ಪ್ರತಿಯೊಬ್ಬನೂ ದೇಶದೊಳಗೆ ತಯಾರಾಗುವ ಖಾದಿ ಬಟ್ಟೆಯನ್ನು ಧರಿಸತೊಡಗಿದರೆ ಪಾಕಿಸ್ತಾನವು ವರ್ಷಕ್ಕೆ ನಲ್ವತ್ತು ಕೋಟಿ ರೂಪಾಯಿಗಳನ್ನು ಹೊರಗೆ ಹೋಗದಂತೆ ಉಳಿಸಬಹುದು" ಎಂದು ಮುಖ್ಯ ಮಂತ್ರಿಗಳು ಸ್ವತಹ ಬಿಳೀಖಾದಿಯನ್ನುಟ್ಟಿದ್ದರು.

ದೇಶದ ಆರ್ಥಿಕ ಪ್ರಗತಿಗೂ, ಬಡಜನರ ಉದ್ಧಾರಕ್ಕೂ ಖಾದಿಯೇ ಹಾದಿ ಎಂಬುದಾಗಿ ಮಹಾತ್ಮಾ ಗಾಂಧಿಯವರು ಹೇಳುತ್ತಿದ್ದರು. ಖಾದಿ ಮಂತ್ರದ ಪ್ರಭಾವದಿಂದಲೇ ಬಡವ ಬಲ್ಲಿದರ ತಾರತಮ್ಯವು ಕಡಿಮೆಯಾಗಿ ಎಲ್ಲರೂ ದೇಶಕ್ಕಾಗಿ ಭುಜಕ್ಕೆ ಭುಜ ಕೊಟ್ಟು ದುಡಿಯಲು ಶಕ್ತರಾದರು. ಖಾದಿಯು ಸ್ವದೇಶ ಪ್ರೇಮದ ಸಂಕೇತವಾಗಿ ಗೌರವಾರ್ಹವಾಯಿತು. ಆದರೆ ಹಿಂದೂದೇಶಕ್ಕೆ ಸ್ವಾತಂತ್ರ್ಯ ದೊರೆತ ನಂತರ ಹಾಗೂ ಮಹಾತ್ಮಾ ಗಾಂಧಿಯವರ ಕಣ್ಮರೆಯ ನಂತರ ಈ ಖಾದಿ ತತ್ವವು ಗಾಳಿಗೆ ಚೆಲ್ಲಲ್ಪಟ್ಟಿದೆ. ಇಂದು ಖಾದಿಯು ಪ್ರಮುಖ್ಯ ವಸ್ತುವಲ್ಲ. ನೂಲುವದು ಕಾಂಗ್ರೆಸಿಗರಿಗೆ ಬೇಕಿಲ್ಲ. ಕಾಂಗ್ರೆಸಿಗರೆನ್ನುವವರೂ ಕೂಡ ಇಂದು ಖಾದಿ ಹಾಕಬೇಕೆಂಬ ನಿರ್ಬಂಧವಿಲ್ಲ. "ದೊರಗು ಖಾದಿ ಬಟ್ಟೆ ಹಾಕುವದರಿಂದೇನು? ದೇಶ ಪ್ರೇಮ ನಮ್ಮ ಹೃದಯದಲ್ಲಿದೆ. ಬಟ್ಟೆ ಹಾಕಿದಾಕ್ಷಣ ಬಂದದ್ದೇನು?" ಎಂದು ಹೇಳುವ ಜನರನ್ನು ಅಲ್ಲಲ್ಲಿ ಕಾಣುವದು ಅಪರೂಪವಲ್ಲ. ಖಾದಿಯ ತತ್ವವೇನೆಂದು ಅರಿಯುವ ಈ ಜನಕ್ಕೆ ಖಾದಿಗೂ, ವಿದೇಶೀ ಯಾ ಸ್ವದೇಶೀ ಮಿಲ್ ತಯಾರಿ ಬಟ್ಟೆಗೂ ಇರುವ ವ್ಯತ್ಯಾಸ ತಿಳಿದಿಲ್ಲ.

ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ ಬಂದಿದೆ. ಆದರೆ ಆರ್ಥಿಕ ಸ್ವಾತಂತ್ರ್ಯ ಇನ್ನೂ ಬಂದಿರುವದಿಲ್ಲ. ಅಂಥಾ ಆರ್ಥಿಕ ಸ್ವಾತಂತ್ರ್ಯಕ್ಕೆ ಖಾದಿಯು ಹಿರಿದ್ವಾರ. ಪ್ರತ್ಯಕ್ಷವಾಗಿ, ಜೀವಂತನಾಗಿ ಕಣ್ಣೆದುರಿಗೆ ಕಾಣುವ ಸೋದರನನ್ನು ನಂಬಿ ಸಹಾಯ ಮಾಡದವನು ಕಣ್ಣಿಗೆ ಕಾಣದ ದೇವರ ಮೇಲೆ ಯಾವ ವಿಶ್ವಾಸವಿಡಬಲ್ಲನು ಎಂಬ ಮಾತಿನಂತೆ ಖಾದಿಯ ತತ್ವವನ್ನು ಅರಿತು ಅದನ್ನು ತಯಾರಿಸುವ ಬಡ ಕೆಲಸಗಾರರ ಆರ್ಥಿಕ ಅಭಿವೃದ್ಧಿಗೆ ನೆರವಾಗದವನು ಮತ್ತಾವ ರಾಷ್ಟ್ರಹಿತ ಕೆಲಸಕ್ಕೆ ತ್ಯಾಗಮಾಡಬಲ್ಲನು?

ನಮ್ಮಿನ ಪಂಜಾಬಿನ ಮುಖ್ಯ ಮಂತ್ರಿಗಳ ಮೇಲಿನ ಮಾತು ನಮ್ಮ ಕಣ್ತೆರೆಯಿಸಬೇಕು. ಬೇರೆ ರಾಷ್ಟ್ರಗಳು ಮಹಾತ್ಮರು ಹಾಕಿ ಕೊಟ್ಟ ಆದರ್ಶಗಳನ್ನು ಅನುಸರಿಸಲು ಯತ್ನಿಸುತ್ತಿರುವಾಗ ಮಹಾತ್ಮರನ್ನು ಪಡೆದ ಭರತಖಂಡವು ಅದನ್ನು ಮರೆಯಬಾರದು. ಕೇಂದ್ರ ಸರಕಾರದ ಮತ್ತು ಸಂಸ್ಥಾನ ಸರಕಾರಗಳ ಮಂತ್ರಿಗಳ ಮತ್ತು ಕೆಲವು ಅಧಿಕಾರಿಗಳ ಸಮ್ಮೇಳನವೊಂದು ತಾ. ೨೯ರಲ್ಲಿ ಡೆಲ್ಲಿಯಲ್ಲಿ ಸೇರಿ ಸರಕಾರಿ ಖಾತೆಗಳ ಉಪಯೋಗಕ್ಕೆ ಖಾದಿಯನ್ನು ಬಳಸುವ, ಸರಕಾರಿ ಅಧಿಕಾರಿಗಳು ಖಾದಿ ಉಡಬೇಕೆಂದು ವಿಧಿಸುವ ಬಗ್ಗೆ ಚರ್ಚೆಯಾಗಲಿರುವದು ಶುಭ ಚಿಹ್ನೆ. ಖಾದಿಗೆ ಪ್ರೋತ್ಸಾಹ ಕೊಡುವದು ಪ್ರತಿ ಸರಕಾರದ ಕರ್ತವ್ಯವಲ್ಲದೆ ಆ ಕೈಗಾರಿಕೆಯು ಅಭಿವೃದ್ಧಿಯಾಗುವಂತೆ ಮಾಡುವದೂ ಜನತೆಯು ಖಾದಿಯನ್ನು ಇಚ್ಛಿಸುವ ವಾತಾವರಣ ಕಲ್ಪಿಸುವದೂ ಸರಕಾರದ ಕರ್ತವ್ಯವಾಗಿದೆ.

ದುರಾದೃಷ್ಟವಶಾತ್ ಪ್ರತಿ ಕ್ಷೇತ್ರಗಳಲ್ಲಿಯೂ ಕಪ್ಪುಸಂತೆ, ಸುಲಿಗೆ, ಲಾಭಬಡಕತನವಿರುವಂತೆ ಖಾದೀ ಜಗತ್ತಿನಲ್ಲಿಯೂ ಇದೆ. ಆಸಕ್ತ ವ್ಯಾಪಾರಿಗಳು ಸಿಕ್ಕಿಸಿಕ್ಕಿದ್ದನ್ನು ಖಾದಿಯೆಂದು ಮಾರಿ ಜನರನ್ನು ಮೋಸಗೊಳಿಸುತ್ತಾರೆ. ಅಖಿಲ ಭಾರತ ಸೇವಾಗಿಯವರ ಸಂಘದಿಂದ ಅಧಿಕೃತಿಯನ್ನು ಪಡೆಯದ ಯಾವದೇ ಬಟ್ಟೆಯೂ ಅಧಿಕೃತ ಖಾದಿ ಎನಿಸುವದಿಲ್ಲವಾದರೂ ಅದರ ಹೆಸರಿನಿಂದ ವಿವಿಧ ರೀತಿಯ ದೊರಗು ಬಟ್ಟೆಗಳನ್ನು ಖಾದಿಯೆಂದು ಮಾರಾಟಮಾಡುವವರು ಬೇಕಾದಷ್ಟಿದ್ದಾರೆ. ಇಂಥಾದನ್ನು ತಡೆಯಲು ಕೊಡಗಿನ ಸರಕಾರವು ಕೊಡಗು ಖಾದಿ ಮಾರಾಟ ಮಸೂದೆಯೊಂದನ್ನು ಬರುವ ಶಾಸನ ಸಭೆಯಲ್ಲಿ ತರಲಿರುವದು ಸೂಕ್ತವಾಗಿದೆ. ಈ ಮಸೂದೆಯನ್ನು ಪಾಸುಮಾಡಿದರೆ ಸಾಲದು. ಕೊಡಗಿನಲ್ಲಿ ಅಧಿಕೃತ ಖಾದಿಯು ಯಥೇಚ್ಛ ದೊರೆಯುವಂತೆಯೂ, ದೇಶದ ಜನರಲ್ಲಿ ಖಾದಿ ಮಮತೆಯುತ್ಪನ್ನವಾಗುವಂತೆಯೂ ಸರಕಾರವೂ ಸಾರ್ವಜನಿಕ ಕೆಲಸಗಾರರೂ ಯತ್ನಿಸಬೇಕಾದುದು ಕರ್ತವ್ಯವಿದೆ. ಏಕೆಂದರೆ ಮಹಾತ್ಮಾಗಾಂಧಿಯವರು ಹೇಳಿದಂತೆ ಖಾದಿಯಲ್ಲಿ ಭಾರತೀಯರ ರಾಜಕೀಯ, ಆರ್ಥಿಕ, ನೈತಿಕ ಹಾಗೂ ಸಾಂಸ್ಕೃತಿಕ ಪ್ರಗತಿ ಅಡಗಿದೆ.

ವರ್ತಮಾನ.

ಬೆಳ್ಳುಮಾಡು ಗ್ರಾಮದ ಕಾಯಿಮಾಂಡ ದೊಡ್ಡ ಮನೆಯೊಳಗೆ ಮಳೆಯಿಂದಾಗಿ ಜಲ ಬುಗ್ಗೆ ಎದ್ದು ಆಡಿಪಾಯವು ಕುಸಿದು ವಾಸವಿದ್ದವರು ಮನೆಯನ್ನು ಬಿಟ್ಟಿರುವರೆಂದು ತಿಳಿಯಬರುತ್ತದೆ.

ಕೊಡಗಿನ ಪೋಲೀಸು ಖಾತೆಯಲ್ಲಿರುವ ೧೫ ಪೋಲೀಸ್ ಕಾನ್‌ಸ್ಟೆಬಲುಗಳ ಕೆಲಸಕ್ಕಾಗಿ ೧೩೦ಕ್ಕೂ ಮಿಕ್ಕಿ ಅರ್ಜಿಬಂದಿತ್ತೆಂದು ತಿಳಿಯಬಂದಿದೆ.

ಮೈಸೂರು ವಿಶ್ವವಿದ್ಯಾಲಯದ ಕಳೆದ ಜುಲೈಯಲ್ಲಿ ನಡೆದ ಎಂ. ಎ., ಪರೀಕ್ಷೆಯಲ್ಲಿ ದ್ವಿತೀಯ ಶ್ರೇಣಿಯಲ್ಲಿ ಶ್ರೀ ಕೊಂಗಾಂಡ ಸಿ. ಗಣಪತಿಯವರು ತೇರ್ಗಡೆಯಾಗಿರುವರು.

ಈ ವರ್ಷ ಜನವರಿ ೧ ರಿಂದ ತಾರೀಕು ೨೬—೮—೫೩ ರ ವರೆಗೆ ಮಡಿಕೇರಿಗೆ ೧೧೫ ಇಂಚು ೩೪ ಸೆಂಟು ಮಳೆಯಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ೯೨ ಇಂಚು ೭೫ ಸೆಂಟು ಮಳೆಯಾಗಿತ್ತು.

ಇಂಡಿಯಾ ಸರಕಾರದ ಪ್ಲಾನಿಂಗ್ ಕಮಿಷನಿನ ಗುಡಿಕೈಗಾರಿಕೆ ಮತ್ತು ಸಹಕಾರ ಖಾತೆಯ ಸ್ಪೆಶಲ್ ಆಫೀಸರಾದ ಶ್ರೀ ಮತ್ತಾಯಿಸರವರು ತಾ. ೨೫, ೨೬ರಲ್ಲಿ ಕೊಡಗಿನ ಜೇನು ಸಾಕುನಿಕೆ ಮತ್ತು ಸಂಗ್ರಹದ ಸಂಘಗಳನ್ನು ಸಂದರ್ಶಿಸಿ ಈ ಸಂಸ್ಥೆಗಳು ಬಹು ಉತ್ತಮ ಕೆಲಸ ಮಾಡುತ್ತಿರುವವೆಂದು ಅಭಿಪ್ರಾಯ ವ್ಯಕ್ತಮಾಡಿರುವರು.

ಕೊಡಗು ಶಾಸನ ಸಭೆಯ ಮೀಟಿಂಗು ತಾ. ೨೯—೯—೫೩ರಲ್ಲಿ ನಡೆಯುವದೆಂದೂ ಆ ಸಭೆಯಲ್ಲಿ ಕೊಡಗಿನಲ್ಲಿ ಖಾದಿ ಮಾರಾಟದ ಮಸೂದೆ, ವ್ಯವಸಾಯ ಮತ್ತು ಕ್ರಿಮಿಕೀಟಗಳ ಹತೋಟಿ ಮಸೂದೆ, ಭೂಮಿ ಸೆಸ್ ಮತ್ತು ಕಂದಾಯ ಮಸೂದೆ ಮತ್ತು ಕೆಲವು ಕಾಯಿದೆಗಳ ತಿದ್ದುಪಡಿ ಮಸೂದೆ ಮೊದಲಾದುವು ಚರ್ಚೆಗೆ ಬರಲಿರುವವೆಂದು ತಿಳಿದು ಬಂದಿದೆ.

ವೀರಾಜಪೇಟೆ ಬಾಡಗ ಗ್ರಾಮದ ಶ್ರೀ ಕೊಂಗಾಂಡ ಸೋಮಯ್ಯನವರ ಸುಮಾರು ನಾಲ್ಕು ಸಾವಿರ ರೂಪಾಯಿ ಬೆಲೆ ಬಾಳುವ ಹಂಚಿನ ಮನೆಯು ತಾ. ೧೫ರಲ್ಲಿ ಬಿದ್ದು ಹೋಗಿದೆಯೆಂದೂ ಮಳೆಯ ಹಾವಳಿಯಿಂದ ಅವರ ಗದ್ದೆಗೂ ತುಂಬಾ ನಷ್ಟವಾಗಿದೆಯೆಂದೂ ತಿಳಿದುಬಂದಿದೆ.

ಅಖಿಲ ಕೊಡಗು ಪಿಂಚಿನ್‌ದಾರರ ವಾರ್ಷಿಕ ಮಹಾಸಭೆಯು ತಾ. ೨೩ರಲ್ಲಿ ನಿವೃತ್ತ ವಿದ್ಯಾಧಿಕಾರಿಗಳಾದ ಶ್ರೀ ಸಿ. ಎಂ. ರಾಮರಾಯರ ಅಧ್ಯಕ್ಷತೆಯಲ್ಲಿ ನಡೆದು ಉದ್ಯೋಗದಲ್ಲಿರುವವರಿಗೆ ಕೊಡುವ ತುಟ್ಟಿ ಬತ್ಯದ ಶೇಕಡ ೫೦ರಷ್ಟನ್ನು ಪಿಂಚಿನ್‌ದಾರರಿಗೆ ಕೊಡಬೇಕೆಂದು ಸರಕಾರವನ್ನು ಕೇಳುವ ಠರಾವು ಪಾಸಾಯಿತು.

ವೀರಾಜಪೇಟೆ ಮುನ್ಸಿಪಾಲಿಟಿಯ ೧೯೫೨-೫೩ರ ವಾರ್ಷಿಕ ಆದಾಯವು ರೂ. ೧,೧೫,೮೦೦ ಗಳೆಂದೂ ಖರ್ಚು ೧,೧೪,೦೦೦ ವೆಂದೂ ಹಿಂದಣ ಶಿಲ್ಕು ಸೇರಿಸಿ ತಾ. ೩೧—೩—೫೩ರಲ್ಲಿ ಬಾಕಿ ರೂ. ೭೯,೬೧೭ ಇತ್ತೆಂದೂ ಪ್ರತಿ ನಾಗರಿಕನ ಸರಾಸರಿ ತಲಾ ಕಂದಾಯ ಮತ್ತು ಆದಾಯ ಅನುಕ್ರಮವಾಗಿ ರೂ. ೧೩—೯—೭ ಮತ್ತು ೧೬—೨—೧ ಇದ್ದದು ಈ ವರ್ಷ ೧೪—೨—೯ ಮತ್ತು ೧೮—೧೪—೩ ಆಗಿದೆಯೆಂದೂ ಖರ್ಚಿನ ಬಾಬಿನಲ್ಲಿ ಪ್ರಾಮುಖ್ಯವಾಗಿ ವೇತನ ಮತ್ತು ತುಟ್ಟಿಬತ್ಯಕ್ಕಾಗಿ ರೂ. ೨೨,೩೬೭, ರಸ್ತೆರಿಪೇರಿಗೆ ೧೨,೧೨೦, ಕಟ್ಟಡಗಳಿಗಾಗಿ ೧೨೨೯೨ ದೀಪಗಳಿಗಾಗಿ ೭,೨೪೬, ಬಾವಿಗಳಿಗಾಗಿ ೩೫,೦೦, ಚರಂಡಿ ರಿಪೇರಿಗೆ ೩,೮೦೦ ಆಗಿದೆಯೆಂದೂ ಪ್ರಕಟವಾಗಿದೆ.

ಮಾಸಿಕ ವೇತನ ರೂ. ೨೭೫—೨೫-೫೦೦ (ಈ ಬಿ) ೩೦—೬೫೦ ಯ ಕೊಡಗಿನ ರಿಜಿಸ್ಟ್ರಾರ ಹುದ್ದೆಯನ್ನು ಆಗಸ್ಟ್ ತಾರೀಕು ೧ರಿಂದ ವಜಾ ಮಾಡಲಾಗಿದೆಯೆಂದೂ ಮಾಸಿಕ ವೇತನ ೨೫೦-೨೦-೪೫೦ (ಈ ಬಿ) ೨೫-೬೦೦ ಯ ಡಿಪ್ಯುಟಿ ರಿಜಿಸ್ಟ್ರಾರವರ ಹುದ್ದೆಯನ್ನು ಹೊಸದಾಗಿ ಏರ್ಪಡಿಸಲಾಗಿದೆಯೆಂದೂ ಈಗ ತಾನೆ ಪ್ರಕಟವಾಗಿದೆ. ಮೈಸೂರಿನಿಂದ ಬಂದ ಶ್ರೀ. ಗಿರಿಯಪ್ಪನವರು ತಾರೀಕು ೨೦ ರಲ್ಲಿ ಡಿಪ್ಯುಟಿ ರಿಜಿಸ್ಟ್ರಾರ್ ಹುದ್ದೆಯ ಚಾರ್ಜನ್ನು ವಹಿಸಿಕೊಂಡಿರುವರು.

ಒಂದು ವರ್ಷದಿಂದ ಅನ್ನಾಹಾರವಿಲ್ಲದೆ ಜೀವಿಸುತ್ತಿರುವ ಪುಂಟಕ್ಕೊಪ್ಪದ ಕುಮಾರಿ ಧನ ಲಕ್ಷ್ಮಿಯನ್ನು ನೋಡಲು ಸುಯೇಜ್ ಪ್ರಾಂತದ ಆಸ್ಪತ್ರೆಯೊಂದರ ಅಧಿಕಾರಿಯಾದ ಫ್ರೆಂಚ್ ಪ್ರೊ. ರೋಝುಲ್ ಗೋಚೆಲ್‌ರವರು ತಾ. ೧೯ರಲ್ಲಿ ಬಂದಿದ್ದರು. ಧನಲಕ್ಷ್ಮಿಯ ಆರೋಗ್ಯ ಈಗ ಚೆನ್ನಾಗಿಲ್ಲವೆಂದೂ ಆಕೆ ಕೇಂದ್ರ ಸರಕಾರದ ಇಚ್ಛೆಯಂತೆ ಬೆಂಗಳೂರಿಗೆ ಪರೀಕ್ಷೆಗಾಗಿ ಹೋಗಲು ಒಪ್ಪಿರುವಳೆಂದೂ ಆಕೆಯ ಆರೋಗ್ಯ ಸುಧಾರಿಸಿದೊಡನೆಯೇ ಹೋಗಲಿರುವಳೆಂದೂ ಗೊತ್ತಾಗಿದೆ.



ಕೊಡಗು ಪತ್ರಿಕೆಗೆ ಲೇಖನಗಳನ್ನು ಬರೆಯಕೂಡದೆಂದು ಕೆಲವರನ್ನು ಕೆಲವು 'ಸ್ವರಾಜ್ಯ'ದೊರೆತವರು ಹೇಳಿ ಗದರಿಸಿರುವರಂತೆ. ಕೆಲವು ಶಾಲಾ ಕಾಲೇಜು ವಿದ್ಯಾರ್ಥಿಗಳನ್ನೂ ಕೆಲವರ ಮೂಲಕ ಎಚ್ಚರಿಸಲಾಗಿದೆಯಂತೆ! ಇದು ಜನತೆಗೆ ದೊರಕಿರುವ ವಾಕ್‌ಸ್ವಾತಂತ್ರ್ಯ!

ಉಕ್ಕೆಯನ್ನು ಹಿಂಡಿದರೆ ಯಾವ ರೀತಿ ಎಣ್ಣೆ ಬರುವದಿಲ್ಲವೋ ಅದೇ ರೀತಿ ಸಾರ್ವಜನಿಕ ಅಭಿಪ್ರಾಯಕ್ಕೆ ಅಂಜುವ ಈ 'ಸ್ವರಾಜ್ಯ'ದೊರೆತ ಪರಬುದ್ಧಿಯುವರಿಂದ ಪ್ರಜಾಪ್ರಭುತ್ವ ಉಳಿಯಲಾರದು.

• •

'ಗೆದ್ದ ಎತ್ತಿನ ಬಾಲ ಹಿಡಿಯುವ' ಬುದ್ಧಿ ಇಂದು ನಿನ್ನೆಯದಲ್ಲ. ಗುಲಾಮಗಿರಿಯಲ್ಲಿದ್ದ ಭಾರತದಲ್ಲಿ ವೈಯುಂಡ ಆ ಸ್ವಭಾವ ಸ್ವತಂತ್ರ ಭಾರತದಲ್ಲೂ ಚಿಗುರಿಕೊಳ್ಳುತ್ತಿದೆ. ಹಿಂದೆ 'ಕೊಡಗು' ಪತ್ರಿಕೆಯನ್ನು ಆದರ್ಶವೆಂದು ಹೊಗಳುತ್ತಾ ಊರೂರು ತಿರುಗುತ್ತಿದ್ದು, ಅದಕ್ಕೆ ಲೇಖನ ಬರೆಯುತ್ತಿದ್ದವರು ಅಧಿಕಾರ ಬೇರೆಡೆ ಇದೆಯೆಂದಾಗ ಅತ್ತ ಸರಿದು ಗುಂಡಿ ಒತ್ತಿದಾಗ ಬೊಗಳುವ ಗ್ರಾಮಫೋನಿನಂತೆ ಬಾಯ್ಬಡಿಯುತ್ತಿದ್ದಾರೆ. ಆದರೆ ಪರಗೆಲೆಯನ್ನು ಗಾಣಕ್ಕೆ ಕೊಟ್ಟರೂ ತೈಲ ಬಾರದೆಂಬ ಸತ್ಯವನ್ನು ಈ ತಿಳಿಗೇಡಿಗಳು ತಿಳಿಯುವದೆಂತು?

* * *

ಕೊಡಗಿನ ಹೊರಗೆ ಅಧಿಕಾರಿಯಾಗಿರುವ ಕೊಡಗಿನವರೊಬ್ಬರು ಕೊಡಗಿನಲ್ಲಿ ಖಾಲಿ ಬಿದ್ದ ಆದೇ ಹುದ್ದೆಗೆ ಬರುವರೆಂದು ನಿಶ್ಚಯವಾಗಿತ್ತು. ಅವರಿಗೆ ಆ ಬಗ್ಗೆ ಆರ್ಡರೂ ದೊರೆತಿತ್ತು. ಅವರು ಹೊರಡಲೂ ಸಿದ್ಧರಾಗಿದ್ದರು. ಆದರೆ ಕೊಡಗಿನ ದೊಡ್ಡ ಅಧಿಕಾರಿಯೊಬ್ಬರು ಒಳಗೊಳಗೆ ಬರೆದು ಕೊಡಗಿನವರು ಕೊಡಗಿನಲ್ಲಿ ಬೇಕಿಲ್ಲವೆಂದು ಕಾರಣ ಕೊಟ್ಟು ಅದನ್ನು ತಪ್ಪಿಸಿದರಂತೆ! ಪ್ರತಿ ಸರಕಾರಗಳೂ ಆಯಾಯ ಭಾಗದ ಜನರಿಗೆ ಪ್ರೋತ್ಸಾಹ ಕೊಡುತ್ತಿರುವಾಗ ಹೊರಗಿನಿಂದ ಜನರನ್ನು ತಂದುದಕ್ಕೆ ಬೊಂಬಾಯಿಯಲ್ಲಿ, ಮೈಸೂರಿನಲ್ಲಿ ಚಳವಳ ನಡೆದದ್ದು ನಮ್ಮ ಕಣ್ಮುಂದೆ ಇರುವಾಗ ಕೊಡಗಿಗೆ ಕೊಡಗಿನವರು ಬೇಕಿಲ್ಲವಂತೆ! ಬಾಡಿಗೆ ಮನೆಯವನಿಗೆ ಮನೆಯ ಲಾಭ ನಷ್ಟದ ಪರಿವೆ ಹೇಗಿರುವದಿಲ್ಲವೋ ಅದೇ ರೀತಿ ವೇತನಕ್ಕಾಗಿ ಬಂದವರಿಗೆ ದೇಶದ ಹಿತಕಾಂಕ್ಷೆ ಇರದು.

* * *

ಕೊಡಗಿನ ಸಹಕಾರ ಸಂಘಗಳ ರಿಜಿಸ್ಟ್ರಾರವರ ಹುದ್ದೆಯನ್ನು ತೆಗೆದು ಹಾಕಿ ಕೊಡಗಿಗೆ ಡಿಪ್ಯೂಟಿ ರಿಜಿಸ್ಟ್ರಾರು ಸಾಕೆಂದು ಈಗ ಬಂದವರನ್ನು ಡಿಪ್ಯೂಟಿ ರಿಜಿಸ್ಟ್ರಾರಾಗಿ ನೇಮಿಸಿರುವರೆಂದು ವಾರ್ತೆ. ಮೈಸೂರಲ್ಲಿ ಡಿ. ರಿಜಿಸ್ಟ್ರಾರಾಗಲು ಒಪ್ಪದವರು ಕೊಡಗಿನಲ್ಲೂ ಒಪ್ಪಲಾರರೆಂಬುದನ್ನು ತಿಳಿದು ಅವರು ಕೇಂದ್ರ ಸರಕಾರಕ್ಕೆ ಅಪೀಲು ಮಾಡಿದಂತೆ ಈ ಏರ್ಪಾಡಿರಬಹುದು. ಅಂತೂ ಹುದ್ದೆಗಳು ಮುಂಡೆಯಾದರೂ ಚಿಂತೆಯಿಲ್ಲ; ಆಳು ಸಾಯಬೇಕು!

* * *

ಪತ್ರಿಕೋದ್ಯೋಗದಲ್ಲೂ ಕೆಲವು ಸಭ್ಯಾಚಾರಗಳಿವೆ. ಬೇರೊಂದು ಪತ್ರಿಕೆಯಿಂದ ಏನನ್ನಾದರೂ ಎತ್ತಿ ಹಾಕಿದರೆ ಆ ಪತ್ರಿಕೆಯ ಹೆಸರು ಹಾಕಲೇಬೇಕು. ಆದರೆ ನಮ್ಮೂರ ಪತ್ರಿಕೆಗೆ ಇದಿಲ್ಲ. ಬೇರೆ ಪತ್ರಿಕೆಯಿಂದ ಅಕ್ಷರಶಃ ತೆಗೆದು ತಾನು ಬರೆದುದೆಂಬಂತೆ ಪ್ರಕಟಿಸಿಕೊಳ್ಳುತ್ತದೆ. ಮತ್ತೆ ಅನುಕರಣೆಯಲ್ಲಿ ಅದನ್ನು ಮೀರಿದವರಿಲ್ಲ. ಪ್ರತಿ ಹೆಜ್ಜೆಯಲ್ಲಿಯೂ ಈ ಅನುಕರಣೆಯೇ! ಈ ಎಂಟು ವರ್ಷ ತಂದ ಗರಿಯಲ್ಲಿ ಅದು ನವಿಲೆಂದು ಕುಣಿಯುವದನ್ನು ಕಂಡಾಗ ನಗಬೇಕೋ ಕನಿಕರಪಡಬೇಕೋ ತಿಳಿಯದು. ಬ್ರಿಟಿಷರ ಕಾಲಕ್ಕೆ ಅವರ ಬಾಲ ಹಿಡಿದು ಬದುಕಿದ ಜೀವ ಇಂದು ಬೇರೊಬ್ಬರ ಬಾಲ ಹಿಡಿದಿದ್ದರೆ ಯಾ ಬೇರೆ ಪತ್ರಿಕೆಗಳ ಬೆಳಕಿನಲ್ಲಿ ಬೆಳೆಯಲೆತ್ನಿಸಿದರೆ ಅದರಲ್ಲಿ ಆಶ್ಚರ್ಯಪಡಬೇಕಾಗಿಲ್ಲ. ಏಕೆಂದರೆ ಕೇವಲ ಹೊಂಗುಟ್ಟುವವನಿಗೆ ಕಥೆಯಾದರೂ ವ್ಯಥೆಯಾದರೂ ಹೇಗೇ ಒಂದೇ ರೀತಿಯವೋ ಹಾಗೆ ಹೇಗಾದರೂ ಜೀವ ಹೊರೆಯಬೇಕೆನ್ನುವವನಿಗೆ ಅನುಕರಣೆಯಾದರೇನು ಕತ್ತರಿ ಕೆಲಸವಾದರೇನು?

• • *

ಹೊರಗಿನಿಂದ ಬಂದು ಕೊಡಗಿನ ಹವಾಗುಣ ಒಗ್ಗದ ಅಧಿಕಾರಿಯೊಬ್ಬರು ಆಸ್ಪತ್ರೆ ಕಾಯಿಲಸ್ಥರ ಹೆಸರಿನಲ್ಲಿ 'ಹಾರ್ಲಿಕ್ಸ್' ಪಡೆಯುತ್ತಿರುವರೆಂದು ಓದುಗರೊಬ್ಬರು ಪ್ರಕಟಿಸಿದ್ದ ಓಲೆಯ ಪರಿಣಾಮವಾಗಿ ಕಳೆದ ತಿಂಗಳು ಅವರು ಹಾಗೆ ಉಪಯೋಗಿಸಿದ 'ಹಾರ್ಲಿಕ್ಸಿ'ನ ಬಿಲ್ಲು ಕೊಟ್ಟಿರುವರೆಂದು ದುರ್ಬೀನಿಗೆ ಗೊತ್ತಾಗಿದೆ. ದೊಡ್ಡ ಜನರನ್ನು ಹತ್ತಿಸಿಕೊಳ್ಳಲು ಬಸ್ಸು ರಷ್ ಬಿಟ್ಟು ಹೋದರೂ ಆ ದೊಡ್ಡವರಿಂದ ಟಿಕೇಟಿನ ದುಡ್ಡು ಪಡೆದುದು ಸಂತೋಷ.

* * *

ಜವಾಬ್ದಾರಿ ಹೊತ್ತವರೊಬ್ಬರು ಮಾತು ಮಾತಿಗೆ 'ಸ್ವತಂತ್ರ ದೇಶದ ಪ್ರಜೆಗಳು ತಮ್ಮ ಜವಾಬ್ದಾರಿ ತಿಳಿಯಬೇಕು. ಸ್ವಾರ್ಥತೆಯನ್ನು ಬಿಟ್ಟು ಸಹಕರಿಸಿ ಸರ್ವರ ಏಳ್ಗೆಗಾಗಿ ದುಡಿಯಬೇಕು' ಎಂದು ಅಲ್ಲಲ್ಲಿ ಹೇಳುತ್ತಿರುತ್ತಾರೆ. ಅಂಥಾವರೇ ಪ್ರಜಾ ಸರಕಾರದ ಜೀಪನ್ನು, ವಾಹನಗಳನ್ನು ತನ್ನ ಸ್ವಂತ ಲಾಭಕ್ಕೆ ಉಪಯೋಗಿಸುತ್ತಾರೆ! ನಾನು ಹೇಳಿದಂತೆ ಮಾಡಿ ನಾನು ಮಾಡಿದಂತೆ ಮಾಡಬೇಡವೆಂಬ ತತ್ವ ಇವರದಾಗಿರುವಂತೆ ತೋರುತ್ತದೆ. ನಡೆಯುವವನೂ ಕಾಲ್ಬಲವಿಲ್ಲದವನು ನೆಗೆದು ತೋರಿಸುವದು ಹೇಗೆ ಅಸಾಧ್ಯವೋ ಹಾಗೆಯೇ ತನ್ನನ್ನು ತಿದ್ದಿಕೊಳ್ಳದೆ ಇತರರನ್ನು ತಿದ್ದಲೆತ್ನಿಸುವದು ನಿಷ್ಪ್ರಯೋಜನವಲ್ಲವೇ?

* * *

ಕಾಂಗ್ರೆಸ್ ಕಮಿಟಿಯ ಸದಸ್ಯರೊಬ್ಬರು ಪರ್ಮಿಟ್ ಇಲ್ಲದೆ ವಿದೇಶೀ ಪಾನೀಯದ ಕುಪ್ಪಿಯೊಂದನ್ನು ಸಾಗಿಸುತ್ತಿದ್ದುದನ್ನು ಕಂಡು ಹಿಡಿದು ಅವರ ಮೇಲೆ ಮಹಜರ್ ಮಾಡಲಾಗಿತ್ತೆಂದೂ ಆ ಪಕ್ಷದವರು ಕೆಲವರು ಸೇರಿ ಅದನ್ನು ಇಲ್ಲದೆ ಮಾಡಿ ಮಾನ ಉಳಿಸಿದರೆಂದೂ ದೂರದ ನೋಟದ ದುರ್ಬೀನಿಗೆ ಗೊತ್ತಾಗಿದೆ. ಹಟ್ಟಿಯಲ್ಲಿ ಹಸುವಿದ್ದರೆ ಮನೆಯಲ್ಲಿ ಹಾಲಿರುವದು ಹೇಗೆ ಅನಿವಾರ್ಯವೋ ಅದೇರೀತಿ ಮನಸು ಕುಡುಕನದಾದರೆ ಖಾದಿ ಕಾಂಗ್ರೆಸ್‌ಗಳೇನು ತಡೆಯಲ್ಲ! ಸಮುದ್ರದಲ್ಲೂ ಸರೋವರದಲ್ಲೂ ಇರುವದು ನೀರೇ ಆದರೂ ಸಮುದ್ರದ ಗರ್ಜನೆ ಸರೋವರದಲ್ಲಿ ಕೇಳಲಾರದು. ಅದೇ ರೀತಿ ಹೇಳುವದು ಕಾಂಗ್ರೆಸ್ಸಿಂದಾದರೂ, ನಿಜ ಕಾಂಗ್ರೆಸಿಗನ ನಿಷ್ಠೆ ಸಂದರ್ಭ ಕಾಂಗ್ರೆಸಿಗನಿಗಿರಲಾರದು.

ನಿಮ್ಮ ಕೈ ಮೂಲಕ ಪರಿಚಯ

— ಲೇಖಕ:—ಶ್ರೀ. ಬಳ್ಕೂರ ಸುಬ್ರಾಯ ಅಡಿಗ —

ಕೈಯ ರೇಖೆಗಳು ಮಾನಸಿಕ ವೃತ್ತಿಗಳ ಹಾಗೂ ಮನೋಭಾವಗಳ ಛಾಯಾರೂಪಗಳು. ಏಕೆಂದರೆ ಈ ಇಚ್ಛೆ ಹಾಗೂ ಕಾಮನೆಗಳ ಮೇಲೆಯೇ ನಮ್ಮ ಪ್ರಕೃತಿ ಭಾವನೆಗಳು ಆಧರಿಸಿಕೊಂಡಿವೆ. ಇವುಗಳ ಪರಿಚಯದಿಂದ ನಾವು ನಮ್ಮ ಶಕ್ತಿ, ಗುಣ ಮತ್ತು ಸಾಮರ್ಥ್ಯಗಳನ್ನು ತಿಳಿದು ಜೀವನವನ್ನು ಉನ್ನತ ಹಾಗೂ ಸಫಲಗೊಳಿಸಬಹುದು

ಸೂಕ್ಷ್ಮವಾಗಿ ಪರೀಕ್ಷಿಸುವಾಗ ಒಬ್ಬರ ಕೈಗೂ ಮತ್ತೊಬ್ಬರ ಕೈಗೂ ಪರಸ್ಪರ ಭೇದವಿದೆಯೆಂದು ತೋರುತ್ತದೆ. ಕೈಗಳಲ್ಲಿರುವಂತೆಯೇ ಸ್ವಭಾವಗಳಲ್ಲಿಯೂ ಪರಸ್ಪರ ಭೇದವಿದೆಯೆಂಬುದು ಅನುಭವಸಿದ್ಧ ಮಾತು.

ಅಗಲ ಹಾಗೂ ದೊಡ್ಡ ಕೈಯುಳ್ಳ ಪುರುಷರು ಸ್ಥಿರ ಸ್ವಭಾವದವರೂ ಗಂಭೀರರೂ ದೂರದರ್ಶಿಗಳೂ ಸಹನಶೀಲರೂ ಉದಾರಚಿತ್ತರೂ ಆಗಿರುತ್ತಾರೆ. ಉದ್ದ ಹಾಗೂ ಸಂಕೀರ್ಣ ಕೈಯುಳ್ಳವರು ಚಂಚಲರಾಗಿರುತ್ತಾರೆ. ವಿಶೇಷವಾಗಿ ಯಾವ ಕೆಲಸದಲ್ಲೂ ಅವರಿಗೆ ಸ್ಥಿರತೆಯಿರುವದಿಲ್ಲ ದಾನಿಯ ಕೈಗಳು ಉದ್ದವಾಗಿಯೂ ಅಗಲವಾಗಿಯೂ ಇರುತ್ತವೆ ಸಣ್ಣದಾದ ಮತ್ತು ಸಂಕೀರ್ಣವಾದ ಕೈಗಳು ಲೋಭವನ್ನು ಸೂಚಿಸುತ್ತವೆ.

ಮೃದುವಾದ ಅಂಗೈ ಉಳ್ಳವರು ಕೋಮಲ ಹೃದಯಿಗಳು. ಅಂಗೈ ಒರಟಾಗಿಯೂ ಕಠೋರವಾಗಿಯೂ ಇದ್ದರೆ ಅಂತಹರು ಕೋಪಿಷ್ಠರೂ ಮುಂಗೋಪಿಗಳೂ ಆಗಿರುತ್ತಾರೆ ನಯವಾದ ಹಾಗೂ ಆಳವಾದ ಅಂಗೈಯುಳ್ಳವರಲ್ಲಿ ಪ್ರೇಮಭಾವವು ಹೆಚ್ಚಿರುತ್ತದೆ

ಅಂಗೈ ಸ್ವಲ್ಪವೂ ಆಳವಿರದವರು ತಮ್ಮ ಸಂಬಂಧಿಕರನ್ನು ಪ್ರೀತಿಸುವದಿಲ್ಲ. ಅಂಗೈ ವಿಕಾರವಾಗಿ ಆಳವಾಗಿದ್ದರೆ ಅವರಿಂದ ಶುಭವಾಗಲಾರದು. ಅಂಗೈ ಕೆಳಕಿನ ಕಡೆ ಸೆಳೆದೊಯ್ಯುತ್ತವೆ. ಚಪ್ಪಟೆಯಾದ ಹಾಗೂ ಉಬ್ಬಿದ ಅಂಗೈಯುಳ್ಳವರು ಕೇವಲ ಸ್ವಾರ್ಥವನ್ನೇ ನೋಡುತ್ತಾರೆ ಅಂಗೈಯಲ್ಲಿ ಗುಳಿಯಿದ್ದರೆ ಧನ ಸಂಗ್ರಹದ ಕಡೆ ವಿಶೇಷ ಲಕ್ಷ್ಯವಿರುತ್ತದೆ. ಅಂಗೈ ಮೇಲೆದ್ದು ಬಂದಿದ್ದರೆ ಅಂತಹರು ದುಂದುಗಾರರಾಗುತ್ತಾರೆ.

ಬೆರಳುಗಳು ನೇರವಾಗಿಯೂ ಉದ್ದವಾಗಿಯೂ ನಯವಾಗಿಯೂ ಇರುವದು ಉತ್ತಮ. ಉದ್ದ ಬೆರಳುಗಳು ಯಾವಾಗಲೂ ಯೋಚಿಸುತ್ತಾ ಇರುವದರ ಕುರುಹಾಗಿದೆ. ಕಿರುಬೆರಳುಗಳುಳ್ಳವರು ಯೋಚನೆ ಮಾಡದೆ ಕೂಡಲೇ ನಿರ್ಣಯಕೊಡುತ್ತಾರೆ. ಕೆಲಸ ನಿಶ್ಚಯವಾದೊಡನೆ ಬೇರಾವ ನೆಪ ಹೇಳದೆ ಅದನ್ನು ಬೇಗನೆ ಮುಗಿಸಿಬಿಡುತ್ತಾರೆ.

ಬೆರಳುಗಳು ನಯವಾಗಿಯೂ ಮೃದುವಾಗಿಯೂ ಗಂಟುಗಳಿಲ್ಲದವೂ ಆಗಿದ್ದರೆ ಅಂತಹರಲ್ಲಿ ಮಾನಸಿಕ ಶಕ್ತಿಯು ಪ್ರಬಲವಾಗಿರುತ್ತದೆ ಬೆರಳುಗಳಲ್ಲಿ ಗಂಟುಗಳಿರುವ ಮನುಷ್ಯರು ನಿಶ್ಚಿತ ಲಾಭವಿಲ್ಲದೆ ಯಾವ ಕೆಲಸವನ್ನೂ ಮಾಡುವದಿಲ್ಲ.

ಹೆಬ್ಬೆರಳು ಸಮಾನ ದಪ್ಪವಾಗಿದ್ದು, ಉಗುರಿರುವ ಭಾಗವು ಕೆಳಗೆ ಜೋಲಾಡಿಕೊಂಡಿರದಿದ್ದರೆ ಅಂತಹ ವ್ಯಕ್ತಿಗಳು ಸಾಹಸಿಗಳಿದ್ದು ತಮ್ಮ ಕಾರ್ಯಗಳನ್ನು ಪೂರ್ಣಗೊಳಿಸುತ್ತಾರೆ. ಹೆಬ್ಬೆರಳಿನ ತುದಿಯಲ್ಲಿ ಚಕ್ರವಿರುವುದು ಸಾಹಸ ಹಾಗೂ ಶೌರ್ಯದ ಗುರುತು. ಹೆಬ್ಬೆರಳು ಬಲಿಷ್ಠವೂ ನೇರವೂ ಗಂಟುಗಳಿಂದ ಕೂಡಿದ್ದೂ ದಪ್ಪವೂ ಆಗಿದ್ದರೆ ಅಂತಹರ ಎಲ್ಲ ಕೆಲಸಗಳೂ ತಮ್ಮ ಇಚ್ಛೆಯಂತೆಯೇ ನೆರವೇರುತ್ತವೆ. ಹೆಬ್ಬೆರಳಿನ ಮೇಲ್ಭಾಗವು ತೆಳುವಾಗಿ ಹಿಂದೆ ಸರಿದಿದ್ದರೆ ಅಂತಹರ ಸ್ಮರಣ ಶಕ್ತಿಯು ಚುರುಕಾಗಿರುತ್ತದೆ. ಹೆಬ್ಬೆರಳು ಕಿರಿದೂ ದೃಢವೂ ಗೋಳಾಕಾರವೂ ಗಂಟುಗಳಿಂದ ಕೂಡಿದ್ದುದೂ ಆಗಿದ್ದರೆ ಅಂತಹರ ಮನೋಹೃದಯಗಳು ಪರಿಶುದ್ಧವಾಗಿರಲಾರದು. ಹೆಬ್ಬೆರಳು ಬಹು ಕಿರಿದಾಗಿರುವ ಮನುಷ್ಯರು ಸ್ವತಃ ಯಾವ ಕೆಲಸವನ್ನೂ ಮಾಡಲಾರರು.

ಹೊಸ ಆವಿಷ್ಕಾರ ಮಾಡುವ ಹಾಗೂ ಗಂಭೀರ ವಿಷಯಗಳ ಕುರಿತು ವಿಚಾರ ಮಾಡುವ ಮನುಷ್ಯರ ಹೆಬ್ಬೆರಳುಗಳು ಬಲಿಷ್ಠವೂ ತುಸು ಹಿಂದೆ ಬಗ್ಗಿದವೂ ಉಗುರಿನ ಭಾಗವು ತುಸು ಸಪೂರವಾದುದೂ ಆಗಿರುತ್ತವೆ.

ಎಡಗೈಗಿಂತ ಬಲಗೈ ದೊಡ್ಡದಿರುವ ಮನುಷ್ಯನು ಪರಾಕ್ರಮಿಯೆನಿಸುತ್ತಾನೆ. ಎಡಗೈ ಬಲಗೈಗಿಂತ ದೊಡ್ಡದಾಗಿರುವವರು ಭೀರು ಸ್ವಭಾವದವರಾಗುತ್ತಾರೆ. ಸಣ್ಣ ಹಾಗೂ ದೊಡ್ಡ ಕೈಗಳುಳ್ಳವರು ಅಸ್ಥಿರರೂ ಚಂಚಲರೂ ಆಗಿರುತ್ತಾರೆ.

(ಶ್ರೀ ರಾವಲ್ ರತನರ ಲೇಖದಿಂದ)

—— 'ಕ. ವಿ.'

ಬೆಳೆಗಳ ಸ್ಪರ್ಧೆಗೆ ಸದಸ್ಯನಾಗುವಿಕೆ

ಎ. (೧) ಯಾವ ರೈತನೇ ಆಗಲಿ ತನ್ನ ಜಮೀನನ್ನು ತಾನೇ ಸಾಗುವಳಿ ಮಾಡುವುದಾಗಲೀ ಅಥವಾ ಆಳುಗಳ ಮೂಲಕ ಮಾಡಿಸುವುದಾಗಲೀ ಯಾ ವಾರಗಾರರಿಂದ ಮಾಡಿಸುವುದಾಗಲೀ ಅಂತಹ ಸಾಗುವಳಿಯ ಜಮೀನು ಒಂದು ಏಕರೆ ವಿಸ್ತೀರ್ಣ ಇದ್ದರೆ ಬೇರೆ ಬೇರೆಯಾಗಿ ಸ್ಪರ್ಧಿಸಬಹುದು.

(೨) ಒಬ್ಬ ರೈತನು ತನ್ನ ಹಿಡುವಳಿಯಲ್ಲಿ ಒಂದೆರಡು ಫಾರಂಗಳನ್ನು ಕೊಂಡುಕೊಂಡು ಸ್ಪರ್ಧಿಸಬಹುದು. ಇನಾಮುಗಳು ಇವೆರಡಕ್ಕೂ ದೊರೆತರೆ ಅಂತಹವರು ಒಂದೇ ಇನಾಮಿಗೆ ಹಕ್ಕುದಾರರು.

(೩) ಪ್ರತಿಯೊಂದು ಗ್ರಾಮದ ೨೦ ಜನರೊಳಗೊಂಡ ಅಂದರೆ ೨೦ ಫಾರಂಗಳನ್ನು ಪಡಕೊಂಡು ಒಂದು ಗುಂಪಿಗೆ ಒಂದು ಯೂನಿಟ್ ಎಂದು ಕರೆಯಲ್ಪಡುವುದು. ಒಂದು ವೇಳೆ ಒಂದು ಯೂನಿಟ್ ಎನಿಸಿಕೊಳ್ಳುವ ಒಂದು ಗ್ರಾಮದಲ್ಲಿ ೨೦ ಜನ ಸ್ಪರ್ಧೆಗಾರರು ಇಲ್ಲದಿದ್ದರೆ ಅಂತಹ ಗ್ರಾಮವನ್ನು ಸಮೀಪದ ಗ್ರಾಮಕ್ಕೆ ಸೇರಿಸಲ್ಪಡುವುದು.

(ಸೂಚನೆ:—ಗ್ರಾಮ ಎಂದರೆ ಸರಕಾರದ ನಿಬಂಧನೆ ಪ್ರಕಾರ ಗಣನೆಗೆ ತೆಗೆದುಕೊಂಡಿರುವ ರೆವಿನ್ಯೂ ಅಥವಾ ಮಹಸೂಲು ಗ್ರಾಮಗಳು ಮಾತ್ರ.)

(೪) ಪ್ರತಿಯೊಬ್ಬ ಸ್ಪರ್ಧೆಗಾರನು ೧ ರೂಪಾಯಿ ದಾಖ್ಲಾತಿಯ ಫೀಜು ಕೊಟ್ಟು ಫಾರಮನ್ನು ಪಡಕೊಳ್ಳುವುದು.

(೫) ಸ್ಪರ್ಧೆಗಾರರಿಂದ ದಾಖ್ಲಾತಿ ಫೀಜು ವಸೂಲಿ ಮಾಡುವ ಅವಧಿಯು ತಾ. ೩೧—೮—೫೩ಕ್ಕೆ ಅಂತ್ಯಗೊಳ್ಳುವುದು. ನಂತರ ಸ್ಪರ್ಧೆಗಾರರನ್ನು ಸೇರಿಸಲಾಗದು.

ಬಿ. ಪ್ರತಿಯೊಂದು ಯೂನಿಟಿನ ಸ್ಪರ್ಧೆಗಾರರು ಸೇರಿ ೩ ಜನ ಕಾರ್ಯಕಾರಿ ಮಂಡಳಿಯವರನ್ನು ನೇಮಿಸುವುದು. ಅಲ್ಲದೆ ಆಯಾ ಗ್ರಾಮದ ಪಟೇಲರು ಮತ್ತು ಸರ್ಕಾರಿನ ಫೀಲ್ಡ್ ಮೆನ್ ಯಾ ಗ್ರಾಮ ಸೇವಕರು, ಈ ಕಮಿಟಿಯವರೊಂದಿಗೆ ಸೇರಿಕೊಳ್ಳುವುದು. ಇವರ ಪೈಕಿ ಆಯಾ ಸರ್ಕಾರಿನ ಗೌರವ ಕಾರ್ಯದರ್ಶಿಯಾಗಿ ಕೆಲಸ ಮಾಡುವುದು.

ಈ ಮೇಲೆ ನಮೂದಿಸಿದ ಕಾರ್ಯಕಾರಿ ಮಂಡಳಿಯವರು ಅವರ ಪೈಕಿ ಯೋಗ್ಯ ಅಧ್ಯಕ್ಷ (ಪ್ರೆಸಿಡೆಂಟ್) ನನ್ನು ಚುನಾಯಿಸಿಕೊಳ್ಳುವುದು ಮತ್ತು ಆ ಮೇಲೆ ನಮೂದಿಸಿದ ಮಂಡಳಿಯವರ ಕಾರ್ಯದಕ್ಷತೆಯು ಈ ಕೆಳಗಿನಂತೆ ಇರಬೇಕು—

(೧) ಕಾರ್ಯಕಾರಿ ಮಂಡಳಿಯವರು ಹೆಚ್ಚು ಸದಸ್ಯರನ್ನು ಸೇರಿಸುವ ಬಗ್ಗೆ ಹೆಚ್ಚಿನ ಪ್ರಚಾರ ಕೆಲಸ ಗ್ರಾಮಾಂತರಗಳಲ್ಲಿ ಮಾಡುವುದು.

(೨) ಕಾರ್ಯಕಾರಿ ಮಂಡಳಿಯವರು ಆಯಾ ಸರ್ಕಾರಿನ ಫೀಲ್ಡ್‌ಮೆನ್‌ರಿಗೂ ಮತ್ತು ಗ್ರಾಮ ಸೇವಕರಿಗೂ ಸ್ಪರ್ಧೆಗಾರರ ಹಿಡುವಳಿಗಳಲ್ಲಿ ಪ್ಲಾಟ್ ಗುರ್ತಿಸುವ ಕೆಲಸಕ್ಕೂ ಅಥವಾ ಸರಹದ್ದುಗಳನ್ನು ಹಾಕುವ ಕೆಲಸಕ್ಕೂ ಬೆಳೆಗಳನ್ನು ಕಟಾವು ಮಾಡಿ ಇಳುವರಿಯನ್ನು ಕಂಡು ಹಿಡಿಯುವ ಬಾಬಿಗೂ ಪೂರ್ತಿ ಸಹಾಯ ನೀಡುವುದು.

(೩) ಒಂದು ಯೂನಿಟಿನ ಸ್ಪರ್ಧೆಗಾರರ ಪೈಕಿ ಉತ್ತಮ ಇನಾಮುಗಳನ್ನು ಹೊಂದಲು ಯೋಗ್ಯ ಇರುವಂತಹ ೬ ಪ್ಲಾಟುಗಳನ್ನು ಆರಿಸಿ ಅವುಗಳಲ್ಲಿ ಇಳುವರಿಯನ್ನು ತೂಕ ಮಾಡುವುದು.

ಸೂಚನೆ:— ಕಾರ್ಯಕಾರಿ ಮಂಡಳಿಯವರ ಚುನಾವಣೆಯು ೩೧—೮—೫೩ರ ಮುಂಚಿತವಾಗಿ ಆಗಬೇಕು.

(ಎ) ಪ್ರತಿಯೊಂದು ಯೂನಿಟಿನ ಪೈಕಿ ಕಾರ್ಯಕಾರಿಯವರು ಆರಿಸಿದ ಉತ್ತಮ ತರದ ಆರು ಪ್ಲಾಟುಗಳಲ್ಲಿ ಬೆಳೆಗಳನ್ನು ಬಡಿದು ತೂಕ ಮಾಡುವದು.

(ಬಿ) ಈ ಕಾರ್ಯಕಾರಿ ಮಂಡಳಿಯವರು ಗುರ್ತಿಸಿದ ಅಥವಾ ಚುನಾಯಿಸಿದ ಉತ್ತಮ ತರದ ಬೆಳೆಯ ಆರು ಪ್ಲಾಟುಗಳು ಆಯಾ ಯೂನಿಟಿನ ಎಲ್ಲಾ ಸ್ಪರ್ಧೆಗಾರರಿಗೂ ತಿಳಿದಿರತಕ್ಕದು. ಈ ಚುನಾಯಿಸುವಿಕೆಯು ಸ್ಪರ್ಧೆಗಾರರಿಗೆ ಅಸಮಧಾನ ಕಂಡು ಬಂದಲ್ಲಿ ವ್ಯವಸಾಯ ಇಲಾಖಾ ಆಫೀಸರರಿಗೆ ರೂಪಾಯಿ ಎರಡರ ಸಮೇತ ಒಂದು ಅರ್ಜಿಮಾಡಿ ಕೊಳ್ಳುವದು. ಅಂಥವರ ಬೆಳೆಗಳನ್ನು ಅಜಮಾಯಿಸಿ ತೂಕ ಮಾಡುವ ಏರ್ಪಾಡು ಮಾಡಲಾಗುವದು. ಇಂತಹ ಅರ್ಜಿದಾರರು ಮೊದಲೇ ಚುನಾಯಿಸಿದ ಆರು ಸ್ಪರ್ಧೆಗಾರರಿಗಿಂತ ಮಿಗಿಲಾರಿ ಇಳುವರಿ ಬಂದದ್ದಾದರೆ ಇನಾಮು ದೊರಕುವದಲ್ಲದೆ ಠೇವಣಾತಿ ಇಟ್ಟ ಎರಡು ರೂಪಾಯಿ ಸಹ ವಾಪಾಸು ದೊರಕುವದು. ಇನಾಮು ದೊರಕದೆ ಇದ್ದ ಸಂದರ್ಭದಲ್ಲಿ ಠೇವಣಾತಿ ಇಟ್ಟ ಎರಡು ರೂಪಾಯಿಯು ವಾಪಾಸು ದೊರೆಯಲಾಗದು

(ಸಿ) ಪ್ರತಿ ಯೂನಿಟಿನಲ್ಲಿ ಅಂದಾಜು ಮಾಡಲೋಸುಗ ಆರು ಪ್ಲಾಟುಗಳನ್ನು ಕುಯಿಸಿ ಇಳುವರಿಯನ್ನು ಕಂಡುಹಿಡಿಯುವದು.

(ಡಿ) ಕಾರ್ಯಕಾರಿ ಮಂಡಳಿಯವರು ಆಯಾ ಹಿಡುವಳಿಯಲ್ಲಿ ಬೆಳೆಗಳನ್ನು ತೂಕ ಮಾಡುವ ದಿವಸಗಳನ್ನು ಮೊದಲೇ ನಿಶ್ಚೈಸುವದಲ್ಲದೆ ಆಯಾ ತಾರೀಕುಗಳನ್ನು ವ್ಯವಸಾಯ ಇಲಾಖಾ ಆಫೀಸರರಿಗೆ ಆಯಾ ಪ್ಲಾಟುಗಳಲ್ಲಿ ಅಂದಾಜು ಮಾಡಿದ ಇಳುವರಿಯ ಫಾರಂ ಸಮೇತ ಕಳುಹಿಸಿ ಕೊಡುವದು. ಯಾವುದೇ ಪ್ಲಾಟುಗಳಲ್ಲಿ ಬೆಳೆಯನ್ನು ಆಯಾ ಸರ್ಕಾರಿನ ಫೀಲ್ಡ್ ಮೆನ್ ಅಥವಾ ಗ್ರಾಮ ಸೇವಕರ ಗೈರು ಹಾಜರಿನಲ್ಲಿ ತೂಕ ಮಾಡಿದ್ದೆಯಾದರೆ ಅಂಥವರಿಗೆ ಇನಾಮು ದೊರಕಲಾರದು.

(ಇ) ಈ ಮೇಲೆ ನಮೂದಿಸಿದ ಪ್ಲಾಟುಗಳಲ್ಲಿ ಬೆಳೆಗಳನ್ನು ಕುಯಿಸಿ ಬಡಿಸಿ ಕಾಳುಗಳನ್ನು ಶುದ್ಧ ಮಾಡಿ ಅದೇ ದಿವಸ ತೂಕಮಾಡುವದು, ದಾಖ್ಲಾತಿ ಫಾರಂನ್ನು ಅದೇ ದಿವಸ ಅದೇ ಜಾಗದಲ್ಲಿ ಕಾರ್ಯಕಾರಿ ಮಂಡಳಿಯವರಿಂದ ಪೂರ್ತಿ ಬರಾಯಿಸಲ್ಪಡತಕ್ಕದ್ದು. ಇಂತಹ ಬರಾಯಿಸಲ್ಪಟ್ಟ ಫಾರಂಗಳನ್ನು ವ್ಯವಸಾಯ ಇಲಾಖಾ ಆಫೀಸರವರಿಗೆ ಕಳುಹಿಸಿ ಕೊಡತಕ್ಕದ್ದು.

(ಎಫ್) ಇನಾಮುಗಳನ್ನು ಹೊಂದತಕ್ಕ ಯೋಗ್ಯತೆಯುಳ್ಳವರನ್ನು ಚುನಾಯಿಸುವ ಕಡೇ ಅಧಿಕಾರವು ವ್ಯವಸಾಯ ಇಲಾಖಾ ಅಧಿಕಾರಿಯವರಿಗೆ ಸೇರಿದೆ.

(ಜಿ) ಬೆಳೆಗಳ ಅಂದಾಜು ಮಾಡಲ್ಪಟ್ಟು ಕೊಯಿಸಿದ ಪ್ಲಾಟಿನಲ್ಲಿ ೨೫೦ ಪೌಂಡಿಗಿಂತ ಹೆಚ್ಚಿನ ಕಾಳುಗಳು ಬಂದಲ್ಲಿ ಅಂತವರ ವಿಷಯ ಕೂಡಲೇ ವ್ಯವಸಾಯ ಇಲಾಖಾ ಆಫೀಸರಿಗೆ ತಿಳಿಸತಕ್ಕದ್ದು. ಅದರೊತ್ತಿನ ೫ ಸೆಂಟು ಪ್ಲಾಟಿನ ಬೆಳೆಯ ಇಳುವರಿಯನ್ನು ಅಧಿಕಾರ ವಹಿಸಿದ್ದ ಒಬ್ಬ ಆಫೀಸರರ ಹಾಜರಿಯಲ್ಲಿ ತೂಕಮಾಡಿ ತೀರ್ಮಾನಿಸುವದು.

(ಹೆಚ್) ಈ ರೀತಿ ೨೫೦ ಪೌಂಡಿಗಿಂತ ಹೆಚ್ಚಿನ ಇಳುವರಿ ಬಂದ ಎಲ್ಲಾ ಸ್ಪರ್ಧೆಗಾರರ ಹೆಸರುಗಳನ್ನು ಆಯಾ ಸರ್ಕಲಿನ ಎಗ್ರಿಕಲ್ಚರ್ ಡೆಮಾನ್‌ಸ್ಟ್ರೇಟರರಿಗೆ ಅಥವಾ ಆಫೀಸರರಿಗೆ ತಿಳಿಸಬೇಕು.

(ಐ) ಎಗ್ರಿಕಲ್ಚರ್ ಡೆಮಾನ್‌ಸ್ಟ್ರೇಟರವರು ಈ ವರ್ತಮಾನವನ್ನು ತಿಳಿದ ಕೂಡಲೇ ಸ್ಪರ್ಧೆಗೆ ಇರಿಸಿದ್ದ ಪ್ಲಾಟಿನ ಒತ್ತಿನಲ್ಲಿ ೫ ಸೆಂಟಿನ ಪ್ಲಾಟನ್ನು ಗುರ್ತಿಸಿ ಈ ವಿಷಯವನ್ನು ವ್ಯವಸಾಯ ಇಲಾಖಾ ಅಧಿಕಾರಿಯವರಿಗೂ, ಯೂನಿಟಿನ ಕಾರ್ಯಕಾರಿ ಮಂಡಳಿಯವರಿಗೂ ತಿಳಿಸುವುದು.

(ಜೆ) ಇಲಾಖಾ ಆಫೀಸರವರು ಈ ವರ್ತಮಾನ ಸಿಕ್ಕಿದ ೧೦ ದಿವಸಗಳೊಳಗೆ ಸ್ಪರ್ಧೆಗಾರನಲ್ಲಿಗೆ ಹೋಗಿ ಮೇಲ್ಕಂಡ ಅಧಿಕಾರಿಯವರೊಡನೆ ಸೇರಿ ಬೆಳೆಯ ಇಳುವರಿಯನ್ನು ಕಂಡು ಹಿಡಿಯುವುದು

(ಕೆ) ಅಂದಾಜು ಮಾಡಲೋಸುಗ ೨½ ಸೆಂಟು ಕುಯಿಸಿದ ಪ್ಲಾಟಿನ ಇಳುವರಿಯನ್ನು ಯೂನಿಟಿನ ಮತ್ತು ನಾಡಿನ ಇನಾಮುಗಳಲ್ಲಿ ಯೂನಿಟಿನ ಮತ್ತು ನಾಡಿನ ಇನಾಮುಗಳನ್ನು ಕೊಡುವುದರಲ್ಲಿ ಗಣನೆಗೆ ತೆಗೆದುಕೊಳ್ಳಲಾಗುವುದು.

(ಎಲ್) ಇದರೊತ್ತಿನ ೫ ಸೆಂಟಿನ ಪ್ಲಾಟಿನ ಇಳುವರಿಯನ್ನು ತಾಲೋಕು ಮತ್ತು ಪ್ರಾಂತ್ಯದ ಇನಾಮುಗಳನ್ನು ಕೊಡುವ ಬಾಬಿಗೆ ಗಣನೆಗೆ ತೆಗೆದುಕೊಳ್ಳಲಾಗುವುದು. ಪ್ರತಿಯೊಂದು ಗ್ರಾಮ ಅಥವಾ ಯೂನಿಟ್, ನಾಡು, ತಾಲೋಕು, ಮತ್ತು ಪ್ರಾಂತ್ಯಗಳ ಮಟ್ಟಕ್ಕೆ ಮೂರು ಮೂರು ಇನಾಮುಗಳನ್ನು ಕೊಡಲಾಗುವುದು.

ಎಗ್ರಿಕಲ್ಚರಲ್ ಆಫೀಸರ್.

ಬರೆಹಗಾರರಿಗೆ ಸೂಚನೆ.

"ಕೊಡಗು" ಪತ್ರಿಕೆಗೆ ಅನೇಕ ಜನರು ಕತೆಗಳನ್ನೂ, ಇತರ ಲೇಖನಗಳನ್ನೂ ಬರೆದು ಕಳುಹಿಸುತ್ತಾರೆ. ಆದರೆ ಕತೆಗಳಲ್ಲಿ ಹೆಚ್ಚಿನವು ಕೇವಲ ಪ್ರೇಮ, ಕಾಮಗಳಿಗೆ ಸಂಬಂಧಿಸಿದವಿದ್ದು ಒಂದೇ ರೀತಿಯವಾಗಿರುತ್ತವೆ. ಲೇಖಕರು ತಮ್ಮ ಕಥಾ ವಸ್ತುವಾಗಿ ಇತರ ವಿಚಾರಗಳನ್ನು ಆರಿಸಿಕೊಂಡು ಬರೆದರೆ ಅಂಥಾ ಕತೆಗಳಿಗೆ ಹೆಚ್ಚಿನ ಸ್ವಾಗತವಿದೆ. ಮತ್ತೆ ಲೇಖನ ಬರೆಯುವವರು ತಮ್ಮ ಪೂರ್ಣ ಪತ್ತೆಯನ್ನು ಕೊಡಬೇಕು. ತಮ್ಮ ಹೆಸರನ್ನು ನಮ್ಮ ತಿಳುವಳಿಕೆಗಾಗಿ (ಪ್ರಕಟಣೆಗಾಗಿ ಅಲ್ಲ) ಕೊಡಲು ಒಪ್ಪದಿಲ್ಲದವರ ಲೇಖನಗಳು ಪ್ರಕಟವಾಗಲಾರವು. ದುರ್ಬೀನು ನೋಟ, ಹಾಸ್ಯ, ಮಧುಪರ್ಕ, ಧರ್ಮರಹಸ್ಯ, ಹುಚ್ಚರ ಹಟ್ಟಿ, ಪ್ರತಿಯೊಂದು ವಿಭಾಗಕ್ಕೂ ಬರೆಯುವ ಉತ್ತಮ ಲೇಖನಗಳಿಗೆ ಸದಾ ಸ್ವಾಗತವಿದೆ.

—ಮೇನೇಜರ್.

ತಿದ್ದುಪಡಿ.

ಕಳೆದ ವಾರದ ಪತ್ರಿಕೆಯಲ್ಲಿ ಮಡಿಕೇರಿಯಲ್ಲಿರುವ ಗೌಡಬೋರ್ಡಿಂಗ್ ಮನೆಯನ್ನು ಕಾಲೇಜು ಹಾಸ್ಟೆಲ್ ಮಾಡಬೇಕೆಂಬ ಸಂಬಂಧ ಶ್ರೀ. ಸಿ. ಡಿ. ಅಪ್ಪಯ್ಯನವರ ಮೇಲೆ ಸುಳ್ಳು ಅಪವಾದ ಹೊರಿಸಿದ ಕಾರಣ ಶ್ರೀ. ಅಪ್ಪಯ್ಯನವರು ಶ್ರೀಗಳಾದ ಚೆಟ್ಟಿಮಾಡ ತಿಮ್ಮಯ್ಯ ಮತ್ತು ಸೋಮಯ್ಯನವರಿಗೆ ಲಾಯರು ನೋಟೀಸು ಕೊಟ್ಟಿರುವರೆಂಬ ವಾರ್ತೆಯಲ್ಲಿ 'ಸೋಮಯ್ಯ' ಎಂಬುದರ ಬದಲು ಪೂವಯ್ಯ ಎಂದು ಓದಿಕೊಳ್ಳಬೇಕು.

ಅಮೇರಿಕದಲ್ಲಿ ವಿವಾಹ ಪದ್ಧತಿ

[ಶ್ರೀ ಕೇಶವ ಸೇನ ಮಿಶ್ರ "ಕಮಲ"ರ ಲೇಖನ ಒಂದರ ಆಧಾರದ ಮೇಲೆ]

— ಅನುವಾದಕ—ಶ್ರೀ ಎಸ್. ಮಾಧವ ಭಟ್ಟ —

ಅಮೇರಿಕದಲ್ಲಿ ಜೂನ್ ತಿಂಗಳಲ್ಲಿ ಮದುವೆಗಳ ಆಡಂಬರಗಳು ಬಹಳ ಹೆಚ್ಚಾಗಿರುತ್ತದೆ ಈ ತಿಂಗಳಲ್ಲಿ ಗುಲಾಬಿಹೂಗಳೂ ಕೂಡ ಅತಿ ಹೆಚ್ಚಾಗಿರುತ್ತವೆ ಈ ಕಾರಣದಿಂದಾಗಿಯೇ ಈ ತಿಂಗಳನ್ನು 'ಹೂಗಳ ತಿಂಗಳೆಂ'ದು ಕರೆಯುತ್ತಾರೆ ಈ ತಿಂಗಳಲ್ಲಿ ಜರಗುವಷ್ಟು ವಿವಾಹಗಳು ಇನ್ನಾವ ತಿಂಗಳಿನಲ್ಲಿಯೂ ಜರಗುವುದಿಲ್ಲ.

ವಧುವಿನ ಉಡುಪು ತೊಡುಪು:—

ಅಮೇರಿಕಾದಲ್ಲಿ ಅನೇಕ ವಿಧದ ಜನರು ವಾಸಿಸುತ್ತಿರುವುದರಿಂದ ವಿವಾಹಗಳಲ್ಲಿ ಬೇರೆಬೇರೆ ವಿಧಾನಗಳು ಅನುಸರಿಸಲ್ಪಡುತ್ತವೆ. ಹೆಚ್ಚಾಗಿ ವಧುಗಳು ವಿವಾಹಗಳಲ್ಲಿ ಧರಿಸುವಂತಹ ಉಡುಪುಗಳಲ್ಲಿಯೂ ವಸ್ತ್ರ ಒಡವೆಗಳಲ್ಲಿಯೂ ಪ್ರಾಚೀನತೆ ಮತ್ತು ನವೀನತೆಗಳ ಸಮ್ಮಿಶ್ರಣವಿರುತ್ತದೆ. ಹಾಗೂ ಅವುಗಳು ನೀಲ ಮತ್ತು ಹಳದಿ ವರ್ಣಗಳಿಂದ ಶೋಭಿಸುತ್ತವೆ. ಈ ರೀತಿ ಬೇರೆ ಬೇರೆ ವಿಧಾನಗಳ ಆರಂಭವು ಎಲ್ಲಿಂದಾಯಿತೆಂದು ಯಾರೂ ಅರಿಯರು.

ಮದುವೆಗಳು ಸಾಧಾರಣವಾಗಿಯೂ, ವಿಶೇಷವಾಗಿಯೂ ಜರಗಿಸಲ್ಪಡುತ್ತವೆ. ವಿವಾಹ ವಿಧಿಯು ಚರ್ಚಿನಲ್ಲಿಯೋ, ವಧುವಿನ ಮನೆಯಲ್ಲಿಯೋ ಅಥವಾ ಯಾವುದಾದರೂ ಸುಂದರ ಉದ್ಯಾನವನದಲ್ಲಿಯೋ ನಡೆಯಬಹುದು. ಆದರೆ ತುಂಬ ಜನರ ಸೇರುವಿಕೆಯು ಅತ್ಯಾವಶ್ಯಕ. ವಧುವು ಪ್ರಾಚೀನ ರೀತಿಯ ಉಡುಪನ್ನು ಧರಿಸಿ ಪಲ್ಲಕಿಯಲ್ಲಿ ಹೋಗುತ್ತಾಳೆ ಅಥವಾ ಹೊಸ ರೀತಿಯ ಸಾಧಾರಣವಾದ ಸುಂದರ ಉಡುಪನ್ನು ಧರಿಸುತ್ತಾಳೆ. ತಾನು ಮತ್ತು ತನ್ನ ತಾಯಿ ಆರಿಸಿಟ್ಟ ಉಡುಪನ್ನು ತೊಟ್ಟು ಆಕೆಯು ಪ್ರತಿಜ್ಞಾವಿಧಿಯಲ್ಲಿ ಭಾಗವಹಿಸುತ್ತಾಳೆ

ಅತಿಥಿಗಳ ಆಗಮನದ ಸಮಯದಲ್ಲಿ ಒಂದು ವಿಶೇಷ ರೀತಿಯ ವಾದ್ಯವು ಮಧುರವಾಗಿ ಬಾರಿಸಲ್ಪಡುತ್ತದೆ ಈ ಸಂದರ್ಭದಲ್ಲಿ ಹಾಡುವ ಹಾಡುಗಳೆಂದು ಬೇರೆ ಇದ್ದರೂ ವಧುವಿನ ಸ್ನೇಹಿತರು (ಗಂಡು ಯಾ ಹೆಣ್ಣು) ಸಂಗೀತ ಹೇಳುತ್ತಿರುತ್ತಾರೆ. ಚರ್ಚುಗಳಲ್ಲಿ ಜರಗುವ ವಿವಾಹಗಳಿಗೆ ವಧುವಿನ ಸಖಿಯರೇ ಆಕೆಯನ್ನು ಕರೆದುಕೊಂಡು ಹೋಗುತ್ತಾರೆ ಮತ್ತು ಆಕೆಯೊಡನೆಯೇ ಇರುತ್ತಾರೆ. ಈ ಸಖಿಯರು ಬಣ್ಣ ಬಣ್ಣದ ಉಡುಪು ತೊಡುಪುಗಳನ್ನು ಧರಿಸಿ ಅದೇ ಬಣ್ಣದ ಹೂಗಳ ಹೂವಿನ ದಾನಿಗಳನ್ನು ಕೈಯಲ್ಲಿ ಹಿಡಿದುಕೊಂಡಿರುತ್ತಾರೆ.

ವಧುವು ತನ್ನ ತಂದೆಯ ಯಾ ಸಂಬಂಧಿಕರ ಬಲಭಾಗದಿಂದ ಬರುತ್ತಾಳೆ. ಪದ್ಧತಿಯಂತೆ ಈ ಸಂದರ್ಭದಲ್ಲಿ ಬಿಳಿಯುಡುಪನ್ನು ಧರಿಸಬೇಕಾದರೂ ಕೆಲವು ವರ್ಷಗಳಿಂದ ನೀಲ ಯಾ ನಸುಗೆಂಪು ಬಣ್ಣದ ಉಡುಪುಗಳು ಬಳಕೆಯಲ್ಲಿ ಬಂದಿರುವುವು. ವಧುವಿನ ಉಡುಪು ತೊಡುಪುಗಳು ಬಹಳ ಅಮೂಲ್ಯವಾಗಿದ್ದರೂ ಸರಿಯೆ, ಸಾಮಾನ್ಯವಾಗಿದ್ದರೂ ಸರಿಯೆ, ಅವುಗಳಿಗೆ ಹೆಚ್ಚಿನ ಮಹತ್ವವಿಲ್ಲ.

ಹೆಚ್ಚಿನ ವಧುಗಳೂ ಫೋರಾ ಪದ್ಧತಿಯನ್ನನುಸರಿಸುತ್ತಾರೆ. ಅದರ ಬಣ್ಣವು ಕೆತ್ತಳೆಯಂತಿರುತ್ತದೆ. ಚೀನಿಯರಂತೆ ಇಲ್ಲಿಯೂ ಇದು ಸೌಭಾಗ್ಯವತಿಯೆಂಬುದರ ಸೂಚಕವಾಗಿದೆ ಮಧುವಿನ ಕೈಗಳಲ್ಲಿ ಒಂದು ಹೂವಿನ ದಾನಿಯೂ ಒಂದು ಬಿಳುಪಿನ ಪ್ರಾರ್ಥನಾ ಪುಸ್ತಕವೂ ಇರುತ್ತವೆ ಅದರ ಸುತ್ತಲೂ ರಿಬ್ಬನ್, ಹೂಯೂ ಸುಂದರವಾಗಿ ನೇಯಲ್ಪಟ್ಟ ನೂಲು ತೂಗಿಸಲ್ಪಟ್ಟಿರುತ್ತವೆ. ವಿವಾಹ ಸಮಾರಂಭದ ಸಮಯವು ಚರ್ಚಿನ ರೀತಿರಿವಾಜುಗಳಿಗನುಸಾರ ಹೆಚ್ಚು ಕಡಮೆ ಮಾಡಲ್ಪಡುತ್ತದೆ.

ಪ್ರೀತಿ ಭೋಜನ.

ವಿವಾಹದ ಸಂದರ್ಭದಲ್ಲಿ ವಧುವಿನ ಮನೆಯಲ್ಲಿ ಅಥವಾ ಯಾವುದಾದರೂ ಉದ್ಯಾನ, ಹೋಟೇಲು ಯಾ ಕ್ಲಬ್ಬಿನಲ್ಲಿ ಒಂದು ಪ್ರೀತಿ ಭೋಜನವು ಏರ್ಪಡಿಸಲಾಗುತ್ತದೆ. ವಿಜೃಂಭಣೆಯಿಂದ ಜರಗುವ ವಿವಾಹಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರುತ್ತಾರೆ. ಸಂಗೀತವು ಏರ್ಪಡಿಸಲಾಗುತ್ತದೆ. ಮದ್ಯ ಸೇವನೆಯೊಂದಿಗೆ ಉತ್ತಮ ಫಲಾಹಾರದ ವ್ಯವಸ್ಥೆಯೂ ಇರುತ್ತದೆ. ಸಾಮಾನ್ಯವಾಗಿ ವಿವಾಹಗಳಲ್ಲಿ ವಧುವಿರುವ ತಾಣವು ಹೂಗಳಿಂದ ಸುಸಜ್ಜಿತವಾಗಿರುತ್ತದೆ. ಫಲಾಹಾರದಲ್ಲಿ 'ಐಸ್‌ಕ್ರೀಮ್' ಯಾ 'ಕೇಕ್' ಹೆಚ್ಚಾಗಿ ಬಳಕೆಯಲ್ಲಿವೆ.

ಈ ಸಮಾರಂಭದ ಅತ್ಯಂತ ಪ್ರಮುಖ ಭಾಗವೆಂದರೆ ವಧುವು ತನ್ನ ಕೈಯಿಂದ ಕೇಕನ್ನು ತುಂಡು ಮಾಡುವುದು. ಈ ಕೇಕ್ ಬಿಳಿ ಹೂಗಳಿಂದ ಮುಚ್ಚಲ್ಪಟ್ಟು ಸುಂದರ ಮಾಲೆಗಳಿಂದ ಕಟ್ಟಲ್ಪಟ್ಟಿರುತ್ತದೆ. ಕೆಲವು ಸಲ ವಧೂವರರ ಸಣ್ಣ ಸಣ್ಣ ಮೂರ್ತಿಗಳನ್ನು ಮಾಡಿ ಅದರ ಮೇಲಿಂಸುವುದೂ ಇದೆ.

ಅಮೇರಿಕದ ಅನೇಕ ನವ ದಂಪತಿಗಳು 'ಹನಿ-ಮೂನ್'ನ ಮೂಲಕ ಸಂತೋಷಪಡುತ್ತಾರೆ. ಆದರೆ ಕೆಲವು ದಂಪತಿಗಳು ಈ ಆನಂದವನ್ನು ರೈಲು ಯಾತ್ರೆಯ, ವಿಮಾನ ಪ್ರಯಾಣಗಳ ಮೂಲಕ ಪಡೆಯುತ್ತಾರೆ. ಆದರೆ ಬಸ್ಸಿನಲ್ಲಿ ಕುಳಿತು ಸುತ್ತಾಡುವುದು ಎಲ್ಲರಿಗೂ ಸಂತೋಷಕರವಾದ ಪದ್ಧತಿ. ವಧುವನ್ನು ತಾಯಿಮನೆಯಿಂದ ಬೀಳ್ಕೊಡುವಾಗ ಸಖಿಕರೂ ಮಿತ್ರರೂ ಅಕ್ಕಿಯನ್ನೆಸೆಯುವರು ಆಕೆಯು ಹೋದ ಬಳಿಕ ಹಿಂದಿನಿಂದ ಹಳೆಯ ಚಪ್ಪಲಿಯೊಂದನ್ನೆಸೆಯುತ್ತಾರೆ ಇದು ಭಾಗ್ಯಶಾಲಿಯಾಗುವ ಸೂಚನೆಯೆಂದು ಪರಿಗಣಿಸಲ್ಪಡುತ್ತದೆ.

ಅಮೇರಿಕದಲ್ಲಿ ಕೆಲವು ದಿನಗಳ ಮೊದಲೇ ವಿವಾಹವನ್ನು ನಿಶ್ಚೈಸುತ್ತಾರೆ. ಕೆಲವು ಸಲ ಒಂದು ವರ್ಷಕ್ಕೆ ಮೊದಲೇ ನಿಶ್ಚೈಸುವುದೂ ಇದೆ. ವಿವಾಹ ನಿರ್ಧಾರದ ಸಂದರ್ಭದಲ್ಲಿ ಕೊಡುವ ಉಂಗುರವು ಹೆಚ್ಚಾಗಿ ವಜ್ರದ್ದಾಗಿರುತ್ತದೆ. ಪ್ರಿಯನು ತನ್ನ ಭಾವೀ ಪತ್ನಿಗೆ ಬಹುಮಾನವಾಗಿ ಒಂದುಂಗುರವನ್ನೀಯುತ್ತಾನೆ. ಪ್ರಿಯೆಯು ತನ್ನ ಎಡಗೈಯ ನಾಲ್ಕನೇ ಬೆರಳಿನಲ್ಲಿದನ್ನು ವಿವಾಹದುಂಗುರವಾಗಿ ಅದನ್ನು ಸಂತೋಷದಿಂದ ಧರಿಸುತ್ತಾಳೆ. ಹೆಚ್ಚಿನ ವಧುಗಳೂ ಮದುವೆಯ ಬಳಿಕ ಎರಡುಂಗುರಗಳನ್ನು ಹೆಚ್ಚಾಗಿ ಇದೇ ಬೆರಳಿನಲ್ಲಿ ಧರಿಸುತ್ತಾರೆ. ಹೆಚ್ಚಿನ ಸ್ತ್ರೀಯರೂ 'ವಿವಾಹದುಂಗುರ'ವನ್ನುಪಯೋಗಿಸುವರು. ಕಳೆದ ೨೫ ವರ್ಷಗಳಿಂದ ವಿವಾಹದುಂಗುರವನ್ನು ಧರಿಸುವವರ ಸಂಖ್ಯೆಯು ತುಂಬಾ ಬೆಳೆದಿದೆ ಆದರೆ ಈ ಕ್ರಮವು ಇನ್ನೂ ಎಲ್ಲಾ ಕಡೆಗಳಲ್ಲಿ ಬಳಕೆಯಲ್ಲಿಲ್ಲ.

ಅಮೇರಿಕದ ಯುವತಿಯರಲ್ಲಿನ ಬಹಳ ಹಿಂದಿನ ರೀತಿ ಪದ್ಧತಿಗಳ ಮೇಲೆ ಹೆಚ್ಚಿನ ಮೋಹ ಉಳಿದಿಲ್ಲ. ನೂತನ ಕ್ರಮಕ್ಕನುಸಾರವಾಗಿ ಮಿತ್ರವೃಂದವು ವಿವಾಹ ಸಂದರ್ಭದಲ್ಲಿ ವಧುವಿಗೆ ಅನೇಕ ರೀತಿಯ ವಸ್ತುಗಳನ್ನು ಬಹುಮಾನವಾಗಿ ಅರ್ಪಿಸುತ್ತದೆ. ತಿಂಡಿ ತಯಾರಿಸುವ ಪಾತ್ರೆ, ವಿದ್ಯುತ್ತಿನ ಒಲೆ, ಚಾ ಬಟ್ಟಲು ಮತ್ತು ಚೂರಿ ಮುಳ್ಳುಗಳನ್ನೂ ಬಹುಮಾನವಾಗಿ ಕೊಡುತ್ತಾರೆ.

ಹೂ ಮತ್ತು ಕ್ರೈಸ್ತ ಗುರುಗಳ ಖರ್ಚನ್ನೆಲ್ಲಾ ಮುಖ್ಯವಾದನ್ನೆಲ್ಲ ವಧುವಿನ ಹೆತ್ತವರು ತೆರಬೇಕಾಗುತ್ತದೆ. ಹೂವಿನ ಖರ್ಚು ವರನ ಕಡೆಯಿಂದ ದೊರೆಯುತ್ತದೆ. ಅವರೇ ವಿವಾಹ ಮಾಡಿಸಿದ ಗುರುಗಳಿಗೂ ದಕ್ಷಿಣೆಯನ್ನೀಯುತ್ತಾರೆ.

ಇತರ ದೇಶಗಳಂತೆಯೇ ಇಲ್ಲಿಯೂ ಸಮವಯಸ್ಕರು ಹುಡುಗಿಯರಿಂದ ಪ್ರಭಾವಿತರಾಗುವಂತೆ ಆಕೆಯ ಹೆತ್ತವರು ಪ್ರಯತ್ನಿಸುತ್ತಾರೆ. ಆದರೆ ಕ್ರಮ ಯಾ ಕಾನೂನುಗಳಿಗನುಸಾರವಾಗಿ ತಂದೆ ತಾಯಿಗಳ ಇಚ್ಛೆಯನ್ನು ಪಾಲಿಸುವದು ಅವಶ್ಯವಿಲ್ಲ. ವರದಕ್ಷಿಣೆಯ ಕ್ರಮವೂ ಅಮೇರಿಕದಲ್ಲಿಲ್ಲ ಇಲ್ಲಿ ವಿವಾಹ ಯೋಗ್ಯವಾದ ಯುವಕನಿಗೆ ತನ್ನ ಇಚ್ಛಾನುಸಾರ, ಹೆತ್ತವರ ಅಭಿಮತವನ್ನು ಅರಿಯದೆ ಮದುವೆಯ ನಿರ್ಣಯವನ್ನು ಮಾಡುವ ಅಧಿಕಾರವಿದೆ.

ವಿವಾಹದ ಆಜ್ಞಾಪತ್ರ.

ವಿವಾಹದಲ್ಲಿ ಸಾಮಾಜಿಕ, ಧಾರ್ಮಿಕ ಎರಡು ತತ್ವಗಳು ಹೊಂದಿಕೊಂಡಿರುವವು. ಇದರಿಂದಾಗಿ ಸರಕಾರದಿಂದೊಂದು ಆಜ್ಞಾ ಪತ್ರವನ್ನು ಪಡೆದುಕೊಳ್ಳಬೇಕಾಗುತ್ತದೆ. ಹಲ ರಾಜ್ಯಗಳ ಭಿನ್ನ ಭಿನ್ನ ಕಾನೂನುಗಳಿಗನುಸಾರ ಕೆಲವು ರಾಜ್ಯಗಳಲ್ಲಿ ಹುಡುಗಿಯ ವಿವಾಹ ಪ್ರಾಯವು ೧೮ ಆದರೆ ಇನ್ನು ಕೆಲವುಗಳಲ್ಲಿ ೨೧ ಈ ಪ್ರಾಯದ ಬಳಿಕ ಹೆತ್ತವರ ಅಭಿಮತ ತಿಳಿಯದೆಯೆ ಆಕೆ ಮದುವೆ ಮಾಡಿಕೊಳ್ಳಬಲ್ಲಳು.

ಕೆಲವು ರಾಜ್ಯಗಳಲ್ಲಿ ಆಜ್ಞಾ ಪತ್ರಕೊಡುವುದಕ್ಕೆ ಮೊದಲು ಆರೋಗ್ಯ ಪರೀಕ್ಷಿಸುವುದಾದರೆ ಕೆಲವುಗಳಲ್ಲಿ ಆಜ್ಞಾ ಪತ್ರಕ್ಕಾಗಿ ನಾಲ್ಕೈದು ದಿನ ನಿರೀಕ್ಷಿಸಬೇಕಾಗುತ್ತದೆ. ಇನ್ನು ಕೆಲವುಗಳಲ್ಲಿ ಕ್ಷಿಪ್ರ ತರದ ಆಜ್ಞಾಪತ್ರ ದೊರೆಯುತ್ತದೆ.

೧೯೪೬ನೇ ಇಸವಿಯಲ್ಲಿ ಅಮೇರಿಕದ ಲ್ಲಾಗ ವಿವಾಹಗಳ ಸಂಖ್ಯೆ ಅತೀ ಹೆಚ್ಚು ೨,೨೯,೮೧,೦೪೫. ೧೯೫೨ರಲ್ಲಿ ೧೮,೧೧,೦೦೦. ಈ ವರ್ಷವೂ ೧೯೪೬ರಂತೆ ಹೆಚ್ಚು ವಿವಾಹಗಳಾಗುವ ಸಂಭವವಿಲ್ಲ.

ಮಳೆಯಿಂದ ಯುದ್ಧ ಇಲ್ಲ.

ಭಾರಿ ಮಳೆಗಳಿಂದ ಇಂಡೋ—ಚೀನಾದಲ್ಲಿ ಕಳೆದ ಹತ್ತು ದಿನಗಳಿಂದ ಯುದ್ಧ ವಾಸ್ತವವಾಗಿ ನಿಂತು ಹೋಗಿದೆ ಎಂದೂ, ಆದರೆ ಸೆಪ್ಟಂಬರ್ ಅಂತ್ಯದ ವೇಳೆಗೆ—ಮಳೆಗಳು ನಿಂತಾಗ—ಆಶ್ಚರ್ಯಕಾರಿ ಆಕ್ರಮಣಗಳನ್ನು ನಡೆಸಲು ಯೋಚಿಸಲಾಗಿದೆಯೆಂದೂ ಇಂಡೋ—ಚೀನಾ ರಾಜ್ಯಗಳ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

'ಈಗ ಮಿಲಿಟರಿ ರಂಗ ಶಾಂತವಾಗಿದೆ' 'ಆದರೆ ಮಳೆ ನಿಂತಾಗ ಹೊಸ ಆಕ್ರಮಣಗಳನ್ನು ನಾವು ನೋಡಬಹುದು' ಎಂದೂ ಅವರು ಹೇಳಿದರು,

ಈಚೆಗೆ ಭರ್ಜರಿಯಾದ ಕೆಲವು ಫ್ರೆಂಚ್ ಸೈನ್ಯಗಳು ಜಯ ಪಡೆದುದರಿಂದ ಇಂಡೋಚೀನಾದಲ್ಲಿರುವ ಎಲ್ಲಾ ಫ್ರೆಂಚ್ ಸೈನ್ಯಗಳೂ ಉತ್ಸಾಹ ಮತ್ತು ಧೈರ್ಯಗಳನ್ನು ಹೊಂದಿರುವುದಾಗಿ ಅವರು ತಿಳಿಸಿದ್ದಾರೆ.

ಕಳೆದ ಗುರುವಾರ ಫ್ರೆಂಚ್ ಮತ್ತು ವಿಯಟ್‌ನಾಂ ಸೈನ್ಯಗಳು ೧೪೧ ಮಂದಿ ದಂಗೆಕಾರರನ್ನು ಸಾಯಿಸಿ, ೪೩ ಮಂದಿಯನ್ನು ಸೆರೆ ಹಿಡಿದವು; ಮತ್ತು ಬೂಯೂಟ್ ಎಂಬಲ್ಲಿ ಶತ್ರುಗಳ ಶಸ್ತ್ರಾಸ್ತ್ರ ಸಂಗ್ರಹಗಳನ್ನು ವಶಪಡಿಸಿಕೊಂಡವು.

ತಾನಾಗಿಯೇ ಕಠಿಣ ಶಿಕ್ಷೆ ಕೇಳಿ ಪಡೆದಳು !

ಚಿನ್ನದ ಸರ ಕದ್ದ ಅಪಾದನೆಯ ಮೇಲೆ ವಿಚಾರಣೆಗೊಳಗಾಗಿದ್ದ ೫೫ ವರ್ಷ ವಯಸ್ಸಿನ ಹೆಂಗಸೊಬ್ಬಳು ಮೊದಲು ಅಪಾದನೆಯನ್ನು ನಿರಾಕರಿಸಿದಳಾದರೂ, ಅನಂತರ ಮೇಜಿಸ್ಟ್ರೇಟರು ಆಕೆ ತಪ್ಪಿತಸ್ಥಳೆಂದು ತೀರ್ಪು ಕೊಟ್ಟಾಗ, ತನಗೆ ಕಠಿಣ ಶಿಕ್ಷೆಯನ್ನೇ ವಿಧಿಸಬೇಕೆಂದು ಕೇಳಿ, ಕಠಿಣ ಶಿಕ್ಷೆ ಪಡೆದಳು.

ಆಕೆ ಮುದುಕಿಯಾದುದರಿಂದ ಅವಳಿಗೆ ಸಾದಾ ಸಜಾ ವಿಧಿಸುವುದಾಗಿ ಮೇಜಿಸ್ಟ್ರೇಟರ ತಿಳಿಸಿದರು. ಆದರೆ ತಾನು ಗಟ್ಟಿಮುಟ್ಟಾಗಿ ಆರೋಗ್ಯವಾಗಿರಬೇಕಾದರೆ, ತನಗೆ ಕೆಲಸವಿರಬೇಕೆಂದೂ ಆದುದರಿಂದ ತನಗೆ ಕಠಿಣ ಶಿಕ್ಷೆಯನ್ನೇ ವಿಧಿಸಬೇಕೆಂದೂ ಆಕೆ ಕೋರಿದಳು. ಮೇಜಿಸ್ಟ್ರೇಟರು ಅವಳ ಕೋರಿಕೆಯಂತೆ ಕಠಿಣ ಶಿಕ್ಷೆಯನ್ನೇ ವಿಧಿಸಿದರು.

* ಆಕಾಶದ ನಕ್ಷತ್ರಗಳು *

ಲೇ:— ಶ್ರೀ ವಿ ಕೆ ಮೂರ್ತಿಸ್ವಾಮಿ. ಎಂ. ಎಸ್ ಸಿ., ಮೈಸೂರು.

ರಾತ್ರಿಯ ಕಾಲದಲ್ಲಿ ಮಿನುಗುತ್ತಾ ಅಂತರಿಕ್ಷದಲ್ಲಿ ಗುರುತು ಮಾಡಲ್ಪಟ್ಟ ಬಿಂದುಗಳೋ ಎನ್ನುವಂತಿರುವ ನಕ್ಷತ್ರಗಳನ್ನು ಎಲ್ಲರೂ ನೋಡಿದ್ದೇವೆ. ಕಣ್ಣಿನಿಂದ ಗುರುತಿಸಲ್ಪಟ್ಟು ಎಣಿಕೆಗೆ ಸಿಕ್ಕುವ ನಕ್ಷತ್ರಗಳ ಸಂಖ್ಯೆ ಸುಮಾರು ೬೦೦೦; ಆದರೆ ದೊಡ್ಡ ದೊಡ್ಡ ದೂರದರ್ಶಕ ಯಂತ್ರಗಳ ಸಹಾಯದಿಂದ ಲಕ್ಷಾಂತರ ನಕ್ಷತ್ರಗಳಿರುವದನ್ನು ನೋಡಬಹುದು. ಸೂರ್ಯನೂ ಒಂದು ಸಾಧಾರಣ ನಕ್ಷತ್ರವೆಂಬುದನ್ನು ನಾವು ಮರೆಯಬಾರದು.

ಈ ನಕ್ಷತ್ರಗಳಿಗೂ ನಮಗೂ ಇರುವ ದೂರವಾದರೂ ಏನು? ಮೊದಲನೆಯದಾಗಿ ತಿಳಿದುಕೊಳ್ಳಬೇಕಾದ ವಿಷಯವೇನೆಂದರೆ, ಎಲ್ಲಾ ನಕ್ಷತ್ರಗಳೂ ನಮ್ಮಿಂದ ಒಂದೇ ದೂರದಲ್ಲಿಲ್ಲ. ಕಣ್ಣಿಗೆ ಅವೆಲ್ಲವೂ ಒಂದು ಗೋಳದ ಮೇಲ್ಮೈ ಮೇಲೆ ಇಟ್ಟಂತೆ ಕಾಣುವವು. ಆದರೆ ನಿಜವಾಗಿಯೂ ನಕ್ಷತ್ರಗಳು ಅಂತರಿಕ್ಷದಲ್ಲಿ ವಿವಿಧ ಭಾಗಗಳಲ್ಲಿ ಮತ್ತು ನಮ್ಮಿಂದ ವಿವಿಧ ದೂರಗಳಲ್ಲಿ ಇವೆ. ನಮಗೆ ಅತ್ಯಂತ ಹತ್ತಿರದಲ್ಲಿರುವ ನಕ್ಷತ್ರದ (ಸೂರ್ಯನನ್ನು ಬಿಟ್ಟು) ದೂರವು ಅನೇಕ ಕೋಟಿ ಮೈಲುಗಳು. ಇಂತಹ ಅದ್ಭುತ ದೂರಗಳನ್ನು ನಾವು ಸಾಮಾನ್ಯವಾಗಿ ಉಪಯೋಗಿಸುವ ಫರ್ಲಾಂಗು ಮೈಲು, ೪೦೦೦೦ ಮೈಲು ಇತ್ಯಾದಿ ರೂಪದಲ್ಲಿ ಬರೆಯುವದು ಕಠಿಣವಾಗುವದು ಮಾತ್ರವಲ್ಲದೆ, ಮನಸ್ಸಿಗೆ ನಿಜವಾದ ಅಭಿಪ್ರಾಯವೂ ಬರುವದಿಲ್ಲ. ಆದುದರಿಂದ ನಕ್ಷತ್ರಗಳ ದೂರಗಳನ್ನಳೆಯಲು ಖಗೋಳ ಶಾಸ್ತ್ರಜ್ಞರು ಕೆಳಗೆ ವಿವರಿಸಿರುವ ಒಂದು ರೀತಿಯನ್ನಿಟ್ಟುಕೊಂಡಿದ್ದಾರೆ.

ಹಲವು ವರ್ಷಗಳ ಹಿಂದೆ ಬೆಳಕಿಗೆ ವೇಗವಿದೆಯೆಂಬುದು ಮನುಷ್ಯನಿಗೆ ತಿಳಿದಿರಲಿಲ್ಲ. ೧೬೭೫ರಲ್ಲಿ ರೋಮರ್ ಎಂಬಾತನು ಗ್ರಹಗಳ ಚಲನಗಳನ್ನು ವೀಕ್ಷಿಸುತ್ತಿರುವಾಗ್ಗೆ ಬೆಳಕು ಒಂದು ವೇಗದಿಂದ ಚಲಿಸುತ್ತಿದೆಯೆಂದು ಗೊತ್ತಾಯಿತು. ಈಚೆಗೆ ನಡೆಸಿರುವ ಪ್ರಯೋಗಗಳಿಂದ ಬೆಳಕು ಒಂದು ಸೆಕೆಂಡಿಗೆ ಸುಮಾರು ಒಂದು ಲಕ್ಷದ ಎಂಭತ್ತಾರು ಸಾವಿರ ಮೈಲಿಗಳು ಚಲಿಸುವದೆಂದು ತಿಳಿದು ಬಂದಿದೆ. ಈ ವೇಗದಲ್ಲಿ ಚಲಿಸುತ್ತಾ ಬೆಳಕು ೧ ವರ್ಷ ಹೋಗುವ ದೂರಕ್ಕೆ ೧ ಜ್ಯೋತಿರ್ವರ್ಷ ಎಂಬುದಾಗಿ ಕರೆಯುತ್ತಾರೆ. ನಕ್ಷತ್ರಗಳಿಗೂ ನಮಗೂ ಇರುವ ದೂರಗಳನ್ನು ಇಂತಹ ಜ್ಯೋತಿರ್ವರ್ಷಗಳಲ್ಲಿ ಅಳೆಯುವದು ಅನುಕೂಲವಾಗಿದೆ. ಸೂರ್ಯನನ್ನು ಬಿಟ್ಟು ನಮಗೆ ಅತ್ಯಂತ ಹತ್ತಿರವಾಗಿರುವ ನಕ್ಷತ್ರದ ದೂರ ೪.೩ ಜ್ಯೋತಿರ್ವರ್ಷಗಳು.

ಉರಿಯುತ್ತಿರುವ ಕೆಂಡ

ಪ್ರತಿಯೊಂದು ನಕ್ಷತ್ರವೂ ವಿಶೇಷ ಉಷ್ಣಾಂಶವನ್ನು ಹೊಂದಿ ಉರಿಯುತ್ತಿರುವ ಒಂದು ಕೆಂಡ. ತನ್ನಲ್ಲಿರುವ ಅದ್ಭುತ ಶಾಖದಿಂದ ನಕ್ಷತ್ರವು ಪ್ರಕಾಶಮಾನವಾಗಿ ಬೆಳಕನ್ನು ಕೊಡುತ್ತದೆ. ಎಲ್ಲಾ ನಕ್ಷತ್ರಗಳ ಪ್ರಕಾಶವೂ ಒಂದೇ ಸಮನಾಗಿಲ್ಲ. ನಕ್ಷತ್ರಗಳು ಎಷ್ಟು ಪ್ರಕಾಶಮಾನವಾಗಿವೆ ಎಂಬುದನ್ನು ಆಧಾರವಾಗಿಟ್ಟುಕೊಂಡು ಖಗೋಳ ಶಾಸ್ತ್ರಜ್ಞರು ಇವುಗಳನ್ನು ಬೇರೆ ಬೇರೆ ವಂಗಡಗಳಾಗಿ ವಿಂಗಡಿಸಿದ್ದಾರೆ. ಸಹಸ್ರಾರು ವರ್ಷಗಳ ಹಿಂದೆ ಜನರು ಅಂತರಿಕ್ಷದಲ್ಲಿ ಗುಂಪು ಗುಂಪಾಗಿ ಕಾಣಬರುವ ನಕ್ಷತ್ರಗಳನ್ನು ಅವು ಹೋಲುವ ಪ್ರಾಣಿ ಮುಂತಾದ ಹೆಸರುಗಳನ್ನು ಕೊಟ್ಟು ಮೇಷ, ವೃಷಭ ಮುಂತಾದ ನಕ್ಷತ್ರ ರಾಶಿಗಳನ್ನು ಮಾಡಿದ್ದಾರೆ.

ಭೂಮಿಯ ದೈನಂದಿನ ಚಲನೆಯಿಂದ ನಕ್ಷತ್ರಗಳು ಪೂರ್ವದಿಂದ ಪಶ್ಚಿಮಕ್ಕೆ ಹೋದಂತೆ ಕಾಣುತ್ತವೆಯೇ ಹೊರತು ಇವುಗಳಿಗೆ ಬೇರೆ ಇನ್ನು ಯಾವ ತರಹದ ಚಲನೆಯೂ ಇರುವಂತೆ ಕಾಣಿಸುವುದಿಲ್ಲ. ಆದರೆ ಅನೇಕ ವರ್ಷಗಳ ಕಾಲ ನಕ್ಷತ್ರಗಳ ಪರಸ್ಪರ ಸ್ಥಾನಗಳನ್ನು ಪರೀಕ್ಷಿಸಿ ಖಗೋಳ ಶಾಸ್ತ್ರಜ್ಞರು ನಕ್ಷತ್ರಗಳೂ ಚಲಿಸುತ್ತವೆ ಎಂಬುದಾಗಿ ತಿಳಿಸುತ್ತಾರೆ. ನಕ್ಷತ್ರಗಳಿಗೂ ನಮಗೂ ಇರುವ ಅಗಾಧ ದೂರದಿಂದ ಅವುಗಳ ಸ್ಥಾನಪಲ್ಲಟದ ಅರಿವು ನಮಗೆ ಬರುವುದು ಕಷ್ಟವಾಗಿದೆ

ಮೋಡವಿಲ್ಲದಿರುವ ಮತ್ತು ಕತ್ತಲೆಯಾಗಿರುವ ರಾತ್ರಿ ಕಾಲದಲ್ಲಿ ನಾವು ಅಂತರಿಕ್ಷವನ್ನು ಗಮನಿಸಿ ನೋಡಿದರೆ ಅಂತರಿಕ್ಷದ ಉದ್ದಕ್ಕೂ ಕ್ಷಿತಿಜದ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹರಡಿಕೊಂಡು ಹೋಗಿರುವ ವೃತ್ತಾಕಾರದ ಬೆಳಕು ಕಾಣಬರುವುದು. ಇದನ್ನು ಕ್ಷೀರಪಥ ಅಥವಾ ಆಕಾಶ ಗಂಗೆ (Milky way) ಎಂದು ಕರೆಯುತ್ತಾರೆ. ಇತ್ತೀಚೆಗೆ ನಡೆಸಿದ ಪ್ರಯೋಗಗಳಿಂದ ಈ ಕ್ಷೀರಪಥವು, ಅಗಾಧವಾಗಿ ಕಾಣುವ ಮಾರ್ಗದಲ್ಲಿ ಅಸಂಖ್ಯಾತ ನಕ್ಷತ್ರಗಳು ಬಹು ಒತ್ತಾಗಿರುವುದರಿಂದ ಅವುಗಳ ಬೆಳಕು ಹೀಗೆ ಕಾಣುವುದೆಂಬುದಾಗಿ ಕಂಡು ಹಿಡಿದಿದ್ದಾರೆ. ಬರಿಯ ಕಣ್ಣಿನಿಂದ ಈ ನಕ್ಷತ್ರಗಳನ್ನು ಬೇರೆ ಬೇರೆಯಾಗಿ ನೋಡಲು ಸಾಧ್ಯವಿಲ್ಲ.

ಪ್ರಾಚೀನ ಭಾರತದಲ್ಲಿ ಖಗೋಳ ಶಾಸ್ತ್ರ.

ಇದು ವರೆಗೆ ಹೇಳಿರುವ ಖಗೋಳ ಶಾಸ್ತ್ರದ ವೈಚಿತ್ರ್ಯಗಳೆಲ್ಲವನ್ನೂ ನವೀನ ಕಾಲದ ಶಾಸ್ತ್ರಜ್ಞರು ನಾನಾ ಸೂಕ್ಷ್ಮವಾದ ಉಪಕರಣಗಳಿಂದ ಪರಿಶೀಲಿಸಿದ್ದಾರೆ ಆದರೆ ಇಂತಹ ಯಾವ ಉಪಕರಣಗಳೂ ಇಲ್ಲದ ಸಾವಿರಾರು ವರ್ಷಗಳ ಹಿಂದೆ ಭಾರತದಲ್ಲಿ ಖಗೋಳ ಶಾಸ್ತ್ರವು ಬಹು ಮಟ್ಟಿಗೆ ಅಭಿವೃದ್ಧಿಯಾಗಿತ್ತು. ಆಗಿನ ಕಾಲದ ನಮ್ಮ ದೇಶದ ಖಗೋಳ ಶಾಸ್ತ್ರಜ್ಞರು ಸೂರ್ಯ, ಚಂದ್ರಾದಿಗಳ ಚಲನಗಳನ್ನು ವೀಕ್ಷಿಸಿ ತಮ್ಮ ಗಣಿತ ಶಾಸ್ತ್ರದ ಜ್ಞಾನದ ಸಹಾಯದಿಂದ ಸೂರ್ಯ, ಚಂದ್ರ ಮತ್ತು ಗ್ರಹಗಳು ಚಲಿಸುವ ರೀತಿಯನ್ನೂ ಗ್ರಹಣಗಳಿಗೆ ಸಂಬಂಧಿಸಿದ ವಿಷಯಗಳನ್ನೂ ಕರಾರುವಾಕ್ಕಾಗಿ ತಿಳಿದುಕೊಂಡಿದ್ದರು. ಆಗಿನ ಕಾಲದಲ್ಲಿ ಅಭ್ಯಾಸ ಮಾಡಿದ ಖಗೋಳ ಶಾಸ್ತ್ರದ ಜ್ಞಾನದಿಂದ ಈಗ ಭಾರತದ ವಿವಿಧ ಭಾಗಗಳಲ್ಲಿ ಪಂಚಾಂಗಗಳನ್ನು ಬರೆಯುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ.

ಭಾರತದಲ್ಲಿ ಬಹು ಪ್ರಾಚೀನ ಕಾಲದಲ್ಲಿ 'ಸೂರ್ಯ ಸಿದ್ಧಾಂತ' ಎಂಬುದು ಖಗೋಳ ಶಾಸ್ತ್ರದ ಮೇಲೆ ಬರೆಯಲ್ಪಟ್ಟ ಒಂದು ಪ್ರಮುಖ ಗ್ರಂಥ. ಇದು ಸಂಸ್ಕೃತದಲ್ಲಿದೆ. ಸೂರ್ಯ ಚಂದ್ರಾದಿಗಳ ಸ್ಥಾನಗಳನ್ನು ಗೊತ್ತುಮಾಡಲು ಬೇಕಾದ ನಿಯಮಗಳು ಇದರಲ್ಲಿ ಶ್ಲೋಕಗಳ ರೂಪದಲ್ಲಿ ಕೊಡಲ್ಪಟ್ಟಿವೆ. ಇದಾದ ಬಹು ಕಾಲದ ನಂತರ ಭಾಸ್ಕರರಿಂದ ಬರೆಯಲ್ಪಟ್ಟ 'ಸಿದ್ಧಾಂತ ಶಿರೋಮಣಿ' ಎಂಬ ಗ್ರಂಥದಲ್ಲಿ ಗ್ರಹಣಗಳ ವಿಚಾರವು ಸವಿಸ್ತಾರವಾಗಿ ತಿಳಿಸಲ್ಪಟ್ಟಿದೆ.

ಆರ್ಯಭಟ್ಟ (ಕ್ರಿಸ್ತಶಕ ೪೭೬,) ಬ್ರಹ್ಮಗುಪ್ತ (ಕ್ರಿ. ಶ. ೬೨೮) ಮತ್ತು ಭಾಸ್ಕರ (ಕ್ರಿ. ಶ. ೧೧೫೦) ಇವರುಗಳು ಇತ್ತೀಚಿನ ಭಾರತದ ಪ್ರಸಿದ್ಧ ಖಗೋಳ ಶಾಸ್ತ್ರಜ್ಞರಲ್ಲಿ ಕೆಲವರು.

ಮುಂದೇನು ?

ಇದುವರೆಗೂ ಹೇಳಿರುವ ಕೆಲವೇ ಖಗೋಳ ಶಾಸ್ತ್ರದ ವಿಷಯಗಳನ್ನು ನಿಧಾನವಾಗಿ ಯೋಚಿಸಿದ್ದೇ ಆದರೆ ಪ್ರಪಂಚ ಸೃಷ್ಟಿ ಎಷ್ಟು ವಿಚಿತ್ರವಾದದು ಎಂಬುದು ಎಲ್ಲರಿಗೂ ತಿಳಿಯುವುದು. ಸೂರ್ಯನನ್ನು ಕೇಂದ್ರವಾಗಿಟ್ಟುಕೊಂಡು ಇದರ ಸುತ್ತಲೂ ಸುತ್ತುವ ಗ್ರಹಗಳು, ಗ್ರಹಗಳ ಸುತ್ತಲೂ ಸುತ್ತುವ ಉಪಗ್ರಹಗಳು, ಸೌರವ್ಯೂಹದಲ್ಲಿ ಆಗಾಗ್ಗೆ ಕಂಡು ಬರುವ ಉಲ್ಕಾಪಾತ ಮತ್ತು ಧೂಮಕೇತು ಮುಂತಾದುವು ನಮಗೆ ಬಹಳ ಹತ್ತಿರದಲ್ಲಿ ಕಾಣಬರುವ ದೃಶ್ಯಗಳೆಂದು ಹೇಳಬಹುದು. ಬರಿಯ ಕಣ್ಣಿಗೆ ಕಾಣಬರುವ ದೇವಯಾನಿ ಎಂಬ ನಕ್ಷತ್ರ ಪುಂಜವು ೮,೫೦,೦೦೦ ಜ್ಯೋತಿರ್ವರ್ಷಗಳ ದೂರದಲ್ಲಿದೆ. (ಎಂದರೆ ೫೮ರ ಮುಂದೆ ೧೭ ಸೊನ್ನೆಗಳನ್ನು ಹಾಕಿದರೆ ಆಗುವಷ್ಟು ಮೈಲಿಗಳು) ಹೀಗಿರುವಾಗ ನವೀನ ಕಾಲದ ಅತ್ಯದ್ಭುತ ದೂರದರ್ಶಕ ಯಂತ್ರಗಳ ಸಹಾಯದಿಂದ ನಾವು ಎಷ್ಟು ದೂರದ ವರೆಗೆ ನೋಡಲಾಗುವುದೆಂಬುದನ್ನು ವರ್ಣಿಸಲು ಸಾಧ್ಯವಿಲ್ಲ. ಹೀಗಿರುವಲ್ಲಿ ನಾವೆಲ್ಲರೂ ಕಲ್ಪಿಸಿಕೊಳ್ಳುವ ವಿಶ್ವವು ಅಂತ್ಯವನ್ನು ಹೊಂದಿರುವುದೇ ಅಥವಾ ಅನಂತವಾದದ್ದೇ ಆದರೆ ಖಗೋಳ ಶಾಸ್ತ್ರದ ಲೆಕ್ಕಾಚಾರಕ್ಕೆ ಸಿಕ್ಕಿರುವ ದೂರಕ್ಕಿಂತಲೂ ಆಚೆ ಮತ್ತೇನಿದೆ? ಇಂತಹ ಅಖಂಡ ವಿಶ್ವದಲ್ಲಿ ಕೇವಲ ಒಂದು ಬಿಂದುವಿನಂತಿರುವ ಈ ನಮ್ಮ ಭೂಗ್ರಹದ ಮೇಲೆ ವಾಸಿಸುವ ಪ್ರಾಣಿಗಳಂತೆ ವಿಶ್ವದ ಇನ್ನಾವ ಭಾಗದಲ್ಲಿಯಾದರೂ ಜೀವಿಗಳಿರುವವೇ? ಇದ್ದಲ್ಲಿ ಅವುಗಳ ಜೀವನ ರೀತಿ ಏನು ? ಮುಂತಾದ ಪ್ರಶ್ನೆಗಳು ಇನ್ನೂ ಖಗೋಳ ಶಾಸ್ತ್ರಜ್ಞರ ಮುಂದಿವೆ. ಭಗವಂತನ ಸೃಷ್ಟಿ ಅದ್ಭುತವೂ ರಹಸ್ಯಮಯವೂ ಆದುದು.

'ಚೇತನಾ.'

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ)

ಅಧಿಕೃತ ಶೇರು ಭಂಡವಾಳ	ರೂ.	10,00 000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು ...	,,	17,000
ಠೇವಣಾತಿ	,,	8,86 000

ವಿವಿಧ ಠೇವಣಾತಿಯ ಬಡ್ಡಿಯ ದರಗಳು.—

ಛಾಲ್ತಿ ಠೇವಣಾತಿ ಶೇಕಡ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ. ಪ್ರೆಸಿಡೆಂಟ್ & ಖಜಾನ್ಚಿ.

ಶನಿವಾರಸಂತೆಗೆ 'ಕೊಡಗು' ಏಜೆಂಟರು, ಶ್ರೀ ಎಸ್. ಎನ್. ಸಿದ್ದಪ್ಪನವರು

ನಾವು ಜಪಾನಿನಿಂದ ಕಲಿಯಬೇಕಾದ ಪಾಠ.

ಕೈಗಾರಿಕಾ ಪ್ರಗತಿಯ ಗುಟ್ಟು.

— ಲೇಖಾಂಕ ೨ —

ಮೂಲ ಲೇಖಕ:—ಶ್ರೀ ಜಮುನಲಾಲ್.

ಪಾಳೆಯಗಾರರ ಹಾಗೂ ಪ್ರತಿಗಾಮಿಗಳ ಆಡಳಿತದಿಂದ ಬಿಡುಗಡೆ ಹೊಂದಿ ಮೂರು ಶತಮಾನಗಳಿಂದ ಜಪಾನು ತನ್ನ ಅರಸರ ಕೃಪಾಶ್ರಯದಲ್ಲಿ ಯೋಗ್ಯ ಆಡಳಿತವನ್ನು ಅಳವಡಿಸಿಕೊಂಡಿದೆ. ಈ ಅವಧಿಯಲ್ಲಿ ಜಪಾನರ ಕೈಗಾರಿಕೆಯು ಬಹುಮಟ್ಟಿಗೆ ಮುಂದರಿದು ಜಗತ್ತಿನ ಪ್ರಾಮುಖ್ಯ ಕೈಗಾರಿಕಾ ರಾಷ್ಟ್ರಗಳಿಗೂ ಎದುರಾಳಾಗಿ ತುಡ್ಡು ಹೊಡೆದು ಎದುನಿಂತಿದೆ. ಕೇವಲ ಬ್ರಿಟಿಷರ ಕಣ್ಣಿನಿಂದಲೇ ನೋಡುತ್ತಿದ್ದ ಭಾರತೀಯರಾದ ನಾವು ಜಪಾನಿನ ಪ್ರಗತಿಯನ್ನು, ಘನತೆಯನ್ನು ಅರಿತಿರುವದಿಲ್ಲ. ಜಪಾನು ದ್ವಿತೀಯ ಯುದ್ಧದಲ್ಲಿ ವಿಪರೀತ ನಷ್ಟಕ್ಕೊಳಗಾಗಿ ಪರಮಾಣು ಬಾಂಬಿಗೂ ತುತ್ತಾದರೂ ಕೂಡ ಅದರ ಕೈಗಾರಿಕೆ ಪುನಹ ಅಭಿವೃದ್ಧಿಗೊಂಡು ದ್ರುತಗತಿಯಿಂದ ಮುಂದೆ ಸಾಗುತ್ತಿದೆ. ಜಪಾನಿನ ಕೈಗಾರಿಕಾ ಪ್ರಗತಿಗೆ ಅಲ್ಲಿಯ ಜನರ ಕೌಶಲ್ಯ ಮತ್ತು ಜಾಣ್ಮೆ ಹಾಗೂ ಅಲ್ಲಿಯ ಪ್ರಕೃತಿಯ ನೆರವು ಇವೇ ಪ್ರಾಮುಖ್ಯ ಕಾರಣಗಳಾಗಿವೆ.

ಪ್ರಾಕೃತಿಕ ವೈಭವ

ಜಪಾನಿನ ಹವಾಗುಣವು ಕೈಗಾರಿಕೆಗೆ ಆದರ್ಶವಾದುದು. ಹಿಂದೂದೇಶದೊಡನೆ ತುಲನೆ ಮಾಡಿದರೆ ಇಲ್ಲಿ ಬೇಸಿಗೆ ಧೀರ್ಘವಾದುದು ವರ್ಷದ ೮ ತಿಂಗಳಿಂದರೂ ಸಲ್ಲುವದು. ಆದರೆ ಜಪಾನಿನಲ್ಲಿ ಈ ರೀತಿ ವಿಷಮ ಹವಾಗುಣವಿಲ್ಲ. ಇಡೀ ಜಪಾನು ಒಂದು ಸುಂದರ ಉದ್ಯಾನವನದಂತಿದೆ. ಒಂದು ಗಂಟೆಯ ಪ್ರಯಾಣದಿಂದ ಅತೀ ಆಧುನಿಕ ನಗರದಿಂದ ಅತೀ ಸುಂದರ ಹಾಗೂ ಶಾಂತಿಯುತ ನಿಸರ್ಗದ ತವರೂರನ್ನು ಸೇರಬಹುದು. ನಾವು ಹಿಂದೂದೇಶದವರು ಕಾಶ್ಮೀರವು ಸುಂದರ ದೇಶವೆನ್ನುವೆವು. ಆದರೆ ಇಡೀ ಜಪಾನು ಕಾಶ್ಮೀರದಂತಿದೆ.

ಜಪಾನು ಬೆಟ್ಟಗುಡ್ಡಗಳ ದೇಶ. ಉತ್ತಮ ಮಳೆ, ಆದರ್ಶ ಹವಾಗುಣದಿಂದ ಇಡೀ ಜಪಾನಿನಲ್ಲಿ ಕಾಡು ಮೊದಲಾದ ಪ್ರಾಕೃತಿಕ ಸಂಪತ್ತು ತುಂಬಿದೆ. ತುಂಬಾ ಹೊಳೆಗಳಿದ್ದು ಅವೆಲ್ಲವೂ ನೀರಾವರಿಗೂ ವಹಿವಾಟಿಗೂ ಸಹಾಯಕವಾಗಿವೆ. ಜಪಾನು ಜ್ವಾಲಾಮುಖಿಗಳ ರಾಜ್ಯವಾಗಿದ್ದರೂ ಈ ಜ್ವಾಲಾ ಪರ್ವತಗಳು ಅದಕ್ಕೆ ಅಪೂರ್ವ ಸೌಂದರ್ಯವನ್ನು ಕೊಟ್ಟಿವೆ.

ಬೆಟ್ಟಗಳು, ಕಣಿವೆಗಳು, ಹೊಳೆಗಳು, ಜಲಪಾತಗಳು: ಸುಂದರ ಸಮುದ್ರ ಕರಾವಳಿಗಳು ಈ ಸುಂದರ ಹಾಗೂ ಅತ್ಯದ್ಭುತ ಪ್ರಾಕೃತಿಕ ಸೌಭಾಗ್ಯಗಳ ಪರಿಣಾಮ ಅಲ್ಲಿಯ ಜನರ ಸ್ವಭಾವದ ಮೇಲೂ ಆಗಿದೆ. ಜಪಾನಿನ ಸಂಸ್ಕೃತಿ, ನೀತಿ, ಪರಂಪರೆ, ತತ್ವ ಸಿದ್ಧಾಂತಗಳು ಈ ನೈಸರ್ಗಿಕ ವಾತಾವರಣವನ್ನೇ ಹೊಂದಿಕೊಂಡಿವೆ.

ಜನರ ಸ್ವಭಾವ

ಜಪಾನಿನ ಜನತೆಯು ನೋಮೂರಿಗಳು. ತಮ್ಮ ಕಸಬಿನ ಗೌರವವನ್ನು ತಮ್ಮ ಜೀವಕ್ಕಿಂತಲೂ ಹೆಚ್ಚಾಗಿ ಭಾವಿಸುತ್ತಾರೆ ತಮ್ಮ ಕುಲದ ಗೌರವ, ದೇಶದ ಮೇಲಿನ ಪ್ರೇಮ ಹಾಗೂ ತಮ್ಮ ಕಸಬಿನ ಹಿರಿಮೆಗಾಗಿ ಪ್ರಾಣ ಬಿಡಲೂ ಅವರು ಸಿದ್ಧರು. ಇದಕ್ಕೆ ಉದಾಹರಣೆಯನ್ನು ಇಲ್ಲಿ ಕೊಡಲಾಗುವದು.

ನಾಟಕಗಳಲ್ಲಿ ವೇಷಧಾರಿಗಳಿಗೆ ಮುಖವಾಡಗಳನ್ನು ರಚಿಸುವ ಗಂಗೊರೋ ಎಂಬವನಿದ್ದನು. ಇತರ ಕಲಾವಿದರಂತೆ ಆತನು ಭಾವಜೀವಿ. ಆತನಿಗೆ ಬಡತನ ಬಂದಿದ್ದರೂ ಕೂಡ ಮಾರಾಟ ಹಾಗೂ ದುಡ್ಡುಗಳಿಸುವ ದೃಷ್ಟಿಯಿಂದ ಸಿಕ್ಕಿದ ಹಾಗೆ ಮುಖವಾಡಗಳನ್ನು ತಯಾರಿಸುತ್ತಿರಲಿಲ್ಲ. ಜಪಾನಿನ ದೀಪೋತ್ಸವದ ಕಾಲದ ನಾಟಕಕ್ಕೆ ಪ್ರಸಿದ್ಧ ನಟನೊಬ್ಬನಿಗೆ ಒಂದು ಮುಖವಾಡ ಬೇಕಾಯಿತು. ಅದನ್ನು ಬಹು ಎಚ್ಚರಿಕೆಯಿಂದ ನಟನು ವಹಿಸುವ ಪಾತ್ರವಾದ ಪಿಶಾಚಿಯ ಈರ್ಷ್ಯೆ, ಕ್ರೋಧ ಮೊದಲಾದ ಸ್ವಭಾವವು ಸ್ಪಷ್ಟವಾಗಿ ತೋರುವಂತೆ ಮುಖವಾಡವನ್ನು ತಯಾರಿಸಿಕೊಟ್ಟನು. ಆಗ ಆ ನಟನು ಅದನ್ನು ನೋಡಿ ಮೆಚ್ಚಿದರೂ, "ಹುಚ್ಚಿನ ಆಸೆಯಿಂದ ಈ ಮುಖವಾಡವನ್ನು ನೀನು ಅತುರದಲ್ಲಿ ಮಾಡಲಿಲ್ಲವೇ?" ಎಂದು ಕೇಳಿದನು. ಇದರಿಂದ ತನ್ನ ಕಸಬಿಗೆ ಅಗೌರವವಾಯಿತೆಂದು ಗಂಗೊರೋ ಅಲ್ಲಿಯೇ ಆ ಮುಖವಾಡವನ್ನು ಚುಚ್ಚು ನೂರು ಮಾಡಿ ಹರಕಿರಿ (ಆತ್ಮಹತ್ಯೆ) ಮಾಡಿಕೊಂಡನು. ತನ್ನ ಕೆಲಸದ ಯಾವ ಊಳಿಯಿಂದ ಆತ್ಮಹತ್ಯೆ ಮಾಡಿಕೊಂಡನೋ ಅದು ಕ್ರಮಶಃ ಆತನ ಮಗ ತೆನ್ನುಸುಕೋವಿನ ವಶಕ್ಕೆ ಬಂತು. ಆ ಉಳಿಯ ಕತೆಯನ್ನು ತಾಯಿಯು ಆತನಿಗೆ ಹೇಳಿ ಅದರ ಗೌರವವನ್ನು ಕಾಪಾಡುವದು ಆತನ ಕೈಯಲ್ಲಿದೆಯೆಂದಳು. ಜೆನ್ನುಸುಕೋ ತನ್ನ ತಂದೆಯ ಕಸಬನ್ನು ಮುಂದುವರಿಸಿದನು. ೧೨ ವರ್ಷಗಳಲ್ಲಿ ಆತನ ಕೀರ್ತಿ ಇಡೀ ಜಪಾನಿನಲ್ಲಿ ತುಂಬಿತು. ಬುದ್ಧ ದೇವಾಲಯ ಒಂದಕ್ಕೆ ಯಮನ ಮುಖ ಚಿತ್ರವನ್ನು ಆತನು ಬಿಡಿಸಿ ಕೊಟ್ಟನು. ಇದನ್ನು ನೋಡಿ ಜಪಾನಿನ ಅರಸನೂ ಕೂಡ ಆತನ ಚಿತ್ರ ಕೌಶಲ್ಯದಿಂದ ವಿಸ್ಮಿತನಾದನು. ಒಂದು ದಿನ ಆತನ ತಂದೆಯನ್ನು ಅವಮಾನಿಸಿದ ನಟನಿಗೆ ಅದೇ ಪಿಶಾಚಿಯ ಮುಖವಾಡ ಬೇಕಾಗಿ ಈತನಲ್ಲಿಗೆ ಬಂದನು. ಜೆನ್ನೋಸುಕೋ ತಂದೆಯ ಉಳಿಯಿಂದಲೇ ಕೆಲಸ ಪ್ರಾರಂಭಿಸಿದನು. ಅದು ಪೂರ್ತಿಯಾದ ನಂತರ ತಂದೆಯ ಸಮಾಧಿಯ ಮುಂದಿಟ್ಟು ಪ್ರಾರ್ಥಿಸಿ ಅದನ್ನು ನಟನಿಗೆ ಕಳುಹಿಸಿದನು. ಅದರ ಕಲಾ ವೈಭವದಿಂದ ನಟನಿಗೆ ತುಂಬಾ ಸಂತೋಷವಾಯಿತು. ನಾಟಕ ಮುಗಿದ ನಂತರ ಆ ಮುಖವಾಡವನ್ನು ತೆಗೆಯಲು ಪ್ರಯತ್ನಿಸಿದಾಗ ಅದು ಆತನ ಮುಖದಲ್ಲಿ ಅಂಟಿ ಆತನ ರಕ್ತಗತವಾಗಿತ್ತು! ತಾತ್ಪರ್ಯವೇದರೆ ಆ ಮುಖವಾಡದಲ್ಲಿ ಆತನ ಗುಣ ನಡತೆ, ಕ್ರೌರ್ಯ ಸರ್ವವೂ ಚಿತ್ರಿತವಾಗಿ ಆತನ ಶರೀರದ ಒಂದು ಭಾಗದಂತಿತ್ತು! ನಟನು ಕಲಾವಿದನ ಮುಂದೆ ನಿಂತು ಆತನ ಹಿರಿಮೆಯನ್ನು ಹೊಗಳಿದನು. ತನ್ನ ತಂದೆಯ ಕಲೆಯ ಗೌರವವನ್ನು ಉಳಿಸಿದ ಮಗನು ಸಂತುಷ್ಟನಾದನು.

ಈ ರೀತಿ ಜಪಾನರು ತಮ್ಮ ಉದ್ಯಮದ ಬಗ್ಗೆ ಪ್ರೀತಿ, ನಿಷ್ಠೆ ಹಾಗೂ ಗೌರವ ಉಳ್ಳವರು. ಮೇಲಿನ ರೀತಿಯ ನೂರಾರು ಉದಾಹರಣೆಗಳನ್ನು ಕೊಡಬಹುದು. ಆದರೆ ಇದು ಸ್ಥಳವಲ್ಲ.

ಸರ್ವಶ್ರೇಷ್ಠ ಸುಶಿಕ್ಷಿತ ಕೆಲಸಗಾರರು

ಜಪಾನರು ಕೇವಲ ಇತರರನ್ನು ಅನುಕರಿಸುವವರು. ಅವರಲ್ಲಿ ಸ್ವಂತ ಯೋಚಿಸುವ ಶಕ್ತಿ ಇಲ್ಲ. ಅವರಿಂದ ಕಲಿಯಲು ನಮಗೇನೂ ಇಲ್ಲವೆಂಬ ರೀತಿಯ ಪರದೇಶಿಯರ ಮಾತಿನಿಂದಲೇ ತೃಪ್ತರಾಗಿ ಭಾರತೀಯರು ಈ ವರೆಗೆ ಇದ್ದರು. ಆದರೆ ಸ್ವತಃ ಜಪಾನನ್ನು ನೋಡಿ ಅಲ್ಲಿಯ ಪ್ರಗತಿಯ ಗುಟ್ಟನ್ನರಿತವರು ಆ ಮಾತುಗಳನ್ನು ಹೇಳುವದಿಲ್ಲ. ಇಡೀ ಜಗತ್ತಿನಲ್ಲಿ ಜಪಾನಿನ ಕೆಲಸಗಾರರನ್ನು, ಚತುರರು ಮತ್ತು ಕುಶಲ ಬುದ್ಧಿಯವರು ಬೇರಿಲ್ಲ. ಉದಾಹರಣೆಗೆ ಹೇಳುವದಾದರೆ ಜಪಾನಿನಲ್ಲಿ ಉಪಯೋಗಿಸುವ ರೈಲ್ವೆ ಇಂಜಿನುಗಳನ್ನು ಪ್ರತಿ ಮೂರು ವರ್ಷಕ್ಕೊಮ್ಮೆ "ಓವರ್ ಆಯಿಲ್" ಪುನರ್ಘಟಿಸುತ್ತಾರೆ. ಈ ಪುನರ್ನಿರ್ಮಿತಿಯು ಇಪ್ಪತ್ತು ವರ್ಷಗಳ ಹಿಂದೆ ಮೂವತ್ತು ದಿನಗಳ ಅವಧಿಯನ್ನು ತೆಗೆದುಕೊಳ್ಳುತ್ತಿತ್ತು. ಆದರೆ ಈಗ ಜಪಾನಿನ ಕುಶಲ ಕೆಲಸಗಾರರು ಐದು ದಿನಗಳಲ್ಲಿ ಮಾಡುತ್ತಾರೆ. ಇದೇ ಕೆಲಸವನ್ನು ಮಾಡಲು ಅಮೇರಿಕವು ೧೪ ದಿನ ತೆಗೆದು ಕೊಳ್ಳುತ್ತದೆ. ಇಂಗ್ಲೆಂಡ್ ಮತ್ತು ಜರ್ಮನಿಗಳು ನಾಲ್ಕುವಾರ ತೆಗೆದು ಕೊಳ್ಳುತ್ತವೆ. ಇಂಥಾ ಕುಶಲತೆಯನ್ನು ಕಂಡೇ ರಷ್ಯಾ ಸರಕಾರವೂ ಕೂಡ ತನ್ನ ಕೆಲಸಗಾರರನ್ನು ಜಪಾನಿನ ಓಮಿಯಾ ರೈಲ್ವೆ ಶಾಲೆಗೆ ಕಳುಹಿಸಿ ಕಲಿಬೇಕು ಮಾಡಿಸಿದೆ. ಅದಾಗೂ ಕೂಡ ರಷ್ಯನರು ಮೇಲಿನ ಕೆಲಸವನ್ನು ೪೫ ದಿನಗಳಿಗಿಂತಾ ಕಡಿಮೆ ಸಮಯದಲ್ಲಿ ಪೂರೈಸಲಾಗಲಿಲ್ಲ. ಆದ್ದರಿಂದ ಜಪಾನಿನ ಓಮಿಯಾ ರೈಲ್ವೆ ಖಾತೆಯ ಇಂಜಿನಿಯರೊಬ್ಬರನ್ನು ರಷ್ಯಾಕ್ಕೆ ಕರೆಸಿ ಅವರಿಂದ ಕೆಲಸದ ಮಾಹಿತಿಯನ್ನು ಪಡೆದು ಆ ಕೆಲಸವನ್ನು ೧೧ ದಿನಗಳಲ್ಲಿ ಮಾಡುವ ಸಮರ್ಥತೆಯನ್ನು ರಷ್ಯಾಗಳಿಸಿದೆ.

ಜಪಾನಿನ ಸಾಮಾನುಗಳೆಲ್ಲವೂ ಕಡಿಮೆ ಬೆಲೆಯವು, ಬಾಳಿಕೆ ಬಾರದಂಥವು, ನಕಲಿವಸ್ತುಗಳೆಂದು ಹೇಳುವವರೂ ಇದ್ದಾರೆ. ಅಂಥಾವರು ಜಪಾನಿನ ಯುದ್ಧ ಹಡಗುಗಳನ್ನು ಯೋಚಿಸಿಕೊಳ್ಳಿರಿ. ಜಪಾನಿನ ವಿಮಾನಗಳು, ಫಿಲ್ಮಿಗಳನ್ನು ನೆನೆದುಕೊಳ್ಳಿರಿ. ಇಡೀ ಜಗತ್ತಿನ ರಾಷ್ಟ್ರಗಳಲ್ಲಿ ಜಪಾನಿನ ರೈಲ್ವೆ ಇಂಜಿನುಗಳಷ್ಟು ಸಮಯಕ್ಕೆ ಸರಿಯಾಗಿ ಓಡುವಂಥಾವು ಎಲ್ಲಿಯೂ ಇಲ್ಲ. ಜಪಾನಿನ ಈ ಕೌಶಲವು ಬ್ರಿಟೀಷರನ್ನು ಕೂಡ ಮುಗ್ಧಗೊಳಿಸಿದೆ.

ಕೆಲಸಗಾರರಲ್ಲಿ ಸಂಶೋಧಕರು.

ಜಪಾನಿನ ಕಾರ್ಖಾನೆಗಳ ಕೆಲಸಗಾರರು ಬರೇ ಕೆಲಸಗಾರರೇ ಅಲ್ಲ. ಅದರಿಂದ ಅವರಿಗೆ ತೃಪ್ತಿ ಇಲ್ಲ. ತಮ್ಮ ಕಾರ್ಖಾನೆ ಮತ್ತು ಕೆಲಸದಲ್ಲಿ ಯಾವ ರೀತಿಯ ಪ್ರಗತಿ ಅಭಿವೃದ್ಧಿಯನ್ನು ಮಾಡಬಹುದೆಂದು ಪ್ರತಿಕ್ಷಣ ಯೋಚಿಸುತ್ತಿರುವ ಸಂಶೋಧಕರವರು. ಓಮಿಯಾ ರೈಲ್ವೆ ಕಾರ್ಖಾನೆಯಲ್ಲಿ ಕೆಲಸ ಮಾಡುವ ಎರಡು ಸಾವಿರ ಜನರಲ್ಲಿ ಪ್ರತಿ ವರ್ಷ ಸುಮಾರು ೫೦, ೬೦ ಜನರಿಗೆ ಹೊಸ ಶೋಧನೆಗಳಿಗಾಗಿ ಬಹುಮಾನ ಕೊಡಲ್ಪಡುತ್ತಿರುತ್ತದೆ. ಇದೇ ರೀತಿ ಎಲ್ಲಾ ಇತರ ಕೈಗಾರಿಕೆಗಳಲ್ಲೂ ಕೂಡ. ಒಂದು ಕಾರ್ಖಾನೆಯಲ್ಲಿ ಕೆಲಸ ಮಾಡುವವರು ಆ ಕಾರ್ಖಾನೆ ನಮ್ಮದೆಂದು ತಿಳಿಯುತ್ತಾರೆ. ಕೆಲಸಗಾರರಲ್ಲಿ (೧) ಪರಸ್ಪರ ವಿಚಾರಗಳನ್ನು ಪರಿಶೀಲಿಸಿ ತಿಳಿದು ಕೊಳ್ಳುವ ಸಮಿತಿ (೨) ಕಡಿಮೆ ಖರ್ಚಿನಿಂದ ಹೆಚ್ಚು ಲಾಭ ಪಡೆಯುವ ಸಂಶೋಧನಾ ಸಮಿತಿ (೩) ರಕ್ಷಣಾ ಸಮಿತಿ (೪) ಕೆಲಸವನ್ನು ಸುಲಭವೂ ಲಾಭದಾಯಕವೂ ಆಗಿ ಮಾಡುವ ಸಮಿತಿ (೫) ಇಂಜಿನಿನಲ್ಲಿ ಅಭಿವೃದ್ಧಿ ಮಾಡುವ ಸಮಿತಿ (೬) ವಿದ್ಯುಚ್ಛಕ್ತಿ ಮೊದಲಾದ ನಾನಾ ಸಮಿತಿಗಳನ್ನು ಕೆಲಸಗಾರರೇ ಮಾಡಿಕೊಂಡು ತಮ್ಮ ಯಂತ್ರದ ಹಾಗೂ ಪಕ್ಷ ಕೈಗಾರಿಕೆಯ ಬಗ್ಗೆ ಸದಾ ಆಲೋಚನೆ ಮಾಡುತ್ತಿರುತ್ತಾರೆ.

ಜಪಾನಿನ ಸರಕಾರ ಹಾಗೂ ಕೈಗಾರಿಕಾ ಸಂಚಾಲಕರು ಕೆಲಸಗಾರರಲ್ಲಿ ಪ್ರಕೃತಿಯ ಮಮತೆಯನ್ನು ಪೋಷಿಸಲು ಸರ್ವ ಅನುಕೂಲತೆ ಮಾಡಿಕೊಡುತ್ತಾರೆ. ಪ್ರತಿ ಕಾರ್ಖಾನೆಯಲ್ಲೂ ಮರಗಿಡಗಳು, ಹೂತೋಟಗಳೂ ತುಂಬಿರುತ್ತವೆ ಕೆಲಸಗಾರರಿಗೆ ಬೆಟ್ಟ ಹತ್ತುವ, ಈಜುವ, ನದಿಗಳಲ್ಲಿ ದೋಣಿ ಚಲಾಯಿಸುವ, ಮೀನು ಹಿಡಿಯುವ ಮೊದಲಾದ ಅನುಕೂಲತೆಗಳನ್ನು ಒದಗಿಸಿ ಪ್ರಕೃತಿಯ ನಿಕಟ ಪರಿಚಯದ ಅನುಮಾಡಿಕೊಡುತ್ತಾರೆ. ಕಾರ್ಖಾನೆಗಳಲ್ಲಿ ಪತ್ರಿಕೆಗಳನ್ನು ಹೊರಡಿಸಿ ಪ್ರಕೃತಿಯ ಸೊಬಗಿನ ಬಗ್ಗೆ ಕೆಲಸಗಾರರ ಲೇಖನ ಕವನಗಳಿಗೆ ವಿಶೇಷ ಪ್ರಾಮುಖ್ಯತೆ ಕೊಡುತ್ತಾರೆ.

ಆಶ್ರಯಧಾತ ಸರಕಾರ

ಜಪಾನಿನ ಕೈಗಾರಿಕಾ ಪ್ರಗತಿಯಲ್ಲಿ ಸರಕಾರದ ಪಾತ್ರವು ಪ್ರಾಮುಖ್ಯವಾದುದು. ಜಪಾನಿನ ಸರಕಾರವು ವಿದೇಶಗಳ ಕೈಗಾರಿಕಾ ಕ್ಷೇತ್ರದಲ್ಲಿ ತಲೆದೋರುವ ಹೊಸ ಹೊಸ ಕಾರ್ಖಾನೆಗಳನ್ನು ಕ್ರಯಕ್ಕೆ ಪಡೆದು ತನ್ನ ದೇಶದ ಕೆಲಸಗಾರರು ಅದನ್ನು ಪರಿಶೀಲಿಸಿ ಅದನ್ನು ಅಭಿವೃದ್ಧಿಗೊಳಿಸುವ ಅನು ಮಾಡುವದು. ಹೆಚ್ಚು ಸಂಖ್ಯೆಯಲ್ಲಿ ಯೋಗ್ಯ ಕೆಲಸಗಾರರನ್ನು ತರಬೇತಿಗೆ ವಿವಿಧ ದೇಶಗಳಿಗೆ ಕಳುಹಿಸಿ ಅವರ ಮೂಲಕ ತನ್ನ ಕೈಗಾರಿಕೆಯನ್ನು ಅಭಿವೃದ್ಧಿ ಪಡಿಸುವದು. ಈ ವಿಚಾರಗಳಿಗಾಗಿ ಸರಕಾರವು ಯಾವುದೇ ಸಂಕೋಚವಿಲ್ಲದೆ ವ್ಯಯಮಾಡುತ್ತದೆ. ಇದೇ ಅಲ್ಲದೆ ಸರಕಾರದ ಖರ್ಚಿನಿಂದ "ಮೋಡೆಲ್ ಕಾರ್ಖಾನೆ" ಗಳನ್ನು ರಚಿಸಿ ಹತ್ತಾರು ವರ್ಷಗಳ ವರೆಗೆ ಅವುಗಳನ್ನು ನಡೆಸಿ ಅದನ್ನು ಲಾಭದಾಯಕವಾಗಿ ನಡೆಸಬಹುದೆಂದು ಕಂಡ ಮೇಲೆ ಖಾಸಗಿ ಜನರು ಅಂಥಾ ಕಾರ್ಖಾನೆಗಳನ್ನು ತೆರೆಯಬಹುದೆಂದು ಪ್ರೋತ್ಸಾಹಕೊಡುತ್ತದೆ.

ಇದರ ಜೊತೆಗೆ ಜಪಾನಿನ ಕೈಗಾರಿಕಾ ಅಭಿವೃದ್ಧಿಗೆ ಮತ್ತೊಂದು ಕಾರಣವೆಂದರೆ ಅಲ್ಲಿಯ ಜನರ ವಿದ್ಯಾ ಸಂಪನ್ನತೆ. ಜಪಾನಿನಲ್ಲಿ ನೂರಕ್ಕೆ ೯೯.೫೮ ಜನರು ವಿದ್ಯಾವಂತರಾಗಿರುವರು. ೧೯೩೩ರಲ್ಲಿ ನಾನು ಜಪಾನಿನಲ್ಲಿ ಒಂದು ಹೊಟೇಲಿನಲ್ಲಿ ಉಳಿದುಕೊಂಡಿದ್ದೆ. ಸೆಪ್ಟೆಂಬರ್ ೧೩ನೇ ತಾರೀಕು. ನಾನು ಪ್ರಯಾಣ ಮಾಡಿ ಆಯಾಸಗೊಂಡದ್ದರಿಂದ ರಾತ್ರೆ ಸಮಯಕ್ಕೆ ಮೊದಲೇ ನಿದ್ರೆ ಮಾಡಿದೆ. ಮರುದಿನ ಬೆಳಗ್ಗೆ ನನ್ನ ರೂಮು ಗುಡಿಸಲು ಬಂದ ಮುದುಕಿಯೊಬ್ಬಳು "ಗುಡ್ ಮಾರ್ನಿಂಗ್, ಮಹಾತ್ಮಾಗಾಂಧಿಯವರ ಆರೋಗ್ಯದ ವಿಚಾರ ಇತ್ತೀಚಿಗಿನ ವಾರ್ತೆ ಕೇಳಿದಿರಾ?" ಎಂದು ಕೇಳಿದಳು. ನಾನು ಪತ್ರಿಕೆ ಓದಿ "ಇಲ್ಲ" ಎಂದೆ. ಆಕೆ ಅಂದಳು, "ಅವರು ಉಪವಾಸ ನಿಲ್ಲಿಸಿದ್ದಾರೆ. ಅವರು ಗಂಡಾಂತರದಿಂದ ಪಾರಾಗಿದ್ದಾರೆ" ಎಂದಳು. "ನಿನಗೇನು ಗೊತ್ತು?" ನಾನು ಕೇಳಿದೆ. "ಏಕೆ, ಯಾವಾಗಲೂ ಎದ್ದ ಹಾಗೆ ಬೆಳಗಿನ ವರ್ತಮಾನ ಪತ್ರಿಕೆ ಓದಿಯೇ ನಾನು ಕೆಲಸಕ್ಕೆ ಹೊರಡುವದು" ಎಂದಳವಳು. ಜಗತ್ತಿನ ವಿಚಾರವನ್ನು ತಿಳಿದುಕೊಳ್ಳುವ ಜಪಾನೀ ಜನರ ಈ ಆಸಕ್ತಿಯನ್ನು ಮೀರಿಸುವವರಾರು?

ವಾರದ ಕಥೆ.

(೨ನೇ ಪುಟದಿಂದ ಸಾಗಿದ್ದು)

ಅದು ತನ್ನ ಶಕ್ತಿಯೆಲ್ಲವನ್ನೂ ಕೇಂದ್ರೀಕರಿಸಿ ಕೊನೆಯ ಹಾಡನ್ನು ಹಾಡಿತು. ಚಂದ್ರನು ಕೇಳಿ ನಡುಗಿಬಿಟ್ಟ. ಕೆಂಗುಲಾಬಿಯು ಸಂತೋಷದಿಂದ ನಲಿದಾಡಿತು. ಆಗಲೇ ಅದು ತನ್ನ ಎಸಳುಗಳೆಲ್ಲವನ್ನೂ ತೆರೆದು ಸಂಪೂರ್ಣವಾಗಿ ಅರಳಿಬಿಟ್ಟಿತ್ತು.

'ನೋಡು, ನೋಡು. ನಿನ್ನ ಸೃಷ್ಟಿ ಸಂಪೂರ್ಣವಾಯಿತು'–ಗಿಡ ಹೇಳಿತು. ಆದರೆ ಬುಲ್ ಬುಲ್ ಮಾರುತ್ತರವೀಯಲಿಲ್ಲ. ಏಕೆಂದರೆ ಅದು ಹುಲ್ಲಿನ ಮೇಲೆ ಸತ್ತು ಬಿದ್ದಿತ್ತು. ಮತ್ತು ಅದರೆದೆಯಲ್ಲಿ ಒಂದು ಮುಳ್ಳು ಚುಚ್ಚಿಕೊಂಡಿತ್ತು.

ಮಧ್ಯಾಹ್ನ ವಿದ್ಯಾರ್ಥಿಯು ಕಿಟಕಿಯನ್ನು ತೆರೆದು ಹೊರಗಿಣಿಕಿದ.

'ವಾಹ್, ಅದೃಷ್ಟವೆ! ಇದೊಂದು ಕೆಂಗುಲಾಬಿ ಅರಳಿದೆ' ಎನ್ನುತ್ತಾ ಅವನದನ್ನು ಕೊಯ್ದು ವೇಗವಾಗಿ ಪ್ರೊಫೆಸರರ ಮನೆಯತ್ತ ಹೊರಟ.

ಪ್ರೊಫೆಸರರ ಮಗಳು ನೀಲಿ ರೇಶ್ಮೆಯನ್ನು ಹೊಟ್ಟು ಕುಳಿತಿದ್ದಳು.

'ಇಗೋ; ನಿನ್ನ ನೃತ್ಯಕ್ಕಾಗಿ ಕೆಂಪು ಗುಲಾಬಿಯನ್ನು ತಂದಿರುವೆ. ನೀನಿದನ್ನು ಎದೆಯ ಮೇಲಿಟ್ಟು ನರ್ತಿಸುವಾಗ ನಾನು ಮನವಾರೆ ನೋಡುವೆ'–ಅವನೆಂದ. ಆದರೆ ಹುಡುಗಿಯು ಹುಬ್ಬು ಗಂಟಿಕ್ಕಿಕೊಂಡಿದ್ದಳು.

'ಊಹೂಂ; ಇದು ನನ್ನ ಉಡಿಗೆಗೆ ಸರಿಹೊಂದಲಾರದು. ಇಷ್ಟೇ ಅಲ್ಲದೆ ಸೇರರ ಅಳಿಯನು ಕೆಲವು ಉತ್ತಮ ವಜ್ರಗಳನ್ನು ನನಗಾಗಿ ಕಳುಹಿಸಿದ್ದಾನೆ. ವಜ್ರಗಳೆದುರಿಗೆ ಹೂವಿನ ಮೌಲ್ಯವೇನಿದೆ?'

'ಮಹಾ ಕೃತಘ್ನಳು ನೀನು'– ವಿದ್ಯಾರ್ಥಿಯು ವ್ಯಥಿತನಾಗಿ ಹೇಳಿದ; ಮತ್ತು ಆ ಹೂವನ್ನು ಸಮೀಪವೇ ಎಸೆದು ಬಿಟ್ಟ. ಆಗಲೇ ಗಾಡಿಯೊಂದು ಹೂವಿನ ಮೇಲೆ ಹಾದು ಹೋಗಿ ಅದನ್ನು ಹುಚ್ಚು ನೂರು ಮಾಡಿತು.

'ಕೃತಘ್ನ, ಕೃತಘ್ನ ನಿನಗೆ ಸಭ್ಯರೀತಿಯಿಂದ ಮಾತಾಡಲೂ ಬರುವುದಿಲ್ಲ. ನಿನ್ನ ಯೋಗ್ಯತೆಯೇನು ? ಬಯಕೆಯೇನು ! ಸೇತರ ಅಳಿಯು ಚಿನ್ನದ ಗುಂಡಿಗಳನ್ನು ಹಾಕಿಕೊಳ್ಳುತ್ತಾನೆ. ನಿನಗೆ ಬೆಳ್ಳಿಯ ತುಣುಕಿಗೂ ಗತಿಯಿಲ್ಲ'–ಹೀಗೆಂದು ಅವಳು ಕುರ್ಚಿಯಿಂದೆದ್ದು ಒಳಗೆ ನಡೆದಳು.

ವಿದ್ಯಾರ್ಥಿಯು ನಿರಾಶೆಯಿಂದ ಹಿಂದಿರುಗುತ್ತಾ ಹೇಳಿದ–'ಪ್ರೀತಿಯೂ ಎಂತಹ ಹುಚ್ಚು ! ಇದು ತರ್ಕಶಾಸ್ತ್ರಕ್ಕಿಂತಲೂ ಕೀಳಾದುದು. ಏಕೆಂದರೆ ಇದರಿಂದ ಏನೂ ನಿರ್ಣಯವಾಗುವುದಿಲ್ಲ. ಇದು ಯಾವಾಗಲೂ ಅಸಂಭವ ವಸ್ತುಗಳನ್ನೇ ಕಲ್ಪಿಸಿ ಕಾಲ್ಪನಿಕ ಸಂಸಾರದಲ್ಲೇ ವಿಹರಿಸುತ್ತದೆ. ವಾಸ್ತವವಾಗಿ ಇದು ಕೇವಲ ಕಲ್ಪನಾತ್ಮಕವಾದುದು. ಆದರೆ ಇದು ಕಲ್ಪನೆಯ ಯುಗವಲ್ಲ; ನಾನು ದರ್ಶನ ಶಾಸ್ತ್ರವನ್ನೋದುವೆ. ಯಥಾರ್ಥವಾದ ಹಾಗೂ ಭೌತಿಕವಾದದ ಅಧ್ಯಯನ ಮಾಡುವೆ' !

ಅವನು ಮನೆಗೆ ಮರಳಿ ಒಂದು ದಪ್ಪವಾದ ಹಳೆಯ ಪುಸ್ತಕವನ್ನು ತೆಗೆದು ಓದತೊಡಗಿದ !

'ಜನ ಪ್ರಗತಿ'ಯಿಂದ.

THE CANARA BANKING CORPORATION LIMITED.

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ. ಉಡುಪಿ (ದ. ಭಾರತ)

ಚಿಕ್ಕ ವಾಯಿದೆಯ ಠೇವಣಾತಿಗಳು :

3 ರಿಂದ 6 ತಿಂಗಳುಗಳ ವರೆಗೆ— ಸಾಲಿಯಾನ ಶೇಕಡ 3
7 ರಿಂದ 12 ತಿಂಗಳುಗಳ ವರೆಗೆ—ಸಾಲಿಯಾನ ಶೇಕಡ $3\frac{1}{4}$
ಪಂಚವಾರ್ಷಿಕ ಸುವರ್ಣ ಠೇವಣಾತಿಗಳು— ,, ,, 4

—: ಕೊಡಗು ಸಂಸ್ಥಾನದಲ್ಲಿ ನಮ್ಮ ಶಾಖೆಗಳು :—

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

INSURE WITH
OR REPRESENT
INDIA'S OLDEST LIFE OFFICE
THE BOMBAY MUTUAL LIFE ASSURANCE SOCIETY, LTD.

BUSINESS IN FORCE OVER 40 CRORES
ASSETS .... OVER 12 CRORES

Applications from energetic youngmen are invited for representation.

Head Office,
BOMBAY.

Branch:
25-21
172. 3. Narasimharaja Road.
BANGALORE 2.

ಕೊಡಗು ಪ್ರಾಂತೀಯ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸ್ :— ವೀರಾಜಪೇಟೆ.

ಶಾಖೆ:—ಪ್ಲ್ಯಾಟಿನಂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟಗಳು
2. 12 ನೇ ನಂಬರಿನ ಒಂಟಿ ಹೊಳವಿನ ತೋಟದ ಕೋವಿಗಳು
3. ಒಂಟಿ ಮತ್ತು ಜೋಡಿ ಹೊಳವಿನ ಕೇಪಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
5. $\frac{5}{8}$", $\frac{1}{2}$" ಮತ್ತು $\frac{3}{8}$" ಕಬ್ಬಿಣದ ಸರಳುಗಳು
6. 2", $1\frac{1}{4}$", 1" $\frac{3}{4}$" ಮತ್ತು $\frac{1}{2}$" ಕೊಳಾಯಿಗಳು. (G. I. Peps)
7. $1\frac{3}{4}$" × $\frac{5}{16}$" ಉಕ್ಕಿನ ಪಟ್ಟಿಗಳು (Spring Steel flats)
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
9. ಕೋತಿ ಮತ್ತು ಆನೆ ಮಾರ್ಕಿನ ಸಿಮೆಂಟ್ ಟನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರು ಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

Edited Printed and Published by P. I. BELLIAPPA at 'KODAGU' Press Mercara, for 'Kodagu' Ltd.,

ಕೊಡಗು

ಶ್ರೀ ಜಯಪ್ರಕಾಶ್ ನಾರಾಯಣ.

ವಾರ್ಷಿಕ ಚಂದಾ ರೂ. ೫—೦—೦ ಶುಕ್ರವಾರ
ಸಂಪುಟ ೩೨) (ಸಂಚಿಕೆ ೧೬ ೪—೯—೧೯೫೩

KODAGU KANNADA WEEKLY MERCARA

ಈ ವಾರದ ಕಥೆ.

ನಾಸ್ತಿಕ

ಅನುವಾದಕ—“ಯಜ್ಞವಲ್ಕ್ಯ”

ಪುತ್ರನ ನಾಮಕರಣ ಸಮಯದಲ್ಲಿ, ಯಾವ ಮಗನ ಹೆಸರಿಗೆ ಒಂದೆರಡು ದೇವತೆಗಳನ್ನು ಹೆಣೆದ ಹೆಸರನ್ನಿಡುತ್ತಿದ್ದೆನೆಯೋ ಅವನು ಎಲ್ಲಾ ದೇವತೆಗಳನ್ನೂ ಧಿಕ್ಕರಿಸಿ ನಾಸ್ತಿಕನಾಗಿ ಮಾರ್ಪಡುತ್ತಾನೆಂದು, ಉಮಾಶಂಕರನ ತಂದೆಗೆ ಹೊಳೆದಿರಲೇ ಇಲ್ಲ. ಒಂದು ವೇಳೆ ಜೀವಂತನಾಗಿದ್ದಿದ್ದರೆ, ತನ್ನ ಸುಪುತ್ರನ ಈ ಬುದ್ಧಿಭ್ರಂಶದಿಂದ ಎಷ್ಟು ವ್ಯಥಿತನಾಗುತಿದ್ದನೋ ಅದೂ ತಿಳಿಯದು. ಆದರೆ ತಾಯಿಯಾದ ಶಾರದೇಶ್ವರೀ ದೇವಿಯು ದೀರ್ಘಾಯುವಾದ ಅಪರಾಧದಿಂದಾಗಿ, ಈ ಶಿಕ್ಷೆಯನ್ನು ಅನುಭವಿಸಬೇಕಾಗಿ ಬಂದಿತು.

ಆ ಸಮಯದಲ್ಲಿ ಉಮಾಶಂಕರನು ಎಂ. ಎ., ತರಗತಿಯಲ್ಲಿ ಓದುತಿದ್ದ. ಆಗಲೇ ತನ್ನ ಕೆಲವು ಸಹಪಾಠಿಗಳನ್ನು ಕಲೆ ಹಾಕಿ, ‘ನಿರೀಶ್ವರ ಸಂಘ’ವನ್ನು ಸ್ಥಾಪಿಸಿದ. “ಈಶ್ವರವಾದದ ಬೌದ್ಧವು ಮನುಷ್ಯನ ದುರ್ಬಲಚಿತ್ತದ ಸಂಶಯ, ಇಲ್ಲವೇ ಕಲ್ಪನೆಯ ಮೇಲೆ ಆಧಾರಿತವಾಗಿದೆ” ಎಂಬ ತತ್ವವನ್ನು ಪ್ರಚಾರ ಮಾಡುವುದೇ ಈ ಸಂಸ್ಥೆಯ ಉದ್ದೇಶ.

ಅಂದು ದೇವರ ಪೂಜೆ ಮಾಡುವ ಕುಲ ಪುರೋಹಿತರು ಹೊರಟು ಹೋಗಿದ್ದರು; ಶಾರದೇಶ್ವರೀ ದೇವಿಯು ಇದೀಗ ಜಪ, ಪೂಜೆ ಮುಂತಾದುವನ್ನು ಮುಗಿಸಿಕೊಂಡು ಜಲಗ್ರಹಣ ಮಾಡಿದ್ದಳು; ಈ ಸದವಕಾಶದಲ್ಲಿ ಉಮಾಶಂಕರನು ತಾಯಿಯ ಬಳಿ ಬಂದು ‘ಅಮ್ಮಾ, ನಮ್ಮ ಮನೆಯಲ್ಲಿ ಇದುವರೆಗೆ ಮಿಥ್ಯಾಡಂಬರದ ಹೆಸರಿನಲ್ಲಿ ಬಹಳ ಹಣ ಮತ್ತು ಸಮಯ ವ್ಯರ್ಥವಾಗಿದೆ. ಇನ್ನು ಮೇಲೆ ಈ ಮಿಥ್ಯಾಡಂಬರವನ್ನು ನಿಲ್ಲಿಸಬೇಕೆಂದಿದ್ದೇನೆ’ ಎಂದು ಹೇಳಿದ

ಆಶ್ಚರ್ಯವಿಸ್ಮಿತಳಾದ ಶಾರದೇಶ್ವರೀ ದೇವಿಯು ಉಮಾಶಂಕರನನ್ನೇ ನೋಡುತ್ತಾ ‘ನೀನು ಹೇಳುವದು ನನಗೆ ಅರ್ಥವೇ ಆಗುತ್ತಿಲ್ಲ, ಉಮಾ. ದುಂದು ವೆಚ್ಚ ಹೇಗೆ?” ಎಂದು ಪ್ರಶ್ನಿಸಿದಳು.

“ಹೇಗೆಯೇ ಅಮ್ಮಾ, ಈ ದೇವಪೂಜೆ, ನಾರಾಯಣ ಪೂಜೆ ಇತ್ಯಾದಿಗಳಿಂದ.... ನಾರಾಯಣನ ಅಸ್ತಿತ್ವದ ವಿಷಯದಲ್ಲೇ ಪೂರ್ಣ ಪರಿಚಯವಿಲ್ಲದಿರುವಾಗ, ಈ ಪ್ರಸ್ತರ ಪ್ರತಿನಿಧಿಗಳ ಮೇಲೆ ಇಷ್ಟು ಸಮಯ ಮತ್ತು ಧನ ನಷ್ಟದಿಂದ ಉಂಟಾಗುವ ಲಾಭವಾದರೂ ಏನು?”

ಮಗನ ಬುದ್ಧಿಗತಿಯನ್ನು ಕಂಡು ಅವನು ಅಧಾರ್ಮಿಕನಾಗಿದ್ದಾನೆಂದು ಶಾರದೇಶ್ವರೀ ದೇವಿಯು ಅರ್ಥ ಮಾಡಿಕೊಂಡಿದ್ದಳು. ಆದರೆ, ಅವನು ಇಷ್ಟು ದೂರದವರೆಗೂ ಹೋಗಿದ್ದಾನೆಂದು ಅವಳು ಭಾವಿಸಿರಲಿಲ್ಲ. ಆಕೆಯು ತನ್ನ ಮನಸ್ಸಿನಲ್ಲಿಯೇ ತನ್ನ ಮಗನ ಅಪರಾಧಗಳನ್ನು ಮನ್ನಿಸಬೇಕೆಂದು ನಾರಾಯಣನನ್ನು ಕುರಿತು ಕ್ಷಮಾ ಪ್ರಾರ್ಥನೆ ಮಾಡುತ್ತಾ “ನೀನು ಹೇಳುತ್ತಿರುವುದಾದರೂ ಏನು ಉಮಾ? ಅಂದರೆ, ನೀನು ಧರ್ಮ ಮತ್ತು ಈಶ್ವರನನ್ನು ಒಪ್ಪುವುದಿಲ್ಲವೇ?”

“ಏಕೆ ಒಪ್ಪುವುದಿಲ್ಲ ಅಮ್ಮಾ! ಆದರೆ ನನ್ನ ಒಪ್ಪಿಗೆಯ ಈಶ್ವರ ಮತ್ತು ಧರ್ಮ ನಿಮ್ಮಗಳಿಗಿಂತ ಭಿನ್ನವಾಗಿದೆ. ನನ್ನ ಭಾಗದ ಈಶ್ವರ ‘ನ್ಯಾಯ’ ಮತ್ತು ಧರ್ಮ, ‘ನೀತಿ’. ನನ್ನ ಈಶ್ವರನ ಸ್ಥಾನ ‘ಬುದ್ಧಿ’ ಮತ್ತು ಧರ್ಮದ ಸ್ಥಾನ ನನ್ನ ಜೀವನ.”

“ನೀನು ಹೇಳುವದೇನು, ನ್ಯಾಯ ಮತ್ತು ನೀತಿ ನಿನಗೊಬ್ಬನಿಗಾಗಿಯೇ ಇದೆ, ನಮಗೆಲ್ಲಾ ಅವರ ಅಸ್ತಿತ್ವವಿಲ್ಲವೆಂದೇ?”

“ಇದೆಯಮ್ಮಾ, ಏಕಿಲ್ಲ, ಆದರೆ ಅದರ ಬಹು ಭಾಗ ನಿಮ್ಮ ಮೂವತ್ತು ಮೂರು ಕೋಟಿ ದೇವತೆಗಳ ಪ್ರಸ್ತರ ಕಾರಾಗಾರದಲ್ಲಿ ಬಂಧಿತವಾಗಿದೆ. ಈ ತರ್ಕವಿತರ್ಕವೇಕೆ, ಹೋಗಲಿ ಬಿಡಮ್ಮಾ, ನಿಮ್ಮ ಅನುಮತಿ ಇದ್ದರೆ, ನಿಮ್ಮ ಈ ನಾರಾಯಣನನ್ನು ನಿಮ್ಮ ಗಂಗಾಮಾಯಿಯಲ್ಲಿ ವಿಸರ್ಜಿಸಿ ಬಿಡಲೇನು?”

ಉಮಾಶಂಕರನ ಈ ಭಾವನಾರಹಿತ ಮಾತುಗಳನ್ನು ಕೇಳಿ ಶಾರದೇಶ್ವರಿ ದೇವಿಯು ಭಯಕಂಪಿತಳಾದಳು.

ಕೆಲವು ಸಮಯದ ನಂತರ ತನ್ನ ಏಕಮಾತ್ರ ಪುತ್ರನ ಮಾನಸಿಕ ವಿಭ್ರಮದಿಂದ ಸಂತಪ್ತಳಾಗಿ, ಕೆಲವು ಸಮಯದ ನಂತರ ನಾರಾಯಣ ಸ್ಮರಣೆಯಾಡುತ್ತಾ ಕಣ್ಮುಚ್ಚಿದಳು. ಅಂತ್ಯ ಸಮಯದಲ್ಲಿ ಅವರುದ್ಧ ಕಂಠದಿಂದ ಆಕೆಯು ತನ್ನ ಸೊಸೆ ಮಂದಾಕಿನಿಗೆ “ನಾನೀಗ ಹೋಗುತಿದ್ದೇನೆ ಅನೇಕ ಕಷ್ಟಗಳನ್ನು ಸಹಿಸಿ, ನಿನ್ನ ಜೀವನ ಸಂಸಾರದಲ್ಲಿ ಯಾವ ಕ್ಷೀಣ ಕಲ್ಯಾಣದ ಹಣತೆ ಇಟ್ಟಿದ್ದೇನೆ, ಅದರಲ್ಲಿ ಯಥಾಶಕ್ತಿ ಎಣ್ಣೆ ಬತ್ತಿ ಹಾಕುತ್ತಿರು” ಎಂದು ಆದೇಶವಿತ್ತಳು.

○ ○ ○

ಆರು ವರ್ಷದ ನಂತರದ ಮಾತು. ಉಮಾಶಂಕರನು ಎಂ. ಎ, ಹಾಗೂ ವಕಾಲತ್ತು ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಕಲಕತ್ತಾ ಹೈಕೋರ್ಟಿನಲ್ಲಿ ಅಡ್ವೋಕೇಟ್ ಆಗಿದ್ದಾನೆ. ವಿದ್ಯಾರ್ಥಿ ಜೀವನದ ‘ನಿರೀಶ್ವರ ಸಂಘ’ದ ಸದಸ್ಯರೆಲ್ಲರೂ ಅನ್ನ ವಸ್ತ್ರಗಳ ಸಮಸ್ಯೆಯನ್ನು ಬಗೆಹರಿಸಲು ಚೆಲ್ಲಾಪಿಲ್ಲಿಯಾಗಿ ಚದುರಿಹೋಗಿದ್ದಾರೆ. ಉಮಾಶಂಕರನ ವಿನಹ ಅನೇಕ ಮಂದಿ, ಈಶ್ವರನೊಂದಿಗೆ ಸಂಧಿಯನ್ನು ಮಾಡಿಕೊಂಡಿದ್ದಾರೆ. ಆದರೆ, ಉಮಾಶಂಕರನು ಮಾತ್ರ ತನ್ನ ಮತವಾದದಲ್ಲಿ ದೃಢವಾಗಿದ್ದಾನೆ.

ಈಶ್ವರವಾದದಲ್ಲಿ ಇವನು ಎಷ್ಟು ವಿರೋಧಿಯಾಗಿದ್ದನೋ, ಇವನ ಎರಡರಷ್ಟು ಇವನ ಹೆಂಡತಿ ಮಂದಾಕಿನಿಯು ಇವುಗಳಲ್ಲಿ ಚಿತ್ತ ಮನಸ್ಕಳಾಗಿದ್ದಳು.

ಒಂದು ದಿನ, ಮಂದಾಕಿನಿಯ ತಂಗಿ ಆಮೋದಿನಿಯೂ ಸಹ, ತನ್ನ ಅಕ್ಕನೊಂದಿಗೆ ಮಾತನಾಡುತ್ತಾ, “ಅಕ್ಕಾ, ತಂದೆಯು ಭಾವನನ್ನು ಎರಡನೇ ಚಾರ್ವಾಕನೆಂದೇ ಹೇಳುತ್ತಿರುತ್ತಾರೆ. ನಿಜವಾಗಿ ಹೇಳಬೇಕಾದರೆ, ಭಾವನವರ ಆಚಾರ ವಿಚಾರಗಳನ್ನು ನೋಡಿದರೆ ನಮಗೆಲ್ಲಾ ಬಹಳ ಲಜ್ಜೆಯಾಗುತ್ತಿದೆ.”

ಮಂದಾಕಿನಿಯು ನಗುತ್ತಾ ಉತ್ತರವಿತ್ತಳು “ನಿಮ್ಮ ಭಾವನಿಗೆ ಚಾರ್ವಾಕನೆಂದರೆ ಬಹಳ ಸಂತೋಷ, ಏಕೆಂದರೆ, ಅವರು ಚಾರ್ವಾಕನನ್ನು ಬಹಳವಾಗಿ ಪ್ರಶಂಸಿಸುತ್ತಾರೆ. ಅವರ ವಿಷಯದಲ್ಲಿ ನೀವು ಲಜ್ಜಿತರಾಗಬೇಕಾದುದೇನಿಲ್ಲ. ಅವರನ್ನು ಇನ್ನು ಮುಂದೆ ಯಾವ ವಿಧವಾದ ಧಾರ್ಮಿಕ ಅನುಷ್ಠಾನಕ್ಕೂ ಆಹ್ವಾನಿಸಬೇಕಾಗಿಲ್ಲ”.

ಒಂದು ದಿನ, ಪ್ರಸಾದ ಕೊಡುತ್ತಾ ಮಂದಾಕಿನಿಯು ನಗುತ್ತಾ ಉಮಾಶಂಕರನೊಂದಿಗೆ ‘ಕೇಳಿದಿರಾ, ಆಮೋದಿನೀ ಹೇಳಿದುದನ್ನು. ನೀವು ಇಷ್ಟು ಪ್ರಬಲ ನಾಸ್ತಿಕರಾಗಿರುವುದನ್ನು ಕಂಡು, ಸ್ವಯಂ ಭಗವಾನನೇ ಒಮ್ಮೆ ನಿಮ್ಮಲ್ಲಿಗೆ ಬರಬಹುದೆಂದು ಹೇಳುತ್ತಿದ್ದಳು’ ಎಂದಳು.

ಉಮಾಶಂಕರನೂ ನಸು, ಪ್ರಸಾದ ತಿನ್ನುತ್ತಾ ‘ಹಾ; ಬಹಳ ಖುಷಿ ಸಮಾಚಾರ. ಆಮೋದಿನಿಯ ಮನೆಗೆ ಭಗವಂತನು ಆಗಾಗ್ಗೆ ಬಂದು ಹೋಗುತ್ತಿರುತ್ತಾನೆ. ಒಮ್ಮೆ ನಮ್ಮಲ್ಲಿಗೂ ಬಂದು ಕಾಫೀ ತಿಂಡಿ ತಿಂದು ಹೋಗುವಂತೆ ಹೇಳಬೇಕೆನ್ನು’ ಎಂದನು.

○ ○ ○

ಹೈಕೋರ್ಟಿನ ಪೂಜಾ ರಜಾದಿನಗಳು ಮುಗಿದಿತ್ತು. ಕೋರ್ಟು ತೆರೆದ ಕೂಡಲೇ, ಒಂದು ಅಪೀಲು ಹಾಕಬೇಕಿತ್ತು. ಅದರ ಕೇಸನ್ನು ತಯಾರು ಮಾಡುತ್ತಾ ಉಮಾಶಂಕರನು ಕುಳಿತಿದ್ದಾನೆ. ತನ್ನಲ್ಲಿಯ ನೀಲಿ–ಕೆಂಪು ಪೆನ್ಸಿಲಿನಿಂದ ಅಲ್ಲಲ್ಲಿ ಏನೋ ಗುರುತು ಹಾಕುತ್ತಿದ್ದಾನೆ. ಈ ಸಮಯದಲ್ಲಿ ಗೌರ ವರ್ಣದ ವೃದ್ಧನೊಬ್ಬನು ಬಳಿಗೆ ಬರುತ್ತಾ ‘ಜಯಹೋ ಜಯಹೋ’ ಎಂದನು.

ಉಮಾಶಂಕರನು ಬ್ರಾಹ್ಮಣನನ್ನು ನೋಡುತ್ತಾ ಕೇಳಿದ ‘ನೀವು ಯಾರು?’

‘ನಾನು ಭಗವಾನ್’

‘ಭಗವಾನ್? ಅಂದರೆ’

‘ಭಗವಾನ್ ಅಂದರೆ ಅರ್ಥವೇನು?’

“ಅರ್ಥಾತ್ ಭಗವಾನ್‌ದಾಸ್, ಘೋಷ್, ದೇಸಾಯಿ, ಮುಖರ್ಜಿ, ಪ್ರಸಾದ್ ಅಥವಾ.......”

‘ಏನಿಲ್ಲ. ಕೇವಲ ಭಗವಾನ್’

‘ನಿವಾಸ ಸ್ಥಾನ?’

‘ಲೋಕ’

‘ಜಿಲ್ಲಾ?’

‘ಅಮರಾವತಿ’

‘ಸರಿ, ಬೇರಾರ್ ಪ್ರಾಂತ. ಆದರೆ, ನಮ್ಮ ಹೈಕೋರ್ಟಿಗೆ ಬಿರಾರ್ ಪ್ರಾಂತದಲ್ಲಿ ಯಾವ ವ್ಯಾಪ್ತಿಯೂ ಇಲ್ಲ. ಇರಲಿ, ನಿಮ್ಮ ಕೇಸ್ ಏನು. ಸಿವಿಲ್ ಇಲ್ಲವೇ ಕ್ರಿಮಿನಲ್?’

ಈಗ, ವೃದ್ಧ ಬ್ರಾಹ್ಮಣನು ಸಸ್ಮಿತನಾಗಿ, ‘ನಾನು, ಈ ಎಲ್ಲಾ ಬ್ರಹ್ಮಾಂಡದ ಸೃಷ್ಟಿಕರ್ತ ಪರಬ್ರಹ್ಮ, ಪರಮೇಶ್ವರ’ ಎಂದನು.

‘ಜಯಹೋ! ಬ್ರಹ್ಮಾಂಡದ ಸೃಷ್ಟಿಕರ್ತಾ?’

‘ಇನ್ನೇನೂ ಇಲ್ಲ, ನಾದಿನಿ ಆಮೋದಿನಿಯು ಹಾಸ್ಯಕ್ಕಾಗಿ ಒಬ್ಬ ವೃದ್ಧನನ್ನು ಭಗವಾನ್‌ನೆಂದು ಹೇಳಿ ಇಲ್ಲಿಗೆ ಕಳುಹಿಸಿದ್ದಾಳೆ’ ಎಂದು ಮನಸ್ಸಿನಲ್ಲಿಯೇ ಯೋಚಿಸಿ ಉಮಾಶಂಕರನಿಗೆ ವಿಶೇಷ ಕೌತುಕದ ಅನುಭವವೂ ಆಯಿತು. ಕುರ್ಚಿಯ ಕಡೆ ತೋರುತ್ತಾ ‘ಕುರ್ಚಿಯ ಮೇಲೆ ಕೂಡೋಣವಾಗಲಿ’ ಎಂದ. ಬ್ರಾಹ್ಮಣನು ಕೂತ ಮೇಲೆ, ‘ತಾವು ವಿಶ್ವ ಬ್ರಹ್ಮಾಂಡದ ಸೃಷ್ಟಿಕರ್ತ, ಆದಿನಾಥ ಭಗವಾನ್ ಎಂದ ಮೇಲೆ, ತಾವು ಸರ್ವಜ್ಞರೂ ಅಹುದು ತಾನೇ. ಆದರೆ ಎಲ್ಲವನ್ನೂ ತಿಳಿದ ತಮಗೆ ಒಬ್ಬ ನಾಸ್ತಿಕನ ದರ್ಶನದ ಅವಶ್ಯಕತೆ ಏನಿತ್ತು ಪ್ರಭೂ?’ ಎಂದು ಪ್ರಶ್ನಿಸಿದನು.

‘ನಾನು ನಿನಗೆ ಈಶ್ವರ ಮಂತ್ರ ದೀಕ್ಷೆ ಕೊಡಲು ಬಂದಿದ್ದೇನೆ’

‘ಈಶ್ವರ ಮಂತ್ರ!....ನೀವು ಕಪಿಲರ ಸಾಂಖ್ಯ ದರ್ಶನ ಓದಿರಬೇಕಲ್ಲವೆ?’

‘ಹೌದು’

‘ಕಪಿಲನೇ ಪ್ರಮಾಣದ ಅಭಾವದಿಂದಾಗಿ ಈಶ್ವರನ ಅಸ್ತಿತ್ವವನ್ನು ಸಿದ್ಧಿಸಿಲ್ಲ’

‘ಈ ಅಪರಾಧದಿಂದಾಗಿ, ನಾನು ಕಪಿಲನನ್ನು ಸಿದ್ಧ (ಪಕ್ವ) ನನ್ನಾಗಿ ಮಾಡಿದ್ದೇನೆ’

‘ಕಪಿಲನನ್ನು ಹೇಗೆ ಸಿದ್ಧನನ್ನಾಗಿ ಮಾಡಿದರೆಂದು ಕೇಳಬಹುದೇ?’

‘ನರಕದಲ್ಲಿನ ಉರಿಯುವ ಹೊಂಡದಲ್ಲಿ ಹಾಕಿ’

‘ಹಾಗಾದರೆ, ನಾನೂ ಕೂಡ ತಮ್ಮನ್ನು ಉರಿಯುವ ಹೊಂಡದಲ್ಲಿ ಹಾಕುತ್ತೇನೆ ಹಾಕಿ ಸಿದ್ಧನನ್ನಾಗಿ ಮಾಡುತ್ತೇನೆ. ತಾವು ಸಿದ್ಧರಾದರೆ ಬದುಕುವಿರಿ ಹತ್ತಿಕೊಂಡು ಉರಿದುಹೋದರೆ, ಕೃತಕ ಭಗವಾನರೆಂದು ಭಾವಿಸುತ್ತೇನೆ. ನಾನು ಯಾವುದನ್ನೇ ಆಗಲಿ, ಪ್ರಮಾಣವಿಲ್ಲದೆ ಸ್ವೀಕರಿಸುವುದಿಲ್ಲ’

‘ಪ್ರಮಾಣ ಏನು ಬೇಕು, ಹೇಳು’

ಉಮಾಶಂಕರನು ಮೇಣದ ಬತ್ತಿ ಹತ್ತಿಸಿ, ‘ಇದರಲ್ಲಿ ನಿಮ್ಮ ಬೆರಳಿಟ್ಟುಕೊಳ್ಳಿ, ಪ್ರಮಾಣ ದೊರಕುತ್ತದೆ’ ಎಂದನು.

ಭಗವಾನನ ಮುಖದಲ್ಲಿ ಪುನಃ ಹಾಸ್ಯರೇಖೆಗಳು ಸ್ಪಷ್ಟವಾಗಿ ಮೂಡಿದುವು. ಸಾಕು! ಇಷ್ಟು ತುಚ್ಛ ಪ್ರಮಾಣವನ್ನು, ನೀನು ಒಪ್ಪುವಿಯೊ?’ ಎಂದು ಹೇಳುತ್ತಾ ಉರಿಯುತ್ತಿರುವ ಮೇಣದ ಬತ್ತಿಯ ಮೇಲೆ ತನ್ನ ಬೆರಳನ್ನಿಟ್ಟನು.–

ಇದೇನು?....ಅರಿಯದ ಜ್ಯೋತಿಶಿಖೆಯು ಬೆರಳನ್ನು ಸ್ಪರ್ಶಿಸಿದ ಕೂಡಲೇ, ಉರಿಯು ಶತಗುಣವಾಯಿತು. ಉಮಾಶಂಕರನ ಆಶ್ಚರ್ಯಕ್ಕೆ ಮೇರೆಯೇ ಇರಲಿಲ್ಲ.

‘ಇದಕ್ಕಿಂತ ಪುಷ್ಟಪ್ರಮಾಣ ಬೇಕೇನು! ಹತಪ್ರಭಾವನಾದ ಉಮಾಶಂಕರನು ಕೇಳಿದನು. ‘ತೋರಿಸಿರಿ’

‘ಗೀತೆಯ ಹನ್ನೆರಡನೆಯ ಅಧ್ಯಾಯವನ್ನು ಓದಿದ್ದೀಯೊ?’

‘ಹೂಂ. ವಿಶ್ವರೂಪ ದರ್ಶನವಲ್ಲವೇ?’

‘ಅರ್ಜುನನ ರೀತಿಯಲ್ಲಿ ನೀನೂ ಸಹ ನನ್ನ ವಿಶ್ವರೂಪ ದರ್ಶನ ನೋಡಬಯಸುತ್ತೀಯೊ?’

ಭೀತಿ, ತ್ರಸ್ತ ಹಾಗೂ ವಿಹ್ವಲನಾದ ಉಮಾಶಂಕರನು ‘ನೋಡುತ್ತೇನೆ’ ಎಂದನು.

‘ಹಾಗಾದರೆ ನೋಡು’ ಭಗವಾನನು ವಿರಾಟ್ ರೂಪಧಾರಣ ಮಾಡಿದನು. ಅಸಂಖ್ಯ ಬಾಹುಗಳು, ಉದರ, ಅನಂತ ಮುಖ, ಈ ರೂಪಕ್ಕೆ ಆದಿ, ಅಂತ್ಯಗಳೇ ಕಾಣಬರುತ್ತಿರಲಿಲ್ಲ. ಎರಡು ಕಣ್ಣುಗಳ ಮಧ್ಯೆ ಸೂರ್ಯಚಂದ್ರರು ಪ್ರಕಾಶಿಸುತ್ತಿದ್ದರು. ಭೀಷಣದಂತಾವಳಿಯ ಈ ಮುಖಮಂಡಲದಲ್ಲಿ ಸರ್ವಗ್ರಾಸೀ ಅಗ್ನಿಯು ರೂಪ ಧರಿಸಿತ್ತು.

ಉಮಾಶಂಕರನು ಭಯಾರ್ತನಾಗಿ ಕಿರುಚಿದನು. ಮಂದಾಕಿನಿಯು ಬಂದು ಆ

(೧೨ನೇ ಪುಟ ನೋಡಿ)



ಚತುರನಾದ ತೋಟಗಾರನು ತನ್ನ ತೋಟದಲ್ಲಿ ಅತ್ಯುತ್ತಮ ಹೂವುಗಳನ್ನು ಬೆಳೆಸುವಂತೆ ಜರಾಮರಣಗಳಿಗೆ ಆಸರೆಯಾದ ಈ ಜಗತ್ತಿನಲ್ಲಿ ಚತುರನಾದವನು ಉತ್ತಮ ಗುಣಗಳ ವ್ಯವಸಾಯ ಮಾಡಬೇಕು.

ಅಂಥಾ ತೋಟಗಾರನು ತನ್ನ ಶರೀರವನ್ನು ನೀರ ಗುಳ್ಳೆಯೆಂದು ತಿಳಿದು ಕಾಮಿನಿ ಕಾಂಚನವೆಂಬ ಹೂವು ಮುಚ್ಚಿದ ಕೂರಲಗುಗಳನ್ನು ತ್ಯಜಿಸಿ ವಿನಾಶಕಾರಿ ಮೃತ್ಯುವಿನ ಹಿಡಿತದಿಂದ ಪಾರಾಗಿ ಚಿರಂಜೀವಿಯಾಗಬೇಕು.

ವಿಷಯ ಸುಖಗಳೆಂಬ ಹೂಗಳನ್ನು ಕುಯ್ಯುವದರಲ್ಲಿ ತಲ್ಲೀನವಾದ ಮನಸ್ಸುಳ್ಳವನನ್ನು—ನಿದ್ರಾಲಿಂಗಿತವಾದ ಗುಡಿಸಲನ್ನು ನದಿಯ ನೆರೆಯು ಯಾವ ರೀತಿ ಕೊಚ್ಚಿಕೊಂಡು ಹೋಗುವದೋ ಅದೇ ರೀತಿ ಮೃತ್ಯುವು ನಿರ್ನಾಮ ಗೊಳಿಸುವದು.

ಹೂವುಗಳನ್ನು ಕುಯಿದು ಅವುಗಳ ಮನೋಹರ ಸುಗಂಧವನ್ನು ಆಘ್ರಾಣಿಸುವ ಮೊದಲೇ ಅವು ಒಣಗುವಂತೆ ವಿಷಯ ಸುಖಗಳ ಪೂರ್ಣಾನಂದವನ್ನು ಪಡೆಯುವ ಮೊದಲೇ ಅಂತಕನ ಹಿಡಿತವು ಕುತ್ತಿಗೆಯನ್ನು ಅಮುಕುವದು.

ಹೂವಿನ ಮೇಲೆ ಕುಳಿತ ಜೇನು ನೊಣವು ಜೇನನ್ನು ಸಂಗ್ರಹಿಸಿ ಹೂವಿನ ಬಣ್ಣಕ್ಕಾಗಲೀ ಸುಗಂಧಕ್ಕಾಗಲೀ ಯಾವುದೇ ಚ್ಯುತಿಯನ್ನು ತಾರದೆ ಹಾರಿಹೋಗುವಂತೆ ಭಕ್ತನಾದವನು ಜಗತ್ತಿನಲ್ಲಿ ಸಾರಾಸಾರವನ್ನರಿತು ಬೇಕಾದುದನ್ನು ಸಂಗ್ರಹಿಸಿ ಉಳಿದುದನ್ನು ಬಿಟ್ಟು ತೊಲಗಬೇಕು.

ಯಾವನೇ ಮನುಷ್ಯನು ಇತರರ ನ್ಯೂನತೆ ಅತಿರೇಕಗಳಿಗೆ ಗಮನವಿಡದೆ ತನ್ನ ತಪ್ಪುಗಳನ್ನೂ ತನ್ನ ಕರ್ತವ್ಯಗಳನ್ನೂ ಪರಿಶೀಲಿಸಿ ತನ್ನ ಮೇಲೆ ನಜರೆ ಇಟ್ಟು ವರ್ತಿಸಿದರೆ ಅದೇ ಪರಮ ಮಾರ್ಗ.

ವಿವಿಧ ರಂಗಿನಿಂದ ಮೆರೆಯುವ ಹೂವಿಗೆ ಸುಗಂಧವಿಲ್ಲದಿದ್ದರೆ ಯಾವ ರೀತಿ ನಿಷ್ಪ್ರಯೋಜನವೋ ಅದೇ ರೀತಿ ವಿವಿಧ ತತ್ವ ನೀತಿಗಳನ್ನು ಹೇಳುತ್ತಾ ಅವುಗಳನ್ನು ಕಾರ್ಯತಃ ಅನುಸರಿಸದವನ ಜೀವನವು ನಿಷ್ಪ್ರಯೋಜನ.

ಹೂವಿನ ರಾಶಿ ಇದ್ದರೆ ನೂರಾರು ಹೂಮಾಲೆಗಳನ್ನು ಮಾಡುವದು ಸಾಧ್ಯವಾಗುವಂತೆ ಜರಾ ಮರಣಗಳಿಗೆ ತುತ್ತಾದ ಮಾನವನು ಹುಟ್ಟಿದ ಈ ಜೀವದ ಸದುಪಯೋಗ ಮಾಡಿಕೊಂಡು ಸದ್ಗುಣಗಳೆಂಬ ಹೂವಿನ ರಾಶಿಯನ್ನು ಸಂಪಾದಿಸಲಿ.

ಹೂಗಳ ಸುಗಂಧವು ಅದು ಗಂಧವಿರಲಿ, ಮಲ್ಲಿಗೆ ಇರಲಿ ಯಾವುದಾದರೂ ಗಾಳಿಗೆ ಎದುರಾಗಿ ಪ್ರಯಾಣ ಮಾಡಲಾರದು. ಆದರೆ ಸದ್ಗುಣಿಯಾದ ಮನುಷ್ಯನ ಸುಚರಿತ್ರೆಯು ಯಾವುದೇ ಎಡರನ್ನು ಲೆಕ್ಕಿಸದೆ ಹಬ್ಬುವದು. ಏಕೆಂದರೆ ಉತ್ತಮ ಗುಣವಿರುವವನು ಎಲ್ಲಾ ದಿಕ್ಕುಗಳಿಗೂ ತನ್ನ ಕಂಪನ್ನು ಬೀರಬಲ್ಲನು.

ಕಲಂಕ ರಹಿತ ಜೀವನ ನಡೆಸುವವನ ಮೇಲೆ ಕೆಟ್ಟವರು ಕೈಮಾಡಿದರೂ ಕೀರ್ತಿಗೆ ಕುಂದು ಬಾರದು. ಶರೀರ ನಶಿಸಿದರೂ ಅವರ ಜ್ಞಾನದ ಕಂಪು ಸರ್ವರ ಚೇತನಕ್ಕೆ ಕಾರಣವಾಗುವದು.

ಕಸಕಡ್ಡಿಯ ಕೊಂಪೆಯಿಂದ ಪರಮ ಪವಿತ್ರವಾದ ಹೂವು ಉತ್ತಮ ಸುವಾಸನೆಯಿಂದ ಕೂಡಿ ವಿಕಸಿತವಾಗುವಂತೆ ರೋಗ ರುಜೆ, ಕಷ್ಟ ಸುಖಗಳಿಗಾಗರವಾದ ಶರೀರಧಾರಿ ಮಾನವನು ಸದ್ಗುಣಗಳ ಖನಿಯಾಗಿ ನಾಲ್ದೆಸೆ ಸುಗಂಧವನ್ನು ಬೀರಬಹುದು.

Edited Printed and Published by P. I. BELLIAPPA
'KODAGU' Press Mercara, for 'Kodagu' Ltd.,

ಮೊರೊಕ್ಕೋದಲ್ಲಿ ಸುಲ್ತಾನರ ಪದಚ್ಯುತಿ.

ಆಫ್ರಿಕಾದ ಉತ್ತರ ಪ್ರದೇಶದಲ್ಲಿ ಭೂಮಧ್ಯ ಸಮುದ್ರ ತೀರದಲ್ಲಿರುವ, ಫ್ರೆಂಚ್ ಸಾಮ್ರಾಜ್ಯಶಾಹಿಗೆ ಒಳಪಟ್ಟ, ಮೊರೊಕ್ಕೋದಿಂದ ಈಗ ವಿಷಾದಕರ ವಾರ್ತೆಯೊಂದು ಬಂದಿರುತ್ತದೆ. ಮೊರೊಕ್ಕೋದ ಪ್ರಶ್ನೆಯು ಕಳೆದ ಒಂದೂವರೆ ವರ್ಷದಿಂದ ರಾಜಕೀಯ ಕ್ಷೇತ್ರದಲ್ಲಿ ತುಂಬ ಮಹತ್ವ ಪಡೆದಿದ್ದಿತು. ಆದರೆ ಇಂದಿನ ಘಟನೆಗಳಿಗೆ ಅದಕ್ಕೂ ದೀರ್ಘ ಕಾಲದ ಹಿನ್ನಲೆಯುಂಟು. ಫ್ರೆಂಚ್ ಸಾಮ್ರಾಜ್ಯಶಾಹಿ ಪ್ರಭುತ್ವದ ವಿರುದ್ಧ ಮೊರೊಕ್ಕೋದಲ್ಲಿ ರಾಷ್ಟ್ರೀಯ ಚಳುವಳಿಯು ಪ್ರಾಬಲ್ಯಕ್ಕೆ ಬರುತಿದ್ದಂತೆಯೇ, ಫ್ರೆಂಚ್ ಸರಕಾರ ಅದನ್ನು ದಮನಿಸಲು ಧೋರಣೆಯನ್ನು ಕೈಗೊಳ್ಳುತಿತ್ತು. ಈಗ ಫ್ರೆಂಚರ ದಮನ ನೀತಿಯು ಪರಾಕಾಷ್ಠೆಗೆ ಮುಟ್ಟಿದೆ; ಮತ್ತು ಪರಿಣಾಮವಾಗಿ ಮೊರೊಕ್ಕೋದ ಸುಲ್ತಾನರಾದ ಸಿದಿ ಮಹಮ್ಮದ್ ಬಿನ್ ಯುಸೂಫರನ್ನು ಪದಚ್ಯುತಗೊಳಿಸಿ, ಕೊರ್ಸಿಕಾ ದ್ವೀಪದಲ್ಲಿ ದಿಗ್ಬಂಧನದಲ್ಲಿ ಇಟ್ಟಿರುವರು. ಫ್ರೆಂಚರು ತಮ್ಮ ಕ್ರಮಕ್ಕೆ ಸಮಾಧಾನ ಕೊಡುತ್ತಾ ದೇಶದೊಳಗೆ ಆಂತರಿಕ ಗಲಭೆ ಗೊಂದಲಗಳು ತಲೆದೋರಿದುದರಿಂದ ಮತ್ತು ಸುಲ್ತಾನರ ವಿರುದ್ಧ ಜನರ ಆಕ್ರೋಶ ಹುಟ್ಟಿದ್ದರಿಂದ, ಸಿದಿ ಮಹಮ್ಮದರನ್ನು ಸ್ಥಾನಭ್ರಷ್ಟಗೊಳಿಸುವ ಅಗತ್ಯಬಿತ್ತೆಂದು ಹೇಳಿರುವರು.

ಆದರೆ ವಸ್ತುಸ್ಥಿತಿಯ ಪರಿಜ್ಞಾನ ಸ್ವಲ್ಪ ಮಾತ್ರ ಇದ್ದರೂ ಸಾಕು—ಫ್ರೆಂಚ್ ಸಾಮ್ರಾಜ್ಯಶಾಹಿಯು ಮೊರೊಕ್ಕೋದಲ್ಲಿ ಪ್ರಜೆಗಳ ಸ್ವಾಭಾವಿಕ ಆಕಾಂಕ್ಷೆಯನ್ನು—ರಾಷ್ಟ್ರೀಯ ಚಳುವಳಿಯನ್ನು—ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕಲು ಯೋಚಿಸಿ, ಕೈಗೊಂಡ ಕ್ರಮವಿದೆಂದು ತಿಳಿಯಬಹುದು. ಯಾದವೀ ಯುದ್ಧವಾಗುವ ಭಯ ಇಂದು ನಿನ್ನೆಯದಲ್ಲ—ಫ್ರೆಂಚ್ ಸಾಮ್ರಾಜ್ಯಶಾಹಿತ್ವಕ್ಕೂ ರಾಷ್ಟ್ರೀಯ ಮನೋವೃತ್ತಿಗೂ ತಾಳಮೇಳ ಎಂದಿಗೂ ಕೂಡಿಬರುವಂತಿರಲಿಲ್ಲ. ರಾಷ್ಟ್ರೀಯ ಚಳುವಳಿಯನ್ನೇ ಫ್ರೆಂಚ್ ಸರಕಾರ 'ಯಾದವೀಕಲಹ'ದ ಬೀಜ ರೂಪದಲ್ಲಿ ಕಂಡಿರಬಹುದೆಂದು ತರ್ಕಿಸಲು ಆಧಾರವಿದೆ. ಈ ಚಳುವಳಿಯನ್ನು ಕೈಗೊಂಡು ಸ್ವತಂತ್ರ ಪ್ರಜೆಗಳಾಗಬಯಸುತ್ತಿದ್ದ 'ಇಸ್ತಿಕಲಾಲ್' ದೇಶ ಪ್ರೇಮಿಗಳಿಗೆ ಮೊರೊಕ್ಕೋದ ಪದಚ್ಯುತ ಸುಲ್ತಾನರ ಸಂಪೂರ್ಣ ಸಹಾನುಭೂತಿಯೂ ಬೆಂಬಲವೂ ಇದ್ದಿತು; ಮತ್ತು ಈಗ ಸಹ ಕೊರ್ಸಿಕಾ ನಡುಗಡ್ಡೆಯಲ್ಲಿ ದಿಗ್ಬಂಧನದಲ್ಲಿ ಇದ್ದಂತೆಯೇ ಈ ರಾಷ್ಟ್ರೀಯ ವೀರರ ಶೌರ್ಯ ಸಾಹಸಗಳನ್ನು ಹುರಿದುಂಬಿಸುವ ವರ್ಚಸ್ಸು ಸುಲ್ತಾನರಲ್ಲಿದೆ. ಫ್ರೆಂಚರು ದಿನ ದಿನಕ್ಕೂ ಪ್ರಬಲಗೊಳ್ಳುತ್ತಿರುವ ರಾಷ್ಟ್ರೀಯ ಚಳುವಳಿಯನ್ನು ದಮನ ಮಾಡಲು ಕೆಲವು ಸಾಮಾನ್ಯ ಸುಧಾರಣೆಗಳನ್ನು ನೀಡಲು ಮುಂಬರುವವರಾಗಿದ್ದಿತು. ಆದರೆ ಸುಲ್ತಾನರಿಗೆ ಇದು ಏನೇನೂ ತೃಪ್ತಿಕರವಿಲ್ಲ. ಜನರ ಸ್ವತಂತ್ರ ಮನೋಭಾವಕ್ಕೆ ಪ್ರೋತ್ಸಾಹಕವಲ್ಲದ ಫ್ರೆಂಚ್ ರಾಜಕಾರಣವನ್ನು ಸುಲ್ತಾನರು ಎಂದೂ ಒಪ್ಪುತ್ತಿರಲಿಲ್ಲ.

ಫ್ರೆಂಚರಿಗೆ ಮೊರೊಕ್ಕೋದಲ್ಲಿ ತಾವು ಮುಂದಿಟ್ಟ ಪ್ರತಿಯೊಂದೂ ಪತ್ರಕ್ಕೆ ತುಟಿಪಿಟಿಕ್ಕೆನ್ನದೆ ಸಹಿ ಹಾಕುವ ಸುಲ್ತಾನನೊಬ್ಬನಿದ್ದರೆ ಸಾಕೆಂದು ತೋರಿದೆ. ಆದರೆ ಫ್ರೆಂಚ್ ರೆಸಿಡೆಂಟ್ ಜನರಲ್ಲರ ತಾಳಕ್ಕೆ ತಕ್ಕಂತೆ ಕುಣಿಯಲು ಸಿದಿ ಮಹಮ್ಮದ ಸುಲ್ತಾನರು ಕೇಳುತ್ತಿರಲಿಲ್ಲ. ಇದರಿಂದ ಸಿಟ್ಟಿಗೆದ್ದ ಫ್ರೆಂಚರು ಮೊರೊಕ್ಕೋದಲ್ಲಿ ಸ್ವಾತಂತ್ರ್ಯಪ್ರಿಯ ರಾಷ್ಟ್ರೀಯ ಚಳುವಳಿಗಾರರ ವಿರುದ್ಧ ಬರ್ಬರ ಜನಾಂಗದ ಪಾಶಾರನ್ನು ಎತ್ತಿಕಟ್ಟಿದರಲ್ಲದೆ, ತಾವೇ ಪ್ರಚೋದಿಸಿದ ಈ ವಿರೋಧವನ್ನು ಯಾದವೀ ಕಲಹದ ದುಶ್ಚಿಹ್ನೆಯೆಂದು ಡಂಗುರ ಸಾರಿದರು. ಮೊರೊಕ್ಕೋದಲ್ಲಿ ಸುಲ್ತಾನನು ರಾಜಕೀಯ ವರಿಷ್ಠನಾಗಿರುವಂತೆ ಧಾರ್ಮಿಕ ದೃಷ್ಟಿಯಿಂದಲೂ ಉನ್ನತ ಸ್ಥಾನವನ್ನು ಪಡೆದಿದ್ದಾನೆ. ಮೊರೊಕ್ಕೋದ ಜನರಲ್ಲಿಯೇ ಬರ್ಬರ ಜಾತಿಯವರನ್ನು ಧಾರ್ಮಿಕ ಭಾವನೆಯಿಂದ ಉದ್ರೇಕಗೊಳಿಸಿ ಫ್ರೆಂಚರು ತಮ್ಮ ರಾಜಕೀಯ ಆಟವನ್ನು ಹೂಡಿದ್ದಾರೆ. ಮತ್ತು ಪಾಶಾರಲ್ಲಿ ಒಬ್ಬನನ್ನು ತಮ್ಮ ಕೈಗೊಂಬೆ ಸುಲ್ತಾನನನ್ನಾಗಿ ನೇಮಿಸಿದ್ದಾರೆ. ಇದನ್ನು ಜನತೆ ಒಪ್ಪುವಂತಿಲ್ಲ; ಜನತೆ ಮಾತ್ರವಲ್ಲ, ಲೋಕದ ಯಾವುದೇ ಪ್ರಜಾಪ್ರಭುತ್ವವಾದಿ ಜನಾಂಗ ಒಪ್ಪುವುದು ಸಾಧ್ಯವಿಲ್ಲ. ಫ್ರೆಂಚರು ಮೊರೊಕ್ಕೋದಲ್ಲಿ ನಡೆಸಿದ ವರ್ತನೆಯು ಅರಬ—ಏಶಿಯಾ ರಾಷ್ಟ್ರಗಳನ್ನು ಇನ್ನಷ್ಟು ಕೆರಳಿಸಿದೆ—ಮತ್ತು ಸಂಯುಕ್ತ ರಾಷ್ಟ್ರ ಸಂಘದ ಮುಂದೆ ಈ ಪ್ರಶ್ನೆಯನ್ನು ಈ ಸಲ ಎತ್ತಿಯೇ ತೀರುವ ದೃಢ ಸಂಕಲ್ಪವನ್ನು ಅವು ಮಾಡಿರುತ್ತವೆ. ಆದರೆ ಫ್ರೆಂಚ್ ಸರಕಾರ ಈ ವಿಷಯವು ತನ್ನ ಆಂತರಿಕ ವ್ಯವಹಾರಕ್ಕೆ ಸಂಬಂಧಿಸಿದ ಸಂಗತಿಯೆಂದು ಹೇಳಿಬಿಟ್ಟು ಬಾಯಿ ಮುಚ್ಚಿ ಪಾರಾಗುವ ಸಂಭವವಿದೆ; ಮತ್ತು ಈ ಯೋಚನೆಯಲ್ಲಿ ಬ್ರಿಟನು ಇತ್ಯಾದಿ ಬೇರೆ ಸಾಮ್ರಾಜ್ಯ ಶಾಹಿ ಸ್ನೇಹಿತರು ಫ್ರೆಂಚರನ್ನು ಎತ್ತಿಕಟ್ಟುವುದರಲ್ಲಿ ಸಂದೇಹವಿಲ್ಲ. ಆದರೆ ಅರಬ ಜನರು ಸ್ವಾತಂತ್ರ್ಯಕ್ಕೋಸ್ಕರ ಜೀವದ ಹಣತೊಟ್ಟು ಕಾದಲು ಸನ್ನದ್ಧರಾಗಿರುವರೆಂಬುದನ್ನು ಯಾರೂ ಮರೆಯಬಾರದು.

ಸೋಮವಾರಪೇಟೆಯಲ್ಲಿ
"ಕೊಡಗು" ಪತ್ರಿಕೆಯ ಏಜೆಂಟರು
ಸಹಕಾರಿ ಸ್ಟೋರ್ಸ್ ಮೇನೇಜರ್

ನಗುಮಲ್ಲಿಗೆ

ಸಾಹುಕಾರ ತನ್ನ ಕಾರಿನಲ್ಲಿ ಪ್ರಯಾಣ ಮಾಡುತ್ತಿದ್ದ.

ಡ್ರೈವರ್– ಸಾಹುಕಾರ್, ನನಗೊಂದು ಸಣ್ಣಡ್ರೈವರ್ ಬೇಕಾಗಿತ್ತು ಸಾರ್.

ಸಾಹುಕಾರ್– ನೀನೇ ಡ್ರೈವರ್, ನಿನಗೊಬ್ಬ ಡ್ರೈವರಂತೆ, ನಿನ್ನನ್ನು ಡಿಸ್‌ಮಿಸ್ ಮಾಡಿದ್ದೇನೆ. ಹೋಗು!

• • •

ಅದೇ ಸಾಹುಕಾರನು ಬೇರೆ ಡ್ರೈವರನ್ನಿಟ್ಟು ಒಂದು ದಿನ ಪ್ರಯಾಣ ಮಾಡುತ್ತಿರುವಾಗ ಡ್ರೈವರ್ ಗೇರ್ ಚೇಂಜ್ ಮಾಡಿದ.

ಸಾಹುಕಾರ– ಏನೋ ಹೆಚ್ಚಿನ ಶಬ್ದ?

ಡ್ರೈವರ್– ಗೇರ್ ಚೇಂಜ್ ಮಾಡಿದ್ದೇನೆ ಸಾರ್.

ಸಾಹುಕಾರ್– ನನ್ನನ್ನು ಕೇಳದೆ ಬದಲಾಯಿಸಲಿಕ್ಕೆ ಯಾರೋ ಹೇಳಿದ್ದು? ನನ್ನ ಮೇಣಸಿನ ಹಣವೆಲ್ಲ ಹಾಳು ಮಾತುತ್ತೀಯಲ್ಲಾ! ಅವನೊಬ್ಬನಿಗೆ ಡ್ರೈವರ್ ಮೇಲೆ ಡ್ರೈವರಂತೆ! ನೀನೊಬ್ಬ ನನ್ನನ್ನು ಕೇಳದೆ ಗೇರ್ ಚೇಂಜ್ ಮಾಡಿರುವೆ!

• • •

ಉಪಾಧ್ಯಾಯ– ಏಕೋ ಚಂಗು, ಚರಂಡಿಯಲ್ಲಿ ಹರಿಯುವ ನೀರನ್ನು ಕುಡಿಯುತ್ತಿದ್ದೀ;

ಚಂಗು– ನೀವೇ ಹೇಳಿದ್ದೀರಲ್ಲಾ ಸಾರ್. ನಿಂತ ನೀರಿಗಿಂತ ಹರಿಯುವ ನೀರೇ ಉತ್ತಮವೆಂದು!

ಐ. ಎ. ಬಿ.

• • •

ಶ್ರೀನಿವಾಸ–ಅಮ್ಮಾ, ನಾಳೆ ನಾವು ತರಗತಿಗೆ ಹೋಗಬೇಕಾದರೆ ಎರಡಾಣೆ, ತರಬೇಕು ಉಪಾಧ್ಯಾಯರು ಹೇಳಿದ್ದಾರೆ.

ತಾಯಿ– ಯಾಕಂತೆ?

ಶ್ರೀನಿವಾಸ– ಅವರು ಒಬ್ಬರ ಹತ್ತಿರ ಹತ್ತು ರೂಪಾಯಿ ಸಾಲ ಮಾಡಿದ್ದಾರಂತೆ. ನಾವು ಕೊಟ್ಟ ದುಡ್ಡಿನಿಂದ ಸಾಲ ತೀರಿಸುತ್ತಾರಂತೆ!

• • •

ಗಿರಾಕಿಯು ಒಂದು ಹೋಟೇಲಿನಲ್ಲಿ ಕಾಫಿ ಕುಡಿದು ಹೋಗುವಾಗ

ಯಜಮಾನ– ನಿಮ್ಮ ದುಡ್ಡೆಲ್ಲಿ?

ಗಿರಾಕಿ– ಸ್ವಲ್ಪ ಕ್ಷಮಿಸಿ, ಮನೆಗೆ ಹೋಗಿ ಒಂದು ಲೋಟ ಕಾಫಿ ಮಾಡಿಕೊಂಡು ಬಂದು ಕೊಡುತ್ತೇನೆ. ಶೀಘ್ರವಾಗಿ ನೀನೆ ಬಂದ್ಬಿಡಿ ನಮ್ಮನೆಗೆ. ಕಾಫಿ ಸಾಲ ತೀರಿಸುತ್ತೇನೆ.

ಪಿ. ಆರ್. ನಾರಾಯಣ,

• • •

ಆತ– ನೀನೇಕೆ ಈ ವರೆಗೆ ಮದುವೆಯಾಗಿಲ್ಲ?

ಪ್ರಾಯಮೀರಿದ ಯುವತಿ– ನನ್ನಲ್ಲಿ ಪ್ರತಿಯೊಂದನ್ನು ತಿನ್ನುವಾಗ ಗುರುಗುಟ್ಟುವ ನಾಯಿ ಇದೆ. ಬಾಯಿ ತೆರೆದಾಗ ಪ್ರತಿಜ್ಞೆ ಮಾಡುವ ಗಿಳಿ ಇದೆ. ಕಂಬಳಿಯ ಮೇಲೆ ಬೂದಿ ಚೆಲ್ಲುವ, ಹೊಗೆಯಾಡುವ ಚಿಮಿಣಿ ಇದೆ. ರಾತ್ರಿ ಎಲ್ಲಾ ಹೊರಗಿರುವ ಬೆಕ್ಕಿದೆ. ಮತ್ತೆ ನನಗೆ ಗಂಡನೊಬ್ಬನ ಅವಶ್ಯಕತೆ ಎಲ್ಲಿದೆ?

* * *

ಚರ್ಚಿನಲ್ಲಿ ಉಪದೇಶ ಹೇಳುತ್ತಿದ್ದ ಗುರುವು ತನ್ನ ಉಪದೇಶ ಮುಗಿಸಿದ ನಂತರ "ನಿಮ್ಮಲ್ಲಿ ಸ್ವರ್ಗಕ್ಕೆ ಹೋಗಲು ಇಚ್ಛಿಸುವವರು ಎದ್ದುನಿಲ್ಲಿ" ಎಂದನು.

ಒಬ್ಬ ಚಿಕ್ಕ ಹುಡುಗನ ವಿನಾ ಎಲ್ಲರೂ ಎದ್ದುನಿಂತರು.

ಗುರು ಬಾಲಕನನ್ನು ನೋಡಿ– "ನಿನಗೆ ಸ್ವರ್ಗಕ್ಕೆ ಹೋಗಲು ಇಚ್ಛೆ ಇಲ್ಲವೇ?

ಬಾಲಕ– ಇವರೆಲ್ಲಾ ಹೋಗುವದಾದರೆ ನಾನು ಹೋಗಲಾರೆ!

• • •

ಸಂಪಾದಕ– ನೀನು ಬರೆದ ಕವನಗಳನ್ನು ಓದಲು ಸಾಧ್ಯವೇ ಇಲ್ಲ. ನಿನ್ನ ಬರವಣಿಗೆ ಚೆನ್ನಾಗಿಲ್ಲ. ಅದನ್ನು ಟೈಪ್ ಮಾಡಿ ತರಲಿಕ್ಕೇನು?

ತರುಣ ಕವಿ– ನನಗೆ ಟೈಪ್ ಮಾಡಲು ತಿಳಿದಿದ್ದರೆ ಈ ರೀತಿ ವ್ಯರ್ಥ ಕವನ ಬರೆದು ಸಮಯ ಕೊಲ್ಲುತ್ತಿದ್ದೆನೇ?

• • •

ಹೋಟೇಲಿನಲ್ಲಿ ಹುರಿದ ಮೀನಿಗೆ ಆರ್ಡರ್ ಮಾಡಿ ಬಹಳ ಹೊತ್ತಾದರೂ ಬಾರದಿರಲು ಗಿರಾಕಿಯು ಅಸಮಾಧಾನಗೊಂಡನು.

ಮಾಣಿ– ಇಲ್ಲ ಸಾರ್. ನಿಮ್ಮ ಮೀನು ಇನ್ನೊಂದೆರಡು ಮಿನಿಟುಗಳಲ್ಲಿ ಬಂದುಬಿಡುತ್ತದೆ.

ಗಿರಾಕಿ– ನೀನು ಯಾವ ಗಾಣ ಉಪಯೋಗಿಸುತ್ತಿರುವೆಯೆಂದು ಹೇಳು!

• • •

ಸೋಮವಾರಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಕೆ. ಎಂ. ಮೊಗಪ್ಪನವರು

ಹುಚ್ಚರ ಹಟ್ಟಿ

ಕಾಲೇಜ್ ಸೂಕ್ತಿಸುಧೆ!

ಪ್ರಾಥಃಕಾಲದ ಗಂಟೆ ಎಂಟಕ್ಕೆದ್ದು
ಮುಖತೊಳೆಯದೆ ಇಡ್ಲಿದೋಸೆಯ ಮೆದ್ದು
ಪಕ್ಕದ ರೂಮಿನಿಂ ಸಿಗರೇಟು ಕದ್ದು
ಗೆಳೆಯರೊಡಗೂಡಿ ಮಾಡು ಸಿಟಿಯಲ್ಲಿ ಸದ್ದು

ತಂದೆ ಬರುವದಂ ತಿಳಿದೊಡೆ
ರಾಮಕೃಷ್ಣರ ಪಟಗಳಂ ತಂದಿಡು
ಗೆಳೆಯರ ಪುಸ್ತಕಗಳಂ ತುಂಬಿಡು
ಆಸಕ್ತಿಯಿಂ ಓದುತಾ ಸದಾ ಕುಳಿತಿರು

ಅಪ್ಪನೆದುರು ಸಿಗರೇಟು ಸೇದ್ವರ ಬೈಯ್ದು
ತಪ್ಪದೆ ನಿತ್ಯಕರ್ಮಗಳ ಮಾಡಿ
ಅಪ್ಪ ಹೋಟಲಿಗೆ ಕರೆದರೂ ಪೋಗದೆ
ತೆಪ್ಪನಿದ್ದು ಪುಸ್ತಕ ಹಿಡಿದಿರು ಮರೆಯದೆ!

ಮಗನ ಚರ್ಯೆಯಿಂ ಮನಕರಗಿ
ಅಗಲುವ ಸಮಯದಿ ತಂದೆ ಕನಿಕರದಿ
ಮಗನಿಗೆ ಪುಸ್ತಕ ಖರ್ಚುಗಳಿಗೆಂದು
ಮೊಗನೋಡಿ ಕಂಬನಿತುಂಬಿ ಕೊಡುವಂ ಶಕ್ತಿಮೀರಿ

ತಂದೆ ಮರೆಯಾಗಲು ಉಸಿರೆಳೆದು
ರಾಮಕೃಷ್ಣರ ಬದಲು ಸಿನೆಮನಟಿಯರ ನೆನೆದು
ಗೆಳೆಯರ ಪುಸ್ತಕಗಳ ಮರುವದಿಸಿ
ದೊರೆತ ಹಣಮೊಡನೆ ಸಿಟಿ ಎಡೆಗೆ ನಡೆಸೋದರಾ!

— ದಾಸ್.

ಬೃಹದಾಕಾರದ ಮೀನು

ಮದ್ರಾಸಿನ ಕರಾವಳಿಯಲ್ಲಿ ಬೆಸ್ತರು ಇತ್ತೀಚೆಗೆ ರಾಕ್ಷಸಾಕೃತಿಯ ಹುಲಿ ಮೀನೊಂದನ್ನು ಸಮುದ್ರದಲ್ಲಿ ಹಿಡಿದು ಬಹಳ ಸಾಹಸಪಟ್ಟು ದಡಕ್ಕೆ ತಂದು ಹಾಕಿದರು. ರಾಮಪುರದ ದೊರೈಕನ್ನು ಮತ್ತು ಪಿಚ್ಚೆಯ ಸೆಟ್ಟಿ ಎಂಬ ಇಬ್ಬರು ಬೆಸ್ತರು ಚಿಕ್ಕ ಮೀನುಗಳನ್ನು ಹಿಡಿಯಲೆಂದು ಸಮುದ್ರದಲ್ಲಿ ಮುಂದುವರಿದಿದ್ದರು. ಅವರು ಬೀಸಿದ್ದ ಸಾಮಾನ್ಯ ಬಲೆಯಲ್ಲಿ ಸಿಕ್ಕಿಕೊಂಡಿದ್ದ ಒಂದು ಮೀನು ಅವರು ಕುಳಿತಿದ್ದ ತೆಪ್ಪ ದೋಣಿ (ಮದ್ರಾಸಿನಲ್ಲಿ ಇದನ್ನು 'ಕೆಟಮರನ್' ಎನ್ನುತ್ತಾರೆ) ಯನ್ನು ಒಂದು ಮೈಲು ದೂರಕ್ಕೆ ಎಳೆದೊಯ್ದಿತು. ಈ ಮೊದಲು ಎಂದೂ ಆಗದ ಈ ವಿಚಿತ್ರ ಅನುಭವಕ್ಕೆ ದಿಗಿಲು ಹೊಂದಿದ ಅವರು ಸಹಾಯಕ್ಕಾಗಿ ಬೊಬ್ಬಿಟ್ಟರು. ದಡದಲ್ಲಿ ಕೆಲಸ ಮಾಡಿಕೊಂಡಿದ್ದ ಇತರ ಕೆಲಮಂದಿ ಬೆಸ್ತರು ಕೂಡಲೇ ಆ ಕಡೆ ಧಾವಿಸಿ ಬೃಹದಾಕಾರದ ಆ ಮೀನನ್ನು ಜೀವಂತವಾಗಿ ಹಿಡಿದು ದಡಕ್ಕೆ ತಂದರು. ದಡಕ್ಕೆ ತಂದ ಕೆಲವೇ ನಿಮಿಷಗಳಲ್ಲಿ ಆ ಮೀನು ಸತ್ತು ಹೋಯಿತು. ಆ ಮೀನಿನ ತೂಕ ೯೫೦ ರಾತಲುಗಳಷ್ಟಿತ್ತು. ೧೭ ಅಡಿ ಉದ್ದ, ೩ ಅಡಿ ಅಗಲ, ೧೦ ಅಡಿ ಸುತ್ತಳತೆಯುಳ್ಳ ಈ ಶಾರ್ಕಿನಿಂದ ಕನಿಷ್ಟ ಪಕ್ಷ ೫ ಗೆಲನ್‌ಗಳಷ್ಟಾದರೂ ಎಣ್ಣೆ ಹಿಂಡಿ ತೆಗೆಯಬಹುದೆಂದು ಅಂದಾಜು ಹಾಕಲಾಗಿದೆ.

ಪತಿಯೊಡನೆ ಸೆರೆಮನೆಗೆ

ಚಿರಾಲಾದಿಂದ ಕೇಳಿಬರುತ್ತಿರುವ ನೈಜ ಪ್ರಕರಣವೊಂದು ಅತ್ಯಂತ ಸ್ವಾರಸ್ಯಪೂರ್ಣವಾಗಿದೆ. ಡೇತ ಚಿನ್ನೋಡು ಎಂಬ ೧೮ ವರ್ಷದ ಹುಡುಗನು ನಾಗೇಶ್ವರಮ್ಮ ಎಂಬ ೧೪ ... ಕ್ಷತ್ರಿಯದ ಹುಡುಗಿಯನ್ನು ಆಕೆಯ ಮಾತಾಪಿತೃಗಳ ಅಭಿಮತಕ್ಕೆ ವಿರುದ್ಧವಾಗಿ ಎತ್ತಿಕೊಂಡು ಹೋದನೆಂಬ ಅಪರಾಧದ ಮೇಲೆ ಸೆರೆ ಹಿಡಿಯಲ್ಪಟ್ಟನು. "ನಾನು ನನ್ನ ಇಷ್ಟ ಪ್ರಕಾರವೇ ಅವನ ಜೊತೆಯಲ್ಲಿ ಹೋಗಿದ್ದೆ. ಅವನು ನನ್ನನ್ನು ಎತ್ತಿಕೊಂಡು ಹೋದದ್ದಲ್ಲ. ಅವನನ್ನು ನಾನು ಮದುವೆಯಾಗಿದ್ದೇನೆ' ಎಂದು ನಾಗೇಶ್ವರಮ್ಮನ ವಾದ. ಅಷ್ಟೇ ಅಲ್ಲ, 'ಪತ್ನಿಯು ಪತಿಯ ಅರ್ಧಾಂಗಿ; ಆಕೆ ಅವನ ಪಕ್ಕದಲ್ಲೇ ಯಾವಾಗಲೂ ಇರತಕ್ಕದ್ದು. ನನ್ನ ಗಂಡನ ಜೊತೆಯಲ್ಲಿ ನಾನೂ ಸೆರೆಮನೆ ಸೇರುವೆನು' ಎಂಬುದಾಗಿಯೂ ಆಕೆ ಹಟ ಹಿಡಿದಳು. ತರುಣಿಯ ಹೆತ್ತವರು ಪೋಲೀಸರಿಗೆ ದೂರು ಕೊಟ್ಟುದರಿಂದ ಆಕೆ ಇನ್ನೂ ವೈನರೆಯದ ಕಾರಣ, ನಾಗೇಶ್ವರಮ್ಮ ಮನೆಗೆ ಹಿಂದಿರುಗಬೇಕಾಯಿತು. ಡೇತ ಚಿನ್ನೋಡುವನ್ನು ರಿಮಾಂಡಿನಲ್ಲಿಡಲಾಗುವದು.

ಜ್ಞಾನದೀಪ

(೧)

ಆಟಂ ಬಾಂಬು ತಾನು ಸಿಡಿದೇ ಊರನ್ನು ಸುಡುತ್ತದೆ. ಆದರೆ ಮನುಷ್ಯನು ತಾನು ಕೆಟ್ಟೇ ಅನ್ಯರನ್ನು ಕೆಡಿಸುತ್ತಾನೆ.

(೨)

ಬಾಯಾರಿದವನಿಗೆ ಗುಟುಕು ತೀರ್ಥ ಸಾಕಾಗದು, ತಂಬಿಗೆ ನೀರೇ ಬೇಕು. ಅದೇ ರೀತಿ ಬಾಳುವೆಗೆಟ್ಟವನಿಗೆ ಸಲಹೆ ಸಾಕಾಗದು. ಸಹಾಯವೇ ಬೇಕು.

(೩)

ಬಟ್ಟೆ ಉರಿಯುವದು ಗೋಚರಕ್ಕೆ ಬಂದಂತೆ ಹೊಟ್ಟೆಯುರಿವುದು ಬರಲಾರದು. ಮದಾಂಧರ ಕೆಲಸ ತಿಳಿದು ಬರುವಂತೆ ಮತ್ಸರಿಗಳ ಹಂಚಿಕೆ ತೋರಿ ಬಾರದು.

—ಸುಡಿಮುತ್ತು.

೬—೯—೫೩ನೇ ಕೊಡಗು ಬುಧವಾರ.

ಅಸ್ಪೃಶ್ಯತೆ

ನಮ್ಮ ರಾಜ್ಯ ಘಟನೆಯ ೧೭ನೇ ನಿಬಂಧನೆಯಲ್ಲಿ "ಅಸ್ಪೃಶ್ಯತೆಯನ್ನು ವಜ್ಜಗೊಳಿಸಲಾಗಿದೆ. ಯಾವುದೇ ರೀತಿಯಲ್ಲಿ ಅದನ್ನು ಅನುಸರಿಸುವವನ್ನು ನಿಶೇಧಿಸಲಾಗಿದೆ. ಅಸ್ಪೃಶ್ಯತೆಯನ್ನು ಅನುಸರಿಸುವವರು ಕಾನೂನು ಪ್ರಕಾರ ಶಿಕ್ಷಾರ್ಹರು" ಎಂದು ವಿಧಿಸಲ್ಪಟ್ಟಿದ್ದರೂ ಶಿಕ್ಷಿಸಲು ಅನುವಾಗುವಂತೆ ಸಂಬಂಧಿಸಿದ ಕಾನೂನು ಇರುವದಿಲ್ಲ. ದಳಿತ ವರ್ಗದ ಕಮಿಷನರಾದ ಶ್ರೀ ಶ್ರೀಕಂಠರವರು ಅಂಥಾ ಒಂದು ಕಾನೂನನ್ನು ಮಾಡುವ ಅವಶ್ಯಕತೆಯನ್ನು ತಮ್ಮ ವರದಿಯಲ್ಲಿ ಸ್ಪಷ್ಟಪಡಿಸಿದ್ದರು. ಮದ್ರಾಸು, ತಿರುವಾಂಕೂರು, ಕೊಡಗು ಮೊದಲಾದ ಹಲವು ಸಂಸ್ಥಾನಗಳು ತಮ್ಮ ವ್ಯವಹಾರ ಕ್ಷೇತ್ರಕ್ಕೊಳಪಟ್ಟ ಅಸ್ಪೃಶ್ಯತೆಯನ್ನು ಶಿಕ್ಷಿಸುವ ಕಾನೂನು ಮಾಡಿರುವರೇನೋ ನಿಜ. ಆದರೆ ಇಡೀ ಹಿಂದೂಸ್ಥಾನಕ್ಕೆ ಅನ್ವಯಿಸುವಂತೆ ಒಂದು ಕಾನೂನು ಇಲ್ಲ. ಆದ್ದರಿಂದ ಜನತಾ ಸಭೆಯಲ್ಲಿ ಈ ಬಗ್ಗೆ ಒಂದು ಮಸೂದೆಯನ್ನು ತರುವ ತೀರ್ಮಾನವನ್ನು ಕೇಂದ್ರ ಸರಕಾರವು ಮಾಡಿ ಅದರ ಕರಡು ಪ್ರತಿಯನ್ನು ಸಂಸ್ಥಾನ ಸರಕಾರಗಳಿಗೂ, ದಳಿತ ವರ್ಗದವರ ಸಂಘ-ಸಂಸ್ಥೆಗಳಿಗೂ, ಜನತಾ ಸಭೆಯ ಸದಸ್ಯರಿಗೂ ಅಭಿಪ್ರಾಯಕ್ಕಾಗಿ ಕಳುಹಿಸಿದೆ. ಸೆಪ್ಟೆಂಬರ್ ೨೦ರ ಒಳಗೆ ಈ ಬಗ್ಗೆ ಅಭಿಪ್ರಾಯವನ್ನು ಕೊಡಬೇಕಿದೆ. ನಂತರ ಜನತಾ ಸಭೆಯಲ್ಲಿ ಈ ಮಸೂದೆಯನ್ನು ಮಂಡಿಸಲಾಗುವುದು.

ಈ ಮಸೂದೆಯ ಮೇರೆ ಅಸ್ಪೃಶ್ಯನೆಂಬ ಕಾರಣ ಯಾವುದೇ ಉದ್ಯೋಗಕ್ಕೆ ಒಬ್ಬನು ಅನರ್ಹನೆನ್ನಕೂಡದು. ಆತನಿಗೆ ಯಾವುದೇ ರೀತಿಯ ನಿರ್ಬಂಧ ಹಾಕಕೂಡದು. ಅಂಗಡಿಗೆ, ಸಾರ್ವಜನಿಕ ಹೋಟಲಿಗೆ, ಸಾರ್ವಜನಿಕ ಯಾವುದೇ ವಿನೋದ ಗೃಹಗಳಿಗೆ ಪ್ರವೇಶಿಸುವವನ್ನು ತಡೆಯಕೂಡದು. ಯಾವುದೇ ಕೆರೆ, ನದಿ, ಬಾವಿ, ಕಟ್ಟೆ, ನಲ್ಲಿ ಇತರ ಯಾವುದೇ ನೀರಿನ ಸ್ಥಳಗಳ, ಸ್ನಾನಘಟ್ಟ, ಸ್ಮಶಾನ, ರಸ್ತೆ, ಇತರ ಯಾವುದೇ ಸಾರ್ವಜನಿಕ ಸ್ಥಳಗಳ ಉಪಯೋಗ ಹಾಗೂ ಪ್ರವೇಶವನ್ನು ನಿರ್ಬಂಧಿಸಕೂಡದು. ಸರಕಾರದ ವಂತಿಗೆ ಯಾ ಸಹಾಯ ಪಡೆಯುವ ಯಾವುದೇ ನಿಧಿ ಹಾಗೂ ಸವಲತ್ತುಗಳಿಂದ ಅವನನ್ನು ವಿನಾಯಿಸಕೂಡದು.

ಹಿಂದೂದೇಶದ ಜನಸಂಖ್ಯೆಯಲ್ಲಿ ಐದನೇ ಒಂದಂಶದಷ್ಟು ದಳಿತವರ್ಗದವರಿದ್ದಾರೆ. ಇವರ ಉನ್ನತಿ ಮತ್ತು ಸುಧಾರಣೆಯಿಲ್ಲದೆ ದೇಶ ಪ್ರಗತಿಗೇರಲಾರದೆಂಬುದು ಸ್ವಯಂ ಸಿದ್ಧ. ಆದ್ದರಿಂದ ಮೇಲ್ಕಂಡ ನಿಯಮ ಆಗಬೇಕಾದ್ದು ಅತ್ಯವಶ್ಯ. ಇಂಥಾ ಒಂದು ಶಾಸನವು ಜಾರಿಗೆ ಬರುವದರಿಂದ ಎಲ್ಲವೂ ಸಾಧಿಸಿದಂತಾಗುವ ದೆಂದು ಭಾವಿಸುವದು ತಪ್ಪು. ಏಕೆಂದರೆ ಕೊಡಗಿನಲ್ಲಿ ಇಂಥಾ ಶಾಸನ ಜಾರಿಯಲ್ಲಿದ್ದರೂ ಕೂಡ ಹರಿಜನರ ಮತ್ತು ದಳಿತ ವರ್ಗದವರ ಸ್ಥಿತಿಯೇನೂ ಸುಧಾರಿಸುವದಿಲ್ಲ. ಇನ್ನೂ ಕೂಡ ಹರಿಜನರು ಮತ್ತಿತರ ದಳಿತ ವರ್ಗದವರು ಸಾರ್ವಜನಿಕ ಸ್ಥಳಗಳಾದ ಹೋಟೇಲು, ಆಸ್ಪತ್ರೆ, ದೇವಸ್ಥಾನಗಳಿಂದ ದೂರವಾಗಿಯೇ ಇದ್ದಾರೆ. ಹೋಟೆಲಿನ ಬಾಗಿಲಿನಲ್ಲಿ ಕೆಟಹಿಡಿದು ನಿಂತು ಕಾಫಿ ಕುಡಿಯುವ ದೈನ್ಯಸ್ಥಿತಿ ಇನ್ನೂ ಅವರಿಗೆ ತಪ್ಪಿಲ್ಲ. ಆದ್ದರಿಂದ ಒಂದು ಕಾನೂನನ್ನು ಪಾಸು ಮಾಡಿದ್ದರಿಂದ ಅಸ್ಪೃಶ್ಯತೆ ನಿವಾರಣೆಯಾದಂತಾಗಲಿಲ್ಲ. ಈ ವರ್ಗದವರ ಆರ್ಥಿಕ ಅಭಿವೃದ್ಧಿಯಾಗುವಂತೆ ಪ್ರಯತ್ನಿಸಬೇಕು. ಆರ್ಥಿಕ ಪ್ರಶ್ನೆಯು ಬಗೆಹರಿಯದಿದ್ದರೆ ಅವರ ಸುಧಾರಣೆಯಾಗುವದು ಅಷ್ಟಕಷ್ಟೆ. ಮನುಷ್ಯನು ಕೇವಲ ಹೊಟ್ಟೆಯ ದೃಷ್ಟಿಯಿಂದಲೇ ಸರ್ವ ಪ್ರಶ್ನೆಗಳನ್ನು ನೋಡಬಾರದೆಂದು ಹೇಳುವವರಿರಬಹುದು. ಆದರೆ ದಳಿತವರ್ಗದ ಕಮಿಷನರಾದ ಶ್ರೀಕಂಠರವರು ಹೇಳುವಂತೆ 'ಕೇವಲ ರೊಟ್ಟಿಯಿಂದಲೇ ಮನುಷ್ಯನು ಬದುಕುವದಲ್ಲವೆಂಬುದು ನಿಜವಿರಬಹುದು. ಆದರೆ ರೊಟ್ಟಿ ಇಲ್ಲದಿದ್ದರೆ ಆತನು ಜೀವಿಸಲೇ ಸಾಧ್ಯವಿಲ್ಲ' ಎಂಬುದನ್ನು ಎಲ್ಲರೂ ಮನದಲ್ಲಿಡಬೇಕು.

ಭರತಖಂಡದ ಆರ್ಥಿಕ ಪುನರ್ರಚನೆಯಲ್ಲಿ ದಳಿತವರ್ಗದವರ ಆರ್ಥಿಕ ಪುನರ್ಘಟನೆಯು ಅತೀ ಪ್ರಾಮುಖ್ಯವಾದುದು. ಈ ಆರ್ಥಿಕ ಸ್ವರಾಜ್ಯವು ದಳಿತವರ್ಗದವರಿಗೆ ಬಾರದ ವರೆಗೆ ಯಾವ ನಿಯಮ ಕಾನೂನುಗಳಿದ್ದರೂ ಅಸ್ಪೃಶ್ಯತೆ ಉಳಿದೇ ಉಳಿಯುವದು. ಈ ವಿಚಾರವನ್ನು ತಿಳಿದೇ ಆಚಾರ್ಯ ವಿನೋಬಾಭಾವೆಯವರು ತಮ್ಮ ಭೂದಾನ ಚಳವಳದಲ್ಲಿ ದೊರೆಯುವ ಭೂಮಿಯ ಮೂರನೇ ಒಂದಂಶವನ್ನು ಭೂಮಿ ಇಲ್ಲದ ಹರಿಜನರಿಗಾಗಿ ಹಂಚುವ ಏರ್ಪಾಡು ಮಾಡಿರುವರು. ಆದ್ದರಿಂದ ಈ ಆರ್ಥಿಕ ಪ್ರಶ್ನೆಯನ್ನು ಪ್ರತಿ ಸರಕಾರಗಳು ಪ್ರಥಮ ಬಗೆಹರಿಸಬೇಕಾಗಿದೆ.

ಅಸ್ಪೃಶ್ಯತೆಯ ಮೇಲಿನ ಮಸೂದೆಯು ಜಾರಿಯಲ್ಲಿ ಬರುವದು ಅನಾವಶ್ಯವೆಂದು ನಮ್ಮ ಅಭಿಪ್ರಾಯವಲ್ಲ. ಈ ಮಸೂದೆ ಮಂಜೂರಾಗಿ ಜಾರಿಯಲ್ಲಿ ಬಂದರೂ ಕೂಡ ಸಾರ್ವಜನಿಕರ ಪ್ರೋತ್ಸಾಹ, ಬೆಂಬಲ, ಸರಕಾರದ ಒತ್ತಾಯವಿಲ್ಲದಿದ್ದರೆ ಅದು ಈಗ ಅನೇಕ ಪ್ರಾಂತಗಳಲ್ಲಿರುವಂತೆ ಕಾಗದದಲ್ಲಿಯೇ ಉಳಿಯಬಹುದು. ಆದ್ದರಿಂದ ಪಾಸಾದ ಮಸೂದೆಯು ಜಾರಿಯಲ್ಲಿ ಬರುವಂತೆ ಸರಕಾರ ಒತ್ತಾಯ ಮಾಡಬೇಕು. ಯೋಗ್ಯ ಪ್ರಚಾರ, ವಿವರಣೆಗಳಿಂದ ತಕ್ಕ ವಾತಾವರಣ ಕಲ್ಪಿಸಬೇಕು. ಅದಿಲ್ಲದೆ ಆರ್ಥಿಕ ಶಕ್ತಿಯಿಲ್ಲದ ದಳಿತ ವರ್ಗದವರು ಯಾವುದೇ ಹಿತಕಾರಕ ಕಾನೂನಾದರೂ ಅದರ ಉಪಯೋಗವನ್ನು ಹೊಂದಿಕೊಳ್ಳಲಾರರು. ಕೊಡಗಿನಲ್ಲಿ ಕಾನೂನು ಇದೆ. ಆದರೆ ಅದು ಕಾರ್ಯತಃ ಜಾರಿಯಲ್ಲಿ ಇಲ್ಲ. ಹರಿಜನ, ದಳಿತ ವರ್ಗದವರನ್ನು ಮೆಟ್ಟಿಸಿ, ಗದರಿಸುವ ಪ್ರವೃತ್ತಿಯೇ ಇಂದೂ ಸಮಾಜದಲ್ಲಿದೆ. ಕೆರೆ, ಬಾವಿಗಳಿಂದ ಇಂದೂ ಅವರು ದೂರ ಉಳಿಯಬೇಕಾಗಿದೆ.

ಈ ಬಗ್ಗೆ ಹರಿಜನರ ತೊಂದರೆ ತೊಡರುಗಳನ್ನು ತಿಳಿದು ಅವುಗಳನ್ನು ಪರಿಹರಿಸಲು ಸಿ. ಐ. ಡಿ. ಇಲಾಖೆ ಮುಂಥಾದಿದ್ದರೆ ದೇಶದ ಹಿತ ಹೆಚ್ಚುತ್ತಿತ್ತು. ಬದಲು ಬೇಕಾದಷ್ಟು ಇಲ್ಲ. ಬೇಡವಾದಲ್ಲಿ ಇದೆ. ಮುಂದಾದರೂ ಸಾರ್ವಜನಿಕರೂ ಸರಕಾರವೂ ತಮ್ಮ ಜವಾಬ್ದಾರಿಗಳನ್ನರಿತು ವರ್ತಿಸಬೇಕಿದೆ ಏಕೆಂದರೆ ದಳಿತ ವರ್ಗದವರ ಅಭಿವೃದ್ಧಿ, ಪ್ರಗತಿ ಇಲ್ಲದೆ ದೇಶದ ಅಭಿವೃದ್ಧಿ ಪ್ರಗತಿ ಸಾಧ್ಯವಾಗದು

ವರ್ತಮಾನ.

ಸೋಮವಾರಪೇಟೆ ಹೈಸ್ಕೂಲಿನ ವಿದ್ಯಾರ್ಥಿಗಳ ಭಾರತ ಸೇವಾ ಸಮಾಜವು ಒಂದು ಏಕೈಯಷ್ಟು ಬತ್ತದ ವ್ಯವಸಾಯವನ್ನು ಮಾಡಿರುವದಲ್ಲದೆ ಒಂದೂವರೆ ಎಕ್ರೆ ಜಮೀನಿನಲ್ಲಿ ಹುರುಳಿ, ಜೋಳ, ಕಬ್ಬು ಮೊದಲಾದುವನ್ನು ಬೆಳೆಸುವ ಏರ್ಪಾಡು ಮಾಡಿರುವರು. ವಿದ್ಯಾರ್ಥಿಗಳ ಈ ಕೆಲಸಕ್ಕೆ ಶ್ರೀ. ಜೆ. ಬಿ. ಸ್ಪ್ರಿಂಗರ್‌ರವರು ತಮ್ಮ ಟ್ರಾಕ್ಟರನ್ನೂ, ಶ್ರೀ. ಚೌಡ್ಲು ಸುಬ್ಬಯ್ಯನವರು ಉಳುವ ಎತ್ತು ಮತ್ತಿತರ ಸಾಹಿತ್ಯಗಳನ್ನೂ ಶ್ರೀ. ಬಿ. ಜಿ. ನಂಜುಂಡನವರು ಸ್ಥೈರನ್ನೂ ಕೊಟ್ಟು ಸಹಕರಿಸಿದರು.

ತಾರೀಕು ೨೭ ರಲ್ಲಿ ಮುಖ್ಯ ಮಂತ್ರಿ ಪೂಣಚ್ಚನವರು ಮಡಿಕೇರಿ ಹೈಸ್ಕೂಲು ಮತ್ತು ಮಿಡಲ್ ಸ್ಕೂಲುಗಳನ್ನು ಸಂದರ್ಶಿಸಿ ಮಳೆಗಾಳಿಯ ದೆಸೆಯಿಂದ ಕುಸಿದು ಶಾಲೆ ನಡೆಸಲು ಅಯೋಗ್ಯವಾಗಿರುವ ಹಳೆ ಕಟ್ಟಡವನ್ನು ನೋಡಿದರು. ಸ್ಥಳವಿಲ್ಲದ ತರಗತಿಗಳನ್ನು ನಡೆಸಲು ಹೈಸ್ಕೂಲು ಸಮಿತಿಯವರು ತಮ್ಮ ಕಟ್ಟಡದಲ್ಲಿ ನಾಲ್ಕು ಕೊಟ್ಟಡಿಗಳನ್ನು ಬಿಟ್ಟುಕೊಡಲೊಪ್ಪಿದುದಕ್ಕೆ ಸಂತೋಷಪಟ್ಟು ಆ ಕೊಟಡಿಗಳಿಗೆ ಕೆಲವು ರಿಪೇರಿಗಳನ್ನು ಸೂಚಿಸಿದರು.

ತಾರೀಕು ೨೮—೮—೫೩ ರಲ್ಲಿ ಶ್ರೀ. ಎನ್. ಕೆ. ಗಣಪಯ್ಯನವರ ಅಧ್ಯಕ್ಷತೆಯಲ್ಲಿ ನರಗಂಮೂರಿನಲ್ಲಿ ಒಂದು ಫೀಡರ್ ಶಾಲೆಯನ್ನು ತೆರೆಯಲಾಯಿತು. ಶ್ರೀಗಳಾದ ಪಿ. ತಿಮ್ಮಯ್ಯ, ಕೆ. ಎ. ದೇವಯ್ಯ, ಕುಮಾರಿ ಸರಳ, ಬೇಳೂರು ರುದ್ರಪ್ಪ, ಪಿ. ಕೆ. ಚೆಟ್ಟಿಚ, ಮೊದಲಾದವರು ಶಾಲೆಯ ಅವಶ್ಯಕತೆ ಮತ್ತು ಅಭಿವೃದ್ಧಿಯ ವಿಚಾರ ಮಾತಾಡಿದರು. ಶಾಲಾ ಕಟ್ಟಡಕ್ಕೆ ನಿಧಿ ಸಂಗ್ರಹಿಸುವ ಸೂಚನೆಯನ್ನು ಅಧ್ಯಕ್ಷರು ಇತ್ತರು.

ತಾರೀಕು ೨೯—೮—೫೩ ರಲ್ಲಿ ಸಿದ್ದಾಪುರದ ವಯಸ್ಕರ ಶಿಕ್ಷಣ ಶಾಲೆಯ ಪರೀಕ್ಷೆಯು ನಡೆದು ಅಲ್ಲಿ ಓದುತಿದ್ದ ಎಂಟು ವಿದ್ಯಾರ್ಥಿಗಳು ತೇರ್ಗಡೆಯಾಗಿರುವರು. ಇವರ ವಿದ್ಯಾಭ್ಯಾಸವು ಇನ್ನೂ ಮುಂದರಿಯುವಂತೆ ಸಹಾಯ ಮಾಡಲು ಶ್ರೀ ಎಸ್. ಎಸ್. ಮರಿಯಪ್ಪ, ಬಿ. ಆರ್. ವೆಂಕಟರಮಣ, ಕೃಷ್ಣಕುಟ್ಟಿ, ಸೋಮಮೇಸ್ತ್ರಿ ಮತ್ತು ದೂಮಪ್ಪ ಇವರಿಂದ ಕೂಡಿದ ಒಂದು ಸಮಿತಿಯನ್ನು ನೇಮಿಸಲಾಗಿದೆ.

ಮದ್ರಾಸಿನಲ್ಲಿ ಪೋಲೀಸ್ ಕಮಿಷನರಾಗಿದ್ದ ಶ್ರೀ. ಪೆಮ್ಮಂಡ ಮೊಣ್ಣಪ್ಪನವರನ್ನು ಹೊಸದಾಗಿ ಅಕ್ಟೋಬರ್ ೧ರಿಂದ ನಿರ್ಮಾಣವಾಗಲಿರುವ ಆಂಧ್ರ ಪ್ರಾಂತದ ಪೋಲೀಸ್ ಇಲಾಖೆಯ ಪುನರ್ಘಟನೆಯನ್ನು ಮಾಡಲು ಮುಖ್ಯಾಧಿಕಾರಿಯಾಗಿ ನೇಮಿಸಿರುವರು.

ಕಳೆದ ವಾರದ ಪತ್ರಿಕೆಯಲ್ಲಿ ಬೆಳೆಗಳ ಸ್ಪರ್ಧೆಗೆ ಸೇರುವ ಬಗ್ಗೆ ಪ್ರಕಟವಾಗಿದ್ದ ನಿಯಮಗಳ ಪ್ರಕಟಣೆಯಲ್ಲಿ ಸ್ಪರ್ಧಿಯಾಗಿ ಸೇರಲು ಕಡೇ ತಾರೀಕು ೩೧—೮—೫೩ ಎಂದು ಪ್ರಕಟವಾದುದು ತ

ಕ್ಕೆಂದರೆ ತಾ ೩೧–೧೦–೫೩ ಎಂದು ಓದಿಕೊಳ್ಳಬೇಕೆಂದೂ ಇಲಾಖೆಯವರು ತಿಳಿಸುತ್ತಾರೆ.

ಪೋಸ್ಟ್ ಮತ್ತು ಟೆಲಿಗ್ರಾಫಿಕ್ ಕೆಲಸಗಾರರ ಕೂಟದ ಮಡಿಕೇರಿ ಶಾಖೆಯೊಂದು ತೆರೆಯಲ್ಪಟ್ಟು ಅದರ ಪ್ರಥಮ ಮೀಟಿಂಗು ತಾ. ೨೮ರಲ್ಲಿ ಶ್ರೀ ಎಚ್. ಟಿ. ಪ್ರಸನ್ನನವರ ಅಧ್ಯಕ್ಷತೆಯಲ್ಲಿ ನಡೆದು ಶ್ರೀಗಳಾದ ಎಚ್. ಟಿ. ಪ್ರಸನ್ನ (ಅಧ್ಯಕ್ಷ) ಬಿ. ಎಸ್. ಕೃಷ್ಣಪ್ಪ (ಉಪಾಧ್ಯಕ್ಷ) ಎಂ. ಪಿ. ಮುತ್ತಣ್ಣ (ಕಾರ್ಯದರ್ಶಿ) ವಿ. ಎಚ್. ಜಾನ್. (ಸಹ ಕಾರ್ಯದರ್ಶಿ) ಶ್ರೀ. ಪಿ. ಪಿ. ನಂಬ್ಯಾರ್ (ಖಜಾನ್ಚಿ) ಸಿ. ಎಸ್. ನಿಂಗಪ್ಪ, ಬಿ. ಎನ್. ಗುರುರಾಜಾಚಾರ್ ಮತ್ತು ಡಿ. ಪಿನ್ಟೋಸ್ (ಕಮಿಟಿ ಮೆಂಬರುಗಳು) ಇವರಿಂದ ಕೂಡಿದ ಕಾರ್ಯಕಾರಿ ಮಂಡಳಿಯನ್ನು ಆರಿಸಲಾಗಿದೆ.

ಕೊಡಗು ಸಹಕಾರಿ ಮಾರ್ಕೆಟಿಂಗ್ ಫೆಡರೇಷನ್ನಿನಲ್ಲಿ ಕತ್ತಿ, ಗುಳ, ಇವೇ ಮೊದಲಾದ ಹತ್ಯಾರುಗಳನ್ನೂ, ಗಾಡಿ ಪಟ್ಟೆಗಳನ್ನೂ ಮಾಡಲು ಯೋಗ್ಯವಾದಂಥ ಉಕ್ಕಿನ ಪಟ್ಟೆಗಳು ಮಾರಾಟಕ್ಕೆ ದೊರೆಯುತ್ತವೆ. ಖಾಯಸ್‌ದಾರರು ಒಡನೆ ಕೊಡಗು ಎಗ್ರಿಕಲ್ಚರಲ್ ಆಫೀಸರವರಿಗೆ ಅರ್ಜಿ ಬರೆದುಕೊಳ್ಳತಕ್ಕದ್ದೆಂದು ತಿಳಿಸುತ್ತಾರೆ.

ಆನೆಚೌಕೂರಿನಿಂದ ಮಧ್ಯಾಹ್ನ ೧೨–೩೦ ಗಂಟೆಗೆ ಹೊರಟು ತಿತಿಮತಿ ಮಾರ್ಗವಾಗಿ ಪೊನ್ನಂಪೇಟೆಗೆ ೧ ಗಂಟೆಗೆ ತಲುಪಿ ಪುನಃ ಅದೇ ಮಾರ್ಗವಾಗಿ ಹಿಂದಕ್ಕೆ ಹೋಗಿ ೧–೫೫ ಗಂಟೆಗೆ ಆನೆ ಚೌಕೂರಿಗೆ ತಲಪುವಂತೆ ಒಂದು ತಾತ್ಕಾಲಿಕ ಬಸ್ ಲೈನನ್ನು ಇಡಲು ಮೈಸೂರಿನ ಶ್ರೀ ಪಿ. ಎನ್. ಸುಂದರರಾಜನ್ ಎಂಬವರಿಗೆ ತಾ. ೨೮ ರಿಂದ ಮೂರು ತಿಂಗಳ ವರೆಗೆ ಲೈಸೆನ್ಸ್ ಕೊಡಲಾಗಿದೆ.

ಕೊಡಗು ಸೆಕ್ರೆಟೆರಿಯೇಟನ್ನು ವಿಭಾಗಗಳನ್ನಾಗಿ ಮಾಡಿ ಕೆಲವು ಆಡಳಿತ ವಿಭಾಗಗಳನ್ನು ಫೈನಾನ್ಸ್ ಸೆಕ್ರೆಟರಿಯವರಿಗೆ ಕೊಟ್ಟಿರುವರು. ಆ ಪ್ರಯುಕ್ತ ಈ ಕೆಳಗಿನ ವರ್ಗಾವರ್ಗಗಳಾಗಿವೆ ಶ್ರೀ. ಎಂ. ವಿ ರಾಮಸ್ವಾಮಿಯವರನ್ನು ಫೈನಾನ್ಸ್ ಸೆಕ್ರೆಟ್ರಿಯೇಟಿನ ಸುಪರಿಂಟೆಂಡೆಂಟ್‌ರನ್ನಾಗಿಯೂ ಉ. ಕೊ. ಸುಭೇದಾರರಾದ ಶ್ರೀ. ಎನ್. ಎಸ್. ಕುಟ್ಟಪ್ಪನವರನ್ನು ಶ್ರೀ. ಎಂ. ಕೃಷ್ಣಯ್ಯನವರನ್ನು ಚೀಫ್ ಸೆಕ್ರೆಟರಿಯೇಟಿನ ಅಸಿಸ್ಟೆಂಟ್ ಸುಪರಿಂಟೆಂಡೆಂಟರುಗಳನ್ನಾಗಿಯೂ ಶ್ರೀ ಕೆ. ಎನ್. ಸೀತಾರಾಮಯ್ಯನವರನ್ನು ಲಾ ಸೆಕ್ರೆಟರಿಯೇಟಿನ ಅಸಿಸ್ಟೆಂಟ್ ಸುಪರಿಂಟೆಂಡೆಂಟನ್ನಾಗಿಯೂ ವರ್ಗಾಯಿಸಿರುವರು.

ಮಡಿಕೇರಿಯ ಇನ್ಸ್‌ಪೆಕ್ಟರಾದ ಶ್ರೀ. ಕೆ. ವಿ. ಸುಬ್ಬರಾಯರನ್ನು ಫೈನಾನ್ಸ್ ಸೆಕ್ರೆಟರಿಯೇಟಿಗೂ ಎಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಆಫೀಸಿನ ಕ್ಲಾರ್ಕರಾಗಿದ್ದ ಜಿ. ಡಿ. ಪರಮೇಶ್ವರಯ್ಯನವರನ್ನು ಸೆಶನ್ಸ್ ಕೋರ್ಟು ಶಿರಸ್ತೇದಾರರನ್ನಾಗಿಯೂ ಶ್ರೀ. ಸಿ. ಪಿ. ಗಣಪತಿಯವರನ್ನು ವ್ಯವಸಾಯ ಇಲಾಖೆಯ ಹೆಡ್ ಕ್ಲಾರ್ಕರನ್ನಾಗಿಯೂ, ಡಿ. ಇ. ಓ. ಆಫೀಸಿನಲ್ಲಿದ್ದ ಶ್ರೀ. ಬಿ. ಕೆ. ಸುಬ್ರಾಯರನ್ನು ಟ್ರೆಜರಿ ಹೆಡ್ ಎಕೌಂಟೆಂಟರನ್ನಾಗಿಯೂ ವರ್ಗಾಯಿಸಿರುವರು.

ರಾಷ್ಟ್ರ ಸಂಘದ ಅಧ್ಯಕ್ಷಪದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರಿಗೆ?

ರಾಷ್ಟ್ರಸಂಘದ ಅಧ್ಯಕ್ಷ ಸ್ಥಾನಕ್ಕೆ ಮುಂದಿನ ಸಲ ಚುನಾವಣೆ ನಡೆದಾಗ ಅಮೇರಿಕವು ಭಾರತದ ಪ್ರತಿನಿಧಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರಿಗೆ ಮತ ಕೊಡಲು ನಿರ್ಧರಿಸಿದೆಯೆಂದು ಹೇಳಲಾಗಿದೆ.

ಅಂಚೆ ಖಾತೆಯವರಿಗೆ ಮುಂಗಡ ಸಂಬಳ

ಇತ್ತೀಚೆಗೆ ಬಂದ ನೆರೆ ಹಾವಳಿಯಿಂದುಂಟಾದ ಕಷ್ಟದಾಯಕ ಪರಿಸ್ಥಿತಿಯನ್ನು ಸದ್ಯಕ್ಕೆ ಸುಧಾರಿಸುವ ಸಲುವಾಗಿ ಉತ್ತರ ಪ್ರದೇಶ, ಬಿಹಾರ್, ಪಶ್ಚಿಮ ಬಂಗಾಳ, ಅಸ್ಸಾಮು ಮತ್ತು ಮದರಾಸುಗಳ ಎಲ್ಲಾ ಅಂಚೆ ಮತ್ತು ತಂತಿ ಆಫೀಸುಗಳ ವಿಭಾಗಕ್ಕೆ ಮೂರು ತಿಂಗಳುಗಳ ಸಂಬಳದ ಹಣವನ್ನು ಮುಂಗಡವಾಗಿ ತೆರಲು ಸರಕಾರವು ನಿರ್ಣಯಿಸಿದೆಯೆಂದೂ ಈ ವಿಭಾಗದ ಡೈರೆಕ್ಟರ್ ಜನರಲರು ತಿಳಿಸುತ್ತಾರೆ. ಪ್ರಕೃತದ ಆವಶ್ಯಕತೆಗಳನ್ನು ಪೂರೈಸಲು ಈ ಮುಂಗಡ ಹಣವು ಸಹಕಾರಿಯಾದೀತೆಂದು ನಂಬಲಾಗಿದೆ.

ವಿನೋಬಾ ಭಾವೆಯವರ ಭೂದಾನ ಯಜ್ಞ

"೧೯೫೪ನೇ ಮಾರ್ಚಿ ತಿಂಗಳೊಳಗೆ ೨೫ ಲಕ್ಷ ಎಕ್ರೆ ಭೂಮಿಯನ್ನು ದಾನವಾಗಿ ಗಳಿಸಬೇಕೆಂಬ ಶ್ರೀ ವಿನೋಬಾ ಭಾವೆಯವರ ಆಶೆಯು ಕೈಗೂಡುವದರಲ್ಲಿ ಸಂಶಯವಿಲ್ಲ" ಎಂದು ಅವರ ಕಾರ್ಯದರ್ಶಿ ಶ್ರೀ ದಾಮೋದರ ದಾಸರು ನುಡಿದರು.

"೧೯೫೭ರ ಒಳಗೆ ಐದು ಕೋಟಿ ಎಕರೆ ದೊರೆಯುವದರಲ್ಲೂ ಸಂಶಯವಿಲ್ಲ. ಬಿಹಾರದಲ್ಲೇ ಉಳಿದು ಆ ರಾಜ್ಯದಲ್ಲಿರುವ ಭೂ ಸಮಸ್ಯೆಯನ್ನು ಬಿಡಿಸಲು ಅವರು ನಿರ್ಧರಿಸಿರುವರು. ಗಯಾ ಜಿಲ್ಲೆಯೊಂದರಲ್ಲೇ ೧ ಲಕ್ಷ ೨೦ ಸಾವಿರ ಎಕರೆ ಭೂಮಿ ದೊರೆತಿದೆ ಎಂದರು.

ಭೂದಾನ ಯಜ್ಞದಲ್ಲಿ ಸತ್ಯಾಗ್ರಹಕ್ಕೂ ಸ್ಥಾನವಿದೆಯೆಂದವರು ಹೇಳಿ ಆದರೆ ಅದಕ್ಕೆ ಈಗ ಕಾಲ ಬಂದಿಲ್ಲವೆಂದರು.

ಕೊರಿಯಾ ರಾಜಕೀಯ ಪರಿಷತ್ತು

ಕೊರಿಯಾ ರಾಜಕೀಯ ಪರಿಷತ್ತು ವಿಫಲವಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಅಲ್ಲದೆ ಅದರಿಂದ ನಮಗೆ ಯಾವ ಫಲಪ್ರಾಪ್ತಿಯೂ ಲಭಿಸಲಾರದು ಎಂದು ದಕ್ಷಿಣ ಕೊರಿಯಾದ ಅಧ್ಯಕ್ಷರಾದ ರ್ಹೀಯವರು ತಾ. ೩೧ರಲ್ಲಿ ಹೇಳಿದರು.

ದ|| ಕೊರಿಯಾ ಕೊನೆಯ ವರೆಗೂ ಹೋರಾಡುವುದು ಮತ್ತು ನಾವು ಉತ್ತರ ಕೊರಿಯಾಕ್ಕೆ ನುಗ್ಗುವೆವು ಎಂದೂ ಅವರು ಸ್ಪಷ್ಟಪಡಿಸಿದರು. ದಕ್ಷಿಣ ಕೊರಿಯಾಕ್ಕೆ ಆಕ್ಕಿಯನ್ನು ಹೇರಿಕೊಂಡು ಬಂದ ಅಮೇರಿಕನ್ ಹಡಗನ್ನು ಸ್ವಾಗತಿಸುತ್ತಾ ರ್ಹೀಯವರು ಮೇಲಿನಂತೆ ನುಡಿದರು. ಆ ಕಾಲಕ್ಕೆ ದ. ಕೊರಿಯಾದ ಅನೇಕ ಮಂತ್ರಿಗಳೂ ಸೇನಾಧಿಕಾರಿಗಳೂ ಇದ್ದರು.



ಹೊರೆ ಹೊರುವವನು ತಲೆಗೆ ದಪ್ಪನ್ನ ಮುಂಡಾಸು ಸುತ್ತಿಕೊಳ್ಳಬೇಕು. ಹಾಗೆಂದು ರಂಗಿನ ಝರಿ ಮುಂಡಾಸು ಸುತ್ತಿದವರು ಹೊರೆ ಹೊರುವವರೆಂದು ತಿಳಿದರೆ ಅನರ್ಥವಾದೀತು. ನಮ್ರತೆಯಿಂದ ಆಡಿದ ಮಾತಿಗೆ ಒಪ್ಪಿ ತಲೆ ಅಲ್ಲಾಡಿಸುವದಕ್ಕೂ ಅಹಂಕಾರದ ತಲೆ ಅಲ್ಲಾಟಕ್ಕೂ ವ್ಯತ್ಯಾಸವಿರುವಂತೆ ಅತಿರೇಕಾಡಂಭರದ ಮುಂಡಾಸು ಸುತ್ತಿದವರು ಕಾರ್ಯಭಾರ ಹೊರಲಿರುವರೆಂದು ಊಹಿಸಬಾರದು. ಹೊನ್ನೆ ಮರವೆಂದರೆ ಮರವೇ ಹೊನ್ನಿನದೆಂದು ತಿಳಿಯಬಾರದು ಹೇಗೋ ಅದರಂತೆ ಗಂಭೀರದ ಮುಂಡಾಸು ತಲೆಯಲ್ಲಿದೆಯೆಂದು ತಲೆಯೊಳಗಿನ ಭಾವನೆಯೂ ಗಂಭೀರವೆಂದು ಭಾವಿಸಬಾರದು

• • •

ಶುಭ ಶೋಭನಗಳಿಗೆ ನೆರೆ ಮನೆಯವರು ನೆರವು ನೀಡುವ ಸಂಪ್ರದಾಯ ಕೊಡಗಿನಲ್ಲಿ ಹಿಂದಿನಿಂದಲೂ ಬೆಳೆದು ಬಂದ ಪದ್ಧತಿ. ಈಗಲೂ ಕೂಡ ಆ ಪದ್ಧತಿ ಹಳ್ಳಿ ಹಳ್ಳಿಗಳಲ್ಲಿ ಇದ್ದರೂ ಕೂಡ ಮೇಲಿನ ಅಧಿಕಾರಿಗಳ ಮನೆಯಲ್ಲಿ ಕೆಳನೌಕರರ ಕುಟುಂಬ (?) ನೆರವೀಯುವ ಪದ್ಧತಿ ಇಲ್ಲ. ನೆರವಿತ್ತ ನೆರೆಮನೆಯವರಿಗೆ ಸಮಾರಂಭ ಸಂಪೂರ್ಣವಾದ ನಂತರ ಪ್ರತ್ಯೇಕ ಔತಣ ಏರ್ಪಡಿಸುವ ಪದ್ಧತಿ ಇರುವಂತೆ ಈ ನೆರವೀಯುವ ನೌಕರರ ಕುಟುಂಬದ ಮಡಿತಕ್ಕೆ ದೊರೆಯುವ ಪ್ರತಿಫಲವೇನು?

• * *

ಶರೀರಕ್ಕೆ ರೋಗಹಿಡಿದವರು ಹವಾಗುಣವನ್ನು ದೂಷಿಸಿ ಫಲವಿಲ್ಲ ಗಾಳಿ, ಮಳೆ, ಬಿಸಿಲು ಎಲ್ಲವೂ ಅವರಿಗೆ ತಾಪತ್ರಯವೇ? ರೋಗಿಗಳಿಗೆ ಆಗಾಗ್ಗೆ ಅದು ತಿನ್ನಬೇಕು ಇದು ತಿನ್ನಬೇಕೆಂದು ಆಸೆಯಾಗುವಂತೆ ರೋಗಹಿಡಿದ ಶರೀರದ ಅಧಿಕಾರಿಗೆ 'ಕಕ್ಕಡ' ತಿಂಗಳಲ್ಲಿ ಬಾಳೆಮೀನು ತಿನ್ನಬೇಕೆಂದಾಯಿತು. ಎತ್ತು ಹಾರುವ ಮೊದಲು ಗೋಣಿಹಾರಿತೆಂದು ವರ್ತಿಸುವ ಕೆಳನೌಕರರೊಬ್ಬರು ಮೀನು ಹಿಡಿಸಿ ಕಿಸೆಯಿಂದ ದುಡ್ಡು ತೆತ್ತು ತಂದರು. ಅಧಿಕಾರಿಯು ಮೀನಿನ ತಲೆ ಬಾಲಗಳನ್ನು ಕತ್ತರಿಸಿ, ಹೊಟ್ಟೆ ಬಗೆದು ಉಳಿದುದನ್ನು ತಕ್ಕಡಿಯಲ್ಲಿ ತೂಗಿ ಪೌಂಡಿಗೆ ೦–೧೨–೦ ಯಂತೆ ಕ್ರಯಕೊಟ್ಟಾಗ ತಾನು ಕೊಟ್ಟ ದುಡ್ಡಿನ ಅರ್ಧವೂ ದೊರೆಯದ ನೌಕರರ ಮುಖ 'ಸುಖ'ವಾಗಿತ್ತಂತೆ. ಬಂಡಾಟವೇ, ಜೀವನ!

• • •

ತಿಂಗಳಿಗೆ ನೂರೈವತ್ತು ಅನಾಯಾಸ ದೊರೆಯುವ ಸಂಪಾದಕರೊಬ್ಬರು ಬಾಣೆ ಕಂದಾಯ ಹಾಕುವದು ಒಳ್ಳೇದು ಸರಕಾರಕ್ಕೆ ಬೆಂಬಲಕೊಡಬೇಕೆಂಬ ಅರ್ಥದಲ್ಲಿ ಬರೆದ ದೊಡ್ಡ ಹಸ್ತಪತ್ರಿಕೆಯ ಪ್ರತಿಗಳನ್ನು ಹಂಚುತ್ತಾ ದೊಡ್ಡದೊಂದು ಕಟ್ಟನ್ನು ತಾನು ಸಂಚರಿಸುವ ರಸ್ತೆಯ ಪಕ್ಕದ ಮೂಸಿಳ್ಳೆ ಅಂಗಡಿಯಲ್ಲಿ ಹಂಚಲು ಇಟ್ಟರು. ವ್ಯಾಪಾರಕ್ಕೆ ಬಂದ ರೈತರಿಗೆ ೧೦೦ಕ್ಕೆ ಎರಡಾಣೆ ಬೆಲೆ ಇರುವ ಕುರ್ಚೆ ಮೀನು ಕಟ್ಟಿ ಕೊಡಲು ಅದು ಉಪಯೋಗವಾಗುತ್ತಿದೆ. ತರಬೇತಿಲ್ಲದ ಕೋಲಾಟದಲ್ಲಿ ಪೆಟ್ಟು ಕೋಲಿಗೂ ಬಿದ್ದೀತು, ಕೈಗೂ ತಗಲೀತು. ಆದರೆ ವಿಚಾರವಿಲ್ಲದೆ ಮಾಡುವ ಕೆಲಸದಿಂದ ವಿಪರೀತವೇ ಆಗುವದೆಂದು ಇವರು ಯಾವಾಗ ತಿಳಿಯುವರೋ ಕಾಣೆ.

ಕೊಡಗಿನ ಧನಲಕ್ಷ್ಮಿ

ಬೊಂಬಾಯಿಯಿಂದ ಹೊರಡುವ "ಇಲ್ಲಸ್ಟ್ರೇಟೆಡ್ ವೀಕ್ಲಿ"ಯ ಲಂಡನ್ ವಾರ್ತಾವಾಹಕರಾದ ಮಿ. ಮೊಸ್‌ಕಲೇಂಡ್ ಗೇಂಡರ್‌ರವರು ಕೊಡಗಿನ ಧನಲಕ್ಷ್ಮಿಯ ವಿಚಾರವಾಗಿ ಬರೆಯುತ್ತಾ ಧನಲಕ್ಷ್ಮಿಯ ವಾರ್ತೆಯು ಲಂಡನಿನ ಆದಿತ್ಯವಾರ ಪತ್ರಿಕೆಗಳಲ್ಲಿ ಪ್ರಾಮುಖ್ಯವಾಗಿ ಪ್ರಕಟಿಸಲ್ಪಟ್ಟಿದೆಯೆಂದೂ, ಒಂದು ವರ್ಷದ ವರೆಗೆ ಅನ್ನಾಹಾರವಿಲ್ಲದೆ ಜೀವಿಸುತ್ತಿರುವ ಧನಲಕ್ಷ್ಮಿಯ ಕತೆಯು ಸರ್ವರನ್ನೂ ಆಶ್ಚರ್ಯಗೊಳಿಸಿದೆಯೆಂದೂ, ಇಂಗ್ಲೆಂಡಿಗೆ ತಿಳಿದಿರುವಂತೆ ಆಹಾರವಿಲ್ಲದೆ ಮನುಷ್ಯನು ಬದುಕಿದ ಅವಧಿಯೆಂದರೆ ಬ್ರಿಕ್ಸಟನ್ ಜೈಲಿನಲ್ಲಿ ಟೆರೆನ್ಸ್ ಮೆಕ್‌ಸ್ವಿನೆಯವರ ೭೩ ದಿನಗಳ ಉಪವಾಸವೆಂದೂ ಆದರೆ ಧನಲಕ್ಷ್ಮಿಯ ಇದಕ್ಕಿಂಥಲೂ ಐದು ಪಾಲು ಹೆಚ್ಚಿನ ದಿನಗಳ ಜೀವನವು ಆಶ್ಚರ್ಯಕರವೆಂದೂ ಹೇಳಿರುವರು.

ಕೊಡಗಿನ ಧನಲಕ್ಷ್ಮಿಯು ಕಳೆದ ಕೆಲವು ದಿನಗಳಿಂದ ಜ್ವರದಿಂದ ನರಳುತ್ತಿದ್ದು ಜ್ವರವು ೧೦೫ ಡಿಗ್ರಿ ವರೆಗೆ ಏರಿತ್ತೆಂದೂ, ಆಗ್ಗೆ ಆಕೆಗೆ ಪೆನ್ಸಿಲಿನ್ ಇಂಜೆಕ್ಷನ್ ಕೊಡಲಾಗಿತ್ತೆಂದೂ, ಇಂಜೆಕ್ಷನಿನ ನಂತರ ಆಕೆ ಒಂದು ಕಪ್ಪು ಕಾಫಿ ಕುಡಿದಳೆಂದೂ ಅದು ವಾಂತಿಯಾಗಲಿಲ್ಲವೆಂದೂ ತಿಳಿದು ಬಂದಿದೆ. ಕೆಲವು ದಿನಗಳ ನಂತರ ಆಕೆಯು ತನ್ನ ಮನೆಯಿಂದ ಸುಮಾರು ೬ ಮೈಲು ದೂರದ ನೆಂಟರ ಮನೆಗೆ ನಡೆದು ಹೋಗುವ ಮೊದಲು ಬಾಯಾರಿಕೆಯಾಗಿ ಒಂದು ಕಪ್ಪು ನೀರು ಕುಡಿದಳೆಂದೂ ಆದರೆ ಅದು ದಾರಿಯಲ್ಲಿ ವಾಂತಿಯಾಯಿತೆಂದೂ ಗೊತ್ತಾಗಿದೆ. ಯಥಾ ರೀತಿ ಈಗ ಆಕೆಯು ಯಾವುದೇ ಆಹಾರ ಪಾನೀಯಗಳನ್ನು ಸೇವಿಸದೆ ಇರುವಳು.

ವರ್ಗವಿಲ್ಲ.

ತಾ. ೨೧ರ ಓದುಗರ ಓಲೆಯಲ್ಲಿ ಕೊಡಗು ಸರಕಾರಿ ಕಾಲೇಜಿನ ಪ್ರಿನ್ಸಿಪಲರನ್ನು ವರ್ಗಮಾಡಲಿರುವರೆಂಬ ವರ್ತಮಾನವಿದೆಯೆಂದೂ, ಅದು ನಿಜವಿದ್ದರೆ ಅದನ್ನು ರದ್ದು ಮಾಡಬೇಕೆಂದೂ ವಾಚಕರೊಬ್ಬರು ಬರೆದಿದ್ದ ಪತ್ರಕ್ಕೆ ಉತ್ತರವಾಗಿ ಕಾಲೇಜಿನ ಪ್ರಿನ್ಸಿಪಲರಿಂದ ಈ ಪತ್ರ ಬಂದಿದೆ.

"It has been brought to my notice that there appeared in your paper dated 21-8-53 a letter to the Editor conveying a rumour of my transfer from this place. I am informed by the authorites that there is no truth in this rumour".

ತಾರೀಕು ೨೧ರ ಕೊಡಗು ಪತ್ರಿಕೆಯಲ್ಲಿ ಈ ಸ್ಥಳದಿಂದ ಬೇರೆಡೆಗೆ ನನ್ನ ವರ್ಗವಾಗುವದೆಂಬ ವಾರ್ತೆಯ ಪತ್ರವೊಂದು ಪ್ರಕಟವಾದುದು ನನ್ನ ಅವಗಾಹನೆಗೆ ಬಂದಿದೆ. ಆ ವರ್ತಮಾನದಲ್ಲಿ ಸತ್ಯಾಂಶವಿಲ್ಲವೆಂದು ಮೇಲಧಿಕಾರಿಗಳು ನನಗೆ ತಿಳಿಸಿರುವರು"

[ಸಂ.

ತತ್ವವಿಲ್ಲದ ಬಾಡಿಗೆ ನಿಯಂತ್ರಣ

ಸರಕಾರದವರು ಜಾರಿಗೆ ತಂದಿರುವ ಬಾಡಿಗೆ ನಿಯಂತ್ರಣ ಕಾನೂನನ್ನು ನಾನು ಒಪ್ಪುವದಾದರೂ ಅದಕ್ಕೆ ನೇಮಿಸುವ ಅಧಿಕಾರಿಗಳನ್ನು ಆರಿಸುವ ನೀತಿ ಸರಿಯಿಲ್ಲವೆಂದು ಹೇಳದೆ ವಿಧಿಯಿಲ್ಲ.

ಯಾತಕ್ಕೆಂದರೆ ಒಂದು ಕಟ್ಟಡಕ್ಕೆ ಬಾಡಿಗೆ ನಿಯಂತ್ರಿಸುವಾಗ ಕಟ್ಟಡ ನಿಂತಿರುವ ಸ್ಥಳದ ಯೋಗ್ಯತೆ, ಕಟ್ಟಡದ ಭದ್ರತೆ, ಮನೆಯ ಒಳಗಿನ ಅನುಕೂಲತೆ, ಹೊರಗಿನ ಅನುಕೂಲತೆ, ಅದಕ್ಕೆ ಖರ್ಚುಮಾಡಿದ ಬಂಡವಾಳ, ಅದಕ್ಕೆ ವಾರ್ಷಿಕ ಖರ್ಚು ಈ ಮೊದಲಾದ ಅನೇಕ ವಿಷಯಗಳನ್ನು ಪರ್ಯಾಲೋಚಿಸಿ ಬಾಡಿಗೆ ನಿಯಂತ್ರಿಸಬೇಕಾಗಿದೆ.

ಅದರ ಬದಲು ಈಗ ಮಾಡುತ್ತಿರುವ ಕ್ರಮವೇನು? ಯಾವದೋ ಸ್ಥಳದಲ್ಲಿರುವ ಮನೆಯ ಬಾಡಿಗೆಯನ್ನು ಹೋಲಿಸಿ ಅವರಂತೆ ನಿಶ್ಚೈಸುತ್ತಾರೆಂದು ನನ್ನ ಅನುಭವ.

ಅದು ಈಗಿರುವ ಅಧಿಕಾರಿಯ ತಪ್ಪೆಂದು ನಾನು ಹೇಳಬಯಸುವದಿಲ್ಲ, ಏಕೆಂದರೆ ಕಟ್ಟಡಗಳ ವಿಷಯ ಸರಿಯಾದ ಅಭಿಪ್ರಾಯ ಪಟ್ಟು ತೀರ್ಮಾನ ಕೊಡಲು ಇಂಜಿನಿಯರಿಂಗ್ ಜ್ಞಾನಿಗಳಾದವರನ್ನೇ ನೇಮಿಸಬೇಕಲ್ಲದೆ ಈ ಕೆಲಸದ ಗಂಧವೇ ಇಲ್ಲದ ಪ್ರಜಾ ಅಧಿಕಾರಿಗಳಿಂದ ಸರಿಯಾದ ನ್ಯಾಯ ದೊರಕುವದಿಲ್ಲವೆಂದು ವ್ಯಸನದಿಂದ ಹೇಳಬೇಕಾಗಿದೆ

ಇದೇ ರೀತಿ ಮುಂದುವರಿದುದೇ ಆದರೆ ಹಳೇ ಕಟ್ಟಡ ರಿಪೇರಿಯಾಗುವದಿಲ್ಲ ಮಾತ್ರವಲ್ಲ ಹೊಸ ಕಟ್ಟಡಗಳು ಪಟ್ಟಣಗಳಲ್ಲಿ ಕಟ್ಟಲ್ಪಡಲಾರವು. 'ಅನುಭವಿ'

ಗೌಡ ಬೋರ್ಡಿಂಗಿರುವ ಕಟ್ಟಡ ಸರಕಾರದ್ದು

ಸರಕಾರದ ಜಡ್ಜ್‌ಮೆಂಟ್

ಈ ಮೊದಲು 'ಜನ್ಮಭೂಮಿ' ಪತ್ರಿಕೆಯಲ್ಲಿ ಈಗಿನ ಗೌಡ ಬೋರ್ಡಿಂಗ್ ಇರುವ ಕಟ್ಟಡ ಗೌಡ ಕೋಮಿನವರದೆಂಬ ಲೇಖನವೊಂದನ್ನು ಪ್ರಕಟಿಸಿದ್ದರು. ಗೌಡ ಬೋರ್ಡಿಂಗ್ ತಮ್ಮದೆಂಬ ಭಾವನೆಯಿಂದಲೇ ಅದರ ಪ್ರೆಸಿಡೆಂಟರು ಆ ಬೋರ್ಡಿಂಗನ್ನು ಮದುವೆ ಮೊದಲಾದ ಸಮಾರಂಭಗಳಿಗೆ ಬೇರೆಯವರ ಉಪಯೋಗಕ್ಕೆ ಕೊಟ್ಟು ರೂ. ೫೦ ಬಾಡಿಗೆ ವಸೂಲ್ಮಾಡಿಕೊಳ್ಳುತ್ತಿದ್ದರು. ಈ ವಿಚಾರದಲ್ಲಿ ತಕರಾರು ಬಂದು ಮಹನೀಯರೊಬ್ಬರು ಗೌಡ ಬೋರ್ಡಿಂಗಿನ ಪ್ರೆಸಿಡೆಂಟರ ಮೇಲೆ ದಾವೆ ಹೂಡಿದ್ದರು. ಅದರ ತೀರ್ಮಾನವನ್ನು ಕೊಡುತ್ತಾ ಕೊಡಗಿನ ಮುನ್ಸಿಫ್ ಮ್ಯಾಜಿಸ್ಟ್ರೇಟರು ಹೇಳಿದ ಮಾತುಗಳು ಹೀಗಿವೆ:

"If at all the President had rented out the building to others in the past he had done so without the knowledge and the consent of the Govt. The property vests with the Govt and the assessment is paid by the Govt. So there is absolutely no vagueness or doubt regarding the fact that the Goverment is the owner of the, building and any one else had no right to rent or to recover rent for the building" ಈ ಹಿಂದೆ ಗೌಡ ಬೋರ್ಡಿಂಗಿನ ಪ್ರೆಸಿಡೆಂಟರು ಆ ಕಟ್ಟಡವನ್ನು ಬೇರೆಯವರಿಗೆ ಬಾಡಿಗೆಗೆ ಕೊಟ್ಟಿದ್ದರೆ ಅದು ಸರಕಾರದ ಅನುಮತಿ ಮತ್ತು ಅವಗಾಹನೆಗೆ ತಿಳಿಯದೆ ಕೊಟ್ಟದ್ದಾಗಿದೆ. ಆ ಕಟ್ಟಡವು ಸರಕಾರದ ಹಕ್ಕಿನದು. ಅದರ ಕಂದಾಯವನ್ನು ಸರಕಾರ ಪಾವತಿ ಮಾಡುತ್ತಿದೆ.... ಆದ್ದರಿಂದ ಸರಕಾರವು ಆ ಕಟ್ಟಡದ ಮಾಲೀಕರೆಂಬುವದರಲ್ಲಿ ಯಾವ ಸಂಶಯಕ್ಕೆಡೆ ಇಲ್ಲ. ಅದನ್ನು ಬಾಡಿಗೆಗೆ ಕೊಡುವ ಯಾ ಬಾಡಿಗೆ ವಸೂಲ್ಮಾಡುವ ಹಕ್ಕು ಸರಕಾರಕ್ಕಲ್ಲದೆ ಬೇರೆ ಯಾರಿಗೂ ಇಲ್ಲ"

ಆದ್ದರಿಂದ ಆ ಕಟ್ಟಡವು ಗೌಡ ಕೋಮಿನವರಿಗೆ ಸೇರಿದ್ದೆಂದು ಹೇಳುವದರಲ್ಲಿ ಅರ್ಥವಿಲ್ಲ ಅದನ್ನು ಸರಕಾರವು ಕಾಲೇಜ್ ಬೋರ್ಡಿಂಗ್ ಆಗಿ ಮಾಡಲು ಯಾವ ಆತಂಕವೂ ಇಲ್ಲ. ನಿರೀಕ್ಷಕ.

ಇದು ನ್ಯಾಯವೇ?

ನಮಗೆ ಸ್ವಾತಂತ್ರ್ಯವು ಸಿಕ್ಕಿ ಇಂದಿಗೆ ಆರು ವರ್ಷಗಳಾಗುವವು ಈ ಹಿಂದೆ ನಡೆದ ಜನಗಣನೆಯಲ್ಲಿ ನಮ್ಮ ಭರತಖಂಡದಲ್ಲಿ ವಿದ್ಯೆಯಲ್ಲಿ ತಿರುವಾಂಕೂರು ಕೊಚ್ಚಿಯು ಒಂದನೆಯದೆಂದೂ ಕೊಡಗು ಎರಡನೆಯದೆಂದೂ ಪ್ರಕಟವಾಗಿದ್ದ ವಿಷಯವು ಬಹಳ ಸಂತೋಷಕರ. ಅದೇ ಪ್ರಕಾರ ನಮ್ಮ ಘನ ಸರಕಾರವು ಅಲ್ಲಲ್ಲಿ ಶಾಲೆಗಳನ್ನು ಸ್ಥಾಪಿಸಿ ಇಡೀ ಭರತಖಂಡದಲ್ಲಿ ನಮ್ಮ ಕೊಡಗು ಒಂದನೇ ಸ್ಥಾನವನ್ನು ಪಡೆಯಬೇಕೆಂಬದಾಗಿ ದೂರದೃಷ್ಟಿಯಿಂದ ನಮಗೆ ಒಂದು ಫಸ್ಟ್‌ಗ್ರೇಡ್ ಕಾಲೇಜನ್ನು ಸ್ಥಾಪಿಸಿ ಹೆಚ್ಚಿನ ದರದ ವೇತನಕೊಟ್ಟು ಉತ್ತಮ ಸಿಬ್ಬಂದಿಗಳನ್ನು ನೇಮಿಸಿ ಕೊಡಗು ಕಾಲೇಜು ಭರತಖಂಡದಲ್ಲಿ ಮಾದರಿ ಕಾಲೇಜಾಗಿ ಆಗಬೇಕೆಂದು ಹವಣಿಸುತ್ತಿರುವುದು ಬಹಳ ಸಂತೋಷದ ವಿಷಯ. ಇದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಪದವೀಧರರ ತಯಾರಾಗುವದರಲ್ಲಿ ಸಂಶಯವಿಲ್ಲ.

ಆದರೆ ಕೊಡಗಿನಲ್ಲಿ ವಿದ್ಯೆಯನ್ನು ಗಳಿಸಿ ವಿಶ್ವಾಸಂತರೆನಿಸಿದ ಯುವಕರಿಗೆ ಸ್ಥಳವಿಲ್ಲದಾಗಿದೆ. ಈಗಿನ ವಿದ್ಯೆ ಸರಕಾರಿ ಉದ್ಯೋಗಕ್ಕೆ ಮಾತ್ರ ಹೆಚ್ಚು ಯೋಗ್ಯ. ಹಾಗಿರುವಾಗ ನಮ್ಮ ದೇಶದ ಯುವಕರಿಗೆ ಇಲ್ಲಿ ಹೆಚ್ಚಿನ ಪ್ರೋತ್ಸಾಹ ದೊರೆಯಬೇಕು. ಆದರೆ ಪರಿಸ್ಥಿತಿ ಹಾಗಿಲ್ಲವೆಂದು ವಿಷಾದದಿಂದ ಹೇಳಬೇಕಿದೆ.

ಹೊರಗಿನಿಂದ ಬಂದವರಿಗೆ ಕೊಡಗಿನಲ್ಲಿ ಹೆಚ್ಚು ಪ್ರೋತ್ಸಾಹ ದೊರೆಯುತ್ತಿದೆ, ಆದರೆ ಇಂಥಾ ಪ್ರೋತ್ಸಾಹ ಕೊಡಗಿನವರಿಗೆ ಹೊರ ಸಂಸ್ಥಾನಗಳಲ್ಲಿ ದೊರೆಯುತ್ತಿದೆಯೇ? ಅಧಿಕಾರದ, ಹಣದ ಮರುಷಯೋಗ ಮಾಡಿ ಆಕ್ಷೇಪಗೊಳಪಟ್ಟರೂ ಹೊರಗಿನವರಿಗೆ ಬಡ್ತಿ ದೊರೆಯುತ್ತಿದೆಯೆಂದರೆ ಆಶ್ಚರ್ಯಪಡಬೇಕು. ಇದು ನ್ಯಾಯವೇ? ಕೊಡಗಿನ ಯುವಕರು ಇಂದು ಭರತ ಖಂಡದ ವಿವಿಧ ಭಾಗದಲ್ಲಿ ಯೋಗ್ಯರೆನಿಸಿದ್ದಾರೆ. ಕೊಡಗಿನಲ್ಲಿ ಅವರು ಅಯೋಗ್ಯರೇ? ಈ ದೇಶದಲ್ಲಿ ಹುಟ್ಟಿ, ಈ ದೇಶದಲ್ಲಿ ಬೆಳೆದು, ಈ ದೇಶದಲ್ಲಿ ವಿದ್ಯೆಯನ್ನು ಸಂಪಾದಿಸಿ, ಈ ದೇಶದಲ್ಲೇ ಸಾಯಲಿರುವವರಿಗೆ ಇಲ್ಲಿ ಸ್ಥಳವಿಲ್ಲವೆಂದರೆ ಅದು ಅನ್ಯಾಯವಲ್ಲವೇ? ಮೊನ್ನೆಯಾಗ ಪೋಲೀಸ್ ಕೆಲಸದ ೧೧ ಸ್ಥಳಗಳಿಗೆ ನೂರು ೧೫೦ ಸ್ಕೂಲ್‌ಫೈನಲ್ ಓದಿದವರ ಅರ್ಜಿಗಳಿದ್ದವೆಂದು ಓದಿದ ನನಗೆ ಆಶ್ಚರ್ಯವಾಯಿತು. ನಿರುದ್ಯೋಗ ಹೀಗಿರುವಾಗ ಸರಕಾರವು ದೇಶೀಯರಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಡವೇ? ಸರಕಾರವು ಹಾಗೆ ಮಾಡಿಲ್ಲವೆನ್ನುವದಾದರೆ ಅದಕ್ಕೆ ಆಧಾರ ಕೊಟ್ಟು ಹೊರಗಿನಿಂದ ಬಂದವರ ಪಟ್ಟಿಯನ್ನು ಪ್ರಕಟಿಸಲು ತಯಾರಿರುವೆನು. ಇನ್ನಾದರೂ ಸರಕಾರವು ಎಚ್ಚರದಿಂದ ವರ್ತಿಸುವದೇ? ದೇಶಪ್ರೇಮಿ.

ವ್ಯಕ್ತಿದೂಷಣೆ ನಿಲ್ಲಬೇಕು

ಮನುಷ್ಯನ ದೇಹಕ್ಕೆ ಕಣ್ಣುಗಳು ಹೇಗೋ, ವಾಹನಗಳ ಚಲನೆಗೆ ಗಾಲಿಗಳು ಹೇಗೋ ಹಾಗೆಯೇ ನಮ್ಮ ಸಂಸ್ಥಾನಕ್ಕೆ ಎರಡು ಪ್ರಧಾನ ಪತ್ರಿಕೆಗಳಿವೆ. ಈ ಪತ್ರಿಕೆಗಳಿಂದ ದೇಶದ ಪ್ರಜೆಗಳು, ರಾಷ್ಟ್ರದ ಯೋಗಕ್ಷೇಮ, ರಾಷ್ಟ್ರದ ಆಗುಹೋಗುಗಳನ್ನು ತಿಳಿದು ಉತ್ತಮ ಪ್ರಜೆಗಳಾಗಿ ಉತ್ತಮ ಮಾರ್ಗದಿಂದ ನಡೆಯಬೇಕಾದ ಸಂಗತಿಯೂ ಗಿರುತ್ತದೆ. ಈ ಪತ್ರಿಕೆಗಳಲ್ಲಿ ಯಾವ ವಾರ ನೋಡಿದರೂ ಒಬ್ಬರನ್ನು ಇನ್ನೊಬ್ಬರು ಟೀಕಿಸುವುದು, ಇಲ್ಲದ ಸಲ್ಲದ ವಿಷಯಗಳನ್ನು ಎತ್ತಿ ಹಿಡಿದುಕೊಂಡು ಕೋಮುವಾರು ಭಾವನೆ ಇತ್ಯಾದಿ ಮಹಾ ಅಸಹ್ಯಕರವಾದ ಪ್ರಕಟಣೆ ಮಾಡುವದು ಹೆಚ್ಚಾಗಿ ಕಂಡು ಬರುತ್ತದೆ. ದೇಶಪ್ರೇಮ, ಪ್ರೀತಿ ಭಾವ, ದೈವಭಕ್ತಿ ಇತ್ಯಾದಿ ಉತ್ತಮ ವಿಷಯಗಳಿಗೆ ಸಾಕಷ್ಟು ಎಡೆಯಿಲ್ಲವೆಂಬಂತೆ ತೋರುತ್ತಿದೆ. ಈ ರೀತಿ ಈ ಪತ್ರಿಕೆಗಳು ಇನ್ನು ಮುಂದಕ್ಕೂ ಸಾಗಿದರೆ ದೇಶದಲ್ಲಿ ಖಂಡಿತವಾಗಿಯೂ ಶತ್ರುತ್ವಗಳು ಹೆಚ್ಚಿ ದೇಶದೊಳಗೆ ಶಾಂತಿ ಇರಲಾರದು. ಆದ್ದರಿಂದ ಸಂಪಾದಕರು ಲೇಖನಗಳನ್ನು ಪರಿಶೀಲಿಸಿ ಯೋಗ್ಯ ವಿಷಯಗಳನ್ನು ಹೆಕ್ಕಿ ತೆಗೆದು ಅಚ್ಚು ಹಾಕಿಸುವುದು ಒಳಿತು.

ಈಗ ಚುನಾವಣೆಗಳು ಕಳೆದಂದಿನಿಂದ ವ್ಯಕ್ತಿಗಳ ಕುರಿತು ಟೀಕಿಸುವುದು, ಪಾರ್ಟಿಗಳನ್ನು ಕುರಿತು ಟೀಕಿಸುವುದು ಹೆಚ್ಚಾಗಿ ಕಂಡುಬರುತ್ತದೆ. ಇದು ಶುದ್ಧ ತಪ್ಪಭಿಪ್ರಾಯ. ಇಡೀ ಜಗತ್ತಿನಲ್ಲಿ ಪಾರ್ಟಿ ಸಂಗರ್ಷಗಳಲ್ಲಿ ಒಬ್ಬರು ಸೋಲುವುದು ಇನ್ನೊಬ್ಬರು ಗೆಲ್ಲುವುದು ವಾಡಿಕೆಯಾಗಿದೆ. ಈ ಮಾತ್ರದ ಟೀಕೆಗಳಿಂದ ಪ್ರಯೋಜನವಾಗದು. ಒಬ್ಬ ವ್ಯಕ್ತಿಯು ಮುಂದಾಳುತನಕ್ಕೆ ನಿಂತು ಸೋತು ಹೋದ ಕಾರಣ ನಾನು ಜೀವವಿರುವ ತನಕ ಆ ನಾಡಿಗೆ ಸಹಾಯ ಮಾಡಲು ಸರಕಾರವನ್ನು ಬಿಡುವುದಿಲ್ಲವೆಂದು ಹೇಳುವರಂತೆ! ಇದು ದೇಶದ್ರೋಹಕರವಾದ ಸಂಗತಿ. ಈ ವ್ಯಕ್ತಿಯು ಕೇವಲ ಹಣ ಸಂಪಾದನೆ ಮತ್ತು ಅಧಿಕಾರಲಾಲಸೆಗೆ ಮುಂದಾಳುತನಕ್ಕೆ ನಿಂತವರೇ ಹೊರತು ಪ್ರಜೆಗಳ ಕ್ಷೇಮಕ್ಕಲ್ಲ. ಈ ವ್ಯಕ್ತಿಯು ಸೋತ ಮಾತ್ರಕ್ಕೆ ಪ್ರಜೆಗಳನ್ನು ಹಾಳುಮಾಡುವವರಾಗಬಾರದು. ಇದು ಬಹು ಕೀಳು ತರದ ಸ್ವಭಾವ. ನಮಗೆ ಒಬ್ಬ ಶತ್ರುವು ಕಲ್ಲನ್ನು ಎಸೆದರೂ ನಾವು ಅವನಿಗೆ ಬೆಲ್ಲವನ್ನು ಎಸೆಯಬೇಕು ಎಂದು ಶ್ರೀ ರಾಮಕೃಷ್ಣ ಪರಮಹಂಸರು ಹೇಳಿದ್ದಾರೆ. ರಾಷ್ಟ್ರದ ಉನ್ನತಿಗೆ ಸೋತವರೂ, ಗೆದ್ದವರೂ, ಸರ್ವರೂ ಶ್ರಮಿಸಿದರೇನೇ ರಾಷ್ಟ್ರೋನ್ನತಿಯಾಗುವುದು. ಇನ್ನಾದರೂ ಪತ್ರಿಕೆಗಳಲ್ಲಿ ಜಗಳವಾಡುವುದನ್ನು ನಿಲ್ಲಿಸಿ, ಒಮ್ಮನಸ್ಸಿನಿಂದ ದೇಶೋನ್ನತಿಗೆ ಎಲ್ಲರೂ ಶ್ರಮಿಸಿರಿ.

ಪಟಂಗಪ್ಪ

ಕಾಲೇಜು ವಿದ್ಯಾರ್ಥಿಗಳಿಗಿದು ಭೂಷಣವಲ್ಲ.

ಕೊಡಗು ಸರಕಾರಿ ಕಾಲೇಜಿನಲ್ಲಿ ಓದುವ ಕೆಲವು ವಿದ್ಯಾರ್ಥಿಗಳು ತಮ್ಮ ಕರ್ತವ್ಯಗಳನ್ನು ಮರೆತುಕೊಂಡು ಆದರ್ಶ ವಿದ್ಯಾರ್ಥಿಗಳಾಗಿರದೆ ಹಿಡಿತವಿರಿ ವರ್ತಿಸುತ್ತಿರುವದು ವಿಷಾದದ ಸಂಗತಿಯಾಗಿದೆ. ಕಾಲೇಜು ಮುಗಿದ ಮೇಲೆ ಸಾಯಂಕಾಲ ಆಟ ಓಟಗಳಲ್ಲಿ ಮಗ್ನರಾಗಿರುವದನ್ನು ಬಿಟ್ಟು ಪ್ರತಿ ದಿನ ಸಾಯಂಕಾಲ ೫ ಗಂಟೆಯ ನಂತರ ಹುಡುಗಿಯರ ಹೈಸ್ಕೂಲಿನ ಹತ್ತಿರ ಬಂದು ಇಲ್ಲಸಲ್ಲದ ಚೇಷ್ಟೆಗಳನ್ನು ಮಾಡುತ್ತಿರುತ್ತಾರೆ. ಹೆಸರೆತ್ತಿ ಕೂಗುತ್ತಾ ಅಸಭ್ಯವರ್ತನೆ ಮಾಡುತ್ತಾರೆ. ತಮ್ಮ ಅಕ್ಕತಂಗಿಯರಂತಿರುವ ವಿದ್ಯಾರ್ಥಿನಿಯರ ಬಗ್ಗೆ ಕಾಲೇಜಿನ ಈ ವಿದ್ಯಾರ್ಥಿಗಳ ಈ ವರ್ತನೆ ಸರಿಯಲ್ಲ. ನಾವು ಏನು ಹೇಳಿದರೂ ಅದು ಅವರಿಗೆ ಹೆಚ್ಚಿನ ಅಸಭ್ಯ ವರ್ತನೆಗೆ ಕಾರಣವಾಗುವದು. ಕಾಲೇಜಿನ ವಿದ್ಯಾರ್ಥಿಗಳು ಕಾಲೇಜಿನ ಯೋಗ್ಯತೆಗೆ ತಕ್ಕಂತೆ ವರ್ತಿಸಬೇಕು. ಈ ವಿಚಾರದಲ್ಲಿ ಕಾಲೇಜಿನ ಪ್ರಿನ್ಸಿಪಲರೂ, ಅವರ ಪೋಷಕರೂ ಸ್ವಲ್ಪ ಎಚ್ಚರಿಕೆ ವಹಿಸಿ ವರ್ತಿಸಬೇಕಾಗಿದೆ. ಈ ಕಾಲೇಜ್ ವಿದ್ಯಾರ್ಥಿಗಳು ಇನ್ನಾದರೂ ಯೋಗ್ಯ ರೀತಿ ವರ್ತಿಸುವರೆಂದು ನಂಬಲಾಗಿದೆ. ಮೇಲಧಿಕಾರಿಗಳೂ ಈ ವಿಚಾರದಲ್ಲಿ ಸ್ವಲ್ಪ ನಿಗವಹಿಸುವರೆಂದು ಆಶಿಸಲಾಗಿದೆ.

'ಸೋದರ.'

ವೀರಾಜಪೇಟೆಯ ತೆಲುಗರ ಬೀದಿ

ತೆಲುಗರ ಬೀದಿಯಲ್ಲಿ ಸಾಧಾರಣ ೨೫೦ ಕುಟುಂಬದ ಜನರು ವಾಸ ಮಾಡುತ್ತಿದ್ದೇವೆ. ಈ ಬೀದಿಯವರಿಗೆ ಮುನಿಸಿಪಾಲಿಟಿಯವರು ನೀರಿನ ಸರಬರಾಜಿಗಾಗಿ ಯಾವುದೊಂದು ವ್ಯವಸ್ಥೆಯನ್ನೂ ಈ ವರೆಗೆ ಮಾಡಿರುವುದಿಲ್ಲವೆಂದು ಬೇಸರದಿಂದ ಹೇಳಬೇಕಾಗಿದೆ.

ಅನೇಕ ವರ್ಷಗಳಿಂದ ಬೇಸಿಗೆಯಲ್ಲಿ ಈ ಬೀದಿಯವರು ನೀರಿಗಾಗಿ ಪಡುತ್ತಿರುವ ಕಷ್ಟವನ್ನು ನಮ್ಮ ಪುರಸಭೆಯ ಕಮಿಟಿ ಪ್ರೆಸಿಡೆಂಟರು ನೋಡಿಕೊಂಡು ಸಂತೋಷ ಪಡುತ್ತಿರುವರೋ ಎಂಬ ಸಂಶಯಪಡಬೇಕಾಗಿದೆ. ಯಾಕೆಂದರೆ ಕಳೆದ ಒಂದೆರಡು ವರ್ಷಗಳಿಂದ ಬಾವಿ ತೋಡಿಸಿ ಕೊಡಬೇಕೆಂದು ಅನೇಕ ಅರ್ಜಿಗಳನ್ನು ಬರೆಕೊಂಡರೂ ಪ್ರತಿ ಉತ್ತರವಾಗಿ ಬೇರೆ ಬೀದಿಗಳಲ್ಲಿ ಬಾವಿ ಕೆಲಸ ಮಾಡಿಸುತ್ತಿರುವದು ಕಾಣುತ್ತಿ! ಎಷ್ಟೇ ಕೂಗಿಕೊಂಡರೂ "ತೆಲುಗರ ಬೀದಿ ತಾನೆ ಪರವಾಯಿಲ್ಲ" ಎಂಬ ತಾತ್ಸಾರ ಭಾವನೆ ಅಧಿಕಾರ ಹೊತ್ತವರಲ್ಲಿ ಬಂದಿರುವಂತೆ ತೋರುತ್ತದೆ. ಸಾಲದ್ದಕ್ಕೆ ನಮ್ಮ ಬೀದಿಯಲ್ಲಿರುವ ಕಮಿಟಿಯವರೊಂದಿಗೂ ಅನೇಕ ಸಾರಿ ಹೇಳಿಕೊಂಡಿರುತ್ತೇನೆ. ಆದರೆ ಯಾವ ಪ್ರಯೋಜನವೂ ಆಗಲಿಲ್ಲ.

ಈಗಾಗಲೇ ನೀರು ಸರಬರಾಯಿಗಾಗಿ ನಮ್ಮ ಪುರಸಭೆಗೆ ಕೇಂದ್ರ ಸರಕಾರದಿಂದ ಕೆಲವು ಲಕ್ಷ ಹಣ ಮಂಜೂರಾಗಿದೆಯೆಂಬ ವರ್ತಮಾನವಿದೆ. ಅದು ತುಂಬಾ ಸಂತೋಷದ ವಿಷಯ. ಆದರೆ ಆಜೇ ನೆಪ ಹೇಳಿಕೊಂಡು ಕೆಲವು ವರ್ಷಗಳನ್ನು ತಳ್ಳದೆ ತತ್ಕಾಲಕ್ಕೆ ಬರುವ ಬೇಸಿಗೆಯ ಒಳಗೆ ಒಂದೆರಡು ಬಾವಿಗಳನ್ನಾದರೂ ಈ ಬೀದಿಯಲ್ಲಿ ಮಾಡಿಸಿ ಕೊಂಡರೆಯನ್ನು ತಪ್ಪಿಸುವರೆಂದು ನಂಬುವ,—

ತೊಂದರೆಗೊಳಗಾದವ.

ಕೆಲವು ಅಭಿನಂದನಾ ವಿಧಾನಗಳು.

ಲೇ:—ಶ್ರೀ ವೈ. ಎಂ. ಭಟ್, ಮಡಿಕೇರಿ

ಭಾರತದಲ್ಲಿ ಹಿರಿಯರು, ಬಂಧು ಬಳಗದವರನ್ನು ಭೇಟಿಮಾಡಾಗ ನಾವು ನಮ್ಮ ಮನೋಭಾವನೆಗಳನ್ನು ಬೇರೆ ಬೇರೆ ರೀತಿಯಲ್ಲಿ ತೋರಿಸುತ್ತೇವೆ. ಅದನ್ನೇ ಅಭಿನಂದನೆಯೆನ್ನುತ್ತಾರೆ.

ನಾವು ಸಮ ವಯಸ್ಕರನ್ನು ಸಂಧಿಸಿದಾಗ ಮುಗುಳು ನಗೆಯನ್ನು ಬೀರಿ ಒಬ್ಬರಿನ್ನೊಬ್ಬರ ಕುಶಲ ವಾರ್ತೆಯನ್ನು ಕೇಳುತ್ತೇವೆ. ಹಿರಿಯರನ್ನು ಸಂಧಿಸುವಾಗ ಪ್ರಣಾಮವನ್ನೂ ಕಿರಿಯರನ್ನು ಸಂಧಿಸುವಾಗ ಆಶೀರ್ವಾದವನ್ನೂ ಮಾಡುತ್ತೇವೆ. ಆ ಸಮಯದಲ್ಲಿ ನಮ್ಮಲ್ಲಿ ಅತ್ಯಧಿಕ ಸರಳತೆಯೂ ಕೋಮಲತೆಯೂ ಇರುತ್ತದೆ. ಇದೇ ಭಾವನೆಯು ಸತ್ಕಾರದ ಜೀವಾಳ.

ಈ ಅಭಿನಂದನಾ ವಿಧಾನವು ಬೇರೆ ಬೇರೆ ದೇಶಗಳಲ್ಲಿ ಬೇರ ಬೇರೆ ಇರುತ್ತದೆ. ಉತ್ತರ ಹಿಂದೂಸ್ತಾನದ ಪಶ್ಚಿಮ ಭಾಗದಲ್ಲಿ ಜನರು ಒಬ್ಬರಿನ್ನೊಬ್ಬರನ್ನು ಭೇಟಿಯಾದಾಗ 'ರಾಮ್ ರಾಮ್' ಅಥವಾ 'ಜಯ್ ಗೋಪಾಲ್' ಎಂದು ಹೇಳುತ್ತಾರೆ.

ಮುಸಲ್ಮಾನರು 'ಸಲಾಂ ಅಲೆಕುಂ' ಅಥವಾ 'ಆದಾಬ್ ಅರ್ಜ್' ಎಂದು ಹೇಳುತ್ತಾ ಒಬ್ಬರಿನ್ನೊಬ್ಬರನ್ನು ಸಂಧಿಸುವರು. ಆಗ ಅವರು ಪ್ರತ್ಯುತ್ತರವಾಗಿ 'ಅಲೆಕುಂ ಸಲಾಂ' ಎನ್ನುತ್ತಾರೆ.

ಇಂಗ್ಲಿಷರ ಪದ್ಧತಿಗನುಸಾರವಾಗಿ ಒಬ್ಬರಿನ್ನೊಬ್ಬರನ್ನು ಸಂಧಿಸುವಾಗ 'ಶೇಕ್ ಹೇಂಡ್' ಮಾಡುತ್ತಾರೆ. ಸಂಧಿಸುವವರು ಪರಸ್ಪರ 'ಗುಡ್ ಮಾರ್ನಿಂಗ್' 'ಗುಡ್ ಡೇ' 'ಗುಡ್ ಈವನಿಂಗ್' 'ಗುಡ್ ನೈಟ್' ಎನ್ನುತ್ತಾ 'ಶೇಕ್ ಹ್ಯಾಂಡ್' ಮಾಡುತ್ತಾರೆ. ಅವರು 'ಗುಡ್ ಬೈ' ಎನ್ನುತ್ತಾ ಅಗಲುತ್ತಾರೆ. ಈ 'ಶೇಕ್ ಹೇಂಡ್' ಮಾಡುವುದರಿಂದ ಅವರ ಪರಸ್ಪರ ಸದ್ಭಾವನೆಗಳು ಗೊತ್ತಾಗುತ್ತವೆ. ಆದರೆ ಅವರು ದೂರದಿಂದ ಕಂಡರೆ ಪರಸ್ಪರ ತಮ್ಮ ತಲೆ ಬಾಗಿಸುತ್ತಾರೆ. ಹೆಚ್ಚಿನ ಗೌರವ ತೋರಿಸುವ ಸಂದರ್ಭಗಳಲ್ಲಿ ಅವರು ತಮ್ಮ 'ಹೇಟ್'ನ್ನು ತಲೆಯಿಂದ ತೆಗೆಯುತ್ತಾರೆ. ಸಂಪೂರ್ಣ ಆದರವನ್ನು ತೋರಿಸುವ ಸಮಯ 'ಹೇಟ್'ನ್ನು ಮುಗುಚಿ ಹಿಡಿಯುತ್ತಾರೆ.

ಫ್ರಾನ್ಸಿನಲ್ಲಿ ತಲೆಯಿಂದ 'ಹೇಟ್' ತೆಗೆಯುವ ಪದ್ಧತಿ ಇದೆ. ಅಲ್ಲಿನ ಜನರು ಭೇಟಿಯಾದಾಗ ಗಾಢಾಲಿಂಗನ ಮಾಡುತ್ತಾರೆ. ಅಲ್ಲಿ ಶ್ರೀಮಂತರು ಕೂಡ ಬಡಕೂಲಿಯನ್ನು ಕಂಡರೂ ತನ್ನ 'ಹೇಟ್' ತೆಗೆದು ಆಲಿಂಗನ ಮಾಡುತ್ತಾರೆ. ಬೆಲ್ಜಿಯಮ್‌ನಲ್ಲೂ ಕೂಡ ಇದೇ ಕ್ರಮವಿದೆ.

ಸ್ಪೇನ್ ದೇಶದ ರೈತರ ಅಭಿವಾದನಾ ಪದ್ಧತಿಯು ಬಹಳ ವಿಚಿತ್ರವಾಗಿದೆ. ಎಲ್ಲರೂ ತಮ್ಮ ತಮ್ಮಲ್ಲಿ ಒಂದೊಂದು ರೊಟ್ಟಿ ತುಂಡನ್ನು ಇಟ್ಟುಕೊಂಡಿರುತ್ತಾರೆ. ಭೇಟಿಯಾಗುವಾಗ ರೊಟ್ಟಿ ತುಂಡುಗಳನ್ನು ಒಬ್ಬರಿನ್ನೊಬ್ಬರಿಗೆ ತೋರಿಸುತ್ತಾ ಭೇಟಿಯಾಗುತ್ತಾರೆ. ಆದರೆ ಯಾರೂ ರೊಟ್ಟಿಯನ್ನು ತೆಗೆದುಕೊಳ್ಳುವುದಿಲ್ಲ.

ಮಲಯಾ, ಲೇಪ್‌ಲೇಂಡ್, ಟಿಸ್ಮಾನಿಯಾ ಮೊದಲಾದ ಕೆಲವು ದ್ವೀಪಗಳಲ್ಲಿ ಚುಂಬಿಸುವ, ಆಘ್ರಾಣಿಸುವ ಹಾಗೂ ಮೂಗಿನಿಂದ ಒರಸುವ ಕ್ರಮವೂ ಇದೆ. ಫಿಲಿಪಾಯಿನ್ ಎಂಬಲ್ಲಿನವರು ಇಬ್ಬರು ಪರಸ್ಪರ ಸಂಧಿಸುವಾಗ ಎರಡು ಕೈಗಳನ್ನು ಎರಡು ಕಿವಿಗಳ ಮೇಲಿಟ್ಟು ಒಂದು ಕಾಲನ್ನೆತ್ತಿ ಪ್ರೇಮಾಭಿವಾದನೆ ಮಾಡುತ್ತಾರೆ.

ರೆಡ್ ಇಂಡಿಯನರು ಒಬ್ಬರಿನ್ನೊಬ್ಬರಿಗೆ ಸಿಗರೇಟು ಕೊಡುತ್ತಾ ಭೇಟಿಯಾಗುವರು. ಬರ್ಮಾದಲ್ಲಿ ಒಬ್ಬರನ್ನೊಬ್ಬರು ಸಂಧಿಸುವಾಗ ಚುಂಬಿಸುವ ಕ್ರಮವಿದೆ.

ಚೀನಾದಲ್ಲಿ ಅನ್ಯೋನ್ಯ ಭೇಟಿಯಾಗುವ ಕೆಲವು ವಿಚಿತ್ರ ರೀತಿಗಳಿವೆ. ವರ್ಷದ ಮೊದಲಿನ ದಿನ ಸಂಧಿಸುವದಾದರೆ ಕೈಗಳನ್ನು ಜೋಡಿಸಿ ಶಿರಬಾಗಿಸುತ್ತಾರೆ. ಎರಡನೇ ಬಾರಿ ಸಂಧಿಸುವದಾದರೆ ಮೊದಲು ಪರಸ್ಪರ ಹೇಟುಗಳನ್ನು ತಗಲಿಸುತ್ತಾರೆ. ಆದರೆ ಅವುಗಳನ್ನು ತಲೆಯಿಂದ ಕೆಳಗೆ ತೆಗೆಯುವದಿಲ್ಲ. ಅಲ್ಲಿ ದಾರಿ ನಡೆಯುವಾಗಲೂ ಕೂಡ ಹೇಟ್ ಇಟ್ಟುಕೊಂಡಿರುತ್ತಾರೆ. ಮನೆಗೆ ಯಾರಾದರೂ ಅತಿಥಿಗಳು ಬಂದಾಗ ಮನೆಯವನ ತಲೆಯಲ್ಲಿ ಹೇಟ್ ಇಲ್ಲದಿದ್ದಲ್ಲಿ ಮೊದಲು ಹೇಟ್ ಧರಿಸಿ ಆ ಮೇಲೆ ಅತಿಥಿಯನ್ನು ಸಂಧಿಸುತ್ತಾನೆ. ಅಲ್ಲಿ ಕುಶಲ ವಾರ್ತೆಗಳನ್ನು ಕೇಳುವ ರೀತಿಯೇ ಬೇರೆ. ಅವರು "ನೀವು ಊಟ ಮಾಡಿದ್ದೀರಾ? ನಿಮ್ಮ ಕೋಧನಾ ಕ್ರಮವು ಸರಿಯಿದೆಯೇ?" ಎಂದು ಮುಂತಾಗಿ ಕೇಳುತ್ತಾರೆ.

ಜಪಾನಿನಲ್ಲಿ ಹೆಚ್ಚಾಗಿ ಮೊಣಕಾಲೂರಿ ಭೇಟಿಯಾಗುತ್ತಾರೆ.

ಆಫ್ರಿಕಾದ "ಮೂರ್" ಎಂಬವರ ಅಭಿನಂದನಾ ಕ್ರಮವು ಅತ್ಯಂತ ಅದ್ಭುತ ಹಾಗೂ ಭಯಂಕರವಾಗಿದೆ. ಯಾರನ್ನಾದರೂ ಭೇಟಿಯಾದರೆ ಅವರು ಕೂಡಲೇ ಕುದುರೆಯನ್ನೇರಿ ಅದನ್ನು ಓಡಿಸಿ ಅವರಿಗೆ ಗುರಿಯಿಟ್ಟು ಪಿಸ್ತೂಲಿನ ಖಾಲಿ ಶಬ್ದವನ್ನು ಮಾಡುತ್ತಾರೆ. ಬಹಸಾಯಿ ಅನುಭವಿಗಳಾದರೆ ಈ ರೀತಿಯ ಅದ್ಭುತ ಅಭಿನಂದನೆಗಳಿಗೆ ಹೆದರಿ ಓಡಿ ಹೋಗುವರು. ಆದರೆ ವಾಸ್ತವಿಕತೆಯು ಗೊತ್ತಾದರೆ ನಗು ಬಾರದಿರಲಾರದು. ಆಫ್ರಿಕದ ಕೆಲವು ಭಾಗಗಳಲ್ಲಿ ಬಲ ಹೆಗಲಿನ ಮೇಲಿನ ಬಟ್ಟೆಯು ತೊಲಗಿಸಲ್ಪಡುತ್ತದೆ. ಇನ್ನು ಕೆಲವೆಡೆಗಳಲ್ಲಿ ಪ್ರೇಮವನ್ನು ಪ್ರದರ್ಶಿಸುವದಕ್ಕಾಗಿ ಎದೆಯ ಮೇಲಿನ ಬಟ್ಟೆಯು ತೊಲಗಿಸಲ್ಪಡುತ್ತದೆ.

ಈಜಿಪ್ಟ್‌ನಲ್ಲಿ ಜನರು "ಇಂದು ಬಿಸಿಲು ಹೇಗಿದೆ?" ಎನ್ನುತ್ತಾ ಒಬ್ಬರಿನ್ನೊಬ್ಬರನ್ನು ಭೇಟಿಯಾಗುವರು.

ಈ ಅದ್ಭುತ ರೀತಿಗಳನ್ನು ಓದಿದರೆ ಯಾರಿಗಾದರೂ ನಗು ಬಾರದಿರಲಾರದು. ಒಂದು ದೇಶದಲ್ಲಿ ವಿಚಿತ್ರವಾಗಿ ತೋರಿದುದು ಇನ್ನೊಂದರಲ್ಲಿ ಸಂಪ್ರದಾಯವೆನಿಸುವದು!

(ಹಿಂದಿಯಿಂದ ಅನುವಾದಿತ)

ಶಿಕ್ಷಣ ಪದ್ಧತಿ ಬದಲಾಗಬೇಕು

"ನಮ್ಮ ದೇಶದಲ್ಲಿ ಈಗ ಹುಡುಗಿಯರಿಗೆ ಕೊಡಲ್ಪಡುತ್ತಿರುವ ಶಿಕ್ಷಣವು ಅಯೋಗ್ಯವಾಗಿದೆ. ಅದು ವ್ಯರ್ಥ ಹಣ ಮತ್ತು ಸಮಯದ ಅಪವ್ಯಯ ಮಾಡುವದಾಗಿದೆ. ಹುಡುಗಿಯರು ಶಿಕ್ಷಣ ಮುಗಿದ ಬಳಿಕ ವಿಶ್ವವಿದ್ಯಾಲಯದ ಪದವಿಗಳನ್ನು ಪಡೆಯುತ್ತಾರೆ. ಆದರಿಂದ ಅವರಿಗೆ ಮುಂದಿನ ಜೀವನದಲ್ಲಿ ಯಾವ ಪ್ರಯೋಜನವೂ ಸಿಕ್ಕುವುದಿಲ್ಲ" ಎಂಬುದಾಗಿ ಮಧ್ಯಪ್ರದೇಶದ ಗವರ್ನರರಾದ ಡಾ. ಪಟ್ಟಾಭಿ ಸೀತಾರಾಮಯ್ಯನವರು ಜಬ್ಬಲ್‌ಪುರ ಮಹಿಳಾ ವಿದ್ಯಾಲಯದ ವಿದ್ಯಾರ್ಥಿನಿಯರನ್ನುದ್ದೇಶಿಸಿ ಮಾತಾಡುತ್ತ ಹೇಳಿದರು.

ಅವರಿನ್ನೂ ಹೇಳಿದ್ದೇನೆಂದರೆ—ಹುಡುಗಿಯರಿಗೆ ಸಿಗುವ ಶಿಕ್ಷಣವು ಹುಡುಗರಿಗೆ ದೊರೆಯುವ ಶಿಕ್ಷಣದ ಪುನರಾವೃತ್ತಿಯಾಗಬಾರದು. ಜೀವನದಲ್ಲಿ ಸ್ತ್ರೀಯರ ಕರ್ತವ್ಯವು ಪೂರಕ ಸ್ಥಿತಿಯದಾಗಿದೆ. ಕಾಲೇಜಿನ ಹುಡುಗಿಯರಿಗೆ ಅವರ ಮುಂದಿನ ಜೀವನದಲ್ಲಿ ಪ್ರಯೋಜನಕ್ಕೆ ಬರುವಂತಹ ವಿಶೇಷ ತರಗತಿಯ ಶಿಕ್ಷಣ ಕೊಡಬೇಕು. ನಮ್ಮ ಇಂದಿನ ಪರಿಸ್ಥಿತಿಗನುಸರಿಸಿ ನಮ್ಮಲ್ಲಿಯ ಶಿಕ್ಷಣ ಪದ್ಧತಿಯೇ ಬದಲಾಗಬೇಕು.

ನಮ್ಮ ದೇಶದಲ್ಲಿ ಸ್ತ್ರೀಪುರುಷರ ಸಂಖ್ಯೆ ಹೆಚ್ಚು ಕಡಿಮೆ ಸಮಸಮಾನವಾಗಿದೆಯೆಂದು ಜನಗಣತಿ ಅಂಕೆಗಳಿಂದ ತಿಳಿಯುತ್ತದೆ. ಸ್ತ್ರೀಯರು ತಮ್ಮ ಬಲಸಂಘಟನೆ ಮಾಡಿಕೊಂಡಲ್ಲಿ ಅವರು ದೇಶದಲ್ಲಿ ಬಹು ಸುಲಭವಾಗಿ ಸ್ತ್ರೀ ಮಂತ್ರಿ ಮಂಡಳವೊಂದನ್ನು ರಚಿಸಬಹುದು."

ಕೊಡಗಿನ ವಿದ್ಯಾ ಇಲಾಖೆ.

— ಲೇ:—"ದೂರದರ್ಶಿ" —

ಕೊಡಗಿನ ವಿದ್ಯಾ ಇಲಾಖೆಯು ಕೆಲಸ ಕಾರ್ಯಗಳು ತೃಪ್ತಿಕರವಾಗಿ ನಡೆಯುತ್ತಿಲ್ಲ. ಇಲಾಖೆಯಲ್ಲಿ ಕೆಲಸ ತೃಪ್ತಿಕರವಾಗಿ ನಡೆಯಬೇಕಾದರೆ ದಕ್ಷರಾದ ಮೇಲಧಿಕಾರಿಗಳು ಬೇಕು. ಅದಕ್ಕಿಂಥಲೂ ಪ್ರಾಮುಖ್ಯವಾದುದೆಂದರೆ ತೃಪ್ತರಾದ ಅಧ್ಯಾಪಕರು ಬೇಕು. ಕೊಡಗಿನಲ್ಲಿ ಸದ್ಯಕ್ಕೆ ಇವೆರಡೂ ಇಲ್ಲವೆಂದರೆ ಅತ್ಯುಕ್ತಿಯಾಗದು. ಆದ್ದರಿಂದ ಕೊಡಗಿನ ವಿದ್ಯಾಪ್ರಗತಿಯು ಕುಂಟುತ್ತಾ ನಡೆಯುತ್ತಿದೆ.

ಪ್ರಥಮ ಪ್ರಪಂಚಯುದ್ಧದ ಕಾಲದಲ್ಲಿ ಆಹಾರ ಪದಾರ್ಥಗಳ ಬೆಲೆ ಏರಿ ಜೀವನ ಖರ್ಚು ಹೆಚ್ಚಾದ ಕಾರಣ ಕೊಡಗು ಸರಕಾರವು ತಾ. ೧-೪-೨೧ ರಿಂದ ಕೊಡಗಿನ ಎಲ್ಲಾ ಇಲಾಖೆಗಳ ನೌಕರರ ವೇತನವನ್ನು ಹೆಚ್ಚಿಸಿದರು. ಆ ಪ್ರಕಾರ ವಿದ್ಯಾ ಇಲಾಖೆಯಲ್ಲಿ ತರಬೇತಾದ ಸೆಕೆಂಡರಿ ಗ್ರೇಡಿನವರಿಗೆ ಮಾಸಿಕ ರೂ. ೪೦-೭೦ ರ ದರವೂ, ಎಲಿಮೆಂಟರಿಯವರಿಗೆ ೩೦-೫೦ ದರವೂ ಕೊಡಲ್ಪಟ್ಟಿತು. ಆ ಕಾಲದಲ್ಲಿ ಜಿಲ್ಲಾ ಬೋರ್ಡು ಶಾಲೆಗಳಿಗೂ ಇದೇ ದರದ ವೇತನ ಕೊಡಲು ಬೋರ್ಡಿಗೆ ಹೆಚ್ಚಿನ ಗ್ರಾಂಟು ಕೊಡಲಾಗಿತ್ತು. ಪರಿಸ್ಥಿತಿ ಸುಧಾರಿಸಿದ ನಂತರ ಅಂದರೆ ೧೯೩೭ ರಲ್ಲಿ ಸರಕಾರವು ಪರಿಶೀಲಿಸಿ ಎಲ್ಲಾ ಸರಕಾರಿ ಇಲಾಖೆಗಳ ಉದ್ಯೋಗಿಗಳ ವೇತನ ದರವನ್ನು ಕಡಿಮೆ ಮಾಡಿದರು. ೧೯೩೩ ರ ನಂತರ ಅಧ್ಯಾಪಕರಾದ ಸೆಕೆಂಡರಿ ಗ್ರೇಡಿನವರಿಗೆ ರೂ. ೩೦-೫೫ ಎಂದೂ, ಎಲಿಮೆಂಟರಿಯವರಿಗೆ ೨೫-೪೫ ಎಂದೂ ನಿಶ್ಚಯಿಸಿದರು. ೧೯೪೦ ರಲ್ಲಿ ಪುನಹ ಬಡ್ತಿಯಲ್ಲಿ ವ್ಯತ್ಯಾಸ ಮಾಡಿದರು.

ದ್ವಿತೀಯ ಪ್ರಪಂಚ ಯುದ್ಧದ ಕಾಲಕ್ಕೆ ಜೀವನ ಖರ್ಚು ಏರಿ ವೇತನವು ಸಾಲದೆಂದು ಉದ್ಯೋಗಸ್ಥರು ಕೂಗತೊಡಗಿ ತಮ್ಮ ಸಂಘ ಸಂಸ್ಥೆಗಳನ್ನು ಮಾಡಿಕೊಂಡು ಡೆಲ್ಲಿಯ ವರೆಗೂ ಹೋಗಿ ವರದಿ ಒಪ್ಪಿಸಿದರು. ಇದೇ ರೀತಿ ಜಿಲ್ಲಾ ಬೋರ್ಡು ಅಧ್ಯಾಪಕರು ಪ್ರಯತ್ನ ಪಟ್ಟರು. ಕೇಂದ್ರ ಸರಕಾರವು ನೇಮಿಸಿದ ಪೇಕಮಿಷನಿನ ಶಿಫಾರಸಿನಂತೆ ತಾ. ೧-೧-೪೭ ರಿಂದ ಸರಕಾರಿ ಉದ್ಯೋಗಿಗಳಿಗೆ ಹೆಚ್ಚಿನ ವೇತನ ದೊರೆಯುವ ಏರ್ಪಾಡಾಯಿತು. ಆದರೆ ಜಿಲ್ಲಾ ಬೋರ್ಡು ಅಧ್ಯಾಪಕರ ಕೂಗು ಯಾರ ಕಿವಿಗೂ ಮುಟ್ಟಲಿಲ್ಲ. ಪ್ರಥಮ ಯುದ್ಧದ ಕಾಲದಲ್ಲಿ ಮಾಡಿದಂತೆ ಸರಕಾರವು ಯೋಗ್ಯ ಗ್ರಾಂಟನ್ನು ಜಿಲ್ಲಾ ಬೋರ್ಡಿಗೆ ಕೊಟ್ಟಿದ್ದರೆ ಆಗುತಿತ್ತು. ಆದರೆ ಚೀಫ್ ಕಮಿಷನರಿಗೆ ಅರ್ಜಿ, ಮನವಿ ಮಾಡಿಕೊಂಡರೂ ಪ್ರಯೋಜನವಾಗಲಿಲ್ಲ. ಜಿಲ್ಲಾ ಬೋರ್ಡು ಅಧ್ಯಾಪಕರ ಅತೃಪ್ತಿ ಮುಷ್ಕರದ ಮಟ್ಟಕ್ಕೂ ತಲಪಿತು. ಇದನ್ನೆಲ್ಲಾ ನಿವಾರಿಸಲು ಅಲ್ಲಲ್ಲಿ ಕೆಂಪಿಕ್ ತೇಪೆ ಕೆಲಸ ನಡೆಯಿತೇ ವಿನಾ ಯೋಗ್ಯ ಏರ್ಪಾಡಾಗಲಿಲ್ಲ.

ಕೊಡಗಿನಲ್ಲಿ ಚುನಾವಣೆ ನಡೆದು ಮಂತ್ರಿಮಂಡಳದ ನೇಮಕವಾದ ನಂತರ ಜಿಲ್ಲಾ ಬೋರ್ಡು ಶಾಲೆಗಳನ್ನು ತಾ. ೧-೪-೫೩ ರಿಂದ ಸರಕಾರ ವಹಿಸಿಕೊಂಡು ಸೆಕೆಂಡರಿ ಗ್ರೇಡಿನವರಿಗೆ ರೂ. ೫೦-೧೦೦ ಎಂದೂ, ಕೆಳಗಿನವರಿಗೆ ರೂ ೪೦-೮೦ ಎಂದೂ ವೇತನ ದರ ನಿಶ್ಚಯಿಸಿದೆ. ಈಗ ಶಾಲೆಗಳೆಲ್ಲವೂ ಸರಕಾರದ್ದಾಗಿದ್ದರೂ ಜಿಲ್ಲಾ ಬೋರ್ಡಿನವರನ್ನು ಹೈಸ್ಕೂಲಿಗೆ ವರ್ಗಮಾಡಿದರೆ ಸರಕಾರಿ ದರ ದೊರೆಯಲಾರದೆಂದು ವರ್ತಮಾನವಿದೆ. ಆ ರೀತಿ ಆರೇಳು ಪೋಸ್ಟುಗಳನ್ನು ಕೊಡಲಾಗಿದೆಯಂತೆ. ಜಿಲ್ಲಾ ಬೋರ್ಡು ಉಪಾಧ್ಯಾಯರು ಈ ಕಡಿಮೆ ಗ್ರೇಡನ್ನು ಒಪ್ಪುವದಿಲ್ಲವೆಂದೂ ಹೈಸ್ಕೂಲಿಗೆ ಹೋಗುವದಿಲ್ಲವೆಂದೂ ತೀರ್ಮಾನಿಸಿದ್ದರಾಗಿ ತಿಳಿಯಬಂದಿದೆ. ಆದರೆ ಕೆಲವೆಡೆ ಹೈಸ್ಕೂಲಿಗೆ ಹೋದರೆ ಗ್ರೇಡನ್ನು ಹೆಚ್ಚಿಸುವದಾಗಿ ಅಧಿಕಾರ ಹೊತ್ತವರು ಭರವಸೆ ಹೇಳುತ್ತಿರುವರೇ ವಿನಾ ಬೇರೇನೂ ಆಗಿಲ್ಲವೆಂದೂ ತಿಳಿದುಬಂದಿದೆ.

೧೯೫೩ನೇ ಮಾರ್ಚ್ ತಿಂಗಳಲ್ಲಿ ಜಿಲ್ಲಾ ಬೋರ್ಡ್ ಶಾಲೆಗಳಲ್ಲಿ ೭೦ ಸೆಕಂಡರಿ ೧೭೦ ಎಲಿಮೆಂಟರಿ ಗ್ರೇಡಿನ ತರಬೇತಾದ ಅಧ್ಯಾಪಕರಿದ್ದರು. ಈಗ ೪೭ ಮಿಡಲ್ ಸ್ಕೂಲುಗಳ ಮತ್ತು ೭೯ ಪ್ರೈಮರಿ ಶಾಲೆಗಳ ಅಧ್ಯಾಪಕರು ವರ್ಗವಾಗಿ ೯೧ ರೂ. ೫೦-೧೦೦ ದರದ ಸೆಕೆಂಡರಿಗ್ರೇಡಿನ, ೩೭೧ ರೂ. ೪೦-೮೦ ರ ಲೋವರ್ ಸೆಕೆಂಡರಿಗ್ರೇಡಿನ ಪೋಸ್ಟುಗಳನ್ನು ಮಂಜೂರ್ಮಾಡಿರುವದಾಗಿ ತಿಳಿಯಬಂದಿದೆ ಆದರೆ ಈಗ ತರಬೇತಾದ ಸಾಕಷ್ಟು ಅಧ್ಯಾಪಕರಿಲ್ಲದಿರುವದರಿಂದ ಈ ಬಾಬಿಗಿಟ್ಟ ಎಲ್ಲಾ ಹಣ ಖರ್ಚಾಗಲಾರದು. ಈ ಏರ್ಪಾಡಿನಲ್ಲಿ ಸರಕಾರಿ ಶಾಲೆಗಳಲ್ಲಿದ್ದ ಸುಮಾರು ೭೦ ಉಪಾಧ್ಯಾಯರನ್ನು ಹೆಡ್ ಮಾಸ್ತರಾಗಿ ಜಿಲ್ಲಾ ಬೋರ್ಡು ಶಾಲೆಗಳಿಗೆ ಕಳುಹಿಸಿರುವರು. ಜಿಲ್ಲಾ ಬೋರ್ಡಿನ ಕೆಲವರಿಗೆ ಮಾತ್ರ ಗ್ರೇಡು ಸಿಕ್ಕಿದೆ ಇದರಿಂದ ಜಿಲ್ಲಾ ಬೋರ್ಡು ಅಧ್ಯಾಪಕ ವರ್ಗಕ್ಕೆ ದೊರೆಯಬೇಕಾಗಿದ್ದ ಅನುಕೂಲತೆ ಪೂರ್ತಿ ದೊರೆಯದಂತಾಯಿತು.

ತರಬೇತಾದ ಅಧ್ಯಾಪಕರು ಕೆಲಸಕ್ಕೆ ಬರುವ ಸಮಯದಲ್ಲಿ ಮಾತ್ರ ವರ್ಗಾವರ್ಗಿಯ ಏರ್ಪಾಡು ಮಾಡುವದನ್ನು ಬಿಟ್ಟು ಯದ್ವಾ ತದ್ವಾ ವರ್ಗಾವರ್ಗಿ ಪ್ರಯೋಜನವಿಲ್ಲ. ಅಧ್ಯಾಪಕರ ಅನುಕೂಲತೆಯನ್ನು ನೋಡಿ ವರ್ಗಾವರ್ಗಿ ಮಾಡಬೇಕು. ಶಿಕ್ಷೆಯ ರೂಪದ ವರ್ಗಾವರ್ಗಿ ಮಾಡಬಾರದೆಂದಲ್ಲ; ಆದರೆ ಇಡೀ ಅಧ್ಯಾಪಕ ವರ್ಗವನ್ನೇ ಈಗ ಮಾಡಿರುವಂತೆ ಸಿಕ್ಕಿ ಸಿಕ್ಕಿದೆಡೆಗೆ ಪಸೆಮ ಪುನಹ ಅವನ್ನು ಮಾರ್ಪಾಡು ಮಾಡುತ್ತಿರುವುದು ಸರಿಯಲ್ಲ. ಇದರಿಂದ ಅಧ್ಯಾಪಕರಿಗೆ ಅತೃಪ್ತಿಯಲ್ಲದೆ ಆಫೀಸಿನಲ್ಲೂ ಕೆಲಸ ಸರಿಯಾಗಿ ಆಗಲಾರದು. ಮತ್ತೆ ದೇಶಕ್ಕೆ ಆಗುವ ನಷ್ಟವನ್ನು ಲೆಕ್ಕ ಹಾಕುವದೆಂತು ?

ಹೈಸ್ಕೂಲುಗಳಲ್ಲಿ ಕನ್ನಡ, ಹಿಂದಿ ಪಂಡಿತರ, ಪಿ. ಟಿ, ಉರ್ದು ಉಪಾಧ್ಯಾಯರ ಗ್ರೇಡುಗಳನ್ನು ಬಿಟ್ಟು ೪೭ ಮೆಟ್ರಿಕ್ ೩೮ ನಾನ್ ಮೆಟ್ರಿಕ್ ಖಾಯಂ ಆಗಿದ್ದ ಪೋಸ್ಟುಗಳ ವೇತನ ದರವನ್ನು ಹೊಸ ದರಕ್ಕೆ ಇಳಿಸಲಾಗಿದೆಯೆಂದು ವರ್ತಮಾನವಿದೆ. ಇದೂ ಅಧ್ಯಾಪಕರಲ್ಲಿ ಅತೃಪ್ತಿಗೆ ಎಡೆ ಮಾಡಿದೆ. ಬಡ್ತಿಯಲ್ಲಿ ಸಾಕಷ್ಟು ಹಣವಿಲ್ಲ. ಆದ್ದರಿಂದ ಹೈಸ್ಕೂಲು ಖರ್ಚಿನಲ್ಲಿ ಉಳಿತಾಯ ಮಾಡಬೇಕೆಂಬ ಆಜ್ಞೆಯಂತೆ ಈ ಏರ್ಪಾಡೆಂದು ತಿಳಿದು ಬಂದಿದೆ. ರಾಮೇಗೌಡನಿಂದ ಕಿತ್ತು ಭೀಮೇಗೌಡನಿಗೆ ದಾನ ಕೊಟ್ಟದ್ದರಿಂದ ಬಂದದ್ದೇನು ?

ಮಂತ್ರಿಮಂಡಳದ ರಚನೆಯಾದ ನಂತರ ಸರಕಾರದ ಇತರ ಇಲಾಖೆಗಳಲ್ಲಿ ಬಹು ಹೆಚ್ಚಿನ ವೇತನದ ಹುದ್ದೆಗಳನ್ನೂ, ಗುಮಾಸ್ತರ ಸಂಖ್ಯೆಯನ್ನೂ ಹಿಡಿತವಿಲ್ಲದೆ ಹೆಚ್ಚಿಸಿದ್ದಾರೆ. ಈ ವಿಪರೀತ ಖರ್ಚಿಗೆ ಸರಕಾರಕ್ಕೆ ಹಣದ ತೊಂದರೆ ಕಂಡು ಬರುತ್ತಿಲ್ಲ. ಆದರೆ ಬಡ ಅಧ್ಯಾಪಕರ ಮಟ್ಟಿಗೆ ಇವರ ಹಿಡಿತ ಸಡಿಲವಾಗಬಾರದು. ಉಪಾಧ್ಯಾಯ ವೃತ್ತಿಗೆ ಸೇರಿದವನು ಉಪಾಧ್ಯಾಯನಾಗಿಯೇ ಸಾಯಬೇಕು. ಎಷ್ಟೇ ದಕ್ಷತೆ ... ಲಸ ಮಾಡಿದರೂ ದೊಡ್ಡ ಪದವಿಗೆ ಹೋಗುವ ಅಸ್ಪದ ಇಲ್ಲ. ಸರಕಾರಿ ಇತರ ಇಲಾಖೆಗಳಲ್ಲಿ ಗುಮಾಸ್ತರಾಗಿ ಸೇರಿದವರು ಇಲಾಖೆಯಿಂದ ಇಲಾಖೆಗೆ ಹೋಗಬಹುದಲ್ಲದೆ ಮೇಲಿನ ಹುದ್ದೆಗೂ ಏರಬಹುದು ಈ ವಿಚಾರವನ್ನು ತಿಳಿದೇ ಗುಮಾಸ್ತರಿಗೆ ರೂ ೫೫-೧೩೦ ಇರುವಾಗ ಸೆಕೆಂಡರಿ ಗ್ರೇಡ್ ಅಧ್ಯಾಪಕರಿಗೆ ೬೮-೧೫೦ ದರದ ವೇತನವನ್ನು ಕೇಂದ್ರ ಸರಕಾರವು ನಿಶ್ಚಯಿಸಿರಬೇಕು. ಆದರೆ ಕೊಡಗಿನಲ್ಲಿ ಅಧ್ಯಾಪಕರಿಗೆ ಸಹಾಯ ಪುರಸ್ಕಾರಗಳಿಲ್ಲ. ಕೇಂದ್ರ ಸರಕಾರ ನಿಶ್ಚಯಿಸಿದ ವೇತನ ಕೊಡುತಿದ್ದರೆ ಯೋಗ್ಯರು ಅಧ್ಯಾಪಕರಾಗಿ ಬರುತಿದ್ದರು. ಆದರೆ ಬದಲು ಈಗ ಎಲ್ಲರೂ ಗುಮಾಸ್ತರಾಗಲು ಇಚ್ಛಿಸುತ್ತಾರೆಯೇ ವಿನಾ ಅಧ್ಯಾಪಕರಾಗಲಾರರು.

ಈ ರೀತಿ ವಿದ್ಯಾ ಇಲಾಖೆಯು ತನ್ನ ಅಧೀನದ ಅಧ್ಯಾಪಕರ ಬಗ್ಗೆ ಯೋಗ್ಯ ರೀತಿಯಿಂದ ವರ್ತಿಸಲಿಲ್ಲವೆನ್ನಬೇಕಾಗಿದೆ. ಫಲಿತಾಂಶವಾಗಿ ಅಧ್ಯಾಪಕ ವೃಂದದಲ್ಲಿ ಅತೃಪ್ತಿ ತುಂಬಾ ಇದೆ. ಇದರಿಂದಾಗಿ ಶಾಲೆಗಳಲ್ಲಿ ಪಾಠ ಪ್ರವಚನಗಳು ಸರಿಯಾಗಿ ನಡೆಯುತ್ತಿಲ್ಲ ಅನೇಕ ಅಧ್ಯಾಪಕರನ್ನು ವಾಸಕ್ಕೆ ಅನುವಿಲ್ಲದ ಕಡೆ ವರ್ಗಾಯಿಸಿರುವದರಿಂದ ದೂರದ ಪೇಟೆಯಲ್ಲೋ ಬೇರಾವ ಕಡೆಯಲ್ಲೋ ಉಳಿದುಕೊಂಡು ಜೀವನ ... ರುವರು. ಅಧ್ಯಾಪಕರು ಸ್ಥಳಕ್ಕೆ ... ರವಿರುವವರೇ ಆಯಾಯ ಶಾಲೆಗಳಲ್ಲಿರಬೇಕು. ತಪ್ಪು ಮಾಡಿದವರನ್ನು ಯಾ ಆಸಕ್ತಿ ಇಲ್ಲದವರನ್ನು ಶಿಕ್ಷಿಸುವದು ನ್ಯಾಯವಾದರೂ ಈಗ ಮಾಡಿರುವ ರೀತಿಯ ಅವ್ಯವಸ್ಥೆಯಿಂದ ತುಂಬಾ ತೊಂದರೆಯಾಗಿದೆ. ಕೊಡಗು ಸರಕಾರದ ವಿದ್ಯಾ ಇಲಾಖೆ ಚೆನ್ನಾಗಿ ಕೆಲಸ ಮಾಡುತ್ತಿದೆಯೆಂದೂ ಕೊಡಗಿನಲ್ಲಿ ವಿದ್ಯಾ ಪ್ರಚಾರ ನೆರೆಯ ಹಲವು ಸಂಸ್ಥಾನಗಳಿಗಿಂತಾ ಉತ್ತಮವಾಗಿದೆಯೆಂದೂ ಪ್ರತೀತಿ ಇತ್ತು. ಆ ಗೌರವವನ್ನು ಹಾಳು ಮಾಡದಂತೆ ಎಚ್ಚರಿಕೆ ವಹಿಸಬೇಕಾದುದು ಅಧಿಕಾರಿಗಳ ಕರ್ತವ್ಯ.

ಮಧುಪರ್ಕ

ಒಬ್ಬನು ಚೆಲುವೆಯೊಬ್ಬಳನ್ನು ಮದುವೆಯಾದನು. ಆದರೆ ಆಕೆ ಬಲು ಸ್ವಾರ್ಥಿಯಾಗಿದ್ದಳು. ಆತನನ್ನು ಒಂದಿಷ್ಟು ಪ್ರೀತಿಸುತ್ತಿರಲಿಲ್ಲ. ಆತನು ಶ್ರೀಮಂತನಾಗಿದ್ದುದರಿಂದ ಧನಿಕ ವರ್ಗದವರ ಸಂಸರ್ಗದಲ್ಲಿ ಮೆರೆದಾಡಬಹುದೆಂಬ ಆಸೆಯಿಂದ ಆಕೆ ಆತನನ್ನು ಲಗ್ನವಾಗಿದ್ದಳು. ಆದರೆ ಮದುವೆಯಾದ ಕೆಲವು ದಿನಗಳಲ್ಲಿಯೇ ಆಕೆಯ ನಿಜ ಸ್ವಭಾವ ಬಯಲಿಗೆ ಬಂತು. ಆಕೆಯು ಆತನನ್ನು ಪ್ರೀತಿಸದೆ ಶ್ರೀಮಂತ ಸಮಾಜದಲ್ಲಿ ಮೇಲೆ ಮೇಲೇರಲು ಅವನನ್ನು ಹಂತವಾಗಿ ಉಪಯೋಗಿಸುತ್ತಿದ್ದಳು. ಇದರಿಂದಾಗಿ ಆತನು ಬಲು ನೊಂದು ಗ್ರಂಥಕರ್ತನಾಗಿದ್ದವನೊಬ್ಬ ಮಿತ್ರನಲ್ಲಿ ಹೇಳಿಕೊಂಡನು. ಅದನ್ನು ಕೇಳಿ ಗೆಳೆಯನು, "ಮಿತ್ರಾ ನಾನೊಂದು ದಿನ 'ಆರ್ಟ್ಪೇಪ'ರೆಂಬ ಕಾಗದದ ನಯ ಮತ್ತು ಮಿರುಗುಗಳಿಗೆ ಮರುಳಾಗಿ ಅವನ್ನು ಕೊಂಡುಕೊಂಡು ನನ್ನ ಪುಸ್ತಕವನ್ನು ಅದರಲ್ಲಿ ಅಚ್ಚು ಹಾಕುವಂತೆ ನನ್ನ ಮುದ್ರಕರಿಗೆ ಕಳುಹಿದೆನು. ಅವರು ಅದನ್ನು ಕಂಡು, ಈ 'ಥಳಕಿನ ಕಾಗದ ನಿಷ್ಪ್ರಯೋಜನ! ಅದಕ್ಕೆ ಶಾಯಿ ತಗಲುವದಿಲ್ಲ' ಎಂದರು. ಅಂತೆಯೇ ಥಳಕಿನ ಹೆಂಡತಿ ನಿಷ್ಪ್ರಯೋಜನ. ಅವಳಿಗೆ ಪ್ರೇಮ ತಾಗುವದಿಲ್ಲ" ಎಂದುತ್ತರವಿತ್ತನು.

ಎ ಎಸ್. ಪಿ. ಐಯ್ಯರ್.

ವೀರಾಜಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಟಿ ಎಸ್. ಗೋವಿಂದರಾಜು

ಕಪಿ ಮತ್ತು ಮೊಸಳೆಯ ಕಥೆ.

ಒಂದು ಸರೋವರದ ಕರೆಯಲ್ಲಿ ಸೇಬುಹಣ್ಣಿನ ಗಿಡವೊಂದಿತ್ತು. ಆ ಗಿಡದಲ್ಲಿ ವರ್ಷದ ಪ್ರತಿ ದಿನವೂ ತಪ್ಪದೆ ಹಣ್ಣಿರುತ್ತಿತ್ತು. ಆ ಮರದಲ್ಲಿ ಕೆಂಪು ಮುಖವೆಂಬ ಕೋತಿಯೊಂದು ಜೀವಿಸುತ್ತಿತ್ತು. ಒಂದು ದಿನ ಸರೋವರದಲ್ಲಿದ್ದ ತಿಳಿಗೇಡಿಯೆಂಬ ಮೊಸಳೆಯು ಕರೆಗೆ ಬಂದು ಸೇಬಿನ ಹಣ್ಣಿನ ಮರದಡಿಯ ಮರಳಿನಲ್ಲಿ ಮಲಗಿ ಬಿಸಿಲು ಕಾಯುತ್ತಿತ್ತು. ಇದನ್ನು ಕಂಡ ಕೆಂಪು ಮುಖವು ಹೀಗೆಂದಿತು. “ಇಂದು ನೀನು ನನ್ನ ಅತಿಥಿಯಾಗಿ ಬಂದಿರುವೆ. ನಾನು ನಿನಗಾಗಿ ಈ ಸೇಬಿನ ಹಣ್ಣುಗಳನ್ನು ಉದುರಿಸುತ್ತಿರುವೆನು. ಅಮೃತಸಮಾನವಾದ ಈ ಹಣ್ಣುಗಳನ್ನು ತಿಂದು ತೃಪ್ತನಾಗು. ಏಕೆಂದರೆ ಆತನು ತಿಳಿಗೇಡಿಯಾಗಲೀ, ಕುರೂಪಿಯಾಗಲೀ, ಉತ್ತಮ ಯಾ ಅಧಮನಿರಲಿ ಮನೆಗೆ ಅತಿಥಿಯಾಗಿ ಬಂದವನನ್ನು ಆತನ ವಿದ್ಯೆ, ಕುಲಗೌರವವನ್ನು ವಿಚಾರಿಸದೆ ಸತ್ಕರಿಸಿದರೆ ಅದೇ ಸ್ವರ್ಗಕ್ಕಿರುವ ಸೋಪಾನವಾಗುವದು”

ಹೀಗೆ ಹೇಳಿ ಮಂಗನು ಸೇಬಿನ ಹಣ್ಣುಗಳನ್ನು ಉದುರಿಸಿತು. ಮೊಸಳೆಯು ಅದರಿಂದ ಅತ್ಯಾನಂದಗೊಂಡಿತು. ಹೀಗೆ ಪ್ರತಿ ದಿನ ಮೊಸಳೆಯು ಬಂದು ಹಣ್ಣು ತಿನ್ನುತಿತ್ತು. ಕ್ರಮೇಣ ಇವರಿಬ್ಬರ ಗೆಳೆತನ ಬೆಳೆಯಿತು. ಒಂದು ದಿನ ಮೊಸಳೆಯು ಒಂದು ಹಣ್ಣನ್ನು ತನ್ನ ಪತ್ನಿಗೆ ತೆಗೆದುಕೊಂಡು ಹೋಗಿ ಕೊಟ್ಟಿತು. ಅದನ್ನು ತಿಂದ ಅದರ ಹೆಂಡತಿಯು ಸಂತೋಷಪಟ್ಟಿತು. ಕೆಂಪು ಮುಖವು ಹೇಳಿದ ಮಂಗನ ಕತೆ ಕೇಳಿ ಪ್ರತಿ ದಿನ ಈ ಹಣ್ಣು ತಿಂದು ಜೀವಿಸುವ ಆ ಕಪಿಯ ಮಾಂಸ ಹೇಗಿರಬಹುದು? ಅದರ ಎದೆಗುಂಡಿಗೆಯು ಅಮೃತಕ್ಕಿಂಥಾ ರುಚಿಕರವಾಗಿರಬಹುದು. ಆದರಿಂದ ಅದನ್ನು ತಿನ್ನಬೇಕೆಂದು ಹೆಣ್ಣು ಮೊಸಳೆಯು ದುರಾಲೋಚನೆ ಮಾಡಿ ತನ್ನ ಪತಿಯೊಂದಿಗೆ ಕಣ್ಣೀರು ಹಾಕುತ್ತಾ “ನಿನ್ನ ಹೆಂಡತಿಯ ಬಗ್ಗೆ ಪ್ರೇಮವಿರುವದಾದರೆ ಮಂಗನ ಎದೆಗುಂಡಿಗೆಯನ್ನು ತಂದು ಕೊಡಬೇಕು. ಅದು ಅಮೃತಸಮಾನವಿರಬಹುದು. ಅದನ್ನು ತಿಂದರೆ ನಾನು ಮುದುಕಿಯಾಗಲಾರೆ. ನನಗೆ ಸಾವು ಬಾರದು. ಸದಾ ನಿನ್ನ ಸಹವಾಸಿಯಾಗಿರುವೆನು” ಎಂದಿತು.

ಆಗ ತಿಳಿಗೇಡಿಯು ಹೇಳಿತು, ‘ಹಾಗೆ ಹೇಳಬಾರದು. ಆತನು ನನ್ನ ಸಹೋದರನಂತೆ. ಯಾವಾಗಲೂ ಹಣ್ಣು ಕೊಡುತ್ತಾನೆ. ಆತನನ್ನು ಕೊಲ್ಲಬಾರದು. ಏಕೆಂದರೆ ನಮಗೆ ಜನ್ಮ ದೊರೆಯಲು ನಮಗೆ ತಾಯಿಯಿರಬೇಕು. ಮತ್ತೊಂದು ಜನ್ಮಕ್ಕೆ ಮತ್ತೊಬ್ಬಾಕೆ ತಾಯಿಬೇಕು. ಆದರೆ ಗೆಳೆತನದಿಂದಾದ ಸಹೋದರತನವು ಒಂದೇ ತಾಯಲ್ಲಿ, ಜೊತೆಯಲ್ಲಿ ಹುಟ್ಟಿದುದಕ್ಕಿಂಥಲೂ ಹಿರಿದು !!

ಹೆಣ್ಣು ಮೊಸಳೆಯು, ‘ಈ ಮೊದಲು ನೀನು ಎಂದೂ ನನ್ನ ಮಾತನ್ನು ನಿರಾಕರಿಸಿಲ್ಲ. ಆದರೆ ಈಗ ನಿರಾಕರಿಸುತ್ತಿರುವೆ. ನಿನಗೆ ಹಣ್ಣು ಕೊಡುತ್ತಿರುವದು ಹೆಣ್ಣು ಕೋತಿ ಇರಬೇಕು. ಅದರೊಂದಿಗೆ ನಿನ್ನ ಸಮಯವನ್ನೆಲ್ಲಾ ನೀನು ಕಳೆಯುತ್ತಿರುವೆ. ನಿನಗೆ ನನ್ನ ಮೇಲಿನ ಪ್ರೇಮ ಕಡಿಮೆಯಾದೆ’ ಎಂದಿತು.

ತಿಳಿಗೇಡಿಗೆ ಇದನ್ನು ಕೇಳಿ ದುಃಖವಾಯಿತು. ಅದು ತನ್ನ ಪತ್ನಿಯನ್ನು ಕುರಿತು, “ಪ್ರಿಯೇ, ನಾನು ನಿನ್ನ ಪಾದತಳದಲ್ಲಿ ನಿನ್ನ ಸೇವೆಗಾಗಿ ಇರುವಾಗ ನನ್ನ ಮೇಲೆ ಅಪವಾದ ಏಕೆ ಹಾಕುತ್ತಿರುವೆ?”

ಇದನ್ನು ಕೇಳಿ ಹೆಣ್ಣು ಮೊಸಳೆಯು ಸಿಟ್ಟಿನಿಂದ, “ನೀನು ಮೋಸಗಾರ. ಆಕೆಯನ್ನು ಬಿಡುವ ಮನಸ್ಸಿಲ್ಲ. ನಿನ್ನ ಸೇವೆಯು ಸೋಗಿನದು. ನನಗೆ ಗೊತ್ತಿದೆ ನಿನ್ನ ಪ್ರೀತಿ ಎಲ್ಲಿದೆಯೆಂದು. ಆಕೆಯನ್ನು ನೀನು ಪ್ರೀತಿಸುವದಿಲ್ಲವಾದರೆ ಕೊಲ್ಲಲಿಕ್ಕೇನು? ನೀನು ಅದರ ಎದೆಗುಂಡಿಗೆ ತಾರದಿದ್ದರೆ ನಾನು ಉಪವಾಸ ಬಿದ್ದು ಪ್ರಾಣತ್ಯಾಗ ಮಾಡುವೆನು” ಎಂದಿತು.

ತಿಳಿಗೇಡಿಯು ಆಲೋಚಿಸಿ ಕಡೆಗೆ ನಿರುಪಾಯನಾಗಿ ಮಂಗನ ಹತ್ತಿರ ಹೋಗಿ ಮಂಗನನ್ನು ತನ್ನ ಮನೆಗೆ ಅತಿಥಿಯಾಗಿ ಕರೆಯಿತು. ಮೋಸವನ್ನು ತಿಳಿಯದ ಮಂಗನು ಮೊಸಳೆಯ ಬೆನ್ನೇರಿ ಮೊಸಳೆಯ ಮನೆಗೆ ಹೊರಟಿತು. ಇನ್ನು ಮಂಗನು ತಪ್ಪಿಸಿಕೊಳ್ಳಲಾರದೆಂದು ದಾರಿಯಲ್ಲಿ ಮೊಸಳೆಯು ಎಲ್ಲಾ ಕತೆಯನ್ನು ಹೇಳಿ ‘ನಿನ್ನ ಎದೆ ಗುಂಡಿಗೆಯನ್ನು ನನ್ನ ಪತ್ನಿಯು ತಿನ್ನಲು ಇಚ್ಛಿಸಿದ್ದಾಳೆ’ ಎಂದಿತು.

ಇದನ್ನು ಕೇಳಿ ಮಂಗನು ಗಾಬರಿಗೊಂಡರೂ ಅದನ್ನು ತೋರಿಸಿಕೊಳ್ಳದೆ ಹೇಳಿತು, “ಅಯ್ಯೋ ಮುಟ್ಠಾಳನಾದ ಗೆಳೆಯನೇ, ನೀನು ಆಗಲೇ ಏಕೆ ಹೇಳಲಿಲ್ಲ. ನಾನು ಯಾವಾಗಲೂ ನನ್ನ ಎದೆಗುಂಡಿಗೆಯನ್ನು ಆ ಮರದಲ್ಲಿಯೇ ತೂಗ ಹಾಕಿ ಅತ್ತಿತ್ತ ತಿರುಗುತ್ತಿರುವೆನು. ನೀನು ಅಲ್ಲಿಯೇ ಹೇಳಿದ್ದರೆ ಅದನ್ನು ತೆಗೆದುಕೊಂಡು ಬರುತಿದ್ದೆ. ಈಗ ಅದನ್ನು ತರಲಿಲ್ಲ. ನನ್ನನ್ನು ಕರೆದುಕೊಂಡು ಹೋಗಿ ಪ್ರಯೋಜನವೇನು’?

ಈ ಮಾತನ್ನು ತಿಳಿಗೇಡಿಯು ನಂಬಿ ಮಂಗನ ಮಾತಿನಂತೆ ದಡಕ್ಕೆ ಹಿಂದಿರುಗಿತು. ದಡಕ್ಕೆ ಬಂದೊಡನೆಯೇ ಮಂಗನು ಮರವೇರಿ ತನ್ನ ಪ್ರಾಣ ಉಳಿದುದಕ್ಕಾಗಿ ಅನೇಕ ದೇವರ ಪ್ರಾರ್ಥನೆ ಮಾಡಿತು. ಕೇಡಿಗಳನ್ನು ನಂಬಬಾರದು, ಅಪನಂಬಿಕೆಯವರಲ್ಲಿ ವಿಶ್ವಾಸವಿಡಬಾರದು. ನಂಬಿದರೆ ಸರ್ವನಾಶವೆಂಬ ಮಾತನ್ನು ನೆನಸಿಕೊಂಡಿತು.

ಅಷ್ಟರಲ್ಲಿ ಮೊಸಳೆಯು “ನನ್ನ ಸಹೋದರಾ, ಬೇಗ ಎದೆಗುಂಡಿಗೆಯನ್ನು ತೆಗೆದುಕೊಂಡು ಬಾ. ನನ್ನ ಹೆಂಡತಿಯು ಏನೂ ತಿನ್ನದೆ ಉಪವಾಸವಿದ್ದಾಳೆ” ಎಂದಿತು.

ಕೆಂಪು ಮುಖನು ನಗುತ್ತಾ “ತಿಳಿಗೇಡಿ ಮತ್ತು ದ್ರೋಹಿ. ನನ್ನನ್ನು ಕೊಲ್ಲಲು ಯತ್ನಿಸಿದ ನಿನ್ನ ಮುಖ ನೋಡಲಾರೆ. ತೊಲಗು. ತಲೆಯಿಲ್ಲದ ಮುಟ್ಠಾಳ. ಒಬ್ಬನಿಗೆ ಎರಡು ಎದೆಗುಂಡಿಗೆಗಳಿರುವವೇ? ಎದೆಗುಂಡಿಗೆಯನ್ನು ತೆಗೆದು ಮರದಲ್ಲಿ ತೂಗಲು ಬರುವದೇ? ನಡೆ. ಮುಂದೆ ಎಂದಿಗೂ ಈ ಮರದಡಿಗೆ ಬಾರದಿರು. ಏಕೆಂದರೆ ನಂಬಿಕೆ ಇಲ್ಲದ ಮಿತ್ರನನ್ನು, ಪುನಹ ನಂಬಿದರೆ ಮೃತ್ಯುವನ್ನಾಲಿಂಗಿಸಿದಂತೆ” ಎಂದಿತು.

ಇದನ್ನು ಕೇಳಿ ಮೊಸಳೆಗೆ ಬಹಳ ವ್ಯಸನವಾಗಿ ತನ್ನ ಬುದ್ಧಿ ಹೀನತೆಗೆ ತನ್ನನ್ನೇ ಬಯ್ದುಕೊಂಡಿತು. ಮತ್ತೆ ಉಪಾಯ ತಾಳಿ “ನನ್ನ ಗೆಳೆಯಾ, ಆಕೆಗೆ ನಿನ್ನ ಎದೆಗುಂಡಿಗೆ ಬೇಕಿಲ್ಲ. ನಿನ್ನನ್ನು ಪರೀಕ್ಷಿಸಲು ಹಾಗೆ ಸುಳ್ಳು ಹೇಳಿದೆ. ನಮ್ಮ ಮನೆಗೆ ಬಾ. ನಿನ್ನ ಆತಿಥ್ಯ ಮಾಡುವುದು ನನ್ನ ಧರ್ಮ” ಎಂದಿತು.

ಆಗ ಮಂಗನು ಸಿಟ್ಟಿನಿಂದ, ‘ವಂಚಕಾ, ತೊಲಗಿಲ್ಲಿಂದ. ನಾನು ಬರಲಾರೆ. ಉಪವಾಸವಿರುವವನು ಯಾವುದಕ್ಕೂ ಹೇಸಲಾರನು. ಬಡವನಾದವನು ಯಾವ ಹೃದಯರಹಿತ ಉಪಾಯಕ್ಕೂ ಹಿಂಜರಿಯಲಾರನು. ಸುಂದರಿಗೆ ಹೇಳು ತಿಯೋದರನ್ನು ಬಾವಿಯಲ್ಲಿ ಆಕೆಯನ್ನು ಕಾಣಲಾರನೆಂದು’ ಎಂದಿತು.

ಮೊಸಳೆಯು ತನಗೆ ಅರ್ಥವಾಗಲಿಲ್ಲವೆನ್ನಲು ಮಂಗನು ಮುಂದಿನ ವಾರ ಸುಂದರಿ ಮತ್ತು ಥಿಯೋಡರನ ಕತೆ ಹೇಳುವದು.

ಜಯಪ್ರಕಾಶ ನಾರಾಯಣರ ತಮಿಳು ನಾಡು ಸಂಚಾರ

ಚೆಂಗಲ್ಪಟ್ಟು, ರಾಮನಾಥಪುರಂ, ಮಧುರೆ ಮತ್ತು ತಿನ್ನವೆಲ್ಲಿ, ಈ ನಾಲ್ಕು ತಮಿಳು ನಾಡು ಜಿಲ್ಲೆಗಳ ಸಂಚಾರ ಕೈಗೊಂಡ ಪ್ರಜಾಸೋಷಲಿಸ್ಟ್ ಮುಖಂಡ ಶ್ರೀ ಜಯಪ್ರಕಾಶ ನಾರಾಯಣರು ೪ ಸಾವಿರ ಎಕ್ರೆಗಳಷ್ಟು ಜಮೀನು ಸಂಗ್ರಹಿಸಲು ಸಮರ್ಥರಾಗಿರುವರೆಂದು ತಮಿಳು ನಾಡು ಭೂದಾನ ಸಮಿತಿಯ ಕಾರ್ಯದರ್ಶಿ ಶ್ರೀ ಜಗನ್ನಾಥನ್ ಅವರು ಹೊರಡಿಸಿದ ಪ್ರಕಟಣೆಯ ಮೇಲಿಂದ ತಿಳಿದು ಬರುತ್ತದೆ. ಎಟ್ಟಾಯಪುರಂ ರಾಜರೊಬ್ಬರೇ ೫೦೦ ಎಕರೆ ಜಮೀನನ್ನು ಭೂದಾನ ಯಜ್ಞಕ್ಕೆ ಉದಾರ ದಾನವಾಗಿ ಕೊಟ್ಟಿರುವರು. ಶ್ರೀ ಜಯಪ್ರಕಾಶ ನಾರಾಯಣರೊಡನೆ ಶ್ರೀ ಕಾಮರಾಜ ನಾದರ್‌ರವರೂ ಈ ಜಿಲ್ಲೆಗಳ ಸಂಚಾರ ಕೈಗೊಂಡಿದ್ದರು. ಅವರು ಕೊಯಮುತ್ತೂರು ಜಿಲ್ಲೆಯ ಸಂಚಾರ ಕೈಕೊಂಡಿದ್ದು ಈಗಾಗಲೇ ೨೦೦೦ ಎಕ್ರೆಗಳಿಗೂ ಮಿಕ್ಕಿ ಭೂಮಿ ಸಂಗ್ರಹವಾಗಿದೆ.

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು :—ವೀರಾಜಪೇಟೆ.

ಶಾಖೆ :—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ಸಪ್ಲೈ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟೆಗಳು
2. 12 ನೇ ನಂಬರಿನ ಒಂಟಿ ಹೋಳವಿನ ತೋಟದ ಕೋವಿಗಳು
3. ಒಂಟಿ ಮತ್ತು ಜೋಡಿ ಹೋಳವಿನ ಕೇಪಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟೆಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
5. $\frac{5}{8}$", $\frac{1}{2}$" ಮತ್ತು $\frac{3}{8}$" ಕಬ್ಬಿಣದ ಸರಳುಗಳು
6. 2", $1\frac{1}{4}$", 1" $\frac{3}{4}$" ಮತ್ತು $\frac{1}{2}$" ಕೊಳಾಯಿಗಳು. (G. I. Peps)
7. $1\frac{3}{4}$" × $\frac{5}{16}$" ಉಕ್ಕಿನ ಪಟ್ಟಿಗಳು (Spring Steel flats)
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
9. ಕೋತಿ ಮತ್ತು ಆನೆ ಮಾರ್ಕಿನ ಸೀಮೆಣ್ಣೆ ಟಿನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ. ಬಿ. ಬೆಳ್ಯಪ್ಪ, (ಪ್ರೆಸಿಡೆಂಟ್)

ನಾವು ಜಪಾನಿನಿಂದ ಕಲಿಯಬೇಕಾದ ಪಾಠ.

ಜಪಾನಿನ ಕೈಗಾರಿಕಾ ಪ್ರಗತಿ.

— ಲೇಖಾಂಕ—೩ —

ಮೂಲ ಲೇಖಕ—ಶ್ರೀ ಚಮನ್ ಲಾಲ್.

ವಿಕೇಂದ್ರೀಕರಣ

ಜಪಾನಿನ ಕೈಗಾರಿಕಾ ಪ್ರಗತಿಯು ಅಲ್ಲಿಯ ಸರಕಾರದಿಂದ ದಕ್ಷ ರೀತಿಯಲ್ಲಿ ರೂಪಿಸಲ್ಪಟ್ಟಿದೆ. ಕೈಗಾರಿಕೆಯು ಕೇವಲ ನಗರಗಳಲ್ಲಾಗಲೀ ಯಾ ಹಳ್ಳಿಗಳಲ್ಲಾಗಲೀ ಕೇಂದ್ರೀಕೃತವಾಗಿಲ್ಲ. ವಿಕೇಂದ್ರೀಕರಣ ತತ್ವದ ಪ್ರಕಾರ ದೇಶದ ವಿವಿಧ ಭಾಗಗಳಲ್ಲಿ ವಿವಿಧ ಕೈಗಾರಿಕೆಗಳಿವೆ. ಈ ರೀತಿ ವಿಕೇಂದ್ರೀಕೃತ ಕೈಗಾರಿಕೆಯ ಉಪಯುಕ್ತತೆಯ ಪರಿಶೀಲನೆ ಮಾಡಿ ಅಮೇರಿಕದ ಕೊಲಂಬಿಯಾ ವಿಶ್ವವಿದ್ಯಾಲಯದ ಪ್ರೊ॥ ಜಾನ್ ಅರ್ಚರ್ಡ್‌ರವರು ಹೀಗೆ ಹೇಳುತ್ತಾರೆ "ಜಪಾನು ಕೈಗಾರಿಕೆಯಲ್ಲಿ ವಿಕೇಂದ್ರೀಕರಣ ಪದ್ಧತಿಯನ್ನು ಪರಿಣಾಮಕಾರಕವಾಗಿ ಜಾರಿಗೆ ತಂದಿದೆ. ಗ್ರಾಮಗಳಲ್ಲಿ ಹೆಚ್ಚಿನ ಜನರಿದ್ದು ಅವರು ಅಲ್ಲೇ ಇರಲು ಇಚ್ಛಿಪದುವರು. ರೈತರು ಸಾಮೂಹಿಕ ಜೀವನ ನಡೆಸುವವರು. ಈಗಿನ ವ್ಯವಸಾಯ ಕ್ರಮದಿಂದ ರೈತನಿಗೆ ವರ್ಷದಲ್ಲಿ ಹಲವು ತಿಂಗಳುಗಳ ಬಿಡುವು ದೊರೆಯುತ್ತದೆ. ಈ ಸಮಯದಲ್ಲಿ ಆತನು ಕೈಗಾರಿಕೆಗಳನ್ನು ಕೈಕೊಳ್ಳುವನು. ಜಪಾನು ಚಿಕ್ಕ ದೇಶವಾಗಿ ಹತ್ತಿರದಲ್ಲೇ ಕಚ್ಚಾ ಮಾಲುಗಳ ಹೆಚ್ಚಿನ ವಹಿವಾಟು ಖರ್ಚಿಲ್ಲದೆ ದೊರೆಯುವವು. ನೀರಿನ ಅನುಕೂಲತೆ ಪ್ರತಿ ಭಾಗದಲ್ಲಿದ್ದು ಜಲಶಕ್ತಿಯಿಂದ ವಿದ್ಯುತ್ ದೊರೆತು ಕೈಗಾರಿಕೆಗೆ ತುಂಬಾ ಅನುಕೂಲವಾಗಿದೆ. ಜಪಾನಿನ ಕೈಗಾರಿಕೆಯು ಪ್ರಾಮುಖ್ಯವಾಗಿ ಗುಡಿಕೈಗಾರಿಕೆಯೇ ಆಗಿದೆ. ಪ್ರತಿ ಮನೆಯೂ ಕೈಗಾರಿಕಾ ಕೇಂದ್ರವಾಗಿದೆ. ಆಧುನಿಕ ರೀತಿಯ ದೊಡ್ಡ ದೊಡ್ಡ ಕಾರ್ಖಾನೆಗಳೂ ಕೂಡ ಕೇವಲ ನಗರಗಳಲ್ಲಿ ಕೇಂದ್ರೀಕೃತವಾಗಿರದೆ ದೇಶದ ವಿವಿಧ [ಭಾಗಗ]ಳಲ್ಲಿವೆ.

ವರ್ಗರಹಿತ ಸಮಾಜ

[ಜ]ಪಾನಿನ ಎಂಟು ಕೋಟಿ ಜನಸಮು[ದಾಯ]ವು ಒಂದು ಕುಟುಂಬದಂತೆ ಪರಸ್ಪರ [ಅನ]ನ್ಯವಾಗಿ ವರ್ತಿಸುತ್ತಾರೆ. ಧನಿಕ[ರು ಮ]ತ್ತು ಬಡವರಲ್ಲಿ ತಾರತಮ್ಯವು ಬ[ಹಳ ಕ]ಡಿಮೆ. ಸಿರಿವಂತರೆಂಬ ಬಡಾಯಿ, [ಕೆಳಗಿನ] ವರ್ಗದವರೆಂಬ ಅಸ್ಪೃಶ್ಯತಾ ಭಾ[ವನೆ ತ]ೋರಿಬರುವದಿಲ್ಲ. ಜಪಾನಿನವು ಪ್ರಾ[ಯೋಗಿಕ]ವಾಗಿ ವರ್ಗರಹಿತ ಸಮಾಜವೆನ್ನಬ[ಹುದು]. ಸಿರಿವಂತರೂ ಬಡವರೂ ಜೊತೆಯ[ಲ್ಲಿಯೇ] ದುಡಿಯುತ್ತಾರೆ. ಜೊತೆಯಲ್ಲಿ ಊಟ, ಸುಖಗಳನ್ನು ಅನುಭವಿಸು[ತ್ತಾರೆ].

ಕೈಗಾರಿಕಾ ಕಾರ್ಖಾನೆಗಳ ಮಾಲಿಕ [ರೂ], ಲಕ್ಷಾಧಿಪತಿಗಳೂ, ಕಾರ್ಖಾನೆಯ ಬಡ ಕೆಲಸಗಾರರ ಜೊತೆಯಲ್ಲಿ ಗೆಳೆಯರಂತೆ ಜೀವಿಸುತ್ತಾರೆ. ಈ ವಿಚಾರವಾಗಿ ಪ್ರೊ॥ ಜಿ. ಪಿ. ಎಬೆನ್ ಎಂಬವರು ಹೀಗೆ ಬರೆಯುತ್ತಾರೆ. "ಇಂಗ್ಲೆಂಡಿಗಿಂತಾ ಜಪಾನು ಭಿನ್ನವಾಗಿದೆ. ಜಪಾನಿನಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿಯು ತಲೆದೋರಿ ಅಲ್ಲಲ್ಲಿ ವರ್ಗಭೇದಗಳು ಕಾಣಬರುತ್ತಿದ್ದರೂ ಬೇರೆ ಪಾಶ್ಚಿಮಾತ್ಯ ಮತ್ತಿತರ ರಾಷ್ಟ್ರಗಳಲ್ಲಿ ಕಂಡು ಬರುವ ವರ್ಗಭೇದವು ಅಲ್ಲಿ ಇಲ್ಲ. ಕೀಳು ಮೇಲು ಭಾವನೆಯೂ ಪ್ರಾಮುಖ್ಯವಾಗಿಲ್ಲ. ಬೇರೆ ದೇಶಗಳಿಗಿಂತಾ ಬಡವ ಬಲ್ಲಿದರ ಪರಸ್ಪರ ಮಿಲನವು ಸ್ನೇಹಪೂರ್ವಕವಾಗಿದೆ. ಯೂರೋಪಿನ ಕಾರ್ಖಾನೆಗಳಲ್ಲಿ ಡೈರೆಕ್ಟರುಗಳಿಗೆ ಊಟ ಮಾಡಲು ಬೇರೆ, ಕೆಲಸಗಾರರಿಗೆ ಬೇರೆಯೆಂದು ಪ್ರತ್ಯೇಕ ಏರ್ಪಾಡುಗಳಿರುವಂತೆ ಜಪಾನಿನಲ್ಲಿಲ್ಲ. ಜಪಾನಿನಲ್ಲಿ ಎಲ್ಲರೂ ಜೊತೆಯಲ್ಲಿ ಕೂತುಕೊಂಡು ಊಟಮಾಡುತ್ತಾರೆ. ಈ ದೃಷ್ಟಿಯಿಂದ ಜಪಾನು ಇತರ ಹಲವು ರಾಷ್ಟ್ರಗಳಿಗಿಂಥಾ ಪ್ರಜಾಪ್ರಭುತ್ವವಾದಿಯಾಗಿದೆ"

ನುರಿತ ಹಾಗೂ ತೃಪ್ತ ಕೆಲಸಗಾರರು

ನಾನು ರಷ್ಯಾವನ್ನು ಸಂದರ್ಶಿಸಿರುವೆನು. ಯೂರೋಪಿನ ಬೇರೆ ಅನೇಕ ರಾಷ್ಟ್ರಗಳನ್ನೂ ಪರಿಶೀಲಿಸಿರುವೆನು. ಅಮೇರಿಕಾವನ್ನೂ ನೋಡಿರುವೆನು. ಆದರೆ ಜಪಾನಿನಲ್ಲಿರುವಂಥಾ ನಗುಮೊಗದ, ಪ್ರಮಾಣಿಕರಾದ ಹಾಗೂ ತೃಪ್ತರಾದ ಕೆಲಸಗಾರರು ಯಾವ ದೇಶದಲ್ಲಿಯೂ ಇಲ್ಲ. ಲಂಡನಿನಲ್ಲಿ ಸಿರಿಸಂಪತ್ತಿದ್ದರೂ, ನ್ಯೂಯಾರ್ಕಿನಲ್ಲಿ ಗಗನ ಚುಂಬಿ ಸೌಧಗಳಿದ್ದರೂ ಅದೇ ರೀತಿ ಅತಿ ಬಡವರ ಬೀದಿಗಳೂ ಗುಡಿಸಲುಗಳೂ ಇವೆ. ಆದರೆ ಜಪಾನಿನಲ್ಲಿ ಇವುಗಳ ಸಂಖ್ಯೆ ಕಡಿಮೆ. ಬಡಗುಡಿಸಲಿನಲ್ಲಿ ಜೀವಿಸುವ ಜಪಾನು ಕೆಲಸಗಾರನು ತೃಪ್ತನೂ ಸಂತೋಷ ಚಿತ್ತನೂ ಆಗಿರುವನು. ಈ ತೃಪ್ತಿ ಆನಂದಗಳಿಗೆ ಕಾರಣವಿಲ್ಲದಿಲ್ಲ. ಜಪಾನಿನ ಕಾರ್ಖಾನೆಗಳಲ್ಲಿ ದುಡಿಯುವ ಕೆಲಸಗಾರರಿಗೆ ದೊರೆಯುವ ಪುರಸ್ಕಾರ, ಗೌರವಗಳು ಆದರ್ಶವಾಗಿವೆ. ಕಾರ್ಖಾನೆಗಳಲ್ಲಿ ಆತನನ್ನೂ ತಮ್ಮ ಸಮಾನನೆಂದು ಪರಿಗಣಿಸುತ್ತಾರೆ. ಆತನ ಸೌಲಭ್ಯಕ್ಕಾಗಿ ಮೇಜು, ಕುರ್ಚಿಗಳೂ, ಸಿನೇಮಾ, ನಾಟಕ, ಹೂದೋಟ, ಆರೋಗ್ಯಕರ ವಸತಿ, ಪುಸ್ತಕ ಶಾಲೆ, ಸಾಹಿತ್ಯ ಕಲೆ ಚಿತ್ರ ಕೆಲಸ, ಸಂಗೀತ, ನೃತ್ಯ, ಆಸ್ಪತ್ರೆ ಮೊದಲಾದ ಸಕಲ ಅನುಕೂಲತೆಗಳು ಒದಗಿಸಲ್ಪಡುತ್ತದೆ. ಕೋಬ್ ಎಂಬಲ್ಲಿಯ ಕಾನೆಗಫೂಚಿ ಮಿಲ್ಲುಗಳಲ್ಲಿ ಕೆಲಸಗಾರರಿಗೆ ಇರುವ ಆಸ್ಪತ್ರೆಯು ಹಿಂದೂಸ್ಥಾನದ ನಗರಗಳಲ್ಲಿರುವ ಹಲವು ಅತ್ಯುತ್ತಮ ಆಸ್ಪತ್ರೆಗಳಿಗಿಂಥಾ ಉತ್ತಮವಾಗಿದೆ ಜಪಾನನ್ನು ಸಂದರ್ಶಿಸುವ ಪ್ರತಿಯೊಬ್ಬನೂ ಈ ಅನುಕೂಲತೆಗಳನ್ನು ನೋಡಬಹುದು. ಹಿಂದೂಸ್ಥಾನದ ಮಿಲ್ ಮಾಲಿಕರೂ, ತೋಟಗಾರರೂ ಜಪಾನನ್ನು ಸಂದರ್ಶಿಸಿ ಅಲ್ಲಿಯ ವ್ಯವಸ್ಥೆಗಳನ್ನು ನೋಡಬೇಕು. ಜಪಾನಿನ ಕೈಗಾರಿಕೆಯ ಅಭಿವೃದ್ಧಿ ಮತ್ತು ಪ್ರಗತಿಗಳಿಗೆ ಅಲ್ಲಿಯ ಪ್ರಮಾಣಿಕ ಮತ್ತು ಚತುರ ಕೆಲಸಗಾರರು, ಅಲ್ಲಿಯ ಕೆಲಸಗಾರರಿಗೆ ಕೊಡುವ ಅನುಕೂಲತೆಗಳು, ಮತ್ತು ತಲೆಭಾರವಲ್ಲದ ಆಡಳಿತ ವ್ಯವಸ್ಥೆ ಇವೇ ಕಾರಣವೆನ್ನಬಹುದು. ಜಪಾನಿನಲ್ಲಿ ಕೆಲಸಗಾರರಿಗೆ ವೇತನ ಕಡಿಮೆ. ಈ ಕಡಿಮೆ ವೇತನದಲ್ಲಿ ಕೆಲಸಗಾರರು ಹೇಗೆ ತೃಪ್ತಿಯಲ್ಲಿರುವರೆಂದು ಪ್ರಶ್ನಿಸಬಹುದು.

ಕುಟುಂಬ ಪದ್ಧತಿ.

ಇದರ ಗುಟ್ಟು ಜಪಾನಿಯರ ಕುಟುಂಬ ಪದ್ಧತಿಯಲ್ಲಿದೆ. ಅವರ ಕುಟುಂಬ ಜೀವನವು ಪರಸ್ಪರ ಸಹಕಾರ, ಸರ್ವರ ಏಳಿಗೆಗಾಗಿ ಮಾಡಬೇಕಾದ ತ್ಯಾಗ ಮೊದಲಾದ ಉತ್ತಮ ಗುಣಗಳನ್ನು ಕಲಿಸುತ್ತದೆ. ಜಪಾನಿನ ಕುಟುಂಬ ಪದ್ಧತಿಯು ಅತೀ ಪುರಾತನವಾದುದು. ಕುಟುಂಬವು ಕೇವಲ ಧಾರ್ಮಿಕ ಯಾ ಆಧ್ಯಾತ್ಮಿಕ ಕೂಟ ಮಾತ್ರವಲ್ಲ; ಆರ್ಥಿಕ ಘಟಕವೂ ಹೌದು. ಪಾಶ್ಚಿಮಾತ್ಯ ಸಂಸ್ಕೃತಿಯು ಜಪಾನಿನಲ್ಲಿ ಕಾಲೂರಿದ್ದರೂ ಕೂಡ ಅಲ್ಲಿಯ ಸಮಾಜವು ಇನ್ನೂ ತನ್ನ ಹಿಂದಿನ ರೀತಿ ನೀತಿಗಳನ್ನು ಉಳಿಸಿಕೊಂಡು ಪ್ರಾಮುಖ್ಯವಾಗಿ ಜಪಾನಿಯದ್ದೇ ಆಗಿದೆ. ಪಾಶ್ಚಿಮಾತ್ಯ ಸಂಸ್ಕೃತಿಯ ವ್ಯಕ್ತಿಯ ಬೆಳವಣಿಗೆಯ ತತ್ವವನ್ನು ಲಾಭದಾಯಕವಾಗಿ ಅವರು ಕುಟುಂಬದ ಏಳ್ಗೆಯೊಂದಿಗೆ ಅಳವಡಿಸಿಕೊಂಡಿದ್ದಾರೆ. ಅಲ್ಲಿಯ ಕೆಲಸಗಾರರ ಉತ್ಕರ್ಷ ಪ್ರಗತಿಗಳು ಅವರವರ ಕುಟುಂಬದ ಉತ್ಕರ್ಷದಲ್ಲಡಗಿದೆ ಆದ್ದರಿಂದ ಪ್ರತಿ ಕೆಲಸಗಾರನೂ ತನ್ನ ಸಂಪಾದನೆಯನ್ನು ಕುಟುಂಬದ ಆದಾಯವೆಂದು ಕೊಡುತ್ತಾನೆ. ಈ ರೀತಿ ಕುಟುಂಬದವರೆಲ್ಲರೂ ಕೆಲಸ ಮಾಡಿ ತಂದ ಆದಾಯವು ಕುಟುಂಬದ ಆದಾಯವಾಗುವದರಿಂದ ಕಡಿಮೆ ವೇತನದಲ್ಲಿ ಕೆಲಸ ಮಾಡುವದು ಅಲ್ಲಿಯ ಕೆಲಸಗಾರರಿಗೆ ಸಾಧ್ಯವಿದೆ. ತಾವು ಸ್ವತಂತ್ರವಾಗಿ ದುಡಿದು ಪ್ರತ್ಯೇಕ ಸಂಸಾರ ನಡೆಸಲಾರದವರೂ ಸುಖವಾಗಿ ಜೀವಿಸುವದು ಈ ಪದ್ಧತಿಯಿಂದ ಸಾಧ್ಯವಾಗಿದೆ.

ಸರಳ ಜೀವನ.

ಜಪಾನಿಯರು ಆಡಂಬರ ಜೀವನದವರಲ್ಲ. ಪ್ರತಿ ಹೆಜ್ಜೆಯಲ್ಲಿಯೂ ಅವರದು ಸರಳ ಜೀವನ. ಇದರಿಂದಾಗಿ ಅವರ ಜೀವನ ಮಟ್ಟವು ಇಂಗ್ಲೆಂಡಿನ ಕೆಲಸಗಾರರಿಗಿಂಥಾ ಉತ್ತಮವಾಗಿದೆ. ಜಪಾನಿ ಕೆಲಸಗಾರರ ಜೀವನ ಪಲ್ಲಟವಾಗಿಲ್ಲ ಅವರು ತಮ್ಮ ದೇಶದ ವಾತಾವರಣ, ಸರಳ ಆಹಾರಗಳಿಂದಲೇ ತೃಪ್ತರು. ಕಬ್ಬಿಣ ಮಂಚ, ರೊಟ್ಟಿ, ತುಪ್ಪ, ಕಾಫಿ, ಕ್ರೀಂ ಎಂಬುದಾಗಿ ಅವರ ಜೀವನದ ಬೇಡಿಕೆ ಹೆಚ್ಚಿರುವದಿಲ್ಲ. ಅವರಿನ್ನೂ ಪ್ರಕೃತಿಯ ಮಕ್ಕಳಾಗಿಯೇ ನೆಲದಲ್ಲಿ ಮಲಗುತ್ತಾರೆ. ಅಕ್ಕಿ, ತರಕಾರಿ, ಮೀನು ಮೊದಲಾದವುಗಳಿಂದಲೇ ತೃಪ್ತರಾಗುತ್ತಾರೆ. ಇದನ್ನು ಕೆಳದರ್ಜೆಯ ಜೀವನ ಮಟ್ಟವೆನ್ನಲಾಗುವದಿಲ್ಲ. ಏಕೆಂದರೆ ಅವರ ಜೀವನ ಕ್ರಮವೇ ಬೇರೆಯಾಗಿದೆ. ಆದ್ದರಿಂದ ಪಾಶ್ಚಾತ್ಯ ರಾಷ್ಟ್ರಗಳ ದುಂದುಗಾರಿಕೆಯ ಜೀವನವನ್ನು ತುಲನೆಮಾಡಿ, ಅವರ ವೇತನದ ಲೆಕ್ಕ ತೆಗೆದು ಜಪಾನಿನಲ್ಲಿ ಕೆಲಸಗಾರರಿಗೆ ವೇತನ ಕಡಿಮೆ, ಅವರ ಸುಲಿಗೆ ನಡೆದಿದೆಯೆನ್ನುವದು ಸರಿಯಲ್ಲ.

ಐಕ್ಯ ದೃಷ್ಟಿ

ಜಪಾನರ ಪ್ರತಿ ಕೆಲಸದಲ್ಲಿಯೂ ಒಂದು ಗುರಿ ಇದೆ. ಪ್ರತಿಯೊಬ್ಬನ ಪ್ರಯತ್ನದಲ್ಲಿಯೂ ಆ ಸಾಮೂಹಿಕ ಗುರಿಯ ದೃಷ್ಟಿ ಇದೆ. ಅವರ ರಾಷ್ಟ್ರೀಯ ಭಾವನೆಯೇ ಅವರ ಸರಳ ಜೀವನಕ್ಕೂ, ಶಕ್ತಿಮೀರಿದ ದುಡಿಮೆಗೂ ಕಾರಣವಾಗಿದೆ. ಕೈಗಾರಿಕೆಯಲ್ಲಿ ಮುಂದರಿದಿರುವ ಬ್ರಿಟನ್, ಅಮೇರಿಕಾಗಳ ಪ್ರಗತಿಯನ್ನು ಜಪಾನಿನದರೊಂದಿಗೆ ಹೋಲಿಸಲಾಗದು. ಆ ರಾಷ್ಟ್ರಗಳ ಪ್ರಗತಿಯಲ್ಲಿ ಏಕಮುಖವಾದ ಓಟವಿಲ್ಲ. ಪರಿಸ್ಥಿತಿಯ ಒತ್ತಡ, ಇಲ್ಲವೇ ಕೆಲವೊಂದು ಜನರ ಲಾಭದ ಆಸೆ, ಯಾ ಬೇರೆ ಕಾರಣಗಳಿಂದ ಆ ರಾಷ್ಟ್ರಗಳ ಕೈಗಾರಿಕಾ ಪ್ರಗತಿಯಾಗಿದ್ದರೆ ಜಪಾನಿನಲ್ಲಿ ಅಲ್ಲಿಯ ಕೆಲಸಗಾರರ ರಾಷ್ಟ್ರಪ್ರೇಮವು ಪ್ರಾಮುಖ್ಯ ಕಾರಣವಿದೆ. ಕೈಗಾರಿಕೆಗೆ ಜಪಾನು ಸರಕಾರವು ಕೊಡುವ ಸಹಾಯವು ಪಾಶ್ಚಿಮಾತ್ಯ ರಾಷ್ಟ್ರಗಳಷ್ಟು ದೊಡ್ಡದಾಗಿರಲಾರದು. ಆದರೆ ಜನತೆಯ ಐಕ್ಯ ಪ್ರಯತ್ನದ ಕಾರಣ ಎಲ್ಲವೂ ಜಯಪ್ರದವಾಗುತ್ತಿದೆ. ಆದ್ದರಿಂದ ಜಪಾನಿನ ಕಾರ್ಖಾನೆಗಳಲ್ಲಿ ಮುಷ್ಕರಯವಾಗುವುದಿಲ್ಲ. ಕೆಲಸಗಾರರು ದೊರೆತ ಕಚ್ಚಾ ಮಾಲಿನ ಪೂರ್ಣ ಉಪಯೋಗವನ್ನು ಲಾಭದಾಯಕವಾಗಿ ಮಾಡಿರುತ್ತಾರೆ. ಯಾವುದೇ ರೀತಿಯ ನಷ್ಟವಾದರೂ ದೇಶಕ್ಕಾದ ನಷ್ಟವೆಂದು ಭಾವಿಸುತ್ತಾರೆ. ಆಡಳಿತ ನಿರ್ವಹಣೆಯ ಯೋಗ್ಯತೆ ಕೆಲಸಗಾರರ ಕಡಿಮೆ ವೇತನ, ವಹಿವಾಟಿನ ಅನುಕೂಲತೆ, ಕೆಲಸಗಾರರ ಚತುರತೆ ಕಚ್ಚಾ ಮಾಲುಗಳ ಸದುಪಯೋಗ ಮೊ[ದಲಾದವುಗಳ] ಕಾರಣದಿಂದ ಜಪಾನರು ಪ್ರಪಂಚದ ಇತರ ಎಲ್ಲಾ ರಾಷ್ಟ್ರಗಳಿಗಿಂತಲೂ ಕಡಿಮೆ ಬೆಲೆಯಲ್ಲಿ ಮಾಲುಗಳನ್ನು ತಯಾರಿಸಲು ಶಕ್ತರಾಗಿದ್ದಾರೆ.

ದಕ್ಷ ಆಡಳಿತ ವ್ಯವಸ್ಥೆ

ಜಪಾನಿನ ಕಾರ್ಖಾನೆಗಳ ಉಸ್ತುವಾರಿಯು ಬಹು ದಕ್ಷ ರೀತಿಯಿಂದ ನಡೆಯುತ್ತದೆ. ಅತ್ಯಾಧುನಿಕ ಯಂತ್ರೋಪಕರಣಗಳ ಉಪಯೋಗವನ್ನು ಅವರು ಮಾಡುತ್ತಾರೆ. ಬ್ರಿಟನಿನಲ್ಲಿ ಗಿರಣಿಯಲ್ಲಿ ೫೫ ಮಿಲಿಯ ಸ್ಪಿಂಡಲ್ಸ್ (ನೆಯಿಗೆಯ ಕದುರುಗಳು) ಇದ್ದರೆ ಜಪಾನಿನಲ್ಲಿ ಬರೇ ೮ ಮಿಲಿಯವಿತ್ತು. ಆದರೆ ಬಟ್ಟೆ ಉತ್ಪತ್ತಿಯು ಬ್ರಿಟನಿಗಿಂಥಾ ಜಪಾನಿನಲ್ಲಿ ಎಷ್ಟೋ ಹೆಚ್ಚಾಗುತ್ತಿತ್ತು. ಈ ದಕ್ಷ ರೀತಿಯ ಕೆಲಸವೇ ಜಪಾನಿನ ಕೈಗಾರಿಕೆಗೆ ಅಗ್ರ ಸ್ಥಾನವನ್ನು ಕೊಟ್ಟಿದೆ. ಪ್ರಾಮುಖ್ಯವಾಗಿ ಜೀವನ ಮಟ್ಟ ಕಡಿಮೆ ಇರುವ ರಾಷ್ಟ್ರಗಳು ಆಧುನಿಕ ಯಂತ್ರೋಪಕರಣಗಳನ್ನು ಉಪಯೋಗಿಸುವುದಿಲ್ಲ. ಆದರೆ ಜಪಾನಿನಲ್ಲಿ ಹಾಗಲ್ಲ. ಅತ್ಯಾಧುನಿಕ ರೀತಿಯ ಯಂತ್ರೋಪಕರಣಗಳನ್ನು ಅಲ್ಲಿ ಕಾಣಬಹುದು.

Licence No. 60.
Licenced to Post without Prepayment
Reg. No. M. 1550.
"KODAGU" MERCARA (Coorg)

ಕಾಶ್ಮೀರದ ನೂತನ ಪ್ರಧಾನರು

ಮಾತು ಕಡಿಮೆ, ಕೃತಿ ಜಾಸ್ತಿ.

ಕಾಶ್ಮೀರದ ರಾಜಕೀಯದಲ್ಲಿ ಮಿಂಚಿನೋಪಾದಿಯಲ್ಲಿ ವಿದ್ಯಮಾನಗಳು ನಡೆದು ಹೋಗಿ ಶೇರ್ ಎ ಕಾಶ್ಮೀರ್ ಶೇಕ್ ಅಬ್ದುಲ್ಲಾರವರು ಅಧಿಕಾರ ಪೀಠದಿಂದ ಉರುಳಿದ ಘಟನೆಗಳು ಇಷ್ಟರಲ್ಲೇ ದೇಶವಿದೇಶಗಳ ರಾಜಕಾರಿಣಿಗಳ ಗಮನವನ್ನು ಸೆಳೆದಿವೆ. ಶೇಕ್ ಅಬ್ದುಲ್ಲರ ಸ್ಥಾನದಲ್ಲಿ ಪ್ರಧಾನ ಮಂತ್ರಿಯಾಗಿ ಬಂದ ಬಕ್ಷಿ ಗುಲಾಮ್ ಮಹಮ್ಮದರು ಕ್ಷಿಪ್ರಾವಧಿಯಲ್ಲಿ ಕಾಶ್ಮೀರದಲ್ಲಿ ಹರಡಿದ್ದ ಕ್ಷೋಭೆಗಳನ್ನು ಅಡಗಿಸಲು ಸಮರ್ಥರಾಗಿರುವರು.

೧೯೦೭ನೇ ಜುಲೈ ತಿಂಗಳಲ್ಲಿ ಇವರು ಒಂದು ಸಾಮಾನ್ಯ ಕುಟುಂಬದಲ್ಲಿ ಹುಟ್ಟಿದ್ದರು. ವಿದ್ಯಾರ್ಥಿ ದೆಶೆಯು ಮುಗಿದ ಮೇಲೆ ಅಧ್ಯಾಪಕರಾಗಿ ಜೀವನ ವೃತ್ತಿಯನ್ನು ಅವರು ಆರಂಭಿಸಿದ್ದರು ಆ ನಂತರ ಅಖಿಲ ಭಾರತ ನೂಲುವವರ ಸಂಘದ ಒಂದು ಶಾಖೆಯಲ್ಲಿ ಉದ್ಯೋಗಕ್ಕಿದ್ದರು. ಕ್ರಮೇಣ ತನ್ನ ಸ್ವಂತ ಪರಿಶ್ರಮದಿಂದ ಹಾಗೂ ಕಾರ್ಯಧುರಂಧರತೆಯಿಂದ ಜಮ್ಮು ಮತ್ತು ಕಾಶ್ಮೀರ ಸಂಸ್ಥಾನಗಳ ಪ್ರಥಮ ಜನಪ್ರಿಯ ಸರಕಾರದಲ್ಲಿ ಮೊದಲ ಉಪಪ್ರಧಾನರಾಗುವ ಗೌರವವೂ ಅವರಿಗೆ ದೊರಕುವಂತಾಯಿತು ಬಾಲ್ಯದಿಂದಲೇ ದೇಶದ ಕುರಿತಾದ ಅಭಿಮಾನ ಯಾವಾಗಲೂ ಇವರಲ್ಲಿ ತುಂಬಿತುಳುಕಾಡುತ್ತಿತ್ತು. ಜನರ ಏಳ್ಗೆಗಾಗಿಯೆ ಸತತ ಶ್ರಮಿಸುತ್ತಿದ್ದರು.

ಅಂಜದೆ, ಅಳುಕದೆ ಇರುವ ಕೆಚ್ಚೆದೆತನ, ಎಂತಹ ಕಠಿಣ, ಪ್ರಸಂಗವನ್ನೂ ಎದುರಿಸುವ ದಾರ್ಢ್ಯ ಇವುಗಳಲ್ಲಿ ಮೊದಲಿಂದಲೂ ಅವರು ಅಪ್ರತಿಮ ಭಟರು. ಇಟಲಿಯ ಮುಸ್ಸೋಲಿನಿಯಂತೆ ಅಪಾಯಕಾರಿಯಾದ ಜೀವನದಲ್ಲಿ ಇವರಿಗೆ ಬಲವಾದ ನಂಬಿಕೆ; ಅಖಂಡ ವಿಶ್ವಾಸ ಶಾಲೆಯಲ್ಲಿ ವಿದ್ಯಾರ್ಥಿದಶೆಯಲ್ಲಿರುವಾಗಲೇ ಕಾಶ್ಮೀರದ ಆದ್ಯಂತ, ಗುಡ್ಡಗಾಡು ಕಣಿವೆಗಳನ್ನು ಲೆಕ್ಕಿಸದೆ ಸೈಕಲ್ ಸಂಚಾರ ಮಾಡಿ ಮುಗಿಸಿದ್ದರು. ನಿರಂಕುಶಾಧಿಕಾರದ ವಿರುದ್ಧ ಸತತ ಹೋರಾಟ ಅವರ ಜೀವನದ ಉಸಿರಾಗಿತ್ತು.

ಪಾಕಿಸ್ಥಾನದ ಪ್ರೇರಣೆಯಿಂದ ಧಾಳಿಗಾರರು ಕಾಶ್ಮೀರದ ಮೇಲೆ ಅಭಿಯೋಗ ಹೂಡಿದಾಗ, ಕೆಲವೇ ವಾರಗಳ ಅಧಿಕೃತಿಯ ಈ ಧುರೀಣನ ಶ್ರೇಷ್ಠತೆಯೂ ಪ್ರಕಾಶಕ್ಕೆ ಬಂತು. ಸಂಚಮಾಂಗ ಒಳಪದರ ರಹಸ್ಯ ಕಾರಸ್ಥಾನಗಳ ಮೇಲೆ ಕಾವಲು ಕಣ್ಣಿಟ್ಟು ಜನರಲ್ಲಿ ದಿಗಿಲುಂಟಾಗದಂತೆ ಕಾಯ್ದ ಕೀರ್ತಿ ಅವರಿಗೆ ಸಲ್ಲಬೇಕು. ರಸ್ತೆಯಿಂದ ರಸ್ತೆಗೆ, ಮೊಹಲ್ಲಾದಿಂದ ಮೊಹಲ್ಲಕ್ಕೆ ಐಕ್ಯತೆಯ ಸಂದೇಶ ಸಾರುತ್ತ ಅಲೆದಾಡಿ ಶತ್ರು ಗೂಢಚಾರರ ಬಾಯಿ ಮುಚ್ಚಿಸಿಬಿಟ್ಟರು.

ಕಳೆದ ೧೫ ವರ್ಷಗಳಲ್ಲಿ ೪ ಸಲ ಕಾರಾಗೃಹವಾಸ ಅನುಭವಿಸಿದ್ದಾರೆ ಅತ್ಯಂತ ದೀರ್ಘಾವಧಿಯ ಸೆರೆಮನೆ ವಾಸವನ್ನು ಗಾಂಧೀಜಿಯವರ ಲಿಯಾಸಿ ಸಬ್ ಜೈಲಿನಲ್ಲಿ ಕಳೆದಿದ್ದರು. ಆ ಸಲ ಅವರಿಗೆ ೧೭ ತಿಂಗಳುಗಳ ದೀರ್ಘಾವಧಿಯ ಸಜೆಯಾಗಿತ್ತು. ಹಲವು ಬಾರಿ ಸಂಸ್ಥಾನೀ ಪೋಲೀಸರನ್ನು ದಂಗುಬಡಿಸಿದ್ದಾರೆ. ೧೯೩೮ರಲ್ಲಿ ಭೂಗರ್ಭ ಚಟುವಟಿಕೆಗಳನ್ನು ನಡೆಸಿಕೊಂಡಿದ್ದರು. 'ಕ್ವಿಟ್ ಕಾಶ್ಮೀರ್' ಚಳವಳ ಕಾಲದಲ್ಲಿ ಭಾರತದಲ್ಲಿದ್ದು ಅಲ್ಲಿಂದ ಕಾಶ್ಮೀರದ ಸ್ವಾತಂತ್ರ್ಯರಕ್ಷಣೆಯ ಚಳವಳ ನಡೆಸಿಕೊಂಡಿದ್ದರು. ಹಿಂದೀಯರ ಒಲವು ಕಾಶ್ಮೀರದ ಕಡೆಗೆ ಪೂರ್ಣ ತಿರುಗುವಂತೆ ಸಾಧಿಸಿದವರಲ್ಲಿ ಅವರು ಅಗ್ರೇಸರರು. ೧೭ ತಿಂಗಳುಗಳ ಕಾಲ ಈ ರೀತಿ ಅಜ್ಞಾತವಾಸದಲ್ಲಿದ್ದು ಅನಂತರ ವಿಜಯಿ ಯೋಧನಂತೆ ತನ್ನ ಮಾತೃದೇಶವನ್ನು ಸೇರಿದರು.

ಪ್ರಾಮಾಣಿಕತೆ, ಧೈರ್ಯ ಸ್ಥೈರ್ಯ, ನಿರಾಡಂಭರತೆ ಇವುಗಳು ಅವರಲ್ಲಿ ಎದ್ದು ತೋರುವ ಗುಣಗಳು. ಬಕ್ಷಿ ಗುಲಾಮ್ ಮಹಮ್ಮದ್ ಕೆಲವೇ ಮಾತುಗಳ ಮನುಷ್ಯ. ಆದರೆ ಕಾರ್ಯರಂಗದಲ್ಲಿ ಗೋಲಾಯತನಿಗಿಂತ ಮಿಗಿಲಾದ ಸಹಸಿ ಸಾರ್ವಜನಿಕ ಕೂಟಗಳಲ್ಲಿ ಒಂದು ದಂಡವನ್ನು ಕೈಯಲ್ಲಿ ಹಿಡಿದು ಗಲಾಟೆ ಎಬ್ಬಿಸುವವರನ್ನು ಶಿಸ್ತಿನಿಂದಿರುವಂತೆ ಅವರು ಮುಂಬರುವಾಗ ಎಂತಹ ಪೋಲಿಯಾದರೂ ತಲೆಬಾಗಲೇ ಬೇಕು ಶಿಸ್ತು ಕಾಯ್ದುಕೊಳ್ಳುವದರಲ್ಲಿ ಸ್ವತಃ ನಿಪುಣರು. ಶೀಘ್ರ ಪರಿಣಾಮವನ್ನು ತರುವ ನ್ಯಾಯವಾದ ಕಾರ್ಯಾಚರಣೆಯಲ್ಲೇ ಇವರಿಗೆ ಅಪಾರ ಶ್ರದ್ಧೆ. ಕಾಶ್ಮೀರದಲ್ಲಿ ಸರಕಾರವೇ ಕಳಚಿ, ರಾಜಕೀಯವೇ ಕಲಸು ಮೇಲೋಗರವಾದ ಗಂಭೀರ ಸ್ಥಿತಿಯಲ್ಲಿ ಶಾಂತಿ ಶಿಸ್ತುಗಳನ್ನು ಕಾಯ್ದಿದ್ದರೆ ಅದು ಅವರ ಈ ಅಪಾರ ಶ್ರದ್ಧೆ ಕಾಶ್ಮೀರದ ಪ್ರತಿಯೊಬ್ಬ ಪ್ರಜೆ ಅವರನ್ನು ಗೌರವದಿಂದ ಕಾಣುತ್ತಾರೆ.

ವಾರದ ಕಥೆ.

(೨ನೇ ಪುಟದಿಂದ ಸಾಗಿದ್ದು)

ಲುಗಾಡಿಸುತ್ತಾ ಕೇಳಿದಳು, 'ಏನು ಸ್ವಪ್ನ ನೋಡುತ್ತಿದ್ದೀರಾ ?'

'ಹೌದು ಮಂದಾ, ದುಃಸ್ವಪ್ನ.'

ಸ್ವಪ್ನದ ಎಲ್ಲಾ ಘಟನೆಯನ್ನೂ ಕೇಳಿದ ಮಂದಾಕಿನಿಯು ಕೈಮುಗಿದು, ಕೆನ್ನೆಗೆ ಹೊಡೆದುಕೊಂಡು 'ಏನು ? ಇದನ್ನು ದುಃಸ್ವಪ್ನವೆನ್ನುತ್ತೀರಾ ? ಇದು ಸುಸ್ವಪ್ನ ನೀವು ಭಗವಾನರು. ಇದಕ್ಕಾಗಿಯೇ ಸ್ವಪ್ನಾವಸ್ಥೆಯಲ್ಲಿ ಭಗವಂತನು ನಿಮಗೆ ದರ್ಶನವಿತ್ತಿದ್ದಾನೆ. ಇನ್ನು ಜಾಗ್ರತಾವಸ್ಥೆಯಲ್ಲಿಯೂ ಸಹ ಯಾವಾಗಲಾದರೊಮ್ಮೆ ದರ್ಶನವೀಯುತ್ತಾನೆ' ಎಂದಳು.

ಸೀರೆಯ ಸೆರಗನ್ನು ಸರಿಮಾಡಿಕೊಂಡು, ಪತಿಯ ಪಾದ ಧೂಳಿಯನ್ನು ಸ್ವೀಕರಿಸಿ, ಮಂದಾಕಿನಿಯು ಕೊಠಡಿಯಿಂದ ಹೊರಗೆ ಹೋದಳು.

ಕೆಲ್ಲ ಹೊತ್ತು ನಿಶ್ಚೇಷ್ಟನಾಗಿ ಕುಳಿತಿದ್ದು ನಂತರ, ಎದ್ದು ಕೈಕಾಲುಮುಖ ತೊಳೆದುಕೊಂಡು, ಚಹಾ ವಗೈರೆ ಮುಗಿಸಿ, ಸಾಂಖ್ಯದರ್ಶನ ತೆಗೆದುಕೊಂಡು ಉಮಾಶಂಕರನು ಕುಳಿತನು.

ಪಾಠ ಪ್ರಾರಂಭಿಸುವ ಮೊದಲು, ಅವನು ಮನಸ್ಸಿನಲ್ಲಿಯೇ ಹೀಗೆಂದುಕೊಂಡ 'ಹೇ ಭಗವನ್, ನಿಜವಾಗಿಯೂ ನೀನಿದ್ದರೆ, ನನ್ನ ಮನಸ್ಸಿನಲ್ಲಿ ಸಂಪೂರ್ಣ ವಿಶ್ವಾಸ ಉತ್ಪನ್ನ ಮಾಡುವ ಮೊದಲು, ನನ್ನ ಮನಸ್ಸಿನ ದುರ್ಬಲತೆಯನ್ನು ದೂರ ಮಾಡು.'

(ಹಿಂದೀ ಕಥೆಯೊಂದರ ಆಧಾರದಿಂದ)

THE CANARA BANKING CORPORATION LIMITED.
ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್.
ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)
ಠೇವು ವಾಯಿದೆಯ ಠೇವಣಾತಿಗಳು :
3 ರಿಂದ 6 ತಿಂಗಳುಗಳ ವರೆಗೆ— ಸಾಲಿಯಾನ ಶೇಕಡ 3
7 ರಿಂದ 12 ತಿಂಗಳುಗಳ ವರೆಗೆ—ಸಾಲಿಯಾನ ಶೇಕಡ 3¼
ಪಂಚವಾರ್ಷಿಕ ಸುವರ್ಣ ಠೇವಣಾತಿಗಳು— ,, ,, 4
—: ಕೊಡಗು ಸಂಸ್ಥಾನದಲ್ಲಿ ನಮ್ಮ ಶಾಖೆಗಳು :—
ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು
ಸೋಮವಾರಪೇಟೆ.

INSURE WITH
OR REPRESENT
INDIA'S OLDEST LIFE OFFICE.
THE BOMBAY MUTUAL LIFE ASSURANCE SOCIETY, LTD.
BUSINESS IN FORCE OVER 40 CRORES
ASSETS .... OVER 12 CRORES
Applications from energetic youngmen are invited for representation.
Head Office, 25–24 Branch
BOMBAY. 172. 3, Narasimharaja Road. BANGALORE 2.

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.
[ಸ್ಥಾಪನೆ: 1921]
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00 000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,36,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಛಾಲ್ತಿ ಠೇವಣಾತಿ ಶೇಕಡ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.
ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುವು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ,
ಪ್ರೆಸಿಡೆಂಟ್ & ಖಜಾಂಚಿ.

ಕೊಡಗು

ಅಮ್ಮ ಬಂದಳು!

ವಾರ್ಷಿಕ ಚಂದಾ ರೂ. ೫—೦—೦
ಸಂಪುಟ ೩) (ಸಂಚಿಕೆ ೧೫
ಶುಕ್ರವಾರ
೧೦--೯--೧೯೫೩

KODAGU KANNADA WEEKLY MERCARA

ಈ ವಾರದ ಕಥೆ.

ನಿರ್ಭಾಗ್ಯ.

ಲೇ:—ಶ್ರೀ ಎಸ್. ಎನ್. ನಾಗಪ್ಪ, ಶಿವಮೊಗ್ಗ.

ಅಂದು ರಾತ್ರಿ ನನಗೆ ಬಹು ಬೇಗ ಎಚ್ಚರಿಕೆಯಾಯ್ತು. ಇನ್ನೂ ನಿದ್ರೆಯ ದುಗುಡ ಸಹ ಪೂರ್ಣ ಹೋಗಿರಲಿಲ್ಲ, ಕಣ್ತೆರೆದು ನೋಡಿದೆ. ಬೆಳಗಿನ ಜಾವ ಐದು ಗಂಟೆಯಾದಂತೆ ಭಾಸವಾಯ್ತು. ಗಡಿಯಾರದ ಕಡೆಗೆ ದೃಷ್ಟಿ ಬೀರಿದೆ. ಅಲ್ಲಿ ಗಡಿಯಾರವಿರಲಿಲ್ಲ. ಅಂದು ಬೆಳಗ್ಗೆಯೇ ರಿಪೇರಿ ಮಾಡಲು ಕೊಟ್ಟು ಬಂದಿದ್ದ ನೆನಪಾಯ್ತು. ಪ್ರತಿ ನಿತ್ಯದಂತೆ ಟವಲನ್ನು ತೆಗೆದುಕೊಂಡು ಸ್ನಾನಕ್ಕೆ ನದಿಗೆ ಹೊರಟೆ.

ಬೇಸಿಗೆ ದಿನವಾದುದರಿಂದ ನೀರೆಲ್ಲವೂ ಬತ್ತಿ ಒಂದು ಪಾರ್ಶ್ವದಲ್ಲಿ ಮಾತ್ರ ಸಣ್ಣಗೆ ಹರಿಯುತ್ತಿತ್ತು. ಸ್ನಾನಕ್ಕೆ ಮೆಟ್ಟಲುಗಳನ್ನು ಇಳಿದು ಸ್ವಲ್ಪ ಮುಂದೆ ಹೋಗಬೇಕಾಗಿತ್ತು. ತಡವರಿಸುತ್ತಾ, ಮೆಟ್ಟಲುಗಳನ್ನು ಇಳಿಯಲಾರಂಭಿಸಿದೆ. ದೃಷ್ಟಿ ಮಾತ್ರ ಚೆನ್ನಾಗಿ ಬೀರುತ್ತಾ ಮುಂದುವರಿದೆ. ಕೊನೆಯ ಮೆಟ್ಟಲಿನ ತುದಿಗಲ್ಲಿನ ಮೇಲೆ ಯಾವುದೋ ಒಂದು ಕಪ್ಪನೆಯ ಆಕೃತಿ ಕಾಣಿಸಲಾರಂಭಿಸಿತು. ಆ ಮುಸುಕಿನಲ್ಲಿ ಸ್ಪಷ್ಟವಾಗಿ ಏನೂ ಕಾಣಿಸಲೊಲ್ಲದು. ತುಂಬಾ ಭಯವಾಯಿತು. ಹಿಂದಕ್ಕೆ ಓಡಿ ಹೋಗೋಣವೆಂದರೆ ಆಗಲೇ ಅರ್ಧ ಮೆಟ್ಟಲುಗಳನ್ನು ಇಳಿದು ಆ ಆಕೃತಿಯ ಸಮೀಪಕ್ಕೆ ಬಂದಿದ್ದೆ. ಏನು ಮಾಡಲೂ ಬುದ್ಧಿ ತೋಚದೆ ಒಂದೆರಗಳಿಗೆ ಅಲ್ಲಿಯೇ ಸ್ತಬ್ಧನಾಗಿ ನಿಂತು ದೃಷ್ಟಿಯನ್ನು ಚೆನ್ನಾಗಿ ಬೀರಿದೆ.

ಸ್ತ್ರೀ ವ್ಯಕ್ತಿಯಿದ್ದಂತೆ ಭಾಸವಾಯ್ತು. ಹೆರಳು ಬಿಚ್ಚಿತ್ತು. ನೀಳವಾದ ತಲೆ ಕೂದಲು ಅಸ್ತವ್ಯಸ್ತವಾಗಿ ಮುಖವನ್ನು ಮುಚ್ಚಿತ್ತು. ನೋಡಿದೊಡನೆ ಒಮ್ಮೆಗೆ ಮೈಯೆಲ್ಲ ಬೆವತುಹೋಯ್ತು. ನಾಲಗೆ ಒಣಗಿ ಕೂಗಲು ಸಹ ಬಾಯಿ ಬಾರದಂತಾಯ್ತು. ಸ್ವಲ್ಪ ಧೈರ್ಯ ತಂದುಕೊಂಡು ಪರೀಕ್ಷಿಸಲೇಬೇಕೆಂದು ಮುಂದುವರಿದೆ. ನನ್ನನ್ನು ನೋಡಿದೊಡನೆ ಆ ಸ್ತ್ರೀ ವ್ಯಕ್ತಿ ಗಾಬರಿಯಿಂದ ಎದ್ದು ನಿಂತಿತು. ಪಕ್ಕದಲ್ಲಿಯೇ ಒಂದು ಚಿಕ್ಕ ಮಗು ಕಾಣಿಸಿತು. ಸುಂದರವಾಗಿತ್ತು. ಹತ್ತಿರ ಹೋಗಿ ನೋಡಿದೆ. ಆಗ ತಾನೆ ಗೋಣು ಮುರಿದು ಬಿಸುಟಿದ್ದ ಹಾಗೆ ತೋರಿತು. ಮನಸ್ಸಿಗೆ ತುಂಬಾ ನೋವಾಯ್ತು. ಆ ಸ್ತ್ರೀಯನ್ನು ಮಾತನಾಡಿಸಲು ಯತ್ನಿಸಿದೆ. ತಕ್ಷಣವೇ ಓಡಲಾರಂಭಿಸಿತು. ನಾನೂ ಹಿಂಬಾಲಿಸಿದೆ.

ಮನೆ ತುಂಬಾ ದೂರವಿರಲಿಲ್ಲ. ನದೀ ದಡದ ಮೇಲೆಯೇ ಇತ್ತು. ನಾನು ಬಾಗಿಲ ಹತ್ತಿರ ಹೋಗುವುದರೊಳಗೆ ಆ ಸ್ತ್ರೀ ವ್ಯಕ್ತಿ ಬಾಗಿಲು ಮುಚ್ಚಿ ಮನೆಯೊಳಗೆ ಸೇರಿಕೊಂಡಿತು. ನನಗೆ ಆಗ ಸಿಟ್ಟು ತಡೆಯಲಾಗಲಿಲ್ಲ. ಬಾಗಿಲು ತೆಗೆಯದಿದ್ದರೆ ಪೋಲೀಸಿಗೆ ಈಗಲೇ ಕಂಪ್ಲೈಂಟ್ ಕೊಡುತ್ತೇನೆಂದು ಬೆದರಿಸಿದೆ. ಆಗ ಬಾಗಿಲು ತೆರೆದು, ನಿಮ್ಮ ಕಾಲಿಗೆ ಬೀಳುತ್ತೇನೆ, ಪೋಲೀಸರಿಗೆ ತಿಳಿಸಬೇಡಿ ಎಂದು ಗೋಳಿಟ್ಟಳು. ಅಂದಿನ ರಾತ್ರಿ ಆದ ಆ ಸ್ತ್ರೀಯ ಗೋಳಿನ ದೃಶ್ಯ ನನ್ನ ಮನಸ್ಸನ್ನು ನೋಯಿಸಿತು.

ಎಂಥ ಜೀವನ ಸ್ತ್ರೀಯರದು!

'ಹತ್ತು ತಿಂಗಳು ಸತತವಾಗಿ ಹೊತ್ತು, ಹೆತ್ತ ಶಿಶುವನ್ನು ತನ್ನ ಸ್ವಂತ ಹಸ್ತದಿಂದಲೇ ಗೋಣು ಮುರಿದು, ಚರಂಡಿಗೋ ಅಥವಾ ನದಿಗೊ ಎಸೆಯುತ್ತಾಳೆ.'

ಹೀಗೆ ತರಂಗ ತರಂಗವಾಗಿ 'ಸ್ತ್ರೀಯರ ನಡೆನುಡಿಗಳ ಬಗ್ಗೆ ಯೋಚನೆಗಳು ಸುಳಿಯಲಾರಂಭಿಸಿದವು

'ಏತಕ್ಕಾಗಿ ಆ ಹಸುಗೂಸನ್ನು ಗೋಣು ಮುರಿದು ಸಾಯಿಸಿದೆ? ನಿನ್ನ, ಹೆತ್ತ ಹೊಟ್ಟೆಗೆ ನೋವುಂಟಾಗಲಿಲ್ಲವೇ? ಹೀಗೆ ವರ್ತಿಸಲು ಕಾರಣವೇನು? „ಎಂದು ಪ್ರಶ್ನಿಸಿದೆ. ಆಕೆಯು ತನ್ನ, ಎಲ್ಲಾ ಬಾಳಿನ ಕಥೆಯನ್ನು ಹೇಳಲು ಪ್ರಾರಂಭಿಸಿದಳು.

ನಾನು ನಮ್ಮ ತಂದೆಗೆ ಒಬ್ಬಳೇ ಮಗಳು. ಊರು ದೇವನೂರು. ಅಷ್ಟೇನೂ ದೊಡ್ಡ ಊರಲ್ಲ. ನೂರು ಮನೆಗಳ ಗ್ರಾಮ ಅದೇ ಊರಿನಲ್ಲಿ ಪ್ರೈಮರಿ ಸ್ಕೂಲ್ ಉಪಾಧ್ಯಾಯರಾಗಿದ್ದರು ನಮ್ಮ ತಂದೆ. ಸಂಬಳ ಗೊತ್ತೇ ಇದೆ. ಬರುವ ಅಲ್ಪ ಸಂಬಳದಲ್ಲಿಯೇ ಅಚ್ಚುಕಟ್ಟಾಗಿ ಜೀವನ ನಡೆಸುತ್ತಿದ್ದರು ನಮ್ಮ ತಾಯಿಯವರು ಸಹ ಯಾವ ತರಹದ ದುಂದು ವೆಚ್ಚಕ್ಕೂ ಅಸ್ಪದ ಕೊಡದೆ ಸಂಸಾರವನ್ನು ಸುಗಮವಾಗಿ ನಡೆಸಿಕೊಂಡು ಹೋಗುತ್ತಿದ್ದರು.

ಬಂಜೆ ತನದ ಸೊಲ್ಲನ್ನಡಗಿಸಿ ಬಹಳ ವರ್ಷಕ್ಕೆ ಹುಟ್ಟಿದ ನನ್ನನ್ನು ತುಂಬಾ ಚೆನ್ನಾಗಿ ಸಾಕಿದ್ದರು. ನಾನು ಪ್ರಾಪ್ತ ವಯಸ್ಕಳಾದಾಗ, ನಮ್ಮ ತಾಯಿ ತಂದೆಗೆ ಆಗಲೇ ಅರ್ಧ ವಯಸ್ಸಾಗಿತ್ತು.

ವರಾನ್ವೇಷಣೆಗಾಗಿ ಊರು ಊರು ಅಲೆದರು. ಯಾವುದೂ ಸರಿಬರಲಿಲ್ಲ. ಕೆಲವು ಗಂಡುಗಳು ಮದುವೆಯಾಗಲು ಮುಂದೆ ಬರುತ್ತಿದ್ದರು. ಆದರೆ ವರದಕ್ಷಿಣೆ ಬೇಕೆಂದು ಕೆಲವರು, ಬಿ. ಎ., ಎಂ. ಎ., ಓದಿಸಬೇಕೆಂದು ಕೆಲವರು ಹೀಗೆ ನಾನಾ ರೀತಿಯಾಗಿ ಕೇಳುತ್ತಿದ್ದರು.

ಬಡತನವಿದ್ದಲ್ಲಿ ಹೊನ್ನಿನ ಅಭಾವ!
ಸಿರಿತನವಿದ್ದಲ್ಲಿ ಹೆಣ್ಣಿನ ಅಭಾವ!

ನಾನೇತಕ್ಕೆ ಹೆಣ್ಣಾಗಿ ಹುಟ್ಟಿದೆ. ಈ ಬಡತನದ ಭವಣೆಯಲ್ಲಿ, ನನ್ನಿಂದ ತನ್ನ ಬಡ ಮಾತಾಪಿತೃಗಳಿಗೆ ಎಷ್ಟು ಕಷ್ಟ. ಜೊತೆಗೆ ನನ್ನ ಕೊರಗಿನ ಜೀವನ ಬೇರೆಯೆಂದು ಸ್ತ್ರೀ ಜೀವನದ ಬಗ್ಗೆ ತಪಿಸಿದೆ.

ಇದೇ ರೀತಿ ಮೂರು ವರ್ಷಗಳು ಕಳೆದವು ಜನರ ಆಡಿಕೆಯ ಮಾತು ಜೋರಾಯ್ತು. ಅಕ್ಕಪಕ್ಕದ ಮನೆಯವರೂ ಸಹ ನಮ್ಮ ತಾಯಿಯ ಎದುರಿನಲ್ಲಿಯೇ ಅಣಕಾಟ ಮಾಡಲಾರಂಭಿಸಿದರು.

ಕಡೆಗೆ ವಯಸ್ಸಾದವರೊಬ್ಬರೊಡನೆ ನನ್ನ ವಿವಾಹ ಆಯಿತು. ಎಲ್ಲಾ ಖರ್ಚನ್ನು ಅವರೇ ಹಾಕಿದರು. ಮದುವೆಯೂ ಸುಗಮವಾಗಿ ನೆರವೇರಿತು. ಅಂದಿನಿಂದ ಪತಿಯ ಮನೆಯಲ್ಲಿ ಸಂಸಾರದ ಹೊರೆಯನ್ನು ಹೊತ್ತು ಕಾಲ ಕಳೆಯಲಾರಂಭಿಸಿದೆ. ಯಾವ ತೊಂದರೆಯೂ ಇರಲಿಲ್ಲ. ಹಿರಿಯ ಹೆಂಡತಿಗೆ ಇದ್ದ ಒಬ್ಬನೇ ಮಗ ರಮೇಶನೂ ಸಹ ಚೆನ್ನಾಗಿ ನನ್ನೊಡನೆ ವರ್ತಿಸುತ್ತಿದ್ದ ಮತ್ತು ವಿಧೇಯನಾಗಿದ್ದ. ವಯಸ್ಸಾದ ಪತಿಯೆಂಬ ಕೊರಗು ವಿನಾ ಮತ್ಯಾವ ಕೊರತೆಯೂ ಇರಲಿಲ್ಲ. ಪತಿಯ ಮೇಲೆ ಯಾವ ಅಲಕ್ಷ್ಯ ಭಾವನೆಯೂ ಇರಲಿಲ್ಲ. ಪ್ರೀತಿ ಪೂರ್ವಕವಾಗಿ ಕಾಣುತ್ತಿದ್ದೆ.

ಆ ವರ್ಷವೇ ರಮೇಶ ಮೆಟ್ರಿಕ್ ಪರೀಕ್ಷೆಯಲ್ಲೀ ತೇರ್ಗಡೆ ಹೊಂದಿದ. ಮುಂದೆ ಓದಿಸಲು ಸಾಕಷ್ಟು ಹಣವಿಲ್ಲದೆ ಬಿಡಿಸಿದರು. ಒಂದು ಗುಮಾಸ್ತೆಯ ಕೆಲಸಕ್ಕಾಗಿ ಆಫೀಸಿನಿಂದ ಆಫೀಸಿಗೆ ಅರ್ಜಿಯನ್ನು ಹಿಡಿದು ಅಲೆದ. ಆದರೆ ನಿರುದ್ಯೋಗಿಯ ನಾಮ ಮಾತ್ರ ಶಾಶ್ವತವಾಗಿ ಉಳಿಯಿತು ರಮೇಶನ ಪಾಲಿಗೆ. ದಿನೇ ದಿನೇ ತಂದೆಯವರ ಕಾಟ ಜಾಸ್ತಿಯಾಯಿತು. ನಾನು ಯಾವ ಅಹಿತವನ್ನೂ ಬಗೆಯಲಿಲ್ಲ. ರಮೇಶ ಬೇಸರದಿಂದ ಮನೆಗೆ ಬಂದಾಗ, ಊಟ ಬೇಡವೆಂದರೂ ಸಮಾಧಾನ ಹೇಳಿ ಬಿಡದೆ ಊಟ ಮಾಡಿಸುತ್ತಿದ್ದೆ. ತಂದೆಯ ತೊಂದರೆ ತಡೆಯಲಾರದೆ ಆತನು ಮನೆಬಿಟ್ಟು ಹೊರಟುಹೋದನು.

ರಮೇಶ ಊರು ಬಿಟ್ಟು ಹೋಗಿ ಮೂರು ವರ್ಷವಾಗುತ್ತಾ ಬಂತು. ಮಗ ಕಣ್ಣಿಂದ ದೂರವಾದ ಮೇಲೆ ದಿನೇ ದಿನೇ ಮಗನ ವಿರಹದ ಚಿಂತೆಯಿಂದ ಅವರು ನಿಶ್ಶಕ್ತರಾಗುತ್ತಾ ಬಂದರು. ಸುಖವಿಲ್ಲದ ಸಂಸಾರವಾಯ್ತು ನಮ್ಮದು.

ಅಂದು ಮಧ್ಯಾಹ್ನ ಎಂದಿನಂತೆ ಊಟಕ್ಕೆ ಬಂದರು. ಸ್ನಾನ ಬೆಳಗ್ಗೆಯೇ ಆಗಿತ್ತು. ಕೈಕಾಲು ತೊಳೆದುಕೊಂಡು ಬಂದು ಊಟಕ್ಕೆ ಕುಳಿತರು. ಅಂದು ತುಂಬಾ ಗೆಲುವಾಗಿದ್ದರು. ನಗುನಗುತ್ತಲೇ ಊಟ ಮಾಡಿದರು. ಈವತ್ತು ಹುಳಿ ಬಹಳ ಚೆನ್ನಾಗಿ ಮಾಡಿದ್ದೀಯೊ, ರಮೇಶ ಇದ್ದಿದ್ದರೆ ಎಷ್ಟು ಹೊಗಳುತ್ತಿದ್ದನೋ ಎಂದು ನುಡಿದರು ಆ ದಿವಸ.

ಇಂದು ಮಗನ ಜ್ಞಾಪಕವಾಯಿತೇ ಎಂದು ಹೇಳಿದೆ. ಊಟ ಮುಗಿದ ಮೇಲೆ ಆರಾಮ ಕುರ್ಚಿಯ ಮೇಲೆ ಬಂದು ಕುಳಿತರು. ಎಲೆ ಅಡಿಕೆಯನ್ನು ಮಡಚಿ ಕೊಟ್ಟು, ನಾನೂ ಊಟ ಮಾಡಲು ಹೊರಡಲಿದ್ದೆ. ಅಷ್ಟರಲ್ಲಿ ನೀರು, ನೀ....ರು, ಎಂದು ಕೈಸನ್ನೆ ಮಾಡಿದರು.

ನೀರನ್ನು ತಂದುಕೊಟ್ಟೆ. ಒಂದು ಗುಟುಕು ನೀರು ಕುಡಿದರು, ಒಮ್ಮೆ ಕಣ್ಣು ತುಂಬಾ ನೋಡಿದರು. ಹಾಗೆಯೇ ಕಣ್ಣು ಮುಚ್ಚಿದರು. ಮತ್ತೆ ಕಣ್ತೆರೆಯಲಿಲ್ಲ. ನನ್ನನ್ನು ಏಕಾಂಗಿನಿಯಾಗಿ ಬಿಟ್ಟು ಇಹ ಲೋಕವನ್ನು ತ್ಯಜಿಸಿ ಹೋಗಿದ್ದರು. ಕೊನೆಗೆ ತಿಳಿಯಿತು. ಹೃದಯ ಸ್ತಂಭನದಿಂದ ಸತ್ತು ಹೋದರೆಂದು. ಅಂದಿನ ನನ್ನ ಸ್ಥಿತಿ ಕರ್ಣಕಠೋರವಾಗಿತ್ತು. ಸಾಹುಕಾರರ ಕಡೆಯವರು ಬಂದು ನನ್ನ ಪತಿಯ ಅಂತ್ಯಕ್ರಿಯೆ ನಡೆಸಿದರು.

ದುಡಿಯುತ್ತಿದ್ದ ಪತಿಯ ಮರಣ, ಇದ್ದ ಒಬ್ಬನೇ ಮಗ ರಮೇಶನ ದೇಶಾಂತರ, ಹೀಗಾಗಿ ನನ್ನ ಮುಂದಿನ ಜೀವನದ ಬಗ್ಗೆ ದಿಕ್ಕೇ ತೋಚದಾಯ್ತು. ಮೊದಲೇ ಬಡತನದ ಬೇಗೆಯಲ್ಲಿ ಉರಿದು ಬೆಂಡಾಗಿದ್ದ ಆ ಮುದಿ ತಂದೆ ತಾಯಿಗಳ ಮನೆಯನ್ನು ಸೇರಲು ಮನಸ್ಸಾಗಲಿಲ್ಲ. ಸಾಯುವ ಮುನ್ನ ಇದ್ದ ಅಲ್ಪ ಸ್ವಲ್ಪ ಸಾಲ ಜೊತೆಗೆ ನನ್ನ ಪತಿಯ ಅಂತ್ಯಕ್ರಿಯೆಗೆ ಆದ ಸಾಲ ಎಲ್ಲಾ ಒಟ್ಟು ಸೇರಿ, ಇರಲು ನೆರಳಾಗಿದ್ದ ಸ್ವಂತ ಮನೆಯೂ ಸಾಹುಕಾರರ ಪಾಲಾಯ್ತು. ಅಬಲೆಯಾದ ನಾನೊಬ್ಬಳು ಎಲ್ಲಿಗೆ ಹೋಗುವುದು. ಹೇಗೆ ಜೀವಿಸುವುದು. ಒಂದು ತುತ್ತು ಅನ್ನ, ಒಂದು ಮೊರು ಬಟ್ಟೆಗಾಗಿ ಪರರ ಮುಂದೆ ಕೈಯೊಡ್ಡುವಂತಾಯ್ತು, ನನ್ನ ಅಂದಿನ ಸ್ಥಿತಿ.

ಬಾಡಿಗೆ ಕೊಡಬೇಕು ಇಲ್ಲದಿದ್ದರೆ ಮನೆ ಬಿಡಬೇಕೆಂದು ಒತ್ತಾಯಪಡಿಸಿದರು. ಒಂದು ಹೊತ್ತು ಊಟಕ್ಕೆ ಗತಿಯಿಲ್ಲದ ನಾನು ಬಾಡಿಗೆ ಎಲ್ಲಿಂದ ಕೊಡುವುದು. ಮನೆಯನ್ನು ಸಾಹುಕಾರರ ವಶಕ್ಕೆ ಬಿಟ್ಟು ಛತ್ರದ ಕಟ್ಟೆಯನ್ನು ಸೇರಿದೆ ಅನಾಥಳ ಹಾಗೆ. ಛತ್ರದ ಕಟ್ಟೆಯ ಮೇಲೆ ಅಂದು ಒಂದು ರಾತ್ರಿ ಕಳೆಯುವುದು ಒಂದು ಯುಗ ಕಳೆದಂತಾಗಿತ್ತು. ನನ್ನ ಬಾಳಿನ ಕ್ರೂರ ರಾತ್ರಿ ಅದು.

ಹನ್ನೆರಡು ಘಂಟೆಯಾದ ಮೇಲೆ, ನಡು ರಾತ್ರಿಯಲ್ಲಿ ಛತ್ರದ ಮೇನೇಜರನು ಬಂದು ಪೀಡಿಸಲೆತ್ನಿಸಿದ. ವಿನಯಪೂರ್ವಕವಾಗಿ ಪ್ರಾರ್ಥಿಸಿದೆ. ಅಂಗಲಾಚಿ ಬೇಡಿಕೊಂಡೆ. ಅಬಲೆಯ ಮಾನ ಕಾಪಾಡಿ, ನಿಮಗೆ ಹೆಂಡಿರಿಲ್ಲವೇ? ಅನಾಥರಾಗಿ ದಿಕ್ಕಿಲ್ಲದೆ ಬಂದರೆ ಈ ತರಹ ಪೀಡಿಸಿ ಬಲಾತ್ಕಾರವಾಗಿ ಅನಾಥರ ಮಾನ ಕೆಡಿಸುವದು ನಿಮಗೆ ಯೋಗ್ಯವಲ್ಲ ಎಂದು ಪರಿಪರಿಯಾಗಿ ಬೇಡಿದೆ.

ಮಹಾ ನೀಚ ಎಲ್ಲಿಂದ ಬರಬೇಕು. ಅವನಿಗೆ ಕರುಣೆ, ಬಲಾತ್ಕಾರವಾಗಿ ನನ್ನನ್ನು ರೂಮಿಗೆ ಎಳೆದುಕೊಂಡು ಹೋಗಿ ಶರೀರ ಸುಖವನ್ನನುಭವಿಸಿದ. ಮರುದಿನವೇ ಅಲ್ಲಿಂದ ನನ್ನನ್ನು ಹೊರದೂಡಿದ ಆ ಚಂಡಾಲನ ನೀಚಕೃತ್ಯದಿಂದ ಅಂದು ಅಪವಿತ್ರಳಾದೆ.

ಆ ನೀಚನ ಸೆರೆ ತಪ್ಪಿದ ಮೇಲೆ ಇಲ್ಲಿಗೆ ಬಂದು, ಮೂರು ರೂಪಾಯಿಗೆ ಬಾಡಿಗೆ ಮನೆ ಗೊತ್ತು ಮಾಡಿಕೊಂಡು ವಾಸಿಸಲೆತ್ನಿಸಿದೆ. ದಿನಕ್ಕೆ ಹನ್ನೆರಡಾಣೆಯಂತೆ ಕೂಲಿ ಮಾಡಲು ಹೋಗುತ್ತಿದ್ದೆ. ಜೊತೆ

(ಕಡೇ ಪುಟವನ್ನು ನೋಡಿ)

ವೀರಾಜಪೇಟೆ ಹೈಸ್ಕೂಲ್ ಬೋರ್ಡಿಂಗ್ ಮನೆ.

ಕೇಂದ್ರ ಸರಕಾರದ ಲೇಬರ್ ಇಲಾಖೆಯವರು ಕೊಡಗಿನಲ್ಲಿ ಔದ್ಯೋಗಿಕ ಕಲಾಶಾಲೆಯೊಂದನ್ನು ತೆರೆಯುವ ನಿರ್ಣಯವಾದಿ ಅದಕ್ಕೆ ಯೋಗ್ಯ ಕಟ್ಟಡವಿಲ್ಲದ ಪ್ರಯುಕ್ತ ಕೊಡಗು ಸರಕಾರವು ಹಂಗಾಮಿಯಾಗಿ ವೀರಾಜಪೇಟೆ ಹೈಸ್ಕೂಲು ಬೋರ್ಡಿಂಗ್ ಕಟ್ಟಡವನ್ನು ಅವರಿಗೆ ಬಿಟ್ಟುಕೊಟ್ಟು ಸುರಗೆಲಸದ ಶೆಡ್ಡಿನಲ್ಲಿ ವಸತಿಗೃಹ ಏರ್ಪಡಿಸಿತು. ಈ ಕಟ್ಟಡದಲ್ಲಿ ಸಾಕಷ್ಟು ಬೆಳಕು ಗಾಳಿಗೆ ಆಸ್ಪದವಿಲ್ಲ. ಮತ್ತು ೩೫ ಕ್ಕಿಂಥಾ ಹೆಚ್ಚಿಗೆ ವಿದ್ಯಾರ್ಥಿಗಳಿರಲೂ ಸಾಧ್ಯವಿಲ್ಲ. ಅಡಿಗೆ ಮನೆ, ಊಟದ ಮನೆ, ನೌಕರುಗಳಿಗೆಂದು ಹಂಗಾಮಿ ಶೆಡ್ಡು ಕಟ್ಟಲಾಗಿದೆ. ಈ ಕಟ್ಟಡದಲ್ಲಿ ಹಂಗಾಮಿಯಾಗಿ ಹಾಸ್ಟೆಲು ತೆರೆದರೂ ಅದೇ ಈಗ ಖಾಯಂ ಎಂಬಂತೆ ನಡೆದು ಬರುತ್ತಿದೆ. ವಿದ್ಯಾರ್ಥಿಗಳಿಗೆ ಈ ಕಟ್ಟಡದಲ್ಲಿ ವಿಪರೀತ ತೊಂದರೆಗಳಿವೆ. ಹಳೆಯ ಬೋರ್ಡಿಂಗ್ ಕಟ್ಟಡವನ್ನು ಔದ್ಯೋಗಿಕ ಶಾಲೆಗೆ ಕೊಡುವದಾದರೆ ಉಚಿತ ಸ್ಥಳದಲ್ಲಿ ವೀರಾಜಪೇಟೆ ಹೈಸ್ಕೂಲಿಗೆ ಯೋಗ್ಯ ಕಟ್ಟಡವೊಂದನ್ನು ಕಟ್ಟಬೇಕಾಗಿ ಸರಕಾರವನ್ನು ಕೇಳಿಕೊಳ್ಳುವನಾಗಿದೆ.

ವಿದ್ಯಾಭಿಮಾನಿ.

—

ಕಾನ್ವೆಂಟ್ 'ಪುಷ್ಪ'ಗಳು.

ಕಳೆದ ವಾರ ಪ್ರಕಟವಾಗಿದ್ದ 'ಸೋದರಿ'ಯ ಪತ್ರ ಓದಿದೆನು. ಅದರಲ್ಲಿ ಬರೆದುದು ಸತ್ಯವಾಗಿದ್ದರೆ ನನ್ನ ಆರೋಪವಿರಲಿಲ್ಲ. ಆದರೆ ಪರಿಸ್ಥಿತಿ ಹಾಗಿಲ್ಲ. ಒಂದು ಗಿಡದಲ್ಲಿಯ ಪುಷ್ಪವು ಮನಮೋಹಕ ಬಣ್ಣದಿಂದೊಡಗೂಡಿ ಎಲೆಗಳ ಹಿನ್ನೆಲೆಯನ್ನು ಪಡೆದು ಸೂರ್ಯನ ಹೊಂಬಣ್ಣದಿಂದ ವಿಶೇಷ ಕಾಂತಿಯನ್ನು ಪಸರಿಸಿ ಮೆರೆಯುವದು ದುಂಬಿಗಳ ಆಕರ್ಷಣೆಗೆಂದು ಪ್ರಕೃತಿಶಾಸ್ತ್ರ ಅಭ್ಯಾಸ ಮಾಡಿದವರೆಲ್ಲರಿಗೂ ತಿಳಿದ ವಿಷಯ. ಅದರಲ್ಲೂ 'ಹೊತ್ತು ಸಂಚಿಕೆ' ಎಂಬ ಪುಷ್ಪವು ಗಳಿಗೆಗೊಂದು ಮಾದರಿಯ ಬಣ್ಣ ಬದಲಾಯಿಸುವದು ಈ ದುಂಬಿಗಳನ್ನು ಆಕರ್ಷಿಸಲೆಂಬುದು ಖಚಿತವಾಗಿದೆ. ದುರಾದೃಷ್ಟವಶಾತ್ ಕಾಲೇಜ್ ಆಟೋಟದ ಮೈದಾನವು ಕಾನ್ವೆಂಟ್ ಎಂಬ ಪುಷ್ಪತೋಟದ ಹತ್ತಿರವೇ ಇರುವದು ನಮ್ಮೆಲ್ಲರ ದುರಾದೃಷ್ಟ. ಆಟದಿಂದ ಸೋತು ಹಿಂತೆರಳುವ ವಿದ್ಯಾರ್ಥಿಗಳ ದಾರಿಯಲ್ಲಿ ಈ ಪುಷ್ಪಗಳು ವಿವಿಧ ಬಣ್ಣರಂಗುಗಳಿಂದ ಬಿಡ್ಡಗಟ್ಟಿ ಮೆರೆಯುತ್ತಿದ್ದರೆ ಅದು ಸೋದರರ ತಪ್ಪಲ್ಲ. ತಂದೆ ತಾಯಿಗಳು ಶಾಲೆಗೆ ಕಳುಹಿಸಿದ ಗುರಿಯನ್ನು ಮನದಲ್ಲಿಟ್ಟು ನಿಮ್ಮ ಆವರಣದೊಳಗೆ ನಿಮ್ಮ ಕಾರ್ಯ ಮಾಡುತ್ತಿದ್ದರೆ ನಿಮ್ಮ ಗೋಜಿಗೆ ಬರುವವರಾರು? ನಿಮ್ಮ ಹೆಸರು ಹಿಡಿದು ಕರೆಯಲು ಕಾಲೇಜ್ ವಿದ್ಯಾರ್ಥಿಗಳು ನಿಮ್ಮ ತರಗತಿಯ ಅಧ್ಯಾಪಕರಲ್ಲ ತಾನೆ! ನಿಷ್ಕಾರಣವಾಗಿ ಇತರರನ್ನು ದೂರದಿರಿ. ನೀವು ನಿಮ್ಮ ಅಳತೆಗೊಳಪಟ್ಟು ಸಭ್ಯತೆಯಿಂದ ವರ್ತಿಸಿದರೆ ಯಾರೂ ನಿಮ್ಮ ಗೋಜಿಗೆ ಬರಲಾರರು. ನಿಮ್ಮ ಸ್ತ್ರೀಯ ಕರ್ತವ್ಯವನ್ನು ಮರೆತು ಮೆರೆದು ಸಿಕ್ಕಿದೆಡೆ ಕಂಪನ್ನು ಬೀರಿ ಆಕರ್ಷಿಸಿದರೆ ಪಾಪದ ದುಂಬಿಗಳು ವೈರಾಗ್ಯ ಶಪಥವನ್ನು ಕೈಕೊಂಡಿಲ್ಲವಷ್ಟೆ!

ಸೋದರ.

ಕಾಲೇಜು ವಿದ್ಯಾರ್ಥಿ ವಸತಿಗೃಹ

ತಾ. ೨೮ರ 'ಕೊಡಗು' ಪತ್ರಿಕೆಯಲ್ಲಿ ಕಾಲೇಜು ವಿದ್ಯಾರ್ಥಿಗಳ ವಸತಿ ಗೃಹದ ವಿಚಾರದಲ್ಲಿ ಪ್ರಕಟವಾದ 'ಸಿ. ಕೆ.' ಯವರ ಪತ್ರ ನೋಡಿ ತುಂಬಾ ಆಶ್ಚರ್ಯವಾಯಿತು. ಮಾನ್ಯ 'ಸಿ. ಕೆ.' ಯವರು ನಿಜ ಪರಿಸ್ಥಿತಿಯನ್ನು ವಿಚಾರ ಮಾಡದೆ ಯಾರೋ ಹೇಳಿದ್ದನ್ನು ಕೇಳಿ ಏನೋ ಬರೆದಿರಬೇಕು. ಇಲ್ಲವಾದರೆ ಜೂನಿಯರ್ ಕ್ಲಾಸಿನ ೪೭ ವಿದ್ಯಾರ್ಥಿಗಳಿಗೆ ಹೊಸ ಕಾಲೇಜಿನ ಸಮೀಪದ ಕಟ್ಟಡದಲ್ಲಿಯೂ, ಸೀನಿಯರ್ ಕ್ಲಾಸಿನ ೩೨ ವಿದ್ಯಾರ್ಥಿಗಳಿಗೆ ಹಳೆಯ ಹಾಸ್ಟೆಲಿನ ಹಾಗೂ ಹಳೆಯ ಕಾಲೇಜಿನ ಆಫೀಸು ಕಟ್ಟಡದಲ್ಲಿಯೂ ಊಟ ವಸತಿಗಳ ಏರ್ಪಾಡು ಎಂದೋ ಮಾಡಲ್ಪಟ್ಟಿದ್ದರೂ ಮಾನ್ಯ 'ಸಿ. ಕೆ.' ಯವರು ಕಣ್ಣುಮುಚ್ಚಿಕೊಂಡು "ಯಾವ ವ್ಯವಸ್ಥೆಯೂ ಮಾಡಲ್ಪಡದಿರುವದು ಕೊಡಗು ಪತ್ರಿಕೆಯಲ್ಲಿ ದೂರು ಒಂದು ದಕ್ಕಾಗಿಯೇ" ಎಂದು ಕೇಳಿರುವದು ಅವರ ಅಜ್ಞಾನವನ್ನು ಸೂಚಿಸುವದು. ತಕ್ಷಣಕ್ಕೆ ಇಷ್ಟು ವ್ಯವಸ್ಥೆ ಮಾಡಲ್ಪಟ್ಟಿದೆ. ಎಲ್ಲಾ ಅನುಕೂಲತೆಗಳುಳ್ಳ ಆದರ್ಶ ವಿದ್ಯಾರ್ಥಿ ಭವನವು ಬರುವ ವರ್ಷ ಬರಲಿರುವದರಿಂದ ಇಷ್ಟರಲ್ಲಿಯೇ ಎಲ್ಲವೂ ಆಗಬೇಕೆಂದು ಬಯಸುವದು ವಿಪರೀತವೆನ್ನಬೇಕಾಗಿದೆ.

ಮಾನ್ಯ 'ಸಿ. ಕೆ.' ಯವರು ಬಡವಿದ್ಯಾರ್ಥಿಗಳು ತೆರುವ ರೂ ೪೦ಕ್ಕೆ ಸರಿಯಾದ ಪ್ರತಿಫಲ ದೊರೆಯುತ್ತಿಲ್ಲವೆಂದು ಬರೆದಿರುವರು. ಈ ವಿಚಾರದಲ್ಲಿಯೂ ರೂ. ೩॥ ಕೋಣೆ, ದೀಪ, ಮುಂತಾದವುಗಳ ಪರವಾಗಿ ಹೋಗಲಾಗಿ ಕೇವಲ ರೂ ೩೬॥ ಆಹಾರಕ್ಕಾಗಿ ವೆಚ್ಚ ತಾಗುವದೆಂದು ದಯವಿಟ್ಟು ತಿಳಿಯಬೇಕು. ಪ್ರತಿಯೊಂದು ಸಾಮಾನಿನ ಬೆಲೆಯೂ ಏರುತ್ತಿರುವ ಅದರಲ್ಲಿಯೂ ಮಳೆಗಾಲವಾಗಿ ಸಹ, ತರಕಾರಿಗಳು ಸಿಕ್ಕದಿರುವ ಈ ಕಾಲದಲ್ಲಿ ಎರಡೂಟ, ಎರಡು ಫಲಹಾರಗಳಿಗೆ ತಿಂಗಳೊಂದರ ರೂ. ೩೬॥ ಹೆಚ್ಚೆಂದು ಯಾವ ಅನುಭವಸ್ಥನೂ ಹೇಳಲಾರನು. ಮನೆವಾರ್ತೆಯನ್ನು ನಡೆಸುವ ಪ್ರತಿಯೊಬ್ಬನೂ ಈ ಏರಿದ ಬೆಲೆಯ ತಾಪತ್ರಿಗೆ ಗುರಿಯಾದವನೇ! ಅದೂ ಅಲ್ಲದೆ ಹಾಸ್ಟೆಲಿನ ಲೆಕ್ಕ ಪತ್ರ ಆಡಳಿತಗಳನ್ನು ಪದೇ ಪದೇ ಸಂಶೋಧಿಸಿ ಪರಿಶೀಲಿಸುತ್ತಾ ಬೇಕಾದ ಸಲಹೆಗಾರರ ಮಂಡಲಿಯೂ ಇರುವಾಗ, ಆ ವಿಷಯದಲ್ಲಿ ವಿದ್ಯಾರ್ಥಿಗಳೆಲ್ಲರೂ ತೃಪ್ತರಿದ್ದರೂ ಮಾನ್ಯ 'ಸಿ. ಕೆ.' ಯವರು ವಿಷ ಬೀಜವನ್ನು ಬಿತ್ತುವ ಹವ್ಯಾಸಕ್ಕೆ ಹೋದುದು ತೀರಾ ವ್ಯಸನಾಸ್ಪದ ಹಾಗೆ ಯಾರಾದರೊಬ್ಬ ವಿದ್ಯಾರ್ಥಿಯು ಕೊಡುವ ರೂ. ೩೬॥ ಗೆ ರೂ. ೬೩॥ ಗೂ ಮಿಕ್ಕಿದ ಸವಲತ್ತು ಕೇಳಿದ್ದಾನೆ ಅಥವಾ ಹಾಸ್ಟೆಲಿನ ಶಿಸ್ತಿಗೆ ವಿರೋಧವಾಗಿ ವರ್ತಿಸಿದ್ದಾದರೆ ಅಂಥವನೊಡನೆ ಇಷ್ಟವಿಲ್ಲವಾದರೆ ಬಿಟ್ಟು ಹೋಗಬಹುದೆಂಬದಾಗಿ ಹೇಳಿದಲ್ಲಿ ತಪ್ಪೇನಿದೆ? ಆದ್ದರಿಂದ ಮಾನ್ಯ 'ಸಿ. ಕೆ.' ಯವರು ಮೊತ್ತಮೊದಲು ಸಂಬಂಧಪಟ್ಟ ಅಧಿಕಾರಿಗಳನ್ನು ಕಂಡು ಮಾತಾಡಿ ವಿಷಯ ವಿಮರ್ಶೆ ಮಾಡಬೇಕಿತ್ತಲ್ಲದೆ ಯಾರೋ ಏನೋ ಹೇಳಿದ ಕೂಡಲೇ ಓದುಗರ ಓಲೆಯಲ್ಲಿ ಬರೆದುದು ತೀರಾ ವಿಷಾದಾಸ್ಪದ. ಇನ್ನಾದರೂ ಹಾಸ್ಟೆಲಿನ ವಿಚಾರದಲ್ಲಿ ಇಂತಹ ಬೇಜವಾಬ್ದಾರಿ ಪತ್ರಗಳು ಪ್ರಕಟವಾಗದಿರಲೆಂದು ಹಾರೈಸಲಾಗಿದೆ.

"ಡಿಪ್ಯೂಟಿ ವಾರ್ಡನ್"

—

ಬೇಲಿ ಹೊಲ ಮೇಯಿತೇ?

ದೇಶದಲ್ಲಿ ಎರಡು ಪಾರ್ಟಿಗಳಿವೆ. ಗೆದ್ದ ಪಾರ್ಟಿಯ ಲೀಡರುಗಳನ್ನು ಒಳಪಡಿಸಿಕೊಂಡರೆ ತನ್ನ ಬೊಕ್ಕಸವನ್ನು ತುಂಬಿಸಿಕೊಳ್ಳಬಹುದೋ ಎಂಬ ಸಂಶಯ ನನಗೆ ಬಂದಿದೆ. ಏಕೆಂದರೆ ನಾನು ಕಣ್ಣಾರೆ ಕಂಡ ಚರಿತ್ರೆಯೊಂದನ್ನು ಇಲ್ಲಿ ಬರೆಯುತ್ತೇನೆ. ಸರಕಾರದವರು ಗಮನಿಸಲಿ. ಕೆಲವು ತಿಂಗಳುಗಳ ಹಿಂದೆ ನಾನು ಒಂದು ದಿನ ಕೋವಿ ತೆಗೆದುಕೊಂಡು ಪಕ್ಷಿಬೇಟೆಗೆ ಹೊರಟೆನು. ಕಾಡಿನೊಳಗೆ ಮೆಲ್ಲಮೆಲ್ಲನೆ ಹೋಗುತ್ತಿರುವಾಗ್ಗೆ ಕಾಡಿನ ಮಧ್ಯದಲ್ಲಿ ಯಾರೋ ಜನರು ಮಾತಾಡುವುದನ್ನು ಕೇಳಿದೆ. ಪಕ್ಷಿ ನೋಡುವುದನ್ನು ಬಿಟ್ಟು ಮನುಷ್ಯರ ಮಾತು ಕೇಳಿ ಬರುವ ಕಡೆ ಹೋದೆ. ನಾನು ಹೋಗುತ್ತಿರುವ ಕಡೆ ನಮ್ಮ ನಾಡಿನ ಒಬ್ಬ ರೆವಿನ್ಯೂ ಅಧಿಕಾರಿಗಳು ಮುಖ ಮಾಡಿಕೊಂಡು ನಿಂತಿದ್ದರು. ಅವರಿಗೆ ಎದುರಾಗಿ ನನ್ನ ಕಡೆ ಬೆನ್ನುಹಾಕಿ ಯಾರೋ ಒಬ್ಬರು ನಿಂತಿದ್ದರು. ಅಧಿಕಾರಿಯ ಮುಂದೆ ನಿಂತ ವ್ಯಕ್ತಿಯು ಅಧಿಕಾರಿಯನ್ನು ಕುರಿತು 'ನನ್ನ ಮರ್ಯಾದೆಯನ್ನು ಉಳಿಸಬೇಕು' ಎಂದು ನುಡಿದರು. ಇದನ್ನು ಕೇಳಿದ ಅಧಿಕಾರಿಯು ಹೀಗೆಂದರು. 'ಏನೇ ಇರಲಿ, ಮರವನ್ನು ಒಡನೆ ಸಾಗಿಸಿ. ನಾಳೆ ಮಾತಾಡುವ' ನಂತರ ಅವರು ಹೊರಟರು. ನಾನೂ ಹಿಂತಿರುಗಿದೆನು. ಎರಡು ದಿನ ಕಳೆದು ಪುನಃ ಅಲ್ಲಿಗಾಗಿಯೇ ಹೋದೆನು. ಮರದ ಹಲಗೆಗಳು ಕಾಣೆಯಾದಿತ್ತು. ಮರದ ಕೊಂಬೆಗಳನ್ನು ಮತ್ತು ಬುಡವನ್ನು ನೋಡಿದೆ. ಮರವಾದರೋ ಹೆಬ್ಬಲಸು (ಅಜನಿ) ಮರದ ಬುಡವು ೮½ ಅಡಿಯ ಸುತ್ತಳತೆ ಇದೆ. ಅದರ ಪಕ್ಕದಲ್ಲಿ ಒಂದು ಸರಳೆ ಮರ ಮತ್ತೊಂದು ಕೈಮರ ಇರುತ್ತೆ. ಜಾಗವು ಒಂದು ಕಡಂಗವು ಬಂದು ಸೇರಿದ ಸ್ಥಳವಾಗಿರುತ್ತೆ. ಹೊಳೆಯ ಕರೆಯಿಂದ ಅಂದಾಜು ಏಳು ಅಡಿ ದೂರದಲ್ಲಿ ಮರದ ಕುತ್ತಿ ಇದೆ. ಅಧಿಕಾರಿಗಳು ಈ ಮರವನ್ನು ಹರಾಜುಮಾಡಿಸದೆ ಗುಟ್ಟಿನ ವ್ಯಾಪಾರ ಮಾಡಿದಂತೆ ತೋರುತ್ತೆ. ನಾಡಿನ ಜವಾಬ್ದಾರಿಕೆ ಇರುವ ಆಫೀಸರುಗಳು ಈ ರೀತಿ ವರ್ತಿಸಿದರೆ ಕೇಳುವವರಿಲ್ಲವೇ? ಸೈಸಾರಿ ಜಾಗದ ಮರದಿಂದ ಅಧಿಕಾರಿಯೂ ಮತ್ತು ಒಬ್ಬ ವ್ಯಕ್ತಿಯೂ ಲಾಭ ಪಡೆದು ಜನತಾ ಸರಕಾರವನ್ನು ಮೋಸಗೊಳಿಸಿದಂತಿದೆ. ಈ ಆಫೀಸರನ್ನು ತಕ್ಷೀರಿಗೆ ಒಳಪಡಿಸಬೇಡವೇ? ಅಧಿಕಾರಿಯವರಿಗೆ ಒತ್ತಾಸೆಯಾಗಿ ಕೆಲವು ವ್ಯಕ್ತಿಗಳು ಕೆಲಸ ಮಾಡುತ್ತಲಿದ್ದಾರೆ. ಅವರ ಮಾತಿಗೆ ಮಂತ್ರಿಗಳು ಮರುಳಾಗದಿರಲಿ.

'ನಾಡಿನವ.'

—

ಹುಚ್ಚರ ಹಟ್ಟಿ

ಇದು ಸರಿಯೇ?

ಕಾನ್ವೆಂಟ್ ಮಾರ್ಗದಿ ನಡೆಯುತಲಿದ್ದೆ
ಎದುರಲಿ ಇಬ್ಬರು ನಡೆವುದ ಕಂಡೆ
ಮೌನದಿ ಬಿರುಸಿನ ಹೆಜ್ಜೆಯನಿಟ್ಟೆ
ಮುಂದಕೆ ದಾಟಿ ನಡೆಯುತಲಿದ್ದೆ.

"ಲೆಫ್ಟ್ ರೈಟ್" ಎನ್ನುವ 'ಕಾಷನ್' ಕೊಟ್ಟರು
"ಎಬೌಟರ್ನ್" ಎನ್ನುವ 'ಆರ್ಡರ್' ಇತ್ತರು
ಮನ್ಮಥನೆಂಬುವ ಬಿರುದನು ಕೊಟ್ಟರು
ಹೆಸರೇನೆನ್ನುತ ಮೂದಲಿಸಿದರು.

ಎನ್ನೆದೆ ಡವಡವ ಹೊಡೆಯುತಲಿತ್ತು
ಕಿರುಕುಳ ನೆನೆದು ಕಿವಿಕೆಂಪಾಯ್ತು
"ಸೋದರಿತನವಿದೆ?" ಮನನುಡಿದಿತ್ತು
ಕಾಲುಗಳೆನ್ನನು ಮುಂದೆಳೆದಿತ್ತು.

ಹಾದಿ ಹೋಕರನು ಹಳಿಯುವದೇಕೆ?
"ಲೆಫ್ಟ್‌ರೈಟ್"ನ್ನುತ ಕೂಗುವದೇಕೆ?
ಇಲ್ಲದ ಸಲ್ಲದ ಪ್ರಶ್ನೆಯದೇಕೆ?
ಬರೆದಿಹ ಸೋದರಿ ಇದು ಸರಿಯೆ?

—"ಟೀಕಾ"

(ತಾ: ೨೮ರ "ಓದುಗರ ಓಲೆ"ಯ ಸೋದರಿಯ ಪತ್ರವನ್ನೋದಿ)

* ಮಿಡಿತೆಗಳ ವರುಷಗಳು *

(ರೀಡರ್ಸ್ ಡೈಜೆಸ್ಟಿನಿಂದ ಅನುವಾದಿಸಿದ್ದು)

ಯುದ್ಧದ ನಷ್ಟ ಕಷ್ಟಗಳಿಂದಲೂ ದರೋಡೆಗಾರರ ಮತ್ತು ಲೂಟಿಗಾರರ ಹಾವಳಿಯ ನಂತರವೂ ರೈತನು ಚೇತರಿಸಿಕೊಳ್ಳುವದು ಸಾಧ್ಯ. ಆದರೆ ಮಿಡಿತೆಗಳು ಒಂದು ಸಲ ಬಂದು ಎರಗಿದರೆ ಯಾವ ರೈತನೂ ಮೇಲೇಳಲಾರನು.

ನಿಮ್ಮ ಹುಲ್ಲು ಮೈದಾನದಲ್ಲಿ, ಮಾ ತೋಟಗಳಲ್ಲಿ ಅಲ್ಲಿ ಇಲ್ಲಿ ಹಾರಾಡುವ ಸಾಧು ಜಂತುವಾದ ಜಿರಳೆಯು (Grasshopper) ಮನುಷ್ಯನ ಅತೀ ಭಯಂಕರವಾದ ಶತ್ರುಗಳಲ್ಲೊಂದಾದ ಮಿಡಿತೆಯ ದೂರದ ಸಂಬಂಧಿಯಾಗಿದೆ. ಚರಿತ್ರೆಯ ಕಾಲಗಳಲ್ಲೆಲ್ಲಾ ಮನುಷ್ಯನಿಗೆ ಸದಾ ತೊಂದರೆಯನ್ನು ನೀಡಿದ ಪ್ರಾಣಿಗಳಲ್ಲಿ ಮಿಡಿತೆಯು ಒಂದಾಗಿದೆ. ಅವುಗಳ ಹಾವಳಿಯು ಈಗ ಎಷ್ಟರ ಮಟ್ಟಿಗೆ ತಲಪಿದೆ ಎಂದರೆ ವಿಶ್ವದ ಒಂದನೇ ನಾಲ್ಕು ಭಾಗದ ಆಹಾರವನ್ನು ಅವು ತಿಂದು ಮುಗಿಸಬಹುದೆಂಬ ಹೆದರಿಕೆಯಿದೆ.

೧೯೫೧-೫೨ರಲ್ಲಿ ಇರಾನ್, ಇರಾಕ್, ಜೋರ್ಡನ ಮತ್ತು ಸಾಡಿ ಅರೇಬಿಯಾದಲ್ಲಿ ಆದ ಮಿಡಿತೆಗಳ ಹಾವಳಿಯು ಬಹು ಭಯಂಕರವಾದದ್ದಾಗಿದೆ. ಹಸುರು ತೆನೆಗಳೂ, ಮರಗಿಡಗಳೂ, ಸಸ್ಯವೆಂದು ಕರೆಯಲ್ಪಡುವ ಎಲ್ಲಾ ರೀತಿಯ ಜೀವನವು, ಸಾವಿರಾರು ಮೈಲುಗಳ ಚದರಳತೆಯಲ್ಲಿ ನಾಶ ಮಾಡಲ್ಪಟ್ಟವು ಈ ವರ್ಷ ಮಧ್ಯ ಆಫ್ರಿಕಾದ ವನಗಳಿಂದ ತೊಡಗಿ, ಹಿಮಾಲಯದ ಬುಡದ ವರೆಗೂ, ಇದರ ಹಾನಿಯು ತಲಪುವ ಸಂಭವವಿದೆ. ೪೦೦ ಮಿಲಿಯ ಹಿಂದೂಸ್ಥಾನದ, ಮತ್ತು ಪಾಕೀಸ್ಥಾನದ ಜನ ಜಂಗುಳಿಯನ್ನು ಈ ಘೋರ ಮಿಡಿತೆ ಹಾವಳಿಯು ತೊಂದರೆಗೀಡು ಮಾಡುವಂತಿದೆ.

ಮಳೆ ಕಡಮೆಯಾಗಿ ಮರು ಭೂಮಿಯಂತಿರುವ ಪ್ರದೇಶಗಳಲ್ಲಿ ಇವುಗಳು ಉದ್ಭವಿಸುತ್ತವೆ. ಮತ್ತು ಇವುಗಳ ಒಕ್ಕಾಗಿರುವಿಕೆಯು, ಸಂತಾನ ಉತ್ಪತ್ತಿಯಲ್ಲಿ ಪ್ರೋತ್ಸಾಹಿಸುತ್ತದೆ. ಈ ಕಾಲದಲ್ಲಿ ಇವು ಹೆಚ್ಚು ತಿನ್ನುತ್ತವೆ. ಹೆಚ್ಚು ತಿಂದಷ್ಟೂ ಹೆಚ್ಚಾಗಿ ಸಂಖ್ಯೆಯಲ್ಲಿ ಬೆಳೆದು ಅವುಗಳು ವೃದ್ಧಿಯಾಗುತ್ತವೆ. ಒಂದು ಚದರ ಗಜದ ಅಳತೆಯಲ್ಲಿ ೫,೦೦೦ಕ್ಕೂ ಮಿಕ್ಕ ಮಿಡಿತೆಗಳು ಮೊಟ್ಟೆ ಇಡಬಲ್ಲವು. ಈ ಮೊಟ್ಟೆಗಳಿಂದ ಹುಟ್ಟುವ ಮಿಡಿತೆಗಳು ೧೮೮,೦೦೦ ಎಕ್ರೆಗಳಷ್ಟು ಸ್ಥಳವನ್ನು ಆಕ್ರಮಿಸಿಕೊಳ್ಳಬಲ್ಲವು! ಒಂದು ಸಲ ಮಿಡಿತೆಯ ಗುಂಪು ಮರಿಯಾದೊಡನೆ ಆ ಸ್ಥಳವನ್ನು ಬಿಟ್ಟು ಬೇರೆ ಕಡೆ ವಲಸೆ ಹೋಗುತ್ತವೆ. ಒಂದೊಂದು ಗುಂಪಿನಲ್ಲಿ ೫೦೦ ಮಿಲಿಯಷ್ಟು ಮಿಡಿತೆಗಳಿದ್ದು ೨೦೦ ಚದರ ಮೈಲುಗಳಷ್ಟು ಸ್ಥಳದ ಪೈರುಗಳನ್ನು ಮರಗಿಡಗಳನ್ನೂ ನಾಶಪಡಿಸಬಲ್ಲವು. ಒಂದು ಗುಂಪು ೨,೦೦೦ ಮೈಲುಗಳಷ್ಟನ್ನು ಆಕ್ರಮಿಸಿದ್ದು ತಿಳಿದು ಬಂದಿದೆ.

ಮೊಟ್ಟೆಯೊಡೆದು ಮರಿಯಾದ ಸ್ಥಳದಿಂದ ೪,೦೦೦ ಮೈಲುಗಳ ದೂರದಲ್ಲಿಯೂ ಸಮುದ್ರದಲ್ಲಿ ಕರಾವಳಿಯಿಂದ ೧,೨೦೦ ಮೈಲು ದೂರದಲ್ಲಿಯೂ ಮಿಡಿತೆಗಳ ಗುಂಪನ್ನು ಕಂಡಿರುತ್ತಾರೆ. ೧೫,೦೦೦ ಅಡಿ ಎತ್ತರದ ಪರ್ವತಗಳನ್ನು ಇವು ದಾಟಬಲ್ಲವು. ಮಿಡಿತೆಗಳಿಗೆ ಎರಡು ಜತೆ ರೆಕ್ಕೆಗಳಿರುತ್ತವೆ. ಹೊರಗಿನದು ಬರಪಾಗಿದ್ದು ವಿಮಾನದ ರೆಕ್ಕೆಗಳಂತೆ ತೇಲಲು ಸಹಾಯಮಾಡುತ್ತವೆ. ಒಳಗಿನ ಮೃದುವಿನ ರೆಕ್ಕೆಗಳು ಝೇಂಕಾರವನ್ನುಂಟು ಮಾಡುತ್ತವೆ. ಆದರ ಅತೀ ಸಣ್ಣ ಮಸಡಗಳು ಬಹು ಬಲಶಾಲಿಯಾಗಿದ್ದು ಅತೀವ ನಾಶಕಾರಿ ಕೃತ್ಯಗಳಿಗೆ ಉಪಯೋಗಿಸಲ್ಪಡುತ್ತದೆ.

ಚೆನ್ನಾಗಿ ಬಿಸಿಲು ಬೀಳುವ ಹಸಿರು ಹೊಲ, ಪೈರು ಪಚ್ಚೆಗಳಿಂದ ಕೂಡಿದ ಸ್ಥಳದಲ್ಲಿ ನಿಂತು ನೋಡುತ್ತಿರುವಿರೆಂದು ಭಾವಿಸಿರಿ. ದೂರದಲ್ಲಿ ಕರಿಯ ಸಣ್ಣ ಮೋಡವೊಂದು ನಿಮಗೆ ಗೋಚರಿಸುವುದು. ಬರ ಬರುತ್ತಾ ಈ ಮೋಡವು ಶರತ್ಕಾಲದ ಮೇಘದಂತೆ ಬೃಹದಾಕಾರವನ್ನು ತಾಳುವದು. ಕೆಲವೇ ನಿಮಿಷಗಳಲ್ಲಿ ಸೂರ್ಯನನ್ನು ಈ ಮೇಘದೋಪಾದಿಯ ವಸ್ತು ಮರೆಮಾಡಿ, ಕತ್ತಲು ಕವಿದಂತಾಗುತ್ತದೆ. ಗಾಳಿಯಲ್ಲಿ ಝೇಂಕಾರವು ಕೇಳಿ ಬರುತ್ತದೆ. ಒಮ್ಮೆಗೇ ಈ ಗುಂಪು ಹೊಲಕ್ಕೆ ಎರಗುತ್ತದೆ. ಸೂರ್ಯನು ಪುನಃ ಪ್ರಕಾಶಮಾನನಾಗುತ್ತಾನೆ. ಆದರೆ ಮೊದಲು ಹಚ್ಚ ಹಸುರಾಗಿದ್ದ ಪೈರಿನ ಹೊಲವು ಕಂದು ಬಣ್ಣಕ್ಕೆ ತಿರುಗುತ್ತದೆ. ಇಡೀ ಹೊಲವೇ ಸಜೀವವಾಗಿ ಹರಿದು ಬರುವಂತೆ ಭಾಸವಾಗುತ್ತದೆ ಮಿಡಿತೆಗಳು ನಿಧಾನವಾಗಿ ತಮ್ಮ ನಾಶಕಾರಿ ಕೆಲಸವನ್ನು ಮಾಡುತ್ತವೆಯಾದರೂ, ಅವು ಕಾಳುಗಳನ್ನೂ ಎಲೆ, ಕಾಂಡಗಳನ್ನು ಭೂಮಿಯ ಮಟ್ಟಕ್ಕೆ ತಿಂದು ನಾಶ ಪಡಿಸುತ್ತವೆ.

ಇತ್ತೀಚೆಗೆ ಬ್ರಿಟಿಷ್‌ನಲ್ಲಿ ೬೦ ಮೈಲು ಅಗಲದ ಮಿಡಿತೆಯ ಗುಂಪೊಂದು ಗಂಟೆಗೆ ೯ ಮೈಲು ವೇಗದಲ್ಲಿ ಸಂಚರಿಸುತ್ತಾ ರಸ್ತೆಗಳ ಅಡ್ಡಗಟ್ಟಿ ಉಗಿಬಂಡಿಯ ಸಂಚಾರವನ್ನೂ ನಿಲ್ಲಿಸಿದವು. ಮನೆಗಳೊಳಗೂ ಹೊಕ್ಕವು. ಮತ್ತು ೬೦,೦೦೦ ಟನ್ನುಗಳಷ್ಟು ಗೋಧಿಯನ್ನು ನಾಶಪಡಿಸಿದವು.

೧೮೬೦ರಲ್ಲಿ ಅಮೇರಿಕಾದಲ್ಲಿ ಹಲವು ರೈತರನ್ನು ಈ ಮಿಡಿತೆಯ ಹಾವಳಿಯು ಸ್ಥಳ ಚ್ಯುತರನ್ನಾಗಿ ಮಾಡಿತು. ಅಲ್ಲಿಂದೀಚೆಗೆ ಸರಕಾರದ ಸಕಾಲ ಸಹಾಯದಿಂದಾಗಿ, ಈ ಹಾವಳಿಯು ಬಲು ಮಟ್ಟಿಗೆ ಕಡಿಮೆಯಾಗಿದೆ

೧೯೨೯ನೇ ಇಸವಿಯ ಮಹತ್ತರದ ಮಿಡಿತೆ ಧಾಳಿಯು ಆಫ್ರಿಕಾಖಂಡದಲ್ಲಿ ಪರಿಣಮಿಸಿದರ ಫಲವಾಗಿ ಇದರ ಹಾನಿಯನ್ನು ಲೋಕಾದ್ಯಂತ ತಡೆಗಟ್ಟಲು ಒಂದು ಶಾಸ್ತ್ರೀಯ ರೀತಿಯ ಪರೀಕ್ಷಾ ಕೇಂದ್ರವು ಇಂಗ್ಲಾಂಡಿನಲ್ಲಿ (ಲಂಡನ್) ಡಾ. ಬೋರಿಸ್ ಯುವರೊ, ಎಂಬವರ ನೇತೃತ್ವದಲ್ಲಿ ೨೫ ವರ್ಷಗಳ ಹಿಂದೆ ತೆರಯಲ್ಪಟ್ಟಿತ್ತು. ಡಾ. ಬೋರಿಸ್‌ರವರು ಮಿಡಿತೆಯ ವಿಷಯದ ಸಂಶೋಧನೆ ನಡಿಸಿದವರ ಪೈಕಿ ಮೊದಲನೆಯವರು. ಇವರು ವಿಶ್ವದ ಎಲ್ಲಾ ಸಂಶೋಧನೆಗಳಿಗಿಂತಲೂ, ಮಿಡಿತೆಗಳ ವಿಷಯವಾಗಿ ಹೆಚ್ಚಿನ ಮಾಹಿತಿಯನ್ನು ಪಡೆದವರಾಗಿರುತ್ತಾರೆ ಇವರು ಮಿಡಿತೆಗಳು ಹುಟ್ಟುವ, ಮತ್ತು ವಲಸೆ ಹೋಗುವ ಸ್ಥಳಗಳನ್ನು ಬಹು ಮಟ್ಟಿಗೆ ಗುರ್ತಿಸಿದ್ದಾರೆ ಮಿಡಿತೆಗಳು ಉದ್ಭವಿಸುವ ಸ್ಥಳಗಳನ್ನು ತಿಳಿದು ಸ್ವಯಂ ಸೇವಕ ದಳದಂತೆ ಕೆಲಸ ಮಾಡುವ ದಳಗಳು ಡಾ. ಬೋರಿಸ್‌ರವರಿಗೆ, ಕಾಲ ಕಾಲಕ್ಕೆ ವರದಿ ಮಾಡುತ್ತಾ ಇರುತ್ತಾರೆ ಇದರ ಆಗು ಹೋಗುಗಳನ್ನರಿತು, ಇವರು ಯುದ್ಧಕ್ಕೆ ಮೊದಲು ಸೇನಾನಿಯು ಎದುರಾಳಿಯ ಪಡೆಯನ್ನು ನಿರ್ಮೂಲ ಮಾಡಲು ಸಿದ್ಧತೆಯನ್ನು ಮಾಡಿಕೊಳ್ಳುವಂತೆ ಮಿಡಿತೆಗಳ ವಿಚಾರದ ವರದಿಯನ್ನು ತಿಳಿದು ಅವುಗಳ ನಾಶಕ್ಕೆ ಸಿದ್ಧತೆಯನ್ನು ಮಾಡಿಕೊಳ್ಳುತ್ತಾರೆ ಉದಾಹರಣೆಗೆ ಈ ಸ್ವಯಂ ಸೇವಕ ದಳವು ಅರೇಬಿಯಾದಲ್ಲಿ ಉತ್ಪತ್ತಿಯಾದ ಮಿಡಿತೆಗಳ ತಂಡವು ಪಾಕಿಸ್ಥಾನದಕಡೆ ಸಾಗುತ್ತಿದೆಯೆಂದು ವರದಿ ಮಾಡಿದ ಒಡನೆಯೇ ಪಾಕಿಸ್ಥಾನದ ಸರಕಾರಕ್ಕೆ ಈ ಸಂಗತಿಯು ತಿಳಿಸಲ್ಪಟ್ಟು ಒಡನೆಯೇ ಪಾಕಿಸ್ಥಾನ ಸರಕಾರವು ಇದರ ಬಗ್ಗೆ ವಿನಾಶಕಾರಿ ಯತ್ನವನ್ನು ತೊಡಗುವಂತೆ ಪ್ರೇರೇಪಿಸಲಾಗುವದು.

ಕೆಲವು ಸಮಯಗಳಲ್ಲಿ ಸ್ಥಳೀಯ ಸರಕಾರಕ್ಕೆ ಹೊರಗಿನಿಂದ ಸಹಾಯವು ಬೇಕಾಗುವದು. ೧೯೫೨-೫೩ನೇ ವರ್ಷದ ಭಯಂಕರ ಮಿಡಿತೆಯ ಹಾವಳಿಯನ್ನು ತಡೆಗಟ್ಟಲು ಗ್ರೇಟ್ ಬ್ರಿಟನ್ ಮತ್ತು ಅಮೇರಿಕಾ ದೇಶಗಳು ಬಹು ಮಟ್ಟಿಗೆಯ ಸಹಾಯವನ್ನು ಮಾಡಿದವು ಈಶಾನ್ಯ ಆಫ್ರಿಕಾದಲ್ಲಿ ಉದ್ಭವಿಸಿದ ಆ ವರ್ಷದ ಮಿಡಿತೆಗಳ ತಂಡವು ವಲಸೆ ಹೋಗುತ್ತಾ ಇತೋಪಿಯಾ ಮತ್ತು ಎರಿಟ್ರಿಯಾ ದೇಶಗಳಲ್ಲಿ ೧೦೦ ಮೈಲಿ ಅಗಲದ ಸ್ಥಳವನ್ನು ಹಾಳು ಗೆಡವಿದವು. ಈ ಗುಂಪು, ಕೆಂಪು ಸಮುದ್ರವನ್ನೂ, ವಿಶಾಲವಾದ ಅರೇಬಿಯಾದ ಮರು ಭೂಮಿಯನ್ನೂ, ಪರ್ಶಿಯಾ ಕೊಲ್ಲಿಯನ್ನೂ ಏನೊಂದು ತೊಂದರೆ ಇಲ್ಲದೆ ದಾಟಿದವು. ಮತ್ತು ಇರಾನ್, ಇರಾಖ್, ಜೋರ್ಡನ್ ಪ್ರದೇಶಗಳನ್ನು ಹಾಳು ಗೆಡುಹಲು ಮೊದಲು ಮಾಡಿದವು. ಏನೂ ಆಹಾರವನ್ನು ಒದಗಿಸದ ಸಾವಿರಾರು ಮೈಲು ಮರು ಭೂಮಿಯನ್ನೂ ಸಹ ಮಿಡಿತೆಗಳು ದಾಟಿದವೆಂದರೆ ಅವುಗಳ ಶರೀರವು ಎಷ್ಟು ಮಟ್ಟಾಗಿದ್ದೀತು!!

೧೯೫೨ ನೇ ಇಸವಿ ಏಪ್ರಿಲ್ ತಾರೀಕು ೧೩ ರಂದು ಇರಾನ್ ಸರಕಾರವು ಮಿಡಿತೆಯ ಹಾವಳಿಯನ್ನು ತಡೆಗಟ್ಟಲು ಅಮೇರಿಕ ದೇಶದ ವ್ಯವಸಾಯ ಖಾತೆಯನ್ನು ಪ್ರಾರ್ಥಿಸಿಕೊಂಡದರ ಫಲವಾಗಿ, 'ಲ್‌ಮೇಬಿ' ಎಂಬವರು ಎಂಟು ಸಣ್ಣ ಮಾದರಿಯ ಏರೋಪ್ಲೇನ್ ಮತ್ತು ಅಮೇರಿಕಾದ ಪೈಲಟುಗಳೊಡಗೂಡಿ, ಮಿಡಿತೆಗಳನ್ನು ನಾಶಮಾಡುವ 'ಅಲ್‌ಡ್ರಿನ್' ಎಂಬ ವಿಷದ ಔಷಧಿಯೊಡನೆ ಇರಾನಿನ ಸಹಾಯಾರ್ಥವಾಗಿ ಬಂದರು. ಈ 'ಅಲ್‌ಡ್ರಿನ್' ಎಂಬ ಔಷಧಿಯನ್ನು ಒಂದು ಗೆಲನಿಗೆ ಎರಡು ಔನ್ಸಿನಷ್ಟನ್ನು ಕಲಸಿ ಅವುಗಳ ಮೇಲೆ ಸ್ಪ್ರೇ ಮಾಡಿದ್ದೇ ಆದರೆ, ಒಂದು ಎಕ್ರೆಯ ವಿಸ್ತೀರ್ಣದಲ್ಲಿರುವ ಎಲ್ಲಾ ಮಿಡಿತೆಗಳನ್ನು ನಾಶಪಡಿಸುವ ಪ್ರಭಾವವನ್ನೊಳಗೊಂಡಿತ್ತು.

ಮೇಭಿಯವರು, ಸ್ಥಳೀಯ ಸರಕಾರದ ಸಹಾಯದಿಂದ ಮಿಡಿತೆಗಳು ರಾತ್ರಿ ತಂಗಿದ ಸ್ಥಳಗಳನ್ನು ಗುರ್ತಿಸಿ ಮುಂಜಾನೆ ಆ ಸ್ಥಳವನ್ನು ವಿಮಾನದಿಂದ ಸಂದರ್ಶಿಸಿ, ಮೇಲೆ ಹೇಳಿದ ಔಷಧದ ಪ್ರಯೋಗದಿಂದ ಮಿಡಿತೆಗಳ ಗುಂಪನ್ನು ನಾಶಪಡಿಸುತ್ತಿದ್ದರು. ರಾತ್ರಿ ತಂಗಿದ ಮಿಡಿತೆಗಳ ಗುಂಪು ಒಳ್ಳೆ ಬಿಸಿಲು ಬಿದ್ದು ಅವುಗಳ ರೆಕ್ಕೆಗಳು ರಾತ್ರಿ ಬಿದ್ದ ಇಬ್ಬನಿಯಿಂದ ಒಣಗುವ ವರೆಗೂ ಬೇರೆ ದಿಕ್ಕಿಗೆ ಹೋಗುತ್ತಿರಲಿಲ್ಲವಾದುದರಿಂದ ಸಿಕ್ಕಿ ಬೀಳುತಿದ್ದವು. ಈ ೧೯೫೨ ನೇ ಇಸವಿಯ ಪ್ರಯೋಗದ ದೆಸೆಯಿಂದ ಇರಾನಿಗೆ ಮಹತ್ತರ ಧಾನ್ಯಗಳ ಉಳಿತಾಯವಾಯಿತು.

೧೯೫೩ ನೇ ಇಸವಿಯ ಉದಯದಲ್ಲೇ, ಮಿಡಿತೆಗಳು ಪುನಃ ಹಿಂದೂಸ್ಥಾನ ಪಾಕಿಸ್ಥಾನ, ಅಫಗಾನಿಸ್ಥಾನ, ಜೋರ್ಡನ್, ಇರಾಕ್, ಮತ್ತು ಇರಾನಿನಲ್ಲಿ ಪ್ರಬಲ ಸಂಖ್ಯೆಯಲ್ಲಿ ಕಾಣಿಸಿಕೊಂಡವು. ಪುನಃ ಬಿಲ್ ಮೇಭಿಯವರೂ, ಇಂಗ್ಲೆಂಡ್ ದೇಶದ ಮಿಡಿತೆ ನಿವಾರಣಾ ಸಂಘದವರೂ ಅವಿಶ್ರಾಂತವಾಗಿ ದುಡಿದು ಟನ್‌ಗಟ್ಲೆ ಮಿಡಿತೆಗಳನ್ನು ನಾಶಪಡಿಸಿದರು. ಆದರೂ ಸಹ ಮಿಡಿತೆಗಳ ಹಾವಳಿ ಕಡಿಮೆಯಾಯಿತೆಂಗು ಹೇಳಲಾಗುವುದಿಲ್ಲ. ಇಷ್ಟು ಮಿಡಿತೆಗಳನ್ನು ಕೊಂದರೂ ಲೋಕದಲ್ಲಿ, ಕಳೆದ ವರ್ಷದ ಮಿಡಿತೆಗಳ ಸಂಖ್ಯೆಗಿಂತಲೂ ಹೆಚ್ಚಾಗಿ ಮಿಡಿತೆಗಳಿವೆಯೆಂದು ಖಚಿತವಾಗಿ ಹೇಳಬಹುದು. ಮನುಷ್ಯನು ಜೀವಿಸಬೇಕಾದರೆ, ಇಡೀ ವಿಶ್ವವೇ ಒಂದಲ್ಲ ಒಂದು ದಿನ ಒಟ್ಟಾಗಿ ಮಿಡಿತೆಗಳ ನಿರ್ಮೂಲಕ್ಕೆ ಒಟ್ಟು ಸೇರಬೇಕಾದ ದಿನವು ಬೇಗನೆ ಬಂದೀತು.

ಅನುವಾದಕ—ಶ್ರೀ ಕೆ. ಜೆ. ಬೋಪಯ್ಯ.

ಪ್ರಕಟಣೆ.

ಈ ಕೆಳಗೆ ಕಾಣಿಸಿದ ಜಾತಿಯ ಮೀನಿನ ಮರಿಗಳು ಸರಕಾರದಿಂದ ನಿಷ್ಕರ್ಷಿಸಲ್ಪಟ್ಟ ಬೆಲೆಗೆ ದೊರೆಯುತ್ತವೆ. ಮೀನು ಸಾಕಲು ಇಷ್ಟವುಳ್ಳವರು ಅವರಿಗೆಬೇಕಾದ ಜಾತಿಯ ಮರಿಗಳಿಗಾಗಿ ನಮೂದಿಸಿರುವ ಈ ಕೆಳಗೆ ರುಜುಮಾಡಿರುವ ಆಫೀಸರವರಿಗೆ ತಮ್ಮ ಅರ್ಜಿಗಳನ್ನು ಬರೆದುಕೊಳ್ಳತಕ್ಕದ್ದು. ಈ ಮೀನಿನ ಮರಿಗಳನ್ನು ಮಡಿಕೇರಿ ಮತ್ತು ಪೊನ್ನಂಪೇಟೆ ವ್ಯವಸಾಯ ಕ್ಷೇತ್ರಗಳಿಂದ ಸರಬರಾಯಿ ಮಾಡಲಾಗುತ್ತದೆ.

ಮೀನಿನ ಜಾತಿ.	ಡಜನ್ ೧ರ ದರ. ರೂ. ಆ. ಪೈ.
೧ ಸ್ಥಳೀಯ ಜಾತಿ.	೦—೨—೦
೨ ಲೇಬಿಯೋ ಜಾತಿ.	೦—೪—೦
೩ ಎಟ್ರೋಪ್ಲೆಸ್ ಸುರಟೆನ್ಸಿಸ್	೦—೬—೦
೪ ಕಟ್ಲ ಕಟ್ಲ.	೨—೮—೦
೫ ಮಿರರ್ ಕಾರ್ಪ್ಸ್	೬—೮—೦
೬ ಗೌರಾಮಿ.	೫—೦—೦

ಬಿ. ಎಸ್. ವರದರಾಜನ್,
ಕೊಡಗು ವ್ಯವಸಾಯ
ಇಲಾಖಾ ಆಫೀಸರ್.

ನಿಜವಾದ ಪ್ರಜಾಪ್ರಭುತ್ವ ಹೇಗಿರಬೇಕು?

ಕೇಂದ್ರ ಸರಕಾರದ ಮಾಜಿ ಆರ್ಥಿಕ ಮಂತ್ರಿ ಡಾ. ಜಾನ್ ಮತ್ತಾಯರವರು ಜುಲೈ ೮ ರಲ್ಲಿ ಮಾಡಿದ ಬ್ರಾಡ್ ಕಾಸ್ಟ್ ಭಾಷಣದಿಂದ ಸಂಗ್ರಹಿಸಿದ್ದು.

● ●

ಶಾಸನ ಸಭಾ ಪದ್ಧತಿಯು ಸರಕಾರವು ಜಯಪ್ರದ ಕೆಲಸ ಮಾಡಬೇಕಾದರೆ ಪಾರ್ಟಿ ಪದ್ಧತಿ ಅವಶ್ಯ. ಇದರಿಂದ ಎರಡು ವಿಚಾರಗಳ ಆಗತ್ಯತೆ ತೋರುವದು. ಒಂದು ಸಾರ್ವಜನಿಕ ಅಭಿಪ್ರಾಯವನ್ನು ಎರಡು ಯಾ ಹೆಚ್ಚಿನ ನಿಶ್ಚಿತ ಪಂಗಡಗಳಾಗಿ ರೂಪಿಸುವದು. ಎರಡನೆಯದಾಗಿ ಎಲ್ಲಾ ತೀರ್ಮಾನಗಳನ್ನು ಬಹುಮತ ಅಭಿಪ್ರಾಯದಂತೆ ಮಾಡುವದು. ಈ ಪದ್ಧತಿಯಲ್ಲಿ ಕೆಲವು ಅಪಾಯಗಳೂ ಇವೆ. ರಾಜಕೀಯ ಒಪ್ಪಂದ ಯಾ ಸಹಕಾರ ಬುದ್ಧಿಗೆ ಅವಕಾಶವಿಲ್ಲದಂತಾದರೆ ಈ ಪದ್ಧತಿಯು ಅನೇಕ ರಾಜಕೀಯ ಗುಂಪುಗಳಿಗೂ, ಪರಸ್ಪರ ಘರ್ಷಣೆಗೂ ಮಾರ್ಗವಾಗಿ ರಾಜಕೀಯ ಭದ್ರತೆ ಹಾಗೂ ಆಡಳಿತ ಪ್ರಗತಿಗೆ ಆತಂಕವಾಗುವದು. ಅದರ ಬದಲು ರಾಜಕೀಯ ಜ್ಞಾನ ಮತ್ತು ಆಸಕ್ತಿ ಕಡಿಮೆಯಾದರೆ ಅಲ್ಲಿ ಒಂದೇ ಪಕ್ಷದ ಮೇಲ್ಮೈಯಾಗಿ ಅದರಿಂದ ಪ್ರಜಾಪ್ರಭುತ್ವವು ನಿರ್ನಾಮಗೊಂಡು ಅಧಿಕಾರ ಶಾಹಿಯ ರೂಪವನ್ನು ತಾಳುವದು. ಏಕ ಪಕ್ಷದ ಆಡಳಿತ ವ್ಯವಸ್ಥೆಯಲ್ಲಿ ಯೋಗ್ಯರೂ, ಶಕ್ತರೂ ಜನಹಿತ ಬಯಸುವವರೂ ಮುಂದಾಳಾಗಿ ದೊರೆತರೆ ದೇಶವು ಅದೃಷ್ಟ ಶಾಲಿಯೆನಿಸಿ ಅಭಿವೃದ್ಧಿಗೊಳ್ಳುವದು. ಇಲ್ಲದಿದ್ದರೆ ರಾಜಕೀಯ ಅನಾಯಕತ್ವ ಅನೈತಿಕತೆಗೆ ಆಸ್ಪದವಾಗುವದು.

* ● ●

ಒಂದು ಪಕ್ಷದವರ ಆಡಳಿತದಲ್ಲಾಗಲೀ ಯಾ ಒಂದಕ್ಕಿಂಥಾ ಹೆಚ್ಚು ಪಕ್ಷದವರ ಆಡಳಿತಲ್ಲಾಗಲೀ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಅಲ್ಪ ಪಕ್ಷೀಯರ ಅಭಿಪ್ರಾಯಗಳಿಗೆ ದೊರೆಯಬೇಕಾದಷ್ಟು ಗಮನ ದೊರೆಯದ ಗಂಡಾಂತರ ಹೆಚ್ಚಿದೆ. ಅಲ್ಪ ಪಕ್ಷೀಯರ ಅಭಿಪ್ರಾಯಗಳನ್ನು ಗಮನಿಸದ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಬೌದ್ಧಿಕ ಮತ್ತು ನೈತಿಕ ನಷ್ಟವು ಜನತೆಗೆ ಆಗುವದೆಂಬುದಕ್ಕೆ ಬೇಕಾದಷ್ಟು ನಿದರ್ಶನಗಳಿವೆ. ಅಲ್ಪ ಪಕ್ಷೀಯರ ಅಭಿಪ್ರಾಯಗಳನ್ನು ಈ ರೀತಿ ಅಲ್ಲಗಳೆಯುತ್ತಾ ನಡೆದರೆ ಅದರ ಪರಿಣಾಮವಾಗಿ ದೃಢಮನಸ್ಸಿನ, ಸದ್ಭಾವನೆಯ ಜನರು ತಮ್ಮ ದೇಶಹಿತ ಅಭಿಪ್ರಾಯಗಳು ಮೂಲೆಗೊತ್ತಲ್ಪಡುವವನ್ನು ಕಂಡು ಬಹುಮತದವರ ರಾಜಕೀಯ ಆಟದ ವಿರುದ್ಧ ನಿಂತು ಹೋರಾಡತೊಡಗುವರು. ಅರ್ಥಾತ್ ಬಹುಮತದವರ ಆಡಳಿತ, ರಾಜಕೀಯ ತತ್ವ ಸಿದ್ಧಾಂತಗಳಿಗೆಲ್ಲ ವಿರೋಧ ನಿಂತು ಪ್ರಜಾಪ್ರಭುತ್ವ ಸರಕಾರದ ತಳಹದಿಯನ್ನೇ ಅಲ್ಲಾಡಿಸುವರು.

● ● ●

ಪಾರ್ಲಿಮೆಂಟರಿ ಆಡಳಿತ ಪದ್ಧತಿಯಲ್ಲಿ ಬಹುಮತ ಪಕ್ಷದ ಅಭಿಪ್ರಾಯದಂತೆಯೇ ಆಡಳಿತ ನಡೆಯಬೇಕು; ಅವರ ಅಭಿಪ್ರಾಯಕ್ಕೆ ಬೆಲೆ ಎಂದು ಆಲೋಚಿಸುವದು ತಪ್ಪು. ಪ್ರತಿ ಸಮಸ್ಯೆಯ ವಿಚಾರದಲ್ಲಿ ಸಾಧಕ, ಬಾಧಕ ವಿಮರ್ಶೆಗಳನ್ನು ಮಾಡಿ, ನಾನಾ ದೃಷ್ಟಿಯಿಂದ ಪರಿಶೀಲಿಸಿ ಒಂದು ನಿರ್ಧಾರಕ್ಕೆ ಬರುವದೇ ಪ್ರಜಾಪ್ರಭುತ್ವವಲ್ಲದೆ ಬಹುಮತವಿದೆಯೆಂದು ನಾವು ಹೇಳಿದ್ದೇ ಆಗಬೇಕೆನ್ನುವ ಹಠಮಾರಿತನವಲ್ಲ. ಬಹುಮತವಿದ್ದು ಅಧಿಕಾರದಲ್ಲಿರುವ ಪಕ್ಷವು ತನ್ನ ಪಕ್ಷದ ಮೂಲಭೂತ ತತ್ವಗಳಿಗೆ ವಿರುದ್ಧ ಬಾರದಂತೆ ಪ್ರತಿ ಸಮಸ್ಯೆಯಲ್ಲಿ ಅಲ್ಪ ಪಕ್ಷೀಯರ ಅಭಿಮತವನ್ನರಿತು ಯೋಗ್ಯ ಒಪ್ಪಂದಕ್ಕೆ ಬರಬೇಕು. ಪುರಾತನ ಕಾಲದ ಗ್ರೀಸ್‌ದೇಶದ ಸಭಾಕೂಟಗಳಲ್ಲಾಗಲೀ, ಭಾರತದ ಹಿಂದಿನ ಕಾಲದ ಗ್ರಾಮಪಂಚಾಯ್ತಿಗಳಲ್ಲಾಗಲೀ ಯಾವುದೇ ನಿಶ್ಚಯದ ಬಗ್ಗೆ ಸಭಾಸದರ ಅಭಿಪ್ರಾಯಕ್ಕಾಗಿ ವಿಭಜಿಸುತ್ತಿರಲಿಲ್ಲ. ಮತ ತೆಗೆಯದೇ ಬಹುಮತ ಅಭಿಪ್ರಾಯದಂತೆ ನಿರ್ಣಯಗಳಾಗುತ್ತಿದ್ದುವು. ಬಹು ಜನರ ಒಪ್ಪಿಗೆ ಯಾ ವಿರೋಧಗಳ ಮೇಲೆ ನಿರ್ಣಯವಾಗುತ್ತಿತ್ತು. ಇಂದೂ ಕೂಡ ಬ್ರಿಟನ್ನಿನ ಕಾಮನ್ಸ್ ಶಾಸನ ಸಭೆಯಲ್ಲಾಗಲೀ, ನಮ್ಮ ಜನತಾ ಸಭೆಯಲ್ಲಾಗಲೀ ಯಾವುದೇ ವಿಚಾರದ ನಿರ್ಣಯದಲ್ಲಿ ಪ್ರಥಮ ಹೆಜ್ಜೆಯೆಂದರೆ ಎರಡು ವಿಭಾಗ ಮಾಡಿ ಮತ ತೆಗೆಯುವದಲ್ಲ; ಬದಲು "ಹೌದು" ಯಾ "ಅಲ್ಲ" ಎಂಬ ಕೂಗಿನ ಮೂಲಕವೆ!

* * *

ಪ್ರಜಾಪ್ರಭುತ್ವದಲ್ಲಿ ಸರಕಾರ ನಡೆಸತಕ್ಕ ಪ್ರವರ್ತಕಾಧಿಕಾರಿಗಳ ಅಂದರೆ ಸರಕಾರಿ ಉದ್ಯೋಗಿಗಳ ವಿಚಾರ ಒಂದೆರಡು ಮಾತು ಹೇಳುವದು ಸೂಕ್ತ. ಪಾರ್ಲಿಮೆಂಟರಿ ಆಡಳಿತ ಪದ್ಧತಿಯ ಪ್ರಕಾರ ಒಂದು ವಿಚಾರದಲ್ಲಿ ನಿರ್ಣಯವಾದ ನಂತರ ಅದನ್ನು ಜಾರಿಗೆ ತರುವ ಜವಾಬ್ದಾರಿಯನ್ನು ಖಾಯಂ ಆಗಿರುವ ಸರಕಾರಿ ಅಧಿಕಾರಿಗಳಿಗೆ ಒಪ್ಪಿಸಲ್ಪಡುತ್ತದೆ. ಅಂಥಾ ಅಧಿಕಾರಿಗಳ ದೈನಂದಿನ ಆಡಳಿತದಲ್ಲಿ ಕೈ ಹಾಕದೆ, ಅವರನ್ನು ಭಂಗಿಸದೆ ನಿರ್ಭಾಧಕವಾಗಿ ಕೆಲಸ ಮಾಡುವ ಅನುವದಗಿಸಿ ಅದಕ್ಕೆ ತಕ್ಕವರಾದ ಯೋಗ್ಯರನ್ನೂ, ದಕ್ಷರನ್ನೂ ಕೆಲಸಕ್ಕೆ ಆಹ್ವಾನಿಸುವ ಸಮರ್ಥತೆಯಲ್ಲಿಯೇ ಪ್ರಜಾಪ್ರಭುತ್ವದ ಸಾಫಲ್ಯತೆ ನಿಂತಿದೆ. ಪಾರ್ಲಿಮೆಂಟರಿ ಆಡಳಿತ ಪದ್ಧತಿಯ ದೇಶದಲ್ಲಿ ಖಾಯಂ ಸರ್ವಿಸಿನಲ್ಲಿರುವ ಅಧಿಕಾರಿಗಳು ರಾಜಕೀಯ ವಲಯದಲ್ಲಿ ಗೌರವಾನ್ವಿತರಾಗಿರಬೇಕು. ಶಾಸನ ಸಭೆಯಿಂದ ಈ ಶಾಶ್ವತ ಸರಕಾರಿ ನೌಕರರಿಗೆ ಎಷ್ಟು ಗೌರವ ತೋರಿಸಲ್ಪಡುತ್ತದೋ ಅಷ್ಟರ ಮಟ್ಟಿಗೆ ಶಾಸನ ಸಭಾ ಪದ್ಧತಿಯ ಸರಕಾರವು ಜಯಪ್ರದವೆನಿಸುವದು.

ಅದರ ಬದಲು ಆಡಳಿತ ಅಧಿಕಾರಿಗಳಾದ ಸಿವಿಲ್ ಸರ್ವಿಸಿನವರ ಬಗ್ಗೆ ಒಟ್ಟಾಗಿ ಯಾ ವ್ಯಕ್ತಿಗತವಾಗಿ ಅಗೌರವ ತೋರಿ ಅವರನ್ನು ಸರಿಯಾಗಿ ನಡೆಸಿಕೊಳ್ಳದೆ ಕಿರುಕುಳ, ತೊಂದರೆಗಳನ್ನು ಕೊಡುತ್ತಿದ್ದರೆ ರಾಜಕೀಯ ಪ್ರಜಾಪ್ರಭುತ್ವಕ್ಕೆ ಗಂಡಾಂತರ ಬಾರದಿರದು. ಪ್ರಜಾಪ್ರಭುತ್ವ ಆಡಳಿತ ಪದ್ಧತಿಯಲ್ಲಿ ಬಹುಮತ ಅಭಿಮತದಂತೆ ರಾಜಕೀಯ ನೀತಿ ಬದಲಾಗುವ ಅಸ್ಪದವಿದ್ದು ಸಾರ್ವಜನಿಕ ಅಭಿಪ್ರಾಯವು ಆಗಾಗ್ಯೆ ಬದಲಾಗುವದರಿಂದ ರಾಜಕೀಯ ತತ್ವಗಳನ್ನು ರೂಪಿಸುವವರಲ್ಲಿ ಬದಲಾವಣೆಗೆ ಆಸ್ಪದವಿದ್ದರೂ ಆಡಳಿತ ಜವಾಬ್ದಾರಿಯನ್ನು ಕಾರ್ಯರೂಪದಲ್ಲಿ ತರುವ ಅಧಿಕಾರಿ ವರ್ಗದಲ್ಲಿ ಆ ಕಾರಣದಿಂದ ಅವ್ಯವಸ್ಥೆಗೂ, ಅಸ್ಥಿರತೆಗೂ ಅನುಮಾಡಬಾರದು. ಯಾವುದೇ ರಾಜಕೀಯ ನೀತಿ ಇದ್ದರೂ ಅದನ್ನು ಜಾರಿಯಲ್ಲಿ ತರುವ ನೌಕರ ವರ್ಗಕ್ಕೆ ಗೌರವ, ಭದ್ರತೆ ಮತ್ತು ಬೆಂಬಲ ದೊರೆತರೆ ಮಾತ್ರ ಪ್ರಜಾಪ್ರಭುತ್ವ ಜಯಪ್ರದವಾಗಿ ಕಾರ್ಯರೂಪಕ್ಕೆ ಬರುವದು.

ನಿದ್ರೆ ಬಾರದವನಿಗೆ ರಾತ್ರೆಯು ಬಹು ಉದ್ದವಾಗಿ ತೋರುತ್ತೆ. ನೊಂದು ನಡೆಯಲಾರದವನಿಗೆ ಫರ್ಲಾಂಗೇ ಮೈಲಾಗಿ ತೋರುತ್ತೆ. ನಿಜ ತತ್ವ ಅರಿಯದವನಿಗೆ ಈ ಜಗತ್ತು ನರಕವಾಗಿ ತೋರುವದು.

ತನಗಿಂಥಾ ಉತ್ತಮನಾದವನೊಬ್ಬನಿಗಾಗಿ ಜಗವೆಲ್ಲಾ ಹುಡುಕಿ ದೊರೆಯದವನು ತಿಳಿಗೇಡಿಯೊಡನೆ ಸಖ್ಯ ಬೆಳೆಸುವದಕ್ಕಿಂಥಾ ಏಕಾಂಗಿಯಾಗಿ ಜೀವಿಸುವದು ಹಿತ.

ಇದು ನನ್ನ ಮನೆ, - ನನ್ನ ಆಸ್ತಿ, ಇದು ನನ್ನ ಮಗು ಎಂದು ತಿಳಿಗೇಡಿಯು ತನ್ನ ಮೇಲೆ ಇಲ್ಲದ ದುಃಖವನ್ನು ಹೇರಿಕೊಳ್ಳುತ್ತಾನೆ. ತಾನೇ ತನಗಿಲ್ಲದ ಮಾನವನು ಆಸ್ತಿ ಕುಟುಂಬವನ್ನು ತನ್ನದೆಂದು ಹೇಳುವದೆಂತು?

ತಾನು ತಿಳಿಗೇಡಿಯೆಂದು ತಿಳಿದಿರುವ ತಿಳಿಗೇಡಿಯು ಆ ಮಟ್ಟಿಗೆ ಬುದ್ಧಿವಂತನು. ತಾನು ಬುದ್ಧಿವಂತನೆಂದು ತಿಳಿದಿರುವ ತಿಳಿಗೇಡಿಯು ನಿಜವಾದ ತಿಳಿಗೇಡಿ.

ತಿಳುವಳಿಕೆ ಇಲ್ಲದವರು, ಕೆಟ್ಟ ಆಲೋಚನೆಯವರು ತಮಗೆ ತಾವೇ ಹಾನಿ ತಂದುಕೊಳ್ಳುತ್ತಾರೆ. ಏಕೆಂದರೆ ಇನ್ನೊಬ್ಬರಿಗೆ ಮಾಡಿದ ಹಾನಿಯು ತನಗೇ ತಪ್ಪುವದು.

ಅಯೋಗ್ಯ ಕೆಲಸದ ಪ್ರತಿ ಫಲ ಬರುವ ವರೆಗೆ ತಿಳಿಗೇಡಿಯು ಅದನ್ನು ಉತ್ತಮವೆಂದೇ ತಿಳಿಯುತ್ತಾನೆ. ನೆಟ್ಟ ಸಸಿಯ ಉತ್ತಮ ಗುಣವು ಅದರ ಫಲದಿಂದ ತಿಳಿದು ಬರುವ ವರೆಗೆ ಅದನ್ನು ಹೊಗಳುವದರಿಂದ ಪ್ರಯೋಜನವಿಲ್ಲ.

ಹಸುವಿನಿಂದ ಆಗ ಕರೆದ ಹಾಲು ಹೇಗೆ ಹುಳಿಯೆನಿಸದೋ ಅದೇ ರೀತಿ ಆಗ ಮಾಡಿದ ಕೆಟ್ಟ ಕೆಲಸವು ಕೆಟ್ಟದೆಂದು ತೋರದು. ಆದರೆ ಕ್ರಮಶಃ ಹಸುವಿನ ಹಾಲು ಹಾಳಾಗುವಂತೆ ಕೆಟ್ಟ ಕೆಲಸದ ಹಾಳು ಪ್ರತಿ ಫಲವೂ ಬಂದೇ ಬರುವದು.

ತಿಳಿಗೇಡಿಯು ಉಪವಾಸವಿರಬಹುದು. ಬಾಳೆ ಎಲೆಯಲ್ಲಿ ಸಸ್ಯಾಹಾರವನ್ನೇ ಊಟ ಮಾಡಬಹುದು. ಆದರೆ ಸದ್ಗುಣಗಳನ್ನು ಅಳವಡಿಸಿಕೊಳ್ಳುವ ಆತನಿಗೂ ಪ್ರಾಣಿಗಳಿಗೂ ಹೆಚ್ಚಿನ ಅಂತರವಿರಲಾರದು.

ಯಾವ ಕೆಲಸಕ್ಕಾಗಿ ಪಶ್ಚಾತ್ತಾಪ ಪಡಬೇಕಾಗಿಲ್ಲವೋ ಅದು ಉತ್ತಮ ಕೆಲಸ. ಅಂಥಾ ಕೆಲಸವು ಸಂತೋಷ, ಶಾಂತಿಗಳನ್ನು ತರುವದು.

ನೋಟೀಸು

ಮಡಿಕೇರಿ ಮುನ್ಸೀಫ್ ಕೋರ್ಟಿನ 1953ರ ಅಮಲ್ದಾರಿ ನಂ 259'53ರ ಪ್ರಕಾರ ವಾದಿ ಐಯೆಂಡ್ರ ರಾಮಪ್ಪನವರಿಗೆ ಪ್ರತಿವಾದಿ ಭಾಸ್ಕರನ್‌ರವರಿಂದ ಬರಬೇಕಾದ ಅಂದಾಜು ರೂ. 800|-ರ ವಸೂಲಾತಿ ಬಗ್ಗೆ ಸದರಿ ಕೋರ್ಟಿನವರು ಈ ಮೊದಲೇ ಪ್ರತಿವಾದಿ ಭಾಸ್ಕರನವರ ಬಾಬ್ತು ಜಪ್ತಿಮಾಡಿ, ವಾದಿಯ ಸ್ವಾಧೀನದಲ್ಲಿ ಬಿಟ್ಟಿರುವ ಅಂದಾಜು ಒಂದು ಸಾವಿರ ಬೆಲೆ ಬಾಳುವ 9 ನೂಲಿನ ಕೈಮಗ್ಗಗಳನ್ನೂ, ಇವುಗಳಿಗೆ ಸೇರಿದ ಇತರ ಸಲಕರಣೆಗಳನ್ನೂ, ತಾ. 18-9-1953ರಲ್ಲಿ ಫ್ರೇಜರ್ ಪೇಟೆ ಬೈಚನಳ್ಳಿ ಗ್ರಾಮದಲ್ಲಿರುವ ಐಯೆಂಡ್ರ ರಾಮಪ್ಪನವರ ಕಟ್ಟಡದ ಸಮೀಪ ಮುನ್ಸೀಫ್ ಕೋರ್ಟಿನ ಅಮೀನರು ಬಹಿರಂಗ ಹರಾಜು ಮಾಡುವರು. ಖಾಯಿಸ್‌ದಾರರು ಸದರಿ ಸೊತ್ತುಗಳನ್ನು ಹರಾಜಿನಲ್ಲಿ ಕೊಂಡುಕೊಳ್ಳಬಹುದು.

ಎ. ಪಿ. ಗೋಪಾಲಕೃಷ್ಣರಾವ್,
ಬಿ. ಎ. ಬಿ. ಎಲ್,
ವಾದಿ ಪರ ವಕೀಲ್, ಮಡಿಕೇರಿ.
ತಾ. 9-9-'53.

॥ ಜ್ಞಾನದೀಪ ॥

(೧)

ಅಂಗಿಯಾಗಿ ಹೊಲಿದಾಕ್ಷಣ ಅರಿವೆಯ ಬಣ್ಣ ಬದಲಾಗದು. ನಿಯಮ ನಿಯಂತ್ರಣಗಳಿಗೆ ಸಿಕ್ಕಿದ ಮಾತ್ರಕ್ಕೆ ಹುಟ್ಟುಗುಣ ಮಾರ್ಪಡದು.

(೨)

ಕಾರ್ಯನಿರತ ಸಮಯದ ಲೆಕ್ಕ ಹಾಕುವುದಿಲ್ಲ. ಧೈರ್ಯವಂತ ಮರಣದ ಭೀತಿ ಪಡುವಂತಿಲ್ಲ.

(೩)

ಕಳವಾದ ಕಡೆಗಳಲ್ಲಿ ಪೋಲೀಸರ ಅಧಿಕಾರಕ್ಕೆ ಮೇರೆ ಇಲ್ಲ. ಕ್ರಮವರಿಯದ ಎಡೆಗಳಲ್ಲಿ ಪೋಲಿಗಳ ಅಬ್ಬರಕ್ಕೆ ಮಿತಿ ಇಲ್ಲ.

೧೧—೯—'೫೩ನೇ **ಕೊಡಗು** ಶುಕ್ರವಾರ.

ಕಾಲೇಜು ವಿದ್ಯಾರ್ಥಿಗಳಿಗೆ ಅವಶ್ಯ ಬೇಕಿರುವ ಅನುಕೂಲತೆಗಳು.

ಮಡಿಕೇರಿಯ ಹಳೆಯ ಪೋಲೀಸ್ ಟ್ರೈನಿಂಗ್ ಶಾಲೆಯ ಬಳಿಯ ಮೈದಾನದಲ್ಲಿ ಕಟ್ಟಲ್ಪಟ್ಟಿರುವ ಹೊಸ ಕಾಲೇಜ್ ಕಟ್ಟಡದಲ್ಲಿ ಇಂಟರ್ ಮೀಡಿಯೇಟ್ ಮತ್ತು ಬಿ. ಎ. ತರಗತಿಗಳು ಈ ವರ್ಷ ಜುಲೈ ತಿಂಗಳಲ್ಲಿ ತೆರೆಯಲ್ಪಟ್ಟಿವೆ. ಈ ಕಾಲೇಜು ಕಟ್ಟಡವು ಮಡಿಕೇರಿ ಪಟ್ಟಣದಿಂದ ಸುಮಾರು ೨ ಮೈಲುಗಳ ದೂರದಲ್ಲಿದೆ. ಈ ಹೊಸ ಕಟ್ಟಡವನ್ನು ಪ್ರಾರಂಭಿಸುವಾಗಲೇ ದೂರದಿಂದ ಬರುವ ವಿದ್ಯಾರ್ಥಿಗಳಿಗೆ ಯೋಗ್ಯವಾದ ಹಾಸ್ಟೆಲ್ ಕಟ್ಟಡವನ್ನು ಕಟ್ಟಿಸಬೇಕೆಂಬ ಅಭಿಪ್ರಾಯ ಬಲವಾಗಿತ್ತು. ಆದರೆ ಕಾಲೇಜು ಕಟ್ಟಡ ಕೆಲಸವೇ ಇನ್ನೂ ಸಂಪೂರ್ಣವಾಗಿ ಮುಗಿದಿಲ್ಲ. ಅಂದ ಮೇಲೆ ವಿದ್ಯಾರ್ಥಿಗಳ ನಿವಾಸದ ಕಟ್ಟಡವನ್ನು ಪ್ರಾರಂಭಿಸುವದೇ ಸಾಧ್ಯವಾಗಿಲ್ಲ. ಆದರೂ ಕಾಲೇಜಿನಲ್ಲಿ ಹೆಚ್ಚಿನ ತರಗತಿ ತೆರೆದ ಮೇಲೆ ವಿದ್ಯಾರ್ಥಿಗಳ ವಾಸಕ್ಕಿರುವ ಅನುಕೂಲತೆಯನ್ನು ಮಾಡಬೇಕಿತ್ತು. ಜೂನಿಯರ್ ಇಂಟರ್ ಮೀಡಿಯೇಟಿನ ವಿದ್ಯಾರ್ಥಿಗಳಿಗೆ ಪೋಲೀಸ್ ತರಬೇತು ಶಾಲೆಯಲ್ಲಿ ತೆರೆದ ವಿದ್ಯಾರ್ಥಿ ನಿವಾಸ ಗೃಹವು ತಾತ್ಕಾಲಿಕವಾಗಿ ಸಮರ್ಪಕವಾಗಿದೆಯೆಂದು ಹೇಳಬಹುದು. ಆದರೆ ಸೀನಿಯರ್ ವಿದ್ಯಾರ್ಥಿಗಳಿಗೆ ಉಳಕೊಳ್ಳಲು ಮತ್ತು ಊಟದ ವ್ಯವಸ್ಥೆ ತೃಪ್ತಿಕರವಾಗಿಲ್ಲ. ಸೀನಿಯರ್ ವಿದ್ಯಾರ್ಥಿಗಳು ಹೈಸ್ಕೂಲ್ ಆವರಣದಲ್ಲಿ ಬಹು ಕಷ್ಟದಿಂದ ತಮ್ಮ ಅಡಿಗೆಯ ಏರ್ಪಾಡನ್ನು ತಾವೇ ಮಾಡಿಕೊಂಡು ದಿನ ತಳ್ಳುತ್ತಿದ್ದಾರೆ. ಇವರ ಮಧ್ಯಾಹ್ನದ ಊಟಕ್ಕೂ ತೊಂದರೆಯಾಗುತ್ತಿದೆ. ಸೀನಿಯರ್ ವಿದ್ಯಾರ್ಥಿಗಳಿಗೆ ಓದಲು ಮತ್ತು ವಸತಿಗಾಗಿ ತಕ್ಕ ಏರ್ಪಾಡು ಮಾಡದಿದ್ದರೆ ಪರೀಕ್ಷಾ ಫಲಿತಾಂಶವು ಉತ್ತಮವಾಗಲಿಕ್ಕಿಲ್ಲ. ಕೋಮುವಾರು ಭಾವನೆಯ ಹಾಸ್ಟೆಲುಗಳಿರುವದು ಇಂದಿನ ಕಾಲಕ್ಕೆ ಅಸಂಗತವಾಗಿರುವದರಿಂದ ಹೈಸ್ಕೂಲಿನ ಕೆಳಗಿನ ಬೋರ್ಡಿಂಗಿನಲ್ಲಿ ಸದರಿ ಹೈಸ್ಕೂಲಿನ ಎಲ್ಲಾ ಹಾಸ್ಟೆಲ್ ವಿದ್ಯಾರ್ಥಿಗಳಿರುವಂತೆ ಮಾಡಿದರೆ ಮೇಲಿನ ಬೋರ್ಡಿಂಗ್ ಮನೆ ಖಾಲಿಯಾಗಿ ದೊರೆವುದು. ಅದನ್ನು ತಾತ್ಕಾಲ ಕಾಲೇಜಿನ ವಸತಿಗೃಹವಾಗಿ ಏರ್ಪಡಿಸಿ ಸೀನಿಯರ್ ವಿದ್ಯಾರ್ಥಿಗಳು ಅಲ್ಲಿರುವ ಏರ್ಪಾಡು ಮಾಡುವದು ಯುಕ್ತವಾಗಿದೆ.

ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರ ಸಂಖ್ಯೆಯು ಹೆಚ್ಚುತ್ತಿರುವ ಈ ಸಮಯದಲ್ಲಿ ವಿದ್ಯಾರ್ಥಿನಿಯರಿಗೆ ಹಾಸ್ಟೆಲ್ ಏರ್ಪಾಡು ಮಾಡಬೇಕಾದ್ದು ಅತ್ಯವಶ್ಯವಿತ್ತು. ಈ ಮೊದಲು ಕಾಲೇಜಿನ ವಿದ್ಯಾರ್ಥಿನಿಯರಿಗೆ ಕಾನ್ವೆಂಟ್ ಬೋರ್ಡಿಂಗಿನಲ್ಲಿ ಸ್ಥಳ ಕೊಡುತ್ತಿದ್ದರು. ಆದರೆ ಈ ವರ್ಷ ಅಲ್ಲಿ ಸ್ಥಳ ಕೊಡದ ಕಾರಣ ಹೊರಗಿನಿಂದ ಬರಲಿದ್ದ ವಿದ್ಯಾರ್ಥಿನಿಯರು ಹಲವರು ಈ ಕಾಲೇಜಿಗೆ ಸೇರಲಾರದೆ ಹೊರಗಿನ ಕಾಲೇಜುಗಳಿಗೆ ಹೋಗಬೇಕಾಯಿತು. ಕೆಲವರು ವಿದ್ಯಾಭ್ಯಾಸವನ್ನೇ ಬಿಡಬೇಕಾಯಿತು. ಸ್ತ್ರೀಯರ ಪ್ರೌಢ ವಿದ್ಯಾಭ್ಯಾಸಕ್ಕೆ ಅಡ್ಡ ಬರುವ ಈ ಕೊರತೆಯನ್ನು ಆದಷ್ಟು ಬೇಗನೆ ನೀಗುವದು ಅತ್ಯವಶ್ಯವಾಗಿದೆ.

ಪಟ್ಟಣದಿಂದ ದೂರದಲ್ಲಿ ಕಾಲೇಜು ಕಟ್ಟಡವನ್ನು ಕಟ್ಟಿದ್ದು ಉತ್ತಮವಾದರೂ, ಆ ನಿರ್ಣಯವನ್ನು ಕೈಕೊಂಡಾಗಲೇ ಪಟ್ಟಣನಿವಾಸಿ ವಿದ್ಯಾರ್ಥಿಗಳ ಪ್ರಯಾಣದ ಅನುಕೂಲತೆಗಾಗಿ ಬಸ್ ಸರ್ವಿಸಿನ ಏರ್ಪಾಡು ಮಾಡಲಾಗುವದೆಂಬ ಅಭಿಪ್ರಾಯವಿತ್ತು. ಹಾಗೆಯೇ ಹೊಸ ಕಟ್ಟಡದಲ್ಲಿ ಕಾಲೇಜು ಪ್ರಾರಂಭವಾದಾಗ್ಯೆ ಈ ತರದ ಬಸ್ ಸರ್ವಿಸನ್ನು ಹಲವರು ನಿರೀಕ್ಷಿಸಿದ್ದರು. ಮಡಿಕೇರಿಯಲ್ಲಿ ಅತಿ ಬಿರುಸಿನ ಗಾಳಿ ಮಳೆಯ ಸಮಯ-ಅಂದರೆ ಜುಲೈ ಆಗಸ್ಟ್ ತಿಂಗಳುಗಳಲ್ಲಿ ವಿದ್ಯಾರ್ಥಿಗಳು ಕಾಲ್ನಡಿಗೆಯಲ್ಲಿ ಕಾಲೇಜಿಗೆ ಹೋಗುವದು ಕಷ್ಟಕರವಾಗಿದೆ. ಜೊತೆಗೆ ರಸ್ತೆಯೂ ಕೂಡ ಅವ್ಯವಸ್ಥೆಯಲ್ಲಿದೆ. ಕಳೆದ ಮಳೆಗಾಲದಲ್ಲಿ ವಿದ್ಯಾರ್ಥಿಗಳು ಬಹು ತೊಂದರೆಗೀಡಾದರು. ಇನ್ನಾದರೂ ಬಸ್ ಸರ್ವಿಸನ್ನು ಏರ್ಪಾಡು ಮಾಡುವರಾಗಿ ಆಶಿಸಲಾಗಿದೆ.

ಹೊಸ ಕಟ್ಟಡದಲ್ಲಿ ಕಾಲೇಜು ಪ್ರಾರಂಭವಾದ್ದು ಸಂತೋಷದ ವಿಚಾರ. ಆದರೆ ವಿದ್ಯಾರ್ಥಿಗಳಿಗೆ ತಮ್ಮ ವಿದ್ಯಾಭ್ಯಾಸಂಗವನ್ನು ಏನೊಂದೂ ಅಡಚಣೆಯಿಲ್ಲದೆ ಸರಾಗವಾಗಿ ಮುಂದರಿಸಲು ಬೇಕಾದ ಅನುಕೂಲತೆಗಳನ್ನು ಒದಗಿಸಿಕೊಟ್ಟರೆ ಮಾತ್ರ ಪರೀಕ್ಷೆಯ ಫಲಿತಾಂಶವು ಉತ್ತಮವಾಗಿ ಕಾಲೇಜು ಈಗಾಗಲೇ ಗಳಿಸಿರುವ ಕೀರ್ತಿಯನ್ನು ಉಳಿಸಿಕೊಳ್ಳಲು ಸಾಧ್ಯವಾಗುವದು ಎಂಬುದನ್ನು ಸಂಬಂಧಪಟ್ಟವರು ಮರೆಯಲಿಕ್ಕಿಲ್ಲವಾಗಿ ನಂಬುತ್ತೇವೆ.

ವರ್ತಮಾನ.

ಕೊಡಗಿನ ಸುಬೇದಾರರ ಹುದ್ದೆಗಳು 'ಸಿಲೆಕ್ಷನ್ ಪೋಸ್ಟ್'ಗಳೆಂದು ಸಾರಲಾಗಿದೆ.

ತಾ. ೧೭ ರಲ್ಲಿ ಶ್ರೀ. ಜಿ. ಎಂ. ಲಿಂಗರಾಜಯ್ಯನವರ ಅಧ್ಯಕ್ಷತೆಯಲ್ಲಿ ಸಲ್ಲೂರು ಗ್ರಾಮದ ಫೀಡರ್ ಶಾಲೆಯ ಆರಂಭೋತ್ಸವ ನಡೆಯಿತು. ಶ್ರೀ. ಬಿ. ದೇವಯ್ಯ, ಎಸ್. ಸಿ. ತಿರುಮಲಪ್ಪ; ಶ್ರೀ ಚನ್ನರಾಜಪ್ಪ ಮೊದಲಾದವರು ಭಾಷಣ ಮಾಡಿದರು.

ತಾ. ೩ ರಲ್ಲಿ ಮುಸಗೋಡು ಗ್ರಾಮದಲ್ಲಿ ಫೀಡರ್ ಶಾಲೆಯೊಂದು ಶ್ರೀ. ಡಿ. ವಿ. ನಾಸಪ್ಪನವರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿತು. ಶ್ರೀಗಳಾದ ಸಿ. ಕಾಳಪ್ಪ, ಬಿ. ಎಸ್. ವಿಟಲ್ ಬಿ. ಎಸ್. ಚನ್ನಬಸಪ್ಪ, ಬಿ. ಜಿ. ಚೆನ್ನಬಸಪ್ಪ ಮೊದಲಾದವರು ಭಾಷಣ ಮಾಡಿದರು.

ತಾರೀಕು ೨೫ ರಲ್ಲಿ ಸಮಾಜ ವಿಕಾಸ ಯೋಜನೆಯ ಕೈಗಾರಿಕಾ ಶಾಖೆಯ ಸಲಹೆಗಾರರು ಹೆಬ್ಬಾಲೆ, ಫ್ರೇಜರ್‌ಪೇಟೆ ಭಾಗಗಳನ್ನು ಸಂದರ್ಶಿಸಿ ರೇಷ್ಮೆಯ ವ್ಯವಸಾಯಕ್ಕಿರುವ ಹಿಪ್ಪು ನೇರಳೆ ಗಿಡವನ್ನು ಬೆಳೆಸುವದನ್ನು ಶಾಲೆಗಳ ಮೂಲಕ ಕೈಗೊಂಡರೆ ಸರಕಾರದಿಂದ ರೂ. ೧೦೦ ರಂತೆ ಸಹಾಯ ಧನವನ್ನೂ, ಖಾಸಗಿ ರೈತರು ವ್ಯವಸಾಯ ಮಾಡಿದ ಪ್ರತಿ ಏಕರೆಗೆ ರೂ. ೧೦೦ ರಂತೆ ಕೊಡಿಸಲಾಗುವದೆಂದೂ ಹೇಳಿದರು.

ತಾರೀಕು ೨೬ ರಲ್ಲಿ ಹೆಬ್ಬಾಲೆ ಮೋಡೆಲ್ ಶಾಲೆಯ ಅಧ್ಯಾಪಕರೂ, ಶಾಲಾ ಪಂಚಾಯಿತದಾರರೂ, ಪ್ರತ್ಯೇಕ ಏರ್ಪಡಿಸಲ್ಪಟ್ಟ ಸಮಿತಿಯೂ ಸೇರಿ ಹೆಬ್ಬಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಲು ವಿದ್ಯಾರ್ಥಿ ಸಪ್ತಾಹವನ್ನು ಆಚರಿಸಿದರು. ಈ ಕಾರ್ಯದಿಂದ ಸುಮಾರು ೫೦ ವಿದ್ಯಾರ್ಥಿಗಳು ಹೊಸದಾಗಿ ಶಾಲೆಗೆ ಸೇರಿರುವರು.

ಮೈನರ್ ಇರಿಗೇಶನ್ ಆಫೀಸರಾಗಿರುವ ಶ್ರೀ. ಸಿ. ವಿಶ್ವೇಶ್ವರಯ್ಯನವರು ೬೦ ದಿನಗಳ ರಜೆಯಲ್ಲಿರುವದರಿಂದ ಅವರ ಬದಲು ಶ್ರೀ. ಜಿ. ಎನ್. ರಾಮಸ್ವಾಮಿಯವರನ್ನು ಮಾಸಿಕ ರೂ. ೨೭೫—೨೫—೫೦೦ ದರದ ವೇತನದಲ್ಲಿ ನೇಮಿಸಲಾಗಿದೆ.

ಕೊಡ್ಲಿಪೇಟೆ ನೋಟಿಫೈಡ್ ಏರಿಯಾದ ಚುನಾವಣೆಯು ತಾ. ೧೬—೯—೫೩ರಲ್ಲಿ ಬೆಳಗ್ಗೆ ೭ ಗಂಟೆಯಿಂದ ೧೨ರ ವರೆಗೂ ಮಧ್ಯಾಹ್ನ ೧ರಿಂದ ೬ರ ವರೆಗೂ ನಡೆಯುವದು. ಆರು ಸ್ಥಳಗಳಿಗೆ ೧೬ ಜನರು ಉಮೇದುವಾರರಾಗಿ ನಿಂತಿರುವರು.

ತಿಂಗಳಿಗೆ ೧೦೦/— ರೂಪಾಯಿಗಳಿಗೆ ಕಡಮೆ ಆದಾಯವಿರುವ ಮತ್ತು ೩೦೦೦/— ಕಿಮ್ಮತ್ತಿನ ಸ್ವಂತ ಆಸ್ತಿ ಇರುವವರಿಗೆ ಮನೆ ಕಟ್ಟಿಕೊಳ್ಳಲಿಕ್ಕಾಗಿ ಸರಕಾರದಿಂದ ಟಿಂಬರ್ ಬೆಲೆಯ ಅರ್ಧ ಕ್ರಯದಲ್ಲಿ ನೂರು ಘನ ಅಡಿಗಳಷ್ಟು ಮರಕೊಡಲು ಅನುಮಾಡುವ ತಿದ್ದುಪಡಿಯೊಂದನ್ನು ಕೊಡಗು ಲೇಂಡ್ ರೆವಿನ್ಯೂ ರೆಗ್ಯುಲೇಶನಿನಲ್ಲಿ ಮಾಡಲಾಗಿದೆ. ಚೀಫ್ ಕಮಿಷನರ ಮುಂಗಡ ಅನುಮತಿ ಪಡೆದು ನೂರು ಘನ ಅಡಿಗಿಂತಾ ಹೆಚ್ಚಿನ ಮರ ಪಡೆಯಬಹುದಾಗಿದೆ.

ಫ್ರೇಜರ್‌ಪೇಟೆ ನೋಟಿಫೈಡ್ ಏರಿಯಾದ ಸಮಿತಿಗೆ ಸದಸ್ಯರಾಗಿ ದಳಿತ ವರ್ಗದವರ ಪ್ರತಿನಿಧಿಯಾಗಿ ಹರಿಜನ ಶ್ರೀ. ಎಂ. ಮಾರಿಗರವರನ್ನು ಸರಕಾರವು ನೇಮಿಸಿದೆ.

ಕೊಡಗು ಸರಕಾರದ ಚೀಫ್ ಸೆಕ್ರೆಟರಿಯವರನ್ನು ತಾರೀಕು ೧೫—೮—೫೩ ರಿಂದ ಕೊಡಗಿನ ಸಹಕಾರಿ ಸಂಘಗಳ ಎಕ್ಸ್ ಆಫಿಶಿಯೋ ರಿಜಿಸ್ಟ್ರಾರಾಗಿ ನೇಮಿಸಲಾಗಿದೆ.

ಖಾಸಗಿ ಮೋಟಾರು ಕಾರುಗಳನ್ನು ವೀರಾಜಪೇಟೆ ಮತ್ತು ಮಡಿಕೇರಿ ಮುನ್ಸಿಪಾಲಿಟಿಗಳೊಳಗೆ ಗಂಟೆಗೆ ೨೦ ಮೈಲುಗಳಿಗೂ, ಸೇತುವೆ ಮತ್ತು ತಿರುವುಗಳಲ್ಲಿ ೧೫ ಮೈಲುಗಳಿಗೂ ಇತರ ಕಡೆಗಳಲ್ಲಿ ೩೦ ಮೈಲುಗಳಿಗೂ ಮೀರಿ ವೇಗದಿಂದ ಓಡಿಸಕೂಡದಾಗಿ ವಿಧಿಸಲಾಗಿದೆ.

ಪ್ರಿವೆಂಟಿವ್ ಡಿಟೆನ್ಶನ್ ಆಕ್ಟಿಗೆ ಸಂಬಂಧಿಸಿ ಕೊಡಗಿಗೆ ಶ್ರೀಗಳಾದ ಜಸ್ಟೀಸ್ ವಾಸುದೇವಮೂರ್ತಿ ಮೈಸೂರು ಹೈಕೋರ್ಟ್ ಜಡ್ಜ್ (ಅಧ್ಯಕ್ಷ) ಪಿ. ಎಂ. ನಾಣಯ್ಯ ಮತ್ತು ಕೆ. ವೆಂಕಟಗಿರಿ ಇವರುಗಳಿಂದ ಕೂಡಿದ ಸಲಹಾ ಸಮಿತಿಯನ್ನು ನೇಮಿಸಲಾಗಿದೆ.

ಈ ವರ್ಷದ ಕೊಡಗಿನ ಸ್ಕಾಲರ್‌ಶಿಫ್ ಕಮಿಟಿಯಾಗಿ ಡಿ. ಕಮಿಷನರು (ಅಧ್ಯಕ್ಷ), ವಿದ್ಯಾಧಿಕಾರಿ, ಕಾಲೇಜ್ ಪ್ರಿನ್ಸಿಪಲ್, ಶ್ರೀ. ಸಿ. ಎ. ಮಂದಣ್ಣ ಮತ್ತು ಶ್ರೀ. ಸಿ. ಎಂ. ನಾಣಮ್ಮಯ್ಯ ಇವರುಗಳನ್ನು ನೇಮಿಸಲಾಗಿದೆ.

ಹಿಂದೀ ಒಕ್ಕೂಟದ ಪ್ರೆಸಿಡೆಂಟರ ಅನುಮತಿ ಪಡೆದು ಕೊಡಗು ಶಾಸನ ಸಭೆಯ ಡೆಪ್ಯುಟಿ ಸ್ಪೀಕರರ ವೇತನವನ್ನು ತಾ. ೧೫—೬—೫೨ ರಿಂದ ತಿಂಗಳಿಗೆ ರೂ. ೨೦೦ ಎಂದು ಚೀಫ್ ಕಮಿಷನರು ನಿಶ್ಚಯಿಸಿರುವರು.

ಕೊಡಗಿನ ಸಾಮೂಹಿಕ ವಿಕಾಸ ಯೋಜನೆಗೆ ಯೋಗ್ಯ ಗ್ರಾಮಸೇವಕರನ್ನು ಆರಿಸಲು ಕೊಡಗಿನ ಡೆವಲಪ್‌ಮೆಂಟ್ ಕಮಿಷನರು (ಅಧ್ಯಕ್ಷ), ವ್ಯವಸಾಯ ಅಧಿಕಾರಿ, ವಿದ್ಯಾಧಿಕಾರಿ, ಎಗ್ಸಿಕ್ಯೂಟಿವ್ ಆಫೀಸರು (ಸೆಕ್ರೆಟರಿ) ಮತ್ತು ಶ್ರೀ. ಪಿ. ಎಂ. ನಾಣಯ್ಯ ಮತ್ತು ಕೆ. ಎಂ. ದೇವಯ್ಯನವರುಗಳಿಂದ ಕೂಡಿದ ಸಮಿತಿಯೊಂದನ್ನು ನೇಮಿಸಲಾಗಿದೆ.

ತಾರೀಕು ೩ ರಲ್ಲಿ ರಂಗ ಸಮುದ್ರದ ಗ್ರಾಮಸ್ಥರು ಬಸವೇಶ್ವರ ದೇವಸ್ಥಾನದ ಬಳಿ ಮಠದ ಗುರುಗಳಾದ ಶ್ರೀ. ಷ. ಬಿ. ಗುರುಬಸಪ್ಪನವರ ಅಧ್ಯಕ್ಷತೆಯಲ್ಲಿ ಕೈಲ್ ಮುಹೂರ್ತ ಹಬ್ಬವನ್ನು ಆಚರಿಸಿದರು. ತೆಂಗಿನ ಕಾಯಿಗೆ ಗುಂಡು ಹೊಡೆಯುವದು, ಲಿಂಬುಕಾಯಿ ಬಿಡುವದು ಮೊದಲಾದ ಸ್ಪರ್ಧೆಗಳಿದ್ದವು. ಕೆಲವು ವರ್ಷಗಳಿಂದ ಪಾಳು ಬಿದ್ದಿದ್ದ ದೇವಸ್ಥಾನವನ್ನು ಹೊಸದಾಗಿ ಕಟ್ಟಿಸಿರುವ ಶ್ರೀ ಕಲ್ಲೇಗೌಡ ಈರಪ್ಪನವರಿಗೆ ಗೌರವ ಮಾಡಲಾಯಿತು.

ತಾರೀಕು ೭ ರಲ್ಲಿ ಮುಕ್ಕೊಡ್ಲೂರು ಗ್ರಾಮದ ಶ್ರೀ. ಕೊಕ್ಕಲೆರ ಬೋಪಯ್ಯನವರು ಅಲ್ಲಿಯ ದನಗಳಿಗೆ ತೊಂದರೆಕೊಡುತ್ತಿದ್ದ ಹುಲಿಯೊಂದನ್ನ ಗುಂಡಿಕ್ಕಿ ಕೊಂದರು.

ಫ್ರೇಜರ್‌ಪೇಟೆ ಹೋಬಳಿ ರಸೂಲ್‌ಪೆಟ್ಟಕೇರಿ ಗ್ರಾಮದಲ್ಲಿರುವ ಪ್ರಯಾಣಿಕರ ಬಂಗ್ಲೆಯಲ್ಲಿ ತಾ. ೭ ರಲ್ಲಿ ಶ್ರೀ. ಜಿ. ಲಿಂಗರಾಜಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಶಾಲೆ ತೆರೆಯಲಾಗಿದೆ.

ಶ್ರೀಮಂಗಲ ಜೈ ಹಿಂದ್ ಕ್ಲಬ್ಬಿನವರು ಕೈಲ್ ಮುಹೂರ್ತ ಹಬ್ಬವನ್ನ ಆಚರಿಸಿದರು. ಆಟೋಟ ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಶ್ರೀ ಕಂಡ್ರತಂಡ ಬಿ. ಕಾರ್ಯಪ್ಪನವರು ಬಹುಮಾನಗಳನ್ನು ಹಂಚಿದರು.

ತಟಸ್ಥ ರಾಷ್ಟ್ರಗಳ ರೀಪೇಟ್ರಿಯೇಶನ್ ಸಮಿತಿಯ ಅಧ್ಯಕ್ಷರಾಗಿ ನೇಮಿಸಲ್ಪಟ್ಟಿರುವ ಜನರಲ್ ಕೊಡಂದೇರ ತಿಮ್ಮಯ್ಯನವರು ತಾ. ೬ರಲ್ಲಿ ಕೊರಿಯಾಕ್ಕೆ ವಿಮಾನ

ಮೂಲಕ ಪ್ರಯಣ ಬೆಳಸಿದರು. ಅವರಿಗೆ ರಾಯಬಾರಿಗಳ ಸ್ಥಾನ ಕೊಡಲಾಗಿದೆ.

ಮೂರ್ನಾಡಿನಲ್ಲಿ ತಾ. ೩ರಲ್ಲಿ ಕೈಲು ಪೊಳ್ದು ಹಬ್ಬವು ಬ್ರಿಗೇಡಿಯರ್ ಚೆಪ್ಪುಡೀರ ಪೊನ್ನಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಆಟೋಟಗಳ ಸ್ಪರ್ಧೆಯಲ್ಲಿ ಶ್ರೀ ಕುಂಡ್ರಂಡ ಎಂ. ಮುತ್ತಣ್ಣನವರು ಛಾಂಪಿಯನ್ ಶಿಫ್ ಕಪ್ ಪಡೆದರು.

ಭಾರತ ಸೇವಕ ಸಮಾಜಕ್ಕೆ ನಿಧಿ ಸಂಗ್ರಹಿಸುವ ಕೆಲಸವು ಹಿಂದೂದೇಶದ ಇತರ ಭಾಗಗಳಲ್ಲಿ ಪಂಡಿತ ಜವಾಹರರ ಅಪೀಲಿನ ಮೇರೆ ಸೆಪ್ಟೆಂಬರು ಪ್ರಥಮ ವಾರದಲ್ಲಿ ನಡೆಯಿತೆಂದೂ ಆದರೆ ಕೊಡಗಿನಲ್ಲಿ ಮಳೆಯ ಕಾರಣದಿಂದಾಗಿ ಈ ನಿಧಿ ಸಂಗ್ರಹ ಕಾರ್ಯವು ಅಕ್ಟೋಬರ್‌ನಲ್ಲಿ ನಡೆಯುವದೆಂದೂ ಅದಕ್ಕೆ ಬೇಕಾದ ಸಮಿತಿ ಮತ್ತು ವಾಲಂಟಿಯರರ ಏರ್ಪಾಡು ಮಾಡಲು ತಾ. ೧೮ರಲ್ಲಿ ಶಾಸನ ಸಭಾಂಗಣದಲ್ಲಿ ಒಂದು ಸಭೆಯು ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ನಡೆಯುವದೆಂದೂ ಗೊತ್ತಾಗಿದೆ.

ಗ್ರೋವೋರ್‌ಫುಡ್ ಸ್ಕೀಮಿನಲ್ಲಿ ಭೂಮಿಯನ್ನು ರೂಪಿತಮಾಡಿ ಬೆಳೆನೆಟ್ಟಿರುವವರಿಗೆ ಸರಕಾರದಿಂದ ಬೋನಸ್ಸು ಹಣವನ್ನು ಕೊಡುತ್ತಿರುವುದು ಸರಿಯಷ್ಟೆ. ಹೀಗೆ ೧೯೫೨–೫೩ ಸಾಲಿನಲ್ಲಿ ಭೂಮಿಯನ್ನು ರೂಪಿತಪಡಿಸಿ ವ್ಯವಸಾಯ ಮಾಡಿರುವಂಥ ಭೂಮಿಯ ಮಾಲೀಕರುಗಳು ಸರಕಾರದಿಂದ ಕೊಡಗು ಬೋನಸ್ಸು ಹಣಕ್ಕಾಗಿ ೧೯೫೩ನೇ ಅಕ್ಟೋಬರ್ ೧೫ನೇ ತಾರೀಖಿನ ಒಳಗಾಗಿ ಕೊಡಗು ವ್ಯವಸಾಯ ಇಲಾಖೆಯ ಆಫೀಸರವರಿಗೆ ಅರ್ಜಿಗಳನ್ನು ಬರೆದುಕೊಳ್ಳತಕ್ಕದ್ದು. ಈ ತಾರೀಖಿನ ನಂತರ ಬರತಕ್ಕ ಅರ್ಜಿಗಳನ್ನು ಅಂಗೀಕರಿಸಲಾಗುವುದಿಲ್ಲವೆಂದು ತಿಳಿಸುತ್ತಾರೆ.

ಮಿಲಿಟರಿ ಎ ಎಸ್. ಸಿ. (ಎಂ. ಟಿ.) ಶಾಖೆಯಿಂದ ಕೆಲಸ ಕಳೆದುಕೊಂಡು ನಿವೃತ್ತರಾಗಿ ಬಂದಿರುವವರು ವಯಸ್ಕರ ಕುರುಡು ವಿದ್ಯಾಭ್ಯಾಸಕ್ಕೆ ಸೇರಲಿಚ್ಛೆಯುಳ್ಳವರಿದ್ದರೆ ಮಡಿಕೇರಿ ಎಂಪ್ಲಾಯಿಮೆಂಟ್ ಆಫೀಸಿನಲ್ಲಿ ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳಬಹುದು.

ಸಹಕಾರಿ ಸಂಘಗಳ ರಿಜಿಸ್ಟ್ರಾರಾಗಿದ್ದ ಶ್ರೀ. ಪಿ. ಯಂ. ಚಂಗಪ್ಪನವರು ಕಳೆದ ತಾ. ೩೧ರ ಸಾಯಂಕಾಲ ಗೃಹ ಮಂತ್ರಿ ಶ್ರೀ. ಮಲ್ಲಪ್ಪನವರ ಮನೆಯಿಂದ ಹಿಂತಿರುಗುತ್ತಿದ್ದಾಗ್ಯೆ ಸದರಿ ಮನೆಯ ಬಳಿ ದಾರಿಯಲ್ಲಿ ಆಕಸ್ಮಾತು ಜಾರಿಬಿದ್ದು ಸೊಂಟ ಮತ್ತು ಬಲದ ಕಾಲಿನ ಕರಡಿಗೆ ಜಖಂ ಆಗಿ ಚಿಕಿತ್ಸೆ ಹೊಂದುತ್ತಿರುವರಾಗಿ ತಿಳಿಯಬರುತ್ತದೆ.

ಮರಗೋಡು, ಹೊಸಕೇರಿ, ಕಟ್ಟೆಮಾಡು, ಐಕೊಳ ಗ್ರಾಮಾಭಿವೃದ್ಧಿ ಸಮಿತಿಯ ಆಶ್ರಯದಲ್ಲಿ ಕೈಲ್ ಮುಹೂರ್ತ ಹಬ್ಬವು ಶ್ರೀ. ಬಿ. ಜಿ. ಕೇಶವ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಆಟೋಟಗಳ ಸ್ಪರ್ಧೆ ನಡೆದು ಶ್ರೀ. ಕಾಂಗಿರ ಗಣಪತಿ ಸಹೋದರರು ಕೊಟ್ಟ ಬೆಳ್ಳಿಯ ಕಪ್ಪು ವೈಲು ಓಟದಲ್ಲಿ ಒಂದನೇ ಬಂದ ಶ್ರೀ. ಐಯೇಟಿ ಗಣಪತಿಯವರಿಗೆ ದೊರೆಯಿತು.

ರಷ್ಯಾದಿಂದ

ಪಾಠ ಕಲಿಯಬೇಕು.

ಪಂಡಿತ ಜವಾಹರ್‌ಲಾಲ್ ನೆಹರೂರವರ ಕುಮಾರಿ ಇಂದಿರಾ ಗಾಂಧಿಯವರು ರಷ್ಯಾವನ್ನು ಸಂದರ್ಶಿಸಿ ಒಂದು ತಿಂಗಳ ವರೆಗೆ ಅಲ್ಲಿದ್ದು ಅಲ್ಲಿಯ ಪರಿಸ್ಥಿತಿಯನ್ನು ಕಣ್ಣಾರೆ ನೋಡಿ ಬಂದಿರುವರು. ರಷ್ಯಾದ ವಿಚಾರದಲ್ಲಿ ಅವರು ಹೇಳಿದ ಕೆಲವು ವಿಚಾರಗಳನ್ನು ಸಂಗ್ರಹಿಸಿ ಕೊಡಲಾಗಿದೆ.

●●●

ಅಭೂತ ಪೂರ್ವ ಪ್ರಗತಿ.

ನನ್ನ ಒಂದು ತಿಂಗಳ ಸಂದರ್ಶನೆಯಲ್ಲಿ ನಾನು ರಷ್ಯಾದಲ್ಲಿ ಭಿಕ್ಷುಕರನ್ನು ಕಾಣಲಿಲ್ಲವೆಂಬುದು ಪ್ರಾಮುಖ್ಯವಲ್ಲ; ಬದಲು ರಷ್ಯಾವು ತನ್ನ ಬೃಹತ್ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಸಾಧಿಸಿರುವ ಅಭೂತಪೂರ್ವ ಪ್ರಗತಿಯು ಪ್ರಶಂಸನಾರ್ಹ. ಭಾರತೀಯರಾದ ನಮಗಿರುವಂತೆಯೇ ಅವರ ಸಮಸ್ಯೆಗಳೂ ಇದ್ದವು. ನಮ್ಮ ದೇಶದಂತೆಯೇ ಅವರದೂ ವಿವಿಧ ಭಾಷೆ, ಸಂಸ್ಕೃತಿಗಳಿಂದ ಕೂಡಿದ, ವಿಶಾಲ ದೇಶ. ಜನತೆಯಲ್ಲೂ ಕೂಡ ಅವಿದ್ಯೆ, ಬಡತನ, ನಿರುದ್ಯೋಗ, ಮೊದಲಾದುವು ಇತ್ತು. ಆದರೆ ೩೫ ವರ್ಷಗಳ ಪ್ರಯತ್ನದಿಂದ ರಷ್ಯಾವು ವ್ಯವಸಾಯ, ಕೈಗಾರಿಕೆ, ವಿಜ್ಞಾನ ಪ್ರತಿಯೊಂದು ಕ್ಷೇತ್ರದಲ್ಲಿಯೂ ಮುಂದರಿದು ಆಧುನಿಕ ರಾಷ್ಟ್ರವಾಗಿದೆ. ಇಂದು ಅಲ್ಲಿ ಅವಿದ್ಯಾವಂತರಿಲ್ಲ. ಅಲ್ಲಿಯ ಕೈಗಾರಿಕೆಗಳ ಪ್ರಗತಿಯು ಮೆಚ್ಚತಕ್ಕಂಥಾದ್ದು. ಯಾವುದೇ ನಿಷ್ಪಕ್ಷಪಾತಿ ಸಂದರ್ಶಕನು ಅವರ ಸಾಧನೆಯನ್ನು ಮೆಚ್ಚಲೇಬೇಕು. ನೀವು ಯಾವ ರಾಜಕೀಯ ಪಂಗಡ ಯಾ ತತ್ವಕ್ಕೆ ಸೇರಿದ್ದರೂ, ರಷ್ಯಾದ ರಾಜಕೀಯ ತತ್ವನೀತಿಗಳಿಗೆ ವಿರೋಧವಿದ್ದರೂ ಕೂಡ ಅವರು ಸಾಧಿಸಿದ ಪ್ರಗತಿಯನ್ನು ಮೆಚ್ಚದೆ ಸಾಧ್ಯವಿಲ್ಲ.

ಅಲ್ಲಿಯ ದೊಡ್ಡ ದೊಡ್ಡ ಹೊಸ ಕಟ್ಟಡಗಳು, ವಿಶಾಲ ರಸ್ತೆಗಳು, ಸುಂದರ ಉದ್ಯಾನಗಳು, ಯಾರನ್ನೂ ಅಚ್ಚರಿಗೊಳಿಸದಿರವು. ಅಲ್ಲಿಯ ಜನರು ಸರಳ ಜೀವಿಗಳು ಮಾತ್ರವಲ್ಲ, ಸರಳ ಮನೋಭಾವದವರೂ ಕೂಡ. ಪ್ರತಿ ನಗರ ಪ್ರತಿ, ಸಂಸ್ಥೆ, ಪ್ರತಿ ಕುಟುಂಬಕ್ಕೂ ವರ್ಷದ ಯಾ ಪಂಚವಾರ್ಷಿಕ ಯೋಜನೆಗಳಿವೆ. ಆ ಅವಧಿಯಲ್ಲಿ ಆ ಗುರಿಯನ್ನು ಮೀರಿ ಪ್ರಗತಿಯನ್ನು ಅವರು ಸಾಧಿಸುತ್ತಾರೆ. ಪ್ರತಿ ಕ್ಷಣಕ್ಕೂ ರಷ್ಯಾವು ಪ್ರಗತಿಪಥದಲ್ಲಿ ಮುಂದರಿಯುತ್ತಿದೆ.

ನಿರುದ್ಯೋಗವಿಲ್ಲ.

ಭವ್ಯಭವಿಷ್ಯಕ್ಕಾಗಿ ಅವರು ಯತ್ನಿಸುತ್ತಿದ್ದರೂ ಇಂದಿನ ಅವರ ಜೀವನದಲ್ಲಿ ಸುಖಕ್ಷೇಮ ಕಡಿಮೆ ಇಲ್ಲ. ಅವರ ಮಾತಿನಂತೆ ರಷ್ಯಾದಲ್ಲಿ ನಿರುದ್ಯೋಗವಿಲ್ಲ. ಬದಲು ಅಲ್ಲಿ ಮಾನವ ಶಕ್ತಿ ಅಂದರೆ ಉದ್ಯೋಗಗಳಿಗೆ ಜನರು ಸಾಕಾಗದೆ ಸರಕಾರವು ಜನಸಂಖ್ಯೆ ಹೆಚ್ಚುವಂತೆ ಪ್ರೋತ್ಸಾಹಕೊಡುತ್ತಿದೆ. ನಾನು ಅಲ್ಲಿಯ ವಿವಿಧ ಅಂಗಡಿಗಳು, ಸಿನೆಮಾ, ಪಾರ್ಕು ಮೊದಲಾದುವುಗಳನ್ನು ಸಂದರ್ಶಿಸಿದೆ. ಎಲ್ಲೆಲ್ಲಿಯೂ ಎಲ್ಲರಿಗೂ ಬೇಕಾದಷ್ಟು ಆಹಾರ, ಬಟ್ಟೆ ಮತ್ತು ಇತರ ಆವಶ್ಯಕತೆಗಳು ಇರುವುದು ಕಂಡುಬಂತು. ಜನತೆಯ ಕೊಳ್ಳುವ ಶಕ್ತಿಯು ಬಹು ಹೆಚ್ಚಿರುವದರಿಂದ ಅವರ ಜೀವನ ಮಟ್ಟವು ಬಹು ಉತ್ತಮವಿದೆ. ಸಾಧನ ಸಾಮಗ್ರಿಗಳ ಬೆಲೆ ಕ್ರಮಶಃ ಕೆಳಗಿಳಿಯುತ್ತಿರುವ ಜಗತ್ತಿನ ಒಂದೇ ರಾಷ್ಟ್ರವೆಂದರೆ ರಷ್ಯಾ ಎನ್ನಬಹುದು. ೧೯೫೦ರಲ್ಲಿ ೩೫೦೦ ರೂಬಲ್ ಬೆಲೆ ಇದ್ದ ರೇಡಿಯೋ ಸೆಟ್ಟುಗಳಿಗೆ ಇಂದು ೧೫೦೦ ಬೆಲೆ ಇದೆ. ಈ ಬೆಲೆ ಇನ್ನೂ ಇಳಿಮುಖವಾಗಿದೆ. ಹೀಗೆ ಎಲ್ಲ ವಸ್ತುಗಳ ಬೆಲೆಯೂ ಇಳಿಯುತ್ತಿದೆ. ಆದರೆ ಕೆಲಸಗಾರರ ವೇತನ ಮಾತ್ರ ಇಳಿದಿಲ್ಲ. ಏರಲು ಏರುತ್ತಿದೆ. ಮನೆಬಾಡಿಗೆ ಅಲ್ಲಿ ಬಹು ಕಡಿಮೆ. ಯೋಗ್ಯ ವಿದ್ಯಾರ್ಥಿಗಳಿಗೆ ಪ್ರೌಢ ವಿದ್ಯಾಭ್ಯಾಸಕ್ಕೆ ಧನ ಸಹಾಯ ಕೊಡುವ ವ್ಯವಸ್ಥೆಯೂ ಇದೆ.

ಮನೋರಂಜನೆ.

ರಷ್ಯಾದಲ್ಲಿ ಮನೋರಂಜನೆಯ ಕಾರ್ಯಕಲಾಪಗಳಿಗೆ ದೊಡ್ಡ ಸ್ಥಾನವಿದೆ. ಸಿನೆಮಾ, ನಾಟಕಗಳಲ್ಲದೆ, ಸಾಂಸ್ಕೃತಿಕ ಭವನಗಳು, ಪಾರ್ಕುಗಳು ಬೇಕಾದಷ್ಟಿವೆ. ಆಟ ಓಟ, ವಾಚನಾಲಯ, ಕಲೆ, ಸಾಹಿತ್ಯ ನೃತ್ಯ, ಸಂಗೀತ ಮೊದಲಾದುವುಕ್ಕೆ ತುಂಬಾ ಪ್ರೋತ್ಸಾಹವಿದೆ. ಜನತೆಯಲ್ಲೂ ಕೂಡ ಸಾಹಿತ್ಯ, ಕಲೆಗಳ ಜ್ಞಾನವು ಬೆಳೆದಿದೆ. ಮಕ್ಕಳ ಹಿತ, ಪ್ರಗತಿಗಳಿಗೆ ರಷ್ಯಾದಲ್ಲಿ ಬಹು ದೊಡ್ಡ ಪ್ರಾಶಸ್ತ್ಯಕೊಡಲಾಗಿದೆ. ಕವಿಗಳ ಹೆಸರಿನಲ್ಲಿ ರಸ್ತೆ, ಕಟ್ಟಡಗಳನ್ನು ತೆರೆದು ಗೌರವ ಕೊಡುತ್ತಾರೆ. ಅಲ್ಲಲ್ಲಿ ಕವಿಗಳ ಪ್ರತಿಮೆಗಳನ್ನು ಕಾಣಬಹುದು. ಅಲ್ಲಿಯ ಜನರ ಉತ್ಸಾಹ ಕಾರ್ಯಚತುರತೆ, ಜೀವನದಲ್ಲಿಯ ಆಸಕ್ತಿಯು ಯಾರನ್ನೂ ಚಕಿತಗೊಳಿಸದಿರದು. ತಾವು ಸಾಧಿಸಿರುವ ಪ್ರಗತಿಯಲ್ಲಿ ಅವರಿಗಿರುವ ಆತ್ಮವಿಶ್ವಾಸವು ಹೊಗಳತಕ್ಕದಾದುದು. ತಮ್ಮ ದೇಶದ ಹಿತಕ್ಕಾಗಿ ಅವರು ಯಾವ ತ್ಯಾಗ ಮಾಡಲೂ ಹಿಂಜರಿಯರು. ಉಸ್ಬೆಕಿಸ್ತಾನದ ಉದ್ಯಾನವೊಂದರಲ್ಲಿದ್ದ ದೊಡ್ಡದಾದ ಕೃತಕ ಕೆರೆಯಲ್ಲಿ ನಾವು ದೋಣಿ

ಬಟ್ಟೆಯ ನಿಯಂತ್ರಣ ರದ್ದು!

— ಎಂದಾಗ —

ನಿರಾತಂಕವಾದ ಸ್ವತಂತ್ರವಾದ ಸರ್ಧೆಯ

ವ್ಯಾಪಾರವು

ಪುನಃ ಮೊದಲಿನಂತೆಯೇ ಪ್ರಾರಂಭ!!

❁●❁

ಈಗಿನ ಮೂರ್ಪಾಟಾದ ಪರಿಸ್ಥಿತಿಯಲ್ಲಿ

ನಾವು

ನಮ್ಮ ಗ್ರಾಹಕ ವರ್ಗದವರಿಗೆ

○ ಮನ ಮೆಚ್ಚುವ ಸೇವೆ —

❁ ಉತ್ತಮ ಆಯ್ಕೆಗೆ ಅವಕಾಶ —

● ಅತ್ಯುತ್ತಮ ಸ್ಪರ್ಧೆಯ ಬೆಲೆ —

ಇವುಗಳಿಂದ ಇನ್ನೂ ಹೆಚ್ಚಿನ ಸೇವೆಗೆ ಬದ್ಧ ಕಂಕಣರಾಗಿರುವೆವೆಂದು ಆಶ್ವಾಸನೆಯನ್ನೀಯಲು ಸಂತೋಷಪಡುತ್ತೇವೆ.

❁●❁

ಆದುದರಿಂದ

ನೀವು

ತಮ್ಮ ಸೇವೆಯನ್ನು ಇನ್ನೂ ಉತ್ತಮ ರೀತಿಯಲ್ಲಿ ಹೇಗೆ ಸಲ್ಲಿಸಬಹುದೆಂದು ದಯಮಾಡಿ ತಿಳಿಸುವಿರಾ?

ಚಂದ್ರಾನಾ ಮತ್ತು ಕಂಪೆನಿ,

ಮಡಿಕೇರಿ.

ಯಲ್ಲಿ ಕುಳಿತು ವಿಹರಿಸಿದೆವು. ಆ ಕೆರೆಯನ್ನು ಅಲ್ಲಿಯ ಯುವಕರು ಒಟ್ಟುಗೂಡಿ ದುಡಿದು ರಚಿಸಿದ್ದಂತೆ. ಒಂದೂವರೆ ವರ್ಷಗಳ ವರೆಗೆ ಅವರೆಲ್ಲರೂ ಯಾವುದೇ ವೇತನವಿಲ್ಲದ ಕೆಲಸ ಮಾಡಿ ಆ ದೊಡ್ಡ ಹಾಗೂ ಸುಂದರ ಕೆರೆಯನ್ನು ಕಟ್ಟಿರುವರು.

ಹೆಂಗಸರು.

ರಷ್ಯಾದಲ್ಲಿ ಹೆಂಗಸರಿಗೂ ಗಂಡಸರಷ್ಟೇ ಅಧಿಕಾರವಿದೆ. ಅವರಿಗೆ ಗಂಡಸರ ಸಮಾನ ವೇತನ ದೊರೆಯುತ್ತದೆ. ಯಾವುದೇ ಕೆಲಸಕ್ಕೆ ಅವರನ್ನು ಸೇರಿಸಕೂಡದೆಂಬ ನಿರ್ಬಂಧವಿಲ್ಲ. ಪ್ರಸವಕಾಲದ ಹೆಚ್ಚಿನ ಸವಲತ್ತು ಹೆಂಗಸರಿಗೆ ದೊರೆಯುವವು. ತಮ್ಮ ಆರೋಗ್ಯದ ಬಗ್ಗೆ ಅವರು ತುಂಬಾ ಎಚ್ಚರಿಕೆ ವಹಿಸುತ್ತಾರೆ. ನಾನು ಡೆಪ್ಯುಟಿ ಮಂತ್ರಿಯಾದವರನ್ನೂ, ಡೈರೆಕ್ಟರುಗಳನ್ನೂ, ಲೇಖಕರು, ಡಾಕ್ಟರು, ನ್ಯಾಯಾಧೀಶರು, ಅಧ್ಯಾಪಕರನ್ನೂ ಕಂಡು ಮಾತಾಡಿದ್ದೇನೆ. ಸಾಮೂಹಿಕ ವ್ಯವಸಾಯ ಕ್ಷೇತ್ರಗಳಲ್ಲಿರುವ ಮಹಿಳಾ ಕೆಲಸಗಾರರೊಡನೆಯೂ ಮಾತಾಡಿದ್ದೇನೆ. ಅವರ ಆತ್ಮ ವಿಶ್ವಾಸ, ಭವ್ಯ ಭವಿಷ್ಯದ ನಂಬಿಕೆ ಇವು ಯಾರನ್ನು ಮುಗ್ಧರನ್ನಾಗಿ ಮಾಡದಿರವು. ಅನೇಕ ಹೆಂಗಳೆಯರು ದೊಡ್ಡ ದೊಡ್ಡ ಪದವಿಯಲ್ಲಿದ್ದಾರೆ. ರಷ್ಯಾದ ವ್ಯವಸಾಯ ಡೆಪ್ಯುಟಿ ಮಂತ್ರಿಯು ಒಬ್ಬ ಉಸ್‌ಬೆಕ್ ಮಹಿಳೆಯಾಗಿದ್ದಾಳೆ.

ಹಿಂದೂದೇಶದ ಬಗ್ಗೆ ಪ್ರೀತಿ

ನಾನು ಕಂಡ ಪ್ರತಿಯೊಬ್ಬರೂ ಹಿಂದೂದೇಶದ ಬಗ್ಗೆ ಸ್ನೇಹಾದರಗಳನ್ನು ತೋರಿಸಿದರು. ಹಿಂದೂದೇಶದ ಜಗತ್ ಶಾಂತಿಯ ಪ್ರಯತ್ನವನ್ನು ಅವರು ಮೆಚ್ಚುತ್ತಾರೆ. ಅದರಲ್ಲೂ ಉಸ್‌ಬೆಕಿಸ್ಥಾನದ ಜನರು ಹಿಂದೂದೇಶದ ಬಗ್ಗೆ ತುಂಬಾ ಉತ್ಸಾಹ ಪ್ರೀತಿಯನ್ನು ವ್ಯಕ್ತಮಾಡಿದರು. ಅನೇಕರು ನನ್ನಲ್ಲಿಗೆ ಮೀಟಿಂಗು, ಸಭೆಗಳಲ್ಲಿ ಬಂದು ಮಾತಾಡುತ್ತಿದ್ದರು. ಆಕ್ಷೆ ಅವರನ್ನು ನಿರ್ಬಂಧಿಸುವವರಾರೂ ಇರಲಿಲ್ಲ.

ರಷ್ಯಾದ ಪ್ರಗತಿಯು ಅಭೂತಪೂರ್ವವಾದುದು. ಆದರೆ ಈ ಪ್ರಗತಿಗಾಗಿ ಅಲ್ಲಿಯ ಜನತೆ ತ್ಯಾಗ ಮಾಡಿದ್ದಾರೆ. ಹಗಲಿರುಳು ದುಡಿದಿದ್ದಾರೆ. ರಷ್ಯಾದ ವಿದೇಶ ಮಂತ್ರಿ ಮೊಲಟೋರವರು ನನ್ನೊಡನೆ ಹೇಳಿದರು. 'ರಷ್ಯಾದ ಜನರಾದ ನಾವು ಪವಾಡಗಳಲ್ಲಿ ವಿಶ್ವಾಸವಿರುವವರಲ್ಲ. ಶ್ರಮವಹಿಸಿ ದುಡಿಯುವದರಲ್ಲೇ ನಮ್ಮ ವಿಶ್ವಾಸ' ಎಂದು. ೩೫ ವರ್ಷಗಳ ಇಂಥಾ ದುಡಿಮೆಯಿಂದ ರಷ್ಯಾವನ್ನು ಮೇಲೆತ್ತಿ ಭವ್ಯ ತಳಹದಿಯಲ್ಲಿ ನಿಲ್ಲಿಸಿದ್ದಾರೆ. ಈಗ ಅವರು ಜೀವನಾವ್ಯಶ ವಸ್ತುಗಳಲ್ಲದೆ ಉತ್ತಮ ಪಾದ ರಕ್ಷೆ, ಬಟ್ಟೆ, ಮನೆ ಮೊದಲಾದ ವಿಚಾರ ಆಸಕ್ತಿ ತೋರತೊಡಗಿದ್ದಾರೆ. ಅವರ ಆರ್ಥಿಕ ಸ್ಥಿತಿ ಉತ್ತಮಗೊಂಡಿದೆ. ಆ ಕಾರಣವಾಗಿಯೇ ರಷ್ಯಾ ಸರಕಾರದ ಶಾಂತಿ ಪ್ರಯತ್ನಕ್ಕೆ ಅಲ್ಲಿಯ ಜನತೆಯ ಹೃತ್ಪೂರ್ವಕ ಬೆಂಬಲವಾಗಿದೆ. ಏಕೆಂದರೆ ಅವರ ಹಾಗೂ ನಮ್ಮ ಯೋಜನೆಗಳೆಲ್ಲ ಕಾರ್ಯರೂಪಕ್ಕೆ ಬಂದು ಸರ್ವತೋಮುಖ ಪ್ರಗತಿಯಾಗಬೇಕಾದರೆ ಪ್ರಪಂಚ ಶಾಂತಿಯು ಅತ್ಯಗತ್ಯ.

—

ಸುಂದರ–ಥಿಯೋಡರರ ಕಥೆ

ಒಂದು ಬಾವಿಯಲ್ಲಿ ಕಪ್ಪೆಗಳ ರಾಜನೊಬ್ಬನಿದ್ದನು. ಆತನ ಹೆಸರು ಥಿಯೋಡರ್ ಎಂದು. ಆತನ ಬಳಗದವರು ಆತನಿಗೆ ಬಹು ತೊಂದರೆ ಕೊಡುತ್ತಿದ್ದರು. ಈ ತೊಂದರೆಯಿಂದ ಪಾರಾಗಲು ಯೋಚಿಸಿ ಆ ಕಪ್ಪೆಗಳ ರಾಜನು ನೀರಿಗೆ ಇಳಿಬಿಡುವ ಬಿಂದಿಗೆಯೊಳಗೆ ಸೇರಿ ಬಾವಿಯಿಂದ ಹೊರ ಬಂದಿತು. ನಂತರ ತನಗೆ ತೊಂದರೆ ಕೊಟ್ಟ ಬಳಗದವರಿಗೆ ಯಾವ ರೀತಿ ಪ್ರತೀಕಾರ ಮಾಡಬೇಕೆಂದು ಆಲೋಚಿಸಿತು. ಏಕೆಂದರೆ ಒಂದು ಬಳಗದವರಲ್ಲಿ ಒಬ್ಬರು ಕಷ್ಟದಲ್ಲಿ ಸಹಾಯ ಮಾಡಿದರೆ ಮತ್ತೊಬ್ಬರು ಕಷ್ಟದಲ್ಲಿ ಹಾಸ್ಯಮಾಡುವರು. ಹೀಗೆ ಮಾಡುವವರಿಬ್ಬರಿಗೂ ಸರಿಯಾದ ಪ್ರತೀಕಾರ ಮಾಡುವವನು ನಿಜವಾಗಿಯೂ ಬುದ್ಧಿಶಾಲಿಯೆಂದು ಬುದ್ಧಿವಂತರ ನುಡಿ ಇರುವದರಿಂದ ಕಪ್ಪೆಯು ಅತ್ತಿತ್ತ ತಿರುಗಾಡತೊಡಗಿತು.

ಅಷ್ಟರಲ್ಲಿ ಬಿಲದಿಂದ ಹೊರಗೆ ಬರುತ್ತಿರುವ ಕಪ್ಪು ಬಣ್ಣದ ಹಾವೊಂದನ್ನು ಅದು ಕಂಡಿತು. ಅದನ್ನು ಕಂಡು ಕಪ್ಪೆಯು ಆಲೋಚಿಸಿತು. "ನಾನು ಈ ಕಪ್ಪು ಹಾವನ್ನು ಬಾವಿಗೆ ಕರಕೊಂಡುಹೋಗುವೆನು. ಅದು ನನ್ನ ಬಳಗದವರನ್ನು ನಿರ್ನಾಮ ಮಾಡುವದು. ಏಕೆಂದರೆ ಶತ್ರುವನ್ನು ಸಂಹರಿಸಲು ಶತ್ರುವನ್ನೇ ಉಪಯೋಗಿಸುವವನು ಎಂದೂ ಆನಂದದಲ್ಲಿರುವನು.

ಈ ರೀತಿ ತೀರ್ಮಾನ ಮಾಡಿಕೊಂಡು ಥಿಯೋಡರನು ಹಾವಿನ ಬಿಲದ ಹತ್ತಿರ ಹೋಗಿ ಹಾವನ್ನು ಕರೆಯಿತು. ಹಾವು ಕರೆಯುವ ಸ್ವರವನ್ನು ಕೇಳಿ ಒಳಗಿನಿಂದಲೇ ಆಲೋಚಿಸಿತು. "ನನ್ನನ್ನು ಕರೆಯುವವನು ನನ್ನ ಜಾತಿಯವರಲ್ಲ. ಕರೆಯುವ ಧ್ವನಿಯು ಹಾವಿನ ಧ್ವನಿಯಲ್ಲ. ನನ್ನ ಜಾತಿಯವರನ್ನು ಬಿಟ್ಟು ಈ ಜಗತ್ತಿನಲ್ಲಿ ನನಗೆ ಬೇರೆಯವರ ಗೆಳೆತನವಿಲ್ಲ. ಆದ್ದರಿಂದ ನಾನು ಹೊರಗೆ ಬರಲಾರೆ. ಏಕೆಂದರೆ ಮನುಷ್ಯನಾರೆಂದು ತಿಳಿಯದೆ ಆತನ ಗುಣ ನೀತಿ ನಡತೆಯನ್ನರಿಯದೆ ಗೆಳೆತನ ಮಾಡುವದಾಗಲೀ, ಗುಟ್ಟನ್ನು ಹೇಳುವದಾಗಲೀ ದುಃಖಕ್ಕೆ ಆಸ್ಪದ ಮಾಡುವದು. ಯಾರೋ ಔಷಧಗಾರನು ಯಾ ಹಾವಾಡಿಗನು ಕರೆಯುತ್ತಿರಬಹುದು. ನನ್ನನ್ನು ಹಿಡಿದು ಕುಕ್ಕೆಯೊಳಗಿಡಲು ಯತ್ನಿಸುತ್ತಿರಬಹುದು. ಇಲ್ಲವೇ ನನ್ನ ಮೇಲೆ ದ್ವೇಷವಿರುವವರು ನನಗೆ ತೊಂದರೆ ಮಾಡಲು ಕರೆಯುತ್ತಿಬಹುದು"

ಹೀಗೆ ಯೋಚಿಸಿ ಹಾವು ಕೇಳಿತು "ನೀನಾರು?

"ನಾನು ಕಪ್ಪೆಗಳ ರಾಜನಾದ ಥಿಯೋಡರನು. ನಿನ್ನೊಡನೆ ಗೆಳೆತನ ಮಾಡಿಕೊಳ್ಳಲು ಬಂದಿರುವೆನು"

ಇದನ್ನು ಕೇಳಿ ಹಾವು–ನಂಬಲು ಅಸಾಧ್ಯವಾದ ಮಾತಿದು. ಹುಲ್ಲು ಬೆಂಕಿಯೊಡನೆ ಗೆಳೆತನ ಮಾಡುವದೇ? ಎಂದು ಆಲೋಚಿಸಿ ಹೇಳಿತು "ನಿನ್ನನ್ನು ಕಂಡೊಡನೆ ಕೊಲ್ಲಲು ಸಿದ್ಧನಿರುವವನ ಗೆಳೆತನವದೇನು? ನಿನ್ನ ಮಾತು ಅರ್ಥವಾಗದು"

"ನೀನು ಹೇಳಿದುದು ಸರಿ. ಹಾವುಗಳು ಕಪ್ಪೆಗಳ ಜನ್ಮ ಶತ್ರುಗಳು. ಆದರೂ ನಾನು ನಿನ್ನ ಗೆಳೆತನಕ್ಕೆ ಬಂದಿರುವೆನು. ಏಕೆಂದರೆ ನಮ್ಮವರು ನನಗೆ ಅವಮಾನ ಮಾಡಿರುವರು. ಆಸ್ತಿಯೆಲ್ಲವೂ ಹಾಳಾಗಿ ಜೀವನಕ್ಕೆ ಗಂಡಾಂತರ ಬಂದಿರುವಾಗ ಅವುಗಳನ್ನು ಉಳಿಸಲು ಸಹಾಯಕವಾಗುವವನಾದರೆ ಆತನು ಹಾವಾದರೇನು ಬೇರೆಯಾದರೇನು?"

"ನಿನ್ನನ್ನು ಅವಮಾನ ಮಾಡಿದವರಾರು?"

"ನನ್ನ ಬಂಧು ಬಳಗದವರು"

"ನಿನ್ನ ಮನೆ ಎಲ್ಲಿ?"

"ಹತ್ತಿರದ ಬಾವಿಯಲ್ಲಿ"

"ಆದರೆ ನಾನು ಅದರೊಳಗಿಳಿಯಲಾರೆ. ಇಳಿದರೆ ನನಗೆ ಉಳಿಯಲು ಜಾಗವಿರದು. ನಿನ್ನ ಬಳಗದವರ ಕೊಲೆ ಮಾಡಲು ಆಸ್ಪದ ದೊರೆಯದು. ಏಕೆಂದರೆ ನುಂಗಲು ಸಾಧ್ಯವಾದುದನ್ನೇ ತಿನ್ನಬೇಕು. ಜೀರ್ಣಶಕ್ತಿ ಇದ್ದರೆ ಮಾತ್ರ ಊಟ ಮಾಡಬೇಕು. ತಾವಿರುವಲ್ಲಿ ಮಾತ್ರ ತಂಗಬೇಕು."

"ಇಲ್ಲ, ನನ್ನೊಡನೆ ನೀನು ಬಾ. ಬಾವಿಗೆ ಇಳಿಯಲು ಸುಲಭದ ದಾರಿ ತೋರಿಸುವೆನು. ಬಾವಿಯೊಳಗೆ ಅತೀ ಸುಂದರವಾದ ಬಿಲವೊಂದಿದೆ. ಅಲ್ಲಿ ನೀನು ಮಲಗಬಹುದು. ನನ್ನ ಬಂಧು ಬಳಗದವರನ್ನು ಅನಾಯಾಸವಾಗಿ ನಾಶಮಾಡಬಹುದು"

ಹಾವು ಆಲೋಚನೆ ಮಾಡಿತು. "ನನಗೆ ವಯಸ್ಸಾಗಿದೆ. ಒಂದು ಇಲಿ ದೊರೆಯಬೇಕಾದರೂ ವಿಪರೀತ ಕಷ್ಟ ಪಡಬೇಕಾಗಿದೆ. ಆದ್ದರಿಂದ ಶಕ್ತಿ ಕಡಿಮೆಯಾದಾಗ, ಸಾವು ಹತ್ತಿರ ಬಂದಿರುವಾಗ, ಗೆಳೆಯರು ಕೈಬಿಡುತ್ತಿರುವಾಗ, ಪತ್ನಿಯು ದೂರ ಸರಿದಾಗ ಬುದ್ಧಿವಂತನು ನಿರಾಯಾಸದ ಜೀವನ ಮಾರ್ಗವನ್ನು ಕಂಡುಕೊಳ್ಳಬೇಕು" ಹೀಗೆ ಯೋಚಿಸಿ ಸುಂದರನೆಂಬ ಆ ಹಾವು ಥಿಯೋಡರನೊಡನೆ ಗೆಳೆತನ ಮಾಡಿಕೊಂಡು ಬಾವಿಯನ್ನು ಸೇರಿತು. ಕೆಲವೇ ದಿನಗಳಲ್ಲಿ ಬಾವಿಯಲ್ಲಿದ್ದ ಕಪ್ಪೆಗಳೆಲ್ಲ ಮುಗಿದು ಹೋದುವು. ಒಂದು ದಿನ ಹಾವು ಥಿಯೋಡರನನ್ನು ಕರೆದು ಹೇಳಿತು. 'ಇಲ್ಲಿ ನನಗೆ ಆಹಾರವಿಲ್ಲದೆ ತೊಂದರೆಯಾಗಿದೆ. ಏನಾದರೂ ತಿನ್ನಲು ಕೊಡು'

'ನೀರಿಗೆ ಹಾಕುವ ಬಿಂದಿಗೆಯ ಮೂಲಕ ಹೊರಗೆ ಹೋಗಿ ಬಿಡು' ಕಪ್ಪೆ ಎಂದಿತು.

'ನಾನು ಮೊದಲು ವಾಸವಿದ್ದ ಬಿಲವನ್ನು ಬಿಟ್ಟು ಬಹು ದಿನಗಳಾದವು. ಅಲ್ಲಿ ಬೇರೆಯವರು ಬಂದು ನೆಲೆಸಿರಬಹುದು. ನಾನು ಈಗಿರುವ ಸ್ಥಳವನ್ನು ಬಿಡಲಾಗದು. ಹೇಗಾದರೂ ಮಾಡಿ ದಿನಕ್ಕೊಂದರಂತೆ ಕಪ್ಪೆಗಳನ್ನು ನೀನು ಒದಗಿಸಬೇಕು. ಇಲ್ಲದಿದ್ದರೆ ನಿನ್ನ ಕುಟುಂಬ ಹಾಗೂ ನಿನ್ನನ್ನು ತಿನ್ನಬೇಕಾಗುವದು' ಎಂದು ಹಾವು ನುಡಿಯಿತು.

ಥಿಯೋಡರನಿಗೆ ಇದರಿಂದ ತುಂಬಾ ನ... ಯಿತು. ಕ್ಷಣ ಆತನು ತಮ್ಮೆಲ್ಲರನ್ನು ತಿನ್ನದಿರನೆಂಬ ಭಯವಾಯಿತು. ಚಿಕ್ಕ ಲಂಚವನ್ನು ಪಡೆದು ಅಭ್ಯಾಸ ಆದವನು ಸರ್ವನುಂಗಲು ಯತ್ನಿಸುವನು. ಒಮ್ಮೆ ತಿಂದು ಆಸೆಗೊಂಡ ಹೊಟ್ಟೆಯ ಬೆಂಕಿ ಸುಲಭದಲ್ಲಿ ತೃಪ್ತವಾಗದು. ಆದ್ದರಿಂದ ಆತನು ಸಿಕ್ಕಿದಂತೆ ನಮ್ಮನ್ನು ನಾಶಮಾಡುವದಕ್ಕೆ ಆಸ್ಪದಕೊಡದೆ ದಿನಕ್ಕೊಂದರಂತೆ ಕಪ್ಪೆಗಳನ್ನು ಕೊಡುವದೆಂದು ನಿಶ್ಚಯಿಸಿತು. ಈ ರೀತಿ ಕೆಲವು ದಿನಗಳು ಕಳೆದವು ಕಪ್ಪೆಗಳೆಲ್ಲಾ ಮುಗಿದು ತನ್ನ ಮಕ್ಕಳನ್ನೇ ಕೊಡುವ ಪರಿಸ್ಥಿತಿ ಬಂತು ಒಂದು ದಿನ ಥಿಯೋಡೇನಿಯಸ್ ಎನ್ನುವ ತನ್ನ ಮಗನನ್ನು ಹಾವು ತಿನ್ನುವದನ್ನು ಕಂಡು ಥಿಯೋದರನು ದೊಡ್ಡದಾಗಿ ಅಳತೊಡಗಿದನು. ಅದನ್ನು ಕಂಡು ಆತನ ಪತ್ನಿಯು 'ಹೀಗೆ ರೋಧಿಸಿ ಫಲವಿಲ್ಲ. ಇಂದಲ್ಲ ನಾಳೆ ನಾವೇ ಹಾವಿಗೆ ಆಹುತಿಯಾಗುವ ಸಂದರ್ಭ ಬಂದಿದೆ. ಆದ್ದರಿಂದ ಇಲ್ಲಿಂದ ನಾವು ತಪ್ಪಿಸಿಕೊಂಡು ಹೋಗುವ ಇಲ್ಲವೇ ಹಾವನ್ನು ಕೊಂದು ಹಾಕುವ ಉಪಾಯ ಕಂಡು ಹಿಡಿಯಬೇಕೆಂದಿತು' ಇದರಿಂದ ಪ್ರಯೋಜನವಾಗಲಿಲ್ಲ. ಕಡೆಗೆ ಎಲ್ಲ ಕುಟುಂಬವೂ ಮುಗಿದು ಥಿಯೋಡರನೊಂದೇ ಉಳಿಯಿತು

ಥಿಯೋಡರನು ಉಪಾಯ ಹೂಡಿ ಬೇರೆ ಬಾವಿಗಳಲ್ಲಿರುವ ಕಪ್ಪೆಗಳು ಈ ಬಾವಿಗೆ ಬರುವಂತೆ ಪ್ರಯತ್ನಿಸಿ ಹಾವಿಗೆ ಬೇಕಾದಷ್ಟು ಮೇವು ಒದಗಿಸುವ ಭರವಸೆ ತೋರಿ ಆ ಬಾವಿಯಿಂದ ಪಾರಾಯಿತು. ಕೆಲವು ದಿನಗಳಲ್ಲಿ ಹಾವಿಗೆ ತಿಂಡಿಯಿಲ್ಲದೆ ಬಡವಾ... ದು ಬಾವಿಯಲ್ಲಿದ್ದ ಹಲ್ಲಿಯೊಂ... ಕರೆದು ಥಿಯೋದರನನ್ನು ಹುಡುಕಿ ತರಲು ಹೇಳಿತು. ಗೌಳಿಯು ಥಿಯೋಡರನನ್ನು ಕಂಡು ಮಾತಾಡಿದಾಗ ಥಿಯೋಡರನು ಹೇಳಿತು. 'ನಾನು ವಾಪಾಸು ಬರಲಾರೆ. ಎಂಥಾ ಗೆಳೆಯನಾದರೂ ಕೂಡ ಉಪವಾಸವಿರುವವನು ಏನನ್ನು ಮಾಡಲೂ ಹಿಂಜರಿಯನು. ಬಡವನು ಜೀವನಕ್ಕಾಗಿ ಯಾವ ಉಪಾಯವನ್ನೂ ಅನುಸರಿಸುವನು. ಆದ್ದರಿಂದ ಥಿಯೋದರನು ಬರಲಾರನೆಂದು ಹೇಳು' ಎಂದಿತು.

'ಆದ್ದರಿಂದ ನೀರಿನ ಪ್ರಾಣಿಯಾದ ಮೊಸಳೆಯೇ ನಾನು ಇನ್ನು ನಿನ್ನೊಡನೆ ಬರಲಾರೆ' ಎಂದು ಕಪಿಯು ಹೇಳಿತು.

ಇದನ್ನು ಕೇಳಿದ ಮೊಸಳೆಯು 'ನನ್ನ ಕೃತಘ್ನತೆಯನ್ನು ಮರೆತು ಬಾ. ಇಲ್ಲದಿದ್ದರೆ ಇಲ್ಲೇ ಉಪವಾಸವಿದ್ದು ಪ್ರಾಣಬಿಡುವೆನು' ಎಂದಿತು.

ಆಗ ಕಪಿಯು 'ತಿಳಿಗೇಡಿ, ಹಿತ್ತಾಳೆ ಕಿವಿಯವನಂತೆ ಅಭಿಪ್ರಾಯವನ್ನು ಕಂಡೂ ಅದಕ್ಕೆ ಬಲಿಬೀಳಲಾರೆ' ಎಂದಿತು ಅದು ಹೇಗೆ ಎಂದು ಕೇಳಲು ಮುಂದಿನ ವಾರ ಕಪಿಯು ಹಿತ್ತಾಳೆ ಕಿವಿಯ ಕತೆ ಹೇಳುವದು.

—

ವಿಮರ್ಶೆ

ಮಾಡಿದವರು:—ಶ್ರೀ ಎಂ. ಎಲ್. ಸುಕುಮಾರನ್, ವೀರಾಜಪೇಟೆ.

'ಕಲಿಯುಗದಲ್ಲಿ ಪ್ರಪಂಚಾನೆ ಕಲೀಕಾ ಆದೆ' ಎಂಬುದಾಗಿ ಒಬ್ಬ ವಯೋವೃದ್ಧರು ಮೊನ್ನೆ ಹೇಳಿದರು. ಆ ಮಾತು ಕೇಳಿ ನಾನು ದಂಗು ಬಡಿದಂತೆ ಆತನನ್ನೇ ದಿಟ್ಟಿಸಿ ನಿಂತು ಬಿಟ್ಟೆ. ಆತ ಕತೆಗಾರನಲ್ಲ, ಕಾದಂಬರಿಕಾರನಲ್ಲ, ರಾಜಕೀಯತಜ್ಞನಂತೂ ಅಲ್ಲ. ನನ್ನ ನಿಮ್ಮಂತೆ ಒಬ್ಬ ಸಾಮಾನ್ಯ ಮನುಷ್ಯ. ನಾಲ್ಕಾರು ಶಬ್ದಗಳಲ್ಲಿ ಅವರು ಇಡೀ ಪ್ರಪಂಚದ ಇಂದಿನ ಪರಿಸ್ಥಿತಿಯನ್ನು ವಿಮರ್ಶೆ ಮಾಡಿ ಬಿಟ್ಟಿದ್ದರು. ಅದರಲ್ಲೂ ಉದಾತ್ತ, ಅರ್ಥಗರ್ಭಿತ ವಿಮರ್ಶೆ ಅದು. ಅದಕ್ಕೇನೇ ಹಿರಿಯರೆಂದುದು "ವಿದ್ಯೆಗಿಂತ ಅನುಭವವೇ ಮೇಲು" ಎಂದು. ನಾಗರಿಕರೆಂಬ ಒಣ ಜಂಭದಿಂದ ಮೆರೆಯುತ್ತಿರುವ ನಾವು ಇನ್ನೂ ನ್ಯಾಯವಾದ ನಾಗರಿಕತೆಯನ್ನು ಕಲಿತುಕೊಂಡಿಲ್ಲ. ಹೊರಗೆ ಸಭ್ಯತೆಯ ಸೋಗು ಹಾಕಿಕೊಂಡು ಒಳಗೆ ಹಾಲಾಹಲವನ್ನು ತುಂಬಿ ಮೆರೆದಾಡುತ್ತಿರುವ ನಾವು ನಾಗರಿಕತೆಯ ಮೊದಲ ಮೆಟ್ಟಲಿನಲ್ಲೇ ಅನಾಗರಿಕತೆಯ ರಮ್ಯನೋಟಕ್ಕೆ ಸೆರೆಯಾಗಿ ಮೇಲೇರದೆ ನಿಂತಿದ್ದೇವೆ. ನಮ್ಮೀ ಮೌಢ್ಯಕ್ಕೆ ಮೇಲಿನ ವಿಮರ್ಶೆ ಸವಾಲು ಹಾಕಿದೆ.

ವಿಮರ್ಶೆ ಮಾನವನ ಜನ್ಮಸಿದ್ಧ ಹಕ್ಕು. ಪ್ರತಿಯೊಬ್ಬ ಮಾನವನೂ ಪ್ರತ್ಯಕ್ಷವಾಗಿಯೇ ಪರೋಕ್ಷವಾಗಿಯೇ ವಿಮರ್ಶಕನೆ. ಇತರರ ವಿಮರ್ಶೆಯಲ್ಲಿ ಪ್ರತಿಯೊಬ್ಬನದೂ ಮೇಲುಗೈ. ಆದರೆ ತನ್ನ ವಿಮರ್ಶೆಯನ್ನೇ ತಾನು ಮಾಡಿ, ತಿದ್ದಿಕೊಳ್ಳುವ ಅಭ್ಯಾಸವೋ, ಹವ್ಯಾಸವೋ ಯಾವುದೂ ಇಲ್ಲ. ತನ್ನನ್ನೆ ವಿಮರ್ಶೆ ಮಾಡಿಕೊಳ್ಳಬೇಕಾದ ಪ್ರಸಂಗಗಳೇನಾದರೂ ಬಂದರೆ ಆತನದು ಬೀಳುಗೈ.

ಪರಸ್ಪರ ಪಕ್ಷ ವಿಮರ್ಶೆಗಳು ಇಂದಿನ ಚುನಾವಣಾ ವೃತ್ತಗಳಲ್ಲೂ, ಸಾಮಾನ್ಯ ವಿಷಯವಾಗಿ ಹೋಗಿವೆ. ಟೀಕೆ, ವಿಮರ್ಶೆಗಳಿಲ್ಲದಿದ್ದರೆ ಚುನಾವಣೆಗಳೇ ಸಾಗಲಾರವು ಎನ್ನುವಷ್ಟರ ಮಟ್ಟಿಗೆ ಅವುಗಳ ಪ್ರಭಾವ ಬೆಳೆದಿದೆ. ವಿಮರ್ಶೆಯನ್ನ ಹಾವಳಿ ಎಂದು ಕರೆದರೆ ತಪ್ಪಲ್ಲ. ನಾನು ವಿಮರ್ಶೆಯನ್ನು "ಹಾವಳಿ" ಎಂದುದಕ್ಕೆ ಕಾರಣವೂ ಇದೆ. ನನ್ನ ಒಬ್ಬ ಸ್ನೇಹಿತ ಹಾದಿಯಲ್ಲಿ ಹೋಗುವ ಹೆಂಗಳೆಯರ ರೀತಿನೀತಿ, ನಡೆ ನುಡಿ, ಒನಪು ಒಯ್ಯಾರ, ಉದ್ದ ಅಗಲ, ತೂಕ ಪ್ರಮಾಣಗಳ ವಿಮರ್ಶಕನಾಗಿದ್ದ. ಆತನಿಗೆ ಆಗದವನು ಯಾರೋ ಒಬ್ಬ, ನನ್ನ ಸ್ನೇಹಿತ ವಿಮರ್ಶೆ ಮಾಡಿದ ಸುದ್ದಿಯನ್ನು ವಿಮರ್ಶೆ ಮಾಡಲ್ಪಟ್ಟ ಹುಡುಗಿಯ ತಂದೆಗೆ ತಿಳಿಸಿದ. ಅವರು ಸ್ವಲ್ಪ ಕೋಪಿಷ್ಟರು. ತನ್ನ ಮಗಳನ್ನು ಬಾಯಿಗೆ ಬಂದಂತೆ ವಿಮರ್ಶೆ ಮಾಡಿದ ಸಂಗತಿ ಕೇಳಿ ಕಿಡಿಕಿಡಿಯಾದರು. ಒಂದು ದಿನ ನನ್ನ ಸ್ನೇಹಿತ ಅವರ ಎದುರು ಸಿಕ್ಕಿಬಿದ್ದ. ಹೇಳದೆ ಕೇಳದೆ, ನಾಲ್ಕು ಬೀದಿಗಳು ಸೇರುವ ಚೌಕಿಯಲ್ಲಿ ನನ್ನ ಸ್ನೇಹಿತನ ಕಣ್ಣಿಗೆ ಫಕೀರೆಂದು ನಾಲ್ಕು ಬಿಗಿದು ಸಮಾಧಾನಗೊಂಡರು. ಅವರು ಹೊರಟು ಹೋದ ನಂತರ, ಹೊಡೆಸಿಕೊಂಡು ಕೆಂಪು ಮೂಲಂಗಿಯಂತಾದ ಗೆಳೆಯ ಅವರನ್ನು ತಾರಾಮಾರಾ ಬಯ್ದನಂತೆ! ಎಂದರೆ ಅವರ ವಿಮರ್ಶೆಗೂ ಆರಂಭಿಸಿದನೆಂದರ್ಥ.

'ಆತ ಕಾಳ ಸಂತೆ ವ್ಯಾಪಾರಿ! 'ಈಕೆ ಪಾಶ್ಚಾತ್ಯರಂತೆ, ಅರೆ ನಗ್ನತೆಯಲ್ಲಿ ತಿರುಗುತ್ತಾಳೆ ನಾಚಿಕೆಯಿಲ್ಲದೆ' ಎಂದು ಮುಂತಾದ ವಿಮರ್ಶೆಗಳು ನಮ್ಮಲ್ಲಿ ಸರ್ವ ಸಾಧಾರಣ. ಆದರೆ ಈ ರೀತಿ ವಿಮರ್ಶಿಸುವ ಜನ ತನ್ನ ಅದವಾ ತನ್ನ ಜನರ ಕಾಳಸಂತೆ ವ್ಯಾಪಾರವನ್ನಂತೂ ಅವಲೋಕಿಸುವವರೇ ಅಲ್ಲ; ತನ್ನ ಅಕ್ಕ ತಂಗಿಯರ ನಡತೆಯನ್ನು ಉದ್ಧರಿಸಿದವರಂತೂ ಖಂಡಿತಾ ಅಲ್ಲ; ಇಂಥವರು ನಿಜವಾಗಿಯೂ ಪಾಪಿಗಳು. ಹಾಗೆಂದ ಮೇಲೆ ಅವರ ವಿಮರ್ಶೆಯ ಮೇಲೆ ವಿಮರ್ಶೆ ಬರೆದ ನನ್ನ ವಿಮರ್ಶೆಯನ್ನು ಹೇಗೆ ಮಾಡುವರೋ! ಆದರೂ ಒಂದು ಮಾತು. ವಿಮರ್ಶೆಗೊಂದು ಗುರಿಯಿರಬೇಕು. ಆ ಗುರಿ ಸಾರ್ವತ್ರಿಕವಾಗಿರಬೇಕು. ವಿಮರ್ಶೆ ಗುರಿಯನ್ನು ತಾಗಬೇಕು. ಹಾಗಾದರೆ ಮಾತ್ರ ವಿಮರ್ಶೆ ಪಾಪವಲ್ಲ, ನಾನೂ ಪಾಪಿಯಲ್ಲ.

ವಿಮರ್ಶೆಗೆ ಎರಡು ಮುಖಗಳು. ನ್ಯಾಯದ ಮುಖ ಒಂದಾದರೆ ಅನ್ಯಾಯದ ಮುಖ ಇನ್ನೊಂದು. ನನ್ನ ಮನೆಯಲ್ಲಿ ನಾನೂ ಕೊಂಚ ಮಟ್ಟಿಗೆ ವಿಮರ್ಶಕನ ಕೆಲಸವನ್ನು ಮಾಡಿದವನೇ. ಕಿರಿಯರ ರೀತಿ ನೀತಿಗಳನ್ನು ವಿಮರ್ಶಿಸಲು ಹಿರಿಯರಿಗೆ ಹಕ್ಕಿದೆಯೆಂದಾಲೋಚಿಸಿ, ನನ್ನ ತಮ್ಮನ ಕೆಲವು ರೀತಿನೀತಿಗಳನ್ನು ನಾನು ವಿಮರ್ಶಿಸಿದುದಿದೆ. ನನ್ನ ವಿಮರ್ಶೆಗೆ ಕೆರಳಿ ನನ್ನನ್ನೆ ವಿಮರ್ಶೆಗೆ ಗುರಿಮಾಡಿ ಬಿಡುತ್ತಾನೆ ಆ ಭೂಪ. ನಾನು 'ತಾಳಿದವನು ಬಾಳಿಯಾನು' ಎಂದರೆ ಆತ 'ಬಗ್ಗಿದವನಿಗೆ ಒಂದು ಗುದ್ದು ಜಾಸ್ತಿ' ಎಂದು ಪ್ರತಿ ವಿಮರ್ಶೆ ಮಾಡಿ ಬಿಡುತ್ತಾನೆ (Action and reaction are equal and opposite) ಎಂಬಂತೆಯೇ ವಿಮರ್ಶೆ ಮತ್ತು ಪ್ರತಿ ವಿಮರ್ಶೆಗಳು. ವಿಮರ್ಶೆ, ಪ್ರತಿ ವಿಮರ್ಶೆಗಳ ಪರಿಣಾಮ ಅವ್ಯಾಹತವಾಗಿ ಸಾಗುತ್ತಾ ನಡೆದಿದೆ. ಅನ್ಯಾಯದ ಮುಖವನ್ನು ತೋರುವ ವಿಮರ್ಶೆಯ ಸಂಪೂರ್ಣ ಸ್ವರೂಪವನ್ನು ತಿಳಿಯಬೇಕಾದರೆ ನಾವು ನಮ್ಮ ಸಾಹಿತ್ಯಕೃತಿಗಳ ವಿಮರ್ಶೆಗಳತ್ತ ಹೊರಳಿ ನೋಡಬೇಕು. ಉದಾಹರಣೆ ಹೇಳಬೇಕೆಂದಿದ್ದರೆ, 'ಕರ್ನಾಟಕ ಕಾದಂಬರಿ ಸಾರ್ವಭೌಮ' ಶ್ರೀ ಅ. ನ. ಕೃಷ್ಣರಾಯರ ನಗ್ನ ಸತ್ಯ, ಶನಿ ಸಂತಾನ, ಕಾದಂಬರಿಗಳಿಗೆ ಬಂದ ಕೆಲವು ವಿಮರ್ಶೆಗಳನ್ನು ತೆಗೆದುಕೊಳ್ಳಬಹುದು. ಅನ್ಯಾಯದ ಅಂತಿಮ ಘಟ್ಟವನ್ನೇರಿದ ವಿಮರ್ಶೆಗಳಿವು. ನಾವು ವೇಶ್ಯೆಯ ಮನೆಗೆ ಹೋಗಿ ಅವಳ ಸಂಗ ಮಾಡಿ ಆನಂದಿಸ(?)ಬಹುದು. ಆದರೆ ಅದೇ ಸಮಸ್ಯೆಯನ್ನು ಕಾದಂಬರಿಕಾರನೆತ್ತಿಕೊಂಡು ಬರೆದರೆ ನಮಗೆ ಅಸಾಧ್ಯ ಕೋಪ; ವೇಶ್ಯೆಯ ಮನೆಗೆ ಹೋಗಿದ್ದರೂ, ಆ ರೀತಿಯ ಅಪಪ್ರಚಾರ. ಕೆಲವು ಉನ್ಮತ್ತ ಧನಿಕರ ಗುಲಾಮರಂತೆ ಬಿಸಿಲಿನಲ್ಲಿ ಬೆವರಿಳಿಸಿ ಕಷ್ಟ ಪಟ್ಟು ಕೆಲಸ ಮಾಡಿಯೂ ಯೋಗ್ಯ ವೇತನವನ್ನು ಪಡೆಯದೆ ನರಳುವ ಶ್ರಮ ಜೀವಿಗಳು ಕಾದಂಬರಿಕಾರನಿಗೆ ಕಥಾವಸ್ತುವನ್ನೊದಗಿಸಿ ಕೊಡಬಲ್ಲರಾದರೆ, ಅವರಿಗಿಂತ ಹೆಚ್ಚು ಪರಿತಾಪ ಪಡುತ್ತಿರುವ ನಮ್ಮ ಸಮಾಜದ ವೇಶ್ಯೆಯರು ಅವನಿಗೆ ಕಥಾವಸ್ತುವನ್ನೊದಗಿಸಿ ಕೊಡಬಾರದೇಕೆ? ಇತರರ ಕಣ್ಣಿಗೆ ಕಾಣದಂತೆ ನಲುಗುವ ಜೀವ ಅವರದು. ಸಾಹಿತಿ ಆಜ್ಞೆಮಾಡುವವನಲ್ಲ. ಬುದ್ಧಿ ಹೇಳುವವನಲ್ಲ. ನಮ್ಮ ಜೀವನದ ಕನ್ನಡಿಯನ್ನು ನಮಗೆ ತೋರಿಸಿ ಕೊಡತಕ್ಕವನು. ನಮ್ಮ ಜೀವನವನ್ನು ಆ ಕನ್ನಡಿಯಲ್ಲಿ ನಾವು ಕಂಡು ನಮ್ಮ ಜೀವನ ಗುರಿಯ ಬಗ್ಗೆ ತರ್ಕಿಸಿ ಅವನ್ನು ತಿದ್ದಿಕೊಳ್ಳಬೇಕು. ಸಾಹಿತಿ ಅತ್ಯುತ್ತಮ ವಿಮರ್ಶಕ. ನಮಗೆ ನಮ್ಮ ವಿಮರ್ಶೆಯೆಂದು ತಿಳಿಯದಂತೆಂತೋ? ನಮ್ಮ ವಿಮರ್ಶೆ ಮಾಡುವವನು ಅವನು. ಮಲೆಯೊಳದಲ್ಲಿ ಒಂದು ಗಾದೆಯಿದೆ. 'ಸ್ನೇಹಿತ ಒಳ್ಳೆಯವನಾಗಿದ್ದರೆ ಕನ್ನಡಿ ಬೇಡ' ಎಂಬುದಾಗಿ. ಸಾಹಿತಿ ಅಂಥಾ ಸ್ನೇಹಿತ. ನಮ್ಮ ಸುಪ್ತಚೇತನವನ್ನು ಬಡಿದೆಬ್ಬಿಸಿ ಸತ್ಯದ ದಿಗಂತದತ್ತ ದೂಡುವವನೂ ಅವನೇ. ರೇಶ್ಮೆಯ ಜವನಿಕೆಯಿಂದ ಮುಚ್ಚಲ್ಪಟ್ಟುದು ನಮ್ಮ ಜೀವನ. ಅ. ನ. ಕೃ. ಆ ಪರದೆಯನ್ನೆತ್ತಿ ಜೀವನದ ಭೀಷಣ ಸ್ವರೂಪವನ್ನು ತೋರಿಸಿ ಕೊಟ್ಟೊಡನೆ ನಾವು ಕನಲಿ ಕಿಡಿಯಾಗುವದು ಯಾವ ನ್ಯಾಯ ?

ವಿಮರ್ಶೆಯ ವಿಚಾರ ಬರೆಯಲು ಹೊರಟರೆ ಮಹಾಭಾರತದಂಥಾ ಹತ್ತು ಗ್ರಂಥಗಳಾಗಬಹುದು. ಮಹಾಭಾರತವನ್ನೆ ಓದಲು ತಾಳ್ಮೆಯಿಲ್ಲದ ನಮ್ಮ ಜನರು ಈ ಹತ್ತು ಗ್ರಂಥಗಳನ್ನು ಓದುವುದಾದರೂ ಹೇಗೆ ? ಅದಕ್ಕಾಗಿಯೇ ಕೊನೆಯದಾಗಿ ಕೆಲವು ಮಾತು ಹೇಳಿ ಈ ಲೇಖನವನ್ನು ಮುಗಿಸುವದು. ಜೀವನವೆಂಬುದು ತಿರೆಗೆ ಮಾನವನನ್ನು ಬಂಧಿಸುವ ಶೃಂಖಲೆ; ಪ್ರೇಮವೆಂಬುದು ಜೀವನಕ್ಕೆ ಮಾನವನನ್ನು ಬಿಗಿಯುವ ಸಂಕೋಲೆ. ಜೀವನ ವಿಮರ್ಶೆಯನ್ನು ಮೀರಿ ನಿಂತಿದೆ. ವಿಮರ್ಶೆಗಳಿಂದ ಲೋಕ ಕೆಟ್ಟಿದೆ. ಆದರೆ ವಿಮರ್ಶೆಗಳಿಂದಲೇ ಲೋಕ ಒಳ್ಳೆಯದಾಗಬೇಕೆಂಬುದನ್ನೂ ನಾವು ಮರೆಯಲಾಗದು.

ಸೋಮವಾರಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಕೆ. ಎಂ. ಪೊಗಸ್ತನವರು

"ದುಡಿಮೆಯೇ ದೇವರ ಆರಾಧನೆ"

ಸಂತ ಸೇನಾಧಿಪತಿ ವಿನೋಬಾಜಿ ಕೈಯಲ್ಲಿ ಪಿಕಾಸಿ ಹಿಡಿದುಕೊಂಡು, ದೇಶದ ಕಷ್ಟದೆಸೆಯ ಮತ್ತು ಬಡತನದ ಭೂತದ ವಿರುದ್ಧ ಹೋರಾಟವನ್ನು ಪ್ರಾರಂಭಿಸಿದ್ದಾರೆ. ನಮ್ಮ ತರುಣ ತರುಣಿಯರು ಟಿಕಮಕ ನೋಡುತ್ತ, ನಿರೀಕ್ಷಿಸುತ್ತ, ಜಡವಾಗಿ ಉಳಿಯುವರೇ? ನಮ್ಮ ದೇಶವು ವಿಶಾಲವಾಗಿದೆ; ಆಳು ಬಲವು ಬಹು ದೊಡ್ಡದಿದೆ; ಸಾಧನ ಸಂಪತ್ತು ಹೇರಳವಾಗಿದೆ; ಪ್ರಕೃತಿಯು ದಯೊಪರ ಮತ್ತು ಸಮೃದ್ಧವಾಗಿದೆ. ಅಂದಮೇಲೆ, ಅನುಪಯೋಗದ ಸೆಮಿಯು, ಕೆಲಸವಿಲ್ಲ, ಆಹಾರವಿಲ್ಲ, ಕಷ್ಟ ಜೀವನ, ಬಡತನ, ಇತ್ಯಾದಿಗಳ ಕೂಗೇಕೆ?

ವಿನೋಬಾಜಿಯವರು ರಾಂಚಿ ಜಿಲ್ಲೆಯ ವಿಷ್ಣುಪುರ ಗ್ರಾಮವನ್ನು ಒಂದು ದಿನ ಬೆಳಗ್ಗೆ ತಲಪಿದರು. ಅವರನ್ನು ಎದುರುಗೊಳ್ಳಲು ಬಂದವರಿಗೆ ಅವರು ಹೇಳಿದರು: "ನಾವು ನಮ್ಮ ಕೆಲಸವನ್ನು ಬಂಜರು ಜಮೀನಿನ ಮೇಲೆ ಪ್ರಾರಂಭಿಸಬೇಕು. ಆ ಕಾರ್ಯವನ್ನು ಪ್ರೀತಿಯಿಂದ ಮಾಡುವ. ನನ್ನ ಎಣಿಕೆಯಂತೆ, ಈ ಉಪಸ್ಥಿತಿಯ ೪೦೦ ಜನನು ಅರ್ಧ ಗಂಟೆಯಲ್ಲಿ ಒಂದು ಎಕ್ರೆ ಬಂಜರು ಜಮೀನನ್ನು ಸಾಗ ವಳಿ ನೆಲವಾಗಿ ಮಾರ್ಪಡಿಸಬಹುದು. ಇದನ್ನು ಕೂಡಲೇ ಮಾಡಬೇಕು. ಈಗ ೧೫ ಅಥವಾ ೨೦ ಗುದ್ದಲಿಗಳನ್ನು ತನ್ನಿರಿ"

ಕೆಲವು ನಿಮಿಷಗಳ ನಂತರ ವಿನೋಬಾಜಿ, ಅವರ ಕೆಲವು ಸಹೋದ್ಯೋಗಿಗಳು ಮತ್ತು ಕೆಲವು ಗ್ರಾಮಸ್ಥರು, ಕೈಯಲ್ಲಿ ಪಿಕಾಸುಗಳನ್ನು ಹಿಡಿದುಕೊಂಡು ಅರ್ಧ ಮೈಲು ದೂರವಿರುವ ಬಂಜರು ಜಮೀನಿನ ಕಡೆಗೆ ಶಿಸ್ತಿನಿಂದ ನಡೆದರು. ಜಮೀನಿನ ಮೇಲೆ ಸೇನಾಧಿಪತಿ, ಅವರ ಸೈನಿಕರಿಗೆ ಸಾಲಾಗಿ ನಿಲ್ಲುವಂತೆ ಆಜ್ಞಾಪಿಸಿದರು. 'ಎಟೆನ್ಷನ್' ಎಂದು ಅವರ ಗಮನವನ್ನು ಸೆಳೆದರು. "ಮೆಹನತ್ ಪೂಜಾ ರಾಮಕಿ" (ದುಡಿಮೆಯೇ ದೇವರ ಆರಾಧನೆ) ಎಂಬ ಮಂತ್ರವನ್ನು ಪಠನ ಮಾಡಿದರು, ಮತ್ತು ಅಗೆಯಲು ಪ್ರಾರಂಭಿಸಿದರು; ಇತರರು ಅನುಕರಿಸಿದರು. ಮಣ್ಣು ಕಲ್ಲಿನ ಗಟ್ಟಿ ಗೋಳಗಳು ಮೇಲೆ ಕೆಳಗಾದವು. ಈ ಹೋರಾಟವು ೪೫ ನಿಮಿಷಗಳ ತನಕ ನಡೆಯಿತು.

ಆ ಮೇಲೆ ಅವರು ತಮ್ಮ ಡೇರೆಗೆ ಮರಳಿಬಂದರು. ಮತ್ತು ಜಮೀನು ಇದ್ದವರು, ತಮ್ಮ ಜಮೀನಿನ ಸ್ವಲ್ಪ ಅಂಶವನ್ನು ಜಮೀನು ಇಲ್ಲದ ಕೃಷಿಕರಿಗೆ ಕೊಡುವಂತೆ ಒಲಿಸುವ ಪ್ರೇಮದ ಮಾತುಗಳಲ್ಲಿ ಉದ್ಯುಕ್ತರಾದರು.

ಇದು ಪ್ರತಿದಿನ ಬೆಳಗ್ಗೆ ಅರ್ಧಗಂಟೆಯಷ್ಟು. ಈ ಸತ್ಯಾಗ್ರಹೀ ಸೇನಾಧಿಪತಿಯ ಮತ್ತು ಅವರ ಅಹಿಂಸಾವಾದಿ ಸೈನಿಕರ ದಿನನಿತ್ಯದ ಕಾರ್ಯಕ್ರಮವಾಗಿದೆ. ಇಂದಿನ 'ಎಟಮ್ ಬಾಂಬ್' ದಿನಗಳಲ್ಲಿ ಅವರ ಏಕಮಾತ್ರ ಆಯುಧವೆಂದರೆ ಗುದ್ದಲಿ.

—(ಇಂಗ್ಲಿಷ್ "ಸರ್ವೋದಯ" ದಿಂದ ಆಯ್ದುದು.)

ನಾವು ಜಪಾನಿನಿಂದ ಕಲಿಯಬೇಕಾದ ಪಾಟ.

ಜಪಾನಿನ ಕೈಗಾರಿಕಾ ಪ್ರಗತಿ.

— ಲೇಖಾಂಕ—೪ —

ಮೂಲ ಲೇಖಕ:—ಶ್ರೀ ಚಮನ್‌ಲಾಲ್.

ಜಪಾನಿನ ಕೈಗಾರಿಕಾ ಉನ್ನತಿ ಹಾಗೂ ಪ್ರಗತಿಗಳಿಗೆ ಮುಖ್ಯ ಕಾರಣವೆಂದರೆ ವಿದೇಶ ಮಾರ್ಕೆಟ್ಟುಗಳ ಬಗೆಗ ಪೂರ್ಣ ಪರಿಜ್ಞಾನ ಮತ್ತು ಅದಕ್ಕೆ ಅನುಗುಣವಾಗಿ ಯೋಜನೆ ತಯಾರಿಸಿ ಸಂತೆಯ ಬೇಡಿಕೆಗೆ ತಕ್ಕಂತೆ ವಸ್ತುಗಳನ್ನು ಒದಗಿಸುವದು. ಅಂತರಾಷ್ಟ್ರೀಯ ವಾಣಿಜ್ಯ ರಂಗದಲ್ಲಿ ಜಪಾನು ಇತ್ತೀಚಿನ ರಾಷ್ಟ್ರ. ಆದರೂ ಅದು ಸುಸಜ್ಜಿತ ಮಹಾರಾಷ್ಟ್ರಗಳ ಸ್ಪರ್ಧೆಯನ್ನು ಎದುರಿಸುವಷ್ಟು ಶಕ್ತಿಶಾಲಿಯಾಗಿದೆ ಕೈಯಲ್ಲಿ ತಯಾರಿಸುವ ವಸ್ತುಗಳಿಗೆ ಗಿರಣಿಯ ವಸ್ತುಗಳೊಡನೆ ಸ್ಪರ್ಧಿಸುವುದು ಸಾಧ್ಯವಿಲ್ಲ. ಅದರಂತೆ ಆಧುನಿಕ ಹೊಸ ಮಾದರಿಯ ಸುಧಾರಿತ ಯಂತ್ರ ತಯಾರಿಯ ವಸ್ತುಗಳೊಡನೆ ಹಳೆಯ ಕಾಲದ ಯಂತ್ರಗಳು ಸ್ಪರ್ಧಿಸಲಾರವು. ಆದ್ದರಿಂದ ಜಪಾನು ಕೈಗಾರಿಕಾ ಪ್ರಗತಿಯೊಡನೆ ಸಮಕಾಲೀನವಾಗಿ ಹೆಜ್ಜೆ ಇಟ್ಟು ತನ್ನ ಯಂತ್ರ, ಸಾಮಗ್ರಿಗಳಲ್ಲಿ ಅವಶ್ಯವಾದ ಬದಲಾವಣೆಗಳನ್ನು ಮಾಡಿಕೊಂಡು ಅತ್ಯಂತ ಆಧುನಿಕ ರಾಷ್ಟ್ರವೆನಿಸಿದೆ ಜಪಾನಿನ ಸರಕಾರವೂ ಕೂಡ ದೇಶದಿಂದ ಹೊರಗೆ ಕಳುಹಿಸುವ ವಸ್ತುಗಳನ್ನು ಅತಿ ಸುಲಭ ಖರ್ಚಿನಿಂದ ಸುಲಭ ಬೆಲೆಯಲ್ಲಿ ಮಾರಾಟವಾಗುವಂತೆ ವಿವಿಧ ಕರಗಳಿಂದ ರಕ್ಷಿಸಿದೆ.

ಅಲ್ಲಿಯ ಕೆಲಸಗಾರರು ದಿನಕ್ಕೆ ಹೆಚ್ಚಿನ ಸಮಯ ದುಡಿಯಬೇಕಿದೆ ಕೆಲಸಗಾರರಿಗೆ ಪಾಶ್ಚಿಮಾತ್ಯ ರೀತಿಯ ಹೆಚ್ಚಿನ ವೇತನ ದೊರೆಯುತ್ತಿಲ್ಲವೆಂಬೀ ಮೊದಲಾದ ದೂರುಗಳನ್ನು ಹಲವರು ಹೇಳುತ್ತಾರೆ. ಈ ಮೊದಲೇ ಹೇಳಿದಂತೆ ಜಪಾನರ ಜೀವನ ಕ್ರಮವೇ ಬೇರೆ ಅದನ್ನು ಪಾಶ್ಚಿಮಾತ್ಯ ಕೈಗಾರಿಕೆಯ ಜೀವನದ ಮಟ್ಟದಿಂದ ಅಳೆಯುವದು ತಪ್ಪಾಗುವದು ಜಪಾನರದು ಸರಳ ಜೀವನ. ಅವರ ಶಾರೀರಿಕ ಹಾಗೂ ಸಾಮಾಜಿಕ ಬೇಡಿಕೆಯು ಕಡಿಮೆ. ಇದರಿಂದ ಅಲ್ಲಿಯ ಜನರಲ್ಲಿ ಬೇರೆ ದೇಶಗಳ ಕೆಲಸಗಾರರಲ್ಲಿರುವಷ್ಟು ಅತೃಪ್ತಿ ಇಲ್ಲ.

ವ್ಯಾಪಾರದ ಕ್ರಮದಲ್ಲೂ ಕೂಡ ಜಪಾನರು ತಮ್ಮ ವೈಶಿಷ್ಟ್ಯವನ್ನು ಬೀರಿದ್ದಾರೆ. ಜಪಾನಿ ವಸ್ತುಗಳು ಅತೀ ಸುಲಭ ಕ್ರಯದವುಗಳು. ಅತೀ ಬಡವನ ಕಿಸೆಗೂ ಸಾಧ್ಯವಾಗುವ ವಸ್ತುಗಳು ಅವರಲ್ಲಿವೆ. ಬಡ ಜನರಿಂದ ತುಂಬಿರುವ ಪ್ರಪಂಚದಲ್ಲಿ ಅತೀ ಕಡಿಮೆ ಬೆಲೆಯ ವಸ್ತುಗಳ ಪೂರೈಕೆ ಲಾಭದಾಯಕವೆಂಬುದು ಅವರಿಗೆ ತಿಳಿದಿದೆ. ಹಾಗೆ ಹೇಳಿದಾಗ ಅವರದೆಲ್ಲವೂ ಕಡಿಮೆ ತರದ ವಸ್ತುಗಳೆಂದು ಯಾರೂ ಭಾವಿಸಬಾರದು. ಬಡವರ, ಸಿರಿವಂತರ, ಎಲ್ಲರ ಕಿಸೆಗೆ ಸರಿಯಾದ ಸಾಹಿತ್ಯಗಳನ್ನು ಅವರು ತಯಾರಿಸುವರು. ಆದ್ದರಿಂದ ಜಗತ್ತಿನ ಸಂತೆಯಲ್ಲಿ ಅವರ ಸಾಮಾನುಗಳಿಗೆ ಬೇಕಾದಷ್ಟು ಬೇಡಿಕೆ ಇದೆ. ಕಾಂಗ್ರೆಸ್ ಚಳವಳದ ಕಾಲಕ್ಕೆ ಹಿಂದೂ ದೇಶದಲ್ಲಿ ಖಾದಿಯ ಮಹತಿ ಹೆಚ್ಚಿ ಎಲ್ಲರೂ ಖಾದಿಗೆ ಪ್ರೋತ್ಸಾಹ ಕೊಡುತ್ತಿದ್ದಾಗ ಜಪಾನು ತಮ್ಮಲ್ಲಿ ಖಾದಿಯಂಥಾ ಒರಟು ಬಟ್ಟೆ ತಯಾರಿಸಿ ಹಿಂದೂದೇಶದಲ್ಲಿ ವಿಕ್ರಯಕ್ಕೆ ಪ್ರಾರಂಭಿಸಿತ್ತು ಎಂದರೆ ಅದರ ಚತುರತೆಯನ್ನು ಬೇರೆ ವಿವರಿಸುವ ಅಗತ್ಯವಿಲ್ಲ.

ಜಪಾನಿನ ಕೆಲಸಗಾರರಲ್ಲಿರುವ ರಾಷ್ಟ್ರೀಯತೆಯು ಅವರ ಕೈಗಾರಿಕೆಯ ಪ್ರಗತಿಗೆ ಪ್ರಾಮುಖ್ಯ ಕಾರಣ ಜಪಾನಿನ ಒಂದು ಬೈಸಿಕಲ್ ಕಾರ್ಖಾನೆಯಲ್ಲಿ ಹಾಡುವ ಒಂದು ಹಾಡಿನ ತಾತ್ಪರ್ಯವಿದು.

"ಜಗತ್ತಿನ ರಾಷ್ಟ್ರಗಳಲ್ಲಿಯ ದುಡಿಮೆಗಾರರ ಹೆಚ್ಚಿನ ದರದ ವೇತನದ ಯಾವುದೇ ಸುದ್ದಿಯು ಸಮುದ್ರದಾಚೆಯಿಂದ ಕೇಳಿ ಬರಲೀ ನಮ್ಮ ಹೃದಯ ತಂತಿಯು ಕಲಕಿಸಿಗೊಳ್ಳದೆ ಪರಸ್ಪರ ಸಹಕಾರದಿಂದ ಕಬ್ಬಿಣದ ಗೋಡೆಯಂತೆ ಅಚಲವಾಗಿರುದು. ನೀತಿಯ ಶಕ್ತಿ ಹಾಗೂ ಧೈರ್ಯದ ಹೃದಯದಿಂದೊಡಗೂಡಿ ನಿರ್ಬಲರ ಸಹಾಯಕ್ಕೆ ಬಲವಂತರ ಬೆಂಬಲದಿಂದ ಬೇಕಿನೀರನ್ನು ಲೆಕ್ಕಿಸದೆ ಪ್ರಯತ್ನಿಸಿ ಸಮಗ್ರ ಸಹೋದರತೆಯನ್ನು ಸ್ಥಾಪಿಸಿ ಜಗತ್ತಿಗೆ ಆದರ್ಶರಾಗುತ್ತ ಪರಸ್ಪರ ಸಹಕಾರ, ಸಮಾನತೆ, ಸೌಜನ್ಯದಿಂದ ಜೀವಿಸುವ ಗುರಿಗಾಗಿ ಹೆಚ್ಚಿನ ಉತ್ಸಾಹದಿಂದ ದುಡಿಯುವೆವು"

THE CANARA BANKING CORPORATION LIMITED.

ದಿ ಕೆನರಾ ಬ್ಯಾಂಕಿಂಗ್ ಕೋಪೊರೇಶನ್ ಲಿಮಿಟೆಡ್.

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ ಉಡುಪಿ (ದ ಭಾರತ)

ಚಿಕ್ಕ ಮಾಯಿದೆಯ ಠೇವಣಾತಿಗಳು

3 ರಿಂದ 6 ತಿಂಗಳುಗಳ ವರೆಗೆ— ನಾಲಿಯೂನ ಶೇಕಡ 3
7 ರಿಂದ 12 ತಿಂಗಳುಗಳ ವರೆಗೆ—ನಾಲಿಯೂನ ಶೇಕಡ 3¼
ಪಂಚವಾರ್ಷಿಕ ಸುವರ್ಣ ಠೇವಣಾತಿಗಳು— ,, ,, 4

— ಕೊಡಗು ಸಂಸ್ಥಾನದಲ್ಲಿ ನಮ್ಮ ಶಾಖೆಗಳು —

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ)

ಅಧಿಕೃತ ಶೇರು ಭಂಡವಾಳ	ರೂ.	10.00 000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು .	,,	17,000
ಠೇವಣಾತಿ ..	,,	8,8[illegible]000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಶೇಕಡ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ ಅಪ್ಪಯ್ಯ. ಪ್ರೆಸಿಡೆಂಟ್ & ಖಜಾನ್ಚಿ.

ಈ ರೀತಿಯ ಗುರಿಯಿಂದ ದುಡಿಯುವ ಕೆಲಸಗಾರರು ತಮ್ಮ ಅಭಿವೃದ್ಧಿಯ ದೃಷ್ಟಿಯಿಂದ ಮಾತ್ರ ದುಡಿಯುವವರಲ್ಲ. ಮಾರಾಟಗಾರರಿಗೂ, ಕೊಂಡುಕೊಳ್ಳುವವರಿಗೂ ಕಡಿಮೆ ಬೆಲೆಯಲ್ಲಿ ಸಾಹಿತ್ಯ ದೊರೆಯುವಂತಾಗಬೇಕು ಈ ರೀತಿಯ ವಿಶಾಲ ಭಾವನೆ ಮತ್ತು ರಾಷ್ಟ್ರೀಯ ಪ್ರೇಮವು ಅಲ್ಲಿಯ ಕೈಗಾರಿಕೆಗಳಿಗೆ ವರಪ್ರಸಾದವಾಗಿದೆ

ಜಪಾನಿನ ಕಾರ್ಖಾನೆಗಳಲ್ಲಿ ಕೆಲಸಕ್ಕೆ ಸೇರುವ ಕೆಲಸಗಾರರ ವಯಸ್ಸು ೧೪ ರಿಂದ ೧೭ ಇರಬೇಕು. ಹೈಯರ್ ಪ್ರೈಮರಿ ಶಾಲೆಯ ಪದವೀಧರರಾಗಿ ಮೇಲು ಸ್ತರದ ಪ್ರವೇಶ ಪರೀಕ್ಷೆ ಪಾಸಾಗಿರಬೇಕು. ೨೧ ವಯಸ್ಸಿನ ವರೆಗೆ ಆತನು ಅಭ್ಯರ್ಥಿಯಾಗಿ ಕೆಲಸ ಮಾಡಬೇಕು. ೨೧ ವಯಸ್ಸು ಕಳೆದು ಕೆಲಸಕ್ಕೆ ಸೇರುವವರೂ ೪ ವರ್ಷ ಅಭ್ಯರ್ಥಿಗಳಾಗಿ ಕೆಲಸ ಮಾಡಬೇಕು ನಂತರ ಕೆಲಸ ಖಾಯಂ ಆಗುವದು

ಈ ರೀತಿ ಕೆಲಸಕ್ಕೆ ಸೇರುವವರಿಗೆ ಪ್ರಥಮದರ್ಜೆಗೆ ಮಾಸಿಕ ೨೦ ಎನ್ಸ್‌ಗಳು. ದ್ವಿತೀಯ ದರ್ಜೆ ೧೮, ತೃತೀಯ ೧೭ ಹೀಗೆ ಹತ್ತು ಗ್ರೇಡುಗಳ ವರೆಗೆ ಕ್ರಮಶಃ ಐದು ಎನ್ಸುಗಳವರೆಗೆ ವೇತನ ದೊರೆಯುವದು. ಇದಲ್ಲದೆ ಆಹಾರ ದಿನಕ್ಕೆ ೩೫ ಸೆನ್ಸ್‌ಗಳು ದೊರೆಯುವದಲ್ಲದೆ ಮುಫತ್ತು ಮಲಗುವ ವ್ಯವಸ್ಥೆ ಮಾಡಿಕೊಡುವರು. ಪ್ರತಿಯೊಬ್ಬರಿಗೂ ಸಾಬೂನು, ವಾಸದ ಮನೆ, ತಿಂಗಳಿಗೆ ೨೫ ಸ್ನಾನದ ಟಿಕೇಟುಗಳು ಕೊಡಲ್ಪಡುವದಲ್ಲದೆ ಆರೋಗ್ಯದ ಜೀವವಿಮೆಯನ್ನು ಕಾರ್ಖಾನೆಯವರೇ ಕಟ್ಟುವರು.

ಸದಾ ಕೆಲಸಕ್ಕೆ ಹಾಜರಾದವರಿಗೆ ಬೋನಸ್ಸು, ಉತ್ತಮ ಕೆಲಸಗಾರರಿಗೆ ಬೋನಸ್ಸು, ವರ್ಷಾಂತ್ಯದಲ್ಲಿ ಲಾಭನೋಡಿ ಬೋನಸ್ ಕೊಡಲ್ಪಡುವದು ಕೆಲಸಗಾರರ ಅತೀ ಹತ್ತಿರದ ಸಂಬಂಧಿಕರು ಸತ್ತರೆ ಏಳುದಿನ ರಜೆ ಕೊಡಲ್ಪಡುವದು. ಕೆಲಸಗಾರರು ದಿನಕ್ಕೆ ೯ ಗಂಟೆ ಕೆಲಸ ಮಾಡುವರು ಪ್ರತಿ ತಿಂಗಳ ಎರಡು ಆದಿತ್ಯವಾರಗಳು, ಹೊಸ ವರ್ಷದ ಸಮಾರಂಭಕ್ಕೆ ೫ ದಿನ, ಜುಲೈಯಲ್ಲಿ ೨ ದಿನ, ರಾಷ್ಟ್ರೀಯ ಹಬ್ಬಗಳಿಗಾಗಿ ೪ ದಿನ ಹೀಗೆ ರಜೆ ವ್ಯವಸ್ಥೆ ಇದೆ

ಕಾರ್ಖಾನೆಗಳ ನಿಯಮಗಳ ಮೇರೆ ಕೆಲಸಗಾರರು ಕಾರ್ಖಾನೆಗಳಲ್ಲಿ ಸಿಗರೇಟು, ಬೀಡಿ ಸೇದಕೂಡದು. ದೊಡ್ಡದಾಗಿ ಹರಟೆ ಕೊಚ್ಚ ಕೂಡದು ಪ್ರತಿ ತಿಂಗಳ ೧೪ನೇ ತಾರೀಖಿನಲ್ಲಿ ವೇತನ ಕೊಡಲ್ಪಡುವದು. ಈ ರೀತಿಯ ನಿಯಮಾವಳಿಗಳಿಂದ ಜಪಾನಿನ ಕೈಗಾರಿಕೆಯು ದಕ್ಷ ರೀತಿ ನಡೆಯುತ್ತಿದೆ ಕೆಲಸಗಾರರೂ ಸಂತುಷ್ಟರಾಗಿರುವರು

ಕೊಡ್ಲಿಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಕೆ. ಸಿ. ಪೀತಾಂಬರನವರು

"......... ಗುರು ಸಾಕ್ಷಾತ್ ಪರಬ್ರಹ್ಮಂ ...."

ಲೇ:—ಶ್ರೀ ಬಿ. ಡಿ. ಸುಬ್ಬಯ್ಯ.

'ಗುರು' ಎಂದಾಕ್ಷಣವೇ ನಾವು ತ್ರೇತಾ, ದ್ವಾಪರ ಯುಗಗಳನ್ನು ನೆನಸುತ್ತೇವೆ. ದಿನಗಳು ಕಳೆದಂತೆ ವರ್ಷಗಳೂ, ವರ್ಷಗಳುರುಳಿದಂತೆ. ಯುಗಯುಗಗಳೂ, ಕಳೆದು, ನಾವು ಕೇವರಿಗೆ ಹೆದರದೆ, ಸತ್ಯ ಧರ್ಮಗಳನ್ನು ಮೂಲೆಗೊತ್ತಿ, ಅತನೊಡನೆ ಸ್ಪೈಪೋಟಿ ನಡೆಸುತಿರುವಂತಹ ಯುಗಕ್ಕೆ ತಲಪಿದ್ದೇವೆ. ಸತ್ಯಯುಗಗಳಲ್ಲಿದ್ದ 'ಗುರು' ಎಂಬ ಪವಿತ್ರ ನಾಮವನ್ನು ಈಗ ನಾವು ಕಾಣುತ್ತಿಲ್ಲ. ಗುರುವು ಉಪಾಧ್ಯಾಯನಾಗಿ ಅಧ್ಯಾಪಕನೆನಿಸಿ, ಮೂಷ್ಟರಾಗಿ, ಮೇಷ್ಟ್ರಿನ ಸ್ಥಾನದಲ್ಲಿದ್ದಾನೆ. ಅಂದಿನ ಗುರುವಿನ ಪಾವನ ಪವಿತ್ರತೆಯನ್ನೂ, ಇಂದಿನ ಮೇಷ್ಟ್ರಿನ ಅಂತಸ್ಥನ್ನೂ ನಾವು ಈಗ ಅಳೆಯಬಹುದು. ಈ ಪಾವನ ನಾಮವನ್ನು ಹಾಡಿ ಹರಸಿ, ದೇವರ ಅಂತಸ್ತಿನ ಪೂಜ್ಯತೆಯನ್ನು ಕೊಟ್ಟು ಗೌರವಿಸಿದ, ನಮ್ಮ ಪೂರ್ವಜರು ಶುದ್ಧ ಸಂತ ... ನಮ್ಮ ಈ ಆಧುನಿಕ ಸಂಸ್ಕೃತಿಯ ಓರೆಗಲ್ಲು ಹೇಳುತ್ತಿದೆ. "ಗುರುಃಬ್ರಹ್ಮಂ, ಗುರುವಿಷ್ಣು, ಗುರುದೇವೋ ಮಹೇಶ್ವರಾ! ಗುರು ಸಾಕ್ಷಾತ್ ಪರಬ್ರಹ್ಮಂ, ತಸ್ಮೈ ಶ್ರೀ ಗುರುಬ್ಯೋನಮಃ" ಎಂದು ಸಾಕ್ಷಾತ್ ಭಗವಂತನ ಸಾಕ್ಷಾತ್ಕಾರವನ್ನು ಈ ಗುರುವಿನಲ್ಲಿ ಕಂಡ ಪೂರ್ವಜರ ಪ್ರಾಚೀನ ಸಂಸ್ಕೃತಿಯ ಒರೆಗಲ್ಲನ್ನು ನೋಡಲು ನಾವು ಪ್ರಯತ್ನಪಡುವದಿಲ್ಲ. 'ಗುರು' ಎಂದಾಕ್ಷಣ, ಅತನಿಗೆ ಶಿರಬಾಗದವರು ಆಗ ವಿರಳವಿದ್ದರು. ಆ ಕಾಲದಲ್ಲಿ ಈಗಿನಂತಹ ನಕಲಿ ವಿದ್ಯೆಯನ್ನು ಕಲಿಸುತ್ತಿರಲಿಲ್ಲ. ಹಳ್ಳಿಹಳ್ಳಿಗೆ, ಪೇಟೆಪೇಟೆಗೊಂದು ಶಾಲೆ, ಕಾಲೇಜುಗಳಿರಲಿಲ್ಲ. ಗುರುಕುಲ ವಾಸ ಮಾಡಿಯೇ ವಿದ್ಯೆಯನ್ನು ಕಲಿಯಬೇಕಿತ್ತು. ರಾಜನಾಗಲೀ, ಪ್ರಜೆಯಾಗಲೀ, ವಿದ್ಯೆ ಬೇಕಿದ್ದರೆ ಗುರುವಿಗೆ ಶರಣಾಗಬೇಕಿತ್ತು. ಆ ಕಾಲದಲ್ಲಿ ಅದಿ ಅಂತಸ್ತಿಲ್ಲದ ಈಗಿನ ವಿದ್ಯೆಯನ್ನು ಯಾವ ಗುರುಕುಲವೂ ಕಲಿಸುತ್ತಿರಲಿಲ್ಲ. ಅಪ್ಪಣೆಯ ಸೇವಕರನ್ನಾಗಿ, ಧೈರ್ಯಸ್ಥೈರ್ಯ ಸತ್ಯ ಧರ್ಮಗಳೆಲ್ಲಕ್ಕೂ ಶರಣೆಂದು, ಕಳ್ಳತನದಿಂದಲೋ, ಮೋಸದಿಂದಲೋ ಜೀವಿಸುವ ಜೀವನ ಮಾರ್ಗವನ್ನು ಆ ಕಾಲದ ವಿದ್ಯೆಯು ಬೋಧಿಸುತ್ತಿರಲಿಲ್ಲ. ಈಗಿನ ವಿದ್ಯೆಯ ಗುರಿಯೆಂದರೆ, ಹೇಗಾದರೂ ಹಣಗಾಡಿ, ಸಿಕ್ಕಿತ್ತ ತರಗತಿಗಳನ್ನು ಬಾಯಿಪಾಠದಿಂದಲೋ ನಕಲು ಹೊಡೆದೋ, ಪಾಸಾಗಿ, ಹೊಟ್ಟೆಪಾಡಿಗಾಗಿ, ಒಂದು ಸ್ಥಾನವನ್ನು ಗಳಿಸಿಕೊಂಡರೆ, ವಿದ್ಯೆಕಲಿತದಕ್ಕೆ ಸಾರ್ಥಕವೆನ್ನುತ್ತೇವೆ. ವಿದ್ಯೆಯ ಪವಿತ್ರತೆಯನ್ನು ದಿನಗಳೆದಂತೆ ನಾವು ಕಳೆದುಕೊಳ್ಳುತ್ತಿದ್ದೇವೆ. ವಿದ್ಯೆಯನ್ನು ವಿನಾಶಕಾರಿ ಯೋಜನೆಗಳಿಗೆ ಮುಡಿಪಾಗಿಟ್ಟಿದ್ದೇವೆ. ಆದಿ ಅಂತ್ಯವಿಲ್ಲದ ಈ ನಮ್ಮ ಸಂಸ್ಕೃತಿಯು ಯಾವುದೋ ಅನಿಶ್ಚಿತ ಆಕಾಲೋಕಕ್ಕೆ ನಮ್ಮನ್ನೆಳೆದು ತಂದು ನಿಲ್ಲಿಸಿದೆ.

ಅಂದ ಮಾತ್ರಕ್ಕೆ ನಮ್ಮ ಈಗಿನ ಗುರುವರ್ಯರನ್ನು ದೂಷಿಸುವದಲ್ಲ. 'ಯತಾ ರಾಜ, ತತ ಪ್ರಜಾ' ಎಂದ ಮೇಲೆ ಅಧ್ಯಾಪಕ ವೃಂದದ ತಪ್ಪೇನಿದೆ? ತಪ್ಪಿಲ್ಲದಿದ್ದರೂ, ಅವರ ಹೆಗಲಲ್ಲಿ ಯಾರೂ ಹೊರದಂತಹ ಒಂದು ಹೊರಲಾರದ ಜವಾಬ್ದಾರಿಕೆ ಇದೆ. ಈ ಜವಾಬ್ದಾರಿಕೆಯನ್ನರಿತು ಹಾಡಿದ ಹಾಡನ್ನೇ ಹಾಡಿದರೂ ಸಹ, ಅದಕ್ಕೆ ರಸ, ರಾಗ, ತಾಳ ಮೇಳವನ್ನು ಕೂಡಿಸಿ ಸ್ವಾರಸ್ಯವುಂಟು ಮಾಡಬಹುದು.

ಇಂದಿನ ಬಾಲವೃಂದವು ನಾಳೆಯ ನಾಡಿನ ಜವಾಬ್ದಾರ ಪ್ರಜೆಗಳೆಂಬುದು ಸತ್ಯ. ನಾಡಿನ ನಾಳೆನೆಗಳಿಗೂ ಅನುವಾದ ಸರಳ, ಸರಾಗ, ಸಹಜವಾದ ಸಂಸ್ಕೃತಿಯನ್ನು ಮುಟ್ಟಿ, ಸರ್ವ ಶಾಖೆಗಳಲ್ಲೂ, ಜ್ಞಾನದ ಬೆಳವಣಿಗೆಯಾಗಿ ಪ್ರಪಂಚಕ್ಕೆ ಒಂದು ಮುಕುಟ ಮಣಿಯಂತಾಗಬೇಕಾದರೆ ಆ ಜವಾಬ್ದಾರಿಕೆ ಆ ನಾಡಿನ ಅಧ್ಯಾಪಕ ವೃಂದದಿಂದರೆ ತಪ್ಪಾಗಲಾರದು.

'May my life, each breath of my life, the eyes, the ears, the speech, the mind, the soul and all other acts and deeds be put to the service of tomorrows citizen' ಎಂಬ ಉದಾತ್ತ ತತ್ವವು ಪ್ರತೀ ಉಪಾಧ್ಯಾಯನ ಅನುದಿನದ ಧ್ಯೇಯವಾಗಿರಬೇಕು. ಗುರುವಿನ ಆಚಾರ, ವಿಚಾರ, ನಡೆನುಡಿಯೆಲ್ಲವೂ ವಿದ್ಯಾರ್ಥಿಯ ಮಾನಸಿಕ ಪಡಿಯಚ್ಚಿನಲ್ಲಿ ಚಿತ್ರಿತವಾಗುತ್ತದೆ. ಬಾಲವೃಂದದ ಭವ್ಯಭವಿಷ್ಯತ್ತು ತಂದೆ ತಾಯಿಗಳಿಗಿಂತಲೂ ಹೆಚ್ಚು ಗುರುವನ್ನೇ ಹೊಂದಿದೆಯೆಂದರೆ ತಪ್ಪಾಗಲಾರದು ಚಿಕ್ಕಂದಿನಲ್ಲಿ ಜಾಗೃತವಾಗಿ ಮೊಳೆತ ಮಾನಸಿಕ ಸಸಿಯೇ ಬೆಳೆದು ಹೆಮ್ಮರವಾಗಿ ಫಲಕೊಡುವದು. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗಲಿಕ್ಕಿಲ್ಲವೆಂಬುದನ್ನು ಪ್ರತೀ ಅಧ್ಯಾಪಕರು ತಿಳಿದಿರಬೇಕು. ಅವರ ಕೋಮಲ ಮನಸ್ಸಿನಲ್ಲಿಟ್ಟ ತಳಹದಿಯೇ ದೃಢಗೊಂಡು, ಮುಂದೆ ನೆಲೆಯಾಗುವದು. ಮಕ್ಕಳೊಡನೆ ಮಕ್ಕಳಾಗಿ, ಅವರೊಡನೆ ಆಡಿ, ಹಾಡಿ, ಕುಣಿದು, ಮುನಿಯದೆ, ದಣಿಯದೆ, ಅದರಲ್ಲೇ ಸರ್ವ ಸಂತೋಷವನ್ನು ಕಂಡುಕೊಂಡು ನಿಷ್ಕಾಮ ಕರ್ಮಿಗಳೆನಿಸಿಕೊಳ್ಳುವ ಪವಿತ್ರತೆಯು ಈ ಗುರುಸ್ಥಾನಕ್ಕಿದೆ.

ಇಂದಿನ ಮಕ್ಕಳಲ್ಲಿ ನಾಳೆಯ ಜವಾಹರಲಾಲರೆಷ್ಟಿಲ್ಲ? ಬುದ್ಧ, ಗಾಂಧಿ, ವಿವೇಕಾನಂದರಂತಹ ತತ್ವಜ್ಞಾನಿಗಳೆಷ್ಟಿಲ್ಲ? ಪುರಂದರ, ಕನಕ, ಕಬೀರರಂತಹ ಭಕ್ತರಿಗೇನು ಕಡಿಮೆಯೇ? ತಾನಸೇನ, ರವಿವರ್ಮ, ಉದಯಶಂಕರ ರಂತಹ ಕಲಾಕಾರರೇನು ವಿರಳವೆ? ಹಿಟ್ಲರ್, ಮುಸಲೋನಿಗಳಂತಹ ಹಠವಾದಿ ಸ್ವಾರ್ಥಿಗಳ ಪಡೆಗೂ ಕಡಿಮೆಯಿಲ್ಲ. ಗುಪ್ತದಲ್ಲಡಗಿರುವಂತಹ ಮಹಾಪುರುಷರನ್ನು ಹೆಕ್ಕಿ ಬೆಳಕಿಗೆ ತರುವ ಕೆಲಸ ಗುರುವಿಗೊಬ್ಬನಿಗೆ ಮಾತ್ರ ಮೀಸಲು. ಇಂತಹ ಮಹಾಪುರುಷರ ಬೆಳವಣಿಗೆಗೆ ಗುರುವರ್ಯರು ಅಹೋರಾತ್ರಿ, ಬಿಡುವಿಲ್ಲದೆ ದುಡಿಯಬೇಕು. ಅದೆಷ್ಟು ಮಹಾಪುರುಷರ, ಮಹಾಮಹಾ ವೀರಧೀರರ, ಸಂಗೀತ ಕಲಾಗಾರರ, ಕರ್ಮಯೋಗಿಗಳ ಭವಿಷ್ಯವು ಬಾಲ್ಯದ ಮುಸುಕಿನಲ್ಲಿ ಹುದುಗಿಕೊಂಡು ನಿಜವೃತ್ತವು ಪ್ರಕಾಶವಾಗಲು ಅವಕಾಶವಿಲ್ಲದೆ ನಶಿಸಿಹೋಗುವದಿಲ್ಲ? ಬಾಲ್ಯದಲ್ಲೇ ಈ ಕಳೆಯನ್ನು ಕಂಡು ಪೋಷಿಸಿ ಉತ್ತಮ ದಾರಿ ತೋರುವದು ಗುರುವಿಗೆ ಸಾಧ್ಯವಿದೆ. ಬಡವ ಬಲ್ಲಿದ, ತುಚ್ಛ ನೀಚ ಯಾರೇ ಇರಲಿ, ಹೃದಯಂಗಮವಾದ ಬೋಧ್ಯವಚನಗಳಿಂದ ಸುಡಿದು ವಿದ್ಯಾ ಸಂಪತ್ತನ್ನು ಹೆಚ್ಚಿಸಿ, ವಿದ್ಯಾ ಪ್ರೇಮಿಗಳ ಪ್ರೇಮ ಗೌರವಗಳಿಗೆ ಅರ್ಹನಾಗುವ ಗುರುವಿನ ಸ್ಥಾನ, ದುಡ್ಡಿಗೆ ಬೆಲೆ ಕಟ್ಟುವ ಆಧುನಿಕ ಯುಗದಲ್ಲಿ ಎಷ್ಟೇ ಕೆಳ ದರ್ಜೆಗಿಳಿದಿದ್ದರೂ, ಅದರ ಸ್ಥಾನಮಾನಗಳು ಎಲ್ಲರ ಗೌರವಕ್ಕೆ ಯೋಗ್ಯ.

ಉಪಾಧ್ಯಾಯ ವೃತ್ತಿಯೆಂದರೆ, ಉಚ್ಚ ತರಗತಿಯ ವಿದ್ಯಾವಂತರು ತುಚ್ಛೀಕರಿಸುವರು. ಹಾವಿನ ಬಾಯ ಕಪ್ಪೆ, ಹಸಿದು ಹಾರುವ ನೊಣಕ್ಕೆ ಆಶೆ ಪಡುವಂತೆ ಅಳಿದುಳಿದು ಎಲ್ಲಿಯೂ ಕೆಲಸ ದೊರಕದೆ ಒಡಲ ಪೀಡೆಗೊಳಗಾದವರೇ ಅನಿವಾರ್ಯವಾಗಿ ಹಂಗಾಮಿ ಉಪಾಧ್ಯಾಯ ವೃತ್ತಿಯೇ ಮೇಲೆಂದು ಇಂಪು ಬರುವದು ಹೆಚ್ಚು. ಇಂತಹವರ ಗುರುತನದಿಂದ ದೇಶಕ್ಕೆ ಯಾ ಜನಾಂಗಕ್ಕೆ ಯಾವ ಹಿತವೂ ಆಗದು. ಸುಗಮವಾಗಿ ದಿನ ನೂಕಲು ಮನಸ್ಸು ಮಾಡಿದ ಮಾನಿಸ್ಸರೆಂದೇ ಅವರನ್ನು ಹರಸಬೇಕಷ್ಟೆ! 'ಪಾಲಿಗೆ ಬಂದುದೇ ಪರಮಾನ್ನ' ಎಂದು ಶ್ರದ್ಧೆಯಿಂದ ಕೆಲಸ ಮಾಡುವವರಿದ್ದರೂ ಹೊಟ್ಟೆಪಾಡಿನ ಆಳಕೆ ಗೋಳಿನಷ್ಟೇ ದುಡಿವವರು ಈಗ ಹೆಚ್ಚಲ್ಲದೆ, ನಾನು ಹಿಡಿದ ವೃತ್ತಿಯ ಶ್ರೇಯಸ್ಸನ್ನು ಸಾಧಿಸಬೇಕೆಂದು ಕೆಲಸ ಮಾಡುವವರು ಬಹಳ ವಿರಳ.

ಇಂತಹ ಕೂಟದಿಂದ ಮುಂದಿನ ಜನಾಂಗದ ಅಧಃಪತನವಾಗಲೂ ಸಾಧ್ಯವಿದೆ. ಈ ವರ್ಗದ ಉಪಾಧ್ಯಾಯರು ಹಸಿ ಹಸುಳೆಯರ ಮುಂದೆ ಯಾವ ಕೆಲಸ ಮಾಡಬಾರದು ಯಾ ಮಾಡಬೇಕೆಂಬುದನ್ನು ವಿವೇಚಿಸುವದಿಲ್ಲ. ಯಾವನೂ ನೂರಕ್ಕೆ ನೂರು ಒಳ್ಳೆಯ ಗುಣ, ಅಭ್ಯಾಸವನ್ನಿಟ್ಟುಕೊಂಡಿಲ್ಲ. ದುರಭ್ಯಾಸವಿರುವಗುರುಗಳು ವಿದ್ಯಾರ್ಥಿಗಳ ಸಮೂಹದಲ್ಲಿ ತಮ್ಮ ದುಃಶ್ಚಟಗಳ ಪ್ರದರ್ಶನ ಮಾಡಬಾರದು. ಬೀಡಿ, ಸಿಗರೇಟು ನಶ್ಯ, ತಾಂಬೂಲಾದಿಗಳನ್ನು ಮನ ಬಂದಂತೆ ವಿದ್ಯಾರ್ಥಿಗಳ ಮುಂದೆ ಉಪಯೋಗಿಸಿದರೆ ಈ ಆನಂದವನ್ನು ಕಂಡು ಎಳೆಯ ಮನಸ್ಸು ಮಾರುಹೋಗುವದು ಸತ್ಯ. ಎಳೆ ಮನಸ್ಸಿನಲ್ಲಿ ದುಃಶ್ಚಟಗಳ ಪರಿಣಾಮ ಬಹುಬೇಗನೆ ಬೇರೂರುವದು. ತಮ್ಮ ವೇಶಭೂಷಣಾದಿಗಳನ್ನೂ ಸಹ ಮಿತಿಮೀರದ ಎಲ್ಲೆಯಲ್ಲಿಡಬೇಕು. ಇಂಗ್ಲೆಂಡಿನಿಂದ ಆಗ ತಾನೆ ಜಹಜಿಳಿದವನಂತೆ ಬುಡದಿಂದ ತಲೆಯ ವರೆಗೆ ಇಂಗ್ಲೀಷಿನವರ ವೇಷಭೂಷಣಗಳ ನಕಲು ಮಾಡಿಯಜ್ಜಾಗಿರಬಾರದು. ಹಾಗೆಂದ ಮಾತ್ರಕ್ಕೆ ಮಂಡಿಯ ವರೆಗಿನ ಪಂಚೆಕಟ್ಟಿ, ಹೆಗಲ ಮೇಲೆ ಒಂದು ತುಂಡು ಬಟ್ಟೆ ಹೊತ್ತರೂ ಸಾಲದು. ನಮ್ಮ ದೇಶದ ಆಚಾರ, ವಿಚಾರ ಉಡಿಗೆ ತೊಡಿಗೆ, ರೀತಿ ನೀತಿಗೆ ವಿರುದ್ಧವಿರಬಾರದು. ಇದೆಲ್ಲಕ್ಕೂ ಒಂದು ಹಿಡಿತವಿದ್ದು, ಎಲ್ಲೆ ಮೀರದಂತೆ, ಅಧ್ಯಾಪಕನು ಮಾದರಿಪುರುಷನಾಗಿರಬೇಕು. ನಮ್ಮ ನಾಡಿನಲ್ಲಿ ಏನೇ ಬಡತನವಿದ್ದರೂ, ಪೋಷಾಕುದಾರರ, ಢಂಭಾಚಾರರ, ಸ್ವಾರ್ಥಿಗಳ, ಹೊಗಳು ಭಟ್ಟರ ಪಡೆಗೆ ಮಾತ್ರ ಕಡಿಮೆಯಿಲ್ಲ. ದಿನಗಳೆದಂತೇ ಇದು ಹೆಚ್ಚಾಗುತ್ತಿದೆ. ಆದರೆ ಇಂದಿನ ಅವಶ್ಯಕತೆ ಅದಲ್ಲ. ಭವ್ಯ ಭಾರತದ ಭವಿಷ್ಯತ್ತಿನ ಎದೆಗಾರರಾದ ನಿಸ್ವಾರ್ಥಿಗಳ ಮಾದರಿ ಪಡೆಯ ಅವಶ್ಯವಿದೆ. ಅದಕ್ಕಾಗಿ ಅಧ್ಯಾಪಕ ವೃಂದವು ಅನುದಿನ ಇಂದಿನ ಏಳ್ಗೆಗಾಗಿ, ನಾಳೆಯ ಭವ್ಯ ಭವಿಷ್ಯತ್ತಿಗಾಗಿ, ದುಡಿಯಬೇಕಾಗಿದೆ. ಕಳೆದು ಹೋದ ಕಾಲವನ್ನು ಚಿಂತಿಸದೆ, ಮುಂದೆಯಾದರೂ ಗುರುತನದ ಪವಿತ್ರತೆಯನ್ನು ಕಾಪಾಡಬೇಕಾಗಿದೆ.

ಪಾರಪ ಕಥೆ

(೩ನೇ ಪುಟದಿಂದ ಸಾಗಿದ್ದು)

ಗೆ ಸಂಜೆ ಹೊತ್ತು ಪಾತ್ರ ತೊಳೆಯುವದೇ ಬಟ್ಟೆ ಒಗೆಯುವವನ್ನು ಎತ್ತುಮಾಡಿಕೊಂಡಿದ್ದೆ ಜೀವನಕ್ಕೆದುಡ್ಡು ಸಾಕಾಗುತ್ತಿತ್ತು. ಬಂದು ಒಂದೆರಡು ತಿಂಗಳಾದ ಮೇಲೆ ತಾಯಿಯಾಗುವ ಸೂಚನೆ ನನಗೆ ತಿಳಿಯಿತು. ನಾಶಪಡಿಸಲು ಯತ್ನಿಸಿದೆ. ಸಾಧ್ಯವಾಗಲಿಲ್ಲ. ಬಾಯಿಬಿಡಲು ಅಂಜಿದೆ ಆ ಚಂಡಾಲನನ್ನು ನೆನೆದಾಗಲೆಲ್ಲಾ ಉದರದಲ್ಲಿ ಉರಿ ಒಮ್ಮೆಗೆ ಏಳುತ್ತಿತ್ತು.

ಇಂದು ರಾತ್ರಿ ಮೋಸವನ್ನು ಕಳೆದುದಲ್ಲದೆ, ಅವರಿವರ ಆಶ್ರಯ ಪಡೆದು ಹೊಟ್ಟೆ ಹೊರೆದುಕೊಳ್ಳುವವಳಲ್ಲಿ ಅಪ್ಪಿಬಂದ ಆ ನೀಚನ ಪ್ರತಿಬಿಂಬ ಹೊರಬಿದ್ದಿತು. ಆ ಕ್ಷಣವೇ ಗೋಣು ಮುರಿದು ತಂದು ಅಲ್ಲಿ ಎಸೆದಿದ್ದೆ. ಇಂದು ನೀವೊಬ್ಬರು ಬಾರದಿದ್ದರೆ ಈ ಮಾನಗೆಟ್ಟ ಹೆಣ್ಣಿನ ಶವವನ್ನು, ಬಾವಿಯಲ್ಲಿಯೋ, ಕೆರೆಯಲ್ಲಿಯೋ, ನದಿಯಲ್ಲಿಯೋ, ಕಾಣುತ್ತಿದ್ದಿರಿ. ಇದು ನನ್ನ ಬಾಳಿನ ಕಥೆಯೆಂದು ಹೇಳಿ ಮುಗಿಸಿದಳು.

ನನ್ನ ಕಣ್ಣಿನಲ್ಲಿ ನೀರು ಧಾರಾಕಾರವಾಗಿ ಸುರಿಯುತ್ತಿತ್ತು. ಅಮ್ಮಾ! ನಿನ್ನನ್ನು ಯಾವ ಕಷ್ಟಕ್ಕೆ ಗುರಿಪಡಿಸಿ ಕಣ್ಮರೆಯಾಗಿದ್ದನೋ ಅವನೇ ನಾನು.... ನಿಮ್ಮ ರಮೇಶ ಎಂದು ಹೇಳಿದೆನು.

ನನ್ನನ್ನು ರಮೇಶಾ! ಎಂದು ಬಾಚಿ ತಬ್ಬಿ ಕೊಂಡು ಗೋಳಿಟ್ಟಳು. ಇಬ್ಬರೂ ಹಾಗೆಯೇ ಎಷ್ಟು ಹೊತ್ತು ಗೋಳಿಟ್ಟೆವೋ ಅರಿಯದೆ ಹೋದೆವು. ಎಚ್ಚೆತ್ತಾಗ ಬೆಳಕು ಹರಿದಿತ್ತು. ಮೂಡಲ ದಿಕ್ಕಿನಲ್ಲಿ ದಿನಕರನು ಆಗಲೇ ಮೂಡಿದ್ದನು.

"ನಂದಿನಿ"

ಹಬ್ಬವೋ – ಪ್ರಾಣಿವಧೆಯೋ?

— ಲೇಖಕಿ:—ಕುಮಾರಿ ಸಿ. ಎಂ. ಕಮಲ —

ಕೊಡಗಿನ ಹಬ್ಬಗಳಲ್ಲಿ ಅತೀ ಮುಖ್ಯವಾದದ್ದು ಹುತ್ರಿ. ಹುತ್ರಿ ಬರುತ್ತೆನ್ನುವಾಗಲೇ ಜನರಲ್ಲೆಲ್ಲಾ ಎಲ್ಲಿಲ್ಲದ ಸಂತೋಷ. ಅದರಲ್ಲೂ 'ಲಕ್ಷ್ಮಿ'ಯನ್ನು ಮನೆಗೆ ತರುವ ದಿನಬಂದಾಗ ಯಾರಿಗೆ ಆನಂದವಾಗದಿರದು? ಅಂತೂ ಎಲ್ಲರ ಹೃದಯಕ್ಷೇತ್ರದಲ್ಲೂ ಆನಂದ ತುಂಬಿ ನೃತ್ಯವಾಡುವ ಕಾಲ ಅದು. ಇನ್ನುಳಿದ ಹಬ್ಬಗಳಲ್ಲಿ ಕೈಲ್‌ಮೂರ್ತ ಪ್ರಮುಖ್ಯವಾದದ್ದು. ರೈತರೆಲ್ಲಾ ಹಗಲಿರುಳೆನ್ನದೆ ದುಡಿದು ಕಂಗಾಲಾಗಿರುವ ಸಮಯದಲ್ಲಿ ಬರುವ ಈ ಹಬ್ಬವನ್ನು ಕೊಡಗಿನ ನಿವಾಸಿಗಳು ಅತೀ ಆದರದಿಂದ ಆಚರಿಸುತ್ತಾರೆ.

ನಾಲ್ಕಾರು ದಿನಗಳಿಂದ ಮಳೆಯೇ ಇರಲಿಲ್ಲ. ಸದ್ಯಕ್ಕೆ ಬರುವ ಚಿಹ್ನೆಯೂ ಕಾಣುವಂತಿರಲಿಲ್ಲ. ಮಳೆನಿಂತು ಬಿಸಿಲು ಬಂದಾಗ ಬಿಸಿಲಿನ ಝಳ ತಡೆಯಲಾಗುವುದಿಲ್ಲ. ಮಳೆಸುರಿಯುವಾಗ ಬಿಸಿಲಿಗಾಗಿ ಹಾತೊರೆಯುವುದು, ಬಿಸಿಲು ಬಂದಾಗ ಮಳೆಗಾಗಿ ಪ್ರಾರ್ಥಿಸುವುದು ಮನುಷ್ಯನ ಸ್ವಭಾವವೇ ಆಗಿದೆ. ಹಾಗೇ ನಾನೂ ಮತ್ತು ಪ್ರಭಾ ಬಯಲಿನತ್ತ ಹೊರಟೆವು. ಬಿಸಿಲಿದ್ದರೂ ತಂಗಾಳಿ ಒಂದೇ ಸವನೆ ಬೀಸುತಿತ್ತು. ಗದ್ದೆಯ ಪಕ್ಕದಲ್ಲಿ ಉದ್ದಕ್ಕೂ ನೆಟ್ಟಿತೆಂಗಿನ ಮರದ ಮಧ್ಯೆ ಕುಳಿತು ಪ್ರಕೃತಿಯ ಸೊಬಗನ್ನು ನೋಡಬೇಕೆಂದು ಮನಸ್ಸು ಹಂಬಲಿಸುತಿತ್ತು. ಗದ್ದೆಗಳೆಲ್ಲಾ ಹಸುರಿನಿಂದೊಡಗೂಡಿ ಏಕಮಯವಾಗಿ ತೋರುತಿತ್ತು. ಪ್ರಶಾಂತ ವಾತಾವರಣದಲ್ಲಿ ಹಸಿರು ಗದ್ದೆಯ ಮಧ್ಯೆ ಬಿಳೀ ಕೊಕ್ಕರೆಗಳು ಕುಳಿತು ಮಳೆಹುಪ್ಪಟ್ಟೆ ಹೆಕ್ಕಿತಿನ್ನುತ್ತಿದ್ದವು.

ಇದ್ದಕ್ಕಿದ್ದಂತೇ ಕರುಳು ಹಿಂಡುವ ರೋಧನವೊಂದು ಕಿವಿಯನ್ನು ಭೇದಿಸಿತು. ಭಯದಿಂದ ಪಕ್ಕದಲ್ಲೇ ಮಲಗಿದ್ದ ಮನೆ ಕಾವಲುಗಾರನನ್ನು 'ಟಿಪ್ಪು' ನೋಡಿದೆ. ಅದು ಅಲ್ಲಿರಲಿಲ್ಲ. ನಮ್ಮ ಕಣ್ಣಿಗೆ ಮಣ್ಣೆರಚಿ ಎಲ್ಲೋ ಮಾಯವಾಗಿತ್ತು. ಹಾ! ಈತನೇ ನಮಗೆ ಮೋಸಮಾಡಿ ಓಡಿಹೋಗಿ ಯಾವದೋ ಮೂಕಪ್ರಾಣಿಯ ಬಲಿತೆಗೆಯುತಿರಬಹುದು. ಅರ್ದೇ ಅಂಥಾ ಹೃದಯಭೇದಕ ಕೂಗು ಎಂದು ಕೂಗು ಕೇಳುವತ್ತ ಧಾವಿಸಿದೆವು. ದೂರದಲ್ಲೊಂದು ಜನರ ಗುಂಪು ಕಾಣಿಸಿತು. ಆ ಕಡೆಯಿಂದಲೇ ಆ ರೋಧನವೂ ಕೇಳಿಬರುತಿತ್ತು. ಭಯದಿಂದ ಮುನ್ನಡೆಯಲು ಮನಸ್ಸು ಹಿಂತೆಗೆಯುತಿತ್ತು. ಆದರೆ ಆ ಹೃದಯಭೇಧಕ ಕೂಗು ಮುನ್ನಡೆಯಿಸಿತು. ಎಂಥಾ ಭೀಕರ ದೃಶ್ಯ? ಅತ್ತ ಕರೆದು ಔತಣ ಬಡಿಸಿ ಕೈಗೆ ಸಿಕ್ಕಿದಾಗ ಪ್ರಾಣತೆಗೆಯುವ ಘಾತುಕರು ಪ್ರಾಣಿಯ ಕೈಕಾಲುಗಳನ್ನೆಲ್ಲಾ ಹಿಡಿದಿದ್ದಾರೆ. ಒಬ್ಬಿಬ್ಬರು ಪ್ರಾಣಿಯ ತಲೆಗೆ ಬಡಿಯುತ್ತಿದ್ದಾರೆ. ಅನೇಕರು ಪ್ರೇಕ್ಷಕರಂತೆ ಸುತ್ತಲೂ ನಿಂತು ದೃಶ್ಯವನ್ನು ನೋಡಿ ಆನಂದಿಸುತಿದ್ದಾರೆ. ಪ್ರಾಣಿಯು ಮೂಗು ಬಾಯಿಯಿಂದ ನೆತ್ತರು ಸುರಿಯುತ್ತಿದ್ದರೂ, ಪ್ರಾಣಹೋಗದೆ ನರಳುತ್ತಾ ಒದ್ದಾಡುತ್ತಿದೆ. ಚಿತ್ರಹಿಂಸೆಯನ್ನು ನೋಡಿ ಸಹಿಸಲಾಗಲಿಲ್ಲ. 'ನಮ್ಮಂತೇ ಅದರದ್ದೂ ಒಂದು ಜೀವವಲ್ಲವೇ? ಈ ರೀತಿ ಹಿಂಸಿಸಿ ಸಾಯಗೊಳಿಸುವುದಕ್ಕಿಂತ ಗುಂಡಾದರೂ ಹಾಕಿದ್ದರೆ ನಿರಾತಂಕವಾಗಿ ಪ್ರಾಣಬಿಡುತಿತ್ತೇನೊ. ಎಂಥಾ ನರಕಯಾತನೆಯನ್ನು ಅನುಭವಿಸುತ್ತಿದೆ. ಈ ಪಾಪವನ್ನು ನನ್ನಿಂದ ನೋಡಲಾಗದು. ನನಗಾಗಿ ಇನ್ನು ಒಂದೆರಡು ಹೊಡೆದಾದರೂ ಸಾಯಗೊಳಿಸಿ' ಎಂದು ಪ್ರಾರ್ಥಿಸಿದೆ.

'ಕೊಂದ ಪಾಪ ತಿಂದಲ್ಲಿ ಹೋಯಿತು. ನಾಳೆ ಕೈಲ್‌ಮೂಹೂರ್ತದ ಸಂಭ್ರಮದಲ್ಲಿ ಪಾಪವೆಲ್ಲವೂ ಮಾಸಿಹೋಗುತ್ತೆ. ನೀವು ಮಾತ್ರ ಹೋಗಿ' ಎಂದು ಹೇಳಿದಾಗ ಇಂಥಾ ಘೋರಕೃತ್ಯವನ್ನು ನೋಡಲು ಬಂದ ನಾನೇ ಪಾಪಿ. ನಾಳೆ ಹಬ್ಬವೆಂಬ ಅರಿವಿದ್ದಿದ್ದರೆ ಬರುತ್ತೇಯಿರಲಿಲ್ಲವೆಂದು ಹಿಂತಿರುಗಿದೆ. ಆದರೆ ಆ ದೃಶ್ಯಮಾತ್ರ ಕಣ್ಮುಂದೆ ಎಡೆಬಿಡದೆ ಬರುತ್ತಲೇ ಇದೆ.

ಮರೆವು ಮಾನವನ ಮೂಲಭೂತ ಹಕ್ಕು. ಹಾಗೇನು ಮರೆಯಲು ಬಹಳ ಯತ್ನಿಸಿದರೂ ಮರೆಯಲಾಗುವದಿಲ್ಲ. ಅದರ ಜೊತೆಯಲ್ಲಿ ಮತ್ತೊಂದು ಘಟನೆ ಜ್ಞಾಪಕಕ್ಕೆ ಬರುತ್ತದೆ. ಲೀಲಾಳು ಶಾಲೆಯಲ್ಲಿ ಅದೊಂದು ದಿನ ದುಃಖಿಸುತ್ತಿದ್ದಳು ಹೌದು! ನಿಜವಾಗಿಯೂ ಲೀಲನ ಲಿನ್ನಿ (ಕೋಳಿ) ಎಷ್ಟು ಮುದ್ದಾಗಿತ್ತು. ನಾನಂದು ಅವರಲ್ಲಿಗೆ ಹೋಗಿದ್ದಾಗ ಲಿನ್ನಿ ತತ್ತಿಯಿಟ್ಟಿರುವಳೆಂದು ಲೀಲ ಎಷ್ಟು ಹೆಮ್ಮೆಪಟ್ಟಳು. ಮರೆಯಲಾರದ ಮರಮಲ್ಲಿಗೆಯ ಬಣ್ಣದ ಲಿನ್ನಿಯನ್ನು ಯೋಚಿಸಿದಾಗ ಲೀಲನಿಗೆ ವೇದನೆಯಾಗದಿರುತ್ತದೆಯೇ? ಲೀಲನ ತಾಯಿ ಎಷ್ಟು ನಿಷ್ಕರುಣಿಯಾಗಿರಬಹುದು? ಲೀಲ ಅಕ್ಕರೆಯಿಂದ ಸಾಕಿದ ಲಿನ್ನಿಯನ್ನು ಆಕೆ ಇಲ್ಲದಾಗ ಕೊಲ್ಲಲು ಮನಸ್ಸಾದರೂ ಆಕೆಗೆ ಹೇಗೆ ಬಂದಿರಬಹುದು? ಅಂದಿನಿಂದ ಲೀಲ ಜೀವನದಲ್ಲಿ ಸಸ್ಯಹಾರಿಯಾಗಿದ್ದಾಳೆ.

ಯೋಚಿಸಿದರೆ ಪ್ರಪಂಚದಲ್ಲಿ ಎಲ್ಲರಿಗಿಂತಲೂ ಶ್ರೇಷ್ಠನೆನಿಸಿದವನು ಮಾನವನು. ಆತನಿಗೆ ಆಲೋಚನಾಶಕ್ತಿಯಿದೆ. ಯಾವ ಪ್ರಾಣಿಗೂ ಬುದ್ಧಿಯನ್ನು ಕೊಡದೆ ಕೇವಲ ಮನುಷ್ಯ ಪ್ರಾಣಿಗೆ ಬುದ್ಧಿ ಕೊಟ್ಟ ಪರಮಾತ್ಮನು ನಿಜವಾಗಿಯೂ ಪಕ್ಷಪಾತಿಯಲ್ಲವೇ? ದಯೆ, ಕರುಣೆಯಿಲ್ಲದ ಮನುಷ್ಯನು ಪ್ರಾಣಿಗೆ ಸಮಾನ. ತಾಯಿಯ ವಾತ್ಸಲ್ಯಕ್ಕಾಗಿ ತನ್ನ ಮಕ್ಕಳಂತೆ ಅಕ್ಕರೆಯಿಂದ ಸಾಕಿದ ಕೋಳಿ, ಹಂದಿ, ಆಡು ಮೊದಲಾದುವು ಹೃಷ್ಟಪುಷ್ಟವಾಗಿ ಬೆಳೆದು ಬಂದಾಗ ಹೇಗೆ ತಾನೇ ಕೊಂದುತಿನ್ನುವರು? ಎಂಥಾ ಕಠೋರ ಹೃದಯ. ಪ್ರಪಂಚವೇ ಭಿನ್ನರುಚಿಯುದ್ದು. ಒಬ್ಬನು ಯಾವುದನ್ನು ದುಃಖವೆಂದು ಕಾಣುವನೋ ಅದನ್ನೇ ಇನ್ನೊಬ್ಬನು ಆನಂದದಿಂದ ಸ್ವಾಗತಿಸುವನು. ಎಲ್ಲರಿಗೂ ಒಂದೇ ಹೃದಯವಿರಲಾರದು. ದಯೆಯಿಂದ ಕೂಡಿ ವಿವೇಚನಾಬುದ್ಧಿಯುಳ್ಳವರು ನಿಜವಾಗಿಯೂ ಮಾಂಸವನ್ನು ತ್ಯಜಿಸುವರು. ತನ್ನಂತೇ ಆ ಮೂಕ ಪ್ರಾಣಿಗೂ ಸಾವು ನೋವಿದೆಯೆಂದು ಯೋಚಿಸಿದವರು ಸಸ್ಯಹಾರಿಗಳಾಗಿರುವರು. ಆದ್ದರಿಂದ ನನಗೆ ಕೈಲ್ ಮುಹೂರ್ತ ಹಬ್ಬವೆಂದರೆ ಪ್ರಾಣಿಗಳ ಕೊಲೆ ಎಂದಾಗಿದೆ. ಅಂದಿನ ಆದೃಶ್ಯವನ್ನು ಮರೆಯಲು ಏನೇನೋ ವಿಧವಾದ ಸಮಾಧಾನಗಳನ್ನು ಕಲ್ಪಿಸಿ ಮರೆಯಲೆತ್ನಿಸಿದರೂ, ಹೃದಯ ಅಲ್ಲೋಲಕಲ್ಲೋಲವಾಗಿತ್ತು. ಮನೆಗೆ ಹೊರಟೆವು. ದೂರದಲ್ಲಿ ಸಂಜೆಯ ಸೂರ್ಯನು ರಂಜಿಸುತ್ತಾ ಮರಕಾಡುಗಳ ಮಧ್ಯೆ ಅಡಗುತ್ತಿದ್ದನು ಆತನ ಮನೋಹರ ವಿಶಾಲ ಬಿಂಬವು ಮರೆಯಾದರೂ ನನ್ನ ಹೃದಯದ ವ್ಯಾಕುಲತೆ ಮಾತ್ರ ಹೃದಯವನ್ನು ಪೀಡಿಸುತ್ತಲೇ ಇದೆ.

INSURE WITH
OR REPRESENT
INDIA'S OLDEST LIFE OFFICE.
THE BOMBAY MUTUAL LIFE ASSURANCE SOCIETY LTD.
BUSINESS IN FORCE OVER 40 CRORES
ASSETS .... OVER 12 CRORES
Applications from energetic youngmen are invited for representation.
25-25
Head Office; BOMBAY.
Branch: 172. 3. Narasimharaja Road. BANGALORE 2.

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್
ಫೆಡರೇಶನ್ ಲಿಮಿಟೆಡ್.,
ಹೆಡ್ ಆಫೀಸ್:—ವೀರಾಜಪೇಟೆ.
ಶಾಖೆ:—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.
ನಮ್ಮಲ್ಲಿ ಈ ಕೆಳಗೆ ಕೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. '32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟಗಳು
2. 12 ನೇ ನಂಬರಿನ ಒಂಟಿ ಹೊಳವಿನ ತೋಟದ ಕೋವಿಗಳು.
3. ಒಂಟಿ ಮತ್ತು ಜೋಡಿ ಹೊಳವಿನ ಕೇಪಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
5. $\frac{5}{8}$", $\frac{1}{2}$" ಮತ್ತು $\frac{3}{8}$" ಕಬ್ಬಿಣದ ಸರಳುಗಳು
6. 2", $1\frac{1}{4}$", 1" $\frac{3}{4}$" ಮತ್ತು $\frac{1}{2}$" ಕೊಳಾಯಿಗಳು. (G. I. Peps)
7. $1\frac{3}{4}$" × $\frac{5}{16}$" ಉಕ್ಕಿನ ಪಟ್ಟಿಗಳು (Spring Steel flats).
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಪಂಪುಗಳು.
9. ಕೋವಿ ಮತ್ತು ಆನೆ ಮಾರ್ಕಿನ ಸೀಮೆಣ್ಣೆ ಟಿನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.
(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೆಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.
ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)
ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

Edited Printed and Published by P. I. BELLIAPPA at 'Kodagu' Press Mercara, for 'Kodagu' Ltd.,

ಕೊಡಗು
ಕ್ರಿಕೆಟ್ "ಬಾಲ" ಎಲ್ಲಿ?
KODAGU
KANNADA
WEEKLY
MERCARA

ಈ ವಾರದ ಕಥೆ.

"ನನ್ನ ಗೃಹಮಂತ್ರಿ"

ಲೇಖಕ:— ಶ್ರೀ ಬಿ. ಡಿ. ಸುಬ್ಬಯ್ಯ

ಸುಂದರಿಯೇನೊ ಹೌದು, ಆದರೆ ಆಕೆಯ ತಾಯಿಯಂತೆ 'ರೌದ್ರಾವತಾರ' ತಾಳಿ 'ತಾಂಡವ ನೃತ್ಯ' ಮಾಡುವುದು ಒಂದು ಸಹಿಸಲಾರದ ಲಕ್ಷಣ! ಅವಳ ತಾಯಿಯಂತೆ ವಿಲಕ್ಷಣೆಯಲ್ಲದಿದ್ದರೂ, 'ರೌದ್ರಾವೇಶ' ತಾಳಿದಾಗ, ತಾಯಿಯ ಪ್ರತಿ ಬಿಂಬವೆಂದೇ ತೋರುವುದು. ಆಕೆಯ ಕಾನ್ವೆಂಟ್ ವಿದ್ಯೆ, ಆಶಿಸಿದ ವರದಕ್ಷಿಣೆ ಅವಳನ್ನು ಕೈಹಿಡಿವಂತೆ ಮಾಡಿತು!

ನಮ್ಮ ಮಾವ ಸೋಮಯ್ಯನವರು ಊರಿಗೆಲ್ಲಾ ಹಿರಿಯರು, ಬುದ್ಧಿವಂತರು, ನ್ಯಾಯವಂತರು, ಹಾಗೆಯೇ ದೈವಭಕ್ತರು. ಜೀವದ, ಪ್ರಪಂಚದ ಆಗುಹೋಗುಗಳನ್ನು ತಿಳಿದವರು. ಯಾವುದೇ ಊರಿನ ಜಗಳ ಕಲಹ, ತಕ್ಷೀ, ಮೊಕದ್ದಮೆಗಳಿದ್ದರೂ, ಸಾಧಾರಣವಾಗಿ ಅವರ ಮನೆಯ ಮುಂದಿರುವ ಅರಳೀಕಟ್ಟೆಯಲ್ಲಿಯೇ ತೀರ್ಮಾನವಾಗುತಿತ್ತು. ಅವರ ಖಡಾಖಂಡಿತ ನ್ಯಾಯ, ನಿಷ್ಪಕ್ಷಪಾತ ತೀರ್ಪುಗಳ ಮುಂದೆ ಯಾವ ಊರ ಧೀರನಿಗೂ ಅವರೆದುರು ವಿರೋಧ ಮಾತಾಡುವ ಧೈರ್ಯವಿರಲಿಲ್ಲ.

ಇವರ ಧರ್ಮಪತ್ನಿ (ನನ್ನ ಅತ್ತೆ) 'ಗಜಘಂಟೆ' ಗೌರಮ್ಮನವರು. ಗೌರಮ್ಮನವರಿಗೆ 'ಗಜಘಂಟೆ'ಯೆಂಬ ನಾಮ ವಿಶೇಷಣವು ಇವರ ಹೆಸರ ಜತೆಯಲ್ಲಿ ಬರಲು, ಅವರ ವರ್ತನೆಯೇ ಕಾರಣವಾಗಿದೆ. ನಮ್ಮ ಸೋಮಯ್ಯನವರು ಊರಿಗೆಲ್ಲಾ ಹೇಗೆ ಹಿರಿಯರೋ, ನ್ಯಾಯಸ್ಥರೋ ಹಾಗೆಯೇ ಗೌರಮ್ಮನವರು ಹೆಂಗಸರ ಅಧ್ಯಕ್ಷೆಯಾಗಿದ್ದರು. ಗಂಡನಿಂದ ತಿಳಿದ ಅಲ್ಪ ಸ್ವಲ್ಪ ವಿಷಯಗಳನ್ನು, ಬಣ್ಣ ಹಚ್ಚಿ, ಅತ್ಯಂತ ರಸಭರಿತವಾಗಿ ಹೇಳುವುದರಲ್ಲಿ ಅವರು ನಿಪುಣೆಯೆನಿಸಿದ್ದರು. ಹಾಗೆಯೇ ಅವರು ಎಂದೂ ಮೆಲ್ಲೆ ಮಾತಾಡಿದವರಲ್ಲ. ಆನೆಯ ಘಂಟೆಯು ಒಂದು ಮೈಲಿನ ವರೆಗೆ ಕೇಳಿಸುವಂತೆ, ಅವರ ಮಾತೂ ಡಾಮರ ಬಡಿದಂತೆ ಕೇಳಿಸುತಿತ್ತು. ಅಂತೆಯೇ ಅವರನ್ನು ಮಾತಾಡಿಯೋ ಜಗಳವಾಡಿ ಸೋಲಿಸುವುದೆಂದರೆ ಅದು ಯಮನನ್ನು ಸೋಲಿಸಿದಂತೆಯೆ. ಅದಕ್ಕಾಗಿಯೇ 'ಗಜಘಂಟೆ' ಬಿರುದು!

ಸೋಮಯ್ಯನವರ ಪ್ರತೀ ವರ್ಷದ ಆದಾಯ ಮೂರು ಸಾವಿರ ರೂಪಾಯಿಗೆ ಮಿಕ್ಕಿದ್ದು. ಇಷ್ಟು ಮೂರು ಜೀವದ ಜೀವನಕ್ಕೆ ಏನೂ ಕೊರತೆಯಿರಲಿಲ್ಲ. ಆದರೆ ಗೌರಮ್ಮ, ಅತ್ತೆಯವರ ದಬ್ಬಾಳಿಕೆಯ ದೊರೆತನದಲ್ಲಿ ಸೋಮಯ್ಯನವರು ಊರಿಗೆಲ್ಲ ಬುದ್ಧಿವಂತರಿದ್ದರೂ, ಮನೆಯಲ್ಲಿ ಅಪ್ಪಣೆಯ ಸೇವಕರಾಗಿದ್ದರು. ಬಂದ ಹುಟ್ಟುವಳಿಯ ಪ್ರತಿ ಬಿಡಿಕಾಸಿನ ಲೆಕ್ಕಚಾರದ ವರದಿ ಆಕೆಗೆ ಸಲ್ಲಬೇಕಿತ್ತು. ವರ್ಷಕ್ಕೆ ಮಾವನಿಗೆ ಎರಡೆರಡು ಜೊತೆ ಬಟ್ಟೆ ಮಾಡಿದರೆ ಸಾಕು. ಅದು ಹರಿದರೂ ಸರಿಯೇ ಹಾಳಾದರೂ ಸರಿಯೇ ಅದಕ್ಕೆಲ್ಲಾ ಹಾಳುಮಾಡಿದವನೆ ಜವಾಬ್ದಾರ. ಯಾವ ವಸ್ತುವೇ ಆಗಲಿ ವರ್ಷಕ್ಕೊಂದು ಸಾರಿ ತಂದರಾಯ್ತು. ತೀರಿಹೋದರೆ ಮತ್ತೆ ತರುವುದೆಂದರೆ ಮರುವರ್ಷವೇ! ಒಂದು ವರ್ಷ ತಂದ ಉಪ್ಪು ಆರೇ ತಿಂಗಳಲ್ಲಿ ತೀರಿಹೋದರೂ ಉಳಿದ ಆರು ತಿಂಗಳನ್ನು ಲವಣಸಖ್ಯದಿಂದಲೇ ದಿನ ನೂಕಿದ ಹೆಂಗಸವಳು. ಕಾಫಿ ಚಾ, ಪುಡಿ ತೀರಿಹೋದರೆ ಆ ಗಿಡಗಳ ಎಲೆಗಳನ್ನು ತಂದು ಸೀಸೆಯಲ್ಲಿ ಕುದಿಸಿ ಮಾಡಿದ ಕಾಫಿ ಚಾಗಳಿಂದಲೇ ತೃಪ್ತಿ ಹೊಂದುವ ಮಿತವ್ಯಯಿಯವಳು. ಯಾರಾದರೂ ಮನೆಗೆ ಬಂದು ಊಟಕ್ಕೆ ನಿಲ್ಲುವರಾದರೆ ಬಾಯಿ ಮಾತಿನಿಂದಲೇ ಅವರ ಹೊಟ್ಟೆ ತುಂಬಿಸಿ ಕಳುಹಿಸಿಬಿಡುತ್ತಿದ್ದರು. ನೆಂಟರಿಷ್ಟರು ಅವರನ್ನು ತಿಳಿದುಕೊಂಡು ಅದು ಇದು ಮಾತಾಡಿ, ಏನೋ ತುರಿತದ ಕೆಲಸವಿರುವಂತೆ ನಟಿಸಿ, ಆದಷ್ಟು ಬೇಗನೆ ಹೋಗಿ ಬಿಡುತಿದ್ದರು. ಅಂತೂ ಆ ಮನೆಯಲ್ಲಿ ಎಷ್ಟಿದ್ದರೂ, ಏನೂ ಇಲ್ಲದಂತೆಯೇ, ಸಾಮಾನ್ಯ ಬಡಕುಟುಂಬದಂತೆ ಕಾಣುತಿತ್ತು.

ಒಬ್ಬಳೇ ಮಗಳು. ಅದರಲ್ಲೂ ಮಿತವ್ಯಯಿಗಳು (ನೀಚರಲ್ಲ) ಆದಾಯವು ಸಾಕಷ್ಟಿದೆ. ಒಳ್ಳೆಯ ವರದಕ್ಷಿಣೆ ಬಂದೀತೆಂದು ಮನಸ್ಸಿನಲ್ಲಿ ಮಂಡಿಗೆ ತಿಂದು ಅವಳನ್ನೇ ಮದುವೆಯಾದೆ. ಮಂಡಿಗೆಗಿಂತ, ಮನಸ್ಸಿನ ಮಂಡಿಗೆ ಸವಿಯೆಂದು ಮದುವೆಯಾದ ಮೇಲೆ ಅರಿವಾಯಿತು. ನನ್ನ ಆಸೆ ಅಭಿಲಾಷೆಗಳು ಮರುಳುಗಾಡಿನ ಮರೀಚಿಯಂತಾಯಿತು. ಪ್ರೀತಿಯ ಒಬ್ಬಳೇ ಮಗಳು, ಅದರಲ್ಲೂ ವಿದ್ಯಾವತಿಯಾದುದರಿಂದ (ಅದರಲ್ಲೂ ಕಾನ್ವೆಂಟಿನ ವಿದ್ಯಾವತಿ) ತುಂಬು ಕೆಲಸಮಾಡಿದರೆ ಏನಾದರೂ ಅಪಾಯವಾಗಿ ಭವಿಷ್ಯವೇ ಹಾಳಾದೀತೆಂದು ಗೌರಮ್ಮನವರು ಹೆದರುತ್ತಿದ್ದರು. ಅಡಿಗೆ ಮನೆಯಲ್ಲಿ ಕೆಲಸ ಮಾಡಿದರೆ ಎಲ್ಲಿ ಬೆಂಕಿಯ ಶಾಖದಿಂದ ಮಗಳು ಕಪ್ಪಾಗುವಳೋ ಎಂದು ಅಡಿಗೆ ಮನೆ ಪ್ರವೇಶವೇ ಆಕೆಗಿರಲಿಲ್ಲ. ಆದರೆ ನನ್ನ ಮನೆಯಲ್ಲಿ ಅವಳಲ್ಲಿ, ಅಡಿಗೆಯವನನ್ನಿಡಲು ನನಗೆ ಶಕ್ತಿ ಬೇಕಲ್ಲ! ಅಂತೂ, ಅವಳ ನುರಿತ ಕೈಯ ಫಲಪಾಕವನ್ನು ತಿಂದು, ಉಂಡು, ನನಗೆ ಬೇಸರವಾಗಿ, ಚಂದ್ರಪ್ಪನ ಕಾರಚಟ್ನೆ, ದೋಸೆಯೋ ಮೇಣಿಂದ, ಹೋಟೇಲಿನಲ್ಲಿ ನನ್ನ ವಿಸ್ತಾರ ಭೋಜನಕ್ಕೆ ಏರ್ಪಾಡು ಮಾಡಿದ್ದೇನೆ. ಬಾಕಿ ಕಷ್ಟಾಗು ರೂಪಾಯಿಯ ಆದಾಯವನ್ನೂ ಹೋಟೇಲು ಆಕ್ರಮಿಸಿಕೊಳ್ಳುತ್ತಿದೆ.

ನಿಮಗೆ ಹೇಳಿದರೆ ನಂಬಲಿಕ್ಕಿಲ್ಲ. ಒಂದು ಸಲ ನನ್ನೊಬ್ಬ ಹಳೇ ಸ್ನೇಹಿತರು, ನೂರಾರು ಮೈಲು ದೂರ ಪ್ರಯಾಣ ಮಾಡಿ ನನ್ನನ್ನು ಕಾಣಲು ಮನೆಗೆ ಬಂದಿದ್ದರು. ಇವಳ ಅರ್ಜಿಯನ್ನು ಗಣಿಸದೆ ನನ್ನ ಮಾನ ಮರ್ಯಾದೆ ಎಲ್ಲಿ ಮಧ್ಯಾಹ್ನದ ಹೊತ್ತು ಹೋದೀತೋ ಎಂದು ಹೆದರಿ, ನೆರೆಮನೆಯ ಸುಬ್ಬಕ್ಕನಿಗೆ ಏನೇನೋ ನೆಗ ಹೇಳಿ, ಅವಳಿಗೆ 'ಮಾಂಕೆಬೇಧಿ' ಹಿಡಿದಿದೆಯೆಂದು ರಂಗು ಬಳಿದು, ಅವಳನ್ನು ಸ್ವಸ್ಥವಾಗಿ ಮಲಗ ಹೇಳಿ, ಸುಬ್ಬಕ್ಕನಿಂದಲೇ ಅತಿಥಿ ಸತ್ಕಾರ ಮಾಡಿಸಿದೆನು. ಬಂದಿದ್ದ ಸ್ನೇಹಿತರು ಬಾಯಿ ಚಪ್ಪರಿಸಿ ಅದೊಂದಷ್ಟು ಊಟ ಮಾಡಿ, ನನ್ನವಳನ್ನೂ ಹೊಗಳದೆ ಬಿಡಲಿಲ್ಲ ಅಂತೂ, ಇವಳನ್ನು ಮದುವೆಯಾದಂದಿನಿಂದ ಮನೆಗೆ ನೆಂಟರು ಬಂದರೆ ಇಲ್ಲದ ಪೀಕಲಾಟ ಹಿಡಿಯುತ್ತದೆ.

ನಾನೇನಾದರೂ ಹೇಳಿದರೆ ಸಾಕು, ಅವಳು ತನ್ನ ವಿದ್ಯಾ ನೈಪುಣ್ಯವನ್ನು ಅಲ್ಲಿ ತೋರಿಸಿ, ನನ್ನನ್ನು ಅವಳ ವಿದ್ಯಾರ್ಥಿಯಾಗಿ ಮಾಡಿಬಿಡುತ್ತಾಳೆ. ನಾನೇನಾದರೂ ಸಿಟ್ಟಿಗೆದ್ದರೆ ಅವಳ ರೌದ್ರಾವತಾರದ ಮುಂದೆ ನನ್ನದು ಸೂರ್ಯನ ಮುಂದಿನ ಮಿಂಚು ಹುಳುವಿನಂತೆ! ಆಕೆ ಹೇಳಿದ ಯಾವದೇ ವಸ್ತುವನ್ನಾಗಲೀ ತರದಿದ್ದರೆ ಆ ದಿವಸ ಕಳೆಯುವುದು ಪುನರ್ಜನ್ಮವೆತ್ತಿದಂತೆ. ಆದರೆ ಕೆಲವು ವೇಳೆ ಆಕೆ ಸಂತೋಷದಿಂದ ಆದರಿಸಿ ನಕ್ಕು ನಲಿಯುವದೂ ಇದೆ. ಆಗ ನಾನು ದೀಪಕ್ಕೆರಗುವ ಪತಂಗದಂತೆಯೇ ಸರಿ. ಅಂತೂ ಯಾವ ತರಹದಲ್ಲೂ ನನಗೆ ಈಕೆಯನ್ನು ಜಯಿಸುವುದು ಅಸಾಧ್ಯವೇ ಆಗಿದೆ. ನನಗೆ ಈಗೀಗ ಯಾರು ಯಾರನ್ನು ಮದುವೆಯಾಗಿದ್ದು, ಎಂಬ ಸಂಶಯವೂ ಸಹ ಬರತೊಡಗಿದೆ!

ವಿದ್ಯಾರತಿಯಾಗಿ, ಒಳ್ಳೆಯ ಮನೆತನದಲ್ಲಿ ಹುಟ್ಟಿ, ಅಂದಚೆಂದ, ನಡೆನುಡಿ, ರೀತಿ ನೀತಿಗಳೆಲ್ಲದರಲ್ಲೂ ಇತರರಿಗೆ ಮಾದರಿಯಾಗಿರುವ ಕನ್ಯೆಯನ್ನೇ ತರುತ್ತೇನೆಂದು ಪಣ ತೊಟ್ಟಿದ್ದೆ. ನನ್ನ ಬಡತನದ ಬಳಲಿಕೆ ಒಂದು ಕೈಹಿಡಿ ವರದಕ್ಷಿಣೆಯನ್ನೂ ಆಶಿಸಿತ್ತು. ಇವಳನ್ನು ಮದುವೆಗೆ ಮುಂಚೆ ಕಂಡಾಗ, ನನ್ನ ಮನೆಗೆ ಬಂದು, ಮಕ್ಕಳ ಮರಿಯಾಗಿ, ಸೌಭಾಗ್ಯವತಿಯಾಗಿ, ಗೃಹಲಕ್ಷ್ಮಿಯಂತೆ ಮೆರೆದಾಳು ಎಂಬ ಆಶೆಯು ಅಣಕಿಸಿತು. ಆದರೆ ಈಗ ಐದು ವರ್ಷದಲ್ಲಿ ಗೃಹಲಕ್ಷ್ಮಿಯಾಗಬೇಕಿದ್ದವಳು ಜಗಳಗಂಟಿ ರುದ್ರಮ್ಮಳಾಗಿದ್ದಾಳೆ. "ಮಾಡಿದ್ದುಣ್ಣೋ ಮಹಾರಾಯ" ಎಂದಂತೆ ನನ್ನನ್ನು ಆಳ್ವ ಗೃಹಮಂತ್ರಿಯಾಗಿದ್ದಾಳೆ. ನನ್ನ ಮನೆಯಲ್ಲಿ ಅವಳದೇ ನಿರಂಕುಶ ಪ್ರಭುತ್ವ. ಅವಳು ಹಾಡಿದ್ದೇ ಹಾಡು, ಹಾಕಿದ್ದೇ ತಾಳ. ನಾನು ಅದಕ್ಕೆ ಸರಿಯಾಗಿ ಕುಣಿಯಬೇಕಾದ ಅಪ್ಪಣೆಯ ಸೇವಕ. ದಿನಗಳೆಯುತ್ತಾ, ನನಗೆ ವಿದ್ಯಾವತಿಯೆನ್ನುವ ಹೆಣ್ಣು ಹುಡುಗಿಯರನ್ನು ಕಂಡರೆ ಸಾಕು ಮೈ 'ಜುಂ' ಎಂದು ನನ್ನವಳ ಸಾಕ್ಷಾತ್ಕಾರವನ್ನು ಅವರಲ್ಲಿ ಕಾಣುತಿದ್ದೇನೆ. ನನ್ನ ಅನುಭವದಿಂದ ಅವಿವಾಹಿತ ತರುಣರಿಗೆ "ಮದುವೆಗೆ ಮುಂಚೆ ಹೆಣ್ಣಿನ ತುಲಾಭಾರವೆಷ್ಟಿದೆಯೆಂದು ಅರಿತುಕೊಳ್ಳಿ, ಇಲ್ಲದಿದ್ದರೆ ಇಂತಹ ಗೃಹಮಂತ್ರಿಗಳ ನಿರಂಕುಶ ಪ್ರಭುತ್ವಕ್ಕೆ ಬಲಿಯಾಗಬೇಕಾದೀತು. 'ಗಂಧದ ಮರವಾದರೆ ಮಣ್ಣು ಹಿಡಿದಿದ್ದರೂ ಸುಟ್ಟಾಗ ಸುವಾಸನೆ ಬೀರುತ್ತದೆ. ಅಲ್ಲದಿದ್ದರೆ ಸುಟ್ಟ ಬೂದಿಯಲ್ಲದೆ ಸುವಾಸನೆಯನ್ನು ನೀವು ಕಾಣಲಾರಿರಿ" ಎಂದು ಉಪದೇಶ ಮಾಡುತ್ತಿರುವೆನು.

ಆರೋಗ್ಯದ ಮೂಲ

ಮನುಷ್ಯನು ಆರೋಗ್ಯವಂತನಾಗಲು ಏನು ಮಾಡಬೇಕು? ಎಂಬ ಬಗ್ಗೆ ಇದು ವರೆಗೆ ಅನೇಕರು ಅನೇಕ ರೀತಿಯಿಂದ ಬೋಧಗೂಡಿ ವಿವಿಧ ಉಪಾಯಗಳನ್ನು ಸೂಚಿಸಿದ್ದಾರೆ. ಈಗ ನಾವು ಆರೋಗ್ಯ ತಜ್ಞರನ್ನು ಕೇಳಿದರೆ, ಚಲೋ ಆಹಾರ ತೆಗೆದುಕೊಳ್ಳಬೇಕು, ಸೋಂಕು ರೋಗಗಳಿಂದ ದೂರ ಇರಬೇಕು, ಅಪಾಯಕಾರಕ ವ್ಯಸನಗಳಿಗೆ ಬಲಿ ಬೀಳಬಾರದು ಇದೇ ಮುಂತಾಗಿ ಹೇಳುತ್ತಾರೆ.

ಆದರೆ ತಮ್ಮ ಪೂರ್ವಜರು ಈ ವಿಷಯದಲ್ಲಿ ಮಾಡಿದ ವಿಚಾರವೇ ಬೇರೆಯಾಗಿದೆ. ಅವರು ಇವೆಲ್ಲ ಬಾಹ್ಯ ವಿಚಾರಗಳಿಗೆ ಮಹತ್ವವನ್ನೇ ಕೊಟ್ಟಿಲ್ಲ. ಮನಸ್ಸೇ ಎಲ್ಲಾ ಆಗುಹೋಗುಗಳಿಗೆ ಮುಖ್ಯ ಕಾರಣವೆಂಬುದನ್ನು ಕಂಡುಹಿಡಿದು "ಮನಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ" ಎಂದು ಹೇಳಿದರು. ಈ ಮಾತಿನ ಮರ್ಮವನ್ನು ಅವರು ಬಹು ಬೋಧಪ್ರದವಾಗಿ ತಿಳಿಸಿದ್ದಾರೆ. ಮನುಷ್ಯನು ಸಿಟ್ಟಿಗೆದ್ದರೆ ಅವನ ರಕ್ತವು ಕುದಿಯ ಹತ್ತುವದು. ಆದರಿಂದ ಅದರಲ್ಲಿ ವಿಷ ಉತ್ಪನ್ನವಾಗುವದು. ದ್ವೇಷ ಅಸೂಯೆ ಮತ್ತು ಆಸೆಗಳು ಅವನ ಆರೋಗ್ಯದ ಮೇಲೆ ಪರಿಣಾಮ ಮಾಡುವವು.

ಯಾವುದೊಂದು ದುಃಖದಾಯಕವಾದ ವಾರ್ತೆಯನ್ನು ಕೇಳಿದರೆ ಇಲ್ಲವೆ ಅಂತಹ ದೃಶ್ಯವನ್ನು ನೋಡಿದರೆ ನಮ್ಮ ಮೋರೆಯು ಬೆಳ್ಳಗಾಗುತ್ತದೆ. ಆಗ ಆ ಪರಿಣಾಮದಿಂದ ನಮ್ಮ ರಕ್ತದೊಳಗಿನ ಕೆಂಪು ಅಣುಗಳು ದೊಡ್ಡ ಸಂಖ್ಯೆಯಲ್ಲಿ ನಾಶಹೊಂದುವದರಿಂದ ಆ ಬಣ್ಣ ಬರುವದು. ತೀರ ಅಸ್ವಸ್ಥತೆ ಉಂಟಾದಾಗ ಕೂಡ ಮನುಷ್ಯನು ಆನಂದದಾಯಕ ಸುದ್ದಿಯು ತಿಳಿದರೆ ಅವನು ಒಳ್ಳೆ ಹುರುಪಿನಿಂದ ಕುಣಿಯ ಹತ್ತುವನು.

ಇದರಿಂದ ಸ್ವಸ್ಥತೆ ಅಸ್ವಸ್ಥತೆಗಳು ಮನಸ್ಸಿನ ಸ್ಥಿತಿಯ ಮೇಲೆ ಅವಲಂಭಿಸಿವೆ ಎಂಬುದು ಸಿದ್ಧವಾಗುವದು. ಮನಸ್ಸು ಸ್ವಸ್ಥವಿದ್ದರೆ ನಮ್ಮ ಪ್ರಕೃತಿಯು ಸದೃಢವಿರುವದು. ಇಲ್ಲದಿದ್ದರೆ ಅದು ಕೆಡಹತ್ತುವದು. ದುರ್ಬಲ ಮನಸ್ಸಿನ ಮೂಲಕ ಉಂಟಾಗುವ ಪರಿಸ್ಥಿತಿಯಲ್ಲಿಯೇ ಹೊರಗಿನ ರೋಗ ಜಂತುಗಳು ನಮ್ಮ ಮೇಲೆ ಪರಿಣಾಮ ಮಾಡುವವು. ಸುದೃಢ ಶರೀರದಲ್ಲಿ ಅವು ಬದುಕುವದು ಕೂಡ ಸಾಧ್ಯವಿಲ್ಲ.

ನಮ್ಮ ಪೂರ್ವಜರು ಈ ಕಾರಣಕ್ಕಾಗಿಯೇ ಮನಸ್ಸಿನ ಸುಸ್ಥಿತಿಯ ಕಡೆಗೆ ಹೆಚ್ಚು ಲಕ್ಷ್ಯಕೊಟ್ಟರು. ದೇವರ ಪೂಜೆ ಭಜನೆ, ಕೀರ್ತನೆ, ಮಂತ್ರ ಪಠನ ಮೊದಲಾದ ಸಾ

ನವಚೀಣಾದ ಹೊಸ ನ್ಯಾಯಾಲಯಗಳು

ಅನುವಾದಕರು: ಶ್ರೀ ಎಸ್. ಅನಂತನಾರಾಯಣ, ಮೈಸೂರು

ಚೀಣಾದಲ್ಲಿ ಜನತಾ ಸರ್ಕಾರ ಸ್ಥಾಪನೆಯಾದ ನಂತರ ಅಲ್ಲಿನ ನ್ಯಾಯಾಂಗ ವ್ಯವಸ್ಥೆಯು, ಇತರ ಎಲ್ಲಾ ಅಂಗಗಳಂತೆ ಬಹಳ ಬದಲಾವಣೆಯನ್ನು ಹೊಂದಿತು. ಹಿಂದಿನ ರಾಜಕೀಯ ಮತ್ತು ಸಾಮಾಜಿಕ ದಬ್ಬಾಳಿಕೆಗಳಿಗೆ ಸಹಾಯ ರೀತಿಯಲ್ಲಿದ್ದಂಥ ನ್ಯಾಯಾಲಯದ ಪದ್ಧತಿಗಳು ಸಂಪೂರ್ಣವಾಗಿ ಮಾಯವಾಗಿ ಹೋದವು. ಚೀಣಾದ ಈಗಿನ ನ್ಯಾಯಾಂಗ ಆಡಳಿತವು ಅಲ್ಲಿನ ಸಾಮಾನ್ಯ ಕಾರ್ಯಕ್ರಮದ ಹದಿನೇಳನೆಯ ವಿಧಿಯ ಆಧಾರದ ಮೇಲೆ ರೂಪಿತಗೊಂಡಿದೆ. ಅದರಂತೆ 'ಕೋಮಿಂಗ್–ಟಾಂಗ್ ಪ್ರತಿಗಾಮಿ ಸರ್ಕಾರದ, ಜನತೆಯನ್ನು ತುಳಿಯುತ್ತಿದ್ದ ಎಲ್ಲಾ ಕಾನೂನುಗಳನ್ನೂ ಆಜ್ಞೆಗಳನ್ನೂ, ಮತ್ತು ನ್ಯಾಯಾಂಗ ಪದ್ಧತಿಗಳನ್ನೂ ರದ್ದು ಮಾಡಬೇಕು. ಜನತೆಯನ್ನು ರಕ್ಷಿಸುವಂತಹ ಕಾನೂನು ಮತ್ತು ಆಜ್ಞೆಗಳನ್ನು ಜಾರಿಗೆ ತರಬೇಕು. ಮತ್ತು ಜನತಾ ನ್ಯಾಯಾಂಗ ವ್ಯವಸ್ಥೆಯನ್ನು ಸ್ಥಾಪಿಸಬೇಕು.'

ಕೋಮಿಂಗ್ ಟಾಂಗ್ ರಾಜ್ಯದ ವ್ಯವಸ್ಥೆಯಲ್ಲಿ ಸರ್ಕಾರದ ಎಲ್ಲಾ ಆಡಳಿತವೂ ಸಾಮ್ರಾಜ್ಯವಾದಿಗಳ, ಸಾಮಂತ ಜಮೀನ್ದಾರರುಗಳ ಮತ್ತು ದೇಶದೊಳಗಿನ ಬಂಡವಾಳಗಾರರ ಹಿತಗಳನ್ನು ಪ್ರತಿನಿಧಿಸುತ್ತಿತ್ತು. ಆದ್ದರಿಂದಲೇ ಆ ರಾಜ್ಯದ ಅಂಗವಾದ ನ್ಯಾಯಾಲಯಗಳೂ ಕೂಡ ಪ್ರತಿಗಾಮಿ ಆಡಳಿತಗಾರರ ಗುಂಪಿನ ಕಡೆ ಸೇರಿ, ಅವರ ಅಧಿಕಾರ ಮತ್ತು ಆಸ್ತಿಗಳನ್ನು ರಕ್ಷಿಸುತ್ತಿದ್ದುವಲ್ಲದೆ ಎಲ್ಲಾ ಕ್ರಾಂತಿಕಾರೀ ನಡವಳಿಕೆಗಳನ್ನು ಮತ್ತು ಜನತೆಯನ್ನು ತುಳಿಯುತ್ತಿದ್ದುವಲ್ಲದೆ ಮತ್ತೇನನ್ನೂ ಮಾಡುತ್ತಿರಲಿಲ್ಲ. ಆ ನ್ಯಾಯಾಲಯಗಳು ಕಮ್ಯೂನಿಸ್ಟ್ ಪಾರ್ಟಿಯ ಸಾವಿರಾರು ಸದಸ್ಯರುಗ[illegible]ಗಾರರುಗಳಿಗೆ ಮತ್ತು ಕೈದಿಗ[illegible] ದಂಡನೆಯನ್ನು ವಿಧಿಸಿದ್ದಲ್ಲದೆ, [illegible] ಶಿಕ್ಷೆಗಳನ್ನೂ ಕೊಟ್ಟಿವೆ. ಸಾಮಾನ್ಯ ಜನತೆಯ ದಬ್ಬಾಳಿಕೆ ಮತ್ತು ಅನ್ಯಾಯಗಳಿಗೆ ನ್ಯಾಯಾಲಯವು ಪ್ರತಿನಿತ್ಯದ ಒಂದು ಸಾಧನವಾಗಿದ್ದಿತು.

ಜನತಾ ನ್ಯಾಯಾಲಯಗಳು.

ಆ ನ್ಯಾಯಾಲಯಗಳ ಸ್ಥಾನದಲ್ಲಿ ಸ್ಥಾಪಿಸಲ್ಪಟ್ಟ ಹೊಸ ಜನತಾ ನ್ಯಾಯಾಲಯಗಳ ರಚನೆಯಲ್ಲಿ ಮೂಲಸಾಗಿಯೇ ವ್ಯತ್ಯಾಸವಿದೆ. ಈ ನ್ಯಾಯಾಲಯಗಳು ಜನತಾ ಪ್ರಭುತ್ವದ ಅಂದರೆ ಬಹು ಸಂಖ್ಯಾತರು ಸಾಮ್ರಾಜ್ಯಶಾಹಿ, ಸಾಮಂತ ಜಮೀನ್ದಾರಿ ಪದ್ಧತಿ ಮತ್ತು ಬಂಡವಾಳಶಾಹಿ ಪದ್ಧತಿಗಳನ್ನು ಪ್ರತಿನಿಧಿಸುವ ಅಲ್ಪ ಸಂಖ್ಯಾತರ ಮೇಲೆ ನಡೆಸುವ ಆಡಳಿತದ, ಅತ್ಯಾವಶ್ಯಕವಾದ ಸಾಧನಗಳಲ್ಲಿ ಒಂದಾಗಿದೆ. ಇವು ಜನತೆಯ ಪರವಾಗಿ ನಿಂತು, ತಮ್ಮ ಹೊಸ ಪ್ರಜಾಪ್ರಭುತ್ವದ ಸಮಾಜವನ್ನು ರಕ್ಷಿಸಲು ತಮ್ಮ ಕೈಲಾದಷ್ಟು ಪ್ರಯತ್ನಮಾಡುತ್ತವೆ. ಆದ್ದರಿಂದಲೇ ಇವು ಕ್ರಿಮಿನಲ್ ವ್ಯವಹಾರಗಳಲ್ಲಿ ಪ್ರತಿಯೊಂದು ಅಪರಾಧದ ವಿರುದ್ಧವೂ, ಜನತೆಯ ಹಕ್ಕುಗಳನ್ನು ಕಾಪಾಡುವುದಲ್ಲದೆ, ಕ್ರಾಂತಿಕಾರಿ ವಿರುದ್ಧದ ಅಪರಾಧಿಗಳಿಗೆ, ದೇಶದ ಜನತೆಯ ರೀತಿ ನೀತಿ ಮತ್ತು ಅವರ ಆರ್ಥಿಕ ವ್ಯವಸ್ಥೆಯನ್ನು ಬುಡಮೇಲು ಮಾಡುವವರನ್ನು ಶಿಕ್ಷಿಸುತ್ತವೆ. ಸಿವಿಲ್ ವ್ಯವಹಾರಗಳಲ್ಲಿ ಜನತಾ ನ್ಯಾಯಾಲಯಗಳು, ಸಾಮಾನ್ಯ ಪ್ರಜೆಗಳಿಗೆ ಸಂಬಂಧಪಟ್ಟ ವ್ಯಾಜ್ಯಗಳು, ರಾಜ್ಯದ ಅಂಗಗಳಿಗೆ, ಜನತೆಯ ಸಂಘಗಳಿಗೆ, ರಾಜ್ಯ ಮತ್ತು ಜನತೆಯ ಕೈಗಾರಿಕೆಗಳಿಗೆ ಸಂಬಂಧಪಟ್ಟ ವ್ಯಾಜ್ಯಗಳನ್ನು ವ್ಯವಹರಿಸುತ್ತವೆ.

ಹಿಂದಿನ ಪ್ರತಿಗಾಮಿ ನ್ಯಾಯಾಲಯಗಳ ಗುರಿ ದಬ್ಬಾಳಿಕೆ ಮತ್ತು ಸೇಡುತೀರಿಸುವುದಾಗಿದ್ದಿತು. ಜನತಾ ನ್ಯಾಯಾಲಯಗಳು ಅಪರಾಧಿಗಳನ್ನು ಶಿಕ್ಷಿಸುವುದೇ ಅಲ್ಲದೆ ಅವುಗಳನ್ನು ತಡೆಯಲು ಮತ್ತು ಅಪರಾಧಿಗಳನ್ನು ಸುಧಾರಿಸುವುದರ ಮೂಲಕ ಅಪ್ಪುಗಳನ್ನು ಕಡಿಮೆ ಮಾಡಲು ಪ್ರಯತ್ನ ಪಡುತ್ತವೆ. ಈ ಮಾರ್ಗವನ್ನು ಪ್ರಬಲ ಕ್ರಾಂತಿಕಾರಿ ವಿರುದ್ಧ ನಡವಳಿಕೆಗಳಲ್ಲಿ ಮತ್ತು ಜನತೆಯ ಹಿತಗಳಿಗೆ ಧಕ್ಕೆತರುವಂತಹ ಅಪರಾಧಗಳಲ್ಲಿ ಭಾಗವಹಿಸಿದವರನ್ನು ಬಿಟ್ಟು ಉಳಿದವರಿಗೆ ಅನುಸರಿಸಲಾಗುತ್ತಿದೆ.

ಜನತೆಯೊಡನೆ ನಿಕಟ ಸಂಬಂಧ

ಜನತೆಯೊಡನೆ [illegible] ಸಂಪರ್ಕವನ್ನಿಟ್ಟುಕೊಂಡಿರುವುದೇ ಚೀಣಾದ ಹೊಸ ನ್ಯಾಯಾಲಯಗಳ ಒಂದು ವೈಶಿಷ್ಟ್ಯ. ಹಳೆಯ ಪದ್ಧತಿಯಲ್ಲಿ ನ್ಯಾಯಾಲಯಗಳು ಜನತೆಯ ವಿರುದ್ಧ ಒಂದು ಸಾಧನವಾಗಿದ್ದೀತೇ ಹೊರತು ಇಂತಹ ನಿಕಟ ಸಂಪರ್ಕವಿಟ್ಟಿರಲಿಲ್ಲ.

ಜನತಾ ನ್ಯಾಯಾಲಯಗಳಿಗೆ ಸಂಬಂಧಪಟ್ಟ ಸರ್ಕಾರದ ಪ್ರಾಂತೀಯ ಕಾಯಿದೆಗಳಿಗನುಸಾರವಾಗಿ ನಿಯಮಿಸಲ್ಪಟ್ಟ 'ಜನತಾ ಪಂಚಾಯಿತಿದಾರರ' ಪದ್ಧತಿಯು ಈ ನ್ಯಾಯಾಲಯಗಳ ಒಂದು ಲಕ್ಷಣ. ಇದರಿಂದ ಯಾವುದಾದರೂ ಜನಮನ್ನಣೆ ಗಳಿಸಿದ ಸಂಘಗಳಿಗೆ ಮೊಕದ್ದಮೆಗಳಲ್ಲಿ ಪಂಚಾಯಿತಿದಾರರುಗಳಾಗಿ ಒಬ್ಬರನ್ನೋ ಅಥವಾ ಇಬ್ಬರನ್ನೋ ಆರಿಸಲು ಕೇಳಬಹುದು.

ಉದಾಹರಣೆಗೆ ಮೋಸಗಾರನಾದ ವರ್ತಕನ ವಿಚಾರಣೆ ಮಾಡುವಾಗ ನ್ಯಾಯಾಲಯವು ವಾಣಿಜ್ಯ ಸಂಘದವರನ್ನು ತಮ್ಮ ಸದಸ್ಯರುಗಳಲ್ಲಿ ಒಬ್ಬರನ್ನು ಪಂಚಾಯಿತಿದಾರರನ್ನಾಗಿ ನೇಮಿಸಲು ಕೇಳಬಹುದು ಮದುವೆಗೆ ಸಂಬಂಧಪಟ್ಟ ಕೆಲವು ಮೊಕದ್ದಮೆಗಳಿಗೆ ಮಹಿಳಾ ಪಂಚಾಯಿತಿದಾರರಿರಬೇಕೆಂದು ನಿಯಮ. ಮತ್ತೆ ಕೆಲವಕ್ಕೆ ಪ್ರಜಾಸತ್ತಾತ್ಮಕ ಮಹಿಳೆಯರ ಸಂಘಗಳಿಗೆ ಆಹ್ವಾನವನ್ನು ಕಳುಹಿಸಬಹುದು.

ಸಂಚರಿಸುವ ನ್ಯಾಯಾಧೀಶರುಗಳು.

ಸ್ಥಳದಲ್ಲೇ ಮೊಕದ್ದಮೆಗಳನ್ನು ವಿಚಾರಣೆ ಮಾಡುವಂತಹ ಸಂಚರಿಸುವ ನ್ಯಾಯಾಧೀಶರುಗಳಿರುವುದೇ ಈ ಹೊಸ ಪದ್ಧತಿಯ ಎರಡನೆಯ ಲಕ್ಷಣ. ಹಿಂದಿನ ದಿನಗಳಲ್ಲಿ ನ್ಯಾಯಸ್ಥಾನವು ಒಂದು ಗೊತ್ತಾದ ಸ್ಥಳದಲ್ಲಿ ನಡೆಯುತ್ತಿದ್ದಿತು ಮತ್ತು ನ್ಯಾಯಾಧೀಶರುಗಳು ಹೊರಗಡೆ ಹೋಗುವ ತೊಂದರೆಯನ್ನೇ ತೆಗೆದುಕೊಳ್ಳುತ್ತಿರಲಿಲ್ಲ. ಜನತಾ ಚೀನಾ ಅನೇಕ ರೀತಿಯ ಅನುಕೂಲಗಳನ್ನೊಳಗೊಂಡ 'ಸಂಚರಿಸುವ ನ್ಯಾಯಾಲಯ'ಗಳನ್ನು ಸ್ಥಾಪಿಸಿದೆ ಇದರಿಂದ ಕೋರ್ಟಿನ ವ್ಯವಹಾರಗಳಿಗೆ ಹೆಚ್ಚು ಕಾಲವಾಗಲಿ ಮತ್ತು ಹಣವಾಗಲಿ ಖರ್ಚಾಗುವುದಿಲ್ಲ. ನ್ಯಾಯಾಲಯಗಳು ಆ ಪ್ರದೇಶದಲ್ಲಿ ವಾಸಮಾಡುವ ಜನತೆಯೊಡನೆ ನೇರವಾದ ಸಂಬಂಧವನ್ನು ಹೊಂದುವುದರಿಂದ ಸಾಕ್ಷಿ ಸಾಹಿತ್ಯಗಳನ್ನು ಪಡೆಯಲು ಮತ್ತು ಪರೀಕ್ಷಿಸಲು ಸುಲಭವಾಗುತ್ತದೆ. ಮತ್ತು ಮೊಕದ್ದಮೆಯ ವಿಚಾರವಾಗಿ ಜನತೆಯ ಅಭಿಪ್ರಾಯವೇನೆಂಬುದೂ ಕೂಡ ತಿಳಿಯುತ್ತದೆ. ಕೊನೆಯದಾಗಿ ಇದರಿಂದ ಮೊಕದ್ದಮೆಗಳನ್ನು ಜಾಗ್ರತೆಯಾಗಿ ತೀರ್ಮಾನಿಸಲು ಸಹಾಯವಾಗುತ್ತದೆ.

ಸಾಮಾನ್ಯವಾಗಿ ನ್ಯಾಯಾಧೀಶನು ಮಳೆಯಾಗಲೀ, ಮಂಜು ಬೀಳುತ್ತಿರಲಿ ಅನೇಕ ಮೈಲುಗಳ ಸಂಚಾರ ಮಾಡಿ ಎರಡು ಪಾರ್ಟಿಗಳಿಗೆ ಮತ್ತು ಅಲ್ಲಿನ ಜನರಿಗೆ ತೃಪ್ತಿಯಾಗುವ ರೀತಿಯಲ್ಲಿ ಆ ಮೊಕದ್ದಮೆಗಳನ್ನು ತೀರ್ಮಾನಿಸುತ್ತಾನೆ. ಸಾಮಾನ್ಯವಾಗಿ ಆತನು ಅಲ್ಲಿಂದ ಹೊರಡುವಾಗ ಎರಡು ಪಾರ್ಟಿಗಳವರೂ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿ ಆವರದಿಂದ ಬೀಳ್ಕೊಡುತ್ತಾರೆ.

ನ್ಯಾಯಾಲಯದ ವಿಧಿ ಮತ್ತು ಶಿಸ್ತನ್ನು ಪಾಲಿಸುವುದಾದರೆ ಪ್ರೇಕ್ಷಕರೂ ಕೂಡ ಮಾತನಾಡಲು ಅವಕಾಶವಿರುವುದು ಮತ್ತೊಂದು ಲಕ್ಷಣ. ಹಿಂದಿನ ಪ್ರತಿಗಾಮಿ ಕೋಮಿಂಗ್ ಟಾಂಗ್ ಸರಕಾರದಲ್ಲಿ ಜನರನ್ನು ನ್ಯಾಯಾಲಯಕ್ಕೆ ಬಿಡುತ್ತಿದ್ದುದೇ ಅಪರೂಪವಾಗಿತ್ತು.

ಸಾಮಾನ್ಯ[illegible]ನ—ಸುಲಭವಾದ ವ್ಯವಹಾರ.

ಕೋಮಿಂಗ್ ಟಾಂಗರ ಕಾಲದಲ್ಲಿ ಅನೇಕ ತೊಡರುಗಳಿಂದ ಕೂಡಿದ ವ್ಯವಹಾರ ನಿಯಮಗಳಿಂದಲೂ, ಕೋರ್ಟಿನ ದುಬಾರಿಯಾದ ಶುಲ್ಕದಿಂದಲೂ ಸಾಮಾನ್ಯ ಜನರು ತಮ್ಮ ಹಕ್ಕುಗಳನ್ನು ಸ್ಥಾಪಿಸಿಕೊಳ್ಳಲು

ಧನೆಗಳಿಂದ ಮನುಷ್ಯನು ಆನಂದದಲ್ಲಿರಬೇಕೆಂದು ಅವರು ಯತ್ನಿಸಿದರು. ಮಡಿ ಮೈಲಿಗೆಗಳ ಕಲ್ಪನೆ ಕೊಟ್ಟು ಶುದ್ಧ ಆಹಾರ, ವಿಹಾರ, ಬಟ್ಟೆಗಳು ಮನುಷ್ಯನಿಗೆ ದೊರಕಬೇಕೆಂದು ದುಡಿದರು. ಅಷ್ಟೇ ಏಕೆ? ಸಂತತಿಯು ಒಳ್ಳೆಯದು ಹುಟ್ಟಬೇಕೆಂಬ ಬಗ್ಗೆ ಕೂಡ ಅವರ ದೃಷ್ಟಿಯಿತ್ತು. ಒಳ್ಳೆ ಮನಸ್ಸಿನ ತಂದೆ ತಾಯಿಗಳಿಂದ ಮಾತ್ರ ಒಳ್ಳೆ ಮಕ್ಕಳು ಹುಟ್ಟುವದು ಸಾಧ್ಯ ಎಂಬುದನ್ನು ಅವರು ಕಂಡುಹಿಡಿದರು. ಆದ್ದರಿಂದ ಮನುಷ್ಯನ ಮನಸ್ಸನ್ನು ತಿದ್ದಲು ಅವರು ಯಾವಾಗಲೂ ಯತ್ನಿಸಿದರು.

ಔಷಧಗಳ ಆವಶ್ಯಕತೆ ಮತ್ತು ಪರಿಣಾಮವೂ ಅವರಿಗೆ ಗೊತ್ತಿತ್ತು. ಆದರೆ ಅದಕ್ಕೆ ಅವರು ಎರಡನೆ ಸ್ಥಾನವನ್ನು ಕೊಟ್ಟಿದ್ದರು. ಔಷಧಗಳ ಪರಿಣಾಮವು ತಾತ್ಕಾಲಿಕವಾದುದೆಂದು ನಿಜವಾದ ಆರೋಗ್ಯವು ದೊರೆಯಲು ಮನಸ್ಸು ಆರೋಗ್ಯವಂತವಾಗಿರದಿದ್ದರೆ ಔಷಧಗಳ ಪ್ರಯೋಜನವು ದೊರೆಯಲಾರದೆಂದೂ ಅವರು ದೃಢವಾಗಿ ನಂಬಿದ್ದರು.

ಜೈಹಿಂದ್.

ಮಧುಪರ್ಕ

ಮೂರು ವರ್ಷಗಳ ಹಿಂದಿನ ಮಾತು. ನಾನು ಹೈಸ್ಕೂಲೊಂದರಲ್ಲಿ ಅಧ್ಯಾಪಕನಾಗಿದ್ದೆ. ಬೆಂಗಳೂರಿಗೆ ಕಾರಣಾಂತರದಿಂದ ಹೋಗಬೇಕಾಯಿತು. ರೈಲ್ವೆ ಸ್ಟೇಶನಿನಲ್ಲಿಳಿದಾಗ ನನ್ನ ಹಾಸಿಗೆ ಪೆಟ್ಟಿಗೆಗಳನ್ನು ಹೊತ್ತುಕೊಳ್ಳಲು ಯಾವುದೇ ಸೇವಕರು ದೊರೆಯಲಿಲ್ಲ. ಅಷ್ಟರಲ್ಲಿ ಹತ್ತಿರ ನಿಂತಿದ್ದವನೊಬ್ಬನು ತಾನು ಅವುಗಳನ್ನು ಹೊತ್ತುಕೊಳ್ಳುವವನಾಗಿ ಹೇಳಿದನು. ಪೆಟ್ಟಿಗೆ ಮತ್ತು ಹಾಸಿಗೆಯನ್ನು ತಲೆಯಲ್ಲಿರಿಸಿ ಅವನು ಮುಂದೆ ನಡೆಯುತ್ತಾ ನನ್ನ ವಿಚಾರ ಕೆಲವು ಪ್ರಶ್ನೆಗಳನ್ನು ಕೇಳಿದನು. ನಾನು ಅಧ್ಯಾಪಕನೆಂದೂ, ಬೆಂಗಳೂರಿಗೆ ಕಾರ್ಯವಶ ಬಂದಿರುವದಾಗಿಯೂ ಹೇಳಿದೆನು. ಆತನು ಪೆಟ್ಟಿಗೆ ಹಾಸಿಗೆಗಳನ್ನು ನಾನು ನಿಶ್ಚೈಸಿದ ಒಂದು ರಿಕ್ಷಾದಲ್ಲಿರಿಸಿ ಹೊರಡಲುದ್ಯುಕ್ತನಾದನು. ಆತನ ಕೂಲಿ ಎಂಟಾಣೆ ಕೊಡಲು ಹೋದಾಗ ಆತನು 'ನಾನು ಕೂಲಿಗಾಗಿ ಕೆಲಸ ಮಾಡುತ್ತಿಲ್ಲ. ನೀವು ಅಧ್ಯಾಪಕರು. ವಿದ್ಯಾರ್ಥಿಗಳಿಗೆ ತಮ್ಮ ಕೆಲಸವನ್ನು ತಾವೇ ಮಾಡಿಕೊಳ್ಳುವ ಸ್ವಾವಲಂಬನ ಬುದ್ಧಿಯನ್ನು ನೀವು ಕಲಿಸಿದರೆ ಅದೇ ನನಗೆ ನೀವು ಕೊಡಬಹುದಾದ ಬಹು ಬೆಲೆಯ ಕೂಲಿ" ಎಂದು ಹೇಳಿದನು. ಆತನ ಮಾತಿನಿಂದ ನಾನು ಅವಾಕ್ಕಾದೆ ಇಂದಿಗೂ ಕೂಡ ಎಲ್ಲಿಗಾದರೂ ಹೊರಡಲು ಪೆಟ್ಟಿಗೆ, ಹಾಸಿಗೆ ಕಟ್ಟಿದರೆ ಆತನ ಮಾತು ಜ್ಞಾಪಕಕ್ಕೆ ಬಂದು ಅವುಗಳನ್ನು ಬೇರೆಯವರಿಂದ ಹೊರಿಸಲು ನಾಚಿಕೆಯಾಗುತ್ತದೆ.

—ಆರ್. ಎ. ಶಿವಾರಿ.

ಅಡಚಣೆಯಾಗಿದ್ದಿತು. ಆದರೆ ಶುಲ್ಕವನ್ನು ಕೊಡಲು ಸಾಧ್ಯವಿದ್ದ ಮತ್ತು ವಕೀಲರನ್ನು ನೇಮಿಸಿಕೊಳ್ಳುವ ಶಕ್ತಿಯಿದ್ದ ಐಶ್ವರ್ಯವಂತರುಗಳಿಗನುಸಾರವಾಗಿಯೇ ಎಲ್ಲವೂ ನಡೆಯುತ್ತಿದ್ದಿತು.

ಈಗ ಎಲ್ಲಾ ಕೃತ್ರಿಮ ಪದ್ಧತಿಗಳನ್ನು ಮತ್ತು ಅನಾವಶ್ಯಕವಾದ ಖರ್ಚುಗಳನ್ನು ರದ್ದುಗೊಳಿಸಿದ್ದಾರೆ. ಇದರ ಪರಿಣಾಮವಾಗಿ ಯಾವ ಬಡವನೇ ಆಗಲಿ ತನ್ನ ಹಕ್ಕುಗಳಿಗೆ ಚ್ಯುತಿಬಂದರೆ ನ್ಯಾಯಾಲಯಗಳಿಗೆ ಹೋಗಲು ಹಿಂಜರಿಯುವುದಿಲ್ಲ. ಈಗ ಆತನ ಮೇಲೆ ಮೊಕದ್ದಮೆಯನ್ನು ಹೂಡಿದರೆ ಆತನು ಅದನ್ನು ಸ್ಥಿರಪಡಿಸಿಕೊಳ್ಳಲು ಅಶಕ್ತನೆಂದು ಹೇಳಲಾಗುವುದಿಲ್ಲ.

ಹಿಂದೆ ಒಂದು ಮೊಕದ್ದಮೆಯನ್ನು ಹೂಡಬೇಕಾಗಿದ್ದರೆ ವಕೀಲರಿಂದ ಬರೆಯಲ್ಪಟ್ಟಿದ್ದ ಅರ್ಜಿಯು ಆವಶ್ಯಕವಾಗಿದ್ದಿತು. ಆದರೆ ಪ್ರಜಾ ನ್ಯಾಯಾಲಯದಲ್ಲಿ ಅದರ ಬದಲಾಗಿ ಬಾಯಿಯಲ್ಲೇ ತನ್ನ ಮೊಕದ್ದಮೆ ವಿಚಾರವನ್ನು ತಿಳಿಸಬಹುದು. ಆದರೆ ನ್ಯಾಯಾಧೀಶನ ಮುಂದೆ ಬಂದು ತನ್ನ ದೂರನ್ನು ಸ್ಪಷ್ಟವಾದ ಮತ್ತು ಸುಲಭವಾದ ಭಾಷೆಯಲ್ಲಿ ತಿಳಿಸುವುದು ಆವಶ್ಯಕ. ನಂತರ ಆ ದೂರು ಸಾಮಾನ್ಯ ಕಾನೂನಿನ ನಿಯಮದಂತೆ ನಡೆಸಲ್ಪಡುತ್ತದೆ.

ಒಂದು ವೇಳೆ ವಾದಿಗೆ ಬಾಯಿಯಲ್ಲಿ ತಿಳಿಸುವುದು ಇಷ್ಟವಿಲ್ಲದಿದ್ದರೆ ಬರವಣಿಗೆಯ ಮುಖಾಂತರ ಸಲ್ಲಿಸಬೇಕಾಗಿದ್ದರೆ ನ್ಯಾಯಾಲಯವೇ ಇದಕ್ಕೆ ಅನುಕೂಲವನ್ನು ಒದಗಿಸಿ ಕೊಡುತ್ತದೆ. ಆತನಿಗೆ ಕಾನೂನಿನ ಅಂಶಗಳು ಗೊತ್ತಿಲ್ಲದೆ ಮೊಕದ್ದಮೆ ತರಲು ಹಿಂತೆಗೆದರೆ ಯಾವ ಖರ್ಚೂ ಇಲ್ಲದೆ ತನ್ನ ಪ್ರಶ್ನೆಗಳಿಗೆ "ನ್ಯಾಯಾಲಯದ ವಿಚಾರಣಾ ಕಚೇರಿ"ಯಲ್ಲಿ ಉತ್ತರಗಳನ್ನು ತಿಳಿಯಬಹುದು. ಈಗ ವಕೀಲರುಗಳನ್ನು ಒದಗಿಸುವ ಪದ್ಧತಿಯ ಬಗ್ಗೆ ಯೋಚನೆ ಮಾಡುತಿದ್ದಾರೆ.

ತಿಳುವಳಿಕೆ ಕೊಡುವುದರಲ್ಲಿ ನ್ಯಾಯಾಲಯಗಳ ಪಾತ್ರ

ಜನತಾ ನ್ಯಾಯಾಲಯಗಳು ನ್ಯಾಯ ತೀರ್ಮಾನ ಮಾಡುವುದೇ ಅಲ್ಲದೆ ಜನತೆಗೆ ತಿಳುವಳಿಕೆ ಕೊಡುವುದರಲ್ಲೂ ಸಹಾಯ ಮಾಡುತ್ತವೆ. ಪ್ರಾಂತೀಯ ಕಾನೂನಿನ ಎರಡನೇ ಪ್ಯಾರಾದ ಮೂರನೇ ವಿಧಿಯಂತೆ ಜನತಾ ನ್ಯಾಯಾಲಯಗಳು ಮೊಕದ್ದಮೆಗಳಲ್ಲಿ ತೀರ್ಪು ಕೊಡುವುದರ ಮೂಲಕ ಮತ್ತು ಆ ಪದ್ಧತಿಗಳನ್ನು ಸ್ವೀಕಾರ ಮಾಡುವುದರ ಮೂಲಕ ಅದಕ್ಕೆ ಸಂಬಂಧಪಟ್ಟ ಪಾರ್ಟಿಗಳಿಗೆ, ಒಟ್ಟಿನಲ್ಲಿ ಸಾಮಾನ್ಯ ಜನತೆಗೆ ರಾಜ್ಯದ ಕಾನೂನು ಮತ್ತು ಶಿಸ್ತನ್ನು ಪಾಲಿಸುವುದರ ಬಗ್ಗೆ ತಿಳಿಸುವ ಮತ್ತು ತಿಳುವಳಿಕೆ ಕೊಡುವ ಕಾರ್ಯವನ್ನು ಮಾಡಬೇಕು.

ಜನತೆಯು ಕಾನೂನಿನ ಎಲ್ಲಾ ಅಂಶಗಳನ್ನು ಮತ್ತು ಭಾವವನ್ನು ಗ್ರಹಿಸುವಂತೆ ಮಾಡಲು ನ್ಯಾಯಾಲಯಗಳು ಎಲ್ಲಾ ವಿಧಗಳಲ್ಲೂ ಸಹಾಯ ಮಾಡುತ್ತವೆ. ಬಹಳ ಆಸಕ್ತಿಯಿಂದ ಕೂಡಿದ ಮತ್ತು ಮಹತ್ವವಾದ ತೀರ್ಮಾನಗಳನ್ನು ಪ್ರಸಾರ ಮಾಡಲು ಆಕಾಶವಾಣಿಗೆ ಕೊಡುತ್ತಾರೆ. ಕಾನೂನು ಮತ್ತು ಧ್ಯೇಯಗಳನ್ನು ಕುರಿತು ಭಾಷಣಗಳನ್ನು ಪ್ರಸಾರ ಮಾಡುತ್ತಾರೆ. ಈ ಪ್ರಸಾರ ಕಾರ್ಯಕ್ರಮಗಳನ್ನು ಮೊದಲು ವೃತ್ತಪತ್ರಿಕೆಗಳಲ್ಲಿ ಪ್ರಚುರಪಡಿಸುತ್ತಾರೆ. ಟಾಂಗ್ ಷಾನಿನಲ್ಲಿ ರೇಡಿಯೋಗಳು ಬಹಳ ಸಾಮಾನ್ಯವಾಗಿರುವುದರಿಂದ ಹೆಚ್ಚು ಜನರಿಗೆ ತಿಳಿಯುತ್ತದೆ.

ಪಟ್ಟಣದ ಒಂದು ವೃತ್ತ ಪತ್ರಿಕೆ ಪ್ರತಿನಿತ್ಯವೂ ತನ್ನ ಪತ್ರಿಕೆಯಲ್ಲಿ 'ನ್ಯಾಯಕ್ಕೆ ಸಂಬಂಧಪಟ್ಟ ಪ್ರಶ್ನೆಗಳು ಮತ್ತು ಉತ್ತರಗಳು' ಎಂಬ ಒಂದು ಭಾಗವನ್ನು ಮೀಸಲಾಗಿಡಲು ಏರ್ಪಾಡು ಮಾಡಿದ್ದಾರೆ ಇದಕ್ಕೆ ಎಲ್ಲಾ ವಿಷಯಗಳನ್ನು ನ್ಯಾಯಾಲಯದ ಸದಸ್ಯರುಗಳು ಒದಗಿಸುತ್ತಾರೆ.

ಲಂಚಗುಳಿತನದ ವಿರುದ್ಧ ಹೋರಾಟ

ಚಿಂಗ್ (ಮಂಚು) ವಂಶದವರ ಕಾಲದಲ್ಲಿ ಜನರು 'ನ್ಯಾಯಾಲಯಗಳಲ್ಲಿ ಎಲ್ಲರಿಗೂ ಅವಕಾಶವಿದ್ದರೂ ಹಣವಿಲ್ಲದೆ ಅಲ್ಲಿಗೆ ಹೋಗಲು ಯಾರೂ ಪ್ರಯತ್ನಿಸುತ್ತಿರಲಿಲ್ಲ' ಎಂಬುದಾಗಿ ಹೇಳುತಿದ್ದರು. ಕೊಮಿಂಗ್‌ಟಾಂಗ್‌ರವರ ಕಾಲದಲ್ಲಿ ಲಂಚವನ್ನು ಕೇಳುವುದು ಮತ್ತು ತೆಗೆದುಕೊಳ್ಳುವುದು ಬಹಳವಾಗಿದ್ದಿತು. ಹೆಚ್ಚು ಕಡಿಮೆ ಎಲ್ಲ ನ್ಯಾಯಾಲಯಗಳೂ ಕಳಂಕದಿಂದ ಕೂಡಿದ್ದವು. ಪ್ರತಿಗಾಮಿ ಸರಕಾರದ ಕಾನೂನಿನಲ್ಲಿ ಲಂಚಗುಳಿತನಕ್ಕೆ ಶಿಕ್ಷೆಯನ್ನು ನಮೂದಿಸಿದ್ದರೂ ವಾಸ್ತವವಾಗಿ ಕಾರ್ಯತಃ ಜಾರಿಯಾದುದನ್ನು ಯಾರೂ ಕೇಳಿಲ್ಲ. ಚಿಯಾಂಗ್ ಕೈಶೇಕ್, ಟಿ ವಿ ಸೂಂಗ್, ಹೆಚ್. ಹೆಚ್. ಕುಂಗ್ ಮತ್ತು ಚೆನ್ ಲಿ–ಫು ಇಂತಹವರ ಕೈಲಿ ದೇಶದ ಆಡಳಿತವಿದ್ದರೆ ಇವಕ್ಕಿಂತ ಬೇರೆ ರೀತಿಯಾಗಲು ಸಾಧ್ಯವೇ ಇಲ್ಲ. ಇವರು ಎಲ್ಲಾ ಕಾನೂನುಗಳನ್ನೂ ತಿರಸ್ಕಾರದಿಂದ ಕಾಣುತ್ತಾ ತಮ್ಮ ಕೈಲಿ ಸಾಧ್ಯವಾದ ಎಲ್ಲಾ ಮಾರ್ಗಗಳಿಂದ (ಲಂಚ ಪಡೆಯುವುದು ಮತ್ತು ಪೇಟೆಯ ಮೇಲಿನ ಹಿಡಿತ) ತಮಗಾಗಿ ಐಶ್ವರ್ಯವನ್ನು ಮಾಡಿದರು.

ಸರ್ಕಾರದ ಮುಖ್ಯಸ್ಥರುಗಳು, ನ್ಯಾಯಾಂಗ ಅಧಿಕಾರಿಗಳೂ ಕೂಡ ಎಲ್ಲರೂ ಅಪ್ರಮಾಣಿಕರಾಗಿದ್ದುದರಿಂದ ಕೆಲವು ಅಲ್ಪ ದರ್ಜೆಯ ಸೇವಕರುಗಳು ಬಲವಂತವಾಗಿ ಅಪ್ರಾಮಾಣಿಕರಾಗಿರಬೇಕಾಯಿತು. ಜನತೆಯ ಮೇಲೆ ಈ ಲಂಚಗುಳಿತನದ ಪ್ರಭಾವವು ಬಹು ಘೋರವಾದದ್ದು. 'ಯಾರಲ್ಲಿ ಹಣವಿದೆಯೋ ನ್ಯಾಯ ಅವರ ಕಡೆಗೆ. ನ್ಯಾಯಾಲಯವು ಕಾನೂನನ್ನಾಗಲೀ ಅಥವಾ ದೇವರನ್ನಾಗಲೀ ಮಾನ್ಯ ಮಾಡುವುದಿಲ್ಲ' ಎಂಬ ಸ್ಪಷ್ಟವಾದ ನೀತಿಯಿಂದ ಜನತೆಗೆ ನ್ಯಾಯಾಲಯದ ಬಗ್ಗೆ ಇದ್ದ ಹಗೆತನವು ವ್ಯಕ್ತಪಡುತ್ತದೆ.

ಜನತಾ ನ್ಯಾಯಾಲಯಗಳ ಸ್ವಭಾವ ಮತ್ತು ಗುರಿಯೇ ಬೇರೆ. ಈ ನ್ಯಾಯಾಲಯಗಳು ಹಿಂದೆಂದೂ ಚೀನಾದಲ್ಲಿ ಇಲ್ಲದಷ್ಟು ಕಳಂಕರಹಿತವಾಗಿವೆ. ಇತ್ತೀಚೆಗೆ ಲಂಚಗುಳಿತನ, ವ್ಯರ್ಥ ಖರ್ಚು ಮತ್ತು ನೌಕರಶಾಹಿಗಳ ವಿರುದ್ಧ ನಡೆಸಿದ ಚಳುವಳಿಯಿಂ ಹಿಂದಿನ ಎಲ್ಲಾ ಲಂಚಗುಳಿತನದ ನಡವಳಿಕೆಗಳಿಗೆ ಬಲವಾದ ಪೆಟ್ಟು ಬಿದ್ದಂತಾಯಿತು.

ವ್ಯವಹಾರದಲ್ಲಿ ಸುಲಭವಾದ ಸ್ವಚ್ಛವಾದ ಆಡಳಿತ ಕ್ರಮದಿಂದ ಕೂಡಿದ ನ್ಯಾಯಾಲಯಗಳು ಜನತೆಯ ರಾಜಕೀಯ ಶಕ್ತಿ ಮತ್ತು ಮಾನವ ಜನಾಂಗದ ಕಾಲು ಭಾಗ ಜನತೆಯಲ್ಲಿನ ರಚನಾತ್ಮಕ ಕಾರ್ಯಗಳನ್ನು ರಕ್ಷಿಸುವುದಲ್ಲದೆ ಬಲವಾಗಲು ಸಹಾಯ ಮಾಡುತ್ತವೆ. "ಚೇತನಾ"

(ಲೀ ಹೋ ಪೇಯಿಯವರ ಲೇಖನದಿಂದ)

ಹುಚ್ಚರ ಹಟ್ಟಿ

'ಗೌರವ ಉಳಿಸಿಕೋ'

(ರಾಗ– ಶ್ಯಾಮ್ ಚಲೇ, ಕಿಡಿಕೀ ಕಡೆ, ತುಮ್ ಸೀಟಿ ಬಜಾವ ಥೋಡ್ ದೋ" —ಹಾಡಿನಂತೆ)

ಓ "ಶಿಕಾ"ನೇ, ಅಪಹಾಸ್ಯ ಛೀ
ನೀ ಕಾಲೇಜು ಗೌರವ ಉಳಿಸಿಕೋ.
ಇಲ್ಲದನಡೇ ಸಲ್ಲದನುಡೀ
ನಿನ್ನಾತ್ಮದ ಬೆಳಕಲಿ ನೋಡಿಕೋ.
ಸೋದರಿಯರೂ ನಿನಗಿಲ್ಲವೇ?
ಹೇ, ಪಾಪಿಯ ದೃಷ್ಟಿಯ ಮುಚ್ಚಿಕೋ.
ಕಾಮಾಲೆಯಿಂ ನರಳುವೆ ನೀಂ
ಓ, ಊರೆಲ್ಲ ಅರಸಿನ ಅಂದುಕೋ.
ಕಾಲೇಜಂತೆ 'ಸೋದರ'ನಂತೆ
ಹೇ, ನೀ ಮೊದಲು ನಿನ್ನನ್ನು ತಿದ್ದಿಕೋ.
ಓದಲ್ಲವೇ, [illegible]
ಸರಿ, ಇಂದಿನಾ ಗುರಿಯೆಂದು ಅರಿತುಕೋ.
ಕುನ್ನಿಗಳಂತೆ, ಸಿಕ್ಕಾಬಟ್ಟೆ
ಛೀ, ತಿರುಗುವರು ಯಾರೆಂದು ತಿಳಿದುಕೋ.
ಓ "ಶಿಕಾ"ನೇ ಕುರುಡಾನೆ ನೀ
ಈ ಹುಡುಗಿಯರು ಅಂತಲ್ಲ ನಂಬಿಕೋ.

—ಕಿದೆಸ.

("ಕಳೆದ ವಾರದ "ಶಿಕಾ"ರ "ಇದು ಸರಿಯೇ?"ಯನ್ನು ಓದಿ)

ಗಾಂಧಿ ವಿಚಾರ ದೋಹನ

ಹೆಂಗಸು

ನಾನು ಹೆಂಗಸಾಗಿ ಹುಟ್ಟಿದ್ದರೆ ಹೆಂಗಸು ತನ್ನ ಭೋಗವಸ್ತು, ಕೈಗೊಂಬೆಯೆಂದು ತಿಳಿಯುವ ಗಂಡಸಿನೆದುರು ದಂಗೆ ಏಳುತ್ತಿದ್ದೆ. ನಾನು ಯಾವುದೇ ಆಭರಣ ತೊಡಲು ನಿರಾಕರಿಸುತ್ತಿದ್ದೆ. ಆಭರಣ ತೊಡುವದು ಗಂಡಸಿನ ಮೆಚ್ಚುಗೆಯನ್ನು ಪಡೆಯುವ ಕಾರಣಕ್ಕಾದ್ದರಿಂದ ಅವನ್ನು ಹೆಂಗಸಿನ ಕಲಂಕವೆಂದು ತಿಳಿಯುತ್ತಿದ್ದೆ.

ನಾನು ನನ್ನ ಹೆಂಡತಿಯನ್ನು ಹೆಂಡತಿಯೆಂಬ ಕಾಮಪೂರ್ಣ ದೃಷ್ಟಿಯಿಂದ ನೋಡುವದನ್ನು ಬಿಟ್ಟಾಗಲೇ ಆಕೆಯ ಹೃದಯವನ್ನರಿತು ಆಕೆಯನ್ನು ಪ್ರೀತಿಸಲು ಕಲಿತೆ. ಎಲ್ಲಿ ಕಾಮವಿದೆಯೋ ಅಲ್ಲಿ ನಿಜವಾದ ಪ್ರೇಮವಿರಲಾರದು.

ಹೆಂಗಸು ತನ್ನ ಶಾರೀರಿಕ ಪ್ರದರ್ಶನವನ್ನು ಬಿಡಬೇಕು. ತನ್ನ ಗಂಡನ ಅರ್ಧಾಂಗಿ ಎನಿಸಬೇಕಾಗಿದೆ ಆತನನ್ನು ಉತ್ತಮ ಉಡುಪು, ಕೂದಲುಗಳ ವಿವಿಧ ಭಂಗಿ, ಸ್ನೋ, ಸೆಂಟ್‌ಗಳಿಂದ ಆಕರ್ಷಿಸಲು ಯತ್ನಿಸುವದನ್ನು ಬಿಡಬೇಕು. ಸೀತೆಯು ರಾಮನನ್ನು ತೃಪ್ತಿಗೊಳಿಸಲಿಕ್ಕಾಗಿ ತನ್ನ ಶಾರೀರಿಕ ಸೌಂದರ್ಯವನ್ನು ಪ್ರದರ್ಶಿಸುವದರಲ್ಲಿ ಒಂದು ನಿಮಿಷವನ್ನೂ ವೆಚ್ಚ ಮಾಡಿರಬಹುದೆಂದು ನಾನು ಯೋಚಿಸಲಾರೆ.

ಸ್ತ್ರೀ ಮತ್ತು ಪುರುಷರಲ್ಲಿ ಸ್ತ್ರೀಯೇ ಗೌರವಾರ್ಹಳು. ಆಕೆ ತ್ಯಾಗದ ಪರಮಾವಧಿ. ಶಾಂತತೆ, ನಂಬಿಕೆ, ಧೈರ್ಯತೆ, ಕಷ್ಟ ಸಹಿಷ್ಣುತೆ, ಮೊದಲಾದ ಸದ್ಗುಣಗಳಲ್ಲಿ ಆಕೆಯನ್ನು ಮೀರುವವರಾರು?

ಜೀವನದಲ್ಲಿ ಪವಿತ್ರವಾದುದರ, ಧಾರ್ಮಿಕವಾದುವುಗಳೆಲ್ಲದರ ರಕ್ಷಕರು ಸ್ತ್ರೀಯರು. ಜೀವನದಲ್ಲಿ ಉತ್ತಮವೆನಿಸುವ ಗುಣಗಳು ಅಳಿಯದೆ ಉಳಿದಿದ್ದರೆ ಅವರ ಕಾರಣದಿಂದಾಗಿದೆ.

ಹೆಂಗಸಿಗೆ ಉತ್ತಮ ವಿದ್ಯೆ ಕೊಡಬೇಕೆಂಬುದರಲ್ಲಿ ವಿಶ್ವಾಸವಿರುವವನು ನಾನು. ಆದರೆ ಗಂಡಸನ್ನು ಅನುಸರಿಸಿ ಆತನ ಹೆಜ್ಜೆಯಲ್ಲಿ ಹೆಜ್ಜೆ ಹಾಕುವದರಿಂದ ಜಗತ್ತಿನ ಹಿತಕ್ಕೆ ತನ್ನ ಪಾಲಿನ ಕರ್ತವ್ಯವನ್ನು ಆಕೆ ಸಲ್ಲಿಸಲಾರಳು.

ನಾರದ ಸಂವಾದ

ನಾಯಿಗಳು ಮೂಳೆಗಾಗಿ ಪರಸ್ಪರ ಜಗಳಾಡಿದರೆ ಪಶುಗಳು ಹಿಡಿಹುಲ್ಲಿಗಾಗಿ ಜಗಳ ಮಾಡುತ್ತವೆ. ಮನುಷ್ಯನು ಹಣ, ಅಧಿಕಾರಗಳಿಗಾಗಿ ಜಗಳಾಡಿದರೆ ಹಗ್ಗಳಿಕೆ, ಸ್ವಲಾಭಗಳಿಗಾಗಿ ರಾಷ್ಟ್ರರಾಷ್ಟ್ರಗಳು ಯುದ್ಧ ಮಾಡುತ್ತವೆ. ಆದ್ದರಿಂದ ಈ ಜಗತ್ತೇ ಪರಸ್ಪರ ಘರ್ಷಣೆಯ ರಂಗಸ್ಥಳವೆಂದು ಒಬ್ಬರು ಹೇಳಿದರೆ ಮತ್ತೊಬ್ಬರು ಈ ಪ್ರಪಂಚವು ಆಕಾರದಲ್ಲಿ ಉರುಟು ಹೇಗೋ ಹಾಗೆಯೇ ಪ್ರಪಂಚದ ಜೀವನ, ಆಗು ಹೋಗುಗಳೆಲ್ಲವೂ ಉರುಟಾಕಾರದಲ್ಲಿ ಸುತ್ತುತ್ತವೆ ಎನ್ನುತ್ತಾರೆ. ಮಗುವಾದ ಮನುಷ್ಯನು ತನ್ನ ಜೀವನ ಚಕ್ರದ ಒಂದು ಸುತ್ತು ಬಂದಾಗ ಮಗುವಿನಂತೆಯೇ ನಿಸ್ಸಹಾಯಕನಾಗಿ ವೃದ್ಧನೆನಿಸುತ್ತಾನೆ. ದಿನವು ಸುಂದರ ಸೂರ್ಯ ಪ್ರಭಾತದಿಂದ ಪ್ರಾರಂಭವಾದರೆ ದಿನ ಚಕ್ರವನ್ನು ಮುಗಿಸಿ ಸಂಧ್ಯಾಕಾಲದಲ್ಲಿ ಅದೇ ರೀತಿಯ ಕಾಂತಿ ಶೋಭೆಯಿಂದ ಮುಳುಗುತ್ತಾನೆ. ಈ ಕಾರಣದಿಂದ ಪ್ರಾರಂಭಕ್ಕೂ ಅಂತ್ಯಕ್ಕೂ ವ್ಯತ್ಯಾಸವಿಲ್ಲದಂತೆ ತೋರುತ್ತದೆ. ಅತಿ ಬಿರುಸಿನಿಂದ ತಿರುಗುವ ಚಕ್ರವು ನಿಂತಿರುವ ಚಕ್ರದಂತೆ ತೋರುವಂತೆ ಅತೀ ಜ್ಞಾನಿಯಾದವನೂ ಅಜ್ಞಾನಿಯಂತೆಯೇ ತೋರುತ್ತಾನೆ!

ಇವೆರಡು ವಾದದಲ್ಲೂ ಸತ್ಯಾಂಶವಿದೆ. ಉರುಟಾದ ವಸ್ತು ಸ್ಥಿರವಾಗಿ ಒಂದೆಡೆ ನಿಲ್ಲಲಾರದು. ಪರಸ್ಪರ ಸ್ಪರ್ಧೆ ಘರ್ಷಣೆ ಇರುವಲ್ಲಿ ಶಾಂತಿ ಇರಲಾರದು. ಆ ತತ್ವದಂತೆಯೇ ಜಗತ್ತಿನಲ್ಲಿ ಶಾಂತಿ ಇಲ್ಲ. ಯಾವುದೂ ಶಾಶ್ವತವಲ್ಲ. ಒಬ್ಬರೊಬ್ಬರಲ್ಲಿ ಪರಸ್ಪರ ಸ್ಪರ್ಧೆ, ಮೇಲೇರುವ ಹವ್ಯಾಸವಿರುವಲ್ಲಿ ಪರಿಮಿತ ಇದ್ದೇ ಇರಬೇಕು. ಈ ದೃಷ್ಟಿಯಿಂದ ಪರಿಶೀಲಿಸಿದರೆ ಇಂದಿನ ನಮ್ಮ ರಾಷ್ಟ್ರ ಧ್ವಜದಲ್ಲಿ ಅಂಕಿತವಾಗಿರುವ ಅಶೋಕ ಚಕ್ರದಲ್ಲೂ ಗೂಢಾರ್ಥವಿದೆ. ಬದಲಾಗಬೇಕಾದುದೇ ಈ ಜಗದ ಧರ್ಮ. ಇಂದಿದ್ದದ್ದು ನಾಳೆ ಇರಲಾರದು. ನಾಳೆಯದ್ದು ನಾಡಿದ್ದು ಇರಲಾರದು. ಕವಿ ಬೇಂದ್ರೆಯವರ ಮಾತಿನಲ್ಲಿ ಹೇಳುವದಾದರೆ ಕಾಲಚಕ್ರವೆಂಬ ಹಕ್ಕಿಯ ಹಾರಾಟದಲ್ಲಿ ಯುಗಯುಗಗಳ ಹಣೆ ಬರಹ ಬದಲಾಗುತ್ತದೆ. ರಾಜರಾಜರು ಮಣ್ಣುಮುಕ್ಕುತ್ತಿದ್ದಾರೆ. ಕೆಳಗಿದ್ದವನು ಮೇಲೆ, ಮೇಲಿದ್ದವರು ಕೆಳಗಿಳಿಯುತ್ತಿದ್ದಾರೆ. ವಿವೇಕಾನಂದರು ಹೇಳಿದಂತೆ ಬ್ರಾಹ್ಮಣರ ಪೌರೋಹಿತ್ಯದ ಕಾಲ, ಕ್ಷತ್ರಿಯರ ತೋಳ್ಬಲದ ಕಾಲ, ವೈಶ್ಯರ ಕುಟಿಲತೆಯ ಕಾಲ ಕಳೆದಿದೆ. ಇದೀಗ ಶೂದ್ರರ ಅಂದರೆ ಕರ್ಮ ಮಾಡುವವರ ಕಾಲ. ದುಡಿವವರ ಕಾಲ.

ಇದಕ್ಕೆ ಚರಿತ್ರೆಯೇ ಸಾಕ್ಷಿನುಡಿಯುತ್ತಿದೆ. ಚರಿತ್ರೆಯ ಪುಟಗಳನ್ನು ನೋಡಿದರೆ ಕೀಳೆಂದವರು ಮೇಲಾಗಿದ್ದಾರೆ. ಮೇಲೆಂದವರು ಕೆಳಗಿಳಿದಿದ್ದಾರೆ. ಅಧಿಕಾರ ನಡೆಸಿದವರು ಕೆಳಗಿಳಿದಿದ್ದಾರೆ. ಅಧಿಕಾರಚಕ್ರದ ಗಾಲಿಯಲ್ಲಿ ಸಿಕ್ಕಿ ನರಳಿದವರು ಮೇಲೇರಿದ್ದಾರೆ. ನಮ್ಮ ಅಲ್ಪ ಕಾಲದ ಈ ಜೀವನದಲ್ಲಿಯೇ ಧನಿಕನೆಂದು ಮೆರೆದವರು ಭಿಕ್ಷೆ ಎತ್ತಿದುದನ್ನೂ, ಭಿಕ್ಷೆ ಎತ್ತುತಿದ್ದವರು ಸಂಪತ್ತಿನ ಶಿಖರಕ್ಕೇರಿದುದನ್ನೂ ಕಂಡಿದ್ದೇವೆ. ಸೂರ್ಯನು ಮುಳುಗದ ಸಾಮ್ರಾಜ್ಯ ಕಟ್ಟಿದವರು ಕೆಳಗಿಳಿಯುವದನ್ನೂ, ಕಾಲಿನ ಕಸವೆಂದು ಕಡೆಗಣಿಸಲ್ಪಟ್ಟವರು ಮೇಲೇಳುವದನ್ನೂ ಕಾಣುತ್ತಿದ್ದೇವೆ. ಆದ್ದರಿಂದಲೇ ಇದನ್ನು ನಶ್ವರ ಪ್ರಪಂಚವೆಂದು ಬುದ್ಧಿವಂತರು ಕರೆದುದು. ಈ ಪ್ರಪಂಚದ ಘಟನೆಗಳಿಂದ ಮಾನವನು ಬುದ್ಧಿ ಕಲಿಯಬೇಕು. ಇನ್ನೊಬ್ಬರ ಜೀವನದ ಪಾಠದಿಂದ ಅನುಭವ ಪಡೆದು ತನ್ನ ಜೀವನವನ್ನು ರೂಪುಗೊಳಿಸಬೇಕು. ಇನ್ನೊಬ್ಬನು ಮಾಡಿದ ತಪ್ಪನ್ನೇ ನಾವು ಪುನಃ ಮಾಡುತ್ತಿದ್ದರೆ ಇನ್ನೊಬ್ಬರಿಗೆ ದೊರೆತ ಪ್ರತಿಫಲವೇ ನಮಗೂ ದೊರೆಯುವದು!

ಒಂದು ಉದಾಹರಣೆ ಹೇಳುವೆನು. ಬ್ರಿಟಿಷರ ಆಡಳಿತ ಕಾಲದಲ್ಲಿ ಕಾಂಗ್ರೆಸ್ಸೆಂದರೆ ಕಣ್ಣು ಕೆಂಪಾಗುತಿತ್ತು. ಬಿಳಿ ಟೊಪ್ಪಿಯವನೊಡನೆ ಮಾತಾಡುವದು ಅಪರಾಧವಾಗುತಿತ್ತು. ಅಂಥಾವರ ಗೆಳೆತನ ತೊಂದರೆಗೆ ಎಡೆ ಮಾಡುತಿತ್ತು. ಆಗ ಅವಕ್ಕೆ ವಿರೋಧವಾಗಿ ನಾವು ಬೊಬ್ಬಿಟ್ಟೆವು. ಇದು ಸರಕಾರವಲ್ಲ; ವ್ಯಕ್ತಿಸ್ವಾತಂತ್ರ್ಯದ ಕೊಲೆಯೆಂದು ಉದ್ಗಾರ ತೆಗೆದೆವು. ಕಾಲವಾಹಿನಿಯ ಕ್ರಮದಂತೆ ಸೂರ್ಯನು ಅಸ್ತಂಗತನಾಗದ ಸಾಮ್ರಾಜ್ಯದಲ್ಲಿ ಸೂರ್ಯಾಸ್ತಮಾನವಾಯಿತು. ಹಿಂದೂದೇಶಕ್ಕೂ ಸ್ವಾತಂತ್ರ್ಯದ ಹೊಸ ಪ್ರಭಾತದ ಹೊಂಬೆಳಕು ಬಂತು. ಗದ್ದಿಗೆಯಿಂದಿಳಿದವರ ಬದಲು ನಾವು ಗದ್ದಿಗೆ ಏರಿ ನಮ್ಮದು ಪ್ರಜಾರಾಜ್ಯವೆಂದೆವು. ಆದರೆ ಪ್ರಜಾ ರಾಜ್ಯದಲ್ಲಿ ನಾವು ಮಾಡುತ್ತಿರುವದೇನು? ನಮ್ಮ ಮಾತಿಗೆ ಶಿರ ಬಾಗಿ ಗುಗ್ಗುಳಗಳಂತೆ ವರ್ತಿಸದವರ, ನಮಗಿಂತ ಭಿನ್ನವಾದ ರಾಜಕೀಯ ಅಭಿಪ್ರಾಯ ಇಟ್ಟುಕೊಂಡವರ ಬಗ್ಗೆ ನಮ್ಮ ನೀತಿ ಹೇಗಿದೆ? ಇಂದಿನ ಪ್ರಜಾರಾಜ್ಯದಲ್ಲಿ ಅಂಥವರೊಡನೆ ಮಾತಾಡುವದು ತಪ್ಪು. ಒಡನಾಡಿದರೆ 'ಪ್ರಮೋಶನ್' ರದ್ದು. ಗೆಳೆತನ ಮಾಡಿದರೆ ಇಲ್ಲದ ಕಿರುಕುಳ. ಹೀಗೆ ಬಳಸಿ ಹೇಳುವದಕ್ಕಿಂಥಾ ಒಂದು ಉದಾಹರಣೆಯನ್ನು ಕೊಡುವೆನು. ಬಡಜನರೊಂದು ಹೊಟ್ಟೆಯ ಪ್ರಾಪ್ತಿಗಾಗಿ ಅಧಿಕಾರಿಯೊಬ್ಬರ ಮಕ್ಕಳಿಗೆ 'ಟ್ಯೂಶನ್' ಹೇಳುತಿತ್ತು. ಮೊನ್ನೆಯಾಗಿ ನಮ್ಮ ರಾಜಕೀಯ ನಂಬಿಕೆಗೆ ಭಿನ್ನವಿರುವವರೊಬ್ಬರು ದೂರದ ಸ್ಥಳಕ್ಕೊಂದಕ್ಕೆ ಹೋಗಿ ಬಂದರು. ಹಲವು ದಿನಗಳ ವರೆಗೆ ಕಾಣದ ಬಡ ಸ್ನೇಹಿತನು ಆತನನ್ನು ಪ್ರಥಮ ಬಾರಿ ಕಂಡಾಗ ಕೈ ಕುಲುಕಿ ಆನಂದ ಪ್ರಕಟಗೊಳಿಸಿ ಕ್ಷೇಮ ಸಮಾಚಾರ ಮಾತಾಡಿದನು. ಗೋಡೆಗಳಿಗೂ ಕಿವಿ ಇರುವ ದಿನ ಇದಾದ್ದರಿಂದ ಈ ವಿಚಾರ ಅಧಿಕಾರಿಗಳ ಕಿವಿಗೆ ಬಿದ್ದಿತು. ಮರುದಿನ ಅಧಿಕಾರಿಗಳು ಬಡ ಅಧ್ಯಾಪಕರಿಗೆ "ಮಕ್ಕಳಿಗೆ ನೀನು ಪಾಠ ಹೇಳುವದು ಬೇಕಿಲ್ಲ"ವೆಂದು 'ಟ್ಯೂಶನ್' ಮನ್ನಾ ಮಾಡಿದರು. ಬ್ರಿಟಿಷರ ಕಾಲದ ಅಂದಿನ ವರ್ತನೆಗೂ ಇಂದಿನ ನಮ್ಮ ಈ ವರ್ತನೆಗೂ ಯಾವುದಾದರೂ ವ್ಯತ್ಯಾಸವಿದೆಯೇ? ಹಾಗಿರುವಾಗ ಕಾಲವಾಹಿನಿಯ ಧರ್ಮದಂತೆ ಹಿಂದಿನ ಅನುಭವದಿಂದ ಪಾಠ ಕಲಿಯದವರಿಗೆ ಸ್ವತಃ ಅನುಭವವನ್ನು ಕಾಲನೇ ಒತ್ತಾಯದಿಂದ ಒದ್ದು ಕಲಿಸಲಿಕ್ಕಿಲ್ಲವೇ? ಆದ್ದರಿಂದ ಕವಿಯೊಬ್ಬರು ಹಾಡಿದ ಈ ಕೆಳಗಿನ ವಿಚಾರವನ್ನು ಇವರು ಗಮನಿಸುವರೇ?

"ಬಡಜನರ ಸಲಿಮುಗಿಸಿ ಹಿರಿ ದಾಗಿ ತೋಳ್ಬೆಳೆಸಿ
ಭೋರ್ಗರೆವ ಕಡುಕೋಪಿ ಧನಿಕ ಬಂಧು
ಇಳೆಯಿಂದ ಜಲಕಣದ ಮೇಲೊಯ್ದ ಹೇ ಮುಗಿಲೆ
ಗರ್ಜಿಸುವೆ ಗುಡುಗುಡಿಸಿ ಏಕೆ ನೀನು?
ಬೇರಬಲದಲಿ ನಿಂದು ಬಾನಿನಲಿ ಸಲೆ ಬೆಳೆದು
ಹಿರಿದು ಸುಂದರನೆಂದು ಬೀಗಿ ಮೆರೆವ ಓ ಮರವೆ
ಕಿರಿಚದಿರು ಘನನೆಂದು ತಿಳಿಯೊ ಮೇಣ್ ಸತ್ಯವನು
ಬೇರಿನಿಂದಲೆ ನಿನ್ನ ಬಾಳು ಬದುಕು."

ಬಟ್ಟೆಯ ನಿಯಂತ್ರಣ ರದ್ದು!

— ಎಂದಾಗ —

ನಿರಾತಂಕವಾದ ಸತ್ಪರಿಣಾಮದ ಸರ್ಧೆಯ
ವ್ಯಾ ಪಾ ರ ವು
ಪುನಃ ಮೊದಲಿನಂತೆಯೇ ಪ್ರಾರಂಭ!!

ಈಗಿನ ಮಾರ್ಪಾಟಾದ ಪರಿಸ್ಥಿತಿಯಲ್ಲಿ

ನಾವು

ನಮ್ಮ ಗ್ರಾಹಕ ವರ್ಗದವರಿಗೆ

○ ಮನ ಮೆಚ್ಚುವ ಸೇವೆ —
⊕ ಉತ್ತಮ ಆಯ್ಕೆಗೆ ಆಸ್ಪದ —
● ಅತ್ಯುತ್ತಮ ಸ್ಪರ್ಧೆಯ ಬೆಲೆ —

ಇವುಗಳಿಂದ ಇನ್ನೂ ಹೆಚ್ಚಿನ ಸೇವೆಗೆ
ಬದ್ಧ ಕಂಕಣರಾಗಿರುವೆವೆಂದು ಆಶ್ವಾಸನೆ-
ಯನ್ನೀಯಲು ಸಂತೋಷಪಡುತ್ತೇವೆ.

ಆ ದು ದ ರಿಂ ದ

ನಾವು

ತಮ್ಮ ಸೇವೆಯನ್ನು ಇನ್ನೂ ಉತ್ತಮ ರೀತಿಯಲ್ಲಿ
ಹೇಗೆ ಸಲ್ಲಿಸಬಹುದೆಂದು ದಯಮಾಡಿ ತಿಳಿಸುವಿರಾ?

ಚಂದ್ರಾನಾ ಮತ್ತು ಕಂಪೆನಿ,

ಮ ಡಿ ಕೇ ರಿ.

॥ ಜ್ಞಾನದೀಪ ॥

(೧)

ಹಾವಿನ ಹೆಡೆಯಡಿಯ ಛಾಯೆ ನೆರಳಾಗದು. ಕಲುಷ ಬುದ್ಧಿಯವನ ದಯೆ ಆಶ್ರಯವಾಗದು.

(೨)

ಹೂತೋಟ ನೋಡಿ ಸಂತೋಷ ಪಟ್ಟರೆ ಹೂ ಮುಡಿದಂತಲ್ಲ. ಅನುಯಾಯಿಗಳ ಬಲ ಎಷ್ಟೇ ಇದ್ದರೂ ಆತ್ಮ ಬಲ ದೊರೆತಂತಲ್ಲ.

(೩)

ಕಣ್ಣೀರನ್ನು ತಣಿಸಲೆಳಸುವದು ಹೇಗೆ ವ್ಯರ್ಥವೋ ಹಾಗೆಯೇ ವಿಚಾರಿಗಳ ವಾದವನ್ನು ವಿಮರ್ಶಿಸಲಿಳಿಯುವುದು ನಿರರ್ಥ.

೧೮-೯-'೫೩ನೇ ಕೊಡಗು ಶುಕ್ರವಾರ.

ವಿದ್ಯುಕ್ಛಕ್ತಿಯ ವಿಚಾರ.

ಕೊಡಗಿಗೆ ಮೈಸೂರಿನಿಂದ ವಿದ್ಯುಕ್ಛಕ್ತಿಯನ್ನು ತರುವ ಯೋಜನೆಯು ನಾಲ್ಕೈದು ವರ್ಷಗಳಿಂದ ರೂಪಿಸಲ್ಪಡುತ್ತಿದ್ದು ಕಳೆದ ವರ್ಷ ಮೈಸೂರಿನೊಡನೆ ಈ ವಿಚಾರದಲ್ಲಿ ಒಪ್ಪಂದವಾಯಿತೆಂದೂ ಸುಮಾರು ೩೫ ಲಕ್ಷ ರೂಪಾಯಿಗಳ ವೆಚ್ಚ ಈ ಯೋಜನೆಗೆ ತಗಲುವದೆಂದೂ, ಎಲ್ಲಾ ಶರತು ಒಪ್ಪಂದಗಳಾಗಿ ಅದು ಕಾರ್ಯರೂಪಕ್ಕಿಳಿಯುವದೇ ಉಳಿದಿರುವದೆಂದೂ ವರ್ತಮಾನಗಳು ಪ್ರಕಟವಾಗಿದ್ದವು. ಆದರೆ ಅದು ಅಲ್ಲಿಗೇ ನಿಂತಂತೆ ಕಾಣುತ್ತಿದೆ. ಮೈಸೂರಿನಿಂದ ವಿದ್ಯುಕ್ಛಕ್ತಿ ತರುವ ಕೆಲಸವು ಪ್ರಾರಂಭವಾದಂತೆ ತೋರುವದಿಲ್ಲ. ಇದರ ಮಧ್ಯೆ ಬರಪೊಳೆ ಯೋಜನೆಯ ಮಾತು ಬಹು ದೊಡ್ಡದಾಗಿ ಕೇಳಿಬರತೊಡಗಿತು. ಡೆಲ್ಲಿಯ ವರೆಗೂ ಈ ಸದ್ದು ತಲಪಿ ಆ ಯೋಜನೆಯ ಪರಿಶೀಲನೆ ನಡೆಯುತ್ತಿದೆ. ಆ ಯೋಜನೆಯನ್ನು ಒಪ್ಪಿ ಅದರ ಕೆಲಸಕ್ಕೆ ಕೈಕೊಂಡರೂ ಕ್ಷಿಪ್ರದಲ್ಲಿ ಕೊಡಗಿಗೆ ವಿದ್ಯುಕ್ಛಕ್ತಿ ದೊರೆಯುವ ಸಂಭವವಿಲ್ಲದ ಕಾರಣ ಮೈಸೂರಿನಿಂದ ವಿದ್ಯುಕ್ಛಕ್ತಿ ತರುವ ವಿಚಾರದಲ್ಲಿ ಹೆಚ್ಚಿನ ಶ್ರದ್ಧೆವಹಿಸುವದು ಅವಶ್ಯವಿತ್ತು. ಏಕೆಂದರೆ ಇಂದಿನ ಯುಗದಲ್ಲಿ ಮಾನವನ ಜೀವನದಲ್ಲಿ ವಿದ್ಯುಕ್ಛಕ್ತಿಯು ಅನಿವಾರ್ಯ ವಸ್ತುವಾಗಿದೆ. ಕೈಗಾರಿಕೆ ಬೆಳೆಯಲು, ಆಧುನಿಕ ಸಲಕರಣೆಗಳ ಲಾಭ ಪಡೆಯಲು ವಿದ್ಯುಕ್ಛಕ್ತಿ ಅತ್ಯಾವಶ್ಯಕ. ಅಂತಿರುವಾಗ ಕೊಡಗಿನ ಸರಕಾರವು ಈ ವಿಚಾರದಲ್ಲಿ ಎಲ್ಲಿಗೆ ತಲಪಿದೆ, ಎಂದು ತಿಳಿಸುವುದು ಉತ್ತಮ. ಒಂದು ವರ್ಷದೊಳಗೆ ಮೈಸೂರಿನಿಂದ ವಿದ್ಯುತ್ ದೊರೆಯುವದೆಂದೂ, ಕೊಡಗಿನ ವಿವಿಧ ಪಟ್ಟಣ, ಹಳ್ಳಿಗಳು ವಿದ್ಯುಕ್ಛಕ್ತಿನಿಂದ ಬೆಳಗುವವೆಂದೂ ಆಸೆಯನ್ನು ತುಂಬಿಕೊಳ್ಳಲಾಗಿತ್ತು. ಆದರೆ ಆ ಆಸೆ ಈ ವರೆಗೆ ಕೈಗೂಡಿರುವದಿಲ್ಲ ಸರಕಾರವು ತಾವು ಮೈಸೂರಿನೊಡನೆ ಮಾಡಿದ ಒಪ್ಪಂದವನ್ನು ಜಾರಿಗೆ ತರಲು ಏನು ಮಾಡಿದೆಯೆಂದು ಜನತೆಗೆ ತಿಳಿಸಬೇಕಿದೆ.

ಕೊಡಗಿನ ಮುಖ್ಯ ಪಟ್ಟಣವಾದ ಮಡಿಕೇರಿಯಲ್ಲಿ ಒಂದು ಚಿಕ್ಕ ಇಲೆಕ್ಟ್ರಿಕ್ ವ್ಯವಸ್ಥೆಯೊಂದು ಮಡಿಕೇರಿಗೆ ಬೆಳಕು ಕೊಡುತ್ತಿತ್ತು. ಸುಮಾರು ಹನ್ನೆರಡು ವರ್ಷಗಳ ಹಿಂದೆ ಸ್ಥಾಪಿತವಾದ ಈ ಕಂಪೆನಿಯ ಬೆಳಕಿನ ವ್ಯವಸ್ಥೆ ಚೆನ್ನಾಗಿ ನಡೆಯದೆ ಇತ್ತಲಾಗಿ ಒಂದೆರಡು ವರ್ಷಗಳಿಂದ ಬಹು ತೊಂದರೆಯಾಗಿದೆ. ಮನುಷ್ಯನ ಆರೋಗ್ಯಕ್ಕೆ ಆಹಾರ, ಬಟ್ಟೆ, ಗಾಳಿ, ನೀರುಗಳಂತೆಯೇ ಬೆಳಕೂ ಅತ್ಯಾವಶ್ಯಕ. ಮಡಿಕೇರಿಯಲ್ಲಿ ಆರೋಗ್ಯಕರವಾದ ಗಾಳಿಗೆ ತೊಂದರೆಯಿಲ್ಲ. ನೀರಿನ ಅಭಾವವೂ ಈ ವರ್ಷದ ಹೆಚ್ಚಿನ ಮಳೆಯಿಂದ ನೀಗಿದೆಯೆನ್ನಬಹುದು. ಮತ್ತೆ ಬೆಳಕಿನ ವಿಚಾರದಲ್ಲಿ ತೊಂದರೆ ವಿಪರೀತವಿದೆ. ಕಳೆದ ಮಳೆಗಾಲದಲ್ಲಿ, ಮತ್ತೆ ಈಗಲೂ ಜೀವಿಸುತ್ತಿರುವ ಮಡಿಕೇರಿ ಜನ ಕಗ್ಗತ್ತಲ ರಾತ್ರೆಯಲ್ಲಿ ಜೀವಿಸಬೇಕಿದೆ. ರಸ್ತೆಗಳಿಗೆ ದೀಪವಿಲ್ಲ. ಮನೆಗಳಲ್ಲಿ ಚಿಮಿಣಿ ಬೆಳಕೇ ಆಧಾರವಾಗಿದೆ. ಈ ಪರಿಸ್ಥಿತಿಯನ್ನು ನಿವಾರಿಸಿ ಮಡಿಕೇರಿ ಪುರಜನರಿಗೆ ಬೆಳಕು ಕೊಡಲು ಸರಕಾರವು ಮುಂದೆ ಬಂದು ಅವ್ಯವಸ್ಥೆಯಲ್ಲಿದ್ದ ಕಂಪೆನಿಯನ್ನು ರೂ. ೭೫,೦೦೦/ ಕ್ಕೆ ಪಡೆದುಕೊಂಡು ಹೊಸ ಇಂಜನುಗಳನ್ನು ತಂದು ಸಿದ್ಧಗೊಳಿಸುತ್ತಿರುವದು ಯೋಗ್ಯವೆನ್ನಬಹುದು. ಇದು ಈ ಮೊದಲೇ ಆಗಬೇಕಿತ್ತು. ಇನ್ನಾದರೂ ಶೀಘ್ರ ಕೈಗೂಡಲಿ.

ಈ ವಿಚಾರದಲ್ಲಿ ಒಂದು ಮಾತು ಹೇಳಬೇಕಿದೆ. ಕಾರ್ಖಾನೆಗಳನ್ನು, ವಿದ್ಯುತ್ ಇಂಜಿನುಗಳನ್ನು ಜನರು ವಾಸವಿರುವ ಕಡೆ ಸ್ಥಾಪಿಸುವುದು ಯೋಗ್ಯವಲ್ಲ. ಪಟ್ಟಣದ ಜನರ ಆರೋಗ್ಯಕ್ಕೂ ಅದರಿಂದ ಹಾನಿ ಇದೆ. ಆದ್ದರಿಂದ ಈಗ ಇರುವ ಸ್ಥಳವನ್ನು ಬದಲಾಯಿಸಿ ವಾಸದ ಮನೆಗಳಿಂದ ಸ್ವಲ್ಪ ದೂರದಲ್ಲಿ ಸ್ಥಾಪಿಸಿದ್ದರೆ ಯೋಗ್ಯವಿತ್ತು.

ವರ್ತಮಾನ.

ಬೆಂಗಳೂರಿನಿಂದ ರಿಕ್ರೂಟಿಂಗ್ ಆಫೀಸರರು ಕೊಡಗಿನಲ್ಲಿ ಈ ಕೆಳಗೆ ತೋರಿಸಿರುವ ದಿನಗಳಲ್ಲಿ ನೊಕ್ಕಾಂ ಮಾಡುವರು. ೨೧-೯-೧೯೫೩ ರಲ್ಲಿ ವೀರಾಜಪೇಟೆಯಲ್ಲೂ, ೨೨-೯-೫೩ ರಲ್ಲಿ ನಾಪೋಕ್ಲಿನಲ್ಲಿಯೂ, ೨೩-೯-೫೩ ರಲ್ಲಿ ಮಡಿಕೇರಿಯಲ್ಲಿಯೂ ಇರುವರು. ಸೈನ್ಯಕ್ಕೆ ಸೇರಲು ಕುತೂಹಲವುಳ್ಳವರು ಮೇಲೆ ತೋರಿಸಿರುವ ದಿನಗಳಲ್ಲಿ ಆಯಾ ಸ್ಥಳಗಳಲ್ಲಿ ಹಾಜರಾಗತಕ್ಕದ್ದು.

ಕಾವೇರಿ ತೀರ್ಥೋದ್ಭವ.

ಬರುವ ಅಕ್ಟೋಬರ್ ತಾರೀಕು ೧೭ ನೇ ಕನ್ಯಾಮಾಸ ತೇದಿ ೩೧ನೇ ನವಮಿಯು ಶನಿವಾರ ಶ್ರಾವಣ ನಕ್ಷತ್ರದ ಸೂರ್ಯೋದಯವಾದ ೯ ಗಂಟೆ ೬ ನಿಮಿಷಕ್ಕೆ ಸರಿಯಾಗಿ ತುಲಾ ಸಂಕ್ರಮಣ ತೀರ್ಥೋದ್ಭವವಾಗುವದು.

ಪೂನಾದಲ್ಲಿರುವ ಕೊಡಗರು ಕೈಲು ಮುಹೂರ್ತ ಹಬ್ಬವನ್ನು ತಾ ೩೧ ರಲ್ಲಿ ಶ್ರೀ. ಮುಕ್ಕಾಟಿರ ಸಿ. ಪಂತ್ರಣ್ಣನವರ ಅಧ್ಯಕ್ಷತೆಯಲ್ಲಿ ಮೇಜರ್ ಕೋದಂಡ ಸೋಮಯ್ಯನವರ ಭವನದಲ್ಲಿ ನಡೆಸಿದರು. ಸದ್ಯದಲ್ಲೇ ಇಂಗ್ಲೆಂಡಿಗೆ ಹೋಗಲಿರುವ ಮೇಜರ್ ಕೋದಂಡ ಸೋಮಯ್ಯನವರಿಗೆ ಪೂನಾದ ಕೊಡಗರು ಒಂದು ಸತ್ಕಾರಕೂಟವನ್ನು ಕೊಟ್ಟರು.

ಬೊಂಬಾಯಿಯಲ್ಲಿರುವ ಕೊಡಗರು ತಾ. ೬ ರಲ್ಲಿ ಬೊಂಬಾಯಿಯ ಸೆಂಟ್ ಅಂತೋಣಿ ಶಾಲೆಯಲ್ಲಿ ಕೊಡಗಿನ ಕೈಲ್ ಮುಹೂರ್ತಹಬ್ಬವನ್ನು ಆಚರಿಸಿದರು.

ತಾರೀಕು ೧೮ ರಲ್ಲಿ ಬೆಳಿಗ್ಗೆ ೧೧ ಗಂಟೆಗೆ ಕೊಡಗು ಶಾಸನ ಸಭಾಂಗಣದಲ್ಲಿ ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ೧೯೫೩-೫೪ ರಲ್ಲಿ ಕ್ಷಯರೋಗ ನಿವಾರಣಾ ಸೀಲುಗಳನ್ನು ಮಾರಾಟ ಮಾಡುವ ವ್ಯವಸ್ಥೆಯನ್ನು ಮಾಡಲು ಒಂದು ಮೀಟಿಂಗು ನಡೆಯುವದು. ತಾ. ೨-೧೦-೫೩ ರಿಂದ ಸೀಲುಗಳ ಮಾರಾಟ ಪ್ರಾರಂಭವಾಗುವದು.

ತಾ. ೧-೯-೫೩ ರಲ್ಲಿ ಹೆಬ್ಬಾಲೆ ಛಹೆಚ್. ಕ್ಲಬ್ಬಿನ ವಿದ್ಯಾರ್ಥಿ ಕೃತ ಸಂಘದ ವಿದ್ಯಾರ್ಥಿಗಳು ಹೆಬ್ಬಾಲೆ ಗ್ರಾಮದ ಶ್ರೀ. ಜಿ ಎಂ. ಲಿಂಗರಾಜಯ್ಯ, ಮೇಗಳ ಮನೆ ಅಣ್ಣಯ್ಯ ಇವರ ಗದ್ದೆಗಳಲ್ಲೂ, ತಾ. ೮-೯-೫೩ ರಲ್ಲಿ ಕಣಿವೆ ಶ್ರೀ ಆರ್. ಕೆ. ಸುಬ್ಬಾವಧಾನಿಗಳ ಗದ್ದೆಯಲ್ಲೂ ಸಮಾಜ ಸೇವಾದೃಷ್ಟಿಯಿಂದ ಅಂದಾಜು ೨½ ಎಕ್ರೆ ನಾಟಿ ಮಾಡಿದರು.

ಈ ಹಿಂದೆ ಇದ್ದ ಉತ್ತರ ಕೊಡಗು ಮತ್ತು ದಕ್ಷಿಣ ಕೊಡಗು ಎರಡು ತಾಲೋಕು ಸುಭೆದಾರರ ಬದಲು ಮೂರು ತಾಲೋಕು ಸುಭೆದಾರರ ಏರ್ಪಾಡು ಮಾಡಿ ಸೋಮವಾರಪೇಟೆಗೆ ಶ್ರೀ ಹೆಮ್ಮಚಿ ಮನೆ ಅಪ್ಪಣಮ್ಮಯ್ಯನವರನ್ನೂ, ಮಡಿಕೇರಿಗೆ ಶ್ರೀ ಕಾಳಮಾಡ ಚಿಟ್ಟಿಯಪ್ಪನವರನ್ನೂ, ವೀರಾಜಪೇಟೆಗೆ ಶ್ರೀ ನಾಯಕಂಡ ಉತ್ತಯ್ಯನವರನ್ನೂ ನೇಮಿಸಲಾಗಿದೆಯೆಂದು ತಿಳಿಯಬರುತ್ತದೆ.

ನಾಗರಹೊಳೆ ರೇಂಜಿನಲ್ಲಿ ಕಳ್ಳತನದ ಮರ ಮಾರಾಟವಾಗಿದೆಯೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವಿಚಾರದಲ್ಲಿ ಕೂಲಂಕುಶವಾದ ಸಾರ್ವಜನಿಕ ವಿಚಾರಣೆ ನಡೆಸಿ ಸರಕಾರಕ್ಕೆ ವರದಿ ಮಾಡಲು ಶ್ರೀ ಎಂ. ಎನ್. ಗುಂಡುರಾಯರನ್ನು ಸ್ಪೆಶಲ್ ವಿಚಾರಣಾ ಆಫೀಸರರಾಗಿ ನೇಮಿಸಿರುವರೆಂದು ತಿಳಿದು ಬಂದಿದೆ.

ಕಾಫಿ ವ್ಯವಸಾಯದ ಖರ್ಚು ಮತ್ತು ಉತ್ಪಾದನೆಯ ವಿಚಾರವನ್ನು ಪರಿಶೀಲಿಸಲು ತಾ. ೧೭ರಲ್ಲಿ ಮದ್ರಾಸಿನಲ್ಲಿ ನಡೆಯುವ ಮದ್ರಾಸು, ಮೈಸೂರು, ತಿರುವಾಂಕೂರು ಮತ್ತು ಕೊಡಗು ಪ್ರಾಂತ್ಯಗಳ ಮಂತ್ರಿಗಳ ಮೀಟಿಂಗಿಗೆ ಕೊಡಗಿನ ಮುಖ್ಯ ಮಂತ್ರಿಯವರು ತಾ. ೧೬ರಲ್ಲಿ ಹೋಗಿರುವರು.

೫ನೇ ಫಾರಂ ಓದಿದವರು ಮತ್ತು ಐದನೇ ತರಗತಿ ಓದಿ ಪ್ರಾಯ ೧೭ ರಿಂದ ೨೫ ರ ವರೆಗೆ ಇದ್ದು ನೇಯಿಗೆ ಕೆಲಸದಲ್ಲಿ ಚೆನ್ನಾಗಿ ಮಾಹಿತಿ ಇರುವವರು ನೇಯಿಗೆ ಅಧ್ಯಾಪಕರು (ಇನ್ಸ್ಟ್ರಕ್ಟರ್) ಮತ್ತು ಅಟೆಂಡರ್ ಕೆಲಸಗಳಿಗೆ ಬೇಕಾಗಿರುವರು. ಅರ್ಜಿದಾರರು ೨೩-೯-೫೩ ರಲ್ಲಿ ಮಡಿಕೇರಿ ಎಂಪ್ಲಾಯಿಮೆಂಟ್ ಆಫೀಸಿಗೆ ಪ್ರಾತಃಕಾಲ ೯ ಘಂಟೆಗೆ ಹಾಜರಾಗತಕ್ಕದ್ದು.

ಹೆಚ್ಚಿನ ಮಳೆಗಾಲದಿಂದ ಈ ವರ್ಷ ನಾಟಿಯ ಕೆಲಸವು ಕೆಲವು ಕಡೆಗಳಲ್ಲಿ ನಿಧಾನವಾಗಿರುತ್ತದೆ. ಇದರಿಂದಾಗಿ ಬೆಳೆಯ ಬೆಳವಣಿಗೆಯು ಸರಿಯಾಗಿರುವುದಿಲ್ಲ. ವ್ಯವಸಾಯಗಾರರು ಅಕ್ಟೋಬರ್ ತಿಂಗಳ ಕೊನೆಯವರೆಗೂ ಬೆಳೆಗಳ ಬೆಳವಣಿಗೆಯನ್ನು ಸರಿಪಡಿಸಿ ಉತ್ಪತ್ತಿಯನ್ನು ಹೆಚ್ಚಿಸಬಹುದು. ಇದಕ್ಕಾಗಿ ಅಮೋನಿಯಮ್ ಸಲ್ಫೇಟ್ ಗೊಬ್ಬರವನ್ನಾಗಲೀ ಅಥವಾ ವ್ಯವಸಾಯ ಡಿಪೋಗಳಲ್ಲಿ ಸಿಗಬಹುದಾದ ಇನ್ನಿತರ ಗೊಬ್ಬರಗಳನ್ನಾಗಲೀ ಭೂಮಿಗೆ ಮಿಶ್ರ ಮಾಡಿ ಕೈಯಿಂದಾಗಲೀ ಅಥವಾ ಬೇರೆ ಯಾವ ತರಹದ ಹತ್ಯಾರದಿಂದಾಗಲೀ ಕದಡಿಸಿದರೆ ಕಣೆಗಳು ಹೆಚ್ಚು ಹೆಚ್ಚಾಗಿ ಹೊರಟು ದೋಂಟು ಬೆಳೆಯುವುದನ್ನು ತಡೆಗಟ್ಟುತ್ತದೆ ಎಂದು ವ್ಯವಸಾಯ ಇಲಾಖೆಯವರು ತಿಳಿಸುತ್ತಾರೆ.

ನಾಪೋಕ್ಲು ಪೋಲೀಸ್ ಸಬ್ ಇನ್ಸ್‌ಪೆಕ್ಟರು ಮತ್ತು ಕೆಲವು ಕಾನ್ಸ್ಟೇಬಲ್‌ಗಳೊಡನೆ ಕಳವು ಕೇಸಿನ ಸಂಬಂಧ ಶ್ರೀ ಇಗ್ಗುಡ ಪೊನ್ನಪ್ಪನೆಂಬುವವರ ಮನೆಯಲ್ಲಿ ಅವರನ್ನು ದಸ್ತಗಿರಿ ಮಾಡಬೇಕೆಂದಿರುವಷ್ಟರಲ್ಲಿ ಪೊನ್ನಪ್ಪನು ಪೋಲೀಸರನ್ನು ಕತ್ತಿಯಿಂದ ಕಡಿದು ಓರ್ವ ಕಾನ್ಸ್ಟೇಬಲರಿಗೆ ತುಂಬಾ ಗಾಯವಾಗಿದೆಯೆಂದೂ, ಹೆಡ್ ಕಾನ್ಸ್ಟೇಬಲರೊಬ್ಬರಿಗೂ ಸ್ವಲ್ಪ ಗಾಯವಾಗಿದೆಯೆಂದೂ ಪೊನ್ನಪ್ಪನ ದಸ್ತಗಿರಿಯಾಗಿ ತನಿಖೆ ನಡೆಯುತ್ತಿದೆಯೆಂದೂ ತಿಳಿದು ಬಂದಿದೆ.

ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿರುವ ಶ್ರೀ. ಅಜ್ಜಿಕುಟ್ಟಿರ ಎಂ. ಅ

ಮಲೆನಾಡಿನವರ ಕಷ್ಟ.

ಈ ವರ್ಷ ಮಲೆನಾಡಿನವರಿಗೆ ಆದ ನಷ್ಟ ಕಷ್ಟ ಒಂದೆರಡಲ್ಲ. ಮಳೆಯಿಂದಾಗಿ ಭೂಮಿಗಾದ ನಷ್ಟ ಒಂದೆಡೆಯಾದರೆ ಹಳ್ಳಿಗನ ಜೀವನಾಧಾರವಾದ ದನಕರುಗಳು ಸತ್ತು ವಿಪರೀತ ನಷ್ಟವಾಗಿದೆ. ಎಂದೂ ಕಾಣದ ಗಂಟಲು ರೋಗವೊಂದು ಈ ನಾಡಿನಲ್ಲಿ ಪ್ರಾರಂಭವಾಗಿ ಶೇಕಡ ಇಂತಿಷ್ಟು ದನಗಳು ಸತ್ತಿವೆಯೆಂದರೆ ಉತ್ಪ್ರೇಕ್ಷೆಯಾಗಲಾರದು.

ಸರಕಾರವು ಕೊಟ್ಟಿರುವ ಚಾಕುವಾರು ವೈದ್ಯ ಶಾಲೆಯು ಮಲೆನಾಡಿನ ಹೆಚ್ಚಿನ ಜನರಿಗೆ ಪ್ರಯೋಜನಕಾರಿಯಾಗಿರುವುದಿಲ್ಲ. ಏಕೆಂದರೆ ಅದು ಮಲೆನಾಡಿನ ಒಂದು ಮೂಲೆಯಲ್ಲಿದೆ. ಆಸ್ಪತ್ರೆಯಲ್ಲೂ ಸಾಕಷ್ಟು ಔಷಧ ಹಾಗೂ ದಕ್ಷ ಡಾಕ್ಟರರ ವ್ಯವಸ್ಥೆ ಇಲ್ಲ. ಇದೇ ರೀತಿ ಜನರ ಆಸ್ಪತ್ರೆಯ ಕೂ

ಪ್ಪಣ್ಣನವರು ಕಾಲೇಜ್ ವಾರ್ಷಿಕ ಆಟೋಟಗಳ ಸ್ಪರ್ಧೆಯಲ್ಲಿ ಛಾಂಪಿಯನ್ ಶಿಪ್ಪನ್ನು ಪಡೆದಿರುವರು.

ತಾರೀಕು ೧೪ರಲ್ಲಿ ಮಡಿಕೇರಿ ಪಟ್ಟಣದಲ್ಲಿ ಭಾರತ ಸೇವಕ ಸಮಾಜದ ಶಾಖೆಯ ಪ್ರಾರಂಭೋತ್ಸವವು ಇಲ್ಲಿಯ ಮುಸ್ಲಿಂ ಶಾಲೆಯಲ್ಲಿ ಕೊಡಗಿನ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕೊಡಗು ಶಾಸನ ಸಭೆಯು ಸೆಪ್ಟೆಂಬರು ತಾ. ೨೨ರಲ್ಲಿ ಪ್ರಾರಂಭವಾಗಿ ತಾರೀಕು ೨೪ರಲ್ಲಿ ಸರಕಾರಿ ಮಸೂದೆ ವಗೈರೆಗಳ ಚರ್ಚೆಯೂ, ತಾ. ೨೫ರಲ್ಲಿ ಖಾಸಗಿ ಠರಾವುಗಳ ಚರ್ಚೆಯೂ ನಡೆಯುವದೆಂದು ತಿಳಿಯಬರುತ್ತದೆ.

ANNOUNCEMENT

Do not Miss to see QUEEN ELIZABETH'S CORONATION NEWSREEL shown along with regular programme at Cauvery Mahal. Mercara from the 18th September for one week.

MANAGER,
Cauvery Mahal.

ಸತ್ಕಾರ ಕೂಟದ ಖರ್ಚು.

ಭಾರತದ ಮಾಜಿ ಸೈನ್ಯಾಧಿಕಾರಿಯಾದ ಜನರಲ್ ಕಾರ್ಯಪ್ಪನವರಿಗೆ ನಾಪೋಕ್ಲಿನಲ್ಲಿ ಕೊಟ್ಟ ಸತ್ಕಾರ ಕೂಟದ ಬಗ್ಗೆ ವಸೂಲ್ಮಾಡಿದ ಹಣದ ಲೆಕ್ಕ ಹೀಗಿದೆ.

ಜಮೆಯಾದ ಒಟ್ಟು ಹಣ ರೂ. ೩೫೭—೦—೦
ಸತ್ಕಾರಕ್ಕೆ ಆದ ಖರ್ಚು ,, ೩೪೫-೧೦-೬

ಬಾಕಿ ರೂ. ೧೦—೫—೬

ಈ ಬಾಕಿಯನ್ನು ನಾಪೋಕ್ಲು ನಾಡು ಸ್ಪೋರ್ಟ್ಸ್ ಕ್ಲಬ್ಬಿಗೆ ಕೊಡಲಾಗಿದೆ.

ಪಿ. ಪಿ ಅಪ್ಪಚ್ಚು, ನಾಪೋಕ್ಲು.

ದಬೊಂದು ಮೂಲೆಯಲ್ಲಿರುವವರಿಂದ ಹೆಚ್ಚಿನ ಪ್ರಯೋಜನ ಆಗುತ್ತಿಲ್ಲ.

ಮಲೆನಾಡಿಗೆ ಈ ಮೊದಲೊಮ್ಮೆ ಮುಖ್ಯ ಮಂತ್ರಿಗಳು ಬಂದುದ್ದಾಗ್ಯೂ ಮಲೆನಾಡನ್ನು ಹೊಗಳಿದ್ದರು. 'ನೀನು ಸಾಕುತ್ತೀ, ಚಿತ್ತದ ಕೆಲಸ ಮಾಡುತ್ತೀರಿ, ಆದಾಯ ತುಂಬಾ ಇದೆ'ಯೆಂದಿದ್ದರು. ಆದರೆ ಪರಿಸ್ಥಿತಿ ಹಾಗಿಲ್ಲ. ನಮ್ಮ ಕಷ್ಟ ಜೀವನವನ್ನು ನೋಡಿಯೇ ತಿಳಿಯಬೇಕು.

ಈ ನಾಡಿನ ಸುಮಾರು ೩೦ಕ್ಕೂ ಮಿಕ್ಕಿ ವಿದ್ಯಾರ್ಥಿಗಳು ಹೈಸ್ಕೂಲಿನಲ್ಲಿ ಓದುತ್ತಿದ್ದಾರೆ. ಪ್ರತಿವಾರ ಅವರು ಮನೆಗೆ ಬರಬೇಕಾದರೆ ಯೋಗ್ಯ ಸೇತುವೆಯು ಯಾವ ಹೊಳೆಗೂ ಇಲ್ಲದ ಕಾರಣ ಆ ತೊಂದರೆ ಹೇಳಲಸಾಧ್ಯ. ಶಾಲೆಗೆ ಹೋಗುವ ಮಕ್ಕಳೇ ಹೊಳೆಗೆ ಪಾಲ ಹಾಕಿ ಶಾಲೆಗೆ ಕಷ್ಟದಿಂದ ಹೋಗುವ ಪರಿಸ್ಥಿತಿ ಒದಗಿದೆ. ಸರಕಾರದವರು ಈ ನಾಡಿನ ಕಡೆ ಗಮನ ಕೊಡಬೇಕು. ಮಲೆನಾಡು ದೂರದಲ್ಲಿದೆಯೆಂದು ಸರಕಾರದ ದೃಷ್ಟಿಯಿಂದಲೂ ದೂರ ಮಾಡಬಾರದು. ಚೆಂಣಪ್ಪ

ವೀರಾಜಪೇಟೆ ತೆಲುಗರ ಬೀದಿ.

ಈ ತಿಂಗಳ ಮೊದಲಲ್ಲಿ 'ತೊಂದರೆಗೊಳಗಾದವ'ರೆಂಬ ಒಬ್ಬರು ವೀರಾಜಪೇಟೆ ಮುನ್ಸಿಪಾಲಿಟಿಯವರು ತೆಲುಗರ ಬೀದಿಯಲ್ಲಿ ವಾಸಮಾಡುವವರಿಗೆ ನೀರಿನ ಏರ್ಪಾಡಿಗಾಗಿ ಯಾವುದೊಂದು ವ್ಯವಸ್ಥೆಯನ್ನು ಈ ವರೆಗೆ ಮಾಡಿಲ್ಲವೆಂದೂ ಮತ್ತು ಆ ಬೀದಿಯಲ್ಲಿರುವವರು ನೀರಿಗಾಗಿ ಪಡುತ್ತಿರುವ ಕಷ್ಟವನ್ನು ಪುರಸಭೆಯ ಅಧ್ಯಕ್ಷರು ಮತ್ತು ಕಮಿಟಿಯವರು ನೋಡಿಕೊಂಡು ಸಂತೋಷಪಡುತ್ತಿದ್ದಾರೆಂದೂ ಬರೆದಿರುವ ಲೇಖನದಲ್ಲಿ ಸ್ವಲ್ಪವೂ ಸತ್ಯಾಂಶವಿರುವುದಿಲ್ಲ.

ತೆಲುಗರ ಬೀದಿಯಲ್ಲಿ ಬಾವಿ ತೋಡಿಸಿಕೊಡಬೇಕೆಂದು ಕಮಿಟಿಯವರು ಹಿಂದೆಯೇ ಚರ್ಚಿಸಿ ಈ ಬೀದಿಯಲ್ಲಿ ಬಾವಿ ತೆಗೆಸಲು ಸರಿಯಾದ ಸ್ಥಳ ವಗೈರೆಯನ್ನು ಆಜಮಾಯಿಸಿ ಮಾಡಲು ಒಂದು ಸಬ್ ಕಮಿಟಿಯನ್ನು ಮಾಡಿದರು. ಈ ಸಬ್ ಕಮಿಟಿಯವರು ಪ್ರಯತ್ನಮಾಡಿಯೂ ಸಹ ಒಂದ ಸರಿಯಾದ ಸ್ಥಳ ದೊರಕಲಿಲ್ಲ. ಅಲ್ಲಿಯ ಸಾರ್ವಜನಿಕರು ಈ ವಿಷಯದಲ್ಲಿ ಸಹಕರಿಸಿ ಒಂದು ಸ್ಥಳ ತೋರಿಸಿಕೊಡಲು ಮುಂದೆ ಬಂದಂತೆ ಕಾಣುವುದಿಲ್ಲ. ಈ ಕಾರಣದಿಂದಾಗಿ ಅಲ್ಲಿ ಈ ವರೆಗೆ ಬಾವಿ ತೋಡಿಸಲು ಸಾಧ್ಯವಾಗಿಲ್ಲ.

ಕಳೆದ ವರ್ಷ ಭೂಮಿಯಲ್ಲಿ ನೀರನ್ನು ಕಂಡುಹಿಡಿಯುವವರೊಬ್ಬರು ಈ ಊರಿಗೆ ಬಂದಿದ್ದಾಗ್ಗೆ ತೆಲುಗರ ಬೀದಿಯಲ್ಲಿ ಡಾಕ್ಟರ್ ಎನ್. ಬಿ. ಉತ್ತಪ್ಪನವರ ಮನೆಯವರೆಗೂ ನೋಡಿ ಸದರಿ ಸ್ಥಳದಲ್ಲಿ ಪೂರ್ತಿ ಬಂಡೆಕಲ್ಲುಗಳೇ ಇರುವುದಾಗಿಯೂ ಮತ್ತು ೫೦ ಅಡಿಗಿಂತ ಹೆಚ್ಚು ಆಳ ತೆಗೆದರೂ ವರ್ಷವಿಡೀ ನೀರು ಸಿಕ್ಕುವಂತಹ ಬಾವಿ ತೋಡಿಸಲು ಅಸಾಧ್ಯವೆಂದೂ ಅಭಿಪ್ರಾಯಕೊಟ್ಟಿದ್ದಾರೆ ಈ ವಿಷಯವು ನಿಜವೆಂದು ಈ ಬೀದಿಯಲ್ಲಿ ಖಾಸಗಿಯಾಗಿ ಬಾವಿ ತೋಡಿಸಿದವರ ಅನುಭವಕ್ಕೂ ಬಂದಿರುವ ವಿಷಯವಾಗಿದೆ.

ವೀರಾಜಪೇಟೆಯ ಇನ್ನೂ ಕೆಲವು ಬೀದಿಯಲ್ಲಿ ವಾಸವಿರುವ ಸಾರ್ವಜನಿಕರು ತಮ್ಮ ಬೀದಿಯಲ್ಲಿ ಬಾವಿ ತೋಡಿಸಲು ಬೇಕಾದ ಜಾಗವನ್ನೂ ಕೊಟ್ಟು ತಮ್ಮ ಸ್ವಂತ ಖರ್ಚಿನಿಂದ ನೀರು ಸಿಕ್ಕುವವರೆಗೆ ಬಾವಿ ತೋಡಿಸಿ ಕೊಟ್ಟಿರುವುದಲ್ಲದೆ ಕಟ್ಟಿತ ಕಟ್ಟಿಸಲು ಆವಶ್ಯವಾದ ಸೈಜ ಕಲ್ಲುಗಳನ್ನೂ ಸಹ ಕೊಟ್ಟಿರುತ್ತಾರೆ. ಇಂತಹ ಸಂದರ್ಭದಲ್ಲಿ ಕಟ್ಟಡ ಕಟ್ಟಲು ಬೇಕಾದ ಸಿಮೆಂಟು ಮತ್ತು ಮಜೂರಿಯನ್ನು ಮುನ್ಸಿಪಾಲಿಟಿಯವರು ಕೊಟ್ಟು ಕೆಲಸ ಪೂರ್ತಿಮಾಡಿಸಿರುತ್ತಾರೆ ಇದೇ ರೀತಿ ತೆಲುಗರ ಬೀದಿಯಲ್ಲೂ ಸಹ ಮಾಡಲು ಮುನ್ಸಿಪಾಲಿಟಿಯವರು ಸಿದ್ಧರಿದ್ದಾರೆ.

ತೆಲುಗರ ಬೀದಿಯವರು ಸಹ ಮುನ್ಸಿಪಾಲಿಟಿಯವರೊಡನೆ ಸಹಕರಿಸಿ ಸ್ವಲ್ಪ ಪ್ರಯತ್ನ ತೆಗೆದುಕೊಂಡರೆ ಮುನ್ಸಿಪಾಲಿಟಿಯವರಿಗೂ ತಮ್ಮ ಕರ್ತವ್ಯವನ್ನು ನಿರ್ವಹಿಸಲು ಸಾಧ್ಯವಾಗುತ್ತದೆ. ಈ ಬೀದಿಯಲ್ಲಿ ಬಾವಿ ಕೆಲಸಕ್ಕಾಗಿ ಮುನ್ಸಿಪಾಲಿಟಿಯ ಕಮಿಟಿಯವರು ರೂ. ೭೫೦ನ್ನು ಕೊಡಲು ಇಂದಿಗೂ ಸಿದ್ಧವಾಗಿದ್ದಾರೆ. ಆ ಬೀದಿಯಲ್ಲಿ ಸರಿಯಾದ ಒಂದು ಸ್ಥಳ ಮತ್ತು ಬಾವಿ ತೋಡಿಸಲು ಮಾತ್ರ ಬೇಕಾಗುವ ಹಣದ ಸಂಗ್ರಹ ಇವುಗಳನ್ನು ಸಾರ್ವಜನಿಕರು ಮಾಡಿಕೊಟ್ಟು ವಾರ್ಡಿನ ಮುನ್ಸಿಪಲ್ ಮೆಂಬರುಗಳೊಡನೆ ಸಹಕರಿಸಿದರೆ ಬಾವಿ ಕೆಲಸ ಏನೂ ತೊಂದರೆಯಿಲ್ಲದೆ ನಡೆದು ಹೋಗುತ್ತದೆ. ನೀಲ್ಪಂಥ ವಿಷಯಗಳನ್ನು ತಿಳಿದೋ ತಿಳಿಯದೆಯೋ ತೊಂದರೆಗೊಳಗಾದವನೆಂದು ಹೇಳಿಕೊಂಡು ತಮ್ಮ ಮಟ್ಟಿನ ಕರ್ತವ್ಯವೇನೆಂದು ತಿಳಿದುಕೊಳ್ಳದೆ ಪುರ ಸಭೆಯ ಅಧ್ಯಕ್ಷರನ್ನೂ ಮೆಂಬರುಗಳನ್ನೂ ದೂರುವವರಿಂದ ಪ್ರಯೋಜನವಿಲ್ಲ. ಮುನ್ಸಿಪಾಲಿಟಿಯವರಿಗೆ ವೀರಾಜಪೇಟೆಯ ಎಲ್ಲಾ ಬೀದಿಗಳೂ ಒಂದೇ. 'ತೆಲುಗರ ಬೀದಿ ತಾನೆ' ಎಂಬ ಮನೋಭಾವನೆ ಅವರಿಗೆ ಬರಲು ಕಾರಣವೇ ಇಲ್ಲ

ಈಗಾಗಲೇ ಮುನ್ಸಿಪಾಲಿಟಿಯವರು ವೀರಾಜಪೇಟೆಗೆ ನೀರು ಸರಬರಾಜು ಮಾಡಲು ಬೇಕಾದ ಎಸ್ಟಿಮೇಟು ವೊದಲಾದವುಗಳನ್ನು ತಯಾರಿಸಲು ತೊಡಗಿದ್ದಾರೆ. ಕೊಡಗು ಸರ್ಕಾರದವರು ೩½ ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಸಾಲಕೊಡಿಸಿಕೊಟ್ಟು ದೊಡ್ಡ ಉಪಕಾರಮಾಡಿದ್ದಾರೆ. ನೀರುಸಿಕ್ಕುವ ಸ್ಥಳವೂ ಸಹ ಮುನ್ಸಿಪಾಲಿಟಿಯ ಸ್ವಾಧೀನಕ್ಕೆ ಈಗ ಬಂದಿದೆ. ಸದರಿ ಕೆಲಸವು ಶೀಘ್ರದಲ್ಲಿಯೇ ಪ್ರಾರಂಭವಾಗುವುದರಲ್ಲಿದೆ.

ಇಷ್ಟಾದರೂ ಸಹ ತೆಲುಗರ ಬೀದಿಯ ಸಾರ್ವಜನಿಕರಿಗೆ ತಮ್ಮ ಬೀದಿಗೆ ಬಾವಿಬೇಕೆಂದು ತೋರಿದಲ್ಲಿ ಈ ಕೂಡಲೇ ಮೇಲೆ ಹೇಳಿದಂತೆ ಮುನ್ಸಿಪಾಲಿಟಿಯವರೊಡನೆ ಸಹಕರಿಸಿ ಬಾವಿಗೆ ಬೇಕಾದ ಸ್ಥಳ ಮತ್ತು ಹಣ ಸಂಗ್ರಹ ಮಾಡಿ ಕೊಟ್ಟಲ್ಲಿ ಆ ಬೀದಿಯಲ್ಲಿ ಬಾವಿಯಾಗಲು ಯಾರ ಅಭ್ಯಂತರವೂ ಇಲ್ಲದೆ ಮುಂದಿನ ಕೆಲಸ ಕೈಕೊಳ್ಳಲು ಸುಲಭವಾಗುತ್ತದೆ.

'ಪುರಸೇವಕ.'

ಕಾಲೇಜು ನಿವಾಸ ಗೃಹ

ಬಹು ಚರ್ಚೆಯಲ್ಲಿದ್ದ 'ಗೌಡುಗಳ ಬೋರ್ಡಿಂಗ್ ಕಟ್ಟಡವು' ಸರಕಾರದ ಕಟ್ಟಡವೆಂದು ಕೋರ್ಟು ತೀರ್ಮಾನದಿಂದಲೇ ತಿಳಿದು ಬರುವುದು ಸಂತೋಷಕರ. ಹೀಗೂ ಸಂಗತಿಗಳು ಹೀಗಿರುವಂತೆ ಕಂಡುಬರುತ್ತದೆ.

(೧) ಅನೇಕ ಕಾಲೇಜು ವಿದ್ಯಾರ್ಥಿಗಳಿಗೆ ವಾಸಕ್ಕೆ ಎಡೆ ಇಲ್ಲದೆ, ಹೋಟೆಲು, ಸ್ವಂತ ವ್ಯವಸ್ಥೆ ಮಾಡಿಕೊಂಡು ವಾಸಿಸುತಿದ್ದಾರೆ. (೨) ಸರಕಾರದ ಒಂದು ಬೋರ್ಡಿಂಗ್ ಕಟ್ಟಡದಲ್ಲಿ ಹೆಚ್ಚು ಕಮ್ಮಿ ೫೦ ವಿದ್ಯಾರ್ಥಿಗಳಿಗೆ ವಾಸಕ್ಕೆ ಎಡೆ ಇದ್ದರೂ ಇದರಲ್ಲಿ ಹಿಂದಿನಿಂತಲೂ ಕಮ್ಮಿ ಗೌಡ ಜನಾಂಗದ ವಿದ್ಯಾರ್ಥಿಗಳನ್ನೇ ವಾಸಕ್ಕಿಟ್ಟಿರುತ್ತಾರೆ. ಎಂದರೆ ೨೦ ವಿದ್ಯಾರ್ಥಿಗಳಿಗೆ ವಾಸಕ್ಕೆ ಎಡೆ ಇದ್ದರೂ, ಆ ಸ್ಥಳದ ಸದುಪಯೋಗ ಮಾಡಿಲ್ಲ. (೩) ಇನ್ನೊಂದು ವಿದ್ಯಾರ್ಥಿ ಗೃಹದಲ್ಲಿ ಕೊಡವ ಜನಾಂಗದ ವಿದ್ಯಾರ್ಥಿಗಳಿದ್ದರೆ ಇವರೊಂದಿಗೆ ಒಬ್ಬ ಹರಿಜನ ವಿದ್ಯಾರ್ಥಿಯೂ ಕೂಡ ಇರುವನೆಂದು ತಿಳಿಯಲು ಸಂತೋಷಿಸಬೇಕಿದೆ. ಇಲ್ಲೇ ಹೈಸ್ಕೂಲಿನ ಎಲ್ಲಾ ವಿದ್ಯಾರ್ಥಿಗಳನ್ನು ಸೇರಿಸಬಹುದಾಗಿದೆ.

ಹೊರ ಕಾಲೇಜುಗಳಲ್ಲಿ ಕಾಲೇಜುಗಳಿಗೆ ಸಮ್ಬಂಧಪಟ್ಟ ನಿವಾಸಗೃಹಗಳಲ್ಲಿಲ್ಲದ ವಿದ್ಯಾರ್ಥಿಗಳು, ಕಾಲೇಜು ಪ್ರಿನ್ಸಿಪಾಲರ ಒಪ್ಪಿಗೆಗೆ ಒಳಪಟ್ಟಂತಹ ನಿವಾಸಗೃಹಗಳಲ್ಲಿಯೇ ವಾಸಿಸಬೇಕೆಂಬ ಕಾನೂನು ಇದೆ. ಎಂದರೆ, ಕಾಲೇಜು ಪ್ರಿನ್ಸಿಪಾಲರು ವಿದ್ಯಾರ್ಥಿಗಳ ವಾಸಕ್ಕೂ ಸಹ ಒಂದು ತರದ ಜವಾಬ್ದಾರಿಕೆಯನ್ನು ಹೊತ್ತುಕೊಂಡಿರುತ್ತಾರೆನ್ನಬಹುದು. ಆದುದರಿಂದ ಅಂತಹ ... ತಮ್ಮ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಕಳುಹಿಸುವುದಕ್ಕೆ ಪೋಷಕರಿಗೆ ಅಂಜಿಕೆಯೇ ಇಲ್ಲ. ಹೀಗಿರುವಾಗ ನಮ್ಮ ದೇಶದಲ್ಲಿ ನಮ್ಮ ಸರಕಾರದ ವಿಷಯದಲ್ಲಿ ನಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಅಂತಹದೊಂದು ಭಾವನೆಯು ಸಿಕ್ಕದೆ ಇರುವುದು ವ್ಯಸನಕರ. ಬದಲಾಗಿ ಕಾಲೇಜು ಅಧಿಕಾರಿಗಳು ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ನಡತೆಗೆ ಯಾವ ಜವಾಬ್ದಾರಿಯನ್ನೂ ಹೊತ್ತಂತಿಲ್ಲ. ಹೊತ್ತಿದ್ದರೆ ಖಾಸಗಿ ಸ್ಥಳಗಳಲ್ಲಿ ಅನವಶ್ಯ ಸೇರಿಕೊಂಡು ಮಾಡಿಕೊಂಡ ಏರ್ಪಾಡುಗಳಿಗೆ ಆಸ್ಪದ ಕೊಡದಂತೆ ಬೋರ್ಡಿಂಗಿನ ವ್ಯವಸ್ಥೆಯನ್ನು ಹಿಂದೆಯೇ ಮಾಡುತಿದ್ದರು. ಬಹುಶಃ ಸರಕಾರವು ಇಂತಹದೊಂದು ಪರಿಸ್ಥಿತಿಗೆ ಜವಾಬ್ದಾರರಾಗಿದ್ದರೆ, ಇನ್ನಾದರೂ ಅದನ್ನು ಸರಿಪಡಿಸಬೇಕು. ಕಾಲೇಜು ವಿದ್ಯಾರ್ಥಿಗಳು ಅವರ ನ್ಯಾಯವಾದ ಹಕ್ಕನ್ನು ಸಾಧಿಸಿಕೊಳ್ಳತ

ಷ್ಟು ಶಕ್ತರಾಗಿದ್ದರೂ ಶಿಸ್ತಿನಿಂದ ತಾಳ್ಮೆಯನ್ನು ತೋರಿಸಿ ಕಷ್ಟವನ್ನು ಅನುಭವಿಸಿಕೊಂಡು ಬರುತ್ತಿರುವದನ್ನು ನೋಡಿ ಅವರನ್ನು ಮೆಚ್ಚಲೇಬೇಕು. 'ಪೋಷಕ'.

ಆಕ್ಟ್ರಾಯಿ ತೆರಿಗೆ

ಎಲ್ಲಾ ದೇಶದಲ್ಲಿಯೂ ಪ್ರಜೆಗಳ ಮುಖ್ಯವಾದ ಒಂದು ಕರ್ತವ್ಯವು ಸರಕಾರಕ್ಕೆ ಕಂದಾಯ, ತೆರಿಗೆ ಕೊಡುವದೆನ್ನಬಹುದು. ಇದರಿಂದಲೇ ಸರಕಾರದ ಬೊಕ್ಕಸವು ತುಂಬಿ ಸರಕಾರವನ್ನು ನಡೆಸಲು ಸಾಧ್ಯವಿದೆ. ಎಷ್ಟು ಜಾಣತನದಿಂದ ಪ್ರಜೆಗಳಿಗೆ ಹೊರೆಯಾಗದಂತೆ ಕಂದಾಯ ತೆರಿಗೆಗಳನ್ನು ಹಾಕಿ, ಅದನ್ನು ಎಷ್ಟರ ಮಟ್ಟಿಗೆ ಪ್ರಜೆಗಳ ಅಂತೂ ದೇಶದ ಏಳಿಗೆಗಾಗಿ ಖರ್ಚು ಮಾಡುವರೋ ಅಷ್ಟರ ಮಟ್ಟಿಗೆ ಸರಕಾರವು ಕೀರ್ತಿಯನ್ನು ಪಡೆಯುತ್ತದೆ.

ಇಂದಿನ ಮಟ್ಟಿಗೆ, ಎರಡು ತರದ ಕಂದಾಯ ತೆರಿಗೆಗಳು ಇವೆ. (೧) ನೇರವಾದ, ಮತ್ತು (೨) ಪರೋಕ್ಷ. ನೇರವಾದ ತೆರಿಗೆ ಎಂದರೆ ನಾವು ನೆಟ್ಟಗೆ, ಭೂಕಂದಾಯ ಆದಾಯ ತೆರಿಗೆಗಳಂತೆ ಸರಕಾರಕ್ಕೆ ನೇರವಾಗಿ ಪಾವತಿ ಮಾಡುವದು. ಪರೋಕ್ಷ ತೆರಿಗೆಗಳೆಂದರೆ, ನಾವು ಉಪಯೋಗಿಸುವ ಸರಕುಗಳ ಮೇಲೆ ಸರಕಾರದವರು ಒಂದು ಮಿತಿಯ ಸುಂಕವನ್ನು ಹಾಕಿ ಸರಕುಗಳ ಮಾರಾಟದ ಬೆಲೆಯನ್ನು ಏರಿಸಿ ಜನರಿಗೆ ತಿಳಿಯದೇನೇ ಜನರಿಂದ ಸುಂಕವನ್ನು ವಸೂಲು ಮಾಡುವದು. ಈ ತರದ ತೆರಿಗೆಯು ಮೋಟಾರು ಬಂಡಿಗಳಿಂದ ಮೊದಲುಗೊಂಡು ಮನುಷ್ಯನ ಜೀವನಕ್ಕೆ ಅತೀ ಅವಶ್ಯವಿರುವ ಸರಕುಗಳನ್ನು ವಿನಾಯಿಸಿ, ಬೆಂಕಿಪೆಟ್ಟಿಗೆಗೂ ವ್ಯಾಪಿಸಿ, ಸರಕಾರದ ಹೆಚ್ಚಿನ ಆದಾಯವು ಇದರಿಂದಲೇ ಆಗಿದೆ.

ಇಂಡಿಯಾ ದೇಶದ ಮಟ್ಟಿಗೆ ಮೊದಲು ಎರಡು ಮಟ್ಟದಲ್ಲಿದ್ದ ತೆರಿಗೆಯು ಕೇಂದ್ರ ಸರಕಾರದ ಮತ್ತು ಪ್ರಾಂತೀಕ ಸರಕಾರದ ತೆರಿಗೆ, ಇಂದು ದೇಶವು ಮುಂದುವರಿದ ಹಾಗೆ ಮೂರನೇ ಮಟ್ಟದ ಜಿಲ್ಲಾ ಬೋರ್ಡು ತೆರಿಗೆಯು ಬಂತು. ದೇಶವು ಮತ್ತಷ್ಟು ಮುಂದರಿದ ಹಾಗೆ ನಾಲ್ಕನೇ ಮಟ್ಟದ ಒಂದು ಮುನ್ಸಿಪಾಲಿಟಿ ತೆರಿಗೆಯು ಬಂದಿದೆಯೆಂದು ಹೇಳಬಹುದು. ಮೊದಲಿನ ಮೂರು ಮಟ್ಟದ ತೆರಿಗೆಯನ್ನು ದೇಶದ ಕಂದಾಯ ಕೊಡುವಂತಹ ಎಲ್ಲಾ ಪ್ರಜೆಗಳೂ ಕೊಡುವವರಾಗಿದ್ದಾರೆ. ಮತ್ತು ಆ ತೆರಿಗೆಗಳ ಫಲವು ದೇಶದ ಉದ್ದಗಲಕ್ಕೂ ಹರಡುವದಾಗಿದೆ.

ಕೆಲವು ಜನರು ವ್ಯಾಪಾರಕ್ಕೋಸ್ಕರವಾಗಿ ಒಂದು ಸ್ಥಳದಲ್ಲಿ ಕಾಯಂ ಆಗಿ ಒಟ್ಟು ಕೂಡಿದ ಮೇಲೆ ಅವರ ಸಂರಕ್ಷಣೆಯು ಮತ್ತು ಸುಖದ ಹಿತದೃಷ್ಟಿಯಿಂದ ಮುನಿಸಿಪಾಲಿಟಿಗಳನ್ನು ಸ್ಥಾಪಿಸಿ, ಅವು ಬೆಳೆದ ಹಾಗೆ ಒಂದು ತರದ ಸರಕಾರವನ್ನೇ ಮುನಿಸಿಪಾಲಿಟಿಯವರು ನಡೆಸುತ್ತಿದ್ದಾರೆ. ಇವರ ಆದಾಯವೆಂದರೆ ಪಟ್ಟಣದೊಳಗಿನ ಮನೆ ವಸೂಲು ಮಾಡುವ ವರ್ಷಾದಾಯ. ಇದರ ಇವರು ಎಲ್ಲಾ ಆಡಳಿತ ಕಾರುಬಾರುಗಳನ್ನು ನಡೆಸುವದು ವಾಡಿಕೆಯಾಗಿದೆ. ಈ ಪದ್ಧತಿಯೇ ಕೆಲವು ವರ್ಷಗಳ ಹಿಂದಿನವರೆಗೆ ನಡೆಯುತ್ತಿತ್ತು.

ಆದರೆ ಈಗ ಕೆಲವು ವರ್ಷಗಳಿಂದ ಮುನಿಸಿಪಾಲಿಟಿಯವರು ಆಕ್ಟ್ರಾಯಿಯೆಂಬ ಹೊಸದೊಂದು ತೆರಿಗೆಯನ್ನು ಜಾರಿಗೆ ತಂದಿದ್ದಾರೆ. ಇಂತಹದೊಂದು ಅನ್ಯಾಯದ ತೆರಿಗೆಗೆ ಸರಕಾರದವರು ಹೇಗೆ ಕೊಡುವ ಕಂದಾಯದ ಮಂಜೂರಾತಿ ಕೊಟ್ಟರೋ ತಿಳಿಯದು. ವಾಡಿಕೆಯಾಗಿ ಯಾವ ಕಂದಾಯ ತೆರುವವನೂ ಒಂದಲ್ಲ ಒಂದು ವಿಧದಲ್ಲಿ ತಾನು ಫಲವನ್ನು ಅನುಭವಿಸಬೇಕಾಗಿದೆ. ಆದರೆ ಈ ಆಕ್ಟ್ರಾಯಿ ತೆರಿಗೆಯು ಆ ಮೂಲತತ್ವವನ್ನು ಮರೆತಂತೆ ಕಾಣುತ್ತೆ.

ಮುನಿಸಿಪಾಲಿಟಿಗಳು ಇರುವದು ಅದರಲ್ಲಿರುವ ಜನರ ಸುಖಕ್ಕೋಸ್ಕರ. ಮುನಿಸಿಪಾಲಿಟಿಯ ಬೊಕ್ಕಸ ಬರಿದಾಗುವದು, ಮುನಿಸಿಪಾಲಿಟಿಯಲ್ಲಿ ವಾಸಿಸುವ ಜನರಿಗೋಸ್ಕರ ಖರ್ಚು ಮಾಡಿ. ಆಗ ಒಂದು ಫಲವನ್ನು ಅನುಭವಿಸಬೇಕಾದರೆ ಅದಕ್ಕಿರುವ ಹಣವನ್ನು ಸಹ ಅವರೇ ತೆರಬೇಕಲ್ಲವೇ? ಆಕ್ಟ್ರಾಯಿ ತೆರಿಗೆಯಿಂದ ಕೊಡಗಿನ ಎರಡು ಮುನಿಸಿಪಾಲಿಟಿಗಳು ಲಕ್ಷಗಟ್ಟಲೆ ಆದಾಯ ಪಡೆಯುತ್ತಿವೆ. ಈ ಹಣವು ಆಯಾಯ ಪುರನಿವಾಸಿಗಳು ತೆತ್ತ ಹಣವೆ? ಖಂಡಿತವಾಗಿಯೂ ಅಲ್ಲ. ಬಹುಶಃ ಶೇಕಡ ೧೦ರಷ್ಟು ಪುರನಿವಾಸಿಗಳು ಕೊಟ್ಟಿದ್ದಾಗಿದ್ದರೆ ಬಾಕಿ ಶೇಕಡ ೯೦ರಷ್ಟು ಮುನಿಸಿಪಾಲಿಟಿಗಳಿಂದ ಯಾವದೊಂದು ಲಾಭವು ದೊರಕದ ಗ್ರಾಮವಾಸಿಗಳಿಂದ ವಸೂಲಾಗಿದ್ದಲ್ಲವೇ? ಎಂದರೆ ಗ್ರಾಮವಾಸಿಗಳು ಪುರನಿವಾಸಿಗಳ ಸುಖಕ್ಕೋಸ್ಕರ ಅದೆಷ್ಟು ದೊಡ್ಡ ತೆರಿಗೆಯನ್ನು ಕೊಡುತ್ತಿರುವರು. ಗ್ರಾಮವಾಸಿಗಳಿಗೆ ಅವರು ತೆತ್ತ ಅಷ್ಟು ದೊಡ್ಡ ತೆರಿಗೆಯನ್ನು ಖರ್ಚು ಮಾಡುವದರಲ್ಲಿ ಏನಾದರೂ ಪ್ರಾತಿನಿಧ್ಯ ಇದೆಯೇ? One who has paid for the piper, has a right to call for the tune.

ಬೆಂಗಳೂರು, ಮೈಸೂರುಗಳಂತ ದೊಡ್ಡ ಸಿಟಿಗಳಲ್ಲಿ ಆಕ್ಟ್ರಾಯಿಯನ್ನು ವಸೂಲ್ಮಾಡುವದು ನ್ಯಾಯವಿದೆ. ಆ ಸಿಟಿಗಳು ದೊಡ್ಡ ವಿನಿಯೋಗದ ಕೇಂದ್ರಗಳಾಗಿ ಆಕ್ಟ್ರಾಯಿಯ ಶೇಕಡ ೯೦ಕ್ಕಿಂತಲೂ ಹೆಚ್ಚಿನ ಉತ್ಪತ್ತಿಯು ಅದರೊಳಗಿನ ಜನರಿಂದಲೇ ಬರುವದಾಗಿದೆ. ವಿರಾಜಪೇಟೆ ಮಡಿಕೇರಿಗಳಂತ ಪುರಗಳು ವಿತರಣಾ ಕೇಂದ್ರಗಳಾದುದರಿಂದ ಸಿಟಿಗಳಲ್ಲಿ ಅನ್ವಯಿಸುವ ತೆರಿಗೆಗಳಿಗೆ ಚಿಕ್ಕ ಪುರಗಳಲ್ಲಿ ಎಡೆಯೇ ಇಲ್ಲ. ಉತ್ತರ ಇಂಡಿಯಾದಲ್ಲಿ ಈ ಪ್ರಶ್ನೆಯನ್ನು ಪರಿಶೀಲಿಸಲು ಕೆಲವು ಸರಕಾರಗಳು ಸಮಿತಿಗಳನ್ನು ಏರ್ಪಡಿಸಿದಂತೆಯೇ ನಮ್ಮ ಸರಕಾರವು ಕೂಡ ಈ ಪ್ರಶ್ನೆಯನ್ನು ಬೇಗನೇ ಪರಿಶೀಲಿಸಿ ಗ್ರಾಮವಾಸಿಗಳ ಮೇಲಿನ ಈ ಅನ್ಯಾಯದ ಅನ್ಯಾಯದ ತೆರಿಗೆಯನ್ನು ಹೋಗಲಾಡಿಸಬೇಕಾಗಿ ಕೋರುವ.

ಕೆ. ಎಂ. ಪೂವಯ್ಯ.

ವೀರರಾಜೇಂದ್ರಪೇಟೆ, ಮುನ್ಸೀಫ್ ಮತ್ತು ಫಸ್ಟ್‌ಕ್ಲಾಸ್ ಮೇಜಿಸ್ಟ್ರೇಟರವರ ಕೋರ್ಟಿನಲ್ಲಿ

ಕ್ರಿ. ಮಿ. ಕೇಸ್ ನಂ. ೭೮ ರ ೧೯೫೩.

ಅರ್ಜಿದಾರ:— ಶ್ರೀಮಂಗಲ ನಾಡು ಹರಿಹರ ಗ್ರಾಮದಲ್ಲಿರುವ (೧) ಸುಬ್ರಮಣ್ಯ ದೇವಸ್ಥಾನ. (೨) ಭದ್ರಕಾಳಿ ದೇವಸ್ಥಾನ. (೩) ಐಯ್ಯಪ್ಪದೇವರ ದೇವಸ್ಥಾನ ಮತ್ತು (೪) ಬೆಳ್ಳಿಕವ್ವ ದೇವಸ್ಥಾನಗಳ ಭಕ್ತರಾದ ಬಲ್ಯ ತೀತಿರ ಸುಬ್ಬಯ್ಯನವರ ಮಗ ಐಯ್ಯಮ್ಮ.

ಮೇಲ್ಕಂಡ ಕೇಸಿನಲ್ಲಿ ಅರ್ಜಿದಾರರಾದ ಹರಿಹರ ಗ್ರಾಮದ ಬಲ್ಯ ತೀತಿರ ಐಯ್ಯಮ್ಮನವರು ತಮ್ಮನ್ನು ಹರಿಹರ ಗ್ರಾಮಸ್ಥರು (೧) ಸುಬ್ರಮಣ್ಯ ದೇವಸ್ಥಾನ (೨) ಭದ್ರಕಾಳಿ ದೇವಸ್ಥಾನ (೩) ಐಯ್ಯಪ್ಪ ದೇವಸ್ಥಾನ ಮತ್ತು (೪) ಬೆಳ್ಳಿಕವ್ವ ದೇವಸ್ಥಾನಗಳಿಗೆ ತಾ. ೫—೧೧—೫೦ರಲ್ಲಿ ತಕ್ಕರಾಗಿ ನೇಮಿಸಿರುವದರಿಂದಲೂ ಮತ್ತು ಈ ದೇವಸ್ಥಾನಗಳ ಆಡಳಿತಕ್ಕೆ ಸಂಬಂಧ ಪಟ್ಟ ಇತರ ಗ್ರಾಮಸ್ಥರು ಸಹಾ ಈ ಕೋರ್ಟಿನಲ್ಲಿ ಇರುವ ಕ್ರಿ. ಮಿ. ಕೇಸ್ ನಂ. ೭೮ರ ೧೯೫೩ರ ಸಮ್ಮಂದ ಸುಬ್ರಮ್ಮಣ್ಯ ದೇವಸ್ಥಾನದ ಸಾಮಾನುಗಳನ್ನು ತಾನು ಹೊಂದಿಕೊಳ್ಳುವಂತೆ ಒಪ್ಪಿರುವದರಿಂದಲೂ, ಈ ಕೋರ್ಟಿನಲ್ಲಿರುವ ಸುಬ್ರಮಣ್ಯ ದೇವಸ್ಥಾನದ ಎಲ್ಲಾ ಸಾಮಾನುಗ ತನಗೆ ಕೊಡಬೇಕೆಂದು ಈ ಕೋರ್ಟಿಗೆ ತಾ. ೧೧—೯—೫೩ರಲ್ಲಿ ಅರ್ಜಿ ದಾಖಲು ಮಾಡಿರುವದರಿಂದ ಸದರಿ ಅರ್ಜಿದಾರರಿಗೆ ಯಾಕೆ, ಆ ಎಲ್ಲಾ ಸಾಮಾನುಗಳನ್ನು ಕೊಡಕೂಡದೆಂಬುದಕ್ಕೆ ಸಬಬು ತೋರಿಸಲು ತಾ. ೨೬—೯—೫೩ರಲ್ಲಿ ಹಗಲು ೧೧ ಘಂಟೆಗೆ ಹಿಯರಿಂಗ್ ಇಟ್ಟಿರುತ್ತೆಯಾದ್ದರಿಂದ ತಕರಾರುದಾರರು ಸದರಿ ದಿನ ಹಾಜರಾಗಿ ತಮ್ಮ ತಕರಾರುಗಳನ್ನು ಹೇಳಿಕೊಳ್ಳತಕ್ಕದ್ದು.

ಕೆ. ಎ. ತಮ್ಮಯ್ಯ,
ಮುನ್ಸಿಫ್ ಮತ್ತು ಫಸ್ಟ್‌ಕ್ಲಾಸ್ ಮೇಜಿಸ್ಟ್ರೇಟರು,
ವೀರಾಜಪೇಟೆ.

ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್,
ಲಿಮಿಟೆಡ್, ಪೊನ್ನಂಪೇಟೆ.

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಿಂದ ನಗಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ, ಅದರ ಮೇಲಣ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಇದ್ದುದರಿಂದ, ಆ ಬಗ್ಗೆ ಸದರಿಯವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಸದರಿಯವರು ಈಡಿಟ್ಟ ನಗಗಳನ್ನು ತಾ. 3–10–53ರ ಒಳಗೆ ಬಿಡಿಸಿಕೊಂಡು ಹೋಗದಿದ್ದ ಪಕ್ಷದಲ್ಲಿ, ತಾ. 5ನೇ ಅಕ್ಟೋಬರ್ 53ರ ಸೋಮವಾರ ಅಪರಾಹ್ನ ಗಂಟೆ 3ಕ್ಕೆ ಯಾ ಬೇಂಕಿನವರಿಗೆ ಯುಕ್ತ ತೋರುವ ಬೇರೆ ತಾರೀಖಿನಲ್ಲಿ ಪುನಃ ನೋಟೀಸು ಕೊಡದೇನೆ, ನಮ್ಮ ವೀರಾಜಪೇಟೆ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು.

ಸಾಲದ ನಂ.	ಸಾಲಗಾರರ ಹೆಸರು ವಿಳಾಸ.	ಸಾಲದ ಮೊಬಲಗು.
97/51	ಚೆಟ್ಟಿಮಾಡ ಎನ್. ಮಂದಯ್ಯ S/o. ನಂಜಪ್ಪ, ನಡಿಕೇರಿ ಗ್ರಾಮ, ಹುದಿಕೇರಿ ಪೋಸ್ಟು.	ರೂ. 70–0–0
116'51	ಚೆಟ್ಟಿಮಾಡ ಎನ್. ಮಂದಯ್ಯ S/o. ನಂಜಪ್ಪ, ನಡಿಕೇರಿ ಗ್ರಾಮ, ಹುದಿಕೇರಿ ಪೋಸ್ಟು	ರೂ. 170–0–0
136/51	ಚೆಟ್ಟಿಮಾಡ ಎನ್. ಮಂದಯ್ಯ S/o. ನಂಜಪ್ಪ, ನಡಿಕೇರಿ ಗ್ರಾಮ, ಹುದಿಕೇರಿ ಪೋಸ್ಟು,	ರೂ. 75–0–0
82/53	ಚೆಟ್ಟಿಮಾಡ ಎನ್. ಮಂದಯ್ಯ S/o ನಂಜಪ್ಪ, ನಡಿಕೇರಿ ಗ್ರಾಮ, ಹುದಿಕೇರಿ ಪೋಸ್ಟು	ರೂ. 184–0–0

Office of the Corporation, Ponnampet Date. 15-9-'53.

P. U. MALLYA,
Agent.

Tenders Invited

The Executive Engineer, Coorg Central Division Central P. W. D., Mercara. invites tenders from registered contractors of C. P. W. D, State P. W. D's, M. E. S. or Railways for the work of 'Construction of a submersible arch bridge across the river Cauvery at Bethru"—collection of hard granite coursed rubble stones' estimated cost Rs. 17,177/–. Tender documents can be had from the C. P. W. D. Office Mercara upto 18–9–'53 on payment of Rs 5/–, which amount will not be refunded. The last date for receipt of tenders is 21–9–1953.

Sd/ S. H. ABHYANKAR
Executive Engineer, Coorg Central Division, Mercara.



ಒಬ್ಬ ಯುವಕ ಮತ್ತು ಯುವತಿ ಗಾಳಿ ಸವಾರಿ ಹೋಗುತ್ತಿದ್ದಾಗ ಪಕ್ಕದಲ್ಲಿಯೇ ಒಬ್ಬ ಮುದುಕಿ ಜಾರಿ ಬಿದ್ದಳು.

ಯುವಕ– ಅಯ್ಯೋ ಪಾಪ! ಎಂದು ಹೇಳಿ ಓಡಿ ಹೋಗಿ ಆ ಮುದುಕಿಯನ್ನು ಎತ್ತಿದನು.

ಯುವತಿ– ಛೆ! ನಾನು ಬಿದ್ದಾಗ ಮಾತ್ರ ಕೈ ಚಪ್ಪಾಳೆ ಹಾಕಿ ನಕ್ಕು, ಈಗ ಆ ಗೊಡ್ಡು ಮುದುಕಿ ಬೀಳುವಾಗ ಮಾತ್ರ ಅಯ್ಯೋ ಪಾಪ ಎಂದು ಓಡಿ ಹೋಗುತ್ತಾರೆ. ಅದೆಂತ ಗಂಡು ಸ್ವಭಾವ!

• • •

ಓರ್ವ ಡಾಕ್ಟರನ ಮನೆ ಹಿಂದುಗಡೆ ಸೀಬೆಕಾಯಿ ಮರವನ್ನು ಶಾಲಾ ಮಕ್ಕಳು ಮುತ್ತಿದ್ದರು.

ನೆರೆಮನೆಯವ– ಡಾಕ್ಟರ್, ಡಾಕ್ಟರ್! ನಿಮ್ಮ ಸೀಬೆಕಾಯಿಗಳನ್ನೆಲ್ಲಾ ಮಕ್ಕಳು ದರೋಡೆ ಮಾಡುತ್ತಾರೆ.

ಡಾಕ್ಟರ್– ಪರ್ವಾ ಇಲ್ಲ. ಆ ಸೀಬೆಕಾಯಿಗಳು ಇನ್ನೂ ಬೆಳೆತ್ತಿಲ್ಲ.

• • •

ಆಳು– ಯಜಮಾನರೇ, ನಿಮ್ಮ ಚಿಕ್ಕ ಮಗು ಒಂದು ನಾಣ್ಯವನ್ನು ನುಂಗಿಬಿಟ್ಟಿದ್ದಾನೆ

ಯಜಮಾನ– ಎಂತ ನಾಣ್ಯ?

ಆಳು– ಸ್ವಾಮಿ, ಮೂರು ಕಾಸಿನ ನಾಣ್ಯ.

ಯಜಮಾನ– ಅವನ್ಯೇನೋ, ಮೂರು ಕಾಸಿನ ನಾಣ್ಯಕ್ಕೆ ಇಷ್ಟು ಬೊಬ್ಬೆ ಮಾಡುತ್ತೀಯ!

ಕೆ. ಎಂ. ಪಿ.

• • •

ಆತ್ಮಪ್ರಶಂಸೆ ಮಾಡುವ ಅಭ್ಯಾಸದವನೊಬ್ಬನು ತನ್ನ ಕೈಗಡಿಯಾರದ ಬಗ್ಗೆ ಅನೇಕ ಕತೆ ಹೇಳಿಕೊಳ್ಳುತ್ತಿದ್ದನು. ಅದರಂಥಾ ಗಡಿಯಾರ ಎಲ್ಲಿಯೂ ಇಲ್ಲ ಎಂಬುದೇ ಅವನ ಮಾತಾಗಿತ್ತು.

ಇದನ್ನು ಕೇಳಿ ಸಾಕಾದವನೊಬ್ಬನು ಸಹಿಸಲಾರದೆ ಹೇಳಿದನು 'ಅದೇನು ಮಹಾ! ನಾನು ನನ್ನ ಗಡಿಯಾರವನ್ನು ಗಂಗಾನದಿಯಲ್ಲಿ ಕಳೆದ ವರ್ಷ ಹಾಕಿದರೂ ಅದು ಇನ್ನೂ ಓಡುತ್ತಿದೆ.'

ಮಾತುಗಾರನಿಗೆ ಆಶ್ಚರ್ಯವಾಗಿ, 'ನಿನ್ನ ಕೈಯಲ್ಲಿರುವ ಗಡಿಯಾರವೇ ಅದು' ಎಂದು ಕೇಳಿದನು,

'ಇಲ್ಲ ಗಂಗಾನದಿ!' ಎಂದವನ ಉತ್ತರ.

ಯುವಕನೊಬ್ಬನು ಹಟಾತ್ತಾಗಿ ಸ್ಮೃತಿ ತಪ್ಪಿ ಬಿದ್ದನು. ಆತನ ಗೆಳೆಯರು ಆತನು ಸತ್ತನೆಂದು ಭಾವಿಸಿ ಆತನ ಶವಸಂಸ್ಕಾರ ಮಾಡುವ ಮೊದಲೇ ಆತನಿಗೆ ಎಚ್ಚರವಾಯಿತು. ಆಗ ಒಬ್ಬನು ಸಾಯುವವರ ವಿಚಾರ ಆತನ ಅನುಭವವನ್ನು ಕೇಳಿದನು.

ಯುವಕ–ಸಾವು? ನಾನು ಸತ್ತಿರಲಿಲ್ಲ. ಏಕೆಂದರೆ ನನ್ನ ಕಾಲು ಶೀತ ಹಿಡಿದಿತ್ತು. ನನಗೆ ಹೊಟ್ಟೆ ಹಸಿದಿತ್ತು.

'ಅದರೆ ಸತ್ತಿಲ್ಲವೆಂದು ಇದರಿಂದ ಹೇಗೆ ಹೇಳುವೆ?' ಮರು ಪ್ರಶ್ನೆ.

'ನಾನು ಸತ್ತು ಸ್ವರ್ಗಕ್ಕೆ ಹೋಗಿದ್ದರೆ ನನಗೆ ಹಸಿವು ಇರುತ್ತಿರಲಿಲ್ಲ. ನರಕಕ್ಕೆ ಹೋಗಿದ್ದರೆ ನನ್ನ ಕಾಲು ತಣ್ಣಗಿರುತ್ತಿರಲಿಲ್ಲ.!'

• • •

ಪಾನನಿರೋಧದ ವಿಚಾರದಲ್ಲಿ ಪ್ರೊಫೆಸರರೊಬ್ಬರು ಮಾತಾಡುತ್ತಾ 'ನಾನು ಒಂದು ಪಾತ್ರೆಯಲ್ಲಿ ಬೀರ್ ಮತ್ತೊಂದರಲ್ಲಿ ನೀರು ತಂದಿಟ್ಟು ಒಂದು ಕತ್ತೆಯನ್ನು ತಂದರೆ ಕತ್ತೆಯು ಯಾವುದನ್ನು ಕುಡಿದೀತು?' ಎಂದು ಕೇಳಿದರು.

'ನೀರನ್ನು' ಎಂದು ವಿದ್ಯಾರ್ಥಿಗಳು ಹೇಳಿದರು.

'ಅದು ನೀರನ್ನೇಕೆ ಕುಡಿಯಬೇಕು?, ಪ್ರೊಫೆಸರರ ಪ್ರಶ್ನೆ.

'ಕತ್ತೆಯಾದ್ದರಿಂದ!' ಉತ್ತರ.

* * *

ಒಮ್ಮೆ ನಾನು ಮತ್ತು ನನ್ನ ಗೆಳೆಯನು ಪರಸ್ಪರರು ತಮ್ಮ ತಪ್ಪುಗಳನ್ನು ಹೇಳಿಕೊಳ್ಳಬೇಕು ಎಂದು ಒಪ್ಪಂದ ಮಾಡಿಕೊಂಡೆವು.

ಒಪ್ಪಂದದಿಂದ ಏನಾಯಿತೆಂದು ಕೇಳುತ್ತಿದ್ದವರೊಬ್ಬರು ಪ್ರಶ್ನಿಸಿದರು.

'ಪರಿಣಾಮವಾಗಿ ಐದು ವರ್ಷಗಳಿಂದ ನಾವು ಮಾತಾಡುತ್ತಿಲ್ಲ!'

* * *

ಕಾಯ್ದಿರಿಸಿದ ಅರಣ್ಯ (ರಿಜರ್ವ್ ಫಾರೆಸ್ಟ್) ದ ವಿಚಾರ ಮಂತ್ರಿಗಳು ಮಾತಾಡುತ್ತಾ 'ಇಲ್ಲಿರುವವರು ಯಾರೂ ಕೂಡ ನಮ್ಮ ವನಸಂಪತ್ತನ್ನು ರಕ್ಷಿಸಲು ಒಂದೇ ಸಹಾಯಕವಾದ ಕೆಲಸ ಮಾಡಿರಲಾರರು' ಎಂದರು.

ಆಗ ಸಭಿಕರೊಬ್ಬರು, 'ಅದು ತಪ್ಪು ಭಾವನೆ. ಕೆಲವು ದಿನಗಳ ಹಿಂದೆ ಮರಕುಟಿಗ ಪಕ್ಷಿಯೊಂದನ್ನು ನಾನು ಗುಂಡಿಕ್ಕಿದ್ದೇನೆ' ಎಂದರು.

• • •

ಸುಂದರಿ–ನನ್ನನ್ನು ಬೆಂಕಿಯಿಂದ ರಕ್ಷಿಸಲು ನೀನು ತುಂಬಾ ಧೈರ್ಯದಿಂದ ಯತ್ನಿಸಿರಬೇಕು.

ಆತ–ಹೌದು, ಅದೇ ಕೆಲಸ ಮಾಡಲು ನಾನು ತಾನೆಂದು ಮುಂದೆ ಬಂದವರನ್ನು ಹೊಡೆದು ಹಾಕಬೇಕಾಯಿತು.

• • *

ಕಾರಿನ ಬಾಗಿಲು ತೆರೆಯಲು ಓಡಿದ ಸೇವಕನು ಮೆಟ್ಟಿಲಿಳಿಯುವಾಗ ತಡವರಿಸಿ ಬಿದ್ದುಬಿಟ್ಟನು.

ಕ್ಲಬ್ ಮೇನೇಜರು ಇದನ್ನು ಕಂಡು 'ನಿಧಾನವಾಗಿ ಹೋಗು. ಜನರು ನಿನ್ನನ್ನು ಕ್ಲಬ್ಬಿನ ಸದಸ್ಯರೆಂದು ತಿಳಿದುಕೊಂಡಾರು' ಎಂದರು.

Notice.

Gymkhana Races will be held on the Jumboor Bane turn-off at milestone 11/7 on Mercara-Somawarpet Road on October the 4th and 7th. First race on each day is at 11-O' Clock. The races will consist of 4 Races each day including one or more for Tat ponies.

J. H. Sprott,
President,
Coorg and Mysore Gymkhana Club.



ಜ್ಞಾನಿಗಳು ಹಾಗೂ ಬುದ್ಧಿವಂತರ ಸೇವೆ ಮಾಡಬೇಕು. ನಮ್ಮ ತಪ್ಪುಗಳನ್ನು ನಿರ್ದಾಕ್ಷಿಣ್ಯವಾಗಿ ಎತ್ತಿ ತೋರಿಸುವವರೇ ಗೆಳೆಯರು. ಅಂಥಾವರ ಸೇವೆ ಎಂದೂ ಹಿತಕರ

ತಪ್ಪುಗಳನ್ನು ಹೇಳಿಕೊಟ್ಟು ಕೆಟ್ಟ ಕೆಲಸ ಮಾಡದಂತೆ ತಡೆಯುವವನನ್ನು ತಿಳಿಗೇಡಿಗಳು ಶತ್ರುವೆಂದೂ ಬುದ್ಧಿವಂತರು ಮಿತ್ರನೆಂದೂ ಭಾವಿಸುತ್ತಾರೆ.

ಕೇಡು ಬಗೆಯುವವರ, ಕೀಳ್ ಬುದ್ಧಿಯವರ ಸಂಘದಿಂದ ಏನೇ ಲಾಭ ಬರುವದಿದ್ದರೂ ಆ ಸಂಗವನ್ನು ತ್ಯಜಿಸು. ಉತ್ತಮರ ಸಂಗದಿಂದ ಕಷ್ಟ ಬಂದರೂ ಅದನ್ನು ಗಳಿಸು.

ಕಾಲುವೆ ತೋಡುವವನು ನೀರೆಲ್ಲಿಗೆ ಬೇಕೋ ಅಲ್ಲಿಗೆ ಕಾಲುವೆಯನ್ನು ತಯಾರಿಸುತ್ತಾನೆ. ಕಮ್ಮಾರನು ಬಾಣವನ್ನು ಕಾಸಿ ಬಡಿದು ನೆಟ್ಟಗೆ ಮಾಡುತ್ತಾನೆ ಮರಗೆಲಸದವನು ಮರವನ್ನು ತನ್ನ ಅವಶ್ಯಕತೆಗೆ ತಕ್ಕಂತೆ ರೂಪಿಸುತ್ತಾನೆ. ಅದೇ ರೀತಿ ಬುದ್ಧಿವಂತನು ತನ್ನ ಜೀವನವನ್ನು ಹಿಡಿತದಲ್ಲಿಡುವನು.

ನಿಶ್ಚಲವಾದ ಕಲ್ಲು, ಗಾಳಿ ಮಳೆ ಬಿಸಿಲುಗಳಿಗೆ ಅಲುಗಾಡದಂತೆ, ದೃಢ ಮನಸ್ಸುಳ್ಳ ... ಹೊಗಳಿಕೆ ತೆಗಳಿಕೆಗಳಿಗೆ ಅಸ್ಥಿರನಾಗನು

ಒಳ್ಳೆಯವನು ಗೊಣಗುವದಿಲ್ಲ ಶಾರೀರಿಕ ಸೌಖ್ಯಕ್ಕಾಗಿ ಹೆಣಗುವದಿಲ್ಲ. ಸುಖ ದುಃಖಗಳಿಂದ ಹಿಗ್ಗಿ, ತಗ್ಗುವದಿಲ್ಲ. ನಶ್ವರ ವಸ್ತುಗಳಿಗೆ ಬೆಲೆಕಟ್ಟುವದಿಲ್ಲ

ತನಗೆಂದಾಗಲೀ, ಇನ್ನೊಬ್ಬರಿಗೆಂದಾಗಲೀ ಬುದ್ಧಿವಂತನು ಮಕ್ಕಳು, ಹಣ, ಆಸ್ತಿ, ಅಧಿಕಾರ ಯಾ ರಾಜ್ಯವೆಂದು ಆಶೆ ಪಡುವದಿಲ್ಲ. ಅನೀತಿಯ ಮಾರ್ಗದಿಂದ ದೊಡ್ಡವನೆನಿಸಲು ಯತ್ನಿಸುವದಿಲ್ಲ.

ತತ್ವಗಳಿಗೆ ಸರಿಯಾಗಿ ಜೀವಿಸುವವನು, ನೀತಿ ನಡತೆಗಳನ್ನು ತಿಳಿದು ವರ್ತಿಸುವವನು ಸರಾಗವಾಗಿ ಸಂಸಾರದ ಶರಧಿಯನ್ನು ದಾಟಿ ದೂರದ ದಂಡೆಯನ್ನು ಮುಟ್ಟುವನು. ಆದರೆ ಆಶೆ, ಸ್ವಾರ್ಥ, ಲೋಭ ಮೊದಲಾದವುಗಳಿಗೊಳಗಾದವನು ಸಂಸಾರವೆಂಬ ಈಚೆಯ ದಂಡೆಯಲ್ಲಿಯೇ ಪರಿತಪಿಸಬೇಕಾಗುವದು

ಜ್ಞಾನದ ಏಳು ತತ್ವಗಳನ್ನು ಅರಿತವರು, ವೈರಾಗ್ಯದಲ್ಲಿ ಆನಂದವನ್ನೂ ತ್ಯಾಗದಲ್ಲಿ ಶಾಂತಿಯನ್ನೂ, ಕತ್ತಲಲ್ಲಿ ಬೆಳಕನ್ನೂ, ಕಷ್ಟದಲ್ಲಿ ಸುಖವನ್ನೂ, ನಿರಾಶೆಯಲ್ಲಿ ತೃಪ್ತಿಯನ್ನೂ, ಕಾಣುವರು. ಅಂಥಾವರೇ ಈ ಐಹಿಕ ಜಗತ್ತಿನ ಜಂಝಡಗಳಿಂದ ಮುಕ್ತರಾಗಿ ನಿರ್ವಾಣ ಪದವನ್ನು ತಲಪಿದವರು.

ಹಿತ್ತಾಳೆ ಕಿವಿ ಕತ್ತೆಯ ಕಥೆ

ಒಂದು ಕಾಡಿನಲ್ಲಿ ವೀರಕೇಸರಿ ಎಂಬ ಸಿಂಹ ರಾಜನಿತ್ತು. ಅದಕ್ಕೆ ಧೂಸರಿ ಎಂಬ ಗುಳ್ಳೆನರಿಯು ಸೇವಕನಾಗಿತ್ತು. ಒಂದು ದಿನ ಸಿಂಹವು ಆನೆಯೊಡನೆ ಹೋರಾಡಬೇಕಾಗಿ ಬಂದು ತನ್ನ ಮೈಮೇಲೆ ತುಂಬಾ ಗಾಯಗಳಾದುದರಿಂದ ಗುಹೆಯನ್ನು ಬಿಟ್ಟು ಹೊರಗೆ ಹೊರಡಲಾರದೆ ಮಲಗಬೇಕಾಯಿತು. ಸಿಂಹವು ಮಲಗಿದ ಕಾರಣ ನರಿಗೆ ಆಹಾರಕ್ಕೆ ತೊಂದರೆಯಾಗಿ ಅದು ಬಡವಾಗತೊಡಗಿತು. ಒಂದು ದಿನ ಹಸಿವಿನ ಬಾಧೆಯಿಂದ ಕಂಗಾಲಾದ ನರಿಯು ಸಿಂಹದೊಡನೆ, "ಮಹಾರಾಜ, ನನಗೆ ತುಂಬಾ ಹಸಿವಾಗಿದೆ. ಒಂದು ಹೆಜ್ಜೆಯನ್ನೂ ಇಡಲಾರದಷ್ಟು ನಿರ್ಬಲನಾಗಿದ್ದೇನೆ. ನಾನು ನಿಮ್ಮ ಸೇವೆಯನ್ನು ಹೇಗೆ ಮಾಡಲಿ?" ಎಂದು ಕೇಳಿತು.

"ನನ್ನ ಈಗಿನ ಸ್ಥಿತಿಯಲ್ಲಿ ನಾನು ಕೊಲ್ಲಬಹುದಾದ ಯಾವುದಾದರೂ ಪ್ರಾಣಿಯನ್ನು ಕಂಡು ಹಿಡಿ" ಎಂದು ಸಿಂಹವೆಂದುದರಿಂದ ನರಿಯು ಅಂಥಾ ಪ್ರಾಣಿಯನ್ನು ಹುಡುಕಿಕೊಂಡು ಕಾಡಿನಲ್ಲಿ ಸುತ್ತತೊಡಗಿತು. ಹೀಗೆ ಸುತ್ತುತ್ತಿರುವಾಗ ಹಳ್ಳಿಯ ಹತ್ತಿರದಲ್ಲಿ ಉದ್ದ ಕಿವಿಯ ಕತ್ತೆಯೊಂದನ್ನು ಕಂಡಿತು. ನರಿಯು ಅದರ ಹತ್ತಿರ ಹೋಗಿ ಸ್ನೇಹದಿಂದ ಹೇಳಿತು, "ಮಿತ್ರಾ, ನಿನಗೆ ವಂದನೆಗಳು. ನಿನ್ನನ್ನು ಭೇಟಿಯಾಗದೆ ಬಹಳ ದಿನಗಳಾದವು. ನೀನೇಕೆ ಇಷ್ಟು ಬಡವಾಗಿರುವೆ?"

"ನಾನೇನು ಮಾಡಲಿ ಗೆಳೆಯಾ, ನನ್ನ ಯಜಮಾನನು ನಿರ್ದಯಿಯು. ನನ್ನ ಮೇಲೆ ಕನಿಕರವಿಲ್ಲ. ಹೊರಲಾರದ ಹೊರೆ ಹೇರುತ್ತಾನೆ. ಆಹಾರವೇನೂ ಕೊಡುವದಿಲ್ಲ. ಕಾಡಿನ ಈ ಒಣಗಿದ ಹುಲ್ಲು ಸೊಪ್ಪು ತಿಂದು ಜೀವಿಸಬೇಕಿದೆ. ಮತ್ತೆ ಬಡವಾಗದಿರಲು ಸಾಧ್ಯವೇ?' ಎಂದು ಕತ್ತೆಯು ಹೇಳಿತು.

'ಹಾಗಾದರೆ' ನರಿಯು ನುಡಿಯತೊಡಗಿತು; "ನಾನೊಂದು ಸ್ಥಳವನ್ನು ಕಂಡಿರುವೆನು ಅಲ್ಲಿ ಚಿಗುರು ಹುಲ್ಲಿದೆ. ನಿರ್ಮಲ ನೀರಿದೆ. ಅಲ್ಲಿಗೆ ಬಾ. ನನ್ನೊಡನಿರು. ನಿನಗ ಸುಂದರ ಕತೆಗಳನ್ನು ಹೇಳುತ್ತೇನೆ. ನೀನು ಸುಖವಾಗಿರಬಹುದು."

"ಅದು ಸರಿ. ಆದರೆ ಗ್ರಾಮದ ಜಂತುಗಳಾದ ನಮ್ಮನ್ನು ಕಾಡು ಪ್ರಾಣಿಗಳು ಕೊಂದು ಹಾಕುವವು. ಆದ್ದರಿಂದ ನಿನ್ನ ಸುಂದರ ಸ್ಥಳವು ನನ್ನ ಅಂತಿಮ ಸ್ಥಳವಾಗಬಹುದು. ಆದ್ದರಿಂದ ಬರಲಾರೆ" ಎಂದು ಕತ್ತೆಯು ಹೇಳಿತು.

"ನೀನು ಹಾಗೆ ಯೋಚಿಸಬೇಡ. ನಾನು ಹೇಳಿದ ಸ್ಥಳದಲ್ಲಿ ಯಾವ ಕಾಡು ಪ್ರಾಣಿಯೂ ಇಲ್ಲ. ಬದಲು ಅಲ್ಲಿ ಮೂರು ಹೆಣ್ಣು ಕತ್ತೆಗಳಿವೆ. ಅವೂ ಕೂಡ ಅಗಸರ ತೊಂದರೆ ತಾಳಲಾರದೆ ನಿನ್ನಂತೆ ಕಷ್ಟಪಟ್ಟು ಅಲ್ಲಿಗೆ ಬಂದು ಸೇರಿದವುಗಳು. ಈಗ ಅವು ಚೆನ್ನಾಗಿ ಸೊಕ್ಕಿ ಬೆಳೆದಿವೆ. ಇನ್ನೂ ಚಿಕ್ಕ ಪ್ರಾಯದ ಅವು ತಮಗೊಬ್ಬ ಗಂಡನನ್ನು ಹುಡುಕಿ ತರಬೇಕೆಂದು ಹೇಳಿದ್ದರಿಂದ ನಿನ್ನನ್ನು ಒತ್ತಾಯ ಮಾಡುತ್ತಿರುವದಾಗಿದೆ. ನೀನು ಅಲ್ಲಿಗೆ ಬಂದರೆ ಸುಖವಾಗಿರಬಲ್ಲೆ" ಎಂದು ನರಿಯು ಹೇಳಿತು.

ಇದನ್ನು ಕೇಳಿದ ಹಿತ್ತಾಳೆ ಕಿವಿಯ ಕತ್ತೆಯು ಸಂತೋಷಗೊಂಡಿತು. "ಹಾಗಾದರೆ ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗು. ಏಕೆಂದರೆ ಹೆಣ್ಣೇ ಅಮೃತ ಅದೇ ವಿಷವೆಂದು ಹೇಳಿದ್ದಾನೆ. ಅದರೊಡನೆ ಪ್ರೇಮದಿಂದಿದ್ದರೆ ಅದೇ ಅಮೃತ. ಅದರ ವಿಯೋಗವೇ ವಿಷ. ಆದ್ದರಿಂದ ನಡೆ" ಎಂದು ಹೇಳಿತು.

ಹಿತ್ತಾಳೆ ಕಿವಿಯ ಕತ್ತೆಯು ನರಿಯ ಮಾತು ಕೇಳಿ ಸಿಂಹದ ಹತ್ತಿರ ಬಂತು. ಆದರೆ ಸಿಂಹವು ತುಂಬಾ ನಿಶ್ಶಕ್ತಿಯಾಗಿತ್ತು. ಅದು ಕತ್ತೆಯು ದೊರೆತ ಸಂತೋಷದಲ್ಲಿ ತಾನು ಮಲಗಿದಲ್ಲಿಂದ ನೆಗೆಯಿತು. ಆದರೆ ಆ ಆವೇಶದ ನೆಗೆತಕ್ಕೆ ಕತ್ತೆಯು ಸಿಗಲಿಲ್ಲ. ಅಕಸ್ಮಾತ್ ಮಿಂಚಿನಂತೆ ಹಾರಿದ ಶಬ್ದ ಕೇಳಿ ಕತ್ತೆಗೆ ಗಾಬರಿಯಾಯಿತು. ತಿರುಗಿ ನೋಡುವಾಗ ಹತ್ತಿರದಲ್ಲಿ ಎದ್ದು ಬರುತ್ತಿರುವ ಸಿಂಹವನ್ನು ಕಂಡು ತನ್ನ ಶಕ್ತಿಗೆ ಮೀರಿದ ವೇಗದಿಂದ ಓಡಿಹೋಯಿತು. ಗಾಯಗೊಂಡ ಸಿಂಹವು ಅದನ್ನು ಹಿಂಬಾಲಿಸಲಾರದಾಯಿತು.

"ಇದೇನು? ನಿಮ್ಮ ನೆಗೆತದ ಪ್ರದರ್ಶನ! ಆದರೆ ಪ್ರಯೋಜನವೇನಾಯಿತು? ನನ್ನ ಪ್ರಾಣ ಹೋಗುತ್ತಿರುವಲ್ಲಿ ನಿಮ್ಮ ಈ ಅವಿವೇಕ. ಹೆಚ್ಚು ಮಾತಾಡಿ ಪ್ರಯೋಜನವಿಲ್ಲ. ಅದನ್ನು ಪುನಃ ಕರೆತರುವೆನು ಆಗ ಖಂಡಿತಾ ಕೊಲ್ಲಬೇಕು" ಎಂದು ನರಿಯು ಹೇಳಿ ಕತ್ತೆಯನ್ನು ಹುಡುಕುತ್ತಾ ಹೊರಟಿತು. ಕತ್ತೆಯು ತನ್ನ ಹಿಂದಿನ ಸ್ಥಳದಲ್ಲಿ ಮೇಯುತಿತ್ತು. ನರಿಯು ಹತ್ತಿರ ಹೋಯಿತು. ಅದನ್ನು ಕಂಡು ಕತ್ತೆಯು "ಒಳ್ಳೇ ಸ್ಥಳಕ್ಕೆ ನನ್ನನ್ನು ಕರೆದುಕೊಂಡು ಹೋದೆ. ನನ್ನ ಜೀವ ಉಳಿದದ್ದು ದೇವರ ಸಹಾಯ. ಆ ಭಯಂಕರ ಪ್ರಾಣಿ ಯಾವುದು?" ಎಂದು ಕೇಳಿತು.

ನರಿಯು ನಗುತ್ತಾ "ಅದು ಹೆಣ್ಣು ಕತ್ತೆ. ಕಾಮದ ಕಾರಣದಿಂದ ನಿನ್ನನ್ನು ಕಂಡು ಆಲಿಂಗಿಸಿಕೊಳ್ಳಲು ಹಾಗೆ ಹಾರಾಡಿತು. ನೀನು ತುಂಬಾ ನಾಚಿಕೆ ಇರುವವನು. ಓಡಿ ಬಂದು ಬಿಟ್ಟೆ ನಿನ್ನನ್ನು ತಡೆಯಲು ಅದು ಕೈ ನೀಡಿತು. ಆದರೆ ನೀನು ಓಡಿ ಬಂದೆ. ಆದ್ದರಿಂದ ನೀನು ಹಿಂದಕ್ಕೆ ಬಾ. ಆಕೆ ನಿನ್ನ ಮೇಲಿನ ಪ್ರೀತಿಯಿಂದ ಆಹಾರ ಮುಟ್ಟದೆ ಕುಳಿತಿದ್ದಾಳೆ. ಆಕೆಯ ಪ್ರೀತಿಯನ್ನು ಹಾಳು ಮಾಡಬಾರದು. ಹೆಣ್ಣಿನ ಪ್ರೇಮವು ಸರ್ವ ಸುಖವನ್ನು ಕೊಡಬಲ್ಲುದು. ಅದರ ಮೇಲೆ ವಿಶ್ವಾಸವಿಡದವನು ಯಾವಾಗಲೂ ಕಷ್ಟ, ನರಕಗಳಿಗೊಳಗಾಗುವನು. ಆದ್ದರಿಂದ ನೀನು ಹಿಂದಿರುಗು" ಎಂದಿತು.

ಕತ್ತೆಗೆ ಕಿವಿ ನೆಟ್ಟಗಾಯಿತು. ಏಕೆಂದರೆ ಆಸೆಗೆ ಒಳಗಾದವನು ಸಾರಾಸಾರಾ ವಿಚಾರ ಮಾಡಲಾರನು. ಅದರಲ್ಲೂ ಕಾಮದ ಕೈಗೊಂಬೆಯಾದವನಿಗೆ ಸ್ಥಿರಬುದ್ಧಿಯೇ ಇರಲಾರದು. ಅದರಂತೆ ತಿಳಿಗೇಡಿಯಾದ ಹಿತ್ತಾಳೆ ಕಿವಿಯ ಕತ್ತೆಯು ನರಿಯೊಡನೆ ಹೋಗಿ ಸಿಂಹದ ಬಾಯಿಗೆ ಆಹುತಿಯಾಯಿತು. ಕತ್ತೆಯನ್ನು ಕೊಂದು ಸಿಂಹವು ನರಿಯನ್ನು ಪಹರೆ ಇಟ್ಟು ನದಿಯ ದಡಕ್ಕೆ ಪ್ರಾರ್ಥನೆಗೆಂದು ಹೋಯಿತು. ಹಿಂತಿರುಗಿ ಬರುವಾಗ ಕತ್ತೆಯ ಕಿವಿ ಮತ್ತು ಹೃದಯಗಳನ್ನು ನರಿಯು ತಿಂದು ಹಾಕಿತ್ತು. ಸಿಂಹವು ಸಿಟ್ಟಿನಿಂದ, 'ಘಾತಕೀ, ನೀನು ಹೃದಯ ಕಿವಿಗಳನ್ನು ತಿಂದು ಉಳಿದ ನಿನ್ನ ಎಂಜಲನ್ನು ನನಗಿಟ್ಟಿರುವೆ. ನಿನ್ನನ್ನು ಈಗ ಕೊಂದು ಹಾಕುವೆನು' ಎಂದಿತು.

ಆಗ ನರಿಯು, 'ಮಹಾರಾಜ. ಹಾಗೆ ಮಾತಾಡಬೇಡ. ಈ ಪ್ರಾಣಿಗೆ ಹುಟ್ಟುವಾಗಲೇ ಕಿವಿ ಮತ್ತು ಹೃದಯಗಳಿಲ್ಲ. ಹಾಗಿದ್ದರೆ ನಿನ್ನನ್ನು ಕಂಡು ಓಡಿ ಹೋಗಿ ಪುನಹ ನಿನ್ನೆಡೆಗೆ ಬರುತ್ತಿರಲಿಲ್ಲ'. ಎಂದಿತು.

ಸಿಂಹಕ್ಕೆ ತೃಪ್ತಿಯಾಯಿತು. ಕತ್ತೆಯ ಕಳೇಬರವನ್ನು ಎರಡು ಪಾಲುಮಾಡಿಕೊಂಡು ಅವು ತಿಂದವು.

'ಅದರಂತೆ ಎಲೈ ಮೊಸಳೆಯೇ ನೀನು ನನಗೆ ಮೋಸ ಮಾಡಿ ನಂತರ ಸತ್ಯ ಹೇಳಿ ಆ ಕುಂಬಾರನಂತೆ ನಿನ್ನ ಕೈಯ್ಯಲ್ಲಿದ್ದುದನ್ನು ಕಳಕೊಂಡೆ' ಎಂದು ಕೋತಿಯು ಹೇಳಲು 'ಅದು ಹೇಗೆ' ಎಂದು ಮೊಸಳೆಯು ಕೇಳಿದ್ದರಿಂದ ಮುಂದಿನ ವಾರ ಕೋತಿಯು ಕುಂಬಾರನ ಕತೆ ಹೇಳುವದು.

ಗರಗಂದೂರು ಶಾಲೆ.

ತಾ. ೧೦—೯—೫೩ ರಲ್ಲಿ ಶ್ರೀ ಎಂ. ಎ. ಬೆಳ್ಳಪ್ಪನವರ ಅಧ್ಯಕ್ಷತೆಯಲ್ಲಿ ಗರಗಂದೂರಿನ ಗ್ರಾಮಸ್ಥರೆಲ್ಲಾ ಸಭೆ ಸೇರಿ, ಫೀಡರ್ ಶಾಲಾ ಕಟ್ಟಡ ಕಟ್ಟಲು ಸ್ಥಳ ನಿಶ್ಚಯ ಮಾಡಿದರು. ಶಾಲಾ ಕಾರ್ಯಕಲಾಪಗಳನ್ನು ಸಾಂಗವಾಗಿ ನೆರವೇರಿಸಲು ಮೂರು ಮಂದಿ ಕಮಿಟಿ ಮೆಂಬರುಗಳಾಗಿ ಶ್ರೀಗಳಾದ ಸಿ. ಈರಪ್ಪನವರು, ಕೇಜನ ಅಯ್ಯಪ್ಪನವರು ಮತ್ತು ಕೆ. ಕೆ. ಗಣಪತಿಯವರನ್ನು ನೇಮಿಸಲಾಯಿತು. ಗ್ರಾಮದ ಪರವಾಗಿ ಕೆಲಸ ಮಾಡಲು ಮೂರು ಮಂದಿ ಕಮಿಟಿ ಮೆಂಬರುಗಳಾಗಿ ಶ್ರೀಗಳಾದ ಕೇಜನ ಮುತ್ತಣ್ಣನವರು, ಮೊಟ್ಟನಳ್ಳಿ ಸೋಮಯ್ಯನವರು ಮತ್ತು ಮಹಮ್ಮದ್ ಪೀರ್‌ರವರನ್ನು ನೇಮಿಸಲಾಯಿತು. ಶಾಲಾ ಕಟ್ಟಡಕ್ಕೆ ಹೆಚ್ಚು ಕಮ್ಮಿ ರೂ. ೧೦,೦೦೦/ ವಾದರೂ ವೆಚ್ಚ ಮಾಡಬೇಕೆಂದೂ ಅಂದಾಜು ಮಾಡಲಾಗಿದೆ. ಸಭಾ ಅಧ್ಯಕ್ಷರು ನಿಧಿ ಸಂಗ್ರಹಕ್ಕೆ ಸಭಿಕರನ್ನು ಕೇಳಿಕೊಂಡಾಗ ಸಭೆಯಲ್ಲಿ ನೆರೆದಿದ್ದ ಈ ಕೆಳಗಿನ ಮಹನೀಯರುಗಳು ಉದಾರ ಮನಸ್ಸಿನಿಂದ ಈ ಕೆಳಗೆ ನಮೂದಿಸಿರುವಂತೆ ಚಂದಾ ಕೊಡಲು ಭರವಸೆಯನ್ನಿತ್ತರು. ಗ್ರಾಮದ ಏಳಿಗೆಯನ್ನು ಬಯಸುವ ಇನ್ನೂ ಅನೇಕ ಮಹನೀಯರುಗಳು ಉದಾರ ಮನಸ್ಸಿನಿಂದ ಚಂದಾ ಕೊಡಲಿರುವರು. ಹಂಗಾಮಿಯಾಗಿ ಈಗ ಊರಿನ ದೇವಸ್ಥಾನದಲ್ಲೇ ೩೫ ಮಕ್ಕಳಿಗೆ ಪಾಠ ಕಲಿಸುತ್ತಿರುವರು. ಇನ್ನೂ ಹೆಚ್ಚು ಕಮ್ಮಿ ೪೦ ಮಕ್ಕಳು ಸೇರಲಿರುವರು. ಈ ಊರಿನವರ ಉತ್ಸಾಹ ಪೂರಿತವಾದ ಕೆಲಸಕ್ಕೆ ಸರಕಾರದವರು ಬೆಂಬಲವನ್ನು ಕೊಡುವರೆಂಬ ನಂಬಿಕೆಯಿಂದ ಸಭೆಯು ಮುಕ್ತಾಯವಾಯಿತು.

ವಾಗ್ದಾನ ಮಾಡಿದವರು

ಶ್ರೀ. ಸಿ. ಈರಪ್ಪನವರು	ರೂ.	೧೦೫
,, ರಾಮಪ್ಪ ಪರೇಲರು	,,	೧೦೧.
,, ಚನ್ನಬಸವಯ್ಯ	,,	೧೦೧.
,, ಕೇಜನ ಮುತ್ತಣ್ಣ	,,	೧೦೧.
,, ಹಂಚೆಟ್ಟಿರ ಬಸಪ್ಪ	,,	೧೦೫.
,, ಕೇಜನ ಐಯ್ಯಪ್ಪ	,,	೫೦.
,, ಅಹಮ್ಮದ್ ಸಾಹೆಬ್	,,	೨೫.
,, ಮಹಮ್ಮದ್ ಪೀರ್	,,	೨೫.
,, ಗೌಡಂಡ್ರ ಚಂಗಪ್ಪ	,,	೧೦.
,, ಯೆಂಕಣ ಸೋಮವ್ವ	,,	೫.
,, ಎಂ. ಇ. ಈಸೂಫ್	,,	೨೫.
,, ಗುಡ್ಡೇರ ಕರಿಯಪ್ಪ	,,	೧೫.
,, ಅಮ್ಮನ್ನನ ಪುಟ್ಟಪ್ಪ	,,	೧೦.
,, ಕೊಳ್ಳಿರ ಬಸಪ್ಪ	,,	೨೫.
,, ಮನಿಯಪಂಡ ಮಾದಯ್ಯ		೨೫.
,, ಕೇಜನ ಚಿಣ್ಣಪ್ಪ	,,	೧೦.
,, ಕೊಪ್ಪಲು ಬಸಮ್ಮ	,,	೨೫.
,, ಜಿ. ಸಿ. ಎಸ್. ಪುಟ್ಟುಸ್ವಾಮಿ		೨೫.
,, ಸಿ. ರಾಮಯ್ಯಗೌಡ	,,	೨೫.
,, ಮೋಟನಳ್ಳಿ ಸೋಮಯ್ಯ		೨೫.
,, ಕೆದಕಾರ್ ಬೋಜಗೌಡ		೫.
,, ಕೊಪ್ಪಲು ಮಲ್ಲಪ್ಪ	,,	೧೦.
,, ಡಿ. ಎಸ್. ನಂಜಪ್ಪಶೆಟ್ಟಿ	,,	೧೦೧.
,, ಮಮ್ಮುಞ ಕಾಕ	,,	೫.
,, ಕಂಟ್ರಾಕ್ಟರು ಕೃಷ್ಣ	,,	೫.

ಸೋಮವಾರಪೇಟೆಗೆ
'ಕೊಡಗು' ಏಜೆಂಟರು,
ಶ್ರೀ. ಕೆ. ಎಂ. ಮೊಗಪ್ಪನವರು

॥ ಜಪಾನಿನ ಮಕ್ಕಳ ಪ್ರಾರಂಭಿಕ ಶಿಕ್ಷಣ ॥

ಲೇಖಕ:—ಸಿ. ಪಿ.

ಜಪಾನಿನಲ್ಲಿ ಮಕ್ಕಳ ಜನನದ ಮೊದಲೇ ಅವರ ತಂದೆ ತಾಯಿಗಳ ಹಾಗೂ ಬಂಧು ಬಳಗದವರ ಕೆಲವು ಕರ್ತವ್ಯಗಳಿರುತ್ತವೆ.

ಮಕ್ಕಳ ಜನನದ ನಂತರ ಅವರ ಪಾಲನೆ ಪೋಷಣೆಯ ಕ್ರಮವನ್ನು ನೋಡಿದರೆ ನಮಗೆ ನಿಜವಾಗಿಯೂ ಬಹಳ ಆಶ್ಚರ್ಯವಾಗುತ್ತದೆ.

ಮಕ್ಕಳ ಜನನದ ಮೊದಲೇ ಅವರ ಹಿರಿಯರು ಅವರಿಗಾಗಿ ಉಡುಪುಗಳನ್ನು ತಯಾರಿಸಿಡುತ್ತಾರೆ. ಅವರು ಒಂದು ಚಂದದ ಹಳದಿ ಬಣ್ಣದ ಅಂಗಿಯನ್ನೂ ಕಡಗೆಂಪು ಬಣ್ಣದ ಒಂದು ಕೋಟನ್ನೂ ತಯಾರಿಸಿಡುತ್ತಾರೆ. ಹಳದಿ ಬಣ್ಣವು ಆರೋಗ್ಯ ಮತ್ತು ಬಲವನ್ನು ಹೆಚ್ಚಿಸುವಂಥಾದ್ದೆಂದೂ, ಕೆಂಪು ಬಣ್ಣವು ಸಂತೋಷದ ಗುರುತೆಂದೂ ಅವರ ನಂಬಿಕೆ. ಆದುದರಿಂದಲೇ ಜಪಾನಿನವರು ಈ ಎರಡು ಬಣ್ಣಗಳನ್ನು ಬಹಳ ಒಳ್ಳೆಯವುಗಳೆಂದು ತಿಳಿದುಕೊಳ್ಳುತ್ತಾರೆ. ಗಂಡು ಮಗುವು ಜನಿಸಿದರೆ ಅದಕ್ಕೆ ನೀಲ ಬಣ್ಣದ ಬಟ್ಟೆಯನ್ನೂ ಹೆಣ್ಣು ಮಗುವು ಜನಿಸಿದರೆ ಗುಲಾಬಿ ಅಥವಾ ಕೆಂಪು ಬಣ್ಣದ ಬಟ್ಟೆಯನ್ನೂ ಕೊಡುತ್ತಾರೆ. ಜಪಾನಿನ ಪ್ರತಿಯೊಬ್ಬ ವ್ಯಕ್ತಿಯೂ ತರ ತರದ ಬಣ್ಣಗಳ ಬಟ್ಟೆಗಳನ್ನು ತಯಾರಿಸುವುದರಲ್ಲಿ ಬಹಳ ಆಸಕ್ತನಾಗಿರುತ್ತಾನೆ. ಮಗುವಿಗಾಗಿ ಅವರು ಒಂದು ಉತ್ಸವವನ್ನು ನಡೆಸುತ್ತಾರೆ. ಆ ದಿನ ಎಲ್ಲೆಲ್ಲೂ ಆನಂದದ ಸುರಿಮಳೆ.

ಅವರು ಮಗುವಿನ ಜನನವಾದೊಡನೆಯೇ ಮನೆಯನ್ನು ಶುಚಿ ಮಾಡಿ ಬಹಳ ಒಳ್ಳೆಯ ಬಟ್ಟೆಗಳನ್ನು ಹಾಸಿ ಶೃಂಗರಿಸುತ್ತಾರೆ. ಆ ಸಮಯ ಎಲ್ಲರೂ ಬಹಳ ಸಂತೋಷದಿಂದಿರುತ್ತಾರೆ.

ಒಂದೆಡೆ ದಾಸಿಯರು ಚಾದ ಕಪ್ಪುಗಳನ್ನು ಹಿಡಿದುಕೊಂಡು ಓಡಾಡುತ್ತಿರುತ್ತಾರೆ. ಇನ್ನೊಂದೆಡೆಯಲ್ಲಿ ಅನ್ನಕ್ಕಾಗಿ ಅಕ್ಕಿ ತೊಳೆಯುತ್ತಿರುತ್ತಾರೆ. ಮತ್ತೊಂದೆಡೆ ನೀರು ತುಂಬುತ್ತಿರುತ್ತಾರೆ. ಜಪಾನಿನವರು ಹೆಚ್ಚಾಗಿ ದೊಡ್ಡಕ್ಕಿ ಅನ್ನವನ್ನು ಊಟ ಮಾಡುತ್ತಾರೆ. ಆದರೆ ಈ ಉತ್ಸವದ ಸಮಯದಲ್ಲಿ ಅವರು ಬಹಳ ಸಣ್ಣ ಅಕ್ಕಿಯನ್ನು ಉಪಯೋಗಿಸುತ್ತಾರೆ. ಗಂಡು ಮಗುವಿನ ಜನನವಾದರೆ ಮಗುವಿನ ತಂದೆ ತಾಯಿಗಳಿಂದ ದಾಸ ದಾಸಿಯರ ತನಕ ಎಲ್ಲರಿಗೂ ಬಹಳ ಸಂತೋಷವಾಗುತ್ತದೆ. ಅವರು ತಮ್ಮ ಸಂತೋಷವನ್ನು ಪ್ರಕಟಗೊಳಿಸಲಿಕ್ಕೆ ಒಂದಲ್ಲ ಒಂದು ಸಂದರ್ಭ ಹುಡುಕುತ್ತಾರೆ. ಅವರು ತಮ್ಮ ಸ್ವರ್ಗೀಯ ಪಿತೃಗಳ ಹೆಸರಿನಲ್ಲೂ ತರತರದ ಪಕ್ವಾನ್ನಗಳನ್ನು ಮಾಡುತ್ತಾರೆ. ಪಕ್ವಾನ್ನಗಳನ್ನು ಮಕ್ಕಳ ಮುಂದಿಡುತ್ತಾರೆ. ಈ ಉತ್ಸವವು ಕೆಲವು ದಿವಸಗಳ ತನಕ ನಡೆಯುತ್ತದೆ.

ಬಂಧು ಬಳಗದವರೂ ನೆರೆ ಹೊರೆಯವರೂ ಈ ಸಂದರ್ಭದಲ್ಲಿ ಬೇರೆ ಬೇರೆ ರೀತಿಯ ಉಡುಗೊರೆಗಳನ್ನು ಕಳುಹಿಸುತ್ತಾರೆ. ಮಕ್ಕಳ ಹಿರಿಯರು ಈ ಉಡುಗೊರೆಗಳನ್ನು ಸ್ವೀಕರಿಸುತ್ತಾ ಅದಕ್ಕಿಂತ ಹೆಚ್ಚಿನ ಕಾಣಿಕೆಗಳನ್ನು ಕೊಡುತ್ತಾರೆ.

ಜನನದ ಮೂರನೆಯ ದಿನದಲ್ಲೇ ಮಕ್ಕಳ ತಲೆಯ ಕೂದಲನ್ನು ತಲೆಯ ಮಧ್ಯದಲ್ಲಿ ಸ್ವಲ್ಪ ಇರಿಸಿ, ಬಾಕಿ ಬಹಳ ಸಣ್ಣದಾಗಿರಿಸುತ್ತಾರೆ. ಈ ಸಂದರ್ಭದಲ್ಲಿ ಅವರು ತಮ್ಮ ಮತದ ಕೆಲವು ಕಾರ್ಯಗಳನ್ನು ಮಾಡುತ್ತಾರೆ. ಮಕ್ಕಳ ಹಿರಿಯರು ಇದನ್ನು ಮಕ್ಕಳ ಜೀವ ರಕ್ಷಣೆಯ ಒಂದು ಭಾಗವೆಂದು ತಿಳಿದುಕೊಳ್ಳುತ್ತಾರೆ.

ಮಕ್ಕಳಿಗೆ ನಾಮಕರಣ ಮಾಡುವಾಗಲೂ ಒಂದು ವಿಶೇಷ ದೃಶ್ಯವು ನಮ್ಮೆದುರಿಗೆ ಕಾಣಿಸುತ್ತದೆ. ಆ ಸಮಯದಲ್ಲಿ ಎಲ್ಲರೂ ಮಗುವಿಗೆ ಯಾವ ಹೆಸರನ್ನಿಡುವದೆಂದು ಪರಸ್ಪರ ಸಲಹೆ ಕೇಳಿಕೊಳ್ಳುತ್ತಾರೆ. ಮಗುವಿನ ತಂದೆಯು ಅಲ್ಲಿರುವ ಸ್ನೇಹಿತರ ಮುಂದೆ ಮಗುವಿಗೆ ಯಾರಾದರೂ ಪ್ರಸಿದ್ಧ ಪುರುಷರ ಇಲ್ಲವೆ ವೀರರ ಹೆಸರನ್ನಿಡುತ್ತಾನೆ. ಹುಡುಗಿಯರಿಗೆ ಹೆಚ್ಚಾಗಿ ಒಳ್ಳೆಯ ಹೂಗಳ ಹೆಸರನ್ನಿಡುತ್ತಾರೆ. ಅವರು ಹುಡುಗರಿಗೆ "ಅಚರದ್" "ತೋಷಿಯೊ" "ಅಬಾವರ್" ಎಂಬ ಹೆಸರುಗಳನ್ನೂ, ಹುಡುಗಿಯರಿಗೆ "ಹಾನಾ" "ಯೂಕೀ" "ಆಯೀ" ಎಂಬ ಹೆಸರುಗಳನ್ನು ಇಡುತ್ತಾರೆ.

ಒಂದು ತಿಂಗಳ ನಂತರ ಮಕ್ಕಳಿಗೆ ಒಳ್ಳೆಯ ಉಡುಪನ್ನು ತೊಡಿಸಿ ಗ್ರಾಮದ ದೇವಸ್ಥಾನಕ್ಕೆ ಕರೆದುಕೊಂಡು ಹೋಗುತ್ತಾರೆ. ಆ ಸಮಯದಲ್ಲಿ ಮಕ್ಕಳು ಎಷ್ಟು ದಣಿದರೂ ತಾಯಿಯಾಗಲೀ, ದಾಸಿಯಾಗಲೀ ಕರುಣೆದೋರಿ ಮಕ್ಕಳ ಎಚ್ಚರ ತೆಕ್ಕೊಳ್ಳುವದಿಲ್ಲ. ಬಾಲ್ಯದಿಂದಲೇ ಇಂತಹ ಕಷ್ಟಗಳನ್ನು ಸಹಿಸುವದರಿಂದ ದೊಡ್ಡವರಾದ ಮೇಲೆ ಜಪಾನಿಗಳು ಶೂರರೂ, ವೀರರೂ ಆಗುತ್ತಾರೆ. ಜಪಾನಿಗಳ ಕುಲಪುರೋಹಿತನು ತಲೆಬೋಳಿಸಿ ಪತಂಗಗಳ ಬಣ್ಣದ ಒಂದು ನಿಲುವಂಗಿಯನ್ನು ತೊಟ್ಟಿರುತ್ತಾನೆ. ಅವನು ಮಕ್ಕಳನ್ನು ದೇವರ ಮುಂದಿರಿಸಿ ಮಂತ್ರೋಚ್ಚಾರಣೆ ಮಾಡುತ್ತಾ ಬಿಳಿ ಕಾಗದದಿಂದ ಮಕ್ಕಳ ದೇಹದ ಮೇಲುಭಾಗವನ್ನು ಒರಸುತ್ತಾನೆ. ಇದರಿಂದ ಮಕ್ಕಳಲ್ಲಿ ದೇವರ ಅಸ್ತಿತ್ವವು ನೆಲಸುವದೆಂದು ಜಪಾನರ ವಿಶ್ವಾಸ.

ಇಲ್ಲಿಗೆ ಅವರ ಮತಕಟ್ಟುಗಳು ಸಾಧಾರಣ ಮುಗಿಯುತ್ತವೆ. ಆ ಮೇಲೆ ಮನೆಯವರೆಲ್ಲರೂ ಮಕ್ಕಳ ರಕ್ಷಣೆಯ ಕಡೆಗೆ ಪೂರ್ಣ ಗಮನವನ್ನೀಯುತ್ತಾರೆ. ಮಕ್ಕಳನ್ನು ಸ್ನಾನ ಮಾಡಿಸುವದು, ಅವುಗಳಿಗೆ ಉಣಿಸುವದು ಮೊದಲಾದ ಕೆಲಸಗಳನ್ನು ಬಹಳ ಪ್ರಮವಹಿಸಿ ಮಾಡುತ್ತಾರೆ. ಜಪಾನಿಗಳು ಮಕ್ಕಳಲ್ಲಿ ದೇವರಂತೆ ಪ್ರೀತಿ ವಿಶ್ವಾಸಗಳನ್ನಿಡುತ್ತಾರೆ.

ಜಪಾನು ಮಕ್ಕಳ ಶಿಕ್ಷಣ ಕ್ರಮವು ಕೂಡ ಬಹಳ ವಿಚಿತ್ರವಾಗಿದೆ. ಮಕ್ಕಳ ಮನಸ್ಸನ್ನು ಸರಿಗೊಳಿಸಿ ಅವರಿಗೆ ಹೊಸ ತರದ ಶಿಕ್ಷಣವನ್ನೀಯುತ್ತಾರೆ. ಜಪಾನಿನಲ್ಲಿ ಮಕ್ಕಳ ಕಡೆಗೆ ಹೆಚ್ಚು ಗಮನವೀಯುವದಿಲ್ಲ. ಮಕ್ಕಳೇನು ಮಾಡುತ್ತಾರೆ, ಎಲ್ಲಿದ್ದಾರೆಂಬ ಗೊಡವೆಯೇ ಅವರಿಗಿರುವದಿಲ್ಲ. ಆದುದರಿಂದ ಮಕ್ಕಳು ಸ್ವತಂತ್ರರಾಗಿದ್ದು ಬಹಳ ಚುರುಕಾಗಿರುವರು.

ಜಪಾನಿ ಮಕ್ಕಳು ಅಳಲರಿಯರೇ ಎಂಬುದು ಕೆಲವರ ಅಭಿಪ್ರಾಯ. ಆದರೆ ಅವರಿಗೆ ಸಿಗುವ ಸೌಕರ್ಯದಿಂದಾಗಿ ಸ್ವಪ್ನದಲ್ಲೂ ಕೂಡ ಅಳುವ ಸಂದರ್ಭವಿರುವದಿಲ್ಲ. ಜನನದ ಎರಡನೆಯ ದಿನವೇ ಮಗುವಿನ ತಾಯಿಯು ಮಗುವನ್ನು ಒಂದು ಚೀಲದಲ್ಲಿರಿಸಿ ಬೆನ್ನ ಮೇಲೆ ಹಾಕಿಕೊಂಡು ಕೆಲಸ ಮಾಡುತ್ತಾಳೆ. ಜಪಾನರು ಮಕ್ಕಳಿಗೆ ಆಡಲು ಬೇಕುಬೇಕಾದ ಒಡವೆಗಳನ್ನು ಒದಗಿಸಿಕೊಡುತ್ತಾರೆ. ಆದುದರಿಂದ ಮಕ್ಕಳಿಗೆ ಅಳಲು ಅವಕಾಶವಿರುವದಿಲ್ಲ.

ಮನೆಯಲ್ಲಿ ಯಾವ ಸಮಾರಂಭವಿದ್ದರೂ ಮಕ್ಕಳು ಅದರಲ್ಲಿ ಭಾಗವಹಿಸುತ್ತಾರೆ. ಮಕ್ಕಳ ಅನುಪಸ್ಥಿತಿಯು ಯಾರಿಗೂ ಇಷ್ಟವಿರುವದಿಲ್ಲ. ಮಕ್ಕಳ ಎಳೆ ಹೃದಯವು ಉತ್ಸವಗಳಲ್ಲೂ ತುಂಬಾ ವಿಷಯಗಳನ್ನು ಕಲಿಯುತ್ತದೆ.

ಇಷ್ಟರ ತನಕ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಬೇಕೆಂದು ಯಾರಿಗೂ ಇರುವದಿಲ್ಲ. ಜಪಾನಿ ಮಕ್ಕಳು ಶಾಲೆಗೆ ಹೋಗುವ ಮೊದಲನೆಯ ದಿನ ಬಹಳ ಕಷ್ಟಪಡುತ್ತಾರೆ. ಜನನದಾರಭ್ಯ ಚೀಲದಲ್ಲೇ ಇದ್ದುದರಿಂದ ಕೈಕಾಲುಗಳು ಬಲಹೀನವಾಗಿರುವದರಿಂದ ನಡೆಯಲು ಬಹಳ ಕಷ್ಟವಾಗುತ್ತದೆ. ಜಪಾನಿ ಮಕ್ಕಳು ಬಾಲ್ಯದಿಂದಲೇ ಬಣ್ಣ ಬಣ್ಣದ ವಸ್ತುಗಳನ್ನು ತೆಗೆದುಕೊಂಡು ಆಡುತ್ತಾರೆ. ಆದುದರಿಂದ ಅವರಿಗೆ ಎಲ್ಲಾ ಬಣ್ಣಗಳ ಮೇಲೂ ತುಂಬಾ ಪ್ರೀತಿ ಇರುವದು.

ಜಪಾನಿನ ಮಕ್ಕಳು ಆಮೋದಕ್ಕೆ ಹೆಚ್ಚು ಸಮಯವನ್ನು ಉಪಯೋಗಿಸುವರು. ಮಕ್ಕಳು ಮೊದಲ ಬಾರಿ ಅಸಫಲತೆ ಹೊಂದಿದಾಗ ಬಹಳ ಬೇಸರ ಪಡುತ್ತಾರೆ. ಆದರೆ ನಿಯಮಾನುಸಾರ ನಡೆದರೆ ಕೊನೆಗೆ ಸಫಲತೆ ದೊರೆತೀತೆಂದು ಧೈರ್ಯತಾಳುತ್ತಾರೆ. ಪ್ರಯತ್ನ ಪಟ್ಟು ಕೊನೆಗೆ ಸಫಲರಾಗುತ್ತಾರೆ.

ಜಪಾನಿನಲ್ಲಿ ಅಧ್ಯಾಪಕರು ಮಕ್ಕಳ ಪ್ರತಿಯೊಂದು ತರದ ವಿದ್ಯಾಭ್ಯಾಸದ ಭಾರವನ್ನು ತಾವೇ ವಹಿಸಿಕೊಳ್ಳುತ್ತಾರೆ. ಅಲ್ಲಿ ಮಕ್ಕಳ ಹೆತ್ತವರು ಅಧ್ಯಾಪಕರಿಗೆ ಕೊಡುವ ಗೌರವವನ್ನು ವರ್ಣಿಸಲು ಸಾಧ್ಯವಿಲ್ಲ. ಇದರಿಂದ ಮಕ್ಕಳಲ್ಲಿ ಅಧ್ಯಾಪಕರ ಮಾತನ್ನು ಸರಿಯಾಗಿ ಪಾಲಿಸಬೇಕೆಂಬ ಒಳ್ಳೆಯ ಅಭಿಪ್ರಾಯವು ಹುಟ್ಟುತ್ತದೆ. ಅಧ್ಯಾಪಕರೂ ಕೂಡ ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಚೆನ್ನಾಗಿ ಗಮನವೀಯುತ್ತಾರೆ. ಇಂತಹ ಉಪಾಧ್ಯಾಯರಿಂದಾಗಿ ಮಕ್ಕಳು ಬಹಳ ಒಳ್ಳೆಯವರಾಗುತ್ತಾರೆ.

ಅಲ್ಲಿ ಮಕ್ಕಳಿಗೆ ಕಿಂಡರ್ ಗಾರ್ಟನಿನ ಮೂಲಕ ಶಿಕ್ಷಣವನ್ನೀಯುತ್ತಾರೆ. ಮಕ್ಕಳು ತರತರದ ಆಟದ ಸಾಮಾನುಗಳನ್ನು ತೆಗೆದುಕೊಂಡು ಆಡುತ್ತಾ ಹಾಡುತ್ತಾ ಇರುತ್ತಾರೆ. ಅಧ್ಯಾಪಕರು ಅವರ ಮೇಲ್ವಿಚಾ-

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸ್:—ವೀರಾಜಪೇಟೆ.

ಶಾಖೆ:—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟೆಗಳು
2. 12 ನೇ ನಂಬರಿನ ಒಂಟಿ ಹೋಳವಿನ ತೋಟೆದ ಕೋವಿಗಳು
3. ಒಂಟಿ ಮತ್ತು ಜೋಡಿ ಹೋಳವಿನ ಕೇಪಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟೆಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
5. $\frac{5}{8}$", $\frac{1}{2}$" ಮತ್ತು $\frac{3}{8}$" ಕಬ್ಬಿಣದ ಸರಳುಗಳು
6. 2", $1\frac{1}{4}$", 1" $\frac{3}{4}$" ಮತ್ತು $\frac{1}{2}$" ಕೊಳಾಯಿಗಳು. (G. I. Peps)
7. $1\frac{3}{4}$" × $\frac{5}{16}$" ಉಕ್ಕಿನ ಪಟ್ಟಿಗಳು (Spring Steel flats),
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
9. ಕೋಳಿ ಮತ್ತು ಆನೆ ಮಾರ್ಕಿನ ಸೀಮೆಣ್ಣೆ ಟಿನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಸಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

Licence No. 60.
Licenced to Post without Prepayment

Reg. No. M. 1550.
"KODAGU" *MERCARA (Coorg)*

ಆಹಾರ ವಿಹಾರದಲ್ಲಿ ಅವಿಚಾರ

ಕೆಲವು ವಿಚಿತ್ರ ಭ್ರಮೆ ಮತ್ತು ಕಲ್ಪನೆಗಳು

ಬೆಳ್ಳುಳ್ಳಿಯ ವಿಶೇಷ ಗುಣಗಳು

'ಬಾಳೆಹಣ್ಣುಗಳಿಂದ ಕೊಬ್ಬು ಬೆಳೆಯುತ್ತದೆ' ಎಂದು ಕೆಲವರೆನ್ನುವಾಗ, 'ಅವು ಕೊಬ್ಬನ್ನು ಕರಗಿಸಿ ಒಳ್ಳೇ ಆರೋಗ್ಯವನ್ನು ಪಾಲಿಸುತ್ತವೆ' ಎಂದು ಮತ್ತೆ ಕೆಲವರ ಅಭಿಪ್ರಾಯ. ಎರಡರಲ್ಲೂ ಸತ್ಯಾಂಶವು ಇದೆ. ಭಾರಕ್ಕೆ ಭಾರ ತುಲನೆಮಾಡಿ ನೋಡುವಾಗ, ಬಾಳೆಯಲ್ಲಿ ಇತರ ಹಣ್ಣುಗಳಿಗಿಂತ ಅಧಿಕಾಂಶ 'ಕೆಲರಿ' (ಉಷ್ಣಪರಿಮಾಣ) ಹೌಲ್ಯವಿದೆ. ಆದರೆ, ಮನುಷ್ಯನು ಮೈಯಲ್ಲಿ ಬೆಳೆಯಲು ಯಾವುದಾದರೂ ಒಂದೇ ಆಹಾರವು ಕಾರಣವಾಗಿಲ್ಲ. ಪ್ರತಿಯೊಬ್ಬರಿಗೆ ಎಷ್ಟು 'ಕೆಲರಿ' ಅವಶ್ಯವಿದೆಯೆಂಬುದು, ಅವರವರ ಪ್ರಕೃತಿ ಮೊದಲಾದುವುಗಳ ಮೇಲೆ ಹೊಂದಿಕೊಂಡಿದೆ. ಬಾಳೆಹಣ್ಣುಗಳನ್ನು ಇತರ ಆಹಾರಗಳೊಂದಿಗೆ ಒಂದೇಸಮನಾಗಿ ಸ್ವೀಕರಿಸುತ್ತಿದ್ದರೆ ಆರೋಗ್ಯಕ್ಕೊಳ್ಳೆಯದೂ ಅಹುದು, ಮೈಭಾರವು ತುಸು ಕಡಿಮೆಯಾಗಬಹುದೆಂಬುದೂ ಅಹುದು. ಬಾಳೆಹಣ್ಣಿನಲ್ಲಿ ಖನಿಜ ಮತ್ತು ವಿಟಮಿನ್ ಅಂಶವು ಸಾಕಷ್ಟಿದೆ.

ಹಸಿ ನೀರುಳ್ಳಿ ತಿನ್ನುತ್ತಿದ್ದರೆ ಶೀತ ಬಾಧೆ ಬರುವುದಿಲ್ಲವೆಂದು ಹಲವರ ಕಲ್ಪನೆ. ಖನಿಜ ಪದಾರ್ಥದ ಅಂಶವು ಇರುವ ಕೆಲವು ಆಹಾರಗಳನ್ನು ಹೆಚ್ಚಿಸಿದರೆ ಆರೋಗ್ಯವು ಸುಧಾರಿಸುತ್ತದೆ, ಮತ್ತು ಒಳ್ಳೇ ಆರೋಗ್ಯವಂತರಿಗೆ ಶೀತ ಬಾಧೆಯಂಥದು ಬರುವುದು ಕಡಿಮೆ. ಆದರೆ, ಯಾವ ಆಹಾರವೂ, ರೋಗಾಣುಗಳನ್ನು ತಡೆದಿಡಲಾರದು. ಹಾಗೆಯೇ ಶುದ್ಧವೂ ಪೌಷ್ಟಿಕವೂ ಆದ ಯಾವ ಆಹಾರವಾದರೂ ರೋಗಗಳನ್ನು ತರಲಾರದು.

ಸೌತೆಕಾಯಿಯಿಂದ ಶೀತವುಂಟಾಗುತ್ತದೆಂದೂ, ಸಕ್ಕರೆಯಿಂದ ಮಧುಮೂತ್ರ ರೋಗ ಬರುವುದೆಂದೂ, ಅದನ್ನು ತಿನ್ನಲೇ ಬಾರದೆಂದಿಲ್ಲ. ಅತಿಯಾಗಿ ಸಕ್ಕರೆ ತಿನ್ನುತಿದ್ದರೆ ಮಧುಮೂತ್ರದ ಭಯವಿದೆ.

ಬೆಳ್ಳುಳ್ಳಿಯು ಅನೇಕರಿಂದ ನಿಷೇಧಿಸಲ್ಪಟ್ಟಿದೆ. ಅದು ಅನೇಕರಿಗೆ ಅಸಹನೀಯ ವಾಸನೆಯ ವಸ್ತುವಾಗಿದೆ; ಹಲವರಿಗೆ ಪ್ರೀತಿಯ ವಸ್ತುವಾಗಿದೆ. ಕೇವಲ ಅದರ ವಾಸನೆಯ ಕಾರಣದಿಂದ ಅದನ್ನು ನಿಷಿದ್ಧವೆನಿಸುವುದು ಸರಿಯಲ್ಲ. ಏಕೆಂದರೆ, ಅದರಲ್ಲಿ ಮುಖ್ಯವಾದ ಖನಿಜಾಂಶಗಳು, ಸುಣ್ಣದ ಲೋಹ (ಕೆಲ್ಸಿಯಮ್,) ಪೊಟೆಶಿಯಂ, ರಂಜಕ ಮೊದಲಾದುವು ಧಾರಾಳವಾಗಿವೆ. ಹಾಗೆಯೇ ಅಯೊಡಿನ್ ಮತ್ತು ಆಮ್ಲತೆಯನ್ನು ನೀಗಿಸುವ ಕ್ಷಾರದ ಅಂಶವೂ ಇರುತ್ತದೆ. ವಿಟಮಿನ್ 'ಬಿ' ಮತ್ತು 'ಸಿ' ತಕ್ಕಷ್ಟು ಪ್ರಮಾಣದಲ್ಲಿ ಶರ್ಕರಾಂಶ (ಸಕ್ಕರೆ,) ಅಲ್ಪ ಪ್ರಮಾಣದಲ್ಲಿ ವಿಟಮಿನ್ 'ಎ' ಇವೂ, ಬೆಳ್ಳುಳ್ಳಿಯಲ್ಲಿರುವುವು. ಬೆಳ್ಳುಳ್ಳಿಯು ಅನೇಕ ಕಾಯಿಲೆಗಳನ್ನು ಗುಣಪಡಿಸಲು ಸಹಾಯಕವಾಗಿದೆ. ಅದು ವಾಯುಹರವೂ ಆಗಿದೆ. ಹಸಿವನ್ನು ಹೆಚ್ಚಿಸುತ್ತದೆ, ಮತ್ತು ವಿಪರೀತ ರಕ್ತದ ಒತ್ತಾಟವನ್ನು ಕಡಿಮೆಯಾಡುತ್ತದೆ. ಬೆಳ್ಳುಳ್ಳಿಯ ಈ ಗುಣಗಳನ್ನರಿತು, ಅದನ್ನು ತಕ್ಕಷ್ಟು ಪ್ರಮಾಣದಲ್ಲಿ ಸೇವಿಸಬೇಕು.

ಜನಸಾಮಾನ್ಯರೊಳಗೆ ಇನ್ನೊಂದು ಹುಚ್ಚು ಕಲ್ಪನೆಯೇನೆಂದರೆ, ಕೆಲವೊಂದು ಆಹಾರಪದಾರ್ಥಗಳನ್ನು ಅತಿಯಾಗಿ ಭುಂಜಿಸಿದರೆ, ಅದರ ದುಷ್ಪರಿಣಾಮವುಂಟಾಗದಂತೆ, ಮತ್ತೆ ಕೆಲವು ಆಹಾರ ಪದಾರ್ಥಗಳನ್ನು ಸೇವಿಸಿದರಾಯಿತು—ಎಂಬುದು! ಉದಾಹರಣಾರ್ಥ:—ನೀವು ಪೇರಲಹಣ್ಣನ್ನು ಅತಿಯಾಗಿ ತಿಂದರೆ, ಅದರ ಮೇಲೆ ಹಸಿ ಶುಂಠಿ ತಿಂದರೆ ಪೇರಲಹಣ್ಣಿನ ದೋಷ ಪರಿಹಾರವೆಂದು ಕೆಲವರು ಉಪದೇಶಿಸುವರು. ಬಟಾಟೆಯನ್ನು ಅಧಿಕವಾಗಿ ತಿಂದರೆ ಮಸಾಲೆಯನ್ನು ಹೆಚ್ಚಾಗಿ ತಿನ್ನಿರಿ ಎನ್ನುವರು. ಅಥವಾ ಹಿಂಗನ್ನು ಹೆಚ್ಚಿಸಿರಿ ಎನ್ನುವರು. ವೈದ್ಯಶಾಸ್ತ್ರದ ಅಲ್ಪ ಮಾತ್ರ ಅನುಭವವಿದ್ದುದೇ ಇಂತಹ ತಪ್ಪು ಭಾವನೆಗಳಿಗೂ ಹುಚ್ಚು ಕಲ್ಪನೆಗಳಿಗೂ ಎಡೆಕೊಡುತ್ತಿದೆ. ತಿನ್ನಲ್ಪಡುವ ಪದಾರ್ಥವು ಎಷ್ಟೇ ಉತ್ತಮವಾಗಿರಲಿ, ದೇಹವು ಅಲ್ಪಾಂಶವನ್ನು ಮಾತ್ರ ಹೀರಿಕೊಳ್ಳುತ್ತದೆಂಬುದನ್ನು ತಿಳಿಯಬೇಕು. ಅತಿಯಾಗಿ ಯಾವುದನ್ನೂ ಭುಂಜಿಸಬಾರದು.

ಕೆಲವು ತಾಯಂದಿರು ತಮ್ಮ ಮಕ್ಕಳಿಗೆ ಬೆಣ್ಣೆ, ತುಪ್ಪ, 'ಖೋವ' (ಹಾಲಿನ ಗಿಣ್ಣು) ದೇಹಪುಷ್ಟಿಗೆ ಅತಿ ಒಳ್ಳೆಯದೆಂದು ಅತಿಯಾಗಿ ತಿನ್ನಿಸುತ್ತಾರೆ; ಮತ್ತು ಅವುಗಳಿಂದ ತಯಾರಿಸಿದ ಮಿಠಾಯಿಗಳನ್ನು ಧಾರಾಳವಾಗಿ ಕೊಡುತ್ತಾರೆ. ಆದರೆ, ಇಂತಹ ಆಹಾರಗಳನ್ನು ಅತಿಯಾಗಿ ತಿನ್ನುವುದರಿಂದ ರೋಗಗಳನ್ನು ತಡೆದುಕೊಳ್ಳುವ ಶಕ್ತಿಯು ಮಕ್ಕಳಲ್ಲಿ ಕಡಿಮೆಯಾಗುವುದು.

ಆಹಾರ ವಿಜ್ಞಾನದಲ್ಲಿ ಸದಾ ಈ ಒಂದು ತತ್ವವು ನೆನಪಿರಲಿ: ಯಾವುದಾದರೂ ಒಂದೇ ಆಹಾರವನ್ನು ಅತಿಯಾಗಿ ತಿನಬೇಡಿ. ಬೇರೆ ಬೇರೆ ತರದ ಆಹಾರಪದಾರ್ಥಗಳನ್ನು ಒಂದು ದಿನದಲ್ಲಿ ಸ್ವಲ್ಪ ಸ್ವಲ್ಪವಾಗಿ ತಿಂದರೆ, ಆರೋಗ್ಯಕ್ಕೂ ಒಳ್ಳೆಯದು ಸ್ವಾದಕ್ಕೂ ಒಳ್ಳೆಯದು.

ಪ್ರಭಾತ

ರಣೆ ನೋಡುತ್ತಾರೆ. ಬಾಲ್ಯದಿಂದಲೇ ಜಪಾನಿನ ಮಕ್ಕಳಲ್ಲಿ ದೇಶಪ್ರೇಮವನ್ನು ಹುಟ್ಟಿಸುತ್ತಾರೆ. ಅವರ ಮನಸ್ಸು ಪ್ರತಿಯೊಂದು ತರದ ಕಷ್ಟವನ್ನು ಸಹಿಸಲು ಸಾಕಷ್ಟು ಶಕ್ತಿಯುಳ್ಳದ್ದಾಗಿರುತ್ತದೆ. ಮಕ್ಕಳಿಗೆ ಪೂರ್ವಜರ, ವೀರರ ಕಥೆಗಳನ್ನು ಹೇಳುತ್ತಾರೆ. ಅವರಿಂದ ಸಣ್ಣ ನಾಟಕಗಳನ್ನು ಆಡಿಸುತ್ತಾರೆ.

ಮಕ್ಕಳಿಗೆ ಸೋತವರ ಮೇಲೆ ದಯೆದೋರಬೇಕೆಂಬ ವಿಚಾರವು ಕಲಿಸಲ್ಪಡುತ್ತದೆ. ಕೆಲವು ವೇಳೆ ಮಕ್ಕಳು ಗುಂಪು ಗುಂಪಾಗಿ ಗಾಯಗೊಂಡವರ ಹಾಗೂ ಮುದಿಗಳ ಸೇವೆಯಲ್ಲಿ ನಿರತರಾಗುತ್ತಾರೆ. ಅವರು ಯುದ್ಧದಲ್ಲಿ ಗಾಯಗೊಂಡವರ, ಹಸಿದವರ, ದಾರಿತಪ್ಪಿದವರ ಎಚ್ಚರ ಕೈಕೊಳ್ಳುತ್ತಾರೆ. ಈ ಎಲ್ಲಾ ವಿಚಾರಗಳನ್ನೂ ಅವರಿಗೆ ನಾಟಕಗಳ ಮೂಲಕ ಕಲಿಸುತ್ತಾರೆ.

ಮಕ್ಕಳ ಮುಂದೆ ರಾಜನ ಪಟವನ್ನಿರಿಸಿ ರಾಜನೊಡನೆ ಯಾವ ರೀತಿ ನಡೆದುಕೊಳ್ಳಬೇಕೆಂದು ಹೇಳಿಕೊಡುತ್ತಾರೆ.

ಮಕ್ಕಳ ಕಿಂಡರ್ ಗಾರ್ಟನ್ ವಿದ್ಯಾಭ್ಯಾಸ ಮುಗಿಸಿ ಶಾಲೆಗೆ ಹೋಗುತ್ತಾರೆ. ಅವರಿಗೆ ಕಿಂಡರ್ ಗಾರ್ಟನ್ ವಿದ್ಯಾಭ್ಯಾಸ ಮುಗಿಸಿದೊಡನೆ ಅಧ್ಯಾಪಕರು ಸರ್ಟಿಫಿಕೇಟುಗಳನ್ನು ಕೊಡುತ್ತಾರೆ. ಕಿಂಡರ್ ಗಾರ್ಟನ್ ವಿದ್ಯಾಭ್ಯಾಸ ಮುಗಿಯುವಷ್ಟರಲ್ಲಿ ಮಕ್ಕಳು ಬಹಳ ಚುರುಕಾಗಿರುತ್ತಾರೆ. ಇವರು ಸರ್ಟಿಫಿಕೇಟು ಪಡೆಯಲು ಹೋಗುವಾಗ ಸಣ್ಣ ಸಿಪಾಯಿಯರಂತೆ ಕಾಣಿಸುತ್ತಾರೆ.

(ಹಿಂದಿಯಿಂದ ಅನುವಾದಿತ)

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಖಾಲ್ತಿ ಠೇವಣಾತಿ ಶೇಕಡ (Current Deposits)	ರೂ.	0–8–0
ಸೇವಿಂಗ್ಸ್ (ತಾ. 1—1—1953 ರಿಂದ)	,,	1–8–0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1–8–0
1 ವರುಷ	,,	2–0–0
2 ವರುಷ	,,	2–8–0
3 ವರುಷ	,,	3–0–0
5 ವರುಷ	,,	3-12-0
10 ವರುಷ	,,	4–0–0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಸೂರೆನ್ಸು ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ.
ಪ್ರೆಸಿಡೆಂಟ್ & ಖಜಾನ್ಚಿ.

THE CANARA BANKING CORPORATION LIMITED.

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ಚಿಕ್ಕ ವಾಯಿದೆಯ ಠೇವಣಾತಿಗಳು :

3 ರಿಂದ 6 ತಿಂಗಳುಗಳ ವರೆಗೆ— ಸಾಲಿಯಾನ ಶೇಕಡ 3
7 ರಿಂದ 12 ತಿಂಗಳುಗಳ ವರೆಗೆ—ಸಾಲಿಯಾನ ಶೇಕಡ 3½
ಪಂಚವಾರ್ಷಿಕ ಸುವರ್ಣ ಠೇವಣಾತಿಗಳು— ,, ,, 4

—: ಕೊಡಗು ಸಂಸ್ಥಾನದಲ್ಲಿ ನಮ್ಮ ಶಾಖೆಗಳು :—

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

Edited Printed and Published by P. I. BELLIAPPA at 'KODAGU' Press Mercara, for 'Kodagu' Ltd

ಕೊಡಗು

ನೃತ್ಯ ಅಲ್ಲವೇ? ಟ್ಯೂನ್ ಸರಿ ಮಾಡಿ !

ವಾರ್ಷಿಕ ಚಂದಾ ರೂ. ೫—೦—೦

ಸಂಪುಟ ೩೨) (ಸಂಚಿಕೆ ೧೭ ಮಡಿಕೇರಿ [illegible]

KODAGU KANNADA WEEKLY MERCARA

ಈ ವಾರದ ಕಥೆ.

ವಿವಾಹದುಡಿಯಲ್ಲಿ

— ಲೇ: ಕುಮಾರಿ ಯು. ಕೆ. ಜಯ —

"ನಿಮ್ಮದು ಯಾರದಾದರೂ ಪೆನ್ನು ಕಳೆದು ಹೋಗಿದೆಯೇ?" ರಾಜು ಧೈರ್ಯದಿಂದ ಅವನಿಗಿಂತಲೂ ಸ್ವಲ್ಪ ಮುಂದೆ ಹೋಗುತ್ತಿದ್ದ ಹುಡುಗಿಯರ ಗುಂಪಿನ ಹತ್ತಿರ ಹೋಗಿ ಕೇಳಿದ. ಹುಡುಗಿಯರಿಗೆ ಒಂದರೆ ಕ್ಷಣ ಅವನ ಪ್ರಶ್ನೆ ವಿಚಿತ್ರವಾಗಿ ಕಂಡರೂ ಅವನ ಕೆಂಪೇರಿದ ಮುಖವನ್ನು ನೋಡಿ ಅವರೆಲ್ಲರೂ ಕೈಯಿಂದ ಬಾಯಿ ಮುಚ್ಚಿಕೊಂಡು ಗುಸುಗುಸು ನಗತೊಡಗಿದರು. ರಾಜುವಿಗೆ ತುಂಬಾ ನಾಚಿಕೆಯೂ ಯಿತು. ನಾನು ಏಕೆ ಈ ಹಾಳು ಹುಡುಗಿಯರನ್ನು ಕೇಳಿದೆ ಅನ್ನಿಸಿತು. ಆದರೆ ಈಗ ಕೇಳಿಯೂಗಿತ್ತು. ಮುಂದೆ ಹೋಗುವ ಹಾಗಿರಲಿಲ್ಲ. ಕೈಯಲ್ಲಿದ್ದ ಪೆನ್ನನ್ನು ಮುಂದೆ ಹಿಡಿದು 'ಇಲ್ಲಿ ಬಿದ್ದಿತ್ತು. ನಿಮ್ಮದ್ಯಾರದಾದರೂ ಇರಬಹುದೇನೋ' ಎಂದು ಕೇಳಿದ್ದೆ ಅಷ್ಟೆ.

"ನಿಮ್ಮ ನಿಂದೂ ಅಂತ ಕಾಣುತ್ತೆ" ಪೆನ್ನು ನೋಡಿ ಒಬ್ಬ ಹುಡುಗಿ ಹೇಳಿದಳು. ನಿರ್ಮಲೆ ಕಂಪಾಸ್ ತೆರೆದು ನೋಡಿದಳು. ಪೆನ್ ಇರಲಿಲ್ಲ. 'ಹೌದು, ನಂದೇ. ತುಂಬಾ ಥ್ಯಾಂಕ್ಸ್' ಎಂದು ಹೇಳಿ ತೆಗೆದುಕೊಂಡಳು. 'ಸದ್ಯ ಪಾರಾದೆ ಪಾಪಾಯಿಲ್ಲ' ಎಂದುಕೊಂಡು ರಾಜು ಹೊರಟ.

"ನಿಂದೂ ಅಂತ ಹೇಗೆ ಗೊತ್ತಾಯಿತು ನಿನ್ಗೆ? ನಿಂದಂತ್ಹಾಗೆ ಬೇರೆಯವರ ಪೆನ್ನು ಇರೋಲ್ವೆ? ಕಂಪಾಸ್‌ನೊಳಗಿದ್ದದ್ದು ಹೇಗೆ ಬಿದ್ದೋಯ್ತು?" ಎಂದು ನಿರ್ಮಲೆಯ ಗೆಳತಿ ಲಲಿತ ಕೇಳಿದಳು. "ಅದೇ ನನ್ಗೂ ಸಮಸ್ಯೆ ಆದ್ರೆ ಇದು ನಂದೇ ಪೆನ್ನು. ನೋಡು. ನಾನು ಬ್ಲೇಡಿನಲ್ಲಿ 'N' ಗುರ್ತು ಮಾಡಿದ್ದೀನಿ" ನಿರ್ಮಲೆ ಹೇಳಿದಳು.

"ಇಲ್ಲಪ್ಪ, ನಾನು ಆಗ್ಲೆ ನೋಡ್ದೆ. ನಿರ್ಮಲೆ ಪೆನ್ನನ್ನು ಕೈಲೇ ಹಿಡ್ಕೊಂಡಿದ್ಲು. ಮಾತಿನ ಭರದಲ್ಲಿ ಎಲ್ಲೋ ಕೈ ಬಿಟ್ಟಿದ್ದಾಳೆ. ಸದ್ಯ ಸಿಕ್ತಲ್ಲಾ. ಇಲ್ಲಿದ್ರೆ ಹದಿನೈದು ರೂಪಾಯಿ ನಷ್ಟವಾಗುತ್ತಿತ್ತು. ಈಗ್ಲೆ ಗಂಟೆ ಐದಾಯ್ತೇನೋ? ನಾವು ಶಾಲೆಯಿಂದ ಹೊರಟು ಎಷ್ಟೊತ್ತಾಯಿತು. ಬನ್ನಿ ಬೇಗ ಬೇಗ" ಎಂದು ಕಾಂತಿ ಮುಂದೆ ಮುಂದೆ ಹೊರಟಳು. ಎಲ್ಲರೂ 'ಹೌದು ಮಾತಿನಲ್ಲಿ ಹೊತ್ತೇ ಗೊತ್ತಾಗೋಲ್ಲ' ಎಂದು ಅವಳನ್ನು ಹಿಂಬಾಲಿಸಿದರು.

• • •

ರಾಜು ಮೊದಲು ಮಡಿಕೇರಿಗೆ ಬಂದಾಗ ಬೀದಿಯ ಭಿಕಾರಿಯಾಗಿದ್ದ. ಆದರೆ ಈಗ ಆಗರ್ಭ ಶ್ರೀಮಂತ ಶೇಷಣ್ಣನವರ ದತ್ತು ಪುತ್ರ. ಯಾವುದಕ್ಕೂ ಏನೂ ಕಡಿಮೆಯಿರಲಿಲ್ಲ. ರಾಜು ಹುಟ್ಟುವುದಕ್ಕೆ ಮೊದಲೇ ಏಳು ತಿಂಗಳ ಗರ್ಭವಿದ್ದಾಗಲೇ ತಂದೆಯನ್ನು ಕಳೆದುಕೊಂಡಿದ್ದ. ಹುಟ್ಟಿ ಕೆಲವೇ ತಿಂಗಳಲ್ಲಿ ತಾಯಿಯೂ ಇಲ್ಲದ ತಬ್ಬಲಿಯಾದ. ಚಿಕ್ಕ ತಂದೆಯ ಆಶ್ರಯದಲ್ಲಿ ಕಷ್ಟದಿಂದ ಬೆಳೆದ. ಅವರ ಮಕ್ಕಳ ಜೊತೆಯಲ್ಲಿ ತಾನೂ ಶಾಲೆಗೆ ಹೋಗುತ್ತಿದ್ದ. ಅವರ ಚಿಕ್ಕತಂದೆ ಚಿಕ್ಕತಾಯಿಯರು ಇವನಿಗಳು ಅಡ್ಡಿಯಾಗುತ್ತಿದ್ದರು. ಅವೂ ಇದೂ ಕೆಲಸ ಹೇಳುತ್ತಲೇ ಇರುತ್ತಿದ್ದರು. ಆದರೆ ಇವನ ಚಟುವಟಿಕೆ ಚುರುಕುತನವನ್ನು ಕಂಡ ಶಾಲಾ ಉಪಾಧ್ಯಾಯರುಗಳು ಅವನಿಗೆ ಉತ್ತೇಜನ ಕೊಡುತ್ತಿದ್ದುದರಿಂದ ರಾಜು ಹೇಗೂ ಸುಧಾರಿಸಿಕೊಂಡು ಹೋಗುತ್ತಿದ್ದ. ತನ್ನ ಹದಿನಾಲ್ಕನೇ ವಯಸ್ಸಿನಲ್ಲಿ ಇರುವಾಗ ಕನ್ನಡ ಒಡೆದ ನೆಪದಿಂದ ಮನೆಯಿಂದ ಹೊರಗಾದ. ಇದಕ್ಕೆ ಕಾರಣ ಚಿಕ್ಕ ತಾಯಿ ತನ್ನ ಮಕ್ಕಳು ಒಂದೊಂದು ಕ್ಲಾಸಿನಲ್ಲೂ ಎರಡೆರಡು ವರ್ಷಕ್ಕೆ ಪಾಸಾಗುತ್ತಿದ್ದುದೂ, ರಾಜು ಎಲ್ಲಾ ಕ್ಲಾಸಿನಲ್ಲೂ ಮೊದಲನೆಯವನಾಗಿ ಪಾಸಾಗುತ್ತಿದ್ದುದು ಚಿಕ್ಕತಾಯಿಯ ಹೊಟ್ಟೆಯಲ್ಲಿ ಉರಿ ಎಬ್ಬಿಸುತ್ತಿತ್ತು. ರಾಜುವಿನಲ್ಲಿ ಸ್ವಲ್ಪ ತಪ್ಪಿದ್ದರೂ ಚಿಕ್ಕತಾಯಿ ಉಪ್ಪು ಖಾರ ಹಚ್ಚಿ ಗಂಗ ಅಂತ ಸಾಕ್ತೀನಿ" ಎಂದು ಶೇಷಣ್ಣನವರೂ ಅವರ ಹೆಂಡತಿ ಸೀತಮ್ಮನವರೂ ಹೇಳಿದ ಮೇಲೆ ರಾಜು ಅವರ ಮಾತಿಗೆ ಒಪ್ಪಲೇಬೇಕಾಯ್ತು. ಅಂದಿನಿಂದ ಅಲ್ಲಿಯೇ ಇರತೊಡಗಿದ. ಮನೆಯಲ್ಲಿ ತಾನು ಮಾಡುವಂತ ಕೆಲಸವೇನೂ ಇಲ್ಲದಿದ್ದರೂ ಅದೂ ಇದೂ ಸ್ವಲ್ಪ ಸ್ವಲ್ಪ ಮಾಡಿಕೊಂಡು ಶೇಷಣ್ಣನವರ ಮಗಳು ಸುಶೀಲೆಯ ಮಕ್ಕಳಾದ ಉಷಾ, ರವಿಗೆ ಪಾಠ ಹೇಳಿಕೊಂಡು ಮನೆಯವರೆಲ್ಲರ ಅಚ್ಚುಮೆಚ್ಚಿನವನಾಗಿದ್ದ. ಎಸ್. ಎಸ್. ಎಲ್. ಸಿ. ಯಲ್ಲೂ ಕೊಡಗಿನಲ್ಲಿ ಫಸ್ಟ್ ಬಂದನು. ಕಾಲೇಜ್‌ನಲ್ಲೂ ಸ್ಕಾಲರ್‌ಶಿಪ್ ಸಿಕ್ಕಿತ್ತು. ಶೇಷಣ್ಣ, ಸೀತಮ್ಮನವರಂತೂ ತಮ್ಮ ಸ್ವಂತ ಮಗನಂತೆ ಸಲಹುತ್ತಿದ್ದರು. ಜನರೂ ಸಹ ರಾಜುವನ್ನು ಶೇಷಣ್ಣನವರ ದತ್ತು ಪುತ್ರನೆಂದೇ ಹೇಳುತ್ತಿದ್ದರು. ರಾಜು ಈಗ ಸೀನಿಯರ್ ಇಂಟರ್‌ನಲ್ಲಿ ಓದುತ್ತಿದ್ದ. ಶೇಷಣ್ಣನವರು ಯಾವಾಗಲೂ ಡನಿಗೆ ಹೇಳುತ್ತಿದ್ದಳು. ರಾಜುಗೆ ಅಲ್ಲಿ ನಿಲ್ಲಲು ಅವಕಾಶವೇ ಇರಲಿಲ್ಲ. ಅಲ್ಲಿಂದ ಹೋಗಲೇ ಬೇಕಾಯಿತು. ನಂತರ ಹಾಗೂ ಹೀಗೂ ಉಪಾಧ್ಯಾಯರುಗಳ ನೆರವಿನಿಂದ ವಾರಾನ್ನ ಛತ್ರಾನ್ನ ಮಾಡಿಕೊಂಡು ಹೇಗೋ ಹದಿನೈದನೇ ವಯಸ್ಸಿನಲ್ಲಿ ಮೂರನೇ ಫಾರಮಿನಲ್ಲಿ ಕೊಡಗಿನಲ್ಲಿ ಮೊದಲನೆಯವನಾಗಿಯೇ ಉತ್ತೀರ್ಣನಾದನು. ಪ್ರತಿಯೊಂದು ತರಗತಿಯಲ್ಲೂ ಮೊದಲನೆಯವನಾಗಿಯೇ ಪಾಸುಮಾಡಿ ಶಾಲೆಗೆ ಸೇರಿದ್ದ ತಡವಾಗಿದ್ದರಿಂದ ಆ ವರ್ಷಕ್ಕೆ ಮೂರನೇ ಫಾರಂ ಮುಗಿಸಿದನು. ಫ್ರೀಷಿಪ್ ಇದ್ದುದರಿಂದ ಮುಂದೆ ಓದಲು ಮಡಿಕೇರಿಗೆ ಬಂದನು. ಮಡಿಕೇರಿಗೆ ಬಂದು ಹೇಗೆ ಹೇಗೂ ಶಾಲೆ ಸೇರಿದ್ದನು. ವಾರದ ಮನೆಗಳು ಇನ್ನೂ ಸರಿಯಾಗಿ ಸಿಕ್ಕಿರಲಿಲ್ಲ. ಅದಕ್ಕಾಗಿ ಒಂದು ದಿವಸ ಶೇಷಣ್ಣನವರ ಮನೆಗೆ ವಾರಾನ್ನ ಕೇಳಲು ಹೋದನು. ಶೇಷಣ್ಣನವರು ಇವನ ಕರುಣ ಕಥೆಯನ್ನು ಆದ್ಯಂತ ಕೇಳಿ ಕಂಬನಿ ಸುರಿಸಿ, "ನಮ್ಮ ಮನೇಲೇ ಇದ್ದುಬಿಡು" ಎಂದರು. ಮೊದಲ ನೋಟದಲ್ಲೇ ಅವರಿಗೆ ರಾಜುವಿನ ಮೇಲೆ ಕರುಣೆ ಪ್ರೀತಿಗಳು ಹುಟ್ಟಿದವು. "ಅಯ್ಯೋ ಬೇಡ. ಇಷ್ಟು ತೊಂದರೆ ಕೊಟ್ಟಿದ್ದೂ ಅಲ್ಲದೆ ಇಷ್ಟೆಲ್ಲಾ ವಿಶ್ವಾಸಕ್ಕೆ ನಾನು ಅರ್ಹನಲ್ಲ" ಎಂದ ರಾಜು "ಹಾಗೇನೂ ತಿಳ್ಕೋಬೇಡಪ್ಪಾ ನನಗೂ ಗಂಡು ಸಂತಾನವಿಲ್ಲ. ಇಬ್ಬರೇ ಹೆಣ್ಣು ಮಕ್ಕಳು. ಬೇಕಾದಷ್ಟಿದೆ ಆದರಲ್ಲೂ ಹಿರಿಯವಳು ವಿಧವೆ. ಕಿರಿಯವಳು ಮೈಸೂರಿನಲ್ಲಿದ್ದಾಳೆ. ಹಿರಿಯವಳಿಗೆ ಎರಡು ಮಕ್ಕಳಿವೆ. ಅವಳಿಗೂ ದೇವರು ಯಾವುದನ್ನೂ ಕಡಿಮೆ ಮಾಡಿಲ್ಲ. ಆದರೆ ಬೇಕಾದನ್ನೇ ಕಿತ್ಕೊಂಡ. ನೀನೇ ಮ

"ಈ ಸಾರಿನೂ ಫಸ್ಟ್ ಕ್ಲಾಸ್ ಹೊಡೀಬೇಕಪ್ಪ, ಇಲ್ದಿದ್ರೆ ಎಂ. ಬಿ. ಬಿ. ಎಸ್. ಗೆ ಹೋಗೋದೆ ಕಷ್ಟವಾಗುತ್ತೆ" ಎಂದು ಹೇಳುತ್ತಲೇ ಇರುತ್ತಿದ್ದರು. ರಾಜುವಾದರೂ ಅದೇ ಪ್ರಯತ್ನದಲ್ಲಿ ಇದ್ದ.

• • •

ಅಂದು ಕಾಲೇಜಿನಿಂದ ಬರುವಾಗ ಆ ಪೆನ್ನು ಸಿಕ್ಕಿತ್ತು. ನಿರ್ಮಲೆಗೆ ಕೊಟ್ಟಿದ್ದನು. ಆಗ ಅವಳು 'ಥ್ಯಾಂಕ್ಸ್' ಹೇಳುವಾಗಿನ ಅವಳ ನೋಟ, ನಾಚಿಕೆಯಿಂದ ಕೆಂಪೇರಿದ ವದನದ ಸೌಂದರ್ಯ ರಾಜುವನ್ನು ಮುಗ್ಧನಾಗಿಸಿತ್ತು. ರಾಜುಗೆ ಪುನಃ ಪುನಃ ಅವಳ ನೆನಪೇ ಆಗುತ್ತಿತ್ತು. "ಆಕೆ ನನ್ನ ಬಾಳ ಸಂಗಾತಿಯಾದರೆ........?" ಇದು ರಾಜುವಿನ ಮನಸ್ಸಿನಲ್ಲಿ ನಿರ್ಮಲೆಯ ವಿಷಯದಲ್ಲಿ ಹಲವು ಬಾರಿ ಎದ್ದಿದ್ದ ಪ್ರಶ್ನೆ. 'ಆದರೆ ನನ್ನಂಥಾ ಭಿಕಾರಿಗೆ! ಈಗೇನೋ ಉತ್ತಮ ಮಟ್ಟದಲ್ಲಿದ್ದೇನೆ ಆದರೂ ನನಗೆ ಕೊಡುವರೇ?' ರಾಜು ತನಗರಿಯದಂತೆ ಮನಸ್ಸಿನಲ್ಲೇ ನಿರ್ಮಲೆಯೊಡನೆ ಭಾವೀ ಜೀವನದ ಭವ್ಯ ಗೋಪುರ ಕಟ್ಟಿದ್ದ.

ನಿರ್ಮಲೆಯ ಮನೆ ಶೇಷಣ್ಣನವರ ಮನೆಯ ನಾಲ್ಕೈದು ಮನೆ ಆಚೆ ಇದ್ದಿತು. ನಿರ್ಮಲೆ ಮತ್ತು ಆಕೆಯ ಅಜ್ಜಿ ಇದ್ದರು. ಐದಾರು ವರ್ಷಗಳ ಹಿಂದೆ ತುಮಕೂರಿನಿಂದ ಬಂದಿದ್ದರು.

ಅವರ ಕುಲಗೋತ್ರ ಯಾವುದೂ ಯಾರಿಗೂ ಗೊತ್ತಿರಲಿಲ್ಲ. ನಿರ್ಮಲೆಯ ಅಜ್ಜಿ "ಇವಳು ನನ್ನ ಮಗಳ ಮಗಳು. ಇವಳು ಹುಟ್ಟಿದಾಗಲೇ ಮಗಳು ತೀರಿಕೊಂಡಳು. ಇವಳಪ್ಪ ಬೇರೆ ಮದುವೆಯಾಗಿದ್ದಾನೆ. ಇವಳಮ್ಮ ಹೋದಾಗಿನಿಂದಲೂ ಇವಳು ನನಗೆ ಗಂಟುಬಿದ್ದಳು. ನಾವು ಬ್ರಾಹ್ಮಣರೇ" ಎನ್ನುತ್ತಿದ್ದಳು.

ಈಚೆಗೆ ಎರಡು ವರ್ಷಗಳಿಂದಲೂ ಏಕೆ? ರಾಜು ಮಡಿಕೇರಿಗೆ ಬಂದಂದಿನಿಂದಲೂ ರಾಜು ನಿರ್ಮಲೆಯನ್ನು ನೋಡುತ್ತಿದ್ದ. ನಿರ್ಮಲೆ ಆಗಾಗ ಶೇಷಣ್ಣನವರ ಮನೆಗೆ ಸುಶೀಲಮ್ಮನ ಹತ್ತಿರ ಕಸೂತಿ ಹೇಳಿಸಿಕೊಳ್ಳಲು ಮತ್ತು ಕತೆ ಪುಸ್ತಕಕ್ಕಾಗಿ ಬರುತ್ತಿದ್ದಳು. ಆದರೆ ರಾಜು ಆಗ ಅಷ್ಟಾಗಿ ಅವಳ ವಿಷಯ ಮನಸ್ಸಿಗೆ ಹಚ್ಚಿಕೊಂಡಿರಲಿಲ್ಲ. ಆದರೆ ಈಗ ತಾರುಣ್ಯದ ಮೆಟ್ಟಲಲ್ಲಿ ನಿಂತಿದ್ದ ರಾಜು ನಿರ್ಮಲೆಯ ಯೌವನದ ಸೌಂದರ್ಯವನ್ನು ಕಂಡು ಮರುಳಾಗಿದ್ದ. ನಿರ್ಮಲೆಯನ್ನು ಮನಸಿನಲ್ಲೇ ವರಿಸಿದ್ದ

ರಾಜು ಎಂ. ಬಿ. ಬಿ ಎಸ್. ಮೊದಲನೇ ವರ್ಷ ಮುಗಿಸಿ ಮನೆಗೆ ಬಂದಿದ್ದ. ಶೇಷಣ್ಣನವರು ಮತ್ತು ಸೀತಮ್ಮ "ಮದುವೆಯಾಗು" ಎಂದು ಒತ್ತಾಯ ಮಾಡುತ್ತಿದ್ದರು. ರಾಜುಗೂ ಅದನ್ನಿಚ್ಛಿಸುತ್ತಿತ್ತು ಆದರೆ ... ಯೋಜನೆ ಅದಕ್ಕೆ ಅಡ್ಡವಾಗುತ್ತಿತ್ತು ಒಂದು ದಿನ ಶೇಷಣ್ಣನವರು "ರಾಜಣ್ಣ, ನೋಡು ಮಂಗಳೂರಿನ ಶ್ಯಾಮರಾಯರು ಅಂತ ಒಬ್ಬರಿದ್ದಾರೆ. ಅವರ ಮಗಳು ಈ ವರ್ಷ ಇಂಟರ್‌ನಲ್ಲಿದ್ದಾಳೆ. ಅವರು ಹೇಳಿ ಕಳುಹಿದ್ದಾರೆ. ನೀನು ಇಷ್ಟಪಟ್ಟರೆ ಈ ರಜದಲ್ಲೇ ಶುಭಕಾರ್ಯ ಆಗೋಗ್ಲಿ ಅಂತ ನನ್ನ ಇಷ್ಟ" ಎಂದರು

"ಆಗ ಬಹುದು ಆದರೆ..." ಅಲ್ಲಿಗೆ ರಾಜು ಮಾತು ನಿಲ್ಲಿಸಿದ.

"ಯಾಕೆ ತಡೆಯುತ್ತೀ ರಾಜು ನಾನು ನಿನ್ನ ಸ್ವಂತ ತಂದೆ ಅಂತ ತಿಳ್ಕೊಂಡು ಸಂಕೋಚವಿಲ್ಲದೆ ಹೇಳು" ಎಂದರು ಶೇಷಣ್ಣ.

"ನಾನು ಹೀಗೆ ಹೇಳುತ್ತೀನಿ ಅಂತ ಸಿಟ್ಟಾಗಬೇಡಿ ಅಪ್ಪ ನನಗೆ ರಂಗಜ್ಜಿ ಮೊಮ್ಮಗಳು ನಿರ್ಮಲೆ ಮೇಲೆ ತುಂಬಾ ಇಷ್ಟ' ರಾಜು ತತ್ತು ತಗ್ಗಿಸಿಕೊಂಡೇ ಹೇಳಿದ. ರಾಜು ಶೇಷಣ್ಣನವರನ್ನು ಅಪ್ಪಾ ಎಂದೂ ಸೀತಮ್ಮನವರನ್ನು ಅಮ್ಮಾ ಎಂದೇ ಕರೆಯುತ್ತಿದ್ದ.

"ಅಷ್ಟು ಹೇಳೋಕೆ ಇಷ್ಟು ಸಂಕೋಚಾನೆ ರಾಜು. ಆಗಲಿ ಬಿಡು. ಹತ್ತಿರದ್ದೆ ಆದ್ರು ಒಳ್ಳೇದೆ" ಎಂದರು. ಈ ವಿಷಯ ಎಲ್ಲರಿಗೂ ಸಂತೋಷವನ್ನುಂಟು ಮಾಡಿತು. ನಿರ್ಮಲೆಯೂ ಅದೇ ವರ್ಷ ಎಸ್. ಎಸ್. ಎಲ್. ಸಿ. ಗೆ ಕಟ್ಟಿದ್ದಳು. ನಿರ್ಮಲೆಯ ಅಜ್ಜಿಗಂತೂ ಸ್ವರ್ಗವೇ ಸಿಕ್ಕಿದಂತಾಗಿತ್ತು. ರಾಜು ನಿರ್ಮಲೆಗೆ ತಕ್ಕ ವರ ಎಂದು ಅವರ ಮನಸ್ಸಿಗೆ ಅನ್ನಿಸಿತು.

• • •

ಮದುವೆ ಕೆಲಸಗಳೆಲ್ಲಾ ಹುರುಪಿನಿಂದ ಸಾಗಿದ್ದವು. ಅಂದು ಭಾನುವಾರ ಪ್ರಾತಃಕಾಲ ಸುಮಾರು ಎಂಟು ಗಂಟೆ ಇರಬಹುದು. ರಂಗಜ್ಜಿ ಶೇಷಣ್ಣನವರ ಮನೆಗೆ ಬಂದರು. ಮುಖ ಬಾಡಿಕೊಂಡು ಕಣ್ಣೀರು ಸುರಿಸುತ್ತಾ ಬಂದ ರಂಗಜ್ಜಿಯನ್ನು ಕಂಡ ಶೇಷಣ್ಣನವರು ಓದುತ್ತಿದ್ದ ವೃತ್ತ ಪತ್ರಿಕೆಯನ್ನು ಮೇಜಿನ ಮೇಲಿರಿಸಿ ಕೆ

ನ್ನಡಕವನ್ನು ಹಣೆಗೇರಿಸಿ "ಏನಜ್ಜಿ, ಇಷ್ಟು ಬೆಳಿಗ್ಗೆ ಬಂದಿರಿ? ಅಯ್ಯೋ ಏನಾಯಿತು ಯಾಕಳ್ತೀರಮ್ಮಾ" ಎಂದು ಆಶ್ಚರ್ಯದಿಂದ ಕೇಳಿದರು. "ಅಯ್ಯೋ ಏನ್ಹೇಳ್ಲಪ್ಪಾ, ನಿರ್ಮಲೆ ಎಲ್ಲೋ ಹೋಗಿಬಿಟ್ಟಿದ್ದಾಳೆ" ಎಂದು ರಂಗಜ್ಜಿ ಅಳತೊಡಗಿದಳು. ಶೇಷಣ್ಣನವರಿಗೂ ಆಶ್ಚರ್ಯವಾಯಿತು. ಮಿಂಚಿನಂತೆ ಮನೆಯವರೆಲ್ಲರಿಗೂ ತಿಳಿಯಿತು. ಎಲ್ಲಾ ಕಡೆಯೂ ಕೆರೆ ಬಾವಿ ಬಿಡದೆ ಹುಡುಕಿದರು. ಆದರೆ ನಿರ್ಮಲೆಯ ಸುಳಿವಿಲ್ಲ. ಮದುವೆಯ ಕಾರ್ಯದಲ್ಲಿ ಉತ್ಸಾಹ ಆನಂದದಿಂದ ತುಂಬಿದ ಮನೆ ಶೋಕದಿಂದ ತುಂಬಿತು. ರಾಜುವಿಗಂತೂ ತಾನು ಕಟ್ಟಿದ್ದ ಆಶಾ ಗೋಪುರ ಕಳಚಿ ಬಿದ್ದಂತಾಯಿತು.

"ಛೆ! ನಾನೆಂಥ ಕೆಲಸ ಮಾಡಿದೆ. ನನ್ನನ್ನು ವಿವಾಹವಾಗಲು ಇಷ್ಟವಿದೆಯೇ ಎಂದೊಮ್ಮೆ ಅವಳನ್ನು ಕೇಳಬೇಕಿತ್ತು. ಬಹುಶಃ ಅವಳ ಪ್ರೇಮಿ ಬೇರೆ ಯಾರಾದರೂ ಇರಬಹುದು ಎಂಥಾ ಅನ್ಯಾಯವಾಯಿತು" ಎನ್ನಿಸಿತು

ಹುಡುಕುವ ಕೆಲಸ ಸಾಗಿತ್ತು. ಅಂತೂ ಕೊನೆಗೆ ಶೇಷಣ್ಣನವರ ಮನೆಯ ಹಿಂದಿದ್ದ ಹಾಳು ಕೆರೆಯಲ್ಲಿ ನೀರು ತುಂಬಿ ಊದಿಕೊಂಡಿದ್ದ ನಿರ್ಮಲೆಯ ವಿಕಾರ ದೇಹ ಸಿಕ್ಕಿತು. ಶೋಕದಿಂದ ರಾಜು ಕುಂದಿದನು. ರಂಗಜ್ಜಿಯ ಗೋಳಂತೂ ಕಲ್ಮರಗಳನ್ನು ಕರಗಿಸುವಂತಿತ್ತು.

ಶವಸಂಸ್ಕಾರವೆಲ್ಲಾ ಮುಗಿದಿತ್ತು. ದಿನಕರನು ರಕ್ತರಂಜಿತ ಕಿರಣಗಳನ್ನುಗುಳುತ್ತಾ ಪಶ್ಚಿಮದತ್ತ ಧಾವಿಸಿದ್ದನು. ರಾಜು ತನ್ನ ಕೋಣೆಯಲ್ಲಿ ಕುಳಿತು ನಿರ್ಮಲೆಗಾಗಿ ಕಣ್ಣೀರು ಸುರಿಸುತ್ತಿದ್ದನು. ಅಷ್ಟರಲ್ಲೇ ಮನೆಯ ಆಳು "ಪೋಸ್ಟ್ ಬಂತು" ಎಂದು ಒಂದು ಕವರನ್ನು ರಾಜುವಿನ ಹತ್ತಿರ ಮೇಜಿನ ಮೇಲಿಟ್ಟು ಹೋದ. ರಾಜುವಿಗೆ ಓದಲು ಮನಸ್ಸಾಗಲಿಲ್ಲ. ಅದನ್ನೊಮ್ಮೆ ದಿಟ್ಟಿಸಿ ನೋಡಿದ. ಅಪರಿಚಿತ ಅಕ್ಷರ ಓದಬೇಕೆನ್ನಿಸಿತು ಉದಾಸೀನದಿಂದ ಕೈಗೆತ್ತಿಕೊಂಡು ಒಡೆದು ಓದಲು ತೊಡಗಿದ

ಒಲವಿನ ಸಹೋದರ, ಇಂದು ನಿಮ್ಮನ್ನು ಈ ರೀತಿ ಸಂಬೋಧಿಸಬೇಕಾಗಿದೆ. ನಾನು ನನ್ನ ಭಾವೀ ಜೀವನದ ಅನೇಕ ರೂಪುರೇಖೆಗಳನ್ನು ಕಟ್ಟಿಕೊಂಡಿದ್ದೆ. ಆದರೆ ಅವೆಲ್ಲಾ ಮುಗಿಲ ಮಲ್ಲಿಗೆಗಳಾದವು. ನಿಮ್ಮ ಯೋಗ್ಯತೆ ಮರ್ಯಾದೆಗಳಿಗೆ ನಾನು ತಕ್ಕವಳಲ್ಲ. ನಿಮ್ಮ ಪ್ರೀತಿ ವಿಶ್ವಾಸಗಳಿಗೆ ನಾನು ಅರ್ಹಳಲ್ಲ. ಶೇಷಣ್ಣನವರಿಗೆ ನನ್ನ ಚರಿತ್ರೆ ತಿಳಿದಿರಲಿಲ್ಲ. ಇದನ್ನೋದುವ ವರೆಗೆ ನಿನಗೂ ತಿಳಿದಿರಲಿಲ್ಲ. ಇನ್ನು ಅವರಿಗೆ ಹೇಗೆ ತಿಳಿಯಬೇಕು. ನಾನು ನನ್ನ ತಾಯಿಯ ಪಾಪದ ಫಲವಾಗಿ ಜನಿಸಿದವಳು. ನನ್ನ ತಾಯಿಯ ಪಾಪದ ಪಿಂಡ ನಾನು. ನಮ್ಮಜ್ಜಿ ನನ್ನ ಪ್ರೇಮಸ್ಸಿನ ಆನಂದದಲ್ಲಿ ಆನಂದಾಶ್ರು ಸುರಿಸುತ್ತಾ ಈ ವಿಷಯ ಹೇಳಿದಳು. ಅದರ ಅನೇ ನನ್ನ ಜೀವನಕ್ಕೆ ವಿಷಗುಳಿಗೆಯಾಯಿತು. ನನಗೆ ಇನ್ನು ಬದುಕುವದಕ್ಕಿಂತಲೂ ಸಾಯುವುದೇ ಲೇಸು ಅನ್ನಿಸಿತು. ಆದರೆ ನನಗೆ ನಮ್ಮಜ್ಜಿಯದೇ ಯೋಚನೆ. ನನಗಾಗಿ ತನ್ನ ದೇಹವನ್ನು ಮುಪ್ಪು ಮಾಡಿದರು. ಅವರು ಹರ್ಷ ಕಂಡ ಮರುಗಳಿಗೆಯಲ್ಲೇ ದುಃಖದ ಸವಿಯನ್ನೂ ಒದಗಿಸಿದ್ದೇನೆ. ಈ ಪತ್ರ ನಿಮ್ಮ ಕೈ ಸೇರುವ ಮೊದಲೇ ನಿಮ್ಮನಗಲಿದ್ದೇನೆ. ನಿಮ್ಮ ಆನಂದ ಜೀವನದಲ್ಲೊಮ್ಮೆ ನನ್ನ ನೆನೆಸಿಕೊಳ್ಳಿ.

ನಿರ್ಭಾಗ್ಯ ಸಹೋದರಿ,
ನಿರ್ಮಲಾ.

ಪತ್ರ ಓದಿ ಮುಗಿಸುವಷ್ಟರಲ್ಲಿ ಕಣ್ಣೀರಿಂದ ತೊಯ್ದು ಅದು ಮುದ್ದೆಯಾಗಿತ್ತು. ಎಲ್ಲರಿಗೂ ಬಗೆಹರಿಯದ ಸಮಸ್ಯೆಯಾಗಿದ್ದ ನಿರ್ಮಲೆಯ ಸಾವು ರಾಜುವಿಗೆ ಮಾತ್ರ ಬಗೆಹರಿದಿತ್ತು.

ಮಧುಪರ್ಕ

ಮಾರಿ ಸದಾ ಜನಸೇವನಾಸಕ್ತರಿಂದಲೂ, ನಾಲ್ಕಾರು ಸಂಘಸಂಸ್ಥೆಗಳ ಕಾರ್ಯಕಾರಿ ಸಮಿತಿಯಲ್ಲಿ ಸ್ಥಳ ಪಡೆದವರಿಂದಲೂ ನಾನೊಬ್ಬ ಜನ ಮುಂದಾಳು ಎಂಬ ಭಾವನೆ ನನ್ನಲ್ಲೇ ಇತ್ತು. ಮೇ ತಾ. ೯ರ ಮಾತು. ನಾನು ಸಿನೆಮಾ ನೋಡಲು ಹೊರಟಿದ್ದೆ. ಜೇಬಿನಲ್ಲಿ ೧೪—೧೩—೦ ಇತ್ತು. ಸಿನೆಮಾ ಮಂದಿರಕ್ಕೆ ಹೋಗುವ ರಸ್ತೆಯ ಪಕ್ಕದಲ್ಲಿ ಹೆಂಗಸೊಬ್ಬಳು ಅಳುತ್ತಾ ಕೂತಿದ್ದಳು. ಆಕೆಯ ಮುಂದೆ ಯಾರೋ ಮಲಗಿದಂತಿತ್ತು. ಹರಕು ವಸ್ತ್ರವೊಂದನ್ನು ಹೊದೆಯಲಾಗಿತ್ತು. ನಾನು ಮುಖಂಡನೊಬ್ಬನೆಂಬ ಹೆಮ್ಮೆಯಿಂದ ನನ್ನ ಅನಾದಿನದ ಸ್ವಭಾವದಂತೆ ಆಕೆ ಅಳುವದೇಕೆಂದು ವಿಚಾರಿಸಿದೆ. ಆಕೆಯು ಗದ್ಗದ ಸ್ವರದಿಂದ ತಾನು ಮತ್ತು ತನ್ನ ಪತಿಯು ಕೂಲಿ ಕೆಲಸದಿಂದ ಜೀವಿಸುತ್ತಿದ್ದುದಾಗಿಯೂ ಆ ದಿನ ಬೆಳಿಗ್ಗೆ ಆಕೆಯ ಪತಿಯು ಮೃತನಾದನಾಗಿಯೂ ಆಕೆಯ ಮುಂದಿರುವುದೇ ಆತನ ಶವವೆಂದೂ ಹೇಳಿ ಗಟ್ಟಿಯಾಗಿ ಅಳತೊಡಗಿದಳು. ನನಗೂ ಹೃದಯ ಕರಗಿತು. ಜೇಬಿನಿಂದ ನಾಲ್ಕಾಣೆಯ ಪಾವಲಿಯೊಂದನ್ನು ಆಕೆಯ ಕೈಯಲ್ಲಿಟ್ಟು ನನ್ನ ಕೋಟನ್ನು ಸರಿ ಮಾಡಿ ಒಂದು ಠೀವಿಯಿಂದ ಮುನ್ನಡೆಯತೊಡಗಿದೆ. ಎರಡು ಹೆಜ್ಜೆ ಇಡುವಷ್ಟರಲ್ಲಿ ರಿಕ್ಷಾ ಗಾಡಿಯೊಂದು ಬಂದಿತು. ರಿಕ್ಷಾದವನು ಗಾಡಿ ನಿಲ್ಲಿಸಿದನು. ಆತನು ಗಾಡಿಯಿಂದ ಇಳಿದು ಆಕೆಯ ಕತೆಯನ್ನು ವಿಚಾರಿಸಿದನು. ನಂತರ ತನ್ನ ಜೇಬನ್ನೆಲ್ಲಾ ಹುಡುಕಿ ಇದ್ದ ೧—೧೨—೦ನ್ನು ಆಕೆಯ ಕೈಯಲ್ಲಿರಿಸಿ ಮುಂದೆ ಹೊರಟನು. ಇದನ್ನು ನೋಡುತ್ತಿದ್ದ ನನಗೆ ಆಶ್ಚರ್ಯವಾಯಿತು. ನಾನು ಸಿನೆಮಾಕ್ಕೆ ಹೋಗಿ ರೂ. ೨॥ ಯ ಟಿಕೇಟು ಪಡೆದು ಕುಳಿತೆ ಆದರೆ ರಸ್ತೆಯ ಪಕ್ಕದ ಹೆಂಗಸಿನ ಚಿತ್ರವೇ ಕಣ್ಮುಂದೆ ನಿಂತಂತಾಗುತಿತ್ತು. ನಾನು ಜನಸೇವಕನೆಂದುಕೊಳ್ಳುವವನು ಸಾಕಷ್ಟು ಸಿರಿವಂತನೂ ಹೌದು. ಆದರೆ ನಾನು ಆಕೆಗೆ ಕೊಟ್ಟದ್ದು ನಾಲ್ಕಾಣೆ. ಆದರೆ ರಿಕ್ಷಾದವನು ತನ್ನ ಅಂದಿನ ಸಂಪಾದನೆಯನ್ನೆಲ್ಲಾ ಕೊಟ್ಟನು! ಬಡವರ ಕಷ್ಟ ಬಡವರಿಗೇ ಗೊತ್ತು! ಅಂದಿನಿಂದ ನನ್ನ ಮುಖಂಡತ್ವದ ಬಗ್ಗೆ ನನಗೆ ತಿರಸ್ಕಾರ ಉಂಟಾಗಿದೆ. ಬದಲು ರಿಕ್ಷಾವಾಲರ ಬಗ್ಗೆ ಆದರ ಹೆಚ್ಚಿದೆ.

—ರಾಮಕೃಷ್ಣ.

Notice.

Gymkhana Races will be held on the Jumkoor Bane turn. off at milestone 11/7 on Mercara-Somwarpet Road on October the 7th and 10th Firs race on each day is at 11. O' Clock. The races wil. consist of four races each day including one or more for Tatponies.

3-2 J. H. SPROTT,
President,
Coorg and Mysore Gymkhana Club.

Coorg Forest Department.

Sale Notice

The right to fell and remove marked standing timoer from eight coupes in Makut, Bhagamandla and Sampaje Ranges for a period of eighteen months from 1-11-53 to 30-4-1955 will be sold by pub ic action at the Conservat r's office, Mercara, at 11 A. M on 5-10-53. For further particulars please apply to the Conservator of Forests, Coorg, Mercara.

ಸಹಕಾರವೇ — ಜೀವನದ ಏಳಿಗೆಯ ಹೆದ್ದಾರಿ,
ಆದರಲ್ಲೂ ವಿಮೆಯಲ್ಲಿ ಸಹಕಾರ ಪೆಂದರೆ ಅಭ್ಯುದಯ ಏಳಿಗೆಯ ಮತ್ತು ಭದ್ರತೆಗೆ ಒಂದು ತಳಹದಿ.

ದಿ ಬೊಂಬಾಯಿ ಕೋಪರೇಟಿವ್ ಇನ್ಶೂರೆನ್ಸ್ ಸೊಸೈಟಿ, ಲಿಮಿಟೆಡ್

ಹೆಡ್ ಆಫೀಸು:—] [ಬೊಂಬಾಯಿ

1953 ನೇ ಸಾಲಿಗೆ ರಿವರ್ಶನರಿ ಬೋನಸ್ಸು
ಹೋಲ್ ಲೈಫ್ ಸಾವಿರಕ್ಕೆ 11 ರಂತೆ — ಎಂಡೋಮೆಂಟ್ ಸಾವಿರಕ್ಕೆ 9 ರಂತೆ

200 ರಿಂದ 900 ರ ತನಕದ ಪೋಲಿಸಿಗಳು ಹಳ್ಳಿಗರಿಗೊಂದು ವರ

ಎಲ್ಲಾ ಕಡೆಗಳಲ್ಲಿಯೂ ಪ್ರಭಾವವುಳ್ಳ ಏಜಂಟರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಯನ್ನು ದಕ್ಷಿಣ ಕನ್ನಡ, ಕೊಡಗು ಮತ್ತು ಮೈಸೂರು ಪ್ರಾಂತ್ಯಕ್ಕೆ ಮುಖ್ಯ ಏಜಂಟರಾದ

12-1

ಎಮ್. ಟಿ. ಕೋರ್‌ಡೆಲ್ ಅಂಡ್ ಕೋ., ಹಂಪನಕಟ್ಟೆ, ಮಂಗಳೂರು, ಇವರಿಂದ ಪಡೆಯಿರಿ.

ಜೇನಿನ ಪ್ರಾಮುಖ್ಯತೆ ಮತ್ತು ಸಾಕುವಿಕೆಯ ಆವಶ್ಯಕತೆ.

— ಲೇ:- ಶ್ರೀ ಟಿ. ಕೆ. ಕುಟ್ಟಾಲಪ್ಪ, ಸರಕಾರಿ ಕಾಲೇಜು —

ಪ್ರಕೃತಿಯಿಂದ ದೊರೆಯುವ ಆಹಾರ ಪದಾರ್ಥಗಳಲ್ಲಿ ಜೇನಿನಷ್ಟು ರುಚಿಯಾದುದೂ ಉತ್ತಮವಾದುದೂ ಬೇರೊಂದಿಲ್ಲ. ಪೂರ್ವ ಕಾಲದಲ್ಲಿ ನಾಗರಿಕ ದೇಶಗಳಲ್ಲೆಲ್ಲಾ ಜನರು ಆಹಾರಕ್ಕಾಗಿ ಜೇನನ್ನೇ ಉಪಯೋಗಿಸುತ್ತಿದ್ದರು. ಮಾತ್ರವಲ್ಲದೆ ಯಜ್ಞಯಾಗಾದಿಗಳಿಗೂ ಜೇನಿಲ್ಲದೆ ಆಗುತ್ತಿರಲಿಲ್ಲ. ಔಷಧಿಗೆ ಜೇನು ಮುಖ್ಯವಾಗಿತ್ತು. ಇದರಿಂದ ಜೇನು ದೇವತೆಗಳಿಗೂ ಸಹ ಅಚ್ಚುಮೆಚ್ಚಿನ ಪದಾರ್ಥವಾಗಿತ್ತೆಂದು ವ್ಯಕ್ತವಾಗುವುದು. ಅಲ್ಲದೆ ನಮ್ಮ ಹಳ್ಳಿಗಾಡಿನ ಜನರು ಇಂದು ಕೂಡ ಸಕ್ಕರೆಯ ಬದಲು ಜೇನನ್ನೇ ಉಪಯೋಗಿಸುವುದು ಅಲ್ಲಲ್ಲಿ ಕಂಡುಬರುತ್ತದೆ. ಬೈಬಲಿನಲ್ಲಿ ಸಹ ಹಾಲು ಮತ್ತು ಜೇನು ಸಮೃದ್ಧಿಯಾಗಿ ದೊರಕುವ ದೇಶವು ಫಲಸಮೃದ್ಧವಾದುದೆಂದು ವರ್ಣಿತವಾಗಿದೆ.

ಬೆಲ್ಲ ಸಕ್ಕರೆಗಳು ಕೃತ್ರಿಮ ಆಹಾರಗಳು. ಜೇನು ಪ್ರಕೃತಿಸಿದ್ಧವಾದ ಶರೀರ ಪೋಷಣ ಶಕ್ತಿಯುಳ್ಳ ಉತ್ತಮ ಆಹಾರವು. ಇದರಲ್ಲಿ 'ಕಾರ್ಬೋಹೈಡ್ರೇಟ್' ಮತ್ತು ಲೋಹಖನಿಜಗಳು ಸೇರಿವೆ. ಹಾಲಿಗಿಂತಲೂ ಹೆಚ್ಚು ಲೋಹಾಂಶವು ಜೇನಿನಲ್ಲಿದೆ. ವಿಟಮಿನ್ಸ್ ಎ. ಬಿ. ಸಿ. ಗಳು ಜೇನಿನಲ್ಲಿವೆ. 'ಜೇನು, ದೇವರೇ ತನ್ನ ಸ್ವಂತ ಪಾಕಗೃಹದಲ್ಲಿ ತಯಾರಿಸಿ ಮನುಷ್ಯನಿಗೆ ಅನುಗ್ರಹಿಸಿದ ಪ್ರಸಾದವು' ಎಂದು ಖಚಿತವಾಗಿದೆ.

ಕೊಡಗು ಭಾಷೆಯ ಹೆಸರು ಕೂಡ 'ತೇನ್'. 'ಜೇನಿನಂತಹ ಮಾತು' 'ಮಂಗ್ಯೆಗೆ ಜೇನು ಹಚ್ಚಿ ಬಿಟ್ಟಿದ್ದಾರೆ' ಎಂಬ ಗಾದೆಗಳನ್ನು ಕೇಳದವರು ವಿರಳ. ಇದರಿಂದ ಜೇನಿನ ಮಹತ್ವವು ಗೊತ್ತಾಗುತ್ತದೆ. ನಮ್ಮ ದೇಶದಲ್ಲಿ ಅನಾದಿಯಿಂದ ಜೇನನ್ನು ಆಹಾರವಾಗಿಯೂ ಔಷಧಿಯಾಗಿಯೂ ಉಪಯೋಗಿಸುತ್ತಿದ್ದರು. ವೇದಗಳು ಸಹ ಜೇನಿನ ಪ್ರಯೋಜನಗಳನ್ನು ಹೇಳುತ್ತವೆ. ಪ್ರಾಚೀನ ಕಾಲದ ಗ್ರೀಕರು ಸಕ್ಕರೆಯ ಬದಲಾಗಿ ಆಹಾರ ಪದಾರ್ಥಗಳಿಗೆ ಜೇನನ್ನೇ ಉಪಯೋಗಿಸುತ್ತಿದ್ದರೆಂದು ಅನೇಕ ಪುಸ್ತಕಗಳಲ್ಲಿ ಓದುತ್ತಿರುವೆವು. ಇಂಗ್ಲೀಷರು ಸಾರಾಯಿ ಯೊಂದಿಗೆ ಜೇನನ್ನು ಬೆರಸಿ ಗಾಯಗಳಿಗೆ ಹಚ್ಚುತ್ತಿದ್ದರಂತೆ!

ಹಿಂದೂದೇಶದ ಆಯುರ್ವೇದ ಔಷಧದ ಅನುಪಾನದಲ್ಲಿ ಜೇನಿನ ಭಾಗವೇ ಹೆಚ್ಚು. ಮಗುವಿಗೆ ಶೀತವಾಗಿದೆಯೆಂದು ಮೂಶಿತ್ತಿದರೆ ಸರಿ, 'ಸ್ವಲ್ಪ ಶುಂಠಿಯನ್ನೂ ಬಜೆಯನ್ನೂ, ಹಿಪ್ಪಲಿಯನ್ನೂ ನೀರಿನಲ್ಲಿ ತೇದು ಜೇನಿನಲ್ಲಿ ಕಲಸಿಕೊಡಿ' ಎಂದು ಹಳ್ಳಿಯ ಕುರುಬನಾದರೂ ಹೇಳಬಲ್ಲನು. ಕಫವಾಗಿದೆ—ಅಡುಸೋಗೆ ರಸಕ್ಕೆ ಒಂದು ಚಮ್ಮಚದಷ್ಟು ಜೇನು ಸೇರಿಸಿಕೊಡಿ. ಬೆಂಕಿ ಬಿದ್ದು ಮೈ ಸುಟ್ಟಿತು. ಜೇನನ್ನು ಹಚ್ಚಿರಿ ಎಂದು ಔಷಧ ಹೇಳುತ್ತಿರಿ. ಮಕ್ಕಳ ಶರೀರವನ್ನು ಪೋಷಿಸಲು ಜೇನು ಉತ್ತಮವಾದ ಆಹಾರ. ಜೇನು ಕಫಾದಿ ದೋಷಗಳನ್ನು ಸಂಪೂರ್ಣ ಹೋಗಲಾಡಿಸಿ ಕರುಳನ್ನು ಸ್ವಚ್ಛವಾಗಿ ಇರಿಸುತ್ತದೆ. ತಾಯಿಯ ಮೊಲೆಹಾಲಿನೊಂದಿಗಾಗಲೀ ದನದ ಕಾಸಿದ ಹಾಲಿನೊಂದಿಗಾಗಲೀ ಜೇನು ಬೆರಸಿಕೊಡುವುದು ಹಿತಕರ. ಶರೀರದಲ್ಲಿ ಚರ್ಬಿ ಬೆಳೆದವರು ನಿತ್ಯವೂ ತಣ್ಣೀರಿನೊಂದಿಗೆ ಜೇನು ಸೇರಿಸಿ ಬೆಳಗ್ಗೆ ಸೇವಿಸಿದರೆ ಶರೀರದ ಕೊಬ್ಬು ಕಡಿಮೆಯಾಗುವುದು. ಜೇನಿನೊಂದಿಗೆ ವಿಷಮ ಪ್ರಮಾಣದಲ್ಲಿ ತುಪ್ಪ ಸೇರಿಸಿ ಸೇವಿಸುವುದರಿಂದ ಶರೀರವು ಪುಷ್ಟಿಯಾಗುವುದು. Borex Powder ನಲ್ಲಿ ಜೇನನ್ನು ಬೆರಸಿ ಬಾಯಿ ಹುಣ್ಣಿಗೆ ಹಚ್ಚುವುದರಿಂದ ಪ್ರಯೋಜನವುಂಟು. ತುಳಸೀರಸಕ್ಕೆ ಜೇನು ಸೇರಿಸಿ ಕೊಟ್ಟರೆ ಕ್ರಿಮಿ ಮತ್ತು ಕಫ ನಾಶವಾಗುವುದು.

ಬಹು ಪುರಾತನದಲ್ಲಿ ಈಗಿನಂತೆ ಸಕ್ಕರೆಯು ತಯಾರಾಗುತ್ತಿದ್ದಿಲ್ಲ. ಆಗ ದೇಶದ ಎಲ್ಲಾ ಜನರು ಜೇನನ್ನು ಧಾರಾಳವಾಗಿ ನಿತ್ಯ ಉಪಯೋಗಿಸುತ್ತಿದ್ದರು. ಇತ್ತೀಚೆಗೆ ಸಕ್ಕರೆಯು ಬಹಳವಾಗಿ ತಯಾರಾಗಿ ಕಡಿಮೆ ಕ್ರಯಕ್ಕೆ ಸಿಗುತ್ತಿರುವುದರಿಂದ ಜನರು ಸಕ್ಕರೆಯನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸಲು ಆರಂಭಿಸಿರುವರು. ಆರಂಭದಲ್ಲಿ ಸಕ್ಕರೆಯು ಬೆಳುಪಾಗಿದ್ದಿಲ್ಲ. ಅದರಲ್ಲಿ ದೇಹದ ಬೆಳವಣಿಗೆಗೆ ಅವಶ್ಯವಾದ 'ವಿಟಮಿನ್ಸ್, ಮಿನರಲ್ ಮೇಟರ್ಸ್' ಮುಂತಾದವು ಸೇರಿದ್ದವು. ಆದರೆ ನಾಗರಿಕತೆಯು ಮುಂದುವರಿದಂತೆ ಕಣ್ಣಿನ ಅಂದಕ್ಕಾಗಿ ಬಿಳಿಯಾದ ಅತಿ ಶುಭ್ರ ಸಕ್ಕರೆಯು ತಯಾರಾಗಲ್ಪಟ್ಟಿತು. ಇದರಿಂದ ಸಕ್ಕರೆಯಲ್ಲಿದ್ದ ಮೊದಲಿನ ಸಾರವತ್ತಾದ ಗುಣಗಳೆಲ್ಲಾ ಮಾಯವಾದುವು. ಆದುದರಿಂದ ಈ ಶುಭ್ರ ಸಕ್ಕರೆಯನ್ನು ಉಪಯೋಗಿಸುವುದು ಹಾನಿಕರವೆಂದು ವಿಜ್ಞಾನಿಗಳು ಹೇಳಿರುವರು. ಅಜೀರ್ಣ, ವಾಯು, ಸಿಹಿಮೂತ್ರ, ಹಲ್ಲು ಕೆಡುವಿಕೆ ಮುಂತಾದ ರೋಗಗಳಿಗೆ ಸಕ್ಕರೆಯೇ ಮೂಲ ಕಾರಣವೆಂದು ಅನೇಕ ಪ್ರಮುಖರ ಆಂಗ್ಲ ವೈದ್ಯರುಗಳು ಸಾರಿ ಸಾರಿ ಹೇಳತೊಡಗಿದ್ದಾರೆ. ಕಾಫಿ, ಟೀ ಮುಂತಾದ ಎಲ್ಲಾ ಆಹಾರಗಳಲ್ಲಿ ಬೆಲ್ಲ ಸಕ್ಕರೆಯ ಬದಲು ಜೇನನ್ನೇ ಉಪಯೋಗಿಸುತ್ತಾ ಬಂದರೆ ಮೇಲೆ ಹೇಳಿದ ಭಯಂಕರ ರೋಗಗಳಿಗೆಡೆಯಿಲ್ಲದೆ ಜನರ ಆರೋಗ್ಯವು ವೃದ್ಧಿಯಾಗುವುದರಲ್ಲಿ ಏನೂ ಸಂದೇಹವಿಲ್ಲ. ಹೀಗೆ ಇಷ್ಟೊಂದು ಉತ್ತಮ ಗುಣಗಳುಳ್ಳ ಆಹಾರ ವಸ್ತುವಾದ ಜೇನನ್ನು ಉತ್ತಮ ರೀತಿಯಲ್ಲಿ ಸಂಗ್ರಹಿಸುವುದು ಹೇಗೆಂಬುದನ್ನು ನಾಡಿನ ಪ್ರತಿಯೊಬ್ಬನೂ ತಿಳಿಯುವುದು ಅವಶ್ಯಕ.

ಮನುಷ್ಯನ ಸುತ್ತ ಎಲ್ಲೆಲ್ಲಿಯೂ ಜೀವರಾಶಿಗಳೇ. ಪ್ರಾಣಿ ವರ್ಗಕ್ಕೆ ಸೇರಿದವುಗಳ ಪೈಕಿ ಅನೇಕವು ಮನುಷ್ಯನಿಗೆ ಬಹು ಸಹಕಾರಿಯಾದವುಗಳು. ಅಮೃತ ಸಮಾನವಾದಂತಹ ಹಾಲನ್ನು ಕೊಡುವ ಗೋವು ಮೊದಲ್ಗೊಂಡು ಉತ್ಕೃಷ್ಟವಾದ ಜೇನನ್ನು ಒದಗಿಸುವ ಕ್ರಿಮಿಕೀಟಗಳ ಗುಂಪಿನ ನೊಣಗಳೂ ಇದಕ್ಕೆ ಸಾಮಾನ್ಯ ನಿದರ್ಶನಗಳಾಗಿವೆ. ಪಾಶ್ಚಾತ್ಯರು, ಮುಖ್ಯವಾಗಿ ಅಮೇರಿಕ ದೇಶದವರು ಜೇನಿನ ಉಪಯೋಗಗಳನ್ನು ತಿಳಿದುಕೊಂಡು ಅದರ ಕೃಷಿಯನ್ನೇ ಕೈಕೊಂಡು ಸುಮಾರು ೧೦ ಕೋಟಿ ರೂ. ಬೆಲೆ ಬಾಳುವ ಜೇನನ್ನು ವರ್ಷಂಪ್ರತಿ ಅವರು ಸಂಗ್ರಹಿಸುವರಂತೆ. ಆದರೆ ನಮ್ಮ ದೇಶದಲ್ಲಿ ಜೇನಿಗೆ ಎಂದೂ ಬರಗಾಲ ಬಾರದಿದ್ದರೂ ಇದರ ವಿಷಯದಲ್ಲಿ ಗಮನ ಕೊಟ್ಟವರು ತೀರಾ ವಿರಳ. ಅದಲ್ಲದೆ ಜನರು ದುಡ್ಡಿನ ಆಸೆಯಿಂದ ಪೂರ್ತಿ ಜೇನು ಕಟ್ಟುವ ವರೆಗೆ ಕಾಯದೆ ಆತುರದಿಂದ ಕುಯ್ದು ಜೇನಿನ ವೃದ್ಧಿಯನ್ನೇ ಹಾನಿ ಮಾಡತೊಡಗುವರು. ಜೇನನ್ನು ತೆಗೆಯುವಾಗ ನಾನಾರೀತಿಯಲ್ಲಿ ನೊಣಗಳನ್ನು ನಾಶಮಾಡುವರು. ಕಾಡು ಜೇನನ್ನು ಮೊದಮೊದಲು ಸುಟ್ಟು ನಾಶಮಾಡುವರಲ್ಲದೆ ಸಾಕುವವರು ತೀರಾ ಕಡಿಮೆ. ಸಾಕುವವರು ಸಹ ಒರಟು ರೀತಿಯಲ್ಲಿ ಸಾಕಿ ಕನಿಷ್ಟ ಉತ್ಪತ್ತಿಯನ್ನೇ ಹೊಂದುತ್ತಿರುವರು.

ಕೊಡಗಿನ ಎಲ್ಲಾ ಜನರು ಸರಕಾರದ ಸಲಹೆಯಂತೆ ಜೇನು ಸಾಕುವುದನ್ನು ಒಂದು ಮುಖ್ಯ ಉಪವೃತ್ತಿಯನ್ನಾಗಿ ಇಟ್ಟುಕೊಂಡು ಆದಾಯ ಹೆಚ್ಚಿಸಿಕೊಳ್ಳಲು ಸಾಧ್ಯವಿದೆ.

Photograph of the Latest FORD 158" wheelbase Bus with Muffussil type body and fitted with PERKINS P6 Diesel engine supplied to M/s Coorg Ex-servicemen's Transport Mercara.



FIT YOUR BUSES & LORRIES WITH PERKINS DIESEL ENGINES AND CUT DOWN RUNNING COST.

P. V. PAI & CO.,

Authorised FORD Sub-dealers
Dealers for PERKINS Diesel engines

Mission Street, MANGALORE.

Branches: MERCARA & VIRAJPET (Coorg)

Coorg Forst Department.

Auction Sale Notice

About 1,00,000 cft of Teak, Biti, Honne, Mathi, Nandi (Venteak) etc will be sold by auction at the Coorg Government Timber Depot, Hunsur, on Monday the 19th October 1953 at 10 A. M.

For conditions of the sale etc apply to the Conservator of Forests Coorg, Mercara.

ವೀರಾಜಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಟಿ ಎಸ್. ಗೋವಿಂದರಾಜು

ಆಚಾರ್ಯ ಭಾವೆಯವರ ಮೇಲೆ ಅತ್ಯಾಚಾರ.

ದೇವಗಡದ ಶ್ರೀ ವೈದ್ಯನಾಥ ಮಂದಿರದ ದ್ವಾರದ ಬಳಿಯಲ್ಲಿ ಅಲ್ಲಿನ ನೂರಾರು ಪಂಡರು (ಪರಂಪರಾಗತ ಪುರೋಹಿತರು) ಆಚಾರ್ಯ ವಿನೋಬಾ ಭಾವೆಯವರ ಮತ್ತು ಅವರೊಂದಿಗಿದ್ದ ಜನರ ಮೇಲೆ ಹಲ್ಲೆ ನಡೆಸಿ ಆಚಾರ್ಯ ಭಾವೆಯವರನ್ನೂ ಇತರ ಹಲವರನ್ನೂ ಗಾಯಗೊಳಿಸಿದರು

ದೇವಗಡದ ಸಬ್ ಡಿವಿಜನಲ್ ಆಫೀಸರರ ಮುಖಾಂತರ ಅವರಿಗೆ ಗಾಯಗಳಾಗಿಲ್ಲವೆಂದು ತಿಳಿದು ನನಗೆ ಸಮಾಧಾನವೆನಿಸಿತು. ಶ್ರೀ ವಿನೋಬಾರ ಪರಿವಾರದಲ್ಲಿದ್ದ ಒಬ್ಬ ಸ್ತ್ರೀಯ ಮೇಲೆ ದಾಳಿ ಆದದ್ದು ತೀರ ವಿಷಾದಕರ. ಸಬ್ ಡಿವಿಜನಲ್ ಆಫೀಸರರು ದೇವಾಲಯದ ಬಳಿ ಸಾದಾ ಉಡುಪಿನ ಕೆಲ ಪೋಲೀಸರನ್ನಿಡದಿದ್ದರೆ ಪರಿಸ್ಥಿತಿ ಇನ್ನೂ ವಿಕೋಪಕ್ಕೆ ಹೋಗುತ್ತಿತ್ತು. ಈಗಾಗಲೇ ಈ ಸಂಬಂಧದಲ್ಲಿ ಆರು ಜನ ಪಂಡರ ಬಂಧನವಾಗಿದ್ದು ವಿಚಾರಣೆ ನಡೆಯುತ್ತಿದೆ. ಅಪರಾಧಿಗಳನ್ನು ಖಂಡಿತಾ ದಂಡಿಸುವೆವು" ಎಂದು ಹೇಳಿದ್ದಾರೆ.

ಸಾರ್ವಜನಿಕರ ಅವಮಾನ

ದೇವಗಢದಲ್ಲಿ ದೇವಾಲಯ ಪ್ರಾಂಗಣದ ಪಂಡಾಗಳು ಆಚಾರ್ಯ ವಿನೋಬಾ ಭಾವೆ ಹಾಗೂ ಅವರ ಸಹಚರರ ಮೇಲೆ ಮಾಡಿರುವ ದಾಳಿ ನಮ್ಮ ದೇಶದ ಸಾರ್ವಜನಿಕರಿಗೆ ಅಪಮಾನಕಾರಕವಾದ ಸಂಗತಿಯಾಗಿದೆ. ಸಂಸ್ಥಾಪನ ಪ್ರಕಾರ ಅಸ್ಪೃಶ್ಯತೆ ಹೋಗಲಾಡಿಸಲ್ಪಟ್ಟಿದ್ದು ಆಚಾರ್ಯರ ಪರಿವಾರದಲ್ಲಿ ಹರಿಜನರಿದ್ದರೆಂಬ ಕಾರಣದಿಂದ ಆದ ಈ ದಾಳಿ ಅಪರಾಧವಾಗಿದೆ. ಬಿಹಾರ್ ಸರಕಾರವು ಇಂಥ ಅಪರಾಧಗಳಿಗೆ ತಕ್ಕ ಶಿಕ್ಷೆ ವಿಧಿಸಬೇಕು ಎಂಬುದಾಗಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್ ಎನ್ ಅಗರವಾಲರು ಒಂದು ಹೇಳಿಕೆಯನ್ನಿತ್ತಿದ್ದಾರೆ. ತಮ್ಮ ಭೂದಾನ ಯಜ್ಞದ ಮೂಲಕ ಆಚಾರ್ಯ ಭಾವೆಯವರು ಭಾರತದ ಎಲ್ಲ ಜನರ ಗೌರವ ಕೃತಜ್ಞತೆಗಳಿಗೆ ಪಾತ್ರರಾಗಿದ್ದಾರೆ. ಅಂಥವರ ಹಾಗೂ ಅವರ ಪರಿವಾರದ ಮೇಲಾದ ದಾಳಿ ಸಾರ್ವಜನಿಕ ಜೀವನಕ್ಕೇ ಮಾಡಿದ ಅಪಮಾನ ಎಂದೂ ಶ್ರೀ ಅಗರವಾಲರು ತಮ್ಮ ಹೇಳಿಕೆಯಲ್ಲಿ ಹೇಳಿದ್ದಾರೆ.

ವಿಚಾರಣೆ ನಡೆಯಲಿ

ಆಚಾರ್ಯ ವಿನೋಬಾ ಭಾವೆಯವರ ಮೇಲೆ ದೇವಗಢದಲ್ಲಿ ಆದ ದಾಳಿಯ ವಿಚಾರಣೆ ನ್ಯಾಯಮಂಡಲದಿಂದ ನಡೆಯಲಿ ಎಂದು ಬಿಹಾರದ ವಿಧಾನ ಸಭೆಯ ಗಳ ಹರಿಜನ ಸದಸ್ಯರು ಒಂದು ಸಂಯುಕ್ತ ಹೇಳಿಕೆಯನ್ನು ಹೊರಡಿಸಿದ್ದಾರೆ. ವೈದ್ಯನಾಥ ದೇವಾಲಯದ ಆಡಳಿತವನ್ನು ಹರಿಜನ ಮೊದಲಾಗಿ ಸರ್ವಜನರಿರುವ ಸಮಿತಿಯೊಂದಕ್ಕೆ ಒಪ್ಪಿಸಬೇಕು ಎಂದು ಅವರು ಹೇಳಿದ್ದಾರೆ

ಅವರು ಈ ಘಟನೆಯಿಂದ ಉದ್ರೇಕಗೊಂಡ ಗಾಂಧೀಜಿಯ ಜನ್ಮ ದಿನ ಅಂದರೆ ಅಕ್ಟೋಬರ್ ೨ರಂದು ಈ ದಾಳಿಯ ಬಗ್ಗೆ ಪ್ರತಿಭಟನೆ ವ್ಯಕ್ತಪಡಿಸಲು ಉಪವಾಸ ಮಾಡಬೇಕು. ಹರಿಜನರಿಗೆ ವೈದ್ಯನಾಥ ದೇವಾಲಯದಲ್ಲಿ ಮುಕ್ತದ್ವಾರವುಂಟಾಗುವ ವರೆಗೆ ಸಾರ್ವಜನಿಕರು ಆ ದೇವಾಲಯವನ್ನು ಬಹಿಷ್ಕರಿಸಬೇಕು ಎಂದು ಆ ಸದಸ್ಯರು ಬಿನ್ನವಿಸಿಕೊಂಡಿರುವರು.

ಆಚಾರ್ಯ ಭಾವೆಯವರ ಹೇಳಿಕೆ

ಆಚಾರ್ಯ ವಿನೋಬಾ ಭಾವೆಯವರು ತಾ. ೧೯ರ ಸಾಯಂಕಾಲ ಪ್ರಾರ್ಥನಾ ಭಾಷಣದಲ್ಲಿ ಆ ಬಗ್ಗೆ ಈ ರೀತಿ ಹೇಳಿದರು.

ನನಗೆ ವೈದ್ಯನಾಥ ಮಂದಿರವನ್ನು ಸಂದರ್ಶಿಸಬೇಕೆಂದಿರಲಿಲ್ಲ. ಏಕೆಂದರೆ ಅಲ್ಲಿ ಹರಿಜನರಿಗೆ ದೇವದರ್ಶನವಿಲ್ಲೆಂದು ನನಗೆ ಹೇಳಲಾಗಿತ್ತು. ಆದರೆ ಮುಖ್ಯ ಪಂಡರು ಬಂದು ಹರಿಜನರನ್ನು ಕರೆದುಕೊಂಡು ಒಂದು ದೇವರ ದರ್ಶನ ಮಾಡಲಿಕ್ಕೆ ಯಾವ ಅಭ್ಯಂತರವೂ ಇಲ್ಲವೆಂದು ಹೇಳಿದ್ದರಿಂದ ಆ ಮಂದಿರವನ್ನು ಸಂದರ್ಶಿಸಲು ನಾನು ಒಪ್ಪಿಕೊಂಡೆ. ಇದನ್ನು ಕೇಳಿ ನನಗೆ ಸಂತೋಷವಾಯಿತು. ಬದಲಾದ ಪರಿಸ್ಥಿತಿಯಲ್ಲಿ ದೇವದರ್ಶನ ಮಾಡಲು ನನಗೆ ಏನೂ ಅಡ್ಡಿ ತೋರಲಿಲ್ಲ. ಅದರಂತೆ ನನ್ನ ಜನರೊಡನೆ ೬. ೩೦ ಗಂಟೆಗೆ ಮಂದಿರಕ್ಕೆ ಹೊರಟೆ. ಮಂದಿರದ ಮಹಾದ್ವಾರ ಸಮೀಪಿಸಿದ ಕೂಡಲೇ "ಧರ್ಮ ಚಿರಾಯುವಾಗಲೀ, ಅಧರ್ಮವು ನಾಶವಾಗಲಿ" ಎಂಬ ಘೋಷಣೆಯನ್ನು ಮಂದಿರದ ಪಂಡಜನರು ಮಾಡಹತ್ತಿದರು. ಆಗ ನಾನು ಎತ್ತರದ ಸ್ಥಳದಲ್ಲಿ ನಿಂತು ಎಲ್ಲರಿಗೂ ಕೂಡುಕೊಳ್ಳಲು ಹೇಳಿದೆನು. ಅದರ ಕೂಡಲೇ ಗೊಂದಲ ಪ್ರಾರಂಭವಾಯಿತು. ಭಾವೆಯವರ ಪ್ರತಿಯೊಬ್ಬ ಅನುಯಾಯಿಗೂ ಹೊಡೆತ ಬಿದ್ದಿತು. ಇದನ್ನೆಲ್ಲಾ ನೋಡಿ ಆಚಾರ್ಯ ಭಾವೆಯವರು ದೇವರ ದರ್ಶನ ಮಾಡಬಯಸದೆ ಹಿಂತಿರುಗಿದರು.

ಆಚಾರ್ಯ ಭಾವೆಯವರ ಮೇಲೆ ಧಾಳಿಯಾಗದಂತೆ ಅವರ ಅನುಯಾಯಿಗಳು ಎಷ್ಟೇ ಪ್ರಯತ್ನಿಸಿದರೂ ಅವರ ಬಲಕಿವಿಯ ಹತ್ತಿರ ಪೆಟ್ಟು ಬಿದ್ದಿದೆ. ಶಿಬಿರಕ್ಕೆ ಮರಳಿದ ಕೂಡಲೇ ಆಚಾರ್ಯ ಭಾವೆಯವರು ಪ್ರಶ್ನಿಸಿದರು. ಪಂಡ ಜನರ ಬಗ್ಗೆ ಯಾರಲ್ಲಿಯೂ ದ್ವೇಷ ಭಾವನೆಯುಂಟಾಗಿಲ್ಲವೆಂಬುದನ್ನು ಕೇಳಿ ಅವರಿಗೆ ಬಹಳ ಸಂತೋಷವಾಯಿತು

'ಈ ರೀತಿಯಾಗಿ ನನಗೆ ದೇವರ ಅನುಗ್ರಹವಾದುದಕ್ಕೆ ನಾನು ಸುದೈವಿಯು. ಸುಮಾರು ೨೦ ವರ್ಷಗಳ ಹಿಂದೆ ಇದೇ ದೇವಗಡದಲ್ಲಿ ಮಹಾತ್ಮಾ ಗಾಂಧಿಯವರಿಗೆ ಇದೇ ಬಗೆಯ ಅನುಗ್ರಹವಾಗಿದ್ದಿತು' ಎಂದು ಆಚಾರ್ಯರು ಹೇಳಿದರು. ಹಿಂದು ಧರ್ಮದ ಬಗ್ಗೆ ಹೇಳಬೇಕಾದರೆ ಈ ಘಟನೆ ಬಹಳ ಮಹತ್ವದ್ದಾಗಿದೆ ಎಂದರವರು. ಗಾಯಗಳೆಲ್ಲ ಗುಣ ಹೊಂದುತ್ತಿದ್ದು ಚಿಂತೆಗೊಳಗಾಗುವ ಕಾರಣವಿಲ್ಲ.

ಆರುಜನ ಪಂಡರ ಬಂಧನ

ವಿನೋಬಾ ಭಾವೆಯವರ ಮೇಲಿನ ಪಂಡ ಜನರ ದಾಳಿಯ ಸಂಬಂಧದಲ್ಲಿ ಇದುವರೆಗೆ ಆರು ಜನರು ಬಂಧಿಸಲ್ಪಟ್ಟಿದ್ದಾರೆ

ಅಪರಾಧಿಗಳನ್ನು ಶಿಕ್ಷೆಗೆ ಗುರಿಪಡಿಸಲಾಗುವದೆಂಬ ಆಶ್ವಾಸನೆಯನ್ನಿತ್ತು ಶ್ರೀ ಕೃಷ್ಣಸಿಂಹರು ಒಂದು ಹೇಳಿಕೆಯಲ್ಲಿ "ಆಚಾರ್ಯ ವಿನೋಬಾಜಿಯವರ ಮೇಲಾದ ದಾಳಿಯ ಸುದ್ದಿ ಕೇಳಿ ನನಗೆ ಆಘಾತವಾಯಿತು.

THE CANARA BANKING CORPORATION LIMITED.

ದಿ ಕೆನರಾ ಬ್ಯಾಂಕಿಂಗ್ ಕೋಪೊರೇಶನ್ ಲಿಮಿಟೆಡ್.

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ಠೇವು ಬಾಯಿದೆಯ ಠೇವಣಾತಿಗಳು :

3 ರಿಂದ 6 ತಿಂಗಳುಗಳ ವರೆಗೆ—ವಾರ್ಷಿಕ ನೂರಕ್ಕೆ 3

7 ರಿಂದ 12 ತಿಂಗಳುಗಳ ವರೆಗೆ—ವಾರ್ಷಿಕ ನೂರಕ್ಕೆ 3½

ಪಂಚವಾರ್ಷಿಕ ಸುವರ್ಣ ಠೇವಣಾತಿಗಳು— ,, ,, 4

—: ಕೊಡಗು ಸಂಸ್ಥಾನದಲ್ಲಿ ನಮ್ಮ ಶಾಖೆಗಳು :—

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

ಒಂದು ಕಣ್ಣಿನ ಮಗು.

ಮೂಗು ಇಲ್ಲದ, ಹಣೆಯಲ್ಲಿ ಒಂದೇ ಕಣ್ಣುಳ್ಳ ವಿಚಿತ್ರ ಹೆಣ್ಣು ಮಗುವೊಂದು ಹೈದರಾಬಾದಿನ ಉಸ್ಮಾನಿಯಾ ಆಸ್ಪತ್ರೆಯಲ್ಲಿ ಇತ್ತೀಚೆಗೆ ಹುಟ್ಟಿ, ಹುಟ್ಟಿದ ಅಲ್ಪಾವಧಿಯಲ್ಲೇ ತೀರಿಹೋಯಿತು. ಆಸ್ಪತ್ರೆಯ ಅಧಿಕಾರಿಗಳು ಆ ಮಗುವಿನ ಮೃತಶರೀರವನ್ನು ಕೆಡದ ಉಳಿಸುವ ದ್ರವ್ಯದಲ್ಲಿ ಹಾಕಿಟ್ಟು ಆಸ್ಪತ್ರೆಯ ವಿಚಿತ್ರ ವಸ್ತುಗಳ ಸಂಗ್ರಹಾಲಯದಲ್ಲಿಟ್ಟಿರುವರು. ಈ ವಿಚಿತ್ರ ಮಗುವಿಗೆ ಕಣ್ಣಿನ ಹುಬ್ಬುಗಳಿರುವ ಭಾಗದಲ್ಲಿ ಕಣ್ಣುಗಳಿರಲಿಲ್ಲ. ಬದಲು ಹಣೆಯಲ್ಲಿ ಒಂದಿಷ್ಟು ಮಾಂಸ ಮೇಲೆ ಚಾಚಿಕೊಂಡಿದ್ದು, ಅದರ ನಡುವೆ ಒಂದೇ ಕಣ್ಣಿತ್ತು.

೨೦೦ ವರ್ಷಗಳ ವರೆಗೆ ಕೆಡದೆ ಉಳಿದ ಶವ.

೨೭ ವರ್ಷಗಳ ಹಿಂದೆ ಸಮುದ್ರದಲ್ಲಿ ಮುಳುಗಿ ಸತ್ತ ಆಸ್ಟ್ರಿಯನ್ನನ ಶವವು ಇತ್ತೀಚೆಗೆ ಸಾಲ್ಜ್‌ಬರ್ಗ್ ಯ ಗ್ರೊಸ್ವಲ್ಡನರ್ ಜಿಲ್ಲೆಯಲ್ಲಿ ಸೆಂಟ್ ಜಾರ್ಜನ್ ಎಂಬ ಪಾದತಳದಲ್ಲಿ ದೊರತ ಈ ಶವ ಸ್ವಲ್ಪ ಕೆಡದೆ ಉಳಿದಿತ್ತು. ೧೯೪೧ರ ಇಸವಿಯ ಮುದ್ರೆಯುಳ್ಳ ನಾಣ್ಯಗಳಿಂದ ಕೂಡಿದ ಹಳೇ ಫ್ಯಾಶನಿನ ಒಂದು ಚರ್ಮದ ಚೀಲವೂ ಆ ಶವದ ಕಿಸೆಯಲ್ಲಿ ದೊರಕಿದೆ. (ಈ ನಾಣ್ಯಗಳು ೧೯೫೦ರ ನಂತರ ಆಸ್ಟ್ರಿಯಾದಲ್ಲಿ ಚಲಾವಣೆಯಲ್ಲಿರಲಿಲ್ಲ) ಹಳೇ ಮಾದರಿಯ ಒಂದು ದೃಷ್ಟಿಚಕ್ರ ಮತ್ತು ಬಿಳಿದ ಮತ್ತು ಕಪ್ಪು ಬಣ್ಣದ ಎರಡು ಕರವಸ್ತ್ರಗಳೂ ಇದ್ದುವು.

ತೆನ್ಸಿಂಗನಿಗೆ ಮುಕ್ತಳಿಂದ ಕಾಣಿಕೆ

ಮುಂಬಯಿಯ ಇಪ್ಪತ್ತೆರಡು ಮಂದಿ ಮಕ್ಕಳು ಹಿಮಾಲಯ ವೀರ ಶೆರ್ಪಾ ತೇನ್‌ಸಿಂಗನಿಗೆ ತಮ್ಮ ರಜಾ ಕಾಲದಲ್ಲಿ ರೂ. ೧೫೦ ಸಂಗ್ರಹ ಮಾಡಿ, ತಮ್ಮ ಕಡೆಯ ಉಡುಗೊರೆಯಾಗಿ ಕಳಿಸಿಕೊಟ್ಟರು. ಅವರ ಸಂಭಾವನೆಯನ್ನು ತೇನ್‌ಸಿಂಗನು ಸಂತೋಷದಿಂದ ಸ್ವೀಕರಿಸುತ್ತ, ತನ್ನ ಹಸರನ್ನೊಳಗೊಂಡ ಚಿತ್ರಗಳನ್ನೂ ತನ್ನ ಸಹಿಯನ್ನೂ ಕೊಟ್ಟು, 'ಶಿಸ್ತನ್ನು ಪಾಲಿಸಿ ನಾಡಿನ ಸೇವೆಗೆ ಮುಂದಾಗಿರಿ' ಎಂಬ ಸಂದೇಶ ಕಳಿಸಿರುವನು.

ಜ್ಞಾನದೀಪ

(೧)

ಎಣ್ಣೆ ಬರುವದು ಕೊಬರಿಯಿಂದ ಹೊರತು ಕಲ್ಲಿನಿಂದಲ್ಲ; ಸಂಗತಿ ತಿಳಿಯುವದು ಬಲ್ಲವರಿಂದಲ್ಲದೆ ಬಡವರಿಂದಲ್ಲ

(೨)

ಮೂರ್ಖ ಮುಚ್ಚಿದ ಮುಖ ಹುಬ್ಬು ಗಂಟಿಕ್ಕಿದ್ದನೆ ನೋಡುವನಲ್ಲ. ಅಪ್ರಸಿದ್ಧನ ಅಪಾದನೆಗಳನ್ನು ಕೇಳುವನಲ್ಲ.

(೩)

ಕೃಪಣನ್ನನ್ನವ ಹಸ್ತಲಾಘವದಿಂದಲೂ ನೋವುಗೊಂಡಾನು. ಆಳಕು ಬಾಧ್ಯಿಯಂತ ಅನುಭವಿಸುವಾಗಲೂ ಅನುಮಾನಗೊಂಡಾನು. ನುಡಿವನೆತ್ತು.

೨೫—೯—೫೩ನೇ **ಕೊಡಗು** ಶುಕ್ರವಾರ.

ನಾಚಿಕೆಗೇಡು.

ಬೀಹಾರಿನ ದೇವಗಡ ಎಂಬಲ್ಲಿ ಪ್ರಸಿದ್ಧವಾದ ವೈದ್ಯನಾಥ ದೇವಾಲಯವಿದೆ. ೧೯೧೫ರಲ್ಲಿ ಮಹಾತ್ಮಾಗಾಂಧೀಜಿಯವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಹಿಂತಿರುಗಿದಾಗ ಅವರು ತಮ್ಮ ಆಶ್ರಮವನ್ನು ಈ ವೈದ್ಯನಾಥ ದೇವಸ್ಥಾನದ ಹತ್ತಿರದಲ್ಲಿ ಸ್ಥಾಪಿಸಬೇಕೆಂದು ದೇವಗಡದ ಜನರು ಆಹ್ವಾನಿಸಿದ್ದರು. ೧೯೩೪ರಲ್ಲಿ ಮಹಾತ್ಮಾಗಾಂಧಿಯವರು ಹರಿಜನ ಕಾರ್ಯಕ್ರಮವನ್ನು ಕೈಕೊಂಡು ದೇವಗಡಕ್ಕೆ ಬಂದಾಗ ಅಲ್ಲಿಯ ಜನರು ಅವರಿಗೆ ವಿರೋಧವಾಗಿ ಕಪ್ಪು ಬಾವುಟಗಳನ್ನು ಹಿಡಿದು ಗಾಂಧೀಜಿಯವರ ಜೊತೆಗಾರರ ಮೇಲೆ ಕೈಮಾಡಿದರು. ಗಾಂಧೀಜಿಯವರಿದ್ದ ಕಾರಿಗೆ ಕಲ್ಲುಹೊಡೆದು ನಷ್ಟಪಡಿಸಿದರು. ಗಾಂಧೀಜಿಯವರು ಅಲ್ಲಿಂದ ಕಾಲ್ನಡಿಗೆಯಲ್ಲಿ ಹರಿಜನ ಪ್ರಚಾರ ಕ್ರಮ ಕೈಕೊಂಡರು. ಆ ರೀತಿ ಅಂದು ವೈದ್ಯನಾಥ ದೇವಸ್ಥಾನಕ್ಕೆ ಗಾಂಧೀಜಿಯನ್ನು ಬಿಡದೆ ಹರಿಜನ ಉದ್ಧಾರದ ಕಾರ್ಯಕ್ಕೆ ಕಪ್ಪು ಬಾವುಟ ಹಿಡಿದ ದೇವಗಡದ ವೈದ್ಯನಾಥ ದೇವಸ್ಥಾನದ ಪುರೋಹಿತರು ಅದೇ ಕೃತ್ಯವನ್ನು ಇನ್ನೂ ಹೀನಾಯವಾಗಿ ಈಗ ಮಾಡಿರುವರು.

ಗಾಂಧಿಜಿಯವರ ಸ್ಫೂರ್ತಿ, ಚೇತನಗಳ ಮೂರ್ತಿಯಾಗಿ ಕೆಲಸ ಮಾಡುತ್ತಿರುವ ಆಚಾರ್ಯ ವಿನೋಬಾ ಭಾವೆಯವರು ತಾರೀಕು ೧೮ನೇ ಶುಕ್ರವಾರ ತಮ್ಮ ಭೂದಾನ ಪ್ರಚಾರದ ನಿಮಿತ್ತ ದೇವಗಡಕ್ಕೆ ಬಂದಿದ್ದರು. ಹರಿಜನರಿಗೆ ಪ್ರವೇಶವಿಲ್ಲದ ದೇವಾಲಯಗಳಲ್ಲಿ ದೇವರಿಲ್ಲವೆಂಬ ನಂಬಿಗೆಯ ಗಾಂಧಿ ಅನುಯಾಯಿಗಳಾದ ವಿನೋಬರು ವೈದ್ಯನಾಥ ದೇವಸ್ಥಾನಕ್ಕೆ ಹೋಗಿ ದೇವರ ದರ್ಶನ ಮಾಡುವ ಇಚ್ಛೆಯಿಂದಿರಲಿಲ್ಲ. ಆದರೆ ಆ ದೇವಸ್ಥಾನದ ಪುರೋಹಿತರಲ್ಲಿ ಹಿರಿಯರಾದವರೊಬ್ಬರು ಆಚಾರ್ಯರಲ್ಲಿಗೆ ಹೋಗಿ ಅವರನ್ನು ದೇವಸ್ಥಾನಕ್ಕೆ ಆಹ್ವಾನಿಸಿದರು. ದೈವಭಕ್ತರಾದ ವಿನೋಬಾರು ಒಪ್ಪಿಕೊಂಡು ಸಾಯಂಕಾಲ ಆರು ಗಂಟೆಗೆ ದೇವಸ್ಥಾನಕ್ಕೆ ತನ್ನ ಪರಿವಾರ ಸಮೇತ ಹೊರಟರು. ದೇವಸ್ಥಾನದ ಬಾಗಿಲ ಬಳಿ ದೇವಸ್ಥಾನದ ಪುರೋಹಿತರು ಇವರ ಮೇಲೆ ಬಿದ್ದು ಸಿಕ್ಕಾಬಟ್ಟೆ ಹೊಡೆದರು! ಅವರು 'ಧರ್ಮ ಉಳಿಯಲಿ; ಅಧರ್ಮ ಅಳಿಯಲಿ' ಎಂಬ ಕೂಗೆಬ್ಬಿಸಿ ಈ ಅತ್ಯಾಚಾರ ನಡೆಸಿದರಂತೆ. ಈ ಅತ್ಯಾಚಾರದ ವಾರ್ತೆ ಇಡೀ ಭರತಖಂಡದ ಜನತೆಯನ್ನು ದುಃಖಕ್ಕೀಡುಮಾಡಿದೆ. ಕಾಂಗ್ರೆಸ್ ಸೆಕ್ರೆಟರಿ ಶ್ರೀ ಅಗರ್‌ವಾಲರು ಹೇಳುವಂತೆ ಇದು ಭಾರತೀಯರ ಮುಖಕ್ಕೆ ಕಪ್ಪು ಬಳಿದಂತೆ.

ಆಚಾರ್ಯ ವಿನೋಬಾರವರು ಪೂರ್ಣ ಅಹಿಂಸಾವಾದಿಗಳು. ಯಾರಿಗೂ ನೋವು ಮಾಡುವ ವ್ಯಕ್ತಿಯಲ್ಲ. ಇಡೀ ಜಗತ್ತಿನಲ್ಲಿ ಮಹಾತ್ಮಾ ಗಾಂಧಿಯವರಿಗೆ ಅತೀ ಹತ್ತಿರದ ವ್ಯಕ್ತಿಯೆಂದರೆ ವಿನೋಬರು. ದೈವೀಗುಣಗಳಿಂದ ತುಂಬಿ ದೇವರ ಅಂಶವೆಂಬ ಖ್ಯಾತಿಗೆ ಏರುತ್ತಿರುವ ವಿನೋಬಾರ ಮೇಲೆ ಸ್ವತಂತ್ರ ಭಾರತದ ಅನಾಗರಿಕ ರಾಷ್ಟ್ರದ ಕೆಲವರು ಕೈಮಾಡಿದರೆಂಬುದು ನಾಚಿಕೆಗೇಡಿನ ವಿಚಾರವಾಗಿದೆ. ಆಚಾರ್ಯರ ಪರಿವಾರದಲ್ಲಿ ಹರಿಜನರಿದ್ದರೆಂಬುದೇ ಈ ಅತ್ಯಾಚಾರಕ್ಕೆ ಕಾರಣವಂತೆ!

ಆಚಾರ್ಯರು ಈ ಘಟನೆಯ ನಂತರ ತನ್ನ ಪರಿವಾರದಲ್ಲಿ ಪೆಟ್ಟು ತಿಂದವರನ್ನು ದ್ದೇಶಿಸಿ "ನಿಮಗಾದರೂ ಆಕ್ರಮಣ ನಡೆಸಿದವರ ಮೇಲೆ ದ್ವೇಷವಿದೆಯೋ?" ಎಂದು ಕೇಳಿದರಂತೆ. ಅದಿಲ್ಲವೆಂಬುದನ್ನು ತಿಳಿದು ತೃಪ್ತಿಯನ್ನು ವ್ಯಕ್ತ ಮಾಡಿದರು! ಪೂರ್ಣ ಅಹಿಂಸಾವಾದಿಗಳ ಮಾರ್ಗವಿದು.

ಆಚಾರ್ಯರಂಥಾ ದೈವೀ ಪುರುಷರು ವೈದ್ಯನಾಥ ದೇವಾಲಯದಲ್ಲಿ ಹರಿಜನರೊಂದಿಗೆ ಪ್ರಾರ್ಥಿಸುವ ಅನುಕಂಪಿಸಿದ್ದರೆ ದೇವಾಲಯದ ಕೀರ್ತಿ ಹೆಚ್ಚುತ್ತಿತ್ತೆಂಬುದರಲ್ಲಿ ಸಂಶಯವಿಲ್ಲ. ಹಿಂದೂದೇಶದ ಕೀರ್ತಿಗೂ, ಹಿಂದೂಧರ್ಮದ ಘನತೆಗೂ ಅಸ್ಪೃಶ್ಯತೆಯು ಕಳಂಕಪ್ರಾಯವಾದುದು. ಇದನ್ನು ಭಾರತದಿಂದ ನಿವಾರಿಸದಿದ್ದರೆ ಭಾರತಕ್ಕೆ ಸದ್ಗತಿಯಾಗಲಾರದು.

ಇಂಡಿಯಾ ಸರಕಾರದವರು ಹಿಂದೂದೇಶದಲ್ಲಿರುವ ಅಖಿಲ ಭಾರತ ಸಂಸ್ಥೆಗಳಾದ ಹರಿಜನ ಸೇವಕ ಸಂಘ, ಭಾರತೀಯ ದಳಿತ ವರ್ಗದ ಸಂಘ, ಮೊದಲಾದ ಸಂಘಗಳ ಕೆಲಸಗಾರರನ್ನು ಸೇರಿಸಿಕೊಂಡು ಅಸ್ಪೃಶ್ಯತೆಯ ವಿರುದ್ಧ ದೇಶದ ಉದ್ದಗಲಕ್ಕೂ ಪ್ರಚಾರ ಕಾರ್ಯ ಕೈಗೊಳ್ಳುವ ನಿರ್ಧಾರ ಮಾಡಿ ಅದಕ್ಕಾಗಿ ೫೦ ಲಕ್ಷ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದಾರೆ. ಯಾವುದೇ ರಾಜಕೀಯ ಬಣ್ಣವನ್ನು ಹಚ್ಚದೆ ದೇಶದ ಎಲ್ಲಾ ಸಾಮಾಜಿಕ ಸುಧಾರಣಾ ಸಂಸ್ಥೆಗಳ ಬೆಂಬಲವನ್ನು ಪಡೆದು ಈ ಕೆಲಸ ಕೈಗೊಳ್ಳಲು ಸರಕಾರವು ನಿರ್ಧರಿಸಿದೆ. ಈ ಸತ್ಕಾರ್ಯಾರ್ಹವಾದ ಕಾರ್ಯಕ್ರಮವು ಜಾರಿಯಲ್ಲಿ ಬೇಗ ಬರಬೇಕು. ಆಚಾರ್ಯ ವಿನೋಬಾರವರ ಮೇಲೆ ನಡೆದ ಅತ್ಯಾಚಾರದಿಂದಾಗಿ ಅಸ್ಪೃಶ್ಯತೆಯ ಮೇಲೆ ಜನತೆಯ ದೃಷ್ಟಿ ಬಿದ್ದಿದೆ. ಆಚಾರ್ಯರೇ ನುಡಿಯುವಂತೆ ಹೇಳುವಂತೆ "ದೇವರು ದಯಪಾಲಿಸಿದ ಈ ಸನ್ಮಾನ"ವು ಜನತೆಯ ಕಣ್ತೆರೆಸಿ ಬಾರದಂತೆ ಅಸ್ಪೃಶ್ಯತೆಯು ನಿವಾರಣೆಯಾಗುವಂತೆ ದುಡಿಯಲು ಸರ್ವರನ್ನು ಪ್ರೇರೇಪಿಸಲಿ.

ವರ್ತಮಾನ.

ತಾ. ೨೯ರಲ್ಲಿ ಪಾಲಿಬೆಟ್ಟದ ವಯಸ್ಕರ ಶಿಕ್ಷಣ ಕೇಂದ್ರದಲ್ಲಿಯ ವಿದ್ಯಾರ್ಥಿಗಳ ಪರೀಕ್ಷೆಯು ನಡೆಯಲಿರುತ್ತಿದ್ದು ೧೬ ಜನರೂ ತೇರ್ಗಡೆಯಾಗಿರುವರು.

ತಾ. ೧೯ರಲ್ಲಿ ವಿರಾಜಪೇಟೆ ಪೌರಸಭಾ ಭವನದಲ್ಲಿ ದ ಕೊಡಗು ಸಾಹಿತ್ಯ ಸಂಘದ ಸಭೆಯು ಮುನ್ಸೀಫರಾದ ಶ್ರೀ ಕೆ. ಎ. ತಮ್ಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ದಿವಂಗತ ಕಿಲ್ಲಿಯವರ ನಿಧನಕ್ಕೆ ಸಂತಾಪ ಸೂಚಿಸಲಾಯಿತು. ಪ್ರೀಗಳಾದ ಕೆ ಎ ತಮ್ಮಯ್ಯ (ಅಧ್ಯಕ್ಷ) ಸಿ ಎಸ್ ಸಂಜಪ್ಪ (ಉಪಾಧ್ಯಕ್ಷ) ಪಿ. ಎನ್ ನಾರಾಯಣ (ಖಜಾಂಚಿ) ಬಿ. ಆರ್ ಅಪ್ಪಣ (ಗೌರವ ಕಾರ್ಯದರ್ಶಿ) ಎಸ್ ಆರ್. ನಾರಾಯಣರಾವ್ (ಸಹಕಾರ್ಯದರ್ಶಿ) ಆರ್. ಜಿ ಕಾಮತ್. ಎಸ್ ನಾರಾಯಣಮೂರ್ತಿ ಮತ್ತು ಕೆ ಸಿ ಕರುಂಬಯ್ಯ (ಮೆಂಬರುಗಳು) ಎಸ್ ಎಸ್. ರಾಮಮೂರ್ತಿ, ಸಿ ಎನ್. ದೇವಯ್ಯ ಬಜಾರ್ ಶಾಲೆಯ ಮುಖ್ಯಾಧಿಕಾರಿಗಳು (ಎಕ್ಸ್ ಅಫಿಸಿಯೋ ಸದಸ್ಯರು) ಇವರುಗಳಿಂದ ಕೂಡಿದ ಸಮಿತಿಯನ್ನು ನೇಮಿಸಲಾಯಿತು.

ಅರಪಟ್ಟು ಗ್ರಾಮದ ಶ್ರೀ ಪಾಲಚಂಡ ಅಪ್ಪಯ್ಯನವರನ್ನು ಗುಂಡು ಹಾಕಿ ಕೊಂದರೆಂಬ ಅಪಾದನೆಯ ಮೇರೆ ಅದೇ ಗ್ರಾಮದ ಮುಕ್ಕಾಟೀರ ಸುಬ್ಬಯ್ಯ ಮತ್ತು ಚಂಗಪ್ಪನವರ ಮೇಲಿನ ಕೇಸು ಮರ್ಕೇರಿ ಸೆಶನ್ಸ್ ಕೋರ್ಟಿನಲ್ಲಿ ವಿಚಾರಣೆಯಾಗುತ್ತಿದೆ.

ತಾ. ೧೫ರಲ್ಲಿ ಬೆಸ್ಸೆಗೊಡ್ಲೂರು ಶಾಲೆಯಲ್ಲಿ ಶ್ರೀ ಕೆ ಸಿ ಕರುಂಬಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಪೊನ್ನಂಪೇಟೆ ಕಾನೂರು ರಸ್ತೆಯ ಇಕ್ಕೆಲೆಯಲ್ಲಿ ೧೫ ಅಡಿಗಳ ವರೆಗೆ ಕಾಡು ಕಡಿದು ರಸ್ತೆ ದುರಸ್ತಿಪಡಿಸುವ ತೀರ್ಮಾನಮಾಡಿರುವರೆಂದು ವರ್ತಮಾನ.

ಎಣ್ಣೆ ತೆಗೆಯುವ, ಸಾಬೂನು ತಯಾರಿಸುವ, ಚರ್ಮ ಹದಮಾಡುವ, ಮೂಳೆ ಪುಡಿಮಾಡುವ ಮೊದಲಾದ ಗುಡಿಕೈಗಾರಿಕೆಗಳಲ್ಲಿ ತರಬೇತಿಗಳಿಚ್ಛಿಸುವವರು ಬೊಂಬಾಯಿಯ ೩೯೩ನೇ ಕಾಳ್ಬಾದೇವಿ ರಸ್ತೆಯಲ್ಲಿರುವ ಗ್ರಾಮೋದ್ಯೋಗ ಸಂಸ್ಥೆಯವರಿಗೆ ಬರೆಕೊಳ್ಳಬಹುದೆಂದೂ ನಿಶ್ಚಿತ ಕೆಲವರಿಗೆ ಸ್ಟೈಪೆಂಡ್ ಕೊಡಲಾಗುವದೆಂದೂ ಗೊತ್ತಾಗಿದೆ.

ಸೋಮವಾರಪೇಟೆ ನಾಡು ಅರೆಯೂರು, ಚಿಕ್ಕಬ್ಬೂರು, ಹಿತ್ಲುಮಕ್ಕಿ, ನೇರಳೆ ಆಡಿನಾಡೂರು, ನೇರುಗಳಲೆ ಗ್ರಾಮಸ್ಥರುಗಳು ಶ್ರೀ ಹೆಚ್. ಎಂ. ಚಂಗಪ್ಪನವರ ಅಧ್ಯಕ್ಷತೆಯಲ್ಲಿ ನೇರುಗಳಲೆ ಗ್ರಾಮದ ಶಾಲೆ ಬಳಿ ತಾ. ೧೭ರಲ್ಲಿ ಸಭೆ ಸೇರಿ ಮೇಲ್ಕಂಡ ಗ್ರಾಮಗಳ ಮಧ್ಯಸ್ಥಳದಲ್ಲಿ ಒಂದು ಶಾಲಾ ಕಟ್ಟಡವನ್ನು ಕಟ್ಟಿ ಪ್ರೈಮರಿ ಶಾಲೆಯನ್ನು ತೆರೆಯಬೇಕೆಂದು ಠರಾವು ಪಾಸಾಗಿ ಸರಕಾರಕ್ಕೆ ಅರ್ಜಿ ಬರೆಕೊಳ್ಳಲಾಯ್ತು. ವಿದ್ಯೆ ಮತ್ತು ಗ್ರಾಮ ಒಗ್ಗಟ್ಟಿನ ವಿಷಯವಾಗಿ ಶ್ರೀ ಜಿ. ಟಿ. ತಮ್ಮಯ್ಯ, ಮಾಚೀರ ತಿಮ್ಮಯ್ಯ, ಸಿ. ಟಿ. ಮಾದಪ್ಪನವರುಗಳು ಮಾತಾಡಿದರು. ಗ್ರಾಮ ಸೇವಕ ಶ್ರೀ ಹೆಚ್. ಎ. ಚಂಗಪ್ಪನವರು ಸಮಾಜ ವಿಕಾಸ ಯೋಜನೆ ಮತ್ತು ಜಪಾನು ವ್ಯವಸಾಯ ಕ್ರಮದ ವಿಷಯವಾಗಿ ಮಾತಾಡಿದರು.

ಕೊಡಗಿನಲ್ಲಿ ಹೊಸದಾಗಿ ದುರಸ್ತಿ ಮಾಡಿದ ಅಥವ ಕಟ್ಟಿದ ಕೆರೆ ಕಾಲುವೆಗಳಿಗೂ ಅಣೆಕಟ್ಟುಗಳಿಗೆ ಸರಕಾರದಿಂದ ಬೋನಸ್ಸು ಕೊಡಲ್ಪಡುವದು. ಅಂಥಾ ಕೆಲಸ ಮಾಡಿಸಿದವರು ತಮ್ಮ ಅರ್ಜಿಗಳನ್ನು ಕೊಡಗು ಸೀರಾವರಿ ಇಲಾಖಾಧಿಕಾರಿಗಳಿಗೆ ಅಕ್ಟೋಬರ್ ತಾ ೧೫ರೊಳಗೆ ಕಳುಹಿಸಬಹುದೆಂದೂ ನಂತರ ಕಳುಹಿಸಲ್ಪಡುವ ಅರ್ಜಿಗಳನ್ನು ಗಮನಿಸಲಾಗುವದಿಲ್ಲವೆಂದೂ ತಿಳಿಸುತ್ತಾರೆ.

ವಯಸ್ಕರ (ಸಮಾಜ) ಶಿಕ್ಷಣ ಯೋಜನೆಯಲ್ಲಿ ತರಬೇತಿ ಕ್ಲಾಸುಗಳು ವೀರಾಜಪೇಟೆ ಹೈಸ್ಕೂಲಿನಲ್ಲಿ ತಾ. ೨೮—೯—೫೩ರಿಂದ ೫ ದಿನಗಳ ವರೆಗೂ ಸೋಮವಾರಪೇಟೆ ಹೈಸ್ಕೂಲಿನಲ್ಲಿ ತಾ. ೫—೧೦—೫೩ರಿಂದಲೂ ನಡೆಸಲ್ಪಡುವದು. ತರಬೇತಿಗಾಗಿ ತಮ್ಮ ಕೇಂದ್ರಗಳಕ್ಕೆ ವಯಸ್ಕರ ಶಾಲೆ

ನಡೆಸಲು ಇಚ್ಛೆಯುಳ್ಳವರು ತರಬೇತಿಗೆ ಬರಲು ಅರ್ಜಿಹಾಕಿಕೊಳ್ಳಬಹುದು. ಹೆಂಗಸರ ತರಗತಿ ನಡೆಸಲು ಉಪಾಧ್ಯಾಯಿನಿಯರು ಬೇಕಾಗಿದ್ದಾರೆ. ಹೆಚ್ಚಿನ ವಿವರ ವಿದ್ಯಾಧಿಕಾರಿಗಳ ಆಫೀಸಿನಿಂದ ಪಡೆಯಬಹುದು.

ಇದೇ ಅಕ್ಟೋಬರ್ ತಾರೀಕು ೮ರಿಂದ ೧೫ರ ವರೆಗೆ ಮಡಿಕೇರಿ ವೇದಾಂತ ಸಂಘದಲ್ಲಿ ನವರಾತ್ರಿ ಉತ್ಸವವನ್ನು ಆಚರಿಸುವರು. ಪ್ರತಿ ದಿನ ಸಾಯಂಕಾಲ ವಾಚನ, ಭಾಷಣ ಮೊದಲಾದುವುಗಳು ನಡೆಯುವವು.

ಕೊಡಗು ಮತ್ತು ಮೈಸೂರು ಕಂಪೆನಿಯು ದಕ್ಷಿಣ ಕೊಡಗು ಎಥ್ಲೆಟಿಕ್ ಯೂನಿಯನಿಗೆ ಕೊಟ್ಟಿರುವ 'ಕೋರ್ಕಪ್' ಹಾಕಿ ಪಂದ್ಯಾಟವು ತಾ. ೨೭—೧೦—೫೩ರಿಂದ ಪೊನ್ನಂಪೇಟೆಯಲ್ಲಿ ನಡೆಯುವದೆಂದೂ ಭಾಗವಹಿಸಲಿಚ್ಛಿಸುವ ಟೀಮುಗಳು ತಾ. ೧೦ರೊಳಗೆ ಸೆಕ್ರೆಟರಿಯವರಿಗೆ ರೂ ೧೦ ಪ್ರವೇಶಧನದೊಂದಿಗೆ ಬರೆದುಕೊಳ್ಳಬಹುದೆಂದೂ ತಿಳಿಸುತ್ತಾರೆ.

ಆಸ್ಪತ್ರೆಯಲ್ಲಿ ಹಂಗಾಮಿ ಪಾರುಪತ್ತೆಗಾರರಾಗಿರುವ ಶ್ರೀ. ಮೇರಿಯಂಡ ಚಂಗಪ್ಪನವರನ್ನು ಮಡಿಕೇರಿಗೆ ಪಾರುಪತ್ತೆಗಾರರಾಗಿ ವರ್ಗಾಯಿಸಿ ಮಡಿಕೇರಿಯ ಪಾರುಪತ್ತೆಗಾರರಾಗಿದ್ದ ಶ್ರೀ. ಕದಂಬಾಡಿ ಸೋಮಪ್ಪನವರನ್ನು ಸೆಕ್ರೆಟರಿಯೇಟಿಗೆ ವರ್ಗಾಯಿಸಿರುವರು.

ಸಮಾಜ ವಿಕಾಸ ಯೋಜನೆಯ ಹೊಸ ಬ್ಲಾಕುಗಳನ್ನು ತೆರೆಯುವ ವಿಚಾರದ ಪ್ರಚಾರ ಸಭೆಗಳು ತಾ. ೧೫ರಲ್ಲಿ ಶನಿವಾರಸಂತೆ, ಭಾಗಮಂಡಲಗಳಲ್ಲೂ, ತಾ. ೧೬ರಲ್ಲಿ ಸೋಮವಾರಪೇಟೆ, ತಾ. ೧೮ರಲ್ಲಿ ಮಡಿಕೇರಿಯಲ್ಲೂ, ತಾ. ೨೦ರಲ್ಲಿ ಅಮ್ಮತ್ತಿ, ಸಿದ್ದಾಪುರಗಳಲ್ಲೂ, ತಾ. ೨೧ರಲ್ಲಿ ಹುದಿಕೇರಿ, ಪೊನ್ನಂಪೇಟೆಗಳಲ್ಲೂ, ತಾ. ೨೨ರಲ್ಲಿ ವೀರಾಜಪೇಟೆಯಲ್ಲೂ, ತಾ. ೨೩ರಲ್ಲಿ ಕಕ್ಕಬೆ, ನಾಪೋಕ್ಲುಗಳಲ್ಲೂ ನಡೆದವು. ಕೊಡಗಿನ ಮುಖ್ಯಮಂತ್ರಿಯವರು ವಿಕಾಸ ಯೋಜನೆಯ ವಿಚಾರ ವಿವರಿಸಿದರು.

ಬಾಡಿಗೆ ನಿಯಂತ್ರಣ ಕಾನೂನು ಮತ್ತು ಮನೆಗಳು

ಕೊಡಗಿನ ಪಟ್ಟಣಗಳಲ್ಲಿ ಬಾಡಿಗೆ ನಿಯಂತ್ರಣ ಕಾನೂನು ಜಾರಿಗೆ ತಂದುದರಿಂದ ಜನತೆಗೆ ಹಿತದ ಬದಲು ಅಹಿತವೇ ಆಗುತ್ತಿದೆಯೆನ್ನಬಹುದು. ಏಕೆಂದರೆ ಬಾಡಿಗೆ ನಿಯಂತ್ರಣ ಕಾನೂನಿನಂತೆ ಮನೆಇರುವವರ ಇಚ್ಛೆಯಂತೆ ಬಾಡಿಗೆ ಬರುತ್ತಿದ್ದು ನಿಂತಿದೆಯಾದರೂ ತಾವು ಖರ್ಚುಮಾಡಿದ ಹಣಕ್ಕೆ ಯುಕ್ತವಾದ ಆದಾಯ ಬರುತ್ತಿಲ್ಲವೆಂದು ದುಡ್ಡಿರುವವರು ಮನೆ ಕಟ್ಟುವದನ್ನೇ ಬಾಕಿಮಾಡಿರುವರು. ಕೊಡಗಿನ ಪೇಟೆಗಳನ್ನು ಪರಿಶೀಲಿಸಿದರೆ ಬಾಡಿಗೆಗೆ ಕೊಡಲೆಂದು ಹೊಸ ಮನೆಗಳನ್ನು ಕಟ್ಟುವದು ಈಗ ಪೂರ್ಣ ನಿಂತಿದೆಯೆಂದು ಹೇಳುವದು ಉತ್ಪ್ರೇಕ್ಷೆಯಾಗಲಾರದು. ಮನೆ ಬಾಡಿಗೆ ಏನೋ ನಿಯಂತ್ರಣದ ಕಾನೂನಿನಿಂದ ಕಡಿಮೆಯಾಗಿದೆಯೆಂಬುದು ನಿಜವಾದರೂ ಮನೆಗಳ ಅಭಾವ ಹೆಚ್ಚುತ್ತಿರುವ ಕಾರಣ ಅನೇಕರಿಗೆ ಮನೆಯಿಲ್ಲದ ತೊಂದರೆಯಾಗುತ್ತಿದೆ. ಮಡಿಕೇರಿಯಲ್ಲಿ ಕಳೆದ ಒಂದು ವರ್ಷದಿಂದಲೇ ಮನೆಗಾಗಿ ಅರ್ಜಿ ಬರೆಕೊಂಡವರಿಗೆ ಮನೆದೊರೆತಿರುವದಿಲ್ಲ. ಮೇಲಾಗಿ ಸರಕಾರಿ ಉದ್ಯೋಗಿಗಳಿಗೆ ಪ್ರಾಮುಖ್ಯತೆ ಕೊಡುತ್ತಿರುವದರಿಂದ ಉಳಿದವರಿಗೆ ಮನೆಯೇ ದೊರೆಯುವಾಗಿದೆ.

ಕೊಡಗಿನ ಬಾಡಿಗೆ ನಿಯಂತ್ರಣ ಅಧಿಕಾರಿಯಾಗಿ ಪ್ರೈವೇಟ್ ಆಫೀಸರನ್ನು ನೇಮಿಸಿರುವದರಿಂದ ಅವರು ಬೇರೆಡೆ ಸುತ್ತಿ ಮನೆ ನೋಡುವದು ಕಷ್ಟ. ಮಡಿಕೇರಿ ಬಿಟ್ಟು ಪೇಟೆ ಸ್ಥಳಗಳಿಗೆ ಆದಿತ್ಯವಾರಗಳಲ್ಲೇ ಹೋಗಬೇಕು. ಇದರಿಂದ ಜನರಿಗೆ ತುಂಬಾ ತೊಂದರೆಯಿದೆ. ಆದ್ದರಿಂದ ದಕ್ಷಿಣ ಕೊಡಗಿಗೆ ಬೇರೊಬ್ಬ ಬಾಡಿಗೆ ನಿಯಂತ್ರಣಾಧಿಕಾರಿಯನ್ನು ನೇಮಿಸುವದರಿಂದ ಆ ಭಾಗದ ಜನರಿಗೆ ಉಪಕಾರವಾದೀತು.

ಬಾಡಿಗೆ ನಿಯಂತ್ರಣ ಕಾನೂನು ಕೇವಲ ಬಾಡಿಗೆ ಮನೆ ಕುಳಿತಿರುವವರ ಹಿತವನ್ನೇ ಸಾಧಿಸಿದರೆ ಸಾಲದು. ಮನೆ ಮಾಲೀಕರ ಹಕ್ಕಿಗೂ ಯೋಗ್ಯ ಮನ್ನಣೆ ಬರುವಂತೆ ಆಸ್ಪದವಿದ್ದರೆ ಮಾತ್ರ ಕಟ್ಟಡಗಳು ಹೆಚ್ಚಾಗುವವು. ಸದ್ಯ ಪರಿಸ್ಥಿತಿಯಲ್ಲಿ ಅಂಥಾ ವ್ಯವಸ್ಥೆ ಇಲ್ಲವೆಂದೇ ಹೇಳಬೇಕಾಗಿದೆ. ಒಬ್ಬರೇ ನಿಯಂತ್ರಣಾಧಿಕಾರಿ ಇರುವ ಕಾರಣ ಕೇಸುಗಳ ತೀರ್ಮಾನಕ್ಕೂ ತಡವಾಗುತ್ತಿದೆ. ಉದಾಹರಣೆಗೆ ಒಂದು ಕೇಸಿನ ಸಂಬಂಧ ಈ ಮೊದಲಿದ್ದ ಮೂರು ಅಧಿಕಾರಿಗಳೂ ಒಬ್ಬರ ನಂತರ ಒಬ್ಬರು ಬಂದು ಮನೆಯನ್ನು ನೋಡಿದರೂ ಇನ್ನೂ ತೀರ್ಮಾನವಾಗದ್ದಿದೆ. ಇವನ್ನೆಲ್ಲಾ ಪರಿಶೀಲಿಸಿ ಸರಕಾರದವರು ತಕ್ಕ ಏರ್ಪಾಡುಗಳನ್ನು ಮಾಡಿ ಬಾಡಿಗೆದಾರರ, ಹಾಗೂ ಮನೆ ಮಾಲೀಕರ ಹಿತವನ್ನು ಕಾಯುವರೆಂದು ಆಶಿಸಲಾಗಿದೆ.

ಬೆಳ್ಳಪ್ಪ.

ಪ್ರಯಾಣಿಕರ ತೊಂದರೆ.

ಭಾಗಮಂಡಲದಿಂದ ಈ ಹಿಂದೆ ಬೆಳಿಗ್ಗೆ ೭—೩೦ಕ್ಕೆ 'ದಿ ಕೂರ್ಗ್ ಟ್ರಾನ್ಸ್‌ಪೋರ್ಟ್ ಬಸ್' ಮಡಿಕೇರಿಗೆ ಹೋಗುತ್ತಿದ್ದು ಮಡಿಕೇರಿಯಿಂದ ಸದ್ರಿ ಬಸ್ಸಿನಲ್ಲಿ ಪ್ರಯಾಣಿಸಿದ ಪ್ರಯಾಣಿಕರಿಗೆ ಮಂಗಳೂರಿನ ವರೆಗಿನ ಎಲ್ಲಾ ಪಟ್ಟಣಗಳಿಗೂ ಹೋಗುವಂತಹ ಅನುಕೂಲವಿತ್ತು. ಆದರೆ ಈಗ ಸದ್ರಿ ಟ್ರಾನ್ಸ್‌ಪೋರ್ಟ್ ಕಂಪೆನಿಯವರು ತಮ್ಮ ಬಸ್ ಮೊದಲು ಹೇಳಿದಂತೆ ಹೊರಡುತ್ತಿದ್ದ ೭—೩೦ರ ವೇಳೆಯನ್ನು ೮ಕ್ಕೆ ಬದಲಾಯಿಸಿ, ಸದ್ರಿ ಬಸ್ಸಲ್ಲಿ ಹೋದರೆ, ಮಡಿಕೇರಿಯಿಂದ ಬೆಳಗ್ಗೆ ಮಂಗಳೂರಿಗೆ ಹೋಗುವ ಬಸ್‌ಗಳೆಲ್ಲ ತಪ್ಪಿ ಹೋಗುವುವು.

ಆದ್ದರಿಂದ ಈಗ ಬೆಳಿಗ್ಗೆ ಮಡಿಕೇರಿಯಿಂದ ಹೊರಡುವ ಸಂಕರವಿಲಾಸ್ ಮತ್ತು ಓಂ ಪ್ರಕಾಶ್ ಬಸ್ಸುಗಳಿಗೆ ಕನೆಕ್ಷನ್ ಸಿಕ್ಕುವಂತೆ ಭಾಗಮಂಡಲದಿಂದ ಒಂದು ಬಸ್ಸನ್ನು ಈಗ ಹೊರಡುವ ಸಮಯವನ್ನು ಬದಲಾಯಿಸಿ ಹೊರಡುವಂತೆ ಏರ್ಪಾಡನ್ನು ಸಮ್ಬಂಧಪಟ್ಟ ಅಧಿಕಾರಿಗಳು ಮಾಡಿ ಜನತೆಗೆ ಹಿತವನ್ನು ಬಯಸುವರೇ?

ತೊಂದರೆಗೀಡಾದ ಪ್ರಯಾಣಿಕ

ಕಣ್ಣು ಮುಚ್ಚಾಲೆ!

ನಾಗರಹೊಳೆ ಫಾರೆಸ್ಟ್ ರೇಂಜಿನಲ್ಲಿ ಮರದ ಕಳ್ಳ ಸಾಗಾಟ ಮೊದಲಾದ ಅವ್ಯವಸ್ಥೆಗಳು ನಡೆದಿವೆಯೆಂಬ ಪುಕಾರಿನ ಬಗ್ಗೆ ಅದರ ಸತ್ಯಾಂಶವನ್ನು ಪರಿಶೀಲಿಸಿ ವಿಚಾರಣೆ ನಡೆಸಿ ಸರಕಾರಕ್ಕೆ ವರದಿ ಮಾಡಲು ಶ್ರೀ. ಎಂ. ಎಸ್. ಗುಂಡುರಾಯರನ್ನು ವಿಶೇಷ ಅಧಿಕಾರಿಯಾಗಿ ನೇಮಿಸಿರುವರೆಂದು ವರ್ತಮಾನವನ್ನು ಓದಿದೆವು. ಈ ಏರ್ಪಾಡು ಕೇವಲ ಕಣ್ಣುಮುಚ್ಚಾಲೆಯಲ್ಲದೆ ಇದರಿಂದ ಯಾವ ಪ್ರಯೋಜನವೂ ಆಗಲಾರದೆಂದು ಹೇಳಬೇಕಿದೆ. ಏಕೆಂದರೆ ಸರಕಾರದ ಅಧಿಕಾರಿಯೊಬ್ಬರಿಂದ ಈ ವಿಚಾರ ನಡೆಯುವದರಿಂದ ಯಾವ ಪುರುಷಾರ್ಥವೂ ಸಾಧಿಸುವದಿಲ್ಲ. ಸರಕಾರವು ನಿಷ್ಪಕ್ಷಪಾತವಾದ ವಿಚಾರಣೆಯಾಗಬೇಕೆಂದು ಇಚ್ಛಿಸಿದ್ದರೆ ಶಾಸನ ಸಭೆಯ ಎರಡು ಸದಸ್ಯರು ಹಾಗೂ ಒಬ್ಬ ಮೇಜಿಸ್ಟ್ರೇಟರಿಂದ ಕೂಡಿದ ವಿಚಾರ ಸಮಿತಿಯನ್ನು ನೇಮಿಸಬಹುದಿತ್ತು. ಅದು ಸಾಧ್ಯವಿಲ್ಲದಿದ್ದರೆ ಒಬ್ಬ ಮೇಜಿಸ್ಟ್ರೇಟರನ್ನು ವಿಚಾರಣಾ ಅಧಿಕಾರಿಯಾಗಿ ನೇಮಿಸಬಹುದಿತ್ತು. ಇದಾವುದನ್ನೂ ಮಾಡದೆ ಸರಕಾರಿ ಅಧಿಕಾರಿಯೊಬ್ಬರನ್ನು ನೇಮಿಸಿದ್ದು ಜನತೆಯ ಕಣ್ಣು ಕಟ್ಟುವ ದೃಷ್ಟಿಯಿಂದಲ್ಲದೆ ಬೇರಲ್ಲ. ಫಾರೆಸ್ಟಿನ ಆಡಳಿತದ ಅವ್ಯವಸ್ಥೆಯ ವಿಚಾರ ಹಲವಾರು ಆರೋಪಗಳು ಈ ವರೆಗೆ ಪ್ರಕಟವಾಗಿದ್ದರೂ, ಸರಕಾರವು ಅವೆಲ್ಲವೂ ನಿರಾಧಾರವಾದುವೆಂದೂ, ಕುತ್ಸಿತ ಜನರ ಪ್ರಚಾರವೆಂದೂ ಅಧಿಕಾರಯುತವಾದ ಗ, ಘಟನೆಯನ್ನು ಹೊರಪಡಿಸುವಾಗ ಸರಕಾರದಿಂದ ನೇಮಕವಾದ ಸರಕಾರದ ಕೈಗೊಂಬೆ ಆಫೀಸರೊಬ್ಬರು ಸರಕಾರದ ಪ್ರಕಟಣೆಗೆ ವಿರೋಧವಾದ ವರದಿಯನ್ನೊಪ್ಪಿಸುವರೆಂಬುದು ದೂರದ ಮಾತು. ಇನ್ನಾದರೂ ತಡವಾಗಿಲ್ಲ. ನಿಜವಾಗಿಯೂ ಪರಿಸ್ಥಿತಿಯ ವಿಚಾರಣೆ ಚೆನ್ನಾಗಿ ಆಗಬೇಕು, ಸರಕಾರದ ಆಡಳಿತವು ಸ್ವಚ್ಛ ಕೈಗಳಿಂದ ನಡೆಯುತ್ತಿದೆಯೆಂಬುದು ರುಜುವಾತಾಗಬೇಕೆಂದು ಸರಕಾರವು ಬಯಸುವದಾದರೆ ಎರಡು ಎಂ. ಎಲ್. ಎ ಗಳಿಂದ ಮತ್ತು ಪ್ರಥಮ ದರ್ಜೆಯ ಮ್ಯಾಜಿಸ್ಟ್ರೇಟರೊಬ್ಬರಿಂದ ಕೂಡಿದ ಒಂದು ಸಮಿತಿಯನ್ನು ನೇಮಿಸಲಿ. ಇಲ್ಲವೇ ಕಡೆಗೆ ಈ ಸರಕಾರಿ ಅಧಿಕಾರಿಯ ಬದಲು ಒಬ್ಬ ಮೇಜಿಸ್ಟ್ರೇಟರನ್ನಾದರೂ ನೇಮಿಸಲಿ. ಸರಕಾರದ ಅಂಕಿತದೊಳಗಿರುವ ಅಧಿಕಾರಿಯು ಎಷ್ಟೇ ಸತ್ಯದೃಷ್ಟಿಯ ವರದಿಮಾಡಿದರೂ ಅದರ ಮೇಲೆ ಜನತೆಗೆ ವಿಶ್ವಾಸ ಉಂಟಾಗಲಾರದು.

ನಿರೀಕ್ಷಕ.

ಅಂದು

ಮಾದರಿ ಗ್ರಾಮ ....

ಇಂದು ?

"The measure of alcohol consumed in a district or a village is the measure of its degradation" ಎಂಬ ಮಾತು ಅಕ್ಷರಶಃ ಸತ್ಯ. ಒಂದು ಕಾಲದಲ್ಲಿ ದಕ್ಷಿಣ ಕೊಡಗಿನಲ್ಲೇ ಮಾದರಿಯಾಗಿದ್ದ ಬೆಸಗೂರು ಗ್ರಾಮವಿಂದು ಕುಡುಕರಿಗೆ ಕಲಹ ಪ್ರಿಯರಿಗೊಂದು ತವರುಮನೆಯಾಗಿದೆ. ಗ್ರಾಮಗಳಲ್ಲಿ ಅವಶ್ಯಕತೆಯಿಲ್ಲದೆ ಸೇಂದಿಕಳ್ಳು ಗ್ರಾಮದಲ್ಲೇ ಸೇಂದಿ ಅಂಗಡಿಯನ್ನಿಟ್ಟುಗಳಿಸುವದನ್ನು ಸರಕಾರ ಬಿಟ್ಟಿಸದ್ದು ಆಶ್ಚರ್ಯಕರವಾದ ಸಂಗತಿ. ಈ ಗ್ರಾಮದಲ್ಲಿ ಕೆಲವು ತಿಂಗಳುಗಳಿಂದ ಈ ಸೇಂದಿ ಅಂಗಡಿ ಹಲಕೆಲವು ಸಿಪಾಯಿಗಳ ಒಮ್ಮತದ ಕುಗ್ಗಿಸಿನ ಪ್ರೇರಣೆಯಿಂದ ಅಭಿವೃದ್ಧಿಗೊಳ್ಳುತ್ತಿದೆ. ಅಂಗಡಿಗೆ ಬೇಕಾದ ಮನೆ, ಅದರ ಖರ್ಚು ಇವುಗಳೆಲ್ಲಾ ಕೆಲವು ದಾನ ಶೂರರ ಕೊಡುಗೆಯಿಂದ ತಳವೂರಿದೆ. ಈ ಅಂಗಡಿ ತೆರೆದಾರಭ್ಯ ಈ ವರೆಗೆ ಈ ಗ್ರಾಮದಲ್ಲಿ ನಾಲ್ಕಾರು ಕ್ರಿಮಿನಲ್ ಕೇಸುಗಳಾಗಿವೆ. ಇದು ಅಧಿಕಾರವರ್ಗದವರಿಗೆ ತಿಳಿದ ವಿಷಯವಾಗಿದೆ. ಗ್ರಾಮದ ಸ್ವಲ್ಪ ಜಾತಿಯವರು, ಅರಿತವರಲ್ಲಿ ಬಹು ಜನರು ಕಣ್ಣುಮುಚ್ಚಿಕೊಂಡು, ಸರ್ವಗೊಂದು ಗಾಸು ಸೇಂದಿ ಮುಫತ್ತಾಗಿ ಸಿಕ್ಕಿದರೆ ಬದ್ಲೇ ಹೋಲೆಂದು ಭಾವಿಸಿ, ಗ್ರಾಮದ ಭವಿಷ್ಯವನ್ನೇ ಹಾಳುಮಾಡುತ್ತಿದ್ದಾರೆ. ನೆರೆ ಕೆರೆಯ ಗ್ರಾಮದವರೂ ಕೂಡ ಅಲ್ಲಿಗೆ ಹೋಗಿ ಕುಡಿಯುವದನ್ನ ದಿನಚರಿ ಮಾಡಿಕೊಳ್ಳುತ್ತಿದ್ದಾರೆ.

ಇಂತಹ ವಿಷಯಗಳನ್ನು ಸಂಬಂಧಿಸಿದ ಅಧಿಕಾರಿಗಳಿಗರುಹಿದ ಗ್ರಾಮದ ಹಿರೇಯರ ಕರ್ತವ್ಯ ಶೂನ್ಯತೆಯನ್ನು ಖಂಡಿಸಬೇಕಿದೆ. ಆದುದರಿಂದ ಸಂಬಂಧಿಸಿದ ಮೇಲಧಿಕಾರಿಗಳನ್ನು ಎಚ್ಚರಿಸಿ ಸರಕಾರವು ಅಧಃಪತನಗೊಳ್ಳುತ್ತಿರುವ ಈ ಗ್ರಾಮದ ಹಿತ ಬಯಸಬೇಕು. ತಮ್ಮ ಜವಾಬ್ದಾರಿಯನ್ನರಿತು ಗ್ರಾಮದ ಕಲ್ಯಾಣಕ್ಕಾಗಿ ಎಚ್ಚರಗೊಳ್ಳಬೇಕೆಂದು ಗ್ರಾಮದ ಪಂಚಾಯಿತರಲ್ಲಿ, ತಕ್ಕ ಮುಖ್ಯಸ್ಥರಲ್ಲಿ, ಹಿರಿಯರಲ್ಲಿ ನೆರೆಗ್ರಾಮಸ್ಥನಾದ ನನ್ನ ಅರಿಕೆ.

'ನೆರೆಗ್ರಾಮಸ್ಥ'

ಬಡವರಿಗಾಗಿ ತ್ಯಾಗ ಮಾಡಿ

ದೇವರ ಹೆಸರಿನಿಂದ ಬಡವರ ಸೇವೆಗಾಗಿ ಏನಾದರೂ ತ್ಯಾಗ ಮಾಡಿ ಉಳಿದ ರಾಷ್ಟ್ರಗಳ ಜನರಿಗೆ ಪಾಠ ಹಾಕಿ ಕೊಡಿರಿ ಎಂದು ಆಚಾರ್ಯ ಭಾವೆಯವರು ತಾ. ೧೮ ರಲ್ಲಿ ತಮ್ಮ ಶಿಬಿರದ ಹತ್ತಿರ ಸೇರಿದ್ದ ಪ್ರಚಂಡ ಸಭೆಯನ್ನುದ್ದೇಶಿಸಿ ಭಾಷಣ ಮಾಡುತ್ತಾ ಹೇಳಿದರು. ಮುಂದುವರಿಯುತ್ತ ಪರಮಾತ್ಮನಲ್ಲಿ ನಿಜವಾದ ಭಕ್ತಿ ಇನ್ನೂ ಉದಯವಾಗಿಲ್ಲ. ಪರಮಾತ್ಮನ ಮೂರ್ತಿ ಪೂಜೆ ಮಾಡುವದಷ್ಟೇ ಸಾಲದು ದರಿದ್ರ ನಾರಾಯಣನ ಸೇವೆಯಿಂದಲೇ ಪರಮಾತ್ಮನಿಗೆ ಪ್ರೀತಿಯಾಗುವುದು ಪರಮಾತ್ಮನ ನಾಮಸ್ಮರಣೆ ಮಾತ್ರವೇ ಸಾಲದು ಆದರಿಂದ ನಿಮ್ಮ ತೊಂದರೆಯು ನಿವಾರಣೆಯಾಗದು ಅವನ ಆಜ್ಞೆಯಂತೆ ನೀವು ನಡೆಯಬೇಕಾಗುವುದು ಎಂದು ಅವರು ಹೇಳಿದರು.

ಪ್ರತಿಯೊಂದು ವ್ಯಕ್ತಿಯೂ ನನ್ನ ಭೂದಾನ ಯಜ್ಞಕ್ಕೆ ಸ್ವಲ್ಪವಾದರೂ ಕೊಡಬೇಕು. ಎರಡನೆಯವರಿಗೆ ಸ್ವಲ್ಪವಾದರೂ ಕೊಡುವದು ಪ್ರತಿಯೊಬ್ಬನ ಕರ್ತವ್ಯವಾಗಿದೆ. ಭೂದಾನ ಯಜ್ಞವು ಯಶಸ್ವಿಯಾಗಬೇಕೆಂದರೆ ಸತತ ಪ್ರಯತ್ನ ಅವಶ್ಯ ಬರೇ ಸಮಯ ದೊರೆತಾಗ ಮಾಡಿದರಾಯಿತೆಂದರೆ ನಡೆಯದು ಎಂದು ನುಡಿದರು.

ಆಂಧ್ರ ಪ್ರಾಂತದ ಅವತರಣಿಕೆಯ ಸಿದ್ಧತೆ.

ಆಂಧ್ರ ಪ್ರಾಂತ ರಚನೆಯ ಕುರಿತಾದ ಪೂರ್ವ ಸಿದ್ಧತೆಯೆಲ್ಲಾ ಇಷ್ಟರಲ್ಲೇ ಮುಗಿದಿದ್ದು, ಅದರ ಆರಂಭೋತ್ಸವದ ಕಾರ್ಯಕ್ರಮವೂ ನಿಶ್ಚಯವಾಗಿದೆ. ಅಕ್ಟೋಬರ್ ತಾ. ೧ ರಂದು ಬೆಳಿಗ್ಗೆ ೯ ಗಂಟೆಗೆ ಭಾರತದ ಪ್ರಧಾನ ಮಂತ್ರಿ ಪಂಡಿತ ಜವಾಹರಲಾಲ ನೆಹರೂರವರು ಆರಂಭೋತ್ಸವ ನೆರವೇರಿಸಲಿರುವರು ಅದಕ್ಕಿಂತ ಮೊದಲು ಮುಖ್ಯ ನ್ಯಾಯಾಧೀಶರಾದ ಶ್ರೀ. ಪಿ. ವಿ. ರಾಜಮನ್ನಾರ್ ಅವರು ಗವರ್ನರರಿಂದ ಅಧಿಕಾರದ ಪ್ರತಿಜ್ಞೆ ಮಾಡಿಸುವರು. ಮೇಲೆ ಮಂತ್ರಿಗಳು ಅಧಿಕಾರದ ಪ್ರತಿಜ್ಞೆ ಮಾಡುವರು. ಸಮಾರಂಭಕ್ಕೆ ಪ್ರತ್ಯೇಕ ಸಭಾಮಂಟಪ ಕರ್ನೂಲಿನಲ್ಲಿ ನಿರ್ಮಿಸಲ್ಪಡುವುದು. ಅಂದು ಸಾಯಂಕಾಲ ಗವರ್ನರರು ಒಂದು ಸತ್ಕಾರ ಕೂಟ ಏರ್ಪಡಿಸುವರು ಆಂಧ್ರ ಪ್ರಾಂತದ ಉದ್ಘಾಟನಾ ದಿನವಾದ ಅಕ್ಟೋಬರ್ ೧ ರಂದು ಆಂಧ್ರದ ಎಲ್ಲಾ ಸಾರ್ವಜನಿಕ ಕಛೇರಿಗಳಿಗೆ ರಜೆ ಕೊಡಲಾಗುವುದೆಂದು ಅಧಿಕೃತವಾಗಿ ತಿಳಿದುಬಂದಿದೆ. ಆಂಧ್ರ ಪ್ರಜಾ ಸೋಶಲಿಸ್ಟ್ ಪಕ್ಷದ ಕಾರ್ಯಕಾರಿ ಸಮಿತಿಯು, ಶ್ರೀ ಟಿ. ಪ್ರಕಾಶಮರಿಗೆ ಪಕ್ಷದ ಕಮ್ಯುನಿಸ್ಟ್ ವಿರೋಧ ಸೂತ್ರಗಳಿಂದ ವಿನಾಯಿತಿ ಕೊಟ್ಟು ಪ್ರಜಾಸತ್ತಾತ್ಮಕವಾದ ಸಮ್ಮಿಶ್ರ ಸರಕಾರವನ್ನು ಸಂಭವನೀಯವಾದ ತಳಹದಿಯ ಮೇಲೆ ರಚಿಸಲು ಅವಕಾಶ ಮಾಡಿಕೊಟ್ಟಿದೆ.

ಗಾಂಧಿ ವಿಚಾರ ದೋಹನ

॥ ಪ್ರಜಾಪ್ರಭುತ್ವ ॥

ಸರಕಾರವು ನಿರಂಕುಶವಿರಲಿ ಯಾ ಜನತಾ ಸರ್ಕಾರವಾಗಿರಲಿ ಜನತೆಯಲ್ಲಿ ಭಯವನ್ನು ಹುಟ್ಟಿಸಿ ಪ್ರಜಾಪ್ರಭುತ್ವವನ್ನು ಸ್ಥಾಪಿಸುವದು ಸಾಧ್ಯವಿಲ್ಲ. ಭಯವು ಸ್ವಾತಂತ್ರ್ಯವನ್ನು ಕೊಲೆ ಮಾಡುತ್ತದೆ. ಸ್ವಾತಂತ್ರ್ಯವಿಲ್ಲದಲ್ಲಿ ಪ್ರಜಾರಾಜ್ಯವಿರಲಾರದು.

ಬಲಾತ್ಕಾರ ಯಾ ಒತ್ತಾಯದ ಮಾರ್ಗದಿಂದ ಪ್ರಜಾಪ್ರಭುತ್ವ ಸ್ಥಾಪಿಸಲು ಸಾಧ್ಯವಿಲ್ಲ. ಶಿಕ್ಷೆಯ ಬೆದರಿಕೆಯಿಂದಲೂ ಪ್ರಜಾಪ್ರಭುತ್ವ ಬಲಗೊಳ್ಳದು. ಪ್ರಜಾಪ್ರಭುತ್ವದ ಭಾವನೆಯು ಹೊರಗಿನಿಂದ ಹೇರಲ್ಪಡುವದಲ್ಲ, ಅದು ಆತ್ಮದಿಂದಲೇ ಹೊರಹೊಮ್ಮಬೇಕಾದ್ದು.

ಪ್ರಜಾಪ್ರಭುತ್ವದ ಜೀವಾಳವೆಂದರೆ ರಾಷ್ಟ್ರದ ಪ್ರತಿ ಅಭಿಪ್ರಾಯದ ಹಾಗೂ ಪ್ರತಿ ಸಂಘದ ವ್ಯಕ್ತಿಯೂ ಕೂಡ ರಾಷ್ಟ್ರದ ಉನ್ನತಿಗೆ ಅಗತ್ಯನೆಂಬುದು. ಆ ಪಕ್ಷ, ಈ ಸಂಘವೆಂದು ಭಿನ್ನತೆ ತೋರುವ ಸರಕಾರ ಪ್ರಜಾಪ್ರಭುತ್ವವೆನಿಸದು.

ಜನತೆಯು ರಾಜಕೀಯ ಅಧಿಕಾರ ಪಡೆದಾಗ ಜನತೆಯ ಸ್ವಾತಂತ್ರ್ಯಕ್ಕೆ ಕೈ ಹಾಕುವ ಪ್ರವೃತ್ತಿಯು ಕಡಿಮೆಯಾಗಬೇಕು. ಅರ್ಥಾತ್ ಯೋಗ್ಯ, ಜನಹಿತ, ಹಾಗೂ ದಕ್ಷ ಸರಕಾರವು ಸಹಜವಾಗಿಯೂ ಜನತೆಯು ದೈನಂದಿನ ಜೀವನದೊಳಗೆ ಪ್ರವೇಶಿಸದು. ಎಲ್ಲಿ ಅಂಥಾ ಸುಗಮ ಸರಕಾರವಿಲ್ಲವೋ ಅಲ್ಲಿ ಪ್ರಜಾಪ್ರಭುತ್ವದ ಮಾತು ಕೇವಲ ಸೋಗು.

ನಾನು ನಿಜವಾದ ಪ್ರಜಾಪ್ರಭುತ್ವವಾದಿ ಎನ್ನುವವಾದರೆ ಬಡವರೊಡನೆ ಗುಳಿತನಾಗಲು, ಅವರಂತೆ ಜೀವಿಸಲು, ಅವರಿಗೆ ದೊರೆಯದ ಸುಖವನ್ನು ತ್ಯಜಿಸಲು ತಯಾರಿರಬೇಕು. ಅಂದಿನ ನಾನು ಎತ್ತರ ಮಟ್ಟದಲ್ಲಿ ನಿಂತು ಪ್ರಜಾಪ್ರಭುತ್ವವಾದಿ ಎಂದರೆ ಅದು ಅರ್ಥವಿಲ್ಲದ ಮಾತು.

ಯಾವನು ಪೂರ್ಣ ಅಹಿಂಸಾವಾದಿಯೋ ತನ್ನ ಸ್ವಾತಂತ್ರ್ಯದ ರಕ್ಷಣೆಯನ್ನು ಅಹಿಂಸಾ ಮಾರ್ಗದಿಂದ ಮಾಡುವನೋ, ತನ್ನ ರಾಷ್ಟ್ರದ, ಜಗತ್ತಿನ ಹಿತಕ್ಕಾಗಿ ಅಹಿಂಸಾ ಮಾರ್ಗದಿಂದ ದುಡಿಯುತ್ತಾನೋ ಆತನೇ ನಿಜವಾದ ಪ್ರಜಾಪ್ರಭುತ್ವವಾದಿಯು ಏಕೆಂದರೆ ಹಿಂಸೆ ಇರುವಲ್ಲಿ ಪ್ರಜಾಪ್ರಭುತ್ವವಿರಲಾರದು.

ಪ್ರಜಾಪ್ರಭುತ್ವ ಪದ್ಧತಿಯೆಂದರೆ ಕುರಿಗಳ ಹಿಂಡಂತಲ್ಲ. ಒಂದು ಕುರಿ ಒಡಿದ ಕಡೆ ಎಲ್ಲವೂ ನುಗ್ಗುವಂತಾದರೆ ಅದು ಪ್ರಜಾಪ್ರಭುತ್ವವಲ್ಲ. ಪ್ರಜಾಪ್ರಭುತ್ವದಲ್ಲಿ ವ್ಯಕ್ತಿಗತ ಅಭಿಪ್ರಾಯ ಮತ್ತು ಸ್ವಾತಂತ್ರ್ಯಕ್ಕೆ ಹೆಚ್ಚಿನ ಗೌರವ ಸಲ್ಲಬೇಕು. ಅದ್ದರಿಂದ ಬಹುಮತವಿದೆಯೆಂದು ಅಲ್ಪ ಪಕ್ಷೀಯರನ್ನು ಕಡೆಗಣಿಸಿ ಅವರ ಅಭಿಪ್ರಾಯಕ್ಕೆ ಕಿವಿಗೊಡದೆ ವರ್ತಿಸುವದು ಪ್ರಜಾಪ್ರಭುತ್ವವಾಗಲಾರದು. ವ್ಯಕ್ತಿಗಳು ತಮ್ಮ ಅಭಿಪ್ರಾಯವನ್ನು ಆಳುವ ತವಸರ ಯಾ ಆಳುವವರ ಕೃಪೆ ಯಾ ಸಂತೋಷಕ್ಕಾಗಿ ಬಲಿ ಕೊಡುವವರಾದರೆ ಸ್ವರಾಜ್ಯ ಶಬ್ದಕ್ಕೆ ಅರ್ಥವಿರಲಾರದು.

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರವರು ಯುಕ್ತರಾಷ್ಟ್ರ ಸಂಘದ ಅಧ್ಯಕ್ಷರು

ಯುಕ್ತರಾಷ್ಟ್ರ ಎಸೆಂಬ್ಲಿ ಅಧ್ಯಕ್ಷ ಆಯ್ಕೆಯ ಫಲಿತಾಂಶವು ಪ್ರಕಟವಾಯಿತು ಎಲ್ಲರೂ ನಿರೀಕ್ಷಿಸಿದಂತೆ ಭಾರತದ ಪ್ರತಿನಿಧಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಆ ಸ್ಥಾನಕ್ಕೆ ಬಹುಮತದಿಂದ ಆರಿಸಲ್ಪಟ್ಟರು. ಥೈಲೇಂಡಿನ ಪ್ರಿನ್ಸ್‌ವಾನ್ ಒಬ್ಬರೇ ವಿಜಯಲಕ್ಷ್ಮಿ ಪಂಡಿತರಿಗೆ ಪ್ರತಿಸ್ಪರ್ಧಿಯಾಗಿದ್ದರು. ಮತದಾನ ಕಾಲದಲ್ಲಿ ಹಾಜರಿದ್ದ ೫೯ ರಾಷ್ಟ್ರಗಳಲ್ಲಿ ೩೭ ರಾಷ್ಟ್ರಗಳು ವಿಜಯಲಕ್ಷ್ಮಿ ಪಂಡಿತರ ಪರವಾಗಿಯೂ, ೨೨ ರಾಷ್ಟ್ರಗಳು ಥೈಲಾಂಡಿನ ರಾಜಕುಮಾರ ವಾನ್‌ರವರ ಪರವಾಗಿಯೂ ಮತಗಳನ್ನು ಕೊಟ್ಟರು.

ಜಾಗತಿಕ ಮಹಾ ಸಂಸ್ಥೆಯಾದ ಯುಕ್ತರಾಷ್ಟ್ರ ಸಂಘದ ಜನರಲ್ ಎಸೆಂಬ್ಲಿಗೆ ಮಹಿಳೆಯೊಬ್ಬರು ಅಧ್ಯಕ್ಷೆಯಾಗಿ ಆರಿಸಲ್ಪಡುವ ದಾಖಲೆ ಇದು ಮೊದಲನೆಯದು. "ಮತದಾನ ಮಾಡಿದ ರಾಷ್ಟ್ರಗಳು ತೋರಿಸಿದ ಈ ಸಹಾನುಭೂತಿ ಭಾರತಕ್ಕೆ ಅರ್ಪಿಸಿದ ಗೌರವ" ಎಂಬುದಾಗಿ ಶ್ರೀಮತಿ ವಿಜಯಲಕ್ಷ್ಮಿಯವರು ಹೇಳಿರುವರು. ಭಾರತ ದೇಶದ ಸ್ವಾತಂತ್ರ್ಯ ಯುದ್ಧ ಕುಂಡದಲ್ಲಿ ಅಸಾಮಾನ್ಯ ತ್ಯಾಗಗಳನ್ನೆಸಗಿ ಪುನೀತವಾದ ನೆಹರೂ ಮನೆತನಕ್ಕೆ ಈ ಚುನಾವಣೆಯ ಘಟನೆ ಮತ್ತೊಂದು ಕಳಸವಿಟ್ಟಿತು. ಹೊಸ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸಲು ಪರಮಾತ್ಮನು ವಿಜಯಲಕ್ಷ್ಮಿಗೆ ಸರ್ವ ಶಕ್ತಿ ಕೊಟ್ಟು ಹರಸಲೆಂದು ಭಾರತೀಯರ ಒಕ್ಕೊರಲ ಪ್ರಾರ್ಥನೆ. 'ಪ್ರ'

ಪತ್ರಿಕಾ ಪ್ರತಿನಿಧಿಗಳ ಅಧ್ಯಕ್ಷರು.

ಸಂಯುಕ್ತ ರಾಷ್ಟ್ರಗಳ ಸಭೆಯಲ್ಲಿ ಪತ್ರಿಕಾ ಪ್ರತಿನಿಧಿಗಳು ತಮ್ಮ ಸಂಘದ ಅಧ್ಯಕ್ಷ ಸ್ಥಾನಕ್ಕೆ ಭಾರತೀಯರೊಬ್ಬರನ್ನು ಅಧ್ಯಕ್ಷರಾಗಿ ಆರಿಸಿದರು. ಇವರ ಹೆಸರು ಶ್ರೀ ಕೃಷ್ಣಬಲರಾಮನ್. ಇವರು ಮದರಾಸಿನ ಹಿಂದೂ ಪತ್ರಿಕೆಯ ಪ್ರತಿನಿಧಿಗಳು

ನಿಮಗೆ ತಿಳಿದಿದೆಯೋ ?

೧೯೫೨–೫೩ ರಲ್ಲಿ ಭಾರತವು ಆಮದು ಮಾಡಿದ ರೂ ೬೩೮ ಕೋಟಿ ಮೌಲ್ಯದ ವಸ್ತುಗಳಲ್ಲಿ ಶೇ. ೨೭ ರಷ್ಟು ಅಮೇರಿಕದ ಸಂಯುಕ್ತ ಸಂಸ್ಥಾನದಿಂದ ಆಮದು ಮಾಡಲಾಗಿದ.

ಕಳೆದ ಮೂರು ವರ್ಷಗಳಿಂದ ಪ್ರತಿ ತಿಂಗಳಿಗೆ ಸರಾಸರಿ ೧೬ ರಂತೆ ಹೊಸ ರೈಲ್ವೆ ಇಂಜಿನುಗಳನ್ನು ಭಾರತದ ರೈಲ್ವೆಗಾಗಿ ಕೊಂಡುಕೊಳ್ಳಲಾಗುತ್ತಿದೆ. ಇವುಗಳಲ್ಲಿ ಪ್ರತಿ ಮೂರು ಭಾರತದಲ್ಲೇ ತಯಾರಾದವುಗಳು.

ಭಾರತವು ವರ್ಷಕ್ಕೆ ೩೫ ಲಕ್ಷ ಟನ್‌ಗಳಷ್ಟು ಪೆಟ್ರೋಲ್ ಹಾಗೂ ತಜ್ಜನ್ಯ ವಸ್ತುಗಳನ್ನು ಉಪಯೋಗಿಸುತ್ತಿದೆ.

ಆದಾಯ ತೆರಿಗೆಯಿಂದ ತಪ್ಪಿಸಿಕೊಂಡ ಗುಪ್ತ ಆದಾಯದ ಶೋಧನೆಗಾಗಿ ಕೇಂದ್ರ ಸರಕಾರವು ಒಂದು ನಿಯೋಗವನ್ನು ನೇಮಿಸಿದೆಯಷ್ಟೆ. ಈ ನಿಯೋಗವು ಕಂಡು ಹಿಡಿದ ಓರ್ವ ವ್ಯಕ್ತಿಯ ಗುಪ್ತ ಸಂಚಯ ರೂ. ೧೭ ಲಕ್ಷಕ್ಕೂ ಮಿಕ್ಕಿತ್ತು. ಶೋಧನೆಯಾದ ವೈಯಕ್ತಿಕ ಗುಪ್ತ ಸಂಚಯದಲ್ಲಿ ಇದೇ ಅತ್ಯಂತ ಹಿರಿದಾದುದು.

ನಾಪ್ಪೋಕ್ಲಿಗೆ "ಕೊಡಗು" ಪತ್ರಿಕೆಯ ಏಜೆಂಟರು ಸಹಕಾರಿ ಸ್ಟೋರ್ಸ್ ಮೇನೇಜರ್.

ಸರ್ವರ ತಿಳುವಳಿಕೆ ಬಗ್ಗೆ

ಪೊನ್ನಂಪೇಟೆ ನಾಡು ಅರುವತ್ತೊಕ್ಲಿಗೆ ಸೇರಿದ ಮುಗುಟಗೇರಿ ಗ್ರಾಮದ ಪಣಿಕರ ತಿಮ್ಮಯ್ಯನವರ ಮಗ ಕುಶಾಲಪ್ಪನು ಈ ಮೂಲಕ ಪ್ರಕಟಿಸುವುದೇನೆಂದರೆ.

ನಮ್ಮ ಕುಟುಂಬದ ಮನೆಯ ಹೆಸರನ್ನು ಪಣಿಕರ ಎಂಬುವದ ಬದಲು ನಮ್ಮ ಜಮೀನಿನ ಹೆಸರಾದ "ದೇವಮಕ್ಕಡ" ಎಂಬದಾಗಿ ಬದಲಾಯಿಸಲಾಗಿದೆ. ಇನ್ನು ಮುಂದಕ್ಕೆ ಲಿಕಾವಟು ಪತ್ರ ವಗೈರೆಗಳಲ್ಲು ನಾವು ಕುಟುಂಬಸ್ತರು ದೇವಮಕ್ಕಡ ಎಂಬುವಾಗಿಯೇ ಬರೆಯುವೆವು. ಇದಕ್ಕೆ ಕೊಡಗಿನ ಡೆ. ಕಮಿಷನರ್ ಸಾಹೇಬರವರ ನಂ. 7493/2-6-53 ರ ಅನುಮತಿ ಇದೆ. ಈ ಸಂಗತಿಯನ್ನು ಸರ್ವರ ಜಾಹೀರಾತು ಬಗ್ಗೆ ಅರಿಕೆ ಮಾಡಿಕೊಂಡಿರುವದಾಗಿದೆ.

ಡಿ. ಟಿ. ಕುಶಾಲಪ್ಪ

22-9-53

ಕುಂಬಾರನ ಕಥೆ.

ಒಂದು ಊರಲ್ಲಿ ಒಬ್ಬ ಕುಂಬಾರನಿದ್ದನು. ಒಂದು ದಿನ ಆತನು ಎಡವಿ ಕೆಳಗೆ ಬಿದ್ದುಬಿಟ್ಟನು. ಬಿದ್ದಾಗ ಒಣಗಿದ ಗಡಿಗೆಯ ಚೂರೊಂದು ಆತನ ಹಣೆಗೆ ತಗಲಿ ದೊಡ್ಡ ಗಾಯವಾಗಿ ರಕ್ತ ತುಂಬಾ ಸುರಿಯಿತು. ಆ ಗಾಯಕ್ಕೆ ಸರಿಯಾದ ಔಷಧಿ ಕಟ್ಟಿ ಯೋಗ್ಯ ಚಿಕಿತ್ಸೆ ಮಾಡಲು ಆತನಿಗ ತಿಳಿದಿರಲಿಲ್ಲ. ಆದ್ದರಿಂದ ಗಾಯವು ಎರಡು ದಿನಗಳಲ್ಲಿ ಕೀವುಕಟ್ಟಿ ಜೋರಾಯಿತು.

ಇದಾದ ಕೆಲವೇ ದಿನಗಳಲ್ಲಿ ಆತನಿದ್ದ ಊರಿಗೆ ಬರಗಾಲ ಬಂತು. ಅನೇಕರು ಊಟಕ್ಕಿಲ್ಲದೆ, ಕುಡಿಯಲು ನೀರಿಲ್ಲದೆ ತೊಂದರೆಗೊಳಗಾದರು. ಕುಂಬಾರನು ಹಣೆಯ ಗಾಯದ ಕಾರಣ ಕೆಲಸ ಮಾಡುತ್ತಿರಲಿಲ್ಲವಾದ್ದರಿಂದ ಆತನಿಗೂ ಹೊಟ್ಟೆಗ ಅನ್ನವಿರಲಿಲ್ಲ. ಆದ್ದರಿಂದ ಆತನು ನೆರೆರಾಜ್ಯದ ಕೆಲವು ಅಂಗರಕ್ಷಕರೊಡಗೂಡಿ ನೆರೆ ರಾಜ್ಯಕ್ಕೆ ಹೋಗಿ ಅಲ್ಲಿ ರಾಜನ ಅಂಗರಕ್ಷಕನೊಬ್ಬನಾಗಿ ಸೇರಿದನು.

ಒಂದು ದಿನ ಅರಸನು ಅಂಗರಕ್ಷಕರನ್ನು ನಿರೀಕ್ಷಿಸುತ್ತಿರಲು ಈ ಕುಂಬಾರನ ಹಣೆಯಲ್ಲಿ ದೊಡ್ಡ ಗಾಯದ ಗುರುತನ್ನು ಕಂಡು "ಈ ಅಂಗರಕ್ಷಕನು ಮಹಾ ಶೂರನಿರಬೇಕು. ಶತ್ರುವಿಗೆ ಹೆದರದೆ ಎದುರಾಗಿ ನಿಂತು ಹೋರಾಡಿದ ಕಾರಣವೇ ಈತನ ಹಣೆಗೆ ಪೆಟ್ಟಾಗಿರಬೇಕು" ಎಂದು ಯೋಚಿಸಿ ಆತನಿಗೆ ಅನೇಕ ಬಹುಮಾನಗಳನ್ನು ಕೊಟ್ಟು ಉಳಿದ ಅಂಗರಕ್ಷಕರಿಗಿಂತಲೂ ಪ್ರೀತಿಯಿಂದ ನೋಡತೊಡಗಿದನು. ರಾಜನ ಈ ಪ್ರೀತಿಯನ್ನು ಕಂಡು ಕುಂಬಾರನ ಮೇಲೆ ಅನೇಕರಿಗೆ ಮತ್ಸರ ಉಂಟಾದರೂ ರಾಜನಿಗೆದುರಾಗಿ ಏನು ಹೇಳಲೂ ಧೈರ್ಯವಿರಲಿಲ್ಲ.

ಒಂದು ದಿನ ರಾಜನು ತನ್ನ ಸೈನ್ಯಗಳ ಪರಿಶೀಲನ ಮಾಡುತ್ತಿದ್ದನು. ತನ್ನ ಸೈನ್ಯದ ಆನೆ, ಕುದುರೆಗಳ ಪರಿಶೀಲನೆ ನಡಸಿದನು. ನಂತರ ಅಂಗರಕ್ಷಕ ದಳವನ್ನು ನೋಡುತ್ತಾ, ಕುಂಬಾರನನ್ನುದ್ದೇಶಿಸಿ, "ನಿನ್ನ ಹೆಸರೇನು? ನಿನ್ನ ಕುಟುಂಬ ಯಾವುದು? ಯಾವ ಯುದ್ಧದಲ್ಲಿ ನಿನಗೆ ಈ ಗಾಯವಾದುದು?" ಎಂದು ಕೇಳಿದನು.

"ಮಹಾ ಪ್ರಭೂ, ಹುಟ್ಟಿನಿಂದ ನಾನು ಕುಂಬಾರನು. ನನ್ನ ಹೆಸರು ಗಟ್ಟಿಯಪ್ಪನೆಂದು. ಈ ಗಾಯವು ಯುದ್ಧದಲ್ಲಿ ಕತ್ತಿಯಿಂದಾದುದಲ್ಲ. ನಾನು ನಾರಾಯ ಕುಡಿದು ಮತ್ತನಾಗಿದ್ದಾಗ ಕಾಲ್ತಪ್ಪಿ ಬಿದ್ದು ಮಡಿಕೆಯ ಒಣಗಿದ ಚೂರಿನಿಂದಾದ ಗಾಯವದು" ಎಂದು ಕುಂಬಾರನು ಸತ್ಯ ನುಡಿದನು.

ರಾಜನಿಗೆ ಸಿಟ್ಟು ಬಂದಿತು. "ಎಂಥಾ ತಿಳಿಗೇಡಿತನ! ನಾನು ಈ ಕುಂಬಾರನನ್ನು ಅಸಾಮಾನ್ಯ ಯೋಧನೆಂದು ತಿಳಿದು ಕೊಂಡಿದ್ದೆನಲ್ಲಾ. ಎಲ್ಲಿ, ಯಾರದು! ಈತನ ಕೈಗ ಬೇಡಿ ತೊಡಿಸಿರಿ" ಎಂದು ಆಜ್ಞಾಪಿಸಿದನು.

ಕುಂಬಾರನು ದೈನ್ಯದಿಂದ ಹಾಗೆ ಮಾಡಬಾರದೆಂದೂ ಯುದ್ಧದಲ್ಲಿ ತನ್ನ ಶೌರ್ಯವನ್ನು ಪರೀಕ್ಷಿಸಿ ತಾನು ಹೇಡಿಯಾದರೆ ಶಿಕ್ಷಿಸಬಹುದೆಂದೂ ಬೇಡಿಕೊಂಡನು. ಅರಸನು ಅದನ್ನು ಕಿವಿಗೆ ತೆಗೆದುಕೊಳ್ಳದೆ ಹೇಳಿದನು, "ಇಲ್ಲ ಸಾಧ್ಯವಿಲ್ಲ. ನಿನ್ನಲ್ಲಿ ಎಲ್ಲಾ ಗುಣಗಳೂ ಇರಬಹುದು. ನೀನು ಸುಂದರನಿರಬಹುದು, ವಿದ್ಯಾವಂತನಿರಬಹುದು, ಆದರೆ ನಿನ್ನ ಕುಟುಂಬದಲ್ಲಿ ಈ ವರೆಗೆ ಯಾರೂ ಆನೆಯನ್ನು ಕೊಂದವರಿಲ್ಲ. ಆದ್ದರಿಂದ ನೀನು ಶಿಕ್ಷಾರ್ಹನು."

ಕುಂಬಾರನು ಅದನ್ನು ಕೇಳಿ ಚಕಿತನಾಗಿ ಆನೆಯನ್ನು ಕೊಲ್ಲಬೇಕೇಕೆ ಎಂದು ಕೇಳಲು ಮುಂದಿನವಾರ ಅರಸನು ಆನೆಯನ್ನು ಕೊಲ್ಲದ ನರಿಯ ಕತೆ ಹೇಳುವನು.

ಸೂಚನೆ.

ಈ ಪುಟವನ್ನು ಹದಿನಾರು ವಯಸ್ಸಿನ ಒಳಗಿರುವ ಮಕ್ಕಳಿಗಾಗಿ ಮೀಸಲಾಗಿರಿಸಲಾಗಿದೆ. ಮಕ್ಕಳು ಚಿಕ್ಕ ಕತೆ, ಕವನ, ಹಾಸ್ಯ, ಒಗಟು ಮೊದಲಾದುವನ್ನು ಬರೆದು ಕಳುಹಿಸಬಹುದು. ಯೋಗ್ಯವಾದುವನ್ನು ಇಲ್ಲಿ ಪ್ರಕಟಿಸಲಾಗುವುದು. ಆದರೆ ಕತೆ, ಕವನ ಎಲ್ಲವೂ ಕೂಡ ಸ್ವತಃ ತಾವೇ ಬರೆದುದಿರಬೇಕು. ಹೆಚ್ಚು ಉದ್ದವಾದುವನ್ನು ಪ್ರಕಟಿಸಲಾರೆವು.

— ಸಂಪಾದಕ.

ವಿರಾಗಿಣಿ

ಕುಮಾರಿ ಪಿ ಆರ್. ರಾಜೀವಮ್ಮ, ವೀರಾಜಪೇಟೆ.

ಒಂದೆ ಅವಂತೀ ನಗರವನ್ನು ವಿಜಯವರ್ಮನೆಂಬ ರಾಜನು ಆಳುತ್ತಿದ್ದನು. ರಾಜನಾದರೋ ಕ್ಷತ್ರಿಯ ಕುಲದವನು. ಅವನಿಗೆ ಒಬ್ಬನೇ ಒಬ್ಬ ಮಗನೆಂದರೆ ಇಂದುವರ್ಮ. ಮಗನು ದೇವರ ಮೇಲೆ ಭಕ್ತಿಯುಳ್ಳವನಾಗಿದ್ದನು. ಆದ್ದರಿಂದ ತಂದೆಯಾದ ವಿಜಯವರ್ಮನು ಅರಮನೆಯಲ್ಲೇ ಒಂದು ದುರ್ಗಾದೇವಿಯ ದೇವಸ್ಥಾನವನ್ನು ಕಟ್ಟಿಸಿದನು. ಆದರೆ ಅದಕ್ಕೆ ಪೂಜೆಮಾಡಲು ತಕ್ಕ ಪೂಜಾರಿಯನ್ನು ಹುಡುಕಿ ಕೊನೆಗೆ ಹೇಗೂ ಒಳ್ಳೆಯ ಕುಲದ ಒಬ್ಬ ನಂಬಿಗಸ್ತನಾದ ಬ್ರಾಹ್ಮಣನು ದೊರೆತನು. ಅವನನ್ನು ರಾಜನು ಅರಮನೆಯಲ್ಲೇ ಇರುವಂತೆ ಏರ್ಪಡಿಸಿದನು. ಆ ಬ್ರಾಹ್ಮಣನಿಗೆ ಆತನ ಪತ್ನಿಯ ಹೊರತು ಬೇರೆ ಬಂಧು ಬಳಗದವರ್ಯಾರೂ ಇರಲಿಲ್ಲ. ಬ್ರಾಹ್ಮಣನು ದೈವ ಭಕ್ತನಾಗಿದ್ದನು. ಪ್ರತಿನಿತ್ಯವೂ ದುರ್ಗೆಯ ಪೂಜೆಯನ್ನು ಏಕಚಿತ್ತದಿಂದ ಮಾಡುತ್ತಾ ರಾಜ, ರಾಣಿ ಮತ್ತು ಅರಮನೆಯ ಇತರ ಎಲ್ಲಾ ಪ್ರಜೆಗಳ ಪ್ರೀತಿಗೆ ಪಾತ್ರನಾಗಿದ್ದನು. ರಾಜನೂ ಸಹ ಪ್ರಜಾಹಿತಚಿಂತಕನಾಗಿ ಪ್ರಜೆಗಳ ಪ್ರೀತಿಗ ಪಾತ್ರನಾಗಿದ್ದನು.

ಆ ಬ್ರಾಹ್ಮಣ ದಂಪತಿಗಳಿಗೆ ಮಕ್ಕಳಿಲ್ಲದ ಕಾರಣ ಅನೇಕ ವ್ರತಗಳನ್ನಾಚರಿಸಿ ಕೊನೆಗೆ ದೇವರ ಕೃಪೆಯಿಂದಲೋ ಎಂಬಂತೆ ಒಂದು ಹೆಣ್ಣು ಮಗುವನ್ನು ಪಡೆದರು. ಅರಮನೆಯಲ್ಲೆಲ್ಲಾ ಭಾರಿ ಸಂಭ್ರಮ. ಜನರೆಲ್ಲರಿಗೂ ಸಿಹಿ ತಿಂಡಿಯನ್ನು ಹಂಚುವ ಏರ್ಪಾಡನ್ನು ರಾಜನು ಮಾಡಿದನು. ಇನ್ನು ಮಗುವಿನ ಜಾತಕವನ್ನು ನೋಡಬೇಕೆಂದು ಬ್ರಾಹ್ಮಣನು ಆಲೋಚಿಸಿದನು. ರಾಜನು ಅರಮನೆಯಲ್ಲೇ ಇರುವ ಒಬ್ಬ ಜ್ಯೋತಿಷ್ಯನನ್ನು ಕರೆಸಿ ಜಾತಕ ನೋಡುವಂತೆ ಹೇಳಿದನು.' ಆ ಜೋಯಿಸನು ಮಗು ಹುಟ್ಟಿದ ನಕ್ಷತ್ರವನ್ನು ಪರೀಕ್ಷಿಸಿ ಹೇಳುತ್ತಾ ಕೊನೆಗೆ "ಇವಳ ವಿವಾಹವು ಕ್ಷತ್ರಿಯ ಕುಮಾರನೊಂದಿಗೆ ಆಗುವದು. ಅವರೂ ಇವಳು ಮುಂದೆ ಉನ್ನತ ಪದವಿಯನ್ನೇರುವ ಸಂಭವವಿದೆ" ಎಂದು ತಿಳಿಸಿದನು. ಇದನ್ನು ಕೇಳಿ ಎಲ್ಲರಿಗೂ ವ್ಯಸನವಾಯಿತು. "ಬಹುಕಾಲದಿಂದಲೂ ಮಕ್ಕಳಿಲ್ಲದೇ ಇದ್ದು ಈಗ ಇದೊಂದೇ ಮಗುವನ್ನು ಪಡೆದರೂ ಇದಕ್ಕೂ ದೇವರು ಈ ರೀತಿ ವಿಧಿಸಿದರೇ" ಎಂದು ಮಾತಾಪಿತೃಗಳು ಬಹು ಚಿಂತೆಯಿಂದಲೇ ಇದ್ದರು. ಮಗುವಿಗೆ 'ವಿರಾಗಿಣಿ' ಎಂದು ನಾಮಕರಣವನ್ನು ಮಾಡಿದರು. ವಿರಾಗಿಣಿಯು ದಿನದಿನಕ್ಕೆ ಶುಕ್ಲ ಪಕ್ಷದ ಚಂದ್ರನಂತೆ ಬೆಳೆದು ದೊಡ್ಡವಳಾದಳು. ಅರಮನೆಯಲ್ಲೇ ಬೆಳೆದ ವಿರಾಗಿಣಿಗೆ ತಕ್ಕ ರೀತಿಯ ವಿದ್ಯಾಭ್ಯಾಸವೂ ಆಯಿತು. ಹೆಸರಿಗೆ ತಕ್ಕಂತೆ ವಿರಾಗಿಣಿಯು ಸೌಂದರ್ಯವತಿಯೂ, ಸಕಲ ವಿದ್ಯಾ ಪಾರಂಗತಳೂ, ಅಪ್ಪಟ ದೈವ ಭಕ್ತೆಯೂ ಆದಳು.

ಹೀಗಿರುತ್ತಾ ವಿರಾಗಿಣಿಯು ಮದುವೆಗೆ ಪ್ರಾಪ್ತ ವಯಸ್ಕಳಾದಳು. ತಾಯಿ ತಂದೆಯರು ಇದಕ್ಕಾಗಿ ಅಹೋರಾತ್ರಿ ನಿದ್ರೆಯಿಲ್ಲದೆ ಯೋಚನಾಮಗ್ನರಾಗಿದ್ದರು. ಕೊನೆಗೆ ಅವರಿಗೆ ಈ ಯೋಚನೆ ಹೊಳೆಯಿತು. "ಊರಲ್ಲಿರುವ ಎಲ್ಲಾ ಬ್ರಾಹ್ಮಣ ಕುಮಾರರನ್ನು ಮಾತ್ರ ಅರಮನೆಗೆ ಸ್ವಯಂವರಕ್ಕೆ ಬರುವಂತೆ ಮಾಡಿ ಕ್ಷತ್ರಿಯ ಕುಮಾರರ್ಯಾರನ್ನೂ ಬಿಡಬಾರದು. ನಂತರ ವಿರಾಗಿಣಿಗೆ ಸ್ವಯಂವರವನ್ನೇ ಮಾಡಿಸಬೇಕು. ಆಗ ಅವಳಿಗೆ ಕ್ಷತ್ರಿಯ ವರನು ದೊರೆಯುವ ಸಂಭವವೇ ಇಲ್ಲ" ಎಂದು. ಕೊನೆಗೆ ಅದೇ ಸರಿಯಾಗಿ ತೋರಿತು. ಮದುವೆಯೇ ಬೇಡವೆಂದಿದ್ದ ವಿರಾಗಿಣಿಯು ದುರ್ಗಾದೇವಿಯ ಬಳಿಗ ಬಂದು ಮೊರೆ ಇಟ್ಟಳು. ಕೆಲವೇ ದಿವಸದಲ್ಲಿ ಸ್ವಯಂವರದ ದಿನ ಬಂದೇ ಬಿಟ್ಟಿತು. ಅರಮನೆಯ ರಾಜಾಂಗಣದಲ್ಲಿ ಶೋಭಿತವಾದ ಮಂಟಪವನ್ನು ಹಾಕಿ ಎಲ್ಲಾ ಬ್ರಾಹ್ಮಣ ಕುಮಾರರು ಸೇರಿದರು. ಎಲ್ಲರೂ ಗಂಭೀರತೆಯಿಂದ 'ತನ್ನನ್ನು ವರಿಸ್ಯಾಳು' ಎಂಬ ಆಶಯದ [illegible] ಆನನಗಳಲ್ಲಿ ಮೂಡಿಸಿದ್ದರು. ಬಾಗಿಲಲ್ಲಿ ಒಂದು ಕಲ್ಲಿನ ಪ್ರತಿಮೆಯು ಇಡಲ್ಪಟ್ಟಿತ್ತು.

ಇಹದ ಬಂಧನದಿಂದ ಬಿಡುಗಡೆಯಾದವನಿಗೆ ಸುಖದುಃಖಗಳ ಪರಿವೆಯಿಲ್ಲ. ಆತನ ಪ್ರಯಾಣದ ಗುರಿ ಮುಟ್ಟಿರುವದರಿಂದ ಆತನಿಗೆ ಜನನ ಮರಣಗಳೂ ಇಲ್ಲ.

ನಿನ್ನೆಗೆಂದು, ನಾಳೆಗೆಂದು ಇಡದೆ, ಈ ಜಗದ ನಶ್ವರತೆಯನ್ನರಿತು, ಜೀವಿಸಲು ಮಾತ್ರ ಬೇಕಾದಷ್ಟನ್ನು ತಿಂದು, ತಮ್ಮ ದೃಷ್ಟಿಯನ್ನು ಅನಂತ ಸುಖದೆಡೆಗೆ ಕೇಂದ್ರೀಕರಿಸಿರುವವರನ್ನು ಅನುಕರಿಸುವದು ಗಗನದಲ್ಲಿ ಹಾರಾಡುವ ಪಕ್ಷಿಯ ಪಥವನ್ನು ಅನುಸರಿಸಲೆಳಸಿದಂತೆ ಕಠಿಣ.

ಆಹಾರದ ಆಸಕ್ತಿ ಇಲ್ಲದವರಾಗಿ, ಅನಾಚಾರಗಳ ಕೋಳೆ ಮಾಡಿದವರಾಗಿ, ಈ ಜಗದ ಮಾಯೆಯನ್ನರಿತು ದೇವರಲ್ಲಿ ವಿಶ್ವಾಸವಿಡುವವರಾಗಿ ಯಾರೂ ಜೀವಿಸುವರೋ ಅವರು ಗುರಿಯನ್ನು ಮುಟ್ಟುವರು

ಪಂಚೇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡವನಿಗೆ ದೇವದೇವತೆಗಳೂ ನಮಸ್ಕರಿಸುವರು. ಅಹಂಕಾರವನ್ನು ಮರ್ದಿಸಿ ಮನವನ್ನು ಹಿಡಿತದಲ್ಲಿಟ್ಟವನು ಕಡಿವಾಣ ಹಿಡಿದ ಕುದುರೆಯು ಗುರಿಯನ್ನು ಸುಗಮವಾಗಿ ಮುಟ್ಟುವಂತೆ ಕೈವಲ್ಯವನ್ನು ಸೇರುವನು.

ಪಂಚೇಂದ್ರಿಯಗಳನ್ನು ಹಿಡಿತದಲ್ಲಿಟ್ಟವನು ಅಚಲನು. ಇಂದ್ರನ ವಜ್ರಾಯುಧದಂತೆ ಶಕ್ತಿಶಾಲಿ, ಸಮುದ್ರದಂತೆ ಕೆಸರಿನಿಂದ ನಿರ್ಲಿಪ್ತನು, ಆತನು ಜನನಮರಣಗಳಿಂದ ವಿಮುಕ್ತನು.

ಆತನ ಮನಸ್ಸು ಶಾಂತಿಯನ್ನು ಪಡೆಯುವದು. ಆತನ ಕರ್ತವ್ಯ ಕರ್ಮಗಳಲ್ಲೂ ನಡೆನುಡಿಗಳಲ್ಲೂ ಗಾಂಭೀರ್ಯತೋರುವದು ಜ್ಞಾನಿಯಾದ ಆತನಲ್ಲಿ ತೇಜಸ್ಸು ತೋರಿಬರುವದು.

ಅವನೇ ಮಾನವರಲ್ಲಿ ಮಾನವೋತ್ತಮನು. ಆತನಿಗೆ ಮೋಹನಂಬಿಕೆಯ ಗ್ರಹಣಹಿಡಿಯದು. ಆತನು ಸರ್ವದೆಸೆಗೆ ಬೆಳಕು ಚೆಲ್ಲುವ ದಿನಕರನಂತೆ!

ಅಂಥಾವರು ಜೀವಿಸುವ ಸ್ಥಳವೇ ಪವಿತ್ರ. ಅವರು ಕಾಡಿನಲ್ಲಿರಲಿ, ನಾಡಿನಲ್ಲಿರಲೀ ಅದೇ ಸ್ವರ್ಗ. ಅವರ ಒಡನಾಟವೇ ಪ್ರಾರ್ಥನೆ.

ಪಂಚೇಂದ್ರಿಯಗಳನ್ನು ಜಯಿಸಿದ ಅಂಥಾವರಿಗೆ ಕಾಡು ನಾಡಿನಂತೆ. ಲೌಕಿಕ ವ್ಯವಹಾರದ ಮನುಷ್ಯನು ತ್ಯಜಿಸಿದ್ದನು ಆತನು ತ್ಯಾಜ್ಯವೆಂದು ಭಾವಿಸನು ಆತನ ದಾರಿಯೇ ಬೇರೆ. ಆತನ ನಾಲಿಗೆ ಕಹಿಸಿಹಿ ಅರಿಯದು. ಆತನ ಮನಸು ಶೋಕ ಸಂತೋಷಗಳಲ್ಲಿ ಭೇದ ಕಾಣದು. ಆತನ ದೃಷ್ಟಿಯು ಉಚ್ಚ ನೀಚಗಳನ್ನು ಗಮನಿಸದು. ಆತನದು ಸ್ವಯಂ ಪೂರ್ಣತ್ವ ಆತನೇ ಬ್ರಹ್ಮ!

ಅದು ರಾಜ ಕನ್ಯೆಯಾದ ಇಂದುವಿನ ಸ್ವಯಂವರವೇ ಆಗಿತ್ತು. ಅದನ್ನು ಯಾರೂ ಗಣನೆಗೆ ತಾರಲೇ ಇಲ್ಲ. ಏಕೆಂದರೆ ಅದು ನೋಡಲು ಒಂದು ಆಕೃತಿಯಂತೆ ಇತ್ತೇ ವಿನಹ ಇಂದುವಿನ ಸ್ವಯಂವರವೆಂದು ಕೇಳಿ ತಿಳಿದುಕೊಳ್ಳಬೇಕಷ್ಟೆ! ಈ ರಾಜ್ಯಾಂಗಣದ ಅತಿಥಿ ಸತ್ಕಾರಕ್ಕೆಲ್ಲಾ ಇಂದುವಿನ ಸ್ವಯಂವರವೇ ಮುಂದಾಳಾಗಿದ್ದನು. ಹಾಗೆಯೇ ರಾಜಕುಮಾರನು ಹೇಳಬೇಕಾದುದನ್ನು ಸಭೆಯ ಮುಂದೆ ಹೇಳಿ ತಾನು ಅಲ್ಲಿಂದ ಒಳಗೆ ಹೋದನು. ಸ್ವಯಂವರವೇ ಬೇಡವೆಂದಿದ್ದ ವಿರಾಗಿಣಿಯು ಕೈಯಲ್ಲಿ ಮಾಲಿಕೆ ದಂಡೆಯನ್ನು ಹಿಡಿದು ನೆರೆದಿದ್ದ ಎಲ್ಲಾ ಪುರುಷರ ಬಳಿಗೆ ಬಂದಳು. ಮನಸ್ಸು ಯಾರನ್ನೂ ಒಪ್ಪದು. ಅವರೇನು ಮಾಡುವದು ಕಲ್ಲಾಜ್ಞೆಯೇ ಸರಿ ಎಂದು ಕೊಂಚ ಯೋಚಿಸಿದಳು. ತಟ್ಟನೆ ಹೋಗಿ ದೇವರೇಗತಿ ಎಂದು ಬಾಗಿಲಿನಲ್ಲಿದ್ದ ಕಲ್ಲಿನ ಮೂರ್ತಿಯ ಕೊರಳಿಗೆ ಮಾಲೆಯನ್ನು ಹಾಕಿದಳು. ಸಭಿಕರೆಲ್ಲರಿಗೂ ಆಶಾಭಂಗವಾದುದಲ್ಲದೆ ಆಶ್ಚರ್ಯವಾಯಿತು. ಅವಳು ಮಾಲೆಯನ್ನು ಹಾಕಿದಾಕ್ಷಣ ರಾಜಕುಮಾರನು ಬಂದು ಅವಳನ್ನು ಆಲಿಂಗಿಸಿಕೊಂಡನು. ತಕ್ಷಣ ಪುಷ್ಪವೃಷ್ಟಿಯಾಯಿತು. ಈ ಪುಷ್ಪವೃಷ್ಟಿಯ ಸಮಯದಲ್ಲಿ "ವಿರಾಗಿಣೀ! ದೈವನಿರ್ಣಯವನ್ನು ಮೀರಲು ಅಸಾಧ್ಯ" ಎಂಬ ಅಶರೀರವಾಣಿಯು ಇಬ್ಬರಿಗೂ ಕೇಳಿಸಿತು.

ಹುಚ್ಚರ ಹಟ್ಟಿ

ಎನ್ನಾಕೆ !

ದೊಡ್ಡವರ ಹೆಣ್ಣೆಂದು ಘನಪಟ್ಟ ಮಣ್ಣೆಂದು
"ವೆಡ್ಡಿಂಗ್" ಆದೊಡದು ಸುಖವಾಗಲಿಲ್ಲ!
ಪೋಣ್‌ವಿದ್ವನ್ಮಣಿಯೆಂದು ಸೌಂದರ್ಯಗಣಿಯೆಂದು
"ಎಡ್ಮೈರ್" ಮಾಡಿದುದು ಹಿತಕಾರಿಯಲ್ಲ!
ಕಾಯಕಕೆ ಆಳಿಲ್ಲ ರೊಕ್ಕ ಬೊಕ್ಕಸಕಿಲ್ಲ
"ಕುಕ್" ಮಾಡಲೆನಗೆ ತಿಳಿಯುವದೆ ಇಲ್ಲ!
ಅತ್ತೆ ಮಾವರಿಗೆಲ್ಲ ಪರಿಚಾರಿಕೇನಲ್ಲ
"ಲೈಫ್" ಎಲ್ಲ ದುಡಿಯಲೆನಗಾಗುವದೇ ಇಲ್ಲ!
ಸ್ನೋ ಪೌಡರ್ ಕ್ರೀಮಿಲ್ಲ, ತುಟಿಗೆಂಪು ಸೆಂಟಿಲ್ಲ
"ಜ್ವೆಲ್ಸ್"ಗಳ ಅಯ್ಯಯ್ಯೋ ಮೊದಲೇ ಇಲ್ಲ!
ಸಿಲ್ಕು ಸೀರೆಗಳಿಲ್ಲ ಭೋಗಭಾಗ್ಯಗಳಿಲ್ಲ
"ಬೋಗಸ್" ಬದುಕಿದೆಂದೊರೆಯುತಿಹಳೆಲ್ಲ!
ಸಂಸಾರ ಸುಖವಿಲ್ಲ ಸಂತಾನಬೇಕಿಲ್ಲ
'ಬ್ಯೂಟಿ'ಯಿದನೆಂದೂ ನಾ ತೊರೆವಳಲ್ಲ!
ಕಷ್ಟಗಳ ಪರಿವಿಲ್ಲ ಬವಣೆಗಳ ಅರಿವಿಲ್ಲ
ಎಂದೆಂಬ "ನಾನ್ಸೆನ್ಸ್" ಎನ್ನಾಕೆಗಲ್ಲಾ!
ಸ್ವಾತಂತ್ರ್ಯ ಭಾರತದ ತರುಣಿ ತರುಣರಿಗೆಲ್ಲ
"ಮೋಡರ್ನ್" ವಿದ್ಯೆಯಿದು ಫಲಕಾರಿಯಲ್ಲ!
ಪಾಶ್ಚಾತ್ಯ ನಾಗರಿಕ ಬರಡು ರೋಗವಿದೆಲ್ಲ
"ಕ್ಯೂರ್" ಆಗುವದೆಂದೊ ಭಗವಂತ ಬಲ್ಲ!

ಲೇಖಕ:— "ಸಮೀರ ಕುಮಾರ"

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ ..	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಲೆಕ್ಕ (Current Deposits)	ರೂ.	0-8-0
ಸೇವಿಂಗ್ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ವರ್ತಮಾನವನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಟಿ. ಅಪ್ಪಯ್ಯ, ಪ್ರೆಸಿಡೆಂಟ್ & ಖಜಾನ್ಚಿ.

ರುದ್ರ ಪ್ರಯಾಗದ ನರಭಕ್ಷಕ

— ಮೂಲ ಲೇಖಕ:— ಜಿಮ್ ಕಾರ್‌ಬೆಟ್ —

ಅನುವಾದಿಸಿದವ—ಶ್ರೀ ಕೆ. ಜೆ. ಬೋಪಯ್ಯ

ಭೀತಿ ಎಂಬ ಶಬ್ದವು ನಮ್ಮ ಯಾವತ್ತೂ ಜೀವನದಲ್ಲಿ ಉಪಯೋಗಿಸುವ ಶಬ್ದಗಳಲ್ಲೊಂದಾಗಿರುವುದರಿಂದ ಅದರ ನಿಜಾರ್ಥವು ನಮ್ಮ ಮನಸ್ಸಿಗೆ ಹಿಡಿಸದು. ಆದರೆ, ಗರವಾಲದ ೫೦೦ ಮೈಲಿ ಚದರಳತೆಯಲ್ಲಿ ವಾಸಿಸುತಿದ್ದ ೫೦,೦೦೦ ನಿವಾಸಿಗಳಿಗೂ, ೧೯೧೮ ರಿಂದ ೧೯೨೬ ರ ವರೆಗೆ ಆ ಮಾರ್ಗವಾಗಿ ಪ್ರಯಾಣಮಾಡಿದ ೬೦,೦೦೦ ತೀರ್ಥಯಾತ್ರಿಕರಿಗೂ ರುದ್ರಪ್ರಯಾಗದ ನರಭಕ್ಷಕನು ಉಂಟುಮಾಡಿದ ಭೀತಿಯು—'ಭೀತಿ' ಎಂದರೆ ಏನು, ಎಂಬ ಪರಿವೆಯನ್ನುಂಟುಮಾಡಿತ್ತು.

ದಿನವಿಡೀ ಸೂರ್ಯನ ಬೆಳಕಿರುವ ವರೆವಿಗೂ, ಗರವಾಲದಲ್ಲಿ ಯಾವತ್ತೂ ಸಂತೆ, ಕಾರ್ಯಕಲಾಪಗಳು ನಡೆಯುತ್ತಿದ್ದವು. ಜನರು ಪೇಟೆಗಳಿಗೂ, ನೆಂಟರಿಷ್ಟರಲ್ಲಿಗೂ, ಹೆಂಗಸರು ಗುಡ್ಡ ಬೆಟ್ಟಗಳಿಗೆ ಹುಲ್ಲು ತರಲೂ, ಸಣ್ಣ ಹುಡುಗರು ಶಾಲೆಗಳಿಗೂ, ಮತ್ತು ಆಡುಗಳನ್ನು ಮೇಯಿಸಲೂ ಹೋಗುತ್ತಿದ್ದರು. ಬೇಸಿಗೆಯಲ್ಲಿ ತಂಡ ತಂಡವಾಗಿ ಯಾತ್ರಿಕರೂ ಸಂಚರಿಸುತಿದ್ದರು. ಆದರೆ, ಯಾವಾಗ ಮುಸ್ಸಂಜೆಯ ನೆರಳು ಬೀಳುತ್ತಿತ್ತೋ, ಅಲ್ಲಿಯ ಜನರ ನಡವಳಿಕೆಯಲ್ಲೊಂದು ಬಗೆಯ ಅಪೂರ್ವ ಬದಲಾವಣೆಯಾಗುತಿತ್ತು. ಪೇಟೆಯ ಕಡೆ ಹೋದವರೂ, ಹೆಂಗಸರೂ, ಶಾಲಾ ಮಕ್ಕಳೂ, ದನ ಕಾಯುವವರೂ ಇನ್ನೂ ಹೊತ್ತಿರುವಾಗಲೇ ತಮ್ಮ ತಮ್ಮ ಮನೆಯನ್ನು ಸೇರಿಕೊಳ್ಳುತಿದ್ದರು. ರಾತ್ರಿಯಾದರೊ ಇಡೀ ಗ್ರಾಮಗಳು, ದೀಪಗಳನ್ನು ಉರಿಸದೆ, ಯಾವದೊಂದು ಬಗೆಯ ಶಬ್ದ ಮಾಡದೆ ಮರುಭೂಮಿಯಂತೆ ನಿಶಬ್ದವಾಗಿರುತಿದ್ದವು. ಇದಕ್ಕೆ ಆ ಸ್ಥಳದಲ್ಲಿ ಸಂಚರಿಸುತಿದ್ದು ಹಾನಿಯನ್ನು ಉಂಟುಮಾಡಿದ ನರಭಕ್ಷಕ ಚಿರತೆಯೇ ಕಾರಣವಾಗಿದ್ದಿತು. ಶಬ್ದ ಮಾಡಿದರೆ ಎಲ್ಲಿ ನರಭಕ್ಷಕನನ್ನು ಆಕರ್ಷಿಸುತ್ತೇವೊ ಎಂಬುದೇ ಆ ಗ್ರಾಮವಾಸಿಗಳ ಪ್ರತಿ ರಾತ್ರಿಯ ಭೀತಿಯಾಗಿತ್ತು. ಇದಕ್ಕೆ ಕಾರಣಗಳಿಲ್ಲದಿರಲಿಲ್ಲ.

ತಂದೆ ತಾಯಿಗಳಿಲ್ಲದ ೧೪ ವರ್ಷದ ತಬ್ಬಲಿಯೊಬ್ಬನು ಗ್ರಾಮದ ಯಜಮಾನನ ಕುರಿಗಳನ್ನು ಕಾಯುತಿದ್ದನು. ಇವನು ಅಸ್ಪೃಶ್ಯನೆಂದು, ಯಜಮಾನನು ಮನೆಯಲ್ಲಿ ಸ್ಥಳ ಕೊಡದೆ ಕುರಿಗಳು ಕೂಡುವ ಕೊಟ್ಟಿಗೆಯ ಮಗ್ಗುಲಲ್ಲಿಯೇ ಮಲಗಿಸಿ ಹೊರಗಿನಿಂದ ಬಾಗಿಲನ್ನು ಭದ್ರಪಡಿಸಿ, ಅದರ ಸಂಕೋಲೆಗೆ ಮರದ ಬೆಣೆಯೊಂದನ್ನು ಸಿಕ್ಕಿಸಿ, ಹೋಗುತಿದ್ದನು. ಭದ್ರತೆಗೋಸ್ಕರ, ಯಜಮಾನನು ಸಂಕೋಲೆಯನ್ನು ಸಿಕ್ಕಿಸಿದ ತರುವಾಯ, ಒಳಗಿನಿಂದ ಹುಡುಗನು ದೊಡ್ಡ ಕಲ್ಲೊಂದನ್ನು ಬಾಗಿಲಿಗೆ ಅಡ್ಡವಾಗಿರಿಸಿ ಮಲಗಿಕೊಳ್ಳುತಿದ್ದನು. ಕೃತ್ಯವು ನಡೆದ ದಿವಸವೂ ಅದೇ ರೀತಿಯ ಭದ್ರತೆಯನ್ನು ವಹಿಸಿದನೆಂಬದಕ್ಕೆ ಸಂಕೋಲೆಯನ್ನು ಕೀಳುವಾಗ ಚಿರತೆಯು ಮಾಡಿದ ಗುರುತುಗಳೇ ಸಾಕ್ಷಿಯಾಗಿದ್ದವು. ಸಂಕೋಲೆಯನ್ನು ಕಿತ್ತು, ಅಡ್ಡವಿರಿಸಿದ್ದ ಕಲ್ಲನ್ನು ನೂಕಿ, ಒಂದೇ ನೆಗೆತಕ್ಕೆ ಆಡುಗಳ ಮೇಲೆ ಹಾರಿ, ನಿದ್ರಿಸುತಿದ್ದ ಹುಡುಗನನ್ನು ಒಂದಿಷ್ಟೂ ಶಬ್ದವಿಲ್ಲದೆ ಚಿರತೆಯು ಕೊಂಡೊಯ್ದಿತ್ತು. ಮಾರಣೆ ದಿನ ತೆರೆದ ಹಟ್ಟಿಯನ್ನೂ, ಚಲ್ಲಾಪಿಲ್ಲಿಯಾಗಿದ್ದ ಕುರಿಗಳನ್ನೂ ಕಂಡ ಯಜಮಾನನು ಹುಡುಕಲು—ದೂರದ ಝರಿಯ ಹತ್ತಿರ ತಿಂದುಳಿದ ಹುಡುಗನ ಶವವು ಸಿಕ್ಕಿತು. ಕುರಿಗಳಲ್ಲೊಂದಕ್ಕಾದರೂ, ಚಿರತೆಯು ಉಗುರಿನಿಂದ ಸಹ ಪರಚಿರಲಿಲ್ಲ. ಬಾಗಿಲು ತೆಗೆಯುವ ಗಲಾಟೆ ನಡೆದಿದ್ದರೂ, ಪಾಪದ ಹುಡುಗನು ಚೆನ್ನಾಗಿ ಕಡೇ ತನಕವೂ ನಿದ್ರಿಸಿರಬೇಕು.

ನೆರೆಮನೆಯವನೊಬ್ಬನು ತನ್ನ ಗೆಳೆಯನನ್ನು 'ಹುಕ್ಕಾ' ಸೇದಲು ಆಮಂತ್ರಿಸಿದ್ದನು. ತಾರೆಗಳೂ ಚಂದ್ರನೂ ಆಗ ತಾನೆ ಮೂಡಿ, ಬೆಳದಿಂಗಳು ಬೀಳುತಿದ್ದುದರಿಂದ ಮನೆಯ ಒಳಗೆ ದೀಪ ಹಚ್ಚಿರಲಿಲ್ಲ. ಎದುರಿನ ಬಾಗಿಲು ಹಾಕಿದ್ದರೂ ಅಗುಳಿ ಹಾಕಿರಲಿಲ್ಲ. ಗೆಳೆಯರಿಬ್ಬರೂ ಮಾತುಕಥೆಗಳಲ್ಲಿ ತಲ್ಲೀನರಾಗಿದ್ದರು. ಮನೆಯವನು ತನ್ನ ಸರದಿಯ ನಂತರ ಹುಕ್ಕದ ನಳಿಗೆಯನ್ನು ಗೆಳೆಯನಿಗೆ ಕೊಡಲು, ಅದು ನೆಲದ ಮೇಲೆ ಬಿದ್ದಿತು. 'ಎಚ್ಚರಿಕೆ ಹುಕ್ಕಾ ಬೆಂಕಿಯನ್ನು ಹೀಗೆ ಕೆಡವಿದರೆ, ನಾವು ಕೂತ ಕಂಬಳಿಗೂ, ನಮ್ಮ ಬಟ್ಟೆಗಳಿಗೂ ಬೆಂಕಿ ತಗಲೀತು' ಎಂದು ಎಚ್ಚರಿಸಿ ಹುಕ್ಕದ ನಳಿಗೆಯನ್ನು ಹೆಕ್ಕಿ ಗೆಳೆಯನಿಗೆ ಕೊಡಹೋಗಲು ಗೆಳೆಯನು ಇದ್ದ ಸ್ಥಳದಲ್ಲಿರಲಿಲ್ಲ—ಬದಲು, ಚಿರತೆಯು ಆತನನ್ನು ಎತ್ತಿಕೊಂಡು ಹೆಬ್ಬಾಗಿಲನ್ನು ದಾಟುತಿತ್ತು. ಕೆಲ ದಿನಗಳ ನಂತರ ಈ ಸಂಗತಿಯನ್ನು ನನಗೆ ನಿರೂಪಿಸುತ್ತಾ, 'ಸಾಹೇಬರೇ ನನ್ನ ಹತ್ತಿರವಿದ್ದ ಗೆಳೆಯನನ್ನು ಚಿರತೆಯು ಕೊಂದು ಹೊತ್ತುಕೊಂಡು ಹೋದರೂ, ಚಿರತೆಯು ಹೆಬ್ಬಾಗಿಲು ದಾಟುವ ವರೆಗೂ, ನನಗೆ ಆ ಸಂಗತಿಯೇ ತಿಳಿಯಲಿಲ್ಲ. ನಾನು ಕಾಣುವ ಸಮಯಕ್ಕೆ ಕೈ ಮೀರಿತ್ತು. ಆದುದರಿಂದ ಚಿರತೆಯು ಆತನನ್ನು ಸ್ವಲ್ಪ ದೂರ ಕೊಂಡೊಯ್ಯುವ ವರೆಗೂ ಕಾದು, ನಂತರ ನಾನು ತಲೆ ಬಾಗಿಲನ್ನು ಒಳಗಿನಿಂದ ಭದ್ರವಾಗಿ ಇಕ್ಕಿಕೊಂಡೆನು' ಎಂದನು.

ಗ್ರಾಮದ ಪಟೇಲನ ಪತ್ನಿಯು ಹಲವು ದಿನದ ರೋಗಿಯಾದ್ದರಿಂದ, ರೋಗಿಯ ಜತೆಯಲ್ಲಿ ರಾತ್ರಿ ಮಲಗಲು ಗ್ರಾಮದ ಎರಡು ಹೆಂಗಸರು ಬರುತ್ತಿದ್ದರು. ಹೆಂಗಸರು ರೋಗಿಯ ಅಕ್ಕಪಕ್ಕದಲ್ಲಿಯೂ, ರೋಗಿಯು ಮಧ್ಯದಲ್ಲಿಯೂ ಪಟೇಲನು ಕೋಣೆಯ ಕದವನ್ನು ಇಕ್ಕಿ—ಕಿಟಕಿಯ ಹತ್ತಿರ ಮಂಚದ ಮೇಲೆಯೂ ಮಲಗಿದ್ದನು. ಕಿಟಕಿಯ ನಾಗೊಂದಿಗೆಯಲ್ಲಿ ಒಂದು ದೊಡ್ಡ ತಾಮ್ರದ ಪಾತ್ರೆಯಲ್ಲಿ ಕುಡಿಯುವ ನೀರನ್ನೂ ಸಣ್ಣಗೆ ಉರಿಯುವ ದೀಪವನ್ನೂ ಇಟ್ಟಿದ್ದರು. ಮಧ್ಯ ರಾತ್ರಿಯ ಸುಮಾರಿಗೆ, ಚಿರತೆಯು ಕಿಟಕಿಗಾಗಿ ಹಾದು ಅತೀ ಜಾಗ್ರತೆಯಿಂದ, ನೀರಿನ ಪಾತ್ರವನ್ನೂ, ದೀಪವನ್ನೂ, ತಳ್ಳದೆ ತಪ್ಪಿಸಿಕೊಂಡು, ಮಧ್ಯದಲ್ಲಿದ್ದ ರೋಗಿಯನ್ನು ಕೊಂದು, ಶವವನ್ನು ಎತ್ತಿಕೊಂಡು, ಕಿಟಕಿಗಾಗಿ ಹಾರಲು, ನೀರಿನ ಪಾತ್ರವೂ, ದೀಪವೂ ಕಳಚಿಕೊಂಡು ಬಿದ್ದು, ಮಲಗಿದವರು ಎಚ್ಚೆತ್ತು ನೋಡಲು, ಕಿಟಕಿಗಾಗಿ ಎತ್ತಿಕೊಂಡು ಹೋಗಲು ಸಾಧ್ಯವಾಗದ ಶವವು ಕಿಟಕಿಯ ಕೆಳಗೆ ಮುದುರಿಕೊಂಡು ಬಿದ್ದಿತ್ತು. ಶವದ ಕುತ್ತಿಗೆಯಲ್ಲಿ ನಾಲ್ಕು ಹಲ್ಲುಗಳು ನಾಟಿದ, ಆಳವಾದ ಗುರುತಿತ್ತು. ರೋಗಿಯ ಶಿಶ್ರೂಷೆಗಾಗಿ ಬಂದವಳಲ್ಲಿ ಒಬ್ಬಳು 'ಹ್ಯಾಗೂ ರೋಗಿಯು ಸಾಯುತಿದ್ದಳು. ಚಿರತೆಯು ನಮ್ಮನ್ನೆಲ್ಲಾ ಬಿಟ್ಟು ಅವಳನ್ನೇ ಚುನಾಯಿಸಿದ್ದು ನಮ್ಮ ಭಾಗ್ಯವೇ ಸರಿ' ಎಂದಳು.

ಇಪ್ಪತ್ತು ಜನ ಯಾತ್ರಿಕರ ತಂಡವೊಂದು, ಮುಸ್ಸಂಜೆಗೆ ಬದರೀನಾಥ್‌ಗೆ ಹೋಗುವ ಮಾರ್ಗದ ಬದಿಯಲ್ಲಿದ್ದ ಅಂಗಡಿಯೊಂದರಲ್ಲಿ ಚಹ ಪಾನಕ್ಕಾಗಿ ಇಳಿದಿದ್ದರು. ಚಿರತೆಯಿಂದ ಪಾರಾಗಲು, ಸಂಜೆಗೆ ಮೊದಲೇ ಛತ್ರವನ್ನು ಸೇರಿಕೊಳ್ಳುವಂತೆ ಅಂಗಡಿಯವನು ಯಾತ್ರಿಕರನ್ನು ಪೀಡಿಸುತ್ತಿದ್ದನು. ಯಾತ್ರಿಕರು, ಸಂಜೆ ಬಹಳವಾಯಿತೆಂದೂ, ಮುಂದೆ ಹೋಗಲು ಹೊತ್ತು ಸಾಲದೆಂದೂ, ತಾವು ಆ ದಿನದ ಮಟ್ಟಿಗೆ ಅಲ್ಲಿಯೇ ಸ್ಥಳ ಸಂಕೋಚವಾದರೂ ತಂಗುವುದಾಗಿಯೂ ವಾದಿಸುತಿದ್ದರು. ಈ ವಾದದ ನಡುವೆ ಮುತ್ರಾದಿಂದ ಬದರಿನಾಥ್ ಕಡೆಗೆ ಪ್ರಯಾಣ ಮಾಡುತ್ತಿದ್ದ ಜಟಾಜೂಟಾಧಾರಿಯಾದ ಒಬ್ಬ ಸಾಧುವು ಆ ಸ್ಥಳಕ್ಕೆ ಬಂದು, ಯಾತ್ರಿಕರ ವಾದಕ್ಕೆ ಬೆಂಬಲಕೊಟ್ಟು, ತಂಡದ ಹೆಂಗಸರೆಲ್ಲರೂ, ಒಳಗೆ ಮಲಗುವಂತೆಯೂ, ತಾವೂ ಬೇರೆ ಯಾತ್ರಿಕರೂ ಹೊರಗೆ ಮಲಗುವದೆಂದೂ, ಮಲಗಿದ ಸ್ಥಳಕ್ಕೆ ನರಭಕ್ಷಕನಾಗಲಿ, ಯಾ ಇನ್ನು ಯಾವ ಚಿರತೆಯೇ ಆಗಲಿ ಬಂದರೂ, ಅವರ ಬಾಯನ್ನು ಹಿಡಿದು ಮಧ್ಯ ಸೀಳಿಹಾಕುವದಾಗಿ ನಂಬಿಸಿದ್ದರಿಂದ ಅಂಗಡಿಯವನು ಸ್ಥಳಕೊಡಬೇಕಾಯಿತು. ರಾತ್ರಿ ಹತ್ತು ಜನರ ಮಧ್ಯದಲ್ಲಿ ತಲೆ ಬಾಗಿಲಿನ ಹತ್ತಿರ ಸಾಧುವೂ ಮಲಗಿಕೊಂಡನು. ಬೆಳಗಾಗಿ ನೋಡಲು, ಸಾಧುವು ಮಲಗಿದ ಸ್ಥಳದಲ್ಲಿರಲಿಲ್ಲ. ಅವನು ಹೊದ್ದುಕೊಂಡಿದ್ದ ಮುಸ್ಪಟ್ಟೆಯು, ಸ್ವಲ್ಪ ದೂರದಲ್ಲಿ ಬಿದ್ದಿತ್ತು. ರಕ್ತದ ಕಲೆಗಳು ಅದರಲ್ಲಿದ್ದಿತು. ಜನರ ಮಾತಿನಿಂದ ಹೊರ ಬಂದ ಅಂಗಡಿಯವನು, ಜನರನ್ನು ಸೇರಿಸಿಕೊಂಡು, ಸೂರ್ಯನ ಬೆಳಕಾಗುತ್ತಲೇ ಹುಡುಕಲು ಸ್ವಲ್ಪ ದೂರದಲ್ಲಿ, ಅರ್ಧ ತಿಂದು ಮುಗಿಸಿದ್ದ ಸಾಧುವಿನ ಶರೀರವು ಕಂಡುಬಂತು.

ಇಂತಹ ಎಷ್ಟೋ ನಿದರ್ಶನಗಳು ನನಗೆ ಕಂಡು ಬರುತಿದ್ದವು. ಪ್ರತಿಯೊಂದು ಕೊಲೆಯೂ ತನ್ನದೇ ಆದ ಒಂದು ಕಥೆಯನ್ನು ಒಳಗೊಂಡಿತ್ತು. ಆದರೆ ಗರವಾಲದ ನಿವಾಸಿಗಳ ಭೀತಿಯ ನಿಜಾರ್ಥವನ್ನು ನಿಮಗೆ ಇದರಿಂದ ಮನದಟ್ಟಾಗಿಸಿದ್ದೇನೆಂದು ನಂಬುತ್ತೇನೆ.

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು:—ವೀರಾಜಪೇಟೆ.

ಶಾಖೆ:—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟೆಗಳು
2. 12 ನೇ ನಂಬರಿನ ಒಂಟಿ ನಳವಿನ ತೋಟದ ಕೋವಿಗಳು.
3. ಒಂಟಿ ಮತ್ತು ಜೋಡಿ ನಳವಿನ ಕೇಪಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟೆಗಳು, ಕೋವಿ ಮದ್ದು ಚೆಲ್ಲು ಮತ್ತು ಕೇಪುಗಳು.
5. $\frac{5}{8}$", $\frac{1}{2}$" ಮತ್ತು $\frac{3}{8}$" ಕಬ್ಬಿಣದ ಸರಳುಗಳು
6. 2", $1\frac{1}{4}$", 1" $\frac{3}{4}$" ಮತ್ತು $\frac{1}{2}$" ಕೊಳಾಯಿಗಳು. (G. I. Peps)
7. $1\frac{3}{4}$" × $\frac{3}{16}$" ಉಕ್ಕಿನ ಪಟ್ಟಿಗಳು (Spring Steel flats).
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೈ ಮಾಡುವ ಪಂಪುಗಳು.
9. ಕೋವಿ ಮತ್ತು ಆನೆ ಮಾರ್ಕಿನ ಸಿಮೆಂಟ್ ಟನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ. ಬಿ. ಬೆಳ್ಯಪ್ಪ, (ಪ್ರೆಸಿಡೆಂಟ್)

ಪ್ರಾಕೃತಿಕ ವೈಭವ

ಕಾಶ್ಮೀರದಂತೆಯೇ ಜಪಾನು ಪ್ರಕೃತಿಯ ಹೂದೋಟ. ಇಡೀ ಜಪಾನು ದ್ವೀಪ ಸಮೂಹಗಳಿಂದ ಕೂಡಿದ ದೊಡ್ಡ ಆಕಾರದ ಕಾಶ್ಮೀರವೆನ್ನಬಹುದು. ಪ್ರತಿ ಪ್ರದೇಶಕ್ಕೂ ತನ್ನದೇ ಆದ ಸೌಂದರ್ಯವಿದೆ. ಆದರೆ ಜಪಾನಿನ ಮನೋಹರ ದೃಶ್ಯಗಳು ಆರೋಗ್ಯಧಾಮಗಳು, ಉತ್ತಮ ಕಲೆ, ಕೈಗಾರಿಕೆಗಳು, ಅಲ್ಲಿಯ ಜನರ ಸಭ್ಯತೆ ನೀತಿಗಳು ಜಪಾನನ್ನು ಜಗತ್ತಿನ ಆದರ್ಶ ಆರೋಗ್ಯಧಾಮವನ್ನಾಗಿ ಮಾಡಿದೆ. ಯಾವುದಾದರೊಂದು ಕಾಲಕ್ಕೆ ಇಡೀ ಜಗತ್ತಿಗೆ ಒಂದು ಸರಕಾರವಾದರೆ ಅಂಥಾ ಜಗತ್ತಿನ ಸರಕಾರದ ಕೇಂದ್ರವು ಜಪಾನು ಆಗಬೇಕೆಂದು ನನ್ನ ಇಚ್ಛೆ. ಈ ಸೌಭಾಗ್ಯದೊಂದಿಗೆ ಜಪಾನಿಗೆ ಗಂಡಾಂತರವೂ ಇದೆ. ಭೂಕಂಪ, ಜ್ವಾಲಾಮುಖಿಗಳು ಆಗಾಗ ಆಗುತ್ತವೆ. ಆದರೆ ಜಪಾನೀಯರು ಅದಕ್ಕಾಗಿ ಅಳುವದಿಲ್ಲ. ಆ ಕಷ್ಟದಲ್ಲೂ ಸೊಬಗನ್ನು ನೋಡಬಲ್ಲರು!

ಜಪಾನು ತನ್ನ ಹೆಚ್ಚುತ್ತಿರುವ ಜನಸಂಖ್ಯೆಗೆ ಜೀವಿಸಲು ಅನುವಾಗುವಂತೆ ರಾಜ್ಯ ವಿಸ್ತಾರದ ಪ್ರಯತ್ನ ಮಾಡಿದಷ್ಟೂ ಅದಕ್ಕೆ ಹಾನಿಕಾರಕ ಪೆಟ್ಟು ಬಿದ್ದಿದೆ. ಇಂದು ದ್ವಿತೀಯ ಯುದ್ಧದ ನಂತರ ಜಪಾನಿಗೆ ಹಿಂದಿದ್ದ ತನ್ನ ರಾಜ್ಯದ ವಿಸ್ತಾರದ ಕೇವಲ ಶೇಕಡ ೪೭ ರಷ್ಟು ಮಾತ್ರ ವಶದಲ್ಲಿದೆ. ಉಳಿದದ್ದೆಲ್ಲವೂ ಮೆಕಾರ್ಥರ ಸರಕಾರದ ಹಿಡಿತದಲ್ಲಿದೆ. ಜಪಾನು ದ್ವೀಪ ಸಮೂಹದಲ್ಲಿ ೧೦೦೦ಕ್ಕೂ ಮಿಕ್ಕಿ ದ್ವೀಪಗಳಿವೆ. ಜಪಾನು ಒಟ್ಟಾಗಿ ೧,೪೭,೦೦೦ ಚದರ ಮೈಲಿಗಳ ವಿಸ್ತಾರವಿದ್ದು ೮೦ ಮಿಲಿಯ ಜನಸಂಖ್ಯೆಯಿಂದ ಕೂಡಿದೆ. ಜಗತ್ತಿನ ಯಾವ ರಾಷ್ಟ್ರದಲ್ಲೂ ಇಷ್ಟು ಹೆಚ್ಚಿನ ಪರಿಮಾಣದ ಜನವಸತಿ ಇಲ್ಲ.

ವ್ಯವಸಾಯ

ಜಪಾನರ ಪ್ರಾಮುಖ್ಯ ಕಸುಬೆಂದರೆ ವ್ಯವಸಾಯ. ರಾಷ್ಟ್ರೀಯ ಬಂಡವಾಳದ ಶೇಕಡ ೪೦ಕ್ಕಿಂಥಾ ಹೆಚ್ಚನ್ನು ಈ ವ್ಯವಸಾಯ ಉದ್ಯಮಕ್ಕಾಗಿ ವಿನಿಯೋಗಿಸಲಾಗಿದೆ. ಜನಸಂಖ್ಯೆಯ ಶೇಕಡ ೪೭ರಷ್ಟು ಜನರು ಕೇವಲ ವ್ಯವಸಾಯದಿಂದ ಜೀವನಸಾಗಿಸುತ್ತಾರೆ. ಜಪಾನರ ವ್ಯವಸಾಯದ ವೈಶಿಷ್ಟ್ಯಗಳೆಂದರೆ (೧) ಚಿಕ್ಕ ಹಿಡುವಳಿಯ ವ್ಯವಸಾಯ (೨) ಭೂ ವ್ಯವಸಾಯ ಮಾಡುವವರಿಗೆ ಭೂಮಿಯ ಮೇಲಿರುವ ಒಡೆತನ (೩) ಆಹಾರ ಪದಾರ್ಥಗಳನ್ನೇ ಬೆಳೆಸಬೇಕೆಂಬ ನಿರ್ಬಂಧ (೪) ಬತ್ತದ ಬೆಳೆಗಿರುವ ಪ್ರಾಶಸ್ತ್ಯ ಮೊದಲಾದುವಾಗಿವೆ. ಜಪಾನಿನಲ್ಲಿ ವ್ಯವಸಾಯ ಮಾಡಲ್ಪಡುವ ಭೂವಿಸ್ತಾರವು ದೇಶದ ವಿಸ್ತಾರದ ಕೇವಲ ಶೇಕಡ ೧೭ ರಷ್ಟಾದರೂ ಶಾಸ್ತ್ರೀಯ ವ್ಯವಸಾಯದ ಕಾರಣ ದೇಶದ ಜನತೆಯ ಶೇಕಡ ೮೦ರಿಂದ ೮೫ರಷ್ಟು ಜನರಿಗೆ ಆಹಾರವನ್ನು ಒದಗಿಸುತ್ತದೆ.

ನಾವು ಜಪಾನಿನಿಂದ ಕಲಿಯಬೇಕಾದ ಪಾಠ.

ಪ್ರಗತಿಶೀಲ ಜಪಾನು

— ಲೇಖಾಂಕ—೫ —

ಮೂಲ ಲೇಖಕ:— ಚಮನಲಾಲ್

ಜಪಾನಿನಲ್ಲಿ ಒಟ್ಟು ೫,೬೯೮,೦೦೦ ವ್ಯವಸಾಯ ಹಿಡುವಳಿಗಳು ಇವೆ. ಸರಾಸರಿ ಒಂದು ಹಿಡುವಳಿಯ ವಿಸ್ತಾರ ಕೇವಲ ಎರಡುವರೆ ಎಕರೆ. ಜಪಾನಿನ ವ್ಯವಸಾಯವು ನಾವು ತಿಳಿದಂತೆ ವ್ಯವಸಾಯವಲ್ಲ; ಅದೊಂದು ತೋಟಗಾರಿಕೆ ಎನ್ನಬಹುದು. ಅವರು ಹಳೇ ಪದ್ಧತಿ ಹತ್ಯಾರುಗಳನ್ನು ಉಪಯೋಗಿಸಿದರೂ ಅಲ್ಲಿಯ ವ್ಯವಸಾಯದ ಸರಾಸರಿ ಉತ್ಪತ್ತಿಯು ಇತರ ಹಲವು ದೇಶಗಳಿಗಿಂಥಾ ಹೆಚ್ಚಾಗಿದೆ. ವರ್ಷಕ್ಕೆ ಒಂದಕ್ಕಿಂಥಾ ಹೆಚ್ಚು ಬೆಳೆ ತೆಗೆಯುವ ಪದ್ಧತಿ ಇದೆ.

ಜಪಾನಿನಲ್ಲಿ ಬತ್ತ, ಗೋಧಿ, ಬಾರ್ಲಿ, ಸಿಹಿ ಗೆಣಸು, ಬಾಲುಗೆಡ್ಡೆ ಮೊದಲಾದುವನ್ನು ಬೆಳೆಸುತ್ತಾರೆ. ವ್ಯವಸಾಯದಲ್ಲಿ ಬತ್ತದ ಬೆಳೆಗೆ ಪ್ರಾಮುಖ್ಯತೆಯಿದ್ದು ಬತ್ತ ವ್ಯವಸಾಯವಾಗುವ ಪ್ರದೇಶದ ಶೇಕಡ ೫೩ ರಷ್ಟನ್ನು ಬತ್ತದ ಬೆಳೆ ಆವರಿಸುತ್ತದೆ. ಈ ವ್ಯವಸಾಯವಾಗುವ ಭಾಗದ ಶೇಕಡ ೯೭ ರಷ್ಟು ಪ್ರದೇಶವು ನೀರಾವರಿ ಸಹಾಯ ಪಡೆದಿದೆ.

ಇದಲ್ಲದೆ ಜಪಾನಿನಲ್ಲಿ ರೇಷ್ಮೆ ಹುಳ ಸಾಕುವ ಕೈಗಾರಿಕೆ ತುಂಬ ಮುಂದುವರಿದಿದೆ. ಟೀ ವ್ಯವಸಾಯವೂ ಸಾಕಷ್ಟಿದೆ. ಜಪಾನಿನಲ್ಲಿ ಆಡು, ಕುರಿ ಮೊದಲಾದುವನ್ನು ಸಾಕುವದಕ್ಕೆ ವಿಸ್ತಾರವಾದ ಭೂಪ್ರದೇಶ ಇಲ್ಲದ್ದರಿಂದ ಆಹಾರಕ್ಕಾಗಿ ಜಾನುವಾರುಗಳ ಸಾಕುವಿಕೆಗೆ ಹೆಚ್ಚಿನ ಪ್ರಾಶಸ್ತ್ಯವಿಲ್ಲ. ಏಕೆಂದರೆ ಒಂದು ಎಕರೆ ಸ್ಥಳದಲ್ಲಿ ಈ ಜಾನುವಾರುಗಳನ್ನು ಸಾಕಿ ಪಡೆಯುವದಕ್ಕಿಂಥಾ ಹೆಚ್ಚಿನ ಉತ್ಪತ್ತಿಯನ್ನು ವ್ಯವಸಾಯದಿಂದ ಅವರು ಪಡೆಯುತ್ತಾರೆ. ಮಾಂಸಾಹಾರದಿಂದ ಆಗುವ ಕೊರತೆಯನ್ನು ತುಂಬಿಕೊಳ್ಳಲು ಅವರು ಯಥೇಚ್ಛ ಮೀನನ್ನು ಉಪಯೋಗಿಸುತ್ತಾರೆ.

ವ್ಯವಸಾಯದಲ್ಲಿ ಯಾವ ರೀತಿಯ ಪ್ರಗತಿ ಮತ್ತು ಅಭಿವೃದ್ಧಿಯನ್ನು ಮಾಡಬಹುದೆಂಬುದನ್ನು ಶೋಧಿಸಲು ಜಪಾನಿನಲ್ಲಿ ೪೨೪ ಸಂಸ್ಥೆಗಳು ಸಂಶೋಧನಾ ಕೆಲಸ ಮಾಡುತ್ತಿವೆ. ವ್ಯವಸಾಯ ಕಾಲೇಜು, ಖಾಸಗಿ ಸಂಸ್ಥೆ, ಕಾರ್ಪೋರೇಶನ್‌ಗಳು ಈ ಕೆಲಸವನ್ನು ಮಾಡುತ್ತವೆ. ಈ ಸಂಸ್ಥೆಗಳು ಬಹು ದಕ್ಷ ರೀತಿಯಿಂದ ಕೆಲಸ ಮಾಡುತ್ತಿವೆ. ಇದರ ಪರಿಣಾಮವಾಗಿ ಒಂದು ಹೆಕ್ಟರ್ ಸ್ಥಳದಲ್ಲಿ ೧೮೯೦ ರಲ್ಲಿ ಆಗುತಿದ್ದುದಕ್ಕಿಂತಲೂ ೧೯೪೦ರಲ್ಲಿ ೪೦೦ ಪಟ್ಟು ಹೆಚ್ಚು ಉತ್ಪತ್ತಿಯಾಗುತ್ತಿದೆ. ೧೭೮೦ರಲ್ಲಿದ್ದುದಕ್ಕಿಂಥಾ ೧೯೪೨ರಲ್ಲಿ ಬತ್ತದ ಬೆಳೆ ಶೇಕಡ ೭೦ರಂತೆ, ಗೋಧಿ, ೧೪೦ ರಂತೆ, ಬಾರ್ಲಿ ೧೧೯ರಂತೆ, ಹೆಚ್ಚಾಗಿದೆ.

ಮೀನುಗಾರಿಕೆ

ದ್ವಿತೀಯ ಮಹಾಯುದ್ಧಕ್ಕೆ ಮೊದಲು ಮೀನುಗಾರಿಕೆಯಲ್ಲಿ ಜಗತ್ತಿನ ಎಲ್ಲಾ ರಾಷ್ಟ್ರಗಳಿಗಿಂಥಾ ಜಪಾನು ಪ್ರಧಾನವಾಗಿತ್ತು. ಜಪಾನು ತನ್ನ ಸಮುದ್ರವಲ್ಲಿ ವರ್ಷಕ್ಕೆ ೩,೫೦೦,೦೦೦ ಮೆಟ್ರಿಕ್ ಟನ್ನುಗಳಷ್ಟು ಮೀನು ಹಿಡಿದರೆ ವಸಾಹತು ಹಾಗೂ ದೂರದ ಸಮುದ್ರಗಳಲ್ಲಿ ವರ್ಷಕ್ಕೆ ೩,೫೦೦,೦೦೦ ಟನ್ನುಗಳಷ್ಟು ಹಿಡಿಯುತ್ತದೆ. ಇಡೀ ಜಗತ್ತು ಹಿಡಿಯುವ ಒಟ್ಟು ಮೀನಿನ ನಾಲ್ಕನೇ ಒಂದು ಭಾಗವನ್ನು ಜಪಾನು ಹಿಡಿಯುತ್ತದೆ. ಜಪಾನಿನಲ್ಲಿ ಮೀನು ಹಿಡಿಯುವವರ ಸಂಖ್ಯೆ ೧,೫೦೦,೦೦೦ ರಷ್ಟಿದೆ. ಒಟ್ಟು ೩,೫೫,೦೦೦ ಮೀನುಹಿಡಿಯುವ ದೋಣಿಗಳಿವೆ. ಇವುಗಳಲ್ಲಿ ೭೫,೦೦೦ ಪವರ್ ಇಂಜಿನಿನಿಂದ ನಡೆಯುವಂಥಾವು. ಜಪಾನು ತಾನು ಹಿಡಿಯುವ ಮೀನಿನ ಬಹು ಭಾಗವನ್ನು ತಾನೇ ಉಪಯೋಗಿಸಿದರೂ ಹೊರ ರಾಷ್ಟ್ರಗಳಿಗೂ ಕಳುಹಿಸುತ್ತದೆ.

ಜಪಾನಿನಲ್ಲಿ ನೂರಾರು ಜಾತಿಯ ಮೀನುಗಳನ್ನು ಉಪಯೋಗಿಸುತ್ತಾರೆ. ಮೀನಿನಿಂದ ವಿವಿಧ ರೀತಿಯ ಭಕ್ಷ್ಯಗಳನ್ನು ಅವರು ತಯಾರಿಸುತ್ತಾರೆ. ಜಪಾನರು ಮೀನು ಸಾಕುವದನ್ನು ದೊಡ್ಡ ಉಪವೃತ್ತಿಯಾಗಿ ಕೈಕೊಂಡಿದ್ದಾರೆ. ತಾವು ಸಾಕಿದ ಮೀನಿನಿಂದ ಬರುವ ಉತ್ಪತ್ತಿಯು ದೊಡ್ಡದಿದೆ. ಮೀನುಗಾರಿಕೆಯಲ್ಲಿ ಪರಿಶೋಧನೆ ಮಾಡಿ ಈ ಕೈಗಾರಿಕೆಯನ್ನು ಉತ್ತಮಗೊಳಿಸಲು ಜಪಾನಿನಲ್ಲಿ ೧೪೩ ಪರಿಶೋಧನಾ ಕೇಂದ್ರಗಳೂ, ೩೨ ಶಾಲೆಗಳೂ, ಎರಡು ಕಾಲೇಜುಗಳೂ ಅಲ್ಲದೆ ಅವರ ವಿಶ್ವವಿದ್ಯಾಲಯಗಳಲ್ಲಿ ಪ್ರತ್ಯೇಕ ಮೂರು ಶಾಖೆಗಳೂ ಇವೆ.

ಫಾರೆಸ್ಟ್ ಉತ್ಪತ್ತಿ.

ಜಪಾನು ತನ್ನ ವಿವಿಧ ಕೈಗಾರಿಕೆಗಳಿಗೆ ಬೇಕಾದ ಮರವನ್ನು ತಾನೆ ಒದಗಿಸಿಕೊಳ್ಳುತ್ತದೆ. ಜಪಾನಿನಲ್ಲಿ ವಿವಿಧ ರೀತಿಯ ಮರಗಳಿವೆ. ಇವಲ್ಲದೆ ಬಿದಿರು ವಿಪುಲವಾಗಿದೆ. ೧೫೩ ವಿಧದ ಬಿದಿರುಗಳು ಜಪಾನಿನಲ್ಲಿವೆ. ಜಪಾನಿನ ಒಟ್ಟು ೯೨,೩೧೮,೦೦೦ ಎಕರು ಭೂವಿಸ್ತೀರ್ಣದಲ್ಲಿ ಶೇಕಡ ೫೩ ರಷ್ಟು ಅಂದರೆ ೪೯,೭೭೩,೦೦೦ ಎಕರೆ ಸ್ಥಳದಲ್ಲಿ ವ್ಯಾಪಾರಕ್ಕೆ ಯೋಗ್ಯವಾದ ಬೆಲೆ ಬಾಳುವ ಮರಗಳ ಸಂಪತ್ತಿದೆ. ಈ ಫಾರೆಸ್ಟ್ ವಿಸ್ತಾರದಲ್ಲಿ ೩,೭೫೭,೦೦೦ ಇಂಪೀರಿಯಲ್, ೧೫,೫೨೪,೦೦೦ ರಾಷ್ಟ್ರೀಯ ಮತ್ತು ೮,೭೮೦,೦೦೦ ಸಾಮೂಹಿಕ ಮತ್ತು ೨೨,೭೦೩,೦೦೦ ಖಾಸಗಿ ಹಿಡುವಳಿದಾರರ ಕೈಯಲ್ಲಿದೆ. ಈ ಫಾರೆಸ್ಟಿನಲ್ಲಿ ೩೫,೭೭೮,೦೦೦ ಎಕರೆ ಪ್ರಾಕೃತಿಕವಾಗಿ ಬೆಳೆದುದಾದರೆ ೧೭,೦೧೧,೦೦೦ ಎಕರೆ ನೆಟ್ಟು ಬೆಳೆಸಿದುದಾಗಿದೆ. ಜಪಾನಿನ ಮರದ ವಾರ್ಷಿಕ ಉತ್ಪತ್ತಿಯು ಜನಸಂಖ್ಯೆಯ ತಲಾ ೮೧೫ ಘನ ಅಡಿಗಳಷ್ಟಿದೆ. ಈ ಉತ್ಪತ್ತಿ ಪ್ರತಿ ವರ್ಷ ಏರುತ್ತಿದೆ. ಜಪಾನಿನಲ್ಲಿ ಪ್ರತಿ ವರ್ಷ ಎಕರೆಗೆ ಸರಾಸರಿ ೧೨.೫೦ ಘನ ಅಡಿ ಮರ ಉತ್ಪತ್ತಿಯಾಗುತ್ತದೆ. ಈ ಉತ್ಪತ್ತಿ ಪ್ರತಿ ವರ್ಷ ಕಡಿಮೆಯಾಗದೆ ಎಕರೆಗೆ ಸರಾಸರಿ ೩.೪ ಘನ ಅಡಿಯಂತೆ ಹೆಚ್ಚುತ್ತಿದೆ

ತನ್ನ ವನಸಂಪತ್ತನ್ನು ಹೆಚ್ಚಿಸುವ ಕಾರ್ಯದಲ್ಲಿ ಜಪಾನು ೧೯೪೭ ರಲ್ಲಿ ೫,೨೫,೦೦೦ ಎಕರೆಗಳಷ್ಟು ಸ್ಥಳದಲ್ಲಿ ಗಿಡಗಳನ್ನು ನೆಟ್ಟಿತು ಪ್ರತಿ ಎಕರೆಗೆ ೮೦೦ರಂತೆ ಗಿಡ ನೆಡುತ್ತಾರೆ. ೧೯೪೭–೫೧ ಈ ಐದು ವರ್ಷಗಳಲ್ಲಿ ಒಂಭತ್ತು ಬಿಲಿಯ ಗಿಡಗಳನ್ನು ನೆಡುವ ಯೋಜನೆ ಮಾಡಿದೆ. ಜಪಾನಿನಲ್ಲಿ ವರ್ಷಕ್ಕೆ ೧,೦೬೯,೦೦೦,೦೦೦ ಘನ ಅಡಿ ಉತ್ತಮ ಟಿಂಬರು ಕಡಿದರೆ ೨,೩೩೧,೦೦೦,೦೦೦ ಘನ ಅಡಿ ಮರವನ್ನು ಸೌದೆಗಾಗಿ ಕಡಿಯುತ್ತಾರೆ. ಅವರು ವರ್ಷಕ್ಕೆ ಸರಾಸರಿ ಬೆಳೆಸುವ ಮರದ ಪರಿಮಾಣವು ೧,೬೯೪,೦೦೦,೦೦೦ ಘನ ಅಡಿ ಇದೆ. ಅವರು ಪ್ರತಿ ವರ್ಷ ಕಡಿಯುವ ಮರದ ಅರ್ಧದಷ್ಟನ್ನು ಆಯಾಯ ವರ್ಷ ಬೆಳೆಸುವವರಿಂದಲೂ, ಬೆಳೆಸುವದರ ಜೊತೆಗೆ ಪ್ರಾಕೃತಿಕ ವನಸಂಪತ್ತು ಹೆಚ್ಚಾಗಿರುವದರಿಂದಲೂ ಅಲ್ಲಿ ಈ ನೈಸರ್ಗಿಕ ಸಂಪತ್ತಿಗೆ ಚ್ಯುತಿ ಬಂದಿಲ್ಲ.

ಜಪಾನಿನಲ್ಲಿ ಮರದ ಸದುಪಯೋಗ ಮಾಡುತ್ತಾರೆ. ಮರದ ಪ್ರತಿ ಭಾಗವನ್ನು ಒಂದಿಲ್ಲೊಂದು ಉಪಯೋಗಕ್ಕೆ ತರುತ್ತಾರೆ. ಪ್ರತಿ ವರ್ಷ ಸುಮಾರು ೨೮ ಕೋಟಿ ೯೦ ಲಕ್ಷ ಘನ ಅಡಿ ಮನೆಗಳಿಗಾಗಿ ೧೫೦,೦೦೦,೦೦೦ ಘನ ಅಡಿ ಸಾರ್ವಜನಿಕ ಕೆಲಸಗಳಿಗಾಗಿ, ೫,೩೫೦,೦೦೦ ಘನ ಅಡಿ ಪೆಟ್ಟಿಗೆ ಮೊದಲಾದ ಕೈಗಾರಿಕೆಗಳಿಗಾಗಿ, ೪,೯೦೦,೦೦೦ ಘನ ಅಡಿ ವ್ಯವಸಾಯ ಹತ್ಯಾರುಗಳಿಗಾಗಿ, ೩,೭೫೦,೦೦೦ ಘನ ಅಡಿ ಬೆಂಕಿಪೆಟ್ಟಿಗೆಗಳಿಗಾಗಿ, ೧೬೬ ಲಕ್ಷ ಘನ ಅಡಿ ಹಡಗಗಳಿಗಾಗಿ, ೧೬೩ ಲಕ್ಷ ಘನ ಅಡಿ ಮೀನು ಹಿಡಿಯುವ ನಾವೆಗಳಿಗಾಗಿ ಅಲ್ಲದೆ ಇನ್ನೂ ವಿವಿಧ ಕೈಗಾರಿಕೆಗಳಿಗಾಗಿ ಮರವನ್ನು ಸ್ವತಹ ಅವರೇ ಉಪಯೋಗಿಸುತ್ತಾರೆ.

ಇದಲ್ಲದೆ ಫಾರೆಸ್ಟಿನಿಂದ ಆಹಾರಕ್ಕೆ ಯೋಗ್ಯವಾದ ೧೦,೦೦೦ ಮೆಟ್ರಿಕ್ ಟನ್‌ಗಳಷ್ಟು ಅಣಂಬೆಯನ್ನೂ, ೩೦,೦೦೦ ಟನ್ನುಗಳಷ್ಟು ಕಳಲೆಯನ್ನೂ, ೧೦ ಸಾವಿರ ಟನ್ನುಗಳಷ್ಟು ಕಾಡು ಗೆಣಸು ಹಂಪಲುಗಳನ್ನೂ ಸಂಗ್ರಹಿಸುತ್ತಾರೆ. ಫಾರೆಸ್ಟ್ ಪ್ರಗತಿ ಮತ್ತು ಪರಿಶೋಧನೆಗಾಗಿ ದೇಶದ ವಿವಿಧ ಭಾಗಗಳಲ್ಲಿ ಅನೇಕ ಕೇಂದ್ರಗಳಿವೆ. ಸರಕಾರದ ಫಾರೆಸ್ಟ್ ಶಾಲೆಯ ಜೊತೆಗೆ ಹಲವಾರು ಖಾಸಗಿ ಕೈಗಾರಿಕಾ ಸಂಸ್ಥೆಗಳೂ ಪರಿಶೋಧನೆಯ ಏರ್ಪಾಡು ಮಾಡಿರುತ್ತಾರೆ. ಫಾರೆಸ್ಟ್ ಬೆಳವಣಿಗೆಯು ಮಾತ್ರವಲ್ಲ; ಅದಕ್ಕೆ ಸಂಬಂಧಿಸಿದ ಕೈಗಾರಿಕೆಗಳ ವಿಚಾರದಲ್ಲೂ ಪರಿಶೋಧನೆ ನಡೆಯುತ್ತಿದೆ. ಜಪಾನರು ತಮ್ಮ ಫಾರೆಸ್ಟ್‌ಗಳನ್ನು ತಮ್ಮ ತೋಟಗಳಂತೆ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಾರೆ.

Edited Printed and Published by P. I. BELLIAPPA at 'KODAGU' Press Mercara, for 'Kodagu' Ltd.,

ಕೊಡಗು

ನೃತ್ಯ ವಿಶಾರದೆ

ವಾರ್ಷಿಕ ಚಂದಾ ರೂ. ೫—೦—೦

ಸಂಪುಟ ೩೨) (ಸಂಚಿಕೆ ೧೮

ಶುಕ್ರವಾರ

೨-೧೦-೧೯೫೩

KODAGU KANNADA WEEKLY MERCARA

ಈ ವಾರದ ಕಥೆ.

ನಿರುದ್ಯೋಗಿಗೆ ನೀರೇ ಗತಿ!

—ಲೇ: ಸಮೀರ ಕುಮಾರ—

ವಸಂತಕಾಲ. ಪ್ರಕೃತಿ ದೇವಿಯು ಹಸುರುಡೆಯನ್ನುಟ್ಟು, ವಿವಿಧ ವರ್ಣರಂಜಿತ ರವಿಕೆಯನ್ನು ತೊಟ್ಟು, ಮನಮೋಹಕ ವಿಕಸಿತ ಕುಸುಮಗಳನ್ನು ಶಿರದಲ್ಲಿ ಮುಡಿದು, ತಂಬೆಲರು ತೀಡಲು ಘಮಘಮನೆ ಹಾರಾಡುವ ತನ್ನ ಸೀರೆಯ ಸೆರಗಿನ ಬೆಳಗಿನೊಡಗೂಡಿ, ಅತ್ತೊಮ್ಮೆ ಇತ್ತೊಮ್ಮೆ ಬಾಗುತ್ತಾ, ಬಳುಕುತ್ತಾ, ಸಂತೋಷದಿಂದ ನೃತ್ಯವನ್ನೆಸಗುತ್ತಿರುವಂತೆ ತೋರುತ್ತಿದೆ! ದೂರದಲ್ಲಿ ನೀಲಾಕಾಶವು ಭೂದೇವಿಯನ್ನಾಲಂಗಿಸಿರುವಲ್ಲಿ ಗೋಪಾಲಕರಾದ ಬಾಲಕರನೇಕರ ಮುರಳಿಯ ಗಾನವು ಕೇಳಿಬರುತ್ತಿದೆ! ಇತ್ತ ಆ ಕಡೆ ಕಾನನದಲ್ಲಿಯ ತರುಲತೆಗಳಲ್ಲೆಸೆಯುವ ಸುಮಸೌರಭಕ್ಕೆ ಮಾರು ಹೋಗಿ, ಅವುಗಳ ಮಧು ಮಾಧುರ್ಯವನ್ನು ಹೀರಬಯಸಿ, ಅತ್ತಿತ್ತ ಹಾರಾಡುವ ಜೇನ್ನೊಣಗಳ 'ಗುಂಯ್ ಗುಂಯ್' ನಾದವು ಹೊರಹೊಮ್ಮುತ್ತಿದೆ! ಇಲ್ಲಿ ಈ ಕಡೆ ಗಿಡ ಬಳ್ಳಿಗಳ ಎಲೆಗಳ ಮರೆಯಲ್ಲಡಗಿ, ಆಹ್ಲಾದದಿಂದೂರಿವ ಶುಕಪಿಕಾದಿ ಪಕ್ಷಿ ಸಂಕುಲದ ಗಾನದಿಂಚರವು ಗಾಳಿಯೊಡನೆ ವಿಲೀನವಾಗಿ ಮೆಲ್ಲಮೆಲ್ಲನೆ ತೇಲಿಬರುತ್ತಿದೆ! ಒಟ್ಟಿನಲ್ಲಿ ಹೇಳುವದಾದರೆ, ಇಡೀ ಜಗತ್ತೇ ಆನಂದಸಾಗರದಲ್ಲಿ ವಿಹರಿಸುತ್ತಿರುವಂತೆ ತೋರಿಬರುತ್ತಿದೆ

ಆದರೆ ಅದೋ ಅಲ್ಲಿ, ಪಕ್ಕದ ಬಯಲಿನ ಮಣ್ಣುದಿಣ್ಣೆಯೊಂದರ ಮೇಲೆ ಆಸನಾರೂಢನಾದ ತರುಣನೋರ್ವನು ವ್ಯಸನಾಕ್ರಾಂತ ವದನದೊಡಗೂಡಿ, ಏನನ್ನೋ ಚಿಂತಿಸುತ್ತಿರುವಂತೆ ತೋರುತ್ತಿದೆ! ಅವನ ನಯನಗಳಲ್ಲಿ ನೀರೂರಿ, ಹೊರಚಿಮ್ಮಿ ಹರಿಯುತ್ತಿದೆ ತಲೆಯ ಕೂದಲೆಲ್ಲವೂ ಕೆದರಿ, ಅವನ ಹಣೆಯ ಮೇಲೆ ಸರಿದು ಕಣ್ಣಾಡುತ್ತಿದೆ! ಕಾಂತಿ ಹೀನವಾದ ಅವನ ನಯನದ್ವಯಗಳು ಬಹುದೂರ, ದಿಗಂತದತ್ತ ತಮ್ಮ ದೃಷ್ಟಿಯನ್ನು ಹರಿಯಿಸಿವೆ! ನಡುಗುತ್ತಿರುವ ಕೈಗಳೆರಡು ಅವನ ವಕ್ಷಸ್ಥಳವನ್ನು ಅಡ್ಡವಾಗಿ ಆವರಿಸಿವೆ. ನೀಳವಾದ ನಿಟ್ಟುಸಿರೊಂದು ಆಗಾಗ ಅವನ ಹೃದಯದಿಂದ ಹೊರಹೊಮ್ಮುತ್ತಿದೆ

ಇದೋ ಇತ್ತ ವೃದ್ಧೆಯೋರ್ವಳು ತನ್ನಸ್ತಿತ್ವವನ್ನೇ ಅರಿಯದಂತೆ ಕುಳಿತಿರುವ ಆ ತರುಣನತ್ತ ಧಾವಿಸಿ ಬರುತ್ತಿದ್ದಾಳೆ ಕಾಲುಗಳು ಹೆಜ್ಜೆಯನ್ನಿಡುತ್ತಿದ್ದರೂ ಅವಳ ಮನೋರಥವು ಮಾತ್ರ ಏನೋ ಒಂದು ಕಾತರತೆಯಿಂದ ತಲ್ಲಣಿಸುತ್ತಿರುವಂತೆ ಭಾಸವಾಗುತ್ತಿದೆ. ಅವಳ ಮುಖದ ಕಾಂತಿಯು ಕುಂದಿದೆ, ಶರೀರವು ಕುಂದಿದೆ, ಹೃದಯವು ನೊಂದಿದೆ ಬಡತನದ ಮಹಾರೋಗ ಅವಳ ಮುಖ ಮಂಡಲದಲ್ಲಿ ತನ್ನ ಮುದ್ರೆಯನ್ನೊತ್ತಿದೆ

ಬೇಗಬೇಗನೆ ತರುಣನಿದ್ದ ತಾಣವನ್ನು ಸೇರಿ ಆ ವೃದ್ಧೆಯು "ಮಗೂ, ಕುಮಾರ, ಯಾಕಪ್ಪ ಹೀಗೆ ಏಕಾಂಗಿಯಾಗಿ ಚಿಂತಿಸುತ್ತಾ ಕುಳಿತಿರುವೆ? ಚಿಂತಿಸಿ, ಚಿಂತಿಸಿ, ನಿನ್ನ ಶರೀರವು ಪೂರಾ ಕೃಶವಾಗಿ ಹೋಗಿರುವದಲ್ಲಾ, ಮಗೂ ಭಗವಂತನು ಯಾವಾಗ ನಮಗೆ ಮಾರ್ಗದರ್ಶನವನ್ನು ಮಾಡುವನೋ ಮಗೂ. ಹೀಗೆ ಬರಿದೆ ದುಃಖಿಸುತ್ತಾ ಕುಳಿತರೆ ನಿನಗೆ ಉದ್ಯೋಗವು ದೊರಕಿದಂತಾಯಿತೇ? ಏಳು, ಮನೆಗೆ ಹೋಗುವಾ" ಎಂದು ಮಾತಿಗಾರಂಭಿಸಿದಳು

ಕುಮಾರ:— ಅಮ್ಮಾ, ನಿನ್ನ ಹೆಸರಿಗೆ ತಕ್ಕಂತೆ ನೀನು ಸೀತಾದೇವಿಯೇ ಹೌದು. ನನ್ನನ್ನು ಎರಡು ವರುಷ ಕಾಲೇಜು ಓದಿಸುವ ಸಲುವಾಗಿ ನಿನ್ನ ಆಭರಣಗಳೆಲ್ಲವನ್ನೂ ಮಾರಿ ನನಗೆ ಹಣ ಒದಗಿಸಿಕೊಟ್ಟೆ. ಉಣ್ಣಲು ಅನ್ನವಿಲ್ಲದೆ ಉಡಲು ಬಟ್ಟೆಯಿಲ್ಲದೆ ನಾನಾ ಕಷ್ಟಗಳನ್ನನುಭವಿಸಿ ನನ್ನ ವಿದ್ಯಾಭ್ಯಾಸಕ್ಕಾಗಿ ನಿನ್ನ ಜೀವನವನ್ನು ಸವೆಯಿಸಿದೆ ಇದ್ದ ಒಂದಿಷ್ಟು ಭೂಮಿ, ತೋಟಗಳೆಲ್ಲವೂ ಸಾಲಗಾರರ ಮತ್ತು ಸರಕಾರದ ಪಾಲಾಯಿತು! ಆದರೆ ಮುಂದೆ ವಿದ್ಯಾಭ್ಯಾಸವು ಮುಗಿದ ನಂತರ ಏನಾದರೂ ನೌಕರಿ ಒಂದು ಉದ್ಯೋಗವು ದೊರೆತು ಈ ಕಷ್ಟಗಳೆಲ್ಲವೂ ಪರಿಹಾರವಾಗಿ, ನಷ್ಟಗಳೆಲ್ಲವೂ ಭರ್ತಿಯಾಗಿ, ಬದುಕು ಸುಖಮಯವಾದೀತೆಂಬುದೇ ನಮ್ಮಿಬ್ಬರ ಮಹದಾಕಾಂಕ್ಷೆಯಾಗಿತ್ತು! ಆದರೆ ಅದಕ್ಕೆ ವ್ಯತಿರಿಕ್ತವಾಗಿ ಇಂದು ಆಸ್ಥೆಲ್ಲಾ ಕಷ್ಟನಷ್ಟಗಳನ್ನನುಭವಿಸಿದುದು ಸಾಲದುದಕ್ಕೆಂಬಂತೆ ಇಂದು ಪುನಃ ಉಳಲು ಭೂಮಿಯಿಲ್ಲದೆ, ಮಾಡಲು ಕೆಲಸವಿಲ್ಲದೆ, ಅಸನವಸನಗಳಿಗೆ ಗತಿಯಿಲ್ಲದ, ನಿರುದ್ಯೋಗಿಯಾಗಿ ಭೂಮಿಗೊಂದು ಭಾರವಾಗಿ ಯಾತಕ್ಕಾಗಿ ಬದುಕಬೇಕೆಂದು ಯೋಚಿಸುತ್ತಿರುವೆನು ಈ ಭಂಡಗಟ್ಟಿ ಅರ್ಥವಿಲ್ಲದ ಬದುಕನ್ನು ಬಾಳಿ ನಾವು ಈ ಜಗತ್ತಿನಲ್ಲಿ ಸಾಧಿಸುವದೇನನ್ನ?

ವೃದ್ಧೆ:— (ಕಣ್ಣೀರನ್ನೊರಸಿಕೊಳ್ಳುತ್ತಾ) ಲೋ, ಮಗೂ, ಅಂತಹ ನುಡಿಗಳನ್ನಾಡಬೇಡ ಇಂದಿನ ಕಾಲದಲ್ಲಿ ಬೇಕಾದಷ್ಟು ಬಿ. ಎ., ಎಂ. ಎ. ಓದಿದವರಿರುವಾಗ ಅವರಿಗಿಂತಲೂ ಕಡಿಮೆ ವಿದ್ಯೆಯಿರುವ ನಿನಗೆ ಅಷ್ಟು ಬೇಗ ಉದ್ಯೋಗವು ದೊರಕೀತೇ? ಸ್ವಲ್ಪ ತಡವಾದೀತು; ಅಷ್ಟೇ. ಅದಕ್ಕಾಗಿ . .

ಕುಮಾರ:— ಅಯ್ಯೋ ಅಮ್ಮಾ, ಇನ್ನೆಲ್ಲಿಯ ನೌಕರಿ ನನಗೆ! ಕಾಣಬೇಕಾದವರನ್ನೆಲ್ಲಾ ಕಂಡಾಯಿತು, ಕೇಳಬೇಕಾದವರನ್ನೆಲ್ಲಾ ಕೇಳಿಯಾಯಿತು, ಬೇಡಬೇಕಾದವರನ್ನೆಲ್ಲಾ ಬೇಡಿಯಾಯಿತು ಮತ್ತು ಮಾಡಬೇಕಾದುದನ್ನೆಲ್ಲಾ ಮಾಡಿಯಾಯಿತು! ಆದರೆ ಎಲ್ಲೆಲ್ಲಿಯೂ "ಇಲ್ಲ"ವೆಂಬ ಸೊಲ್ಲಲ್ಲದೆ ಬೇರಿಲ್ಲ! ನನ್ನಂತಹ ಬಡವನಾದವನ ವಿದ್ಯೆಯೂ ಸಹ ಬಡವೇ ಎಂದೆನಿಸುತ್ತಿದೆ ನನಗೆ! ನಿಜವನ್ನು ಹೇಳುವದಾದರೆ ಹೆಚ್ಚಿನ ವಿದ್ಯೆಗಾಗಿ ಇದ್ದ ಕಿಂಚಿತ್ ಆಸ್ತಿಯನ್ನು ಒತ್ತೆಯಿಟ್ಟು, ನಾನು ಕಾಲೇಜಿನಲ್ಲಿ ಓದಲು ಹೋದುದು ಅನುಚಿತವಾಯಿತು ನೋಡು, ನಾನು ಹಿಂದೊಮ್ಮೆ ಅಂದಿದ್ದೆ, ಈಗಿನ ಕಾಲದ ಎಂತಹ ವಿದ್ಯಾವಂತರಿಗೂ ಉದ್ಯೋಗವು ದೊರಕುವದು ಬಲುಕಷ್ಟವೆಂದು ಆ ಮಾತು ನನ್ನ ಪಾಲಿಗೆ ಸತ್ಯವಾಗಿಯೇ ಪರಿಣಮಿಸಿತು

ವೃದ್ಧೆ:— ಕುಮಾರ, ಇಂದಲ್ಲದಿದ್ದರೆ ನಾಳೆಯಾದರೂ ದೇವರು ನಮಗೆ ದಯೆ ತೋರಿಸಿಯಾನು. ನಾವೆಷ್ಟಾದರೂ ಮನುಷ್ಯ ಮಾತ್ರರು. ಭಗವಂತನೊಲವು ಒಂದು ಇಲ್ಲದಿದ್ದ ಪಕ್ಷದಲ್ಲಿ ನಾವೇನನ್ನೂ ಮಾಡಲಾರೆವು ಅದು ದೊರೆತಾಗ ಎಲ್ಲವೂ ತಾನಾಗಿಯೇ ಆಗುವದು

ಕುಮಾರ:— ಅಯ್ಯೋ ಅಮ್ಮಾ, ಇಂದಿನ ಕಾಲದಲ್ಲಿ ಆ ದೇವರೂ ಸಹ ದನಿಕರ ಬೊಕ್ಕಸವೊಳಗೆ ಬಂಧಿತನಾಗಿಹೋಗಿರುವನೋ ಎಂದೆನಿಸುತ್ತದೆ ನನಗೆ! ಇಲ್ಲವಾದರೆ ಅವನ ಭಕ್ತರಾದ ನಮಗೆ ಈ ರೀತಿಯ ಅಂತ್ಯವಿಲ್ಲದ ಕಷ್ಟ ಪರಂಪರೆಗಳು ಬಂದೊದಗುತ್ತಿದ್ದುವೇ? ಒಟ್ಟಿನಲ್ಲಿ ನನಗಿನ್ನು ಈ ನರಕ ಲೋಕದಲ್ಲಿ ನೌಕರಿ ದೊರಕುವ ಸಂಭವವೇ ಕಾಣುವದಿಲ್ಲ

ವೃದ್ಧೆ:— ಮಗೂ, ಎಷ್ಟೇ ಸಂಕಷ್ಟಗಳು ಬಂದರೂ ನಾವು ಭಗವಂತನನ್ನು ನಿಂದಿಸಬಾರದು ಮತ್ತು ಎದೆಗುಂದಲೂಬಾರದು: ಅವನ ಕೃಪೆಯು ನಮಗೆ ಎಂದು ದೊರಕುವದೋ ಅಂದು ದೊರಕಲಿ ಈಗ ಏಳು ಮನೆಗೆ ಹೋಗುವಾ" ಎಂದು ಗದ್ಗದ ಸ್ವರದಲ್ಲಿ ಸೀತಮ್ಮನು ಮಗನನ್ನು ಸಂತೈಸುತ್ತಾ, ಕೈಹಿಡಿದೆಬ್ಬಿಸಿ ಅವನನ್ನು ಮನೆಯತ್ತ ಕರೆದುಕೊಂಡು ಹೋದಳು.

ಮುಂದೆ ಒಂದು ವಾರದ ನಂತರ ಮೈಸೂರಿನಲ್ಲಿದ್ದ ಕುಮಾರನ ಓರ್ವ ಮಿತ್ರ ಶಂಕರನಿಂದ "ಇಲ್ಲಿಯ ಬಟ್ಟೆ ಗಿರಣಿಯೊಂದರಲ್ಲಿ ಗುಮಾಸ್ತ ಹುದ್ದೆಯೊಂದು ಖಾಲಿಯಿದೆ. ಸ್ವಲ್ಪ ಪ್ರಯತ್ನಿಸಿದರೆ ದೊರಕಬಹುದು, ಸಾಧ್ಯವಿದ್ದರೆ ಒಡನೆ ಹೊರಟು ಬಾ" ಎಂಬುದಾಗಿ ಅವನಿಗೊಂದು ಪತ್ರವು ಬಂದಿತು. ಅವನು ಅದನ್ನು ಸೀತಮ್ಮನಿಗೆ ಓದಿ ಹೇಳಿ, ಅವಳ ಅಪ್ಪಣೆಯನ್ನು ಪಡೆದು ಮಾರನೆಯ ದಿನವೇ ಹೊರಟು ಬಿಟ್ಟನು. ಹೊಟ್ಟೆ ಬಟ್ಟೆಯನ್ನು ಕಟ್ಟಿ ಆಪತ್ಕಾಲಕ್ಕಾಗಿ ಅತೀ ಕಷ್ಟದಿಂದ ಉಳಿಸಿಟ್ಟಿದ್ದ ಹತ್ತು ರೂಪಾಯಿಗಳನ್ನು ಸೀತಮ್ಮನು ಸಂತೋಷದಿಂದ ಮಗನ ಕೈಯಲ್ಲಿಟ್ಟು ದೇವರ ಕೋಣೆಯ ಎಣ್ಣೆ ಹಣತೆಯನ್ನು ಹೊತ್ತಿಸಿ, ನೂರಾರು ಬಾರಿ ಭಗವಂತನನ್ನು ಪ್ರಾರ್ಥಿಸಿ ಅವನನ್ನು ಹರಸಿ ಕಳುಹಿಸಿಕೊಟ್ಟಳು. 'ಈ ನಿನ್ನ ದೀನ ಭಕ್ತರನ್ನು ರಕ್ಷಿಸು" ಎಂದೆನ್ನುತ್ತಾ ಮನಸಿಲ್ಲದ ಮನಸ್ಸಿನಿಂದ ಮನೆಯ ಒಳಹೊಕ್ಕಳು.

ಕುಮಾರನು ಮೊದಲ ಬಸ್ಸಿನಲ್ಲಿಯೇ ಮೈಸೂರನ್ನು ಸೇರಿ. ತನ್ನ ಮಿತ್ರ ಶಂಕರನೊಡಗೂಡಿ, ಅವನೊಂದ ಬಟ್ಟೆ ಗಿರಣಿಯತ್ತ ಧಾವಿಸಿ, ಅಲ್ಲಿಯ ಮಾಲಿಕರನ್ನು ಕಂಡು, ತನ್ನ ಆಗಮನದ ಕಾರಣವನ್ನು ಸವಿಸ್ತಾರವಾಗಿ ವಿವರಿಸಿ, ಕೃಪೆದೋರಿ ಆ ಖಾಲಿಯಿದ್ದ ಉದ್ಯೋಗವನ್ನು ಕರುಣಿಸಿ ರಕ್ಷಿಸಬೇಕೆಂದು ದೈನ್ಯದಿಂದ ಬೇಡಿಕೊಂಡನು. ಆದರೆ ಆ ಮಾಲಿಕರು "ವೆರಿ ಸಾರಿ, ಆ ಉದ್ಯೋಗಕ್ಕೆ ನಿನ್ನೆ ತಾನೇ ಬೇರೊಬ್ಬ ಗ್ರಾಜುವೇ[illegible]ಮಿಸಿಯಾಯಿತು. ಈಗೇನೂ ಮಾಡಲು ಸಾಧ್ಯವಿಲ್ಲ" ಎಂದೊರೆದು ತಮ್ಮ ಮೋಟಾರು ಕಾರನ್ನೇರಿ ಹೋಗಿಯೇ ಬಿಟ್ಟರು ಕುಮಾರನಿಗೆ ಆಕಾಶವೇ ಕಳಚಿ ಶಿರದ ಮೇಲೆ ಬಿದ್ದಂತಾಯಿತು ಕಾದ ಕಬ್ಬಿಣದ ಕೆಂಡಗಳಿಂದ ತನ್ನನ್ನು ಸುಡುವಂತಾಯಿತು ಧ್ವಜ ಸ್ತಂಭದಂತೆ ಹಾಗೆಯೇ ನಿಂತಲ್ಲಿ ನಿಂತುಬಿಟ್ಟನು. ಅಶ್ರುಬಿಂದುಗಳೆರಡು ಹೊರಬಂದು ಕಣ್ಣಂಚಿನಲ್ಲಿ ಒಂದರೆ ನಿಮಿಷ ನಿಂದು, ಭೂಮಿಯಲ್ಲಿ ಬಿದ್ದುವು! ಆ ಹೃದಯದ್ರಾವಕ ನೋಟವನ್ನು ನೋಡಿದ ಶಂಕರನ ಹೃದಯವೂ ಬಿರಿದಂತಾಯಿತು. ಹಾಗೂ ಹೀಗೂ ಅವನನ್ನು ಸಂತೈಸುವ ಪ್ರಯತ್ನಮಾಡಿ, ಶಂಕರನು ಮೈಸೂರಿನ ಮುಖ್ಯ ಮುಖ್ಯ ಸರಕಾರಿ ಕಛೇರಿ, ಗಿರಣಿ, ಕಾರ್ಖಾನೆ—ಮುಂತಾದೆಡೆಯೆಲ್ಲಾ ಒಂದೆರಡು ದಿವಸಗಳ ವರೆಗೆ ಕುಮಾರನೊಡನೆ ಅಲೆದಾಡಿದನು. ಆದರೆ ಎಲ್ಲವೂ ನಿಷ್ಪ್ರಯೋಜನವಾಗಿಯೇ ಪರಿಣಮಿಸಿತು!

ಮೈಸೂರಿಗೆ ಬಂದ ಮೂರನೆಯ ದಿವಸ ಶಂಕರನು ಎಷ್ಟು ಬಲವಂತಪಡಿಸಿದರೂ ನಿಲ್ಲದೆ, ಕುಮಾರನು ಅವನಿಂದ ಬೀಳ್ಕೊಂಡು, ತಾನು ಮನೆಗೆ ಹಿಂತಿರುಗುವೆನೆಂದು ಹೇಳಿ ಅಲ್ಲಿಂದ ಹೊರಟುಬಿಟ್ಟನು ಮುಂದೆ ಒಂದು ವಾರದ ನಂತರ ಅಂಚೆಯವನು ಸೀತಮ್ಮನಿಗೆ ಒಂದು ರಿಜಿಸ್ಟರ್ಡ್ ಪತ್ರವನ್ನು ತಂದುಕೊ[illegible] ಅದನ್ನು ಕಂಡು ಅವಳಿಗಾದ ಆ[illegible] ಅಷ್ಟಿಷ್ಟಲ್ಲ. ಈ ಬಾರಿ ಖಂಡಿತವಾಗಿಯೂ ಕುಮಾರನಿಗೆ ನೌಕರಿಯು ದೊರೆತಿರಬಹುದೆಂದೂ, ಅವನ ಈ ವಿಜಯ ವಾರ್ತೆಯನ್ನೇ ಈ ಪತ್ರದಲ್ಲಿ ತನಗರುಹಿರಬಹುದೆಂದೂ ಬಗೆದು ಅವಳು ಹಿರಿ ಹಿರಿ ಹಿಗ್ಗಿದಳು. ತನಗೆ ಓದು ಬರಹ ಬಾರದ ಕಾರಣ, ಆ ಅಂಚೆಯವನನ್ನೇ ಆ ಪತ್ರವನ್ನು ಓದಿ ತಿಳಿಸಿಕೊಡುವಂತೆ ಕೇಳಿಕೊಂಡಳು.

ಅಯ್ಯೋ, ಹೇಳುವುದೇನು, ಅಂಚೆಯವನು ಆ ಪತ್ರವನ್ನು ಓದಿ ಮುಗಿಸುವುದರೊಳಗೆ ಗಂಟಲೊಡೆಯುವಂತೆ ಚೀರಿ, ಸೀತಮ್ಮನು ಭೂಮಿಯಲ್ಲಿ ಪ್ರಜ್ಞಾಶೂನ್ಯಳಾಗಿ ಧೊಪ್ಪನೆ ಬಿದ್ದುಬಿಟ್ಟಳು!

ಮಾರನೆಯ ಪ್ರಾತಃಕಾಲ ಮೈಸೂರು ನಗರದ ದೈನಿಕ ವೃತ್ತ ಪತ್ರಿಕೆಗಳ ಮುಖ ಪುಟಗಳಲ್ಲಿ "ಕುಕ್ಕರಹಳ್ಳಿ ಕೆರೆಯಲ್ಲಿ ಒಂದು ಶವದ ಪತ್ತೆ, ತರುಣನೋರ್ವನ ಆತ್ಮಹತ್ಯೆ" ಎಂಬುದಾಗಿ ದಪ್ಪಕ್ಷರಗಳಲ್ಲಿ ವರ್ತಮಾನವೊಂದು ಪ್ರಕಟವಾಗಿತ್ತು.

ಕೊಡಗು ಶಾಸನ ಸಭಾ ಮೀಟಿಂಗು.

ತಾರೀಕು ೨೮ರ ಬೆಳಿಗ್ಗೆ ೧೧ ಗಂಟೆಯಿಂದ ಕೊಡಗು ಶಾಸನ ಸಭೆಯ ಮೀಟಿಂಗು ಪ್ರಾರಂಭವಾಯಿತು. ಶ್ರೀ ಗುಂಡುಕುಟ್ಟಿ ಮಂಜುನಾಥಯ್ಯನವರಲ್ಲದೆ ಉಳಿದ ಎಲ್ಲಾ ಸದಸ್ಯರುಗಳೂ ಹಾಜರಿದ್ದರು. ಹನ್ನೊಂದು ಗಂಟೆಗೆ ಸರಿಯಾಗಿ ಪ್ರಶ್ನೋತ್ತರಗಳು ತೆಗೆದುಕೊಳ್ಳಲ್ಪಟ್ಟವು. ೧೧–೪೫ರ ವರೆಗೆ ಪ್ರಶ್ನೋತ್ತರಗಳು ನಡೆದು ನಂತರ ಸಭೆಯ ಮುಂದಿದ್ದ ಮಸೂದೆಗಳು ಚರ್ಚಿಸಲ್ಪಟ್ಟವು. ಮುಖ್ಯ ಮಂತ್ರಿ ಶ್ರೀ ಪೂಣಚ್ಚನವರು ಕೊಡಗು ಎಗ್ರಿಕಲ್ಚರಲ್ ಪೆಸ್ಟ್ಸ್ ಮತ್ತು ಡಿಸೀಸಸ್ ತಿದ್ದುಪಡಿ ಮಸೂದೆಯನ್ನು ಸಭೆಯ ಮುಂದಿಡುತ್ತಾ ಕೊಡಗು ಪ್ಲಾಂಟರುಗಳ ಸಂಘವು ೧೯೫೦ರಲ್ಲಿ ಇಂಡಿಯಾ ಕಾಫಿ ಬೋರ್ಡಿನವರ ನಿರ್ಣಯದಂತೆ ವ್ಯವಸಾಯಕ್ಕೆ ಬರುವ ಕ್ರಿಮಿ ರೋಗಗಳನ್ನು ತಡೆಗಟ್ಟುವ ಖಾನೂನಿನಲ್ಲಿ ತಿದ್ದುಪಡಿ ಮಾಡಿ ಆ ನಿಯಮಕ್ಕೆ ವಿರೋಧ ವರ್ತಿಸದಂತೆ ಕಠಿಣ ಶಿಕ್ಷೆಯ ಏರ್ಪಾಡು ಮಾಡಬೇಕೆಂಬ ಸೂಚನೆಯನ್ನು ಕೊಟ್ಟ ಮೇರೆ ಆ ಪ್ರಕಾರ ಈ ತಿದ್ದುಪಡಿ ಮಸೂದೆಯನ್ನು ತಂದದ್ದಾಗಿದೆಯೆಂದು ಹೇಳಿದರು. ಮಸೂದೆಯು ಸರ್ವಾನುಮತದಿಂದ ಪಾಸಾಯಿತು.

ಕೊಡಗು ಜಿಲ್ಲಾಬೋರ್ಡನ್ನು ರದ್ದುಗೊಳಿಸಿದ ಕಾರಣ ಕೊಡಗು ಡಿಸ್ಟ್ರಿಕ್ಟ್ ಫಂಡ್ ರೆಗ್ಯುಲೇಶನಿನ ಮೇರೆ ವಸೂಲ್ಮಾಡುತಿದ್ದ ಸೆಸ್ ಮತ್ತು ಇತರ ಕಂದಾಯಗಳನ್ನು ಸರಕಾರವು ವಸೂಲ್ಮಾಡುವ ಅನುವಾಗುವಂತೆ ಕೊಡಗು ಲೇಂಡ್ ಸೆಸ್ ಮತ್ತು ಟೇಕ್ಸಸ್ ಬಿಲ್ಲನ್ನು ಗೃಹಮಂತ್ರಿ ಶ್ರೀ ಮಲ್ಲಪ್ಪನವರು ಮುಂದಿಟ್ಟರು. ಈ ವಿಚಾರ ಶ್ರೀ ಕೆ. ಪಿ. ಕರುಂಬಯ್ಯನವರು ಒಂದು ಸೂಚನೆಯನ್ನು ಕೊಡುತ್ತಾ ಈ ಮಸೂದೆ ಪ್ರಕಾರ ರೂಪಾಯಿಗೆ ಆರಾಣೆಯಂತೆ ಸೆಸ್ ಹಾಕಬಹುದೆಂದು ಅತ್ಯಧಿಕ ಪರಿಮಿತಿಯನ್ನು ಇಟ್ಟಿದ್ದರೂ ಸರಕಾರವು ಎಂದೂ ಆ ರೀತಿ ಸೆಸ್ ಹಾಕಬಾರದೆಂದೂ ಹೇಳಿದರು. ಹಾಗೆ ಸೆಸ್ ದರ ಹೆಚ್ಚಿಸುವಾಗ ಸಭೆಯ ಅಭಿಮತವಿಲ್ಲದೆ ಮಾಡುವದಿಲ್ಲವೆಂದು ಮಂತ್ರಿಗಳು ಹೇಳಿದರು. ಮಸೂದೆಯು ಸರ್ವಾನುಮತದಿಂದ ಪಾಸಾಯಿತು.

ನಂತರ ಗೃಹಮಂತ್ರಿ ಮಲ್ಲಪ್ಪನವರು ಕೊಡಗು ಕೋರ್ಟುಗಳ (ತಿದ್ದುಪಡಿ) ಮಸೂದೆಯನ್ನು ಸಭೆಯ ಮುಂದಿಟ್ಟರು. ಈ ಮಸೂದೆಯ ಅವಶ್ಯಕತೆಯನ್ನು ವಿವರಿಸುತ್ತಾ ವಕೀಲರಾಗಿದ್ದವರು ಜಿಲ್ಲಾ ಜಡ್ಜರಾಗುವದರಿಂದಲೂ ಅಂಥಾ ವಕೀಲರು ನಡೆಸುತ್ತಿದ್ದ ಕೇಸಿನ ತೀರ್ಮಾನವನ್ನು ಅವರೇ ಜಡ್ಜರಾಗಿ ಮಾಡುವದು ನ್ಯಾಯದ ದೃಷ್ಟಿಯಿಂದ ಸಮರ್ಪಕವಲ್ಲದ್ದರಿಂದಲೂ, ಜಿಲ್ಲಾ ಕೋರ್ಟುಗಳಲ್ಲಿ ಹೆಚ್ಚಿನ ಕೆಲಸ ತುಂಬಿ ಒಬ್ಬ ನ್ಯಾಯಾಧೀಶರಿಂದ ಎಲ್ಲವನ್ನೂ ನಡೆಸುವದು ಕಠಿಣವಾದ ಸಂದರ್ಭದಲ್ಲೂ ಹೆಚ್ಚಿನ ಜಡ್ಜರನ್ನು ನೇಮಿಸುವ ಅನುಮಾಡಲಿಕ್ಕಾಗಿ ಈ ಮಸೂದೆಯೆಂದರು. ಮಸೂದೆಯು ಸರ್ವಾನುಮತದಿಂದ ಪಾಸಾಯಿತು.

ಮುಖ್ಯ ಮಂತ್ರಿ ಪೂಣಚ್ಚನವರು ನಂತರ ಕೊಡಗು ಖಾದಿ ಮಾರಾಟದ ಮಸೂದೆಯನ್ನು ಸಭೆಯ ಮುಂದಿಟ್ಟರು. ಈ ಮಸೂದೆಯ ಪ್ರಕಾರ ಖಾದಿಯನ್ನು ಲೈಸೆನ್ಸ್ ಪಡೆದ ವ್ಯಾಪಾರಿಗಳೇ ಮಾರಬೇಕಲ್ಲದೆ, ಬೇರೆಯವರು ಕೂಡದು. ಅಖಿಲ ಭಾರತ ಗ್ರಾಮೋದ್ಯೋಗ ಸಂಘದಿಂದ ಸರ್ಟಿಫಿಕೇಟ್ ಪಡೆದವರು ಮತ್ತು ಸರಕಾರದಿಂದ ಲೈಸೆನ್ಸ್ ಪಡೆದವರು ಮಾತ್ರ ಖಾದಿ ವ್ಯಾಪಾರ ಮಾಡಬಹುದಾಗಿದೆ. ಈ ಮಸೂದೆಯು ಸರ್ವಾನುಮತದಿಂದ ಪಾಸಾಯಿತು. ಕೇವಲ ೨೫ ನಿಮಿಷಗಳಲ್ಲಿ ಸಭಾ ಕೆಲಸವು ಮುಗಿದ ಕಾರಣ ಅಧ್ಯಕ್ಷರು ಸಭೆಯನ್ನು ೧೨–೧೦ ನಿಮಿಷಕ್ಕೆ ಮುಕ್ತಾಯಗೊಳಿಸಿ ಮೆಂಬರರ ಠರಾವುಗಳನ್ನು ಪರ್ಯಾಲೋಚಿಸಲು ಮಧ್ಯಾಹ್ನ ೨–೩೦ ಗಂಟೆಗೆ ಪುನಃ ಸಭೆ ಸೇರುವದೆಂದರು.

ಠರಾವುಗಳು.

ಮಧ್ಯಾಹ್ನದ ಮೇಲೆ ೨–೩೦ ಗಂಟೆಗೆ ಪುನಹ ಸಭೆ ಸೇರಿತು. ಶ್ರೀ. ಎಂ. ಡಿ. ಮಾಚಯ್ಯನವರು ಕೊಡಗಿಗೆ ಸಾಲ ನಿವಾರಣಾ ಬೋರ್ಡೊಂದನ್ನು ಶೀಘ್ರವಾಗಿ ನೇಮಿಸಬೇಕೆಂಬ ಠರಾವನ್ನು ಸೂಚಿಸಿದರು. ಮಂತ್ರಿಗಳು ಈ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿ ಈ ಮೊದಲು ಅಂಥಾ ಒಂದು ಬೋರ್ಡಿತ್ತೆಂದೂ, ಅದಕ್ಕೆ ಸಾಕಷ್ಟು ಕೆಲಸವಿಲ್ಲದಿಂದ ಅದನ್ನು ವಜಾಮಾಡಲಾಯಿತೆಂದೂ ಈಗ ಅದರ ಅವಶ್ಯಕತೆಯನ್ನು ಪರಿಶೀಲಿಸಿ ಅವಶ್ಯವಿದ್ದರೆ ಅಂಥಾ ಬೋರ್ಡನ್ನು ಸ್ಥಾಪಿಸಲಾಗುವದೆಂದೂ ಹೇಳಿದರು. ಸೂಚಕರು ಠರಾವನ್ನು ವಾಪಾಸು ತೆಗೆದುಕೊಂಡರು.

ತಂದೆ ತಾಯಿಗಳಿಲ್ಲದ ನಿರ್ಗತಿಕರಾದ ಎಲ್ಲಾ ಕೋಮಿನ ಒಂದನೇ ದರ್ಜೆಯಿಂದ ಮೂರನೇ ಫಾರಂಮಿನ ವರೆಗೆ ಓದುವ ವಿದ್ಯಾರ್ಥಿಗಳಿಗಾಗಿ ಸರಕಾರವು ಮಡಿಕೇರಿಯಲ್ಲಿ ಒಂದು ಅನಾಥಾಲಯವನ್ನು ತೆರೆದು ಇದರ ಖರ್ಚನ್ನೆಲ್ಲಾ ಸರಕಾರವೇ ನಿರ್ವಹಿಸಬೇಕೆಂಬ ಠರಾವನ್ನು ಶ್ರೀ ಪಿ. ಕೆ. ಚೆನ್ನಯ್ಯನವರು ಸೂಚಿಸಿದರು. ಅನುಮೋದಿಸುವವರು ಯಾರೂ ಇಲ್ಲದ ಕಾರಣ ಠರಾವು ಬಿದ್ದುಹೋಯಿತು.

ಆದಷ್ಟು ಶೀಘ್ರ ಕೊಡಗು ಸರಕಾರಿ ಕಾಲೇಜಿನ ವಿದ್ಯಾರ್ಥಿನಿಯರಿಗೆ ಒಂದು ನಿವಾಸ ಗೃಹವನ್ನು ತೆರೆಯಬೇಕೆಂಬ ಶ್ರೀ ಕೆ. ಪಿ. ಕರುಂಬಯ್ಯನವರ ಠರಾವನ್ನು ಅವರು ಮಧ್ಯಾಹ್ನದ ಮೇಲೆ ಗೈರು ಹಾಜರಾದ್ದರಿಂದ ಶ್ರೀ ಪಿ.ಪಿ. ಉತ್ತಯ್ಯನವರು ಸೂಚಿಸಿದರು. ವಿದ್ಯಾ ಮಂತ್ರಿಗಳು ಈ ವಿಚಾರ ತಮ್ಮ ಸಹಾನುಭೂತಿಯನ್ನು ಸೂಚಿಸಿ ಬರುವ ವಿದ್ಯಾವರ್ಷ ಪ್ರಾರಂಭವಾಗುವ ಮೊದಲು ತಕ್ಕ ವ್ಯವಸ್ಥೆ ಮಾಡಲಾಗುವದೆಂದರು. ಸೂಚಕರು ಈ ಭರವಸೆಯಿಂದ ಠರಾವನ್ನು ವಾಪಾಸು ತೆಗೆದುಕೊಂಡರು.

ಪೈಸಾರಿ ಭೂಮಿಯನ್ನು ದರಖಾಸ್ತುದಾರರಿಗೆ ಸರ್ವೆ ಮಾಡಿ ಕಲ್ಲು ಹಾಕಿದ ಮೇಲೆಯೂ, ಕೆಲವು ವೇಳೆ ಪಟ್ಟೆ ಕೊಟ್ಟ ನಂತರವೂ ಅದನ್ನು ರದ್ದು ಮಾಡಿಸುವಂಥಾ ಕ್ರಮವನ್ನು ವಜಾಮಾಡಬೇಕೆಂಬ ಠರಾವನ್ನು ಶ್ರೀ ಪಿ. ಕೆ. ಚೆನ್ನಯ್ಯನವರು ಸೂಚಿಸದೆ ಹಿಂತೆಗೆದುಕೊಂಡರು.

ಕುಟ್ಟದ ಪಕ್ಕದಲ್ಲಿ ಗುಡ್ಡನಾಡಿನ ಜನರ ಹಿತಕ್ಕಾಗಿ ಒಂದು ಆದರ್ಶ ವಸಾಹತನ್ನು ಸರಕಾರ ಸ್ಥಾಪಿಸಬೇಕೆಂಬ ಠರಾವನ್ನು ಶ್ರೀ ಜಿ. ಸುಬ್ಬಯ್ಯನವರು ಸೂಚಿಸಿದರು. ಗೃಹಮಂತ್ರಿಗಳು ಠರಾವಿನ ತತ್ವವನ್ನು ಒಪ್ಪಿ ಕುಟ್ಟದಲ್ಲಿಯೇ ಅಂಥಾ ವಸಾಹತಾಗಬೇಕೆಂಬ ತತ್ವವನ್ನು ನಿರಾಕರಿಸಿ ಸರಕಾರವು ಪರಿಶೀಲಿಸಿ ಎಲ್ಲಿ ಅಂಥಾ ಅವಶ್ಯಕತೆ ಮತ್ತು ಸಾಧ್ಯತೆ ಇದೆಯೋ ಅಲ್ಲಿ ಮಾಡಲಾಗುವದೆಂದರು. ಠರಾವನ್ನು ಸೂಚಕರು ಹಿಂತೆಗೆದುಕೊಂಡರು.

ಭೂಮಿಯ ದರಖಾಸ್ತು ಅರ್ಜಿಗಳು ೨–೩ ವರ್ಷಗಳಿಂದ ಮುಲ್ಕಿ ಬಿದ್ದಿವೆಯಾಗಿಯೂ, ದರಖಾಸ್ತು ಭೂಮಿಗಳನ್ನು ಸರ್ವೆಮಾಡಿ ಕೊಟ್ಟಿರುವದಿಲ್ಲವಾಗಿಯೂ ಜನರಿಂದ ಪುಕಾರು ಇರುವದಾಗಿಯೂ ಈ ಸರ್ವೆಗಾಗಿಯೇ ದಕ್ಷಿಣ ಕೊಡಗಿಗೊಬ್ಬ ಮತ್ತು ಉತ್ತರ ಕೊಡಗಿಗೊಬ್ಬ ಶ್ಯಾನುಭೋಗರನ್ನು ನೇಮಿಸಬೇಕೆಂಬ ಠರಾವನ್ನು ಶ್ರೀ ಪಿ. ಕೆ. ಚೆನ್ನಯ್ಯನವರು ಸೂಚಿಸದೆ ಹಿಂತೆಗೆದುಕೊಂಡರು.

ದನಗಳನ್ನು ಆಹಾರಕ್ಕಾಗಿ ಕುಯ್ಯುವದನ್ನು ಕೊಡಗಿನಲ್ಲಿ ನಿರ್ಬಂಧಿಸಬೇಕೆಂಬ ಠರಾವನ್ನು ಶ್ರೀ ಎಂ. ಡಿ. ಮಾಚಯ್ಯನವರು ಸೂಚಿಸದೆ ಹಿಂತೆಗೆದುಕೊಂಡರು.

ಸುಂಟಿಕೊಪ್ಪ ಶಾಲೆಗೆ ಒಂದು ಬಾವಿ ಅವಶ್ಯವಿರುವದರಿಂದ ಅದನ್ನು ತೋಡಿಸಿಕೊಡಬೇಕೆಂಬ ಠರಾವನ್ನು ಶ್ರೀ ಪಿ. ಲಕ್ಷ್ಮಯ್ಯನವರು ಸೂಚಿಸದೆ ಹಿಂತೆಗೆದುಕೊಂಡರು.

ಕೊಡಗಿನಲ್ಲಿ ಉಪಯೋಗಿಸಲ್ಪಡುತ್ತಿರುವ "ಕೊಳ್ಗ" ಸೇರಿನಲ್ಲಿ ಸಂಬಳ ಕೊಡುವ ಪದ್ಧತಿಯನ್ನು ರದ್ದು ಮಾಡಬೇಕು ಎಂಬ ಠರಾವನ್ನು ಶ್ರೀ ಜಿ ಸುಬ್ಬಯ್ಯನವರು ಸೂಚಿಸಿ ಇದರಿಂದ ಮಜೂರರಿಗೆ ತುಂಬಾ ಅನ್ಯಾಯವಾಗುತ್ತಿದೆ ಎಂದರು. ಮುಖ್ಯ ಮಂತ್ರಿಗಳು 'ಕೊಳ್ಗ' ಸೇರು ಪದ್ಧತಿಯು ಈಗ ಕೊಡಗಿನಲ್ಲಿಲ್ಲವೆಂದೂ ಅಂಥಾ ಸೇರುಗಳನ್ನು ಉಪಯೋಗಿಸ ಕೂಡದೆಂಬ ನಿಯಮವಿದೆಯೆಂದೂ, ಹಾಗೆ ಅಂಥಾ ಸೇರುಗಳನ್ನು ಉಪಯೋಗಿಸುವವರ ನಿದರ್ಶನವನ್ನು ಸರಕಾರಕ್ಕೆ ತಿಳಿಸಿದರೆ ಸರಕಾರವು ಶಿಕ್ಷಿಸುವದೆಂದೂ ಹೇಳಿದರು. ಸೂಚಕರು ಠರಾವನ್ನು ಹಿಂತೆಗೆದುಕೊಂಡರು.

ಮಾದಾಪುರದಲ್ಲಿ ಒಂದು ಪೋಲೀಸ್ ಔಟ್ ಪೋಸ್ಟ್ ತೆರೆಯಬೇಕೆಂಬ ಠರಾವನ್ನು ಶ್ರೀ ಪಿ. ಲಕ್ಷ್ಮಯ್ಯನವರು ಸೂಚಿಸಿದರು. ಹಣದ ಅಭಾವದ ಕಾರಣ ಪೋಲೀಸ್ ಔಟ್‌ಪೋಸ್ಟ್ ತೆರೆಯಲಾಗುವದಿಲ್ಲವೆಂದೂ ಹಾಗೆ ಅವಶ್ಯವಿದ್ದರೆ ಒಂದೆರಡು ಪೋಲೀಸರನ್ನು ಅಲ್ಲಿರುವಂತೆ ಏರ್ಪಡಿಸಬಹುದೆಂದೂ ಗೃಹಮಂತ್ರಿಯವರು ಹೇಳಿದರು. ಠರಾವು ಈ ಭರವಸೆಯಿಂದ ಹಿಂತೆಗೆಯಲ್ಪಟ್ಟಿತು.

ಕೊಡಗಿನಲ್ಲಿ ಪ್ಲಾಂಟೇಶನ್ ಲೇಬರ್ ಆಕ್ಟನ್ನು ಆದಷ್ಟು ಶೀಘ್ರ ಜಾರಿಯಲ್ಲಿ ತರಬೇಕೆಂಬ ಠರಾವನ್ನು ಶ್ರೀ ಎಂ. ಡಿ ಮಾಚಯ್ಯನವರು ಸೂಚಿಸದೆ ಹಿಂತೆಗೆದುಕೊಂಡರು.

ವಾಚ್‌ಮ್ಯಾನ್ ಮಾತ್ರ ಇರುವ ಫಾರೆಸ್ಟುಗಳಲ್ಲಿ ಅವರ ಜೊತೆಗೆ ಒಬ್ಬೊಬ್ಬ ಗಾರ್ಡನ್ನೂ ನೇಮಿಸಬೇಕೆಂಬ ಠರಾವನ್ನು ಶ್ರೀ ಪಿ. ಕೆ. ಚೆನ್ನಯ್ಯನವರು ಸೂಚಿಸದೆ ಹಿಂತೆಗೆದುಕೊಂಡರು.

ಹರಿಜನ ಮತ್ತು ನಿಮ್ನ ವರ್ಗದ ಒಂದೊಂದು ಕುಟುಂಬಕ್ಕೆ ತರಿ ಯಾ ಖುಷ್ಕಿ ವ್ಯವಸಾಯಕ್ಕೆ ಸರಕಾರಿ ಪೈಸಾರಿಯಿಂದ ಮೂರು ಎಕರೆಗೆ ಕಡಿಮೆ ಇಲ್ಲದಂತೆ ಜಮೀನು ಕೊಡಬೇಕೆಂಬ ಠರಾವನ್ನು ಶ್ರೀ ಪಿ. ಕೆ. ಚೆನ್ನಯ್ಯನವರು ಸೂಚಿಸದೆ ಹಿಂತೆಗೆದುಕೊಂಡರು.

ಹರಿಜನ ಮತ್ತು ನಿಮ್ನ ವರ್ಗದವರು ತಮ್ಮ ವಾಸದ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಸರಕಾರಿ ಪೈಸಾರಿಯಿಂದ ಮರ ಮತ್ತು ಬಿದಿರನ್ನು ಮುಫತ್ತು ಕೊಡಬೇಕೆಂಬ ಠರಾವನ್ನು ಶ್ರೀ ಪಿ. ಕೆ. ಚೆನ್ನಯ್ಯನವರು ಸೂಚಿಸಿದರು. ಶ್ರೀ ಲಕ್ಷ್ಮಯ್ಯನವರು ಅನುಮೋದಿಸಿದರು. ಮುಖ್ಯ ಮಂತ್ರಿಯವರು ಈ ವಿಚಾರದಲ್ಲಿ ಈಗಾಗಲೇ ರೂ. ೨೦೦ ಬೆಲೆಗೊಳಪಟ್ಟ ಮರಮಟ್ಟು ಕೊಡುವ ಏರ್ಪಾಡು ಮಾಡಿರುವದಾಗಿ ಅರುಹಿಕೆ ಕೊಟ್ಟ ಮೇರೆ ಸೂಚಕರು ಠರಾವನ್ನು ಹಿಂತೆಗೆದುಕೊಂಡರು.

ಸೋಮವಾರಪೇಟೆಯಿಂದ ಕೂತಿ ವರೆಗಿರುವ ರಸ್ತೆಯನ್ನು ಮೈಸೂರು ಗಡಿಯ ವರೆಗೆ ಮುಂದರಿಸಿ ಕಲ್ಲು ಹಾಕಿ ಸರಿಪಡಿಸಬೇಕೆಂಬ ಠರಾವನ್ನು ಶ್ರೀ ಸಿ. ಕೆ. ಕಾಳಪ್ಪನವರು ಸೂಚಿಸಿದರು. ಗೃಹಮಂತ್ರಿಗಳು ಮಾತಾಡುತ್ತಾ ರಸ್ತೆಯನ್ನು ಮೈಸೂರು ಗಡಿಯ ವರೆಗೆ ಮುಂದರಿಸಲಾಗುವದೆಂದೂ ಆದರೆ ಕಲ್ಲು ಹಾಕಿ ಸರಿಪಡಿಸಲು ಮೈಲಿಗೆ ರೂ. ೨೦ ಸಾವಿರಕ್ಕಿಂಥಾ ಹೆಚ್ಚು ವೆಚ್ಚ ತಗಲುವದರಿಂದ ೧೧ ಮೈಲು ದೂರಕ್ಕೆ ೨ ಲಕ್ಷಕ್ಕಿಂಥಾ ಹೆಚ್ಚು ಖರ್ಚಾಗುವದಾದ್ದರಿಂದ ಸದ್ಯಕ್ಕೆ ಸರಕಾರವು ಅಷ್ಟು ವೆಚ್ಚ ಮಾಡಲು ತಯಾರಿಲ್ಲವೆಂದರು. ಈ ರಸ್ತೆಯಲ್ಲಿ ಹೆಚ್ಚು ಹಾಳಾದ ಭಾಗಗಳನ್ನು ಮಾತ್ರ ದುರಸ್ತುಪಡಿಸಿ ವಹಿವಾಟಿಗೆ ಸಾಧ್ಯವಾಗುವಂತೆ ಮಾಡಬೇಕೆಂದು ಶ್ರೀ ಎಚ್. ಟಿ. ಮುತ್ತಣ್ಣನವರು ಸೂಚಿಸಿದರು. ಮಂತ್ರಿಯವರು ಈ ಸೂಚನೆಯನ್ನು ಒಪ್ಪಿದ ಕಾರಣ ಠರಾವು ಹಿಂತೆಗೆಯಲ್ಪಟ್ಟಿತು.

ಹರಿಜನ ಮಕ್ಕಳು ೩೦ರ ಮೇಲ್ಪಟ್ಟು ಶಾಲೆಯಲ್ಲಿ ಓದುವದಿದ್ದರೆ ಅವರಿಗೆ ಅಡಿಗೆ ಮಾಡುವ ಅಡಿಗೆಯವರಿಗೆ ಸಂಬಳಕೊಡಬೇಕೆಂಬ ಠರಾವನ್ನು ಶ್ರೀ. ಪಿ. ಲಕ್ಷ್ಮಯ್ಯನವರು ಸೂಚಿಸದೆ ಹಿಂತೆಗೆದುಕೊಂಡರು.

ಶೀಘ್ರವಾಗಿ ಕೊಡಗಿನಲ್ಲಿ ಭೂಮಿ ಅಡಮಾನ ಸಂಘ ಒಂದನ್ನು ಸ್ಥಾಪಿಸಬೇಕೆಂಬ ಠರಾವನ್ನು ಶ್ರೀ. ಎಂ. ಡಿ. ಮಾಚಯ್ಯನವರು ಸೂಚಿಸಿದರು. ಅಂಥಾ ಸಂಘವನ್ನು

ಸ್ಥಾಪಿಸಲು ಸರಕಾರವು ಮೊನ್ನೆ ಮೆಂಬರರಷ್ಟೇ ಆತುರದಲ್ಲಿದೆಯೆಂದೂ ಶೀಘ್ರ ಅಂಥಾ ಸಂಘವನ್ನು ಸ್ಥಾಪಿಸಲಾಗುವದೆಂದೂ ಮಂತ್ರಿ ಮಲ್ಲಪ್ಪನವರು ಹೇಳಿದರು. ಠರಾವನ್ನು ಸೂಚಕರು ಹಿಂತೆಗೆದುಕೊಂಡರು.

ಸುಂಟಿಕೊಪ್ಪ ಶಾಲೆಯಲ್ಲಿ ಮಕ್ಕಳ ಸಂಖ್ಯೆ ಜಾಸ್ತಿಯಾಗಿ ಶಾಲೆಯಲ್ಲಿ ಮಕ್ಕಳು ಕುಳಿತುಕೊಳ್ಳಲು ಸ್ಥಳವೇ ಇಲ್ಲವಾದ್ದರಿಂದ ಅಲ್ಲಿಗೊಂದು ಶಾಲಾ ಕಟ್ಟಡವನ್ನು ಸರಕಾರದವರು ಕಟ್ಟಿಸಿ ಕೊಡಬೇಕೆಂಬ ಠರಾವನ್ನು ಶ್ರೀ ಪಿ. ಲಕ್ಕಯ್ಯನವರು ಸೂಚಿಸಿದರು. ಈ ಶಾಲಾ ಕಟ್ಟಡಕ್ಕಾಗಿ ಸರಕಾರವು ಬಜೆಟ್ಟಿನಲ್ಲಿ ರೂ. ೪೦೦೦ ಇಟ್ಟಿದೆಯೆಂದೂ ಅಲ್ಲಿಯ ಜನರು ಉಳಿದ ಮೂರು ನಾಲ್ಕು ಸಾವಿರವನ್ನು ಹಣದ ಯಾ ದೈಹಿಕ ಪರಿಶ್ರಮದ ಮೂಲಕ ಒದಗಿಸಿ ಕೊಟ್ಟರೆ ಶೀಘ್ರ ಶಾಲೆಯಾಗುವದೆಂದೂ ಸೂಚಿಸಿದರು. ಸೂಚಕರು ಠರಾವನ್ನು ಹಿಂತೆಗೆದುಕೊಂಡರು.

ಶನಿವಾರಸಂತೆ ನಾಡುಖಚೇರಿಗೆ ಇಬ್ಬರು ಹೆಚ್ಚಿಗೆ ಶ್ಯಾನುಬೋಗರನ್ನು ನೇಮಿಸಬೇಕೆಂಬ ಠರಾವನ್ನು ಶ್ರೀ ಪಿ. ಕೆ. ಚೆನ್ನಯ್ಯನವರು ಸೂಚಿಸಿದರು. ನಾಡುಖಚೇರಿಗಳಲ್ಲಿ ಈಗ ತುಂಬಾ ಕೆಲಸವಿದೆಯೆಂದೂ ಆದ್ದರಿಂದ ಶನಿವಾರಸಂತೆಗೆ ಮಾತ್ರವಲ್ಲ ಅವಶ್ಯವಿರುವೆಡೆ ಹೆಚ್ಚಿನ ಶ್ಯಾನುಬೋಗರನ್ನು ಕೊಡಲಾಗುವದೆಂದು ಮುಖ್ಯಮಂತ್ರಿಯವರು ಹೇಳಿದರು. ಠರಾವನ್ನು ಸೂಚಕರು ಹಿಂತೆಗೆದರು

ಇಷ್ಟರಲ್ಲಿ ಅಧ್ಯಕ್ಷರಾದ ಶ್ರೀ. ಬಿ. ಎಸ್. ಕುಶಾಲಪ್ಪನವರು ಈ ರೀತಿ ಕಾರ್ಯಕ್ರಮವನ್ನು ಮುಂದರಿಸಿದರೆ ನಾಳೆಯ ದಿನಕ್ಕೆ ಕೆಲಸವೇ ಇಲ್ಲದಾಗುವದೆಂದೂ ಆದ್ದರಿಂದ ಮೀಟಿಂಗನ್ನು ಇಂದಿಗೆ ಬರಕಾಸ್ತು ಮಾಡುವೆನೆಂದೂ ಹೇಳಿದರು. ೩-೪೫ ಗಂಟೆಗೆ ಪ್ರಥಮ ದಿನದ ಕಾರ್ಯಕಲಾಪಗಳು ಮುಗಿದವು.

ದ್ವಿತೀಯ ದಿನ ತಾ. ೨೯-೯-೫೩

ಈ ದಿನ ಬೆಳಗ್ಗೆ ೧೧ ಗಂಟೆಗೆ ಪುನಹ ಶಾಸನ ಸಭೆ ಪ್ರಾರಂಭವಾಯಿತು. ಸುಮಾರು ಮುಕ್ಕಾಲು ಗಂಟೆಯ ವರೆಗೆ ಪ್ರಶ್ನೋತ್ತರಗಳು ನಡೆದ ಮೇಲೆ ಠರಾವುಗಳ ಚರ್ಚೆಯು ತೆಗೆದುಕೊಳ್ಳಲ್ಪಟ್ಟಿತು.

ಅರಕಲಗೋಡು ರಸ್ತೆಯಿಂದ ಕಟ್ಟೆಪುರದ ಫಾರೆಷ್ಟಿನೊಳಗೆ ಆಗಳ್ಳಿ ಗ್ರಾಮಕ್ಕೆ ಹೋಗುವ ಗ್ರಾಮರಸ್ತೆಯಲ್ಲಿ ಒಂದು ಫರ್ಲಾಂಗು ರಸ್ತೆಯನ್ನು ಸರಕಾರವು ಸರಿಪಡಿಸಿಕೊಡಬೇಕೆಂಬ ಠರಾವನ್ನು ಶ್ರೀ. ಪಿ. ಕೆ ಚೆನ್ನಯ್ಯನವರು ಸೂಚಿಸಿದರು. ಹಾಗೆ ಮಾಡಲಾಗುವದೆಂದು ಮಂತ್ರಿಗಳು ಭರವಸೆಕೊಟ್ಟದ್ದರಿಂದ ಠರಾವು ಹಿಂತೆಗೆಯಲ್ಪಟ್ಟಿತು.

ಹರಿಜನರ ಪೈಕಿ ದೀರ್ಘಕಾಲದ ಸಾಲ ಸಿಕ್ಕಿದಂಥವರಿಗೆ ಬಡ್ಡಿಯನ್ನು ಮಾಫಿ ಮಾಡಿಕೊಡಬೇಕೆಂಬ ಠರಾವನ್ನು ಶ್ರೀ. ಪಿ. ಲಕ್ಕಯ್ಯನವರು ಮಂಡಿಸಿದರು. ಮಂತ್ರಿಗಳು ಈ ವಿಚಾರದಲ್ಲಿ ಸಾಧ್ಯವಾದ ಸಹಾಯ ಮಾಡಿಕೊಡಲಾಗುವದೆಂದು ಹೇಳಿದ ಕಾರಣ ಠರಾವು ಹಿಂತೆಗೆಯಲ್ಪಟ್ಟಿತು.

ಕೊಡಗು ಸರಕಾರಿ ಕಾಲೇಜು ವಿದ್ಯಾರ್ಥಿಗಳಿಗಾಗಿ ಯೋಗ್ಯ ಹಾಸ್ಟೆಲ್ ಕಟ್ಟಡ ಕಟ್ಟಿಸಬೇಕೆಂಬ ಶ್ರೀ. ಕೆ. ಸಿ. ಕರುಂಬಯ್ಯನವರ ಠರಾವನ್ನು ಅವರು ಗೈರ್ಹಾಜರಾದ ಕಾರಣ ಶ್ರೀ ಪಿ. ಸಿ. ಉತ್ತಯ್ಯನವರು ಸೂಚಿಸಿದರು. ವಿದ್ಯಾಮಂತ್ರಿಯವರು ಮುಂದಿನ ವಿದ್ಯಾ ವರ್ಷಾರಂಭವಾಗುವದರೊಳಗೆ ಹುಡುಗರ ಹಾಗೂ ಹುಡುಗಿಯರ ಎರಡು ಹಾಸ್ಟೆಲುಗಳನ್ನು ಮಾಡುವ ಭರವಸೆ ಇತ್ತ ಮೇರೆ ಠರಾವು ಹಿಂತೆಗೆಯಲ್ಪಟ್ಟಿತು.

ಸಿದ್ದಾಪುರ ಟೌನಿನಲ್ಲಿ ಪೋಲೀಸ್ ಸ್ಟೇಷನ್ ಒಂದನ್ನು ಸ್ಥಾಪಿಸಬೇಕೆಂಬ ಠರಾವನ್ನು ಶ್ರೀ. ಎಂ. ಡಿ. ಮಾಚಯ್ಯನವರು ಸೂಚಿಸಿದರು. ಮಂತ್ರಿ ಶ್ರೀ ಮಲ್ಲಪ್ಪನವರು ಈಗಿರುವ ಔಟ್ ಪೋಸ್ಟಿನಲ್ಲೇ ಅವಶ್ಯವಿರುವಷ್ಟು ಪೋಲೀಸರ ಸಂಖ್ಯೆಯನ್ನು ಹೆಚ್ಚಿಸಲಾಗುವದೆಂದು ಹೇಳಿದ ಕಾರಣ ಠರಾವನ್ನು ಸೂಚಕರು ಹಿಂತೆಗೆದುಕೊಂಡರು.

ಶನಿವಾರಸಂತೆ ಕಾಜೂರು ಹೊಳೆಗೆ ಕಾಜೂರು ಬಳಿ ಸರಕಾರವು ಒಂದು ಸೇತುವೆ ಕಟ್ಟಿಸಿಕೊಡಬೇಕೆಂಬ ಠರಾವನ್ನು ಶ್ರೀ. ಪಿ. ಕೆ. ಚೆನ್ನಯ್ಯನವರು ಸೂಚಿಸಿದರು. ಸರಕಾರವು ಬಜೆಟ್ಟಿನಲ್ಲಿ ಈ ಬಗ್ಗೆ ರೂ. ೨೫೦೦೦ ಇಟ್ಟಿದೆಯೆಂದೂ, ಆ ಕೆಲಸವನ್ನು ಆದಷ್ಟು ಬೇಗ ಮಾಡಲಾಗುವದೆಂದೂ ಹೇಳಿದ್ದರಿಂದ ಠರಾವು ಹಿಂತೆಗೆಯಲ್ಪಟ್ಟಿತು.

ಶೆಟ್ಟಿಗೇರಿ–ಕೋತೂರು ನಾಲ್ಕೇರಿ ರಸ್ತೆಯಲ್ಲಿ ಲಕ್ಷ್ಮಣತೀರ್ಥ ಹೊಳೆಗೆ ಒಂದು ಸೇತುವೆ ಕಟ್ಟಿಸಿಕೊಡಬೇಕು ಎಂಬ ಠರಾವನ್ನು ಶ್ರೀ. ಜಿ. ಸುಬ್ಬಯ್ಯನವರು ಮುಂದಿಟ್ಟರು. ಅಲ್ಲಿಗೆ ಒಂದು ಸೇತುವೆ ಅಗತ್ಯವಿದೆಯೋ ಎಂಬುದನ್ನು ಪರಿಶೀಲಿಸಿ ಅವಶ್ಯವಿದ್ದರೆ ಮಾಡಲಾಗುವದೆಂಬ ಭರವಸೆ ಇತ್ತ ಮೇರೆ ಠರಾವು ಹಿಂತೆಗೆಯಲ್ಪಟ್ಟಿತು.

ಹರಿಜನ ಮತ್ತು ದಲಿತ ವರ್ಗದವರ ಪುರೋಭಿವೃದ್ಧಿಗಾಗಿ ಸರಕಾರಿ ಮತ್ತು ಖಾಸಗಿ ಮೆಂಬರುಗಳಿಂದ ಕೂಡಿದ ಒಂದು ಸಲಹಾ ಸಮಿತಿಯನ್ನು ನೇಮಿಸಬೇಕೆಂದೂ ಈ ಸಮಿತಿಯವರು ಕೊಡುವ ಸಲಹೆಗಳನ್ನು ಸರಕಾರವು ಜಾರಿಯಲ್ಲಿ ತರಬೇಕೆಂದೂ ಒಂದು ಠರಾವನ್ನು ಶ್ರೀ. ಪಿ. ಕೆ. ಚೆನ್ನಯ್ಯನವರು ಸೂಚಿಸದೆ ಹಿಂತೆಗೆದುಕೊಂಡರು.

ಭಾರತ ಸರಕಾರವು ಕೊಡಗಿನ ಹರಿಜನಾಭಿವೃದ್ಧಿಗಾಗಿ ಕೊಡುವ ಹಣದ ಜೊತೆಗೆ ಕೊಡಗು ಸರಕಾರವು ೫ ಲಕ್ಷ ರೂಪಾಯಿಗಳನ್ನು ಕೊಟ್ಟು ಉಚಿತ ಮನೆಗಳನ್ನು ಕಟ್ಟಿಸಿ ಹರಿಜನ ಮಕ್ಕಳ ವಿದ್ಯೆಗೆ ಹೆಚ್ಚಿನ ಸಹಾಯ ಮತ್ತು ಹರಿಜನರ ವ್ಯವಸಾಯಕ್ಕೆ ಸಾಲಕೊಡಬೇಕೆಂಬ ಠರಾವನ್ನು ಶ್ರೀ ಪಿ. ಕೆ. ಚೆನ್ನಯ್ಯನವರು ಸೂಚಿಸಿದರು. ಕೊಡಗಿನಲ್ಲಿ ಹರಿಜನರಿಗೆ ಸಾಧ್ಯವಾದ ಸಹಾಯಗಳೆಲ್ಲವನ್ನೂ ಮಾಡಿಕೊಡುತ್ತಿದೆಯೆಂದೂ ಉಚಿತ ಮನೆಗೆ ಸಾಹಿತ್ಯ, ವಿದ್ಯಾಭ್ಯಾಸಕ್ಕೆ ಅನುಕೂಲತೆ, ವ್ಯವಸಾಯಕ್ಕೆ ಜಾಗ ಮೊದಲಾದುವನ್ನು ಕೊಡುತ್ತಿದೆಯೆಂದೂ ಐದು ಲಕ್ಷ ರೂಪಾಯಿಗಳ ವೆಚ್ಚಮಾಡಬೇಕೆಂದು ಕೇಳುವದು ಕಷ್ಟಕರವಾದುದೆಂದೂ ಸೂಚಕರು ಠರಾವನ್ನು ವಾಪಾಸು ತೆಗೆದುಕೊಳ್ಳಬೇಕೆಂದೂ ಕೇಳಿಕೊಂಡ ಮೇರೆ ಠರಾವು ಹಿಂತೆಗೆಯಲ್ಪಟ್ಟಿತು.

ಕೊಡಗಿನ ಹೊಳೆಗಳಲ್ಲಿ ಜನವರಿಯಿಂದ ಮೇ ತಿಂಗಳ ವರೆಗೆ ಬಲೆ ಹಾಕಿ ಮೀನು ಹಿಡಿಯಲು ಬಿಡಬೇಕೆಂಬ ಠರಾವನ್ನು ಶ್ರೀ ಸಿ ಕೆ. ಕಾಳಪ್ಪನವರು ಸೂಚಿಸಿದರು. ಹಾಗೆ ಮೀನುಹಿಡಿಯುವ ನಿರ್ಬಂಧವನ್ನು ತೆಗೆದು ಹಾಕುವದು ಉಚಿತವೆಂದೂ ಎಲ್ಲಿ ಅಗತ್ಯವೋ ಅಲ್ಲಿ ಮೀನು ಹಿಡಿಯುವ ಅನುಮತಿ ಸರಕಾರ ಕೊಡುವದೆಂದೂ ಮುಖ್ಯಮಂತ್ರಿಯವರು ಹೇಳಿದ ಮೇರೆ ಸೂಚಕರು ಠರಾವನ್ನು ಹಿಂತೆಗೆದುಕೊಂಡರು.

ಕೊಡಗು ಮಾಧ್ಯಮಿಕ ಮತ್ತು ಹೈಸ್ಕೂಲುಗಳಲ್ಲಿ ಒಂದನೇ ಫಾರಮಿನಿಂದ ಮೂರನೇ ಫಾರಮಿನ ವರೆಗೆ ಓದುತ್ತಿರುವ ಹರಿಜನ ಮತ್ತು ನಿಮ್ನವರ್ಗದ ಹುಡುಗರಿಗೆ ಮಡಿಕೇರಿಯಲ್ಲಿ ಒಂದು ಫ್ರೀ ಹಾಸ್ಟೆಲನ್ನು ನಿರ್ಮಿಸಿ ಮಕ್ಕಳ ವಿದ್ಯಾಭ್ಯಾಸದ ಖರ್ಚನ್ನೆಲ್ಲಾ ಸರಕಾರವೇ ವಹಿಸಿಕೊಳ್ಳಬೇಕೆಂಬ ಠರಾವನ್ನು ಶ್ರೀ ಪಿ. ಕೆ. ಚೆನ್ನಯ್ಯನವರು ಸೂಚಿಸದೆ ಹಿಂತೆಗೆದುಕೊಂಡರು.

ಹರಿಜನರಿಗೆ ಪೈಸಾರಿ ಭೂಮಿಯನ್ನು ಸರ್ವೆಮಾಡಿ ಕೊಟ್ಟಂಥವರಿಗೆ ಅದೇ ಭೂಮಿಯನ್ನು ಗಿರ್ವಿ ತೆಗೆದುಕೊಂಡು ರೂಪಾಯಿ ೨೦೦, ಕ್ಕೆ ಒಳಪಟ್ಟು ಟಕಾವಿ ಸಾಲ ಕೊಡಬೇಕೆಂಬ ಠರಾವನ್ನು ಶ್ರೀ ಪಿ. ಲಕ್ಕಯ್ಯನವರು ಸೂಚಿಸಿದರು. ಮುಖ್ಯಮಂತ್ರಿಯವರು ಹೀಗೆ ಮಾಡುವದು ಉಚಿತವಾಗಲಾರದೆಂದೂ ಅದರಿಂದ ಹರಿಜನರಿಗೆ ಹಾನಿಯೇ ಆಗಬಹುದೆಂದೂ ಹೇಳಿದರು ಸೂಚಕರು ಠರಾವನ್ನು ಹಿಂತೆಗೆದುಕೊಂಡರು.

ಸೋಮವಾರಪೇಟೆ ಕುಂದಳ್ಳಿ ರಸ್ತೆಯನ್ನು ಮೈಸೂರು ಗಡಿಯ ವರೆಗೆ ಮುಂದರಿಸಬೇಕೆಂಬ ಠರಾವಿನ ಬಗ್ಗೆ ರಸ್ತೆಮಾಡಲಾಗುವದೆಂದೂ ಆದರೆ ಕಲ್ಲು ಹಾಕಿ ಪಕ್ಕಾ ರಸ್ತೆ ಮಾಡಲು ಹೆಚ್ಚು ಹಣ ಬೇಕೆಂ

(೧೦ ನೇ ಪುಟ ನೋಡಿ)

ಸಹಕಾರವೇ ✵ ಜೀವನದ ಏಳಿಗೆಯ ಹೆದ್ದಾರಿ,

ಅದರಲ್ಲೂ ವಿಮೆಯಲ್ಲಿ ಸಹಕಾರ ವೆಂದರೆ ಅನ್ಯೋನ್ಯ ಏಳಿಗೆಯ ಮತ್ತು ಭದ್ರತೆಗೆ ಒಂದು ಕಳಶದಿ.

ದಿ ಬೊಂಬಾಯಿ ಕೋಪರೇಟಿವ್ ಇನ್ಶೂರೆನ್ಸ್ ಸೊಸೈಟಿ ಲಿಮಿಟೆಡ್

[ಹೆಡ್ ಆಫೀಸು:—] [ಬೊಂಬಾಯಿ

1953 ನೇ ಸಾಲಿಗೆ ರಿವರ್ಶನರಿ ಬೋನಸ್ಸು

⊕ ಹೋಲ್ ಲೈಫ್ ಸಾವಿರಕ್ಕೆ 11 ರಂತೆ ⊕ ಎಂಡೋಮೆಂಟ್ ಸಾವಿರಕ್ಕೆ 9 ರಂತೆ

✵ 200 ರಿಂದ 900 ರ ತನಕದ ಪೋಲಿಸಿಗಳು ಹಳ್ಳಿಗರಿಗೊಂದು ವರ ✵

ಎಲ್ಲಾ ಕಡೆಗಳಲ್ಲಿಯೂ ಪ್ರಭಾವವುಳ್ಳ ಏಜೆಂಟರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಯನ್ನು ದಕ್ಷಿಣ ಕನ್ನಡ, ಕೊಡಗು ಮತ್ತು ಮೈಸೂರು ಪ್ರಾಂತ್ಯಕ್ಕೆ ಮುಖ್ಯ ಏಜೆಂಟರಾದ

12-2

ಎಮ್. ಟಿ. ಕೋರ್ಡೆಲ್ ಅಂಡ್ ಕೋ., ಹಂಪನಕಟ್ಟೆ, ಮಂಗಳೂರು, ಇವರಿಂದ ಪಡೆಯಿರಿ.

ಆನೆಗಳನ್ನು ಕೊಲ್ಲದ ನರಿಯ ಕಥೆ.

ಒಂದು ಕಾಡಿನಲ್ಲಿ ಒಂದು ಸಿಂಹವು ತನ್ನ ಪತ್ನಿಯೊಂದಿಗೆ ಜೀವಿಸುತಿತ್ತು. ಒಮ್ಮೆ ಹೆಣ್ಣು ಸಿಂಹವು ಅವಳಿ ಜವಳಿ ಮರಿಗಳನ್ನು ಹೆತ್ತಿತು. ಹೆತ್ತ ಸಿಂಹದ ಆಹಾರಕ್ಕಾಗಿ ಪ್ರತಿ ದಿನ ಜಿಂಕೆಗಳನ್ನು ಕೊಂದು ಗಂಡು ಸಿಂಹವು ತಂದು ಕೊಡುತಿತ್ತು.

ಒಂದು ದಿನ ಕಾಡನ್ನೆಲ್ಲಾ ಸುತ್ತಿದರೂ ಯಾವುದೇ ಪ್ರಾಣಿಯು ಸಿಂಹಕ್ಕೆ ದೊರೆಯಲಿಲ್ಲ. ಸಾಯಂಕಾಲವಾಗುತ್ತಾ ಬಂತು. ತನ್ನ ಗುಹೆಗೆ ಸಿಂಹವು ಹಿಂತಿರುಗುವಾಗ ದಾರಿಯಲ್ಲಿ ಅದು ನರಿಯ ಚಿಕ್ಕ ಮರಿಯೊಂದನ್ನು ಕಂಡಿತು. ಇನ್ನೂ ಚೆನ್ನಾಗಿ ಓಡಾಡಲಾರದ ಮರಿಯನ್ನು ಕಂಡು ಸಿಂಹಕ್ಕೆ ಕನಿಕರವಾಯಿತು. ಆದ್ದರಿಂದ ಅದನ್ನು ನೋವು ಮಾಡದೆ ಎತ್ತಿಕೊಂಡು ತನ್ನ ಗುಹೆಗೆ ಬಂದಿತು.

ಆಗ ಹೆಣ್ಣು ಸಿಂಹವು ಕೇಳಿತು, "ಪ್ರಿಯಾ, ನನಗೆ ತುಂಬಾ ಹಸಿವಾಗುತ್ತದೆ. ಏನಾದರೂ ತಂದಿರುವೆಯಾ ?"

"ಈ ದಿನ ಯಾವುದೇ ಬೇಟೆ ದೊರೆಯಲಿಲ್ಲ. ನರಿಯ ಮರಿಯೊಂದು ಮಾತ್ರ ದೊರೆಯಿತು. ಅದನ್ನು ನಾನು ಕೊಲ್ಲಲಿಲ್ಲ. ನನ್ನ ಮಕ್ಕಳಂತೇ ಅದು ಚಿಕ್ಕದಾಗಿದೆ. ಶಾಸ್ತ್ರ ಪ್ರಕಾರ ವೀರರು ಹೆಂಗಸು, ಸನ್ಯಾಸಿ, ಮಕ್ಕಳನ್ನು ಕೊಲ್ಲುವ ಬದಲು ಅವರ ರಕ್ಷಣೆಗಾಗಿ ಪ್ರಾಣ ಕೊಡಬೇಕೆಂದಿದೆ. ಆದರೂ ನಿನಗೆ ತುಂಬಾ ಹಸಿವಾಗಿದ್ದರೆ ಅದನ್ನು ತಿನ್ನು. ಬೆಳಗ್ಗೆ ಬೇರೆ ಪ್ರಾಣಿಗಳನ್ನು ಹಿಡಿದು ತರುವೆನು" ಎಂದು ಗಂಡು ಸಿಂಹವು ಹೇಳಿತು.

"ಅದು ಇನ್ನೂ ಚಿಕ್ಕ ಮರಿಯೆಂದು ಮಮತೆಯಿಂದ ನೀನು ಅದನ್ನು ಕೊಲ್ಲಲಿಲ್ಲ. ಆದರೆ ತಾಯಿಯ ಕರುಳಿರುವ ನಾನು ಕೇವಲ ತುತ್ತು ಅನ್ನಕ್ಕಾಗಿ ಅದನ್ನು ಹೇಗೆ ಕೊಲ್ಲಲಿ? ಏಕೆಂದರೆ ಯಾವ ಸ್ವಾರ್ಥ ಹಿತಸಾಧನೆಯ ಕೆಲಸವಾದರೂ ನ್ಯಾಯಾನ್ಯಾಯ ವಿವೇಚನೆ ಮಾಡಬೇಕು" ಎಂದು ಹೆಣ್ಣು ಸಿಂಹವು ಹೇಳಿ ನರಿಯ ಮರಿಯನ್ನು ತನ್ನ ಮರಿಗಳ ಜೊತೆಯಲ್ಲಿಯೇ ಮಲಗಿಸಿ ಅದಕ್ಕೂ ಮೊಲೆ ಹಾಲನ್ನು ಕೊಟ್ಟಿತು. ಹೀಗೆ ಆ ಮೂರು ಮರಿಗಳೂ ಒಂದೇ ತಾಯಿಯ ಮಕ್ಕಳಂತೆ ಬೆಳೆಯತೊಡಗಿದವು.

ಒಂದು ದಿನ ಒಂದು ಕಾಡಾನೆಯು ಕಾಡಿನಲ್ಲಿ ತಿರುಗುತ್ತಾ ಆ ಕಡೆ ಬಂತು. ಅದನ್ನು ಕಂಡು ಸಿಂಹದ ಮರಿಗಳು ರೋಷದಿಂದ ಗರ್ಜಿಸುತ್ತಾ ಅದನ್ನು ಕೊಲ್ಲಲು ಆನೆಯ ಮೇಲೆ ಎರಗಿದವು. ಆದರೆ ನರಿಯ ಮರಿಯು ಅವುಗಳನ್ನು ಕರೆದು ಹೇಳಿತು "ಸೋದರರೆ, ಅದು ಒಂದು ಆನೆ. ನಿಮ್ಮ ಜಾತಿಯ ಶತ್ರು. ಅದರ ಹತ್ತಿರ ಹೋಗದಿರಿ. ಅದು ನಿಮ್ಮನ್ನು ಕೊಂದುಹಾಕೀತು" ಹೀಗೆ ಆ ನರಿಯ ಮರಿಯು ಹೇಳಿ ಗುಹೆಗೆ ಓಡಿ ಹೋಯಿತು. ಸಿಂಹದ ಮರಿಗಳು ತಮ್ಮ ಅಣ್ಣನು ಓಡಿ ಹೋಗುವುದನ್ನು ಕಂಡು ಧೈರ್ಯಗೆಟ್ಟವು. ಏಕೆಂದರೆ ಒಬ್ಬ ಶೂರ ಯೋಧನು ಇಡೀ ಸೇನೆಗೆ ಧೈರ್ಯ, ಶೌರ್ಯಗಳನ್ನು ಕೊಟ್ಟು ಹೋರಾಡಲು ಪ್ರೇರೇಪಿಸಬಹುದು. ಆದರೆ ಹೇಡಿಯಾದ ಒಬ್ಬನು ಇಡೀ ಸೈನ್ಯದ ಧೈರ್ಯವನ್ನು ಕೆಡಿಸಬಹುದು. ಅದರಂತೆ ಈ ಸಿಂಹದ ಮರಿಗಳು ತಮ್ಮ ಗುಹೆಗೆ ಬಂದು ತಮ್ಮಣ್ಣನು ಓಡಿ ಹೋದ ವಿಚಾರವನ್ನು ತಂದೆ ತಾಯಿಯರೊಡನೆ ಹೇಳಿ ತಮಾಷೆ ಮಾಡಿದವು.

ಇದನ್ನು ಕೇಳಿದ ನರಿಗೆ ತುಂಬಾ ಸಿಟ್ಟು ಬಂತು. ಅದು ಸಿಡಿಮಿಡಿಗೊಂಡು ಸಿಂಹದ ಮರಿಗಳನ್ನು ಬೈದಿತು. ಇದನ್ನು ಕಂಡು ಹೆಣ್ಣು ಸಿಂಹವು ನರಿಯನ್ನು ಹತ್ತಿರ ಕರೆದು "ನೀನು ಎಂದೂ ಆ ರೀತಿ ಬಯ್ಯಬಾರದು. ಅವರಿಬ್ಬರು ನಿನ್ನ ಸಹೋದರರು" ಎಂದಿತು. ಆಕೆಯ ಈ ಮಾತು ನರಿಗೆ ಇನ್ನಷ್ಟು ಪ್ರೋತ್ಸಾಹ ಕೊಟ್ಟಂತಾಯಿತು. ಅದು ಇನ್ನೂ ಹಾರಾಡತೊಡಗಿತು. "ನಾನೇನು ಧೈರ್ಯದಲ್ಲಿ ಇವರಿಗಿಂಥಾ ಕಡೆಯಲ್ಲ. ಬುದ್ಧಿಯಲ್ಲಾಗಲೀ ಚತುರತೆಯಲ್ಲಾಗಲೀ ಅವರಿಗೆ ಕೀಳಲ್ಲ. ಹಾಗಿರುವಾಗ ನನ್ನನ್ನು ತಮಾಷೆ ಮಾಡುವ ಹಕ್ಕೆಲ್ಲಿದೆ? ನಿಜವಾಗಿಯೂ ನಾನವರನ್ನು ಕೊಲ್ಲದಿರಲಾರೆ" ಎಂದಿತು.

ಹೆಣ್ಣು ಸಿಂಹವು ಇದನ್ನು ಕೇಳಿ ತನ್ನೊಳಗೆ ತಾನೇ ನಗುತ್ತಾ "ನೀನು ಸುಂದರನು, ಶಕ್ತಿಶಾಲಿಯು, ಜ್ಞಾನಿಯು. ಆದರೆ ನಿನ್ನ ಕುಟುಂಬದವರಾರೂ ಆನೆಯನ್ನು ಕೊಂದವರಲ್ಲ" ಎಂದಿತು. ಏಕೆಂದರೆ ತೋರಿಕೆಯ ಜಂಭದಿಂದ ಸಿಂಹದ ಮರಿಗಳೊಡನೆ ಹೋರಾಡಿ ಸಾಯುವದನ್ನು ಹೆಣ್ಣು ಸಿಂಹವು ತಡೆಯಲು ಬಯಸಿತು. "ಆದ್ದರಿಂದ ಕೇಳು, ನಿನ್ನ ತಾಯಿಯು ನರಿಯೇ ಹೊರತು ನಾನಲ್ಲ. ಆದರೆ ನಾನು ನಿನ್ನನ್ನು ಪೋಷಿಸಿ ಸಾಕಿಸಿರುವೆನು. ನನ್ನ ಹಾಲನ್ನು ಕೊಟ್ಟು ಬೆಳಸಿರುವೆನು. ನನ್ನ ಮಕ್ಕಳು ನಿನ್ನನ್ನು ತಮ್ಮ ಸಹೋದರ ಸಿಂಹವೆಂದು ತಿಳಿದುಕೊಂಡಿದ್ದಾರೆ. ನಿನ್ನನ್ನು ನರಿಯೆಂದು ಅವರು ತಿಳಿಯುವ ಮೊದಲು ನೀನು ಇಲ್ಲಿಂದ ದೂರವಾಗುವುದು ಒಳ್ಳೆಯದು. ಇಲ್ಲದಿದ್ದರೆ ನಿನ್ನನ್ನು ಉಳಿಸಲಾರರು," ಎಂದಿತು. ಇದನ್ನು ಕೇಳಿ ನರಿಗೆ ತುಂಬಾ ಭಯವಾಯಿತು. ಅದು ಓಡಿ ಹೋಗಿ ತನ್ನವರ ಗುಂಪನ್ನು ಸೇರಿಕೊಂಡಿತು"

ಆದ್ದರಿಂದ ನಿನ್ನನ್ನು ಬೇರೆ ಸೈನಿಕರು ಕುಂಬಾರನೆಂದು ತಿಳಿಯುವ ಮೊದಲು ನೀನು ಇಲ್ಲಿಂದ ಓಡಿಹೋಗು. ಇಲ್ಲದಿದ್ದರೆ ನಿನಗೆ ಒಳ್ಳೆಯದಾಗದು ಎಂದು ಅರಸನು ಹೇಳಲು ಕುಂಬಾರನು ಅರಸನ ಅಂಗರಕ್ಷಕ ದಳವನ್ನು ಬಿಟ್ಟು ಓಡಿಹೋದನು. ಆದ್ದರಿಂದ ಸತ್ಯವನ್ನು ಬಿಟ್ಟು ವರ್ತಿಸುವವರಿಂದ ಹಿತವಾಗಲಾರದು. ನೀನು ನಿನ್ನ ಸಂತತಿಯು ಸಂತೋಷಕ್ಕಾಗಿ ನಾನಾ ವೇಷ ತಾಳುತ್ತಿರುವೆ. ಆದರೆ ಹೆಂಗಸರನ್ನು ನಂಬದಿರು. ನಿನ್ನ ಸರ್ವಸ್ವವೇನು ತಿಳಿದರೂ ನಿನಗೆ ಮೋಸ ಅವರಿಂದ ಇದ್ದೇ ಇದೆ ಎಂದು ಕೋತಿಯು ಹೇಳಲು ಮೊಸಳೆಯು ಅದಕ್ಕೆ ಉದಾಹರಣೆಯೇನೆಂದು ಕೇಳಿದ್ದರಿಂದ ಮುಂದಿನ ವಾರ ಕಪಿಯು ಕೃತಘ್ನಳಾದ ಪತ್ನಿಯ ಕತೆಯನ್ನು ಹೇಳುವದು.

ಸೌಂದರ್ಯ ಮತ್ತು ಸದ್ಗುಣ

ಲೇ: ಕುಮಾರಿ ಪಿ. ಬಿ. ಕುಸುಮ ಮಡಿಕೇರಿ.

ಒಂದು ಊರಿನಲ್ಲಿ ಒಬ್ಬ ಬ್ರಾಹ್ಮಣನಿದ್ದನು. ಆತನಿಗೆ ಮೂರು ಹೆಣ್ಣು ಮಕ್ಕಳು. ಒಂದನೆಯವಳ ಹೆಸರು ಗೌರಿ, ಎರಡನೆಯವಳ ಹೆಸರು ನಿರ್ಮಲ ಮೂರನೆಯವಳ ಹೆಸರು ಸುಗುಣೆ ಎಂದು. ಗೌರಿ ಮತ್ತು ನಿರ್ಮಲರು ತುಂಬಾ ಸುಂದರಿಯರಾಗಿದ್ದರು. ಸುಗುಣೆಯು ಸುಂದರಿಯಲ್ಲ. ಜೊತೆಗೆ ತುಂಬಾ ಕಪ್ಪಾಗಿದ್ದಳು. ಆದರೆ ಆಕೆಯು ತನ್ನ ಹೆಸರಿಗೆ ತಕ್ಕಂತೆ ಒಳ್ಳೆ ಗುಣವುಳ್ಳವಳಾಗಿದ್ದಳು. ತಂದೆ ತಾಯಿಯರಲ್ಲಿಯೂ ಮಕ್ಕಳ ಮಟ್ಟಿಗೆ ತಾರತಮ್ಯವಿರುತ್ತದೆ. ಗೌರಿ ಮತ್ತು ನಿರ್ಮಲೆಯರು ತಂದೆ ತಾಯಿಗಳ ಪ್ರೀತಿಗೆ ಪಾತ್ರರಾಗಿದ್ದರು. ಆದರೆ ಸುಗುಣೆಯ ಮೇಲೆ ಅವರಿಗೆ ಅಂಥಾ ಮಮತೆ ಇರಲಿಲ್ಲ. ಮನೆಯಲ್ಲಿ ಏನು ತಪ್ಪಾದರೂ ಅದು ಸುಗುಣೆಯಿಂದಲೇ ಆಗುತ್ತಿತ್ತು. ಅಕ್ಕಂದಿಯರು ತಾವು ಸುಂದರಿಯರೆಂಬ ಕಾರಣದಿಂದ ಆಕೆಯನ್ನು ಹೀಯಾಳಿಸುತ್ತಿದ್ದರು. ಮನೆಗೆ ಬಂದವರೂ ಕೂಡ ಸುಗುಣೆಯನ್ನು ಮಾತಾಡಿಸುತ್ತಲೇ ಇರಲಿಲ್ಲ ಆದ್ದರಿಂದ ಆಕೆ ಮನೆಯೊಳಗೇ ತನ್ನ ಕೆಲಸ ಮಾಡಿಕೊಂಡು ಇದ್ದು ಬಿಡುತಿದ್ದಳು. ಆಕೆಗೆ ಒಳ್ಳೆ ಬಟ್ಟೆ ಬರೆಗಳೂ ಅಕ್ಕಂದಿಯರಿಂದಾಗಿ ಉಡಲು ತೊರೆಯುತ್ತಿರಲಿಲ್ಲ.

ಕ್ರಮೇಣ ಈ ಮೂವರೂ ಬೆಳೆದು ದೊಡ್ಡವರಾದರು. ಅಷ್ಟರಲ್ಲೇ ಸುಂದರಿಯರಾದ ಇಬ್ಬರು ಅಕ್ಕಂದಿಯರಿಗೂ ಸುಲಭದಲ್ಲಿ ವರ ನಿಶ್ಚಯವಾಗಿ ಅವರ ಮದುವೆಯು ವಿಜೃಂಭಣೆಯಿಂದ ನಡೆಯಿತು. ಇಬ್ಬರೂ ಶ್ರೀಮಂತ ಪತಿಯರನ್ನು ಸೇರಿ ಆನಂದದಲ್ಲಿ ತಂದೆ ತಾಯಿಯರನ್ನು ಮರೆತರು. ಸುಗುಣಳಿಗೆ ಯೋಗ್ಯ ವಯಸ್ಸಾದರೂ ವರನು ದೊರೆಯಲಿಲ್ಲ. ತಂದೆ ತಾಯಿಯರು ಆಕೆಯನ್ನು ಶಪಿಸತೊಡಗಿದರು. ತಾನು ಮದುವೆಯಾಗದೆ ಉಳಿಯುವೆನೆಂದು ಆಕೆ ಹೇಳಿದರೂ ತಂದೆ ತಾಯಿಯರ ಕಿರುಕುಳ ತಪ್ಪಿರಲಿಲ್ಲ.

ವಿಧಿಯ ನಿಯಮ. ಹಠತ್ತಾಗಿ ತಂದೆ ತಾಯಿಯರಿಬ್ಬರೂ ಕಾಯಿಲೆ ಬಿದ್ದರು. ಅವರು ತಮ್ಮ ಹಿರೇ ಮಕ್ಕಳಿಗೂ, ಶ್ರೀಮಂತ ಅಳಿಯಂದಿಯರಿಗೂ ಹೇಳಿ ಕಳುಹಿಸಿದರು ಆದರೆ ಅವರ ಸುಳಿವೇ ಇಲ್ಲ. ಸುಗುಣೆಯು ಮಮತೆಯಿಂದ ತಂದೆ ತಾಯಿಯರ ಶಿಶ್ರೂಷೆ ಮಾಡುತ್ತಿದ್ದಳು. ಆಕೆಯ ಪ್ರೀತಿ ಅನನ್ಯ ಸೇವೆಯಿಂದಾಗಿ ತಂದೆ ತಾಯಿಯರು ಆಕೆಯಬಗ್ಗೆ ತಾವು ಆ ವರೆಗೆ ತೋರಿಸಿದ ತಾತ್ಸಾರಕ್ಕಾಗಿ ಮರುಗಿದರು. ತಮ್ಮ ಹಿರೇ ಮಕ್ಕಳ ನಿರ್ದಯತೆಗಾಗಿ ನೊಂದುಕೊಂಡರು. ಸುಗುಣೆಯ ಶಿಶ್ರೂಷೆಯಿಂದ ತಂದೆ ತಾಯಿಯರು ಕಾಯಿಲೆಯಿಂದ ಹುಷಾರಾದರು.

ಅವರಿಗೆ ಆಗ ತಿಳಿಯಿತು. ತಾವು ಸೌಂದರ್ಯಕ್ಕೆ ಬೆಲೆ ಕಟ್ಟಿ ಹಿರೆಯ ಮಕ್ಕಳನ್ನು ಪ್ರೀತಿಸಿದ್ದು ಪ್ರಯೋಜನವಿಲ್ಲ. ಸೌಂದರ್ಯವು ಕೇವಲ ತೋರಿಕೆಯ ವಸ್ತು. ಆದ್ದರಿಂದ ಜೀವನದಲ್ಲಿ ಗುಣವೇ ಸೌಂದರ್ಯಕ್ಕಿಂಥಾ ಮಿಗಿಲು ಎಂದು. ಈಗ ಅವರು ಸುಗುಣೆಯನ್ನು ಅತ್ಯಂತ ಪ್ರೀತಿಯಿಂದ ನೋಡುತ್ತಿದ್ದಾರೆ. ಆಕೆಯೇ ತಮ್ಮ ನಿಜವಾದ ಪುತ್ರಿ ಎಂದು ಹೇಳುತ್ತಿದ್ದಾರೆ.

ಮಡಿಕೇರಿ

ಎತ್ತರ ಎತ್ತರ ಎತ್ತರಕೆ
ಹತ್ತುತ ಹತ್ತುತ ನಡೆ ಮುಂದೆ
ಸುತ್ತಲು ಹರಡಿಹ ಚಿತ್ರರಕೆ
ಒತ್ತುತ ಕಣ್ಣನು ನೋಡಿಂದೆ
ಮಲ್ಲಿಗೆ ಬೆಳುಪಿನ ಸುಂದರ ಸೊಬಗಿನ
ಉಲ್ಲಸ ತರುತಿಹ ಮಡಿಕೇರಿ
ಎಲ್ಲರ ಕಣ್ಮನ ಅಂದದ ಚಂದದ
ನಲ್ಮೆಯ ಊರಿದು ಮಡಿಕೇರಿ
ರಾಜಾಸೀಟಿನ ಸುಂದರ ಸೊಬಗು
ಓಂಕಾರೇಶ್ವರ ಗದ್ದಿಗೆ ಬೆಡಗು
ಜಡಿ ಮಳೆಗಾಳಿಯ ಭೀಕರ ಗುಡುಗು
ಕೇಳುತ ನಿನ್ನೆದೆಯುಲಿ ನಡುಗು!
ನೊಂದವ ಬೆಂದವ ಬಂದವನಿರಲಿ
ಗಂಧದ ಊರಿನ ಕಂಪಿನಲಿ
ಹಿಂದಕೆ ಮುಂದಕೆ ಯೋಚನೆ ಇರಲಿ
ನಿಲ್ಲುವರಿಲ್ಲೇ ತಂಪಿನಲಿ

—"ದಿನೇಶ" ೮ನೇ ಫಾರಂ

೩—೧೦—೫೨ನೇ **ಕೊಡಗು** ಶುಕ್ರವಾರ.

ಗಾಂಧಿ ಜಯಂತಿ.

ಅಕ್ಟೋಬರ್ ಎರಡನೆ ತಾರೀಕು ಪುನಹ ಬಂದಿತು. ಜಗದ್ವಂದ್ಯ ಮಹಾತ್ಮರ ಜನ್ಮದಿನವಿದು. ರಾಷ್ಟ್ರಪಿತರೂ ಭಾರತಕ್ಕೆ ಸ್ವಾತಂತ್ರ್ಯವನ್ನು ಒದಗಿಸಿ ಕೊಟ್ಟವರೂ ಆದ ಪೂಜ್ಯ ಮಹಾತ್ಮರನ್ನು ನೆನೆದು ಭರತ ಖಂಡವ ಏಕೆ? ಇಡೀ ಜಗತ್ತಿನ ಜನರು ಗೌರವವನ್ನು ಸಲ್ಲಿಸುವ ದಿನವಾದ್ದರಿಂದ ಈ ದಿನ ಮಹಾತ್ಮರ ಜೀವನದ ವಿಚಾರ ಒಂದು ಅಂತರ್ನಿರೀಕ್ಷಣೆಯು ಕರ್ತವ್ಯವಾಗಿದೆ.

ಒಬ್ಬ ವ್ಯಕ್ತಿಯನ್ನು ಗೌರವಿಸುವದು ಆತನ ಗುಣ, ನಡತೆ, ಹತ್ತು ಜನರಿಗೆ ಮಾಡಿದ ಸೇವೆಗಳಿಗಾಗಿ. ಅತ್ಯುತ್ತಮ ಸೇವೆ ಸಲ್ಲಿಸಿ ಬಹು ಜನರ ಹಿತಕ್ಕಾಗಿ ಜೀವಿಸಿದವರು ತಮ್ಮ ಸೇವೆಯ ಪರಿಮಾಣದಂತೆ ಆದರ್ಶ ಮಾನವರಾಗಿ ಕಡೆಗೆ ದೇವರ ಅಂತಸ್ತಿಗೂ ಏರುತ್ತಾರೆ. ಅದೇ ರೀತಿ ರಾಮ, ಕೃಷ್ಣ, ಬುದ್ಧ, ವಿವೇಕಾನಂದ ಮೊದಲಾದವರು ನಮ್ಮಂತೆಯೇ ಶರೀರಧಾರಿಗಳಾದ ವ್ಯಕ್ತಿಗಳಾದರೂ ತಮ್ಮ ಅಮೋಘ ಸೇವೆ ಸಾಧನೆಗಳಿಂದ ದೇವರ ಅಂತಸ್ತಿಗೆ ಏರಿದರು. ಆಧುನಿಕ ಯುಗದಲ್ಲಿ ನಮ್ಮೆಲ್ಲರ ಕಣ್ಮುಂದೆ ನಮ್ಮಂತೆಯೇ ಜರಾಪೀಡೆಗಳಿಗೆ ಈಡಾದ ಶರೀರಧಾರಿ ಪುರುಷನೊಬ್ಬನು ತನ್ನ ನೀತಿ, ನಡತೆ, ಸತ್ಯ ಸರಳ ಜೀವನದಿಂದ ದೇವತಾ ಮನುಷ್ಯನೆನಿಸಿ ದೇವರ ಸಾಲಿಗೇರಿದನು. ಮಹಾತ್ಮಾ ಗಾಂಧಿಯವರನ್ನು ದೇವರ ಅವತಾರವೆಂದವರೆಷ್ಟೋ, ದೇವರೆಂದು ಪೂಜಿಸುವವರೆಷ್ಟೋ.

ಇಂಥಾ ಒಂದು ಸ್ಥಿತಿಗೆ ಒಬ್ಬ ವ್ಯಕ್ತಿ ಏರಬೇಕಾದರೆ ಅದು ಶಾರೀರಿಕ ಬಲದ ಕಾರಣವಾಗಲೀ, ದುಡ್ಡಿನ ಬಲದ ಪ್ರೇರಣೆಯಾಗಲೀ ಅಲ್ಲ. ಅದು ಆತ್ಮದ ಪ್ರೇಮದ ಬಲ. ಗಾಂಧೀಜಿಯವರ ಈ ವಿಶಾಲ ಪ್ರೇಮವೇ ಅವರನ್ನು ಹಲವು ನಿಶ್ಚಿತ ಕಾರ್ಯಕ್ರಮಗಳನ್ನು ಜೀವನ ಧ್ಯೇಯವಾಗಿ ಕೈಕೊಳ್ಳುವಂತೆ ಮಾಡಿತು. ಅವುಗಳಲ್ಲಿ ಪ್ರಾಮುಖ್ಯವೆನಿಸಿದ ಖಾದಿ ಪ್ರತಿಜ್ಞೆ, ಅಸ್ಪೃಶ್ಯತಾ ನಿವಾರಣೆ, ಅಹಿಂಸಾ ತತ್ವ, ಪಾನನಿರೋಧ ಮೊದಲಾದುವು ಕೆಲವು. ಇಂದಿನ ಈ ಪವಿತ್ರ ದಿನದಲ್ಲಿ ಅವುಗಳ ಬಗ್ಗೆ ನಾವೇನು ಮಾಡುತ್ತಿರುವೆವೆಂಬುದನ್ನು ಪರಿಶೀಲಿಸುವಾ.

ಒಮ್ಮೆ ಖಾದಿಯೆಂದರೆ ಅತೀ ಪವಿತ್ರ ವಸ್ತುವಾಗಿತ್ತು. ಖಾದಿಧಾರಿಯು ಸತ್ಯವ್ರತನೂ, ದೇಶ ಸೇವಕನೂ ಎಂದು ಪರಿಗಣಿಸಲ್ಪಡುತ್ತಿತ್ತು. ಖಾದಿಯು ರಾಷ್ಟ್ರದ ಬಂಧ ವಿಮೋಚನೆಯ ಹಾಗೂ ದಾರಿದ್ರ್ಯನಿವಾರಣೆಯ ಸಂಕೇತವಾಗಿತ್ತು. ಖಾದಿಯಲ್ಲಿ ಆರ್ಥಿಕ ಪ್ರಶ್ನೆಮಾತ್ರವಲ್ಲ; ನೈತಿಕ ದೃಷ್ಟಿಯೂ ಅಡಕವಾಗಿತ್ತು. ಖಾದಿ ಉಡುವದು ಸಮಾಜದಲ್ಲಿ ಗೌರವದ ಚಿಹ್ನೆಯಾಗಿತ್ತು. ಆದರೆ ಅಂಥಾ ಸ್ಥಾನ ಇಂದು ಖಾದಿಗೆಲ್ಲಿದೆ? ದೇಶ ಪ್ರೇಮ ತೋರಿಸಲು ಖಾದಿಯೇ ಉಡಬೇಕೆ? ಎಂದು ಪ್ರಶ್ನಿಸುವದು ಸಾಮಾನ್ಯವಾಗಿದೆ. ಖಾದಿಯ ಹೆಸರಿನಲ್ಲಿ ಕಳ್ಳ ವ್ಯಾಪಾರ, ಮೋಸಗಳು ನಡೆಯುತ್ತಿವೆ. ಯಾವುದೋ ಬಟ್ಟೆಯನ್ನು ಖಾದಿಯೆಂದು ಮಾರಲಾಗುತ್ತಿದೆ. ಇದು ಎಷ್ಟರ ಮಟ್ಟಿಗೆ ಎಂದರೆ ನಮ್ಮ ಕೊಡಗು ಸರಕಾರವೂ ಕೂಡ ಮೊನ್ನೆಯಾಗಿ ಖಾದಿ ಮಸೂದೆಯನ್ನು ತಂದು ಲೈಸನ್ಸ್ ಪಡೆಯದವರು ಖಾದಿ ಮಾರಾಟ ಮಾಡಕೂಡದೆಂಬ ನಿರ್ಬಂಧ ಹಾಕಬೇಕಾಯಿತು. ಇಂಥಾ ನಿರ್ಬಂಧ ಹಾಕಿ ಖಾದಿ ಪ್ರಸಾರದ ಬಗ್ಗೆ ಸರಕಾರ ಗಮನವಿಡದಿದ್ದರೆ ಈ ನಿರ್ಬಂಧದಿಂದ ಅನಾಹುತವೇ ಆದೀತು. ಏಕೆಂದರೆ ಅಧಿಕೃತ ಖಾದಿ ಅವಶ್ಯ ಉಡುವವರಿಗೂ ದೊರೆಯದಾದೀತು. ಸರಕಾರವು ಖಾದಿಗೆ ಕೊಡುತ್ತಿರುವ ಪ್ರೋತ್ಸಾಹ ಎಷ್ಟಕ್ಕೂ ಸಾಲದು. ಸರಕಾರಿ ಉದ್ಯೋಗಿಗಳು ಖಾದಿ ತೊಡುವಂತೆ ಪ್ರೋತ್ಸಾಹಿಸಬೇಕು. ಸರಕಾರವು ತನ್ನ ಕೆಳ ನೌಕರರಿಗೆ ಸರಬರಾಯಿ ಮಾಡುವ, ಕಚೇರಿಗಳಲ್ಲಿ ಉಪಯೋಗಿಸುವ ಎಲ್ಲಾ ಬಟ್ಟೆಯೂ ಖಾದಿಯೇ ಆಗಬೇಕೆಂದು ನಿರ್ಣಯಿಸಬೇಕು. ಕಾಂಗ್ರೆಸ್ ಸಮಿತಿಯವರೂ ಖಾದಿಯ ಬಗ್ಗೆ ಹೆಚ್ಚು ನಿಷ್ಠೆ ವಹಿಸಬೇಕು. ಇಲ್ಲದಿದ್ದರೆ ಮಹಾತ್ಮರ ಜೀವನ ತತ್ವಗಳಲ್ಲೊಂದನ್ನು ಕಡೆಗಣಿಸಿದಂತಾಗುವದು.

ಅಸ್ಪೃಶ್ಯತಾ ನಿವಾರಣೆಯ ವಿಚಾರದಲ್ಲೂ ಜನ ಜಾಗೃತಿ ಆಗಬೇಕಾದಷ್ಟು ಆಗಿಲ್ಲ. ಸರಕಾರವೂ ಈ ಬಗ್ಗೆ ಖಾನೂನು ಕಾಯಿದೆಗಳನ್ನು ಮಾಡಿದ್ದರೂ, ಹರಿಜನ ಹಾಗೂ ದಳಿತ ವರ್ಗದವರ ಪ್ರಗತಿಗೆ ಪ್ರಯತ್ನ ನಡೆಸುತ್ತಿದ್ದರೂ ಹೆಚ್ಚಿನ ಪ್ರಗತಿ ಆದಂತೆ ತೋರುವುದಿಲ್ಲ. ಕಳೆದ ಕೊಡಗು ಶಾಸನ ಸಭೆಯಲ್ಲಿದ್ದ ಠರಾವುಗಳಲ್ಲಿ ಬಹು ಸಂಖ್ಯೆಯವು ಹರಿಜನರ ಮತ್ತು ಸಿನ್ನ ವರ್ಗದವರ ಹಿತ ಬಯಸುವ ಠರಾವುಗಳಾಗಿದ್ದವು. ಈ ಠರಾವುಗಳ ಸಂಖ್ಯೆಯಿಂದಲೇ ಈ ವರ್ಗದವರು ಆಶಿಸಿದಷ್ಟು ಆಗಿಲ್ಲವೆಂಬುದು ಗೊತ್ತಾಗುತ್ತದೆ. ಈ ಬಗ್ಗೆ ಸರಕಾರಕ್ಕೆ ಮಾತ್ರ ಜವಾಬ್ದಾರಿಯಲ್ಲ. ಸರಕಾರವು ಅವರ ಆರ್ಥಿಕ ಅಭಿವೃದ್ಧಿಯ ಬಗ್ಗೆ ಸಹಾಯ ಮಾಡಿ ಸಾಮಾಜಿಕ ತೊಂದರೆಗಳ ನಿವಾರಣೆಯ ಬಗ್ಗೆ ಖಾನೂನು ಮಾಡಬಹುದು. ಅದು ಜಯಪ್ರದವಾಗಬೇಕಾದರೆ ಸಮಾಜದ ಉತ್ತಮರೆನಿಸಿದವರು ಅವರನ್ನು ತಮ್ಮ ಸೋದರರೆಂಬ ಮನೋಭಾವದಿಂದ ಸ್ವಾಗತಿಸದಿದ್ದರೆ ಕೇವಲ ಖಾನೂನು ಮಾಡಿದುದರಿಂದ ಪ್ರಯೋಜನವಾಗದು.

ಮಹಾತ್ಮರ ಜೀವದ ಜೀವಾಳವಾದ ಅಹಿಂಸೆಯ ಅಭಾವವೇ ಜಗತ್ತಿನ ಯುದ್ಧಗಳಿಗೂ, ಪರಸ್ಪರ ವೈಶಮ್ಯಕ್ಕೂ ಕಾರಣವಾಗಿದೆ. ಅಹಿಂಸೆಗೆ ಪ್ರೇಮ ತಳಹದಿ. ದ್ವೇಷ, ಈರ್ಷೆ, ಅಸೂಯೆ, ಸ್ವಪ್ರೀತಿ, ಅಸತ್ಯಗಳಿರುವಲ್ಲಿ ಅಹಿಂಸೆಗೆ ಸ್ಥಾನವಿಲ್ಲ. ಪರಸ್ಪರ ಅಪನಂಬಿಕೆ ಇರುವಲ್ಲಿ ಅಹಿಂಸೆಗೆ ಸ್ಥಳವಿಲ್ಲ! ದೇಶದಲ್ಲಿ ಹಬ್ಬಿರುವ ಸಿ. ಐ. ಡಿಗಳ ತಂಡವು ದೇಶದಲ್ಲಿ ಅಹಿಂಸೆಗೆ ಜಾಗವಿಲ್ಲವೆಂಬುದನ್ನು ತೋರಿಸುತ್ತದೆ. ಏಕೆಂದರೆ ಅಹಿಂಸೆ ಪರಸ್ಪರ ಪ್ರೀತಿ, ವಿಶ್ವಾಸಗಳ ತಳಹದಿಯಲ್ಲಿ ಬೆಳೆಯಬೇಕಾದುದು.

ಮತ್ತೆ ಪಾನನಿರೋಧವು ಕೇವಲ ತೋರಿಕೆಯ ಮಾತಾಗಿ ಪರಿಣಮಿಸಿದೆ. ಜನತೆಯಲ್ಲೂ ಕುಡಿಯುವದು ಒಂದು ಸಾಮಾಜಿಕ ಅವಶ್ಯಕತೆ ಎಂಬ ಭಾವನೆ ಹೆಚ್ಚಾಗುತ್ತಿರುವಂತೆ ತೋರುತ್ತಿದೆ. ಕುಡಿಯುವವನನ್ನು ಸಮಾಜವು ಧಿಕ್ಕರಿಸುವ ಕಾಲವೊಂದಿತ್ತು. ಆದರೆ ಇಂದು ಅಂಥಾವರ ಬಳಗವೇ ಹೆಚ್ಚಾಗತೊಡಗಿದೆ. ಅದಕ್ಕನುಗುಣವಾಗಿ ಸರಕಾರವೂ ಅದಕ್ಕೆ ಪ್ರೋತ್ಸಾಹಕೊಡುವಂತೆ ತೋರುತ್ತಿದೆ. ಕೊಡಗಿನಲ್ಲಿ ಒಂದು ವಿಧದ ಕೂಪನ್ ಪದ್ಧತಿಯನ್ನು ತಂದು ನಿಯಂತ್ರಣವಿದ್ದರೂ ಹಿಂದಿದ್ದ ಕೂಪನಿಗೆ ಒಂದು ಕುಪ್ಪಿಯ ಬದಲು ಈಗ ಎರಡು ಕುಪ್ಪಿ ಕೊಡುವಂತೆ ಮಾಡಿದುದು ಮೇಲಿನ ನಮ್ಮ ಮಾತನ್ನು ಸಮರ್ಥಿಸುತ್ತದೆ. ಗಾಂಧೀಜಿಯವರ ಇಂಥಾ ಪವಿತ್ರ ತತ್ವಗಳು ಒಂದೊಂದಾಗಿ ಶಿಥಿಲಗೊಳ್ಳುತ್ತಿರುವಾಗ ಗಾಂಧಿಜಯಂತಿಯನ್ನು ಆಚರಿಸಿ ಜಡತುಲ್ಯವಾದ ಗಾಂಧೀಜಿಯ ಭಾವಚಿತ್ರಕ್ಕೆ ಹೂಮಾಲೆ ಹಾಕುವದರಿಂದ ಪ್ರಯೋಜನವಿಲ್ಲ. ಆದ್ದರಿಂದ ಮಹಾತ್ಮರ ವಿಪುಲ ತತ್ವಗಳನ್ನು ಜಾರಿಯಲ್ಲಿ ತರುವ ದೃಢ ಮನಸ್ಸಿನವರು ನಾವಾದರೆ ಮಾತ್ರ ಗಾಂಧೀಜಯಂತಿಯ ಆಚರಣೆ ಸಾರ್ಥಕವಾದೀತು.

SPECIAL NOTICE.

The Gymkhana Races on the Jambur Bane have been postponed from the 4th and will now be held on the 7th and 10th of October.

J. H. Sprott,
President,
Coorg & Mysore Gymkhana Club.

ರಾಷ್ಟ್ರಪತಿಗಳ ಸಂದೇಶ.

ಹಿಂದೂದೇಶದ ಕ್ಷಯರೋಗ ನಿವಾರಣಾ ಸಂಸ್ಥೆಯು ಮುಖೇನ ಮೂರು ವರ್ಷಗಳ ಹಿಂದೆ ಕ್ಷಯರೋಗನಿವಾರಣಾ ಸೀಲಿನ ಯೋಜನೆಯು ಹೊರಡಿಸಲ್ಪಟ್ಟದರ ಪರಿಣಾಮವಾಗಿ ನಮ್ಮ ದೇಶದಲ್ಲಿ ಸಾಧಾರಣ ೩೦ ಲಕ್ಷ ರೂಪಾಯಿಗಳನ್ನು ಕ್ಷಯನಿವಾರಣಾ ಕೆಲಸಕ್ಕಾಗಿ ಎತ್ತಲು ಸಾಧ್ಯವಾದುದಕ್ಕಾಗಿ ನಾನು ಸಂತೋಷಪಡುತ್ತೇನೆ.

ಈ ಯೋಜನೆಯು ಈ ಯುಗದ ಶ್ರೇಷ್ಠ ಮಾನವರಾದ ಮಹಾತ್ಮ ಗಾಂಧೀಜಿಯವರ ಜನ್ಮದಿವಸವೇ ಪ್ರಾರಂಭವಾಗುತ್ತೆ. ಮಹಾತ್ಮರ ಜೀವನದ ಆಶೆಯು ಈ ರೋಗದ ನಿರ್ಮೂಲ ಮತ್ತು ಈ ಕಾಯಿಲೆಯಿಂದ ನರಳುವವರ ಬಿಡುಗಡೆಯೇ ಆಗಿದೆ. ಆದ್ದರಿಂದ ಆ ದಿನ ನಾವು ನಮ್ಮ ಕೈಲಾದಷ್ಟು ಆ ಯೋಜನೆಗೆ ಧನ ಸಹಾಯ ಮಾಡುವೆವು ಎಂದು ಪ್ರತಿಜ್ಞೆ ಮಾಡಿ ಅದರಂತೆ ವರ್ತಿಸಿದರೆ ನಮ್ಮ ದೇಶದ ಪಿತಾಮಹನ ಆಶೆಯ ಬಗ್ಗೆ ಕಾಣಿಕೆ ಸಲ್ಲಿಸಿದಂತಾಗುವುದಲ್ಲದೆ ಲಕ್ಷಾಂತರ ಮಾನವ ವರ್ಗದ ಪ್ರಾಣ ಹಾನಿಯನ್ನು ನಿಲ್ಲಿಸುವ ಪ್ರಯತ್ನಕ್ಕೆ ಸಹಾಯಮಾಡಿದಂತಾಗುತ್ತೆ.

ನಾಲ್ಕನೇ ಸೀಲ್ ಯೋಜನೆಯೂ ತಾರೀಕು ೨ ನೇ ಅಕ್ಟೋಬರ್ ತಿಂಗಳಲ್ಲಿ ಪ್ರಾರಂಭಿಸುತ್ತದೆ. ಹಿಂದೂದೇಶದ ಜನರು ಈ ಸಂದರ್ಭವನ್ನು ಮನಗಂಡು ಸಾವಿರಾರು ಜನರ ಪ್ರಾಣರಕ್ಷಣಾ ಕಾರ್ಯದಲ್ಲಿ ತೊಡಗುತ್ತಿರುವ ಕ್ಷಯರೋಗನಿವಾರಣಾ ಸಂಸ್ಥೆಯ ಸೀಲಿಗೆ ಸಹಾಯಮಾಡುವಿರಾಗಿ ನನಗೆ ನಂಬಿಕೆ ಇದೆ. ನಾನು ಈ ಸಂಸ್ಥೆಗೆ ಜಯವನ್ನು ಬಯಸುತ್ತೇನೆ.

ರಾಜೇಂದ್ರ ಪ್ರಸಾದ್.

ಕೊಡಗಿನಲ್ಲಿ ೧೯೩೬ರಲ್ಲಿ ಒಟ್ಟು ೧೯೧ ಕೇಸುಗಳನ್ನು ಇಂಡಿಯನ್ ಪೀನಲ್ ಕೋಡ್ ಪ್ರಕಾರ ಚಾರ್ಜ್‌ಶೀಟ್ ಮಾಡಲಾಯಿತೆಂದೂ ಅವುಗಳಲ್ಲಿ ೧೧೧ ಕೇಸುಗಳು ನೆರೆಪ್ರಾಂತಗಳಿಗೆ ಸೇರಿದ ಜನರ ಮೇಲಾದುವೆಂದೂ ಗೊತ್ತಾಗಿದೆ.

ಕೂಡಿಗೆಯಲ್ಲಿರುವ ಸರಕಾರಿ ಡೈರಿ ಫಾರಮಿಗೆ ೧೯೩೦-೩೧ರಲ್ಲಿ ರೂಪಾಯಿ ೩೫,೯೦೩, ೧೯೩೧-೩೨ರಲ್ಲಿ ೭೩,೪೦೭, ೧೯೩೨-೩೩ರಲ್ಲಿ ೭೭,೪೫೦ ಖರ್ಚಾಗಿದೆಯೆಂದೂ, ೧೯೩೦-೩೧ರಲ್ಲಿ ರೂ ೧೦,೩೪೦ ೧೯೩೧-೩೨ರಲ್ಲಿ ೧೧,೨೭೨, ೧೯೩೨-೩೩ರಲ್ಲಿ ೧೪,೧೦೭ ರೂಪಾಯಿ ಉತ್ಪತ್ತಿ ಬಂದಿದೆಯೆಂದೂ ತಿಳಿದುಬಂದಿದೆ.

ಕೂಡಿಗೆಯಲ್ಲಿರುವ ಸರಕಾರಿ ವ್ಯವಸಾಯ ಫಾರ್ಮಿಗೆ ೧೯೩೦-೩೧ರಲ್ಲಿ ರೂ ೭೧೦೧, ೧೯೩೧-೩೨ರಲ್ಲಿ ೧೨,೨೩೩, ೧೯೩೨-೩೩ರಲ್ಲಿ ೨೭,೭೪೩ ರೂ. ಖರ್ಚಾಗಿ ಈ ಫಾರ್ಮಿನಿಂದ ೩೦-೩೧ರಲ್ಲಿ ರೂ. ೫೭೯೨, ೩೧-೩೨ರಲ್ಲಿ ೯೯೪೭, ೩೨-೩೩ರಲ್ಲಿ ೭೭೭೭ ರೂಪಾಯಿ ಆದಾಯ ಬಂದಿದೆಯೆಂದೂ ಮಡಿಕೇರಿ ಫಾರಮಿಗೆ ಅದೇ ವರ್ಷಗಳಿಗೆ ಅನುಕ್ರಮವಾಗಿ ರೂ. ೨೦೫೬, ೭೬೦೫, ೭೭೦೯, ಖರ್ಚಾಗಿ ೩೧-೩೨ರಲ್ಲಿ ೧೯೩೩, ಮತ್ತು ೩೨-೩೩ರಲ್ಲಿ ೨೦೩೩ ಆದಾಯವೂ ಪೊನ್ನಂಪೇಟೆ ಫಾರಮಿಗೆ ಅದೇ ವರ್ಷಗಳಿಗೆ ಅನುಕ್ರಮವಾಗಿ ರೂ. ೭೬೩೩, ೧೧,೨೨೩, ೧೩,೪೫೭ ರೂ ಖರ್ಚಾಗಿ ೨೭೪೯, ೨೫೭೪ ಮತ್ತು ೩೫೧೨ ರೂಪಾಯಿಗಳ ಆದಾಯವೂ ಬಂದಿದೆಯಂತೆ.

ಸೋಮವಾರಪೇಟೆ ಕೋಳಿ ಸಾಕುವ ಕೇಂದ್ರಕ್ಕೆ ೧೯೩೦ರಿಂದ ತಾ. ೧೫-೯-೩೩ರ ವರೆಗೆ ರೂ. ೧೩,೪೬೭ ಖರ್ಚಾಗಿದೆಯೆಂದೂ ಇದೇ ಅವಧಿಯಲ್ಲಿ ರೂ. ೧೩,೫೭೩ ಆದಾಯ ಬಂದಿದೆಯೆಂದೂ ತಿಳಿಯುಬಂದಿದೆ.

ಕಳೆದ ವರ್ಷ ಪ್ರಾರಂಭಿಸಿದ ಸಾಮೂಹಿಕ ವಿಕಾಸ ಯೋಜನೆಗೆ ಅಡಕವಾದ ಗ್ರಾಮಗಳನ್ನು ಬಿಟ್ಟು ಉಳಿದ ಗ್ರಾಮಗಳನ್ನು ಅಂದರೆ ಮಡಿಕೇರಿ ಭಾಗಮಂಡಲ ಮತ್ತು ನಾಪೋಕ್ಲು ಒಂದು, ಅಮ್ಮತ್ತಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಶ್ರೀಮಂಗಲ ಮತ್ತೊಂದು, ಹೀಗೆ ಎರಡು ಸಾಮೂಹಿಕ ವಿಕಾಸ ಯೋಜನೆಯ ಬ್ಲಾಕುಗಳಾಗಿ ಮಾಡಿ ಪ್ರತಿ ಬ್ಲಾಕಿಗೆ ರೂ ೧೫ ಲಕ್ಷದಂತೆ ವ್ಯಯಮಾಡುವ ಏರ್ಪಾಟಾಗಿದೆಯೆಂದೂ ಈ ಯೋಜನೆಯು ತಾರೀಕು ೨-೧೦-೫೩ರಿಂದ ಜಾರಿಗೆ ಬರುವದೆಂದೂ ಗೊತ್ತಾಗಿದೆ.

ಜಲಂಧರಿನಲ್ಲಿರುವ ಕೊಡವರು ತಾ. ೬-೯-೫೩ರಲ್ಲಿ ಅಲ್ಲಿರುವ ಶ್ರೀಮಾನ್ ಅರೆಯಡ ಪೂವಯ್ಯನವರ ಭವನದಲ್ಲಿ ಕೈಲ್‌ಮೂಹೂರ್ತ ಹಬ್ಬವನ್ನು ಆಚರಿಸಿದರು.

ವೀರಾಜಪೇಟೆ ಶ್ರೀ ಕಾವೇರಿ ಆಶ್ರಮದಲ್ಲಿ ತಾ. ೮-೧೦-೫೩ರಿಂದ ೧೬-೧೦-೫೩ರ ವರೆಗೆ ನವರಾತ್ರಿ ಪೂಜೆಯನ್ನೂ, ತಾ. ೧೭-೧೦-೫೩ರಿಂದ ೧೯-೧೦-೫೩ರ ವರೆಗೆ ಶ್ರೀ ಕಾವೇರಿ ಪೂಜೆಯನ್ನೂ ಪ್ರತಿ ದಿನ ಸಾಯಂಕಾಲ ೭ ಗಂಟೆಯಿಂದ ನಡೆಸಲಾಗುವದು. ಎಲ್ಲಾ ದಿನಗಳಲ್ಲಿ ಭಾಷಣ, ವಾಚನ ಮತ್ತು ಹಂಕಥೆಗಳು ನಡೆಯಲಿವೆ.

ವೀರಾಜಪೇಟೆ ಆಸ್ಪತ್ರೆಯಲ್ಲಿ ಸಬ್ ಅಸಿಸ್ಟೆಂಟ್ ಸರ್ಜನರಾಗಿದ್ದ ಡಾ. ಎಸ್. ಆರ್. ಚಂದ್ರಶೇಖರರವರನ್ನು ಸರಕಾರದವರು ಕಿವಿ, ಮೂಗು ಮತ್ತು ಗಂಟಲು (ಈ. ಎನ್. ಟಿ ಕೋರ್ಸ್) ಸಂಬಂಧ ಹೆಚ್ಚಿನ ವ್ಯಾಸಂಗ ಪಡೆಯಲು ಮದರಾಸಿಗೆ ಕಳುಹಿಸಿರುತ್ತಾರೆ.

ವರ್ತಮಾನ.

ಹೊರಗಿನಿಂದ ಬಂದು ಕೊಡಗಿನ ಸರಕಾರದ ಅತಿಥಿಗಳಾಗಿದ್ದ ಕೇಂದ್ರ ಸರಕಾರದ ಮಂತ್ರಿಗಳು ಇತರ ಅದ್ಯ ಮಹನಿಯರಿಗಾಗಿ ೫೧-೫೨ರಲ್ಲಿ ರೂ. ೧೫೭೦/-, ೫೨-೫೩ರಲ್ಲಿ ರೂ. ೭೮೮೦/- ವೆಚ್ಚವಾಗಿವೆ

೧೯೫೨ರಿಂದ ಈಚೆಗೆ ಕೊಡಗು ಸರಕಾರವು ಮೈಸೂರು ಸಂಸ್ಥಾನದಿಂದ ೧೦ ಗಜೆಟೆಡ್ ಮತ್ತು ನಾನ್ ಗಜೆಟೆಡ್ ಅಧಿಕಾರಿಗಳನ್ನೂ ಎರಡು ನಿವೃತ್ತರನ್ನೂ ಇಲ್ಲಿ ಉದ್ಯೋಗಕ್ಕೆ ನೇಮಿಸಿದೆಯೆಂದು ತಿಳಿಯುತ್ತದೆ.

ಕೊಡಗಿನಲ್ಲಿ ಆಹಾರ ಪದಾರ್ಥಗಳ ಕಳ್ಳ ಸಾಗಾಟದ ೧೫೫ ಕೇಸುಗಳು ೧-೯-೫೨ರಿಂದ ೩೧-೮-೫೩ರ ವರೆಗೆ ಹಿಡಿಯಲ್ಪಟ್ಟಿವೆ. ಇವುಗಳಲ್ಲಿ ೬೨ ಕೇಸುಗಳಲ್ಲಿ ಶಿಕ್ಷೆಯಾಗಿ, ೧೨ ಬಿಡುಗಡೆಯಾಗಿ, ಉಳಿದವು ತೀರ್ಮಾನಕ್ಕೆ ಇನ್ನೂ ಇರುವವೆಂದು ತಿಳಿದು ಬರುತ್ತದೆ.

ಕಳೆದ ಮಳೆಗಾಲದಲ್ಲಿ ನಷ್ಟಪಟ್ಟ ರೈತರಿಗೆ ಎ ಎಲ್. ಆಕ್ಟ್ ಪ್ರಕಾರ ೭೭.೭೫ ಮತ್ತು ೮೫ರ ರೂಪಿತ ಆಕ್ಟ್ ಪ್ರಕಾರ ೧ ಲಕ್ಷದ ೯೭ ಸಾವಿರ ರೂಪಾಯಿಗಳ ಸಾಲವನ್ನು, ಶೇಕಡ ೬ ದರದಲ್ಲಿ ಸರಕಾರವು ಕೊಟ್ಟಿದೆ. ಕೊಡಗಿಗೆ ಮಳೆಯಿಂದಾದ ನಷ್ಟವು ಸುಮಾರು ೪ ಲಕ್ಷ ರೂಪಾಯಿಗಳಷ್ಟೆಂದು ಸರಕಾರ ಅಂದಾಜು ಮಾಡಿದೆ.

ಕೊಡಗಿನಲ್ಲಿ ೪೭೧ ರೈತರು ಜಪಾನು ಪದ್ಧತಿಯ ಬತ್ತ ವ್ಯವಸಾಯ ಕ್ರಮವನ್ನು ಸುಮಾರು ೯೦೦ ಎಕರೆ ಜಾಗದಲ್ಲಿ ಕೈಕೊಂಡಿರುವರೆಂದೂ ಇದರಿಂದ ಸುಮಾರು ೨೧೦ ಟನ್ ಬತ್ತ ಹೆಚ್ಚು ಬೆಳೆಯಬಹುದೆಂದೂ ಸರಕಾರ ಅಂದಾಜು ಮಾಡಿದೆ.

ಬರಪೊಳೆ ಹೈಡ್ರೋ ಎಲೆಕ್ಟ್ರಿಕ್ ಯೋಜನೆಯ ಬಗ್ಗೆ ಪರಿಶೀಲನೆ ನಡೆದಿದೆಯೆಂದೂ ಅದು ಇನ್ನೂ ಪೂರ್ತಿಯಾಗಿಲ್ಲವೆಂದೂ ಜುಲೈ ಅಂತ್ಯದ ವರೆಗೆ ಒಟ್ಟು ರೂ. ೩೪,೯೯೪ ಖರ್ಚಾಗಿದೆಯೆಂದೂ ತಿಳಿದು ಬಂದಿದೆ.

ಕೊಡಗಿನಲ್ಲಿ ೧೯೫೨-೫೩ರಲ್ಲಿ ವ್ಯವಸಾಯ ಆದಾಯ ತೆರಿಗೆಯ ಉತ್ಪತ್ತಿ ೧೩,೮೪,೦೦೦ ವೆಂದೂ ಈ ವರ್ಷ ಆಗಷ್ಟ್ ತಿಂಗಳವರೆಗೆ ರೂ. ೧,೩೪,೦೦೦ ಬಂದಿದೆಯೆಂದೂ ಈ ಕಂದಾಯವು ೫೨-೫೩ರಲ್ಲಿ ೪೮೦ ಜನರ ಮೇಲೂ, ೫೩-೫೪ರಲ್ಲಿ ೫೧೪ ಜನರ ಮೇಲೂ ಹಾಕಲ್ಪಟ್ಟಿದೆಯೆಂದೂ ಇವರಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚು ಉತ್ಪತ್ತಿ ಇರುವವರು ೩ ಜನರು, ೫೦ ಸಾವಿರದಿಂದ ೧ ಲಕ್ಷದ ವರೆಗೆ ೪ ಜನರು, ೨೫ ಸಾವಿರದಿಂದ ೫೦ ಸಾವಿರದ ವರೆಗೆ ೫ ಜನರು, ೧೫ ಸಾವಿರದಿಂದ ೨೫ ಸಾವಿರದ ವರೆಗೆ ೪ ಜನರು, ಉಳಿದವರು ೧೫ ಸಾವಿರದ ಕೆಳಗಿನವರೆಂದೂ ತಿಳಿಯ ಬಂದಿದೆ.

ಸೋಮವಾರಪೇಟೆ ನಾಡು ನಗರಳ್ಳಿ ಗ್ರಾಮದಲ್ಲಿ ತಾ. ೨೨-೯-೫೩ರಲ್ಲಿ ಶ್ರೀ ಹೆಚ್. ಎಂ. ಚಂಗಪ್ಪನವರ ಅಧ್ಯಕ್ಷತೆಯಲ್ಲಿ ವಯಸ್ಕರ ಶಿಕ್ಷಣ ಶಾಲಾ ಉದ್ಘಾಟನಾ ಪ್ರಾರಂಭೋತ್ಸವವು ನಡೆಯಿತು. ೩೭ ವಯಸ್ಕರು ಅಕ್ಷರಾಭ್ಯಾಸ ಮಾಡುತ್ತಿರುವರು.

ಸೋಮವಾರಪೇಟೆ ನಾಡು ಕುಮಾರಳ್ಳಿ ಮತ್ತು ಬಾಚಳ್ಳಿ ಗ್ರಾಮಸ್ಥರುಗಳು ಬಾಚಳ್ಳಿಯಲ್ಲಿ ತಾ. ೨೩ರಲ್ಲಿ ಶ್ರೀ ಹೆಚ್. ಎಂ. ಚಂಗಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಬಾಚಳ್ಳಿಯಲ್ಲಿ ಒಂದು ಪೋಷಕ ಶಾಲೆಯನ್ನು ಕೂಡಲೆ ತೆರೆಯಬೇಕೆಂದು ಠರಾವು ಪಾಸು ಮಾಡಿ ಘನ ಸರಕಾರವು ಕೂಡ್ಲೆ ಇಲ್ಲಿಗೆ ಒಂದು ಪೋಷಕ ಶಾಲೆಯನ್ನು ಕೊಡಬೇಕೆಂದು ಅರ್ಜಿ ಬರಕೊಳ್ಳುವಂತೆ ತೀರ್ಮಾನವಾಯಿತು.

ಸೋಮವಾರಪೇಟೆ ನಾಡು ಶಾಂತಳ್ಳಿ ಗ್ರಾಮದ ಸುತ್ತು ಮುತ್ತಲಿನ ೭ ಗ್ರಾಮಸ್ಥರುಗಳು ತಾ. ೨೪ರಲ್ಲಿ ಶಾಂತಳ್ಳಿಯಲ್ಲಿ ಶ್ರೀ ಹೆಚ್. ಟಿ ಮುತ್ತಣ್ಣನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶಾಂತಳ್ಳಿಯಲ್ಲಿ ತೆರೆದಿರುವ ಮಾಧ್ಯಮಿಕ ಶಾಲಾ ಕಟ್ಟಡ ಕಟ್ಟಲು ನಿಧಿ ಸಂಗ್ರಹ ಕಮಿಟಿಯನ್ನು ಆರಿಸಿ ಶ್ರೀ ಕೆ. ಎಸ್ ಚಂಗಪ್ಪನವರನ್ನು ನಿಧಿ ಸಂಗ್ರಹ ಕಮಿಟಿಯ ಪ್ರೆಸಿಡೆಂಟರಾಗಿ ಆರಿಸಲಾಯಿತು.

ಕೊಡಗು ಸರಕಾರದ ಸೆಕ್ರೆಟರಿಯೇಟಿನ ಸಿಬ್ಬಂದಿ ಖರ್ಚು ವರ್ಷಕ್ಕೆ ರೂ. ೧,೮೦,೦೦೦ ಎಂದು ಗೊತ್ತಾಗಿದೆ.

ವೀರಾಜಪೇಟೆ ಮಹಿಳಾ ಸಹಕಾರ ಸಮಾಜಕ್ಕೆ ತಿಂಗಳಿಗೆ ೧೦೦ ರೂಪಾಯಿಗಳ ಮಂಜೂರಿ ಕೊಟ್ಟು ಅಲ್ಲಿ ಸಂಗೀತ ಮತ್ತು ನೃತ್ಯಕಲಿಸುವ ಕಲಾ ಕೇಂದ್ರವೊಂದನ್ನು ತೆರೆಯಲಾಗಿದೆಯೆಂದೂ ಬೇರೆ ಕಡೆ ಕೇಂದ್ರಗಳನ್ನು ತೆರೆಯಲು ಮುಂಬರುವವರಿದ್ದರೆ ಅಂಥಾ ಕೇಂದ್ರಗಳಿಗೂ ಧನ ಸಹಾಯವನ್ನು ಸರಕಾರ ಮಾಡುವದೆಂದೂ ತಿಳಿದು ಬಂದಿದೆ.

ಬೇತರಿ ಸೇತುವೆಯ ಕೆಲಸವನ್ನು ಶೀಘ್ರ ಕೈಕೊಂಡು ಬರುವ ಮಳೆಗಾಲದೊಳಗೆ ಮುಗಿಸುವ ಪ್ರಯತ್ನವು ಸರಕಾರದ್ದೆಂದೂ ಇದಕ್ಕೆ ರೂ. ೨,೩೪,೯೦೦ ಖರ್ಚು ತಗಲುವದೆಂದೂ ಗೊತ್ತಾಗಿದೆ.

ಮೈಸೂರಿನಿಂದ ಕೊಡಗಿಗೆ ವಿದ್ಯುಚ್ಛಕ್ತಿ ತರುವ ವಿಚಾರದಲ್ಲಿ ಎರಡು ಸರಕಾರಗಳಲ್ಲಿ ಇನ್ನೂ ಒಪ್ಪಂದವೇನೂ ಆಗಿಲ್ಲವೆಂದೂ ಪ್ರತಿ ವರ್ಷಕ್ಕೆ ಎರಡು ಲಕ್ಷ ರೂಪಾಯಿಯ ವಿದ್ಯುಚ್ಛಕ್ತಿಯನ್ನು ಕೊಂಡುಕೊಳ್ಳಬೇಕೆಂದು ಮೈಸೂರು ಸರಕಾರವು ಕರಹಾಕಿದೆಯೆಂದೂ, ಆದರೆ ಕೊಡಗಿಗೆ ಪ್ರಥಮ ಮೂರು ವರ್ಷಗಳಲ್ಲಿ ವರ್ಷಕ್ಕೆ ಕೇವಲ ೫೦೦ ಕಿಲೋವಾಟುಗಳಷ್ಟೇ ಶಕ್ತಿ ಬೇಕಿರುವದರಿಂದ ಮೈಸೂರಿನವರ ಶರತ್ತಿಗೊಪ್ಪಿದರೆ ಕೊಡಗಿಗೆ ಪ್ರಥಮ ಮೂರು ವರ್ಷಗಳಲ್ಲಿ ಸುಮಾರು ೪ ಲಕ್ಷ ರೂಪಾಯಿ ನಷ್ಟವಾಗುವದೆಂದೂ ಈ ಕಾರಣದಿಂದ ಯಾವುದೇ ನಿರ್ಣಯವಾಗಿಲ್ಲವೆಂದೂ ತಿಳಿಯಬಂದಿದೆ.

ಮೈಸೂರು ಸರಕಾರದ ವಿದ್ಯುಚ್ಛಕ್ತಿ ಇಲಾಖೆಯ ಸಂಘದ ಮೈಸೂರು ಶಾಖೆಗೆ ಶ್ರೀ. ಎ. ಸಿ. ಅಪ್ಪಚ್ಚನವರನ್ನು ಅಧ್ಯಕ್ಷರಾಗಿ ಆರಿಸಿರುವರು. ಇವರನ್ನು ಮೈಸೂರು ಸಿಟಿ ನೌಕರರ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆರಿಸಲಾಗಿದೆ.

ಎಸ್ ಎಸ್ ಎಲ್. ಸಿ. ಪಬ್ಲಿಕ್ ಮೆಟ್ರಿ ಪರೀಕ್ಷೆಯು ತಾ. ೮ ರಿಂದ ಪ್ರಾರಂಭವಾಗುವದು.

ಕಳೆದ ಅಕ್ಟೋಬರ್ ತಾ. ೨ ರಿಂದ ಉತ್ತರ ಕೊಡಗಿನ ನೂರು ಗ್ರಾಮಗಳಲ್ಲಿ ಪ್ರಾರಂಭವಾದ ಸಾಮೂಹಿಕ ವಿಕಾಸ ಯೋಜನೆಯ ಕೆಲಸದಲ್ಲಿ ಈ ವರೆಗೆ ರೂ ೬೩,೭೭೫ರ ಬಾವಿ, ಕೆರೆ, ರಸ್ತೆ, ಶಾಲಾ ಕಟ್ಟಡ, ಸೇತುವೆ ಮೊದಲಾದುವುಗಳ ಕೆಲಸ ಪೂರ್ತಿಯಾಗಿದೆಯೆಂದೂ ರೂಪಾಯಿ ೩೨,೬೦೦ ರ ಅಣೆಕಟ್ಟು, ಬಾವಿಗಳು, ಆಸ್ಪತ್ರೆಗಳ ಕೆಲಸಗಳು ಮುಗಿಯುತ್ತಾ ಬಂದಿವೆಯೆಂದೂ, ರೂ, ೧,೪೮,೬೦೦ ಮೌಲ್ಯದ ಕಾಲುವೆ, ಕೆರೆ, ಶಾಲೆ, ರಸ್ತೆ, ಮಾರ್ಕೆಟ್ ಕೆಲಸಗಳು ನಡೆಯುತ್ತಿವೆಯೆಂದೂ ಸರಕಾರದ ವತಿಯಿಂದ ತಿಳಿದುಬಂದಿದೆ.

ಮಡಿಕೇರಿ ಗೌಡಬೋರ್ಡಿಂಗಿನ ಸಂಬಂಧ ಶ್ರೀ ಸಿ. ಡಿ. ಅಪ್ಪಯ್ಯನವರು ಪ್ರಕಟಿಸಿದ ಪತ್ರವೊಂದನ್ನು ಸಮರ್ಥಿಸಿ ಕೆಲವು ಗೌಡ ಕೋಮಿನವರ ಮತ್ತು ಇತರರ ಸಹಿಯಿಂದ ಪ್ರಕಟವಾದ ಪತ್ರಕ್ಕೆ ಉತ್ತರವಾಗಿ ಜನ್ಮಭೂಮಿ ಪತ್ರಿಕೆಯಲ್ಲಿ ಪ್ರಕಟವಾದ ಕೆಲವು ಲೇಖನಗಳ ವಿಚಾರದಲ್ಲಿ "ಕ್ರಿಮಿನಲ್ ಮತ್ತು ಸಿವಿಲ್ ಏಕ್ಷನ್" ತೆದುಕೊಳ್ಳುವದಾಗಿ ಜನ್ಮಭೂಮಿ ಸಂಪಾದಕರಿಗೂ, ಶ್ರೀ ಬಡುವಂಡ ಪೂವಯ್ಯನವರಿಗೂ ಶ್ರೀ ಸಿ. ಡಿ. ಅಪ್ಪಯ್ಯನವರ, ನೋಟೀಸು ಕೊಟ್ಟಿರುವರೆಂದೂ ವರ್ತಮಾನ.

ಕೇಂದ್ರ ಸರಕಾರದ ವ್ಯವಸಾಯ ಮತ್ತು ವಾಣಿಜ್ಯ ಶಾಖೆಯ ಸೆಕ್ರೆಟರಿಗಳಾದ ಶ್ರೀ ಎಚ್. ಆರ್. ಪಿ. ಐಯ್ಯಂಗಾರ್‌ರವರು ತಾ. ೩೦ರಲ್ಲಿ ಮಡಿಕೇರಿಗೆ ಬಂದಿರುವರು. ಕಾಫಿಯ ಬೆಲೆಯ ವಿಚಾರ ಮತ್ತು ಅದನ್ನು ಹೊರಗೆ ರಫ್ತು ಮಾಡುವ ವಿಚಾರದಲ್ಲಿ ಪ್ಲಾಂಟರುಗಳ ಮತ್ತು ಅವರ ಸಂಘಗಳ ಅಭಿಮತ ತಿಳಿಯಲು ಅವರು ಕೊಡಗಿನ ಪ್ಲಾಂಟರುಗಳನ್ನು ಭೇಟಿಯಾಗಿ, ಕಾಫಿ ತೋಟಗಳನ್ನು ಸಂದರ್ಶಿಸಿ ತಾ. ೩ರಲ್ಲಿ ವಾಪಾಸು ಹೋಗುವರು.

ಗಾಂಧೀ ಜಯಂತಿಯ ದಿನದಂದು ಮಡಿಕೇರಿಯಲ್ಲಿ ಚೀಫ್ ಕಮಿಷನರು, ನಾಪೋಕ್ಲು ಭಾಗಮಂಡಲಗಳಲ್ಲಿ ಗೃಹ ಮಂತ್ರಿಯವರು, ವೀರಾಜಪೇಟೆ ಪೊನ್ನಂಪೇಟೆಗಳಲ್ಲಿ ಮುಖ್ಯ ಮಂತ್ರಿಯವರು, ಅಮ್ಮತ್ತಿಯಲ್ಲಿ ಶಾಸನ ಸಭಾಧ್ಯಕ್ಷರು ಸಾಮೂಹಿಕ ವಿಕಾಸ ಯೋಜನಾ ಕಾರ್ಯಕ್ರಮದ ಉದ್ಘಾಟನೆ ಮಾಡುವರು.

ಟೆಂಡರು ನೋಟೀಸು.

ಈ ಪರಿಶೋಧನಾ ಕ್ಷೇತ್ರಕ್ಕೆ ಸೇರಿದ ಸುಮಾರು ೩೭ ಎಕರೆ ಕಿತ್ತಳೆ ತೋಟದ ೧೯೫೩-೫೪ನೇ ಸಾಲಿನ ಫಲವನ್ನು ಗುತ್ತಿಗೆಗೆ ಕೊಡಲಾಗುವದು. ಪಡಕೊಳ್ಳಲಿಚ್ಛಿಸುವವರು ತಮ್ಮ ಟೆಂಡರುಗಳನ್ನು ಸೀಲು ಮಾಡಿದ ಕವರುಗಳಲ್ಲಿ "೧೯೫೩-೫೪ರ ಕಿತ್ತಳೆ ಫಸಲಿಗೆ ಟೆಂಡರು" ಎಂದು ಬರೆದು ಈ ಕೆಳಗಿನವರಿಗೆ ರೂ ೧೦೦/ ಆಸಕ್ತ ಹಣ ಡಿಪಾಜಿಟ್ಟಿನೊಂದಿಗೆ ಕಳುಹಿಸ ತಕ್ಕದ್ದು.

ಜಯಶೀಲನಾದ ಟೆಂಡರುದಾರನು ಎಗ್ರಿಮೆಂಟ್ ಸಮಯದಲ್ಲಿ ಟೆಂಡರಿನ ಅರ್ಧ ಹಣವನ್ನು ಪಾವತಿ ಮಾಡಬೇಕು. ಫಸಲನ್ನು ಕುಯ್ಯುವ ಮೊದಲು ಎಲ್ಲಾ ಬಾಕಿಯನ್ನೂ ಪಾವತಿಸಬೇಕಾಗುವದು. ಟೆಂಡರನ್ನು ಸ್ವೀಕರಿಸುವ ಕಡೇ ತಾರೀಕು ೧೫-೧೦-೫೩.

ಸುಪರಿಂಟೆಂಡೆಂಟ್,
ಕಾಫಿ ಪರಿಶೋಧನಾ ಸಬ್ ಸ್ಟೇಶನ್,
ಚೆಟ್ಟಳ್ಳಿ.

|| ಓದುಗರ ಓಲೆಗಳು ||

ಮಡಿಕೇರಿ ಪುರ ಸಭೆಯವರಲ್ಲಿ ವಿನಂತಿ.

ಮಡಿಕೇರಿಯಲ್ಲಿ ಹಂದಿಗಳನ್ನು, ಆಡುಗಳನ್ನು ಅನೇಕರು ಸಾಕುವದು ವಾಡಿಕೆ. ಆದರೆ ಅವುಗಳಿಂದ ಆಗುವ ಅನಾಹುತಗಳನ್ನು ಪ್ರತಿಯೊಬ್ಬನು ವಿಚಾರಿಸಬೇಕಾದ ವಿಷಯ. ಹಂದಿಗಳನ್ನೇನೋ ಸುಲಭದಲ್ಲಿ ಸಿಕ್ಕಿದುದರಿಂದ ಅವುಗಳನ್ನು ಹಡ್ಲುಗಳಲ್ಲಿ ಮತ್ತಿತರ ಸ್ಥಳಗಳಲ್ಲಿ ಗುಂಡುಹಾಕಬಹುದು. ಆದರೆ ಆಡುಗಳು ಅವುಗಳಿಗಿಂತ ಸ್ವಲ್ಪ ಚುರುಕಾದ ಮತ್ತು ಹೆಚ್ಚಿನ ಅನಾಹುತಗಳನ್ನು ಮಾಡುವ ಪ್ರಾಣಿಗಳೆಂಬುದನ್ನು ಎಲ್ಲರೂ ಒಪ್ಪಬೇಕಾದ ವಿಷಯ.

ಸಾಧಾರಣ ಆಡುಗಳ ಮಾಲಿಕರು ಹಗಲಲ್ಲಿ ಅವುಗಳನ್ನು ಬಿಡದೆ ಸಾಯಂಕಾಲದ ಮೇಲೆ ಬಿಡುವದು ಒಂದು ಕ್ರಮ. ಏಕೆಂದರೆ ಸೂರ್‍ಯಾಸ್ತಮಾನವಾದ ಮೇಲೆ ಅದಕ್ಕೆ ಗುಂಡಿಕ್ಕುವದಿಲ್ಲವೆಂದು ಯೋಚನೆ. ಆದುದರಿಂದ ಅವುಗಳ ಮಾಲಿಕರು ಸರಿಯಾಗಿ ಕಟ್ಟಿ ಸಾಕಬೇಕಲ್ಲದೆ ಬಿಟ್ಟರೆ ಯಾವ ಸಮಯದಲ್ಲಾದರೂ ಗುಂಡಿಕ್ಕಿ ಕೊಲ್ಲುವ ಏರ್ಪಾಡುಮಾಡಬೇಕು. ಅನೇಕರ ಹಿತ್ತಲು ಮತ್ತು ತೋಟಗಳನ್ನು ಇವು ಬಹಳ ಮಟ್ಟಿಗೆ ನಾಶಮಾಡುತ್ತಿವೆ. ಮುಂಬರುವ ಚುನಾವಣೆಯ ದೃಷ್ಟಿಯಿಂದ ನಾವೇಕೆ ಹೀಗೆ ಮಾಡಬೇಕೆಂದು ತಟಸ್ಥರಾಗದೆ ಪುರಸಭೆಯವರು ದಾಕ್ಷಿಣ್ಯವಿಲ್ಲದೆ ಕೂಡಲೇ ಆಡು ಮತ್ತು ಹಂದಿಗಳನ್ನು ಕಾನೂನಿನಂತೆ ಸಾಕದಿದ್ದರೆ ಅವುಗಳಿಗೆ ಗುಂಡಿಕ್ಕಿ ಪಟ್ಟಣಿಗರ ತೋಟ ಇತ್ಯಾದಿಗಳನ್ನು ಕಾಪಾಡುವ ಏರ್ಪಾಡು ಮಾಡಬೇಕೆಂದು ನಿರೀಕ್ಷಿಸುವ.

'ನಷ್ಟಪಟ್ಟ ಪಟ್ಟಣಿಗ'

ವೀರಾಜಪೇಟೆ ತೆಲುಗರ ಬೀದಿ

ನೀರಿನ ತೊಂದರೆಗೊಳಗಾದವರೊಬ್ಬರು ಬರೆದ ಪತ್ರಕ್ಕೆ "ಪುರಸೇವಕ" ರೊಬ್ಬರು ಕೊಟ್ಟಿರುವ ಜವಾಬನ್ನು ನೋಡಿದರೆ ಅವರ ತಿಳಿಗೇಡಿತನವನ್ನು ಪ್ರದರ್ಶಿಸಿದಂತೆ ಕಾಣುತ್ತೆ.

ಬಾವಿ ತೋಡಿಸುವ ಕೆಲಸಕ್ಕೆ ಒಂದು ಸಬ್ ಕಮಿಟಿ ಮಾಡಿರುತ್ತಾರೆಂದೂ, ಅವರು ಪ್ರಯತ್ನ ಮಾಡಿದರೆಂದೂ, ಅದಕ್ಕೆ ಸಾರ್ವಜನಿಕರು ಸಹಕರಿಸಲಿಲ್ಲವೆಂದೂ ಮೊದಲಾಗಿ ಬರೆದಿರುವರು.

ಒಂದು ಬೀದಿಯಲ್ಲಿರುವ ಸಾರ್ವಜನಿಕರ ಸಹಕಾರ ಪಡೆದು ಒಂದೆರಡು ಬಾವಿ ತೋಡಿಸಲಿಕ್ಕೆ ಸಾಧ್ಯವಾಗದ ಸಬ್ ಕಮಿಟಿಯವರಿಂದ ಬೇರೆ ಯಾವ ದೊಡ್ಡ ಕೆಲಸ ಆದೀತೆಂಬುದು ನನಗೆ ತಿಳಿಯದು.

ಕಳೆದ ವರ್ಷ ಭೂಮಿಯಲ್ಲಿ ನೀರು ಕಂಡು ಹಿಡಿಯುವವರು ಬಂದು ನೋಡಿ ನೀರು ಸಿಕ್ಕುವ ಸ್ಥಳವಿಲ್ಲವೆಂದು ಹೇಳಿರುವರೆಂದು ಬರೆದಿರುವರು.

ಕಳೆದ ವರ್ಷ ಎಂದರೆ ೧೯೫೨ನೇ ಫೆಬ್ರವರಿ ಮೊದಲನೇ ವಾರದಲ್ಲಿ ಅವರು (ನೀರು ಕಂಡು ಹಿಡಿಯುವವರು) ಪುರದ ನಾನಾ ಕಡೆ ನೋಡಿ ಬಂತೆಯೇ ಒಬ್ಬ ಪುರ ನೌಕರರೊಂದಿಗೆ ಟೇಕ್ಸಿಯಲ್ಲಿ ನಮ್ಮ ಬೀದಿಗೆ ಒಂದು ಶ್ರೀಮತಿ ಮುಕ್ಕಾಟಿರ ಮುತ್ತಮ್ಮನವರ ಮನೆ ಹತ್ತಿರ ಟೇಕ್ಸಿ ನಿಲ್ಲಿಸಿ ಅಲ್ಲಿಯೇ ಕೆಲವು ಕಡೆ ನೋಡಿ ಕಡೆಗೆ ಶ್ರೀಮತಿ ಮುತ್ತಮ್ಮನವರ ಮನೆಗೂ ಈಗ ಮುನ್ಸಿಪಲ್ ತೊಟ್ಟಿ ಮಾಡಗಿದ ಜಾಗಕ್ಕೂ ಮಧ್ಯೆ ಒಂದು ಸ್ಥಳವನ್ನು ಗೊತ್ತು ಮಾಡಿದ ಸಂಗ್ತಿ ನಮಗೆಲ್ಲ ತಿಳಿದಿದೆ. ಅದೇ ಪ್ರಕಾರ ಈ ಮೊದಲು ಪುರಸಭೆಗೆ ನಾವು ಬರಕೊಂಡ ಅರ್ಜಿಯಲ್ಲಿ ಸಹ ತೋರಿಸಿರುವೆವು.

ಆದರೆ ನಮ್ಮ ಅನಾಮಧೇಯ 'ಪುರಸೇವಕ'ರಿಗೆ ಮೇಲಿನ ವಿಷಯ ತಿಳಿಯದಿರುವದು ಅವರ ಮಂಕು ದೃಷ್ಟಿಯ ಕಾರಣವಲ್ಲದೆ ಬೇರಿಲ್ಲ. ಬಹುಶಃ ಅವರು ಆ ಸಮಯದಲ್ಲಿ 'ಪುರಸೇವಕ' ವೃತ್ತಿಯನ್ನು ಕೈಕೊಂಡಿರಲಿಕ್ಕಿಲ್ಲವೆಂದು ನಂಬುತ್ತೇನೆ. ಬೇರೆ ಬೀದಿಗಳಲ್ಲಿ ಕೆಲವರು ಮಾಡಿರುವ ದಾನ ಕಾರ್‍ಯವನ್ನು ನಮ್ಮ ಬೀದಿಗೆ ಹೋಲಿಸಿ ಬರೆದಿರುತ್ತಾರೆ. ಪುರಸಭೆ ಹುಟ್ಟಿದಲ್ಲಿಂದ ಕಂದಾಯ ಕೆತ್ತು ಸೋತರೂ ಬೀದಿಯವರಿಗೆ ಯಾವುದಾದರೂ ಕೆಲವು ಉಪಕಾರದ ಕೆಲಸ ಮಾಡಿ ತೋರಿಸಿದ್ದರೆ 'ನಿಮ್ಮ ಕೇಳಿಕೆಯು ಸರಿಯಲ್ಲ ಹಾಗೆ ಬೇಕಾದರೆ ಬೇರೆ ಬೀದಿಯವರಂತೆ ನೀವು ಸಹ ಕೆಲವು ಸಹಾಯ ಮಾಡಬೇಕೆಂ'ದು ಒತ್ತಾಯ ಮಾಡುವದು ನ್ಯಾಯವಾಗಿದೆ. ಅದರ ಬದಲು ಮೊದಲಾಗಿ ಕೇಳಿಕೊಂಡ ಬಾವಿಯ ವಿಷಯಕ್ಕೆ ಕೊಟ್ಟ ಜವಾಬು ಈ ಬೀದಿಯವರಿಗೆ ನೋವನ್ನುಂಟುಮಾಡಿದೆ

ಅಲ್ಲದೆ ರೂ. ೭೫೦/–ನ್ನು ಬಾವಿಯ ಕೆಲಸಕ್ಕೆ ಕೊಡಲು ಸಿದ್ಧರಿರುತ್ತಾರೆಂದು ಬರೆದಿರುವರು. ನಮಗೆ ನೀರಿಗಾಗಿ ಬಾವಿ ತೋಡಿಸಿ ಕೊಡಿರೆಂದು ಕೇಳಿರುವವಲ್ಲದೆ ಬಾವಿಯ ಕಂಟ್ರಾಕ್ಟು ಕೆಲಸ ಕೇಳಿರುವುದಿಲ್ಲ. ಆದುದರಿಂದ ಸಂಖ್ಯೆಯನ್ನು ಮತ್ತು ಸ್ಥಳವನ್ನು ಹೇಳಿಕೊಡು ಸಮಯ ತಳ್ಳುವದು ಪುರಸಭೆಗೆ ತಕ್ಕುದಲ್ಲ. ರಸ್ತೆಗೆ ಡಾರು ಹಾಕುವ ಮತ್ತು ಚರಂಡಿ ಕಟ್ಟಿಸುವ ವಗೈರೆ ಕೆಲಸಕ್ಕೆ ಲಕ್ಷಗಟ್ಟಲೆ ವರ್ಷಕ್ಕೆ ವ್ಯಯ ಮಾಡುತ್ತಿರುವಾಗ ಜೀವನಕ್ಕೆ ಅತ್ಯವಶ್ಯ ಬೇಕಾದ ನೀರು ಅವರಲ್ಲೂ ಬೀದಿಯವರ ಮೊದಲನೇ ಕೇಳಿಕೆಯಾದ್ದರಿಂದ ಕಾಲವಿಳಂಬ ಮಾಡದೆ ತೊಂದರೆಯನ್ನು ತಪ್ಪಿಸುವರೆಂದು ನಂಬುವ,

——ತೊಂದರೆಗೊಳಗಾದವರಲ್ಲಿ ಮತ್ತೊಬ್ಬ.

ಇದು ಸರಿಯಲ್ಲ.

ತಾರೀಕು ೧೮–೯–೫೩ ರ ಕೊಡಗು ಪತ್ರಿಕೆಯಲ್ಲಿ ಮರೆನಾಡಿನವರ ಕಷ್ಟ ಎಂಬದಾಗಿ, ಚಿಣ್ಣಪ್ಪನೆಂಬವರು ಬರೆದ ಲೇಖನವನ್ನು ಓದಿದೆನು. ಅವರು ಬರೆದ ಎಲ್ಲಾ ಸಂಗತಿಗಳು ನಿಜವಲ್ಲ. ಮಳೆಯಿಂದ ಆದ ನಷ್ಟ ಈ ನಾಡಿಗೇ ಅಲ್ಲ. ಕೊಡಗಿನ ನಾನಾ ಭಾಗಗಳಲ್ಲಿ ಈ ವರ್ಷ ನಷ್ಟವಾಗಿರುತ್ತೆ. ದನಗಳ ಕಾಯಿಲೆಯು ಸಹ ಎಲ್ಲಲ್ಲಿಯೂ ಇಲ್ಲ. ಕೆಲವರಲ್ಲಿ ಮಾತ್ರ ಆಗಿರುತ್ತೆ. ಇದಕ್ಕೆ ಮರೆನಾಡಿನಲ್ಲೆಲ್ಲಾ ಕಾಯಿಲೆಯಿಂದ ದನಗಳು ಸತ್ತಿವೆಯೆಂಬುದು ಸರಿಯಲ್ಲ. ಈ ನಾಡಿನಲ್ಲಿರುವ ಜಾನುವಾರು, ಮತ್ತು ಜನರ ಆಸ್ಪತ್ರೆಯು ಸಹ ಈ 'ನಾಡಿನ ಒಂದು ಮೂಲೆಯಲ್ಲಿದೆ ದಕ್ಷ ಡಾಕ್ಟರರ ಸಲಹೆ ಇಲ್ಲ, ಇದರಿಂದ ಹೆಚ್ಚಿನ ಪ್ರಯೋಜನ ಆಗುತ್ತಿಲ್ಲವೆಂಬದಾಗಿ ಬರೆದಿರುವರು. ಇದು ಸರಿಯಲ್ಲ. ಈ ನಾಡಿಗೆ ಆಸ್ಪತ್ರೆ ಬೇಕೆಂಬದಾಗಿ ತೀರ್ಮಾನ ಮಾಡುವಾಗ ಎಲ್ಲಿ ಕಟ್ಟಡ ದೊರೆಯುತ್ತೆ ಅಲ್ಲಿ ಆಸ್ಪತ್ರೆ ತೆರೆದು ಕೊಡುತ್ತೇವೆಂಬದಾಗಿ ಸರಕಾರದವರ ತೀರ್ಮಾನವಿತ್ತು. ಇಡೀ ಮರೆನಾಡಿನವರೆಲ್ಲರೂ ಸೇರಿ ತೀರ್ಮಾನ ಮಾಡಿದ ಸ್ಥಳದಲ್ಲೇ ಈಗ ಈ ಆಸ್ಪತ್ರೆಗಳಿರುವುದಾಗಿದೆ. ಕಟ್ಟಡಕ್ಕಾಗಿ ಕಟ್ಟಡ ಕಟ್ಟಿಸಿಕೊಟ್ಟ ಮಹನೀಯರ ಉದಾರತೆಯಿಂದಾಗಿ ಇಲ್ಲಿ ಆಸ್ಪತ್ರೆಯಾಗಿದೆ. ಅಲ್ಲದೆ ಆಸ್ಪತ್ರೆಯ ವಿಷಯ ತೀರ್ಮಾನವಾಗುವಾಗಲೆ ಜಾನುವಾರು ಆಸ್ಪತ್ರೆಗೆ ಒಬ್ಬ ಸ್ಟಾಕುಮೇನರೂ, ಜನರ ಆಸ್ಪತ್ರೆಗೆ ಒಬ್ಬ ಕಂಪೌಂಡರ್, ಮತ್ತು ಒಬ್ಬ ನರ್ಸ್, ಮತ್ತು ಪ್ರತೀ ಶುಕ್ರವಾರ ಶ್ರೀಮಂಗಲ ಡಾಕ್ಟರರು ಬರುವಂತೆಯೂ ತೀರ್ಮಾನವಾಗಿದೆ ಅದರಂತೆ ಈಗಲೂ ನಡೆಯುತ್ತಾ ಇದೆ. ದಿನಕ್ಕೆ ಸರಾಸರಿ ೩೫ ಜನರು ಔಷಧಿ ತೆಗೆದುಕೊಂಡು ಹೋಗುತ್ತಾ ಇರುವರು. ಈ ರೀತಿ ನಡೆಯುತ್ತಿರುವ ಆಸ್ಪತ್ರೆಯು ಫಲಕಾರಿಯಲ್ಲ ಎನ್ನುವದು ಸರಿಯಲ್ಲ.

ಎಂ. ಎಂ. ಪೂಚಯ್ಯ.

ಗೋಣಿಕೊಪ್ಪಲು ಟೌನ್ ಬೇಂಕು.

ಗೋಣಿಕೊಪ್ಪಲಿನಲ್ಲಿ ಒಂದು ಬೇಂಕು ಹುಟ್ಟಿ ಬರೇ ಮೂರು ವರ್ಷ ತುಂಬಿದ್ದರೂ ಸಹ ಬಹಳ ಮುಂದಕ್ಕೆ ಬಂದು ಉತ್ತಮ ಕೆಲಸ ಮಾಡುತ್ತಿರುವದು ಸಂತೋಷದ ಸಂಗತಿ. ಕೆಲವು ದಿನಗಳ ಹಿಂದೆ ಬೇಂಕಿನಿಂದ ಹಣವನ್ನು ಸಾಲವಾಗಿ ತೆಗೆದುಕೊಂಡು ತನ್ನ ಬತ್ತವಿರುವ ರೂಮನ್ನು ಬೇಂಕಿನವರ ವಶಕ್ಕೆ ಹಣದ ಭದ್ರತೆಗಾಗಿ ಕೊಟ್ಟಂತಹ ಮಿಲ್ಲು ಮಾಲೀಕರೊಬ್ಬರು ಬೇಂಕಿನವರು ಹಾಕಿದ ಬೀಗವನ್ನು ತೆಗೆದು ಎರಡು ಗಾಡಿ ಬತ್ತವನ್ನು ತೆಗೆದಿರುತ್ತಾರಂತೆ! ಇದನ್ನು ಸ್ಥಳೀಯ ಮಿಲ್ಲು ಇನ್ಸ್‌ಪೆಕ್ಟರವರು ಕಂಡು ಹಿಡಿದು ಬೇಂಕಿನ ಮೇನೇಜರವರಿಗೆ ತಿಳಿಸಿರುತ್ತಾರಂತೆ! ಅದೇ ರೀತಿ ಮೇನೇಜರು ಸಹ ಬೇಂಕಿನ ಪ್ರೆಸಿಡೆಂಟರವರಿಗೆ ತಿಳಿಸಿರುತ್ತಾರಂತೆ. ಆದರೆ ಪ್ರೆಸಿಡೆಂಟರು ಈ ವಿಷಯದಲ್ಲಿ ಏನು ಕ್ರಮ ತೆಗೆದಿರುವರು? ಒಳ್ಳೆ ಹೆಸರು ತೆಗೆದಂತಹ ಪ್ರೆಸಿಡೆಂಟರು ಈ ರೀತಿ ತಣ್ಣಗಿರಲು ಕಾರಣ ಏನೆಂದು ತಿಳಿಯಬೇಕು.

ಮೊನ್ನೆ ದಿನ ಈ ಬೇಂಕಿನ ಜನರಲ್ ಬಾಡಿ ಮೀಟಿಂಗಿನಲ್ಲಿ ಈ ವಿಷಯವನ್ನು ಕೇಳಬೇಕೆಂದು ಒಬ್ಬ ಮೆಂಬರರು ತಯಾರಾಗಿದ್ದರು. ಆದರೆ ಮೀಟಿಂಗು ಕೊನೆಗೊಳ್ಳಲು ರಾತ್ರಿಯಾಗುತ್ತದೆಯೆಂದೂ ಯಾವ ಕಾರಣದಿಂದಲೋ ಅಧ್ಯಕ್ಷರು ಕಾರ್ಯಕ್ರಮ ಪಟ್ಟಿಯಲ್ಲಿ ಇತರ ವಿಷಯವೆಂಬದನ್ನು ಬಿಟ್ಟು ಒಂದೇ ಸಲ ಅಧ್ಯಕ್ಷರ ಭಾಷಣವನ್ನು ಸುರುಮಾಡಿ ಬಿಟ್ಟರು. ಅಧ್ಯಕ್ಷರ ಭಾಷಣ ಮುಗಿಯುವಷ್ಟರಲ್ಲೇ ತಿಂಡಿ ತೀರ್ಥದ ಕಾರ್ಯಕ್ರಮವಾದ್ದರಿಂದ ಈ ವಿಷಯ ಅಲ್ಲಿಗೆ ಮೌನವನ್ನು ತಾಳಿತು.

ಜನರಲ್ ಬಾಡಿ ಮೀಟಿಂಗಿಗೆ ಮೊದಲೆ ಬತ್ತದ ದುರುಪಯೋಗವಾಗಿದ್ದರೂ ಸಹ ಮಹಾಸಭೆಯ ಮೀಟಿಂಗಿನ ದಿನದವರೆಗೂ ಕೆಲವು ಡೈರೆಕ್ಟರುಗಳಿಗೆ ಈ ಸಂಗತಿ ತಿಳಿದಿರುವುದಿಲ್ಲ. ಅವರಿಗೆ ಒಬ್ಬ ಮೆಂಬರು ಹೇಳುವಾಗ ಗೊತ್ತು. ಮಾತ್ರ ಇದನ್ನು ನೋಡುವಾಗ ಪ್ರೆಸಿಡೆಂಟರು ಬ್ಯಾಂಕಿನ ಡೈರೆಕ್ಟರುಗಳನ್ನು ತನ್ನ ವಿಶ್ವಾಸಕ್ಕೆ ತೆಗೆದುಕೊಂಡಂತೆ ಕಾಣುವದಿಲ್ಲ. ಕಾನೂನು ಎಂಬುದು ಬಡವ ಬಲ್ಲಿದರಿಗೆಲ್ಲ ಒಂದೇ ಅಲ್ಲವೇ? ಇದನ್ನು ಈ ದಿವಸ ಸುಮ್ಮನೆ ಬಿಟ್ಟರೆ ನಾಳೆ ಇನ್ನೊಬ್ಬನು ಈ ರೀತಿ ಸುರುಮಾಡುವುದಿಲ್ಲವೇ? ಇದನ್ನು ತಿಳಿದವರು ಬೇಂಕಿನಲ್ಲಿ ಹಣವನ್ನಾದರೂ ಇಡಲು ಹಿಂದೆ ಮುಂದೆ ನೋಡಲಿಕ್ಕಿಲ್ಲವೇ ಅದ್ದರಿಂದ ಸಮ್ಮಂಧಪಟ್ಟ ಅಧಿಕಾರಿಗಳು ವಿಷಯವನ್ನು ಪರಿಶೀಲಿಸುವರೇ?

ಬೇಂಕಿನ ಮೆಂಬರು.

ವೀರಾಜಪೇಟೆ ಮುನ್ಸಿಫ್ ಮತ್ತು ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟರವರ ಕೋರ್ಟಿನಲ್ಲಿ.

ಕ್ರಿ. ಮಿ. ಕೇಸ್ ನಂ. 78 ರ 1953

ಅರ್ಜಿದಾರ:–ಶ್ರೀಮಂಗಲನಾಡು, ಹರಿಹರ ಗ್ರಾಮದಲ್ಲಿರುವ (1) ಸುಬ್ರಮಣ್ಯ ದೇವಸ್ಥಾನ (2) ಭದ್ರಕಾಳಿ ದೇವಸ್ಥಾನ (3) ಐಯಪ್ಪದೇವಸ್ಥಾನ ಮತ್ತು (4) ಬೆಳ್ಳಿ ಕಪ್ಪ ದೇವಸ್ಥಾನಗಳ ತಕ್ಕರಾದ ಬಲ್ಯ ತೀತೀರ ಸುಬ್ಬಯ್ಯನವರ ಮಗ ಐಯ್ಯಮ್ಮ,

ಮೇಲ್ಕಂಡ ಕೇಸಿನಲ್ಲಿ ಅರ್ಜಿದಾರರಾದ ಪರಿಹರ ಗ್ರಾಮದ ಬಲ್ಯ ತೀತೀರ ಐಯ್ಯಮ್ಮನವರು ತಮ್ಮನ್ನು ಹರಿಹರ ಗ್ರಾಮಸ್ಥರು (1) ಸುಬ್ರಮಣ್ಯ ದೇವಸ್ಥಾನ (2) ಭದ್ರಕಾಳಿ ದೇವಸ್ಥಾನ (3) ಐಯ್ಯಪ್ಪದೇವಸ್ಥಾನ ಮತ್ತು (4) ಬೆಳ್ಳಿ ಕಪ್ಪ ದೇವಸ್ಥಾನಗಳಿಗೆ ತಾ. 29–11–52 ರಲ್ಲಿ ತಕ್ಕರಾಗಿ ನೇಮಿಸಿರುವುದರಿಂದಲೂ, ಮತ್ತು ಈ ದೇವಸ್ಥಾನಗಳ ಆಡಳಿತಕ್ಕೆ ಸಂಬಂಧಪಟ್ಟ ಇತರ ಗ್ರಾಮಸ್ಥರು ಸಹ ಈ ಕೋರ್ಟಿನಲ್ಲಿ ಇರುವ ಕ್ರಿ. ಮಿ. ಕೇಸ್ ನಂಬರು 68 ರ 1953 ರ ಸಂಬಂಧ, ಸುಬ್ರಮಣ್ಯ ದೇವಸ್ಥಾನದ ಸಾಮಾನುಗಳನ್ನು ತಾನು ಹೊಂದಿಕೊಳ್ಳುವಂತೆ ಒಪ್ಪಿರುವುದರಿಂದಲೂ, ಈ ಕೋರ್ಟಿನಲ್ಲಿರುವ ಸುಬ್ರಮಣ್ಯ ದೇವಸ್ಥಾನದ ಎಲ್ಲಾ ಸಾಮಾನುಗಳನ್ನು ತನಗೆ ಕೊಡಬೇಕೆಂದು ಈ ಕೋರ್ಟಿಗೆ ತಾ. 11–9–53 ರಲ್ಲಿ ಅರ್ಜಿ ದಾಖಲು ಮಾಡಿರುವುದರಿಂದ ಸದರಿ ಅರ್ಜಿದಾರರಿಗೆ ಯಾಕೆ ಆ ಎಲ್ಲಾ ಸಾಮಾನುಗಳನ್ನು ಕೊಡಕೂಡದೆಂಬುವದಕ್ಕೆ ಸಬಬು ತೋರಿಸಲು ತಾ. 19–10–53 ರಲ್ಲು ಹಗಲು 11 ಗಂಟೆಗೆ ಹೀಯರಿಂಗ್ ಇಟ್ಟಿರುತ್ತೆಯಾದ್ದರಿಂದ ತಕರಾರುದಾರರು ಸದರಿ ದಿನ ಹಾಜರಾಗಿ ತಮ್ಮ ತಕರಾರುಗಳನ್ನು ಹೇಳಿಕೊಳ್ಳತಕ್ಕದ್ದು.

ಕೆ. ಎ. ತಮ್ಮಯ್ಯ,
ಮುನ್ಸಿಫ್ ಮತ್ತು
ಫಸ್ಟ್‌ಕ್ಲಾಸ್ ಮೇಜಿಸ್ಟ್ರೇಟರು.

ಮಹದೇವಪೇಟೆ ಆಸ್ಪತ್ರೆ ಉದ್ಘಾಟನೋತ್ಸವ

ಮಡಿಕೇರಿ ಮಹದೇವಪೇಟೆಯಲ್ಲಿ ಕೊಡಗು ಶಾಸನ ಸಭೆಯ ಅಧ್ಯಕ್ಷರಾದ ಶ್ರೀ ಬಿ ಎಸ್. ಕುಶಾಲಪ್ಪನವರು ಸುಮಾರು ರೂ. ಏಳು ಸಾವಿರ ವೆಚ್ಚದಿಂದ ಕಟ್ಟಿಸಿರುವ ಆಸ್ಪತ್ರೆ ಕಟ್ಟಡದ ಉದ್ಘಾಟನೋತ್ಸವವು ತಾ ೨೦ರಲ್ಲಿ ನಡೆಯಿತು ಚೀಫ್ ಕಮಿಷನರಾದ ಕರ್ನಲ್ ಬೇಡಿಯವರು ಅಧ್ಯಕ್ಷತೆ ವಹಿಸಿದ್ದರು. ಮಡಿಕೇರಿ ಪುರಸಭೆಯ ಪ್ರೆಸಿಡೆಂಟರಾದ ಮೊಯಿದಿನ್‌ರವರು ಸ್ವಾಗತವನ್ನು ಬಯಸಿ ಶ್ರೀ ಕುಶಾಲಪ್ಪನವರ ಉದಾರತೆಯನ್ನು ವಿವರಿಸಿದರು ಗೃಹಮಂತ್ರಿ ಮಲ್ಲಪ್ಪನವರು ಮಾತಾಡುತ್ತಾ, ಮಹದೇವಪೇಟೆಗೆ ಇದ್ದ ಆಸ್ಪತ್ರೆಯ ಅವಶ್ಯಕತೆಯನ್ನೂ ಶ್ರೀ ಕುಶಾಲಪ್ಪನವರ ಆದರ್ಶವನ್ನೂ ಹೊಗಳಿದರು ಮುಖ್ಯ ಮಂತ್ರಿ ಪೂಣಚ್ಚನವರು ದೀರ್ಘ ಭಾಷಣ ಮಾಡುತ್ತಾ ಕುಶಾಲಪ್ಪನವರ ಆದರ್ಶವನ್ನು ಇತರರು ಹಿಂಬಾಲಿಸಬೇಕೆಂದೂ ರಾಷ್ಟ್ರದ ಜೀವನವು ಒಂದು ಗಡಿಯಾರ ಜೀವನದಂತೆಯೆಂದೂ, ಸೆಕೆಂಡ್ ಮುಳ್ಳು ಒಂದು ಕ್ಷಣವೂ ನಿಲ್ಲದೆ ಸುತ್ತುತ್ತಿದ್ದರೆ ಮಾತ್ರ ಮಿನಿಟು ಮುಳ್ಳು ನಿಧಾನವಾಗಿ, ಗಡಿಯಾರ ಮುಳ್ಳು ಅದಕ್ಕಿಂತಲೂ ನಿಧಾನವಾಗಿ ಸುತ್ತುವದೆಂದೂ ಅದರಂತೆ ರಾಷ್ಟ್ರದ ಸೆಕೆಂಡ್ ಮುಳ್ಳಿನಂತಿರುವ ನಾವೆಲ್ಲರೂ ಸದಾ ದುಡಿಯುತ್ತಿದ್ದರ ಮಿನಿಟ್ ಮುಳ್ಳಾದ ಕೊಡಗು ದೇಶ ಅಭಿವೃದ್ಧಿಗೊಳ್ಳುವದೆಂದೂ ಈ ರೀತಿ ವಿವಿಧ ಸಂಸ್ಥೆಗಳು ಅಭಿವೃದ್ಧಿಗೊಳ್ಳುವದರಿಂದ ಗಂಟೆ ಮುಳ್ಳಿನ ಹಿಂದುಳಿದವರು ಮುಂದಡಿ ಇಡುವರೆಂದೂ ಹೇಳಿದರು ಗಡಿಯಾರದಲ್ಲಿ 'ಎಲಾರಾಂ' ಮುಳ್ಳಿರುವಂತೆ ದೇಶದಲ್ಲೂ ಕೂಗೆಬ್ಬಿಸುವ ತಂತ್ರ ಮತ್ತು ರಾಜಕೀಯ ಒಂದಿದೆಯೆಂದೂ ಜನರ ಅತೃಪ್ತಿ, ಕಷ್ಟ, ನಿರ್ಬಲತೆಯಲ್ಲಿ ಅವರು ಬೆಳೆಯುವರೆಂದೂ ಗಡಿಯಾರದ 'ಎಲಾರಾಂ' ಕೂಗುವಾಗ ಯಾವ ರೀತಿ ಮೇಲಿನ ಗುಂಡಿಯನ್ನೊತ್ತಿದರೆ ಅದು ನಿಶ್ಶಬ್ದವಾಗುವದೋ ಅದರಂತೆ ಈ ಕೂಗುವವರನ್ನು ಸ್ಥಗಿತಗೊಳಿಸಬೇಕೆಂದೂ ಹೇಳಿದರು.

ಶ್ರೀ ಬಿ ಎಸ್ ಕುಶಾಲಪ್ಪನವರು ಮಾತಾಡುತ್ತಾ ಇದು ತನ್ನ ಜೀವನದ ಸುವರ್ಣ ದಿನವೆಂದೂ, ತಾನು ಶ್ರೀಮಂತನಲ್ಲದಿದ್ದರೂ ಜನತೆಯ ಕಷ್ಟವೇ ಈ ರೀತಿಯ ಒಂದು ಪ್ರಯತ್ನಕ್ಕೆ ಪ್ರೇರೇಪಿಸಿತೆಂದೂ ಹೇಳಿದರು ಅಧ್ಯಕ್ಷರ ಭಾಷಣದಿಂದ ಸಮಾರಂಭವು ಕೊನೆಗೊಂಡಿತು. ನಂತರ ಗೃಹ ಮಂತ್ರಿಯವರು ಕಟ್ಟಡವನ್ನು ತೆರೆದರು. ಮುಖ್ಯ ಮಂತ್ರಿಯವರು ಮೆಡಿಕಲ್ ಚೆಸ್ಟನ್ನು ತೆರೆದರು.

—

ಭರವಸೆ.

[illegible]
[illegible]
[illegible]
[illegible]
[illegible] ಸಂಗ್ರಾಮ ಗತವಾಯ್ತು.
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]

—ಕೆ ವಿ ಪುಟ್ಟಪ್ಪ "ಕೃತ್ತಿಕೆ" ಯಿಂದ

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಷನ್ ಲಿಮಿಟೆಡ್.,

ಹೆಡ್ ಆಫೀಸ್ :— ವೀರಾಜಪೇಟೆ.

ಶಾಖೆ :— ನ್ಯೂ ಎಕ್ಸ್ಟೆನ್ಶನ್ ಬಿಲ್ಡಿಂಗ್ಸ್, ಮಡಿಕೇರಿ

ನಮ್ಮಲ್ಲಿ ಈ ಕೆಳಗೆ ಸೂಚಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟೆಗಳು
2. 12 ನೇ ನಂಬರಿನ ಒಂಟಿ ನಳಿಗೆಯ ತೋಟದ ಕೋವಿಗಳು
3. ಒಂಟಿ ಮತ್ತು ಜೋಡಿ ನಳಿಗೆಯ ಕೇಸಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟೆಗಳು, ಕೋವಿ ಮದ್ದು ಚಿಲ್ಲು ಮತ್ತು ಕ್ಯಾಪುಗಳು
5. ⅝", ½" ಮತ್ತು ⅜" ಕಬ್ಬಿಣದ ಸರಳುಗಳು
6. 2", 1¼", 1" ¾" ಮತ್ತು ½" ಕೊಳಾಯಿಗಳು. (G I Pipes)
7. 1¾" × 5/16" ಉಕ್ಕಿನ ಪಟ್ಟಿಗಳು (Spring Steel flats)
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಔಷಧಿ ಹೊಡೆಯುವ ಪಂಪುಗಳು.
9. ಕೋಳಿ ಮತ್ತು ಆನೆ ಮಾರ್ಕಿನ ಸಿಮೆಂಟ್ ಟಿನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ, ಜಿಲ್ಲಾ ಮೆಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ ಬಿ ಚೆಕ್ಕಪ್ಪ, (ಪ್ರೆಸಿಡೆಂಟ್)

ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್ ಲಿಮಿಟೆಡ್.

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ ಭಾರತ)

ಆರ್ಥಿಕ ಉಳಿತಾಯ ಯೋಜನೆಗಳಲ್ಲಿ "ಕ್ಯುಮ್ಯುಲೇಟಿವ್ ಡಿಪೋಜಿಟ್" ಯೋಜನೆಯು ಅತಿ ಪರಿಣಾಮಕಾರಿ ಹಾಗೂ ಅನುಕೂಲವಾದುದು ಯಾವುದಾದರೊಂದು ನಿರ್ದಿಷ್ಟ ಉದ್ದೇಶ ಸಾಧನೆಗೆ, ನಿಯಮಿತ ಕಾಲಕ್ಕೆ ನಿಯಮಿತ ಹಣವನ್ನು ಒಂದು ನಿಯಮಿತ ಅವಧಿಯೊಳಗೆ ಬಡ್ಡಿಯೊಂದಿಗೆ ವಾಪಸು ಸಿಗುವಂತೆ ಬ್ಯಾಂಕಿನಲ್ಲಿ ಶೇಖರಿಸಿಡುವುದೇ ಈ ಯೋಜನೆಯ ಮೂಲ ತತ್ವ. ಇದು ಮುಖ್ಯವಾಗಿ ಮಧ್ಯಮ ತರಗತಿಯ ಜನರಿಗೆ ಇಲ್ಲವೆ ನಿಯಮಿತ ಸಂಬಳದ ನೌಕರರಿಗೆ ತಮ್ಮ ಮುದ್ದು ಮಕ್ಕಳ ವಿದ್ಯಾಭ್ಯಾಸ, ಮುಂಜಿ, ಮದುವೆ ಯಾ ಇನ್ನಿತರ ಸದುದ್ದೇಶ ಸಾಧನೆಗಳಿಗೆ ಅತ್ಯನುಕೂಲ ಹಾಗೂ ಅತಿ ಸುಲಭವಾದ ಯೋಜನೆ.

ವಿಶೇಷ ಮಾಹಿತಿಗೆ, ಕೊಡಗು ಸಂಸ್ಥಾನದಲ್ಲಿನ ಈ ಕೆಳಗಿನ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿ

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

THE CANARA BANKING CORPORATION LIMITED.

Estd. 1906] [*H O, Udipi (S. India)*

ಪಾಪ-ಪುಣ್ಯ

"ಇಡೀ ಭೂಮಿಯು ನನ್ನ ತಾಯಿ, ನಾನಾಕೆಯ ಪುತ್ರ" ಎಂದು ಭಾರತದ ಜ್ಞಾನಿಗಳು ಹೇಳಿದರು. ಇಲ್ಲಿಯ ವಿಚಾರವಂತರು ನಾನು ನೀನು ಎಂಬ ಭೇದ ಭಾವವಿಡಲಿಲ್ಲ. ಅಂತೆಯೇ ಲೋಕದ ಜನರಾರು ಬಂದರೂ ಅವರಿಗೆ ಸ್ವಾಗತ ದೊರೆಯಿತು. ಈ ಪುಣ್ಯವೂ ಇಲ್ಲಿ ನಡೆದಿದೆ.

ಆದರೆ, ಪುಣ್ಯ ನಡೆದಂತೆ ಇಲ್ಲಿ ಪಾಪವೂ ನಡೆಯಿತು. ಅದು ಯಾವ ಪಾಪ?

ಆಚಾರ್ಯ ವಿನೋಬಾ ಭಾವೆಯವರು ವಿವರಿಸುತ್ತಾರೆ:—

ಈ ದೇಶವು ಪುಣ್ಯ ಭೂಮಿಯೆಂದು ಲೋಕದಲ್ಲಿ ಪ್ರಸಿದ್ಧವಾಗಿದೆ 'ದುರ್ಲಭಂ ಭಾರತೇ ಜನ್ಮ' ಎಂದು ನಾವು ಹೇಳುತ್ತಲೇ ಬಂದಿದ್ದೇವೆ. ಬೇರೆ ದೇಶಗಳ ಇತಿಹಾಸದಲ್ಲಿ ಕಾಣದ ಒಂದು ಇತಿಹಾಸ ವೈಶಿಷ್ಟ್ಯವು ಭಾರತಕ್ಕಿದೆಯೆಂದು ಇಡೀ ಲೋಕವೇ ಒಪ್ಪುತ್ತಿದೆ ಇಲ್ಲಿ ನಾವು ನಾನಾ ಪ್ರಕಾರದ ತಪಸ್ಸು ಮಾಡಿದ್ದೇವೆ. ಎಷ್ಟೋ ಶೋಧನೆ ನಡೆದಿದೆ; ಆಧ್ಯಾತ್ಮಿಕ ಪ್ರಯೋಗ ನಡೆದಿದೆ. ಈಗ ಪಶ್ಚಿಮ ದೇಶಗಳಲ್ಲಿ ವಿಜ್ಞಾನದ ಪರಿಶೋಧನೆ ನಡೆವಂತೆ, ನಮ್ಮಲ್ಲಿ ಆಧ್ಯಾತ್ಮಿಕ ಶೋಧನೆ ಪ್ರಯೋಗ ನಡೆದವು.

ಈ ದೇಶ ಎಂಥದು? ಇಡೀ ಪೃಥ್ವಿಯ ದರ್ಶನ! 'ನಾನಾ ಧರ್ಮಾಣಂ ಪೃಥಿವೀಂ ವಿವಾಚಸಂ' ನಾನಾ ಧರ್ಮಗಳ, ನಾನಾ ಭಾಷೆಗಳ ಜನರು ಭೂಮಿಯಲ್ಲಿ ಹರಡಿದ್ದಾರೆ. 'ಮಾತಾ ಭೂಮಿಃ ಪುತ್ರೋಹಂ ಪೃಥಿವ್ಯಾಃ' ಇಡೀ ಭೂಮಿಯು ತಾಯಿ; ನಾನಾಕೆಯ ಪುತ್ರ. ಇಡೀ ಪೃಥ್ವಿಗಾಗಿ ವೈದಿಕ ಋಷಿ ಹೇಳಿದ ಮಾತು ಭರತ ಭೂಮಿಗೂ ಅಷ್ಟೇ ಅನ್ವಯಿಸುತ್ತದೆ. ಇಲ್ಲಿನ ವಿಚಾರವಂತರು, ಜ್ಞಾನಿಗಳು, ನಾನು ನೀನು ಎಂಬ ಭೇದವನ್ನು ಇಡಲಿಲ್ಲ. ಸಂಕುಚಿತ ದೇಶಾಭಿಮಾನವೆಂಬುದು ಈ ಭೂಮಿಯಲ್ಲಿ ಎಂದೂ ಹುಟ್ಟಲೇ ಇಲ್ಲ. ಅಂತೆಯೇ ಲೋಕದ ಜನರು ಯಾರು ಬಂದರೂ ಅವರಿಗೆ ಅಲ್ಲಿ ಸ್ವಾಗತವಿತ್ತು. ಹೀಗೆ ಎಷ್ಟೋ ಪುಣ್ಯ ಇಲ್ಲಿ ನಡೆಯಿತು. ಪರಮೇಶ್ವರನ ದಯೆ ಇದಕ್ಕೆ ಇರಲೇಬೇಕು.

ಪುಣ್ಯ ನಡೆದಂತೆ ಈ ಭೂಮಿಯಲ್ಲಿ ಪಾಪವೂ ನಡೆಯಿತು ಪುಣ್ಯದ ಜೊತೆಗೆ ಪಾಪವನ್ನು ಭೋಗಿಸಲೇಬೇಕು. ಐದು ರೂಪಾಯಿಯ ಪುಣ್ಯ ಮಾಡಿದೆವು. ಮೂರು ರೂಪಾಯಿಯ ಪಾಪ ಮಾಡಿದೆವು; ಉಳಿದದ್ದು ಎರಡು ರೂಪಾಯಿಯ ಪುಣ್ಯ ಸಾಕು; ಎನ್ನುವ ಹಾಗಿಲ್ಲ. ಈ ಈ ಬಗೆಯ 'ಕೂಡಿಸು ಕಳೆ' ಲೆಕ್ಕ ಅಲ್ಲಿಲ್ಲ. ಐದು ರೂಪಾಯಿಯ ಪುಣ್ಯವನ್ನು ಭೋಗಿಸಬೇಕು; ಮೂರು ರೂಪಾಯಿಯ ಪಾಪವನ್ನು ಭೋಗಿಸಬೇಕು. ಎರಡನ್ನು ಅನುಭವಿಸಬೇಕು. ಎರಡೂ ಬಿಟ್ಟದ್ದಲ್ಲ. ಅನೇಕರಿಗೆ ಇದು ತಿಳಿಯದು. ಬಹಳ ಪಾಪ ಮಾಡಿ ಹಣ ಗಳಿಸುತ್ತಾರೆ. ಆ ಮೇಲೆ ಸ್ವಲ್ಪ ಹಣ ದಾನ ಮಾಡಿ, ಛತ್ರ ಕಟ್ಟಿ, ಈ ಥರದಿಂದ ಆ ಪಾಪವನ್ನು ಕಳೆಯುವ ಯೋಚನೆ ಮಾಡುತ್ತಾರೆ. ಪಾಪ, ಪುಣ್ಯ ಎರಡನ್ನೂ ಬೇರೆ ಬೇರೆ ಅನುಭವಿಸಬೇಕು.

ಮೊದಲು ಹೇಳಿದಂತೆ, ಈ ಪುಣ್ಯ ಭೂಮಿಯಲ್ಲಿ ಬೇಕಾದಷ್ಟು ಪುಣ್ಯ ನಡೆಯಿತು; ಪಾಪ ನಡೆದಿದೆ. ಉಚ್ಚ, ನೀಚ ಭಾವವನ್ನು ಬೆಳೆಸಿದ್ದು ಆ ಪಾಪ. ಶ್ರಮವನ್ನು ಗೌರವಿಸುವ ಉದ್ದೇಶದಿಂದ ನಮ್ಮ ಸಮಾಜದಲ್ಲಿ ವರ್ಣ ವ್ಯವಸ್ಥೆ ಹುಟ್ಟಿತು, ಅದರಲ್ಲಿ ಏನೂ ದೋಷವಿಲ್ಲ. ಆದರೆ, ಬರಬರುತ್ತಾ ಅದರಲ್ಲಿ ಮೇಲು, ಕೀಳೆಂಬ ಭಾವ ಬೆಳೆಯಿತು. ಪರಿಶ್ರಮ, ಉಪಯೋಗಕರ ಕೆಲಸ, ನೀಚ ಎನಿಸಿದವು. ಅವನ್ನು ಮಾಡುವವರೂ ಕೀಳು ತರಗತಿಯವರಾದರು. ಕಡೆಗೆ ಅವರಲ್ಲಿ ಕೆಲವರನ್ನು ಅಸ್ಪೃಶ್ಯರು ಎಂದೆವು. ಕೆಲಸ ಮಾಡುವುದು ಅಗೌರವವೆನಿಸಿತು. ಜ್ಞಾನಿ ಕೆಲಸ ಮಾಡನು. ಭಕ್ತನು ಜಪಸರ ತಿರುಗಿಸುತ್ತಾನೆ, ಕೆಲಸ ಮಾಡನು. ಸನ್ಯಾಸಿ ಕೆಲಸ ಮಾಡನು, ಬ್ರಾಹ್ಮಣ ಕೆಲಸ ಮಾಡನು, ಹೀಗೆ ಕೆಲಸ ಮಾಡದವರ ಗುಂಪು ಬೆಳೆಯಿತು. ಅವರ ಗೌರವ ಹೆಚ್ಚಿತು, ಕೆಲಸ ಮಾಡುವವರ ಸಂಖ್ಯೆ ಕುಗ್ಗಿತು, ಅವರ ಗೌರವವೂ ಕುಗ್ಗಿತು ಈ ಮಹಾ ಪಾಪ ನಮ್ಮ ದೇಶದಲ್ಲಿ ಆಯಿತು. ಈಗ ಪರಮೇಶ್ವರನಿಗೆ ಕರುಣೆ ಬಂತು. ನೂರಾರು ವರುಷದ ನಂತರ ದಾಸ್ಯದಿಂದ ಮುಕ್ತರಾದೆವು.

ಈ ದೇಶವು ಮಾಡಿದ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವಾಯಿತೆಂದು ದೇವರಿಗೆ ಎನಿಸಿರಬೇಕು. ದೇವರು ದಯಾಮಯನಲ್ಲವೇ? ಮೊದಲಿನ ಕೃಪೆಯನ್ನು ಮತ್ತೆ ಈ ದೇಶಕ್ಕೆ ತೋರಿಸಿದನು. ಇಲ್ಲದಿದ್ದರೆ ಗಾಂಧೀಜಿಯಂತ ಮುಂದಾಳು ನಮಗೆ ನಿಮಿತ್ತವಾಗಿ ದೊರೆತು ನಮ್ಮಂಥ ಹರಕರು ಸ್ವಾತಂತ್ರ್ಯ ಪಡೆಯಲು ಬೇರಾವ ಕಾರಣವಿದೆ? ನಮ್ಮಲ್ಲಿ ಅಂಥ ಶಕ್ತಿಯಾವುದೂ ಇಲ್ಲ ಆ ಶಕ್ತಿಯಿದೆಯೆಂಬ ಆತ್ಮ ವಿಶ್ವಾಸ ನಮಗಿದ್ದಿದ್ದರೆ, ಈಗ ಭಾರತಕ್ಕೆ ಬಂದ ಗತಿ ಬರುತ್ತಿರಲಿಲ್ಲ. ಬೇರೆ ಬಣ್ಣವೇ ಬರುತ್ತಿತ್ತು. ಸ್ವರಾಜ್ಯ ಬಂದರೂ, ಜನರ ದುಃಖ, ಮನೋಮಾಲಿನ್ಯ, ವಿಮನಸ್ಕತೆ ಮೊದಲಿದ್ದಂತೆಯೇ ಇರುವದು ಸಾಧ್ಯವಾಗುತ್ತಿರಲಿಲ್ಲ. ಆದರೆ ಹಾಗೆ ಇದೆ. ಆದ್ದರಿಂದ ನಮ್ಮ ಸ್ವರಾಜ್ಯ ದೇವರ ಕೃಪೆಯೆಂದು ತಿಳಿಯಬೇಕು ಅಂತೆಯೇ ಈ ಕ್ಲಿಷ್ಟ ವಾತಾವರಣದಲ್ಲಿಯೂ, ಉಚ್ಚ ಆಶಯ ಸದ್ಭಾವನೆಗಳು ಕಾಣಬರುತ್ತಿವೆ.

(ಆಚಾರ್ಯ ವಿನೋಬಾ ಭಾವೆಯವರ ಭಾಷಣದಿಂದ ಅಯ್ದುದು.)

—"ಸರ್ವೋದಯ"

ಶ್ರೀ. ಪ್ರಕಾಶಮ್ ಕಾಂಗ್ರೆಸ್ಸಿಗೆ ಸೇರಿದರು.

ಮದರಾಸಿನ ಪ್ರಜಾ ಸೋಶಲಿಸ್ಟ್ ಪಕ್ಷದ ನಾಯಕರೂ, ಆಂಧ್ರದ ಪ್ರಮುಖ ಧುರೀಣರೂ ಆದ ಶ್ರೀ. ಟಿ ಪ್ರಕಾಶಂ ಅವರು ಪ್ರಜಾ ಸೋಶಲಿಸ್ಟ್ ಪಕ್ಷಕ್ಕೆ ರಾಜಿನಾಮೆ ಕೊಟ್ಟು ಆಂಧ್ರ ಕಾಂಗ್ರೆಸ್ ಲೆಜಿಸ್ಲೇಚರ್ ಪಕ್ಷದ ಎಸೋಸಿಯೇಟ್ ಸದಸ್ಯರಾಗಿ ಸೇರಿರುವರು

ಅವರು ಪಿ. ಎಸ್. ಪಿ. ಯ ನ್ಯಾಶನಲ್ ಎಕ್ಸಿಕ್ಯೂಟಿವ್ ಸಮಿತಿಗೂ, ಪ್ರಾಂತೀಯ ಪಿ. ಎಸ್. ಪಿ. ಪಕ್ಷದ ಸದಸ್ಯತನಕ್ಕೂ ರಾಜಿನಾಮೆಯನ್ನಿತ್ತಿರುವುದಾಗಿ ತಿಳಿಸಿದರು.

ಆಂಧ್ರ ಕಾಂಗ್ರೆಸ್ ಲೆಜಿಸ್ಲೇಚರ್ ಪಕ್ಷಕ್ಕೆ ತಾವು ಸೇರಿರುವದಾಗಿ ಕಾಂಗ್ರೆಸ್ ಅಧ್ಯಕ್ಷರಾದ ಪಂಡಿತ ಜವಾಹರಲಾಲ ನೆಹರುಗಳಿಗೆ ತಾವು ತಿಳಿಸಿರುವುದಾಗಿಯೂ ಶ್ರೀ. ಟಿ. ಪ್ರಕಾಶಂ ಹೇಳಿದರು.

. ಪಂಡಿತ ಜವಹರಲಾಲರೂ, ಕಾಂಗ್ರೆಸ್ ಕಾರ್ಯಕಾರಿ ಮಂಡಲವೂ ತಮ್ಮ ನಿರ್ಧಾರಕ್ಕೆ ಸಮ್ಮತಿಸಿರುವರೆಂದೂ ಸೂಚಿಸಿದರು.

ತಮ್ಮ ಹೇಳಿಕೆಯನ್ನು ಮುಂದುವರಿಸುತ್ತಾ, ಶ್ರೀ. ಟಿ ಪ್ರಕಾಶಂ ಅವರು 'ಪಿ. ಎಸ್. ಪಿ. ಯ ನ್ಯಾಶನಲ್ ಎಕ್ಸಿಕ್ಯೂಟಿವ್— ಇವರು ಎಂತಹ ಪರಿಸ್ಥಿತಿಯಲ್ಲಿ ಆಂಧ್ರ ಪ್ರಾಂತದ ರಚನೆಯಾಗಿದೆ; ಯಾವ ಪ್ರಕಾರ ಆಂಧ್ರರು ತಮ್ಮ ಸರಕಾರವನ್ನು ರಚಿಸಿ ಜನತೆಯ ಅಭಿವೃದ್ಧಿಗಾಗಿ ದುಡಿಯಬೇಕು, ಎಂಬ ವಿಷಯಗಳ ಕಡೆಗೆ ಲಕ್ಷ್ಯಕೊಡದ ಕಾಂಗ್ರೆಸಿನ ಒಂದು ಸಣ್ಣ ಪ್ರಾರ್ಥನೆಯನ್ನು ಮನ್ನಿಸದೆ ತಿರಸ್ಕರಿಸಿ ದೊಡ್ಡ ತಪ್ಪನ್ನು ಮಾಡಿದರು.

'ಆಂಧ್ರದಲ್ಲಿಯ ವಿಶೇಷ ಸಂಭವನಗಳು ಕಳೆದ ನಾಲ್ಕೈದು ವರ್ಷಗಳಿಂದ ಜನರು ಪಡುತ್ತಿರುವ ಕಷ್ಟಗಳು, ಚುನಾವಣಾ ಕಾಲದಲ್ಲಿ ಜನರು ಮಾಡಿದ ನಿರ್ಧಾರ. ಇವುಗಳನ್ನು ಗಮನಿಸಿ ಪಿ. ಎಸ್. ಪಿ. ಯ ನ್ಯಾಶನಲ್ ಎಕ್ಸಿಕ್ಯೂಟಿವ್ ಇದರ ಅಭಿಪ್ರಾಯವನ್ನು ಅಲಕ್ಷಿಸಿ ಈಗ ನಾನು ಅನುಸರಿಸುತ್ತಿರುವ ಮಾರ್ಗವನ್ನು ಆರಿಸಿದೆನು.' ಎಂದಿರುವರು.

(೪ನೇ ಪುಟದಿಂದ ಸಾಗಿದ್ದು)

ವದರಿಂದ ಅದು ಸಾಧ್ಯವಾಗದೆಂದೂ ಮಂತ್ರಿಯವರು ಹೇಳಿದ ಮೇರೆ ಠರಾವನ್ನು ಸೂಚಕರಾದ ಶ್ರೀ ಪಿ. ಲಕ್ಷಯ್ಯನವರು ಹಿಂತೆಗೆದುಕೊಂಡರು.

ಕೊಡಗಿಗೆ ಪ್ರಥಮತ ದೊರೆತಿರುವ ಪ್ರಜಾ ಸರಕಾರದ ಆಡಳಿತವು ಚರಿತ್ರಾರ್ಹವಾದ ವಿಷಯವಾಗಿದ್ದು ಅದು ಸುವರ್ಣಾಕ್ಷರಗಳಿಂದ ಬರೆದಿಡತಕ್ಕದ್ದಾಗಿ ಆಡಳಿತವು ದಕ್ಷ ವ್ಯಕ್ತಿಗಳಿಂದ ನಡೆಯುತ್ತಿರುವದು ಚಿರಸ್ಮರಣೀಯವಾದ ವಿಷಯವಾಗಿರುವದರಿಂದ ಇದರ ಸವಿ ನೆನಪಿಗಾಗಿ ಮಾನ್ಯ ಮಂತ್ರಿದ್ವಯರ, ಅಧ್ಯಕ್ಷರ ಮತ್ತು ಚೀಫ್ ಕಮಿಷನರ ಭಾವಚಿತ್ರಗಳನ್ನು ಎಸೆಂಬ್ಲಿ ಹಾಲ್‌ನಲ್ಲಿಡಬೇಕೆಂಬ ಠರಾವನ್ನು ಶ್ರೀ ಪಿ. ಕೆ. ಚಿನ್ನಯ್ಯನವರು ಸೂಚಿಸದೆ ಹಿಂತೆಗೆದುಕೊಂಡರು.

ಠರಾವುಗಳೆಲ್ಲಾ ಮುಗಿದ ಕಾರಣ ಮಧ್ಯಾಹ್ನ ೧—೧೫ ನಿಮಿಷಕ್ಕೆ ಕೌನ್ಸಿಲ್ ಅಧಿವೇಶನವನ್ನು ಅಕ್ಟೋಬರ್ ೧೪ನೇ ತಾರೀಖಿಗೆ ಮುಂದರಿಸಲಾಯಿತು.

ಭಾರತ ಸೇವಾ ಸಮಾಜ

ಸಮಾಜದ ಅಧ್ಯಕ್ಷರಾದ ಪಂಡಿತ್ ನೆಹರೂರವರು ನಿಧಿಯ ಸಹಾಯಾರ್ಥ ಒಂದು ಅರಿಕೆಯನ್ನು ಮಾಡಿರುವರು. ಆ ಪ್ರಯುಕ್ತ ಕೊಡಗಿನ ಜನರ ಒಂದು ಮಹಾಸಭೆಯು ಚೀಫ್ ಕಮಿಷನರವರ ಅಧ್ಯಕ್ಷತೆಯಲ್ಲಿ ಜರುಗಿ ಈ ಕೆಳಗಿನ ವ್ಯಕ್ತಿಯರನ್ನು ವಸೂಲಾತಿಗೆ ನೇಮಿಸಲಾಗಿದೆ. ಅವರು ಅವರ ಸ್ಥಳೀಕ ಕಮಿಟಿಗಳನ್ನು ಮಾಡಿಕೊಂಡು ನಿಧಿಗೆ ಹಣ ಕೇಳುವರು. ದಿಲ್ಲಿಯಿಂದಲೇ ಪ್ರಿಂಟ್ ಮಾಡಿರುವ ರಶೀತಿ ಪುಸ್ತಕಗಳಿಂದ, ಕೊಟ್ಟ ಹಣಕ್ಕೆ ರಶೀತಿ ಕೊಡಲಾಗುವದು. ಹತ್ತು ರೂಪಾಯಿಗಳಿಗೆ ಹೆಚ್ಚಿನ ಸಹಾಯ ಮಾಡಿದವರ ಹೆಸರುಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವದು. ಹಣ ಸಹಾಯ ಅಥವಾ ಧರ್ಮಾರ್ಥ ಶಾಲಾ, ಆಸ್ಪತ್ರೆ ಕಟ್ಟಡ ಸಹ ಕಟ್ಟಿಸಬಹುದು. ಆದಾಯ ಕಂದಾಯದಿಂದ ಈ ಹಣ ವಿನಾಯಿಸಲ್ಪಡುವದು.

ಕೊಡಗು ಧರ್ಮದ ತವರು ಎಂಬ ಹೆಸರನ್ನು ಪಡೆದಿದೆ. ನೆಹರೂರವರಿಗೆ ಈಗಲೂ ಈ ಮೂಲಕ ಕೊಡಗಿನ ಮಹಾಜನರು ತಮ್ಮ ಸಹಾಯವನ್ನು ಸಮರ್ಪಿಸುವರಾಗಿ ನಂಬಿರುತ್ತೇವೆ.

ಬಿ. ಎಸ್. ಕುಶಾಲಪ್ಪ,

(ನಿಧಿ ಸಂಗ್ರಹ ಕಮಿಟಿಯ ಅಧ್ಯಕ್ಷ.)

(೧) ಕೊಡ್ಲಿಪೇಟೆ— ಶ್ರೀ ಪಿ. ಕೆ. ಚಿನ್ನಯ್ಯ ಎಂ. ಎಲ್. ಎ, (೨) ಶನಿವಾರಸಂತೆ— ಶ್ರೀ ಕೃಷ್ಣಮೂರ್ತಿ, (೩) ಸೋಮವಾರಪೇಟೆ— ಶ್ರೀ ಸಿ. ಕೆ. ಕಾಳಪ್ಪ ಎಂ. ಎಲ್. ಎ, (೪) ಮಾದಾಪುರ— ಶ್ರೀ ಎನ್. ಕೆ. ಗಣಪಯ್ಯ; (೫) ಸುಂಟಿಕೊಪ್ಪ— ಶ್ರೀ ಮಂಜುನಾಥಯ್ಯ ಎಂ. ಎಲ್. ಎ; (೬) ಫ್ರೇಜರ್‌ಪೇಟೆ— ಶ್ರೀ ಲಕ್ಷ್ಮಣಶೆಟ್ಟಿ, (೭) ಮಡಿಕೇರಿ— ಶ್ರೀ ಮೋಹಿದೀನ್, ಮುನ್ಸಿಪಲ್ ಪ್ರೆಸಿಡೆಂಟ್, (೮) ಸಿದ್ದಾಪುರ— ರಾವ್‌ಬಹದ್ದೂರ್ ಕೆ. ಟಿ. ಉತ್ತಪ್ಪ; (೯) ಮೂರ್ನಾಡು— ಶ್ರೀ ಕೆ ದೇವಯ್ಯ, ಡಿಪ್ಯೂಟಿ ಸ್ಪೀಕರ್; (೧೦) ಭಾಗಮಂಡಲ— ಶ್ರೀ ಎಸ್. ಶ್ರೀನಿವಾಸಯ್ಯ; (೧೧) ನಾಪೋಕ್ಲು—ಶ್ರೀ ಡಿ. ಎನ್. ದೇವಯ್ಯ; (೧೨) ಕಕ್ಕಬ್ಬೆ— ಶ್ರೀ ಎಸ್. ನಾರಾಯಣಮೂರ್ತಿ, (೧೩) ಅಮ್ಮತ್ತಿ— ಶ್ರೀ ಐ. ಪಿ. ಕಾರ್ಯಪ್ಪ; (೧೪) ಪೊಳ್ಳಿಬೆಟ್ಟ ಶ್ರೀ— ಐವರ್ ಬುಲ್; (೧೫) ಗೋಣಿಕೊಪ್ಪಲು — ಶ್ರೀ ಕೊಂಗಾಂಡ ಬಿ. ಗಣಪತ್ತಿ; (೧೬) ಪೊನ್ನಂಪೇಟೆ— ಶ್ರೀ ಸಿ. ಪಿ. ಕುಶಾಲಪ್ಪ, (೧೭) ವೀರಾಜಪೇಟೆ— ಎಸ್. ಎಸ್. ರಾಮಮೂರ್ತಿ; (೧೮) ತಿತಿಮತಿ— ಶ್ರೀ ಐ. ಪಿ. ಚಂಗಪ್ಪ; (೧೯) ಹುದಿಕೇರಿ— ಶ್ರೀ ಕೆ. ಎಸ್. ಸಂಜಪ್ಪ, (೨೦) ಶ್ರೀಮಂಗಲ—ಶ್ರೀ ಕೆ. ಸಿದ್ದಪ್ಪ; (೨೧) ಕುಟ್ಟ— ಶ್ರೀ ಮುಕ್ಕಾಟಿರ ಕರುಂಬಯ್ಯ, (೨೨) ಸಂಪಾಜೆ— ಶ್ರೀ ಜಿ ಸ್ ಸಣ್ಣಯ್ಯ.

ವೀರಾಜಪೇಟೆಗೆ

'ಕೊಡಗು' ಏಜೆಂಟರು,

ಶ್ರೀ ಟಿ. ಎನ್. ಗೋವಿಂದರಾಜು.

॥ ಯುಗಪುರುಷ ಬಾಪು ॥

ಲೇ: ಪಂಡಿತ ಜವಾಹರ್‌ಲಾಲ್ ನೆಹರೂ

ನಮ್ಮ ಜೀವನದ ಬೆಳಕಾಗಿದ್ದ ಜ್ಯೋತಿ ನಂದಿತು. ಸುತ್ತಲೂ ಕತ್ತಲು ಕವಿದಿದೆ. ನಮ್ಮ ನಚ್ಚಿನ ಬಾಪು ಕಣ್ಮರೆಯಾದರು. ನಮ್ಮ ರಾಷ್ಟ್ರಪಿತನಾಗಿ ನಮ್ಮ ಭವಿಷ್ಯ ನಿರೂಪಿಸುತ್ತಿದ್ದ ಬಾಪು ಇನ್ನಿಲ್ಲ. ನಮ್ಮ ಜೀವನದ ಬೆಳಕು ನಂದಿತು ಎಂದು ನಾನು ಹೇಳುವದೂ ತಪ್ಪಾದೀತು. ಏಕೆಂದರೆ ಈ ರಾಷ್ಟ್ರದಲ್ಲಿ ಬೆಳಗಿದ ಆ ಬೆಳಕು ಸಾಮಾನ್ಯ ಬೆಳಕೇನಲ್ಲ. ಈ ಹಲವು ವರ್ಷಗಳ ವರೆಗೆ ಈ ದೇಶವನ್ನು ಬೆಳಗಿಸಿದ ಆ ದಿವ್ಯಜ್ಯೋತಿಯು ಭವಿಷ್ಯದ ಸಹಸ್ರಾರು ವರ್ಷಗಳ ವರೆಗೂ ಬೆಳಕುಕೊಡುವದು. ವರ್ಷ ಕಳೆದಂತೆ ಅದು ಜಗತ್ತಿನ ಬೆಳಕಾಗಿ ಅಸಂಖ್ಯ ಹೃದಯಗಳಿಗೆ ಶಾಂತಿಯನ್ನು ಕೊಟ್ಟು ಸತ್ಪಥವನ್ನು ತೋರುವದು. ಆ ಬೆಳಕು ಕೇವಲ ವರ್ತಮಾನಕ್ಕೆ ಸಂಬಂಧಿಸಿದ ಬೆಳಕಲ್ಲ. ಜೀವಿತ ಸತ್ಯದ ನಿತ್ಯ ಬೆಳಕದು. ಶಾಶ್ವತವಾದ ಸತ್ಯಗಳನ್ನು ಮರೆತು ಸತ್ಯಪಥವನ್ನು ತಪ್ಪಿ ನಡೆಯುವ ನಮಗೆ ಸದಾ ದಾರಿ ತೋರಿಸುವ ಅಚಲ ಬೆಳಕದು.

* * *

ನಾವು ಉತ್ತಮರನ್ನು, ಆದರ್ಶ ಜೀವನ ನಡೆಸಿದವರನ್ನು ಹೊಗಳುತ್ತೇವೆ. ಅವರ ಘನತೆ, ಉದಾತ್ತತೆಗಳನ್ನು ಅಳೆಯಲು ನಮಗೊಂದು ಅಳತೆಗೋಲಿರುತ್ತದೆ. ಆದರೆ ಈ ಯುಗಪುರುಷನನ್ನು ನಾವು ಅಳೆಯುವದೆಂತು. ಅವನನ್ನು ಹೊಗಳುವದೆಂತು? ನಾವೆಲ್ಲರೂ ರೂಪಿತಗೊಂಡ ಸಾಮಾನ್ಯ ವಸ್ತುಗಳಿಂದ ತಯಾರಾದ ವ್ಯಕ್ತಿ ಅವನಲ್ಲ. ಈ ಜಗತ್ತಿಗೆ ಆ ಜ್ಯೋತಿ ಬಂದಿತು. ಕಲ್ಮಷವಿಲ್ಲದೆ ಸಾಕಷ್ಟು ಕಾಲ ಸರ್ವರ ಹಿತಕ್ಕಾಗಿ ಬೆಳಗಿತು. ಈಗ ಅದು ನಂದಿದೆ. ಆ ಜೀವನವನ್ನು ನಾವೇನು ಹೊಗಳಬಲ್ಲೆವು? ನಾವು ಹೊಗಳುವ ಸಾಧ್ಯತೆಯಾದರೂ ಎಲ್ಲಿದೆ? ಆತನು ಜೀವಿಸಿರುವಾಗಲೇ ಜಗತ್ತಿನ ಜನತೆ ಆತನನ್ನು ಮುಕ್ತಕಂಠದಿಂದ ಹೊಗಳಿದೆ. ಅವನ ನಿಧನದಲ್ಲಿ ಇಡೀ ಜಗತ್ತು ದುಃಖಸಾಗರದಲ್ಲಿ ಮುಳುಗಿದೆ. ಆತನ ಮಕ್ಕಳಾಗಿ, ಆತನ ನಿಜ ಮಕ್ಕಳಿಗಿಂಥಲೂ ಹತ್ತಿರದವರಾಗಿ ಬದುಕಿದ, ಆತನ ಕರೆಯಂತೆ ನಮ್ಮ ಪುಟ್ಟ ಹೆಜ್ಜೆಗಳನ್ನು ಅಡವಿತಡವಿ ಇಡಲು ಯತ್ನಿಸಿದ ನಾವೇನು ಹೊಗಳಬಲ್ಲೆವು?

* * *

ಸುತ್ತಲೂ ಬೆಳಗಿ ನಮ್ಮ ಜಡಶರೀರಕ್ಕೂ ಚೇತನವನ್ನೂ, ಸ್ಫೂರ್ತಿಯನ್ನೂ, ಸಾಕಷ್ಟು ಕಾವನ್ನೂ ಕೊಡುತ್ತಿದ್ದ ಸೂರ್ಯ[illegible] ಅಸ್ತಮಾನವಾಯಿತು. ಎಲ್ಲೆಡೆಯಲ್ಲೂ ಚಳಿ ಪಸರಿಸಿದೆ. ಆದರೂ ಈ ಚಳಿಯಿಂದ ನಡುಗಿ, ಕತ್ತಲೆಯಲ್ಲಿ ಉಡುಗಿ ಕೂರುವದು ಆತನ ಘನತೆಗೆ ಸಲ್ಲದು. ಏಕೆಂದರೆ ಆತನಲ್ಲಿ ಬೆಳಗಿದ ದೈವಜ್ಯೋತಿಯ ಬೆಳಕು ನಮ್ಮ ಮೇಲೆಯೂ ಬಿದ್ದು ನಮ್ಮನ್ನೂ ಸ್ವಲ್ಪ ಮಟ್ಟಿಗೆ ಬದಲಾಯಿಸಿದೆ. ಆ ದಿವ್ಯ ಜ್ಯೋತಿಯ ಪ್ರಭಾವದಿಂದ ನಮ್ಮ ಹೃದಯದಲ್ಲೂ ನಮ್ಮ ಪರಿಮಿತಿಗೊಳಪಟ್ಟ ಚಿಕ್ಕ ಹಣತೆಗಳು ಹಚ್ಚಲ್ಪಟ್ಟಿವೆ. ಆದ್ದರಿಂದ ಆತನನ್ನು ಹೊಗಳಿದರೆ ನಮ್ಮನ್ನೇ ಹೊಗಳಿದಂತಾಗುತ್ತದೆ. ಆತನು ನಮ್ಮೆಲ್ಲರ ಜೀವದ ಜೀವಾಳವಾಗಿ ನಮ್ಮ ಪ್ರತಿ ಕ್ಷೇತ್ರದಲ್ಲಿ ಪ್ರಭಾವ ಬೀರಿದವನು. ವಿಖ್ಯಾತರಾದ ಮಹಾಪುರುಷರಿಗೆ ಪ್ರತಿಮೆಗಳೂ, ಸ್ಮಾರಕ, ಕಟ್ಟಡಗಳೂ ಕಟ್ಟಲ್ಪಡುತ್ತವೆ. ಆದರೆ ಈ ದೇವತಾ ಮನುಷ್ಯನು ತಾನು ಜೀವಿಸಿದ್ದಾಗಲೇ ಪ್ರತಿ ಮಾನವನ ಹೃದಯದಲ್ಲಿ ಸ್ಥಾನಪಡೆದು ವಿರಾಜಿಸಿದ್ದಾನೆ. ಆತನು ಮಿಲಿಯಾಂತರ ಜನತೆಯ ಹೃದಯದಲ್ಲಿ ಜೀವಿಸಿದ್ದಾನೆ. ಭವಿಷ್ಯದ ಮಿಲಿಯಾಂತರ ವರ್ಷಗಳ ವರೆಗೂ ಜೀವಿಸುವನು.

* * *

ಶತಮಾನಗಳ ನಂತರ ಚರಿತ್ರೆಯು ಇಂದಿನ ದಿನಗಳನ್ನು ಅವುಗಳ ಯೋಗ್ಯತೆಗನುಗುಣ ಅಳೆಯಲು ಶಕ್ತವಾಗುವದು. ನಾವು ಅದರೊಳಗೆ ಮಿಳಿತರಾಗಿ, ಅದರ ಕರ್ತವ್ಯ ಕಾರಣಗಳಲ್ಲಿ ಮಿಲನರಾಗಿರುವದರಿಂದ ನಿಷ್ಪಕ್ಷ ದೃಷ್ಟಿಯಿಂದ ಅದರ ಘನತೆ ಶ್ರೇಷ್ಠತೆಗಳನ್ನು ಅಳೆಯಲಾರೆವು. ಗತ ಭಾರತದ ಅತೀ ಘನತರ ಸಂಕೇತವಾಗಿದ್ದವರು ರಾಷ್ಟ್ರಪಿತ ಬಾಪು. ಬರಲಿರುವ ಭವಿಷ್ಯದ ಘನತೆಯು ವ್ಯಕ್ತಿಯು ಅವರೇ. ಇಂದವರಿಲ್ಲ. ಅನಾಧರಂತಾಗಿರುವ ನಮ್ಮ ಸುತ್ತುಮುತ್ತು ವಿವಿಧ ಸಮಸ್ಯೆಗಳೂ ನೂರಾರು ಗಂಡಾಂತರಗಳೂ ಇವೆ. ಇವೆಲ್ಲವುಗಳಿಗಿಂಥಾ ನಮ್ಮಲ್ಲಿ ನಮ್ಮ ವಿಶ್ವಾಸವನ್ನು ಕಳೆದುಕೊಳ್ಳುವದು ಮಹಾಗಂಡಾಂತರ. ಆದ್ದರಿಂದ ಧೃತಿಗೆಡದೆ ಮುಂದೆ ಸಾಗುವದು ಇಂದಿನ ಆವಶ್ಯಕತೆಯಾಗಿದೆ. ಬಾಪುವಿನ ಅಗಲಿಕೆಯ ದುಃಖದ ಮಧ್ಯೆ ನಮ್ಮನ್ನು ನಾವು ಅದೃಷ್ಟಶಾಲಿಗಳೆಂದುಕೊಳ್ಳಬೇಕಿದೆ. ಈ ಮಹಾ ಯುಗಪುರುಷನ ಸಮಕಾಲೀನರಾಗಿ ಬದುಕಿದ ಭಾಗ್ಯ ನಮ್ಮದಾಗಿದೆ. ಮುಂದಿನ ಮಿಲಿಯಾಂತರ ವರ್ಷಗಳ ನಂತರದ ಪೀಳಿಗೆಯು ಈ ದೇವತಾ ಮನುಷ್ಯನು ಇಲ್ಲಿ ಜನ್ಮವೆತ್ತಿ ಈ ಭೂಮಿಯಲ್ಲಿ ಬದುಕಿ ಬಾಳಿದ ಪುಣ್ಯಯುಗವನ್ನು ಸ್ಮರಿಸುವಾಗ, ಅತಿ ನಿಕೃಷ್ಟರೂ, ಆತನನ್ನು ಯೋಗ್ಯ ರೀತಿ ಹಿಂಬಾಲಿಸದವರೂ ಆದ ನಾವು ಆತನು ತುಳಿದ ಭೂಮಿಯನ್ನೇ ತುಳಿದು, ಆತನು ಆಘ್ರಾಣಿಸಿದ ವಾಯುವನ್ನು ಸೇವಿಸಿ ಆತನ ಸಮಕಾಲೀನರಾಗಿ ಬದುಕಿನ ಕಾರಣದಿಂದ ನಮ್ಮನ್ನೂ ಪುಣ್ಯವಂತರೆಂದು ಪರಿಗಣಿಸದಿರರು. ಆದ್ದರಿಂದ ಆ ಯುಗಪುರುಷನ ಹಿಂಬಾಲಕರಿಗೆ ತಕ್ಕ ಯೋಗ್ಯತೆಯಿಂದ ವರ್ತಿಸುವ.

* * *

೧೯೧೬ ನೇ ಇಸವಿ. ನಾನು ಬಾಪುವನ್ನು ಪ್ರಥಮವಾಗಿ ನೋಡಿದ ಸಮಯವದು. ಈ ಗತಕಾಲದ ಘಟನೆಗಳನ್ನು ಆಲೋಚಿಸಿದರೆ ಮಹಾ ಘಟನೆಗಳ ಪ್ರವಾಹವೇ ಚಿತ್ತವನ್ನು ಮುತ್ತಿಕೊಳ್ಳುತ್ತವೆ. ಭಾರತದ ಚರಿತ್ರೆಯಲ್ಲಿ ಅದೆಂಥಾ ದಿನಗಳು. ಆ ಜಯಾಪಜಯಗಳು, ಆ ಹಿಗ್ಗುತಗ್ಗುಗಳು, ವರ್ಣನಾತೀತವಾದುವು. ಆ ಮಹಾಪುರುಷನ ಸ್ಪರ್ಶಕ್ಕೆ ದೊರಕಿದ ನಿಕೃಷ್ಟ ಜೀವಿಯೂ ಕೂಡ ವೀರನೂ ಆದರ್ಶನೂ ಆದನು. ಭರತಖಂಡದ ಸ್ವಾತಂತ್ರ್ಯ ರಣದ ಮಹಾನಾಟಕದ ಸೂತ್ರಧಾರಿಯಾದ ಬಾಪುವಿನ ನಿರ್ದೇಶನದಲ್ಲಿ ಎಲ್ಲರೂ ಆದರ್ಶ ಪಾತ್ರ ವಹಿಸಿದರು. ಜಗತ್ತಿನ ಘಟನೆಗಳ ಯುದ್ಧ, ಘರ್ಷಣೆಗಳ, ಸ್ಫೋಟ, ತಾತ್ಸಾರಗಳ ಹಿನ್ನೆಲೆಯಲ್ಲಿ ಭಾರತದ ಆ ಕಾಲದ ಘಟನೆಗಳು ಸ್ಫಟಿಕ ಸದೃಶ ಪವಿತ್ರತೆಯಿಂದ ಸ್ಪಷ್ಟವಾಗಿ ತೋರುತ್ತವೆ. ಭಾರತವು ಜಗತ್ತಿನ ಘಟನೆ, ಘರ್ಷಣೆಗಳ ಕೆಳಮಟ್ಟದಿಂದ ಬಹು ಎತ್ತರದ ಮಟ್ಟದಲ್ಲಿ ಜೀವಿಸಿತು. ಮಹಾತ್ಮರ ವ್ಯಕ್ತಿತ್ವವು ಭಾರತವನ್ನು ಮೇಲ್ಮಟ್ಟದಲ್ಲಿ ನಿಲ್ಲಿಸಿತು. ಜಗತ್ತಿಗೆ ಆದರ್ಶವಾಗುವ ಘನತೆಯನ್ನು ಅದಕ್ಕೆ ಕೊಟ್ಟಿತು. ಭರತಖಂಡದ ಈ ಅರ್ಧ ಶತಮಾನದ ಚರಿತ್ರೆಯಲ್ಲಿ ಮಹಾತ್ಮರು ವಿಶ್ವರೂಪಿಯಂತೆ ಮಹಾ ಆಕಾರದ ಶಕ್ತಿ ಸಂಪನ್ನತೆಯಿಂದ ತೋರುತ್ತಾರೆ. ಈ ಶಕ್ತಿ ಶಾರೀರಕ ಪಶುಬಲವಲ್ಲ. ಅದು ಆತ್ಮದ ಹಾಗೂ ಅಧ್ಯಾತ್ಮಿಕ ಶಕ್ತಿ.

* * *

ಕಠಿಣ ಪರಿಶ್ರಮದ ದೀರ್ಘಜೀವನವು ಬಾಪುವಿನದು. ಸಾಮಾನ್ಯ ವಿಷಯಗಳೇ ಅವರ ಕಾರ್ಯಕ್ಷೇತ್ರ. ಅವುಗಳ ಮೇಲೆಯೇ ಅವರ ನವೀನ ಪ್ರಯೋಗ ಪ್ರತಿ ಕ್ಷೇತ್ರದಲ್ಲಿ ಅವರ ಹಸ್ತಕ್ಷೇಪವಾದರೂ ಸುಂದರ ಕಲಾವಿದನು ತನ್ನ ಕುಂಚದ ವಿವಿಧ ಹೊಡೆತಗಳಿಂದ ಮನಮೋಹಕ ಚಿತ್ರ ರಚಿಸುವಂತೆ ಮಹಾತ್ಮಾಗಾಂಧಿಯವರು ಸಮಗ್ರ ಸಮರಸದ ಭವ್ಯ ಭಾರತಕ್ಕೆ ಅಡಿಪಾಯ ಹಾಕಿದರು. ಬಾಪುವು ಅತ್ಯುತ್ತಮ ಕಲಾವಿದ. ನಿರ್ಜೀವ ವಸ್ತುಗಳ ನಿರ್ಮಾಣದ ಕಲಾಕಾರನಲ್ಲ. ಬದಲು ಸಜೀವ ಜನತೆಯ ಕಲಾಕಾರ. ಅವರ ಪ್ರಾಯ ಹೆಚ್ಚಾದಂತೆ ಅವರ ಶರೀರವು ಕೇವಲ ಆತ್ಮದ ಆಶಯಕ್ಕೆ [illegible]ಹಾಯಕವಾದ ಸಾಧನವಾಯಿತು. ಅವರು ತಮ್ಮ ಶರೀರವನ್ನೇ ಮರೆತು ಸರ್ವೈಕ್ಯವನ್ನು ಪಡೆದರು. ಬಾಪುವನ್ನು ನೋಡುವವರಿಗೂ ಕೂಡ ಅವರ ಬಡಕಲಾದ ಒಣಶರೀರದ ಗೋಚರವೇ ಆಗುತ್ತಿರಲಿಲ್ಲ. ಅವರ ಆತ್ಮದ ಸೌಂದರ್ಯವನ್ನೇ ಗೋಚರಿಸುತಿತ್ತು. ತತ್ಪರಿಣಾಮವಾಗಿ ಅವರು ಎಲ್ಲಿ ಕುಳಿತರೋ ಅಲ್ಲೇ ದೇವಮಂದಿರವಾಯಿತು. ಅವರು ಎಲ್ಲಿ ನಡೆದರೋ ಅದು ತೀರ್ಥಸ್ಥಳವಾಯಿತು.

* * *

ಸಾವಿನಲ್ಲಿಯೂ ಕೂಡ ಬಾಪುವಿನದು ಎಂಥಾ ಪರಿಪೂರ್ಣತೆ! ಬಾಪುವು ಗಿಡ ಒಣಗಿ ಸೊರಗುವಂತೆ ರೋಗರುಜಿನಗಳಿಂದ ಸಾಯಲಿಲ್ಲ. ಬೋಧಪ್ರದವಾದ ಜೀವನಕ್ಕೆ ಅನುಗುಣವಾದ ಅಂತಿಮವೇ ಅವರಿಗೆ ದೊರೆಯಿತು. ಅದರಿಂದ ಅವರ ಜೀವನದ ಪಾಟಕ್ಕೆ ಘನತೆ ಏರಿತು. ಜೀವನವೇ ಒಂದು ತಪಸ್ಸು ಪ್ರಾರ್ಥನೆಯಾದ ಬಾಪುವಿಗೆ ಪ್ರಾರ್ಥನೆಯ ಸಮಯದಲ್ಲಿಯೇ ಸಾವು ದೊರೆಯಿತು. ಭೂಮಿಗೆ ಹೊರೆಯಾಗಿ, ನಾಲ್ಕು ಜನರಿಗೆ ಉಪಯೋಗವಿಲ್ಲದಂಥಾ ಕೃಶರಾಗಿ ಅವರು ಸಾಯಲಿಲ್ಲ. ಕಣ್ಣಿನಲ್ಲಿ [illegible] ತೇಜ ತುಂಬಿ, ಮುಖದಲ್ಲಿ ಮುಗುಳ್ನಗೆ ಹೊರಸೂಸಿ ಇಹವನ್ನು ತ್ಯಜಿಸಿದರು. ಬಾಪುವು ನಮ್ಮನ್ನು [illegible]ದರು ನಮ್ಮನ್ನು ಶಕ್ತಿಶಾಲಿಗಳಾಗಿ ಮಾಡಲು ನಮ್ಮೊಡನೆ ಜನಿಸಿದರು. ಅವರು [illegible] ಅಮಾನುಷ ರೀತಿಯ ಚೇತನದಿಂದ ಮಡಿದರು. ಜಗತ್ತಿನ ದೀನ ದಲಿತರಿಗಾಗಿ ಸರ್ವಸ್ವವನ್ನು ತೇದು ವಿನಿಯೋಗಿಸಿದರು. ನಮ್ಮ ರಾಷ್ಟ್ರೀಯ ಪರಂಪರೆಯನ್ನು ಸಂಪನ್ನವಾಗಿ ಮಾಡಿ ಹೇಳಹೆಸರಿಲ್ಲದಿದ್ದ ರಾಷ್ಟ್ರವನ್ನು ಜಗತ್ತಿನ ಸ್ವತಂತ್ರ ರಾಷ್ಟ್ರಗಳ ಸಾಲಿನಲ್ಲಿ ನಿಲ್ಲಿಸಿದರು. ಅವರು ಪರಿಪೂರ್ಣರು. ಜೀವನ ಸಾಫಲ್ಯವನ್ನು ಪಡೆದರು. ಈಗ ಉಳಿದಿರುವದು ನಮ್ಮ ಕರ್ತವ್ಯ. ಆ ಯುಗಪುರುಷನ ಅನುಯಾಯಿಗಳಾದ ನಾವು ಅವರ ಆಸೆ, ಭರವಸೆಗಳಿಗೆ ವ್ಯತಿರಿಕ್ತ ವರ್ತಿಸದೆ ರಾಷ್ಟ್ರದ ಉನ್ನತಿಗೆ ಮಡಿಯಬೇಕು. ಅವರು ನಮಗೆ ಬಿಟ್ಟು ಹೋಗಿರುವ ಕೆಲಸವನ್ನು ನಮ್ಮ ಶ್ರದ್ಧಾಪೂರ್ವಕ ಪರಿಶ್ರಮದಿಂದ ಮುಂದೊತ್ತುವದು ಪ್ರತಿಯೊಬ್ಬನ ಕರ್ತವ್ಯ. ಆಗ ಮಾತ್ರ ನಾವು ಮುಕ್ತಕಂಠದಿಂದ ಕೂಗುತ್ತಿದ್ದ 'ಮಹಾತ್ಮಾಗಾಂಧೀಕೀ ಜೈ' ನಿಜವಾಗಿ ಕೈಗೂಡುವದು.

ಸಂಗ್ರಾಹಕ—ಶ್ರೀ ಬಿ.ಡಿ.ಗ

Notice.

Gymkl[illegible] Races will be held on the Jumboor Bane turn. off at milestone 11/7 on Mercara-Somwarpet Road on October the 7th and 10th. First race on each day is at 11. O' Clock The races will consist of four races each day including one or more for Tatponies.

3-3 J. H SPROTT,
President,
Coorg and Mysore Gymkhana Club.

Edited Printed & Published by P. I. Belliappa, at, Kodagu' Press, Mercara, for 'Kodagu' Ltd.

ನಾಲ್ಕನೇ ಕ್ಷಯ ರೋಗ ಸೀಲುಗಳ ಮಾರಾಟ ಚಳವಳ.

೧೯೫೩ ನೇ ಅಕ್ಟೋಬರ್ ೨ ರಿಂದ ೧೯೫೪ ನೇ ಜನವರಿ ೨೬ ರ ವರೆಗೆ

(ಹೊಸ ಡೆಲ್ಲಿಯಲ್ಲಿರುವ ಅಖಿಲ ಭಾರತ ಕ್ಷಯ ರೋಗ ನಿವಾರಣಾ ಸಂಘದಿಂದ ನಡೆಸಲ್ಪಡುವಂಥಾದ್ದು)

೧೯೫೩-೫೪ ರ ಕ್ಷಯ ರೋಗ ಸೀಲು

ಈ ಸೀಲುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಕೊಂಡುಕೊಳ್ಳಿರಿ. ಪ್ರತಿ ಸೀಲಿಗೆ

*** ಒಂದಾಣೆ ಮಾತ್ರ ***

ಜ್ಞಾಪಕದಲ್ಲಿಡಿರಿ ! ನಿಮ್ಮ ಧನ ಸಹಾಯವು ಕ್ಷಯ ರೋಗದ
ವಿರುದ್ಧ ಜನತೆ ಹೂಡಿರುವ ಯುದ್ಧಕ್ಕೆ ನೆರವಾದ ನೆರವೆಂದು

(ಈ ಪ್ರಕಟಣಾ ಸ್ಥಳ ಮೆಸರ್ಸ್ ಮೂಫತ್‌ಲಾಲ್ ಗಗಲ್‌ಬಾಯಿ ಅಂಡ್ ಕಂಪೆನಿ ಲಿಮಿಟೆಡ್ ಬೊಂಬಾಯಿ ಇವರ ಕೃಪೆಯಿಂದ)

ಕೊಡಗು

ಕೊನೆಯ ಹಾಡು.

ನನ್ನ ಹರಣ ನಿನಗೆ ಶರಣ
        ಸಕಲ ಕಾರ್ಯ ಕಾರಣಾ
ನಿನ್ನ ಮನನ ಮಿಂಚ ತನನ
        ವಿನುತಿದೆ ತನು ಪಾವನಾ ! ॥ ೧ ॥

ಸುಖದ ಮಿಷವು ದುಃಖ ವಿಷವು
        ಹಿಗ್ಗಿ ಪ್ರಾಣ ಪೂರಣಾ
ಪಂಚಕರಣ ಗಳಿಗೆಗಡಣ
        ಕಟ್ಟಿತು ಗುಡಿ ತೋರಣಾ ॥ ೨ ॥

ನಿನ್ನ ಚರಣ ಸುಸಂತರಣ
        ಜಗತ್ಪ್ರಿತ ಭಾವನಾ !
ಹಾಸ್ಯ ಕಿರಣ ತಪಸು ಸರಣ
        ತದಿತರ ಪಥ ಕಾಣೆನಾ ॥ ೩ ॥

ಹರುಷ ರಸವೆ, ಕರುಣದಸುವೆ,
        ಜೀವ ಧರ್ಮ ಧಾರಣಾ;
ರಸವೆ ಜನನ ವಿರಸ ಮರಣ
        ಸಮರಸವೇ ಜೀವನಾ. ॥ ೪ ॥

— ದ. ರಾ. ಬೇಂದ್ರೆ (ಮೂರ್ತಿ ಮತ್ತು ಕಾಮಕಸ್ತೂರಿ)

ವಾರ್ಷಿಕ ಚಂದಾ ರೂ. ೫—೦—೦
ಸಂಪುಟ ೩) (ಸಂಚಿಕೆ ೧೯
ಶುಕ್ರವಾರ
೯--೧೦--೧೯೫೩
ಬಿಡಿ ಪ್ರತಿ 2 ಆಣೆ

KODAGU KANNADA WEEKLY MERCARA

ಈ ವಾರದ ಕಥೆ.

ಆ ರೋಗಿ ಯಾರು……?

— ಲೇಖಕಿ:—ಕುಮಾರಿ ಡಿ. ಯಸ್. ಸರೋಜಿನಿ —

ಆ ರೋಗಿ ಯಾರು? ಲೀಲಾವತಿಯ ಮನಸ್ಸಿಗೆ ಇದೊಂದು ಬಗೆಹರಿಯದ ಸಮಸ್ಯೆ. ಆ ರೋಗಿಯ ಕಾಯಿಲೆ ಕುಷ್ಟರೋಗ. ಅವನು ಆಸ್ಪತ್ರೆಗೆ ಬಂದು ಆರು ತಿಂಗಳಾಗುತ್ತಾ ಬಂದಿತ್ತು. ಅವನ ಕಾಯಿಲೆ ಗುಣವಾಗುವ ಹಾಗಿರಲಿಲ್ಲ. ವೈದ್ಯರು ಅವನನ್ನು ಬಿಡುವ ಹಾಗೂ ಇರಲಿಲ್ಲ. ಅವನಿಗಾರೂ ಗತಿಯಿಲ್ಲವೆಂದೇ ತೋರುತ್ತದೆ. ಯಾರೂ ಆತನನ್ನು ನೋಡಲು ಬರುತ್ತಿರಲಿಲ್ಲ. ಅವನ ಆ ಭಯಂಕರ ರೋಗದ ದುರ್ಗಂಧ ಅವನಿದ್ದ ವಾರ್ಡನ್ನೆಲ್ಲಾ ವ್ಯಾಪಿಸಿತ್ತು. ಅದನ್ನು ಸಹಿಸಲಾರದೆ ಸಹರೋಗಿಗಳು ಅಲ್ಲಿರಲು ಮತ್ತು ಆಹಾರ ತೆಗೆದುಕೊಳ್ಳಲು ಮುಖ ಸಿಂಡರಿಸುತ್ತಿದ್ದರು. ಇದರಿಂದ ಕೆಲವು ದಿನಗಳಿಂದ ಆತನನ್ನು ಒಂದು ಮೂಲೆಯಲ್ಲಿ ಮಲಗಿಸಿದ್ದರು. ಲೀಲಾವತಿಯ ಮನಸ್ಸು ಆ ರೋಗಿಯ ದಾರುಣ ಸ್ಥಿತಿಗಾಗಿ ಮಮ್ಮಲ ಮರುಗುತ್ತಿತ್ತು.

ಲೀಲಾವತಿ ನರ್ಸ್. ಆ ಆಸ್ಪತ್ರೆಗೆ ಬಂದು ಐದು ವರ್ಷಗಳಾಗುತ್ತಾ ಬಂದಿತ್ತು. ಎಂತೆಂಥಾ ಭಯಂಕರ ರೋಗಪೀಡಿತ ರೋಗಿಗಳಿಗೆ ಆಕೆ ಶಿಶ್ರೂಷೆ ಮಾಡಿದ್ದಳು. ಆದರೆ ಯಾರಲ್ಲೂ ಆಕೆಯ ಅಭಿಮಾನ ಹುಟ್ಟಿರಲಿಲ್ಲ. ಆದರೆ ಈ ಕುಷ್ಟರೋಗಿ! ನೋಡಲು ವಿಪರೀತ ಅಸಹ್ಯವಾಗುವಂಥಾ ಕಾಯಿಲೆ ದುರ್ಗಂಧದಿಂದ ಕೂಡಿ ಹತ್ತಿರ ಹೋಗಲೂ ಸಹ ಅಂಜಿಕೆಯಾಗುತ್ತಿತ್ತು. ಇಂಥಾ ರೋಗಿಯಲ್ಲಿ ಲೀಲಾವತಿಗೆ ಪೂಜ್ಯ ಭಾವನೆ ಉಂಟಾಗಿತ್ತು. ಇತರ ನರ್ಸುಗಳು ಆತನನ್ನು ಮುಟ್ಟಲು ಅಸಹ್ಯಪಡುತ್ತಿದ್ದರು. ಆದರೆ ಲೀಲಾವತಿ ಆರುತಿಂಗಳಿಂದ ಆದರದಿಂದ ಶಿಶ್ರೂಷೆ ಮಾಡುತ್ತಿದ್ದಳು.

ಲೀಲಾವತಿ ಅನುಪಮ ಸುಂದರಿಯಲ್ಲದಿದ್ದರೂ ನೋಟಕರ ಕಣ್ಣಿಗೆ ನಿರಾಶೆಯನ್ನುಂಟು ಮಾಡುತ್ತಿರಲಿಲ್ಲ. ಅಷ್ಟು ಎತ್ತರವೂ ಅಲ್ಲ ಅಷ್ಟು ಗಿಡ್ಡವೂ ಅಲ್ಲದ ಗಂಭೀರವಾದ ನಿಲುವು ಕಪ್ಪು ಮಿಶ್ರಿತ ಕೆಂಪು ಬಣ್ಣ. ಮಾಟವಾದ ಕಣ್ಣು, ಮೂಗು ಬಾಯಿಗಳಿಂದ ಕೂಡಿದ ದುಂಡು ಮುಖ ಆಕರ್ಷಣೀಯವಾಗಿ ಕಾಣುತ್ತಿತ್ತು. ಗುಂಗುರು ಗುಂಗುರಾದ ಮುಂಗುರುಳು ಕೂದಲನ್ನು ಜಡೆ ಹೆಣೆದು ಬೆನ್ನ ಮೇಲೆ ಗಂಟು ಕಟ್ಟುವಳು. ಶುಭ್ರ ಉಡುಪು ಅವಳ ನಸುಗಪ್ಪು ಮುಖಕ್ಕೆ ಅಂದವಾಗಿ ಒಪ್ಪುತ್ತಿತ್ತು. ಜೊತೆಗೆ ಸದಾ ಮುಗುಳ್ನಗು. ಲೀಲಾವತಿಗೆ ೨೫ ವರ್ಷವಾಗಿದ್ದರೂ ೧೮-೧೯ ವರ್ಷದ ತರುಣಿಯಂತೆ ತೋರುತ್ತಿದ್ದಳು.

ಅದು ಆಷಾಡ ಮಾಸದ ಕೃಷ್ಣಪಕ್ಷದ ಕಾರಿರುಳು. ನಡುರಾತ್ರಿಯ ಸಮಯ. ಅಂದು ಲೀಲಾವತಿಗೆ ಗಂಡಸರ ವಾರ್ಡಿನಲ್ಲಿ ನೈಟ್ ಡ್ಯೂಟಿ. ಆದ್ದರಿಂದ ಅಲ್ಲಿಯೇ ಇದ್ದ ಆರಾಮ ಕುರ್ಚಿಯಲ್ಲಿ ಬಿದ್ದುಕೊಂಡಿದ್ದಳು. ವಿಪರೀತವಾದ ಮಳೆಗಾಳಿಯ ಪ್ರಯುಕ್ತ ಲೀಲಾವತಿಗೆ ನಿದ್ರೆ ಬರಲೊಲ್ಲದು. ಅತ್ತ ಒಂದು ಮೂಲೆಯಲ್ಲಿ ಮಲಗಿದ್ದ ಕುಷ್ಟರೋಗಿಯ ನರಳುವಿಕೆಯೋ ಕರ್ಣಕಠೋರವಾಗಿತ್ತು. ಐವತ್ತು ವರ್ಷದ ಆ ರೋಗಿ ರೋಗದಿಂದ ಬೆಂದು ಬಳಲಿ ೭೦–೭೫ ವರ್ಷದ ಮುದುಕನಂತೆ ತೋರುತ್ತಿದ್ದನು. ಮಂದವಾಗಿ ಬೆಳಗುತ್ತಿದ್ದ ಬೆಡ್ ಲ್ಯಾಂಪಿನ ಬೆಳಕಿನಲ್ಲಿ ರೋಗದಿಂದ ಕಂಗಾಲಾಗಿದ್ದ ಆ ರೋಗಿಯ ದೇಹ ಭಯಂಕರವಾಗಿ ತೋರುತ್ತಿತ್ತು. ರೋಗಿಯ ನರಳುವಿಕೆ ಹೆಚ್ಚಾಯಿತು. ಲೀಲಾವತಿ ಆ ನರಳುವಿಕೆ ಕೇಳಲಾರದೆ, "ಯಾಕಜ್ಜಾ ತುಂಬಾ ಸಂಕಟವಾಗಿದೆಯೇ?" ಎಂದು ಕೇಳಿದಳು.

"ಅಯ್ಯೋ ಇನ್ನೆಲ್ಲಿಯ ಸಂಕಟ. ಕೇವಲ ಕ್ಷಣಕಾಲ ಮಾತ್ರ" ಮುದುಕನ ಮಾತಿನಲ್ಲಿ ವೇದನೆಯು ತುಂಬಿತ್ತು.

"ನಿನಗಾರೂ ಗತಿ ಇಲ್ಲವೇ ಅಜ್ಜಾ?" ಲೀಲ ಮೃದುವಾಗಿ ಕೇಳಿದಳು

"ಇದ್ದಾರೆ ತಾಯೀ, ಇದ್ದಾರೆ. ನನ್ನ ಹೃದಯ ಪುತ್ತಳಿ ಇದ್ದಾಳೆ. ನಿಮ್ಮಷ್ಟೇ ವಯಸ್ಸಿನ ಮಗಳೊಬ್ಬಳಿದ್ದಾಳೆ. ಇಲ್ಲ! ಇಲ್ಲ! ಅದು ಈಗಾಗಲೇ ಮಾತೆಯ ಮಡಿಲನ್ನು ಸೇರಿರಬಹುದು." ಮುದುಕ ತನ್ನಷ್ಟಕ್ಕೆ ನುಡಿದನು.

"ಯಾರಜ್ಜ, ನಿನ್ನ ಲೀಲ" ಕರುಣೆಯಿಂದ ಕೇಳಿದಳು ಲೀಲಾವತಿ.

"ಅದೊಂದು ಮಹಾ ಕತೆ ತಾಯಿ" ಮುದುಕನ ಕಂಠ ಗದ್ಗದಿತವಾಗಿತ್ತು.

"ನಿನಗೆ ಹೇಳಲು ತೊಂದರೆಯಾಗದಿದ್ದರೆ ಹೇಳುವೆಯಾ ನಿನ್ನ ದುರಂತ ಕತೆಯನ್ನು? ನಾನು ಕೇಳುವೆನು" ಲೀಲಾ ಉತ್ಸಾಹದಿಂದ ಕೇಳಿದಳು. ತನ್ನ ಕಷ್ಟವನ್ನು ಕೇಳುವ ಆಕೆಯ ಕಾತುರತೆಯನ್ನು ನೋಡಿ ಕಷ್ಟವಾದರೂ ಮುದುಕ ಕತೆ ಹೇಳತೊಡಗಿದ.

'ನನ್ನದು ಚಿಕ್ಕ ಅಚ್ಚುಕಟ್ಟಾದ ಸಂಸಾರ. ಅದರಲ್ಲಿ ನಾನು ಮತ್ತು ನನ್ನ ಪ್ರೇಮಮಣಿ ಲಕ್ಷ್ಮಿ ಎರಡೇ ವ್ಯಕ್ತಿಗಳು ನಾನೂ ದುಡಿಯುತ್ತಿದ್ದೆ. ಅವಳೂ ದುಡಿಯುತಿದ್ದಳು. ನಮ್ಮ ಬಾಳ ನೌಕೆ ಅನಂದಾನಂದದಲ್ಲಿ ಸಾಗಿತ್ತು. ಒಂದೇ ಒಂದು ಕೊರತೆ ನಮ್ಮನ್ನು ಬಹು ಕಾಲದಿಂದ ಬಾಧಿಸುತಿತ್ತು. ಮಕ್ಕಳಿಲ್ಲವೆಂದು. ಕಡೆಗೆ ಮಗುವೊಂದು ಹುಟ್ಟಿತು. ಆದರೆ ಅದು ಕುಲದೀಪಕನಾಗಿರಲಿಲ್ಲ. ಅನ್ಯ ಕುಲವನ್ನು ಬೆಳಗಿಸುವ ಅಣಿಮುತ್ತಾಗಿತ್ತು. ಅದಕ್ಕೆ ನಾನಿಟ್ಟ ಪ್ರೇಮದ ಹೆಸರು ಲೀಲಾ. ಲೀಲಾಳನ್ನು ಮುದ್ದು ಮುದ್ದಾಗಿ ಬೆಳೆಸಿದೆವು. ನನ್ನ ಲಕ್ಷ್ಮಿಯಂತೂ ಮಗುವಿನ ಆಟಪಾಟಗಳಿಗೆ ಪಡುತಿದ್ದ ಆನಂದ ಅಷ್ಟಿಷ್ಟಲ್ಲ. ಆದರೆ ವಿಧಿಗೆ ಇದು ಸಹಿಸದಾಯಿತು. ನನ್ನ ಹೃದಯರಾಣಿ ಜ್ವರದ ನೆಪದಿಂದ ಇಹಲೋಕದಾಟ ಮುಗಿಸಿದಳು. ಲಕ್ಷ್ಮಿ ಇಲ್ಲದ ಬಾಳು ನನಗೆ ಬರಡೆನಿಸಿತು. ಏನು ಮಾಡಬೇಕೆಂದೂ ನನಗೆ ಆಗ ತೋಚದಾಯಿತು. ಜೀವವಿದ್ದು ನಿರ್ಜೀವಿಯಾದೆ. ಜ್ಞಾನವಿದ್ದು ಹುಚ್ಚನಾದೆ. ಜೀವನದಲ್ಲಿಯೇ ಜಿಗುಪ್ಸೆ ತೋರಿತು. ಆಗ ಲೀಲೂ ಎರಡು ವರ್ಷದ ಹಸುಗೂಸು. ಹೆಂಡತಿ ಇಲ್ಲದ ನನಗೆ ಮಗು ಭಾರವಾಗಿ ತೋರುತಿತ್ತು. ಈ ಪರಿಸ್ಥಿತಿಯಲ್ಲಿ ನನಗೆ ಯಾರೋ 'ಅನಾಥಾಶ್ರಮ'ದ ವಿಷಯ ತಿಳಿಸಿದರು. ಎರಡು ವರ್ಷದ ಮುದ್ದುಗುವರಿ ಲೀಲಾಳನ್ನು ನನ್ನ ಕೈಯಾರೆ ಹೆಣ್ಣುಮಕ್ಕಳ ಅನಾಥಾಶ್ರಮಕ್ಕೆ ಒಪ್ಪಿಸಿದೆ. ನಂತರ ನನಗೆ ಯಾರ ನಿರ್ಬಂಧವೂ ಇಲ್ಲದಾಯಿತು ಊಟ ಉಪಚಾರಗಳು ಬೇಡವಾದವು. ಅಂದಿನಿಂದ ಅಲೆಯುವುದೊಂದೇ ನನ್ನ ಕಸುಬಾಯಿತು. ಇಷ್ಟವಿದ್ದರೆ ಭಿಕ್ಷೆ ಬೇಡಿ ತಿನ್ನುತ್ತಿದ್ದೆ. ಇಲ್ಲದಿದ್ದರೆ ಉಪವಾಸ! ಹೀಗೆ ಬಹು ವರ್ಷಗಳ ವರೆಗೆ ತಿರುಗಿದೆ. ಕೊನೆಗೆ ಈ ಭಯಂಕರ ರೋಗಕ್ಕೂ ತುತ್ತಾದೆ. ಇಂದಿಗೆ ಹತ್ತು ವರ್ಷಗಳಿಂದ ಈ ಕಾಯಿಲೆಯಿಂದ ನರಳುತಿದ್ದೇನೆ. ಇನ್ನು ಹೆಚ್ಚು ಕಾಲ ನರಳಲಾರೆ ಎಂಬ ನಂಬಿಕೆ ನನ್ನಲ್ಲಿದೆ. ಮುಂದೆ ಮುದುಕನಿಗೆ ಮಾತು ಹೊರಡಲಿಲ್ಲ. ಕಂಠ ಗದ್ಗದಿತವಾಯಿತು. ಅಶ್ರುಧಾರೆ ಕಟ್ಟೆಯೊಡೆದು ಬರುತಿತ್ತು.

"ಅಪ್ಪಾ, ನಿನ್ನ ಮಗಳನ್ನು ನೀನು ಗುರುತಿಸಲಾರದಾದೆಯಾ? ಅಯ್ಯೋ! ಅಪ್ಪಾ ನಾನೆಂಥ ನಿರ್ಭಾಗ್ಯಳು ನಿನ್ನನ್ನೀ ಸ್ಥಿತಿಯಲ್ಲಿ ಕಾಣಬೇಕಾಯಿತೆ ನನ್ನ ಈ ಪಾಪಿ ಕಣ್ಣುಗಳು? ಎಂದು ಲೀಲಾವತಿಯು ತಂದೆಯ ಪಾದಕ್ಕೆರಗಿ ರೋದಿಸುತ್ತಾ ಹೇಳಿದಳು. 'ನಾನು ಅನಾಥಾಶ್ರಮವನ್ನು ತೊರೆದು ಇಂದಿಗೆ ಐದು ವರ್ಷಗಳಾದವು. ಇಂದಿನ ನನ್ನ ಈ ಸ್ಥಿತಿಗೆ ಅನಾಥಾಶ್ರಮವೇ ಕಾರಣ. ನಾನು ಹೊರಟು ಬರುವ ದಿನ ಅಲ್ಲಿಯ ಅಧಿಕಾರಿಣಿ ಈ ಕಥೆಯನ್ನೇ ನನಗೆ ಹೇಳಿದ್ದರು ಕೇಳಿ ಕಣ್ಣೀರು ಸುರಿಸಿದ್ದೆ. ನೀನು ಅವರಿಗೆ ಇದೆಲ್ಲವನ್ನೂ ಹೇಳಿದ್ದಿಯಂತೆ. ನೀವ್ಯಾರೂ ಬದುಕಿಲ್ಲವೆಂದುಕೊಂಡಿದ್ದೆ. ಆದರೆ ಕೊನೆಗೊಮ್ಮೆ ನೋಡುವ ಭಾಗ್ಯ ಒದಗಿತು ಅದೂ ಈ ಅವಸ್ಥೆಯಲ್ಲಿ! ಈ ಹತಭಾಗ್ಯೆ ನಿನ್ನ ಮುದ್ದು ಕುವರಿ ಲೀಲಾ ನನ್ನನ್ನು ನೋಡು…."

ಲೀಲಾವತಿಯ ಕಣ್ಣೀರು ಹೊನಲಾಗಿ ಹರಿಯುತಿತ್ತು. ಇದುವರೆಗೂ ಸುಮ್ಮನೆ ಬೊಗಸೆಗಣ್ಣುಗಳಿಂದ ನೋಡುತಿದ್ದ ಮುದುಕ 'ಲೀಲೂ! ನನ್ನ ಕಣ್ಮಣಿ ಲೀಲೂ. ನಿನ್ನ ಶ್ರೇಯಸ್ಸನ್ನು ಕಣ್ತುಂಬ ನೋಡಿ ನಿನ್ನೊಡನೆ ಬಾಳುವ ಭಾಗ್ಯವನ್ನು ಭಗವಂತನು ನನಗೆ ಕರುಣಿಸಲಿಲ್ಲ. ಲೀಲೂ ಸ…ಹಿ….ಸ….ಲಾ……." ಮುಂದಕ್ಕೆ ಮಾತೇ ಹೊರಡಲಿಲ್ಲ.

ಭಯಂಕರ ಸಿಡಿಲೊಂದು ಗರ್ಜಿಸಿತು. ದಿಗಂತದಲ್ಲಿ ಪ್ರಜ್ವಲ ಮಿಂಚೊಂದು ಮಿಂಚಿ ಮಾಯವಾಯಿತು. ಲೀಲಾವತಿ ದಿಟ್ಟಿಸುತಿದ್ದಂತೆಯೇ ಮುದುಕನ ಜೀವಜ್ಯೋತಿ ನಿರಾಕಾರಣೆಯಲ್ಲಿ ಐಕ್ಯವಾಗಿ ನಿಸ್ತಬ್ಧತೆ ಪಸರಿಸಿತು. "ಅಪ್ಪಾ……." ಎಂದು ಭಯಂಕರವಾಗಿ ಚೀರುತ್ತಾ ಲೀಲಾ ಪ್ರಜ್ಞಾಶೂನ್ಯಳಾಗಿ ಶವದ ಮೇಲೊರಗಿದಳು.

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು:—ವೀರಾಜಪೇಟೆ.

ಶಾಖೆ:—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟಾಗಳು
2. 12 ನೇ ನಂಬರಿನ ಒಂಟಿ ಹೋಳವಿನ ತೋಟದ ಕೋವಿಗಳು.
3. ಒಂಟಿ ಮತ್ತು ಜೋಡಿ ಹೋಳವಿನ ಕೇಪಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
5. 5/16", 1/2" ಮತ್ತು 3/8" ಕಬ್ಬಿಣದ ಸರಳುಗಳು
6. 2", 1¼", 1" ¾" ಮತ್ತು ½" ಕೊಳಾಯಿಗಳು. (G. I. Peps)
7. 1¾" × 5/16" ಉಕ್ಕಿನ ಪಟ್ಟಿಗಳು (Spring Steel flats).
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
9. ಕೋತಿ ಮತ್ತು ಆನೆ ಮಾರ್ಕಿನ ಸೀಮೆಂಟ್ ಟಿನ್ನುಗಳು.
10. ಕಾಫಿ ಬೀಜವು ಫ್ರೆಂಚ್ಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಕೆ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

ಹೊಸ ಆಂಧ್ರ ಪ್ರಾಂತದ ಸೂಕ್ಷ್ಮ ಪರಿಚಯ.

ಪ್ರಧಾನಿ ನೆಹರೂರವರಿಂದ ಅಕ್ಟೋಬರ್ ಒಂದರಲ್ಲಿ ಆಂಧ್ರಪ್ರಾಂತ ಉದ್ಘಾಟಿಸಲ್ಪಟ್ಟಾಗ ಆಂಧ್ರ ಜನರ ದೀರ್ಘ ಕಾಲದ ಕನಸು ನೆನಸಾಯಿತು.

ಹೊಸ ಆಂಧ್ರ ಪ್ರಾಂತದಲ್ಲಿ ಕರ್ನೂಲು, ಬಳ್ಳಾರಿ (ಮೂರು ತಾಲ್ಲೂಕುಗಳು), ಅನಂತಪುರ, ಕಡಪಾ, ನೆಲ್ಲೂರು, ಪೂರ್ವ ಗೋದಾವರಿ, ಪಶ್ಚಿಮ ಗೋದಾವರಿ, ಕೃಷ್ಣಾ, ಗುಂಟೂರು, ವಿಶಾಖಪಟ್ಟಣ, ಶ್ರೀಕಾಕುಳಂ ಮತ್ತು ಚಿತ್ತೂರು—ಈ ೧೨ ಜಿಲ್ಲೆಗಳಿರುತ್ತವೆ.

೧೯೦೭ರಲ್ಲಿ ಮೊಟ್ಟ ಮೊದಲು ಸತ್ಯಾಗ್ರಹ ಸ್ವಭಾವದ ಹೋರಾಟ ನಡೆದುದರ ಪರಿಣಾಮವಾಗಿದೆ ಈ ಹೊಸ ಪ್ರಾಂತ. ಆಂಧ್ರ ಪ್ರಾಂತದ ಭಾವನೆಗೆ ಒಂದು ಹೊಸ ರೂಪ ಬಂದುದು ೧೯೧೩ರಲ್ಲಿ. ಆಗ ಆಂಧ್ರ ಮಹಾ ಸಭೆಯ ವೇದಿಕೆಯಿಂದ ಹೊರಟ ಚಳುವಳಿ ಕರೆಗೆ ಎಲ್ಲಾ ದರ್ಜೆಗಳ ಎಲ್ಲಾ ವಯಸ್ಸಿನ ಜನರೂ ಓಗೊಟ್ಟರು. ಮಹಾತ್ಮಾ ಗಾಂಧಿಯವರ ಅಸಹಕಾರ ಚಳುವಳಿ ಮತ್ತು ಕಾಂಗ್ರೆಸು ಸಾಧಿಸಲು ಉದ್ದೇಶಿಸಿದ ಭಾಷಾವಾರು ಪ್ರಾಂತಗಳ ತತ್ವಗಳು ಆಂಧ್ರರ ಈ ಚಳುವಳಿಗೆ ಹುರುಪು ಕೊಟ್ಟವು.

ಪುರಾತನ ಆಡಳಿತಗಾರರು

ತಮಿಳರಂತೆ ಆಂಧ್ರರೂ ದಕ್ಷಿಣದ ಅತಿ ಪ್ರಾಚೀನ ಅರಸರಾಗಿದ್ದರೆಂಬುದನ್ನು ಈ ಸಂದರ್ಭದಲ್ಲಿ ನೆನಪಿಗೆ ತಂದುಕೊಳ್ಳಬಹುದಾಗಿದೆ. ಕ್ರಿಸ್ತಶಕ ಆರಂಭವಾಗುವುದಕ್ಕೆ ೩೦೦ ವರ್ಷಗಳ ಮೊದಲೇ ಆಂಧ್ರರ ಈ ಅಳ್ವಿಕೆಯಿತ್ತು. ಆಂಧ್ರ ದೇಶವನ್ನು ಮೊಟ್ಟ ಮೊದಲು ಕ್ರಿಸ್ತಪೂರ್ವ ೩೦೦ರಿಂದ ಕ್ರಿಸ್ತಶಕ ೬೦೦ರ ವರೆಗೆ ಆಂಧ್ರ ರಾಜರೇ ಆಳಿದರು. ಇಕ್ಷ್ವಾಕುಗಳು, ಶಾಳಂಕಾಯಣರು ಮೊದಲಾದ ಹಲವು ವಂಶಗಳವರು ಆ ಮೇಲೆ ಆಂಧ್ರವನ್ನಾಳಿದರು. ಸುಮಾರು ಕ್ರಿಸ್ತಶಕ ೬೨೦ರಿಂದ ೧೩ನೇ ಶತಮಾನದ ಕೊನೆಯ ವರೆಗೆ ಆಂಧ್ರದಲ್ಲಿ ಪೂರ್ವ ಚಾಲುಕ್ಯರೂ, ಅವರಾದ ಮೇಲೆ ವಿಜಯನಗರದವರೂ ಆಳುತ್ತಿದ್ದರು. ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ಆಂಧ್ರರ ಕಲೆ ಮತ್ತು ಸಂಸ್ಕೃತಿಗಳು ಅತ್ಯುಚ್ಛ್ರಾಯ ಸ್ಥಿತಿಯಲ್ಲಿದ್ದುವು. ಈ ರಾಜರು ಕಲೆ, ಧರ್ಮ ಸಾಹಿತ್ಯಗಳೆಲ್ಲಕ್ಕೂ ಉತ್ತೇಜನವೀಯುತಿದ್ದರು.

ಹೊಸದಾಗಿ ರಚಿತವಾದ ಆಂಧ್ರ ಪ್ರಾಂತದ ಉದ್ಘಾಟನೆಯು ಇವರಿಂದ ಅಕ್ಟೋಬರ್ ಒಂದರಲ್ಲಿ ನಡೆಯಿತು.

ಆಂಧ್ರ ತಮಿಳು ಪ್ರಭಾವಗಳು

ಆಂಧ್ರ ಚಕ್ರಾಧಿಪತ್ಯ ಹಲವು ಶತಮಾನಗಳ ಕಾಲ ವೈಭವದಿಂದ ಇತ್ತು. ಅವರ ಭಾಷೆ ತಮಿಳರ ಮೇಲೆ ವಿಶೇಷ ಪರಿಣಾಮ ಬೀರಿತು. ಅದರಲ್ಲೂ ಸಂಗೀತ ಕೃತಿಗಳು ಮತ್ತು ಸಾಹಿತ್ಯಗಳ ಮೇಲೆ ೧೮ನೇ ಶತಮಾನದ ದ್ವಿತೀಯಾರ್ಧದಿಂದ ೨೦ನೇ ಶತಮಾನದ ಆರಂಭದ ವರೆಗೆ ಈ ಪ್ರಭಾವ ತುಂಬಾ ಇತ್ತು. ಹೀಗೆಯೇ ತಮಿಳರೂ ಕೂಡ ಆಂಧ್ರ ಸಂಸ್ಕೃತಿಯ ಮೇಲೆ ಸಾಕಷ್ಟು ಪ್ರಭಾವ ಬೀರಿದರು. ಮುಸ್ಲಿಮರ ಧಾಳಿಗಳ ಕಲುಷಿತ ವಾತಾವರಣವಿದ್ದ ಸಮಯದಲ್ಲಿ ಅನೇಕ ಮಂದಿ ಆಂಧ್ರರು ತಮಿಳು ನಾಡಿನಲ್ಲಿ ಆಶ್ರಯ ಪಡೆದರು.

ನೂತನ ಆಂಧ್ರ ಪ್ರಾಂತ ೩ ಕೋಟಿ ೮೩ ಲಕ್ಷ ಎಕರೆ ಪ್ರದೇಶವನ್ನೊಳಗೊಂಡಿದೆ. ಉಳಿದ ಮದ್ರಾಸ್ ಪ್ರಾಂತದ ವಿಸ್ತೀರ್ಣ ೪ ಕೋಟಿ ೧೯ ಲಕ್ಷ ಎಕರೆ. ಆಂಧ್ರರ ಈ ಪ್ರದೇಶದಲ್ಲಿ ಶೇಕಡ ೧೧ರಷ್ಟು ಭಾಗ ಬಂಜರು ಭೂಮಿಯಾಗಿದೆ. ಉಳಿದ ಮದ್ರಾಸ್ ಪ್ರಾಂತದ ಬಂಜರು ಭೂಮಿ ಪ್ರಾಯಶಃ ಶೇಕಡ ೪೦ರಷ್ಟಿರಬಹುದು.

ಹೊಸ ಆಂಧ್ರ ಪ್ರಾಂತದ ಜನ ಸಂಖ್ಯೆ ೨,೧೨,೫೫,೪೪೭. ಉಳಿದ ಮದ್ರಾಸ್ ಪ್ರಾಂತದಲ್ಲಿ ೩,೫೭,೧೬,೪೮೫ ಜನರು ಇದ್ದಾರೆ.

೪೦ ಲಕ್ಷ ಎಕರೆ ಪ್ರದೇಶದಲ್ಲಿ ಭತ್ತದ ಬೆಳೆ

೧೯೫೦–೫೧ರಲ್ಲಿ ಆಂಧ್ರದಲ್ಲಿ ೪೦,೭೩, ಎಕರೆ ೪೯೯ ಪ್ರದೇಶದಲ್ಲಿ ಭತ್ತದ ಬೆಳೆ ತೆಗೆಯಲಾಗಿತ್ತು. ಭತ್ತದ ಉತ್ಪಾದನೆ ಸುಮಾರು ೨೮,೩೩,೯೦೪ ಟನ್ನುಗಳಷ್ಟಾಗಿತ್ತು. ಅದೇ ವರ್ಷ ಆಂಧ್ರದಲ್ಲಿ ೨,೪೧,೭೦೦ ಟನ್‌ಗಳಷ್ಟು ಬೆಲ್ಲ, ೭,೬೪,೮೫೭ ಟನ್ ಕಡಲೇಕಾಯಿ ಮತ್ತು ೪೨,೪೬೪ ಬೇಲುಗಳಷ್ಟು ಹತ್ತಿ (೧ ಬೇಲು ೩೯೨ ಪೌಂಡು ತೂಕದ್ದು) ಉತ್ಪಾದಿಸಲಾಯಿತು.

ಆಂಧ್ರದ ಇತರ ಬೆಳೆಗಳಲ್ಲಿ ಮಿಲೆಟ್ಸ್, ಹೊಗೆಸೊಪ್ಪು, ಕಬ್ಬು ಮತ್ತು ತೆಂಗಿನಕಾಯಿ ಮುಖ್ಯವಾದವು.

ವಿಸ್ತೀರ್ಣ

ಹೊಸ ಪ್ರಾಂತ ೬೩,೯೭೯ ಚದರ ಮೈಲಿ ವಿಸ್ತೀರ್ಣವುಳ್ಳದ್ದಾಗಿದೆ. ೬೦೦ ಮೈಲಿ ಉದ್ದದ ಕರಾವಳಿ ಪ್ರದೇಶವನ್ನು ಹೊಂದಿದೆ.

ಆಂಧ್ರ ಪ್ರಾಂತದಲ್ಲಿ ೩೦ ಮುನಿಸಿಪಾಲಿಟಿಗಳಿವೆ. ೪೫ ಪ್ರಮುಖ ಟೌನುಗಳೂ, ೨೫೦ ಪಂಚಾಯಿತಿಗಳೂ ಇವೆ. ಹೊಸ ಆಂಧ್ರ ಪ್ರಾಂತದಲ್ಲಿ ಸರಾಸರಿ ವರಮಾನ ಒಬ್ಬನಿಗೆ ೧೭೭ ರೂ.ಗಳೆಂದು ಅಂದಾಜು ಮಾಡಲಾಗಿದೆ. ಆಂಧ್ರರ ಆದಾಯದ ಮೂರನೇ ಎರಡು ಭಾಗ ವ್ಯವಸಾಯದಿಂದ ಬರುತ್ತದೆ.

ಆದಾಯ ಮತ್ತು ವೆಚ್ಚ

೧೯೫೩–೫೪ರಲ್ಲಿ ನೂತನ ಪ್ರಾಂತದ ಆದಾಯ ೨೦,೭೭,೦೧,೦೦೦ ರೂ. ಗಳಿರುವವೆಂದೂ, ವೆಚ್ಚ ೨೨,೬೯,೦೦,೦೦೦ ರೂ. ಗಳಿರುವವೆಂದೂ ಹೇಳಲಾಗಿದೆ. ತನ್ನ ಅಸ್ತಿತ್ವದ ಆರಂಭದ ವರ್ಷದಲ್ಲಿ ಆಂಧ್ರವು ೨,೦೨,೦೦,೦೦೦ ರೂ.ಗಳ ಖೋತಾ ಎದುರಿಸಬೇಕಾಗುವುದು.

ರಾಯಲಸೀಮೆ

ರಾಯಲಸೀಮೆಯ ಜನಸಂಖ್ಯೆಯೇ ೬೧,೦೧,೨೬೧ ಆಗಬಹುದೆಂದು ಲೆಕ್ಕಹಾಕಲಾಗಿದೆ. ರಾಯಲಸೀಮೆಯು (ಬಳ್ಳಾರಿ ಸೇರಿ) ೨,೦೬,೩೫,೫೦೭ ಎಕರೆ ಪ್ರದೇಶವನ್ನೊಳಗೊಂಡಿದೆ. ಆಂಧ್ರದ ತೀರದ ಜಿಲ್ಲೆಗಳು ೨,೨೩,೯೬,೫೯೯ ಎಕರೆ ಪ್ರದೇಶವನ್ನೊಳಗೊಂಡಿರುತ್ತವೆ. ಉತ್ತರ ಪೆನ್ನಾರ್, ಗೋದಾವರಿ, ಕೃಷ್ಣಾ ಮತ್ತು ತುಂಗಭದ್ರಾ, ಆಂಧ್ರದ ಮುಖ್ಯ ನದಿಗಳು.

ಬೆಳೆಗಳು

ಆಂಧ್ರದಲ್ಲಿ ನಾನಾ ಬೆಳೆಗಳ ಉತ್ಪಾದನೆ ಹೀಗಿದೆ. ಅಕ್ಕಿ ೧೭,೭೫,೦೦೦ ಟನ್, ಮಿಲೆಟ್ಸ್ ೧೧,೬೮,೦೦೦ ಟನ್, ದ್ವಿದಳ ಧಾನ್ಯಗಳು ೧,೩೫,೦೦೦ ಟನ್, ಕಬ್ಬು ೩,೬೨,೦೦೦ ಟನ್ ಮತ್ತು ಹೊಗೆಸೊಪ್ಪು ೯೩ ಸಾವಿರ ಟನ್.

ಮಂತ್ರಿ ಮಂಡಲ

ಈ ಹೊಸ ಪ್ರಾಂತದ ಮಂತ್ರಿಮಂಡಳದಲ್ಲಿ ೭ ಜನ ಮಂತ್ರಿಗಳಿದ್ದಾರೆ. ಶ್ರೀ ಟಿ. ಪ್ರಕಾಶಂರವರು ಮುಖ್ಯ ಮಂತ್ರಿಗಳು. ಅವರಿಗೆ ೮೫ ವರ್ಷ ವಯಸ್ಸು. ಉಪ ಪ್ರಧಾನ ಮಂತ್ರಿಯಾಗಿ ಶ್ರೀ ಸಂಜೀವ ರೆಡ್ಡಿಯವರಿದ್ದಾರೆ. ಇನ್ನುಳಿದ ಮಂತ್ರಿಗಳೆಂದರೆ ಶ್ರೀ ಟಿ. ವಿಶ್ವನಾಥನ್, ಶ್ರೀ ಸಂಜೀವಯ್ಯ, ಶ್ರೀ ಕೋಟಿ ರೆಡ್ಡಿ, ಶ್ರೀ ಪಟ್ಟಾಭಿರಾಮ ರಾವ್ ಮತ್ತು ಶ್ರೀ ತಿಮ್ಮ ರೆಡ್ಡಿ ಇವರು.

ಸಹಕಾರವೇ ಜೀವನದ ಏಳಿಗೆಯ ಹೆದ್ದಾರಿ,

ಅದರಲ್ಲೂ ವಿಮೆಯಲ್ಲಿ ಸಹಕಾರ ಪಡೆದರೆ ಅನ್ಯೋನ್ಯ ಏಳಿಗೆಯ ಮತ್ತು ಭದ್ರತೆಗೆ ಒಂದು ತಳಹದಿ.

ದಿ ಬೊಂಬಾಯಿ ಕೋಪರೇಟಿವ್ ಇನ್ಸೂರೆನ್ಸ್

ಹೆಡ್ ಆಫೀಸು:—] ಸೊಸೈಟಿ, ಲಿಮಿಟೆಡ್ [ಬೊಂಬಾಯಿ

1953 ನೇ ಸಾಲಿಗೆ ರಿವರ್ಶನರಿ ಬೋನಸ್ಸು

⊕ ಹೋಲ್ ಲೈಫ್ ಸಾವಿರಕ್ಕೆ 11 ರಂತೆ ⊕ ಎಂಡೋಮೆಂಟ್ ಸಾವಿರಕ್ಕೆ 9 ರಂತೆ

200 ರಿಂದ 900 ರ ತನಕದ ಪೋಲಿಸಿಗಳು ಹಳ್ಳಿಗರಿಗೊಂದು ವರ

ಎಲ್ಲಾ ಕಡೆಗಳಲ್ಲಿಯೂ ಪ್ರಭಾವವುಳ್ಳ ಏಜಂಟರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಯನ್ನು ದಕ್ಷಿಣ ಕನ್ನಡ, ಕೊಡಗು ಮತ್ತು ಮೈಸೂರು ಪ್ರಾಂತ್ಯಕ್ಕೆ ಮುಖ್ಯ ಏಜಂಟರಾದ

12–3

ಎಮ್. ಟಿ. ಕೋರ್‌ಡೆಲ್ ಅಂಡ್ ಕೋ., ಹಂಪನಕಟ್ಟೆ, ಮಂಗಳೂರು, ಇವರಿಂದ ಪಡೆಯಿರಿ.



ಮಗು—ಅಮ್ಮಾ! ನೀನು ಮತ್ತು ಅಪ್ಪಾ ಇಷ್ಟು ಕಪ್ಪಾಗಿದ್ದರೂ ನಾನೇಕಮ್ಮ ಇಷ್ಟು ಬೆಳ್ಳಗೆ?

ಅಮ್ಮ—ಮಗೂ! ಹೇಂಟೆ ಮತ್ತು ಹುಂಜ ಕಪ್ಪಾದರೂ ಕೋಳಿಮೊಟ್ಟೆ ಬೆಳ್ಳಗಲ್ಲವೆ?

ಕೆ. ಎ ಬೆಲ್ಲು.

* * *

ಮಡಿಕೇರಿ ವಿದ್ಯುಚ್ಛಕ್ತಿಯ ಅವ್ಯವಸ್ಥೆ. ಅದರಲ್ಲೂ ಅಮಾವಾಸ್ಯೆ ಕಾರ್ಗತ್ತಲು. ಆ ಸಮಯದಲ್ಲಿ ಒಬ್ಬ ಯುವಕನು ಎದುರು ಬರುತ್ತಿರುವ ಒಬ್ಬ ಮುದುಕಿಗೆ ಡಿಕ್ಕಿ ಹೊಡೆದು, ಇಬ್ಬರೂ ಚರಂಡಿಗೆ ಬೀಳುವರು. ಚರಂಡಿಯಿಂದ ಎದ್ದ ಮುದುಕಿಯು "ಪರವಾಗಿಲ್ಲ, ನಾನು ಬೀಳುವ ಮುಂಚೆ ಯಾವ ಪಿಕ್ಕಿಗೆ ಮುಖ ಹಾಕಿಕೊಂಡಿದ್ದೆ?" ಎಂದು ಕೇಳಿದಳು.

* * *

ಕಮ್ಯುನಿಸ್ಟ್ ಮೀಟಿಂಗಿಗೆ ತಪ್ಪದೆ ಹೋಗುತ್ತಿದ್ದ ಹೊಟೇಲ್ ಕೆಲಸಗಾರನೊಬ್ಬನು, ಕೆಲವು ದಿವಸಗಳಿಂದ ಮೀಟಿಂಗಿಗೆ ಹೋಗುವುದನ್ನು ನಿಲ್ಲಿಸಿದನು.

ಹೋಟೇಲ್ ಯಜಮಾನ—ಯಾಕಯ್ಯ, ನೀನು ಈಗ ಕಮ್ಯುನಿಸ್ಟ್ ಮೀಟಿಂಗಿಗೆ ಹೋಗುವುದನ್ನು ನಿಲ್ಲಿಸಿದೆ?

ಕೆಲಸಗಾರ—ಮೊನ್ನೆ ಒಬ್ಬರು ಮೀಟಿಂಗಿನಲ್ಲಿ ಮಾತನಾಡುತ್ತಾ 'ಎಲ್ಲರ ಹಣವನ್ನು ಕಿತ್ತುಕೊಂಡು ಪ್ರತಿಯೊಬ್ಬರಿಗೂ ಸಮವಾಗಿ ಹಂಚಿದರೆ ಒಬ್ಬೊಬ್ಬರಿಗೆ ೧,೫೦೦ ರೂಪಾಯಿ ಬರುತ್ತದೆ' ಎಂದು ಹೇಳಿದರು.

ಹೊಟೇಲ್ ಯಜಮಾನ—ಆದರೆ ನೀನು ಏಕೆ ಅಲ್ಲಿಗೆ ಹೋಗುವುದನ್ನು ನಿಲ್ಲಿಸಬೇಕು?

ಕೆಲಸಗಾರ—ನನ್ನ ಹತ್ತಿರ ೨,೦೦೦ ರೂಪಾಯಿ ಇವೆ. — ಪಿ ಆರ್. ಎಸ್.

* * *

ಮಾಣಿ—(ಸಂತೋಷದಿಂದ) ಇಂದಿನ ಮಧ್ಯಾಹ್ನದ ಊಟಕ್ಕೆ ಎಲ್ಲವೂ ಇದೆ ಸಾರ್.

ಗಿರಾಕಿ—ಇಷ್ಟು ದಿನದ ಊಟ ನನಗೆ ಬೇಕಿಲ್ಲ. ಇಂದು ಶುಚಿಯಾದುದನ್ನು ತಾ.

* * *

ಗಂಡನು ಕೈಯಲ್ಲಿ ಒಂದು ಗಂಟನ್ನು ಹಿಡಿದು ಅದರ ಬಗ್ಗೆ ಅಷ್ಟೇನೂ ಉತ್ಸಾಹ ತೋರಿಸದ ಹೆಂಡತಿಯನ್ನು ಕುರಿತು 'ನಾನು ಏನು ತಂದಿರುವೆನೆಂದು ಹೇಳು. ಇಡೀ ಜಗತ್ತಿನಲ್ಲಿ ನನಗೆ ಅತೀ ಪ್ರಿಯವಾದ ವ್ಯಕ್ತಿಗಾಗಿ ಇದನ್ನು ತಂದಿರುವೆನು'

ಹೆಂಡತಿ—ಹಾಗಾದರೆ ಅದು ನೀವು ತೆಗೆಯಬೇಕೆಂದು ಕಾತರಿಸುತ್ತಿದ್ದ ಟೈ ಇರಬೇಕು!

• • •

ಚಲನ ಚಿತ್ರ ಒಂದಕ್ಕೆ ಹೊಸ ನಟಿಯನ್ನು ಆರಿಸುವ ಕೆಲಸಸಾಗಿತ್ತು. ಡೈರೆಕ್ಟರು ಒಬ್ಬ ಹುಡುಗಿಯನ್ನು ಒಪ್ಪಿ 'ಇವಳಾಗಬಹುದು ಸರಿಯಾದ ಮುಖ, ಯುಕ್ತ ವೈ ಬಣ್ಣ, ಯೋಗ್ಯ ಸ್ವರ, ಎಲ್ಲವೂ ಸರಿ ಇದೆ' ಎಂದು ಹೇಳಿ 'ನೀನು ಸಂಬಳ ಎಷ್ಟು ಇಚ್ಛಿಸುವೆ?' ಎಂದು ಕೇಳಿದರು.

'ತಿಂಗಳಿಗೆ ಆರುನೂರು ರೂಪಾಯಿ' ಆಕೆಯ ಉತ್ತರ.

'ನೀನು ಬಹಳ ಎತ್ತರವಾಗಿರುವದರಿಂದ ಚಿತ್ರಕ್ಕೆ ಸರಿಯಾಗದು' ಡೈರೆಕ್ಟರನೆಂದ.

• • •

ಸೇಲ್ಸ್‌ಮೇನ್—ಬೆಳ್ಳಿಯನ್ನು ಶುದ್ಧ ಮಾಡಲು ಅತ್ಯುತ್ತಮ ಪೋಲಿಶ್ ಇದೆ.

ಮನೆಯಾಕೆ—ನನಗೇನೂ ಬೇಕಿಲ್ಲ.

ಸೇಲ್ಸ್‌ಮೇನ್—ಹಾಗಾದರೆ ನೆರೆ ಮನೆಯವರು ಹೇಳಿದ್ದು ಸತ್ಯವಾಯಿತು.

ಮನೆಯಾಕೆ—ಏನು ಹೇಳಿದರು.

ಸೇಲ್ಸ್‌ಮೇನ್—ಅಲ್ಲಿಗೆ ಹೋಗಬೇಡ, ಅವರು ಪೋಲೀಶ್ ಕೊಂಡುಕೊಳ್ಳಲಾರರು. ಕೊಳೆಯಲು ಅವರಲ್ಲಿ ಬೆಳ್ಳಿಯ ಪಾತ್ರೆಗಳೇ ಇಲ್ಲವೆಂದು.

ಮನೆಯಾಕೆ—ತಿಳಿಗೇಡಿಗಳು! ಅರ್ಧ ಡಜನ್ ಬಾಟ್ಲುಗಳನ್ನು ಕೊಡಿ!

• • •

ಅಧ್ಯಾಪಕಿ—ಇತರ ಪ್ರಾಣಿಗಳಿಗಿಲ್ಲದ ವಸ್ತು ಆನೆಗಳಲ್ಲಿ ಯಾವುದಾಗಿದೆ?

ಚಿಕ್ಕ ಹುಡುಗಿ—ಅವುಗಳ ಮರಿಗಳು ಟೀಚರ್.

• • •

ವ್ಯಾಪಾರಿಯೊಬ್ಬನು ಕಾಯಿಲೆಯಿಂದ ನರಳುತ್ತಾ ತನ್ನ ಮೃತ್ಯುಶಯ್ಯೆಯಲ್ಲಿದ್ದನು. ಆತನು ಕಡೆಗೊಮ್ಮೆ ಹೊರಳಿ 'ತಾಯಿ ಇರುವಳೇ?' ಎಂದು ಕೇಳಿದನು.

'ಹೌದು' ತಾಯಿ ಉತ್ತರಿಸಿದನು.

'ಹಿರಿಯ ಮಗ?'

'ಹೌದು'

'ಉಳಿದ ನಾಲ್ಕು ಗಂಡು ಮಕ್ಕಳು?'

'ಹೌದು'

'ನಾಲ್ಕು ಹೆಣ್ಣು ಮಕ್ಕಳು?'

'ಹೌದು'

ರೋಗಿಯು ಇದನ್ನು ಕೇಳಿ ಕಷ್ಟದಿಂದ ಎದ್ದು ಕುಳಿತು 'ಹಾಗಾದರೆ ಅಂಗಡಿಯಲ್ಲಿ ಯಾರೂ ಇಲ್ಲವೆ?' ಎಂದನು.

ಭೂ ಸುಧಾರಣೆ ಬಗ್ಗೆ ರಾಜ್ಯ ಘಟನೆಯಲ್ಲಿ ತಿದ್ದುಪಡಿ.

ಭೂ ಸುಧಾರಣೆಯ ವಿಷಯದಲ್ಲಿ ಭಾರತ ಸರಕಾರದ ಕೈಯನ್ನು ಬಲಪಡಿಸುವದಕ್ಕಾಗಿ ಭಾರತ ರಾಜ್ಯಾಂಗಕ್ಕೆ ಶೀಘ್ರದಲ್ಲಿಯೇ ತಿದ್ದುಪಡಿಯನ್ನು ಸರಕಾರ ತರಲಿದೆಯೆಂದು ದೆಹಲಿ ರಾಜಕೀಯ ವೃತ್ತಗಳಲ್ಲಿ ಭಾವಿಸಲಾಗಿದೆ. ಇದೇ ರೀತಿ ಸಂಸ್ಥಾನಾಧೀಶರುಗಳೊಡನೆ ಭಾರತ ಸರಕಾರದ ಸಂಬಂಧವನ್ನು ಬದಲಾವಣೆ ಮಾಡುವ ಬಗ್ಗೆಯೂ ರಾಜ್ಯಾಂಗದಲ್ಲಿ ಸೂಕ್ಷ್ಮ ತಿದ್ದುಪಡಿ ಮಾಡಲಾಗುವದಾಗಿ ಗೊತ್ತಾಗಿದೆ ಈಗಾಗಲೇ ಸಂಸ್ಥಾನಾಧೀಶರುಗಳನ್ನು ಅವರ ಪ್ರೀವಿ ಪರ್ಸನ್ನು ಸಾಕಷ್ಟು ಖೋತಾ ಮಾಡಿಕೊಳ್ಳುವಂತೆ ಪ್ರಧಾನ ಮಂತ್ರಿಗಳು ಪ್ರಾರ್ಥಿಸಿಕೊಂಡಿದ್ದಾರೆ. ರಾಜಪ್ರಮುಖರುಗಳಿಗೆ ಅವರ ಸ್ಥಾನಗಳ ಬಗ್ಗೆ ಜನರಲ್ಲಿ ಅಸಂತೋಷ ಬೆಳೆಯುತ್ತಿದೆಯೆಂಬುದನ್ನೂ ಸ್ಪಷ್ಟಪಡಿಸಲಾಗಿದೆ. ಅವರ ಸ್ಥಾನ ಮಾನಗಳು ಕಾಲಧರ್ಮಕ್ಕನುಗುಣವಾಗಿಲ್ಲವೆಂದೂ ತಿಳಿಸಲಾಗಿದೆ.

ಸಂಸ್ಥಾನಾಧೀಶರುಗಳು ಶೀಘ್ರದಲ್ಲಿಯೇ ಸೌರಾಷ್ಟ್ರ ಮತ್ತು ಮಧ್ಯಭಾರತಗಳಲ್ಲಿ ಸಭೆ ಸೇರಿ ತಮ್ಮ ಉತ್ತರಗಳನ್ನು ಸಿದ್ಧಗೊಳಿಸಲಿದ್ದಾರೆ. ಅವರು ಪ್ರಧಾನ ಮಂತ್ರಿಗಳ ಸಲಹೆಗೆ ಒಪ್ಪಿಕೊಂಡರೂ ಸಹಾ, ರಾಜಪ್ರಮುಖರ ಸ್ಥಾನವನ್ನು ರದ್ದುಗೊಳಿಸುವದಕ್ಕಾಗಿ ರಾಜ್ಯಾಂಗಕ್ಕೆ ತಿದ್ದುಪಡಿ ತರಬೇಕಾದುದು ಅಗತ್ಯವಾಗುತ್ತದೆ.

ಸಂಸ್ಥಾನಾಧೀಶರುಗಳಿಗೆ ಕೊಡಲಾಗುತ್ತಿರುವ ಭಾರೀ ವರ್ಷಾಶನಗಳಿಂದ ಭಾರತ ಸರಕಾರದ ಮೇಲೆ ಬಿದ್ದಿರುವ ಭಾರಿ ಆರ್ಥಿಕ ಹೊರೆಯನ್ನು ಕಡಿಮೆ ಮಾಡುವದೇ ಪ್ರಧಾನ ಮಂತ್ರಿಗಳ ಉದ್ದೇಶ. ಅದಕ್ಕಾಗಿಯೂ ರಾಜ್ಯಾಂಗವನ್ನು ತಿದ್ದುಪಡಿ ಮಾಡಬೇಕಾಗುತ್ತದೆ.

ಜಮೀನ್ದಾರರಿಗೆ ಪರಿಹಾರಗಳನ್ನು ಕೊಡದೆಯೇ ಜಮೀನ್ದಾರಿ ವಜಾ ಮಾಡಲು ಅವಕಾಶ ಕೊಡುವ ತಿದ್ದುಪಡಿಯನ್ನೂ ತರಲು ಉದ್ದೇಶಿಸಲಾಗಿದೆ. ಇದರಿಂದ ಭೂ ಸುಧಾರಣೆ ಕಾರ್ಯಕ್ರಮವನ್ನು ಬೇಗನೆ ಜಾರಿಗೆ ತರಲು ಸಹಾಯವಾಗುವದು ಜಮೀನ್ದಾರರುಗಳಿಗೆ ಭಾರಿ ಪರಿಹಾರವನ್ನು ಕೊಡುವದು ಸಂಸ್ಥಾನ ಸರಕಾರಗಳ ಶಕ್ತಿಗೆ ಮೀರಿದ್ದಲ್ಲದೆ, ಭೂಸುಧಾರಣೆಗಳ ಉದ್ದೇಶವೇ ಸಾಧನೆಯಾಗದಂತೆ ಮಾಡುತ್ತದೆ. ಇದನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯೂ ಸಹ ಸುದೀರ್ಘವಾಗಿ ಪರ್ಯಾಲೋಚಿಸುತ್ತಿದೆ.

ಇದುವರೆಗೂ ಯಾವುದೊಂದು ನಿರ್ಧಾರವನ್ನೂ ಮಾಡಿಲ್ಲವಾದರೂ ಅಧಿಕಾರದಲ್ಲಿರುವ ಪಕ್ಷವು ಪರಿಹಾರದ ಪ್ರಶ್ನೆಯ ಬಗ್ಗೆ ತನ್ನ ಅಭಿಪ್ರಾಯಗಳನ್ನು ಬದಲಾಯಿಸಲು ಯೋಚಿಸುತ್ತಿದೆ. ಇದರಿಂದ ರಾಷ್ಟ್ರದ ಭಾರಿ ಮೊತ್ತಗಳು ಜನತೆಗಲ್ಲದೆ ಪಟ್ಟಭದ್ರ ವರ್ಗದವರಿಗೆ ವಿನಿಯೋಗವಾಗದಂತೆ ಮಾಡಲು ರಾಜ್ಯಾಂಗದಲ್ಲಿ ಸ್ಪಷ್ಟವಾಗಿ ನಮೂದಿಸಲಾಗುವದು. ಒಬ್ಬನು ಇಟ್ಟುಕೊಳ್ಳಬಹುದಾದ ಭೂಮಿಯ ಪರಿಮಾಣವು ೫೦ ಏಕರೆಗಳಿಗಿಂತಾ ಹೆಚ್ಚಿರಬಾರದೆಂಬ ಸೂಚನೆ ಇದೆ.

ಭಾರತಾದ್ಯಂತ ಜಮೀನ್ದಾರಿ ರದ್ದು ಮಾಡಿದಲ್ಲಿ ಈಗಿನ ಪರಿಹಾರ ದರಗಳ ಪ್ರಕಾರ ಕನಿಷ್ಠ ಪಕ್ಷ ರೂ. ೫೦೦ ಕೋಟಿಗಳಷ್ಟು ಹಣ ಕೊಡಬೇಕಾಗುವದೆಂದೂ ಲೆಕ್ಕಾಚಾರ ಹಾಕಲಾಗಿದೆ. ಅಂದರೆ ಇಡೀ ಪಂಚವಾರ್ಷಿಕ ಯೋಜನೆಗೆ ತಗಲುವ ವೆಚ್ಚದಲ್ಲಿ ನಾಲ್ಕನೇ ಒಂದು ಭಾಗದಷ್ಟು ಹಣ ಇದಕ್ಕಾಗಿ ಖರ್ಚಾಗಲಿದೆ. ಆದ್ದರಿಂದ ಪಂಚವಾರ್ಷಿಕ ಯೋಜನೆಗೆ ಬಿಟ್ಟು, ಜಮೀನ್ದಾರರುಗಳಿಗೆ ಇಷ್ಟೊಂದು ಹಣಕೊಡುವದು ಪ್ರಜೆಗಳ ಹಿತದೃಷ್ಟಿಯಿಂದ ಯಾವ ಧರ್ಮ? ಎಂಬುದಾಗಿ ಪ್ರಶ್ನೆ ಕೇಳಬರುತ್ತಿದೆ. ದೀರ್ಘಾವಧಿಯ ಕಂತುಗಳಲ್ಲೂ ಸಹ ಇಷ್ಟೊಂದು ಪ್ರಮಾಣದ ಹಣ ಕೊಡುವದು ಸರಿಯಲ್ಲವೆಂದು ಅಭಿಪ್ರಾಯ ಪಡುತ್ತಿರಲಾಗಿದೆ.

ಎಲ್ಲಾ ಪ್ರಾಂತಗಳಿಂದಲೂ ಒಟ್ಟು ಸೇರಿ ಕೊಡಬೇಕಾಗಿ ಬರುವ ಜಮೀನ್ದಾರಿ ಪರಿಹಾರದ ಹಣದ ಮೊತ್ತ ರೂ. ೪೧೪ ಕೋಟಿಗಳು. ಆದರೆ ಆ ಜಮೀನಿನಿಂದ ಸರಕಾರಕ್ಕೆ ಹೆಚ್ಚಿಗೆ ಬರಬಹುದಾದ ರೆವಿನ್ಯೂ ಆದಾಯ ರೂ. ೧೬ ಕೋಟಿಗಳು. ಇದನ್ನೆಲ್ಲಾ ಪರ್ಯಾಲೋಚಿಸಿದ ಮೇಲೆ ಜಮೀನ್ದಾರರಿಗೆ ಕೊಡಬೇಕಾದ ಪರಿಹಾರವನ್ನು ಸಾಧ್ಯವಾಗುವಂತಹ ಪರಿಮಿತಿಗೆ ಇಳಿಸಬೇಕಾದುದಗತ್ಯವೆಂದು ಭಾವಿಸಲಾಗಿದೆ. ಒಟ್ಟು ರೂ. ೫೦ ಕೋಟಿಗಳಿಂತ ಹೆಚ್ಚು ಪರಿಹಾರ ಕೊಡಬಾರದೆಂದೂ ನಿರ್ದಿಷ್ಟಗೊಳಿಸುವ ಸಂಭವವಿದೆ.

ಅಂತೂ ಇದಕ್ಕಾಗಿ ರಾಜ್ಯಾಂಗದ ತಿದ್ದುಪಡಿ ಆಗಬೇಕಾಗಿದ್ದು, ಅದಕ್ಕೋಸ್ಕರ ಮಸೂದೆಯು ನವಂಬರ್ ಅಧಿವೇಶನದಲ್ಲಿ ಸಾಧ್ಯವಿಲ್ಲದಿದ್ದರೆ ಬಜೆಟ್ ಅಧಿವೇಶನದಲ್ಲಾದರೂ ಬರುವದೆಂದು ಭಾವಿಸಲಾಗಿದೆ.

ಸೋಮವಾರಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಜೆ. ಎಂ. ಮೊಗಪ್ಪನವರು

ವೀರಾಜಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಟಿ. ಎನ್. ಗೋವಿಂದರಾಜು

॥ ಗಾಂಧಿ ಜಯಂತಿ ॥

ಈ ಸಾರಿಯ ಗಾಂಧಿ ಜಯಂತಿಯು ಈ ಹಿಂದಿನಂತೆ ಕೇವಲ ಮೆರವಣಿಗೆ, ಸಭೆ, ಭಾಷಣಗಳಲ್ಲಿ ಪರ್ಯವಸಾನ ಹೊಂದದೆ ಪರಿಣಾಮಕಾರಕವಾದ ಶರೀರ ಪರಿಶ್ರಮದ ರೂಪು ತಾಳಿದ್ದು ಶುಭ ಚಿಹ್ನೆಯಾಗಿದೆ. ನಿಜವಾಗಿಯೂ ಈ ರೀತಿಯ ಆಚರಣೆಯೇ ಗಾಂಧೀಜಿಯವರ ಮನಸ್ಸಿಗೆ ಸಮ್ಮತವಾದುದೆಂದು ಹೇಳಲು ಅಭ್ಯಂತರವಿಲ್ಲ. [ಸಂ.]

●●

ಪೊನ್ನಂಪೇಟೆ.

ಗಾಂಧೀಜಯಂತಿಯ ಆಚರಣೆಗಾಗಿ ಪಟ್ಟಣದ ಜನರೂ ಸುತ್ತುಮುತ್ತಲು ಹಳ್ಳಿಯವರೂ, ವಿದ್ಯಾರ್ಥಿಗಳೂ ಪೊನ್ನಂಪೇಟೆಯಲ್ಲಿ ಸೇರಿದರು. ಸುಮಾರು ೩೦೦ ಕ್ಕಿಂತಾ ಹೆಚ್ಚು ಜನರಿದ್ದರು. ಇವರು ನಾಲ್ಕು ಪಂಗಡಗಳಾಗಿ ಒಂದು ಪಂಗಡವು ಪೊನ್ನಂಪೇಟೆ ಪಟ್ಟಣ ನೈರ್ಮಲ್ಯದ ಕೆಲಸ ಕೈಗೊಂಡಿತು. ಮತ್ತೊಂದು ಪೊನ್ನಂಪೇಟೆ ಕಾನೂರು ರಸ್ತೆ ಕೆಲಸಕ್ಕೂ, ಇನ್ನೊಂದು ಪೊನ್ನಂಪೇಟೆ ನಲ್ಲೂರು ರಸ್ತೆ ಕೆಲಸಕ್ಕೂ, ಮಗುದೊಂದು ತಂಡವು ಪೊನ್ನಂಪೇಟೆ ಹುದೂರು ರಸ್ತೆ ಕೆಲಸವನ್ನೂ ಪ್ರಾರಂಭಿಸಿದವು. ಆ ದಿನ ಮಾತ್ರ ಕೆಲಸ ಮಾಡಿ ತೃಪ್ತರಾಗದೆ ತಮ್ಮ ಕೆಲಸವನ್ನು ಮುಂದರಿಸುತ್ತಿರುವರು. ಪೊನ್ನಂಪೇಟೆ ಕಾನೂರು ರಸ್ತೆಯು ಹಾದು ಹೋಗುವ ಗ್ರಾಮಸ್ಥರಾದ ಮತ್ತೂರು, ಬಲ್ಯಮುಂಡೂರು, ಬೆಕ್ಕೆಸೊಡ್ಲೂರು ಮೊದಲಾದ ಗ್ರಾಮದ ಜನರು ತಮ್ಮ ಭಾಗದ ರಸ್ತೆಯ ಇಕ್ಕಡೆಯ ಮರಗಳನ್ನು ಸುಮಾರು ೧೫ ಅಡಿಗಳ ವರೆಗೆ ಕಡಿದು ಉತ್ತಮ ಕೆಲಸ ಮಾಡುತ್ತಿರುವರು.

ವೀರಾಜಪೇಟೆ.

ಇಲ್ಲಿಯ ಪ್ರೌಢ ಶಾಲೆಯ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ತಾ. ೨ರ ಬೆಳಿಗ್ಗೆ ಶಾಲೆಯ ಆವರಣದಲ್ಲಿ ಸೇರಿದರು. ಪುರಸಭೆಯ ಅಧ್ಯಕ್ಷರಾದ ಶ್ರೀ. ಎಸ್. ಎಸ್. ರಾಮಮೂರ್ತಿಯವರು ಧ್ವಜಾರೋಹಣ ಮಾಡಿದರು. ಮೆರವಣಿಗೆಯ ನಂತರ ಪುರಸಭೆಯ ಪ್ರಾಥಮಿಕ ಶಾಲೆಗೆ ಹೋಗಿ ಆವರ ಹಿಂದುಗಡೆ ಬೆಳೆದಿದ್ದ ಕಾಡನ್ನು ಕಡಿದು ಅಲ್ಲಿಯ ಹೊಲಸು ಸ್ಥಳವನ್ನು ಸ್ವಚ್ಛಗೊಳಿಸಿದರು. ತಾ. ೪ರಲ್ಲಿ ಪ್ರೌಢ ಶಾಲೆಯ ಸುಮಾರು ೧೫೦ ವಿದ್ಯಾರ್ಥಿಗಳು ಸಮೀಪದ ಬೆಟ್ಟದ ತುದಿಯಲ್ಲಿರುವ ಈಶ್ವರ ದೇವಾಲಯದ ಆವರಣವನ್ನು ಸ್ವಚ್ಛಗೊಳಿಸಿದರು. ದೇವಾಲಯದ ಬಾವಿಯನ್ನೂ ಸರಿಪಡಿಸಿದರು. ಅದೇ ದಿನ ಅಧ್ಯಾಪಕರ ತರಬೇತು ಶಾಲೆಯ ವಿದ್ಯಾರ್ಥಿಗಳೂ, ಪ್ರೌಢ ಶಾಲೆಯ ಕೆಲವು ಅಧ್ಯಾಪಕರೂ ಗಾಂಧೀಜಯಂತಿಯಂದು ಮುಖ್ಯಮಂತ್ರಿಯವರು ಉದ್ಘಾಟಿಸಿದ ಮಗ್ಗುಲ ರಸ್ತೆ ನಿರ್ಮಾಣ ಕೆಲಸದಲ್ಲಿ ಗ್ರಾಮಸ್ಥರೊಡನೆ ಸಹಕರಿಸಿದರು.

ಮಡಿಕೇರಿ

ತಾ. ೨ರಂದು ಮಡಿಕೇರಿ ಹೈಸ್ಕೂಲಿನ ಎನ್. ಸಿ. ಸಿ. ದಳದವರು ಬೆಳಿಗ್ಗೆ ೭ ಗಂಟೆಯಿಂದ ಮಡಿಕೇರಿ ಪಟ್ಟಣದ ಬೀದಿಗಳನ್ನು ಶುಚಿಗೊಳಿಸಿದರು. ೯—೩೦ ಗಂಟೆಗೆ ಶಾಲೆಯ ಎಲ್ಲಾ ವಿದ್ಯಾರ್ಥಿಗಳೂ ಮಾರ್ಕೆಟ್ ವರೆಗೆ ಮೆರವಣಿಗೆ ಹೋಗಿ ನಂತರ ಕೋಟೆಯಲ್ಲಿ ಚೀಫ್ ಕಮಿಷನರಿಂದ ನಡೆದ ಧ್ವಜಾರೋಹಣದಲ್ಲಿ ಭಾಗವಹಿಸಿದರು. ೧೧—೩೦ಕ್ಕೆ ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೂ, ಸಮಾಜ ವಿಕಾಸ ಯೋಜನೆಯ ಉದ್ಘಾಟನೆಯೂ ನಡೆಯಿತು. ವಿದ್ಯಾರ್ಥಿಗಳು ಸಭೆಯ ನಂತರ ಗೌಳೀಬೀದಿಗೆ ಹೋಗಿ ಅಲ್ಲಿ ಉಪಯುಕ್ತ ಕೆಲಸ ಮಾಡಿದರು. ಮಧ್ಯಾಹ್ನದ ವೇಳೆ ೩—೩೦ಕ್ಕೆ ಹೈಸ್ಕೂಲ್ ಬೋರ್ಡಿಂಗ್ ಭವನದಲ್ಲಿ ಶ್ರೀ ಡಿ. ಎನ್. ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಅನೇಕ ವಿದ್ಯಾರ್ಥಿಗಳೂ, ಅಧ್ಯಾಪಕರೂ ಗಾಂಧೀಜಿಯವರ ಜೀವನಾದರ್ಶವನ್ನು ಕುರಿತು ಭಾಷಣ ಮಾಡಿದರು.

ಸಾಪೋರ್ಕ್ಲು

ಇಲ್ಲಿಯ ಪ್ರೌಢ ಶಾಲೆಯ ವಿದ್ಯಾರ್ಥಿಗಳೂ, ಅಧ್ಯಾಪಕರೂ, ಸಾರ್ವಜನಿಕರೂ ಶಾಸನ ಸಭೆಯ ಉಪಾಧ್ಯಕ್ಷರಾದ ಶ್ರೀ ಕೆ. ಎಂ. ದೇವಯ್ಯನವರ ಅಧ್ಯಕ್ಷತೆಯಲ್ಲಿ ಸೇರಿದರು. ಪ್ರಥಮ ಅಧ್ಯಕ್ಷರಿಂದ ಧ್ವಜಾರೋಹಣ ನಡೆಯಿತು. ಶ್ರೀ ಕೆ. ಬಿ. ಐಯ್ಯಪ್ಪನವರು ಗಾಂಧಿ ತತ್ವಗಳ ಕುರಿತು ಭಾಷಣ ಮಾಡಿದರು. ನಂತರ ಮೆರವಣಿಗೆ ಮತ್ತು ನೂಲುವ ಸ್ಪರ್ಧೆ ನಡೆಯಿತು. ಇದೇ ದಿನ ಸಾಪೋರ್ಕ್ಲು ನಾಡು ಸಾಮೂಹಿಕ ವಿಕಾಸ ಯೋಜನೆಯ ಉದ್ಘಾಟನೆಯನ್ನು ಗೃಹ ಮಂತ್ರಿಗಳು ನೆರವೇರಿಸಿದರು. ಸಭೆಯ ನಂತರ ಮಂತ್ರಿಗಳ ನೇತೃತ್ವದಲ್ಲಿ ಅಧ್ಯಾಪಕರೂ ವಿದ್ಯಾರ್ಥಿಗಳೂ ಇತರರೂ ಸಮಾಜ ಸೇವಾ ಕೆಲಸ ಮಾಡಿದರು. ಇಲ್ಲಿಯ ಸಾರ್ವಜನಿಕರ ಸಭೆಯೊಂದು ಮಧ್ಯಾಹ್ನದ ವೇಳೆ ಶ್ರೀ ಕೆ. ಎಂ. ದೇವಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಕೆ. ಬಿ. ಐಯ್ಯಪ್ಪ, ಬಿ. ಪಿ. ಮಾಚಯ್ಯ, ಎಂ. ಎಂ. ಮಾಚಯ್ಯ, ಎ. ಸಿ. ಸೋಮಣ್ಣ ಮತ್ತು ಕೆ. ಕೆ. ಸೋಮಯ್ಯ ಮೊದಲಾದವರು ಭಾಷಣ ಮಾಡಿದರು.

ಹೆಬ್ಬಾಲೆ

ಇಲ್ಲಿಯ ಒಂಟೆಯಂಗಡಿ ದಳಿತ ವರ್ಗದವರ ಶಾಲೆಯಲ್ಲಿ ಗಾಂಧೀ ಜಯಂತಿಯು ಶ್ರೀ ಚೇವಿರ ನಿವಾಚಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಧ್ವಜಾರೋಹಣದ ನಂತರ ದೇವಸ್ಥಾನಕ್ಕೆ ಮೆರವಣಿಗೆ ಹೋಗಿ ಪೂಜೆ ನಡೆಯಿತು. ನಂತರ ಸೇರಿದ ಸಭೆಯಲ್ಲಿ ಶ್ರೀಗಳಾದ ಕೆ. ಎನ್. ಉತ್ತಪ್ಪ ಮೊದಲಾದವರು ಭಾಷಣ ಮಾಡಿದರು. ನೆರೆದ ವಿದ್ಯಾರ್ಥಿಗಳಿಗೂ ಸಾರ್ವಜನಿಕರಿಗೂ ಸಿಹಿ ತಿಂಡಿ ಹಂಚಲಾಯಿತು.

ರಾಮಪುರ

ಊರಿನಲ್ಲಿ ಮೆರವಣಿಗೆಯ ನಂತರ ಶಾಲಾ ಮೈದಾನದಲ್ಲಿ ಆಟೋಟಗಳ ಸ್ಪರ್ಧೆ ನಡೆಯಿತು. ದೇವಸ್ಥಾನದ ಮುಂಭಾಗದಲ್ಲಿ ಶ್ರೀ ಎನ್. ಕೆ. ಮಾಚಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಶ್ರೀ ಕೆ. ಎನ್. ಭಗವಾನ್ ಶೆಟ್ಟಿಯವರು ಗಾಂಧೀಜಿಯ ಗುಣಗಾನ ಮಾಡಿದರು. ಬಹುಮಾನ ವಿತರಣೆಯ ನಂತರ ಪ್ರಸಾದ ವಿನಿಯೋಗದೊಂದಿಗೆ ಕಾರ್ಯಕ್ರಮ ಕೊನೆಗೊಂಡಿತು.

ಬೆಳ್ಳೂರು

ಗ್ರಾಮಸ್ಥರೂ, ಶಾಲಾ ವಿದ್ಯಾರ್ಥಿ, ಅಧ್ಯಾಪಕರೂ ಶ್ರೀ ಇಟ್ಟಿರ ಕುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಸೇರಿದರು. ಶ್ರೀ ಬಿ. ಎ. ಅಚ್ಚಪ್ಪ, ಸಿ. ಟಿ. ಭೀಮಯ್ಯ ಮೊದಲಾದವರು ಭಾಷಣ ಮಾಡಿದರು. ಗ್ರಾಮಸ್ಥರೂ, ವಿದ್ಯಾರ್ಥಿಗಳೂ, ಅಧ್ಯಾಪಕರೂ ಸೇರಿ ಶಾಲೆಯ ಸುತ್ತಲಿನ ಬೇಲಿ ರಿಪೇರಿ ಮಾಡಿ ಶಾಲೆಯ ಬಳಿಯಲ್ಲಿರುವ ಕೆರೆಯನ್ನು ಶುಚಿಗೊಳಿಸಿದರು. ಗ್ರಾಮಸ್ಥರು ಗ್ರಾಮದ ರಸ್ತೆಯ ರಿಪೇರಿಯನ್ನು ಒಂದು ಮೈಲು ವರೆಗೆ ನಡೆಸಿದರು. ಏಳು ದಿನಗಳಲ್ಲಿ ಗ್ರಾಮ ರಸ್ತೆಯ ಪೂರ್ತಿ ಕೆಲಸ ಮುಗಿಸಬೇಕೆಂದು ನಿರ್ಣಯವಾಗಿದೆ.

ಚೆಟ್ಟಿಮಾನಿ

ಇಲ್ಲಿಯ ಮಾಧ್ಯಮ ಶಾಲಾ ಆವರಣದಲ್ಲಿ ಶಾಲಾ ಮುಖ್ಯೋಪಾಧ್ಯಾಯರಿಂದ ಧ್ವಜಾರೋಹಣ ನಡೆಯಿತು. ಈ ಶಾಲೆಗೆ ಆಟದ ಮೈದಾನವಿಲ್ಲದ ಕಾರಣ ವಿದ್ಯಾರ್ಥಿಗಳೂ, ಅಧ್ಯಾಪಕರೂ ಸೇರಿ ಮೈದಾನದ ಕೆಲಸ ಪ್ರಾರಂಭಿಸಿದ್ದಾರೆ. ನಂತರ ಪದಕಲ್ಲು ದೇವಸ್ಥಾನದ ವರೆಗೆ ಮೆರವಣಿಗೆ ತೆಗೆದು ಶ್ರೀ ಕೆ. ಎಸ್. ಗಣಪತಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಶ್ರೀಗಳಾದ ಕೆ. ಆರ್. ಬಾಲಕೃಷ್ಣ, ಎ. ಎಂ. ಬೆಳ್ಯಪ್ಪ, ಎ. ಸಿ. ಮುತ್ತಣ್ಣ, ಪಿ. ಟಿ. ಮುತ್ತಣ್ಣ, ಬಿ. ಆರ್. ಸುಬ್ರಾಯ, ಎಂ. ಎ. ಹಸನಬ್ಬ, ಪಿ. ನಂಜಪ್ಪಯ್ಯ ಮೊದಲಾದವರು ಭಾಷಣ ಮಾಡಿದರು.

ರಸೂಲ್‌ಪುರ.

ಬೆಳಿಗ್ಗೆ ೯ ಗಂಟೆಗೆ ರಸೂಲ್‌ಪುರ, ಬಸವನಳ್ಳಿ ಗ್ರಾಮದವರೂ, ಸಾಮೂಹಿಕ ವಿಕಾಸಯೋಜನೆಯ ಗ್ರಾಮಸೇವಕರೂ, ವಿದ್ಯಾರ್ಥಿಗಳೂ ಧ್ವಜಾರೋಹಣಮಾಡಿ, ಮೆರವಣಿಗೆ ತೆಗೆದು ಬಸವೇಶ್ವರ ದೇವಾಲಯದಲ್ಲಿ ಪೂಜೆ ನಡೆಯಿತು. ನಂತರ ಶ್ರೀ. ಜಿ. ಎಂ. ಮಂಜುನಾಥಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಶ್ರೀಗಳಾದ ಎನ್. ಎಂ. ನಂಜಪ್ಪ, ಸಿ. ಎಚ್. ಕಾರ್ಯಪ್ಪ, ಬಿ. ಎಸ್. ತಮ್ಮಯ್ಯ, ಮೊದಲಾದವರು ಭಾಷಣ ಮಾಡಿದರು. ರಾತ್ರಿ ಸುಂಟಿಕೊಪ್ಪ ಮತ್ತು ರಸೂಲ್‌ಪುರದವರು ಸೇರಿ 'ರತಿಕಲ್ಯಾಣ'ವೆಂಬ ನಾಟಕವನ್ನು ಅಭಿನಯಿಸಿದರು.

ಗುಡುಗಳಲೆ.

ಈ ಗ್ರಾಮಸ್ಥರು ಶ್ರೀ. ಶಂಕರರಾಯರ ಮುಂದಾಳ್ತನದಲ್ಲಿ ಗ್ರಾಮದ ರಸ್ತೆ, ಓಣಿಗಳ ನಿರ್ಮಲೀಕರಣ ಕೆಲಸ ನಡೆಸಿದರು. ಅದೇ ದಿನ ಸಂಜೆ ಪೂಜೆ ಪುರಸ್ಕಾರಗಳು ನಡೆದುವು. ನಂತರ ನಾಡುಬಾರುಪತ್ತಿಗಾರರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಶ್ರೀಗಳಾದ ಪೊನ್ನಪ್ಪ, ಶಂಕರರಾಯ, ತಮ್ಮಯ್ಯ, ಮಲ್ಲಯ್ಯ ಮೊದಲಾದವರು ಭಾಷಣ ಮಾಡಿದರು. ಶನಿವಾರಸಂತೆ ಶ್ರೀ. ಮರಿಸಿದ್ದಪ್ಪನವರ ಸಂಗೀತವಿತ್ತು.

ಗರ್ವಾಲೆ.

ಗ್ರಾಮದ ಜನರೂ ವಿದ್ಯಾರ್ಥಿಗಳೂ ಒಟ್ಟು ೧೫೦ ಜನರು ಸೇರಿದ್ದರು. ಮುಖ್ಯೋಪಾಧ್ಯಾಯರಿಂದ ಧ್ವಜಾರೋಹಣವಾಗಿ ಮಹಾತ್ಮರ ಭಾವಚಿತ್ರದೊಡನೆ ಮೆರವಣಿಗೆ ನಡೆಯಿತು. ನಂತರ ಅಧ್ಯಾಪಕರೂ, ವಿದ್ಯಾರ್ಥಿಗಳೂ ಸೇರಿ ಶಾಲೆಯ ಸುತ್ತಲಿನ ೧½ ಎಕರೆ ಸ್ಥಳದ ಕಾಡು ಕಡಿದರು. ಗ್ರಾಮಸ್ಥರು ಶಾಲಾ ಮೈದಾನವನ್ನು ದುರಸ್ತಿಗೊಳಿಸಿದರು.

ಬಿ. ಶೆಟ್ಟಿಗೇರಿ.

ಪೂರ್ವಾಹ್ನ ೯—೩೦ ಗಂಟೆಗೆ ಶಾಲಾ ಮುಖ್ಯೋಪಾಧ್ಯಾಯರಿಂದ ಧ್ವಜಾರೋಹಣ ಕೆಲಸವು ನಡೆಯಿತು. ೯-೪೫ಕ್ಕೆ ಮೆರವಣಿಗೆ ಹೊರಟು ಎರಡು ದೇವಸ್ಥಾನಗಳನ್ನು ಸಂದರ್ಶಿಸಿ ಮಹಾತ್ಮರ ಆತ್ಮಕ್ಕೆ ಶಾಂತಿಯನ್ನೀಯಲೆಂದೂ, ಹಿಂದೂಸ್ಥಾನದ ಸ್ವಾತಂತ್ರ್ಯವು ಚಿರಸ್ಥಾಯಿಯಾಗಿ ಉಳಿಯಲೆಂದೂ ಪ್ರಾರ್ಥಿಸಲಾಯಿತು. ಸರಿ ೧೨ ಗಂಟೆಗೆ ಶಾಲಾ ಹತ್ತಿರದ ರಸ್ತೆಯ ದುರಸ್ತಿ ಕೆಲಸವನ್ನು ಶಾಲಾ ಮಕ್ಕಳಿಂದ ಸುಮಾರು ೧½ ಫರ್ಲಾಂಗ್‌ಗಳ ದೂರ ಮಾಡಿಸಲಾಯಿತು.

ಅಪರಾಹ್ನ ೨ ಗಂಟೆಗೆ ಸರಿಯಾಗಿ, ಶ್ರೀ ಕೆ. ಜಿ. ಪೂವಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಶ್ರೀಮತಿ. ಯಂ.-ಡಿ. ದೇವಮ್ಮನವರು ಪ್ರಾರ್ಥನೆಯನ್ನು ಮಾಡಿದರು. ಶ್ರೀಗಳಾದ ಕೆ. ಬಿ. ಬೋಪಯ್ಯ, ಕೆ. ಯಂ. ಗೌರಮ್ಮ, ಎನ್. ಸಿ. ಬಿದ್ದಪ್ಪ, ಕೆ. ಟಿ. ಕಾರ್ಯಪ್ಪ, ಬಿ. ಕೆ. ಅರ್ಜುನ, ಕೆ. ಎ. ಕುಶಾಲಪ್ಪ, ಮೊದಲಾದವರು ಭಾಷಣ ಮಾಡಿದರು.

ಕಣಿವೆ.

ಕಣಿವೆ ಪುರಜನರೂ, ಜೆ. ಪಿ. ಶಾಲೆಯ ಅಧ್ಯಾಪಕ, ವಿದ್ಯಾರ್ಥಿಗಳೂ ಸೇರಿ ಗಾಂಧಿ ಜಯಂತಿ ಆಚರಿಸಿದರು. ಆಟೋಟಗಳ ಸ್ಪರ್ಧೆ ಏರ್ಪಡಿಸಲಾಗಿತ್ತು.

ಬೇಕಾಗಿದ್ದಾರೆ

ಹೊಸ ಮಾದರಿಯ ಫೌಂಟನ್ ಪೆನ್ ಮಾರಾಟ ಮಾಡಲು ಆಕರ್ಷಣೀಯ ಶರತುಗಳ ಮೇಲೆ ಏಜೆಂಟರು ಬೇಕಾಗಿದ್ದಾರೆ. ಸೇಂಪಲಿಗೂ ವಿವರಗಳಿಗೂ ಈ ಪತ್ರಿಗೆ ಬರೆಯಿರಿ.

Standard Pen House
(K. M)
Bhandari Street
Bombay 3.

೯—೧೦—೫೩ನೇ **ಕೊಡಗು** ಶುಕ್ರವಾರ.

ಕೊರಿಯೂದಲ್ಲಿ ತೊಂದರೆ.

ಕೊರಿಯೂ ಯುದ್ಧದ ಬಗ್ಗೆ ಎರಡು ಕಡೆಗೂ ಸಂಧಾನ ಶರತಿನಂತೆ ಇಕ್ಕಡೆಯಲ್ಲಿರುವ ಯುದ್ಧ ಕೈದಿಗಳನ್ನು ಅವರವರ ದೇಶಕ್ಕೆ ಹಿಂತಿರುಗಿ ಕಳುಹಿಸುವ ಏರ್ಪಾಡಾಗಿ ಈ ಜವಾಬ್ದಾರಿಯನ್ನು ತಟಸ್ಥ ರಾಷ್ಟ್ರಗಳ ವಶಕ್ಕೊಪ್ಪಿಸಲಾಯಿತು. ತಟಸ್ಥ ರಾಷ್ಟ್ರಗಳ ಮುಂದಾಳಾಗಿ ಹಿಂದೂದೇಶವು ಈ ಜವಾಬ್ದಾರಿಯನ್ನು ಒಪ್ಪಿಕೊಂಡು ಜನರಲ್ ಕೊಡಂದೆರ ತಿಮ್ಮಯ್ಯನವರನ್ನು ತಟಸ್ಥ ರಾಷ್ಟ್ರಗಳ ಸಮಿತಿಯ ಅಧ್ಯಕ್ಷರಾಗಿ ಆರಿಸಿತು. ಅವರಿಗೆ ಸಹಾಯಕವಾಗಿ ಯುದ್ಧ ಕೈದಿಗಳನ್ನು ಅವರವರ ದೇಶಗಳಿಗೆ ಕಳುಹಿಸಲು ಸಹಾಯವಾಗುವಂತೆ ಬ್ರಿಗೇಡಿಯರ್ ಥೋರಟ್‌ರವರ ಅಧೀನದಲ್ಲಿ ೫ ಸಾವಿರದಷ್ಟು ಭಾರತೀಯ ಸೈನಿಕರನ್ನು ಕಳುಹಿಸಿತು. ಹಿಂದೂದೇಶವು ಈ ಮಹಾಜವಾಬ್ದಾರಿಯನ್ನು ವಹಿಸಿಕೊಳ್ಳಲು ಅವಕ್ಕಿರುವ ಜಗತ್ತಿನ ಶಾಂತಿಯ ಬಯಕೆಯೇ ಮುಖ್ಯ ಕಾರಣ. ಅವರೂ ಈ ಜವಾಬ್ದಾರಿಯನ್ನು ಒಪ್ಪುವ ಮೊದಲು ಅದು ಇಕ್ಕಡೆಯ ರಾಷ್ಟ್ರಗಳಿಗೂ ಜಕ್ಕೀಲು ಮಾಡಿ ತನ್ನ ಕೆಲಸವು ಸಾಂಗವಾಗಿ ನಡೆಯಬೇಕಾದರೆ ಎರಡು ಕಡೆಯವರೂ ಹೃತ್ಪೂರ್ವಕ ಸಹಕಾರ ಕೊಟ್ಟರೆ ಮಾತ್ರ ಸಾಧ್ಯನೆಂಬುದನ್ನು ಶೃತಪಡಿಸಿತ್ತು. ಸಂಯುಕ್ತ ರಾಷ್ಟ್ರಸಂಘದ ಪರವಾಗಿ ಮಿ. ಲಿಂಕೋನ್ ವೈಟ್‌ರವರು ಈ ಭರವಸೆಯನ್ನು ಕೊಡುತ್ತಾ ಭಾರತದ ಸೈನಿಕರಿಗಾಗಲೀ, ಮಧ್ಯಸ್ಥಿಕೆಗಾರರಿಗಾಗಲೀ ಯಾವುದೇ ತೊಂದರೆ ತೊಡರುಗಳು ಬಾರವೆಂದು ಹೇಳಿದ್ದರು. ಆ ಭರವಸೆಯ ಮೇರೆ ಭಾರತದ ಮುಖ್ಯ ಮಂತ್ರಿಗಳಾದ ಪಂಡಿತ ನೆಹರೂರವರು ಭಾರತೀಯ ದಳವನ್ನು ಅಲ್ಲಿಗೆ ಕಳುಹಿಸುವ ಮುನ್ನ ಆವರ ಜವಾಬ್ದಾರಿಯನ್ನು ವಿವರಿಸಿ, ಭಾರತದ ಶಾಂತಿ ಬಯಕೆಗೆ ಕುಂದುಬಾರದಂತೆ ವರ್ತಿಸಿ ದೇಶದ ಘನತೆಯನ್ನು ಹೆಚ್ಚಿಸಬೇಕೆಂದು ಹರಸಿ ಬೀಳ್ಕೊಟ್ಟರು. ಭಾರತವು ಈ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಸಂಯುಕ್ತ ರಾಷ್ಟ್ರ ಪ್ರೇರಿತ ದಕ್ಷಿಣ ಕೊರಿಯನರೂ, ಕಮ್ಯೂನಿಸ್ಟ ಪ್ರೇರಿತ ಉತ್ತರ ಕೊರಿಯನರೂ ಯಾವುದೇ ಆತಂಕ ತರಲಿಕ್ಕಿಲ್ಲೆಂದು ಭಾವಿಸಲಾಗಿತ್ತು.

ಆದರೆ ಕೊರಿಯೂದಿಂದ ಇತ್ತೀಚೆಗೆ ಬರುತ್ತಿರುವ ವರ್ತಮಾನಗಳ ಪ್ರಕಾರ ಮೇಲಿನ ಸಂಧಾನ ಶರತ್ತುಗಳೂ, ಭಾರತಕ್ಕೆ ಕೊಟ್ಟ ಭರವಸೆಗಳೂ ಉಲ್ಲಂಘಿಸಲ್ಪಟ್ಟು ಭಾರತವು ಒಪ್ಪಿದ ಜವಾಬ್ದಾರಿಯನ್ನು ನಿರ್ವಹಿಸುವದು ಕಷ್ಟಪ್ರಾಯವಾಗಿದೆ. ಈ ಎರಡು ಪಕ್ಷಗಳು ಹೊರಗೆ ಕಾಣುವಂತೆ ಯಾವುದೇ ಆತಂಕಗಳನ್ನು ಒಡ್ಡುತ್ತಿಲ್ಲವಾದರೂ ಯುದ್ಧ ಕೈದಿಗಳಿಗೆ ಕೊಟ್ಟ ಬೋಧನೆ, ವಿವರಣೆಗಳಿಂದಾಗಿ ಅವರೇ ದಂಗೆ ಏಳತೊಡಗಿದ್ದಾರೆ. ಅಧ್ಯಕ್ಷರಾದ ಜನರಲ್ ತಿಮ್ಮಯ್ಯನವರು ಹೇಳುವಂತೆ ಯುದ್ಧ ಕೈದಿಗಳಿಗೆ ಸಂಧಾನದ ಶರತುಗಳನ್ನೂ ಮತ್ತು ಹಿಂದೂಸ್ಥಾನದ ಜವಾಬ್ದಾರಿ ಮತ್ತು ಅದರ ಸೈನ್ಯದ ಕರ್ತವ್ಯದ ವಿಚಾರ ಯೋಗ್ಯ ಮಾಹಿತಿ ಕೊಡದ ಕಾರಣ ಯುದ್ಧ ಕೈದಿಗಳಲ್ಲಿ ತಪ್ಪಭಿಪ್ರಾಯ ಉಂಟಾಗಿ ಸ್ವದೇಶಕ್ಕೆ ಹಿಂತಿರಗುವ ವಿಚಾರಕ್ಕೆ ಆತಂಕ ಒಡ್ಡುತ್ತಿರುವರು. ಆದ್ದರಿಂದಾಗಿ ತಿಮ್ಮಯ್ಯ ಸಮಿತಿಯು ಯುದ್ಧ ಕೈದಿಗಳಿಗೆ ನಿಜ ಪರಿಸ್ಥಿತಿಯನ್ನು ವಿವರಿಸಿ ಅವರ ಮನದಲ್ಲಿರುವ ತಪ್ಪಭಿಪ್ರಾಯವನ್ನು ನಿವಾರಿಸುವ ಯತ್ನ ಮಾಡುತ್ತಿಲ್ಲವದೆ.

ಅಮೇರಿಕಾ ಸೈನ್ಯದವರಿಂದ ನಡೆಸುತ್ತಿರುವ ಪತ್ರಿಕೆಯೊಂದು ಹಿಂದೂದೇಶದ ಬಗ್ಗೆ ನಾನಾ ಅಪಪ್ರಚಾರ ಕೈಕೊಂಡಿದೆ. ಅಲ್ಲದೆ ಯುದ್ಧ ಕೈದಿಗಳು ಯಾವುದೇ ತಟಸ್ಥ ರಾಷ್ಟ್ರಗಳಿಗೆ ತಾವು ಹೋಗಲು ಅನುವಾಗುವಂತೆ ಬಂಧ ವಿಮುಕ್ತರಾಗುವರೆಂಬುವನ್ನು ತಿಳಿಸದೆ ಅವರನ್ನು ಫಾರ್ಮೋಸಾಕ್ಕೆ ಕರೆದುಕೊಂಡು ಹೋಗುವರೆಂದು ತಪ್ಪಭಿಪ್ರಾಯ ಕೊಡಲ್ಪಡುತ್ತಿದೆ. ಪರಿಣಾಮವಾಗಿ ಕೈದಿಗಳಲ್ಲಿ ಅಶಾಂತಿ, ಭಾರತೀಯರ ಮೇಲೆ ಅವಿಶ್ವಾಸ ಹೆಚ್ಚಾಗುತ್ತಿದೆ.

ಈ ತೊಂದರೆಗಳಲ್ಲದೆ ದಕ್ಷಿಣ ಕೊರಿಯೂದ ವಿದೇಶ ಮಂತ್ರಿಗಳು ಭಾರತೀಯ ದಳದ ಮೇಲೆ ಯುದ್ಧ ಸಾರುವ ಯತ್ನದಲ್ಲಿದ್ದಾರೆ. ಕೆಲವು ವಾರಗಳ ಹಿಂದೆ ಯುದ್ಧ ಕೈದಿಗಳ ಶಿಬಿರದಲ್ಲಿ ದಂಗೆಯೆದ್ದು ಅದನ್ನು ಅಡಗಿಸಲು ಭಾರತ ಸೈನಿಕರು ಗುಂಡು ಹಾರಿಸಬೇಕಾಗಿ ಬಂದುದನ್ನು ವಿರೋಧಿಸಿ ವಿದೇಶ ಮಂತ್ರಿಗಳು "ಹಿಂದೂದೇಶಿಯರ ವಿರುದ್ಧ ಸೈನ್ಯ ಪ್ರಯೋಗ ಮಾಡಿ ಅವರನ್ನು ಹೊರಗಟ್ಟಲಾಗುವದು" ಎಂದಿರುವರು.

ಈ ವಿವರಗಳನ್ನು ಪರಿಶೀಲಿಸಿದರೆ ಕೊರಿಯೂ ಯುದ್ಧ ಸಂಧಾನಕ್ಕೂ, ಯುದ್ಧ ಕೈದಿಗಳ ಪುನರ್ನಿವೇಶನಕ್ಕೂ ಜಗತ್ತಿನ ಶಾಂತಿಗೂ ವಿರುದ್ಧ ಪ್ರಯತ್ನ ನಡೆಸುವವರು ಹಿನ್ನೆಲೆಯಲ್ಲಿ ನಿಂತು ಕಾರ್ಯ ಮಾಡುತ್ತಿರುವರೆಂಬುದು ವೇದ್ಯವಾಗುವದು. ಕೊರಿಯೂದ ಸಮಸ್ಯೆಯು ಬಗೆಹರಿಯಬೇಕಾದರೆ ಯುದ್ಧ ಕೈದಿಗಳ ಪ್ರಶ್ನೆಯು ಸಮರ್ಪಕವಾಗಿ ಇತ್ಯರ್ಥವಾಗಬೇಕು. ಹಿಂದೂ ದೇಶವು ವಿಪರೀತ ಖರ್ಚನ್ನು ಹೊತ್ತು ತನ್ನ ಸೈನ್ಯವನ್ನು ಕೊರಿಯಾಕ್ಕೆ ಕಳುಹಿಸಿದ್ದರೆ ತಮ್ಮ ಸ್ವಂತ ಲಾಭ ಯಾ ಹೆಗ್ಗಳಿಕೆಗಾಗಿ ಅಲ್ಲವೆಂಬುದನ್ನು ಎಲ್ಲರೂ ತಿಳಿಯಬೇಕು. ಸಂಯುಕ್ತರಾಷ್ಟ್ರ ಸಂಘದ ಹಾಗೂ ಉತ್ತರ ಕೊರಿಯೂ ಮತ್ತು ಕಮ್ಯೂನಿಸ್ಟರ ಆಶಯದಂತೆ ಅವರಲ್ಲಾದ ಒಪ್ಪಂದ ಶರತುಗಳನ್ನು ಸಮರ್ಪಕ ರೀತಿಯಿಂದ ಜಾರಿಯಲ್ಲಿ ತಂದು ಶಾಂತಿಗೆ ಸಹಾಯಕವಾಗುವ ಸದುದ್ದೇಶದಿಂದ ಭಾರತವು ಈ ಗುರುತರ ಜವಾಬ್ದಾರಿಯನ್ನು ಒಪ್ಪಿ ಅವರಿಟ್ಟರ ಆಶೆಯದಂತೆ ಕೆಲಸ ಮಾಡುತ್ತಿದೆ. ಈಗ ಆ ಎರಡು ಕಡೆಯವರೂ ಭಾರತದ ಪ್ರಯತ್ನಕ್ಕೆ ಸಹಾಯ ಮಾಡುವ ಬದಲು ಹಿನ್ನೆಲೆಯಲ್ಲಿ ನಿಂತು ಅಡಚಣೆ ತರುವದಾದರೆ ಅದನ್ನು ಖಂಡಿಸಿ ನಿಶೇಧಿಸಬೇಕಲ್ಲದೆ ಅಂಥಾವರಿಗೆ ಜಗತ್ತಿನಲ್ಲಿ ಶಾಂತಿಬೇಕಿಲ್ಲವೆಂದು ಹೇಳಬೇಕಾಗುವದು. ಜನರಲ್ ತಿಮ್ಮಯ್ಯನವರು ವಹಿಸಿರುವ ಜವಾಬ್ದಾರಿ ಬಹಳ ಗಂಡಾಂತರಕಾರಿಯಾದುದು. ಅವರ ಅಥವಾ ಭಾರತದ ಈ ಪ್ರಯತ್ನಕ್ಕೆ ಜಯ ದೊರೆತು ಜಗತ್ತಿನ ಶಾಂತಿ ಒಂದು ಹೆಜ್ಜೆ ಹತ್ತಿರ ಬರುವಂತಾಗಲಿ.

ವರ್ತಮಾನ.

ದಾವಣಗೆರೆ ಇಂಜನಿಯರಿಂಗ್ ಕಾಲೇಜಿನಲ್ಲಿ ಓದುತ್ತಿರುವ ಶ್ರೀ ಬಿ. ಎಂ. ಮಂದಪ್ಪನವರು ಸದರಿ ಕಾಲೇಜಿನ ವಾರ್ಷಿಕ ಆಟೋಟಗಳ ... ಷಿಯನ್ ಶಿಪ್ ಕಪ್ ಪಡೆದಿರುವರೆಂದು ತಿಳಿಯಬರುತ್ತದೆ.

ವೀರಾಜಪೇಟೆ ಕರ್ನಾಟಕ ಸಾಹಿತ್ಯ ಸಂಘದ ಆಶ್ರಯದಲ್ಲಿ ಗಾಂಧಿ ಜಯಂತಿಯಂದು "ಗಾಂಧೀಜಿಯ ಜೀವನ ಮತ್ತು ಸಂದೇಶ" ...... ವಿಷಯದಲ್ಲಿ ಸ್ಥಳೀಯ ಹೈಸ್ಕೂಲು ವಿದ್ಯಾರ್ಥಿಗಳೊಳಗೆ ಏರ್ಪಡಿಸಿದ ವಾಕ್ ಸ್ಪರ್ಧೆಯಲ್ಲಿ ಕುಮಾರಿ ಪಿ. ಕೆ. ಅಕ್ಕಮ್ಮನವರು ಒಂದನೇ ಬಹುಮಾನವನ್ನೂ ಕುಮಾರಿ ಎಸ್. ಆರ್. ವಿಜಯಮ್ಮ ಇವರು ದ್ವಿತಿಯ ಬಹುಮಾನವನ್ನೂ ಪಡೆದರು.

ತಾ. ೨ರಲ್ಲಿ ಭಾಗಮಂಡಲದಲ್ಲಿ ಸಾಮೂಹಿಕ ವಿಕಾಸ ಯೋಜನೆಯ ಉದ್ಘಾಟನೆಯನ್ನು ಕೊಡಗಿನ ಗೃಹ ಮಂತ್ರಿಗಳು ಮಾಡಿದ ನೆನಪಿಗಾಗಿ ಭಾಗಮಂಡ್ಲ ಆಸ್ಪತ್ರೆಗೆ ಒಂದು ವಾರ್ಡನ್ನು ಕಟ್ಟಿ ಕೊಡಲು ಭಾಗಮಂಡ್ಲದ ಶ್ರೀ ಎಸ್. ಶ್ರೀನಿವಾಸಯ್ಯನವರು ವಾಗ್ದಾನ ಮಾಡಿರುವರು.

ಕೇಂದ್ರ ಸರಕಾರದ ಕೈಗಾರಿಕೆ ಮತ್ತು ವಾಣಿಜ್ಯ ಶಾಖೆಯ ಸೆಕ್ರೆಟರಿಯವರಾದ ಶ್ರೀ ಎಚ್. ಆರ್. ವಿ. ಐಯ್ಯಂಗಾರ್‌ರವರು ತಾ. ೩ರಲ್ಲಿ ಮಡಿಕೇರಿಗೆ ಬಂದು ಕಾಫಿ ವ್ಯವಸಾಯದ ಸ್ಥಿತಿ, ಕಾಫಿಯ ಬೆಲೆ ಮತ್ತು ಹೊರ ದೇಶಗಳಿಗೆ ರಫ್ತು ಮಾಡುವ ವಿಚಾರ ಕೊಡಗಿನ ಕಾಫಿ ಪ್ಲಾಂಟರುಗಳೊಡನೆ ಮಾತುಕತೆ ನಡೆಸಿ ತಾ. ೨ರಲ್ಲಿ ಹಿಂತೆರಳಿದರು.

ಪಾರ್ಲಿಮೆಂಟಿನ ಸದಸ್ಯರಾದ ಶ್ರೀ ಎ. ವಿ. ಥಾಮಸ್‌ರವರು ತಾ. ೫ರಲ್ಲಿ ಮಡಿಕೇರಿಗೆ ಬಂದು ಕೌನ್ಸಿಲು ಸಭಾಂಗಣದಲ್ಲಿ ನಡೆದ ಕೊಡಗಿನ ... ಗಾರರ ಸಭೆಯಲ್ಲಿ ಮಾತಾಡುತ್ತಾ ... ವ್ಯವಸಾಯದ ಪರಿಸ್ಥಿತಿ, ಅದರ ಅಂಕೆ ಸಂಖ್ಯೆಗಳ ವಿವರ ಕೇಂದ್ರ ಸರಕಾರಕ್ಕೂ ಜನತಾ ಸಭೆಯ ಸದಸ್ಯರಿಗೂ ಸರಿಯಾದ ಪರಿಜ್ಞಾನವನ್ನು ಕೊಡಲು ಡೆಲ್ಲಿಯಲ್ಲಿ ಒಂದು ಪಬ್ಲಿಕ್ ರಿಲೇಷನ್ಸ್ ಆಫೀಸರನ್ನು ನೇಮಿಸಬೇಕೆಂಬ ಸೂಚನೆ ಮಾಡಿದರು.

ಡೆಲ್ಲಿಯಲ್ಲಿ ತಾ. ೭ರಿಂದ ಆವರೆಗೆ ನಡೆಯುವ ನೇಶನಲ್ ಡೆವಲಪ್‌ಮೆಂಟ್ ಕೌನ್ಸಿಲಿನ ಮೀಟಿಂಗಿನಲ್ಲಿ ಭಾಗವಹಿಸಲು ಕೊಡಗಿನ ಮುಖ್ಯ ಮಂತ್ರಿಯವರು ತಾ. ೬ರಲ್ಲಿ ಹೋಗಿರುವರು.

ಕಳೆದ ಒಂದು ವರ್ಷದಿಂದ ಅನ್ನಾಹಾರಗಳಿಲ್ಲದೆ, ನೀರನ್ನೂ ಕೂಡ ಮುಟ್ಟದೆ ಆರೋಗ್ಯಕರ ಜೀವನ ನಡೆಸುತ್ತಿರುವ ಸುಂಟಿಕೊಪ್ಪದ ಕುಮಾರಿ ಧನಲಕ್ಷ್ಮಿಯು ಇಂಡಿಯಾ ಸರಕಾರದ ಅಪೇಕ್ಷೆಯಂತೆ ಬೆಂಗಳೂರಿನ ಜನರಲ್ ಆಸ್ಪತ್ರೆಯಲ್ಲಿ ವೈದ್ಯಕೀಯ ಪರಿಶೀಲನೆಗಾಗಿ ತಾ. ೯ರಲ್ಲಿ ತನ್ನ ತಂದೆಯವರೊಡನೆ ಹೋಗುವಳು. ಅಲ್ಲಿಯ ಇವರ ಖರ್ಚಿಗಾಗಿ ಇಂಡಿಯಾ ಸರಕಾರ ರೂ. ೧,೨೦೦/– ಮಂಜೂರ್ಮಾಡಿದೆಯೆಂದು ವರ್ತಮಾನ.

ರಾಷ್ಟ್ರೀಯ ವಿಸ್ತರಣಾ ಯೋಜನೆಯ National Extention scheme ಆಫೀಸರಾಗಿ ಶ್ರೀ ಮುಂಡಂಡ ಪೊನ್ನಪ್ಪನವರನ್ನು ನೇಮಿಸಿದ್ದು ಅವರು ಈಗಿರುವ ತಮ್ಮ ಜಿ. ವ್ಯವಸಾಯ ಅಧಿಕಾರಿಯ ಕೆಲಸದ ಜೊತೆಗೆ ಇದನ್ನೂ ನೋಡಿಕೊಳ್ಳುವರು.

ಕೊಡಗಿನ ಸಾಮೂಹಿಕ ವಿಕಾಸ ಯೋಜನೆಯನ್ನು ಜಾರಿಗೆ ತರುವ ಸಂಬಂಧ ಎಲ್ಲಾ ಇಲಾಖೆಗಳ ಕೆಲಸಗಳನ್ನು ಒಂದುಗೂಡಿಸಿ ಏಕಮುಖವಾಗಿ ಸಾಗಿಸಲನುವಾಗುವಂತೆ ಸಾಮೂಹಿಕ ವಿಕಾಸ ಯೋಜನೆಯ ಡೆವಲಪ್‌ಮೆಂಟ್ ಕಮಿಷನರನ್ನು ಕೊಡಗು ಸರಕಾರದ ಎಡಿಶನಲ್ ಸೆಕ್ರೆಟರಿಯಾಗಿ ನೇಮಿಸಲಾಗಿದೆಯೆಂದು ಪ್ರಕಟವಾಗಿದೆ.

ಕೊಡಗು ಸರಕಾರದ ಫೈನಾನ್ಸ್ ಡಿಪಾರ್ಟ್‌ಮೆಂಟಿನಲ್ಲಿ ಮಾಸಿಕ ವೇತನ ರೂ. ೧೬೦–೧೦–೨೨೦ರ ಒಂದು ಸ್ಪೆಶಲ್ ಆಫೀಸರ್ ಹುದ್ದೆಯನ್ನು ಹೊಸದಾಗಿ ನಿರ್ಮಿಸಿ ಅದನ್ನು 'ಸಿಲೆಕ್ಷನ್ ಪೋಸ್ಟ್' ಆಗಿ ಮಾಡಲಾಗಿದೆ.

ಮೈಸೂರಿನ ಇಲೆಕ್ಟ್ರಿಕ್ ಇಲಾಖೆಯ ಸುಪರಿಂಟೆಂಡೆಂಟರಾಗಿ ನಿವೃತ್ತರಾಗಿದ್ದು ಕೊಡಗಿನಲ್ಲಿ ಇಲೆಕ್ಟ್ರಿಕ್ ಇನ್ಸ್‌ಪೆಕ್ಟರಾಗಿ ನೇಮಿಸಲ್ಪಟ್ಟಿರುವ ಶ್ರೀ ಸಿ. ಬಿ. ನರಸಿಂಹ ಮೂರ್ತಿಯವರ ಉದ್ಯೋಗದ ಅವಧಿಯನ್ನು ತಾ.೧೫–೯–೫೩ರಿಂದ ೧೫–೩–೫೪ರ ವರೆಗೆ ಆರು ತಿಂಗಳು ಹೆಚ್ಚಿಸಿದೆ.

ಕೊಡಗಿನ ಫೈನಾನ್ಸ್ ಸೆಕ್ರೆಟರಿಯಾಗಿರುವ ಶ್ರೀ ಶ್ರೀನಿವಾಸರಾಯರ ಅಧಿಕಾರವಧಿಯನ್ನು ತಾ. ೧೫–೭–೫೩ರಿಂದ ಆರು ತಿಂಗಳ ವರೆಗೆ ಹೆಚ್ಚಿಸಲಾಗಿದೆ.

ಕೊಡಗಿನ ಹೇಂಡ್‌ಲೂಮ್ ಅಭಿವೃದ್ಧಿ ಸಮಿತಿಯಾಗಿ ಟೆಕ್ಸ್‌ಟೈಲ್ ಕಮಿಷನರು, ಜಿಲ್ಲಾ ವಿದ್ಯಾಧಿಕಾರಿಗಳು, ಸಹಕಾರ ಸಂಘಗಳ ಡೆಪ್ಯುಟಿ ರಿಜಿಸ್ಟ್ರಾರವರು, ಶ್ರೀ ಪಿ. ಲಕ್ಕಯ್ಯ, ಶ್ರೀ ಡಿ. ಕೃಷ್ಣಶೆಟ್ಟಿ, ಶ್ರೀ ಕಾಶಿರಾಮಪ್ಪ ಶೆಟ್ಟಿಯವರನ್ನು ಒಂದು ವರ್ಷದ ಅವಧಿಯ ವರೆಗೆ ನೇಮಿಸಲಾಗಿದೆ.

ಶ್ರೀಗಳಾದ ಮದೂರು ಬಸಪ್ಪ, ಎಸ್. ಎಸ್ ಸಿದ್ದಲಿಂಗಪ್ಪ, ಗೌಸ್ ಸಾಹೇಬ್, ಡಿ. ಎಚ್ ಸಣ್ಣಪ್ಪ, ಎಸ್. ಪಿ. ಸುಬ್ರಾಯಶೆಟ್ಟಿ ಮತ್ತು ಕೆ. ಎನ್. ಎಲ್ಲೋಜಿರಾಯ ಇವರನ್ನು ಕೊಡ್ಲಿಪೇಟೆ ನೋಟಿಫೈಡ್ ಏರಿಯಾದ ಸಮಿತಿಯ ಸದಸ್ಯರಾಗಿ ಆರಿಸಲಾಗಿದೆ.

ಭಾಗಮಂಡಲ ದೇವಸ್ಥಾನದಲ್ಲು ಈ ವರ್ಷದ ಬಾರಿ ಮಳೆ ದೆಸೆಯಿಂದ ಬಿದ್ದು ಹೋದ ಗೋಳಿಯನ್ನು ರೂಪಾಯಿಗಳು ೫೦೦೦ ಕ್ಕೆ ಮೇಲ್ಪಟ್ಟು ಖರ್ಚು ಮಾಡಿ ಉದಾರಭಾವದಿಂದ ಶ್ರೀ ಕೊರವಂಡ ಎಂ. ತಿಮ್ಮಯ್ಯನವರು ಕಟ್ಟಿಸಿಕೊಟ್ಟಿರುವದರಿಂದ ದೇವಸ್ಥಾನದ ಕಮಿಟಿ ಮೆಂಬರುಗಳು ಸದರಿ ತಿಮ್ಮಯ್ಯನವರಿಗೆ ಈ ತಾರೀಕು ೧೩ನೇ ದಿವಸ ಹಗಲು ೧೧ ಗಂಟೆಗೆ ಬಿನ್ನವತ್ತಳಿಕೆಯನ್ನು ಭಾಗಮಂಡಲ ದೇವಸ್ಥಾನದ ಮುಂದುಗಡೆ ಅರ್ಪಿಸುತ್ತಾರಾಗಿ ವರ್ತಮಾನ.

ವಿನಯ ಬೇಕು

ತಾ. ೨೯ರಲ್ಲಿ ನಾನು ಅವ್ಯತ್ತಿ ನಾಡು ಕಚೇರಿಗೆ ಹೋಗಿದ್ದೆ. ಹಾಲುಗುಂದ ಗ್ರಾಮಸ್ಥರೊಬ್ಬರು ಕಚೇರಿಗೆ ಬಂದು ಗುಮಾಸ್ತರೊಬ್ಬರ ಹತ್ತಿರ ಹೋಗಿ ತಾನು ತಾ. ೪—೧೧—೫೨ರಲ್ಲಿ ಮಾಡಿದ ರಿಜಿಸ್ಟ್ರೇಷನ್ ಸರ್ಟಿಫಿಕೇಟಿನ ಕಾಪಿ ಬಂದಿದೆಯೋ ಎಂದು ಕೇಳಿದರು. ಗುಮಾಸ್ತರು ಓರೆಕಣ್ಣಿಂದೊಮ್ಮೆ ರೈತರನ್ನು ನೋಡಿ 'ಇಲ್ಲ; ಬಂದರೆ ಅದನ್ನು 'ಕೊಡದ ಉಪ್ಪು ಹಾಕಿ ಇಟ್ಟುಕೊಳ್ಳುವೆನೆ?' ಎಂದು ಗದರಿಸಿ ನುಡಿದರು. ಆ ರೈತ ಬಂಧುಗಳು ಅದೇ ಆಫೀಸಿನಲ್ಲಿ ಜಮಾಬಂಧಿ ನಕಲು ಬೇಕೆಂದು ಅರ್ಜಿ ಬರೆಕೊಂಡು ತಿಂಗಳೊಂದಾಗಿದೆಯಂತೆ. ಅದನ್ನು ಕೊಡಿರೆಂದು ಕೇಳಿದರೆ 'ಅದಕ್ಕೆ ಫಾರಂ ಬಂದಿಲ್ಲ'ವೆಂದು ಉತ್ತರ ಕೊಟ್ಟರಂತೆ. ಏಕೆ? ಫಾರಂಗಳಿಲ್ಲದಿದ್ದರೆ ತರಿಸಬಾರದೆ? ರೈತರೊಂದಿಗೆ ಸರಕಾರಿ ಅಧಿಕಾರಿಗಳು ಈ ರೀತಿ ವರ್ತಿಸಬಾರದು. ಇನ್ನಾದರೂ ವಿನಯದಿಂದ ವರ್ತಿಸಬಾರದೆ?

—ಹಾಜರಿದ್ದ ಮತ್ತೊಬ್ಬ ರೈತ

ಇದು ನ್ಯಾಯವೇ ?

ತಾ. ೨೫—೯—೫೩ರಲ್ಲು ನಾಪೋಕ್ಲು ನಾಡಿಗೆ, ಮುಖ್ಯ ಮಂತ್ರಿಯವರು ಮತ್ತು ಗೃಹ ಮಂತ್ರಿಯವರು ಪ್ರಜೆಗಳಿಗಿರುವ ಕಷ್ಟಗಳನ್ನು ನಿವಾರಿಸಲು ಆಗಮಿಸುವ ವರ್ತಮಾನ ತಿಳಿದು ಬಹಳ ಸಂತೋಷವಾಯಿತು. ಯಾಕೆಂದರೆ ನಮ್ಮ ಮಸೀದಿಯ ಬಳಿ ಇರುವ ಭಾವಿಯು ಈ ವರ್ಷದ ಮಳೆಗಾಲದಲ್ಲಿ ಕೆಲವು ಅಡಿಗಳಷ್ಟು ಆಳಕ್ಕೆ ಹೂತು ಹೋಗಿ ಕಲ್ಲಿನ ಕಟ್ಟಡ ಸಮೇತ ಬಿದ್ದುಹೋಗಿ ಬಹಳ ನಷ್ಟವಾಗಿತ್ತು. ಟೌನಿನಲ್ಲಿರುವ ಮಸೀದಿಯೊದ್ದರಿಂದ ಪ್ರಯಾಣಿಕರು ಹೆಚ್ಚಾಗಿ ಬಂದು ನೀರಿಗೆ ತೊಂದರೆಪಡುವುದರಿಂದಲೂ, ಮಸೀದಿ ಒಳಗೆ ನುಗ್ಗಲು ಸಹ ಕಾಲು ತೊಳೆಯಬೇಕಾದ್ದರಿಂದಲೂ ನೀರಿನ ಅಭಾವ ಹೆಚ್ಚಾಗಿ ಕಷ್ಟಪಡುತ್ತಿದ್ದೆವು. ಇದನ್ನು ರಿಪೇರಿ ಮಾಡಿಸುವ ಬಗ್ಗೆ ನಮ್ಮಲ್ಲಿ ಚೈತನ್ಯ ಇಲ್ಲದ್ದರಿಂದ ಮತ್ತು ನದ್ರಿ ಬಾವಿಯನ್ನು ಸಚಿವರುಗಳಿಗೆ ತೋರಿಸುವ ಉದ್ದೇಶದಿಂದ ಅವರನ್ನು ಅಲ್ಲಿಗೆ ಕರೆತರಲು ಚಪ್ಪರ ವಗೈರೆ ಹಾಕಿ ನಾವೆಲ್ಲರೂ ಮಸೀದಿಯ ಬಳಿಯಲ್ಲಿ ಮಂತ್ರಿಗಳನ್ನು ಸ್ವಾಗತಿಸಲು ತೀರ್ಮಾನಿಸಿದಾಗ, ನಾಡಿನ ಅಧಿಕಾರಿಗಳು ಅದು ಕೂಡದೆಂಬದಾಗಿ ತಿಳಿಸಿ, ಹಾಗೆ ನೀವು ಮಾಡಬೇಕಾದರೆ ಶ್ರೀ ನಾರಾಯಣಮೂರ್ತಿಯವರ ಸಮ್ಮತ ಬೇಕೆಂದು ಹೇಳಿದ್ದರಿಂದ ತಾರೀಕು ೨೩ನೇ ದಿನ ಶ್ರೀ ಯಂ. ಯಂ. ಇಬ್ರಾಹಿಂ ಎಂಬವರನ್ನು ಚೆಯ್ಯಂಡಾಣೆಯವರಿಗೆ ಕಳುಹಿಸಿ ಅವರನ್ನು ಕಂಡಾಗ ಯಾವ ಆತಂಕವೂ ಇಲ್ಲ. ನಿಮ್ಮ ಇಷ್ಟಾನುಸಾರ ಚಪ್ಪರ ಹಾಕಬಹುದೆಂದು ಹೇಳಿದರು. ಈ ಅಧಿಕಾರಿಗಳು ಈ ರೀತಿ ವರ್ತಿಸಬೇಕೆ? ಖಾಸಗಿ ವ್ಯಕ್ತಿಯೊಬ್ಬರನ್ನು ಕೇಳಬೇಕೆಂದು ಹೇಳಬೇಕೆ? ಸರಕಾರಕ್ಕೂ ಪ್ರಜೆಗಳಿಗೂ ಬೆಳೆದು ಬರುವ ವಾತ್ಸಲ್ಯವನ್ನು ಕಮ್ಮಿ ಮಾಡಿಸುವ ಈ ಯತ್ನವೇಕೆ?

"ನೊಂದವ"

ನಕಲಿ ತೀರ್ಮಾನ

ನಾಪೋಕ್ಲು ನಾಡಿನ ಎಡ್‌ಹಾಕ್ ಕಮಿಟಿಯವರು ಬಾಣೆ ಕಂದಾಯ ಎಕ್ರೆಗೆ ೪ ಅಣೆ ಕೊಡುವದು ಸೂಕ್ತವೆಂಬುದಾಗಿ ಒಪ್ಪಿರುತ್ತಾರೆಂಬದಾಗಿ ಪತ್ರಿಕೆಯಲ್ಲಿ ಪ್ರಕಟಿಸಿರುವದನ್ನು ನೋಡಿದೆನು. ಆದರೆ ನಡೆದ ಸಂಗತಿ ಹೀಗಿದೆ—ಆ ದಿನ ಮಧ್ಯಾಹ್ನ ಎಡ್ ಹಾಕ್ ಸಮಿತಿಯ ಪ್ರೆಸಿಡೆಂಟರು ಬಂದು ಹಾಜರಿದ್ದ ೩—೪ ಜನರಿಗೆ ಗಡಿಬಿಡಿಯಲ್ಲಿ ಈ ರೀತಿ ಹೇಳಿದರು. "ಕಾಂಗ್ರೆಸ್ ಹೆಡ್ ಆಫೀಸಿನಿಂದ ತಿಳಿಸಿರುತ್ತಾರೆ ಎಲ್ಲಾ ಕಡೆ ಎಡ್‌ಹಾಕ್ ಕಮಿಟಿಯವರು ಮೀಟಿಂಗು ಮಾಡಿ ಠರಾವು ಕಳುಹಿಸಬೇಕು. ಅದಕ್ಕಾಗಿ ನಾವು ಸಹ ಕಳುಹಿಸಬೇಕಾಗಿದೆ. ಅವರು ಬಾಣೆ ಕಂದಾಯದ ವಿಷಯ ಪ್ರಕಟಿಸಿ ಹಂಚಿದ ಹಸ್ತ ಪತ್ರಿಕೆಯನ್ನು ನೋಡಿದಿರಿ. ಇದನ್ನು ನಾವು ಸಹ ಅವರು ಕೇಳಿದಂತೆ ಕಳುಹಿಸಿಬಿಡುವ" ಇಷ್ಟು ಹೇಳಿ ಇವರ ಪ್ರೆಸಿಡೆಂಟರು ಹೊರಟು ಹೋಗಿಯೇ ಬಿಟ್ಟರು. ಯೋಗ್ಯ ಮೀಟಿಂಗು ಎಲ್ಲಿಯೂ ಆಗಿಲ್ಲ. ನಾಡಿನ ಯಾವ ಯಾವ ಕಡೆ ಇವರು ಮೀಟಿಂಗು ಮಾಡಿ ರೈತರಿಗೆ ಮಂದಟ್ಟು ಮಾಡಿ ಕೊಟ್ಟಿರುತ್ತಾರೆಂತ ಇವರು ತಿಳಿಸಲಿ. ಸ್ವತಂತ್ರ ಭಾರತದಲ್ಲಿ ಇನ್ನೂ ಎಡ್‌ಹಾಕ್ ಕಮಿಟಿಯೇ ಇರಬೇಕೆ? ಚುನಾಯಿತರಾಗದ ಈ ಸಮಿತಿಗೆ ಇಡೀ ನಾಪೋಕ್ಲು ನಾಡಿನ ಅಭಿಪ್ರಾಯ ವ್ಯಕ್ತ ಮಾಡಲು ಹಕ್ಕಿದೆಯೇ? ಇನ್ನು ಮುಂದಕ್ಕಾದರೂ ಇವರು ಸರಿಯಾದ ರೀತಿಯಲ್ಲಿ ವರ್ತಿಸುವ ಎಚ್ಚರಿಕೆ ತೆಗೆದುಕೊಳ್ಳಲಿ.

—'ತಿಳಿದವ'

ಸಂಬಂಧಿಸಿದ ಅಧಿಕಾರಿಗಳಿಗೆ

ತಾ. ೧೭—೮—೫೩ರ ಕೊಡಗು ಪತ್ರಿಕೆಯಲ್ಲಿ ಬೀಟಿ ಹೋಲ ಮೇಯಿತೇ? ಎಂದು ಪ್ರಕಟವಾದ ಪತ್ರವು ಸರಕಾರದ ಅವಗಾಹನೆಗೆ ಬಂದಿರಬೇಕಾಗಿ ನಂಬುತ್ತೇನೆ. ಅದರ ನಂತರ ಸಿ. ಐ. ಡಿ. ಅಧಿಕಾರಿಯೊಬ್ಬರು ತನಿಕೆ ಮಾಡುತ್ತ ಮರದ ಬುಡವನ್ನು ನೋಡಿರುತ್ತಾರೆಂದು ಮಾತ್ರ ಗೊತ್ತಾಗಿದೆ. ನಂತರ ಏನೂ ಆಗಿಲ್ಲವೆಂದೂ ತೋರಿಬರುತ್ತಿದೆ. ಇದನ್ನು ಇಷ್ಟರಲ್ಲೇ ಬಿಡುವದರಲ್ಲಿ ನ್ಯಾಯವಿದೆಯೇ? ಏನೇ ಇರಲಿ ನಾನು ಕಂಡ ನಿಜ ಸಂಗತಿಯನ್ನು ನಿಮ್ಮ ಅವಗಾಹನೆಗೆ ಬರೆಯಲಿಚ್ಛಿಸುತ್ತೇನೆ. ಅಧಿಕಾರಿಯಾದರೋ ಆ ನಾಡಿನ ಪಾರುಪತ್ತೆಗಾರರು. ಮರವಾದರೋ ಬೇತು ಗ್ರಾಮದಲ್ಲಿ ಕಾವೇರಿ ಹೊಳೆಕರೆ ಜಾಗ. ಮರ ಸಾಗಿಸಿದ್ದು ಕಳೆದ ಮೇ ತಿಂಗಳಲ್ಲಾಗಿದೆ. ಈ ವಿಷಯವನ್ನು ಸರಕಾರದ ಅವಗಾಹನೆಗೆ ತರಲು ತಡವಾದದ್ದು ಪಾರುಪತ್ತೆಗಾರರು ಕೊಡಗು ಅಸಿಸ್ಟೆಂಟ್ ಕಮಿಷನರ ಹುಕುಂ ನಿರೀಕ್ಷಣೆ ಮೀರಿ ಕೆಲವು ಸಂಧರ್ಭಗಳಲ್ಲಿ ಸ್ವೆಸಾರಿ ಜಾಗದ ಮರವನ್ನು ತಕ್ಕ ಬೆಲೆ ಕಟ್ಟಿ ಮಾರುವ ಅಧಿಕಾರವಿದೆಯೆಂದ ... ತಿಳಿಕೆಗೆ ಬಂದ ಕಾರಣವೇ ಆಗಿರುತ್ತ. ಆದರೆ ಇತ್ತೀಚೆಗೆ ವಿಚಾರಿಸಿದಲ್ಲೂ ಸರಕಾರಕ್ಕೆ ಆ ಮರದ ಬಾಪ್ತು ಯಾವ ವಿಧದಲ್ಲು ಹಣ ಬಂದಿರುವದಿಲ್ಲವೆಂ... ಮದರಿಂದಲೂ ಪ್ರಜಾ ಸರಕಾರವು ಸರಿಯಾದ ರೀತಿಯಿಂದ ನಡೆಯಬೇಕಾದರೆ ಇಂಥಾ ವಿಷಯಗಳನ್ನು ಸರಕಾರದ ತಿಳುವಳಿಕೆಗೆ ಕೊಡುವದು ನನ್ನ ಕರ್ತವ್ಯವೆಂದೂ ಇದನ್ನು ಪ್ರಕಟಿಸಿರುತ್ತೇನೆ. ಸರಕಾರವು ಇದನ್ನು ವಿಚಾರಿಸಿ ಕಾನೂನಿಗೆ ತಪ್ಪಿ ವರ್ತಿಸಿದವರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳಬಹುದಾಗಿ ನಂಬುತ್ತೇನೆ.

ಕಣ್ಣಾರೆ ಕಂಡವ.

ಮೂರ್ನಾಡು ಕುಂಬಳದಾಳು ರಸ್ತೆ.

ಮೂರ್ನಾಡಿನಿಂದ ಕುಂಬಳದಾಳಿಗೆ ಹೋಗುವ ರಸ್ತೆಯನ್ನು ಈ ಮೊದಲು ಇಷ್ಟ ಇಂಜಿನಿಯರ್ ಮನ್ನಾಡಿಯರವರು ಹಲವಾರು ಸಲ ನೋಡಿ ಪರಿಶೀಲಿಸಿ ಮಾಡಿಸಿರುವದಾಗಿದೆ. ಸದರಿ ಹಳೇ ರಸ್ತೆಯನ್ನು ಬಿಟ್ಟು ಈಗ ಹೊಸ ರಸ್ತೆ ಮಾಡಲು ಸರ್ವೆ ಮಾಡಿರುತ್ತಾರಲ್ಲದೆ ಪ್ಲೇನು ಕಡಿನು ತಯ್ಯಾರಾಗಿದೆ. ಈಗ ಮಾಡಿರುವ ಸರ್ವೆಯಲ್ಲಿ ಮೂರ್ನಾಡಿನಿಂದ ೧½ ಮೈಲು ದೂರದ ಹಳೆ ರಸ್ತೆಯು ಬಹಳ ಚೆನ್ನಾಗಿರುತ್ತದೆ. ಸದರಿ ರಸ್ತೆಗೆ ಸ್ವಲ್ಪ ರಿಪೇರಿ ಬೇಕಾಗುತ್ತದೆ ... ಸಾಧಾರಣ ಅಂದಾಜು ಒಂದು ... ರೂಪಾಯಿ ವಳಗೆ ಸಾದಾಗಬಹುದು ಸದರಿ ೧½ ಮೈಲಿಗೆ ಈಗ ಹೊಸ ನಿರ್ಮಾಣ ಆದ ರಸ್ತೆ ಆಗಬೇಕಾದರೆ ಸದ್ಯಕ್ಕೆ ೪ ಸಾವಿರ ರೂಪಾಯಿ ಬೇಕಾಗುವದು. ಈ ಹೊಸ ರಸ್ತೆ ಮಾಡುವಾಗ ಅನೇಕ ಜನ ... ಗಗಳ ಮಧ್ಯೆ ರಸ್ತೆ ಹಾದುದರಿಂದ ಜನರ ತಕರಾರಿದ್ದು ಹೇಗೂ ಮಾಡಿಸಿದ್ದಾಗಿದೆ. ಅಲ್ಲಿಂದ ಜಾಗ ವಿಂಗಡವಾದ ಬಳಿಕ ಜನರು ಕಾಫಿತೋಟ ವಗೈರೆ ಮಾಡಿರುವರು. ಈಗ ಹೊಸ ರಸ್ತೆ ಮಾಡಿ ಅವರ ತೋಟಗಳಿಗಾಗಿ ಜನರನ್ನು ತೊಂದರೆಪಡಿಸುವದು ಬೇಡ. ಈ ಸಂಗತಿಗಳನ್ನು ಗೃಹಮಂತ್ರಿಗಳಲ್ಲೂ, ಸ್ಥಳೀಯ ಎಂ. ಎಲ್. ಎ. ಯವರಲ್ಲೂ ಹೇಳಲಾಗಿದೆ. ಗೃಹ ಮಂತ್ರಿಗಳು ಸ್ಥಳೀಕ ಜನರಿಗೆ ತಿಳಿಸಿ ಬರುವದಾಗಿ ಹೇಳಿದ್ದರು. ಆದರೆ ಪುನಃ ಸರ್ವೆ ಕೆಲಸ ಪ್ರಾರಂಭವಾಗಿರುವದು ಕಂಡು ಬಂದಿದೆ. ನಮ್ಮದಾಗಿರುವ ಸರಕಾರವು ಜನರ ತೊಂದರೆಯನ್ನು ತಪ್ಪಿಸಿ ಹೊಸ ರಸ್ತೆಯ ನಿರ್ಮಾಣವನ್ನು ಬಿಟ್ಟು ಹಳೆ ರಸ್ತೆಯನ್ನು ದುರಸ್ತಿಗೊಳಿಸಿದರೆ ಉತ್ತಮ.

ಸದರಿ ರಸ್ತೆಯಲ್ಲಿ ತಿರುಗುವವ.

ಸರಕಾರಕ್ಕೆ ವಂದನೆ.

ತಾ. ೨೫—೯—೫೩ ರ ಪತ್ರಿಕೆಯಲ್ಲಿ ಬಿಸಗೂರು ಗ್ರಾಮದಲ್ಲಿ ಲೈಸೆನ್ಸ್ ಇಲ್ಲದೆ ಸೇಂದಿ ಕಟ್ಟಿ ಮಾರಾಟ ಮಾಡುತ್ತಿರುವದರ ವಿಚಾರ ಒಂದು ಪತ್ರ ಪ್ರಕಟವಾಗಿತ್ತು. ಇದನ್ನು ಗಮನಕ್ಕೆ ತೆಗೆದು ಕೊಂಡು ಸರಕಾರಿ ಅಧಿಕಾರಿಗಳು ತಾ. ೨೮ರಲ್ಲಿ ಗ್ರಾಮಕ್ಕೆ ಹೋಗಿ ತನಿಕೆ ನಡೆಸಿದರೆಂದೂ, ಕೇಸು ಹಿಡಿದರೆಂದೂ ಆದರೆ ಇದಕ್ಕೆ ಮೊದಲೇ ಗ್ರಾಮದಲ್ಲಿ ನೆಲೆ ಊರಿದ್ದ ಬಿಲ್ಲವನು ಗ್ರಾಮ ಬಿಟ್ಟಿದ್ದನೆಂದೂ ತಿಳಿಯಬಂತು. ಸರಕಾರದ ಅಧಿಕಾರಿಗಳು ಇದೇ ರೀತಿ ಆಗಾಗ್ಗೆ ಗ್ರಾಮಕ್ಕೆ ಸಂದರ್ಶನೆಯಿತ್ತು ಆ ಗ್ರಾಮದಲ್ಲಿ ಸೇಂದಿ ಕಟ್ಟುವವರು ಇಲ್ಲದಂತೆಯೂ ಅನಧಿಕೃತ ಸೇಂದಿಯ ಹಾವಳಿಯನ್ನು ಸಂಪೂರ್ಣ ನಿಲ್ಲಿಸುವರೆಂದೂ ಪ್ರಾರ್ಥಿಸುವೆನು.

ಗ್ರಾಮಸ್ಥ.

ದಕ್ಷಿಣ ಕೊಡಗಿನಲ್ಲಿ ಸಾಮೂಹಿಕ ವಿಕಾಸಯೋಜನೆ ಕೆಲಸ.

ಈಗಾಗಲೇ ಮಂತ್ರಿಗಳು ಮತ್ತು ಡೆವಲಪ್‌ಮೆಂಟ್ ಕಮಿಷನರು ದಕ್ಷಿಣ ಕೊಡಗಿನ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮೀಟಿಂಗ್ ಮಾಡಿ ಸಾಮೂಹಿಕ ವಿಕಾಸಯೋಜನೆಯ ಉದ್ದೇಶವನ್ನೂ, ಜನರು ಸಾಮೂಹಿಕ ಕೆಲಸಕ್ಕೆ ಹೇಗೆ ಸಹಕರಿಸಬೇಕೆಂಬುದನ್ನೂ ವಿವರಿಸಿದ್ದಾರೆ. ಜನರು ಎಚ್ಚತ್ತು ಅಧಿಕಾರಿಗಳೊಡನೆ ಸಹಕರಿಸಿ ಗ್ರಾಮದ ಮತ್ತು ನಾಡಿನ ಎಲ್ಲಾ ಸಾಮಾಜಿಕ ಮತ್ತು ಆರ್ಥಿಕ ಕುಂದುಕೊರತೆಗಳನ್ನು ಬೇಗನೆ ವಾಗಿಯೂ ಹೋಗಲಾಡಿಸಲಿಕ್ಕೆ ಇದೊಂದು ಉತ್ತಮ ಮಾರ್ಗ.

ಉತ್ತರ ಕೊಡಗಿನಲ್ಲಿ ಕೆಲಸವು ಮಾದರಿಯಾಗಿ ನಡೆದಿದೆಯೆಂದೂ ಜನರ ಸಹಕಾರವು ಪೂರ್ತಿಯಾಗಿತ್ತೆಂದೂ ತಿಳಿಯುತ್ತೇವೆ. ಅವರ ಕೆಲಸವು ಇಂಡಿಯಾದ ಎಲ್ಲಾ ಸಾಮೂಹಿಕ ವಿಕಾಸಯೋಜನೆಯ ಕ್ಷೇತ್ರಕ್ಕಿಂತ ಉತ್ತಮವಾಗಿ ನಡೆದಿದೆಯೆಂದು ಕೇಳುವುದು ಶ್ಲಾಘನೀಯವಾಗಿದೆ. ಆದರೆ ಉತ್ತರ ಕೊಡಗಿನ ಗ್ರಾಮಗಳಿಗೂ ದಕ್ಷಿಣ ಕೊಡಗಿನ ಗ್ರಾಮಗಳಿಗೂ ಬಹಳ ವ್ಯತ್ಯಾಸಗಳಿವೆ. ಉತ್ತರ ಕೊಡಗಿನ ಶನಿವಾರಸಂತೆ, ಕೊಡ್ಲಿಪೇಟೆ, ಫ್ರೇಜರ್‌ಪೇಟೆ ಹೋಬಳಿಗಳ ಗ್ರಾಮಗಳು ಸ್ವಾಭಾವಿಕವಾಗಿ ಪಟ್ಟಣದ ರೀತಿ ಒಂದೇ ಗುಂಪಿನಲ್ಲಿ ನುಂಪ್ಪೆಯಾಗಿವೆ. ದಕ್ಷಿಣ ಕೊಡಗಿನಲ್ಲಿ ಒಂದು ಮನೆಯಿಂದ ಇನ್ನೊಂದು ಮನೆಗೆ ಎರಡು, ಯಾ, ಮೂರು ಫರ್ಲಾಂಗುಗಳ ದೂರವಿದೆ. ಉತ್ತರ ಕೊಡಗಿನಲ್ಲಿ ಸಮುದಾಯಕ ಬಾವಿ, ಕೆರೆ ವಗೈರೆಗಳು ಇವೆ. ದಕ್ಷಿಣ ಕೊಡಗಿನಲ್ಲಿ ಪ್ರತಿ ಮನೆಗೂ ಬೇರೆ ಬಾವಿ, ಕೆರೆಗಳಿವೆ. ಉತ್ತರ ಕೊಡಗಿನಲ್ಲಿ ಒಂದು ರಸ್ತೆ ಎಲ್ಲಾ ಮನೆಗಳಿಗೂ ಪ್ರಯೋಜನವಾಗುತ್ತೆ. ದ. ಕೊಡಗಿನಲ್ಲಿ ಪ್ರತಿ ಮನೆಗೂ ಬೇರೆ ಬೇರೆ ...

ಕಾಗಿದೆ. ಉತ್ತರ ಕೊಡಗಿನಲ್ಲಿ ದನಗಳನ್ನು ಮನೆಯೊಳಗೇನೇ ಕೂಡಿಸುವುದರಿಂದ ನೈರ್ಮಲ್ಯ ಕಡಿಮೆ ಆದರೆ ದ. ಕೊಡಗಿನಲ್ಲಿ ಕೊಟ್ಟಿಗೆಗಳು ಮನೆಯಿಂದ ಪ್ರತ್ಯೇಕಿಸಿ ದೂರದಲ್ಲಿವೆ. ಉತ್ತರ ಕೊಡಗಿನಲ್ಲಿ ಕೆಲವು ನಿಮಿಷಗಳಲ್ಲಿ ಮುಖ್ಯ ವಿಷಯಗಳನ್ನು ಇಡೀ ಗ್ರಾಮಕ್ಕೆ ಪ್ರಚಾರ ಮಾಡುವುದು ಆದರೆ ದಕ್ಷಿಣ ಕೊಡಗಿನಲ್ಲಿ ಒಂದು ಯಾ ಅರ್ಧ ದಿನವಾದರೂ ಬೇಕು. ಸಹಕಾರ ಸಂಘ ಮತ್ತು ಶಾಲೆಗಳಾದರೂ ದ. ಕೊಡಗಿನಲ್ಲಿ ಕನಿಷ್ಠ ಪಕ್ಷ ಎರಡು ಗ್ರಾಮಕ್ಕೊಂದು ಇದೆ. ಉತ್ತರ ಕೊಡಗಿನಲ್ಲಿ ಇದಿಲ್ಲ ಉತ್ತರ ಕೊಡಗಿನ ಗ್ರಾಮಸ್ತರು ಹೆಚ್ಚಾಗಿ ಒಂದು ಗುಂಪಿನಲ್ಲಿ ವಾಸವಿರುವುದರಿಂದ ಸಾಮೂಹಿಕ ವಿಕಾಸಯೋಜನೆಯ ಕೆಲಸಕ್ಕೆ ಅಲ್ಲಿ ತುಂಬಾ ಅನುಕೂಲತೆ ಇದೆ

ದಕ್ಷಿಣ ಕೊಡಗಿನವರು ಯಾವ ರೀತಿ ಕೆಲಸ ಮಾಡಬೇಕೆಂಬುದು ಮತ್ತು ಅವರ ಅವಶ್ಯಕತೆ ಏನೆಂಬುದನ್ನು ಬರೆಯುವುದೇ ಈ ಲೇಖನದ ಉದ್ದೇಶ. ದಕ್ಷಿಣ ಕೊಡಗಿನವರ ಮುಖ್ಯ ಅವಶ್ಯಕತೆ (೧) ರಸ್ತೆ ಎಲ್ಲಾ ಗ್ರಾಮದ ರಸ್ತೆಗಳೂ ದುರಸ್ತಾಗಿ ಸರಕಾರದ ಮುಖ್ಯ ರಸ್ತೆಗೆ ಕೂಡಬೇಕು. ಪ್ರತಿ ಮನೆಗೂ ರಸ್ತೆಗಳಾಗಬೇಕು ತೋಡು, ನಾಲೆ, ಮತ್ತು ಚಿಕ್ಕ ಹೊಳೆಗೆ ಸೇತುವೆಗಳಾಗಬೇಕು. ಪೂರ್ವದಿಂದಲೇ ನಾಡಿನಿಂದ ನಾಡಿಗೆ ಇದ್ದ ರಸ್ತೆಗಳು ವಾಹನ ಸಂಚಾರಕ್ಕೆ ಯೋಗ್ಯವಾಗಿ ಮಾಡಲ್ಪಡಬೇಕು. ಪ್ರತಿ ಗ್ರಾಮಕ್ಕೂ, ಮನೆಗೂ ಗಾಡಿ ರಸ್ತೆಗಳಿಲ್ಲದೆ ಹೋದರೆ ಗ್ರಾಮಸ್ತರಿಗೆ ಬದುಕುವುದೇ ಕಷ್ಟ. ಆದ್ದರಿಂದ ಗ್ರಾಮಸ್ತರು ಈ ವಿಷಯದಲ್ಲಿ ಟೊಂಕಕಟ್ಟಿ ಬಹಳ ಕೆಲಸ ಮಾಡಲು ಸಹಕರಿಸಬೇಕಾದ್ದು ಅತ್ಯವಶ್ಯ (೨) ನೀರಾವರಿ ಕೆಲಸದಲ್ಲಿ ಉದ್ಯುಕ್ತರಾಗಿ ಸಮುದಾಯಕ್ಕೆ ಪ್ರಯೋಜನವಾಗುವ ಕೆರೆ ಕಟ್ಟಿ ನಾಲೆಗಳನ್ನು ದುರುಸ್ತುಪಡಿಸಿ ನೀರಿಲ್ಲದ ಗದ್ದೆಗೆ ನೀರು ಸರಬರಾಯಿ ಮಾಡಿ ಹೆಚ್ಚು ಭತ್ತವನ್ನು ಬೆಳೆಸುವುದು (೩) ಹರಿಜನೋದ್ಧಾರದ ಕೆಲಸ.

(೪) ಪ್ರತಿ ಗ್ರಾಮದಲ್ಲಿಒಂದೊಂದು ಶಾಲೆಯಾಗಬೇಕಾದ್ದು ಅತ್ಯಾವಶ್ಯ ತತ್ಕಾಲಕ್ಕೆ ಶಾಲೆಗಳಿಲ್ಲದ ಗ್ರಾಮ (ಪ್ರಾಥಮಿಕ) ಚಿಕ್ಕ ಮಕ್ಕಳ ಎರಡು ತರಗತಿಯ ಶಾಲೆಯೊಂದನ್ನು ಒಂದು ಉಪಾಧ್ಯಾಯರಿಂದ ತೆರೆಯುವುದು ಒಳ್ಳೇದು. ಶಾಲೆಯ ಅಭಿವೃದ್ಧಿಯನ್ನು ಅನುಸರಿಸಿ ಹಿಂದಳಿಂದ ಒಡಾವಣಮಾಡಿಕೊಳ್ಳಬಹುದು. (೫) ಪ್ರತಿಯೊಂದು ಗ್ರಾಮದಲ್ಲೂ ಒಂದೊಂದು ಸಹಕಾರ ಸಂಘವು ಅವಶ್ಯ. ಸಂಘವಿಲ್ಲದ ಗ್ರಾಮಗಳು ಸಂಘವನ್ನು ಮಾಡಿಕೊಳ್ಳಬೇಕು. ನಮ್ಮ ಎಲ್ಲಾ ಸಾಮೂಹಿಕ ಆರ್ಥಿಕ ಮತ್ತು ಮಾನಸಿಕ ಬೆಳವಣಿಗೆಯು ಸಂಘಶಕ್ತಿಯಿಂದಲೇ ಹೆಚ್ಚಾಗಿ ಆಗಬೇಕಾಗಿದೆ. ಗ್ರಾಮಕೊಂದು ಸಂಘವನ್ನು ಮಾಡಿ, ಗ್ರಾಮದ ಪ್ರಾಯಕ್ಕೆ ಬಂದ ಎಲ್ಲಾ ಹೆಂಗಸರು ಮತ್ತು ಗಂಡಸರನ್ನು ಸಂಘಕ್ಕೆ ಸೇರುವಂತೆ ಮಾಡಬೇಕಾದ್ದು ಅತ್ಯಾವಶ್ಯ. ಯಾವಾಗ ಎಲ್ಲಾ ಗ್ರಾಮಸ್ತರು ಜಾತಿ ಮತಭೇದವಿಲ್ಲದೆ ಸಂಘಕ್ಕೆ ಸೇರುವರೋ ಆವಾಗ ತನ್ನ ತನ್ನ ಪ್ರಾದಿತ ಆಗ ಗ್ರಾಮದಲ್ಲಿ ಯಾವ ತರದ ಒಳ್ಳೆಯ ಅಭಿಪ್ರಾಯಗಳನ್ನು ಮುಂದಕ್ಕೆ ತರಲು ಅನುಕೂಲವಾಗುತ್ತೆ. ಮತ್ತು ಒಂದು ಹಿಡಿತಕ್ಕೆ ಎಲ್ಲರೂ ಒಳಗಾಗುತ್ತಾರ. ಹೀಗೆ ಮಾಡಬೇಕಾದರೆ, ಗ್ರಾಮದ ಎಲ್ಲಾ ಅನುಕೂಲಸ್ತರು ಮೊದಲು ಮುಂದಕ್ಕೆ ಬಂದು ತಮ್ಮ ಹಿಂದುಳಿದ ಸಹೋದರರಿಗೆ ಮಾರ್ಗದರ್ಶಕರಾಗಬೇಕು. ಈ ಸಾಮೂಹಿಕ ವಿಕಾಸ ಯೋಜನೆಯಲ್ಲಿ ಬೇಕಾದದು ಶರೀರಶ್ರಮ ಮತ್ತು ಮುತುವರ್ಜಿಯಿಂದ ಸಹಕರಿಸಿ ಸ್ವಾರ್ಥತತ್ವಗಳನ್ನು ಮರೆತು ಪ್ರೀತಿಯಿಂದ ಕಲೆತು ಕೆಲಸ ಮಾಡುವಂತಾದ್ದು. ದಕ್ಷಿಣ ಕೊಡಗಿನವರು ಇಡೀ ಕೊಡಗಿಗೆ ಅಲ್ಲ, ಇಡೀ ಹಿಂದುಸ್ಥಾನಕ್ಕೆ ಮಾದರಿಯಾಗಿ ಕೆಲಸ ಮಾಡಿ ತಮ್ಮ ಮತ್ತು ತಮ್ಮ ಗ್ರಾಮಗಳ ಕಲ್ಯಾಣವನ್ನು ಬಯಸಬೇಕಿದೆ.

ಕೆ. ಪಿ.. ಚಿಣಪ್ಪ

ವಾರದ ಭವಿಷ್ಯ

ತಾ. ೯—೧೦—೫೩ರಿಂದ ೧೬—೧೦—೫೩ ರ ವರೆಗೆ

ಜ್ಯೋತಿಷ್ಯ—ಶ್ರೀ ಬಿ. ಜಿ. ಶ್ರೀನಿವಾಸ ಶಾಸ್ತ್ರಿಯವರು

ಮೇಷ

ಈ ವಾರ ನಿಮ್ಮ ಆರೋಗ್ಯವು ಚೆನ್ನಾಗಿರುವ್ಪದು. ವ್ಯವಹಾರದಲ್ಲಿ ಲಾಭ, ಆರ್ಥಿಕ ವಿಚಾರದಲ್ಲಿ ಮನಸಂತೋಷ ಕೋರ್ಟು ವ್ಯವಹಾರದಲ್ಲಿ ಅನುಕೂಲ. ಮಿತ್ರ ಜನರಿಂದ ಸುಖ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಮನೋಇಷ್ಟಿತ ಕಾರ್ಯವು ಈಡೇರುವದು. ತಾ. ೧೦ ಮತ್ತು ೧೧ ಸುಖಭೋಜನ ಮತ್ತು ಸಂಚಾರ.

ವೃಷಭ

ಈ ವಾರ ನೀವು ಆರ್ಥಿಕ ವಿಚಾರದಲ್ಲಿ ತುಂಬಾ ಕಷ್ಟಕ್ಕೊಳಗಾಗುವಿರಿ. ಆದರೂ ಮಿತ್ರ ಜನರ ಸಹಾಯದಿಂದ ಮನಶಾಂತಿಯನ್ನು ಹೊಂದುವಿರಿ ಆರೋಗ್ಯ ಮಟ್ಟವು ತೃಪ್ತಿಕರವಾಗಿರುವದು ಆದರ ಕುಟುಂಬದಲ್ಲಿ ಅನಾರೋಗ್ಯ ಕಲಹದಿಂದಾಗಿ ಮನಶ್ಚಾಂಚಲ್ಯ. ವ್ಯಾಪಾರೋದ್ಯಮಿಗಳಿಗೆ ಈ ವಾರವು ಉತ್ತಮವಾಗಿಲ್ಲ. ತಾ. ೧೨ ಮತ್ತು ೧೩ ಸಂಚಾರ, ಮಿತ್ರ ಜನರ ಭೇಟಿ

ಮಿಥುನ

ಆರೋಗ್ಯ ಮತ್ತು ಆರ್ಥಿಕ ವಿಚಾರದಲ್ಲಿ ಈ ವಾರವು ನಿಮಗೆ ಉತ್ತಮವಾಗಿರುವದು. ಆದರೆ ಮಿತ್ರ ಜನರಿಂದಾಗಿ ನಷ್ಟಕ್ಕೊಳಗಾಗುವಿರಿ ಮಕ್ಕಳ ದೆಸೆಯಿಂದ ಕಿಂಚಿತ್ ಧನ ವ್ಯಯವಾಗುವದು ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಈ ವಾರವು ಉತ್ತಮವಾಗಿಲ್ಲ. ತಾ. ೧೪ ಮತ್ತು ೧೫ ಮನೋವ್ಯಥೆ.

ಕರ್ಕಾಟಕ

ಈ ವಾರದಲ್ಲಿ ಆರೋಗ್ಯ ದೃಷ್ಟಿಯಲ್ಲಿ ನೀವು ಬಹು ಎಚ್ಚರದಿಂದಿರಬೇಕಾಗುವದು ಸಾಂಪತ್ತಿಕ ಸ್ಥಿತಿಯಲ್ಲಿ ಉತ್ತಮವಿದ್ದರೂ ಕುಟುಂಬದ ಅನಾರೋಗ್ಯ ನಿಮಿತ್ತ ಖರ್ಚಾಗುವದು. ನಿಮ್ಮ ವ್ಯವಹಾರ ವಿಷಯಗಳು ಚಿಂತಾಜನಕವಾಗುವವು ಮಿತ್ರಜನರ ಸಹಾನುಭೂತಿಯಿಂದ ಸ್ವಲ್ಪ ಮಟ್ಟಿಗೆ ಉತ್ತಮವಿದೆ. ವ್ಯಾಪಾರೋದ್ಯಮಿಗಳು ತುಂಬಾ ತೊಂದರೆಗೊಳಗಾದರೂ ಆರ್ಥಿಕ ಲಾಭವು ಕಂಡುಬರಬಹುದು ತಾ. ೧೦ ಮತ್ತು ೧೧ ಮಿತ್ರರ ಸತ್ಕಾರಗಮನ

ಸಿಂಹ

ಈ ವಾರ ನೀವು ನೂತನ ಕಾರ್ಯಲಾಭದಿಂದ ಶಾಂತಿಯನ್ನು ಹೊಂದುವಿರಿ ಆರೋಗ್ಯ ಮಟ್ಟವು ಚೆನ್ನಾಗಿರುವದು ಸಾಂಪತ್ತಿಕ ವಿಚಾರದಲ್ಲಿ ತಕ್ಕ ಮಟ್ಟಿಗೆ ತೃಪ್ತಿ ಹೊಂದುವಿರಿ. ಸಮಾಜದಲ್ಲಿ ಸನ್ಮಾನಗಳು ಲಭಿಸಲಿವೆ. ಕೋರ್ಟು ವ್ಯವಹಾರಗಳು ಅನುಕೂಲವಾಗಿ ಪರಿಣಮಿಸುವವು ವಿದ್ಯಾರ್ಥಿ ವೃಂದಕ್ಕೆ ಈ ವಾರವು ಪ್ರಗತಿಪರವಾಗಿರುವದು

ಕನ್ಯಾ

ಈ ವಾರ ನೀವು ಕ್ರೋಧವನ್ನುದೂರೀಕರಿಸಿದರೆ ಬಹಳ ಉತ್ತಮವಿರುವದು. ಮಿತ್ರರು ನಿಮ್ಮನ್ನು ವಂಚಿಸುವರು. ವ್ಯಾಪಾರ ವ್ಯವಹಾರಗಳಿಂದ ನಷ್ಟ ಸಂಭವಿಸುವದು. ಕುಟುಂಬದ ಅನಾರೋಗ್ಯ ನಿಮಿತ್ತ ಮನಸ್ಸಿಗೆ ಶಾಂತಿ ಎಂಬುದು ಕನಸಿನ ಗಂಟಾಗಿರುವದು ತಾ. ೧೨ ಮತ್ತು ೧೩ ವ್ಯಥೆ, ಮಿತ್ರ ಜನರಿಂದಾಗಿ ನಷ್ಟ.

ತುಲಾ

ಈ ವಾರ ನಿಮ್ಮ ದೇಹಾರೋಗ್ಯ ಚೆನ್ನಾಗಿದ್ದರೂ ವ್ಯವಹಾರದಲ್ಲಿ ತೊಡಕುಗಳು ಲಭಿಸುವವು. ಒಂದೆಡೆಯಲ್ಲಿ ಧನಾಗಮನವಿದ್ದರೂ ಮತ್ತೊಂಡೆಯಲ್ಲಿ ಖರ್ಚಿನ ದಾರಿಯೂ ಇರುವದು. ಕೋರ್ಟು ವ್ಯವಹಾರದಲ್ಲಿ ಧನ ನಷ್ಟವಾಗುವದು. ವ್ಯಾಪಾರೋದ್ಯಮಿಗಳಿಗೆ ನಷ್ಟ ಚಿಹ್ನೆಗಳು ಕಂಡುಬರುವವು. ತಾ. ೧೩ ಮತ್ತು ೧೪ ಸಂಚಾರ, ಭೀತಿ.

ವೃಶ್ಚಿಕ

ಈ ವಾರ ನಿಮ್ಮ ಆರೋಗ್ಯ ನೆಲೆಯು ಚೆನ್ನಾಗಿರಲಾರದು. ಮಿತ್ರ, ಬಂಧು ಪರಿವಾರದವರ ವಿಯೋಗ ವಾರ್ತೆಯಿಂದ ಸಂಚಾರ ಕೈಕೊಳ್ಳಬೇಕಾಗುವದ. ಆರ್ಥಿಕ ವಿಚಾರದಲ್ಲಿ ಮನೋವ್ಯಾಕುಲವನ್ನು ಹೊಂದುವಿರಿ. ವಿದ್ಯಾರ್ಥಿ ವಿದ್ಯಾರ್ಥಿನಿಯರು ಆಲಸ್ಯಭಾವವುಳ್ಳವರಾಗುವರು. ತಾ. ೧೩ ಮತ್ತು ೧೪ ಪ್ರಯಾಣ ಮತ್ತು ವ್ಯಥೆ.

ಧನು

ಈ ವಾರವು ನಿಮಗೆ ಬಹಳ ಉತ್ತಮವಿರುವದರಿಂದ ಮಾನಸಿಕ ಚಿಂತೆಯು ದೂರವಾಗಿ ಸಮಾಜದಲ್ಲಿ ಲಾಭ ಸನ್ಮಾನಗಳು ಲಭಿಸಲಿವೆ ಆರೋಗ್ಯವು ಸಾಕಷ್ಟಿರುವದು. ಅಪರಿಚಿತರೂ ಕೂಡ ನಿಮಗೆ ಸಹಾಯಕರಾಗುವರು. ವಿದ್ಯಾರ್ಥಿ ವೃಂದಕ್ಕೆ ಈ ವಾರವು ಅಭೀಷ್ಟಪ್ರದವಾಗಿರುವದು.

ಮಕರ

ನೀವು ಕೈಕೊಂಡ ಕಾರ್ಯವು ಈ ವಾರ ಫಲಕಾರಿಯಾಗುವ ಬದಲು ಅದರಿಂದ ನಷ್ಟವನ್ನನುಭವಿಸುವಿರಿ ಆರೋಗ್ಯವು ಸಾಕಷ್ಟಿರಲಾರದು. ಕುಟುಂಬದಲ್ಲಿ ಅನಾರೋಗ್ಯವು ತಲೆದೋರಬಹುದು. ಈ ವಾರ ಧನಾಗಮನವಿದ್ದರೂ ಸಾಲಕೊಟ್ಟವರಿಗೆ ಕೊಡಲು ಸರಿಯಾಗುವದು. ವಿದ್ಯಾರ್ಥಿ ವಿದ್ಯಾರ್ಥಿನಿಯರು ಉತ್ಸಾಹದಿಂದಿರುವರು. ತಾ. ೧೦ ಮತ್ತು ಹನ್ನೊಂದು ಸಂಚಾರ, ದುಃಖವಾರ್ತೆ.

ಕುಂಭ

ಆರೋಗ್ಯ ಮತ್ತು ಆರ್ಥಿಕ ವಿಚಾರದಲ್ಲಿ ಈ ವಾರವು ನಿಮಗೆ ಉತ್ತಮವಿರುವದು ಮನಸ್ಥಿತಿಯು ನಿರುತ್ಸಾಹಿಯಾಗಿರುವದು. ಕೋರ್ಟು ವ್ಯವಹಾರಗಳು ಪ್ರತಿಕೂಲವಾಗುವದು ಮಿತ್ರ ಜನರ ವಂಚನೆಯಿಂದ ನಷ್ಟ ಪಡಬೇಕಾಗುವದು. ತಾ. ೧೨ ಮತ್ತು ೧೩ ನಷ್ಟ.

ಮೀನ

ಆರೋಗ್ಯ ವಿಚಾರದಲ್ಲಿ ಈ ವಾರವು ನಿಮಗುತ್ತಮವಿರುವದು. ಮನಸ್ಸು, ಬಂಧು ಜನರ ಅನಾರೋಗ್ಯ ನಿಮಿತ್ತ ಅಶಾಂತಿಯ ಬೀಡಾಗುವದು. ಆರ್ಥಿಕ ಸ್ಥಿತಿಯು ತುಸು ಉತ್ತಮವಿರುವದರಿಂದ ಹೇಗಾದರೂ ಚೇತರಿಸುವಿರಿ. ಅಪರಿಚಿತರು ನಿಮ್ಮ ಮಿತ್ರರಾಗಲು ಬಯಸುವರು. ವಿದ್ಯಾರ್ಥಿ ವೃಂದಕ್ಕೆ ಈ ವಾರವು ತೊಂದರೆಯದಾಗಿರುವದು. ತಾ. ೧೦ ಮತ್ತು ೧೧ ಲಾಭ, ಸುಖ

ಮುಫತ್ತು! ಮುಫತ್ತು!!

ಸಾವಿರ ಕಾಶ್ಮೀರ ಶಾಲುಗಳನ್ನು ಮುಫತ್ತಾಗಿ ನಾವು ಹಂಚುತ್ತಿರುವೆವು. ನಿರಾಶರಾಗದಿರಲು ಇಂದೇ ಬರೆಯಿರಿ.

Diamond Commercial
Chambers (K. M)
Bhandari Street
Bombay 3.

ಶನಿವಾರಸಂತೆಗೆ
'ಕೊಡಗು' ಏಜೆಂಟರು,
ಶ್ರೀ ಎಸ್. ಎನ್. ಸಿದ್ದಪ್ಪನವರು



ಕೃತಘ್ನಳಾದ ಹೆಂಡತಿಯ ಕಥೆ

ಒಂದು ನಗರದಲ್ಲಿ ಒಬ್ಬ ಬ್ರಾಹ್ಮಣನಿದ್ದನು. ಆತನು ತನ್ನ ಪತ್ನಿಯನ್ನು ಜೀವಕ್ಕಿಂಥಲೂ ಹೆಚ್ಚಾಗಿ ಪ್ರೀತಿಸುತಿದ್ದನು. ಆದರೆ ಆಕೆಯು ಯಾವಾಗಲೂ ಜಗಳಗಂಟಿಯಾಗಿ ಆತನ ಕುಟುಂಬದವರೊಡನೆ ವರ್ತಿಸುತ್ತಿದ್ದಳು. ಆತನು ತನ ಪತ್ನಿಯನ್ನು ಹೆಚ್ಚಾಗಿ ಪ್ರೀತಿಸುತ್ತಿದ್ದುದರಿಂದಲೂ, ಆಕೆಯ ಜಗಳಗಂಟಿತನದ ಕಾರಣ ಆಕೆಯೊಡನೆ ಒಂದೇ ಕುಟುಂಬದಲ್ಲಿ ಜೀವಿಸುವದು ಕಷ್ಟವಾದುದರಿಂದಲೂ ತನ್ನ ಮನೆಯನ್ನು ಬಿಟ್ಟು ಆಕೆಯೊಡನೆ ದೂರದ ಬೇರೆ ದೇಶಕ್ಕೆ ಹೊರಟನು. ಅವರು ದಾರಿಯಲ್ಲಿ ದೊಡ್ಡ ಕಾಡೊಂದನ್ನು ದಾಟಿ ಹೋಗಬೇಕಾಗಿತ್ತು. ದಾರಿಯಲ್ಲಿ ಹೆಂಡತಿಯು ಗಂಡನನ್ನು ಕುರಿತು, 'ನನಗೆ ತುಂಬಾ ಬಾಯಾರಿಕೆಯಾಗಿದೆ. ಎಲ್ಲಾದರೂ ಸ್ವಲ್ಪ ನೀರು ದೊರೆಯುವದೇ ನೋಡಿ!" ಎಂದಳು. ಆತನು ಮರದಡಿಯಲ್ಲಿ ಆಕೆಯನ್ನು ಕುಳ್ಳಿರಿಸಿ ತಾನು ನೀರು ಹುಡುಕಲು ಹೋದನು. ಸ್ವಲ್ಪ ಸಮಯದ ಮೇಲೆ ಬ್ರಾಹ್ಮಣನು ಹಿಂದಿರುಗಿದಾಗ ಹೆಂಡತಿಯು ಮರದಡಿಯಲ್ಲಿ ಸತ್ತು ಬಿದ್ದಿದ್ದಳು!

ಆತನು ತನ್ನ ಪತ್ನಿಯನ್ನು ತನ್ನ ಜೀವಕ್ಕಿಂಥಲೂ ಹೆಚ್ಚಾಗಿ ಪ್ರೀತಿಸುತಿದ್ದುದರಿಂದ ದಿಕ್ಕುತೋಚದೆ ಅಳತೊಡಗಿದನು. ಆಗ ಆತನಿಗೆ ಒಂದು ಆಕಾಶವಾಣಿಯು ಈ ರೀತಿ ಕೇಳಿಸಿತು 'ಓ ಬ್ರಾಹ್ಮಣಾ ನೀನು ನಿನ್ನ ಜೀವದ ಅರ್ಧವನ್ನು ನಿನ್ನ ಹೆಂಡತಿಗಾಗಿ ದಾನ ಮಾಡಲು ತಯಾರಾದರೆ ನಿನ್ನ ಹೆಂಡತಿಯು ಜೀವಿಸುವಳು.'

ಇವನ್ನು ಕೇಳಿ ಬ್ರಾಹ್ಮಣನು ಪರಿಶುದ್ಧ ಮನಸ್ಸಿನಿಂದ ಪೂಜಾವಿಧಿಯನ್ನು ಮುಗಿಸಿ ತನ್ನ ಅರ್ಧ ಜೀವವನ್ನು ಕೊಡಲು ತಯಾರಾಗಿ 'ನಾನು ನನ್ನ ಜೀವಕೊಡುವೆನು' ಎಂದು ಮೂರು ಬಾರಿ ಉಚ್ಚರಿಸಲು ಆತನ ಪವಿತ್ರ ಹೃದಯದ ಫಲದಿಂದ ಸತ್ತು ಬಿದ್ದಿದ್ದ ಆತನ ಹೆಂಡತಿಯು ಜೀವಂತಳಾಗಿ ಎದ್ದು ನಿಂತಳು! ಬ್ರಾಹ್ಮಣನಿಗೆ ತುಂಬಾ ಸಂತೋಷವಾಯಿತು.

ಆತನು ತಂದಿದ್ದ ನೀರನ್ನು ನಂತರ ಇಬ್ಬರೂ ಕುಡಿದು ಕಾಡಿನ ಹಣ್ಣುಗಳನ್ನು ತಿಂದು ಮುಂದೆ ಹೊರಟರು. ಅವರು ಒಂದು ನಗರಕ್ಕೆ ತಲಪಿದರು. ನಗರದಲ್ಲಿ ಒಂದು ಸುಂದರ ಹೂತೋಟವಿತ್ತು. ಅದನ್ನು ಕಂಡು ಬ್ರಾಹ್ಮಣನು "ಈ ತೋಟದಲ್ಲಿ ನೀನು ಸ್ವಲ್ಪ ಹೊತ್ತು ಕೂತುಕೋ. ನಾನು ನಗರದಿಂದ ಆಹಾರವನ್ನು ತರುವೆನು' ಎಂದು ಹೆಂಡತಿಗೆ ಹೇಳಿ ಹೊರಟು ಹೋದನು.

ಆ ಹೂತೋಟದಲ್ಲಿ ಕಾಲಿಲ್ಲದವನೊಬ್ಬನಿದ್ದನು. ಆತನ ಕೆಲಸವೆಂದರೆ ಬಾವಿಯ ಪಂಪಿನ ಚಕ್ರವನ್ನು ಕುಳಿತಲ್ಲಿಂದ ತಿರುಗಿಸಿ ತೋಟಕ್ಕೆ ನೀರು ಹಾಯಿಸುವದು. ಆತನು ತನ್ನ ಕೆಲಸವನ್ನು ಯಾವಾಗಲೂ ಹಾಡುತ್ತಾ ಮಾಡುತ್ತಿದ್ದನು. ಆತನ ಹಾಡು ಅಷ್ಟು ಮನೋಲ್ಲಾಸಕರವಾಗಿತ್ತು. ಆತನ ಸ್ವರವನ್ನು ಕೇಳಿದ ಬ್ರಾಹ್ಮಣ ಹೆಂಡತಿಯ ಹೃದಯದಲ್ಲಿ ಹಾಡುವವನ ಬಗ್ಗೆ ಪ್ರೇಮವು ಉಕ್ಕಿತು. ಆಕೆಯು ಆತನ ಹತ್ತಿರ ಹೋಗಿ, 'ಗೆಳೆಯಾ, ನಿನ್ನ ಹಾಡಿನಿಂದ ನಾನು ಹುಚ್ಚಳಂತಾಗಿರುವೆನು. ನನ್ನ ಪ್ರೇಮವನ್ನು ಸ್ವೀಕರಿಸದಿದ್ದರೆ ಬ್ರಾಹ್ಮಣ ಹೆಂಗಸೊಬ್ಬಳನ್ನು ಕೊಲೆ ಮಾಡಿದ ಪಾತಕವು ನಿನಗೆ ಬರುವದು' ಎಂದಳು.

'ಆದರೆ ನನ್ನಂಥಾ ಕಾಲಿಲ್ಲದವನೊಡನೆ ನೀನೇನು ಮಾಡುವೆ?' ಎಂದನು ಕೇಳಲು 'ನೀನು ಗಾಬರಿ ಪಡಬೇಡ. ನನ್ನನ್ನು ನಿನ್ನ ಹೆಂಡತಿಯಾಗಿ ಮಾಡಿಕೋ' ಎಂದಳು. ಆತನು ಒಪ್ಪಿದನು. ಆಗ ಬ್ರಾಹ್ಮಣನ ಹೆಂಡತಿಯು, 'ಈ ಕ್ಷಣದಿಂದ ನಾನು ನಿನ್ನವಳು. ನನ್ನ ಜೀವನ ಅಂತ್ಯದ ವರೆಗೆ ನಿನ್ನೊಡನಿರುವೆನು. ನೀನು ನನ್ನೊಡನೆ ಬರಬೇಕು' ಎಂದಳು. ಕುಂಟನು ಒಪ್ಪಿದನು.

ಬ್ರಾಹ್ಮಣನು ಆಹಾರ ತೆಗೆದುಕೊಂಡು ಬಂದನು. ಇಬ್ಬರೂ ಊಟಕ್ಕೆ ಕುಳಿತಾಗ ಆಕೆ ಹೇಳಿದಳು.' ಆ ಕುಂಟನಿಗೂ ಹಸಿದಿರಬೇಕು. ಆತನಿಗೂ ಸ್ವಲ್ಪ ಕೊಡೋಣ' ಎಂದು. ಊಟ ಮುಗಿಯಿತು. ಬ್ರಾಹ್ಮಣ ಹೆಂಡತಿಯು ತನ್ನ ಗಂಡನೊಡನೆ ಹೇಳಿದಳು. 'ನಾವು ಬೇರೆ ದೇಶಕ್ಕೆ ಹೋದಾಗ ಅಲ್ಲಿ ಯಾರನ್ನೂ ನನಗೆ ಗೊತ್ತಿರಲಾರದು. ನೀವು ಸದಾ ನನ್ನ ಜೊತೆಯಲ್ಲಿ ಮನೆಯಲ್ಲೇ ಇರುವದು ಸಾಧ್ಯವಿಲ್ಲ. ಆದ್ದರಿಂದ ನನಗೆ ಮಾತಾಡಲು ಅನುವಾಗುವಂತೆ ಈ ಕುಂಟನನ್ನು ಕರೆದುಕೊಂಡರೆ ಹಿತವಾಗುವದು'. ಇದನ್ನು ಕೇಳಿ ಬ್ರಾಹ್ಮಣನು, 'ಆ ಕುಂಟನಿಗೆ ನಡೆಯಲಾಗುವದಿಲ್ಲ ಆತನು ನಮ್ಮೊಡನೆ ಬರಲಾರನು' ಎಂದನು. 'ನಾನು ಆತನನ್ನು ಹೊತ್ತುಕೊಳ್ಳುವೆನು. ಒಂದು ಕುಕ್ಕೆಯಲ್ಲಿರಿಸಿ ತಲೆಯಲ್ಲಿ ಇಟ್ಟರೆ ಸರಿ' ಎಂದು ಆಕೆ ಹೇಳಿದಳು. ಆತನು ಒಪ್ಪಿ ಅವರ ಪ್ರಯಾಣ ಮುಂದರಿಯಿತು.

ಒಂದು ದಿನ ಅವರು ಒಂದು ಬಾವಿಯ ಹತ್ತಿರ ರಾತ್ರೆ ಉಳಿದುಕೊಂಡರು. ಬ್ರಾಹ್ಮಣನ ಹೆಂಡತಿಯು ಕುಂಟನ ಸಹಾಯದಿಂದ ರಾತ್ರೆ ಬ್ರಾಹ್ಮಣನನ್ನು ಬಾವಿಯೊಳಗೆ ನೂಕಿ ಹಾಕಿದಳು. ನಂತರ ಆಕೆಯು ಕುಂಟನನ್ನು ಹೊತ್ತುಕೊಂಡು ಒಂದು ಪಟ್ಟಣಕ್ಕೆ ಬಂದಳು. ರಾತ್ರೆ ಬೀದಿ ತಿರುಗುತಿದ್ದ ಪೋಲೀಸರು ಆಕೆಯ ತಲೆಯ ಮೇಲಿನ ಬುಟ್ಟಿಯಲ್ಲಿ ಕಳ್ಳತನದ ವಸ್ತುಗಳಿರಬಹುದೆಂದು ರಾಜನಿಗೆ ಕಳುಹಿಸಿದರು. ಅದನ್ನು ತೆರೆದು ನೋಡುವಾಗ ಕುಂಟನನ್ನು ಅರಸನು ಕಂಡನು. ಅಷ್ಟರಲ್ಲಿ ಬ್ರಾಹ್ಮಣ ಹೆಂಗಸು ಅಳುತ್ತಾ ಅಲ್ಲಿಗೆ ಪೋಲೀಸರೊಡನೆ ಬಂದು, 'ಈತನು ನನ್ನ ಅಂಗಹೀನ ಗಂಡನು. ನನ್ನ ಕುಟುಂಬದವರು ನನಗೆ ವಿಪರೀತ ತೊಂದರೆ ಕೊಡುತ್ತಿದ್ದುದರಿಂದ ನನ್ನ ಜೀವಕ್ಕೂ ಮಿಗಿಲಾದ ಗಂಡನನ್ನು ಹೊತ್ತುಕೊಂಡು ಬಂದಿರುವೆನು. ನನಗೆ ಜೀವನವೇ ಕಷ್ಟವಾಗಿದೆ' ಎಂದಳು.

ರಾಜನಿಗೆ ಆಕೆಯ ಮೇಲೆ ದಯೆ ಬಂತು. —"ನೀನು ನನ್ನ ತಂಗಿಯಂತೆ ಇಲ್ಲಿ ಜೀವಿಸು. ನಿನಗೆ ಎರಡು ಗ್ರಾಮಗಳನ್ನು ಕೊಟ್ಟಿದ್ದೇನೆ. ನಿನ್ನ ಗಂಡನೊಡನೆ ಸುಖವಾಗಿ ಬದುಕು'' ಎಂದನು.

ಬಾವಿಯೊಳಗೆ ಬಿದ್ದ ಬ್ರಾಹ್ಮಣನು ಯಾರದೋ ಸಹಾಯದಿಂದ ಪಾರಾಗಿ ಅದೇ ನಗರಕ್ಕೆ ಬಂದನು. ಆತನ ಪತ್ನಿಯು ಆತನನ್ನು ಒಂದು ದಿನ ಕಂಡು ರಾಜನಲ್ಲಿ, 'ಹೇ ದೊರೆಯೇ, ನನ್ನ ಗಂಡನ ಶತ್ರುವು ಇಲ್ಲಿಗೂ ಬಂದು ನನಗೆ ತೊಂದರೆ ಕೊಡುತ್ತಿದ್ದಾನೆ' ಎಂದು ದೂರು ಹೇಳಿದಳು. ರಾಜನು ಬ್ರಾಹ್ಮಣನನ್ನು ಹಿಡಿಸಿ ಗಲ್ಲಿಗೇರಿಸುವ ಆಜ್ಞೆ ಮಾಡಿದನು. ಆಗ ಬ್ರಾಹ್ಮಣನು "ಮಹಾ ಪ್ರಭೂ, ಈ ಹೆಂಗಸು ನನ್ನಿಂದ ಕೆಲವು ವಸ್ತುಗಳನ್ನು ಪಡೆದಿರುವಳು. ಅವನ್ನು ಹಿಂದಕ್ಕೆ ಕೊಡಿಸಿದರೆ ಸಾಕು'' ಎಂದನು. ಬ್ರಾಹ್ಮಣನ ಹೆಂಡತಿಯು ಆತನಿಂದ ತಾನು ಏನೂ ಪಡೆದಿಲ್ಲವೆಂದು ರಾಜನ ಎದುರು ನಿರಾಕರಿಸಲು ಬ್ರಾಹ್ಮಣನು,—'ನಾನು ಜೀವ ಕೊಡುವೆನು' ಎಂಬ ಮೂರು ಶಬ್ದಗಳಿಂದ ನಿನಗೆ ನನ್ನ ಅರ್ಧ ಜೀವವನ್ನು ದಾನ ಮಾಡಿರುವೆನು. ಅದನ್ನು ಹಿಂದಕ್ಕೆ ಕೊಡು' ಎಂದನು. ಬ್ರಾಹ್ಮಣನ ಹೆಂಡತಿಗೆ ಗಾಬರಿಯಾಯಿತು. ಗಾಬರಿಯಿಂದ ಆಕೆ "ನಾನು ಜೀವ ಕೊಡುವೆನು"? ಎಂದಳು. ಆ ಕ್ಷಣ ಅವಳು ಮೃತಳಾಗಿ ಕೆಳಗೆ ಬಿದ್ದಳು. ರಾಜನಿಗೆ ಆಶ್ಚರ್ಯವಾಯಿತು. ಬ್ರಾಹ್ಮಣನು ನಡೆದ ಕತೆಯನ್ನೆಲ್ಲಾ ಹೇಳಿದನು.

ಆದ್ದರಿಂದ ತನ್ನ ಸರ್ವಸ್ವವನ್ನೂ ಕಡೆಗೆ ಜೀವವನ್ನು ಕೊಟ್ಟರೂ ತನ್ನ ಹೆಂಡತಿಯನ್ನು ನಂಬುವದು ಗಂಡಾಂತರಕಾರಿ. ಗಂಡನು ಹೆಂಗಸಿಗಾಗಿ ಬೇಕಾದುದನ್ನು ಮಾಡುತ್ತಾನೆ. ಕುದುರೆಗಳಲ್ಲದ ಆ ಪ್ರಾಣಿಗಳು ಮುಗುಳು ನಗೆ ನಗುವಾಗ ಯಾವ ಗಂಡಸೂ ಹುಚ್ಚನಂತೆ ವರ್ತಿಸುತ್ತಾನೆ ಎಂದು ಕೋತಿಯು ಹೇಳಲು ಮೊಸಳೆಯು ಅದರ ಅರ್ಥವಾಗಲಿಲ್ಲವೆಂದು ಹೇಳಿದ ಕಾರಣ ಮುಂದಿನ ವಾರ ಕೋತಿಯು ಆನಂದ ಅರಸನ ಮಂತ್ರಿಯ ಕಾರ್ಯದರ್ಶಿಯ ಕತೆ ಹೇಳುವದು.

ಪ್ರಾಮಾಣಿಕತೆ.

ನನಗಾಗ ಹನ್ನೆರಡು ವರ್ಷ ಪ್ರಾಯ. ಒಂದು ಕುಪ್ಪಿ ಸೀಮೆಣ್ಣೆ ತರಲು ಅಮ್ಮ ನನ್ನನ್ನು ಪೇಟೆಗೆ ಕಳುಹಿಸಿದ್ದರು. ನಾನು ಸೀಮೆಣ್ಣೆ ತೆಗೆದುಕೊಂಡು ಅಮ್ಮ ಕೊಟ್ಟಿದ್ದ ಐದು ರೂಪಾಯಿಯ ನೋಟನ್ನು ಅಂಗಡಿಯವನಿಗೆ ಕೊಟ್ಟೆ. ಆತನು ನಾಲ್ಕು ರೂಪಾಯಿ ಹನ್ನೊಂದಾಣೆ

ಯನ್ನು ನನಗೆ ಕೊಟ್ಟನು. ನಾನು ದುಡ್ಡನ್ನು ಜೇಬಿನಲ್ಲಿರಿಸಿ ಮನೆಕಡೆ ತಿರುಗಿದೆ. ಸ್ವಲ್ಪ ದೂರ ಹೆಜ್ಜೆ ಹಾಕುವವರೊಳಗೆ ಅಂಗಡಿಯವ ನನ್ನನ್ನು ಕೂಗತೊಡಗಿದ. ನನಗೆ ಗಾಬರಿಯಾಯಿತು. ಆತನು ದುಡ್ಡು ಕೊಟ್ಟಿಲ್ಲವೆಂದು ಪುನಃ ನನ್ನನ್ನು ದುಡ್ಡು ಕೇಳಲಿರುವನೆಂದು ಭಾವಿಸಿ ನಾನು ಹೆದರಿಕೆಯಿಂದ ಮುಂದೆ ನಡೆಯತೊಡಗಿದ್ದೆ. ಅಷ್ಟರಲ್ಲಿ ಅಂಗಡಿಯವನು ಓಡಿ ಬಂದು ನನ್ನನ್ನು ನಿಲ್ಲಿಸಿ ಹೇಳಿದನು, "ನಿನಗೆ ಕೊಟ್ಟ ಚಿಲ್ಲರೆಯಲ್ಲಿ ತಪ್ಪಿಯದ ಖೋಟಾ ರೂಪಾಯಿ ಒಂದು ಸೇರಿಹೋಗಿದೆ. ಅದನ್ನು ಹಿಂದಕ್ಕೆ ಕೊಡು. ಇಕೋ ಬೇರೆ ರೂಪಾಯಿ" ಎಂದನು. ನಾನು ಜೇಬಿನಿಂದ ಚಿಲ್ಲರೆ ಎಲ್ಲವನ್ನೂ ತೆಗೆದೆ. ಕಲ್ಲಿಗೆ ಬಡೆದರೂ ಶಬ್ದ ಬಾರದ ರೂಪಾಯಿಯೊಂದಿತ್ತು. ಆತನು ಅದನ್ನು ತೆಗೆದುಕೊಂಡನು. ನನಗೆ ಅದು ಖೋಟಾ ರೂಪಾಯಿಯೆಂದು ತಿಳಿದಿರಲಿಲ್ಲ. ಆತನ ಪ್ರಾಮಾಣಿಕತೆಯನ್ನು ನೆನೆದಾಗ ಇಂದೂ ಆ ಚಿಕ್ಕ ಅಂಗಡಿಗಾರನ ಮೇಲೆ ನನಗೆ ಅಭಿಮಾನ ಉಕ್ಕಿ ಬಂದು ವ್ಯಾಪಾರಗಾರರೆಲ್ಲಾ ಆ ರೀತಿ ಪ್ರಾಮಾಣಿಕರಾಗಿರುತ್ತಿದ್ದರೆ ಅನಿಸುತ್ತದೆ.

—ಚಿಂಣಪ್ಪ ಬಿ., ೫ನೇ ಫಾರಂ.



ಅರ್ಥವಿಲ್ಲದ ಸಾವಿರ ಮಾತಿಗಿಂಥಾ ಅರ್ಥವಿರುವ ಒಂದೇ ಮಾತು ಲೇಸು. ಹೃದಯವಿಲ್ಲದೆ ಸಾವಿರ ದೇವರ ನಾಮ ಜಪಿಸುವದಕ್ಕಿಂಥಾ ಭಕ್ತಿ ಪುರಸ್ಸರವಾಗಿ ಒಂದೇ ಪದ ಸಾಕು.

ಯುದ್ಧದಲ್ಲಿ ಸಾವಿರ ಜನರನ್ನು ಸಾವಿರ ಬಾರಿ ಗೆದ್ದವನಿಗಿಂತಲೂ ತನ್ನನ್ನು ತಾನು ಗೆದ್ದ ವಿಜಯವು ಹೆಚ್ಚಿನದು.

ಇನ್ನೊಬ್ಬರ ಮೇಲೆ ತಾನು ಪಡೆದ ಜಯಕ್ಕಿಂಥಾ ತನ್ನ ಮೇಲೆ ತಾನು ಪಡೆದ ಜಯವು ಹಿರಿದಾದದು. ಮನುಷ್ಯನು ತನ್ನನ್ನು ತನ್ನ ವಶದಲ್ಲಿಟ್ಟುಕೊಂಡು ವರ್ತಿಸುವವನಾದರೆ ಆತನ ವಿಜಯವನ್ನು ದೇವರಾಗಲೀ, ಗಂಧರ್ವರಾಗಲೀ, ಕಡೆಗೆ ಬ್ರಹ್ಮನಾಗಲೀ ನಿಷ್ಪ್ರಯೋಜನಗೊಳಿಸಲಾರರು.

ಪ್ರತಿ ತಿಂಗಳು ಶತವರ್ಷಗಳ ವರೆಗೆ ಸಾವಿರಾರು ಸಂಖ್ಯೆಯಲ್ಲಿ ಹಣವನ್ನು ಒಬ್ಬನು ದಾನ ಮಾಡಿದರೂ ಕೂಡ ಅದರಿಂದ ಹೆಚ್ಚಿನ ಶ್ರೇಯಸ್ಸಿಲ್ಲ. ಬದಲು ಒಂದೇ ನಿಜ ತತ್ವವನ್ನು ಸರಿಯಾಗಿ ಅರಗಿಸಿ ಆಚರಣೆಯಲ್ಲಿ ತರುವದರಿಂದ ಹೆಚ್ಚಿನ ಶ್ರೇಯಸ್ಸಿದೆ.

ಪ್ರತಿಯೊಬ್ಬನನ್ನು ತನ್ನಂತೆ ಕಾಣುವವನ, ಹಿರಿಯರನ್ನು ಗೌರವಿಸುವವನ ಜೀವನದ ಘನತೆ, ಸೌಂದರ್ಯ, ಶಕ್ತಿ ಮತ್ತು ಆನಂದಗಳು ಹೆಚ್ಚುವವು.

ಪಥಗೆಟ್ಟು, ಇನ್ನೊಬ್ಬರಿಗೆ ಕಂಟಕನಾಗಿ ನೂರು ವರ್ಷ ಬದುಕುವದಕ್ಕಿಂಥಾ ಜನತೆಯ ಹಿತಕ್ಕಾಗಿ, ತನ್ನ ಆಂತರಿಕ ಬೆಳಕಿನ ತೇಜಸ್ಸಿಗಾಗಿ ಬದುಕುವ ಒಂದು ದಿನದ ಜೀವನವೇ ಲೇಸು.

ಸೋಮಾರಿಯಾಗಿ, ನಿಶ್ಚಿತ ಗುರಿಯಿಲ್ಲದವನಾಗಿ ನೂರು ವರ್ಷ ಬಾಳುವದಕ್ಕಿಂಥಾ ಜ್ಞಾನವನ್ನು ಹೆಚ್ಚಿಸಿಕೊಳ್ಳುವದಕ್ಕಾಗಿ, ತನ್ನನ್ನು ತಾನು ತಿಳಿಯಲಿಕ್ಕಾಗಿ ಬದುಕಿದ ಒಂದೇ ದಿನ ಮೇಲು.

ಈ ಬದುಕಿನ ಅರ್ಥವನ್ನು ತಿಳಿಯದೆ ನೂರು ವರ್ಷ ಬಾಳುವದಕ್ಕಿಂಥಾ ಜೀವೈಕ್ಯ ಸಾಧನೆಗಾಗಿ ಬದುಕಿದ ಒಂದೇ ದಿನವು ಹಿರಿದು.

Edited Printed and Published by P. I. BELLIAPPA at 'KODAGU' Press Mercara, for 'Kodagu' Ltd.,

ನಮ್ಮ ಶಾಲೆ.

ನಮ್ಮದು ಶಾಲೆ
ಬೆಟ್ಟದ ಮೇಲೆ
ಸುತ್ತಲು ಹೂಗಳು
ಘಮ್ ಘಮ್ ಘಮ್.

ಸುಂದರ ತೋಟ
ಹಾಕಿಯ ಆಟ
ಹಾರುತ ಹೊಡೆಯುವೆ
ಟಪ್ ಟಪ್ ಟಪ್.

ಎಲ್ಲವು ಚೆಂದ
ಮನಕಾನಂದ
ಪಾಠವು ಮಾತ್ರ
ಲೊಟ ಲೊಟ ಲೊಟ್.

--ಶ್ರೀನಿವಾಸ, ೬ನೇ ಫಾರಂ

ಸರ್ವೆ ವಿದ್ಯಾರ್ಥಿಗಳ ಸಂಘ ಫ್ರೇಜರ್‌ಪೇಟೆ.

ಪ್ರೇಜರ್‌ಪೇಟೆ ಜಿ. ಎಂ. ಶಾಲೆಯ ಆವರಣದಲ್ಲಿ ತಾ. ೨೦—೯—೫೩ನೇ ಆದಿತ್ಯವಾರ ದಿನ ಈ ಊರಿನ ನೋಟಿಫೈಡ್ ಏರಿಯದ ವೈಸ್ ಪ್ರೆಸಿಡೆಂಟರಾದ ಶ್ರೀ ಎಸ್. ಎನ್. ಲಕ್ಷ್ಮಣಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಈ ವರ್ಷದ ಸರ್ವೆ ವಿದ್ಯಾರ್ಥಿ ಸಂಘದ ದಿನಾಚರಣೆಯನ್ನು ಬಹು ವಿಜೃಂಭಣೆಯಿಂದ ಆಚರಿಸಲಾಯಿತು. ಶಾಲಾ ವಿದ್ಯಾರ್ಥಿಗಳಿಗೂ ಹಾಗೂ ಸಾರ್ವಜನಿಕರಿಗೂ ವಿವಿಧ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಿದ್ದರು. ಸಂಘದ ಅಧ್ಯಕ್ಷರಾದ ಶ್ರೀಯುತ ಕೆ. ಎಂ. ನಂಜುಂಡನವರು ಸ್ವಾಗತ ಭಾಷಣ ಮಾಡಿದರು. ಸಂಘದ ಕಾರ್ಯದರ್ಶಿಗಳಾದ ಶ್ರೀಯುತ ಎಂ. ಸಿ. ಸೋಮಣ್ಣನವರು ಸಂಘದ ವರದಿಯನ್ನು ಓದಿ ಕಳೆದ ಆರು ತಿಂಗಳಿಂದ ಸಂಘವು ನಡೆಸಿದ ಕಾರ್ಯಕಲಾಪಗಳನ್ನು ಸಂಕ್ಷಿಪ್ತವಾಗಿ ವಿವರಿಸಿದರು. ಸರ್ವೆಯಲ್ಲಿ ಉತ್ತಮ ತರಬೇತಿಯನ್ನು ಪಡೆಯುವದೇ ಶಾಲೆಯ ಮುಖ್ಯ ಉದ್ದಿಶ್ಯವಾಗಿದ್ದರೂ ವಿದ್ಯಾರ್ಥಿಗಳ ಚಟುವಟಿಕೆಯು ಸರ್ವೆ ಒಂದರಲ್ಲಿಯೇ ಅಡಕವಾಗಿರದೆ ವಿದ್ಯಾರ್ಥಿಗಳ ಸರ್ವತೋಮುಖವಾದ ಅಭಿವೃದ್ಧಿಗೆ ಸಹಾಯವಾಗುವ ಆಟೋಟಗಳು, ಸಾಹಿತ್ಯ ಮತ್ತು ಲಲಿತ ಕಲೆಗಳಿಗೆ ಸಂಘವು ವಿಶೇಷ ಪ್ರೋತ್ಸಾಹ ಕೊಟ್ಟಿದೆ. ಸಂಘದ ಆಶ್ರಯದಲ್ಲಿ ಕ್ಯಾರಂ ಬೋರ್ಡ್, ವಾಲಿಬಾಲ್ ಮತ್ತು ಹಾಕಿ ಮೊದಲಾದ ಪಂದ್ಯಾಟಗಳನ್ನು ಸಹ ಏರ್ಪಡಿಸಲಾಗಿತ್ತು. ತಾ ೧೯—೯—೫೩ರಲ್ಲಿ ಪ್ರೇಜರ್‌ಪೇಟೆ ಸರ್ವೆ ಯೂನಿಯನಿಗೂ ಮತ್ತು ಪ್ರೇಜರ್‌ಪೇಟೆ ಪಬ್ಲಿಕ್ ಟೀಮಿನವರಿಗೂ ನಡೆದ ವಾಲಿಬಾಲ್ ಪಂದ್ಯಾಟದಲ್ಲಿ ಪಬ್ಲಿಕ್ ಟೀಮಿನವರು ಸರ್ವೆ ಯೂನಿಯನ್ ಟೀಮಿನವರನ್ನು ಸೋಲಿಸಿ ಬಹುಮಾನ ಪಡೆದರು. ಅದೇ ದಿನ ನಡೆದ ಹಾಕಿ ಪಂದ್ಯಾಟದಲ್ಲಿ ಸರ್ವೆ ಯೂನಿಯನ್ ಟೀಮಿನವರು ಪಬ್ಲಿಕ್ ಟೀಮಿನವರನ್ನು ಸೋಲಿಸಿ ಬಹುಮಾನ ಪಡೆದರು. ಈ ಎರಡು ಪಂದ್ಯಾಟಕ್ಕೂ ಶ್ರೀ ಎಸ್. ಎನ್. ಲಕ್ಷ್ಮಣಶೆಟ್ಟಿಯವರೇ ಬಹುಮಾನಗಳನ್ನು ನೀಡಿದರು.

ಈ ಸಲದ ಟ್ರೈನಿಂಗಿಗೆ ೨೧ ವಿದ್ಯಾರ್ಥಿಗಳಿದ್ದರು. ಇವರಲ್ಲಿ ೫ ಜನ ಸರಕಾರಿ ಉದ್ಯೋಗಸ್ಥರೂ ೭ ಜನ ಇಂಟರ್ ಮೀಡಿಯೇಟ್‌ನವರೂ ಮತ್ತು ಬಾಕಿಯುಳ್ಳವರು ಎಸ್. ಎಸ್. ಎಲ್ ಸಿ ಯವರೂ ಇದ್ದಾರೆ ಕಳೆದ ಸಾಲಿನ ಸರ್ವೆ ಪರೀಕ್ಷೆಯಲ್ಲಿ ೧೭ ಜನ ವಿದ್ಯಾರ್ಥಿಗಳಲ್ಲಿ ೧೭ ಜನರೂ ಪಾಸಾಗಿರುವರು. ಇವರಲ್ಲಿ ೬ ಜನರು ಫಸ್ಟ್ ಕ್ಲಾಸಿನಲ್ಲೂ, ೮ ವಿದ್ಯಾರ್ಥಿಗಳು ಸೆಕೆಂಡ್ ಕ್ಲಾಸಿನಲ್ಲೂ, ಬಾಕಿ ಇರುವವರು ಮೂರನೇ ಕ್ಲಾಸಿನಲ್ಲೂ ಪಾಸಾಗಿರುವರು. ಇದೇ ರೀತಿಯಲ್ಲಿ ಮುಂದಿನ ವರ್ಷ ವಿದ್ಯಾರ್ಥಿಗಳು ತೇರ್ಗಡೆಯಾಗಲೆಂದು ಅಧ್ಯಕ್ಷರು ಆಶಿಸಿದರು. ಕೊನೆಯಲ್ಲಿ ಆಟೋಟಗಳಲ್ಲಿ ಗೆದ್ದವರಿಗೆ ಬಹುಮಾನವನ್ನು ಹಂಚಿದರು. ವಂದನಾರ್ಪಣೆಯ ನಂತರ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.
[ಸ್ಥಾಪನೆ: 1921]
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಖಾಲ್ತಿ ಠೇವಣಾತಿ ಶೀಕಡ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ ಅಪ್ಪಯ್ಯ, ಪ್ರೆಸಿಡೆಂಟ್ & ಖಜಾಂಚಿ.

ಸಾಮೂಹಿಕ ಸ್ವಉದ್ಯಮ.

— ಲೇ:- ಶ್ರೀ ಬಿ. ಡಿ. ಗಣಪತಿ —

ಗಂಡಾಂತರ

ರಾಜಮಹೇಂದ್ರಿಯ ೧೪ ಮೈಲು ದೂರದಲ್ಲಿ ಗೋದಾವರಿ ನದಿಯ ದಡದಲ್ಲಿ ಸೀತಾನಗರವೆಂಬ ಗ್ರಾಮವಿದೆ. ಸ್ವಾತಂತ್ರ್ಯ ಚಳವಳದ ಕಾಲದಲ್ಲಿ ಅಲ್ಲಿಯ ಗೌತಮಿ ಆಶ್ರಮವು ರಾಜಕೀಯ ಕೆಲಸಗಾರರಿಗೂ, ಇತರ ದೇಶಸೇವಕರಿಗೂ ಆಶ್ರಯ ಸ್ಥಳವೆನಿಸಿ ಚರಿತ್ರಾರ್ಹವಾದ ಸೇವೆಯನ್ನು ಸಲ್ಲಿಸಿದೆ. ಈ ಆಶ್ರಮದ ಆವರಣವೇ ಕಸ್ತೂರ್ಬಾ ಗಾಂಧೀ ಸ್ಮಾರಕ ಟ್ರಸ್ಟಿನ ಆಂಧ್ರ ಶಾಖೆಯ ಕಾರ್ಯರಂಗ. ಈ ಟ್ರಸ್ಟಿನ ಆಶ್ರಯದಲ್ಲಿ ಗ್ರಾಮಸೇವಕಿಯರ ಶಿಕ್ಷಣ ನಡೆಯುತ್ತಿದೆಯಲ್ಲದೆ ಮೂಲ ಶಿಕ್ಷಣ ಶಾಲೆ ಮತ್ತು ಹೆರಿಗೆ ಆಸ್ಪತ್ರೆಯೊಂದೂ ನಡೆಯುತ್ತಿದೆ.

ಕಳೆದ ಆಗಸ್ಟ್ ೧೫ನೇ ತಾರೀಕು. ಸ್ವಾತಂತ್ರ್ಯ ದಿನವಾದುದರಿಂದ ಗ್ರಾಮಸೇವಕಿಯರೂ ಇತರರೂ 'ಪ್ರಭಾತಫೇರಿ'ಗೆ ಬೆಳಿಗ್ಗೆ ಸಿದ್ಧರಾಗುತ್ತಿದ್ದರು. ಅಷ್ಟರಲ್ಲಿ ಗೋದಾವರಿ ನದಿಯಲ್ಲಿ ನೆರೆಯು ಹೆಚ್ಚುತ್ತಾ ಬರುತ್ತಿದೆಯೆಂದೂ ದಡವನ್ನು ಮೀರಿ ಸುತ್ತಲಿನ ಪ್ರದೇಶವನ್ನು ಆವರಿಸಲಿದೆಯೆಂದೂ ತಿಳಿಯಬಂತು. ಇನ್ನು ಕೇವಲ ಎಂಟು ಇಂಚು ನೀರು ಬಂದರೆ ಆವರ ಆಶ್ರಮವೂ ಗ್ರಾಮವೂ ಗಂಡಾಂತರಕ್ಕೆ ಒಳಗಾಗುವಂತಿತ್ತು. ಕೆಲವೆಡೆ ನದಿಯ ನೀರು ದಂಡೆಯನ್ನು ಮೀರಿ ಹರಿಯತೊಡಗಿತ್ತು. ಎಲ್ಲಂಗೂ ದುಃಖಿತರಾಯಿತು. ನೆರೆಯ ಭಯವು ಪ್ರತಿಯೊಬ್ಬರಲ್ಲಿಯೂ ಗಾಬರಿ ಹುಟ್ಟಿಸಿತು. ಆದ್ದರಿಂದ ಆಶ್ರಮದ ಜನರನ್ನು, ಹಳ್ಳಿಯವರನ್ನೂ ಬೇರೆ ಕಡೆ ಸುರಕ್ಷಿತ ಸ್ಥಳಕ್ಕೊಯ್ಯುವ ಮಾತುಕತೆ ನಡೆಯುತಿತ್ತು.

ಆದರೆ ಕಸ್ತೂರ್ಬಾ ಗಾಂಧೀ ಟ್ರಸ್ಟಿನ ಸಂಚಾಲಿಕೆಯಾದ ಶ್ರೀಮತಿ ಬಚಕೃಷ್ಣಮ್ಮ, ಹೆರಿಗೆ ಆಸ್ಪತ್ರೆಯ ಡಾ. ಮಿಸೆಸ್ ವಿಜಯಲಕ್ಷ್ಮಿ ಮೊದಲಾದವರು ಹೊಸ ಯೋಜನೆಯೊಂದನ್ನು ಮಾಡಿದರು. ದಿನ ದಂಡೆ ಮೀರಿ ಹಳ್ಳಿಯನ್ನು ಮುಳುಗಿಸದಂತೆ ನದಿಯನ್ನು ಎದುರಿಸಿ ಹೋರಾಡಲು ಅವರು ಸಿದ್ಧರಾದರು!

ಸ್ವ ಪರಿಶ್ರಮ

ಆಸ್ಪತ್ರೆಯಲ್ಲಿದ್ದ ರೋಗಿಗಳನ್ನು ಬೇರೆಡೆ ಸಾಗಿಸುವ ಯತ್ನವನ್ನು ಹಳ್ಳಿಯ ಗಂಡಸರು ಮಾಡುತ್ತಿದ್ದರು. ಕಸ್ತೂರ್ಬಾ ಶಿಬಿರದ ಗ್ರಾಮ ಸೇವಿಕೆಯರು ನದಿಯ ವಿರುದ್ಧ ಹೋರಾಡಲು ತಯಾರಾದರು. ಸ್ವಾತಂತ್ರ್ಯ ದಿನಾಚರಣೆಯು ಅಲ್ಲಿಗೆ ನಿಂತಿತು. ಎಲ್ಲರೂ ಗುದ್ದಲಿ, ಹಾರೆ, ಬುಟ್ಟಿ, ಕತ್ತಿಗಳನ್ನು ಹಿಡಿದು ಹೊರಟರು. ಆಶ್ರಮದ ಹೆಂಗಳೆಯರು ಯಾವ ನಾಚಿಕೆ, ಗೌರವಗಳನ್ನು ತಳೆಯದೆ ಎಲ್ಲರೂ ಒಟ್ಟಾಗಿ ಕೆಲಸ ಪ್ರಾರಂಭಿಸಿದರು. ಹೊಳೆಯ ದಂಡೆಯನ್ನು ಒಂದು ಕಡೆಯಿಂದ ಮಣ್ಣು ಹಾಕಿ ಎತ್ತರಿಸಲು ಪ್ರಾರಂಭಿಸಿದುದಲ್ಲದೆ ದಂಡೆಯಿಂದ ಸೋರಿಬರುತ್ತಿದ್ದ ನೀರನ್ನು ತಡೆದರು. ಈ ಗಂಡಾಂತರದ ಸಮಯದಲ್ಲಿ ಗ್ರಾಮ ಸೇವಿಕೆಯರು ಕೈಕೊಂಡ ಆದರ್ಶ ಸೇವೆಯನ್ನು ಕಂಡು ಗ್ರಾಮದ ಗಂಡಸು, ಹೆಂಗಸು, ಮಕ್ಕಳಾದಿಯಾಗಿ ಎಲ್ಲರೂ ಈ ಮಹಾ ಪ್ರಯತ್ನದಲ್ಲಿ ಸೇರಿದರು. ಅಲ್ಲಲ್ಲಿ ಮರಗಳು ಕತ್ತರಿಸಲ್ಪಟ್ಟು ಅಡ್ಡ ಇಡಲ್ಪಟ್ಟವು. ಅವುಗಳ ಮೇಲೆ ಮಣ್ಣಿನ ರಾಶಿ ಬೀಳತೊಡಗಿತು. ಹೊಳೆಯ ನೀರು ಇಂಚು ಇಂಚಿನಂತೆ ಮೇಲೇರತೊಡಗಿತು. ಅದರಂತೆಯೇ ದಂಡೆಯೂ ಕೂಡ ಇಂಚು ಇಂಚಿನಂತೆ ಎತ್ತರಗೊಳ್ಳುತಿತ್ತು. ತಾ. ೧೫, ೧೬, ಮತ್ತು ೧೭ ಈ ಮೂರು ದಿನಗಳ ವರೆಗೆ ವಿರಾಮವಿಲ್ಲದೆ ಕೆಲಸ ನಡೆಯಿತು. ಹೊಳೆಯ ದಂಡೆಯು ೧॥ ಅಡಿಯಷ್ಟು ಮೇಲೆದ್ದಿತು. ಇಡೀ ಸೀತಾನಗರ ಗ್ರಾಮದ ಉದ್ದಕ್ಕಿರುವ ನಾಲ್ಕು ಮೈಲು ದೂರದ ಹೊಳೆಯ ದಂಡೆಯ ದುರಸ್ತಿಯು ಇದರಿಂದ ನಡೆಯಿತು. ಮೂರು ದಿನಗಳ ನಂತರ ಹೊಳೆಯ ನೀರು ಇಳಿಯತೊಡಗಿತು. ಗ್ರಾಮವು ಗ್ರಾಮಸ್ಥರ ಸ್ವಪ್ರಯತ್ನದಿಂದ ನೀರುಪಾಲಾಗದೆ ಉಳಿಯಿತು.

ಮತ್ತೊಂದು ಗಂಡಾಂತರ

ಸೀತಾನಗರಕ್ಕೆ ನೆರೆಯ ಹಾವಳಿ ತಪ್ಪಿದ್ದೇ ತಡ ಅದರ ಜೊತೆಯಲ್ಲಿ ವಾಂತಿಭೇದಿ ರೋಗ ಹರಡಿತು ಅನೇಕರು ರೋಗಕ್ಕೆ ತುತ್ತಾದರು. ಆ ಸಮಯದಲ್ಲಿ ಕಸ್ತೂರ್ಬಾ ಕೇಂದ್ರದ ಗ್ರಾಮ ಸೇವಿಕೆಯರು ಸಲ್ಲಿಸಿದ ಸೇವೆಯು ಸುವರ್ಣಾಕ್ಷರಗಳಿಂದ ಬರೆದಿಡಬೇಕಾದುದು. ಕೇಂದ್ರದ ಆಸ್ಪತ್ರೆಯಲ್ಲಿ ಸುಮಾರು ೮೦ ಜನ ರೋಗಿಗಳ ಶಿಶ್ರೂಷೆ ಮಾಡಲಾಯಿತು. ಗ್ರಾಮ ಸೇವಿಕೆಯರು ಮನೆ ಮನೆಗಳನ್ನು ಸುತ್ತಿ ೪೦೦೦ ಜನರಿಗೆ ವಾಂತಿಭೇದಿಯನ್ನು ತಡೆಯುವ ಇನಾಕ್ಯುಲೇಶನ್ ಮಾಡಿದರು. ಇವೇ ಅಲ್ಲ, ಪ್ರತಿ ಮನೆ, ಪ್ರತಿ ಬೀದಿಗಳನ್ನು ಗುಡಿಸಿ ಶುಚಿ ಮಾಡಿದರು. ಪ್ರತಿ ಬಾವಿಯ ನೀರಿಗೂ ಪರ್ಮಾಂಗನೇಟ್ ಔಷಧ ಹಾಕಿದರು. ಇವರ ಈ ಪ್ರಯತ್ನದಿಂದ ರೋಗವು ನಿಯಂತ್ರಿಸಲ್ಪಟ್ಟು, ಕಡೆಗೆ ನಿರ್ನಾಮವಾಯಿತು. ಈ ಗ್ರಾಮಸೇವಿಕೆಯರು ಕೆಲವು ತಿಂಗಳುಗಳ ಹಿಂದೆ ಸೀತಾಪುರದ ಹತ್ತಿರದ ಗ್ರಾಮ ಒಂದರಲ್ಲಿ ಭಯಂಕರ ಬೆಂಕಿಯುಂಟಾಗಿ ಹಳ್ಳಿಗೆ ಹಳ್ಳಿಯೇ ಅಗ್ನಿಗಾಹುತಿಯಾದಾಗ ಬೆಂಕಿ ನಂದಿಸುವ ಕೆಲಸವನ್ನು ಅನೇಕ ಗಂಡಾಂತರಗಳನ್ನೆದುರಿಸಿ ಮಾಡಿದುದಲ್ಲದೆ ಸರ್ವಸ್ವವೂ ಸುಟ್ಟು ಹೋಗಿ ನಿರ್ಗತಿಕರಾದ ಸುಮಾರು ೫೦೦ ಜನರಿಗೆ ಅನ್ನಾಹಾರ ಕೊಟ್ಟು ರಕ್ಷಿಸಿದರು.

ಹೊಸಕುಡಿಮಿಂಚು.

ಸೀತಾನಗರದಲ್ಲಿ ತೋರಿಬಂದ ಸ್ವಪರಿಶ್ರಮದ ಉದಾತ್ತ ಆದರ್ಶದ ಕುಡಿ ಮಿಂಚು ಕೊಡಗಿನಲ್ಲೂ ಅಲ್ಲಲ್ಲಿ ಮಿಂಚತೊಡಗಿರುವುದು ಶುಭ ಚಿಹ್ನೆ. ಈ ಹಿಂದೆ ಗ್ರಾಮರಸ್ತೆಗಳನ್ನೋ ಇಲ್ಲವೇ ಬೇರೆ ಗ್ರಾಮ ಜನಹಿತದ ಕೆಲಸಗಳನ್ನೊ ಮಾಡಲು ಅಲ್ಲೊಂದು, ಇಲ್ಲೊಂದು ಎಂಬಂತೆ ಕೆಲವರ ಪ್ರೇರಣೆಯಿಂದ ನಡೆಯುತ್ತಿದ್ದ ಕೆಲಸಗಳು ಈಗ ಅಲ್ಲಲ್ಲಿ ತೋರಿಬರತೊಡಗಿವೆ. ಕಳೆದ ಅಕ್ಟೋಬರ್ ತಿಂಗಳಿನಿಂದೀಚೆಗೆ ಉತ್ತರ ಕೊಡಗಿನ ಹಲವೆಡೆ ಜನರು ಒಗ್ಗಟ್ಟಾಗಿ ತಮ್ಮ ಗ್ರಾಮಕ್ಕೆ ಬೇಕಾದ ಬಾವಿ ರಸ್ತೆ, ಮೊದಲಾದ ವಿಚಾರಗಳಿಗಾಗಿ ದೈಹಿಕ ಪರಿಶ್ರಮ ಮಾಡಿರುವರು; ಮಾಡುತ್ತಲೂ ಇರುವರು. ಈ ಅಕ್ಟೋಬರಿನ ಪ್ರಾರಂಭದಿಂದ ದಕ್ಷಿಣ ಕೊಡಗಿಗೂ ಸಾಮೂಹಿಕ ವಿಕಾಸ ಯೋಜನೆಯು ವಿಸ್ತರಿಸಲ್ಪಟ್ಟಿರುವ ಕಾರಣ ದಕ್ಷಿಣ ಕೊಡಗಿನಲ್ಲಿಯೂ ಜನರು ತಮ್ಮ ತಮ್ಮ ಗ್ರಾಮದ, ನಾಡಿನ ಅಭಿವೃದ್ಧಿಗೆ ಅಗತ್ಯವಾಗಿರುವ ಹಾಗೂ ತಮ್ಮ ದೈಹಿಕ ಪರಿಶ್ರಮದಿಂದ ಮಾಡಬಹುದಾದ ಕೆಲಸಗಳನ್ನು ಕೈಕೊಂಡಿರುವರು. ಬಾವಿ, ಕೆರೆ, ರಸ್ತೆ ಮೊದಲಾದುವುಗಳು ಹೊಸ ರೂಪನ್ನು ಈ ಪರಿಶ್ರಮದ ಕಾರಣದಿಂದ ತಳೆಯುತ್ತಿವೆ.

ವಿದ್ಯಾರ್ಥಿಗಳ ಅಮೂಲ್ಯ ಸೇವೆ

ಈ ಉತ್ತಮ ಆದರ್ಶವನ್ನು ಕೈಕೊಂಡು ಶಕ್ತಿ ಮೀರಿ ದುಡಿದು ಜನತೆಯಲ್ಲಿಯೂ ಈ ಸ್ವಸಹಾಯದ ರಾಜಾ ತತ್ವವನ್ನು ಜಾಗೃತಿಗೊಳಿಸಿ ಅವರನ್ನೂ ಕೆಲಸಕ್ಕೆ ಅಣಿಮಾಡಿದ ಶ್ರೇಯಸ್ಸು ಕೊಡಗಿನ ವಿದ್ಯಾರ್ಥಿ ವೃಂದಕ್ಕೆ ಸಲ್ಲುತ್ತದೆ. ಕೊಡಗಿನ ಕಾಲೇಜಿನ ವಿದ್ಯಾರ್ಥಿಗಳೂ, ಹೈಸ್ಕೂಲುಗಳ ಮತ್ತು ಇನ್ನೂ ಕೆಳಗಿನ ಶಾಲೆಗಳ ವಿದ್ಯಾರ್ಥಿಗಳೂ ಕೂಡ ಅಮೂಲ್ಯ ಕೆಲಸವನ್ನು ಕಳೆದ ವರ್ಷ ಮಾಡಿದರು. ಈ ವರ್ಷ ಮಾಡುತ್ತಿರುವರು. ಇವರ ಪ್ರಯತ್ನದಿಂದಾಗಿ ಅನೇಕ ರಸ್ತೆಗಳು ಹೊಸ ರೂಪು ತಳೆದಿವೆ. ಅನೇಕ ಕಡೆ ಕೆರೆಗಳು ದುರಸ್ತಿಯಾಗಿವೆ. ಶಾಲಾ ಆವರಣಗಳು ಸ್ವಚ್ಛವಾಗಿವೆ. ನಾಳೆಯ ನಾಗರಿಕರಾದ ವಿದ್ಯಾರ್ಥಿಗಳು ಇಂದು ತೋರಿಸಿದ ಉತ್ತಮ ಆದರ್ಶವು ಮುಂದಿನ ಭವ್ಯ ಭವಿಷ್ಯಕ್ಕೆ ಸಾಂಕೇತಿಕವಾಗಿದೆ. ಕೊಡಗಿನ ವಿದ್ಯಾರ್ಥಿ ವೃಂದವು ನವರಾಷ್ಟ್ರ ನಿರ್ಮಾಣದ ತನ್ನ ಪಾಲಿನ ಕರ್ತವ್ಯ ಹಾಗೂ ಜವಾಬ್ದಾರಿಯನ್ನು ಯೋಗ್ಯ ರೀತಿ ನಿರ್ವಹಿಸುತ್ತಿದೆ

ಅನುಕರಣೀಯ ಆದರ್ಶ

ಮೊನ್ನೆ ಸಭೆಯೊಂದರಲ್ಲಿ ಮಾತಾಡುತ್ತಾ ಕೊಡಗಿನ ಗೃಹ ಮಂತ್ರಿಗಳು ಒಂದು ಉದಾಹರಣೆಯನ್ನು ಹೇಳಿದರು. ಮರಗೋಡು ಗ್ರಾಮವು ಈ ಸ್ವಸಹಾಯ ದುಡಿಮೆಯಲ್ಲಿ ತೋರಿಸಿದ ಆದರ್ಶವನ್ನು ವಿವರಿಸಿದರು. ಮಡಿಕೇರಿ ಬೆಟ್ಟಗುಡ್ಡಗಳ ತಪ್ಪಲಲ್ಲಿರುವ ಈ ಗ್ರಾಮಕ್ಕೆ ಒಂದು ರಸ್ತೆಗಾಗಿ ಸರಕಾರವು ಹತ್ತು ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿತ್ತಂತೆ. ಗ್ರಾಮದ ಜನರು ಸರಕಾರದಿಂದ ಆ ರಸ್ತೆ ಕೆಲಸವನ್ನು ಮಾಡಿಸದೆ ತಾವೇ ಒಗ್ಗಟ್ಟಾಗಿ ಸುಮಾರು ಹತ್ತು ಮೈಲು ದೂರದ ರಸ್ತೆಯನ್ನು ಸ್ವಪರಿಶ್ರಮದಿಂದ ಸರಕಾರಕ್ಕೆ ಸಮ್ಮತವಾಗುವ ರೀತಿ ಮಾಡಿದರು. ಮತ್ತೆ ಆ ರಸ್ತೆಗೆ ಅಡ್ಡವಾಗಿ ಹರಿಯುವ ಹೊಳೆ, ತೋಡುಗಳಿಗೆ ಸರಕಾರ ಕೊಡಲೊಪ್ಪಿದ್ದ ಹತ್ತು ಸಾವಿರ ರೂಪಾಯಿಗಳನ್ನು ವ್ಯಯ ಮಾಡಿ ಸೇತುವೆ ಕಟ್ಟಿ ಕೊಡುವಂತೆ ಕೇಳಿದರು. ಸರಕಾರವು ಸಂತೋಷದಿಂದ ಈಗಾಗಲೇ ಈ ಕೆಲಸ ಪ್ರಾರಂಭಿಸಿದೆಯೆಂದು ಮಂತ್ರಿಗಳು ಹೇಳಿದರು. ಇಂಥ ಆದರ್ಶವು ಅನುಕರಣೀಯ. ಗ್ರಾಮಸ್ಥರು ಸುಮಾರು ೧೦ ಸಾವಿರ ರೂ. ಗಳ ಬೆಲೆ ಬಾಳುವ ತಮ್ಮ ದೈಹಿಕ ಪರಿಶ್ರಮವನ್ನು ತಮ್ಮ ಗ್ರಾಮಕ್ಕಾಗಿ ಮಾಡಿಕೊಂಡ ಕಾರಣ ಗ್ರಾಮಕ್ಕೆ ೨೦ ಸಾವಿರ ರೂಪಾಯಿಗಳ ಸಹಾಯವಾದಂತಾಯಿತು. ಈ ರೀತಿಯಲ್ಲಿ ಪ್ರತಿ ಗ್ರಾಮದವರು ಪರಿಶ್ರಮ ಮಾಡಿದರೆ ಕೊಡಗಿನ ಉದ್ಧಾರವು ಶೀಘ್ರ ಭವಿಷ್ಯದಲ್ಲೇ ಆಗುವದು.

ತಿಳಿಯಬೇಕಾದ ಒಂದು ವಿಚಾರ

ಶಿವಕೊಟ್ಟ ಜೋಳಿಗೆಯೆಂದು ಅದನ್ನು ತೂಗಹಾಕಿ ತೃಪ್ತಿಯಿಂದಿದ್ದರೆ ಯಾವ ರೀತಿ ಹೊಟ್ಟೆ ತುಂಬಲಾರದೋ ಅದೇ ರೀತಿ ಜನತಾ ಸರಕಾರವಿದೆ, ಜನಪ್ರಿಯ ಮುಂದಾಳುಗಳಿದ್ದಾರೆ ಎಂದರೆ ನಾಡಿನ ಜನತೆಯ ಅಭಿವೃದ್ಧಿಯಾಗಲಿಲ್ಲ. ಯಾವ ಸರಕಾರ ಆಡಳಿತ ನಡೆಸುತಿದ್ದರೂ ಮಹಾತ್ಮ ಗಾಂಧಿಯವರಂಥಾ ತ್ಯಾಗಿಗಳೂ, ಪರಹಿತಕಾಂಕ್ಷಿಗಳೂ ನಮಗೆ ಆಡಳಿತಗಾರರಾಗಿ ದೊರೆತರೂ ಕೂಡ ಜನತೆಯ ಪ್ರಗತಿ, ದೇಶದ ಉನ್ನತಿ, ಆರ್ಥಿಕ ಸಂಪತ್ತು ಹೆಚ್ಚಬೇಕಾದರೆ ಅದು ಪ್ರಜೆಗಳಾದ ನಮ್ಮ ಸ್ವಪ್ರಯತ್ನದಿಂದಲೇ ಆಗಬೇಕು. ಯಾವ ಕುಬೇರ ಸರಕಾರವಾದರೂ ಕೂಡ ಪ್ರತಿ ಗ್ರಾಮದ ಸಮಸ್ಯೆ, ಬೇಕು ಬೇಡಿಕೆಗಳನ್ನು ನಿವಾರಿಸಿ ಕೊಡಲು ಶಕ್ತವಾಗಲಾರದು. ಅದು ರಷ್ಯಾವಿರಲಿ ಯೂ ಅಮೇರಿಕಾವಿರಲಿ ಅವು ಪ್ರಗತಿಯ ಹಂತವನ್ನು ಒಂದೊಂದಾಗಿ ಏರಿ ಇಂದು ಆದರ್ಶ ರಾಷ್ಟ್ರಗಳಾಗಿದ್ದರೆ ಜನತೆಯ ಸಾಂಘಿಕ ಪ್ರಯತ್ನದ ಕಾರಣದಿಂದಲ್ಲದೆ ಸರಕಾರದ ಆಜ್ಞೆ, ಅಧಿಕಾರಗಳಿಂದಲ್ಲ. ಆದ್ದರಿಂದ ದೇಶದ ಉದ್ಧಾರ ಆಗಬೇಕಿದ್ದರೆ ಅದು ದೇಶದ ಜನರಿಂದಲೇ ಆಗಬೇಕು.. ಅದು ಕಾಂಗ್ರೆಸ್ ಸರಕಾರವಿರಲಿ ಯೂ ಕಮ್ಯೂನಿಸ್ಟ್ ಸರಕಾರಲೀ ಅಥವಾ ಮತ್ತಾವುದೇ ಸರ್ವಾಧಿಕಾರವಿರಲಿ ದೇಶದಜನತೆಯ ದುಡಿಮೆಯಿಂದಲೇ ಪ್ರಗತಿ ಆಗಬೇಕು. ಭಾರತದಂಥಾ ಬಡ ರಾಜ್ಯವು ದೇಶದ ಜನತೆಗೆ ಬೇಕಿರುವದನ್ನೆಲ್ಲಾ ದುಡ್ಡಿನ ಹೊಳೆ ಹರಿಸಿ ಸಾಧಿಸಲಾರದು. ಭಾರತದಲ್ಲಿ ದುಡ್ಡಿನ ಬಲ ಕಡಿಮೆಯಾದರೂ ಜನಬಲ ಹೆಚ್ಚಿದೆ. ಈ ಜನತೆಯ ಸಾಂಘಿಕ ದುಡಿಮೆಯ ಮಹಾ ಪ್ರವಾಹವು ಸರ್ವ ಎಡೆ ಹರಿಯುವಂತಾದರೆ ದೇಶವು ಸುಭಿಕ್ಷೆಯ ನಾಡಾಗುವುದರಲ್ಲಿ ಸಂಶಯವಿಲ್ಲ

ಭಾರತೀಯರಾದ ನಮ್ಮಲ್ಲಿ ಆರಂಭ ಶೂರತ್ವ ಹೆಚ್ಚು. ಪ್ರಥಮವಾಗಿ ನಾವು ಬಹು ಆಡಂಬರದಿಂದ ಕಾರ್ಯಕೈಕೊಳ್ಳುತ್ತೇವೆ. ಆದರೆ ಆ ಸ್ಫೂರ್ತಿಯೇ ಕಡೆಯ ವರೆಗೆ ಇರುವದಿಲ್ಲ. ನಮ್ಮ ಸ್ಫೂರ್ತಿ ಹುಲ್ಲಿನ ಬೆಂಕಿಯಂತಾಗಬಾರದು. ಈಗ ನೇ

ನಾವು ಜಪಾನಿನಿಂದ ಕಲಿಯಬೇಕಾದ ಪಾಠ. [೬]

ಜಪಾನಿನ ನೈಸರ್ಗಿಕ ಸಂಪತ್ತು.

— ಮೂಲ ಲೇಖಕ —ಶ್ರೀ ಚಮನ್‌ಲಾಲ್ —

ಖನಿಜಸಂಪತ್ತು.

ಖನಿಜ ಸಂಪತ್ತುಗಳ ದೃಷ್ಟಿಯಿಂದ ಜಪಾನು ಬಡ ರಾಷ್ಟ್ರವೆನ್ನಬಹುದು. ತನ್ನ ಕೈಗಾರಿಕೆಗೆ ಬೇಕಾದ ಖನಿಜಗಳನ್ನು ಅದು ಹೊರಗಿನಿಂದ ತರಬೇಕಿದೆ. ಜಪಾನಿನಲ್ಲಿ ಪೆಟ್ರೋಲು ಪ್ರಾಮುಖ್ಯವಾಗಿ ಅಕಿಟಾ, ಯಾಮಗಾಟ ಮತ್ತು ನೈಗಾಟ ಜಿಲ್ಲೆಗಳಲ್ಲಿ ದೊರೆಯುತ್ತದೆ. ಸುಮಾರು ೪೦೦೦ ಬಾವಿಗಳಿಂದ ವರ್ಷಕ್ಕೆ ಜಪಾನು ೧,೪೦೦,೦೦೦ ಬೇರೆಲ್‌ಗಳಷ್ಟು ಪೆಟ್ರೋಲನ್ನು ಉತ್ಪಾದಿಸಿದರೂ ಅದು ಕೇವಲ ಜಪಾನಿಗೆ ಅಗತ್ಯವಿರುವ ಪರಿಮಾಣದ ಕೇವಲ ಶೇಕಡ ಹತ್ತರಷ್ಟು. ಸೀಸ, ಮ್ಯಾಂಗನೀಸ್, ಟಂಗ್‌ಸ್ಟನ್, ನಿಕ್ಕಲ್, ಕೋಬಾಲ್ಟ್, ಪಾದರಸ, ವನಾಡಿಯಮ್, ಟಿಟಾನಿಯಮ್, ತಬ್ಬಿಣ, ಆಸ್‌ಬೆಸ್ಟಸ್, ಜಿಪ್ಸಿಯಮ್, ಟಿನ್ ಮೊದಲಾದ ಖನಿಜಗಳು ಅಲ್ಲಿ ಉತ್ಪಾದನೆಯಾದರೂ ಜಪಾನಿನ ಆವಶ್ಯಕತೆಗೆ ಸಾಕಷ್ಟು ಉತ್ಪಾದನೆಯಾಗುತ್ತಿಲ್ಲ. ಫಾಸ್ಫೇಟ್, ಪೊಟ್ಯಾಶ್ ಮೊದಲಾದ ಕ್ಷಾರಜನಕ ವಸ್ತುಗಳು ಜಪಾನಿನಲ್ಲಿ ಉತ್ಪಾದನೆಯಾಗದ ಕಾರಣ ಅವನ್ನೆಲ್ಲಾ ಹೊರಗಿನಿಂದಲೇ ತರಬೇಕಿದ.

ತಾಮ್ರದ ಬಗ್ಗೆ ಜಪಾನು ತನ್ನ ಆವಶ್ಯಕತೆಗಿಂಥಾ ೭೦,೦೦೦ ಮೆಟ್ರಿಕ್ ಟನ್ನು ಹೆಚ್ಚಿಗೆ ಉತ್ಪಾದಿಸುತ್ತದೆ. ಝಿಂಕ್‌ನ ಉತ್ಪಾದನೆಯು ೧೯೩೫ ರಿಂದ ವರ್ಷಕ್ಕೆ ಜಪಾನಿನ ಅವಶ್ಯಕತೆಗಿಂಥಾ ೨೩,೦೦೦ ಟನ್ ಹೆಚ್ಚಿದೆ. ಜಪಾನು ವರ್ಷಕ್ಕೆ ೩-೮ ಟನ್ನುಗಳಷ್ಟು ಚಿನ್ನವನ್ನು ಉತ್ಪಾದಿಸುತ್ತದೆ. ಬೆಳ್ಳಿಯ ಉತ್ಪಾದನೆಯು ಅವಶ್ಯಕತೆಗಿಂಥಾ ೨,೦೦,೦೦೦ ಕಿಲೋಗ್ರಾಮು ಹೆಚ್ಚಿದ್ದು ಜಗತ್ತಿನಲ್ಲಿ ಏಳನೇ ಸ್ಥಾನಪಡೆದಿದೆ. ಆರ್‌ಸೆನಿಕ್, ಕ್ರೋಮಾಯಿಟ್ ಮೊದಲಾದುವುಗಳನ್ನು ಜಪಾನು ತನ್ನ ಬೇಡಿಕೆಗಿಂಥಾ ಹೆಚ್ಚು ಉತ್ಪಾದಿಸುತ್ತದೆ. ಕಲ್ಲಿದ್ದಲಿನ ವಿಚಾರದಲ್ಲೂ ಜಪಾನು ಅದೃಷ್ಟಶಾಲಿಯಾಗಿದೆ. ಜಪಾನಿನ ಕಲ್ಲಿದಲ್ಲಿನ ಸಂಗ್ರಹವು ೧೬,೦೦೦,೦೦೦,೦೦೦ ಮೆಟ್ರಿಕ್ ಟನ್ನುಗಳೆಂದು ಅಂದಾಜು ಮಾಡಲಾಗಿದೆ. ಇವುಗಳಲ್ಲಿ ಶೇಕಡ ೯೩ ರಷ್ಟು 'ಬಿಟುಮಿನಸ್' ಆಗಿದೆ. ೧೯೪೦ ರ ಕಲ್ಲಿದ್ದಲ್ಲು ಉತ್ಪತ್ತಿ ೫೭,೦೦೦,೦೦೦ ಮೆಟ್ರಿಕ್ ಟನ್ನುಗಳು. ರಂಜಕ ಮತ್ತದಕ್ಕೆ ಸಂಬಂಧಿಸಿದ ವಸ್ತುಗಳ ಉತ್ಪಾದನೆಯು ೧೯೪೩ ರಲ್ಲಿ ೩,೮೦೦,೦೦೦ ಟನ್ನುಗಳಾಗಿದ್ದವು. ಜಪಾನು ವರ್ಷಕ್ಕೆ ೪,೦೦೦,೦೦೦ ಮೆಟ್ರಿಕ್ ಟನ್ನುಗಳಷ್ಟು ಸಿಮೆಂಟನ್ನು ಉತ್ಪಾದಿಸುತ್ತದೆ.

ವಿದ್ಯುಚ್ಛಕ್ತಿ

ಜಪಾನು ನೀರಿನ ಮಟ್ಟಿಗೆ ಬಹು ಅನುಕೂಲತೆಯನ್ನು ಪಡೆದಿದೆ. ಅನೇಕ ನದಿ ಕೆರೆಗಳಿಂದ ಅದು ತುಂಬಿದೆ. ಈ ನದಿ, ಕೆರೆಗಳ ನೀರಿನ ಸದುಪಯೋಗವನ್ನು ಅದು ಚೆನ್ನಾಗಿ ಮಾಡಿಕೊಂಡಿದೆ. ದೇಶವು ಚಿಕ್ಕದಾದುದರಿಂದ ನದಿಗಳು ಉದ್ದವಾಗಿಲ್ಲ. ಆದರೆ ಮಳೆ ಹೆಚ್ಚಾದ್ದರಿಂದ ನದಿಗಳಲ್ಲ ತುಂಬಾ ನೀರಿನ ಪ್ರವಾಹವಿರುತ್ತದೆ. ಜಪಾನಿನ ವಿದ್ಯುಚ್ಛಕ್ತಿ ಶಕ್ತಿ ಒಟ್ಟು ೧ ಕೋಟಿ ಕಿಲೋವಾಟ್‌ಗಳೆಂದು ಅಂದಾಜು ಮಾಡಲಾಗಿದೆ. ಜಪಾನಿನ ಅತೀ ದೊಡ್ಡ ವಿದ್ಯುಚ್ಛಕ್ತಿ ಕೇಂದ್ರವು ಶಿನಾನೋ ನದಿಯಲ್ಲಿದೆ. ಇದು ೧,೬೫,೦೦೦ ಕಿಲೋವಾಟ್ ಶಕ್ತಿಯನ್ನು ಉತ್ಪಾದಿಸುತ್ತದೆ. ಇದಲ್ಲದೆ ದೇಶದ ಉದ್ದಗಲಕ್ಕೂ ನದಿ, ತೋಡುಗಳನ್ನು ಕಟ್ಟಿ ನೀರಾವರಿ ಕೆಲಸಗಳನ್ನು ಮಾಡಿರುವದಲ್ಲದೆ ಅವುಗಳಿಂದಲೇ ವಿದ್ಯುಚ್ಛಕ್ತಿ ಉತ್ಪಾದಿಸುವ ಯೋಜನೆಯನ್ನೂ ಕಾರ್ಯರೂಪಕ್ಕೆ ತಂದಿರುವರು. ಇದರಿಂದಾಗಿ ಪ್ರತಿ ಮನೆಗೂ ವಿದ್ಯುಚ್ಛಕ್ತಿ ಸರಬರಾಯಿಯಾಗಿದೆ. ಪ್ರತಿ ಮನೆಯೂ ತನಗೆ ಬೇಕಾದ ಕೈಗಾರಿಕೆಯನ್ನು ತನ್ನ ಮನೆಯಲ್ಲಿಯೇ ಇಟ್ಟುಕೊಳ್ಳುವದು ಸಾಧ್ಯವಾಗಿದೆ.

ಪರಿಶೋಧನೆ ಮತ್ತು ಪ್ರಚಾರ

ಭೂರಚನಾ ಶಾಸ್ತ್ರ ಮತ್ತು ಖನಿಜ ಶಾಸ್ತ್ರಗಳಲ್ಲಿ ಅವರು ನಡೆಸುತ್ತಿರುವ ಪರಿಶೋಧನೆಗಳನ್ನು ಸಂಯುಕ್ತ ಅಮೇರಿಕಾದೊಡನೆ ಹೋಲಿಸಿದರೆ ಚಿಕ್ಕದೆಂದು ತೋರಬಹುದು. ಸಂಯುಕ್ತ ಅಮೇರಿಕಾದ ವಿದ್ಯಾಲಯಗಳಿಂದ ಹೊರ ಬರುವ ವಿದ್ಯಾರ್ಥಿಗಳಷ್ಟು ಜಪಾನಿನ ತಜ್ಞರಿಲ್ಲದಿರಬಹುದು. ಆದರೆ ಈ ವಿಚಾರದಲ್ಲಿ ಸರಕಾರವು ಹೃತ್ಪೂರ್ವಕವಾದ ಪ್ರಯತ್ನವನ್ನು ಮಾಡುತ್ತಿದೆಯಲ್ಲದೆ ಜಪಾನು ದಿನದಿಂದ ದಿನಕ್ಕೆ ಈ ಮಾರ್ಗದಲ್ಲಿ ಮುಂದರಿಯುತ್ತಿದೆಯೆನ್ನುವದರಲ್ಲಿ ಸಂಶಯವಿಲ್ಲ.

ಜಪಾನಿನ ಇಂಪೀರಿಯಲ್ ಜಿಯೋಲಾಜಿಕಲ್ ಸರ್ವೆ, ಟೋಕಿಯೋ, ಹೊಕ್ಕಿಡೋ, ಕ್ಯೋಟೋ, ಕ್ಯುಶು ಮೊದಲಾದೆಡೆಗಳಲ್ಲಿರುವ ಇಂಪೀರಿಯಲ್ ವಿಶ್ವವಿದ್ಯಾಲಯಗಳು, ಯೊವಾಟಾ ಟೆಕ್ನಿಕಲ್ ರಿಸರ್ಚ್ ಸಂಸ್ಥೆ, ಜಪಾನು ಕಬ್ಬಿಣ ಮತ್ತು ಉಕ್ಕಿನ ಕಂಪೆನಿ, ಮೊದಲಾದ ಹಲವು ಸಂಸ್ಥೆಗಳು ಅತ್ಯಾಧುನಿಕ ರೀತಿಯ ಪರಿಶೋಧನೆಗಳನ್ನು ಮಾಡುತ್ತಿವೆ.

ಆರ್ಥಿಕ ತಜ್ಞರಿಗೊಂದು ಸವಾಲು

ಯುದ್ಧದ ನಂತರ ಜಪಾನಿನ ಆರ್ಥಿಕ ಹಾಗೂ ಕೈಗಾರಿಕಾ ನೀತಿಯು ಹೆಚ್ಚು ಹೆಚ್ಚಾಗಿ ಗುಡಿಕೈಗಾರಿಕೆ ಮತ್ತು ತನ್ನ ದೇಶದಲ್ಲಿ ದೊರೆಯುವ ಕಚ್ಚಾ ಮಾಲುಗಳ ಸದುಪಯೋಗದ ಕಡೆಗೆ ಕೇಂದ್ರಿತವಾಗಿದೆ. ಅನೇಕ ಕೈಗಾರಿಕಾ ತಜ್ಞರು ಮತ್ತು ಅರ್ಥಶಾಸ್ತ್ರಜ್ಞರು ಹೇಳುತ್ತಿದ್ದ ಮತ್ತು ಇಂದೂ ಹೇಳುತ್ತಿರುವ ಕೈಗಾರಿಕಾ ಕೇಂದ್ರದ ಹತ್ತಿರದಲ್ಲಿಯೇ ಕಚ್ಚಾ ಮಾಲು ದೊರೆಯಬೇಕು ಯಾ ಕಚ್ಚಾ ಮಾಲು ದೊರೆಯುವಲ್ಲಿಯೇ ಕೈಗಾರಿಕೆ ಸ್ಥಾಪಿಸಲ್ಪಡಬೇಕೆಂಬ ಅಂಥ ವಿಶ್ವಾಸವನ್ನು ಜಪಾನು ಸುಳ್ಳೆಂದು ಸಾಬೀತುಗೊಳಿಸಿದೆ. ಹತ್ತಿ, ಟಿನ್, ರಬ್ಬರು, ಉಕ್ಕು ಮೊದಲಾದ ನೂರಾರು ಅತ್ಯಾವಶ್ಯಕ ಸಾಹಿತ್ಯಗಳು ಜಪಾನಿನಲ್ಲಿ ಸಾಕಷ್ಟಿಲ್ಲ. ಆದರೆ ಇವನ್ನು ಹೊರರಾಷ್ಟ್ರಗಳಿಂದ ತರಿಸಿ ಜಪಾನು ಅತೀ ಲಾಭದಾಯಕವಾದ ಕೈಗಾರಿಕೆಯನ್ನು ಸ್ಥಾಪಿಸಿದೆ. ಜಪಾನಿನ ಟೆಕ್ಸ್‌ಟೈಲ್ ಕೈಗಾರಿಕೆಯು ಇಡೀ ಜಗತ್ತಿನಲ್ಲಿ ಕೀರ್ತಿಪಡೆದಿದೆ. ಸುಮಾರು ನಾಲ್ಕು ಕೋಟಿ ರೂಪಾಯಿ ಬೆಲೆ ಬಾಳುವ ಹೊಲಿಗೆ ಮತ್ತು ಕಸೂತಿ ಕೆಲಸದ ವಸ್ತುಗಳನ್ನು ಅದು ಹೊರಗೆ ಕಳುಹಿಸುತ್ತದೆ. ಗುಂಡಿ, ಬ್ರಶ್ ಮೊದಲಾದ ನೂರಾರು ರೀತಿಯ ಸಾಹಿತ್ಯಗಳನ್ನು ತಯಾರಿಸುತ್ತದೆ. ರಬ್ಬರ್ ಸಾಹಿತ್ಯಗಳಿಗೆ ರಬ್ಬರನ್ನು ಪೂರ್ತಿಯಾಗಿ ಹೊರದೇಶಗಳಿಂದ ತರಿಸಿದರೂ ಅದು ಮಾಡುವ ರಬ್ಬರು ಸಾಧನಗಳು ಜಗತ್ತಿನ ಯಾವುದೇ ರಾಷ್ಟ್ರದ ಸಾಧನಗಳೊಡನೆ ಸ್ಪರ್ಧೆ ನಡೆಸಬಲ್ಲವು. ಜಪಾನಿನ ಮೀನುಗಾರಿಕೆಯ ಉದ್ಯಮವು ಜಗತ್ತಿನ ಒಟ್ಟು ಉದ್ಯಮದ ಶೇಕಡ ೪೦ರಷ್ಟಿದ್ದರೂ ಮೀನು ಹಿಡಿಯಲು ಬೇಕಾದ ಬಲೆಗಳನ್ನು ಹೊರದೇಶಗಳಿಂದ ತರಿಸಿದ ಕಚ್ಚಾಮಾಲುಗಳಿಂದಲೇ ತಯಾರಿಸುತ್ತದೆ. ಜಪಾನಿನ ಅನೇಕ ಗುಡಿಕೈಗಾರಿಕೆಗಳು ಹೊರಗಿನಿಂದ ಆಮದುಮಾಡುವ ಕಚ್ಚಾಮಾಲುಗಳನ್ನು ಹೊಂದಿಕೊಂಡಿದೆ. ಜಪಾನು ಬಿದಿರಿನಿಂದ ೧೪೦೦ ವಿಧದ ಆವಶ್ಯಕ ವಸ್ತುಗಳನ್ನು ತಯಾರಿಸುತ್ತದೆ. ಈ ತಯಾರಿಕೆಯು ಗುಡಿಕೈಗಾರಿಕೆಯ ರೂಪದಲ್ಲಿ ನಡೆಯುತ್ತದೆ. ಆದರೆ ಇದಕ್ಕೆ ಬೇಕಾದ ಬಿದಿರನ್ನು ಅದು ಹೊರದೇಶಗಳಿಂದ ತರಿಸುತ್ತದೆ. ಕಾಗದಕ್ಕೆ ಬೇಕಾದ ಕಚ್ಚಾ ಮಾಲು ಹೊರಗಿನಿಂದ ಬರುತ್ತದೆ. ಕಾಗದದಿಂದ ಜಪಾನು ೩೦೦ ಕ್ಕೂ ಮಿಕ್ಕಿದ ಸುಂದರ ವಸ್ತುಗಳನ್ನು ತಯಾರಿಸುತ್ತದೆ. ಕೊಡೆಗಳು, ಲ್ಯಾಂಟರ್ನ್, ಬೀಸಣಿಗೆ, ಚೀಲ, ಹಗ್ಗ, ಕೈವಸ್ತ್ರ, ಬಟ್ಟೆ, ಸೂಟ್‌ಕೇಸ್, ಮೊದಲಾದುವನ್ನು ಅದು ಕಾಗದದಿಂದ ತಯಾರಿಸುತ್ತದೆ. ರೇಷ್ಮೆ ವಸ್ತುಗಳಿಗೆ, ಮರದ ಆಟದ ಸಾಮಾನುಗಳಿಗೆ, ಸೆಲುಲಯಿಡ್ ವಸ್ತುಗಳಿಗೆ ಜಪಾನು ಜಗದ್ವಿಖ್ಯಾತವಾಗಿದೆ. ಈ ಎಲ್ಲಾ ಕೈಗಾರಿಕೆಗಳು ಹೊರದೇಶಗಳಿಂದ ತರಿಸಿದ ಕಚ್ಚಾ ಮಾಲುಗಳನ್ನೇ ಬಹುಮಟ್ಟಿಗೆ ಆಧರಿಸಿವೆ.

ಸೆಲುಲಯಿಡ್ ಒಂದೇ ಕೈಗಾರಿಕೆಯನ್ನು ತೆಗೆದುಕೊಂಡರೂ ಸೆಲುಲಯಿಡ್ ತಯಾರಿಸಲು ಹತ್ತಿ ಚೂರು, ನೈಟ್ರಿಕ್ ಏಸಿಡ್ ಮತ್ತು ಕರ್ಪೂರ ಬೇಕು. ಜಪಾನು ಹತ್ತಿ ಚೂರುಗಳನ್ನು ಬೇರೆ ದೇಶಗಳಿಂದ ತರಿಸುತ್ತದೆ. ಕರ್ಪೂರವನ್ನು ಫಾರ್ಮೋಸಾದಿಂದ ಪಡೆಯುತ್ತದೆ. ಜಪಾನು ತನ್ನ ಕೊಜೆ ಮಣ್ಣು ಕೈಗಾರಿಕೆಗೆ ಬೇಕಾದ ಮಣ್ಣನ್ನು ಚೈನಾದಿಂದ ಪಡೆಯುತ್ತದೆ. ಕೊಜೆ ಮಣ್ಣಿನಿಂದ ತಯಾರಾಗುವ ಹಲವು ಜಗದ್ವಿಖ್ಯಾತ ವಸ್ತುಗಳು ಜಪಾನಿನ ಗುಡಿಕೈಗಾರಿಕೆಯ ತಯಾರಿಕೆಗಳಾಗಿವೆ. ಜಪಾನಿನ ಗುಡಿಕೈಗಾರಿಕೆಗಳು ಕೊಜೆ ಮಣ್ಣಿನಿಂದ ಹತ್ತು ಜನರ ಊಟಕ್ಕಿರುವ ೪೦ ಸಾಹಿತ್ಯಗಳನ್ನು ಕೇವಲ ರೂಪಾಯಿ ಹನ್ನೆರಡರಷ್ಟು ಕಡಿಮೆ ಬೆಲೆಗೆ ಮಾರಲು ಶಕ್ತವಾಗಿವೆ!

ಶದ ಹಲವು ಭಾಗಗಳಲ್ಲಿ ತೋರಿಬರುತ್ತಿರುವ ಶರೀರ ಪರಿಶ್ರಮದ ಈ ಉತ್ತಮ ಆದರ್ಶವು ಇನ್ನೂ ಬೆಳೆದು ಹಬ್ಬಬೇಕು. ಸಾಮೂಹಿಕ ಪರಿಶ್ರಮದಿಂದ ನಾಡಿನ ರೈತರಾದ ನಮಗೆ ಮಾಡಲು ಸಾಧ್ಯವಿರುವದನ್ನೆಲ್ಲಾ ಮಾಡಿ ಸಾಧ್ಯವಾಗದ ಸೇತುವೆ, ಬಾವಿ, ಅಣೆಕಟ್ಟು, ಶಾಲೆ, ಆಸ್ಪತ್ರೆ, ಮೊದಲಾದ ಕೆಲಸಗಳಿಗೆ ಸರಕಾರವನ್ನು ಕೇಳಿದರೆ ಸರಕಾರವು ಸಂತೋಷದಿಂದ ಮಾಡುವದು. ಸರಕಾರವು ನಮ್ಮದಾದ ಮೇಲೆ ಜನತೆಗಿರುವ ಜವಾಬ್ದಾರಿಯಿದು. ಈ ಜವಾಬ್ದಾರಿಯನ್ನು ನಾವೆಲ್ಲರೂ ಒಗ್ಗಟ್ಟಾಗಿ ಒಮ್ಮನಸ್ಸಿನಿಂದ ಕೈಕೊಂಡರೆ ದೇಶದ ಸರ್ವತೋಮುಖ ಅಭಿವೃದ್ಧಿ ಕ್ಷಿಪ್ರದಲ್ಲೇ ಆಗುವದು.

ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ ಉಡುಪಿ (ದ ಭಾರತ)

ಆರ್ಥಿಕ ಉಳಿತಾಯ ಯೋಜನೆಗಳಲ್ಲಿ "ಕ್ಯುಮುಲೇಟಿವ್ ಡಿಪೋಜಿಟ್" ಯೋಜನೆಯು ಅತಿ ಪರಿಣಾಮಕಾರಿ ಹಾಗೂ ಅನುಕೂಲವಾದುದು. ಯಾವುದಾದರೊಂದು ನಿರ್ದಿಷ್ಟ ಉದ್ದೇಶ ಸಾಧನೆಗೆ, ನಿಯಮಿತ ಕಾಲಕ್ಕೆ ನಿಯಮಿತ ಹಣವನ್ನು ಒಂದು ನಿಯಮಿತ ಅವಧಿಯೊಳಗೆ ಬಡ್ಡಿಯೊಂದಿಗೆ ವಾಪಸು ಸಿಗುವಂತೆ ಬ್ಯಾಂಕಿನಲ್ಲಿ ಶೇಖರಿಸಿಡುವುದೇ ಈ ಯೋಜನೆಯ ಮೂಲ ತತ್ವ. ಇದು ಮುಖ್ಯವಾಗಿ ಮಧ್ಯಮ ತರಗತಿಯ ಜನರಿಗೆ ಇಲ್ಲವೆ ನಿಯಮಿತ ಸಂಬಳದ ನೌಕರರಿಗೆ ತಮ್ಮ ಮುದ್ದು ಮಕ್ಕಳ ವಿದ್ಯಾಭ್ಯಾಸ, ಮುಂಜಿ, ಮದುವೆ ಯಾ ಇನ್ನಿತರ ಸದುದ್ದೇಶ ಸಾಧನೆಗಳಿಗೆ ಅತ್ಯನುಕೂಲ ಹಾಗೂ ಅತಿ ಫಲಕಾರೀ ಯೋಜನೆ.

ವಿಶೇಷ ಮಾಹಿತಿಗೆ, ಕೊಡಗು ಸಂಸ್ಥಾನದಲ್ಲಿನ ಈ ಕೆಳಗಣ ನಮ್ಮ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ.

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

THE CANARA BANKING CORPORATION LIMITED.

Estd: 1906] [H. O, Udipi (S. India)

ಕೊಡಗು

ಕಣ್ಗಳ ಬಿರಿಯುದು ನಿನ್ನ ಸ್ವರೂಪ
ಹೊಂಬೊಳು ಫಳ ಫಳ ಬೆಳಗುತಿವೆ;
ನಿನ್ನ ಗಾನದ ಲಹರಿಯು ಇಂದು
ಮನಸಿಗೆ ಇಂಪನು ಊಡಿಸಿದೆ.

ವಾರ್ಷಿಕ ಚಂದಾ ರೂ. ೫—೦—೦ ಶುಕ್ರವಾರ

ಸಂಪುಟ ೩೨] —— [ಸಂಚಿಕೆ ೨೦ ೧೬--೧೦--೧೯೫೩

ಬಿಡಿ ಪ್ರತಿ

2 ಆಣೆ

KODAGU KANNADA WEEKLY MERCARA

ಈ ವಾರದ ಕಥೆ.

ಕ್ಷಮಾ.

— ಲೇಖಕಿ:—ಮಿಸ್. ಮುತ್ತಮ್ಮ, ಎಸ್. ಕೆ. —

ಹುಣ್ಣಿಮೆಯ ದಿನವದು. ಸೂರ್ಯನು ಆಗ ತಾನೆ ಅಸ್ತಂಗತನಾಗುತಿದ್ದನು, ಪೂರ್ವ ದಿಗಂತದಲ್ಲಿ ಚಂದ್ರನ ಶೀತಲ ಛಾಯೆ ಪಸರಿಸತೊಡಗಿತ್ತು. ನಕ್ಷತ್ರಗಳು ಅಲ್ಲೊಂದು ಇಲ್ಲೊಂದು ಮಿನುಗುತಿದ್ದವು. ಪ್ರಶಾಂತವಾದ ಈ ಸಂಧ್ಯಾಸಮಯದಲ್ಲಿ ಹತ್ತಿರದ ಮನೆಯೊಳಗಿಂದ ಕಟ್, ಕಟ್ ಶಬ್ದ ಕೇಳಿಬರುತಿತ್ತು. ಶಿಲ್ಪಿಯೋರ್ವನು ಕಲ್ಲಿನ ಪ್ರತಿಮೆಯೊಂದನ್ನು ಕೆತ್ತುತಿದ್ದನು. ಕೆಲಸದಲ್ಲಿ ಮಗ್ನನಾಗಿದ್ದುದರಿಂದ ಸಮಯದ ಕಲ್ಪನೆಯೇ ಆತನಿಗಿರಲಿಲ್ಲ. ಬಹಳ ಹೊತ್ತಿನಿಂದ ಕೆಲಸ ಮಾಡುತಿದ್ದುದರಿಂದ ಆತನ ಹಣೆಯಲ್ಲಿ ಬೆವರಿನ ಹನಿಗಳು ತುಂಬಿದ್ದವು. ಆತನ ಈ ಕೆತ್ತನೆ ಕೆಲಸದಲ್ಲಿ ಆತನ ಉಳಿಯ ಪೆಟ್ಟು ಹೇಗೆ ಶಬ್ದ ಮಾಡುತಿತ್ತೋ ಅದೇ ರೀತಿ ಆತನ ಹೃದಯದಲ್ಲೂ ಒಂದು ರೀತಿಯ ಉದ್ವೇಗವಿತ್ತು. ಆತನಿಗೆ ಆತನು ಕೆತ್ತುತಿದ್ದುದು ಕೇವಲ ಕಲ್ಲಿನ ಮೂರ್ತಿಯಾಗಿರಲಿಲ್ಲ. ಅದರ ಪ್ರತಿಯೊಂದು ರಚನೆ, ಆಕಾರದಲ್ಲಿಯೂ ಆತನು ಹೊಸ ಅನುಭವವನ್ನು ಹೊಂದುತ್ತಿದ್ದನು!

ಕಲ್ಲು ಕೆತ್ತುವ ಶಿಲ್ಪಿ ಕಲೆ ಆತನ ಕುಲಕಸುಬಲ್ಲ. ಆದರೆ ಆತನು ಇತ್ತೀಚೆಗೆ ಕತ್ತನೆಯ ಕೆಲಸವನ್ನು ಕೈಗೊಂಡಿದ್ದನು ಅದನ್ನು ಕೈಗೊಂಡಂದಿನಿಂದ ಅದಕ್ಕೆ ತನ್ನ ಸರ್ವ ಚೇತನವನ್ನೂ ವಿನಿಯೋಗಿಸಿದ್ದನು. ಆತನಿಗೆ ವಿವಾಹವಾಗಿತ್ತು. ಆತನ ಹೆಂಡತಿಯ ಮೇಲೆ ಅನನ್ಯ ಪ್ರೀತಿಯಿತ್ತು. ಉದ್ಯಮ ಮತ್ತು ಪ್ರೇಮಗಳ ಎರಕ ಹೊಯ್ದಂತೆ ಆತನು ಅಂದು ಕಲ್ಲಿನಲ್ಲಿ ತನ್ನ ಪತ್ನಿಯ ಸುಂದರ ವಿಗ್ರಹವನ್ನೇ ಕೆತ್ತುತಿದ್ದ.

ಶಿಲಾ ಪ್ರತಿಮೆ ಪೂರ್ತಿಗೊಳ್ಳುತ್ತಾ ಬಂದಿತ್ತು. ಅಲ್ಲಲ್ಲಿ ಅಲ್ಪ ಸ್ವಲ್ಪ ಕೆಲಸ ಉಳಿದಿತ್ತು. ಆತನ ಉಳಿಯ ಒಂದೊಂದೇಟಿಗೂ ವಿಗ್ರಹವು ಸ್ಪಷ್ಟರೂಪುಗೊಂಡು ಸಜೀವತೆಯನ್ನು ಪಡೆಯುತಿತ್ತು. ಶಿಲ್ಪಿಯು ಬೆಳಗಿನಿಂದ ದುಡಿದು ಸೋತಿದ್ದನು. ಚಂದ್ರನ ತಂಪಾದ ಬೆಳಕು ಮಂದವಾಗಿ ಬೀಳತೊಡಗಿತ್ತು. ಆತನಿಗೆ ಸಮಯದ ಅರಿವಾದರೂ ತನ್ನ ಕೆಲಸವನ್ನು ನಿಲ್ಲಿಸಿ ಚಂದ್ರನ ಶೀತಲ ತಂಪಿನಲ್ಲಿ ಕಣ್ಮುಚ್ಚಿ ಕುಳಿತನು. ಆತನ ಮನವು ತನ್ನ ಪ್ರೇಯಸಿಯೆಡೆಗೆ ಧಾವಿಸಿತ್ತು. ಮನಸ್ಸಿನಲ್ಲಿ ನಾನಾ ಆಲೋಚನೆಗಳನ್ನು ತಂದುಕೊಂಡು ಮೌನ ಹಾಗೂ ಶಾಂತ ಸುಖದಲ್ಲಿ ತಲ್ಲೀನನಾಗಿದ್ದನು.

ಆತನು ಎಷ್ಟು ಸಮಯದ ವರೆಗೆ ಹೀಗೆ ಕುಳಿತಿದ್ದನೆಂದು ಹೇಳಲು ಬರುವದಿಲ್ಲ. ಯಾರದೋ ಕಾಲ ಸಪ್ಪಳ ಕೇಳಿಸಿದಂತಾದ್ದರಿಂದ ಆತನು ಕಣ್ತೆರೆದನು. ಹೇಳುವದೇನು? ಆತನ ಹೃದಯರಾಣಿ ಕ್ಷಮಾಳು ಎದುರುಗಡೆಯಿಂದ ಮುಗುಳು ನಗೆನಗುತ್ತಾ ಬರುತಿದ್ದಳು. ಆಕೆಯನ್ನು ಕಂಡು ಹಿರಿಹಿಗ್ಗಿದ ಶಿಲ್ಪಿಯು ಆಕೆಯ ಹತ್ತಿರ ಬಂದೊಡನೆ ಶಿಲಾವಿಗ್ರಹದ ಮುಖಕ್ಕೆ ಮುಚ್ಚಿದ್ದ ಬಟ್ಟೆಯನ್ನು ತೆಗೆದನು. ಕ್ಷಮಾಳು ವಿಗ್ರಹವನ್ನು ನೋಡಿದಳು. ತನ್ನದೇ ವಿಗ್ರಹ, ಆಕಾರ, ಅದೇ ನಿಲುವು, ಅದೇ ಮುಂಗುರುಳು, ಅದೇ ಕಿರುನಗೆ, ಸ್ಪಟಿಕ ಶಿಲೆಯ ಆ ವಿಗ್ರಹವು ಕ್ಷಮಾಳ ಪ್ರತಿರೂಪವಾಗಿತ್ತು. ಕ್ಷಮಾಳು ತಲೆಯಿಂದ ಹಿಡಿದು ಕಾಲಿನ ವರೆಗೆ ವಿಗ್ರಹವನ್ನು ನೋಡಿದಳು. ವಿಗ್ರಹವನ್ನು ನಿಲ್ಲಿಸಿದ್ದ ಅಸ್ತಿಭಾರ ಶಿಲೆಯಲ್ಲಿ ಬರೆದ ಎರಡು ಅಕ್ಷರಗಳನ್ನೂ ಓದಿದಳು.

ಕ್ಷಮಾಳು ಗಂಡನ ಪಕ್ಕದಲ್ಲಿ ಕುಳಿತಳು. ಶಿಲ್ಪಿಯು ತನ್ನ ಒರಟು ಕೈಗಳನ್ನು ಆಕೆಯ ಮೃದು ಹೆಗಲ ಮೇಲಿರಿಸಿ ಆಕೆಯನ್ನು ಪಕ್ಕಕ್ಕೆ ಸರಿಸಿಕೊಂಡನು. ಶಿಲ್ಪಿಯು ತನ್ನ ಸಂಗಿನಿಯ ಸಹವಾಸ, ಉದ್ರೇಕಪೂರ್ಣ ಪೂರ್ಣಿಮ ಚಂದ್ರನ ಶೀತಲ ಉನ್ಮತ್ತತೆಯಿಂದ, 'ನೋಡು ಕ್ಷಮಾ, ಈ ವಿಗ್ರಹವು ನಿನ್ನದು. ಹೆಸರು ಕೂಡಾ ನಿನ್ನದೇ. ಆದರೆ ಆ ಹೆಸರಲ್ಲಿ ಅಡಕವಾಗಿರುವ ಕ್ಷಮಾಗುಣವು ನಿನ್ನದು ಹಾಗೂ ನನ್ನ ಸ್ವಂತ ಆಸ್ತಿಯಲ್ಲ ಪ್ರಪಂಚದ ಜೀವನಕ್ಕೆ ಅದು ಆಧಾರ. ಆ ಒಂದು ಗುಣ ಇಲ್ಲದಿದ್ದರೆ ಈ ಪ್ರಪಂಚದ ಜೀವನ ಅಸಹನೀಯವಾಗುತಿತ್ತು' ಎಂದು ಹೇಳಿದನು.

ಈ ಮಾತುಗಳನ್ನು ಕೇಳಿದ ಕ್ಷಮಾಳ ಕೈಗಳು ನಡುಗತೊಡಗಿದುವು. ಶಿಲ್ಪಿಯು ಎಷ್ಟು ಆನಂದದಲ್ಲಿದ್ದನೋ ಅಷ್ಟೇ ಅಸ್ಥಿರತೆ, ಅಸಮಾಧಾನಗಳು ಕ್ಷಮಾಳಲ್ಲಿ ಕಾಣುತಿದ್ದವು. ಆಕೆಯು ಬೆಂಕಿಯ ಕಾವಿನಿಂದ ಪರಿತಪಿಸುವ ಪತಂಗದಂತೆ ಅಸ್ಥಿರಳಾಗಿದ್ದಳು. ಕ್ಷಮೆಯು ಗಂಡನ ಕಡೆಗೊಮ್ಮೆ ತಿರಸ್ಕಾರ ಭಾವದಿಂದ ನೋಡಿದಳು ತಟ್ಟನೆ ಆತನ ಪಕ್ಕದಿಂದ ಎದ್ದು ದ್ರುತಗತಿಯಿಂದ ಹೊರಟು ಹೋದಳು. ಶಿಲ್ಪಿಯು ಚಕಿತನಾದನು. ಸುತ್ತುಮುತ್ತು ತವಕದಿಂದ ನೋಡಿದನು. ಎದುರಿನಲ್ಲಿ ತಾನು ಕೆತ್ತಿದ ಮೂರ್ತಿಯಲ್ಲದೆ ಬೇರೇನೂ ಇರಲಿಲ್ಲ. ಎಲ್ಲೆಲ್ಲಿಯೂ ನೀರವತೆ ಪಸರಿಸಿತ್ತು. ತಾನು ಯೋಚಿಸಿದ್ದು, ಕಂಡದ್ದು ಸರ್ವವೂ ಸ್ವಪ್ನವೆಂದು ಆತನಿಗರಿವಾಯಿತು.

ನಿದ್ರೆಯಿಂದೆದ್ದವನಂತೆ ಶಿಲ್ಪಿಯು ಎದ್ದು ಮನೆಯ ಕಡೆ ಹೊರಟನು. ಮಮತೆಯ ಹೆಂಡತಿಯೊಡನೆ ತಾನು ಕಂಡ ಸ್ವಪ್ನವನ್ನು ಹೇಳಿಕೊಂಡು ಆನಂದಿಸುವ ತವಕ ಆತನಲ್ಲಿತ್ತು. ಮನೆಯ ಹತ್ತಿರ ಬಂದಂತೆ ತೋಟದಲ್ಲಿ ಯಾರೋ ಕಿರುದನಿಯಿಂದ ಮಾತಾಡುವದು ಕೇಳಿಬಂತು. ಆತನು ನಿಂತು ನಿರೀಕ್ಷಿಸಿದನು. ತೋಟದ ಮಾಮರದ ನೆರಳಡಿಯಲ್ಲಿ ಯಾರೋ ಎರಡು ವ್ಯಕ್ತಿಗಳು ಗೋಚರವಾದುವು. ಶಿಲ್ಪಿಯು ಕಾತರತೆಯಿಂದ ನೋಡಿದನು. ಪರಪುರುಷನೊಬ್ಬನ ತೋಳ ತೆಕ್ಕೆಯಲ್ಲಿ ತನ್ನ ಕ್ಷಮಾಳನ್ನು ಕಂಡು ತನ್ನ ಕಣ್ಣುಗಳನ್ನು ನಂಬದಾದ. ಅವರಿಬ್ಬರೂ ಉನ್ಮತ್ತರಂತಿದ್ದರು. ಬಾಹ್ಯಪ್ರಪಂಚದ ಜ್ಞಾನವೇ ಅವರಿಗಿದ್ದಂತೆ ತೋರುತ್ತಿರಲಿಲ್ಲ. ಶಿಲ್ಪಿಯ ಹೃದಯವು ಈ ಅನಿರೀಕ್ಷಿತ ಆಘಾತದಿಂದ ಒಡೆದು ಚೂರಾಯಿತು. ಆತನಿಗೆ ಪ್ರಪಂಚವೇ ಶೂನ್ಯವಾಗಿ ತೋರಿತು.

'ಪ್ರೇಮ, ವಿಶ್ವಾಸ, ಎಲ್ಲಿದೆ ಪ್ರೇಮ?' ಆತನು ಹುಚ್ಚನಂತೆ ತನ್ನೊಳಗೆ ತಾನೆ ಅಂದುಕೊಂಡನು.

ಆತನು ಮನೆಗೆ ಹೋಗದೆ ಹಿಂತಿರುಗಿದನು. ತಾನು ಕೆತ್ತಿದ ಸುಂದರ ಶಿಲಾಪ್ರತಿಮೆಯ ಹತ್ತಿರ ಬಂದನು. ಜೀವದ ಜೀವಾಳವೆನಿಸಿದ್ದ ಆ ಮೂರ್ತಿಯು ಆತನಿಗೆ ಅಸಹ್ಯವಾಗಿ ತೋರುತಿತ್ತು. ಆತನು ತನ್ನ ಸುತ್ತಿಗೆಯನ್ನು ಹಿಡಿದು ಪ್ರಹರಿಸತೊಡಗಿದನು. ಆತನ ಒಂದೊಂದು ಏಟಿಗೆ ವಿಗ್ರಹದ ಒಂದೊಂದು ಚೂರು ಹಾರಿ ವಿಗ್ರಹವು ಕುರೂಪಗೊಳ್ಳುತಿತ್ತು. ವಿಗ್ರಹವು ಪುಡಿಪುಡಿಯಾಯಿತು. ಆತನ ಉದ್ರೇಕ ಸ್ವಲ್ಪ ಕಡಿಮೆಯಾಯಿತು. ಆ ಸುಂದರ ಬೆಳದಿಂಗಳಿನಲ್ಲಿ ಆತನು ಅಲ್ಲಿಯೇ ನತಮಸ್ತಕನಾಗಿ ಕುಳಿತನು. ಆತನ ಕಣ್ಣಿನಲ್ಲಿ ಕಂಬನಿ ತುಂಬಿತ್ತು. ಆತನ ಸುತ್ತಲೂ ಶಿಲಾಮೂರ್ತಿಯ ಚೂರುಗಳು ಬೆಳದಿಂಗಳಲ್ಲಿ ಬೆಳ್ಳಗೆ ತೋರುತಿದ್ದವು. ಆತನು ಆ ಚೂರುಗಳನ್ನು ಒಂದೊಂದಾಗಿ ಹೆಕ್ಕತೊಡಗಿದನು. ತನ್ನ ವಸ್ತ್ರದ ತುಂಬ ಆ ಚೂರುಗಳನ್ನು ತುಂಬಿಕೊಂಡು ಹತ್ತಿರದ ನದಿಯತ್ತ ನಡೆದನು.

ಚಂದ್ರನ ಬೆಳಕಿಗೆ ಇಡೀ ನದಿಯೇ ಚಂದ್ರ ಶಿಲೆಯಂತೆ ಬೆಳ್ಳಗೆ ಕಂಗೊಳಿಸುತಿತ್ತು. ಶಿಲ್ಪಿಯು ಹತ್ತಿರದ ಕಲ್ಲೊಂದರ ಮೇಲೆ ಕುಳಿತನು. ಆತನಿಗೆ ಪ್ರಪಂಚವೇ ಶೂನ್ಯವಾಗಿತ್ತು. ತನ್ನ ವಸ್ತ್ರದಲ್ಲಿದ್ದ ಸ್ಪಟಿಕ ಶಿಲೆಯ ಚೂರುಗಳನ್ನು ಒಂದೊಂದಾಗಿ ನದಿಗೆ ಎಸೆಯತೊಡಗಿದನು. ಕಲ್ಲಿನ ಚೂರು ಒಂದೊಂದು ಬಿದ್ದಂತೆ ನೀರು ಅಸ್ತವ್ಯಸ್ತವಾಗಿ ಕದಡಿಕೊಂಡು ತೆರೆಗಳನ್ನು ಎಬ್ಬಿಸುತಿತ್ತು. ಶಿಲ್ಪಿಯ ಮನಸ್ಸಿನ ತರಂಗಗಳೂ ಅದೇ ರೀತಿ ಹಿಂದಿನ ಹಲ ಕೆಲವು ನೆನಹುಗಳನ್ನು ನೆನೆದು ಅಶಾಂತಿಗೊಳ್ಳುತಿದ್ದವು. ಮೋಡವೊಂದು ಚಂದ್ರನನ್ನು ಬಂದು ಆವರಿಸಿತು. ಚಂದ್ರನ ಬೆಳ್ಳಗಿನ ಬೆಳಕು ಮಾಯವಾಯಿತು. ಸುತ್ತಲೂ ಕತ್ತಲೆ ಕವಿಯಿತು. ಸ್ಪಟಿಕ ಶಿಲೆಯಂತೆ ತೋರುತ್ತಿದ್ದ ನದಿಯೂ ಅಗೋಚರವಾಯಿತು. ಸುತ್ತು ಆವರಿಸಿದ ಅಂಧಕಾರದಲ್ಲಿ ಶಿಲ್ಪಿಯ ಇರವೂ ಕಾಣದಾಯಿತು.

ಮುಫತ್ತು! ಮುಫತ್ತು!!

ಸಾವಿರ ಕಾಶ್ಮೀರ ಶಾಲುಗಳನ್ನು ಮುಫತ್ತಾಗಿ ನಾವು ಹಂಚುತ್ತಿರುವೆವು. ನಿರಾಶರಾಗದಿರಲು ಇಂದೇ ಬರೆಯಿರಿ.

Diamond Commercial
Chambers (K. M)
Bhandari Street
52-2 Bombay 3.

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ)

ಅಧಿಕೃತ ಶೇರು ಭಂಡವಾಳ	ರೂ.	10,00 000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು ...	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಶೇಕಡ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-C-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ & ಖಜಾಂಚಿ.

ವಾರದ ಭವಿಷ್ಯ

ತಾ. ೧೬—೧೦—೫೩ರಿಂದ ೨೨—೧೦—೫೩ರ ವರೆಗೆ.

ಜ್ಯೋತಿಷ್ಯ—ಶ್ರೀ ಬಿ. ಜಿ. ಶ್ರೀನಿವಾಸ ಶಾಸ್ತ್ರಿಯವರು.

ಮೇಷ

ಈ ವಾರ ನಿಮ್ಮ ದೇಹಾರೋಗ್ಯವು ಚೆನ್ನಾಗಿದ್ದರೂ ಆರ್ಥಿಕ ವಿಚಾರದಲ್ಲಿ ತುಂಬಾ ತೊಂದರೆಗೊಳಗಾಗುವಿರಿ. ಕುಟುಂಬದ ಅನಾರೋಗ್ಯ ನಿಮಿತ್ತದಿಂದಾಗಿ ಮನಸ್ಸಿಗೆ ಶಾಂತಿಯಿಲ್ಲದಾಗುವದು. ಜನರು ನಿಮಗೆ ಮಿತ್ರರಂತೆ ತೋರ್ಪಡಿಸಿ ವಂಚಿಸುವರು. ವಿದ್ಯಾರ್ಥಿವೃಂದವು ಮುಂಚಿಹೋದ ಕಾರ್ಯದಲ್ಲಿ ಚಿಂತಾಕುಲರಾಗುವರು. ತಾ. ೧೬—೧೭ ಖರ್ಚು ಹೆಚ್ಚು.

ವೃಷಭ

ಈ ವಾರ ನಿಮ್ಮ ಆರೋಗ್ಯ ಮಟ್ಟವು ಚೆನ್ನಾಗಿದ್ದು ಸಮಾಜದಲ್ಲಿ ಸನ್ಮಾನಗಳು ದೊರೆಯಲಿವೆ. ಸಾಂಪತ್ತಿಕ ಸ್ಥಿತಿಯು ಉತ್ತಮವಿರುವದರಿಂದ ಮಾನಸಿಕ ಸ್ಥಿತಿಯು ಶಾಂತಿಯಲ್ಲಿರುವದು. ಮಿತ್ರರ ಸಹಾಯದಿಂದ ನೀವು ಕೈಕೊಂಡ ಕಾರ್ಯಗಳು ಉತ್ತಮ ಪರಿಣಾಮಕಾರಗಳಾಗುವವು. ವಿದ್ಯಾರ್ಥಿ ವಿದ್ಯಾರ್ಥಿನಿಯರು ಮನಃಶಾಂತಿಯನ್ನು ಹೊಂದುವರು. ತಾ. ೧೮—೧೯ ಸಂಚಾರ, ಮಿತ್ರರ ಭೇಟಿ.

ಮಿಥುನ

ನಿಮ್ಮ ಆರೋಗ್ಯವಿಚಾರದಲ್ಲಿ ಈ ವಾರ ಸ್ವಲ್ಪ ಎಚ್ಚರಿಕೆಯಲ್ಲಿರಬೇಕಾಗಿ ಸೂಚನೆ. ಆರ್ಥಿಕ ವಿಷಯದಲ್ಲಿ ಉತ್ತಮವಿರುವದರಿಂದ ಮನೋನಿಶ್ಚಿತ ಕಾರ್ಯಗಳು ಈಡೇರುವವು. ಮಿತ್ರರ ಪತ್ರಾಗಮನದಿಂದ ಮನಸ್ಸು ಶಾಂತಿಯನ್ನು ಹೊಂದುವದು. ವ್ಯಾಪಾರೋದ್ಯಮಿಗಳು ಆರಂಭದಲ್ಲಿ ಕಷ್ಟಕ್ಕೊಳಗಾದರೂ ಕಡೆಗೆ ಲಾಭವನ್ನು ಹೊಂದುವರು. ತಾ. ೧೭—೧೮ ವಾಹನ ಭಯ, ಸಂಚಾರ.

ಕರ್ಕಾಟಕ

ನಿಮಗೆ ಈ ವಾರ ದಾನ ಮತ್ತು ಧರ್ಮಕಾರ್ಯ ನಿಮಿತ್ತ ಖರ್ಚು ಹೆಚ್ಚಾಗಿದ್ದರೂ ಮನಸ್ಸು ಶಾಂತಶೀಲವುಳ್ಳದ್ದಾಗಿರುವದು. ಮಿತ್ರರ ಸಹಾಯದಿಂದ ಮನೋನಿಶ್ಚಿತ ಕಾರ್ಯವು ಈಡೇರಲಿರುವದು. ನಿಮ್ಮ ಆರೋಗ್ಯ ಮಟ್ಟವು ಉತ್ತಮವಿರುವದರಿಂದ ನೂತನ ಕಾರ್ಯವನ್ನು ಕೈಗೊಳ್ಳಲಿರುವಿರಿ. ನಷ್ಟಕ್ಕೊಳಗಾದ ವ್ಯಾಪಾರೋದ್ಯಮಿಗಳಿಗೆ ಈ ವಾರ ಲಾಭ ಚಿಹ್ನೆಗಳು ತೋರುವವು. ತಾ. ೨೧—೨೨ ಸುಖ. ಮಿತ್ರರ ಭೇಟಿ.

ಸಿಂಹ

ಈ ವಾರ ನಿಮ್ಮ ಆರೋಗ್ಯ ಮಟ್ಟವು ಚೆನ್ನಾಗಿರುವದರಿಂದ ನಿಮ್ಮ ಕಾರ್ಯಗಳು ಸಾಂಗವಾಗಿ ನೆರವೇರುವವು. ಕುಟುಂಬ ಸುಖವು ಚೆನ್ನಾಗಿರುವದರಿಂದ ಮಾನಸಿಕ ಸ್ಥಿತಿಯು ಉತ್ತಮವಿರುವದು. ಸಾಂಪತ್ತಿಕ ಸ್ಥಿತಿಯು ತುಸು ಅನಿಷ್ಟದ್ದಾದರೂ ಮಿತ್ರರ ಸಹಾಯದಿಂದ ಉತ್ತಮವಾಗುವದು. ತಾ. ೧೭—೧೮ ಮಿತ್ರರ ಭೇಟಿ.

ಕನ್ಯಾ

ಈ ವಾರ ನಿಮ್ಮ ಆರೋಗ್ಯದೃಷ್ಟಿಯಲ್ಲಿ ಎಚ್ಚರಿಕೆಯಿಂದಿರತಕ್ಕದ್ದು. ಜನರು ನಿಮ್ಮ ಮಿತ್ರರಂತೆ ನಟಿಸಿ ನಿಮ್ಮನ್ನು ವಂಚಿಸುವರು. ಕುಟುಂಬದಲ್ಲಿ ಅನಾರೋಗ್ಯವು ಕಂಡು ಬರುವದರಿಂದ ಆರ್ಥಿಕ ಲಾಭವಿದ್ದರೂ ಅದು ವ್ಯಯವಾಗುವದು. ವ್ಯಾಪಾರೋದ್ಯಮಿಗಳು ನಷ್ಟಕ್ಕೊಳಗಾಗುವರು. ತಾ. ೧೮—೧೯ ಖರ್ಚು ಮನೋವ್ಯಥೆ.

ತುಲಾ

ಆರೋಗ್ಯದೃಷ್ಟಿಯಲ್ಲಿ ಈ ವಾರ ನಿಮಗೆ ಉತ್ತಮವಿದ್ದರೂ ಕುಟುಂಬದಲ್ಲಿ ಕಲಹ, ರೋಗ ಮೊದಲಾದವುಗಳಿಂದ ನಿಮ್ಮ ಮನಸ್ಸಿಗೆ ಶಾಂತಿಯೆಂಬುದು ದೂರವರ್ತಿಯಾಗಿರುವದು. ಆರ್ಥಿಕ ಸ್ಥಿತಿಯಲ್ಲಿ ನೀವು ಮಾನವಂತರೆನಿಸಿಕೊಳ್ಳುವದೇ ಬಲು ಕಷ್ಟ. ಕೋರ್ಟು ವ್ಯವಹಾರಗಳು ಪ್ರತಿಕೂಲವಾಗುವದು. ವಿದ್ಯಾರ್ಥಿಯವರಿಗೆ ಕರ್ತವ್ಯಶೂನ್ಯತೆ. ತಾ. ೧೭—೧೮ ಸಂಚಾರ, ಖರ್ಚು.

ವೃಶ್ಚಿಕ

ಸಾಕು ಸಾಕು ಸಂಸಾರ ಸುಖವೆಂಬುದು ಈ ವಾರ ನಿಮಗೆ ಸಂಪೂರ್ಣ ಭೋಧ್ಯವಾಗುವದು. ಆರೋಗ್ಯವು ಚೆನ್ನಾಗಿದ್ದರೂ ಹೆಂಡತಿ ಮಕ್ಕಳಿಗೆ ಸುಖವಿಲ್ಲದ್ದರಿಂದ ಮನಸ್ಸಿಗೆ ಸದಾ ಅಶಾಂತಿಯೇ ಗತಿಯಾಗುವದು. ಆರ್ಥಿಕ ದೃಷ್ಟಿಯಲ್ಲಿಯೂ ತಾವು ತುಂಬಾ ತೊಂದರೆಗಳಿಗೊಳಗಾಗುವಿರಿ. ವಿದ್ಯಾರ್ಥಿಗಳು ಆಲಸ್ಯಸ್ವಭಾವವುಳ್ಳವರಾಗುವರು. ತಾ. ೨೧—೨೨ ಮಿತ್ರರ ಭೇಟಿ, ಖರ್ಚು.

ಧನು

ಈ ವಾರ ನಿಮ್ಮ ಆರೋಗ್ಯವು ಚೆನ್ನಾಗಿದ್ದು ಸಮಾಜದಲ್ಲಿ ಸನ್ಮಾನಗಳು ಲಭಿಸಲಿದೆ. ಸಾಂಪತ್ತಿಕ ಸ್ಥಿತಿಯು ಉತ್ತಮವಿರುವದರಿಂದ ಮನೋಭಿಷ್ಟ ಕಾರ್ಯಗಳು ಈಡೇರುವವು. ಅಪರಿಚಿತರು ಕೂಡ ಸಹಾಯವನ್ನು ನೀಡುವರು. ವ್ಯಾಪಾರೋದ್ಯಮಿಗಳು ಮನೋನಿಶ್ಚಯ ಕಾರ್ಯಗಳಲ್ಲಿ ಲಾಭ ಹೊಂದುವರು. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಈ ವಾರವು ಪ್ರಗತಿಪರವಾಗಿರುವದು. ತಾ. ೧೯—೨೦ ಸುಖ, ಆನಂದ.

ಮಕರ

ಈ ವಾರ ನಿಮ್ಮ ದೈಹಿಕ ಸ್ಥಿತಿಯು ಉತ್ತಮವಿರುವದು. ನೂತನ ಕಾರ್ಯದಿಂದ ನಿಮ್ಮ ಮನಸ್ಸು ಶಾಂತಿಯನ್ನು ಹೊಂದುವದು. ಸಾಂಪತ್ತಿಕ ಸ್ಥಿತಿಯು ಉತ್ತಮವಿದ್ದರೂ ಕೂಡ ಖರ್ಚು ಅಧಿಕವಿರುವದು. ಮಿತ್ರರ ಸಹವಾಸದಿಂದ ನೀವು ಕಷ್ಟಕ್ಕೊಳಗಾಗಬೇಕಾಗುವದು. ತಾರೀಕು ೧೭—೧೮ ಸಂಚಾರ.

ಕುಂಭ

ಆರೋಗ್ಯ ವಿಚಾರದಲ್ಲಿ ಈ ವಾರವು ನಿಮಗೆ ಉತ್ತಮವಿರುವದು. ಮಿತ್ರ ಬಂಧುವರ್ಗದವರ ವಿಯೋಗವಾರ್ತೆಯಿಂದ ಮನಸ್ಸು ವ್ಯಾಕುಲತೆಯನ್ನು ಹೊಂದುವದು. ನೂತನ ಮಿತ್ರ ಲಾಭದಿಂದ ನಿಮಗೆ ಖರ್ಚು ಒದಗಲಿದೆ. ವ್ಯಾಪಾರೋದ್ಯಮಿಗಳು ಈ ವಾರ ಸಂಚಾರವನ್ನು ಕೈಗೊಳ್ಳಬೇಕಾಗುವದು. ವಿದ್ಯಾರ್ಥಿ ಸಮೂಹವು ಜಾಗ್ರತಾವಸ್ಥೆಯನ್ನು ಹೊಂದುವದು. ತಾ. ೧೭—೧೮ ಖರ್ಚು, ಮನೋವ್ಯಥೆ.

ಮೀನ

ಈ ವಾರ ನೀವು ದೂರ ಪ್ರವಾಸವನ್ನು ಕೈಗೊಳ್ಳಬೇಕಾದಿರುವಿರಿ. ಇದರಿಂದ ನಿಮಗೆ ಉತ್ತಮವಿರುವದು. ಆರೋಗ್ಯ ಮಟ್ಟವು ಚೆನ್ನಾಗಿದ್ದು ಸಮಾಜದಲ್ಲಿ ಲಾಭ ಸನ್ಮಾನಗಳು ಲಭಿಸಲಿವೆ. ಮಿತ್ರರ ಸಹಾಯದಿಂದ ನೀವು ಕೈಗೊಂಡ ಕಾರ್ಯವು ಪರಿಣಾಮಕಾರಿಯಾಗುವದು. ವಿದ್ಯಾರ್ಥಿ ವಿದ್ಯಾರ್ಥಿನಿಯರು ಮನಃಶಾಂತಿಯನ್ನೈದುವರು. ತಾ ೧೭—೧೮ ಮಿತ್ರರ ಭೇಟಿ, ಸಂಚಾರ.

ಧರ್ಮರಹಸ್ಯ

ಪಾಪದಿಂದ ದೂರವಿರಬೇಕು. ಪುಣ್ಯವನ್ನು ಮಾಡಲು ಕಾತುರರಾಗಿರಬೇಕು. ಪುಣ್ಯ ಯಾ ಸತ್ಕಾರ್ಯ ಮಾಡಲು ನಿಧಾನಿಸುವವನ ಮನವನ್ನು ಪಾಪವು ಆವರಿಸುವದು.

ಪಾಪವನ್ನು ಒಬ್ಬನು ಮಾಡಬಹುದು. ಆದರೆ ಅದನ್ನು ಆತನು ಪುನಹ ಮಾಡದಿರಲಿ. ಕೆಟ್ಟದಾರಿಯ ವರ್ತನೆಯೇ ಕಷ್ಟಕ್ಕೂ, ಅಶಾಂತಿಗೂ ಕಾರಣ.

ಪುಣ್ಯ ಕೆಲಸವನ್ನು ಒಮ್ಮೆ ಮಾಡಿದವನು ಪುನಹ ಪುಣ್ಯ ಕರ್ಮಗಳನ್ನೇ ಮಾಡಲಿ. ಈ ರೀತಿ ಅದನ್ನು ತನ್ನ ಸ್ವಭಾವವನ್ನಾಗಿ ಮಾರ್ಪಡಿಸಿ ಕೊಂಡರೆ ಶಾಂತಿಯೂ ಶ್ರೇಯಸ್ಸೂ ದೊರೆಯುವದು.

ಕೆಟ್ಟ ಕೆಲಸದ ಪರಿಪಾಕವು ಪಕ್ವವಾಗುವ ವರೆಗೆ ಕೆಟ್ಟ ಕೆಲಸದಲ್ಲೂ ಸುಖ ತೋರಬಹುದು. ಅದು ಪಕ್ವವಾದಾಗ ಮಾತ್ರ ಅದರ ತೊಂದರೆ ತೊಡರುಗಳ ಅನುಭವವಾಗುವದು.

ಒಳ್ಳೆ ಕೆಲಸಗಳ ಫಲವು ಕರಗತವಾಗಲು ಸಮಯ ಹಿಡಿಯಬಹುದು. ಆ ವರೆಗೆ ಒಳ್ಳೆಯ ಕೆಲಸದಿಂದ ನಷ್ಟಗಳೇ ಆಗಬಹುದು. ಆದರೆ ಒಳ್ಳೇ ಕೆಲಸಗಳು ಫಲಬಿಟ್ಟಾಗ ಸುಖಶಾಂತಿಗಳೂ ನೆಲೆಸಿಲ್ಲುವವು

ಪಾಪವನ್ನು ಎಲ್ಲಿ ಕಂಡರೂ ಎದುರಿಸಬೇಕು. ಅದು ನನಗೇನು ತಟ್ಟದೆಂದು ದೂರವಿದ್ದರೆ ಆಗದು. 'ಹನಿಕೂಡಿ ಹಳ್ಳ' ಎಂಬ ನಾಣ್ಣುಡಿಯಂತೆ ಸ್ವಲ್ಪ ಪಾಪಗಳೇ ಸೇರಿ ಪಾಪದ ರಾಶಿಯಾಗಿ ಮನುಷ್ಯನನ್ನು ಹಾಳು ಮಾಡುತ್ತವೆ.

ತುಂಬಾ ಧನಿಕನಿಕ ವಸ್ತುಗಳನ್ನು ಸಾಗಿಸುತ್ತಿರುವ ವರ್ತಕನಿಗೆ ಅವುಗಳನ್ನು ರಕ್ಷಿಸುವಷ್ಟು ಸಂರಕ್ಷಕರಿಲ್ಲದಿದ್ದರೆ ಯಾವ ರೀತಿ ಗಂಡಾಂತರದ ಮಾರ್ಗವನ್ನು ಬಿಟ್ಟು ಸಂರಕ್ಷಿತವಾದ ದಾರಿಗಾಗಿ ಹೋಗುವನೋ ಅದೇ ರೀತಿ ಉತ್ತಮ ಜೀವನದ ಆಸೆ ಇರುವವನು ಕೆಡುಕನ್ನು ತ್ಯಜಿಸುತ್ತಾನೆ.

ಕೈಯಲ್ಲಿ ಗಾಯವಿಲ್ಲದವನು ವಿಷವನ್ನು ಮುಟ್ಟಿದರೂ ಅದರಿಂದ ಅವನಿಗೆ ಯಾವ ಕೇಡೂ ಆಗದು. ಅದರಂತೆ ಕೆಟ್ಟದನ್ನು ಮಾಡದವನಿಗೆ ಪಾಪವು ಅಂಟದು.

ಪರಿಶುದ್ಧನೂ, ಅನ್ಯಾಯ ಮಾಡದವನೂ, ಸರಳನೂ, ನಿರಪರಾಧಿಯೂ ಆದವನಿಗೆ ಕೇಡು ಬಗೆದರೆ ಬಗೆದವನಿಗೆ ಆ ಕೇಡು ಆಗುವದು. ಗಾಳಿಗೆ ಎದುರು ಚೆಲ್ಲಿದ ಧೂಳು ಚೆಲ್ಲಿದವನ ಕಣ್ಣಿಗೇ ಬರುವದು.

ಆಕಾಶದಲ್ಲಿ, ಗಿರಿಗುಹೆಗಳಲ್ಲಿ ಯಾ ಸಮುದ್ರದಡಿಯಲ್ಲಿ ಅವಿತರೂ ಕೂಡ ತನ್ನ ಕೆಟ್ಟ ಕೆಲಸಗಳ ದುಷ್ಪರಿಣಾಮದಿಂದ ಮನುಷ್ಯನು ಬಿಡುಗಡೆ ಹೊಂದಲಾರನು.

ನಾವು ಜಪಾನಿನಿಂದ ಕಲಿಯಬೇಕಾದ ಪಾಠ. [೭]

ವಿದ್ಯುಚ್ಛಕ್ತಿಯ ನಾಡು ಜಪಾನು

— ಮೂಲ ಲೇಖಕ.—ಶ್ರೀ ಚಮನ್‌ಲಾಲ್ —

ಜಪಾನು ವಿದ್ಯುಚ್ಛಕ್ತಿಯಲ್ಲಿ ಜಗತ್ತಿನ ಮಹಾ ರಾಷ್ಟ್ರಗಳಲ್ಲಿ ಐದನೇ ಸ್ಥಾನ ಪಡೆದಿದೆ. ಇತರ ರಾಷ್ಟ್ರಗಳಲ್ಲಿ ವಿದ್ಯುಚ್ಛಕ್ತಿಯು ಪೇಟೆ, ನಗರಗಳಲ್ಲಿ ತುಂಬಿದ್ದರೆ ಜಪಾನಿನಲ್ಲಿ ಹಳ್ಳಿಗಳಲ್ಲೂ ಅದು ಪಸರಿಸಿದೆ. ಜಪಾನಿನ ಶೇಕಡ ೯೦ರಷ್ಟು ಕಟ್ಟಡಗಳಿಗೆಲ್ಲಾ ವಿದ್ಯುಚ್ಛಕ್ತಿ ಸರಬರಾಯಿ ಆಗಿದೆ.

●●

ಆರಸರ ಆಯುಧ ಅಧಿಕಾರ. ಅದರಂತೆ ಆಧುನಿಕ ಕೈಗಾರಿಕೆಯ ಪ್ರಗತಿಗೆ ಮುಖ್ಯ ಸಾಧನ ವಿದ್ಯುಚ್ಛಕ್ತಿ. ಸಂಯುಕ್ತ ಅಮೇರಿಕಾವನ್ನು ಬಿಟ್ಟು ಉಳಿದ ಎಲ್ಲಾ ರಾಷ್ಟ್ರಗಳಿಗೂ ಜಪಾನಿನ ವಿದ್ಯುತ್ ಉತ್ಪಾದನಾ ಸಲಕರಣೆ ಮತ್ತು ದಕ್ಷತೆಗಳು ಆದರ್ಶವಾಗಿವೆ ಜಪಾನಿನ ಪ್ರತಿ ಗುಡಿಕೈಗಾರಿಕೆಯೂ ವಿದ್ಯುಚ್ಛಕ್ತಿಯಿಂದ ನಡೆಯುತ್ತಿದೆ. ಈ ಕೆಳಗಿನ ಪಟ್ಟಿಯು ಜಪಾನಿನ ಪ್ರಗತಿಯ ಅರಿವನ್ನು ಮಾಡಿಕೊಡಬಹುದು

ಕೈಗಾರಿಕೆ.	ಉಪಯೋಗಿಸುವ ವಿದ್ಯುತ್ ಅಶ್ವಶಕ್ತಿಗಳು. ೧೯೨೯ರಲ್ಲಿ	೧೯೩೩ರಲ್ಲಿ
ಬಟ್ಟೆ ಕಾರ್ಖಾನೆ	೧೩೭,೦೦೦	೯೩೧,೦೦೦
ಲೋಹ	೧೬,೦೦೦	೮೯೮,೦೦೦
ಯಂತ್ರೋಪಕರಣ	೨೬,೦೦೦	೪೬೪,೦೦೦
ಕೊಜೆಮಣ್ಣು ಕೆಲಸ	೧೯,೦೦೦	೩೯೪,೦೦೦
ರಸಾಯನ	೪೪,೦೦೦	೮೨೪,೦೦೦
ಮರಗೆಲಸ	೧೭,೦೦೦	೧೬೫,೦೦೦
ಪ್ರಿಂಟಿಂಗ್	೩,೦೦೦	೩೯,೦೦೦
ಆಹಾರ ಮತ್ತು ಪಾನೀಯ	೨೪,೦೦೦	೨೨೫,೦೦೦

ಈ ಅಂಕೆ ಸಂಖ್ಯೆಗಳು ಯಾವ ರೀತಿ ಜಪಾನಿನ ಕೈಗಾರಿಕೆಗಳು ವಿದ್ಯುಚ್ಛಕ್ತಿಯನ್ನು ಹೆಚ್ಚೆಚ್ಚಾಗಿ ಬಳಸಿಕೊಳ್ಳುತ್ತಿವೆಯೆಂಬುದನ್ನು ತೋರಿಸುತ್ತವೆ. ಜಪಾನು ಸುಮಾರು ೧೦ ಮಿಲಿಯ ಕಿಲೋವಾಟ್ ವಿದ್ಯುಚ್ಛಕ್ತಿ ಉತ್ಪಾದನೆ ಮಾಡುತ್ತದೆ. ಇದರಲ್ಲಿ ಸುಮಾರು ೬ ಮಿಲಿಯದಷ್ಟು ನೀರಿನಿಂದ (ಹೈಡ್ರೋ ಇಲೆಕ್ಟ್ರಿಕ್) ಲೂ, ೪ ಮಿಲಿಯದಷ್ಟು ಆವಿಯಿಂದ (ಸ್ಟೀಮ್) ಲೂ ಉತ್ಪಾದನೆಯಾಗುತ್ತದೆ. ಸಾರ್ವಜನಿಕ ಆಸ್ತಿಯ ಕಂಪೆನಿಗಳು ಸುಮಾರು ೯ ಮಿಲಿಯ ಕಿಲೋವಾಟ್ ಶಕ್ತಿಯನ್ನೂ ಖಾಸಗಿ ಸಂಸ್ಥೆಗಳು ೧ ಮಿಲಿಯ ಕಿಲೋವಾಟ್ ಶಕ್ತಿಯನ್ನೂ ಉತ್ಪಾದಿಸುತ್ತವೆ. ವರ್ಷದ ಇಡೀ ದಿನಗಳಲ್ಲಿ ನದಿ ಕಟ್ಟೆಗಳ ನೀರು ಸಮಾನವಾಗಿ ಹರಿಯದ ಕಾರಣ ಅದರಲ್ಲಿ ಆಗುವ ಕೊರತೆಯನ್ನು ಆವಿಯಿಂದ ವಿದ್ಯುತ್ ಉತ್ಪಾದನೆ ಮಾಡಿ ತುಂಬಿಕೊಳ್ಳಲಾಗುತ್ತಿದೆ.

ವಿದ್ಯುಚ್ಛಕ್ತಿಯಿಂದ ಲಾಭವಿದೆ

ವಿದ್ಯುತ್ ಉಪಯೋಗದಿಂದ ಯಾವ ರೀತಿಯ ಲಾಭ ಹೊಂದಬಹುದೆಂಬುದಕ್ಕೆ ನಾಕಾಸು ಎಂಬ ಗ್ರಾಮದ ಒಂದು ಅನುಭವವನ್ನು ಇಲ್ಲಿ ಕೊಡಬಹುದು. ಕಾಮಿಸುವಾದಿಂದ ನಾಕಾಸು ೩೦ ನಿಮಿಷಗಳ ಬಸ್ ಪ್ರಯಾಣದ ದೂರದಲ್ಲಿದೆ ಆದರ ಜನಸಂಖ್ಯೆಯು ೩,೩೬೭. ಇವರಲ್ಲಿ ಶೇಕಡ ೭೫ರಷ್ಟು ಜನರು ವ್ಯವಸಾಯಗಾರರು. ಆ ಗ್ರಾಮದಲ್ಲಿ ಒಟ್ಟು ೪೫೦ ಮನೆಗಳಿವೆ. ಅಲ್ಲಿ ವ್ಯವಸಾಯವಾಗುವ ಭೂಮಿ ೨೨೦·೮ ಚೋ ಮತ್ತು ೩೬ ಚೋ ಬಾಣೆ. (೧ ಚೋ= ೨·೪೫ ಏಕರು)

ಒಂದು ಕುಟುಂಬವು ಸರಾಸರಿ ·೪೯ ಚೋದಷ್ಟು ಸ್ಥಳದಲ್ಲಿ ವ್ಯವಸಾಯ ಮಾಡುತ್ತಿದೆ. ಆದರೆ ಅದರಿಂದ ಅವರು ತೆಗೆಯುವ ಉತ್ಪತ್ತಿಯು ೩·೧ ಕೋಕೂ (೧ ಕೋಕೂ=೫ ಬುಶೆಲ್) ಆಗಿದೆ. ಜಪಾನಿನಲ್ಲಿ ಭೂಸುಧಾರಣಾ ಪದ್ಧತಿಯಿಂದಾಗಿ ದೊಡ್ಡ ಜಮೀನ್ದಾರರಿಲ್ಲ. ಭೂಮಿಯನ್ನು ಚಿಕ್ಕ ಚಿಕ್ಕ ಭಾಗಗಳಾಗಿ ಹಂಚಿರುವ ಕಾರಣ ಪ್ರತಿ ಕುಟುಂಬವು ಆದರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ ಅತೀ ಹೆಚ್ಚಿನ ಉತ್ಪಾದನೆಯನ್ನು ಪಡೆಯುತ್ತದೆ. ಭೂಮಿಯನ್ನು ವಿಂಗಡಿಸಿ ಚಿಕ್ಕ ಚಿಕ್ಕ ತುಂಡುಗಳಾಗಿ ಮಾಡುವದರಿಂದ ಉತ್ಪತ್ತಿ ಕಡಿಮೆಯಾಗುವದೆಂಬ ನಂಬಿಕೆಯನ್ನು ಸುಳ್ಳೆಂದು ಜಪಾನರು ಸ್ಪಷ್ಟಪಡಿಸಿದ್ದಾರೆ. ಜಪಾನರು ಈ ವ್ಯವಸಾಯಕ್ಕಾಗಿ ಯಂತ್ರಗಳನ್ನು ಉಪಯೋಗಿಸುವದಲ್ಲದೆ ಯಂತ್ರಗಳ ಚಾಲನೆಗೆ ವಿದ್ಯುಚ್ಛಕ್ತಿ ಉಪಯೋಗಿಸುತ್ತಾರೆ.

ವ್ಯವಸಾಯಕ್ಕೆ ವಿದ್ಯುಚ್ಛಕ್ತಿ ಏಕೆ?

ಜಪಾನಿನಲ್ಲಿ ವ್ಯವಸಾಯಕ್ಕೆ ವಿದ್ಯುಚ್ಛಕ್ತಿಯನ್ನು ಉಪಯೋಗಿಸುವುದು ಲಾಭದಾಯಕವಾಗಿದೆ. ಏಕೆಂದರೆ ವ್ಯವಸಾಯಕ್ಕೆ ಬೇಕಾದ ಜಾನುವಾರುಗಳನ್ನು ಸಾಕುವುದು ಅಲ್ಲಿ ಕಷ್ಟ. ಅವುಗಳಿಗೆ ಬೇಕಾದ ಆಹಾರಗಳನ್ನು ಒದಗಿಸುವುದು ಪ್ರಯಾಸ. ಮೇಲಿನ ಗ್ರಾಮವು ಕೇವಲ ಬತ್ತದ ಬೆಳೆಗೆ ಉಪಯುಕ್ತ ಪ್ರದೇಶವಾದ ಕಾರಣ ಜಾನುವಾರುಗಳಿಗೆ ಹುಲ್ಲುಗಾವಲುಗಳೇ ಅಲ್ಲಿ ಇಲ್ಲ.

ವ್ಯವಸಾಯಕ್ಕೆ ಸಾಕಷ್ಟು ಗೊಬ್ಬರ ದೊರೆಯದ ಕಾರಣ ಅಮೋನಿಯ ತುಂಬಿದ ನೀರನ್ನು ಭೂಗರ್ಭದಿಂದ ಹೀರಿ ವ್ಯವಸಾಯಕ್ಕೆ ಉಪಯೋಗಿಸಲು ವಿದ್ಯುಚ್ಛಕ್ತಿಯಿಂದ ನಡೆಯುವ ಸಕ್ಷನ್ ಪಂಪುಗಳು ಸಹಾಯಕವಾದವು.

ವಿದ್ಯುಚ್ಛಕ್ತಿಯ ಪ್ರಯೋಗದಿಂದ ಹೆಚ್ಚಿನ ಬೆಳೆ ತೆಗೆಯುವದು ಸಾಧ್ಯವೆಂದು ತೋರಿದೊಡನೇ ಗ್ರಾಮಸ್ಥರೆಲ್ಲರೂ ಅದನ್ನು ಅನುಸರಿಸಿದರು. ಈ ಒಂದು ಗ್ರಾಮದಲ್ಲಿ ೧೯೪೭ರಲ್ಲಿ ೮೨ ಶಕ್ತಿ ಉತ್ಪಾದಿಸುವ ಮೋಟಾರುಗಳು, ೨೮ ಪಂಪುಗಳು, ೫ ಟ್ರಾಕ್ಟರುಗಳು, ೪೪ ಬತ್ತವನ್ನು ಸುಲಿದು ಅಕ್ಕಿ ಮಾಡುವ ಯಂತ್ರಗಳು, ಒಂದು ಕ್ರಿಮಿನಾಶಕ ಸ್ಪ್ರೇಯರ್ ಇವೆ ಇವೆಲ್ಲವೂ ವಿದ್ಯುತ್ತಿನಿಂದ ನಡೆಯುವವುಗಳು.

ಇದರ ಪ್ರತಿಫಲವಾಗಿ ಗ್ರಾಮಕ್ಕೆ ನೀರಿನ ಕೊರತೆ ಇಲ್ಲದಾಯಿತು. ಹಗ್ಗ ಮಾಡುವ ಯಂತ್ರದಿಂದಾಗಿ ಹುಲ್ಲಿನಿಂದ ಮೊದಲಾಗುತ್ತಿದ್ದ ೧೬,೦೦೦ ತಾನ್ ಬದಲು ೫೦ ಸಾವಿರ ತಾನ್ ಹಗ್ಗವಾಗತೊಡಗಿತು ಅಕ್ಕಿ ಮಾಡುವ ಯಂತ್ರಗಳಿಂದಾಗಿ ಮಾರಾಟವು ಸುಲಭವಾಯಿತು. ಈ ಯಂತ್ರಗಳಿಂದಾಗಿ ಕುಯಿಲು ಯಾ ನಾಟಿಯ ಸಮಯದಲ್ಲಿ ಬೇಕಾಗುತಿದ್ದ ಸುಮಾರು ೨೦೦ ಜನ ಕೆಲಸಗಾರರ ಆವಶ್ಯಕತೆ ಇಲ್ಲದಾಯಿತು. ಈ ಗ್ರಾಮದವರು ೧೯೪೯ರಲ್ಲಿ ೧೩೮ ಮೋಟಾರುಗಳನ್ನು, ಬತ್ತವನ್ನು ಒಡೆದು ತೆಗೆಯುವ ೫ ಯಂತ್ರಗಳನ್ನು ಅಕ್ಕಿ ಮಾಡುವ ೩೫ ಯಂತ್ರಗಳನ್ನು, ಹಗ್ಗ ಮಾಡುವ ನೂರು ಯಂತ್ರಗಳನ್ನು, ೨೦ ಪಂಪುಗಳನ್ನು ಕ್ರಯಕ್ಕೆ ಪಡೆದಿರುವದಲ್ಲದೆ ರೇಷ್ಮೆ ಕೈಗಾರಿಕೆಗೂ, ಬತ್ತದ ಬೆಳೆಯು ಬೇಗ ಬೆಳೆಯುವಂತೆಯೂ ವಿದ್ಯುಚ್ಛಕ್ತಿ ಉಪಯೋಗಿಸುವ ಪ್ರಯತ್ನ ಮಾಡಿದ್ದಾರೆ. ಈ ಉದಾಹರಣೆಯಿಂದ ವಿದ್ಯುತ್ ಪ್ರಯೋಗದಿಂದ ಹಳ್ಳಿಗಳ ಆರ್ಥಿಕ ಪ್ರಗತಿಯನ್ನು ಬಹುಮಟ್ಟಿಗೆ ಸಾಧಿಸಬಹುದೆಂದು ಹೇಳಬಹುದು.

ಯುದ್ಧದ ನಂತರ

ಬೇಕಾದಷ್ಟು ವಿದ್ಯುತ್ ಶಕ್ತಿ ಇದ್ದುದರಿಂದ ಯುದ್ಧಕ್ಕೆ ಮೊದಲು ಜಪಾನು ಆನಂದದ ಸ್ವರ್ಗವಾಗಿತ್ತು. ಎಲ್ಲೆಡೆಯಲ್ಲೂ ಸಮೃದ್ಧಿ, ಸಂಪತ್ತು ತುಂಬಿತ್ತು. ಆದರೆ ಯುದ್ಧದ ಅನಾಹುತದಿಂದಾಗಿ ಜಪಾನಿನ ವಿದ್ಯುಚ್ಛಕ್ತಿ ಶಕ್ತಿಯು ಹುಡಿಯಾಗಿ ಅಲ್ಲಿಯ ಬೇಡಿಕೆಯನ್ನು ಪೂರೈಸಲಾರದಾಗಿದೆ. ಈ ರೀತಿ ಜಪಾನಿನಲ್ಲಿ ವಿದ್ಯುತ್ ಸರಬರಾಯಿ ಯುದ್ಧದ ಅನಾಹುತದಿಂದ ಕಡಿಮೆಯಾದುದರಿಂದ ಜಪಾನಿನ ಕೈಗಾರಿಕಾ ಉತ್ಪತ್ತಿಯೂ ಕಡಿಮೆಯಾಗಿದೆ. ತಿಂಗಳಿಗೆ ೪೮ ಸಾವಿರ ಟನ್ ಉಕ್ಕು ಉತ್ಪಾದಿಸುತ್ತಿದ್ದ ಜಪಾನು ಈಗ ೩೦ ಸಾವಿರ ಟನ್ ಮಾತ್ರ ಮಾಡುತ್ತಿದೆ. ಅಮೋನಿಯ ಸಲ್ಫೇಟ್ ಉತ್ಪತ್ತಿಯು ೬·೧ ಸಾವಿರ ಟನ್ನಿನಿಂದ ೫೫ ಸಾವಿರಕ್ಕಿಳಿದಿದೆ. ಎರಡು ಮಿಲಿಯ ಪೌಂಡು ಉತ್ಪಾದನೆಯಾಗುತ್ತಿದ್ದ ರೇಯನ್ ಈಗ ಒಂದೂವರೆ ಮಿಲಿಯಕ್ಕಿಳಿದಿದೆ.

ಆದರೆ ಇದರಿಂದ ನಿರುತ್ಸಾಹಗೊಂಡು ಜಪಾನು ಕುಳಿತಿಲ್ಲ. ವಿದ್ಯುಚ್ಛಕ್ತಿಯೇ ಜಪಾನಿನ ಪ್ರಗತಿಗೂ, ಅಭಿವೃದ್ಧಿಗೂ, ಸುಖಕ್ಕೂ ಸಾಧನವೆಂಬುದನ್ನು ಅದು ತಿಳಿದಿದೆ ಆದ್ದರಿಂದ ಯುದ್ಧದಿಂದಾದ ನಷ್ಟವನ್ನು ಭರ್ತಿ ಮಾಡಿ ಇನ್ನೂ ಹೆಚ್ಚಿನ ವಿದ್ಯುತ್ ಉತ್ಪಾದಿಸಲು ಅದು ಸರ್ವ ಪ್ರಯತ್ನ ಮಾಡುತ್ತಿದೆ. ದಿನದಿಂದ ದಿನಕ್ಕೆ ಅದರ ಸ್ಥಿತಿ ಸುಧಾರಿಸತೊಡಗಿದೆ.

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು:—ವೀರಾಜಪೇಟೆ.

ಶಾಖೆ:—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟೆಗಳು
2. 12 ನೇ ನಂಬರಿನ ಒಂಟಿ ಹೊಳವಿನ ತೋಟದ ಕೋವಿಗಳು.
3. ಒಂಟಿ ಮತ್ತು ಜೋಡಿ ಹೊಳವಿನ ಕೇಪಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟೆಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
5. ⅝", ½" ಮತ್ತು ⅜" ಕಬ್ಬಿಣದ ಸರಳುಗಳು
6. 2", 1¼", 1" ¾" ಮತ್ತು ½" ಕೊಳಾಯಿಗಳು. (G. I. Peps)
7. 1¾" × $\frac{5}{16}$" ಉಕ್ಕಿನ ಪಟ್ಟಿಗಳು (Spring Steel flats),
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
9. ಕೋತಿ ಮತ್ತು ಆನೆ ಮಾರ್ಕಿನ ಸೀಮೆಣ್ಣೆ ಟಿನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಆವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ, ಜಿಲ್ಲಾ ಮೆಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

ರಾಜಕೀಯ—ಶಾಂತಿ ಸಾಧಕವಲ್ಲ.

ಲೇ: 'ಗುಪ್ತ' ಮಡಿಕೇರಿ

ರಾಜಕೀಯದಿಂದ ಜನಜಾಗೃತಿಯಾಗುತ್ತದೆ. ಜನಜಾಗೃತಿಯಿಂದ ಉತ್ತಮ ಸರಕಾರಗಳ ನಿರ್ಮಾಣವಾಗುತ್ತದೆ. ಉತ್ತಮ ಸರಕಾರಗಳಿಂದ ಜನತೆಯ ಉನ್ನತಿಯಾಗುತ್ತದೆ. ಈ ಪ್ರಗತಿಯಿಂದಾಗಿ ಜಗತ್ತಿನ ಶಾಂತಿಯಾಗಿ ಸರ್ವವೂ ಸುಖಮಯವಾಗುತ್ತದೆ. ಆದ್ದರಿಂದ ರಾಜಕೀಯದಿಂದಲೇ ಜಗತ್ತಿನ ಶಾಂತಿ ಪ್ರಗತಿಗಳೆಂದು ಭಾವಿಸಲಾಗಿತ್ತು. ಆದರೆ ಅನೇಕ ವರ್ಷಗಳ ರಾಜಕೀಯ ತಿಕ್ಕಾಟ, ವಿಜಯ, ಅವನತಿಗಳನ್ನು ಪರಿಶೀಲಿಸಿದರೆ Politics is the God that failed to bring peace, plenty and prosperity to the nations of the world. ರಾಜಕೀಯವು ಜಗತ್ತಿನ ರಾಷ್ಟ್ರಗಳಿಗೆ ಸುಭಿಕ್ಷ, ಪ್ರಗತಿ, ಶಾಂತಿಗಳನ್ನು ತರಲಾಗದ ದೇವತೆಯೆಂಬುದು ಮನವರಿಕೆಯಾಗುವುದು. ಜಗತ್ತಿನ ಇಂದಿನ ಸ್ಥಿತಿ, ಆಗುಹೋಗುಗಳನ್ನು ನಿರ್ವಿಕಾರ ಮನಸ್ಸಿನಿಂದ ಪರಿಶೀಲಿಸುವ ಯಾರೂ ಕೂಡ ರಾಜಕೀಯ ಮಾರ್ಗದಿಂದ ಜಗತ್ತಿನಲ್ಲಿ ಶಾಂತಿ ಬಂದೀತೆಂದು ದೃಢವಾಗಿ ಹೇಳಲಾರರು.

ಜಗತ್ತಿನ ಚರಿತ್ರೆಯನ್ನೊಮ್ಮೆ ಪರಿಶೀಲಿಸಿದರೆ ರಾಜಕೀಯ ಘರ್ಷಣೆ ಅನಾದಿ ಕಾಲದಿಂದಲೂ ನಡೆಯುತ್ತಾ ಬಂದಿದೆ. ಹಿಂದಿನ ಕಾಲದಲ್ಲಿ ವ್ಯಕ್ತಿಗಳ ಸುತ್ತು ರಾಜಕೀಯ ಬೆಳೆಯುತಿತ್ತು. ಒಬ್ಬ ಅರಸನು ಬಲಾಢ್ಯನಾದರೆ ಆತನು ತನ್ನ ಶಕ್ತಿ ಸಾಮರ್ಥ್ಯದಿಂದ ಸಿಕ್ಕಿದವರನ್ನೆಲ್ಲಾ ಸದೆಬಡೆದು ತಾನು ಸಾರ್ವಭೌಮನೆನಿಸುವದು ಅಂದಿನ ಸಂಪ್ರದಾಯವಾಗಿತ್ತು. ಅಂದಿನ ರಾಜಕೀಯವು ಶಕ್ತಿ ಇದ್ದವನ ರಾಜಕೀಯವಾಗಿತ್ತು. ಆದರೆ ಆ ಶಕ್ತಿಶಾಲಿ ಅರಸ, ಚಕ್ರವರ್ತಿಗಳ ಕಾಲ ಕಳೆದು ತತ್ವಗಳ ರಾಜಕೀಯ ಪ್ರಾರಂಭವಾಯಿತು. ಅದರಲ್ಲಿ ವ್ಯಕ್ತಿಗಳಿಗೆ ಪ್ರಾಮುಖ್ಯತೆಯಿಲ್ಲ. ತತ್ವಗಳಿಗೆ ಹಿರಿಮೆ. ಈ ಇಪ್ಪತ್ತನೇ ಶತಮಾನದಲ್ಲಿ ಈ ತತ್ವಗಳ ರಾಜಕೀಯವೇ ನಡೆದು ಬರುತ್ತಿದೆ. ತತ್ವಗಳ ರಾಜಕೀಯದಿಂದ ಜಗತ್ತಿನ ಘರ್ಷಣೆ ನಿಂತು ಶಾಂತಿಯು ಉದಯವಾಗಬಹುದೆಂಬ ಆಸೆ ಇತ್ತು. ಆದರೆ ಇದು ಇನ್ನಷ್ಟು ಜಟಿಲವಾಯಿತು. ರಾಜಕೀಯವು ವಿವಿಧ ಕವಲೊಡೆದು-ವಿವಿಧ ತತ್ವಗಳ ರೂಪು ತಾಳಿ, ತತ್ವತತ್ವಗಳೊಡನೆ ತಿಕ್ಕಾಟ ಪ್ರಾರಂಭವಾಯಿತು

ಸರ್ವಾಧಿಕಾರಿಗಳ, ಕೆಲ ಜನ ಸರ್ವಸ್ವತಂತ್ರರ, ದಬ್ಬಾಳಿಕೆ ಆಡಳಿತಗಳು ಮುಗಿದು ಪ್ರಜಾಪ್ರಭುತ್ವ, ಬಂಡವಳವಾದ, ಸಾಮ್ಯವಾದ, ಉಗ್ರ ಸಾಮ್ಯವಾದ ಮೊದಲಾದ ನೂರಾರು ತತ್ವಗಳ ಘರ್ಷಣೆ ನಡೆಯುತ್ತಿದೆ. ಇಂದು ಜಗತ್ತಿನ ರಾಜಕೀಯವು ಈ ತತ್ವಗಳ ಮೇಲೆ ಹೊಂದಿಕೊಂಡಿದೆ. ಈ ತತ್ವಗಳೆಲ್ಲವುಗಳ ಗುರಿಯು ಜನತೆಯ, ಸುಖ, ಪ್ರಗತಿ, ಶಾಂತಿಗಳೆಂಬುದನ್ನು ಪ್ರತಿಯೊಬ್ಬನೂ ಗಮನಿಸಬೇಕು. ಎಲ್ಲರ ಗುರಿ ಒಂದಾದರೂ ಪರಸ್ಪರದಲ್ಲಿರುವ ಘರ್ಷಣೆ ಹಿರಿದಾಗುವುದೆಂದರೆ ಆಶ್ಚರ್ಯಪಡಬೇಕಾಗಿದೆ. ಈ ಘರ್ಷಣೆ ತಿಕ್ಕಾಟಗಳ ಕಾರಣವಾಗಿ ಕಳೆದ ಅರ್ಧ ಶತಮಾನದಲ್ಲಿ ಎರಡು ಘೋರ ಪ್ರಪಂಚಕದನಗಳನ್ನು ಜಗತ್ತು ಕಂಡಿತು. ಮೊದಲನೆಯ ಪ್ರಪಂಚ ಯುದ್ಧವು ಜಗತ್ತಿನಲ್ಲಿ ಪ್ರಜಾ ಪ್ರಭುತ್ವದ ಸ್ಥಾಪನೆಗಾಗಿ ನಡೆಯಿತು. ಪ್ರಜಾಪ್ರಭುತ್ವವಾದಿಗಳಿಗೇ ಜಯವಾಯಿತು. ಆದರೆ ಪ್ರಜಾ ಪ್ರಭುತ್ವ ನೆಲೆಗೊಳ್ಳಲಿಲ್ಲ. ಬಾಯಲ್ಲಿ ಉದ್ಘುಷ್ಟದ ತತ್ವ ಹೇಳಿದವರ ವರ್ತನೆಯೇ ದ್ವಿತೀಯ ಯುದ್ಧಕ್ಕೆ ಮೂಲ ಕಾರಣವಾಯಿತು. ದ್ವಿತೀಯ ಯುದ್ಧವು ಜನತೆಯ ಹಿತಕ್ಕಾಗಿಯೂ, ಪ್ರಪಂಚದ ಶಾಂತಿಗಾಗಿಯೂ ನಡೆಯಿತು. ಪ್ರತಿಗಾಮಿಗಳ ಸೋಲಾಗಿ ಶಾಂತಿ ಸಾಧಕರೆನ್ನುವವರಿಗೇ ವಿಜಯವಾಯಿತು. ಆದರೆ ಜಗತ್ತಿನಲ್ಲಿ ಶಾಂತಿ ಎಲ್ಲಿದೆ? ಆಗುವ ಚಿಹ್ನೆಯಾದರೂ ಎಲ್ಲಿ ತೋರುತ್ತಿದೆ? ಇಂದು ಬಂಡವಳವಾದ ಸಾಮ್ಯವಾದಗಳ ಮಹಾ ಘರ್ಷಣೆ ಎಲ್ಲೆಡೆ ನಡೆದಿದೆ. ಯಾವ ಭಾಗದ, ಯಾವ ಪ್ರಶ್ನೆಗೂ ಈ ಘರ್ಷಣೆಯ ಛಾಯೆಯೇ ಬೀಳುತ್ತಿರುವದರಿಂದ ಮತ್ತೊಂದು ಮಹಾ ಯುದ್ಧದ ಪೂರ್ವ ಚಿಹ್ನೆಗಳು ತೋರುತ್ತಿವೆ. ಪರಮಾಣು ಬಾಂಬು, ಹೈಡ್ರೋಜನ್ ಮತ್ತು ಕೋಬಾಲ್ಟ್ ಬಾಂಬುಗಳ ಆವಿಷ್ಕಾರವಾಗಿ ಒಂದನ್ನೊಂದು ಮೂದಲಿಸುತ್ತಿವೆ. ಹೀಗಿರುವಾಗ ರಾಜಕೀಯದಿಂದ ಶಾಂತಿ ಸಂಸ್ಥಾಪನೆಯಾಗುವದೆಂಬುದು ಒಂದು ಭ್ರಾಂತಿಯಲ್ಲದೆ ಕಾರ್ಯತಃ ಕೈಗೂಡುವ ವಸ್ತುವಲ್ಲ.

ವಿನಾಶದತ್ತ ಜಗತ್ತನ್ನು ಕೊಂಡೊಯ್ಯುತ್ತಿರುವ ರಾಜಕೀಯಕ್ಕೆ ಸಹಾಯಕವಾಗಿ ವಿಜ್ಞಾನ, ಸಾಹಿತ್ಯ ಸರ್ವವೂ ಕುಣಿಯುತ್ತಿವೆ. ವಿಜ್ಞಾನವು ಇನ್ನೂ ಭಯಂಕರ ಆಯುಧಗಳನ್ನು ಕಂಡು ಹಿಡಿಯುತ್ತಿದೆ. ಪತ್ರಿಕೋದ್ಯೋಗವು ಅಧಿಕಾರ ರಾಜಕೀಯದ ಕೈಗೊಂಬೆಯಾಗಿದೆ. ಜನಜೀವನಕ್ಕೆ ಅತ್ಯಾವಶ್ಯಕವಾದ, ಜಗತ್ತಿನ ಶಾಂತಿಗೆ ಪೂರಕವಾದ ಸಲಹೆಗಳು ದುಡ್ಡಿನ ಚೀಲಕ್ಕೆ ಮರುಳಾಗಿ ಪತ್ರಿಕೋದ್ಯಮವು ಇಂದು ವ್ಯಾಪಾರದ ಅಂತಸ್ತಿಗಿಳಿದಿದೆ. ಸಾಹಿತ್ಯವು ಕೂಡ ಅದೇ ಪಥವನ್ನು ಹಿಡಿದು ನಡೆಯುತ್ತಿದೆ. ರೋಮಾಂಚಕಾರಕ ಕಥೆ, ಕಾದಂಬರಿಗಳು, ವಾಣಿಜ್ಯ ಪ್ರವೃತ್ತಿಯ ಪ್ರಕಾಶನಗಳು ಹೆಚ್ಚಾಗಿ, ಜನಹಿತಕ್ಕೆ ಆವಶ್ಯಕವೂ, ನೀತಿ ನಡತೆಗಳಿಗೆ ಸಹಾಯಕವೂ ಆದ ಸಾಹಿತ್ಯಕ್ಕೆ ಪ್ರೋತ್ಸಾಹ ಇಲ್ಲದಾಗಿದೆ. ಇಂದು ಲಾಭದ ಆಸೆ, ದುಡ್ಡಿನ ಹುಚ್ಚು, ಮೆರೆಯುವ ಇಚ್ಛೆಯಲ್ಲದೆ ಮಾನವನ ದೈವೀ ಗುಣಗಳ, ಸತ್ಯ ಶೀಲಗಳ ಕಡೆ ಗಮನವಿಲ್ಲ.

ರಾಜಕೀಯಕ್ಕೂ, ಪತ್ರಿಕೋದ್ಯೋಗ ಮೊದಲಾದ ಉದ್ಯಮಗಳಿಗೂ, ಸಾಹಿತ್ಯ ಮತ್ತಿತರ ಕಲೆಗಳಿಗೂ ತಗಲಿರುವ ರೋಗವನ್ನು ನಿವಾರಿಸದಿದ್ದರೆ ಜಗತ್ತಿನ ಶಾಂತಿ ಒಂದು ಕಲ್ಪನಾ ವಸ್ತುವಾಗಿಯೇ ಉಳಿಯುವದಲ್ಲದೆ ಅದರ ಅಸ್ತಿತ್ವವು ಕಾರ್ಯರೂಪದಲ್ಲಿ ಇಳಿದು ಬಾರದು.

ಈ ರೀತಿಯ ಹೀನ ಪರಿಸ್ಥಿತಿ ಜಗತ್ತಿನಲ್ಲಿ ಉಂಟಾಗಲು ಹುಟ್ಟು ಕುರುಡಾಗಿರುವ ಆಧುನಿಕ ನಾಗರಿಕತೆಯೇ ಕಾರಣ. ಈ ನಾಗರಿಕತೆಗೆ ಬೇಕಾದುದು ಜಯವಲ್ಲದೆ ನೀತಿಯಲ್ಲ. ಆತನು ಕೈಗಾರಿಕೆ ಮಾಡುವವನಾಗಲೀ, ವಕೀಲ, ಡಾಕ್ಟರನಿರಲಿ, ಗುರು ಪಾದ್ರಿ ಇರಲಿ ರಾಜಕೀಯವೇತ್ತ ಯಾ ಅಧಿಕಾರ ವರ್ಗದವನಿರಲೀ ಪ್ರತಿಯೊಬ್ಬನಿಗೂ ಬೇಕಾದುದು ಅಲ್ಪ ಪರಿಶ್ರಮದಿಂದ ಅತಿ ಲಾಭವನ್ನು ಪಡೆಯುವದೇ ಆಗಿದೆ. ಯಾರಿಗೆ ಯಾವ ಅಹಿತವಾದರೂ ಚಿಂತೆ ಇಲ್ಲ; ಎಷ್ಟು ಸುಳ್ಳು ಅನೀತಿಯಾದರೂ ಚಿಂತೆಯಿಲ್ಲ; ಇಂದಿನವರ ಗುರಿ ಕಾರ್ಯ ಸಾಧನೆ ಮತ್ತು ಲಾಭ ಸಂಪಾದನೆ.

ಹಿಂದೆಯೂ ಕೂಡ ಇದೇ ರೀತಿಯ ಉದ್ಯಮ, ವ್ಯವಹಾರಗಳನ್ನು ನಡೆಸುತ್ತಿದ್ದ ಜನರಿದ್ದರು. ಗುರುಗಳು, ವೈದ್ಯರು, ಅಧಿಕಾರಿ, ರಾಜಕೀಯವಾದಿಗಳಿದ್ದರು. ಆದರೆ ಅಂದಿನವರ ಜೀವನ ತತ್ವವೇ ಬೇರೆಯಾಗಿತ್ತು. ಅಂದು ಜೀವನಕ್ಕಿಂತಲೂ ನೀತಿ ನಡತೆ, ಪ್ರಾಮಾಣಿಕತೆಗಳಿಗೆ ಬೆಲೆಯಿತ್ತು. ಪಾಪದ ಪಥ ತುಳಿಯುವದಕ್ಕಿಂತ ಜೀವಾರ್ಪಣ ಯೋಗ್ಯವೆಂಬುದು ಅವರ ಮತವಾಗಿತ್ತು. ಅಂಥಾ ಆದರ್ಶಕರಾಗಿ ಹಣಕ್ಕಿಂತಲೂ ಗುಣ ನೀತಿಗಳು ಹೆಚ್ಚಿನ ಬೆಲೆಯುಳ್ಳವೆಂಬುದನ್ನು ಅವರು ಕಾರ್ಯತಃ ತೋರಿಸುತ್ತಿದ್ದರು. ಆ ರೀತಿ ನೀತಿಗೆ ಬೆಲೆ ಕಟ್ಟಿ, ಉತ್ತಮ ಆದರ್ಶಕ್ಕಾಗಿ ಜೀವತೆತ್ತುದರಿಂದಲೇ ಮಾನವನು ಪ್ರಾಣಿಗಳಿಗಿಂಥಾ ಉತ್ತಮನು ಅಥವಾ ಮಾನವನು ಇಹ ಜೀವನದಲ್ಲಿಯೇ ತನ್ನ ಉತ್ತಮ ಗುಣಗಳ ಕಾರಣ ದೇವರ ಸಾಲಿಗೆ ಸೇರಬಲ್ಲನೆಂಬುದು ಶೃತಪಟ್ಟಿತು.

ಆಧುನಿಕ ನಾಗರಿಕತೆಯು ಈ ಗುಣ, ನೀತಿ, ಸತ್ಯಧರ್ಮಗಳ ಪಥವನ್ನು ಬಿಟ್ಟು ಅರ್ಥಶಾಸ್ತ್ರ, ರಾಜಕೀಯ ಮತ್ತು ಸಮಾಜಶಾಸ್ತ್ರಗಳೇ ಸರ್ವಸ್ವವೆಂದು ಸಾರತೊಡಗಿತು. ಆದರೆ ಸೂಕ್ಷ್ಮವಾಗಿ ಪರಿಶೀಲಿಸುವವರಿಗೆ ಈ ತತ್ವಗಳ ಟೊಳ್ಳುತನವೂ ಈ ತತ್ವಗಳ ತಳಹದಿಯಲ್ಲಿ ಪ್ರಪಂಚದ ಶಾಂತಿ ಸಂಸ್ಥಾಪಿಸುವೆವೆನ್ನುವವರ ಸೋಗೂ ತಿಳಿದು ಬಾರದಿರದು. ಆಧುನಿಕ ಯುಗದ ಈ ನವೀನ ನಾಗರೀಕತೆಯೇ ಸರ್ವಸ್ವ, ಅದರಿಂದಲೇ ಸರ್ವರ ಹಿತವೆನ್ನುವದಾದರೆ ಪ್ರಪಂಚದ ಯುದ್ಧ ಕ್ರಾಂತಿಗಳಾದರೂ ಈ ಮಾರ್ಗದಲ್ಲಿ ಈ ವರೆಗೆ ಪರಿಸ್ಥಿತಿ ಸುಧಾರಿಸದಿರಲು ಕಾರಣವೇನು? ನಿನ್ನೆ ಹುಟ್ಟಿದ ಈ ನಾಗರಿಕತೆಯೇ ಸರ್ವಸ್ವವೆನ್ನುವದಾದರೆ ಆರ್ಷೇಯವಾದ ಪುರಾತನವಾದ ತತ್ವಗಳಿಗೆ ಇಂದು ಸ್ಥಾನವಿಲ್ಲವೇ? ತತ್ವ ಪ್ರವಾದಿಗಳಾದ ಬುದ್ಧ, ಕನ್‌ಫ್ಯೂಶಿಯಸ್, ಮಹಾವೀರ, ಕೃಷ್ಣ, ಝರಾತುಷ್ಟ್ರ, ಪೈತಾಗೋರಸ್, ಪ್ಲೆಟೋ, ಪ್ಲೋಟಿನಸ್ ಮೊದಲಾದ ಮಹಾಪುರುಷರು ಹೇಳಿದ ಮಾತು, ಬದುಕಿ ತೋರಿಸಿದ ಜೀವನದ ಮಾದರಿ ಈ ಆಧುನಿಕ ಯುಗದ ನಾಗರೀಕರಿಗೆ ಅರ್ಥರಹಿತವಾದುವುಗಳೇ? ಜನಜೀವನಕ್ಕೆ ಕ್ರಿಸ್ತನ ತತ್ವದ ಆವಶ್ಯಕತೆ ಇಂದಿಲ್ಲವೇ?

ಈ ಪ್ರಶ್ನೆಗಳಿಗೆ ಪ್ರತಿಯೊಬ್ಬನೂ ತನ್ನ ಅನುಭವಕ್ಕನುಗುಣವಾದ ಉತ್ತರ ಕೊಡಬಹುದು. ಆದರೆ ಇಂದು ಬೇಕಿರುವದು ಮಾತಿನ ಮಲ್ಲತನ ಯಾ ಉತ್ತರದ ಸಮರ್ಪಕತೆಯಲ್ಲ. "To thine own self be true" ನಿನ್ನಾತ್ಮಕ್ಕೆ ನೀನು ಸರಿಯಾಗಿ ಸತ್ಯವಾಗಿರು ಎಂಬ ಮಾತು ಬಹು ಅರ್ಥಗರ್ಭಿತವಾದುದು. ಮಾನವನ ಆಧ್ಯಾತ್ಮಿಕ ಮತ್ತು ಸಾಮಾಜಿಕ ಬೆಳವಣಿಗೆ ಮತ್ತು ಪ್ರಗತಿಗೆ ತೃಪ್ತಿಕರವಾದ ಆರ್ಥಿಕ ತಳಹದಿ ಬೇಕೆಂಬುದು ನಿಜ. ಪುರಾಣದ ಬ್ರಹ್ಮ, ವಿಷ್ಣು, ಮಹೇಶ್ವರರಿಗಿಂತಲೂ, ಅನ್ನ, ಬಟ್ಟೆ, ವಸತಿಗಳೆಂಬ ತ್ರಿಮೂರ್ತಿಗಳು ಹಿರಿಯವೆಂದೆನ್ನುವದು ಸಹಜ. ಮನುಷ್ಯನು ಆಹಾರ ತಿಂದೇ ಜೀವಿಸುವವನಾದರೂ ಬರೇ ಆಹಾರದಿಂದಲೇ ಜೀವಿಸುವವನಲ್ಲವೆಂಬುದನ್ನು ಒಪ್ಪಲೇಬೇಕು. ಹಾಗಿದ್ದಿದ್ದರೆ ಅಮೇರಿಕಾವು ಇಂದು ಜಗತ್ತಿನ ಅತೀ ಸುಖ ಶಾಂತಿಯ ರಾಷ್ಟ್ರವಾಗುತಿತ್ತು. ಆದರೆ ಪರಿಸ್ಥಿತಿ ಹಾಗಿಲ್ಲ. ಲಕ್ಷಾಂತರ ರೂಪಾಯಿ ಬ್ಯಾಂಕಿನಲ್ಲಿಟ್ಟುಕೊಂಡ ಸಿರಿವಂತರು, ಮನಮೋಹಕ ಸೌಂದರ್ಯ, ಆರೋಗ್ಯ ಉಳ್ಳವರು, ಉತ್ತಮ ಆಹಾರ, ಉತ್ತಮ ಉಡಿಗೆ, ಉತ್ತಮ ವಿದ್ಯೆ ಐಹಿಕ ಸರ್ವ ಭೋಗ ಭಾಗ್ಯಗಳುಳ್ಳವರು ಅತೃಪ್ತಿಯಿಂದ ಅಶಾಂತಿಯಿಂದ ಆತ್ಮಹತ್ಯೆ ಮಾಡಿಕೊಳ್ಳುವದು ನಮಗೆ ಕಂಡುಬಂದಿದೆ. ಹಾಗಾದರೆ ಮಾನವನು ಕೇವಲ ಅಧಿಕಾರಕ್ಕಾಗಿ ಯಾ ಆಹಾರ, ಭೋಗವಿಲಾಸಗಳಿಗಾಗಿ ಬದುಕುವವನಲ್ಲ. ಇವುಗಳಿಗಿಂಥಾ ಭಿನ್ನವಾದುದು, ಇವುಗಳು ಕೊಡದ ಸುಖಶಾಂತಿಗಳನ್ನು ಕೊಡುವಂಥಾದ್ದು ಬೇರೊಂದಿದೆಯೆಂಬುದನ್ನು ಸರ್ವರೂ ಒಪ್ಪಬೇಕು. ಅದಿಲ್ಲದಿದ್ದರೆ ಜೀವನವು ನಿಸ್ಸಾರವೆಂದು ತಿಳಿಯಲ್ಪಡುತ್ತಿದೆಯೆಂಬುದನ್ನು ಮನಗಾಣಬೇಕು.

ಮನುಷ್ಯನು ಕೇವಲ ಶರೀರನಲ್ಲ. ಇಲ್ಲವೇ ಅಗೋಚರವಾದ ಆತ್ಮವೂ ಅಲ್ಲ. ಕೇವಲ ಶರೀರವಾಗಿದ್ದರೆ ಆತನಿಗೆ ಶರೀರಕ್ಕೆ ಹಿತವಾಗುವ ವಸ್ತುಗಳಿಂದ ಸಂತೋಷವಾಗಬೇಕಿತ್ತು. ಶಾಂತಿದೊರೆಯಬೇಕಿತ್ತು. ಕೇವಲ ಆತ್ಮವೇ ಆಗಿದ್ದರೆ ಆತ್ಮಕ್ಕೆ ಹಿತವಾದ ವಸ್ತುಗಳಿಂದ ಶಾಂತಿ ಸಮಾಧಾನ ದೊರೆಯಬೇಕಿತ್ತು. ಆದರೆ ಶರೀರದ ಅವಶ್ಯಕತೆಗೆ ಬೇಕಾದ ಸರ್ವ ಅನುಕೂಲತೆ

(೭ನೇ ಪುಟ ನೋಡಿ)

೧೬—೧೦—೫೨ನೇ **ಕೊಡಗು** ಶುಕ್ರವಾರ.

ಭೂ ಸು ಧಾ ರ ಣೆ .

ಅಖಿಲ ಭಾರತ ಆಯೋಜನಾ ಸಮಿತಿಯು (ಪ್ಲಾನಿಂಗ್ ಕಮಿಷನ್) ಭೂಸುಧಾರಣೆಯ ವಿಚಾರದಲ್ಲಿ ಇತ್ತೀಚೆಗೆ ಹೆಚ್ಚು ಆಸಕ್ತಿಯನ್ನು ತಳೆದಿದೆ. ಈಗ ಯಾವ ರೀತಿ ಭೂವಿತರಣೆಯಾಗಿದೆ; ವ್ಯವಸಾಯ ಮಾಡಲು ಯೋಗ್ಯವಾದ ಆದರೆ ಈಗ ಪಾಳು ಬಿದ್ದಿರುವ ಭೂಮಿ ಎಷ್ಟಿದೆ ಎಂಬೀ ವಿಚಾರದ ಮಾಹಿತಿಯನ್ನು ಸಂಗ್ರಹಿಸಲು ಅದು ಪ್ರಾಂತೀಯ ಸರಕಾರಗಳಿಗೆ ನಿರ್ದೇಶಿಸಿದೆ. ಮೊನ್ನೆಯಾಗಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿಯೂ ಕೂಡ ಈ ವಿಚಾರ ವಿವೇಚಿಸಲ್ಪಟ್ಟು ಭೂಸುಧಾರಣೆಯ ಆವಶ್ಯಕತೆ ಮತ್ತು ಅದು ಹೇಗಾಗಬೇಕೆಂಬ ಬಗ್ಗೆ ಕೆಲವು ಸೂಚನೆಗಳು ಕೊಡಲ್ಪಟ್ಟಿವೆ.

ಈಗಿನ ಪ್ರಸ್ತುತ ಭೂವಿತರಣಾ ಸ್ಥಿತಿಯು ತೀರಾ ಅಸಮಾಧಾನಕರವೆಂಬುದರಲ್ಲಿ ಎರಡಭಿಪ್ರಾಯಗಳಿಲ್ಲ. ವ್ಯವಸಾಯ ಮಾಡಲಾರದವರಲ್ಲಿ ಹೆಚ್ಚು ಭೂಮಿ, ವ್ಯವಸಾಯ ಮಾಡಲು ಶಕ್ತರಾದವರಿಗೆ ಭೂಮಿ ಇಲ್ಲದಿರುವಿಕೆ ಮೊದಲಾದ ಕಾರಣಗಳಿಂದ ದೇಶದ ವ್ಯವಸಾಯದ ಉತ್ಪತ್ತಿ ಬಹಳ ಕಡಿಮೆ ಇದೆ. ಈ ಭೂವಿತರಣೆಯೂ ಕೂಡ ಹಿಂದೂಸ್ಥಾನದ ಉದ್ದಗಲಕ್ಕೂ ಒಂದೇ ರೀತಿಯಲ್ಲಿಲ್ಲ. ವಿವಿಧ ಪ್ರಾಂತಗಳಲ್ಲಿ ವಿವಿಧ ರೀತಿಯ ಪದ್ಧತಿಗಳಿವೆ. ವ್ಯವಸಾಯ ಮಾಡುವವನೇ ಭೂಮಿಯ ಮಾಲೀಕನೂ ಆಗಿರಬೇಕೆಂಬ ತತ್ವವನ್ನು ಪ್ರತಿಯೊಬ್ಬನೂ ಒಪ್ಪಲೇಬೇಕು. ಹಾಗಾದರೆ ಮಾತ್ರ ವ್ಯವಸಾಯಗಾರನು ಹೆಚ್ಚಿನ ಆಸ್ಥೆಯಿಂದ ವ್ಯವಸಾಯ ಮಾಡುವದು ಸಾಧ್ಯವಿದೆ. ಬೇರೊಬ್ಬರ ಭೂಮಿಯನ್ನು ಗೇಣಿಗೋ, ವಾರಕ್ಕೋ ಮಾಡುವ, ಭೂಮಿ ಇಲ್ಲದವರು ಆ ಭೂಮಿಯನ್ನು ಇಂದಲ್ಲ ನಾಳೆ ಬಿಟ್ಟು ಕೊಡಬೇಕಾದುದರಿಂದ ಹೆಚ್ಚಿನ ಆಸಕ್ತಿ ಮತ್ತು ದೂರದೃಷ್ಟಿಯಿಂದ ವ್ಯವಸಾಯ ಮಾಡಲಾರರು. ಆದ್ದರಿಂದ ಒಬ್ಬನು ಜಮೀನ್ದಾರನಾಗಿ ಸರ್ವಭೂಮಿಯ ಒಡೆಯನಾಗಿ ಶಹರಿನಲ್ಲಿ ಜೀವಿಸುತ್ತಿದ್ದು ಆತನ ವಾರಗಾರರಾಗಿ ಹಲವಾರು ಜನರು ದುಡಿದು ಆತನ ಕಣಜ ತುಂಬಿಸುವ ಪದ್ಧತಿಯಿಂದ ವ್ಯವಸಾಯವು ಅಭಿವೃದ್ಧಿಗೊಳ್ಳಲಾರದು.

ಈ ಕಾರಣದಿಂದ ಒಬ್ಬನು ತನ್ನ ವಶ ಇಟ್ಟುಕೊಳ್ಳಬಹುದಾದ ಭೂಮಿಯ ಒಂದು ಮಹಾಪರಿಮಿತಿಯನ್ನು ನಿಶ್ಚಯಿಸುವಂತೆ ಸೂಚನೆಗಳಾಗಿರುವದೂ ಸೂಕ್ತವೇ ಆಗಿದೆ. ಒಬ್ಬನು ೫೦ ಏಕರೆ ಜಮೀನುಗಳಿಗಿಂತಾ ಹೆಚ್ಚು ಭಾಗದ ಒಡೆಯನಾಗಿರಕೂಡದೆಂಬ ಸೂಚನೆಯು ಯುಕ್ತವಾಗಿ ತೋರುತ್ತಿದೆ. ಹಿಂದೂದೇಶದಲ್ಲಿ ಜನಸಂಖ್ಯೆ ಹೆಚ್ಚಿದ್ದು ಭೂಮಿ ಕಡಿಮೆ ಇರುವದರಿಂದ ಈ ರೀತಿಯ ಒಂದು ಮಿತಿ ಇಡಬೇಕಾದ್ದು ಅನಿವಾರ್ಯವಾಗಿದೆ.

ಭೂವಿತರಣೆಯಿಂದಲೇ ವ್ಯವಸಾಯದ ಪರಿಸ್ಥಿತಿ ಉತ್ತಮಗೊಳ್ಳಲಾರದು. ಹಿಂದೂದೇಶದ ವ್ಯವಸಾಯ ಯೋಗ್ಯ ಭೂಮಿಯನ್ನು ಸಮಾನವಾಗಿ ಹಂಚಿದರೂ ಪ್ರಶ್ನೆ ಬಗೆಹರಿಯದು. ಏಕೆಂದರೆ ವರ್ಷಕ್ಕೆ ೫ ಮಿಲಿಯದಂತೆ ಹೆಚ್ಚುತ್ತಿರುವ ಭಾರತದ ಜನಸಂಖ್ಯೆಗೆ ಭೂಮಿ ಒದಗಿಸುವದು ಅಸಾಧ್ಯದ ಮಾತು. ದೇಶದ ಬಹು ಜನರು ಭೂಮಿಯ ಆಶ್ರಯ ಪಡೆದು ವ್ಯವಸಾಯಗಾರರಾಗಿ ಜೀವಿಸಬೇಕಾದುದು ಅನಿವಾರ್ಯವಾದರೂ ಎಲ್ಲರೂ ಭೂಮಿಯನ್ನೇ ಆಶ್ರಯಿಸುವದು ಸಾಧ್ಯವಾಗದ ಮಾತು. ಹಾಗೆನ್ನುವಾಗ ಭೂವಿತರಣಾ ಪ್ರಶ್ನೆ ಮಹತ್ವದ್ದಲ್ಲವೆಂದು ಯಾರೂ ತಿಳಿಯಬಾರದು. ದೇಶದಲ್ಲಿ ವ್ಯವಸಾಯಕ್ಕೆ ಯೋಗ್ಯವಾಗಿ ವ್ಯವಸಾಯವಾಗದಿರುವ ಭೂಮಿ ಇದೆ. ಇದರ ಲೆಕ್ಕ ತೆಗೆದು ಅಂಥಾ ಕಡೆಗಳಲ್ಲಿ ಭೂಮಿ ಕೊಟ್ಟು ವ್ಯವಸಾಯಕ್ಕೆ ಅನುಮಾಡುವದು ಆವಶ್ಯ. ಕೊಡಗು ಸರಕಾರವೂ ಕೂಡ ವ್ಯವಸಾಯ ಯೋಗ್ಯವಾದ ಇಂಥಾ ಭೂಮಿಗಳಿವೆಯೆಂಬುದನ್ನು ಕಂಡು ಹಿಡಿಯುವ ಯತ್ನ ಮಾಡುತ್ತಿದೆಯೆಂದೂ, ಹರಿಜನರಿಗೆ ಇದರಿಂದ ಪ್ರತಿಯೊಬ್ಬನಿಗೆ ಮೂರು ಏಕ್ರೆ ಭೂಮಿ ಕೊಡುವ ಏರ್ಪಾಡಿದೆಯೆಂದೂ ಕೌನ್ಸಿಲಿನಲ್ಲಿ ಅಧಿಕಾರದಲ್ಲಿರುವವರು ಹೇಳಿರುವರು. ಈ ಉತ್ತಮ ಏರ್ಪಾಡು ಆದಷ್ಟು ಶೀಘ್ರ ಕೈಗೂಡಬೇಕು.

ಕೊಡಗಿನಲ್ಲಿ ಹೊರಪ್ರಾಂತಗಳಂತೆ ಭೂ ಪ್ರಶ್ನೆ ಕಠಿಣವಿಲ್ಲ. ಕೊಡಗಿನಲ್ಲಿ ಹೊರಗಿನಂತೆ ದೊಡ್ಡ ಜಮೀನ್ದಾರರು ಬಹಳ ಇಲ್ಲ. ಇಲ್ಲಿ ಟೆನೆನ್ಸಿ ಪದ್ಧತಿಯೂ ಬಹು ಕಡಿಮೆ. ಪ್ರತಿ ವ್ಯವಸಾಯಗಾರನೂ ಭೂಮಾಲೀಕನಾಗಿರುವದರಿಂದ ವ್ಯವಸಾಯದ ಮಟ್ಟವು ನೆರೆಯ ಪ್ರಾಂತಗಳಿಗಿಂತಾ ಉತ್ತಮವಿದೆ. ಆದರೆ ದೇಶದಲ್ಲಿ ಭೂಮಿ ಇಲ್ಲದ ಹಲವರಿದ್ದಾರೆ. ಅವರಿಗೆ ಭೂಮಿ ಒದಗಿಸುವದು ಸರಕಾರದ ಕರ್ತವ್ಯವಿದೆ. ದೇಶದಲ್ಲಿರುವವರೆಲ್ಲರ ಭೂ ಬೇಡಿಕೆಯನ್ನು ಸಲ್ಲಿಸುವದು ಯಾವ ಸರಕಾರಕ್ಕೂ ಸಾಧ್ಯವಿಲ್ಲ ನಿಜ. ಆದರೆ ವ್ಯವಸಾಯ ಯೋಗ್ಯವಾದ ಭೂಮಿ ಎಲ್ಲವನ್ನೂ ವಿತರಣೆ ಮಾಡುವದು ಸಾಧ್ಯವಿದೆ. ವ್ಯವಸಾಯ ಮಾಡಲಾರದಷ್ಟು ಹೆಚ್ಚು ಭೂಮಿ ಇಟ್ಟುಕೊಂಡಿರುವವರಿಂದ ಹೆಚ್ಚಿನದನ್ನು ಪರಿಹಾರ ಕೊಟ್ಟೋ ಯಾ ಕೊಡದೆಯೋ ವಶಪಡಿಸಿ ವಿತರಣೆ ಮಾಡುವದು ಸಾಧ್ಯವಿದೆ.

ಒಂದು ಕುಟುಂಬದ ಯೋಗ್ಯ ಜೀವನಕ್ಕೆ ೨೦ ಏಕ್ರೆ ಭೂಮಿ ಬೇಕೆಂಬ ಒಂದು ನಂಬಿಕೆ ಹಲವರಲ್ಲಿದೆ. ಅದಕ್ಕಿಂತಾ ಕಡಿಮೆ ಭೂವ್ಯವಸಾಯವು ಆರ್ಥಿಕ ದೃಷ್ಟಿಯಿಂದ ಲಾಭದಾಯಕವಲ್ಲವೆಂಬ ವಿಶ್ವಾಸವೂ ಇದೆ. ಇದು ನಿಜವಲ್ಲದ ಸಂಗತಿ. ಭೂ ವ್ಯವಸಾಯದ ಆದಾಯ ಯಾ ಸಂಪತ್ತು ಅದರ ವಿಸ್ತಾರದಲ್ಲಿಲ್ಲ. ಪರಿಣಾಮಕಾರಕವಾದ "ಇನ್‌ಟೆನ್ಸಿವ್" ವ್ಯವಸಾಯದಲ್ಲಿದೆ. ಜಪಾನಿನಲ್ಲಿ ಒಂದೆರಡು ಏಕರೆಗಳ ವ್ಯವಸಾಯದಿಂದಲೇ ಕುಟುಂಬಗಳು ಚೆನ್ನಾಗಿ ಜೀವಿಸುತ್ತಿವೆ. ಆದ್ದರಿಂದ ವಿಸ್ತಾರದ ದೃಷ್ಟಿಯ ಬದಲು ಹೆಚ್ಚು ಆಸ್ಥೆಯಿಂದ ಉತ್ತಮ ವ್ಯವಸಾಯ ಮಾಡುವದರಲ್ಲಿ ಲಾಭವಿದೆ. ಅದಕ್ಕೆ ಆಧುನಿಕ ಸಲಕರಣೆ, ಗೊಬ್ಬರ, ವ್ಯವಸಾಯ ಕ್ರಮಗಳನ್ನು ಕೈಕೊಳ್ಳಬೇಕು.

ಎಷ್ಟೇ ಉತ್ತಮ ವ್ಯವಸಾಯ ಮಾಡಿದರೂ, ಎಷ್ಟೇ ದಕ್ಷತೆಯಿಂದ ಭೂವಿತರಣೆ ನಡೆದರೂ ಭೂಮಿ ಇಲ್ಲದ ಜನರು ದೇಶದಲ್ಲಿ ಇದ್ದೇ ಇರಬೇಕಾಗುವದು. ಏಕೆಂದರೆ ದೇಶದ ಜನಸಂಖ್ಯೆ ಏರುತ್ತಿರುವಂತೆ ದೇಶದ ವಿಸ್ತಾರವು ಹೆಚ್ಚುತ್ತಿಲ್ಲ ತಾನೆ! ಆದ್ದರಿಂದ ಈ ಹೆಚ್ಚುತ್ತಿರುವ ಜನಸಂಖ್ಯೆಗೆ ಬೇರೆ ಉದ್ಯಮದ ಏರ್ಪಾಡನ್ನು ಸರಕಾರಗಳು ಮಾಡಬೇಕು. ಇಂದಿನ ಆಧುನಿಕ ಯುಗದಲ್ಲಿ ಎಷ್ಟೇ ದಕ್ಷತೆಯಿಂದ ವ್ಯವಸಾಯ ಮಾಡಿದರೂ ಕೇವಲ ವ್ಯವಸಾಯದಿಂದಲೇ ಸಂಪತ್ತು ಹೆಚ್ಚಿಸಿಕೊಂಡು ಸುಖ ಜೀವನ ನಡೆಸುವದು ಸಾಧ್ಯವಿಲ್ಲ. ವ್ಯವಸಾಯದ ಜೊತೆಗೆ ಬಿಡು ಸಮಯದಲ್ಲಿ ಕೈಕೊಳ್ಳಬಹುದಾದ ಕೈಗಾರಿಕೆಗಳ ಅಭಿವೃದ್ಧಿಯಾಗಬೇಕು. ಈ ಎರಡು ರೀತಿಯ ಸಮ್ಮಿಶ್ರಣದ ಬಲದಿಂದಲೇ ಜಪಾನು ಸಂಪನ್ನ ರಾಷ್ಟ್ರವಾಗಿದೆ. ಅಂತೆಯೇ ನಾವು ಆಗುವದು ಸಾಧ್ಯವಿದೆ.

ಹೊಗೆಸೊಪ್ಪಿನ ಮೇಲೆ ಕಂದಾಯ

ಕೊಡಗು ಶಾಸನ ಸಭೆಯಲ್ಲಿ ಮಸೂದೆ ಪಾಸಾಯಿತು

ಕೊಡಗು ಶಾಸನ ಸಭೆಯು ಮಂಗಳವಾರ? ತಾ. ೧೪ರ ಬೆಳಿಗ್ಗೆ ೧೦ ಗಂಟೆಗೆ ಶಾಸನ ಸಭಾಂಗಣದಲ್ಲಿ ಸೇರಿತು. ಶ್ರೀಗಳಾದ ಎ. ಸಿ ತಿಮ್ಮಯ್ಯ, ಪಿ ಐ. ಬೆಳ್ಯಪ್ಪ ಮತ್ತು ಎ. ಬೆಳ್ಳಿಯವರ ವಿನಹ ಎಲ್ಲಾ ಸದಸ್ಯರೂ ಹಾಜರಿದ್ದರು. ಮುಖ್ಯ ಮಂತ್ರಿ ಶ್ರೀ ಸಿ ಎಂ. ಪೂಣಚ್ಚನವರು ಕೊಡಗು ಹೊಗೆಸೊಪ್ಪು (ಮಾರಾಟ ತೆರಿಗೆ ಮತ್ತು ರಿಜಿಸ್ಟ್ರೇಶನ್) ಮಸೂದೆಯನ್ನು ಮುಂದಿಡುತ್ತಾ ಹೀಗೆ ಹೇಳಿದರು. ಮದ್ರಾಸ್ ಪ್ರಾಂತದಲ್ಲಿ ಸಿಗರೇಟು, ಸಿಗಾರು, ಚುರುಟುಗಳ ಮೇಲೆ ಕಂದಾಯ ಹಾಕಿರುವದರಿಂದಲೂ, ಮೈಸೂರಿನಲ್ಲಿ ಮಾರಾಟ ತೆರಿಗೆ ಹಾಕಿರುವ ಕಾರಣವು ಕೊಡಗಿನಲ್ಲಿ ಈ ಹೊಗೆಸೊಪ್ಪು ಉತ್ಪಾದನೆಗಳ ಸರಬರಾಯಿಗೆ ಧಕ್ಕೆ ಬಂದಿದೆ. ಎಂದಿನಂತೆ ಯೋಗ್ಯ ಸರಬರಾಯಿ ಆದರೂ ನೆರೆ ಪ್ರಾಂತಗಳಲ್ಲಿ ಹೆಚ್ಚಿನ ಬೆಲೆ ದೊರೆಯುವ ಕಾರಣ ಈ ಪ್ರಾಂತದಿಂದ ಈ ಹೊಗೆಸೊಪ್ಪು ವಸ್ತುಗಳು ಹೊರಗಿನ ಪ್ರಾಂತಗಳಿಗೆ ಕಳುಹಿಸಲ್ಪಟ್ಟು ಕೊಡಗಿನಲ್ಲಿ ಅವುಗಳ ಅಭಾವವಾಗುತ್ತಿದೆ. ಇದರಿಂದ ಕಳ್ಳಸಂತೆ ಲಾಭ ಬಡಕತನಕ್ಕೆ ಆಸ್ಪದವಾಗಿ ಉಪಯೋಗಿಸುವವರಿಗೆ ತೊಂದರೆಯಾಗುತ್ತಿದೆ. ಈ ಕಂದಾಯದಿಂದ ಕೊಡಗು ಸರಕಾರಕ್ಕೆ ಸುಮಾರು ರೂ. ಐವತ್ತು ಸಾವಿರ ಆದಾಯ ಬರುವದು. ಈ ಮಸೂದೆಯ ನಿಬಂಧನೆಗಳು ಮದ್ರಾಸು ಪ್ರಾಂತದ ಮಸೂದೆಯನ್ನೇ ಹೋಲುತ್ತವೆ. ಈ ಮಸೂದೆ ಪ್ರಕಾರ ಸಿಗಾರ್, ಚರೂಟ್ ಮತ್ತು ಸಿಗರೇಟ್ ಹೊಗೆಸೊಪ್ಪಿನ ಮೇಲಲ್ಲದೆ ಉಳಿದ ಹೊಗೆಸೊಪ್ಪು, ಹಾಗೂ ಅವುಗಳ ತಯಾರಿಗೂ ಕಂದಾಯ ಹೇರಲ್ಪಡುವದಿಲ್ಲ. ಮೂರು ಕಾಸು ಯಾ ಅದಕ್ಕೆ ಕಡಿಮೆ ಬೆಲೆಗೆ ಮಾರಲ್ಪಡುವ ಸಿಗರೇಟಿಗೆ ಪ್ರತಿ ರೂಪಾಯಿಗೆ ಮೂರು ಕಾಸಿನಂತೆಯೂ, ಆರು ಕಾಸು ಮತ್ತು ಮೂರು ಕಾಸಿನೊಳಗಿನ ಬೆಲೆಯ ಸಿಗರೇಟುಗಳಿಗೆ ಮಾರಾಟ ಬೆಲೆಯ ಶೇಕಡ ೧೦ ರಂತೆಯೂ, ಒಂಭತ್ತು ಕಾಸು ಮತ್ತು ಆರು ಕಾಸಿನೊಳಗಿನ ಸಿಗರೇಟುಗಳಿಗೆ ಶೇಕಡ ೧೫ ರಂತೆಯೂ ಇವುಗಳಿಗಿಂತಾ ಹೆಚ್ಚಿನ ಬೆಲೆಯವುಗಳಿಗೂ ಸಿಗರೇಟ್ ಮತ್ತು ಪೈಪ್ ಹೊಗೆಸೊಪ್ಪಿಗೂ ಶೇಕಡ ೨೦ ರಂತೆಯೂ ಎರಡಾಣೆ ಬೆಲೆಯ ಮತ್ತು ಕೆಳಗಿನ ಚರೂಟ್, ಸಿಗಾರುಗಳಿಗೆ ರೂಪಾಯಿಗೆ ಮೂರು ಪೈಯಂತೆಯೂ ಉಳಿದ ವಕ್ಕೆ ಶೇಕಡ ೨೦ ರಂತೆಯೂ ಕಂದಾಯ ವಿಧಿಸಲ್ಪಡುವದು. ಇದಲ್ಲದೆ ವ್ಯಾಪಾರಿಗಳು ಹೆಸರು ರಿಜಿಸ್ಟರ್ ಮಾಡಿಸಿಕೊಳ್ಳಬೇಕು. ಚಿಲ್ಲರೆ ವ್ಯಾಪಾರಿಗಳು ರೂ. ೧ ರಂತೆಯೂ, ರಖಂ ವ್ಯಾಪಾರಿಗಳು ರೂ. ೧೦ ರಂತೆಯೂ ರಿಜಿಸ್ಟರ್ ಫೀಜು ಕೊಡಬೇಕು.

ಶ್ರೀ ಪಿ. ಸಿ. ಉತ್ತಯ್ಯನವರು ಮುಖ್ಯ ಮಂತ್ರಿಯವರ ಅಭಿಪ್ರಾಯ ಸಮಂಜಸವಲ್ಲವೆಂದೂ ಉಪಯೋಗಿಸುವವರ ಮೇಲಲ್ಲದೆ ಉತ್ಪಾದಿಸುವವರ ಮೇಲೆ ಈ ಕಂದಾಯ ಹೇರಲ್ಪಡದ ಕಾರಣ ದೇಶದಲ್ಲಿ ಬೇಡಿಕೆ ಹೆಚ್ಚಾದಷ್ಟು ಸರಬರಾಯಿ ಹೆಚ್ಚಿ ಕೊರತೆವುಂಟಾಗದೆಂದೂ ಆದರೆ ರಾಷ್ಟ್ರರಚನಾ ಕೆಲಸಗಳಿಗೆ ಹಣಬೇಕಿರುವದರಿಂದ ಈ ಕಂದಾಯದ ತತ್ವಕ್ಕೆ ತಾನು ಒಪ್ಪುವೆನೆಂದೂ ಹೇಳಿದರು.

ನಂತರ ಮಸೂದೆಯ ನಿಬಂಧನೆಗಳು ಒಂದೊಂದಾಗಿ ತೆಗೆದುಕೊಳ್ಳಲ್ಪಟ್ಟವು ಮಸೂದೆಯ ನಾಲ್ಕನೇ ನಿಬಂಧನೆಗೆ ಒಂದು ತಿದ್ದುಪಡಿಯನ್ನು ಶ್ರೀ ಚೌರಿರ ಮಂದಣ್ಣನವರು ಸೂಚಿಸುತ್ತಾ ಮದ್ರಾಸಿನ ಮಸೂದೆಯನ್ನೇ ಈ [illegible]

ಪರಿಸಿದೆಯೆಂದರೂ ಮದ್ರಾಸಿನ ಮಸೂದೆಯಲ್ಲಿ ಮೂರು ಕಾಸು ಮತ್ತು ಅದಕ್ಕೆ ಕಡಿಮೆ ಕ್ರಯದ ಸಿಗರೇಟುಗಳಿಗೆ ಕಂದಾಯ ವಿಧಿಸಿಲ್ಲವೆಂದೂ ಆದ್ದರಿಂದ ಕೊಡಗಿನಲ್ಲೂ ಹಾಗೆಯೇ ಮಾಡಬೇಕೆಂದೂ ಈ ಕಡಿಮೆ ಬೆಲೆಯ ಸಿಗರೇಟುಗಳನ್ನು ಬಡವರೇ ಉಪಯೋಗಿಸುವದರಿಂದ ಬಡವರ ಹಿತಬಯಸುವ ಸರಕಾರವು ಈ ಕಡಿಮೆ ಬೆಲೆಯ ಸಿಗರೇಟುಗಳಿಗೆ ಕಂದಾಯ ಹಾಕಬಾರದೆಂದೂ ತಿದ್ದುಪಡಿ ಸೂಚಿಸಿದರು. ಶ್ರೀ. ಗುಂಡುಕುಟ್ಟಿ ಮಂಜುನಾಥಯ್ಯನವರು ಅನುಮೋದಿಸಿದರು. ಶ್ರೀ. ಕೋರನ ದೇವಯ್ಯ ಮತ್ತು ಶ್ರೀ. ನಾಣಮಯ್ಯ ಇವರು ತಿದ್ದುಪಡಿಯನ್ನು ವಿರೋಧಿಸುತ್ತಾ ಹೊಗೆಸೊಪ್ಪು ಆರೋಗ್ಯಕ್ಕೆ ಕೆಟ್ಟದಾದುದರಿಂದ ಅದರ ಉಪಯೋಗವನ್ನು ಕಡಿಮೆ ಮಾಡುವದು ವಿಹಿತವೆಂದೂ ಆದ್ದರಿಂದ ಬೀಡಿ ಮೊದಲಾದುದಕ್ಕೂ ಕಂದಾಯ ವಿಧಿಸುವದು ಹಿತವಿತ್ತೆಂದೂ ಆದ್ದರಿಂದ ಮಂದಣ್ಣನವರ ತಿದ್ದುಪಡಿ ವಿರೋಧಾರ್ಹವೆಂದರು. ಮುಖ್ಯ ಮಂತ್ರಿಯವರು ತಿದ್ದುಪಡಿಯನ್ನು ವಿರೋಧಿಸಿ ತಿದ್ದುಪಡಿಯ ಸೂಚಕರಾದ ಶ್ರೀ ಮಂದಣ್ಣನವರು ತಿದ್ದುಪಡಿಯನ್ನು ಹಿಂತೆಗೆದುಕೊಳ್ಳುವದು ಉಚಿತವೆಂದರು. ಶ್ರೀ. ಮಂದಣ್ಣನವರು ಉತ್ತರವೀಯುತ್ತಾ ಬಡ ರೈತರೆಂದುಕೊಳ್ಳುವ ಶ್ರೀ. ಕೋರನ ದೇವಯ್ಯನವರಂಥವರು ಬಡವರ ಹಿತಕ್ಕಾಗಿ ತಾನು ಸೂಚಿಸಿದ ತಿದ್ದುಪಡಿಯನ್ನು ವಿರೋಧಿಸುವದು ಆಶ್ಚರ್ಯವೆಂದೂ, ಸರಕಾರವು ಮುಂದಿಟ್ಟಿರುವ ವಾದವು ಸಮರ್ಪಕವಲ್ಲವೆಂದೂ ಆದರೂ ಸರಕಾರಗಳ ನೀತಿಯೇ ಕೆಲವು ವೇಳೆ ವಿಚಿತ್ರವಾಗಿರುವದರಿಂದ ತಾನು ತಿದ್ದುಪಡಿಯನ್ನು ಹಿಂತೆಗೆದುಕೊಳ್ಳುವದಾಗಿಯೂ ಹೇಳಿದರು.

ನಂತರ ಮಸೂದೆಯು ಬಹುಮತದಿಂದ ಪಾಸಾಯಿತು. ಶಾಸನ ಸಭೆಯು ಒಂದು ಗಂಟೆಯ ಕಾರ್ಯ ನಡೆಸಿ ಮುಕ್ತಾಯಗೊಂಡಿತು.

(ಐದನೇ ಪುಟದಿಂದ)

ದೊರೆತರೂ ಮಾನವನು ಮನಸ್ಸಿನ ಬೆಳವಣಿಗೆಯ ಕಡೆ, ಆಧ್ಯಾತ್ಮದ ಕಡೆ ಗಮನ ಕೊಡುತ್ತಾನೆ. ಆದ್ದರಿಂದ ಶಾರೀರಿಕ ಬೇಡಿಕೆಗೆ ಭಿನ್ನವಾದ ಬೇರೊಂದು ಬೇಡಿಕೆ ಮನುಷ್ಯನಲ್ಲಿದೆ. ಮಾನವನ ಅಸ್ತಿತ್ವಕ್ಕೆ ಶರೀರ ಆತ್ಮಗಳ ಸಮ್ಮಿಲನ ಹೇಗೆ ಅವಶ್ಯವೋ ಅದರಂತೆ ಆತನ ಅರ್ಥ ಪೂರಿತ ಜೀವನಕ್ಕೆ ಭೌತಿಕ ಮತ್ತು ನೈತಿಕ ತತ್ವಗಳ ಮಿಲನ ಅವಶ್ಯ. ನೀತಿ ನಡತೆಗಳೇ ನಶ್ವರ ಮಾನವನನ್ನು ಚಿರಂಜೀವಿಯಾಗಿ ಮಾಡುವವಲ್ಲದೆ ಅವುಗಳಿಂದಲೇ ಜಗತ್ತಿನ ಶಾಂತಿಯೂ ಸಾಧ್ಯ. ಯುದ್ಧ, ಘರ್ಷಣೆ, ತಿಕ್ಕಾಟಗಳಿಂದ ಶಾಂತಿ ಬರುವದೆಂದು ಭಾವಿಸುವದು ವಿಷದ ಮಥನದಿಂದ ಅಮೃತ ಹುಟ್ಟಬೇಕೆಂದು ಆಶಿಸಿದಂತೆ. ಯುದ್ಧದ ಮಾರ್ಗದಿಂದ ಬರುವದು ಅಶಾಂತಿಯೇ! ಪ್ರಸ್ತುತ ರಾಜಕೀಯವು ಯುದ್ಧಕ್ಕೆ ಪ್ರೋತ್ಸಾಹಕಾರವೂ ಸಹಾಯಕವೂ ಆಗಿರುವದರಿಂದ ಅದರಿಂದ ಎಂದೆಂದಿಗೂ ಅಶಾಂತಿ, ಘರ್ಷಣೆ, ಸ್ಪರ್ಧೆಯೇ ಬರುವದು. ಜಗತ್ತಿನಲ್ಲಿ ಶಾಂತಿ ಬೇಕಿದ್ದರೆ ಅದು ಐಕ್ಯದ ಪ್ರೇಮದ ಮಾರ್ಗದಿಂದಲೇ ಸಾಧ್ಯ. ಪ್ರೇಮ, ಐಕ್ಯತೆ ನೆಲೆನಿಲ್ಲಬೇಕಾದರೆ ಸತ್ಯ, ಪ್ರಾಮಾಣಿಕತೆ, ನೀತಿ, ನಡತೆಗಳೇ ಸಾಧನಗಳು. ಅದ್ದರಿಂದ ಜಗತ್ತಿನ ಶಾಂತಿಯ ಪ್ರಥಮ ಆವಶ್ಯಕತೆ ಪರಮಾಣು ಬಾಂಬು, ಯಾ ಸರ್ವನಾಶಕ ದಿಕ್ಕೆಟ್ಟ ವಿಜ್ಞಾನವಲ್ಲ; ಬದಲು ಸರ್ವೈಕ್ಯ ಸಾಧಿಸಬಲ್ಲ ನೀತಿಯುತ, ಗುಣಯುತ, ಶೀಲಯುತ ವ್ಯಕ್ತಿಗಳ ನಿರ್ಮಾಣ.

ವರ್ತಮಾನ.

ವೈದ್ಯಕೀಯದಲ್ಲಿ ಹೆಚ್ಚಿನ ವ್ಯಾಸಂಗ (ಎಫ್. ಆರ್. ಸಿ ಎಸ್) ಕ್ಕೆ ಇಂಗ್ಲೆಂಡಿಗೆ ಹೋಗಲಿರುವ ಶ್ರೀ ಅಂಜಪರವಂಡ ಬಿ. ಚಿಣ್ಣಪ್ಪ ಇವರಿಗೆ ಮೈಸೂರು ಸಿಟಿ ಕಾಲೇಜುಗಳ ಕೊಡಗಿನ ವಿದ್ಯಾರ್ಥಿಗಳು ಒಂದು ಸತ್ಕಾರ ಕೂಟವನ್ನು ಏರ್ಪಡಿಸಿ ಬೀಳ್ಕೊಟ್ಟರು.

ಈ ತಾ. ೨೫ರಲ್ಲಿ ನಡೆಸಬೇಕೆಂದಿದ್ದ ಜಿಲ್ಲಾ ಹಿಂದೀ ಪಂಡಿತರ ಹಾಗೂ ಪ್ರಚಾರಕರ ಸಮ್ಮೇಳನವು ಕಾರಣಾಂತರದಿಂದ ಮುಂದುವರಿಸಲ್ಪಟ್ಟಿದೆ.

ಅರಪಟ್ಟು ಗ್ರಾಮದ ಶ್ರೀ ಪಾಲಚಂಡ ಅಪ್ಪಯ್ಯನವರನ್ನು ಗುಂಡಿಕ್ಕಿ ಕೊಂದ ಕೇಸಿನ ವಿಚಾರವು ಕೊಡಗು ಜಿಲ್ಲಾ ಸೆಶನ್ಸ್ ಕೋರ್ಟಿನಲ್ಲಿ ನಡೆದು, ಒಂದನೇ ಅಪರಾಧಿ ಶ್ರೀ ಮುಕ್ಕಾಟಿರ ಸುಬ್ಬಪ್ಪನವರಿಗೆ ಮರಣದಂಡನೆ ಶಿಕ್ಷೆಯು ವಿಧಿಸಲ್ಪಟ್ಟಿದೆ. ಎರಡನೇ ಅಪರಾಧಿಯಾಗಿದ್ದ ಶ್ರೀ ಪಾಲಚಂಡ ಚಿಣ್ಣಪ್ಪನವರ ಮೇಲಿನ ತಪ್ಪು ರುಜುವಾತಾಗದ ಕಾರಣ ಅವರ ಬಿಡುಗಡೆಯಾಗಿದೆ.

ಸಮಾಜ ಶಿಕ್ಷಣ ತರಬೇತು ಸೋಮವಾರಪೇಟೆ ಹೈಸ್ಕೂಲಿನಲ್ಲಿ ಆಳ ಅಧ್ಯಾಪಕರಿಗೆ ಕೊಡಲ್ಪಟ್ಟಿತು. ಪ್ರಾರಂಭೋತ್ಸವವನ್ನು ಶ್ರೀಮಾನ್ ವಿಠಲರಾಯರು ನೆರವೇರಿಸಿದರು. ಈ ಶಿಬಿರಕ್ಕೆ ಜಿಲ್ಲಾ ವಿದ್ಯಾಧಿಕಾರಿಗಳೂ, ಸಾಮೂಹಿಕ ವಿಕಾಸದ ಹೆಲ್ತ್ ವಿಜಿಟರ್ ಕುಮಾರಿ ಕಾವೇರಮ್ಮನವರೂ ದಯಮಾಡಿಸಿ ಸೂಕ್ತ ಸಲಹೆ ಕೊಟ್ಟರು. ಶ್ರೀ ರುದ್ರಶೆಟ್ಟರಿಂದ ವಾಚನವೂ ಇತ್ತು.

ಆಲೂರು ಸಿದ್ದಾಪುರ ವಯಸ್ಕರ ಶಿಕ್ಷಣ ಕೇಂದ್ರದಲ್ಲಿ ಅಕ್ಷರಸ್ಥರಾದವರಿಗೆ ಶ್ರೀ ಜೆ. ಗಣೇಶ್‌ರಾವ್, (ಜಿಲ್ಲಾ ವಿದ್ಯಾಧಿಕಾರಿ) ಇವರ ಅಧ್ಯಕ್ಷತೆಯಲ್ಲಿ ಯೋಗ್ಯತಾ ಪತ್ರಗಳನ್ನು ತಾ. ೬ರಲ್ಲಿ ಹಂಚಲಾಯಿತು. ಶ್ರೀಗಳಾದ ಶಾಂತವೀರಪ್ಪನವರು, ಗಣಪತಿಯವರು ಮತ್ತು ಪುಟ್ಟಸ್ವಾಮಿಯವರು ಮಾತನಾಡಿದರು. ಸುಗ್ಗಿ ಕುಣಿತವಾದ ನಂತರ ಚಲನ ಚಿತ್ರ ಪ್ರದರ್ಶನವಿತ್ತು.

ಹಿಂದೂದೇಶದಿಂದ ಹೊರದೇಶಗಳಿಗೆ ಈ ವರ್ಷ ೨೦೦೦ ಟನ್ ಕಾಫಿ ಬೀಜವನ್ನು ರಫ್ತು ಮಾಡುವ ಅನುಮತಿಯನ್ನು ಕೇಂದ್ರ ಸರಕಾರ ಕೊಟ್ಟಿದೆ. ಹಿಂದೂದೇಶದೊಳಗೆ ಕಾಫಿಗಿರುವ ಬೆಲೆಗಿಂತಾ ಹೊರ ಮಾರ್ಕೆಟಿನಲ್ಲಿ ಖಂಡಿಗೆ ರೂ. ೧೦೦/– ಹೆಚ್ಚಿಗೆ ದೊರೆಯುವದೆಂದೂ ಈ ಹೊರಗೆ ಹೋಗುವ ಕಾಫಿಗೆ ಸರಕಾರವು ಖಂಡಿಗೆ ರೂ. ೬೨—೮—೦ ಕಂದಾಯ ಹಾಕುವದೆಂದೂ ತಿಳಿದು ಬಂದಿದೆ.

ಸೂಚನೆ.

ದೇಶದ ವಿವಿಧ ಭಾಗಗಳಲ್ಲಿ ಗಾಂಧಿ ಜಯಂತಿ ಆಚರಿಸಿದ ವರದಿಗಳು ಬಂದಿದ್ದರೂ ಅವುಗಳು ತುಂಬಾ ಹಳೇ ವರ್ತಮಾನವಾದುದರಿಂದ ಪ್ರಕಟಿಸಿರುವದಿಲ್ಲ. ವರ್ತಮಾನಗಳು ಆದಷ್ಟು ಬಿಸಿಯಾಗಿದ್ದರೆ ಮಾತ್ರ ಪುರಸ್ಕರಿಸಲ್ಪಡುವವೆಂದು ತಿಳಿಸಲಾಗಿದೆ. —ಸಂಪಾದಕ.

ಜೇನು ಕೃಷಿಕರ ಅವಗಾಹನೆ ಬಗ್ಗೆ.

ಕೊಡಗು ವ್ಯವಸಾಯ ಇಲಾಖೆಯ ಅಧೀನದಲ್ಲಿ ಪಂಚವಾರ್ಷಿಕ ಯೋಜನೆಯ ಅಂಗವಾಗಿ ಜೇನು ಕೃಷಿ ಅಭಿವೃದ್ಧಿ ಕಾರ್ಯದಲ್ಲಿ ಜೇನು ಕೃಷಿ ಇನ್‌ಸ್ಪೆಕ್ಟರನ್ನು ಜೇನು ಕೃಷಿ ಮೇಲ್ವಿಚಾರಕರನ್ನಾಗಿ ನೇಮಿಸಿ, ಅವರ ಮತ್ತು ಜೇನು ಇನ್‌ಸ್ಪೆಕ್ಟರ ಆಫೀಸನ್ನು ಭಾಗಮಂಡಲದ ಕೇಂದ್ರ ಮಧುವನಕ್ಕೆ ವರ್ಗಾಯಿಸಲಾಗಿದೆ

ಕೊಡಗಿನ ಪಶ್ಚಿಮಾರ್ಧ ಭಾಗದಲ್ಲಿ ಜೇನಿನ ಕೃಷಿಯನ್ನು ತೀವ್ರ ಅಭಿವೃದ್ಧಿ ಮಾಡಬೋಸುಗ ಶ್ರೀಮಂಗಲನಾಡಿಗೆ (ಮುಖ್ಯವಾಗಿ ಮರೆನಾಡು) ಒಬ್ಬರು, ಪೊನ್ನಂಪೇಟೆನಾಡಿಗೆ (ಮುಖ್ಯವಾಗಿ ಕುತ್ತುನಾಡು) ಒಬ್ಬರು, ವೀರರಾಜಪೇಟೆನಾಡಿಗೆ (ಮುಖ್ಯವಾಗಿ ಓಟಿಕೊಲ್ಲಿ, ಹೆಗ್ಗಳ, ಕೆದಮುಳ್ಳೂರು, ತೋಮರ, ಪಾಲಂಗಾಲ, ಭಾಗಕ್ಕೆ) ಒಬ್ಬರು, ನಾಪೋಕ್ಲು ನಾಡಿಗೆ (ಕಕ್ಕಬೆಯಲ್ಲಿ) ಒಬ್ಬರು, ಭಾಗಮಂಡಲ ನಾಡಿಗೆ (ಕೇಂದ್ರ ಮಧುವನದಲ್ಲಿ) ಒಬ್ಬರು, ಮತ್ತು ಮಡಿಕೇರಿನಾಡಿಗೆ ಒಬ್ಬರು, ಈ ರೀತಿ ಆರು ಜನ ಜೇನು ಕೃಷಿ ಗ್ರಾಮ ಸೇವಕರನ್ನು ನೇಮಿಸಲಾಗಿದೆ. ಇವರು ವ್ಯವಸಾಯ ಇಲಾಖೆಯ ಸಿಬ್ಬಂದಿಗಳೊಡನೆ ಬೆರೆತು ಕೆಲಸ ಮಾಡುವರು. ಮಾದಾಪುರ ಮತ್ತು ಸೋಮವಾರಪೇಟೆನಾಡಿನ ಶಾಂತಳ್ಳಿ ಕೇಂದ್ರಗಳಲ್ಲಿ ಕೆಲಸ ಮಾಡಲು ಬೇಗನೆ ಜೇನು ಕೃಷಿ ಗ್ರಾಮ ಸೇವಕರನ್ನು ನೇಮಕಮಾಡಲಾಗುವುದು

ಇವರು ಜೇನು ಗೂಡು, ಕೃತಕ ಎರಿ ತಳಹದಿ, ಮತ್ತು ಜೇನು ಕೃಷಿಗೆ ಆಗತ್ಯವಿರುವ ಇತರ ಉಪಕರಣಗಳನ್ನು ರೈತರಿಗೆ ರಿಯಾಯಿತಿ ದರದಲ್ಲಿ ಒದಗಿಸಿ ಕೊಡುವುದಲ್ಲದೆ, ಜೇನು ಗೂಡುಗಳಲ್ಲಿ ಜೇನು ವಸತಿಗಳನ್ನು ಕೂಡಿಸಿ ಕೊಡುವುದು, ಗೂಡಿನಲ್ಲಿಡಬೇಕಾದ ನಿಗ ಮತ್ತಿತರ ನವೀನ ಕೃಷಿ ಪದ್ಧತಿಯ ಮಾಹಿತಿಯನ್ನು ಹಳ್ಳಿಯವರಲ್ಲಿ ಹರಡುವುದು, ಮೊದಲಾದ ಕೆಲಸ ಕಾರ್ಯಗಳನ್ನು ಗ್ರಾಮಾಂತರಗಳಲ್ಲಿ ಕೈಗೊಳ್ಳುವರು. ನವೀನ ಜೇನು ಕೃಷಿ ವಿಧಾನಗಳನ್ನು ರೈತರಿಗೆ ಪ್ರದರ್ಶಿಸಿ, ಪ್ರತ್ಯಕ್ಷ ತೋರಿಸಿ, ಸಂಪೂರ್ಣ ಮಾಹಿತಿಯನ್ನು ಬೀರುವ ಉದ್ದಿಶ್ಯವಾಗಿ ಮಾದರಿ ಮಧುವನಗಳನ್ನು ತೆರೆಯಲಾಗುವುದು.

ಕೊಡಗಿನಲ್ಲಿ ಜೇನು ಕೃಷಿ ಅಭಿವೃದ್ಧಿಯ ಕುರಿತು ಎರಡಭಿಪ್ರಾಯವಿಲ್ಲದ್ದರಿಂದ ನಾಡಿನ ಮಹಾಜನರು ದೊರಕಿಸಿಕೊಟ್ಟ ಸಹಾಯವನ್ನು ಸ್ವೀಕರಿಸಿ, ಕೊಡಗಿನ ಜೇನು ಕೃಷಿ ಅಭಿವೃದ್ಧಿ ಕಾರ್ಯದಲ್ಲಿ ನಿರತರಾಗಿ ನಮ್ಮ ಪ್ರಾಂತ್ಯವನ್ನು 'ಹಾಲ್ಜೇನು ಹರಿವ ಭೂಮಿಯನ್ನಾಗಿ' ಮಾಡಲು ಮೇಲ್ಕಂಡ ಸಿಬ್ಬಂದಿಯವರೊಡನೆ ಸಹಕರಿಸುವರಾಗಿ ಆಶಿಸಲಾಗಿದೆ.

ಕೊಡಗು ವ್ಯವಸಾಯ ಇಲಾಖೆಯಿಂದ.

ಬಾತ್ಮಿ

ಗೋಣಿಕೊಪ್ಪ ಟೌನ್ ಬ್ಯಾಂಕು

ತಾರೀಕು ೨-೧೦-೫೩ರ ಕೊಡಗು ಪತ್ರಿಕೆಯಲ್ಲಿ 'ಗೋಣಿಕೊಪ್ಪಲು ಟೌನ್ ಬ್ಯಾಂಕು' ಎಂಬದಾಗಿ ಬ್ಯಾಂಕಿನ ಮೆಂಬರು ಬರೆದ ಲೇಖನವನ್ನು ಓದಿದೆನು. ಅವರು ಬರೆದ ಸಂಗತಿ ಯಾವುದೂ ನಿಜವಲ್ಲ. ಯಾವ ವಿಲ್ಲುಮಾಲಿಕರೂ ಬ[illegible]ಗೆ ಈಡಾಗಿ ಕೊಟ್ಟಂತ ಬತ್ತದ ಮುಳಿಗೆಗಳಿಂದ ಬ್ಯಾಂಕಿನ ಅಧಿಕಾರಿಗಳ ಅನುಮತಿ ಇಲ್ಲದೆ ಬತ್ತವನ್ನು ಈ ವರೆಗೆ ತೆಗೆದಿರುವುದಿಲ್ಲ. ಬ್ಯಾಂಕಿನ ಕಾನೂನು ಮೇರೆ ಬ್ಯಾಂಕಿಗೆ ಹಣ ಕಟ್ಟಿ ಅವರಿಗೆ ಅವಶ್ಯವಿರುವ ಬತ್ತವನ್ನು ತೆಗೆಯುವದಾಗಿದೆ. ಅದ ಕಾರಣ ಬ್ಯಾಂಕು ಪ್ರೆಸಿಡೆಂಟರು ಯಾವ ಕ್ರಮ ಜರಗಿಸುವ ಅವಶ್ಯ ಕಾಣುವುದಿಲ್ಲ.

ಬ್ಯಾಂಕಿನ ಕಳೆದ ಮಹಾಸಭೆಯ ಮೀಟಿಂಗಿನಲ್ಲು ಈ ವಿಷಯವನ್ನು ಕೇಳಲು ಒಬ್ಬ ಮೆಂಬರು ತಯಾರಾಗಿದ್ದರೆಂದೂ ಆದರೆ ಅವರಿಗೆ ಸಮಯ ದೊರಕಲಿಲ್ಲವೆಂದೂ ಬರೆದಿರುತ್ತಾರೆ. ಇದು ನಿಜವಲ್ಲ. ಕಳೆದ ಬ್ಯಾಂಕಿನ ಮಹಾಸಭೆ ಮೀಟಿಂಗನು ರಾತ್ರಿ ೭ ಗಂಟೆಯ ವರೆಗೆ ಬೆಳಕು ಇಟ್ಟುಕೊಂಡು ನಡೆಸಲಾಗಿದೆ. ಬ್ಯಾಂಕಿನ ವಿಷಯ ಕೇಳುವ ಪ್ರಶ್ನೆಗಳಿಗೆಲ್ಲಾ ಆ ದಿನದ ಮೀಟಿಂಗಿನ ಅಧ್ಯಕ್ಷರಾದ ಡಿಪ್ಯುಟಿ ರಿಜಿಸ್ಟ್ರಾರ್‌ರವರು ಪ್ರತಿ ಮೆಂಬರರಿಗೂ ಅದಷ್ಟು ಸಮಯ ಕೊಟ್ಟಿರುತ್ತಾರೆ. ಅಂಥಾದ್ದರಲ್ಲೂ ಸಮಯ ಕೊಡಲಿಲ್ಲವೆಂದು ಮೆಂಬರು ಹೇಳಿದ್ದು ಪೂರಾ ನಿಜವಲ್ಲದ ಸಂಗತಿ.

ಮಹಾಸಭೆ ಮೀಟಿಂಗಿಗೆ ಮೊದಲೇ ಬತ್ತದ ದುರುಪಯೋಗವಾಗಿದ್ದರೂ ಸಹ ಮಹಾಸಭೆಯ ಮೀಟಿಂಗಿನ ದಿನದ ವರೆಗೂ ಕೆಲವು ಡೈರೆಕ್ಟರುಗಳಿಗೆ ಈ ವಿಷಯ ತಿಳಿದಿರುವುದಿಲ್ಲವೆಂದು ಬರೆದಿರುತ್ತಾರೆ. ಹೀಗೆ ದುರುಪಯೋಗವಾಗದ್ದರಿಂದ ಈ ಸಂಗತಿಯು ಡೈರೆಕ್ಟರುಗಳ ತಿಳುವಳಿಕೆಗೆ ಬರುವ ಕಾರಣವಿಲ್ಲ.

ಬ್ಯಾಂಕಿನ ಪ್ರೆಸಿಡೆಂಟರು ಡೈರೆಕ್ಟರುಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲವೆಂದೂ ಬರೆದಿರುತ್ತಾರೆ. ಹಾಗೆ ಡೈರೆಕ್ಟರುಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದಿದ್ದಂಥ ಪಕ್ಷದಲ್ಲು ಅವರು ಹೇಳುವ ಹಾಗೆ ಈ ಬ್ಯಾಂಕು ಅಷ್ಟು ಉತ್ತಮ ರೀತಿಯಲ್ಲಿ ಕೆಲಸ ಮಾಡುತಿರಲಿಲ್ಲ. ಕಳೆದ ಮಹಾ ಸಭೆ ಚುನಾವಣೆಯಲ್ಲಿ ಪ್ರೆಸಿಡಂಟರು ೧೫೩ ಮೆಂಬರು ಹಾಜರಿದ್ದಲ್ಲಿ ೧೧೧ ಓಟು ಪಡೆದು ಜಯಶೀಲರಾಗುತ್ತಿರಲಿಲ್ಲ.

ಇವನ್ನು ಈ ದಿನ ಸುಮ್ಮನೆ ಬಿಟ್ಟರೆ ಬ್ಯಾಂಕಿನ ಅಭಿವೃದ್ಧಿಗೆ ಧಕ್ಕೆಯಾಗುತ್ತದೆಂದೂ ಬರೆದಿರುತ್ತಾರೆ. ಈ ನಿಜವಲ್ಲದ ಸಂಗತಿಯನ್ನು ಪತ್ರಿಕೆಯಲ್ಲಿ ಪ್ರಕಟಿಸಿದರಿಂದ ಬ್ಯಾಂಕಿಗೆ ಕೆಲವು ಮಟ್ಟಿಗೆ ಧಕ್ಕೆ ಅಲ್ಲದೆ ಬೇರೊಂದಿಲ್ಲ. ಇಂಥಾ ನಿಜವಲ್ಲದ ವಿಷಯಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿ ಬ್ಯಾಂಕಿಗೆ ಧಕ್ಕೆ ತರುವ ಇರಾದೆಯುಳ್ಳವರ ಮೆಂಬರರ ವರ್ತನೆಗಳಿಗೆ ನಾನು ವಿಷಾದಿಸುತ್ತೇನೆ.

ಕೆ. ಬಿ. ಗಣಪತಿ.
ಪ್ರೆಸಿಡೆಂಟ್,
ಗೋಣಿಕೊಪ್ಪಲು ಸಹಕಾರಿ
ಲಿಮಿಟೆಡ್. ಬ್ಯಾಂಕು

ಪರಿಶ್ರಮ ಮಾಡಿರಿ, ಭೇದಭಾವ ಬಿಡಿರಿ

ಆಚಾರ್ಯ ವಿನೋಬಾ ಭಾವೆ

ನಮ್ಮ ಆಶ್ರಮದಲ್ಲಿ ತರುಣರು ಅನೇಕರಿದ್ದಾರೆ. ಹೆಚ್ಚಾಗಿ ಶಾಲೆ ಕಾಲೇಜು ಬಿಟ್ಟು ಬಂದವರು. ಕೆಲವರು ಹೊಲ ಮಾಡುತ್ತಾರೆ. ಕೆಲವರು ನೆಲ ಅಗೆಯುತ್ತಾರೆ. ಕೆಲವರು ನೀರು ಎತ್ತುತ್ತಾರೆ. ಕೆಲವರು ಅಡಿಗೆ ಮಾಡುತ್ತಾರೆ. ಕೆಲವರು ಭಂಗೀ ಕೆಲಸ ಮಾಡುತ್ತಾರೆ. ನಮಗೆ ಬಾವಿ ಬೇಕಾಯಿತು; ನಾವೇ ಅಗೆಯಲು ಮೊದಲಿಟ್ಟೆವು. ತಮಗೆ ಅನುಭವವಿಲ್ಲದ ಕೆಲಸಗಳನ್ನು ತರುಣರು ಬಹಳ ಹುರುಪಿನಿಂದ ಮಾಡುತಿದ್ದಾರೆ.

ಆ ತರುಣರಿಗೆ ಇಷ್ಟು ಪ್ರೇರಣೆ ಎಲ್ಲಿಂದ ಬಂತು ಎಂದು ನನಗೆ ಆಶ್ಚರ್ಯವಾಗುತ್ತದೆ. ದೇವರ ಇಚ್ಛೆಯನ್ನು ಅದರಲ್ಲಿ ಕಾಣುತ್ತೇನೆ ಎಂಬುದರಿಂದಲೇ ನನ್ನ ಉತ್ಸಾಹ ಪರಮಾವಧಿಗೆ ಮುಟ್ಟುತ್ತದೆ. ಭಾರತದ ಸದ್ಯದ ಸ್ಥಿತಿಯ ಬಗ್ಗೆ ಜನರು ನಿರಾಶೆಗೊಂಡಾಗ ನನಗೆ ಅದರ ಸ್ಪರ್ಶವಾಗದು. ಸುತ್ತಲೂ ಕತ್ತಲೆ ಕವಿದಿದ್ದರೂ ಅದನ್ನು ಕಳೆವ ಶಕ್ತಿಯು ಮೂಡುತ್ತಿರುವುದು ನನಗೆ ಕಾಣುತ್ತಿದೆ.

ತರುಣರಲ್ಲಿ ಬಲವಾದ ಪ್ರೇರಣೆ ಕೆಲಸ ಮಾಡಿಸುತ್ತಿದೆ. ಭಾರತದಲ್ಲಿ ಸಾಮ್ಯಯೋಗ ಎಲ್ಲೆಲ್ಲಿಯೂ ಕಾಣುವಂತೆ ಮಾಡಲು ನಮಗೆ ದಾರಿ ತೋರಿಸುವವರಾರು ಎಂದು ಅವರು ಕಾತುರರಾಗಿದ್ದಾರೆ. ಸಾಮ್ಯಯೋಗದ ಹೆಸರನ್ನು ಹೇಳಿ, ತರುಣರ ಹುರುಪನ್ನು ನೋಡಿ, ಇದುವರೆಗೆ ಪರಿಶ್ರಮ ಮಾಡದವರು ಅದಕ್ಕಾಗಿ ದುಡಿಯಲು ಸಿದ್ಧರಾಗಿದ್ದಾರೆ. ಇಂಥ ಕೆಲಸ ಎಲ್ಲಿಯೇ ಮಾಡಲಿ ಯುವಕರು ಹುರುಪಿನಿಂದ ಕೆಲಸ ಮಾಡಲು ಮುಂದೆ ಬಂದಾರು.

ಅದೇ ಪ್ರಕಾರ ನಾನು ಅನೇಕ ಸಲ ಕಾಂಗ್ರೆಸಿಗರಿಗೆ ಹೇಳಿರುತ್ತೇನೆ. ಅದೊಂದು ದೊಡ್ಡ ಸಂಸ್ಥೆ. ಅದರ ಹಿನ್ನೆಲೆಯಲ್ಲಿ ತಪಸ್ಸು ಇದೆ. ೫೦–೬೦ ವರ್ಷಗಳ ಇತಿಹಾಸದಲ್ಲಿ ಕಾಂಗ್ರೆಸ್ ಬಹಳ ತಪಸ್ಸು ಮಾಡಿದೆ. ಈ ಯುಗದಲ್ಲಿ ಅನೇಕ ಮಹಾಪುರುಷರು ನಮ್ಮ ದೇಶದಲ್ಲಿ ಹುಟ್ಟಿದರು. ಅವರೆಲ್ಲರ ಪ್ರಯತ್ನವೂ ಕಾಂಗ್ರೆಸಿನ ಮೂಲಕ ಆಯಿತು. ಕಾಂಗ್ರೆಸಿನ ಸಂಬಂಧವು ಇಡೀ ದೇಶಕ್ಕೆ ಆಯಿತು.

ಆದ್ದರಿಂದ ಕಾಂಗ್ರೆಸಿಗರಿಗೆ ಹೇಳುತ್ತೇನೆ. ಇತರರಿಗೂ ಹೇಳುತ್ತೇನೆ. ಸಮಾಜವಾದಿಗಳಲ್ಲಿ ನನಗೆ ಹಲವರು ಗೆಳೆಯರಿದ್ದಾರೆ. ಈ ಮನುಷ್ಯರಲ್ಲಿ ಬೇಧಭಾವವಿಲ್ಲ ಎಂಬುದು ಅವರಿಗೆ ಗೊತ್ತು. ನನಗೆ ಯಾವ ಪಕ್ಷವೂ ಇಲ್ಲ. ನಾನೆಂದೂ ಯಾವುದೇ ಪಕ್ಷದವನೆಂದು ತಿಳಿದಿಲ್ಲ. ನನ್ನ ಹಣೆಗೆ ಯಾವ ಗುಂಪಿನ ಪಟ್ಟಿಯೂ ಇಲ್ಲ. ಯಾವ ವಾದಕ್ಕೂ ನಾನು ಮರುಳಾಗಿಲ್ಲ. ಸತ್ಯಾಂಶ ಎಲ್ಲಿ ಸಿಕ್ಕಿದರೂ ಅದನ್ನು ಗ್ರಹಿಸಲು ನನ್ನ ಬುದ್ಧಿಯು ಸದಾ ಸ್ವತಂತ್ರವಾಗಿದೆ. ಆದ್ದರಿಂದ ಸಮಾಜವಾದಿಗಳಲ್ಲಿ ನನಗೆ ಹಲವರು ಗೆಳೆಯರು. ಅವರಿಗೂ, ಎಲ್ಲರಿಗೂ ಹೇಳುತ್ತೇನೆ; ಈಗ ವಾದ-ವಿವಾದ ಬಿಟ್ಟುಬಿಡಿ, ದೇಶವು ಈಗ ಸ್ವತಂತ್ರವಾಗಿದೆ. ವಾದಕ್ಕೆ ಇದು ಸಮಯವಲ್ಲ. ದೇಶವು ಸ್ವತಂತ್ರವಾದಾಗ ಹಲವು ಬಗೆಯ ಶಕ್ತಿಗಳು ಕೆಲಸ ಮಾಡುತ್ತವೆ. ಅದರಲ್ಲಿ ಕೆಲವು ಪ್ರತೀಕಾರವಾದಿಗಳು. ಅವುಗಳನ್ನು ಎಲ್ಲರೂ ಸೇರಿ ಎದುರಿಸಬೇಕು. ಅವುಗಳನ್ನು ಎದುರಿಸಿದ ಮೇಲೆ, ದೇಶದ ಬದುಕಿನ ಮಟ್ಟವು ನಮ್ಮ ಮನಸ್ಸಿನಂತೆ ಏರಿದ ಮೇಲೆ, ವಾದಗಳ ಪ್ರವಾಹವೇ ಹರಿಯಲಿ. ಅಲ್ಲಿಯ ವರೆಗೆ ವಾದಗಳನ್ನು ಬಿಟ್ಟುಬಿಡಿರಿ. ಎಲ್ಲರ ಸೇವೆಯನ್ನೂ ಮಾಡಿರಿ.

ಭಾಷಣ ಶ್ರವಣಗಳಿಂದ ಸೇವೆಯಾಗದು. ಪ್ರತ್ಯಕ್ಷ ಶರೀರ ಶ್ರಮದಿಂದಲೇ ಸೇವೆಯಾದೀತು. ಗಂಡು, ಹೆಣ್ಣು, ಮಗು ಮುದುಕ, ಪ್ರತಿಯೊಬ್ಬ ಭಾರತೀಯನೂ ಇಂದು ತನ್ನ ಕೈಲಾದಷ್ಟನ್ನು ತಾಯಿನಾಡಿಗಾಗಿ ಮಾಡಬೇಕು. ಮಾಡದಿದ್ದರೆ ದೇಶದ ಸಮಸ್ಯೆಯು ಬಗೆಹರಿಯದು.

ಸರ್ವೋದಯವೆಂದರೇನು ಎಂದು ಕೇಳುತ್ತಾರೆ. ನಾನು ಹಲವು ಬಗೆಯ ಅರ್ಥ ಹೇಳುತ್ತೇನೆ. ಸರ್ವೋದಯ ಎಂದರೆ ಸರ್ವರ ಪ್ರಯತ್ನ ಎಂಬುದೂ ಒಂದು ಅರ್ಥ. ದೇಶಕ್ಕಾಗಿ ಕಿಂಚಿತ್ತಾದರೂ ಕೆಲಸ ಮಾಡದ ಒಂದು ಮಗುವೂ ಇರಲಾಗದು. ಅದಕ್ಕಾಗಿಯೇ ನೂಲು ತೆಗೆಯಿರಿ ಎಂದು ಗಾಂಧೀಜಿಯವರು ದೀಕ್ಷೆ ಕೊಟ್ಟಿದ್ದರು. ಬೇರೆ ಕೆಲಸವನ್ನು ಮಾಡಬಹುದು. ಬೇರೆ ಕೆಲಸ ಮಾಡಲೂ ಕೂಡ ಅಶಕ್ತನಾದವನು ಸ್ವಲ್ಪ ನೂಲು ನೂತರೆ, ದೇಶದ ಉತ್ಪತ್ತಿ ಅಷ್ಟು ಹೆಚ್ಚಿತು. ಹನಿಗೂಡಿ ಹಳ್ಳ. ಒಬ್ಬೊಬ್ಬರ ಪರಿಶ್ರಮವೂ ಕೂಡಿ ದೇಶ.

ಯಾವುದಾದರೂ ಅಂಥ ಉತ್ಪತ್ತಿಯ ಕಾರ್ಯಕ್ರಮವನ್ನು ನೀವೇ ಯೋಚಿಸಿರಿ. ಬಡವರೊಡನೆ ಏಕರೂಪವಾಗುವಂತಹ ಕಾರ್ಯಕ್ರಮವನ್ನು ಹುಡುಕಿರಿ. ರಾಯ-ರಂಕ, ಕಲಿತವ ಕಲಿಯದವ, ನಾಗರಿಕ-ಗ್ರಾಮೀಣ, ಎಂಬ ಎಲ್ಲಾ ಭೇದಗಳೂ ಅದರಿಂದ ಕಳೆದಿರಬೇಕು. ಮೇಲು-ಕೀಳು ಇರಲಾಗದು. ಆ ಮೇಲೆ ಯಾವ ವಾದದ ಜಗಳವೂ ಇರದು. ನೀವೇ ನೋಡಿರಿ- ತರುಣರಲ್ಲಿ ಹುರುಪು ಬರುತ್ತದೆ. ಎಂಥ ತೀಕ್ಷ್ಣ ಪ್ರೇರಣೆಯಿಂದ ಅವರು ಕೆಲಸಕ್ಕೆ ತೊಡಗುತ್ತಾರೆ!

ಅಂತೆಯೇ, ಕಾಂಗ್ರೆಸಿಗರಿಗೆ, ಸಮಾಜವಾದಿಗಳಿಗೆ, ಎಲ್ಲಾ ವಾದಿಗಳಿಗೂ ಹೇಳುತ್ತೇನೆ; ನಿಮ್ಮ ಸ್ವಂತ ವಿಚಾರ ನಿಮ್ಮಲ್ಲೇ ಇರಲಿ. ಅದನ್ನು ಬಿಡಬೇಕೆಂದು ಹೇಳುವದಿಲ್ಲ; ನಿಮಗೆ ಹಿತವೆನಿಸಿದ ವಿಚಾರ, ನಿಮ್ಮ ಮನಸ್ಸಿನಲ್ಲಿ ನಾಟಿದ ಮಾತು, ನೀವು ಹೇಗೆ ಬಿಟ್ಟುಬಿಡುವಿರಿ? ಬಿಡಲೂ ಬಾರದು. ಅವು ಇರಲಿ. ಸದ್ಯ ದೇಶಕ್ಕೆ ಪರಿಶ್ರಮ ಬೇಕು. ಭೇದಭಾವ ಅಳಿಸುವ ಕಾರ್ಯಕ್ರಮ ಬೇಕು. ಅದನ್ನು ಹಿಡಿಯಿರಿ. ಅದರಿಂದ ಎಂಥ ಮಹಾಶಕ್ತಿ ಹುಟ್ಟುವುದೆಂಬುದನ್ನು ನೋಡಿರಿ. ನಾವು ಸ್ವಲ್ಪ ಮಾಡಿದೆವು. ಅದರಿಂದ ಎಷ್ಟು ಸ್ಫೂರ್ತಿ ಬರುವುದೆಂದು ನೋಡಿದೆವು. ನೋಡುವವರಿಗೆ, ಕೇಳುವವರಿಗೆ; ಸ್ಫೂರ್ತಿ ಸಿಗುವುದಾದರೆ, ಮಾಡುವವರಿಗೆ ಎಷ್ಟು ಸಿಗಬೇಡ?

ಪಟ್ಟಣದವರು ಹಳ್ಳಿಗಳ ಸೇವೆ ಮಾಡಬೇಕು. ಹಳ್ಳಿಗರು ಪಟ್ಟಣಕ್ಕೆ ನೆರವಾಗಬೇಕು. ಹೀಗೆ ಪರಸ್ಪರ ನೆರವಾಗುವ ಪ್ರೇರಣೆ ಏಕಾಗಬಾರದು? ಹಾಗಾದರೆ, ಎಲ್ಲಾ ಭೇದಗಳೂ ಅಳಿದಾವು. ಎಲ್ಲರೂ ಸೇರಿ ಭಾರತದ ಸೇವೆ ಮಾಡಿಯಾರು. ದೇವರು ಪ್ರತಿಯೊಬ್ಬನಿಗೂ ಬೇರೆ ಬೇರೆ ಶಕ್ತಿ ಕೊಟ್ಟಿದ್ದಾನೆ. ಲೋಕದಲ್ಲಿ ಈ ಬಗೆಯ ವಿಷಮತೆಯಿಂದ ಲಾಭವೇ ಇದೆ.

ಸಂಗೀತದಲ್ಲಿ ಬರೇ ಸಾ. ಸಾ, ಸಾ- ಒಂದೇ ಸ್ವರವಾಗಿ, ಗ. ಮ. ಯಾವುದೂ ಇಲ್ಲವಾದರೆ, ಸಂಗೀತವೇ ಆಗುತ್ತಿರಲಿಲ್ಲ. ಭಿನ್ನ ಭಿನ್ನ ಸ್ವರವಾದರೂ ಒಂದೊಂದರಲ್ಲೂ ಬೇರೆ ಗುಣ ಇದೆ. ಅದರಿಂದ ಮಾಧುರ್ಯ ಹುಟ್ಟುತ್ತದೆ. ಎಲ್ಲಾ ಸೇರಿ ಸೊಗಸಾದ ಸಂಗೀತವಾಗುತ್ತದೆ. ಪಟ್ಟಣಿಗರಲ್ಲಿ ಹಲವು ಶಕ್ತಿಗಳಿವೆ. ಆದರೆ ಅವುಗಳು ಪರಸ್ಪರ ವಿರುದ್ಧವಾಗಿ ಕೆಲಸ ಮಾಡುತ್ತಿವೆ. ಅದರಿಂದ ಶಕ್ತಿವರ್ಧನವಾಗದು. ಹ್ರಾಸವಾಗುತ್ತದೆ. ಹತ್ತಕ್ಕೆ ವಿರುದ್ಧ ಎಂಟು ಶಕ್ತಿಗಳಾದರೆ ಉಳಿದದ್ದು ಎರಡೇ. ಅವೇ ಹತ್ತಕ್ಕೆ ಎಂಟು ಕೂಡಿದರೆ ಹದಿನೆಂಟಾಯಿತು. ಇದು ಸಾಮಾನ್ಯ ಲೆಕ್ಕ. ನಮ್ಮ ದೇಶದಲ್ಲಿ ಬೇಕಾದಷ್ಟು ಶಕ್ತಿ ಇದೆ- ಇದೆಲ್ಲವೂ ಒಂದೇ ನಿಟ್ಟಿಗೆ ಹರಿದು ಬಂದರೆ, ಆಗ ಹೊಳೆಯಾಗುತ್ತದೆ. ನೀರು ಅತ್ತ ಇತ್ತ ಹರಿದೋಡಿದರೆ ಹೊಳೆಯಾಗದು. ಎಲ್ಲೋ ಇಂಗಿ ಹೋಗುತ್ತದೆ; ಅದರಲ್ಲಿ ಮಹಾಪ್ರವಾಹ ಹುಟ್ಟದು. ನಮ್ಮಲ್ಲಿ ಶಕ್ತಿಗೇನೂ ಕಡಮೆಯಿಲ್ಲ. ಅದೆಲ್ಲವೂ ಒಂದೇ ದಿಕ್ಕಿಗೆ ಬಂದರೆ, ಆಗ ಅದು ಬೆಳಗೀತು; ಅದರ ಸ್ವರೂಪ ಕಂಡು ಬಂದೀತು;- ಅದರ ಪರಿಣಾಮ ಅನುಭವವಾದೀತು.

ಆದುದರಿಂದಲೇ ಮತ್ತೊಮ್ಮೆ ಹೇಳುತ್ತೇನೆ; ಏನಾದರೂ ಪರಿಶ್ರಮ ಮಾಡಿ; ಭೇದಭಾವ ಬಿಟ್ಟುಬಿಡಿ.

ಪ್ರಭಾತ.

ಸಹಕಾರವೇ

ಜೀವನದ ಏಳಿಗೆಯ ಹೆದ್ದಾರಿ,

ಅದರಲ್ಲೂ ವಿಮೆಯಲ್ಲಿ ಸಹಕಾರವೆಂದರೆ ಅನ್ಯೋನ್ಯ ಏಳಿಗೆಯ ಮತ್ತು ಭದ್ರತೆಗೆ ಒಂದು ತಳಹದಿ.

ದಿ ಬೊಂಬಾಯಿ ಕೋಪರೇಟಿವ್ ಇನ್ಶೂರೆನ್ಸ್ ಸೊಸೈಟಿ, ಲಿಮಿಟೆಡ್

ಹೆಡ್ ಆಫೀಸು:— [ಬೊಂಬಾಯಿ]

1953 ನೇ ಸಾಲಿಗೆ ರಿವರ್ಶನರಿ ಬೋನಸ್ಸು

ಹೋಲ್.ಲೈಫ್ ಸಾವಿರಕ್ಕೆ 11 ರಂತೆ   ಎಂಡೋಮೆಂಟ್ ಸಾವಿರಕ್ಕೆ 9 ರಂತೆ

200 ರಿಂದ 900 ರ ತನಕದ ಪೋಲಿಸಿಗಳು ಹಳ್ಳಿಗರಿಗೊಂದು ವರ

ಎಲ್ಲಾ ಕಡೆಗಳಲ್ಲಿಯೂ ಪ್ರಭಾವವುಳ್ಳ ಏಜಂಟರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಯನ್ನು ದಕ್ಷಿಣ ಕನ್ನಡ, ಕೊಡಗು ಮತ್ತು ಮೈಸೂರು ಪ್ರಾಂತ್ಯಕ್ಕೆ ಮುಖ್ಯ ಏಜಂಟರಾದ

ಎಮ್. ಟಿ. ಕೋರ್‌ಡೆಲ್ ಅಂಡ್ ಕೋ., ಹಂಪನಕಟ್ಟೆ, ಮಂಗಳೂರು, ಇವರಿಂದ ಪಡೆಯಿರಿ.

12-4



ಆನಂದ ಅರಸನ ಕಥೆ.

ಸಮುದ್ರದಿಂದ ಆವರಿಸಲ್ಪಟ್ಟ ಸಮಸ್ತ ದೇಶದ ಅರಸನು ಆನಂದನಾಗಿದ್ದನು. ಆತನ ಶೌರ್ಯ ಪ್ರತಾಪ, ಶಕ್ತಿಗಳಿಗೆ ಎಣೆ ಇರಲಿಲ್ಲ. ಆತನ ಪದತಳದಲ್ಲಿ ನೂರಾರು ಸಾಮಂತ ರಾಜರು ಸದಾಕಾಲ ಶಿರಬಾಗಿ ನಿಂತಿರುತ್ತಿದ್ದರು. ಈ ಸಾಮಂತ ಅರಸರ ಕಿರೀಟದ ಮುತ್ತುಗಳ ಬೆಳಕಿನಿಂದ ಆತನ ಪಾದಗಳು ಶೋಭಿಸುತ್ತಿದ್ದವು. ಈ ಮಹಾ ತೇಜಸ್ವಿಯೂ ಶಕ್ತಿಶಾಲಿಯೂ ಆದ ಅರಸನಿಗೆ ಪ್ರಕಾಶನೆಂಬ ಕಾರ್ಯದರ್ಶಿಯೊಬ್ಬನಿದ್ದನು. ಆತನಿಗೆ ಜಗತ್ತಿನಲ್ಲಿ ತಿಳಿಯದ ವಿಚಾರಗಳಿರಲಿಲ್ಲ. ಎಲ್ಲಾ ಶಾಸ್ತ್ರ ಪುರಾಣಗಳ ಅನುಭವ ಆತನಿಗಿತ್ತು. ವಿಜ್ಞಾನ ವೈದ್ಯಕೀಯಗಳ ಪರಿಜ್ಞಾನವಿತ್ತು. ಹೆಚ್ಚೇಕೆ? ಆತನು ಸರ್ವಜ್ಞನಾಗಿದ್ದನು.

ಒಂದು ದಿನ ಪ್ರಕಾಶನಿಗೂ ಆತನ ಪ್ರೀತಿಯ ಪತ್ನಿಗೂ ಒಂದು ಪ್ರೇಮ ಕಲಹವಾಯಿತು. ಪತ್ನಿಯು ಸಿಟ್ಟಿನಿಂದ ಮುಖ ಕಪ್ಪಗೆ ಮಾಡಿಕೊಂಡಳು. ಇದನ್ನು ಕಂಡು ಪ್ರಕಾಶನಿಗೆ ವ್ಯಥೆಯಾಯಿತು. "ಪ್ರಿಯೆ, ನಿನ್ನನ್ನು ಸಂತೋಷಗೊಳಿಸಲು, ತೃಪ್ತಿ ಪಡಿಸುವ ವಿಧಾನವನ್ನು ಹೇಳು. ನಿನ್ನ ಮನಸ್ಸಿಗೆ ಸಂತೋಷವಾಗುವುದನ್ನು ಎಷ್ಟೇ ಕಷ್ಟ ಬಂದರೂ ಮಾಡುವೆನು." ಎಂದು ಪ್ರಕಾಶನು ಕೇಳಿದನು.

ಆಕೆ ಸ್ವಲ್ಪ ಬಿಗು ಸ್ವಭಾವದವಳು. "ನೀನು ನಿನ್ನ ತಲೆಯನ್ನು ಬೋಳಿಸಿ ನನ್ನ ಕಾಲುಗಳಿಗೆ ಬಿದ್ದರೆ ಆಗ ನಾನು ಸಂತುಷ್ಟಳಾಗಬಹುದು" ಎಂದು ಪತ್ನಿಯು ಹೇಳಿದಳು. ಆತನು ಹಾಗೆಯೇ ಮಾಡಲು ಪತ್ನಿಯು ಸಂತೋಷಗೊಂಡಳು.

ಒಂದು ದಿನ ಅರಸನಾದ ಆನಂದನ ಪತ್ನಿಗೂ ಗಂಡನ ಮೇಲೆ ಸಿಟ್ಟು ಬಂತು. ಎಷ್ಟೇ ಸಂತೈಸಿದರೂ ಆಕೆ ತೃಪ್ತಿಗೊಳ್ಳಲಿಲ್ಲ. ಕಡೆಗೆ ಅರಸನು "ಪ್ರಿಯಳೇ, ನಿನ್ನನ್ನಗಲಿ ಒಂದು ಕ್ಷಣ ನಾನಿರಲಾರೆ. ಈ ರೀತಿ ಸಿಟ್ಟುಗೊಂಡಿದ್ದರೆ ನನ್ನ ಮನಸ್ಸಿಗೆ ಸಮಾಧಾನವಿರಲಾರದು. ನಿನ್ನ ಕಾಲಿಗೆ ಬಿದ್ದು ನಿನ್ನ ಕ್ಷಮೆ ಕೇಳುವೆನು. ಸಂತೋಷದಿಂದಿರು" ಎಂದು ಹೇಳಿದನು. ಅದಕ್ಕೆ ಹೆಂಡತಿಯು "ನೀನು ಬಾಯಲ್ಲಿ ಈ ಕಡಿವಾಣವನ್ನು ಕಚ್ಚಿಕೋ. ನಿನ್ನ ಬೆನ್ನಿನ ಮೇಲೆ ನಾನು ಕುಳಿತು ಸವಾರಿ ಮಾಡಲು ಬಿಡಬೇಕು. ಸವಾರಿ ಮಾಡುತ್ತಿರುವಾಗ ಕುದುರೆಯಂತೆ ಕೂಗುತ್ತಾ ನಾನು ಹೇಳಿದ ಕಡೆ ಸಂಚರಿಸಿದರೆ ನನ್ನ ಸಿಟ್ಟು ಇಳಿಯುವದು" ಎಂದಳು. ರಾಜನು ಹಾಗೆಯೇ ಮಾಡಿದನು.

ಮಾರನೆಯ ದಿನ ಪ್ರಕಾಶನು ರಾಜನಲ್ಲಿಗೆ ಬಂದನು. ರಾಜ ದರ್ಬಾರಿನಲ್ಲಿ ಕುಳಿತುಕೊಂಡನು. ಅರಸನು ಆತನನ್ನು ಕುರಿತು "ಗೆಳೆಯನಾದ ಪ್ರಕಾಶ. ಇದೇಕೆ ತಲೆ ಬೋಳಿಸಿರುವೆ. ಅದೂ ಹೊಸವರ್ಷದ ಈ ಸಮಯದಲ್ಲಿ?" ಎಂದು ಕೇಳಿದನು. ಅದಕ್ಕೆ ಉತ್ತರವಾಗಿ ಪ್ರಕಾಶನು "ರಾಜ, ಹೆಂಗಸಿನ ತೃಪ್ತಿಗಾಗಿ ಗಂಡಸು ಏನು ಮಾಡುವದಿಲ್ಲ. ಆಕೆಯ ತೃಪ್ತಿಗಾಗಿಯೇ ಯಾವ ಸಮಯದಲ್ಲೂ ತಲೆ ಬೋಳಿಸಲ್ಪಡುತ್ತದೆ. ಆಕೆಯ ತೃಪ್ತಿಗಾಗಿಯೇ ಕುದುರೆಯಂತೆ ಅವನು ಅರಚುತ್ತಾನೆ" ಎಂದನು.

ಆದ್ದರಿಂದ ಎಲೈ ಮೊಸಳೆಯೇ, ನೀನೂ ಕೂಡ ಆನಂದ ಅರಸನಂತೆಯೂ ಆತನ ಕಾರ್ಯದರ್ಶಿಯಂತೆಯೂ ಹೆಂಡತಿಗೆ ಹೆದರುವ ಹೇಡಿಯಾಗಿರುವೆ. ಆಕೆಯು ಕೇಳಿದಳೆಂಬ ಕಾರಣಕ್ಕಾಗಿ ನಿನ್ನ ಗೆಳೆಯನಾಗಿದ್ದ ನನ್ನನ್ನು ಕೊಲ್ಲಲು ಯತ್ನಿಸಿದೆ. ಆದರೆ ನಿನ್ನ ನಾಲಗೆಯೇ ನಿನಗೆ ವಿರೋಧವಾಯಿತು. ಏಕೆಂದರೆ ಗಿಣಿ ಮೊದಲಾದ ಪಕ್ಷಿಗಳು ಮಾತಾಡುವ ಕಾರಣದಿಂದಲೇ ಅವುಗಳಿಗೆ ಜೀವನಾದ್ಯಂತ ಪಂಜರ ಜೀವನವಾಗಿದೆ. ಆದರೆ ಮೌನಿಯಾದ ಕೊಕ್ಕರೆಯನ್ನು ಯಾರೂ ಪಂಜರದಲ್ಲಿ ಬಂಧಿಸಲಾರರು. ಏಕೆಂದರೆ ಮೌನವೇ ಸರ್ವತ್ರ ಸಾಧನ. ವೇಷ ಬದಲಾಯಿಸುವಲ್ಲಿ ಎಷ್ಟೇ ಚತುರನಿದ್ದರೂ, ಕಣ್ಣಿಗೆ ಎಷ್ಟೇ ಭಯಂಕರವಾಗಿ ತೋರಲು ಹುಲಿಯ ಚರ್ಮ ಹೊದ್ದಿದ್ದರೂ ಕತ್ತೆಯು ಮಾತಾಡಿದ್ದರಿಂದ ಕೊಲ್ಲಲ್ಪಟ್ಟಿತು" ಎಂದು ಕೋತಿಯು ಹೇಳಲು "ಅದು ಹೇಗೆ" ಎಂದು ಮೊಸಳೆಯು ಕೇಳಿದ ಕಾರಣ ಮುಂದಿನ ವಾರ ಕೋತಿಯು ಹುಲಿ ಚರ್ಮ ಹೊದ್ದ ಕತ್ತೆಯ ಕತೆ ಹೇಳುವದು.

ಇಬ್ಬರು ಸೋದರರು.

ಲೇ:— ಕುಮಾರಿ ಟಿ. ಎಸ್. ದೇವಮ್ಮಾಜಿ, ಮೂರ್ನಾಡು.

ದಿನೇಶ ಮತ್ತು ಮಹೇಶರಿಬ್ಬರು ಸೋದರರು. ಒಂದೇ ಶಾಲೆಯಲ್ಲಿ ಓದುತ್ತಿದ್ದರು. ಅವರ ತಂದೆ ಅತ್ಯಂತ ಶ್ರೀಮಂತನಾಗಿರದಿದ್ದರೂ ಈ ಕಾಲದಲ್ಲಿ ಮಕ್ಕಳಿಗೆ ಸಾಕಾದಷ್ಟು ವಿದ್ಯೆ ಕೊಡಲು ಸಿದ್ಧರಾಗಿದ್ದರು.

ದಿನೇಶನು ವಿದ್ಯೆಯಲ್ಲಿ ಅಭಿರುಚಿ ತೋರಿಸಲಿಲ್ಲ. ಆಟ, ಓಟ ಮೊದಲಾದುವುಗಳಲ್ಲೇ ಮಗ್ನನಾಗಿರುತ್ತಿದ್ದನು. ಪುಸ್ತಕವೆಂದರೆ ಶತ್ರುವಿನಂತೆ. ತಂದೆಯು ಎಷ್ಟೇ ಪ್ರಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಶಾಲೆಯಲ್ಲಿ ಅವರದೇ ಒಂದು ಗುಂಪು ಇತ್ತು. ಅವರಿಗೆ ಕೆಲಸವೆಂದರೆ ಪಾಠದ ಸಮಯದಲ್ಲಿ ತಮಾಷೆ ಮಾಡುವದು. ಸಿನೇಮಾ, ನಾಟಕಗಳನ್ನು ನೋಡುವದು, ಸಿಗರೇಟ್ ಸೇದುವದು ಮೊದಲಾದುವು. ಶಾಲೆಗೆ ಫೀಜಿಗಾಗಿ ಕೊಟ್ಟ ದುಡ್ಡನ್ನು ಸಹ ಖರ್ಚುಮಾಡಿಬಿಡುತ್ತಿದ್ದನು. ಒಂದು ಸಾರಿ ಆತನು ಹೀಗೆ ದುಡ್ಡು ಖರ್ಚು ಮಾಡಿ ಫೀಜು ಕಟ್ಟದ್ದರಿಂದ ಅಧ್ಯಾಪಕರು ಹಾಜರು ಪಟ್ಟಿಯಿಂದ ಹೆಸರು ತೆಗೆದು ಬಿಡುತ್ತೇನೆಂದು ಹೇಳಿದರು. ಆತನಿಗೆ ಮನೆಯಲ್ಲಿ ತಂದೆಯನ್ನು ಹಣ ಕೇಳುವದು ಸಾಧ್ಯವಿರಲಿಲ್ಲ. ಆತನು ಯಾರಿಗೂ ಹೇಳದೆ ಎಲ್ಲಿಯೋ ಹೊರಟು ಹೋದನು.

ಮಹೇಶನು ಹಾಗಿರಲಿಲ್ಲ. ಆತನು ವಿದ್ಯೆಯಲ್ಲಿ ಬಹು ಕುಶಲನಾಗಿದ್ದನು. ವ್ಯಾಸಂಗವನ್ನು ಮುಂದರಿಸಿ ಆತನು ವಕೀಲನಾದನು. ವಕೀಲ ವೃತ್ತಿಯನ್ನು ಮುಂದರಿಸಿ ಹೆಸರುಗಳಿಸಿದನು. ಒಂದು ದಿನ ಮಹೇಶನು ಕೋರ್ಟಿಗೆ ಹೋಗುತ್ತಿರುವಾಗ ಎರಡು ಪೋಲೀಸರು ಒಬ್ಬ ಭಿಕ್ಷುಕನನ್ನು ಹಿಡಿದುಕೊಂಡು ಎದುರು ಬರುತ್ತಿದ್ದರು. ಮಹೇಶನು "ಈತನನ್ನು ಎಲ್ಲಿಗೆ ಒಯ್ಯುತ್ತಿದ್ದೀರಿ. ಈತನ ಅಪರಾಧವೇನು?" ಎಂದು ಕೇಳಿದನು. ಆತನು ಕಳವು ಮಾಡಿರುವನೆಂದು ಪೋಲೀಸರು ಹೇಳಿದರು. ಭಿಕ್ಷುಕನ ದೀನಸ್ಥಿತಿಯನ್ನು ನೋಡಿ ಮಹೇಶನಿಗೆ ಕನಿಕರವಾಯಿತು. ಅವನನ್ನು ಒಂದೆರಡು ಮಾತು ವಿಚಾರಿಸಿದನು. ಆತನು ಮಾತಾಡುತ್ತಲೇ ಮಹೇಶನಿಗೆ ಹಳೆಯ ನೆನಪುಗಳು ಬಂದವು. ಆತನು ತನ್ನ ಸಹೋದರನೆಂಬ ಅರಿವಾಯಿತು. ಮಹೇಶನು ಪೋಲೀಸರೊಂದಿಗೆ ಕಚೇರಿಗೆ ನಡೆದು ದಿನೇಶನು ಮಾಡಿದ ಕಳ್ಳತನಕ್ಕೆ ಕೋರ್ಟು ವಿಧಿಸಿದ ಜುಲ್ಮಾನೆಯನ್ನು ತೆತ್ತು ಆತನನ್ನು ಬಿಡುಗಡೆ ಮಾಡಿಕೊಂಡು ಮನೆಗೆ ಬಂದನು.

ದಿನೇಶನು ತನ್ನ ತಮ್ಮನೊಡನೆ ಎಲ್ಲಾ ವೃತ್ತಾಂತವನ್ನೂ ತಾನು ಪಟ್ಟ ಕಷ್ಟಗಳನ್ನೂ ಹೇಳುತ್ತಾ "ಅಂದು ನಾನು ಶಾಲೆಗೆ ಸರಿಯಾಗಿ ಹೋಗದೆ, ಪುಸ್ತಕಗಳನ್ನು ಓದದೆ ದಾರಿತಪ್ಪಿ ವರ್ತಿಸಿದುದರಿಂದ ನನ್ನ ಜೀವನವೂ ದಾರಿತಪ್ಪಿತು" ಎಂದು ಪಶ್ಚಾತ್ತಾಪ ಪಟ್ಟನು. ಈಗ ಸೋದರರಿಬ್ಬರೂ ಪ್ರೀತಿಯಿಂದಿದ್ದಾರೆ. ದಿನೇಶನಿಗೆ ಬುದ್ಧಿಬಂದಿದೆ.

ಚಾಡಿ ಮಾತು ಕೇಳಬಾರದು.

ಲೇ:— ಕುಮಾರ ಎನ್. ಡಿ. ಶ್ರೀಧರ, ಮಡಿಕೇರಿ.

ಒಂದು ಊರಿನಲ್ಲಿ ಒಬ್ಬನು ತನ್ನ ಹೆಂಡತಿಯೊಡನೆ ಸುಖದಿಂದ ಜೀವನ ಮಾಡುತ್ತಿದ್ದನು. ಗಂಡನು ಕಷ್ಟಪಟ್ಟು ದುಡಿದು ಹಣವನ್ನು ಗಳಿಸಿ ತರುತ್ತಿದ್ದನು. ಹೆಂಡತಿಯು ತಮ್ಮ ಆಹಾರಕ್ಕಾಗಿ ಆ ಹಣವನ್ನು ಉಪಯೋಗಿಸುತ್ತಿದ್ದಳು.

ಅವರ ಸಂತೋಷದ ಜೀವನವನ್ನು ಒಬ್ಬ ಮುದುಕಿಯು ಕಂಡು ಅವರಿಗೆ ಕೇಡು ಬಗೆಯಲು ನಿಶ್ಚೈಸಿದಳು. ಅವಳು ಗಂಡನಿಗೆ ಗೊತ್ತಾಗದಂತೆ, "ನಿನ್ನ ಗಂಡನು ಮೊದಲಿನ ಜನ್ಮದಲ್ಲಿ ಸಮುದ್ರದ ಮೀನಾಗಿ

ಗಾಂಧಿ ವಿಚಾರ ದೋಹನ

* ಸತ್ಯದ ನಿಲುವು *

ಸತ್ಯವೆಂದರೆ ಏನು? ಎಂಬ ಪ್ರಶ್ನೆಯು ಬಹು ಕಠಿಣ. ಆದರೆ ನಾನು ಅದನ್ನು ಬಗೆಹರಿಸಿರುವೆನು. ನಮ್ಮ ಹೃದಯದ ವಾಣಿಯು ಏನು ಹೇಳುವದೋ ಅದೇ ಸತ್ಯ. ಆದರೆ ಪ್ರತಿಯೊಬ್ಬ ವ್ಯಕ್ತಿಯ ಮಾನಸಿಕ ಸ್ಥಿತಿ, ಅರಿಯುವ ಕೌಶಲ ಒಂದೇ ಅಲ್ಲದ ಕಾರಣ ಒಬ್ಬನಿಗೆ ಸತ್ಯವೆಂದು ತೋರಿದ್ದು ಮತ್ತೊಬ್ಬನಿಗೆ ಅಸತ್ಯವೆಂದೆನಿಸಬಹುದು. ಈ ಕಾರಣವಾಗಿಯೇ ಜಗತ್ತಿನಲ್ಲಿ ವಿವಿಧ ಅಭಿಪ್ರಾಯಗಳು ತುಂಬಿ ಸರ್ವವೂ ಸತ್ಯ ಯಾ ಸರ್ವವೂ ಸುಳ್ಳು ಎಂಬಂತಾಗಿದೆ.

ಸತ್ಯದ ಅರಿವಾಗಬೇಕಾದರೆ ಅಹಂಭಾವವು ಮಾರ್ಗವಲ್ಲ. ಯಾರು ಸಹನಾಶೀಲನೋ ಯಾರಲ್ಲಿ ದೈನ್ಯತೆ ಇದೆಯೋ ಆತನೇ ಸತ್ಯವನ್ನು ಅರಿಯುವನು. ಸತ್ಯದ ಸಮುದ್ರದ ಆಳವನ್ನು ಅರಿಯಬೇಕಾದರೆ ತನ್ನತನವನ್ನು ಮರೆಯಬೇಕು.

ಸತ್ಯವೆಂಬುದು ಸರ್ವದಕ್ಕೂ ಮಧ್ಯ ಬಿಂದು. ಅದು ಸರ್ವ ವಿಚಾರಗಳಿಗೂ ಕೇಂದ್ರ. ಯಾವ ಗುಣ ನಡತೆ, ನೀತಿ ನಿಯಮಗಳೂ ಈ ಕೇಂದ್ರದ ಸುತ್ತು ಸುತ್ತಿದರೆ ಮಾತ್ರ ಅವುಗಳಿಗೆ ಬೆಲೆ ಘನತೆ. ಸತ್ಯವೆಂದರೆ ಮಾತಿನ ಸತ್ಯತೆ ಮಾತ್ರವಲ್ಲ. ಮನಸಿನಲ್ಲಿ ಮೂಡಿದುದನ್ನು ಮಾತಿನಲ್ಲಿ ಹೇಳುವದು, ಮಾತಿನಲ್ಲಿ ಹೇಳಿದುದನ್ನು ಕೃತಿಯಲ್ಲಿ ತರುವದೇ ಸತ್ಯವೆನಿಸುವದು.

ಸತ್ಯವೆಂಬುದು ಒಂದೇ ವಸ್ತು. ಅದರಲ್ಲಿ ಭಿನ್ನತೆ ವ್ಯತ್ಯಾಸವಿಲ್ಲ. ದೇವರಲ್ಲಿ ನಾನಾ ರೂಪ ಭೇದಗಳಿರಬಹುದು. ಆದರೆ ಸತ್ಯ ಮಾತ್ರ ಒಂದೇ. ಅದರಲ್ಲಿ ಭಿನ್ನತೆ ಇಲ್ಲ ಆದ್ದರಿಂದ ನಾನು ಸತ್ಯದ ಆರಾಧಿಕನಾಗಿರುವೆನು.

ಪ್ರತಿಯೊಬ್ಬನ ಹೃದಯದಲ್ಲಿಯೂ ಈ ಸತ್ಯವೆಂಬುದಿದೆ. ಅದನ್ನು ಹುಡುಕಿ ಕಂಡುಕೊಳ್ಳುವುದರಲ್ಲಿಯೇ ಮಾನವತೆಯ ಘನತೆ ಅಡಗಿದೆ. ಆದರೆ ಒಬ್ಬನು ತನಗೆ ಸತ್ಯವೆಂದು ಕಂಡುದನ್ನೇ ಬೇರೆಯವರೂ ಅಂಗೀಕರಿಸಬೇಕೆಂದು ಬಲಾತ್ಕಾರ ಮಾಡುವುದು ತಪ್ಪು.

ಜೀವನವೆಂಬುದು ಒಂದು ಆಸೆ, ಕಾಂಕ್ಷೆ. ಅದರ ಗುರಿಯು ಪರಿಪೂರ್ಣತೆಯನ್ನು ಪಡೆಯುವದಾಗಿದೆ. ನಮ್ಮ ನ್ಯೂನತೆ, ಅತಿರೇಕಗಳ ಕಾರಣ ಈ ಉಚ್ಚ ಗುರಿಯನ್ನು ಕೆಳಗಿಳಿಸಬಾರದು. ಸತ್ಯವನ್ನು ತಮಗೆ ಹಿತವಾಗುವ ರೀತಿ ಮಾರ್ಪಡಿಸಬಾರದು.

ನಾನು ಸತ್ಯದ ದೀನ ಶೋಧಕನು. ಈ ಶೋಧನೆಯಲ್ಲಿ ನನ್ನ ಸಹಕಾರ್ಯಕರ್ತರಲ್ಲಿ ತುಂಬಾ ವಿಶ್ವಾಸ ಭರವಸೆ ಇಡುವೆನು ಏಕೆಂದರೆ ಅವರ ರೀತಿ ನೀತಿ, ಕಷ್ಟ ಸುಖಗಳಿಂದ ನನ್ನ ಜೀವನವನ್ನು ತಿದ್ದಿಕೊಳ್ಳುವದೇ ನನ್ನ ಗುರಿಯಲ್ಲದೆ ಅವರನ್ನು ಅಳೆದು ಬೆಲೆ ಕಟ್ಟುವುದಲ್ಲ. ನಾನು ಅನೇಕ ಬಾರಿ ತಪ್ಪು ಮಾಡಿರುವೆನು. ಆ ತಪ್ಪನ್ನು ಒಪ್ಪಲು ಹಿಂದಡಿ ಇಟ್ಟಿರುವೆನು. ಆದ್ದರಿಂದ ಈ ತಪ್ಪುಗಳಿಂದ ಯಾವುದೇ ಶಾಶ್ವತ ಹಾನಿ ನನಗಾಗಿರುವದಿಲ್ಲ.

— ಎಂ. ಕೆ. ಗಾಂಧಿ.

ದ್ದನು. ನೀನು ಪರೀಕ್ಷಿಸುವೆಯಾದರೆ ಅವನು ರಾತ್ರಿ ನಿದ್ರೆ ಮಾಡುತ್ತಿರುವಾಗ ಅವನ ಮೈಯನ್ನು ನೆಕ್ಕು ಆಗ ಗೊತ್ತಾಗುವದು" ಎಂದು ಹೆಂಡತಿಗೆ ಎಂದವಳು ನಂತರ ಹೆಂಡತಿಗೆ ಗೊತ್ತಾಗದಂತೆ ಆ ಮುದುಕಿ ಗಂಡನಿಗೆ "ನಿನ್ನ ಹೆಂಡತಿಯು ಮೊದಲಿನ ಜನ್ಮದಲ್ಲಿ ನಾಯಿಯಾಗಿದ್ದಳು. ಬೇಕಾದರೆ ನೀನು ರಾತ್ರಿ ನಿದ್ದೆ ಮಾಡಿದವನಂತೆ ನಟಿಸು, ಅವಳು ನಿನ್ನ ಮೈಯನ್ನು ನೆಕ್ಕುವಳು" ಎಂದಳು.

ಮುದುಕಿಯ ಮಾತಿನಂತೆ ರಾತ್ರಿ ಗಂಡನು ನಿದ್ರೆ ಮಾಡಿದವನಂತೆ ಗೊರಕೆ ಹೊಡೆಯುತ್ತಿದ್ದನು. ಆಗ ಹಂಡತಿ ಮೆಲ್ಲನೆ ಎದ್ದು ಆತನ ಮೈ ನೆಕ್ಕಿದಳು. ಆತನ ಮೈಯು ಉಪ್ಪಾಗಿದೆಯೆಂದು ಆಕೆಗೆ ತಿಳಿಯಿತು. ಆಕೆ ಮೈ ನೆಕ್ಕುವದನ್ನು ಕಂಡು ಗಂಡನು "ಹೆ! ನಾಯಿ" ಎಂದು ಕೂಗಿದನು. ಆಕೆಯನ್ನು ನಾಯಿಯೆಂದೇ ಭಾವಿಸಿ ಆಕೆಗೆ ಹೊಡೆದನು. ಜಗಳ ಪ್ರಾರಂಭವಾಗಿ ಹೆಂಡತಿಯು ರಾತ್ರಿಯೇ ಮನೆಬಿಟ್ಟು ತನ್ನ ಊರಿಗೆ ಹೊರಟು ಹೋದಳು. ನೋಡಿದಿರಾ! ಮುದುಕಿಯ ಕುತಂತ್ರ. ಆದ್ದರಿಂದ ಚಾಡಿ ಮಾತು ಕೇಳುವದು ಅಪಾಯಕರ.

ಭಾರತ ನೌಕಾ ಪಡೆಯ ವ್ಯೂಹವನ್ನು ರಾಷ್ಟ್ರಪತಿ ವೀಕ್ಷಿಸಿದರು.

ಭಾರತ ನೌಕಾ ಪಡೆಯ ವ್ಯೂಹವನ್ನು ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದ್‌ರವರು ತಾ. ೧೦ ರಲ್ಲಿ ಬೊಂಬಾಯಿಯಲ್ಲೂ ಪ್ರಥಮವಾಗಿ ಬಂದರಿನಲ್ಲಿ 'ಗೇಟ್‌ವೇ ಆಫ್ ಇಂಡಿಯಾ'ದ ಎದುರಿನಲ್ಲಿ ವೀಕ್ಷಿಸಿದರು. ೧೦ ಸಾವಿರಕ್ಕೂ ಹೆಚ್ಚು ಜನ ಈ ಸಮಾರಂಭವನ್ನು ನೋಡಲು ಸೇರಿದ್ದರು. ಇಡೀ ನೌಕಾಪಡೆಯ ಹಡಗಳೆಲ್ಲಾ ಒಟ್ಟಾಗಿ ಸೇರಿ ಇಂತಹ ಪ್ರದರ್ಶನವನ್ನು ರಾಷ್ಟ್ರ ಮುಖ್ಯಸ್ಥರ ಎದುರಿನಲ್ಲಿ ನಡೆಸುತ್ತಿರುವುದು ನೌಕಾಪಡೆಯ ಇತಿಹಾಸದಲ್ಲೇ ಇದೇ ಮೊಟ್ಟಮೊದಲು.

ಭಾರತದ ಸೈನ್ಯ ದಳಗಳೆಲ್ಲದರ ಸುಪ್ರೀಂ ಕಮ್ಯಾಂಡರಾದ ರಾಷ್ಟ್ರಪತಿಯವರು ಈ ವ್ಯೂಹ ವೀಕ್ಷಣೆ ಮಾಡಿದಾಗ, ಈ ಚಿತ್ತಾಕರ್ಷಕ ಸಮಾರಂಭವನ್ನು ಪ್ರಧಾನ ಮಂತ್ರಿ ಪಂ. ನೆಹ್ರೂರವರೂ ಬೊಂಬಾಯಿ ಗವರ್ನರ್ ಶ್ರೀ. ಗಿರಿಜಾ ಶಂಕರ ಬಾಜಪೈರವರೂ ನೋಡಿದರು.

ರಾಷ್ಟ್ರಪತಿಯವರೂ ಪ್ರಧಾನ ಮಂತ್ರಿಯವರೂ 'ಗೇಟ್ ವೇ ಆಪ್ ಇಂಡಿಯಾ'ಕ್ಕೆ ಬೆಳಿಗೆ ೮-೩೦ ಗಂಟೆಗೆ ಸರಿಯಾಗಿ ಬಂದರು. ಬೆಳಗಿನ ಜಾವದಿಂದಲೇ ಅಲ್ಲಿ ಸೇರಿದ್ದ ಜನಸ್ತೋಮವು ಜಯಕಾರಗಳನ್ನು ಮಾಡಿತು.

ವ್ಯೂಹ ವೀಕ್ಷಣೆಗಾಗಿ ಬಂದಿದ್ದ ಹಡಗಗಳನ್ನೆಲ್ಲಾ ವಿವಿಧ ವರ್ಣಗಳ ನೌಕಾ ಧ್ವಜಗಳಿಂದ ಎಲ್ಲಾ ಕಡೆಗಳಿಂದಲೂ ಅಲಂಕರಿಸಲಾಗಿತ್ತು. ನೌಕಾ ಪಡೆಯ ಬಿಳಿಯ ಬಣ್ಣದ ಈ ಹಡಗುಗಳೆಲ್ಲಾ ಒಂದು ಮೈಲಿಗೂ ಹೆಚ್ಚು ವಿಸ್ತಾರವಾದ ಪ್ರದೇಶದಲ್ಲಿ ನೀಲಿಯ ಆಕಾಶದ ಹಿನ್ನೆಲೆಯಲ್ಲಿ ಕಂಗೊಳಿಸುತ್ತಾ ನಿಂತಿದ್ದವು.

ರಾಷ್ಟ್ರಪತಿಯೂ, ಪ್ರಧಾನ ಮಂತ್ರಿಯೂ, ನೌಕಾ ದಳದ ಸಿ-ಇನ್-ಸಿ ವೈಸ್ ಅಡ್ಮಿರಲ್ ಸರ್ ಮಾರ್ಕ್ ಪೈಜಿಯವರ ಜತೆಯಲ್ಲಿ ಆಗಮಿಸಿದರು. ೩೧ ಕುಶಾಲ ತೋಪುಗಳ ನಿನಾದದ ಮಧ್ಯೆ ರಾಷ್ಟ್ರಪತಿಯವರು ವಿಹಾರ ನೌಕೆಯನ್ನೇರಿದರು. ವಿಹಾರ ನೌಕೆಯಲ್ಲಿ ಬೊಂಬಾಯಿ ಗವರ್ನರ್‌ರವರೂ ಮಂಡಿಸಿದ್ದರು. ಈ ನೌಕೆಯು ಅನಂತರ ವ್ಯೂಹ ವೀಕ್ಷಣಾ ಸಾಲಿಗೆ ಪ್ರವೇಶಿಸಿತು. ಈ ನೌಕೆಯ ಹಿಂದೆ ಬೊಂಬಾಯಿ ಮುಖ್ಯ ಮಂತ್ರಿ ಶ್ರೀ. ಮೊರಾರ್ಜಿ ದೇಸಾಯಿಯವರೂ, ಇತರ ಕೇಂದ್ರ ಮತ್ತು ಪ್ರಾಂತೀಯ ಮಂತ್ರಿಗಳೂ ಕುಳಿತಿದ್ದ ಇತರ ನೌಕೆಗಳೂ ಬಂದವು.

ವೀಕ್ಷಣಾ ವ್ಯೂಹದ ಹಡಗುಗಳೆಲ್ಲಾ ಸಮಾನಾಂತರ ಸಾಲುಗಳಲ್ಲಿ ನಿಂತಿದ್ದವು. ಫ್ಲಾಗ್ ಷಿಪ್ 'ದೇಹಲಿ,' ಆರು ಡಿಸ್ಟ್ರಾಯರ್‌ಗಳು, ಮೂರು ಫ್ರಿಗೇಟ್‌ಗಳು, ಎರಡು ಸರ್ವೆ ಹಡಗುಗಳು, ಏಳು ಮೈನ್ ಸ್ವೀಪರುಗಳು, ನಾನಾ ಬಗೆಯ ಡಾಕ್ ಯಾರ್ಡ್ ದೋಣಿ ಮುಂತಾದವು, ಒಂದು ಟ್ಯಾಂಕ್ ಇಳಿಸಬಲ್ಲ ಹಡಗು, ಟ್ರೈನಿಂಗ್ ಹಡಗಾದ 'ಡೆಫರಿನ್' ಮತ್ತು ಭಾರತದ ವಿವಿಧ ಹಡಗು ಕಂಪೆನಿಗಳನ್ನು ಪ್ರತಿನಿಧಿಸುವ ನಾಲ್ಕು ವ್ಯಾಪಾರಿ ಹಡಗುಗಳು ಮುಂತಾದವು ಇದ್ದವು. ಈ ಹಡಗುಗಳ ಮೇಲೆ ಅವುಗಳ ಆಫೀಸರುಗಳೂ ನಾವಿಕರುಗಳೂ ಸಾಲುಗಟ್ಟಿ ನಿಂತಿದ್ದು, ತಮ್ಮ ಬಳಿಗೆ ರಾಷ್ಟ್ರಪತಿಯವರ ನೌಕೆ ಬಂದಂತೆಲ್ಲಾ 'ರಾಷ್ಟ್ರಪತಿ-ಕಿ-ಜೈ' ಎಂಬ ಹರ್ಷನಿನಾದಗಳನ್ನು ಮಾಡಿದರು.

ಪಾಕಿಸ್ತಾನದ ರಾಜ್ಯಘಟನೆ

ಘಟನೆಯ ಕೆಲವು ಸೂತ್ರಗಳನ್ನು ಕುರಿತು ಪೂರ್ವ ಮತ್ತು ಪಶ್ಚಿಮ ಪಾಕಿಸ್ತಾನಗಳಲ್ಲಿ ಭಿನ್ನಾಭಿಪ್ರಾಯವಿದ್ದು ಅದರ ನಿವಾರಣೆಗಾಗಿ ಹೊಸ ಸೂಚನೆಗಳನ್ನೊಳಗೊಂಡ ಸೂತ್ರವೊಂದು ಅಲ್ಲಿಯ ಘಟನಾ ಸಮಿತಿಯ ಮುಂದೆ ಪ್ರಧಾನಿ ಮಹಮ್ಮದಾಲಿ ಅವರಿಂದ ಮಂಡಿಸಲ್ಪಟ್ಟಿತು. ಹೊಸ ಸೂತ್ರದಂತೆ ಪಾಕಿಸ್ತಾನದ ಕೇಂದ್ರ ವಿಧಾಯಕಸಭೆಯಲ್ಲಿ ಯಾವುದೇ ನಿರ್ಣಯ ಮಾನ್ಯವಾಗಬೇಕಾದರೆ ಉಭಯ ಪಾಕಿಸ್ತಾನಗಳ ಹಾಜರಿದ್ದ ಸದಸ್ಯರಲ್ಲಿ ಶೇಕಡ ಇಂಪತ್ತು ಮಂದಿ ಸದಸ್ಯರ ಬೆಂಬಲ ಸಿಗಲೇಬೇಕು. ಈ ಸೂಚನೆಯನ್ನು ಪಾಕಿಸ್ತಾನದ ಎರಡೂ ಭಾಗಗಳು ಒಪ್ಪಿರುವವಲ್ಲದೆ ಪೂರ್ವ ಮತ್ತು ಪಶ್ಚಿಮ ಪಾಕಿಸ್ತಾನಗಳು ಪ್ರತ್ಯೇಕ ಪ್ರಭುತ್ವಗಳಾಗುವ ಭೀತಿಯೂ ಅಡಗಿದೆ. ಪಾಕಿಸ್ತಾನದ ಮೂಲಭೂತ ತತ್ವಗಳನ್ನು ಮಂಡಿಸುತ್ತ ನಮ್ಮ ರಾಷ್ಟ್ರ ಸರ್ವತಂತ್ರ ಸ್ವತಂತ್ರ ಪ್ರಜಾರಾಜ್ಯವಾಗುವುದೆಂದು ಮಹಮ್ಮದಾಲಿಯವರು ಸೂಚಿಸಿದ್ದಾರೆ.

ಮೈಸೂರಿನಲ್ಲಿ, ಘರ್ಷಣೆ.

ನವರಾತ್ರಿಯ ಒಂಭತ್ತು ದಿವಸಗಳೂ ಮೈಸೂರು ಅರಮನೆ ಆವರಣದಲ್ಲಿ ಜಟ್ಟಿಗಳ ಕಾಳಗ ನಡೆಯುವಾಗ ಹರಿಜನರು ಅದರಲ್ಲಿ ಭಾಗವಹಿಸಬಹುದೆಂಬ ಅನುಮತಿ ದೊರೆತ ಮೇಲೆ ಸವರ್ಣೀಯ ಜಟ್ಟಿಗಳಿಗೆ ಅಸಮಾಧಾನವುಂಟಾಗಿ ತಾ ೪ರ ದಿವಸ ಇದು ಉಲ್ಬಣಾವಸ್ಥೆಗೆ ಬಂದು ಉದ್ವೇಶ ಮನೋಭಾವನೆಯಿಂದ ಕೂಡಿದ ಗುಂಪಿನ ಮೇಲೆ ಪೋಲೀಸಿನವರು ಗುಂಡು ಹಾರಿಸಬೇಕಾದ ಪ್ರಮೇಯವೊದಗಿ ನಾಲ್ಕು ಜನ ಸತ್ತು ಒಟ್ಟು ಸುಮಾರು ೪೫ ಮಂದಿಗೆ ಗಾಯಗಳಾದವು.

ಪೋಲೀಸಿನವರಲ್ಲಿ ೨೫ ಮಂದಿಗೆ ಪೆಟ್ಟು ತಗಲಿದೆ. ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟರಾದ ಶ್ರೀ. ಕೃಷ್ಣಮೂರ್ತಿಯವರಿಗೆ ಸ್ವಲ್ಪ ಮಟ್ಟಿಗೆ ಗಾಯಗಳಾಗಿವೆಯೆಂದು ಗೊತ್ತಾಗಿದೆ. ಗುಂಡಿನೇಟಿನ ಪ್ರಕರಣವಾದ ಮೇಲೆ ಅಲ್ಲೆಲ್ಲಾ ಪೋಲೀಸ್ ಕಾವಲು ಬಲವಾಗಿತ್ತು. ಪೇಟೆಯ ಮಾಮೂಲು ಕಾರ್ಯಕ್ರಮಗಳಿಗೆ ಯಾವ ಪ್ರತಿಬಂಧಕವೂ ಉಂಟಾಗಲಿಲ್ಲ.

ಷಾಪಸಂದ್ ಗಾಡಿಗಳೂ, ಬಸ್ಸುಗಳೂ ನಗರದ ರಸ್ತೆಗಳಲ್ಲಿ ಮಾಮೂಲಾಗಿ ಓಡಲಾರಂಭಿಸಿದವು. ಅರಮನೆಯ ಎಲ್ಲಾ ದ್ವಾರಗಳಲ್ಲೂ ಪೋಲೀಸ್ ಪಹರೆ ಹೆಚ್ಚಾಗಿದೆ. ಇತ್ತೀಚೆಗೆ ಈ ಘರ್ಷಣೆ ಬಗ್ಗೆ ಹಿಂದು ಮೈಸೂರು ನಗರದಲ್ಲಿ ಪರಿಸ್ಥಿತಿ ಶಾಂತವಾಗಿದೆ.

ಫ್ರಾಂಕಾಯಿಸ್ ಹ್ಯೂಬರ್—ಕುರುಡ ಜೇನು ಕೃಷಿ ವಿಜ್ಞಾನಿ.

[ಕೊಡಗು ವ್ಯವಸಾಯ ಇಲಾಖೆಯಿಂದ]

ವ್ಯವಸಾಯ ವಿಜ್ಞಾನ ಶಾಖೆಗಳಲ್ಲೊಂದಾದ—ಜೇನು ಕೃಷಿಯ ಪರಿಶೋಧನೆಯ ಕಾರ್ಯದಲ್ಲಿ ಶ್ರಮಿಸಿ, ತನುವನ್ನು ಸವೆಸಿ, ಆತ್ಮವನ್ನು ಬಲಿಗೊಟ್ಟು, ಪ್ರಪಂಚದ ವಿಜ್ಞಾನಿಗಳ ಪಟ್ಟಿಯನ್ನು ತಿರಿದರೆ ಅಲ್ಲಿ ಎಷ್ಟೋ ಮಂದಿಯರ ಹೆಸರು ಗೋಚರವಾಗುತ್ತದೆ. ಹಿಂದಿನ ಕಾಲದ ವಿಜ್ಞಾನಿ ವರ್ಜಿಲ್, ಇತ್ತೀಚಿನ ಮೇಯಿಟರ್‌ಲಿಂಕ್‌ರಂತಹ ನಿಪುಣ ವಿಜ್ಞಾನಿಗಳಿಂದ ಸ್ಥಿರಸ್ಥಾಯಿಯಾಗಿ ನಿಲ್ಲಲರ್ಹತೆಯುಳ್ಳ ಹಲವು ಸಂಶ್ಯಾಂಶಗಳು ಪ್ರಪಂಚಕ್ಕೆ ದೊರೆತಿದ್ದರೆ ಇನ್ನು ಕೆಲವು ತೀಕ್ಷ್ಣ ಬುದ್ಧಿಯ ಪ್ರತ್ಯಕ್ಷ ಕೆಲಸಗಾರ ಸತ್ಯಶೋಧಕರಿಂದ ಅದೆಷ್ಟೋ ಸೇವೆ ಜೇನು ಪ್ರಪಂಚಕ್ಕೆ ಸಂದಿದೆ. ಇಂತಹವರ ಪೈಕಿ ಫ್ರಾಂಕಾಯಿಸ್ ಹ್ಯೂಬರ್ ಎಂಬ ಸ್ವಿಟ್ಜರ್ಲೆಂಡಿನ ಪ್ರಕೃತಿ ಶಾಸ್ತ್ರಜ್ಞರು ಒಬ್ಬರು.

ಇವರು ಜನಿವಾ ನಗರದಲ್ಲಿ ೧೭೫೦ರಲ್ಲಿ ಜನ್ಮವೆತ್ತಿದರು. ಆ ಕಾಲದ ಅಲ್ಲಿಯ ಮಹಾ ವಿಜ್ಞಾನಿಗಳಾದ ಬೆನೆಡಿಕ್ಟ್ ಡಿ ಸಸ್ಸ್ಯೂರ್ ಮತ್ತು ಚಾರ್ಲಸ್ ಬೆನಿಟ್‌ರವರು, ಇವರಿಗೆ ಹತ್ತಿಪ್ಪತ್ತು ವರ್ಷಕ್ಕೆ ಹಿರಿಯರು. ಇವರು (ಹ್ಯೂಬರ್) ಸ್ಥಿತಿವಂತ ಕುಟುಂಬದಲ್ಲಿ ಹುಟ್ಟಿ ಮೂರು ವರ್ಷಗಳ ಕಾಲ ತಜ್ಞರಾದ ತಮ್ಮ ಅಜ್ಜಿಯಿಂದ ಪೋಷಿಸಲ್ಪಟ್ಟು, ನಂತರ ಸಂಗೀತದಲ್ಲಿಯೂ, ಚಿತ್ರ ಮತ್ತು ಶಿಲ್ಪಕಲೆಗಳಲ್ಲೂ ನಿಪುಣರಾಗಿದ್ದ ತಂದೆಯ ಪೋಷಣೆಗೊಳಗಾಗಿ ಬೆಳೆದು ಬಂದರು. ವಿದ್ಯಾರ್ಜನೆಯ ಕಾಲ ಸಮೀಪಿಸಿದಾಗ ಇವರ ತಂದೆ ಜೀನ್ ಹ್ಯೂಬರು ಇವರನ್ನು ಹತ್ತಿರದ ನೃತ್ಯಕಲೆಯ ಶಾಲೆಗೆ ಸೇರಿದರು. ತಂದೆಯಂತೆಯೇ ಕುಶಲಕಲೆಯಲ್ಲಿ ಆಸಕ್ತಿಯಿದ್ದ ಈ ಬಾಲಕನು ನೃತ್ಯಕಲೆಯ ಜತೆಗೆ ಹಲವು ವಿಷಯಗಳನ್ನು ಗ್ರಹಿಸಿಕೊಂಡನು. ಅಲ್ಲಿ ಸಮಪ್ರಾಯದ ಮೇರಿ ಎಲ್ಲಿಸ್ ಎಂಬ ಒಬ್ಬ ನ್ಯಾಯಾಧೀಶರ ಎಳೇ ಬಾಲಕಿಯು ಆಟದ ಗೆಳತಿಯಾದವಳು. ಇವಳೇ ಮುಂದೆ ಹ್ಯೂಬರರ ಧರ್ಮಪತ್ನಿಯಾದಳು. ಪ್ರಾಯ ಹದಿನೈದು ಸಂದಾಗ ಇವರು ಜಿನಿವಾ ಕಾಲೇಜಿನಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ, ಬಿ. ಡಿ. ಸಸ್ಸ್ಯೂರ್ ವಿಜ್ಞಾನಿಯ ಕೈಕೆಳಗೆ ಪ್ರಕೃತಿಶಾಸ್ತ್ರವನ್ನು ಅಭ್ಯಾಸಿಸಿ, ರಸಾಯನ ಶಾಸ್ತ್ರವನ್ನು ಅರಗಿಸಿಕೊಂಡರು. ಇವರಿಗೆ ಜ್ಞಾನಾರ್ಜನೆಯ ಹುಚ್ಚು ನೆತ್ತಿಗೆ ಹತ್ತಿ ಇರುಳು ಬಹು ಸಮಯದ ವರೆಗೆ ದೀಪ ಹಚ್ಚಿಕೊಂಡು ಪುಸ್ತಕಗಳನ್ನು ಓದಿದುದರ ತತ್ಪರಿಣಾಮವಾಗಿ ಅವರ ದೃಷ್ಟಿಯು ಕೆಡುತ್ತಾ ಬಂತು. ದೃಷ್ಟಿಯು ಪೂರ್ತಿಯಾಗಿ ಇಂಗಿ ಹೋಗುವ ಚಿಹ್ನೆಯು ಕಂಡು ಬಂದುದರಿಂದ ಇವರ ತಂದೆ ಜೀನ್ ಹ್ಯೂಬರು ಇವರನ್ನು ಪೇರಿಸ್ಸಿಗೆ ಒಬ್ಬ ಪ್ರವೀಣ ವೈದ್ಯರಲ್ಲಿಗೆ ಕರೆದೊಯ್ದರು. ವೈದ್ಯರ ಪ್ರಯತ್ನವು ಸಫಲವಾಗದ್ದರಿಂದ ಅವರು ಮರಳಿ ಬಂದರು. ಹ್ಯೂಬರ ದೃಷ್ಟಿ ಹಾಳಾದರೂ ದೇಹವು ಬಹು ಚೆನ್ನಾಗಿ ಬೆಳೆಯಿತು. ಅವರ ಬುದ್ಧಿಯು ವಿಕಾಸ ಹೊಂದಿ, ಪ್ರಕೃತಿ ಸೌಂದರ್ಯದಲ್ಲಿ ಅಭಿರುಚಿ ವಿಶಾಲವಾಗಿ ಬೆಳೆಯಿತು. ಬಾಲ್ಯದ ಗೆಳತಿಯಾದ ಮೇರಿ ಎಲ್ಲಿಸಳನ್ನು ಮದುವೆಯಾದರು. ಇವಳು ತನ್ನ ಪತಿಯ ಪರಿಶೋಧನೆಯ ಕಾರ್ಯದಲ್ಲಿ ಕಣ್ಣಿಗೆ ಕಣ್ಣಾಗಿ ವರದಿ ಕೊಡುವವಳಾಗಿ ವಿಷಯಗಳನ್ನು ಓದಿ ಹೇಳುವವಳಾಗಿ, ಕಾರ್ಯದರ್ಶಿಯಾಗಿ ನಾನಾ ಪಾತ್ರಗಳನ್ನು ವಹಿಸಿ ಹ್ಯೂಬರರ ಕಾರ್ಯರಂಗದಲ್ಲಿ ಯಶಸ್ಸನ್ನು ತಂದಳು. ಹ್ಯೂಬರರು ಒಂದು ದಿನ ತನ್ನ ವೃದ್ಧಾಪ್ಯದಲ್ಲಿ ತನ್ನ ಸ್ನೇಹಿತರೊಬ್ಬರೊಡನೆ ಮಾತಾಡುತ್ತಾ "ನನ್ನ ಪತ್ನಿಯಿರುವ ತನಕ ನನಗೆ ನನ್ನ ಕುರುಡುತನದ ಅರಿವೇ ಆಗಲಿಲ್ಲ" ಎಂಬುದಾಗಿ ಹೇಳಿದರು. ಇವರ ಕೆಲಸ ಕಾರ್ಯಗಳಲ್ಲಿ ನೆರವಾದವರಲ್ಲಿ ಬರ್ನನ್ಸ್ ಎಂಬವರು ಇನ್ನೊಬ್ಬರು. ಇವರು ಮೊದಲಿಗೆ ಸೇವಕರಾಗಿ ಬಂದು ಸೇರಿ, ತಮ್ಮ ಕಾರ್ಯ ಕುಶಲತೆಯಿಂದ ಹ್ಯೂಬರಿಗೆ ಸಹಾಯಕರಾಗಿ ಕಡೆಯ ವರೆಗೆ ಉಳಿದರು. ನಲ್ವತ್ತು ವರ್ಷಗಳ ಕಾಲದ ದಾಂಪತ್ಯ ಜೀವನದ ಮೇಲೆ ತನ್ನ ಪತ್ನಿಯು ವಿಧಿವಶಳಾದಾಗ ಬರ್ನನ್ಸ್‌ರೇ ಹ್ಯೂಬರಿಗೆ ಕಣ್ಣಾಗಿ ಲೌಕಿಕ ನೌಕೆಯನ್ನು ನಡೆಸಿದರು. ಜೇನು ಕೃಷಿಯ ತೀವ್ರ ಪರಿಶೋಧನೆಯ ಕಾಲದಲ್ಲಿ, ಹ್ಯೂಬರರ ಇರಾದೆಗೆ ಸರಿಯಾಗಿ ಒಪ್ಪುವ ರೀತಿ ಕೆಲಸ ಕಾರ್ಯಗಳನ್ನು ನಡೆಸಿ ಕ್ರಮಾನುಕ್ರಮವಾಗಿ ನಿಜಾಂಶ ಮತ್ತು ಇತರ ಫಲಿತಾಂಶಗಳನ್ನು ವರದಿ ಕೊಟ್ಟು ಅಷ್ಟು ಉತ್ಸಾಹಪೂರ್ವಕವಾಗಿ ಬರ್ನನ್ಸರು ದುಡಿದರು. ಜೇನು ನೊಣ ಮತ್ತು ಒಕ್ಕಲುಗಳನ್ನು ಅನೇಕಾನೇಕ ರೀತಿಯಲ್ಲಿ ಪರೀಕ್ಷಾರ್ಥವಾಗಿಟ್ಟು, ಅವುಗಳ ಫಲಿತಾಂಶಗಳನ್ನು ಕಾಯುತ್ತಿರುವುದೊಂದೇ ಅವರ ಜನ್ಮದ ಗುರಿಯಾಗಿತ್ತು. ಇವರು (ಹ್ಯೂಬರರು) ತಮ್ಮ ಪರಿಶೋಧನೆಯ ಪರಂಪರೆಗಳ ಫಲಿತಾಂಶಗಳನ್ನು ತಮ್ಮ ಹತ್ತಿರದ ಸ್ನೇಹಿತರಾದ ವಿಜ್ಞಾನಿ ಬೆನೆಟ್‌ರವರಿಗೆ ಪತ್ರಗಳ ರೂಪದಲ್ಲಿ ಬರೆದರು. ಇವೆಲ್ಲವೂ ಕೆಲಕಾಲದ ನಂತರ "ಜೇನುನೊಣಗಳ ಬಗ್ಗೆ ಹೊಸ ದೃಷ್ಟಿ" ಎಂಬ ಹೆಸರಿನಿಂದ ಪುಸ್ತಕದ ರೂಪದಲ್ಲಿ ಪ್ರಕಟಿಸಲ್ಪಟ್ಟಿತು. ಇವರ ಅಂದಿನ ಪರಿಶೋಧನೆಯ ಫಲಿತಾಂಶಗಳು ಇಂದಿನ ವರೆಗೆ ಸತ್ಯವಾಗಿಯೇ ನಿಂತಿವೆ.

ಇವರು ೧೭೮೯ರಲ್ಲಿ ಎರಡು ತರದ ಕನ್ನಡಿಯ ಜೇನು ಗೂಡುಗಳನ್ನು ರಚಿಸಿ, ಜೇನೆರಿಗಳನ್ನು ಪುಸ್ತಕದ ಹಾಳೆ ಮಗುಚಿ ನೋಡುವ ರೀತಿಗೂ, ರೂಪಿಸಿ ಜೇನು ವಸತಿಯ ಒಳಗುಟ್ಟನ್ನು ಪ್ರದರ್ಶಿಸಿದರು. ರಾಣಿ ನೊಣಕ್ಕೆ ಗಂಡು ನೊಣದ ಸಂಪರ್ಕವಾಗುವುದು ಹಾರಾಟದಲ್ಲಿಯೆಂದೂ, ಒಂದಾವರ್ತಿ ಗಂಡಿನ ಸಂಪರ್ಕವಾದರೆ ತನ್ನ ಆಯುಷ್ಯ ಪರ್ಯಂತ ಮೊಟ್ಟೆಯಿಕ್ಕಲು ಅದಕ್ಕೆ ಸಾಧ್ಯವಿದೆಯೆಂತಲೂ, ರಾಣಿಯ ದಿಬ್ಬಣ ಹಾರಾಟದಲ್ಲಿ ಗಂಡಿನ ಸ್ಮಶಾನ ಯಾತ್ರೆಯೆಂದೂ ನಿರೂಪಿಸಿದರು. ಗಂಡಿನ ಸ್ಪರ್ಶವಾಗದ ರಾಣಿಯು ಬರೀ ಗಂಡು ನೊಣಗಳಾಗುವ ಮೊಟ್ಟೆಗಳನ್ನಿಡಬಲ್ಲುದೆಂದೂ, ರಾಣಿಯಾಗಿ ಹುಟ್ಟುವ ಮತ್ತು ಕೆಲಸಗಾರ ನೊಣಗಳಾಗುವ ಮೊಟ್ಟೆಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲವೆಂದೂ, ರಾಣಿಗೆ ಪ್ರತ್ಯೇಕವಾಗಿ ದೊಡ್ಡ ಕಣಗಳನ್ನು ಕೊಟ್ಟು ರಾಣಿ ಹುಳಕ್ಕೆ 'ರಾಯಲ್ ಜೆಲ್ಲಿ' ಯೆಂಬ ಶಕ್ತಿವರ್ಧಕ ಆಹಾರವನ್ನು ಕೊಟ್ಟು ವಿಶೇಷ ತರದ ಪೋಷಣೆಗೆ ಒಳಪಡಿಸುವದರಿಂದ ಅದು ದೊಡ್ಡ ಆಕಾರದಲ್ಲಿ ಬೆಳೆದು ದೃಢಕಾಯವನ್ನು ತಳೆದು, ಗೂಡಿನ ರಾಣಿ ಇಲ್ಲವೇ ತಾಯಿಯಾಗುವದೆಂದೂ ಅದೇ ಮೊಟ್ಟೆ ಚಿಕ್ಕ ಕಣಗಳಲ್ಲಿದ್ದು ಸಾಮಾನ್ಯ ಆಹಾರವನ್ನು ಉಪಯೋಗಿಸುವದರಿಂದ ಅದು ಚಿಕ್ಕದಾಗಿ ಬೆಳೆದು ಕೆಲಸಗಾರ ನೊಣವಾಗುತ್ತದೆಂದೂ, ಕೆಲಸಗಾರ ನೊಣವು ತನ್ನ ದೇಹ ಪ್ರಕೃತಿಯಲ್ಲಿ ಬಂಜೆಯೆಂದೂ, ಅದು ನಪುಂಸಕವಲ್ಲವೆಂದೂ ತೀರ್ಮಾನಿಸಿದರು. ಒಂದಕ್ಕಿಂತ ಹೆಚ್ಚು ರಾಣಿ ನೊಣಗಳು ಒಂದು ಗೂಡಿನಲ್ಲಿರುವುದಿಲ್ಲವೆಂದೂ, ಆಕಸ್ಮಾತ್ ಹಾಗೇನಾದರೂ ಇದ್ದ ಪಕ್ಷದಲ್ಲಿ ಅವು ಪರಸ್ಪರ ಕಚ್ಚಾಡಿ, ಒಂದು ವಿನಹ ಬಾಕಿಯೆಲ್ಲಾ ನಾಶಹೊಂದುತ್ತವೆಂದೂ, ಕೆಲಸಗಾರ ನೊಣಗಳು ವಿಶೇಷ ಪರಿಸ್ಥಿತಿಯಲ್ಲಿ ಮೊಟ್ಟೆಯಿಕ್ಕುತ್ತವೆಂದೂ, ಹೀಗೆ ಇಕ್ಕಿದ ಮೊಟ್ಟೆಗಳಿಂದ ಬರೀ ಗಂಡು ನೊಣಗಳು ಉತ್ಪತ್ತಿಯಾಗುತ್ತದೆಂತಲೂ ನಿರೂಪಿಸಿದರು. ತಾಯಿ ನೊಣಕ್ಕೆ ಯಾವ ಕಣದಲ್ಲಿ ಯಾವ ಮೊಟ್ಟೆಯನ್ನಿಡಬೇಕೆಂಬುದರ ಪೂರ್ತಿ ಪರಿಜ್ಞಾನವಿದೆಯೆಂದೂ, ಮರಿ ಹಾರಿಸುವ ಕಾಲಕ್ಕೆ ಸರಿಯಾಗಿ ಗಂಡು ನೊಣಗಳಾಗುವ ಮೊಟ್ಟೆಗಳನ್ನಿಡಲು ಅದಕ್ಕೆ ತಕ್ಕ ಅರಿವಿದೆಯೆಂದೂ, ಜೇನುಗೂಡಿನ ಒಳಗುಟ್ಟನ್ನು ಬರೆದರು. ಮೊಟ್ಟೆ, ಮರಿ, ನೊಣಗಳೆಲ್ಲಾ ಆಮ್ಲಜನಕ ವಾಯುವನ್ನು ಸೇವಿಸಿ, ಅಂಗಾರಾಮ್ಲವನ್ನು ಬಿಡುತ್ತವೆಂದೂ, ಪರೀಕ್ಷೆಗಳ ಮೂಲಕ ಪ್ರದರ್ಶಿಸಿ, ಗೂಡಿಗೆ ಗವಾಕ್ಷಗಳ ಆವಶ್ಯಕತೆಯನ್ನು ವಿವರಿಸಿದರು. ನೊಣವು ಅದರ ಮುಳ್ಳನ್ನು ಶತ್ರುಗಳ ಮೇಲೆ ಬಿಟ್ಟಾಗ ಒಂದು ವಿಶೇಷ ತರದ ವಾಸನೆ ಹೊರಡುತ್ತದೆಂತಲೂ, ಆ ವಾಸನೆಯು ಗೂಡಿನ ಬೇರೆ ನೊಣಗಳಿಗೆ ಮುಟ್ಟಿದಾಗ ಶತ್ರುಗಳ ಆಗಮನದ ಅರಿವು ಆವಕ್ಕಾಗಿ ಎಲ್ಲಾ ನೊಣಗಳು ಚುಚ್ಚಲನುವಾಗುವುದೆಂತಲೂ, ಗೂಡಿನೊಳಗಣ ಗೋಂದು ಪದಾರ್ಥವು ಸಸ್ಯವರ್ಗಗಳಿಂದ ಬರುತ್ತದೆಂತಲೂ, ಕಂಡು ಹಿಡಿದರು. ಮೇಣವು ನೊಣದ ಕೊಬ್ಬು. ಅದನ್ನು ತನ್ನ ಹೊಟ್ಟೆಯ ಕೆಳಭಾಗದ ಪದರಿಗಾಗಿ ಹೊರ ತಂದು ಎರಿ ಕಟ್ಟುತ್ತದೆಂದೂ ೧೭೯೩ರಲ್ಲಿ ಪ್ರಕಟಿಸಿದರು. ಮೇಣವು ನೊಣದ ಶರೀರದಲ್ಲಿ ಉತ್ಪತ್ತಿಯಾಗಬೇಕಾದರೆ ತುಂಬಾ ಜೇನು ತುಪ್ಪವನ್ನು ಉಪಯೋಗಿಸಬೇಕೆಂದೂ, ಕೆಲಸಗಾರ ನೊಣಗಳು ಪರಾಗವನ್ನು ನುಂಗಿ ಅದನ್ನು ಮರಳಿ ಬಾಯಿಗೆ ತಂದು ಎಳೆ ಮರಿಗಳಿಗೆ ಆಹಾರವಾಗಿ ಕೊಟ್ಟು ಸಾಕುತ್ತವೆಂತಲೂ ಎಲ್ಲಾ ಹೂಗಳಲ್ಲಿ ಪುಷ್ಪರಸ ದೊರಕದೆಂತಲೂ, ವಾತಾವರಣದ ವ್ಯತ್ಯಾಸಕ್ಕನುಗುಣವಾಗಿ ಅದು ಹೆಚ್ಚು ಕಡಿಮೆ ಯಾ ಇಲ್ಲದಾಗುತ್ತದೆಂತಲೂ, ಅವರು ನಿರೂಪಿಸಿದರು. ಎರಿ ಕಟ್ಟುವ ರೀತಿ ನೀತಿ, ಸಾಹಿತ್ಯ, ಶ್ರಮ ಮುಂತಾದುವುಗಳ ವಿಷಯ ಒಂದು ಅಧ್ಯಾಯವನ್ನೇ ಬರೆದಿಟ್ಟಿರುವರು.

ಹೀಗೆ ಅವೆಷ್ಟೋ ಪರಿಶೋಧನೆಗಳನ್ನು ನಡೆಸಿ, ಅನೇಕ ಸಂಖ್ಯಾಂಶಗಳನ್ನು ಹುಡುಕಿ, ನಾನಾ ಪರೀಕ್ಷೆಗೆ ಗುರಿಪಡಿಸಿ, ಹೆಕ್ಕಿ ಬರೆದಿಟ್ಟಿರುವರು. ಇದರ ಆಧಾರದ ಮೇಲೆ, ನವಶೋಧನೆಗಳು ನಡೆಯುತ್ತಿವೆ. ಇವರ ನಿರ್ಧಾರವನ್ನು ತಪ್ಪೆಂದು ಎಣಿಸುವ ಕಾಲ ಇಂದಿಗೂ ಬಂದಿರುವುದಿಲ್ಲ. ಬರುವ ಸಂಭವವೂ ಇಲ್ಲವೆಂಬುದೇ ನವಶೋಧಕರ ಮತ.

ಜೇನು ಕೃಷಿ ಶಾಸ್ತ್ರದಲ್ಲಿ ಉನ್ನತ ಸ್ಥಾನವನ್ನು ಪಡೆದ ಈ ಧೃತರಾಷ್ಟ್ರ—ಹ್ಯೂಬರರು ಜೇನು ಕೃಷಿ ಪರಿಶೋಧನಾ ರಂಗದಲ್ಲಿ ತಮ್ಮ ತೀಕ್ಷ್ಣ ಜ್ಞಾನ ಶಕ್ತಿಯನ್ನು ಒರೆಹಚ್ಚಿದ್ದಲ್ಲದೆ, ಹಾರ್ಮೋನಿಯಂ, ಭಾಷಾ ಯಂತ್ರ ಮುಂತಾದ ಇತರ ಸಣ್ಣ ಪುಟ್ಟ ಸಾಹಿತ್ಯಗಳನ್ನು ರಚಿಸಿದರು. ಇವರಿಗೆ ಕೊನೆಯ ವರೆಗೆ ಸಂಗೀತದಲ್ಲಿ ಆಸಕ್ತಿ ಇತ್ತು. ಇಂಪಾದ ಸಂಗೀತವನ್ನು ಶ್ರವಣ ಮಾಡಿದಾಗ ಇವರು ನರ್ತಿಸುತಿದ್ದರಂತೆ. ತನ್ನ ಎಂಭತ್ತೆರಡನೇ ವಯಸ್ಸಿನಲ್ಲಿ ತನ್ನ ಪ್ರಾಣ ಸ್ನೇಹಿತನಿಗೊಂದು ಪತ್ರವನ್ನು ಬರೆದು ಮುಗಿಸಿ, ಸ್ವಲ್ಪ ಸಮಯದಲ್ಲಿ ತನ್ನ ಸುಪುತ್ರಿಯ ತೋಳುಗಳಿಗೆ ಒರಗಿ, ಶಿವಾಧೀನವನ್ನು ಹೊಂದಿದರು. ನಶ್ವರ ಶರೀರವು ಪಂಚಭೂತಗಳಲ್ಲಿ ಐಕ್ಯವಾದರೂ ಕೀರ್ತಿಯು ಮಾತ್ರ ಇಂದಿಗೂ ಬೆಳಗುತ್ತಿವೆ!

ಬೇಕಾಗಿದ್ದಾರೆ

ಹೊಸ ಮಾದರಿಯ ಫೌಂಟೆನ್ ಪೆನ್ ಮಾರಾಟ ಮಾಡಲು ಆಕರ್ಷಣೀಯ ಶರತ್ತುಗಳ ಮೇಲೆ ಏಜೆಂಟರು ಬೇಕಾಗಿದ್ದಾರೆ. ಸೇಂಪಲಿಗೂ ವಿವರಗಳಿಗೂ ಈ ಪತ್ರಿಗೆ ಬರೆಯಿರಿ.

Standard Pen House
(K. M)
Bhandari Street
52-2 Bombay 3.

ವೀರಾಜಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಟಿ. ಎಸ್. ಗೋವಿಂದರಾಜು

Licence No. 60.
Licenced to Post without Prepayment

Reg. No. M. 1550.
"KODAGU" MERCARA (Coorg)

ಪ್ರಪಂಚದ ಈ ವರ್ಣಸಂಕರ ಮಹಾಪುರುಷರು!

ಅನುವಾದಕ:—ಶ್ರೀ ಬಳ್ಕೂರು ಸುಬ್ರಾಯ ಅಡಿಗ, ಗಂಗೊಳ್ಳಿ.

ವರ್ಣ ಸಂಕರ ವ್ಯಕ್ತಿಗಳು ಹೆಚ್ಚಾಗಿ ಪ್ರತಿಭಾ ಸಂಪನ್ನರಾಗಿರುತ್ತಾರೆಂಬ ವಿಚಾರವನ್ನು ಮೊತ್ತಮೊದಲು ಪ್ರಸಿದ್ಧ ವೈಜ್ಞಾನಿಕರಾದ ಹಾಲ್ಡೇನರು ತಿಳಿಸಿದರು. ಆಧುನಿಕ ಕಾಲದ ಇನ್ನೊಬ್ಬ ವೈಜ್ಞಾನಿಕ ಹಾಗೂ ವಿಚಾರಕರಾದ ಹೆಚ್. ಜಿ. ವೇಲ್ಸರು 'ಮಿಶ್ರಿತ ರಕ್ತವು ಪ್ರತಿಭಾವಂತ ವ್ಯಕ್ತಿಗಗಗೆ ಜನ್ಮವಿತ್ತಿದೆ' ಯೆಂಬುದನ್ನು ಅನೇಕ ಉದಾಹರಣೆಗಳಿಂದ ಸಮರ್ಥಿಸಿ ತಮ್ಮ ಒಂದು ಪ್ರಬಂಧದಲ್ಲಿ ಬರೆದಿದ್ದಾರೆ. ವರ್ಣಸಂಕರ ಪುರುಷರೇ ಅಧಿಕ ಬುದ್ಧಿವಂತರಾಗಿರುವದೆಂಬುದನ್ನು ಜೂಲಿಯನ್ ಹಕ್ಸಲೆಯೂ ಒಪ್ಪಿಕೊಂಡಿದ್ದಾನೆ. ಈ ವೈಜ್ಞಾನಿಕರ ಅಭಿಪ್ರಾಯವು ಎಷ್ಟರ ಮಟ್ಟಿಗೆ ಸರಿಯೆಂಬುದನ್ನು ನಾವೀಗ ನೋಡಬೇಕಾಗಿದೆ. ಮೊಟ್ಟಮೊದಲು ನಾವು ಮಹನ್ ಚರ್ಚಿಲ್ಲರನ್ನೇ ತೆಗೆದು ಕೊಳ್ಳೋಣ.

ಚರ್ಚಿಲ್

ಬ್ರಿಟನಿನ ಮಹಾ ಮೇಧಾವಿ ಚರ್ಚಿಲರನ್ನು ಇಂದು ಇಡೀ ಪ್ರಪಂಚವೇ ಅರಿತಿದೆ. ಅವರೊಬ್ಬ ರಾಜನೀತಿಜ್ಞರೆಂದು ಹೆಚ್ಚಿನ ಜನ ಭಾವಿಸಿದ್ದಾರೆ. ಆದರೆ ಅಷ್ಟೇ ಅಲ್ಲ; ಅವರು ವಿಖ್ಯಾತ ಭಾಷಣಕಾರರೂ, ಕಾದಂಬರಿಕಾರರೂ ಆಗಿದ್ದಾರೆ. ತಮ್ಮ ಜೀವನದ ಮಧ್ಯಭಾಗದಲ್ಲಿ ಅವರು ರಾಜಕೀಯ ಕ್ಷೇತ್ರದಲ್ಲಿ ಕಾಲಿಟ್ಟರು. ದೊಡ್ಡ ದೊಡ್ಡ ಹುದ್ದೆಗಳನ್ನು ಗಳಿಸಿ ಇಂಗ್ಲೆಂಡಿನ ಪ್ರಧಾನಿ ಮಂತ್ರಿಗಳೂ ಆದರು. ಎರಡನೇ ಮಹಾ ಯುದ್ಧದಲ್ಲಿ ಅವರು ತೋರಿದ ಜಾಣ್ಮೆಯನ್ನು ಇಡೀ ಲೋಕವೇ ಕೊಂಡಾಡುತ್ತಿದೆ. ಚೇಂಬರಲೇನರ ಭ್ರಾಂತಿಗಳನ್ನು ನಿವಾರಿಸಿ ಅವರು ಇಂಗ್ಲೆಂಡನ್ನು ಉಳಿಸಿದ ರೀತಿ ಇಂಗ್ಲೆಂಡಿನ ಇತಿಹಾಸದಲ್ಲೇ ಸ್ವರ್ಣಾಕ್ಷರಗಳಲ್ಲಿ ಬರೆಯಲರ್ಹವಾಗಿದೆ. ಈ ಯೋಗ್ಯತೆಯಿಂದಾಗಿಯೇ ಪ್ರಪಂಚದ ಪ್ರಸಿದ್ಧ ನಾಲ್ಕು ಮಂತ್ರಿಗಳಲ್ಲಿ ಚರ್ಚಿಲ್ಲರ ಹೆಸರೂ ಸೇರಿಕೊಂಡಿದೆ. ಇಂತಹ ಮಹನ್ ಚರ್ಚಿಲ್ಲರ ತಂದೆ ಇಂಗ್ಲೀಷನಾದ ಲಾರ್ಡ್ ರೆನ್‌ಡೋಲ್ಫನೂ, ತಾಯಿ ಮಿಸ್ ಜೇನೀ ಜರೋಮ್ ಎಂಬ ಅಮೇರಿಕನ್ ಸ್ತ್ರೀಯೂ ಆಗಿದ್ದರು. ಈ ರೀತಿ ಚರ್ಚಿಲರ ನಾಡಿಗಳಲ್ಲಿ ಇಂಗ್ಲೀಷರ ಹಾಗೂ ಅಮೇರಿಕನರ ಮಿಶ್ರಿತ ರಕ್ತವು ಹರಿಯುತ್ತಾ ಇದೆ.

ಇಟೆಲಿಯ ಮಾರ್ಕೋನಿ

ವಿಜ್ಞಾನ ಕ್ಷೇತ್ರದಲ್ಲಿ ಮಾರ್ಕೋನಿಯು ಹೆಸರೂ ಪ್ರಸಿದ್ಧವಾಗಿದೆ. ಜ್ಞಾನಾರ್ಜನೆಗೆ ಪ್ರಮುಖ ಸಾಧನವಾದ ಈಗಿನ ರೇಡಿಯೋದ ಮೂಲದಲ್ಲಿ ಮಾರ್ಕೋನಿಯ ಚಿತ್ರವು ಅಡಗಿಕೊಂಡಿದೆ. ಈ ಮಹಾಪುರುಷನು ಬಾಲ್ಯದಲ್ಲಿ ತೋರಿಸಿದ ತನ್ನ ತೀವ್ರ ಬುದ್ಧಿಯಿಂದಾಗಿ ಇವನ ಹೆಸರು ಮುಂದೆ ಉಜ್ವಲವಾಗುವದೆಂದು ಅಧ್ಯಾಪಕರು ಭವಿಷ್ಯ ನುಡಿದಿದ್ದರು. ಅವರ ಮಾತು ಮುಂದೆ ಸತ್ಯವಾಗಿ ಪರಿಣಮಿಸಿತು. ಇಂತಹ ಪ್ರಸಿದ್ಧ ಪುರುಷನ ತಂದೆ ಇಟೆಲಿಯವನೂ ತಾಯಿ ಆಯರ್ಲೆಂಡಿನವಳೂ ಆಗಿದ್ದರು. ಇಟೆಲಿಯನ್ ಹಾಗೂ ಆಯರಿಶ್ ರಕ್ತದ ಸಮ್ಮಿಶ್ರಣದಿಂದ ಮಾರ್ಕೋನಿಯಂತಹ ಮಹಾ ವೈಜ್ಞಾನಿಕನು ಜನ್ಮತಾಳಿದನು.

ಹಕ್ಸಲೇ ಬಂಧುಗಳು

ನೀವು ಹಕ್ಸಲೇ ಬಂಧುಗಳ ಹೆಸರನ್ನು ಕೇಳಿರಬಹುದು. ಆಲ್ಡಸ್ ಹಕ್ಸಲೇ ಮತ್ತು ಜೂಲಿಯನ್ ಹಕ್ಸಲೇ. ಇವರಿಬ್ಬರೂ ಪ್ರಸಿದ್ಧ ವಿಜ್ಞಾನಿ ಹಾಗೂ ಸಾಹಿತಿಗಳು. ಹಕ್ಸಲೇ ಬಂಧುಗಳು ವಿಖ್ಯಾತ ವೈಜ್ಞಾನಿಕರಾದ ಥಾಮಸ್ ಹಕ್ಸಲೆಯವರ ಮೊಮ್ಮಕ್ಕಳು. ತಂದೆ ಇಂಗ್ಲಿಷರೂ ತಾಯಿ ಹಾಲೇಂಡಿನವಳೂ ಆಗಿದ್ದರು. ಥಾಮಸ್ ಹಕ್ಸಲೆಯು ಆಸ್ಟ್ರಿಯನ್ ಕುಮಾರಿಯನ್ನು ಮದುವೆಯಾದ. ಈ ರೀತಿ ಹಕ್ಸಲೇ ಬಂಧುಗಳ ನಾಡಿಗಳಲ್ಲಿ ಮೂರು ರೀತಿಯ ರಕ್ತಗಳ ಮಿಶ್ರಣವುಂಟಾಯಿತು.

ರುಡ್‌ಯೊಡ್ ಕಿಪ್‌ಲಿಂಗ್

ನೋಬಲ್ ಪುರಸ್ಕಾರ ವಿಜಯಿಯಾದ ಕಿಪಲಿಂಗರೂ ಪ್ರಪಂಚದ ಪ್ರಸಿದ್ಧ ಮಹಾಪುರುಷರಲ್ಲೊಬ್ಬರು. ನೋಬಲ್ ಪುರಸ್ಕಾರವು ಅವರ ಮಹತ್ವವನ್ನು ಪ್ರಕಟಪಡಿಸಿತು. ತಂದೆ ಇಂಗ್ಲೆಂಡಿನವರೂ ತಾಯಿ ಸ್ಕಾಟ್‌ಲೇಂಡಿನವರೂ ಆಗಿದ್ದರು.

ವಿಲಿಯಮ್ ಬಟ್ಲರ್ ಕೀಟ್ಸ್

ಕೀಟ್ಸರ ಹೆಸರೂ ಈ ಪಂಕ್ತಿಗೆ ಸೇರುತ್ತದೆ. ಇವರ ಕವಿತೆಗಳಿಗೆ ಎಲ್ಲೆಲ್ಲೂ ಸನ್ಮಾನ ದೊರೆಯುತ್ತಿದೆ. ಪ್ರಪಂಚವೂ ನೋಬಲ್ ಬಹುಮಾನದಿಂದ ಇವರನ್ನು ಪುರಸ್ಕರಿಸಿದೆ. ಇವರ ತಂದೆ ಇಂಗ್ಲೆಂಡಿನವರೂ ತಾಯಿ ಸ್ಕಾಟ್‌ಲೇಂಡಿನವಳೂ ಆಗಿದ್ದರು.

ಸರ್ ಆರ್ಥರ್ ಕಾನನ್ ಡಾಯಲ್

ಸ್ಕಾಟ್‌ಲೇಂಡ್ ಹಾಗೂ ಆಯರ್ಲೇಂಡ್ ರಕ್ತದಿಂದ ಹುಟ್ಟಿದ ಸಂತಾನವೂ ತೀವ್ರ ಬುದ್ಧಿಗೆ ಪ್ರಸಿದ್ಧವಾಗಿದೆ. ಈ ವಿಷಯದಲ್ಲಿ ಕಾನನ್ ಡಾಯಲರ ಹೆಸರು ಉಲ್ಲೇಖನೀಯವಾಗಿದೆ. ಇವರು ಪ್ರಸಿದ್ಧ ವೈಜ್ಞಾನಿಕರೂ, ಸಫಲ ಚಿಕಿತ್ಸಕರೂ, ಶ್ರೇಷ್ಠ ಕಾದಂಬರೀಕಾರರೂ ಅತ್ಯುತ್ಕೃಷ್ಟ ಸಂಗೀತಜ್ಞರೂ ಆಗಿದ್ದಾರೆ. ಇವರ ಪ್ರಸಿದ್ಧ ಕಾದಂಬರಿಯಾದ "ಶೇರ್ಲಕ್ ಹೋಮ್ಸ ಅತ್ಯಂತ ಆದರಣೀಯವೆನಿಸಿದೆ. ತಮ್ಮ ಕಾದಂಬರಿಗಳ ಕಥಾವಸ್ತುವನ್ನು ವಿಜ್ಞಾನ ಜಗತ್ತಿನಿಂದಲೂ ಆಯ್ದು ಅದಕ್ಕೆ ಸುಂದರ ರೂಪವನ್ನಿತ್ತಿದ್ದಾರೆ. ಇವರ ನಾಡಿಗಳಲ್ಲಿ ಸ್ಕಾಟ್ ಹಾಗೂ ಆಯರಿಶ್ ರಕ್ತವು ಮಿಶ್ರಿತವಾಗಿ ಹರಿಯುತ್ತಿದೆ. ಇವರ ಕವಿತೆಗಳು ಉಚ್ಚ ಕೋಟಿಗೆ ಸೇರುತ್ತವೆ.

ಗೇಬ್ರಿಯಲ್ ರಾಂಸೇರೀ

ರಾಂಸೇರಿಯವರೂ ಪ್ರಸಿದ್ಧ ಕವಿ ಹಾಗೂ ಕಲಾಕಾರರ ರೂಪದಲ್ಲಿ ಖ್ಯಾತಿಗಳಿಸಿದ್ದಾರೆ. ರಾಂಸೇರಿಯವರ ತಂದೆಯವರು ಇಟೆಲಿಯ ನಿವಾಸಿಗಳಾಗಿದ್ದರು. ಆದರೆ ಕಾರಣಾಂತರದಿಂದ ಲಂಡನಿಗೆ ಬಂದು ಇರಬೇಕಾಯಿತು. ಅವರಿಗೆ ಇಂಗ್ಲೀಷ್ ಯುವತಿಯ ಮೇಲೆ ಪ್ರೇಮ ಬೆಳೆದು ಅವಳನ್ನು ಮದುವೆಯಾದರು. ರಾಂಸೇರಿಯವರ ಅಜ್ಜ ಇಟೆಲಿಯ ನಾಗರಿಕನಾಗಿದ್ದರೂ ಅಜ್ಜಿ ಇಂಗ್ಲೆಂಡಿನವಳು. ರಾಂಸೆಯುವರ ಸಹೋದರ ಸಹೋದರಿಯರು ಸಾಹಿತ್ಯ ಕ್ಷೇತ್ರದಲ್ಲಿ ಸಾಕಷ್ಟು ಮುಂದುವರಿದ್ದರು. ರಾಂಸೆಯವರ ಕವಿತೆಗಳೂ ರಹಸ್ಯವಾದೀ ಭಾವನೆಗಳಿಂದ ಓತಪ್ರೋತವಾಗಿದೆ. 'ಹೌಸ್ ಆಫ್ ಲೈಫ್' 'ಕಿಂಗ್ಸ್ ಟ್ರಜರಿ' ಮೊದಲಾದವು ಅವರ ಪ್ರಸಿದ್ಧ ಕವಿತೆಗಳು.

ಅಲೆಕ್ಸಾಂಡರ್ ಡೂಮೂಸ್

ಅಲೆಕ್ಸಾಂಡರ್ ಡೂಮೂಸ್ ಐತಿಹಾಸಿಕ ಕಾದಂಬರಿ ಬರೆಯುವುದರಲ್ಲಿ ಎತ್ತಿದ ಕೈ. ಅವರ ಸಾಹಿತ್ಯ ಚೇತನವು ಪ್ರಖರವೂ ಅತ್ಯಂತ ಶ್ರೇಷ್ಠವೂ ಆಗಿತ್ತು. ಆದರೆ ಡೂಮೂಸರ ರಕ್ತದಲ್ಲಿ ನೀಗ್ರೋ ಹಾಗೂ ಇಂಗ್ಲೀಷ್ ರಕ್ತವು ಬೆರಕೆಯಾಗಿದೆಯೆಂದು ಕೇಳಿ ನೀವು ಆಶ್ಚರ್ಯಪಡಬಹುದು.

(ಹಿಂದಿಯಿಂದ)

ಜನಪದ ಗೀತೆ

(ಗಂಡನ ಮನೆಗೆ ತೆರಳುವ ಮಗಳಿಗೆ ತಾಯಿಯ ಬುದ್ಧಿವಾದ)

ಅತ್ತೆಮಾವಾಗಂಜಿ ಸುತ್ತೇಳು ನೆರೆಗಂಜಿ
ಮತ್ತೆ ಆಳುವಾ ದೊರೆಗಂಜಿ।
ಮತ್ತೆ ಆಳುವಾ ದೊರೆಗಂಜಿ ಎಲೆಮಗಳೆ
ಅತ್ತೆ ಮನೆಯಾಗೆ ಬಾಳವ್ವ ॥೧॥

ಬಾಳುವೆ ಮಾಡಿದರೆ ಬಾ ತೇಗಿ ಅಂದಾರು
ಬಾಳುವೆಗೆಟ್ಟು ಮತಿಗೆಟ್ಟು।
ಬಾಳುವೆಗೆಟ್ಟು ಮತಿಗೆಟ್ಟು ಬಾಳಿದರೆ
ಹೆತ್ತವರ ಕುಲಕ್ಕೇ ಹಗೆಯಾದೆ ॥೨॥

ಆಲಕ್ಕೆ ಹೂವಿಲ್ಲ, ಸಾಲಕ್ಕೆ ಕೊನೆಯಿಲ್ಲ
ಜಾಲಿಯ ಮರವು ನೆರಳಲ್ಲ
ಜಾಲಿಯ ಮರವು ನೆರಳಲ್ಲ ಹೆಣ್ಣಿಗೆ
ತೌರಿನಾ ಮನೆಯು ಸ್ಥಿರವಲ್ಲ ॥೩॥

ಮೊತ್ಗಂಟೆಮಗಳಲ್ಲ, ತಾಟ್ಗಿತ್ತಿ ಸೊಸೆಯಲ್ಲ.
ಮೂತು ತಂದೋಳು ಮಗಳಲ್ಲ
ಮೂತು ತಂದೋಳು ಮಗಳಲ್ಲ ತೌರೀನ
ಮನೆಗೆ ಬಂದಳಿಯ ಮಗನಲ್ಲಾ ॥೪॥

ಕನ್ನಡಿ ಕೈತಪ್ಪಿ ಹನ್ನೆರಡು ಚೂರಾಗಿ
ಹೆಣ್ಣಿನ ಮನವು ಎರಡಾಗಿ
ಹೆಣ್ಣಿನ ಮನವು ಎರಡಾಗಿ ದಾಳಿಂಬೆ
ಹಣ್ಣಾದರೇನೂ ಫಲವಿಲ್ಲ ॥೫॥

"ಕೆ. ಎಂ. ಎಂ."
ಚಿಕ್ಕಬಳ್ಳಾಪುರ.

ದಿ ಕೆನರಾ ಬ್ಯಾಂಕಿಂಗ್ ಕೋಪೊರೇಶನ್ ಲಿಮಿಟೆಡ್.

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ಆರ್ಥಿಕ ಉಳಿತಾಯ ಯೋಜನೆಗಳಲ್ಲಿ "ಕ್ಯುಮುಲೇಟಿವ್ ಡಿಪೋಜಿಟ್" ಯೋಜನೆಯು ಅತಿ ಪರಿಣಾಮಕಾರಿ ಹಾಗೂ ಅನುಕೂಲವಾದುದು ಯಾವುದಾದರೊಂದು ನಿರ್ದಿಷ್ಟ ಉದ್ದೇಶ ಸಾಧನೆಗೆ, ನಿಯಮಿತ ಕಾಲಕ್ಕೆ ನಿಯಮಿತ ಹಣವನ್ನು ಒಂದು ನಿಯಮಿತ ಅವಧಿಯೊಳಗೆ ಬಡ್ಡಿಯೊಂದಿಗೆ ವಾಪಸು ಸಿಗುವಂತೆ ಬ್ಯಾಂಕಿನಲ್ಲಿ ಶೇಖರಿಸಿಡುವುದೇ ಈ ಯೋಜನೆಯ ಮೂಲ ತತ್ವ. ಇದು ಮುಖ್ಯವಾಗಿ ಮಧ್ಯಮ ತರಗತಿಯ ಜನರಿಗೆ ಇಲ್ಲವೆ ನಿಯಮಿತ ಸಂಬಳದ ನೌಕರರಿಗೆ ತಮ್ಮ ಮುದ್ದು ಮಕ್ಕಳ ವಿದ್ಯಾಭ್ಯಾಸ, ಮುಂಜಿ, ಮದುವೆ ಯೂ ಇನ್ನಿತರ ಸದುದ್ದೇಶ ಸಾಧನೆಗಳಿಗೆ ಅತ್ಯನುಕೂಲ ಹಾಗೂ ಅತಿ ಫಲಕಾರೀ ಯೋಜನೆ.

ವಿಶೇಷ ಮಾಹಿತಿಗೆ, ಕೊಡಗು ಸಂಸ್ಥಾನದಲ್ಲಿನ ಈ ಕೆಳಗಣ ನಮ್ಮ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ :

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

THE CANARA BANKING CORPORATION LIMITED.

Estd: 1906] [H. O, Udipi (S. India)

Edited Printed and Published by P. I. BELLIAPPA at 'KODAGU' Press Mercara, for 'Kodagu' Ltd..

ಕೊಡಗು



ನಾಳಂಗು ಸಂಶೋಧಕ

ವಾರ್ಷಿಕ ಚಂದಾ ರೂ. ೬—೦—೦ ಶುಕ್ರವಾರ

ಸಂಪುಟ ೩೨] —— [ಸಂಚಿಕೆ ೨೧ ೨೩-೧೦-೧೯೫೩

ಬಿಡಿ ಪ್ರತಿ 2 ಆಣೆ

KODAGU KANNADA WEEKLY MERCARA

ಈ ಮದುವೆ ಕಥೆ

'ಡಾರ್ಲಿಂಗ್!'

'ಜೀ'

'ಪ್ರವಾಸದ ಕಾಲದಲ್ಲಿ ನಿನಗೆ ಚಿತ್ತ ಚಕ್ಕನೆ ಕೆಡುವದಿತ್ತೆ ನನಗನಿಸುವುದೇ?'

'ಜೀ'

'ಎರಡು ವರ್ಷಗಳಿಂದ ಈ ಹೊತ್ತಿನೊಳಗೆ ಬರುತ್ತೇನೆ ನೀನು ಸಿದ್ಧಳಾಗಿರಬೇಕು.'

'ಜೀ'

'ಜೀ, ಜೀ, ಜೀ' ಎರಡು ವರ್ಷಗಳಿಂದ ಅವರು ಈ ಏಕಾಕ್ಷರೀ ಶಬ್ದವನ್ನು ಕೇಳುತ್ತಿದ್ದಾರೆ. ಬಾಯಿ ತೆರೆದು ಮಾತಾಡುವ ಸಂದರ್ಭಗಳಲ್ಲಿ ಒಂದೆರಡು ಅವಳು ಈ 'ಜೀ' ಶಬ್ದದಿಂದಲೇ ಮುಗಿಸುತ್ತಳೆ.

ನಾರಾಯಣಗಂಜ್ ಜಿಲ್ಲೆಯ ಡೆಪ್ಯೂಟಿ ಕಮಿಷನರಾದ ಸುಧೀರ ಸಕ್ಸೇನಾ ಐ. ಸಿ. ಎಸ್., ಇವರು ತುಂಬಾ ಸೌಭಾಗ್ಯಶಾಲಿಗಳೆಂದು ಪ್ರತಿಯೊಬ್ಬರೂ ಹೇಳುತ್ತಿದ್ದರು. ಕೈತುಂಬಾ ಸಂಬಳ, ಇರಲು ಉತ್ತಮ ವಸತಿ, ವಿಮಲೆಯಂತಹ ಸುಶೀಲ ವಿದ್ಯಾವಂತ ಗೃಹಿಣಿ, ಅಣ್ಣನಂತಹ ಸುಯೋಗ್ಯ ಪುತ್ರ, ಅಶೋಕನಂತಹ ಚತುರ ಹಾಗೂ ಸುಂದರ ಪುತ್ರಿ—ಇಲ್ಲ ಸಲ್ಲ ಗೃಹದ ಇದು ವಾಗ ಅವರಿಗೇನು ಕೊರತೆ?

ಇಷ್ಟೆಲ್ಲ ಸೌಕರ್ಯಗಳಿದ್ದರೂ ಸುಧೀರರಿಗೆ ಪತ್ನಿಯ 'ಜೀ' ಎಂಬ ಏಕಾಕ್ಷರೀ ಶಬ್ದವನ್ನು ಕೇಳಿ ಬೇಸರವಾಗುತ್ತಿತ್ತು. ತನ್ನ ಸುಖವೆಲ್ಲ ಒಮ್ಮೆಲೇ ಕಣ್ಮರೆಯಾದಂತೆ ಭಾಸವಾಗುತ್ತಿತ್ತು.

'ಜೀ' ಎಂಬುದರಿಂದ ಈ ಒಂದೇ ಶಬ್ದವು ಅವರ ಜೀವನದಲ್ಲಿ ಪ್ರತಿಧ್ವನಿಸತೊಡಗಿತು.

೧೨ ವರ್ಷಗಳ ಹಿಂದಿನ ಮಾತು. ಆ ವರುಷ ಮುಸೂರಿಯಲ್ಲಿ ಮೊದಲ ಬಾರಿ ಭೇಟಿಯಾಗಿದ್ದರು. ಸುಧೀರರು ಆಗ ತಾನೆ ಇಂಗ್ಲೆಂಡಿನಿಂದ ಬಂದಿದ್ದರು. ಮತ್ತು ಕೆಲಸಕ್ಕೆ ಸೇರುವ ಮೊದಲು ಕೆಲವು ವಾರಗಳ ವಿಶ್ರಾಂತಿಯನ್ನನುಭವಿಸಬೇಕೆಂದಿದ್ದರು. ಮುಸೂರಿಯ ಸುಂದರ ಹಾಗೂ ಚಿತ್ತಾಕರ್ಷಕ ತರುಣಿಯರಿಂದ ತುಂಬಿಹೋಗಿತ್ತು. ಪುಸ್ತಕಾಲಯದೆದುರಿಗೆ ಅವರ ಗುಂಪು ನಲಿದಾಡುತ್ತಿತ್ತು. ಆದರೆ ಸುಧೀರರಿಗೆ ಯಾವ ಆಕೃತಿಯೂ ಮೆಚ್ಚಿಕೆಯಾಗಲಿಲ್ಲ. ವಿಮಲೆಯನ್ನು ಮೊದಲ ಬಾರಿ ನೋಡಿದಾಗಲೇ ಅವರು ಅವಳೆಡೆಗೆ ಆಕೃಷ್ಟರಾದರು.

'ಹಲ್ಲೋ ಸುಧೀರ್'—ಅವರ ಪಾರ್ಟ್ನರ್‌ಗಳು ಮಾಥುರನು ಕೈಯಿಂದ ಸನ್ನೆ ಮಾಡುತ್ತ ಹೇಳಿದ. 'ಇಲ್ಲಿ ಬಾ, ಇವನ್ನು ಭೇಟಿಯಾಗು. ಇವರ ಹೆಸರು ವಿಮಲಾ ಬೆನರ್ಜಿ....ಬಂಗಾಳಿಗಳಾದರೂ ಲಕ್ನೋದಲ್ಲಿ ಬೆಳೆದಿದ್ದಾರೆ....ಅಲ್ಲೇ ಕಾಲೇಜಿನಲ್ಲಿ ಓದುತ್ತಿದ್ದಾರೆ......!'

ಅವರು ಮಾಥುರನ ಆಗ್ರಹವನ್ನು ಪ್ರತೀಕ್ಷಿಸದೆಯೇ ವಿಮಲೆಯ ಬಳಿಯ ಕುರ್ಚಿಯ ಮೇಲೆ ಕುಳಿತುಕೊಂಡರು. ಈಗ ಕತ್ತಲಿನ ಆ ಕೋಣೆಯಲ್ಲಿ ವಿಮಲೆಯಲ್ಲದೆ ಬೇರಾವ ಕಡೆಗೂ ಅವರ ಲಕ್ಷ್ಯವಿದ್ದಿರಲಿಲ್ಲ.

ಹನ್ನೆರಡು ವರ್ಷಗಳ ನಂತರವೂ ಅವರ ಮೊದಲ ಮಾತುಕತೆ ಸುಧೀರರಿಗೆ ನೆನಪಿದೆ. 'ನೀನು ಐ. ಟಿ. ಕಾಲೇಜಿನಲ್ಲಿ ಓದುತ್ತಿರುವೆಯಾ?'

'ಜೀ'

'ಬಿ. ಎ. ತರಗತಿಯಲ್ಲಿರುವೆಯೋ?'

'ಜೀ'

'ಬರುವ ವರ್ಷ ಫೈನಲ್ ಪರೀಕ್ಷೆಗೆ ಕುಳಿತುಕೊಳ್ಳುತ್ತೀರಾ?'

'ಜೀ'

ಎರಡು ವರ್ಷಗಳ ವರೆಗೆ ಇಂಗ್ಲೀಷ್ ಸ್ತ್ರೀಯರ ಕರ್ಕಶ ಧ್ವನಿಯನ್ನು ಕೇಳಿ ಬೇಸತ್ತ ಸುಧೀರರಿಗೆ ಮುಸೂರಿಯ ಸ್ವಚ್ಛ ವಾತಾವರಣದಲ್ಲಿ ಕಳೆದ ದಿನಗಳು ಮನಸ್ಸಿಗೆ ಈ ಮಧುರವಾದ 'ಜೀ' ಶಬ್ದದಿಂದ ತುಂಬಾ ಶಾಂತಿ ಸಿಕ್ಕಿತು. ಬಿರುಗಾಳಿ ಹಾಗೂ ಭಯಂಕರ ಗುಡುಗು ಮಿಂಚುಗಳಿಂದ ಕೂಡಿದ ಚಳಿಗಾಲದ ನಂತರ ಗುಲಾಬಿ ಹೂಗಳ ವಸಂತದಂತೆ ವಿಮಲೆಯ 'ಜೀ' ಶಬ್ದವು ಅವರಿಗೆ ಭಾಸವಾಯಿತು. ಆ ಒಂದಕ್ಷರದಲ್ಲಿ ಮಾಧುರ್ಯ, ಕೋಮಲತೆ ಹಾಗೂ ಪವಿತ್ರತೆಯು ತುಂಬಿಕೊಂಡಿತ್ತು.

ಪಿ. ಎಲ್. ಓ.

ವಿಮಲೆಯಂತಹ ಉತ್ತಮ ಪತ್ನಿ ನನಗೆ ಬೇರೆ ಸಿಗಲಾರಳು. ಅವಳ ತಂದೆಯೂ ನನ್ನಂತಹ ಐ. ಸಿ. ಎಸ್. ಅಧಿಕಾರಿಯನ್ನು ಕಡೆಗಣಿಸಲಾರರು. ಇವಳನ್ನು ಮದುವೆಯಾಗಿ ಸುಖ ಶಾಂತಿಯ ಜೀವನವನ್ನು ನಡೆಸಬಹುದು—ಸುಧೀರ ಯೋಚಿಸಿದ.

'ನಿಮ್ಮ ತಂದೆಯವರು........!'

'ಲಕ್ನೋದಲ್ಲಿದ್ದಾರೆ. ಆರ್ಟ್‌ಸ್ಕೂಲಿನಲ್ಲಿ ಕಲಿಸುತ್ತಿದ್ದಾರೆ.'

'ಓಹೋ, ಆರ್ಟಿಸ್ಟ್ ಬೆನರ್ಜಿಯವರು ನಿಮ್ಮ ತಂದೆಯವರೆ? ಅವರ ಚಿತ್ರ ಪ್ರದರ್ಶನವು ಎಷ್ಟೋ ಸಾರೆ ನಮ್ಮಲ್ಲಿ ನಡೆದಿತ್ತು. ನನಗೆ ಅವರ ಚಿತ್ರ ತುಂಬಾ ಮೆಚ್ಚಿಕೆ. ೧೨ ವರ್ಷ ಪ್ರಾಯದ ಬಾಲಕಿಯೊಬ್ಬಳ ಚಿತ್ರ ನನಗೆ ತುಂಬಾ ಆಕರ್ಷಕವೆನಿಸಿತು. ಅದು ನಿಮ್ಮದೇ ಅಲ್ಲವೆ?'

'ಜೀ'

'ಅದರಲ್ಲಿ ನೀವು ಬಹು ಚಂಚಲವಾಗಿ ತೋರುತ್ತಿದ್ದೀರಿ. ಆದರೀಗ ತುಂಬಾ 'ಸೀರಿಯಸ್' ಆಗಿದ್ದೀರಿ.'

ಈ ಬಾರಿ ಮಾತ್ರ ಅವಳು 'ಜೀ' ಎನ್ನಲಿಲ್ಲ. ಒಂದು ವಿಚಿತ್ರ ವಿಷಾದಭರಿತ ನಗುವನ್ನು ನಕ್ಕು 'ಜೀವನದಲ್ಲಿ ಸುಖದುಃಖಗಳು ಬರುತ್ತಲೇ ಇರುತ್ತವೆ. ಆಶೆ ನಿರಾಶೆಗಳಿಂದ ಕೂಡಿದ ಜೀವನದ ಪ್ರತಿಬಿಂಬವು ಮುಖದ ಮೇಲೆ ತೋರಿಬರುವದು ಸ್ವಾಭಾವಿಕ'.

ಸುಧೀರರು ಮುಸೂರಿಯಲ್ಲಿರುವ ತನ್ನ ಹೆಚ್ಚಿನ ಸಮಯವನ್ನು ವಿಮಲೆಯೊಟ್ಟಿಗೇ ಕಳೆದರು. ಈ ಎಲ್ಲ ದಿನಗಳಲ್ಲಿ ವಿಮಲೆ ಕಷ್ಟಪಟ್ಟು ೧೦-೧೨ ವಾಕ್ಯಗಳನ್ನಾಡಿರಬಹುದು. ಸುಧೀರರ ವಿಚಾರಗಳನ್ನು ಅವಳು ಮೌನವಾಗಿ ಮನವಿಟ್ಟು ಕೇಳುತ್ತಿದ್ದಳು. ಅವರು ನೇರಾಗಿ ಪ್ರಶ್ನಿಸುವ ವರೆಗೆ ತನ್ನ ಅಭಿಪ್ರಾಯವನ್ನವಳು ಪ್ರಕಟಿಸುತ್ತಿದ್ದಿಲ್ಲ. ಆದರೆ ಸುಧೀರರಿಗೆ ಅವಳ ಈ ಕಡಿಮೆ ಮಾತಿನಿಂದ ಏನೂ ಬೇಸರವೆನಿಸುತ್ತಿದ್ದಿಲ್ಲ. ವಾಚಾಳಿ ಹುಡುಗಿಯರನ್ನು ಕಂಡರೆ ಅವರಿಗಾಗದು. ಹೀಗೆ ಎಲ್ಲಾ ವಿಚಾರಗಳಲ್ಲೂ ತಮಗವಳು ಅನುಕೂಲೆಯೆಂದರಿತ ಮೇಲೆ ಸುಧೀರರೊಂದು ದಿನ ಅವಳೊಡನೆ ಮದುವೆಯ ಪ್ರಸ್ತಾಪವನ್ನೆತ್ತಿ ಬಿಟ್ಟರು.

'ವಿಮಲಾ ನಾನು ನಿನ್ನನ್ನು ತುಂಬಾ ಪ್ರೀತಿಸುತ್ತಿದ್ದೇನೆಂದು ನಿನಗೆ ತಿಳಿದಿದೆಯೆ?'

'ಜೀ'

'ನಿನ್ನನ್ನು ಬಿಟ್ಟು ನಾನಿರಲಾರೆ; ನನ್ನನ್ನು ವಿವಾಹವಾಗುವೆಯಾ?'

'ಜೀ'

ಈ 'ಜೀ' ಶಬ್ದದಲ್ಲಿ ಪ್ರಶ್ನೆಯೂ ಇತ್ತು; ಉತ್ತರವೂ ಇತ್ತು.

❁

ಅನುವಾದಕ:— ಶ್ರೀ ಬಳ್ಕೂರು ಸುಬ್ರಾಯ ಅಡಿಗ, ಗಂಗೊಳ್ಳಿ

❁

ತುಸು ಹೊತ್ತಿನ ಮೌನದ ಬಳಿಕ ಅವಳೆಂದಳು—'ನೋಡಿ; ನಾನು ನಿಮ್ಮನ್ನು ತುಂಬಾ ಆದರಿಸುತ್ತೇನೆ. ಆದ್ದರಿಂದ ನಿಮ್ಮನ್ನು ವಂಚಿಸಲಾರೆ. ನಾನು ನಿಮ್ಮನ್ನು ಪ್ರೀತಿಸಲಾರೆ'.

'ನೀನು ಬೇರಾರನ್ನಾದರೂ ಪ್ರೀತಿಸುತ್ತೀಯಾ?'

ವಿಮಲೆಯ ಬಾಯಿಂದ ಇಲ್ಲವೆಂಬ ಶಬ್ದವೆಂದೂ ಹೊರಡುತ್ತಿದ್ದಿಲ್ಲ. ಆದರೆ ಈಗ ಮಾತ್ರ ಅವಳು—'ಅಂತಹದೇನೂ ಇಲ್ಲ' ಎಂದಳು.

'ಹಾಗಿದ್ದರೇನೂ ತೊಂದರೆಯಿಲ್ಲ. ಪ್ರೇಮಿಸುವ ವಿಧಾನವನ್ನು ನಾನೇ ಕಲಿಸುತ್ತೇನೆ' ಸುಧೀರನು ಉತ್ಸಾಹದಿಂದ ಹೇಳಿದ. ಅಂದು ೧೯೪೨ನೇ ಜುಲೈ ೧೪ನೇ ದಿನಾಂಕವಾಗಿತ್ತು.

ಸೇವಕನು ಆ ದಿನದ ಟಪ್ಪಾಲನ್ನು ತಂದು ಎದುರಿಗಿಟ್ಟ. ಮೊತ್ತ ಮೊದಲು ಕಾಗದವನ್ನು ತೆಗೆದು ಪೋಸ್ಟಾಫೀಸಿನ ಮುದ್ರೆಯನ್ನು ನೋಡಿದರು. ೧೪—೭—೧೯೫೩. ಒಂದು ಕ್ಷಣದಲ್ಲೇ ಅವರಿಗೆ ಹನ್ನೆರಡು ವರ್ಷಗಳ ಹಿಂದಿನ ಆ ದಿನ ಪುನಃ ಕಣ್ಣೆದುರಿಗೆ ನಲಿದಾಡಿತು. ಕವರನ್ನು ಚೂರಿಯಿಂದ ತೆರೆಯುತ್ತಾ ಸುಧೀರರು ವಿಮಲೆಯೊಡನೆ 'ಇಂದಾವ ತಾರೀಕೆಂದು ನೆನಪಿದೆಯೋ?' ಎಂದು ಕೇಳಿದರು.

'ಜೀ' —ಅವಳ ದೃಷ್ಟಿಯು ಗೋಡೆಯ ಮೇಲಿನ ಕೇಲೆಂಡರಿನ ಕಡೆ ಹರಿಯಿತು.

೧೨ ವರ್ಷಗಳ ಹಿಂದೆ ಮುಸೂರಿಯಲ್ಲಿ ಮೊತ್ತ ಮೊದಲು ನಿನ್ನೊಡನೆ 'ಪ್ರಪೋಸ್' ಮಾಡಿದ ಆ ದಿನ ನೆನಪಿದೆಯೇ?

'ಜೀ'. ಆದರೆ ಈ 'ಜೀ'ಯಲ್ಲಿ ಕೇವಲ ಸ್ವೀಕೃತಿಯಿತ್ತು. ಪ್ರಫುಲ್ಲತೆಯಿದ್ದಿಲ್ಲ.

ಸುಧೀರರು ಒಂದೊಂದೇ ಪತ್ರವನ್ನು ಓದುತ್ತಾ ಹೋದರು. ನಾಲ್ಕನೇ ಪತ್ರವನ್ನೆತ್ತಿ ನೋಡಿದರು. ಅದು ವಿಮಲೆಯ ಹೆಸರಿಗಿತ್ತು. ಒಂದು ದಪ್ಪವಾದ ಹಳೆಯ ಕವರದು. ಅದರ ಮೇಲೆ ಅನೇಕ ಮುದ್ರೆಗಳು ಬಿದ್ದಿದ್ದವು, ಮತ್ತು ಅನೇಕ ಬಾರಿ ವಿಳಾಸವನ್ನು ಹೊಡೆದು ಹಾಕಿ ಬರೆಯಲಾಗಿತ್ತು. ಅಂ? ಇದೇನು? ಮಿಸ್ ವಿಮಲಾ ಬೆನರ್ಜಿ! ಮದುವೆಯಾಗಿ ೧೨ ವರ್ಷಗಳ ಮೇಲೂ ಮಿಸೆಸ್ ವಿಮಲಾ ಸಕ್ಸೇನಳನ್ನು ಮಿಸ್ ಎಂದು ಕರೆಯುವ ಈ ಅಸಭ್ಯನಾರು?

ಸುಧೀರರೊಮ್ಮೆ ವಿಮಲೆಯ ಕಡೆ ದೃಷ್ಟಿ ಹರಿಸಿದರು. ಆದರೆ ಅವಳು ಸೇವಕನಿಗೆ ಮಧ್ಯಾಹ್ನದ ಅಡುಗೆಯ ಕುರಿತು ಬೇಕಾದ ಅನುಭವಗಳನ್ನೀಯುತ್ತಿದ್ದಳು. ತನ್ನ ಪತ್ರವನ್ನು ವಿಮಲೆ ಗುರುತಿಸಲಿಲ್ಲವೆಂದು ಭರವಸೆಯಾದಾಗ ಅವರದನ್ನು ತೆರೆದರು. ಕವರಿನೊಳಗಿಂದ ಅನೇಕ ಪುಟಗಳಷ್ಟು ಉದ್ದದ ಪತ್ರವೊಂದು ಹೊರಬಿತ್ತು. ಅದರ ಮೊದಲಿನ ಕೆಲವು ಪಂಕ್ತಿಗಳೇ ಸುಧೀರರ ಶಾಂತಿಭಂಗಕ್ಕೆ ಸಾಕೆನಿಸಿದ್ದವು.

—'ಪ್ರಾಣಪ್ರಿಯ ವಿಮಲಾ,

ನಿನ್ನನ್ನು ಭೆಟ್ಟಿಯಾಗಿ ೨ ತಿಂಗಳು ಕಳೆದವು. ನನ್ನ ಪಾಲಿಗೆ ಈ ಎರಡು ತಿಂಗಳು ಯುಗವೆನಿಸಿವೆ. ನಾವಿನ್ನು ಎಂದೆಂದೂ ಹೀಗೆಯೇ ಗುಟ್ಟಾಗಿ ಭೆಟ್ಟಿಯಾಗಲು ಸಾಧ್ಯವಿದೆಯೇ? ನಮ್ಮಿಬ್ಬರ ನಡುವೆ ಇದ್ದ ಗೋಡೆ ಎಂದೂ ಕುಸಿದು ಬೀಳಲಾರದ........?'

ಕ್ರೋಧ ಹಾಗೂ ತಿರಸ್ಕಾರದ ಆವೇಶದಿಂದ ಸುಧೀರರ ಕೈಗಳು ನಡುಗುತ್ತಿದ್ದವು. ಮುಂದೆ ಅವರಿಂದ ಆ ಕಾಗದವನ್ನು ಓದಲಾಗಲಿಲ್ಲ. ಅದು ಅವರ ಹೆಂಡತಿಯ ದುರ್ನಡತೆಯನ್ನು ಸಾರಿ ಹೇಳುತ್ತಿತ್ತು; ಬೇಗ ಬೇಗನೆ ಪತ್ರವನ್ನು ತಿರುವಿ ಅದರ ಕೊನೆಯ ಪುಟದ ಮೇಲೆ ದೃಷ್ಟಿ ಹರಿಸಿದರು. ಕೊನೆಯಲ್ಲಿ "ನಿನ್ನವನೇ ಆದ ಅನಿಲ" ಎಂದಿತ್ತು.

'ಅನಿಲ' —ಅವರ ಮನಸಿನಲ್ಲಿ ಈ ಅಪರಿಚಿತ ಹೆಸರು ಅಣು ಬಾಂಬಿನಂತೆ ಸ್ಫೋಟನವನ್ನುಂಟು ಮಾಡಿತು. 'ವಿಮಲಾ!' ಅವರು ಕರೆದರು. ಆಗಲೇ ಕೋಣೆಯಿಂದ ಹೊರ ಹೊರಡುವ ಸಿದ್ಧತೆಯಲ್ಲಿದ್ದ ವಿಮಲೆ ನಿಂತು 'ಜೀ' ಎಂದಳು.

'ಜೀ, ಜೀ, ಜೀ,' ಈ ಶಬ್ದ ಅವರ ಮುಖಕ್ಕೆ ಬಡಿದಂತೆ ಅನಿಸಿತು. 'ಅನಿಲ ನಾರು?'

ಸುಧೀರನ ಈ ಪ್ರಶ್ನೆ ಅವಳನ್ನು ಕ್ಷಣ ಕಾಲ ಸ್ತಬ್ಧಳನ್ನಾಗಿ ಮಾಡಿತು. ಬಳಿಕ ಮೆಲ್ಲ ಮೆಲ್ಲನೆ ಅವಳ ಮುಖದ ಮೇಲೆ ಮಂದಹಾಸವು ನಲಿದಾಡಿತು.

'ಅನಿಲ'—ಭಕ್ತನು ಭಗವಂತನ ನಾಮವನ್ನುಚ್ಚರಿಸುವಂತೆ ಅವಳು ಭಕ್ತಿಯಿಂದ ಮೆಲ್ಲನೆ ಉದ್ಗರಿಸಿದಳು.

'ಹೌದು. ಹೌದು, ಅನಿಲ. ಯಾರವನು?'—ವಿಮಲೆಯ ಕಂಗಳಲ್ಲಿ ಆ ಹೊಸ ಪ್ರಕಾಶವನ್ನು ಕಂಡು ಕಿಡಿ ಕಾರುತ್ತಾ ಸುಧೀರರು ಪ್ರಶ್ನಿಸಿದರು.

ಆದರೆ ವಿಮಲೆ ಬೇರೊಂದು ಪ್ರಪಂಚದಲ್ಲಿದ್ದಂತೆ ತೋರುತ್ತಿದ್ದಳು. ಅವಳ ಕಂ-

(ಕಡೇ ಪುಟವನ್ನು ನೋಡಿ)

ವಾರದ ಭವಿಷ್ಯ

ತಾ. ೨೩—೧೦—೫೩ರಿಂದ ೨೯—೧೦—೫೩ರ ವರೆಗೆ.

ಜ್ಯೋತಿಷ್ಯ—ಶ್ರೀ ಬಿ. ಜಿ. ಶ್ರೀನಿವಾಸ ಶಾಸ್ತ್ರಿಯವರು.

ಮೇಷ

ಈ ವಾರ ನಿಮ್ಮ ಪರಿಸ್ಥಿತಿಯು ಅತಿ ಚಿಂತಾಜನಕವಾಗಿರುವದೆಂದು ತಿಳಿಸಲು ಬಹಳ ವಿಷಾದವಾಗುವದು. ಆರೋಗ್ಯವು ಸಾಕಷ್ಟಿಲ್ಲದೆ ಮನೋನಿಶ್ಚಿತ ಕಾರ್ಯವು ಸಾಗದು ಆರ್ಥಿಕ ವಿಚಾರದಲ್ಲಿ ತುಂಬಾ ತೊಂದರೆಗೊಳಗಾಗುವಿರಿ ಕುಟುಂಬ ಕಲಹ ನಿಮಿತ್ತ ಮನಸ್ಸಿಗೆ ಶಾಂತಿ ಇರಲಾರದು. ವಿದ್ಯಾರ್ಥಿ ವಿದ್ಯಾರ್ಥಿನಿಯರು ಆಲಸ್ಯವುಳ್ಳವರಾಗುವರು.

ವೃಷಭ

ಈ ವಾರ ನಿಮ್ಮ ಆರೋಗ್ಯಮಟ್ಟವು ಚೆನ್ನಾಗಿದ್ದು ವ್ಯವಹಾರಗಳಲ್ಲಿ ಉತ್ಸಾಹ, ಸಮಾಜದಲ್ಲಿ ಲಾಭ ಸನ್ಮಾನಗಳು ಲಭಿಸಲಿವೆ. ಸಾಂಪತ್ತಿಕ ಸ್ಥಿತಿಯು ಉತ್ತಮವಿಲ್ಲದಿದ್ದರೂ ಮಿತ್ರಜನರ ಸಹಾಯದಿಂದ ಸುಧಾರಿಸಿಕೊಳ್ಳುವಿರಿ. ವ್ಯಾಪಾರೋದ್ಯಮಿಗಳಿಗೆ ಈ ವಾರವು ಲಾಭದಾಯಕವಾಗಿರುವದು. ವಿದ್ಯಾರ್ಥಿ ವಿದ್ಯಾರ್ಥಿನಿಯರು ಇತರರ ಅಪಹಾಸ್ಯಕ್ಕೊಳಗಾದರೂ ಜಾಗರೂಕ ಸ್ಥಿತಿಯಲ್ಲಿರುವರು. ತಾ. ೨೩—೨೪ ಮಿತ್ರರ ಭೇಟಿ, ಸುಖ.

ಮಿಥುನ

ನೀವು ಈ ವಾರದಲ್ಲಿ ಇತರರಲ್ಲಿ ಅಧಿಕ ಪ್ರಸಂಗವನ್ನು ಬಿಟ್ಟು ತಮ್ಮ ಕಾರ್ಯಗಳಲ್ಲಿ ಜಾಗರೂಕರಾಗಿ ವರ್ತಿಸಿದರೆ ತುಂಬಾ ಉತ್ತಮವಿರುವದು. ಆರೋಗ್ಯಮಟ್ಟವು ಚೆನ್ನಾಗಿರುವದು. ಮಿತ್ರರ ಸಂಯೋಗಲಾಭದಿಂದ ನಿಮ್ಮ ಕಾರ್ಯಗಳಿಗೆ ಭಂಗಬರಲಿದೆ. ಆರ್ಥಿಕ ಸ್ಥಿತಿಯು ಸಾಕಷ್ಟು ಉತ್ತಮವಿರಲಾರದು. ವಿದ್ಯಾರ್ಥಿವೃಂದವು ವೃಥಾಕಾಲಹರಣದಿಂದ ಕೂಡಿರುವದು. ತಾ. ೨೫—೨೬ ಮಿತ್ರರ ಭೇಟಿ ಖರ್ಚು.

ಕರ್ಕಾಟಕ

ಈ ವಾರ ನೀವು ಧಾರ್ಮಿಕರೆಂದು ತೋರ್ಪಡಿಸಬೇಕೆಂಬಾಪೇಕ್ಷೆಯಿಂದ ಆರ್ಥಿಕ ವಿಚಾರದಲ್ಲಿ ತುಂಬಾ ಕಷ್ಟ ನಷ್ಟಗಳೀಡಾಗುವಿರಿ. ಆರೋಗ್ಯಮಟ್ಟವು ಚೆನ್ನಾಗಿದ್ದು ಮನೋನಿಶ್ಚಿತ ಕಾರ್ಯಗಳು ಹೇಗಾದರೂ ಸಾರ್ಥಕಗೊಳ್ಳುವವು. ಕುಟುಂಬದಲ್ಲಿ ಅನಾರೋಗ್ಯ ನಿಮಿತ್ತ ಕಿಂಚಿದ್ಧನ ವ್ಯಯವಾಗಲಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರು ಈ ವಾರ ಯಶಸ್ಸು ಪಡೆಯುವರು ತಾ. ೨೫—೨೬ ಮಿತ್ರ ಜನರಿಂದಾಗಿ ನಷ್ಟ. ಕಾರ್ಯ ಲಾಭ

ಸಿಂಹ

ಈ ವಾರ ನಿಮ್ಮ ಆರೋಗ್ಯಸ್ಥಿತಿಯು ಚೆನ್ನಾಗಿರುವದು. ಸಮಾಜದಲ್ಲಿ ಲಾಭ ಸನ್ಮಾನಗಳು ಲಭಿಸಿ ನಿಮ್ಮ ಮನಸ್ಥಿತಿಯ ಶಾಂತಿಯನ್ನು ಹೊಂದುವದು. ಕೋರ್ಟು ವ್ಯವಹಾರಗಳು ಅನುಕೂಲವಾಗುವವು. ಮಿತ್ರರಿಂದಾಗಿ ಕಿಂಚಿದ್ಧನಾಗಮನ ಯೋಗವಿದೆ. ವ್ಯಾಪಾರೋದ್ಯಮಿಗಳಿಗೆ ಸ್ವಕಾರ್ಯದಲ್ಲಿ ಕಂಡುಬರುವ ವಿಘ್ನಗಳು ದೂರವಾಗಿ ಲಾಭ ಚಿಹ್ನೆಗಳು ಕಂಡುಬರಬಹುದು. ತಾ. ೨೭—೨೮ ಧನ ಲಾಭ, ಸಂಚಾರ.

ಕನ್ಯಾ

ಈ ವಾರ ನಿಮ್ಮ ಆರೋಗ್ಯ ಸ್ಥಿತಿಯು ಚೆನ್ನಾಗಿರಲಾರದು. ಜನರು ನಿಮ್ಮ ಹಿತಚಿಂತಕರೆಂದು ತೋರ್ಪಡಿಸಿ ನಿಮಗೆ ತೊಂದರೆ ತರುವರು. ಕುಟುಂಬದ ಅನಾರೋಗ್ಯದಿಂದ ಸಾಂಪತ್ತಿಕ ಸ್ಥಿತಿಯು ಉತ್ತಮವಿರಲಾರದು. ಕೋರ್ಟು ವ್ಯವಹಾರಗಳು ಪ್ರತಿಕೂಲವಾಗಿ ಮನಸ್ಸಿಗೆ ಸದಾ ವ್ಯಾಕುಲತೆಯೇ ಗತಿಯಾಗುವದು ವ್ಯಾಪಾರೋದ್ಯಮಿಗಳಿಗೆ ಸ್ವಕಾರ್ಯಗಳಲ್ಲಿ ತೊಡಕುಗಳು ಬರಬಹುದು. ವಿದ್ಯಾರ್ಥಿ ಸಮೂಹವು ನಿರುತ್ಸಾಹವುಳ್ಳದ್ದಾಗುವದು. ತಾ. ೨೮—೨೯ ಖರ್ಚು, ಮನೋವ್ಯಥೆ.

ತುಲಾ

ಆರೋಗ್ಯದೃಷ್ಟಿಯಲ್ಲಿ ನಿಮಗೆ ಈ ವಾರವು ಉತ್ತಮವಿದ್ದರೂ ಕುಟುಂಬದಲ್ಲಿ ಕಲಹ, ಅನಾರೋಗ್ಯ ಮೊದಲಾದುವುಗಳಿಂದ ಮಾನಸಿಕ ಸ್ಥಿತಿಯು ಚಾಂಚಲ್ಯದಿಂದ ಕೂಡಿರುವದು. ಪೂರ್ವಾಪರ ವಿಚಾರವಿಲ್ಲದೆ ಕಾರ್ಯಕ್ಕೆ ಕೈಹಾಕಿ ಚಿಂತಿಸಬೇಕಾಗುವದು. ಆಪ್ತ ಬಂಧುಗಳು ನಿಮ್ಮನ್ನು ದೂರೀಕರಿಸುವರು. ಸಾಂಪತ್ತಿಕ ಸ್ಥಿತಿಯು ಉತ್ತಮವಿರುವದಿಲ್ಲ. ವಿದ್ಯಾರ್ಥಿ ವಿದ್ಯಾರ್ಥಿನಿಯರು ಮಂದ ಪ್ರಜ್ಞೆಯುಳ್ಳವರಾಗುವರು. ತಾ. ೨೫—೨೬ ಅಸುಖ.

ವೃಶ್ಚಿಕ

ಈ ವಾರ ನಿಮ್ಮ ದೇಹಸ್ಥಿತಿಯು ಉಷ್ಣಪ್ರಕೋಪದಿಂದ ಉತ್ತಮವಿರಲಾರದು. ವ್ಯವಹಾರದಲ್ಲಿ ತೊಡಕು ಮತ್ತು ಇತರರ ನಿಂದೆಗೊಳಗಾಗಿ ಮಾನಸಿಕ ವಿಚಾರದಲ್ಲಿ ಅಶಾಂತಿ ಮೂಡುವದು. ಸಾಂಪತ್ತಿಕ ಸ್ಥಿತಿಯು ಉತ್ತಮವಿದ್ದರೂ ಕುಟುಂಬದ ಅನಾರೋಗ್ಯ ಮತ್ತು ಮಿತ್ರ ಬಂಧುವರ್ಗದವರ ವಿಯೋಗದಿಂದ ಖರ್ಚು ವಿಪರೀತವಾಗುವದು. ವ್ಯಾಪಾರೋದ್ಯಮಿಗಳಿಗೆ ಈ ವಾರ ತುಸು ಉತ್ತಮವಿರುವದು. ತಾ. ೨೩—೨೪ ಸಂಚಾರ, ಮನೋವ್ಯಥೆ.

ಧನು

ಈ ವಾರ ನಿಮಗೆ ಅತಿ ಉತ್ತಮವಿದೆಯೆಂದು ತಿಳಿಸಲು ಬಹು ಸಂತೋಷವಾಗುವದು. ಆರೋಗ್ಯ ಮಟ್ಟವು ಚೆನ್ನಾಗಿದ್ದು ಸಮಾಜದಲ್ಲಿ ಮರ್ಯಾದೆಗಳು ಲಭಿಸಲಿದೆ. ಜನರು ನಿಮ್ಮ ಮಿತ್ರರಾಗಲು ಬಯಸುವರು. ಸಾಂಪತ್ತಿಕ ದೃಷ್ಟಿಯಲ್ಲಿ ತುಸು ಅನಿಷ್ಟವಿದ್ದರೂ ಮಿತ್ರರ ಸಹಾಯದಿಂದ ಉತ್ತಮವಾಗುವದು. ನಿಮ್ಮ ಕಾರ್ಯಗಳು ಉತ್ತಮ ಪರಿಣಾಮಿಗಳಾಗುವದರಿಂದ ಮನೋಗತಿಯು ಶಾಂತಿಯನ್ನು ಹೊಂದುವದು. ತಾ. ೨೫—೨೬ ಕಾರ್ಯಲಾಭ, ಸುಖ.

ಮಕರ

ಈ ವಾರ ನಿಮ್ಮ ಆರೋಗ್ಯಮಟ್ಟವು ಕೆಡಲಿದೆ. ಸಾಂಪತ್ತಿಕ ಸ್ಥಿತಿಯು ಉತ್ತಮವಿದ್ದರೂ ವೃಥಾ ಸಂಚಾರದಿಂದಲೂ ಮಿತ್ರ ಜನರ ಹಾವಳಿಯಿಂದಲೂ ಖರ್ಚು ವಿಪರೀತವಾಗುವದು. ಮನೆಯಲ್ಲಿ ಕಲಹಾದಿಗಳ ಕಾಕಸ್ವರದಿಂದ ಮನಸ್ಸಿಗೆ ಶಾಂತಿಯೇ ಇಲ್ಲದಾಗುವದು. ವ್ಯಾಪಾರೋದ್ಯಮಿಗಳು ತುಂಬಾ ನಷ್ಟಕ್ಕೊಳಗಾಗುವರು. ತಾ. ೨೮—೨೯ ಖರ್ಚು, ಅಸುಖ.

ಕುಂಭ

ಈ ವಾರ ನೀವು ನೂತನ ಕಾರ್ಯವನ್ನು ಕೈಗೊಳ್ಳಬೇಕಾಗುವದು ಮಿತ್ರ ಜನರ ಸಹಾನುಭೂತಿಯಿಂದ ನಿಮಗೆ ಬಹು ಉತ್ತಮವಾಗಲಿದೆ. ನಿಮ್ಮ ಆರೋಗ್ಯವು ಚೆನ್ನಾಗಿದ್ದು ಸಮಾಜದಲ್ಲಿ ಸನ್ಮಾನಗಳು ಲಭಿಸಲಿದೆ. ವ್ಯಾಪಾರೋದ್ಯಮಿಗಳಿಗೆ ಈ ವಾರವು ಅಭೀಷ್ಟ ಪ್ರದವಾಗಿರುವದು ವಿದ್ಯಾರ್ಥಿ ವೃಂದವು ಚೇತರಿಸುವದು. ತಾ. ೨೮—೨೯ ಮಿತ್ರ ಜನ ಭೇಟಿ, ಸಂಚಾರ.

ಮೀನ

ಈ ವಾರ ನೀವು ದೈಹಿಕ ವಿಚಾರದಲ್ಲಿ ಜಾಗರೂಕರಾಗಿರಬೇಕಾಗುವದು. ವ್ಯವಹಾರಗಳಲ್ಲಿ ಪ್ರಥಮತಃ ತೊಡಕು ಕಂಡುಬಂದರೂ ಪರಿಣಾಮದಲ್ಲಿ ಉತ್ತಮವಿರುವದು. ಆರ್ಥಿಕ ಸ್ಥಿತಿಯು ಉತ್ತಮವಿದ್ದರೂ ಕುಟುಂಬದ ಅನಾರೋಗ್ಯನಿಮಿತ್ತ ಖರ್ಚು ಹೆಚ್ಚಾಗುವದು. ಮಿತ್ರರು ನಿಮ್ಮನ್ನು ವಂಚಿಸಲಿರುವರು. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಈ ವಾರವು ಪ್ರಗತಿಪರವಾಗಿರುವದು. ತಾ. ೨೩—೨೪ ಖರ್ಚು, ಅಸುಖ.

ಹಿಂಸೆಗೆ ಎಲ್ಲರೂ ಹೆದರುತ್ತಾರೆ. ಎಲ್ಲರೂ ಮೃತ್ಯುವಿಗೆ ಅಂಜುತ್ತಾರೆ. ಆದುದರಿಂದ ತನ್ನನ್ನು ಇನ್ನೊಬ್ಬನಂತೆ ಭಾವಿಸಿ ಯಾರೂ ಯಾರಿಗೂ ಹಿಂಸೆಮಾಡಬಾರದು ಯಾ ಕೊಲ್ಲಬಾರದು.

ಎಲ್ಲರಿಗೂ ಜೀವದ ಮೇಲೆ ಆಸೆ ಇದೆ. ಎಲ್ಲರೂ ಬಾಳಬೇಕೆಂದು ಹಂಬಲಿಸುತ್ತಾರೆ. ಹಾಗಿರುವಾಗ ಇನ್ನೊಬ್ಬರಿಗೆ ಹಿಂಸೆ ಬಗೆಯುವದು ಹಿತವಲ್ಲ.

ಇನ್ನೊಬ್ಬರಿಗೆ ತೊಂದರೆ ಕೊಡುವದರಲ್ಲಿ ಬೇರೆಯವರನ್ನು ಹಿಂಸಿಸುವದರಲ್ಲಿ ಯಾರು ಆನಂದ ಪಡುವರೋ ಅಂಥಾವರಿಗೆ ಇಹದಲ್ಲಿಯೂ, ಪರದಲ್ಲಿಯೂ ಶಾಂತಿ ದೊರೆಯದು.

ಕಠಿಣವಾಗಿ ಯಾರಿಗೂ ಮಾತಾಡದಿರು. ಕಠಿಣ ಮಾತಾಡಿದರೆ ಕಠಿಣವಾಗಿಯೇ ಉತ್ತರ ಬರುವದು. ಸಿಟ್ಟಿನ ಮಾತಿನ ಫಲವೇ ದುಃಖ.

ಒಡೆದ ಶಂಖದಂತೆ ಮೌನದಿಂದಿರಲು ನಿನಗೆ ತಿಳಿದಿರುವದಾದರೆ ನಿನ್ನನ್ನು ಸಿಟ್ಟು ಆಗಾಗ ಬಾಧಿಸದು. ಸಿಟ್ಟು ಬಾಧಿಸದಿದ್ದರೆ ನಿನಗೆ ಶೋಕ ಬಾರದು. ಶೋಕ ಬಾರದಲ್ಲಿ ಶಾಂತಿ ದೊರೆಯುವದು.

ದನ ಮೇಯಿಸುವವನು ಕೈಯಲ್ಲಿ ಕೋಲು ಹಿಡಿದು ದನಗಳನ್ನು ಹೊರಗಟ್ಟುವಂತೆ ಮುದಿತನ ಮತ್ತು ಮೃತ್ಯುವೆಂಬುದು ಜೀವವನ್ನು ಮನುಷ್ಯ ಶರೀರದಿಂದ ಹೊರಗಟ್ಟುವವು.

ಬೆಂಕಿಹತ್ತಿದ ಮರವು ಬೆಂಕಿಯ ಜ್ವಾಲೆಯಿಂದ ಸುಂದರವಾಗಿ ತೋರಬಹುದಾದರೂ ಬೆಂಕಿಯಿಂದಲೇ ಅದು ಭಸ್ಮವಾಗುವಂತೆ ಕೆಟ್ಟ ಮಾರ್ಗದಿಂದ ಸಂಪನ್ನನೂ, ಸುಖಿಯೂ, ಎಂದು ತೋರುವ ಮಾನವನೂ ಆತ್ಮನಾಶ ಹೊಂದುವನು.

ತಪ್ಪು ಮಾಡದವರನ್ನು ಶಿಕ್ಷಿಸುವವರಿಗೆ, ಏನೂ ತಿಳಿಯದವರಿಗೆ ನೋವು ಮಾಡುವವರಿಗೆ ಈ ಕೆಳಗಿನ ಹತ್ತು ಗಂಡಾಂತರಗಳಲ್ಲಿ ಯಾವುದಾದರೊಂದು ಬರುವದು. (೧) ಆಪಾರ ನಷ್ಟ (೨) ಶರೀರಾವಯವಗಳಿಗೆ ಆಘಾತ (೩) ವಾಸಿಯಾಗದ ಕಾಯಿಲೆ (೪) ಬುದ್ಧಿ ಭ್ರಮಣೆ (೫) ಅರಸನ ಕ್ರೋಧ (೬) ಭಯಂಕರ ಅಪವಾದ (೭) ಧನ ಹಾನಿ (೮) ಬೆಂಕಿಯಿಂದ ಮನೆ ಬೆಂದುಹೋಗುವಿಕೆ (೯) ಬಂಧು ವಿಯೋಗ (೧೦) ಸಹಿಸಲಾರದ ಕಷ್ಟ.

ತನ್ನ ಶರೀರವಾಗಲೀ, ಜಟಾಧಾರಿ ರೂಪವಾಗಲೀ, ಮಲಿನ ಶರೀರವಾಗಲೀ, ಉಪವಾಸ ವ್ರತವಾಗಲೀ, ಬರಿ ನೆಲದ ಶಯನವಾಗಲೀ, ಶರೀರದ ತುಂಬ ವಿಭೂತಿ ಧಾರಣೆಯಾಗಲೀ ಯಾವುದೇ ರೀತಿಯ ಸನ್ಯಾಸಿಯ ಸೋಗಾಗಲೀ ಮಾನವನನ್ನು ಪರಿಶುದ್ಧಗೊಳಿಸಲಾರವು.

ತನ್ನ ಸಂಶಯಗಳನ್ನು ವಿಚಾರಿಸಿ ಬಗೆಹರಿಸಿದವನು, ಸಕಲ ಎಡೆ ಪ್ರೇಮದ ಸಂದೇಶ ನೋಡುವವನು ಮಗುವಿನ ನಗೆಯಲ್ಲೂ, ಅನಾಥನ ಕಣ್ಣೀರಿನಲ್ಲೂ ದೇವನ ಲೀಲೆಯನ್ನು ನೋಡಿ ತ್ಯಾಗ ಮಾಡುವವನು ಪರಿಶುದ್ಧನೆನಿಸುವನು.

ಆಡಂಭರದ ಉಡುಪು ಹಾಕಿದ್ದರೂ ತನ್ನ ಅರಿಷಡ್ವೈರಿಗಳನ್ನು ಹತೋಟಿಯಲ್ಲಿಟ್ಟು, ಶಾಂತನೂ, ನಿರ್ಮಲ ಮನಸ್ಸಿನವನೂ, ಪವಿತ್ರ ಜೀವನ ನಡೆಸುವವನೂ, ಬೇರೆ ಪ್ರಾಣಿಗಳಿಗೆ ನೋವು ಮಾಡದವನೂ ಆಗಿದ್ದರೆ ಆತನೇ ಬ್ರಾಹ್ಮಣನೆನಿಸುವನು. ಆತನೇ ಆದರ್ಶ ಸನ್ಯಾಸಿ ಎನಿಸುವನು.

ಗದ್ದೆಗೆ ನೀರು ಹಾಯಿಸುವವರು ದಾರಿಯಲ್ಲಿ ನೀರು ಸೋರಿಹೋಗದಂತೆ ಎಚ್ಚರದಿಂದ ನೋಡಿಕೊಳ್ಳುತ್ತಾರೆ. ಬಿಲ್ಲುಗಾರನು ಬಾಣವನ್ನು ನೆಟ್ಟಗೆ ಇಟ್ಟುಕೊಳ್ಳುತ್ತಾನೆ ಏಕೆಂದರೆ ಡೊಂಕಿದ ಬಾಣ ಗುರಿಗೆ ತಗಲದು. ಮರ ಕೆಲಸದವನು ಮರವನ್ನು ಬಗ್ಗಿಸಿ ತನ್ನಂತೆ ಮಾಡಿಕೊಳ್ಳುತ್ತಾನೆ. ಅದರಂತೆ ಉತ್ತಮ ಕೆಲಸ ಮಾಡುವವನೂ ಉತ್ತಮ ಮಾನವನೂ ಆಗಬೇಕಾದರೆ ತನ್ನನ್ನು ತಾನು ಡೊಂಕು ಹಾದಿಗೆ ಬಿಡದೆ ಹಿಡಿತದಲ್ಲಿಡಬೇಕು.

ಭೂ ಸುಧಾರಣೆಯ ಪ್ರಶ್ನೆ

ಪ್ರೊ. ಕೆನ್ನೆತ್ ಎಚ್. ಪಾರ್ಸನ್ಸರು 'ಅಮೇರಿಕದ ವಿಸ್‌ಕನ್ಸಿನ್ ವಿಶ್ವವಿದ್ಯಾಲಯಕ್ಕೆ ಸೇರಿದ ತಜ್ಞರಲ್ಲಿ ಒಬ್ಬರು. ಭಾರತ ಸರಕಾರದ ವಿನಂತಿಯಂತೆ ಇವರೂ ಬೇರೆ ಇಬ್ಬರೂ ಕೆಲಸಮಯದ ಹಿಂದೆ ನಮ್ಮ ದೇಶವನ್ನು ಸಂದರ್ಶಿಸಿ ಇಲ್ಲಿಯ ಕೃಷಿ ವ್ಯವಸ್ಥೆಯನ್ನು ಪರಿಶೀಲಿಸಿ, ಭೂಸುಧಾರಣಾ ಸಂಗತಿಯಲ್ಲಿ ನಾವು ಬುದ್ಧಿವಂತಿಕೆಯಿಂದ ಅನುಸರಿಬಹುದಾದ ಕ್ರಮಗಳ ಕುರಿತು ವಿಸ್ತೃತವಾದ ವರದಿಯೊಂದನ್ನು ಯೋಜನಾ ಆಯೋಗಕ್ಕೆ ಒಪ್ಪಿಸಿರುವರು.

'ನಿಜವಾದ, ತುಂಬ ಕಾಲ ಬಾಳುವ ಮತ್ತು ಮಹತ್ವದ ಪ್ರಗತಿಯನ್ನು ಕೈಗೂಡಿಸುವುದಕ್ಕೋಸ್ಕರ ಭಾರತದಲ್ಲಿ ಜಾಗರೂಕತೆಯಿಂದಲೂ ಪ್ರಾಗತಿಕ ದೃಷ್ಟಿಯಿಂದಲೂ ಒಕ್ಕಲುಗಳಿಗೆ ರಕ್ಷಣೆಕೊಡುವ ಪದ್ಧತಿಯನ್ನು ಜಾರಿಗೆ ತರುವುದರಿಂದ ಭಾರತ ದೇಶವು ಆರ್ಥಿಕ ಹಾಗೂ ರಾಜಕೀಯ ಮುನ್ನಡೆಯನ್ನು ಶಾಂತರೀತಿಯಲ್ಲಿ ಸಾಧಿಸಬಲ್ಲುದು' ಎಂದು ಪ್ರೊ. ಪಾರ್ಸನ್ಸರು ತಮ್ಮ ವರದಿಯಲ್ಲಿ ಹೇಳಿರುವರು. ಮುಂಬಯಿ, ಮದ್ರಾಸು, ಪೆಪ್ಸು, ಉತ್ತರಪ್ರದೇಶ ಮುಂತಾಗಿ ಭಾರತದ ಬೇರೆ ಬೇರೆ ರಾಜ್ಯಗಳಲ್ಲಿ ಕೈಗೊಂಡ ಭೂಸುಧಾರಣಾ ಕಾರ್ಯಕ್ರಮಗಳನ್ನು ಕಳೆದ ವರ್ಷ ನಿರೀಕ್ಷಿಸಿ, ಪರಿಶೀಲಿಸಿದ ಇವರ ಅಭಿಪ್ರಾಯದಂತೆ 'ಭೂಮಿಯ ಉಪಯೋಗ ಮತ್ತು ಅದರ ಮೇಲಿನ ಅಧಿಕಾರದ ವಿಷಯವನ್ನು ಬೇಗನೇ ನಿರ್ಧಾರದಿಂದ ತೀರ್ಮಾನಿಸದಿದ್ದರೆ ಆರ್ಥಿಕ ಹಾಗೂ ಸಾಮಾಜಿಕ ಕೇಡುಗಳು ಬಲಿತು ಹಾನಿಗೆ ಅವಕಾಶ ಮಾಡಿಕೊಡುತ್ತವೆ.'

ಈಗ ಭೂಸುಧಾರಣೆಗೋಸ್ಕರ ನಡೆದಿರುವ ಶಾಂತ ಚಳುವಳಿಯು ರೈತರು ನಿಕಟ ಭವಿಷ್ಯದಲ್ಲಿಯೇ ತೊಡಗಬಹುದಾದ ಉಗ್ರ ಕ್ರಮದ ಆಂದೋಲನದ ಮುನ್ಸೂಚನೆ ಎಂದು ಪ್ರೊ. ಪಾರ್ಸನ್ಸರ ಅಭಿಪ್ರಾಯ. ಇಂಥಾ ಉಗ್ರ ಚಳುವಳಿ ನಡೆದದ್ದೇ ಆದರೆ ಅದು ರಾಜಕೀಯ ಮುಸುಕನ್ನು ಧರಿಸಿಕೊಂಡು, ಕಮ್ಯೂನಿಸ್ಟರ ಕೈವಾದಕ್ಕೆ ಅವಕಾಶಮಾಡಿಕೊಡುತ್ತದೆ.

ಈ ಮಾತನ್ನು ಜಪಾನಿನಲ್ಲಿ ಭೂ ಸುಧಾರಣಾ ಯೋಜನೆಗಳನ್ನು ಯಶಸ್ವಿಗೊಳಿಸಿದ ಪ್ರೊ. ಲಾಡೆಜಿಂಸ್ಕಿ ಎಂಬ ಇನ್ನೊಬ್ಬ ತಜ್ಞರೂ ಅನುಮೋದಿಸುತ್ತಾರೆ. ಮದ್ರಾಸು, ಪಂಜಾಬು ಹಾಗೂ ಕಾಶ್ಮೀರದ ಭೂ ಸುಧಾರಣಾ ಪ್ರಯತ್ನವನ್ನು ಪರಿಶೀಲಿಸಿದ ಇವರು 'ನಾವು ಸಂದರ್ಶಿಸಿದ ಯಾವುದೇ ಹಳ್ಳಿಯಲ್ಲೂ ಅಧಿಕಾರಾರೂಢವಾಗಿರುವ ಕಾಂಗ್ರೆಸು ಪಕ್ಷವು ಸಾಕಷ್ಟು ಹಕ್ಕುಬಾಧ್ಯತೆಗಳನ್ನು ಪಡೆದಿರದ ಜನಗಳ ಹಿತರಕ್ಷಣೆಗೆ ದುಡಿಯುತ್ತಿದ್ದಂತೆ ಕಾಣಲಿಲ್ಲ. ಸಾಮಾನ್ಯ ರೈತರಿಗೂ ಕೃಷಿ ಕೆಲಸಗಾರರಿಗೂ ಕಾಂಗ್ರೆಸ್ ಪಕ್ಷದೊಂದಿಗೆ ಸಂಬಂಧವಿದ್ದಂತೆ ತೋರಲಿಲ್ಲ. ಕಮ್ಯೂನಿಸ್ಟರ ಮೈತ್ರಿಯನ್ನ ಅವರೆಲ್ಲರೂ ಮೆಚ್ಚುತ್ತಿದ್ದಂತೆ ಭಾಸವಾಗುತ್ತದೆ ಸರಕಾರದ ನೆರವಿನ ಭರವಸೆ ಅವರಿಗೆ ಇದ್ದಂತೆ ಕಂಡು ಬರಲಿಲ್ಲ. ಇದನ್ನು ಸರಕಾರವೂ ಕಾಂಗ್ರೆಸು ಪಕ್ಷವೂ ಗಂಭೀರವಾಗಿ ವಿಚಾರಿಸಿಕೊಂಡು, ಪರಿಣಾಮಕಾರಿಯಾದ ಮತ್ತು ಸಕಾಲಿಕವಾದ ಆರ್ಥಿಕ ಪುನರುಜ್ಜೀವನಕ್ಕೆ ಎಡೆಮಾಡಿಕೊಡಬಲ್ಲ ಸುಧಾರಣೆಯನ್ನು ಕೈಗೊಳ್ಳಬೇಕು' ಎಂದಿರುವರು.

ಭೂ ಸುಧಾರಣೆಯ ಪ್ರಯತ್ನ ಕೈಗೊಳ್ಳುವಾಗ ಕೃಷಿಯನ್ನು ಅವಲಂಬಿಸಲು ಬಯಸುವ ಎಲ್ಲರಿಗೂ ಸಮಾನಾವಕಾಶ ಕೊಡುವುದಕ್ಕೆ ಮಹತ್ವ ನೀಡಬೇಕೆಂದು ಪ್ರೊ. ಪಾರ್ಸನ್ಸರು ಹೇಳಿದ್ದರೂ—ಈಗಿನ ಪರಿಸ್ಥಿತಿಯಲ್ಲಿ ಅಸಮಾನತೆ ಎನ್ನು ಹೋಗಲಾಡಿಸುವ ಪ್ರಯತ್ನದ ಪರಿಣಾಮವಾಗಿ ಬಡತನವೇ ಎಲ್ಲರ ಕೊರಳಿಗೂ ಗಂಟು ಬೀಳ್ವೀತೆಂದು ಎಚ್ಚರದ ಮಾತನ್ನೂ ನುಡಿದಿರುವರು. ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಮಹತ್ವಕೊಡುವುದೇ ಈ ಅನರ್ಥವನ್ನು ದೂರೀಕರಿಸುವ ಏಕಮಾತ್ರ ಉಪಾಯ. ಎಲ್ಲರಿಗೂ ಸಮಾನಾವಕಾಶ ನೀಡಲು, ಹೊಸತಾಗಿ ಕೃಷಿಗೆ ಆಸ್ಪದವನ್ನುಂಟುಮಾಡಲು ಮತ್ತು ಹಳ್ಳಿಗರಿಗಿರುವ ಭೂಮಿಯ ಹಸಿವೆ ಹಿಂಗಿಸಿಕೊಳ್ಳಲು ಪ್ರತ್ಯೇಕವಾದ ಸುಧಾರಣೆಗಳನ್ನು ಮಾಡದೆ ಈ ಮೂರನ್ನೂ ಒಂದೇ ದೃಷ್ಟಿಯಿಂದ ಒಟ್ಟಿಗೆ ವಿಚಾರಿಸಬೇಕಾದುದು ಅಗತ್ಯ.

ಎಲ್ಲರಿಗೂ ಸಮಾನಾವಕಾಶಕೊಡುವ ಹುಮ್ಮಸಿನಲ್ಲಿ ಈಗಿನ ಭೂಮಿಯನ್ನು ಬೇಸಾಯಮಾಡುವ ಒಕ್ಕಲಿಗರ ವಶಕ್ಕೆ ಶಾಶ್ವತವಾಗಿ ಬಿಡುವುದು ಹೆಚ್ಚು ಫಲದಾಯಕವಾಗಲಾರದೆಂದು ಪ್ರೊ. ಪಾರ್ಸನ್ಸರು ಹೇಳುತ್ತಾರೆ. ಎಲ್ಲ ಒಕ್ಕಲುಗಳೂ ತಮ್ಮ ಭೂಮಿಯ ಸ್ವಾಮಿತ್ವವನ್ನು ಪಡೆಯುವಂತೆ ಪ್ರಕೃತದ ಪರಿಸ್ಥಿತಿ ಅನುಕೂಲವಾಗಿ ಕಾಣುವುದಿಲ್ಲ. ಭೂಮಾಲಿಕರಿಂದ ಭೂಮಿಯನ್ನು ಒಕ್ಕಲುಗಳಿಗೆ ಶಾಶ್ವತವಾಗಿ ನೀಡುವುದಕೋಸ್ಕರ ವಶಪಡಿಸಿಕೊಳ್ಳುವಾಗ, ಭಾರತದ ರಾಜ್ಯಾಂಗ ಘಟನೆಯಲ್ಲಿ ಒಪ್ಪಿಕೊಂಡ ತತ್ವದಂತೆ, ಭೂಮಾಲಿಕರಿಗೆ ಪರಿಹಾರಕೊಡಬೇಕಾಗುವುದು 'ಇದಕ್ಕೆ ಬೇಕಾದಷ್ಟು ಭಂಡವಾಳ ನಮ್ಮ ಬಳಿಯಿಲ್ಲ; ಮತ್ತು ನಮ್ಮಲ್ಲಿ ಪ್ರಾಚೀನಕಾಲದಿಂದ ರೂಢವಾಗಿರುವ ಆರ್ಥಿಕ ವ್ಯವಸ್ಥೆಯು ಇಂಥ ಸುಧಾರಣೆಯನ್ನು ಒಮ್ಮೆಲೆ ತಡೆದುಕೊಳ್ಳಲಿಕ್ಕೂ ಇಲ್ಲ. ಮಾತ್ರವಲ್ಲ—ಶಾಶ್ವತವಾಗಿ ಭೂಮಿಯನ್ನು ಸಾಗುಮಾಡುವ ಒಕ್ಕಲಿಗನಿಗೆ ಆ ಭೂಮಿ ಸೇರಬೇಕೆಂಬ ತತ್ವವನ್ನು ಭೂ ಮಾಲಿಕರು ಎಷ್ಟು ಮಾತ್ರಕ್ಕೂ ಒಪ್ಪಲಾರರು. ಪ್ರಾಯಶಃ ಇದನ್ನು ವಿರೋಧಿಸುವ ಉದ್ದೇಶದಿಂದಲೇ ಅವರು ಯಾವ ಒಕ್ಕಲನ್ನೂ ಶಾಶ್ವತವಾಗಿ ಒಂದು ಭೂಮಿಯ ಮೇಲೆ ಇರಗೊಡುವುದಿಲ್ಲ. ಒಂದೆರಡು ವರ್ಷಗಳು ಕಳೆದ ಕೂಡಲೇ ಒಕ್ಕಲೆಬ್ಬಿಸಿ ಬೇರೊಬ್ಬ ಹೊಸಬನ ವಶಕ್ಕೆ ಭೂಮಿಯನ್ನು ಒಪ್ಪಿಸಲು ಭೂ ಮಾಲಿಕರು ಆತುರಪಡುವರು.

ಇಂಥದರಲ್ಲಿ ಭಾರತವು ಅನುಸರಿಸಬಹುದಾದ ಕ್ರಮ—ಧನಿ ಮತ್ತು ಒಕ್ಕಲುಗಳ ಸಂಬಂಧವನ್ನು ಅವರವರ ಹಕ್ಕು ಬಾಧ್ಯತೆಗಳಿಗೆ ವ್ಯತ್ಯಯವುಂಟಾಗದಂತೆ ಊರ್ಜಿತಗೊಳಿಸುವುದೇ ಆಗಿದೆ. ಈ ಸಂಬಂಧಕ್ಕೆ ಸುಧಾರಿತ ರೂಪ ಕೊಡುವಾಗ ಮೂರು ಸಂಗತಿಗಳನ್ನು ಕಣ್ಣು ಮುಂದೆ ಇಟ್ಟುಕೊಳ್ಳುವುದು ಚೆನ್ನ—(೧) ಸಾಮಾನ್ಯ ಒಕ್ಕಲಿಗರಿಗೆ ಅವನ ವಶಕ್ಕೆ ಬಂದ ಭೂಮಿಯ ಮೇಲೆ ಐದು ವರ್ಷಗಳ ಶಾಶ್ವತ ಅಧಿಕಾರವಿರಬೇಕು; ಮತ್ತು ಒಳ್ಳೆ ರೀತಿಯಲ್ಲಿ ಅವನು ಬೇಸಾಯ ನಡೆಸುವವನಾದರೆ ಈ ಒಕ್ಕಲುತನ ತಾನಾಗಿಯೇ ಮುಂದರಿಯಬೇಕು; (೨) ಒಕ್ಕಲಿಗನಿಗೆ ಅವನ ಪರಿಶ್ರಮಕ್ಕೆ ಹೊಂದಿಕೊಂಡು, ಹೊಲ ಸಾಗುವಳಿಯ ವೆಚ್ಚವನ್ನು ಗಮನದಲ್ಲಿಟ್ಟುಕೊಂಡು ಹಾಗೂ ಹೊಲದ ಮೇಲೆ ಧನಿ ಹಾಕಿದ ಭಂಡವಾಳವನ್ನು ಉತ್ಪಾದಕ ಕಾರ್ಯಕ್ಕೆ ಹಚ್ಚಿದ ಅವನ ಹೊಣೆಗಾರಿಕೆಯನ್ನು ಲಕ್ಷಿಸಿ ಯೋಗ್ಯ ಪ್ರತಿಫಲ ದೊರೆಯಬೇಕು, ಧನಿಯ ಪಾಲಿಗೆ ಹೊಲಕ್ಕೆ ಹಾಕಿದ ಭಂಡವಾಳಕ್ಕೆ ಯೋಗ್ಯ ಬಡ್ಡಿ ದೊರೆಯಬೇಕು. ಆದರೆ ಈ ಭಂಡವಾಳದ ಮೂಲ್ಯ ರೂಪನವನ್ನು ರೂಪಾಯಿ ಆಣೆ ಪೈಯಿಂದ ಲೆಕ್ಕ ಮಾಡುವುದು ಮಾತ್ರ ಸರಿಯಲ್ಲ; (೩) ಫಸಲಿನಲ್ಲಿ ತಮಗೆ ದೊರೆಯುವ ಪಾಲನ್ನು ಹೊಂದಿಕೊಂಡು ಉತ್ಪಾದನಾ ವೆಚ್ಚದಲ್ಲಿ ಧನಿ ಒಕ್ಕಲುಗಳು ಭಾಗವಹಿಸುವುದಕ್ಕೆ ಅವಕಾಶ ನೀಡಬೇಕು; ಎಂದರೆ ಭೂಮಿಯ ಫಲವರ್ಧಿಸಿ, ಉತ್ಪಾದನೆ ಹೆಚ್ಚಿಸುವ ಪ್ರಯತ್ನಕ್ಕೆ ಧನಿಯ ಕಡೆಯಿಂದ ಪ್ರೋತ್ಸಾಹ ದೊರೆತೀತು.

ಹಿಡುವಳಿಗೊಂದು ಮಿತಿಯನ್ನು ಕಲ್ಪಿಸುವುದು ಭೂಸುಧಾರಣಾ ಪ್ರಯತ್ನದಲ್ಲಿ ಅಗತ್ಯವೇ ಎಂಬ ಪ್ರಶ್ನೆಯನ್ನು ವಿಚಾರಿಸುತ್ತಾ ಪ್ರೊ. ಪಾರ್ಸನ್ಸರು 'ಇಲ್ಲಿ ಗಮನಿಸಬೇಕಾದ ಮುಖ್ಯ ಪ್ರಶ್ನೆ—ಭೂಮಿಯೆಂದರೇನೇ ಒಂದು ಬಗೆಯ ಬಂಡವಾಳ ಹೌದೇ, ಅಲ್ಲವೇ?' ಎಂದಿರುವರು ಎರಡನೆಯ ಸಂಗತಿ, ಹಿಡುವಳಿಯು ಸಾರ್ವಜನಿಕ ಹಿತಕ್ಕೆ ಬಾಧಕ ಬರದಂತೆ ಕಾರ್ಯಕ್ಷಮ ರೀತಿಯಲ್ಲಿ ಮತ್ತು ಉತ್ಪಾದನೆ ಹೆಚ್ಚುವಂತೆ ಉಪಯೋಗಿಸಲ್ಪಡುತ್ತಿದೆಯೇ ಎಂಬುದು ಮೂರನೆಯದಾಗಿ ದೊಡ್ಡ ದೊಡ್ಡ ಹಿಡುವಳಿದಾರರಿಗೆ ಭೂಮಿಯ ಉತ್ಪಾದನೆ ಹೆಚ್ಚಿಸಲು ಪ್ರಯತ್ನ ಕೈಗೊಂಡರೆ ತಮಗೆ ನಷ್ಟವಾಗುವುದಿಲ್ಲವೆನ್ನುವ ಭರವಸೆ ಬೇಕು.

ಇದೆಲ್ಲ ಸರಕಾರದ ಧೋರಣೆಗೆ ಸಂಬಂಧಿದ ಸಂಗತಿಯಾದುದರಿಂದ ನಮ್ಮ ಜನರೇ ಯೋಗ್ಯ ನಿರ್ಣಯ ಕೈಗೊಳ್ಳಬಲ್ಲರು. ಕೇಂದ್ರ ಸರಕಾರವು ಭಾರತದಲ್ಲಿ ಎಲ್ಲ ಕಡೆಯೂ ಭೂ ಸುಧಾರಣಾ ನೀತಿಯಲ್ಲಿ ಏಕಸೂತ್ರತೆ ಇರುವಂತೆ ನೋಡಿಕೊಳ್ಳತಕ್ಕದ್ದು. ರಾಜ್ಯ ಸರಕಾರಗಳ ಹಾಗೂ ಕೇಂದ್ರ ಸರಕಾರದ ನಡುವೆ ಭೂ ಸುಧಾರಣೆಯಂಥ ಮಹತ್ವದ ಧೋರಣೆಯ ಸಂಬಂಧದಲ್ಲಿ ಭಿನ್ನಾಭಿಪ್ರಾಯವಿರುವುದು ಸಲ್ಲದು.

ಭೂ ಸುಧಾರಣೆ ಸಾಧ್ಯವಾಗುವಂತೆ ಏನೆಲ್ಲ ಮಾಡಬೇಕೆಂಬ ವಿಷಯದಲ್ಲಿ ಸರಕಾರಕ್ಕೆ ಅಗತ್ಯವಿರುವ ಮಾಹಿತಿಯು ದೊರೆಯುತ್ತಿಲ್ಲ. ಭೂ ಸುಧಾರಣೆಯ ಯಶಸ್ಸು ಧೋರಣೆಯ ಸಮರ್ಪಕತೆಯನ್ನು ಹೊಂದಿಕೊಂಡಿರುವುದರಿಂದ, ಸಂಶೋಧನಾ ಮಂಡಳವೊಂದು ಈ ವಿಷಯದಲ್ಲಿ ಹೆಚ್ಚಿನ ಆಸ್ಥೆ ತೆಗೆದುಕೊಳ್ಳುವುದೂ ಭೂ ಸುಧಾರಣೆಯ ಕುರಿತು ರೈತರ ಪ್ರತಿಕ್ರಿಯೆಗಳೇನಿರಬಹುದೆಂದು ನಿಶ್ಚಿತವಾಗಿ ತಿಳಿದುಕೊಳ್ಳುವುದೂ ಯೋಗ್ಯ. ಕೃಷಿಗೆ ಸಂಬಂಧಿಸಿದಂತೆ ಸಾಮಾನ್ಯ ತತ್ವಗಳನ್ನು ನಿರ್ಧರಿಸಿ ಮಾರ್ಗದರ್ಶನ ಮಾಡಬಲ್ಲ ಸಂಶೋಧನಾ ಮಂಡಳ ಯಾವ ಕಾಲಕ್ಕೂ ಅಸ್ತಿತ್ವದಲ್ಲಿರುವುದೊಳಿತು. ಕೇಂದ್ರ ಸರಕಾರದ ಭೂ ಸುಧಾರಣಾ ಸಮಿತಿಯನ್ನು ಈ ಆವಶ್ಯಕತೆಗೊಪ್ಪುವಂತೆ ಪುನರ್ಘಟಿಸುವುದು ಅಪೇಕ್ಷಣೀಯವಾಗಿದೆ.

ರೈತರಲ್ಲಿರುವ ಭೂಮಿಯ ತೃಷೆಯು ರಾಜಕೀಯ ಚದುರಂಗದ ವಸ್ತುವಾಗದಂತೆ ಶೈಕ್ಷಣಿಕ ಮಟ್ಟದಲ್ಲಿ ಪ್ರಯತ್ನಗಳು ನಡೆಯುವ ಅಗತ್ಯ ಬಹಳವಿದೆ. ಹಳ್ಳಿಗರು ತಮ್ಮಲ್ಲಿಯೇ ಯೋಗ್ಯ ಧುರೀಣತ್ವವನ್ನು ಕಂಡುಕೊಂಡು ಘಟನಾತ್ಮಕವಾಗಿ ತಮ್ಮ ಅಭಿವೃದ್ಧಿ ಸಾಧಿಸಲು ಪ್ರೋತ್ಸಾಹ ಕೊಡುವುದರಿಂದ, ಕಮ್ಯೂನಿಸ್ಟರ ಕಡೆಗೆ ಅವರ ಒಲವು ಹರಿಯುವುದನ್ನು ತಡೆಯಬಹುದು.

ಕೊನೆಯದಾಗಿ, ಹಳ್ಳಿಗರಿಗೆ ವ್ಯವಸಾಯಕೋಸ್ಕರ ಸಾಲ ರೂಪದಲ್ಲಿ ಹಣ ಒದಗಿಸಿ ಕೊಡುವ ವ್ಯವಸ್ಥೆ ಇನ್ನಷ್ಟು ಚೆನ್ನಾಗಿ ಕಾರ್ಯಾರಂಭ ಮಾಡಬೇಕು. ಒಕ್ಕಲುಗಳ ದೈನ್ಯಾವಸ್ಥೆಗೆ ಅವರಿಗೆ ಸಕಾಲದಲ್ಲಿ ಯೋಗ್ಯ ಶರ್ತಗಳಲ್ಲಿ ಹಣದ ನೆರವು ದೊರೆಯದಿರುವುದೇ ಪ್ರಧಾನ ಹೇತು—ಹೀಗೆ ಪ್ರೊ. ಪಾರ್ಸನ್ಸರು ತಮ್ಮ ವರದಿಯಲ್ಲಿ ಹೇಳಿರುವರು.

'ನವಯುಗ'ದಿಂದ.

ಮಾರಾಟಕ್ಕಿದೆ.

ಮಡಿಕೇರಿ ಹೊಸ ಕಾಲೇಜು ಕಟ್ಟಡಕ್ಕೆ ಒತ್ತಾಗಿ ಮಡಿಕೇರಿಯ ಶಾಲಾ ಕಾಲೇಜುಗಳಿಗೆಲ್ಲಾ ಸಮೀಪವಾಗಿ ಮಕ್ಕಳ ವಿದ್ಯಾಭ್ಯಾಸಕ್ಕೂ, ಪೇಟೆ, ಕೋರ್ಟು ಕಚೇರಿಗಳಿಗೂ ಸಮೀಪವಾಗಿ ವ್ಯಾಪಾರ ಉದ್ಯೋಗ ವ್ಯವಹಾರಗಳಿಗೂ, ಪೇಟೆಗಲ್ಲಿಗಳಿಂದ ದೂರವಾಗಿ ವಾಸಕ್ಕೆ ಆರೋಗ್ಯವಾಗಿಯೂ, ಕಾಫಿ, ಯಾಲಕ್ಕಿ ವ್ಯವಸಾಯಕ್ಕೂ, ದನಕರುಗಳನ್ನು ಸಾಕಲೂ ಈ ಎಲ್ಲಾ ಅನುಕೂಲತೆ ಇರುವ ನೀರಾವರಿಯ 150ರಿಂದ 200 ಬಟ್ಟಿ ಬತ್ತ ಬೆಳೆಯುವ 300 ಬಟ್ಟಿ ಭೂಮಿಯೂ, ಮರ ಕಾಡಿರುವ 17 ಎಕರೆ ಜಾಗೆಯೂ ಮಾರಾಟಕ್ಕಿದೆ. ಖಾಯಸ್ ದಾರರಾಗಿ ಸ್ವತ್ತು ಅಜಮಾಯಿಸುವವರಿಗೆ ಕ್ರಯ ತಿಳಿಸಲಾಗುವುದು. ಈ ಅಡ್ರೆಸಿನವರನ್ನು ವಿಚಾರಿಸಿ.

ಕೋಚನ ಬೊಪ್ಪಯ್ಯ,
ಹೊಸ ಕಾಲೇಜು ಕಟ್ಟಡ ಬಳಿ,
ಮಡಿಕೇರಿ.

ಧರ್ಮ ಪರಿಪಾಲನೆಯಲ್ಲಿ —

ನಮ್ಮ ಕರ್ತವ್ಯಗಳು.

ಲೇ:—ಶ್ರೀ ಎಂ. ಬಿ. ಕಾಳಪ್ಪ, ನಿವೃತ್ತ [illegible], ಅ [illegible]

ಹಿಂದೂಸ್ಥಾನದಲ್ಲಿ ನಮ್ಮ ನಡುವೆ ಅನೇಕ ಯೋಗಿಗಳು ಜೀವಿಸುತ್ತಿರುವದು ನಮ್ಮ ಭಾಗ್ಯ. ಅತೀ ಪ್ರಾಚೀನ ಕಾಲದಿಂದಲೇ ಹಿಂದೂಸ್ಥಾನವು ಯೋಗಿಗಳ ಋಷಿಗಳ ಪುಣ್ಯಭೂಮಿಯೆಂದು ಹೆಸರು ಹೊಂದಿದೆ. ಅವರು ಸಾಮಾನ್ಯ ಮನುಷ್ಯರಂತೆ ಜನ್ಮವೆತ್ತಿ ನಮ್ಮ ನಡುವೆ ಜೀವನ ನಡೆಸುತ್ತಿದ್ದರೂ ಅವರ ಸದ್ಗುಣಗಳು ಮಿನುಗುತ್ತಿರುವದು. ಸರಳ, ಸತ್ಯ, ಪ್ರೇಮ ಮತ್ತು ಭಕ್ತಿಗಳಿಂದ ಕೂಡಿರುವ ಅವರ ನಿರ್ಮಲವಾದ ಜೀವನವು ಅತೀ ಪ್ರಕಾಶವನ್ನು ಬೀರುವದು. ಲಾಭದ ಗಣನೆ ಮಾಡದೆ ನೀತಿಯನ್ನು ಅವರು ಪಾಲಿಸುವರು. ಪ್ರಾಪಂಚಿಕ ಸುಖಗಳನ್ನು ಲೆಕ್ಕಿಸದೆ ಧರ್ಮ ಪಾಲನೆಯಲ್ಲಿ ನಿರತರಾಗಿರುವರು. ಜಗತ್ತಿನ ಪ್ರತಿಯೊಂದು ಜೀವಿಯು ಪರಸ್ಪರ ಪ್ರೀತಿ ಭಾವದಿಂದ ವರ್ತಿಸಬೇಕೆಂಬುದೇ ಅವರ ಧರ್ಮ. ದೇವರು ಪ್ರತಿಯೊಂದು ಜಂತುವನ್ನು ಪ್ರೀತಿಸುವನು ಮತ್ತು ಸಹಾಯಕನೂ ಆಗಿರುವನು. ಪ್ರತಿಯೊಬ್ಬ ಮನುಷ್ಯನು ಪರಸ್ಪರ ಪ್ರೀತಿಯಿಂದಲೂ, ಸಹಾಯಕ ರೀತಿಯಿಂದಲೂ ವರ್ತಿಸಬೇಕೆಂಬುದೇ ದೇವರ ಇಚ್ಛೆಯಾಗಿದೆ. ಹೀಗಾದ ಪಕ್ಷದಲ್ಲಿ ದೇವರ ಇಚ್ಛೆಯನ್ನು ಹೇಗೆ ಪರಿಪಾಲಿಸಬಹುದು? ಅದು ದೇವರಲ್ಲಿ ಭಕ್ತಿಯಿಂದಲೂ ಮತ್ತು ಎಲ್ಲರನ್ನು ಪ್ರೀತಿಸುವದರಿಂದಲೂ ಎಂದು ಹೇಳಬಹುದು.

ದುಃಖ ಮತ್ತು ಗಂಡಾಂತರಗಳು ಹೇಗೆ ಬರುವದೆಂದು ನೋಡೋಣ? ಇದಕ್ಕೆ ಕಾರಣರು ಪರಸ್ಪರ ಪ್ರೇಮವಿಲ್ಲದ, ಸ್ವಾರ್ಥದಿಂದ ಕೂಡಿದ ಜನರಾಗಿರುತ್ತಾರೆ. ಒಬ್ಬ ಕಳ್ಳನು ತನ್ನ ಮನೆಯನ್ನು, ತನ್ನ ಏಳಿಗೆಯನ್ನು ಅತಿಯಾಗಿ ಬಯಸುತ್ತಾನೆ. ಆದರಿಂದಾಗಿ ತನ್ನ ಸ್ವಾರ್ಥವನ್ನು ಸಾಧಿಸಲು ಇನ್ನೊಬ್ಬನ ಮನೆಯನ್ನು ಕದಿಯುವನು. ಒಬ್ಬ ಕೊಲೆ ಪಾತಕನು ತನ್ನ ದೇಹವನ್ನು ಅತಿಯಾಗಿ ಮೋಹಿಸುವನು. ತನ್ನ ದೇಹದ ಮೋಹದಿಂದ, ತನಗೆ ಒದಗುವ ಲಾಭದ ಮೋಹದಿಂದ ಇತರ ದೇಹಗಳನ್ನು ಕೊಲೆ ಮಾಡುವನು. ಒಬ್ಬನು ಇನ್ನೊಬ್ಬನ ಮನೆಯನ್ನು ತನ್ನ ಮನೆಯಂತೆ ಭಾವಿಸಿದರೆ ಅಲ್ಲಿ ಕಳ್ಳತನಕ್ಕೆ ಎಡೆಯುಂಟಾಗುವದಿಲ್ಲ. ಒಬ್ಬನು ಇನ್ನೊಬ್ಬನ ದೇಹವನ್ನು ತನ್ನ ದೇಹದಂತೆ ಭಾವಿಸಿದರೆ ಅಲ್ಲಿ ಕೊಲೆಗೆ ಎಡೆಯುಂಟಾಗುವದಿಲ್ಲ.

ಸ್ವಾರ್ಥತೆ ಎಂಬುದು ಕತ್ತಲೆ, ಕಗ್ಗವಿ ಅಂಧಕಾರ. ನಿಸ್ವಾರ್ಥತೆ ಎಂಬುದು ಪ್ರಕಾಶ ಮಾನವಾದ ಬೆಳಕು ಬೆಳಕು ಮತ್ತು ಕತ್ತಲೆ ಒಟ್ಟಿಗೆ ಇರಲಾರವು. ಹಾಗೆಯೇ ಸ್ವಾರ್ಥದ ಎಡೆಯಲ್ಲಿ ದೇವರಿರಲು ಅಸಾಧ್ಯ. ಕೇವಲವಾದ 'ನಾನು' ಎಂಬ ಪದವನ್ನು ತ್ಯಜಿಸಿದರೆ "ಈ ದೇಹವೇ ದೇವರ ಪೂಜ್ಯ ಮಂದಿರವಾಗುವ"ದೆಂದು ಸ್ವಾಮಿ ವಿವೇಕಾನಂದರು ಹೇಳಿರುವರು. ಆದ್ದರಿಂದ ಎಲ್ಲರೂ ಅನ್ಯೋನ್ಯ ಪ್ರೇಮ ಭಾವದಿಂದ ವರ್ತಿಸಿದರೆ ಸ್ವಾರ್ಥತೆಯನ್ನು ತೊರೆದರೆ ಅಲ್ಲಿ ಶಾಂತಿಯು ನೆಲಸುವದು. ಎಲ್ಲಿ ಹಗೆ, ದ್ವೇಷಗಳಿವೆಯೋ ಅಲ್ಲಿ ದುಃಖ ಗಂಡಾಂತರಗಳು ಆವರಿಸುವವು. ಜಗತ್ತಿನ ಇಂದಿನ ಸ್ಥಿತಿಯಲ್ಲಿ ಇರುವ ಮುಖ್ಯವಾದ ಕೆಡುಕು, ದೋಷಗಳು ಏನೆಂದರೆ ಬಲಿಷ್ಠ ರಾಷ್ಟ್ರಗಳು ಬಲ ಹೀನರ ಮೇಲೆ ದಾಳಿ ನಡೆಸುವದು. ಹೆಚ್ಚು ಜನಸಂಖ್ಯೆ ಇರುವ ಕುಟುಂಬಗಳು ಸಣ್ಣ ಕುಟುಂಬಗಳ ಶಾಂತಿಯನ್ನು ಕೆಡಿಸುವದು. ಯುಕ್ತಿವಂತನು ಬುದ್ಧಿ ಹೀನನನ್ನು ಮೋಸಗೊಳಿಸುವದು, ಮೇಲ್ಪಟ್ಟವರು ಕೀಳು ಜನರನ್ನು ಧಿಕ್ಕರಿಸುವದು ಇತ್ಯಾದಿಗಳಾಗಿವೆ. ಯೋಗಿಗಳು ಎತ್ತಿ ಹಿಡಿದಿರುವ ನೀತಿ, ಧರ್ಮ ಮತ್ತು ಸದಾಚಾರಗಳ ಉದ್ದೇಶ್ಯವು ಜಗತ್ತಿನ ಪ್ರತಿಯೊಬ್ಬಜೀವಿಯಲ್ಲೂ ಒಂದು ಸಂಪೂರ್ಣಗೊಂಡ ಆನಂದವನ್ನು ಬೀರಬೇಕೆಂಬುದಾಗಿ ಪ್ರ್ಜಇದೇ ಗುರಿ ನಮ್ಮಮುಂದಾಳುಗಳದ್ದೂ ನ್ಯಾಯ ನಿರ್ಮಾಪಕರದ್ದೂ ಆಗಿರುತ್ತೆ. ಈ ಎಲ್ಲಾ ಸಿದ್ಧಾಂತಗಳ ಅಭಿಪ್ರಾಯ ವಾದ ಸರ್ವ ಸಾರ್ವತ್ರಿಕ ಪ್ರೇಮವೊಂದೇ ಈ ಸ್ವಾರ್ಥವೆಂಬ ಮಾಯೆಯಿಂದ ಮುಚ್ಚಿ ಹೋಗಿರುವ ಜಗತ್ತನ್ನು ಉದ್ಧರಿಸಲು ಶಕ್ತವೆಂದು ತಿಳಿಯಬೇಕು. ಆದರೆ ಅಲ್ಪ ಬುದ್ಧಿಯ ಸಾಧಾರಣ ಜನಸ್ತೋಮಕ್ಕೆ ಇದರ ಮಹತ್ವವನ್ನು ಅರಿವುಗೊಳಿಸುವದು ಕಷ್ಟಸಾಧ ವಿಷಯವಾಗಿದೆ. ಆದ್ದರಿಂದ ಋಷಿಗಳು, ಯೋಗಿಗಳು ಧರ್ಮ ಸಿದ್ಧಾಂತಗಳ ಮೂಲಕ ಪ್ರೇಮದ ಮಹತ್ವವನ್ನು ಸಾರುವರು ಅನೇಕರು ಒಬ್ಬನೇ ಆದ ಭಗವಂತನಿರುವನೆಂದು ಸಾರುವರು. ಆ ದೇವರು ಶಿಷ್ಟರನ್ನು ರಕ್ಷಿಸುವನೆಂದೂ, ದುಷ್ಟರನ್ನು ಶಿಕ್ಷಿಸುವನೆಂದು ಸಾರುವರು. ಈ ಸರ್ವ ಸಾರ್ವತ್ರಿಕ ಪ್ರೇಮವೇ ಬುದ್ಧ, ಮಹಾತ್ಮಗಾಂಧಿ ಮೊದಲಾದವರು ಭೋದಿಸಿದ ಅಹಿಂಸಾ ತತ್ವವು. ಪ್ರೇಮ ಮತ್ತು ಅಹಿಂಸೆ ನಿರ್ವಿಕಾರವಾದ, ಆನಂದವಾದ, ಆನಂದಕ್ಕೆ ಕೊಂಡೊಯ್ಯುವ ಹಾದಿಗಳು. ಮಹಾಭಾರತದಲ್ಲಿ 'ಅಹಿಂಸಾವೇ ಶ್ರೇಷ್ಠವಾದ ಧರ್ಮವೆಂದು ಹೇಳಿರುವದು. ಸ್ವಾಮಿ ಶಿವಾನಂದರು ಜಗತ್ತಿನಲ್ಲಿರುವದು ಒಂದೇ ಧರ್ಮ. ಅದು ಪ್ರೇಮದ ಧರ್ಮವೆಂದು ಹೇಳಿರುವರು.

ಹಿಂದೂದೇಶದಲ್ಲಿ ಅನೇಕ ಋಷಿಗಳೂ, ಸಂತರೂ ಇದ್ದಾರೆ. ಅವರ ಸಮಕಾಲೀನರಾಗಿ ಬದುಕುವ ಭಾಗ್ಯ ನಮ್ಮದಾಗಿದೆ. ಹೀಗಿರುವಾಗ ಈ ಯೋಗಿಗಳಿಗೆ ನಾವು ಕೊಡಬೇಕಾದ ಕಾಣಿಕೆಗಳೇನು? ಮುಡುಪುಗಳೇನು? ಮೊದಲನೆಯದಾಗಿ ಅವರು ಪಾಲಿಸುವಂಥಾ ಸದ್ಗುಣಗಳನ್ನು ನಾವು ಪಾಲಿಸಬೇಕು. ಎರಡನೆಯದಾಗಿ ಅವರ ಅನುಭವಪೂರಿತವಾದ ಜ್ಞಾನ ಮತ್ತು ಭೋದನೆಗಳನ್ನು ಎಲ್ಲರಲ್ಲೂ ಹರಡಬೇಕು. ಪರಸ್ಪರ ಪ್ರೇಮದಿಂದ ಬಾಳಬೇಕೆಂಬುದೇ ನಮ್ಮ ಮತವಾಗಿರಲಿ, ಪ್ರೇಮವೆಂಬುದೇ ನಮ್ಮ ಜೀವನದ ತತ್ವವಾಗಿರಲಿ

———



ಟೀಕಾಕಾರ—ನೀನು ಚಿತ್ರಿಸಿರುವ ಚಿತ್ರಗಳನ್ನು ನೋಡುತ್ತ ನಾನು ಆಶ್ಚರ್ಯ ಚಕಿತನಾಗುವೆ

ಕಲಾಕಾರ—ಅವುಗಳನ್ನು ನಾನು ಹೇಗೆ ಮಾಡುವೆನೆಂದೇ?

ಟೀಕಾಕಾರ—ಅಲ್ಲ, ಏಕೆ ಮಾಡುತ್ತಿರುವೆಯೆಂದು!

o o o

ಮಗನ ಶಾಲೆಯ ಪ್ರಗತಿಯ ಕಾರ್ಡನ್ನು ನೋಡಿ ತಂದೆಯವರು ಸಿಟ್ಟುಗೊಂಡರು.

ಮಗ—ಈ ಸಾರೆ ಎಲ್ಲಾ ಮಕ್ಕಳು ಹೀಗೆಯೇ. ಯಾರೂ ಪಾಸಾಗಿರುವದಿಲ್ಲ.

ತಂದೆ—ಎದುರು ಮನೆಯ ಕುಮಾರನು ಹೇಗೆ?

ಮಗ—ಆತನಿಗೊಬ್ಬನಿಗೆ ಒಳ್ಳೆ ಮಾರ್ಕು ದೊರೆತಿದೆ ಆದರೆ ಆತನ ಪ್ರಶ್ನೆಯೇ ಬೇರೆ. ಆತನಿಗೆ ಅತಿ ಬುದ್ಧಿಶಾಲಿಗಳಾದ ತಂದೆ ತಾಯಿಗಳಿದ್ದಾರೆ!

* * *

ಔತಣ ಕೂಟವೊಂದರಲ್ಲಿ ಖಗೋಳ ಶಾಸ್ತ್ರಜ್ಞನೊಬ್ಬನು ಆಗ ತಾನೆ ಹೈಸ್ಕೂಲು ಬಿಟ್ಟ ಹುಡುಗಿಯೊಬ್ಬಳ ಪಕ್ಕದಲ್ಲಿ ಕುಳಿತಿದ್ದನು. ಮಾತಾಡುತ್ತಾ ಹುಡುಗಿಯು 'ನೀವು ಏನು ಮಾಡುತ್ತಿರುವಿರಿ? ಉದ್ಯಮವೇನು?' ಎಂದು ಕೇಳಿದಳು.

ಖ. ಶಾಸ್ತ್ರಜ್ಞ—ನಾನು ಖಗೋಳಶಾಸ್ತ್ರ ಅಭ್ಯಾಸ ಮಾಡುತ್ತಿರುವೆನು.

ಹುಡುಗಿ—ಈ ವಯಸ್ಸಿನಲ್ಲಿ? ನಾನು ಕಳೆದ ವರ್ಷವೇ ಹೈಸ್ಕೂಲಿನಲ್ಲಿ ಅದನ್ನು ಓದಿ ಮುಗಿಸಿರುವೆನು!

* * *

ತಂಗಿ—ನಾನು ೨೫ ವರ್ಷ ವಯಸಾಗುವ ವರೆಗೆ ಮದುವೆಯಾಗಲಾರೆ.

ಅಕ್ಕ—ನಾನು ಮದುವೆಯಾಗುವ ವರೆಗೆ ೨೫ ವರ್ಷ ಆಗಲಾರೆ!

* * *

ಎರಡು ಗಂಟೆಗಳ ವರೆಗೆ ಭಾಷಣ ಮಾಡಿದ ಭಾಷಣಕಾರನು—'ಕ್ಷಮಿಸಿರಿ, ನಾನು ತುಂಬಾ ಸಮಯ ತೆಗೆದುಕೊಂಡೆ, ನನ್ನ ಕೈಯಲ್ಲಿ ಗಡಿಯಾರ ಇಲ್ಲದ್ದೇ ತೊಂದರೆ'

ಸಭಿಕರಲ್ಲೊಬ್ಬ—ಹೌದು, ಆದರೆ ನಿಮ್ಮ ಹಿಂದುಗಡೆ ಗೋಡೆಯಲ್ಲಿ ಕೆಲೆಂಡರೊಂದಿದೆ!

* * *

'ಗಡಿಯಾರವು ಸುಂದರಿಯಾದ ಹೆಂಗಸಿನಂತೆ' ಎಂದು ಒಬ್ಬರು ಹೇಳಿದರು.

'ಹೇಗೆ?' ಇನ್ನೊಬ್ಬರು ಪ್ರಶ್ನಿಸಿದರು.

'ಹೇಗೆಂದರೆ ಗಡಿಯಾರಕ್ಕೆ ಕೇವಲ ಮುಖ ಮತ್ತು ಆಕಾರ ಮಾತ್ರ; ತಲೆ ಇಲ್ಲ. ಒಮ್ಮೆ ಕೀ ಕೊಟ್ಟರೆ ಅದು ನಿಲ್ಲುವಂತಿಲ್ಲ. ದಿವಸದ ಪ್ರತಿ ಗಂಟೆಯಲ್ಲೂ ಅದು ನಮ್ಮನ್ನು ಎಚ್ಚರಿಸುತ್ತಿರುತ್ತದೆ.

* * *

ಅಧಿಕಾರಿ ಪೋಲೀಸಿನವನನ್ನು ಕುರಿತು—"ಪೋಲೀಸ್ ಕಾರನ್ನು ಕೆಲವು ದರೋಡೆಗಾರರು ಹಿಂಬಾಲಿಸಿ ಗಂಟೆಗೆ ೫೦ ಮೈಲು ವೇಗದಲ್ಲಿ ಬರುತ್ತಿರುವರೆಂದು ತಿಳಿ. ಆಗ ನೀನೇನು ಮಾಡುವೆ?"

'ಅರುವತ್ತು ಮೈಲು ವೇಗದಲ್ಲಿ ಕಾರನ್ನು ಓಡಿಸಲು ಹೇಳುವೆ' ಪೋಲೀಸನ ಉತ್ತರ.

* * *

ಪ್ರಸಿದ್ಧ ಹಾಸ್ಯಗಾರರಾದ ಮಾರ್ಕ್ ಟ್ವೈನ್‌ರವರನ್ನು ತನ್ನ ವಾಚನಾಲಯಕ್ಕೆ ಮಿ. ರೋಗರ್ಸ್ ಎಂಬವರು ಕರೆದುಕೊಂಡು ಹೋಗಿ ಅಲ್ಲಿದ್ದ ಸ್ಫಟಿಕ ಶಿಲೆಯ ಮೂರ್ತಿಯೊಂದನ್ನು ತೋರಿಸುತ್ತಾ 'ಅದು ಇಟೆಲಿಯ ಪ್ರಖ್ಯಾತ ಕಲಾವಿದನೊಬ್ಬನು ಮಾಡಿದ ಚಿತ್ರ. ಯುವತಿಯು ತನ್ನ ಹೆರಳಿಗೆ ಎಣ್ಣೆ ಹಾಕಿಕೊಳ್ಳುವ ಚಿತ್ರವದು' ಎಂದರು.

ಮಾರ್ಕ್‌ಟ್ವೈನ್—ಆದರೆ ಅದು ನೈಸರ್ಗಿಕ ಚಿತ್ರವಲ್ಲ.

ವಿಖ್ಯಾತ ಕಲಾಕಾರನ ಚಿತ್ರವನ್ನು ಆ ರೀತಿ ಹೀಯಾಳಿಸಿದುದನ್ನು ಕೇಳಿ ಚಕಿತರಾದ ರೋಗರ್ಸರು 'ಏಕೆ?' ಎಂದು ಕೇಳಿದರು.

'ಆಕೆಯ ಬಾಯಲ್ಲಿ ನಾಲ್ಕಾರು ಹೇರ್‌ಪಿನ್ ಇರಬೇಕಿತ್ತು' ಟ್ವೈನರ ಉತ್ತರ.

* * *

ಸಾರ್ಜೆಂಟ್—ಸಿಪಾಯಿ ನೀನು ಗುಂಡು ಹೊಡೆಯುವದನ್ನು ನೋಡುವಾಗ ನನಗೆ ಸಿಡಿಲಿನ ಜ್ಞಾಪಕವಾಗುತ್ತದೆ.

ಸಿಪಾಯಿ—ಅದು ಹೇಗೆ ಸಾರ್?

ಸಾರ್ಜೆಂಟ್—ಸಿಡಿಲು ಯಾವ ರೀತಿ ಒಮ್ಮೆ ಹೊಡೆದ ಸ್ಥಳಕ್ಕೆ ಪುನಹ ಹೊಡೆಯುವದಿಲ್ಲವೋ ಅದೇ ರೀತಿ ನಿನ್ನ ಗುಂಡೂ ಕೂಡ ಒಮ್ಮೆ ತಾಗಿದಲ್ಲಿಗೆ ಮತ್ತೊಮ್ಮೆ ತಾಗದು.

* * *

ಹೊಸ ಕೆಲಸಗಾರನೊಬ್ಬನನ್ನು ಮರ ಕುಯ್ಯುವ ಯಂತ್ರದಲ್ಲಿ ಕೆಲಸಕ್ಕೆ ಸೇರಿಸುತ್ತಾ ಮೇನೇಜರನು ಗರಗಸವನ್ನು ತೋರಿಸಿ ಅದು ಹೇಗೆ ಕೆಲಸ ಮಾಡುತ್ತದೆಯೆಂಬುದನ್ನು ವಿವರಿಸಿ 'ಅದು ಅಪಾಯಕರ. ಅದರೊಳಗೆ ಕೈ ಹಾಕೀಯೇ!' ಎಂದು ಎಚ್ಚರಿಸಿ ಹೊರಟು ಹೋದನು.

ಕೆಲಸ ಮಾಡುತ್ತಿದ್ದ ಗರಗಸವನ್ನು ಮುಟ್ಟಿ ನೋಡಲು ಕೈ ಚಾಚಿದಾಗ ಕೆಲಸಗಾರನ ಬೆರಳೊಂದು ಕತ್ತರಿಸಿ ಹೋಯಿತು ಕೆಲಸಗಾರನು ಕೂಗಿಕೊಂಡನು. ಮೇನೇಜರನು ಓಡಿ ಬಂದು ಏನೆಂದು ಕೇಳಲು ಕೆಲಸಗಾರನು ವಿವರಿಸುತ್ತಾ 'ನಾನು ಹೀಗೆ ಗರಗಸದ ಎದುರು ಕೈ ಇಟ್ಟೆ' ಎಂದು ಕೈ ನೀಡಿದನು. ಆತನ ಮತ್ತೊಂದು ಬೆರಳು ಕತ್ತರಿಸಲ್ಪಟ್ಟು ಕೆಳಗೆ ಬಿತ್ತು!

———

ಜ್ಞಾನದೀಪ

(೧)

ಗೋಡೆಯ ಎತ್ತರವಿದ್ದಷ್ಟೇ ಗೋಡೆಯ ಬೆಲೆ. ಮನಸ್ಸಿನ ಮಟ್ಟವಿದ್ದಷ್ಟೇ ಮಾನವನ ಘನತೆ.

(೨)

ಬಿಡ್ಡ ತುಂಬಿದ ಒರೆಯು ಶೋಭನೆನ್ನಿಸದು. ಜಾಣ್ಮೆ ತುಂಬಿದ ಜಡನೂ ಜಾಣನೆನ್ನಿಸಲಾರ.

(೩)

ಶ್ರಮದಿಂದ ಉಬ್ಬಸಪಡುವವನನ್ನು ರೋಗಿಯೆನಬೇಡ. ಕಾದಾಡಿ ಸೋತವನನ್ನು ಹೈಲಾಗವನೆನಬೇಡ.

ನುಡಿಮುತ್ತು

೨೩—೧೦—೫೩ನೇ ಕೊಡಗು ಶುಕ್ರವಾರ.

ಸರಕಾರದ ಆದಾಯ ಮತ್ತು ಮದ್ಯ ಪ್ರತಿಬಂಧ.

ಕೆಲವು ದಿನಗಳ ಹಿಂದೆ ಕೇಂದ್ರ ಸರಕಾರದ ಒಕ್ಕಲತನ ಮಂತ್ರಿಗಳಾದ ಡಾ. ಪಂಜಾಬ್‌ರಾವ್ ದೇಶಮುಖರವರು ರಾಜಕೋಟೆಯಲ್ಲಿ ಒಂದು ಭಾಷಣ ಮಾಡುತ್ತಾ ಪಾನನಿರೋಧವನ್ನು ವಿರೋಧಿಸಿ ಮಾತಾಡಿದರೆಂದೂ, ಪಾನನಿರೋಧದಿಂದ ಸರಕಾರದ ಆದಾಯ ಕಡಿಮೆಯಾಗಿ ದೇಶದಲ್ಲಿ ಆಗುತ್ತಿರುವ ಮತ್ತು ಆಗಬೇಕಾದ ರಾಷ್ಟ್ರ ರಚನಾ ಕಾರ್ಯಗಳಿಗೆ ಸಾಕಷ್ಟು ಹಣ ದೊರೆಯುತ್ತಿಲ್ಲವೆಂದೂ, ರಾಷ್ಟ್ರದ ಅಭಿವೃದ್ಧಿಗಾಗಿ ಇಂದು ಬೇಕಿರುವದು ಹಣ ಮತ್ತು ಹೆಚ್ಚು ಹಣವೆಂದೂ, ಅಂಥಾ ಹಣವು ಯಾವ ಮಾರ್ಗದಿಂದ ಬಂದರೂ ತಾವು ಸ್ವೀಕರಿಸಲು ತಯಾರಿರುವೆವೆಂದೂ ಹೇಳಿದುದಾಗಿ ಪತ್ರಿಕೆಗಳಲ್ಲಿ ವರದಿಯಾಗಿತ್ತು. ಈ ವಿಚಾರದಲ್ಲಿ ಮಂತ್ರಿಗಳ ಅಭಿಪ್ರಾಯವನ್ನು ಅನೇಕ ಕಡೆ ಟೀಕಿಸಲಾಗುತ್ತಿರಲು ಕೆಲವು ದಿನಗಳ ನಂತರ ಅವರು ಮತ್ತೊಂದು ಪ್ರಕಟಣೆ ಹೊರಡಿಸಿ ರಾಜ್ಯಗಳು ಅಭಿವೃದ್ಧಿ ಹೊಂದಬೇಕಾದರೆ ಈಗ ಕೆಲವು ಕಡೆ ಜಾರಿಯಲ್ಲಿ ತಂದಿರುವ ಪಾನನಿರೋಧ ಕಾರ್ಯಕ್ರಮಗಳ ಪುನರ್ವಿಮರ್ಶೆ ಮಾಡುವದು ಅಗತ್ಯವೆಂದು ಹೇಳಿದುದೆಂದೂ ವ್ಯಕ್ತಮಾಡಿರುವರು. ಈ ಮಂತ್ರಿಗಳ ಅಭಿಪ್ರಾಯಕ್ಕೆ ಬೆಂಬಲ ಕೊಡುವ ರೀತಿಯ ಪ್ರಕಟಣೆಗಳೂ, ಅಭಿಪ್ರಾಯಗಳೂ ಆಗಾಗ ಪತ್ರಿಕೆಗಳಲ್ಲಿ ಕೇಳಬರುತ್ತಿವೆ. ಪಾನನಿರೋಧವು ಸಾವಧಾನದಿಂದ ನಡೆಯಬೇಕಾದುದೆಂದೂ, ಸದ್ಯಕ್ಕೆ ರಾಷ್ಟ್ರರಚನೆ ಅತಿ ತ್ವರಿತದಿಂದ ಆಗಬೇಕಿರುವದರಿಂದ ಅದಕ್ಕೆ ಬೇಕಾದ ಹಣವನ್ನು ಯಾವುದೇ ಮಾರ್ಗದಿಂದ ಸಂಪಾದಿಸುವದು ಯುಕ್ತವೆಂದೂ ಅಭಿಪ್ರಾಯಪಡುವ ಕಾಂಗ್ರೆಸಿಗರೂ ಇತರರೂ ಬೇಕಾದಷ್ಟಿದ್ದಾರೆ. ಈ ಅಭಿಪ್ರಾಯಕ್ಕೆ ಬೆಂಬಲ ಕೊಡುವ ರೀತಿಯಲ್ಲಿಯೇ ಕೊಡಗು ಸರಕಾರವಾದರೂ ಈ ಮೊದಲು ಕೊಡುತಿದ್ದ ತಿಂಗಳಿಗೆ ಒಂದು ಕುಪ್ಪಿ ಸಾರಾಯಿಯ ಪರಿಮಾಣವನ್ನು ಎರಡು ಕುಪ್ಪಿಗೆ ಹೆಚ್ಚಿಸಿದುದೆಂದು ಹೇಳಬಹುದು.

ಮದ್ಯಪಾನ ನಿರೋಧವು ಕಾಂಗ್ರೆಸಿನ ತತ್ವಗಳಲ್ಲಿ ಒಂದು. ಕಾಂಗ್ರೆಸು ಒಪ್ಪಿರುವ ಕಾರ್ಯಕ್ರಮಗಳಲ್ಲಿ ಖಾದಿ ತತ್ವಕ್ಕಿಂತಲೂ ಪ್ರಮುಖ್ಯವಾದುದಿದು. ಕಾಂಗ್ರೆಸ್ಸಿನ ಜೀವಾಳವಾದ ಇಂಥ ತತ್ವಗಳ ಬಗ್ಗೆ ಮಂತ್ರಿಗಳಂಥಾ ಜವಾಬ್ದಾರಿ ಹೊತ್ತ ವ್ಯಕ್ತಿಗಳು ತಪ್ಪು ತಿಳುವಳಿಕೆ ಜನತೆಯಲ್ಲಿ ಹುಟ್ಟುವಂತೆ ಮಾತಾಡುವದು ಯೋಗ್ಯವಲ್ಲ. "ಮದ್ಯದಿಂದ ಬರುವ ಹಣವು ಕಲಂಕಿತವಾದುದು. ಅದನ್ನು ಎಂಥಾ ಅಭಿವೃದ್ಧಿ ಕಾರ್ಯಕ್ಕೂ ಉಪಯೋಗಿಸಲಾರೆ" ಎಂದು ಮಹಾತ್ಮಾ ಗಾಂಧಿಯವರು ಹೇಳುತಿದ್ದರು. ಅವರ ಅನುಯಾಯಿಗಳೆನ್ನುವ ಈ ಮಂತ್ರಿಗಳು ಮತ್ತು ಇತರ ಕಾಂಗ್ರೆಸಿಗರು ಈ ಕಲಂಕಿತ ಹಣದಿಂದ ರಾಷ್ಟ್ರರಚನೆ ಮಾಡಲು ಬಯಸುವದು ಆಶ್ಚರ್ಯದ ಸಂಗತಿ. ಮದ್ಯಪಾನದಿಂದ ಜನರ ಆರ್ಥಿಕ ಅವನತಿಯಾಗುವದಲ್ಲದೆ ನೈತಿಕ ಪತನವೂ ಆಗುವದೆಂಬುದನ್ನು ಪ್ರತಿಯೊಬ್ಬರೂ ಒಪ್ಪುವರು. ಪಾನನಿರೋಧವನ್ನು ಜಾರಿಗೆ ತಂದಿರುವ ಬೊಂಬಾಯಿ ಮೊದಲಾದೆಡೆ ಕುಡಿದು ಮತ್ತರಾಗಿ ವರ್ತಿಸುತ್ತಿದ್ದ ಶ್ರೀಮಂತರ ಕುರುಡು ಆನಂದಕ್ಕೆ ಧಕ್ಕೆ ಬಂದಿರುವದಾದರೂ ಬಡ ಜನರ ಜೀವನ ಮಟ್ಟವು ಉತ್ತಮವಾಗಿರುವದಲ್ಲದೆ, ಬಡ ಕುಟುಂಬಗಳಲ್ಲಿ ಆನಂದ ಹೆಚ್ಚಿದೆಯೆಂದು ತಿಳಿದುಬಂದಿದೆ. ಸ್ಥಿತಿವಂತನಾದ ಅನೀತಿಯ ಪ್ರಜೆಗಿಂಥಾ ನೀತಿವಂತರಾದ ಬಡ ಪ್ರಜೆಗಳಿಂದಲೇ ದೇಶದ ಉನ್ನತಿ ಹಾಗೂ ಶಾಂತಿ ಎಂಬುದನ್ನು ಈ ಜನರು ಮರೆಯಬಾರದು.

ವರ್ತಮಾನ.

ಮಡಿಕೇರಿ ಕೊಡವ ಸಭೆಯ ಮಹಾಸಭೆಯು ತಾ ೨೭ರಲ್ಲಿ ನಡೆದು ಶ್ರೀಗಳಾದ ಕೋದಂಡ ಬೋಪಯ್ಯ, (ಪ್ರೆಸಿಡೆಂಟ್) ಕುಟ್ಟಂಡ ತಿಮ್ಮಯ್ಯ, (ಗೌ. ಕಾರ್ಯದರ್ಶಿ) ನೆಲ್ಲಮಕ್ಕಳ ಕರುಂಬಯ್ಯ, ಬೊಮ್ಮಂಡ ಮುತ್ತಣ್ಣ, ಕೊಡಂದೆರ ಅಪ್ಪಚ್ಚು, ಬೊವೇರಿಯಂಡ ಬೆಳ್ಯಪ್ಪ, ಮಾದಂಡ ಅಪ್ಪಯ್ಯ ಇವರುಗಳನ್ನು ಕಾರ್ಯಕಾರಿ ಮಂಡಳಿಗೆ ಆರಿಸಲಾಯಿತು.

ತಾ. ೧೧ರಲ್ಲಿ ಕೊಡಗು ಜಮೀನ್ದಾರ ಸಂಘದ ಹಾಲಿನಲ್ಲಿ ಮಡಿಕೇರಿ ಜನಹಿತ ಸಂಘದ ಆಶ್ರಯದಲ್ಲಿ ವಿದ್ಯುದ್ದೀಪ ಉಪಯೋಗಿಸುವವರ ಬಹಿರಂಗ ಸಭೆ ನಡೆದು ಇನ್ನು ಮುಂದಕ್ಕೆ ವಿದ್ಯುಚ್ಛಕ್ತಿಗೆ ಸರಕಾರವು ಮಾಡತಕ್ಕ ದರ ಮತ್ತು ಇನ್ನಿತರ ಬಾಬುಗಳನ್ನು ದೀರ್ಘ ಚರ್ಚೆ ಮಾಡಿ ಸಂಬಂಧಪಟ್ಟ ಮಂತ್ರಿಗಳನ್ನು ಈ ಬಗ್ಗೆ ಕಂಡು ಇತ್ಯರ್ಥ ಮಾಡಲು ಶ್ರೀಗಳಾದ ಸಿ. ಯಂ. ರಾಮರಾವ್, ಕೆ. ಕಾಳಪ್ಪ, ಯಂ. ಐ. ಬಿದ್ದಯ್ಯ, ಯಂ. ವಿಶ್ವನಾಥ ಕಾಮತ್, ಕೆ. ಕೆ. ತಿಮ್ಮಯ್ಯ ಇವರಿಂದ ಕೂಡಿದ ಒಂದು ನಿಯೋಗ ಗೋಷ್ಠಿಯನ್ನು ಆರಿಸಲಾಯ್ತು.

ಕೊಡಗಿನಲ್ಲಿ ಈ ವರ್ಷ ಬತ್ತದ ಬೆಳೆ ಚೆನ್ನಾಗಿದ್ದು ಒಟ್ಟು ೬೨,೦೦೦ ಟನ್ ಬತ್ತ ಬೆಳೆಯಬಹುದೆಂಗೂ, ಇದರಲ್ಲಿ ಸುಮಾರು ೪೦,೦೦೦ ಟನ್ ದೇಶದ ಆಂತರಿಕ ಉಪಯೋಗಕ್ಕೆ ಬೇಕಿದ್ದು ಉಳಿದ ಸುಮಾರು ೨೨,೦೦೦ ಟನ್ನುಗಳನ್ನು ಹೊರ ಪ್ರಾಂತ್ಯಗಳಿಗೆ ಕಳುಹಿಸಬಹುದೆಂದೂ ಅಂದಾಜು ಮಾಡಲಾಗಿದೆ.

ಪಂಡಿತ ನೆಹರೂರವರ ಪುತ್ರಿ ಇಂದಿರಾ ಗಾಂಧಿಯವರ ಅಪೀಲಿನಂತೆ ಕೊರಿಯಾದಲ್ಲಿರುವ ಭಾರತೀಯ ಸೈನಿಕರಿಗೆ ದಿವಾಳಿ ಹಬ್ಬದ ಸಮಯದಲ್ಲಿ ಸಹಾಯಕ್ಕಾಗಿ ಕೊಡಗು ಸರಕಾರವು ಸಾವಿರ ರೂಪಾಯಿಗಳನ್ನು ಕಳುಹಿಸಿದೆಯೆಂದು ತಿಳಿದು ಬಂದಿದೆ.

ಕೇಂದ್ರ ಸರಕಾರದ ಸೆಂಟ್ರಲ್ ಪೂಲಿಗೆ ಕೊಡಬೇಕೆಂದು ನಿಶ್ಚಿತವಾಗಿರುವ ೮,೦೦೦ ಟನ್ ಅಕ್ಕಿಯನ್ನು ಕೇಂದ್ರದ ನಿರ್ದೇಶನದಂತೆ ಮೈಸೂರು ಮತ್ತು ಮಲಬಾರುಗಳಿಗೆ ಸರಬರಾಯಿ ಮಾಡಿ ಉಳುವ ರಿ ಬತ್ತವನ್ನು ತನಗೆ ಯುಕ್ತ ತೋರಿದಂತೆ ಮಾರಾಟ ಮಾಡುವ ಅನುವನ್ನು ಕೇಂದ್ರ ಸರಕಾರವು ಕೊಡಗು ಸರಕಾರಕ್ಕೆ ಕೊಟ್ಟಿದೆಯೆಂದೂ ಆದ್ದರಿಂದ ಮೇಲ್ಕಂಡ ೮,೦೦೦ ಟನ್ ಅಕ್ಕಿಯಲ್ಲದೆ ಉಳಿದುದನ್ನು ನೆರೆ ಪ್ರಾಂತಗಳಿಗೆ ಕಳುಹಿಸಲು ನಿಯಂತ್ರಣ ಇರಲಾರದೆಂದೂ ಪ್ರಕಟವಾಗಿದೆ.

ತಾ. ೧೫—೧೦—೫೩ ರ ಕೊಡಗು ಸಹಕಾರ ಬಂಧುವಿನಲ್ಲಿ ಕೊಡಗು ಸ್ಟೇಟ್ ಸಹಕಾರ ಬ್ಯಾಂಕಿನ ಡೈರೆಕ್ಟರುಗಳ ಸಭೆಯು ತಾ. ೧೦—೧೧—೫೩ ರಲ್ಲು ಜರುಗುವುದೆಂದು ಪ್ರಕಟವಾದದ್ದನ್ನು ರದ್ದುಮಾಡಿ ತಾ. ೩೧—೧೦—೫೩ ನೇ ಶನಿವಾರ ಹಗಲು ೧೧ ಗಂಟೆಗೆ ಜರುಗಿಸುತ್ತಾರೆಂದು **ತಿಳಿಯ** ಬರುತ್ತಿ.

ತಾ. ೧೧—೧೦—೫೩ನೇ ಆದಿತ್ಯವಾರ ಸೋಮವಾರಪೇಟೆ ಮಹಿಳಾ ಸಹಕಾರ ಸಮಾಜದಲ್ಲಿ ವಯಸ್ಕರ ರಾತ್ರಿ ಪಾಠ ಶಾಲೆಯಲ್ಲಿ ಕಳೆದ ೮ ತಿಂಗಳಿಂದ ಓದಿ ವ್ಯಾಸಂಗ ಮಾಡಿದ ೧೫ ಮಂದಿ ಮಹಿಳೆಯರ ಪೈಕಿ ೧೦ ಮಂದಿಗೆ ಯೋಗ್ಯತಾ ಪತ್ರ ವಿನಿಯೋಗ ಸಮಾರಂಭವನ್ನು ಕೊಡಗು ಜಿಲ್ಲಾ ವಿದ್ಯಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರಗಿಸಲಾಯಿತು. ಕೊಡಗಿನಲ್ಲಿ ನಿರಕ್ಷರಸ್ಥರಾದ ಮಹಿಳೆಯರು ವ್ಯಾಸಂಗ ಮಾಡಿ ತೇರ್ಗಡೆಯಾದುದು ಇದೇ **ಪ್ರಥಮ.** ಸದ್ರಿ ದಿನ ಸಂಜೆ ೭ ಗಂಟೆಯಿಂದ ರಾತ್ರಿ ೯ ಗಂಟೆಯ ವರೆಗೆ ಶ್ರೀಮತಿ ಪಿ. ಎಂ. ಗಣಪತಿ, ಕಮ್ಯೂನಿಟಿ ಹೆಲ್ತ್ ವಿಜಿಟರ್ ಕುಮಾರಿ ಎಂ. ಡಬ್ಲ್ಯು. ಕಾವೇರಮ್ಮ, ಶ್ರೀ ಬಿ ಜಿ. ಲಿಂಗಣ್ಣ, ಬಿ. ಜಿ. ಚೆನ್ನಬಸಪ್ಪ ಇವರ ಭಾಷಣಗಳೂ, ಚಲನ ಚಿತ್ರ ಪ್ರದರ್ಶನವೂ ನಡೆದವು.

ಕೊಡಗು ಸರಕಾರಿ ಕಾಲೇಜಿನ ಹಾಕಿ ಟೀಮಿನವರು ತಾ. ೨೪ರಲ್ಲಿ ಮಡಿಕೇರಿಯಿಂದ ಕಣ್ಣಾನೂರಿಗೆ ಹೋಗಿ ಅಲ್ಲಿ ಕೆಲವು ಆಟಗಳನ್ನು ಆಡಿ ತಾ ೨೮ರಲ್ಲಿ ತಲಚೇರಿಯಲ್ಲಿ ನಡೆಯುವ ಅಂತರ್ಕಾಲೇಜು ಹಾಕಿ ಪಂದ್ಯಾಟದಲ್ಲಿ ಮಂಗಳೂರು ಸೆಂಟ್ ಎಲೋಸಿಯಸ್ ಕಾಲೇಜ್ ಟೀಮಿನೊಡನೆ ಆಡುವರು.

ಚುನಾವಣಾ ಕ್ಷೇತ್ರಗಳ ಪುನರ್ವಿಮರ್ಶೆ ಮಾಡಲು ನೇಮಿತರಾಗಿರುವ ಸಮಿತಿಯ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಐಯ್ಯರ್ ಮತ್ತು ಸದಸ್ಯರೊಬ್ಬರಾದ ಶ್ರೀ ಸುಂದರಂರವರು ತಾ. ೨೦ರಲ್ಲಿ ಮಡಿಕೇರಿಗೆ ಬಂದು ಕೊಡಗು ಚುನಾವಣಾ ಕ್ಷೇತ್ರಗಳ ವಿಚಾರ ಪರಿಶೀಲಿಸಿ ಹಿಂತೆರಳಿದರು.

ಕೊಡಗಿನಲ್ಲಿ ರೇಷ್ಮೆ ಕೈಗಾರಿಕೆಯನ್ನು ಜಯಪ್ರದವಾಗಿ ಕೈಕೊಳ್ಳಲು ಸಾಧ್ಯವೇ ಎಂಬುದನ್ನು ಪರಿಶೀಲಿಸಲು ಈ ವಿಚಾರದಲ್ಲಿ ತಜ್ಞರಾದ ಮೈಸೂರಿನ ಕೆಲವು ಅಧಿಕಾರಿಗಳು ಕೊಡಗಿನಲ್ಲಿ ತಮ್ಮ ಪರಿಶೀಲನೆಯನ್ನು ನಡೆಸುತ್ತಿರುವರು.

ಭಾಗಮಂಡಲದಲ್ಲಿ ಯಾತ್ರಿಕರ ಅನುಕೂಲತೆಗಾಗಿ ದಿವಂಗತ ಕೋರವಂಡ ಮುತ್ತಣ್ಣನವರು ಕಟ್ಟಿಸಿದ ಛತ್ರವು ಕಳೆದ ಮಳೆಗಾಲದಲ್ಲಿ ಬಿದ್ದುಹೋದುದನ್ನು ಅವರ ಪುತ್ರ ಶ್ರೀ ಕೋರವಂಡ ತಿಮ್ಮಯ್ಯನವರು ರೂ. ೫೦೦೦ ವೆಚ್ಚದಿಂದ ಕಟ್ಟಿಸಿಕೊಟ್ಟಿರುವರು. ತಾ. ೧೭ರಲ್ಲಿ **ಕೊಡಗು ಮುಜ್ರಾಯಿ** ಇಲಾಖೆಯವರು ಶ್ರೀಯುತರ **ಉದಾರ**ತೆಯನ್ನು ಕೊಂಡಾಡಿ ಅವರಿಗೊಂದು **ಬಿ**ನ್ನವತ್ತಳೆಯನ್ನರ್ಪಿಸಿದರು.

ಇಂಡಿಯಾ ಚೈನಾ ಮೈತ್ರಿ ಸಂಘದ ಅಖಿಲ ಭಾರತ ಸಮ್ಮೇಳನವು ನವಂಬರ್

ತಾ. ೨೮ ಮತ್ತು ೨೯ರಲ್ಲಿ ಡೆಲ್ಲಿಯಲ್ಲಿ ನಡೆಯುವದೆಂದೂ ಕೊಡಗಿನಿಂದ ಎರಡು ಡೆಲಿಗೇಟುಗಳಿಗೆ ವಸತಿ ವ್ಯವಸ್ಥೆಯಿದೆಯೆಂದೂ ಹೋಗಲಿಚ್ಛಿಸುವವರು ಕೊಡಗಿನ ಶಾಖೆಯ ಕಾರ್ಯದರ್ಶಿಯವರಿಗೆ ಬರೆದುಕೊಳ್ಳಬಹುದೆಂದೂ ತಿಳಿಸುತ್ತಾರೆ.

ತಾ. ೨-೧೦-೫೩ರಲ್ಲಿ ಬೇಟೋಳಿ ಗ್ರಾಮದ ಶ್ರೀ ಪಟ್ರಪಂಡ ಬಿ. ಪೊಂಣಪ್ಪನವರು ಬರೀ ಕೆಲವು ದಿನಗಳ ಕಾಯಿಲೆಯಿಂದ ತಮ್ಮ ೫೩ನೇ ವಯಸ್ಸಿನಲ್ಲಿ ಶಿವಾಧೀನರಾದರು.

ಆಡು, ಕುರಿಗಳ ಮಾಂಸವನ್ನು ಅಧಿಕಾರಿಗಳು ಪರಿಶೀಲಿಸಿ ಕೆಂಪು ಮುದ್ರೆ ಹಾಕಿದ ೧ನೇ ತರಗತಿಯದಕ್ಕೆ ಸೇರಿಗೆ ರೂ. ೧-೧೨-೦, ಹಸುರು ಮುದ್ರೆಯ ಎರಡನೆ ತರಗತಿಯದಕ್ಕೆ ರೂ. ೧-೮-೦ ಯಂತೆಯೂ ತಲೆಯೊಂದಕ್ಕೆ ೦-೧೨-೦ ಯಂತೆಯೂ, ಶ್ವಾಸಕೋಶ, ಹೀಲಿ, ಕಲಿಜ ಮೊದಲಾದವುಗಳಿಗೆಲ್ಲಾ ಸೇರಿ ೦-೧೨-೦ ಯಂತೆಯೂ, ಕರುಳು, ಬೋಟಿ ಮೊದಲಾದವುಗಳಿಗೆ ಒಟ್ಟಾಗಿ ೦-೬-೦ ಯಂತೆಯೂ ನಾಲ್ಕು ಕಾಲುಗಳಿಗೆ ೦-೩-೦ ಯಂತೆಯೂ ನೋಟಿಫೈಡ್ ಏರಿಯಾ ಮತ್ತು ಮಾರ್ಕೆಟುಗಳಲ್ಲಿ ಬಿಕರಿ ಮಾಡಬೇಕೆಂದು ಸರಕಾರ ನಿಶ್ಚಯಿಸಿದೆ.

ಬಳ್ಳಾರಿಯ ಹೊಸಪೇಟೆಯಲ್ಲಿರುವ ಮಲಚೀರ ಶ್ರೀ ಪೂವಯ್ಯನವರು ಮಲಚೀರ ಪೂವಮ್ಮ ಚಂಗಪ್ಪ ಇವರ ಜ್ಞಾಪಕಾರ್ಥವಾಗಿ ರೂ. ೯೫೦ ರ ಸವೌಲ್ಯವನ್ನು ಪೊನ್ನಂಪೇಟೆ ಗವರ್ನಮೆಂಟ್ ಹೈಸ್ಕೂಲಿಗೆ ಕೊಟ್ಟಿರುವರು. ಈ ಸವೌಲ್ಯದ ಬಡ್ಡಿ ರೂ. ೪೭ ಯನ್ನು ಪ್ರತಿ ವರ್ಷ ಆ ಹೈಸ್ಕೂಲಿನಲ್ಲಿ ಎಸ್. ಎಸ್. ಎಲ್. ಸಿ. ತರಗತಿಯಲ್ಲಿ ಕನ್ನಡದಲ್ಲಿ ಅತ್ಯುಚ್ಚ ಅಂಕೆಯನ್ನು ಪಡೆಯುವ ವಿದ್ಯಾರ್ಥಿಗೆ ಇನಾಮಾಗಿ ಕೊಡುವಂತೆ ಕೇಳಿಕೊಂಡಿರುವರು.

ಗೋಣಿಕೊಪ್ಪಲು ಜನಹಿತ ಸಂಘದ ಪ್ರೆಸಿಡೆಂಟರಾದ ಶ್ರೀ ಪಿ. ಎಂ. ನಾಚ್ಚಯ್ಯನವರ ಅಧ್ಯಕ್ಷತೆಯಲ್ಲಿ ತಾ. ೯-೧೦-೫೩ನೇ ಶುಕ್ರವಾರ ರಾತ್ರಿ ಏಳು ಗಂಟೆಗೆ ಗೋಣಿಕೊಪ್ಪಲಿನಲ್ಲಿ ವಯಸ್ಕರ ಶಾಲೆ ತೆರೆಯುವ ಆರಂಭೋತ್ಸವವು ನಡೆಯಿತು. ಆ ದಿನ ೨೩ ಮಂದಿ ವಯಸ್ಕರು ವಿದ್ಯಾಭ್ಯಾಸಕ್ಕಾಗಿ ಶಾಲೆಗೆ ಸೇರಿರುವರು.

ತಾ. ೧೦-೧೦-೫೩ರಲ್ಲಿ ಭಾರತ ಸೇವಕ ಸಮಾಜದ ಮೀಟಿಂಗನ್ನು ಶ್ರೀಮಂಗಲ ಸಹಕಾರ ಮಾರ್ಕೆಟಿಂಗ್ ಸಂಘದ ಹಾಲಿನಲ್ಲಿ ಶ್ರೀ ಕೋಟ್ರಮಾಡ ಕುಶಾಲಪ್ಪನವರ ಅಧ್ಯಕ್ಷತೆಯಲ್ಲಿ ನಡೆಸಲಾಯ್ತು. ಆ ಸರ್ಕಲ್ ಸಹಕಾರ ಸಂಘಗಳ ಇನ್ಸ್‌ಪೆಕ್ಟರು ಶ್ರೀ ಎಂ. ಎ. ಪೂಣಚ್ಚನವರು ಮತ್ತು ಶ್ರೀ ಕೆ. ಸಿದ್ದಪ್ಪನವರು ಮಾತಾಡಿ ಮಹಾಜನರ ಸಹಾಯವನ್ನು ಕೋರಿದ ನಂತರ ವಸೂಲಾತಿಗೆ ಒಂದು ಸಮಿತಿಯನ್ನು ಆರಿಸಲಾಯಿತು

ಗ್ವಾಲಿಯರ್‌ನಲ್ಲಿ ತಾ. ೨೪ ರಿಂದ ನಡೆಯುವ ಜನತಾ ಸಭೆಯ ಮತ್ತು ಪ್ರಾಂತಗಳ ವಿಧಾನ ಸಭೆಗಳ ಸ್ಪೀಕರುಗಳ ಸಮ್ಮೇಳನಕ್ಕೆ ಕೊಡಗಿನ ಶಾಸನ ಸಭೆಯ ಸ್ಪೀಕರು, ಡೆಪ್ಯುಟಿ ಸ್ಪೀಕರು ಮತ್ತು ಸರಕಾರದ ಲಾ ಸೆಕ್ರೆಟರಿಗಳು ಹೋಗಿರುವರು.

ಹೊಸದಾಗಿ ನೇಮಕವಾಗಿರುವ ಕೊಡಗಿನ ಮೂರು ಸುಬೆದಾರರನ್ನು ಒಂದು ತಿಂಗಳ ಮಟ್ಟಿಗೆ ತರಬೇತಿಗಾಗಿ ಮದುರೆಗೆ ಕಳುಹಿಸಿರುವರು. ಅಲ್ಲಿ ಅವರು ಸಮಾಜ ವಿಕಾಸ ಯೋಜನೆಯ ವಿಚಾರ ಹೆಚ್ಚಿನ ಅನುಭವ ಪಡೆಯುವರು.

ವಿದ್ಯಾಧಿಕಾರಿಗಳಲ್ಲಿ.

ನಿಮ್ಮ ಆಫೀಸಿನಿಂದ ತಾ. ೩-೧೦ ೫೩ ರಲ್ಲಿ ಹೊರಟ ಒಂದು ಟ್ರಾನ್ಸ್‌ಫರ್ ಆರ್ಡರು ತಾ. ೬ರಲ್ಲೇ ಬದಲಾಗಲು ಕಾರಣವೇನು? ಟ್ರೈನಿಂಗ್ ಆಗಿ ಬಹು ವರ್ಷಗಳಿಂದ ಹೊರಗೆ ಕೆಲಸ ಮಾಡುತ್ತಿದ್ದ ಒಬ್ಬ ವಯಸ್ಸಾದ ಉಪಾಧ್ಯಾಯರನ್ನು ಅವರ ಮನೆಯ ಹತ್ತಿರಕ್ಕೆ ವರ್ಗಮಾಡುವ ವಿಶೇಷ ದಯೆಗೆ ಕಾರಣವೇನು? ಅವರ ಬದಲು ತರಬೇತಾಗದ ಈ ವರ್ಷವೇ ಕೆಲಸಕ್ಕೆ ಸೇರಿದವರೊಬ್ಬರನ್ನು ವರ್ಗಾಯಿಸಿದ್ದು ಆ ಹೊಸ ಅಧ್ಯಾಪಕರು ತಾ. ೫ ರಲ್ಲಿ ಸಿಕ್ಕಿದ ಆರ್ಡರನ್ನು ನೋಡಿ ತಾ. ೬ ರಲ್ಲಿ ಮಡಿಕೇರಿಗೆ ಬಂದು ಅಂದು ಸಾಯಂಕಾಲವೇ ಸ್ಟೇ ಆರ್ಡರ್ ಕೈಯಲ್ಲೇ ತರಲು ಸಾಧ್ಯವಾದುದು ಹೇಗೆ? ಹಾಗಾದರೆ ವರ್ಗಾವರ್ಗಿಗಳನ್ನು ಒಂದು ತತ್ವಪ್ರಕಾರ ಮಾಡುತ್ತಿಲ್ಲವೆಂದರ್ಥವೇ? ಇಂದು ಮಾಡಿದ ಆರ್ಡರನ್ನು ಮೂರನೆ ದಿನ ಬದಲಾಯಿಸುವ ಪ್ರಮೇಯವೇನು?

'ವಿದ್ಯಾಭಿಮಾನಿ.'

ಕರ್ತವ್ಯ ಚ್ಯುತಿ.

ತೋಟದ ಮಾಲೀಕರೊಬ್ಬರು ತಮ್ಮ ತೋಟದಿಂದ ಪಾಸ್ ಇಲ್ಲದೆ ಎರಡು ಗಾಡಿ ಸೌದೆಯನ್ನು ಹತ್ತಿರದ ಪೇಟೆಗೆ ಮಾರಾಟಕ್ಕೆ ಕಳುಹಿಸಿದ್ದರು. ಪೇಟೆಯಲ್ಲಿದ್ದ ಶ್ಯಾನುಭೋಗರು ಗಾಡಿಯವನನ್ನು ತಡೆದು ಪಾಸು ಕೇಳಿದರು. ಗಾಡಿಯವನು ತನ್ನ ಸಾಹುಕಾರರು ಕೊಟ್ಟ ಚೀಟಿಯನ್ನು ತೋರಿಸಿ, 'ಈ ಸೌದೆ ಕೊಡಗಿನ....ಇಂಥವರದ್ದು' ಎಂದರು. ಶ್ಯಾನುಭೋಗರು ಪಾಸ್ ಇಲ್ಲದ ಸೌದೆಯನ್ನು ಚಾರ್ಜು ಮಾಡದೆ ಬಿಟ್ಟುಬಿಟ್ಟರು. ಅವರು ಯಾರೇ ಆಗಿರಲಿ, ಸರಕಾರದ ಹಿತ ಬಯಸುವವರು ಹೀಗೆ ಮಾಡಬಹುದೇ? ಹೀಗೆ ಮಾಡಿದವರನ್ನು ಕಂಡೂ ಕೂಡ ಶಿಕ್ಷೆಗೊಳಗುಮಾಡದೆ ಬಿಡಬಹುದೇ?

ಪ್ರತ್ಯಕ್ಷ ಕಂಡವ.

ಸ್ವರಾಜ್ಯ ಯಾರಿಗೆ?

ಸರಕಾರದ ಆಶ್ರಯದಲ್ಲಿ ನಡೆಯುತ್ತಿರುವ ಕೆಲವು ವಿಚಿತ್ರ ಸಂಗತಿಗಳನ್ನು ಜನತೆಯ ಮುಂದಿಡುವದೇ ಈ ಪತ್ರದ ಉದ್ದೇಶ.

ಮಡಿಕೇರಿಯಲ್ಲಿ ಯಾವುದೇ ಮನೆ ಖಾಲಿ ಬಿದ್ದರೆ ಅದನ್ನು ಬಾಡಿಗೆಗೆ ಪಡೆಯುವ ಪ್ರಥಮ ಹಕ್ಕು ಸರಕಾರಿ ಉದ್ಯೋಗಿಗಳಿಗೆ—ಅದರಲ್ಲೂ ಗಜೆಟೆಡ್ ಉದ್ಯೋಗಿಗಳಿಗೆ! ಅರ್ಜಿ ಬರೆದುಕೊಂಡು ವರ್ಷವಾದರೂ ಮನೆ ದೊರೆಯದ ಚಿಕ್ಕ ಉದ್ಯೋಗಿಗಳೂ ಸರಕಾರದವರೂ ಇದ್ದಾರೆಂಬುದು ರೆಂಟ್ ಕಂಟ್ರೋಲ್ ಆಫೀಸರರಿಗೆ ಬಂದ ಅರ್ಜಿ ಫೈಲನ್ನು ನೋಡಿದರೆ ತಿಳಿಯಬಹುದು. ಆದರೆ ದೊಡ್ಡ ಉದ್ಯೋಗಿಗಳಿಗೆ ಹೇಗಾದರೂ ಮಾಡಿ ಮನೆ ಮಾಡಿಕೊಡಲು ತುಂಬಾ ಗಮನವೀಯಲಾಗುತ್ತದೆ ಎಂಬುದು ಎಲ್ಲರ ಅನುಭವದ ಮಾತು.

ಸರಕಾರಿ ಡೈರಿ ಫಾರಮಿನಿಂದ ಮಾರಾಟಕ್ಕೆ ಮಡಿಕೇರಿಗೆ ಬರುವ ಹಾಲೂ ಕೂಡ ಮೇಲಧಿಕಾರಿಗಳಿಗೆ ಹೆಚ್ಚಾಗಿ ಹಂಚಲ್ಪಟ್ಟು ಉಳಿದುಳಿದರೆ ಕೆಳಗಿನವರಿಗೆ ದೊರೆಯುತ್ತದೆ. ಸಾರ್ವಜನಿಕರಿಗೂ ಚಿಕ್ಕ ಉದ್ಯೋಗದವರಿಗೂ ಎಂದಿನಂತೆ ಮಡಿಕೇರಿ 'ಗೋಕುಲ'ದ ಹಾಲೇ ಗತಿ!

ಮೊನ್ನೆಯಾಗಿ ಮಡಿಕೇರಿಯ ವಿದ್ಯುಚ್ಛಕ್ತಿ ಸರಬರಾಯಿಯ ಏರ್ಪಾಡು ಪ್ರಾರಂಭವಾಗಿದೆ. ಈ ಸರಬರಾಯಿ ಕೇವಲ ಸರಕಾರಿ ಕಚೇರಿಗಳಿಗೂ, ಗಜೆಟೆಡ್ ಆಫೀಸರುಗಳ ಮನೆಗಳಿಗೂ ಮಾತ್ರ. ಉಳಿದವರಿಗೆ ಸೀಮೆಣ್ಣೆ ದೀಪವೇ ಗತಿ! ಈ ರೀತಿಯ ಏರ್ಪಾಡುಗಳೇಕೆ? ಜನಹಿತ ಸರಕಾರವು, ಜನತೆಯದೆಂದೇ ಹೇಳಿಕೊಳ್ಳುವ ಸರಕಾರವು ಈ ರೀತಿ ಮಾಡಲೇಕೆ? ಎಲ್ಲರಿಗೂ ನವಂಬರ್ ಒಂದರಿಂದಲೇ ಬೆಳಕು ಕೊಟ್ಟಿದ್ದರೆ ಎ. ಕ್ಕಿರಲಿಲ್ಲವೇ? ಗಜೆಟೆಡ್ ಉದ್ಯೋಗಿಗಳಿಗೆ ಮಾತ್ರ ಕೊಟ್ಟು ಉಳಿದವರಲ್ಲಿ ಒಂದು ರೀತಿಯ ಅಸಮಾಧಾನ ಹುಟ್ಟಿಸಲು ಆಸ್ಪದ ಕೊಡಬೇಕೆ? ಇದನ್ನೆಲ್ಲಾ ಕಣ್ಣಾರೆ ಕಾಣುತ್ತಿರುವ ಬಡನಾಗರಿಕರು "ಸ್ವಾತಂತ್ರ್ಯ ಬಂದುದು ಯಾರಿಗೆ?" ಎಂದು ಪ್ರಶ್ನಿಸಿದರೆ ಅದು ವಿಪರೀತವೇ?

'ಬಡ ನಾಗರಿಕ'

ಇದು ಚೆನ್ನಾಗಿಲ್ಲ.

ತಾ. ೭ರಲ್ಲಿ ಸೋಮವಾರಪೇಟೆ ಶಾಲೆಯಲ್ಲಿ ಶ್ರೀ ವಿಷಕಂಠಯ್ಯನವರ 'ಅಮೋಘವಾದ ಲಾವಣಿ' ಏರ್ಪಾಡಾಗಿತ್ತು. ನಾಲ್ಕು ಗಂಟೆಗೆಂದು ಕಾರ್ಯಕ್ರಮ ನಿಶ್ಚಿತವಾಗಿದ್ದರೂ ೫-೧೫ರ ವರೆಗೆ ಕಾರ್ಯಕ್ರಮ ಪ್ರಾರಂಭವಾಗಲಿಲ್ಲ. ಸರಕಾರದ ಜೀಪು ಪ್ರಯಾಣಕ್ಕಿದ್ದರೂ ಒಂದು ಗಂಟೆ ತಡವಾಗಿ ಬಂದುದು ಸರಿಯಲ್ಲ. ನೆರೆದಿದ್ದ ಸುಮಾರು ೨೦೦ ಸಾರ್ವಜನಿಕರ ಒಂದು ಗಂಟೆಯ ಅರ್ಥಾತ್ ಒಟ್ಟಾರೆ ೨೦೦ ಗಂಟೆಗಳ ಸಮಯ ಇದರಿಂದಾಗಿ ವ್ಯರ್ಥವಾಯಿತು. ಜನತೆಯ ಸಮಯದ ದುರುಪಯೋಗ ಹೀಗಾಗಬಾರದು.

ವಿಷಕಂಠಯ್ಯನವರ ಲಾವಣಿ ಚೆನ್ನಾಗಿದ್ದರೂ ಹಳ್ಳಿಯವರಿಗೆ ಅರ್ಥವಾಗದು. ಖರ್ಚು ಕೊಟ್ಟು ಶ್ರೀಯುತರನ್ನು ಜನಹಿತ ದೃಷ್ಟಿಯಿಂದ ನೇಮಿಸಿರಬಹುದಾದರೂ ಗ್ರಾಮೀಣ ಜನರಿಗೆ ಅವರ ಲಾವಣಿಯಿಂದ ಹೆಚ್ಚಿನ ಪ್ರಯೋಜನ ಆಗದು. ಲಾವಣಿಗಾರರು ಕೊಡಗು ದೇಶವನ್ನು ಹೊಗಳುವದು ಸರಿ. ಆದರೆ ಅದರ ಜೊತೆಯಲ್ಲೇ ಇಲ್ಲಿಯ ಅಧಿಕಾರಿಗಳನ್ನೂ ಮಂತ್ರಿಗಳನ್ನೂ ಉತ್ಪ್ರೇಕ್ಷೆ ಮಾಡಿ ಹೊಗಳುವದು ಸರಿಯಲ್ಲ. ಸರಕಾರವೇ ಖರ್ಚು ಕೊಟ್ಟು ನೇಮಿಸಿರುವ ವ್ಯಕ್ತಿ ಆ ರೀತಿ ಹೊಗಳಿದರೆ ಆ ಹೊಗಳಿಕೆಗೆ ಬೆಲೆಯೂ ಇಲ್ಲ. ಅದರಿಂದ ಯಾರಿಗೂ ಗೌರವವೂ ಇಲ್ಲ.

'ವಿಲ್ಸಾ' ಸೋಮವಾರಪೇಟೆ.

ಪ್ಯೂನುಗಳ ಕೋರಿಕೆ.

ಸರಕಾರಿ ಅಧಿಕಾರಿಗಳಿಗೆ ಬೆಳಗೆ ೧೦ ಗಂಟೆಯಿಂದ ಸಾಯಂಕಾಲ ಐದು ಗಂಟೆಯ ವರೆಗೆ ಕೆಲಸವೆಂದು ನಿಶ್ಚಿತ ಸಮಯ ಗೊತ್ತುಮಾಡಲ್ಪಟ್ಟಿದೆ. ಹಳ್ಳಿ, ಗ್ರಾಮಗಳಲ್ಲಿ ಕೂಲಿ ಮಾಡುವ ಮಜೂರರಿಗೂ ಸಮಯ ನಿಗದಿ ಮಾಡಲ್ಪಟ್ಟಿದೆ. ಆದರೆ ಸರಕಾರಿ ಕೆಲಸ ಮಾಡುವ ಪ್ಯೂನುಗಳಿಗೆ ಈ ರೀತಿಯಲ್ಲಿ ಸಮಯ ನಿಶ್ಚಯಿಸದಿರುವದು ತುಂಬಾ ತೊಂದರೆಗೆ ಕಾರಣವಾಗಿದೆ. ಪ್ಯೂನುಗಳು ದಿನಕ್ಕೆ ಎಂಟುಘಂಟೆ ಆಫೀಸು ಡ್ಯೂಟಿ ಮಾಡಿದರೂ ಸಾಲದು. ಮತ್ತೆ ಅಧಿಕಾರಿಗಳ ಮನೆಯಲ್ಲಿ ಕಡಿಮೆ ಆರು ಗಂಟೆ ಡ್ಯೂಟಿ ಮಾಡಬೇಕು. ಅನೇಕರು ಬೆಳಿಗೆ ೫ ಗಂಟೆಯಿಂದ ರಾತ್ರೆ ೧೧ ಗಂಟೆಯವರೆಗೆ ಬಿಡುವಿಲ್ಲದೆ ದುಡಿಯಬೇಕಾಗುತ್ತೆ. ಆಫೀಸಿನಲ್ಲಿ ಎಂಥಾ ಕಷ್ಟ ಕೆಲಸವಾದರೂ ಮಾಡಬಹುದು. ಆದರೆ ಅಧಿಕಾರಿಗಳ ಮನೆಯಲ್ಲಿ ಅವರ ಹೆಂಗಸು, ಮಕ್ಕಳ ಕಡೆಗೆ ಅವರ ನೆಂಟರ ಕೆಲಸ ಮಾಡಿ ಪೂರೈಸುವದು ಆಗದ ಕೆಲಸ. ಆದ್ದರಿಂದ ನಮ್ಮ ಇಂದಿನ ಜನಹಿತ ಸರಕಾರವು ಆಫೀಸು ಪ್ಯೂನುಗಳು ಅಧಿಕಾರಿಗಳ ಮನೆ ಕೆಲಸ ಮಾಡದ ರೀತಿಯ ಒಂದು ಕಾನೂನು ಮಾಡಬೇಕಾಗಿ ಅರಿಕೆ.

'ಪ್ರಜಾ ಸರಕಾರದ ಸೇವಕ.'

ಭೂದಾನವೇ ?

ಪ್ರಜಾಸರ್ಕಾರವು ಸ್ಥಾಪನೆಯಾಗುವ ಮುನ್ನ ಗೋಣಿಕೊಪ್ಪಲು ಮಾರ್ಕೆಟ್ ಬಳಿ ಇದ್ದ ಸೇಂದಿ ಅಂಗಡಿಯು ರದ್ದಾಯಿತಷ್ಟೆ. ಅದು ರದ್ದಾದೊಡನೆ ಆ ಅಂಗಡಿಯ ಕಂಟ್ರಾಕ್ಟುದಾರರು ಆ ಸ್ಥಳವನ್ನು ಸರಕಾರಕ್ಕೆ ಬಿಟ್ಟು ಕೊಡದೆ ಅಲ್ಲಿ ವಾಸವಿದ್ದ, ಹುಲ್ಲಿನ ಮನೆ ಇದ್ದುದನ್ನು ಕಿತ್ತು ಹಾಕಿ ಕ್ರಮೇಣ ಮಣ್ಣಿನ ಗೋಡೆ ಮಾಡಿಗಿ ಮನೆ ಕಟ್ಟಲಿಕ್ಕೆ ಪ್ರಾರಂಭಿಸಿದರು. ಆಗ ಇಲ್ಲಿಯ ಜನರು ಅದಕ್ಕೆ ವಿರುದ್ಧ ತಮ್ಮ ಅಭಿಪ್ರಾಯವನ್ನು ಸರಕಾರಕ್ಕೆ ವ್ಯಕ್ತಪಡಿಸಿದರು. ಆದರೆ ಸರಕಾರವು ಸೂಕ್ತ ಸಮಯಕ್ಕೆ ಹುಕುಂ ಕಳುಹಿಸದೆ ತಡಮಾಡಿದುದರಿಂದ ಕಂಟ್ರಾಕ್ಟರರು ಗೋಡೆ ಎಬ್ಬಿಸಿ ಮನೆ ಕೆಲಸ ಪೂರ್ತಿ ಮಾಡುವ ಅವಕಾಶ ಸಿಕ್ಕಿತು. ಮನೆ ಕಟ್ಟಿ ಕಳೆದ ನಂತರ, ಮನೆ ಕಟ್ಟಕೂಡದು ಎಂಬ ಹುಕುಂ ಬಂದಿತು. ತತ್ಪರಿಣಾಮವಾಗಿ ಕಂಟ್ರಾಕ್ಟರರು ಅದರ ಒತ್ತಿನಲ್ಲಿ ಇನ್ನೊಂದು ಮನೆ ಕಟ್ಟಲಿಕ್ಕಾಗಿ ಇಟ್ಟಿಗೆಯ ಕಂಬ ಕಟ್ಟುತ್ತಿದ್ದುದನ್ನು ಬಾಕಿ ಮಾಡಿದರು. ಸ್ವಲ್ಪ ಸಮಯದಲ್ಲೇ ಮಹಾ ಚುನಾವಣೆ ನಡೆಯಬೇಕಿದ್ದುದರಿಂದ ಸಾಧಾರಣ ಒಂದು ವರ್ಷದ ತನಕ ಈ ಪ್ರಶ್ನೆ ಹಾಗೇ ನಿಂತುಬಿಟ್ಟಿತು.

ಚುನಾವಣೆ ಕಳೆದು ಸಾಧಾರಣ ಐದಾರು ತಿಂಗಳುಗಳ ನಂತರ ಜನರ ಕೂಗು ಈ ಕೃತ್ಯದ ವಿರುದ್ಧ ಬಹಳ ಜೋರಾದುದರಿಂದ ಸರಕಾರವು ಎಚ್ಚರಿಸಿಕೊಂಡು ಆ ಸ್ಥಳವನ್ನು ಬಿಟ್ಟು ಬಿಡಬೇಕೆಂದು ಕಂಟ್ರಾಕ್ಟರರಿಗೆ ಹುಕುಂ ಕಳುಹಿಸಿತು. ಆ ಸ್ಥಳವನ್ನು ಉಳಿಸಿಕೊಳ್ಳಬೇಕೆಂದು ಕಾಣಬೇಕಾದವರನ್ನು ಕಂಡು, ಹೇಳಬೇಕಾದುದನ್ನು ಹೇಳಿದರ ಪರಿಣಾಮವಾಗಿ ಸರಕಾರವು ಸ್ಥಳೀಯ ನೋಟಿಫೈಡ್ ಏರ‍್ಯಾದ ಕಮಿಟಿ ಮೆಂಬರುಗಳ ಅಭಿಪ್ರಾಯಕ್ಕೆ ಬಿಟ್ಟಿತು. ಕಮಿಟಿ ಮೆಂಬರುಗಳು ಆ ಸ್ಥಳವು ಬಹಳ ಪ್ರಧಾನವಾದ ಸ್ಥಳ ನೋಟಿಫೈಡ್ ಏರ‍್ಯಕ್ಕೆ ಬಹಳ ಆವಶ್ಯವಿದೆ ಎಂದು ತಮ್ಮ ವರದಿ ಕಳುಹಿಸಿದುದರಿಂದ ಸರಕಾರಕ್ಕೆ ಯಾವ ಉಪಾಯವೂ ಇಲ್ಲದೆ ಮನೆಯನ್ನು ಮುರಿಯಬೇಕೆಂದು ಹುಕುಂ ಕಳುಹಿಸಿತು. ಆ ಹುಕುಂ ಮೇರೆ ಮನೆಯನ್ನು ಮುರಿಯಲು ಅಕ್ಟೋಬರ್ ತಿಂಗಳು ೯ನೇ ತಾರೀಕಿನ ದಿವಸ ಸುಭೆದಾರರೂ, ಪೋಲೀಸಿನವರೂ ಪೇಟೆಯ ಜನರೂ ನೆರೆದಿದ್ದರು. ತತ್ಸಮಯಕ್ಕೆ ಇಬ್ಬರು ವ್ಯಕ್ತಿಗಳು ಅದಕ್ಕೆ ತಾವು ಜಾಮೀನು ನಿಲ್ಲುವೆವೆಂತಲೂ, ಹದಿನೈದು ದಿನಗಳೊಳಗೆ ಟೌನು ವಾಸಿಗಳ ಸರಿಯಾದ ಅಭಿಪ್ರಾಯ ಸರಕಾರಕ್ಕೆ ತಿಳಿಸುವೆವೆಂತಲೂ ಸುಭೆದಾರರೊಡನೆ ಮಾತನಾಡಿದುದರ ಪರಿಣಾಮವಾಗಿ, ಹುಕುಂ ಸಮೇತ ಮನೆಯನ್ನು ಮುರಿಯಲಿಕ್ಕೆ ಬಂದಿದ್ದವರು, ಹಾಗೆ ಸುಮ್ಮನೆ ಹಿಂತಿರುಗಿದರು. ಇದರ ರಹಸ್ಯವೇನಿರಬಹುದೆಂದು ಇನ್ನು ಮುಂದಕ್ಕೆ ನೋಡಬೇಕಿದೆ.

ಟೌನಿನ ಜನರ ಅಭಿಪ್ರಾಯ ತೆಗೆಯಲು ಒಪ್ಪಿಕೊಂಡ ಇಬ್ಬರು ವ್ಯಕ್ತಿಗಳು ತಮ್ಮ ಜೊತೆಗೆ, ಸುತ್ತುಮುತ್ತಲಿನ ಕೆಲವು ಗ್ರಾಮಸ್ಥರನ್ನೂ ಟೌನಿನ ಕೆಲವು ಜನರನ್ನು ಹೆಚ್ಚುಕಡಿಮೆ ಹತ್ತಿಪ್ಪತ್ತು ಜನರನ್ನು ಸೇರಿಸಿಕೊಂಡು ತಾ. ೧೪ರ ದಿವಸ ಒಂದು ಅರ್ಜಿ ತಯಾರಿಸಿಕೊಂಡು ಪ್ರತಿ ಮನೆಗಳಿಗೂ, ಪ್ರತಿ ಅಂಗಡಿಗಳಿಗೂ ಹೊಕ್ಕು ಹೆಚ್ಚು ಕಡಿಮೆ ೨೦೦ ಚಿಲ್ಲರೆ ಸೈನ್ ಜಮಾಯಿಸಿರುವರು. ೧೨೦೦ ಚಿಲ್ಲರೆ ಓಟರುಗಳಿರುವ ಈ ಟೌನಿನಿಂದ ಗ್ರಾಮಸ್ಥರೂ ಸೇರಿ ೨೦೦ ಚಿಲ್ಲರೆ ಸೈನ್ ಜಮೆ ಮಾಡಿದರೆ ಉಳಿದವರಿಗೆ ಯಾವ ಹಕ್ಕುದಾರಿಕೆಯೂ ಇರುವುದಿಲ್ಲವೆ ? ಇದರಲ್ಲಿ ಗ್ರಾಮಸ್ಥರ ಸೈನ್ ವಜ ತೆಗೆದರೆ ಹೆಚ್ಚು ಕಡಿಮೆ ನೂರು ಚಿಲ್ಲರೆ ಸೈನ್ ಟೌನುವಾಸಿಗಳದ್ದಿರಬಹುದು. ನೋಟಿಫೈಡ್ ಏರ‍್ಯ ಕಮಿಟಿ ಮೆಂಬರುಗಳು ತಮ್ಮ ತೀರ್ಮಾನದಂತೆ ಟೌನಿಗೆ ಆ ಸ್ಥಳವು ಅವಶ್ಯವಿರುವುದರಿಂದ ಈ ಅರ್ಜಿಗೆ ತಾವು ಯಾವ ತೀರ್ಮಾನವನ್ನು ಕೊಡಲಾರೆವೆಂದು ಬರೆದು ಸರಕಾರಕ್ಕೆ ಕಳುಹಿಸಿರುವರು. ನಮ್ಮ ಪ್ರಜಾ ಸರಕಾರವು ಸಿರಿವಂತರಿಗೆ ಭೂದಾನ ಮಾಡದೆ ಈ ಘಟನೆಯಲ್ಲಿ ನೋಟಿಫೈಡ್ ಏರ‍್ಯಾದವರ ಅಭಿಪ್ರಾಯದಂತೆ ವರ್ತಿಸಿ ಪಟ್ಟಣದ ಹಿತಕ್ಕಾಗಿ ಆ ಜಾಗವನ್ನು ಕಂಟ್ರಾಕ್ಟರಿಂದ ಬಿಡಿಸಬೇಕಿದೆ.

ಪಟ್ಟಣಿಗ.

ಆಸ್ತಿಕರ ಮಸೂದೆ

ಕೇಂದ್ರದ ಜನತಾ ಸಭೆಯು ಆಸ್ತಿಕರ ಮಸೂದೆಯನ್ನು ಅಂಗೀಕರಿಸಿ ಅದು ಈಗ ರಾಷ್ಟ್ರಪತಿಗಳ ಮನ್ನಣೆ ಪಡೆದು ತಾ. ೧೫ರಿಂದ ಜಾರಿಗೆ ಬಂದಿರುವದು. ಈ ಶಾಯಿದೆ ಪ್ರಕಾರ ಯಾವನೊಬ್ಬನು ಮರಣಹೊಂದಿದರೆ ಆತನ ಆಸ್ತಿಯು ನಿಶ್ಚಿತ ಪ್ರಮಾಣಕ್ಕಿಂಥಾ ಹೆಚ್ಚು ಇದ್ದರೆ ಆ ಆಸ್ತಿಯ ಬೆಲೆಯ ಮೇಲೆ ಈ ಆಸ್ತಿ ಕರವು ಹೇರಲ್ಪಡುವದು ಮರಣಾನಂತರ ಹಸ್ತಾಂತರ ಹೊಂದಿದ ಆಸ್ತಿಯ ಮೇಲೆ ಈ ಕಂದಾಯ ಹಾಕಲ್ಪಡುತ್ತದೆ. ಸ್ಥಿರ ಚರ ಆಸ್ತಿಯ ಮೇಲೆ, ಅವುಗಳನ್ನು ಮಾರಾಟ ಮಾಡಿದ ಹಣದ ಮೇಲೆ, ಇಲ್ಲವೇ ಆ ಹಣದಿಂದ ತೊಡಗಿದ ಉದ್ಯಮದ ಮೇಲೆ ಈ ಕಂದಾಯ ಹಾಕಲ್ಪಡುತ್ತದೆ. ಸಾರ್ವಜನಿಕ ಉದ್ದೇಶಕ್ಕಾಗಿ ಕೈಕೊಂಡ ಉದ್ಯಮಗಳಿಗೂ, ಮಾಡಲ್ಪಟ್ಟ ಆಸ್ತಿಗಳಿಗೂ ಈ ಕಂದಾಯ ಅನ್ವಯಿಸುವದಿಲ್ಲ. ಮೃತನ ಆಸ್ತಿಯನ್ನು ವಹಿಸಿಕೊಳ್ಳುವ ಆಡಳಿತೆಗಾರರು, ಅವಿಭಕ್ತ ಕುಟುಂಬದ ವ್ಯವಸ್ಥಾಪಕರು ಪಾಲಕರು, ಸಮಿತಿ ಯಾ ಯಾವುದೇ ವ್ಯಕ್ತಿ ಇವರೆಲ್ಲರೂ ಈ ಕಂದಾಯ ಕೊಡಲು ಬದ್ಧರಾಗಿರುವರು. ಈ ಕಾಯಿದೆಯ ಮೇಲೆ ತಯಾರಾಗಿರುವ ನಿಯಮಗಳು ಗಜೆಟ್ಟಿನಲ್ಲಿ ಪ್ರಕಟವಾಗಿದ್ದು ಆ ನಿಯಮಗಳ ಬಗ್ಗೆ ಸಾರ್ವಜನಿಕರು ಅಭಿಪ್ರಾಯ ಕೊಡಬಹುದಾಗಿದೆ.

ಈ ಕಂದಾಯವು ಹೆಚ್ಚಾಗಿ ಶ್ರೀಮಂತರಿಗೆ ಅನ್ವಯವಾಗುತ್ತದೆ. ಎರಡನೇ ಮಹಾ ಯುದ್ಧದ ನಂತರ ಅನೇಕರು ಅಪಾರ ಸಂಪತ್ತನ್ನು ಗಳಿಸಿರುವದರಿಂದ ಈ ಏರುತಗ್ಗುಗಳನ್ನು ಕ್ರಮಶಃ ಸರಿ ಮಾಡಲು ಈ ಮಸೂದೆಯನ್ನು ತರಲಾಗಿದೆಯೆಂದು ಹೇಳಲಾಗಿದೆ.

ಮುಸ್ಲಿಂ ಲೀಗಿನ ಅಧ್ಯಕ್ಷ ಪದ

ಪಾಕಿಸ್ತಾನದ ಪ್ರಧಾನಿ ಮಹಮುದಾಲಿಯವರು ಪಾಕಿಸ್ತಾನದ ಮುಸ್ಲಿಂ ಲೀಗಿನ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ತಾ ೧೮ರಲ್ಲಿ ಕರಾಚಿಯಲ್ಲಿ ಲೀಗಿನ ಕೌನ್ಸಿಲಿನ ಸಭೆ ಸೇರಿದಾಗ ಮಹಮುದಾಲಿಯವರ ಹೆಸರನ್ನು ಸೂಚಿಸಿದೊಡನೆ ಬಲೂಚಿಸ್ತಾನದ ಸದಸ್ಯರು ಕೋಪಗೊಂಡು ವಿರೋಧಿಸಿ, ಕಾಸಿಂ ಮಹಮ್ಮದ್ ಇಸ್ಸಾರ ಹೆಸರನ್ನು ಸೂಚಿಸಿದರು. ಎರಡು ಗುಂಪುಗಳೊಳಗೆ ಬಿಸಿ ಮಾತಾಗಿ ಹೊಡೆದಾಡುವ ಪ್ರಸಂಗವೂ ಬಂದೊದಗಿತು. ಕೊನೆಗೆ ಮತ ತೆಗೆಯಲಾಗಿ ಅಲಿಯವರಿಗೆ ೨೫೮ ಮತಗಳೂ ಇಸ್ಸಾರಿಗೆ ೩೭ ಮತಗಳೂ ದೊರೆತವು.

ಜಪಾನಿನಲ್ಲಿ ಭಾರತೀಯ ವೇದಾಂತ ಪ್ರಚಾರ

ಹಿಂದೀ ಜ್ಯೂರಿಗಳಾದ ಡಾ. ರಾಧಾವಿನೋದಪಾಲ ಇವರು ಟೋಕಿಯೊದ ಒಕುರಾ ಸಾಂಸ್ಕೃತಿಕ ಸಂಸ್ಥೆಯ ಆಮಂತ್ರಣದ ಮೇರೆಗೆ ಅಲ್ಲಿಗೆ ತಾ. ೧೪ರ ರಾತ್ರಿ ತಲುಪಿದರು. ಅವರು ಅಲ್ಲಿ ಒಂದು ತಿಂಗಳ ವರೆಗೆ ಹಿಂದೀ ತತ್ವಜ್ಞಾನಿಗಳ ಕುರಿತು ಭಾಷಣ ಮಾಡಲಿರುವರು. ಜಪಾನಿನ ಇತರ ನಗರಗಳಲ್ಲೂ ಅವರು ಮಾತನಾಡುವ ನಿರೀಕ್ಷೆಯಿದೆ.

ಮೂರು ಮೈಲಿಗೊಂದು ಅಂಚೆ ಕಚೇರಿ

ನಮ್ಮ ದೇಶದಲ್ಲಿ ಯಾರೂ ಕೂಡ ಟಪ್ಪಾಲು ಸೌಕರ್ಯಕ್ಕಾಗಿ ೩ ಮೈಲಿಗಿಂತ ದೂರ ಹೋಗದಂತೆ ಮಾಡುವುದೇ ಭಾರತ ಸರಕಾರದ ಉದ್ದೇಶ ಎಂದು ಭಾರತದ ಸಂಪರ್ಕ ಶಾಖಾ ಸಚಿವ ಶ್ರೀ ಜಗಜ್ಜೀವನರಾಂ ಇವರು ತಾ. ೧೮ರಲ್ಲಿ ನುಡಿದರು. ಅವರು ಒರಿಸ್ಸಾ ವಾಣಿಜ್ಯ ಸಂಘದಲ್ಲಿ ಭಾಷಣ ಮಾಡುತ್ತ 'ಪ್ರತಿಯೊಂದು ಜಿಲ್ಲೆಯ ಕೇಂದ್ರದಲ್ಲೂ ತಕ್ಕ ರೀತಿಯಲ್ಲಿ ಟೆಲಿಫೋನ್ ಎಕ್ಸ್‌ಚೇಂಜ್ ಸ್ಥಾಪಿಸಲು ಸರಕಾರ ನಿರ್ಧರಿಸಿದೆ; ಸಾರ್ವಜನಿಕ ಟೆಲಿಫೋನ್ ವ್ಯವಸ್ಥೆ ಮಾಡಲು ಆಲೋಚಿಸಲಾಗಿದೆ... ಆದರೆ ವಿದೇಶದಿಂದ ಸಾಕಷ್ಟು ಸಾಮಗ್ರಿ ಬರಬೇಕಾಗಿದೆ' ಎಂದು ತಿಳಿಸಿದರು.

ಪ್ರಕಟಣೆ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ:—ಪೌತಿ ಬಾಚರಣಿಯಂಡ ಗಣಪತಿಯವರ ಹೆಸರಿನಲ್ಲು ಮಡಿಕೇರಿ ಬಾಣೆಮೊಟ್ಟೆಯಲ್ಲಿರುವ ನಮ್ಮ ಮನೆಯನ್ನು ಅವರ ಪತ್ನಿ ಗಂಗಮ್ಮನು ವಿಕ್ರಯಿಸಲು ಆಲೋಚಿಸಿರುವುದಾಗಿ ತಿಳಿಯುವದರಿಂದ ಸದರಿ ಮನೆಯು ನಮ್ಮ ಕುಟುಂಬಕ್ಕೂ ಹಕ್ಕಾಗಿರುವದರಿಂದ ಅದನ್ನು ಯಾರೂ ಕ್ರಯಕ್ಕೆ ಕೊಂಡುಕೊಳ್ಳಬಾರದಾಗಿಯೂ ಹಾಗೆ ಕೊಂಡು ಕೊಂಡಲ್ಲಿ ಆದರಿಂದಾಗುವ ಸರ್ವ ಕಷ್ಟ ನಷ್ಟಗಳಿಗೂ ಅವರೇ ಗುರಿಯಾಗತಕ್ಕದ್ದು ಎಂದೂ ಈ ಮೂಲಕ ತಿಳಿಸಲಾಗಿದೆ.

ಬಿ. ಐ. ಸುಬ್ಬಯ್ಯ
ಮತ್ತು ಸಹೋದರರು.

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ಆರ್ಥಿಕ ಉಳಿತಾಯ ಯೋಜನೆಗಳಲ್ಲಿ "ಕ್ಯುಮುಲೇಟಿವ್ ಡಿಪೋಜಿಟ್" ಯೋಜನೆಯು ಅತಿ ಪರಿಣಾಮಕಾರಿ ಹಾಗೂ ಅನುಕೂಲವಾದುದು ಯಾವುದಾದರೊಂದು ನಿರ್ದಿಷ್ಟ ಉದ್ದೇಶ ಸಾಧನೆಗೆ, ನಿಯಮಿತ ಕಾಲಕ್ಕೆ ನಿಯಮಿತ ಹಣವನ್ನು ಒಂದು ನಿಯಮಿತ ಅವಧಿಯೊಳಗೆ ಬಡ್ಡಿಯೊಂದಿಗೆ ವಾಪಸು ಸಿಗುವಂತೆ ಬ್ಯಾಂಕಿನಲ್ಲಿ ಶೇಖರಿಸಿಡುವುದೇ ಈ ಯೋಜನೆಯ ಮೂಲ ತತ್ವ. ಇದು ಮುಖ್ಯವಾಗಿ ಮಧ್ಯಮ ತರಗತಿಯ ಜನರಿಗೆ ಇಲ್ಲವೆ ನಿಯಮಿತ ಸಂಬಳದ ನೌಕರರಿಗೆ ತಮ್ಮ ಮುದ್ದು ಮಕ್ಕಳ ವಿದ್ಯಾಭ್ಯಾಸ, ಮುಂಜಿ, ಮದುವೆ ಯಾ ಇನ್ನಿತರ ಸದುದ್ದೇಶ ಸಾಧನೆಗಳಿಗೆ ಅತ್ಯನುಕೂಲ ಹಾಗೂ ಅತಿ ಫಲಕಾರೀ ಯೋಜನೆ.

ವಿಶೇಷ ಮಾಹಿತಿಗೆ, ಕೊಡಗು ಸಂಸ್ಥಾನದಲ್ಲಿನ ಈ ಕೆಳಗಣ ನಮ್ಮ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ :

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

THE CANARA BANKING CORPORATION LIMITED.

Estd: 1906] [*H. O, Udipi (S. India)*

ಮುಫತ್ತು! ಮುಫತ್ತು!!

ಸಾವಿರ ಕಾಶ್ಮೀರ ಶಾಲುಗಳನ್ನು ಮುಫತ್ತಾಗಿ ನಾವು ಹಂಚುತ್ತಿರುವೆವು. ನಿರಾಶರಾಗದಿರಲು ಇಂದೇ ಬರೆಯಿರಿ.

Diamond Commercial
Chambers (K. M)
Bhandari Street
Bombay 3.

52-3



ಹುಲಿ ಚರ್ಮದ ಕತ್ತೆಯ ಕಥೆ.

ಒಂದು ಪಟ್ಟಣದಲ್ಲಿ ಸೊಗಸು ಬಟ್ಟೆ ಎಂಬ ಮಡಿವಾಳನಿದ್ದನು. ಆತನಿಗೆ ಒಂದು ಕತ್ತೆ ಇತ್ತು. ಅದಕ್ಕೆ ಸರಿಯಾಗಿ ಆಹಾರ ದೊರೆಯದ ಕಾರಣ ಅದು ತುಂಬಾ ಬಡಕಲಾಗಿತ್ತು. ಮಡಿವಾಳನು ಒಂದು ದಿನ ಹೀಗೆ ಕಾಡಿನಲ್ಲಿ ತಿರುಗಾಡುತಿದ್ದಾಗ ಸತ್ತ ಹುಲಿಯೊಂದನ್ನು ಕಂಡನು. ಆತನಿಗೆ ಸಂತೋಷವಾಗಿ ಅತನು ಹೀಗೆ ಆಲೋಚಿಸಿದನು. “ನಾನು ಅದೃಷ್ಟಶಾಲಿ. ಈ ಹುಲಿಯ ಚರ್ಮವನ್ನು ತೆಗೆದುಕೊಂಡು ಹೋಗಿ ನನ್ನ ಕತ್ತೆಗೆ ಹೊದಿಸಿ ರಾತ್ರೆಬಿಟ್ಟು ಬಿಡುವೆನು. ಅದು ನೆರೆಕರೆಯವರ ಗದ್ದೆ, ತೋಟಗಳಲ್ಲಿ ಸುರಕ್ಷಿತವಾಗಿ ಮೇಯಲಿ. ಏಕೆಂದರೆ ರೈತರು ಹುಲಿ ಚರ್ಮವನ್ನು ನೋಡಿ ನಿಜವಾದ ಹುಲಿಯೆಂದು ಭಾವಿಸಿ ಹೆದರಿಕೊಂಡು ನನ್ನ ಕತ್ತೆಯನ್ನು ಓಡಿಸರು”.

ಹೀಗೆ ಆಲೋಚಿಸಿ ಅವನು ಹುಲಿ ಚರ್ಮವನ್ನು ತಂದು ತನ್ನ ಕತ್ತೆಗೆ ಹೊದಿಸಿ ರಾತ್ರೆ ಬಿಡತೊಡಗಿದನು. ಅದು ನೆರೆಕರೆಯವರ ಹೊಲ, ತೋಟಗಳನ್ನು ಹೊಕ್ಕು ತುಂಬಾ ತಿನ್ನತೊಡಗಿತು. ಕೆಲವೇ ದಿನಗಳಲ್ಲಿ ಅದು ಸೊಕ್ಕಿ ಕೊಬ್ಬಿಗೆಗೆ ಹಿಡಿಸದಾಯಿತು.

ಒಂದು ದಿನ ಹೀಗೆ ಕತ್ತೆಯು ನೆರೆಯವರ ತೋಟದಲ್ಲಿ ಮೇಯುತ್ತಿರಲು, ದೂರದಲ್ಲಿ ಹೆಣ್ಣು ಕತ್ತೆಯೊಂದು ಅರಚುವ ಶಬ್ದವನ್ನು ಕೇಳಿ ತಾನೂ ಅರಚತೊಡಗಿತು. ಇದರಿಂದ ಇದು ಹುಲಿಯಲ್ಲ; ಹುಲಿ ಚರ್ಮ ಹೊದ್ದಿರುವ ಕತ್ತೆಯೆಂದು ರೈತರಿಗೆ ತಿಳಿದುಹೋಯಿತು. ಅವರು ದೊಣ್ಣೆ ಹಿಡಿದು ಸುತ್ತುಗಟ್ಟಿ ಕತ್ತೆಯನ್ನು ಹೊಡೆದು ಕೊಂದು ಹಾಕಿದರು. ಆದ್ದರಿಂದ ಯಾರು ಎಷ್ಟೇ ಚತುರತೆಯಿಂದ ವೇಷ ಧರಿಸಲಿ, ಅವರು ಕಣ್ಣಿಗೆ ಎಷ್ಟೇ ಭಯಂಕರವಾಗಿ ತೋರಲಿ, ಹುಲಿ ಚರ್ಮ ಹೊದ್ದಿದ್ದರೂ ತನ್ನ ಅರಚಾಟದಿಂದ ತನ್ನ ಸ್ವಭಾವ ವ್ಯಕ್ತ ಮಾಡಿ ಕತ್ತೆಯು ಸತ್ತಿತು ಎಂದು ಹೇಳುವದಾಗಿದೆ” ಎಂದು ಕೋತಿಯು ಹೇಳಿತು.

ಈ ರೀತಿಯಾಗಿ ಕೋತಿಯು ಮೊಸಳೆಗೆ ಕತೆ ಹೇಳುತ್ತಿರುವಾಗ ನೀರಿನೊಳಗಿನ ಒಂದು ಪ್ರಾಣಿಯು ಬಂದು ಮೊಸಳೆಯನ್ನು ಕುರಿತು. “ಗೆಳೆಯಾ, ನಿನ್ನ ಹೆಂಡತಿಯು ಉಪವಾಸದಿಂದ ನಿಧನ ಹೊಂದಿದಳು” ಎಂದು ಹೇಳಿತು. ಇದನ್ನು ಕೇಳಿ ಮೊಸಳೆಗೆ ಕಣ್ಣು ಕತ್ತಲೆ ಕವಿದಂತಾಗಿ ಅಳತೊಡಗಿತು. “ನಾನೇನು ಮಾಡಲಿ. ನನಗೆ ಎಂಥಾ ದುರಾದೃಷ್ಟ ಬಂದಿತು. ಅಯ್ಯೋ, ಎಲ್ಲಿ ಹಾಯಿಯಿಲ್ಲವೋ. ತನ್ನ ಅಭಿರುಚಿಯನ್ನು ತಿಳಿದು ವರ್ತಿಸುವ ಪತ್ನಿ ಇಲ್ಲವೋ ಅಂಥಾ ಮನೆಯನ್ನು ಬಿಟ್ಟು ಕಾಡಿನಲ್ಲಿ ವಾಸಿಸುವದು ಹಿತವೆಂದು ನಾಣ್ನುಡಿ ಇದೆ. ಆದ್ದರಿಂದ ಗೆಳೆಯನಾದ ಕೋತಿಯೇ, ನಿನಗೆ ಕೊಟ್ಟ ತೊಂದರೆಗೂ, ಅಪರಾಧಕ್ಕೂ ನನ್ನನ್ನು ಮನ್ನಿಸು. ನಾನು ಆಕೆಯನ್ನು ಕಳಕೊಂಡೆನು. ನನಗೆ ಇನ್ನು ಬದುಕುವ ಇಚ್ಛೆ ಇಲ್ಲ, ನಾನು ಆತ್ಮ ಹತ್ಯೆ ಮಾಡಿಕೊಳ್ಳುವೆನು.” ಎಂದು ಮೊಸಳೆಯು ಹೇಳಿ ರೋಧಿಸತೊಡಗಿತು.

ಇದನ್ನು ಕೇಳಿ ಕೋತಿಯು ನಗುತ್ತಾ “ನನಗೆ ಗೊತ್ತಿತ್ತು. ನೀನು ಹೆಂಡತಿಯ ದಾಸನಾಗಿ ಆಕೆಯ ಕೈಯ ಕಡಿವಾಣದಂತೆ ವರ್ತಿಸುತ್ತಿದ್ದವನೆಂದು. ತಿಳಿಗೇಡಿ. ನಿನ್ನ ಅಂಥಾ ಹೆಂಡತಿ ಸತ್ತುದಕ್ಕೆ ಆನಂದಪಡುವ ಬದಲು ಅಳುತ್ತಿರುವೆ. ಅಂಥಾ ಹೆಂಡತಿ ಸತ್ತಾಗ ಗೆಳೆಯರಿಗೆ ಔತಣ ಕೊಡಬೇಕು. ಏಕೆಂದರೆ ಸಿಟ್ಟು ಮಾಡಿಕೊಂಡು, ಮಾತು ಮಾತಿಗೂ ಜಗಳ ಮಾಡಿಕೊಂಡು ಇರುವ ಹೆಂಗಸು ಸತಿಯಲ್ಲ; ಅವಳೇ ಗಂಡನ ಮುದಿ ಪ್ರಾಯವೆಂದು ಬುದ್ಧಿವಂತರು ಹೇಳುತ್ತಾರೆ. ಆದ್ದರಿಂದ ಈ ಜಗತ್ತಿನಲ್ಲಿ ಶಾಂತಿ ಬೇಕಿದ್ದರೆ ಅಂಥಾ ಹೆಂಗಸರ ಹೆಸರನ್ನೇ ಬಿಟ್ಟುಬಿಡಬೇಕು. ಏಕೆಂದರೆ ಆಕೆಯ ಮನಸ್ಸಿನಲ್ಲಿರುವದನ್ನು ಆಕೆ ಹೇಳಲಾರಳು. ಮಾತಾಡುವದೊಂದಾದರೆ ಮಾಡುವದಿನ್ನೊಂದು. ಮಾತಿಗೂ ಕೃತಿಗೂ ಸಂಬಂಧವಿಲ್ಲದ ಆಶ್ಚರ್ಯಕರ ವಸ್ತುವೇ ಈ ಹೆಂಗಸೆಂಬುದು. ಹೆಚ್ಚೇಕೆ ತನ್ನ ಸುಖಕ್ಕಾಗಿ ತನ್ನ ಮಗುವನ್ನೇ ಅವರು ಕೈಯಾರೆ ಕೊಲ್ಲಬಹುದು. ನಿಜವಾಗಿಯೂ ಹುಡುಗಿಯರು ಸ್ವಾರ್ಥಿಗಳೂ, ವಂಚಕರೂ, ಕಟು ಸ್ವಭಾವದವರೂ ಆದರೂ ಹುಡಗರು ಅವರನ್ನು ಮೃದುಹೃದಯದವರೆಂದೂ ಕೋಮಲೆಯರೆಂದೂ, ಸರ್ವಸ್ವವೆಂದೂ ಭಾವಿಸುತ್ತಾರೆ.” ಎಂದು ಕೋತಿಯು ಹೇಳಿತು.

ಮೊಸಳೆಗೆ ಜ್ಞಾನೋದಯವಾದಂತಾಯಿತು. “ನೀನು ಹೇಳುವದು ಸಹಜ. ಆದರೆ ನಾನೇನು ಮಾಡಲಿ. ನನಗೆ ಎರಡು ಅಪಾರ ದುಃಖಗಳಿವೆ. ಒಂದು ನನ್ನ ಕುಟುಂಬ ನಿರ್ನಾಮವಾದುದು. ಎರಡನೆಯದು ನನ್ನ ಗೆಳೆಯನೊಡನೆ ಜಗಳ ಮಾಡಿಕೊಂಡುದು. ನಾವು ತೋರಿಸುವ ಜಾಣತನದಿಂದಲೇ ನಮಗೆ ನಷ್ಟವಾಗುತ್ತಿದೆ. ಈ ಜಾಣತನಕ್ಕಾಗಿಯೇ “ಪ್ರೇಮಿಯನ್ನೂ, ಗಂಡನನ್ನೂ ಕಳಕೊಂಡಳೆ”ಂಬ ನಾಣ್ನುಡಿಯಾಗಿದೆ” ಎಂದು ಮೊಸಳೆಯು ಹೇಳಿತು. ಅದು ಹೇಗೆಂದು ಕೋತಿಯು ಕೇಳಲು ಮುಂದಿನ ವಾರ ಮೊಸಳೆಯು ರೈತನ ಹೆಂಡತಿಯ ಕತೆ ಹೇಳುವದು.

---

* ಬಡತನವೇ ಶಾಶ್ವತ *

ಧನಪಾಲರೆಂದರೆ ನಮ್ಮ ಗ್ರಾಮದ ದೊಡ್ಡ ಮನುಷ್ಯರು. ಹೆಸರಿಕ್ಕೆ ಅನುಸರಿಸುವಂತೆ ನಮ್ಮ ಗ್ರಾಮಕ್ಕೆ ಧನವಂತರು. ಅವರು ಹೇಳಿದ್ದೇ ಶಾಸನ. ಅವರ ಅಭಿಪ್ರಾಯವೇ ಗ್ರಾಮದವರ ಅಭಿಪ್ರಾಯ. ಅವರಿಗೆ ಮೂರು ಜನ ಮಕ್ಕಳು. ಹಿರಿಯ ಇಬ್ಬರು ತಂದೆಯಂತೆಯೇ ಆಡಂಭರದಲ್ಲಿ ಜೀವಿಸುತಿದ್ದರು. ಎಲ್ಲರಿಗಿಂತಲೂ ತಾವು ಮಿಗಿಲೆಂದು ಭಾವಿಸಿಕೊಳ್ಳುತಿದ್ದರು. ಗ್ರಾಮದವರೆಲ್ಲಾ ತಮ್ಮ ಹೇಳಿಕೆಯಂತೆ ನಡೆಯಬೇಕೆಂದು ಆಶಿಸುತ್ತಿದ್ದರು. ಆದರೆ ಮೂರನೆಯ ಮಗ ಶಶಿಪಾಲನ ವರ್ತನೆಯೇ ಬೇರೆ. ಅವನು ಬೆಳೆದುದು ಬೀದಿಯ ಮಕ್ಕಳ ಸಹವಾಸದಲ್ಲಿ. ಈಗ ಜೀವಿಸುತ್ತಿರುವದೂ ಗ್ರಾಮದ ಬಡಜನರ ಮತ್ತು ಹೀನುಳಿದವರ ಜೊತೆಯಲ್ಲಿ. ಶಶಿಪಾಲನಿಂದ ತಮ್ಮ ಗೌರವ, ಘನತೆಗಳು ಕಮ್ಮಿಯಾದವೆಂದು ತಂದೆ ಧನಪಾಲರೂ, ಸಹೋದರರೂ ಭಾವಿಸುತ್ತಿದ್ದರು. “ಕೋಗಿಲೆಯ ಹೊಟ್ಟೆಯಲ್ಲಿ ಇದೊಂದು ಕಾಗೆ ಹುಟ್ಟಿದಂತಾಗಿದೆ” ಎಂದು ಧನಪಾಲರು ಹೇಳುತಿದ್ದರು.

ನಮ್ಮ ಗ್ರಾಮದಲ್ಲಿ ಶ್ರೀಮಂತರೆಂದರೆ ಧನಪಾಲರು ಮತ್ತು ಇನ್ನೊಂದೆರಡು ಕುಟುಂಬಗಳು. ಉಳಿದ ನೂರಾರು ನೂರು ಕುಟುಂಬಗಳೆಲ್ಲಾ ಬಡತನದ ರೈತರ ಕುಟುಂಬಗಳು. ಶಶಿಪಾಲನು ಈ ಬಡ ಕುಟುಂಬಗಳಿಗೆಲ್ಲಾ ಬೇಕಾದವನಾಗಿದ್ದನು. ತನ್ನ ಮನೆಯಿಂದ ತನ್ನ ಖರ್ಚಿಗೆ ದೊರೆತ ಹಣವನ್ನೆಲ್ಲಾ ತನ್ನ ಗ್ರಾಮದ ಬಡಜನರಿಗಾಗಿ ಖರ್ಚು ಮಾಡಿ ತಾನೂ ಬಡ ಗ್ರಾಮಸ್ಥರಲ್ಲೊಬ್ಬನಂತೆ ಜೀವಿಸುತಿದ್ದನು.

ಆ ವರ್ಷ ಭಯಂಕರ ಮಳೆಗಾಲ. ಗ್ರಾಮಕ್ಕೆ ಗ್ರಾಮವೇ ನಾಶವಾಯಿತು. ನೆಟ್ಟ ಬೆಳೆ ಫಸಲು ನಾಶವಾದುದಲ್ಲದೆ ಗ್ರಾಮಸ್ಥರ ಮನೆ ಮಠಗಳೆಲ್ಲಾ ನಾಶವಾದವು. ಧನಪಾಲರ ಮನೆಯೂ ಬಿದ್ದುಹೋಯಿತು. ಅವರಿಗಿದ್ದ ಉತ್ತಮ ಕಾಫಿ ತೋಟವು ಬೆಟ್ಟವು ಕುಸಿದು ಬಿದ್ದುದರಿಂದ ನಿರ್ನಾಮವಾಯಿತು. ಅವರ ಬ್ಯಾಂಕಿನಲ್ಲಿದ್ದ ಅಲ್ಪ ಸ್ವಲ್ಪ ಹಣವೂ ಕರಗಿ ಹೋಯಿತು. ಗ್ರಾಮಸ್ಥರೆಲ್ಲಾ ನಿರ್ಗತಿಕರಾದರು. ಅದರಂತೆ ಧನಪಾಲರ ಕುಟುಂಬದವರೂ ನಿರ್ಗತಿಕರಾಗಿದ್ದಾರೆ. ಆದರೆ ಅವರಿಗೆ ಬದುಕುವುದು ಕಷ್ಟವಾಗಿದೆ. ಸಿರಿತನದಲ್ಲಿ ಬೆಳೆದವರಾದ ಕಾರಣ ಕೆಲಸ ಮಾಡಲಾರರು. ಹಳ್ಳಿಗರೊಡನೆ ಬೆರೆಯಲಾರರು. ಗಂಜಿ ಊಟ ಮಾಡಲಾರರು. ಹೀಗಾಗಿ ಅವರು ಆಗಾಗ್ಗೆ ಕಾಯಿಲೆ ಬೀಳುತ್ತಿದ್ದಾರೆ. ಧನಪಾಲರು ಹಾಸಿಗೆ ಹಿಡಿದು ಇಂದೋ ನಾಳೆಯೋ ಎನ್ನುವಂತಿದ್ದಾರೆ. ಆದರೆ ಶಶಿಪಾಲನು ಅಂದಿನಂತೆ ಇಂದೂ ಇದ್ದಾನೆ. ಅಂದು ಹೆಚ್ಚಿನ ಸಂತೋಷವೂ ಇರಲಿಲ್ಲ. ಇಂದು ಹೆಚ್ಚಿನ ದುಃಖದಿಂದಲೂ ಜೀವಿಸುತ್ತಿಲ್ಲ. ಆದ್ದರಿಂದ ಸಿರಿತನ ಶಾಶ್ವತವಲ್ಲ; ಬಡತನವೇ ಜೀವನದಲ್ಲಿ ಉತ್ತಮವಾದುದು. ದುಡಿದು ತನ್ನ ಕೈಬಲದಿಂದ ಜೀವಿಸುವವನಿಗೆ ಎಂದೂ ಹೆದರಿಕೆ,ದುಃಖಗಳಿಲ್ಲ.

— ಎ. ಎಸ್. ಎಂ. ವಿದ್ಯಾರ್ಥಿ

ಸಮಾಜ ವಿಪ್ಲವದ ಪುರೋಹಿತ ಆಚಾರ್ಯ ವಿನೋಬ ಭಾವೆ.

[ಲೇಖಕ:— ಶ್ರೀ ಹೆಚ್. ಮನಮೋಹನ ಕಾಮತ್.]

ಮಹಾತ್ಮನು ಬೆಳಗಿನ ಪಥದಲ್ಲಿ ಮುನ್ನಡೆವ ರಾಜಯೋಗಿಯು, ಹಿಂಸೆಯಿಲ್ಲದ—ಕಾಠಿನ್ಯವಿಲ್ಲದ—ಬಲಾತ್ಕಾರವಿಲ್ಲದ ರೀತಿಯಲ್ಲಿ, ಭಾರತದಲ್ಲಿ ಸಮಾಜ ಕ್ರಾಂತಿಯನ್ನು ಸಾಧಿಸುತ್ತಿರುವನು. ನೆತ್ತರಿನ ಹೊಳೆ ಹರಿಸದೆ, ಕೇವಲ ಪ್ರೇಮ ಸಂದೇಶವನ್ನೊಯ್ದು ಈ ಯೋಗಿಯು, ಜಮೀನಿಲ್ಲದ ಬಡವರಿಗೆ ಜಮೀನನ್ನು ಹಂಚಿ ಕೊಡಲು ತನ್ನ "ಯಜ್ಞ"ವನ್ನು ನಡೆಸಿದ್ದಾನೆ. ಅವನ ಪ್ರತಿಯೊಂದು ಮಾತು, ಅಮೃತ ಸಂದೇಶವನ್ನೊಯ್ಯುತ್ತಿದೆ. ಮಾನವನ ಉಚ್ಚ ಮನೋವೃತ್ತಿಯನ್ನು ವಿಶದಗೊಳಿಸಿ, ಸಂಪರ್ಕಿಸಿದವರೆಲ್ಲರ ಮನೋಪಲ್ಲಟನ ಮಾಡುತ್ತಿದೆ.

●●

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಾಯಕತ್ವ ವಹಿಸಿದ್ದ ಗಾಂಧೀಜಿಯವರ ತರುವಾಯ ಭಾರತದ ಗತಿ ಏನಾಗುವದೋ ಎಂದು ಭಯಗೊಂಡವರೂ ಇದ್ದರು. ಇಂದು ಆಶಾದಾಯಕ ಹೆಜ್ಜೊಂದರೊಂದು ಇರಿದು ಮಾರ್ಗದರ್ಶನ ಮಾಡುತ್ತಿರುವದು ನಮ್ಮ ಚರಿತ್ರೆಯಲ್ಲಿ ಇನ್ನೊಂದು ಅಧ್ಯಾಯವಾಗಿ ಸಾಗಿದೆ. ರಾಜಕೀಯ ವರ್ತುಲಗಳಲ್ಲಿ ಇಂದು ಗಾಂಧೀಜಿಯವರ ಹೆಸರಿನಲ್ಲಿ ನಾಟ್ಯವಾಡುತ್ತಿರುವ ಅಧಿಕಾರ ಲಾಲಸೆ, ಸ್ವಾರ್ಥಸಾಧನೆ, ಲಂಚ ಋಷುವತ್ತುಗಳಿಂದ ದೂರವಾಗಿದ್ದು, ಆಚಾರ್ಯ ವಿನೋಬಭಾವೆಯವರು ಶಾಂತಿಯುತ ಪಥದಲ್ಲಿ ಮುಂದುವರಿದು ಸಮಾಜದಲ್ಲಿ ಇಂದು ಭೀಕರವಾಗಿ ಹೆಡೆಯೆತ್ತಿ ನಿಂತಿರುವ ಅಸಮಾನತೆಯ ಭೂತದ ಉಪಟಳವನ್ನು ನಿವಾರಿಸಲು ಸೊಂಟ ಕಟ್ಟಿರುವರು.

ಯಾವ ರಾಜಕೀಯ ಪಕ್ಷ ಪ್ರಭಾವಕ್ಕೂ ಬಲಿ ಬೀಳದೆ 'ಸಂತ' ನಂತೆ ಅವರು ಇಂದು ದೊಡ್ಡ ಸಾಮಾಜಿಕ ಕ್ರಾಂತಿಯ ಸೂತ್ರ ಹಿಡಿದುಕೊಂಡಿದ್ದಾರೆ ಮತ್ತು ಈವರೆಗೆ ಯಶಸ್ಸು ಗಳಿಸಿದ್ದಾರೆ.

ಸಮಾನ ಸಮಾಜದ ಸಂದೇಶ

ದೇಶದಲ್ಲಿ ಇಂದು ಭಯಾನಕವಾಗಿ ಜನತೆಯನ್ನು ಪೀಡಿಸುತ್ತಿರುವ ಬಡತನವನ್ನು ಹೋಗಲಾಡಿಸಿ ದೇಶದ ಆರ್ಥಿಕ ಪರಿಸ್ಥಿತಿಯು ಚೇತರಿಸಬೇಕಾಗಿದೆ. ಒಪ್ಪೊತ್ತು ಕೂಡ ಸರಿಯಾಗಿ ಅನ್ನವಿಲ್ಲದೆ ಗೋಳಿಡುತ್ತಿರುವ ಕುಟುಂಬಗಳೊಂದೆಡೆ, ಕೆಲವೇ ಮಂದಿ ಐಶ್ವರ್ಯವಂತರ ಉಂಡು ತೇಗುವ ವರ್ಗ ಇನ್ನೊಂದೆಡೆ, ಮಾನವ ವರ್ಗದಲ್ಲಿ ಈ ತೆರನಾದ ಭೇದಾಭೇದಗಳನ್ನು ಆಚಾರ್ಯ ಭಾವೆಯವರು ಸಹಿಸರು. ಇದರ ಪರಿಹಾರಕ್ಕಾಗಿ ಒಂದು ಸೂತ್ರವನ್ನವರು ಕಂಡುಹಿಡಿದರು. ಅದೇ ಭೂದಾನ ಯಜ್ಞ.

ಹೇರಳವಾಗಿ ಜಮೀನುಳ್ಳ ಭೂಮಾಲಿಕರು ಅದರಲ್ಲಿ ಒಂದಿಷ್ಟು ಪಾಲನ್ನು ತನ್ನ ಸಹೋದರರೆಂದೇ ತಿಳಿದು, ಬಡ ರೈತರಿಗೆ ದಾನವಾಗಿ ಕೊಡಬೇಕೆಂದೇ ಆಚಾರ್ಯ ಭಾವೆಯವರ ಉದ್ದೇಶ. ಒಂದು ಮನೆಯಲ್ಲಿ ತಂದೆಯ ಆಸ್ತಿಯನ್ನು ಮಕ್ಕಳೆಲ್ಲ ಸಮಾನವಾಗಿ ಹೇಗೆ ಹಂಚಿಕೊಳ್ಳುವರೋ ಅದೇ ತೆರನಾಗಿ ಶ್ರೀಮಂತರೂ ದಯಾಶೀಲರಾಗಿ ಸ್ವಯಂ ಮುಂದೆ ಬಂದು ನರಳುವ ಸಹೋದರ ವರ್ಗಕ್ಕೆ ನೆರವು ಕೊಟ್ಟು ಅವರನ್ನು ಉದ್ಧರಿಸಲೆಂಬುದೇ ಭೂದಾನ ಯಜ್ಞದ ತತ್ವ. ಗಾಳಿ, ಬೆಳಕುಗಳ ಮೇಲೆ ಎಲ್ಲರಿಗೂ ಹೇಗೆ ಸ್ವಾತಂತ್ರ್ಯವಿದೆಯೋ ಅದೇ ತೆರನಾಗಿ ಈ ವಿಶಾಲ ಭೂಸಂಪತ್ತಿನ ಮೇಲೆ ಸಕಲರಿಗೂ ಅಧಿಕಾರವಿದೆ.

ಜನತಾ ಯುಗ

ಆಚಾರ್ಯ ಭಾವೆಯವರು ಉಪದೇಶಿಸಿದಂತೆ ಇದು ರಾಜ ಮಹಾರಾಜರ ದರ್ಪದ ದಿನವಲ್ಲ. ಈಗ ಜನತೆಯೇ ಆಳುವವರು. ಪ್ರಜಾಯುಗವಿದು. ಇದನ್ನು ಧನಿಕವರ್ಗ ಅರಿತುಕೊಳ್ಳಬೇಕು. ಇಲ್ಲವಾದರೆ, ಹಸಿದ ಜನ ದಂಗೆಯೆದ್ದೀತು ಎಂದು ಭಾವೆಯವರು ಈ ಮೊದಲೇ ಎಚ್ಚರಿಸಿದ್ದಾರೆ. ಅವರು ಪ್ರೇಮಪುರಸ್ಸರವಾಗಿ ಕೊಟ್ಟ ಸಂದೇಶವು ಹಲವರ ಹೃದಯ ಕರಗಿಸಿದೆ ಎಂಬುದಕ್ಕೆ ಈಗಾಗಲೇ ಸಂಗ್ರಹವಾಗಿರುವ ಜಮೀನಿನ ಮೊತ್ತವೇ ಸಾಕ್ಷಿ. ಜನರ ಹೃದಯ ಪರಿವರ್ತನೆಗೆ ಕಾನೂನು, ಬಲಾತ್ಕಾರ, ಗುಂಡು ಫಲಿಸಲಾರವು. ಆತ್ಮೀಯ ಭಾವನೆಯಿಂದ ಪ್ರೇಮಪ್ರವಾಹ ಹರಿಸಿ ಜನತೆ ತಾನಾಗಿ ಪರಿವರ್ತನಗೊಳ್ಳಬೇಕಾಗಿದೆ. ಈ ಮನೋ ಪರಿವರ್ತನೆಗೆ ಆಚಾರ್ಯ ಭಾವೆಯಂತ ಸಾಧು ವಿಭುಗಳ ಸಂದೇಶವೇ ಯಶಸ್ವಿಯಾದೀತು.

ಸಮಾಜವಾದ

ಸಮಾಜವಾದವನ್ನು ಹಲವು ದೇಶಗಳಲ್ಲಿ ಹಲವು ರೀತಿಗಳಲ್ಲಿ ಅನುಸರಿಸಲಾಗಿದೆ. ಆದರೆ ರಕ್ತಪಾತದಿಂದ, ಹಿಂಸೆಯಿಂದ, ಸ್ಥಾಪಿತವಾದ ಆ ಸಮಾಜವಾದ ನಮಗೆ ಬೇಡವೆಂದೇ ಭಾವೆಯವರು ಪ್ರೇಮದ ಜ್ಯೋತಿಯನ್ನು ಬೆಳಗಿಸಿದ್ದಾರೆ. ದೀನ ದಲಿತರ ಹಿತವನ್ನು ಬಯಸುವಾಗ ಧನಿಕರ ಹೃದಯವನ್ನು ಕರಗಿಸಿ, ಅವರಾಗಿಯೇ ಮುಂದೆ ಬಂದು ನೆರವೀಯುವಂತೆ ಅವರು ಮಾಡುತ್ತಿದ್ದಾರೆ.

ಕಮ್ಯೂನಿಸಮಿನ ವಿರುದ್ಧ ಅಸ್ತ್ರ

ರಷ್ಯವು ಕಮ್ಯೂನಿಸ್ಟ ರಾಜ್ಯ. ಚಿಯಾಂಗ್ ಕೈಶೇಕರ ಆಡಳಿತೆಯಲ್ಲಿ ಅತೃಪ್ತಿಗೊಂಡ ಚೀನ ಇಂದು ರಷ್ಯದ ಹಾದಿ ಹಿಡಿಯಿತು. ಭಾರತದ ಸಮೀಪದ ಈ ಎರಡು ಮಹಾ ರಾಷ್ಟ್ರಗಳು ಕಮ್ಯೂನಿಸ್ಟ ಆದುದರಿಂದ ಭಾರತಕ್ಕೆ ಅವುಗಳ ಮೇಲೆ ದ್ವೇಷವೇನೂ ಇಲ್ಲ. ಆದರೆ ಭಾರತಕ್ಕೆ ತನ್ನದೇ ಆದ ಸಂಸ್ಕೃತಿಯಿದೆ. ತನ್ನದೇ ಆದ ರೀತಿಯಿಂದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸಾಧ್ಯವಿದೆಯೆಂದರಿತ ಭಾವೆಯವರು ಕಮ್ಯೂನಿಸಮ್ ಬಲವಾಗಿ ಬೇರು ಬಿಡುವ ಮೊದಲೇ ತಮ್ಮ ಭೂದಾನ ಅಸ್ತ್ರವನ್ನು ಪ್ರಯೋಗಿಸಿದ್ದಾರೆ.

ಆದರೂ ನಮ್ಮಲ್ಲಿ ಇನ್ನೂ ಜ್ಞಾನದ ಕಣ್ಣು ತೆರೆದಿಲ್ಲ. ದೇವಘರದಲ್ಲಿ ಇತ್ತೀಚೆಗೆ ದೇವಾಲಯವೊಂದರ ಪಂಡರು (ಅರ್ಚಕರು) ಪುಂಡಾಟಿಕೆ ನಡೆಸಿದರು. ಹೀಗಾದರೂ ಭಾವೆಯವರ ಸೌಮ್ಯಶೀಲತೆಯಿಂದ ಮರುದಿವವೇ ಅವರ ಹೃದಯದಲ್ಲಿ ಜ್ಞಾನದೀವಿಗೆಯ ಪ್ರಕಾಶ ಬೆಳಕು ಕಂಡಿತು. ದೇವಾಲಯಕ್ಕೆ ಹರಿಜನ ಪ್ರವೇಶವಾಯಿತು. ಸಮಾನ ಸಮಾಜದ ತತ್ವ ಅಲ್ಲಿಯೂ ವಿಜಯ ಭೇರಿ ಬಾರಿಸಿತು. ಕಾನೂನಿನಿಂದ ಆಗದ ಕಲಸ ಕೇವಲ ಒಂದು ಚಿಕ್ಕ ಘಟನೆಯ ಬಳಿಕ ನೆರವೇರಿದುದು ಭಾವೆಯವರ ವಿಶಿಷ್ಟತೆಯೆಂದೇ ಹೇಳಬೇಕು.

ವಿದೇಶಗಳಲ್ಲಿ ವಿಸ್ಮಯ

ಆಚಾರ್ಯ ಭಾವೆಯವರ ಕಾಲ್ನಡಿಗೆ ಪ್ರವಾಸ, ಜನರೊಂದಿಗೆ ಬೆರೆತು ಅವರು ಕೊಡುತ್ತಿರುವ ಉಪದೇಶ, ಭೂದಾನ ಯಜ್ಞದ ಯಶಸ್ಸು ಇವುಗಳನ್ನೆಲ್ಲಾ ಕೇಳಿ ಕಂಡು, ವಿದೇಶಗಳಲ್ಲಿ ರಾಜಕಾರಿಣಿಗಳು ವಿಸ್ಮಯಗೊಂಡಿದ್ದಾರೆ. ಆಸ್ಟ್ರೇಲಿಯಾದ ಕೇಂಬೆರಾ ರೇಡಿಯೋದಲ್ಲಿ ಭೂದಾನದ ವಿಚಾರವಾಗಿ ಒಂದು ವಿಮರ್ಶಾತ್ಮಕ ಭಾಷಣ ನಡೆದು ಭಾವೆಯವರ ಅದ್ಭುತ ಪ್ರೇಮಶಕ್ತಿಯನ್ನು ಕೊಂಡಾಡಲಾಯಿತು. ಬ್ರಿಟನ್ ಮತ್ತು ಅಮೇರಿಕದಲ್ಲೂ ಪತ್ರಿಕೆಗಳಲ್ಲಿ ಅಗ್ರಲೇಖನಗಳು ಬರತೊಡಗಿದವು. ಸಮಾಜ ವೈಶಮ್ಯದ ವಿರುದ್ಧ ಈ ರೀತಿಯ ಅಹಿಂಸಾತ್ಮಕ ಚಳವಳ ಯಶಸ್ವಿಯಾದೀತೆಂದು ಅವರೆಂದೂ ಎಣಿಸಿರಲಿಲ್ಲ. ಅಹಿಂಸಾ ಪ್ರಯೋಗದಿಂದಲೇ ಸ್ವಾತಂತ್ರ್ಯ ಗಳಿಸಿದ ಭಾರತವು ತನ್ನ ಸಾಮಾಜಿಕ ವಿಪ್ಲವವನ್ನು ಅಹಿಂಸಾತ್ಮಕವಾಗಿಯೇ ಮಾಡಿ ತೋರಿಸಲು ಹೊರಟಿರುವದನ್ನು ಕಂಡು ಅವರೆಲ್ಲರೂ ಆಶ್ಚರ್ಯ ಚಕಿತರಾಗಿದ್ದಾರೆ.

ರಾಜ್ಯಘಟನೆಯಲ್ಲಿ ಹೇಳಿರುವಂತೆ ಪ್ರಜಾಪ್ರಭುತ್ವವು ಜನತೆಗಾಗಿ, ಜನರಿಂದ, ಜನರ ಮೂಲಕವೇ ನಡೆಯುವ ಸರಕಾರ ಎಂದಿರುವದಾದರೆ ಅದನ್ನು ಕಾರ್ಯಗತ ಮಾಡಲು ಆಚಾರ್ಯ ಭಾವೆಯವರೇ ಈಗ ಪೌರೋಹಿತ್ಯ ವಹಿಸಿದ್ದಾರೆನ್ನಬಹುದು. ಸರಕಾರದ ನೆರವು ಅವರಿಗೆ ಬೇಕಾಗಿಲ್ಲ. ಪೋಲೀಸ್ ಕಾವಲು ಅನಾವಶ್ಯಕ ಎಂದವರು ಹೇಳುತ್ತಿದ್ದಾರೆ. ಗಾಂಧೀಜಿಯವರು ಪೂರ್ತಿಗೊಳಿಸದ ಕೆಲಸಗಳನ್ನು ಭಾವೆಯವರು ಇಂದು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

ಸಮಾನಸಮಾಜ ನಿರ್ಮಿಸಲು ಟೊಂಕ ಕಟ್ಟಿರುವ ಯೋಗಿ ಭಾವೆಯವರಿಗೆ ಎಲ್ಲರೂ ಬೆಂಬಲ ಕೊಡುವದು ಅಗತ್ಯವಾಗಿದೆ ಮತ್ತು ಅದು ನಮ್ಮೆಲ್ಲರ ಕರ್ತವ್ಯ ಆಗಿದೆ. 'ಪ್ರಭಾತ'

—

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಅಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಖಾಲ್ತಿ ಠೇವಣಾತಿ ಲೆಕ್ಕ (Current Deposits)	ರೂ.	0-8-0
ಸೇವಿಂಗ್ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ. ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ & ಖಜಾಂಚಿ.

ಬೇಕಾಗಿದ್ದಾರೆ.

ಹೊಸ ಮಾದರಿಯ ಫೌಂಟನ್ ಪೆನ್ ಮಾರಾಟ ಮಾಡಲು ಆಕರ್ಷಣೀಯ ಶರತುಗಳ ಮೇಲೆ ಏಜೆಂಟರು ಬೇಕಾಗಿದ್ದಾರೆ. ಸ್ಯಾಂಪಲಿಗೂ ವಿವರಗಳಿಗೂ ಈ ಪತ್ತೆಗೆ ಬರೆಯಿರಿ.

Standard Pen House
(K. M)
Bhandari Street
52-3 Bombay 3.

ನಾವು ಜಪಾನಿನಿಂದ ಕಲಿಯಬೇಕಾದ ಪಾಠ [೮]

"ಮನೆಯೇ ನನ್ನ ಕಾರ್ಖಾನೆ."

— ಮೂಲ ಲೇಖಕ — ಶ್ರೀ ಜಮುನಾಲಾಲ್ —

ಜಪಾನು ಕಾರ್ಖಾನೆಗಳ ಮನೆಯು. ಅಲ್ಲಿಯ ಮನೆಗಳೆಲ್ಲಾ ಕಾರ್ಖಾನೆಗಳು. ಕಾರ್ಖಾನೆಗಳೆಲ್ಲಾ ನಿವಾಸದ ಮನೆಗಳು. ಗುಡಿ ಕೈಗಾರಿಕೆಗಳೆಂದರೆ ಬಡವರಿಗೆ ಸಂಪತ್ತನ್ನು ತರುತ್ತವೆ. ಸಂಪತ್ತು ಇದ್ದರೆ ಗೌರವ ಬರುತ್ತದೆ. ಸಂಪತ್ತು ಅಸ್ಪೃಶ್ಯತೆಯನ್ನೂ, ಕೀಳುಭಾವನೆಯನ್ನೂ ನಿವಾರಿಸುತ್ತದೆ. ಅಷ್ಟೇ ಅಲ್ಲ ಗುಡಿ ಕೈಗಾರಿಕೆಗಳೇ ದೇಶದ ಸಂಪತ್ತಿನ ಹಾಗೂ ಐಕ್ಯತೆಯ ಬುನಾದಿ.

"ಮೂರು ವರ್ಷಗಳಿಗೆ ಮೊದಲು ಯುದ್ಧದ ಅನಾಹುತದಿಂದಾಗಿ ನನ್ನ ಕಾರ್ಖಾನೆಯು ನಿರ್ನಾಮವಾಯಿತು. ಆದರೆ ನಾನು, ನನ್ನ ಹೆಂಡತಿ ಮತ್ತು ಹಳೆಯ ಒಬ್ಬ ಕೆಲಸಗಾರ ನಾವು ಮೂರು ಜನರು ನಮ್ಮ ಮನೆಯನ್ನೇ ನಮ್ಮ ಕಾರ್ಖಾನೆಯಾಗಿ ಮಾಡಿ ಈ ಮೂರು ವರ್ಷಗಳಲ್ಲಿ ಒಂದು ಮಿಲಿಯ 'ಯನ್' ಗಳನ್ನು ಸಂಪಾದಿಸಿರುವೆವು. ಮುಂದೆ ದೊಡ್ಡ ಕಾರ್ಖಾನೆಯೊಂದನ್ನು ಸ್ಥಾಪಿಸುವ ಆಲೋಚನೆಯಲ್ಲಿರುವೆವು" ಎಂದು ಚಿಕ್ಕ ಕಾರ್ಖಾನೆಯ ಮಾಲಿಕನೊಬ್ಬನು ನನ್ನೊಡನೆ ಹೇಳಿದನು. ಜಪಾನು ಕೈಗಾರಿಕೆಯಲ್ಲಿ ಬಹು ಮಟ್ಟಿಗೆ ಮುಂದರಿದಿದೆ. ಜಪಾನರು ಕೇವಲ ಬಿದಿರೊಂದರಿಂದಲೇ ೧೪೦೦ ವಸ್ತುಗಳನ್ನು ತಮ್ಮ ಮನೆಯಲ್ಲಿ ಗುಡಿ ಕೈಗಾರಿಕೆಯಾಗಿ ತಯಾರಿಸುತ್ತಾರೆ. ಬಿದಿರಿನ ಕುರ್ಚಿಗಳು, ಬಿದಿರಿನ ರೇಡಿಯೋ ಸೆಟ್‌ಗಳು ಜಗದ್ವಿಖ್ಯಾತವಾಗಿವೆ. ಪೆಟ್ಟಿಗೆ, ಚಾಪೆ, ಬುಟ್ಟಿಗ, ಗುಂಡಿ, ಕೈಚೀಲ, ಹಂಚು, ಫೈಬರ್ ಸೂಟ್, ಪಾದರಕ್ಷೆ, ಮೊದಲಾದ ನೂರಾರು ಸಾಹಿತ್ಯಗಳನ್ನು ಬಿದಿರಿನಿಂದ ಸಾಜೂಕಾಗಿ ಅವರು ಮಾಡುತ್ತಾರೆ.

ವಿದ್ಯುತ್ ಸಹಾಯದಿಂದ ಯಂತ್ರಗಳ ಮೂಲಕ ಮಾಡುವ ಕೆಲಸವನ್ನು ಅವುಗಳಿಂದ ಮಾಡಿ ಉಳಿದುದನ್ನು ಗ್ರಾಮೀಣ ಜನರೇ ಸ್ವತಹ ಮಾಡುವದರಿಂದ ನಿರುದ್ಯೋಗ ಜಪಾನಿನಲ್ಲಿ ಕಡಿಮೆ ಇದೆ. ಒಂದು ಚಿಕ್ಕ ಗ್ರಾಮದ ಕೇಂದ್ರ ಸ್ಥಳದಲ್ಲಿ ಪಾದರಕ್ಷೆಗೆ ಲೇಸ್ ಮಾಡುವ ಕಾರ್ಖಾನೆಯೊಂದಿದ್ದು ಅದು ಹತ್ತಿ, ರೇಷ್ಮೆ, ರೇಯಾನ್‌ಗಳಿಂದ ಶೂ ಲೇಸ್ ತಯಾರಿಸಿದರೆ ಆ ಲೇಸ್‌ಗಳಿಗೆ ಬೇಕಾದ ಲೋಹದ ತುದಿಗಳನ್ನು, ಅವುಗಳಿಗೆ ಬೇಕಾದ ಹವಕೊಡುವ ಡಬ್ಬಗಳನ್ನು ಪ್ಯಾಕು ಮಾಡುವ ಎಲ್ಲ ಕೆಲಸಗಳನ್ನು ಗ್ರಾಮದ ಹೆಂಗಸು ಮಕ್ಕಳು ಮಾಡುತ್ತಾರೆ.

ಜಪಾನಿನಲ್ಲಿ ನಾನು ಮೂರು ವರ್ಷಗಳ ವರೆಗಿದ್ದು ಕಳೆದ ೧೫ ವರ್ಷಗಳಲ್ಲಿ ಜಪಾನಿನ ಕೈಗಾರಿಕೆ ಯಾವ ರೀತಿ ಅಭಿವೃದ್ಧಿಗೊಳ್ಳುತ್ತಿದೆಯೆಂಬುದನ್ನು ನೋಡಿರುವೆನು. ಜಪಾನಿನ ಕೈಗಾರಿಕಾ ಪ್ರಗತಿಗೆ ಮುಖ್ಯ ಕಾರಣವೆಂದರೆ ಇಡೀ ಜಪಾನೇ ಒಂದು ಕಾರ್ಖಾನೆಯಂತಿದೆ. ಅಲ್ಲಿಯ ಪ್ರತಿಯೊಬ್ಬ ನಾಗರಿಕನೂ ಈ ಪ್ರಗತಿಯ ಬಗ್ಗೆ ತನ್ನ ಪಾಲಿನ ಕರ್ತವ್ಯವನ್ನು ನಿರ್ವಹಿಸುತ್ತಾನೆ. ೨೦ ವರ್ಷಗಳ ಹಿಂದೆ ಜಪಾನು ಪ್ರಾಮುಖ್ಯವಾಗಿ ವ್ಯವಸಾಯಗಾರರ ನಾಡಾಗಿತ್ತು. ಇಂದು ಅದು ಜಗತ್ತಿನ ಪಸರಾಂತ ಕೈಗಾರಿಕಾ ರಾಷ್ಟ್ರವಾಗಿದೆ. ಇದರ ಗುಟ್ಟು ಜಪಾನರ ಕುಟುಂಬ, ಮನೆಗಳಲ್ಲಿವೆ. ಹಗಲು ಅವು ಕಾರ್ಖಾನೆಗಳಾಗಿದ್ದು ರಾತ್ರಿ ಮನೆಗಳಾಗಿರುವವು. ಈ ಗೃಹ ಕಾರ್ಖಾನೆಗಳು ಜಪಾನಿನಲ್ಲಿ ಆಶ್ಚರ್ಯಕಾರಕ ಪ್ರಗತಿಯನ್ನುಂಟು ಮಾಡಿರುವವು.

ಬ್ರಿಟಿಷ್ ಪೋಷಕರು ಭಾರತವು ವ್ಯವಸಾಯಗಾರರ ರಾಷ್ಟ್ರವೆಂದೂ ಅದನ್ನು ಕೈಗಾರಿಕಾ ರಾಷ್ಟ್ರವಾಗಿ ಮಾಡುವದು ಅಸಾಧ್ಯವೆಂದೂ ಹೇಳುತ್ತಿದ್ದರು. ವ್ಯವಸಾಯ ಪ್ರಧಾನ ರಾಷ್ಟ್ರವನ್ನು ಕೈಗಾರಿಕಾ ರಾಷ್ಟ್ರವಾಗಿ ಮಾಡಬಹುದೆಂಬುದನ್ನು ಜಪಾನಿನ ಚಕ್ರವರ್ತಿ ಮೈಜಿಯೆಂಬವರು ಮಾಡಿ ತೋರಿಸಿದರು. ಬ್ರಿಟಿಷರು ಭಾರತದಲ್ಲಿ ಮುನ್ನೂರು ವರ್ಷ ಆಳಿದರೂ ಅವರು ಭಾರತವು ಕೈಗಾರಿಕಾ ರಾಷ್ಟ್ರವಾಗಲಾರದೆಂದೇ ಹೇಳುತ್ತಾ ಬಂದರು. ಜಪಾನಿನ ಬಡ ರೈತರು ಕೇವಲ ಭೂಮಿಯ ಉತ್ಪಾದನೆಯಿಂದ ಜೀವಿಸುವದು ಕಷ್ಟವೆಂದು ಮನಗಂಡು ಕೈಗಾರಿಕೆಯನ್ನು ಸ್ವಾಗತಿಸಿಕೊಂಡರು. ಪರಿಣಾಮವಾಗಿ ಜಪಾನು ಕಾಲದಲ್ಲಿ ಮಾಡಿದ ತನ್ನ ಪ್ರಗತಿಯನ್ನೂ ಅದರೊಂದಿಗೆ ದೇಶದ ಪ್ರಗತಿಯನ್ನೂ ಸಾಧಿಸಿದರು.

ಜಪಾನಿನ ರೈತರಲ್ಲಿ ೧೯೩೭ರಲ್ಲಿ ನೂರಕ್ಕೆ ೫೫ ಜನರು ಉಪಕೈಗಾರಿಕೆ ಕೈಕೊಂಡು ವ್ಯವಸಾಯದ ಆದಾಯದ ಜೊತೆಗೆ ಈ ಕೈಗಾರಿಕಾ ಆದಾಯವನ್ನು ಹೆಚ್ಚಿಸಿಕೊಂಡಿದ್ದರು. ೧೯೩೭ರಲ್ಲಿ ಇವರ ಸಂಖ್ಯೆ ೫೫ಕ್ಕೆ ಏರಿತ್ತು. ೧೯೩೯ರಲ್ಲಿ ೬೦ಕ್ಕೆ ಏರಿತು. ಯುದ್ಧ ಕಾಲದಲ್ಲಿ ಇದು ಕುಗ್ಗಿದರೂ ಯುದ್ಧ ಅಂತ್ಯವಾಗುವಾಗ ಅಂದರೆ ೧೯೪೭ರಲ್ಲಿದ್ದ ೬೭ರ ಸಂಖ್ಯೆಯು ೬೭ರಲ್ಲಿ ೫೩ಕ್ಕೆ ಏರಿತು. ಈಗ ಇನ್ನೂ ಹೆಚ್ಚಾಗಿರುವದರೆಂಬುದರಲ್ಲಿ ಸಂಶಯವಿಲ್ಲ.

ಜಪಾನಿನ ಗುಡಿ ಕೈಗಾರಿಕೆಗಳನ್ನು ಗುಡಿ ಕೈಗಾರಿಕೆಗಳನ್ನುವದಕ್ಕಿಂಥ ಕುಟುಂಬ ಸಹಕಾರ ಉದ್ಯಮವೆನ್ನಬೇಕು. ಜಪಾನಿನ ನನ್ನ ಆರನೇ ಸಂದರ್ಶನದ ಕಾಲದಲ್ಲಿ ನಾನು ಅಂಥಾ ಸುಮಾರು ೨೦೦ ಕುಟುಂಬ ಸಹಕಾರ ಉದ್ಯಮಗಳನ್ನು ಪರಿಶೀಲಿಸಿದೆನು. ಪ್ರತಿಯೊಂದರಲ್ಲೂ ಗಂಡ, ಹೆಂಡತಿ, ಮಕ್ಕಳು ಮತ್ತು ಕೆಲವು ಹತ್ತಿರದ ನೆಂಟರು ಸಂತೋಷದಿಂದ ಪರಸ್ಪರ ಹರಟೆ, ತಮಾಷೆ ಮಾಡುತ್ತಾ ಕೆಲಸದಲ್ಲಿ ನಿರತರಾಗಿರುವವನ್ನು ನೋಡಿದೆನು. ಅವರಿಗೆ ಕೆಲಸವೆಂಬುದು ಆನಂದದಾಯಕ ವಸ್ತು. ಎಂಟು ಹತ್ತು ವಯಸ್ಸಿನ ಚಿಕ್ಕ ಮಕ್ಕಳೂ ಕೂಡ ಎಳೆ ವಯಸ್ಸಿನಲ್ಲಿ ಕೆಲಸಕ್ಕೆ ಹಚ್ಚಲ್ಪಡುವರೆಂದು ಇದರ ಅರ್ಥವಲ್ಲ. ಆಟ, ಓಟ, ವಿಹಾರಗಳಲ್ಲಿ ಜಪಾನರನ್ನು ಸರಿಗಟ್ಟುವವರು ವಿರಳ. ಅವರು ಪಾರ್ಕುಗಳಲ್ಲಿ, ಬೆಟ್ಟಗುಡ್ಡಗಳಲ್ಲಿ, ದೇವಸ್ಥಾನ, ನೈಸರ್ಗಿಕ ಕಾರಂಜಿ ಮೊದಲಾದೆಡೆಗಳಲ್ಲಿ ವಿಹರಿಸುತ್ತಾರೆ. ಅವರಿಗೆ ವಾರಾಂತ್ಯದ ಆದಿತ್ಯವಾರವೇ ಬರಬೇಕೆಂದಿಲ್ಲ. ಅವರಿಗೆ ಕೆಲಸದ ಹೊರತು ಪ್ರತಿ ದಿನವೂ ರಜಾ ದಿನವೆ. ಸಾಯಂಕಾಲಗಳಲ್ಲಿ ಸಾವಿರಾರು ಹೆಂಗಸರು, ಗಂಡಸರು, ಮಕ್ಕಳಾದಿಯಾಗಿ ವಿಹರಿಸುತ್ತಿರುತ್ತಾರೆ. "ಕೆಲಸ ಮಾಡುವ ಕಾಲದಲ್ಲಿ ಕೆಲಸ ಮಾಡುತ್ತಿರು; ಆಡುವ ಸಮಯದಲ್ಲಿ ಆಡುತ್ತಿರು" ಎಂಬುದೇ ಜಪಾನಿಯರ ಜೀವನ ಸಿದ್ಧಾಂತ. ಯಾವ ರೀತಿ ಕುಟುಂಬದ ಉನ್ನತಿಗೆ ಎಲ್ಲರೂ ಒಂದಾಗಿ ದುಡಿಯುತ್ತಾರೆಂಬುದಕ್ಕೆ ಇದೊಂದು ನಿದರ್ಶನವನ್ನು ಕೊಡುವೆನು.

ಟೋಕಿಯೋ ನಗರದ ರಸ್ತೆಯ ಪಕ್ಕದಲ್ಲಿ ಚಿಕ್ಕದೊಂದು ಗುಡಿಸಲು. ಆ ಗುಡಿಸಲಿನ ಚಾಪೆ ಹಾಸಿದ ನೆಲದಲ್ಲಿ ಒಬ್ಬ ಗಂಡಸು, ಒಬ್ಬ ಹೆಂಗಸು ಒಂದು ಚಿಕ್ಕ ಹೆಣ್ಣು ಹುಡುಗಿ ಕುಳಿತಿದ್ದಾರೆ. ಅವರು ತಯಾರಾದ ಪೆನ್ಸಿಲುಗಳನ್ನು ಲೆಕ್ಕ ಮಾಡಿ ಅವುಗಳಿಗೆ ಲೇಬಲ್ ಅಂಟಿಸಿ ಒಂದೊಂದು ಡಜನ್ ಪೆನ್ಸಿಲಿನ ಕಟ್ಟು ಮಾಡುತ್ತಿದ್ದಾರೆ. ಮಕ್ಕಳು ಶಾಲೆಯಿಂದ ಬಂದ ನಂತರ ಈ ಕೆಲಸದಲ್ಲಿ ಆಸಕ್ತಿಯಿಂದ ಸಹಾಯ ಮಾಡುತ್ತಾರೆ. ಗ್ರಾಮದ ಪೆನ್ಸಿಲ್ ಕಾರ್ಖಾನೆಯ ಸುತ್ತು ಮುತ್ತಲಿನ ಸುಮಾರು ಐವತ್ತು ಕುಟುಂಬಗಳು ಈ ಕೆಲಸ ಮಾಡುತ್ತವೆ. ಈ ಪೆನ್ಸಿಲುಗಳು ಕಾರ್ಖಾನೆಯಲ್ಲಿ ತಯಾರಾಗಿ ಇವರಲ್ಲಿಗೆ ಬರುವವು. ಮೊದಲು ಅನೇಕ ಕುಟುಂಬಗಳು ಕಾರ್ಖಾನೆಗೆ ಮರ, ಸೀಸ ಸರಬರಾಯಿ ಮಾಡುವ ಮೊದಲಾದ ಕೆಲಸಗಳನ್ನು ಮಾಡಿಯುತ್ತಾರೆ. ಗ್ರಾಮದ ಕಾರ್ಖಾನೆಯೂ ಕೂಡ ಗ್ರಾಮ ಕೈಗಾರಿಕೆಗೆ ತಕ್ಕುದು. ಕಾರ್ಖಾ

ಸಹಕಾರವೇ ✺ ಜೀವನದ ಏಳಿಗೆಯ ಹೆದ್ದಾರಿ,
ಅದರಲ್ಲೂ ವಿಮೆಯಲ್ಲಿ ಸಹಕಾರ ಪಂದರೆ ಅನ್ಯೋನ್ಯ ಏಳಿಗೆಯ ಮತ್ತು ಭದ್ರತೆಗೆ ಒಂದು ಸಾಧನ.

ದಿ ಬೊಂಬಾಯಿ ಕೋಪರೇಟಿವ್ ಇನ್ಸೂರೆನ್ಸ್
ಸೊಸೈಟಿ, ಲಿಮಿಟೆಡ್

ಹೆಡ್ ಆಫೀಸು:— [ಬೊಂಬಾಯಿ]

1953 ನೇ ಸಾಲಿಗೆ ರಿವರ್ಶನರಿ ಬೋನಸ್ಸು
ಹೋಲ್ ಲೈಫ್ ಸಾವಿರಕ್ಕೆ 11 ರಂತೆ — ಎಂಡೋಮೆಂಟ್ ಸಾವಿರಕ್ಕೆ 9 ರಂತೆ

✺ 200 ರಿಂದ 9000 ರ ತನಕದ ಪೋಲಿಸಿಗಳು ಪಡೆಯಬಹುದು ವರ ✺

ಎಲ್ಲಾ ಕಡೆಗಳಲ್ಲಿಯೂ ಪ್ರಭಾವವುಳ್ಳ ಏಜಂಟರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಯನ್ನು ದಕ್ಷಿಣ ಕನ್ನಡ, ಕೊಡಗು ಮತ್ತು ಮೈಸೂರು ಪ್ರಾಂತ್ಯಕ್ಕೆ ಮುಖ್ಯ ಏಜಂಟರಾದ

12-5

ಎಮ್. ಟಿ. ಕೋರ್ಡೆಲ್ ಅಂಡ್ ಕೋ., ಹಂಪನಕಟ್ಟೆ, ಮಂಗಳೂರು, ಇವರಿಂದ ಪಡೆಯಿರಿ.

Licence No. 60.
Licenced to Post without Prepayment

Reg. No. M. 1550.
"KODAGU" MERCARA (Coorg)

ನೆಯಲ್ಲಿ ೪೦ ಹೆಂಗಸುಗಂಡಸರು ಕೆಲಸಕ್ಕೆ ನಿಯುಕ್ತರಾಗಿದ್ದರು ಪೆನ್ಸಿಲುಗಳನ್ನು ಪೂರ್ತಿಗೊಳಿಸುವ ಕೆಲಸ ಮಾತ್ರ ಕಾರ್ಖಾನೆಯಲ್ಲಿ ನಡೆಯುತ್ತಿತ್ತು. ಈ ಕಾರ್ಖಾನೆಯೊಂದರ ಸುತ್ತು ಸುಮಾರು ನೂರು ಕುಟುಂಬಗಳು ಪೆನ್ಸಿಲು ಕೆಲಸ ಮಾಡಿಕೊಂಡು ಜೀವನ ಮಾಡುತ್ತಿದ್ದವು.

ಈ ನೂರು ಕುಟುಂಬಗಳ ಸಾಮೂಹಿಕ ಉದ್ಯಮವು ವರ್ಷಕ್ಕೆ ೬,೦೦,೦೦೦ ಗ್ರೋಸು ಪೆನ್ಸಿಲುಗಳನ್ನು ತಯಾರು ಮಾಡುತ್ತದೆ. ಅತೀ ಉತ್ತಮ ಪೆನ್ಸಿಲುಗಳಿಗೆ ಡಜನಿಗೆ ೩.೫ ಪೆನ್ಸ್‌ಗಳೂ, ಅತೀ ಕಡಿಮೆಯವಕ್ಕೆ ಡಜನಿಗೆ .೬೫ ಪೆನ್ಸ್‌ಗಳೂ ಬೆಲೆ ಅಲ್ಲಿದೆ. ಈ ಕಾರ್ಖಾನೆಯು ನೂರು ಕುಟುಂಬಗಳ ಸಹಕಾರದಿಂದ ತಯಾರಿಸಿದ ಪೆನ್ಸಿಲು ಜಗತ್ತಿನ ವಿವಿಧ ರಾಷ್ಟ್ರಗಳಿಗೆ ರಫ್ತಾಗುತ್ತವೆ. ಉದಾಹರಣೆಗಾಗಿ ಕೊಟ್ಟ ಈ ಪೆನ್ಸಿಲ್ ಕಾರ್ಖಾನೆಯಂತೆಯೇ ಇತರ ಕೈಗಾರಿಕೆಗಳೂ ನಡೆಯುವವು.

ಸಹಕಾರದ ತಳಹದಿಯಲ್ಲಿ ಗ್ರಾಮೋದ್ಯೋಗಗಳು ಯಾ ಗುಡಿ ಕೈಗಾರಿಕೆಗಳು ಹೇಗೆ ನಿಂತು ಲಾಭದಾಯಕ ಕೆಲಸ ಮಾಡುವವೆಂಬುದಕ್ಕೆ ಮೇಲಿನದು ಒಂದು ನಿದರ್ಶನ. ಕ್ಯೋಟೋ ಎಂಬಲ್ಲಿ ಬೀಸಣಿಗೆ ಮಾಡುವವರ ಬೀದಿಗೆ ನನ್ನನ್ನು ಕರೆದುಕೊಂಡು ಹೋದರು. ಅಲ್ಲಿ ಯಾವ ರೀತಿ ಪರಿಶ್ರಮವು ವಿಭಾಗಿಸಲ್ಪಟ್ಟಿದೆಯೆಂಬುದನ್ನು ಕಂಡೆನು. ಆ ಪೇಟೆಯಲ್ಲಿ ಹಲವು ಬೀದಿಗಳಿದ್ದವು. ಪ್ರತಿ ಬೀದಿಯ ಪ್ರತಿ ಮನೆಗೂ ಗೃಹ ಕಾರ್ಖಾನೆಗಳಿದ್ದವು. ಪ್ರತಿ ಕಾರ್ಖಾನೆಯೂ ಬೀಸಣಿಗೆಯ ಒಂದೊಂದು ಭಾಗವನ್ನು ತಯಾರಿಸುತ್ತಿತ್ತು. ಪ್ರತಿ ಮನೆಯ ಬೀಸಣಿಗೆಯ ಬಗ್ಗೆ ತನ್ನ ಪಾಲಿನ ಕರ್ತವ್ಯವನ್ನು ಮಾಡುತ್ತಿತ್ತು. ೬ಯು ಮನೆಗಳ ಈ ಸಮ್ಮಿಶ್ರ ಕೆಲಸದಿಂದ ಬೀಸಣಿಗೆ ತಯಾರಾಗುತ್ತಿತ್ತು. ಇದರ ಪ್ರತಿಫಲವೆಂದರೆ ಜಗತ್ತಿನಲ್ಲೇ ಹೆಸರು ಪಡೆದಿರುವ ಜಪಾನಿನ ರೇಷ್ಮೆ ಬೀಸಣಿಗೆ. ಒಂದು ಮನೆಯಲ್ಲಿ ಬಿದಿರಿನ ಕಡ್ಡಿಗಳೂ, ಇನ್ನೊಂದರಲ್ಲಿ ಆ ಕಡ್ಡಿಗಳನ್ನು ೮ ಇಂಚಿಗೆ ಸರಿಯಾಗಿ ಕತ್ತರಿಸುವದೂ, ಇನ್ನೊಂದರಲ್ಲಿ ಬಣ್ಣ ಕೊಡುವದೂ, ಇನ್ನೊಂದರಲ್ಲಿ ಪ್ರಿಂಟ್ ಮಾಡಿದ ಸಿಲ್ಕು ಅಳವಡಿಸುವದೂ, ಇನ್ನೊಂದರಲ್ಲಿ ಮಡಚಿ ಮಾರ್ಕೆಟಿಗೆ ಸಿದ್ಧ ಮಾಡುವ ಕೆಲಸವೂ ನಡೆಯುತ್ತಿದ್ದವು. ಹೀಗೆ ಆರು ಮನೆಗಳ ಸಾಮೂಹಿಕ ಕಲಸದಿಂದ ಬೀಸಣಿಗೆ ತಯಾರಾಗುತ್ತಿತ್ತು.

ಸಶೇಷ.

ವಾರದ ಕಥೆ.

(೨ನೇ ಪುಟದಿಂದ ಸಾಗಿದ್ದು)

ಗಳು ಅನಂತದಲ್ಲೇನನ್ನೋ ಅರಸುತ್ತಿದ್ದವು. 'ಅವನು ನನ್ನ ಸರ್ವಸ್ವ!' ಅವಳು ನಗುಮುಖದಿಂದ ಸುಧೀರರೊಡನಲ್ಲ—ಪ್ರಪಂಚದೊಡನೆ ಹೇಳಿದಳು. ಮರುಕ್ಷಣವೇ ಅವಳ ಮಂದಹಾಸವು ಮಾಯವಾಗಿ ಮುಖದ ಮೇಲೆ ಕಟುವ್ಯಂಗ್ಯವು ಮಿಂಚಿಹೋಯಿತು. 'ಈಗವನು ಏನೂ ಅಲ್ಲ'—ಹೇಳಿದು ಅವಳು ಯಾವುದೋ ಅಜ್ಞಾತ ದುಃಖದ ಭಾರದಿಂದ ತಲೆ ತಗ್ಗಿಸಿದಳು.

'ಸಮಸ್ಯೆಯೊಡ್ಡಬೇಡ'—ಸುಧೀರ ಗರ್ಜಿಸಿದರು. ಮನೆಯಲ್ಲೊಂದು ಮಹಾ ಕ್ರಾಂತಿಯೆಬ್ಬಿಸಬೇಕೆಂದೂ, ಎಲ್ಲಾ ವಸ್ತುಗಳನ್ನು ವಿಮಲೆಯ ಮೇಲೆಸೆದು ಚೂರು ಚೂರು ಮಾಡಿಬಿಡಬೇಕೆಂದೂ ಅವರ ಇಚ್ಛೆಯಾಯಿತು.

'ನಿಜ ಹೇಳು; ನೀನವನನ್ನು ಪ್ರೀತಿಸುತ್ತೀಯಾ?'

ಬಗ್ಗಿದ ಕತ್ತು ನೇರಾಯಿತು. ಯಾವಾಗಲೂ ಕೇವಲ 'ಜೀ' ಎಂದು ಹೇಳುತ್ತಿದ್ದ ವಿಮಲೆ ಅಭಿಮಾನದಿಂದ ತಲೆಯೆತ್ತಿ ಪತಿಯನ್ನೊಮ್ಮೆ ನಿಟ್ಟಿಸಿ—ಹೌದು; ನಿಮ್ಮ ಅಭಿಪ್ರಾಯ ಸರಿ. ಎಂದಳು.

ಆಗಲೇ ಸುಧೀರರಿಗೆ ಕತ್ತಲೆ ಕವಿದಂತಾಯಿತು. ತಮ್ಮ ಮರ್ಯಾದೆ, ಎದ್ದತ್ತು ಹಾಗೂ ಅಭಿಮಾನ ಇವೆಲ್ಲಕ್ಕೂ ಅವಳು ಮಸಿ ಹಚ್ಚಿದ್ದಳು. ಈಗ ಅವರಲ್ಲಿದ್ದ ಸದ್ಗುಣಗಳೆಲ್ಲ ಮಾಯವಾದವು. ಈಗ ಅವರು ಲಂಡನಿನ ವಿದ್ಯಾವಂತ ಬ್ಯಾರಿಸ್ಟರ್ ಅಲ್ಲ. ಐ. ಸಿ. ಎಸ್. ಅಸೋಸಿಯೇಶನ್ನಿನ ಕಾರ್ಯದರ್ಶಿಗಳೂ ಅಲ್ಲ, ಕ್ಲಬ್ಬಿನ ಲೋಕಪ್ರಿಯ ಸದಸ್ಯರಲ್ಲ, ನಾರಾಯಣಗಂಜ್ ಜಿಲ್ಲೆಯ ಡೆಪ್ಯೂಟಿ ಕಮಿಷನರ್ ಕೂಡ ಅಲ್ಲ. ಹೊಗಸಿನಿಂದ ಮೋಸ ಹೊಂದಿದ ಅಸಭ್ಯ ಕ್ರೂರಿಗಳೊಬ್ಬರು.

'ಹೊರಟು ಹೋಗು ಈ ಮನೆಯಿಂದ ಈಗಲೇ, ಈ ಕ್ಷಣವೆ!' ಅವರು ಕೂಗಿದರು.

ವಿಮಲೆಯ ಮುಖದ ಮೇಲೆ ಕೋಪದ ಕುರುಹಾಗಲೀ ದುಃಖದ ಚಿಹ್ನೆಯಾಗಲೀ ಮೂಡಲಿಲ್ಲ. ಅವಳು ಈಗಲೂ ಯಾವುದೇ ಬೇರೊಂದು ಪ್ರಪಂಚದಲ್ಲಿದ್ದಂತೆ ಕಾಣುತಿದ್ದಳು. ಪತಿಯ ಚೀತ್ಕಾರಕ್ಕೆ ಅವಳೇನೂ ಉತ್ತರ ಕೊಡಲಿಲ್ಲ. ಒಮ್ಮೆ ತನ್ನ ಪತಿಯ ಕಡೆ ನೋಡಿದಳು. ಆ ದೃಷ್ಟಿಯಲ್ಲಿ ಕ್ಷಮಾ ಭಾವನೆಯಿತ್ತು. 'ನಿಮಗೆ ಇದು ಅರ್ಥವಾಗಲಾರದು....!' ಎಂಬ ಅಭಿಪ್ರಾಯ ಅಡಕವಾಗಿತ್ತು. ಅವಳು ಅಲ್ಲಿಂದ ನೇರಾಗಿ ಒಳಹೋಗಿ ಕಿರುಮಗಳನ್ನು ಎತ್ತಿಕೊಂಡು ವೇಗವಾಗಿ ಹೊರಬಿದ್ದಳು. ಒಮ್ಮೆಯೂ ತಿರುಗಿ ನೋಡಲಿಲ್ಲ.

ವಿಮಲೆ ಬಂದು ಕ್ಷಮೆ ಬೇಡಿಯಾಳೆಂದು ಹಾರೈಸಿದ್ದ ಸುಧೀರರ ಕಲ್ಪನೆ ಗಾಳಿಯಲ್ಲಿ ಹಾರಿ ಹೋದಂತಾಯಿತು. ಆದರೆ ಹೀಗೆ ಮನೆ ಬಿಟ್ಟು ಹೋದಾಳೆಂದು ಅವರು ಭಾವಿಸಿರಲಿಲ್ಲ. ಈ ಮೌನವಾದ ಪೆಟ್ಟಿನಿಂದ ಅವರ ದೇಹವೊಮ್ಮೆ ಉರಿದು ಹೋದಂತಾಯಿತು. ಸುತ್ತಿಗೆಯಂತೆ 'ಅನಿಲ ಅನಿಲ' ಎಂಬ ಶಬ್ದ ಅವರ ಮೆದುಳಿನ ಮೇಲೆ ಒಡೆಯತೊಡಗಿತು. 'ಈ ಅನಿಲನಾರೆಂದು ಪತ್ತೆ ಹಚ್ಚಿಯೇ ಬಿಡುವೆ. ಅವನ ಮೇಲೆ ವಿವಾಹಿತ ಸ್ತ್ರೀಯನ್ನು ಹಾರಿಸಿ ಕೊಂಡೊಯ್ದ ಅಪವಾದ ಹೊರಿಸಿ ಜೈಲಿಗೆ ಕಳುಹಿಸುವೆ, ಕೊಲ್ಲಿಸಿಯೂ ಬಿಡುವೆ.'

ಹುಚ್ಚರಂತೆ ಓಡುತ್ತಾ ಅವರು ವಿಮಲೆಯ ಕೋಣೆಗೆ ತಲಪಿದರು. ಅವಳು ಕಾಗದಪತ್ರಗಳನ್ನಿಡುವ ಸ್ಥಾನ ಅವರಿಗೆ ತಿಳಿದಿತ್ತು. ಬೀಗದ ಕೈಗೊಂಚಲು ಎದುರು ಮಂಚದ ಮೇಲೆ ಬಿದ್ದಿತ್ತು. ಕವಾಟನ್ನು ತೆರೆದು ಅದರಲ್ಲಿನ ಕಾಗದಗಳನ್ನೆಲ್ಲ ಹುಡುಕಾಡಿದರು.

ಎಲ್ಲಕ್ಕಿಂತ ಕೆಳಗೆ ಕೆಂಪು ರೇಷ್ಮೆಯ ಬಟ್ಟೆಯಿಂದ ಸುತ್ತಿದ ಕೆಲವು ಕಾಗದಗಳಿದ್ದವು.

ಅವರ ಊಹೆ ಸರಿಯೆನಿಸಿತು. ಪ್ರತಿಯೊಂದು ಪತ್ರದಲ್ಲೂ 'ವಿಮಲ, ನನ್ನ ಪ್ರಾಣ, ನನ್ನ ಜೀವನ ಸರ್ವಸ್ವ, ನಿನ್ನ ಅನಿಲ, ಕೇವಲ ನಿನ್ನ ಅನಿಲ, ಈ ಪ್ರಪಂಚದಲ್ಲೂ, ಮುಂದಿನ ಪ್ರಪಂಚದಲ್ಲೂ ನಿನ್ನವ—ಎಂದಿತ್ತು. ಪ್ರತಿ ವಾಕ್ಯದಿಂದಲೂ ಅವರ ಹೃದಯ ಬರ್ಚಿಯಿಂದ ತಿವಿದಂತಾಗುತಿತ್ತು. ಒಂದೊಂದಾಗಿ ಆ ಕಾಗದಗಳು ಅವರ ಕೈಯಿಂದ ನೆಲದ ಮೇಲೆ ಬೀಳುತ್ತಿದ್ದವು. ಆದರಿದೇನು. ಕಾಗದಗಳ ನಡುವೆ ಮಡಚಿಟ್ಟ ಪತ್ರಿಕೆಯ ಒಂದು ಪುಟದಲ್ಲಿ ನವಯುವಕನೊಬ್ಬನ ಚಿತ್ರವಿತ್ತು. ವಿಚಿತ್ರವಾಗಿ ಹೊಳೆಯುವ ಕಂಗಳು, ಎತ್ತರವಾದ ಹಣೆ, ಮುಗುಳ್ನಗುವ ತುಟಿಗಳು ಇವು ಆ ಮುಖಕ್ಕೆ ವಿಶೇಷ ಶೋಭೆಯನ್ನಿತ್ತಿದ್ದುವು. ಆ ಚಿತ್ರದ ಕೆಳಗೆ ಈ ಸಮಾಚಾರವು ಅಚ್ಚಾಗಿತ್ತು:—

"ನವಯುವಕ ಕವಿಯ ಮರಣ"

"ಲಕ್ನೋವಿನ ನವಯುವಕ ಪ್ರಗತಿಶೀಲ ಸಾಹಿತಿಗಳೂ ಕ್ರಾಂತಿ ಕವಿಗಳೂ ಆದ ಅನಿಲ ಕುಮಾರರ ಮೃತ್ಯುವಿನ ಸಮಾಚಾರವನ್ನು ತಿಳಿಸಲು ತುಂಬಾ ವಿಷಾದಪಡುತ್ತೇವೆ. ೧೯೩೨ರ ಸತ್ಯಾಗ್ರಹ ಚಳವಳದಲ್ಲಿ ಭಾಗವಹಿಸಿ ಅವರು ಜೈಲಿಗೆ ಹೋಗಿದ್ದರು. ಜೈಲ್ಲಿಯೇ ಅವರಿಗೆ ಕ್ಷಯರೋಗ ಅಂಟಿಕೊಂಡಿತು......'

ಸುಧೀರರು ಎಲ್ಲಾ ವೃತ್ತಾಂತವನ್ನೂ ಓದದಾದರು. ಏಕೆಂದರೆ ಪತ್ರಿಕೆಯ ಚೂರಿನ ಮೇಲೆ ಅಚ್ಚಾದ ತಾರೀಕು ೧೮—೬—೧೯೪೦ ಆಗಿತ್ತು.

ಅವರ ಕೈಯಿಂದ ಉಳಿದೆಲ್ಲ ಪತ್ರಗಳೂ ಪತ್ರಿಕೆಯ ಚೂರೂ ಕೆಳಗುರುಳಿದವು. ಅವರಿಗೆ ಯಾವುದೂ ಅರ್ಥವಾಗಲಿಲ್ಲ. ಮೇಜಿನ ಮೇಲೆ ಅನಿಲನ ಪತ್ರವೂ ಕವರೂ ಬಿದ್ದಿದ್ದುವು. ಕವರನ್ನೆತ್ತಿ ಅವರು ಮತ್ತೊಮ್ಮೆ ಲಕ್ಷ್ಯಗೊಟ್ಟು ಓದಿದರು. ಪತ್ತಾರು ಉರುಟು ಮುದ್ರೆಗಳ ನಡುವೆ ಚೌಕಾಕಾರದ ಒಂದು ಮುದ್ರೆಯ ಮೇಲೆ ಇಂಗ್ಲಿಷಿನಲ್ಲಿ D. L. O. (ಡೆಡ್ ಲೆಟರ್ ಆಫೀಸ್) ಎಂದು ಅಚ್ಚಾಗಿತ್ತು.

(ಅಭ್ಯಾಸದ ಕತೆಯೊಂದು— ಹಿಂದಿಯಿಂದ)

ಸೋಮವಾರಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಕೆ. ಎಂ. ಸೋಗಪ್ಪನವರು

ಕೊಡಗು ಶಸ್ತ್ರಾಸ್ತ್ರ ಸಹಕಾರಿ ಸರ್ವೀಸಿಂಗ್
ಸೊಸೈಟಿ ಲಿಮಿಟೆಡ್.,
ರಿಜಿಸ್ಟರ್ಡ್ :— ಮಡಿಕೇರಿ.
ಶಾಖೆ :— ನಂ. ೮೦, ಬಳಿ ಬಿಲ್ಡಿಂಗ್ಸ್, ಮಡಿಕೇರಿ
ನಮ್ಮಲ್ಲಿ ಈ ಕೆಳಗೆ ಕೊಟ್ಟಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟಗಳು
2. 12 ನೇ ನಂಬರಿನ ಒಂಟಿ ಹೊಳವಿನ ತೋಟದ ಕೋವಿಗಳು.
3. ಒಂಟಿ ಮತ್ತು ಜೋಡಿ ಹೊಳವಿನ ಕೇಪಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
5. $\frac{5}{8}''$, $\frac{1}{2}''$ ಮತ್ತು $\frac{3}{8}''$ ಕಬ್ಬಿಣದ ಸರಳುಗಳು
6. $2''$, $1\frac{1}{4}''$, $1''$ $\frac{3}{4}''$ ಮತ್ತು $\frac{1}{2}''$ ಕೊಳಾಯಿಗಳು. (G. I. Peps)
7. $1\frac{3}{4}'' \times \frac{5}{16}''$ ಉಕ್ಕಿನ ಪಟ್ಟಿಗಳು (Spring Steel flats).
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
9. ಕೋಟೆ ಮತ್ತು ಆನೆ ಮಾರ್ಕಿನ ಸಿಮೆಂಟ್ ಟಿನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.
(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೆಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)
ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

Edited Printed and Published by P. I. BELLIAPPA at 'KODAGU' Press Mercara, for 'Kodagu'...

ಕೊಡಗು

ಚಿನ್ನದ ಒಡವೆಗೆ ಏತಕೆ ಅಮ್ಮಾ
ತೊಂದರೆ ಕೊಡುವವು ಬಡವಮ್ಮಾ!
ನನ್ನೀ ಒಲುಮೆಯ ನಿನ್ನೀ ವಾತ್ಸಲ್ಯ
ಎರಡೂ ಒಡವೆಗಳಾಗವಮ್ಮಾ!
ನಾ ನಿನಗೊಡವೆಯು, ನೀ ನನಗೊಡವೆಯು
ಬೇರೆಯ ಒಡವೆಗಳೇಕಮ್ಮಾ?

— ಕುವೆಂಪು

ವಾರ್ಷಿಕ ಚಂದಾ ರೂ. ೫—೦—೦
ಸಂಪುಟ ೩೨] —— [ಸಂಚಿಕೆ ೩೨
ಶುಕ್ರವಾರ
೨೦-೧೦-೧೯೫೨
ಬಿಡಿ ಪ್ರತಿ
2 ಆಣೆ

KODAGU KANNADA WEEKLY MERCARA

ಈ ವಾರದ ಕಥೆ.

* "ಗೆದ್ದವ ಜಾಣ!" *

— ಲೇಖಕಿ:—ಮಿಸ್, ಲೀಲಾರಾಣಿ —

ಕಥೆ ಪುಸ್ತಕ ಹಿಡಿದು ಕುಳಿತ ರಾಣಿಯು ತನ್ನನ್ನು ತಾನೇ ಮರೆತು ಕಥೆಯಲ್ಲಿ ಮಗ್ನಳಾಗಿದ್ದಳು. ಕಥಾ ನಾಯಕನ ಜೀವನವನ್ನೂ ಆತನು ಸಹಿಸಿದ ಕಷ್ಟ ಸುಖಗಳನ್ನೂ ನೆನೆಸಿ ಆಕೆಯ ಕಣ್ಣಿನಲ್ಲಿ ನೀರು ಹನಿಗೂಡಿತ್ತು. ಆಕೆಗೆ ಸಮಯದ ಪರಿವೆಯೇ ಇರಲಿಲ್ಲ.

ರಾಜನು ಎಂದಿನಂತೆ ತನ್ನ ಖಚೇರಿ ಕೆಲಸ ಮುಗಿಸಿ ಸಾಯಂಕಾಲ ೫. ೩೦ ಗಂಟೆಗೆ ಮನೆಗೆ ಬಂದು ತನ್ನ ಕೋಟನ್ನು ತೆಗೆದಿಟ್ಟು ತನ್ನ ಹೃದಯ ರಾಣಿಯನ್ನು ಕೂಗಿದನು. ಆದರೆ ತನ್ನ ಭಾವನೆಯಲ್ಲಿ ಮಗ್ನಳಾಗಿದ್ದ ರಾಣಿಗೆ ಕೇಳಿಸಲಿಲ್ಲ. ರಾಜನು ಮೃದು ಹೆಜ್ಜೆ ಹಾಕುತ್ತಾ ರಾಣಿಯ ಕೋಣೆಗೆ ಹೋದನು. ರಾಣಿಗರಿಯದೆ ಹಿಂದುಗಡೆಯಿಂದ ಹೋಗಿ ಕಣ್ಮುಚ್ಚಿದನು. ರಾಣಿಯು ಗಾಬರಿಗೊಂಡು ಕೂಗಿ ಕೊಂಡಳು. ರಾಜನು ನಗುತ್ತಾ ಹೇಳಿದನು. "ಇಷು, ನಿಷ್ಠೆಯಿಂದ ಓದಿದರೆ ಎಂಟು ದಿನಗಳಲ್ಲಿ ಬಿ. ಎ. ಪರೀಕ್ಷೆಗೆ ಕಟ್ಟಬಹುದು ನಾನು ಕರೆದುದೂ ಕೇಳಿಸಲಿಲ್ಲ!"

ರಾಣಿಯು ಲಜ್ಜೆಯಿಂದ, 'ಕ್ಷಮಿಸಿ. ಇದೊಂದು ಕಥೆಯನ್ನು ಓದುತ್ತಾ ಮಗ್ನಳಾಗಿ ಕುಳಿತುಬಿಟ್ಟೆ. ಸಮಯದ ಅರಿವೇ ಆಗಲಿಲ್ಲ. ಎಂದಿನಂತೆ ಬಾಗಿಲಲ್ಲಿ ನಿಂತು ನಿಮ್ಮನ್ನು ಎದುರುಗೊಳ್ಳಲಾಗಲಿಲ್ಲ. ಈ ಪುಸ್ತಕವನ್ನು ಬರೆದ ಗ್ರಂಥ ಕರ್ತರು ನಿಜವಾಗಿಯೂ ಮಾರ್ಮಿಕವಾದ ಚಿತ್ರವೊಂದನ್ನು ಚಿತ್ರಿಸಿದ್ದಾರೆ' ಎಂದು ಹೇಳಿ ಆಕೆಯು ಕತೆ ಹೇಳತೊಡಗಿದಳು.

ರಾಜ– "ರಾಣಿ, ಈಗ ನಿಲ್ಲಿಸು. ಕಾಫಿ, ತಿಂಡಿ, ಏನಾದರಿದ್ದರೆ ತಂದಿಡು. ಕಾಫಿ ಕುಡಿದಾದ ಮೇಲೆ ಗಾಳಿ ವಿಹಾರಕ್ಕೆ ಹೋಗುವ. ಅಲ್ಲಿ ಕಥೆ ಕೇಳಬಹುದು.' ಎಂದನು. ಇಬ್ಬರೂ ಕಾಫಿ ಕುಡಿದ ನಂತರ ಅವರು ಮನ ಒಪ್ಪುವ ಡ್ರೆಸ್ ಮಾಡಿಕೊಂಡು ಮಡಿಕೇರಿಯ ಟಾರು ಹಾಕಿದ ರಸ್ತೆಗಳನ್ನು ದಾಟಿ ಸಿವಿಲ್ ಸರ್ಜನ್ ಬೆಟ್ಟದ ತುದಿಯಲ್ಲಿ ಬಂದು ಕುಳಿತರು. ಕಥೆ ಹೇಳಲು ಉತ್ಸುಕಳಾಗಿದ್ದ ರಾಣಿಯು ಒಂದು ರೀತಿಯ ತತ್ಪರತೆಯಿಂದ ಕಥೆ ಹೇಳಲು ತೊಡಗಿದಳು.

"೧೯೨೦ನೇ ಇಸವಿ. ರಮೇಶನು ಆಗ ಕಾಲೇಜಿನ ಪ್ರಥಮ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದನು. ಮಹಾತ್ಮಾಗಾಂಧಿಯವರು ತಮ್ಮ ದಕ್ಷಿಣ ಆಫ್ರಿಕಾ ಚಳವಳವನ್ನು ಮುಗಿಸಿ ಭಾರತಕ್ಕೆ ಬಂದು ನಾಲ್ಕಾರು ವರ್ಷಗಳಾಗಿದ್ದವು. ಗಾಂಧೀಜಿಯವರ ಪ್ರಭಾವ ಮೆಲ್ಲ ಮೆಲ್ಲಗೆ ದೇಶದ ಹಲವೆಡೆ ಹರಡ ತೊಡಗಿತ್ತು. ಅವರ ಆದರ್ಶ ಮಾರ್ಗದ ಕಂಪು ರಮೇಶನಿಗೂ ಮುಟ್ಟಿ ಅಂದೇ ಗಾಂಧೀಜಿಯು ಮುಂದೆ ಉದಯಿಸುವ ಭಾರತದ ಭಾಗ್ಯ ರವಿಯೆಂದು ರಮೇಶನು ನಂಬಿ, ಗಾಂಧೀಜಿಯ ಹಿಂಬಾಲಕನಾಗಿದ್ದನು.

ವ್ಯಾಸಂಗ ಮುಗಿದು ಮನೆಗೆ ಬಂದ ರಮೇಶನು ಯಾವ ಸರಕಾರಿ ಉದ್ಯೋಗವನ್ನೂ ಕೈಕೊಳ್ಳಲಿಲ್ಲ. ಅಂದಿನ ಸರಕಾರಿ ಉದ್ಯೋಗವೆಂಬುದು ಗೌರವದ ಸಂಕೇತವಾಗಿತ್ತು. ಅಂಥಾ ನಾಡಿನಲ್ಲಿ ರಮೇಶನು ಗಾಂಧೀಜಿಯ ತತ್ವಗಳನ್ನು ಸಾರಲಾರಂಭಿಸಿದ್ದು! ನಾಲ್ಕಾರು ಜನರನ್ನು ಸೇರಿಸಿಕೊಂಡು ಅಖಿಲ ಭಾರತ ಕಾಂಗ್ರೆಸಿನ ತತ್ವಗಳನ್ನು ಪ್ರಚಾರ ಮಾಡತೊಡಗಿದನು.

ಬ್ರಿಟಿಷರನ್ನು ದೇವರೆಂದು ಭಾವಿಸುತ್ತಿದ್ದ ಜನರಲ್ಲಿ ಈ ಪ್ರಚಾರ ಮಾಡುವದು ಸುಲಭವಾಗಿರಲಿಲ್ಲ. ಆದರೆ ರಮೇಶನ ಆ ನಮ್ರತೆ, ಪರಹಿತ ಬುದ್ಧಿ ಹಲಕೆಲವರ ದೃಷ್ಟಿಯನ್ನು ಸೆಳೆದಿತ್ತು. ೧೯೨೧ರಲ್ಲೂ ನಂತರ ೧೯೩೦–೩೧ರಲ್ಲೂ ಗಾಂಧೀಜಿಯವರ ನೇತೃತ್ವದಲ್ಲಿ ನಡೆದ ಅಖಿಲ ಭಾರತ ಆಂದೋಲನಗಳ ಬಿಸಿ ಆತನ ನಾಡಿಗೂ ಮುಟ್ಟಿತ್ತು. ೧೯೩೦–೩೧ರಲ್ಲಿ ರಮೇಶನ ಪ್ರೇರಣೆಯಂತೆ ಸತ್ಯಾಗ್ರಹವು ನಡೆಯಿತು. ಬ್ರಿಟೀಷ ಸರಕಾರವು ರಮೇಶನೊಡಗೂಡಿ ಹಲವರ ದಸ್ತಗಿರಿ ಮಾಡಿತು.

ಈ ರೀತಿ ರಮೇಶನಿಂದ ಪ್ರಾರಂಭಿಸಲ್ಪಟ್ಟ ಚಳವಳವು ಬೆಳೆಯುತೊಡಗಿತು. ಆ ಉದ್ಯೋಗವೆಂದರೆ ಪರಕೀಯರ ಗುಲಾಮಗಿರಿಯಾಗಿತ್ತು. ಅದು ಗಾಂಧಿ ಅನುಯಾಯಿ ರಮೇಶನಿಗೆ ಸರಿತೋರಲಿಲ್ಲ. ಆತನು ತನ್ನ ಹಳ್ಳಿಯಲ್ಲಿಯೇ ಉಳಿದು ಸಾಧ್ಯವಾದ ಜನಹಿತ ಕೆಲಸಗಳನ್ನು ಮಾಡುತ್ತಾ ಕ್ರಮ.ಶಃ ಜನಾನುರಾಗವನ್ನು ಪಡೆದು ಶಾಸನ ಸಭೆಯ ಸದಸ್ಯನಾಗಿದ್ದನು.

ಆ ಕಾಲದಲ್ಲಿ ಆ ಊರಿನ ಜನರಿಗೆ ರಾಜಕೀಯದ ಗಂಧವಿರಲಿಲ್ಲ. ಬ್ರಿಟಿಷರಿಗೆ ಸಲಾಮು ಹೊಡೆದು ಅವರ ಕೃಪೆಯಿಂದ ಜೀವನ ಸುಧಾರಿಸಿಕೊಂಡವರೇ ಪುಣ್ಯಾತ್ಮರೆಂದು ಭಾವಿಸಲ್ಪಡುತಿತ್ತು. ಸರಕಾರದ ಅಧಿಕಾರದಲ್ಲಿರುವವರು ಇಲ್ಲದ ಕಿರುಕುಳ ಕೊಟ್ಟರು. ಅವರ ಲಾಠೀ ಚಾರ್ಜಿಗೂ, ಗುಂಡಿನೇಟಿಗೂ ಅನೇಕರು ತುತ್ತಾದರು. ರಮೇಶನು ತನ್ನ ಸೋದರರನ್ನು ಕಳಕೊಂಡನು. ತನ್ನ ಹೆಂಡತಿಯೂ ಗುಂಡಿನೇಟಿಗೆ ತುತ್ತಾಗಿ ಅಂಗ ಹೀನಳಾದುದನ್ನು ಸಹನೆಯಿಂದ ನೋಡಬೇಕಾಯಿತು.

ಈ ರೀತಿಯ ತ್ಯಾಗ ಪರಿಶ್ರಮಗಳ ಫಲವಾಗಿ, ೧೯೪೨ರಲ್ಲಿ ನಡೆದ ಮಹಾ ಕ್ರಾಂತಿಯ ಕಾರಣವಾಗಿ ೧೯೪೭ರಲ್ಲಿ ದೇಶವು ಸ್ವತಂತ್ರವಾಯಿತು. ಎಲ್ಲರೂ ಹಿರಿಹಿರಿ ಹಿಗ್ಗಿದರು.

ದೇಶಕ್ಕೆ ಸ್ವಾತಂತ್ರ್ಯ ದೊರೆಯಿತು. ದೇಶದ ಆಡಳಿತ ಅಧಿಕಾರವು ದೇಶೀಯರ ಕೈಗೆ ಬಂದಿತು. ಬ್ರಿಟೀಷರ ದಬ್ಬಾಳಿಕೆ ನಿಂತಿತು. ತಾವೇ ದೇಶದ ಭಾಗ್ಯವಿಧಾತರೆಂದು ತಿಳಿದೊಡನೆಯೇ ಆ ವರೆಗೆ ಬ್ರಿಟಿಷರ ಬಾಲ ಹಿಡಿದಿದ್ದವರೂ ಇತರರೂ ಕಾಂಗ್ರೆಸಿನೊಳಗೆ ನುಗ್ಗಿದರು. ಪ್ರತಿಯೊಬ್ಬನು ತಾನು ಕಾಂಗ್ರೆಸಿನವನೆಂದು ಮಿಲ್ ಬಟ್ಟೆಯೊದರೂ ಬಿಳಿ ಟೊಪ್ಪಿ ಧರಿಸಿದರು. ದೇಶದಲ್ಲಿ ಸ್ಪರ್ಧೆ ಪ್ರಾರಂಭವಾಯಿತು. ಕಾಂಗ್ರೆಸು ಬಡವರ, ಕೆಲಸವಿಲ್ಲದವರ ಕೂಟವೆಂದು ತುಚ್ಛೀಕರಿಸಿ ಹಳಿಯುತ್ತಿದ್ದವರು, ಗಾಂಧೀಜಿಯನ್ನು ನಗ್ನ ಫಕೀರನೆಂದೂ, ತಿಳಿಗೇಡಿಯೆಂದೂ ಹೇಳುತ್ತಿದ್ದವರು ಅಧಿಕಾರವು ಕಾಂಗ್ರೆಸಿನ ಕೈಗೆ ಬಂದಿದೆಯೆಂದಾಗ ಎಲ್ಲವನ್ನೂ ಮರೆತು ಕಣ್ಣುಮುಚ್ಚಿ ಕಾಂಗ್ರೆಸಿಗೆ ನುಗ್ಗಿ ಬಾಯ್ಬಡಿಯ ತೊಡಗಿದರು.

ಬ್ರಿಟೀಷರ ಕಾಲದಲ್ಲಿ ಅವರ ಪಾದ ಪೂಜೆ ಮಾಡಿ ಅವರ ಆಶ್ರಯದಲ್ಲಿ ಧನಗಳಿಸಿ ಸಂಪನ್ನರಾದವರು ಕಾಂಗ್ರೆಸ್ಸನ್ನು ವಶಪಡಿಸಿಕೊಂಡರು. ದುಡ್ಡಿನ ಬಲದ ಮುಂದೆ ರಮೇಶನಂಥಾ ಸರ್ವಸ್ವವನ್ನೂ ಕಳಕೊಂಡ ಬಡ ದೇಶ ಭಕ್ತನ ತ್ಯಾಗ ಜೀವನವು ಜನತೆಯ ಸ್ಮೃತಿ ಪಥದಿಂದ ಮರೆತು ಹೋಯಿತು. ಹೊಟ್ಟೆಗೆ ಅನ್ನವಿಲ್ಲದೆ ಬಡತನದಲ್ಲಿ ನರಳುವ ಬಡಜನರು ದುಡ್ಡಿನ ಆಸೆಗೆ ಮರುಳಾದರು. ದುಡ್ಡು ಚೆಲ್ಲುವ ಬಂಡವಾಳದಾರರೇ ತಮ್ಮ ಮುಂದಾಳುಗಳೆಂದರು. ಸ್ವಾತಂತ್ರ್ಯದ ಈ ಮಹಾ ಗೊಂದಲದಲ್ಲಿ ರಮೇಶನ ಸ್ಥಿತಿಯನ್ನು ಕೇಳುವವರೇ ಇಲ್ಲದಾಯಿತು. ದೇಶಕ್ಕಾಗಿ ಅಣ್ಣತಮ್ಮಂದಿಯರನ್ನು ಕಳೆದುಕೊಂಡು ಸದಾಕಾಲಕ್ಕೆ ಅಂಗವಿಹೀನೆಯಾದ ಪತ್ನಿಯನ್ನು ಕಟ್ಟಿಕೊಂಡು ರಮೇಶನು ಇಂದೂ ಕೂಡ ಅಂದಿನಂತೆಯೇ ಸತ್ಯ ಜೀವನ ನಡೆಸುತ್ತಿರುವನು. ಬಡತನದ ಝಳದಿಂದ ಆತನ ಶರೀರವು ಒಣಗಿ ಸೊರಗಿದೆ. ಯೌವನದಲ್ಲಿ ತನ್ನ ಸರ್ವಸ್ವವನ್ನೂ ದೇಶಕ್ಕೆ ಧಾರೆಯಾಗಿ ಎರೆದು ದುಡಿದ ಈತನಿಗೆ ಇಂದು ೫೫ ವಯಸ್ಸಾಗಿದೆ. ಆದರೆ ವಾಸ್ತವವಾಗಿ ೭೦ರ ಮುದುಕನಂತಿದ್ದಾನೆ. ಇಂದಿನ ಅಧಿಕಾರದ ಹೋರಾಟದ, ಸ್ವಾರ್ಥಿಗಳ ಕಿತ್ತಾಟದ ಮಧ್ಯೆ ರಮೇಶನ ಇರವೇ ಜನತೆಗೆ ಮರೆತುಹೋಗಿದೆ"

ಇದು ಆ ಪುಸ್ತಕದ ಕಥಾವಸ್ತು. ಅದನ್ನು ಓದಿ ನನಗೆ ತುಂಬಾ ವ್ಯಸನವಾಯಿತು. ಆ ಕಥೆಯನ್ನು ಓದುತ್ತಿದ್ದಂತೆಯೇ ರಮೇಶನ ಸ್ಥಿತಿಯನ್ನು ನೆನೆಸಿ,

"ಸಮಯವಿಹುದಿನ್ನು ಅವಸರವುಬೇಡ,
ತುದಿಯ ಕಾಣದ ಕಾಲ ಮುಂದಿರುವದು.
ಗುರಿಯು ಇರೆ ದೂರ, ಕಠಿಣವಿರೆದಾರಿ
ಯುಗಯುಗಗಳುಳಿದಿಹುದು
ಭೀತಿಯೇಕೆ?"

ಎಂಬ ಕವಿ ಪುಟ್ಟಪ್ಪನವರ ಮಾತು ನೆನಪಿಗೆ ಬಂತು ಆ ಆಸೆಯಲ್ಲಿ ಧೈರ್ಯತಂದುಕೊಂಡೆ" ಎಂದು ಹೇಳಿ ರಾಣಿಯು ಕಥೆ ಮುಗಿಸಿದಳು.

ರಾಜನು ರಾಣಿಯನ್ನು ಹತ್ತಿರ ಸರಿಸಿ ಆಕೆಯ ಕಪೋಲವನ್ನು ಮೃದುವಾಗಿ ತಟ್ಟಿ ಸೂರ್ಯನನ್ನು ತೋರಿಸಿ, "ನೋಡಲ್ಲಿ ಸೂರ್ಯನು ಅಸ್ತಂಗತನಾಗುತ್ತಿರುವನು. ಪುನಃ ನಾಳೆ ಸೂರ್ಯನು ಪೂರ್ವ ದಿಗಂತದಲ್ಲಿ ಮೂಡುವನೆಂಬುದು ಸತ್ಯ. ಆದರೆ ಆ ಸಮಯದಲ್ಲಿ ಆ ಮೂಡುವ ಸೂರ್ಯನನ್ನು ಸ್ವಾಗತಿಸಿ ಆತನ ರಮಣೀಯ ಕಾಂತಿಯಲ್ಲಿ ಆನಂದ ಪಡಲು ನಾವಿರುವೆವೆಂಬ ಭರವಸೆಯೆಲ್ಲಿ? ಪುಟ್ಟಪ್ಪನವರೆಂದಂತೆ ತುದಿಯ ಕಾಣದ ಕಾಲ ಮುಂದಿರಬಹುದು. ಆದರೆ ಕಾಲಚಕ್ರದ ಉರುಳಾಟದಲ್ಲಿ ನಶ್ವರ ಶರೀರಧಾರಿ ಮಾನವನು ನಶಿಸಬೇಕಾಗುವದು. ಆದರಿಂದ ರಮೇಶನ ಜೀವನದಲ್ಲಿ ಮತ್ತೊಂದು ಸೂರ್ಯೋದಯವಾದೀತೆಂಬ ನಿನ್ನ ಸಮಾಧಾನವು ನಿನ್ನ ಮಟ್ಟಿಗೆ ನಿನಗೆ ತೃಪ್ತಿಕೊಡಬಹುದೇ ವಿನಾ ಈ ಸ್ಪರ್ಧೆಯ ಪ್ರಪಂಚದಲ್ಲಿ ರೀತಿ ನೀತಿ ಬಿಟ್ಟು ನುಗ್ಗಿದವ ಗೆದ್ದನಲ್ಲದೆ ಸತ್ಯ, ನೀತಿ, ಧರ್ಮವೆಂದು ನಿಂತವ, ನಿರ್ನಾಮವಾದಂತೆಯೇ" ಎಂದು ಹೇಳಿ ರಾಣಿಯನ್ನು ಮೆಲ್ಲ ಚುಂಬಿಸಿದನು.

—

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ಆರ್ಥಿಕ ಉಳಿತಾಯ ಯೋಜನೆಗಳಲ್ಲಿ "ಕ್ಯುಮುಲೇಟಿವ್ ಡಿಪೋಜಿಟ್" ಯೋಜನೆಯು ಅತಿ ಪರಿಣಾಮಕಾರಿ ಹಾಗೂ ಅನುಕೂಲವಾದುದು. ಯಾವುದಾದರೊಂದು ನಿರ್ದಿಷ್ಟ ಉದ್ದೇಶ ಸಾಧನೆಗೆ, ನಿಯಮಿತ ಕಾಲಕ್ಕೆ ನಿಯಮಿತ ಹಣವನ್ನು ಒಂದು ನಿಯಮಿತ ಅವಧಿಯೊಳಗೆ ಬಡ್ಡಿಯೊಡನೆ ವಾಪಸು ಸಿಗುವಂತೆ ಬ್ಯಾಂಕಿನಲ್ಲಿ ಶೇಖರಿಸಿಡುವುದೇ ಈ ಯೋಜನೆಯ ಮೂಲ ತತ್ವ. ಇದು ಮುಖ್ಯವಾಗಿ ಮಧ್ಯಮ ತರಗತಿಯ ಜನರಿಗೆ ಇಲ್ಲವೆ ನಿಯಮಿತ ಸಂಬಳದ ನೌಕರರಿಗೆ ತಮ್ಮ ಮುದ್ದು ಮಕ್ಕಳ ವಿದ್ಯಾಭ್ಯಾಸ, ಮುಂಜಿ, ಮದುವೆ ಯೂ ಇನ್ನಿತರ ಸದುದ್ದೇಶ ಸಾಧನೆಗಳಿಗೆ ಅತ್ಯನುಕೂಲ ಹಾಗೂ ಅತಿ ಫಲಕಾರೀ ಯೋಜನೆ.

ವಿಶೇಷ ಮಾಹಿತಿಗೆ, ಕೊಡಗು ಸಂಸ್ಥಾನದಲ್ಲಿನ ಈ ಕೆಳಗಣ ನಮ್ಮ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ:

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

THE CANARA BANKING CORPORATION LIMITED.

Estd: 1906] [H. O, Udipi (S. India)

ವಾರದ ಭವಿಷ್ಯ

ತಾ. ೩೦—೧೦—೫೩ರಿಂದ ೫—೧೧—೫೩ರ ವರೆಗೆ.

ಜ್ಯೋತಿಷ್ಯ—ಶ್ರೀ ಬಿ. ಜಿ. ಶ್ರೀನಿವಾಸ ಶಾಸ್ತ್ರಿಯವರು.

ಮೇಷ

ನೀವು ಈ ವಾರ ಕೈಕೊಂಡ ಕಾರ್ಯಗಳು ಹೆಚ್ಚಾಗಿ ಜಯಗೊಳ್ಳಲಿವೆ. ಆದರೆ ಕೆಲವು ಕಾರ್ಯಗಳಿಗೆ ವಿಶೇಷ ಪ್ರಯತ್ನಗಳನ್ನು ಮಾಡಬೇಕಾದ್ದರಿಂದ ಅತ್ಮಕ್ಕೆ ಅಶಾಂತಿಯುಂಟಾದೀತು. ಆರ್ಥಿಕ ವಿಚಾರದಲ್ಲಿ ಆಪ್ತೇಷ್ಟರ ಭೇಟಿಯಿಂದ ಖರ್ಚಾಗಲಿದೆ. ಆರೋಗ್ಯವು ಚೆನ್ನಾಗಿದ್ದು ಸಮಾಜದಲ್ಲಿ ಗೌರವ ಪ್ರಾಪ್ತಿಯಾಗಲಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಈ ವಾರವು ಪ್ರಗತಿ ಪರವಾಗಿರುವದು. ತಾ. ೩೧ ಮತ್ತು ೧, ಖರ್ಚು.

ವೃಷಭ

ನಿಮ್ಮ ಆರೋಗ್ಯ ಸ್ಥಿತಿಯು ಈ ವಾರ ಚೆನ್ನಾಗಿದ್ದು ನೂತನ ಕಾರ್ಯಗಳನ್ನು ತಾವು ಕೈಕೊಳ್ಳಬೇಕಾಗುವದು. ಸಮಾಜದಲ್ಲಿ ಸನ್ಮಾನಗಳು ಲಭಿಸಲಿವೆ. ಮೊದಲು ಅಹಿತರಾದವರು ಈ ವಾರ ನಿಮ್ಮ ಮೈತ್ರಿಯನ್ನು ಬಯಸುವರು. ಕೋರ್ಟು ವ್ಯವಹಾರಗಳು ಅನುಕೂಲವಾಗುವವು. ವ್ಯಾಪಾರ ನಿರತರಿಗೆ ಈ ವಾರವಲ್ಲಿ ಲಾಭ ಚಿಹ್ನೆಯೂ ಕಂಡುಬರುವದು. ತಾ. ೨ ಮತ್ತು ೩ ಮಿತ್ರರ ಪತ್ರಾಗಮನ, ಸುಖ.

ಮಿಥುನ

ಈ ವಾರ ನಿಮ್ಮ ದೈಹಿಕ ಸ್ಥಿತಿಯು ಚೆನ್ನಾಗಿರುವದು. ಧೈರ್ಯೋತ್ಸಾಹ ಬಲದಿಂದ ಯಾವ ಕಾರ್ಯವನ್ನಾದರೂ ಸಾಧಿಸುವಿರಿ. ಆದರೂ ಮನಸ್ತಾಪಗೊಳ್ಳುವ ಘಟನೆಯೊಂದೊದಗಿ ಮನಸ್ಸು ಉದಾಸೀನತೆಯನ್ನು ಹೊಂದುವದು. ಕುಟುಂಬದ ಅನಾರೋಗ್ಯ ನಿಮಿತ್ತ ಸಾಂಪತ್ತಿಕ ಖರ್ಚಾಗಲಿದೆ. ವ್ಯಾಪಾರೋದ್ಯಮಿಗಳಿಗೆ ಈ ವಾರವು ಹೆಚ್ಚು ಉತ್ತಮವಿರುವದಿಲ್ಲ. ತಾ. ೪ ಮತ್ತು ೫ ಮಿತ್ರ ಜನರ ಭೇಟಿ, ಮನಸ್ತಾಪ.

ಕರ್ಕಾಟಕ

ಆಶೆಯೇ ದುಃಖಕ್ಕೆ ಕಾರಣವೆಂಬ ಲೋಕೋಕ್ತಿಯು ಈ ವಾರ ನಿಮ್ಮದಾಗಿರುವದು. ಆರೋಗ್ಯ ಸ್ಥಿತಿಯು ಸಾಕಷ್ಟಿದ್ದರೂ ಅಯೋಚಿತ ಕಾರ್ಯಕ್ಕೋಸ್ಕರ ಖರ್ಚಾಗಿ ಮನಶಾಂತಿ ಇರಲಾರದು. ಮಹತ್ವದ ಕಾರ್ಯ ಸಂಬಂಧ ಮೇಲಧಿಕಾರಿಗಳ ಭೇಟಿಯಾಗಲಿದೆ ವಿದ್ಯಾಭ್ಯಾಸಿಗಳು ಇತರರ ಹವ್ಯಾಸಕ್ಕೊಳಗಾಗಿ ಜಾಗೃತಾವಸ್ಥೆಯನ್ನು ಹೊಂದುವರು. ತಾ. ೨ ಮತ್ತು ೩ ವಿಶೇಷ ಖರ್ಚು, ಯಶೋವೃದ್ಧಿ.

ಸಿಂಹ

ಈ ವಾರ ನಿಮಗೆ ಅನುಕೂಲವಾಗಿರುವದು. ಆದರೆ ಸುಮ್ಮನೆ ಕುಳಿತರೆ ಕೆಲಸವಾಗಲಾರದು. ಮಲಗಿರತಕ್ಕ ಸಿಂಹದ ಬಾಯಿಗೆ ತಾವಾಗಿಯೇ ಮೃಗಗಳು ಬೀಳಲಾರವಷ್ಟೆ. ವಿಚಾರ ಪರರಾಗಿ ಎಂಥಾ ಮಹತ್ವದ ಕೆಲಸವನ್ನೂ ತಾವು ಕೈಗೊಂಡರೂ ಸಾಫಲ್ಯಹೊಂದುವದು. ಆರೋಗ್ಯ ಸ್ಥಿತಿಯು ಉತ್ತಮವಿರುವದು. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪ್ರಗತಿ ಲಭಿಸುವದು. ತಾ. ೧ ಮತ್ತು ೨ ಸನ್ಮಾನ, ಕಾರ್ಯಸಿದ್ಧಿ.

ಕನ್ಯಾ

ಈ ವಾರ ನೀವು ದೈಹಿಕ ವಿಚಾರದಲ್ಲಿ ಹೆಚ್ಚಿನ ಎಚ್ಚರಿಕೆ ಇಟ್ಟರೆ ಚೆನ್ನಾಗಿರುವದು ಸಾಂಪತ್ತಿಕ ವಿಚಾರದಲ್ಲಿ ಅನಿರೀಕ್ಷಿತ ಶುಭದಾಯಕ ಘಟನೆಗಳೊದಗಿ ಧನಲಾಭ ಯೋಗವಿದೆ. ಬಂಧು ಮಿತ್ರರ ಸಮಾಗಮದಿಂದ ಮನತೃಪ್ತಿಯಾಗಲಿದೆ. ವ್ಯಾಪಾರೋದ್ಯಮಿಗಳು ಕಷ್ಟಕ್ಕೊಳಗಾದರೂ ಹೆಚ್ಚಿನ ಲಾಭವನ್ನು ಹೊಂದುವರು. ವಿದ್ಯಾರ್ಥಿವೃಂದಕ್ಕೆ ಪ್ರಗತಿ. ತಾ. ೪ ಮತ್ತು ೫ ಬಂಧುಮಿತ್ರರ ಭೇಟಿ, ಸಂಚಾರ.

ತುಲಾ

ಭಾಗ್ಯ ವಿಹೀನನು ಎಲ್ಲಿಗೆ ಹೋದರೂ ವಿಪತ್ತುಗಳು ಅವನನ್ನೇ ಹಿಂಬಾಲಿಸುವವೆಂಬಂತೆ ತಾವು ವಿಚಾರ ದೃಷ್ಟಿಯಲ್ಲಿ ಉತ್ತಮವೆಂದು ತೋರುವ ಕಾರ್ಯವನ್ನು ಕೈಕೊಂಡರೂ ಇದರಲ್ಲಿ ಧನವ್ಯಯ ಮತ್ತು ವಾಕ್ಕಲಹಗಳು ಒದಗಲಿವೆ. ರಾಜಕೀಯ ಕ್ಷೇತ್ರದಲ್ಲಿ ಪ್ರತಿಕೂಲತೆಯುಂಟಾದೀತು. ಆರೋಗ್ಯ ನೆಲೆಯು ಚೆನ್ನಾಗಿದ್ದರೂ ಕುಟುಂಬದ ಅನಾರೋಗ್ಯ ನಿಮಿತ್ತದಿಂದ ಮನಸ್ಸಿಗೆ ಶಾಂತಿಯಿರಲಾರದು. ವಿದ್ಯಾಭ್ಯಾಸಿಗಳು ಪಾಠದ ಪ್ರಕೃತಿಯವರಾಗುವರು. ತಾ. ೨ ಮತ್ತು ೩ ಖರ್ಚು.

ವೃಶ್ಚಿಕ

ಆರೋಗ್ಯವು ಕೆಡದಂತೆ ತಾವು ಈ ವಾರ ಎಚ್ಚರದಿಂದಿರಬೇಕು. ಕುಟುಂಬದಲ್ಲಿ ಕಲಹ, ಅನಾರೋಗ್ಯ ಮೊದಲಾದವುಗಳ ವಿಚಾರದಲ್ಲಿ ರಾತ್ರಿ ಹಗಲೆನ್ನದೆ ದುಡಿಯಬೇಕಾಗುವದು. ಜನರು ನಿಮ್ಮ ಮಿತ್ರರೆಂದೆನಿಸಿ ನಿಮ್ಮನ್ನು ಮೋಸದಲ್ಲಿಕ್ಕುವರು. ಅಯೋಚಿತ ಸಂಚಾರದಿಂದಾಗಿ ನಿದ್ರಾಭಂಗ, ದೇಹಜಾಡ್ಯ, ಸಂಭವಿಸಲಿದೆ. ವ್ಯಾಪಾರ ತತ್ಪರರು ನಷ್ಟದಲ್ಲಿ ಬೀಳಬೇಕಾಗುವದು. ತಾ. ೩ ಮತ್ತು ೪ ಸಂಚಾರ, ಖರ್ಚು.

ಧನು

ಆರೋಗ್ಯ ದೃಷ್ಟಿಯಲ್ಲಿ ಈ ವಾರವು ನಿಮಗೆ ಬಹಳ ಉತ್ತಮವಿರುವದು. ಇತರರು ನಿಮ್ಮ ಕಾರ್ಯಕ್ಕೆ ಭಂಗತರಲೆತ್ನಿಸಿದರೂ ಅದು ಸೂರ್ಯ ತೇಜ ಸಂಪರ್ಕ ದೀಪದಂತೆ ತನ್ನಿಂದ ತಾನೇ ನಿಸ್ತೇಜಗೊಳ್ಳುವದು. ಆರ್ಥಿಕ ಸ್ಥಿತಿಯಲ್ಲಿ ಅಡಚಣೆಗಳಿದ್ದರೂ ಮಿತ್ರರ ಸಹಾಯದಿಂದ ಸಂತೋಷವನ್ನು ಹೊಂದುವಿರಿ. ವಿದ್ಯಾರ್ಥಿ ವೃಂದಕ್ಕೆ ಈ ವಾರವು ಅಭೀಷ್ಟಪ್ರದವಾಗಿರುವದು. ತಾ. ೪ ಮತ್ತು ೫ ಸುಖ.

ಮಕರ

ಈ ವಾರ ನಿಮಗೆ ದೇಹಸ್ಥಿತಿ ವಿರಿಸಾಡತಕ್ಕ ಕೆಲಸಗಳು ಬಂದೊದಗುವದರಿಂದ ಆರೋಗ್ಯವು ಕಡಲಿದೆ ದುಷ್ಟ ಜನರ ಸಂಸರ್ಗದಿಂದ ಮನೋನಿಶ್ಚಿತ ಕಾರ್ಯಗಳು ಸಕಾಲದಲ್ಲಿ ನೆರವೇರಲಾರವು. ಅಪ್ತೇಷ್ಟರ ಸತ್ಕಾರಕ್ಕಾಗಿ ಆರ್ಥಿಕ ವಿಚಾರದಲ್ಲಿ ನಷ್ಟವಾಗಲಿದೆ. ಸತಿಸುತರ ಆರೋಗ್ಯವು ಚೆನ್ನಾಗಿರಬಹುದು. ವ್ಯಾಪಾರಸ್ಥರಿಗೆ ಈ ವಾರ ನಷ್ಟ. ತಾ. ೨ ಮತ್ತು ೩ ಖರ್ಚು, ಸಂಚಾರ.

ಕುಂಭ

ಈ ವಾರ ನಿಮ್ಮ ಆರೋಗ್ಯವು ಚೆನ್ನಾಗಿದ್ದು ಕೋರ್ಟು ವ್ಯವಹಾರಗಳು ಅನುಕೂಲವಾಗುವವು. ಒಂದು ಕಡೆಯಿಂದ ಧನಾಗಮನವಿದ್ದರೆ ಮತ್ತೊಂದು ಕಡೆಯಿಂದ ವ್ಯಯವಾಗುವದು ಆಪ್ತ ಬಂಧುವರ್ಗದವರ ವಿಯೋಗವಾರ್ತೆಯಿಂದ ಮನಸ್ಸಿಗೆ ಶಾಂತಿಯಿರಲಾರದು. ವಿದ್ಯಾರ್ಥಿ ವಿದ್ಯಾರ್ಥಿನಿಯರು ತಮ್ಮ ಅಧ್ಯಯನ ಭಾಗದಲ್ಲಿ ಮುಂಗಾಮಿಗಳಾಗುವರು. ತಾ. ೫ ಧನವ್ಯಯ. ಸಂಚಾರ.

ಮೀನ

ಈ ವಾರ ನೀವು ಕೈಕೊಂಡ ಕಾರ್ಯಗಳು ಜಾಗ್ರತೆಯಿಂದ ಸಾಗುವವು. ಸಾಮಾನ್ಯ ಜನರೂ ಕೂಡ ನಿಮ್ಮ ಸಹಾಯಕರಾಗುವರು ಸಮಾಜದಲ್ಲಿ ಲಾಭ ಸನ್ಮಾನಗಳು ಲಭಿಸಲಿದೆ. ಆರೋಗ್ಯವು ಸಾಕಷ್ಟಿದ್ದು ಆರ್ಥಿಕ ಸ್ಥಿತಿಯು ತುಸು ಕೆಟ್ಟಿತಾದರೂ ಇತರರ ಸಹಾಯದಿಂದ ನೀವು ಸುಧಾರಿಸಿಕೊಳ್ಳುವಿರಿ. ವ್ಯಾಪಾರಿಗಳು ಈ ವಾರ ಅಯೋಚಿತ ಲಾಭವನ್ನು ಹೊಂದುವರು. ತಾ. ೨ ಮತ್ತು ೩ ಲಾಭ, ಕಾರ್ಯಸಿದ್ಧಿ.

ಸಾರ್ವಜನಿಕರಿಗೆ

"ಕೊಡಗು" ಪತ್ರಿಕೆಯ ಏಜೆಂಟರು ಸಹಕಾರಿ ಸ್ಟೋರ್ಸ್ ಮೇನೇಜರ್.

ಸಹಕಾರವೇ — ಜೀವನದ ಏಳಿಗೆಯ ಹೆದ್ದಾರಿ,

ಅದರಲ್ಲೂ ವಿಮೆಯಲ್ಲಿ ಸ ಹ ಕಾ ರ ವೆಂದರೆ ಅನ್ಯೋನ್ಯ ಏಳಿಗೆಯ ಮತ್ತು ಭದ್ರತೆಗೆ ಒಂದು ತಳಹದಿ.

ದಿ ಬೊಂಬಾಯಿ ಕೋಪರೇಟಿವ್ ಇನ್ಶೂರೆನ್ಸ್

ಹೆಡ್ ಆಫೀಸು:—] ಸೊಸೈಟಿ, ಲಿಮಿಟೆಡ್ [ಬೊಂಬಾಯಿ

1952 ನೇ ಸಾಲಿಗೆ ರಿವರ್ಶನರಿ ಬೋನಸ್ಸು

⊕ ಹೋಲ್ ಲೈಫ್ ಸಾವಿರಕ್ಕೆ 11 ರಂತೆ ⊕ ಎಂಡೋಮೆಂಟ್ ಸಾವಿರಕ್ಕೆ 9 ರಂತೆ

ರಿಂದ 900 ರ ತನಕದ ಪೋಲಿಸಿಗಳು ಹಳ್ಳಿಗರಿಗೊಂದು ವರ

ಎಲ್ಲಾ ಕಡೆಗಳಲ್ಲಿಯೂ ಪ್ರಭಾವವುಳ್ಳ ಏಜಂಟರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಯನ್ನು ದಕ್ಷಿಣ ಕನ್ನಡ, ಕೊಡಗು ಮತ್ತು ಮೈಸೂರು ಪ್ರಾಂತ್ಯಕ್ಕೆ ಮುಖ್ಯ ಏಜಂಟರಾದ

12-6

ಎಮ್. ಟಿ. ಕೋರ್‌ಡೆಲ್ ಅಂಡ್ ಕೋ., ಹಂಪನಕಟ್ಟೆ, ಮಂಗಳೂರು, ಇವರಿಂದ ಪಡೆಯಿರಿ.

ಪರಸ್ಪರ ತಿಳುವಳಿಕೆ, ಸಹಿಷ್ಣುತೆ ಅಗತ್ಯ

ಡಾ.— ರಾಧಾ ಕೃಷ್ಣನ್‌ರವರ ಭಾಷಣ.

ವಿಶ್ವಸಂಘದ ಉದ್ದೇಶವು, ಈಗಿನ ಪ್ರಚ್ಛನ್ನ ಯುದ್ಧವನ್ನು ಹೆಚ್ಚಿಸುವುದಾಗಿರದೆ, ಜಗತ್ತಿನ ಸಂಘರ್ಷಮಯ ವಾತಾವರಣವನ್ನು ಶಾಂತಗೊಳಿಸಲು ಸಾಧನಗಳನ್ನು ಕಂಡು ಹಿಡಿಯುವುದಾಗಿದ್ದರೆ, ನಮ್ಮ ಧೋರಣೆಯು, ಯಾವುದೇ ಜೀವನ ಪದ್ಧತಿಯನ್ನು ನಷ್ಟಗೊಳಿಸುವುದಾಗಿರದೆ, ಬಾಳುವುದು ಮತ್ತು ಬಾಳಲು ಬಿಡುವುದಾಗಿದ್ದರೆ, ಇತರರಿಂದ ಅಪೇಕ್ಷಿಸುವ ಸಹಿಷ್ಣುತೆಯ ಭಾವನೆಯನ್ನು ನಾವೂ ತೋರಿಸಬೇಕು,' ಎಂದು ಭಾರತದ ಉಪರಾಷ್ಟ್ರಾಧ್ಯಕ್ಷ ಡಾ. ರಾಧಾಕೃಷ್ಣನರು ತಾ. ೨೪ ರಲ್ಲಿ ಹೇಳಿದರು.

ರಾಷ್ಟ್ರಸಂಘದ ದಿನದ ನಿಮಿತ್ತ ಡಾ ರಾಧಾಕೃಷ್ಣನರ ರಿಕಾರ್ಡುಮಾಡಿದ ಭಾಷಣವನ್ನು ದೆಹಲಿಯ ಆಕಾಶವಾಣಿ ಕೇಂದ್ರದಿಂದ ಪ್ರಸರಿಸಲಾಯಿತು.

'ಸಂಯುಕ್ತ ರಾಷ್ಟ್ರಸಂಘವು ಹಲವು ಅಮೂಲ್ಯ ವಿಷಯಗಳನ್ನು ಸಾಧಿಸಿರುವುದಾದರೂ ಅದು ನೈತಿಕ ವರ್ಚಸ್ಸನ್ನು ಕಳಕೊಳ್ಳುತ್ತಿದೆ. ಪ್ರಾರಂಭದಿಂದಲೇ ಅದರ ಇತಿಹಾಸವು, ವಿಫಲತೆ, ದುರ್ಬಲತೆ, ಅದರ ಮೂಲೋದ್ದೇಶವನ್ನು ವಿಕೃತವಾಗಿ ತಿಳಿಯುವುದು, ಅದರ ಘನವಾದ ನಿರ್ಣಯಗಳ ಉಲ್ಲಂಘನೆ ಇವುಗಳಿಂದಲೇ ಕೂಡಿದೆ ಎಂದು ಸಾಮಾನ್ಯವಾಗಿ ತಿಳಿಯಲಾಗುತ್ತಿದೆ. ರಾಷ್ಟ್ರಸಂಘದ ಸದಸ್ಯರಾದ ಸರಕಾರಗಳಲ್ಲಿಯೂ ಅಂತರರಾಷ್ಟ್ರೀಯತ್ವಕ್ಕಿಂತ ರಾಷ್ಟ್ರೀಯ ಮನೋವೃತ್ತಿಯೇ ಹೆಚ್ಚಿದೆ. ಸ್ವತಂತ್ರ ರಾಷ್ಟ್ರಗಳಲ್ಲಿ ಭಯ ಮತ್ತು ಅಸುರಕ್ಷಿತತೆಯಿಂದಾಗಿ ರಾಷ್ಟ್ರೀಯ ಭಾವನೆ ಬೆಳೆಯುತ್ತಿದೆ.

'ಅಂತರರಾಷ್ಟ್ರೀಯ ರಂಗದಲ್ಲಿ, ಜಗತ್ತಿನ ಮಹಾ ರಾಷ್ಟ್ರಗಳು ಯುದ್ಧದ ಭಯಾನಕ ರೂಪವನ್ನು ತಾಳಬಲ್ಲ ಚಿಕ್ಕ ಚಿಕ್ಕ ಚಕಮಕಿಗಳಲ್ಲಿ ತೊಡಗಿರುವುದನ್ನೂ, ಯುದ್ಧೋಪಯೋಗಿ ಠಾಣ್ಯಗಳನ್ನು ಪಡೆಯಲು ಹವಣಿಸುತ್ತಿರುವುದನ್ನೂ, ಪ್ರತಿಸ್ಪರ್ಧಿ ದೇಶಗಳ ಜನರಲ್ಲಿ ದ್ರೋಹಕ್ಕೆ ಪ್ರೋತ್ಸಾಹ ಕೊಡುವುದನ್ನೂ ನೋಡಿದಲ್ಲಿ ನಿರಾಶೆ ಮತ್ತು ಮಾನಸಿಕ ಅಶಾಂತಿ ನಮ್ಮನ್ನಾವರಿಸುತ್ತವೆ. ಒಬ್ಬ ವ್ಯಕ್ತಿಯು ಮತ್ತೊಬ್ಬನನ್ನು ಅಧೋಗತಿಗಿಳಿಸಬಹುದು. ಆದರೆ ಅಧಿಕಾರಲಾಲಸೆ ಮತ್ತು ಸಂದರ್ಭಸಾಧಕತೆಯ ಮೇಲೆ ತಮ್ಮ ಧೋರಣೆಗಳನ್ನು ಆಧರಿಸುವ ಸರಕಾರಗಳು ಇಡಿ ಜನಾಂಗವನ್ನೇ ಪಶುಸಮಾನವನ್ನಾಗಿ ಮಾಡಬಲ್ಲವು.

'ಯುಕ್ತ ರಾಷ್ಟ್ರ ಸಂಘದ ಸನದಿಗೆ ಸಹಿ ಹಾಕಿದವರೆಲ್ಲ ಅದರ ತತ್ವಗಳನ್ನು ಪ್ರಾಮಾಣಿಕತನದಿಂದ ತಮ್ಮ ಆಂತರಿಕ ಹಾಗೂ ಬಾಹ್ಯನೀತಿಗಳಿಗೆ ಅನ್ವಯಿಸಿದಲ್ಲಿ ಮಾತ್ರ ಜಾಗತಿಕ ಶಾಂತಿ ಸ್ಥಾಪನೆಯಾಗಬಲ್ಲದು.

'ಏಷ್ಯಾ ಮತ್ತು ಆಫ್ರಿಕದ ಪರತಂತ್ರ ರಾಷ್ಟ್ರಗಳ ಸ್ವಾತಂತ್ರ್ಯ ಚಳವಳಿಯನ್ನು ಉಪೇಕ್ಷಿಸಲು ಸಾಧ್ಯವಿಲ್ಲ. ವಸಾಹತುಗಳಲ್ಲಿ ಶಾಂತವಾಗಿ ಅಧಿಕಾರಾಂತರವಾಡಲು ರಾಷ್ಟ್ರಸಂಘದ ಪ್ರಮುಖ ರಾಷ್ಟ್ರಗಳು ತಮ್ಮ ಪ್ರಭಾವವನ್ನುಪಯೋಗಿಸಬೇಕು. ವಸಾಹತು ಪದ್ಧತಿ, ಅನೀತಿ ಯುಕ್ತ ಪ್ರತಿನಿಧಿ ಸ್ವರೂಪವಲ್ಲದೆ, ಮಾನವ ಹಕ್ಕು ಬಾಧ್ಯತೆಗಳನ್ನುಲ್ಲಂಘಿಸುವ ಮತ್ತು ಪುರಾತನ ಸಮಾಜ ಪದ್ಧತಿಗಳನ್ನನುಸರಿಸುವ ಸರಕಾರಗಳಿಗೆ ನಾವು ಬೆಂಬಲ ಕೊಟ್ಟಲ್ಲಿ ಮತ್ತು ಆ ಬೆಂಬಲವು ಸೈನಿಕ ಸಹಾಯದ ರೂಪವನ್ನು ತಾಳಿದಲ್ಲಿ ಜಾಗತಿಕ ಶಾಂತಿಯು ಅಪಾಯದಲ್ಲಿ ಬೀಳುವುದು. ವರ್ಣ ಸಮಸ್ಯೆಗಳನ್ನು ಜಾದುವಿನಿಂದ ಬಗೆಹರಿಸಲು ಸಾಧ್ಯವಿಲ್ಲ. ಆದರೆ ವರ್ಣದ್ವೇಷವೂ ಅದರ ಪರಿಹಾರವಲ್ಲ.

'ವಿಶ್ವ ಸಂಸ್ಥೆಯು ಸ್ವತಂತ್ರವಾಗಿ ವರ್ತಿಸಬಲ್ಲ ಅಂತರರಾಷ್ಟ್ರೀಯ ಸಂಸ್ಥೆಯಾಗಿರದೆ ಪ್ರಭಾವಿ ಗುಂಪುಗಳ ಕೈಗೊಂಬೆಯಾದಂತಿದೆ. ಕಮ್ಯೂನಿಸಮಿನ ಬೆದರಿಕೆಯು ಜಗತ್ತಿನ ಸ್ಥಿತಿಯತ್ತ ನೋಡುವ ನಮ್ಮ ದೃಷ್ಟಿಕೋಣವನ್ನೇ ವಿಕೃತಗೊಳಿಸಿದೆ. ರಾಜಕೀಯ ಸ್ವಾತಂತ್ರ್ಯ ಸಾಮಾಜಿಕ ಸಮಾನತೆ, ಆರ್ಥಿಕ ಪ್ರಗತಿ ಇವುಗಳ ವಿರುದ್ಧ ಹೋರಾಡುವ ಪ್ರತಿಗಾಮಿ ವ್ಯಕ್ತಿಗಳೇ ಕಮ್ಯೂನಿಸಮಿನ ನಿಜವಾದ ಮಿತ್ರರಾಗಿದ್ದಾರೆ. ಪ್ರಜಾಪ್ರಭುತ್ವವಾದಿಗಳು ಸರಿಯಾಗಿ ವರ್ತಿಸಿದಲ್ಲಿ, ಕಮ್ಯೂನಿಸಮಿನ ಆಕರ್ಷಣೆಯು ನಿಶ್ಚಿತವಾಗಿ ಕಡಿಮೆಯಾದೀತು.

'ನಾವೇ ಸರಿ ಇತರರು' ತಪ್ಪು ಎಂಬ ಸಂಕುಚಿತ ಭಾವನೆ ಇರಕೂಡದು ಪರಸ್ಪರ ತಿಳುವಳಿಕೆ ಮತ್ತು ಸಹಿಷ್ಣುತೆ ಇವು ಅತ್ಯಾವಶ್ಯಕ. ಸತತ ಪ್ರಯತ್ನದಿಂದ ಇದನ್ನು ರಾಷ್ಟ್ರಗಳಲ್ಲಿ ನಿರ್ಮಾಣಮಾಡಬೇಕು

'ಬದಲಾವಣೆಯ ನಿಯಮಕ್ಕೆ ರಷ್ಯದ ಪದ್ಧತಿಯೂ ಹೊರತಾಗಿಲ್ಲ. ಕೆಲವು ಭೌತಿಕ ವಸ್ತುಗಳಿಲ್ಲದೆ ನಾವು ಜೀವನ ನಡೆಸಲು ಸಾಧ್ಯವಿಲ್ಲ ಹೇಗೋ ಹಾಗೆಯೇ ಕೆಲವು ನೈತಿಕ ಮತ್ತು ಆಧ್ಯಾತ್ಮಿಕ ವಿಚಾರಗಳಿಲ್ಲದಿದ್ದರೆ ನಾವು ಬದುಕಲು ಇಚ್ಛಿಸುವುದೂ ಇಲ್ಲವೆಂದು ಕಮ್ಯೂನಿಸ್ಟರೂ ಮನಗಾಣುವುದು ಅಸಾಧ್ಯವಲ್ಲ.

'ಒಳ್ಳೆಯ ವರ್ತನೆಯಿಂದ ಕೆಟ್ಟದನ್ನು ಜಯಿಸಬೇಕು ಎಂಬುದನ್ನು ನಾವು ಮರೆಯಬಾರದು. ದೀರ್ಘಕಾಲದ ತನಕ ತಟಸ್ಥವಾಗಿದ್ದ ಅಮೇರಿಕವು ಭಾರತ ಮತ್ತಿತರ ದೇಶಗಳ ತಟಸ್ಥ ಧೋರಣೆಗೆ ಸಹಾನುಭೂತಿ ತೋರಿಸಬೇಕು. ಭಾರತವು ಜಾಗತಿಕ ಶಾಂತಿಗೆ ತನ್ನ ಅಲ್ಪ ಕಾಣಿಕೆ ಕೊಡಬಯಸುತ್ತದೆ. ಆದರೆ ಎರಡೂ ಕಡೆಯವರು ಕೊರಿಯದಲ್ಲಿ ನಮ್ಮ ಪ್ರಯತ್ನಗಳನ್ನು ನಷ್ಟಗೊಳಿಸಲು ಪ್ರಯತ್ನಿಸುವಂತಿದೆ.

'ಚೀನದ ಜನತಾ ಪ್ರತಿನಿಧಿ ಸರಕಾರಕ್ಕೆ ರಾಷ್ಟ್ರಸಂಘದಲ್ಲಿ ಸ್ಥಾನಕೊಟ್ಟಲ್ಲಿ ಶಾಂತಿಯ ಹಿತಸಾಧಿಸಿದಂತಾದೀತು ಇಂದು ಮಾನವ ಜನಾಂಗವು ಬದಲಾವಣೆ ಹೊಂದುವ ಸ್ಥಿತಿಯಲ್ಲಿದೆ. ನಮ್ಮ ಕನಸಿನ ಜಗತ್ತನ್ನು ಸ್ಥಾಪಿಸಲು ನಾವೆಲ್ಲರೂ ಹೆಣಗಾಡಬೇಕು' ಎಂದು ಡಾ. ರಾಧಾಕೃಷ್ಣನ್ ನುಡಿದರು.

ವಿಧವೆಯರ ಪ್ರಲಾಪ

ಕೊರಿಯಾ ಯುದ್ಧದಲ್ಲಿ ತಮ್ಮ ಗಂಡಂದಿರನ್ನು ಕಳಕೊಂಡು ನಿರ್ಗತಿಕರಾದ ವಿಧವೆಯರು ಮತ್ತು ಪುತ್ರಶೋಕದಿಂದ ಪೀಡಿತರಾದ ಮಾತೆಯರು ಇತ್ತೀಚೆಗೆ ದಕ್ಷಿಣ ಕೊರಿಯದ ಅಧ್ಯಕ್ಷ ಡಾ. ಸಿಂಗ್‌ಮನ್ ರೀ ಮತ್ತು ಅವರ ಧರ್ಮಪತ್ನಿಯನ್ನು ಹಳಿದು, ವಿರೋಧ ಪ್ರದರ್ಶನ ನಡೆಸಿದರು. 'ಡಾ. ರ್‍ಹೀಯವರೇ, ನಮ್ಮ ಗಂಡಂದಿರನ್ನು ನಮಗೆ ತಿರುಗಿ ಕೊಡಿರಿ' ಎಂಬ ಉದ್ಘೋಷಗಳನ್ನು ಹೊರಡಿಸುತ್ತ ರಾಜಧಾನಿಯ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಬಂದರು. ಈ ಕಠಿಣ ಪರಿಸ್ಥಿತಿಯನ್ನು ವಿಮರ್ಶಿಸಲು ರ್‍ಹೀಯವರು ತಮ್ಮ ಮಂತ್ರಿ ಮಂಡಲದ ಅವಸರದ ಸಭೆಯನ್ನು ಕರೆಸಬೇಕಾಯಿತು ಈ ವಿಧವೆಯರಿಗೆ ವಸ್ತ್ರದಾನ ನೀಡಲು ಏರ್ಪಡಿಸಿದ ಸ್ಥಳದಲ್ಲಿ ಘರ್ಷಣೆ ನಡೆಯುವಲ್ಲಿಯ ವರೆಗೆ ಪರಿಸ್ಥಿತಿಯು ಗಂಭೀರವಾಯಿತು. "ನೀವು ಕೊಡುವ ಈ ಆರು ಗಜ ಬಟ್ಟೆ ನಮ್ಮ ಕಣ್ಣೀರು ಒರೆಸಲು ಸಾಕಾದೀತೇ" ಎಂದು ವಿಧವೆಯರು ಗುಲ್ಲೆಬ್ಬಿಸಿದರು.

ಕಾಫಿಯ ಬೆಲೆಯ ನಿರ್ಣಯ

ಈಗ ಕಾಫಿ ಬೆಳೆಸುವವರಿಗೆ ಒಂದು ನಿಶ್ಚಿತ ಕನಿಷ್ಟ ಬೆಲೆ ಕೊಡಲು ನಿರ್ಧಾರವಾಗಿತ್ತು. ಈಗಿನ ಕನಿಷ್ಟ ಬೆಲೆಯನ್ನೇ ಮುಂದಕ್ಕೆ ಕಾಯಂ ಬೆಲೆಯಾಗಿ ಮಾಡುವ ನಿರ್ಧಾರ ಕೇಂದ್ರ ಸರಕಾರ ಮಾಡಿರುವರೆ.

ಪ್ರಕೃತ ಪ್ರತಿಯೊಬ್ಬ ಕಾಫಿ ಬೆಳೆಸುವವನೂ ತಾನು ಬೆಳೆಸಿದ ಕಾಫಿಯನ್ನೆಲ್ಲಾ ಕಾಫಿ ಬೋರ್ಡಿಗೆ ಕೊಡಬೇಕು. ಸ್ವಲ್ಪ ಹಣವನ್ನು ಅವರು ಕೂಡಲೇ ಕೊಡುವುದಲ್ಲದೆ ಮಾರಿದಂತೆ ಹಣ ತೆರುತ್ತಾ ಬಂದು ಪೂರ್ಣ ಮಾರಾಟವಾದ ಬಳಿಕ ಲೆಕ್ಕ ಮುಗಿಸುವರು

ಕಾಫಿಯಲ್ಲಿ ಮುಖ್ಯ ಮೂರು ತರಗತಿಗಳು: ಪ್ಲಾಂಟೇಶನ್ ಕಾಫಿಗೆ ೮೦ ನಂಬರು, ಅರೇಬಿಕ (ಚೆರೀ ತರ)ಕ್ಕೆ ೬೮ ನಂಬರು ಮತ್ತು (ಇನ್ನೇ ತರ)ದ ರೋಬಸ್ಟಕ್ಕೆ ೫೨ ನಂಬರು, ಬೆಲೆಯನ್ನೂ ನಂಬ್ರಕ್ಕೆ (ಹ. ವೈಟಿಗೆ) ರೂ. ೨–೪–೦ರಂತೆ ನಿರ್ಣಯ ಮಾಡಿರುವ ಈ ದರದಲ್ಲಿ ಪ್ಲೇಂಟೇಶನಿಗೆ ಹ. ವೈಟಿಗೆ ರೂ. ೧೮೦; ಅರೇಬಿಕಕ್ಕೆ ರೂ. ೧೫೩ ಮತ್ತು ರೊಬಸ್ಟಕ್ಕೆ ರೂ. ೧೧೭/– ದೊರೆಯುತ್ತದೆ. ಬೋರ್ಡಿನ ನಿಶ್ಚಿತ ಪ್ರಮಾಣದಲ್ಲಿ ಮತ್ತು ಮೇಲೆ ನಿಶ್ಚಯ ಮಾಡಿದ ಬೆಲೆಯಲ್ಲಿ ಪರಸ್ಪರ ಸಹಾಯ ಸಮಿತಿಗಳಿಗೆ ಒಪಗಿಸುವುದು. ಕೊಟ್ಟು ಉಳಿದುದನ್ನು ಹರಾಜು ಮಾಡಲಾಗುವುದು. ಇದರಿಂದ ಅಧಿಕ ಬೆಲೆ ಬಂದು ಬೆಳೆಸುವವರಿಗೆ ಮತ್ತಷ್ಟು ಹೆಚ್ಚು ಬೆಲೆ ದೊರಕುವುದು. ಇದು ಕಾಫಿ ಉಪಯೋಗಿಸುವವರಿಂದ ಬರುವ ಹಣ.

ಈಗಿನ ಬದಲಾವಣೆಯಿಂದ ಬೆಳೆಸುವವನಿಗೆ ನ್ಯಾಯವಾದ ಬೆಲೆ ಮಾತ್ರ ದೊರೆಯುವದಲ್ಲದೆ ಹೆಚ್ಚೇನೂ ದೊರೆಯುವುದಿಲ್ಲ. ಹರಾಜಿನಿಂದ ಹೆಚ್ಚು ದೊರೆತರೆ ಅದು ಉಪಯೋಗಿಸುವವನ ಅನುಕೂಲಕ್ಕಾಗಿ ವಿನಿಯೋಗವಾಗುವುದು. ವರ್ಷದ ಕಾಫಿಯ ಅಂದಾಜು ಉತ್ಪತ್ತಿ ೨೩೦೦೦ ಟನ್‌ಗಳು, ಇದರಲ್ಲಿ ಮಾರಾಟವಾದುದು ೯೦೦೦ ಟನ್. ಬೋರ್ಡಿನ ವಶವಿರುವುದು ೧೪ ಸಾವಿರ ಟನ್, ಈ ಬಾರಿ ೨೦೦೦ ಟನ್ ರೊಬಸ್ಟಾ ಕಾಫಿಯನ್ನು ರಫ್ತು ಮಾಡಲು ಸರಕಾರ ಅನುಮತಿ ಕೊಟ್ಟಿದೆ.

ಸರಕಾರದ ನಿರ್ಧಾರದಿಂದ ಬೆಳೆಸುವವನಿಗೆ ನ್ಯಾಯವಾದ ಬೆಲೆಯೇ ಸಿಗುವುದೆಂದು ಅಭಿಪ್ರಾಯಪಟ್ಟಿದೆ. ಮುಂದಿನ ವರ್ಷಕ್ಕೆ ನ್ಯಾಯ ಬೆಲೆ ಎಷ್ಟೆಂದು ತಿಳಿಸಲು ಸರಕಾರ ಬೋರ್ಡನ್ನು ಕೇಳಿಕೊಂಡಿದೆ.

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಶೇಕಡ (Current Deposits)	ರೂ.	0–8–0
ಸೇವಿಂಗ್ಸ್ (ತಾ. 1—1—1953 ರಿಂದ)	,,	1–8–0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1–8–0
1 ವರುಷ	,,	2–0–0
2 ವರುಷ	,,	2–8–0
3 ವರುಷ	,,	3–0–0
5 ವರುಷ	,,	3-12-0
10 ವರುಷ	,,	4–0–0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.   ಕೆ. ಪಿ. ಅಪ್ಪಯ್ಯ. ಪ್ರೆಸಿಡೆಂಟ್ & ಖಜಾನ್ಜಿ.

ದೇಶದ ಹಿತಕ್ಕಾಗಿ ನಿಮ್ಮ ಪಾಲಿನ ಸೇವೆ ಸಲ್ಲಿಸಿರಿ

ಕಾಲೇಜು ಒಕ್ಕೂಟದಲ್ಲಿ ಚೀಫ್ ಕಮೀಶನರವರ ಭಾಷಣ.

ತಾ. ೨೬ನೇ ಸೋಮವಾರ ಸಾಯಂಕಾಲ ನಾಲ್ಕು ಗಂಟೆಗೆ ಚೀಫ್ ಕಮಿಷನರವರಿಂದ ಕೊಡಗು ಸರಕಾರೀ ಕಾಲೇಜಿನ ಅಧ್ಯಾಪಕ ಮತ್ತು ವಿದ್ಯಾರ್ಥಿಗಳ ಒಕ್ಕೂಟದ ಉದ್ಘಾಟನಾ ಸಮಾರಂಭವು ನೆರವೇರಿಸಲ್ಪಟ್ಟಿತು.

ಆದಿಯಲ್ಲಿ ಪ್ರಿನ್ಸಿಪಲರಾದ ಶ್ರೀ ಅಚ್ಯುತನ್ ಪಿಳ್ಳೆಯವರು ಅಭ್ಯಾಗತರನ್ನು ಸ್ವಾಗತಿಸುತ್ತಾ 'ಈ ಒಕ್ಕೂಟವು ಕಾಲೇಜಿನ ಅತ್ಯಂತ ಪ್ರಮುಖವಾದ ಸಂಸ್ಥೆಯಾದುದರಿಂದ ಇದರ ಉದ್ಘಾಟನೆಯು ಸಂಸ್ಥಾನದ ವರಿಷ್ಠಾಧಿಕಾರಿಗಳವರಿಂದ ನೆರವೇರಿಸಲ್ಪಡುವುದು ಅತ್ಯಂತ ಸಮಂಜಸವಾದ್ದೆಂದೂ ತಮ್ಮ ಆಮಂತ್ರಣವನ್ನು ಸ್ವೀಕರಿಸಿದ್ದಕ್ಕಾಗಿ ಕೃತಜ್ಞತೆಯನ್ನೂ ಅರ್ಪಿಸಿದರು. ಬಳಿಕ ಈ ವರ್ಷ ಹೊಸ ಕಾಲೇಜಿನ ಹೊಸ ಕಾರ್ಯಕಲಾಪಗಳಲ್ಲಿ ಮುಖ್ಯವಾದ ವಿದ್ಯಾರ್ಥಿಗಳ ನ್ಯಾಯಸ್ಥಾನ, ಸಮಾಜಸೇವಾ ಸಂಘದವರ ಹೊಸ ಮಾರ್ಗ ಕಡಿಯುವ ಕೆಲಸ, ಪ್ರತಿ ಸೋಮವಾರವೂ ನಡೆಸಲ್ಪಡುವ ನೈತಿಕ ಶಿಕ್ಷಣ ಮತ್ತದರ ಶುಭ ಪರಿಣಾಮ ಇತ್ಯಾದಿ ವಿಚಾರಗಳನ್ನೆಲ್ಲಾ ವಿವರಿಸಿ ಅಭ್ಯಾಗತರನ್ನು ಆರಂಭ ಭಾಷಣಕ್ಕಾಗಿ ಕೇಳಿಕೊಂಡರು.

ಚೀಫ್ ಕಮಿಷನರ ಭಾಷಣ

"ನನ್ನನ್ನು ಈ ಸಂಘದ ಆರಂಭ ಭಾಷಣಕ್ಕಾಗಿ ಪುನಃ ಆಮಂತ್ರಿಸಿದ್ದಕ್ಕೆ ಪ್ರಿನ್ಸಿಪಾಲರಿಗೂ ಇತರ ಸಂಬಂಧಪಟ್ಟ ಅಧಿಕಾರಿಗಳಿಗೂ ನಾನು ಕೃತಜ್ಞನಾಗಿದ್ದೇನೆ. ಆದರಲ್ಲಿಯೂ ಈ ವರ್ಷ ಡಿಗ್ರಿ ಕಾಲೇಜಿನ ವಿದ್ಯಾರ್ಥಿಗಳಿಗೆ ಭಾಷಣವೀಯಲು ಆಮಂತ್ರಿಸಿದ್ದರಿಂದ ಬಹಳ ಸಂತುಷ್ಟನಾಗಿದ್ದೇನೆ.

ಸಂಸ್ಥಾನದ ಮುಖ್ಯಾಧಿಕಾರಿಯಾಗಿದ್ದುಕೊಂಡು ನಿಮ್ಮ ಚಟುವಟಿಕೆಗಳನ್ನು ಸರಿಯಾಗಿ ಪರಿಶೀಲಿಸುತಿದ್ದು, ಈ ಸಂಸ್ಥೆಯು ಯೋಗ್ಯ ದಾರಿಯಲ್ಲಿ ಮುಂದುವರಿಯುತ್ತಿರುವುದನ್ನು ನಾನು ಕಾಣುತಿದ್ದೇನೆ. ಈ ಮೊದಲು ನಿಮ್ಮ ಸರಿಯಾದ ಅಭಿವೃದ್ಧಿಗೆ ಅನುಕೂಲವಾದ ವಾತಾವರಣವಿಲ್ಲದೆ ತೊಂದರೆಯಾಗಿತ್ತು. ಈಗ ಹೊಸ ಕಟ್ಟಡದ ಕೆಲಸ ಸಂಪೂರ್ಣವಾಗದ್ದರಿಂದ ಹಾಗೂ ವಿದ್ಯಾರ್ಥಿ ವಾಸಗೃಹ ಅನುಕೂಲತೆ ಇಲ್ಲದ್ದರಿಂದ ಕಷ್ಟವಾಗುತ್ತಿರಬಹುದು. ಆದರೆ ಇವೆಲ್ಲಾ ತಾತ್ಕಾಲಿಕವಾಗಿದ್ದು ಶೀಘ್ರದಲ್ಲೇ ನಿಮಗೆ ಬೇಕಾದ ಎಲ್ಲಾ ಅನುಕೂಲತೆಗಳೂ ಒದಗಿಸಲ್ಪಡುವವು. ಇಷ್ಟೆಲ್ಲಾ ತೊಂದರೆಗಳಾಗಿದ್ದರೂ ನಿಮ್ಮ ಪರೀಕ್ಷಾ ಫಲಿತಾಂಶಗಳನ್ನು ನೋಡುವಾಗ ನೀವು ಉತ್ತಮ ರೀತಿಯಲ್ಲಿ ಕಾರ್ಯತತ್ಪರರಾಗಿದ್ದೀರೆಂದು ತಿಳಿದು ಬರುತ್ತದೆ.

ಈ ವರ್ಷದ ಆದಿಯಲ್ಲಿ ಕಾಲೇಜು ಕಟ್ಟಡ ಕೆಲಸ ಸಂಪೂರ್ಣವಾಗದ್ದರಿಂದ ನಾವೆಣಿಸಿದಂತೆ ಕಲೆ ಮತ್ತು ವಿಜ್ಞಾನಗಳಿಗೆ ಸಂಬಂಧಿಸಿದ ಎಲ್ಲಾ ತರಗತಿಗಳನ್ನು ಆರಂಭಿಸಲಾಗದೆ ಎರಡು ಶಾಖೆಗಳ ಬಿ. ಎ., ಕ್ಲಾಸ್‌ಗಳು ಮಾತ್ರ ತೆರೆಯಲ್ಪಟ್ಟಿವೆ ಬರುವ ವರ್ಷ ಉಳಿದ ಕ್ಲಾಸುಗಳೂ ಆರಂಭಿಸಲ್ಪಟ್ಟು ಸಂಸ್ಥಾನದ ಜನರ ಬಹು ದಿನದ ಬಯಕೆಯು ಪರಿಪೂರ್ಣವಾಗಲಿದೆ. ಇಲ್ಲಿಯ ಸರಕಾರಕ್ಕೆ ಈ ಕಾಲೇಜು ಪ್ರಮುಖ ಸಮಸ್ಯೆಗಳಲ್ಲೊಂದಾಗಿದೆ. ಸಂಕುಚಿತ ಆರ್ಥಿಕ ಸ್ಥಿತಿ ಮುಂತಾದ ಹಲವು ತೊಡಕುಗಳಿಂದಾಗಿ ಆಗಬೇಕಾದಷ್ಟು ಬೇಗನೆ ಕೆಲಸಗಳನ್ನು ಮುಗಿಸಲಾಗಲಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಲಭಿಸಿದ ಬಳಿಕ ನಾನಾ ತರದ ಸಮಸ್ಯೆಗಳನ್ನು ಸರಕಾರವು ಇದಿರಿಸಬೇಕಾಗಿ ಬಂತು. ಹಾಗಿದ್ದರೂ ಟೀಕಾಕಾರರ ಟೀಕೆಗಳಿಗೇನೂ ಕಡಿಮೆ ಇಲ್ಲ. ಆದ್ದರಿಂದಲೇ ಇವನ್ನೆಲ್ಲ ಸರಿಯಾಗಿ ಯೋಚಿಸಿಯೇ ಪಂಚವಾರ್ಷಿಕ ಯೋಜನೆಯು ಆರಂಭಿಸಲ್ಪಟ್ಟಿದೆ ಆ ಯೋಜನೆಯಲ್ಲಿ ಈ ಕಾಲೇಜಿಗೂ ಒಂದು ಪ್ರಧಾನ ಸ್ಥಾನ ಕೊಡಲ್ಪಟ್ಟಿದೆ.

ಕಾಲೇಜು ಕೌನ್ಸಿಲಿನವರು ವಿದ್ಯಾರ್ಥಿಗಳ ಶಿಸ್ತಿನ ವಿಚಾರ ವಿಶೇಷ ನಿಗ ಕೊಡುತ್ತಿರುವದನ್ನು ತಿಳಿದು ಸಂತೋಷಪಡುತ್ತೇನೆ. ನಿಮ್ಮ ಜಯದ ತಳಹದಿಯು ಈ ಶಿಸ್ತಿನ ದೃಢವಾದ ಅಡಿಪಾಯದ ಮೇಲೆ ಕಟ್ಟಿದೆಯೆಂಬುದನ್ನು ಎಷ್ಟು ಒತ್ತಿ ಹೇಳಿದರೂ ಸಾಲದು. ನಿಮ್ಮ ವಿದ್ಯಾ ನಿಲಯದ ಮಾನಾಪಮಾನಗಳು ಈ ಶಿಸ್ತನ್ನು ಹೊಂದಿಕೊಂಡಿವೆ. ಶಿಸ್ತಿನಲ್ಲಿ ಶಾಂತಿ, ಸಹನೆ, ಸಾಹಸ, ನಡತೆ, ನೀತಿ ಎಲ್ಲವೂ ಸೇರಿಕೊಂಡಿದೆ ಇವೆಲ್ಲ ಕೂಡಿದ್ದರೇನೇ ಇಂದಿನ ಯುವಕನು ಜಯಶೀಲ ಮುಖಂಡನಾಗಬಲ್ಲನು. ಆದ್ದರಿಂದ ಇವನ್ನು ದಯವಿಟ್ಟು ಮನನ ಮಾಡಿಕೊಂಡು ಮುಂಬರುವ ದೇಶದ ಭಾರವನ್ನು ವಹಿಸಲು ಸಮರ್ಥ ಪ್ರಜೆಗಳಾಗಬೇಕೆಂಬುದನ್ನು ನೆನಪಿಟ್ಟುಕೊಳ್ಳಿರಿ.

ಇದಲ್ಲದೆ ನೀವು ಸಮಾಜ ಸೇವೆಯಲ್ಲಿ ಅಭಿರುಚಿವುಳ್ಳವರಾಗಿರುವಿರೆಂದು ತಿಳಿದು ಸಂತೋಷಗೊಂಡೆನು. ಕಳೆದ ಆರೇಳುವರ್ಷಗಳಲ್ಲಿ ದೇಶದಾದ್ಯಂತ ನಾವು ಸಾಧಿಸಿದ ಕೆಲಸಗಳು ಬಹಳವಾಗಿದ್ದರೂ ಇನ್ನೂ ಮಾಡಬೇಕಾದ ಕಾರ್ಯಭಾಗಗಳು ಅಪಾರವಾಗಿವೆ. ನಮ್ಮ ಪ್ರಧಾನ ಮಂತ್ರಿಗಳಾದ ನೆಹರೂರವರು ಹೇಳುವಂತೆ ಇನ್ನು ೧೦—೧೫ ವರ್ಷಗಳಲ್ಲಿ ನಾವು ಅತೀ ದೊಡ್ಡ ರಾಷ್ಟ್ರಗಳ ಸಾಲಿನಲ್ಲಿ ಬರುವುದರಲ್ಲಿ ಸಂದೇಹವಿಲ್ಲ. ಆದರೆ ನಮ್ಮ ಯೋಜನೆಗಳೆಲ್ಲಾ ಪೂರ್ತಿಯಾಗಲಿಕ್ಕೆ ಕೋಟ್ಯಾಂತರ ರೂಪಾಯಿಗಳ ಅವಶ್ಯಕತೆ ಇದೆ. ನಾವು ಹಣದ ವಿಚಾರದಲ್ಲಿ ಪಾಶ್ಚಾತ್ಯ ರಾಷ್ಟ್ರಗಳಷ್ಟು ಸಂಪನ್ನರಾಗಿರಲಿಕ್ಕಿಲ್ಲ. ಧನಸಂಪತ್ತು ಕಡಿಮೆಯಾದರೂ ನಮ್ಮಲ್ಲಿ ಜನಸಂಪತ್ತು ಧಾರಾಳವಾಗಿದೆ. ಈಗಾಗಲೆ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಕೃಷಿಪ್ರಧಾನವಾದ ರಾಷ್ಟ್ರ ನಮ್ಮದಾದ್ದರಿಂದ ನಮ್ಮ ಜನಸಂಖ್ಯೆಯು ಬಹುಭಾಗ ಎಲ್ಲಾ ವಿಧದಲ್ಲಿ ಹಿಂದುಳಿದ ಗ್ರಾಮಗಳಲ್ಲಿದೆ. ಅಂಥವರಿಗೆ ಜ್ಞಾನದಾನದ ಕಾರ್ಯ ಆಗಬೇಕಾಗಿದೆ. ಅವರಿಗೆ ನಿಮ್ಮಿಂದ ಸಹಾಯ ಸಲಹೆಗಳು ಬೇಕಾಗಿವೆ. ದುಡಿಮೆಯ ಗೌರವವನ್ನು ಅರಿತವರಾಗಿ ಸಮಾಜ ಸೇವೆಯಲ್ಲಿ ನೀವು ಶ್ರದ್ಧೆಯನ್ನು ಹೆಚ್ಚಿಸಬೇಕು. ಅಂತಹ ಅನವರತ ಪರಿಶ್ರಮದಿಂದಲೇ ಭಾರತದ ಭವಿಷ್ಯವು ಭವ್ಯವಾದೀತು. ಕೊಡಗಿನ ವಿಚಾರವನ್ನೇ ತೆಗೆದುಕೊಂಡರೂ ಇಲ್ಲಿ ಬಡತನ, ಅಜ್ಞಾನಗಳು ಸ್ವಲ್ಪ ಮಟ್ಟಿಗೆ ಕಡಿಮೆಯಾದರೂ ಇಲ್ಲಿ ಮಾಡಬೇಕಾದ ಕಾರ್ಯಭಾಗ ಹೆಚ್ಚಿದೆ ಆದ್ದರಿಂದಲೇ ಕೊಡಗಿನ ಎಲ್ಲಾ ಭಾಗವು ಸಾಮೂಹಿಕ ಯೋಜನೆ ಪದ್ಧತಿಯೊಳಗೆ ಸೇರಿಸಲ್ಪಟ್ಟಿದೆ. ಈ ವಿಚಾರದಲ್ಲಿ ಪ್ರತಿ ಒಬ್ಬ ವ್ಯಕ್ತಿಯು ಮಾಡಬೇಕಾದ ಕೆಲಸ ಬೇಕಾದಷ್ಟಿದೆ. ನಿಮ್ಮಂಶವನ್ನು ನೀವು ಉತ್ತಮ ರೀತಿಯಲ್ಲಿ ನೆರವೇರಿಸಿ ಇಡೀ ದೇಶದ ಅಭ್ಯುದಯದಲ್ಲಿ ನೆರವಾಗಿರಿ.

ಕೊನೆಯದಾಗಿ ನೀವು ನಿಮ್ಮ ವಿದ್ಯಾಭ್ಯಾಸ ವಿಚಾರದಲ್ಲಿ ವಿಶೇಷ ಶ್ರದ್ಧೆಯನ್ನು ವಹಿಸಿರಿ. ನೀವು ಅತ್ಯಲ್ಪ ಸಮಯದಲ್ಲಿ ಅನೇಕ ವಿಚಾರಗಳನ್ನು ಅಧ್ಯಾಪಕರ ಸಹಾಯದಿಂದ ಕಲಿಯಬೇಕಾಗಿದೆ. ಇದೀಗ ಅಮೂಲ್ಯ ಸಮಯ. ನಿಮ್ಮ ಲಕ್ಷ್ಯವು ನಾನಾ ಕಡೆಗಳತ್ತ ಚಲಿಸುತಿದ್ದರೆ ನೀವೇನನ್ನೂ ಸಾಧಿಸಲಾರಿರಿ ಆದರೆ ಈಗಿನಿಂದಲೇ ನಿಮ್ಮ ಜೀವನದ ಉದ್ದೇಶ, ಧ್ಯೇಯವೇನೆಂಬುದನ್ನು ನಿರ್ಧರಿಸಿಕೊಳ್ಳಿರಿ. ಮತ್ತದಕ್ಕನುಸಾರವಾಗಿ ಕೆಲಸಮಾಡಿರಿ. ಹೇಗಾದರೂ ಡಿಗ್ರಿಪಡೆದು ಕೇವಲ ಸರಕಾರಿ ಕೆಲಸಕ್ಕಾಗಿ ಹಾತೊರೆಯಬೇಡಿರಿ. ಯೋಗ್ಯ ಉದ್ಯೋಗದತ್ತ ದೃಷ್ಟಿ ಇಟ್ಟು ಸ್ವತಂತ್ರ ಜೀವನಕ್ಕೆ ಸಿದ್ಧರಾಗಿರಿ

ಇನ್ನೊಂದು ವಿಚಾರ ನಾನು ಹೇಳುವುದೇನೆಂದರೆ ನಾನು ಬರುವ ಜನವರಿಯಲ್ಲಿ ನಿವೃತ್ತನಾಗಲಿರುವುದರಿಂದ ಇದೀಗ ನನ್ನ ಕೊನೆಯ ಭಾಷಣವಾಗಿರುವುದು ಆದರೆ ಕಳೆದ ೩½ ವರ್ಷಗಳಲ್ಲಿ ನಿಮ್ಮ ಕಾಲೇಜಿನ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ನನ್ನ ಆಡಳಿತೆಯ ಕಾಲದಲ್ಲಿ ಈ ಸಂಸ್ಥೆಯು ಅಭಿವೃದ್ಧಿಯಾಗುತ್ತಿರುವ ವಿಚಾರದಲ್ಲಿ ನಾನು ಬಹಳ ಸಂತೋಷಪಡುತ್ತೇನೆ. ಈ ಕಾಲೇಜಿನ ಸ್ನೇಹ ಸಂಬಂಧವು ಯಾವಾಗಲೂ ನನ್ನ ಸ್ಮೃತಿಪಟಲದಲ್ಲಿ ಅಚ್ಚಳಿಯದಿರಬಹುದು. ಹಾಗಾಗಿ ನಾನು ನಿಮ್ಮಿಂದ ದೂರವಾಗುವಾಗ ಕೊಡುವ ಮತ್ತೊಂದು ಚಿಕ್ಕ ಉಪದೇಶವೆಂದರೆ ನೀವು ವಿದ್ಯಾಭ್ಯಾಸ ಮಾಡುವ ವೇಳೆ ಎಲ್ಲಾ ರಾಜಕೀಯ ವಿಚಾರಗಳಿಂದ ದೂರವಾಗಿರಿ. ನಿಮ್ಮ ಅಭ್ಯಾಸ ಮುಗಿದ ಮೇಲೆ ಧಾರಾಳ ಸಮಯ ಸಿಗಲಿರುವುದರಿಂದ ಈಗಿನ ಜ್ಞಾನಾಭಿವೃದ್ಧಿಯ ಈ ಸುಸಮಯದಲ್ಲಿ ನಿಮ್ಮ ಬುದ್ಧಿ ಆಪಾದ್ಯಗಳನ್ನು ಈ ಬೇಡದ ರಾಜಕೀಯದಲ್ಲಿ ಹಾಳುಮಾಡಬೇಡಿರಿ.

ಬರುವ ವರ್ಷ ಪರೀಕ್ಷೆಯಲ್ಲಿ ನೀವೆಲ್ಲಾ ಅತ್ಯುತ್ತಮ ರೀತಿಯಿಂದ ತೇರ್ಗಡೆ ಹೊಂದಿ ನಿಮ್ಮ ಸಂಸ್ಥಾನ ಮತ್ತು ಕಾಲೇಜು ಮಾತ್ರವಲ್ಲ ನಿಮ್ಮ ಪ್ರಿನ್ಸಿಪಾಲರಿಗೂ ಇತರ ಅಧ್ಯಾಪಕ ವೃಂದದವರಿಗೂ ಉತ್ತಮ ಯಶಸ್ಸನ್ನು ತರುವಿರೆಂದು ಹಾರೈಸುತ್ತೇನೆ"

ಭಾಷಣವಾದ ಬಳಿಕ ಸಂಘದ ಕಾರ್ಯದರ್ಶಿಯವರಾದ ವಿದ್ಯಾರ್ಥಿ ಶ್ರೀ ಬಿ. ಎ. ನಂಜಪ್ಪನವರು ಅತಿಥಿಗಳಿಗೆ ಅನಂತ ಧನ್ಯವಾದಗಳನ್ನರ್ಪಿಸುತ್ತಾ ಅವರ ಹಿತಬೋಧನೆಯನ್ನು ಸದಾ ಸ್ಮರಿಸಿಕೊಂಡು ಅದಕ್ಕನುಸಾರವಾಗಿ ವರ್ತಿಸಲು ಪ್ರಯತ್ನಿಸುತ್ತೇವೆಂದು ವಿದ್ಯಾರ್ಥಿಗಳ ಪರವಾಗಿ ಭಾಷೆಯಿತ್ತರು.

ಕೇವಲ ಜಲಪಾನದಿಂದ ಜೀವಧಾರಣೆ ಮಾಡಿರುವ ಮಹಿಳೆ

ಬೆಂಗಳೂರಿನ ಪ್ರಮುಖ ವರ್ತಕರೆನ್ನಿಸಿಕೊಂಡವರಾದ ಶ್ರೀ ಶ್ರೀನಿವಾಸನ್ ಎಂಬವರ ೪೦ ವರ್ಷ ಪ್ರಾಯದ ಪತ್ನಿ ಶ್ರೀಮತಿ ನಾಗಲಕ್ಷ್ಮಮ್ಮ ಎಂಬವರು ಕಳೆದ ಆರು ವರ್ಷಗಳಿಂದ ಯಾವೊಂದು ಆಹಾರ ಉಪಕ್ರಮಿಸದೆ ಕೇವಲ ನೀರನ್ನು ಮಾತ್ರ ಸೇವಿಸಿ ಇರುವರು. ಇವರು ನಾಲ್ಕು ಮಕ್ಕಳ ತಾಯಿ. ತಮ್ಮ ಮನೆ ಕೆಲಸಗಳನ್ನೆಲ್ಲ ಈಗಲೂ ಉತ್ಸಾಹದಿಂದ ಮಾಡುತ್ತಿರುವರು. ಆರೋಗ್ಯ ಚೆನ್ನಾಗಿದೆ. ಶ್ರೀಮತಿಯವರು ದೈವಭಕ್ತಿಯುಳ್ಳವರಾಗಿದ್ದು, ಈಗ ಸಿದ್ಧಿಹೊಂದಿರುವರೆಂದು ಹೇಳಲಾಗಿದೆ ತಾನು ಬರೇ ನೀರು ಕುಡಿದು ಕಳೆದ ಆರು ವರ್ಷಗಳಿಂದ ಕಾಲಹರಣ ಮಾಡುತ್ತಿರುವ ವಿಚಾರವು ಬಹಿರಂಗವಾಗಬಾರದೆಂಬ ಉದ್ದೇಶದಿಂದ ಈ ವರೆಗೆ ಆಕೆ ಈ ಸಮಾಚಾರವನ್ನು ಯಾರಿಗೂ ತಿಳಿಸಿಲ್ಲವೆಂದು ತಿಳಿದುಬರುತ್ತದೆ.

ಬಹುಮಾನ

ಸುಂಟಿಕೊಪ್ಪದ ಕೆಂಚಟ್ಟಿ ತೋಟದ ರೈಟರು ಕನ್ನಡಕದ ಶಿವಪ್ಪನವರ ಬಾಪ್ತು ಹೆರೂರಿನಲ್ಲಿ ಅವರ ಭೂಮಿ ವಾರಮಾಡುವ ಎನ್. ಪಿ ಪದಾರಿಯಾದ ನನ್ನ ಸ್ವಾಧೀನದಲ್ಲಿದ್ದ ಕರಿ ವರ್ಣದ ಸಾಧಾರಣ ನಾಲ್ಕು ಇಂಚು ಉದ್ದದ ಮುಂಗೋಡಿನ ಒಟೆ ಕೊಂಬಿನ ಹಣೆಯಲ್ಲಿ ಬಿಳಿ ಬೊಟ್ಟಿರುವ ಸಾಧಾರಣ ೩½ ಅಡಿ ಎತ್ತರದ ಕರೆಯುವ ಹಸು ಮತ್ತು ಅದರ ೧॥ ತಿಂಗಳ ಹೆಣ್ಣು ಕರು ಸಮೇತ ಒಂದು ತಿಂಗಳಿಂದ ಪರಾರಿಯಾಗಿರುತ್ತದೆ. ಇದನ್ನು ಪತ್ತೆ ಮಾಡಿಕೊಟ್ಟವರಿಗೆ ರೂ ೫ ಬಹುಮಾನ ಕೊಡಲಾಗುವದು.

ಎನ್. ಪಿ. ಪದಾರಿ.

ಹೇರೂರು ಗ್ರಾಮ.

ತಾ. ೨೭—೧೦—೫೩

ಜ್ಞಾನದೀಪ

(೧)

ಆನೆಯ ದಂತ ಹುಡುಕಿಕೊಂಡು ಸಿಂಹದ ಗವಿ ನುಗ್ಗುವದು ಅನಾಹುತ. ಅದರಂತೆ ಅನುಕೂಲ ಸಂಪಾದನೆಗಾಗಿ ಅಧಮರನ್ನಾಶ್ರಯಿಸುವದು ಅಪಾಯಕರ.

(೨)

ನೇಗಿಲು ಹಿಡಿದು ಉಳುವವನ ಹೆಜ್ಜೆ ಮಣ್ಣು ಸಾಲಿನ ಮೇಲೆಯೇ ಬೀಳುತ್ತದೆ ಅದರಂತೆ ಕಾರ್ಯಕರ್ತನ ಲಕ್ಷ್ಯ ಕ್ರಮ, ನಿಯಮಗಳ ಮೇಲೆಯೇ ಇರುತ್ತದೆ.

(೩)

ನರಕದಲ್ಲಿ ಶಿಕ್ಷೆ ದೊರೆಯುವದೆಂದು ನರಹತ್ಯೆ ಮಾಡಿದವನನ್ನು ಇಲ್ಲಿ ಕ್ಷಮಿಸುವದಿಲ್ಲ. ಅದರಂತೆ ಮತ್ತೊಬ್ಬರು ಬುದ್ಧಿ ಕಲಿಸಿಯಾರೆಂದು ಊಹಿಸಿ ಮಧಾಂಧನನ್ನು ಮನ್ನಿಸಲಾಗುವದಿಲ್ಲ.

ನುಡಿಮುತ್ತು.

ಕೊಡಗು

ತಾರೀಕು ೩೦—೧೦—೧೯೫೩ನೇ ಶುಕ್ರವಾರ

ಸಂಧಾನಕ್ಕೆ ಸಂಚಕಾರ?

ಕೊರಿಯಾದಲ್ಲಿ ಯುದ್ಧ ಕೈದಿಗಳ ವಿನಿಮಯ ಬಗ್ಗೆ ಕೆಲಸ ಮಾಡುತ್ತಿರುವ ತಟಸ್ಥರಾಷ್ಟ್ರ ಸಮಿತಿಯ ಅಧ್ಯಕ್ಷರಾದ ಜನರಲ್ ತಿಮ್ಮಯ್ಯನವರು ತಮ್ಮ ತಾಟಸ್ಥ್ಯವನ್ನು ಉಳಿಸಿಕೊಂಡು ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಿದ್ದರೂ ಕೂಡ ಸಂಧಾನ ಶರತುಗಳಂತೆ ಇಕ್ಕಡೆಯಿಂದಲೂ ಸಾಕಷ್ಟು ಸಹಕಾರ ದೊರೆಯದ ಕಾರಣ ಅಲ್ಲಲ್ಲಿ ಆತಂಕ ಒದಗಿ ಕೆಲಸ ಮುಂದರಿಯದಾಗಿದೆ. ಯುದ್ಧ ಕೈದಿಗಳ ಶಿಬಿರದಲ್ಲಿ ದಕ್ಷಿಣ ಕೊರಿಯ ಮತ್ತು ಚಿಯಾಂಗ್ ಕೈಶೇಕರ ಜನರು ನುಸುಳಿಕೊಂಡು ಅವರು ವಿಧ ವಿಧದ ಅಪಪ್ರಚಾರ ಮಾಡಿ ಕೈದಿ ವಿನಿಮಯ ಕಾರ್ಯವು ನಡೆಯದಂತೆ ಮಾಡುತ್ತಿರುವರು. ಉತ್ತರ ಕೊರಿಯದ ಯುದ್ಧ ಕೈದಿಯು ಮರಳಿ ತನ್ನ ತಾಯ್ನಾಡಿಗೆ ಹೋಗುವ ಅಭಿಪ್ರಾಯ ವ್ಯಕ್ತ ಮಾಡಿದರೆ ಆತನ ಕೊಲೆ ಮಾಡುವ ಬೆದರಿಕೆಯನ್ನು ದಕ್ಷಿಣ ಕೊರಿಯದ ಮತ್ತು ಚಿಯಾಂಗರ ಕೈಯಾಳುಗಳು ಹಾಕುತ್ತಿರುವರು. ಕೈದಿ ಶಿಬಿರದಲ್ಲಿ ಅವರದೇ ಮೇಲ್ಗೈಯಾಗಿರುವದರಿಂದ ಪರಿಸ್ಥಿತಿ ಹದಗೆಟ್ಟಿದೆ.

ತಾವು ವಹಿಸಿರುವ ಜವಾಬ್ದಾರಿಯನ್ನೂ, ಸಂಧಾನದ ನಿಯಮಗಳನ್ನೂ, ಕೈದಿಗಳಿಗೆ ವಿವರಿಸಿ ಹೇಳುವದು ಕೂಡ ತಟಸ್ಥ ಸಮಿತಿಗೆ ಅಸಾಧ್ಯವಾಗಿದೆ. ಮಾತನಾಡಲು ಪ್ರಾರಂಭಿಸಿದ ಕೂಡಲೆ ಉಳಿದ ಕೈದಿಗಳು ಮಾತು ಕೇಳದಂತೆ ಗಲಾಟೆ ನಡೆಸುವದರಿಂದಲೂ ತಿಳಿಸಿ ಹೇಳುವ ಸ್ಥಳಕ್ಕೆ ಕೈದಿಗಳನ್ನು ಹೋಗಗೊಡದ್ದರಿಂದಲೂ ಈ ವಿವರಣಾ ಕೆಲಸವನ್ನು ನಿಲ್ಲಿಸಬೇಕಾಗಿ ಬಂದಿದೆ. ಬಲಾತ್ಕಾರದಿಂದ ಈ ಕೈದಿಗಳನ್ನು ತಿಳಿಸಿ ಹೇಳುವ ಸ್ಥಳಕ್ಕೆ ತರಬಹುದಾದರೂ ಅದರಲ್ಲಿ ಪ್ರಾಣ ಹಾನಿಯಾಗುವದೆಂಬುದನ್ನು ತಿಳಿದು ಭಾರತೀಯ ಸೈನ್ಯವು ಬಲಪ್ರಯೋಗ ಮಾಡಲು ನಿರಾಕರಿಸಿದೆ.

ಭಾರತೀಯ ಸೇನಾಪಡೆಯನ್ನೂ ತಟಸ್ಥ ರಾಷ್ಟ್ರ ಸಮಿತಿಯ ಅಧ್ಯಕ್ಷ ಜನರಲ್ ತಿಮ್ಮಯ್ಯನವರನ್ನೂ ಪ್ರಪಂಚದ ಅನೇಕ ರಾಷ್ಟ್ರಗಳ ಪತ್ರಿಕೆಗಳೂ, ಮುಂದಾಳುಗಳೂ ಹೊಗಳುತ್ತಿದ್ದರೂ ಈ ವರೆಗಿನ ಉತ್ತಮ ಕೆಲಸವನ್ನು ಮುಂದರಿಸುವದು ತಿಮ್ಮಯ್ಯನವರಿಗೆ ಕಠಿಣವಾಗಿ ಬಂದಿದೆ.

ಉತ್ತರ ಮತ್ತು ದಕ್ಷಿಣ ಕೊರಿಯಾದ ಎರಡು ಪಕ್ಷಗಳೂ ಪರಸ್ಪರರನ್ನು ಸಂಶಯದಿಂದ ನೋಡುತ್ತಿರುವದರಿಂದಲೂ, ಸಂಧಾನ ಶರತುಗಳಿಗಿಂಥಲೂ, ಕೊರಿಯಾದ ಹಿತಕ್ಕಿಂಥಲೂ, ಜಗತ್ತಿನ ಶಾಂತಿಯ ಬಯಕೆಗಿಂಥಲೂ ತಮ್ಮ ತಮ್ಮ ಪ್ರತಿಷ್ಠೆಗಾಗಿ ಇಕ್ಕಡೆಯವರು ಹಂಬಲಿಸುತ್ತಿರುವದರಿಂದಲೂ ತಿಮ್ಮಯ್ಯನವರ ಕೆಲಸವು ಕಷ್ಟವಾಗಿದೆ.

ಕೊರಿಯಾ ಯುದ್ಧದಲ್ಲಿ ಶಾಶ್ವತ ಶಾಂತಿ ಪ್ರಸ್ಥಾಪಿಸುವ ದೃಷ್ಟಿಯಿಂದ ವಿಶ್ವಸಂಸ್ಥೆಯ ಪಕ್ಷದವರೂ, ಚೀನೀ ಮತ್ತು ಉತ್ತರ ಕೊರಿಯಾ ಪ್ರತಿನಿಧಿಗಳೂ ಶೀಘ್ರದಲ್ಲೇ ಪಾನ್‌ಮುಂಜಾನದಲ್ಲಿ ಮಾತುಕತೆ ಪ್ರಾರಂಭಿಸುವವರಿದ್ದರೂ ಕೈದಿಗಳ ವಿನಿಮಯದ ಘರ್ಷಣೆಯ ಛಾಯೆಯು ಆ ಮಾತುಕತೆಗಳ ಮೇಲೂ ಬೀಳದಿರದು. ಜನರಲ್ ತಿಮ್ಮಯ್ಯನವರು ಇತ್ತೀಚೆಗೆ ಹೇಳಿದಂತೆ ಯುದ್ಧ ಕೈದಿಗಳ ವಿನಿಮಯ ಪ್ರಶ್ನೆ ಬಗೆ ಹರಿಯುವದು ಅಸಂಭವವಾಗಿ ತೋರುತ್ತಿದೆ. ಇದಕ್ಕಾಗಿ ನೇಮಿಸಲ್ಪಟ್ಟ ತಟಸ್ಥ ರಾಷ್ಟ್ರ ಸಮಿತಿಯೂ ವಿಸರ್ಜಿಸಲ್ಪಡುವ ಸಾಧ್ಯತೆ ಇದೆ. ಹೀಗಾದರೆ ನಿಜವಾಗಿಯೂ ಅದು ವಿಷಾದಕರ ಘಟನೆಯೇ ಹೌದು. ಕೊರಿಯಾ ಸಂಧಾನದ ಮೂಲಕ ಪ್ರಪಂಚ ಶಾಂತಿಯ ಗುರಿಗಾಗಿ ಮುಂದಿಟ್ಟ ಹೆಜ್ಜೆಗಳು ಹಿಂದಿಡಲ್ಪಟ್ಟಂತಾಗುವದರಲ್ಲಿ ಸಂಶಯವಿಲ್ಲ.

ವರ್ತಮಾನ.

ಮೈಸೂರು ಸಂಸ್ಥಾನದ ಮುಖ್ಯ ನ್ಯಾಯಾಧೀಶರಾದ ಶ್ರೀ ಪಾಲೆಕಂಡ ಮೇದಪ್ಪನವರು ಕೊಡಗಿನ ಕೋರ್ಟುಗಳ (ಇನ್ಸ್‌ಪೆಕ್ಷನ್) ಪರಿಶೀಲನೆಗಾಗಿ ತಾ. ೧೮ರಲ್ಲಿ ಮಡಿಕೇರಿಗೆ ಬಂದು ತಾ ೬ರ ವರೆಗೆ ಕೊಡಗಿನಲ್ಲಿರುವರು.

ಮದ್ರಾಸಿನ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ವ್ಯವಸ್ಥಾಪಕರು ಕಾವೇರಿ ಹಬ್ಬದ ಸಮಯದಲ್ಲಿ ಜನತೆಗೆ ಅಕ್ಕಿಪಡಿ ಕೊಡಲು ಕೊಡಗು ಮುಜರಾಯಿ ಇಲಾಖಾ ಪ್ರೆಸಿಡೆಂಟರಿಗೆ ರೂ ೫೦೦/ನ್ನು ಕಳುಹಿಸಿಕೊಟ್ಟಿರುವರು.

ಮಡಿಕೇರಿ ಓಂಕಾರೇಶ್ವರ ದೇವಸ್ಥಾನದಲ್ಲಿ ಅಷ್ಟಗಂಧ ಹಾಕುವ ಪೂಜೆಗಳು ತಾ. ೩-೧೧-೫೩ರಿಂದ ೮-೧೧-೫೩ರ ವರೆಗೆ ನೀಲೇಶ್ವರದ ತಂತ್ರಿಗಳಿಂದ ನಡೆಯುವದೆಂದೂ ಕಡೇ ದಿನ ಬೆಳಿಗ್ಗೆ ಮಹಾಪೂಜೆಯೂ, ಸಾಯಂಕಾಲ ತೆಪ್ಪೋತ್ಸವವೂ ನಡೆಯುವದೆಂದೂ ತಿಳಿದುಬಂದಿದೆ.

ಚೇಂದಂಡ ಕೇಸ್ಲೆಟ್ ಹಾಕಿ ಪಂದ್ಯಾಟವು ತಾ. ೧೧-೧೧-೫೩ರಿಂದ ವೀರಾಜಪೇಟೆ ಹೈಸ್ಕೂಲ್ ಗ್ರೌಂಡಿನಲ್ಲಿ ಪ್ರಾರಂಭವಾಗುವದೆಂದೂ ಭಾಗವಹಿಸಲಿಚ್ಛಿಸುವವರು ತಾ. ೭ರೊಳಗೆ ಸೆಕ್ರೆಟರಿ, ಚೇಂದಂಡ ಕೇಸ್ಲೆಟ್ ಹಾಕಿ ಟೂರ್ನಮೆಂಟ್, ಗವರ್ನ್‌ಮೆಂಟ್ ಶಾಲೆ, ವೀರಾಜಪೇಟೆ ಇವರಿಗೆ ಬರಕೊಳ್ಳಬಹುದೆಂದೂ ತಿಳಿಸುತ್ತಾರೆ.

ಕಳೆದ ದಸರಾ ಪ್ರದರ್ಶನ ಕಾಲಕ್ಕೆ ಮೈಸೂರಿನಲ್ಲಿ ನಡೆದ ಸುಂದರ ಶರೀರ ಪ್ರದರ್ಶನದಲ್ಲಿ ಮೈಸೂರಿನಲ್ಲಿರುವ ಶ್ರೀ ಬಲ್ಲಚಂಡ ಐಯ್ಯಣ್ಣನವರ ನಾಲ್ಕನೆ ಪುತ್ರ ದೇವಯ್ಯನವರು ಪ್ರಥಮವಾಗಿ ಬಂದು "ಮಿಸ್ಟರ್ ಮೈಸೂರು" ಕೀರ್ತಿ ಪಡೆದರು ಅವರಿಗೆ ಒಂದು ಬೆಳ್ಳಿಯ ಕಪ್ಪು, ಚಿನ್ನದ ಮೆಡಲು ಮತ್ತೊಂದು ಕ್ರಾಸ್ ಬೆಲ್ಟ್ ಬಹುಮಾನ ಕೊಡಲ್ಪಟ್ಟವು.

ಮರಗೋಡು ಗ್ರಾಮದ ಶ್ರೀ ಮಳ್ಳಂದಿರ ನಂಜಪ್ಪನವರಿಗೂ ಅವರ ಕುಟುಂಬದವರಿಗೂ ವಿಚಿತ್ರ ರೀತಿಯಲ್ಲಿ ಹುಚ್ಚು ಕಾಣಿಸಿಕೊಂಡು ನಂಜಪ್ಪನವರು ತಮ್ಮ ತೋಟದ ಕಾಫಿ, ಕಿತ್ತಳೆ ಗಿಡಗಳನ್ನು ಕತ್ತರಿಸತೊಡಗಿದ್ದರೆಂದೂ ತಡೆಯಲು ಹೋದವರ ಮೇಲೆ ಕೈ ಮಾಡಲು ಹಿಂಜರಿಯುತ್ತಿರಲಿಲ್ಲವೆಂದೂ ಪೋಲೀಸರಿಗೆ ಇದು ತಿಳಿದು ಅವರನ್ನೂ, ಅವರ ತಾಯಿ ಮತ್ತು ಇನ್ನೊಬ್ಬ ಹೆಂಗಸು ಹೀಗೆ ಮೂರು ಜನರನ್ನು ಹಿಡಿದು ಮಡಿಕೇರಿ ಆಸ್ಪತ್ರೆಗೆ ದಾಖಲು ಮಾಡಿ ಇಬ್ಬರೂ ಹೆಂಗಸರು ಗುಣವಾಗಿದ್ದಾರೆಂದೂ ನಂಜಪ್ಪನವರು ಆಸ್ಪತ್ರೆಯಲ್ಲೇ ಇರುವರೆಂದೂ ತಿಳಿಯಬರುತ್ತದೆ.

ದಿವಂಗತರಾದ ತಮ್ಮ ತಂದೆಯವರ ಜ್ಞಾಪಕಾರ್ಥವಾಗಿ ಸಿದ್ದಾಪುರ ಆಸ್ಪತ್ರೆಗೆ ಸೇರಿಕೆಗೆ ಆಸ್ಪತ್ರೆಯೊಂದನ್ನು ಕಟ್ಟಲು ಶ್ರೀ ಐನಂಡ ಕಾರ್ಯಪ್ಪನವರು ರೂ. ೧೦,೦೦೦ವನ್ನು ಉದಾರವಾಗಿ ದಾನ ಕೊಟ್ಟಿರುವರು.

ಬಾಳಲೆ ಮೋಡೆಲ್ ಶಾಲೆಯಲ್ಲಿ ವಯಸ್ಕರ ಶಿಕ್ಷಣ ತರಗತಿಯನ್ನು ತಾ. ೨೭ರಿಂದ ತೆರೆಯಲಾಗಿದೆ. ೨೦ ಜನರು ಶಿಕ್ಷಣ ಪಡೆಯುತ್ತಿರುವರು.

ಹೆಬ್ಬಾಲೆ ಸ್ತ್ರೀ ವಯಸ್ಕರ ಶಿಕ್ಷಣ ಶಾಲೆಯ ವಿದ್ಯಾರ್ಥಿಗಳ ಪರೀಕ್ಷೆಯು ತಾ. ೨೧ರಲ್ಲಿ ನಡೆದು ಎಲ್ಲಾ ವಿದ್ಯಾರ್ಥಿಗಳು ಅಂದರೆ ೧೩ ಜನರೂ ತೇರ್ಗಡೆಯಾಗಿರುವರು. ಕೊಡಗಿನ ವಿದ್ಯಾಧಿಕಾರಿ ಶ್ರೀ ಗಣೇಶರಾಯರ ಅಧ್ಯಕ್ಷತೆಯಲ್ಲಿ ಯೋಗ್ಯತಾ ಪತ್ರ ಹಂಚಲಾಯಿತು. ಸ್ತ್ರೀ ವಯಸ್ಕ ವಿದ್ಯಾರ್ಥಿಗಳು ಒಂದು ನಾಟಕವನ್ನು ಅಭಿನಯಿಸಿದರು.

ಈಚೂರು ಸಹಕಾರ ಸಂಘದ ಆಶ್ರಯದಲ್ಲಿ ಸಂಘದ ಮೆಂಬರುಗಳೂ, ಗ್ರಾಮಸ್ಥರೂ ಸೇರಿ ಕುಂದ ಶಾಲೆಯಿಂದ ಹಾತೂರಿಗೆ ಹೋಗುವ ರಸ್ತೆ ಕೆಲಸವನ್ನು ತಾ. ೨೩, ೨೪ ಮತ್ತು ೨೫ರಲ್ಲಿ ಕೈಕೊಂಡು ಒಟ್ಟು ಸುಮಾರು ೨೫೦ ಜನರ ಕೆಲಸ ನಡೆಸಿ ೧½ ಮೈಲು ರಸ್ತೆಯನ್ನು ದುರಸ್ತಿಗೊಳಿಸಿರುವರು.

ಮಡಿಕೇರಿ ಸರಕಾರಿ ಕಾಲೇಜಿನಿಂದ ಮದ್ರಾಸು ವಿಶ್ವವಿದ್ಯಾಲಯದ ಆಶ್ರಯದಲ್ಲಿ ನಡೆಯಲಿರುವ ಇಂಗ್ಲೀಷ್ ವಾಕ್ ಸ್ಪರ್ಧೆಯಲ್ಲಿ ಭಾಗವಹಿಸಲು ಶ್ರೀಗಳಾದ ಸರಪಂಡ ಪಿ. ಕುಶಾಲಪ್ಪ ಮತ್ತು ಬಿ. ಕೃಷ್ಣಭಟ್ಟ ಇವರುಗಳನ್ನೂ ಮತ್ತು ಕನ್ನಡ ವಾಕ್ ಸ್ಪರ್ಧೆಯಲ್ಲಿ ಭಾಗವಹಿಸಲು ಶ್ರೀಗಳಾದ ಬಿ. ಶಂಕರ್ ಭಟ್ ಮತ್ತು ಪಳಿಯಂಡ ಜಿ ಕುಟ್ಟಪ್ಪ ಇವರುಗಳನ್ನೂ ಆರಿಸಲಾಗಿದೆ.

ಫ್ರೇಜರ್‌ಪೇಟೆ ಸಹಕಾರ ಮಹಿಳಾ ಸಮಾಜದ ಆಶ್ರಯದಲ್ಲಿ ಶಿಶು ವಿಹಾರದ ಕಟ್ಟಡ ಕಟ್ಟಲು ಸರಕಾರ ಕೊಡುವ ಹಣದ ಜೊತೆಗೆ ಫ್ರೇಜರ್‌ಪೇಟೆಯ ಶ್ರೀ ಎಸ್. ಎನ್. ಲಕ್ಷ್ಮಣಶೆಟ್ಟಿಯವರು ಶ್ರೀಮತಿ ಸರಸ್ವತಮ್ಮ ಲಕ್ಷ್ಮಣಶೆಟ್ಟಿಯವರ ಹೆಸರಿನಲ್ಲಿ, ರೂ. ೨,೦೦೦ ಉಚಿತವಾಗಿ ಕೊಡುವುದಾಗಿ ತಿಳಿಸಿರುವರು.

ತಾ ೨-೧೧-೫೩ರಲ್ಲಿ ಗುಯ್ಯ ಅಗಸ್ತ್ಯೇಶ್ವರ ಮಹಾದೇವರ ಉತ್ಸವವು ಪ್ರಾರಂಭವಾಗಿ ತಾ. ೬-೧೧-೫೩ನೇ ಶುಕ್ರವಾರ ಗುಯ್ಯದಲ್ಲಿ ಕಾವೇರಿ ತೀರ್ಥಸ್ನಾನ ನಡೆಯುವದು.

ಸುಬೆದಾರರಾಗಿ ತರಬೇತಿಗೆ ಹೋಗಿರುವ ಶ್ರೀ ಎನ್. ಜಿ ಉತ್ತಯ್ಯನವರ ಬದಲು ಪೊನ್ನಂಪೇಟೆಗೆ ಪಾರುಪತ್ತೆಗಾರರಾಗಿ ಶ್ರೀ ಬಲ್ಲಚಂಡ ಟಿ. ಗಣಪತಿಯವರನ್ನು ವರ್ಗಾಯಿಸಿ ಅವರ ಬದಲು ಭಾಗಮಂಡಲಕ್ಕೆ ಶ್ರೀ ಬಿ. ಯಂ. ನಾಗಪ್ಪನವರನ್ನು ಪಾರುಪತ್ತೆಗಾರರಾಗಿ ನೇಮಿಸಿ ಅವರ ಬದಲು ಶ್ರೀ ಮೇಚಂಡ ಮುದ್ದಯ್ಯನವರನ್ನು ಉತ್ತರ ಕೊಡಗಿನ ರೇಶನಿಂಗ್ ಇನ್ಸ್‌ಪೆಕ್ಟರಾಗಿ ನೇಮಿಸಲಾಗಿದೆ.

ತಾ. ೨೪-೧೦-೫೩ರಲ್ಲಿ ಜಂಬೂರು ಮಾಧ್ಯಮಿಕ ಶಾಲೆಯ ವಾರ್ಷಿಕೋತ್ಸವವು ಕೊಡಗಿನ ವಿದ್ಯಾ ಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಉತ್ತರ ಕೊಡಗಿನಲ್ಲಿ ೧೯೫೨ನೇ ಅಕ್ಟೋಬರ್ ಎರಡರಿಂದ ಪ್ರಾರಂಭವಾದ ಸಾಮೂಹಿಕ ವಿಕಾಸಯೋಜನೆಯ ಕೆಲಸವು ಎಷ್ಟರ ಮಟ್ಟಿಗೆ ನಡೆದಿದೆಯೆಂಬ ಬಗ್ಗೆ ಒಂದು ಪರಿಶೀಲನೆಯು ತಾ. ೨೬ರಲ್ಲಿ ಸೋಮವಾರಪೇಟೆಯಲ್ಲಿ ನಡೆಯಿತು. ಆ ಸಂದರ್ಭದಲ್ಲಿ ದನ, ಕೋಳಿ, ದನಗಳಿಗೆ ಕೃತಕ ಗರ್ಭದಾನ, ಜಪಾನು ವ್ಯವಸಾಯ ಮೊದಲಾದ ಪ್ರದರ್ಶನಗಳ ಏರ್ಪಾಡಿತ್ತು.

ಕೊಡಗಿನ ರೇಶನ್ ಅಂಗಡಿಗಳಲ್ಲಿ ಕೂಪನ್ ಇಲ್ಲದೆ ಯಾರು ಬೇಕಾದರೂ ನಾಲ್ಕು ರೂಪಾಯಿಗಳಿಗೆ ಮೀರದೆ ಅಕ್ಕಿ ಕೊಂಡುಕೊಳ್ಳಬಹುದೆಂದು ಸರಕಾರ ನಿರ್ಧರಿಸಿದೆಯೆಂದು ವರ್ತಮಾನ.

ಶ್ರೀ ಚೆರಿಯಮನೆ ಪೊನ್ನಪ್ಪನವರ ತಂದೆ ದಿವಂಗತ ಕುಶಾಲಪ್ಪನವರ ಜ್ಞಾಪಕಾರ್ಥವಾಗಿ ಕೊಡಗಿನ ಎಲ್ಲಾ ಮಾಧ್ಯಮಿಕ ಶಾಲೆಗಳು ಹಾಕಿಪಂದ್ಯಾಟಕ್ಕೆ ಸ್ಪರ್ಧಿಸುವಂತೆ ಒಂದು ಬೆಳ್ಳಿಯ ಬಟ್ಟಲನ್ನು ಮೂರ್ನಾಡು ಜಿ. ಎಂ. ಸ್ಕೂಲಿಗೆ ಶ್ರೀ. ಪೊನ್ನಪ್ಪನವರು ಒಪ್ಪಿಸಿರುವರು. ಈ ಪಂದ್ಯಾಟವು ನವಂಬರ್ ತಾ. ೧೫ರಿಂದ ಪ್ರಾರಂಭವಾಗುವದು. ಇದಕ್ಕೆ ಭಾಗವಹಿಸಲು ಕುತೂಹಲವುಳ್ಳ ಶಾಲೆಗಳು ನವಂಬರ್ ೮ ರೊಳಗೆ ರೂ. ೪ ಗ್ರೌಂಡ್ ಫೀಜು ಸಹಿತ ಶಾಲೆಯ ಹೆಡ್ ಮಾಸ್ಟರರಿಗೆ ಬರೆದುಕೊಳ್ಳಬಹುದು.

ಮೂರ್ನಾಡು ಶಾಲೆಯಲ್ಲಿ ಸುಮಾರು ೩೦೦ ಮಕ್ಕಳು ಉಪಾಧ್ಯಾಯರೊಡಗೂಡಿ ತಾರೀಕು ೧೫,೧೯,೨೦ ರಲ್ಲಿ ಸಾರ್ವಜನಿಕ ಮತ್ತು ವಾರಣೆ ರಸ್ತೆಗಳು ಕೂಡುವ ಸ್ಥಳದಿಂದ ಕರಡಿಬಾಣೆಯಲ್ಲಿರುವ ಶಾಲಾ ಹೊಸ ಕಟ್ಟಡದ ವರೆಗೆ ಕಾಲುದಾರಿಯನ್ನು ಮಾಡಿದರು. ಆ ಬಳಿಕ ಶಾಲೆಯಿಂದ ಪಬ್ಲಿಕ್ ರಸ್ತೆಯ ವರೆಗೆ ಇರುವ ಕಾಲುದಾರಿಯನ್ನೂ ಆ ಕಾಲುದಾರಿಯಿಂದ ಗದ್ದೆಯ ವರೆಗೆ ಇರುವ ಕಾಲುದಾರಿಯನ್ನೂ ಸಹ ದುರುಸ್ತುಮಾಡಿ ಸಾರ್ವಜನಿಕರಿಗೆ ತಿರುಗಾಡಲು ಅನುಕೂಲ ಮಾಡಿಕೊಟ್ಟರು. ಅನಂತರ ಶಾಲೆಯ ಅಂಗಳಕ್ಕೆ ಅದರ ಬತ್ತಿನಲ್ಲಿದ್ದ ದಿಣ್ಣೆಯನ್ನು ಅಗೆದು ಮಣ್ಣುಹಾಕಿ ಅಂಗಳವನ್ನು ಎತ್ತರಿಸಿದರು

ಮಡಿಕೇರಿಯಲ್ಲಿಯ ಗೌಡ ವಿದ್ಯಾರ್ಥಿನಿವಾಸದ ವಿಚಾರದಲ್ಲಿ ಶ್ರೀ. ಸಿ. ಡಿ. ಅಪ್ಪಯ್ಯನವರು ಬರೆದ ಲೇಖನದ ಬಗ್ಗೆ ಶ್ರೀಗಳಾದ ಚೆಟ್ಟಿಮಾಡ ತಿಮ್ಮಯ್ಯ, ಪೂವಯ್ಯ ಮತ್ತು ಬಡುವಂಡ ಪೂವಯ್ಯ ಇವರುಗಳು ಬರೆದ ಲೇಖನಗಳ ಸಂಬಂಧ ಸದರಿ ಅಪ್ಪಯ್ಯನವರು ಆ ಮೂವರ ಮೇಲೆ ಮಡಿಕೇರಿ ಮುನ್ಸಿಫ್ ಕೋರ್ಟಿನಲ್ಲಿ ಕ್ರಿಮಿನಲ್ ದಾವಾ ದಾಕಲು ಮಾಡಿರುವರೆಂದು ತಿಳಿಯಬಂದಿದೆ.

ತಾ. ೩೧ರಲ್ಲಿ ಸಂಯುಕ್ತ ರಾಷ್ಟ್ರ ಸಂಘದ ದಿನಾಚರಣೆಯು ಕೊಡಗಿನ ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ಬೆಳಗ್ಗೆ ೧೦ ಗಂಟೆಗೆ ಕೋಟೆಯ ಆವರಣದಲ್ಲಿ ನಡೆಯುವದು. ಮುಖ್ಯ ಮಂತ್ರಿಯವರು 'ಸಂಯುಕ್ತ ರಾಷ್ಟ್ರ ಸಂಘ' ಎಂಬ ವಿಚಾರವೂ ಗೃಹ ಮಂತ್ರಿಯವರು 'ಮಾನವನ ಹಕ್ಕುಗಳು' ಎಂಬವಿಚಾರವೂ ಭಾಷಣ ಮಾಡುವರು. ಶ್ರೀಗಳಾದ ಎ. ಪಿ. ಗೋಪಾಲಕೃಷ್ಣ, ಮಿಸೆಸ ಚಿಣಪ್ಪ, ಮಿಸೆಸ್ ರಾಮಚಂದ್ರ. ಸಿ. ಎ. ಮಂದಣ ಮೊದಲಾದವರ ಭಾಷಣಗಳವೆ.

ಮಾಜಿ ಸಿಪಾಯಿಗಳಲ್ಲಿ ಅಧ್ಯಾಪಕ ವೃತ್ತಿಗೆ ಸೇರಲು ಕುತೂಹಲವುಳ್ಳವರು, ಅಂದರೆ ಕಡಿಮೆ ಪಕ್ಷ ಎಸ್. ಎಸ್. ಎಲ್. ಸಿ. ಅಥವಾ ಐ. ಎ. ಸ್ಪೆಷಲ್ ಸರ್ಟಿಫಿಕೇಟ್ ಹೊಂದಿಕೊಂಡವರು ಹೆಚ್ಚಿನ ವಿಷಯಗಳನ್ನು ಮಡಿಕೇರಿ ಎಂಪ್ಲಾಯಿಮೆಂಟ್ ಆಫೀಸಿನಿಂದ ನವಂಬರ್ ತಾರೀಕು ೧೪ರ ಒಳಗೆ ಖುದ್ದಾಗಿ ಹೊಂದಿಕೊಂಡು ನಮೂದಿಸಿದ ಅಪ್ಲಿಕೇಶನ್ ಫಾರಂನಲ್ಲಿ ಅಪ್ಲಿಕೇಶನನ್ನು ಕೊಡಬೇಕಾಗಿದೆ.

ಸೂಚನೆ.

ಅನೇಕ ಗ್ರಾಮಗಳಿಂದಲೂ, ಸಂಘ ಸಂಸ್ಥೆಗಳಿಂದಲೂ ಸಾಮೂಹಿಕ ವಿಕಾಸಯೋಜನೆ ಕೆಲಸ ಕೈಕೊಳ್ಳಲು ತೀರ್ಮಾನಿಸಲಾಗಿದೆಯೆಂಬ ವರದಿ ಬಂದಿವೆ; ಬರುತ್ತಿವೆ. ಕೇವಲ ತೀರ್ಮಾನಗಳ ವಿಚಾರವನ್ನು ಪ್ರಕಟಿಸುವದರಿಂದ ಪ್ರಯೋಜನವಿಲ್ಲವೆಂದೂ ಆದ ಕೆಲಸದ ವಿವರಣೆಯನ್ನು ಬರೆದರೆ ಅಂಥಾ ವಾರ್ತೆಗಳನ್ನು ಆದರದಿಂದ ಪ್ರಕಟಿಸಲಾಗುವದೆಂದೂ ಈ ಮೂಲಕ ತಿಳಿಸಲಾಗಿದೆ.

[ಸಂ

ದ್ವಿತೀಯ ಪಂಚವಾರ್ಷಿಕ ಯೋಜನೆ

ಕೇಂದ್ರ ಸರಕಾರದ ಆಯೋಜನಾ ಸಮಿತಿಯವರು ರಚಿಸಿದ ಸುಮಾರು ೨೫೦೦ ಕೋಟಿ ರೂಪಾಯಿಯ ಪಂಚವಾರ್ಷಿಕ ಯೋಜನೆಯು ಜಾರಿಯಲ್ಲಿ ಬಂದು ೩. ವರ್ಷವಾಯಿತಷ್ಟೆ. ಈಗ ದ್ವಿತೀಯ ಪಂಚವಾರ್ಷಿಕ ಯೋಜನೆಯ ತಯಾರಿಯು ನಡೆಯುತ್ತಿದೆ. ಈ ದ್ವಿತೀಯ ವರ್ಷದ ಯೋಜನೆಯಂತೆ ವರ್ಷಕ್ಕೆ ಒಂದು ಮಿಲಿಯ ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸುವ ಏರ್ಪಾಡು ಮಾಡಲಾಗುವದಂತೆ.

ಎಲ್ಲವೂ ಕ್ಷಣ ಕ್ಷಣಕ್ಕೂ ನಶಿಸಿ ನಾಶವಾಗುತ್ತಿರಲು ನಗುವೇಕೆ? ಸಂತೋಷವೇಕೆ? ಸುತ್ತಲೂ ಕತ್ತಲು ಕವಿದಿರುವಾಗ ಬೆಳಕಿಗಾಗಿ ಪ್ರಯತ್ನಿಸಬಾರದೇಕೆ?

ಈ ಶರೀರವನ್ನು ನೋಡು. ರೋಗ, ಅಶಕ್ತಿಗಳ ತವರು. ಬಿಸಿಲಿಗೆ ಬಾಡುತ್ತದೆ. ಮಳೆಗೆ ಕುಗ್ಗುತ್ತದೆ. ಅಶಾಶ್ವತವಾದ ಈ ಶರೀರವು ಸರ್ವ ಜರಾಪೀಡೆಗಳ ತವರು ಮನೆ.

ಈ ಆಕಾರ ನಾಶವಾಗುತ್ತದೆ. ಅದರ ಜೀವವು ಮರಣದಲ್ಲಿ ಅಂತ್ಯಗೊಳ್ಳುತ್ತದೆ. ರಕ್ತಮಾಂಸಗಳಿಂದ ಬೇರ್ಪಟ್ಟ ಬೆಳ್ಳಗಿನ ಮೂಳೆಯು ಅಲ್ಲಲ್ಲಿ ಚೆಲ್ಲಲ್ಪಡುತ್ತದೆ. ಈ ನಶ್ವರ ಶರೀರದಿಂದ ಯಾವ ಶಾಶ್ವತ ಸುಖ ಬಂದೀತು?

ಈ ಶರೀರವೆಂಬುದು ಮೂಳೆಗಳೆಂಬ ಕಲ್ಲುಮರಗಳಿಂದಲೂ, ರಕ್ತಮಾಂಸಗಳೆಂಬ ನೀರು ಮಣ್ಣುಗಳಿಂದಲೂ ರಚಿತವಾದ ನಗರ. ಬಿಸಿಲಿನ ಝಳಕ್ಕೂ, ಮಳೆಯ ತಾಪಕ್ಕೆ ಕಟ್ಟಡವು ಕುಸಿಯುವಂತೆ ಕಾಲದ ಚಲನೆಯೆಂಬ ಮಂದಿವಾಯುವಲ್ಲಿ ಅದು ಮೃತ್ಯುವಿಗಾಹುತಿಯಾಗುತ್ತದೆ.

ಸುಂದರವಾಗಿ ರಚಿಸಿ, ಬಣ್ಣ ಬಳಿಯಲ್ಪಟ್ಟ ಅರಸನ ರಥಗಳು ಸವೆದು ಮೂಲೆ ಸೇರುತ್ತವೆ. ಅದರಂತೆ ಸೌಂದರ್ಯದ ನಿಧಿ ಎನಿಸಿದರೂ ಈ ಶರೀರ ನಾಶವಾಗುತ್ತದೆ. ಆದರೆ ಹಿತವಾದುದೆಂಬ ಸದ್ಗುಣತೆ, ನೀತಿಗಳಿಗೆ ಚ್ಯುತಿಯಿಲ್ಲ ಆ ಶಾಶ್ವತ ನಿಧಿಗಳು ನಿನ್ನವಾಗಲಿ.

ತಿಳಿಯದ ಮಾನವನು ಜೀವನವನ್ನು ಸುಖವೆಂದು ಭಾವಿಸಿ ದನದಂತೆ ಜೀವಿಸುತ್ತಾನೆ. ಅಂದಾವನ ಶರೀರ ಬೆಳೆಯುತ್ತದೆ. ಆದರೆ ಜ್ಞಾನ ಬೆಳೆಯದು.

ಶಿಸ್ತಿನ ಜೀವನ ನಡೆಸದವರು, ಯೌವನದಲ್ಲಿ ಧನ ಸಂಪಾದನೆ ಮಾಡದವರು, ಮೀನಿಲ್ಲದ ಕೆರೆಯ ಕೊಕ್ಕರೆಯಂತೆ ನಾಶವಾಗುವರು.

ಶಿಸ್ತಿನಿಂದ ಬದುಕದವರು, ನ್ಯಾಯಾನ್ಯಾಯ ವಿವೇಚಿಸದವರು, ಶರೀರ ಶಕ್ತಿ ಇದ್ದಾಗ ನ್ಯಾಯ ರೀತಿಯಿಂದ ಧನ ಸಂಚಯ ಮಾಡದವರು ಮುರಿದು ಬಿದ್ದ ಬಾಣದಂತೆ ಮುದಿತನದಲ್ಲಿ ನಿಷ್ಪ್ರಯೋಜಕರೆನಿಸುವರು.

ಬಡವರ ಹಸಿವೆಯೇ ಶಾಂತಿಯ ಶತ್ರು

"ಸಂಪತ್ತು, ಸಮೃದ್ಧಿ ಮತ್ತು ಬಡಜನಾಂಗಗಳೊಳಗಿನ ಈ ತಾರತಮ್ಯ ಹೀಗೆಯೇ ಬೆಳೆಯುತ್ತಾ ಹೋದರೆ ಜಗತ್ತು ಅದನ್ನು ಸೈರಿಸಲಾರದು" ಎಂದು ಸಂಯುಕ್ತರಾಷ್ಟ್ರ ಸಂಘದ ಅಧ್ಯಕ್ಷರಾದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಪ್ರತಿನಿಧಿ ಮತ್ತು ಪ್ರೇಕ್ಷಕರನ್ನುದ್ದೇಶಿಸುತ್ತಾ ನುಡಿದರು. ಸಂಯುಕ್ತ ರಾಷ್ಟ್ರ ಸಂಘದ ದಿನಾಚರಣೆಯ ಸಂಬಂಧವಾಗಿ ಕೂಡಿದ ಸಭೆಯಲ್ಲಿ ಶ್ರೀಮತಿ ಪಂಡಿತರು ಹಾಗೆ ಎಚ್ಚರಿಕೆ ಕೊಡಿಸಿದರು.

"ಹಸಿವೆ, ರೋಗರುಜೆ, ನಿರಕ್ಷರತೆಗಳೇ ಶಾಂತಿಯ ಪರಮ ವೈರಿಗಳು. ಸಂಯುಕ್ತರಾಷ್ಟ್ರ ಸಂಘದ ಸ್ಥಾಪನೆಯಾಗಿ ಎಂಟು ವರುಷಗಳಾದರೂ ಯುದ್ಧವನ್ನು ನಿವಾರಿಸುವ ಉಪಾಯ ಇನ್ನೂ ಲಭಿಸಿಲ್ಲ. ಕೊರಿಯಾದಲ್ಲಿ ಯುದ್ಧವು ನಿಂತಿರುವದೇನೋ ನಿಜ. ಆದರೆ ಶಾಂತಿಯನ್ನು ಕಾಪಾಡಲು ಎಲ್ಲರೂ ಸಹನೆಯಿಂದ ವರ್ತಿಸಬೇಕು" ಎಂದು ಅವರು ನುಡಿದರು.

ರಕ್ತದ ಬರವಣಿಗೆ.

ಡೇನಿಯಲ್ ಬ್ರೆನನ್ ಎಂಬಾತನನ್ನು ದರೋಡೆಕಾರರು ಸಂಧಿಸಿ ಆತನನ್ನು ಮೈ ಮುರಿಯೆ ಥಳಿಸಿ ಅವನಲ್ಲಿದ್ದ ಹಣ ದೋಚಿಕೊಂಡು ತಮ್ಮ ಕಾರಿನಲ್ಲಿ ಕುಳಿತು ಓಡಿ ಹೋದರು. ಆದರೆ ಡೇನಿಯಲ್ ಎಚ್ಚರ ತಪ್ಪುವ ಮೊದಲು ತನ್ನ ರಕ್ತದಿಂದ ಒಂದು ಅಂಗಡಿಯ ಕಿಟಕಿಯ ಮೇಲೆ ಆ ಮೋಟಾರಿನ ನಂಬರ ಬರೆದಿಟ್ಟನು.

ಮುಂದೆ ಇದರಿಂದ ಪೋಲೀಸರಿಗೆ ಆ ಕಾರಿನ ಪತ್ತೆ ಹತ್ತಿತು ಅದರ ಡ್ರೈವರ್ ನಿಜವನ್ನೊಪ್ಪಿಕೊಂಡು ಡೇನಿಯಲ್‌ನ ಮೇಲೆ ಧಾಳಿ ಮಾಡಿದ ನಾಲ್ವರನ್ನು ತೋರಿಸಿಕೊಟ್ಟನು.

ಕೊರಿಯೂದಲ್ಲಿ 'ಭಾರತೀಯ' ಗ್ರಾಮ.

ಜನರಲ್ ತಿಮ್ಮಯ್ಯನವರು ಧರಿಸಿರುವ ಮುಳ್ಳಿನ ಕಿರೀಟ.

ಲೇ:—"ಗುಪ್ತ", ಮಡಿಕೇರಿ.

ಕೊರಿಯೂದಲ್ಲಿ ನಡೆಯುತ್ತಿದ್ದ ಯುದ್ಧವು ತಾತ್ಕಾಲಿಕವಾಗಿ ನಿಂತಿದೆ. ಸಂಧಾನವಾಗಿ ಆ ಸಂಧಾನದ ಶರತುಗಳಂತೆ ಯುದ್ಧ ಕೈದಿಗಳ ವಿತರಣೆಗೆ ತಟಸ್ಥ ರಾಷ್ಟ್ರ ಸಮಿತಿಯ ನೇಮಕವಾಗಿ ಭಾರತವು ಅದರ ಮುಂದಾಳ್ತನ ವಹಿಸಿ ಭಾರತದ ಆ ಸಮೂನ ಯೋಧ ಜನರಲ್ ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ಈ ತಟಸ್ಥ ರಾಷ್ಟ್ರ ಸಮಿತಿಯು ಕೊರಿಯೂಕ್ಕೆ ಹೋಗಿ ಯುದ್ಧ ಕೈದಿಗಳ ವಿನಿಮಯದ ಬಗ್ಗೆ ಕೆಲಸ ಮಾಡುತ್ತಿರುವರು. ಎಂಥಾ ಪರಿಸ್ಥಿತಿಯಲ್ಲಿ ಭಾರತೀಯ ಸೇನೆಯು ಅಲ್ಲಿ ಕೆಲಸ ಮಾಡಲು ಹೋಗಿದೆ, ಎಂಥಾ ಗಂಡಾಂತರವನ್ನು ನಮ್ಮ ಯೋಧರು ಎದುರಿಸಬೇಕಾಗಿ ಬಂದಿದೆಯೆಂಬುದು ಈ ಕೆಳಗಿನ ಕಲವು ವಾಕ್ಯಗುಚ್ಛಗಳನ್ನು ಓದುವದರಿಂದ ವಾಚಕರಿಗೆ ಮನವರಿಕೆಯಾಗಬಹುದು.

ಕೊರಿಯೂ ಸಂಧಾನದ ಮಾತುಕತೆಗಳಾದ ನಂತರ ದಕ್ಷಿಣ ಹಾಗೂ ಉತ್ತರ ಕೊರಿಯೂದ ಮಧ್ಯೆ ಅಮೇರಿಕನರು ಹೇಳುವಂತೆ 'ಡಿ. ಜೀ' (ಡೀಮಿಲಿಟೈಸ್‌ಡ್ ಝೋನ್) ಎಂದರೆ ಸೈನ್ಯ ವಿಹೀನ ವಿಭಾಗವನ್ನು ರಚಿಸಲಾಗಿದೆ. ಈ ಭಾಗದಲ್ಲಿಯೇ 'ಭಾರತೀಯ ಗ್ರಾಮ'ದ ರಚನೆಯಾಗಿದ್ದು ಅಲ್ಲಿ ಭಾರತೀಯ ಸೈನಿಕರು ವಾಸಿಸುತ್ತಿರುವರು. ಇಲ್ಲಿ ಕೊರಿಯದ ಉತ್ತರ ದಕ್ಷಿಣಗಳನ್ನು ವಿಭಾಗಿಸಿ ಮಧ್ಯದಲ್ಲಿ ಸೈನಿಕರಿಲ್ಲದ ವಿಭಾಗ ರಚಿಸಲು ಕೊರಿಯೂದ ಉದ್ದಕ್ಕೂ ಕಟ್ಟಿರುವ ಎರಡಿಂಚು ಅಗಲದ ಬಿಳಿ ಟೇಪನ್ನು ನೋಡಬಹುದು. ಇದು ಹಳ್ಳ, ತಿಟ್ಟು, ಬೆಟ್ಟಗುಡ್ಡ, ನದಿ ಕೆರೆಗಳೆನ್ನದೆ ಉದ್ದಕ್ಕೆ ಸಾಗಿದೆ ಇದೇ ಬಿಳಿ ಟೇಪು ತಟಸ್ಥ ರಾಷ್ಟ್ರಗಳ ತಾಟಸ್ಥ್ಯವನ್ನು ಎತ್ತಿ ತೋರಿಸಲೋ ಎಂಬಂತೆ ತಟಸ್ಥ ರಾಷ್ಟ್ರ ಸಮಿತಿಯ ಮುಖ್ಯ ಖಜೇರಿಯ ಸುತ್ತ ಆವರಿಸಿದೆ. ಇಲ್ಲಿಯೇ ಭಾರತೀಯ ಅಪ್ರತಿಮ ಯೋಧ ಜನರಲ್ ತಿಮ್ಮಯ್ಯನವರು ತಮ್ಮ ಅತಿ ಗಡುಚಿನ ಜವಾಬ್ದಾರಿಯನ್ನು ಹೊತ್ತು ಕೆಲಸ ಮಾಡುತ್ತಿರುವದಾಗಿದೆ. ತಿಮ್ಮಯ್ಯನವರ ಈ ಮುಖ್ಯ ಖಜೇರಿಯಲ್ಲಿ ಅವರ ಸೈನ್ಯದ ೬೦ ಅಧಿಕಾರಿಗಳೂ, ೩೦೦ ಯೋಧರೂ ಟೆಂಟುಗಳಲ್ಲಿ ಜೀವಿಸುತ್ತಾರೆ.

ಭಾರತೀಯನಿಗೆ ಕೊರಿಯೂವು ಪರದೇಶದಂತೆ ತೋರುವದಿಲ್ಲ. ಅಲ್ಲಿಯ ಗ್ರಾಮಗಳು ಭಾರತೀಯ ಹಳ್ಳಿಗಳಂತೆಯೆ. ಭಾರತದಂತೆಯೇ ಬಡತನ, ಮಣ್ಣಿನಗುಡಿಸಲು ಮೊದಲಾದುವನ್ನು ಅಲ್ಲಿ ಕಾಣಬಹುದು. ಆದರೆ ಕೊರಿಯನರ ಒಂದು ವೈಶಿಷ್ಟ್ಯವೆಂದರೆ ಅವರು ಹೂವುಗಳಿಗಾಗಿ ಪ್ರಾಣಬಿಡುವವರು ಅಲ್ಲಿಯ ಬಡ ಕುಟುಂಬಗಳು ಆಹಾರವಿಲ್ಲದೆ ಉಪವಾಸವಿರಬಹುದು. ಆದರೆ ಯಾವ ಬಡ ಕುಟುಂಬವೂ ಮನೆಯ ಸುತ್ತು ಚಂದದ ಹೂತೋಟವಿಲ್ಲದೆ ಜೀವಿಸಲಾರದು. ಕೊರಿಯೂದಲ್ಲಿ ಯುದ್ಧದ ಅನಾಹುತದಿಂದ ನಷ್ಟವಾಗದ ವಸ್ತು ಯಾವುದೂ ಇಲ್ಲ. ಮರಗಿಡಗಳೂ, ನೆಲಮನೆಗಳೂ, ಭೂಮಿ, ನದಿ, ಕೆರೆ ಸರ್ವವೂ ಕೂಡ ಯುದ್ಧದ ಅನಾಹುತದ ಚಿತ್ರವನ್ನು ಎತ್ತಿ ತೋರಿಸುವಂತಿವೆ. ಕೊರಿಯೂದಲ್ಲಿ ಆಕಾಶದ ನಕ್ಷತ್ರಗಳನ್ನು ಬಿಟ್ಟರೆ ಉಳಿದೆಲ್ಲವೂ ಯುದ್ಧದ ಅನಾಹುತಕ್ಕೆ ತುತ್ತಾದುವೆ!

ಈ ವಾತಾವರಣದಲ್ಲಿ ಜನರಲ್ ತಿಮ್ಮಯ್ಯನವರು ಸುಮಾರು ೨೩,೦೦೦ ವಿರುವ ಯುದ್ಧ ಕೈದಿಗಳನ್ನು ಅವರವರ ತಾಯ್ನಾಡಿಗೆ ಕಳುಹಿಸುವ ಇಲ್ಲವೇ ಅವರಿಷ್ಟದಂತೆ ಬೇರೆಡೆ ಹೋಗುವ ನಿರ್ಣಯಕ್ಕೆ ಬಲಾತ್ಕಾರ ಯಾ ಒತ್ತಾಯವಿಲ್ಲದೆ ತರಬೇಕಿದೆ. ಚಿಕ್ಕಂದಿನಿಂದಲೇ ಯೋಧನಾಗಿ ಬೆಳೆದ ಜನರಲ್ ತಿಮ್ಮಯ್ಯನವರು ಈ ಪ್ರಶ್ನೆಯನ್ನು ನೇರವಾಗಿ, ಸಾಮಾನ್ಯ ಬುದ್ಧಿ ಪೂರ್ವಕವಾಗಿ ಎದುರಿಸಿದ್ದಾರೆ. ಅವರಲ್ಲಿ ರಾಜಕೀಯ ವಾದಿಗಳ ಒಳಯತ್ನವಾಗಲೀ, ತೋರಿಕೆಯ ನಯನೀತಿಗಳಾಗಲೀ ಇಲ್ಲ. ಅವರ ನೇರವಾದ ಸ್ವಭಾವ, ನಿಷ್ಪಕ್ಷಪಾತ ಧೋರಣೆ ಇವು ಈಗಾಗಲೇ ಅವರ ಜೊತೆ ಕೆಲಸಗಾರರಾದ ಬೇರೆ ತಟಸ್ಥ ರಾಷ್ಟ್ರಗಳಾದ ಝೆಕೊಸ್ಲೋವಿಯಾ, ಪೋಲೆಂಡ್, ಸ್ವೀಡನ್, ಮತ್ತು ಸ್ವಿಟ್ಝರ್ಲೆಂಡ್ ಪ್ರತಿನಿಧಿಗಳನ್ನು ಮೆಚ್ಚಿಸಿದೆ.

ಅಲ್ಲಿರುವ ಭಾರತೀಯ ಸೈನಿಕರು ಅಲ್ಲಿಯ ವಾತಾವರಣಕ್ಕೆ ಹೊಂದಿಕೊಂಡಿದ್ದಾರೆ. ಸ್ನಾನ, ಮುಖಕ್ಷೌರ ಮೊದಲಾದುವನ್ನು ಅಮೇರಿಕನರಂತೆ ಮಾಡಿದರೂ, ಊಟ ಉಪಚಾರವು ಭಾರತೀಯ ಪದ್ಧತಿಯಂತೆ ನಡೆಯುತ್ತದೆ. ಸಂಯುಕ್ತ ರಾಷ್ಟ್ರ ಸಂಘದವರು, ಚೈನೀಯರು ಮತ್ತು ಕೊರಿಯನರು ಇವರಿಗೆ ರೇಶನ್, ತರಕಾರಿ, ಮತ್ತಿತರ ಆಹಾರಗಳನ್ನು ಒದಗಿಸುತ್ತಾರೆ. ಮೊಟ್ಟೆ, ಅಕ್ಕಿ, ರಷ್ಯಾ ಜಾಮ್, ಚೈನಾ ರೊಟ್ಟಿ ಹಣ್ಣುಗಳು ಉತ್ತರ ಕೊರಿಯೂದಿಂದ ದೊರೆಯುತ್ತವೆ. ಮೀನು, ಮಾಂಸ, ಬೆಣ್ಣೆ, ಮೊದಲಾದುವು ಸಂಯುಕ್ತ ರಾಷ್ಟ್ರ ಸಂಘದ ವತಿಯಿಂದ ದೊರೆಯುತ್ತದೆ ಕುಡಿಯುವ ನೀರು ಟ್ರಕ್ಕುಗಳ ಮೂಲಕ ಸರಬರಾಯಿಯಾಗುತ್ತದೆ.

ಅಲ್ಲಿರುವ ಡೋಗ್ರಾ, ಜಾಟ್, ರಾಜ್‌ರಿಫ್, ಗರ್ವಾಲ ಸೈನ್ಯ ಶಾಖೆಗಳಿಗೆ ಪ್ರತ್ಯೇಕ ಪ್ರತ್ಯೇಕ ಯುದ್ಧ ಕೈದಿ ಕೇಂದ್ರಗಳನ್ನು ಕಾಯುವ ಕೆಲಸವು ಇದೆ. ಈ ಪ್ರತಿ ಯೂನಿಟ್ಟೂ ಸ್ವಾವಲಂಬಿಯಾಗಿದೆ. ಅವರದೇ ಕ್ಷೌರಿಕ, ಮಡಿವಾಳ, ಅಡಿಗೆಯವರಿದ್ದಾರೆ. ಇವರೆಲ್ಲರೂ ತಮ್ಮ ನಿಶ್ಚಿತ ಕೆಲಸಗಳನ್ನು ಸಂತೋಷದಿಂದ ಮಾಡುತಿದ್ದಾರೆ. ಭಾರತವು ಈ ಯುದ್ಧ ಕೈದಿಗಳ ವಿತರಣೆಯ ಜವಾಬ್ದಾರಿಯನ್ನು ವಹಿಸಿಕೊಂಡಾಗ ಈ ಪ್ರಶ್ನೆಯು ಜಟಿಲವಾದುದೂ, ಗಂಡಾಂತರಕಾರಿಯೂದುದೂ ಎಂದು ಭಾವಿಸಿರಲಿಲ್ಲ. ಸಂಧಾನದ ಶರತುಗಳ ಪ್ರಕಾರ ಕೈದಿಗಳನ್ನು ವಶದಲ್ಲಿಟ್ಟುಕೊಂಡಿರುವವರು, ಸ್ಥಳ, ಆಹಾರ ಮತ್ತಿತರ ಅವಶ್ಯಕತೆಗಳನ್ನು ವದಗಿಸಬೇಕಿದೆ. ಇಂಥಾ ಐದು ಕೈದಿಗಳನ್ನು ಇಡುವ ಕೇಂದ್ರಗಳ ಏರ್ಪಾಡಾಗಿ ಪ್ರತಿ ಕೇಂದ್ರದಲ್ಲಿ ೫೦೦ ಕೈದಿಗಳ ಗುಂಪಿನ ಬೇರೆ ಬೇರೆ ವಿಭಾಗಗಳನ್ನು ಮಾಡಲಾಗಿದೆ.

ಈ ಕೈದಿಗಳ ಶಿಬಿರದಲ್ಲಿ ವಿವಿಧ ರೀತಿಯ ಪ್ರಚಾರ ನಡೆಯುತಿದ್ದು ಕೈದಿಗಳಲ್ಲಿ ಸ್ವಂತ ಅಭಿಪ್ರಾಯವೇ ಇಲ್ಲದಾಗಿದೆ ತಟಸ್ಥ ರಾಷ್ಟ್ರ ಸಮಿತಿಯ ಕೆಲಸವು ಸರಾಗವಾಗಿ ಸಾಗದಂತೆ ಅನೇಕ ಏಜನ್ಸಿಗಳು ಒಳಗೊಳಗೆ ಕೆಲಸ ಮಾಡುತ್ತಿವೆ. ಈ ತಟಸ್ಥ ರಾಷ್ಟ್ರ ಸಮಿತಿಯವರಲ್ಲಾ ಕಮ್ಯೂನಿಸ್ಟರೆಂದೂ ಹೇಳಲಾಗುತ್ತಿದೆ. ಇದರಿಂದಾಗಿ ಕೈದಿಗಳಲ್ಲಿ ಕ್ಷೋಭೆ ಎದ್ದಿದೆ. ಭಯಂಕರ ವಿರೋಧ ಪ್ರದರ್ಶನವನ್ನೂ ಅವರು ಮಾಡುತಿದ್ದಾರೆ. ಯಾವುದೇ ರೀತಿಯ ತಟಸ್ಥ ರಾಷ್ಟ್ರ ಸಮಿತಿಯವರ ವಿವರಣೆಯೂ ಪ್ರಯೋಜನವಾಗುತ್ತಿಲ್ಲ ಈ ಕೈದಿಗಳ ಶರೀರದ ಮೇಲೆ 'ನಾನು ಕಮ್ಯೂನಿಸ್ಟ ವಿರೋಧಿ' ಎಂಬೀ ಮೊದಲಾಗಿ ಹಚ್ಚೆ ಚುಚ್ಚಲ್ಪಟ್ಟಿವೆ. ಇವುಗಳೆಲ್ಲವುಗಳ ಗುರಿಯೆಂದರೆ ಈ ಕೈದಿಗಳು ಉತ್ತರ ಕೊರಿಯೂಕ್ಕಾಗಲೀ, ಚೈನಾಕ್ಕಾಗಲೀ ಹೋಗಲು ನಿರಾಕರಿಸುವರೆಂದು ತೋರಿಸುವದೇ ಆಗಿದೆ.

ಇದಕ್ಕೆ ಬೆಂಬಲ ಕೊಡುವಂತೆ ಅಮೇರಿಕಾ ಪ್ರೋತ್ಸಾಹದಿಂದ ನಡೆಸಲ್ಪಡುತ್ತಿರುವ 'ಸ್ಟಾರ್ ಮತ್ತು ಸ್ಟ್ರೈಪ್' ಎಂಬ ಪತ್ರಿಕೆಯು ನಾನಾ ರೀತಿಯ ಅಪಪ್ರಚಾರವನ್ನು ಭಾರತೀಯರ ಹಾಗೂ ತಟಸ್ಥ ರಾಷ್ಟ್ರಗಳ ವಿರುದ್ಧ ಮಾಡುತ್ತಿದೆ. ಈ ವರೆಗೆ ಯುದ್ಧ ಕೈದಿಗಳಲ್ಲಿ ಕೇವಲ ನೂರಿಪ್ಪತ್ತು ಜನರು ಮಾತ್ರ ಬಿಡುಗಡೆಯಾಗಿದ್ದಾರೆ. ಕೈದಿಗಳಲ್ಲಿ ಯಾರಾದರೂ ಕೂಡ ತಾನು ಉತ್ತರ ಕೊರಿಯೂಕ್ಕೆ ಯಾ ಚೈನಾಕ್ಕೆ ಹೋಗಲಿಚ್ಛಿಸುವೆನೆಂಬ ಅಭಿಪ್ರಾಯ ವ್ಯಕ್ತಮಾಡಿದರೆ ಆಸಕ್ತ ಸಂಗಡದ ಕೈದಿಗಳು ಅಂಥಾವರನ್ನು ಆ ಕ್ಷಣ ಕೊಲೆ ಮಾಡುವರು. ಈ ಭಯದ ಕಾರಣ ಯಾವ ಕೈದಿಯೂ ತನ್ನ ಅಭಿಮತವನ್ನು ಹೇಳಲು ಹಿಂಜರಿಯುವನು. ಒಬ್ಬ ಕೈದಿಯು ತಪ್ಪಿಸಿಕೊಂಡು ಹೋಗಲು ಯತ್ನಿಸಿದನೆಂದು ಆತನನ್ನು ಕೋದಿಕ್ಕಿ ಅಲ್ಲೇ ಹೂಳಲಾಯಿತಂತೆ!

ಈ ರೀತಿ ಅಮೇರಿಕನರಿಂದ ಅಂತರ್ಗತವಾಗಿ ಉದ್ರಿಕ್ತರಾದ ಕೈದಿಗಳನ್ನು ಸಮಾಧಾನದ ಮಾರ್ಗದಿಂದ ವಿತರಣೆ ಮಾಡುವದು ಅಸಾಧ್ಯವೆಂದು ತಟಸ್ಥರಾಷ್ಟ್ರ ಸಮಿತಿಗೆ ತೋರಿದೆ ಆದ್ದರಿಂದ ಈ ರೀತಿಯ ಆತಂಕವನ್ನು ಒಡ್ಡಿದರೆ ಶಕ್ತಿ ಪ್ರಯೋಗ ಮಾಡಲಾಗುವದೆಂದು ಕೈದಿಗಳನ್ನು ಎಚ್ಚರಿಸಲಾಗಿದೆ. ಕೈದಿಗಳಿಗೆ ನಿಜಸ್ಥಿತಿಯನ್ನು ವಿವರಿಸುವ ಕೆಲಸ ನಡೆಯುತ್ತಿದೆ. ಇದಕ್ಕೂ ಕೂಡ ಆತಂಕ ಬಂದು ತತ್ಕಾಲ ಈ ವಿವರಣಾ ಕೆಲಸ ನಿಂತಿದೆ ವಿವರಣಾ ಅವಧಿಯು ೯೦ ದಿನದೊಳಗೆ ಮುಗಿಯಬೇಕೆಂದು ನಿರ್ಧರಿಸಿ ಅದನ್ನು ಹೆಚ್ಚಿಸಲು ಸಂಯುಕ್ತ ರಾಷ್ಟ್ರದವರು ನಿರಾಕರಿಸಿದ್ದಾರೆ. ಪರಿಣಾಮವಾಗಿ ತಟಸ್ಥ ಸಮಿತಿಯವರ ಕೆಲಸಕ್ಕೆ ತುಂಬಾ ತೊಂದರೆಯಾಗುತ್ತಿದೆ.

ಈ ಮಧ್ಯೆ ತಟಸ್ಥ ರಾಷ್ಟ್ರ ಸಮಿತಿಯವರು ಕಮ್ಯೂನಿಸ್ಟರಿಗೆ ಬೆಂಬಲ ಕೊಡುತ್ತಿದ್ದಾರೆ. ಉತ್ತರ ಕೊರಿಯೂದವರ ಬೆನ್ನು ತಟ್ಟುತ್ತಿದ್ದಾರೆ. ಎಂಬ ಪ್ರಚಾರವೊಂದು ಬಲವಾಗಿ ನಡೆಯುತ್ತಿದೆ. ಇಂಥಾ ಪರಿಸ್ಥಿತಿಯಲ್ಲೂ ಜನರಲ್ ತಿಮ್ಮಯ್ಯನವರು ತಮ್ಮ ದಕ್ಷತೆ ಮತ್ತು ಸಹನಾಪೂರ್ಣ ಕೆಲಸದಿಂದ ಅಪೂರ್ವ ಆದರ್ಶವನ್ನು ಎಲ್ಲರಿಗೂ ತೋರಿಸಿದ್ದಾರೆ. ಅವರ ನಿಶ್ಚಲ ಪ್ರಯತ್ನವು ಕೊರಿಯೂ ಸಮಸ್ಯೆಯ ಈ ಅಂಧಕಾರದಲ್ಲಿ ಒಂದು ಆಶಾ ಬೆಳಕಾಗಿದೆ. ಅವರ ಇತ್ತೀಚೆಗಿನ ಹೇಳಿಕೆಯಂತೆ ಅಲ್ಲಿ ಯಶಸ್ವಿ ಕಾರ್ಯ ನಡೆಸುವುದು ಸಾಧ್ಯವಿಲ್ಲವೆಂದೂ, ತಟಸ್ಥ ರಾಷ್ಟ್ರ ಸಮಿತಿಯ ವಿಸರ್ಜನೆಯಾಗಬಹುದೆಂದೂ ತಿಳಿದು ಬಂದಿದೆ. ಅಂಥಾ ಪರಿಸ್ಥಿತಿ ಬಾರದೆ ತಟಸ್ಥ ರಾಷ್ಟ್ರ ಸಮಿತಿಯು ಕೊರಿಯೂದ ಈ ಜಟಿಲ ಸಮಸ್ಯೆಯನ್ನು ಬಗೆಹರಿಸಲು ಶಕ್ತವಾಗಿ ಜಗತ್ತಿನ ಶಾಂತಿಗೆ ತಳಹದಿಯನ್ನು ಹಾಕಲೀ ಎಂಬುದೇ ಶಾಂತಿಪ್ರಿಯರೆಲ್ಲರ ನಿಶ್ಚಲ ಆಸೆ.

ಪತ್ನಿ ಪ್ರೇಮ.

ಕ್ಯಾಲಿಫೋರ್ನಿಯದ ಇಂಗಲ್‌ವುಡ್ ಎಂಬಲ್ಲಿ ವಿಲಿಯಂ ಕೆಂಪ್ ಎಂಬಾತನೊಬ್ಬನಿದ್ದಾನೆ. ಆತ ತನ್ನ ಲಗ್ನದ ದಿನ ತನ್ನ ಹೆಂಡತಿಗೆ 'ನಾನು ಆಜನ್ಮವೂ ನಿನಗೆ ನೀನಿನ್ನೂ ಹಾಸಿಗೆಯಲ್ಲಿರುವಾಗಲೇ ಪ್ರತಿ ನಿತ್ಯ ಒಂದು ಕಪ್ಪು ಚಹ ತಂದು ಕೊಡುತ್ತೇನೆ' ಎಂದು ವಚನವಿತ್ತ. ಆಗ ಅವಳು 'ಏನು ತಂದುಕೊಡುತ್ತಾನೆ?' ಎಂದು ಭಾವಿಸಿಯೋ ಏನೋ ಮುಗುಳ್ನಗೆ ನಕ್ಕಳು.

ಆದರೆ ವಿಲಿಯಂ ೬೦ ವರ್ಷಗಳ ಹಿಂದೆ ಇತ್ತಿತ ತನ್ನ ವಚನವನ್ನು ಇಂದಿನ ವರೆಗೂ ಪಾಲಿಸಿಕೊಂಡು ಬಂದಿದ್ದಾನೆ! ಗಂಡ ವಿಲಿಯಮ್ಮನಿಗೆ ೮೦ ವರ್ಷ; ಅವನ ಹೆಂಡತಿಗೆ ೭೭ ವರ್ಷ. ತನ್ನ ಹೆಂಡತಿಯ ೧೦೦ನೆಯ ಜನ್ಮ ದಿನ ಅವಳಿಗೆ ಒಂದರ ಬದಲು ಎರಡು ಕಪ್ಪು ಚಹ ಕೊಟ್ಟು ಸನ್ಮಾನಿಸಬೇಕೆಂಬ ಬಯಕೆ ವಿಲಿಯಮ್ಮನಿಗಿದೆ.

ಬೇಕಾಗಿದ್ದಾರೆ.

ಹೊಸ ಮಾದರಿಯ ಫೌಂಟನ್ ಪೆನ್ ಮಾರಾಟ ಮಾಡಲು ಆಕರ್ಷಣೀಯ ಶರತುಗಳ ಮೇಲೆ ಏಜೆಂಟರು ಬೇಕಾಗಿದ್ದಾರೆ, ಸ್ಯಾಂಪಲಿಗೂ ವಿವರಗಳಿಗೂ ಈ ಪತ್ತೆಗೆ ಬರೆಯಿರಿ.

Standard Pen House
(K. M)
Bhandari Street
52-5 Bombay 3

ರೈತನ ಪತ್ನಿಯ ಕಥೆ.

ಒಂದು ಗ್ರಾಮದಲ್ಲಿ ಒಬ್ಬ ರೈತನು ತನ್ನ ಪತ್ನಿಯೊಡನೆ ಜೀವಿಸು ತ್ತಿದ್ದನು. ತನ್ನ ಗಂಡನು ಮುದುಕನಾದ ಕಾರಣ ಆಕೆಗೆ ತೃಪ್ತಿ ಇರ ಲಿಲ್ಲ. ಯಾವಾಗಲೂ ಆಕೆಯು ಬೇರೆಯವರನ್ನು ಚಿಂತಿಸುತ್ತಾ ಇದ್ದಳು. ಇದನ್ನು ತಿಳಿದ ಒಬ್ಬನು ಒಂದು ದಿನ ಆಕೆಯ ಹತ್ತಿರ ಬಂದು, «ಅಯ್ಯೋ ಸುಂದರ ಪ್ರಾಣಿ, ನನ್ನ ಹೆಂಡತಿ ಸತ್ತು ಹೋಗಿದ್ದಾಳೆ. ನಿನ್ನನ್ನು ನೋಡಿ ನನ್ನ ಪ್ರೇಮ ಉಕ್ಕಿ ಬರುತ್ತಿದೆ. ಪ್ರೇಮದ ಪೂರ್ಣ ಸಿದ್ಧಿಯನ್ನು ನನ ಗಿತ್ತು ನನ್ನನ್ನು ಸಂಪನ್ನನಾಗಿ ಮಾಡು'' ಎಂದು ಕೇಳಿಕೊಂಡನು.

«ನಿನ್ನ ಅಭಿಪ್ರಾಯ ಹಾಗಿದ್ದರೆ, ನನ್ನ ಗಂಡನಿಗೆ ಬೇಕಾದಷ್ಟು ಹಣವಿದೆ. ಅತನು ವೃದ್ಧನಾಗಿ ಕುಳಿತಲ್ಲಿಂದ ಏಳಲಾರನು. ನಾನು ಬೇಕಾದಷ್ಟು ಹಣ ತೆಗೆದುಕೊಂಡು ಬರುವೆನು. ನಾವಿಬ್ಬರೂ ಬೇರೆ ದೂರ ಪ್ರದೇಶಕ್ಕೆ ಹೋಗಿ ಪ್ರೇಮದ ಪೂರ್ಣ ಫಲವನ್ನು ಅನುಭವಿಸುವ'' ಎಂದು ಆಕೆ ಹೇಳಿದಳು.

ಅವರಿಬ್ಬರು ನಿಶ್ಚಿತ ಸ್ಥಳದಲ್ಲಿ ಬೆಳಗಿನ ಜಾವದಲ್ಲಿ ಭೇಟಿಯಾಗಿ ಮುಂದೆ ಹೋಗುವದಾಗಿ ತೀರ್ಮಾನಿಸಿಕೊಂಡರು. ರೈತನ ಹೆಂಡತಿಯು ಸಂತೋಷದಿಂದ ಮನೆಗೆ ಬಂದಳು. ಆ ದಿನ ರಾತ್ರೆ ಗಂಡನು ನಿದ್ರಿಸು ತ್ತಿರುವಾಗ ಎಲ್ಲಾ ಹಣ ಮತ್ತು ಆಭರಣಗಳನ್ನು ತೆಗೆದುಕೊಂಡು ನಿಶ್ಚಿತ ಸ್ಥಳಕ್ಕೆ ಬಂದು ಇಬ್ಬರೂ ಸಂತೋಷದಿಂದ ದೂರದ ನಗರಕ್ಕೆ ಪ್ರಯಾಣ ಬೆಳೆಸಿದರು. ದಾರಿಯಲ್ಲಿ ಆಕೆಯ ಪ್ರೇಮಿಯು ಆಲೋಚಿಸಿ ದನು. ಈ ನಡು ವಯಸ್ಸಿನ ಹೆಂಗಸನ್ನು ಕಟ್ಟಿಕೊಂಡು ನಾನೇನು ಮಾಡಲಿ. ಈಕೆಯನ್ನು ಮದುಕಿಕೊಂಡು ಬೇರೆ ಜನರೂ ಬರಬಹುದು. ಆದ್ದರಿಂದ ಆಕೆಯಲ್ಲಿರುವ ಹಣವನ್ನು ದೋಚಿಕೊಂಡು ನಾನು ಬೇರೆಡೆ ಹೋಗುವದೇ ಉಚಿತವೆಂದು ತೀರ್ಮಾನಿಸಿದನು.

ದಾರಿಯಲ್ಲಿ ಅವರು ಒಂದು ನದಿಯನ್ನು ದಾಟಬೇಕಾಯಿತು. ಆಗ ಪ್ರೇಮಿಯು ಹೇಳಿದನು. «ಈ ನದಿಯಲ್ಲಿ ತುಂಬಾ ನೀರಿದೆ. ಇದನ್ನು ದಾಟುವದು ಕಷ್ಟ. ನಿನ್ನ ಆಭರಣ, ಹಣವನ್ನು ಕೊಡು. ಬಟ್ಟೆ ಬರೆಗಳನ್ನೂ ಬಿಚ್ಚಿಕೊಡು. ಆ ದಡದಲ್ಲಿ ಇಟ್ಟು ಬರುವೆನು. ನಂತರ ನಿನ್ನನ್ನು ಸುರಕ್ಷಿತವಾಗಿ ದಾಟಿಸಲು ಸುಲಭವಾಗುವದು'' ಎಂದನು. ಆಕೆ ಹಾಗೆಯೇ ಮಾಡಲು ಪ್ರೇಮಿಯು ನದಿಯನ್ನು ದಾಟಿ ಹಣ ಮತ್ತು ಆಕೆಯ ಬಟ್ಟೆಯೊಡನೆ ಪರಾರಿಯಾದನು.

ರೈತನ ಪತ್ನಿಯು ಬಟ್ಟೆ ಬರೆ ಇಲ್ಲದೆ ನಗ್ನಳಾಗಿ ನದಿಯ ದಂಡೆ ಯಲ್ಲಿ ಕೈಗಳಿಂದ ಮುಖ ಮುಚ್ಚಿಕೊಂಡು ಕುಳಿತು ರೋಧಿಸತೊಡಗಿ ದಳು. ಆ ಸಮಯದಲ್ಲಿ ಒಂದು ಹೆಣ್ಣು ನರಿಯು ಒಂದು ತುಂಡು ಮಾಂಸವನ್ನು ಹೊತ್ತುಕೊಂಡು ಆ ದಾರಿಗಾಗಿ ಬಂತು. ನದಿ ಯ ಕರೆಯಲ್ಲಿ ಅದು ನಿಂತು ನೋಡುತ್ತಿರಲು ನದಿಯಿಂದ ದೊಡ್ಡದೊಂದು ಮೀನು ದಡಕ್ಕೆ ಹಾರಿತು. ಅದನ್ನು ಕಂಡು ನರಿಯು ತನ್ನ ಬಾಯಲ್ಲಿದ್ದ ಮಾಂಸದ ತುಂಡನ್ನು ಬಿಟ್ಟು ಆ ಮೀನಿನತ್ತ ಓಡಿತು. ಅಷ್ಟರಲ್ಲಿ ಆಕಾ ಶದಲ್ಲಿ ಹಾರುತ್ತಿದ್ದ ಹದ್ದೊಂದು ಮಿಂಚಿನ ವೇಗದಿಂದ ಎರಗಿ ಮಾಂಸದ ತುಂಡನ್ನು ಎತ್ತಿಕೊಂಡು ಹೋಯಿತು. ಕರೆಯಲ್ಲಿ ಬಿದ್ದ ಮೀನು ನರಿ ಯು ತಲುಪುವದರೊಳಗೆ ಹಾರಾಡಿ ಪುನಃ ನೀರನ್ನು ಸೇರಿತು. ನರಿಯು ಇದ್ದದನ್ನು ಕಳಕೊಂಡು ಆಕಾಶದಲ್ಲಿ ಹಾರುತ್ತಿದ್ದ ಹದ್ದಿನ ಕಡೆಗೆ ನೋ ಡುತ್ತಿರುವದನ್ನು ಕಂಡು ರೈತನ ಪತ್ನಿಯು ನಗುತ್ತಾ «ಓ ಬಡ ನರಿಯೇ, ಹದ್ದಿಗೆ ನಿನ್ನ ಮಾಂಸ ದೊರೆಯಿತು. ಮೀನು ನೀರಿನಲ್ಲಾಯಿತು. ಎರ ಡನ್ನೂ ಕಳಕೊಂಡ ನಿನ್ನ ಮುಂದಿನ ಆಸೆಯೇನು?''ಎಂದು ಕೇಳಿದಳು.

ನರಿಯು ರೈತನ ಪತ್ನಿಯೂ ಅದೇ ರೀತಿ ನಿರಾಶಳಾಗಿರುವಳೆಂಬು ದನ್ನು ಅರಿತು «ನಿನ್ನ ಬುದ್ಧಿವಂತಿಕೆಯು ನನಗಿಂಥಾ ದ್ವಿಗುಣವಾದುದು. ಪ್ರೇಮಿಯನ್ನೂ, ಗಂಡನನ್ನೂ ಕಳಕೊಂಡು ನಗ್ನಳಾಗಿ ನದೀ ತೀರದಲ್ಲಿ ಕುಳಿತಿರುವ ನಿನ್ನ ಅಸಹಾಯಕತೆಗೆ ನಾನೇನೆನ್ನಲೀ'' ಎಂದು ಹಾಸ್ಯಮಾಡಿತು.

ಈ ರೀತಿ ಮೊಸಳೆಯು ಕತೆ ಹೇಳುತ್ತಿರಲು ನೀರಿನೊಳಗಿಂದ ಮತ್ತೊಂದು ಜಲ ಪ್ರಾಣಿಯು ಹೊರಗೆ ಬಂದು «ನಿನ್ನ ಮನೆಯನ್ನು ಬೇರೊಂದು ದೊಡ್ಡ ಮೊಸಳೆಯು ಆಕ್ರಮಿಸಿದೆ'' ಎಂದಿತು. ಇದನ್ನು ಕೇಳಿ ಮೊಸಳೆಗೆ ವ್ಯಸನ ಹೆಚ್ಚಾಯಿತು. ತನ್ನ ಮನೆಯನ್ನು ಆಕ್ರಮಿಸಿದ ಮೊಸಳೆಯನ್ನು ಹೇಗೆ ಹೊರದೂಡುವದೆಂದು ಆಲೋಚಿಸುತ್ತಾ «ಗೆಳೆಯಾ, ನನ ದುರದೃಷ್ಟವನ್ನು ನೋಡು. ನನ್ನ ಮನೆಯನ್ನು ಬೇರೊಬ್ಬನು ಆಕ್ರ ಮಿಸಿರುವನು. ಗೆಳೆಯನಾದ ನೀನು ಸಿಟ್ಟುಗೊಂಡಿರುವೆ. ಹೆಂಡತಿಯೂ ಸತ್ತುಹೋದಳು. ಅಯ್ಯೋ, ನನಗೆ ಇನ್ನೆಂಥಾ ಕಷ್ಟ ಬಂದಿತೋ ಹೇಳ ಲಾರೆ. ಕಷ್ಟವು ಒಂದಾಗಿ ಬರುವದಿಲ್ಲ. ನಾನು ಅತನೊಡನೆ ಹೋರಾ ಡಲೇ ಬೇಕು. ಮೊದಲು ಮನೆ ಬಿಡುವಂತೆ ಸಮಾಧಾನದಿಂದ ಆತನಿಗೆ ಹೇಳಲೇ? ಆತನಿಗೆ ಲಂಚಕೊಟ್ಟು ಮನೆ ಬಿಡಿಸಲೇ? ಯಾ ಬೇರೆ ಯಾವ ದಾರಿ ಅನುಸರಿಸಲೇ? ಎಂದು ಕೋತಿಯನ್ನು ಕೇಳಲು ಕೋತಿಯು, «ಎಲೈ ವಿಶ್ವಾಸಘಾತುಕನೇ, ನನ್ನನ್ನೇಕೆ ಪುನಃ ಕಾಡುತ್ತಿರುವೆ? ನೀನು ತಿಳಿಗೇಡಿ ನಾನು ನಿನಗೆ ಬುದ್ಧಿವಾದ ಹೇಳಲಾರೆ. ಏಕೆಂದರೆ ಯೋಗ್ಯರಿಗೆ ಮಾತ್ರ ಬುದ್ಧಿವಾದ ಹೇಳಬೇಕು. ಇಲ್ಲದಿದ್ದರೆ ತಿಳಿಗೇಡಿ ಕೋತಿಯು ಗುಬ್ಬ ಚ್ಚಿಯ ಗೂಡು ಮುರಿದಂತಾಗುತ್ತೆ'' ಎಂದು ಹೇಳಲು ಅದು ಹೇಗೆಂದು ಮೊಸಳೆಯು ಕೇಳಿದ ಕಾರಣ ಕೋತಿಯು ಮುಂದಿನ ವಾರ ಚಪಲ ಬು ದ್ಧಿಯ ಗುಬ್ಬಚ್ಚಿಯ ಕತೆ ಹೇಳುವದು.

"ಸಂಘದಂತೆ ಬುದ್ಧಿ."

ಒಬ್ಬ ಬೇಟೆಗಾರನು ಒಂದು ಗಿಣಿಯನ್ನು ಸಾಕಿಕೊಂಡಿದ್ದನು. ಅದು ಎರಡು ಮರಿಗಳನ್ನು ಮಾಡಿತು. ಒಂದು ಮರಿಯು ಪಂಜರದಿಂದ ತಪ್ಪಿಸಿಕೊಂಡು ಹಾರಿಹೋಯಿತು. ಕಾಡಿನಲ್ಲಿ ಅದು ಒಬ್ಬ ಸನ್ಯಾಸಿಗೆ ದೊರೆತು ಆತನು ಅದನ್ನು ಮುದ್ದಾಗಿ ಸಾಕಿ ಮಾತು ಕಲಿಸಿದನು. ಬೇಟೆ ನಲ್ಲಿದ್ದ ಮರಿಯು ಅಲ್ಲೇ ಬೆಳೆದು ಅದೂ ಮಾತು ಕಲಿಯಿತು.

ಒಂದು ದಿನ ಒಬ್ಬ ಅರಸನು ಕಾಡಿಗೆ ಬೇಟೆಗೆ ಬಂದವನು ದಾರಿ ತಪ್ಪಿ ಈ ಬೇಟೆಗಾರನ ಮನೆಗೆ ಬಂದನು. ಆತನನ್ನು ಕಂಡ ಪಂಜರದಲ್ಲಿದ್ದ ಗಿಣಿಯು '«ಆತನನ್ನು ಹಿಡಿಯಿರಿ, ಕೊಲ್ಲಿರಿ'' ಎಂದು ಕೂಗಿಕೊಂಡಿತು. ರಾಜನು ಗಾಬರಿಯಿಂದ ಬೇರೆ ಕಡೆ ಕುದುರೆಯನ್ನು ಓಡಿಸಿದನು. ಹಾಗೆ ಹೋಗುತ್ತಿರಲು ದಾರಿಯಲ್ಲಿ ಸನ್ಯಾಸಿಯ ಮನೆಯನ್ನು ಕಂಡು ಅಲ್ಲಿಗೆ ಹೋದನು. ಅಲ್ಲಿದ್ದ ಗಿಳಿಯು, «ಬನ್ನಿರಿ, ನಮಸ್ಕಾರ. ಕುಳಿತುಕೊಳ್ಳಿರಿ. ನಂಟರು ಬಂದಿದ್ದಾರೆ. ನೀರು ತನ್ನಿರಿ'' ಎಂದು ಹೇಳಿತು.

ರಾಜನಿಗೆ ಆಶ್ಚರ್ಯವಾಯಿತು. ಒಂದೇ ತರದ ಎರಡು ಪಕ್ಷಿಗಳು ಈ ರೀತಿ ಮಾತಾಡಲು ಕಾರಣವೇನೆಂದು ಕೇಳಲು ಸನ್ಯಾಸಿಯ ಆಶ್ರಮ ದಲ್ಲಿದ್ದ ಪಕ್ಷಿಯು ಹೇಳಿತು «ರಾಜಾ, ಬೇಟೆಗಾರನಲ್ಲಿ ನೀನು ಕಂಡ ಗಿಳಿಯು ನನ್ನ ಸಹೋದರನು. ಆತನು ಬೇಟೆಗಾರನಲ್ಲಿರುವದರಿಂದ ಆತನ ಸ್ವಭಾವವನ್ನೇ ಕಲಿತಿದೆ. ನಾನು ಸನ್ಯಾಸಿಯೊಡನಿರುವೆನು. ಆತನ ದ್ದೂ ಸ್ವಭಾವವೇ ನನಗೆ ಬಂದಿದೆ. ಆದ್ದರಿಂದ «ನಿನ್ನ ಗೆಳೆಯರನು ಹೇಳು ನೀನು ಯಾರೆಂದು ಹೇಳುವೆ'' ಎಂದು ಹೇಳುವ ನಾಣ್ಣುಡಿಯಾಗಿದೆ ಎಂದಿತು.

ರಾಜನು ಆಲೋಚಿಸಿದನು. 'ಹೌದು, ನಾವು ಯಾರೊಡನೆ ಜೀವಿ ಸುವೆವೋ ಅವರ ಸ್ವಭಾವವೇ ನಮಗೆ ಬರುತ್ತದೆ. ಆದ್ದರಿಂದಲೇ «ಸಂ ಘದಂತೆ ಬುದ್ಧಿ; ತಿಂಡಿಯಂತೆ ಲದ್ದಿ'' ಎನ್ನುವದಾಗಿದೆ ಎಂದು ಕೊಂಡನು. ನೋಡಿದಿರಾ, ಕೆಟ್ಟವರ ಗೆಳೆತನ ಮಾಡಿದರೆ ಕೆಟ್ಟವರಾಗುವೆವು. ಒಳ್ಳೆಯ ವರ ಗೆಳೆತನ ಮಾಡಿದರೆ ಒಳ್ಳೆಯವರಾಗುತ್ತೇವೆ.

— ಕುಮಾರಿ ಇಂದಿರಾ, ೧೫ ವಯಸ್ಸು.

ಗ್ರಾಮ ತರಬೇತು ಶಾಲೆ.

ಜಪಾನು ತನ್ನ ಗುಡಿ ಕೈಗಾರಿಕೆಗಳನ್ನು ಶಾಸ್ತ್ರೀಯ ರೀತಿಯಲ್ಲಿ ನಡೆಸಲು ಶಕ್ತವಾಗಿದ್ದರೆ ಅದಕ್ಕೆ ಪ್ರಾಮುಖ್ಯ ಕಾರಣ ಅಲ್ಲಿಯ ನುರಿತ ಕೆಲಸಗಾರರು. ಪ್ರತಿ ವಿಧದ ಕೈಗಾರಿಕೆಗೂ ಬೇಕಾದ ನುರಿತ ಕೆಲಸಗಾರರು ದೊರೆಯುವದರಿಂದಲೂ, ಕೆಲಸಗಾರರು ಅವರವರ ಮನೆಗಳಲ್ಲಿಯೇ ಇದ್ದು ಕೈಗಾರಿಕೆಯನ್ನು ಕೈಕೊಳ್ಳಬಹುದಾದುದರಿಂದಲೂ ಕೆಲಸಗಾರರು ಬಹು ಆಸಕ್ತಿಯಿಂದ ದುಡಿಯುತ್ತಾರೆ. ಒಂದು ಕೈಗಾರಿಕೆಯನ್ನು ಸ್ಥಾಪಿಸುವಾಗ ಆ ಕೈಗಾರಿಕೆಗೆ ಬೇಕಾದ ಕಚ್ಚಾಮಾಲು ಎಲ್ಲಿ ಸುಲಭವಾಗಿ ಹೆಚ್ಚು ಖರ್ಚಿಲ್ಲದೆ ದೊರೆಯುತ್ತದೆಂದು ನೋಡುವದು ಲಾಭದಾಯಕವಾದರೂ ಕೈಗಾರಿಕೆಯ ಜಯಾಪಜಯಗಳು ನುರಿತ ಕೆಲಸಗಾರರನ್ನು ಹೊಂದಿಕೊಂಡಿವೆ. ನುರಿತ ಕೆಲಸಗಾರರು ದೊರೆಯಬೇಕಾದರೆ ಆ ಬಗ್ಗೆ ಜನತೆಗೆ ಕೊಡಲ್ಪಡುವ ತರಬೇತೇ ಪ್ರಾಮುಖ್ಯವಾಗಿದೆ. ಜಪಾನಿನ ಪ್ರತಿ ಗ್ರಾಮಗಳಲ್ಲಿ ಈ ರೀತಿಯ ತರಬೇತು ಶಾಲೆಗಳಿದ್ದು ಸಾವಿರಾರು ಜನರು ಪ್ರತಿ ವರ್ಷ ತರಬೇತು ಪಡೆಯುತ್ತಾರೆ. ಈ ನುರಿತ ಕೆಲಸಗಾರರು ಪ್ರತಿ ಗ್ರಾಮದಲ್ಲಿ ದೊರೆಯುವದರಿಂದ ಬೇರೆ ಕೇಂದ್ರೀಕೃತ ಕೈಗಾರಿಕೆಗಳ ದೇಶಗಳಂತೆ ಕೇವಲ ನಗರಗಳಲ್ಲಿ ಇವರು ಗುಂಪುಕೂಡುವದಿಲ್ಲ. ಪ್ರತಿಯೊಬ್ಬನಿಗೂ ಅಲ್ಪ ವೆಚ್ಚದಲ್ಲಿ ಆತನ ಗ್ರಾಮದಲ್ಲಿಯೇ ತರಬೇತು ದೊರೆಯುತ್ತದೆ. ಗಂಡಸರು. ಹೆಂಗಸರು, ಹುಡುಗರು, ಹುಡುಗಿಯರು ಜೊತೆಯಾಗಿ ಜೊತೆಯಲ್ಲೇ ತರಬೇತಾಗುತ್ತಾರೆ, ಆಡುತ್ತಾರೆ, ಕೆಲಸ ಮಾಡುತ್ತಾರೆ.

ಕೈಗಾರಿಕಾ ವಿದ್ಯೆ.

ಜಪಾನಿನ ಕೈಗಾರಿಕಾ ಅಭಿವೃದ್ಧಿಗೆ ಮೂಲಕಾರಣವು ಜಪಾನಿನ ಕೈಗಾರಿಕಾ ಮನೋವೃತ್ತಿಯ ವಿದ್ಯೆ. ವಿಶ್ವವಿದ್ಯಾಲಯಗಳಲ್ಲಿ, ಹೈಸ್ಕೂಲುಗಳಲ್ಲಿ ಪೋಲಿಟೆಕ್ನಿಕ್ ಶಾಲೆಗಳಲ್ಲಿ, ಕೈಗಾರಿಕಾ ಮುನ್ನಡೆಯ ಶಾಲೆಗಳಲ್ಲಿ ಕೈಗಾರಿಕೆಗಳಿಗೆ ಸಂಬಂಧಿಸಿದ ವಿದ್ಯೆ ಕಲಿಸಲ್ಪಡುತ್ತದೆ. ಅಮೇರಿಕಾ ಮತ್ತು ಯುದ್ಧಕ್ಕೆ ಮೊದಲಿನ ಜರ್ಮನಿಯನ್ನು ಬಿಟ್ಟರೆ ಜಪಾನು ತನ್ನ ಶಾಲೆ, ವಿಶ್ವವಿದ್ಯಾಲಯಗಳಲ್ಲಿ ಕೊಡುವ ಕೈಗಾರಿಕಾ ವಿದ್ಯೆ ಮತ್ತು ಅನುಕೂಲತೆಗಳು ಜಗತ್ತಿನಲ್ಲಿ ಆದರ್ಶವೆನಿಸಿವೆ. ಕೈಗಾರಿಕಾ ಕಾಲೇಜುಗಳಿಗೆ ಸೇರಬೇಕಾದರೆ ಅದಕ್ಕೆ ಮೊದಲು ಆರು ವರ್ಷ ಪ್ರಾಥಮಿಕ ಶಾಲೆಗಳಲ್ಲೂ ನಾಲ್ಕು ವರ್ಷ ಮಿಡ್ಲ್ ಶಾಲೆಗಳಲ್ಲೂ, ಮೂರು ವರ್ಷ ಹೈಸ್ಕೂಲುಗಳಲ್ಲೂ ಓದಿರಬೇಕು. ವಿದ್ಯಾರ್ಥಿಗಳು ತಮ್ಮ ೧೮-೧೯ನೇ ವಯಸಿನಲ್ಲಿ ಕಾಲೇಜುಗಳಿಗೆ ಬಂದು ಮೂರು ವರ್ಷಗಳಲ್ಲಿ ಕಾಲೇಜು ವಿದ್ಯಾಭ್ಯಾಸವನ್ನು ಮುಗಿಸುತ್ತಾರೆ. ಜಪಾನಿನ ೨೦೦ ಪೋಲಿಟೆಕ್ನಿಕ್ ಶಾಲೆಗಳೂ, ೨೪ ಔದ್ಯೋಗಿಕ ಟೆಕ್ನಾಲಜಿಯ ಹೈಸ್ಕೂಲುಗಳೂ ಪ್ರತಿ ವರ್ಷ ಸಾವಿರಾರು ತರಬೇತಾದ ಕೆಲಸಗಾರರನ್ನು ತಯಾರಿಸುತ್ತವೆ. ಪ್ರತಿ ವರ್ಷ ಹೈಸ್ಕೂಲುಗಳಿಂದ ಹತ್ತು ಸಾವಿರ ನುರಿತ ಕೆಲಸಗಾರರು ಹೊರಬರುತ್ತಾರೆ. ಈ ಶಾಲೆಗಳೆಲ್ಲ ಪ್ರಾಂತೀಯ ಸರಕಾರಗಳಿಂದ ನಡೆಸಲ್ಪಡುತ್ತವೆ. ಮೆಕಾನಿಕಲ್ ಇಂಜನಿಯರಿಂಗ್, ಕೆಮಿಕಲ್, ಆರ್ಕಿಟೆಕ್ಚರಲ್ ತರಬೇತುಗಳನ್ನು ಕೆಲವು ಶಾಲೆಗಳು ಕೊಟ್ಟರೆ ಟೆಕ್ಸ್‌ಟೈಲ್, ರೇಷಿಮೆ, ಮಣ್ಣು ಕೈಗಾರಿಕೆ ಮೊದಲಾದ ತರಬೇತನ್ನು ಕೆಲವು ಶಾಲೆಗಳು ಕೊಡುತ್ತವೆ. ಕೈಯಲ್ಲಿ ಕಾಗದ ತಯಾರಿಸುವ, ಗಡಿಯಾರ ತಯಾರಿಸುವ, ಗಣಿಗಳಿಗೆ ಸಂಬಂಧಿಸಿದ ಕೆಲಸ ಕಲಿಸುವ, ವಿದ್ಯುಚ್ಛಕ್ತಿ, ಛಾಯಾಗ್ರಹಣ ಮೊದಲಾದುವನ್ನು ಕಲಿಸಲು ವಿಶೇಷ ಶಾಲೆಗಳಿವೆ. ಕೆಲವು ಶಾಲೆಗಳು ಬೆಳಗಿನ ಸಮಯದಲ್ಲೂ ಕೆಲವು ಸಾಯಂಕಾಲವೂ ನಡೆಯುತ್ತವೆ. ವರ್ಷಕ್ಕೆ ೪೦,೦೦೦ ದಂತೆ ಜನರು ಈ ತರಬೇತುಗಳನ್ನು ಪಡೆಯುತ್ತಾರೆ. ಕೈಗಾರಿಕಾ ಮುನ್ನಡೆಯ ಶಾಲೆಗಳು ಪ್ರಾಥಮಿಕ ಶಾಲೆಗಳಲ್ಲಿ ಓದಿ ಕೆಲಸ ತೆಗೆದುಕೊಳ್ಳಲು ಇಚ್ಛಿಸುವವರಿಗೆ ತರಬೇತು ಕೊಡುವವು.

ಜಪಾನಿನಿಂದ ಕಲಿಯಬೇಕಾದ ಪಾಠ. [೯]

ಕೈಗಾರಿಕಾ ಕೆಲಸಗಾರರ ತರಬೇತು ಕ್ರಮ.

— ಮೂಲ ಲೇಖಕ—ಶ್ರೀ ಚಮನ್‌ಲಾಲ್ —

ಸಾಮೂಹಿಕ ಕೈಗಾರಿಕಾ ವಿದ್ಯೆ

ಸಾಮೂಹಿಕ ಔದ್ಯೋಗಿಕ ವಿದ್ಯೆಯು ಜಪಾನಿನಲ್ಲಿ ಯಶಸ್ವಿರೀತಿಯಲ್ಲಿ ಕೊಡಲ್ಪಡುತ್ತದೆ. ಇದಕ್ಕಾಗಿ ವಿಜ್ಞಾನ, ವಾಣಿಜ್ಯ, ವಸ್ತುಸಂಗ್ರಹಾಲಯಗಳೂ, ಚಲನಚಿತ್ರಗಳೂ, ವಾಚನಾಲಯಗಳೂ, ರೇಡಿಯೋಗಳೂ ಕೈಗಾರಿಕಾ ಪ್ರಕಟಣೆಗಳೂ ತುಂಬಾ ಕೆಲಸ ಮಾಡುತ್ತಿವೆ. ಪ್ರತಿ ವಿಧದ ಕೈಗಾರಿಕೆಗೂ ಪರಿಶೋಧನಾ ಶಾಖೆಗಳಿವೆ. ಆ ಶಾಖೆಗಳು ಶಾಸ್ತ್ರೀಯ ಪರಿಶೀಲನೆ ಮಾಡಿ ತಮ್ಮ ಪತ್ರಿಕೆಗಳಲ್ಲಿ ಉಪಯುಕ್ತ ಪ್ರಕಟಣೆಗಳನ್ನು ಪ್ರಕಟಿಸುತ್ತವೆ. ಈ ಪ್ರಕಟಣೆಗಳು ಪ್ರಾಮುಖ್ಯವಾಗಿ ಚಿತ್ರಗಳಿಂದಲೇ ವಿಷದವಾಗಿದ್ದು ಹೆಚ್ಚು ವಿದ್ಯಾವಂತನಲ್ಲದ ಗ್ರಾಮ ಕೆಲಸಗಾರನೂ ಕೂಡ ಅದನ್ನು ಅರ್ಥ ಮಾಡಿಕೊಂಡು ತನ್ನ ಕೈಗಾರಿಕೆಯಲ್ಲಿ ಮಾರ್ಪಾಡು ಹಾಗೂ ಸುಧಾರಣೆಯನ್ನು ತಂದುಕೊಳ್ಳಲು ಸಹಾಯಕವಾಗಿರುತ್ತವೆ. ಜಪಾನಿನ ವಿದ್ಯೆಯ ಮೂಲತತ್ವವೆಂದರೆ ಶಾರೀರಿಕ ತರಬೇತು ಮತ್ತು ಔದ್ಯೋಗಿಕ ಜ್ಞಾನ.

ಔದ್ಯೋಗಿಕ ಕುಶಲತೆ

ಈ ರೀತಿಯ ವಿದ್ಯೆಯಿಂದಾಗಿ ಆಶ್ಚರ್ಯಕಾರಕ ಬದಲಾವಣೆ ಜಪಾನಿನಲ್ಲಾಗಿದೆ. ಟೋಕಿಯೋ ನಗರದ ಹತ್ತಿರದಲ್ಲಿ ಪತ್ರಿಕೋದ್ಯೋಗಿ ಮಹಿಳೆಯೊಬ್ಬಳು ಸ್ಥಾಪಿಸಿದ ಶಾಲೆಯೊಂದನ್ನು ನಾನು ನೋಡಿದೆ. ಅಲ್ಲಿ ಹದಿನಾಲ್ಕು ವಯಸ್ಸಿನ ಬಾಲಕರಿಗೆ ಸೈಕಲ್ ತಯಾರಿಸುವುದನ್ನು ಕಲಿಸಲಾಗುತಿತ್ತು. ಅದೇ ಶಾಲೆಯಲ್ಲಿ ಶಾಲಾ ಡೆಸ್ಕುಗಳು, ಕುರ್ಚಿಗಳು, ವಾಚುಗಳು ಮೊದಲಾದುವುಗಳು ತಯಾರಾಗುತಿತ್ತು. ಅಷ್ಟು ಚಿಕ್ಕ ವಯಸ್ಸಿನ ಮಕ್ಕಳು ಗಡಿಯಾರ ತಯಾರಿಸುತ್ತಿರುವದನ್ನು ಕಂಡು ನನಗೆ ಆಶ್ಚರ್ಯವಾಯಿತು.

ಜಪಾನಿನ ಬಾಲಕ ಬಾಲಕಿಯರಿಗೆ ಆಶ್ಚರ್ಯಕಾರಕ ಕೈಗಾರಿಕಾ ಜ್ಞಾನವಿದೆ. ಅದೇ ರೀತಿ ನಮ್ಮ ದೇಶದ ಕೆಲಸಗಾರರೂ ಕೂಡ ಚತುರರೆಂಬುದನ್ನು ನಾನು ಬಲ್ಲೆ. ಅವರು ಕಾಶ್ಮೀರ, ಡೆಲ್ಲಿ, ಜಯಪುರ, ಮೈಸೂರುಗಳಲ್ಲಿರಲೀ ಯಾ ಡಕ್ಕಾ ಹೈದರಾಬಾದುಗಳಲ್ಲಿರಲಿ ಕುಶಲತೆಯೇನೋ ಅವರಲ್ಲಿದೆ. ಆದರೆ ಅದಕ್ಕೆ ತಕ್ಕುದಾದ ತರಬೇತಿನ ವ್ಯವಸ್ಥೆ ನಮ್ಮಲ್ಲಿಲ್ಲ. ನಾನು ಟೋಕಿಯೋದ ಕಲಾಶಾಲೆಯನ್ನು ಸಂದರ್ಶಿಸಿದೆ. ನಾನು ಹೋದ ದಿನ ಫೀಜು ಹೆಚ್ಚಿಸಿದುದಕ್ಕಾಗಿ ಆ ಶಾಲೆಯ ವಿದ್ಯಾರ್ಥಿಗಳು ಮುಷ್ಕರ ಹೂಡಿದ್ದರು. ಆದರೂ ಅಲ್ಲಿ ವಿದ್ಯಾರ್ಥಿಗಳಿಗೆ ಏನು ಕಲಿಸುತ್ತಾರೆಂಬುದನ್ನು ತಿಳಿಯಲು ನನಗೆ ಕಷ್ಟವಾಗಲಿಲ್ಲ. ಆ ಶಾಲೆಯಲ್ಲಿ ಜಪಾನಿ ಪೈಂಟಿಂಗ್ ಕಲಿಯುವ ೮೩ ವಿದ್ಯಾರ್ಥಿಗಳು, ಆಯಿಲ್ ಪೆಯಿಂಟಿಂಗ್ ಕಲಿಯುವ ೬೨, ಕೆತ್ತನೆ ಕೆಲಸ ಕಲಿಯುವ ೪೯, ಕಲಾವಿಭಾಗದಲ್ಲಿ ೧೯೩ ವಿದ್ಯಾರ್ಥಿಗಳು, ಕಟ್ಟಡ ವಿಭಾಗದಲ್ಲಿ ೬೧ ವಿದ್ಯಾರ್ಥಿಗಳು ತರಬೇತು ಪಡೆಯುವ ೨೨ ಅಧ್ಯಾಪಕರೂ ಇದ್ದರು. ಇವರಿಗೆ ಒಟ್ಟಾಗಿ ೨೫ ಪ್ರೊಫೆಸರುಗಳೂ ಅಧ್ಯಾಪಕರೂ ಇದ್ದರು. ಇದರಿಂದ ಅಲ್ಲಿಯ ತರಬೇತು ಶಾಲೆ ಎಷ್ಟರ ಮಟ್ಟಿಗೆ ದಕ್ಷರೀತಿಯಿಂದ ನಡೆಯುತ್ತಿದೆಯೆಂಬುದನ್ನು ತಿಳಿಯಬಹುದು.

ಕೈಯಲ್ಲಿ ತಯಾರಾದ ಯಂತ್ರಗಳು

ಈ ರೀತಿಯ ತರಬೇತನ್ನು ಪಡೆದ ಜಪಾನಿನ ಕೆಲಸಗಾರರು ಕೈಗಾರಿಕೆಯ ಪ್ರತಿ ಅಂಶವನ್ನು ಅರಿತಿದ್ದು ತಾವೇ ತಮ್ಮ ಕುಶಲತೆಯಿಂದ ಸ್ವತಹ ಹೊಸ ಯಂತ್ರಗಳನ್ನು ತಯಾರಿಸುತ್ತಾರೆ. ಯಾವ ಕೈಗಾರಿಕಾ ಕೇಂದ್ರಕ್ಕೆ ಹೋಗಿ "ಈ ಯಂತ್ರವು ಎಲ್ಲಿ ದೊರೆಯುತ್ತದೆ" ಎಂದು ಕೇಳಿದರೆ "ಅದನ್ನು ನಾವೇ ಇಲ್ಲಿ ಸ್ವತಹ ತಯಾರಿಸಿದೆವು" ಎಂಬ ಉತ್ತರವೇ ಹೆಚ್ಚು. ಈ ರೀತಿ ಅವರೇ ತಯಾರಿಸಿದ ಯಂತ್ರಗಳ ಬೆಲೆಯು ಬಹು ಮಟ್ಟಿಗೆ ಕಡಿಮೆ. ಆರು ಸ್ಪಿಂಡಲ್‌ಗಳ ಆಧುನಿಕ ನೆಯಿಗೆ ಯಂತ್ರದ ಬೆಲೆ ಅಲ್ಲಿ ಕೇವಲ ರೂ. ೩೦ ಮಾತ್ರ. ಹಗ್ಗ ಹಾಸೆ, ಗುಂಡಿ, ಕಂಬಳಿ, ಗ್ಲಾಸು, ನೆಯಿಗೆ, ಬಿದಿರು ಕೆಲಸ, ಮರ ಕೆಲಸ, ಮೊದಲಾದುವಕ್ಕೆ ಸಂಬಂಧಿಸಿದ ಯಂತ್ರಗಳು ಬಹು ಕಡಿಮೆ ಬೆಲೆಯಲ್ಲಿ ದೊರೆಯುವವಲ್ಲದೆ ಅಂಥಾವನ್ನು ಹಿಂದೂದೇಶದಲ್ಲಿ ಸ್ಥಾಪಿಸುವದು ಬಹು ಸುಲಭದ ಕೆಲಸವಾಗಿದೆ. ಜಪಾನಿನ ವಾಣಿಜ್ಯ ಬೋರ್ಡಿನ ಪ್ರಸಿಡೆಂಟರು ತಮ್ಮ ನುರಿತ ಕೆಲಸಗಾರರನ್ನೂ, ಯಂತ್ರಗಳನ್ನೂ ಭಾರತದ ಅವಶ್ಯಕತೆಗೆ ಒದಗಿಸಿ ಕೊಡಲು ಸದಾ ತಯಾರಿರುವದಾಗಿ ನನ್ನೊಡನೆ ಹೇಳಿದರು.

ಬುದ್ಧಿವಂತನೊಬ್ಬನ ಕಥೆ.

೧೯೦೪ ರಲ್ಲಿ ಬ್ರಿಟಿಷರಿಂದ ತಯಾರಾದ ಗೇಸ್ ಇಂಜಿನಿನ ಗೇರು ಮುರಿದು ಹೋಯಿತು. ಜಪಾನಿನಲ್ಲಿ ಹೊಸದೊಂದನ್ನು ಮಾಡುವಂತಿರಲಿಲ್ಲ. ಕೆಲಸವು ಅತೀ ತುರಿತದಾಗಿತ್ತು. ಒಬ್ಬ ಗಿಡ್ಡ ಕೆಲಸಗಾರನ್ನು ತನ್ನ ಹಳೆ ಮಾದರಿಯ ಸಾಹಿತ್ಯಗಳಿಂದ ಬ್ರಿಟಿಷರ ಆಧುನಿಕ ಯಂತ್ರದಿಂದ ತಯಾರಾದ ಸ್ಪಿರಲ್ ಗೇರನ್ನು ತಯಾರಿಸತೊಡಗಿದನು. ಕೆಲವೇ ಸಮಯದಲ್ಲಿ ಆತನು ತನ್ನ ಕೆಲಸದಲ್ಲಿ ಜಯ ಪಡೆದನು. ಇಂದೂ ಕೂಡ ಆತನು ಸೌಖ್ಯನಾಗಿ ಜಪಾನಿನ ಅತೀ ದೊಡ್ಡ, ಹಾಗೂ ಜಗತ್ತಿನ ಅತೀ ಸುಧಾರಿಸಿದ ಗೇರು ತಯಾರಿಸುವ ತನ್ನ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದಾನೆ. ಆತನ ಮೂರು ಸಹೋದರರೂ ಆತನ ಜೊತೆಯಲ್ಲಿ ಕೆಲಸ ಮಾಡುತ್ತಾರೆ. ಅವರ ಕಾರ್ಖಾನೆಯ ಬಂಡವಾಳ ೩,೦೦೦,೦೦೦, ಯನ್‌ಗಳಿದ್ದು ಅವರು ೨೬೦ ಜನ ಕೆಲಸಗಾರರನ್ನು ಕೆಲಸಕ್ಕಿಟ್ಟುಕೊಂಡಿದ್ದಾರೆ. ಆದರೂ ಅದರ ಮಾಲೀಕನಾದ ಕೆಲಸಗಾರನು ಇಂದೂ ನೀಲವರ್ಣದ ಕೆಲಸದ ಬಟ್ಟೆ ಧರಿಸಿ ತನ್ನ ಕಾರ್ಖಾನೆಯಲ್ಲಿ ದುಡಿಯುತ್ತಿರುತ್ತಾನೆ. ಕೆಲಸವೆಂದರೆ ಜಪಾನಿನ ಕೆಲಸಗಾರರಿಗೆ ಪ್ರಾರ್ಥನೆಯಂತೆ. ಅದೇ ಅವರ ಜೀವನದ ಮುಖ್ಯ ಸಾಧನ. ಅದರಲ್ಲೇ ಅವರಿಗೆ ಆನಂದ.

ಆಯುಧಕ್ಕೆ ಬದಲು ಹುಡುಗಿಯರು

ಕೆರೆನ್ ದಂಗೆಗಾರರು ಹೆಚ್ಚೆಚ್ಚು ಶಸ್ತ್ರಗಳನ್ನು ಸಂಗ್ರಹಿಸಲು ಒಂದು ಹೊಸ ಹಂಚಿಕೆ ಹುಡುಕಿರುವರು. ಬರ್ಮ ಆಗ್ನೇಯ ಭಾಗದ ಹಳ್ಳಿಗಳ ಹುಡುಗಿಯರನ್ನು ಬಲಾತ್ಕಾರದಿಂದ ಹಿಡಿದು ರಾಷ್ಟ್ರೀಯ ಚೀನೀ ಗೊರಿಲ್ಲಾ ಸೈನಿಕರಿಗೆ ಅವರನ್ನು ಕೊಟ್ಟು ಪ್ರತಿಫಲವಾಗಿ ಯುದ್ಧೋಪಕರಣಗಳನ್ನು ಅವರು ಗೊರಿಲ್ಲಾ ಯೋಧರಿಂದಲೇ ಪಡೆಯುತ್ತಿರುವರೆಂದು ರಣಕ್ಷೇತ್ರದಿಂದ ಬಂದ ವಾರ್ತೆಗಳ ಮೇಲಿಂದ ತಿಳಿದು ಬಂದಿದೆ. ಚೀನಿಯರಲ್ಲಿ ಹುಡುಗಿಯರಿಗಾಗಿ ಹೆಚ್ಚು ಲಾಲಸೆಯಿಂದಿದ್ದು, ಈ ವ್ಯಾಪಾರದಲ್ಲಿ ತುಂಬಾ ಉತ್ಸುಕತೆ ಪ್ರದರ್ಶಿಸುತ್ತಿರುವುದು ಹೆಚ್ಚೆಚ್ಚು ಮಂದಿ ಹುಡುಗಿಯರನ್ನು ಅಪಹರಿಸುವಂತೆ ಕೆರೆನರಿಗೆ ಪ್ರೋತ್ಸಾಹ ಕೊಟ್ಟಿರುತ್ತದೆ.

"ನಿಮ್ಮ ಕೈ ಬರಹದಿಂದ ನಿಮ್ಮನ್ನು ಸೂಕ್ಷ್ಮವಾಗಿ ಅರಿತುಕೊಳ್ಳಿ."

ಮೂಲ ಲೇಖಕಿ:—ಶ್ರೀಮತಿ ಯಮ್ನಾ ಮಾಯೆ ಸ್ಟೈಕರೆ.

[ರೀಡರ್ಸ್ ಡೈಜೆಸ್ಟಿನಿಂದ]

ಕನ್ನಡಿಯು ಹೇಗೆ ನಿಮ್ಮ ಅಂದಚಂದದ ಮುಖವನ್ನು ಪ್ರತಿಬಿಂಬಿಸುವುದೋ ಹಾಗೆಯೇ ನಿಮ್ಮ ಬರವಣಿಗೆಯು ನಿಮ್ಮ ಅಂತರಾಳವನ್ನು ಬಿಚ್ಚಿ ಹೇಳುತ್ತದೆಂದರೆ ಆಶ್ಚರ್ಯಪಡಬೇಕಾದುದಿಲ್ಲ. ಚಿಕ್ಕಂದಿನಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಬರೆದ 'ಕಾಪಿ'ಗಳನ್ನೊಮ್ಮೆ ನೋಡಿ, ಹೈಸ್ಕೂಲಿನಲ್ಲಿ ವ್ಯಾಸಂಗ ಮಾಡುತಿದ್ದಾಗ 'ಬರೆದ ಪತ್ರಗಳನ್ನೊಮ್ಮೆ ವಿಮರ್ಶಿಸಿರಿ. ಕಡೆಗೆ ನಿಮ್ಮ ಈಗಿನ ಬರವಣಿಗೆಯನ್ನೊಮ್ಮೆ ಪರೀಕ್ಷಿಸಿರಿ. ದಿನಗಳೆದಂತೆ ಅವುಗಳು ಹೇಗೆ ಬೆಳೆದು ಮಾರ್ಪಾಡಾಗಿವೆಯೋ ಹಾಗೆಯೇ ತಮ್ಮ ಅಂತರಾಳದ ಬೆಳವಣಿಗೆಯಾಗಿದೆ.

ಬರವಣಿಗೆಯು ಮೆದುಳಿನ ಆಡಳಿತಕ್ಕೊಳಪಟ್ಟಿದೆ. ಅದರ ಅಪ್ಪಣೆಗನುಸಾರವಾಗಿ ಕೈ ಬೆರಳುಗಳು ವ್ಯಕ್ತಿಯ ದೃಢತೆಯೂ ನಿಸ್ತೀರ್ಣತೆಯಂತೆ ಕೆಲಸ ಮಾಡುತ್ತವೆ. ನಾವು ಬರೆಯುವಾಗ ಸುಮಾರು ಐದುನೂರು ಚಿಕ್ಕ, ದೊಡ್ಡ ಸ್ನಾಯುಗಳು ಕೆಲಸ ಮಾಡುತ್ತವೆ. ಬರವಣಿಗೆಯಲ್ಲಿ ಬರುವ ನಿಶ್ಚಿತ ಆಕೃತಿ, ಸ್ಥಿರವಾದ ರೀತಿ, ಗಡಿ, ಅಂಕುಡೊಂಕುಗಳ ಮಾದರಿಯನ್ನು ಪರೀಕ್ಷಿಸಿ ವ್ಯಕ್ತಿಯು ಇಂತಹ ವರ್ಗದವನೆಂದು ಹೇಳಲು ಸಾಧ್ಯವಿದೆ.

ಗೆರೆಯಿಲ್ಲದ ಕಾಗದದಲ್ಲಿ ಮೂವತ್ತು ಶಬ್ದಗಳಿರುವ ಒಂದು ವಾಕ್ಯವನ್ನು ಬರೆಯಿರಿ. ಲೇಖನಿ ಮತ್ತು ಶಾಯಿಯನ್ನುಪಯೋಗಿಸಿರಿ. ಈ ಕೆಳಗಿನ ಪಂಗಡಗಳಲ್ಲಿ ತಮ್ಮದನ್ನು ವಿಂಗಡಿಸಿ, ತಮ್ಮನ್ನರಿತುಕೊಳ್ಳಿರಿ.

೧. ನಿಮ್ಮ ಅಕ್ಷರಗಳು ದುಂಡಗಿದ್ದು, ಮುತ್ತಿನ ಸರದಂತೆ ಇದ್ದರೆ, ನಿಮ್ಮ ಸುಖಪು ಹೃದಯ, ಬಿಚ್ಚು ಮನಸ್ಸಿನಲ್ಲಡಗಿದ ಒಳ್ಳೆಯ ಗುಣ, ಮತ್ತು ಯಾವುದೇ ಕೆಲಸದಲ್ಲಿರುವ ಶ್ರದ್ಧೆಯನ್ನು ತೋರಿಸುತ್ತದೆ. ಆದರೆ ಅಂದಿನ ಕೆಲಸವನ್ನು ಅಂದೇ ಮಾಡದೆ, ನಾಳೆಯಾದರೂ ಚಿಂತೆಯಿಲ್ಲ ಎನ್ನುವ ಸಮಾಧಾನಿಗಳ ವರ್ಗಕ್ಕೆ ಸೇರಿದವರು ತಾವು.

೨. ನಿಮ್ಮ ಅಕ್ಷರಗಳು ಪೊನಚು ಮೊನಚಾಗಿದ್ದರೆ, ಅದು ತಮ್ಮ ಚುರುಕು ಸ್ವಭಾವ, ಕೆಲಸ ಮಾಡಬೇಕೆಂಬ ಕಾತುರತೆ, ನಿಮ್ಮಲ್ಲಿರುವ ಆತ್ಮಭರವಸೆಯನ್ನು ತೋರಿಸುತ್ತದೆ. ನಿಮ್ಮನ್ನು ಮಂದೆ ಸ್ವಭಾವದವರು ಬೇಗನೆ ಅರಿತುಕೊಳ್ಳಲಾರರು. ನೀವು ಅನಕ್ಕಾಗಿ ಸಿಡಿಮಿಡಿಗೊಂಡು ಗುಡುಗಿಕೊಳ್ಳುವ ಮುಂಗೋಪಿಗಳೆಂದೆನೂ ಸಲ್ಲುವುದು.

೩. ನಿಮ್ಮ ಬರವಣಿಗೆಯು ಸಾಮಾನ್ಯ ನಿಶ್ಚಿತ ಲಿಪಿಗಿಂತ ದೊಡ್ಡದಿದ್ದರೆ ತಾವು ಸ್ಫೂರ್ತಿದಾಯಕ ಮಾತುಗಾರರು, "Jack of all trades but master of none" ಎಂದಂತೆ ಎಲ್ಲಾ ವಿಷಯದಲ್ಲಿಯೂ ಆಸಕ್ತಿಯಿದ್ದು ಅಲ್ಪ ಸ್ವಲ್ಪ ಅರಿತಿದ್ದರೂ, ಯಾವ ವಿಷಯದಲ್ಲೂ ನುರಿತವರಲ್ಲ. ಜತೆಗೆ ದಂಭಾಚಾರದವರೆಂದರೆ ತಾವು ಸಿಟ್ಟುಗೊಳ್ಳಲಿಕ್ಕಿಲ್ಲ ತಾನೆ?

೪. ತಮ್ಮ ಬರವಣಿಗೆ ಸೂಜಿ ಮೊನೆಯಂತೆ ನಿಶ್ಚಿತ ಲಿಪಿಗಿಂತಲೂ ಕಿರಿದಾಗಿದ್ದರೆ, ನಿಮ್ಮನ್ನು ನೀವು ಹಿಡಿತದಲ್ಲಿಡತಕ್ಕಂತ ಆತ್ಮಶಕ್ತಿಯಿರುವವರು ಅದರಂತೆ ಸ್ವಲ್ಪ ದೂರದೃಷ್ಟಿಗಳು, ಒಗಟಿದ್ದರೂ, ಬಿಕ್ಕಟ್ಟಿಲ್ಲದೆ ಬಗೆಹರಿಸಬಲ್ಲ ಚತುರರು. ಜ್ಞಾನಭಂಡಾರವನ್ನು ಹೆಚ್ಚಿಸಲು ಕುತೂಹಲವಿರುವವರು, ಆದರೆ ಸ್ವಾರ್ಥಿಗಳೂ ಹೌದು.

೫. ನಿಮ್ಮ ಬರವಣಿಗೆಯು ಆಡಂಬರವಿಲ್ಲದೆ, ಸರಳ ಸರಾಗವಾಗಿದ್ದರೆ, ನೀವು ನಂಬಿಗಸ್ಥರು, ಸತ್ಯವಂತರು, ವಿಧೇಯರು, ಮತ್ತು ಧಾರಾಳಿಗಳು. ನಿಮಗಿಂತ ಅದೃಷ್ಟ ಹೀನರಿಗಾಗಿ ಕನಿಕರಿಸುವ ದೊಡ್ಡ ಮನಸ್ಸಿನವರು. ಆದರೆ ತಾವು ಸಂಘಬುದ್ಧಿಯವರಲ್ಲ.

೬. ತಾವು ಯಾರೂ ಒರೆಯದ 'ರೀತಿಯ ತಮ್ಮದೇ ಆದ ಒಂದು ವೈಖರಿಯಲ್ಲಿ ಬರೆವದಾದರೆ ಅನಲ್ಲೂ ಎಡದ ಕೈಯಲ್ಲಿ ಬರೆವವರಾದರೆ, ನಾಳೆ ಬರುವುದನ್ನು ಇಂದೇ ಹೇಳುವ ದೂರ ದೃಷ್ಟಿಯವರು. ನಿಮ್ಮನ್ನು ಮರಳುಮಾಡಲಿಕ್ಕೆ ಹೇಗೆ ಆಗುವುದಿಲ್ಲವೋ ಹಾಗೆಯೇ ಸಂತೋಷಿಸಲೂ ಸಾಧ್ಯವಿಲ್ಲ. ಸ್ವಾರ್ಥಪರರು ಹೇಗೊ ಹಾಗೆಯೇ ತಮ್ಮ ಮನಸ್ಸಿನಲ್ಲೊಂದಿದ್ದರೆ ಬಾಯಲ್ಲಿ ಬೇರೇನಾದರನ್ನುಸುರಿ ವಸ್ತು ಸ್ಥಿತಿಯನ್ನು ಬಚ್ಚಿಡತಕ್ಕವರು. ನಿಮ್ಮ ಸ್ನೇಹ ಬಯಸುವವರು ಸತ್ಯ ಹೇಳುವುದಿದ್ದರೆ, ದೀಪಕ್ಕೆರಗುವ ಪತಂಗದಂತೆ!

೭. ನೀವು ವಿಂಗಡಪಂಗಡಗಳಿಗನುಸಾರವಾಗಿ, ದೂರ ದೂರ ನಿಶ್ಚಿತ ಲಿಪಿಯಂತೆ ಬರೆಯುವುದಿದ್ದರೆ ತಾವು ಬಿಚ್ಚುಮನಸ್ಸಿಗರೆಂದು ಕೇಳಿ ಸಂತೋಷಪಡದಿರಲಾರಿರಿ. ಯಾರು ಸಿಟ್ಟುಗೆದ್ದರೂ ನಿಜಹೇಳುವಸತ್ಯವಾದಿಗಳೆಂದರೆ ಉಲ್ಲಾಸ ಹೊಂದದಿರಲಾರಿರಿ. ಎದ್ದ ಎತ್ತಿನ ಬಾಲ ಹಿಡಿಯುವವರಲ್ಲದಿದ್ದರೂ, ಬಿದ್ದ ಎತ್ತಿನ ಕೋಡನ್ನು ಹಿಡಿದು ಏಳಿಸಲು ಪ್ರಯತ್ನಿಸುವ ಕರುಣಾಳುಗಳು. ಆದರೆ ನಿಮ್ಮನ್ನು ದೇವರು ಮೆಚ್ಚಿದರೂ, ನಿಮ್ಮನ್ನು ಜನ ಮೆಚ್ಚುವುದಿಲ್ಲ. ಇದರಿಂದ ತಮ್ಮ ಅಭಿವೃದ್ಧಿ, ತಾವು ಯೋಚಿಸಿದಂತಾಗಲಾರದೆಂದರೆ ಬೇಸರವಿಲ್ಲ ತಾನೆ?

೮. ನೀವು ಮುದ್ದೆ ಮುದ್ದೆಯಾಗಿ 'ಕಾಲಾಣೆಯ ಕಾಗದದಲ್ಲಿ ಕಾಲ ಚಕ್ರದ ಕತೆಯನ್ನೆಲ್ಲಾ ತ್ರೇತಾಯುಗದಿಂದ ಕಲಿಯುಗದ ವರೆಗೆ ಬರೆಯ ಬಲ್ಲಿರೊ? ಎಂದರೆ ತಾವು ಮಿತವ್ಯಯಿಗಳು, ತಮ್ಮ ಭವಿಷ್ಯದ ಮೇಲೆ ಬಹಳ ನಿಗವಿಟ್ಟು, ಕಾಲ ಬಂದಾಗ ಎಂತಹ ಕತ್ತೆಯ ಕಾಲನ್ನು ಹಿಡಿದು ತಮ್ಮ ಕಾರ್ಯದಲ್ಲಿ ಜಯಶಾಲಿಗಳಾಗುವವರು ತಕ್ಕಂತೆ ವೇಷಬದಲಾಯಿಸಿ, ತಮ್ಮ ಶ್ರೇಯಸ್ಸನ್ನು ಸಾಧಿಪ ನಿಪುಣರೆಂದರೆ ನೀವೆ!

೯. ತಾವುಗಳು ನಿಧಾನವಾಗಿ ಬರೆಯುತ್ತೀರೊ? ಹಾಗಾದರೆ ತಾವು ಸ್ವಲ್ಪ ದಪ್ಪ ಚರ್ಮದವರು ಹಾಗೆಯೇ ಸಮಾಧಾನಿಗಳು. ಕೆಲಸವೊಂದನ್ನು ಮಾಡಲು ಪ್ರಾರಂಭಿಸಿದರೆ ಕೆಲಸ ತೀರಬೇಕಷ್ಟೆ! ಕೆಲಸವು ಹೇಗಿದ್ದರೂ ತಮಗೆ ತೃಪ್ತಿಯೆ. ತಾವು ಮಾತುಗಾರರಲ್ಲ. ಆದರೆ ಸ್ಥಿರ ಮನಸ್ಸಿದೆ. ಮನಸ್ಸಿನಲ್ಲಿ ಸ್ವಪ್ನ ರಾಜ್ಯವನ್ನು ಕಟ್ಟಿಕೊಂಡು, ತೇಲಾಡುವ ಆಶಾನಿರತರಾದರೂ, ಕಲಾವಿದರಲ್ಲ. ಆದರೆ ತಾವು ನಂಬಿಗಸ್ಥರು, ನಂಬಿದವರನ್ನು ಮೋಸಗೊಳಿಸಲಾರಿರಿ.

೧೦. ನಿಮ್ಮ ಬರವಣಿಗೆಯು ತಡೆ ತೊಡರುಗಳಿಲ್ಲದೆ ಸರಾಗವಾಗಿ ಹರಿಯುತ್ತದೊ? ಹಾಗಾದರೆ ತಾವು ಕಾರ್ಯಕುಶಲರು. ಆವೇಶಪೂರಿತ ಮಾತುಗಾರರು. ಕಾಲ ಜ್ಞಾನಿಗಳು, ಕಷ್ಟದಲ್ಲಿಯೂ ಎದೆಗುಂದದೆ ಸುಖಕಾಣುವ ಸುಖಿಗಳು. ತಾವುಗಳು ತಿಳಿಹಾಸ್ಯಗಾರರಿದ್ದು, ತಮ್ಮ ಕಾಲ್ಪನಿಕ ಜ್ಞಾನ ದೊಡ್ಡದಿರುವುದರಿಂದ ತಾವು ಒಳ್ಳೆಯ ಬರಹಗಾರರಾಗಲೂ ಸಾಧ್ಯವಿದೆ.

೧೧. ನಿಮಗೆ ಸರಿಸಮಾನ ದೂರವಾಗಿ ಗೆರೆಯಿಲ್ಲದ ಕಾಗದಲ್ಲಿ ಬರೆಯಲಾಗುವುದಿಲ್ಲವೆ? ಎರಡು ಗೆರೆಗಳ ಸುರುವಿನಲ್ಲಿ ಯಾ ಕಡೆಯಲ್ಲಿ ಅಂತರವು ಒಂದೇ ರೀತಿಯಲ್ಲಿರದಿದ್ದರೆ, ತಾವುಗಳು ಸಮಾಜದಲ್ಲಿ ಸ್ನೇಹಿತರ ತಂಡವನ್ನೇ ಕಟ್ಟಿಕೊಳ್ಳತಕ್ಕವರು. ಜನರಲ್ಲಿ ಮಿಳಿತವಾಗಿ ಸ್ನೇಹವನ್ನು ಕಟ್ಟಿಕೊಳ್ಳುವವರು, ಗುಂಪಿಗೆ, ಜನರ ಅಭಿರುಚಿಗೆ ಅನುಸಾರವಾಗಿ ಸರಿಗೊಳ್ಳುವವರು. ಆದರೆ ತಾವು ದುಂದುಗಾರರು. ಎಂದೂ ಗಳಿಸುವವರಲ್ಲ. ತಾತ್ಪರ್ಯ, ತಾವು ಬಡವರಾಗಿಯೇ ಉಳಿಯುತ್ತೀರಿ

೧೨. ತಾವುಗಳು ಬರೆಯುವಾಗ ಹೇಗೆ ಬೇಕೋ ಹಾಗೆ ವಿರಾಮ ಚಿನ್ಹೆಗಳನ್ನಿಟ್ಟು, ಬಹು ಎಚ್ಚರಿಕೆಯಿಂದ ಅಚ್ಚು ಬಡಿದಂತೆ ಬರೆವವರಾದರೆ, ತಾವುಗಳು ಸರಳ ಜೀವಿಗಳು. ಶುಚಿತ್ವವಿಲ್ಲದ ಕಾರ್ಯ ತಮ್ಮ ಮನಸ್ಸಿಗೆ ಹಿಡಿಸದು ನೀವು ಯಾವ ಕೆಲಸವಿದ್ದರೂ ನೂರಕ್ಕೆ ನೂರೇ ಸರಿಯಾಗಬೇಕೆಂದು ಸ್ಫೂರ್ತಿಯಿಂದ ಕೆಲಸ ಮಾಡುವವರು. ಉಚಿತ ವೇಳೆಯಲ್ಲಿ ಉಚಿತ ಮಾತಾಡುವವರು, ಆದರೆ ಜನರು ತಮ್ಮನ್ನು ಹೊಗಳಬೇಕೆಂಬ ಆಕಾಂಕ್ಷೆಯಿದೆ, ಹೊಗಳಿದವನನ್ನು 'ಮೂರ್ಖರಂತೆ ನಂಬುವ ಮೂಢನಂಬಿಕೆಯಿದೆ. ಇದು ತಮ್ಮ ಜೀವನದಲ್ಲಿ ತೊಂದರೆ ತರದಿರಲಾರದು.

೧೩. ತಾವು ಬರೆಯುವಾಗ ಶ್ರದ್ಧೆಯಿಲ್ಲದೆ, ಕೈಗೆ ಬರುವಂತೆ ಬರೆಯುತ್ತೀರೊ? ಹಾಗೆ ಎಚ್ಚರ ತಪ್ಪಿ ಬರೆಯುವದೆಂದರೆ ತಮ್ಮ ಗುಣ, ನಡೆ, ನುಡಿ, ನೀತಿ ಆಚಾರ ವಿಚಾರ ಯಾವುದರಲ್ಲಿಯೂ ನೀವು ಹಿಡಿತವಿಲ್ಲದವರೆಂದು ಅರಿತುಕೊಳ್ಳಿ. ಬೇಕಾದಷ್ಟು ಬಾಯಿಯಲ್ಲಿ ಹೇಳುವಿರಿ, ಬೋಧಿಸುವಿರಿ, ಆದರೆ ಕಾರ್ಯಮಾಡುವವರಲ್ಲ. ನೀವು ಮನಸಂತೋಷದಿಂದ ಒಂದು ದಿನವನ್ನಾದರೂ ನೂಕಿದರೆ ಅದೇ ದೊಡ್ಡದು. ನಿಮ್ಮ ಅಸ್ಥಿರ ಮನಸೇ ನಿಮ್ಮ ಈ ಗಂಡಾಂತರಗಳಿಗೆ ಕಾರಣವೆಂದು ಅರಿತುಕೊಳ್ಳಿ.

೧೪. ಲೇಖನಿಯನ್ನು ಒತ್ತಿ ಬರೆಯುತ್ತೀರಾ? ಅಂದರೆ ತಮಗೆ ಬೇರೆಯವರನ್ನು ಒಲಿಸಿಕೊಳ್ಳುವ ಆತ್ಮಶಕ್ತಿಯಿದೆ. ತಾವುಗಳು ಮಾದರಿಯ ಪುರಷರೆಂದರೂ ತಪ್ಪಲ್ಲ. ತಮ್ಮ ಮನಸ್ಸಿನಂತೆಯೇ ನಡೆಯುವವರಲ್ಲದೆ ಬೇರೆಯವರ ತಾಳಕ್ಕೆ ಹೆಜ್ಜೆ ಹಾಕಲಾರಿರಿ. ತಾವು ದೈವ ಭಕ್ತರು. ಯಾವ ಕೆಲಸವನ್ನೂ ದೇವರ ಪ್ರೀತಿಗಾಗಿ ಮನಸಾರೆ ಮಾಡುವಿರಿ. ಆದರೆ ಜನರು ನಿಮ್ಮನ್ನು ಅಷ್ಟು ಆಧರಿಸರು.

೧೫. ಲೇಖನಿಗೆ ನೋವಾಗದಂತೆ ಬರೆಯುವಿರಾ? ತಾವುಗಳು ಕಲಾಭಿಮಾನಿಗಳು. ಯಾವುದೇ ಸುಂದರ ಕೃತಿ, ಯಾ ನೋಟವನ್ನು ನೋಡಿ ಆನಂದಿಸುವವರು. ತಮ್ಮ ಮನಸಿನಲ್ಲಿ ಉದ್ಭವಿಸಿದ ಯಾವುದೇ ವಿಷಯವನ್ನು ಹೇಳಿ ಜನರನ್ನು ಒಲಿಸಿಕೊಳ್ಳಲಾರಿರಿ. ಕಾರಣ ತಮ್ಮ 'ಮಂಗಮುಷ್ಟಿ'ಯ ತರ್ಕದಿಂದ. ಏಕಾಏಕಿ ತಾವುಗಳು ಭೂಕಂಪದಂತೆ ಸಿಟ್ಟುಗೊಳ್ಳುವಿರಿ. ಈ ಮುಡುಕು ಸ್ವಭಾವ ತಮ್ಮನ್ನು ಹಾಳುಮಾಡೀತು.

೧೬. ತಾವು ಬರೆಯಲು ಸುರುಮಾಡಿದಾಗ ಅಚ್ಚುಮೆಚ್ಚಾಗಿ ಬರೆದಂತೆ ಕಡೆಯವರೆಗೂ ಬರೆಯಲಾರಿರಾ? ಎಂದರೆ ತಾವು ಆರಂಭಶೂರರು. ಕೆಲಸ ಸುರುಮಾಡುವಾಗ ಒಬ್ಬನೇ ಎರಡು ಜನರ ಕೆಲಸ ಮಾಡೀರಿ. ಕೆಲಸ ಪೂರ್ತಿಯಾಗುವದನ್ನು ನಿಮ್ಮ ಮೇಲಿನ ಚಟುವಟಿಕೆಯಿಂದ ಹೇಳಲಿಕ್ಕಾಗದು. ಕಾರಣ ಸ್ಥಿರಮನಸ್ಸಿಲ್ಲ. ಆದರೆ ತಮ್ಮ ಆಕರ್ಷಕ ಮಾತು ತಮಗೆ ಬೇಕಾದಷ್ಟು ಸ್ನೇಹಿತರನ್ನು ಗಳಿಸಿಕೊಡುತ್ತದೆ. ಆದರೆ ಇದರಿಂದ ಪ್ರಯೋಜನವಿಲ್ಲ.

ಅನುವಾದಕ:- ಶ್ರೀ ಬಿ ಡಿ. ಸುಬ್ಬಯ್ಯ.

ಬೇಕಾಗಿದ್ದಾರೆ

ಹೊಸ ಮಾದರಿಯ ಫೌಂಟನ್ ಪೆನ್ ಮಾರಾಟ ಮಾಡಲು ಆಕರ್ಷಣೀಯ ಶರತುಗಳ ಮೇಲೆ ಏಜೆಂಟರು ಬೇಕಾಗಿದ್ದಾರೆ. ಸ್ಯಾಂಪಲಿಗೂ ವಿವರಗಳಿಗೂ ಈ ಪತ್ತೆಗೆ ಬರೆಯಿರಿ.

Standard Pen House
(K. M)
Bhandari Street
Bombay 3.

52-4

॥ ಈ ಕಾಲದ ಪ್ರತಿಜ್ಞೆಗಳು ॥

[ಸೂಜಿದವರು—ಕುಮಾರಿ ಪಿ. ಎಂ. ಕಮಲ]

ರಾತ್ರಿ ಗಂಟೆ ಒಂಭತ್ತೂ ಮುಕ್ಕಾಲಾದರೂ ಯಾರೂ ಊಟಕ್ಕೇಳುವ ಚಿಹ್ನೆಯೇ ಕಾಣುತ್ತಿರಲಿಲ್ಲ. ಮಾತಿನ ರಭಸದಲ್ಲಿ ಅಮ್ಮ ಊಟಕ್ಕೆ ಕರೆದದ್ದು ಕೇಳಿಸಲೇ ಇಲ್ಲ. ಮಂಗಳೂರಿಂದ ವೀಣ ಮತ್ತು ಆಕೆಯ ತಂದೆ ಬಂದಿದ್ದರು. ಅವರು ನಮ್ಮಲ್ಲಿಗೆ ಬಾರದೆ ಎರಡು ಮೂರು ವರ್ಷಗಳಾಗಿದ್ದವು. ಅಪರೂಪ ದರ್ಶನವಾದುದರಿಂದ ಅಂದಿನ ಊಟದಲ್ಲಿ ಸ್ವಲ್ಪ ವಿಶೇಷಗಳೇ ಇದ್ದವು. ಹೋಳಿಗೆ ಮೊದಲಾದ ಭಕ್ಷ್ಯಗಳನ್ನು ಮಾಡಿದ್ದರು. ವೀಣಳ ತಂದೆ, 'ಸಿಹಿ ತಿಂಡಿಯೆಂದರೆ ನನಗೆ ಸ್ವಲ್ಪ ಹಾಗೆ ಹಾಗೆಯೇ' ಎಂದರು. ಅದರ ರಹಸ್ಯ ಯಾರಿಗೂ ತಿಳಿಯಲೇ ಇಲ್ಲ. ಕೊನೆಗೆ 'ನನ್ನ ತಾಯಿ ಅಗಲಿದಲ್ಲಿಂದ ತಂದೆ ಸಿಹಿ ತಿಂಡಿ ತಿನ್ನುವುದಿಲ್ಲವೆಂದು' ವೀಣಳಿಂದ ತಿಳಿಯಿತು. ಆದರೆ ಯಾಕೋ ಆಕೆಯ ಮಾತಿನಲ್ಲಿ ನನಗೆ ನಂಬಿಕೆಯೇ ಬರಲಿಲ್ಲ. ಅವರು ಮೊದಲೇ 'ಡಯಬೆಟಿಸ್' ರೋಗದಿಂದ ನರಳುತ್ತಿದ್ದರು. ಆ ಕಾರಣವಾಗಿಯೇ ಸಿಹಿ ತಿನ್ನದಿರಬೇಕೆಂದು ನಾವು ಊಹಿಸಿದೆವು. ಆಂಟಿ ಸತ್ತು ಏಳೆಂಟು ವರ್ಷಗಳಾಗಿದ್ದರೂ ಈ ಪ್ರತಿಜ್ಞೆಯ ವಿಷಯ ಕೇಳಿಯೇ ಇರಲಿಲ್ಲ. ತನ್ನ ಸ್ವಾರ್ಥತೆಗಾಗಿ ಸಿಹಿ ತಿಂಡಿ ಬಿಟ್ಟಿದ್ದರೂ ಹೆಂಡತಿಯ ಜ್ಞಾಪಕಾರ್ಥವಾಗಿ ಪ್ರತಿಜ್ಞೆ ತೊಟ್ಟಿರುವದೆನ್ನುವಾಗ ಎಲ್ಲರಿಗೂ ಅವರ ಮೃದುಹೃದಯದರಿವಾಗುತಿತ್ತು! ಇದೊಂದು ರೀತಿಯ ಪ್ರತಿಜ್ಞೆ!

o o o

ಅವರ ಪ್ರತಿಜ್ಞೆಯನ್ನು ಯೋಚಿಸುತ್ತಿದ್ದಂತೆಯೇ ಹಿಂದಿನ ಘಟನೆಯೊಂದು ಕಣ್ಮುಂದೆ ಸುಳಿಯಿತು. ನಾನು ಆಗ ಎಂಟನೇ ದರ್ಜೆಯಲ್ಲಿ ಓದುತ್ತಿದ್ದೆ. ನಾನೂ, ಗೀತಾ ಮತ್ತು ಸಚ್ಚಿ ಜೊತೆಯಲ್ಲೇ ಕೂರುತ್ತಿದ್ದೆವು. ನಾಗವೇಣಿ ನಮಗಿಂತಲೂ ಒಂದು ಕ್ಲಾಸು ಮೇಲಿದ್ದಳು. ಅವರ ಮನೆಯಲ್ಲಿ ಆಗಾಗ ಸತ್ಯನಾರಾಯಣ ಪೂಜೆ, ಗಣಪತಿ ಹೋಮ, ಪಾರ್ವತಿ ವ್ರತ ಹೀಗೆಂದು ಪಕ್ಷಕ್ಕೊಂದು ಪೂಜೆ ಇದ್ದೇ ಇರುತಿತ್ತು. ಪೂಜೆಗೆ ತನ್ನ ಗೆಳತಿಯರನ್ನೆಲ್ಲಾ ಕರೆದುಕೊಂಡು ಹೋಗುವ ಪದ್ಧತಿ ಆಕೆಯಲ್ಲಿತ್ತು. ಅಂದಿನ ಸತ್ಯನಾರಾಯಣ ಪೂಜೆಗೆ ಯಾರೂ ಹೋಗಲೇ ಇಲ್ಲ. ಆದಕ್ಕಾಗಿ ಮರುದಿನ ಶಾಲೆಗೆ ಬರುವಾಗ ಒಂದಷ್ಟು ಹೋಳಿಗೆ ಗಂಟು ಕಟ್ಟಿ ತಂದಿದ್ದಳು. ಮಧ್ಯಾಹ್ನದ ವಿರಾಮ ಸಮಯದಲ್ಲಿ ಎಲ್ಲರಿಗೂ ಹಂಚಬೇಕೆಂದು ಸುಮ್ಮನಿದ್ದಳು. ಆದರೆ ಪಿ. ಟಿ. ಗಂಟೆಯಲ್ಲಿ ಯಾರೋ ಅದನ್ನು ಕಾಣೆ ಮಾಡಿದ್ದರು. ಪಾಪದ ನಾಗವೇಣಿಗೆ ಇತರ ಗೆಳತಿಯರೊಡನೆ ಹೇಳಲು ಸಂಕಟ. ಹೇಗೋ ಶಾಲೆಯ ಹುಡುಗಿಯರಿಗೆಲ್ಲಾ ತಿಳಿದು, ಅಲ್ಲಲ್ಲಿ ಹೋಳಿಗೆಯ ಗುಜು ಗುಜು ಮಾತೇ ಕೇಳಿಸುತಿತ್ತು. ಅವಳ ಪಕ್ಕದಲ್ಲಿ ಕೂರುತಿದ್ದ ಶೀಲ, ಲಲಿತಳಿಗೆಲ್ಲ ತುಂಬಾ ದುಃಖವುಂಟಾಯಿತು. 'ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ'ವೆಂದು ನಾಗವೇಣಿಗೂ ಕೊರಗು. ಇದರ ಮಧ್ಯೆ ಮನೆಯಲ್ಲಿ ತಂದೆ ಅಣ್ಣನಿಗೆಲ್ಲಾದರೂ ಶಾಲೆಗೆ ಹೋಳಿಗೆ ತಂದದ್ದು ತಿಳಿದರೆ ಅದೊಂದು ರದ್ಧಾಂತವೇ ಸರಿ ಎಂದು ಹೆದರಿಕೆ ಬೇರೆ. ಹೀಗಾಗಿ ನಾಗವೇಣಿಯ ಸ್ಥಿತಿ ಸಂಕಟಕ್ಕೀಡಾಗಿತ್ತು. ಕೊನೆಗೆ ನಾಗವೇಣಿಗೆ ಅತೀ ಪ್ರೀತಿಯಾಗಿದ್ದ ಹೋಳಿಗೆಯನ್ನೇ ತಿನ್ನುವುದಿಲ್ಲವೆಂದು ಅಂದಿನಿಂದ ಪ್ರತಿಜ್ಞೆ ತೊಟ್ಟುಕೊಂಡಳು. ನನಗೆ ಆಕೆಯ ಪ್ರತಿಜ್ಞೆ ಸರಿತೋರಲಿಲ್ಲ. ಯಾವಾಗಲಾದರೂ ನಮ್ಮ ಮನೆಯಲ್ಲಿ ಹೋಳಿಗೆ ಮಾಡಿದಾಗಲೆಲ್ಲಾ ನಾಗವೇಣಿಯನ್ನು ನೆನೆದು ಹುಚ್ಚು ಹುಡುಗಿ ಎಂದೆನ್ನದಿರಲಾರೆ.

o o o

ಈ ಹುಡುಗಾಟದ ಪ್ರತಿಜ್ಞೆಗಳನ್ನೆಲ್ಲ ನೆನಸಿಕೊಂಡರೆ ನಗು ಬರುತ್ತೆ. ಗೀತಳ ಮನೆಯವರು ಹೆಚ್ಚಾಗಿ ಖಾದಿ ಹಾಕುತ್ತಿದ್ದರು. ಖಾದಿಯೇ ಹಾಕುವದೆಂದು ಅವರ ಪ್ರತಿಜ್ಞೆಯಂತೆ! ಖಾದಿ ತುಂಬಾ ದೊರಗು ಬಟ್ಟೆಯಾದುದರಿಂದ ನಮಗೆಲ್ಲಾ ಸಣ್ಣದಿರುವಾಗ ಅದರ ಬೆಲೆಯೇ ತಿಳಿದಿರಲಿಲ್ಲ. ಒಂದು ದಿನ ಶಾಲೆಯಲ್ಲಿ ಏನೋ ಸ್ವಲ್ಪ ವಿಶೇಷವಿತ್ತು. ಆ ಕಾಲದಲ್ಲಿ ಬೆಂಗಾಲ್ ಸಿಲ್ಕ್ ಸೀರೆಗೆ ತುಂಬಾ ಪ್ರಾಶಸ್ತ್ಯವಿತ್ತು. ಗೀತಾಳು ಅಂತದ್ದೇ ಸೀರೆ ಉಟ್ಟಿದ್ದಳು. 'ನನಗೆ ಆ ಸೀರೆ ನೋಡಿದಾಕ್ಷಣ ಬೆಂಗಾಲ್ ಸಿಲ್ಕು ಎಂದು ತಿಳಿಯಿತು. ಖದ್ದರ್ ಸಿಲ್ಕು ಸೀರೆ ನೋಡದವರಿಗೆ ಯಾವುದು ಬೆಂಗಾಲ್ ಸಿಲ್ಕು, ಯಾವುದು ಖದ್ದರ್ ಸಿಲ್ಕು ಎಂದು ಗೊತ್ತಾಗುವದು ಕಷ್ಟ. ನಮ್ಮ ಶಾರನಿಗೂ ಅಂತಹದ್ದೇ ಒಂದು ಬೆಂಗಾಲ್ ಸಿಲ್ಕು ಸೀರೆಯಿದ್ದುದರಿಂದ ಅದು ಖದ್ದರ್ ಸಿಲ್ಕ್ ಅಲ್ಲವೆಂದು ಗೀತಳೊಡನೆ ಹೇಳಿದೆ. ಗೀತ ಮಾತ್ರ ಯಾರ ಮಾತಿಗೂ ಒಪ್ಪುವಂತಿರಲಿಲ್ಲ. ಕೊನೆಗೆ ಮರುದಿನ ನಾನು ಸೀರೆ ತಂದು ತೋರಿಸಿದಾಗ ಆಕೆಯ ಬಾಯಿಂದ ಮಾತೇ ಹೊರಡಲಿಲ್ಲ. ಅಂದಿನಿಂದ ಆಕೆ ನನ್ನೊಡನೆ ಮಾತು ಬಿಟ್ಟಳು. ನಮ್ಮ ಗೆಳೆತನವೇ ಒಡೆದು ಹೋಯಿತು. ಇಂದೂ ಕೂಡ ಆಕೆಯ ಖಾದಿ ಪ್ರತಿಜ್ಞೆಯನ್ನು ನೆನೆದರೆ ನನಗೆ ನಗು ಬರುತ್ತದೆ. ಪ್ರತಿಯೊಬ್ಬನೂ ತನ್ನ ಶಕ್ತಿಗನುಸಾರ ಖಾದಿಯನ್ನು ತೊಡಲೇಬೇಕು. ಆದರೆ ತಾವು ತೊಟ್ಟಿದ್ದೆಲ್ಲವೂ ಖಾದಿಯೆಂದೂ, ತಾವು ಪ್ರತಿಜ್ಞಾಬದ್ಧರೆಂದೂ ಹೇಳಿಕೊಳ್ಳುವದನ್ನು ನನಗೆ ಸಹಿಸಲಾಗಲಿಲ್ಲ.

o o o

ಇಂದಿನ ಯುಗದಲ್ಲಿ ಪ್ರತಿಜ್ಞೆಗಳಿಗೆ ಬಣ್ಣ ಬದಲಾಯಿಸುವ ಶಕ್ತಿಯಿದೆ. ಸಮಯಾನುಸಾರ ಪ್ರತಿಜ್ಞೆಯೂ ತಿರುಗುತ್ತ ಕೇವಲ ನಾಲಗೆಯಲ್ಲಿ ಎಲುಬಿಲ್ಲದುದೇ ಇದಕ್ಕೆ ಕಾರಣವಾಗಿರಬಹುದು. ಒಮ್ಮೆ ನಾನು ಸಹ ಎಲ್ಲರಂತೆಯೇ ಒಂದು ಪ್ರತಿಜ್ಞೆ ತೊಟ್ಟುಕೊಂಡಿದ್ದೆ. ಆದರೆ ಆ ಪ್ರತಿಜ್ಞೆಯನ್ನು ಉಳಿಸಿಕೊಳ್ಳುವ ಯೋಗ್ಯತೆ ನನಗಿರಲಿಲ್ಲವೋ ಯಾ ಪ್ರತಿಜ್ಞೆಗಿರಲಿಲ್ಲವೋ ನನಗೇ ತಿಳಿಯದು. ಎಲ್ಲರಂತೆ ನನಗೂ ಪತ್ರಿಕೆಯಲ್ಲಿ ಏನಾದರೂ ಬರೆಯಬೇಕೆಂದು ತುಂಬಾ ದಿವಸದಿಂದಲೇ ಹಿರಿಯಾಸೆಯೊಂದಿತ್ತು. ಅದರದು ಬರೇ ಬಿಸಿಲು ಕುದುರೆಯಾಗಿ ಉಳಿದಿತ್ತೇ ವಿನಹ ಕಾರ್ಯತಃ ಸಾಧ್ಯವಾಗಿರಲಿಲ್ಲ. ನನ್ನ ಬಳಗದವರನ್ನೆಲ್ಲ ಒಂದು ಲೇಖನಕಾಗಿ ಕಾಡಿದೆ. ಕೇವಲ ಯಾರಿಗೂ ಅಂಥಾ ಯೋಗ್ಯತೆಯಿದ್ದಿರಲಿಕ್ಕಿಲ್ಲವೆಂದು ಈಗ ನನ್ನ ಭಾವನೆ. ಅಂತೂ ಹಸರಿನಾಸೆ ಸಾಧಾರಣದ್ದೇನಲ್ಲ. ಹೇಗಲ್ಲೋ ಮಾಡಿ ಹಳೆ ಸಂಚಿಕೆಯೊಂದರಿಂದ ಅತ್ಯುತ್ತಮ ಕತೆಯೊಂದನ್ನು ಆರಿಸಿ ನಮ್ಮೂರಿನ ಸಂಪಾದಕರಿಗೆ ಕಳುಹಿಸಿದೆ. ಪಕ್ಷಪಾತಿ ಸಂಪಾದಕರು ಆ ಲೇಖನಿಯನ್ನು ಪ್ರಕಟಿಸಲೇ ಇಲ್ಲ. ಒಂದಲ್ಲ, ಎರಡಲ್ಲ, ನಾಲ್ಕಾರು ಸಂಚಿಕೆಗಳನ್ನೆಲ್ಲಾ ನೋಡಿದೆ. ಕೊನೆಗೆ ಸಂಪಾದಕರನ್ನು ಮನಸಾರೆ ಶಪಿಸಿದೆ. ನಾನೇನಾದರೂ ನಮ್ಮ ಮನೆಯ ಆರ್ಥಿಕ ಮಂತ್ರಿ ಆಗ ಆಗಿದ್ದಿದ್ದರೆ ನಿಜವಾಗಿಯೂ, ಆ ಪತ್ರಿಕೆ ತರಿಸುವುದೇ ನಿಲ್ಲಿಸುತಿದ್ದೆನು. ಕೊನೆಗಂತೂ ಮನಸಮಾಧಾನವಿಲ್ಲದೆ 'ಇಂದಿನಿಂದಲೇ ಲೇಖನಿ ಬರೆಯುವದನ್ನು ಬಿಟ್ಟೆ'ನೆಂದು ಪ್ರತಿಜ್ಞೆ ತೊಟ್ಟುಕೊಂಡೆ!

ಒಂದು ದಿನ ಶಾಲೆಯಲ್ಲಿ ಲೈಬ್ರೆರಿ ಪುಸ್ತಕ ಕೊಳ್ಳಲು ಲೈಬ್ರೆರಿ ರೂಮಿಗೆ ಹೋದ. ಮೇಸ್ಟ್ರು ಬಾಗಿಲು ತೆಗೆದು ಬೇಕಾದದ್ದು ಆರಿಸಿಕೋ ಆ ಮೇಲೆ ಬರೆದುಕೊಳ್ಳುವೆನೆಂದು ಹೇಳಿದರು. ಅಲ್ಲೇ ಕೆಳಗಿನ ಕಪಾಟಿನಲ್ಲೊಂದು ದೀಪಾವಳಿ ಸಂಚಿಕೆ ಕಾಣಿಸಿತು. ಹಾಳೆ ತಿರುವುತಿದ್ದಂತೇ ಅದರಲ್ಲಿ ನಾನು ಪರರೆಂಜಲನ್ನು ಕಸಿದು ಬರೆದಿದ್ದ ಲೇಖನಿ ಪ್ರಕಟವಾಗಿತ್ತು. ನನಗೆ ಇದೇನು ಕನಸೋ ಎಂದಾಯಿತು. ಅದರ ಲೇಖಕರು ಬೇರಿದ್ದರು. ಹೇಗಿದೆ ಈ ಪ್ರಪಂಚದಲ್ಲಿ ಮೋಸ? ಅವರೂ ನನ್ನಂತೇ ಹಳೇ 'ಪ್ರಬುದ್ಧ ಕರ್ಣಾಟಕ'ದಿಂದ ಕಸಿದೇ ಆ ಲೇಖನಿಯನ್ನು ಬರೆದಿದ್ದರು. ಅದರವರ ಕಾರ್ಯ ಜಯವಾಗಿತ್ತು. ಅದನ್ನು ನೋಡಿ ನನಗೇ ಅಸಹ್ಯವಾಯಿತು. ಆ ಗಳಿಗೆಯಲ್ಲಿ ನನ್ನ ಲೇಖನಿಯನ್ನು ಪ್ರಕಟಿಸದ ಸಂಪಾದಕರನ್ನು ಬಾಯಿ ತುಂಬಾ ಹೊಗಳಿದೆ. ಹಿಂದು-ಮುಂದಾಲೋಚಿಸದೆ ಪ್ರತಿಜ್ಞೆ ಮಾಡುವ ನನ್ನಂಥಾ ಅಲ್ಪಮತಿಯರನ್ನು ಯೋಚಿಸಿ ನನಗೇ ನಾಚಿಕೆಯಾಯಿತು. ಹಾಗೇ ನನ್ನ ಮೋಸವನ್ನು ತಿಳಿದ ಸಂಪಾದಕರಿಗೆ ನನ್ನಲ್ಲಿ ಎಂಥಾ ತುಚ್ಛ ಭಾವನೆ ಉಂಟಾಗಿರಬಹುದೆಂದು ಆಲೋಚಿಸುತ್ತಾ ಕುಳಿತೆ. ಆದರೆ ಅವರಲ್ಲಿ ನನಗೊಂದು ಗೌರವ ಉಂಟಾಗಿ ನಿಜವಾಗಿಯೂ ಅವರನ್ನು ಮನದಲ್ಲೇ ಹೊಗಳಿದೆ.

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸ್ :— ವೀರಾಜಪೇಟೆ.

ಶಾಖೆ:— ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟಗಳು
2. 12 ನೇ ನಂಬರಿನ ಒಂಟಿ ಕೊಳವಿನ ತೋಟದ ಕೋವಿಗಳು.
3. ಒಂಟಿ ಮತ್ತು ಜೋಡಿ ಹೊಳವಿನ ಕೇಪಿನ (ತುಂಬಿಪ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
5. $\frac{5}{8}$", $\frac{1}{2}$" ಮತ್ತು $\frac{3}{8}$" ಕಬ್ಬಿಣದ ಸರಳುಗಳು
6. 2", $1\frac{1}{4}$", 1" $\frac{3}{4}$" ಮತ್ತು $\frac{1}{2}$" ಕೊಳಾಯಿಗಳು. (G. I. Peps)
7. $1\frac{3}{4}$" × $\frac{5}{16}$" ಉಕ್ಕಿನ ಪಟ್ಟಿಗಳು (Spring Steel flats).
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಪಂಪುಗಳು.
9. ಕೋತಿ ಮತ್ತು ಆನೆ ಮಾರ್ಕಿನ ಸಿಮೆಂಟ್ ಟಿನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೆಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

Edited Printed and Published by P. I. BELLIAPPA at 'Kodagu' Press Mercara, for 'Kodagu' Ltd.

ಕೊಡಗು

ಯುಗಪುರುಷ ವಿನೋಬಾ ಭಾವೆ

“ತೆರೆಯ ಮರೆಯಲ್ಲಿ ೫೭ ವರ್ಷ ವಯಸ್ಸಿನ ಕ್ಷೀಣ ಕಾಯದ ಸಂಸ್ಕೃತ ವಿದ್ವಾಂಸರೊಬ್ಬರು ಧನಿಕ-ದರಿದ್ರರ ಹಿತಾರ್ಥಗಳನ್ನು ಸಮರಸಗೊಳಿಸಿ ವರ್ಗ ಸಮರದ ತಳಹದಿಯನ್ನೇ ಕಿತ್ತೊಗೆಯುವ ಪ್ರಯತ್ನ ಮಾಡುತ್ತಾ ಸದ್ದಿಲ್ಲದ ರೀತಿಯಲ್ಲಿ ಭಾರತದ ಇತಿಹಾಸವನ್ನು ರೂಪಿಸುತ್ತಿರುವರು” ಎಂದು ಅಮೇರಿಕದ ‘ರಿಪೋರ್ಟರ್’ ಪತ್ರಿಕೆಯಲ್ಲಿ ಮಿಸೆಸ್ ವೀರಾ ಮೈಕೆಲ್ಸ್ ಡೀನರು ವಿನೋಬಾ ಭಾವೆಯವರ ಭೂದಾನ ಯಜ್ಞದ ಆಂದೋಲನ ಕುರಿತಾಗಿ ಮೇಲಿನಂತೆ ಬರೆದಿರುವರು.

೧೯೫೭ರ ಒಳಗೆ ಭಾರತದ [illegible] ಕೋಟಿ ಭೂಮಿ ಹೀನರಿಗೆ ೫ ಕೋಟಿ ಎಕರೆ ಭೂಮಿ ಒದಗಿಸಬೇಕೆಂದು ತಮ್ಮ ಕನಸನ್ನು ನಿಜಗೊಳಿಸುವ ತವಕ ಭಾವೆಯವರು ಬದುಕಿದರೆ “ಮಹಾತ್ಮಾ ಗಾಂಧಿಯವರ ಅಗ್ರ ಶಿಷ್ಯರಲ್ಲೊಬ್ಬರಾಗಿರುವ ಭಾವೆಯವರ ಸ್ಮರಣೆಯು ಹಿಂದೀಯರ ಮನಸಿನಲ್ಲಿ ಮಹಾತ್ಮಾ ಗಾಂಧಿಯವರ ಸ್ಮರಣೆಯಷ್ಟೇ ಶಾಶ್ವತವಾಗಿ ನಿಲ್ಲುವುದು” ಎಂದು ಮಿಸೆಸ್ ಡೀನ್ ಹೇಳುತ್ತಾರೆ.

ಶುಕ್ರವಾರ

೭-೧೧-೧೯೫೨

ಬಿಡಿ ಪ್ರತಿ 2 ಆಣೆ

KODAGU KANNADA WEEKLY MERCARA

ವಾರದ ಕಥೆ.

* ದೇವರ ಅನುಗ್ರಹ *

— ಲೇಖಕಿ: ಮಿಸ್. ಬಿ. ಸಿ. ಡಿ. —

ಢಣ್! ಢಣ್! ಢಣ್! ಎಂದದ್ದೇ ತಡ ಶ್ಯಾಮನು ಇತರ ಮಕ್ಕಳೊಡನೆ ತರಗತಿಯ ಹೊರಗೆ ಬಂದನು. ಪುಸ್ತಕಗಳನ್ನು ಎತ್ತಿಕೊಂಡು ಮನೆಗೆ ಓಡಲು ಪ್ರಾರಂಭಿಸಿದನು. ಸಾಯಂಕಾಲದ ಸಮಯ, ಎಲ್ಲೆಲ್ಲಿ ನೋಡಿದರೂ ಶಾಲೆಯಿಂದ ಮನೆಗೆ ಹಿಂತಿರುಗುವ ಮಕ್ಕಳ ಸಂತೋಷದ ಕೂಗು. ಗುಂಪು ಗುಂಪಾಗಿ ಮಕ್ಕಳು ಬೆಳಗಿನಿಂದ ಸಾಯಂಕಾಲದ ವರೆಗೂ ಶಾಲೆಯಲ್ಲಿ ನಡೆದ ಆಟ ಪಾಟಗಳ ವಿಚಾರವಾಗಿ ಮಾತಾಡುತ್ತ ಹಿಂತಿರುಗುತ್ತಿದ್ದರು. ಆದರೆ ಶ್ಯಾಮನನ್ನು ನೋಡಿದರೆ ಸಣ್ಣ ಹುಡುಗನಂತೆ ಒಬ್ಬನೇ ಯಾರನ್ನೂ ಲೆಕ್ಕಿಸದೆ ಓಡುತ್ತ ಹೋಗುತ್ತಿದ್ದ. ಏನೋ ಒಂದು ಮಹತ್ತಾದ ವಿಷಯವನ್ನು ಮನೆಯವರಿಗೆ ತಿಳಿಸಲು ಹೋಗುತ್ತಿರುವನೆಂದು ಅವನ ಮುಖದಲ್ಲಿನ ಚಿಹ್ನೆಯು ಹೇಳುವಂತಿತ್ತು.

ಹಾಗೂ ಹೀಗೂ ಓಡಿ ಓಡಿ ಒಂದು ಮೈಲು ದೂರದಲ್ಲಿರುವ ಮನೆಯನ್ನು ಸೇರಿದ. ಪುಸ್ತಕಗಳನ್ನು ಒಂದು ಮೂಲೆಗೆ ಬಿಸುಟ. ಅವನಿಗೆ ಹೊಟ್ಟೆ ಹಸಿವಾದಂತೆ ತೋರುತ್ತಿತ್ತು. ಬೇಗನೆ ಏನಾದರೂ ತಿಂಡಿ ಸಿಕ್ಕಿದರೆ ಬೇಗನೆ ತಿಂದು ಸ್ನೇಹಿತರೊಡನೆ ಆಡಲು ಹೋಗಬೇಕಾಗಿತ್ತೆಂದು ತೋರುತ್ತಿ. "ಅಮ್ಮಾ, ಅಮ್ಮಾ" ಎಂದು ಕೂಗಿದ. ನಿತ್ಯವೂ ಸಾಯಂಕಾಲ, ಇಷ್ಟು ಒಬ್ಬ ಮಗನನ್ನು ಕಾತುರಳಾಗಿ ಕಾಯುತಿದ್ದ ತಾಯಿ ಗೆ ಇಂದ. ಏನಾಯಿತೋ ಎಂದು ಪುನಃ ಗಟ್ಟಿಯಾಗಿ 'ಅಮ್ಮಾ' ಎಂದು ಕೂಗಿದ. ಪ್ರತ್ಯುತ್ತರವಿಲ್ಲ. ಎಲ್ಲವೂ ಶೂನ್ಯ ಎಂಬಂತಾಯ್ತು! ಬಳಿಕ ಒಳಕೋಣೆಯಿಂದ ಕೆಮ್ಮಲು ಕೇಳಿಸಿತು. ಕೋಣೆಯೊಳಕ್ಕೆ ಧಾವಿಸಿದ. ನೋಡಿದ ದೃಶ್ಯದಿಂದ ಚಕಿತನಾದ. ಕಠಿಣ ಜ್ವರದಿಂದ ತಾಯಿ ಹಾಸಿಗೆ ಹಿಡಿದಿದ್ದಾಳೆಂದು ತಿಳಿಯಿತು. ಹಾಸಿಗೆಯ ಬಳಿ ಕುಳಿತ. ಮಲಗಿದ್ದ ತಾಯಿಯು ಕಂಬನಿಯನ್ನು ಸುರಿಸುತ್ತಾ 'ಮಗೂ ನಿನಗೆ ಹೊಟ್ಟೆ ಹಸಿವಾದಂತೆ ತೋರುತ್ತಿದೆ. ಮಧ್ಯಾಹ್ನದ ಅನ್ನವೇನಾದರೂ ಇದ್ದರೆ ನೋಡು ನೀನು ಶಾಲೆಗೆ ಹೋದ ಮೇಲೆ ತಲೆನೋವಿನಿಂದ ಮಲಗಿಕೊಂಡೆ. ಜ್ವರವೂ ಬಂದಂತೆ ತೋರುತ್ತೆ. ನಿನ್ನ ತಂದೆ ಇದ್ದಿದ್ದರೆ ನಿನಗೆ ಇಷ್ಟು ಕಷ್ಟವಿರಲಿಲ್ಲ. ನೀನು ಹುಟ್ಟಿ ಆರು ವರ್ಷಗಳ ವರೆಗೆ ಅವರು ಸಂತೋಷದಲ್ಲಿದ್ದರು ಕೊನೆಗೆ ಒಂದು ದಿನ ಇದ್ದಕ್ಕಿದಂತೆಯೇ ತಲೆನೋವಿನಿಂದ ಮಲಗಿದ್ದವರು ಎರಡು ದಿನಗಳಲ್ಲಿಯೇ ನಮ್ಮೆಲ್ಲರನ್ನು ತ್ಯಜಿಸಿ ಪರಲೋಕವನ್ನು ಸೇರಿದರು. ಇದು ಕಳೆದು ಇಂದಿಗೆ ಎಂಟು ವರ್ಷಗಳು ಕಳೆದಿವೆ. ಇದೆಲ್ಲವು ದೇವರ ಅನುಗ್ರಹ ಕಂದ" ಎಂದು ನುಡಿದಳು.

"ಅಯ್ಯೋ ನಾನು ಏಕೆ ಇತರ ಮಗುವಾಗಿ ಜನಿಸಿದೆ" ಎಂದು ಶ್ಯಾಮನ ಮನಸ್ಸು ನುಡಿಯಿತು.! ಎಲ್ಲವೂ ದೇವರ ಅನುಗ್ರಹದಂತೆ ಎಂದು ಒಡನೆ ಮನೆಯ ಹೊರಗೆ ಬಂದನು. ಪಕ್ಕದ ಆಸ್ಪತ್ರೆಯ ವೈದ್ಯರೊಬ್ಬರಿಂದ ಔಷಧವನ್ನು ತಾಯಿಗೆ ತಂದು ಕೊಟ್ಟನು. ತಾಯಿಯು ಗುಣಹೊಂದುವಂತೆ ತೋರದಿರಲು ತಾಯಿಯನ್ನು ಆಸ್ಪತ್ರೆಗೆ ಒಯ್ದನು. ಇವನು ಎಂದಿನಂತೆ ಶಾಲೆಗೆ ಹೋಗುತ್ತಿದ್ದನು. ಆಗ ಅವನು ಒಂಭತ್ತನೆಯ ದರ್ಜೆಯಲ್ಲಿ ವ್ಯಾಸಂಗ ಮಾಡುತ್ತಿದ್ದನು. ತಾಯಿ ಆಸ್ಪತ್ರೆಯಲ್ಲಿದ್ದುದರಿಂದ ಸಾಯಂಕಾಲ ಮನೆಗೆ ಹಿಂತಿರುಗಲು ಮನಸ್ಸೆ ಇಲ್ಲದಾಯಿತು ಸತ್ತುಹೋದ ತಂದೆಯನ್ನು ಯೋಚನೆಯಾಗುತ್ತಿತು. ಕ್ರಮಶಃ ತಾಯಿಯ ಕಾಯಿಲೆ ಹೆಚ್ಚಾಗಿ ಆಕೆ ಆಸ್ಪತ್ರೆಯಿಂದ ಹಿಂತಿರುಗುವದು ಸಂಶಯವಾಯಿತು. ಇನ್ನು ನಾನು ಅನಾಥನು ಎನ್ನುವದಕ್ಕೆ ಏನೂ ಅಡ್ಡಿಯಿಲ್ಲವೆಂದುಕೊಂಡನು. ಇವನ್ನೆಲ್ಲಾ ಯೋಚಿಸುತ್ತ ಹುಚ್ಚನಂತಾಗಿದ್ದನು. ಅದೊಂದು ದಿನ ಆತನು ಈ ರೀತಿ ಯೋಚಿಸುತ್ತಾ ಮನೆಯ ಕಡೆಗೆ ಹುಚ್ಚನಂತೆ ಒಡಿದನು. ಮನೆಯು ಸ್ಮಶಾನದಂತೆ ನಿಶಬ್ದವಾಗಿತ್ತು. ಪುಸ್ತಕಗಳನ್ನು ಮೂಲೆಗೆ ಬಿಸುಟು ಮನೆ ಬಾಗಿಲನ್ನು ಹಾಕಿಕೊಂಡು ಆಸ್ಪತ್ರೆಯ ಕಡೆಗೆ ಬಂದನು. ತಾಯಿಯನ್ನು ನೋಡಲು ಅಂಜಿದನು. ಆಕೆ ಸತ್ತು ಹೋಗಿರಬೇಕೆಂದು ಆತನ ಮನ ನುಡಿಯಿತು. ಅವಳು ತಂದೆಯಂತೆ ಪರಲೋಕವನ್ನೈದಿದ್ದರೆ ಮುಂದೇನು ಮಾಡುವದೆಂದು ಕನಲಿದನು. ಆಸ್ಪತ್ರೆಗೆ ಹೋಗಲಿಲ್ಲ. ಬೇರೆಡೆ ಧಾವಿಸಿದನು. ಹಸಿವನ್ನೂ ಮರೆತನು, ದಣಿವೂ ಇಲ್ಲದಾಯಿತ್ತು. ಆಯಾಸವಿಲ್ಲದೆ ಬಹು ದೂರ ಸಾಗಿದನು. ಸಮಯವು ರಾತ್ರಿಯಾಗಿತ್ತು. ತಟ್ಟನೆ ಕಾಲುಗಳು ಅವನನ್ನು ನಿಲ್ಲಿಸಿದವು. ಆಶ್ಚರ್ಯದಿಂದ ಸುತ್ತಲೂ ನೋಡಿದನು. ರಸ್ತೆಯ ಪಕ್ಕದಲ್ಲಿಯೇ ಒಂದು ಮನೆ ಕಾಣಿಸಿತು. ಮನೆಯ ಬಾಗಿಲಿಗೆ "ಅನಾಥರ ಆಶ್ರಮ" ಎಂಬುದನ್ನು ಬರೆದಿಟ್ಟಿದ್ದರು. ಭಯವಿಲ್ಲದೆ ಒಳಗೆ ಹೋಗು ಎಂದು ಹೃದಯವಾಣಿಯು ನುಡಿದಂತಾಯಿತು.. ಒಳ್ಳೆ ಅಚ್ಚುಕಟ್ಟಾದ ದೇಹ. ಬಿಳಿವರ್ಣ, ಕೆಂಪು ತುಟಿಗಳು, ವಿಶಾಲವಾದ ಕಣ್ಣು ಕಿವಿಗಳು, ಕಪ್ಪಗಾದ ಹುಬ್ಬುಗಳು, ಗುಂಗುರು ಕೂದಲು ಇವುಗಳಿಂದ ಕೂಡಿದ ಇವನನ್ನು ನೋಡಿದ ಅಧಿಕಾರಿಗಳಾದ ಮನೋಹರರಾಯರು ಸಂತೋಷಗೊಂಡು ಇವನ ಎಲ್ಲಾ ವಿಷಯಗಳನ್ನು ತಿಳಿದು ಇವನಿಗೆ ಆಶ್ರಮದಲ್ಲಿ ಆಶ್ರಯವನ್ನಿತ್ತರು.

ಪಕ್ಕದಲ್ಲಿಯ ಶಾಲೆಗೆ ಈತನು ಕಳುಹಿಸಲ್ಪಟ್ಟನು. ಇತರ ಎಲ್ಲಾ ಮಕ್ಕಳಿಗಿಂತಲೂ ಗಟ್ಟಿಗನಾಗಿದ್ದು ಎಲ್ಲ ತರಗತಿಗಳಲ್ಲೂ ಮೊದಲನೆಯವನಾಗಿ ಉತ್ತೀರ್ಣನಾದನು. ಇದರ ಫಲವಾಗಿ ಸರಕಾರವೇ ಇವನಿಗೆ ವೈದ್ಯಕೀಯ ವಿದ್ಯಾಭ್ಯಾಸಕ್ಕಾಗಿ ಸಹಾಯವನ್ನಿತ್ತರು. ಇದರಲ್ಲೂ ಎಲ್ಲ ವರ್ಷಗಳಲ್ಲೂ ಉತ್ತೀರ್ಣನಾಗಿ ಕಡೆಯ ವರುಷದ ಪರೀಕ್ಷೆಯನ್ನು ಸಹ ಮುಗಿಸಿದ. ಇದರಲ್ಲು ಮೊದಲನೆಯವನಾಗಿ ತೇರ್ಗಡೆ ಹೊಂದುವದರಲ್ಲಿ ಯಾವ ಸಂದೇಹವಿರಲಿಲ್ಲ ದೇವರ ಅನುಗ್ರಹವು ಪೂರ್ತಿಯಾಗಿ ಇವನ ಮೇಲಿತ್ತು ಎಂಬಂತೆ ತೋರುತ್ತಿತ್ತು.

ಆಶ್ರಮಕ್ಕೆ ಸೇರಿ ಎಂಟು ವರ್ಷಗಳು ಉರುಳಿದವು. ಶ್ಯಾಮನಿಗೆ ಹಿಂದಿನ ವಿಚಾರವನ್ನು ನೆನೆಸಿದರೆ ಒಂದು ಕನಸ್ಸಿಂದೇ ಭಾಸವಾಗುತ್ತಿತ್ತು. ಒಂದು ದಿನ ತನ್ನ ಕೋಣೆಯಲ್ಲಿ ಆರಾಮ ಕುರ್ಚಿಯಲ್ಲಿ ಕುಳಿತು ಯಾವುದೋ ಒಂದು ಪತ್ರಿಕೆಯನ್ನು ಒದುತ್ತಲಿದ್ದ. ವೈದ್ಯಕೀಯ ಪರೀಕ್ಷೆಯ ಫಲಿತಾಂಶ ಬಂದಿತ್ತು. ಅದರಲ್ಲಿ ತಾನು ತೇರ್ಗಡೆಯೊದುದನ್ನು ನೋಡಿ ತಟ್ಟನೆ ತಾಯಿಯ ಯೋಚನೆಯುಂಟಾಯಿತು. ದೇವರ ಅನುಗ್ರಹವಿದ್ದು ಅವಳು ಬದುಕಿದ್ದರೆ ಅವಳಿಗೂ ತನ್ನ ಶುಭ ಸಂಗತಿಯನ್ನು ತಿಳಿಸಿ ಅವಳನ್ನು ಸಂತೋಷಿಸುತ್ತಿದ್ದೆ. ಈಗ ಅನಾಥನಾದ ತನ್ನ ವಿಷಯದಲ್ಲಿ. ಸಂತೋಷಿಸುವವರ್ಯಾರು?

ಆತನ ಮನಸ್ಸೆಲ್ಲಾ ಮನೆಯ ಕಡೆಗೆ ತಿರುಗಿತು. ಹುಚ್ಚು ಹಿಡಿದಂತಾಯಿತು. ಕೈಯಲ್ಲಿದ್ದ ಪತ್ರಿಕೆಯು ಕೈಯಿಂದ ತಟ್ಟನೆ ಕೆಳಗೆ ಬಿತ್ತು. ಕೋಣೆಯ ಹೊರಗೆ ದಾವಿಸಿದನು. ರಸ್ತೆಗೆ ಇಳಿದು ತನ್ನ ಊರಿನ ಕಡೆಗೆ ನಡೆದನು. ಎಷ್ಟು ಮೈಲಿ ನಡೆದನೆಂದೇ ಗೊತ್ತಾಗದಾಯ್ತು. ತನ್ನ ಊರನ್ನು ಸೇರಿದನು. ತಾಯಿಯನ್ನು ಬಿಟ್ಟು ಹೋಗಿದ್ದ ಆಸ್ಪತ್ರೆಗಾಗಿ ಹೋದನು. ತಾಯಿಯು ಗುಣಹೊಂದಿ ಮನೆಗೆ ಹೋಗಿರುವಳೇ ಎಂದು ಕೇಳಲು ಧೈರ್ಯ ತೋರಲಿಲ್ಲ. ಎಂಟು ವರ್ಷಗಳ ಹಿಂದೆ ಮನೆಯನ್ನು ಬಿಟ್ಟು ಅನಾಥನೆಂದು ಓಡಿದ್ದೆಲ್ಲ ಜ್ಞಾಪಕಕ್ಕೆ ಬಂತು. ಮನಸ್ಸು ಭಾರವಾಯಿತು. ಕಾಲುಗಳು ಹಿಂದಕ್ಕೆ ಸೆಳೆಯುವಂತಾಯ್ತು. ಅತೀ ಕಷ್ಟದಿಂದ ಮನೆಯನ್ನು ಸೇರಿದ. ಮನೆಯು ಹಿಂದೆ ತಾನು ನೋಡಿದಂತೆಯೇ ಇತ್ತು. ಮನೆಯ ಬಾಗಿಲು ತೆರೆದಿತ್ತು. ಮೈ ಜುಮ್ಮೆನ್ನಿಸಿತು. "ತಾನು ಹಾಕಿ ಹೋಗಿದ್ದ ಬಾಗಿಲನ್ನು ತೆರೆದವರ್ಯಾರು? ಎಂದು ಒಳಗೆ ಪ್ರಶ್ನಿಸಿದ. ಮನೆಯೊಳಗೆ ಎಲ್ಲೆಲ್ಲಿಯೂ ಶಾಂತಿ. ಗಾಬರಿಯಾದ, ಕೈಕಾಲುಗಳಿಗೆ ನಡುಕವುಂಟಾಯಿತು. ಒಳಗೆ ಕೋಣೆಯಿಂದ ಕೆಮ್ಮಲು ಕೇಳಿಸುತ್ತಿತ್ತು. ಒಳಗೆ ಹೋಗಿ ಹಾಸಿಗೆಯ ಬಳಿ ಕುಳಿತ. ಎಂಟು ವರ್ಷಗಳ ಹಿಂದೆ ನೋಡಿದ ತಾಯಿಯ ರೂಪವು ಕಣ್ಣಮುಂದೆ ಕಾಣಿಸಿತು. ಆಗಿನ ರೂಪಕ್ಕೂ ಈಗ ಹಾಸಿಗೆಯಲ್ಲಿ ಮಲಗಿದ್ದ ರೂಪಕ್ಕೂ ಎಷ್ಟೊ ವ್ಯತ್ಯಾಸವಿತ್ತು. ಮುಖವೆಲ್ಲ ನೆರಿಗೆ ಹಿಡಿದಿತ್ತು. ತಲೆಕೂದಲು ಬಿಳಿವರ್ಣದಾಗಿತ್ತು. ಹಲ್ಲುಗಳು ಉದುರಿದ್ದವು. ಕಣ್ಣುಗಳು ಆಳಕ್ಕೆ ಹೋಗಿದ್ದವು. ಕೈಯಲ್ಲಿ ಬರೀ ಮೂಳೆಗಳು ಎತ್ತಿ ಕಾಣುತ್ತಿದ್ದವು. ದುಃಖದಿಂದ ಬಳಲುತ್ತಿರುವ ಮನವನ್ನು ಒತ್ತಿ ಹಿಡಿದು "ಅಮ್ಮಾ ಅಮ್ಮಾ! ನನ್ನ ಗುರುತು ನಿನಗೆ ಇಲ್ಲವೇ? ನಾನು ನಿನ್ನ ಶ್ಯಾಮ. ನಿನ್ನನ್ನು ಕಷ್ಟದಲ್ಲಿರುವಾಗ ಬಿಟ್ಟು ಹೋದುದಕ್ಕಾಗಿ ಕ್ಷಮಿಸು. ನಿನ್ನ ರೋಗಗಳನ್ನು ಗುಣಪಡಿಸಲೋಸುಗ ನಾನು ಇಂದು ವೈದ್ಯನಾಗಿ ಬಂದಿರುವೆನು. ನನ್ನನ್ನು ಕ್ಷಮಿಸಲಾರೆಯಾ ಅಮ್ಮಾ!" ಎಂದು ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿದನು.

ಮಗನ ಮಾತುಗಳನ್ನು ಕೇಳಿದ ತಾಯಿಯು ಆಶ್ಚರ್ಯದಿಂದಲೂ ಸಂತೋಷದಿಂದಲೂ ಧಾರಾಕಾರವಾಗಿ ಕಂಬನಿಯನ್ನು ಸುರಿಸುತ್ತ ಮಗನನ್ನು ನೋಡುತ್ತ ಅವನ ಕೈಗಳನ್ನು ಬಿಗಿಯಾಗಿ ಹಿಡಿದುಕೊಂಡು "ಮಗೂ, ಹೋದಲ್ಲಿಂದ ಆರು ತಿಂಗಳುಗಳ ವರೆಗೆ ಆಸ್ಪತ್ರೆಯಲ್ಲಿದ್ದೆನು. ರೋಗವು ಸರಿಯಾಗಿ ಗುಣ ಹೊಂದದ್ದರಿಂದ ಮನೆಗೆ ಹಿಂತಿರುಗಿದೆನು. ನಿನ್ನ ವಿಷಯದಲ್ಲಿ ಸ್ಮರಣ ಮಾಡುತ್ತಾ ವರ್ಷಗಳನ್ನು ಕಷ್ಟದಿಂದ ಕಳೆದೆನು. ನನ್ನಂತಹ ರೋಗಿಗಳನ್ನು ರೋಗಮುಕ್ತರನ್ನಾಗಿ ಮಾಡಲು ಶಕ್ತಿಯನ್ನು ಸದಾ ದೇವರು ಅನುಗ್ರಹಿಸಲಿ. ಇಂದಿನಿಂದ ನೀನು ಅನಾಥನಾದೆ. ಅದಕ್ಕಾಗಿ ನೀನು ದುಃಖ ಪಡಬೇಕಾಗಿಲ್ಲ. ಕಡೆಯ ಕಾಲಕ್ಕಾದರೂ ಸಂತೋಷದಿಂದ ಕಣ್ತುಂಬ ನೋಡಿ ನಿನ್ನ ತಂದೆಯಿರುವಲ್ಲಿಗೆ ತೆರಳುವೆನು ಎಲ್ಲವೂ ದೇವರ ಅ—ನು—ಗ್ರ—ಹ" ಎಂದು ನುಡಿದಳು. ಶ್ಯಾಮನು ಮೂಗ್ಧನಂತಾಗಿದ್ದನು. ಎತ್ತಲೋ ಹುಚ್ಚನಂತೆ ನೋಡುತ್ತಿದ್ದವನು "ಅಮ್ಮಾ" ಎಂದು ತಾಯಿಯ ಕಡೆ ತಿರುಗಿದನು. ಅಷ್ಟರಲ್ಲಿ ತಾಯಿಯ ಶ್ವಾಸವು ನಿಂತಿತ್ತು. ಕಣ್ಣುಗಳು ಮಗನನ್ನೆ ನೋಡುವಂತೆ ತೆರೆದಿದ್ದವು. ಆದರೆ ಅದರಲ್ಲಿ ಜೀವದ ಕಳೆ ಮಾತ್ರ ಇರಲಿಲ್ಲ.

Coorg Forest Department
Timber Sale Notice.

About 1,00,000 cft. of Teak, Biti, Honne, Mathi, and Nandi (Venteak) etc., will be sold by auction at the Coorg Government Timber Depot, Hunsur, on Wednesday the 25th November 1953 at 10 A. M.

For Conditions of the Sale etc apply to the Conservator of Forests, Coorg, Mercara.

ವಾರದ ಭವಿಷ್ಯ

ತಾ. ೬—೧೧—೫೩ರಿಂದ ೧೨—೧೧—೫೩ರ ವರೆಗೆ.

ಜ್ಯೋತಿಷ್ಯ—ಶ್ರೀ ಬಿ. ಜಿ. ಶ್ರೀನಿವಾಸ ಶಾಸ್ತ್ರಿಯವರು.

ಮೇಷ

ಈ ವಾರ ನೀವು ಆಶಾತತ್ಪರರಾಗಿ ಅನೇಕ ಕಾರ್ಯಗಳನ್ನು ಕೈಗೊಂಡು ಆಹಾರ ಪಾನೀಯಗಳನ್ನೂ ಸಹ ಸಮಯಕ್ಕೆ ಸರಿಯಾಗಿ ಸ್ವೀಕರಿಸದೆ ಇರಬೇಕಾಗುವದರಿಂದ ಆರೋಗ್ಯ ಮಟ್ಟವು ಚೆನ್ನಾಗಿರಲಾರದು. ಪ್ರಭು ಜನರ ಸಹಾಯವು ನಿಮ್ಮ ಮೇಲಿಲ್ಲದ ಕಾರಣ ನಿಮ್ಮ ಕಾರ್ಯಕ್ಕೆ ವಿಘ್ನಗಳೊದಗಿ ಮನಸ್ಸಿಗೆ ಅಶಾಂತಿಯಾಗುವುದು. ಮಿತ್ರ ಜನರು ನಿಮ್ಮನ್ನು ವಂಚಿಸಲಿರುವರು. ವಿದ್ಯಾಭ್ಯಾಸಿಗಳು ಕರ್ತವ್ಯ ಮೂಢರಾಗುವರು. ತಾ. ೬, ೭, ಸಂಚಾರ, ಮನಕ್ಲೇಶ.

ವೃಷಭ

ಈ ವಾರ ನಿಮ್ಮ ಆರೋಗ್ಯವು ಚೆನ್ನಾಗಿರುವುದು. ಮಿತ್ರ ಜನರು ನಿಮ್ಮ ಸಹಾಯವನ್ನು ಬೇಡುವರು. ಕೋರ್ಟು ವ್ಯವಹಾರಗಳು ಪ್ರತಿಕೂಲವಾಗಿ ಮನಸ್ಸಿಗೆ ಅಸಮಾಧಾನವಾಗುವುದು. ವ್ಯಾಪಾರೋದ್ಯಮಿಗಳು ಹೆಚ್ಚಿನ ಆಶಾತತ್ಪರರಾಗಿ ತುಂಬಾ ತೊಂದರೆಗೊಳಗಾಗುವರು. ವಿದ್ಯಾರ್ಥಿ ವೃಂದಕ್ಕೆ ಈ ವಾರವು ಉತ್ತಮವಿರುವುದು. ತಾ. ೮, ೯ ಮಿತ್ರಭೇಟಿ.

ಮಿಥುನ

ನೀವು ಕೈಕೊಂಡ ಕಾರ್ಯಗಳಲ್ಲಿ ಈ ವಾರ ಜಯಶಾಲಿಗಳಾಗುವಿರಿ. ಶತ್ರುಗಳ ವಿಷಯದಲ್ಲಿ ಸ್ವಲ್ಪ ಮುಂಜಾಗ್ರತೆ ವಹಿಸಿಕೊಳ್ಳಬೇಕಾಗುವುದು. ಆರೋಗ್ಯ ಉತ್ತಮ. ಕೋರ್ಟು ವ್ಯವಹಾರಗಳು ಧನ ನಷ್ಟದ ನಂತರ ಅನುಕೂಲ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ತಮ್ಮ ಪ್ರವೃತ್ತಿಯಲ್ಲಿ ಪ್ರಗತಿ. ತಾ. ೮, ೯ ಖರ್ಚು, ಕಾರ್ಯಸಿದ್ಧಿ.

ಕರ್ಕಾಟಕ

ಗುರುವೇ ಪ್ರತಿಕೂಲಸ್ಥನಾದರೆ ಕಾರ್ಯಗಳು ಹೇಗೆ ತಾನೆ ಕೊನೆಗೊಳ್ಳುವವು? ಶಂಕರನನ್ನು ಶರಣು ಹೊಂದಿ ಸತ್ಯ ಪಕ್ಷಪಾತಿಗಳಾಗಿ ವರ್ತಿಸಿದರೆ ಕಾರ್ಯಗಳು ಕೈಗೂಡಲಿವೆ. ಆರೋಗ್ಯ ಮಟ್ಟವು ಶೀತ ಪ್ರಕೃತಿ ರೋಗದಿಂದ ಚೆನ್ನಾಗಿರಲಾರದು. ಸಾಂಪತ್ತಿಕ ವಿಚಾರಗಳಲ್ಲಿ ಬಿಕ್ಕಟ್ಟುಗಳಿದ್ದರೂ ಮಿತ್ರರ ಸಹಾನುಭೂತಿ ಸಹಾಯಗಳಿವೆ. ವಿದ್ಯಾರ್ಥಿಗಳಿಗೆ ಆಲಸ್ಯ. ತಾ. ೧೧, ೧೨ ಮನಕ್ಲೇಶ, ಸಂಚಾರ.

ಸಿಂಹ

ಈ ವಾರ ನಿಮ್ಮ ಆರೋಗ್ಯವು ಚೆನ್ನಾಗಿದ್ದು ಸಮಾಜದಲ್ಲಿ ಮಾನಸನ್ಮಾನಗಳು ಲಭಿಸಲಿವೆ. ಮೇಲಧಿಕಾರಿಗಳ ಕಟಾಕ್ಷದಿಂದ ತಾವು ಉತ್ತಮರೆನಿಸಿಕೊಳ್ಳುವಿರಿ. ಆರ್ಥಿಕ ವಿಚಾರದಲ್ಲಿ ಕುಟುಂಬದ ಅನಾರೋಗ್ಯ ನಿಮಿತ್ತ, ಮತ್ತು ಅಯೋಚಿತ ಸಂಚಾರ ನಿಮಿತ್ತವಾಗಿ ಖರ್ಚಾಗಲಿದೆ. ವ್ಯಾಪಾರೋದ್ಯಮಿಗಳಿಗೆ ಈ ವಾರ ಲಾಭದಾಯಕವಾಗಿರುವುದು. ತಾ. ೬, ೭ ಲಾಭ, ಸಂಚಾರ.

ಕನ್ಯಾ

ಶರೀರದಲ್ಲಿ ಉಷ್ಣಾಧಿಕದಿಂದ ಈ ವಾರ ನಿಮ್ಮ ಆರೋಗ್ಯವು ಕೆಡಲಿದೆ. ಅಧಿಕ ಸಂಲಾಪದಿಂದ ವಾಕ್ಕಲಹ. ಜನವಿರೋಧಿಗಳು ಒದಗಿ ಮಾನಸಿಕ ಮಟ್ಟವು ಚಂಚಲವುಳ್ಳದ್ದಾಗುವುದು. ಮಿತ್ರರು ನಿಮ್ಮನ್ನು ವಂಚಿಸಲಿರುವರು ಆಪ್ತ ಬಂಧು ವರ್ಗದವರ ವಿಯೋಗ ನಿಮಿತ್ತ ಖರ್ಚಾಗಲಿದೆ. ವ್ಯಾಪಾರಸ್ಥರು ತುಂಬಾ ಕಷ್ಟಕ್ಕೊಳಗಾದರೂ ಕಡೆಗೆ ತೃಪ್ತಿಯನ್ನು ಹೊಂದುವರು. ತಾ. ೧೧, ೧೨ ಖರ್ಚು.

ತುಲಾ

ಈ ವಾರ ನೀವು ಬಹಳ ಎಚ್ಚರಿಕೆಯಿಂದ ವರ್ತಿಸತಕ್ಕದ್ದು. ಪರಸ್ಪರ ವಿರುದ್ಧ ಸ್ವರೂಪದ ವಿಚಾರಗಳು ನಿಮ್ಮ ತಲೆಯಲ್ಲಿ ಸುತ್ತುತ್ತಿರಬಹುದು. ಆರೋಗ್ಯ ಸ್ಥಿತಿ ಚೆನ್ನಾಗಿದ್ದರೂ ಇತರರ ಹವ್ಯಾಸಕ್ಕೊಳಗಾಗಿ ಮಾನಸಿಕ ಮಟ್ಟವು ಚೆನ್ನಾಗಿರಲಾರದು. ನೀವು ಹಿತರೆಂದು ಭಾವಿಸಿದ ಜನರು ನಿಮ್ಮನ್ನು ಮೋಸಪಡಿಸ್ಸುವರು. ತಾ. ೧೧, ೧೨ ಕರ್ಮವೈಕಲ್ಯ, ಮನಃಕ್ಲೇಶ.

ವೃಶ್ಚಿಕ

ತಾವು ಈ ವಾರ ಪ್ರಯತ್ನಕ್ಕೆ ಸರಿಯಾದ ಫಲವನ್ನು ಹೊಂದುವದೆಂದರೆ ಬಲು ಕಷ್ಟ ಸಾಧ್ಯ. ಆರೋಗ್ಯ ದೃಷ್ಟಿಯಿಂದ ಉತ್ತಮವಿರುವದು. ಮನಸ್ಸಿನಲ್ಲಿ ಸಾಹಸದ ವಿಚಾರಗಳು ತಲೆದೋರಿ ಪ್ರಯತ್ನಿಸಿ ಇಚ್ಛಾಪೂರ್ತಿಯ ಕಾಲದಲ್ಲಿ ಅಚಿಂತಿತ ಘಟನೆಗಳೊದಗಿ ಸಂದಿಗ್ಧ ಪರಿಸ್ಥಿತಿಯುಂಟಾಗಿ ಮನಸ್ಸಿಗೆ ಶಾಂತಿಯಿರಲಾರದು. ವಿದ್ಯಾರ್ಥಿ ವೃಂದವು ವ್ಯಾಕುಲತೆಯನ್ನು ಹೊಂದುವದು. ತಾ. ೮, ೯ ಮನೋವ್ಯಥೆ, ಖರ್ಚು.

ಧನು

ತಾವು ಈ ವಾರ ಯಾವ ಕಾರ್ಯಕ್ಕೆ ಕೈ ಹಾಕಿದರೂ ಅವು ಸಫಲವಾಗುವವು. ಇತರರು ನಿಮ್ಮ ಸಹಾಯಕರಾಗುವರು. ಆರೋಗ್ಯವು ಸಾಕಷ್ಟಿದ್ದು ಪ್ರಭು ಜನರ ಭೇಟಿ ಸನ್ಮಾನಗಳು ಲಭಿಸಲಿವೆ. ಹಣಕಾಸಿನ ವಿಷಯದಲ್ಲಿ ಪ್ರಥಮತ ಚಿಂತೆ ಮೂಡಿದರೂ ಮಿತ್ರರ ಸಹಾಯದಿಂದ ದೂರವಾಗುವದು. ತಾ. ೧೧, ೧೨, ಪ್ರಭು ಜನರ ಭೇಟಿ, ಸನ್ಮಾನ.

ಮಕರ

ಈ ವಾರ ನಿಮ್ಮ ಆರೋಗ್ಯವು ಚೆನ್ನಾಗಿರುವುದು. ಕುಟುಂಬದ ಅನಾರೋಗ್ಯ ಮತ್ತು ವಾಕ್ಕಲಹ ನಿಮಿತ್ತದಿಂದ ಮನಸ್ಸಿಗೆ ಶಾಂತಿ ಇರಲಾರದು. ಕೆಲವು ವೇಳೆ ಮನಸ್ಸಿನಲ್ಲಿ ಸಾಹಸ ಕೃತ್ಯಗಳು ತಲೆದೋರಿದರೂ ಇತರ ಅಡಚಣೆಗಳಿಂದ ತಾನಾಗಿಯೇ ಮಾಯವಾಗುವವು. ವ್ಯಾಪಾರ ತತ್ಪರರಿಗೆ ಈ ವಾರ ಹೆಚ್ಚಿನ ಉತ್ತಮವಿಲ್ಲ. ತಾ. ೧೦, ೧೧ ಖರ್ಚು.

ಕುಂಭ

ಆರೋಗ್ಯ ದೃಷ್ಟಿಯಲ್ಲಿ ಈ ವಾರವು ನಿಮಗೆ ಉತ್ತಮವಿರುವದು. ಮನೋನಿಶ್ಚಿತ ಕಾರ್ಯಗಳು ಪ್ರಥಮದಲ್ಲಿ ಸುಗಮವಾದರೂ ಕಡೆಗೆ ವಿಪರೀತ ಘಟನೆ ಒದಗಿ ಮನಸ್ಸು ವ್ಯಾಕುಲತೆಯನ್ನು ಹೊಂದುವದು. ಆರ್ಥಿಕ ಸ್ಥಿತಿಯಲ್ಲಿ ತಾವು ಮಾನವಂತರೆನಿಸಿಕೊಳ್ಳುವದೇ ಕಷ್ಟವೆಂದು ತೋರುವದು. ವಿದ್ಯಾರ್ಥಿಗಳು ಈ ವಾರ ಬಹುಮಾನಿತರಾಗುವರು. ತಾ. ೧೧, ೧೨ ಸುಖ ಸಂಚಾರ.

ಮೀನ

ಗುರು ಕೇಂದ್ರವು ನಿಮ್ಮ ರಾಶಿಗಿರುವದರಿಂದ ಆರೋಗ್ಯವು ಸಾಕಷ್ಟಿದ್ದು ಈ ವಾರ ನೀವು ಮನೋನಿಶ್ಚಿತ ಕಾರ್ಯಗಳಲ್ಲಿ ಶೀಘ್ರ ಜಯಾಗುವಿರಿ. ಸಾಂಪತ್ತಿಕ ವಿಚಾರದಲ್ಲಿ ತೊಂದರೆಯಾದರೂ ಮಿತ್ರ ಬಂಧುಗಳ ಸಹಾಯದಿಂದ ಪಾರಾಗುವಿರಿ. ಕೋರ್ಟು ವ್ಯವಹಾರಗಳು ಅನುಕೂಲವಾಗಲಿವೆ. ವಿದ್ಯಾರ್ಥಿಗಳು ತಮ್ಮ ಕಾರ್ಯಗಳಲ್ಲಿ ಮುಂಗಾಮಿಗಳಾಗುವರು. ತಾ. ೧೦, ೧೧ ಸನ್ಮಾನ, ಲಾಭ, ಮಿತ್ರರ ಭೇಟಿ.

ವೀರಾಜಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಟಿ ಎಸ್. ಗೋವಿಂದರಾಜು

ಧರ್ಮರಹಸ್ಯ

ಮನುಷ್ಯನು ತನ್ನನ್ನು ತಾನು ಪ್ರೀತಿಸುವದಾದರೆ ತನ್ನ ಮೇಲೆ ತಾನು ಕಾವಲಿರಬೇಕು. ದಿನ ರಾತ್ರಿಗಳಲ್ಲಿ ತನ್ನ ನಡತೆ ನೀತಿಗಳ ಮೇಲೆ ಕಾಪಲಿಡಬೇಕು.

ಇತರರು ಹೇಗೆ ನಡೆಯಬೇಕೆಂದು ನಾವು ಇಚ್ಛಿಸುವೆವೋ ಹಾಗೆ ನಾವು ನಡೆಯುವದನ್ನು ಮೊದಲು ಕಲಿಯಬೇಕು. ತನ್ನನ್ನು ಹಿಡಿತದಲ್ಲಿಟ್ಟವನು ಇತರರಿಗೆ ಬೋಧಿಸಲು ಅರ್ಹತೆ ಪಡೆಯುವನು

ತಾನೇ ತನ್ನ ಒಡೆಯನು. ತನಗಿಂಥಾ ಮಿಗಿಲಾದ ದೇವರು ಬೇರಿರಲಾರನು. ತನ್ನನ್ನು ತಾನು ಹಿಡಿತದಲ್ಲಿಡಲು ಕಲಿತ ಮನುಷ್ಯನು ಕಾಣದ ದೇವರನ್ನು ಪ್ರತ್ಯಕ್ಷ ಪಡಿಸಿಕೊಂಡಂತೆ.

ತನ್ನಿಂದ ಮಾಡಲ್ಪಟ್ಟ ಕೇಡು ತನಗೇ ಅನ್ವಯಿಸುವದು. ಇನ್ನೊಬ್ಬರಿಗೆ ಗುರಿಯಿಟ್ಟ ಅಪಮಾನವು ತನ್ನನ್ನೇ ಸೇರುವುದು. ವಜ್ರವನ್ನು ನಾಶ ಮಾಡಲು ಯತ್ನಿಸಿದ ಇತರ ರತ್ನಗಳು ತಮ್ಮಿಂದ ತಾವೇ ನಾಶಗೊಳ್ಳುವಂತೆ ಜಗದ ಜನಕ್ಕೆ ಕೇಡು ಬಗೆವವನು ನಾಶವಾಗುವನು.

ಮರವನ್ನಾಶ್ರಯಿಸಿ ಹಬ್ಬಿದ ಬಳ್ಳಿಯು ಮರವನ್ನು ಸುತ್ತಿ ಮುತ್ತಿ ಮರವು ಕಾಣದಂತೆ ಮುಚ್ಚಿ ಕಡೆಗೆ ಅದನ್ನು ಕೊಲ್ಲುವಂತೆ ಮನುಷ್ಯನ ದುಷ್ಟ ಕರ್ಮಗಳು ಬೆಳೆದು ಕಡೆಗೆ ಆತನನ್ನೇ ನಾಶ ಮಾಡುವವು.

ಕೇಡನ್ನು ಮಾಡಲು ಬಹು ಸುಲಭ. ಅದು ಇಳಿಜಾರಿನ ದಾರಿಯಲ್ಲಿ ನಡೆದಂತೆ. ಆದರೆ ಒಳ್ಳೇದನ್ನು ಸಾಧಿಸುವದು ಬೆಟ್ಟವನ್ನು ಏರಿದಂತೆ ಕಠಿಣ. ಸುಲಭದ ದಾರಿಯಿಂದ ಕೆಳಗೆ ಹೋದರೂ ಸತ್ಪಥವು ಕಷ್ಟಕರವೂ, ಶ್ರಮಕರವೂ ಆಗುವುದು.

ಕೇಡು ತನ್ನಿಂದಲೇ ತನಗಾಗುವದಲ್ಲದೆ ಪರರಿಂದ ತನಗಾಗುವದಲ್ಲ. ತಾನೇ ಅದನ್ನು ಅನುಭವಿಸಬೇಕಲ್ಲದೆ ಪರರಲ್ಲ. ತಾನೇ ಅದನ್ನು ಶುದ್ಧೀಕರಿಸಬೇಕಲ್ಲದೆ ಬೇರೆಯವರಲ್ಲ. ಆದ್ದರಿಂದ ಕೆಡುಕನಾಗುವದೂ ಉತ್ತಮನಾಗುವದೂ ಅವನವನ ಕೆಲಸದ ಮೇಲೆಯೇ ನಿಂತಿದೆ. ಅವನವನ ಉತ್ಕರ್ಷ ಅವನತಿಗಳು ಅವನ ಕರ್ಮದ ಮೇಲೆಯೇ ಆಧರಿಸಿವೆ

ಒಬ್ಬನು ಇನ್ನೊಬ್ಬನನ್ನು ಸತ್ಪಥಕ್ಕೆ ಹಚ್ಚಲಾರ. ಇನ್ನೊಬ್ಬನನ್ನು ಮೇಲೆತ್ತಿ ಸದ್ಗುಣಿಯಾಗಿ ಮಾಡಲಾರ. ಪ್ರತಿಯೊಬ್ಬನೂ ಅವನವನೇ ಪ್ರಯತ್ನಿಸಿ ಅವನವನ ಉದ್ಧಾರ ಮಾಡಿಕೊಳ್ಳಬೇಕು.



ಪ್ರಾಣಿಸಂಗ್ರಹಾಲಯದಲ್ಲಿ ಸಿಂಹಗಳಿಗೆ ಬುದ್ಧಿ ಕಲಿಸುವನೊಬ್ಬನು ಮನೆಯಲ್ಲಿ ತನ್ನ ಹೆಂಡತಿಯ ಎದುರಾಗ ತುಂಬಾ ಹೆದರುತ್ತಿದ್ದನು. ಒಂದು ದಿನ ಆತನು ರಾತ್ರಿ ಮನೆಗೆ ಬರಲು ಬಹಳ ಹೊತ್ತಾಯಿತು. ಅಷ್ಟು ಹೊತ್ತಿಗೆ ಮನೆಗೆ ಬಂದು ಹೆಂಡತಿಯ ಸಿಟ್ಟನ್ನು ಎದುರಿಸಲು ಹೆದರಿ ಆತನು ಪ್ರಾಣಿಸಂಗ್ರಹಾಲಯಕ್ಕೆ ಹೋಗಿ ಸಿಂಹವನ್ನು ಮಲಗಲು ಹೇಳಿ ಅದರ ಹೆಗಲಿಗೆ ಒರಗಿ ನಿದ್ದೆಹೋದನು.

ಮರುದಿನ ಬೆಳಿಗ್ಗೆ ಹೆಂಡತಿಯು ಗಂಡನನ್ನು ಹುಡುಕುತ್ತಾ ಪ್ರಾಣಿಸಂಗ್ರಹಾಲಯಕ್ಕೆ ಬಂದು ಸಿಂಹದ ಪಂಜರದಲ್ಲಿದ್ದ ಗಂಡನನ್ನು ನೋಡಿ 'ಹೇ ಹೇಡಿ' ಎಂದಳು!

* * *

ಸಿಟ್ಟಿನಿಂದ ರೇಗಿದವನೊಬ್ಬನು ಲಾಯರು ಆಫೀಸಿಗೆ ಬಂದು, 'ದರ್ಜಿಯೊಬ್ಬನು ಸಮಯಕ್ಕೆ ಸರಿಯಾಗಿ ಬಟ್ಟೆ ಕೊಡದ್ದರಿಂದ ನಾನು ಜಗಳ ಮಾಡಿದಾಗ 'ನೀನೆಲ್ಲಾದರೂ ಸಾಯು' ಎಂದು ಹೇಳಿದನು. ಇದಕ್ಕೆ ನಿಮ್ಮ ಸಲಹೆ ಬೇಕು' ಎಂದು ಹೇಳಿ ಐವತ್ತು ರೂಪಾಯಿಗಳನ್ನು ಮುಂದಿಟ್ಟನು.

ಲಾಯರು ರೂಪಾಯಿಗಳನ್ನು ಜೇಬಿನೊಳಗೆ ಹಾಕಿ, 'ಆ ದರ್ಜಿಯು ಸಾಯಲು ಹೇಳಿದನೆ? ನನ್ನ ಬುದ್ಧಿವಾದವೇನೆಂದರೆ ಆತನು ಹೇಳಿದಂತೆ ನೀನು ಮಾಡುವದು ಬೇಡ' ಎಂದನು.

* * *

ಯಜಮಾನನು ಅಡಿಗೆ ಮನೆ ಬಾಗಿಲಲ್ಲಿ ನಿಂತು 'ಈ ದಿನ ರಾತ್ರಿ ಊಟಕ್ಕೆ ಏನು ಮಾಡಿರುವೆ?'

ಅಡಿಗೆಯವ—ಈ ದಿನ ಸಾವಿರಾರು ವಸ್ತುಗಳನ್ನು ತಿನ್ನಬಹುದು.

ಯಜಮಾನ—ಯಾವುವು?

ಅಡಿಗೆಯವ—ಕಡಲೆ ಸಾರು!

* * *

ಬಸ್ಸಿನಲ್ಲಿ ಪ್ರಯಾಣಿಕರು ತುಂಬಾ ಇದ್ದರು ಸುಂದರಿ ಯುವತಿಯೊಬ್ಬಳಿಗೆ ಯೋಗ್ಯ ಸ್ಥಳದೊರೆಯದೆ ಹಿಂದಿನ ಸೀಟಿನಲ್ಲಿ ಕೂರಬೇಕಾಯಿತು. ಸ್ವಲ್ಪ ಸಮಯದ ನಂತರ ಪಕ್ಕದಲ್ಲಿ ಕುಳಿತ ಪ್ರಯಾಣಿಕನು ಸಿಗರೇಟು ಹಚ್ಚತೊಡಗಿದನು.

ಯುವತಿ—ಸಿಗರೇಟು ಎಳೆದರೆ ನನಗೆ ತಲೆ ತಿರುಗುತ್ತದೆ.

ಪ್ರಯಾಣಿಕ—ತಲೆ ತಿರುಗುವದಾದರೆ ನೀನೇಕೆ ಸಿಗರೇಟ್ ಸೇದಬೇಕು?

* * *

ಧೈವಭಕ್ತನೊಬ್ಬನು ಭಾಷಣ ಮಾಡುತ್ತಿದ್ದನು. ಧರ್ಮ, ನೀತಿಗಳ ಆವಶ್ಯಕತೆಯನ್ನು ಕುರಿತು ವಿವರಿಸುತಿದ್ದನು ಸಭೆಯಲ್ಲಿ ಕುಳಿತಿದ್ದ ಕಮ್ಯೂನಿಸ್ಟ್ ಬಸ್ಕೀನವರೊಬ್ಬರು ಎದ್ದು ನಿಂತು 'ನಿಮ್ಮ ಧರ್ಮ, ವೇದಾಂತ ಪ್ರಾರಂಭವಾಗಿ ಸಾವಿರಾರು ವರ್ಷಗಳಾಗಿದ್ದರೂ ಜಗತ್ತಿನ ಸ್ಥಿತಿಯನ್ನು ನೋಡಿರಿ ನೀವು ಅಪೇಕ್ಷಿಸಿದಂತೆ ಒಂದೇ ಹೆಜ್ಜೆ ಮುಂದಿಟ್ಟಿಲ್ಲ' ಎಂದನು.

ಪ್ರಚಾರಕರು—ನಿಜವಿರಬಹುದು ಸಹೋದರ. ಜಗತ್ತಿನಲ್ಲಿ ನೀರು ಉತ್ಪಾದನೆಯಾಗಿ ಮಿಲಿಯಾಂತರ ವರ್ಷಗಳು ಸಂದಿವೆ. ಆದರೆ ನಿಮ್ಮ ಮುಖವೂ, ಬಟ್ಟೆಗಳೂ ಹೇಗಿವೆ ನೋಡಿ?

* * *

ಕುರುಡನೊಬ್ಬನು ಭಿಕ್ಷೆಗಾಗಿ ಬಂದಿದ್ದನು. ಮನೆಯ ಯಜಮಾನನು ಆತನ ಭಿಕ್ಷಾಪಾತ್ರೆಗೆ ನಾಲ್ಕಾಣೆ ಎಸೆದನು. ಅದು ಅದರೊಳಗೆ ಬೀಳದೆ ಹೊರಗೆ ಬಿತ್ತು. ಅದನ್ನು ಭಿಕ್ಷುಕನು ಹೆಕ್ಕಿಕೊಂಡನು. ಅದನ್ನು ಕಂಡು ಯಜಮಾನನು, 'ನೀನು ಕುರುಡನೆಂದು ನಂಬಿದ್ದೆ' ಎಂದನು.

ಭಿಕ್ಷುಕ—ನಾನು ಯಾವಾಗಲೂ ಬರುವ ಕುರುಡನಲ್ಲ. ಇಂದು ಅವನು ಸಿನೆಮಾಕ್ಕೆ ಹೋಗಿರುವದರಿಂದ ಆತನ ಬದಲು ನಾನು ಬಂದಿರುವೆನು!

* * *

ಹೋಟೆಲ್ ಮಾಲೀಕರೊಬ್ಬರು ತನ್ನ ಹೋಟೇಲಿನ ಉದ್ಘಾಟನೆಯನ್ನು ಆ ದೇಶದ ಅರಸರಿಂದ ನಡೆಸಿ ಆ ಹೋಟೆಲಿಗೆ 'ರಾಯಲ್ ರೆಸ್ಟೋರೆಂಟ್' ಎಂದು ಹೆಸರಿಟ್ಟು ಆ ಬೋರ್ಡಿನ ಅಡಿಯಲ್ಲಿ 'ಅರಸರು ಇಲ್ಲಿ ಊಟ ಮಾಡುತ್ತಾರೆ' ಎಂದು ಬರೆದರು.

ಹೋಟೇಲಿಗೆ ಬಂದ ಕೆಲವು ವಿದ್ಯಾರ್ಥಿಗಳು ಆ ಬೋರ್ಡಿನ ಕೆಳಗೆ "God Save the King" ದೇವರು ರಾಜರನ್ನು ರಕ್ಷಿಸಲಿ' ಎಂದು ಬರೆದಿದ್ದರು!

* * *

ನ್ಯೂಯಾರ್ಕಿನ ಬೀದಿಯಲ್ಲಿ ತಿರುಗಿದ್ದ ಪ್ರಯಾಣಿಕನೊಬ್ಬನನ್ನು ಜೇಬುಕಳ್ಳನು ನಿಲ್ಲಿಸಿ 'ನಿನ್ನಲ್ಲಿರುವ ಹಣವನ್ನು ಕೊಡು. ಇಲ್ಲದಿದ್ದರೆ ನಿನ್ನ ಮೆದುಳನ್ನು ಹಾರಿಸಿ ಬಿಡುವೆ' ಎಂದನು.

ಪ್ರಯಾಣಿಕ—ಹಾರಿಸು, ನ್ಯೂಯಾರ್ಕಿನಲ್ಲಿ ಮೆದುಳಿಲ್ಲದೆ ಜೀವಿಸಬಹುದು. ಆದರೆ ಹಣವಿಲ್ಲದೆ ಸಾಧ್ಯವಿಲ್ಲ! ಎಂದನು

ಶ್ರೀ. ಅಶೋಕ ಮೆಹ್ತಾರಿಗೆ ೧೬ ತಿಂಗಳ ಶಿಕ್ಷೆ

ಪ್ರಜಾ ಸೋಷಲಿಸ್ಟ್ ಮುಖಂಡರಾದ ಶ್ರೀ. ಅಶೋಕ ಮೆಹ್ತಾರವರಿಗೆ ಪರ್ದಿ ಸತ್ಯಾಗ್ರಹದ ಸಂಬಂಧವಾಗಿ ಒಟ್ಟು ೧೬ ತಿಂಗಳ ಅವಧಿಯ ಸಾದಾ ಸಜವನ್ನೂ, ಒಟ್ಟು ೫೦ ರೂಪಾಯಿಗಳ ಜುಲ್ಮಾನೆಯನ್ನೂ ವಿಧಿಸಲಾಗಿದೆ.

ಅವರು ಜನರನ್ನು ನಾನಾ ಅಪರಾಧಗಳನ್ನು ಮಾಡುವಂತೆ ಚಿತಾವಣಿಗೊಳಿಸಿದರಿಂದಲೂ, ಅಕ್ರಮ ಕೂಟ ಸೇರಿಸಿದ್ದರಿಂದಲೂ, ಕ್ರಿಮಿನಲ್ ರೀತಿಯ ಅತಿಕ್ರಮ ಪ್ರವೇಶವನ್ನೂ ಆಸ್ತಿಪಾಸ್ತಿಗೆ ನಷ್ಟವನ್ನೂ ಮಾಡಿದ್ದಾರೆಂದೂ ಪಾರ್ದಿಯ ಮ್ಯಾಜಿಸ್ಟ್ರೇಟರು ತೀರ್ಪಿತ್ತು ಪ್ರತಿಯೊಂದು ಅಪರಾಧಕ್ಕೂ ಕಾರಾಗೃಹ ವಾಸವನ್ನೂ, ಜುಲ್ಮಾನೆಯನ್ನೂ ವಿಧಿಸಿದರು.

ಶಿಕ್ಷೆಗಳನ್ನೆಲ್ಲಾ ಒಟ್ಟಿಗೆ ಅನುಭವಿಸಲು ಮ್ಯಾಜಿಸ್ಟ್ರೇಟರು ಆಜ್ಞೆ ಮಾಡಿರುವುದರಿಂದ ಶ್ರೀ. ಅಶೋಕ ಮೆಹ್ತಾರವರು ಒಟ್ಟು ೧೧ ತಿಂಗಳ ಕಾಲ ಸೆರೆಮನೆಯಲ್ಲಿರಬೇಕಾಗುವುದು.

ಈ ಮೊಕದ್ದಮೆಯಲ್ಲಿ ಅಪಾದಿತರಾಗಿದ್ದ ಅನೇಕ ಮಂದಿಯಲ್ಲಿ ಒಟ್ಟು ಏಳು ಮಂದಿಯನ್ನು ಮಾತ್ರ ಎಲ್ಲಾ ಆಪಾದನೆಗಳಿಂದಲೂ ಖುಲಾಸೆ ಮಾಡಲಾಯಿತು. ಹಾಗೆ ಖುಲಾಸೆಯಾದವರಲ್ಲಿ ಬೊಂಬಾಯಿ ಲೆಜಿಸ್ಲೆಟಿವ್ ಅಸೆಂಬ್ಲಿಯ ಪ್ರಜಾ ಸೋಷಲಿಸ್ಟ್ ಸದಸ್ಯರಾದ ಡಾ. ಅಮೂಲ್ ದೇಸಾಯಿಯವರೂ ಒಬ್ಬರು.

Office of the Development Commissioner,
Community Projects, Coorg,
Mercara, the 29th October, 1953.

NOTICE

Sealed Tenders will be received by the Development Commissioner, Coorg at his office upto 3 P. M. on 19th November, 1953 for the following works. The tender should be in the prescribed form obtainable in the office of the Development Commissioner, Coorg on payment of Rs 10/. For copies of tender notices and other perticulars please apply to the Development Commissioner, Community Projects. Coorg.

(1) Construction of Hostel blocks for 50 students at Kudige.
(2) ,, Hostel block for 10 lady students.
(3) ,, Dining hall.
(4) ,, Kitchen.
(5) ,, Model school for 5 classes.
(6) ,, Quarters for graduate teachers one.
(7) ,, Quarters for Matric & non-Matric teachers (three twin blocks)
(8) ,, Quarters for three Peons.

I. C. Subbiah,
Development Commissioner.

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00 000
ವಸೂಲಾದ ಶೇರು ಮೊಬಲಗು	,,	2,61,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	16,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಶೇಕಡ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	3-4-0
1 ವರುಷದಿಂದ 5 ವರ್ಷಗಳ ವರೆಗೆ	,,	4-4-0
5 ವರುಷ ಮತ್ತು ಮೇಲ್ಪಟ್ಟ ಅವಧಿಗೆ	,,	4-12-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಬೆಳ್ಳಿಯ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ,
ಪ್ರೆಸಿಡೆಂಟ್ & ಖಜಾಂಚಿ.

ಮಡಿಕೇರಿಯಲ್ಲಿ ಡಾ. ಕಾಟ್ಜೂ. ಸಮಾಜ ಶಿಕ್ಷಣ ದಿನಾಚರಣೆ.

ಕೇಂದ್ರ ಸರಕಾರದ ಗೃಹಮಂತ್ರಿಗಳಾದ ಡಾ. ಕೈಲಾಸನಾಥ ಕಾಟ್ಜೂರವರು ತಾರೀಕು ೩೦ರ ಸಾಯಂಕಾಲ ೬.೩೦ ಗಂಟೆಗೆ ಮಂಗಳೂರಿನಿಂದ ಮಡಿಕೇರಿಗೆ ಬಂದರು. ಮಡಿಕೇರಿ ಟೋಲ್‌ಗೇಟಿನ ಬಳಿ ಅವರನ್ನು ಕೊಡಗಿನ ಮಂತ್ರಿಗಳೂ, ಚೀಫ್ ಕಮಿಷನರು ಮತ್ತು ಸಾರ್ವಜನಿಕರೂ ಎದುರ್ಗೊಂಡು ಸ್ವಾಗತವನ್ನೀಯಲಾಯಿತು.

ಅತಿಥಿಗಳ ಗೌರವಾರ್ಥವಾಗಿ ರಾತ್ರೆ ಅವರಿಗೆ ಒಂದು ಔತಣವನ್ನು ಶಾಸನ ಸಭಾಭವನದಲ್ಲಿ ಏರ್ಪಡಿಸಲಾಗಿತ್ತು. ಶಾಸನ ಸಭಾಸದಸ್ಯರೂ, ಗಜೆಟೆಡ್ ಉದ್ಯೋಗಿಗಳೂ ಇದಕ್ಕೆ ಆಹ್ವಾನಿಸಲ್ಪಟ್ಟಿದ್ದರು. ಈ ಔತಣದಲ್ಲಿ ಡಾ. ಕಾಟ್ಜೂರವರು ಭಾಷಣ ಮಾಡುತ್ತಾ 'ಕೊಡಗು ಸುಂದರ ದೇಶ. ಇಲ್ಲಿಗೆ ಕಳೆದ ಸಾರೆ ನಾನೊಮ್ಮೆ ಬಂದಿದ್ದೆ. ಇಲ್ಲಿಯ ಸೌಂದರ್ಯ ಹವಾಗುಣಗಳಿಂದ ನಾನು ಮೋಹಿತನಾಗಿರುವೆನು. ಇಲ್ಲೇ ಮನೆಮಾಡಿಕೊಂಡು ನಾನಿರಲೋ ಎನಿಸುತ್ತದೆ.

ಇಂದಿನದು ಪ್ರಚಾರಯುಗ. ಕೊಡಗಿನ ಸೌಂದರ್ಯ, ಇಲ್ಲಿಯ ಜನರ ಮೂಲ ಮೊದಲಾದವುಗಳ ಬಗ್ಗೆ ಶಾಸ್ತ್ರೀಯ ರೀತಿಯ ಅರಿವನ್ನು ಹೊರದೇಶದವರಿಗೆ ಕೊಡಬೇಕು. ನಿಮ್ಮಲ್ಲಿಯ ವೈಶಿಷ್ಟ್ಯ ವಿಶೇಷತೆಗಳಿಗೆ ಯೋಗ್ಯ ನೆರವು ನೀಡಬೇಕು. ಕುಂಭಮೇಳದಂತೆ ಕಾವೇರಿಯಲ್ಲಿ ಒಂದು ಮೇಳವನ್ನು ಏರ್ಪಡಿಸಬೇಕು. ನಿಮ್ಮ ಸುಖ, ಸಂತೋಷ, ಶಾಂತಿ, ಸಮೃದ್ಧಿಗಳಲ್ಲಿ ನೆರೆಯವರೂ ಪಾಲುಗೊಳ್ಳುವ ಅನುಮಾಡಬೇಕು. ಗಂಗಾ ಯಮುನಾನದಿಗಳು ಉತ್ತರ ದೇಶದ ಸಂಪತ್ತಿಗೆ ಕಾರಣವಾದಂತೆ ಕಾವೇರಿನದಿಯು ದಕ್ಷಿಣ ದೇಶದ ಸಂಪತ್ತಿಗೆ ಕಾರಣವಾಗಿದೆ.

ನಾನು ಹಿಂದೂದೇಶದ ಎಲ್ಲಾ 'ಎ.' 'ಬಿ.' ಮತ್ತು 'ಸಿ' ಸಂಸ್ಥಾನಗಳಲ್ಲಿ ತಿರುಗಿರುವೆನು. ಬಹುತೇಕ ಈ ಸಂಸ್ಥಾನಗಳಲ್ಲಿರುವಂತೆ ಅಧಿಕಾರದ ಪೈಪೋಟಿ, ಮಂತ್ರಿಮಂಡಳಗಳನ್ನು ವಿಸ್ತರಿಸಬೇಕೆಂಬ ಕೂಗು ಕೊಡಗಿನಲ್ಲಿ ಇಲ್ಲದಿರುವದನ್ನು ನೋಡಿ ನನಗೆ ಸಂತೋಷವಾಗಿದೆ. ಕೊಡಗು ಚಿಕ್ಕ ಪ್ರದೇಶವಾದರೂ ಅದೃಷ್ಟಶಾಲಿ ತನಗೆ ಸಹಾಯನೀಡಬೇಕೆಂದು ಕೇಂದ್ರ ಸರಕಾರದ ಮುಂದೆ ನಿಂತು ಯಾಚಿಸುವ ಸ್ಥಿತಿ ಅದಕ್ಕಿಲ್ಲ. ಚಿಕ್ಕ ಆಡಳಿತವು ಯಾವಾಗಲೂ ದಕ್ಷವಾಗಿ ನಡೆಯುತ್ತದೆ. ಆಡಳಿತಗಾರರಿಗೆ ಜನತೆಯೊಡನೆ ನೇರವಾದ ಸಂಪರ್ಕವಿಟ್ಟುಕೊಳ್ಳುವ ಅನು ಇದರಲ್ಲಿದೆ. ದೇಶದ ಯಾವುದೇ ಪ್ರಜೆಯು ತನ್ನ ಬೇಕುಬೇಡಿಕೆಗಳನ್ನು ನೇರವಾಗಿ ಹೇಳಿಕೊಂಡು ಅವನ್ನು ಶೀಘ್ರವಾಗಿ ಅದನ್ನು ಸಾಧಿಸಿಕೊಳ್ಳುವ ಅನುವಿದೆ. ನಾನೂ ಕೂಡ ಕೊಡಗಿನಂಥಾ ಚಿಕ್ಕ ಪ್ರಾಂತವೊಂದರಲ್ಲಿ ಹುಟ್ಟಿದವನು. ಅದರ ಜನಸಂಖ್ಯೆ ೮ ಲಕ್ಷ, ವಾರ್ಷಿಕ ಉತ್ಪತ್ತಿ ೧.೨ ಲಕ್ಷವಿತ್ತು. ಆ ಸಂಸ್ಥಾನವು ಈಗ ಮಧ್ಯಭಾರತದಲ್ಲಿ ಸಮಾವೇಶವಾಗಿದೆ. ನಿಮ್ಮ ಈ ಚಿಕ್ಕ ದೇಶದಲ್ಲಿ ೨ ಲಕ್ಷ ಜನಸಂಖ್ಯೆ ಇದ್ದರೂ ಆರ್ಥಿಕ ಸ್ಥಿತಿ ಚೆನ್ನಾಗಿರುವ ಕಾರಣ ತನ್ನ ಕಾಲಿನ ಮೇಲೆ ತಾನು ಭದ್ರವಾಗಿ ಅದು ನಿಲ್ಲಲು ಸಾಧ್ಯವಾಗಿದೆ. ಕೊಡಗಿನಲ್ಲಿ ಆಡಳಿತ ಜವಾಬ್ದಾರಿ ಹೊತ್ತವರೂ, ಇತರ ಸಣ್ಣ ಪ್ರಾಂತಗಳ ಆಡಳಿತೆಯವರೂ ಆಡಳಿತದಲ್ಲಿ ಎಲ್ಲಾ ವರ್ಗದವರಿಗೂ ನ್ಯಾಯದೊರಕುವಂತೆ ನೋಡಿಕೊಳ್ಳಬೇಕು. ಕೊಡಗು 'ಸಿ' ವರ್ಗದ ಸಂಸ್ಥಾನಗಳಿಗೆ ದೀಪದಂತಿದೆ. ಅದರ ಬೆಳಕು ಇನ್ನೂ ಪ್ರಕಾಶಮಾನವಾಗಿ ಬೆಳಗಲಿ.

ಕೊಡಗು ಮತ್ತೊಂದು ವಿಚಾರದಲ್ಲಿ ಅದೃಷ್ಟಶಾಲಿ. ಮಧ್ಯ ಭಾರತದ ಜನಸಂಖ್ಯೆ ೬ ಕೋಟಿ ಇದೆ. ಆದರೆ ಈ ಜನಸಂಖ್ಯೆಯಲ್ಲಿ ಒಂದು ಕೋಟಿಯಷ್ಟು ಮಾತ್ರ ಸಾಮೂಹಿಕ ವಿಕಾಸ ಯೋಜನೆಯ ಲಾಭವನ್ನು ಪಡೆಯುತ್ತಿವೆ. ಆದರೆ ಇಡೀ ಕೊಡಗು ಈ ಯೋಜನೆಯಲ್ಲಿ ಅಡಕವಾಗಿದೆಯೆಂಬುದು ಶುಭ ಸಂಗತಿ. ಎಲ್ಲರೂ ಸಹಕರಿಸಿ ಈ ದೇಶವನ್ನು ಆದರ್ಶ ಸಂಸ್ಥಾನವಾಗಿ ಮಾಡಬೇಕಿದೆ" ಎಂದು ಹೇಳಿದರು.

ಕೊಡಗಿನ ಮುಖ್ಯ ಮಂತ್ರಿಯವರಾದ ಶ್ರೀ ಸಿ. ಎಂ. ಪೂಣಚ್ಚನವರು ಅವರಿಗೆ ಸ್ವಾಗತವನ್ನೀಯುತ್ತಾ "ನಾವು ತಮ್ಮನ್ನು ಸದಾ ಗುರುವೆಂದೂ, ತತ್ವಜ್ಞಾನಿ ಮುಂದಾಳೆಂದೂ ಭಾವಿಸುವೆವು. ನಮ್ಮ ನ್ಯಾಯವಿಧಾಯಕ ಸಭೆಯ ಉದ್ಘಾಟನಾ ಸಮಾರಂಭವನ್ನು ನೆರವೇರಿಸುವ ಸಂದರ್ಭದಲ್ಲಿ ತಾವು ನಮ್ಮ ಮುಂದಿರಿಸಿದ ಉಚ್ಚ ಧ್ಯೇಯಗಳಿಗೆ ಸರಿಯಾಗಿ ನಡೆಯಲು ಸದಾ ಯತ್ನಿಸುವೆವು" ಎಂದು ಹೇಳಿದರು.

ಡಾಕ್ಟರ್ ಕಾಟ್ಜೂರವರು ಮರುದಿನ ಬೆಳಿಗ್ಗೆ ಕಾಂಗ್ರೆಸ್ ಎಂ ಎಲ್. ಎ ಗಳನ್ನೂ ಕೆಲಸಗಾರರನ್ನೂ ಭೇಟಿಯಾಗಿ ಮಂಗಳೂರಿಗೆ ೯ ಗಂಟೆಗೆ ತೆರಳಿದರು. ಇವರ ಭೇಟಿಗೆ ಅನು ಮಾಡಿಕೊಡಬೇಕೆಂದು ಎಂ. ಎಲ್. ಎ. ಗಳಾದ ಶ್ರೀ ಕೆ. ಪಿ. ಕರುಂಬಯ್ಯ ಮತ್ತು ಶ್ರೀ ಪಿ ಸಿ. ಉತ್ತಯ್ಯನವರು ಸ್ಥಳೀಯ ಸರಕಾರಕ್ಕೆ ಬರೆದುಕೊಂಡರೂ ಅವರು ಯೋಗ್ಯ ಏರ್ಪಾಡು ಮಾಡದ ಕಾರಣ ಮಂತ್ರಿಯವರು ಮಂಗಳೂರಿಗೆ ಹೊರಡುವ ಮುನ್ನ ಹಠ ಪೂರ್ವಕವಾಗಿ ಶ್ರೀ ಕೆ. ಪಿ. ಕರುಂಬಯ್ಯ ಮತ್ತು ಶ್ರೀ ಪಿ ಸಿ. ಉತ್ತಯ್ಯನವರು ಕೆಲವು ನಿಮಿಷಗಳ ವರೆಗೆ ಮಂತ್ರಿಗಳನ್ನು ಕಂಡು ಮಾತಾಡಿದರು. ನಿವೃತ್ತರಾದವರನ್ನು ಪುನಹ ಉದ್ಯೋಗಕ್ಕೆ ನೇಮಿಸಬಾರದೆಂಬ ವಿಚಾರವನ್ನೂ ಆಡಳಿತದಲ್ಲಿ ತಮಗೆ ತೋರಿದ ಕೆಲವು ಕುಂದು ಕೊರತೆಗಳನ್ನೂ ಮಂತ್ರಿಯವರ ಮುಂದಿಟ್ಟರೆಂದು ತಿಳಿಯಬರುತ್ತದೆ

ಪೊನ್ನಂಪೇಟೆ

ತಾರೀಕು ೨-೧೧-೫೩ರಲ್ಲಿ ಈ ಕೇಂದ್ರದ ಸಮಾಜ ಶಿಕ್ಷಣ ದಿನಾಚರಣೆಯು ನಡೆಯಿತು. ಶ್ರೀ ಎಂ. ಎ. ಚಂಗಪ್ಪನವರು ಧ್ವಜಾರೋಹಣ ಮಾಡಿದರು, ನಂತರ ಅಧ್ಯಾಪಕರೂ, ವಿದ್ಯಾರ್ಥಿಗಳೂ ಸೇರಿ ಶಾಲಾ ಆವರಣವನ್ನು ಶುಚಿಪಡಿಸಿದರು. ಮಧ್ಯಾಹ್ನದ ವೇಳೆ ಶ್ರೀ ಸಿ. ಎಂ. ನಾಣಮ್ಮಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಶ್ರೀ ಕೃಷ್ಣಮೂರ್ತಿಯವರ ಕಾವ್ಯವಾಚನ, ಶ್ರೀ ಶೇಷಗಿರಿಯವರ ಭಾರತ ವಾಚನ, ಶ್ರೀ ವಿಷಕಂಠರಾಯರಿಂದ ಲಾವಣಿಗಳಾದವು. ಶ್ರೀ ಪಿ ಜಿ. ಮುತ್ತಪ್ಪನವರು ಸಮಾಜ ಶಿಕ್ಷಣದ ವಿಚಾರ ಭಾಷಣ ಮಾಡಿದರು. ಅದೇ ದಿನ ಸಾಯಂಕಾಲ ನೆಹರೂ ಕಾಲನಿಯಲ್ಲಿ ಡಾ ನಾಣಮ್ಮಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಶ್ರೀ ವಿಷಕಂಠರಾಯರ ಲಾವಣಿ ಹಾಡಲ್ಪಟ್ಟಿತು.

[illegible]

ಇಲ್ಲಿ ಶ್ರೀ ಅಚ್ಚಿಕುಟ್ಟಿರ ಮಾದಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ವಿಷಕಂಠರಾಯರು ಲಾವಣಿ ಹಾಡಿದರು. ಶ್ರೀ ಪಿ. ಜಿ. ಮುತ್ತಪ್ಪನವರು ಸಾಮಾಜಿಕ ಶಿಕ್ಷಣದ ಕುರಿತು ಭಾಷಣ ಮಾಡಿದರು.

[illegible]

ಇಲ್ಲಿಯ ಶಾಲಾ ವಿದ್ಯಾರ್ಥಿಗಳೂ, ಅಧ್ಯಾಪಕರೂ ಪಾಲೂರು ದೇವಸ್ಥಾನಕ್ಕೆ ಹೋಗಿ ದೇವಸ್ಥಾನದ ಆವರಣದಲ್ಲಿ ೧೧-೧೫ರಿಂದ ೨-೩೦ರವರೆಗೆ ಕೆಲಸ ನಡೆಸಿದರು ಭೋಜನದ ನಂತರ ಸಭೆ ಸೇರಿತು. ಉಪಾಧ್ಯಾಯರುಗಳು ಪಂಚವಾರ್ಷಿಕ ಯೋಜನೆ, ಸಾಮೂಹಿಕ ಶಿಕ್ಷಣ, ಆರೋಗ್ಯ, ಗ್ರಾಮ ಶುಚಿತ್ವಗಳ ವಿಚಾರ ಭಾಷಣ ಮಾಡಿದರು. ವಿದ್ಯಾರ್ಥಿಗಳಿಂದ ಸಂಗೀತ, ಕೋಲಾಟ ನಡೆದವು.

ಕಾಕೂರು

ಇಲ್ಲಿ ಶ್ರೀಮಂಗಲ ನಾಡಿನ ಪಾರುಪತ್ತೆಗಾರರ ಅಧ್ಯಕ್ಷತೆಯಲ್ಲಿ ಈ ದಿನಾಚರಣೆ ನಡೆಯಿತು. ಧ್ವಜಾರೋಹಣದ ನಂತರ ಹೇರ್ಮಾಡು ದೇವಸ್ಥಾನಕ್ಕೆ ಮೆರವಣಿಗೆ ಹೋಗಿ ದೇವಸ್ಥಾನವನ್ನು ಶುಚಿಗೊಳಿಸಿದರು. ಶಾಲೆಗೆ ಆಟದ ಮೈದಾನ ಇಲ್ಲದ ಕಾರಣ ಸೇರಿದ್ದ ಜನರಿಂದ ರೂ. ೧೧೦ ಸಂಗ್ರಹಿಸಿ ಆಟದ ಮೈದಾನ ಮಾಡಲು ಶ್ರೀ ಮಚ್ಚಮಾಡ ಮೊಣ್ಣಪ್ಪನವರಿಗೆ ರೂ. ೪೫೦ಕ್ಕೆ ಕಂಟ್ರಾಕ್ಟು ಕೊಡಲಾಯಿತು. ನಂತರ ಶ್ರೀ ಮೊಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಶ್ರೀಗಳಾದ ಕೆ. ಸಿ. ಮಂದಣ್ಣ, ಕೆ. ಎಂ. ಮಾದಪ್ಪ, ಎಂ. ಡಿ. ಸುಬ್ಬಯ್ಯ, ಪಿ. ಕೆ. ಸುಬ್ಬಯ್ಯ ಮತ್ತು ವಿದ್ಯಾರ್ಥಿಗಳಾದ ಕೆ. ಎಂ. ಉತ್ತಯ್ಯ, ಎಚ್. ಎಂ. ಜಾನಕಿ, ಎಂ ಡಿ. ಮಂದಣ್ಣ, ಸಿ. ಕೆ. ನಾಣಯ್ಯ ಮೊದಲಾದವರು ಭಾಷಣ ಮಾಡಿದರು. ಸೇರಿದ್ದ ನಿರಕ್ಷರಸ್ಥರಲ್ಲಿ ಕೆಲವರಿಗೆ ರುಜು ಹಾಕಲು ಕಲಿಸಲಾಯ್ತು.

ತೊರೆನೂರು

ಇಲ್ಲಿಯ ಶಾಲೆಯಲ್ಲಿ ಪ್ರಾರ್ಥನೆಯಾದ ನಂತರ ಬೀದಿ ಬೀದಿ ಗುಡಿಸಿ, ಗ್ರಾಮ ನೈರ್ಮಲ್ಯದ ಪ್ರಚಾರ ಮಾಡಲಾಯಿತು. ಆಟೋಟಗಳ ಸ್ಪರ್ಧೆ ನಡೆಯಿತು. ನಂತರ ಶಾಲೆಯಲ್ಲಿ ಶ್ರೀ ಬಸಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಜಯಶೀಲರಾದವರಿಗೆ ಬಹುಮಾನ ಹಂಚಲಾಯಿತು. ಶ್ರೀಗಳಾದ ನಂಜುಂಡಸ್ವಾಮಿ, ಶಿವಧ್ವನಿ, ಸಿ. ಕೆ. ರಾಮಚಂದ್ರ ಮೊದಲಾದವರು ಭಾಷಣ ಮಾಡಿದರು.

[illegible]

ಬೆಳಿಗ್ಗೆ ಶಾಲಾ ಆವರಣದಲ್ಲಿ ಇಲ್ಲಿಯ ಶಾಲಾ ಮುಖ್ಯೋಪಾಧ್ಯಾಯರಿಂದ ಧ್ವಜಾರೋಹಣ ನಡೆಯಿತು. ನಂತರ ಇಲ್ಲಿಂದ ೨½ ಮೈಲು ದೂರವಿರುವ ಇರ್ಪು ದೇವಸ್ಥಾನಕ್ಕೆ ಹೋಗಿ ಅದರ ಸುತ್ತಮುತ್ತಲನ್ನು ಶುಚಿ ಮಾಡಲಾಯಿತು. ಮಧ್ಯಾಹ್ನ ಶ್ರೀ ಅಜ್ಜಮಾಡ ಮುದ್ದಪ್ಪ ಸಹೋದರರು ಏರ್ಪಡಿಸಿದ ಭೋಜನ ಮುಗಿಸಿಕೊಂಡು ಶ್ರೀ ಸಣ್ಣುವಾನಂದರವರ ಅಧ್ಯಕ್ಷತೆಯಲ್ಲಿ ಸಭೆ ಸೇರಲಾಯಿತು. ಶ್ರೀಗಳಾದ ಎಚ್. ಬಿ ಕುಶಾಲಪ್ಪ, ಎ. ಕೆ ಪೂವಯ್ಯ, ಎಂ. ಕೆ. ಪೆಮ್ಮಯ್ಯ, ಸಿ. ಕೆ. ನಂಗಣ್ಣ ಮತ್ತು ಕೆ. ಬಿ. ಐಯ್ಯಮ್ಮ ಇವರುಗಳು ಭಾಷಣ ಮಾಡಿದರು.

ಬೆಟ್ಟಗೇರಿ

ತಾ. ೧ರಂದು ಬೆಟ್ಟಗೇರಿ ಶಾಲೆಯಲ್ಲಿ ಶ್ರೀ ಮುಕ್ಕಾಟಿರ ಸೋಮಯ್ಯನವರ ಅಧ್ಯಕ್ಷತೆಯಲ್ಲಿ ಸಾಮಾಜಿಕಾಧ್ಯಯನವು ಸಾಂಗವಾಗಿ ನೆರವೇರಿತು. ಬೆಳಿಗ್ಗೆ ಹತ್ತುವರೆ ಗಂಟೆಗೆ ಧ್ವಜ ವಂದನೆ ಮಾಡಿ ಶಾಲೆಯಲ್ಲಿ ಸಭೆ ಜರುಗಿತು. ಮುಖ್ಯೋಪಾಧ್ಯಾಯರು ಪಂಚವಾರ್ಷಿಕ ಯೋಜನೆ ಮತ್ತು ಸಾಮೂಹಿಕ ಯೋಜನೆಯ ವಿಷಯವಾಗಿ ಮಾತನಾಡಿದರು. ಶ್ರೀ ಎಂ. ಎಂ. ಅಪ್ಪಯ್ಯನವರು ಆರೋಗ್ಯದ ವಿಷಯವಾಗಿಯೂ, ಅಬ್ದುಲ್ ರಹಿಮಾನ್, ಮೈಲಾರ್ ಮೊದಲಾದವರು ವಯಸ್ಕರಶಿಕ್ಷಣದ ವಿಷಯವೂ ಮಾತನಾಡಿದರು ಶ್ರೀ ಬಿ. ಎಂ. ಸೋಮಯ್ಯನವರು ವಯಸ್ಕರಿಗೆ ಪಾಠ ಮಾಡಿದರು. ಶಾಲಾ ಮಕ್ಕಳೂ ಉಪಾಧ್ಯಾಯರೂ ಊರ ಮಹನೀಯರೂ ಸೇರಿ ಮೆರವಣಿಗೆ ಹೋಗಿ ಬೆಟ್ಟಗೇರಿ ದೇವಾಲಯವನ್ನು ಶುಚಿ ಮಾಡಿದರು.

ಭಾಗಮಂಡಲ

ಇಲ್ಲಿ ಸಭೆಯು ಶ್ರೀನಿವಾಸಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಎ. ಕೆ. ಎಸ್. ಭಟ್, ಟಿ. ಆರ್. ಆಚಾರ್ಯ, ಪಿ. ಜಿ. ಮುತ್ತಪ್ಪ, ಪಿ. ಎಲ್. ಆರ್. ಶಾಸ್ತ್ರಿ. ನಾಗಪ್ಪ, ಬಿ ಟಿ. ಗಣಪತಿ ಮೊದಲಾದವರು ಭಾಷಣ ಮಾಡಿದರು. ನಂತರ ಮಂಗಳೂರಿನ ಶ್ರೀ ಕೆ. ಎಂ. ರಾಧಾಕೃಷ್ಣರವರ ಸಂಗೀತ ಕಚೇರಿ ಮತ್ತು ಶ್ರೀ ವಿಶ್ವೇಶ್ವರದಾಸರ ಹರಿಕಥೆ ನಡೆಯಿತು.

ಕೊಡಗು

ತಾರೀಕು ೬—೧೧—೧೯೫೩ನೇ ಶುಕ್ರವಾರ

ಬತ್ತದ ಬೆಲೆ ಮತ್ತು ವಿನಿಯಂತ್ರಣ.

ಈ ವರ್ಷ ಮಳೆಗಾಲ ಚೆನ್ನಾಗಿದ್ದು ಕೊಡಗಿನ ಬತ್ತದ ಬೆಳೆಯು ತೃಪ್ತಿಕರವಾಗಿದೆಯೆನ್ನಬಹುದು. ಇಷ್ಟು ವರ್ಷಗಳಿಂದ ಮಳೆಯ ಅಭಾವ ಮತ್ತಿತರ ತೊಂದರೆಗಳಿಂದ ಕಷ್ಟಪಡುತ್ತಿದ್ದ ರೈತನು ಈ ವರ್ಷ ನಾಲ್ಕು ಕಾಳು ಬತ್ತ ಹೆಚ್ಚು ಬೆಳೆಯಬಹುದೆಂದು ನಿರೀಕ್ಷಿಸುತ್ತಿದ್ದಾನೆ. ಈ ಸಂತೋಷದ ಸಮಯದಲ್ಲೇ ಬತ್ತದ ಬೆಲೆಯು ಕಡಿಮೆಯಾಗುವದೋ ಎಂಬ ಭಯವಿದೆ. ಸರಕಾರದವರು ರೈತನಿಗೆ ಕಳೆದ ವರ್ಷ ದೊರೆತ ಬೆಲೆಯೇ ಈ ವರ್ಷ ದೊರೆಯುವಂತೆ ಮಾಡಬೇಕಿದೆ. ಆ ಬೆಲೆಯು ದೊರೆತರೆ ರೈತನಲ್ಲಿ ಹುರುಪು ಹೆಚ್ಚಾಗಿ ಆತನು ಆಸ್ತೆಯಿಂದ ಹೆಚ್ಚು ಬೆಳೆಯುವ ಪ್ರಯತ್ನವನ್ನು ಮಾಡುವನು. ಜೊತೆಗೆ ಆತನ ಜೀವನಾವಶ್ಯಕ ಇತರ ವಸ್ತುಗಳ ಬೆಲೆಯೇನು ಇಳಿದಿಲ್ಲ. ಅದು ಇಳಿಯುವ ಸಂದರ್ಭವೂ ಕಾಣುತ್ತಿಲ್ಲ. ಆದ್ದರಿಂದ ರೈತನ ಬತ್ತಕ್ಕೆ ಕಳೆದ ವರ್ಷದ ಬೆಲೆಯು ದೊರೆಯಬೇಕಾದುದು ನ್ಯಾಯವಾಗಿದೆ.

ದೇಶದಲ್ಲಿ ಈ ವರ್ಷ ಬೆಳೆ ಚೆನ್ನಾಗಿರುವದರಿಂದ ಆಹಾರದ ಅಭಾವ ಇಲ್ಲದಾಗುತ್ತಿದೆ. ಮದ್ರಾಸು ಮೊದಲಾದೆಡೆಯೂ ಕೂಡ ಸಂಗ್ರಹಿಸಲ್ಪಟ್ಟ ಆಹಾರ ಪದಾರ್ಥಗಳನ್ನು ಶೀಘ್ರ ಮಾರುವ ಪ್ರಯತ್ನಗಳಾಗುತ್ತಿವೆ. ಏಕೆಂದರೆ ಹೊಸ ಬತ್ತ ಬಂದಾಗ ವ್ಯಾಪಾರಿಗಳಿಗೆ ನಷ್ಟವಾಗಬಹುದೆನ್ನಲಾಗಿದೆ. ಮುಂದಿನ ವರ್ಷದ ಆಹಾರ ಸ್ಥಿತಿಯು ಅನುಕೂಲವಿರುವದರಿಂದ ಕ್ರಮಶಃ ಆಹಾರ ನಿಯಂತ್ರಣವನ್ನು ತೆಗೆದು ಹಾಕುವದು ಹಿತ. ಕೊಡಗಿನಿಂದ ಕೇಂದ್ರ ಸರಕಾರಕ್ಕೆ ಕೊಡಬೇಕೆಂದು ನಿಶ್ಚಯಿಸಿರುವ ಅಂಶವನ್ನು ಬಿಟ್ಟು ಉಳಿದ ಬತ್ತದ ಮಾರಾಟವನ್ನು ಯಾವುದೇ ತಡೆಯಿಲ್ಲದೆ ಮಾಡುವ ಅನುವು ಮಾಡಲ್ಪಡುವದೆಂಬ ಸರಕಾರದ ನೀತಿಯು ಸ್ವಾಗತಾರ್ಹವಾಗಿದೆ.

ಬರುವ ವರ್ಷದ ಸ್ಥಿತಿ ಆಶಾದಾಯಕವಾಗಿದ್ದರೂ ಸದ್ಯಕ್ಕೆ ದೇಶದಲ್ಲಿ ಅನೇಕ ಜನರು ಊಟಕ್ಕಿಲ್ಲದೆ ತೊಂದರೆ ಪಡುತ್ತಿದ್ದಾರೆ. ಕೊಡಗಿನಲ್ಲಿ ಸಾಕಷ್ಟು ಬತ್ತವು ಮಿಲ್ಲುಗಳಲ್ಲಿ ನಿಕ್ಷೇಪ ಇದೆಯೆಂದು ತಿಳಿದು ಬಂದಿದೆ. ಹಾಗಿರುವಾಗ ಈ ಕಷ್ಟದ ಸಮಯದಲ್ಲಿ ತೊಂದರೆಗೊಳಗಾದವರಿಗೆ ನಿರ್ಬಾಧಕವಾಗಿ ನಿಯಂತ್ರಿತ ಬೆಲೆಯಲ್ಲಿ ಸಾಕಷ್ಟು ಅಕ್ಕಿ ರೇಷನ್ ಡಿಪೋಗಳಲ್ಲಿ ಕೂಪನ್ ಇಲ್ಲದೆ ದೊರೆಯುವಂತೆ ಮಾಡಬೇಕು. ಈಗ ಕೊಡಲು ಏರ್ಪಡಿಸಿರುವ ಬರೇ ಹತ್ತು ಸೇರಿನ ನಿರ್ಬಂಧ ಹಾಕದೆ ಸಾಕಷ್ಟು ಅಕ್ಕಿ ದೊರೆಯುವಂತೆ ಸರಕಾರ ಮಾಡುವದೆಂದು ನಂಬಲಾಗಿದೆ. ಏಕೆಂದರೆ ಇಂದೂ ಕೂಡ ಗ್ರಾಮಗಳಲ್ಲಿ ಬಟ್ಟಿಗೆ ರೂ. ೨೦ರಿಂದ ೨೫ರ ವರೆಗೆ ಬತ್ತ ಮಾರಾಟವಾಗುತ್ತಿರುವ ವಾರ್ತೆಗಳು ಕೇಳಿ ಬರುತ್ತಿವೆ. ಮುಂದಿನ ನಾಲ್ಕು ವಾರಗಳ ನಂತರ ಹೊಸ ಬತ್ತ ಬರಬಹುದಾದ್ದರಿಂದ ಈ ಸಂದಿಗ್ಧ ಸಮಯದಲ್ಲಿ ಸರಕಾರವು ಈ ಅನುಕೂಲತೆಮಾಡಿ ಜನರ ತೊಂದರೆ ನೀಗುವರೆಂದು ನಿರೀಕ್ಷಿಸಲಾಗಿದೆ.

ವರ್ತಮಾನ.

ಪೊಳ್ಳಿಬೆಟ್ಟದಲ್ಲಿ ನಡೆದ ಕೋರ್ ಹಾಕಿ ಕಪ್ಪಿನ ಕಡೇ ಆಟವು ಪೊಳ್ಳಿಬೆಟ್ಟ 'ಎ' ಟೀಮಿನವರಿಗೂ, ಮಡಿಕೇರಿ ಹೈಸ್ಕೂಲ್ ಟೀಮಿನವರಿಗೂ ನಡೆದು ಪೊಳ್ಳಿಬೆಟ್ಟ 'ಎ' ಟೀಮಿನವರು ಒಂದು ಗೋಲಿನಿಂದ ಜಯ ಪಡೆದರು. ಗೆದ್ದವರಿಗೆ ಮಿಸೆಸ್ ಬುಲ್ ರವರು ಕಪ್ಪನ್ನು ಕೊಟ್ಟರು.

ಅಂತರ್ಕಾಲೇಜು ಹಾಕಿ ಪಂದ್ಯಾಟಕ್ಕಾಗಿ ಕೊಡಗು ಸರಕಾರಿ ಕಾಲೇಜಿನ ಟೀಮಿನವರು ಗುರುವಯ್ಯೂರ್ ಕಾಲೇಜ್ ಟೀಮನ್ನು ೨ ಗೋಲುಗಳಿಂದ ತಾ. ೨೯ನಲ್ಲಿ ಸೋಲಿಸಿದರು. ತ್ರಿಚೂರ್ ಝೋನ್ ಕಡೇ ಆಟದಲ್ಲಿ ತ್ರಿಚೂರಿನ ಥಾಮಸ್ ಕಾಲೇಜ್ ಟೀಮನ್ನು ೧೧ ಗೋಲುಗಳಿಂದ ಸೋಲಿಸಿದರು.

ವೀರಾಜಪೇಟೆ ಕೊಡವ ಸಮಾಜದ ವಾರ್ಷಿಕ ಮಹಾಸಭೆಯು ತಾ. ೮ನೇ ಆದಿತ್ಯವಾರ ದಿನ ವೀರಾಜಪೇಟೆ ಮಹಿಳಾ ಸಮಾಜದಲ್ಲಿ ನಡೆಯುವದು. ಪೂರ್ವಾಹ್ನ ೯ ಘಂಟೆಗೆ ಆಟೋಟಗಳ ಸ್ಪರ್ಧೆ ನಡೆಯುತ್ತದೆ.

ಮಡಿಕೇರಿ ಗಾಯನ ಸಮಾಜದ ಆರಂಭೋತ್ಸವವು ಮಾನ್ಯ ಚೀಫ್ ಕಮಿಷನರವರ ಅಧ್ಯಕ್ಷತೆಯಲ್ಲಿ ಈ ತಾರೀಕು ೮ನೆ ಭಾನುವಾರ ಸಂಜೆ ೫ ಗಂಟೆಗೆ ಸೆಂಟ್ರಲ್ ಹೈಸ್ಕೂಲ್ ಹಾಲಿನಲ್ಲಿ ನೆರವೇರುವದು.

ನಾಪೋಕ್ಲು ನಾಡಿನ ಜನರು ನಾಪೋಕ್ಲು ಸ್ಟೋರ್ ಮಹಡಿಯಲ್ಲಿ ತಾ. ೨-೧೧-೫೩ರಲ್ಲಿ ಆ ನಾಡಿನ ಪಾರುಪತ್ತೆಗಾರರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸಾಮೂಹಿಕ ವಿಕಾಸ ಯೋಜನೆಯಲ್ಲಿ ನಾಡಿನಲ್ಲಿ ಆಗಬೇಕಾದ ಕೆಲಸಗಳನ್ನು ಮಾಡಲು ಸಲಹೆಗಳನ್ನು ಇನ್ನಿತರ ಕೆಲಸಗಳನ್ನು ಕೈಕೊಳ್ಳುವದಕ್ಕಾಗಿ ಒಂದು ಸಮಿತಿಯನ್ನೂ ಏರ್ಪಡಿಸಿ ತಾ ೧೬-೧೧-೫೩ರಲ್ಲಿ ನಾಡಿನ ಜನರ ಸಭೆ ಸೇರುವಂತೆ ತೀರ್ಮಾನಿಸಲಾಯಿತು.

ಸಾಮೂಹಿಕ ವಿಕಾಸ ಯೋಜನೆಯ ಕೆಲಸ ನಿಮಿತ್ತ ನಾಪೋಕ್ಲು ಟೌನಿನಿಂದ ಚವಲ್ ಕಡು (ದೋಣಿ ಕಡು) ರಸ್ತೆ ಅಂದಾಜು ೨॥ ಮೈಲು ದೂರದ ರಸ್ತೆಯ ಕೆಲಸವನ್ನು ನಾಪೋಕ್ಲು ಗ್ರಾಮಸ್ಥರು ೫೦೦ ಜನಕಸ್ಸು ಮಿಕ್ಕಿ ಕೆಲಸ ಮಾಡಿ ಪೂರೈಸಿದ್ದಾರೆ.

ಜ್ಯುಡಿಷಿಯಲ್ ಮತ್ತು ಶಾಸನ ಸಭಾ ಅ. ಸೆಕ್ರೆಟರಿಯೆಂದಿದ್ದ ಹುದ್ದೆಯ ಹೆಸರನ್ನು ಶಾಸನ ಸಭೆಯ ಎಕ್ಸ್ಆಫಿಶಿಯೋ ಸೆಕ್ರೆಟರಿ ಮತ್ತು ಲಾ ಸೆಕ್ರೆಟರಿಯೆಂದು ಬದಲಾಯಿಸಿ ಶ್ರೀ. ಎಂ. ಎನ್. ಗುಂಡುರಾಯರನ್ನೇ ಮಾಸಿಕ ರೂ. ೪೦೦-೨೦-೫೦೦ ರ ವೇತನದಲ್ಲಿ ನೇಮಿಸಲಾಗಿದೆ.

ಕೊಡಗಿನಿಂದ ಮೈಸೂರು ಹೈಕೋರ್ಟಿಗೆ ಹೋಗುವ ಅಪೀಲು ಕೇಸುಗಳಿಗೆ ಕೊಡಗಿನ ಪಬ್ಲಿಕ್ ಪ್ರಾಸಿಕ್ಯೂಟರಾಗಿ ಮೈಸೂರಿನ ಅಡ್ವೊಕೇಟ್ ಜನ್ನಲರನ್ನು ನೇಮಿಸಲಾಗಿದೆ.

ತನ್ನ ಇತರ ಜವಾಬ್ದಾರಿಯ ಜೊತೆಗೆ ಕೊಡಗಿನ ಮುಖ್ಯ ಚುನಾವಣಾ ಅಧಿಕಾರಿಯಾಗಿ ಕೊಡಗು ಸರಕಾರದ ಸೆಕ್ರೆಟರಿಯಾದ ಶ್ರೀ. ಎನ್. ಎಸ್. ರಾಮಚಂದ್ರನ್‌ರವರನ್ನು ನೇಮಿಸಲಾಗಿದೆ.

ಕೊಡ್ಲಿಪೇಟೆ ನೋಟಿಫೈಡ್ ಏರಿಯಾದ ಸಮಿತಿಗೆ ಶ್ರೀ. ಬಿ. ಎಸ್. ಕೆಂಚಯ್ಯನವರನ್ನೂ ಸೋಮವಾರಪೇಟೆ ನೋಟಿಫೈಡ್ ಏರಿಯಾ ಸಮಿತಿಗೆ ಶ್ರೀ. ಬಿ. ಕೆಂಚಪ್ಪನವರನ್ನೂ ಹಿಂದುಳಿದ ಪಂಗಡದವರ ಪರ ಸದಸ್ಯರಾಗಿ ನೇಮಿಸಲಾಗಿದೆ.

ಕೊಡಗಿನಲ್ಲಿ ಆಗಸ್ಟ್ ತಿಂಗಳಲ್ಲಿ ೨೮೭ ಜನನಗಳೂ, ೧೯೮ ಮರಣಗಳೂ ಸಂಭವಿಸಿವೆ.

ಅಮ್ಮತ್ತಿನಾಡು ಕೊಡವ ಸಭೆಯ ವಾರ್ಷಿಕ ಮಹಾಸಭೆಯು ತಾ. ೧೪ ರಲ್ಲಿ ಕಳ್ಳಿರ ಬಾಣೆ ಮಂದಿನಲ್ಲಿ ನಡೆಯುವದು.

ನಿವೃತ್ತ ಅಸಿಸ್ಟೆಂಟ್ ಕಮಿಷನರಾಗಿದ್ದ ಶ್ರೀ. ಕೋದಂಡ ಅಪ್ಪಯ್ಯನವರ ಪತ್ನಿಯವರು ತಾ. ೨ ರಲ್ಲಿ ಶಿವಾಧೀನರಾದರು.

ಕೊಡಗು ಸರಕಾರದವರು ಹೊಸದಾಗಿ ಏರ್ಪಡಿಸಿರುವ ಸಂಸ್ಕೃತಿ ಪ್ರಸಾರ ಯೋಜನೆಯ ಉದ್ಘಾಟನೆಯು ತಾ. ೭ ರಲ್ಲಿ ಚೀಫ್ ಕಮಿಷನರಿಂದ ಮಡಿಕೇರಿಯಲ್ಲಿ ನಡೆಯುವದು. ಮೂರ್ತಿ ವೆಂಕಟೇಶ ಐಯ್ಯಂಗಾರ್ ಮತ್ತು ಸಿ.ಕೆ. ವೆಂಕಟರಾಮಯ್ಯನವರ ಭಾಷಣಗಳೂ ಇವೆ.

ಕೊಡಗಿಗೆ ಬಂದಿರುವ ಮೈಸೂರಿನ ಮುಖ್ಯ ನ್ಯಾಯಾಧೀಶರಾದ ಪಾಲೇಕಂಡ ಮೇದಪ್ಪನವರಿಗೆ ವೀರಾಜಪೇಟೆಯ ಪುರಸಭೆಯವರು ತಾ ೩ ರಲ್ಲಿ ಒಂದು ಬಿನ್ನವತ್ತಳೆಯನ್ನು ಕೊಟ್ಟು ಸನ್ಮಾನಿಸಿದರು.

ಸಂಯುಕ್ತ ರಾಷ್ಟ್ರ ದಿನಾಚರಣೆ.

ತಾರೀಕು ೨೪ ರಲ್ಲಿ ಮಡಿಕೇರಿಯಲ್ಲಿ ಸಂಯುಕ್ತ ರಾಷ್ಟ್ರ ದಿನಾಚರಣೆ ನಡೆಯಿತು. ಶಾಲಾ ವಿದ್ಯಾರ್ಥಿಗಳ ಮೆರವಣಿಗೆಯ ನಂತರ ಕೋಟೆಯ ಆವರಣದಲ್ಲಿ ಚೀಫ್ ಕಮಿಷನರು ಸಂಯುಕ್ತ ರಾಷ್ಟ್ರ ಸಂಘದ ಧ್ವಜಾರೋಹಣ ಮಾಡಿದರು. ನಂತರ ಕೌನ್ಸಿಲ್ ಸಭಾಂಗಣದಲ್ಲಿ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಗೃಹ ಮಂತ್ರಿ ಮಲ್ಲಪ್ಪನವರೂ, ಮಿಸೆಸ್ ಚೆಪ್ಪುಡೀರ ಚಿಣ್ಣಪ್ಪ, ಸಿ. ಎ. ಮಂದಣ್ಣ, ಎ. ಪಿ. ಗೋಪಾಲಕೃಷ್ಣ ಮೊದಲಾದವರು ಭಾಷಣ ಮಾಡಿದರು. ಮಡಿಕೇರಿ ಪುರಸಭೆಯ ಪ್ರೆಸಿಡೆಂಟ್ ಜನಾಬ್ ಮೊಯಿದ್ದಿನ್‌ರವರ ವಂದನಾರ್ಪಣೆಯಿಂದ ಸಭೆ ಬರಕಾಸ್ತಾಯಿತು.

ನಾಪೋಕ್ಲು.

ಇಲ್ಲಿಯ ಪ್ರೌಢಶಾಲೆಯ ಆವರಣದಲ್ಲಿ ಈ ದಿನಾಚರಣೆ ಶ್ರೀ. ಡಿ. ಎನ್. ದೇವಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ. ಕೆ. ಬಿ. ಅಯ್ಯಪ್ಪನವರು ಭಾಷಣ ಮಾಡಿದರು. ನಂತರ ಮೆರವಣಿಗೆ, ಆಟೋಟಗಳ ಸ್ಪರ್ಧೆ ನಡೆಯಿತು. ಮಧ್ಯಾಹ್ನದ ಪೋಲೆ ಪಂಕ್ ಸ್ಪರ್ಧೆ, ಸಂಗೀತ ಸ್ಪರ್ಧೆ, ನೃತ್ಯ, ಪ್ರಬಂಧ ಸ್ಪರ್ಧೆ ಮೊದಲಾದುವು ನಡೆದು ಜಯಶೀಲರಾದವರಿಗೆ ಬಹುಮಾನ ಹಂಚಲಾಯಿತು.

ಪೊನ್ನಂಪೇಟೆ.

ಮೆರವಣಿಗೆಯ ನಂತರ ಡಾಕ್ಟರ್ ನಾಣಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ವಿದ್ಯಾರ್ಥಿಗಳಿಗೆ ವಾಕ್ಸ್ಪರ್ಧೆ ಏರ್ಪಡಿಸಲಾಗಿತ್ತು. ಶ್ರೀಗಳಾದ ಎಂ. ಎ. ಚಂಗಪ್ಪ, ಸಿ. ಎಸ್. ಪೊನ್ನಪ್ಪ ಇವರುಗಳು ಭಾಷಣ ಮಾಡಿದರು. ಶ್ರೀ. ಬಿ. ಕೆ. ಗೋಪಾಲದಾಸರ 'ಮೂರ್ವಾಸಾತಿಥ್ಯ' ಎಂಬ ಹರಿಕಥೆ ನಡೆಯಿತು.

ಹೆಬ್ಬಾಲೆ ಒಂಟಿಯಂಗಡಿ.

ಇಲ್ಲಿ ಶ್ರೀಮಾನ್ ಚೆನ್ನಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ವಿದ್ಯಾರ್ಥಿಗಳಿಗೆ ಆಟೋಟಗಳ ಸ್ಪರ್ಧೆ ಏರ್ಪಡಿಸಲಾಗಿತ್ತು. ಬಹುಮಾನ ವಿತರಣೆಯ ನಂತರ ಶ್ರೀಗಳಾದ ಪರ್ಲತ್ತಾಯ, ಕೆ. ಆರ್. ರಾವ್. ಕುಮಾರಿ ಕೆ. ಬಿ. ಅಕ್ಕಮ್ಮ ಮೊದಲಾದವರು ಭಾಷಣ ಮಾಡಿದರು.

ಮಡಿಕೇರಿ.

ಶ್ರೀ. ಕೆ ಕೆ. ಗಣಪತಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ. ಕೆ. ಎಸ್. ನಂಜಪ್ಪನವರು ಧ್ವಜಾರೋಹಣ ಮಾಡಿದರು. ಮೆರವಣಿಗೆ, ಆಟೋಟಗಳ ನಂತರ ಮಧ್ಯಾಹ್ನ ೧ ಗಂಟೆಗೆ ಸಭೆ ನಡೆದು ಬಹುಮಾನ ವಿನಿಯೋಗ ಮತ್ತು ಭಾಷಣಗಳಾದವು.

ಮೂರ್ನಾಡು.

ಸ್ಕೌಟ್ ಮತ್ತು ಗರ್ಲ್ಸ್ ಗೈಡ್ಸ್‌ಗಳ ಪೆರೇಡ್ ನಡೆದ ನಂತರ ಶ್ರೀ. ಕೆ ಎಂ. ಮೊಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಶ್ರೀಗಳಾದ ಬಿ. ಬಿ. ಮುದ್ದಯ್ಯ, ಬಿ. ಜಿ. ಮುತ್ತಣ್ಣ, ಎನ್. ಎ. ಮುತ್ತಪ್ಪ, ಎಂ. ಕೆ. ಕಾರ್ಯಪ್ಪ, ಟಿ. ಎಸ್. ಪೊನ್ನಮ್ಮ ಮೊದಲಾದವರು ಭಾಷಣ ಮಾಡಿದರು.

ಬೆಟ್ಟಗೇರಿ

ಶ್ರೀ ಮಣವಟ್ಟಿರ ಚಂಗಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ಶಾಲಾ ಮೈದಾನದಲ್ಲಿ ಸಾರ್ವಜನಿಕರೂ ವಿದ್ಯಾರ್ಥಿಗಳೂ ಸೇರಿ ಸ್ಪರ್ಧೆಗಳಲ್ಲಿ ಭಾಗವಹಿಸಿದರು. ವಿದ್ಯಾರ್ಥಿಗಳು ಕೋಲಾಟವಾಡಿದರು. ಶಾಲಾ ಮುಖ್ಯೋಪಾಧ್ಯಾಯರೂ ಶ್ರೀ ಪಡೆಯಟ್ಟಿರ ಪಳಂಗಪ್ಪನವರೂ ಮಾತನಾಡಿದರು.

ಭಾಗಮಂಡಲ

ಈ ದಿನಾಚರಣೆಯು ಇಲ್ಲಿನ ಪಾರುಪತ್ತೆಗಾರರಾದ ಶ್ರೀ ಬಿ. ಟಿ. ಗಣಪತಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಶಾಲಾ ಬಾಲಕರಿಗೂ ಇತರರಿಗೂ ಆಟೋಟಗಳ ಸ್ಪರ್ಧೆ ನಡೆದ ಮೇಲೆ ಶ್ರೀಗಳಾದ ಟಿ. ಆರ್. ಆಚಾರ್ಯ ಮೊದಲಾದವರು ಭಾಷಣ ಮಾಡಿದರು.

ನಿರುದ್ಯೋಗ

ದಿನ ಕಳೆದಂತೆ ದೇಶದಲ್ಲಿ ನಿರುದ್ಯೋಗ ಹೆಚ್ಚಾಗುತ್ತಿದೆಯೆಂಬುದು ಪತ್ರಿಕೆ ಓದುವವರೆಲ್ಲರಿಗೂ ತಿಳಿದಿದೆ. ಕೊಡಗಿನಲ್ಲಿಯೂ ಕೂಡ ಈ ಸಮಸ್ಯೆ ಜೋರಾಗುತ್ತಿದೆ. ಮನೆ ಮನೆಗೆ ಕೆಲಸ ಹುಡುಕಿಕೊಂಡು ತಿರುಗುವವರೂ, ಕೆಲಸ ದೊರೆಯದ ಕಾರಣ ಭಿಕ್ಷೆಗಿಳಿದಿರುವವರೂ ಹೆಚ್ಚಾಗಿದ್ದಾರೆ. ಒಂದೆಡೆ ವಿದ್ಯಾವಂತರ ನಿರುದ್ಯೋಗ ಹೆಚ್ಚುತಿದ್ದರೆ ಮತ್ತೊಂದೆಡೆ ಕಾರ್ಮಿಕರ ನಿರುದ್ಯೋಗವೂ ಬೆಳೆಯುತ್ತಿದೆ. ಈ ಕಾರ್ಮಿಕರ ನಿರುದ್ಯೋಗಕ್ಕೆ ಹೊರಗಿನಿಂದ ಕೊಡಗಿಗೆ ಬರುವವರ ಸಂಖ್ಯೆಯು ಹೇಗೆ ಕಾರಣವೋ ಅದೇ ರೀತಿ ದೇಶದ ವಿದ್ಯಾವಂತರ ನಿರುದ್ಯೋಗಕ್ಕೆ ಹೊರಗಿನಿಂದ ಜನರನ್ನು ತರುತ್ತಿರುವದೂ ಕಾರಣವಾಗಿದೆ. ಇದರ ನಿವಾರಣೆ ಬಗ್ಗೆ ಕೆಲವು ಸೂಚನೆಗಳನ್ನು ಇಲ್ಲಿ ಕೊಡಬಯಸುತ್ತೇನೆ.

(೧) ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜುಗಳಲ್ಲಿ ದೇಶೀಯ ನಿರುದ್ಯೋಗಿಗಳನ್ನು ಮಾತ್ರ ರಿಜಿಸ್ಟರು ಮಾಡಿ ಅವರಿಗೆ ಉದ್ಯೋಗ ಒದಗಿಸಬೇಕು. ಯೋಗ್ಯರು ದೊರೆಯದಲ್ಲಿ ಮಾತ್ರ ಹೊರಗಿನವರನ್ನು ಆರಿಸಬಹುದು.

(೨) ಒಂದೇ ಕುಟುಂಬದಲ್ಲಿ ಹೆಚ್ಚಿನವರು ಸರಕಾರಿ ಉದ್ಯೋಗಿಗಳಾಗಿದ್ದರೆ ಅಂಥಾ ಕುಟುಂಬದವರಿಗೆ ಪ್ರಾಶಸ್ತ್ಯ ಕೊಡದೆ ಸರಕಾರಿ ಉದ್ಯೋಗವಿಲ್ಲದ ಕುಟುಂಬದವರಿಗೆ ಅನು ಮಾಡಬೇಕು. (ಅಂದರೆ ಶಿಫಾರಸ್ಸು, ಮನೆತನಗಳನ್ನು ನೋಡಿ ಪಟ್ಟಿ ಕಟ್ಟದೆ ಇಷ್ಟೂ ಯೋಗ್ಯ ಅರ್ಹತೆ ಯುವರಾದರೆ ಸರಕಾರಿ ಉದ್ಯೋಗಿಗಳಿಲ್ಲದ ಕುಟುಂಬದವರನ್ನೇ ಆರಿಸಬೇಕು).

(೩) ದೇಶದಲ್ಲಿರುವ ವ್ಯವಸಾಯವೂ ಡಬಹುದಾದ ಜಮೀನಿನ ಲೆಕ್ಕ ತೆಗೆದು ನಿರುದ್ಯೋಗಿಗಳಾಗಿರುವ ಕಾರ್ಮಿಕರಿಗೆ ಭೂಮಿಯನ್ನು ಕೊಟ್ಟು ಅವರು ಯೋಗ್ಯ ವ್ಯವಸಾಯ ಕೈಕೊಳ್ಳುವಂತೆ ಹೊಸ ವಸಾಹತುಗಳನ್ನು ನಿರ್ಮಿಸಬೇಕು.

(೪) ಗ್ರಾಮಗಳ ಪರಿಶೀಲನೆ ಮಾಡಿ ಯಾವ ಗ್ರಾಮಗಳಲ್ಲಿ ಯಾವ ಯಾವ ಕೈಗಾರಿಕೆ ಮಾಡಬಹುದೆಂಬುದನ್ನು ಪರಿಶೀಲಿಸಿ ಅಂಥಾ ಗುಡಿ ಕೈಗಾರಿಕೆಗಳ ಸ್ಥಾಪನೆಗೆ ಏರ್ಪಾಡು ಮಾಡಬೇಕು.

ಸರಕಾರವು ಈ ವಿಚಾರಗಳನ್ನು ಗಮನಿಸಿ ಮುಂದಿನ ತನ್ನ ಕಾರ್ಯವಿಧಾನದಲ್ಲಿ ಇವುಗಳನ್ನು ಅಳವಡಿಸುವದೇ ?

ಗೋಪಾಲಕೃಷ್ಣ.

ವಿದೇಶಿ ಪಾನೀಯ

ದೇಶದ ಹಲವು ಕಡೆ ಹೊಸದಾಗಿ ವಿದೇಶೀ ಪಾನೀಯಗಳಾದ ಬ್ರಾಂಡಿ, ವಿಸ್ಕಿಗಳ ಅಂಗಡಿಗಳು ತೆರೆಯಲ್ಪಟ್ಟಿವೆ. ಅದೇ ರೀತಿ ಸೋಮವಾರಪೇಟೆಯಲ್ಲಿಯೂ ಒಂದು ತೆರೆಯಲ್ಪಟ್ಟಿದೆ. ಇಲ್ಲಿ ಕೂಪನ್ ಇಲ್ಲದೆ ಬ್ರಾಂಡಿ, ವಿಸ್ಕಿ ದೊರೆಯುತ್ತದೆಂದೂ ಅಂಗಡಿಯ ಒಳಭಾಗದಲ್ಲಿ 'ರಿಟೈಲ್' ಆಗಿ ಮಾರಲ್ಪಡುತ್ತದೆಂದೂ ವರ್ತಮಾನವಿದೆ. ಅಲ್ಲದೆ ಹೊರ ಪ್ರಾಂತಕ್ಕೂ ಸಾಗಿಸಲ್ಪಡುತ್ತಿದೆಯೆಂಬ ವಾರ್ತೆ ಇದೆ. ಈ ವಿಚಾರವನ್ನು ಸಂಬಂಧಿಸಿದ ಅಧಿಕಾರಿಗಳು ಪರಿಶೀಲಿಸಿ ಸರಕಾರಿ ನಿಯಮಕ್ಕೆ ವಿರುದ್ಧ ವರ್ತನೆ ಇದೆಯೆಂದಾದರೆ ಶಿಕ್ಷಿಸಬೇಕಿದೆ.

'ಸರಕಾರದ ದಾಸ'

ವೀರಾಜಪೇಟೆ ಸಿವಿಲ್ ಆಸ್ಪತ್ರೆ.

ಈ ಆಸ್ಪತ್ರೆಯಲ್ಲಿ ರೋಗಿಗಳಿಗೆ ಸಾಕಷ್ಟು ಸ್ಥಳವಿಲ್ಲದೆ ನೆಲದಲ್ಲಿ ಹಾಸಿಗೆ ಹಾಕಿಕೊಂಡು ಕಷ್ಟಪಡುತ್ತಿರುವದು ಯಾರಿಗಾದರೂ ಬೇಸರ ತರುವ ದೃಶ್ಯವಾಗಿದೆ. ಈ ಆಸ್ಪತ್ರೆಗೆ ಕಡಿಮೆ ನೂರು ಹಾಸಿಗೆಗಳ ಬೇರೊಂದು ಕಟ್ಟಡದ ಅಗತ್ಯವಿದೆ. ಅದಕ್ಕಾಗಿ ನನ್ನ ಸೂಚನೆಯೇನೆಂದರೆ ಆಸ್ಪತ್ರೆಯ ಹತ್ತಿರದಲ್ಲಿರುವ ಪ್ರಯಾಣಿಕರ ಬಂಗ್ಲೆಯನ್ನು ತುರಿತವಾಗಿ ಆಸ್ಪತ್ರೆಗೆ ತೆಗೆದುಕೊಂಡು ಇನ್‌ಪೇಶೆಂಟ್ ವಾರ್ಡಾಗಿ ಮಾಡುವದು. ಕ್ರಮಶಃ ಈಗಿರುವ ಮುನ್ಸೀಫ್ ಕೋರ್ಟು ಕಟ್ಟಡ ಅದರ ಹತ್ತಿರದ ಪಿ. ಡಬ್ಲ್ಯು. ಡಿ. ಕಟ್ಟಡ ಮೊದಲಾದುವನ್ನು ಆಸ್ಪತ್ರೆಗೆ ತೆಗೆದುಕೊಂಡು ಆಸ್ಪತ್ರೆಯ ಬಡಾವಣೆ ಮಾಡುವದು. ಈಗ ಜಾರಿಯಲ್ಲಿ ಬಂದಿರುವ ಸಾಮೂಹಿಕ ವಿಕಾಸ ಯೋಜನೆಯಲ್ಲಾಗಲೀ, ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಾಗಲೀ ಈ ಬಡಾವಣೆಯ ಕಾರ್ಯಕ್ರಮವನ್ನು ಕೈಕೊಳ್ಳುವುದಲ್ಲದೆ ಕೊಡಗಿನ ಮುಖ್ಯ ವೈದ್ಯಕೀಯ ಕೇಂದ್ರವು ವೀರಾಜಪೇಟೆಯಲ್ಲಿರುವಂತೆ ಏರ್ಪಡಿಸುವದು ಹಿತವಾಗಿದೆ. ಏಕೆಂದರೆ ಮಡಿಕೇರಿಯ ಹವಾಗುಣ ವೈದ್ಯಕೀಯ ಕೇಂದ್ರವನ್ನು ಅಭಿವೃದ್ಧಿಪಡಿಸಲು ಸಹಾಯಕವಾಗಿಲ್ಲ.

— ಕಾಳಪ್ಪ

ಟಿ. ಬಿ. ಸೀಲ್ಸ್ ಮಾರಾಟ.

ಕ್ಷಯರೋಗ ನಿವಾರಣೆಗಾಗಿ ಟಿ. ಬಿ. ಸೀಲ್ಸ್ ಮಾರಾಟದಿಂದ ಹಣ ಸಂಗ್ರಹಿಸುತ್ತಿರುವುದು ಯೋಗ್ಯವಾದರೂ ಕೆಲವೆಡೆ ಕೆಲವರ ದರ್ಪದ ಕಾರಣ ಇದು ದೊಡ್ಡ ಉಪದ್ರವವೇ ಆಗಿರುತ್ತೆ. ಒಬ್ಬ ರೈತನು ಸಿವಿಲ್ ಆಸ್ಪತ್ರೆಗೆ ಹೋಗಲಿ, ವೆಟರಿನರಿ ಆಸ್ಪತ್ರೆಗೆ ಹೋಗಲಿ, ಶಾಲೆಗೆ ಹೋಗಲಿ, ರೆವಿನ್ಯೂ ಆಫೀಸಿಗೆ ಹೋಗಲಿ, ಪೋಲೀಸು ಸ್ಟೇಶನ್ನಿಗೆ ಹೋಗಲಿ, ಸಹಕಾರ ಬ್ಯಾಂಕಿಗೆ ಹೋಗಲಿ, ರೇಶನ್ ಡಿಪ್ಪೋಗಳಿಗೆ ಹೋಗಲಿ, ಯಾವುದೇ ಆಫೀಸುಗಳಿಗೆ ಹೋಗಲಿ, ಯಾವ ಸರಕಾರ ಉದ್ಯೋಗಸ್ಥರನ್ನು ಕಂಡಾಗ ಆಗಲಿ ಎರಡಾಣೆಗೆ ಕಡಿಮೆ ಇಲ್ಲದಂತೆ ಟಿ. ಬಿ. ಸೀಲ್ಸುಗಳನ್ನು ಹೊಂದಿಕೊಳ್ಳಲೇಬೇಕು. ಇಲ್ಲವಾದರೆ ನಮ್ಮ ಯಾವ ಕೆಲಸವು ಆಗುವಂತಿಲ್ಲ. ರೇಶನ್ ಡಿಪ್ಪೋಗಳಲ್ಲಿ ಟಿ ಬಿ ಸೀಲ್ಸ್ ಕೊಳ್ಳದಿದ್ದರೆ ಅಕ್ಕಿಯೇ ಸಿಗುವಂತಿಲ್ಲ. ಇದೇ ರೀತಿ ಪ್ರತಿಯೊಂದು ಆಫೀಸಿನಲ್ಲೂ ಪ್ರತಿಯೊಬ್ಬ ಆಫೀಸರ ಹತ್ತಿರವೂ ಟಿ. ಬಿ. ಸೀಲ್ಸ್ ಕೊಳ್ಳದಿದ್ದರೆ ನಿರ್ವಾಹವೇ ಇಲ್ಲದಂತಾಗಿರುತ್ತೆ. ಒಟ್ಟಿನಲ್ಲಿ ಒಬ್ಬ ಮನುಷ್ಯ ಒಬ್ಬೊಬ್ಬರಲ್ಲಿ ಬರೇ ಎರಡಾಣೆಗೆ ಟಿ. ಬಿ. ಸೀಲ್ಸ್ ಕೊಳ್ಳುವದಾದರೂ ಅಂದಾಜು ಎರಡು ರೂಪಾಯಿ ಮೇಲ್ಪಟ್ಟು ಬೇಕಾಗುತ್ತೆ. ತಂತಮ್ಮ ಮೇಲಧಿಕಾರಿಗಳಿಂದ ಹುಕುಂ ಪಡೆದ ಸಣ್ಣ ಉದ್ಯೋಗಸ್ಥರು ಟಿ. ಬಿ ಸೀಲ್ಸ್ ಮಾರಾಟಕ್ಕಾಗಿ ಈ ರೀತಿ ತೊಂದರೆ ಕೊಡುವದು ಸರಿಯಲ್ಲ.

ಬೇಸತ್ತ ಬಡವ್ಯಕ್ತಿ.

ಹುಚ್ಚರ ಪಟ್ಟಿ

ಗೌರವ ಬೇಕೆ?

ಒಮ್ಮೆ ಧರ್ಮಜನಂತೆ ಒಮ್ಮೆ ಕೌರವನಂತೆ
ಒಮ್ಮೆ ಒಡ ಜೀವಿಗಳ ಕೃತಿಯುಸಿರೆ ನೀವೆನುತ
ಭೀಮನೊಲು ಗರ್ಜಿಪಿರಿ ಶಕುನಿಯೊಳು ತರ್ಕಿಪಿರಿ
ಮೇನ್ ಕೈಕೆ ರಾಣಿಯೊಳು ಕುಹಕವನು ಒಗೆಯುವಿರಿ
ಹೊಗಳುವರ ಹೊಂಕಾರ, ಹೂಮಾಲೆ ಸತ್ಕಾರ
ನಡೆಯುತ್ತಿರುವಿರಿ ಇಂದು ಭಾರತದ ಸರಕಾರ!
ಯುಗಪುರುಷರೊರೆದಿರುವ ತತ್ವಗಳ ಹೇಳುತ್ತ
ಗಾಂಧಿ ಅಹಿಂಸೆಗಳೆಂದು ವಚನಗಳ ಸಾರುತ್ತ
ಮಂಜನರ ಹಿತ ಸೋಗಿನಾಟವನು ಆಡುವಿರೆ?
ಆದರ್ಶ, ಸರಳತನ, ಜನಹಿತಗಳೆನು ಮರೆತು
ಆಡಂಭರದ ಬಗೆಗೆ, ಜೀವನಕೆ ಮನಸೋತು
ಸಿಂಹಾಸನ, ಅಂದಿನ ತ್ಯಾಗ ಮೂರ್ತಿಗಳೇ?
ಯಾವ ಗೌರವವನ್ನು ಸೂಚಿಸಲಿ ನಿಮಗಿಂದು?
ಯಾವ ಜನಹಿತಕಾಗಿ ಹೂಮಾಲೆ ತರಲಿ?

ಲೈಸನ್ಸು ರದ್ದು ಮಾಡಿ

ಮೋಟಾರು ವಾಹನಗಳ ಕಾನೂನು ಮೇರೆ ೧೯೪೦ನೇ ಇಸವಿಯ ಮೋಡೆಲುಗಳ ಹಿಂದಿನ ಮೋಡೆಲಿನ ಕಾರುಗಳನ್ನು ಬಾಡಿಗೆಯ ವಾಹನಗಳಾಗಿ ಉಪಯೋಗಿಸಬಾರದೆಂಬ ನಿಯಮವಿದೆಯೆಂದು ನನಗೆ ತಿಳಿದು ಬಂದಿದೆ. ಆದರೆ ನನಗೆ ತಿಳಿದಿರುವಂತೆ ಮಡಿಕೇರಿಯಲ್ಲಿ ಒಂದು, ವೀರಾಜಪೇಟೆಯಲ್ಲಿ ಒಂದು ಹೀಗೆ ಎರಡು ಹಳೆ ಮೋಡೆಲಿನ ಕಾರುಗಳಿಗೆ ಲೈಸೆನ್ಸ್ ಕೊಟ್ಟು ಅವು ಬಾಡಿಗೆ ಟ್ಯಾಕ್ಸಿಗಳಾಗಿ ಓಡುತ್ತಿವೆ. ಈ ರೀತಿಯಲ್ಲಿ ಕಾನೂನನ್ನು ಉಲ್ಲಂಘಿಸಿ 'ಪೆ ಹರ್ಬಾನಿ' ಮಾಡಲು ಕಾರಣವೇನು ? ಸಂಬಂಧಿಸಿದ ಅಧಿಕಾರಿಗಳು ಇದನ್ನು ಪರಿಶೀಲಿಸಿ ಈ ಹಳೆ ಮೋಡೆಲಿನ ವಾಹನಗಳ ಲೈಸೆನ್ಸು ರದ್ದು ಮಾಡಬೇಕಿದೆ.

ಪ್ರಯಾಣಿಕ.

ಗೋಣಿಕೊಪ್ಪ ಟೌನ್ ಬ್ಯಾಂಕ್ ಪ್ರೆಸಿಡೆಂಟರಿಗೆ

ನೀವು ಕಳೆದ ತಾ ೧೪ರ 'ಜನ್ಮಭೂಮಿ' ಮತ್ತು ತಾ. ೧೬ರ 'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸಿದ 'ಅಪಪ್ರಚಾರ'ವೆಂಬ ಪತ್ರವನ್ನು ಓದಿ ನನಗೆ ಆಶ್ಚರ್ಯವಾಯಿತು. ನೀವು ಕಾನೂನಿನಂತೆ ಕ್ರಮ ಜರುಗಿಸದೆ ಬಿಟ್ಟ ಮಿಲ್ ಮಾಲೀಕರ ಹೆಸರನ್ನು ನಾನೇ ಹೇಳಿ ಕೊಡಬೇಕೆ? ಆ ಮಿಲ್ ಮಾಲಿಕರು ಬತ್ತವನ್ನು ನಿಕ್ಷೇಪವಿಟ್ಟ ರೂಮಿನಿಂದ ಗಲ್ಲಿ ಮಾಡಿದ್ದನ್ನು ಮಿಲ್ ಇನ್ಸ್‌ಪೆಕ್ಟರರು ಬ್ಯಾಂಕಿಗೆ ತಿಳಿಸಿರುವುದಿಲ್ಲವೇ? ಇದನ್ನು ಬ್ಯಾಂಕಿನ ಸೆಕ್ರೆಟರಿಯವರು ನಿಮಗೆ ತಿಳಿಸಿ ಅವರನ್ನು ಪೋಲೀಸಿಗೆ ಕೊಡಬೇಕೆಂದು ಒತ್ತಾಯ ಮಾಡಿಲ್ಲವೇ? ಹಾಗೆ ಮಾಡದೆ ನೀವು ಮೌನ ತಳೆಯಲು ಕಾರಣವೇನು? ಅದೇ ಬತ್ತದ ಅಕ್ಕಿಯನ್ನು ಮಿಲ್ ಇನ್ಸ್‌ಪೆಕ್ಟರರು ಪೊನ್ನಂಪೇಟೆ ರೇಷನ್ ಡಿಪ್ಪೋಕ್ಕೆ ಕಳುಹಿಸಿದ್ದಾರೋ ಎಂಬುದನ್ನು ಪತ್ತೆಹಚ್ಚಿ ತಿಳಿಯಿರಿ.

ನೀವು ಡೈರೆಕ್ಟರುಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದಿದ್ದ ಪಕ್ಷದಲ್ಲಿ ಬ್ಯಾಂಕು ಇಂದಿನ ಉತ್ತಮ ಸ್ಥಿತಿಗೆ ಬರುತಿತ್ತೇ ಎಂದು ಕೇಳಬಯಸುವೆ. ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡಿರಬಹುದು. ಆದರೆ ಈ ಬತ್ತದ ದುರುಪಯೋಗದ ವಿಚಾರದಲ್ಲಿ ಮಾತ್ರ ಮರೆತಿರುವಿರೆಂದು ನನ್ನ ಭಾವನೆ.

ಈ ವಿಚಾರದಲ್ಲಿ ಲೇಖನ ಬರೆದವರಾರೆಂದು ನೀವು ಅವರಿವರನ್ನು ಕೇಳುವ ಅಗತ್ಯವಿಲ್ಲ. ನಿಮ್ಮ ತಪ್ಪನ್ನು ಒಪ್ಪಿಕೊಳ್ಳಿರಿ. ನಾನೇ ಖುದ್ದಾಗಿ ನಿಮ್ಮಲ್ಲಿಗೆ ಬಂದು ನನ್ನ ಪರಿಚಯ ಮಾಡಿಕೊಡುತ್ತೇನೆ. ಬ್ಯಾಂಕಿನಿಂದ ಸಾಲ ಬೇಡಿ ನಿರಾಶನಾದವನು ನಾನಲ್ಲ. ನಾನು ಸಾಲಕ್ಕೆ ಬರೆದಿರುವುದೂ ಇಲ್ಲ. ಸಾಲ ತೆಗೆಯುವ ಪ್ರಮೇಯವೂ ನನಗಿಲ್ಲ. ಪತ್ರ ಬರೆದವರ ಮೇಲೆ ಕ್ರಿಮಿನಲ್ ಮೊಕದ್ದಮೆ ಜರುಗಿಸುವ ಅಭಿಪ್ರಾಯ ಬರೆದಿರುವಿರಿ. ಆದರೆ ಬ್ಯಾಂ

ಕು ಯಾರೊಬ್ಬರ ಸ್ವಂತ ಆಸ್ತಿಯಲ್ಲ. ನಿಮ್ಮನ್ನು ಪ್ರೆಸಿಡೆಂಟರಾಗಿ ಆರಿಸಿದ ೧೧೧ ಜನರಲ್ಲಿ ನಾನೂ ಒಬ್ಬನೆಂದು ತಿಳಿಯಿರಿ. ಆದ್ದರಿಂದ ಸತ್ಯಾಂಶವನ್ನು ಮುಚ್ಚಲು ಯತ್ನಿಸದೆ ತಪ್ಪನ್ನು ಒಪ್ಪಿಕೊಳ್ಳಿ. ಮುಂದಕ್ಕಾದರೂ ಯೋಗ್ಯ ರೀತಿ ಎಲ್ಲರ ಸಹಕಾರವನ್ನು ಪಡೆದು ಬ್ಯಾಂಕಿನ ಪುರೋಭಿವೃದ್ಧಿಗಾಗಿ ನಾವೆಲ್ಲರೂ ದುಡಿಯುವಾ.

ಬ್ಯಾಂಕಿನ ಮೆಂಬರು.

ಮೂರ್ನಾಡು ಸಹಕಾರ ಕೂಟ

ಮೂರ್ನಾಡು ಸಹಕಾರ ಕೂಟದ ಮಹಾಸಭೆಯು ತಾ. ೨೪-೧೦-೫೩ ರಲ್ಲು ಕೊಡಗು ಸಹಕಾರ ಸ್ಟೇಟ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀಮಾನ್ ಕೆ. ಪಿ. ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸದರಿ ಮಹಾ ಸಭೆಗೆ ಯೂನಿಯನಿಗೆ ಸಂಯೋಜಿಸಲ್ಪಟ್ಟ ೩೧ ಸಂಘಗಳ ೬೨ ಡೆಲಿಗೇಟರ ಪೈಕಿ ೫೪ ಡೆಲಿಗೇಟರುಗಳು ಹಾಜರಿದ್ದರು. ಗೈರಾಜರಾದ ೮ ಜನ ಡೆಲಿಗೇಟರುಗಳ ಪೈಕಿ ಮೂರ್ನಾಡು ಶಾಲಾ ಬಾಲಕರ ಸ್ಟೋರಿನ ಇಬ್ಬರು ಪ್ರತಿನಿಧಿಯರು ಯಾವ ಪಕ್ಷವನ್ನು ವಹಿಸಬಾರದೆಂಬದಾಗಿ ಮೀಟಿಂಗಿಗೆ ಬರಲಿಲ್ಲ. ಆ ದಿನದ ಮೀಟಿಂಗಿಗೆ ಸಾಧಾರಣ ನೂರು ಜನರಿಗೆ ಕಡಿಮೆಯಿಲ್ಲದಂತೆ ಪ್ರೇಕ್ಷಕರು ಎಲ್ಲಾ ಗ್ರಾಮಗಳಿಂದ ಬಂದು ಹಾಜರಿದ್ದರು.

ಮುಂದಿನ ವರ್ಷಕ್ಕೆ ಬೇಕಾಗಿರುವ ೭ ಜನ ಸಮಿತಿಯವರ ಸ್ಥಾನಕ್ಕೆ ತುಂಬಾ ಪೈಪೋಟಿಯಿತ್ತು. ಸದರಿ ಮೀಟಿಂಗಿನಲ್ಲಿ ಶ್ರೀ. ಬಡ್ಡನ ಪೊನ್ನಪ್ಪನವರ ಪಾರ್ಟಿಯಿಂದ ೭ ಜನರ ಹೆಸರನ್ನೂ ಶ್ರೀ ಕೆ. ಯಂ. ಮೊಣ್ಣಪ್ಪನವರ ಪಾರ್ಟಿಯಿಂದ ೭ ಜನರ ಹೆಸರನ್ನೂ ಮತ್ತು ಸ್ವತಂತ್ರವಾಗಿ ಒಬ್ಬರ ಹೆಸರನ್ನು ಅಂತು ಜುಮ್ಲ ೧೫ ಜನರ ಹೆಸರು ಸೂಚಿಸಲ್ಪಟ್ಟಿತ್ತು. ಮೀಟಿಂಗಿಗೆ ಮೊದಲು ಶ್ರೀ. ಬಡ್ಡನ ಪೊನ್ನಪ್ಪನವರು ತಮ್ಮ ಕಡೆಯ೭ ಮಂದಿಯವರ ಹೆಸರನ್ನು ವಿನಂತಿ ಪತ್ರದೊಂದಿಗೆ ಪ್ರಿಂಟು ಮಾಡಿಸಿ ತಂದು ಎಲ್ಲಾ ಡೆಲಿಗೇಟರುಗಳಿಗೂ ಹಂಚಿದ್ದರು. ಚುನಾವಣೆಯು ಬ್ಯಾಲೆಟು ಮೂಲಕ ನಡೆಯಲಾಗಿ ಶ್ರೀಗಳಾದ ಕೆ. ಯಂ. ಮೊಣ್ಣಪ್ಪನವರಿಗೆ ೪೦ ಓಟು, ಬಿ. ಜಿ. ಸುಬ್ಬಯ್ಯ, ೩೯ ಓಟು, ಬಿ. ಕೆ. ಬೆಳ್ಯಪ್ಪ, ೩೩ ಓಟು, ಬಿ. ಎನ್. ಕುಟ್ಟಪ್ಪ, ೩೨ ಓಟು, ಎಂ. ಎಸ್. ಸುಬ್ಬಯ್ಯ, ೩೧ ಓಟು, ಪಾರೇರ ಪೊನ್ನಪ್ಪ ೨೭ ಓಟು, ಜ್ಞಾನಿರ ಕರುಂಬಯ್ಯ ೨೩ ಓಟು ದೊರೆಯಿತು. ಬಡ್ಡನ ಪೊನ್ನಪ್ಪನವರ ಪಕ್ಷದವರಾದ ಶ್ರೀಗಳಾದ ಬಿ. ಜಿ. ಮುತ್ತಣ್ಣ ೨೪ ಓಟು, ಕರ್ಣಯನ ರಾಮಪ್ಪ, ೨೭ ಓಟು, ಬಡ್ಡನ ಪೊನ್ನಪ್ಪ ೨೪ ಓಟು, ತೆಕ್ಕಡ ಪೂವಯ್ಯ ೨೨ ಓಟು, ಉಳುವಾರನ ಗಣಪತಿ ೨೦ ಓಟು, ಪಾಚಂಡ ಕಾರ್ಯಪ್ಪ, ೧೭ ಓಟು, ಪಾಂಡಂಡ ಮುದ್ದಪ್ಪ ೧೭ ಓಟು ಮತ್ತು ಸ್ವತಂತ್ರವಾಗಿ ನಿಂತ ಪುದಿಯೊಕ್ಕಡ ಕಾರ್ಯಪ್ಪನವರಿಗೆ ೮ ಓಟು ದೊರೆಯಿತು. ಇವರುಗಳ ಪೈಕಿ ಹೆಚ್ಚಿನ ಮತವನ್ನು ಪಡೆದ ಶ್ರೀಗಳಾದ ಕೆ. ಯಂ. ಮೊಣ್ಣಪ್ಪ, ಬಿ. ಜಿ. ಸುಬ್ಬಯ್ಯ, ಬಿ. ಕೆ. ಬೆಳ್ಯಪ್ಪ, ಬಿ. ಎನ್. ಕುಟ್ಟಪ್ಪ, ಎಂ. ಎಸ್. ಸುಬ್ಬಯ್ಯ, ಬಿ. ಜಿ. ಮುತ್ತಣ್ಣನವರು ಆರಿಸಲ್ಪಟ್ಟರು. ಬಾಕಿ ಉಳಿದ ಒಬ್ಬ ಡೈರೆಕ್ಟರರ ಸ್ಥಳಕ್ಕೆ ಶ್ರೀಗಳಾದ ಪಾರೇರ ಪೊನ್ನಪ್ಪನವರಿಗೂ ಮತ್ತು ಕರ್ಣಯನ ರಾಮಪ್ಪನವರಿಗೂ ಸರಿಸಮಾನವಾಗಿ ೨೭ ಮತ ಸಿಕ್ಕಿದ ಕಾರಣ ಸಭಾಧ್ಯಕ್ಷರು ಲಾಟ್ರಿ ತೆಗೆಯಲಾಗಿ ಕೆ. ರಾಮಪ್ಪನವರು ಆರಿಸಿಬಂದರು.

ಆರಿಸಿ ಬಂದ ಡೈರೆಕ್ಟರುಗಳ ಪೈಕಿ ಪ್ರೆಸಿಡೆಂಟುತನಕ್ಕೆ ಕೆ. ಯಂ. ಮೊಣ್ಣಪ್ಪನವರ ಮತ್ತು ಬಿ. ಜಿ. ಮುತ್ತಣ್ಣನವರ ಹೆಸರುಗಳನ್ನು ಸೂಚಿಸಲಾಗಿ, ಈ ವರೆಗೆ ಪ್ರೆಸಿಡೆಂಟರಾಗಿದ್ದ ಮೊಣ್ಣಪ್ಪನವರು ತನಗೆ ಮಹಾಸಭೆಯವರು ಈ ದಿನ ಹೆಚ್ಚಿನ ಸಂಖ್ಯೆಯ ಓಟನ್ನು ಕೊಟ್ಟು ಡೈರೆಕ್ಟರಾಗಿ ಆರಿಸಿದಕ್ಕೆ ಸಭೆಗೆ ವಂದಿಸಿ, ಇನ್ನು ಮುಂದಕ್ಕೆ ಮೂರ್ನಾಡಿನಲ್ಲಿ ಪಾರ್ಟಿ ಪಂಗಡಗಳಿಲ್ಲದೆ ಅನ್ಯೋನ್ಯ ಪ್ರೀತಿಯಿಂದ ನಾವೆಲ್ಲರು ಇರಬೇಕೆಂಬದಾಗಿ ಹೇಳುತ್ತಾ, ತಾನು ಕೆಲವು ವರ್ಷಗಳ ವರೆಗೆ ಪ್ರೆಸಿಡೆಂಟರಾಗಿ ಕೆಲಸ ಮಾಡಿರುವದರಿಂದ ನನ್ನ ಬದಲು ಬಿ. ಜಿ. ಮುತ್ತಣ್ಣನವರೇ ಪ್ರೆಸಿಡೆಂಟರಾಗಿರಬೇಕೆಂದರು. ಅದೇ ರೀತಿ ಬಿ. ಜಿ. ಮುತ್ತಣ್ಣನವರೇ ಯೂನಿಯನು ಪ್ರೆಸಿಡೆಂಟರಾದರು.

ಬಿ. ಜಿ. ಸುಬ್ಬಯ್ಯ,
ಸೆಕ್ರೆಟರಿ.

ವಾರ್ತೆಗಳು.

ಐಕ್ಯ ಮಹಾರಾಷ್ಟ್ರ ರಾಜ್ಯದ ಬೇಡಿಕೆಯು ಐತಿಹಾಸಿಕ ತಳಹದಿ, ಸಾಂಸ್ಕೃತಿಕ ಪರಂಪರೆ, ಸಾಮಾಜಿಕ ಭದ್ರತೆ ಮತ್ತು ರಾಜಕೀಯ ಭಾವನೆಗಳನ್ನು ಆಧರಿಸಿದೆಯಲ್ಲದೆ ಆರ್ಥಿಕ ಮತ್ತು ಹಣಕಾಸಿನ ದೃಷ್ಟಿಯಿಂದಲೂ ಅದಕ್ಕೆ ಬೆಂಬಲ ದೊರೆತಿದೆ ಎಂದು ಪ್ರಸಿದ್ಧ ಅರ್ಥ ಶಾಸ್ತ್ರಜ್ಞರಾದ ಪ್ರೊ. ಧನಂಜಯರಾವ್ ಗಾಡ್ಗಿಲ್‌ರವರು ಹೇಳಿದರು.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ತಾ. ೧ರಲ್ಲಿ ಹುಬ್ಬಳ್ಳಿಯಿಂದ ಹೊರಡುವ ಪೂರ್ವದಲ್ಲಿ ಭಾಷಾವಾರು ರಾಜ್ಯರಚನೆ ವಿಚಾರದಲ್ಲಿ ಪ್ರಧಾನ ಮಂತ್ರಿ ನೆಹರೂ ಅರ್ಥಾತ್ ಕೇಂದ್ರ ಸರಕಾರದ ನಿಲುವೆಯ ಮೂಲಕ ಕರ್ನಾಟಕ ರಾಜ್ಯ ನಿರ್ಮಾಣಕ್ಕಾಗಿ ಚಳುವಳಿ ಮಾಡುವ ಪ್ರಶ್ನೆಯೇ ಇಲ್ಲ. ಯಾವುದೊಂದು ಪಕ್ಷದ ಪ್ರಚಾರಕ್ಕೆ ಕರ್ನಾಟಕದ ಜನರು ಬಲಿ ಬೀಳುವದಿಲ್ಲೆಂದು ನಿರೀಕ್ಷಿಸಿದ್ದೇನೆ ಎಂದು ಹೇಳಿದರು. ಸತ್ಯಾಗ್ರಹ, ಉಪವಾಸ ಮೊದಲಾದುವುಗಳ ಸಂಬಂಧವೇ ಇಲ್ಲಿಲ್ಲ. ಕೆ. ಪಿ. ಸಿ. ಸಿ. ಕೂಡ ಇದನ್ನು ಸ್ಪಷ್ಟ ಮಾಡಿದೆ. ಉದ್ದೇಶ ಸಾಧನೆಗಾಗಿ ಸಕಲರೂ ಒಕ್ಕಟ್ಟಾಗಿ ಕಾರ್ಯ ಮಾಡುವದೇ ಮುಖ್ಯವಾಗಿದೆ ಎಂದವರು ಹೇಳಿದರು.

ಹೈದರಾಬಾದ ರಾಜ್ಯವನ್ನು ಒಡೆದು ಹಂಚಬೇಕೆಂಬ ವಿಷಯದಲ್ಲಿ ತಾವು ಮತ್ತು ಹೈದರಾಬಾದ್ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಸ್ವಾಮಿ ರಮಾನಂದ ತೀರ್ಥರು ಒಪ್ಪಿದ್ದೇವೆ ಎಂದು ವಿಶಾಲ ಆಂಧ್ರ ಮಹಾಸಭೆಯ ಅಧ್ಯಕ್ಷರಾದ ಶ್ರೀ ಎ. ಕಾಳೇಶ್ವರರಾಯರು ತಾ ೧ರಲ್ಲಿ ಪತ್ರಿಕಾ ಪ್ರತಿನಿಧಿಗಳಿಗೆ ಹೇಳಿದರು.

ನೇಪಾಳದ ಮಂತ್ರಿ ಮಂಡಳವನ್ನು ವಿಸ್ತರಿಸಿ ತಮ್ಮ ಪಕ್ಷದ ನಾಲ್ವರನ್ನು ಅದರಲ್ಲಿ ಸೇರಿಸಿಕೊಳ್ಳುವದಾಗಿ ನೇಪಾಳದ ಮುಖ್ಯಮಂತ್ರಿ ಶ್ರೀ ಎಂ. ಪಿ. ಕೊಯಿರಲಾರು ಆಮಂತ್ರಣವಿತ್ತದನ್ನು ನೇಪಾಳಿ ಕಾಂಗ್ರೆಸ್ ಸಮಿತಿಯು ಸ್ವೀಕರಿಸಿರುವದು ಸಮಿತಿಯಲ್ಲಿ ತುಸು ವಿರೋಧ ವ್ಯಕ್ತವಾದರೂ ಆಮಂತ್ರಣ ಸ್ವೀಕರಿಸಲ್ಪಟ್ಟಿರುವದು.

ಪಂಜಾಬಿ ಭಾಷೆಯ ಪ್ರತ್ಯೇಕ ರಾಜ್ಯ ಸ್ಥಾಪನೆಯ ಉದ್ದೇಶವನ್ನು ಸಾಧಿಸುವದಕ್ಕಾಗಿ ಪ್ರಧಾನ ಮಂತ್ರಿ ನೆಹರೂರ ನಿವಾಸದ ಎದುರು ಆಮರಣ ಉಪವಾಸ ಕೈಕೊಳ್ಳುವದಾಗಿ ಸಾರಿದ್ದ ಪೆಪ್ಸು ರಾಜ್ಯದ ಶಿರೋಮಣಿ ರಿಯಾಸತ ಅಕಾಲಿ ದಲದ ಅಧ್ಯಕ್ಷ ಜಥೆದಾರ ಸಂಪೂರ್ಣಸಿಂಗ ರಮಣರನ್ನು ದಿಲ್ಲಿಯ ಹೊಸ ವಲಯದ ನರೇಲಾ ರೈಲ್ವೆ ನಿಲ್ದಾಣದಲ್ಲಿ ತಾ. ೧ರಲ್ಲಿ ಬಂಧಿಸಲಾಯಿತು.

ಭಾರತದ ತಂತಿ ಶಾಖೆ ಶತಾಬ್ದಿ ಪ್ರದರ್ಶನವನ್ನು ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದರು ತಾ. ೧ರಲ್ಲಿ ಉದ್ಘಾಟಿಸಿದರು. ಈ ಸಮಾರಂಭಕ್ಕೆ ಉಪರಾಷ್ಟ್ರಪತಿ ಡಾ. ರಾಧಾಕೃಷ್ಣನ್, ಕೇಂದ್ರ ಮಂತ್ರಿಗಳೇ ಮೊದಲಾದ ಪ್ರಮುಖರು ಬಂದಿದ್ದರು.

ರಾಜಸ್ಥಾನದಲ್ಲಿಯ ಎಲ್ಲ ಕಾಂಗ್ರೆಸಿಗರಲ್ಲಿ ಸಂಪೂರ್ಣ ಐಕ್ಯಮತ್ಯವಾಗಿದೆ ಎಂದು ತಾ. ೩೧ರ ರಾತ್ರಿ ಪತ್ರಿಕಾ ಪರಿಷತ್ತಿನಲ್ಲಿ ಅ. ಭಾ. ಕಾಂಗ್ರೆಸಿನ ಕಾರ್ಯದರ್ಶಿಗಳಾದ ಶ್ರೀ ಎಸ್. ಎನ್. ಅಗರವಾಲರು ಹೇಳಿದರು. ಪಾಲೀವಾಲ ಟಿಕ್ಕಾರಾಮರು ಮಂತ್ರಿ ಮಂಡಳದಲ್ಲಿ ಭಾಗವಹಿಸುವ ಪ್ರಶ್ನೆಯನ್ನು ದಿಲ್ಲಿಯಲ್ಲಿ ನಿರ್ಧರಿಸಲಾಗುವದು. ನವಂಬರ್ ೨ನೇ ದಿನಾಂಕ ತಾನು ಕಾಂಗ್ರೆಸ್ ಅಧ್ಯಕ್ಷರಿಗೆ ವರದಿಯನ್ನು ಒಪ್ಪಿಸಿದ ಬಳಿಕ ಈ ಬಗ್ಗೆ ಅವಶ್ಯಕ ಪ್ರಕಟಣೆಯನ್ನು ಹೊರಡಿಸಲಾಗುವದು. ಒಂದು ಪಕ್ಷದೊಳಗಾಗಿ ಇದನ್ನು ಹೊಂದಿಸಲಾಗುವದೆಂದು ಅಗರವಾಲರು ಹೇಳಿದರು.

ಕೇಂದ್ರ ಸರಕಾರದ ಯೋಜನೆಯ ಪ್ರಕಾರ ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯಕೀಯ ಸೌಲಭ್ಯ ಒದಗಿಸುವದಕ್ಕಾಗಿ ಹೆಲ್ತ್ ಆಸಿಸ್ಟೆಂಟ್‌ಗಳನ್ನು ತರಬೇತುಗೊಳಿಸುವ ಯೋಜನೆಯು ಮದರಾಸು ಪ್ರಾಂತದಲ್ಲಿ ಬರುವ ವರ್ಷದಿಂದ ಜಾರಿಗೆ ಬರುವದು.

ಭಾರತದಲ್ಲಿ ಭೂ ಸುಧಾರಣೆ ಮಾಡದೆ ಇದ್ದರೆ, ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲು ಎಂಥ ಕೈಗಾರಿಕೆ ಮತ್ತು ಕೃಷಿ ಸುಧಾರಣೆಯ ಕಾರ್ಯಕ್ರಮಗಳನು ಜಾರಿಗೆ ತಂದರೂ ಫಲಿಸಲಾರವು, ಎಂಬುದಾಗಿ ಭಾರತ ಕಮ್ಯೂನಿಷ್ಟ್ ಪಕ್ಷದ ಹಂಗಾಮಿ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಇ. ಎಂ. ಎಸ್. ನಂಬೂದರಿಪಾದರು ಪ್ರತಿಕಾ ಪರಿಷತ್ತಿನಲ್ಲಿ ಹೇಳಿದರು.

ದೇಶಬಾಂಧವರಲ್ಲಿ ವಿನಂತಿ

ಕೊಡಗು ಮುಜರಾಯಿ ಇಲಾಖೆಯ ಪ್ರೆಸಿಡೆಂಟರು ಮತ್ತು ಸಮಿತಿಯ ಸದಸ್ಯರು ಈ ಮೂಲಕ ತಿಳಿಯ ಪಡಿಸುವದೇನೆಂದರೆ:—

ಮಡಿಕೇರಿ ಓಂಕಾರೇಶ್ವರ ಮತ್ತು ತಲಕಾವೇರಿಯ ಅಗಸ್ತ್ಯೇಶ್ವರ ದೇವಾಲಯಗಳಲ್ಲಿ ಬ್ರಹ್ಮಕಲಶ, ಅಷ್ಟಗಂಧ ಕೆಲಸ ಮತ್ತು ಮಹಾ ಪೂಜೆಗಳನ್ನು ನಡೆಸಬೇಕೆಂದು ಹಲವು ವರ್ಷಗಳಿಂದ ಪ್ರಯತ್ನ ಪಟ್ಟರೂ ಹಣದ ಅಭಾವದಿಂದ ಈ ವರೆಗೆ ಮಾಡಲಾಗಲಿಲ್ಲ. ಇತ್ತೀಚೆಗೆ ಶ್ರೀಗಳಾದ ಪಳಕಡ ಶ್ರೀಮತಿ ದೇವಮ್ಮನವರಿಂದ ರೂ. ೧೦೦೦, ಕುಂಚೆಟ್ಟಿರ ಕುಶಾಲಪ್ಪನವರಿಂದ ರೂ. ೫೦೦, ಕನ್ಸಾಲಿಡೇಟೆಡ್ ಕಾಫಿ ತೋಟದ ಜನರಲ್ ಮೇನೇಜರಿಂದ ರೂ. ೨೫೦, ಜಿ. ಎಂ ಮಂಜುನಾಥಯ್ಯನವರಿಂದ ರೂ. ೩೦೦, ಪೈಕೇರ ಚಂಗಪ್ಪನವರಿಂದ ರೂ. ೫೦, ಚೆಪ್ಪುಡೀರ ಪೊನ್ನಪ್ಪನವರಿಂದ ರೂ. ೫೦, ಮತ್ತಿನ್ನಿತರ ಕೆಲವರಿಂದ ಶಕ್ತ್ಯಾನುಸಾರ ಹೀಗೆ ಸುಮಾರು ೨೦೦೦ ಕ್ಕಿಂತಾ ಸ್ವಲ್ಪ ಹೆಚ್ಚು ಹಣ ಸಂಗ್ರಹವಾಗಿದೆ. ಈ ಸಹಾಯದಿಂದಾಗಿ ಮೇಲ್ಕಂಡ ಕಾರ್ಯಕ್ರಮವನ್ನು ಮಡಕೇರಿ ಓಂಕಾರೇಶ್ವರ ದೇವಸ್ಥಾನದಲ್ಲಿ ಈ ತಾ. ೫ರಿಂದ ೮ರ ವರೆಗೂ, ತಲಕಾವೇರಿ ಅಗಸ್ತ್ಯೇಶ್ವರ ದೇವಾಲಯದಲ್ಲಿ ತಾ. ೧೩ರಿಂದ ೧೮ರ ವರೆಗೂ ಅಂಕುರಾರೋಪಣ, ಸ್ಥಳ ಶುದ್ಧಿ, ಬಿಂಬ ಶುದ್ಧಿ, ಪ್ರಾಯಶ್ಚಿತ್ತ ಹೋಮ, ಕಲಶ ಪೂಜೆ, ಪ್ರಧಾನ ಹೋಮ, ಕಲಶಾಭಿಷೇಕ, ಮಹಾ ಪೂಜೆ ಮೊದಲಾದವು ನೀಲೇಶ್ವರ ತಂತ್ರಿಗಳಿಂದ ನಡೆಯುತ್ತದೆ. ಈ ಪೂಜೆಗಳಿಗಾಗಿ ಒಟ್ಟು ನಾಲ್ಕು ಸಾವಿರ (೪೦೦೦) ರೂಪಾಯಿಗಳು ಬೇಕೆಂದು ಅಂದಾಜು ಮಾಡಲಾಗಿದೆ. ಈ ಪುಣ್ಯ ಕೆಲಸಕ್ಕಾಗಿ ಭಕ್ತ ಜನರು ಕೊಡುಗೈಯಿಂದ ಸಹಾಯ ಮಾಡಿ ದೇವರ ಕೃಪೆಗೆ ಪಾತ್ರರಾಗಬೇಕಾಗಿ ಈ ಅರ್ಜಿಯು ಮಾಡಿದ್ದಾಗಿದೆ. ಭಕ್ತರ ಧನ ಸಹಾಯವಿಲ್ಲದೆ ಈ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯಲಾರವು. ಆದ್ದರಿಂದ ಸಹಾಯ ಮಾಡುವವರು ಟೆಂಪಲ್ ಫಂಡ್ ಸಮಿತಿಯ ಪ್ರೆಸಿಡೆಂಟರ ಹೆಸರಿಗೆ ತಮ್ಮ ಸಹಾಯ ಧನವನ್ನು ಕಳುಹಿಸಿಕೊಡಬೇಕಾಗಿಯೂ ಮೇಲಿನ ಕಾರ್ಯಕ್ರಮಗಳಿಗೆ ಆಗಮಿಸಬೇಕಾಗಿಯೂ ಪ್ರಾರ್ಥನೆ.

ಸಿ. ಎ. ಚಂಗಪ್ಪ.

ಮಡಿಕೇರಿ ಪ್ರೆಸಿಡೆಂಟರು, ಕೊಡಗು ಮುಜರಾಯಿ ಇಲಾಖೆ.



ಚಪಲ ಬುದ್ಧಿಯ

ಗುಬ್ಬಚ್ಚಿಯ ಕಥೆ.

ಒಂದು ಕಾಡಿನಲ್ಲಿ ಒಂದು ಗುಬ್ಬಚ್ಚಿಯು ತನ್ನ ಪಂಡತಿಯೊಡನೆ ಒಂದು ಮರದಲ್ಲಿ ತನ್ನ ಗೂಡನ್ನು ಕಟ್ಟಿಕೊಂಡು ಜೀವಿಸುತ್ತಿತ್ತು. ಜೂನ್ ತಿಂಗಳ ಒಂದು ದಿನ ಕೋತಿಯೊಂದು ಭೀಕರ ಅಪ್ಪ ಮಳೆಗೂ, ಅನೇಕ ಸ್ಥಿಗಳ ಹೊಡೆತಕ್ಕೂ ಸಿಕ್ಕಿ ಆ ಮರದಲ್ಲಿ ಆಶ್ರಯ ಪಡೆದಿತ್ತು. ಚಳಿಯಿಂದ ನಡುಗುತ್ತಿದ್ದ ಕೋತಿಯ ಹಲ್ಲುಗಳು ಕಟಕಟ ಶಬ್ದದ ಸಂಗೀತ ಹಾಡುತ್ತಿದ್ದವು. ಆ ಕೋತಿಯು ಮುದುಡಿ ಬಾಗಿತ್ತು. ಕೈಕಾಲುಗಳನ್ನು ಮುದುರಿಸಿ ಹಿಡಿದಿತ್ತು. ಈ ಚಿತ್ರವನ್ನು ನೋಡಿದ ಹೆಣ್ಣು ಗುಬ್ಬಚ್ಚಿಗೆ ದಯೆ ಹುಟ್ಟಿತು. "ಮನುಷ್ಯನಂತೆ ಕೈಕಾಲುಗಳಿರುವ ನೀನು ಮನುಷ್ಯನಂತೆ ತೋರುತ್ತಿರುವೆ. ಮಳೆ ಛಳಿಯಿಂದ ನಡುಗುತ್ತಿರುವ ನೀನು ನಿನಗಾಗಿ ಒಂದು ಮನೆ ಕಟ್ಟಿಕೊಳ್ಳಬಾರದೇಕೆ?" ಎಂದು ಅದು ಕೋತಿಯನ್ನು ಕೇಳಿತು. ಈ ಮಾತನ್ನು ಕೇಳಿ ಕೋತಿಯು ಮನಸ್ಸಿನಲ್ಲೇ ಆಲೋಚಿಸಿತು. ಕೆಲವು ಜನರು ತಮ್ಮನ್ನು ತಾವೇ ಬುದ್ಧಿವಂತರೆಂದು ತಿಳಿದು ಇತರರಿಗೆ ಬುದ್ಧಿವಾದ ಹೇಳುತ್ತಾರೆ. ಏಕೆಂದರೆ ಆತ್ಮ ಪ್ರಶಂಸೆಯು ಎಲ್ಲಾ ಪ್ರಾಣಿಗಳಿಗೂ ಪ್ರಿಯವಾದುದು. ತಾವು ದೊಡ್ಡವರೆಂಬ ಕಾರಣದಿಂದಲೇ ಮಿಂಚುಹುಳ ತನ್ನಿಂದಲೇ ಜಗತ್ತಿಗೆ ಬೆಳಕೆಂದು ತಿಳಿಯುತ್ತದೆ. ಆಕಾಶವನ್ನು ಬೀಳದ ಹಾಗೆ ತಾನು ಹಿಡಿದಿರುವೆನೆಂದು ಅಹಂಭಾವದಿಂದ ಪಕ್ಷಿಯೊಂದು ಕಾಲನ್ನು ಆಕಾಶದೆಡೆ ಮಾಡಿ ಮಲಗುತ್ತದೆ! ಈ ಹಕ್ಕಿಗೂ ಅದೇ ಜಂಭವಿದೆ. ಆದ್ದರಿಂದ ಅದಕ್ಕೆ ಬುದ್ಧಿ ಕಲಿಸಬೇಕೆಂದು ಪಕ್ಷಿಯನ್ನು ಕುರಿತು, "ತಿಳಿಗೇಡಿ, ಸೂಜಿಮೂತಿಯ ನೀನೂ ನನಗೆ ಬುದ್ಧಿ ಹೇಳುವೆಯಾ? ಬಾಯಿ ಮುಚ್ಚು, ನಿನ್ನ ಅಧಿಕ ಪ್ರಸಂಗ ನನ್ನೆದುರಿಗೆ ಬೇಕಿಲ್ಲ" ಎಂದಿತು.

ಆದರೆ ಗುಬ್ಬಚ್ಚಿಯು ಕೇಳಲಿಲ್ಲ. ವಿವಿಧ ರೀತಿಯ ಉಪದೇಶ ಮಾಡತೊಡಗಿ ತನ್ನ ಪಾಂಡಿತ್ಯವನ್ನು ತೋರಲು ಯತ್ನಿಸಿತು. ಸಿಟ್ಟುಗೊಂಡ ಕಪಿಯು ಮೇಲೇರಿ ಗುಬ್ಬಚ್ಚಿಯ ಗೂಡನ್ನು ಕಿತ್ತುಹಾಕಿತು. ಆದ್ದರಿಂದ ಸಂದರ್ಭನೋಡಿ ಬುದ್ಧಿ ಹೇಳಬೇಕು. ನಮಗೆ ನೋಡಿ ಯೋಗ್ಯರಿಗೆ ಸಲಹೆಕೊಡಬೇಕು. ಇಲ್ಲದಿದ್ದರೆ ತಿಳಿಗೇಡಿ ಕಪಿಯು ಗುಬ್ಬಚ್ಚಿಯ ಗೂಡು ಮುರಿದಂತಾದೀತು ಎಂದು ಹೇಳುವದಾಗಿದೆ" ಎಂದು ಕೋತಿಯು ಹೇಳಲು, ಮೊಸಳೆಯು, "ಅಯ್ಯೋ, ಗೆಳೆಯ. ನಾನು ನಿನಗೆ ಅಪರಾಧ ಮಾಡಿರುವೆನು. ಆದರೆ ನನ್ನ ಹಿಂದಿನ ಗೆಳೆತನವನ್ನು ನೆನೆದು ನನ್ನ ತಪ್ಪಿಗಾಗಿ ನನ್ನನ್ನು ಕ್ಷಮಿಸಿ ಬುದ್ಧಿವಾದ ಹೇಳು" ಎಂದು ಬಿನ್ನವಿಸಿತು.

"ನಾನು ನಿನಗೆ ಒಂದೂ ಹೇಳಲಾರೆ. ಏಕೆಂದರೆ ನೀನು ನಿನ್ನ ಹೆಂಡತಿಯ ಸಲಹೆಯಂತೆ ನನ್ನನ್ನು ಕೊಲೆ ಮಾಡಲು ಯತ್ನಿಸಿದೆ. ನೀನು ನಿನ್ನ ಹೆಂಡತಿಯನ್ನು ಹೆಚ್ಚು ಪ್ರೀತಿಸುತ್ತಿದ್ದಿರಬಹುದು. ಆದರೆ ಅವಳ ಸಂತೃಪ್ತಿಗಾಗಿ ನಿನ್ನ ಗೆಳೆಯರನ್ನೂ, ಬಂಧುಗಳನ್ನೂ ನಾಶಮಾಡುವದೇ? ಆದ್ದರಿಂದ ನೀನು ನಂಬಿಕೆಗೆ ಅನರ್ಹನು. ಬೋಧನೆಗೆ ಅಯೋಗ್ಯನು" ಎಂದು ಕೋತಿಯು ಹೇಳಿತು.

"ನನ್ನ ಪ್ರೀತಿಯ ಗೆಳೆಯಾ," ಮೊಸಳೆಯು ಹೇಳತೊಡಗಿತು. "ನೀನು ಹೇಳುವದು ನಿಜ. ಆದರೆ "ಏಳು ಶಬ್ದಗಳು ಗೆಳೆತನವನ್ನು ಸಂಪಾದಿಸುವವೆಂಬ" ನಾಣ್ನುಡಿಯನ್ನು ಕೇಳಿಲ್ಲವೆ? ನನಗೆ ಯೋಗ್ಯ ಬುದ್ಧಿವಾದ ಹೇಳು. ಏಕೆಂದರೆ ಸ್ವರ್ಗದಲ್ಲಾಗಲೀ ಭೂಮಿಯಲ್ಲಾಗಲೀ ಹೃದಯ ಮುಟ್ಟಿ ನೆರೆಯುವರಿಗೆ ಉಪಕಾರ ಮತ್ತು ಸದುಪದೇಶ ಮಾಡುವವನಿಗೆ ಯಾವ ತೊಂದರೆ ತೊಡಕುಗಳೂ ಬಾರವು. ನಾನೇನೋ ನಿನಗೆ ಅಪರಾಧ ಮಾಡಿದೆ. ಈಗ ನನ್ನನ್ನು ಕ್ಷಮಿಸಬೇಕೆಂದು ಕೇಳಿಕೊಳ್ಳುತ್ತಿರುವೆನು. ಒಳ್ಳೆಯದು ಮಾಡಿದವನಿಗೆ ಒಳ್ಳೆಯದನ್ನು ಮಾಡುವವರಲ್ಲಿ ಯಾವ ಘನತೆ ಇದೆ? ಆದರೆ ಕೆಟ್ಟದ್ದು ಮಾಡಿದವರಿಗೆ ಒಳ್ಳೆಯದನ್ನು ಮಾಡುವುದರಲ್ಲಿ ನಿಜವಾದ ಘನತೆ ಇದೆ. ಉತ್ತಮ ಪುರುಷರು, ಸಾಧು ಸಂತರು ಕೆಟ್ಟದಕ್ಕೆ ಒಳ್ಳೆಯದರಿಂದಲೇ ಉತ್ತರಿಸುವರು" ಎಂದು ಹೇಳಿತು.

ಈ ಮಾತುಗಳನ್ನು ಕೇಳಿ ಕೋತಿಯ ಮನಸ್ಸು ಕರಗಿತು. ಅದು ಹೇಳತೊಡಗಿತು "ಎಲೈ ಗೆಳೆಯಾ, ನಿನ್ನ ತಪ್ಪುಗಳನ್ನು ಮರೆತೆನು. ನೀನು ಹಿಂತಿರುಗಿ ಹೋಗಿ ನಿನ್ನ ಮನೆಯನ್ನು ಆಕ್ರಮಿಸಿದವನೊಡನೆ ಹೋರಾಡು ಎಂಬುದೇ ನನ್ನ ಬುದ್ಧಿವಾದ. ಏಕೆಂದರೆ ಪೋಷಕರಿಗೆ ಗೌರವ ಕೊಡಬೇಕು. ವೀರರಲ್ಲಿ ಸಂಶಯ ಹುಟ್ಟಿಸಬೇಕು. ತಿಳಿಗೇಡಿಗಳಿಗೆ ಲಂಚ ಕೊಡಬೇಕು, ಸಮಾನರೊಡನೆ ಹೋರಾಡಬೇಕೆಂದು ಸೂಕ್ತಿ ಇರುವದು" ಎಂದು ಹೇಳಿತು. ಮೊಸಳೆಯು ಅದರ ಅರ್ಥ ವಿಶದವಾಗಿ ಹೇಳೆಂದು ವಿನಂತಿ ಕೇಳಿದ ಕಾರಣ ಮುಂದಿನವಾರ ಕೋತಿಯು ಅತಿಚತುರಕ ಎಂಬ ನರಿಯು ಆನೆಯನ್ನು ಹೇಗೆ ತಿಂದಿತು ಎಂಬ ಕಥೆಯನ್ನು ಹೇಳುವುದು.

ಹಣ ಮತ್ತು ವಿದ್ಯೆ.

ಕೊಡಗಿನ ಮೂಲೆಯಲ್ಲಿಯ ಚಿಕ್ಕ ಊರದು. ಆ ಊರಿನಲ್ಲಿ ಬಡ ರೈತನೊಬ್ಬನಿದ್ದನು. ಅವನಿಗೆ ಇಬ್ಬರು ಹೆಂಡತಿಯರು. ಹಿರೇ ಹೆಂಡತಿಗೆ ಸುಶೀಲಾ ಒಬ್ಬಳೇ ಮಗಳು. ಕಿರಿಯ ಹೆಂಡತಿಗೆ ಸೂರ್ಯ ಮತ್ತು ನಳಿ ಎಂಬ ಇಬ್ಬರು ಮಕ್ಕಳು. ಈ ಕುಟುಂಬದಲ್ಲಿ ಶಾಂತಿಯೇ ಇರುತ್ತಿರಲಿಲ್ಲ. ಯಾವಾಗಲೂ ಬಡ ರೈತನ ಹೆಂಡತಿಯರೊಳಗೆ ಜಗಳ ಇಲ್ಲವೇ ಮಕ್ಕಳೊಳಗೆ ಜಗಳ ನಡೆಯುತ್ತಿತ್ತು. ಕಿರಿ ಹೆಂಡತಿಯ ಇಬ್ಬರು ಮಕ್ಕಳೂ ಕ್ರೂರರಾಗಿದ್ದರು. ಅವರಿಬ್ಬರು ಸೇರಿದರೆ ಹೆಸರಿನಂತೆಯೇ ಸೂರ್ಯನಳಿಯಂತೆ ವರ್ತಿಸುತ್ತಿದ್ದರು.

ಅವರು ಬಹು ಕಷ್ಟಪಟ್ಟು ದುಡಿಯುತ್ತಿದ್ದರು. ಕಿರಿ ಹೆಂಡತಿಯೂ ಆಕೆಯ ಮಕ್ಕಳೂ ಬೆವರಿಳಿಸಿ ದುಡಿದು ಬಂದುದನ್ನು ತಮ್ಮ ಸಂಪಾದನೆಯಾಗಿ ಪ್ರತ್ಯೇಕ ಇಟ್ಟುಕೊಳ್ಳುತ್ತಿದ್ದರು. ಮಕ್ಕಳಿಗೆ ವಿದ್ಯೆ ಕೊಡದೆ ಹೀಗೆ ಸಂಪಾದನೆಗಾಗಿ ದುಡಿಯಲು ಹಚ್ಚಿದ್ದರಿಂದ ಅವರಿಬ್ಬರೂ ಅಕ್ಷರ ಶೂನ್ಯರಾಗಿದ್ದರು. ಕೆಲವೇ ವರ್ಷಗಳಲ್ಲಿ ಅವರು ಸಾವಿರಾರು ರೂಪಾಯಿ ಕೂಡಿಟ್ಟರು. ತಾಯಿಯು ತನ್ನ ಇಬ್ಬರು ಮಕ್ಕಳಿಗೂ ವಿವಿಧ ನಗಗಳನ್ನು ಮಾಡಿಸಿದಳು. ಅವರು ಯೋಗ್ಯ ವಯಸ್ಸಿನವರಾಗಿ ಗ್ರಾಮದ ಹಬ್ಬ, ಹುಣ್ಣಿಮೆ, ಉತ್ಸವಗಳಲ್ಲಿ ತುಂಬಾ ಆಭರಣ ಹಾಕಿಕೊಂಡು ಮೆರೆಯುತ್ತಿದ್ದರು.

ಆದರೆ ಹಿರಿಯ ಹೆಂಡತಿಯು ಮನೆಯವರು ಸುಶೀಲೆಯನ್ನು ಅಲ್ಲಿ ಬಿಡದೆ ತನ್ನ ಮನೆಯಲ್ಲಿಟ್ಟು ಕಾನ್ವೆಂಟ್ ವಿದ್ಯೆ ಕೊಡಿಸಿ ಆಕೆ ಸ್ಕೂಲ್ ಫೈನಲ್ ಪಾಸಾಗಿ ಮಡಿಕೇರಿ ಆಫೀಸೊಂದರಲ್ಲಿ ಕೆಲಸಕ್ಕೆ ಸೇರಿದಳು. ಕೆಲವೇ ವರ್ಷಗಳಲ್ಲಿ ಆಕೆಯ ವಿವಾಹವು ಯೋಗ್ಯ ವರನೊಬ್ಬನೊಡನೆ ನಡೆದು ಆಕೆಯ ಜೀವನ ಸುಖಮಯವಾಯಿತು. ಆಕೆಯು ವಿದ್ಯಾವತಿಯಾದ್ದರಿಂದ ಆಭರಣಗಳ ಹುಚ್ಚಿಲ್ಲ. ಯಾವಾಗಲೂ ಶುಭ್ರ ಬಿಳಿಯಾದ ಉಡುಪು ಧರಿಸುತ್ತಾಳೆ. ಮನೆಯನ್ನೂ ಹಾಗೆಯೇ ಇಟ್ಟುಕೊಂಡಿದ್ದಾಳೆ.

ಕೆಲವು ಸಮಯದ ನಂತರ ಹಣದ ಆಸೆಗಾಗಿ ಓಡಾಡುತ್ತಿರುವ ಇಬ್ಬರೊಡನೆ ಸೂರ್ಯ ಮತ್ತು ನಳಿಯರ ಮದುವೆಯಾಯಿತು. ಅವರ ಮೈಮೇಲಿನ ನಗಗಳಿಗಲ್ಲದೆ ಅವರ ಸೌಂದರ್ಯ ಗುಣಗಳಿಗಾಗಿ ಅವರು ಮದುವೆಯಾದುದಲ್ಲ. ಮದುವೆಯಾದ ಕೆಲವೇ ದಿನಗಳಲ್ಲಿ ಸೂರ್ಯಳಿಗೆ ಕಾಯಿಲೆ ಪ್ರಾರಂಭಿಸಿತು. ಆಕೆಯನ್ನು ಕಾಯಿಲೆಯಿಂದ ಉಳಿಸಬೇಕಾದರೆ ಸೂರ್ಯಳ ನಗಗಳೆಲ್ಲಾ ಮಾರಿಹೋಗಿದ್ದವು. ನಳಿಯ ಪತಿಯು ಕುಡುಕನಾಗಿದ್ದನು. ಆತನು ಒಂದೊಂದಾಗಿ ನಳಿಯ ಆಭರಣಗಳನ್ನು ಮಾಯ ಮಾಡಿದನು. ಈಗ ಇಬ್ಬರ ನಗಗಳು ಕರಗಿಹೋಗಿವೆ. ಈಗ ಅವರಿಗೆ ಸ್ವತಃ ದುಡಿಯದೆ ಜೀವನ ನಡೆಸಲಾಗದ ಬಡ ಸ್ಥಿತಿ ಬಂದಿದೆ. ಪತಿಗಳಿಗೆ ಬುದ್ಧಿ ಹೇಳಿ ಅವರನ್ನು ಸನ್ಮಾರ್ಗಕ್ಕೆ ಹಚ್ಚುವ ವಿದ್ಯೆ ಅವರಿಗಿಲ್ಲ. ಹೀಗಾಗಿ ಅವರಿಬ್ಬರ ಜೀವನ ನರಕವಾಗಿದೆ. ಸುಶೀಲೆಯು ವಿದ್ಯಾವತಿಯಾಗಿ ಮಹಿಳಾ ಸಮಾಜ ಮೊದಲಾದವುಗಳ ಸದಸ್ಯೆಯಾಗಿ ತನ್ನ ಕೈಲಾದ ಸಮಾಜಸೇವೆ ಮಾಡುತ್ತಾ ಆನಂದದಿಂದ ಪತಿಯೊಡನೆ ಜೀವಿಸುತ್ತಿದ್ದಾಳೆ. ಆದ್ದರಿಂದ ಹೊನ್ನು, ಹಣ, ಆಭರಣಕ್ಕಿಂತಾ ವಿದ್ಯೆಯೇ ಮೇಲಾಗಿದೆ.

ಲೇ:- ಕುಮಾರ ಬಿ. ಎ. ರಘು, ಆರನೆ ತರಗತಿ.

ಜಪಾನಿನಿಂದ ಕಲಿಯಬೇಕಾದ ಪಾಠ. [೧೦]

ಕೆಲಸಗಾರರಿಗೆ ಸೌಕರ್ಯಗಳು.

[ಮೂಲ ಲೇಖಕ:— ಶ್ರೀ ಚಮನ್‌ಲಾಲ್]

ಕೆಲಸಗಾರರೇ ಮಾಲಿಕರು.

ಕಳೆದ ವಾರ ಒಬ್ಬ ಕೆಲಸಗಾರನು ಯಾವ ರೀತಿ ತನ್ನ ಜಾಣ್ಮೆಯಿಂದ ಕಾರ್ಖಾನೆಯೊಂದನ್ನು ಸ್ಥಾಪಿಸಿ ಸುಮಾರು ೩೦೦ ಕೆಲಸಗಾರರನ್ನಿಟ್ಟುಕೊಂಡು ಆದರ್ಶ ರೀತಿಯಲ್ಲಿ ಕಾರ್ಖಾನೆಯನ್ನು ನಡೆಸುತ್ತಿರುವನೆಂಬ ವಿಚಾರ ಒಂದು ಉದಾಹರಣೆಯನ್ನು ಕೊಡಲಾಗಿತ್ತು. ಜಪಾನಿನಲ್ಲಿ ಕೆಲಸಗಾರರ ಮತ್ತು ವ್ಯವಸ್ಥಾಪಕರ ಸಂಬಂಧವು ಯಾವ ರೀತಿ ಪರಸ್ಪರ ಮೈತ್ರಿಯನ್ನೂ ವಿಶ್ವಾಸ ಪೂರ್ಣವೂ ಆಗಿದೆಯೆಂಬುದಕ್ಕೆ ಆ ಕಾರ್ಖಾನೆಯ ಉದಾಹರಣೆಯನ್ನೇ ಎತ್ತಿ ಹೇಳುವೆನು. ಕಾರ್ಖಾನೆಯ ಯಜಮಾನನು ತಾನು ಕಾರ್ಖಾನೆಯ ಮಾಲಿಕನೆಂಬ ಕಾರಣಕ್ಕಾಗಿ ಉಳಿದೆಲ್ಲರಿಗಿಂತಾ ಹೆಚ್ಚಿನ ವೇತನ ತೆಗೆದುಕೊಳ್ಳುವದಿಲ್ಲ. ಆ ಕಾರ್ಖಾನೆಯಲ್ಲಿ ನುರಿತ ಕೆಲಸಗಾರನಿಗೆ ದಿನಕ್ಕೆ ಐದು ವರೆ ಎನ್‌ಗಳು ಅಂದರೆ ಸುಮಾರು ನಾಲ್ಕು ರೂಪಾಯಿಗಳ ವೇತನ ದೊರೆಯುವದು. ಕಾರ್ಖಾನೆಯ ಯಜಮಾನನು ಇದಕ್ಕಿಂತಾ ಹೆಚ್ಚಿನ ವೇತನ ತೆಗೆದುಕೊಳ್ಳಲಾರನು. ಕಾರ್ಖಾನೆಯ ಇಂಜನಿಯರರ ವೇತನವೂ ಇದೇ ಮಟ್ಟದ್ದು. ಎಲ್ಲರೂ ಈ ರೀತಿಯ ಹೆಚ್ಚು ತಾರತಮ್ಯವಿಲ್ಲದ ವೇತನವನ್ನು ಪಡೆಯುವದರಿಂದ ಕಾರ್ಖಾನೆಯಲ್ಲಿ ಪ್ರತಿ ವರ್ಷ ಪರಿಮಿತ ಲಾಭ ಬರುತ್ತದೆ. ಈ ಲಾಭವನ್ನು ವ್ಯವಸ್ಥಾಪಕರು ಜೇಬಿಗೆ ಹಾಕಿ ಬಂಡವಳದಾರರಾಗಿ ಬೆಳೆಯುವದಿಲ್ಲ. ಲಾಭದ ಬಹು ಅಂಶವನ್ನು ಕಾರ್ಖಾನೆಯ ವಿಸ್ತರಣೆಗೂ, ಆಧುನಿಕ ಸಲಕರಣೆಗಳ ಜೋಡಣೆಗೂ ವ್ಯಯಿಸುತ್ತಾರೆ. ಕಾರ್ಖಾನೆಯ ಯಜಮಾನನು ಮನಬಂದ ಹಾಗೆ ರಜೆ ತೆಗೆದುಕೊಳ್ಳುವದಿಲ್ಲ. ಎಲ್ಲರಂತೆ ಆತನೂ ದುಡಿಯುತ್ತಾನೆ. ಆತನಿಗೆ ದೊರೆಯುವ ಹೆಚ್ಚಿನ ಸವಲತ್ತೆಂದರೆ ತಿಂಗಳಿಗೆ ೧೨ ಪೌಂಡುಗಳಂತೆ ನಿಕ್ಷೇಪವಿಡುವ ವ್ಯವಸ್ಥಾಪಕರ ನಿಧಿ. ಈ ನಿಧಿಯನ್ನು ವ್ಯವಸ್ಥಾಪಕನು ತನ್ನ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮಾತ್ರ ಖರ್ಚು ಮಾಡುತ್ತಾನೆ. ಕಾರ್ಖಾನೆಯ ಮಾಲಿಕನು ಕಾರ್ಖಾನೆಯನ್ನು ತನ್ನ ಸ್ವಂತ ಆಸ್ತಿಯೆಂದು ಭಾವಿಸದೆ ಸರ್ವ ಕೆಲಸಗಾರರಿಗೂ ಸೇರಿದ ಸ್ವತ್ತೆಂದು ಭಾವಿಸುತ್ತಾನೆ. ಕಾರ್ಖಾನೆಯ ಯಜಮಾನನಿಗಾಗಲೀ, ಕೆಲಸಗಾರರಿಗಾಗಲೀ, ದುಡ್ಡು ಹೆಚ್ಚು ಸಂಪಾದಿಸುವ ಮೋಹವಿಲ್ಲ; ಎಲ್ಲರಿಗೂ ಆದರ್ಶವಾದ ವಸ್ತು ತಯಾರಿಸುವ ಹೃತ್ಪೂರ್ತಿ.

ಈ ಕೆಲಸಗಾರನ ಕಾರ್ಖಾನೆಗೆ ಜಪಾನಿನ ಜನರೇ ಅಲ್ಲ; ಜಗತ್ತಿನ ಇತರ ಭಾಗದವರೂ ತಮ್ಮ ಕೆಲಸಗಳಿಗಾಗಿ ಬರುತ್ತಾರೆ. ಯಂತ್ರದ ಮುರಿ (ಗೇರ್) ತಯಾರಿಸುವವರಲ್ಲಿ ಈ ಕೆಲಸಗಾರನು ಅದ್ವಿತೀಯನೆನಿಸಿದ್ದಾರೆ. ಇದೇ ರೀತಿ ಜಪಾನಿನ ಇತರ ಕೈಗಾರಿಕೆಗಳೂ ಮುಂದರಿದಿವೆ.

ಗ್ರಾಮಕ್ಕೆ ಬನ್ನಿ.

ಈ ಬೇಸಿಗೆಯಲ್ಲಿ ನಾನು ಜಪಾನಿನಲ್ಲಿ ಸಂದರ್ಶಿಸಿದ ೨೦೦ ಗ್ರಾಮಗಳ ಪೈಕಿ ಇರು ಗ್ರಾಮಗಳಿಗೆ ವಾಚಕರನ್ನು ಕರೆದೊಯ್ಯಲು ಆಶಿಸುತ್ತೇನೆ. ಜಪಾನಿನ ಗುಡಿಕೈಗಾರಿಕೆಗಳ ಸಾಧಾರಣ ಅನುಭವವು ಅಲ್ಲಿ ಆಗುವದು. ಈ ಗ್ರಾಮಗಳು ಆದರ್ಶವಾಗಿದ್ದು ಜಪಾನಿನ ಜೀವನಾಡಿಗಳಂತಿರುವ ಒಂದೊಂದು ಕೈಗಾರಿಕೆಗಳು ಇಲ್ಲಿ ವ್ಯವಸ್ಥಿತ ರೀತಿಯಿಂದ ನಡೆಯುತ್ತಿವೆ. ಈ ಗ್ರಾಮಗಳು ಕೋಬ್ ಗುಡ್ಡದ ಹತ್ತಿರದಲ್ಲಿವೆ ಮೂರು ಗ್ರಾಮಗಳು ಹೆಚ್ಚಾಗಿ ಬಿದಿರಿನ ಕೆಲಸ ಮಾಡುತ್ತವೆ. ಒಂದು ಗ್ರಾಮವು ಪ್ರತಿ ಮನೆಯಲ್ಲಿ ಕಾಗದ ತಯಾರಿಸುತ್ತದೆ. ಓಕಾಸದ ಹತ್ತಿರದ ಒಂದು ಗ್ರಾಮದಲ್ಲಿ ಬೆಂಕಿಪೆಟ್ಟಿಗೆ ತಯಾರಾಗುತ್ತಿದೆ. ಮತ್ತೊಂದು ಕಬ್ಬಿಣ ಕೆಲಸ ಮಾಡುತ್ತದೆ. ಈ ಗ್ರಾಮಗಳೆಲ್ಲ ಸುಂದರ ವಾತಾವರಣದಲ್ಲಿವೆ. ಅವುಗಳನ್ನು ನೋಡಿದಾಗ ಕಾಶ್ಮೀರದ ನೆನಪಾಗುತ್ತದೆ. ಸುಂದರ ಕೆರೆಗಳಿದ್ದು ನೀರು ಬೇಕಾದಷ್ಟಿದೆ. ವಿದ್ಯುಚ್ಛಕ್ತಿಯ ವ್ಯವಸ್ಥೆ ಸರ್ವ ಎಡೆ ಇದೆ. ಬಸು, ರೈಲು, ದೋಣಿ ಮೊದಲಾದುವು ಕಚ್ಚಾ ಮಾಲು ತರಲು ಯಾ ಕಳುಹಿಸಲು ಸದಾ ಸಿದ್ಧವಿವೆ.

ಕಬ್ಬಿಣ ಕೆಲಸ.

ಪ್ರಥಮವಾಗಿ ಕಬ್ಬಿಣ ಕೆಲಸ ಮಾಡುವ ಮಿಕಿ ಎಂಬ ಗ್ರಾಮಕ್ಕೆ ಹೋಗುವಾ. ಜಪಾನಿನಲ್ಲಿ ಕಬ್ಬಿಣ ಸಾಹಿತ್ಯಗಳನ್ನು ಉತ್ಪಾದಿಸುವ ಮೂರು ಮುಖ್ಯ ಕೇಂದ್ರಗಳಿವೆ. ಮಿಕಿ, ಸಿಕಾಯಿ ಮತ್ತು ಸಂಜೋ. ಇವುಗಳಲ್ಲಿ ಮಿಕಿಯೇ ದೊಡ್ಡದು. ಅದು ಗ್ರಾಮದಂತೆ ತೋರಿದರೂ ಅದನ್ನು ನಗರವೆಂದು ಹೇಳಬಹುದು. ಈ ನಗರವು ಆರು ಮೈಲು ಉದ್ದ ೩½ ಮೈಲು ಅಗಲವಿದೆ. ನದಿಯ ಎರಡು ದಂಡೆಯಲ್ಲಿ ಈ ಕೈಗಾರಿಕಾ ಕೇಂದ್ರವಿರುವದರಿಂದ ತಯಾರಾದ ವಸ್ತುಗಳ ಹಾಗೂ ಕಚ್ಚಾ ಮಾಲುಗಳ ರವಾನೆಗೆ ಈ ನದಿಯು ಉಪಯುಕ್ತವಾಗಿದೆ.

ಈ ಪಟ್ಟಣದಲ್ಲಿರುವ ಆರೇಳು ಮನೆ ಕಾರ್ಖಾನೆಗಳನ್ನು ನೋಡಿದೆನು. ಈ ನಗರದಲ್ಲಿರುವ ಮನೆಗಳೆಲ್ಲವೂ ಕಾರ್ಖಾನೆಗಳು! ಕಬ್ಬಿಣದ ಆದುರುಗಳಿಂದ ಇವರು ತಮ್ಮ ತಮ್ಮ ಮನೆಗಳಲ್ಲಿ ತಯಾರಿಸುವ ವಸ್ತುಗಳು ಯಾರನ್ನೂ ಚಕಿತಗೊಳಿಸದಿರವು. ಒಬ್ಬ ವಿಧವೆಯು ಒಂದು ಮನೆಯಲ್ಲಿ ಹೀಗೆ ಹೇಳಿದಳು. "ಇಲ್ಲಿ ನಾನು ತಯಾರಿಸುವ ಕಬ್ಬಿಣದ ಚಿಕ್ಕ ಪೆಟ್ಟಿಗೆಗಳು ಹಿಂದೂದೇಶದಿಂದ ಜಪಾನಿಗೆ ಬರುವ ಉಣ್ಣೆ ಬೇಲುಗಳನ್ನು ಬಿಗಿಯಲು ಉಪಯೋಗಿಸಲ್ಪಡುತ್ತವೆ." ಚಿಕ್ಕ ವಯಸ್ಸಿನ ಪಾಶ್ಚಿಮಾತ್ಯರಂತೆ ಸುಂದರ ಉಡುಪು ಧರಿಸಿ ಸಂಪನ್ನನಂತೆ ತೋರುವ ಒಬ್ಬ ಜಪಾನಿಯು ಹೀಗೆ ಹೇಳಿದನು. "ನನ್ನ ಚಿಕ್ಕಪ್ಪನು ಈ ಕಬ್ಬಿಣ ಪಟ್ಟಿಗಳನ್ನು ತಯಾರಿಸಿ ಹಿಂದೂ ದೇಶಕ್ಕೆ ಕಳುಹಿಸಿ ಮಿಲಿಯಾಧಿಪತಿಯಾಗಿದ್ದಾನೆ." ಮತ್ತೊಬ್ಬ ಜಪಾನಿಯು ನನ್ನನ್ನು ಕಂಡೊಡನೆ, 'ಜೈ ಹಿಂದ್, ವಂದೇ ಮಾತರಂ, ನೇತಾಜೀ ಕೀ ಜೈ' ಎಂದು ಮೊದಲಾಗಿ ಹೇಳಿ, ನನ್ನ ಡ್ರೈವರನನ್ನು ಉದ್ದೇಶಿಸಿ 'ಚಲೋ ಚಲೋ' ಎಂದನು. ಆತನು ತನಗೆ ಗೊತ್ತಿರುವ ಹಿಂದೀ ಶಬ್ದಗಳನ್ನೆಲ್ಲಾ ಉಪಯೋಗಿಸುತ್ತಿದ್ದನು. ಆತನು ಹೇಳಿದನು, 'ನನಗೆ ಚಪಾತಿಗಳೆಂದರೆ ತುಂಬಾ ಇಷ್ಟ.' ಇತರರ ಬಗೆಗಿರುವ ಅವರ ಆಸಕ್ತಿಯು ಇದರಿಂದ ವ್ಯಕ್ತವಾಗುತ್ತದೆ. ಮಿಕಿಯಲ್ಲಿ ೧೫೦೦ ವರ್ಷಗಳಿಂದ ನಡೆಯುತ್ತಿರುವ ಕೈಗಾರಿಕೆಗಳಿವೆ. ಕಾಲ, ರೀತಿ, ಬದಲಾದಂತೆ, ಕೈಗಾರಿಕಾ ಪ್ರಗತಿಯೊಡಂತೆ ಅದಕ್ಕೆ ಹೊಂದಿಕೊಂಡು ಅವು ಬೆಳೆದು ಬಂದಿವೆ. ಮಿಕಿಯ ೧೫೦೦೦ ಜನಸಂಖ್ಯೆಯಲ್ಲಿ ೮೦೦೦ ಕ್ಕಿಂತಾ ಹೆಚ್ಚಿನವರು ಈ ಕಬ್ಬಿಣ ಕೈಗಾರಿಕೆಯಲ್ಲಿ ತೊಡಗಿರುವರು. ಗರಗಸ, ಚೂರಿ, ವ್ಯವಸಾಯ ಹತ್ಯಾರುಗಳಿಗೆ ಮಿಕಿಯು ಜಗದ್ವಿಖ್ಯಾತವಾಗಿದೆ.

ಇಲ್ಲಿಯ ಬಹು ಕಾರ್ಖಾನೆಗಳಲ್ಲಿ ಕೆಲಸಗಾರರೇ ಕಾರ್ಖಾನೆಯ ಶೇರುದಾರರೂ ಡೈರೆಕ್ಟರರೂ ಆಗಿದ್ದಾರೆ. ಅವರ ನಿರ್ದೇಶನದಂತೆ ಕೆಲಸ ನಡೆಯುತ್ತದೆ.

ಕಾಗದ ತಯಾರಿಯ ಗ್ರಾಮ.

ಕೋಬೇ ಗುಡ್ಡಗಳ ಮೇಲೆ ಒಗಾವ ಎಂಬ ಕಾಗದ ತಯಾರಿಸುವ ಗ್ರಾಮವಿದೆ. ಇದು ಕಾಶ್ಮೀರದ ಪಹಗಾಮನ್ನು ಹೋಲುತ್ತದೆ. ಈ ಗ್ರಾಮವು ನದಿಯ ಕರೆಯಲ್ಲಿದೆ. ಕಾಗದ ತಯಾರಿಸಲು ಬೇಕಾದ ಕಚ್ಚಾಮಾಲು ಇಲ್ಲಿ ವಿಪುಲವಿದೆ. ಈ ಗ್ರಾಮದಲ್ಲಿ ೧೫,೦೦೦ ಜನರಿದ್ದಾರೆ. ಇವರಲ್ಲಿ ೩೫೦೦ ಜನರು ಕಾಗದ ತಯಾರಿ ಕೈಗಾರಿಕೆಯಿಂದ ಜೀವಿಸುತ್ತಾರೆ. ಪ್ರತಿ ಮನೆಯಲ್ಲಿಯೂ ಕಾಗದ ತಯಾರಾಗುತ್ತದೆ.

ಇಂಥಾ ಕಾಗದ ತಯಾರಿಸುವ ಕುಟುಂಬವೊಂದನ್ನು ಪರಿಶೀಲಿಸುವ. ಈ ಕುಟುಂಬದ ಯಜಮಾನನಾದ ಇಟೋಸನ್ನನ ಸಂಸಾರವೆಂದರೆ ಹೆರಿಯದ ಸುಂದರ ಹೆಂಡತಿ, ಎರಡು ಹುಡುಗಿಯರು ಮತ್ತೊಬ್ಬ ನೆಂಟ. ಇವರೆಲ್ಲರೂ ಕೆಲಸ ಮಾಡುತ್ತಾರೆ. ದಿವಸಕ್ಕೆ ಇವರು ಮೂರಡಿ ಉದ್ದ ಎರಡಡಿ ಅಗಲದ ೮೦೦ ಗಜ ಕಾಗದ ತಯಾರಿಸುತ್ತಾರೆ. ಅದರ ದಿನದ ಉತ್ಪತ್ತಿ ರೂ. ೧೧-೮-೦ ಆಗುತ್ತಿದೆ. ಅವರು ತಿಂಗಳಿಗೆ ೨೫ ದಿನ ಕೆಲಸ ಮಾಡುತ್ತಾರೆ. ಗ್ರಾಮದಲ್ಲಿ ಸುಸಜ್ಜಿತವಾದ ತರಬೇತು ಶಾಲೆ ಇದೆ. ಕಾಗದ ತಯಾರಿಯನ್ನು ಅಲ್ಲಿ ಮಕ್ಕಳಿಗೆ ಆರು ತಿಂಗಳುಗಳಲ್ಲಿ ಕಲಿಸಲಾಗುತ್ತದೆ

'ಜಪಾನಿನ ಕಾಗದ' ಎಂದರೆ ಜಪಾನಿನಲ್ಲಿ ಕೈಯಿಂದ ತಯಾರಿಸಲ್ಪಟ್ಟ ಕಾಗದ ಎಂದರ್ಥ. ಜಪಾನಿನ ಪತ್ರಿಕೆಗಳಿಗೂ ಇತರ ಕೆಲಸಗಳಿಗೂ ಕಾಗದ ತಯಾರಿಸುವ ದೊಡ್ಡ ಕಾರ್ಖಾನೆಗಳು ಹೊರಿತಿಯಾದ್ದೋ ಮೊದಲಾದೆಡೆ ಇವೆ. ಆದರೆ ಜಪಾನಿನ ಕೈ ಕಾಗದದ ಜೊತೆಯಲ್ಲಿ ಅವು ಸ್ಪರ್ಧೆ ನಡೆಸಲಾರವು. ಜಪಾನಿನ ಕೈ ಕಾಗದಕ್ಕೆ ಇಡೀ ಜಗತ್ತಿನಲ್ಲಿ ಬೇಡಿಕೆ ಇದೆ. ಅದು ಬಲವಾದುದೂ ಸುಂದರವೂ ಇದ್ದು ನೂರಾರು ಕೆಲಸಗಳಿಗೆ ಬೇಕಾಗುತ್ತದೆ. ಪುಸ್ತಕ ಬೈಂಡಿಂಗ್, ಮನೆಯ ಒಳಗಿನ ಅಲಂಕಾರ, ಸಾಮಾನು ಸುತ್ತಲು ಈ ಕಾಗದವನ್ನು ಮೀರಿದ್ದಿಲ್ಲ. ಈ ಕೈಗಾರಿಕೆಯಲ್ಲಿ ಅಸಾಧ್ಯ ಪ್ರಗತಿಯಾಗಿ ಯಾವ ಆಧುನಿಕ ಯಂತ್ರ ತಯಾರಿಯೂ ಇದನ್ನು ಮೀರಿಸಲಾರದು.

ಕಾಗದದಿಂದ ೩೦೦ ವಸ್ತುಗಳು

ಜಪಾನರು ಕಾಗದವನ್ನು ನೂರಾರು ವಿಷಯಗಳಿಗೆ ಉಪಯೋಗಿಸುತ್ತಾರೆ. ಜಪಾನ ಕಾಗದವು ಗಟ್ಟಿಯಾದುದೂ, ತಾಳಿಕೆ ಬರುವಂಥಾದ್ದೂ ಆಗಿದೆ. ಕಾಗದದಿಂದ ಅನೇಕ ಬೀಸಣಿಗೆ, ಪರದೆ, ದೀಪ ಮೊದಲಾದುವನ್ನು ಮಾಡುತ್ತಾರೆ. ಕಾಗದವನ್ನು ಕೈ ವಸ್ತ್ರವಾಗಿಯೂ ಉಪಯೋಗಿಸುತ್ತಾರೆ. ಗಾಜಿನ ಕಿಡಿಕಿಗಳ ಬದಲು ಕಾಗದ ಉಪಯೋಗವಾಗುತ್ತದೆ. ಮನೆ ಗುಡಿಸಲು ಕಾಗದದ ಹಿಡುಗಲುಗಳನ್ನು ಅನರು ಉಪಯೋಗಿಸುತ್ತಾರೆ. ಎಣ್ಣೆ ಕಾಗದಗಳಿಂದ ಕೊಡೆ, ರೈನ್ ಕೋಟು, ಹೊಗೆಸೊಪ್ಪು ಚೀಲ, ಕೂರಲು ಆಸನ, ಮಾಡುತ್ತಾರೆ. ಕಾಗದದ ಪೆಟ್ಟಿಗೆ ಮೊದಲಾದ ನೂರಾರು ವಿಷಯಗಳಿಗೆ ಜಪಾನರ ಕೈಕಾಗದ ಉಪಯೋಗವಾಗುತ್ತದೆ. ಕಲಾಕಾರರ ಚಿತ್ರ ಕೆಲಸಕ್ಕೆ ಜಪಾನರ ಕೈ ಕಾಗದವನ್ನು ಮೀರಿಸಿದುದಿಲ್ಲ.

ಟಿಬೇಟ್ ಕುರಿತು ಚೈನಾ ಭಾರತ ಪರಿಷತ್ತು

ಟಿಬೇಟ್ ಕುರಿತು ವಿಚಾರ ವಿನಿಮಯ ಮಾಡಲು ಚೈನಾ ಭಾರತ ಸಮ್ಮೇಲನವೊಂದು ಪೆಕಿಂಗ್‌ನಲ್ಲಿ ಇದೇ ಬರುವ ಡಿಶಂಬರ್ ತಿಂಗಳಲ್ಲಿ ಜರಗಬಹುದೆನ್ನಲಾಗಿದೆ. ಈ ಸಂಬಂಧ ಮಾತುಕತೆ ನಡೆಸಲು ಚೈನಾದಲ್ಲಿರುವ ಭಾರತ ರಾಯಭಾರಿ ಶ್ರೀ ಎನ್. ರಾಘವನ್‌ರವರು ಸದ್ಯದಲ್ಲೇ ದೆಹಲಿಗೆ ಬರುವ ನಿರೀಕ್ಷೆಯಿದೆ. ಈ ಸಮ್ಮೇಲನದಲ್ಲಿ ಭಾರತ ಮತ್ತು ಟಿಬೇಟ್‌ಗಳ ನಡುವೆ,ಯಂತ್ರಕರಮತ್ತು ವ್ಯವಹಾರಗಳ ಕುರಿತು ಚರ್ಚಿಸಲಾಗುವದು.

ಹಿಟ್ಲರನ ಅನೇಕ ಸೇನಾಧಿಕಾರಿಗಳು ಈಗ ಸಿರಿಯಾ, ಲೆಬಲಾನ್ ಇತ್ಯಾದಿ ಮಧ್ಯಪೂರ್ವ ರಾಷ್ಟ್ರಗಳಲ್ಲಿ ಆಶ್ರಯ ಪಡೆದಿರುವರೆಂದೂ ವಿಮಾನ ದಳ ಮತ್ತು ಟ್ಯಾಂಕು ದಳಗಳ ಸಂಘಟನೆ ಮಾಡುತ್ತಿರುವರೆಂದೂ ಹೇಳಲಾಗಿದೆ.

ಆಸ್ತಿಕರ ಕಾಯಿದೆಯ ಸ್ಥೂಲ ವಿವರ

ಕಳೆದ ಅಕ್ಟೋಬರ್ ೧೫ನೇ ತಾರೀಕಿನಿಂದ ಜಾರಿಗೆ ಬಂದಿದೆ.

೧೯೫೩ನೇ ಇಸವಿಯ ಆಸ್ತಿ ಕರ ಕಾಯಿದೆಯು ತಾರೀಕು ೧೫—೧೦—೫೩ರಿಂದ ಜಾರಿಗೆ ಬಂದಿರುವದಷ್ಟೆ. ಈ ಕಾಯಿದೆಯು ಒಬ್ಬನ ನಿಧನದ ಕಾರಣದಿಂದ ಹಸ್ತಾಂತರವಾಗುವ ಆಸ್ತಿಯು ಕರಮುಕ್ತ ಪ್ರಮಾಣಕ್ಕಿಂತ ಹೆಚ್ಚು ಇದ್ದರೆ ಅದರ ಬೆಲೆಯ ಮೇಲೆ ಕರವನ್ನು ಹೇರುವ ಮತ್ತು ವಸೂಲು ಮಾಡುವ ಅಧಿಕಾರವನ್ನು ಕೇಂದ್ರ ಸರಕಾರಕ್ಕೆ ಕೊಡುತ್ತದೆ. ನಮ್ಮ ಪಾರ್ಲಿಮೆಂಟನಲ್ಲಿ ಕಳೆದ ವರ್ಷ ಆಗಸ್ಟ್ ತಿಂಗಳಲ್ಲಿ ಈ ಆಸ್ತಿ ಕರ ಮಸೂದೆಯನ್ನು ಮಂಡಿಸಲಾಯಿತು. ಪಾರ್ಲಿಮೆಂಟಿನ ಎರಡೂ ಸಭೆಗಳು ಇದನ್ನು ಚರ್ಚೆಗೆ ತೆಗೆದುಕೊಂಡು, ಅದನ್ನು ಮನ್ನಿಸಲು ಸುಮಾರು ಒಂದು ವರ್ಷ ಕಾಲ ಹಿಡಿಯಿತು. ಭಾರತೀಯರಿಗೆ ಈ ಕರವು ಹೊಸ ಅನುಭವವಾಗಿದ್ದರೂ ಭಾರತ ಸರಕಾರವು ಈ ಕರವನ್ನು ಹೊರಿಸುವ ವಿಚಾರವನ್ನು ಬಹಳ ಹಿಂದಿನಿಂದಲೇ ಪರಿಶೀಲನೆಗೆ ತೆಗೆದುಕೊಂಡಿತ್ತು. ಕರ ಭಾರ ವಿಚಾರಣಾ ಸಮಿತಿಯು ೧೯೨೫ರಲ್ಲಿ ಸರ್ವಪ್ರಥಮವಾಗಿ ಆಸ್ತಿಯ ಮೇಲೆ ಕರವನ್ನು ಹೊರಿಸುವ ಸೂಚನೆಯನ್ನು ಮುಂದಿಟ್ಟಿತು. ಆದರೆ ಆ ಸಮಯ ಕೆಲವು ರಾಜಕೀಯ ಸುಧಾರಣೆಗಳು ಬರಲಿದ್ದುವಾದ ಕಾರಣ ಯಾವುದೇ ಕ್ರಮ ಕೈಗೊಳ್ಳಲ್ಪಡಲಿಲ್ಲ. ಮುಂದೆ ದ್ವಿತೀಯ ಮಹಾಯುದ್ಧ ಕಾಲದಲ್ಲಿ ಅನೇಕ ಜನರು ಅಪಾರ ಸಂಪತ್ತನ್ನು ಗಳಿಸಿದುದರಿಂದ, ಅವರ ಸೊತ್ತು ಮತ್ತು ಆಸ್ತಿಯ ಮೇಲೆ ಕರ ಹೇರಿದರಾಗಬಹುದೆಂದು ತೋರಿತು. ಹಾಗೆಂದು ೧೯೩೫ನೇ ಇಸವಿಯ ಭಾರತೀಯ ಕಾಯಿದೆಯಂತೆ ಈ ಕರವನ್ನು ಹೇರಲು ಬರುತಿದ್ದಿಲ್ಲ. ಅದಕ್ಕಾಗಿ ಆ ಕಾಯಿದೆಯಲ್ಲಿ ಯೋಗ್ಯ ತಿದ್ದುಪಡಿ ಮಾಡುವ ಅಗತ್ಯ ಉಂಟಾಯಿತು. ೧೯೪೬ನೇ ಇಸವಿಯಲ್ಲಿ ಒಂದು ವಿಧೇಯಕವು ಮಂಡಿಸಲ್ಪಟ್ಟರೂ ಕಾರಣಾಂತರಗಳಿಂದ ಅದು ಚರ್ಚೆಗೆ ತೆಗೆದುಕೊಳ್ಳಲ್ಪಡಲಿಲ್ಲ. ೧೯೪೮ನೇ ಇಸವಿಯಲ್ಲಿ ನಡುಗಾಲದ ಪಾರ್ಲಿಮೆಂಟಿನಲ್ಲಿ ಈ ವಿಧೇಯಕವನ್ನು ಮರಳಿ ಮಂಡಿಸಿದಾಗ, ಅದು ಪರಿಶೀಲಕ ಸಮಿತಿಯ ಘಟ್ಟವನ್ನು ಮಾತ್ರ ಮುಟ್ಟಿತು; ಮುಂದೆ ನಡುಗಾಲ ಪಾರ್ಲಿಮೆಂಟಿನ ವಿಸರ್ಜನೆಯೊಂದಿಗೆ ಈ ವಿಧೇಯಕವೂ ರದ್ದಾಯಿತು.

ಕಾಯಿದೆಯ ವ್ಯಾಪ್ತಿ

ಈ ಕಾಯಿದೆಯ ಕಲಮುಗಳು ಬಹಳ ಕ್ಲಿಷ್ಟವಾಗಿರುತ್ತವೆ. ಪಾರ್ಲಿಮೆಂಟಿನಲ್ಲಿ ಇದನ್ನು ಕೆಲವು ಸದಸ್ಯರು ಎತ್ತಿ ತೋರಿಸಿ, ಆಕ್ಷೇಪಿಸಿದ್ದರು. ಆಗ ಅರ್ಥ ಸಚಿವ ಶ್ರೀ ದೇಶಮುಖರು ಬಾಣನ ಸಂಸ್ಕೃತ ನಾಟಕ 'ಕಾದಂಬರಿ'ಯ ಶ್ಲೋಕಗಳನ್ನು ಉದಾಹರಿಸಿ ಇವು ಅತ್ಯಂತ ಕ್ಲಿಷ್ಟವಾಗಿದ್ದರೂ ರಸಿಕರನ್ನು ಮೆಚ್ಚಿಸುವಂತೆ ಇರುವದರಿಂದ, ಆಸ್ತಿ ಕರ ಕಾಯಿದೆಯೂ ತಜ್ಞ ವಕೀಲರ ಪ್ರೀತಿಗೆ ಪಾತ್ರವಾಗುವುದರಲ್ಲಿ ಸಂದೇಹವಿಲ್ಲ ಎಂದರು. ಆದರೆ ಸಾಮಾನ್ಯ ಮನುಷ್ಯನ ಪಾಲಿಗೆ ಈ ಕಾಯಿದೆಯ ಅರ್ಥ ವಿವರಣೆ ಮಾಡಿಕೊಳ್ಳುವುದು ಸುಲಭಸಾಧ್ಯವಲ್ಲ—ಇದನ್ನು ಮನಗಂಡು ಕೇಂದ್ರ ಕಂದಾಯ ಮಂಡಳದವರು 'ಆಸ್ತಿ ಕರದ ಕುರಿತು ಸೂಚನೆಗಳು' ಎಂದೊಂದು ಚಿಕ್ಕ ವಿವರಣಾ ಪುಸ್ತಕವನ್ನು ಪ್ರಕಟಿಸಿರುವರು. ಅದರಲ್ಲಿ ಕಾಯಿದೆಯ ಕಲಮುಗಳು ತಕ್ಕ ಉದಾಹರಣೆಗಳೊಂದಿಗೆ ವಿವರಿಸ್ಪಟ್ಟಿವೆ.

ಆಸ್ತಿಕರ ವಿಧೇಯಕವು ಜಮ್ಮು ಮತ್ತು ಕಾಶ್ಮೀರ ಸಂಸ್ಥಾನಗಳನ್ನು ಬಿಟ್ಟು ಉಳಿದ ಭಾರತಕ್ಕೆ ಅನ್ವಯಿಸುತ್ತದೆ. ಭಾರತದ ಎಲ್ಲ ರಾಜ್ಯಗಳಲ್ಲಿರುವ ಸ್ಥಿರ ಚರ ಆಸ್ತಿಗಳ ಮೇಲೆ ಈ ಕರವನ್ನು ಹೇರಲಾಗುವುದು. ಭಾರತದ ಹೊರಗಿನ ಸ್ಥಿರಾಸ್ತಿಯ ಮೇಲೆ ಈ ಕರವು ಬೀಳುವುದಿಲ್ಲವಾದರೂ ಮರಣ ಕಾಲದಲ್ಲಿ ಒಬ್ಬ ಮನುಷ್ಯನು ಭಾರತದಲ್ಲಿ ನೆಲಸಿದ್ದು, ಅವನಿಗೆ ವಿದೇಶಗಳಲ್ಲಿ ಚರಾಸ್ತಿ ಇದ್ದರೆ, ಅದು ಆಸ್ತಿ ತೆರಿಗೆಗೆ ಅರ್ಹವಾಗುತ್ತದೆ.

ಆಸ್ತಿಯ ಅರ್ಥ ವಿವರಣೆ

ಮರಣಾನಂತರ ಆ ವ್ಯಕ್ತಿಯ ಆಸ್ತಿಯು ಯಾರ ಕೈಗೆಯೇ ಹೋಗಲಿ ಅದನ್ನು ಗಮನಿಸದೆ ಕರಾಕರಣೆಯನ್ನು ಮಾಡಲಾಗುವದು. ಆಸ್ತಿ ಎಂದರೇನೆಂಬುದನ್ನು ಕಾಯಿದೆಯ ಕೆಲವು ಕಲಂಗಳಲ್ಲಿ ವಿವರಿಸಿದ್ದು, ಅವುಗಳಲ್ಲಿ ಕೆಳಗಿನವುಗಳೂ ಸಮಾವೇಶವಾಗಿವೆ. (೧) ಸ್ಥಿರ—ಚರ ಆಸ್ತಿಯಲ್ಲಿ ಪಾಲು (೨) ಇಂಥಾ ಪಾಲಿನ ಮಾರಾಟದಿಂದ ಬರುವ ಹಣ (೩) ಇಂಥ ಹಣವು ಎಲ್ಲಿಯಾದರೂ ತೊಡಗಿಸಲ್ಪಟ್ಟಿದ್ದರೆ ಅದು (೪) ಯಾವುದೇ ಪದ್ಧತಿಯಿಂದ ಒಂದು ವರ್ಗದಿಂದ ಇನ್ನೊಂದಕ್ಕೆ ಪರಿವರ್ತಿಸಲ್ಪಟ್ಟ ಆಸ್ತಿ (೫) ನ್ಯಾಯವಾಗಿ ದೊರೆತಂಥ ಆಸ್ತಿ (೬) ಮೃತನ ಸಾಲ (೭) ವಾದಗ್ರಸ್ತ ಆಸ್ತಿಗಳು (೮) ಹಣಕ್ಕೆ ಪರಿವರ್ತಿಸ್ಪಡುವ ಯಾವುದೇ ತರದ ಹಕ್ಕು ಮತ್ತು (೯) ಮೃತನ ಹಕ್ಕು ಇಲ್ಲವೆ ಸಾಲ ಪದ್ಧತಿಯ ಪರಿಣಾಮವಾಗಿ ದೊರೆಯುವ ಲಾಭ.

ಕೆಲವು ಆಸ್ತಿಗಳು ಮರಣದ ಬಳಿಕ ಹಸ್ತಾಂತರವಾಗುವುದಿಲ್ಲ. ಆದರೂ ಅವುಗಳನ್ನು ಆಸ್ತಿಕರವನ್ನು ಹೇರುವ ಬಗ್ಗೆ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವದು (೧) ಮೃತನು ವಿಲೆವಾರಿ ಮಾಡಬಹುದಾಗಿದ್ದ ಆಸ್ತಿ (೨) ಮರಣದಿಂದ ಪಾಲುಗಾರಿಕೆ ನಷ್ಟವಾಗುವಂತಹ ಆಸ್ತಿ (ಮಿತಾಕ್ಷರ, ಮರು ಮಕ್ಕಳತ್ತಾಯಂ ಮತ್ತು ಅಳಿಯ ಸಂತಾನ ಪದ್ಧತಿಯ ಅವಿಭಕ್ತ ಕುಟುಂಬದ ಆಸ್ತಿಯಲ್ಲಿ ಪಾಲಿರುವಾತನು ೧೮ ವರ್ಷಕ್ಕೆ ಮೊದಲು ಮೃತಪಟ್ಟರೆ ಅವನ ಪಾಲಿನ ಆಸ್ತಿಯ ಮೇಲೆ ಕರಾ ಕರಣೆ ಮಾಡಲಾಗುವುದಿಲ್ಲ. ಆದರೆ ಮಿತಾಕ್ಷರ ಪದ್ಧತಿಯ ಕುಟುಂಬದಲ್ಲಿ ಮೃತನು ೧೮ ವರ್ಷಕ್ಕೆ ಕೆಳಗಿನವನಿದ್ದರೂ ಅವನ ಆಸ್ತಿಯ ಪಾಲಿನಲ್ಲಿ ಇನ್ನೊಬ್ಬ ಪುರುಷ ಭಾಗೀದಾರನಿರದಿದ್ದರೆ ಅದಕ್ಕೆ ಕರ ಅನ್ವಯಿಸುತ್ತದೆ) (೩) ಮರಣ ನಿರೀಕ್ಷೆಯಿಂದ ದಾನ ರೂಪದಲ್ಲಿ ಸ್ವೀಕರಿಸಿದ ಆಸ್ತಿ. (ಏಕೆಂದರೆ ಇಂಥ ದಾನವು ರದ್ದಾಗುವುದಿಲ್ಲ. ಮತ್ತು ಮರಣಕ್ಕೆ ಮೊದಲು ಜಾರಿಗೆ ಬರುವುದಿಲ್ಲ) (೪) ಸಾರ್ವಜನಿಕ ಉದ್ದೇಶಗಳಿಗಾಗಿ ಮರಣಕ್ಕೆ ಆರು ತಿಂಗಳು ಮೊದಲೇ ಮತ್ತು ಬೇರೆ ಉದ್ದೇಶಗಳಾದರೆ ಎರಡು ವರ್ಷ ಮುಂಚಿತವಾಗಿ ದಾನ ನೀಡಿದ ಆಸ್ತಿ. ಆದರೆ ವಿವಾಹೋದ್ದೇಶದಿಂದ ೫೦೦೦ ರೂಪಾಯಿಗೆ ಮಿಗದಂತೆ ತೆಗೆದಿಟ್ಟ ಆಸ್ತಿಗೆ ಇದು ಅನ್ವಯಿಸುವುದಿಲ್ಲ. (೫) ಜೀವಾವಧಿಯ ವರೆಗೆ ಹಕ್ಕು ಇದ್ದಂಥ ಆಸ್ತಿಯನ್ನು ನಿರ್ದಿಷ್ಟ ಅವಧಿಯಲ್ಲಿ ವಿಲೇವಾರಿ ಮಾಡಿದ್ದರೆ ಅದರ ಮೇಲೆ ಕರ ಬೀಳುವುದು. (೬) ಸಂಯುಕ್ತ ಹೆಸರಿನಲ್ಲಿದ್ದಂಥ ಆಸ್ತಿಯು ಅದರಲ್ಲಿಯೇ ಒಬ್ಬನ ಮರಣಾ ನಂತರ ಇನ್ನೊಬ್ಬನಿಗೆ ಹೋಗುವಂತಿದ್ದರೆ ಅದು (೭) ಜೀವಾವಧಿಯ ವರೆಗೆ ಹಕ್ಕು ಇಟ್ಟುಕೊಂಡು ಅನಂತರ ಬಿಟ್ಟುಕೊಟ್ಟ ಆಸ್ತಿ (೮) ವಿಮೆಯ ಹಣವು ಎರಡನೆಯವರ ಕೈಗೆ ಅಧಿಕಾರಪೂರ್ವಕ ಸಿಗುವಂತಿದ್ದರೆ ಇತ್ಯಾದಿ

ಕೆಲವು ನಮೂನೆಯ ಆಸ್ತಿಗಳು ಮರಣದ ಕಾರಣದಿಂದ ಹಸ್ತಾಂತರವಾಗುವುದಿಲ್ಲವಾದುದರಿಂದ, ಅವುಗಳ ಮೇಲೆ ಕರಾಕರಣೆ ಮಾಡಲಾಗುವುದಿಲ್ಲ. (೧) ಕೇವಲ ಅಡಳಿತಗಾರನೆಂದು ಧಾರಣ ಮಾಡಿದ ಆಸ್ತಿ (ಕಂಪೆನಿ ಮೇನೇಜರ, ಗುರುಪೀಠಗಳು ಈ ಕಕ್ಷೆಯಲ್ಲಿ ಬರುತ್ತವೆ (೨) ವಿಶ್ವಸ್ತನೆಂದು ನೋಡಿಕೊಳ್ಳುತಿದ್ದ ಆಸ್ತಿ. (ಆದರೆ ಮೃತನು ತಾನಾಗಿಯೇ ವಿಶ್ವಸ್ತ ಮಂಡಳವೊಂದನ್ನು ರಚಿಸಿದ್ದು ಅದರಲ್ಲಿ ಸಹಸದಸ್ಯನಾಗಿದ್ದರೆ ಮರಣಕ್ಕೆ ಎರಡು ವರ್ಷ ಪೂರ್ವದಲ್ಲಿ ಆ ಮಂಡಳ ಅಸ್ತಿತ್ವದಲ್ಲಿರಬೇಕಾಗುವುದು. ತಾನು ರಚಿಸಿದ ವಿಶ್ವಸ್ತ ಮಂಡಳದ ಪೂರ್ಣ ಸದಸ್ಯನೇ ಮೃತನಾಗಿದ್ದರೆ ಮರಣಕ್ಕೆ ೫ ವರ್ಷ ಪೂರ್ವ ಆ ಮಂಡಳ ಅಸ್ತಿತ್ವದಲ್ಲಿರಬೇಕು.) (೩) ಯಾವ ಕರಾದೂ ಹಾಕದೆ ನಿರ್ದಿಷ್ಟ ಅವಧಿಯಲ್ಲಿ ದಾನ ಮಾಡಿದ ಆಸ್ತಿ ಇತ್ಯಾದಿ.

ಸಹಕಾರವೇ ಜೀವನದ ಏಳಿಗೆಯ ಹೆದ್ದಾರಿ,
ಅದರಲ್ಲೂ ವಿಮೆಯಲ್ಲಿ ಸಹಕಾರವೇ ಪರಸ್ಪರ ಅನ್ಯೋನ್ಯ ಏಳಿಗೆಯ ಮತ್ತು ಭದ್ರತೆಗೆ ಒಂದು ತಳಹದಿ.

ದಿ ಬೊಂಬಾಯಿ ಕೋಪರೇಟಿವ್ ಇನ್ಶೂರೆನ್ಸ್ ಸೊಸೈಟಿ, ಲಿಮಿಟೆಡ್

ಹೆಡ್ ಆಫೀಸು:— [ಬೊಂಬಾಯಿ]

1952 ನೇ ಸಾಲಿಗೆ ರಿವರ್ಶನರಿ ಬೋನಸ್ಸು
ಹೋಲ್ ಲೈಫ್ ಸಾವಿರಕ್ಕೆ 11 ರಂತೆ
ಎಂಡೋಮೆಂಟ್ ಸಾವಿರಕ್ಕೆ 9 ರಂತೆ

ಹಳ್ಳಿಗರಿಗೊಂದು ವರ

ರಿಂದ 900 ರ ತನಕದ ಪೋಲಿಸಿಗಳು

ಎಲ್ಲಾ ಕಡೆಗಳಲ್ಲಿಯೂ ಪ್ರಭಾವವುಳ್ಳ ಏಜಂಟರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಯನ್ನು ದಕ್ಷಿಣ ಕನ್ನಡ, ಕೊಡಗು ಮತ್ತು ಮೈಸೂರು ಪ್ರಾಂತ್ಯಕ್ಕೆ ಮುಖ್ಯ ಏಜಂಟರಾದ

ಎಮ್. ಟಿ. ಕೋರ್ಡೆಲ್ ಅಂಡ್ ಕೋ., ಹಂಪನಕಟ್ಟೆ, ಮಂಗಳೂರು, ಇವರಿಂದ ಪಡೆಯಿರಿ.

12-7

ಕೆಲವು ರಿಯಾಯಿತಿಗಳು

ಕರಾಕರಣೆಗೆ ಅರ್ಹವಾದ ಆಸ್ತಿಯ ಒಟ್ಟು ಬೆಲೆಯ ಮೇಲೆ ಕಂಟ್ರೋಲರರೆಂಬ ಅಧಿಕಾರಿಗಳು ಕರವನ್ನು ಹೊರಿಸುವರು. ಮೃತನ ಮರಣ ಸಮಯದಲ್ಲಿ ಅವನ ಹೆಸರಿನಲ್ಲಿರುವ ಮೇಲೆ ವಿವರಿಸಿದ ವಿವಿಧ ಬಗೆಯ ಆಸ್ತಿಗಳನ್ನು ಬಹಿರಂಗ ಪೇಟೆಯಲ್ಲಿ ಮಾರುತ್ತಿದ್ದರೆ ಯಾವ ಬೆಲೆ ಬರುತಿತ್ತೋ ಅದನ್ನೇ ಆಸ್ತಿಯ ಬೆಲೆಯಾಗಿ ಗಣಿಸಲಾಗುವುದು. ಅವಿಭಕ್ತ ಕುಟುಂಬಕ್ಕೆ ಸೇರಿದ ಅಳಿಯ ಸಂತಾನ ಮರುಮಕ್ಕತ್ತಾಯಂ ಮತ್ತು ಮಿತಾಕ್ಷರ ಪದ್ಧತಿಯಲ್ಲಿ ಮೃತನ ದೆಸೆಯಿಂದ ಅವನ ಪಾಲು ಪ್ರತ್ಯೇಕವಾಗುವುದಿಲ್ಲವಾದರೂ ಅವನ ಆಸ್ತಿಯ ಬೆಲೆ ಕಟ್ಟುವಾಗ ಅದು ಪ್ರತ್ಯೇಕವಾಗಿರುವದೆಂದೇ ಗಣನೆಗೆ ತೆಗೆದುಕೊಳ್ಳಲಾಗುವುದು. ಆಸ್ತಿ ಕರವನ್ನು ಹೇರುವುದಕ್ಕೋಸ್ಕರ ಬೆಲೆ ನಿರ್ಣಯಿಸುವಾಗ ಕೆಲವು ಸಾಲ ಮುಂತಾದುವುಗಳನ್ನು ವಜಾ ಮಾಡಲಾಗುವುದು (೧) ಒಂದು ಸಾವಿರ ರೂಪಾಯಿಯನ್ನು ಮೀರದಂತೆ ಮೃತನ ಅಂತ್ಯ ಸಂಸ್ಕಾರದ ವೆಚ್ಚ. (೨) ಯೋಗ್ಯ ಹಾಗೂ ಅಧಿಕೃತ ಸಾಲಗಳು (೩) ವರದಕ್ಷಿಣೆಗಾಗಿ ೫ ಸಾವಿರ ರೂಪಾಯಿ ವರೆಗೆ ಮಾಡಿದ ಸಾಲ (೪) ಪರದೇಶಗಳಲ್ಲಿ ಇರುವ ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳುವಾಗ ಆಗುವ ವೆಚ್ಚದಲ್ಲಿ ಆ ಆಸ್ತಿಯ ಬೆಲೆಯ ಪ್ರತಿಶತ ೫ನ್ನು ಮೀರದಷ್ಟು ಮತ್ತು (೫) ಮರಣದ ದಿನದ ವರೆಗೆ ಮೃತನು ಕೊಡಬೇಕಾಗಿದ್ದ ಕರ ಬಾಕಿ.

ಕರದ ದರಗಳನ್ನು ಹಂತಗಳಲ್ಲಿ ನಿರ್ಣಯಿಸಲಾಗಿರುವುದು. ಮಿತಾಕ್ಷರ, ಮರುಮಕ್ಕತ್ತಾಯಂ ಮತ್ತು ಅಳಿಯ ಸಂತಾನ ಪದ್ಧತಿಯ ಕುಟುಂಬದ ಸದಸ್ಯನ ಸಂಬಂಧದಲ್ಲಿ ೫೦ ಸಾವಿರ ರೂಪಾಯಿಯನ್ನೂ ಬೇರೆಯವರ ಸಂಗತಿಯಲ್ಲಿ ಒಂದು ಲಕ್ಷ ರೂಪಾಯಿಯನ್ನೂ ಕರ ಮುಕ್ತತೆಯ ಪರಮಾವಧಿ ಮಿತಿಯಾಗಿ ನಿರ್ಣಯಿಸಲಾಗಿದೆ.

ಇದಲ್ಲದೆ ಬೇರೆ ಕೆಲವು ಕರ ಮುಕ್ತ ಆಸ್ತಿಗಳೂ ಇವೆ. ಅವುಗಳ ಮೇಲೆ ಕರಾಕರಣೆ ಮಾಡಲಾಗುವುದಿಲ್ಲವಾದರೂ ಆಸ್ತಿಯ ಒಟ್ಟು ಬೆಲೆ ನಿರ್ಣಯ ಕಾಲಕ್ಕೆ ಅವನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು. ಸಾರ್ವಜನಿಕ ಉದ್ದೇಶಕ್ಕಾಗಿ ಮರಣದ ಆರು ತಿಂಗಳ ಮೊದಲು ದಾನ ಮಾಡಿದ ೨೫೦೦ ರೂಪಾಯಿ ವರೆಗೆ ಬೆಲೆಯುಳ್ಳ ಆಸ್ತಿ ಇತರ ಯಾವುದೇ ಉದ್ದೇಶಕ್ಕಾಗಿ ಮರಣದ ಎರಡು ವರ್ಷ ಪೂರ್ವದಲ್ಲಿ ದಾನ ಕೊಟ್ಟ ೧೫೦೦ ರೂಪಾಯಿ ವರೆಗಿನ ಆಸ್ತಿ. ಆಸ್ತಿ ಕರವನ್ನು ಕೊಡುವುದಕ್ಕೋಸ್ಕರ ಸರಕಾರದ ಹೆಸರಿನಲ್ಲಿ ಮಾಡಿಟ್ಟ ೫೦೦೦೦ ರೂ. ವರೆಗಿನ ಜೀವವಿಮೆ. ಕರ ಕೊಡುವುದಕ್ಕೆಂದು ಸರಕಾರದೊಡನೆ ನಿಕ್ಷೇಪಿಸಿದ ೫೦೦೦೦ ರೂ. ವರೆಗಿನ ಹಣ. ತನ್ನನ್ನು ಅವಲಂಬಿಸಿದ ಹೆಮ್ಮಕ್ಕಳ ವಿವಾಹೋದ್ದೇಶದಿಂದ ಅವರಲ್ಲಿ ಪ್ರತಿಯೊಬ್ಬನ ಹೆಸರಲ್ಲಿ ೫ ಸಾವಿರ ರೂಪಾಯಿಯನ್ನು ಮೀರದಂತೆ ಇಳಿಸಿದ ಜೀವವಿಮೆ.

ಆಸ್ತಿಯ ಒಟ್ಟು ಬೆಲೆಯ ಮೇಲೆ ಕರಾಕರಣೆ ಮಾಡುವಾಗ ಮೇಲಿನ ವಿನಾಯಿತಿಗಳ ಮಟ್ಟಿಗೆ ವಟ್ಟವನ್ನು ಕೊಡಲಾಗುವುದು.

ಇದಲ್ಲದೆ ಮೇಲಿಂದ ಮೇಲೆ ಮರಣಗಳು ಸಂಭವಿಸಿ ಹಸ್ತಾಂತರವು ತೀವ್ರಗತಿಯಿಂದ ಸಾಗಿದರೆ, ಅಲ್ಲಿ ಆಸ್ತಿಕರ ಹೇರುವಾಗ ಕೆಲವು ರಿಯಾಯಿತಿಯನ್ನು ತೋರಿಸಲಾಗುವುದು. ಒಂದು ಮರಣದ ಬಳಿ ಮೂರು ತಿಂಗಳೊಳಗೆ ಎಷ್ಟೇ ಮರಣ ಸಂಭವಿಸಿದರೂ ಮತ್ತು ಆಸ್ತಿಯ ಹಸ್ತಾಂತರ ಎಷ್ಟು ಬಾರಿ ನಡೆದರೂ ಅದನ್ನು ಒಂದೇ ಮರಣವಾಗಿ ತೆಗೆದುಕೊಳ್ಳಲಾಗುವುದು. ಸಾಂಕ್ರಾಮಿಕ ರೋಗ ಮತ್ತು ಅಪಘಾತಗಳಿಂದ ಈ ರೀತಿ ಕುಟುಂಬಕ್ಕೆ ರಕ್ಷಣೆ ದೊರೆಯುತ್ತದೆ. ಮೊದಲನೆಯ ಮರಣದ ಬಳಿಕ ಎರಡನೇ ಮರಣವು ಆ ವರ್ಷದಲ್ಲಿಯೇ ನಡೆದರೆ ಕರ ಪ್ರಮಾಣವನ್ನು ಶೇಕಡ ೫೦ರಷ್ಟು ಇಳಿಸಲಾಗುವುದು. ೨, ೩, ೪ ಮತ್ತು ೫ನೇ ವರ್ಷಗಳಲ್ಲಾದರೆ ಕ್ರಮವಾಗಿ ಪ್ರತಿ ಶತ ೪೦, ೩೦, ೨೦ ಮತ್ತು ೧೦ರಷ್ಟು ಕಡಿಮೆ ಮಾಡಲಾಗುವುದು. ಹಿಂದೂ ವಿಧವೆಯು ತನ್ನ ಪತಿಯ ಮರಣಾನಂತರ ಏಳು ವರ್ಷಗಳಲ್ಲಿ ತೀರಿಕೊಂಡರೆ ಅವಳ ಆಸ್ತಿಯ ಹಸ್ತಾಂತರ ಕಾಲದಲ್ಲಿ ತೆರಿಗೆ ಹೊರಿಸುವಾಗಲೂ ಕೆಲವು ರಿಯಾಯಿತಿಗಳಿವೆ.

ಅಪೀಲಿಗೆ ಅವಕಾಶ

ಆದಾಯ ತೆರಿಗೆಯ ಇಲಾಖೆಯವರೇ ಆಸ್ತಿ ತೆರಿಗೆಯನ್ನೂ ಗಮನಿಸುವರು. ಮತ್ತು ಅವರಿಗೆ ಮೃತನ ಆಸ್ತಿಯನ್ನು ವಹಿಸಿಕೊಳ್ಳುವ ಆಡಳಿತಗಾರ, ಅವಿಭಕ್ತ ಕುಟುಂಬದ ವ್ಯವಸ್ಥಾಪಕ, ವಿಶ್ವಸ್ತ, ಪಾಲಕ, ಸಮಿತಿ ಅಥವಾ ಯಾವುದೇ ವ್ಯಕ್ತಿ ಕರ ಸಲ್ಲಿಸಬೇಕು. ಅವರವರ ಪಾಲಿಗೆ ಮೃತನ ಆಸ್ತಿಯಲ್ಲಿ ಎಷ್ಟೆಷ್ಟು ಬರುತ್ತದೋ ಅದರ ಮಟ್ಟಿಗೆ ಮಾತ್ರ ಅವರು ಕರ ಕೊಡಲು ಬಾಧ್ಯರು. ಮೃತನ ಮರಣದ ಆರು ತಿಂಗಳೊಳಗೆ ಅವನ ಆಸ್ತಿಯ ಲೆಕ್ಕವನ್ನು ವಿವರವಾಗಿ ತನ್ನ ಅಂದಾಜಿನಂತೆ ಆಸ್ತಿ ವಹಿಸಿಕೊಳ್ಳುವವನು ತಿಳಿಸಬೇಕಾಗುವುದು. ಇದನ್ನು ಕಂಟ್ರೋಲರನು ಪರಾಮರ್ಶಿಸಿ, ಆಸ್ತಿಯ ಬೆಲೆಯನ್ನು ನಿರ್ಣಯಿಸಿ, ಕರ ತುಂಬಲು ಅವಧಿ ನಿರ್ಧರಿಸಿ ತಿಳಿಸುವನು. ಆಸ್ತಿಯು ಒಬ್ಬನಿಗಿಂತ ಹೆಚ್ಚು ಜನರಿಗೆ ಹೋಗುವ ಪಕ್ಷದಲ್ಲಿ ಕರ ತುಂಬುವ ಹೊಣೆಯು ಸಂಯುಕ್ತವಾಗಿದ್ದು, ಇವರಲ್ಲಿ ಯಾರಾದರೊಬ್ಬನು ಬೇರೊಬ್ಬನ ಹೆಸರಲ್ಲಿ ಕರ ತುಂಬಿಸಬಲ್ಲನು; ಮತ್ತು ಹಾಗೆ ತುಂಬಿಸಿದ ಹಣವನ್ನು ಆ ಸದಸ್ಯನಿಂದ ಕಾಯಿದೆ ಬದ್ಧವಾಗಿ ಪಡೆಯಲು ಅರ್ಹನು.

ಕಂಟ್ರೋಲರನು ಬೆಲೆ ಕಟ್ಟುವಾಗ ಅನ್ಯಾಯವಾಯಿತೆಂದು ಕಂಡು ಬಂದರೆ ಕೇಂದ್ರ ಕಂದಾಯ ಮಂಡಳಕ್ಕೆ ಅಪೀಲು ಮಾಡಲು ಎಡೆಯಿದೆ. ಕಾಯಿದೆ ಸಂಬಂಧದ ತಕರಾರುಗಳಲ್ಲಿ ನಿರ್ಣಯ ಬೇಕಿದ್ದರೆ ನೂರು ರೂ. ಮಂಡಳಕ್ಕೆ ಕಟ್ಟಿ ಅವರ ಮೂಲಕ ಹೈಕೋರ್ಟಿನ ವಿವರಣೆಯನ್ನು ಕೇಳಬಹುದು. ಮಂಡಳದ ನಿರ್ಣಯದ ವಿರುದ್ಧ ಹೈಕೋರ್ಟಿಗೂ, ಅಲ್ಲಿಂದ ಅಗತ್ಯದ ಸಂದರ್ಭಗಳಲ್ಲಿ ವರಿಷ್ಠ ನ್ಯಾಯಾಲಯಕ್ಕೂ ಅಪೀಲು ಮಾಡಬಹುದು.

ಇನ್ನು ಮುಂದೆ ಒಬ್ಬನ ಮರಣಾನಂತರ ಅವರ ಆಸ್ತಿಯನ್ನು ಕ್ರಯಕ್ಕೆ ತೆಗೆದುಕೊಳ್ಳುವವರು ಆ ಆಸ್ತಿಯ ಮೇಲೆ ಕರವನ್ನು ಕೊಡಲಾಗಿರುವದೋ ಹೇಗೆಂಬುದನ್ನು ಮೊದಲು ದೃಢಪಡಿಸಿಕೊಳ್ಳುವ ಅಗತ್ಯವಿದೆ. ಕಂಟ್ರೋಲರನು ವಸೂಲಾದ ತೆರಿಗೆಯ ಬಗ್ಗೆ ಕೊಟ್ಟ ರಶೀತಿಯನ್ನು ಹಾಗೆ ವಿಕ್ರಯಕ್ಕೆ ಕೊಳ್ಳುವವರು ನೋಡಿಕೊಳ್ಳುವುದು ಒಳ್ಳೆಯದು. ಹೆಚ್ಚಿನ ಆಸ್ತಿಗಳು ಕರಮುಕ್ತ ಪ್ರಮಾಣದಲ್ಲಿ ಬರುವ ಸಂಭವವಿದೆ. ಇಲ್ಲಿ ಕೂಡ ಈ ರೀತಿ ಕರ ಮುಕ್ತತೆಯ ಬಗ್ಗೆ ಶಿಫಾರಸು ಪತ್ರವನ್ನು ಪಡೆದು ಇಟ್ಟುಕೊಳ್ಳುವುದು ಅಪೇಕ್ಷಣೀಯ.

ನವಯುಗ.

ದಿ ಕೆನರಾ ಬ್ಯಾಂಕಿಂಗ್ ಕಾರ್ಪೋರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ಆರ್ಥಿಕ ಉಳಿತಾಯ ಯೋಜನೆಗಳಲ್ಲಿ "ಕ್ಯುಮುಲೇಟಿವ್ ಡಿಪೋಜಿಟ್" ಯೋಜನೆಯು ಅತಿ ಪರಿಣಾಮಕಾರಿ ಹಾಗೂ ಅನುಕೂಲವಾದುದು. ಯಾವುದಾದರೊಂದು ನಿರ್ದಿಷ್ಟ ಉದ್ದೇಶ ಸಾಧನೆಗೆ, ನಿಯಮಿತ ಕಾಲಕ್ಕೆ ನಿಯಮಿತ ಹಣವನ್ನು ಒಂದು ನಿಯಮಿತ ಅವಧಿಯೊಳಗೆ ಬಡ್ಡಿಯೊಂದಿಗೆ ವಾಪಾಸು ಸಿಗುವಂತೆ ಬ್ಯಾಂಕಿನಲ್ಲಿ ಶೇಖರಿಸಿಡುವುದೇ ಈ ಯೋಜನೆಯ ಮೂಲ ತತ್ವ. ಇದು ಮುಖ್ಯವಾಗಿ ಮಧ್ಯಮ ತರಗತಿಯ ಜನರಿಗೆ ಇಲ್ಲವೆ ನಿಯಮಿತ ಸಂಬಳದ ನೌಕರರಿಗೆ ತಮ್ಮ ಮುದ್ದು ಮಕ್ಕಳ ವಿದ್ಯಾಭ್ಯಾಸ, ಮುಂಜಿ, ಮದುವೆ ಯಾ ಇನ್ನಿತರ ಸದುದ್ದೇಶ ಸಾಧನೆಗಳಿಗೆ ಅತ್ಯನುಕೂಲ ಹಾಗೂ ಅತಿ ಫಲಕಾರೀ ಯೋಜನೆ.

ವಿಶೇಷ ಮಾಹಿತಿಗೆ, ಕೊಡಗು ಸಂಸ್ಥಾನದಲ್ಲಿನ ಈ ಕೆಳಗಣ ನಮ್ಮ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ :

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

THE CANARA BANKING CORPORATION LIMITED.

Estd: 1906] [*H. O, Udipi (S. India)*

ಕೊಡಗು ಪ್ರಾಂತೀಯ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸ್ :—ವೀರಾಜಪೇಟೆ.

ಶಾಖೆ :—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟಗಳು
2. 12 ನೇ ನಂಬರಿನ ಒಂಟಿ ಹೊಳವಿನ ತೋಟದ ಕೋವಿಗಳು.
3. ಒಂಟಿ ಮತ್ತು ಜೋಡಿ ಹೊಳವಿನ ಕೇಪಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
5. ⅝", ½" ಮತ್ತು ⅜" ಕಬ್ಬಿಣದ ಸರಳುಗಳು
6. 2", 1¼", 1" ¾" ಮತ್ತು ½" ಕೊಳಾಯಿಗಳು. (G. I. Peps)
7. 1¾" × $\frac{5}{16}$" ಉಕ್ಕಿನ ಪಟ್ಟಿಗಳು (Spring Steel flats),
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಪಂಪುಗಳು.
9. ಕೋತಿ ಮತ್ತು ಆನೆ ಮಾರ್ಕಿನ ಸೀಮೆಣ್ಣೆ ಟಿನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

Edited Printed and Published by P. I. BELLIAPPA, at 'KODAGU' Press Mercara, for 'Kodagu' Ltd.,

ಕೊಡಗು

ಸಂಪುಟ ೩೨ || ತಾ. ೧೩—೧೧—೧೯೫೩ನೇ ಶುಕ್ರವಾರ || ಸಂಚಿಕೆ ೩೯

ಅರುವತ್ತು ವರುಷಗಳ ಚಿರಧೀರ ಸೇವೆಯನು
ಭಾರತಕೆ ಅನವರತ ಗೈದು ನೀವು
ಭುವಿಯ ಇತಿಹಾಸದಲಿ ಗಣ್ಯತೆಯ ಸ್ಥಾನವನು
ಗಳಿಸಿದಿರಿ, ಪುಣ್ಯಶಾಲಿಗಳು ನಾವು!

ಸ್ವಾತಂತ್ರ್ಯ ಸಂಗ್ರಾಮದಲಿ ನಿಂತು ಕಾದಿ
ಸೆರೆಯಲ್ಲಿ ಬಹುವರ್ಷ ಕಳೆದು ನೀವು
ತಾಳ್ಮೆಯಲಿ ಅತಿ ಕಷ್ಟವನುಭವಿಸಿ ನರಳಿ
ದಾರಿಯನು ತೋರಿದಿರಿ ಜನತೆಗಂದು.

ನಾಲ್ವತ್ತು ಕೋಟಿಗಳ ಭಾರತದ ಮುಗ್ಧವೀರ!
ಆರ್ಯ ಧರ್ಮದ ಮೂರ್ತಿ ಭಾರತಿಯ ವರದ ಪುತ್ರ!
ನೀವಿರಲು ಧೈರ್ಯವಿದೆ, ನಿಮಗಿರಲಿ ಶತವರುಷ
ನೀವಿತ್ತ ಆದರ್ಶ, ಓ ಧೀರ, ಜನಸಾರ
ಇನ್ನೊಮ್ಮೆ ಜೀವನದ ಗುರಿಯಾಗಿ ಬೆಳಗುವದು
ಚಿರಕಾಲ ಎಮಗೆಮಗೆ ಶಾಂತಿಯನು ತರುವದು.

ವಾರದ ಕಥೆ.

ಗುಲಾಬಿ ಹುಡುಗಿ

— ಲೇ:—ಶ್ರೀ ಸಂ. ಜಿ. ಅರಗ —

ಆಕೆಯ ಹೆರಳಿಗೆ ಗುಲಾಬಿ ಹೂ ಬಹು ಅಂದವಾಗಿ ಒಪ್ಪುತ್ತಿತ್ತು.

ಅವರಲ್ಲಿಯೂ ಬಿಳಿಯ ಗುಲಾಬಿ ಹೂವು!

ಕಪ್ಪು ಕೂದಲುಗಳ ಮೇಲೆ ಬಿಳಿಯ ಗುಲಾಬಿ. ಕಪ್ಪು ಮೋಡದ ನಡುವೆ ತೇಲುವ ಚಂದ್ರನಂತೆ ಬಲು ಮೋಹಕ.

ಅವಳ ಮುಖವೂ ಒಂದು ಗುಲಾಬಿ ಹೂವೇ! ಅಷ್ಟೇ ಅಂದ, ಅಷ್ಟೇ ಚೆಲುವು; ಅಷ್ಟೇ ಸುಮಧುರ.

ಆ ಮುಖ, ಆ ಕೂದಲು, ಆ ಗುಲಾಬಿ.

ಅವಳಿಗವನು 'ಗುಲಾಬಿ ಹುಡುಗಿ' ಎಂದೇ ಹೆಸರಿಟ್ಟಿದ್ದ.

ಆಕೆ ಅವನ ಅಧ್ಯಾಪಕರ ಮಗಳು.

ಗುಲಾಬಿ ಹೂ ಬೆಳೆಯುತ್ತಿದ್ದುದು ಅವನ ಮನೆಯ ಮುಂದಣ ತೋಟದಲ್ಲಿ. ಮುಡಿಯುವ ಆ ಗುಲಾಬಿ ಹುಡುಗಿ ಎದುರು ಮನೆಯಲ್ಲಿ.

ಹೌದು ಎದುರು ಮನೆ ಹೆಚ್ಚು ದೂರವಿಲ್ಲದ ಎದುರು ಮನೆ.

ಈ ಮನೆಯ ಕಿಟಕಿಯಲ್ಲಿ ನಿಂತು, ಆ ಮನೆಯ ಕಿಟಕಿಯ ಮೂಲಕ ಒಳಗಿದ್ದ ಗುಲಾಬಿ ಹುಡುಗಿಯನ್ನವನು ನೋಡುತ್ತಿದ್ದ. ಮರೆಯಾಗಿಯೇನೂ ಅಲ್ಲ. ಸ್ಪಷ್ಟವಾಗಿಯೇ ಕಾಣುತ್ತಿತ್ತು ಎಲ್ಲಾ!

ಅವನು ಅಧ್ಯಾಪಕರ ಮನೆಗೆ ಪ್ರತಿ ದಿನ ಬೆಳಿಗ್ಗೆ ಪಾಠ ಹೇಳಿಸಿಕೊಳ್ಳಲು ಹೋಗುತ್ತಿದ್ದ. ಹೋಗುವಾಗೆಲ್ಲಾ ಒಂದು ಸುಂದರವಾದ, ಚೆನ್ನಾಗಿ ಅರಳಿದ ಬಿಳಿಯ ಗುಲಾಬಿ ಹೂ ಬಿಡಿಸಿಕೊಂಡು ಹೋಗಿ ಅವರ ಮನೆಯಲ್ಲಿ ಹಾಲಿನಲ್ಲಿಟ್ಟಿರುತ್ತಿದ್ದ ಮೇಜಿನ ಮೇಲಿಡುವನು. ಆ ಹುಡುಗಿ ಆ ಗುಲಾಬಿ ಹೂವನ್ನು ಎತ್ತಿಕೊಂಡು ತನ್ನ ಹೆರಳುಗಳಿಗೆ ಸಿಕ್ಕಿಸಿಕೊಂಡು ಹೋಗುವಳು. ಅದನ್ನವನು ಆಸೆಯ ಕಣ್ಣುಗಳಿಂದ ನೋಡುವನು. ತಾನು ತಂದ ಹೂ ಅವಳ ಕೂದಲ ಮೇಲೆ ಅದೆಷ್ಟು ಹೆಮ್ಮೆಯಿಂದ ಕುಳಿತಿದೆ! ಎಂದುಕೊಳ್ಳುವನು. ಅವಳು ನಡೆದು ಹೋಗುತ್ತಿರುವಾಗ ಆ ಕಡೆಗೇ ನೋಡುವನು. ಆಕೆ ಬೇರೆತ್ತಲೋ ನೋಡುತ್ತಿರುವಾಗ ಆಕೆಯ ಮುಖವನ್ನು ನೋಡುವ ಧೈರ್ಯವನ್ನು ಮಾಡುವನು.

ಆದರೆ ಆಕೆಯ ದೃಷ್ಟಿಯನ್ನೆದುರಿಸಲು ಅವನಿಂದಾಗದು.

ಈ ದಿನಚರಿ ಬಹಳ ದಿನಗಳಿಂದ ನಡೆದು ಬಂದಿತ್ತು. ಒಂದು ದಿನವೂ ಹೂ ಆ ಮನೆಯ ಮೇಜಿನ ಮೇಲಕ್ಕೆ ಹೋಗದೆ ಉಳಿಯುತ್ತಿರಲಿಲ್ಲ; ಅನಂತರ ಅದೇ ಹೂ ಆ ಹುಡುಗಿಯ ಕುರುಳನ್ನಲಂಕರಿಸದಿರುತ್ತಿರಲಿಲ್ಲ.

ಒಂದು ದಿನವೂ ತಪ್ಪಿರಲಿಲ್ಲ. ಅಧ್ಯಾಪಕರಿರಲಿ, ಇಲ್ಲದಿರಲಿ; ಪಾಠವಿರಲಿ, ಇರದಿಲ್ಲದಿರಲಿ, ಏನೇ ಆಗಲಿ, ಹೂ ಅಲ್ಲಿಗೆ ಹೋಗಲೇ ಬೇಕು. ಆಕೆ ಮುಡಿಯಲೇ ಬೇಕು. ಆಕೆ ಮುಡಿದಿರುವುದನ್ನು ನೋಡಿದರೇ, ತನ್ನ ಕಿಟಕಿಯಲ್ಲಿ ನಿಂತು ನೋಡಿದರೇ ಇವನಿಗೆ ತೃಪ್ತಿ.

ಮೊದಲು ಒಂದು ಹೂವಿದ್ದುದು ಕ್ರಮೇಣ ಎರಡು ಹೂವಾಯಿತು.

ಒಂದು ದಿನ ಎರಡು ಹೂವಿಟ್ಟು ಬಂದು ಕಿಟಕಿಯಲ್ಲಿ ನಿಂತು ಅಚ್ಚರಿ ನೋಡತೊಡಗಿದ. ಗುಲಾಬಿ ಹುಡುಗಿ ಎರಡು ಹೂ ಮುಡಿದಿದ್ದಳು. ಎರಡು ಜಡೆ ಹೆಣೆದು ಎರಡರ ಬುಡಕ್ಕೂ ಒಂದೊಂದು ಹೂ ಮುಡಿದಿದ್ದಳು.

ಅಂತೂ ಆಕೆ ಸೋಲಲಿಲ್ಲ.

ಈತ ಮೂರು ಹೂವಿಡ ಹೋಗಲಿಲ್ಲ

ಆಕೆಯನ್ನು ಎರಡು ಜಡೆಯಲ್ಲಿ ನೋಡಬೇಕೆಂದ ದಿನ ಎರಡು ಹೂ; ಒಂದೇ ಜಡೆಯಲ್ಲಿ ನೋಡಬೇಕೆನಿಸಿದರೆ ಒಂದೇ ಹೂ!

ಹೂ ಇದ್ದಂತೆ ಜಡೆ.

ಹೂವಿಗಾಗಿ ಜಡೆ ಅಲ್ಲ, ಜಡೆಗಾಗಿ ಹೂವು.

ಅವಳಿಗಾಗಿ ಇವನ ಹೂವು.

ಅಷ್ಟೇ ಅಲ್ಲ; ಅವಳಿಗಾಗಿ ಇವನ ಹೃದಯದ ಹೂ ಸಹ ಅರಳಿತ್ತು.

ಅದು ಕಂಡೂ ಕಾಣದಂತಿತ್ತು. ಅದನ್ನೂ ಸ್ಪಷ್ಟವಿತ್ತು.

ಗುಲಾಬಿ ಹುಡುಗಿಯನ್ನವನು ಪ್ರೀತಿಸುತ್ತಿದ್ದ.

ಮುಟ್ಟಿ ನೋಡಿಕೊಂಡು ಸರಿಯಾದ ಜಾಗದಲ್ಲಿ ಹೂ ಕುಳಿತಿರುವುದನ್ನು ನಿರ್ಧರಿಸಿಕೊಳ್ಳುವಳು! ತಿರುಗಿ ತಿರುಗಿ ಕನ್ನಡಿಯಲ್ಲಿ ನೋಡಿಕೊಂಡು ಇಮ್ಮಡಿಸಿದ ಚೆಲುವನ್ನು ಕಂಡು ಕಂಡು ಹೇಗೆ ಹಿಗ್ಗುವಳು!

ಇಷ್ಟಾಗಿಯೂ ಅಂಥ ಚೆಲುವಾದ, ಚೆಲುವನ್ನಿಮ್ಮಡಿಸುವ ಹೂವನ್ನಿತ್ತವನ ಬಗ್ಗೆ ಕೃತಜ್ಞತೆ ಬೇಡವೇ? ಕೊನೆಗೆ ಒಂದು ಮುಗುಳ್ನಗೆ!

ಇಲ್ಲ, ಎಂಥದೂ ಇಲ್ಲ.

ಆದರೆ ಅವನೂ ಅದಕ್ಕಾಗಿ ಹಂಬಲಿಸುತ್ತಿರಲಿಲ್ಲ. ತಾನು ಕೊಟ್ಟ ಹೂವಿನಿಂದಾಗಿ ಅವಳಿಗೆ ತೃಪ್ತಿಯಾಯಿತೇ, ಅವಳ ಚೆಲುವು ಪೂರ್ಣವಾಯಿತೆ, ಅವಳ ಹೆರಳಿಗದು ಒಪ್ಪಿದೆಯೋ! ಇಷ್ಟೇ ಅವನಿಗೆ ಬೇಕಾದುದು. ಅದರಲ್ಲಿಯೇ ತೃಪ್ತಿ.

ಅವಳು ಹೂ ಮುಡಿದು ಸಂಭ್ರಮದಿಂದ ನಡೆದು ಹೋಗುತ್ತಿದ್ದರೆ ಅದನ್ನು ನೋಡುವುದೇ ಅವನಿಗೆ ಹಬ್ಬ. ಕಂಗಳಿಗೆ ಸುಗ್ಗಿ.

* * * * * *

ಇವನ ಮನೆಯ ಮುಂದಣ ತೋಟದಲ್ಲಿ ಮೊದಲು ಒಂದೇ ಗುಲಾಬಿ ಗಿಡವಿತ್ತು, ಬಿಳಿಯ ಗುಲಾಬಿ ಗಿಡ.

ಕ್ರಮೇಣ ಅದು ವೃದ್ಧಿಸತೊಡಗಿತು. ಬೇರೆ ಬೇರೆ ಜಾತಿಯ, ತರ ತರನಾದ ರೂಪದ ಗುಲಾಬಿ ಗಿಡ ಬೆಳೆಯತೊಡಗಿತು.

ಅದಕ್ಕಾಗಿ ಅವನು ದೊಡ್ಡ ಶೋಧನೆಯನ್ನೇ ನಡೆಸಿದ್ದ. ಕ್ಯಾಟಲಾಗುಗಳನ್ನೆಲ್ಲಾ ತರಿಸಿ ನೋಡಿದ್ದ. ಬೀಜ, ಕೊನೆಗಳಿಗಾಗಿ ಎಲ್ಲೆಲ್ಲಿಯೋ ಅಲೆದಿದ್ದ. ಯಾರ್ಯಾರನ್ನೋ ಕೇಳಿದ್ದ.

ಯಾವ ಜಾತಿಯ ಹೂ ಅವಳ ಮುಡಿಗೆ ಶೋಭಿಸುವದೆಂಬ ಶೋಧನೆ ಮುಗಿದಿರಲೇ ಇಲ್ಲ. ಅವನು ಒಂದು ನಿರ್ಧಾರಕ್ಕೆ ಬಂದಿರಲಿಲ್ಲ. ಬೇರೆ ಬೇರೆ ಬಣ್ಣಗಳ ಹೂವಿನಿಂದಲೂ ಪ್ರಯೋಗ ನಡೆಸಿದ್ದ. ಕೆಂಪು ಒಪ್ಪುವದು. ಆದರೆ ಬಿಳಿಯ ಗುಲಾಬಿಯಷ್ಟು ಚೆನ್ನಾಗಿ ಒಪ್ಪದು.

ಒಂದೊಂದು ಹೊಸ ಬಗೆಯ ಹೂ ಇಟ್ಟು ಬಂದ ದಿನವೂ ಕಿಟಕಿಯಲ್ಲಿ ನಿಂತು ಆಸಕ್ತಿಯಿಂದ ನೋಡುತ್ತಿರುವನು. ಅವನ ಕಿಟಕಿಯೆದುರಿಗೇ ಅವಳ ಕೋಣೆಯ ಕಿಟಕಿಯೂ ಇತ್ತು. ಹೆರಳು ಹಾಕಿಕೊಂಡಾದ ಮೇಲೆ ಆಕೆ ಗುಲಾಬಿ ಹೂವನ್ನು ತನ್ನ ಮುಡಿಗೆ ಕನ್ನಡಿ ನೋಡಿಕೊಳ್ಳುತ್ತಾ ಸಿಕ್ಕಿಸಿಕೊಳ್ಳುವದನ್ನೂ ಅವನು ನೋಡುವನು. ಆ ಬಿಳಿಯ ಕೈಯಿಂದ ಅವನ್ನೆಷ್ಟು ಚೆಲುವಾಗಿ ಎತ್ತುವಳು! ಮುಡಿಯುವ ಜಾಗವನ್ನೆಂತು ಆಳತೆಯಿಟ್ಟಂತೆ ಕಂಡುಹಿಡಿಯುವಳು! ಹೇಗೆ ನಾಜೂಕಾಗಿ ಸಿಕ್ಕಿಸಿಕೊಳ್ಳುವಳು! ಮತ್ತೆ ಮತ್ತೆ

ಅವಳನ್ನವನು ಪ್ರೀತಿಸುತ್ತಿದ್ದ.

ಅದು ಹೇಗೆಂಬುದು ಅವನಿಗೇ ತಿಳಿಯದು.

ಅವಳ ಹೆಸರೂ ಅವನಿಗೆ ಸರಿಯಾಗಿ ತಿಳಿಯದು. ಅಂತೇ ಅವಳು 'ಗುಲಾಬಿ ಹುಡುಗಿ'ಯಾಗಿದ್ದಳು.

ಅವಳು ಹೇಗಿದ್ದಾಳೆಂದರೆ ಹೂವಿನಂತೆ ಸುಂದರವಾಗಿದ್ದಾಳೆಂದು ಅವನಿಗೆ ಗೊತ್ತು ಅದೂ ಬಿಳಿಯ ಗುಲಾಬಿ ಹೂವಿನಂತೆ.

ಅವಳ ಕಣ್ಣು ಹೇಗಿದೆ? ಕೆನ್ನೆ ಹೇಗಿದೆ; ಮೂಗು ಹೇಗಿದೆ? ಗಲ್ಲ ತುಟಿಗಳು ಹೇಗಿವೆ? ಎಂದು ಕೇಳಿದರೆ ಅವನಿಗೆ ತಿಳಿಯದು. ಅವನೆಂದೂ ಅವುಗಳನ್ನು ವಿವರವಾಗಿ ನೋಡಿಲ್ಲ.

ಅವಳುಡುವ ಸೀರೆ ಗೊತ್ತು, ತೊಡುವ ರವಿಕೆಯ ಬಣ್ಣ ಗೊತ್ತು. ಅವಳು ಮುಡಿಯುವ ಹೂವಂತೂ ಚೆನ್ನಾಗಿ ಗೊತ್ತು.

ಇವನೆಂದೂ ಅವಳೆಡೆಗೆ ಮುಗುಳು ನಕ್ಕಿಲ್ಲ. ಅವಳೂ ಅಷ್ಟೇ.

ಅವಳನ್ನು ಮದುವೆಯಾಗಬೇಕೆಂದು ಈತನೆಂದೂ ಆಶಿಸಿದವನಲ್ಲ. ಮದುವೆಯ ಯೋಚನೆಯೇ ಇಲ್ಲ.

ಕೊನೆಗೆ ಅವಳೊಡನೆ ಸವಿ ಮಾತನಾಡಬೇಕೆಂದು, ಅವಳ ಸವಿ ಮಾತು ಕೇಳಬೇಕೆಂದು ಸಹ ಆಸೆಯಿಲ್ಲ. ತನ್ನ ಪ್ರೀತಿಯನ್ನವಳಿಗೆ ತಿಳಿಸಬೇಕೆಂದೇನೂ ಅವನಿಗಿಷ್ಟವಿಲ್ಲ. ತನ್ನನ್ನವಳು ಪ್ರೀತಿಸುತ್ತಾಳೆಯೋ ಕೇಳಬೇಕೆಂದೂ ಬಯಸನು.

ಪತ್ರಗಿತ್ರ ಬರೆಯುವಂಥ ಯೋಚನೆಯೂ ಅವನ ಮನಸ್ಸಿನಲ್ಲಿಲ್ಲ.

ಅವಳನ್ನು ಅಪ್ಪಿಕೊಳ್ಳಬೇಕೆಂದಾಗಲಿ ಅವಳ ಚೆಂದುಟಿಗಳನ್ನು ಮುದ್ದಿಸಬೇಕೆಂದಾಗಲಿ ಅವನು ಯೋಚಿಸಿಲ್ಲ. ಅಂಥ ಯಾವ ಯೋಚನೆಯೂ ಅವನ ಮನಸ್ಸಿನಲ್ಲಿ ಸುಳಿದಿಲ್ಲ.

ಅವಳ ಗಾನ ಸುಧೆಯನ್ನು ಕೇಳುತ್ತ ಆ ಅಮೃತ ವಾಹಿನಿಯಲ್ಲಿ ಕೊಚ್ಚಿ ಹೋಗಬೇಕೆಂಬುದೂ ಅವನು ಬಯಸಿಲ್ಲ.

ಅವಳೊಡಗೂಡಿಕೊಂಡು ಕುಳಿತು ಹೊತ್ತು ಕಳೆಯಬೇಕೆಂದೂ ಯೋಚಿಸಿಲ್ಲ. ಅವನ ಆಸೆ ಬಹಳ ಚಿಕ್ಕದು; ವಿಚಿತ್ರವಾದುದು.

ಅವನ ತಲೆಯಲ್ಲಿ ಆ ಹೂ, ಆ ಮುಡಿಯನ್ನುಳಿದು ಬೇರೆ ವಿಚಾರವೇ ಹೋಗದು.

ಆ ಹೂವನ್ನು ತಾನಾಗಿ ಅವಳ ಮುಡಿಗೆ ಸಿಕ್ಕಿಸಬೇಕೆಂಬುದೇ ಅವನ ಹಿರಿಯಾಸೆ.

ಆ ಆಸೆ ಎಂದೋ ಹುಟ್ಟಿದ್ದು. ಆಕೆ ಒಯ್ಯಾರದಿಂದ ಹೂ ಮುಡಿದುಕೊಳ್ಳುವುದು ನೋಡಿದಾಗಲೆಲ್ಲ ಅದು ಸರಿಯಾಗಲಿಲ್ಲವೆಂದೆನಿಸುವುದು ಇವನಿಗೆ. ತಾನು ಸರಿಯಾಗಿ ಮುಡಿಸಬಲ್ಲೆ, ಮುಡಿಸಬೇಕು, ಒಮ್ಮೆಯಾದರೂ ಮುಡಿಸಬೇಕು, ಎಂದುಕೊಳ್ಳುವನು.

ಅಷ್ಟು ದಿನವೂ ತಾನು ಕೊಟ್ಟ ಹೂ ತೆಗೆದುಕೊಂಡು ಮುಡಿದಿದ್ದಾಳೆ. ಒಮ್ಮೆ ತನ್ನ ಕೈಯಿಂದಲೇ ಮುಡಿಸಿಕೊಳ್ಳಬಾರದೇಕೆ?

ಆದರೆ ಹಾಗೆಂದು ಅವಳಿಗೆ ಹೇಳುವದೆಂತು? ತನ್ನ ಆಸೆ ಅವಳಿಗೆ ತಿಳಿಯುವ ಬಗೆಯಾದರೂ ಎಂತು? ತನ್ನ ಆಸೆ ನೆರವೇರುವುದೆಂತು? ಎಂದು?

ಅವಳ ಮುಡಿಗೆ ಹೂ ಮುಡಿಸಬೇಕು ಹೇಗೆ ಮುಡಿಸುವುದು? ಅವಕಾಶವೆಂತು ಸಿಗುವುದು? ಅದನ್ನವಳಿಗೆ ಹೇಳುವುದು ಹೇಗೆ? ಹೇಳಿದರೂ ಅದಕ್ಕವಳು ಒಪ್ಪಿಯಾಳೆ?

ಯೋಚನೆ ತಲೆಯಲ್ಲಿ ಕೊರೆಯತೊಡಗಿತು.

ಆಕೆ ಒಪ್ಪಬಹುದು. ಇಷ್ಟು ದಿನ ನಾನು ಕೊಟ್ಟ ಹೂ ಮುಡಿದುಕೊಂಡಿದ್ದಾಳೆ. ಒಂದು ದಿನ, ಒಂದೇ ಒಂದು ದಿನ ನನ್ನ ಕೈಯಿಂದ ಮುಡಿಸಿಕೊಳ್ಳಲಾರಳೆ?

ಅದನ್ನುಳಿದು ನಾನು ಬೇರೇನೂ ಬಯಸುವುದಿಲ್ಲವಲ್ಲ!

ಒಪ್ಪಬಹುದು. ಒಪ್ಪಿಯೇ ಒಪ್ಪುತ್ತಾಳೆ.

ಅವಳಿಗೆ ತನ್ನ ಇಷ್ಟ ತಿಳಿಸುವುದೊಂದೇ ಬಾಕಿ.

ಹೇಗೆ ತಿಳಿಸುವುದು?

ಕಾಗದ ಬರೆದು? ಯಾರಿಂದಾದರೂ ಹೇಳಿ ಕಳಿಸಿ? ನೇರವಾಗಿ ಕಂಡು ಕೇಳಿ?

ಯಾವುದಕ್ಕೂ ಸಾಕಷ್ಟು ಧೈರ್ಯವಿರಲಿಲ್ಲ ಅವನಿಗೆ.

ಒಂದೊಂದು ಯೋಚನೆಯನ್ನೇ ಮನಸ್ಸಿನಿಂದ ದೂರ ಮಾಡುತ್ತಾ ಬಂದ.

ಇವಾವುವೂ ಅಲ್ಲದೆ ಬೇರೇನಾದರೂ ಉಪಾಯ ಹುಡುಕಬೇಕು.

ಉಪಾಯಕ್ಕಾಗಿ ಹುಡುಕತೊಡಗಿದ.

(ಕಡೇ ಪುಟವನ್ನು ನೋಡಿ)

ಕ್ಷಯರೋಗ ನಿರ್ಮೂಲಿಸಲು ಸಹಾಯ ಮಾಡಿರಿ

ಕ್ಷಯ ರೋಗ ನಿಯಂತ್ರಣದ ಯಶಸ್ವಿಕೆಯು ಇವುಗಳ ಮೇಲೆ ನಿಂತಿದೆ

(೧) ಸಾಕಷ್ಟು ಹಣ

(೨) ಜಾಗೃತಿಗೊಂಡಿರುವ ಮತ್ತು ಸಹಕರಿಸುವ ಸಾರ್ವಜನಿಕರು

(೩) ಸಾಮೂಹಿಕ ಸದ್ಯರ ಹೃತ್ಪೂರ್ವಕ ಪರಿಶ್ರಮ

(೪) ವ್ಯಕ್ತಿಕೀಯ ಕೆಲಸಗಾರರ ಉತ್ಸಾಹ

ಕ್ಷಯ ರೋಗ ಸೀಲುಗಳ ಮಾರಾಟದ ಚಳವಳವು ಇವುಗಳನ್ನು ಸಾಧಿಸಲು ಸಹಾಯ ಮಾಡುವದು

ಒಂದಾಣೆಯ ಕ್ಷಯ ರೋಗ ಸೀಲುಗಳನ್ನು ಹೆಚ್ಚಾಗಿ ಕೊಂಡು ಕೊಂಡು ಉಪಯೋಗಿಸಿರಿ

ಕ್ಷಯರೋಗ ಸೀಲುಗಳು ಕೊಡಗು ಸಿವಿಲ ಸರ್ಜನರಲ್ಲಿ ಮತ್ತು ಸಂಸ್ಥೆಯ ಇತರ ಏಜನ್ಸಿಗಳಲ್ಲಿ ದೊರೆಯುತ್ತದೆ

ಹಿಂದೂದೇಶದ ಕ್ಷಯರೋಗ ಸೀಲುಗಳ ನಾಲ್ಕನೇ ಚಳವಳ.

ನ್ಯೂ ಡಲ್ಲಿಯಲ್ಲಿರುವ ಕ್ಷಯ ರೋಗ ನಿವಾರಣಾ ಸಂಸ್ಥೆಯಿಂದ ನಡಸಲ್ಪಡುವಂದಾದ್ದು

ಈ ಪ್ರಕಟಣಾ ಸ್ಥಳವು ಬೊಂಬಾಯಿಯ ಮಾಣಕ್‌ಲಾಲ್ ಗಗಲ್ ಭಾಯಿ ಮತ್ತು ಕಂಪೆನಿಯವರ ಕೃಪೆಯಿಂದ

॥ ಪುಸ್ತಕಗಳ ವಿಮರ್ಶೆ ॥

ಆದರ್ಶದ ಆಡಂಬರ— ಬರೆದವರು ಶ್ರೀಮತಿ ಟಿ. ಸುನಂದಮ್ಮ, ವಿಜಯ ಸಾಹಿತ್ಯ, ಬೆಂಗಳೂರು ೪. ಬೆಲೆ ೦—೬—೦

ಮೂರು ಏಕಾಂಕಗಳ ಸಂಕಲನವಿದು ಆದರ್ಶ ಆಡಂಬರ, ಊರ್ಗೊಂದು ಅಡ್ಗೇ ಮನೆ ಮತ್ತು ದೂಪಾವಳಿ ಇವು ಮೂರು ಏಕಾಂಕಗಳಾಗಿವೆ ಶ್ರೀಮತಿ ಸುನಂದಮ್ಮನವರು ಸರಳ, ಸುಲಭ ಶೈಲಿಯಲ್ಲಿ ಈ ಪ್ರಹಸನಗಳನ್ನು ಬರದಿದ್ದಾರೆ ತಿಳಿ ಹಾಸ್ಯದಿಂದ ಕೂಡಿದ ಈ ಏಕಾಂಕಗಳು ಅಭಿನಯಿಸಲು ಯೋಗ್ಯವಾಗಿವೆ

Ornamental fish for Garden Ponds and Home Aquariums ಬರದವರು ಮೈಲೂರು ಲಕ್ಷ್ಮೀನಾರಾಯಣರಾಯರು ಬೆಲೆ ೦—೨—೦

ತೋಟದ ಕೊಳಗಳಲ್ಲಿ, ಹಳ್ಳಿಯ ಕೆರೆಗಳಲ್ಲಿ ಅಲಂಕಾರಕ್ಕಾಗಿ ಉಪಯೋಗಿಸಲ್ಪಡುವ ಎಂಥ ವಿಧದ ಮೀನುಗಳನ್ನು ಹೇಗೆ ಸಾಕಬಹುದು, ಸಾಕುವ ಕರ, ಕೊಳಗಳು ಹೇಗಿರಬೇಕು, ಅವುಗಳಿಗೆ ಆಹಾರ ಹೇಗೆ ಕೊಡಬೇಕು. ಎಂಬಿತ್ಯಾದಿ ವಿವರಗಳನ್ನು ಒಳಗೊಂಡಿರುವ ಈ ಚಿಕ್ಕ ಪುಸ್ತಕವು ಮೀನು ಕೃಷಿ ಯಲ್ಲಿ ಆಸಕ್ತಿ ಇರುವವರಿಗೆ ಉತ್ತಮ ಕೈಪಿಡಿಯಾಗಿದೆ

ಕ್ಷಯರೋಗ— ಲೇಖಕರು ಡಾ ವಿ ಆರ್ ಭಟ್, ಚಿತ್ರ ಪ್ರಕಾಶದ ಮಂದಿರ, ಮಂಗಳೂರು ೩ ಬೆಲೆ ೩—೪—೦

ಕ್ಷಯರೋಗದ ಹುಟ್ಟು, ಲಕ್ಷಣ, ಅದು ಬಳಯುವ ರೀತಿ ಮೊದಲಾದುವನ್ನು ಪುಸ್ತಕದ ಪ್ರಥಮದಲ್ಲಿ ಸವಿಸ್ತಾರವಾಗಿ ವಿವರಿಸಲಾಗಿದೆ ಕ್ಷಯರೋಗದ ಚಿಕಿತ್ಸಾ ಕ್ರಮ, ಕ್ಷಕಿರಣಗಳ ಪ್ರಯೋಗ, ಕ್ಷಯರೋಗದಲ್ಲಿ ಬರುವ ಪರಿಣಾಮಗಳು, ಶಕ್ತಿಪಾತ ಚಿಕಿತ್ಸೆ, ಕೃತಕ ವಾತಾವಕ್ಷ ಚಿಕಿತ್ಸೆ ಮೊದಲಾದುವನ್ನು ಚಿತ್ರ ಸಮೇತ ವಿವರವಾಗಿ ಕೊಡಲಾಗಿದೆ. ಕ್ಷಯ ರೋಗದಿಂದ ಮುಕ್ತರಾಗಲು ಸಾಧ್ಯವೇ, ಅದು ಬಾರದ ಹಾಗೆ ಹೇಗೆ ಮಾಡುವದು ಎಂಬ ವಿವರಗಳನ್ನೂ ಈ ಪುಸ್ತಕದಲ್ಲಿ ಕೊಟ್ಟಿದೆ ನಾಗರಿಕತೆ ಹೆಚ್ಚಿದಂತೆ ಈ ರೋಗವು ಹೆಚ್ಚಾಗುತ್ತಿದೆ ಹಳ್ಳಿಗಳಿಗಿಂಥಾ ಪಟ್ಟಣಗಳಲ್ಲಿ ಇದರ ಹಾವಳಿ ಬೆಳೆಯುತ್ತಿದೆ ಇಂಥಾ ರೋಗದ ಸರ್ವ ವಿವರವನ್ನೂ, ಅದರ ಶಮನ ವಿಧಾನಗಳನ್ನೂ ಒಳಗೊಂಡ ಈ ಪುಸ್ತಕವು ಸ್ವಾಗತಾರ್ಹವಾಗಿದೆ. ಕ್ಷಯರೋಗದಲ್ಲಿ ವಿಶೇಷ ಪರಿಜ್ಞಾನಗಳಿಸಿರುವ ಲೇಖಕರ ಕಲವು ಲೇಖನಗಳು 'ಕೊಡಗು' ಪತ್ರಿಕೆಯಲ್ಲೂ ಪ್ರಕಟವಾಗಿದ್ದವು ಈ ಉಪಯುಕ್ತ ಪುಸ್ತಕದ ಮುದ್ರಣವು ಸರ್ವಾಂಗ ಸುಂದರವಾಗಿದೆ. ಈ ಶಾಸ್ತ್ರೀಯ ಗ್ರಂಥವು ಕನ್ನಡ ಸಾಹಿತ್ಯ ಭಂಡಾರಕ್ಕೆ ಹೊಸದಾಗಿ ಒಂದು ರತ್ನ ಇಂತಹ ಪುಸ್ತಕಗಳು ಎಷ್ಟೇ ಬಂದರೂ ಅವುಗಳಿಗೆ ಸ್ವಾಗತವಿದೆ ಎಂಬ ದರಲ್ಲಿ ಸಂಶಯವಿಲ್ಲ ಲಾಭದ ಆಸೆಯಿಲ್ಲದೆ ಪ್ರಕಟವಾದ ಈ ಯತ್ನಕ್ಕೆ ಸರ್ವರ ಪ್ರೋತ್ಸಾಹ ಅಗತ್ಯ

ರೂಪರಾಶಿಗಳ ಸಂತೆ— ಲೇಖಕರು ಎಂ. ಬಿ. ಮರಕಿಣಿ, ಜನಪ್ರಿಯ ಸಾಹಿತ್ಯ, ಸರಸ್ವತಿ ನಿಲಯ, ಪುತ್ತೂರು.

ಅರುವತ್ತೆರಡು ಪುಟಗಳ ಈ ಚಿಕ್ಕ ಹೊತ್ತಿಗೆಯಲ್ಲಿ ಹೊಸಮನೆ, ನಂದಿದ ದೀಪ, ಮಾಸ್ಯ ಮತ್ತು ಸದ್ಗುರ, ಪಾರ್ಕ್ ಸುಬ್ಬ, ಜರೂರು ಚಿಟ್ಟಿ, ಮೊದಲಾದ ಐದು ವ್ಯಂಗ್ಯ ಲೇಖನಗಳಿವೆ ಈ ಲೇಖಕರಿಂದ ಸಾಹಿತ್ಯದಲ್ಲಿ ಬೆಳಗಿದ ಕೈಚಳಕವನ್ನು ಈ ಪುಸ್ತಕ ಓದುವದರಿಂದ ತಿಳಿಯಬಹುದು ಇನ್ನೂ ತರುಣರಾದ ಇವರು ಭವಿಷ್ಯದಲ್ಲಿ ಕೆಲವು ಒಳ್ಳೆ ದಾರಿಯ ಬೆಳಗ ಸಾಕಷ್ಟು ನಿದರ್ಶನಗಳಿವೆ

ಸಾಧನಾ— ಲೇಖಕರು "ನಿರಂಜನ" ಪುರೋಗಾಮಿ ಪ್ರಕಾಶನ, ಬೆಂಗಳೂರು. ಬೆಲೆ ೧—೮—೦

ಇದು ೧೬೦ ಪುಟಗಳ ಒಂದು ಪತ್ರ ಸಂಕಲನ ಈ ಪತ್ರಗಳು ತಮ್ಮ ಬಾಳಿನ ಗೆಳತಿ ಸಾಧನಾಳಿಗೆ ಬರೆದು ಕೊಂಡವುಗಳು. ಇವುಗಳನ್ನು ಪ್ರೇಮ ಪತ್ರಗಳನ್ನುವದಕ್ಕಿಂಥಾ ಲೋಕ ವ್ಯವಹಾರ ಪತ್ರಗಳನ್ನುವದು ಉಚಿತ. ನಿರಂಜನರು ಈ ಪತ್ರಗಳಲ್ಲಿ ಚರ್ಚಿಸಿದ ವಿಚಾರಗಳು ಒಂದೆರಡಲ್ಲ ಪ್ರಾಮುಖ್ಯವಾಗಿ ಈ ಪತ್ರ ಸಂಕಲನದಲ್ಲಿ ಕನ್ನಡ ನಾಡಿನ ಹಲವು ಹಿರಿಯ ಹಾಗೂ ಕಿರಿಯ ಸಾಹಿತಿ, ಕಲಾವಿದರ ಬಗ್ಗೆ ಪ್ರಗತಿಶೀಲ ಮನೋಭಾವದ ವ್ಯಕ್ತಿಯೊಬ್ಬರ ನಿಷ್ಪಕ್ಷಪಾತ ಅಭಿಪ್ರಾಯಗಳನ್ನು ನೋಡಬಹುದು ಅದೇ ಅಲ್ಲ, ಅದರೊಂದಿಗೆ ಆ ಸಾಹಿತಿಗಳ ಬರಹ, ಜೀವನಗಳ ಸೂಕ್ಷ್ಮ ಪರಿಚಯವೂ ಓದುಗರಿಗಾಗುತ್ತದೆ ಕನ್ನಡ ನಾಡಿನ ಹಲವು ಭಾಗದ ಪರಿಚಯವೂ ಜನಜೀವನದ ರೂಪರೇಖೆಗಳು ಈ ಪತ್ರಗಳಲ್ಲಿ ದೊರೆಯುತ್ತದೆ

ಸಾಧನಾ ಓದಲು ಚೆನ್ನಾಗಿದೆ ನಿರಂಜನರ ಶೈಲಿಯು ಅವರ ಭಾವನೆ ಹಾಗೂ ವರ್ಣನೆಗಳಿಗೆ ಪೋಷಕವಾಗಿದೆ. ಆಡಂಭರದ ಭಾಷೆಯಾಗಲೀ, ಅರಗಿಸಲಾರದ ವಿಚಾರಗಳಾಗಲೀ, ತೋರಿಕೆಯ ಪ್ರೌಢಿಮೆಯಾಗಲೀ ಇದರಲ್ಲಿಲ್ಲ ಹೆಚ್ಚೇಕೆ ಸಾಧನಾ ಲಿಪ್‌ಸ್ಟಿಕ್, ಹೇಂಡ್ ಬ್ಯಾಗ್, ಹೈ ಹೀಲ್ಡ್ ಶೂಗಳನ್ನು ನಂಬಿ ಮೇಕಪ್ ಮಾಡಿದ ಹೆಂಗಸಾಗಿರದೆ ಸರಳ ಶುಭ್ರ ಉಡುಪಿನ, ನಗುಮೊಗದ, ತಿಳಿಹಾಸ್ಯದ ಕಷ್ಟಗಳ ಅರಿವಿರುವ ಹೆಂಗಸಾಗಿದ್ದಾಳೆ ಎಲ್ಲರಿಂದಲೂ ಆಕೆ ಸರ್ವರಿಂದಲೂ ಸ್ವಾಗತಾರ್ಹಳು

ವಾರದ ಕತೆ.

ಗುಲಾಬಿ ಹುಡುಗಿ

— ಲೇ:— ಶ್ರೀ ಸಂ. ಜಿ. ಅರಗ —

ಆಕೆಯ ಹೆರಳಿಗೆ ಗುಲಾಬಿ ಹೂ ಬಹು ಅಂದವಾಗಿ ಒಪ್ಪುತಿತ್ತು.

ಅವರಲ್ಲಿಯೂ ಬಿಳಿಯ ಗುಲಾಬಿ ಹೂವು!

ಕಪ್ಪು ಕೂದಲುಗಳ ಮೇಲೆ ಬಿಳಿಯ ಗುಲಾಬಿ. ಕಪ್ಪು ಮೋಡದ ನಡುವೆ ತೇಲುವ ಚಂದ್ರನಂತೆ ಬಲು ಮೋಹಕ.

ಅವಳ ಮುಖವೂ ಒಂದು ಗುಲಾಬಿ ಹೂವೇ! ಅಷ್ಟೇ ಅಂದ, ಅಷ್ಟೇ ಚೆಲುವು; ಅಷ್ಟೇ ಸುಮಧುರ.

ಆ ಮುಖ, ಆ ಕೂದಲು, ಆ ಗುಲಾಬಿ.

ಅವಳಿಗವನು 'ಗುಲಾಬಿ ಹುಡುಗಿ' ಎಂದೇ ಹೆಸರಿಟ್ಟಿದ್ದ.

ಆಕೆ ಅವನ ಅಧ್ಯಾಪಕರ ಮಗಳು.

ಗುಲಾಬಿ ಹೂ ಬೆಳೆಯುತಿದ್ದುದು ಅವನ ಮನೆಯ ಮುಂದಣ ತೋಟದಲ್ಲಿ. ಮುಡಿಯುವ ಆ ಗುಲಾಬಿ ಹುಡುಗಿ ಎದುರು ಮನೆಯಲ್ಲಿ.

ಹೌದು ಎದುರು ಮನೆ ಹೆಚ್ಚು ದೂರವಿಲ್ಲದ ಎದುರು ಮನೆ.

ಈ ಮನೆಯ ಕಿಟಕಿಯಲ್ಲಿ ನಿಂತು, ಆ ಮನೆಯ ಕಿಟಕಿಯ ಮೂಲಕ ತಿರುಗಾಡುತ್ತಿದ್ದ ಗುಲಾಬಿ ಹುಡುಗಿಯನ್ನವನು ನೋಡುತಿದ್ದ. ಮರೆಯಾಗಿಯೇನೂ ಅಲ್ಲ. ಸ್ಪಷ್ಟವಾಗಿಯೇ ಕಾಣುತಿತ್ತು ಎಲ್ಲಾ!

ಅವನು ಅಧ್ಯಾಪಕರ ಮನೆಗೆ ಪ್ರತಿದಿನ ಬೆಳಗ್ಗೆ ಪಾಟ ಹೇಳಿಸಿಕೊಳ್ಳಲು ಹೋಗುತಿದ್ದ. ಹೋಗುವಾಗೆಲ್ಲಾ ಒಂದು ಸುಂದರವಾದ, ಚೆನ್ನಾಗಿ ಅರಳಿದ ಬಿಳಿಯ ಗುಲಾಬಿ ಹೂ ಬಿಡಿಸಿಕೊಂಡು ಹೋಗಿ ಅವರ ಮನೆಯಲ್ಲಿ ಹಾಲಿನಲ್ಲಿಟ್ಟಿರುತಿದ್ದ ಮೇಜಿನ ಮೇಲಿಡುವನು. ಆ ಹುಡುಗಿ ಆ ಗುಲಾಬಿ ಹೂವನು ಎತ್ತಿಕೊಂಡು ತನ್ನ ಹೆರಳುಗಳಿಗೆ ಸಿಕ್ಕಿಸಿಕೊಂಡು ಹೋಗುವಳು. ಅದನ್ನವನು ಆಸೆಯ ಕಣ್ಣುಗಳಿಂದ ನೋಡುವನು. ತಾನು ತಂದ ಹೂ ಅವಳ ಕೂದಲ ಮೇಲೆ ಅದೆಷ್ಟು ಹೆಮ್ಮೆಯಿಂದ ಕುಳಿತಿದೆ! ಎಂದುಕೊಳ್ಳುವನು. ಅವಳು ನಡೆದು ಹೋಗುತ್ತಿರುವಾಗ ಆ ಕಡೆಗೇ ನೋಡುವನು. ಆಕೆ ಬೇರೆತ್ತಲೋ ನೋಡುತ್ತಿರುವಾಗ ಆಕೆಯ ಮುಖವನ್ನು ನೋಡುವ ಧೈರ್ಯವನ್ನು ಮಾಡುವನು.

ಆದರೆ ಆಕೆಯ ದೃಷ್ಟಿಯನ್ನೆದುರಿಸಲು ಅವನಿಂದಾಗದು.

ಈ ದಿನಚರಿ ಬಹಳ ದಿನಗಳಿಂದ ನಡೆದು ಬಂದಿತ್ತು. ಒಂದು ದಿನವೂ ಹೂ ಆ ಮನೆಯ ಮೇಜಿನ ಮೇಲಕ್ಕೆ ಹೋಗದೆ ಉಳಿಯುತ್ತಿರಲಿಲ್ಲ; ಅನಂತರ ಅದೇ ಹೂ ಆ ಹುಡುಗಿಯ ಕುರುಳನ್ನಲಂಕರಿಸದಿರುತ್ತಿರಲಿಲ್ಲ.

ಒಂದು ದಿನವೂ ತಪ್ಪಿರಲಿಲ್ಲ. ಅಧ್ಯಾಪಕರಿರಲಿ, ಇಲ್ಲದಿರಲಿ; ಪಾಠವಿರಲಿ, ಇರದಿಲ್ಲದಿರಲಿ, ಏನೇ ಆಗಲಿ, ಹೂ ಅಲ್ಲಿಗೆ ಹೋಗಲೇ ಬೇಕು. ಆಕೆ ಮುಡಿಯಲೇ ಬೇಕು. ಆಕೆ ಮುಡಿದಿರುವುದನ್ನು ನೋಡಿದರೇ, ತನ್ನ ಕಿಟಕಿಯಲ್ಲಿ ನಿಂತು ನೋಡಿದರೇ ಇವನಿಗೆ ತೃಪ್ತಿ.

ಮೊದಲು ಒಂದು ಹೂವಿದ್ದುದು ಕ್ರಮೇಣ ಎರಡು ಹೂವಾಯಿತು.

ಒಂದು ದಿನ ಎರಡು ಹೂವಿಟ್ಟು ಬಂದು ಕಿಟಕಿಯಲ್ಲಿ ನಿಂತು ಅಚ್ಚರಿ ನೋಡತೊಡಗಿದ. ಗುಲಾಬಿ ಹುಡುಗಿ ಎರಡು ಹೂ ಮುಡಿದಿದ್ದಳು. ಎರಡು ಜಡೆ ಹೆಣೆದು ಎರಡರ ಬುಡಕ್ಕೂ ಒಂದೊಂದು ಹೂ ಮುಡಿದಿದ್ದಳು.

ಅಂತೂ ಆಕೆ ಸೋಲಲಿಲ್ಲ.

ಈತ ಮೂರು ಹೂವಿಡ ಹೋಗಲಿಲ್ಲ.

ಆಕೆಯನ್ನು ಎರಡು ಜಡೆಯಲ್ಲಿ ನೋಡಬೇಕೆಂದ ದಿನ ಎರಡು ಹೂ; ಒಂದೇ ಜಡೆಯಲ್ಲಿ ನೋಡಬೇಕೆನಿಸಿದರೆ ಒಂದೇ ಹೂ!

ಹೂ ಇದ್ದಂತೆ ಜಡೆ.

ಹೂವಿಗಾಗಿ ಜಡೆ ಅಲ್ಲ, ಜಡೆಗಾಗಿ ಹೂವು.

ಅವಳಿಗಾಗಿ ಇವನ ಹೂವು.

ಅಷ್ಟೇ ಅಲ್ಲ; ಅವಳಿಗಾಗಿ ಇವನ ಹೃದಯದ ಹೂ ಸಹ ಅರಳಿತ್ತು.

ಅದು ಕಂಡೂ ಕಾಣದಂತಿತ್ತು. ಆದರೂ ಸ್ಪಷ್ಟವಿತ್ತು.

ಗುಲಾಬಿ ಹುಡುಗಿಯನ್ನವನು ಪ್ರೀತಿಸುತಿದ್ದ.

ಇವನ ಮನೆಯ ಮುಂದಣ ಕೈತೋಟದಲ್ಲಿ ಮೊದಲು ಒಂದೇ ಗುಲಾಬಿ ಗಿಡವಿತ್ತು, ಬಿಳಿಯ ಗುಲಾಬಿ ಗಿಡ.

ಕ್ರಮೇಣ ಅದು ವೃದ್ಧಿಸತೊಡಗಿತು. ಬೇರೆ ಬೇರೆ ಜಾತಿಯ, ತರ ತರವಾದ ರೂಪದ ಗುಲಾಬಿ ಗಿಡ ಬೆಳೆಯತೊಡಗಿತು.

ಅದಕ್ಕಾಗಿ ಅವನು ದೊಡ್ಡ ಶೋಧನೆಯನ್ನೇ ನಡೆಸಿದ್ದ. ಕ್ಯಾಟಲಾಗುಗಳನ್ನೆಲ್ಲಾ ತರಿಸಿ ನೋಡಿದ್ದ. ಬೀಜ, ಕೊನೆಗಳಿಗಾಗಿ ಎಲ್ಲೆಲ್ಲಿಯೋ ಅಲೆದಿದ್ದ. ಯಾರ್ಯಾರನ್ನೋ ಕೇಳಿದ್ದ.

ಯಾವ ಜಾತಿಯ ಹೂ ಅವಳ ಮುಡಿಗೆ ಶೋಭಿಸುವದೆಂಬ ಶೋಧನೆ ನಡೆಯದಿರಲೇ ಇಲ್ಲ. ಅವನು ಒಂದು ನಿರ್ಧಾರಕ್ಕೆ ಬಂದಿರಲಿಲ್ಲ. ಬೇರೆ ಬೇರೆ ಬಣ್ಣಗಳ ಹೂವಿನಿಂದಲೂ ಪ್ರಯೋಗ ನಡೆಸಿದ್ದ. ಕೆಂಪು ಒಪ್ಪುವದು. ಆದರೆ ಬಿಳಿಯ ಗುಲಾಬಿಯಷ್ಟು ಚೆನ್ನಾಗಿ ಒಪ್ಪದು.

ಒಂದೊಂದು ಹೊಸ ಬಗೆಯ ಹೂ ಇಟ್ಟು ಬಂದ ದಿನವೂ ಕಿಟಕಿಯಲ್ಲಿ ನಿಂತು ಆಸಕ್ತಿಯಿಂದ ನೋಡುತ್ತಿರುವನು. ಅವನ ಕಿಟಕಿಯೆದುರಿಗೇ ಅವಳ ಕೋಣೆಯ ಕಿಟಕಿಯೂ ಇತ್ತು. ಹೆರಳು ಹಾಕಿಕೊಂಡಾದ ಮೇಲೆ ಆಕೆ ಗುಲಾಬಿ ಹೂವನ್ನು ತನ್ನ ಮುಡಿಗೆ ಕನ್ನಡಿ ನೋಡಿಕೊಳ್ಳುತ್ತಾ ಸಿಕ್ಕಿಸಿಕೊಳ್ಳುವದನ್ನೂ ಅವನು ನೋಡುವನು. ಆ ಬಿಳಿಯ ಕೈಯಿಂದ ಅದನ್ನೆಷ್ಟು ಚೆಲುವಾಗಿ ಎತ್ತುವಳು! ಮುಡಿಯುವ ಜಾಗವನ್ನೆಂತು ಆಳತೆಯಿಟ್ಟಂತೆ ಕಂಡುಹಿಡಿಯುವಳು! ಹೇಗೆ ನಾಜೂಕಾಗಿ ಸಿಕ್ಕಿಸಿಕೊಳ್ಳುವಳು! ಮತ್ತೆ ಮತ್ತೆ ಮುಟ್ಟಿ ನೋಡಿಕೊಂಡು ಸರಿಯಾದ ಜಾಗದಲ್ಲಿ ಹೂ ಕುಳಿತಿರುವುದನ್ನು ನಿರ್ಧರಿಸಿಕೊಳ್ಳುವಳು! ತಿರುಗಿ ತಿರುಗಿ ಕನ್ನಡಿಯಲ್ಲಿ ನೋಡಿಕೊಂಡು ಇಮ್ಮಡಿಸಿದ ಚೆಲುವನ್ನು ಕಂಡು ಕಂಡು ಹೇಗೆ ಹಿಗ್ಗುವಳು!

ಇಷ್ಟಾಗಿಯೂ ಅಂಥ ಚೆಲುವಾದ, ಚೆಲುವನ್ನಿಮ್ಮಡಿಸುವ ಹೂವನ್ನಿತ್ತವನ ಬಗ್ಗೆ ಕೃತಜ್ಞತೆ ಬೇಡವೇ? ಕೊನೆಗೆ ಒಂದು ಮುಗುಳ್ನಗೆ!

ಇಲ್ಲ, ಎಂಥದೂ ಇಲ್ಲ.

ಆದರೆ ಅವನೂ ಅದಕ್ಕಾಗಿ ಹಂಬಲಿಸುತ್ತಿರಲಿಲ್ಲ. ತಾನು ಕೊಟ್ಟ ಹೂವಿನಿಂದಾಗಿ ಅವಳಿಗೆ ತೃಪ್ತಿಯಾಯಿತೇ, ಅವಳ ಚೆಲುವು ಪೂರ್ಣವಾಯಿತೆ, ಅವಳ ಹೆರಳಿಗದು ಒಪ್ಪಿದಯೇ! ಇಷ್ಟೇ ಅವನಿಗೆ ಬೇಕಾದುದು. ಅದರಲ್ಲಿಯೇ ತೃಪ್ತಿ.

ಅವಳು ಹೂ ಮುಡಿದು ಸಂಭ್ರಮದಿಂದ ನಡೆದು ಹೋಗುತಿದ್ದರೆ ಅದನ್ನು ನೋಡುವುದೇ ಅವನಿಗೆ ಹಬ್ಬ. ಕಂಗಳಿಗೆ ಸುಗ್ಗಿ.

* * * * * *

ಅವಳನ್ನವನು ಪ್ರೀತಿಸುತಿದ್ದ.

ಅದು ಹೇಗೆಂಬುದು ಅವನಿಗೇ ತಿಳಿಯದು.

ಅವಳ ಹೆಸರೂ ಅವನಿಗೆ ಸರಿಯಾಗಿ ತಿಳಿಯದು. ಅಂತೇ ಅವಳು 'ಗುಲಾಬಿ ಹುಡುಗಿ'ಯಾಗಿದ್ದಳು.

ಅವಳು ಹೇಗಿದ್ದಾಳೆಂದರೆ ಹೂವಿನಂತೆ ಸುಂದರವಾಗಿದ್ದಾಳೆಂದು ಅವನಿಗೆ ಗೊತ್ತು ಅದೂ ಬಿಳಿಯ ಗುಲಾಬಿ ಹೂವಿನಂತೆ.

ಅವಳ ಕಣ್ಣು ಹೇಗಿದೆ? ಕೆನ್ನೆ ಹೇಗಿದೆ; ಮೂಗು ಹೇಗಿದೆ? ಗಲ್ಲ ತುಟಿಗಳು ಹೇಗಿವೆ? ಎಂದು ಕೇಳಿದರೆ ಅವನಿಗೆ ತಿಳಿಯದು. ಅವನೆಂದೂ ಅವುಗಳನ್ನು ವಿವರವಾಗಿ ನೋಡಿಲ್ಲ.

ಅವಳುಡುವ ಸೀರೆ ಗೊತ್ತು, ತೊಡುವ ರವಿಕೆಯ ಬಣ್ಣ ಗೊತ್ತು. ಅವಳು ಮುಡಿಯುವ ಹೂವಂತೂ ಚೆನ್ನಾಗಿ ಗೊತ್ತು.

ಇವನೆಂದೂ ಅವಳೆಡೆಗೆ ಮುಗುಳು ನಕ್ಕಿಲ್ಲ. ಅವಳೂ ಅಷ್ಟೆ.

ಅವಳನ್ನು ಮದುವೆಯಾಗಬೇಕೆಂದು ಈತನೆಂದೂ ಆಶಿಸಿದವನಲ್ಲ. ಮದುವೆಯ ಯೋಚನೆಯೇ ಇಲ್ಲ.

ಕೊನೆಗೆ ಅವಳೊಡನೆ ಸವಿ ಮಾತನಾಡಬೇಕೆಂದು, ಅವಳ ಸವಿ ಮಾತು ಕೇಳಬೇಕೆಂದು ಸಹ ಆಸೆಯಿಲ್ಲ. ತನ್ನ ಪ್ರೀತಿಯನ್ನವಳಿಗೆ ತಿಳಿಸಬೇಕೆಂದೇನೂ ಅವನಿಗಿಷ್ಟವಿಲ್ಲ. ತನ್ನನ್ನವಳು ಪ್ರೀತಿಸುತ್ತಾಳೆಯೇ ಕೇಳಬೇಕೆಂದೂ ಬಯಸನು.

ಪತ್ರಗಿತ್ರ ಬರೆಯುವಂಥ ಯೋಚನೆಯೂ ಅವನ ಮನಸ್ಸಿನಲ್ಲಿಲ್ಲ.

ಅವಳನ್ನು ತಪ್ಪಿಕೊಳ್ಳಬೇಕೆಂದಾಗಲಿ ಅವಳ ಚೆಂದುಟಿಗಳನ್ನು ಮುದ್ದಿಸಬೇಕೆಂದಾಗಲಿ ಅವನು ಯೋಚಿಸಿಲ್ಲ. ಅಂಥ ಯಾವ ಯೋಚನೆಯೂ ಅವನ ಮನಸ್ಸಿನಲ್ಲಿ ಸುಳಿದಿಲ್ಲ.

ಅವಳ ಗಾನ ಸುಧೆಯನ್ನು ಕೇಳುತ್ತ ಆ ಅಮೃತ ವಾಹಿನಿಯಲ್ಲಿ ಕೊಚ್ಚಿ ಹೋಗಬೇಕೆಂದೂ ಅವನು ಬಯಸಿಲ್ಲ.

ಅವಳೆದೆಗೊರಗಿಕೊಂಡು ಕುಳಿತು ಹೊತ್ತು ಕಳೆಯಬೇಕೆಂದೂ ಯೋಚಿಸಿಲ್ಲ. ಅವನ ಆಸೆ ಬಹಳ ಚಿಕ್ಕದು; ವಿಚಿತ್ರವಾದುದು.

ಅವನ ತಲೆಯಲ್ಲಿ ಆ ಹೂ, ಆ ಮುಡಿಯನ್ನುಳಿದು ಬೇರೆ ವಿಚಾರವೇ ಹೊಳೆಯದು.

ಆ ಹೂವನ್ನು ತಾನಾಗಿ ಅವಳ ಮುಡಿಗೆ ಸಿಕ್ಕಿಸಬೇಕೆಂಬುದೇ ಅವನ ಹಿರಿಯಾಸೆ.

ಆ ಆಸೆ ಎಂದೋ ಹುಟ್ಟಿದ್ದು. ಆಕೆ ಒಯ್ಯಾರದಿಂದ ಹೂ ಮುಡಿದುಕೊಳ್ಳುವುದು ನೋಡಿದಾಗಲೆಲ್ಲ ಅದು ಸರಿಯಾಗಲಿಲ್ಲವೆಂದೆನಿಸುವುದು ಇವನಿಗೆ. ತಾನು ಸರಿಯಾಗಿ ಮುಡಿಸಬಲ್ಲೆ, ಮುಡಿಸಬೇಕು, ಒಮ್ಮೆಯಾದರೂ ಮುಡಿಸಬೇಕು, ಎಂದುಕೊಳ್ಳುವನು.

ಅಷ್ಟು ದಿನವೂ ತಾನು ಕೊಟ್ಟ ಹೂ ತೆಗೆದುಕೊಂಡು ಮುಡಿದಿದ್ದಾಳೆ. ಒಮ್ಮೆ ತನ್ನ ಕೈಯಿಂದಲೇ ಮುಡಿಸಿಕೊಳ್ಳಬಾರದೇಕೆ?

ಆದರೆ ಹಾಗೆಂದು ಅವಳಿಗೆ ಹೇಳುವದೆಂತು? ತನ್ನ ಆಸೆ ಅವಳಿಗೆ ತಿಳಿಯುವ ಬಗೆಯಾದರೂ ಎಂತು? ತನ್ನ ಆಸೆ ನೆರವೇರುವುದೆಂತು? ಎಂದು?

ಅವಳ ಮುಡಿಗೆ ಹೂ ಮುಡಿಸಬೇಕು ಹೇಗೆ ಮುಡಿಸುವುದು? ಅವಕಾಶವೆಂತು ಸಿಗುವುದು? ಅದನ್ನವಳಿಗೆ ಹೇಳುವುದು ಹೇಗೆ? ಹೇಳಿದರೂ ಅದಕ್ಕವಳು ಒಪ್ಪಿಯಾಳೆ?

ಯೋಚನೆ ತಲೆಯನ್ನು ಕೊರೆಯತೊಡಗಿತು.

ಆಕೆ ಒಪ್ಪಬಹುದು. ಇಷ್ಟು ದಿನ ನಾನು ಕೊಟ್ಟ ಹೂ ಮುಡಿದುಕೊಂಡಿದ್ದಾಳೆ. ಒಂದು ದಿನ, ಒಂದೇ ಒಂದು ದಿನ ನನ್ನ ಕೈಯಿಂದ ಮುಡಿಸಿಕೊಳ್ಳಲಾರಳೆ?

ಅದನ್ನುಳಿದು ನಾನು ಬೇರೇನೂ ಬಯಸುವುದಿಲ್ಲವಲ್ಲ!

ಒಪ್ಪಬಹುದು. ಒಪ್ಪಿಯೇ ಒಪ್ಪುತ್ತಾಳೆ.

ಅವಳಿಗೆ ತನ್ನ ಇಷ್ಟ ತಿಳಿಸುವುದೊಂದೇ ಬಾಕಿ.

ಹೇಗೆ ತಿಳಿಸುವುದು?

ಕಾಗದ ಬರೆದು? ಯಾರಿಂದಾದರೂ ಹೇಳಿ ಕಳಿಸಿ? ನೇರವಾಗಿ ಕಂಡು ಕೇಳಿ?

ಯಾವುದಕ್ಕೂ ಸಾಕಷ್ಟು ಧೈರ್ಯವಿರಲಿಲ್ಲ ಅವನಿಗೆ.

ಒಂದೊಂದು ಯೋಚನೆಯನ್ನೇ ಮನಸ್ಸಿನಿಂದ ದೂರ ನೂಕುತ್ತಾ ಬಂದ.

ಇವಾವುವೂ ಅಲ್ಲದೆ ಬೇರೇನಾದರೂ ಉಪಾಯ ಹುಡುಕಬೇಕು.

ಉಪಾಯಕ್ಕಾಗಿ ಹುಡುಕತೊಡಗಿದ.

(ಕಡೇ ಪುಟವನ್ನು ನೋಡಿ)

ಕ್ಷಯರೋಗ ನಿರ್ಮೂಲಿಸಲು ಸಹಾಯ ಮಾಡಿರಿ

ಕ್ಷಯ ರೋಗ ನಿಯಂತ್ರಣದ ಯಶಸ್ವಿಕೆಯು ಇವುಗಳ ಮೇಲೆ ನಿಂತಿದೆ

(೧) ನಾಕಪ್ಪು ಹಣ

(೨) ಜಾಗೃತಿಗೊಂಡಿರುವ ಮತ್ತು ಸಹಕರಿಸುವ ಸಾರ್ವಜನಿಕರು

(೩) ಸಾಮೂಹಿಕ ಸದಸ್ಯರ ಹೃತ್ಪೂರ್ವಕ ಪರಿಶ್ರಮ

(೪) ವೈದ್ಯಕೀಯ ಕೆಲಸಗಾರರ ಉತ್ಸಾಹ

ಕ್ಷಯ ರೋಗ ಸೀಲುಗಳ ಮಾರಾಟದ ಚಳವಳಿವು ಇವುಗಳನ್ನು ಸಾಧಿಸಲು ಸಹಾಯ ಮಾಡುವದು

ಒಂದಾಣೆಯ ಕ್ಷಯ ರೋಗ ಸೀಲುಗಳನ್ನು ಹೆಚ್ಚಾಗಿ ಕೊಂಡು ಕೊಂಡು ಉಪಯೋಗಿಸಿರಿ

ಕ್ಷಯರೋಗ ಸೀಲುಗಳು ಕೊಡಗು ಸಿವಿಲ್ ಸರ್ಜನರಲ್ಲಿ ಮತ್ತು ಸಂಸ್ಥಾನದ ಇತರ ಏಜೆನ್ಸಿಗಳಲ್ಲಿ ದೊರೆಯುತ್ತದೆ.

ಹಿಂದೂದೇಶದ ಕ್ಷಯರೋಗ ಸೀಲುಗಳ ನಾಲ್ಕನೇ ಚಳವಳಿ.

ನ್ಯೂ ಡೆಲ್ಲಿಯಲ್ಲಿರುವ ಕ್ಷಯ ರೋಗ ನಿವಾರಣಾ ಸಂಸ್ಥೆಯಿಂದ ನಡೆಸಲ್ಪಡುವ ಸಂಘಾಮ್ದ

ಈ ಪ್ರಕಟಣಾ ಸ್ಥಳವು ಬೊಂಬಾಯಿಯ ಮಾಫತ್‌ಲಾಲ್ ಗಗಲ್ ಭಾಯಿ ಮತ್ತು ಕಂಪೆನಿಯವರ ಕೃಪೆಯಿಂದ

॥ ಪುಸ್ತಕಗಳ ವಿಮರ್ಶೆ ॥

ಆದರ್ಶದ ಆಡಂಬರ— ಬರೆದವರು ಶ್ರೀಮತಿ ಟಿ. ಸುನಂದಮ್ಮ, ವಿಜಯ ಸಾಹಿತ್ಯ, ಬೆಂಗಳೂರು ೪. ಬೆಲೆ ೦-೮-೦.

ಮೂರು ಏಕಾಂಕಗಳ ಸಂಕಲನವಿದು ಆದರ್ಶ ಆಡಂಬರ, ಊರೊಂದು ಅಡ್ಡೇ ಮನೆ ಮತ್ತು ಧೂಪಾವಳಿ ಇವು ಮೂರು ಏಕಾಂಕಗಳಾಗಿವೆ. ಶ್ರೀಮತಿ ಸುನಂದಮ್ಮನವರು ಸರಳ, ಸುಲಭ ಶೈಲಿಯಲ್ಲಿ ಈ ಪ್ರಹಸನಗಳನ್ನು ಬರೆದಿದ್ದಾರೆ. ತಿಳಿ ಹಾಸ್ಯದಿಂದ ಕೂಡಿದ ಈ ಏಕಾಂಕಗಳು ಅಭಿನಯಿಸಲು ಯೋಗ್ಯವಾಗಿವೆ.

Ornamental fish for Garden Ponds and Home Aquariums- ಬರೆದವರು ಮೈಲೂರು ಲಕ್ಷ್ಮೀನಾರಾಯಣರಾಯರು. ಬೆಲೆ ೦-೨-೦.

ತೋಟದ ಕೊಳಗಳಲ್ಲಿ, ಹಳ್ಳಿಯ ಕೆರೆಗಳಲ್ಲಿ ಅಲಂಕಾರಕ್ಕೆ ಉಪಯೋಗಕ್ಕೊಬರುವ ನಾನಾ ವಿಧದ ಮೀನುಗಳನ್ನು ಹೇಗೆ ಸಾಕಬಹುದು; ಸಾಕುವ ಕೆರೆ, ಕೊಳಗಳು ಹೇಗಿರಬೇಕು, ಅವುಗಳಿಗೆ ಆಹಾರ ಹೇಗೆ ಕೊಡಬೇಕು ಎಂಬಿತ್ಯಾದಿ ವಿವರಗಳನ್ನು ಒಳಗೊಂಡಿರುವ ಈ ಚಿಕ್ಕ ಪುಸ್ತಕವು ಮೀನು ಕೃಷಿಯಲ್ಲಿ ಆಸಕ್ತಿ ಇರುವವರಿಗೆ ಉತ್ತಮ ಕೈಪಿಡಿಯಾಗಿದೆ.

ಕ್ಷಯರೋಗ— ಲೇಖಕರು ಡಾ. ವಿ. ಆರ್ ಭಟ್, ಚಿತ್ರ ಪ್ರಕಾಶದ ಮಂದಿರ, ಮಂಗಳೂರು ೩. ಬೆಲೆ ೩-೪-೦.

ಕ್ಷಯರೋಗದ ಹುಟ್ಟು, ಲಕ್ಷಣ, ಅದು ಬೆಳೆಯುವ ರೀತಿ ಮೊದಲಾದುವನ್ನು ಪುಸ್ತಕದ ಪ್ರಥಮದಲ್ಲಿ ಸವಿಸ್ತಾರವಾಗಿ ವಿವರಿಸಲಾಗಿದೆ. ಕ್ಷಯರೋಗದ ಚಿಕಿತ್ಸಾ ಕ್ರಮ, ಕ್ಷಕಿರಣಗಳ ಪ್ರಯೋಗ, ಕ್ಷಯರೋಗದಲ್ಲಿ ಬರುವ ಕಠಿಣಾವಸ್ಥೆಗಳು, ಶಕ್ತಿಪಾತ ಚಿಕಿತ್ಸೆ, ಕೃತಕ ವಾತಾವಕ್ಷ ಚಿಕಿತ್ಸೆ ಮೊದಲಾದುವನ್ನು ಚಿತ್ರ ಸಮೇತ ವಿವರವಾಗಿ ಕೊಡಲಾಗಿದೆ. ಕ್ಷಯರೋಗದಿಂದ ಮುಕ್ತರಾಗಲು ಸಾಧ್ಯವೇ, ಅದು ಬಾರದ ಹಾಗೆ ಹೇಗೆ ಮಾಡುವದು ಎಂಬ ವಿವರಗಳನ್ನೂ ಈ ಪುಸ್ತಕದಲ್ಲಿ ಕೊಟ್ಟಿದೆ. ನಾಗರಿಕತೆ ಹೆಚ್ಚಿದಂತೆ ಈ ರೋಗವು ಹೆಚ್ಚಾಗುತ್ತಿದೆ. ಹಳ್ಳಿಗಳಿಗಿಂಥಾ ಪಟ್ಟಣಗಳಲ್ಲಿ ಇದರ ಹಾವಳಿ ಬೆಳೆಯುತ್ತಿದೆ. ಇಂಥಾ ರೋಗದ ಸರ್ವ ವಿವರವನ್ನೂ, ಅದರ ಶಮನ ವಿಧಾನಗಳನ್ನೂ ಒಳಗೊಂಡ ಈ ಪುಸ್ತಕವು ಸ್ವಾಗತಾರ್ಹವಾಗಿದೆ. ಕ್ಷಯರೋಗದಲ್ಲಿ ವಿಶೇಷ ಪರಿಜ್ಞಾನಗಳಿರುವ ಲೇಖಕರ ಕೆಲವು ಲೇಖನಗಳು 'ಕೊಡಗು' ಪತ್ರಿಕೆಯಲ್ಲೂ ಪ್ರಕಟವಾಗಿದ್ದವು. ಈ ಉಪಯುಕ್ತ ಪುಸ್ತಕದ ಮುದ್ರಣವು ಸರ್ವಾಂಗ ಸುಂದರವಾಗಿದೆ. ಈ ಶಾಸ್ತ್ರೀಯ ಗ್ರಂಥವು ಕನ್ನಡ ಸಾಹಿತ್ಯ ಭಂಡಾರಕ್ಕೆ ಹೊಸದಾಗಿ ಬಂದ ಒಂದು ರತ್ನ. ಇಂತಹ ಪುಸ್ತಕಗಳು ಎಷ್ಟೇ ಬಂದರೂ ಅವುಗಳಿಗೆ ಸ್ವಾಗತವಿದೆ ಎಂಬುದರಲ್ಲಿ ಸಂಶಯವಿಲ್ಲ. ಲಾಭದ ಆಸೆಯಿಲ್ಲದೆ ಪ್ರಕಟವಾದ ಈ ಯತ್ನಕ್ಕೆ ಸರ್ವರ ಪ್ರೋತ್ಸಾಹ ಅಗತ್ಯ.

ರೂಪರಾಶಿಗಳ ಸಂತೆ— ಲೇಖಕರು ಎಂ. ಬಿ. ಮರಕಿಣಿ, ಜನಪ್ರಿಯ ಸಾಹಿತ್ಯ, ಸರಸ್ವತಿ ನಿಲಯ, ಪುತ್ತೂರು.

ಅರುವತ್ತೆರಡು ಪುಟಗಳ ಈ ಚಿಕ್ಕ ಹೊತ್ತಿಗೆಯಲ್ಲಿ ಹೊಸಮನೆ, ನಂದಿದ ದೀಪ, ಮಾಸ್ಟ್ ಮಂತ್ರಿನರ್ವರೇ, ಪಾರ್ಕ ಸುಬ್ಬ, ಜರೂರು ಸಭೆ, ಮೊದಲಾದ ಎಂಟು ವ್ಯಂಗ್ಯ ಲೇಖನಗಳಿವೆ. ಈ ಲೇಖಕರಿದ್ದು ಸಾಹಿತ್ಯದಲ್ಲಿ ಪಳಗಿದ ಕೈ ಅಲ್ಲವನ್ನುವದು ಈ ಪುಸ್ತಕ ಓದುವದರಿಂದ ತಿಳಿಯುವದಾದರೂ ಇನ್ನೂ ತರುಣರಾದ ಇವರು ಭವಿಷ್ಯದಲ್ಲಿ ಕೃದುರಿ ಬೆಳೆದಾರೆಂಬ ಬಗೆಗೆ ಸಾಕಷ್ಟು ನಿದರ್ಶನಗಳಿವೆ.

ಸಾಧನಾ— ಲೇಖಕರು "ನಿರಂಜನ" ಪುರೋಗಾಮಿ ಪ್ರಕಾಶನ, ಬೆಂಗಳೂರು. ಬೆಲೆ ೧-೮-೦.

ಇದು ೧೩೦ ಪುಟಗಳ ಒಂದು ಪತ್ರ ಸಂಕಲನ. ಈ ಪತ್ರಗಳು ತನ್ನ ಬಾಳಿನ ಗೆಳತಿ ಸಾಧನಾಳಿಗೆ ಬರೆದು ಕೊಂಡವುಗಳು. ಇವುಗಳನ್ನು ಪ್ರೇಮ ಪತ್ರಗಳನ್ನುವದಕ್ಕಿಂಥಾ ಲೋಕ ವ್ಯವಹಾರ ಪತ್ರಗಳೆನ್ನುವದು ಉಚಿತ. ನಿರಂಜನರು ಈ ಪತ್ರಗಳಲ್ಲಿ ಚರ್ಚಿಸಿದ ವಿಚಾರಗಳು ಒಂದೆರಡಲ್ಲ. ಪ್ರಾಮುಖ್ಯವಾಗಿ ಈ ಪತ್ರ ಸಂಕಲನದಲ್ಲಿ ಕನ್ನಡ ನಾಡಿನ ಹಲವು ಹಿರಿಯ ಹಾಗೂ ಕಿರಿಯ ಸಾಹಿತಿ, ಕಲಾವಿದರ ಬಗ್ಗೆ ಪ್ರಗತಿಶೀಲ ಮನೋಭಾವದ ವ್ಯಕ್ತಿಯೊಬ್ಬರ ನಿಷ್ಪಕ್ಷಪಾತ ಅಭಿಪ್ರಾಯಗಳನ್ನು ನೋಡಬಹುದು. ಅದೇ ಅಲ್ಲ; ಅದರೊಂದಿಗೆ ಈ ಸಾಹಿತಿಗಳ ಬರಹ, ಜೀವನಗಳ ಸೂಕ್ಷ್ಮ ಪರಿಚಯವೂ ಓದುಗರಿಗಾಗುತ್ತದೆ. ಕನ್ನಡ ನಾಡಿನ ಹಲವು ಭಾಗದ ಪರಿಚಯವೂ ಜನಜೀವನದ ರೂಪರೇಖೆಗಳು ಈ ಪತ್ರಗಳಲ್ಲಿ ದೊರೆಯುತ್ತದೆ.

ಸಾಧನಾ ಓದಲು ಚೆನ್ನಾಗಿದೆ. ನಿರಂಜನರ ಶೈಲಿಯು ಅವರ ಭಾವನೆ ಹಾಗೂ ವರ್ಣನೆಗಳಿಗೆ ಪೋಷಕವಾಗಿವೆ. ಆಡಂಭರದ ಭಾಷೆಯಾಗಲೀ, ಅರಗಿಸಲಾರದ ಶಬ್ದಗಳಾಗಲೀ, ತೋರಿಕೆಯ ಪ್ರೌಢಿಮೆಯಾಗಲೀ ಇದರಲ್ಲಿಲ್ಲ. ಹೆಚ್ಚೇಕೆ? ಸಾಧನಾ ಲಿಪ್‌ಸ್ಟಿಕ್, ಹೇಂಡ್ ಬ್ಯಾಗ್, ಹೈ ಹೀಲ್ಡ್ ಶೂಗಳನ್ನು ಧರಿಸಿ ಮೇಕಪ್ ಮಾಡಿದ ಬೆಡಗಿಯಾಗಿರದೆ ಸರಳ ಶುಭ್ರ ಉಡುಪಿನ, ನಗುಮೊಗದ, ತಿಳಿಹಾಸ್ಯದ ಕಣ್ಣುಗಳ ಅಂದವಿರುವ ಹುಡುಗಿಯಾಗಿದ್ದಾಳೆ. ಅದ್ದರಿಂದಲೇ ಆಕೆ ಸರ್ವರಿಂದಲೂ ಸ್ವಾಗತಾರ್ಹಳು.

ವಾರದ ಭವಿಷ್ಯ

ತಾ. ೧೩—೧೧—೫೩ರಿಂದ ೧೯—೧೧—೫೩ರ ವರೆಗೆ.

ಜ್ಯೋತಿಷ್ಯ—ಶ್ರೀ ಬಿ. ಜಿ. ಶ್ರೀನಿವಾಸ ಶಾಸ್ತ್ರಿಯವರು.

ಮೇಷ

ಈ ವಾರ ನಿಮ್ಮ ದೈಹಿಕ ಸ್ಥಿತಿಯು ಉತ್ತಮವಾಗಿದ್ದರೂ ಬಂಧುಮಿತ್ರರ ಸತ್ಕಾರ ನಿಮಿತ್ತ ಖರ್ಚು ಹೆಚ್ಚಾಗಿ ಆರ್ಥಿಕ ಸ್ಥಿತಿಯಲ್ಲಿ ತೊಂದರೆಗೀಡಾಗುವಿರಿ. ಇತರರ ನಿಂದನೆಗೆ ನೀವು ಗುರಿಯಾಗುವುದರಿಂದ ನಿಮ್ಮ ಮನಸ್ಸು ಬೇಸರವನ್ನು ಹೊಂದುವದು. ವಿದ್ಯಾರ್ಥಿ ವಿದ್ಯಾರ್ಥಿನಿಯರು ತಮ್ಮ ಮನೋನಿಶ್ಚಿತ ಗುರಿಯನ್ನು ಮುಟ್ಟಲಸಾಧ್ಯವಾದ ಕಾರಣ ಚಿಂತಾಕುಲರಾಗುವರು. ತಾ. ೧೩-೧೪ ಮನೋವ್ಯಥೆ, ಖರ್ಚು.

ವೃಷಭ

ಆರೋಗ್ಯ ವಿಷಯದಲ್ಲಿ ಈ ವಾರವು ನಿಮಗೆ ಉತ್ತಮವಿದ್ದು ನೀವು ನೂತನ ಕಾರ್ಯಕ್ಕೆ ಕೈಹಾಕಲಿರುವಿರಿ. ಮೇಲಧಿಕಾರಿಗಳು ನಿಮಗೆ ಅನುಕೂಲರಾಗುವರು. ಒಂದೆಡೆಯಿಂದ ಧನಾಗಮವಿದ್ದರೂ ಅಂತೆಯೇ ಖರ್ಚಿನ ದಾರಿಯೂ ಕಂಡುಬರಬಹುದು. ಸಾಮಾನ್ಯ ಜನರು ನಿಮಗೆ ಸಹಾಯಕರಾಗುವರು ವಿದ್ಯಾರ್ಥಿವೃಂದಕ್ಕೆ ಈ ವಾರವು ಅತ್ಯುತ್ತಮವಿರುವದು. ತಾ. ೧೩-೧೪ ಮಿತ್ರರ ಭೇಟಿ ಧನ ಲಾಭ

ಮಿಥುನ

ಈ ವಾರ ನೀವು ಕೈಗೊಂಡ ಕಾರ್ಯವು ನೀವು ಗ್ರಹಿಸಿದ್ದಕ್ಕಿಂತ ಸುಲಭದಲ್ಲಾಗಿ ಮಾನಸಿಕ ಉಲ್ಲಾಸವು ದ್ವಿಗುಣಿತವಾಗುವದು. ಆರೋಗ್ಯನೆಲೆಯು ಚೆನ್ನಾಗಿದ್ದು ಸಮಾಜದಲ್ಲಿ ಸನ್ಮಾನಗಳು ಲಭಿಸಲಿವೆ. ಆ ಹಿತರು ವೈಷಮ್ಯದಿಂದ ಕೇಡು ಮಾಡಲಿಚ್ಛಿಸಿದರೂ ಅದು ಫಲಕಾರಿಯಾಗದೆ ತಾವಾಗಿಯೇ ನಿಂದಿತರಾಗುವರು. ವ್ಯಾಪಾರೋದ್ಯಮಿಗಳಿಗೆ ಅಲಾಭವಾತಾವರಣವು ದೂರವಾಗುವದು. ತಾ. ೧೫-೧೬ ಲಾಭ, ಮಿತ್ರರ ಭೇಟಿ.

ಕರ್ಕಾಟಕ

ತಾವು ಈ ವಾರ 'ಕಂಡದ್ದೆಲ್ಲ ಬೇಕು ಚಿಂತಿತ ಕಾರ್ಯಗಳ್ಳೆಲ್ಲ ಕೈಹಾಕಬೇಕೆಂಬ ಅನೇಕ ಪಥವರ್ತನೆಗಳನ್ನು ಬಿಟ್ಟು ಏಕ ಪಥಾನುಯಾಯಿಗಳಾದರೆ ಬಲು ಉತ್ತಮವಾಗಿರುವದು. ಆರೋಗ್ಯ ಸ್ಥಿತಿಯು ಚೆನ್ನಾಗಿರುವದು. ಕುಟುಂಬದ ಅನಾರೋಗ್ಯ ನಿಮಿತ್ತವಾಗಿ ಆರ್ಥಿಕ ವಿಚಾರದಲ್ಲಿ ತೊಂದರೆಗೀಡಾಗುವಿರಿ. ವಿದ್ಯಾರ್ಥಿ ವಿದ್ಯಾರ್ಥಿನಿಯರು ಪೂರ್ವಾಪರ ವಿಚಾರಶೂನ್ಯರಾಗುವರು. ತಾ. ೧೮-೧೯ ಖರ್ಚು, ಮನೋವ್ಯಾಕುಲ.

ಸಿಂಹ

ತಮ್ಮ ರಾಶಿಯು ಸಿಂಹವೆಂದು ತಿಳಿದು ತಾವು ಸುಮ್ಮನಿದ್ದರೆ ಕಾರ್ಯವು ಸರ್ವಥಾ ಕೈಗೂಡುವಂತಿಲ್ಲ. ಶಕ್ತಿಯನ್ನು ಪ್ರದರ್ಶಿಸಿದರೆ ಮಾತ್ರ ಕೈಗೂಡುವದು. ಆರೋಗ್ಯವು ಸಾಕಷ್ಟಿದ್ದರೂ ಆಲಸ್ಯವು ಸ್ವಲ್ಪ ಹೆಚ್ಚೆನ್ನಬಹುದು. ವ್ಯಾಪಾರ ತತ್ವರಂಗಿಗೆ ಈ ವಾರವು ಲಾಭಪ್ರದವಾಗಿರುವದು. ತಾ ೧೭-೧೮ ಸುಖ, ಮಿತ್ರರ ಭೇಟಿ.

ಕನ್ಯಾ

ಈ ವಾರ ತಾವು ದೈಹಿಕ ವಿಚಾರದಲ್ಲಿ ತುಂಬಾ ಗಮನವಿಡಬೇಕಾಗುವದು. ಪಿತ್ತೋಷ್ಣ ಸಂಬಂಧ ರೋಗಗಳು ತಲೆದೋರಬಹುದು. ಆರ್ಥಿಕ ಸ್ಥಿತಿಯಲ್ಲಿ ಉತ್ತಮವಿದ್ದರೂ ಮಿತ್ರಜನರ ಹಾವಳಿ ನಿಮ್ಮನ್ನು ಬಿಟ್ಟಿದ್ದಲ್ಲ ನೀವು ಇತರರಲ್ಲಿ ಅವರ ಹಿತಕ್ಕೆಂದು ಮಾತಾಡಿದರೂ ಪರಿಣಾಮದಲ್ಲಿ ಇದು ವಾಕ್ಕಲಹಕ್ಕೆ ಎಡೆಯಾಗುವದು. ಕೋರ್ಟು ವ್ಯವಹಾರಗಳು ಪ್ರತಿಕೂಲವಾಗುವವು. ವ್ಯಾಪಾರಿಗಳಿಗೆ ನಷ್ಟ ಚಿನ್ಹೆಯು ಮೂಡುವದು. ತಾ. ೧೭-೧೭ ಖರ್ಚು, ವ್ಯಾಕುಲ.

ತುಲಾ

ಈ ವಾರ ನಿಮ್ಮ ರಾಶಿಯಲ್ಲಿ ಶುಭಗ್ರಹರ ಸಂಯೋಗವಿರುವದರಿಂದ ಆರೋಗ್ಯವು ಚೆನ್ನಾಗಿದ್ದು ಸಮಾಜದಲ್ಲಿ ಸನ್ಮಾನಗಳು ಲಭಿಸಲಿವೆ. ಆರ್ಥಿಕ ಸ್ಥಿತಿಯಲ್ಲಿಯೂ ಸಾಧಾರಣ ಉತ್ತಮವೇ ಆಗಿರುವದು. ಆಪ್ತೇಷ್ಟರು ತಮ್ಮ ಹಿತಚಿಂತಕರೆಂದು ತೋರ್ಪಡಿಸಿ ನಿಮ್ಮನ್ನು ವಂಚಿಸಲೆತ್ನಿಸುವರು. ತಾ. ೧೩-೧೪ ಮನಃಶಾಂತಿ ಸುಖ.

ವೃಶ್ಚಿಕ

ಆರೋಗ್ಯ ದೃಷ್ಟಿಯಲ್ಲಿ ಈ ವಾರವು ನಿಮಗುತ್ತಮವಿರುವದು. ಅನೇಕ ಕಾರ್ಯತರಂಗಗಳು ನಿಮ್ಮ ತಲೆಯನ್ನು ಸುತ್ತುವದರಿಂದ ಮಾನಸಿಕ ಸ್ಥಿತಿಯು ಜಲಧಿಯಂತೆ ಚಂಚಲವಾಗುವದು. ಸಾಂಪತ್ತಿಕ ವಿಚಾರದಲ್ಲಿ ತುಂಬಾ ಬಿಕ್ಕಟ್ಟಿದ್ದರೂ ಮಿತ್ರಜನರ ಸಹಾಯದಿಂದ ಜೀತರಿಸಿಕೊಳ್ಳುವಿರಿ. ವಿದ್ಯಾರ್ಥಿ ಸಮೂಹಕ್ಕೆ ಈ ವಾರ ಅಪ್ರಗತಿಪರವಾಗಿರುವದು.

ಧನು

ಕೆಲವೊಮ್ಮೆ ತಮಗೆ ಆಹಾರಪಾನೀಯಗಳನ್ನು ತೆಗೆದುಕೊಳ್ಳಲು ಸಮಯವಿಲ್ಲದಿದ್ದರೂ ಈ ವಾರ ತಮ್ಮ ಆರೋಗ್ಯವು ಚೆನ್ನಾಗಿರುವದು. ಸಾಮಾನ್ಯ ಜನರು ಕೂಡ ನಿಮ್ಮ ವಿಶ್ವಾಸವನ್ನು ಬೇಡುವರು. ಕೋರ್ಟು ವ್ಯವಹಾರಗಳು ಅನುಕೂಲವಾಗುವವು. ಸಾಂಪತ್ತಿಕ ಸ್ಥಿತಿಯು ಉತ್ತಮವಿದ್ದು ತಾವು ಕೈಗೊಂಡ ಸಕಲ ಕಾರ್ಯಗಳೂ ಸಾಂಗವಾಗಿ ನೆರವೇರುವವು. ತಾ. ೧೫-೧೭ ಸಂಚಾರ, ಮಿತ್ರ ಜನರ ಸಮಾಗಮ.

ಧರ್ಮರಹಸ್ಯ

ಮನುಷ್ಯನು ಉತ್ತಮ ಜೀವನದ ತತ್ವಗಳನ್ನು ಅನುಸರಿಸಿ ಆ ಮಾರ್ಗದಲ್ಲಿ ಕಷ್ಟ ಬಂದರೂ ಎದುರಿಸಿ ಮುನ್ನಡೆಯಬೇಕಲ್ಲದೆ ಕೆಟ್ಟ ಜೀವನದ ಸುಖದ ಮಾರ್ಗದಲ್ಲಲ್ಲ. ಈ ದುರ್ಮಾರ್ಗದ ಸುಖವು ಹುಲ್ಲಿನ ಬೆಂಕಿಯಂತೆ ಕ್ಷಣಿಕ.

ಮರುಭೂಮಿಯ ಮಾಯಾಜಲದಂತೆ, ಯಾ ನೀರ್ಗುಳ್ಳೆಯಂತೆ ನಶ್ವರವೆಂದೂ, ಅಸ್ತಿತ್ವವಿಲ್ಲದುದೆಂದೂ ಈ ಜಗವನ್ನು ಯಾರು ಪರಿಗಣಿಸುವರೋ ಅಂಥಾವರನ್ನು ಮೃತ್ಯುವಿನ ಅರಸ ಯಮನು ಹಿಂಬಾಲಿಸನು.

ಯಾರು ಕೆಟ್ಟ ಪಥವನ್ನು ತುಳಿದು ಅದರ ನಶ್ವರತೆಯನ್ನೂ, ವಿಫಲತೆಯನ್ನೂ ಮನಗಂಡು ಆ ಜೀವನದಿಂದ ದೂರ ಸರಿದು ಹೊಸ ಮಾರ್ಗ ಹಿಡಿಯುವರೋ ಅಂಥಾವರು ಜಗತ್ತಿಗೆ ಬೆಳಕಾಗಬಲ್ಲರು ಮೋಡದ ಮರೆಯಲ್ಲಡಗಿದ್ದ ಚಂದ್ರನು ಮೋಡ ಚದರಿದ ನಂತರ ಬೆಳಗುವಂತೆ ಅವರು ಪ್ರಕಾಶಮಾನರಾಗುವರು.

ಈ ಜಗತ್ತು ಸ್ವಾರ್ಥತೆ, ಈರ್ಷೆ, ದ್ವೇಷಗಳ ಕತ್ತಲಿನಲ್ಲಿ ಆವರಿಸಲ್ಪಟ್ಟಿದೆ. ಈ ಕಾರ್ಗತ್ತಲೆಯನ್ನು ತಿಳಿದು ಅದರಲ್ಲಿ ಸಿಲುಕದೆ ದೂರವಿರಬೇಕು ಬಲೆಯಲ್ಲಿ ಸಿಕ್ಕಿದ್ದ ಪಕ್ಷಿಯು ಬಿಡುಗಡೆ ಹೊಂದಿದಾಗ ಯಾವ ರೀತಿ ಆಕಾಶದ ಕಡೆ ನಿರ್ಭಾಧಕವಾಗಿ ಹಾರುವದೋ ಅದೇ ರೀತಿ ಈ ಕತ್ತಲೆಯಿಂದ ಬಿಡುಗಡೆ ಹೊಂದಿದ ಜೀವ ಪರಮಪದವನ್ನು ಸೇರುವದು.

ಜೀವನದ ತತ್ವವನ್ನು ಮುರಿಯುವ ಮನುಷ್ಯನು, ಅಸತ್ಯವೆಂದು ತಿಳಿದೂ ಅಸತ್ಯವಾಡುವವನು, ಇನ್ನೊಬ್ಬರ ಬಗೆಗೆ ಕಾತರತೆ ಇಲ್ಲದವನು, ಯಾವ ಪಾಪವನ್ನೂ ಮಾಡಲು ಹಿಂಜರಿಯನು.

ಜಿಪುಣರು ದೇವರ ರಾಜ್ಯಕ್ಕೆ ಕಾಲಿಕ್ಕಲಾರರು. ದಾನ ಧರ್ಮಗಳನ್ನು ಕಂಡು ಹರಿಸದ ತಿಳಿಗೇಡಿಗಳು ಮೇಲೇರಲಾರರು. ಬುದ್ಧಿವಂತರಾದವರೇ ಸದ್ಗುಣಗಳ ಬೆಲೆಯರಿತು ಇಹಪರಗಳಲ್ಲಿ ಸುಖಶಾಂತಿ ಪಡೆಯುವರು.

ಹಂಸಗಳು ಆಕಾಶದಲ್ಲಿ ಸಾವಿರಾರು ಮೈಲು ಹಾರಿದರೂ ಬೇರೋದು ಕೆರೆಯಲ್ಲಿ ಹೋಗಿ ಇಳಿಯುವವೇ ವಿನಾ ನೆಲದಲ್ಲಿಳಿಯವು ಯಾ ಮರದಲ್ಲಿ ಕೂರವು. ಅದೇ ರೀತಿ ಎಷ್ಟೇ ತೊಂದರೆ ತಾಪತ್ರಯಗಳಿದ್ದರೂ ಉತ್ತಮನಾದವನು ಒಳ್ಳೆಯದನ್ನು ಮಾಡುವನೇ ವಿನಾ ಅಡ್ಡದಾರಿ ಹಿಡಿಯನು.

ಮಕರ

ಆರೋಗ್ಯವೇ ಸಕಲ ಭಾಗ್ಯಕ್ಕೂ ಹೆದ್ದಾರಿಯೆಂಬುದನ್ನು ತಾವು ಜ್ಞಾಪಕದಲ್ಲಿಟ್ಟು ಆರೋಗ್ಯವನ್ನು ಕಾಪಾಡಿಕೊಳ್ಳತಕ್ಕದ್ದು. ಪಿತ್ತಸಂಬಂಧ ರೋಗವು ತಲೆದೋರಲಿರುವದು. ಕುಟುಂಬದಲ್ಲಿ ಅನಾರೋಗ್ಯ ನಿಮಿತ್ತ ಖರ್ಚು ಇಮ್ಮಡಿಯಾಗಲಿದೆ. ಜನರು ದುರ್ಭೋಧನೆಯಿಂದ ನಿಮ್ಮನ್ನು ವಂಚಿಸಲಿರುವರು. ವ್ಯಾಪಾರ ತತ್ಪರಂಗೆ ಕಷ್ಟಾಧಿಕವಾದರೂ ಲಾಭವನ್ನು ಹೊಂದುವರು. ೧೮-೧೯ ವಾಕ್ಕಲಹ, ಸಂಚಾರ.

ಕುಂಭ

ಆರೋಗ್ಯದೃಷ್ಟಿಯಲ್ಲಿ ಈ ವಾರವು ನಿಮಗೆ ಉತ್ತಮವಾಗಿರುವದಾದರೂ ಆರ್ಥಿಕ ಸ್ಥಿತಿಯಲ್ಲಿ ಒಂದೆಡೆಯಿಂದ ಲಾಭ ಕಂಡು ಬಂದರೂ ಇನ್ನೊಂದೆಡೆಯಲ್ಲಿ ಅಂತೆಯೆ ಖರ್ಚಿನ ದಾರಿಯ ಬಾಗಿಲು ತೆರೆದಿರುವದು. ಇಷ್ಟಬಂಧು ವರ್ಗದವರ ವಿಯೋಗದಿಂದ ಮಾನಸಿಕ ಸ್ಥಿತಿಯು ಚಿಂತಾಜನಕವಾಗಿರುವದು. ವಿದ್ಯಾರ್ಥಿ ವಿದ್ಯಾರ್ಥಿನಿಯರು ಅನಗತ್ಯ ವಿಚಾರಪರರಾಗುವರು. ತಾ. ೧೪-೧೫ ವೃಥಾಸಂಚಾರ, ಮನೋವ್ಯಥೆ.

ಮೀನ

ಆರ್ಥಿಕ ದೃಷ್ಟಿಯಲ್ಲಿ ಈ ವಾರ ತಮಗೆ ತೃಪ್ತಿಕರವಿಲ್ಲದಿದ್ದರೂ ಆರೋಗ್ಯವು ಚೆನ್ನಾಗಿರುವದು. ತಾವು ಕೈಗೊಂಡ ಕಾರ್ಯದಲ್ಲಿ ಅಯೋಚಿತ ವಿಘ್ನಪೀಡನೆಯೊಂದಾಗಿ ಮಾನಸಿಕ ಸ್ಥಿತಿಯು ಅಶಾಂತಿಯಲ್ಲಿರುವದು. ಕೋರ್ಟು ವ್ಯವಹಾರಗಳಲ್ಲಿ ವಿಘ್ನ ಸಂಭವವಿದೆ. ವ್ಯಾಪಾರೋದ್ಯಮಿಗಳು ಅಂದಾಜಿಗೆ ತಕ್ಕಂತೆ ಲಾಭ ಹೊಂದುವರು. ವಿದ್ಯಾರ್ಥಿ ವಿದ್ಯಾರ್ಥಿನಿಯರು ಜೀತರಿಸುವರು. ತಾ. ೧೮-೧೯ ಶುಭ ವಾರ್ತೆ.

ಕಾಫಿಯ ಬೆಲೆ

— ಲೇ:- ಶ್ರೀ ಸಿ. ಜಿ. ಐಯ್ಯಪ್ಪ, —

ಈ ವಿಷಯದಲ್ಲಿ ಕೇಂದ್ರ ಸರಕಾರದವರು ೧೯೫೨-೫೩ರ ಸಾಲಿನ ಕಾಫಿಗೆ, ಬೆಳೆದವರಿಗೆ ಪೌಂಡಿಗೆ ಎರಡು ರೂಪಾಯಿ ನಾಲ್ಕಾಣೆ ಕೊಡಲಾಗುವದೆಂದು ಮಾಡಿದ ಅಭಿಪ್ರಾಯವನ್ನು ಸ್ಥಳೀಯ ಎಲ್ಲಾ ಪತ್ರಿಕೆಗಳೂ ಪ್ರಕಟಿಸಿದುದನ್ನು ಎಲ್ಲರೂ ಓದಿರಬಹುದು. ಇದರ ಮೇಲೆ ಜನ್ಮಭೂಮಿ ಪತ್ರಿಕೆಯ ಸಂಪಾದಕರು ಅವರ ತಾ. ೨೮-೧೦-೫೩ರ ಪತ್ರಿಕೆಯಲ್ಲಿ ಬರೆದ ಅಗ್ರಲೇಖನವನ್ನು ಓದಿದೆನು. ಇವರು ಕೇಂದ್ರ ಸರಕಾರದ ಮಂತ್ರಿಗಳು ಈಗ ಮಾಡಿರುವ ಕಾನೂನು, ಬೆಳೆಸುವವರ ಮತ್ತು ಕಾಫಿ ಉಪಯೋಗಿಸುವವರ ಇತ್ತಂಡದವರ ಹಿತದೃಷ್ಟಿಯಿಂದಲೂ ಬಹಳ ಸಮಂಜಸವಾಗಿದೆ ಎಂಬುದಾಗಿ ಬರೆದಿದ್ದಾರೆ. ಆದರೆ ನ್ಯಾಯವಾಗಿ ಪರಿಶೀಲಿಸಿದಲ್ಲಿ ಸರಕಾರದ ಈ ನೀತಿಯು ಕೇವಲ ಕಾಫಿ ಉಪಯೋಗಿಸುವವರ ಹಿತದೃಷ್ಟಿಯನ್ನು ಮಾತ್ರ ಲಕ್ಷಿಸಿ ಮಾಡಿದಂತೆ ಕಂಡುಬರುತ್ತದೆ. ಯಾಕೆಂದರೆ ಎಲ್ಲರಿಗೂ ತಿಳಿದಂತೆ ಕಾಫಿ ವ್ಯವಸಾಯವು ಇತರ ಭೂವ್ಯವಸಾಯದಂತಲ್ಲ. ಭತ್ತ ವಗೈರೆಗಳಲ್ಲಿ ನೈಸರ್ಗಿಕ ಸಹಾಯವು ಸಕಾಲದಲ್ಲಿ ಸಿಕ್ಕಿದರೆ ಬೆಳೆಸುವವನಿಗೆ ತನ್ನ ಶ್ರಮಕ್ಕೆ ತಕ್ಕ ಪ್ರತಿಫಲ ಆರು ತಿಂಗಳಲ್ಲಿ ಬಂದೇ ಬರುತ್ತದೆ. ಆದರೆ ಕಾಫಿ ವ್ಯವಸಾಯದಲ್ಲಿ ಬೆಳೆಸುವವರು ವರುಷದಲ್ಲಿ ಹನ್ನೊಂದು ತಿಂಗಳು ಕೆಲಸ ಮತ್ತು ಖರ್ಚು ಮಾಡಿದರೇನೇ ಒಂದು ಫಸಲು ಸಿಕ್ಕುವದು. ಆದರಲ್ಲೂ ಹೂ ಮಳೆಯು ಕಾಲಕ್ಕೆ ಸರಿಯಾಗಿ ಬರದೆ ಹೋದರೆ, ಅಥವಾ ಅಂತಹ ಹೂ ಮಳೆಯು ಸಕಾಲದಲ್ಲಿ ಬಂದರೂ, ಸಾಕಷ್ಟು ಹೊಡೆಯದಿದ್ದರೆ ಮತ್ತು ಸಕಾಲದಲ್ಲಿ ಸಾಕಷ್ಟು ಮಳೆ ಹೊಡೆದರೂ ಸಹ ಆವೇಳೆ ಆಗಿಂದಾಗ್ಯೆ 'ಬೇಕಿಂಗ್ ಶವರ್ಸ್' ಸಿಕ್ಕದಿದ್ದರೆ ಅವನ ಇಡೀ ವರುಷದ ಉತ್ಪತ್ತಿಯು ಸೊನ್ನೆಯಾಗಿ ಹೋಗುತ್ತೆ. ಫಸಲು ಏನೂ ಇಲ್ಲವೆಂದಾದರೂ ತೋಟದ ಯಾವುದಾದರೊಂದು ಕೆಲಸವನ್ನು ನಿಲ್ಲಿಸಲಿಕ್ಕಾಗುತ್ತದೆಯೇ? ಫಸಲು ಇರುವಾಗ್ಯೆ ಮಾಡಬೇಕಾದ ಎಲ್ಲ ಕೆಲಸಗಳನ್ನು ಫಸಲು ಇಲ್ಲದಿರುವಾಗಲೂ ಮಾಡಿಯೇ ತೀರಬೇಕು.

ಎರಡನೇಯದಾಗಿ ಭತ್ತ, ಇನ್ನಿತರ ವ್ಯವಸಾಯಗಳಲ್ಲಿ ಗೊಬ್ಬರ ಸರಿಯಾಗಿ ಹಾಕಿ, ನ್ಯಾಯವಾದ ವ್ಯವಸಾಯವನ್ನು ಮಾಡಿದರೆ ಮಳೆ ಸರಿಯಾಗಿದ್ದರೆ ಪ್ರತಿ ವರುಷವೂ ಒಳ್ಳೆಯ ಫಸಲನ್ನೇ ಎತ್ತುವಳಿ ಮಾಡಬಹುದು. ಆದರೆ ಕಾಫಿ ವ್ಯವಸಾಯದಲ್ಲಿ ಎಷ್ಟೇ ಗೊಬ್ಬರ ಹಾಕಿದರೂ ವರುಷ ಬಿಟ್ಟು ವರುಷಕೊಮ್ಮೆ ಮಾತ್ರ ಬಂಪರ್ ಕ್ರಾಪ್ ಸಿಕ್ಕುತ್ತದೆ. ಸ್ಥಿತಿಗತಿಯು ಹೀಗಿರುವಾಗ್ಯೆ ಈಗಿರುವ ಕಾಫಿಯ ಬೆಲೆಯು ಬಹಳ ಹೆಚ್ಚಾಗಿದೆ ಎಂಬುವದು ಸರಿಯಲ್ಲ. ಅದರಲ್ಲೂ ಇತರ ಹೆಚ್ಚಿನ ಖರ್ಚಿಲ್ಲದ ಏಲಕ್ಕಿ, ಅಡಿಕೆ ಮತ್ತು ಒಳ್ಳೆ ಮೆಣಸಿನ ಬೆಲೆಯೊಡನೆ ಹೋಲಿಸಿದರೆ ಕಾಫಿಯ ಬೆಲೆಯು ಬಹು ಕಡಿಮೆಯೆಂದೇ ತಿಳಿಯಬೇಕಾಗಿದೆ. ಏಲಕ್ಕಿಯ ಬೆಲೆಯು ಟನ್ನಿಗೆ ೨೪ ಸಾವಿರಕ್ಕೆ ತಲಪಿತ್ತು. ಈಗಲೂ ಮಣಕ್ಕೆ ೧೫೦ ಎಂದಾದರೂ ಟನ್ನಿಗೆ ೧೨ ಸಾವಿರವಾಯಿತು. ಒಳ್ಳೆ ಮೆಣಸಿಗೂ ಸಹ ಟನ್ನಿಗೆ ೧೬ ಸಾವಿರವಿತ್ತು. ಈಗಲೂ ೮ ಸಾವಿರಕ್ಕೆ ಕಡಿಮೆ ಇಲ್ಲ. ಕಾಫಿಯ ಬೆಲೆಯು ಎಂದೂ ಟನ್ನಿಗೆ ೪ ಸಾವಿರಕ್ಕಿಂತ ಮೇಲೆ ಬೆಳೆಸುವವರಿಗೆ ಸಿಕ್ಕಲಿಲ್ಲ. ಆದರಲ್ಲೂ ಹೊರಗಿನ ಬೆಲೆಗಿಂತಲೂ ಹಂಡ್ರೆಡ್‌ವೇಟಿಗೆ ರೂ. ೧೦೦ ಕಡಿಮೆಯಲ್ಲೇ ಭಾರತದಲ್ಲಿ ಮಾರಲ್ಪಡುತ್ತಿದೆ.

ಇಷ್ಟೇ ಅಲ್ಲ, ಕಾಫಿ ವ್ಯಾಪಾರದಲ್ಲಿ ಈಗ ನಡುವಳಿಕೆಯಲ್ಲಿರುವ ಒಂದು ವಿಶೇಷ ಸಂಗತಿಯು ವಾಣಿಜ್ಯ ಕ್ಷೇತ್ರದಲ್ಲೇ ಇನ್ನೆಲ್ಲಿಯೂ ಕಂಡುಬರುವದಿಲ್ಲ. ಆ ವಿಶೇಷ ಸಂಗತಿಯೆಂದರೆ ಇದು: ಕಾಫಿ ಫಸಲಿನ ಎತ್ತುವಳಿಯು ನವಂಬರಿನಲ್ಲಿ ಪ್ರಾರಂಭವಾಗಿ ಮಾರ್ಚಿನ ಒಳಗೆ ಮುಗಿಯುತ್ತದೆ. ಈ ಫಸಲು ಬರಬೇಕಾದರೆ ಹಿಂದಿನ ಮಾರ್ಚಿ ತಿಂಗಳಿಂದಲೇ ತೋಟಗಾರರು ಗೊಬ್ಬರ ಹಾಕುವದು, ಸ್ಪ್ರೇ ಮಾಡುವದು, ಕಚ್ಚಡ ತೆಗೆಯುವದು, ಕಪಾತ್ ಮಾಡುವದು, ಮಾಲೀಸ್ ಮಾಡಿಸುವದು ಮುಂತಾದ ಎಲ್ಲಾ ಕೆಲಸಗಳನ್ನು ಮಾಡಿಸಬೇಕಾಗುತ್ತದೆ.

ಹೀಗೆ ಹನ್ನೊಂದು ತಿಂಗಳ ವರೆಗೆ ಎಲ್ಲಾ ತರದ ಖರ್ಚನ್ನು ಮಾಡಿ ಆದನಂತರ, ಫಸಲನ್ನು ಎತ್ತುವಳಿ ಮಾಡಿ, ಎಲ್ಲಾ ಫಸಲನ್ನು ಕಾಫಿ ಬೋರ್ಡಿನ ವಶಕ್ಕೆ ಕೊಟ್ಟುಬಿಡುತ್ತೇವೆ. ಕಾಫಿ ಕೊಟ್ಟ ಕೂಡಲೇ ನಮಗೆ ಕಾಫಿಯ ಒಟ್ಟಿನ ಬೆಲೆಯು ಸುಮಾರು ೩ರಲ್ಲಿ ಒಂದಂಶ ಹಣ ಕೊಡುತ್ತಾರೆ. ಬಾಕಿಯಾಗುವ ಹಣಕ್ಕೆ ನಾವು ಇನ್ನೂ ಒಂದು ವರ್ಷದ ವರೆಗೆ ಕಾಯುತ್ತೇವೆ. ಅಂದರೆ ನಾವು ಈ ಫಸಲು ಎತ್ತುವಳಿ ಮಾಡಲು ಮಾಡಿದ ಖರ್ಚಿಗೆ ಫಸಲು ಬರುವ ವರೆಗೆ ಶೇಕಡ ಶಾಲಿಯಾನ ಎಂಟುವರೆ ರೂಪಾಯಿ ಬಡ್ಡಿ ಕೊಟ್ಟದಲ್ಲದೆ, ಫಸಲು ಎತ್ತುವಳಿ ಮಾಡಿಯೂ, ಅದು ಮಾರಾಟ ಆಗುವ ವರೆಗೆ ಅದೇ ಹಣಕ್ಕೆ ಪುನಃ ಬಡ್ಡಿ ಕೊಡುತ್ತಲೇ ಇರಬೇಕಾಗಿದೆ.

ಆದರೆ ಕಾಫಿ ಉಪಯೋಗಿಸುವವನಿಗಾದರೋ, ಅವನು ಯೋಚಿಸುವ ಕಾಲದಲ್ಲಿ ಅವನ ಮನೆ ಬಾಗಿಲಿನ ಎದುರು ಬೇಕಾದಷ್ಟು ಕಾಫಿಯು ಹೊರಗಿನ ದೇಶದಲ್ಲಿ ಮಾರಾಟವಾಗುವ ರೇಟಿಗಿಂತ ನೂರು ರೂಪಾಯಿ ಕಡಿಮೆ ದರದಲ್ಲಿ ಕಾದು ನಿಂತಿರುತ್ತದೆ. ನಿಜವಾಗಿ ನೋಡಿದರೆ ಕಾಫಿಯು ವರ್ಷಕ್ಕೊಮ್ಮೆ ಬರುವ ಬೆಳೆಯಾದುದರಿಂದ ಬೆಳೆ ಬಂದ ಕಾಲದಲ್ಲಿ ಕಾಫಿ ಉಪಯೋಗಿಸುವವರು ಅವರ ಮುಂದಿನ ಒಂದು ವರ್ಷಕ್ಕೆ ಬೇಕಾದಷ್ಟು ಕಾಫಿಯನ್ನು ಒಂದೇ ಗಂಟಿನಲ್ಲಿ ಕ್ರಯಕ್ಕೆ ತೆಗೆದು ದಾಸ್ತಾನು ಮಾಡಬೇಕು. ಹಾಗೆ ಮಾಡಿದರೆ ಇವರ ನೂರಾರು ರೂಪಾಯಿಗಳನ್ನು ಈ ಸಾಮಗ್ರಿಗಾಗಿ ಖರ್ಚು ಮಾಡಬೇಕಾಗಿತ್ತು. ಈ ಹಣಕ್ಕೆ ಅವರಿಗೆ ಬಡ್ಡಿ ಬರುತ್ತಿರಲಿಲ್ಲ. ಆದರ ಬದಲು ಈಗ ಪೂಲ್ ಮತ್ತು ಆಕ್ಷನ್ ರೀತಿ ಪ್ರಕಾರ ಕಾಫಿ ಕುಡಿಯುವವರಿಗೆ ಬೇಕು ಬೇಕಾದಾಗ ಕಾಫಿ ಸಿಕ್ಕುವಂತೆ ಏನೊಂದೂ ಖರ್ಚಿಲ್ಲದೆ ಕಾಫಿ ಬೆಳೆಸುವವರು ಅವರ ಹಣಕ್ಕೆ ಬಡ್ಡಿ ತೆತ್ತುಕೊಂಡು ಇವರಿಗೋಸ್ಕರ ದಾಸ್ತಾನು ಮಾಡಿ ಕಾಯುವದಾಗಿದೆ. ಹಾಗೆ ನಮ್ಮ ಫಸಲಿಗೆ ನಾವೇ ಬಡ್ಡಿ ಕೊಟ್ಟುಕೊಂಡು ಕಾದು, ಅಂತಹ ಕಾಯುವಿಕೆಯ ಪ್ರತಿಫಲವಾಗಿ ಏನಾದರೂ ಸ್ವಲ್ಪ ನಫೆ ಬಂದರೆ, ಆ ನಫೆಯು ಕಾಫಿ ಕುಡಿಯುವವರ ಉಪಯೋಗಕ್ಕೆ ಹೋಗಬೇಕೆಂಬದಾಗಿ ನಿರ್ಣಯಿಸಿರುವ ಸರಕಾರದವರ ನೀತಿಯು ನ್ಯಾಯಬದ್ಧವಾಗಿ ಕಂಡುಬರುವುದಿಲ್ಲ. ಆ ನಫೆಯು ನ್ಯಾಯಕ್ಕೂ, ತಮ್ಮ ಹಣಕ್ಕೂ ಬಡ್ಡಿ ಕೊಟ್ಟುಕೊಂಡು ಕಾದು ಕುಳಿತ ಮಾಲೀಕರಿಗೆ ಹೋಗಬೇಕೇ ವಿನಹ ಏನೊಂದೂ ಹಣ ಖರ್ಚು ಮಾಡದೆ ಬೇಕಾದಾಗ ಕಾಫಿ ಕೊಂಡು ಕೊಂಡು ಕುಡಿಯುವವರಿಗೆ ಎಷ್ಟು ಮಾತ್ರಕ್ಕೂ ಸಲ್ಲಲಾರದು. ಇಂತಹ ಮತ್ತೊಂದು ನಿದರ್ಶನವು ಇಡೀ ವಾಣಿಜ್ಯ ಕ್ಷೇತ್ರದಲ್ಲಿ ಕಂಡು ಬರುವುದಿಲ್ಲ. ಒಂದು ವೇಳೆ ಆ ಹೆಚ್ಚಿನ ಲಾಭವೇನಾದರೂ ಇದ್ದರೆ, ಅದು ಕಾಫಿ ಉಪಯೋಗಿಸುವವರಿಗೆ ಸೇರಬೇಕೆಂದಾದರೆ ಕಾಫಿ ಮಾಲೀಕರಿಗೆ ಅವರಿಗೆ ದೊರೆಯುವ ಹಣವನ್ನು, ಅವರ ಖರ್ಚಿನ ಪರಿಶೀಲನೆಯನ್ನು ಮಾಡಿ ನ್ಯಾಯವಾದ ರೇಟಿನಲ್ಲಿ ನಿಷ್ಕರ್ಷೆ ಮಾಡಿ, ಅಂತಹ ನಿಷ್ಕರ್ಷಿತವಾದ ಕ್ರಯವನ್ನು, ಮಾಲು ಕೈಗೆ ಬಂದ ಕೂಡಲೇ ಒಂದೇ ಗಂಟಿನಲ್ಲಿ ಸರಕಾರದವರು ಕೊಟ್ಟುಬಿಡಬೇಕು. ಹಾಗೆ ಮಾಡಿದರೆ ನಮಗೆ ನಮ್ಮ ಫಸಲಿನ ಪ್ರತಿಫಲವು ಒಂದೇ ಗಂಟಿನಲ್ಲಿ ಬರುವದಲ್ಲದೆ ಈ ಫಸಲು ಎತ್ತುವಳಿಗಾಗಿ ನಾವು ಮಾಡಿದ ಸಾಲಕ್ಕೆ ಪುನಃ ಒಂದು ವರ್ಷಕ್ಕೆ ಕೊಡುವ ಬಡ್ಡಿಯಾದರೂ ಪ್ಲಾಂಟರುಗಳಿಗೆ ಉಳಿಕೆಯಾದೀತು.

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,61,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	16,000

ವಿವಿಧ ಠೇವಣಾತಿಗಳ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಲೆಕ್ಕದ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	3-4-0
1 ವರುಷದಿಂದ 5 ವರ್ಷಗಳ ವರೆಗೆ	,,	4-4-0
5 ವರುಷ ಮತ್ತು ಮೇಲ್ಪಟ್ಟ ಅವಧಿಗೆ	,,	4-12-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ನಗದು ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ನಾರ್ದರ್ನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ.

ಟಿ. ಸಿ. ಅಪ್ಪಯ್ಯ,
ಪ್ರೆಸಿಡೆಂಟ್ & ಖಜಾನ್ಚಿ.

Office of the Minor Irrigation Officer, Coorg, Mercara.
Dated 10—11—53.

Notification.

Sealed Tenders will be received at the Office of the Irrigation Officer, Mercara, up to 3 P. M. on 17-11-'53, for the construction of Central Work Shop Building at Mercara.

The tender should be accompanied by a Treasury challen for having deposited Rs. 2,500 – as earnest money.

Plans and Estimates may be seen at the above office on all working days. The tender should quote rate-war on each item of work, which can be had at the office on payment of Re. 1/- per set.

C. Visweswaria,
Irrigation Officer, Coorg.

ಕೊಡಗು

ತಾರೀಕು ೧೨—೧೧—೧೯೫೪ನೇ ಶುಕ್ರವಾರ

ನೆಹರೂ ಜಯಂತಿ.

ತಾರೀಕು ೧೪-೧೧-೫೪ಕ್ಕೆ ಪಂಡಿತ ಜವಾಹರಲಾಲರಿಗೆ ೬೫ ವರ್ಷ ತುಂಬುವದು. ಒಬ್ಬ ವ್ಯಕ್ತಿಯ ಜೀವನದಲ್ಲಿ ೬೫ ವರ್ಷಗಳೆಂದರೆ ವೃದ್ಧಾಪ್ಯವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಆದರೆ ಜವಾಹರರ ಹೆಗಲಲ್ಲಿ ಈ ವರ್ಷಗಳು ಹಗುರವಾಗಿ ಕೂತಂತೆ ತೋರುತ್ತವೆ. ನೆಹರೂರವರನ್ನು ವೃದ್ಧರೆಂದು ಊಹಿಸುವದು ಕಷ್ಟವಾಗಿದೆ. ಅವರು ಹೊತ್ತಿರುವ ಜವಾಬ್ದಾರಿ, ಅವರು ಮಾಡುತ್ತಿರುವ ಕೆಲಸ, ಅವರಲ್ಲಿರುವ ಚೈತನ್ಯ ಮತ್ತು ಸ್ಫೂರ್ತಿ ಇವು ಅವರನ್ನು ಯುವಕರೆಂದೇ ನಮಗೆ ಸಾರುತ್ತಿವೆ. ಪ್ರತಿಯೊಬ್ಬ ಭಾರತೀಯನ ಕಾಂಕ್ಷೆಯೂ ಕೂಡ ಅವರು ಯುವಕರಾಗಿರಬೇಕೆಂದೇ ಇದೆ. ಆದರೆ ಕಾಲಚಕ್ರದ ಉರುಳಾಟವನ್ನು ಯಾರೂ ತಡೆಯಲಾರರು. ಅಂತೆಯೇ ಅವರು ಕಾಲದ ಆಳತೆಯಲ್ಲಿ ವೃದ್ಧರ ಸಾಲಿಗೆ ಸೇರಿದ್ದಾರೆ. ಆದರೆ ಅವರ ಹುರುಪು, ಕೆಲಸ ಮಾಡುವ ಹುಮ್ಮಸ್ಸು, ಭಾರತವನ್ನು ಭವ್ಯವಾಗಿ ರೂಪಿಸಬೇಕೆಂಬ ಕಾಂಕ್ಷೆ ಇವುಗಳಿಗೆ ಕಾಲದ ತುಕ್ಕು ಹಿಡಿದಿಲ್ಲ. ಅವು ದಿನ ಕಳೆದಂತೆ ಚಿಗುರಿ ಚಿರಯೌವನವನ್ನು ಪಡೆದಂತಿವೆ.

ಪಂಡಿತ ನೆಹರೂರವರು ಈ ೬೫ ವರ್ಷಗಳಲ್ಲಿ ಭರತಖಂಡಕ್ಕೂ, ಜಗತ್ತಿನ ಶಾಂತಿಯ ಕಾರಣಕ್ಕೂ ಸಲ್ಲಿಸಿದ ಸೇವೆಯು ಈ ಯುಗದ ಚರಿತ್ರೆಯೇ ಆಗಿದೆ. ಇಂದು ರಾಷ್ಟ್ರೀಯ ವೇದಿಕೆಯಲ್ಲಾಗಲೀ, ಅಂತರಾಷ್ಟ್ರೀಯ ರಂಗದಲ್ಲಾಗಲೀ ಪಂಡಿತ ನೆಹರೂರವರ ಪ್ರಭಾವ ಬೀಳದ ಸಮಸ್ಯೆಯಿಲ್ಲ. ಇವರ ಮುಂದಾಳ್ತನವೊಂದಿರುವ ಕಾರಣ ಭಾರತವು ತನ್ನ ಮುಂದಿರುವ ಎರಡು ತೊಡರುಗಳನ್ನು ದಾಟಿ ಮುಂದರಿಯುತ್ತಿದೆ. ಪಂಡಿತ ನೆಹರೂರವರೇ ಇಂದಿನ ಆಡಳಿತದ ಜೀವಾಳವಾಗಿದ್ದಾರೆ. ಅವರ ಮೇಲಿನ ಅಖಂಡ ವಿಶ್ವಾಸವೇ ಭಾರತೀಯರೆಲ್ಲರನ್ನು ಏಕೀಕರಿಸಿ ನವರಾಷ್ಟ್ರ ನಿರ್ಮಾಣದ ಕೆಲಸದಲ್ಲಿ ತೊಡಗಿಸಿದೆ.

ಅಧಿಕಾರ ಬಂದಾಗ ಅದನ್ನು ತನ್ನ, ತನ್ನವರ ಸ್ವಾರ್ಥಕ್ಕಾಗಿ ಉಪಯೋಗಿಸಿ ಕಾಂಗ್ರೆಸ್ಸಿನ ಕೀರ್ತಿಯನ್ನು ಕೆಳಗಿಳಿಸಿದ ನೂರಾರು ದ್ರೋಹಿಗಳಿದ್ದು ಆ ಕಾರಣವಾಗಿ ದೇಶದ ಪ್ರಗತಿ ಸಾಕಷ್ಟು ದ್ರುತಗತಿಯಿಂದ ಆಗುವುದು ಅಸಾಧ್ಯವಾಗಿದ್ದರೂ ಪಂಡಿತ ನೆಹರೂರವರಂಥಾ ಸ್ಫಟಿಕ ಶುಭ್ರ ಚಾರಿತ್ರ್ಯ ಉಳ್ಳವರ ಪ್ರಯತ್ನದಿಂದಾಗಿ ನಿಧಾನವಾಗಿಯಾದರೂ ಭಾರತವು ನಿಶ್ಚಿತ ಪಥದಲ್ಲಿ ಮುಂದಡಿಯಿಡುತ್ತಿದೆ. ಗಾಂಧೀಜಿಯವರ ಹೆಸರು ಭಾರತೀಯರಲ್ಲಿ ಉತ್ಪನ್ನ ಮಾಡುತ್ತಿದ್ದ ಭಕ್ತಿ, ಗೌರವಗಳನ್ನು ನೆಹರೂರವರ ಹೆಸರು ಉತ್ಪನ್ನ ಮಾಡದಿದ್ದರೂ ಇಂದಿನ ಭೌತಿಕ ಯುಗದಲ್ಲಿ ಪಾಶ್ಚಿಮಾತ್ಯ ಪೌರ್ವಾತ್ಯ ಸಂಸ್ಕೃತಿಗಳ ಕಲಸುಮೇಲೋಗರದಲ್ಲಿ ನೆಹರೂರವರಂಥ ಮುಂದಾಳು ಬೇರೊಬ್ಬರಿಲ್ಲ. ಅಂತೆಯೇ ಅವರನ್ನು ಮುಂದಾಳಾಗಿ ಪಡೆದ ಭಾರತೀಯರು ಧನ್ಯರು. ಪಂಡಿತ ನೆಹರೂರವರು ಇನ್ನೂ ದೀರ್ಘಾಯುಗಳಾಗಲಿ. ಅವರ ವ್ಯಕ್ತಿತ್ವ ಅಂತರ್ರಾಷ್ಟ್ರೀಯ ರಂಗದಲ್ಲಿ ಇನ್ನೂ ಮೇಲೇರಲಿ. ಭಾರತವು ಅವರ ಮುಂದಾಳ್ತನದಲ್ಲಿ ಜಗತ್ತಿನ ಶಾಂತಿ ಸಂಸ್ಥಾಪನೆಗೆ ತನ್ನ ಪಾಲಿನ ಕರ್ತವ್ಯವನ್ನು ಜಯಪ್ರದವಾಗಿ ಮಾಡುವಂತಾಗಲಿ.

ವರ್ತಮಾನ

ಈ ತಾರೀಕು ೨೨ ರಿಂದ ೨೭ ರ ವರೆಗೆ ಫ್ರೇಜರ್‌ಪೇಟೆ ಶ್ರೀ. ಗಣಪತಿ ದೇವರ ರಥೋತ್ಸವವು ಮತ್ತು ಜಾನುವಾರುಗಳ ಜಾತ್ರೆಯು ನಡೆಯುತ್ತದೆ. ಗ್ರಾಮ ಕೈಗಾರಿಕಾ ವಸ್ತುಗಳ, ಕಸೂತಿ ಕೆಲಸದ, ಮತ್ತು ತರಕಾರಿಗಳ ಪ್ರದರ್ಶನದ ಏರ್ಪಾಡು ಇದೆ. ಉತ್ತಮ ರಾಸುಗಳಿಗೂ, ಓಡುವ, ಮತ್ತು ಭಾರ ಎಳೆಯುವ ಎತ್ತುಗಳಿಗೂ ಬಹುಮಾನಗಳಿವೆ.

ತಾರೀಕು ೯ ರಲ್ಲಿ ದೊಡ್ಡಬಿಹಳ ಗ್ರಾಮದಲ್ಲಿ ಶ್ರೀ. ಬಿ. ಕೆ. ಶಾಂತವೀರಪ್ಪನವರ ಅಧ್ಯಕ್ಷತೆಯಲ್ಲಿ ವಯಸ್ಕರ ಶಿಕ್ಷಣ ಶಾಲೆ ತೆರೆಯಲ್ಪಟ್ಟಿತು. ೩೨ ವಿದ್ಯಾರ್ಥಿಗಳಿರುವರು.

ಸಂಯುಕ್ತ ರಾಷ್ಟ್ರ ಸಂಘದ ದಿನಾಚರಣೆಯು ಶ್ರೀ. ಸ. ಕೈಕೋಡಿ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಚೆಟ್ಟಿಮಾನಿಯಲ್ಲಿ ನಡೆಯಿತು. ಆಟೋಟಗಳ ಸ್ಪರ್ಧೆ ಇತ್ತು. ಶ್ರೀಗಳಾದ ಕೆ. ಆರ್ ಬಾಲಕೃಷ್ಣ, ಕೆ. ಎಸ್. ಗಣಪತಿ, ಕೆ. ಎ ರಾಮಯ್ಯ ಮತ್ತು ಎ. ಎಂ. ಬೆಳ್ಯಪ್ಪನವರು ಭಾಷಣ ಮಾಡಿದರು. ಸಾಯಂಕಾಲ ಹರಿಕತೆಯ ಏರ್ಪಾಡು ಮಾಡಲಾಗಿತ್ತು.

ಈ ವರ್ಷ ರೈತರಿಗೆ, ಹುತ್ತರಿ ಸಾಲ ಕೊಡಲಿಕ್ಕಾಗಿ ಸರಕಾರದವರು ಒಂದು ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಡಗು ಸ್ಟೇಟ್ ಕೋಆಪರೇಟಿವ್ ಬ್ಯಾಂಕಿಗೆ ಕೊಟ್ಟಿರುವರು.

ನವೆಂಬರ್ ತಾರೀಕು ೨೦ನೇ ಶುಕ್ರವಾರ ಕೃತ್ತಿಕ ನಕ್ಷತ್ರದಲ್ಲಿ ಸುಬ್ರಹ್ಮಣ್ಯ (ಇಗ್ಗುತಪ್ಪ) ದೇವರ ಕಲಾಡ್ಚ ಹಬ್ಬವು. ಮಾರನೆ ದಿನ ಶನಿವಾರ (ತಾ. ೨೧) ರೋಹಿಣಿ ನಕ್ಷತ್ರದ ಮಿಥುನ ರಾಶಿಯಲ್ಲಿ ರಾತ್ರಿ ೮ ಗಂಟೆಗೆ ನೆರೆ ಕಟ್ಟುವದು, ೯ ಗಂಟೆಗೆ ಕದಿರು ತೆಗೆಯುವದು, ೧೦ ಗಂಟೆಗೆ ಊಟ ಮಾಡಲು ಶುಭ ಮುಹೂರ್ತ. ಮಾರನೆ ದಿವಸ ಆದಿತ್ಯವಾರ (ತಾ. ೨೨) ಮೃಗಶಿರ ನಕ್ಷತ್ರ ಕರ್ಕಾಟಕ ರಾಶಿಯಲ್ಲಿ ರಾತ್ರಿ ೯ ಗಂಟೆಗೆ ನೆರೆ ಕಟ್ಟುವದು ೧೦ ಗಂಟೆಗೆ ಕದಿರು ತೆಗೆಯುವದು, ೧೧ ಗಂಟೆಗೆ ಊಟ ಮಾಡಲು ಶುಭ ಮುಹೂರ್ತ.

ಗಾಳಿಬೀಡಿನಲ್ಲಿ ವಯಸ್ಕರ ಶಿಕ್ಷಣ ಶಾಲೆಯು ಶ್ರೀ. ಸಿ. ಡಿ. ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ತಾ. ೫ ರಲ್ಲಿ ತೆರೆಯಲ್ಪಟ್ಟಿತು. ಕೊಡಗಿನ ವಿದ್ಯಾಧಿಕಾರಿಗಳೂ ವಯಸ್ಕರ ಶಿಕ್ಷಣ ಆರ್ಗನೈಜರೂ, ವೈ. ಟಿ. ಐಯ್ಯಪ್ಪನವರೂ ಭಾಷಣ ಮಾಡಿದರು.

ತಾ. ೬ರಲ್ಲಿ ಕೊಡಗಿನ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಕುಟ್ಟ ಟೌನಿಗೆ ಹೂವಿನ ಕಾಡು ತೋಟದವರ ಉದಾರತೆಯ ಕಾರಣ ದೊರೆತಿರುವ ನಲ್ಲಿ ನೀರು ಸರಬರಾಯಿಯ ಉದ್ಘಾಟನಾ ಸಮಾರಂಭವು ನಡೆಯಿತು.

ಕಡಿಯತ್ತು ನಾಡು ಯೂನಿಯನ್ನಿನ ಆಶ್ರಯದಲ್ಲಿ ಅಂತರ್ರಾಷ್ಟ್ರೀಯ ಸಹಕಾರ ದಿನಾಚರಣೆಯು ಶ್ರೀ ಕೆ. ಬಿ. ಐಯ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಎಂ. ಎಂ. ಸೋಮಯ್ಯ, ಬಿ. ಪಿ. ಕುಟ್ಟಪ್ಪ, ಬಿ ಎಂ ಸುಬ್ಬಯ್ಯ, ಬಿ ಚಿಟ್ಟಿಯಪ್ಪ, ಅನಂತರಾಮಯ್ಯ ಮೊದಲಾದವರು ಭಾಷಣ ಮಾಡಿದರು.

ತಾ. ೯ರಲ್ಲಿ ಹುದಿಕೇರಿಯಲ್ಲಿ ವಯಸ್ಕರ ಶಿಕ್ಷಣ ಶಾಲೆಯನ್ನು ತೆರೆಯುವ ಉದ್ದೇಶ್ಯ ಚಲನ ಚಿತ್ರ ಪ್ರದರ್ಶಿಸಲಾಯಿತು. ತಾ. ೧೦ರಲ್ಲಿ ಒಂದು ಶಾಲೆಯನ್ನು ಹುದಿಕೇರಿ ಹೈಸ್ಕೂಲಿನಲ್ಲಿ ತೆರೆಯಲಾಗಿದೆ. ತಾ. ೯ರಲ್ಲಿ ಮತ್ತೂರು ಬೆಟ್ಟ ಕುರುಬರ ಕೇರಿಯಲ್ಲಿ ಒಂದು ವಯಸ್ಕರ ಶಿಕ್ಷಣ ಶಾಲೆ ತೆರೆಯಲಾಯಿತು.

ತಾ. ೮ನೇ ಆದಿತ್ಯವಾರ ಕೊಡಗು ಗಾಯನ ಸಮಾಜದ ಉದ್ಘಾಟನೆಯು ಕೊಡಗು ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ಸೆಂಟ್ರಲ್ ಹೈಸ್ಕೂಲು ಸಭಾಂಗಣದಲ್ಲಿ ನಡೆಯಿತು. ಈ ಸಭೆಯ ಪ್ರೆಸಿಡೆಂಟರಾದ ಶ್ರೀ ಬಿ. ಎಸ್. ಕುಶಾಲಪ್ಪನವರ ಪ್ರಾರಂಭ ಭಾಷಣವಾದ ನಂತರ ಅಧ್ಯಕ್ಷರು ಸಂಗೀತದ ವಿಚಾರ ನಾಲ್ಕು ಮಾತಾಡಿದರು. ಮೈಸೂರಿನ ಶ್ರೀ ಶ್ರೀನಿವಾಸಮೂರ್ತಿ ಮತ್ತು ಪಾರ್ಟಿಯವರ ಸಂಗೀತ ಕಚೇರಿ ಇತ್ತು.

ಸಹಕಾರ ದಿನಾಚರಣೆಯು ತಾ. ೭ ರಲ್ಲಿ ಕಕ್ಕಬ್ಬೆ ಶಾಲೆಯಲ್ಲಿ ಶ್ರೀ ಎ ಸಿ. ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಶ್ರೀಗಳಾದ ಎಸ್. ಎಸ್. ನಾರಾಯಣ ಮೂರ್ತಿ, ಕೆ. ಟಿ. ಉತ್ತಯ್ಯ, ಬಿ. ಪಿ ಮಾಚಯ್ಯ, ಕೆ. ಎ. ಸೋಮಯ್ಯ, ಕೆ. ಎನ್. ಕಾವೇರಿಯಪ್ಪ, ಎ. ಎನ್. ತಿಮ್ಮಯ್ಯ ಮೊದಲಾದವರು ಭಾಷಣ ಮಾಡಿದರು.

ಸಹಕಾರ ದಿನಾಚರಣೆಯು ಹುದಿಕೇರಿಯಲ್ಲಿ ಶ್ರೀ. ಕೆ. ಕೆ. ಗಣಪತಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಎಚ್. ಸಿ. ನಂಜಪ್ಪ, ಕೆ. ಎನ್. ಜಯಸಿಂಹ, ಬಿ. ವಿ. ಚಂಗಪ್ಪ, ಎಂ. ಎಂ. ಪೂಣಚ್ಚ, ಪಿ ಎಂ. ಕುಟ್ಟಪ್ಪ, ಎಚ್. ಬಿ. ಕುಶಾಲಪ್ಪ, ಎಂ. ರಝಾಕ್ ಸಾಹೇಬ್ ಮತ್ತು ಅಹಮ್ಮದ್ ಸಾಹೇಬರು ಭಾಷಣ ಮಾಡಿದರು.

ಅಮ್ಮತ್ತಿ ಶಾಲೆಯಲ್ಲಿ ಸಂಯುಕ್ತ ರಾಷ್ಟ್ರ ದಿನಾಚರಣೆಯು ಶ್ರೀ. ಕೆ. ಸಿ ಕರುಂಬಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು ಆಟೋಟಗಳ ಸ್ಪರ್ಧೆ, ಸಿಹಿತಿಂಡಿ ಹಂಚುವಿಕೆಯ ನಂತರ ಸಭೆ ನಡೆದು ಶ್ರೀಗಳಾದ ಸಿ ಎನ್. ಗಣಪತಿ, ಕೆ. ಡಿ. ಅಚ್ಚಪ್ಪ, ಎಂ. ಬಿ. ಬೋಪಯ್ಯ ಇವರುಗಳು ಭಾಷಣ ಮಾಡಿದರು. ಶಾಲಾ ಮಕ್ಕಳಿಂದ ಸಂಗಿತ, ನೃತ್ಯಗಳಿದ್ದವು

ತಾರೀಕು ೧ ರಲ್ಲಿ ಸಮಾಜ ಶಿಕ್ಷಣಾ ದಿನಾಚರಣೆಯು ಅಮ್ಮತ್ತಿಯಲ್ಲಿ ಶ್ರೀ. ಪಿ. ಎಂ. ಭೀಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ವಿ. ಎಸ್. ರಾಮಕೃಷ್ಣನವರು ಭಾಷಣ ಮಾಡಿದರು. ಒಂದು ವಯಸ್ಕರ ಶಿಕ್ಷಣ ಶಾಲೆಯನ್ನು ಇಲ್ಲಿ ತೆರೆಯಲಾಯಿತು.

ಬಾಳೆಲೆ ಶಾಲೆಯಲ್ಲಿ ಸಮಾಜ ಶಿಕ್ಷಣ ದಿನಾಚರಣೆಯು ಶ್ರೀ. ಪಿ. ಎಸ್. ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಕೆ. ಎಸ್. ಅಪ್ಪಚ್ಚು, ವಿ. ರಾಮರಾವ್, ಕೆ. ಕೆ. ಸುಬ್ಬಯ್ಯ, ಪಿ. ಎಸ್. ಭೀಮಯ್ಯ, ಕೆ. ಎನ್. ಬೋಪಯ್ಯ, ಎ. ಪಿ ಅಯ್ಯಪ್ಪ, ಬಿ. ಕೆ. ವೆಂಕಟರಮಣ ಮೊದಲಾದವರು ಭಾಷಣ ಮಾಡಿದರು

ಸಂಯುಕ್ತ ರಾಷ್ಟ್ರ ದಿನಾಚರಣೆಯು ಕರಡ ಮಾಧ್ಯಮಿಕ ಶಾಲೆಯಲ್ಲಿ ಶ್ರೀ. ನಡಿಕೇರಿಯಂಡ ದೇವಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಆಟೋಟಗಳ ಸ್ಪರ್ಧೆಯ ನಂತರ ಸಭೆ ಸೇರಿತು ಶ್ರೀಗಳಾದ ಎನ್. ಸಿ. ಸುಬ್ಬಯ್ಯ, ಸಿ. ಬಿ. ಕೇಚಮ್ಮ ಇವರುಗಳು ಭಾಷಣ ಮಾಡಿದರು. ಪಾಠ ಸ್ಪರ್ಧೆ, ಸಂಗೀತ, ನೃತ್ಯದ ಏರ್ಪಾಡಿತ್ತು.

ಸಮಾಜ ಶಿಕ್ಷಣ ದಿನಾಚರಣೆಯು ಕಾನೂರು ಶಾಲೆಯಲ್ಲಿ ಶ್ರೀ. ಎಂ. ಬಿ. ಕುಶಾಲಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಆಟೋಟಗಳ ಸ್ಪರ್ಧೆ ಇತ್ತು. ಶ್ರೀಗಳಾದ ಎಚ್. ಎಸ್. ಮಂದಪ್ಪಯ್ಯ ಎಂ. ಎ. ಸುಬ್ರಾಯ, ಸಿ. ಎ. ಐಯ್ಯಮ್ಮ, ಸಿ. ಕೆ. ಪೊನ್ನಪ್ಪ, ಸಿ. ಜೆ. ಮಂದಯ್ಯ ಮೊದಲಾದವರು ಭಾಷಣ ಮಾಡಿದರು.

ಪಂಚವಾರ್ಷಿಕ ಯೋಜನೆಯಲ್ಲಿ ವಿದ್ಯೆಗೆ ಸಂಬಂಧಿಸಿದ ವಿಷಯಗಳನ್ನು ಪರಿಶೀಲಿಸಿ ಯೋಗ್ಯ ಸಲಹೆ ಕೊಡಲು ವಿದ್ಯಾಮಂತ್ರಿಗಳು, ವಿದ್ಯಾಧಿಕಾರಿಗಳು, ಸಾಮೂಹಿಕ ವಿಕಾಸ ಯೋಜನೆಯ ಡೆವಲಪ್‌ಮೆಂಟ್ ಕಮಿಷನರು ಮತ್ತು ಫೈನಾನ್ಸ್ ಸೆಕ್ರೆಟರಿಯವರಿಂದ ಕೂಡಿದ ಒಂದು ಸಮಿತಿಯನ್ನು ನೇಮಿಸಲಾಗಿದೆ.

ಶ್ರೀ ಪೈಕೆರ ಚಂಗಪ್ಪನವರು ಮಡಿಕೇರಿ ಸಿವಿಲ್ ಆಸ್ಪತ್ರೆಗೆ ಒಂದು ಸ್ಪೆಶಲ್ ವಾರ್ಡ್ ಕಟ್ಟಲು ೫ ಸಾವಿರ ರೂಪಾಯಿಗಳನ್ನೂ, ಬಿಳಿಗೇರಿಗ್ರಾಮ ಶಾಲಾ ಕಟ್ಟಡಕ್ಕೆ ೨ ಸಾವಿರ ರೂಪಾಯಿಗಳನ್ನೂ ಕೊಟ್ಟಿರುವರೆಂದು ವರ್ತಮಾನ.

ತಾ ೭ರಲ್ಲಿ ಕೊಡಗು ಹಾಲನ ಸಭಾಂಗಣದಲ್ಲಿ ಕೊಡಗಿನ ಸಂಸ್ಕೃತಿ ಪ್ರಸಾರ ಯೋಜನೆಯ ಉದ್ಘಾಟನೆಯು ನ್ಯಾ

ಸೂರಿನ ಸಂಸ್ಕೃತಿ ಪ್ರಸಾರ ಶಾಖೆಯ ಡೈರೆಕ್ಟರಾದ ಶ್ರೀ ಸಿ. ಕೆ. ವೆಂಕಟರಾಮಯ್ಯನವರಿಂದ ನಡೆಯಿತು. ಕೊಡಗಿನ ಮುಖ್ಯಮಂತ್ರಿಯವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಬಿ. ಎಸ್. ರಾಮಾನುಜಾಚಾರ್ಯರು ಕವನಗಳನ್ನು ಹಾಡಿದರು. ಅಖಿಲ ಭಾರತ ಆಕಾಶವಾಣಿಯ ಕಲಾವಿದರಾದ ಶ್ರೀ ಕಾಳಿಂಗರಾಯ ಮತ್ತು ಪಾರ್ಟಿಯವರ ಸಂಗೀತ ಖಚೇರಿ ನಡೆಯಿತು. ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರು ಸಂಸ್ಕೃತಿಯ ನೆಲೆಯ ಕುರಿತು ಭಾಷಣ ಮಾಡಿದರು. ಶ್ರೀ ವಿಷಕಂಠರಾಯರು ಲಾವಣಿ ಹಾಡಿದರು. ಶ್ರೀ ಕೌಶಿಕ ಮತ್ತು ಜೊತೆಯವರಿಂದ ಭಾರತ ವಾಚನ ನಡೆಯಿತು.

ಶ್ರೀ ಮನೆಯಪಂಡ ಕಿ. ಕಾರ್‍ಯಪ್ಪ ಐ. ಎ. ಎಸ್. ಅವರನ್ನು ಆಂಧ್ರ ಸಂಸ್ಥಾನದ ಶ್ರೀಕಾಕುಳಂ ಡಿಸ್ಟ್ರಿಕ್ಟ್ (ಗಂಜಾಂ ಡಿಸ್ಟ್ರಿಕ್ಟ್) ನ ಕಲೆಕ್ಟರಾಗಿಯೂ, ಅದೇ ಡಿಸ್ಟ್ರಿಕ್ಟ್‌ನ ಏಜೆನ್ಸಿ ಏರಿಯಾದ ಸೆಶನ್ಸ್ ಜಡ್ಜರಾಗಿಯೂ ನೇಮಿಸಿರುವರು.

ಸಾಮೂಹಿಕ ವಿಕಾಸ ಯೋಜನೆಯ ವಾರ್ತೆಗಳು

ಹೊದ್ದೂರು ಗ್ರಾಮದ ಕಬ್ಬಡಗೇರಿ ಸಹಕಾರ ಸಂಘದ ಸದಸ್ಯರು ಹೊದ್ದೂರಿನಿಂದ ಬಲಮುರಿಯ ವರೆಗೆ ಎರಡು ಮೈಲು ದೂರದ ರಸ್ತೆಯನ್ನು ದುರಸ್ತಿಗೊಳಿಸಿದರು. ಒಟ್ಟಿನಲ್ಲಿ ಸುಮಾರು ೭೦೦ ಜನರ ಕೆಲಸ ಮಾಡಿದರು. ಹೊದ್ದೂರು ಶಾಲೆಯಿಂದ ಕುಂಬಳದಾಳು ಗ್ರಾಮಕ್ಕೆ ಹೋಗುವ ರಸ್ತೆ ಕೆಲಸ ನಡೆಯುತ್ತಿದೆ.

ಮುರಗೋಡು, ಹೊಸಕೇರಿ, ಕಟ್ಟೆಮಾಡು, ಐಕೊಳ ಗ್ರಾಮಸ್ಥರೂ, ಮುರಗೋಡು ಶಾಲಾ ವಿದ್ಯಾರ್ಥಿ ಅಧ್ಯಾಪಕರೂ ಗಾಂಧಿ ಜಯಂತಿಯ ದಿನದಿಂದ ಶಾಲಾ ಆಟದ ಮೈದಾನದ ಕೆಲಸವನ್ನು ಕೈಕೊಂಡು ೧೨ ದಿನಗಳಲ್ಲಿ ಒಟ್ಟು ಸುಮಾರು ೩,೫೦೦ ಜನರ ಕೆಲಸ ಮಾಡಿ ಕೆಲಸ ಮುಗಿಸಿದರು. ಈ ಮೈದಾನವನ್ನು ತೆರೆಯುವ ಸಭೆಯು ತಾ. ೧೮ರಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಸಿ. ಎ. ಮುಂದಂಣನವರಿಂದ ತೆರೆಯಲ್ಪಟ್ಟಿತು.

ಬಿ. ಶೆಟ್ಟಿಗೇರಿ ಶಾಲೆಯ ವಿದ್ಯಾರ್ಥಿಗಳು ಮೂರು ಗುಂಪುಗಳಾಗಿ ಒಂದು ಗುಂಪಿನವರು ಬಿ. ಶೆಟ್ಟಿಗೇರಿಯ ಕೆರೆಯನ್ನೂ, ಇನ್ನೊಂದು ಗುಂಪಿನವರು ಸಾಧು ದೇವಸ್ಥಾನವನ್ನೂ, ಮತ್ತೊಂದು ಗುಂಪು ಅಂದಾಜು ಒಂದು ಫರ್ಲಾಂಗು ರಸ್ತೆಯನ್ನೂ ಮಾಡಿದರು. ಮಧ್ಯಾಹ್ನದ ವೇಳೆ ಶ್ರೀ ಕೆ. ಜಿ. ಪೂವಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆದು ಭಾಷಣಗಳಾದವು.

ಬಲ್ಲಮಾವಟಿ ಗ್ರಾಮದವರು ಸುಮಾರು ೪೦೦ ಜನರ ಕೆಲಸ ಮಾಡಿ ಅಂದಾಜು ಒಂದೂವರೆ ಮೈಲು ದೂರದ ಗ್ರಾಮ ರಸ್ತೆ ಕೆಲಸ ಪೂರೈಸಿರುವರು. ಪೇರೂರು ಗ್ರಾಮದವರು ಅಷ್ಟೇ ಜನರ ಕೆಲಸದಿಂದ ಸುಮಾರು ಎರಡು ಮೈಲು ದೂರದ ರಸ್ತೆ ರಿಪೇರಿ ಮಾಡಿರುವರು. ನಾಪೋಕ್ಲು ಪೇಟೆ ಗ್ರಾಮಸ್ಥರು ನಾಪೋಕ್ಲಿನಿಂದ ಪಾರಾಣೆಗೆ ಹೋಗುವ ರಸ್ತೆಯನ್ನು ಒಂದು ಮೈಲು ದೂರದ ವರೆಗೆ ದುರಸ್ತಿ ಮಾಡಿದ್ದಾರೆ. ನಾಪೋಕ್ಲು ಪೇಟೆ ಕೊಳಕೇರಿ ಗ್ರಾಮಸ್ಥರು ಆ ಗ್ರಾಮದ ಮಧ್ಯೆ ಹೋಗುವ ರಸ್ತೆಯ ಸುಮಾರು ಎರಡುವರೆ ಮೈಲು ದೂರದ ಕೆಲಸ ಪೂರೈಸಿದ್ದಾರೆ. ಈಸ್ಟ್ ಕೊಳಕೇರಿ ಗ್ರಾಮಸ್ಥರು ಗ್ರಾಮದಲ್ಲಿ ಸುಮಾರು ಒಂದು ಮೈಲು ದೂರದ ಹೊಸ ರಸ್ತೆ ಮಾಡಿರುವರು.

ಕುತ್ತುನಾಡು ಸಹಕಾರ ಸಂಘದ ಸದಸ್ಯರು ಒಟ್ಟುಗೂಡಿ ಅಲ್ಲಿಯ ಲೋಕಲ್ ಫಂಡ್ ರಸ್ತೆಯನ್ನು ದುರಸ್ತಿಗೊಳಿಸಿದ್ದಾರೆ. ಸುಮಾರು ೩೫೦ ಜನರ ಕೆಲಸ ನಡೆದಿದೆ.

ಬೇಳೂರು ಗ್ರಾಮಸ್ಥರೂ, ಶಾಲಾ ವಿದ್ಯಾರ್ಥಿಗಳೂ ಕುಸುಬೂರು, ಬೇಳೂರು ಬಸವನಹಳ್ಳಿ ಗ್ರಾಮಗಳನ್ನು ಸಂದರ್ಶಿಸಿ, ಹಲವರ ಮನೆಗಳನ್ನು ಶುಚಿಗೊಳಿಸಿದ್ದಲ್ಲದೆ ಕೆಲವು ಕಡೆ ಗ್ರಾಮ ರಸ್ತೆಗಳನ್ನು ದುರಸ್ತಿಗೊಳಿಸಿದರು. ತಾ. ೮ರಲ್ಲಿ ಹತ್ತು ಜನರ ತಂಡವೊಂದು ಗುಡುಗೂರು ಬೇಳೂರು ಕುರುಬರ ವಸತಿಗಳನ್ನು ಸಂದರ್ಶಿಸಿ ಅವರ ಮನೆ ಶುಚಿಗೊಳಿಸಿದರು. ಮತ್ತು ಶುಚಿತ್ವದ ಬಗ್ಗೆ ಅವರಿಗೆ ಬೋಧನೆ ಕೊಡಲಾಯಿತು.

|| ಓದುಗರ ಓಲೆಗಳು ||

ಮಾಂಸದ ಬೆಲೆ.

ಕೊಡಗಿನ ಪೇಟೆ ಮತ್ತು ನೋಟಿಫೈಡ್ ಏರಿಯಾಗಳಲ್ಲಿ ಮಾಂಸದ ಬೆಲೆಯನ್ನು ಸರಕಾರದವರು ಪ್ರಥಮ ದರ್ಜೆಯದಕ್ಕೆ ರೂ. ೧—೧೨—೦ ಮೊದಲಾಗಿ ನಿರ್ಣಯಿಸಿರುವದು ಸರಿಯಷ್ಟೆ. ಈ ನಿರ್ಣಯದಿಂದಾಗಿ ಪೇಟೆಗೆ ಒಳ್ಳೆಯ ಮಾಂಸವೇ ಬಾರದಾಗಿದೆ. ಅಪ್ಪಗಳನ್ನು ಪರಿಶೀಲಿಸಿ ಸೀಲ್ ಹಾಕುವ ಅಧಿಕಾರಿಗಳು ಬಂದದ್ದರಲ್ಲಿ ಉತ್ತಮವಾದುದನ್ನು ಒಂದನೆ ತರಗತಿಯೆಂದು ವರ್ಗೀಕರಿಸಬೇಕಾದ ಪ್ರಸಂಗ ಬಂದಿದೆ. ಬೇರೆ ಪೇಟೆಗಳ ವಿಚಾರ ನನಗೆ ತಿಳಿದಿಲ್ಲ. ಆದರೆ ಮಡಿಕೇರಿಯ ಅನುಭವ ಹೇಳುವದಾದರೆ ಈ ನಿಯಂತ್ರಣದ ನಂತರ ಒಳ್ಳೆಯ ಮಾಂಸ ದೊರೆಯುವದೇ ಕಷ್ಟವಾಗಿದೆಯೆಂಬುದು ಮಾಂಸ ಉಪಯೋಗಿಸುವವರೆಲ್ಲರ ಅಭಿಪ್ರಾಯವಾಗಿದೆ. ಅದ್ದರಿಂದ ಕಟುಕರು ತಮಗೆ ಇಚ್ಛೆ ಬಂದ ಕುರಿಗಳನ್ನು ಕಡಿಯಲು ಬಿಡದೆ ಡಾಕ್ಟರರೇ ನೋಡಿ ಅವರು ಆರಿಸಿದ ಕುರಿಗಳನ್ನೇ ಕಡಿಯುವಂತೆ ಮಾಡದಿದ್ದರೆ ಈ ನಿಯಂತ್ರಣದಿಂದ ಹೆಚ್ಚಿನ ಪ್ರಯೋಜನವಾಗಲಾರದು. ಗ್ರಾಮಾಂತರ ಜನರಿಗೆ ಈ ನಿಯಂತ್ರಣದ ವಿಚಾರ ತಿಳಿದಿಲ್ಲ. ಮಾಂಸದ ವಿವಿಧ 'ಕ್ಲಾಸು'ಗಳೂ ಅವರಿಗೆ ತಿಳಿದಿಲ್ಲ. ಹಾಗಿರುವದರಿಂದ ಮಾಂಸ ಮಾರಾಟ ಮಾಡುವಲ್ಲಿ ಸರಕಾರ ನಿಯಂತ್ರಣದ ವಿವರಗಳನ್ನು ಎಲ್ಲರಿಗೂ ತಿಳಿಯುವಂತೆ ಬೋರ್ಡಿನಲ್ಲಿ ಬರೆದಿಡುವದು ಉತ್ತಮ.

ನಾಗರಿಕ.

ಅರಣ್ಯರೋಧನ.

ಮಡಿಕೇರಿ ಬಸ್‌ಸ್ಟೇಂಡಿಗೆ ಅನೇಕ ಬಸ್ಸುಗಳು ಪ್ರತಿ ದಿನ ಬರುತ್ತವೆ. ಪ್ರತಿ ದಿನ ಇಲ್ಲಿಂದ ಬೇರೆಡೆ ಹೋಗುತ್ತವೆ. ಯಾವ ಬಸ್ಸು ಯಾವ ಲೈನಿಗಾಗಿ ಎಷ್ಟು ಗಂಟೆಗೆ ಮಡಿಕೇರಿಯಿಂದ ಹೊರಡುತ್ತದೆ ಮತ್ತೆ ಮಡಿಕೇರಿಗೆ ಬಂದು ತಲಪುತ್ತದೆಯೆಂಬ ವೇಳಾಪಟ್ಟಿಯನ್ನು ಪ್ರಯಾಣಿಕರ ಅನುಕೂಲತೆಗಾಗಿ ದೊಡ್ಡದಾಗಿ ಬರೆಸಿ ಬಸ್‌ಸ್ಟ್ಯಾಂಡಿನಲ್ಲಿ ಬೋರ್ಡು ಇಡಬೇಕೆಂದು ಈ ಮೊದಲು ಒಂದೆರಡು ಬಾರಿ ಪತ್ರಗಳು ಪ್ರಕಟವಾಗಿದ್ದರೂ ಈ ವರೆಗೂ ಮಾಡಿರುವದಿಲ್ಲ. ಈಗ ಹಲವಾರು ಬಸುಗಳಿವೆ. ವಿವಿಧ ಸಮಯಕ್ಕೆ ಹೊರಟು ನಾನಾಸು ಬರುತ್ತವೆ. ಈ ವಿವರ ಪ್ರಯಾಣಿಕರಿಗೆ ತುಂಬಾ ಅವಶ್ಯವಾಗಿದೆ. ಕೊಡಗಿನ ಟ್ರಾನ್ಸ್‌ಪೋರ್ಟ್ ಅತಾರಿಟಿಯವರಾಗಲೀ, ಮಡಿಕೇರಿ ಪುರಸಭೆಯವರಾಗಲೀ ಈ ವಿಚಾರವನ್ನು ಮನಸಿಗೆ ತೆಗೆದುಕೊಂಡು ತಕ್ಕುದಾದ ಬೋರ್ಡು ಇರಿಸುವರೆಂದು ಆಶಿಸಲಾಗಿದೆ.

ಪ್ರಯಾಣಿಕ.

ಇದು ನಿಲ್ಲಬೇಕು.

ಮರೆನಾಡಿನ ಕೆಲವು ಮಹನೀಯರು ಮತ್ತು ಕುತ್ತುನಾಡಿನ ಕೆಲವರು ಸೇರಿಕೊಂಡು ಮನೆ ಸಾರಾಯಿ ವ್ಯಾಪಾರವನ್ನು ಕುತ್ತುನಾಡಿನಲ್ಲಿ ಧಾರಾಳವಾಗಿ ಮಾಡುತ್ತಿದ್ದಾರೆ. ಕಳೆದ ಸಂಕ್ರಮಣದ ನಂತರ ಈ ವ್ಯಾಪಾರ ತುಂಬಾ ಬಿರುಸಾಗಿದೆ. ಗ್ರಾಮ ಗ್ರಾಮಗಳಿಗೆ ಇವುಗಳನ್ನು ಹಂಚಲು ಡಿಪೋ ಆಫೀಸರುಗಳಂತೆ ಕೆಲವರು ಜವಾಬ್ದಾರಿ ವಹಿಸಿ ಮಾರಾಟ ಮಾಡಿ ಲಾಭ ಪಡೆಯುತ್ತಿದ್ದಾರೆ. ಹುತ್ತರಿ ಹಬ್ಬ ಸಮೀಪಿಸಿದ್ದರಿಂದ ಇದು ಇನ್ನೂ ಹೆಚ್ಚಾಗ ತೊಡಗಿದೆ. ಈ ವ್ಯಾಪಾರವನ್ನು ನಿರ್ಬಾಧಕವಾಗಿ ನಡೆಯಲು ಬಿಟ್ಟರೆ ಅನಾಹುತವಾಗಬಹುದು. ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ಈ ಬಗ್ಗೆ ಹೆಚ್ಚಿನ ನಿಗವಿಟ್ಟಂತೆ ತೋರುವದಿಲ್ಲ. ಇನ್ನಾದರೂ ಅವರು ತೊಂದರೆ ತೆಗೆದುಕೊಂಡು ಈ ಅನೈತಿಕ ಮಾರಾಟವನ್ನು ತಡೆದು ಜನರ ಹಿತಸಾಧಿಸುವರೆಂದು ನಂಬಲಾಗಿದೆ.

'ನಾಡಿನವ'

ನಾಪೋಕ್ಲು ನಾಡಿನ ಏಳಿಗೆ!

ತಾ. ೨೧ರ ಜನ್ಮಭೂಮಿ ಪತ್ರಿಕೆಯಲ್ಲಿ ಈ ನಾಡಿನ ಏಳಿಗೆಯಾಗುವದೆಂತು ಎಂದು ನಾಡಿನ ಹಿತೈಷಿಯೆಂಬವರು ಬರೆದ ಲೇಖನ ಓದಿದೆನು. ಅವರು ಒಬ್ಬ ವ್ಯಕ್ತಿಯ ಹಿತೈಷಿಯಲ್ಲದೆ ನಾಡಿನ ಹಿತೈಷಿಯಲ್ಲವೆಂಬುದು ಅವರ ಲೇಖನದಿಂದ ಎಲ್ಲರಿಗೂ ಮನವರಿಕೆಯಾಗಿದೆ. ಕಪ್ಪು ಕನ್ನಡಕ ಹಾಕಿಕೊಂಡವನಿಗೆ ಲೋಕವೆಲ್ಲಾ ಕಪ್ಪಾಗಿ ತೋರುತ್ತದೆ. ಮಂತ್ರಿಗಳು ದಯಮಾಡಿಸಿದಾಗ ತಮ್ಮ ಕಷ್ಟವನ್ನು ಹೇಳಿಕೊಳ್ಳಲು ಮಸೀದಿಯ ಹತ್ತಿರ ಚಪ್ಪರ ಹಾಕಿದ್ದೇ ವಿನಾ ನಾವು ಅಂಥವರು ಇಂಥವರೆಂದು ನಿಮ್ಮಂತೆ ಹೊಗಳಿಕೊಳ್ಳಲು ಅಲ್ಲ. ನಾಡಿನ ಉತ್ತಮ ಮುಂದಾಳು ಎಂಬುದನ್ನು ನಿಮ್ಮ ಮನದಲ್ಲಿಟ್ಟುಕೊಂಡರೆ ಸಾಕು. ನಾಡಿನವರಿಗೆ ಯಾರು ಹೇಗೆ ಎಂಬುದು ತಿಳಿದಿದೆ. ನಾಡಿನ ಅಧಿಕಾರಿಗಳ ವಿಚಾರದಲ್ಲಿ ಪ್ರಕಟವಾಗಿದ್ದ ಪ್ರಸಾರಿ ಮರದ ದುರುಪಯೋಗ ಲೇಖನವೂ ಸುಳ್ಳೆಂದು ಭಾವಿಸುವಿರಾ? ಹಿತೈಷಿಗಳೇ, ನಿಮ್ಮಂಥವರಿಂದ ನಾಡಿನ ಏಳಿಗೆ ಆಗಲಾರದು. ನಾಡಿನ ಏಳಿಗೆ ನಾಡಿನವರ ದುಡಿತ ಮತ್ತು ಸರಕಾರದ ಸಹಾಯದ ಮೇಲೆ ನಿಂತಿದೆಯಲ್ಲದೆ ನಿಮ್ಮಂಥ ಹೊಗಳು ಭಟ್ಟರಿಂದಲ್ಲ. ನಿಮ್ಮಂಥವರೂ, ನಿಮ್ಮ ಆಶ್ರಯದ ಅಧಿಕಾರಿಗಳೂ ನಾಡಿನ ಏಳಿಗೆಗೆ ಅಡಚಣೆ ಎಂಬುದು ಎಲ್ಲರಿಗೂ ತಿಳಿದಿದೆ.

'ನಾಡಿನವ'

ಮೂರನೇ ಫಾರಂ ಪರೀಕ್ಷೆ.

ವಿದ್ಯಾರ್ಥಿ ಜೀವನದಲ್ಲಿ ಇರುವ ಕಂಟಕಗಳಲ್ಲಿ ಮೂರನೆ ಫಾರಂ ಬೋರ್ಡು ಪರೀಕ್ಷೆಯು ಒಂದು. ಈ ಪರೀಕ್ಷೆಗೋಸ್ಕರವಾಗಿ ಅನೇಕ ವಿದ್ಯಾರ್ಥಿಗಳು ಮೂರನೆ ಫಾರಮಿನಿಂದಲೇ ಶಾಲೆ ಬಿಡುವ ಪರಿಸ್ಥಿತಿ ಬರುತ್ತದೆ. ಇಂದಿನ ಪರಿವರ್ತನೆಯಾಗುತ್ತಿರುವ ವಿದ್ಯಾಭ್ಯಾಸದಲ್ಲಿ ಬೋರ್ಡು ಪರೀಕ್ಷೆಗಳ ಮಹತ್ವ ಕಡಿಮೆಯಾಗಬೇಕು. ಯಾವುದೋ ಶಾಲೆಯ ಅಧ್ಯಾಪಕರು ಯಾವುದೋ ಶಾಲೆಯ ವಿದ್ಯಾರ್ಥಿಯ ಪ್ರಶ್ನಾಪತ್ರವನ್ನು ಓದಿ ಬೆಲೆ ಕಟ್ಟುವದು ನಿಜ. ಆ ಕಾಗದದ ಮೇಲೆ ಆತನು ಬರೆದ ವಿಚಾರಗಳ ತುಲನೆಯಿಂದ ಸರಿಯೆಂದು ಹೇಳಬಹುದಾದರೂ ವಿದ್ಯಾರ್ಥಿಯ ಸರ್ವಾಂಗೀಣ ಉನ್ನತಿಯಿಂದ ಸಮಂಜಸವಲ್ಲ. ವಿದ್ಯಾರ್ಥಿಗಳ ಶಾಲೆಯ ವರ್ತನೆ, ನಡತೆ ಮತ್ತು ಆತನು ತೋರಿಸುವ ಅಕ್ಷರ ಜ್ಞಾನ ಇವುಗಳೆಲ್ಲವುಗಳ ಮೇಲೆ ಆತನ ಯೋಗ್ಯತೆಯನ್ನಳೆಯಬೇಕಲ್ಲದೆ ಕೇವಲ ಕಾಗದದ ಮೇಲೆ ಬಾಯಿ ಪಾಠ ಕಲಿತೋ, ಕಾಪಿ ತೆಗೆದೋ ಬರೆದ ವಿಚಾರದಿಂದ ವಿದ್ಯಾರ್ಥಿಯ ಯೋಗ್ಯತೆಯನ್ನು ಅಳೆಯುವದು ತಪ್ಪು. ಅದ್ದರಿಂದಲೇ ಇಂದಿನ ರೀತಿಯ ಕೇವಲ ಬರವಣಿಗೆಯ ಪರೀಕ್ಷೆಗಳನ್ನು ರದ್ದು ಮಾಡಬೇಕೆಂಬ ಕೂಗು ಕೇಳಿಬರುತ್ತದೆ. ನಮ್ಮ ನೆರೆ ಪ್ರಾಂತವಾದ ಮೈಸೂರು ಈ ದಾರಿಯ ಪ್ರಥಮ ಹೆಜ್ಜೆಯಾಗಿ ಮೂರನೇ ಫಾರಂ ಬೋರ್ಡು ಪರೀಕ್ಷೆಯನ್ನು ರದ್ದು ಮಾಡಿದೆಯೆಂದು ಪತ್ರಿಕೆಗಳಲ್ಲಿ ಓದಿದೆನು. ಇದು ಸೂಕ್ತವಾದುದೆಂದು ನನ್ನ ಅಭಿಪ್ರಾಯ. ಕೊಡಗು ಸರಕಾರವೂ ಕೂಡ ಈ ರೀತಿಯ ನಿರ್ಧಾರವನ್ನು ತೆಗೆದುಕೊಂಡು ಕೊಡಗಿನಲ್ಲಿ ಮೂರನೇ ಫಾರಮಿನ ಬೋರ್ಡು ಪರೀಕ್ಷಾ ಪದ್ಧತಿಯನ್ನು ವಜಾ ಮಾಡಬೇಕಾಗಿ ನನ್ನ ಸೂಚನೆಯಾಗಿದೆ.

'ವಿದ್ಯಾಭಿಮಾನಿ'

ಪಾರಾಣೆ ಶಾಲೆಯ ಕೆಲಸ ಮುಗಿಯಿತೆ?

ಪಾರಾಣೆಯಲ್ಲಿ ಒಂದು ಹೊಸ ಕಟ್ಟಡವನ್ನು ಶ್ರೀ ಅಪ್ಪನೆರವಂಡ ಮಾದಪ್ಪನವರು ಅವರ ತಂದೆಯವರ ಹೆಸರಿನಲ್ಲಿ ಕಟ್ಟಿಸಿ ಅವರ ಹೆಸರಿನಲ್ಲಿ ಕರೆಯಲಾಗುವಂತೆ ನಾಡಿನವರು ಒಪ್ಪಿ, ಸದ್ರಿ ಕೆಲಸವು ಕೆಲವು ಮಟ್ಟಿಗೆ ಬಾಕಿಯಾದುದಕ್ಕೆ ನಾಡಿನವರು ಸರಕಾರದವರನ್ನು ಕೇಳಿಕೊಂಡ ಮೇರೆ ರೂ. ೭೦೦೦ ಮಂಜೂರು ಮಾಡಿದ್ದರು. ಸದ್ರಿ ಕೆಲಸಕ್ಕೆ ಸರಿಯಾದ ಕಂಟ್ರಾಕ್ಟುದಾರರು ದೊರೆಯದೆ ನಾಡಿನವರು ಕಟ್ಟಡದ ಕೆಲಸ ಮಾಡಿಸಲು ಒಂದು ಸಮಿತಿಯನ್ನು ಆರಿಸಿದರು. ಈ ಸಮಿತಿಯ ಅಧ್ಯಕ್ಷರು ತಮ್ಮ ಅಧೀನದಲ್ಲಿರುವ ಪಳ್ಳಿಯೆಂಬವನಿಗೆ ಕೆಲಸ ಕೊಟ್ಟುಕೊಡುವ ನಾದರೆ ತಾನೇ ಜವಾಬ್ದಾರಿಕೆಯಿಂದ ಕೆಲಸ ನಡೆಸಿಕೊಡುತ್ತೇನೆಯಾಗಿಯೂ ಆದರೆ ಮುಂಗಡ ರೂ. ೩೦೦೦ ನಾಡಿನವರು ಕೊಡಬೇಕೆಂದೂ ಒಪ್ಪಿದ್ದರಿಂದ ಸಮಿತಿಯವರು ಬ್ಯಾಂಕಿಗೆ ಸಾಲ ತೆಗೆದು ಅಧ್ಯಕ್ಷರ ಪತ್ರದ ಮೇರೆ ಮುಂಗಡವಾಗಿ ಹಣ ಕೊಟ್ಟರು. ತರ್‍ವಾ ಬಂದರೂ ಶಾಲೆ ಕೆಲಸ ಸಮಯಕ್ಕೆ ಸರಿಯಾಗಿ ಆಗಲು ಕಷ್ಟವಾಯಿತು. ಅದರೆ ಕಟ್ಟಡದ ಕೆಲಸ ಆಗಿದೆಯೆಂದು ಸರ್ಟಿಫೈ ಮಾಡಿಸಿ ಮಂಜೂರಾದ ಹಣವನ್ನು ತೆರಲು ಸದ್ರಿಯವರಿಗೇನೇ ಅಧಿಕಾರ ಕೊಡಲಾಯಿತು. ಅವರು ರೂ. ೭೦೦೦ ವನ್ನು ಹೊಂದಿಕೊಂಡು ಕೆಲಸದವನಿಗೆ ರೂ. ೩೦೦೦ ಕೊಟ್ಟು ರೂ. ೭೦೦ ಕೆಲಸದ

|| ಕೊಡಗಿನ ಭವಿಷ್ಯ ||

ಕಳೆದ ಮಹಾ ಚುನಾವಣೆಯ ಕಾಲಕ್ಕೆ ಮತ್ತು ಅದಕ್ಕಿಂತ ಹಿಂದೆ ಕೊಡಗಿನ ಭವಿಷ್ಯವು ಪ್ರತಿಯೊಬ್ಬ ಕೊಡಗು ನಿವಾಸಿಯ ಹೃದಯವನ್ನು ಹೊಕ್ಕು ಮನಸ್ಸನ್ನು ಕದಲಿಸಿತ್ತು. ಆದರೆ ಆ ಸಮಯದಲ್ಲಿ ಈ ಅತಿ ಮುಖ್ಯ ವಿಷಯವನ್ನು ಯಾವನೊಬ್ಬನು ನಿರ್ವಿಕಾರತೆಯಿಂದ ಕೂಲಂಕುಶವಾಗಿ ವಿವೇಚಿಸಲು ಸಾಧ್ಯವಿರಲಿಲ್ಲವೆಂದು ಹೇಳಬೇಕು. ಕೇವಲ ರಾಜಕೀಯ ವಿರೋಧ ಪಕ್ಷಗಳ ಪರಸ್ಪರ ಸ್ಪರ್ಧೆಯಲ್ಲಿ ಬೆಳೆದ ಈ ಮಹತ್ವದ ಪ್ರಶ್ನೆಯು ನಿಷ್ಪಕ್ಷ ದೇಶದ ಹಾಗೂ ಜನರ ಹಿತದೃಷ್ಟಿಯನ್ನು ಕಾಪಾಡುವ ಯಾವ ಇತ್ಯರ್ಥಕ್ಕೂ ಬರಲು ಎಡೆ ಇರಲಿಲ್ಲ. ದೈವವಶಾತ್ ನಮ್ಮೆಲ್ಲರ ಪುಣ್ಯಕ್ಕೂ ಮತ್ತು ದೇಶದ ಹಿತಕ್ಕೂ ಈ ಮಹಾ ಪ್ರಶ್ನೆಯು ಅಂದಿನ ಕಲಕಿನ ವಾತಾವರಣದಲ್ಲಿ ತೀರ್ಮಾನಿಸಲ್ಪಡದೆ ಇದ್ದುದು ಉತ್ತಮವೆಂದೇ ತಿಳಿಯಬೇಕು.

ಭಾಷಾವಾರು ಪ್ರಾಂತ ರಚನೆಯ ಕೂಗು ಹಿಂದೂಸ್ಥಾನದಲ್ಲಿ ಎಲ್ಲೆಡೆಯಿಂದಲೂ ಗುಡುಗಿನ ರೀತಿ ಕೇಳಿ ಬರಲು ಪ್ರಾರಂಭಿಸಿದಂದಿನಿಂದಲೇ ದೇಶದ ಹಿತದೃಷ್ಟಿಯುಳ್ಳ ಪ್ರತಿಯೊಬ್ಬ ವ್ಯಕ್ತಿಯೂ ತಮ್ಮ ದೇಶದ ಹಾಗೂ ತಮ್ಮ ಜನಾಂಗದ ಮುಂದಿನ ರೂಪರೇಷೆಯೇನೆಂದು ನಾನಾ ವಿಧದಲ್ಲಿ ಯೋಚಿಸುತ್ತಿದ್ದರು. ಕೆಲವು ರಾಜಕಾರಣಿಗಳು ತಮ್ಮ ಅಭಿಪ್ರಾಯವನ್ನು ಬಹಿರಂಗವಾಗಿ ಹೊರಪಡಿಸುತಿದ್ದರೆ ಮತ್ತನೇಕ ದೇಶ ಹಿತೈಷಿಗಳು ತಮ್ಮ ರಾಜಕೀಯ ಪಕ್ಷದ ಗುರಿಯಿಂದ ತಮ್ಮ ಮನಸ್ಸಿನಲ್ಲಿಯೇ ಈ ವಿಚಾರವನ್ನು ತುಲನೆ ಮಾಡುತ್ತಿದ್ದರು. ಇವರನ್ನು ಬಿಟ್ಟರೆ ಉಳಿದ ಸಾವಿರಾರು ಜನರು, ವ್ಯವಸಾಯಗಾರರು ವ್ಯಾಪಾರಸ್ಥರು, ಉದ್ಯೋಗಿಗಳು, ವಿದ್ಯಾರ್ಥಿಗಳು ಮತ್ತು ದೇಶಕಾಂಕ್ಷೆಯುಳ್ಳ ಸಾವಿರಾರು ಮಹಿಳೆಯರು ಅನೇಕ ವರ್ಷಗಳಿಂದ ತಮ್ಮ ದೇಶದ ಹಾಗೂ ತಮ್ಮ ಮುಂದಿನ ಪೀಳಿಗೆಯ ಭವಿಷ್ಯದ ನಿರ್ಧಾರಕ್ಕೆ ಬರಬೇಕೆಂದು ತಮಗೆ ಒಪ್ಪುವ ರೀತಿಯಿಂದ ಮನಮುಟ್ಟಿ ನೆನಸಿದ್ದಾರೆ ಮತ್ತು ಯುಕ್ತ ತೋರಿದಂತೆ ವರ್ತಿಸಿದ್ದಾರೆ.

ಈ ಪ್ರಶ್ನೆಯು ಮತ್ತೊಮ್ಮೆ ಕೂಡಲೇ ರಾಜಕೀಯ ಮುಂದಾಳುಗಳ ಹಾಗೂ ಮಹಾ ಜನತೆಯ ಮುಂದೆ ನಾವು ಕಲ್ಪಿಸಿದಕ್ಕಿಂತ ಒಡನೆಯೇ ಬರುತ್ತಿದೆ. ಆಂಧ್ರ ರಾಜ್ಯ ನಿರ್ಮಾಣವು ಭಾಷಾವಾರು ಪ್ರಾಂತರಚನೆಯ ಮೇಲೆ ಮೊನ್ನೆಯಾಗಿ ಕೇಂದ್ರ ಸರಕಾರದ ಒಪ್ಪಿಗೆಯಿಂದ ನೆರವೇರಿತು. 'ವಿಶಾಲಾಂಧ್ರ, ಕರ್ನಾಟಕ ಏಕೀಕರಣ, ಐಕ್ಯಕೇರಳ, ಸಂಯುಕ್ತ ಮಹಾರಾಷ್ಟ್ರ ಮೊದಲಾದ ಹೊಸ ಪ್ರಾಂತಗಳ ಕೂಗು ಅತೀ ತೀಕ್ಷ್ಣ ಕಂಠದಿಂದ ಹೊರಟಿರುವುದು ಎಲ್ಲರಿಗೂ ತಿಳಿದುದೆ. ಕೇಂದ್ರ ಸರಕಾರವು ತಮ್ಮ ಯೋಜನೆಗಳನ್ನು ಸಮರ್ಪಗೊಳಿಸಬೇಕಾದರೆ, ದೇಶದಲ್ಲಿ ಭದ್ರತೆಯ ಸರಕಾರ ಸ್ಥಾಪಿಸಲ್ಪಡಬೇಕಾದರೆ, ಜನರಲ್ಲಿ ಶಾಂತಿ ಸುಖ, ನೆಮ್ಮದಿ ಉಂಟಾಗಬೇಕಾದರೆ, ಮೊದಲು ಈ ಪ್ರಾಂತರಚನೆಯನ್ನು ಸಮರ್ಪಕವಾಗಿ ವಿವೇಚಿಸುವುದಲ್ಲದೆ, ತಕ್ಕಂತೆ ಪ್ರಾಂತಗಳ ಮಾರ್ಪಾಡಾಗಬೇಕೆಂದು ಈಗಾಗಲೇ ನಿರ್ಧರಿಸಿದ್ದಾರೆ. ಅತ್ಯಂತ ಜಟಿಲವಾದ ಈ ಪ್ರಶ್ನೆಯನ್ನು ಬಿಡಿಸಲು ಮತ್ತು ಕೇಂದ್ರ ಸರಕಾರಕ್ಕೆ ಹೊಸ ಪ್ರಾಂತ ನಿರ್ಮಾಣದ ಅವಶ್ಯಕತೆಯ ಬಗ್ಗೆ ಶಿಫಾರಸ್ಸು ಮಾಡಲು ಅತ್ಯುಚ್ಚ ಜವಾಬ್ದಾರಿ ಕೂಟ (High Power Commission) ವನ್ನು ಕೂಡಲೇ ಏರ್ಪಡಿಸುವದಿದೆ. ಈ ಕಮಿಷನ್ ತಮ್ಮ ಮುಂದೆ ಇಟ್ಟಿರುವ ಪ್ರಶ್ನೆಯ ಸಂಬಂಧ ಅಭಿಪ್ರಾಯ ವ್ಯಕ್ತಪಡಿಸಬಯಸುವವರನ್ನೆಲ್ಲಾ ನಾನಾ ವಿಧದಿಂದ ವಿಚಾರಿಸುತ್ತದೆ. ಜನ ಮುಂದಾಳುಗಳಿಗೆ, ಗಣ್ಯ ವ್ಯಕ್ತಿಗಳಿಗೆ ಹಾಗೂ ಜನಸಾಮಾನ್ಯರಿಗೆ ತಮ್ಮ ಮನವಿಗಳ ಮೂಲಕವಾಗಲೀ ತಮ್ಮ ಸ್ವಂತ ಹಾಜರಿಯಿಂದಾಗಲೀ ಇನ್ನನೇಕ ಶಾಂತರೀತಿಗಳಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಅನುಕೂಲತೆ ಸಂಪೂರ್ಣ ದೊರೆಯುವುದು. ಆ ಕಾಲಕ್ಕೆ ಜನಸಂಘಟನೆಯಿಂದ ಮೆರವಣಿಗೆ, ಗೂಂಡಾಗಿರಿ ಮತ್ತೆ ಇತರ ರೀತಿಯಿಂದ ತಮ್ಮ ಅಭಿಮತವನ್ನು ಬಲಾತ್ಕಾರ ರೂಪಗಳಿಂದ ಪ್ರದರ್ಶಿಸಲು ಎಡೆ ಸಿಗಲಾರದು, ಮಾತ್ರವಲ್ಲದೆ ಮಹಾ ಜನರು ಮತ್ತು ಮುಖಂಡರು ಅಂತ ಅಡ್ಡ ದಾರಿಗೆ ಇಳಿಯುವುದು ಯಾವ ದೃಷ್ಟಿಯಿಂದಲೂ ಯೋಗ್ಯವಲ್ಲ. ಕೇವಲ ಶಾಂತ ವಾತಾವರಣದಲ್ಲೇ ದೇಶದ ಭವಿಷ್ಯದಂತಹ ಮಹಾ ಪ್ರಶ್ನೆಯನ್ನು ಸಮತುಲನೆ ಮತ್ತು ವಿಮರ್ಶಾತ್ಮಕ ರೀತಿಯಿಂದ ಬಿಡಿಸಲು ಸಾಧ್ಯವೆಂದು ಪ್ರತಿಯೊಬ್ಬ ಜವಾಬ್ದಾರ ನಾಗರಿಕನು ತಿಳಿದು, ಯೋಗ್ಯ ರೀತಿಯಿಂದ ವರ್ತಿಸುವುದು ದೇಶದ ಹಾಗೂ ಜನಾಂಗದ ಹಿತದೃಷ್ಟಿಯಿಂದ ಅತ್ಯವಶ್ಯ.

ಇಂತಹ ಒಂದು ಪ್ರಶ್ನೆ ದೇಶದ ಜನರ ಮುಂದೆ ಒಡನೆಯೇ ಬರುವದಿದೆ ಎಂದಾಗ ಇಂದಿನ ದೇಶದ ಪರಿಸ್ಥಿತಿ ಈ ಪ್ರಶ್ನೆಗೆ ಯಾವ ರೀತಿಯ ಉತ್ತರವನ್ನೀಯುವುದು ಎಂದು ಸ್ವಲ್ಪ ವಿವೇಚಿಸುವ. ನಮ್ಮಲ್ಲಿ ಹಾಗೂ ಹಿಂದೂದೇಶದ ಎಲ್ಲೆಡೆಯಲ್ಲೂ ಪ್ರಜಾಪ್ರಭುತ್ವವು ನೆಲಸಿ ಈಗಾಗಲೇ ಬೇರೂರಲಿಕ್ಕೆ ಪ್ರಾರಂಭಿಸಿರುವುದರಿಂದ ಜಾತೀಯತೆ ಮತ್ತು ಕೋಮುವಾರು ಭಾವನೆಯನ್ನು ಪ್ರತಿಯೊಬ್ಬನೂ ತಮ್ಮದೆ ಜಾತಿಯ ಹಿತ ಹಾಗೂ ಸರ್ವ ಜನರ ಹಿತದೃಷ್ಟಿಯಿಂದ ಆದಷ್ಟು ಬೇಗನೆ ಮರೆಯುವುದು ಅತ್ಯವಶ್ಯ. ಕೇವಲ ರಾಜ್ಯಭಾರವನ್ನು ದಕ್ಷತೆಯಿಂದ ಸರ್ವ ಜನರ ಹಿತದೃಷ್ಟಿಯಿಂದ ಸಾಗಿಸುವವನೇ ಮುಂದಕ್ಕೆ ನ್ಯಾಯಶಾಸನ ಸಭೆಗೆ ಅಥವ ಮಂತ್ರಿ ಪದವಿಗೆ ಯೋಗ್ಯನಾಗುವನೆಂದು ಜನಸಾಮಾನ್ಯರು ತಮ್ಮ ಓಟಿನ ಬಲದಿಂದ ತೀರ್ಮಾನಿಸುವ ಹಕ್ಕು ಪಡೆದಿದ್ದಾರೆ. ಜಾತಿ ಬೇಧದ ಮಂತ್ರವು ಕೆಲವು ಸಮಯದ ವರೆಗೆ ಸ್ವಾರ್ಥ ಸಾಧನೆಗೆ ಜನರನ್ನು ಮೋಸಗೊಳಿಸುವ ಸಾಧನವಾಗಬಹುದು. ಆದರೆ ಜನಸಾಮಾನ್ಯರು ತಮ್ಮ ಕರ್ತವ್ಯ, ತಪ್ಪ ಹಕ್ಕು, ಯೋಗ್ಯ ಮತ್ತು ನಿಷ್ಪಕ್ಷವಾದ ಸರಕಾರವನ್ನು ಸ್ಥಾಪಿಸಿಕೊಳ್ಳುವ ಅವಶ್ಯಕತೆಯನ್ನು ಒಡನೆಯೇ ತಿಳಿಯಬಲ್ಲರು ಆದ್ದರಿಂದ ಮುಂದೆ ಮಾಯವಾಗಲಿರುವ ಜಾತೀಯ ಪ್ರಶ್ನೆಯನ್ನು ಇಂದು ಅನಾವಶ್ಯಕಭೂತವನ್ನಾಗಿ ಮಾಡಿ, ಜನರನ್ನು ಮಂಕುಗೊಳಿಸಿ ದೇಶದ ಹಾಗೂ ದೇಶನಿವಾಸಿಗಳ ಭಾವೀ ಸುರಕ್ಷತೆಯನ್ನು ಸೂರೆಗೊಳ್ಳಲು ಯಾವನೂ ಯತ್ನಿಸದಿರಲಿ.

ಈಗ ಸುಮಾರು ಎರಡು ವರ್ಷಗಳಿಂದ ಜನರಿಂದ ಆರಿಸಲ್ಪಟ್ಟ ಮುಂದಾಳುಗಳು ನ್ಯಾಯಾಂಗದ ಸದಸ್ಯರಾಗಿರುವರಲ್ಲದೆ ತಮ್ಮ ಮೆಚ್ಚಿಗೆಯ ಗಣ್ಯವ್ಯಕ್ತಿಗಳಿಂದ ಪ್ರಜಾ ಸರಕಾರವನ್ನೂ ಸ್ಥಾಪಿಸಿಕೊಂಡಿರುವರು. ಕೊಡಗು ಕೇವಲ ಚಿಕ್ಕದಿರುವುದೇ ಅದರ ವೈಶಿಷ್ಟ್ಯವೆಂದು ನಮ್ಮ ದೇಶದ ಹಿತಬಯಸುವ ಕೇಂದ್ರ ಸರಕಾರದ ಮತ್ತು ಇನ್ನನೇಕ ಜವಾಬ್ದಾರಿ ವ್ಯಕ್ತಿಗಳು ಎತ್ತಿ ಹೇಳುತ್ತಾರೆ. ಗಾಂಧೀಜಿಯವರ ವಿಕೇಂದ್ರಿತ ಸರಕಾರ ಹಿಂದೂದೇಶದಲ್ಲಿ ಸಾಧ್ಯವಿದೆ ಎಂದರೆ ಅದು ನಮ್ಮ ಪುಟ್ಟ ಕೊಡಗು ದೇಶದಲ್ಲಿ ಎಂದು ಎಲ್ಲರೂ ಒಪ್ಪುತ್ತಾರೆ. ವಾಸ್ತವವಾಗಿ ಈ ಸ್ವಲ್ಪ ಸಮಯದಲ್ಲಿ ಜನಸಾಮಾನ್ಯರು ತಮ್ಮದೇ ಸರಕಾರದಿಂದ ಎಷ್ಟು ಸವಲತ್ತು ಮತ್ತು ಕೆಲಸ ಕಾರುಬಾರುಗಳಲ್ಲಿ ಅನುಕೂಲತೆ ಇರುವುದೆಂದು ತಿಳಿದಿದ್ದಾರೆ. ಸಣ್ಣ ದೇಶವಾದುದರಿಂದ ಪ್ರತಿಯೊಬ್ಬ ನಾಗರಿಕನಿಗೂ ಸರಕಾರದಲ್ಲಿ ತನ್ನ ಕರ್ತವ್ಯವನ್ನು ಹುರುಪಿನಿಂದಲೂ ಮತ್ತು ಪ್ರಯೋಜನಕಾರಿಯಾಗಿಯೂ ಸಲ್ಲಿಸಲು ಸಾಧ್ಯವಿದೆ. ನಮ್ಮ ದೇಶದ ಪ್ರತಿಯೊಬ್ಬನಿಗೂ ದೇಶದ ಮಂತ್ರಿಗಳನ್ನಲ್ಲದೆ ಸಭಾಸದರೆಲ್ಲರ ಒಳಪರಿಚಯವನ್ನು ಸಹ ಗೊತ್ತುಮಾಡಿಕೊಳ್ಳುವ ಸಾಧ್ಯತೆ ಇದೆ. ಇಂಥಾ ಸಾಧ್ಯತೆ ಮತ್ತೆಲ್ಲೂ ಸಾಧ್ಯವಿಲ್ಲ. ಪ್ರತಿಯೊಬ್ಬನಿಗೂ ದಾಕ್ಷಿಣ್ಯ ತೋರಿಸುವುದು ಎಷ್ಟು ಕಷ್ಟವೆಂದು ಹೇಳಬೇಕಿಲ್ಲ. ಆದರಲ್ಲೂ ಒಬ್ಬನ ಆಶೆಯು ಮತ್ತೊಬ್ಬನ ನಿರ್ಮೂಲವೆಂದ ಮೇಲೆ ಅಲ್ಲಲ್ಲಿ ಸ್ವಲ್ಪ ಮಟ್ಟಿಗೆ ವಂಚನೆಗೆ ಕಾರಣವಿರುತ್ತದೆ. ಆದರೂ ಸಣ್ಣ ದೇಶವಾದ್ದರಿಂದ ಮತ್ತು ರಾಜ್ಯಭಾರ ಹೊತ್ತವರ ಮತ್ತು ಜನಮುಂದಾಳುಗಳ ಪೂರ್ಣ ಪರಿಚಯವು ಸರ್ವರಿಗೂ ಇರುವದರಿಂದ ತಮ್ಮ ಕಷ್ಟ ಸುಖಗಳನ್ನು ನಿರ್ವಂಚನೆಯಿಂದ ಯಾವ ಭೀತಿಯೂ ಇಲ್ಲದೆ ಅವರ ಮುಂದಿಟ್ಟು ಅವರಿಗೆ ತಮ್ಮ ಬೇಡಿಕೆಗಳನ್ನು ಮನವಟ್ಟು ಮಾಡಿಸುವ ಅವಕಾಶ ಇಂದು ಕೇವಲ ಕೊಡಗಿನ ಪ್ರಜೆಗಳಿಗೆ ಸಿಕ್ಕಿದಷ್ಟು ಪರಿಮಾಣದಲ್ಲಿ ಬೇರೆ ಯಾವ ಪ್ರಾಂತದಲ್ಲೂ ಇಲ್ಲವೆಂದೇ ಹೇಳಬೇಕಾಗಿದೆ. ಒಂದು ವೇಳೆ ಕೊಡಗು ನಿವಾಸಿಗಳು ತಮ್ಮ ಪ್ರತ್ಯೇಕತೆಯನ್ನು ಕಳಕೊಳ್ಳಲು ತೀರ್ಮಾನಿಸಿದರೆ, ತಮ್ಮ ಮುಂದಿನ ಸರಕಾರ ಅಗೋಚರವಾಗುವಷ್ಟು ದೂರವಿರುವದಲ್ಲದೆ ಅಂತಹ ಸರಕಾರದಲ್ಲಿ ಸಾಮಾನ್ಯಪ್ರಜೆಗೆ ಸಹಕರಿಸಿ ನಡೆದುಕೊಂಡು ನಾಗರಿಕ ಕರ್ತವ್ಯವನ್ನು ಸಲ್ಲಿಸುವದು ಅಸಾಧ್ಯವಾಗುವುದು. ನಮ್ಮ ಪ್ರತಿನಿಧಿಗಳ ಸಂಖ್ಯೆಯೂ ತೀರಾ ಕಡಿಮೆಯಾಗುವುದಲ್ಲದೆ ನಮ್ಮ ಕಷ್ಟ ಸುಖ, ನಮ್ಮ ಜೀವನ ಪಾರಂಪರ್ಯವನ್ನು ತಿಳಿಯದ ವ್ಯಕ್ತಿತ್ವ ನಮ್ಮ ಮೇಲೆ ಸರಕಾರ ನಡೆಸುವಲ್ಲಿ ಅವರು ಎಷ್ಟು ಸುಸ್ವಭಾವಿಗಳಾದರೂ ಕೊಡಗಿನ ಜನತೆಗೆ ಪೂರ್ಣ ನ್ಯಾಯ ಹಾಗೂ ಸಮಂಜಸ ಪರಿಣಾಮಗಳು ದೊರಕವು ಎಂಬುದನ್ನು ಎಲ್ಲರೂ ತಿಳಿಯಬೇಕು.

ಆರ್ಥಿಕ ದೃಷ್ಟಿಯಿಂದಲೂ ಸಹ ನಮ್ಮ ಸರಕಾರವು ಮಹಾ ವಿಪತ್ತಿಗೆ ತುತ್ತಾಗಿಲ್ಲವೆಂದು ಕೇಂದ್ರದ ಮಾನ್ಯ ಗೃಹ ಮಂತ್ರಿಯವರೇ ಮೊನ್ನೆ ಅಕ್ಕರೆಯಿಂದ ಹೇಳಿ ಹೆಮ್ಮೆಪಡಿಸಿರುವರು. ನಮ್ಮ ಸರಕಾರದ ಹಣದ ಬೇಡಿಕೆಗಳು ವಿಶಾಲವಾದವುಗಳಲ್ಲ. ನಮ್ಮಲ್ಲಿ ನಿರಾಶ್ರಿತ, ಕಾರ್ಖಾನೆ ಕೆಲಸಗಾರರ, ದೊಡ್ಡ ನಗರಗಳಲ್ಲಿ ಬಂದು ನೆಲಸಿದ ಅಸಂಖ್ಯಾತ ನಿವಾಸಿಗಳ ಮತ್ತು ಅಥವಾ ಉದ್ಯೋಗವಿಲ್ಲದ ಮಿಲಿಯಾಂತರ ಜನರ ಪ್ರಶ್ನೆ ಇಲ್ಲ. ಇದು ನಮ್ಮ ಭಾಗ್ಯವೇ. ಬದಲು ವಿಪುಲ ನೈಸರ್ಗಿಕ ಸಂಪತ್ತು, ಉತ್ತಮ ಮಣ್ಣು, ವ್ಯವಸಾಯರಾಗಿ ಶ್ರಮಿಸುವ ಜನತೆ ಮತ್ತು ಅಂದಚೆಂದದಿಂದ ತುಂಬಿ ತುಳುಕುವ ನಮ್ಮ ಬೆಟ್ಟ ಗುಡ್ಡಗಳ ನಾಡು ನಮ್ಮ ಅಪಾರ ಸಂಪತ್ತು ಎಂದು ಪ್ರತಿಯೊಬ್ಬ ನಿವಾಸಿ ತಿಳಿದು ಹೆಮ್ಮೆ ಪಡತಕ್ಕದ್ದು. ಹಿಂದೂದೇಶದಲ್ಲಿ ಪ್ರಜಾ ಸರಕಾರವು ಎಲ್ಲೆಡೆಯಲ್ಲೂ ಸ್ಥಾಪಿಸಲ್ಪಟ್ಟು ಮುಂದಕ್ಕೂ ಅದು ಬೆಳೆಯಲು ಮತ್ತು ಕೇಂದ್ರ ಸರಕಾರದ ಹಿರಿಮೆ ಪಂಜಾಬದಿಂದ ಅಸ್ಸಾಂ ವರೆಗೆ, ಕಾಶ್ಮೀರದಿಂದ ದಕ್ಷಿಣದಲ್ಲಿ ಕನ್ಯಾಕುಮಾರಿಯ ವರೆಗೆ ಮುಟ್ಟಲು ಕೊಡಗಿನಂಥಾ ಪುಟ್ಟ ದೇಶವು ಸಹ ಇತರ ಕೆಲವು ಪ್ರಾಂತಗಳೊಡನೆ ಪ್ರತ್ಯೇಕ ಉಳಿಯುವದು ಅವಶ್ಯವೆಂದು ದೇಶದ ಗಣ್ಯ ವ್ಯಕ್ತಿಗಳು ಮನಗಂಡಿದ್ದಾರೆ. ಆದ್ದರಿಂದ ಈ ವಿಚಾರ ಪ್ರತಿಯೊಬ್ಬನೂ ಶಾಂತರೀತಿಯಿಂದ ಆಲೋಚಿಸುವ ಸಮಯ ಸನ್ನಿಹಿತವಾಗಿದೆ.

ದೇಶದ ಹಿತಚಿಂತಕ.

ಮೇಲೆ ನಷ್ಟ ಬಂತೆಂದು ಹೇಳಿ ನಾಡಿನವರಿಂದ ಸಾಲ ಪಡೆದ ರೂ. ೩೦೦೦ ಗಳಲ್ಲಿ ರೂ. ೨೪೦೦ ಮಾತ್ರ ಕೊಟ್ಟಿರುವರು. ಆದರಲ್ಲೂ ಬಡ್ಡಿಗೆ ಒಪ್ಪಿ ತೆಗೆದು ಕೊಂಡ ಹಣದಲ್ಲಿ ಅಸಲಿನಿಂದ ಬಿಡಬೇಕಾಗಿ ಬಂತು. ಕೆಲಸ ಆಗುವ ಮೊದಲೇ ರೂ. ೬೦೦೦ ದ ಕೆಲಸಕ್ಕೆ ರೂ. ೬೦೦ ನಷ್ಟ ಭರ್ತಿ ಮಾಡಿಕೊಂಡು ಕಂಟ್ರಾಕ್ಟುದಾರನಿಗೆ ಉಳಿದ ಕೆಲಸ ಮಾಡಬೇಡವೆಂದು ಪತ್ರ ಬರೆದುದಾಗಿದೆಯೆಂದು ವರ್ತಮಾನವಿದೆ ಈ ರೀತಿ ಮಾಡಿದ ಪಕ್ಷ ಶಾಲಾ ಅಧ್ಯಕ್ಷರಾಗಿ ಇರುವ ಇವರ ನೀತಿ ಸರಿಯೆ? ಸರಕಾರದವರು ಮತ್ತು ನಾಡಿನವರು ಕೆಲಸ ಪೂರ್ತಿಯಾಗದೆ ಸರಕಾರದ ರೂ. ೬೦೦೦ ನಾಡಿನವರ ರೂ ೬೦೦ ಗಳನ್ನು ಹೇಗೆ ಕೊಟ್ಟರೋ ತಿಳಿಯದು ಅಲ್ಪ ತಪ್ಪಿದ್ದರೂ ಕಟ್ಟಡಕ್ಕೆ ಹಣ ಕೊಡದ ಸರಕಾರವು ಕೆಲಸವಾಗದಿದ್ದರೂ ಇವರಿಗೆ ಹಣಕೊಡಲು ಕಾರಣವೇನು? ಬೇರೆಯವರಿಗಾಗಿದ್ದರೆ ಅವರ ಹಣಕ್ಕೆ ಸರಕಾರ ಮುಟ್ಟುಗೋಲು ಹಾಕುತ್ತಿದ್ದರು. ಇವರನ್ನು ಈ ನಾಡಿನಲ್ಲಿ ಎಲ್ಲ ಕೆಲಸಕ್ಕೂ ಮುಂದಾಳಾಗಿ ನೇಮಿಸುತ್ತಿದ್ದಾರೆ. ಏಕೆಂದರೆ ಕೆಲಸ ಆಗದಿದ್ದರೂ ಸರಕಾರದ ಹಣ ಬೇಗನೆ ದೊರೆಯುತ್ತೆ ಎಂಬ ಭಾವನೆಯಿಂದ! ಇನ್ನಾದರೂ ಶಾಲೆಯ ಬಾಕಿಯಾದ ಕೆಲಸವನ್ನು ಸರಕಾರದವರು, ಸಮಿತಿಯವರು ಸೇರಿ ಒಡನೇ ಅವರಿಂದ ಮಾಡಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಜಂ ದುಹಣದಿಂದ ನಷ್ಟ ಪಟ್ಟವ.



ನರಿಯು ಆನೆಯನ್ನು ತಿಂದ ಕಥೆ.

ಒಂದು ಕಾಡಿನಲ್ಲಿ ಅತಿ ಚುರುಕು ಎಂಬ ನರಿ ಇದ್ದಿತು. ಅದು ಒಂದು ದಿನ ಕಾಡಿನಲ್ಲಿ ಸತ್ತುಬಿದ್ದ ಆನೆಯೊಂದನ್ನು ಕಂಡಿತು. ಆನೆಯು ಸತ್ತು ಬಿದ್ದಿದ್ದರೂ ಅದರ ಚರ್ಮವು ಬಹಳ ಗಟ್ಟಿಯಾಗಿದ್ದರಿಂದ ನರಿಗೆ ಆನೆಯ ಮಾಂಸ ತಿನ್ನುವದು ಅಸಾಧ್ಯವಾಗಿತ್ತು. ಆ ಸಮಯದಲ್ಲಿ ಅಲ್ಲಿಲ್ಲಿ ಸುತ್ತಾಡುತ್ತಾ ಆ ಪ್ರದೇಶಕ್ಕೆ ಒಂದು ಸಿಂಹವು ಬಂದಿತು. ಅದನ್ನು ಕಂಡ ನರಿಯು ವಿನಯದಿಂದ, 'ಓ ಮೃಗರಾಜ, ನಾನೊಬ್ಬ ಸೇವಕ. ಈ ಆನೆಯನ್ನು ಮೃಗರಾಜನಾದ ನಿನ್ನ ಸಂತೋಷಕ್ಕಾಗಿ ಕಾಯುತ್ತಿರುವೆನು. ಈ ಆನೆಯನ್ನು ತಾವು ತಿನ್ನಬಹುದು' ಎಂದಿತು.

ಆಗ ಸಿಂಹವು, 'ಎಲ್ಲೈ ಒಕ್ಕಲಿಗನೇ, ಯಾವುದೇ ಕಾಲಕ್ಕೆ ನಾನು ಇನ್ನೊಬ್ಬರು ಕೊಂದ ಪ್ರಾಣಿಯನ್ನು ತಿನ್ನುವವನಲ್ಲ. ಈ ಆನೆಯು ನಿನ್ನದು. ನೀನು ಬೇಕಾದಷ್ಟು ತಿನ್ನಬಹುದು' ಎಂದಿತು. ಆಗ ನರಿಯು ಸಂತೋಷದಿಂದ, 'ಮಹಾಪ್ರಭು, ನಿಮ್ಮ ಘನತೆಗೆ ತಕ್ಕುದಾದ ವರ್ತನೆ ಇದು' ಎಂದು ನಮಸ್ಕರಿಸಿತು.

ಸಿಂಹವು ಹೊರಟು ಹೋದ ನಂತರ ಹುಲಿಯೊಂದು ಅಲ್ಲಿಗಾಗಿ ಬಂದಿತು. ಆಗ ನರಿಯು, ಒಬ್ಬ ತಿಳಿಗೇಡಿಯನ್ನು ಇಟ್ಟಿದ ವಿನಯ, ವಿನಯ ಪ್ರಾರ್ಥಕನನ್ನು ಮಾಡಿ ಕಳುಹಿಸಿದೆ. ಅದರೆ ಈಗ ಬಂದಿರುವ ಈ ಹುಲಿಯನ್ನೇನು ಮಾಡಲಿ. ಈತನು ನಿಜವಾಗಿಯೂ ವೀರನು. ಆದ್ದರಿಂದ ವೀರರನ್ನು ಹೊಗಳುವಿಕೆಯಿಂದ ಬಗ್ಗಿಸಲಾಗದು. ಹೊಗಳಿಕೆಗೆ ಬಗ್ಗದವರನ್ನು ಚತುರತೆಯಿಂದ ಬಗ್ಗಿಸಬೇಕು. ಏಕೆಂದರೆ ಮುತ್ತು ಎಷ್ಟೇ ಗಟ್ಟಿಯಾಗಿಯೂ, ನಯವಾಗಿಯೂ ಇದ್ದರೂ ಅದರೊಳಗೆ ತೂತೊಂದು ಮಾಡಿದರೆ ಸಾಧಾರಣ ನೂಲು ಅದನ್ನು ಹಿಡಿದಿಡಬಲ್ಲುದು.

ಹೀಗೆ ಯೋಚಿಸಿ ಅದು ಹುಲಿಯ ಹತ್ತಿರ ಹೋಗಿ ಸ್ವಲ್ಪ ಗಾಬರಿ ಕಂಠದಿಂದ ಹೇಳಿತು, 'ಅಯ್ಯೋ, ನೀವೇಕೆ ಸಾವಿನ ದವಡೆಗೆ ಬೀಳಲು ಹೊರಟಿರುವಿರಿ. ಈ ಆನೆಯನ್ನು ಸಿಂಹವೊಂದು ಕೊಂದು ಹಾಕಿ ನನ್ನನ್ನು ಕಾವಲಿಗೆ ಇಟ್ಟು, ನದಿಗೆ ಸ್ನಾನ ಮಾಡಲು ಹೋಗಿದೆ. ಸ್ನಾನಕ್ಕೆ ಹೊರಡುವ ಮುನ್ನ ಹೀಗೆ ಹೇಳಿದೆ. 'ಯಾವುದಾದರು ಹುಲಿಯು ಈ ಮಾರ್ಗವಾಗಿ ಬಂದರೆ ಕೂಡಲೆ ಬಂದು ನನಗೆ ತಿಳಿಸು. ಈ ಕಾಡಿನಲ್ಲಿ ಹುಲಿಗಳೇ ಇಲ್ಲದಂತೆ ಮಾಡಬೇಕಿದೆ. ಏಕೆಂದರೆ ಒಮ್ಮೆ ನಾನು ಒಂದು ಆನೆಯನ್ನು ಕೊಂದು ಬೇರಡೆ ಹೋಗಿದ್ದಾಗ ಹುಲಿಯೊಂದು ಬಂದು ಅದನ್ನು ತಿಂದು ನಾನು ಉಳಿದುದನ್ನು ತಿನ್ನುವಂತೆ ಮಾಡಿತು. ಅಂದಿನಿಂದ ಹುಲಿಗಳ ಹತ್ಯೆಮಾಡುವ ಪಣತೊಟ್ಟಿರುವೆನು."

ಈ ಮಾತುಗಳನ್ನು ಕೇಳಿ ಹುಲಿಗೆ ಗಾಬರಿಯಾಯಿತು. 'ನನ್ನ ಜೀವವನ್ನು ಉಳಿಸು. ಸಿಂಹವು ನಿಧಾನವಾಗಿ ಬಂದರೂ ಕೂಡ ನಾನೂ ಬಂದಿದ್ದ ಮತ್ತು ಈ ಕಾಡಿನಲ್ಲಿರುವ ವರ್ತಮಾನವನ್ನು ಅದಕ್ಕೆ ತಿಳಿಸದಿರು." ಎಂದು ಹೇಳಿ ಹುಲಿಯು ಓಡಿ ಹೋಯಿತು.

ಹುಲಿಯು ಹೋದ ನಂತರ ಚಿರತೆಯೊಂದು ಬಂದಿತು. ಅದನ್ನು ಕಂಡು ನರಿಯು ಈತನನ್ನು ನನ್ನ ಕೆಲಸಕ್ಕೆ ಉಪಯೋಗಿಸಿಕೊಳ್ಳುವೆ. ಚಿರತೆಗೆ ಹರಿತವಾದ ಹಲ್ಲುಗಳಿವೆ. ಆನೆಯ ಚರ್ಮವನ್ನು ತುಂಡರಿಸಲು ಶಕ್ತಿಯಿದೆಯೆಂದು ಭಾವಿಸಿ ಚಿರತೆಯನ್ನು ಕುರಿತು, "ಇಷ್ಟು ದಿನ ಎಲ್ಲಿದ್ದೆ ಗೆಳೆಯಾ, ಏಕೆ ನಿನಗೆ ಹಸಿವಾಗಿದೆಯೋ? ಇಂದು ನೀನು ನನ್ನ ಅತಿಥಿಯಾಗಿ ಬಾ. ಆವಶ್ಯಕಾಲದಲ್ಲಿ ಅತಿಥಿಯಾಗಿ ಬರುವವನು ನಿಜವಾದ ಅತಿಥಿ ಎಂದು ಸೂಕ್ತಿ ಇದೆ. ಬಾ ನೋಡಿಲ್ಲಿ. ಆನೆಯೊಂದು ಸಿಂಹದಿಂದ ಕೊಲ್ಲಲ್ಪಟ್ಟು ಸತ್ತು ಬಿದ್ದಿದೆ. ಸಿಂಹವು ನನ್ನನ್ನು ಎಚ್ಚರಿಕೆಗಾಗಿ ಇಲ್ಲಿ ಬಿಟ್ಟು ಹೋಗಿದೆ. ಆದರೂ ಕೂಡ ನೀನು ಹಸಿದಿರುವಂತೆ ತೋರುವೆ. ಹಸಿದವರಿಗೆ ಅನ್ನವೀಯುವುದಕ್ಕಿಂತ ಧರ್ಮವಿಲ್ಲ. ಆದ್ದರಿಂದ ಆದಷ್ಟು ಶೀಘ್ರವಾಗಿ ಸಿಂಹವು ಬರುವ ಮೊದಲು ನಿನ್ನ ಹೊಟ್ಟೆ ತುಂಬಿಸಿಕೋ' ಎಂದಿತು.

ಆಗ ಚಿರತೆಯು, 'ಇಲ್ಲ, ಈ ಮಾಂಸವು ನನಗೆ ಉಚಿತವಲ್ಲ. ಏಕೆಂದರೆ ಮನುಷ್ಯನು ಸುಖದಿಂದ ಬಾಳಲು ಜೀವಂತನಿರಬೇಡವೇ? ಜೀರ್ಣಿಸಿಕೊಳ್ಳಲಾಗುದನ್ನು ತಿನ್ನಬಾರದು' ಎಂದಿತು. ಅದಕ್ಕೆ ನರಿಯು 'ಹೇಡಿಯಂತೆ ಹೆದರಬೇಡ. ಧೈರ್ಯ ತಂದುಕೋ. ಸಿಂಹ ಬರುವದನ್ನು ಕಂಡೊಡನೆಯೇ ನಾನು ಸೂಚನೆ ಕೊಡುವೆ. ಆಗ ನೀನು ಓಡಿ ಹೋಗಬಹುದು. ಆದ್ದರಿಂದ ಬೇಗ ಪ್ರಾರಂಭಿಸು' ಎಂದಿತು.

ಹಸಿದ ಚಿರತೆಯು ಆನೆಯ ಚರ್ಮವನ್ನು ಕಚ್ಚಿ ತುಂಡು ಮಾಡುತ್ತಿತ್ತು. ನಾಲ್ಕನ್ನು ಚರ್ಮ ಕತ್ತರಿಸಲ್ಪಟ್ಟಾಗ ನರಿಯು 'ಸಿಂಹ ಬಂತು. ಸಿಂಹ ಬಂತು' ಎಂದು ಕೂಗಿತು. ಚಿರತೆಯು ಸಿಕ್ಕಾಬಟ್ಟೆ ಓಡಿ ಹೋಯಿತು. ನರಿಯು ಆನೆಯ ಮಾಂಸವನ್ನು ತಿನ್ನತೊಡಗಿತು. ಹೀಗೆ ತಿನ್ನುತ್ತಿರುವಾಗ ಮತ್ತೊಂದು ನರಿಯು ಅಲ್ಲಿಗೆ ಬಂತು. ಆಗ ಅತಿ ಚುರುಕು ಈ ನರಿಯು ತನ್ನ ಸಮಾನನವನೆಂದು ತಿಳಿದು ಅದನ್ನು ಎದುರಿಸಲು ಸಿದ್ಧವಾಯಿತು. ಏಕೆಂದರೆ ದೊಡ್ಡವರಿಗೆ ಗೌರವ ಕೊಟ್ಟು ಅವರನ್ನು ಗೆಲ್ಲಬೇಕು. ವೀರರಲ್ಲಿ ಸಂಶಯ ಹುಟ್ಟಿಸಿ ಸೋಲಿಸಬೇಕು. ಸಾಮಾನ್ಯ ವ್ಯಕ್ತಿಗಳಿಗೆ ಲಂಚದ ಆಸೆ ತೋರಿಸಿ ಗೆಲ್ಲಬೇಕು. ಸಮಾನರಾದವರನ್ನು ಯುದ್ಧದಲ್ಲಿ ಎದುರಿಸಬೇಕೆಂದು ವಚನವಿದೆ. ಹೀಗೆ ಹೇಳಿ ಚುರುಕು ಬುದ್ಧಿಯು ಆ ನರಿಯ ಮೇಲೆ ಬಿದ್ದು ಅದನ್ನು ಓಡಿಸಿ ಬಹುದಿನದವರೆಗೆ ಆನೆಯ ಮಾಂಸದಿಂದ ಸುಖವಾಗಿ ಜೀವಿಸಿತು.

ಇದೇ ರೀತಿಯಲ್ಲಿ ನೀನೂ ಕೂಡ ಹೋಗಿ ನಿನ್ನ ಮನೆಯನ್ನು ಆಕ್ರಮಿಸಿದವನ ಸೊಸೆಯೊಂದಿಗೆ ಹೋರಾಡಿ ಜಯಿಸು. ಶೀಘ್ರ ಅದನ್ನು ಮಾಡದಿದ್ದರೆ ಅದು ಅಲ್ಲಿಯೇ ಬೇರು ಬಿಟ್ಟು ಅದನ್ನು ಹೊರದೂಡುವದು ನಿನಗೆ ಅಸಾಧ್ಯವಾದೀತು. ಏಕೆಂದರೆ ಗೋವುಗಳಿಂದ ರಕ್ಷಣೆ ದೊರೆಯುತ್ತದೆ. ಬ್ರಾಹ್ಮಣರು ಆತ್ಮತ್ಯಾಗ ಮಾಡುತ್ತಾರೆ. ಹೆಂಗಸರು ಆಸಕ್ತರಾಗಿರುತ್ತಾರೆ. ನೆಂಟರು ತೊಂದರೆ ಕೊಡುತ್ತಾರೆ. ಅದರಂತೆಯೇ ವಿಭಿನ್ನ ರೀತಿಯ ಭಕ್ಷ್ಯ ಊಟಕ್ಕೆ ಚಂದ. ಸಮಾಜದ ಉತ್ಸವಗಳಲ್ಲಿ ಹೆಂಗಸರನ್ನು ಮೆಚ್ಚಿಸುವದು ಸುಲಭ. ದೂರದ ದೇಶಗಳಲ್ಲಿ ದೊಡ್ಡಸ್ಥಿಕೆ ಮರೆತು ಹೋಗುತ್ತದೆ' ಎಂದು ಕೋತಿಯು ಹೇಳಲು ಅದು ಹೇಗೆಂದು ಕೇಳಲು ವಿದೇಶ ಯಾತ್ರೆಗೆ ಹೊರಟ ನಾಯಿಯ ಕತೆಯನ್ನು ಮುಂದಿನ ವಾರ ಕೋತಿಯು ಹೇಳುವದು.

ಮೊಸ್ಟರಾಗಿ

ಬರುವೆನು!

ಹ್ಯಾಟು, ಬೂಟು, ಕೋಟು, ತೊಟ್ಟು
ಬೆತ್ತ ಹಿಡಿದು ಬರುವೆನು.
ಮಕ್ಕಳೆಲ್ಲ ನೋಡಿರಾಗ
ಮೊಸ್ಟರಾಗಿ ಬರುವೆನು.
ಕ್ಲಾಸಿನೊಳಗೆ ನಡೆದು ಬಂದು
ಕುರ್ಚಿ ಬಳಿಯ ಸೇರುವೆ.
ಕುರ್ಚಿ ಬಳಿಯ ಸೇರಿ ಬೇಗ
ಮೇಜಿಗೆರಡು ಹೊಡೆಯುವೆ.
"ಶಿಟ್ಟು ನಿನ್ನ ಟೋಪ್ಪಿ ಎಲ್ಲಿ?
ರಾಮು ಲೆಕ್ಕ ತೋರಿಸು
ಸೀತೆ ನೀನು ಪಾಠ ಓದು"
ಎಂದು ಆಜ್ಞೆ ಮಾಡುವೆ.
ತಂಟೆ ಗಿಂಟೆ ಮಾಡುವವನ
ಬಾಗಿಲ ಬಳಿ ನಿಲ್ಲಿಸೆ.
ಗಂಟೆ ಸದ್ದು ಕೇಳಿದೊಡನೆ
ಶಾಲೆಯಿಂ ಹೊರ ನಡೆಯುವೆ.

ಎನ್. ಕೆ. ಚಂಗಪ್ಪ, ವಿದ್ಯಾರ್ಥಿ,
ಮಡಿಕೇರಿ.

ಕರೆ.

ನಲಿಯುತ ನಲಿಯುತ ಭರದಲಿ ಬನ್ನಿರಿ!
ಕಾವೇರಿ ಮಾತೆಯ ಚಿಣ್ಣರಿರಾ ||

ನೀವೇ ಕೊಡಗಿನ ಮುಂದಿನ ವೀರರು!
ಬಾಳಿದು ಬೆಳಗಲಿ ಮಕ್ಕಳಿರಾ ||

ಕೊಡಗಿನ ಮರ್ದನೆ ನೀಗಲು ನೀಗುವ!
ಪಣ ತೊಟ್ಟೇಳಿರಿ ಬಾಲರಿರಾ

ಮಾತೆಯ ಕೊರಗನು ಕೇಳಿರಿ ಏಳಿರಿ!
ಎಚ್ಚರಗೊಳ್ಳಿರಿ ಪೊರೆದಿರಾ ||

ಜಾತಿಯ ಮತಗಳ ಭೇದವನಳಿಸುತ!
ಒಮ್ಮನದಿಂದಿರಿ ಕಂದರಿರಾ ||

ಕೊಡಗಿನ ಮಹಿಮೆಯ ಕಾರ್ಯದಿ ತೋರಿಸಿ!
ಬೇಗನೆ ಬನ್ನಿರಿ ಧೀರರಿರಾ ||

ಮಾಡುವ ಇಲ್ಲವೆ ಮಡಿಯುವ ಎನ್ನುವ!
ನಾಡಿಗೆ ಓಗೊಡಿ ಚಿಣ್ಣರಿರಾ ||

—ಎಂ. ಎ. ನಂಜಯ್ಯ, ವಿದ್ಯಾರ್ಥಿ.

ಜಪಾನಿನಿಂದ ಕಲಿಯಬೇಕಾದ ಪಾಠ. [೧೧]

ಗುಡಿ ಕೈಗಾರಿಕಾ ಪ್ರಗತಿ.

[ಮೂಲ ಲೇಖಕ:—ಶ್ರೀ ಚಮನ್‌ಲಾಲ್]

ಬಿದಿರಿನ ಗ್ರಾಮ.

ಕೈಗಾರಿಕಾ ಮತ್ತು ವಾಣಿಜ್ಯ ಕೇಂದ್ರಗಳಾದ ಕೋಬೆ, ಒಸಾಕ ಮತ್ತು ಕ್ಯೋಟೋಗಳ ಹತ್ತಿರದ ಮೂರು ಬಿದಿರಿನ ಗ್ರಾಮಗಳನ್ನು ನಾನು ಸಂದರ್ಶಿಸಿದೆ. ಕೋಬೆಯ ಹತ್ತಿರ ಯೊಮಗೂಚಿ ಗ್ರಾಮವು ವಿಖ್ಯಾತವಾದ ಬಿಸಿನೀರಿನ ಜಲಮುಖ ಅರಿಮೊದ ಹತ್ತಿರವಿದೆ. ಅಲ್ಲಿಗೆ ಬಸ್ ಮತ್ತು ವಿದ್ಯುಚ್ಛಕ್ತಿ ರೈಲಿನ ಸಂಬಂಧವಿದೆ. ಇಡೀ ಗ್ರಾಮವು ಬಿದಿರಿನ ಕೈಗಾರಿಕೆಯನ್ನು ಮಾಡುತ್ತದೆ. ನಾನು ಸಂದರ್ಶಿಸಿದ ನೂರಾರು ಮನೆಗಳು ಅತಿ ತುರುಸಿನ ಕೆಲಸದಲ್ಲಿ ಮಗ್ನವಾದ ಕಾರ್ಖಾನೆಗಳಂತಿದ್ದವು. ಆ ಕುಟುಂಬದವರು ಹಸುರಾದ ಬಿದಿರನ್ನು ವಿವಿಧ ರೀತಿಯ ಸುಂದರ ಕುಕ್ಕೆ, ಪೆಟ್ಟಿಗೆ, ಹರಿವಾಣ ಮೊದಲಾದ ದೈನಂದಿನ ಉಪಯೋಗದ ನೂರಾರು ಸಾಧನಗಳಾಗಿ ತಯಾರಿಸುತ್ತಿದ್ದರು. ಗ್ರಾಮದ ಮುಖ್ಯಸ್ಥನು ಈ ಸಾಮಾನುಗಳನ್ನು ರಖಂವಾರಾಗಿ ಹೊರಗೆ ಕಳುಹಿಸುವವನಾಗಿದ್ದನು. ಆತನು ನನ್ನನ್ನು ಕರೆದುಕೊಂಡು ವಿವಿಧ ಗುಡಿ ಕಾರ್ಖಾನೆಗಳನ್ನು ತೋರಿಸಿದ್ದಲ್ಲದೆ ಸಮಾನೆಗೆ ನಿಕ್ಷೇಪವಿಟ್ಟಿರುವ ತನ್ನ ವಿಶಾಲವಾದ ಉಗ್ರಾಣವನ್ನು ತೋರಿಸಿದನು. ಅಲ್ಲಿಯ ಕೆಲಸಗಾರರೆಲ್ಲ ಸಂಪನ್ನರೂ, ದೃಢಕಾಯರೂ ಆಗಿದ್ದರು. ಒಳ್ಳೇ ಬಟ್ಟೆ ಬರೆಗಳನ್ನು ಧರಿಸಿ ನಗುನಗುತ್ತಾ ಕೆಲಸ ಮಾಡುತ್ತಿದ್ದರು. ಗ್ರಾಮದ ಮುಖ್ಯಸ್ಥನ ಮನೆಯು ಒಬ್ಬ ಜಮೀನ್ದಾರನ ಮನೆಯಂತಿತ್ತು. ಅದರಲ್ಲಿ ವಿವಿಧ ಕಲಾತ್ಮಕ ಚಿತ್ರಗಳಿದ್ದವು. ಬುದ್ಧನ ಪ್ರಾರ್ಥನಾ ಮಂದಿರವೂ ಮನೆಯಲ್ಲಿತ್ತು.

ವಿದ್ಯುಚ್ಛಕ್ತಿ ಎಂದರೆ ಸಂಪತ್ತು.

ಒಸಾಕದ ಹತ್ತಿರದ ಮತ್ತೊಂದು ಬಿದಿರು ಕೈಗಾರಿಕೆಯ ಗ್ರಾಮದಲ್ಲಿ ವಿದ್ಯುಚ್ಛಕ್ತಿಯೆಂದರೆ ಯಾವ ರೀತಿ ಅದು ಸಂಪತ್ತು ಎಂಬುದನ್ನು ಮನಗಂಡೆನು. ಆ ಗ್ರಾಮದಲ್ಲಿ ಚಿಕ್ಕ ಹುಡುಗಿಯರು ಬಿದಿರಿನ ಪರದೆಗಳನ್ನು ವಿದ್ಯುತ್‌ಶಕ್ತಿಯಿಂದ ನಡೆಯುವ ಮಗ್ಗಗಳಲ್ಲಿ ತಯಾರಿಸುತ್ತಿದ್ದರು. ಅವರ ಮನೋರಂಜನೆಗೆ ಅದರೊಂದಿಗೆ ಜಪಾನಿನ ರಾಷ್ಟ್ರೀಯ ಗೀತೆಗಳೂ ಹಾಡಲ್ಪಡುತ್ತಿದ್ದವು. ಈ ಕಾರ್ಖಾನೆಗಳು ಅಮೇರಿಕಾದ ಸಂತೆಗಳಿಗಾಗಿ ಪರದೆಗಳನ್ನೂ ಸುಂದರ ಕುಕ್ಕೆಗಳನ್ನೂ ತಯಾರಿಸುತ್ತಿದ್ದವು. ಈ ಬಿದಿರಿನ ಸಾಮಾನುಗಳನ್ನು ಅಮೇರಿಕಾಕ್ಕೆ ಕಳುಹಿಸಿ ಈ ಚಿಕ್ಕ ಗ್ರಾಮವು ವರ್ಷಕ್ಕೆ ಎರಡು ಮಿಲಿಯ ಡಾಲರುಗಳು ಅಂದರೆ ಸುಮಾರು ಹತ್ತು ಮಿಲಿಯ ರೂಪಾಯಿಗಳನ್ನು ಸಂಪಾದಿಸುತ್ತದೆ. ಹಿಂದೂದೇಶವು ಬಿದಿರಿನ ನೆಲೆವೀಡು. ಬಿದಿರು ಪ್ರಥಮತಃ ಹುಟ್ಟಿದ್ದು ಭಾರತದಲ್ಲಿ. ಇಂದೂ ಕೂಡ ವಿಪುಲವಾಗಿ ಬಿದಿರು ಭಾರತದಲ್ಲಿದೆ. ಜಪಾನಿನಂತೆ ಈ ಬಿದಿರನ್ನು ಯೋಗ್ಯ ರೀತಿ ನಾವು ಉಪಯೋಗಿಸಿದರೆ ಅಪಾರ ಸಂಪತ್ತುಗಳಿಸಬಹುದಾಗಿದೆ. ಯುದ್ಧಕ್ಕೆ ಮೊದಲು ಜಪಾನಿನ ಬಿದಿರು ಕೈಗಾರಿಕೆಯಲ್ಲಿ ತೊಡಗಿದ ಪ್ರತಿ ಕೆಲಸಗಾರನೂ ದಿನಕ್ಕೆ ನಾಲ್ಕೈದು ರೂಪಾಯಿ ವೇತನ ಪಡೆಯುತ್ತಿದ್ದನು. ಬಾಂಬುಗಳಿಂದ ಧ್ವಂಸವಾಗದ ಟೋಕಿಯೋ ನಗರದ ನಿವಾಸಿಗಳಿಗಿಂಥಲೂ ಈ ಬಿದಿರು ಗ್ರಾಮದ ಜನರು ಸುಖಿಗಳೂ, ಅನುಕೂಲಸ್ಥರೂ ಆಗಿದ್ದರು. ನಾನು ಸಂದರ್ಶಿಸಿದ ಮತ್ತೊಂದು ಬಿದಿರು ಗ್ರಾಮದಲ್ಲಿ ಬಿದಿರಿನಿಂದ ಸುಂದರವಾದ ಗುಂಡಿ, ಬ್ರೂಚ್, ಕೊಳಲು ಮೊದಲಾದುವನ್ನು ತಯಾರಿಸುತ್ತಿದ್ದರು. ಈ ವಸ್ತುಗಳ ಮೇಲಿನ ಸುಂದರವಾದ ಚಿತ್ರ ಕೆಲಸವನ್ನು ಹೆಚ್ಚಾಗಿ ಗ್ರಾಮದ ಮಕ್ಕಳು ಮಾಡುತ್ತಿದ್ದರು.

ಬಿದಿರಿನಿಂದ ೧೪೦೦ ಸಾಮಾನು

ಭಾರತವು ಜಪಾನಿಗೆ ಕೊಟ್ಟ ಬೌದ್ಧಮತದ ನಂತರದ ಅಮೂಲ್ಯ ಕೊಡುಗೆಯೆಂದರೆ ಬಿದಿರು. ಜಪಾನು ನೂರಾರು ವಿಧದ ಬಿದಿರನ್ನು ಬೆಳೆಸುತ್ತದೆ. ನಮ್ಮಲ್ಲಿ ಕಾಫಿ, ಕಿತ್ತಳೆ ತೋಟ ವ್ಯವಸಾಯದಂತೆ ಬಿದಿರಿನ ವ್ಯವಸಾಯ ಮಾಡುತ್ತಾರೆ. ಜಪಾನರು ಬಿದಿರಿನಿಂದ ಸುಮಾರು ೧೪೦೦ ವಿವಿಧ ವಸ್ತುಗಳನ್ನು ತಯಾರಿಸುತ್ತಾರೆ. ಜಪಾನಿನಲ್ಲಿ ಪ್ರತಿ ದಿನದ ಜೀವನದಲ್ಲಿ ಬಿದಿರು ಪ್ರಾಮುಖ್ಯ ಅವಶ್ಯಕತೆಯಾಗಿದೆ. ಹೊಸ ವರ್ಷದ ಅಲಂಕಾರಕ್ಕಾಗಿ ಜಪಾನಿನ ಒಂದು ಮೂಲೆಯಿಂದ ಮತ್ತೊಂದಕ್ಕೆ ಬಿದಿರನ್ನು ಉಪಯೋಗಿಸುತ್ತಾರೆ. ಬಿದಿರು ಜಪಾನಿಗೆ ಪ್ರಾಕೃತಿಕ ಸೌಂದರ್ಯವನ್ನು ಕೊಟ್ಟಿದೆ. ಒಂದು ವಿಧದ ಸುಂದರ ಜಾತಿಯ ಬಿದಿರನ್ನು ತೋಟದಲ್ಲಿ ಹೂಗಿಡ ನೆಟ್ಟಂತೆ ನೆಡುತ್ತಾರೆ. ಮರದ ಬದಲು ಮನೆ ಕಟ್ಟಲು ಅವರು ಬಿದಿರನ್ನು ಉಪಯೋಗಿಸುತ್ತಾರೆ. ಬಿದಿರಿನಿಂದ ನಾನಾ ರೀತಿಯ ಕುರ್ಚಿ, ಮೇಜುಗಳನ್ನು ಮಾಡುತ್ತಾರೆ. ಮರದ ಸಾಹಿತ್ಯಗಳಿಗಿಂಥಾ ಇವು ಸುಂದರವಾಗಿರುತ್ತವೆ.

ಟೋಕಿಯೋದ ಒಂದು ಕಂಪೆನಿಯು ಬಿದಿರಿನಿಂದ ಸಿಗರೇಟು ಪೆಟ್ಟಿಗೆ, ಚೆಸ್ ಬೋರ್ಡು, ಮಹಿಳೆಯರ ಕೈ ಚೀಲ ಮೊದಲಾದುವನ್ನು ತಯಾರಿಸುತ್ತದೆ. ಈ ಸಾಮಾನುಗಳು ಅಮೇರಿಕಾದಲ್ಲಿ ಜನಪ್ರಿಯವಾಗಿವೆ. ಬಿದಿರಿನಿಂದ ಹಲವಾರು ಸಂಗೀತ ಸಾಧನಗಳನ್ನು ಮಾಡುತ್ತಾರೆ. ಶ್ರೀಕೃಷ್ಣನ ಬನ್ಸುರಿ (ಕೊಳಲು) ಯು ಜಪಾನಿನಲ್ಲಿ ಜನಪ್ರಿಯವಾಗಿದೆ. ಜಪಾನಿನ ನಾರಾ ಎಂಬಲ್ಲಿಯ ದೇವಾಲಯ ಒಂದರಲ್ಲಿ ಶ್ರೀಕೃಷ್ಣನು ಕೊಳಲು ಬಾರಿಸುವ ವಿಗ್ರಹವನ್ನು ಅವರು ಇಟ್ಟಿರುವರು.

ಮರ ಕೈಗಾರಿಕೆಗಳು.

ಜಪಾನಿನಲ್ಲಿ ಮರದ ತೊಲೆಗಳ ವ್ಯಾಪಾರವಲ್ಲದೆ ಮರದ ಪಲ್ಪ್ ತಯಾರಿಸುವದು, ಪ್ಲೈವುಡ್ ಮೊದಲಾದ ಕೈಗಾರಿಕೆಗಳು ವಿಪುಲವಾಗಿ ನಡೆಯುತ್ತದೆ. ಇದಲ್ಲದೆ ಫಾರೆಸ್ಟ್ ಉತ್ಪತ್ತಿಗಳಾದ ಕರ್ಪೂರ, ಎಣ್ಣೆ, ಗುಗ್ಗುಳ ಮೊದಲಾದುವುಗಳ ತಯಾರಿಯು ನಡೆಯುತ್ತದೆ. ನಿಕೋರು ದ್ವೀಪ ಒಂದರಲ್ಲಿಯೇ ಕರ್ಪೂರ ತಯಾರಿಸುವ ೬೩ ಮಿಲ್ಲುಗಳಿವೆ. ೧೯೪೩ ರಿಂದ ಈ ಒಂದು ದ್ವೀಪದಲ್ಲಿ ವರ್ಷಕ್ಕೆ ೭೪ ಮೆಟ್ರಿಕ್ ಟನ್ನುಗಳಷ್ಟು ಕರ್ಪೂರ ಎಣ್ಣೆ ತಯಾರಾಗುತ್ತಿತ್ತು. ಸೀತದಾರ ಮರದ ಎಣ್ಣೆ ತಯಾರಿಸಲು ಸುಮಾರು ೩೯೦ ಕೇಂದ್ರಗಳಲ್ಲಿ ಕೆಲಸ ನಡೆಯುತ್ತದೆ. ಸುಮಾರು ೧೧೦೦ ಒಲೆಗಳಲ್ಲಿ ಎಣ್ಣೆ ತಯಾರಿಸಿ ವರ್ಷಕ್ಕೆ ೫೦೦೦ ಟನ್ನುಗಳಿಗಿಂಥಾ ಹೆಚ್ಚು ಎಣ್ಣೆ ಉತ್ಪನ್ನವಾಗುತ್ತದೆ. ಗುಗ್ಗುಳವೂ ಕೂಡ ವರ್ಷ ೮೮೦ ಮೆಟ್ರಿಕ್ ಟನ್ನುಗಳಷ್ಟು ಈ ದ್ವೀಪ ಒಂದರಲ್ಲೇ ಉತ್ಪಾದಿಸಲ್ಪಡುತ್ತದೆ.

ಇತರ ಫಾರೆಸ್ಟ್ ಕೈಗಾರಿಕೆಗಳು

ಜಪಾನಿನ ಜನರ ಉತ್ಪಾದನೆಯ ಹಲವು ಭಾಗವು ಫಾರೆಸ್ಟ್ ಉತ್ಪತ್ತಿಗಳಿಂದ ಬರುತ್ತದೆ. ಮರದ ತೊಗಟೆಗಳಿಂದ ಹಗ್ಗಗಳನ್ನೂ ಹಿಡಿಗಲುಗಳನ್ನೂ, ವಿವಿಧ ಬಣ್ಣಗಳನ್ನೂ ತಯಾರಿಸುತ್ತಾರೆ. ಜಪಾನಿನಲ್ಲಿ ಹುಲ್ಲು, ಎಲೆ, ಮರದ ಚಿಕ್ಕ ಕೊಂಬೆಗಳನ್ನೂ ಕೂಡ ವಿವಿಧ ರೀತಿಯ ಕೈಗಾರಿಕೆಗಾಗಿ ಲಾಭದಾಯಕವಾಗಿ ಉಪಯೋಗಿಸುತ್ತಾರೆ. ಜಪಾನರು ಅಣಬೆಗಳನ್ನು ಬೆಳೆಸಿ ಒಣಗಿಸಿ ಹೊರದೇಶಗಳಲ್ಲಿ ಮಾರುತ್ತಾರೆ. ಡೆಲ್ಲಿಯಲ್ಲಿ ಒಂದು ಸೇರು ಒಣಗಿದ ಈ ಅಣಬೆಗಳಿಗೆ ರೂ. ೨೦ ಬೆಲೆ ಇದೆ. ನಾವು ಕೂಡ ಜಪಾನರಂತೆ ಅಣಬೆಗಳನ್ನು ಮೂರು ವಿಧದಲ್ಲಿ ಬೆಳೆಸಬಹುದು.

(೧) ಕತ್ತಲು ಕೋಣೆಗಳಲ್ಲಿ ಫ್ರೆಂಚ್ ಅಣಬೆಗಳನ್ನು ಬೆಳೆಸಬಹುದು.

(೨) ಜಪಾನರಂತೆ ಮರದ ತೊಲೆಗಳಲ್ಲಿ ಅಣಬೆ ಬೆಳೆಸಬಹುದು.

(೩) ವ್ಯಾಪಾರದೃಷ್ಟಿಯಿಂದ ಅಣಬೆ ವ್ಯವಸಾಯ ಕೈಕೊಳ್ಳಬಹುದು.

ಪೈರೇತ್ರುಮ್ ಕೈಗಾರಿಕೆ

ಪೈರೇತ್ರುಮ್ ಎಂಬುದು ನಮ್ಮಲ್ಲಿಯ ಸೇವಂತಿಗೆ ಹೂವಿನ ಜಾತಿಯ ಗಿಡ. ಇದರಲ್ಲಿ ಎರಡು ವಿಧದವುಗಳನ್ನು ಜಪಾನಿನಲ್ಲಿ ವಿಪುಲವಾಗಿ ಬೆಳೆಯುತ್ತಾರೆ. ಕೆಂಪು ಹೂವಿನದು ಕೇವಲ ಸೌಂದರ್ಯ, ಅಲಂಕಾರಕ್ಕಾಗಿ. ಬಿಳಿಯ ಬಣ್ಣದ್ದರಿಂದ ವಿವಿಧ ರೀತಿಯ ಹುಡಿ, ಕ್ರಿಮಿನಾಶಕ ಮತ್ತು ಔಷಧಗಳನ್ನು ತಯಾರಿಸುತ್ತಾರೆ. ಜಪಾನರು ಈ ಗಿಡವನ್ನು ಪ್ರಥಮವಾಗಿ ಅಮೇರಿಕಾದಿಂದ ತಂದರೂ ಅದನ್ನು ಅಭಿವೃದ್ಧಿಗೊಳಿಸಿ ಅದರಿಂದ ತಯಾರಾದ ವಸ್ತುಗಳನ್ನು ಹೆಚ್ಚಾಗಿ ಅಮೇರಿಕಾಕ್ಕೆ ಕಳುಹಿಸುತ್ತಾರೆ. ಜಪಾನಿನಲ್ಲಿ ಇದರ ವ್ಯವಸಾಯ ವಿಸ್ತಾರವಾಗಿ ನಡೆಯುತ್ತದೆ. ಹಲವಾರು ಕಾರ್ಖಾನೆಗಳು ಈ ಕೈಗಾರಿಕೆಗಾಗಿ ಸ್ಥಾಪಿತವಾಗಿವೆ. ೧೯೩೩ರಲ್ಲಿ ಜಪಾನು ೧೧,೪೭೩ ಟನ್ ಪೈರೇತ್ರುಮನ್ನು ಹೊರದೇಶಗಳಿಗೆ ಕಳುಹಿಸಿತು. ಇದರಲ್ಲಿ ಸುಮಾರು ೮೮೦೦ ಟನ್ನುಗಳು ಒಣಗಿದ ಸುಂದರ ಹೂವುಗಳು!

ಬೆಂಕಿಪಟ್ಟಣ ಕೈಗಾರಿಕೆ

ಜಪಾನಿನಲ್ಲಿ ಬೆಂಕಿಪಟ್ಟಣ ಕೈಗಾರಿಕೆ ಹಬ್ಬಿದಷ್ಟು ಶೀಘ್ರವಾಗಿ ಬೇರೆಲ್ಲಿಯೂ ಹಬ್ಬಿಲ್ಲ. ಬೇರೆ ದೇಶಗಳಂತೆ ಬೆಂಕಿಪಟ್ಟಣಗಳು ದೊಡ್ಡ ಕಾರ್ಖಾನೆಗಳಲ್ಲಿ ತಯಾರಾಗದೆ ಪ್ರತಿ ಮನೆಯಲ್ಲಿಯ ಚಿಕ್ಕ ಚಿಕ್ಕ ಯಂತ್ರ ಸಹಾಯದಿಂದ ತಯಾರಾಗುತ್ತದೆ. ಬೆಂಕಿಪಟ್ಟಣ ತಯಾರಿಸುವ ಕೆಲಸವು ಬಹು ಸುಲಭದ್ದು. ಈ ಕೈಗಾರಿಕೆಯಲ್ಲಿ ಮೂರರಲ್ಲಿ ಎರಡಂಶ ಹೆಂಗಸರೇ ಕೆಲಸಗಾರರು. ಈ ಕೈಗಾರಿಕೆಯಲ್ಲಿ ಅವರು ಬಹು ಕುಶಲತೆಯನ್ನು ಪಡೆದಿರುವರು. ಇವಲ್ಲದೆ ಜಪಾನಿನ ಬಟ್ಟೆ ಬರೆ ಮೊದಲಾದ ಟೆಕ್ಸ್‌ಟೈಲ್ ಕೈಗಾರಿಕೆಗೆ ದೊಡ್ಡ ದೊಡ್ಡ ಯಂತ್ರ ಸಜ್ಜಿತ ಕಾರ್ಖಾನೆಗಳಿದ್ದರೂ ಜಪಾನಿನ ಉತ್ಪಾದನೆಯ ಏಳರಲ್ಲಿ ಆರು ಪಾಲು ಪ್ರತಿ ಮನೆಯಲ್ಲಿರುವ ವಿದ್ಯುಚ್ಛಕ್ತಿಯಿಂದ ನಡೆಯುವ ಚಿಕ್ಕ ಮಗ್ಗಗಳಿಂದಲೇ ತಯಾರಾಗುತ್ತದೆ. ಅತೀ ಉತ್ತಮವಾದ ಬಟ್ಟೆಗಳೆಲ್ಲ ಈ ಮನೆಯಲ್ಲಿಯ ಚಿಕ್ಕ ಕಾರ್ಖಾನೆಗಳಿಂದಲೇ ಉತ್ಪನ್ನವಾಗುತ್ತದೆ. ಆರು ಮಗ್ಗಗಳ ಚಿಕ್ಕ ಇಂಥಾ ಕಾರ್ಖಾನೆಯೊಂದು ವಿದ್ಯುಚ್ಛಕ್ತಿಯ ಸಹಾಯದಿಂದ ದಿನಕ್ಕೆ ೩೦೦ ಗಜ ಉತ್ತಮ ಬಟ್ಟೆ ತಯಾರಿಸಬಲ್ಲುದು. ಜಪಾನಿನಲ್ಲಿ ಒಂದು ಮಗ್ಗಕ್ಕೆ ೮೦ ರೂ. ಇದೆ. ಪ್ರತಿ ಹಳ್ಳಿಯಲ್ಲಿಯೂ ಇವು ಮಾರಲ್ಪಡುತ್ತವೆ.

ಹೆಂಗಸರು ಕೈಗಾರಿಕೆಯ ಜೀವಾಳ

ಜಪಾನಿನ ಕೈಗಾರಿಕೆಯ ಪ್ರಗತಿಗೆ ಜಪಾನಿನ ಸುಪುತ್ರಿಯರೇ ಜೀವಾಳವೆಂದು ಹೇಳಿ ಅವರನ್ನು ವಂದಿಸುವದು ನನ್ನ ಕರ್ತವ್ಯ. ಅವರು ಬಹು ಶ್ರಮ ವಹಿಸಿ ಕೆಲಸ ಮಾಡುತ್ತಾರೆ. ಕೆಲಸದಲ್ಲಿ ಅವರ ಚತುರತೆಯು ವಿಸ್ಮಯಕಾರಕವಾದುದು. ಯಾವ ಕೈಗಾರಿಕೆಯಾದರೂ ಅವರ ಕೈ ಮುಟ್ಟದೆ ಅದು ಪರಿಪೂರ್ಣತೆಯನ್ನು ಪಡೆಯದು. ಜಪಾನು ಈ ರೀತಿ ಆಶ್ಚರ್ಯಕರವಾಗಿ ಕೈಗಾರಿಕಾ ಪ್ರಗತಿಯನ್ನು ಸಾಧಿಸಲು ಮುಖ್ಯ ಕಾರಣವೆಂದರೆ ಅದರ ಕೈಗಾರಿಕೆಗಳು ನಗರಗಳಲ್ಲಿ ಕೇಂದ್ರೀಕೃತವಾಗಿರದೆ ಹಳ್ಳಿಗಳಲ್ಲಿ ಪ್ರತಿ ಮನೆಗಳಲ್ಲಿ ಹಂಚಲ್ಪಟ್ಟಿರುವದು. ಜಪಾನಿನ ಸರಕಾರವು ಸುಲಭ ಕ್ರಯದ ಯಂತ್ರಗಳ ವಿತರಣೆಗೆ ಪ್ರೋತ್ಸಾಹ ಕೊಟ್ಟು, ಸುಲಭ ದರದಲ್ಲಿ ವಿದ್ಯುಚ್ಛಕ್ತಿ ಒದಗಿಸಿರುವದರಿಂದ ಪ್ರತಿ ಮನೆಯೂ ಕಾರ್ಖಾನೆಯಾಗಿವೆ. ಭಾರತೀಯರಾದ ನಾವು ನಮ್ಮ ಭಾಷಣಗಳಲ್ಲಿ ಹೇಳುವ ಗುಡಿ ಕೈಗಾರಿಕೆಗಳ ವಿಚಾರ ನಿಜವಾಗಿಯೂ ಆಸ್ಥೆ ಉಳ್ಳವರಾದರೆ ಗುಡಿ ಕೈಗಾರಿಕೆಗಳಿಗೆ ಸಂಬಂಧಿಸಿದ ಚಿಕ್ಕ ಕಾರ್ಖಾನೆಗಳನ್ನು ಹಳ್ಳಿಗಳಲ್ಲಿ ಹಬ್ಬುವಂತೆ ಮಾಡುವದಲ್ಲದೆ ಅದಕ್ಕು ಬೇಗ ವಿದ್ಯುಚ್ಛಕ್ತಿ ಒದಗಿಸಬೇಕು

ಕಳೆದ ೩೦ ವರ್ಷಗಳಿಂದಲೂ ನಾವು ವಿಧಾಯಕ ಕಾರ್ಯಕ್ರಮ, ಗ್ರಾಮಾಭಿವೃದ್ಧಿ ಕೈಗಾರಿಕಾ ಪುನರ್ಘಟನೆಯ ವಿಚಾರ ಮಾಡುತ್ತಾ ಬಂದಿರುವೆವು. ಈ ಮಾತಿನಿಂದ ಪ್ರಯೋಜನವಿಲ್ಲ. ಆರ್ಥಿಕ ಅಭಿವೃದ್ಧಿಯಾದರೆ ದೇಶದಲ್ಲಿರುವ ಅನೇಕ ತೊಡರು ವ್ಯತ್ಯಾಸಗಳು ನೀಗುವವು. ಜಪಾನರ ಆದರ್ಶವನ್ನು ಮುಂದಿಟ್ಟುಕೊಂಡು ನಾವು ಕಾರ್ಯಪ್ರವೃತ್ತರಾಗಬೇಕು. ಭಾರತದ ಉದ್ಧಾರ ಗ್ರಾಮಗಳಲ್ಲಿನ ಅವರ ಲಕ್ಷಾಂತರ ಗುಡಿಸಲುಗಳ ಉದ್ಧಾರದಲ್ಲಿದೆ.

ಶಾಂತಿ ಎಲ್ಲಿ?

— ಲೇಖಕ:—"ಶಾಕೆನೂನಿ" —

"ಲಾಲಸೆಗೆ ಸರಿಯಾದ ಬೆಂಕಿಯಿಲ್ಲ. ದ್ವೇಶಕ್ಕೆ ಸರಿಯಾದ ಹಾನಿಯಿಲ್ಲ. ಹೀನವಾದ ಬಾಳ್ವೆಗಿಂತ ಬೇರೆ ದುಃಖವಿಲ್ಲ. ಶಾಂತಿಗಿಂತ ಅನ್ಯ ಸುಖವಿಲ್ಲ" ಅಂದ ಮೇಲೆ ಶಾಂತಿಯೊಳಗೆಯೇ ಎಲ್ಲಾ ಸುಖಗಳೂ ಅಡಗಿವೆಯೆಂದಾಯಿತು. ಈ ಅಶಾಂತಿ ತುಂಬಿದ ಜಗತ್ತಿನಲ್ಲಿ ಶಾಂತಿಯ ಬೇಟೆಯು ಸತತ ನಡೆಯುತ್ತಿದೆ, ನಡೆದಿದೆ, ನಡೆಯುವುದು. ಆದರೂ ಶಾಂತಿಯು ಮಾನವನ ಕೈವಶವಾಗಲಿಲ್ಲ. ನಾವೆಲ್ಲರೂ ಶಾಂತಿಗಾಗಿ ಶಾಂತಿಯನ್ನರಸುತ್ತಿದ್ದೇವೆ. ಅದನ್ನರಸುತ್ತಾ ಎಷ್ಟು ವೇಗದಿಂದ ಮಾನವನು ಸಂಸ್ಕೃತಿಯ ಮೆಟ್ಟಿಲನ್ನು ಏರುತ್ತಿರುವನೋ ಅಷ್ಟೇ ದೂರ ದೂರವಾಗಿ ಅದು ಅರಿವಿಕೆಯಿಲ್ಲದ ಅಂತರದಲ್ಲೋಡುತ್ತಿದೆ. ಶಾಂತಿಯು ಮಾನವನ ಜೀವನದಲ್ಲಿ ಮರಳುಗಾಡಿನ ಮರೀಚಿಯಂತೆ, ಎಟುಕಲಾರದ ಸೋಗಿನ ನಿಧಿಯಂತೆ. ಯಾವ ಕಾಲದಲ್ಲೇ ಆಗಲೀ, ಯಾವ ಪುರಾಣವನ್ನೇ ನೋಡಲೀ, ಯಾಕೆ ಬಹಿರ್ಪ್ರಪಂಚಕ್ಕೆ ಶರಣೆಂದು ಅರಿಷಡ್ವೈರಿಗಳನ್ನು ಜಯಿಸಿದ, ಸಂತ, ಸಾಧು, ಮಹಾತ್ಮ, ಮಹರ್ಷಿಯ ಋಷಿವರ್ಯರ ಜೀವನವನ್ನೇ ಪರೀಕ್ಷಿಸಲಿ, ಶಾಂತಿಯು ಎಲ್ಲರ ಜೀವನದಲ್ಲೂ ಹಿಡಿಯಲಾರದೊಂದು ಮಾಯಾಮೃಗವಾಗಿಯೇ ಉಳಿದಿದೆ. ದೇವನೇ ಪ್ರತ್ಯಕ್ಷ ಜನ್ಮವೆತ್ತಿದ್ದರೂ ಸಹ ಪ್ರಪಂಚದಲ್ಲಿ ಹುಟ್ಟಿದವನಿಗೆ ಶಾಂತಿ ಇಲ್ಲ. ಯುಗ ಯುಗಗಳಿಂದಲೂ ಶಾಂತಿಗಾಗಿ, ಶಿಷ್ಟರ ಹಿತಕ್ಕಾಗಿ, ದುಷ್ಟರನ್ನು ನಿಗ್ರಹಿಸಿ ಶಾಂತಿ ಸ್ಥಾಪಿಸಿದರೂ ಶಾಶ್ವತವಾದ ಶಾಂತಿಯು ಯಾವ ದೇವನಿಗೂ ನಿಲುಕಲಿಲ್ಲ.

ಶಾಂತಿ ಎಂಬುದೇನು ಉಪ್ಪರಿಗೆಯ ಭೋಗವಿಲಾಸ ಜೀವನದಲ್ಲಡಗಿದೆಯೇ? ಅತುಳ ಐಶ್ವರ್ಯದಿಂದ ಲೋಕವನ್ನೇ ತನ್ನದಾಗಿ ಮಾಡಿಕೊಂಡರೇನು ಶಾಂತಿಯು ಆತನ ವಶವಾದೀತೇ? ಇಡೀ ಪ್ರಪಂಚದ ಸರ್ವಾಧಿಕಾರಿಯಾಗಿ ತನ್ನ ಮನೋಭಿಲಾಷೆಯಂತೆ ನಡೆದರೆ ಶಾಂತಿಯು ಆತನ ಸರ್ವಾಧಿಕಾರಕ್ಕೆ ಹೆದರಿ ಶರಣಾದೀತೆ? ಲೋಕಕ್ಕೇ ಶರಣೆಂದು ಇಹ, ವೈಭವ ವಿಲಾಸಕ್ಕೆ ಮರುಳಾಗದೆ, ಕಾಡಲ್ಲಿ ಕೂತು ತಪಸ್ವಿಯಾದರೂ, ಪರಲೋಕದ ಚಿಂತೆಯಿಂದ ಆತನಿಗೆ ಶಾಂತಿ ದೊರೆಯುವದೆ? ಬುದ್ಧ ದೇವನಂತಹ ರಾಜಕುಮಾರರು, ರಾಜ ಜೀವನಕ್ಕೆ ತಿಲಾಂಜಲಿಯಿತ್ತು, ಶಾಂತಿಯನ್ನರಸಲು ಜೀವನವನ್ನೇ ತೇದರೂ ಶಾಂತಿಯು ಆತನಿಗೊಲಿಯಿತೆ? ಶಾಂತಿಯು ಯಾರ ಶಾಶ್ವತ ಆಸ್ತಿಯಲ್ಲ. ಇತರರಿಂದ ಕೊಂಡುಕೊಳ್ಳಬಹುದಾದ ವಸ್ತುವೂ ಅಲ್ಲ. ಅದು ಯಾರಿಗೂ ಮರುಳಾಗದ ಸ್ವತಂತ್ರ ದೇವತೆ. ಎಲ್ಲಾ ಯುಗಗಳಲ್ಲಿಯೂ ದೇವದೂತರು ಜನ್ಮವೆತ್ತಿದ್ದಾರೆ. ಯಾವ ದೇವದೂತನಾದರೂ, ಶಾಂತಿಗಾಗಿ ಹೆಣಗಾಡಿದರೂ, ತನ್ನ ಸ್ವಂತ ಜೀವನದಲ್ಲೇ ಶಾಂತಿಯನ್ನು ಕಂಡುಕೊಳ್ಳಲಾರದ ಕಷ್ಟಗಳಿಗೆ ಬದ್ಧನಾದ್ದಾನೆ. ರಾಮ ಕೃಷ್ಣರಂತಹ ದೇವಸಂಭೂತರೇ ಜೀವನದಲ್ಲಿ ಶಾಂತಿಯಿಲ್ಲದೆ ಪಟ್ಟ ಪರಿತಾಪ ನಮಗೆ ತಿಳಿಯದಲ್ಲ.

ಪೌರಾಣಿಕ ಮಾತು ಹಾಗಿರಲಿ, ಆಧುನಿಕ ಯುಗದಲ್ಲಿ ಶಾಂತಿ ಸ್ಥಾಪನೆಗಾಗಿ ಆಗಿ ಹೋದ ಮಹಾ ಘಟನೆಗಳನ್ನು ವಿವೇಚಿಸಿದರೆ ಸಾಕು. ಸಾಕ್ಷಾತ್ ಶಾಂತಿಮೂರ್ತಿಯಾದ ಮಹಾತ್ಮಾ ಗಾಂಧಿಜಿಯವರ ಜೀವನದಲ್ಲೆಲ್ಲಾ ಆ ಶಾಂತಿ ತುಂಬಿ, ಅವರೆಷ್ಟು ಶಾಂತಿಗಾಗಿ ಹೆಣಗಾಡಿದರೂ ಅವರ ಅವರನ್ನು ಅಶಾಂತಿಯಿಂದಲೇ ಬಲಿ ತೆಗೆದುಕೊಂಡಿದೆ ಜಗದ ಜನ. ಅಂದ ಮೇಲೆ ಶಾಂತಿಯ ಉಳಿವುತಾನೆ ಎಲ್ಲಿ? ಇಡೀ ಪ್ರಪಂಚದಲ್ಲೆಲ್ಲಾ ಶಾಂತಿ ಸ್ಥಾಪಿಸಲು ಹೊರಟ ಶಾಂತಿ ದೂತರ ಕೂಟವಾದ ವಿಶ್ವಸಂಸ್ಥೆಯು ಏನು ಸಾಧಿಸಿದೆ? ಪ್ರಪಂಚಕ್ಕೆಲ್ಲಾ ಶಾಂತಿಯ ಮೋಕ್ಷಂತ್ರ ಹಾಕಬೇಕೆಂದು ಬಯಸಿ, ಭಾರತವು ತನ್ನ ಶಾಂತಿ ದೂತರನ್ನು ಹಿಂದೆಯೂ ಇಂದೂ ಪರದೇಶಗಳಿಗೆ ಕಳುಹಿಸುತ್ತಿದೆ. ಆದರೂ ಶಾಂತಿದೂತರಿಗೇನು ಮನ್ನಣೆ ದೊರೆತಿದೆ? ಶಾಂತಿ ಬೇಕೆಂಬುದು ಒಂದು ಸೋಗಿನ ಮಾತು. ಜಗತ್ತಿನಲ್ಲೆಲ್ಲಾ ಚಿರಶಾಂತಿ ನೆಲಸಿದ್ದರೆ, ಪ್ರಪಂಚವೇ ನಿರ್ಜೀವದ ಆಗರವಾದೀತು. ಇಲ್ಲಿ ಶಾಂತಿ ನೆಲೆಸಬಾರದೆಂಬುದು ದೇವ ನಿಯಮವೆಂದ್ಲೇ ಹೇಳಬೇಕು. ಇದು ಪ್ರಕೃತಿಯ ಒಂದು ಸೂಕ್ಷ್ಮ ಸೂತ್ರವಾಗಿರಬಹುದು.

ಹಗಲು ರಾತ್ರೆಯಂತೆ, ಸುಖದುಃಖಗಳೂ ಆಶೆ ನಿರಾಶೆ, ಶಾಂತಿ ಅಶಾಂತಿಗಳೂ ದ್ವಂದ್ವ ಭಾಗಗಳು. ಆದರೆ ಆಧುನಿಕ ಯುಗದಲ್ಲಿ ಅಶಾಂತಿಯೇ ಹೆಚ್ಚಾಗಿರುವ ಮರ್ಮವೇನು? ಮಾನವನ ಅಹೋರಾತ್ರಿಯ ಪ್ರಯತ್ನವೆಲ್ಲಾ ನಿಷ್ಪ್ರಯೋಜನವಾಗಲು ಕಾರಣವೇನು? ಬಿರುಗಾಳಿಗೆದುರಾದ ತಂಗಲೆಗಳಂತೆ, ಮಾನವನ ಆಶಾಭಂಗವೂ ಕ್ಷಣ ಕ್ಷಣಕ್ಕೂ ಆಗುತ್ತಿರುವದರ ಗುಟ್ಟೇನು? ಅಂದರೆ, ಇಂದು ಮಾನವನಲ್ಲಿರಬೇಕಾದ ಮಾನವತೆಯಿಲ್ಲ. ಆತನು ತನ್ನನ್ನು ತಾನು ತಿಳಿದುಕೊಳ್ಳಲಿಲ್ಲ. ಅಸತ್ಯ ಅಧರ್ಮ, ಅಹಂಕಾರ, ದುರಾಶೆ, ದುರ್ವೃತ್ತಿ, ದುರ್ನಡತೆಗಳ ಹಿಡಿತದಲ್ಲಿ, ಸ್ವಾರ್ಥವೆಂಬ ಕೆಸರಿನಲ್ಲಿ ಮಾನವನು ಸೂಕರದಂತೆ ಉರುಳಾಡುತ್ತಿದ್ದಾನೆ. ತನ್ನಂತೆ ಪರರೂ ಪರರಂತೆ ತಾನೂ ಎಂಬ ಅಭಿಮಾನ ಮಾಯವಾಗಿ, ಮಾನವ ಸ್ವರೂಪವಾದರೂ ರಾಕ್ಷಸೀ ಹೃದಯದ ಆಳ್ವಿಕೆ ನಡೆಯುತ್ತಿದೆ. ವೇದಿಕೆಗಳಲ್ಲಿ ಉದ್ಬುದ್ಧದ ಶಾಂತಿ ಸಂದೇಶವನ್ನು ಶಾಂತಿ ಬೋಧಕರೂ, ಸಾಧು ಸಂತರೂ ಬೋಧಿಸುತ್ತಾರೆ ಕೇಳುವವರ ಮಾತಿರಲಿ, ಬೋಧಿಸುವವರಲ್ಲಿಯೇ ಶಾಂತಿ ನೆಲೆಗೊಂಡಿಲ್ಲ ಬದಲು ಚಂಚಲತೆ ನೆಲೆಸಿದೆ. ಶಾಂತಿಯು ಎಲ್ಲರ ಜೀವನದ ಹಕ್ಕಾಗಿದ್ದರೂ, ತಮ್ಮ ದುಷ್ಕರ್ಮಗಳ ದುಃಷ್ಪರಿಣಾಮದಿಂದ ಎಲ್ಲಿಯೋ ಎಟುಕಲಾರದ ದೂರದಲ್ಲಿ ಅಗೋಚರವಾಗಿದೆ.

"What thou sowest thou shalt reap", ಬಿತ್ತಿದ ಬೀಜವನ್ನೇ ಹೇಗೆ ಬೆಳೆಯುವ ಫಲಹೊಂದಿದೆಯೋ ಹಾಗೆಯೇ ನಾವು ಮಾಡುವ ಸತ್ಕರ್ಮವೂ ಬೇಕಾದ ಶಾಂತಿಯನ್ನು ಹೊತ್ತಿದೆ. ಫಲದಾಸೆಯಿಲ್ಲದೆ, ನಿಶ್ಚಿತ ಕಾಲದಲ್ಲಿ ಮಳೆ ಹೊಡೆಯುವದು, ಗಾಳಿ ಬೀಸುವದು ನೀರು ಹರಿಯುವದು. ಅದು ಯಾವುದೋ ಅಗೋಚರ ಶಕ್ತಿಯ ಬಯಕೆಯಂತೆಯೋ ಯಾ ಭಯದಿಂದಲೋ ತನ್ನ ಕರ್ಮವನ್ನು ನಿಸರ್ಗ ಮಾಡುತ್ತಿದೆ ಆ ಅಗೋಚರ ಶಕ್ತಿಯೂ ಕೂಡ ಬಿಡುವಿಲ್ಲದೆ ತನ್ನ ಕರ್ಮವನ್ನು ಮಾಡುತ್ತಿದೆ. ತನ್ನ ಕರ್ಮವನ್ನು ಮಾಡದೆ ಒಂದೇ ಒಂದು ನಿಮಿಷ ತಟಸ್ಥನಾದಲ್ಲಿ ಏನೇನೋ ಅನಾಹುತಗಳಾಗಿ ಪ್ರಪಂಚವೇ ನಾಶವಾದೀತು. ಅಂತು ಫಲದಾಸೆ ಇಲ್ಲದೆ ಇಂಥಾ ಮಹಾತ್ಕಾರ್ಯವು ಬಿಡುವಿಲ್ಲದೆ, ಆ ಶಕ್ತಿಯಿಂದ ನಡೆಯುತ್ತಿದೆ. ನಿಜವಾದ ಕರ್ಮವೆಂದರೆ ಫಲದಾಸೆಯಿಲ್ಲದೆ, ತನ್ನ ಹೆಗಲ ಜವಾಬ್ದಾರಿಯನ್ನರಿತು ಕರ್ಮಕ್ಕೋಸ್ಕರ ಕರ್ಮ ಮಾಡುವದು. ಹಾಗೆ ಮಾಡುವ ನಿಷ್ಕಾಮ ಕರ್ಮದಲ್ಲಡಗಿದೆ ಶಾಂತಿ. ಎಂದು ನಾನು, ನನ್ನ, ನನಗೆ, ಎಂಬ ಸ್ವಾರ್ಥವು ಹೋಗಿ, ಮಾನವನ ಹೃದಯ ವೀಣೆಯಲ್ಲಿ, ಪ್ರೇಮ, ಪ್ರೀತಿ, ವಿಶ್ವಾಸದ ತಂತಿ ಮಿಡಿಯುವದೋ ಅಂದಿನ ವರೆಗೆ ಶಾಂತಿಯೊಂದು ಸ್ವಪ್ನರಾಜ್ಯ. ಸ್ವಾತಂತ್ರ್ಯ, ಸಮತಾ, ಭ್ರಾತೃತ್ವದ ನೆಳಲಿಗೆ ತಂಡ ತಂಡವಾಗಿ ಎಂದು ಮಾನವರು ಬಂದು ಸೇರ ನರೋ ಅಂದು ದೊರೆಯುವದು ಶಾಂತಿ. ಈ ಪ್ರಪಂಚವನ್ನೂ, ಮಾನವ ಗಣವನ್ನೂ, ಕೊಂಚವಾದರೂ ವ್ಯಥೆಯಾಗಲೀ, ಮಾತ್ಸರ್ಯವಾಗಲೀ, ಸ್ವಾರ್ಥಭಾವವಾಗಲೀ ಹುಟ್ಟದ ರೀತಿಯಲ್ಲಿ ಪ್ರೀತಿಸಲು ಕಲಿತಾಗ ಶಾಂತಿಯು ಪ್ರತ್ಯಕ್ಷವಾಗುವದು. ಜೀವನದಲ್ಲಿ ಹಿಂಸೆ, ಅಧಿಕಾರ ತೃಷೆ, ಕಾಳಿನ ಕೊರಗು, ದ್ವೇಷಾಪೇಕ್ಷೆ, ಮೊದಲಾದುವುಗಳಲ್ಲಿ ಮುಳುಗಿ, ಅದರ ಅಂಧಕಾರವು ನಮ್ಮ ಮಾನವತೆಯನ್ನು ಹಾಳುಮಾಡಿದೆ. ಸತ್ಯ, ಸ್ವಾತಂತ್ರ್ಯ ಸಮಾನತೆ, ಸರ್ವರಿಗೂ ಇದೆ – ನಿಷ್ಕಲ ಸತ್ಯ ಪತಾಕೆಯು ಬೆಳಕೆಂದು ಜಗತ್ತಿಗೆ ಬೀಳುವದಿಲ್ಲವೋ ಅಂದಿನ ವರೆಗೆ ಮಾನವನು ಶಾಂತಿಯಿಂದ ವಂಚಿತನೆ. ಪ್ರತಿ ವ್ಯಕ್ತಿಯ ಹೃದಯ ಮಂಟಪದಲ್ಲಿ ಪ್ರೇಮ ರಾಗದ ದೀವಿಗೆ ಎಂದಿನ ವರೆಗೂ ಬೆಳಗದೋ ಅಂದಿನ ವರೆಗೆ ಶಾಂತಿ ಸಾಧಿಸಲಾರದ ವಸ್ತು. ಹೃದಯ ಪರಿವರ್ತನೆಯಾಗಿ, ತನ್ನ ಅಂತರಾಳವನ್ನು ಅರಿತು, ಹೆರರಲ್ಲಿ ತನ್ನ ಪಡಿಯಚ್ಚನ್ನು ಎಂದಿನ ವರೆಗೆ ಕಾಣನೋ ಅಲ್ಲಿಯ ವರೆಗೆ ಮಾನವನಿಗೆ ಶಾಂತಿಯು ಅಶಾಂತಿಯ ಒಗಟು. ತನ್ನಲ್ಲಿ ಶಾಂತಿ ನೆಲೆಸಿದ್ದರೆ ಪರರಲ್ಲಿಯೂ ಶಾಂತಿಯನ್ನು ಕಾಣಬಹುದು. ಹಾಗೆ ದೇಶದಲ್ಲಿ, ಪ್ರಪಂಚದಲ್ಲಿ, ವಿಶ್ವದಲ್ಲಿ ಕಾಣಬಹುದು. ಇದರಿಂದ ಶಾಂತಿಯ ನೆಲೆಗೆ ಮಾನವನ ಹೃದಯ ಪರಿವರ್ತನೆಯೇ ಮಾರ್ಗ.

—

ಸಹಕಾರವೇ ✷ ಜೀವನದ ಏಳಿಗೆಯ ಹೆದ್ದಾರಿ,
ಆದದರಿಂದ ವಿಮೆಯಲ್ಲಿ ಸಹಕಾರ ಪದ್ಧತಿ ಅತ್ಯೋನ್ಯ ಏಳಿಗೆಯ ಸುಭದ್ರತೆಗೆ ಆಧಾರ.

ದಿ ಬೊಂಬಾಯಿ ಕೋಪರೇಟಿವ್ ಇನ್ಶೂರೆನ್ಸ್
ಹೆಡ್ ಆಫೀಸು: —] ಸೊಸೈಟಿ, ಲಿಮಿಟೆಡ್ [ಬೊಂಬಾಯಿ,

1952 ನೇ ಸಾಲಿಗೆ ರಿವರ್ಷನರಿ ಬೋನಸ್ಸು
ಹೋಲ್ ಲೈಫ್ ಸಾವಿರಕ್ಕೆ 11 ರಂತೆ ಎಂಡೋಮೆಂಟ್ ಸಾವಿರಕ್ಕೆ 9 ರಂತೆ

✷ ರಿಂದ 900 ರ ತನಕದ ಪೋಲಿಸಿಗಳು ಹಳ್ಳಿಗರಿಗೊಂದು ವರ ✷

ಎಲ್ಲಾ ಕಡೆಗಳಲ್ಲಿಯೂ ಪ್ರಭಾವವುಳ್ಳ ಏಜಂಟರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಯನ್ನು ದಕ್ಷಿಣ ಕನ್ನಡ,
ಕೊಡಗು ಮತ್ತು ಮೈಸೂರು ಪ್ರಾಂತ್ಯಕ್ಕೆ ಮುಖ್ಯ ಏಜಂಟರಾದ
12-8
ಎಮ್. ಟಿ. ಕೋರ್ಡೆಲ್ ಅಂಡ್ ಕೋ., ಹಂಪನಕಟ್ಟೆ, ಮಂಗಳೂರು, ಇವರಿಂದ ಪಡೆಯಿರಿ.

ಪಾರದ ಕಥೆ.

(೨ನೇ ಪುಟದಿಂದ ಬಂದದ್ದು)

ಯಾವುದೂ ಹೊಳೆಯದು ಹೇಗೆ ಹೊಳೆಯಬೇಕು ?

ಇದ್ದಕ್ಕಿದ್ದಂತೆ ಒಂದು ವಿಷಯ ನೆನಪಾಯಿತು.

ಹೂ ಬೇಗ ತೆಗೆದುಕೊಂಡು ಹೋಗಿ ಇಟ್ಟು ಬರದಿದ್ದರೆ ಹುಡುಗಿ ಅದಕ್ಕಾಗಿ ಕಾದಿರುತ್ತಾಳೆ.

ಆ ಹೂವನ್ನೇ ಮುಡಿಯುತ್ತಾಳೆ. ಬೇರೆ ಹೂವನ್ನು ಮುಡಿಯುವುದಿಲ್ಲ.

ಆ ಮನೆಯಲ್ಲಿ ಅವಳೊಬ್ಬಳೇ ಹೂ ಮುಡಿಯುವುದು. ಅವರ ಮನೆಯಲ್ಲಿ ಹೂ ಗಿಡಗಳಿಲ್ಲ. ಯಾರೂ ತಂದು ಕೊಡುವುದಿಲ್ಲ.

ಆಕೆ ಈ ಹೂವನ್ನೇ ನಂಬಿಕೊಂಡಿರುತ್ತಾಳೆ.

ಕೊಂಡೊಯ್ದು ಕೊಡದಿದ್ದರೆ ಏನು ಮಾಡಬಹುದು ?

ಬರಿ ತಲೆಯಲ್ಲಿ ಹೊರಟಾಳೆ? ಅವಳಿಗದು ಎಂದೂ ಒಪ್ಪದು. ಅವಳನ್ನಾ ರೀತಿ ಎಂದೂ ಆವನು ನೋಡಿಲ್ಲ. ಅವಳೆಂದೂ ಬರಿ ತಲೆಯಲ್ಲಿರಲಾರಳು. ಹೂ ಮುಡಿದೇ ತೀರುವಳು.

ಹೂ ಎಲ್ಲಿ ಬರಬೇಕು ?

ಹೂವಿಗಾಗಿ ಈ ಮನೆಗೆ ಬರಬಹುದು. ಬಂದು ಒಂದು ಹೂ ಕಿತ್ತುಕೊಂಡು ಹೋಗಬಹುದು. ಕೊನೆಗೆ ಕೇಳಿಯಾದರೂ ತೆಗೆದುಕೊಂಡು ಹೋಗಬಹುದು

ಯಾರನ್ನು ಕೇಳಬೇಕು? ಗೇಟ್ ಬಳಿ ಇರುವವರನ್ನು ಕೇಳಬೇಕು.

ತಾನೇ ಅಲ್ಲಿ ನಿಂತಿದ್ದರೆ ?

ಕೇಳಿದಾಗ ಹೂ ಕಿತ್ತು ತಂದು ಅವಳ ಕೈಗೆ ಕೊಡದೆ ತನ್ನಭೀಷ್ಟ ತಿಳಿಸಿದರೆ ?

ಆಗ ಎಲ್ಲವೂ ಸರಿಹೋಗಬಹುದು. ತನ್ನಾಸೆ ನೆರವೇರಬಹುದು.

ನಾಳೆಯೇ ಹಾಗೆ ಮಾಡಬಹುದು.

ಆ ರಾತ್ರಿ ಆತ ಆಕೆಗೆ ಹೂ ಮುಡಿಸಿದ ಕನಸು ಕಂಡ.

• • •

ಬೆಳಗಾಯಿತು. ಗುಲಾಬಿ ಗಿಡದಲ್ಲಿ ಹೂಗಳರಳಿ ನಾನು ತಾನೆಂದು ಸ್ಪರ್ಧಿಸುತ್ತಿದ್ದವು. ಆತ ಅವುಗಳೆಡೆಗೆ ಆಸೆಯಿಂದ ನೋಡಿದ್ದ.

ಚೆನ್ನಾದ ಉಡುಪು ಹಾಕಿಕೊಂಡು ಕಿಟಕಿಯ ಬಳಿ ನಿಂತು ಆತ ನೋಡುತ್ತಿದ್ದ. ಎಂದಿನ ಅಭ್ಯಾಸದಂತೆ ಅಂದು ಹೂ ಕೊಂಡು ಹೋಗಿ ಮೇಜಿನ ಮೇಲಿರಿಸಿರಲಿಲ್ಲ.

ಆಕೆ ಸ್ನಾನ ಮಾಡಿ ಬಂದಳು. ಕೂದಲು ಬಾಚಿಕೊಂಡು ಹೂವಿಗಾಗಿ ಮೇಜಿನ ಕಡೆಗೆ ನೋಡಿದಳು. ಹೂವಿಲ್ಲ.

ಇಂದು ತಡವಾಗಬಹುದೆಂದು ಕೂದಲು ಹಾಗೆ ಗಂಟು ಹಾಕಿಕೊಂಡಳು. ಹೂ ಎಷ್ಟಿದೆಯೆಂದು ನೋಡದೆ ಜಡೆ ಹೇಗೆ ಹಾಕಿಕೊಳ್ಳುವುದು ?

ಸೀರೆಯುಟ್ಟಾಯಿತು—ಇನ್ನೂ ಹೂ ಬಂದಿಲ್ಲ.

ಕುಪ್ಪಸ ತೊಟ್ಟಾಯಿತು—ಇನ್ನೂ ಹೂ ಬರಲಿಲ್ಲ.

ಮುಖಕ್ಕೆ ಸ್ನೋ ಹಚ್ಚಿಕೊಂಡು, ತೆಳ್ಳಗೆ ಪೌಡರು ಹಾಕಿಕೊಂಡು ಕುಂಕುಮ ಇಟ್ಟುಕೊಂಡು ಕನ್ನಡಿ ನೋಡಿ ಮೆಚ್ಚಿಕೊಂಡಾಯಿತು.

ಇನ್ನೂ ಹೂ ಬಂದಿಲ್ಲ.

ಏಕಿಷ್ಟು ತಡ? ಆತ ಇಲ್ಲವೇ? ಮರೆತನೆ?

ಆತ ಕಿಟಕಿಯಲ್ಲಿ ಕಾಣಿಸಿಕೊಂಡ.

ಇಂದೇನು ಎಲ್ಲಾ ವಿಚಿತ್ರ! ಎಂದುಕೊಂಡಳಾಕೆ.

ಆತ ಸಮಯ ಸಮೀಪಿಸಿತೆಂದುಕೊಂಡು ಮಹಡಿಯಿಂದ ಕೆಳಗಿಳಿದು ಮನೆಯ ಬಾಗಿಲಲ್ಲಿ ನಿಂತುಕೊಂಡ.

ಆವನು ಮರೆಯಾದ್ದು ಕಂಡು ಹೂ ತಂದಾನೆಂದು ಆಕೆ ನಿರೀಕ್ಷಿಸಿದಳು.

ಹೂ ಬರಲಿಲ್ಲ.

ಹುಡುಗಿ ಬಂದಾಳೆಂದು ಇವನು ನಿರೀಕ್ಷಿಸಿದ. ಆಕೆ ಬರಲಿಲ್ಲ.

ಗೇಟ್ ಬಳಿ ಬಂದು ನಿಂತುಕೊಂಡು ಕಾಯತೊಡಗಿದ ಗಳಿಗೆಗೊಮ್ಮೆ ಗಡಿಯಾರ ನೋಡುತ್ತಿದ್ದ. ಒಂದೊಂದು ನಿಮಿಷವೂ ಒಂದೊಂದು ಗಂಟೆಯಂತಾಗಿತ್ತು.

ಕಾದೇ ಕಾದ. ಬಹಳ ಹೊತ್ತು ಕಾದ.

ಕೊನೆಗೂ ಆಕೆ ಆ ಮನೆಯಿಂದ ಹೊರಗೆ ಬಂದಳು.

ಈತನ ಎದೆಯ ಬಡಿತ ಹೆಚ್ಚಾಯಿತು. ತಾನಾಡಬೇಕೆಂದು ಗಟ್ಟಿ ಮಾಡಿಟ್ಟುಕೊಂಡಿದ್ದ ಮಾತುಗಳನ್ನು ನೆನಪಿಸಿಕೊಂಡ. ಅವು ಜಾರಿ ಜಾರಿ ಹೋಗುತ್ತಿದ್ದವು. ಇವನು ಎಳೆದೆಳೆದು ಬಿಗಿಹಿಡಿದಿದ್ದ.

ಹುಡುಗಿ ಇವನ ಸಮೀಪವೇ ಬಂದಳು ಕತ್ತೆತ್ತಿ ಅವಳ ಮುಖ ನೋಡಲಾಗದೆ ಮುಖ ಕೆಳಗೆ ಮಾಡಿ ನಿಂತಿದ್ದ.

ಇವನು ನೋಡಬಹುದೆಂದು ಆಕೆ ಕಾದಳು. ಊಹುಂ!

"ಇವತ್ತು ಹೂವೇಕೆ ಕೊಡಲಿಲ್ಲ?" ಅವಳೇ ಮಾತನಾಡಿದ್ದು.

"ನಾ....ನ್ನಾ....ನ್ನ....ನಾ... "

ಹೂವೇ ಹೇಳಲಾರದೆ ಅರ್ಧಕ್ಕೆ ನಿಲ್ಲಿಸಿದ.

"ಈಗಲಾದರೂ ಕೊಡಿ"

"ಓಹೋ....ಓಹೋ.. "

ಆತ ಹೋಗಿ ಮುನ್ನವೇ ನೋಡಿಟ್ಟಿದ್ದ ಹೂವನ್ನು ಬಿಡಿಸಿ ತಂದ. ಈಗ ಆತನಿಗೆ ಎಲ್ಲಿಲ್ಲದ ಧೈರ್ಯ ಬಂದಂತಿತ್ತು.

"ಕೊಡಿ ಇಲ್ಲಿ" ಎಂದಳಾಕೆ.

"ಊಹೂಂ" ಎಂದನೀತ.

"ಅದೇಕೆ?"

ಆತ ಧೈರ್ಯ ಮಾಡಿಯೆಂದ.

"ನಾ....ನಾನೇ....ಮು ·ಮುಡಿಸು"

"ಅಂ!"

"ಮುಡಿಸುತ್ತೇನೆ"

"ಅಬ್ಬಾ! ಎಂಥ ಜನ!"

"ಏಕೆ?.. ಇಷ್ಟು ದಿನ?"

"ನಿಮ್ಮ ಹೂ ಬೇಡ. ಎಂದಿಗೂ ಬೇಡ"

"ನಿಲ್ಲಿ....ನಿಲ್ಲಿ"

ಇಲ್ಲ, ಆಕೆ ನಿಲ್ಲಲಿಲ್ಲ. ಮನೆಗೆ ತಲಪಿ ಅವಳ ಕೋಣೆ ಸೇರುವ ವರೆಗೂ ನಿಲ್ಲಲಿಲ್ಲ.

ಆತನಿಗೆ ಏನು ಮಾಡಲೂ ತಿಳಿಯಲಿಲ್ಲ.

ಕೂಡಲೇ ಹೋಗಿ ಆ ಹೂ ಅವರ ಮನೆಯ ಮೇಜಿನಮೇಲಿಟ್ಟು ಬಂದ. ತನ್ನ ಕಿಟಕಿಯಲ್ಲಿ ನಿಂತು ಆಕೆ ಹೂ ಮುಡಿಯುವದನ್ನು ನೋಡ ಬಯಸಿದ

ಆಕೆ ಹೂ ಮುಡಿಯಲಿಲ್ಲ.

ಮಾರನೇ ದಿನವೂ ಹೂ ಕೊಂಡು ಹೋಗಿ ಇಟ್ಟು ಬಂದ. ಸುಂದರವಾದ ಗುಲಾಬಿ ಹೂ.

ಅದರೆ ಗುಲಾಬಿ ಹುಡುಗಿ ಅದನ್ನು ಮುಡಿಯಲಿಲ್ಲ. ಕಣ್ಣೆತ್ತಿಯೂ ನೋಡಲಿಲ್ಲ.

ಅಂದು ಆಕೆ ಬರಿದಲೆಯಲ್ಲಿ ಹೋಗುವದು ನೋಡಿದ. ಇವನ ಕರುಳರಿಯಿತು. ಎಂದೂ ನೋಡದಿದ್ದ ಆ ದೃಶ್ಯಕ್ಕೆ ಅವನೇ ಕಾರಣ.

ಏಕೆ ಆ ಆಸೆಪಟ್ಟೆ? ಇದ್ದ ಸುಖವನ್ನೂ ಕಳೆದುಕೊಂಡೆ!

ಆಕೆ ಮತ್ತೆಂದೂ ಹೂ ಮುಡಿದುದನ್ನಿವನು ನೋಡಲಿಲ್ಲ. ಗಿಡದ ಹೂವೆಲ್ಲಾ ಅರಳಿ ಒಣಗಿ ನೆಲಕ್ಕೆ ಬಿದ್ದುಹೋಗತೊಡಗಿದವು.

ಅದರ ಜೊತೆಗೇ ಈತನ ಹೃದಯವೂ ಕುದಿಯಿತು.

"ಜನಪ್ರಗತಿ"ಯಿಂದ

ದಿ ಕೆನರಾ ಬ್ಯಾಂಕಿಂಗ್ ಕಾರ್ಪೋರೇಶನ್ ಲಿಮಿಟೆಡ್.

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ ಭಾರತ)

ಆರ್ಥಿಕ ಉಳಿತಾಯ ಯೋಜನೆಗಳಲ್ಲಿ "ಕ್ಯುಮುಲೇಟಿವ್ ಡಿಪೋಜಿಟ್" ಯೋಜನೆಯು ಅತಿ ಪರಿಣಾಮಕಾರಿ ಹಾಗೂ ಅನುಕೂಲವಾದುದು ಯಾವುದಾದರೊಂದು ನಿರ್ದಿಷ್ಟ ಉದ್ದೇಶ ಸಾಧನೆಗೆ, ನಿಯಮಿತ ಕಾಲಕ್ಕೆ ನಿಯಮಿತ ಹಣವನ್ನು ಒಂದು ನಿಯಮಿತ ಅವಧಿಯೊಳಗೆ ಬಡ್ಡಿಯೊಂದಿಗೆ ವಾಪಾಸು ಸಿಗುವಂತೆ ಬ್ಯಾಂಕಿನಲ್ಲಿ ಶೇಖರಿಸಿಡುವುದೇ ಈ ಯೋಜನೆಯ ಮೂಲ ತತ್ವ. ಇದು ಮುಖ್ಯವಾಗಿ ಮಧ್ಯಮ ತರಗತಿಯ ಜನರಿಗೆ ಇಲ್ಲವೆ ನಿಯಮಿತ ಸಂಬಳದ ನೌಕರರಿಗೆ ತಮ್ಮ ಮುದ್ದು ಮಕ್ಕಳ ವಿದ್ಯಾಭ್ಯಾಸ, ಮುಂಜಿ, ಮದುವೆ ಯಾ ಇನ್ನಿತರ ಸದುದ್ದೇಶ ಸಾಧನೆಗಳಿಗೆ ಅತ್ಯನುಕೂಲ ಹಾಗೂ ಅತಿ ಫಲಕಾರೀ ಯೋಜನೆ.

ವಿಶೇಷ ಮಾಹಿತಿಗೆ, ಕೊಡಗು ಸಂಸ್ಥಾನದಲ್ಲಿನ ಈ ಕೆಳಗಣ ನಮ್ಮ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ :

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

THE CANARA BANKING CORPORATION LIMITED.
Estd: 1906] *[H. O, Udipi (S. India)*

ಕೊಡಗು ಪ್ರಾಂತೀಯ ಸಹಕಾರಿ ಮಾರ್ಕೆಟಿಂಗ್ ಫೆಡರೇಷನ್ ಲಿಮಿಟೆಡ್.,

ಹೆಡ್ ಆಫೀಸು :— ವೀರಾಜಪೇಟೆ.

ಶಾಖೆ:—ನ್ಯೂ ಪಬ್ಲಿಕ್ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟಗಳು
2. 12 ನೇ ನಂಬರಿನ ಒಂಟಿ ಕೊಳವಿನ ತೋಟದ ಕೋವಿಗಳು.
3. ಒಂಟಿ ಮತ್ತು ಜೋಡಿ ಕೊಳವಿನ ಕೇಪಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
5. 5/8", 1/2" ಮತ್ತು 3/8" ಕಬ್ಬಿಣದ ಸರಳುಗಳು
6. 2", 1½", 1" ¾" ಮತ್ತು ½" ಕೊಳಾಯಿಗಳು. (G. I. Pipes)
7. 1¼" × 5/16" ಉಕ್ಕಿನ ಪಟ್ಟಿಗಳು (Spring Steel flats)
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
9. ಕೋತಿ ಮತ್ತು ಆನೆ ಮಾರ್ಕಿನ ಸೀಮೆಣ್ಣೆ ಟಿನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)
ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

Edited Printed and Published by P. I. BELLIAPPA at 'KODAGU' Press Mercara, for 'Kodagu' Ltd.,

ಕೊಡಗು

ಹುತ್ತರಿ ಬಂತು'

KODAGU KANNADA WEEKLY MERCARA

ಪಾರದ ಕಥೆ.

(೨ನೇ ಪುಟದಿಂದ ಬಂದದ್ದು)

ಯಾವುದೂ ಹೊಳೆಯದು ಹೇಗೆ ಹೊಳೆಯಬೇಕು ?

ಇದ್ದಕ್ಕಿದ್ದಂತೆ ಒಂದು ವಿಷಯ ನೆನಪಾಯಿತು.

ಹೂ ಬೇಗ ತೆಗೆದುಕೊಂಡು ಹೋಗಿ ಇಟ್ಟು ಬರದಿದ್ದರೆ ಹುಡುಗಿ ಅದಕ್ಕಾಗಿ ಕಾದಿರುತ್ತಾಳೆ.

ಆ ಹೂವನ್ನೇ ಮುಡಿಯುತ್ತಾಳೆ. ಬೇರೆ ಹೂವನ್ನು ಮುಡಿಯುವುದಿಲ್ಲ.

ಆ ಮನೆಯಲ್ಲಿ ಅವಳೊಬ್ಬಳೇ ಹೂ ಮುಡಿಯುವುದು. ಅವರ ಮನೆಯಲ್ಲಿ ಹೂ ಗಿಡಗಳಿಲ್ಲ. ಯಾರೂ ತಂದು ಕೊಡುವುದಿಲ್ಲ.

ಆಕೆ ಈ ಹೂವನ್ನೇ ನಂಬಿಕೊಂಡಿರುತ್ತಾಳೆ.

ಕೊಂಡೊಯ್ದು ಕೊಡದಿದ್ದರೆ ಏನು ಮಾಡಬಹುದು ?

ಬರಿ ತಲೆಯಲ್ಲಿ ಹೊರಟಾಳೆ? ಅವಳಿಗದು ಎಂದೂ ಒಪ್ಪದು. ಅವಳನ್ನಾ ರೀತಿ ಎಂದೂ ಅವನು ನೋಡಿಲ್ಲ. ಅವಳೆಂದೂ ಬರಿ ತಲೆಯಲ್ಲಿರಲಾರಳು. ಹೂ ಮುಡಿದೇ ತೀರುವಳು.

ಹೂ ಎಲ್ಲಿ ಬರಬೇಕು ?

ಹೂವಿಗಾಗಿ ಈ ಮನೆಗೆ ಬರಬಹುದು. ಬಂದು ಒಂದು ಹೂ ಕಿತ್ತುಕೊಂಡು ಹೋಗಬಹುದು. ಕೊನೆಗೆ ಕೇಳಿಯಾದರೂ ತೆಗೆದುಕೊಂಡು ಹೋಗಬಹುದು.

ಯಾರನ್ನು ಕೇಳಬೇಕು ? ಗೇಟ್ ಬಳಿ ಇರುವವನನ್ನು ಕೇಳಬೇಕು.

ತಾನೇ ಅಲ್ಲಿ ನಿಂತಿದ್ದರೆ ?

ಕೇಳಿದಾಗ ಹೂ ಕಿತ್ತು ತಂದು ಅವಳ ಕೈಗೆ ಕೊಡದೆ ತನ್ನಭೀಷ್ಟ ತಿಳಿಸಿದರೆ ?

ಆಗ ಎಲ್ಲವೂ ಸರಿಹೋಗಬಹುದು. ತನ್ನಾಸೆ ನೆರವೇರಬಹುದು.

ನಾಳೆಯೇ ಹಾಗೆ ಮಾಡಬಹುದು.

ಆ ರಾತ್ರಿ ಆತ ಆಕೆಗೆ ಹೂ ಮುಡಿಸಿದ ಕನಸು ಕಂಡ.

• • •

ಬೆಳಗಾಯಿತು. ಗುಲಾಬಿ ಗಿಡದಲ್ಲಿ ಹೂಗಳರಳಿ ನಾನು ತಾನೆಂದು ಸ್ಪರ್ಧಿಸುತ್ತಿದ್ದುವು. ಆತ ಅವುಗಳೆಡೆಗೆ ಆಸೆಯಿಂದ ನೋಡಿದ್ದ.

ಚೆನ್ನಾದ ಉಡುಪು ಹಾಕಿಕೊಂಡು ಕಿಟಕಿಯ ಬಳಿ ನಿಂತು ಅತ್ತ ನೋಡುತ್ತಿದ್ದ. ಎಂದಿನ ಅಭ್ಯಾಸದಂತೆ ಅಂದು ಹೂ ಕೊಂಡು ಹೋಗಿ ಮೇಜಿನ ಮೇಲಿರಿಸಿರಲಿಲ್ಲ.

ಆಕೆ ಸ್ನಾನ ಮಾಡಿ ಬಂದಳು. ಕೂದಲು ಬಾಚಿಕೊಂಡು ಹೂವಿಗಾಗಿ ಮೇಜಿನ ಕಡೆಗೆ ನೋಡಿದಳು. ಹೂವಿಲ್ಲ.

ಇಂದು ತಡವಾಗಬಹುದೆಂದು ಕೂದಲು ಹಾಗೆ ಗಂಟು ಹಾಕಿಕೊಂಡಳು. ಹೂ ಎಷ್ಟಿದೆಯೆಂದು ನೋಡದೆ ಜಡೆ ಹೇಗೆ ಹಾಕಿಕೊಳ್ಳುವುದು ?

ಸೀರೆಯುಟ್ಟಾಯಿತು—ಇನ್ನೂ ಹೂ ಬಂದಿಲ್ಲ.

ಕುಪ್ಪಸ ತೊಟ್ಟಾಯಿತು—ಇನ್ನೂ ಹೂ ಬರಲಿಲ್ಲ.

ಮುಖಕ್ಕೆ ಸ್ನೋ ಹಚ್ಚಿಕೊಂಡು, ಕೆನ್ನೆಗೆ ಪೌಡರು ಹಾಕಿಕೊಂಡು ಕುಂಕುಮ ಇಟ್ಟುಕೊಂಡು ಕನ್ನಡಿ ನೋಡಿ ಮೆಚ್ಚಿಕೊಂಡಾಯಿತು.

ಇನ್ನೂ ಹೂ ಬಂದಿಲ್ಲ.

ಏಕಿಷ್ಟು ತಡ? ಆತ ಇಲ್ಲವೇ? ಮರೆತನೆ ?

ಆತ ಕಿಟಕಿಯಲ್ಲಿ ಕಾಣಿಸಿಕೊಂಡ.

ಇಂದೇನು ಎಲ್ಲಾ ವಿಚಿತ್ರ! ಎಂದುಕೊಂಡಳಾಕೆ.

ಆತ ಸಮಯ ಸಮೀಪಿಸಿತೆಂದುಕೊಂಡು ಮಹಡಿಯಿಂದ ಕೆಳಗಿಳಿದು ಮನೆಯ ಬಾಗಿಲಲ್ಲಿ ನಿಂತುಕೊಂಡ.

ಅವನು ಮರೆಯೊದ್ದು ಕಂಡು ಹೂ ತಂದಾನೆಂದು ಆಕೆ ನಿರೀಕ್ಷಿಸಿದಳು.

ಹೂ ಬರಲಿಲ್ಲ.

ಹುಡುಗಿ ಬಂದಾಳೆಂದು ಇವನು ನಿರೀಕ್ಷಿಸಿದ. ಆಕೆ ಬರಲಿಲ್ಲ.

ಗೇಟ್ ಬಳಿ ಬಂದು ನಿಂತುಕೊಂಡು ಕಾಯತೊಡಗಿದ. ಗಳಿಗೆಗೊಮ್ಮೆ ಗಡಿಯಾರ ನೋಡುತ್ತಿದ್ದ. ಒಂದೊಂದು ನಿಮಿಷವೂ ಒಂದೊಂದು ಗಂಟೆಯಂತಾಗಿತ್ತು.

ಕಾದೇ ಕಾದ. ಬಹಳ ಹೊತ್ತು ಕಾದ.

ಕೊನೆಗೂ ಆಕೆ ಆ ಮನೆಯಿಂದ ಹೊರಗೆ ಬಂದಳು.

ಈತನ ಎದೆಯ ಬಡಿತ ಹೆಚ್ಚಾಯಿತು. ತಾನಾಡಬೇಕೆಂದು ಗಟ್ಟಿಮಾಡಿಟ್ಟುಕೊಂಡಿದ್ದ ಮಾತುಗಳನ್ನು ನೆನಸಿಕೊಂಡ. ಅವು ಜಾರಿ ಜಾರಿ ಹೋಗುತ್ತಿದ್ದುವು. ಇವನು ಎಳೆದೆಳೆದು ಬಿಗಿಹಿಡಿದಿದ್ದ.

ಹುಡುಗಿ ಅವನ ಸಮೀಪವೇ ಬಂದಳು. ಕತ್ತೆತ್ತಿ ಅವಳ ಮುಖ ನೋಡಲಾಗದೆ ಮುಖ ಕೆಳಗೆ ಮಾಡಿ ನಿಂತಿದ್ದ.

ಇವನು ನೋಡಬಹುದೆಂದು ಆಕೆ ಕಾದಳು. ಊಹುಂ!

"ಇವತ್ತು ಹೂವೇಕೆ ಕೊಡಲಿಲ್ಲ?" ಅವಳೇ ಮಾತನಾಡಿದ್ದು.

"ನಾ....ನ್ನಾ....ನ್ನ....ನಾ...."

ಹೇಳಲಾರದೆ ಅರ್ಧಕ್ಕೆ ನಿಲ್ಲಿಸಿದ.

"ಈಗಲಾದರೂ ಕೊಡಿ"

"ಓಹೋ....ಓಹೋ..."

ಆತ ಹೋಗಿ ಮುನ್ನವೇ ನೋಡಿಟ್ಟಿದ್ದ ಹೂವನ್ನು ಬಿಡಿಸಿ ತಂದ. ಈಗ ಆತನಿಗೆ ಎಲ್ಲಿಲ್ಲದ ಧೈರ್ಯ ಬಂದಂತಿತ್ತು.

"ಕೊಡಿ ಇಲ್ಲಿ" ಎಂದಳಾಕೆ.

"ಊಹೂಂ" ಎಂದನೀತ.

"ಅದೇಕೆ?"

ಆತ ಧೈರ್ಯ ಮಾಡಿಯೆಂದ.

"ನಾ....ನಾನೇ....ಮು...ಮುಡಿಸು"

"ಆಂ!"

"ಮುಡಿಸುತ್ತೇನೆ"

"ಅಬ್ಬಾ! ಎಂಥ ಜನ!"

"ಏಕೆ?...ಇಷ್ಟು ದಿನ?"

"ನಿಮ್ಮ ಹೂ ಬೇಡ. ಎಂದಿಗೂ ಬೇಡ"

"ನಿಲ್ಲಿ....ನಿಲ್ಲಿ"

ಇಲ್ಲ, ಆಕೆ ನಿಲ್ಲಲಿಲ್ಲ. ಮನೆಗೆ ತಲುಪಿ ಅವಳ ಕೋಣೆ ಸೇರುವ ವರೆಗೂ ನಿಲ್ಲಲಿಲ್ಲ.

ಆತನಿಗೆ ಏನು ಮಾಡಲೂ ತಿಳಿಯಲಿಲ್ಲ.

ಕೂಡಲೇ ಹೋಗಿ ಆ ಹೂ ಅವರ ಮನೆಯ ಮೇಜಿನಮೇಲಿಟ್ಟು ಬಂದ. ತನ್ನ ಕಿಟಕಿಯಲ್ಲಿ ನಿಂತು ಆಕೆ ಹೂ ಮುಡಿಯುವದನ್ನು ನೋಡ ಬಯಸಿದ.

ಆಕೆ ಹೂ ಮುಡಿಯಲಿಲ್ಲ.

ಮಾರನೇ ದಿನವೂ ಹೂ ಕೊಂಡು ಹೋಗಿ ಇಟ್ಟು ಬಂದ. ಸುಂದರವಾದ ಗುಲಾಬಿ ಹೂ.

ಆದರೆ ಗುಲಾಬಿ ಹುಡುಗಿ ಅದನ್ನು ಮುಡಿಯಲಿಲ್ಲ. ಕಣ್ಣೆತ್ತಿಯೂ ನೋಡಲಿಲ್ಲ.

ಅಂದು ಆಕೆ ಬರಿದಲೆಯಲ್ಲಿ ಹೋಗುವದು ನೋಡಿದ. ಇವನ ಕರುಳಿರಿಯಿತು. ಎಂದೂ ನೋಡದಿದ್ದ ಆ ದೃಶ್ಯಕ್ಕೆ ಅವನೇ ಕಾರಣ.

ಏಕೆ ಆ ಆಸೆಪಟ್ಟೆ? ಇದ್ದ ಸುಖವನ್ನೂ ಕಳೆದುಕೊಂಡೆ!

ಆಕೆ ಮತ್ತೆಂದೂ ಹೂ ಮುಡಿದುದನ್ನಿವನು ನೋಡಲಿಲ್ಲ. ಗಿಡದ ಹೂವೆಲ್ಲಾ ಅರಳಿ ಒಣಗಿ ನೆಲಕ್ಕೆ ಬಿದ್ದುಹೋಗತೊಡಗಿದವು.

ಆದರ ಜೊತೆಗೇ ಈತನ ಹೃದಯವೂ ಕುದಿಯಿತು.

"ಜನಪ್ರಗತಿ"ಯಿಂದ

ದಿ ಕೆನರಾ ಬ್ಯಾಂಕಿಂಗ್ ಕಾರ್ಪೋರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ಆರ್ಥಿಕ ಉಳಿತಾಯ ಯೋಜನೆಗಳಲ್ಲಿ "ಕ್ಯುಮುಲೇಟಿವ್ ಡಿಪೋಜಿಟ್" ಯೋಜನೆಯು ಅತಿ ಪರಿಣಾಮಕಾರಿ ಹಾಗೂ ಅನುಕೂಲವಾದುದು. ಯಾವುದಾದರೊಂದು ನಿರ್ದಿಷ್ಟ ಉದ್ದೇಶ ಸಾಧನೆಗೆ, ನಿಯಮಿತ ಕಾಲಕ್ಕೆ ನಿಯಮಿತ ಹಣವನ್ನು ಒಂದು ನಿಯಮಿತ ಅವಧಿಯೊಳಗೆ ಬಡ್ಡಿಯೊಂದಿಗೆ ವಾಪಾಸು ಸಿಗುವಂತೆ ಬ್ಯಾಂಕಿನಲ್ಲಿ ಶೇಖರಿಸಿಡುವುದೇ ಈ ಯೋಜನೆಯ ಮೂಲ ತತ್ವ. ಇದು ಮುಖ್ಯವಾಗಿ ಮಧ್ಯಮ ತರಗತಿಯ ಜನರಿಗೆ ಇಲ್ಲವೆ ನಿಯಮಿತ ಸಂಬಳದ ನೌಕರರಿಗೆ ತಮ್ಮ ಮುದ್ದು ಮಕ್ಕಳ ವಿದ್ಯಾಭ್ಯಾಸ, ಮುಂಜಿ, ಮದುವೆ ಯಾ ಇನ್ನಿತರ ಸದುದ್ದೇಶ ಸಾಧನೆಗಳಿಗೆ ಅತ್ಯನುಕೂಲ ಹಾಗೂ ಅತಿ ಫಲಕಾರೀ ಯೋಜನೆ.

ವಿಶೇಷ ಮಾಹಿತಿಗೆ, ಕೊಡಗು ಸಂಸ್ಥಾನದಲ್ಲಿನ ಈ ಕೆಳಗಣ ನಮ್ಮ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ :

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

THE CANARA BANKING CORPORATION LIMITED.

Estd: 1906] [*H. O, Udipi (S. India)*

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು :— ವೀರಾಜಪೇಟೆ.

ಶಾಖೆ:—ನ್ಯೂ ಪಬ್ಲಿಕ್ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟಗಳು
2. 12 ನೇ ನಂಬರಿನ ಒಂಟಿ ಹೊಳವಿನ ತೋಟದ ಕೋವಿಗಳು.
3. ಒಂಟಿ ಮತ್ತು ಜೋಡಿ ಹೊಳವಿನ ಕೇಪಿನ (ತುಂಬಿನ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚೆಲ್ಲು ಮತ್ತು ಕೇಪುಗಳು.
5. $\frac{5}{8}$", $\frac{1}{2}$" ಮತ್ತು $\frac{3}{8}$" ಕಬ್ಬಿಣದ ಸರಳುಗಳು
6. 2", $1\frac{1}{4}$", 1" $\frac{3}{4}$" ಮತ್ತು $\frac{1}{2}$" ಕೊಳಾಯಿಗಳು. (G. I. Peps)
7. $1\frac{3}{4}$" × $\frac{5}{16}$" ಉಕ್ಕಿನ ಪಟ್ಟಿಗಳು (Spring Steel flats)
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಪಂಪುಗಳು.
9. ಕೋತಿ ಮತ್ತು ಆನೆ ಮಾರ್ಕಿನ ಸೀಮೆಂಟ್ ಟಿನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

Edited Printed and Published by P. I. BELLIAPPA at 'Kodagu' Press Mercara, for 'Kodagu' Ltd.,

ಕೊಡಗು

ಪುತ್ತರಿ ಬಂತು !

2

KODAGU KANNADA WEEKLY MERCARA

ವಾರದ ಕಥೆ.

ಯಾರಿವಳು!!

ಮಿಸ್ ಪ್ರೇಮಲತಾ
ಅಮ್ಮತ್ತಿ

ಅದೊಂದು ರವಿವಾರದ ಸಂಜೆ. ಮುಸಲಧಾರೆಯಂತೆ ಎಡೆಬಿಡದೆ ನಾಲ್ಕಾರು ದಿನಗಳಿಂದ ಸುರಿಯುತ್ತಿದ್ದ ಮಳೆಯು ಪಕ್ಕನೆ ನಿಂತಿತ್ತು. ಹೊಂಬಿಸಿಲು ಸುತ್ತಲೂ ಪಸರಿಸಿ ಆಕಾಶವು ನೀಲಾಂಬರಧಾರಿಯಾಗಿ ಕಾಣುತಿತ್ತು. ಮಳೆಯ ಕಾರಣ ಮನೆಯಲ್ಲಿ ಕೂತೂ ಕೂತು ಕೈಕಾಲುಗಳಿಗೆ ಜಡ್ಡು ಹಿಡಿದಿತ್ತು. ಯಾವಾಗ ಈ ಮಳೆಯು ನಿಲ್ಲುವುದೋ ನಾನು ಯಾವಾಗ ಶುಭ್ರ ವಸ್ತ್ರಧಾರಿಣಿಯಾಗಿ ಠೀವಿಯಿಂದ ಸಂಜೆಯ ತಿರುಗಾಟಕ್ಕೆ ಹೋಗುವುದೋ ಎಂದು ಮನದಲ್ಲೇ ತವಕಿಸುತ್ತಿದ್ದೆ. ಅಂಥಾ ನನ್ನ ಹೆಬ್ಬಯಕೆಯನ್ನು ಪೂರೈಸಲು ಮಳೆದೇವರು ನನ್ನ ಕರೆಗೆ ಓಗೊಟ್ಟಿದ್ದ.

ನಾನು ಕೆಲವು ದಿವಸಗಳಿಂದ ಮನೆಯಿಂದ ಹೊರಟದ ಕಾರಣ ಆ ದಿನ ಎಂದಿಗಿಂತ ಸ್ವಲ್ಪ ಮೊದಲೇ ಹತ್ತಾರು ಸಲ ಕನ್ನಡಿಯ ಮುಂದೆ ನಿಂತು ಸುಗಂಧ ತೈಲ ಹಚ್ಚಿ ತಲೆಬಿಡಿಸಿ, ಒಳ್ಳೆಯ ವಸ್ತ್ರಗಳಿಂದ ಅಲಂಕೃತಳಾದೆ. 'ಹಾಳು ಹುಡುಗಿ ಎಷ್ಟು ಸರ್ತಿ ಕನ್ನಡಿ ನೋಡಿಕೊಳ್ಳುವಳಪ್ಪಾ! ಪೌಡರು, ಪೇಸ್ಟ್, ಕ್ರೀಮ್ ಜೊತೆಗೆ ಸುಗಂಧ ತೈಲ ತಲೆಗೆ, ಕಡೆಗೂ ಸಾಲದೆ ತುಟಿಗೂ ಕೆನ್ನೆಗೂ ಏನೇನೋ ರಂಗು! ಸೀರೆ ಸರಿಪಡಿಸಿದಷ್ಟೂ ಸಾಲದು. ನೆರಿಗೆ ನೋಡಿದಷ್ಟೂ ತೀರದು. ಈಗಿನ ಕಾಲದ ಮಕ್ಕಳೇ!! ನಿಮ್ಮ ಮುಖವನ್ನೇಕೆ ಬದಲು ಮಾಡುವದಿಲ್ಲ. ಯಾವಾಗಲಿನ ಮುಖವನ್ನೇ ತೋರಿಸಿಕೊಂಡು ನಡಿಯುವಿರಲ್ಲಾ?' ಎಂದು ನನ್ನ ಅಮ್ಮ ಒಳಗಿಂದ ಚುಚ್ಚು ಹಾಸ್ಯ ಮಾಡುತ್ತಿದ್ದಳು. ಅಂಥಾ ಮಾತುಗಳು ನನಗೆ ಸಾಮಾನ್ಯವಾಗಿತ್ತು. ನಾನು ಸಾಧ್ಯವಾದ ರೀತಿಯಿಂದ ಸಿಂಗರಿಸಿಕೊಂಡೆ. ಕೈಯಲ್ಲಿ ಬಿಸಿಲು ಕೊಡೆಯನ್ನು ಹಿಡಿದು ಚರ್ ಚರ್ ಎನ್ನುವ ಒಂದು ಚಪ್ಪಲಿ ಸಿಕ್ಕಿಸಿ ನನ್ನ ಜೊತೆಯವರೊಡನೆ ಒಳ್ಳೆ ಬಿಂಕದ ಸಿಂಗಾರಿಯಂತೆ ಹೊರಟೆ.

ಈ ದಿನ ಎಲ್ಲಿಗೆ ಯಾವ ಕಡೆಗೆ–ಬೆಟ್ಟದ ಕಡೆಗೋ ಹೊಳೆಯ ಕಡೆಗೋ ಹೋಗುವುದಾ ವಕ್ಕೊ ಎಂದು ಚಿಕ್ಕ ಚಿಕ್ಕ ತರ್ಕಗಳಿಂದ ದಾರಿನಡೆದೆವು. ಕಡೆಗೆ ನಾವು ಹೊಳೆಯ ಕಡೆಗೆ ಹೋಗಿ ಮಳೆಯಿಂದ ತುಂಬಿದ ಹೊಳೆಯನ್ನೇ ನೋಡುವಾ. ಇಷ್ಟು ಇದ್ದರೆ ಬಸ್ಸು ಎಂದು ನನ್ನ ಠೀವಿಯಿಂದಲೇ ಮಾತನ್ನು ಚಲಾಯಿಸಿದೆ. ಜೊತೆಯವರೂ ಹೂಂಗುಟ್ಟಿದರು. ಕಾರಣ ಅವರ್ಯಾರಿಗಿಂತಲೂ ನಾನೇ ಸ್ವಲ್ಪ ಧೈರ್ಯ ಮತ್ತು ಖಂಡ ತುಂಡ ಮಾತಿನವಳು. ಕಡೆಗೆ ಹೊಳೆಯ ಹತ್ತಿರ ಬಂದೆವು.

ಹೊಳೆಯ ಕರೆಯಲ್ಲಿ ಒಂದು ಈಶ್ವರ ದೇವಾಲಯ. ಅಲ್ಲಿ ಆ ದಿನ ಏನೋ ಪೂಜೆ. ಬ್ರಾಹ್ಮಣರ ಮಂತ್ರ ಪಠಣ, ಗಣಗಣ ಗಂಟೆಗಳ ಶಬ್ದ, ಹೊಗೆ, ಊದುಬತ್ತಿಗಳ ಘಮ ಘಮ ವಾಸನೆ, ಹಲವು ಜನರ ಗದ್ದಲ, ಹೆಂಗಸರ ಮಾತು, ಮಕ್ಕಳ ಚೀರಾಟ ಎಲ್ಲವೂ ಕೇಳಿಬರುತಿತ್ತು. ಇತ್ತ ಕಡೆ ಹೊಳೆಯು ತುಂಬಿದ ಠೀವಿಯಿಂದ ಸಿಕ್ಕಿದ ಮರ ಕಲ್ಲುಗಳನ್ನು ಕೊಚ್ಚಿಕೊಂಡು ವಿಚಿತ್ರ ಶಬ್ದ ಮಾಡುತ್ತಾ ಹರಿಯುತ್ತಿತ್ತು. ಹೊಳೆಯನ್ನು ನೋಡಲು ಸಂತೋಷವೂ ಭಯವೂ ಆಗುತಿತ್ತು.

ನನ್ನ ಜೊತೆಯವರು ಹೊಳೆಯನ್ನು ಕ್ಷಣಕಾಲ ನೋಡಿ ಕಡೆಗೆ ದೇವಸ್ಥಾನದ ಪೂಜೆಗಾಗಿ ತೆರಳಿದರು. ನಾನು ಮಾತ್ರ ಅಲ್ಲೇ ನೀರಿನ 'ಭವ'ವನ್ನು ನೋಡುತ್ತಾ ನಿಂತೆನು. ಹಾಗೆ ಸುತ್ತ ನೋಡುತ್ತಿರುವಾಗ ನೇರಳ ಮರದ ಬುಡದಲ್ಲಿ ಏನೋ ಒಂದು ಬಿಳೀ ವಸ್ತು ಕಂಡಂತಾಯಿತು. ಅದೇನು! ಎಂದು ಸ್ವಲ್ಪ ಹೆದರಿದವಳಾದರೂ ಪ್ರಮಾಣಿಸಿ ನೋಡಬೇಕೆಂದು ಆ ಕಡೆಗೆ ಹೊರಟೆನು. ಹತ್ತಿರ ಹತ್ತಿರ ಹೋದಂತೆ ಅದು ಒಂದು ಹೆಂಗಸೆಂದು ಭಾಸವಾಯಿತು. ಧೈರ್ಯದಿಂದ ಹತ್ತಿರ ಹೋದೆನು. ನಿಜವಾಗಿಯೂ ಅಲ್ಲಿ ಒಬ್ಬ ಶುಭ್ರ ವಸ್ತ್ರಧಾರಿಣಿಯಾದ ಹೆಂಗಸು ನೀರಿನ ರಭಸವನ್ನೇ ದಿಟ್ಟಿಸಿ ನೋಡುತ್ತಾ ಯಾವುದೋ ಯೋಚನೆಯಲ್ಲಿದ್ದಳು. ನಾನು ಹೋದದ್ದು ಅವಳಿಗೆ ಅರಿಯಲೇ ಇಲ್ಲ. ನಾನು ಅವಳನ್ನು ಅಡಿಯಿಂದ ಮುಡಿಯವರೆಗೆ ನಿರೀಕ್ಷಿಸಿದೆ. ಚೆಲ್ವಿಕೆಯಲ್ಲಿ ಆಕೆ ಕಡಿಮೆ ಇರಲಿಲ್ಲ. ನೋಡಿದಾಕ್ಷಣ ಆಕೆ ದೊಡ್ಡ ಸಿರಿವಂತಿಕೆಯ ಗರ್ಭದಲ್ಲಿ ಜನಿಸಿದವಳೂ ಹೆಚ್ಚು ವಿದ್ಯಾಸಂಪನ್ನಳೂ ಎಂದು ಹೇಳಬಹುದಾಗಿತ್ತು. ಅವಳ ಮುಖದಲ್ಲಿ ಅಪೂರ್ವ ಗಂಭೀರ ತೇಜಸ್ಸಿತ್ತು. ಆಕೆಯ ಸೌಂದರ್ಯ ನಮ್ಮಲ್ಲಿ ಹಲವರಿಗಿರುವಂತೆ ಇಲ್ಲದ ವೇಷ ಒಯ್ಯಾರಕ್ಕೆ ಬಲಿ ಬೀಳದೆ ತನ್ನ ರೂಪಲಾವಣ್ಯಗಳಿಂದ ಗಂಡಸರ ಮನಸನ್ನು ಕುವಿಚಾರಕ್ಕೆ ಎಳೆಯಗೊಳ್ಳದೆ ವಿಲಕ್ಷಣ ಗಾಂಭೀರ್ಯದಿಂದ ಅವರ ಕುವಿಚಾರಗಳನ್ನು ತಡೆದು ಅವರಲ್ಲಿಯೂ ಸದ್ವಿಚಾರಗಳನ್ನು ಪ್ರೇರೇಪಿಸುವಂತಿತ್ತು.

ನನಗೆ ಅವಳನ್ನು ಕಂಡು ನಾಚಿಕೆಯಾಯಿತು. ನನ್ನ ಡೌಲಿನ ಆಡಂಭರವನ್ನು ನೆನೆದು ಮನಸು ಚಿಕ್ಕದಾಯಿತು. ಆಕೆಯ ಮುಂದೆ ಅಪರಾಧಿಯಂತಾದೆ. ಆಕೆಯೊಡನೆ ಹೇಗೆ ಮಾತಾಡಲಿ ನನ್ನ ಈ ಲೇಸುಗಳನ್ನೆಲ್ಲಾ ಎಲ್ಲಿ ಬಿಸುಡಲಿ, ಇವಳೇನು ವನದೇವತೆಯೋ ಯಾ ಜಲದೇವತೆಯೋ ಎಂದು ನನ್ನೊಳಗೆ ವಿಚಾರಿಸುತಿದ್ದೆ.

ಕಡೆಗೆ ಧೈರ್ಯಮಾಡಿ, 'ಏನಮ್ಮಾ ನೀವು, ನಿನಗೆ ಪೂಜೆ ಪ್ರಾರ್ಥನೆ ಏನೂ ಬೇಡವೇ?' ಎಂದು ಸಂಕೋಚದಿಂದಲೇ ಕೇಳಿದೆ.

ಆಕೆ ಮಿಂಚಿನಂತೆ ನನ್ನನ್ನು ದಿಟ್ಟಿಸಿ 'ಯಾರಿಗೆ ಪೂಜೆ,? ಯಾರಿಗಾಗಿ ಪ್ರಾರ್ಥನೆ?' ಎಂದು ಕೇಳಿದಳು. ಆ ವಾಣಿಯಲ್ಲಿ ಒಂದು ಸ್ಥಿರತೆ ಗಾಂಭೀರ್ಯವಿತ್ತು.

ನಾನು–'ದೇವರಿಗೆ' ಎಂದೆ.

ಅವಳು–ದೇವರು? ಯಾವ ದೇವರು? ಎಲ್ಲಿರುವನವನು? ಕಲ್ಲಿನ ವಿಗ್ರಹದಲ್ಲೆ?' ಎಂದು ಒಳ್ಳೆ ಬಿಗುವಿನಿಂದಲೇ ಮಾತಾಡಿದಳು. ಇವಳನ್ನು ನಾನೇಕೆ ಕೆಣಕಿದೆನಪ್ಪಾ ಎಂದು ಮನ ಹವಗುಟ್ಟಿದರೂ 'ಅಲ್ಲವಮ್ಮಾ ದೇವರು ಇಲ್ಲವೆನ್ನುವೆಯೂ? ಕಣ್ಣಿಗೆ ಕಾಣನೆಂಬ ಕಾರಣದಿಂದ ಆತನ ಅಸ್ತಿತ್ವವನ್ನು ಇಲ್ಲವೆನ್ನಲಾಗುವದೇ? ಗಾಳಿ ಕಣ್ಣಿಗೆ ಕಾಣುವದಿಲ್ಲವೆಂದು ಗಾಳಿ ಇಲ್ಲ ಎನ್ನುವದು ಸರಿಯೆ?' ಎಂದು ಕೇಳಿದೆ. ನನ್ನ ಮಾತಿನಲ್ಲಿ ಆಕೆಗೆ ಉತ್ತರಿಸಲಾರದ ಪ್ರಶ್ನೆ ಇದೆಯೆಂಬ ಗರ್ವ ನನ್ನ ವಾಣಿಯಲ್ಲಿತ್ತು.

ಅವಳು ನನ್ನೆಡೆಗೆ ಕುತೂಹಲದ ದೃಷ್ಟಿಯೊಂದನ್ನು ಬೀರಿ, 'ತಂಗೀ, ನಿನಗಿರುವ ದೇವರ ಮೇಲಿನ ವಿಶ್ವಾಸಕ್ಕೆ ನಾನು ಆತಂಕವಾಗಲಾರೆ. ಆದರೆ ನನ್ನ ಮಟ್ಟಿಗೆ ಈ ಪ್ರಪಂಚದಲ್ಲಿ ನನಗಿಂಥಾ ಹಿರಿದಾದ ದೇವರಿಲ್ಲ. ಅರ್ಥಾತ್ ಮಾನವನೇ ಈ ಜಗತ್ತಿನ ದೇವನು. ಆತನೇ ಈ ಜಗತ್ತಿನ ಪಿಶಾಚಿಯೂ ಕೂಡ! ತನ್ನ ಸ್ವಯತ್ನದಿಂದ ಆತನು ದೇವನ ಅಂತಸ್ತಿಗೂ ಏರಬಲ್ಲನು. ಇಲ್ಲವೇ ಪ್ರಾಣಿಯ ವರ್ಗಕ್ಕೂ ಇಳಿಯಬಲ್ಲನು.' ಎಂದಳು.

'ಹಾಗಾದರೆ ಮನುಷ್ಯನನ್ನೇ ಸರ್ವಶಕ್ತನೆಂದು ತಿಳಿಯುವದರಿಂದ ಆತನು ಮಾಡಿದ್ದೆಲ್ಲವೂ ದೇವರ ಇಚ್ಛೆಯೆಂದಾಗದೇ?' ಎಂದು ನಾನು ಪ್ರಶ್ನಿಸಿದೆ.

ಆಕೆ ಮನಮೋಹಕ ಮುಗುಳು ನಗೆಯೊಂದನ್ನು ಬೀರಿ, 'ತಂಗೀ, ಮನುಷ್ಯನಲ್ಲಿ ಮನುಷ್ಯನಿಗೆ ವಿಶ್ವಾಸ ಪ್ರಥಮ ಬೇಕು. ತನ್ನಲ್ಲಿ ತನಗೆ ವಿಶ್ವಾಸವಿಲ್ಲದವನು ಯಾವ ದೇವರ ಮೇಲೂ ವಿಶ್ವಾಸವಿಡಲಾರನು. ಈ ದೇಹವನ್ನೇ ದೇವಸ್ಥಾನವೆಂದೂ, ಆತ್ಮವನ್ನೇ ಭಗವಂತನೆಂದೂ ತಿಳಿದು ತನ್ನ ದಿನನಿತ್ಯದ ಕೆಲಸವನ್ನು ಭಗವಂತನ ಪೂಜೆ, ಪ್ರಾರ್ಥನೆಯೆಂದು ಯಾರು ಮಾಡುವನೊ ಆತನೇ ದೇವನು. ಆದ್ದರಿಂದಲೇ 'ನಿನ್ನೊಳು ನೀನು ತಿಳಿದು ನೋಡು' ಎಂದು ಸಿದ್ಧಾಂತಿಗಳು ಹೇಳುವದಾಗಿದೆ.' ಎಂದು ಹೇಳಿದಳು. ಆಕೆಯು ಈ ಮಾತು ಹೇಳುತ್ತಿರಲು ಆಕೆಯ ಕಣ್ಣಿನಲ್ಲಿ ಅಪೂರ್ವ ತೇಜಸ್ಸು ಹೊಳೆಯುತಿತ್ತು. ನನಗೆ ಆ ಕಣ್ಣುಗಳನ್ನು ನೋಡಲಾಗುತ್ತಿರಲಿಲ್ಲ. ನಾನು ತಲೆ ತಗ್ಗಿಸಿ ನೆಲವನ್ನು ನೋಡುತ್ತಿದ್ದೆ.

ಸ್ವಲ್ಪ ಹೊತ್ತು ಕಳೆದ ನಂತರ ನಾನು 'ನೀನಾರು, ನಿನ್ನ ಹೆಸರೇನು? ನಿನಗೆ ತಂದೆ ತಾಯಿ. ಸಂಸಾರವಿಲ್ಲವೇ?' ಎಂದು ಪ್ರಶ್ನಿಸಿದೆ.

'ಅದರ ತನಿಖೆ ನಿನಗೇಕೆ?' ಎಂದು ಆಕೆ ಸ್ವಲ್ಪ ಬಿಗು ಸ್ವರದಲ್ಲಿ ಹೇಳಿದಳು.

ಆಕೆಯ ಬಗ್ಗೆ ನನ್ನಲ್ಲಿ ಹುಟ್ಟಿದ್ದ ಗೌರವ, ಭಕ್ತಿಗಳನ್ನು ಹೊರಚೆಲ್ಲಿ ವಿನಯದಿಂದ, ಕಾತರಭಾವದಿಂದ 'ನಿನಗೂ ಒಂದು ಕುಟುಂಬ ಇರಬೇಕು. ನಿನ್ನನ್ನೂ ಹಡೆದ ತಾಯಿ ತಂದೆಯರಿರಬೇಕು. ಅದನ್ನರಿಯಲು ಪ್ರಶ್ನಿಸಿದ ನನ್ನನ್ನು ಕ್ಷಮಿಸು. ಅದರಿಂದ ನಿನಗೆ ದುಃಖವಾಗಿದ್ದರೆ ಮನ್ನಿಸು' ಎಂದು ಹೇಳಿ ಸುಮ್ಮನಾದೆ.

ನನ್ನ ಮಾತನ್ನು ಕೇಳಿ ಪಾಪ ಎನ್ನಿಸಿರಬೇಕು. ಆಕೆ ದೂರದ ದಿಗಂತದತ್ತ ನೋಡುತ್ತಾ ಕನವರಿಸುವಂತೆ ಹೇಳಿದಳು, 'ನನಗೂ ಕುಟುಂಬವಿತ್ತು. ತಂದೆ ತಾಯಿಗಳ ಪ್ರೀತಿ, ವಿಶ್ವಾಸಗಳಲ್ಲಿ ನಾನೂ ಬೆಳೆದವಳು. ಆದರೆ ಈಗ ನನ್ನ ಪಾಲಿಗೆ ಆ ಕುಟುಂಬ ಪ್ರೇಮ, ಪ್ರೀತಿಗಳು ನಷ್ಟವಾಗಿದ್ದರೂ ವಿಶಾಲತೆಯನ್ನು ಪಡೆದು ಇಡೀ ಜಗತ್ತೇ ಇಂದು ನನ್ನ ಕುಟುಂಬವಾಗಿದೆ. ಮಾನವಗಣವೇ ನನ್ನ ತಂದೆ ತಾಯಿ, ಅಣ್ಣ ತಂಗಿಯರಾಗಿದ್ದಾರೆ. ಈ ವಿಶ್ವಪುರುಷನೆನಿಸಿದ ಮಾನವ ಕೋಟಿಯ ಪರಿಚಯ, ಸೇವೆಯೇ ನನ್ನ ಪ್ರಾರ್ಥನೆ ಪೂಜೆಗಳಾಗಿವೆ. ಅದರಲ್ಲೇ ನನಗೆ ಆನಂದ. ಅಲ್ಲೇ ನನಗೆ ಭಗವಂತನ ದರ್ಶನವಾಗುತ್ತಿದೆ'

ಆಕೆಯ ಈ ಮಾತುಗಳು ನನಗರ್ಥವಾಗಲಿಲ್ಲ. ಬಹುಶಃ ಯಾವುದೋ ಸಂತಾಪಕ್ಕೀಡಾಗಿ ತಲೆ ಕೆಡಿಸಿಕೊಂಡವಳಿರಬೇಕೆನಿಸಿತು. ನಾನು ಈ ರೀತಿ ಯೋಚನಾ ಮಗ್ನಳಾಗಿದ್ದುದರಿಂದ ಆಕೆ ನನ್ನ ಬಳಿಯಿಂದ ಹೋದುದು ತಿಳಿಯಲೇ ಇಲ್ಲ. ಆಕೆಯನ್ನೊಂದು ಕಡೆಯ ಪ್ರಶ್ನೆ ಕೇಳಬೇಕೆಂದು ನೋಡಿದಾಗ ಮರಕಾಡುಗಳ ಮಧ್ಯೆಯ ದೂರದ ದಾರಿಯಲ್ಲಿ ಆಕೆಯ ಬಿಳಿ ಆಕಾರವು ಮುಂದೆ ಮುಂದೆ ಹೋಗುತಿತ್ತು. ಆಕೆ ಕಣ್ಮರೆಯಾಗುವ ವರೆಗೆ ಆಕೆಯನ್ನು ನೋಡಿ ದೇವಸ್ಥಾನಕ್ಕೆ ಹಿಂತಿರುಗಿದೆ. ಆಕೆಯೊಡನೆ ಮಾತಾಡುತ್ತಿದ್ದ ನನ್ನನ್ನು ಕಂಡಿದ್ದ ನನ್ನ ಗೆಳತಿಯರು 'ಯಾರವಳು?' ಎಂದು ಕೇಳಿದರು. ಆದರೆ ನನಗೆ ಗೆಳತಿಯರ ಪ್ರಶ್ನೆ ಕೇಳುತ್ತಿರಲಿಲ್ಲ. ಬದಲು ಆಕೆ ಹೇಳಿದ 'ನಿನ್ನೊಳು ನೀನು ತಿಳಿದು ನೋಡು' ಎಂಬ ವಾಕ್ಯ ನನ್ನ ಹೃದಯದಲ್ಲಿ ಉತ್ತರದ ರೂಪದಲ್ಲಿ ಪ್ರತಿಧ್ವನಿಸುತಿತ್ತು.

Office of the Asst. Commissioner
of Coorg, Mercara.
Dated 7—11—1953.

NOTICE

It is hereby notified for general information that a 1951 model Murphy radio set with six valves will be sold in public auction on Friday, the 27th November 1953 in front of the District Magistrate's office at 11 A. M. Successful bidders should pay the bid amount immediately after the sale. The sale is subject to confirmation by the Govt. Further particulars may be had from the office of the Assistant Commissioner.

A. KUSHALAPPA,
For Asst Commissioner.

THE CHIEF COMMISSIONER OF COORG, NOTIFICATION.

No. A. 21563/D. N. C. I. 1/53. *Mercara the 10th November 1953.*

The Following Notification of the delimitation commission, India, is republished for information of the General Public.-

DELIMITATION COMMISSION, INDIA, NOTIFICATION.

No. 58/20/53. *New Delhi, dated the 25th November, 1953.*

In persuance of clauses (a) and (b) of sub-section (3) of section 8 of the Delimitation Commission Act, 1952 (LXXXI of 1952), the Delimitation Commission hereby publishes its proposals in respect of the distribution of the seats allotted to the Legislative Assembly of the State of Coorg to territorial constituencies and Delimitation thereof in accordance with the provisions of sub section (2) of the said section and specifies the 25th November 1953, as the date on or after which the proposals will be further considered by it.

Any objections or suggestions in regard to these proposals should reach the Secretary of the Delimitation Commission (No. 2, Prithviraj Road. New Delhi)before the said date, It would facilitate prompt consideration if they are in English.

The Commission will hold a public sitting in Legislative Assembly Hall at Bangalore on Wednesday the 2nd December, 1953, at 10 A. M. when it will further consider these proposals and the objections and suggestions in respect thereof received by it before the 25th November. 1953.

PROPOSALS:-The territorial constituencies into which the State of Coorg shall be divided for the purpose of elections to the Legislative Assembly of the State, the extent of each constituency, the number of seats allotted to each constituency and the number of seats, if any, reserved for the Scheduled Castes or, as the case may be, the Scheduled Tribes, in each constituency shall be as shown in the following Table:

TABLE-ASSEMBLY CONSTITUENCIES.

Sl. No	Name of Constituency	Extent of Constituency	Total No of seats	Seats reserved: Scheduled castes	Seats reserved: Scheduled tribes
1	2	3	4	5	6
		NORTH COORG TALUK.			
1.	SANIVARSANTHE	Sanivarsanthe Hobli.	2	1	Nil
2.	SOMWARPET NORTH	Somwarpet Nad (excluding Belur, Basavanalli Kusubur, Yelkanur, Negalele-Karkalli, Belagunda, Kirgandur, Biligeri, Thakeri, Aigur, Garagandur, Masagodu, and Nerugalele Villages.	1	Nil.	Nil
3.	SOMWARPET SOUTH	Belur-Basavanalli, Kusubur, Yelknur, Negalele-Karkalli, Belagunda Kirgandur, Biligeri, Thakeri, Aigur, Gargandur, Masagodu and Nerugalele villages in Somwarpet nad.	1	Nil	Nil
4.	FRASERPET	Fraserpet Hobli.	1	Nil	Nil
.	SUNTICOPPA	Sunticoppa Nad and Hamiyala, Mukkodlu, Cherala-srimangala, and Erale Valamudi villages in Mercara nad.	2	1	Nil
.	MERCARA	Mercara Municipality.	1	Nil	Nil
.	MURNAD	Maragodu, Hosakeri, Sodlur-kattemadu, Kiggalu, Kanthur, Muthamudi, Badaga, Hoddur, Hodavada, Kumbaladalu, Arvathoklu, Kaggodlu, Biligeri. Heravanad, Hakathur, and Kadagada, villages in Mercara nad and Bettakeri village in Bhagamandla nad.	1	Nil	Nil
8.	SAMPAJE	Kalur, Hebbatageri, Makkandur, Karnangeri, Ibnivalavadi, Kalakeri, Nidugane, Katakeri, Mekeri, Made, Galibeedu, Monnangeri, Bettathur, Sampaje, Chembu and Peraje villages and Kadamakal Estate in Mercara nad.	1	Nil	Nil
9.	BHAGAMANDLA	Bhagamandla nad (excluding Bettakeri village)	1	Nil	Nil
		SOUTH COORG TALUK.			
10.	NAPOKLU	Napoklu nad (excluding Balamuri and Konanjageri villages)	1	Nil	Nil
11.	BEDDUNAD	Balamuri and Konanjageri villages in Napoklu nad and Kunjilageri, Nalkeri, Mythadi, Devanageri, Chembebellyur, Arameri, Kadangamarur. Bellumadu, and Arapattu villages in Virajpet nad.	1	Nil	Nil
12.	VIRAJPET	Virajpet Municipality and Kadanur, Kuklur Aimangala, Maggula, Betoli and Arji villages in Virajpet nad.	1	Nil	Nil
13.	VEDENALKNAD	Nariandada, Chelavara, Karada, Palangala, Kedamullur, Kottoli, Heggala, Badaga, Rudragappe Bittangala. Nangala and Balugodu villages in Virajpet nad	1	Nil	Nil
14.	AMMATHI	Ammathi nad (excluding Hosur, Mekur Hosakeri, Badagabanangala, Chennangi (including forest) Chennayanakote and Maldare villages.	2	1	Nil
15.	BETTIATHNAD	Gonikoppal town & Kaikeri, Mayamudi Aruvathoklu, Nallugote. Kachur (Cunda). Athur and Hathur villages in Ponnampet nad, and Hosur, Mekur Hosakeri, Badagabanangala. Chennayanakote Chennangi (including forest) and Maldare villages in Ammathi nad.	2	Nil	1
16.	PONNAMPET	Ponnampet panchayat and Kirgur, Mathur, Nallur, Besagur, Bekkesodlur, Bilur, Kottageri, Devanur, Balele, Dhanugala, Nokya, (including forest), Hebbale, Kalhal and Halligattu. villages in Ponnampet nad	2	Nil	1
17.	HUDIKERI	Hudikeri town and Hudikeri, Hysodlur, Belloor, Harihara, Baliyamundur, Chickkamundur, Mugutageri and Begur villages, in Srimangala nad and Shettigeri and Kuttandi villages in Ponnampet nad.	1	Nil	Nil
18.	SRIMANGALA	Srimangala nad (excluding Hudikeri town and Hudikeri, Hysodlur, Belloor, Harihara, Ballyamundur, Chikkamundur, Mugutageri and Begur villages) and Nittur, Kurkal and Kanur, villages and Hatgat forest area in Ponnampet nad.	2	Nil	1

BY ORDER OF THE CHIEF COMMISSIONER,

(Sd) N. S. RAMACHANDRA.
Chief Secretary.
Chief Electrol Officer, Coorg.

P. S. SUBRAMANIAN,
Secretary.

ಕೊಡಗಿನ ಧನಲಕ್ಷ್ಮಿಯ ಕತೆ ನಿರಾಧಾರವಾದುದು.

ಮೈಸೂರಿನ ಮೆಡಿಕಲ್ ಸರ್ವಿಸಿನ ಡೈರೆಕ್ಟರವರ ಅಭಿಪ್ರಾಯ

ಕೊಡಗಿನ ಅಚ್ಚರಿಯ ಕನ್ಯೆಯೆಂದು ವಿಖ್ಯಾತಳಾಗಿದ್ದ ಧನಲಕ್ಷ್ಮಿಯು ಬೇರೆ ವ್ಯಕ್ತಿಗಳಂತೆಯೇ ಸಾಮಾನ್ಯ ಜೀವನದವಳೆಂದೂ ಅವಳಲ್ಲಿ ಆಶ್ಚರ್ಯಪಡಬೇಕಾದುದೇನೂ ಇಲ್ಲವೆಂದೂ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಆಕೆಯನ್ನು ಪರೀಕ್ಷಿಸಿದ ಡಾಕ್ಟರುಗಳು ಅಭಿಪ್ರಾಯಪಟ್ಟಿದ್ದಾರೆ. ಮೈಸೂರು ವೈದ್ಯಶಾಖೆಯ ಡೈರೆಕ್ಟರಾದ ಡಾ. ರಾಮಲಿಂಗರೆಡ್ಡಿಯವರು ಈ ವಿಚಾರದಲ್ಲಿ ಒಂದು ಹೇಳಿಕೆ ಹೊರಡಿಸುತ್ತಾ ಹೀಗೆ ಹೇಳಿದರು.

"ಆಸ್ಪತ್ರೆಗೆ ಆಕೆ ದಾಖಲ್ಮಾಡಲ್ಪಟ್ಟ ಮೂರನೆ ದಿನದ ಬೆಳಿಗ್ಗೆ ಧನಲಕ್ಷ್ಮಿಯು ಸುಮಾರು ೮ ಔನ್ಸು ನೀರನ್ನು ತಾನಾಗಿಯೇ ಕುಡಿದುದಲ್ಲದೆ ನಂತರ ಕಾಫಿಯನ್ನೂ ಕುಡಿದಳು. ಸಾಯಂಕಾಲವಾಗುವಾಗ ಆಕೆ ಅನ್ನ ಬೇಕೆಂದು ಕೇಳಿದಳು. ಕೊಟ್ಟದ್ದೆಲ್ಲವನ್ನೂ ಆಕೆ ಚೆನ್ನಾಗಿ ತಿಂದು ಯಾವುದೇ ಅನಾನುಕೂಲತೆ ಇಲ್ಲದೆ ಅರಗಿಸಿಕೊಳ್ಳುತ್ತಿರುವಳು. ಈಗ ಎಲ್ಲರಂತೆ ಆಕೆ ಆಹಾರ ಸೇವಿಸುತ್ತಿರುವಳು."

ಕಳೆದ ಹದಿನಾರು ತಿಂಗಳುಗಳಿಂದ ಅನ್ನನೀರಿಲ್ಲದೆ ಜೀವಿಸುತ್ತಿರುವ 'ಅಚ್ಚರಿಯ ಕನ್ಯೆ' ಎನಿಸಿದ್ದ ಆಕೆಯು ಎಲ್ಲರಂತೆ ಸಾಮಾನ್ಯಳೆಂಬುದು ಇದರಿಂದ ವಿಧಿತವಾಯಿತು.

ಡಾ. ರೆಡ್ಡಿಯವರು ತಮ್ಮ ಹೇಳಿಕೆಯನ್ನು ವಿಶದ ಪಡಿಸುತ್ತಾ ಹೀಗೆ ಹೇಳುತ್ತಾರೆ. "ಯಾರಿಗೂ ಕಾಣದಂತೆ ಗುಟ್ಟಿನಲ್ಲಿ ಆಕೆ ಆಹಾರ ಸೇವಿಸುತ್ತಿರಬೇಕೆಂದು ನನ್ನ ಅಭಿಪ್ರಾಯವಾಗಿದೆ. ಆಕೆಯು ಅನೇಕ ತಿಂಗಳುಗಳ ವರೆಗೆ ಅನ್ನ ನೀರಿಲ್ಲದೆ ಜೀವಿಸುತ್ತಿದ್ದಳೆಂಬ ಪ್ರಚಾರವನ್ನು ಆಸಕ್ತ ಜನರು ತಮ್ಮ ಗುರಿಯ ಸಾಧನೆಗಾಗಿ ಮಾಡುತ್ತಿದ್ದಿರಬೇಕೆಂದು ನಮಗನಿಸುತ್ತದೆ. ಆಕೆಯು ಇತರ ಸಾಮಾನ್ಯ ವ್ಯಕ್ತಿಯಂತೆಯೇ ಆಹಾರವನ್ನು ಅರಗಿಸಿಕೊಳ್ಳಬಲ್ಲಳು.

ಪ್ರಥಮವಾಗಿ ಅಕ್ಟೋಬರ್ ತಾ. ೧೦ ರಲ್ಲಿ ಆಕೆಯನ್ನು ನಾವು ಕಂಡಾಗ ಪತ್ರಿಕೆಗಳಲ್ಲಿ ಪ್ರಕಟವಾದಂತೆ ಆಕೆ ಅನೇಕ ತಿಂಗಳುಗಳಿಂದ ಅನ್ನಾಹಾರವಿಲ್ಲದೆ ಜೀವಿಸುತ್ತಿದ್ದವಳೆಂದು ನಮಗೆ ಕಾಣಲಿಲ್ಲ. ನಾವು ಆಕೆಯನ್ನು ಆಸ್ಪತ್ರೆಯ ಸ್ಪೆಶಲ್ ವಾರ್ಡಿನಲ್ಲಿಟ್ಟು ಆಕೆಯನ್ನು ಯಾರೂ ಕಾಣದಂತೆ ಬಾಗಿಲು ಬಿಗಿದಿಟ್ಟು ಆಕೆಯ ತಂದೆ ತಾಯಿಯರೂ ಕೂಡ ಸಂಬಂಧಿಸಿದ ಡಾಕ್ಟರರ ಅನುಮತಿಯಿಲ್ಲದೆ ಆಕೆಯನ್ನು ಕಾಣಬಾರದೆಂದು ವಿಧಿಸಿ, ಸ್ನಾನದ ಕೋಣೆಗೆ ಬೀಗ ಹಾಕಿಸಿ, ನರ್ಸುಗಳಿಗೆ ಎಚ್ಚರಿಕೆ ಕೊಟ್ಟು ಭದ್ರ ಕಾವಲಿರಿಸಿದೆವು. ಕೋಣೆಯಲ್ಲಿ ಒಂದು ಗ್ಲಾಸಿನಲ್ಲಿ ಕೆಲವು ಔನ್ಸ್ ನೀರನ್ನು ಮಾತ್ರ ಇಟ್ಟಿದ್ದೆವು. ಹೀಗೆ ಕೋಣೆಯಲ್ಲಿಟ್ಟ ೨೪ ಮತ್ತು ೪೮ ಗಂಟೆಯೊಳಗೆ ಆಕೆಯೇ ಒಪ್ಪಿಕೊಳ್ಳುವಂತೆ ಆಕೆಯಲ್ಲಿ ಹಸಿವಿನ ಚಿಹ್ನೆ ತೋರಿಬಂದುದಲ್ಲದೆ ದಿನಕ್ಕೆ ೨ ಪೌಂಡುಗಳಂತೆ ಆಕೆಯ ಭಾರ ಕಡಿಮೆಯಾಗತೊಡಗಿತು. ಮೂರನೇ ದಿನದ ಬೆಳಿಗ್ಗೆ ಆಕೆ ೮ ಔನ್ಸಿನಷ್ಟು ನೀರು ತಾನಾಗಿಯೇ ಕುಡಿದಳು. ಅನಂತರ ಕಾಫಿ ಬೇಕೆಂದು ಕೇಳಿದಳು. ನಂತರ ಸರಾಗವಾಗಿ ಕೊಟ್ಟುದೆಲ್ಲವನ್ನೂ ತಿನ್ನತೊಡಗಿದಳು."

ಈ ರೀತಿ ಆಕೆಯ ಬಗ್ಗೆ ಪ್ರಚಾರವಾಗಿದ್ದ ಆಶ್ಚರ್ಯಕರ ಸಂಗತಿಯು ಪೊಳ್ಳೆಂದು ತಿಳಿದ ನಂತರ ಡಾ. ರೆಡ್ಡಿಯವರು, "ಹೇಳಲ್ಪಟ್ಟ ನಿನ್ನ ಕಾಯಿಲೆ ವಾಸಿಯಾಯಿತು. ಇನ್ನು ನೀನು ಮನೆಗೆ ಹೋಗಬಹುದೆಂ"ದು ಹೇಳಲು ಆಕೆಯ ತಂದೆಯು ಇನ್ನೂ ಎರಡು ದಿನ ಆಸ್ಪತ್ರೆಯಲ್ಲಿರಬೇಕೆಂದು ಕೇಳಿಕೊಂಡರಂತೆ. ಆಕೆಯು ಸುಮಾರು ೩೬ ದಿನ ಆಸ್ಪತ್ರೆಯಲ್ಲಿದ್ದು ಈಗ ಬಿಡುಗಡೆ ಹೊಂದಿದ್ದಾಳೆ.

ಆಕೆ ಇರುವ ಕೋಣೆಗೆ ಡಾಕ್ಟರರ ಅಪ್ಪಣೆ ವಿನಾ ತಂದೆ ತಾಯಿಯರು ಹೋಗಕೂಡದೆಂದು ನಿರ್ಬಂಧಿಸಿದಾಗ ಆಕೆಯ ಪೋಷಕರು ಅತೃಪ್ತಿ ಸೂಚಿಸಿದರೆಂದೂ ಇದರಿಂದ ಆಕೆಯ ಗುಟ್ಟು ಅವರಿಗೆ ತಿಳಿದಿತ್ತೆಂದೂ ಡಾ. ರೆಡ್ಡಿಯವರು ಅಭಿಪ್ರಾಯಪಟ್ಟಿದ್ದಾರೆ.

ಈ ಮೇಲಿನ ವಿಚಾರಗಳು ಪ್ರಕಟವಾದ ನಂತರ ಧನಲಕ್ಷ್ಮಿಯ ಸಹೋದರ ನಾಣ್ಯಯ್ಯ ಎಂಬವರು ಪತ್ರಿಕಾ ಪ್ರತಿನಿಧಿಗಳೊಡನೆ ಹೀಗೆ ಹೇಳಿರುವರು. "ಧನಲಕ್ಷ್ಮಿಯ ಬಾಯಲ್ಲಿ ಒಂದು ತರ ಹಸುರು ಮತ್ತು ಅರಸಿನ ಬಣ್ಣದ ಜೊಲ್ಲು ತೋರುತ್ತಿತ್ತು. ಆ ಜೊಲ್ಲು ಪ್ರಾರಂಭವಾದಾಗ ಆಕೆಗೆ ಆಹಾರದ ಮೇಲೆ ಜಿಗುಪ್ಸೆ ಬರುತ್ತಿತ್ತು. ಅಲ್ಲದೆ ತಿಂದುದನ್ನು ವಾಂತಿಮಾಡುತ್ತಿದ್ದಳು. ಆಗ ಆಕೆ ಯಾವ ಆಹಾರವನ್ನೂ ಸೇವಿಸುತ್ತಿರಲಿಲ್ಲ. ಹೀಗೆ ಕೆಲವು ದಿನ ಯಾ ವಾರಗಳು ಕಳೆದ ನಂತರ ಆಕೆಗೆ ಹಸಿವು ಬಾಯಾರಿಕೆಗಳು ಬರುತ್ತಿದ್ದವು. ಆಕೆಯು ಎಲ್ಲರಂತೆ ಇರುತ್ತಿದ್ದಳು" ಎಂದಿರುವರು. ಈ ಚಕ್ರ ಸುತ್ತುತಿತ್ತೆಂದೂ ಈಗ ಆಕೆ ಆಹಾರ ಸೇವಿಸುತ್ತಿದ್ದರೂ ಪುನಹ ಆಕೆ ಆಹಾರ ಬಿಡಬಹುದೆಂದೂ ಅವರ ಅಭಿಪ್ರಾಯ.

ಧನಲಕ್ಷ್ಮಿಯು ಮೈಸೂರಿಗೆ ಬಂದಿದ್ದಾಳೆ. ಆಕೆ ಕೊಡಗಿಗೆ ಬರುವದಿಲ್ಲವೆಂದೂ ನರ್ಸಿಂಗ್ ತರಬೇತು ಪಡೆದು ಎಲ್ಲರಂತೆ ಜೀವಿಸಲು ಇಚ್ಛಿಸುತ್ತಿರುವಳೆಂದೂ ವರದಿಯಾಗಿದೆ. ವಿಕ್ಟೋರಿಯಾ ಆಸ್ಪತ್ರೆಯ ಸುಪರಿಂಟೆಂಡೆಂಟ್ ಡಾ. ಪಿ. ಕೃಷ್ಣರಾಯರ ಹೇಳಿಕೆಯಂತೆ ಆಸ್ಪತ್ರೆ ಸೇರುವಾಗ ಇದ್ದ ಆಕೆಯ ೧೧೨ ಪೌಂಡು ಭಾರವು ಈಗ ೧೧೮ಕ್ಕೆ ಏರಿದೆಯೆಂದೂ ತಿಳಿದುಬಂದಿದೆ. ಕೇವಲ ಎರಡು ದಿನಗಳ ವರೆಗೆ ಆಕೆ ಉಪವಾಸವಿರಲಾರದ್ದನ್ನು ನೋಡುವಾಗ ಆಕೆಯು ಪ್ರಚಾರ ಮಾಡಲ್ಪಟ್ಟಿದಂತೆ ತಿಂಗಳುಗಟ್ಟಲೆ ಅನ್ನಾಹಾರವಿಲ್ಲದಿದ್ದಳೆಂದು ನಂಬುವದು ಸಾಧ್ಯವಿಲ್ಲವೆಂದು ಕೃಷ್ಣರಾಯರು ಹೇಳಿರುವರು.

ವೀರಾಜಪೇಟೆಗೆ

'ಕೊಡಗು' ಏಜೆಂಟರು

ಶ್ರೀ ಟಿ. ಎನ್. ಗೋವಿಂದರಾಜು

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು :— ವೀರಾಜಪೇಟೆ.

ಶಾಖೆ :— ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟಗಳು
2. 12 ನೇ ನಂಬರಿನ ಒಂಟಿ ನಳಿಗೆಯ ತೋಟದ ಕೋವಿಗಳು.
3. ಒಂಟಿ ಮತ್ತು ಜೋಡಿ ನಳಿಗೆಯ ಕೇಪಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
5. $\frac{5}{8}''$, $\frac{1}{2}''$ ಮತ್ತು $\frac{3}{8}''$ ಕಬ್ಬಿಣದ ಸರಳುಗಳು
6. $2''$, $1\frac{1}{4}''$, $1''$ $\frac{3}{4}''$ ಮತ್ತು $\frac{1}{2}''$ ಕೊಳಾಯಿಗಳು. (G. I. Peps)
7. $1\frac{3}{4}'' \times \frac{5}{16}''$ ಉಕ್ಕಿನ ಪಟ್ಟಿಗಳು (Spring Steel flats)
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
9. ಕೋತಿ ಮತ್ತು ಆನೆ ಮಾರ್ಕಿನ ಸಿಮೆಂಟ್ ಟಿನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ. ಬಿ. ಬೆಳ್ಯಪ್ಪ, (ಪ್ರೆಸಿಡೆಂಟ್)

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,61,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	16,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಲೆಕ್ಕ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	3-4-0
1 ವರುಷದಿಂದ 5 ವರ್ಷಗಳ ವರೆಗೆ	,,	4-4-0
5 ವರುಷ ಮತ್ತು ಮೇಲ್ಪಟ್ಟ ಅವಧಿಗೆ	,,	4-12-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ & ಖಜಾನ್ಚಿ.

ನೀವು ನನ್ನನ್ನು ನಾಸ್ತಿಕನೆನ್ನಿ, ನಿರಾಶಾವಾದಿಯೆನ್ನಿ, ಏನೆಂದು ಬೇಕಾದರೂ ಕರೆದುಕೊಳ್ಳಿ. ನಾನು ಪವಾಡಗಳಲ್ಲಿ, ಅಚ್ಚರಿಯ ವಿಚಾರಗಳಲ್ಲಿ, ವಿಮರ್ಶೆ, ಕಾರ್ಯಕಾರಣಗಳಿಗೆ ಸಿಲುಕದ ವಿಷಯಗಳಲ್ಲಿ ನಂಬಿಕೆ ಇಲ್ಲದವನು. ಆದರೆ ನಮ್ಮ ಸಮಾಜದಲ್ಲಿ ಮೂಢ ನಂಬಿಕೆ ಹೆಚ್ಚಿದೆ. ವಿಮರ್ಶಿಸದೆ ನಂಬುವ, ವಿವೇಚನೆ ಮಾಡದೆ ಕುರಿಗಳಂತೆ ವರ್ತಿಸುವ ಬಹು ಜನರಿದ್ದಾರೆ. ಇದಕ್ಕೆ ನೂರಾರು ನಿದರ್ಶನಗಳನ್ನು ಕೊಡಬಹುದು. ಈ ಜನರ ಮೂಢ ನಂಬಿಕೆಯನ್ನು ತಮ್ಮ ಬೇಳೆಬೇಯಿಸುವ ಸಾಧನವಾಗಿ ಉಪಯೋಗಿಸಿಕೊಳ್ಳುವವರೂ ಇಲ್ಲವೆಂದಲ್ಲ.

ಹೇಗೂ ಇತ್ತೀಚೆಗಿನ ವರ್ಷಗಳಲ್ಲಿ ಕೊಡಗು ಎರಡು ವಿಚಾರಗಳಿಗೆ ವಿಖ್ಯಾತವಾಗಿದೆ. ಒಂದು ಹೆಚ್ಚು ಬೆಳೆ ಬೆಳೆಸುವ ಅಖಿಲ ಭಾರತ ರೆಕಾರ್ಡನ್ನು ಮುರಿದು 'ಕೃಷಿಪಂಡಿತ' ಬಿರುದಾಂಕಿತರಾದ ಶ್ರೀ ಸಂಗಯ್ಯನವರ ಕರ್ಮಕುಶಲತೆ. ಮತ್ತೊಂದು ವರ್ಷದ ವರೆಗೆ ಅನ್ನಾಹಾರ, ನೀರನ್ನು ಮುಟ್ಟದೆ ಆರೋಗ್ಯಕರವೂ ಉಪಯುಕ್ತವೂ ಆದ ಜೀವನ ನಡೆಸುತ್ತಿದ್ದಳೆಂದು ನಂಬಿದ್ದ ಧನಲಕ್ಷ್ಮಿಯ ಅದ್ಭುತ ಪವಾಡ.

ಸಂಗಯ್ಯನವರ ಕಾರ್ಯಕುಶಲತೆ, ಸಾಧಿಸಿದ ಸಾಧನೆ, ಮೊದಲಾದ ವಿಚಾರ ನಾನು ವಿವರಿಸುವ ಅಗತ್ಯವಿಲ್ಲ. ಇಡೀ ಕೊಡಗಿನ ಜನರಿಗೆ ಅದು ತಿಳಿದಿದೆ. ಸಂಗಯ್ಯನವರಿಗೂ ತನ್ನ ಅತ್ಯಾಶ್ಚರ್ಯಕರ ಜಯದ ಅರಿವಿದೆ. ಅದು ಹಳೆಯ ಮಾತು. ಅವರ ಜಗತ್ ಖ್ಯಾತಿಯನ್ನು ಪಡೆದು ಆಧುನಿಕ ವಿಜ್ಞಾನ ಮತ್ತು ವೈದ್ಯಕೀಯ ತಜ್ಞರನ್ನು ಬೆರಗುಗೊಳಿಸಿದ 'ಅಚ್ಚರಿಯ ಕನ್ಯೆ' ಧನಲಕ್ಷ್ಮಿಯ ವಿಚಾರ ನಾಲ್ಕು ಗೆರೆ ಬರೆಯಬೇಕೆನಿಸಿದೆ.

ಮೇಲೆ ಹೇಳಿದಂತೆ ಪ್ರಕೃತಿಗೆ ವಿರುದ್ಧವಾದುದನ್ನು, ವಿವೇಚನೆಗೆ ನಿಲುಕದ್ದನ್ನು ನಂಬುವವನು ನಾನಲ್ಲದ್ದರಿಂದ ಪತ್ರಿಕೆಗಳೂ, ಜವಾಬ್ದಾರಿ ವ್ಯಕ್ತಿಗಳೂ, ಏನೇ ಹೇಳಿಕೊಂಡರೂ 'ಪವನ ಭಕ್ಷಿಣಿ' ಧನಲಕ್ಷ್ಮಿಯ ನಿರಾಹಾರ ಜೀವನದ ವಿಚಾರದಲ್ಲಿ ನನಗೆ ವಿಶ್ವಾಸವಾಗಿರಲಿಲ್ಲ. ಈ ನನ್ನ ಅವಿಶ್ವಾಸಕ್ಕೆ ಬೆಂಬಲಕೊಡುವಂತೆ ಆಕೆಯ ವಿಚಾರದಲ್ಲಿ ಅನೇಕ ಅಪಸ್ವರಗಳು ಆಗಾಗ ಕೇಳಿಬರುತಿದ್ದವು. ಒಮ್ಮೆ ಆಕೆ ನೀರುಕುಡಿದಳೆಂದೂ, ಒಮ್ಮೆ ಕಾಫಿ ಕುಡಿದಳೆಂದೂ ಒಮ್ಮೆ ಆಕೆ ಊಟ ಮಾಡಿದಳೆಂದೂ ವಾರ್ತೆಗಳು ಬಂದು ನನ್ನ ಸಂಶಯವನ್ನು ಬಲಗೊಳಿಸುತ್ತಿದ್ದವು. ಉದಾಹರಣೆಗೆ ಆಕೆ ಮಡಿಕೇರಿ ಆಸ್ಪತ್ರೆಯಲ್ಲಿ ಇದ್ದಾಗ ತಾ. ೧೦–೧೧–೫೩ ರ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ 'ಧನಲಕ್ಷ್ಮಿಯು ತಾ. ೭–೧೧–೫೩ ರ ಮಧ್ಯಾಹ್ನದಿಂದ ಊಟ ಮಾಡಲು ಪ್ರಾರಂಭಿಸಿದ್ದಾಳೆ. ರಾತ್ರೆ ಊಟ ಮಾಡಿದ್ದಾಳೆ. ಮಾರಣೆ ಬೆಳಗ್ಗೆ ಕಾಫಿ ಕುಡಿದಿದ್ದಾಳೆ' ಎಂಬ ವರ್ತಮಾನ ಪ್ರಕಟವಾಗಿತ್ತು. ಹೀಗೆ ಆಕೆ ಆಹಾರ ತೆಗೆದುಕೊಂಡುದು ನಿಜವೆಂಬುದು ಸ್ವತಹ ಪರಿಶೀಲನೆಯಿಂದ ಮತ್ತೆ ನನಗೆ ತಿಳಿದುಬಂದು ನನ್ನ ಸಂಶಯ ಇನ್ನಷ್ಟು ಹೆಚ್ಚಾಗಿತ್ತು.

ಆದರೆ ಇಂಥಾ ಪವಾಡಗಳನ್ನು ದೊಡ್ಡದು ಮಾಡಿ ಅದರ ಮುಚ್ಚಿನಲ್ಲಿ ಏನೋ ಸಾಧಿಸಲೆತ್ನಿಸುವ ಜನರಿರುತ್ತಾರೆ. 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ಪ್ರಕಟವಾದ ವಾರ್ತೆಯನ್ನು ಸುಳ್ಳೆಂದು ಹೇಳುತ್ತಾ ಒಂದು ಪತ್ರಿಕೆಯು ತಾ. ೧೭-೧೧-೫೩ ರ ತನ್ನ ಸಂಚಿಕೆಯಲ್ಲಿ ಹೀಗೆ ಬರೆಯಿತು: 'ಪೂರ್ವ ಜನ್ಮದ ಸುಕೃತದಿಂದ ಈ ಶಕ್ತಿಯು ಧನಲಕ್ಷ್ಮಿಗೆ ಬಂದಿರಬೇಕು. ಇವಳನ್ನು ತತ್ವಗುರುವಿನ ಸತ್ಸಂಗಕ್ಕೆ ಬಿಟ್ಟು ದೇಶೋದ್ಧಾರ ಶಕ್ತಿ ಇವಳಿಗೆ ಬರುವಂತೆ ಮಾಡಬೇಕು. ಈಕೆಯು ಆಹಾರ ತೆಗೆದುಕೊಳ್ಳಲು ಪ್ರಾರಂಭಿಸಿದ್ದಾಳೆ ಎಂಬ ನಿಜವಲ್ಲದ ವರ್ತಮಾನವನ್ನು ಮದ್ರಾಸ್ ಪತ್ರಿಕೆಗೆ ಅದರ ಕೊಡಗಿನ ಬಾತ್ಮಿದಾರರು ಬರೆದಿರುವರು' ಈ ರೀತಿಯ ಕುರುಡು ವಿಶ್ವಾಸವನ್ನೂ, ತತ್ವಹೀನ ಭಕ್ತಿಯನ್ನೂ ಉತ್ಪಾದಿಸಿ ಜನತೆಯ ವಿವೇಚನಾ ಶಕ್ತಿಯನ್ನು ಕುಂಠಿತಗೊಳಿಸುವದು ಸಮಾಜದ ಹಿತದೃಷ್ಟಿಯಿಂದ ಖಂಡನೀಯವಾದುದು.

ಜನ ಮರುಳೋ? ಜಾತ್ರೆ ಮರುಳೋ?

ಲೇ:-- " ಕಾವ್ಯೇರಿ "

ಅನ್ನಾಹಾರ, ನೀರುಗಳಿಲ್ಲದೆ ಒಂದು ವ್ಯಕ್ತಿ ಆರೋಗ್ಯಕರವಾಗಿ ಜೀವಿಸುತ್ತಿದೆಯೆಂಬುದು ಇಂದಿನ ಅನ್ನಾಹಾರಗಳ ಅಭಾವದ ಕಾಲದಲ್ಲಿ ಪ್ರಾಮುಖ್ಯವೂ, ಆಶ್ಚರ್ಯಕರವೂ ಆದ ವಾರ್ತೆ. ಅಂತೆಯೇ ಧನಲಕ್ಷ್ಮಿಯ ವಾರ್ತೆ ಹಿಂದೂದೇಶದ ಉದ್ದಗಲಕ್ಕೆ ಹರಡಿದುದಲ್ಲದೆ, ಸಾಗರಗಳನ್ನು ದಾಟಿ ಜಗತ್ತಿನ ಇತರ ರಾಷ್ಟ್ರಗಳಿಗೂ ಮುಟ್ಟಿತು. ಚಿಕ್ಕದಾಗಿ ಯಾರಿಗೂ ಗೋಚರಿಸದಿದ್ದ ಕೊಡಗು ಎಲ್ಲಿದೆ, ಅಲ್ಲಿಗೆ ಹೋಗಲು ದಾರಿ ಯಾವುದು ಎಂದು ಎಲ್ಲರೂ ಕೇಳತೊಡಗಿದರು.

ಧನಲಕ್ಷ್ಮಿಯು ಮೈಸೂರು ಚಲುವಾಂಬಾ ಆಸ್ಪತ್ರೆಯಲ್ಲಿ ೪ ದಿನ, ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ೬ ದಿನ ಮತ್ತು ಮೈಸೂರು ಮಿಶನ್ ಆಸ್ಪತ್ರೆಯಲ್ಲಿ ೧೦ ದಿನ ತನ್ನ ಈ ಊಟ ಮಾಡದ ಕಾಯಿಲೆಕ್ಕೆ ಚಿಕಿತ್ಸೆಗಾಗಿ ಇದ್ದಳಂತೆ. ಆದರೆ ಆಕೆಯ ವರ್ತಮಾನ ಆಗ ಹಬ್ಬಿರಲಿಲ್ಲ. ೧೯೫೨ರ ನವಂಬರಿನಲ್ಲಿ ೧೯ ದಿನಗಳ ವರೆಗೆ ಆಕೆ ಮಡಿಕೇರಿ ಆಸ್ಪತ್ರೆಯಲ್ಲಿದ್ದಳು. ಮಡಿಕೇರಿ ಆಸ್ಪತ್ರೆಯ ಡಾಕ್ಟರುಗಳು ಆಕೆಯ ಮೇಲೆ ಸರ್ವ ಕಾವಲಿಟ್ಟಿರಲಿಲ್ಲವೆಂದು ನನಗೆ ಗೊತ್ತಿದೆ. ಆಕೆಯ ಜೊತೆಯಲ್ಲಿ ಒಬ್ಬಾಕೆ ನರ್ಸನ್ನು ಇಟ್ಟಿದ್ದರು. ಆಕೆಯನ್ನು ನೋಡಲು ಹೆಚ್ಚಿನ ತೊಂದರೆ ಇಲ್ಲದೆ ಯಾರೂ ಕಾಣಬಹುದಿತ್ತು. ಆಕೆಯು ತನ್ನ ಜೊತೆ ನರ್ಸನ್ನೊಂಗಡ ಸಾಯಂಕಾಲ ವಾಕಿಂಗ್ ಹೋಗುವದೂ ಇತ್ತು. ಹೀಗಿದ್ದುದರಿಂದ ಬೇಕಿದ್ದರೆ ಆಹಾರ ತೆಗೆದುಕೊಳ್ಳುವದು ಆಕೆಗೆ ಕಷ್ಟವಿರಲಿಲ್ಲವೆಂದು ಹೇಳಬಹುದಾಗಿದೆ. ಬೆಂಗಳೂರು ಆಸ್ಪತ್ರೆಯಲ್ಲಿ ಮಾಡಿದಂತೆ ಮಡಿಕೇರಿ ಆಸ್ಪತ್ರೆಯಲ್ಲಿ ಮಾಡಿದ್ದರೆ ಗುಟ್ಟೆಲ್ಲದರೆ ರಟ್ಟಾಗುತಿತ್ತು. ಮಡಿಕೇರಿ ಆಸ್ಪತ್ರೆಯಲ್ಲಿದ್ದಾಗಲೇ ಆಕೆ ಆಹಾರ ಸೇವಿಸಿದ್ದು 'ಇಂಡಿಯನ್ ಎಕ್ಸ್‌ಪ್ರೆಸ್'ನಲ್ಲಿ ವರದಿಯಾಗಿದ್ದ ಹಾಗೆ ಡಾಕ್ಟರುಗಳಿಗೂ ತಿಳಿದಿದೆ. ಆದರೆ ಅದನ್ನು ಪ್ರಕಟಪಡಿಸದೆ ಆಕೆಯ ಪವಾಡ ಜೀವನಕ್ಕೆ ಆಸಕ್ತರು ಕಳೆಕೊಟ್ಟು ಬೆಂಗಳೂರಿನ ಡಾಕ್ಟರರು ಈಗ ಹೇಳುವಂತೆ ಹಾಗೂ ಆಕೆಯ ಮೇಲೆ ಕುಹಕದ ಆರೋಪ ಹೊರಿಸುವಂತೆ ಆಯಿತು. ಅದೇ ಅಲ್ಲ ದೇಶೀಯರನೇಕರೂ ದೂರ ದೇಶದಿಂದ ಹಲವಾರು ಜನರೂ ಬಂದು ಆಕೆಯನ್ನು ಕಾಣತೊಡಗಿದರು. ಆಕೆಯನ್ನು ದೈವಾಂಶ ಸಂಭೂತೆಯೆಂದು ಹೇಳಿದವರೂ ಇದ್ದಾರೆ. ಮದ್ರಾಸಿನ ಹೈಕೋರ್ಟು ನ್ಯಾಯಾಧೀಶರಾದ ಎ. ಎಸ್. ಪಿ. ಆಯ್ಯರ್‌ರವರು ಈಕೆಯನ್ನು "ಪವನಸುತೆ" "ವಾಯು ಭಕ್ಷಿಣಿ"ಯೆಂದು ಶಿರಬಾಗಿ ವಂದಿಸಿರುವುದನ್ನು ಇಂದು ನೆನೆದರೆ ದುಃಖವಾಗುತ್ತೆ. ಅವರೇ ಅಲ್ಲ ಜನರಲ್ ಕಾರ್ಯಪ್ಪ ಮತ್ತಿತರ ಅನೇಕ ಮಹನೀಯರು ಬಂದು ಆಕೆಯ ಈಗ ಹೊರಪಟ್ಟಿರುವ ಟೊಳ್ಳು ಪವಾಡಕ್ಕೆ ಗೌರವ ಸಲ್ಲಿಸಿದ್ದಾರೆ. ಇಸ್ಮೈಲಿಯಾದಲ್ಲಿಯ ಸುಯೇಜ್ ಕಾಲುವೆ ಕಂಪೆನಿಯ ಆಸ್ಪತ್ರೆಯಲ್ಲಿರುವ ಫ್ರೆಂಚ್ ಡಾಕ್ಟರರಾದ ಪ್ರೊ. ಆರ್. ಗೋಡೆಲ್‌ರವರಿಗೆ ಧನಲಕ್ಷ್ಮಿಯ ಪವಾಡದ ವಿಷಯದಲ್ಲಿ ಸಂಶಯವಿದ್ದಂತೆ ತೋರುತ್ತದೆ. ಅವರು "The whole concept of nutrition would have to be considered afresh *if* the case of Dhanalaxmi proved to be authentic" ಧನಲಕ್ಷ್ಮಿಯ ವಿಚಾರವು ಆಧಾರ ಪೂರ್ವಕವಾದುದೆಂದು ಸಾಬೀತಾದರೆ ನಮ್ಮ ಆಹಾರದ ವಿಚಾರದ ಕಲ್ಪನೆಯನ್ನೇ ಹೊಸದಾಗಿ ಆಲೋಚಿಸಬೇಕಾಗುವದು" ಎಂದಿದ್ದರು.

ಧನಲಕ್ಷ್ಮಿಯ ಈ ಕಥೆ ನಿರಾಧಾರವಾದುದು, ಆಕೆಯು ಬೆಂಗಳೂರಿನ ಡಾಕ್ಟರ್ ರಶ್ಮಿಯವರೆಂದಂತೆ ಗುಟ್ಟಾಗಿ ಆಹಾರ ತೆಗೆದುಕೊಳ್ಳುತಿದ್ದಿರಬೇಕೆಂದು ವಾದಿಸಲೂ ಸಾಧ್ಯವಿದೆ. ಧನಲಕ್ಷ್ಮಿಯು ಮಡಿಕೇರಿ ಆಸ್ಪತ್ರೆಯಲ್ಲಿದ್ದಾಗಲೂ ಸ್ವಲ್ಪ ತನ್ನ ಭಾರವನ್ನು ಕಳೆದುಕೊಂಡಿದ್ದಳು. ಬೆಂಗಳೂರಿನ ಆಸ್ಪತ್ರೆಯಲ್ಲಿ ದಿನಕ್ಕೆ ಒಂದೆರಡು ಪೌಂಡುಗಳಂತೆ ಭಾರ ಕಳೆದುಕೊಳ್ಳುತ್ತಿದ್ದಳಂತೆ. ವರ್ಷಗಟ್ಟಳೆ ಉಪವಾಸವಿರುವವಳು ಆಸ್ಪತ್ರೆಯಲ್ಲಿ ಈ ರೀತಿ ಸಾಮಾನ್ಯ ಮನುಷ್ಯರಂತೆ ಭಾರ ಕಳೆದುಕೊಳ್ಳಲು ಕಾರಣವೇನು? ಇಷ್ಟರ ವರೆಗೆ ಯಾವುದೇ ಬೇರೆ ವಿವರಣೆ ಕೊಡದಿದ್ದ ಆಕೆಯ ಸಂಬಂಧಿಕರು ಯಾವಾಗಲೂ ಆಕೆಯಲ್ಲಿ ಈ ಆಶ್ಚರ್ಯಕರ ಚಿಹ್ನೆ ಇರುವದಿಲ್ಲವೆಂದೂ ಕೆಲವು ವೇಳೆ ಮಾತ್ರ ತೋರುವದೆಂದೂ ಆಗ ಉಪವಾಸವಿದ್ದು ಆ ಅವಧಿ ಕಳೆದ ನಂತರ ಎಲ್ಲರಂತೆ ಇರುವಳೆಂದೂ ಈಗ ಹೇಳುತ್ತಿರುವರು. ಇದೆಲ್ಲಾ ಕೇವಲ ಬೂಟಾಟಿಕೆಯಂತೆ ತೋರುತ್ತದೆ.

ಯಾರು ಬೇಕಾದರೆ ಏನೂ ಹೇಳಲಿ. ಆದರೆ ಅದು ಇತರರಿಗೆ ಹಾನಿಕಾರಕವಾಗಬಾರದು. ಧನಲಕ್ಷ್ಮಿಯ ಈ ಪವಾಡ ಪ್ರಚಾರಕ್ಕಾಗಿ ಆದ ಧನ ನಷ್ಟವೆಷ್ಟು? ಎಷ್ಟು ಜನರು ಸುಂಕಕೊಟ್ಟು ಆಕೆಯನ್ನು ನೋಡಲು ಯಾತ್ರೆ ಬೆಳೆಸಿದರು. ಆಕೆಯ ಚಲನ ಚಿತ್ರ ಉತ್ಪಾದನೆಗೆ ತಗಲಿದ ಖರ್ಚೆಷ್ಟು? ಮತ್ತೆ ಆಕೆಯ ವೈದ್ಯಕೀಯ ಪರಿಶೀಲನೆಗಾಗಿ ಇಂಡಿಯಾ ಸರಕಾರ ವಹಿಸಿದ ಖರ್ಚೇನು? ಬೆಂಗಳೂರಿನ ಡಾಕ್ಟರು ಎನ್ನುವಂತೆ ಆಕೆಯದು ಕಣ್ಣು ಕಟ್ಟು ಎನ್ನುವ ಪವಾಡವಾದರೆ ನಿಜವಾಗಿಯೂ ಬಡ ಪ್ರಜೆಯ ಹಣದ ದುರುಪಯೋಗ. ಹೀಗಾಗಲು ಅವಕಾಶ ಕೊಟ್ಟವರನ್ನು ವಿಚಾರಿಸಿ ಶಿಕ್ಷಿಸುವದು ಅನ್ಯಾಯವಾಗಲಾರದು.

ಹೀಗೊಂದು ಉಪವಾಸದ ನಾಟಕ ಮಾಡಲು ಕಾರಣವೇನಿತ್ತು. ಅದರಿಂದ ಯಾರಿಗೆ ಯಾವ ಲಾಭವೆಂದು ಪ್ರಶ್ನಿಸುವ ಆವಶ್ಯಕತೆ ಇದೆ. ಇವರಲ್ಲಿ ಅಂಥಾ ಒಂದು ಮರಾವೆ ಯಾರಿಗೂ ಇದ್ದಿರಲಾರದು. ಇಂಥಾ ವಿಚಾರಗಳನ್ನು ತೀಪ್ರ ಮತಿಯಿಂದ ಪರಿಶೀಲಿಸುವ ಮುಖ್ಯರೊಬ್ಬರ ಅಭಿಪ್ರಾಯದಂತೆ ಪ್ರೌಢರಾದ ಹುಡುಗಿಯರಿಗೆ ಅದೊಂದು ವಯಸ್ಸಿನಲ್ಲಿ ಅನ್ನಾಹಾರಗಳ ಬಗ್ಗೆ ಜಿಗುಪ್ಸೆ ಬಂದು ಅವರು ಉಪವಾಸವಿರುವ ಸಂಭವವಿದೆಯಂತೆ. ಅವರು ಉದಾಹರಣೆಗಾಗಿ ಒಂದು ತಿಂಗಳ ವರೆಗೆ ಉಪವಾಸವಿದ್ದ ಅವರ ನೆರೆಮನೆಯವರೊಬ್ಬರ ನಿದರ್ಶನವನ್ನೂ ಹೇಳಿದರು. ಆ ಅವಧಿ ಕಳೆದ ನಂತರ ಅದು ಸರಿಹೋಗಿ ಎಲ್ಲರಂತೆ ಸ್ವಾಭಾವಿಕಕ್ಕೆ ತಿರುಗುವದಂತೆ. ಅದೇ ರೀತಿ ಧನಲಕ್ಷ್ಮಿಗೂ ಆಗಿರಬಹುದೇನೋ, ಈಕೆಯ ವಿಚಾರದಲ್ಲಿ ದೊಡ್ಡ ದೊಡ್ಡವರು ಆಸಕ್ತಿ ವಹಿಸಿ ಪ್ರಚಾರ ನಡೆಸಿ ಆಕೆಯನ್ನು ಒಂದು ಎತ್ತರದ ವೇದಿಕೆಯಲ್ಲಿ ಕುಳ್ಳಿರಿಸಿದರೆಂದೂ ಅಲ್ಲಿಂದ ಕೆಳಗಿಳಿದರೆ ತನ್ನ ಗೌರವ, ಹಿರಿಮೆ, ತನಗಾಗಿ ಪ್ರಯತ್ನಿಸಿದವರಿಗೆ ಕಲಂಕ ಬಂದೀತೆಂದು ಆಕೆ ಅಲ್ಲಿಯೇ ಉಳಿಯಲು ಈ ಕೃತ್ರಿಮ ಮಾರ್ಗ ಕೈಕೊಂಡಿರಬೇಕೆಂದೂ ಊಹಿಸಲಾಗಿದೆ. ಈ ಊಹನೆ ತಪ್ಪಿರಲಿ ಯಾ ಸರಿಯಿರಲಿ ಹೇಗೂ ಕೊಡಗಿನ ಶೋಭೆಯನ್ನು ಈ ದುರಂತ ಕತೆ ಹೆಚ್ಚಿಸುತ್ತಿಲ್ಲವೆಂದು ವಿಷಾದದಿಂದ ಹೇಳಬೇಕಿದೆ. ಇನ್ನಾದರೂ ಜನತೆ ಇಂಥಾ ಕಲ್ಪಿತ ಅದ್ಭುತ ವಿಚಾರಗಳಿಗೆ ಬೆಲೆ ಕಟ್ಟದಿರಲಿ.

ಕೊಡಗು

ತಾರೀಕು ೨೦—೧೧—೧೯೫೩ನೇ ಶುಕ್ರವಾರ

ಇಸ್ಲಾಂ ರಾಜ್ಯ.

ಪಾಕಿಸ್ಥಾನದ ರಾಜ್ಯಘಟನೆಯ ತಯಾರಿಯು ನಡೆದಿದೆ. ಈ ವರೆಗೆ ಪ್ರಕಟವಾದ ಅಭಿಪ್ರಾಯದಂತೆ ಪಾಕಿಸ್ತಾನವು ಇಸ್ಲಾಂ ರಾಜ್ಯವಾಗುವದೆಂಬುದರಲ್ಲಿ ಸಂಶಯವಿಲ್ಲ. ಪಾಕಿಸ್ತಾನದಲ್ಲಿ ಮುಸ್ಲೀಮರಲ್ಲದ ಇತರ ಅಲ್ಪ ಸಂಖ್ಯಾತರು ಇದ್ದಾರೆ. ಅಲ್ಪ ಸಂಖ್ಯಾತರನ್ನು ಅಲ್ಲಿಂದ ಕಿತ್ತೊಗೆಯುವ ಯತ್ನಗಳು ನಡೆದರೂ ಹಿಂದುಯರೂ, ಪಾರ್ಸಿ ಮೊದಲಾದವರೂ ಅಲ್ಲಿ ಇನ್ನೂ ಇದ್ದಾರೆ. ಅಲ್ಪ ಸಂಖ್ಯಾತರೆಂದು ಅವರಿಗೆ ಪ್ರತ್ಯೇಕ ಹಕ್ಕು ಬಾಧ್ಯತೆಗಳನ್ನು ಕೊಡಬೇಕಾದ ಅಗತ್ಯವಿಲ್ಲದಿದ್ದರೂ ಅಲ್ಪ ಸಂಖ್ಯಾತರಿಗೂ ಇತರರಷ್ಟೇ ಹಕ್ಕಿರಬೇಕಾದುದು ಪ್ರಜಾರಾಜ್ಯದಲ್ಲಿ ಆವಶ್ಯಕ. ಆದರೆ ಪಾಕಿಸ್ತಾನದ ರೂಪುಗೊಳ್ಳುತ್ತಿರುವ ರಾಜ್ಯಘಟನೆಯಂತೆ ಪಾಕಿಸ್ತಾನವು ಇಸ್ಲಾಂ ರಾಜ್ಯವಾಗುವದು. ಎಂದೆಂದೂ ಪಾಕಿಸ್ತಾನದ ಮುಖ್ಯಸ್ತನು ಮುಸ್ಲೀಮನೇ ಆಗಿರಬೇಕು. ಪಾಕಿಸ್ತಾನದ ಯಾವುದೇ ಶಾಶನವೂ ಮುಸ್ಲೀಮರ ಪವಿತ್ರ ಗ್ರಂಥವಾದ ಕುರಾನಿನ ಸೂತ್ರಗಳಿಗೆ ಸರಿಯಾಗಿಯೇ ನಡೆಯಬೇಕು.

ಒಟ್ಟಾರೆ ಪಾಕಿಸ್ತಾನವು ಕೇವಲ ಮುಸಿಮರ ರಾಜ್ಯವಾಗುವುದು. ಅಲ್ಲಿರುವ ಮುಸ್ಲಿಮೇತರರಿಗೆ ಸಮಾನಾವಕಾಶವನ್ನೂ, ನಾಗರಿಕ ಹಕ್ಕು ಬಾಧ್ಯತೆಗಳನ್ನೂ ಕೊಡಲು ಪಾಕಿಸ್ತಾನವು ಸಿದ್ಧವಿರುವಂತೆ ತೋರುವುದಿಲ್ಲ. ಈ ರೀತಿ ಕುರಾನಿನ ತತ್ವಗಳಂತೆ ದೇಶದ ಆಡಳಿತ ನಡೆಯುವದಾದರೆ ಹಿಂದೂ ಮತದಂತೆ ಅಲ್ಲಿ ಜೀವಿಸುವವರ ಗತಿ ಏನೆಂದು ವಿವರಿಸಬೇಕಿಲ್ಲ. ಇದಕ್ಕಾಗಿಯೇ ಪಾಕಿಸ್ತಾನದ ರಾಜ್ಯಘಟನಾ ಸಭೆಯಲ್ಲಿದ್ದ ಹಿಂದೂಯ ಮತ್ತಿತರ ಅಲ್ಪಸಂಖ್ಯಾಕ ಸದಸ್ಯರು ಈ ಬಗ್ಗೆ ತಮ್ಮ ವಿರೋಧವನ್ನು ವ್ಯಕ್ತಮಾಡಿ ರಾಜ್ಯಘಟನಾ ಸಭೆಯಿಂದ ಹೊರ ನಡೆದರು.

ಸೂಕ್ಷ್ಮವಾಗಿ ಪರಿಶೀಲಿಸಿದರೆ ಇಂದಿನ ಈ ೨೦ ನೇ ಶತಮಾನದಲ್ಲಿ ಮಧ್ಯಯುಗದ ಜಾತೀಯ ಮತ್ತಿತರ ರೀತಿಯ ಆಡಳಿತದ ಮೋಹವು ಪಾಕಿಸ್ತಾನಕ್ಕೆ ಬಂದಿರುವದು ವಿಷಾದಕರ. ಪಾಕಿಸ್ತಾನದ ಅಧ್ಯಕ್ಷಸ್ಥಾನಕ್ಕೆ ಕೇವಲ ಮುಸ್ಲಿಮನೇ ಬರಬೇಕೆಂದರೆ ಉಳಿದ ನಾಗರಿಕರಿಗೆ ಇರಬೇಕಾದ ಸಮಾನ ಹಕ್ಕುಬಾಧ್ಯತೆಗಳನ್ನು ನಿರ್ನಾಮಗೊಳಿಸಿದಂತೆ. ಕುರಾನಿನ ತತ್ವಪ್ರಕಾರ ಪಾಕಿಸ್ತಾನದ ರಾಜ್ಯಭಾರ ನಡೆಯುವದಾದರೆ ಅಲ್ಲಿಯ ಶಾಲೆಗಳಲ್ಲಿ ಅದನ್ನೇ ಕಲಿಸಲಾಗುವದೆಂಬುದರಲ್ಲಿ ಸಂಶಯವಿಲ್ಲ. ಈ ರೀತಿಯಾದರೆ ಅವನವನ ಧರ್ಮದಂತೆ ನಡೆದುಕೊಳ್ಳುವ ಸ್ವಾತಂತ್ರ್ಯ ಬೇರೆ ನಾಗರಿಕರಿಗೆಲ್ಲಿದೆ?

ಈ ರೀತಿ ಪಾಕಿಸ್ತಾನದ ರಾಜ್ಯಘಟನೆಯು ಅಲ್ಪ ಸಂಖ್ಯಾಕರ ಹಕ್ಕು ಬಾಧ್ಯತೆಗಳನ್ನು ನಿರ್ಲಕ್ಷಿಸಿ ಪಾಕಿಸ್ತಾನವನ್ನು ಸಂಪೂರ್ಣ ಮುಸ್ಲಿಂ ಅರ್ಥಾತ್ ಇಸ್ಲಾಂ ರಾಜ್ಯವಾಗಿ ಮಾಡಲು ಹೊರಟಿದೆ. ಇದರಿಂದ ಪಾಕಿಸ್ತಾನದಲ್ಲಿರುವ ಹಿಂದೂಯರ ಮತ್ತಿತರ ಅಲ್ಪ ಸಂಖ್ಯಾಕರ ಸ್ಥಿತಿ ಬಹು ತೊಂದರೆಗೀಡಾಗುವದರಲ್ಲಿ ಸಂಶಯವಿಲ್ಲ. ಈ ೨೦ ನೇ ಶತಮಾನದ ಪ್ರಜಾಯುಗದಲ್ಲಿಯೂ ಕೂಡ ಪಾಕಿಸ್ತಾನವು ಈ ರೀತಿಯ ರಾಜ್ಯಘಟನೆ ತಯಾರಿಸುತ್ತಿರುವದು ವಿಷಾದಕರವಾಗಿದೆ.

ವರ್ತಮಾನ

ಬಿರುನಾಣಿ ವಯಸ್ಕರ ಶಿಕ್ಷಣ ಶಾಲೆಯಲ್ಲಿ ಕಲಿಯುತ್ತಿದ್ದ ಹತ್ತು ಜನರಲ್ಲಿ ಹತ್ತು ಜನರೂ ತೇರ್ಗಡೆಯಾಗಿರುವರು. ತಾ ೧೦ರಲ್ಲಿ ಪರೀಕ್ಷೆ ನಡೆಯಿತು.

ತಾ. ೧೧ರಲ್ಲಿ ರಾಮಸ್ವಾಮಿ ಕಣಿವೆ ಸಾಮೂಹಿಕ ವಿಕಾಸ ಯೋಜನಾ ಕೇಂದ್ರದ ಆಶ್ರಯದಲ್ಲಿ ಪ್ರಥಮ ಸಾಮೂಹಿಕ ಗ್ರಾಮ ಶುಚಿತ್ವ ದಿನಾಚರಣೆ ಮತ್ತು ಚಿತ್ರ ದಿನಾಚರಣೆಯು ಕೊಡಗಿನ ಗೃಹ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯಿತು.

ವೀರಾಜಪೇಟೆ ಮೂಲ ಶಿಕ್ಷಣ ತರಬೇತು ಶಾಲೆಯಲ್ಲಿ ನಡೆಯಬೇಕಿದ್ದ ತ್ರೈಮಾಸಿಕ ಚುನಾವಣೆಯು ನಡೆದು ಶ್ರೀಗಳಾದ ಸಿ ಎಂ ಕುಶಾಲಪ್ಪ (ಮುಖ್ಯ ಮಂತ್ರಿ) ಬಿ. ಕೆ ನಾರಾಯಣ (ಸಾಂಸ್ಕೃತಿಕ ಮಂತ್ರಿ), ವಿ ಎಂ ನಂಜಯ (ಉತ್ಪಾದಕ ಮಂತ್ರಿ), ಬಿ ಎಸ್ ಬಸವಣ್ಣಯ್ಯ (ಭಾಷಕ)ರಾಗಿ ಆರಿಸಲ್ಪಟ್ಟಿರುವರು.

ಬಬ್ಬಗೇರಿ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳು ಮೂರು ಸಂಗಡಗಳಾಗಿ ತಾ ೧೬ರಲ್ಲಿ ಒಂದು ಸಂಗಡವು ಬಬ್ಬಕೇರಿಯಿಂದ ಅರುವತ್ತೊಕ್ಲಿಗೆ ಹೋಗುವ ಕಾಲುದಾರಿಯನ್ನು ಅಂದಾಜು ೧॥ ಮೈಲು ದೂರಕ್ಕೆ ದುರಸ್ತಿಗೊಳಿಸಿರುವದು. ಉಳಿದ ಸಂಗಡಗಳು ಬೆಟ್ಟಗೇರಿಯಿಂದ ಅಮ್ಮನೂರು, ಬಟ್ಟತ್ತೂರು ಗ್ರಾಮಗಳಿಗೆ ಹೋಗುವ ರಸ್ತೆಗಳನ್ನು ೧ ಮೈಲುಗಳ ವರೆಗೆ ದುರಸ್ತಿಗೊಳಿಸಿರುವರು.

ವಾಚಕರಲ್ಲಿ

ಮುತ್ತೂರಿ ಹಬ್ಬದ ರಜೆಯ ಕಾರಣ ತಾರೀಕು ೨೭—೧೧—೫೩ರ 'ಕೊಡಗು' ಪಂಚಿಕೆಯು ಪ್ರಕಟವಾಗುವುದಿಲ್ಲ.

—ಸಂಪಾದಕ

ಕೊಡಗು ಜಿಲ್ಲಾ ಹಿಂದೀ ಪ್ರಚಾರ ಸಮಿತಿಯ ಆಶ್ರಯದಲ್ಲಿ ಡಿಸೆಂಬರಿನಲ್ಲಿ ನಡೆಯಲಿರುವ ಹಿಂದೀ ಪ್ರಚಾರಕ ಸಮ್ಮೇಳನದ ಸಂಬಂಧವಾಗಿ ಇದೇ ತಾ. ೨೯ ನೇ ಭಾನುವಾರ ಅಪರಾಹ್ನ ೨-೩೦ ಕ್ಕೆ ಸೆಂಟ್ರಲ್ ಹೈಸ್ಕೂಲಿನಲ್ಲಿ 'ಹಿಂದೀ ಶಬ್ದ ಸಂಗ್ರಹ ಸ್ಪರ್ಧೆ' (ಅರ್ಥಸಹಿತ ಹಿಂದೀ ಶಬ್ದಗಳ ಜ್ಞಾನವನ್ನು ಕಂಡುಹಿಡಿಯುವ ಸ್ಪರ್ಧೆ) ನಡೆಯುವುದು. ಯಾರು ಬೇಕಾದರೂ ಭಾಗವಹಿಸಬಹುದು.

ತಾ ೬—೧೧—೫೩ ನೇ ಶುಕ್ರವಾರ ಗೋಣಿಕೊಪ್ಪ ಫೀಡರ್ ಶಾಲೆಯಲ್ಲಿ ಶ್ರೀಮಾನ್ ಎಂ ಎಸ್ ಗಣಪತಿಯವರ ಅಧ್ಯಕ್ಷತೆಯಲ್ಲಿ ವಯಸ್ಕರ ಶಿಕ್ಷಣ ಕೇಂದ್ರವು ತೆರೆಯಲಾಯಿತು. ೩೫ ಜನ ವಯಸ್ಕ ವಿದ್ಯಾರ್ಥಿಗಳು ತರಗತಿಗೆ ಸೇರಿರುವರು. ವಯಸ್ಕರ ವಿದ್ಯಾಭ್ಯಾಸದ ವಿಷಯವಾಗಿ ಶ್ರೀ ಕೆ ಎಂ ಸೋಮಯ್ಯ, ಶ್ರೀ ಈರಪ್ಪ ಮೊದಲಾದವರು ಭಾಷಣ ಮಾಡಿದರು.

ಈ ತಾ ೨೭ರ ಬೆಳಿಗ್ಗೆ ೧೧ ಗಂಟೆಗೆ ಕೊಡಗು ಜಿಲ್ಲಾ ಮೇಜಿಸ್ಟ್ರೇಟ್ ಖಚೇರಿ ಎದುರು ೩೦ ವಿವಿಧ ಗಡಿಯಾರಗಳನ್ನು ಬಹಿರಂಗ ಹರಾಜು ಮಾಡಲಾಗುವದೆಂದು ತಿಳಿಯ ಬಂದಿದೆ.

ಹಳೇ ವಿದ್ಯಾರ್ಥಿನಿಯರ ದಿನಾಚರಣೆ (Old Girls Day) ಮಡಿಕೇರಿ ಸೆಂಟ್ ಜೋಸೆಫ್ಸ್ ಕಾನ್ವೆಂಟಿನಲ್ಲಿ ತಾರೀಕು ೯—೧೨—೫೩ ರಲ್ಲಿ ನಡೆಯುವದು.

ಅಖಿಲ ಭಾರತ ಮಹಿಳೆಯರ ರಾಷ್ಟ್ರೀಯ ಸಮಿತಿಯ ಆಶ್ರಯದಲ್ಲಿ ಕಸೂತಿ ಸ್ಪರ್ಧೆಯೊಂದು ಮುಂಬರುವ ಜನವರಿ ಅಂತ್ಯದೊಳಗೆ ನಡೆಯುವದೆಂದೂ ಅದಕ್ಕೆ ತಮ್ಮ ಕಸೂತಿ ವಸ್ತುಗಳನ್ನು ಕಳುಹಿಸುವವರು ಡೆಲ್ಲಿಯಲ್ಲಿರುವ ಆ ಸಮಿತಿಯ ಖಚೇರಿಗೆ ಕಳುಹಿಸಬಹುದೆಂದೂ ಉತ್ತಮವಾದುದೆಂದು ಆರಿಸಿದ ಕಸೂತಿಗೆ ಒಂದನೇ ಬಹುಮಾನ ರೂ ೫೦೦/—ಎರಡನೆ ರೂ ೩೦೦ —ಮೂರನೇ ರೂ ೨೦೦/—ಮತ್ತು ರೂ ೫೦ ರ ಹತ್ತು ಬಹುಮಾನಗಳನ್ನು ಕೊಡಲಾಗುವದೆಂದೂ ಪ್ರಕಟವಾಗಿದೆ. ಕಳುಹಿಸಬೇಕಾದ ಎಡ್ರೆಸು ನೇಶನಲ್ ಕೌನ್ಸಿಲ್ ಆಫ್ ವಿಮೆನ್, ವೆಸ್ಟರ್ನ ಹೌಸ್, ಕರ್ಜನ್ ರೋಡ್, ಡೆಲ್ಲಿ ಎಂದಿದೆ.

ಈ ತಾ ೧೨ರಲ್ಲಿ ರಾಜಮಂಡ್ರಿಯಲ್ಲಿ ನಡೆದ ಅಖಿಲ ಭಾರತ ಸಹಕಾರಿ ಕೂಟದ ಕಾರ್ಯಕಾರಿ ಮಂಡಳಿಯ ಮೀಟಿಂಗಿಗೆ ಹೋಗಿದ್ದ ಕೊಡಗು ಸಹಕಾರಿ ಮಾರ್ಕೆಟಿಂಗ್ ಸೊಸೈಟಿಯ ಪ್ರೆಸಿಡೆಂಟರಾದ ಶ್ರೀ ಪಿ ಐ ಬೆಳ್ಯಪ್ಪನವರು ತಾ ೧೮ರಲ್ಲಿ ವಾಪಸು ಬಂದಿರುವರು.

ನಾಪೋಕ್ಲು ನಾಡಿನವರು ತಾ ೨೮ರಲ್ಲಿ ನಡೆಸಿದ ಮೀಟಿಂಗಿನ ತೀರ್ಮಾನದ ಮೇರೆ ತಾ ೧೬ರಲ್ಲಿ ನಾಪೋಕ್ಲು ನಾಡು ಕಚೇರಿ ಬಳಿ ಮೈದಾನದಲ್ಲಿ ಶ್ರೀ ಕೆ. ಎಸ್ ನಂಜುಂಡನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸಾಮೂಹಿಕ ವಿಕಾಸ ಯೋಜನೆಯ ಕೆಲಸಕ್ಕೆ ಸೆಂಟ್ರಲ್ ಕಮಿಟಿಗಳನ್ನು ನಿರ್ಮಿಸುವಂತೆ ತೀರ್ಮಾನವಾಗಿ ಈ ಬಗ್ಗೆ ನಾಡಿನ ಸಹಕಾರ ಸಂಘಗಳ ಪ್ರೆಸಿಡೆಂಟರು ಮತ್ತು ಅವರ ಜೊತೆಗೆ ಬೇರೊಬ್ಬ ಡೆಲಿಗೇಟ್ ರೊಡಗೂಡಿ ತಾ ೩೦ರಲ್ಲಿ ಸಭೆ ಸೇರುವಂತೆ ತೀರ್ಮಾನಿಸಲಾಯ್ತು.

ಬತ್ತದ ಬೆಲೆ

ಈ ವರ್ಷ ಅಂದರೆ ೧೯೫೩—೫೪ ರ ಸಾಲಿಗೆ ಬತ್ತದ ಬೆಲೆಯನ್ನು ಈ ಕೆಳಗಿನ ದರದಂತೆ ನಿಶ್ಚಯಿಸಿರುವರೆಂದು ಗೊತ್ತಾಗಿದೆ. ೧೨೦ ಪಡಿಯ ಗಾಡಿಗೆ ಜೀರಿಗೆ ಸಣ್ಣ ರೂ ೨೭೨, ಕೊಯಮುತ್ತೂರು ಸಣ್ಣ ೨೪೯, ಬಿಳಿಯ ರೂ ೨೧೦ ಮತ್ತು ದೊಡ್ಡಿ ಮತ್ತು ಕರ್ತ ರೂ ೨೦೨ ಈ ಬೆಲೆ ರೈತನ ಕಣದಲ್ಲಿ ದೊರೆಯುವದು. ನಿಶ್ಚಿತ ಬತ್ತದ ಸೆಂಟರುಗಳಲ್ಲಿ ಬತ್ತ ಕೊಟ್ಟವರಿಗೆ ಈ ಬೆಲೆಯ ಜೊತೆಗೆ ರೂ ೧೦-೬-೮ ದೊರೆಯಬೇಕು. ಮಿಲ್ಲುಗಳಲ್ಲಿ ತಂದು ಕೊಟ್ಟವರಿಗೆ ಇದರ ಮೇಲೆ ರೂ. ೩-೧೨-೦ ದೊರೆಯಬೇಕು.

ಕಾಲೇಜಿನ ಗೊಂದಲ

ತಾ ೫—೧೧—೫೩ರ ಮಧ್ಯಾಹ್ನ ೩-೩೦ ಗಂಟೆಗೆ ಸರಕಾರಿ ಕಾಲೇಜು ಕೂಟದ ಆಶ್ರಯದಲ್ಲಿ ಏರ್ಪಡಿಸಿದ್ದ ಸಭೆಯೊಂದರಲ್ಲಿ ಕೊಡಗಿನ ಗೃಹ ಸಚಿವರ ಭಾಷಣದ ಏರ್ಪಾಡಾಗಿತ್ತು. ಮಂತ್ರಿಗಳು ಕಾಲೇಜಿಗೆ ಈ ಭಾಷಣಕ್ಕಾಗಿ ಹೋಗುತ್ತಿದ್ದಾಗ ಕಾಲೇಜಿನಿಂದ ಕೆಲವು ವಿದ್ಯಾರ್ಥಿಗಳು ಮನೆಗೆ ಹೋಗುತ್ತಿದ್ದುದನ್ನು ಕಂಡು ಅವರು ಬೇಸರಗೊಂಡು ಅವರ ಹೆಸರನ್ನು ವಿಚಾರಿಸಿದರಂತೆ. ಆಗ ಕೆಲವು ವಿದ್ಯಾರ್ಥಿಗಳು ಸರಿಯಾದ ಜವಾಬು ಕೊಡದೆ ತಮಾಷೆ ಮಾಡಿದರೆಂದು ಒಂದು ವರ್ತಮಾನವಿದ್ದರೆ ವಿದ್ಯಾರ್ಥಿಗಳು ಯಾವುದೊಂದು ಜವಾಬು ಕೊಡದೆ ಹೋದರೆಂದು ಮತ್ತೊಂದು ವರ್ತಮಾನವಿದೆ. ಹೇಗೂ ಮಂತ್ರಿಯವರು ಕಾಲೇಜಿಗೆ ಹೋಗಿ ಅಲ್ಲಿ ಅವರನ್ನು ಎದುರ್ಗೊಳ್ಳಲು ನಿಂತಿದ್ದ ಕಾಲೇಜ್ ಅಧಿಕಾರಿಗಳನ್ನು ಕುರಿತು ಸಿಟ್ಟಿನಿಂದ ಮಾತಾಡಿ ವಿದ್ಯಾರ್ಥಿಗಳ ವರ್ತನೆ ಸರಿಯಾಗುವ ವರೆಗೆ ತಾನು ಯಾವ ಭಾಷಣ ಮಾಡುವದಿಲ್ಲವೆಂದೂ ಹೇಳಿ ಅನೇಕ ವಿದ್ಯಾರ್ಥಿಗಳು ಭಾಷಣಕ್ಕಾಗಿ ಕಾದಿದ್ದ ಹಾಲಿಗೆ ಹೋಗದೆ ಹಿಂತಿರುಗಿದರಂತೆ. ಮರುದಿನ ವಿದ್ಯಾರ್ಥಿಗಳ ಕೂಟದವರು ಮಂತ್ರಿಯವರು ತಮ್ಮ ಸಭೆಗೆ ಬಾರದಿದ್ದುದಕ್ಕೂ, ಕಾಲೇಜು ಅಧಿಕಾರಿಗಳಲ್ಲಿ ಕಾಲೇಜಿನ ವಿದ್ಯಾರ್ಥಿಗಳೆಲ್ಲರನ್ನೂ ಅವಹೇಳನ ಮಾಡಿದ್ದಕ್ಕೂ ತಕ್ಕ ಸಮಜಾಯಿಸಿಕೆಯನ್ನು ಕೊಡಬೇಕೆಂದೂ ಹಾಗೆ ಮಾಡದಿದ್ದರೆ ಕಾಲೇಜಿನ ಹಾಗೂ ವಿದ್ಯಾರ್ಥಿಗಳ ಗೌರವಕ್ಕಾಗಿ ಮುಷ್ಕರ ಹೂಡುವದಾಗಿಯೂ ಅರ್ಜಿ ಬರೆದು ಗೃಹ ಮಂತ್ರಿಯವರಿಗೆ ಕೊಟ್ಟು ಅದರ ನಕಲನ್ನು ಪಂಡಿತ ನೆಹರೂ ಮತ್ತು ಮದ್ರಾಸು ವಿಶ್ವವಿದ್ಯಾಲಯದ ವೈಸ್‌ಛಾನ್ಸಲರಿಗೆ ಕಳುಹಿಸಿದರಂದೂ ಅಲ್ಲದೆ ಈ ವಿಚಾರ ಕೊಡಗಿನ ಮುಖ್ಯ ಮಂತ್ರಿಯವರಿಗೂ ಚೀಫ್ ಕಮಿಷನರಿಗೂ ಪ್ರಕಾರ ದೇಳಿದರೆಂದೂ ಅವರ ಕಾಲೇಜಿನ ಪ್ರಿನ್ಸಿಪಲರ ಸಲಹೆ ಮೇರೆ ವಿದ್ಯಾರ್ಥಿಗಳು ಮರುದಿನ ಮುಷ್ಕರವನ್ನು ಬಾಕಿ ಮಾಡಿದರೆಂದೂ ನಂತರ ಮುಖ್ಯ ಮಂತ್ರಿಯವರು ವಿದ್ಯಾರ್ಥಿಗಳ ಪ್ರತಿನಿಧಿಗಳನ್ನು ಸಮಾಧಾನಗೊಳಿಸಿದರೆಂದೂ ತಿಳಿಯಬಂದಿದೆ.

ಪೈಸಾರಿಯ ಆಕ್ರಮಣ

ಹೊದ್ದೂರು ದೇವರ ಕಾಡು ಪೈಸಾರಿಯಲ್ಲಿ ಮಾವಿನ ಮರ ಒಂದನ್ನು ಕಡಿದು ಸೌದೆ ಒಡೆಯಲಾಗುತ್ತಿದೆ. ಈ ಮಹನೀಯರು ಈ ಮರದ ಬೆಲೆ ಮಾತ್ರ ಸರಕಾರಕ್ಕೆ ಸಲ್ಲಿಸಿರಲಾರರೆಂದು ಊಹಿಸಬೇಕಿದೆ. ಯಾಕೆಂದರೆ ಅಂದಾಜು ೪೦೦ ಘನ ಅಡಿ ಪರಿಮಾಣವುಳ್ಳ ಈ ಮರದ ಈಗಿನ ಬೆಲೆ ರೂ. ೩೦೦ ಆಗಬಹುದು. ಇಷ್ಟೆಲ್ಲ ಹಣ ತೆತ್ತು ಅದನ್ನು ಯಾರಾದರೂ ಸೌದೆ ಒಡೆಸಲಾರರು. ಅಧಿಕಾರದ ಹೊಣೆ ಹೊತ್ತವರಾಗಿ ಕಾನೂನಿಗೆ ಮೂರು ಕಾಸು ಬೆಲೆ ಕೊಡದ ಈ ಮಹನೀಯರನ್ನು ವಿಚಾರಿಸದಿರಲು ಕಾರಣವೇನು? ಗ್ರಾಮದ ಪಟೇಲರಿಗಾಗಲೀ ಸರಕಾರದ ಅಧಿಕಾರಿಗಳಿಗಾಗಲೀ ಈ ಸಂಗತಿ ತಿಳಿಯದೇ? ಈ ಮೊದಲು ಇದೇ ಮಹನೀಯರು ಪೈಸಾರಿಯ ಸ್ವಲ್ಪ ಜಾಗವನ್ನು ಆಕ್ರಮಿಸಿಕೊಂಡಿರುವರು. ಇದಕ್ಕೆ ಜನರ ಪುಕಾರು ಎದ್ದಾಗ ತೋರಿಕೆಗಾಗಿ ಹಂಗಾಮಿ ವ್ಯವಸಾಯಕ್ಕೆ ಸರಕಾರದಿಂದ ಪಡಕೊಂಡಂತೆ ಒಂದು ಮಂಜೂರಾತಿ ಪಡೆದಿರುವರಂತೆ. ಸರಕಾರದ ಅಧಿಕಾರಿಗಳು ಬೇರೆ ಗರೀಬರ ಅರ್ಜಿಗಳಿದ್ದಾಗ್ಯೂ ಈ ಜಾಗವನ್ನು ಕೊಡದೆ ಈ ಮಹನೀಯರಿಗೆ ಕೊಟ್ಟಿರುವರು. ಸದ್ರಿ ಜಾಗಕ್ಕೆ ಮುಳ್ಳು ತಂತಿ ಹಾಕಿ ತನ್ನ ಆಸ್ತಿಯಾಗಿ ಮಾಡಿಕೊಳ್ಳಲು ಏರ್ಪಾಡಾಗಿರುತ್ತೆ.

ಮುಂದಾಳುಗಳ ವರ್ತನೆಯನ್ನೇ ಅನುಕರಿಸುವ ಹಿಂದಾಳುಗಳಿಗೇನು ನಮ್ಮಲ್ಲಿ ಕೊರತೆ ಇಲ್ಲ. ಈ ಮಹನೀಯರು ಮಾಡುತ್ತಿರುವದನ್ನು ಕಂಡು ಇನ್ನು ಕೆಲವರು ಪೈಸಾರಿ ಜಾಗದಲ್ಲಿ ದಬ್ಬಾಳಿಕೆಯಿಂದ ಲೈನ್ ಮನೆ, ಕೊಟ್ಟಿಗೆ ವಗೈರೆ ಕಟ್ಟಿಸುತ್ತಿದ್ದಾರೆ. ಮತ್ತು ಇವರು ಆಕ್ರಮಿಸಿಕೊಂಡ ಜಾಗಗಳು ಅವರವರ ಸ್ವಂತ ಆಸ್ತಿಯಾಗುವಂತಿದ್ದರೆ ಇನ್ನು ಪೈಸಾರಿ ಜಾಗವನ್ನು ಬೇಕೆಂತಲೇ ಆಕ್ರಮಿಸಿಕೊಳ್ಳಬೇಕೆಂದು ಇತರರೂ ಯತ್ನಿಸುತ್ತಿದ್ದಾರೆ. ಈ ಬಗ್ಗೆ ಸರಕಾರ ಎಚ್ಚರಿಕೆ ವಹಿಸಬೇಕು.

ನಿರೀಕ್ಷಕ

ಇವೆಲ್ಲಿಯ ವಸ್ತುತೆ?

ಈಗಿನ ಕೊಡಗು ಸರಕಾರ ವಿದ್ಯೆಗಾಗಿ ಶ್ರಮವಹಿಸಿರುವದನ್ನು ಇದೇ ಜುಲೈ ತಿಂಗಳ 'ಕೊಡಗು ವಾರ್ತಾ ಸಂಗ್ರಹ'ದಲ್ಲಿ ನೋಡಿ ತುಂಬಾ ಸಂತೋಷವಾಯಿತು. ಇಡೀ ಕೊಡಗಿನಲ್ಲಿ ಮಾಧ್ಯಮಿಕ, ಪ್ರಾಥಮಿಕ ಮತ್ತು ಪೋಷಕ ಶಾಲೆಗಳೆಂದು ಹಳೇ ಮತ್ತು ಹೊಸ ಶಾಲೆಗಳು ಒಟ್ಟು ೧೬೩ ಶಾಲೆಗಳಿವೆ. ಮತ್ತು ವ್ಯಾನು ಸಿನೆಮ ಪ್ರದರ್ಶನ ಇನ್ನಿತರ ಖರ್ಚುಗಳೆಂದು ವಯಸ್ಕರ ಶಿಕ್ಷಣಕ್ಕೂ ಹೇರಳವಾಗಿ ಹಣ ಖರ್ಚು ಮಾಡುತ್ತಾರೆ. ಆದರೆ ಹಿಂದಿನಂತೆ ಮುಖ್ಯಾಧಿಕಾರಿಗಳ ಮೇಲ್ವಿಚಾರಣೆ ಕ್ರಮರೀತಿಯಲ್ಲಿ ನಡೆಯದೆ ವಹಿಸಿರುವ ಶ್ರಮಕ್ಕೆ ತಕ್ಕ ಫಲ ದೊರೆಯುತ್ತಿಲ್ಲ. ನಾನು ಕಂಡ ಹಾಗೆ ಕೊಡ್ಲಿಪೇಟೆ ಶಾಲೆ ಹಾಗೂ ಸುತ್ತುಮುತ್ತಲಿರುವ ಶಾಲೆಗಳಿಗೆ ಮುಖ್ಯಾಧಿಕಾರಿಗಳು ಸಂದರ್ಶಿಸಿ ಒಂದು ವರ್ಷದ ಮೇಲಾಯಿತು. ಡೆಪ್ಯೂಟಿ ಇನ್ಸ್‌ಪೆಕ್ಟರವರು ವಯಸ್ಕರ ಶಿಕ್ಷಣ ವ್ಯಾನಿನಲ್ಲಿ ಆಗಾಗ್ಯೆ ಕೇವಲ ಅರ್ಧ ಗಂಟೆಗಾಗಿ ಬರುತ್ತಿದ್ದರೂ ಶಾಲೆ ಇನ್ಸ್‌ಪೆಕ್ಷನ ಮಾಡಿ ಸುಮಾರು ಒಂದು ವರ್ಷವಾಯಿತೆಂದು ಪರಸ್ಪರ ತಿಳಿಯಲಾಯಿತು. ಹೊಸದಾಗಿ ತೆರೆದಿರುವ ಶಾಲೆಗಳ ವಿಷಯ ಕೊಡಗಿನ ಪತ್ರಿಕೆಗಳಲ್ಲಿ ಪ್ರಕಟವಾಗಿ ಹಳ್ಳಿಹಳ್ಳಿಯ ಪತ್ರಿಕೆ ಓದುವ ಪ್ರತಿಯೊಬ್ಬ ಬಡ ಕೃಷಿಕನಿಗೂ ತಿಳಿದಿದ್ದಾಗ್ಯೂ ವಿದ್ಯಾ ಇಲಾಖಾ ಆಫೀಸಿನವರಿಗೆ ಈ ವಿಚಾರ ತಿಳಿದಿರುವದಿಲ್ಲವೆಂಬುದು ಆಯಾ ಶಾಲೆಯ ಉಪಾಧ್ಯಾಯರುಗಳಿಗೆ ಈಗಿನ ವಿವರಣೆ ಬಗ್ಗೆ ಬರುತ್ತಿರುವ ಪತ್ರಗಳ ವಿಷಯ ಅಲ್ಲಲ್ಲಿ ಪರಸ್ಪರ ಮಾತಾಡುತ್ತಿರುವದರಿಂದ ಗೊತ್ತಾಗುತ್ತದೆ. ಮೂರು ನಾಲ್ಕು ತಿಂಗಳುಗಳಿಂದ ಸಂಬಳ ದೊರೆಯದೆ ರಿಪೋರ್ಟು ವಗೈರೆ ತಮ್ಮ ಸ್ವಂತ ಅಂಚೆ ವೆಚ್ಚದಿಂದ ಮಾಡಿ ಸಾಕಾಗಿ ಈಗಾಗಲೇ ಇಲ್ಲಿಗೆ ಸಮೀಪದ ಒಂದು ಪೋಷಕ ಶಾಲೆ ಸುಮಾರು ೧೦-೧೫ ದಿನಗಳ ತನಕ ಉಪಾಧ್ಯಾಯರಿಲ್ಲದೆ ಮುಚ್ಚಲ್ಪಟ್ಟಿತ್ತು.

ಇದಕ್ಕೆ ಸಂಬಂಧಪಟ್ಟ ಮೇಲಧಿಕಾರಿಗಳು ಜನಾಂಗ ಹಾಗೂ ಒಂದು ದೇಶದ ಏಳಿಗೆಗೆ ಬಹು ಪ್ರಾಮುಖ್ಯ ಸ್ಥಾನ ಹೊಂದಿರುವ ವಿದ್ಯೆಗೆ ಮಾಡುತ್ತಿರುವ ಖರ್ಚು ಫಲಪ್ರದವಾಗುವಂತೆ ಇನ್ನಷ್ಟು ಹೆಚ್ಚಿನ ಗಮನ ಕೊಟ್ಟು ವಿದ್ಯಾಭಿವೃದ್ಧಿಯನ್ನು ಕೋರುವಿರಾಗಿ ನಂಬುತ್ತೇನೆ.

ವಿದ್ಯಾಭಿಮಾನಿ.

ಮಕ್ಕಳ ಪುಟ

ಗೆಳೆಯನನ್ನು ಕುರಿತು!

ಪಟ್ಟೆ 'ಪ್ಯಾಂಟು'ಗಳೆರಡನು ತೊಟ್ಟು
ಕಣ್ಣಿಗೆ ಕಪ್ಪಿನ 'ಗಾಗಲ್ಸ್'ಇಟ್ಟು
ಮೋಟು 'ಸಿಗರೇಟ್' ತುಟಿಯಲಿ ಸೆಟ್ಟು
ಪಯಣವಿದೆಲ್ಲಿಗೆ ಎಲೆ ಗೆಳೆಯಾ? ||೧||

ಕೈ ಕೈ ಹಿಡಿದು 'ಮಿಸಿಸ್' ತಳೆದು
ಮೆಲ್ಲ ಮೆಲ್ಲ ತಿರುಗುತ 'ಮೆರಿ'ಯೆಂದೊರೆದು
ರಸ್ತೆಯ ಮಧ್ಯದಿ ನಾಟ್ಯಕ್ರೀಡೆಯ
ಹೊರಟಿಹುದೆಲ್ಲಿಗೆ ಎಲೆ ಗೆಳೆಯಾ? ||೨||

ಕಂಡವರೆಲ್ಲರ 'ಕಾಮೆಂಟ್' ಮಾಡುತ
ಪ್ರಣಯೋಸಕ್ತಿಯ 'ಜೋಕ್'ನು ಗೈಯುತ
ಪರಿ ಪರಿ ಬಗೆಗಳ 'ಫ್ರಾಂಕ್ಸ್' ಎಂದೆನ್ನುತ
ತಿರುಗುವುದೆಲ್ಲಿಗೆ ಎಲೆ ಗೆಳೆಯಾ? ||೩||

ಗಳಿಸಿದ ವಿದ್ಯೆಯ ಗಾಳಿಗೆ ತೂರಿ
ಪಡೆದಿಹ ಘನತೆಯ ಕೆಸರಿಗೆ ಮಾರಿ
ಕಾಣದ ಕತ್ತಲ ಪಥವನು ಸೇರಿ
ಪಯಣವಿದೆಲ್ಲಿಗೆ ಎಲೆ ಗೆಳೆಯಾ? ||೪||

ಲೇಖಕಃ 'ನವೀನ ಕುಮಾರ' ಮಡಿಕೇರಿ.

ಲಾಟರಿ ಚಾಳಿ

ರಾಜಭಕ್ತಿ ಮತ್ತು ದೈವಭಕ್ತಿ ಪ್ರವೀಣರಾದ ಕೊಡಗಿನ ನಿವಾಸಿಗಳು ಇನ್ನು ಕೆಲವೇ ದಿನಗಳಲ್ಲಿ ಧನಲಕ್ಷ್ಮಿಯು ಅವತಾರ ಪುರುಷರೆಂದು ಗುಡಿ ಕಟ್ಟಿ ನಮಿಸುವ ದಿನಗಳು ಸನ್ನಿಹಿತವಾಗುತ್ತಿದ್ದ ಸಮಯದಲ್ಲೇ ಅವರ ಕಣ್ಣುಮುಚ್ಚಾಲೆಯು ಬೆಂಗಳೂರಿನ ಸುಪ್ರಸಿದ್ಧ ಡಾ. ರೆಡ್ಡಿಯವರ ಪರಿಶ್ರಮದಿಂದ ಬಯಲಾಯಿತು. ಹಲವು ಮಾನ್ಯ ವ್ಯಕ್ತಿಗಳನ್ನೂ ಮತ್ತು ನಮ್ಮ ಮುಖ್ಯ ಪಟ್ಟಣದ ಡಾಕ್ಟರುಗಳನ್ನೂ ಹಣ್ಣುಗಾಯಿ ನೀರುಗಾಯಿ ಮಾಡಿ ಈ ನರಿಗೆ ನಾರದ ಸವಾದಕ್ಕೂ ಘನ ತರದ್ದೇ ಆಗಿದೆ!

ಶ್ರೀ ರೆಡ್ಡಿಯವರು ಕೈಕೊಂಡ ಉಗ್ರ ತರದ, ಅದರೆ ಸಾಧಾರಣ ಪರೀಕ್ಷೆಯನ್ನು ಮಡಿಕೇರಿ ಆಸ್ಪತ್ರೆಯಲ್ಲಿ ಯಾರಿಕ್ಕಾಗಿ ಕೈಕೊಳ್ಳಲಿಲ್ಲವೆಂಬುದು ಆಶ್ಚರ್ಯ. ಶ್ರೀ ರೆಡ್ಡಿಯವರು ಧನಲಕ್ಷ್ಮಿಯು ಎಲ್ಲಾ ಜನರಂತೆಯೇ ಊಟ ತಿಂಡಿಗಳೆಂದಲೇ ಹೊಸಲಿನಿಂದಲೂ ಬೆಳೆದವಳೆಂತಲೂ, ಯಾವಾಗಲೂ ಅವಳಿಗೆ ಊಟವು ಬೇಕೆಂತಲೂ, ಅತಿ ಮೀರಿ ಬಲಾತ್ಕಾರದ ಉಪವಾಸ ಮಾಡಿದರೆ ಖಂಡಿತಾ ಸಾಯುವಳೆಂತಲೂ ವರದಿ ಮಾಡಿರುತ್ತಾರೆ. ಈ ವರದಿಯು ನಮ್ಮ ಕೊಡಗಿನ ನಿವಾಸಿಗಳ ಮೇಲೂ, ವೈದ್ಯಕೀಯ ತಜ್ಞರ ಮೇಲೂ ಒಂದು ಕಪ್ಪು ಛಾಯೆಯನ್ನು ತಾರದಿರದು.

ಶ್ರೀ ರೆಡ್ಡಿಯವರು ಕೊಟ್ಟ ಹೇಳಿಕೆಯಲ್ಲಿ ಕೆಲವು ಆಪ್ತ ಜನರೂ ಸಹ ಈ ಮೋಸದಲ್ಲಿ ಭಾಗಿಗಳಾಗಿ ಯಾವುದೋ ಒಂದು ಲಾಭದಾಯಕ ಕಾರ್ಯವನ್ನು ಸಫಲಪಡಿಸಿಕೊಳ್ಳಲು ಪ್ರಯತ್ನಿಸಿದಂತಿದೆ ಎಂದಿದ್ದಾರೆ. ಘನ ಸರಕಾರವು ಇದುವರೆವಿಗೂ ಇವರ ಮೇಲೆ ಹಣ ವ್ಯಯಿಸಿದ್ದರೆ ಇದರ ಮರು ಜಾವತಿಗಾಗಿ ಯಾವದಾದರೊಂದು ಕಾರ್ಯಕ್ರಮ ತೆಗೆದುಕೊಳ್ಳುವುದು ಒಳ್ಳೆಯದು. ಇಲ್ಲದ ಪಕ್ಷ ನಾಳೆ ತನ್ನ ಎರಡು ಕಣ್ಣುಗಳಿಂದ ಮುಳುಗಿದ ಸೂರ್ಯನನ್ನು ರಾತ್ರಿಯೂ ಕಾಣುವ ಮಹಾನುಭಾವನೊಬ್ಬನು ಇದೇ ರೀತಿಯ ಪರೀಕ್ಷೆಗಾಗಿ ಅಮೇರಿಕಾ ನಗರಕ್ಕೆ ಹೊರಡಬಹುದು!

ಶ್ರೀ ರೆಡ್ಡಿಯವರ ಪರಿಶ್ರಮದಿಂದ ನಮ್ಮ ದೇಶದ ಮೇಲೂ, ದೇಶದ ವೈದ್ಯಕೀಯ ರಂಗದ ಮೇಲೂ ಮಾತ್ರ ಕೆಟ್ಟ ಹೆಸರಾಗಿ ನಾವು ಉಳಿದುಕೊಂಡೆವು. ಆದರೆ ಧನಲಕ್ಷ್ಮಿಯು ಬೆಂಗಳೂರಿನಲ್ಲೂ ಕಣ್ಣಿಗೆ ಮಣ್ಣೆರಚಿದ್ದರೆ ಅಮೇರಿಕದಲ್ಲಿ ಇದು ಬಯಲಾಗಿ ಇಡೀ ಹಿಂದೂದೇಶದ ಜನರ ಮತ್ತು ಡಾಕ್ಟರುಗಳ ಹೆಸರೂ ಮಲಿನಗೊಳಿಸಲ್ಪಡುತ್ತಿದ್ದುವು.

ದಿವಂಗತ ಗಣ್ಯ ವ್ಯಕ್ತಿಗಳಾದ ಶ್ರೀ ಪಟೇಲರೂ, ಕೇಂದ್ರ ಸರಕಾರದ ಮಾನ್ಯ ಮಂತ್ರಿಗಳೂ, ಹೊಗಳಿದ 'ಅತೀವ ಒಳ್ಳೆಯವರಾದ ಕೊಡಗು ನಿವಾಸಿಗಳ' ಮಧ್ಯದಲ್ಲಿ ಇಂತಹ 'ಚಾಲೋಟಿನ' ಪ್ರದರ್ಶನ ನಿಜಕ್ಕೂ ಆಶಾದಾಯಕವಲ್ಲ.

ಕೆ. ಜಿ. ಬೋಪಯ್ಯ.

ಹಿಂದೀ ಪರೀಕ್ಷೆ

ಮಡಿಕೇರಿ ಕೇಂದ್ರದಲ್ಲಿ ಆಗಸ್ಟ್ ೫೩ರ ಹಿಂದೀ ಪರೀಕ್ಷೆಗಳಲ್ಲಿ ಶ್ರೀಗಳಾದ ಬಿ. ಎ. ಮಾದಪ್ಪ, ಎನ್. ಎಂ. ರಾಜಿ, ತಿ. ಎ. ಚಂದ್ರಮ್ಮ, ಎನ್. ಎಂ. ಕಾವೇರಮ್ಮ, ಸಿ. ಸಿ. ಪೂವಯ್ಯ, ಎನ್. ಎಂ. ಸೀತೆ (ಪ್ರಥಮ ಶ್ರೇಣಿ) ಮತ್ತು ಎ. ಡಿ. ಸೋಮ (ಪ್ರಥಮ ಶ್ರೇಣಿ) ಇವರುಗಳು ಪ್ರಾಥಮಿಕದಲ್ಲೂ,—ಶ್ರೀಗಳಾದ ಟಿ. ಎನ್. ತಾರ, ಸಿ. ಎಸ್. ದೇವಮ್ಮ, ಎಸ್. ಜಿ. ಪ್ರಸನ್ನ, ಕೆ. ವಿ. ಗೋಪಾಲ ಭಟ್ಟ್, ಕಾಮೇಶ್ವರನ್, ಎನ್. ಜಿ. ಸರೋಜ, ಟಿ. ರಮೇಶ ಕಾಮತ್ (ಪ್ರಥಮ ಶ್ರೇಣಿ) ಎಂ. ಪಿ. ಪ್ರಮೀಳ, ಬಿ. ಜಿ. ಕೇಶವರಾವ್ ಮತ್ತು ಟಿ. ಸಾವಿತ್ರಿ (ಪ್ರಥಮ ಶ್ರೇಣಿ) ಇವರುಗಳು ಮಾಧ್ಯಮದಲ್ಲೂ—ಶ್ರೀಗಳಾದ ಕೆ. ಎಸ್. ಬೋಜಮ್ಮ, ಸಿ. ಎಂ. ತಾರ, ಬಿ. ಎಸ್. ಬಸವಣ್ಣಯ್ಯ, ಕೆ. ಎಂ. ಮಾಚಮ್ಮ, ವಿ. ಎಸ್. ಗೌರಮ್ಮ (ಪ್ರಥಮ ಶ್ರೇಣಿ) ಎಂ. ಎಸ್. ಇಂದಿರ, ಹೆಚ್. ವಿ. ಭಾರತೀ ದೇವಿ ಮತ್ತು ಕೆ. ಎನ್. ದೇವರಾವ್, ಇವರುಗಳು ರಾಷ್ಟ್ರ ಭಾಷಾದಲ್ಲೂ ತೇರ್ಗಡೆಯಾಗಿರುವರು.

ನೆಪೋಲಿಯನನ 'ಗಿತಾರ್' ೧೮೯೦ ರೂಪಾಯಿಗೆ ಮಾರಿಹೋಯಿತು.

ಸೈಂಟ್ ಹೆಲೈನಾದಲ್ಲಿ ಅಜ್ಞಾತವಾಸದಲ್ಲಿರುವ ಕಾಲದಲ್ಲಿ ಬೇಸರ ಕಳೆಯಲು ಫ್ರೆಂಚ್ ಚಕ್ರವರ್ತಿ ನೆಪೋಲಿಯನನು ಬಾರಿಸಿಕೊಂಡಿದ್ದ 'ಗಿತಾರ್' ಸಂಗೀತೋಪಕರಣವು ಇತ್ತೀಚೆಗೆ ಆಸ್ಟ್ರೇಲಿಯದ ಸಿಡ್ನಿ ನಗರದಲ್ಲಿ ೧೮೯೦ ರೂಪಾಯಿಗಳಿಗೆ ಹರಾಜಾಗಿ ಹೋಯಿತು. ನೆಪೋಲಿಯನನಿಗೆ ಸಂಬಂಧಪಟ್ಟ ವಸ್ತುಗಳನ್ನೆ ಸಂಗ್ರಹಿಸುವ ಮೆಲ್ಬೋರ್ನಿಯದ ಗೃಹಸ್ಥನೊಬ್ಬನು ಅದನ್ನು ಕೊಂಡುಕೊಂಡನು. ಆ 'ಗಿತಾರ್' ಮೇಲೆ ಆನೆಯ ದಂತ ಮತ್ತು ಮುತ್ತಿನ ಕೆತ್ತನೆಯಿದೆ.

೨,೬೦೦ ರೂ. ಬೆಲೆ ಬಾಳುವ ಪ್ರಯಾಣ ವಿಮಾನ

ಫ್ರಾನ್ಸಿನ ಅಲ್ಲೆ ನಗರದಲ್ಲಿ ಮೂರು ಮಂದಿ ಕುಶಾಗ್ರಮತಿಯ ಇಂಜಿನಿಯರರು ಪ್ರಾಯಶಃ ಅತೀ ಚಿಕ್ಕ ಮತ್ತು ಅತ್ಯಂತ ಕಡಿಮೆ ವೆಚ್ಚದ ಪಯಣ ವಿಮಾನವನ್ನು ತಯಾರಿಸಿರುವರು. 'ಟರ್ಬುಲೆಂಟ್' ಎಂಬು ಈ ಚಿಕ್ಕ ವಿಮಾನಕ್ಕೆ ಹೆಸರಿಟ್ಟಿದ್ದಾರೆ. ಆ ವಿಮಾನದಲ್ಲಿ ೨೫ ಅಶ್ವಶಕ್ತಿಯುಳ್ಳ ಒಂದು ವಾಕ್ಸ್ ವೇಗನ್ ಮೋಟಾರ್ ಇರುವದು. ಅದರ ರೆಕ್ಕೆಯ ಅಳತೆ ಸುಮಾರು ೨೦ ಅಡಿಗಳಷ್ಟು. ಅದನ್ನು ತಯಾರಿಸಲು ೨೦೦,೦೦೦ ಫ್ರಾಂಕ್‌ಗಳಷ್ಟು (ರೂ. ೨೬೦೦) ತಗಲುವದು. ತಾಸಿಗೆ ೩೭ ಮೈಲುಗಳಿಂದ ೮೦ ಮೈಲುಗಳಷ್ಟು ವೇಗ ಓಡಬಲ್ಲದು. ೬೨ ಮೈಲುಗಳಷ್ಟು ಅಂತರ ಓಡಲು ಎಂಟು ಲೀಟರ್ (೧೪ ಪೈಂಟ್ಸ್) ಗಳಷ್ಟು ಮಾತ್ರ ಪೆಟ್ರೋಲ್ ಖರ್ಚಾಗುವದು.

ಪಂಚಮಹಾ ರಾಷ್ಟ್ರಗಳ ಸಮ್ಮೇಳನ ಜರಗೀತೇ?

ಅಂತರ್ರಾಷ್ಟ್ರೀಯ ಸಂಘರ್ಷಮಯ ಪರಿಸ್ಥಿತಿ, ಜರ್ಮನ್ ಸಮಸ್ಯೆ ಮತ್ತು ಯೂರೋಪಿನ ಭದ್ರತೆಗೆ ಸಂಬಂಧಪಟ್ಟ ಇತರ ಪ್ರಶ್ನೆಗಳನ್ನು ಚರ್ಚಿಸಲು ಪಶ್ಚಿಮ ರಾಷ್ಟ್ರಗಳು ಒಪ್ಪುವುದರ ಮೇಲೆ ಜಾಗತಿಕ ಮಹಾ ರಾಷ್ಟ್ರಗಳ ವಿದೇಶ ಮಂತ್ರಿಗಳ ಸಮ್ಮೇಳನ ಜರಗುವುದು ಹೊಂದಿಕೊಂಡಿದೆ ಎಂಬುದಾಗಿ ರಷ್ಯದ ವಿದೇಶ ಮಂತ್ರಿಗಳಾದ ವಿ. ಮೊಲೊಟೊರವರು ತಾ. ೧೪ರ ರಾತ್ರಿ ಮಾಸ್ಕೋದಲ್ಲಿ ಹೇಳಿದರು.

ಅವರು ರಷ್ಯದ ಹಾಗೂ ವಿದೇಶಗಳ ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಮಾತಾಡುತಿದ್ದರು. "ಯೂರೋಪಿಯನ್ ಸೇನಾ ಒಪ್ಪಂದವನ್ನು ಮಂಜೂರು ಮಾಡಿಸುವ ಪಶ್ಚಿಮ ರಾಷ್ಟ್ರಗಳ ಧೋರಣೆಯಿಂದ ಜರ್ಮನ್ ಪ್ರಶ್ನೆಯು ಬಗೆಹರಿಯುವುದು ಅಸಾಧ್ಯವಾದೀತು. ವಿದೇಶ ಮಂತ್ರಿಗಳ ಸಮ್ಮೇಳನವು ನಿರ್ದಿಷ್ಟ ಪ್ರಶ್ನೆಯನ್ನು ಮಾತ್ರ ಚರ್ಚಿಸಬೇಕೆಂದು ಹೇಳುವದು ಸರಿಯಲ್ಲ. ಜಾಗತಿಕ ಶಾಂತಿಗೆ ಸಂಬಂಧಪಟ್ಟ ಯಾವುದೇ ಸಮಸ್ಯೆಯನ್ನು ಚರ್ಚಿಸಲು ಅದು ಸ್ವತಂತ್ರವಾಗಿರಬೇಕು. "ಇಷ್ಟೆಲ್ಲ ಹೇಳಿದ ನಂತರ ಸ್ವಾಭಾವಿಕವಾಗಿ ಏಳುವ ಪ್ರಶ್ನೆ ಎಂದರೆ ವಿದೇಶ ಮಂತ್ರಿಗಳ ಸಮ್ಮೇಳನ ಜರಗೀತೇ? ಇದಕ್ಕೆ ಉತ್ತರ ಅಮೇರಿಕಾ, ಬ್ರಿಟನ್, ಫ್ರಾನ್ಸುಗಳ ಮೇಲೆ ಹೊಂದಿಕೊಂಡಿದೆ" ಎಂದು ಅವರು ಹೇಳಿದರು.

ಸಂಯುಕ್ತ ಮಹಾರಾಷ್ಟ್ರದ ಬೇಡಿಕೆ.

ತಾ. ೧೪ ರಲ್ಲಿ ಡೆಲ್ಲಿಯಲ್ಲಿ ಪ್ರಾರಂಭವಾಗಿರುವ ಬೃಹನ್ಮಹಾರಾಷ್ಟ್ರ ಪರಿಷತ್ತಿನ ೨೧ ನೇ ಅಧಿವೇಶನದಲ್ಲಿ ಮಾತಾಡಿದವರೆಲ್ಲ ಬೊಂಬಯಿ ರಾಜಧಾನಿಯಾಗಿರುವ ಸಂಯುಕ್ತ ಮಹಾರಾಷ್ಟ್ರದ ಸ್ಥಾಪನೆಗೆ ಸರ್ವಾನುಮತದ ಬೆಂಬಲ ನೀಡಿದರು. ಸ್ವಾಗತಾಧ್ಯಕ್ಷರಾಗಿರುವ ಶ್ರೀ. ಎನ್. ವಿ. ಗಾಡಗಿಲ್ ಮತ್ತು ಪರಿಷತ್ತಿನ ಅಧ್ಯಕ್ಷತೆ ವಹಿಸಿದ್ದ ಮುಂಬಯಿ ಕಂದಾಯ ಮಂತ್ರಿ ಶ್ರೀ. ಬಿ ಎಸ್. ಹಿರೆಯವರು ಮಹಾರಾಷ್ಟ್ರ ಪ್ರಾಂತದ ಸ್ಥಾಪನೆ ಬೇಗನೆ ಆಗಬೇಕೆಂದು ಒತ್ತಾಯಪೂರ್ವಕ ಪ್ರತಿಪಾದನೆ ಮಾಡಿದರು. ಇದೀಗ ಮಹಾರಾಷ್ಟ್ರ ಪ್ರಾಂತದ ಸ್ಥಾಪನೆ ಅನಿವಾರ್ಯವಾಗಿ ಎಷ್ಟೇ ಅಡೆತಡೆ ಬಂದರೂ ಅದು ಸ್ಥಾಪಿತವಾಗುವದು. ಆಗಲಿಕ್ಕೆ ಬೇಕು ಎಂದು ಶ್ರೀ. ಗಾಡಗಿಲರು ಅಭಿಪ್ರಾಯಪಟ್ಟರು. ನಮ್ಮ ಸಂಯುಕ್ತ ಮಹಾರಾಷ್ಟ್ರದ ಬೇಡಿಕೆಯು ಸಂವಿಧಾನಕ್ಕನುಸಾರವಾಗಿಯೇ ಇದೆ. ಅದು ಅರಾಷ್ಟ್ರೀಯವಾಗಿದೆಯೆಂದು ಹೇಳುವದು ಕಿಡಿಗೇಡಿತನದ್ದಾಗಿದೆ. ಅದೇ ರೀತಿ ಇಂಥವರೊಬ್ಬರ ವಿರುದ್ಧ ಅದು ಇರುವದೆಂದು ಹೇಳುವದೂ ಮೂರ್ಖತನದ್ದಾಗಿದೆಂದು ಅವರು ಹೇಳಿದರು. ಸಂಯುಕ್ತ ಮಹಾರಾಷ್ಟ್ರ ಸ್ಥಾಪನೆಯಿಂದ ರಾಷ್ಟ್ರದ ಐಕ್ಯಕ್ಕೆ ಭಂಗ ಬರುವ ಪ್ರಶ್ನೆಯೇ ಇಲ್ಲ. ಕಳೆದ ೧೫೦ ವರ್ಷಗಳಿಂದ ನಾವು ರಾಷ್ಟ್ರದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ಹೋರಾಡುತ್ತಿರುವವು ಎಂದು ಗಾಡಗಿಲರು ಹೇಳಿದರು.

ಭಾರತದೊಡನೆ ಕಾಶ್ಮೀರದ ಸೇರ್ಪಡೆ.

ಕಾಶ್ಮೀರ ಪ್ರಧಾನರಾದ ಬಕ್ಷಿ ಗುಲಾಮು ಮಹಮ್ಮದರು ಶನಿವಾರ ದಿನ ಶ್ರೀನಗರದಿಂದ ೨೪ ಮೈಲಿನ ಮೇಲಿರುವ ಸ್ಪೋರೇನದಲ್ಲಿ ಸೇರಿದ ರಾಷ್ಟ್ರೀಯ ಪರಿಷತ್ತಿನ ಕಾರ್ಯಕರ್ತರ ಸಭೆಯಲ್ಲಿ ಮಾತಾಡುತ್ತ ಕಾಶ್ಮೀರವು ಭಾರತದಲ್ಲಿ ಸೇರ್ಪಡೆಹೊಂದಿದ್ದು ಇನ್ನು ಹಿಂದೆಗೆಯುವವಿಚಾರವೇ ಇಲ್ಲೆಂದು ಸಾರಿದರು. ಕಾಶ್ಮೀರ ಜನತೆಯೂ ದೀರ್ಘ ವಿಚಾರದನಂತರ ತಮ್ಮ ಜಾತ್ಯಾತೀತ ಧ್ಯೇಯದ ಯಶಕ್ಕಾಗಿ ಭಾರತದ ಜನತೆಯೊಡನೆ ಒಂದಾಗಿದೆ. ಈ ಪ್ರಗತಿಪರ ಧ್ಯೇಯವು ಭಾರತದೊಡನೆ ಸಂಬಂಧವಿಟ್ಟರೇನೆ ಯಶಸ್ವಿಯಾಗಬಲ್ಲದು.

ಭಾರತದೊಡನೆ ಸೇರಿದ್ದರಿಂದ ಕಾಶ್ಮೀರಕ್ಕೆ ಎಷ್ಟೋ ಆರ್ಥಿಕ ರಾಜಕೀಯ ಪ್ರಯೋಜನಗಳು ದೊರೆತಿದೆ. ಪ್ರತಿಯೊಬ್ಬ ಕಾಶ್ಮೀರಿಯೂ ಭಾರತದೊಡನಿರುವ ಬಾಂಧವ್ಯವನ್ನು ದೃಢಗೊಳಿಸಲು ಬದ್ಧಕಂಕಣನಾಗಿದ್ದಾನೆಂದು ಅವರು ಹೇಳಿದರು.

ಜ್ಞಾನಿಯನ್ನು, ಸಧರಹಿತ ಹಾಗೂ ಹೇಡಿ ಇಲ್ಲದ ಸ್ವಭಾವವನ್ನು ಯಾವ ದಾರಿಯಲ್ಲಿ ಕೆಳಗೊಯ್ಯಲು ಸಾಧ್ಯ? ಎಲ್ಲಿ ಹೀನ ಸ್ಥಳದಲ್ಲಿ ಆತನನ್ನು ಹಾಕಿದರೂ ಆತನು ಮಲಿನಗೊಳ್ಳನು. ಆತನ ಬೆಲೆ ಕೆಸರಿನಲ್ಲಿ ಹಾಕಿದ ವಜ್ರದಂತೆ!

ಇಂಥಾ ಜ್ಞಾನಿಗಳ, ಬೆಳಕಿನ ಜೀವನ ನಡೆಸುವವರ, ಭಕ್ತರ ಕಡೆಗೆ ದೇವರೂ ಕೂಡ ತವಕದಿಂದ ನೋಡುತ್ತಾನೆ. ಅವರ ಸ್ವಾರ್ಥ ಅನಾಸಕ್ತಿಯಲ್ಲಿ ದೇವರೂ ಆನಂದ ಪಡುತ್ತಾನೆ.

ಮನುಷ್ಯ ಜನ್ಮವನ್ನು ಪಡೆಯುವುದು ಪರಮ ಭಾಗ್ಯ. ಮಾನವನ ಜೀವನವನ್ನು ಶಾಂತವೂ, ಅರ್ಥಗರ್ಭಿತವೂ ಆಗಿ ಮಾಡಿಕೊಂಡವರು ಭಾಗ್ಯವಂತರು. ಈ ಜೀವನದಲ್ಲಿ ವೇದಾಗಮ ತತ್ವಗಳನ್ನು ಅರಗಿಸಿಕೊಂಡವರು ಋಷ್ಯರೆನಿಸುವವರು. ಅವರಿಗೆ ಏನೂ ಅಲಭ್ಯವಿಲ್ಲ.

ಕೆಟ್ಟ ಕೆಲಸ, ಆಲೋಚನೆಗಳಿಂದ ದೂರವಿರುವದು, ತನ್ನ ಭಾವನೆಗಳನ್ನು ಪರಿಶುದ್ಧಗೊಳಿಸಿಕೊಳ್ಳುವುದು, ಇವೇ ಬುದ್ಧನ ತತ್ವಗಳು.

ಸಹನೆಯೇ ಹಿರಿದಾದ ಪ್ರಾರ್ಥನೆ. ಕಷ್ಟಗಳನ್ನು ಲೆಕ್ಕಿಸದೆ ಎದುರಿಸಿ ಸತ್ಯದ ಪಥವನ್ನು ಹಿಡಿದಿರುವದೇ ನಿರ್ವಾಣ. ಬುದ್ಧನಿಂದ ಇನ್ನೊಬ್ಬರಿಗೆ ಕೇಡು ಬಗೆಯುವವನು ಬುದ್ಧನ ಮಾರ್ಗದಿಂದ ದೂರ ಸರಿದಂತೆ.

ದೋಷಾರೋಪಣೆ ಮಾಡದಿರೋಣ, ಇನ್ನೊಬ್ಬರಿಗೆ ನೋವು ಮಾಡದಿರೋಣ, ಹಿಡಿತದ ಜೀವನ ನಡೆಸೋಣ, ಆಹಾರ, ವಿಹಾರ ಮೊದಲಾದವಲ್ಲಿ ಸರಳರಾಗಿರೋಣ, ಮಾನಸಿಕ ಸಂಸ್ಕೃತಿಯ ಬೆಳವಣಿಗೆಗೆ ಪ್ರಯತ್ನಿಸೋಣ ಇವೇ ಬುದ್ಧನ ತತ್ವಗಳು.

ಭೋಗ ವಿಲಾಸಗಳು ಹೊನ್ನಿನ ಮಳೆಯಿಂದಲೂ ತೃಪ್ತಿಗೊಳ್ಳಲಾರವು. ಭೋಗ ವಿಲಾಸಗಳಿಂದ ಕ್ಷಣಿಕ ಸುಖ ದೊರೆತರೂ, ನಿರಂತರ ದುಃಖವಿದೆ ಎಂದರಿತ ಬುದ್ಧಿವಂತರು ಅಂಥಾವುಗಳಲ್ಲಿ ಆಸಕ್ತಿ ಇಡಲಾರರು. ಆಸೆ, ಆಕಾಂಕ್ಷೆಗಳನ್ನು ಹತ್ತಿಕ್ಕಿ ಕೊಲೆ ಮಾಡುವುದರಲ್ಲೇ ಬುದ್ಧಿವಂತರು ಸಂತುಷ್ಟರಾಗುವರು.

ಭಯದಿಂದ ಪೀಡಿತರಾದವರು ಬೆಟ್ಟ, ಕಾಡು, ಮರ, ದೇವಸ್ಥಾನಗಳಲ್ಲಿ ತಮ್ಮ ರಕ್ಷಣೆಗೆ ತಾವನ್ನು ಹುಡುಕುವರು. ಆದರೆ ಅವು ಅಂಥಾ ರಕ್ಷಕಾ ಸ್ಥಾನಗಳಲ್ಲ. ಹೊರಗಿನ ವಸ್ತುಗಳ ಆಶ್ರಯ ಪಡೆದರೆ ತನ್ನ ಬಲದಲ್ಲಿ ನಿಲ್ಲುವವನನ್ನು ಈ ಭಯಗಳು ಪೀಡಿಸವು.

ಉತ್ತಮ ಕುಲ ಸಂಭೂತನನ್ನು ಕಾಣುವುದು ಅಪರೂಪ. ಆತನು ಎಲ್ಲೆಲ್ಲಿಯೂ ಹುಟ್ಟಲಾರನು. ಎಲ್ಲಿ ಮೆಚ್ಚುವ ಕವಿಯುವ ಜ್ಞಾನದ ಬೆಳಕಿದೆಯೋ, ಎಲ್ಲಿ ಲೋಭ, ಈರ್ಷೆ, ದ್ವೇಷಗಳ ಹಾವಳಿ ಇಲ್ಲವೋ ಅಲ್ಲಿ ಉತ್ತಮನು ಜನಿಸುವನು. ಅಂಥಾವನ ಜನನದಿಂದ ಆ ಕುಟುಂಬವೂ, ದೇಶವೂ ಪಾವನಗೊಳ್ಳುವುದು.

ಗೌರವ ಯೋಗ್ಯರಿಗೆ ಗೌರವ ಸಲ್ಲಿಸಬೇಕು. ಅರಿಷಡ್ವರ್ಗಗಳ ಹಿಡಿತದಿಂದ ಬಿಡುಗಡೆಯಾದವರಿಗೆ ಪೂಜೆ ಸಲ್ಲಿಸಬೇಕು. ಸುಖ ದುಃಖಗಳ, ಭಯ, ಕ್ರೋಧಗಳ ಗಡಿಯನ್ನು ದಾಟಿದವರಿಗೆ ಭಕ್ತಿ ಮಾಡಬೇಕು. ಇಂಥಾ ಸಿದ್ಧರಿಗೆ ಗೌರವ ಮಾಡುವವನು ಪಾಪದಿಂದ ಮುಕ್ತನಾಗಿ, ಪರಮಪದವಾದ ನಿರ್ವಾಣವನ್ನು ಹೊಂದುವನು.

ಶನಿವಾರದಂತೆಗೆ
'ಕೊಡಗು' ಏಜೆಂಟರು,
ಶ್ರೀ ಎನ್. ಎಸ್. ಸಿದ್ದಪ್ಪನವರು

ವಿದೇಶಕ್ಕೆ ಹೋದ ನಾಯಿಯ ಕತೆ.

ಒಂದು ಪಟ್ಟಣದಲ್ಲಿ ಚುಕ್ಕಿ ಎಂಬ ಹೆಸರಿನ ನಾಯಿ ಇತ್ತು. ಆ ಪಟ್ಟಣಕ್ಕೆ ಬರಗಾಲ ಬಂದುದರಿಂದ ಜನರಿಗೆ ಅನ್ನಕ್ಕೆ ತೊಂದರೆಯಾಯಿತು. ಆದ್ದರಿಂದ ನಾಯಿಗಳ ಪಾಡು ಬಹು ಕಷ್ಟಕ್ಕೀಡಾಯಿತು. ಚುಕ್ಕಿಯು ಆ ಪಟ್ಟಣವನ್ನು ಬಿಟ್ಟು ದೂರದ ದೇಶಕ್ಕೆ ಹೋಗಬೇಕೆಂದು ನಿಶ್ಚಯಿಸಿ ಆ ಪಟ್ಟಣವನ್ನು ಬಿಟ್ಟಿತು. ಅನೇಕ ದಿನಗಳ ಪ್ರಯಾಣದ ನಂತರ ಅದು ದೂರದ ದೇಶವೊಂದನ್ನು ಸೇರಿ ಅಲ್ಲಿಯ ಪಟ್ಟಣವೊಂದನ್ನು ಸೇರಿತು. ಆ ಪಟ್ಟಣದಲ್ಲಿ ಅಡಿಗೆ ಮನೆಯ ಹಿಜಾರ ಕಿಟಕಿ ಇದ್ದ ನಾಗರಿಕನ ಪತ್ನಿಯೊಬ್ಬಳ ಮನೆಯನ್ನು ಕಂಡುಕೊಂಡಿತು. ಪ್ರತಿ ದಿನ ಚುಕ್ಕಿಯು ಬಾಗಿಲು ತೆರೆದಿರುತ್ತಿದ್ದ ಆ ಮನೆಗೆ ನುಗ್ಗಿ ಅಡಿಗೆ ಮನೆಯಲ್ಲಿ ಸಿಕ್ಕಿದುದನ್ನು ತಿಂದು ಓಡಿ ಹೋಗುತ್ತಿತ್ತು.

ಒಂದು ದಿನ ಈ ರೀತಿ ಅಡಿಗೆ ಮನೆಯಲ್ಲಿ ಸಿಕ್ಕಿದುದನ್ನು ಹೊಟ್ಟೆ ತುಂಬ ತಿಂದು ಹೊರಗೆ ಓಡಿ ಹೋಗುವಾಗ ಬೀದಿಯ ಇತರ ನಾಯಿಗಳು ಚುಕ್ಕಿಯ ಮೇಲೆ ಹಾರಿ ಬಂದುವು. ಏಕೆಂದರೆ ಜಾತಿ ಜಾತಿಗೆ ವೈರಿ ಎಂಬಂತೆ ನಾಯಿಯನ್ನು ಕಂಡರೆ ನಾಯಿಗೆ ಆಗದು. ನಾಲ್ಕಾರು ನಾಯಿಗಳ ಮಧ್ಯೆ ಚುಕ್ಕಿಯು ಸಿಕ್ಕಿಕೊಂಡಿತ್ತು. ಆ ನಾಯಿಗಳು ನಿರ್ದಾಕ್ಷಿಣ್ಯದಿಂದ ಚುಕ್ಕಿಯನ್ನು ಕಚ್ಚಿ ಗಾಯಗೊಳಿಸಿದುವು.

ಆಗ ಚುಕ್ಕಿಯು ಗಾಯಗಳಿಂದ ನರಳುತ್ತಾ ಆಲೋಚಿಸಿತು. "ಬರಗಾಲ ಎಂದರೂ ಶಾಂತಿಯಿಂದ ನಾಯಿಗಳ ಜತೆಗೆ ಬದುಕಲು ಆಸ್ಪದವಿರುವ ತಾಯ್ನಾಡೇ ಸುಮ್ಮ ಸುಮ್ಮನೆ ಜಗಳ ಕಾಯುವ ಜನರಿರುವ ಸುಭಿಕ್ಷವಾದ ಪರದೇಶಕ್ಕಿಂತಾ ಉತ್ತಮ" ಹೀಗೆಂದು ಆಲೋಚಿಸಿ ಚುಕ್ಕಿಯು ತನ್ನ ಊರಿಗೆ ಹಿಂತಿರುಗಲು ನಿರ್ಧಾರ ಮಾಡಿ ಅದೇ ರೀತಿ ಹಿಂತಿರುಗಿ ಬಂತು.

ಆಗ ಚುಕ್ಕಿಯ ಸಂಬಂಧಿಕರು ವಿದೇಶದಿಂದ ಹಿಂತಿರುಗಿದ ತಮ್ಮ ಬಂಧುವನ್ನು ಕಂಡು ಸುತ್ತುಗಟ್ಟಿ ವಿವಿಧ ಪ್ರಶ್ನೆ ಕೇಳತೊಡಗಿದರು. "ನೀನು ಹೋದ ದೇಶ ಹೇಗಿತ್ತು. ಅಲ್ಲಿಯ ಜನರ ರೀತಿ ನೀತಿ ಏನು? ಅವರ ಆಹಾರ ವಿಹಾರ ಹೇಗೆ? ಅವರ ಸ್ವಭಾವ ಎಂಥಾದ್ದು?" ಈ ಮೊದಲಾದ ಪ್ರಶ್ನೆ ಕೇಳಿದರು.

ಆಗ ಚುಕ್ಕಿಯು, "ಆ ದೇಶದ ವಿಚಾರ ಏಕೆ ಕೇಳುವಿರಿ? ಅಲ್ಲಿಯ ಆಹಾರವು ತಿನ್ನಲು ಬಹು ಸೊಗಸು. ಬೇಕೆನ್ನುವಂತ ವಿವಿಧ ಭಕ್ಷ್ಯಗಳಿಗೆ ಕೊರತೆ ಇಲ್ಲ. ಹೆಂಗಸರು ತುಂಬಾ ನಾಗರಿಕರಾಗಿ ಅಡಿಗೆ ಮನೆ ಬಿಟ್ಟಿರುವರು. ಸಮಾಜ ಸಭೆಗಳಲ್ಲಿ ಅವರನ್ನು ನೋಡಲು ಮಾತ್ರ ಅವರೊಡನೆ ಬೆರೆಯಲು ಅನುಕೂಲ. ಆದರೆ ಒಂದೇ ನ್ಯೂನತೆ ಅಲ್ಲಿರುವ ನಮ್ಮ ಬಳಗದವರಿಗೆ ಸಭ್ಯತೆ, ರೀತಿ ನೀತಿಗಳ ಅರಿವಿಲ್ಲ" ಎಂದಿತು.

ಈ ರೀತಿಯ ಉಪದೇಶವನ್ನು ಕೋತಿಯಿಂದ ಪಡೆದ ಮೊಸಳೆಯು ತನ್ನ ಮನೆಯನ್ನು ಆಕ್ರಮಿಸಿದ ಮೊಸಳೆಯೊಡನೆ ಹೋರಾಡಲು ನಿಶ್ಚಯಿಸಿತು. ಆದ್ದರಿಂದ ಮೊಸಳೆಯು ಗೆಳೆಯನಾದ ಕೋತಿಗೆ ವಂದಿಸಿ ತನ್ನ ಮನೆಯ ಕಡೆ ಹೋಗಿ ಅಲ್ಲಿದ್ದ ಮೊಸಳೆಯೊಡನೆ ಬಹು ವೀರಾವೇಶದಿಂದ ಹೋರಾಡಿ ಆಗಂತುಕನನ್ನು ಕೊಂದು ಹಾಕಿ ತನ್ನ ಮನೆಯನ್ನು ಪಡೆದು ಬಹು ವರ್ಷಗಳ ವರೆಗೆ ಸುಖವಾಗಿ ಬದುಕಿತು. ಆದ್ದರಿಂದ ಕ್ಷಣಪ್ರೇ ಎಂಬಂತೆ ಮಾಯವಾಗುವ ಆನಂದದ ದಿನಗಳನ್ನು ಮರೆಯಿರಿ. ಬರಲಿರುವ ಕಷ್ಟವನ್ನು ನೆನೆದು ಗಾಬರಿಗೊಳ್ಳದೆ ಅದರಲ್ಲೂ ಸುಖವಿದೆಯೆಂದು ತಿಳಿಯಿರಿ. ಏಕೆಂದರೆ ಪ್ರತಿಯೊಂದು ಜಂಕೆಯೂ ಕೂಡ ಅದರ ಅದೃಷ್ಟದಲ್ಲಿ ದೊರೆಯುವ ಹುಲ್ಲನ್ನು ತಿನ್ನುವುದಲ್ಲದೆ ಯಾವ ಪ್ರಯತ್ನ ಪಟ್ಟರೂ ಅದೃಷ್ಟಕ್ಕೆ ಮೀರಿ ವರ್ತಿಸಲಾಗುವದಿಲ್ಲ. ಎಂಬಲ್ಲಿಗೆ ಕೋತಿ ಮತ್ತು ಮೊಸಳೆಯ ಕಥೆ ಸಂಪೂರ್ಣವಾಯಿತು.

ನಮ್ಮ ಅಜ್ಜಿಯ ಕತೆ.

— ಕುಮಾರಿ ಟಿ. ಎಸ್. ದೇವಮ್ಮಾಜಿ, ೮ನೇ ತರಗತಿ, ಮೂರ್ನಾಡು —

ಆದಿತ್ಯವಾರ. ಬೇಸಿಗೆಯ ಉರಿಬಿಸಿಲು. ಮಧ್ಯಾಹ್ನದ ಊಟದ ನಂತರ ಎಲ್ಲರೂ ನಿದ್ರೆ ಮಾಡುವ ಅಭ್ಯಾಸ. ನಮ್ಮ ಅಜ್ಜಿ ಕಥೆ ಹೇಳುವುದರಲ್ಲಿ ಚತುರರು. ನನ್ನ ತಮ್ಮ ರಾಜನು ಅಜ್ಜಿಯ ಜೊತೆಯಲ್ಲಿ ಮಲಗಿ ಕಥೆ ಹೇಳಬೇಕೆಂದು ಪೀಡಿಸತೊಡಗಿದ್ದನು. ನಾನು ಪಕ್ಕದ ಕೋಣೆಯಲ್ಲಿದ್ದೆ. ಅಜ್ಜಿ ಹೇಳಿದ ಕತೆಯಿದು.

"ಇಬ್ಬರು ಬೇಟೆಗಾರರು ಬೇಟೆಯಾಡಲು ಕಾಡಿಗೆ ಹೋದರು. ಎಷ್ಟು ಸುತ್ತಿದರೂ ಅವರಿಗೆ ಯಾವುದೇ ಪ್ರಾಣಿ ಕಾಣಲು ದೊರೆಯಲಿಲ್ಲ. ಹತ್ತಿರದ ಮರದಲ್ಲಿ ಗೂಗೆಯೊಂದು ಕೂತಿತ್ತು. ಇಬ್ಬರು ಅದಕ್ಕೆ ಗುರಿಯಿಟ್ಟು ಗುಂಡು ಹೊಡೆದರು. ಗೂಗೆಯು ಬಿದಿರಿನ ಪೊದೆಯೊಂದರೊಳಗೆ ಬಿತ್ತು. ಗೂಗೆಗೆ ಸರಿಯಾಗಿ ಏಟಾಗದೆ ಗಾಯವಾಗಿ ಅದು ಕೂಗಿಕೊಳ್ಳುತ್ತಿತ್ತು. ಆ ಹೊತ್ತಲ್ಲಿ ಅಲ್ಲಿಗೆ ಕಾಗೆಯೊಂದು ಬಂದು ಗೂಗೆಯ ಸ್ಥಿತಿಯನ್ನು ನೋಡಿ ಕನಿಕರಪಟ್ಟು ಪಕ್ಷಿಗಳ ವೈದ್ಯನಾದ ಕೋಗಿಲೆಯ ಹತ್ತಿರ ಗಾಯಗೊಂಡ ಗೂಗೆಯನ್ನು ಕರೆದುಕೊಂಡು ಹೋಯಿತು.

ಕೋಗಿಲೆಯ ಮನೆಯಲ್ಲಿ ಹಲವಾರು ಕಾಯಿಲೆಯವರಿದ್ದರು. ಗೂಗೆಗೂ ಸ್ವಲ್ಪ ಸ್ಥಳ ಮಾಡಿ ಕೊಟ್ಟು ಉತ್ತಮ ಔಷಧದಿಂದ ಕೋಗಿಲೆಯು ಅದನ್ನು ಉಪಚರಿಸತೊಡಗಿತು. ಕೆಲವು ದಿನಗಳಲ್ಲಿ ಗೂಗೆಗೆ ಸಂಪೂರ್ಣ ವಾಸಿಯಾದ್ದರಿಂದ ಆಸ್ಪತ್ರೆಯಿಂದ ಹೋಗಲು ಗೂಗೆಯನ್ನು ಕೋಗಿಲೆ ಕೇಳಿ. ಔಷಧಿಯ ಬಿಲ್ಲನ್ನು ಕೊಟ್ಟಿತು. ಆದರೆ ಗೂಗೆಯ ಹತ್ತಿರ ಹಣವಿರಲಿಲ್ಲ.

ಒಂದು ದಿನ ರಾತ್ರಿ ಗೂಗೆಯು ಹೇಳದೆ ಕೇಳದೆ, ಕೋಗಿಲೆಗೆ ದುಡ್ಡು ಕೊಡದೆ ಪಲಾಯನ ಮಾಡಿತು. ಗೂಗೆಯು ದುಡ್ಡು ಕೊಡದೆ ಹೊರಟು ಹೋದದ್ದರಿಂದ ಕೋಗಿಲೆಯು ಕಾಗೆಯನ್ನು ದುಡ್ಡುಕೊಡು ಎಂದು ಕೇಳಿತು. ಕಾಗೆಯು ಇಂದಿನ ವರೆಗೂ ದುಡ್ಡು ಕೊಟ್ಟಿರುವುದಿಲ್ಲ. ಆದ್ದರಿಂದಲೇ ಇಂದಿನ ವರೆಗೂ ಗೂಗೆಗಳು ಕಾಗೆಗೆ ಹೆದರಿ ಹಗಲು ಹೊರಗೆ ಬಾರದೆ ರಾತ್ರಿ ಮಾತ್ರ ತಮ್ಮ ಸಂಚಾರ ಮಾಡಿ ಆಹಾರ ಸಂಪಾದಿಸುತ್ತವೆ. ಕಾಗೆಯು ಗೂಗೆಯ ಬಗ್ಗೆ ಜಾಮೀನು ನಿಂತು ಹಣ ಕೊಡದ್ದರಿಂದ ಆ ಹಣವನ್ನು ಭರ್ತಿ ಮಾಡಲು ಕೋಗಿಲೆಯು ತನ್ನ ಮೊಟ್ಟೆಗಳನ್ನು ಕಾಗೆಯ ಗೂಡಿನಲ್ಲಿಟ್ಟು ಕಾಗೆಯು ಮರಿ ಮಾಡುವಂತೆ ಮಾಡುತ್ತವೆ." ಎಂದು ಹೇಳಿ ಕತೆ ಮುಗಿಸಿದರು.

ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್ ಲಿಮಿಟೆಡ್.

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ ಉಡುಪಿ (ದ. ಭಾರತ)

ಆರ್ಥಿಕ ಉಳಿತಾಯ ಯೋಜನೆಗಳಲ್ಲಿ 'ಕ್ಯುಮುಲೇಟಿವ್ ಡಿಪಾಸಿಟ್" ಯೋಜನೆಯು ಅತಿ ಪರಿಣಾಮಕಾರಿ ಹಾಗೂ ಅನುಕೂಲವಾದುದು. ಯಾವುದಾದರೊಂದು ನಿರ್ದಿಷ್ಟ ಉದ್ದೇಶ ಸಾಧನೆಗೆ, ನಿಯಮಿತ ಕಾಲಕ್ಕೆ ನಿಯಮಿತ ಹಣವನ್ನು ಒಂದು ನಿಯಮಿತ ಅವಧಿಯೊಳಗೆ ಬಡ್ಡಿಯೊಂದಿಗೆ ವಾಪಾಸು ಸಿಗುವಂತೆ ಬ್ಯಾಂಕಿನಲ್ಲಿ ಶೇಖರಿಸಿಡುವುದೇ ಈ ಯೋಜನೆಯ ಮೂಲ ತತ್ವ. ಇದು ಮುಖ್ಯವಾಗಿ ಮಧ್ಯಮ ತರಗತಿಯ ಜನರಿಗೆ ಇಲ್ಲವೆ ನಿಯಮಿತ ಸಂಬಳದ ನೌಕರರಿಗೆ ತಮ್ಮ ಮುದ್ದು ಮಕ್ಕಳ ವಿದ್ಯಾಭ್ಯಾಸ, ಮುಂಜಿ, ಮದುವೆ ಯಾ ಇನ್ನಿತರ ಸದುದ್ದೇಶ ಸಾಧನೆಗಳಿಗೆ ಅತ್ಯನುಕೂಲ ಹಾಗೂ ಅತಿ ಸಲಕಾರೀ ಯೋಜನೆ.

ವಿಶೇಷ ಮಾಹಿತಿಗೆ, ಕೊಡಗು ಸಂಸ್ಥಾನದಲ್ಲಿನ ಈ ಕೆಳಗಣ ನಮ್ಮ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

THE CANARA BANKING CORPORATION LIMITED.

Estd: 1906] [*H. O, Udipi (S. India)*

ವಾರದ ಭವಿಷ್ಯ

ತಾ. ೨೦—೧೧—೫೩ರಿಂದ ೨೬—೧೧—೫೩ರ ವರೆಗೆ.

ಜ್ಯೋತಿಷ್ಯ—ಶ್ರೀ ಬಿ. ಜಿ. ಶ್ರೀನಿವಾಸ ಶಾಸ್ತ್ರಿಯವರು.

ಮೇಷ

ಆರೋಗ್ಯ ವಿಚಾರದಲ್ಲಿ ಈ ವಾರವು ತಮಗೆ ತೃಪ್ತಿಕರವಾಗಿರುವದು. ತಮ್ಮ ಉದ್ಯೋಗಕ್ಕೆ ತಕ್ಕಂತೆ ಧನಾಗಮ ಯೋಗ ವಿದ್ದರೂ ಕುಟುಂಬದ ಅನಾರೋಗ್ಯದಿಂದಾಗಿ ಖರ್ಚು ಸಂಭವಿಸಲಿದೆ. ಉತ್ತಮವೆಂದು ಭಾವಿಸಿ ತಾವು ನೂತನ ಕಾರ್ಯ ಕೈಕೊಂಡು ಪ್ರಥಮ ಚುಂಬಿತದಲ್ಲೇ ದಂಡ ಭಗ್ನವಾದಂತಾಗಿ ಮಾನಸಿಕ ಸ್ಥಿತಿಯು ವ್ಯಾಕುಲತೆಯನ್ನು ಹೊಂದುವದು. ವಿದ್ಯಾರ್ಥಿ ವಿದ್ಯಾರ್ಥಿನಿಯರು ವೃಥಾಸಂಲಾಪಿಗಳಾಗುವರು. ತಾ. ೨೫–೨೬ ಖರ್ಚು, ಕಾರ್ಯವಿಘ್ನ.

ವೃಷಭ

ಈ ವಾರ ನಿಮ್ಮ ದೈಹಿಕ ಸ್ಥಿತಿಯು ಉತ್ತಮವಿದ್ದು ಕಾರ್ಯಗಳಲ್ಲಿ ಉಚ್ಛ ವರ್ಗದವರಿಂದ ಮನ್ನಣೆಯನ್ನು ಹೊಂದುವಿರಿ. ಸಾಮಾನ್ಯ ಜನರು ಕೂಡ ನಿಮ್ಮ ಹಿತಚಿಂತಕರಾಗುವರು. ಸಾಂಪತ್ತಿಕದಲ್ಲಿ ಉತ್ತಮವಿದ್ದು ಸಮಾಜದಲ್ಲಿ ಲಾಭ ಸ್ಥಾನಗಳು ಲಭಿಸಲಿವೆ. ಕೋರ್ಟು ವ್ಯವಹಾರಗಳಲ್ಲಿ ಜಯವನ್ನು ಹೊಂದುವಿರಿ. ವಿದ್ಯಾರ್ಥಿ ವೃಂದಕ್ಕೆ ಈ ವಾರವು ಅಭೀಷ್ಟಪ್ರದವಾಗಿರುವದು. ತಾ. ೨೦ ಲಾಭ, ಶುಭ ವಾರ್ತೆ.

ಮಿಥುನ

ದೈಹಿಕ ದೃಷ್ಟಿಯಲ್ಲಿ ಈ ವಾರ ತಮಗೆ ಬಹಳ ಉತ್ತಮವಿರುವದು. ತಾವು ಕೈಗೊಂಡ ಕಾರ್ಯಗಳೆಲ್ಲಾ ನಿಮ್ಮ ನಿಶ್ಚಿತಕ್ಕಿಂತ ಮೊದಲೇ ಕೈಗೂಡುವವು. ಕೆಲವೊಮ್ಮೆ ಸಾಂಪತ್ತಿಕದಲ್ಲಿ ತೊಂದರೆಗೊಳಗಾದರೂ ಮಿತ್ರರ ಸಹಾಯದಿಂದ ನಿಶ್ಚಿಂತರಾಗುವಿರಿ. ವ್ಯಾಪಾರೋದ್ಯಮಿಗಳಿಗೆ ಪ್ರಥಮತಃ ಕಷ್ಟ ಕಂಡುಬಂದರೂ ಪರಿಣಾಮದಲ್ಲಿ ಇಚ್ಛಿತ ಪ್ರಾಪ್ತಿಯೂಗುವದು.

ಕರ್ಕಾಟಕ

ಸಾಕು ಸಾಕು ಸಂಸಾರ ಸುಖ ಎಂಬ ಲೋಕೋಕ್ತಿಯು ಈ ವಾರ ನಿಮಗೆ ಅನುಭವಸಿದ್ಧವಾಗುವದು. ಆರೋಗ್ಯದೃಷ್ಟಿಯಲ್ಲಿ ನಿಮಗೆ ಉತ್ತಮವಿದ್ದರೂ ಸುತಸತಿಗಳ ಅಸುಖದಿಂದಾಗಿ ಖರ್ಚು ಇಮ್ಮಡಿಯಾಗಿ ಮನಸಿಗೆ ಶಾಂತಿಯಿರಲಾರದು. ಮನಃಸಾಕ್ಷಿಗೆ ವಿರೋಧವಾದ ಕಾರ್ಯವೊಂದೊದಗಿ ಇವರ ಪರಿಣಾಮವು ಬಹುಕಾಲ ನಿಲ್ಲಲಿದೆ. ವ್ಯಾಪಾರ ತತ್ಪರರಿಗೆ ಈ ವಾರವು ಶುಭಪ್ರದವಲ್ಲ.

ಸಿಂಹ

ಈ ವಾರ ತಮಗೆ ಉತ್ತಮವಿರುವದೆಂದು ತಿಳಿಸಲು ಬಲು ಸಂತೋಷ. ನೀವು ಶತ್ರುಗಳೆಂದು ಭಾವಿಸಿದ ಜನರೂ ಕೂಡ ಉಪಕಾರಮಾಡುವರು. ಆರೋಗ್ಯವು ಸಾಕಷ್ಟಿದ್ದು ಮೇಲಧಿಕಾರಿವರ್ಗದವರಿಂದ ಬಹುಮಾನ ಸಂಭವಿಸಲಿದೆ. ಸಾಂಪತ್ತಿಕ ಸ್ಥಿತಿಯಲ್ಲಿ ಕೆಲವು ವೇಳೆ ಚಿಂತಾಕ್ರಾಂತರಾದರೂ ಬಂಧುಮಿತ್ರರ ಸಹಾಯದಿಂದ ಸುಧಾರಿಸಿಕೊಳ್ಳುವಿರಿ. ವಿದ್ಯಾರ್ಥಿ ವಿದ್ಯಾರ್ಥಿನಿಯರು ಬುದ್ಧ್ಯುತ್ಸಾಹ ಭರಿತರಾಗುವರು. ತಾ. ೨೧ ಸುಖ, ಮೃಷ್ಟಾನ್ನ ಭೋಜನ.

ಕನ್ಯಾ

ಆರೋಗ್ಯ ದೃಷ್ಟಿಯಲ್ಲಿ ಈ ಹಪ್ತೆಯು ಉತ್ತಮವಿದ್ದರೂ ಹಿತಶತ್ರುಗಳ ತಂತ್ರಕ್ಕೊಳಗಾಗಿ ಮಾನಸಿಕ ಗತಿಯು ಗಾಳಿಗೆ ಸಿಲುಕಿದ ಎಲೆಯಂತೆ ಚಂಚಲವಾಗಿರುವದು. ತಾವು ಕೈಗೊಂಡ ಕಾರ್ಯಗಳು ಮಧ್ಯದಲ್ಲೇ ತಾಟಸ್ಥ್ಯವನ್ನೈದುವವು. ವೃಥಾ ಸಂಚಾರದಿಂದಾಗಿ ಸಂಪತ್ತಿನಲ್ಲಿ ಖರ್ಚಾಗಲಿರುವದು. ವ್ಯಾಪಾರ ತತ್ಪರರಿಗೆ ತಮ್ಮ ಆಶಯದಷ್ಟು ಲಾಭ ಸಿಗಲಾರದು ತಾ. ೨೬ ಖರ್ಚು, ಅಪವಾದ.

ತುಲಾ

'ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ' ಎಂಬ ತತ್ವವನ್ನು ಮನಸ್ಸಿನಲ್ಲಿಟ್ಟು ಶಾಂತಿಯನ್ನು ತಂದುಕೊಂಡರೆ ಬಹಳ ಉತ್ತಮ. ವಾಕ್ಕಲಹಗಳಿಗೆ ಸಂದರ್ಭಗಳು ಅನೇಕ ಬಂದೊದಗಬಹುದು. ಆರೋಗ್ಯವು ಸಾಕಷ್ಟಿದ್ದರೂ ಕುಟುಂಬದಲ್ಲಿ ಅಸುಖವು ಕಂಡುಬರಬಹುದು. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಈ ವಾರ ಅಪ್ರಿಯವಾಗಿರುವದು. ತಾ. ೨೩ ಖರ್ಚು, ಅಪವಾದ ಭಯ.

ವೃಶ್ಚಿಕ

ಆರೋಗ್ಯ ದೃಷ್ಟಿಯಲ್ಲಿ ಈ ವಾರ ಉತ್ತಮ. ಒಂದೆಡೆಯಿಂದ ಧನಾಗಮಯೋಗವಿದ್ದರೂ ಮತ್ತೊಂದೆಡೆಯಲ್ಲಿ ದ್ವಿಗುಣಿತ ಖರ್ಚಿನ ದಾರಿಯೂ ಕಂಡುಬರಬಹುದು. ಕೋರ್ಟುವ್ಯವಹಾರಗಳಲ್ಲಿ ವೃಥಾ ಧನ ನಷ್ಟವಾಗಲಿದೆ. ಕುಟುಂಬದಲ್ಲಿ ವಾಕ್ಕಲಹಗಳು ಆಗಾಗ ತಲೆದೋರಬಹುದು. ಬಂಧು ಮಿತ್ರರ ವಿಯೋಗ ವರ್ತಮಾನದಿಂದ ಮನಸಿಗೆ ಅಶಾಂತಿ. ತಾ. ೨೩–೨೪ ಧನ ನಷ್ಟ, ಮಿತ್ರರ ಪತ್ರಾಗಮನ.

ಧನು

ತಾವು ಕೈಯಿಕ್ಕಿದ ಕಾರ್ಯಗಳು ಹೆಚ್ಚಾಗಿ ಫಲಕಾರಿಗಳಾಗುವದರಿಂದ ಅನೇಕ ಕಾರ್ಯಗಳಿಗೆ ಕೈಹಾಕಿ ತುಂಬಾ ಕೆಲಸದ ತೊಂದರೆಗಳಿಗೊಳಗಾಗುವಿರಿ. ಕೆಲವು ವೇಳೆ ಆಹಾರಪಾನಿಯಗಳನ್ನು ಸಹ ಸಮಯಕ್ಕೆ ಸರಿಯಾಗಿ ತೆಗೆದುಕೊಳ್ಳಲಸಾಧ್ಯವಾಗುವದು. ಆರೋಗ್ಯವು ಸಾಕಷ್ಟಿದೆ. ಖರ್ಚಿನ ದಾರಿಗಳು ಅನೇಕವಿದ್ದರೂ ಅಂತೆಯೇ ಧನಾಗಮವು ಕಂಡುಬರಬಹುದು. ತಾ. ೨೬ ಧನ ಲಾಭ, ಸಂಚಾರ.

ಮಕರ

ಈ ವಾರ ನಿಮಗೆ ಪರಸ್ಪರವಿರುದ್ಧ ಘಟನೆಗಳು ಬಂದೊದಗಿ ಮನಸಿಗೆ ಶಾಂತಿಯಿರಲಾರದು. ಆರೋಗ್ಯ ದೃಷ್ಟಿಯಲ್ಲಿ ಈ ವಾರ ಉತ್ತಮವಾಗಿದ್ದರೂ ಕಾರ್ಯವಿಘ್ನಗಳು ಮತ್ತು ಇತರರ ನಿಂದೆಗೊಳಗಾಗುವಿಕೆಗಳು ತಪ್ಪಿದ್ದಲ್ಲ. ಕೋರ್ಟುವ್ಯವಹಾರಗಳಲ್ಲಿ ನಷ್ಟವಾಗಲಿದೆ. ವ್ಯಾಪಾರೋದ್ಯಮಿಗಳಿಗೆ ತಮ್ಮ ಅಭಿಪ್ರಾಯಕ್ಕೆ ತಕ್ಕಂತೆ ಲಾಭ ಸಿಗಲಾರದು. ತಾ. ೨೪ ಖರ್ಚು, ಸಂಚಾರ.

ಕುಂಭ

ಆಶೆಯೇ ದುಃಖಕ್ಕೆ ಕಾರಣವೆಂಬುವ ಲೋಕೋಕ್ತಿ ಈ ವಾರ ನಿಮ್ಮ ಪರವಾಗಿರುವದು. ನಿಮ್ಮ ಮನೋನಿಶ್ಚಿತ ಕಾರ್ಯಗಳು ನಿಮ್ಮೆಣಿಕೆಯಂತಾಗದೆ ಖರ್ಚಿನ ದಾರಿಗಳಾಗಿ ಪರಿಣಮಿಸುವವು. ಆರೋಗ್ಯವು ಚೆನ್ನಾಗಿದ್ದರೂ ಕುಟುಂಬದಲ್ಲಿ ರೋಗ ಕಂಡುಬಂದು ಮನಸ್ಸು ವ್ಯಾಕುಲತೆಯನ್ನು ಹೊಂದುವದು. ವಿದ್ಯಾರ್ಥಿವೃಂದಕ್ಕೆ ಈ ವಾರ ಪ್ರಗತಿಪರವಾಗಿರುವದು. ತಾ. ೨೦–೨೧ ಖರ್ಚು.

ಮೀನ

ಈ ವಾರವು ಆರೋಗ್ಯ ದೃಷ್ಟಿಯಲ್ಲಿ ಉತ್ತಮವಾಗಿರುವದು. ತಾವು ಕೈಗೊಂಡ ಕಾರ್ಯಗಳು ಹೆಚ್ಚಾಗಿ ಕೈಗೂಡುವಂಥವುಗಳೇ ಆಗಿರುವವು. ಕೆಲವು ವೇಳೆ ಮನಸ್ಸು ಅಸತ್ಯದ ಕಡೆ ತಿರಳಬಹುದು. ಸತ್ಯಕ್ಕೆ ಜಯವೆಂಬುದನ್ನು ತಾವು ಅದ್ದರಿಂದ ತಿಳಿದುಕೊಂಡು ವರ್ತಿಸತಕ್ಕದ್ದು. ಸಾಂಪತ್ತಿಕದಲ್ಲಿ ತೊಂದರೆಗೊಳಗಾಗುವಿರಿ. ವಿದ್ಯಾರ್ಥಿವೃಂದಕ್ಕೆ ಈ ವಾರವು ಮುಂಗಾಮಿಯಾಗಿರುವದು. ತಾ. ೨೫ ಸಂಚಾರ, ಧನ ಲಾಭ.

ಸೋಮವಾರಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಕೆ. ಎಂ. ಮೊಗಪ್ಪನವರು

ಸಹಕಾರವೇ ಜೀವನದ ಏಳಿಗೆಯ ಹೆದ್ದಾರಿ,
ಅದರಲ್ಲೂ ವಿಮೆಯಲ್ಲಿ ಸಹಕಾರ ವೆಂದರೆ ಅನ್ಯೋನ್ಯ ಏಳಿಗೆಯ ಮತ್ತು ಭದ್ರತೆಗೆ ಹಾದಿ.

ದಿ ಬೊಂಬಾಯಿ ಕೋಪರೇಟಿವ್ ಇನ್ಸೂರೆನ್ಸ್
ಹೆಡ್ ಆಫೀಸು:—] ಸೊಸೈಟಿ, ಲಿಮಿಟೆಡ್ [ಬೊಂಬಾಯಿ.

1952 ನೇ ಸಾಲಿಗೆ ರಿವರ್ಶನರಿ ಬೋನಸ್ಸು
ಹೋಲ್ ಲೈಫ್ ಸಾವಿರಕ್ಕೆ 11 ರಂತೆ ಎಂಡೋಮೆಂಟ್ ಸಾವಿರಕ್ಕೆ 9 ರಂತೆ

ರಿಂದ 900 ರ ತನಕದ ಪೋಲಿಸಿಗಳು ಹಳ್ಳಿಗರಿಗೊಂದು ವರ

ಎಲ್ಲಾ ಕಡೆಗಳಲ್ಲಿಯೂ ಪ್ರಭಾವವುಳ್ಳ ಏಜಂಟರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಯನ್ನು ದಕ್ಷಿಣ ಕನ್ನಡ,
ಕೊಡಗು ಮತ್ತು ಮೈಸೂರು ಪ್ರಾಂತ್ಯಕ್ಕೆ ಮುಖ್ಯ ಏಜಂಟರಾದ

12-9

ಎಮ್. ಟಿ. ಕೋರ್‌ಡೆಲ್ ಅಂಡ್ ಕೋ., ಹಂಪನಕಟ್ಟೆ, ಮಂಗಳೂರು, ಇವರಿಂದ ಪಡೆಯಿರಿ.

ಜಪಾನಿನಿಂದ ಕಲಿಯಬೇಕಾದ ಪಾಠ. [೧೨]

ಜಪಾನಿನ ಗುಡಿ ಕೈಗಾರಿಕೆಗಳು

[ಮೂಲ ಲೇಖಕ:—ಶ್ರೀ ಜಮುನ್‌ಲಾಲ್]

ಜಪಾನಿನ ಕೈಗಾರಿಕಾ ಉತ್ಪತ್ತಿಯಲ್ಲಿ ೧೯೩೦ರ ಲೆಕ್ಕದಂತೆ ಶೇಕಡ ೫೪ರಷ್ಟು ಒಬ್ಬನೇ ಮನುಷ್ಯನಿಂದ ನಡೆಸಲ್ಪಡುವ ಯಂತ್ರಗಳಿಂದ ತಯಾರಾದವು. ಉಳಿದ ಶೇಕಡ ೪೦ರಷ್ಟು ೫ ಜನರಿಗೊಳಗಿನ ಚಿಕ್ಕ ಕಾರ್ಖಾನೆಗಳಿಂದ ತಯಾರಾದವು.

• • • * * *

೧೯೩೨ರ ಲೆಕ್ಕದ ಪ್ರಕಾರ ಜಪಾನಿನ ಬಟ್ಟೆ ಕೈಗಾರಿಕೆಯಲ್ಲಿ ನಿರತರಾದ ಎರಡು ಲಕ್ಷ ಹತ್ತು ಸಾವಿರ ಕೆಲಸಗಾರರಲ್ಲಿ ೩೦,೦೦೦ ಅಥವಾ ಏಳರಲ್ಲಿ ಒಂದಂಶದಷ್ಟು ಕೆಲಸಗಾರರು, ಮಾತ್ರ ೨೦೦ ಜನರಿಗಿಂಥಾ ಹೆಚ್ಚು ಕೆಲಸಗಾರರಿರುವ ಮಿಲ್ಲುಗಳಲ್ಲಿ ಕೆಲಸ ಮಾಡುತ್ತಿದ್ದರು. ಉಳಿದ ಕೆಲಸಗಾರರಲ್ಲಿ ಸುಮಾರು ೧೫೪,೦೦೦ ಎಂದರೆ ಶೇಕಡ ೭೫ರಷ್ಟು ಜನರು ೫೦ ಕೆಲಸಗಾರರಿಗೂ ಕಡಿಮೆ ಇರುವ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದರು.

ಜೀವದ ಜೀವಾಳ

ನೀವು ನಂಬಿ ಇಲ್ಲವೆ ಬಿಡಿ, ಜಪಾನಿನ ಕೈಗಾರಿಕಾ ಚಕ್ರಾಧಿಪತ್ಯದ ಶಕ್ತಿಯು ಅವರ ಗುಡಿಕೈಗಾರಿಕೆಗಳ ಮೇಲೆಯೇ ನಿಂತಿದೆ. ಜಪಾನಿನ ಗುಡಿಕೈಗಾರಿಕೆಗಳೆಂಬ ಹೆಸರು ಇಂದಿನ ಆಧುನಿಕ ದೊಡ್ಡ ಕೈಗಾರಿಕೆಗಳ ಕಾಲದಲ್ಲಿ ಚಿಕ್ಕದಾಗಿ ಕೇಳಿದರೂ ಅವು ಮಾಡುತ್ತಿರುವ ಉತ್ಪಾದನೆ ಗಣನೀಯವಾದುದು. ಜಪಾನು ಉತ್ಪಾದನೆ ಮಾಡುವ ಕೈಗಾರಿಕಾ ವಸ್ತುಗಳ ಶೇಕಡ ೬೫ರಷ್ಟು ಗುಡಿ ಕೈಗಾರಿಕೆಗಳಿಂದ ತಯಾರಾಗುತ್ತವೆ. ಹೊರ ದೇಶಗಳಿಗೆ ಕಳುಹಿಸುವ ವಸ್ತುಗಳ ಶೇಕಡ ೫೭ರಲ್ಲಿ ಗುಡಿಕೈಗಾರಿಕೆಗಳಿಂದಲೇ ಬರುತ್ತವೆ. ಟೋಕಿಯೋ ನಗರದ ವಾಣಿಜ್ಯ ಸಂಘವು ತಯಾರಿಸಿದ ಒಂದು ವರದಿಯ ಮೇಲೆ ಜಪಾನಿನಿಂದ ಹೊರಗೆ ಕಳುಹಿಸುವ ಬಟ್ಟೆಯ ವಸ್ತುಗಳಲ್ಲಿ ಶೇಕಡ ೧೭ರಷ್ಟು, ಉಣ್ಣೆಯ ವಸ್ತುಗಳಲ್ಲಿ ಶೇಕಡ ೪೯ರಷ್ಟು, ಶಿಲ್ಕ್ ವಸ್ತುಗಳಲ್ಲಿ ಶೇಕಡ ೫೫ರಷ್ಟು, ನೆಯಿಗೆ ವಸ್ತುಗಳಲ್ಲಿ ಶೇಕಡ ೨೮ರಷ್ಟು, ಹ್ಯಾಟ್, ಟೊಪ್ಪಿಗಳಲ್ಲಿ ಶೇಕಡ ೨೭ರಷ್ಟು, ಬೈಸಿಕಲ್‌ಗಳಲ್ಲಿ ಶೇಕಡ ೬೭ರಷ್ಟು, ಪೆನ್ಸಿಲುಗಳಲ್ಲಿ ಶೇಕಡ ೬೨ರಷ್ಟು ಗುಡಿ ಕೈಗಾರಿಕೆಗಳಿಂದ ತಯಾರಾದುವೆಂದು ತಿಳಿದುಬಂದಿದೆ.

ಏಕೆ ಲಾಭದಾಯಕ

ಜಪಾನಿನ ಗುಡಿಕೈಗಾರಿಕೆಗಳು ಇಷ್ಟು ಲಾಭದಾಯಕವಾಗಲು ಕಾರಣವೇನೆಂಬುದಕ್ಕೆ ಮಿಟ್ಸುಬಿಶಿ ಪರಿಶೋಧನಾ ಸಂಸ್ಥೆಯವರು ಈ ಕೆಳಗಿನ ಕಾರಣಗಳನ್ನು ಕೊಟ್ಟಿದ್ದಾರೆ.

(೧) ವಿಪುಲವಾದ ವಿದ್ಯುಚ್ಛಕ್ತಿ ಸರಬರಾಯಿ. ಅದೂ ಅತೀ ಕಡಿಮೆ ಬೆಲೆಯಲ್ಲಿ.

(೨) ಸಣ್ಣ ಕೈಗಾರಿಕೆಗಳು ಹೆಚ್ಚಾಗಿ ಹತ್ತಿರದ ಸಂತೆಯ ಬೇಡಿಕೆಯನ್ನು ಸಲ್ಲಿಸುವದಾದ್ದರಿಂದ ಜನರ ಬೇಡಿಕೆಗನುಗುಣ ಕೈಗಾರಿಕೆಯಲ್ಲಿ ಆಗಾಗ ಮಾರ್ಪಾಡು ಮಾಡುವದು ಗುಡಿ ಕೈಗಾರಿಕೆಯಲ್ಲಿ ಸಾಧ್ಯವಿದೆ. ಅಲ್ಲದೆ ಈ ಕೈಗಾರಿಕೆಯಲ್ಲಿ ಕಲಾನೈಪುಣ್ಯವನ್ನು ಅಳವಡಿಸುವದು ಸಾಧ್ಯವಾಗಿದೆ. ಬಟ್ಟೆ ನುಡಕೆ ಪಾತ್ರ ತಯಾರಿಯೊಪ್ಪದೇ ಕೈಗಾರಿಕೆ ಇದ್ದರೂ ಅವುಗಳಲ್ಲಿ ಬೇಡಿಕೆಗೆ ತಕ್ಕಂತೆ ವ್ಯತ್ಯಾಸ ಮಾಡುವದು ಗುಡಿ ಕೈಗಾರಿಕೆಯಿಂದ ಸಾಧ್ಯವಾಗಿದೆ.

(೩) ಕಡಿಮೆ ದರದ ಮಜೂರಿಯಲ್ಲಿ ಉತ್ತಮ ಕೆಲಸಗಾರರು ದೊರೆಯುವದು. ಗ್ರಾಮಾಂತರಗಳಲ್ಲಿ ಯಾವುದೇ ಕೈಗಾರಿಕೆಗೆ ಬೇಕಾದ ಕುಶಲ ಕೆಲಸಗಾರರು ಸಾಕಷ್ಟು ಸಂಖ್ಯೆಯಲ್ಲಿ ದೊರೆಯುವದರಿಂದ ಗುಡಿಕೈಗಾರಿಕೆ ದಕ್ಷವೂ ಯಶಸ್ವಿಯೂ ಆಗಿದೆ.

(೪) ಗುಡಿಕೈಗಾರಿಕೆಗಳು ಪ್ರತಿ ಮನೆಯ ಪಾರಂಪಾರಿಕ ಕಸುಬಾಗಿರುವದರಿಂದ ಪರಂಪರಾಗತವಾಗಿ ಬಂದ ಕೈಗಾರಿಕಾ ಜ್ಞಾನವು ಅಮೂಲ್ಯವಿದೆ.

(೫) ಗುಡಿಕೈಗಾರಿಕೆಗಳು ದೊಡ್ಡ ಕೈಗಾರಿಕೆಗಳೊಡನೆ ಸಹಕರಿಸಿ ಕೆಲಸ ಮಾಡುತ್ತವೆ. ಇವೆರಡರೊಳಗೆ ಸ್ಪರ್ಧೆಗೆ ಆಸ್ಪದವಿಲ್ಲ. ಕಾರ್ಖಾನೆಗೆ ಬೇಕಾದ ದೊಡ್ಡ ದೊಡ್ಡ ಭಾಗಗಳು ದೊಡ್ಡ ಕಾರ್ಖಾನೆಗಳಲ್ಲಿ ತಯಾರಾದರೆ ಚಿಕ್ಕ ವಸ್ತುಗಳಾದ ಮೊಳೆ, ಬೋಲ್ಟ್ ಮೊದಲಾದುವು ಗುಡಿಕೈಗಾರಿಕೆಯಲ್ಲಿ ತಯಾರಾಗುತ್ತವೆ.

ನೇಯಿಗೆ ಗುಡಿಕೈಗಾರಿಕೆ

ಜಪಾನಿನಲ್ಲಿ ನೂಲು ಮಾಡುವ ಕೆಲಸವು ಪ್ರಾಮುಖ್ಯವಾಗಿ ದೊಡ್ಡ ಗಿರಣಿಗಳಿಂದ ನಡೆದರೂ ನೂಲನ್ನು ಬಟ್ಟೆಯಾಗಿ ನೇಯುವ ಕೆಲಸವು ಬಹುತರ ಗುಡಿಕೈಗಾರಿಕೆಯ ರೂಪದಲ್ಲೇ ನಡೆಯುತ್ತದೆ. ಜಪಾನಿನ ಪ್ರತಿ ಮನೆಯಲ್ಲೋ ಎಂಬಂತೆ ನಡೆಯುವ ಈ ನೆಯಿಗೆಯ ಕೈಗಾರಿಕೆಯು ಪ್ರಾಮುಖ್ಯವಾಗಿ ದೇಶದ ಅಂತರಿಕ ಬೇಡಿಕೆಗೆ ಬೇಕಾದ ಬಟ್ಟೆಯನ್ನು ಸರಬರಾಯಿ ಮಾಡುತ್ತದೆ. ಹೊರದೇಶಗಳಿಗೆ ಮಾರಾಟಕ್ಕೆ ಕಳುಹಿಸುವ ಬಟ್ಟೆಗಳು ಹೆಚ್ಚಾಗಿ ದೊಡ್ಡ ಕಾರ್ಖಾನೆಗಳಿಂದ ತಯಾರಾಗುತ್ತವೆ. ಆದರೂ ಇಂಥ ಬಟ್ಟೆ ದೊಡ್ಡ ಗಿರಣಿಗಳಿಂದಲೂ, ಇಂಥಾವು ಗುಡಿಕೈಗಾರಿಕೆಯಿಂದಲೂ ತಯಾರಾಗಬೇಕೆಂದೂ ಏರ್ಪಡಿದೆ. ಹೆಚ್ಚಾಗಿ ದೊಡ್ಡ ಗಿರಣಿಗಳಿಂದ ಸುಲಭದ ಕೆಲಸವಾದ ಶರ್ಟಿಂಗ್, ಬೆಡ್‌ಶೀಟ್, ಹಚ್ಚಡ, ಮೊದಲಾದುವು ತಯಾರಾಗುತ್ತವೆ. ವಿಶೇಷ ಪರಿಶ್ರಮ ಮತ್ತು ಕುಶಲತೆ ಬೇಕಾದ ಡ್ರಿಲ್, ಸೇಟೀನ್, ಫ್ಲೇನಲ್, ಕ್ರೇಪ್, ಕೋರ್ಡುರೋಯಿ ಮೊದಲಾದುವು ಗುಡಿ ಕಾರ್ಖಾನೆಗಳಲ್ಲಿ ತಯಾರಾಗುತ್ತವೆ.

ಕೃತಕ ರೇಶ್ಮೆ ಕೈಗಾರಿಕೆ

ಯುದ್ಧಕ್ಕೆ ಮೊದಲು ಜಪಾನಿನ ಕೃತಕ ರೇಶ್ಮೆ (ರೆಯಾನ್) ಕೈಗಾರಿಕೆಯು ರೂಪಾಯಿಗೊಂದರಂತೆ ಸುಂದರ ಸೀರೆಗಳನ್ನು ಒದಗಿಸುತ್ತಿತ್ತು. ಈ ರೇಶ್ಮೆ ಕೈಗಾರಿಕೆಯು ಪ್ರಾಮುಖ್ಯವಾಗಿ ಗುಡಿಕೈಗಾರಿಕೆಯಾಗಿಯೇ ನಡೆಯುತ್ತದೆ. ಜಪಾನಿನಲ್ಲಿ ಕೃತಕ ರೇಶ್ಮೆ ತಯಾರಿಸುವ ಒಟ್ಟು ೩೩೪೧ ಕಾರ್ಖಾನೆಗಳೂ, ೪೨,೭೫೩ ಕೆಲಸಗಾರರೂ ಇರುವರು. ಅದರಲ್ಲಿ ೫ ಜನರಿಂದ ೯ರ ವಳಗೆ ಕೆಲಸಗಾರರಿರುವ ಕಾರ್ಖಾನೆಗಳು ೧೨೪೩ ಇದ್ದು ಅದರಲ್ಲಿ ೮೦೦೫ ಜನರು ಕೆಲಸ ಮಾಡುತ್ತಾರೆ. ೧೦ರಿಂದ ೪೯ರ ಒಳಗೆ ಕೆಲಸಗಾರರಿರುವ ೩೨೧ ಕಾರ್ಖಾನೆಗಳಲ್ಲಿ ೪೧೯೩ ಜನರು ಕೆಲಸ ಮಾಡುತ್ತಾರೆ. ೨೦೦ಕ್ಕಿಂಥಾ ಹೆಚ್ಚು ಕೆಲಸಗಾರರಿರುವ ಕಾರ್ಖಾನೆಗಳು ೧೧ ಇದ್ದು ಒಟ್ಟು ೩೬೫೦ ಕೆಲಸಗಾರರು ಅವುಗಳಲ್ಲಿ ಕೆಲಸ ಮಾಡುತ್ತಾರೆ. ಜಪಾನಿನ ಕೃತಕ ರೇಶ್ಮೆಯು ಇಡೀ ಜಗತ್ತಿನ ಮಾರ್ಕೆಟುಗಳಲ್ಲಿ ತನ್ನ ಸ್ವಾಮಿತ್ವವನ್ನು ಪಡೆದಿದೆ. ಉಣ್ಣೆ ಕೈಗಾರಿಕೆಯೂ ಕೂಡ ಚಿಕ್ಕ ಮನೆ ಕೈಗಾರಿಕೆಗಳಿಂದಲೇ ಹೆಚ್ಚು ತಯಾರಾಗುತ್ತವೆ. ಇದಲ್ಲದೆ ಯಂತ್ರ ತಯಾರಿಯ ಕೆಲಸವೂ ಗುಡಿಕೈಗಾರಿಕೆಯಾಗಿಯೇ ನಡೆಯುತ್ತದೆ. ಯಂತ್ರ ತಯಾರಿಯ ಕೆಲಸ ದಕ್ಷ ಜಪಾನಿನಲ್ಲಿ ೮೦೬೩೪೭ ಜನರು ಕೆಲಸ ಮಾಡುತ್ತಿರುವರು. ರಸಾಯನ ಕೈಗಾರಿಕೆಯಲ್ಲೂ ಕೂಡ ಶೇಕಡ ೪೦ರಷ್ಟು ಗುಡಿಕೈಗಾರಿಕೆಯ ರೂಪದಲ್ಲೇ ನಡೆಯುತ್ತದೆ.

ಏಳು ರೂಪಾಯಿಗೆ ಬೈಸಿಕಲ್

ಬೈಸಿಕಲ್ ತಯಾರಿಸುವ ಕೈಗಾರಿಕೆಯು ಜಪಾನಿನಲ್ಲಿ ಮತ್ತೊಂದು ಗುಡಿಕೈಗಾರಿಕೆ. ೨೦೦ ಜನರಿಗಿಂಥಾ ಹೆಚ್ಚು ಕೆಲಸಗಾರರಿರುವ ಕಾರ್ಖಾನೆಗಳಲ್ಲಿ ಕೇವಲ ಶೇಕಡ ೪ರಷ್ಟು ಜನರು ಮಾತ್ರ ಕೆಲಸ ಮಾಡುತ್ತಾರೆ. ಯುದ್ಧಕ್ಕೆ ಮೊದಲು ಜಪಾನಿನಲ್ಲಿ ಬೈಸಿಕಲ್ ಒಂದಕ್ಕೆ ರೂ. ೭ ಬೆಲೆ ಇತ್ತು. ಕಲ್ಕತ್ತಾದಲ್ಲಿ ಜಪಾನು ಬೈಸಿಕಲ್ಲುಗಳು ರೂ. ೧೮ಕ್ಕೆ ಮಾರಾಟವಾಗುತ್ತಿದ್ದವು. ಬೈಸಿಕಲ್ ತಯಾರಿಸುವ ಕಾರ್ಖಾನೆಯ ಬೆಲೆ ರೂ. ೪೦೦ಕ್ಕೆ ಮೀರುತ್ತಿರಲಿಲ್ಲ.

ಬೈಸಿಕಲು ವಿವಿಧ ಭಾಗಗಳನು ಜೋಡಿಸಿ ಮಾಡುವ ವಸ್ತು. ಒಂದು ಬೈಸಿಕಲಿಗೆ ಇಂಥಾ ೩೦ ವಿವಿಧ ಭಾಗಗಳಿವೆ. ಈ ವಿವಿಧ ಭಾಗಗಳಲ್ಲ ಕೇವಲ ಎರಡು ಭಾಗಗಳು ಮಾತ್ರ ದೊಡ್ಡ ಕಾರ್ಖಾನೆಯಲ್ಲಿ ತಯಾರಾಗುವವು. ಉಳಿದವುಗಳೆಲ್ಲ ಗುಡಿಕೈಗಾರಿಕೆಯಲ್ಲಿ ತಯಾರಾಗುತ್ತವೆ.

ಕಡಿಮೆ ಬೆಲೆಯ ಕಾರ್ಖಾನೆ

ಜಪಾನಿನ ಗುಡಿಕೈಗಾರಿಕೆಗಳು ಅಷ್ಟು ಯಶಸ್ವಿಯಾಗಿ ನಡೆದುಕೊಂಡು ಬರಲು ಕಡಿಮೆ ಬೆಲೆಗೆ ದೊರೆಯುವ ಉತ್ತಮ ಕಾರ್ಖಾನೆಗಳೂ ಒಂದು ಕಾರಣ. ಉದಾಹರಣೆಗೆ ಸೈಕಲಿನ ಹೇಂಡಲ್‌ಗಳನ್ನು ತಯಾರಿಸುವ ಕಾರ್ಖಾನೆ. ಅದರ ಬೆಲೆ ಅತೀ ಕಡಿಮೆ; ಮಾತ್ರವಲ್ಲ. ಈ ಕೆಲಸವನ್ನು ಮಕ್ಕಳು ಯೂ ಹೆಂಗಸರು ಹೆಚ್ಚಿನ ಪ್ರಯಾಸವಿಲ್ಲದೆ ಮಾಡಬಹುದು. ಜಪಾನಿನ ಗುಡಿಕೈಗಾರಿಕೆಯ ಯಶಸ್ವಿತೆಗೆ ಬೇರೆ ಕಾರಣಗಳೆಂದರೆ ಕೆಲಸಗಾರರಲ್ಲಿರುವ ಐಕ್ಯತೆ ಮತ್ತು ಸಹಕಾರ. ಒಂದು ಮನೆಯ ಕಾರ್ಖಾನೆಯಲ್ಲಿ ಒಂದು ತಯಾರಾದರೆ ಮತ್ತೊಂದರಲ್ಲಿ ಇನ್ನೊಂದು ತಯಾರಾಗುತ್ತದೆ. ಪ್ರತಿಯೊಬ್ಬರೂ ತನ್ನ ಕೆಲಸವನ್ನು ಆದಷ್ಟು ದಕ್ಷತೆಯಿಂದ ನಡೆಸಲು ಯತ್ನಿಸುತ್ತಾರೆ. ಈ ಕೆಲಸಗಳು ಸುಲಭವಿರುವದರಿಂದ ಹಳ್ಳಿಯ ಹುಡುಗರೂ ಕೂಡ ಇದನ್ನು ಮಾಡುವರು. ಉತ್ಪಾದನೆಯ ಮೇಲೆ ಸೂಕ್ಷ್ಮವಾದ ನಿರೀಕ್ಷಣೆ ಇದ್ದು ಉತ್ಪಾದನೆಯು ಅಚ್ಚುಕಟ್ಟಾದುದೂ ದಕ್ಷವಾದುದೂ, ಗ್ರಾಹಕರ ಮನಮೆಚ್ಚುವಂಥಾದ್ದೂ ಆಗಬೇಕೆಂದು ಹೆಚ್ಚಿನ ನಿಗವಹಿಸಲಾಗುತ್ತದೆ. ಈ ರೀತಿಯ ಉಸ್ತುವಾರಿ ದಕ್ಷತೆಗಳಿಂದ ಜಪಾನರ ಕೈಗಾರಿಕಾ ವಸ್ತುಗಳು ಜಗತ್ತಿನ ವ್ಯಾಪಾರ ಕೇಂದ್ರಗಳಲ್ಲಿ ಯಾವ ಸ್ಪರ್ಧೆಯನ್ನೂ ಎದುರಿಸುವಷ್ಟು ಶಕ್ತವಾಗಿವೆ.

COORG AGRICULTURAL DEPARTMENT

TENDER NOTICE.

Tenders are invited for the supply of 1700 tons of groundnut oil cake, 150 tons of superphosphate and 300 tons of bonemeal. Contract documents consisting of complete set of specifications and the set of conditions of contract to be complied with by the person whose tender may be accepted can be had from the undersigned. The requisition should be accompanied by a stamped and self addressed envelope. Tenders should reach the Agricultural Officer, Coorg, Mercara before 3 P. M. on 1st December 1953.

The acceptance of the tender will rest with the Agricultural Officer and he does not bind himself to accept the lowest tender and reserves to himself the right to reject all are any of the tenders received without assigning any reason therefor.

20-11-53.
Mercara.

B. S. Varadarajan.
Agricultural Officer.

ಕ್ಷಯ ರೋಗದ ವಿರುದ್ಧ ಯುದ್ಧಕ್ಕೆ ಸೇರಿರಿ

ಕ್ಷಯ ರೋಗ ಹೇಗೆ ಹಬ್ಬುತ್ತದೆಂದು ನಿಮಗೆ ತಿಳಿದಿದೆಯೇ ?

ರೋಗ ತಗಲಿದವರ ಸಂಪರ್ಕದಿಂದ ಅದು ಹಬ್ಬುತ್ತದೆ. ಹೀಗೆ ಹಬ್ಬುವುದನ್ನು ನೀವು ತಡೆಯುವಿರಾದರೆ ಆ ರೋಗದ ಪ್ರಸಾರವನ್ನು ತಡೆದಂತೆ. ಕ್ಷಯ ರೋಗ ಹೀಗೆ ಹರಡುವದನ್ನು ತಡೆದರೆ ಕ್ಷಯ ರೋಗದ ವಿರುದ್ಧ ಯುದ್ಧವನ್ನು ಅರ್ಧ ಗೆದ್ದಂತೆ.

ಕ್ಷಯ ರೋಗದ ವಿರುದ್ಧದ ಸಂಪೂರ್ಣ ಯುದ್ಧಕ್ಕೆ ಇವು ಬೇಕು.

(೧) ಕ್ಷಯ ರೋಗ ಪೀಡಿತರನ್ನಿಡಲು ಪ್ರತ್ಯೇಕ ವಾರ್ಡುಗಳು

(೨) ಬಡ ರೋಗಿಗಳಿಗೂ, ಅವರ ಕುಟುಂಬಕ್ಕೂ ಸಹಾಯ ಕೊಡಲು ಎಚ್ಚರ ಸಮಿತಿಗಳು

(೩) ಕ್ಷಯ ರೋಗ ವಾಸಿಯಾದ ನಂತರ ಅವರ ಎಚ್ಚರಿಕೆ ತೆಗೆದುಕೊಳ್ಳುವ ಸಂಸ್ಥೆಗಳು. ಉದಾಹರಣೆಗೆ ಅವರ ಪುನರ್ನಿವೇಶ ಕೇಂದ್ರಗಳು, ಅವರ ವಿಶೇಷ ವಸಾಹತುಗಳು ಇತ್ಯಾದಿ

(೪) ಕ್ಷಯ ರೋಗ ಚಿಕಿತ್ಸಾಲಯಗಳು

(೫) ಚಿಕಿತ್ಸಾಲಯ, ಆಸ್ಪತ್ರೆ ಮತ್ತು ಆರೋಗ್ಯಧಾಮಗಳಲ್ಲಿ ಕ್ಷಕಿರಣ ಮತ್ತು ಇತರ ಆಧುನಿಕ ಪರಿಶೋಧನಾ ಅನುಕೂಲತೆಗಳು

(೬) ವಿಶೇಷವಾಗಿ ಕ್ಷಯ ರೋಗವನ್ನು ತಡೆಗಟ್ಟುವ ವಿಚಾರದಲ್ಲಿ ಆರೋಗ್ಯ ರಕ್ಷಣೆಯ ಬಗ್ಗೆ ಪ್ರಚಾರ

ಕೊಡಗಿನ ಈ ಸಂತೋಷದ ಕಾಲವು ನಿಮ್ಮನ್ನು ಆಹ್ವಾನಿಸುತ್ತಿದೆ.

ಕೊಡಗಿನಲ್ಲಿ ಇದು ಅತ್ಯುತ್ತಮ ಸಮಯ. ನಿಮ್ಮ ಭೂಮಿಯು ನಗು ನಗುತ್ತಿರುವ ಬತ್ತದ ಬೆಳೆಯಿಂದಲೂ, ಕಾಫಿ, ಕಿತ್ತಳೆ, ಏಲಕ್ಕಿ, ಒಳ್ಳೆಮೆಣಸು ಮೊದಲಾದುವುಗಳಿಂದಲೂ ಶೋಭಾಯಮಾನವಾಗಿದೆ. ಈ ಸುಭಿಕ್ಷೆಯ ಮಧ್ಯೆ ನಿಮ್ಮಲ್ಲಿ ನಿಮ್ಮ ಅನೇಕ ಬಂಧುಗಳು ಕ್ಷಯ ರೋಗ ಪೀಡಿತರಾಗಿರುವರು. ಈ ವರ್ಷಋತುವಿನ ಸಂತೋಷವನ್ನು ಅವರು ಅನುಭವಿಸಲಾರದಾಗಿದ್ದಾರೆ. ಮುಂಬರುವ ಹಬ್ಬ, ಉತ್ಸವಗಳಲ್ಲಿ ಅವರು ಭಾಗಿಗಳಾಗಲಾರರು. ಅಂಥಾ ಹಬ್ಬ, ಉತ್ಸವಗಳು ಅವರಿಗೆ ಅರ್ಥರಹಿತವಾದವುಗಳು. ಈ ದುರದೃಷ್ಟದ ಬಂಧುಗಳ ಬಗ್ಗೆಯ ನಿಮ್ಮ ಕನಿಕರವು ಕ್ಷಯ ರೋಗ ಸೀಲ್ ಮಾರಾಟ ಚಳವಳಿಕ್ಕೆ ಕೊಡುವ ಧಾರಾಳ ಮನಸ್ಸಿನ ಸಹಾಯದಿಂದ ವ್ಯಕ್ತಪಡಲಿ.

ಹೆಚ್ಚು ಸಂಖ್ಯೆಯಲ್ಲಿ ಈ ಟಿ. ಬಿ. ಸೀಲುಗಳನ್ನು ಕ್ರಯಕ್ಕೆ ಪಡಕೊಂಡರೆ ಕ್ಷಯ ರೋಗದ ವಿರುದ್ಧ ಯೋಗ್ಯ ಕಾರ್ಯಕ್ರಮ

ಕೈಗೊಳ್ಳಲು ಆರೋಗ್ಯಾಧಿಕಾರಿಗಳಿಗೆ ಸಹಾಯ ಮಾಡಿದಂತಾಗುತ್ತದೆ

ದಯವಿಟ್ಟು ಒಂದಾಣೆ ಬೆಲೆಯ ಕ್ಷಯ ರೋಗ ಸೀಲುಗಳನ್ನು ಪಡಕೊಂಡು ಕೊಡಗಿನಲ್ಲಿ ಕ್ಷಯ ರೋಗ ನಿವಾರಕ ಕಾರ್ಯಕ್ರಮಗಳಿಗೆ ನಿಮ್ಮ ಪಾಲಿನ ಸಹಾಯ ಮಾಡಿರಿ. ನರಳುತ್ತಿರುವ ಮಾನವಗಣದ ಕಾರಣಕ್ಕಾಗಿ ಕೊಡುವ ಸಹಾಯಕ್ಕಿಂಥಾ ಮಿಗಿಲಾದುದು ಬೇರಿಲ್ಲ.

ಟಿ. ಬಿ. ಸೀಲುಗಳು ಇಲ್ಲಿ ದೊರೆಯುತ್ತವೆ :— ಕೊಡಗಿನ ಸಿವಿಲ್ ಸರ್ಜನರು, ಮಡಿಕೇರಿ ಮತ್ತು ಕೊಡಗು ಸಂಸ್ಥಾನದ ಇತರ ಏಜೆನ್ಸಿಗಳಲ್ಲಿ

ಭಾರತದ ನಾಲ್ಕನೇ ಕ್ಷಯರೋಗ ಸೀಲ್ ಮಾರಾಟ ಚಳವಳ.
ನ್ಯೂ ಡೆಲ್ಲಿಯಲ್ಲಿರುವ ಅಖಿಲ ಭಾರತ ಕ್ಷಯರೋಗ ಸಂಸ್ಥೆಯಿಂದ ನಡೆಸಲ್ಪಡುವಂಥಾದ್ದು

(ಈ ಸ್ಥಳವು ಮಫತ್‌ಲಾಲ್ ಗಗಲ್‌ಭಾಯಿ ಮತ್ತು ಕಂಪೆನಿಯವರ ಕೃಪೆಯಿಂದ)

Edited Printed and Published by P. I. BELLIAPPA at 'KODAGU' Press Mercara, for 'Kodagu' Ltd.

ಕೊಡಗು

"ಕುಣಿಯೋಣು ಬಾರ, ಕುಣಿಯೋಣು ಬಾ"

ವಾರ್ಷಿಕ ಚಂದಾ ರೂ. ೪--೦--

ಸಂಪುಟ ೩೨] ---- [ಸಂಚಿಕೆ ೨೫

ಶುಕ್ರವಾರ

೭--೧೨--೧೯೫

ಬಿಡಿ ಪ್ರತಿ

2 ಆಣೆ

KODAGU KANNADA WEEKLY MERCARA

ಶೀಲ - ವಿದ್ಯೆ

ವಿವಿಧ ಆಟೋಟಗಳು ಮತ್ತು ಬಹುಮುಖವಾಗಿರುವ ಚಟುವಟಿಕೆಗಳು ಗುಣ ನಡತೆಗಳನ್ನು ರೂಪಿಸುವುದರಲ್ಲಿ ಮಾಡುವ ಸಹಾಯ

ಲೇ:- ಶ್ರೀ ಕೆ. ಬಿ. ಐಯ್ಯಪ್ಪ, ಬಿ. ಎ., ಬಿ. ಟಿ.

ಶೀಲವೆಂಬುದರ ಅರ್ಥವನ್ನು ವ್ಯಕ್ತಿತ್ವ, ಸದಾಚಾರ ಮತ್ತು ಧರ್ಮದೊಡನೆ ಗ್ರಥಿಸಬಹುದು. ಒಂದು ಸಮಯದಲ್ಲಿ, ಪ್ರಮುಖ ಗುಣಗಳಿರುವ ವ್ಯಕ್ತಿಗಳನ್ನು ಸೌಗುಣ್ಯ ವ್ಯಕ್ತಿಗಳೆಂದೂ, ಶೀಲವಂತರೆಂದೂ ಕರೆಯುತ್ತಿದ್ದರು. ನಂತರ ಖ್ಯಾತಿವಂತರನ್ನು ಶೀಲವಂತರೆನ್ನುತ್ತಿದ್ದರು. ನಿಜಕ್ಕೂ ಶೀಲವೆಂಬುದು ಅನಿವಾರ್ಯವಾದದ್ದು; ಇಚ್ಛಿಸುವಂತಾದ್ದು. ಮಾತ್ರವಲ್ಲ ವರ್ಧಿಸುವ ನಾಗರೀಕತೆಗೆ ಆವಶ್ಯವಾದದ್ದು. ಸಮಾಜ ವರ್ತನೆಯ ಕ್ರಮವನ್ನೂ, ಯಾವನು ಬೆರೆಯುವ ಸಮೂಹಗಳೊಡನೆ ಕಲ್ಪಿಸಿಕೊಂಡ ಸಂಬಂಧವನ್ನೂ, ಯಾತನು ಮಾಡುವ ವಿವಿಧ ಕೃತಿಗಳ ಕ್ರಮ ವ್ಯವಸ್ಥೆಯನ್ನೂ, ಇಲ್ಲವೆ ತನ್ನ ಯೋಜನ ಶಕ್ತಿಯಿಂದೊಡಗೂಡಿದ ಮನೋವೃತ್ತಿಯನ್ನು ಅಥವಾ ಮನೋವಿಕಾರ ಸ್ವಭಾವವನ್ನು, ಶೀಲವೆಂಬುದಾಗಿ ಆಧುನಿಕ ಯುಗದಲ್ಲಿ ಅರ್ಥಮಾಡಿಕೊಳ್ಳುತ್ತಿದ್ದಾರೆ. ಸೌಮ್ಯ ಪ್ರತಿಕ್ರಿಯೆಯನ್ನುಂಟು ಮಾಡುವ ಶ್ರೇಷ್ಠ ವಸ್ತು ಸ್ಥಿತಿಯನ್ನು ಕಲ್ಪಿಸುವದೇ ಶೀಲವಾಗಿದೆ. ಈ ಶೀಲ ವಿದ್ಯಾರ್ಜನೆಗೆ ಆಟೋಟಗಳು ಎಷ್ಟರ ಮಟ್ಟಿಗೆ ಸನ್ನಿವೇಶವನ್ನು ಒದಗಿಸಿಕೊಡುತ್ತವೆಂಬುದನ್ನು ನಾವು ನೋಡುವ ಪ್ರಸಂಗದೊಂದಿಗೆ ಆಟೋಟಗಳಲ್ಲಿ ಈ ಕೆಳಗೆ ನಮೂದಿಸಿದ ಕಾರಣಗಳು, ನೀತಿ ನಡತೆಗಳನ್ನು ತಿದ್ದುವದರಲ್ಲಿ ಗಮನಾರ್ಹವಾಗಿವೆ.

(೧) ಸ್ವಂತ ಭಾಗವಹಿಸುವ ಸಂದರ್ಭ ಆಟಗಳಲ್ಲಿ ಒದಗುತ್ತದೆ. ತಮ್ಮ ಶೀಲವನ್ನು ಸುಧಾರಿಸಬೇಕಾದರೆ, ಸ್ವತಃ ಭಾಗವಹಿಸುವ ಅವಕಾಶ ಪ್ರತಿಯೊಬ್ಬ ವಿದ್ಯಾರ್ಥಿಗೆ ದೊರೆಯಬೇಕು. ಬಾಲಕರು ಆಯ್ದುಕೊಂಡು ತಮ್ಮ ವಿಮರ್ಶಾಶಕ್ತಿಯನ್ನು ಉಪಯೋಗಿಸಬೇಕು. ಮಗುವಿನ ಅಭಿರುಚಿಯನ್ನು ಇಮ್ಮಡಿ ಮಾಡದಿರದು. ಮಕ್ಕಳಿಗೆ ಆಟವೆಂದರೆ ಪ್ರಾಣಕ್ಕಿಂತ ಮೇಲು. ಸ್ವತಃ ಭಾಗವಹಿಸುವಂತೆ ಮಾಡಬೇಕು; ಮಾತ್ರವಲ್ಲ ಅವಕಾಶ ಕಲ್ಪಿಸಿಕೊಡಬೇಕು. ಉತ್ತಮ ಮುಂದಾಳುತನ ಮತ್ತು ಸಮಾಜ ಸಮ್ಮತಿಯಿಂದ ಮಕ್ಕಳ ಬಯಕೆಯನ್ನು ಈಡೇರಿಸಬಹುದು. ಶೀಲ ವಿದ್ಯೆಯಲ್ಲಿ ಎಳೇ ಬಾಲಕರ ಇಷ್ಟಾರ್ಥಗಳನ್ನು ನೆರವೇರಿಸುವದರಿಂದ ಪ್ರಚಂಡ ಪರಿಣಾಮಗಳನ್ನುಂಟುಮಾಡುವದು.

(೨) ಬಾಲಕ ಬಾಲಕಿಯರಿಗೆ ಆಟೋಟಗಳಲ್ಲಿ ಅಂತರಿಕ ಮನೋಭಿಷ್ಟ ಇದ್ದೇ ಇರುವದು. ಮಾನವನ ಸ್ವಸ್ಥಿತ ಶರೀರ ರಚನೆಯೊಳಗೆ ಕೆಲವು ಪ್ರಬಲವಾದ ಕಟಾಕ್ಷಗಳಿರುತ್ತವೆ. ಇವುಗಳನ್ನು ಬೇಡಿಕೆಗಳೆಂದು ಹೇಳುವೆವು. ಈ ಬೇಡಿಕೆಗಳು ಅಭಿರುಚಿಗಳ ಸಹಾಯದಿಂದ ವಿಕಾಸಗೊಳ್ಳುತ್ತವೆ. ಅಭಿರುಚಿಯು ಕ್ಷಣಿಕ ಮನಸ್ಸಿನ ಪ್ರಾರಂಭದ ಮೆಟ್ಟಿಲಾಗಿರುತ್ತದೆ. ಮಗುವಿನ ವರ್ತನೆಯನ್ನು ತಿಳಿದು ಅದರ ಬೇಡಿಕೆಗೆ ಯೋಗ್ಯರೀತಿಯ ಮನ್ನಣೆ ನೀಡುವಂತೆ ಮುಂದಾಳುತನಬೇಕು. ಆಟೋಟಗಳು ಈ ಬೇಡಿಕೆಯ ತೃಪ್ತಿಯನ್ನು ತಣಿಸುವವು. ಒಬ್ಬ ಬಾಲಕನಿಗೆ ಒಂದು ಟೀಮಿನಲ್ಲಿ ಸದಸ್ಯನಾಗಬೇಕೆಂಬ ಕಾಂಕ್ಷೆ ಇರಬಹುದು. ಆದರೆ ಅದಕ್ಕೆ ತಕ್ಕ ಕೌಶಲ್ಯ ಆತನಲ್ಲಿರಬೇಕು. ಆಟದಲ್ಲಿ ಪ್ರವೀಣನಾಗಬೇಕೆಂಬ ಬಾಲಕನ ಛಲವನ್ನು ಮುಂದಾಳುತನವು ಅರಿತು ತಕ್ಕ ಮಾರ್ಗದರ್ಶಕನಾದರೆ ಆ ಬಾಲಕನು ತೃಪ್ತಿಪಡುವದರಲ್ಲಿ ಸಂದೇಹವಿಲ್ಲ.

ಆಟಗಳ ಉಪಯುಕ್ತತೆ

(೩) ಆಟೋಟಗಳಲ್ಲಿ ಭಾಗವಹಿಸುವದರಿಂದ ಬಹುಮಾನಗಳ ನಿರೀಕ್ಷಣೆಯಿಲ್ಲದೆ ಮನಃತೃಪ್ತಿಯನ್ನುಂಟುಮಾಡುವದು. ಆದ್ದರಿಂದ ತನ್ನ ನೀತಿ ನಡತೆಗಳನ್ನು ಉತ್ತಮಗೊಳಿಸುವ ಸುಸನ್ನಿವೇಶ ಆಟರಂಗದಲ್ಲಿ ಲಭಿಸುವದು. ಫಲಾಪೇಕ್ಷೆಯಿಂದ, (ಬಹುಮಾನ ನಿರೀಕ್ಷಣೆಯಿಂದ) ಒಬ್ಬಾತನು ಆಟಗಾರನಾಗುವಂತಿದ್ದರೆ ಶೀಲ ಸ್ವಭಾವ ವಿಕಾಸಗೊಳ್ಳದು. ಬಹುಮಾನಗಳು ಅವಶ್ಯ; ಆದರೆ ಅವುಗಳಿಗೆ ಅಂತರಿಕ ಬೆಲೆ ಇರಲಾರದು. ಸೋಲಿನೊಳಗೂ ಸಹ ಮಾನಸಿಕ ಪ್ರತಿಕ್ರಿಯೆ ಬೆಳೆಯಬಾರದು. ಆದರೆ ಒಂದು ಸಂಗಡವು ಮತ್ತೊಂದು ಸಂಗಡದೊಡನೆ ಆಡುತ್ತಿರುವಾಗ, ಆಟಗಾರನಲ್ಲಿ ಮಿಶ್ರಿತ ರಸಭಾವಗಳು ಉದ್ಭವಿಸುವವು. ತನ್ನ ಸಂಗಡದ ಮೇಲೆ ಅಭಿಮಾನ, ವಿಧೇಯತ್ವ, ಶಾಲೆಯ ಮೇಲಿನ ಮಮತೆ, ತನ್ನ ಸಂಗಾತಿಗಳ ಮೇಲಿರುವ ಜೊತೆಗಾರಿಕೆ ಮತ್ತು ವಿರೋಧ ಸಂಗಡದೊಡನಿರಬೇಕಾದ ವಾತ್ಸಲ್ಯಪೂರ್ವಕವಾದ ಸಂಘರ್ಷ—ಈ ಸುಗುಣಗಳೆಲ್ಲಾ ಆಟರಂಗದಲ್ಲಿ ತಾವಾಗಿಯೇ ವೃದ್ಧಿಯಾಗುವದು.

(೪) ಮುಂದಾಳುತನಕ್ಕೂ, ಅನುಕರಣಕ್ಕೂ, ಆಟಗಳು ತುಂಬಾ ಎಡೆಯನ್ನು ಕಲ್ಪಿಸುವವು. ಶೀಲದ ಪ್ರಕಾಶವು ಮುಂದಾಳುತನವನ್ನು ಪೋಷಿಸುವದು. ತನ್ನ ಜನರನ್ನು ಮುಂದೊಡುವ ಚೈತನ್ಯವನ್ನು ನೀಡುವದು. ಇತರರನ್ನು ಅನುಸರಿಸುವಂತ ಧೈರ್ಯ ಸ್ವಭಾವವನ್ನು ಉಂಟುಮಾಡುವದು. ಈ ರೀತಿಯ ಸದ್ಗುಣಗಳಿರುವವರೇ ಟೀಮುಗಳ ನಾಯಕರಾಗುವರು. ಒಬ್ಬನು ಕ್ರಿಕೆಟ್ ನಾಯಕನಾಗಬಹುದು; ಆದರೆ ಆತನು ಶೀಲವಂತನಾದರೆ, ಕಾಲ್ಚೆಂಡು ಆಟದಲ್ಲಿ ತನಗಿಂತ ಗಟ್ಟಿಗನಾದ ನಾಯಕನ ಕೆಳಗೆ ಆಡುವನು. ಈ ರೀತಿಯ 'ಕೊಟ್ಟು ತೆಗೆಯುವ' ಶೀಲವು ಸಂಕೀರ್ಣತೆಯನ್ನಾಗಲೀ, ಯಾ ಕನಿಷ್ಟ ಭಾವನೆಯನ್ನಾಗಲೀ ಅರಸಬಿಡಲಾರದು.

(೫) ಆಟಗಳು ತನ್ನನ್ನು ತಾನೇ ತಿದ್ದಿಕೊಳ್ಳಲಿಕ್ಕೆ ತುಂಬಾ ಆಸ್ಪದವನ್ನು ನೀಡುತ್ತವೆ. ತನ್ನನ್ನು ತಿದ್ದಬೇಕಾಗುವ ಶಕ್ತಿ ವಿಮರ್ಶಿಸಿ ಅದಕ್ಕನುಗುಣವಾಗಿ ನಡೆಯುವ ಧೋರಣೆ ಶೀಲ ವಿದ್ಯೆಯಿಂದ ಸಿಗುವವು. ತಾನು ಮಾಡಿದ ಆಯ್ಕೆಗೆ ತಾನೇ ಜವಾಬ್ದಾರನಾಗಿರಬೇಕು. ವಿದ್ಯಾರ್ಥಿಗಳಿಗೆ ಆಟಗಾರರನ್ನು ಸಂಘಟಿಸುವ ಯಾ ತರಬೇತು ಮಾಡುವ, ಇಲ್ಲವೇ ನಡೆಸುವ ಅಧಿಕಾರವನ್ನು ಕೊಡಬಹುದು. ಆವಾಗ ಅಸಂಖ್ಯಾತ ಆಯ್ಕೆಗೆ, ಅಸಂಖ್ಯಾತ ಆಸ್ಪದಗಳು ದೊರಕಬಹುದು. ಶೀಲದ ಬೆಳವಣಿಗೆಗೆ ಸಾಕಷ್ಟು ಸ್ವಾತಂತ್ರ್ಯವೂ ಬೇಕು. ಈ ವೈಯಕ್ತಿಕ ಬಿಡುಗಡೆಯಲ್ಲಿ ಅವನು ತನ್ನ ಯಾ ಅಸಮಂಜಸ ಆಯ್ಕೆಗಳನ್ನು ಮಾಡಿದರೆ ಸಹಿಸಬೇಕಾಗುವದು. ಆದರೆ ಈ ಅಯೋಗ್ಯ ಆಯ್ಕೆಯಿಂದ ನಾಯಕನಾದರೆ ಶೀಲವಂತನೆಂದು ಹೇಳಬಹುದು.

ಅಪೇಕ್ಷಿಸುವಂತ ಮನೋವೃತ್ತಿಯನ್ನು ಉಚ್ಚ ಧ್ಯೇಯಗಳನ್ನೂ, ಶ್ರೇಷ್ಠ ದರ್ಜೆಯ ಚರ್ಯೆಯನ್ನೂ, ಆಟಗಳು ನಿರ್ಮಿಸಿ ಶೀಲ ಸ್ವಭಾವವನ್ನು ತರಬೇತು ಮಾಡುವವು. ಮುಂದಾಳುಗಳು ಈ ಉತ್ತಮ ಧ್ಯೇಯ ಮತ್ತು ಮನೋವೃತ್ತಿಗಳನ್ನು ತಮ್ಮ ಅನುಯಾಯಿಗಳ ಮನಸ್ಸಿನಲ್ಲಿ ನಾಟುವಂತೆ ಮಾಡಿ ಉತ್ಕೃಷ್ಟರನ್ನಾಗಿ ಮಾಡಬಹುದು. ಒಂದು ಆಟದಲ್ಲಿ ಉಂಟಾಗತಕ್ಕ ಏರುತಗ್ಗುಗಳು, ಎಡರು ತೊಡರುಗಳು, ಜಯವನ್ನೂ ತರಲೂಬಹುದು; ಅಪಜಯವನ್ನೂ ತರಲೂಬಹುದು. ಆದರೆ ಇದಕ್ಕಾಗಿ ಭಾಗೀದಾರನು ಕ್ರೋಧ ಯಾ ಜಿಗುಪ್ಸೆ ಪಡಬಾರದು. ತಜ್ಞರೊಬ್ಬರು ನುಡಿದಂತೆ, "Love the game beyond the prize" ಎಂಬ ಸ್ಫೂರ್ತಿಯಲ್ಲಿ ತೆಗೆದುಕೊಳ್ಳಬೇಕು. ಧೈರ್ಯ, ಅಪ್ರತಿಮ ಸಹಕಾರ, ದಯೆ ಮತ್ತು ಸಹಸ್ಪರು ಸದ್ಗುಣ ಸದಾಚಾರಗಳನ್ನು ಪ್ರದರ್ಶಿಸುವದೇ ಆಟಗಾರನ ಧ್ಯೇಯವಾಗಿರತಕ್ಕದ್ದು. ಇದೇ ಅನುಭವದ ವಿದ್ಯೆಯೆಂಬುದು.

ಉಪಸಂಹಾರ ರೀತಿಯಲ್ಲಿ ಈ ಕೆಳಗಿನಂತೆ ನಿರೂಪಿಸಬಹುದು.

(೧) ಆಟೋಟಗಳಲ್ಲಿ ಬಾಲಕರು ಸ್ವತಃ ಭಾಗವಹಿಸುವರು. ಇದರಿಂದ ತಮ್ಮ ಮೆಚ್ಚಿನ ಆಯ್ಕೆಗೆ ಎಡೆಯುಂಟಾಗುವದು.

(೨) ಆಟಗಳೆಲ್ಲಾ ಅಂತರಿಕ ಅಭಿಲಾಷೆಗಳಿರತಕ್ಕ ಚಟುವಟಿಕೆಗಳಾದುದರಿಂದ ತನ್ನ ನೀತಿ ನಡತೆಗಳನ್ನು ತಿದ್ದಿಕೊಳ್ಳಲು ತುಂಬಾ ಅವಕಾಶವಿದೆ.

(೩) ಆಟೋಟಗಳು ಮನೋಭಿಷ್ಟಗಳನ್ನು ತಣಿಸುವದರಿಂದ ಮನಸ್ಸು ಚಂಚಲವಾಗದು; ಗಡಿಬಿಡಿಯಾಗದು; ಸಮತೂಕದಲ್ಲಿರುವದು.

(೪) ಮುಂದಾಳುತನಕ್ಕೂ, ಅನುಕರಣಕ್ಕೂ ಆಟವು ತುಂಬಾ ಎಡೆಕೊಡುವದು.

(೫) ಆಟಗಳು ಆತ್ಮ ಸಂಯಮವನ್ನೂ, ಆಯ್ಕೆ ಶಕ್ತಿಯನ್ನೂ, ಮತ್ತು ವಿಶಾಲ ಹೃದಯವನ್ನೂ ಕೊಡುವವು.

ಅಧ್ಯಾಪಕರ ಕರ್ತವ್ಯ

ಆಟಗಳು ಶೀಲ ಸ್ವಭಾವವನ್ನು ಉಂಟುಮಾಡುವದಾದರೂ ಅತೀ ಸತ್ಪರಿಣಾಮಗಳನ್ನು ಬಾಲಕರ ಮೇಲೆ ಬೀರಬಹುದೆಂಬ ಭರವಸೆ ಕೊಡಲಾಗುವದಿಲ್ಲ. ಇದರ ಆಗುಹೋಗುಗಳ ಎರಡು ಪ್ರಧಾನ ಸನ್ನಿವೇಶಗಳ ಮೇಲೆ ನಿಂತಿದೆ

(೧) ಮುಂದಾಳುತನದ ಗುಣ:— ಯೋಗ್ಯ ಗುಣ ನಡತೆಗಳನ್ನು ಕಲಿಸುವದಕ್ಕೆ ಕಲಿಸುವವರು ಯೋಗ್ಯರಾಗಿರಬೇಕು. ಅಧ್ಯಾಪಕರ ನೀತಿನಡತೆಗಳು ಆದರ್ಶವಾಗಿರಬೇಕು. ತಾಳ್ಮೆ, ದಯೆ, ನಿಷ್ಪಕ್ಷಪಾತದಿಂದಿದ್ದು ಬಾಲಕರು ಅನುಕರಣ ಮಾಡುವಂತಿರಬೇಕು. ಕೇವಲ ಅಹಂಕಾರ, ಆಡಂಬರ ಮತ್ತು ದೊಡ್ಡ ವಿದ್ಯಾವಂತನೆಂಬ ವಿವೇಕ ಶೂನ್ಯತೆ ಆತನಲ್ಲಿರಬಾರದು. ಸಹೋಪಾಧ್ಯಾಯರೊಡನೆ ಸಹಕಾರಿ ಹಾಗೂ ಸಹಾಯಕನಾಗಿರಬೇಕು. ಅಧ್ಯಾಪಕರ ಶೀಲದಲ್ಲಿ ಎಳ್ಳಷ್ಟು ಕಳಂಕವಿರಬಾರದು. ಎಷ್ಟೇ ದೊಡ್ಡ ವಿದ್ಯಾವಂತನಿರಲಿ; ಅವನ ನೀತಿ ಮತ್ತು ಆಚಾರ ಹೇಯವಾದರೆ, ಅವನ ಬೋಧನೆ ಅವನ ಭಾಷಣ ಎಲ್ಲಾ ಅಬದ್ಧ ಮತ್ತು ಕುಹಕ ಎಂದೆನಿಸದಿರದು. ಅಂತ ಸಮಾಜ ವಂಚಕ ಬೇರೆ ಯಾರೂ ಇರಲಾರರು. ಇದು ಸರ್ವ ವಿದ್ಯಾವಂತರಿಗೂ ಅನ್ವಯಿಸುವಂತಾದ್ದು. ಪ್ರಮಾಣಿಕತನ ಮತ್ತು ನಿಷ್ಕಪಟ ಉದ್ದಿಷ್ಟ ಇರಬೇಕು. ಈಗ ಕೈಗೊಂಡಿರುವ "Youth welfare Movement" ಯುವಕ ಅಭಿವೃದ್ಧಿ ಚಳುವಳಿ ಬಹಳ ಶ್ರೇಯಸ್ಕರವಾದದ್ದೇ ಸರಿ. ಬಾಲಕರ ಸರ್ವತೋಮುಖವಾದ ಶೀಲಾಭಿವೃದ್ಧಿಗೆ ಇದು ಅತೀ ಉತ್ತಮ ವ್ಯವಸ್ಥೆ. ಆದರೆ ಸರ್ವರೂ ಏಕ ಮನಸ್ಸಿನಿಂದ ಕಾರ್ಯತತ್ಪರರಾಗಬೇಕು.

(೨) ಪರಿಶುದ್ಧ ವಾತಾವರಣ:— ಅಧಿಕವಾದ ನೈತಿಕ ಬೋಧನೆಯಿಂದ ಪ್ರಯೋಜನವಿಲ್ಲ. ಬದಲು ಕಾರ್ಯತಃ ಆಟರಂಗಗಳಲ್ಲಿ ಉತ್ತಮ ಮತ್ತು ಅಧಮ ಸನ್ನಿವೇಶ ಕಲ್ಪನೆಯ ಗುಣಾವಗುಣಗಳನ್ನು ತಿಳಿಯುವ ಶಕ್ತಿ ಕೊಡಬೇಕು. ಸರ್ವತೋಮುಖವಾದ ಮನೋಭಿಷ್ಟಗಳನ್ನು ಉತ್ತಮ ವಾತಾವರಣದಲ್ಲಿ ಬೆರೆಯುವಂತೆ ಮಾಡಿ ಸಣ್ಣ ಯುವಕರನ್ನು ತರಬೇತು ಮಾಡುವದೇ ಶೀಲ ವಿದ್ಯೆಯಾಗಿದೆ. ಪರಿಪಕ್ವವಾದ ಆಕರ್ಷಣೆಯ ವಾತಾವರಣದಲ್ಲಿ ವ್ಯವಸ್ಥೆಗೊಂಡ ಆಟೋಟಗಳು ಮತ್ತು ವಿವಿಧ ಚಟುವಟಿಕೆಗಳು ಯೋಗ್ಯ ಮುಂದಾಳುಗಳ ನಾಯಕತ್ವದಲ್ಲಿ ಸಕಲ ಬಾಲಕರ ಗುಣಶೀಲಗಳನ್ನು ಸುಧಾರಿಸುವದು.

ಸೋಮವಾರಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಕೆ. ಎಂ. ಮೊಗಪ್ಪನವರು

ಜಪಾನಿನಿಂದ ಕಲಿಯಬೇಕಾದ ಪಾಠ.-[೧೩]

ಸಹಕಾರ ರಾಜ್ಯ ಜಪಾನು.

ಜಪಾನಿನ ಸಹಕಾರ ಪದ್ಧತಿಯಂತೆ ಗ್ರಾಮದ ಸಹಕಾರ ಸಂಘವು ಗ್ರಾಮದ ಜೀವನಾಡಿ. ಆಯಾ ಗ್ರಾಮದ ಜನಸಂಖ್ಯೆಯನ್ನು ತನ್ನ ಆಶ್ರಯದಲ್ಲಿ ತಂದು ಇಡೀ ಗ್ರಾಮದ ಆದಾಯವನ್ನು ತನ್ನ ಮೂಲಕ ನಡಸುವ ಕೇಂದ್ರಗಳೇ ಈ ಸಹಕಾರ ಸಂಘಗಳು.

— ಮೂಲ ಲೇಖಕ:—ಶ್ರೀ ಜಮನ್‌ಲಾಲ್

ಜಪಾನು ೮೦ ಮಿಲಿಯ ಸಹಕಾರಿಗಳ ರಾಜ್ಯವೆಂದು ಹೇಳಿದರೆ ಅದು ಉತ್ಪ್ರೇಕ್ಷೆಯಾಗಲಾರದು. ಜರ್ಮನಿಯಿಂದ ಆಮದಾಗಿ ಬಂದ ಸಹಕಾರ ಪದ್ಧತಿಯು ಜಪಾನಿನಲ್ಲಿ ಚೆನ್ನಾಗಿ ಬೇರು ಬಿಟ್ಟು ವಿಸ್ತೃತವಾಗಿ ಬೆಳೆದು ಜನ ಜೀವನದ ವಿವಿಧ ಅಂಗಗಳನ್ನು ಹೊಕ್ಕು ಅಲ್ಲಿಯ ಜೀವನದ ಜೀವಾಳವಾಗಿದೆ. ಜಪಾನು ಹಿಂದಿನಿಂದಲೂ ಕೂಡ ಸಹಕಾರ ತತ್ವಕ್ಕೆ ಫಲವತ್ತಾದ ದೇಶ. ನಾನು ಜಗತ್ತನ್ನು ಎಂಟು ಬಾರಿ ಸುತ್ತಿರುವೆನು. ಆದರೆ ಜಗತ್ತಿನ ಯಾವ ದೇಶದಲ್ಲಿಯೂ ಕೂಡ ಜಪಾನಿನಂತೆ ಸಹಕಾರ ತತ್ವವನ್ನು ಬಡವ ಬಲ್ಲಿದರು, ಒಡೆಯರು, ಮಜೂರರು, ವ್ಯಾಪಾರಿಗಳು, ಸರಕಾರಿ ಉದ್ಯೋಗಿಗಳು ಸಮರಸರಾಗಿ ಬಳಸಿಕೊಂಡುದನ್ನು ಬೇರೆಲ್ಲಿಯೂ ಕಂಡಿರುವದಿಲ್ಲ. ಪ್ರತಿ ಖಚೇರಿಯಲ್ಲಿ ಒಂದು ರೀತಿಯ ಸಹಕಾರ ಸಂಸ್ಥೆ, ಎನ್ನು ಪ್ರತಿ ಬೀದಿಯಲ್ಲಿಯೂ ಸಹಕಾರ ಸಮಿತಿಗಳನ್ನು ನೀವು ನೋಡಬಹುದು. ರಾಷ್ಟ್ರದ ಹಬ್ಬ, ಉತ್ಸವ ಮೊದಲಾದುವಕ್ಕೂ ಕೂಡ ಸಹಕಾರಿ ಸಮಿತಿ, ಸಂಘಗಳಿವೆ. ರಾಷ್ಟ್ರೀಯ ವಾರಗಳನ್ನು ಸಹಕಾರ ತಳಹದಿಯಲ್ಲಿ ಏರ್ಪಡಿಸಿ ಆ ವಾರ ದೇಶದ ಉದ್ಯಮಗಳಿಗೂ ವಿಶೇಷ ಮಾರಾಟ ಏರ್ಪಡಿಸುತ್ತಾರೆ. ಆ ಸಂದರ್ಭದಲ್ಲಿ ಪ್ರತಿ ಅಂಗಡಿಯೂ ಕೂಡ ಮದುವೆ ಮನೆಯಂತೆ ಶೃಂಗರಿಸಲ್ಪಟ್ಟಿರುತ್ತದೆ. ಬೆಂಕಿಯನ್ನು ನಂದಿಸಲು ಹೆಂಗಸರು ಸಹಕಾರ ಸಮಿತಿಗಳನ್ನು ಮಾಡಿಕೊಂಡಿರುತ್ತಾರೆ. ಜಪಾನಿನ ಆಡಿಗೆ ಮನೆಗಳೆಲ್ಲವೂ ಮರದಿಂದ ರಚಿತವಾದ ಕಾರಣ ಬೆಂಕಿಯ ಅನಾಹುತ ಹೆಚ್ಚು. ಪ್ರತಿ ಹೆಂಗಸು ತನ್ನ ಮನೆಯ ಹಟ್ಟಿಗೆ ನೀರು ಚಿಮುಕಿಸಿ ಶುದ್ಧವಾಗಿ ಧೂಳಿಲ್ಲದ ರೀತಿ ನೋಡಲು ಮಹಿಳಾ ಸಮಿತಿಗಳಿವೆ. ಇದೇ ರೀತಿ ಅಂಗಡಿ, ಮುನಿಸಿಪಾಲಿಟಿಗಳಲ್ಲೂ ಏರ್ಪಾಡುಗಳಿವೆ.

ಜರ್ಮನ್ ತಳಹದಿ

ಇತ್ತೀಚಿನ ವರೆಗೂ ಕೂಡ ಜಪಾನಿನ ಸಹಕಾರ ಚಳವಳವು ಜರ್ಮನಿಯ ಚಳವಳವನ್ನೇ ಹೋಲುತ್ತದೆ. ೧೯೩೩ರಲ್ಲಿ ಜರ್ಮನಿಯಲ್ಲಿ ವ್ಯವಸಾಯಿಕ ಸಹಕಾರ ಸಂಘಗಳ ಸಂಖ್ಯೆಯು ಅಲ್ಲಿಯ ಒಟ್ಟು ಸಂಘಗಳ ಸಂಖ್ಯೆಯ ಶೇಕಡ ೭೦ರಷ್ಟಿದ್ದವು. ಅದೇ ರೀತಿ ಜಪಾನಿನಲ್ಲಿ ಈ ಸಂಖ್ಯೆ ಶೇಕಡ ೯೦ರಷ್ಟಿತ್ತು. ಜಪಾನಿನ ಜನಸಂಖ್ಯೆಯ ಶೇಕಡ ೪೫ರಷ್ಟು ಜನರು ಸಹಕಾರ ಚಳವಳದೊಳಗೆ ಅಡಗಿರುವರು. ವ್ಯವಸಾಯಿಕ ಕುಟುಂಬಗಳಲ್ಲಿ ಶೇಕಡ ೭೫ರಷ್ಟು ಈ ಚಳವಳದಲ್ಲಿ ಸೇರಿರುವರು. ಆದರೆ ಇತ್ತಲಾಗಿ ಇವರಲ್ಲಿ ಬದಲಾವಣೆಯಾಗಿ ಉತ್ತಮ ಜೀವನ, ಮಾರ್ಕೆಟಿಂಗ್ ವಿಭಾಗಗಳಿಗೆ ಪ್ರೋತ್ಸಾಹ ಹೆಚ್ಚು ದೊರೆಯುತ್ತಿದೆ. ಸಹಕಾರ ಸಂಸ್ಥೆಗಳು ಪ್ರಾಮುಖ್ಯವಾಗಿ ಮಾಡುವ ಮಾರಾಟವೆಂದರೆ ಅಕ್ಕಿ, ರೇಷ್ಮೆ, ವ್ಯವಸಾಯಕ್ಕೆ ಬೇಕಾದ ಗೊಬ್ಬರ. ಇವೆಲ್ಲವನ್ನೂ ಒಟ್ಟಾಗಿ ಮಾರುವ ಮತ್ತು ಕೊಂಡುಕೊಳ್ಳುವ ತತ್ವ ಪ್ರಕಾರ ಮಾಡಲಾಗುತ್ತಿದೆ.

ಜಪಾನಿನ ವ್ಯವಸಾಯ ಉತ್ಪಾದನಾ ನಿಕ್ಷೇಪ ಗೃಹಗಳಲ್ಲಿ ಶೇಕಡ ೯೮ರಷ್ಟು ವ್ಯವಸಾಯ ಸಹಕಾರ ಸಂಘಗಳ ಹತೋಟಿಯಲ್ಲಿದೆ. ವ್ಯವಸಾಯ ಉತ್ಪಾದನಾ ಸಹಕಾರ ಸಂಘಗಳು ಒಂದೆಡೆಯಾದರೆ ಅವುಗಳನ್ನು ರಖಂವಾರು ಮಾರಾಟ ಮಾಡುವ ಮಾರ್ಕೆಟಿಂಗ್ ಸಂಘಗಳೂ ಇವೆ. ಇವೇ ಅಲ್ಲ. ಕೈಗಾರಿಕಾ ಪ್ರಗತಿಗಾಗಿ ಕೈಗಾರಿಕಾ ಸಂಘಗಳೂ ಅಲ್ಲಿವೆ. ಅವುಗಳ ಉತ್ಪಾದನೆಯನ್ನು ಮಾರಾಟ ಮಾಡುವ ಬೇಡಿಕೆಯನ್ನು ಪೂರೈಸುವ ಪ್ರತ್ಯೇಕ ಸಂಘಗಳೂ ಇವೆ. ಇವೇ ಲ್ಲ, ಹಾಲು, ಮಾರಾಟಕ್ಕೂ, ವಿದೇಶೀ ವ್ಯಾಪಾರಕ್ಕೂ, ಬೆಳೆಸುವವರ ಹಿತ ಕಾಯುವದಕ್ಕೂ ಸಂಘಗಳಿವೆ.

ಒಂದು ಉದಾಹರಣೆ

ಜಪಾನಿನ ಆದರ್ಶ ಸಹಕಾರದ ವಿಚಾರ ಒಂದು ಉದಾಹರಣೆಯನ್ನು ಇಲ್ಲಿ ಕೊಡಬಯಸುವೆನು. ಜಪಾನಿನಲ್ಲಿ ಹಟ್‌ಸುಶಿಮಾ ಎಂಬ ದ್ವೀಪವೊಂದಿದೆ. ಅದರ ಜನಸಂಖ್ಯೆ ೯೦೦. ೪೩ ಕುಟುಂಬಗಳು ಈ ದ್ವೀಪದಲ್ಲಿ ಒಂದೇ ಕುಟುಂಬದಂತೆ ಜೀವಿಸುತ್ತವೆ. ಅವರು ಜೊತೆಯಲ್ಲಿ ಕೆಲಸ ಮಾಡುತ್ತಾರೆ, ಆಟವಾಡುತ್ತಾರೆ. ಎಲ್ಲರ ಉತ್ಪಾದನೆಯನ್ನು ಒಂದೆಡೆ ಫಂಡಾಗಿ ಶೇಖರಿಸುತ್ತಾರೆ. ಆದದರಿಂದಲೇ ಎಲ್ಲರಿಗಾಗಿ ಖರ್ಚು ಮಾಡುತ್ತಾರೆ. ಇತ್ತಲಾಗಿ ಅವರನ್ನು ಒಂದು ಪತ್ರಿಕೆಯು ಕಮ್ಯುನಿಸ್ಟರೆಂದು ಕರೆದಾಗ ಆ ೪೩ ಕುಟುಂಬಗಳ ಮುಂದಾಳು ತನಕಾಸನ್ ಎಂಬವರು "ನಾವು ರಾಜಕೀಯ ದೃಷ್ಟಿಯ ಕಮ್ಯುನಿಸ್ಟರಲ್ಲ; ಆರ್ಥಿಕ ಸಮಾನತೆಯ ಕಮ್ಯುನಿಸ್ಟರು" ಎಂದು ಹೇಳಿದರು.

ಕೇವಲ ೩೫ ಮೈಲುಗಳ ಚದರಳತೆಯುಳ್ಳ ಹಟ್‌ಸುಶಿಮಾದಲ್ಲಿ ನಿಶ್ಚಿತ ಸಂಖ್ಯೆಯ ಜನರನ್ನು ಮಾತ್ರ ಯೋಗ್ಯ ರೀತಿ ರಕ್ಷಿಸಬಹುದಾಗಿದೆ. ಅವರ ಆರ್ಥಿಕ ಆದಾಯವು ನಿಶ್ಚಿತವಾಗಿರುವದರಿಂದ ಜನಸಂಖ್ಯೆ ಹೆಚ್ಚಾದರೆ ಎಲ್ಲರೂ ಸುಖಿಗಳಾಗಲಾರರು. ಅದ್ದರಿಂದ ನಿಶ್ಚಿತ ಸಂಖ್ಯೆಗಿಂತ ಹೆಚ್ಚು ಜನರಾದಾಗ ಲಾಟ್ರಿ ಹಾಕಿ ಯಾರನ್ನು ದ್ವೀಪದ ಜಪಾನಿನ ದೊಡ್ಡ ಭೂಭಾಗಕ್ಕೆ ಕಳುಹಿಸುವದೆಂದು ಅವರು ನಿಶ್ಚಯಿಸುತ್ತಾರೆ. ಅಲ್ಲಿಯ ಜನಸಂಖ್ಯೆಯು ಹೆಚ್ಚದಂತೆ ತಡೆಯಲು ಹಿರಿಯ ಜ್ಯೇಷ್ಠ ಪುತ್ರನಲ್ಲದೆ ಉಳಿದವರೆಲ್ಲರೂ ಹೊರಗೆ ಹೋಗಿ ಜೀವಿಸಬೇಕೆಂಬ ನಿಯಮ ಮಾಡಿದ್ದಾರೆ.

ಈ ದ್ವೀಪದವರ ಮುಖ್ಯ ಕೈಗಾರಿಕೆಯೆಂದರೆ ಸಮುದ್ರ ಪಾಚಿಯನ್ನು ಸಂಗ್ರಹಿಸುವದು ಮತ್ತು ಚಿಪ್ಪು ಮೀನು ಹಿಡಿಯುವದು. ಹೆಚ್ಚಾಗಿ ಸಮುದ್ರದಲ್ಲಿ ಪಾಚಿಯನ್ನು ಹುಡುಗಿಯರೇ ಸ್ವತಃ ಸಮುದ್ರದಲ್ಲಿ ಮುಳುಗಿ ಸಂಗ್ರಹಿಸುತ್ತಾರೆ. ಇದರಿಂದ ದಿನಕ್ಕೆ ೩೦೦ ಎನ್‌ಗಳಷ್ಟು ಅವರು ಸಂಪಾದನೆ ಮಾಡುತ್ತಾರೆ.

ಆದರ್ಶ ಸಹಕಾರ ಗ್ರಾಮ

ಜಪಾನಿನಲ್ಲಿ ನಾನಿದ್ದ ಪ್ರತಿ ದಿನವೂ ಹೊಸ ಹೊಸ ಸಹಕಾರ ವಿಷಯಗಳನ್ನು ಅದು ನನಗೆ ತಿಳಿಸುತಿತ್ತು. ಅಲ್ಲಿಯ ಪತ್ರಿಕೆಗಳಲ್ಲಿ ಸಹಕಾರ ಚಳವಳಕ್ಕೆ ಹೆಚ್ಚಿನ ಪ್ರಾಧಾನ್ಯತೆ ಕೊಡುತ್ತಾರೆ. ಗ್ರಾಮಸ್ಥರು ತಮ್ಮ ಹಳ್ಳಿಗಳಲ್ಲಿ ತಮ್ಮದೇ ಸಹಕಾರ ಸಂಸ್ಥೆ ಮಾಡಿಕೊಳ್ಳುತ್ತಾರೆ. ಆ ಸಂಸ್ಥೆಯ ಮೂಲಕ ತಮ್ಮ ಭೂಮಿಗೆ ನೀರು ಒದಗಿಸುವ, ತಮ್ಮ ವ್ಯವಸಾಯಕ್ಕೆ ಬೇಕಾದ ದಕ್ಷ ಮಜೂರರನ್ನು ಸಂಗ್ರಹಿಸುವ ಕೆಲಸ ಮಾಡುತ್ತಾರೆ. ವ್ಯವಸಾಯ ಹತಾರುಗಳನ್ನು, ಯಂತ್ರ ಸಾಮಗ್ರಿಗಳನ್ನು ಒದಗಿಸಿಕೊಳ್ಳುತ್ತಾರೆ. ಯಂತ್ರಗಳಿಗಿಂತ ಹೆಚ್ಚಾಗಿ ವ್ಯವಸಾಯಕ್ಕೆ ಕುದುರೆ, ಎತ್ತುಗಳನ್ನು ಅವರು ಹೆಚ್ಚು ಪ್ರೋತ್ಸಾಹಿಸುತ್ತಾರೆ. ಗ್ರಾಮದ ಬೇಡಿಕೆಗಳಾದ ಬಟ್ಟೆ, ಹೊಲಿಯುವ ಯಂತ್ರ ಮೊದಲಾದುವು ಗ್ರಾಮಗಳಲ್ಲೇ ಸಹಕಾರ ತಳಹದಿಯಲ್ಲಿ ಕೆಲಸ ಮಾಡಿ ಜನತೆಯ ಹಿತ ಸಾಧಿಸುತ್ತವೆ.

ವ್ಯವಸಾಯಗಾರರು ತಮ್ಮ ಗೋಧಿ ಬತ್ತ ಮೊದಲಾದ ಉತ್ಪಾದನೆಗಳನ್ನು ಸಹಕಾರ ಸಂಘಗಳ ಮೂಲಕವೇ ಕೊಡುತ್ತಾರೆ. ಮಧ್ಯಸ್ಥಗಾರರ ವ್ಯಾಪಾರಕ್ಕೆ ಅಲ್ಲಿ ಎಡೆಯೇ ಇಲ್ಲ. ಹೆಂಗಸರು ಸಾಮೂಹಿಕ ಹೊಲಿಯುವ ಕ್ಲಬ್‌ಗಳನ್ನು, ಸಾಮೂಹಿಕ ಪಾಕಶಾಲೆಗಳನ್ನು ನಡೆಸುತ್ತಾರೆ.

ಗ್ರಾಮದ ಸರ್ವ ಕೆಲಸವನ್ನೂ ತನ್ನ ಹಿಡಿತದಲ್ಲಿ ನಡೆಸುವ ಈ ಗ್ರಾಮ ಸಹಕಾರ ಸಂಸ್ಥೆಗಳ ಡೈರೆಕ್ಟರುಗಳಲ್ಲಿ ಮೂರು ನಾಲ್ಕು ಜನರು ಹೆಂಗಸರಿರುತ್ತಾರೆ. ಈ ಸಂಘಗಳ ಮೂಲಕ ಗ್ರಾಮದ ನಿಶ್ಚಿತ ಕಚೇರಿ, ವಾಚನಾಲಯ, ರೇಡಿಯೋ, ನಾಟಕ, ಸಿನೆಮಾಗಳ ಏರ್ಪಾಡುಗಳಿರುತ್ತವೆ. ವೈದ್ಯಕೀಯ ಸಹಾಯವೂ ಇವರ ಮೂಲಕವೇ ಬರುತ್ತದೆ. ಜಪಾನಿನ ಈ ಆದರ್ಶ ಸಹಕಾರ ಗ್ರಾಮಗಳು ಯಾರನ್ನೂ ಕೂಡ ಮುಗ್ಗರಿಸದಿರವು. ಸಹಕಾರವೇ ಅಲ್ಲಿಯ ಜೀವದ ಜೀವಾಳ.

ಸಹಕಾರ ವ್ಯವಸಾಯ ಸಂಘಗಳು

ಈ ಹೊಸ ರೀತಿಯ ಸಹಕಾರ ಸಂಘಗಳು ಜಪಾನಿನ ವೈಶಿಷ್ಟ್ಯವಾಗಿವೆ. ಇವುಗಳ ಗುರಿಯೆಂದರೆ ಜಪಾನಿನ ವ್ಯವಸಾಯ ಉತ್ಪಾದನೆಯನ್ನು ಆಧುನಿಕ ವಿಧಾನಗಳಿಂದ ಹೆಚ್ಚು ಮಾಡುವದು. ವ್ಯವಸಾಯಗಾರರ ಬೇಡಿಕೆಗಳನ್ನು ಸಾಮೂಹಿಕವಾಗಿ ಒದಗಿಸಿ ಕೊಡುವದು. ವ್ಯವಸಾಯದಲ್ಲಿ ಆಧುನಿಕ ಸಂಶೋಧನೆ ನಡೆಸಿ ಯೋಗ್ಯ ಬದಲಾವಣೆ ಮಾಡುವದು. ಸಹಕಾರ ಸಾಮೂಹಿಕ ವ್ಯವಸಾಯ ಕ್ರಮವನ್ನು ಜಾರಿಗೆ ತರುವದು. ವ್ಯಕ್ತಿಗತವಾಗಿ ವ್ಯವಸಾಯಗಾರರು ಮಾಡಲಾರದ ಕೆಲಸಗಳನ್ನು ಸಾಮೂಹಿಕವಾಗಿ ಮಾಡುವದು. ಈ ಹೊಸ ಸಂಘಗಳ ವಿಚಾರ ಮಾತಾಡುತ್ತಾ ಜಪಾನಿನ ವ್ಯವಸಾಯ ಇಲಾಖೆಯ ಒಬ್ಬ ಅಧಿಕಾರಿಯಾದ ಟಿಕಾಸ್ಸಾ ಐರೋರಿ ಎಂಬವರು ಹೀಗೆ ಹೇಳುತ್ತಾರೆ.

"ಈ ಸಂಘಗಳು ಪ್ರಜಾಪ್ರಭುತ್ವದ ಚೇತನದ ತಳಹದಿಯಲ್ಲಿ ಕಟ್ಟಲ್ಪಟ್ಟವುಗಳು. ಇವುಗಳಲ್ಲಿ ಅಧಿಕಾರ ಪ್ರಿಯರಿಗೆ ಸ್ಥಳವಿಲ್ಲ. ಇವು ರೈತರ ಸಂಘಗಳು. ಗ್ರಾಮದ ರೈತರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯನ್ನು ಉನ್ನತಗೊಳಿಸಲು ಸ್ಥಾಪಿಸಲ್ಪಟ್ಟವುಗಳು. ವ್ಯಕ್ತಿಗಳಿಂದ ಸಾಧ್ಯವಾಗದ ಕೆಲಸಗಳನ್ನು ಸಹಕಾರದ ಸಾಮೂಹಿಕ ಯತ್ನದಿಂದ ಸಾಧಿಸಿಕೊಳ್ಳಲು ಇವು ಮಾರ್ಗಗಳು. ಈ ಸಂಘಗಳ ಉಪಯೋಗವನ್ನು ಹೆಚ್ಚಾಗಿ ಮಾಡಿಕೊಂಡಷ್ಟೂ ರೈತರು ಹೆಚ್ಚೆಚ್ಚು ಲಾಭ ಪಡೆಯುವರು. ಇವುಗಳು ಸರಕಾರದ ಸಂಸ್ಥೆಗಳಲ್ಲ. ರೈತರ ಸ್ವತಂತ್ರ ಸಹಕಾರ ಕೇಂದ್ರಗಳು. ಜಗತ್ತಿನ ವ್ಯವಸಾಯದೊಂದಿಗೆ ಜಪಾನರ ವ್ಯವಸಾಯವು ಯಶಸ್ವಿಯಾಗಿ ಸ್ಪರ್ಧಿಸಬೇಕಾದರೆ ಈ ಸಂಘಗಳೇ ಜಪಾನಿನ ಮುಂದಿನ ಆಸೆ, ಭರವಸೆ"

ಜಪಾನರ ನಂಬಿಕೆಯಂತೆ ವ್ಯವಸಾಯದಲ್ಲಿ ಯಾವುದೇ ಉತ್ಪಾದನೆಯ ಅಭಿವೃದ್ಧಿ ಆಗಬೇಕಾದರೆ ಕೇವಲ ಸರಕಾರದ ವರದಿಯ ಶೋಧನೆ ಸಂಶೋಧನೆಗಳಿಂದ ಆಗಲಾರದು. ಜನತೆಯಲ್ಲಿ ವ್ಯವಸಾಯದ ಆಸಕ್ತಿಯನ್ನು ಹೆಚ್ಚಿಸಲು ಈ ರೀತಿಯ ರೈತರ ಸಂಘಗಳ ಮೂಲಕವೇ ಸಾಧ್ಯವೆಂದು ಅವರ ನಂಬಿಕೆ. ಅವರ ನಂಬಿಕೆ ನಿಜವೆಂಬುದನ್ನು ಅಲ್ಲಿನ ಕಾರ್ಯಕಲಾಪಗಳು ಎತ್ತಿತೋರಿಸುತ್ತವೆ.

ಸಹಕಾರದಿಂದ ಸಾಧಿಸಿದ ಪವಾಡಗಳು

ಜಪಾನಿನ ಓಸಾಕದ ಕ್ಯೋನಾ (ಸಹಕಾರ) ರಬ್ಬರ್ ಕಂಪೆನಿಯ ಕೆಲಸಗಾರ ನಿರ್ದೇಶಕರೊಬ್ಬರು ನನ್ನೊಡನೆ ಹೇಳಿದ ವಿಚಾರಗಳಿವು. ೧೯೪೭ನೇ ಮಾರ್ಚ್ ತಿಂಗಳಲ್ಲಿ ರಬ್ಬರ್ ಕಂಪೆನಿಯ ಸಮೊಡಿ ಶಾಖೆಯು ವಿಮಾನ ಧಾಳಿಯಿಂದ ಸಂಪೂರ್ಣ ನಾಶವಾಯಿತು. ಅದೇ ವರ್ಷ

ವಾರದ ಭವಿಷ್ಯ

ತಾ. ೪—೧೨—೫೩ರಿಂದ ೧೦—೧೨—೫೩ರ ವರೆಗೆ.

ಜ್ಯೋತಿಷ್ಯ—ಶ್ರೀ ಬಿ. ಜಿ. ಶ್ರೀನಿವಾಸ ಶಾಸ್ತ್ರಿಯವರು.

ಮೇಷ

ಆರೋಗ್ಯದೃಷ್ಟಿಯಲ್ಲಿ ಈ ವಾರ ನಿಮಗುತ್ತಮವಿದೆಯಾದರೂ ಕುಟುಂಬದ ಅನಾರೋಗ್ಯದಿಂದಾಗಿ ಮಾನಸಿಕ ಸ್ಥಿತಿಯು ಉತ್ತಮವಿರಲಾರದು. ಸಾಂಪತ್ತಿಕ ವಿಷಯದಲ್ಲಿ ಧನಾಗಮವಿದ್ದರೂ ಖರ್ಚಿನ ಪಥವು ಬಾಯ್ದೆರೆದಿರುವದು. ವಿಕ್ರಯತತ್ಪರರಿಗೆ ಲಾಭದಾಯಕ ಚಿಹ್ನೆಗಳು ಕಂಡುಬರಬಹುದು. ವಿದ್ಯಾರ್ಥಿವರ್ಗದವರು ತಮ್ಮ ಮನೋನಿಶ್ಚಿತ ಗುರಿಯನ್ನು ಮುಟ್ಟದೆ ಆಲಸ್ಯದೀದಿರುವರು ತಾ. ೪–೫ ಸಂಚಾರ ಖರ್ಚು.

ವೃಷಭ

ನಿಮ್ಮ ದೈಹಿಕ ಸ್ಥಿತಿಯು ಉತ್ತಮವಿದ್ದು ಹೊಸ ಕಾರ್ಯವನ್ನು ತಾವು ಕೈಕೊಳ್ಳಬೇಕಾಗುವದು. ಮೊದಲು ಅಹಿತರಾದವರು ಈ ವಾರ ನಿಮ್ಮ ಮೈತ್ರಿಯನ್ನು ಬಯಸುವರು. ಕೋರ್ಟು ವ್ಯವಹಾರಗಳು ಅನುಕೂಲವಾಗಲಿದೆ. ಮಿತ್ರಬಂಧುವರ್ಗದವರ ಶುಭವಾರ್ತೆಯು ಪತ್ರಾಗಮನದಿಂದ ಮಾನಸಿಕ ಗತಿಯು ಶಾಂತಿಯಿಂದಿರುವದು. ತಾ. ೪–೫ ಶುಭ ವಾರ್ತೆ ಮಿತ್ರರ ಭೇಟಿ.

ಮಿಥುನ

ಈ ಮೊದಲು ನಿಮ್ಮ ರಾಶಿಗತನಾದ ಗುರುವು ಪ್ರಸ್ತುತ ದ್ವಾದಶದಲ್ಲಿರುವದರಿಂದ ಮನೋನಿಶ್ಚಿತ ಕಾರ್ಯಗಳೆಲ್ಲಾ ಮಧ್ಯದಲ್ಲೇ ತಾಟಸ್ಥ್ಯವನ್ನೈದುವವು. ಅಹಿತರು ನಿಮ್ಮ ಹಿತಚಿಂತಕರೆಂದು ತೋರ್ಪಡಿಸಿ ನಿಮ್ಮನ್ನು ವಂಚಿಸಲಿರುವರು. ಆರೋಗ್ಯ ಮಟ್ಟವು ಸಾಕಷ್ಟಿರಲಾರದು. ವ್ಯಾಪಾರ ನಿರತರು ತಮ್ಮ ಶ್ರಮಕ್ಕೆ ತಕ್ಕ ಲಾಭವನ್ನು ಹೊಂದಲಾರರು ತಾ. ೬–೭ ಮನಚಾಂಚಲ್ಯ, ವಾಕ್ಕಲಹ.

ಕರ್ಕಾಟಕ

ಉತ್ಸಾಹದ ಜೊತೆಗೆ ತಾವು ಧೈರ್ಯವನ್ನು ತಂದುಕೊಂಡರೆ ಎಂಥಾ ಕಾರ್ಯವನ್ನು ಈ ವಾರ ಸಾಧಿಸುವಿರೆಂಬುದು ನಿಶ್ಚಯ. ಉಚ್ಚವರ್ಗದವರಿಂದ ಲಾಭ ಸನ್ಮಾನಗಳು ಲಭಿಸಲಿವೆ. ಅಯೋಚಿತ ಧನ ಲಾಭದಿಂದಾಗಿ ಮನಸ್ಸು ಶಾಂತತ್ವವನ್ನೈದುವದು. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಈ ವಾರವು ಬಹಳ ಉತ್ತಮವಾಗಿರುವದು. ತಾ. ೯–೧೦ ಮನಃಸಂತೋಷ, ಸನ್ಮಾನ.

ಸಿಂಹ

ಈ ವಾರ ನಿಮ್ಮ ಆರೋಗ್ಯವು ಚೆನ್ನಾಗಿರುವದು. ಮಿತ್ರ ಬಂಧುವರ್ಗದವರ ಚಿಂತಾಜನಕ ಪತ್ರಾಗಮನದಿಂದ ಮಾನಸಿಕ ಸ್ಥಿತಿಯು ಉತ್ತಮವಿರಲಾರದು. ಆರ್ಥಿಕ ವಿಚಾರದಲ್ಲಿ ಖರ್ಚಿನ ದಾರಿಗಳು ತುಂಬಾ ಕಂಡು ಬರುವದರಿಂದ ಕುಬೇರನೇ ಮಿತ್ರನಾದರೂ ತೃಪ್ತಿಯಿರಲಾರದು. ವ್ಯಾಪಾರೋದ್ಯಮಿಗಳಿಗೂ ಮತ್ತು ವಿದ್ಯಾರ್ಥಿವೃಂದಕ್ಕೂ ಈ ವಾರ ಆರ್ಥಿಕ, ಮಾನಸಿಕ, ದೈಹಿಕ ವಿಚಾರಗಳಲ್ಲಿ ಉತ್ತಮ.

ಕನ್ಯಾ

ಆರೋಗ್ಯ ವಿಚಾರದಲ್ಲಿ ಈ ವಾರ ನೀವು ಹೆಚ್ಚಿನ ಗಮನವಿಡಬೇಕಾಗಿರುವದು. ಪಿತ್ತೋಷ್ಣ ಪ್ರಕೃತಿರೋಗವು ತಲೆದೋರಲಿದೆ. ಸಾಂಪತ್ತಿಕ ದೃಷ್ಟಿಯಲ್ಲಿ ಕೆಲವೊಮ್ಮೆ ತಾವು ತೊಂದರೆಗೀಡಾದರೂ ಮಿತ್ರರ ಸಹಾಯದಿಂದ ಚೇತರಿಸಿಕೊಳ್ಳುವಿರಿ. ಕೋರ್ಟು ವ್ಯವಹಾರಗಳು ಚಿಂತಾಜನಕಗಳಾಗುವವು. ವಿದ್ಯಾರ್ಥಿ ವಿದ್ಯಾರ್ಥಿನಿಯರು ವೃಥಾಕಾಲಹರಣ ನಿರತರಾಗುವರು. ತಾ. ೯–೧೦ ಮನಶ್ಚಂಚಲ ಖರ್ಚು.

ತುಲಾ

ಸಾರ್ಧಸಪ್ತಶನಿಯ ಆಟದ ಕಾಟದಿಂದ ತಾವು ಆರ್ಥಿಕ ವಿಚಾರದಲ್ಲಿ ಮಾನವಂತರೆನಿಸಿಕೊಳ್ಳುವದೆ ಬಲು ಕಷ್ಟಸಾಧ್ಯ. ಆರೋಗ್ಯವು ಸಾಕಷ್ಟಿದ್ದರೂ ಕುಟುಂಬದಲ್ಲಿ ಅನಾರೋಗ್ಯವು ಕಂಡುಬರಲಿದೆ. ತಾವು ಹಿತರೆಂದು ಭಾವಿಸಿ ಮಾತಾಡುವ ಮಾತುಗಳು ವಾಕ್ಕಲಹಕ್ಕೆಡೆಯಾಗುವವು. ವ್ಯಾಪಾರತತ್ಪರರು ನಷ್ಟದಲ್ಲಿ ಬೀಳುವರು. ತಾ ೮–೯ ಸಂಚಾರ, ಕಲಹ.

ವೃಶ್ಚಿಕ

ಈ ವಾರ ನೀವು ಕೈಗೊಂಡ ಕಾರ್ಯಗಳು ಹೆಚ್ಚಾಗಿ ಫಲಕಾರಿಗಳಾಗುವವು ಆರೋಗ್ಯವು ಸಾಕಷ್ಟಿದ್ದು ಸಮಾಜದಲ್ಲಿ ಲಾಭ ಸನ್ಮಾನಗಳು ಲಭಿಸಲಿದೆ. ಮಿತ್ರಜನರಿಂದಾಗಿ ಕೆಲವು ವೇಳೆ ಸಾಂಪತ್ತಿಕದಲ್ಲಿ ನಷ್ಟ ಕಂಡುಬಂದರೂ ಅಯೋಚಿತ ಧನ ಲಾಭದಿಂದ ಚೇತರಿಸುವಿರಿ. ವ್ಯಾಪಾರನಿರತರು ಈ ವಾರ ಮನೋನಿಶ್ಚಿತ ಲಾಭವನ್ನು ಹೊಂದುವರು. ತಾ. ೭–೮ ಲಾಭ ಸನ್ಮಾನ.

ಧನು

ಈ ವಾರ ನಿಮ್ಮ ಆರೋಗ್ಯ ಚೆನ್ನಾಗಿದ್ದರೂ ಕೈಗೊಂಡ ಕಾರ್ಯಗಳಲ್ಲಿ ವಿಘ್ನ ಪರಂಪರೆಗಳು ತಲೆದೋರುವವು. ಉಚ್ಚವರ್ಗದವರಿಂದ ನಿಂದಿಸಲ್ಪಡಲಿರುವಿರಿ. ಆರ್ಥಿಕ ವಿಚಾರದಲ್ಲಿ ತುಂಬಾ ತೊಂದರೆಗಳಿಗೊಳಗಾಗಿ ಮಿತ್ರ ಜನರ ಸಹಾಯವನ್ನು ಬೇಡಿದರೂ ಫಲಕಾರಿಯಾಗಲಾರದು. ವಿದ್ಯಾರ್ಥಿ ವಿದ್ಯಾರ್ಥಿನಿಯ ಇತರರ ಹವ್ಯಾಸಕ್ಕೊಳಗಾಗಿ ಆಲಸ್ಯದಿಂದಿರುವರು. ತಾ. ೪ ೫ ಅಪನಾದ. ನಷ್ಟ.

ಮಕರ

ಆರೋಗ್ಯದೃಷ್ಟಿಯಲ್ಲಿ ಈ ವಾರ ನಿಮಗೆ ಬಲು ಉತ್ತಮವಿರುವದು. ಸಾಂಪತ್ತಿಕದಲ್ಲಿ ಉತ್ತಮವಿದ್ದು ಮಾನಸಿಕ ಸ್ಥಿತಿ ಶಾಂತಿಯಲ್ಲಿರುವದು. ಕೋರ್ಟು ವ್ಯವಹಾರಗಳು ಅನುಕೂಲವಾಗುವವು. ಮಿತ್ರರ ಸಹಾಯದಿಂದ ಮನಸಿನಲ್ಲಿ ಧೈರ್ಯೋತ್ಸಾಹಗಳು ಮೂಡುವವು. ವಿದ್ಯಾರ್ಥಿವೃಂದವು ಮನೋನಿಶ್ಚಿತ ಗುರಿಯನ್ನು ಮುಟ್ಟುವದು.

ಕುಂಭ

ಈ ವಾರ ನಿಮ್ಮ ರಾಶಿಗೆ ಗ್ರಹಾನುಕೂಲವಿರುವದರಿಂದ ನೀವು ಕೈಗೊಂಡ ಕಾರ್ಯಗಳು ನಿಮ್ಮ ನಿಶ್ಚಿತಕ್ಕಿಂತ ಮೊದಲೇ ಫಲಕಾರಿಗಳಾಗುವವು. ಆರ್ಥಿಕ ವಿಚಾರದಲ್ಲಿ ಬಂಧುವರ್ಗದವರಿಂದ ವಂಚಿಸಲ್ಪಟ್ಟವರಾದರೂ ಮಿತ್ರರ ನೆರವು ದೊರಕಿ ಸುಧಾರಿಸಿಕೊಳ್ಳುವಿರಿ. ಕೆಲವೊಮ್ಮೆ ಆಹಾರ ಸೇವನೆಗೆ ಸಮಯ ಸಂಕೋಚವಾದರೂ ಆರೋಗ್ಯವು ಚೆನ್ನಾಗಿರುವದು. ವಿದ್ಯಾರ್ಥಿವೃಂದಕ್ಕೆ ಪ್ರಗತಿ. ತಾ ೬–೭ ಸುಖ, ಸನ್ಮಾನ ಭೋಜನ.

ಮೀನ

‘ಕ್ರಿಯಾಸಿದ್ಧಿಃ ಸತ್ವೆ ಭವತಿ’ ಎಂಬಂತೆ ತಾವು ಕೈಗೊಂಡ ಕಾರ್ಯಗಳಲ್ಲಿ ಪ್ರಥಮತಃ ತೊಂದರೆಗಳು ಕಂಡುಬಂದರೂ ಹಿಂಜರಿಯದೆ ಮುಂಗಾಮಿಗಳಾದರೆ ಫಲವು ನಿಶ್ಚಯವಾಗಿ ಪ್ರಾಪ್ತಿಯಾಗುವದು. ಜನರು ತಮ್ಮೆದುರು ವಿರೋಧಿಗಳಂತೆ ವರ್ತಿಸಿದರೂ ಕಾರ್ಯತಃ ಅವರು ಸಹಾಯಕರಾಗುವರು. ಪತಿಸುತರ ಸುಖಸಂತೋಷದಿಂದ ಮಾನಸಿಕ ಸ್ಥಿತಿಯು ತಲ್ಲೀನವಾಗಿರುವದು. ತಾ. ೮–೯ ಸುಖ, ಮಿತ್ರಭೇಟಿ.

ಜೂನ್ ತಿಂಗಳಲ್ಲಿ ಕಂಪೆನಿಯ ಮುಖ್ಯ ಖಜೇರಿಯೂ ಬಾಂಬಿನಿಂದ ನಾಶಗೊಂಡಿತು. ಯುದ್ಧ ನಿಂತ ನಂತರ ೧೯೪೫ನೇ ಅಕ್ಟೋಬರ್ ತಿಂಗಳಲ್ಲಿ ನಾವು ನಮ್ಮ ಕಂಪೆನಿಯ ಪುನರುಜ್ಜೀವನಕ್ಕೆ ಕೈಯಿಕ್ಕಿದೆವು. ಡಿಸೆಂಬರ್ ತಿಂಗಳಲ್ಲಿ ಮುಖ್ಯ ಖಜೇರಿಯ ಯಂತ್ರಗಳ ರಿಪೇರಿ ಆಯಿತು. ೧೯೪೬ ಮಾರ್ಚಿ ತಿಂಗಳಲ್ಲಿ ಟೈರ್ ಕಾರ್ಖಾನೆ ಸಿದ್ಧವಾಯಿತು. ೧೯೪೭ನೇ ಜನವರಿಯಲ್ಲಿ ನಮ್ಮ ಕಂಪೆನಿಯ ಬಂಡವಾಳವು ಇಪ್ಪತ್ತೈದು ಲಕ್ಷಕ್ಕೆ ಏರಿತು ಆಗಸ್ಟ್ ತಿಂಗಳಲ್ಲಿ ಇದು ೫೦ ಲಕ್ಷಕ್ಕೆ ಮುಟ್ಟಿತು. ಈಗ ಯುದ್ಧಕ್ಕೆ ಮೊದಲಿದ್ದುದಕ್ಕಿಂತಾ ಉತ್ತಮ ಸ್ಥಿತಿಯಲ್ಲಿ ಕಂಪೆನಿ ಇದೆ.

“ಕ್ಯೋವಾ” ಎಂದು ಜಪಾನಿನಲ್ಲಿ ಹೇಳಿದರೆ ‘ಸಹಕಾರ’ ಎಂದರ್ಥ. ಈ ಕಂಪೆನಿಯಲ್ಲಿ ಕೆಲಸಗಾರರು ಮತ್ತು ಬಂಡವಾಳದಾರರು ಪರಸ್ಪರ ಸಹಕರಿಸಿ ಎಲ್ಲರ ಹಿತಕ್ಕಾಗಿ ಎಲ್ಲರು ದುಡಿಯುವದನ್ನು ಕಾಣಬಹುದು. ಈ ಕಂಪೆನಿಯಲ್ಲಿ ೩೦೦ ಕೆಲಸಗಾರರಿದ್ದಾರೆ. ಕಂಪೆನಿಯ ಶೇಕಡ ೮೦ ರಷ್ಟು ಬಂಡವಾಳವು ಹಣಗಾರರದ್ದೇ ಆದರೂ ಕೆಲಸಗಾರರೂ ಕಂಪೆನಿಯ ಆಡಳಿತದಲ್ಲಿ ಸಮಾನ ಜವಾಬ್ದಾರಿಯನ್ನು ಪಡೆದಿರುವರು.

COORG FOREST DEPARTMENT

About 1,00,000 c.ft. of Teak, Biti, Honne, Mathi, Nandi (Venteak) etc., will be sold by public auction at the Coorg Timber Depot Hunsur on Wednesday the 23rd December 1953 at 10 A. M. (Also some jungle-woods for delivery in the forests will be sold). For conditions of the sale etc., apply to the Conservator of Forests, Coorg, Mercara.

ಕೊಡಗು ಪ್ರಾಂತೀಯ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು:—ವೀರಾಜಪೇಟೆ.

ಶಾಖೆ:—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟಗಳು
2. 12 ನೇ ನಂಬರಿನ ಒಂಟಿ ನಳಿಗೆಯ ತೋಟದ ಕೋವಿಗಳು.
3. ಒಂಟಿ ಮತ್ತು ಜೋಡಿ ಹೊಳವಿನ ಕೇಪಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚೆಲ್ಲಾ ಮತ್ತು ಕೇಪುಗಳು.
5. 5/8", 1/2" ಮತ್ತು 3/8" ಕಬ್ಬಿಣದ ಸರಳುಗಳು
6. 2", 1¼", 1" ¾" ಮತ್ತು ½" ಕೊಳಾಯಿಗಳು. (G. I. Pipes)
7. 1¾" × 5/16" ಉಕ್ಕಿನ ಪಟ್ಟೆಗಳು (Spring Steel flats)
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
9. ಕೋವಿ ಮತ್ತು ಆನೆ ಮಾರ್ಕಿನ ಸೀಮೆಎಣ್ಣೆ ಟಿನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಸಿ. ಬಿ. ಬೆಳ್ಳಪ್ಪ, (ಪ್ರೆಸಿಡೆಂಟ್)

ಸ್ವಾತಂತ್ರ್ಯ ಸಿಕ್ಕಿದರೂ ಸುಖ ಸಿಕ್ಕಿರುವುದೇ?

ಸ್ವಾತಂತ್ರ್ಯಾನಂತರ ಜನಜೀವನದಲ್ಲಿ ಏನಾದರೂ ಸುಧಾರಣೆಯಾಗಿರುವುದೇ ಎಂಬ ಪ್ರಶ್ನೆಯನ್ನುತ್ತರಿಸುತ್ತ ಪ್ರಜಾ ಸೋಷಲಿಸ್ಟ್ ಪಕ್ಷದ ಅಧ್ಯಕ್ಷರಾದ ಆಚಾರ್ಯ ಕೃಪಲಾನಿಯವರು ತಾ. ೨೭ರಲ್ಲಿ ನಕಾರಾತ್ಮಕ ಉತ್ತರವನ್ನು ಇತ್ತರು.

ಮದ್ರಾಸಿನ ಗೋಖಲೆ ಸಭಾ ಸದನದಲ್ಲಿ ಮಾತನಾಡುತ್ತಾ, 'ನಾವು ಬ್ರಿಟಿಷ್ ಸರಕಾರದೊಂದಿಗೆ ಹೋರಾಡಿದುದು ಅವರ ಮೇಲಿನ ದ್ವೇಷದಿಂದಲ್ಲ. ಅವರ ಸಾಮ್ರಾಜ್ಯಶಾಹಿ ಧೋರಣೆಯಿಂದ ಎಲ್ಲ ಕ್ಷೇತ್ರದಲ್ಲೂ ಜನಜೀವನ ಬಡವಾಗುತ್ತಿತ್ತು. ಬ್ರಿಟಿಷರ ವಿರುದ್ಧ ಹೋರಾಡಲು ಗಾಂಧೀಜಿಯವರು ಅಹಿಂಸಾ ಶಸ್ತ್ರವನ್ನು ನಮಗೊಪ್ಪಿಸಿದರು. ಆದರಿಂದ ಬ್ರಿಟಿಷ್ ಕಂಟಕವನ್ನು ನಾವು ದೂರ ಸರಿಸಿದೆವು. ಆದರೆ ಸ್ವಾತಂತ್ರ್ಯಾನಂತರ ದೇಶದಲ್ಲಿ ಏನಾದರೂ ಬದಲಾವಣೆಯಾಗಿದೆಯೇ? ಹಿಂದೆಂದೂ ಇಲ್ಲದ ಜಾತಿ, ಉಪಜಾತಿಯ ಭಾವನೆ ಇಂದು ಚುನಾವಣೆಗಳಲ್ಲಿ ತಲೆ ಎತ್ತಿದೆ, ದು ಅರ್ಥ ಪೂರ್ಣಕರ. ತನ್ನ ಗೌರವಕ್ಕೆ ಕುಂದು ತರುವಂತಹ ಯಾವುದನ್ನೂ ಒಪ್ಪದ ಈಗಿನ ಸರಕಾರವೂ ಇದನ್ನು ಒಪ್ಪಲೇಬೇಕಾಗಿದೆ. ಬ್ರಿಟಿಷರ ಕಾಲದ ಆಡಳಿತ ರೀತಿಯೇ ಇಂದೂ ಜಾರಿಯಲ್ಲಿದೆ. ಪೋಲೀಸರ ಮನೋಭಾವನೆಯಲ್ಲೂ ಯಾವ ಬದಲಾವಣೆಯೂ ಆಗಿಲ್ಲ. ಯಾರು ಆಂದೋಲನ ಮಾಡಿದರೂ ಲಾಠಿ ಚಾರ್ಜ್ ಅಥವಾ ಗೋಳಿಬಾರು ಮಾಡಲು ಅವರು ಹಿಂಜರಿಯುವಂತೆ ತೋರುತ್ತಿಲ್ಲ.

'ವಿದ್ಯಾರ್ಥಿಗಳಲ್ಲಿ ಶಿಸ್ತಿಲ್ಲ ಎಂಬುದನ್ನು ನಾನು ಒಪ್ಪುತ್ತೇನೆ. ಇದರ ಹೆಚ್ಚಿನ ಹೊಣೆ ಅವರ ತಂದೆ ತಾಯಿಗಳ ಮೇಲೆ. ವಿದ್ಯಾರ್ಥಿಗಳನ್ನು ಅಂಕೆಯಲ್ಲಿಡುವ ಸುಲಭ ವಿಧ್ಯೆಯಲ್ಲಿ ಇಂದಿನ ಅಧ್ಯಾಪಕರೂ ತರಬೇತಿ ಹೊಂದಬೇಕು. ವಿದ್ಯಾರ್ಥಿಗಳು ಅಧ್ಯಾಪಕರನ್ನು ಪ್ರೀತಿಸುವಂತೆ ಗೌರವಿಸುವಂತೆ ಮಾಡಬೇಕು. ಆದರೆ ಇದನ್ನು ಸಾಧಿಸಲು ವಿದ್ಯಾರ್ಥಿಗಳನ್ನು ಅಧ್ಯಾಪಕರು ಪ್ರೀತಿಸಬೇಕು.

ಆಳುವ ವ್ಯಕ್ತಿಗಳು ಬದಲಾಗಿದ್ದರೂ ಆಡಳಿತದ ರೀತಿ ಬದಲಾಗಿಲ್ಲ. ಅದು ಇನ್ನೂ ಹೆಚ್ಚಿನ ಕೆಟ್ಟದ್ದಾಗಿದೆ. ಲಂಚ

> ## ಎಲ್ಲ ಭೂಮಿಯು ದೇವರದು.
>
> ಬೆಳಕು, ಗಾಳಿ, ನೀರುಗಳಂತೆ ಭೂಮಿಯು ಪರಮಾತ್ಮನ ಉದಾರ ದೇಣಿಗೆಯಾಗಿದೆ.
>
> ಭೂಮಿಯ ಮೇಲೆ ಎಲ್ಲರಿಗೂ ಅಧಿಕಾರವಿದೆ. ಅದನ್ನು ಎಲ್ಲರ ಹಿತಕ್ಕಾಗಿ ಉಪಯೋಗಿಸಬೇಕು.
>
> ನಾನು ಪ್ರೇಮದಿಂದಲೇ ಕೇಳುತ್ತೇನೆ. ನನ್ನ ಹತ್ತಿರ ಯಾವುದೇ ಅಧಿಕಾರವಿಲ್ಲ. ಅಧಿಕಾರದ ಮೇಲೆ ನನಗೆ ವಿಶ್ವಾಸವೂ ಇಲ್ಲ.
>
> ನಿಮ್ಮ ಮನೆಯಲ್ಲಿ ಐದು ಮಕ್ಕಳಿದ್ದರೆ ನನ್ನನ್ನು ಆರನೆಯವನೆಂದು ತಿಳಿಯಿರಿ; ಮತ್ತು ನನ್ನ ಪಾಲನ್ನು ಕೊಡಿರಿ.
>
> ಹಣವನ್ನು ಗಳಿಸುವುದು ಗಳಿಕೆಯಲ್ಲ. ಪ್ರೇಮವನ್ನು ಗಳಿಸುವದೇ ನಿಜವಾದ ಗಳಿಕೆಯು.
>
> ಭೂದಾನ ಯಜ್ಞವು ಒಂದು ಸತ್ಯ ವಿಚಾರವು
>
> ಪ್ರತಿಯೊಂದು-ಊರಿಗೆ ಊರೇ ಒಂದು ಕುಟುಂಬವಾಗಬೇಕೆಂಬುದೇ ನನ್ನ ಪ್ರಯತ್ನ.
>
> ಇದೊಂದು ಶಾಂತಿಮಯ ಕ್ರಾಂತಿ.
>
> ನಾನು ಮೊದಲು ನಿಮ್ಮ ಹೃದಯಪರಿವರ್ತನ ಮಾಡಬಯಸುವೆ. ಆಮೇಲೆ ನಿಮ್ಮ ಜೀವನಪರಿವರ್ತನ ಮಾಡಬಯಸುವೆ. ಅನಂತರ ಸಮಾಜದಲ್ಲಿ ಪರಿವರ್ತನೆಯನ್ನು ಸಾಧಿಸುವೆ.
>
> ಯಾರು ಇಂದು ಕೊಡುವದಿಲ್ಲವೋ ಅವರು ನಾಳೆ ಕೊಡುವರು. ಅವರು ಕೊಡದೇ ಇರಲಾರರು. ನನಗೆ ಭೂಮಿ ಕೊಡಲಿಕ್ಕಿಲ್ಲ ಎನ್ನುವ ಯಾವನೊಬ್ಬ ವ್ಯಕ್ತಿಯೂ ಭಾರತದಲ್ಲಿ ಇಲ್ಲ.
>
> -- ವಿನೋಬಾಜಿ. (ಪ್ರ)

> ## ಮಹಿಳೆಯರು ಮತ್ಸರ ಪಡದಿರುವುದೊಳ್ಳೆಯದು
>
> "ನೀವು ಇಲ್ಲಿ ಬಹಳವಾಗಿ ಸಮಾಜ ಸೇವೆ ಮಾಡಿರುವಿರೆಂದು, ನೀವಿತ್ತ ಮಾನಪತ್ರದಿಂದ ತಿಳಿದೆ. ಆದರೆ, ಸರಕಾರದ ಆಯವು ಸಾಕಷ್ಟಿಲ್ಲ; ನಿಮಗೆ ಹೆಚ್ಚಿನ ಹಣ ಸಹಾಯ ಕೊಡಲಾಗುವುದಿಲ್ಲ"
>
> "ನಾನು ಸ್ತ್ರೀಯಲ್ಲ; ಅನೇಕ ವರ್ಷಗಳಿಂದ ಏಕಾಕಿಯಾಗಿ ಇರುವ ಕಾರಣ, ನಿಮ್ಮ ಆಶೆ ಆಕಾಂಕ್ಷೆಗಳೂ ನನಗೆ ತಿಳಿಯುವುದಿಲ್ಲ ಆದ ಕಾರಣ, ನಿಮಗೆ ಸಲಹೆ ನೀಡಲು ಮನಸ್ಸಿಲ್ಲ".
>
> "ಸೇವೆಯಲ್ಲೇ ನೈಜ ಹರುಷವಿದೆ.
>
> "ಮತ್ಸರ ಪಡಬೇಡಿ ಮಹಿಳೆಯರು ಮತ್ಸರಿಗಳೆಂದು ಪುರುಷರ ಭಾವನೆ. ಆದರೆ, ಮಹಿಳೆಯರು ಸರಳ ಸ್ವಭಾವದವರಾಗಿ, ತಮ್ಮ ಮತ್ಸರವನ್ನು ಬಯಲುಪಡಿಸುತ್ತಾರೆ, ಪುರುಷರು ಅಷ್ಟು ಸ್ಪಷ್ಟವಾಗಿ ಪ್ರದರ್ಶಿಸುವುದಿಲ್ಲ. ಯಾರೂ ಮತ್ಸರ ಪಡದಿರುವುದೇ ಒಳ್ಳೆಯದು. ಮತ್ಸರವು ತೋರಿಸಿದಂತೆ-ತನ್ನಿಂದ ತಾನೇ ಅಧಿಕವಾಗುವುದು.
>
> — ರಾಜಾಜಿ. (ಪ್ರ)

ಇಂದಿನಷ್ಟು ಪ್ರಾಂತೀಯ ಭಾವನೆ, ತಪ್ಪು ತಿಳುವಳಿಕೆ ಹಿಂದೆಂದೂ ಇದ್ದಿಲ್ಲ. ಈ ದೋಷಗಳು ಬೆಳೆಯುವಂತೆ ತೋರುತ್ತದೆ

'ಬ್ರಿಟಿಷರ ತೊಲಗುವಿಕೆಯಿಂದ ಜನರ ಆರ್ಥಿಕ ಸ್ಥಿತಿ ಸುಧಾರಿಸೀತೆಂದು ಜನರಿಗೆ ಆಶ್ವಾಸನೆ ಕೊಡಲಾಗಿತ್ತು. ಆದರೆ ಆಹಾರ, ಬಟ್ಟೆ, ವಸತಿ, ವಿದ್ಯೆ ಎಲ್ಲ ವಿಷಯಗಳಲ್ಲೂ ಜನರ ತಪ್ಪುಗಳು ಹೆಚ್ಚುತ್ತಿರುವುವನ್ನು ನಾವು ಕಾಣುತ್ತೇವೆ. ಜನರಿಗೆ ಕಡಿಮೆ ಆಹಾರ ಸಿಕ್ಕುತ್ತಿದೆ, ಅದೂ ಮಿಶ್ರ ಆಹಾರ. ಬಟ್ಟೆ, ಸಣಬಿನ ಉತ್ಪಾದನೆ ಹೆಚ್ಚಾದರೂ ಜನರಲ್ಲಿ ಕೊಳ್ಳುವ ಶಕ್ತಿ ಇಲ್ಲದ್ದರಿಂದ ಅವರ ಉಪಯೋಗವಾಗದೆ ಮಿಲ್ಲುಗಳು ಮುಚ್ಚಿಹೋಗುವ ಸ್ಥಿತಿಗೆ ಬಂದಿವೆ. ಇದರಿಂದ ನಿರುದ್ಯೋಗವು ತಲೆದೋರಿದೆ.

'ಯೋಜನೆಯು ಕಾರ್ಯಗತವಾಗುತ್ತಿರುವಾಗ ನಿರುದ್ಯೋಗ ಹೆಚ್ಚುತ್ತಿರುವುದು ದೋರತನವು ಮಂತ್ರಿಗಳ ತನಕವೂ ವ್ಯಾಪಿಸಿದೆ.

"ಪ್ರಜಾ ಸತ್ತಾತ್ಮಕ ಪದ್ಧತಿಯಲ್ಲಿ ತಲೆಗಳನ್ನೆಣಿಸಿ ಸರಕಾರ ಬದಲಿಸಬೇಕಾಗುತ್ತದೆ. ಆದರೆ ಸರ್ವಾಧಿಕಾರಿ ಪದ್ಧತಿಯಲ್ಲಿ ತಲೆ ಒಡೆದು, ಸರಕಾರವು ಏನಾದರೂ ಸಾಧಿಸಿರುವದೇ ಎಂದು ಜನರು ವಿಚಾರ ಮಾಡಬೇಕು. ಮಾಡಿದ್ದರೆ ಅದಕ್ಕೆ ಬೆಂಬಲ ಕೊಡುವದು ಜನರ ಕರ್ತವ್ಯ.

"ಕಾಂಗ್ರೆಸು ತ್ಯಾಗ ಯೋಚಿಸಿದಾಗ ನಾನದರಲ್ಲಿದ್ದೆ. ಅದು ಅಧಿಕಾರ ಗಳಿಸಿದಾಗ ನಾನದರಿಂದ ಹೊರಬಿದ್ದೆ. ನನ್ನ ಪಕ್ಷದ ನೀತಿಯು ಹೆಚ್ಚು ಕಡಿಮೆ ಗಾಂಧಿ ನೀತಿಯಾಗಿದೆ. ಅವರ ನೀತಿಯನ್ನು ಕಾಂಗ್ರೆಸ್ಸು ಕಾರ್ಯಾಚರಣೆಗೆ ತಂದಿಲ್ಲ. ಆದುದರಿಂದ ಜನರನ್ನು ಕುರಿಗಳನ್ನಾಗಿ ಮಾಡಲು ಆ ನೀತಿಗೇ ಪುನಃ ಪ್ರಾಮುಖ್ಯತೆ ಕೊಡಲು ನಾನು ಪ್ರಯತ್ನಿಸುತ್ತಿದ್ದೇನೆ. ದೇಶದ ಏಕತೆಯನ್ನು ನಾವು ಕಾಯ್ದುಕೊಳ್ಳುವೆವು.

ಮದರಾಸಿನಲ್ಲಿ ರಾಜಾಜಿಯವರ ತಿದ್ದಿದ ಪ್ರಾಥಮಿಕ ವಿದ್ಯಾ ಯೋಜನೆ ತಕ್ಕಮಟ್ಟಿಗೆ ಒಳ್ಳೆಯದಿದೆ. ಆದರೆ ಅದು ಇನ್ನೂ ಸುಧಾರಣೆ ಹೊಂದಬೇಕು ಬುನಾದಿ ಶಿಕ್ಷಣವು ಕೊಡಲ್ಪಡಬೇಕು. ವಿದ್ಯಾಭ್ಯಾಸ ಕ್ರಮ ಚೆನ್ನಾಗಿಲ್ಲವೆಂದು ಎಲ್ಲರೂ ಹೇಳುತ್ತಿರುವರಾದರೂ ಅದನ್ನು ಬದಲಾಯಿಸುವ ಸಾಹಸ ಯಾರಲ್ಲೂ ಇಲ್ಲ. ರಾಜಾಜಿಯವರು ಈ ವಿಷಯದಲ್ಲಿ ಮಾರ್ಗದರ್ಶನ ಮಾಡಿದ್ದಾರೆ, ಎಂದು ಆಚಾರ್ಯ ಕೃಪಾಲಿನಿ ಹೇಳಿದರು

Office of the Coorg Provincial Co-operative Marketing Federation Ltd., VIRAJPET.

TENDERS

The undersigned invites sealed tenders for the clearance of iron and steel materials, agricultural implements, cement, etc., from rail head and sea at Tellicherry and transport of the same to the godowns of the Coorg Provincial Co-operative Marketing Federation both at Virajpet and Mercara.

The rates should be quoted.

The last date for the receipt of tenders will be 15-12-1953.

Further details can be had from the office of the institution.

P. I. BELLIAPPA,
President.

Wanted

Wanted seven Sales Managers in North Coorg District on Rs. 120 - P. M. to develop the sales of our Products.

Apply sharp to-

THE DISTRICT SALES MANAGER,
Eastern National Transport Services Ltd,
4-352 Telugu St.
VIRAJPET (Coorg).

COORG FOREST DEPARTMENT

Sale Notice

The right to fell and remove marked standing timber from seven coupes in Makut, Bhagamandala and Sampaje Ranges for a period of 18 months from 1-2-54 to 31-7-55 will be sold by public auction at the Conservator's Office, Mercara, at 11 A. M. on 19-12-1953. For further particulars please apply to the Conservator of Forests, Coorg, Mercara.

ಕೊಡಗು

ತಾರೀಕು ೪—೧೨—೧೯೫೩ನೇ ಶುಕ್ರವಾರ

ಕ್ಷಯರೋಗ ಮತ್ತು ಅದರ ನಿವಾರಣೆ.

ನಾಗರಿಕತೆ ಬೆಳೆದಂತೆ ಕ್ಷಯರೋಗವು ಹೆಚ್ಚು ವಿಸ್ತಾರವಾಗಿ ಹಬ್ಬುತ್ತಿರುವದು ಕಂಡು ಬರುತ್ತಿದೆ. ಹಿಂದೆ ಕೇವಲ ನಗರಗಳಲ್ಲೇ ಹೆಚ್ಚಾಗಿದ್ದ ಈ ಕಾಯಿಲೆಯು ನಾಗರಿಕತೆ ಹಳ್ಳಿಗಳಿಗೆ ಕಾಲಿಕ್ಕಿದಂತೆ ಹಳ್ಳಿಗಳಲ್ಲೂ ಹಬ್ಬತೊಡಗಿದೆ. ಕೊಡಗಿನಂಥಾ ಹಳ್ಳಿಗಳ ನಾಡಿನಲ್ಲೂ ಈ ರೋಗ ವಿಸ್ತಾರವಾಗಿ ಹಬ್ಬುತ್ತಿದೆಯೆಂಬುದು ಕೊಡಗಿನ ಆಸ್ಪತ್ರೆಗಳಲ್ಲಿ ಸೇರಿದ ರೋಗಿಗಳ ಪರಿಶೀಲನೆಯಿಂದ ತಿಳಿದು ಬಂದಿದೆ. ಕೇವಲ ೨½ ಲಕ್ಷಕ್ಕೂ ಕಡಿಮೆ ಜನ ಸಂಖ್ಯೆ ಇರುವ ಕೊಡಗಿನಲ್ಲಿ ಪ್ರತಿ ವರ್ಷ ಸರಾಸರಿ ೩೦೦ ರಷ್ಟು ಜನರು ಈ ಕಾಯಿಲೆಯಿಂದ ಸಾಯುವರೆಂದೂ ೧೫೦೦ ರಿಂದ ೨೦೦೦ ದಷ್ಟು ಜನರು ಇದರಿಂದ ನರಳುವರೆಂದೂ ಅಂದಾಜುಮಾಡಿರುವಾಗ ಈ ಕಾಯಿಲೆಯ ಭಯಂಕರತೆಯನ್ನೂ, ಅದನ್ನು ತಡೆಗಟ್ಟುವ ತೀವ್ರ ಅವಶ್ಯಕತೆಯನ್ನೂ ಬೇರೆ ಬರೆಯಬೇಕಿಲ್ಲ.

ಈ ರೋಗದ ಮಹಾ ಅನಾಹುತವನ್ನರಿತೇ ದೆಹಲಿಯಲ್ಲಿರುವ ಕ್ಷಯರೋಗ ನಿವಾರಣಾ ಸಂಘದವರು ಟಿ. ಬಿ ಸೀಲುಗಳ ಮಾರಾಟದ ವ್ಯವಸ್ಥೆ ಮಾಡಿ ಇದಕ್ಕಾಗಿ ಹಣ ಸಂಗ್ರಹಿಸುತ್ತಿದ್ದಾರೆ. ಈ ರೋಗ ನಿವಾರಣೆಗೆ ಆಸ್ಪತ್ರೆ, ಔಷಧ, ಪ್ರಚಾರ ಮೊದಲಾದುವು ವಿಪುಲವಾಗಿ ಬೇಕು. ಇವುಗಳು ಹಣವಿಲ್ಲದೆ ಸಾಧ್ಯವಿಲ್ಲ. ಕೊಡಗಿನಲ್ಲೂ ಕೇಂದ್ರ ಕ್ಷಯರೋಗ ನಿವಾರಣಾ ಸಂಸ್ಥೆಯ ನಾಲ್ಕನೇ ಟಿ. ಬಿ. ಸೀಲು ಮಾರಾಟ ಚಳವಳವು ಪ್ರಾರಂಭವಾಗಿದೆ. ಮುಂದಿನ ಜನವರಿ ೨೬ ರ ವರೆಗೆ ಇದು ನಡೆಯುವದು. ಈ ಅವಧಿಯಲ್ಲಿ ಪ್ರತಿಯೊಬ್ಬರೂ ಕೂಡ ಈ ಸೀಲುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಪಡಕೊಂಡು ಈ ಭಯಂಕರ ರೋಗದ ನಿವಾರಣೆಗೆ ಸಹಾಯ ಮಾಡಬೇಕಾಗಿದೆ.

ನಾವು ಅನೇಕ ಅನಾವಶ್ಯಕ ಖರ್ಚುಗಳನ್ನು ಮಾಡುತ್ತೇವೆ. ಬೀಡಿ, ಸಿಗರೇಟು, ಟೀ, ಸಿನೇಮಾಗಳೆಂದು ಬೇಕಾದಷ್ಟು ಖರ್ಚು ಮಾಡುತ್ತೇವೆ. ಅಂಥಾ ಹಣದಿಂದ ಈ ಟಿ. ಬಿ. ಸೀಲುಗಳನ್ನು ಕೊಂಡುಕೊಂಡದ್ದೇ ಆದರೆ ಈ ರೋಗವನ್ನು ತಡೆಗಟ್ಟಲೂ, ರೋಗದಿಂದ ನರಳುವ ಸಹೋದರರಿಗೆ ಸಹಾಯವನ್ನೀಡಲೂ ನೆರವಿತ್ತಂತಾಗುವದು.

ಕ್ಷಯರೋಗದ ನಿವಾರಣೆಗೆ ಈ ಒಂದು ಮುಖದ ಕೆಲಸ ನಡೆಸಿದರೆ ಸಾಲದು. ರೋಗವು ಬಾರದಂತೆ ತಡೆಗಟ್ಟುವ ನಿವಾರಣೋಪಾಯವೂ ನಡೆಯಬೇಕಾಗುವದು. ಈ ದೃಷ್ಟಿಯಿಂದ ಕೊಡಗಿನ ಸರಕಾರವು ಈ ತಿಂಗಳ ಪ್ರಥಮ ತಾರೀಖಿನಿಂದ ಕೊಡಗಿನಲ್ಲಿ ಬಿ ಸಿ ಜಿ. ಡಾಕು ಹಾಕುವ ಕೆಲಸವನ್ನು ಕೈಕೊಂಡು ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಕಾರ್ಯ ಪ್ರಾರಂಭವಾಗಿದೆ. ಕ್ಷಯರೋಗವು ಹೆಚ್ಚಾಗಿ ಯುವಕ ಯುವತಿಯರಿಗೇ ತಗಲುವ ಕಾರಣ ಅವರನ್ನು ರೋಗಮುಕ್ತರನ್ನಾಗಿ ಮಾಡಲು ಪ್ರಥಮತಃ ದೇಶದ ಮಕ್ಕಳಿಗೇ ಈ ಡಾಕನ್ನು ಹಾಕಲಾಗುವದು. ತಂದೆ ತಾಯಿಗಳು ಈ ಡಾಕು ಹಾಕುವದರ ಉಪಯುಕ್ತತೆಯನ್ನು ಮಕ್ಕಳಿಗೆ ವಿವರಿಸಿ ಪ್ರತಿ ಮಗುವೂ ಕ್ಷಯರೋಗದಿಂದ ರಕ್ಷಿಸಲ್ಪಡುವಂತೆ ನೋಡಬೇಕು.

ಬಿ. ಸಿ ಜಿ. ಡಾಕು ಹಾಕುವ ಕೆಲಸವು ಹಿಂದೂದೇಶದ ಇತರ ಭಾಗಗಳಲ್ಲಿ ಪ್ರಾರಂಭವಾಗಿ ಈಗಾಗಲೇ ಆರು ಮಿಲಿಯಕ್ಕೂ ಹೆಚ್ಚು ಡಾಕು ಹಾಕಲಾಗಿದೆ. ಕೊಡಗಿನಲ್ಲಿ ಈ ಕೆಲಸವು ಯಶಸ್ವಿಯಾಗಿ ನಡೆದು ಪ್ರತಿಯೊಬ್ಬರೂ ಕೂಡ ಭಯಂಕರ ಕ್ಷಯರೋಗದಿಂದ ಮುಕ್ತರಾಗುವಂತಾಗಲೀ ಎಂಬುದೇ ನಮ್ಮ ಹಾರೈಕೆ.

ವರ್ತಮಾನ

ಟೇಂವಂತ ಕೇಸ್ಮೆಟ್ ಹಾಕಿ ಸಂದ್ಯಾಪದ ಕಡೇ ಆಟವು ತಾ ೩೦ರಲ್ಲಿ ವೀರಾಜಪೇಟೆ ಹೈಸ್ಕೂಲ್ ಮೈದಾನದಲ್ಲಿ ಪೊಳ್ಳಬೆಟ್ಟದ ದಕ್ಷಿಣ ಕೊಡಗು ಎತ್ಲೆಟಿಕ್ ಯೂನಿಯನಿನ ಟೀಮಿಗೂ ಅಮ್ಮತಿಯ ಫ್ರೆಂಡ್ಸ್ ಇಲೆವೆನ್ ಟೀಮಿಗೂ ನಡೆದು ಯೂನಿಯನ್ ಟೀಮಿನವರು ಎರಡು ಗೋಲುಗಳಿಂದ ಜಯಶೀಲರಾದರು. ಗೆದ್ದವರಿಗೆ ಕೇಸ್ಮೆಟನ್ನೂ, ವ್ಯಕ್ತಿಗತ ಕಪ್ಪುಗಳನ್ನೂ ಮತ್ತು ಸೋತ ಟೀಮಿನವರಿಗೆ ಮೆಡಲುಗಳನ್ನೂ ಕೊಡಗಿನ ವಿದ್ಯಾಧಿಕಾರಿಗಳಾದ ಶ್ರೀ ಗಣೇಶರಾಯರು ಕೊಟ್ಟರು

ತಾ. ೧೮—೧೧—೫೩ ನೇ ದಿನ ಫ್ರೇಜರ್‌ಪೇಟೆ ಮಹಿಳಾ ಸಮಾಜ ಮತ್ತು ಶಿಬಿರದ ಸಭೆಯು ಶ್ರೀಮಾನ್ ಎಸ್. ಎನ್ ಲಕ್ಷ್ಮಣ ಶೆಟ್ಟರವರ ಅಧ್ಯಕ್ಷತೆಯಲ್ಲಿ ನಡೆಯಿತು. ಮಹಿಳಾಸಮಾಜದ ವಸಿಡೆಂಟರು ಶ್ರೀಮತಿ ಕುಟ್ಟಪ್ಪನವರು ಶಿಬಿಹಾರ ನಡೆಸಲು ಅವಶ್ಯ ಸಲಹೆ ಸಹಾಯ ಕುರಿತು ಮಾತಾಡಿದರು. ಶ್ರೀಗಳಾದ ಎಸ್. ಡಿ. ಜವರಪ್ಪ, ಕೆ. ರಾಮರಾವ್‌ರವರು ಸೂಕ್ತ ಸಲಹೆಗಳನ್ನಿತ್ತರು.

ತಾ. ೧೯—೧೧—೫೩ ರಲ್ಲಿ ಇಬ್ನಿವಳವಾಡಿ ಗ್ರಾಮದಲ್ಲಿ ನೀರು ಸರಬರಾಯಿ ಪಂಪಿನ ಆರಂಭೋತ್ಸವವು ಮುಖ್ಯ ಮಂತ್ರಿಯವರಿಂದ ನಡೆಯಿತು. ಈ ಸಂದರ್ಭದಲ್ಲಿ ಗೃಹಮಂತ್ರಿಗಳು ಮಾತಾಡುತ್ತಾ ಬೋಯಿಕೇರಿ ಶಾಲಾ ಕಟ್ಟಡವು ಚೆನ್ನಾಗಿಲ್ಲವೆಂಬ ನಾಡಿನವರ ಬಿನ್ನವತ್ತಳೆಗೆ ಉತ್ತರ ರೂಪವಾಗಿ ಈಗಾಗಲೇ ಶಾಲಾ ಕಟ್ಟಡಕ್ಕೆ ಸರಕಾರವು ರೂ. ೫೦೦೦ ಮಂಜೂರ್ಮಾಡಿರುವದೆಂದೂ ಅಲ್ಲಿಯ ಪ್ಲಾಂಟರಾದ ಶ್ರೀ. ಸಿ. ಎ. ನಂಜಪ್ಪನವರು ಉಳಿದ ರೂ. ೫೦೦೦ ಕೊಡಬೊಪ್ಪಿ ಶಾಲಾಕಟ್ಟಡದ ಸರ್ವ ಜವಾಬ್ದಾರಿಯನ್ನು ವಹಿಸಲಿರುವರೆಂಮೂ ಹೇಳಿದರು.

೧೯೪೯ ರಿಂದ ಡೇರಾಡೂನಿನ ಪ್ರಿನ್ಸ್ ಆಫ್ ವೇಲ್ಸ್ ಮಿಲಿಟರಿ ಕಾಲೇಜಿನಲ್ಲಿದ್ದ ಶ್ರೀ. ಬಲ್ಲಚಂಡ ಕೆ. ಚಂಗಪ್ಪನವರ ಪುತ್ರ ಬೆಳ್ಯಪ್ಪನವರು ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನಿನಲ್ಲಿ ತೇರ್ಗಡೆಯಾಗಿ ತಾ. ೧—೧—೫೪ ರಿಂದ ಜಾಯಿಂಟ್ ಸರ್ವಿಸ್ ವಿಂಗ್ ತರಬೇತಿಗೆ ಆರಿಸಲ್ಪಟ್ಟಿದ್ದಾರೆ.

ಮದ್ರಾಸು ವಿಶ್ವವಿದ್ಯಾಲಯದ ಬಿ. ಎ. ಪರೀಕ್ಷೆಯಲ್ಲಿ ಶ್ರೀ. ಕಾಡ್ಯಮಾಡ ಕೆ. ಮುತ್ತಣ್ಣ ಡಿ. ಸಿ. ಜಯರಾಮ್, ಮಲ್ಲಂಗಡ ಗಣಪತಿ, ಇವರುಗಳೂ, ಬಿ. ಕಾಂ. ಪರೀಕ್ಷೆಯಲ್ಲಿ ಶ್ರೀ. ಪಾರುವಂಗಡ ಕೆ. ಬೆಳ್ಯಪ್ಪನವರೂ ಮೈಸೂರು ವಿಶ್ವವಿದ್ಯಾಲಯದ ಬಿ. ಎಸ್‌ಸಿ. ಪರೀಕ್ಷೆಯಲ್ಲಿ ಶ್ರೀ. ಮೂಪಂಗಡ ಸೋಮಯ್ಯನವರೂ, ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ಶ್ರೀ. ಕೀತಿಯಂಡ ಎ. ಮುತ್ತಣ್ಣನವರೂ ತೇರ್ಗಡೆಯಾಗಿರುವರು.

ಐಮ್ಮಂಗೇರಿ ಗ್ರಾಮಸ್ಥರು ಸಮಾಜ ವಿಕಾಸ ಯೋಜನೆಯ ಅಂಗವಾಗಿ ನಾಪೋಕ್ಲಿನಿಂದ ಭಾಗಮಂಡಕ್ಕೆ ಹೋಗುವ ಹಳೇ ರಸ್ತೆಯನ್ನು ೨೫೦ ಜನ ಕೆಲಸದಿಂದ ದುರಸ್ತಿ ಮಾಡಿರುತ್ತಾರೆ. ಅಲ್ಲದೆ ಮಳೆಗಾಲದಲ್ಲಿ ಕಾವೇರಿ ನದಿಯ ನೀರಿನಿಂದ ಈ ರಸ್ತೆ ಉಪಯೋಗಕ್ಕೆ ಬಾರದ ಕಾರಣ ಗ್ರಾಮದ ಮಧ್ಯಕ್ಕಾಗಿ ೨೩೦ ಜನರ ಕೆಲಸದಿಂದ ಹೊಸ ರಸ್ತೆಯೊಂದನ್ನು ಮಾಡಲಾಗಿದೆ.

ಅಖಿಲ ಕೊಡಗು ಉಪಾಧ್ಯಾಯರ ೨೦ ನೇ ಸಮ್ಮೇಳನವು ಡಿಸೆಂಬರ್ ತಾ ೨೦ ನೇ ಆದಿತ್ಯವಾರ ಪೊನ್ನಂಪೇಟೆ ಶಾಲಾ ಆವರಣದಲ್ಲಿ ನಡೆಯುವದು. ಈ ಸಂಬಂಧ ಅದೇ ದಿನ ಬೆಳಿಗ್ಗೆ ಶಾಲಾ ಮಕ್ಕಳಿಗೂ ಸಾರ್ವಜನಿಕರಿಗೂ ಆಟೋಟಗಳ ಸ್ಪರ್ಧೆ ಇದೆ. ಅಲ್ಲದೆ ಚಿತ್ರ ಕೆಲಸ, ಕಾಗದ ಕತ್ತರಿಸಿ ಮಾಡಿದ ಕೆಲಸ, ಕೊಡೆ ಮಣ್ಣು, ಹಗ್ಗ, ವ್ಯವಸಾಯ ಉಪಕರಣಗಳು, ಡ್ರಾಯಿಂಗ್, ಕಸೂತಿ, ನೇಯಿಗೆ, ಶೀಟ್ ವರ್ಕ್ಸ್, ಎಂಬ್ರಾಯಿಡರಿ, ತರಕಾರಿ ವಸ್ತುಗಳ ಪ್ರದರ್ಶನವೂ ನಡೆಯುವದು.

ತಾ. ೧೮ ರಿಂದ ೨೩ ರ ವರೆಗೆ ಶನಿವಾರಸಂತೆ ಗುಡುಗಳಲೆ ಜಯದೇವ ಜಾನುವಾರುಗಳ ಜಾತ್ರೆಯೂ, ಬಸವೇಶ್ವರ ಉತ್ಸವವೂ ನಡೆಯುವದು. ಈ ಸಂಬಂಧ ಕುಶಲ ಕೈಗಾರಿಕೆ, ಕೃಷಿ, ಹಣ್ಣು ಹಂಪಲು ಮತ್ತು ಕೋಳಿಗಳ ಪ್ರದರ್ಶನಗಳಿವೆ.

ಬಾಡಗರಕೇರಿ ಗ್ರಾಮದ ಸುಮಾರು ೩೦೦ ಜನರು ಕಕ್ಕಟ್ಟುಹೊಳೆ ರಸ್ತೆಯನ್ನು ರಿಪೇರಿ ಮಾಡಿರುವದಲ್ಲದೆ ಬಾಡಗರಕೇರಿ ಶಾಲಾ ಆವರಣ ಮತ್ತು ಆಟದ ಮೈದಾನವನ್ನು ಸರಿಪಡಿಸಿರುವರು. ಅಲ್ಲದೆ ಶ್ರೀ. ಎ ಗಣಪತಿ ಮತ್ತು ಎಂ. ಎಂ. ಮಾತಯ್ಯನವರು ಸಾರ್ವಜನಿಕರ ದನಕರುಗಳ ಉಪಯೋಗಾರ್ಥವಾಗಿ ಸುಮಾರು ೩೦ ಅಡಿ ಉದ್ದ ೨೦ ಅಡಿ ಅಗಲದ ಕೆರೆ ತೆಗೆಸಿರುವರು.

ದೆಹಲಿಯ ಅಖಿಲ ಭಾರತ ಹಿಂದೀ ಪರಿಷತ್ತಿನ ಹಾಗೂ ಮದ್ರಾಸಿನ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಮೋ. ಸತ್ಯನಾರಾಯಣನವರ ಅಧ್ಯಕ್ಷತೆಯಲ್ಲಿ ತಾ. ೫ನೇ ಶನಿವಾರ ಅಪರಾಹ್ನ ೨-೩೦ಕ್ಕೆ ಅಖಿಲ ಕೊಡಗು ಹಿಂದೀ ಪ್ರಚಾರಕರ ಸಮ್ಮೇಳನವು ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಜರಗುವುದು. ಸರ್ವರಿಗೂ ಆಮಂತ್ರಣವಿದೆ.

ಖೋಟಾ ನಾಣ್ಯಗಳನ್ನು ತಯಾರು ಮಾಡುವ, ಖೋಟಾ ಕರೆನ್ಸಿ ನೋಟುಗಳನ್ನು ಅಚ್ಚು ಮಾಡುವ ಪ್ರಯತ್ನ ನಡೆಸಿದ್ದರೆಂಬ ತಕ್ಸೀರಿನ ಮೇರೆ ಶ್ರೀಗಳಾದ ಜೋಸೆಫ್, ಪಿ. ದೇವಯ್ಯ, ಎಂ. ಚಂಗಪ್ಪ ಮೊದಲಾದ ಆರು ಜನರನ್ನು ವೀರಾಜಪೇಟೆ ಪೋಲೀಸರು ದಸ್ತಗಿರಿ ಮಾಡಿರುವರು. ಮುಂದಿನ ತನಿಖೆ ನಡೆಯುತ್ತಿದೆಯೆಂದು ವರ್ತಮಾನ.

ಭಾಷಾವಾರು ಪ್ರಾಂತರಚನೆಯ ಬಗ್ಗೆ ಪರಿಶೀಲನೆ ನಡೆಸಿ ವರದಿ ಮಾಡಲು ಕೇಂದ್ರ ಸರಕಾರವು ಶೀಘ್ರದಲ್ಲಿ ನೇಮಿಸಲಿರುವ ಸಂಸ್ಥೆ ಸಮಿತಿಯ ಮುಂದೆ ಕರ್ನಾಟಕ ಪ್ರಾಂತ ರಚನೆಯ ಬಗ್ಗೆ ಪುರಾವೆಗಳನ್ನು ಕೊಡಲು ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಪ್ರೆಸಿಡೆಂಟರು ಇಡೀ ಕರ್ನಾಟಕಕ್ಕೆ ಆರು ಜನರ ಒಂದು ಸಮಿತಿಯನ್ನು ನೇಮಿಸಿರುವರು. ಅದರಲ್ಲಿ ಶ್ರೀ ಕೊಪ್ಪಮಾಡ ಕರುಂಬಯ್ಯನವರು ಒಬ್ಬರಾಗಿರುವರು.

ತಾ ೨೦ರಲ್ಲಿ ಕೊಡಗಿನ ಗೃಹಮಂತ್ರಿಯವರು ಕೊಡ್ಲಿಪೇಟೆಗೆ ಸಂದರ್ಶಿಸಿದ ಜ್ಞಾಪಕಾರ್ಥವಾಗಿ ಕೊಡ್ಲಿಪೇಟೆಯಲ್ಲಿ ಆಸ್ಪತ್ರೆಗೆ ಒಂದೊಂದು ಹೆರಿಗೆ ವಾರ್ಡುಗಳನ್ನು ಕಟ್ಟಲು ಶ್ರೀಗಳಾದ ಮರೂರು ಬಸಪ್ಪ, ಎಸ್. ಪಿ. ಸುಬ್ರಾಯ ಶೆಟ್ಟಿ, ಮಾವಿನಳ್ಳಿ ಸಿದ್ದಬಸಪ್ಪ, ಮರೂರು ಪುಟ್ಟನಂಜಪ್ಪ ಮತ್ತು ಶ್ರೀ ಮೊಯಿದಿನ್ ಬ್ಯಾರಿ ಇವರುಗಳು ಒಪ್ಪಿರುವರು.

ಕೊಡಗು ಕರ್ನಾಟಕ ಸಂಘದ ನಾಟಕ ಕಲಾವೃಂದದವರು ತಾ. ೭—೨—೫೪ರಲ್ಲಿ ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ಹಾಲಿನಲ್ಲಿ ಕೊಡಗಿನ ಮುಖ್ಯ ಮಂತ್ರಿಗಳ ಸಮ್ಮುಖದಲ್ಲಿ 'ಹಣಹದ್ದು' ಎಂಬ ನಾಟಕವನ್ನು ಅಭಿನಯಿಸುವರು.

ಕೊಡಗಿನಲ್ಲಿ ಕ್ಷಯ ರೋಗವು ಹೆಚ್ಚುತ್ತಿರುವದೆಂದು ಕಂಡು ಬಂದಿರುವದರಿಂದ ಹೊರಗಿನ ಪ್ರಾಂತಗಳಲ್ಲಿ ಮಾಡುತ್ತಿರುವಂತೆ ಚಿಕ್ಕ ಮಕ್ಕಳನ್ನು ಈ ರೋಗದಿಂದ ರಕ್ಷಿಸುವ ದೃಷ್ಟಿಯಿಂದ ಬಿ. ಸಿ. ಜಿ. ಡಾಕು ಹಾಕುವದನ್ನು ಕೊಡಗಿನಲ್ಲಿ, ಈ ತಾ. ೧ ರಿಂದ ಪ್ರಾರಂಭ ಮಾಡಲಾಗಿದೆ. ಪ್ರಥ

ಮತವಾಗಿ ಮಡಿಕೇರಿ ಹೈಸ್ಕೂಲು ವಿದ್ಯಾರ್ಥಿಗಳನ್ನು ಪರೀಕ್ಷಿಸಿ ದಾಖಲು ಹಾಕಲ್ಪಡುತ್ತಿದೆ.

ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪ, ಕಾರ್ಯದರ್ಶಿ ಶ್ರೀ ಗುದ್ಲೆಪ್ಪ ಹಳ್ಳಿಕೇರಿ, ಇವರುಗಳು ತಾ. ೬ರಲ್ಲಿ ವೀರಾಜಪೇಟೆಗೆ ಬರುವರೆಂದೂ ಎರಡು ದಿನಗಳ ವರೆಗೆ ಕೊಡಗಿನ ವಿವಿಧ ಭಾಗಗಳನ್ನು ಕಾಂಗ್ರೆಸ್ ಸಂಘಟನೆಯ ಕಾರ್ಯಕ್ಕಾಗಿ ಸುತ್ತುವರೆಂದೂ ತಿಳಿದು ಬರುತ್ತದೆ.

ಕೊಡಗಿನ ಚೀಫ್ ಕಮಿಷನರೂ ಗೃಹ ಮಂತ್ರಿಗಳೂ ತಾ. ೨ರಲ್ಲಿ ಡೆಲ್ಲಿಗೆ ಹೋಗಿರುವರು.

ಕೊಡಗಿನ ಚೀಫ್ ಕಮಿಷನರಾದ ಶ್ರೀ ಚೇತಿಯವರ ಅಧಿಕಾರಾವಧಿಯನ್ನು ತಾ. ೨೬—೧—೫೪ರಿಂದ ಒಂದು ವರ್ಷದ ವರೆಗೆ ಹೆಚ್ಚಿಸಿರುವದಾಗಿ ತಿಳಿಯಬರುತ್ತದೆ.

ಮಧ್ಯ ಪ್ರದೇಶ ಸರಕಾರದ ಎಕ್ಸ್‌ಟ್ರಾ ಅ. ಕಮಿಷನರಾದ ಶ್ರೀ ಎಸ್. ಎಸ್. ವರ್ಮಾರವರನ್ನು ಕೊಡಗಿನ ರೀಜನಲ್ ಸೆಟ್ಲ್‌ಮೆಂಟ್ ಕಮಿಷನರಾಗಿ ನೇಮಿಸಲಾಗಿದೆ. ಅವರ ಮುಖ್ಯ ಕಛೇರಿ ಬೊಂಬಾಯಿಯಲ್ಲಿರುವದು.

ಕೊಡಗನ್ನು ಮೂರು ತಾಲ್ಲೂಕುಗಳಾಗಿ ವಿಂಗಡಿಸಲಾಗಿದೆ. ಶನಿವಾರಸಂತೆ, ಫ್ರೇಜರ್‌ಪೇಟೆ, ಸೋಮವಾರಪೇಟೆ ಮತ್ತು ಸುಂಟಿಕೊಪ್ಪ ನಾಡುಗಳು ಸೋಮವಾರಪೇಟೆ ತಾಲೋಕಿಗೂ, ಪೊನ್ನಂಪೇಟೆ, ಅಮ್ಮತ್ತಿ, ವೀರಾಜಪೇಟೆ ಮತ್ತು ಶ್ರೀಮಂಗಲ ನಾಡುಗಳು ವೀರಾಜಪೇಟೆ ತಾಲೋಕಿಗೂ, ಮಡಿಕೇರಿ, ಭಾಗಮಂಡಲ ಮತ್ತು ನಾಪೋಕ್ಲು ನಾಡುಗಳು ಮಡಿಕೇರಿ ತಾಲ್ಲೋಕಿಗೂ ಸೇರುವವು.

ಇನ್ನು ಮುಂದೆ ವೀರಾಜಪೇಟೆ ಮತ್ತು ಮಡಿಕೇರಿ ಆಸ್ಪತ್ರೆಯ ಅ. ಸರ್ಜನರುಗಳನ್ನು 'ಸುಪರಿಂಟೆಂಡೆಂಟ್' ಎಂದು ಕರೆಯಲಾಗುವುದು. ಈ ಹುದ್ದೆಗಳನ್ನು ಗಜೆಟೆಡ್ ಮಾಡಿ ಮಾಸಿಕ ರೂ. ೨೬೦-೧೫-೪೫೦ ವೇತನ ದರ ನಿಶ್ಚಯಿಸಲಾಗಿದೆ.

ಕೊಡಗು ವೆಟರ್‌ನರಿ ಆಫೀಸರ ಹುದ್ದೆಯನ್ನು ಗಜೆಟೆಡ್ ಮಾಡಿ ಮಾಸಿಕ ರೂ. ೨೬೦-೧೫-೪೧೦-೨೦-೫೦೦ ದರದ ವೇತನ ನಿಶ್ಚಯಿಸಲಾಗಿದೆ.

ಕೊಡ್ಲಿಪೇಟೆ ನೋಟಿಫೈಡ್ ಏರಿಯದ ಉಪಾಧ್ಯಕ್ಷರಾಗಿ ಶ್ರೀ ಮರೂರು ಬಸಪ್ಪನವರನ್ನೂ, ಸೋಮವಾರಪೇಟೆ ನೋಟಿಫೈಡ್ ಏರಿಯಾದ ಪ್ರೆಸಿಡೆಂಟರಾಗಿ ಶ್ರೀ ಕೆ. ಮೊಗಪ್ಪನವರನ್ನೂ, ಉಪಾಧ್ಯಕ್ಷರಾಗಿ ಶ್ರೀ ಬಿ ಆದಿನಾರಾಯಣ ಶೆಟ್ಟಿಯವರನ್ನೂ ಆರಿಸಲಾಗಿದೆ.

ಕೊಡಗಿನ ದಳಿತ ವರ್ಗದವರ ಹಿತವನ್ನು ಕಾಯುವ ಮತ್ತು ಅವರ ಅಭಿವೃದ್ಧಿಗೆ ಸಲಹೆ ಕೊಡುವ ದೃಷ್ಟಿಯಿಂದ ಗೃಹ ಮಂತ್ರಿ, ಡೆವಲಪ್‌ಮೆಂಟ್ ಕಮಿಷನರ್, ಡೆಪ್ಯೂಟಿ ರಿಜಿಸ್ಟ್ರಾರ್, ದ್ವಿನಕಾಯ ಅಧಿಕಾರಿ, ಶ್ರೀಗಳಾದ ಪಿ. ಕೆ ಚೆನ್ನಯ್ಯ, ಕೆ. ಸಿ. ಕರಂಬಯ್ಯ, ಪಿ ಲಕ್ಕ, ಪಿ. ಬೆಳ್ಳಿ, ಜಿ. ಸುಬ್ಬಯ್ಯ, ಬಿ. ಕೆ. ಕಾಳ ಮತ್ತು ಪರಿಜನ ಸಂಜ ಇವರಿಂದ ಕೂಡಿದ ಒಂದು ಸಮಿತಿಯ ನೇಮಕ ಮಾಡಲಾಗಿದೆ.

॥ ಓದುಗರ ಓಲೆಗಳು ॥

ಗೋಣಿಕೊಪ್ಪ ಬ್ಯಾಂಕ್

ಬ್ಯಾಂಕಿನ ಮೆಂಬರರೆಂದು ನೀವು ತಾ. ೭—೧೧—೫೨ರ 'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸಿದ ಪತ್ರವನ್ನು ನೋಡಲಾಯ್ತು. ಇದರಲ್ಲಿ ನೀವು ಬರೆದಿರುವ ವಿಷಯವೆಲ್ಲಾ ನಿಜವಲ್ಲದ ಸಂಗತಿಯಾಗಿದೆ. ಖಾನೂನಿ ಸಂತೆ ಕ್ರಮ ಜರುಗಿಸಲು ಯಾವ ಮಿಲ್ಲು ಮಾಲೀಕನೂ ಖಾನೂನಿಗೆ ವಿರೋಧವಾಗಿ ನಡೆದಿರುವುದಿಲ್ಲ. ಬ್ಯಾಂಕಿಗೆ ಈಡಾಗಿ ಇಟ್ಟ ಬತ್ತವನ್ನು ಯಾವ ಮಿಲ್ಲು ಮಾಲೀಕನೂ ಗಲ್ಲಿ ಮಾಡಿರುವದಿಲ್ಲ. ನನಗೆ ಯಾರೂ ಪೋಲೀಸರಿಗೆ ಕೊಡಲು ಒತ್ತಾಯ ಮಾಡಿರುವದೂ ಇಲ್ಲ. ಮಿಲ್ಲು ಮಾಲೀಕರು ಪ್ರತೀ ವಾರವೂ ರೇಷನ್ ಡಿಪ್ರೋಕ್ಕೆ ಅಕ್ಕಿ ಸರಬರಾಯಿ ಮಾಡಲೇಬೇಕು. ಮಾಡುತ್ತಲೂ ಇದ್ದಾರೆ. ನೀವು ಯಾರೆಂದು ತಿಳಿದವರನ್ನು ಕೇಳುವ ಅವಶ್ಯಕತೆ ನನಗೆ ಇಲ್ಲ. ನೀವು ಯಾರೆಂದು ಖಾನೂನು ರೀತಿ ಕೇಳಿ ತಿಳಿದುಕೊಳ್ಳಲು ಪ್ರಯತ್ನ ಪಟ್ಟಿರುತ್ತೇನೆ. ನೀವೇ ಮುದ್ದಾಗಿ ಬಂದು ಪರಿಚಯ ಮಾಡಿ ಕೊಡಲು ಆಗದೆ ಇದ್ದವರು ನಿಮ್ಮನ್ನು ನೀವೇ ಒಳಗೆ ಇಟ್ಟುಕೊಂಡು ನಿಜವಲ್ಲದ ಸಂಗತಿಯನ್ನು ಪತ್ರಿಕೆಯಲ್ಲಿ ಪ್ರಕಟಿಸಲು ಕಾರಣವಿಲ್ಲ. ನನ್ನನ್ನು ಪ್ರೆಸಿಡೆಂಟರಾಗಿ ಆರಿಸಿದ್ದು ನೀವಲ್ಲ. ಬ್ಯಾಂಕಿನ ಡೈರೆಕ್ಟರುಗಳನ್ನು ಆರಿಸಲು ನಿಮ್ಮ ಒಂದು ವೋಟು ಇರಬಹುದು.

—ಕೆ. ಪಿ. ಗಣಪತಿ (ಪ್ರೆಸಿಡೆಂಟ್)

(ಈ ವಿಚಾರದಲ್ಲಿ ಮುಂದೆ ಪತ್ರವ್ಯವಹಾರಕ್ಕೆ ಎಡೆ ಕೊಡಲಾಗುವದಿಲ್ಲ—ಸಂ.)

ಕ್ಕೆ ಸಹಾಯವನ್ನು ಕೊಟ್ಟಿದ್ದರೂ ಬಡ ಗ್ರಾಮಸ್ಥರಿಂದ ವಿಶೂರು, ನಲ್ಲೂರು, ಮತ್ತು ಸುಳುಗೋಡಿನವರು ಸ್ಥಾಪಿಸಿದ ಪೊನ್ನಪ್ಪ ಸಂತೆಯ ಶಾಲೆಯು ಇನ್ನೂ ಸರಕಾರದ ಗಮನಕ್ಕೆ ಬಾರದಿರುವುದು ನಮ್ಮ ದುರಾದೃಷ್ಟವೇ ಸರಿ. ನಾಡಿನ ಎಂ. ಎಲ್. ಎ ರವರಿಂದ ಪ್ರಾರಂಭೋತ್ಸವವನ್ನು ಜರಗಿಸಿದ ಕಾಲದಲ್ಲಿ ಅವರು ಇತ್ತ ಭರವಸೆಯೂ ಮತ್ತು ಶಾಲಾ ಪರಿಶೋಧನೆ ಕಾಲದಲ್ಲಿ ಡೆಪ್ಯುಟಿ ಇನ್ಸ್‌ಪೆಕ್ಟರವರು ಇತ್ತ ಭರವಸೆಯೂ ಊರಿನ ಜನರಲ್ಲಿ ಹುರುಪನ್ನುಂಟುಮಾಡಿತ್ತು. ಆದರೆ ಕೊಡಗು ವಾರ್ತಾ ಸಂಗ್ರಹವನ್ನು ನೋಡಿದ ಕಾಲದಲ್ಲಿ ಆವೆಯೆಲ್ಲವೂ ನಿರಾಶೆಯಾಯಿತು. ಊರಿನ ಜನರು ಸ್ವಂತ ಕೆಲಸದಿಂದ ಶಾಲೆ ಕಟ್ಟಿಸಿರುತ್ತಾರೆ. ಊರಿನ ಯುವಕರು ಕಳೆದ ಆರು ತಿಂಗಳಿಂದ ಯಾವ ಪ್ರತಿಫಲದ ಆಸೆಯೂ ಇಲ್ಲದೆ ಶಾಲೆಯಲ್ಲಿ ದುಡಿಯುತಿದ್ದಾರೆ. ಮಕ್ಕಳ ಸಂಖ್ಯೆಯು ೫೦ ಕ್ಕೂ ಮಿಕ್ಕಿದೆ. ಘನ ಸರಕಾರವು ಇನ್ನಾದರೂ ಗಮನಿಸಿ ತಕ್ಕ ರಿಯಾಯಿತಿಯನ್ನು ಕೊಟ್ಟು ಜನರ ಹುರುಪಿಗೆ ಧಕ್ಕೆ ಬಾರದೆ ಪ್ರೋತ್ಸಾಹ ಕೊಡುವುದೇ!

ಊರ ಹಿತೈಷಿ.

ಬಾಲಕರು ಚಿನ್ನ; ಅಧ್ಯಾಪಕರು ಅಕ್ಕಸಾಲಿಗರು.

"ಬಾಲಕರು ಚಿನ್ನ, ಉಪಾಧ್ಯಾಯರು ಚಿನಿವಾರರು. ಈ ಚಿನ್ನವನ್ನು ಆ ಚಿನಿವಾರರಲ್ಲಿ ಭದ್ರತೆಗೊಪ್ಪಿಸಿರುವರು. ಅದನ್ನು ಜೋಪಾನವಾಗಿಡಿರಿ. ಒಂದು ಮಗುವಿನ ವಿಷಯದಲ್ಲಿ ಅಧ್ಯಾಪಕನು ನಡೆಕೊಳ್ಳುವ ರೀತಿಯಲ್ಲಿ ಕಿಂಚಿತ್ತಾದರೂ ಚ್ಯುತಿ ತೋರಿದರೆ ಒಬ್ಬನ ಅಥವಾ ಒಬ್ಬಳ ಇಡೀ ಜೀವಮಾನವೇ ಕೆಡಬಹುದು.

ಪ ಕ್ಷಿಗೆ ಹೊಡೆಯಬೇಡಿ; ಕಿವಿ ಹಿಂಡಬೇಡಿ; ಅಥವಾ ಇನ್ನಾವ ತರದಲ್ಲೂ ನೋಯಿಸದಿರಿ. ಅವರು ಕಲಿಯಬೇಕಾದುದನ್ನು ಅವರ ಬಾಯಿಂದ ಚಲೋದಾಗಿ ಹೊರಗೆ ಬರುವಂತೆ ಮಾಡಿರಿ. ಬಾಲಕರು ಎಳೆಯ ಸಸಿಗಳು. ಹೊಡೆದು ಬೆಳೆಸಲಾಗದು".

* * * * *

"ಅಧ್ಯಾಪಕರಿಗೆ ದೊರೆವ ಸಂಬಳ ಬಹು ಕಡಿಮೆ. ನಮ್ಮ ನಾಡಿನಲ್ಲಿ ಪ್ರಾಮುಖ್ಯ ಕೆಲಸಗಳನ್ನು ಮಾಡುವವರಿಗೆಲ್ಲ ಹಾಗೆ. ಅತಿಕ್ರಮದ ಕೆಲಸ ಮಾಡುವ ಪಟೇಲರು ಮತ್ತು ಶ್ಯಾನುಭೋಗರ ವಿಷಯ ನೋಡಿರಿ........ಆದರೆ, ಅಧ್ಯಾಪಕರೂ ಗ್ರಾಮ ಪಟೇಲರೇ ಮೊದಲಾದವರೂ ಲಕ್ಷಾಂತರ ಮಂದಿ ಇದ್ದಾರೆ. ಒಬ್ಬೊಬ್ಬರಿಗೆ ಎರಡೆರಡು ರೂಪಾಯಿಗಳಂತೆ ಭಡತಿ ಕೊಟ್ಟರೂ ಕೋಟಿ ಗಟ್ಟಲೆ ಹಣ ಬೇಕಾಗುವುದು. ಈ ಕಷ್ಟಗಳಿಲ್ಲದಿದ್ದರೆ—ನಿಮಗೆ ಈಗಿನ ಎರಡು ಪಾಲನ್ನು ಸಲಬೇಕು—ಎಂಬುದನ್ನು ತಿಳಿದ ನಾನು, ಅದನ್ನು ಕೊಡಿಸುತಿದ್ದೆ".

— ರಾಜಾಜಿ. (ಪ್ರ)

ಕಾಂಗ್ರೆಸ್ ಸರಕಾರವು ಕೊಡಗಿನಲ್ಲಿ ನಿಷಾನಿಷೇಧವನ್ನು ಏತಕ್ಕೆ ಜಾರಿಮಾಡಕೂಡದು.

ಮೊನ್ನೆ ತಾನೇ ಬಂದು ಹೋದ ಇಂಡಿಯಾದ ಗೃಹಮಂತ್ರಿಗಳಾದ ಡಾಕ್ಟರ್ ಕೈಲಾಸನಾಥ ಕಟ್ಜುರವರು, ಚೀಫ್ ಕಮಿಷನರ ಪ್ರಾಂತ್ಯಗಳಲ್ಲಿ ಕೊಡಗು ದೇಶದ ಆಡಳಿತ ಕ್ರಮವು ಮಾದರಿಯಾಗಿದೆಯೆಂದೂ, ಹೊಗಳಲು ಅರ್ಹವಾಗಿದೆಯೆಂದೂ ಮೊದಲಾಗಿ ಮಂತ್ರಿಮಂಡಲವನ್ನು ಹೊಗಳಿ ಹೋದರು. ನಮ್ಮ ಇಬ್ಬರು ಯುವಕ ಮಂತ್ರಿಗಳು ಬಹಳ ದೃಷ್ಟಿಯಿಂದಲೂ ಪಕ್ಷಪ್ರಾಮಾಣಿಕತೆಯಿಂದಲೂ ಕೆಲಸ ಮಾಡುತ್ತಿರುವುದು ದೇಶದವರಿಗೆ ತಿಳಿಯದ ವಿಷಯವಲ್ಲ. ಆದರೆ ನಿಶಾನಿಷೇಧದ ವಿಷಯ ಇಂಡಿಯನ್ ಕಾಂಗ್ರೆಸ್ ಸರಕಾರವು ಮಾಡಿದ್ದೇನು? ಮದ್ರಾಸು ಮತ್ತು ಬೊಂಬಾಯಿಗಳಲ್ಲಿ ಪೂರ್ತಿಯಾಗಿಯೂ ಮತ್ತಿತರನೇಕ ಪ್ರಾಂತ್ಯಗಳಲ್ಲಿ ಸ್ವಲ್ಪ ಪಾಗಿಯೂ ನಿಷಾನಿಶೇಧವನ್ನು ಜಾರಿಗೆ ತಂದಿರುವಾಗ ನಮ್ಮ ಸರಕಾರವು ಎದ್ದೇಳಬೇಕಾದ್ದು ಅತ್ಯಾವಶ್ಯ. ಕೊಡಗಿನಲ್ಲಿ ಇದನ್ನು ಪೂರ್ತಿಯಾಗಿ ಜಾರಿಗೆ ತಂದು ಕೊಡಗನ್ನು ಏತಕ್ಕೆ ಮಾದರಿಯನ್ನಾಗಿ ಮಾಡಕೂಡದು?

ಒಂದು ವೇಳೆ ಉತ್ಪತ್ತಿ ಕಡಿಮೆಯಾಗುತ್ತದೆಂದು ಇವರ ಅಭಿಪ್ರಾಯವಾಗಿರಬಹುದು. ಜನರನ್ನು ಹಾಳುಮಾಡಿ, ಸಂಸಾರವನ್ನು ಛಿನ್ನಭಿನ್ನವಾಗಿ ಮಾಡಿ ದೇಶಕ್ಕೆ ಮಹಾಅಪರಾಧವನ್ನುಂಟುಮಾಡುವಂತ ಈ ಉತ್ಪತ್ತಿಯನ್ನು ಪೂಜ್ಯ ಮಹಾತ್ಮ ಗಾಂಧಿಯವರು ಎಷ್ಟರ ಮಟ್ಟಿಗೆ ಖಂಡಿಸಿರುತ್ತಾರೆಂಬುದೂ, ಅವರ ಬಲಗೈಯಂತಿರುವ ಶ್ರೀ. ರಾಜಾಜಿಯವರು ಆಗಾಗ್ಗೆ ಈ ವಿಷಯದಲ್ಲಿ ಮಾತಾಡುತ್ತಿರುವುದನ್ನೂ ಪತ್ರಿಕೆಯನ್ನು ಓದುವವರು ತಿಳಿದಿರುವರು. ಮಹಾತ್ಮರು, ಈ ವಿಷಯ ಹೇಳಿದನ್ನು ಎಲ್ಲರೂ ಚೆನ್ನಾಗಿ ಪರ್ಯಾಲೋಚಿಸಬೇಕಾಗಿದೆ "ಇಂಡಿಯಾದಲ್ಲಿ ನಿಷಾನಿಶೇಧವನ್ನು ಒತ್ತಾಯದಲ್ಲಿ ಜಾರಿಗೆ ತರಕೂಡದೆಂದೂ, ಮದ್ಯಪಾನಿಗಳಿಗೆ ಕುಡಿಯಲಿಕ್ಕೆ ಎಲ್ಲಿಲೂ ತಕ್ಕ ಅನುಕೂಲ ಕಲ್ಪಿಸಬೇಕೆಂದೂ ವಾದಿಸುವವರ ವಾದಕ್ಕೆ ಮೋಸಹೋಗಬೇಡಿರಿ. ಯಾವ ಸರಕಾರವೇ ಆಗಲಿ ಜನರನ್ನು ದುರ್ಮಾರ್ಗಕ್ಕೆ ಇಳಿಸಕೂಡದು. ಸೂಳೆಗಾರಿಕೆಗೂ, ಕಳ್ಳತನಕ್ಕೂ ಪ್ರೋತ್ಸಾಹ ಕೊಡುವುದು ಯಾವ ಸರಕಾರದ ನೀತಿಯಾಗಿರಕೂಡದು. ಕುಡುಕ ತನವು ಕಳ್ಳತನ ಮತ್ತು ಸೂಳೆಗಾರಿಕೆಗಿಂತ ನಿಂದ್ಯವಾದ ಅಸಹ್ಯವಾದ ಮತ್ತು ಪಾಪದ ಕೆಲಸವೆಂದು ಖಂಡಿತ ಹೇಳುತ್ತೇನೆ. ಕುಡುಕತನವೇ ಹೆಚ್ಚಾಗಿ ಸೂಳೆಗಾರಿಕೆ ಮತ್ತು ಕಳ್ಳತನಕ್ಕೆ ಪೋಷಕವಾಗಿದೆ."

ಈ ಮೇಲೆ ಹೇಳಿರುವ ಬಾಪೂಜೀಯವರ ವಾಕ್ಯಗಳು ವೇದವಾಕ್ಯಗಳಲ್ಲವೇ! ನಮ್ಮ ಸರಕಾರವು ಈ ಮೇಲಿನ ವಿಷಯಗಳನ್ನು ಹಸ್ತಪತ್ರಿಕೆಯ ಮೂಲಕ ನೀಡದಿಲ್ಲಾ ಏತಕ್ಕಾಗಿ ಹಂಚಕೂಡದು? ತೋಟದಲ್ಲಿರುವ ಕೂಲಿಕಾರರು ಸೇಂದಿ ಅಂಗಡಿಗಳಿಗೆ ತಮ್ಮ ಸಂಪಾದನೆಯ ಅರ್ಧ ಭಾಗವನ್ನು ವೆಚ್ಚಮಾಡುತ್ತಿರುವುದು, ಅನೇಕ ಗ್ರಾಮಸ್ಥರು ಸೇಂದಿ ಅಂಗಡಿಗಳಲ್ಲಿಯೇ ತಮ್ಮ ಕಾಲವನ್ನು ಕಳೆದು ಸಂಸಾರಗಳ ಹಾಳುಮಾಡುತ್ತಿರುವುದೂ, ಪಟ್ಟಣಿಗರು ಹೆಚ್ಚಾಗಿ ಕುಡಿಯುತ್ತಿರುವುದು, ನಮ್ಮ ಸರಕಾರದ ಅವಗಾಹನೆಗೆ ಬಂದಿರಬಹುದಲ್ಲವೇ?

ಸರಕಾರದವರು ನಿಶಾನಿಷೇಧ ಜಾರಿಗೆ ತರಲಿಕ್ಕೆ ಹಣದ ಅಡಚಣೆಯೊಂದು ಹೇಳಬಹುದು. ಆದರೆ ಮದರಾಸು ಪ್ರಾಂತದ ಉದಾಹರಣೆ ತೆಗೆದು ಕೊಂಡು ನೂರಾರು ಕಂದಾಯ ಏತಕ್ಕೆ ಹಾಕಬಾರದು? ರಾಜಾಜಿಯಂತ ರಾಜಕೀಯ ಶ್ರೇಷ್ಠ ನೇತಾರರುಗಳೂ ಮತ್ತು ರಾಜಕಾರಣ ಪಟುಗಳೂ

ಸರಕಾರದ ದೃಷ್ಟಿ ಬತ್ತಬೇಕು.

ಪ್ರಜಾ ಸರಕಾರವು ವಿದ್ಯಾಭ್ಯಾಸದ ಏಳಿಗೆಗಾಗಿ ಪ್ರತೀ ಗ್ರಾಮದಲ್ಲಿಯೂ ಫೀಡರ್ ಸ್ಕೂಲ್‌ಗಳನ್ನು ಸ್ಥಾಪಿಸಿರುವುದು ಶ್ಲಾಘನೀಯ. ಒಂದೇ ಸಮಯದಲ್ಲಿ ಸ್ಥಾಪಿಸಿದ ಅನೇಕ ಫೀಡರ್ ಸ್ಕೂಲುಗಳನ್ನು ಸರಕಾರವು ಗಮನಿಸಿ ತ

ದ ಭಾರತದೇಶದಲ್ಲಿ ಯಾರಿದ್ದಾರೆ? ಅವರಷ್ಟು ಧೈರ್ಯದಿಂದ ಕೆಲಸ ಮಾಡುವವರು ನಮ್ಮಲ್ಲಿ ಯಾರೂ ಇಲ್ಲ. ಕುಡುಕತನವೆಂಬ ಮಹಾ ಮಾರಿಯಿಂದ ಪಾರುಮಾಡಿ ಜನರ ಆರ್ಥಿಕ ಮತ್ತು ಮಾನಸಿಕ ಸುಧಾರಣೆಯನ್ನು ಮಾಡುವಷ್ಟು ಪುಣ್ಯವು ಯಾವುದಗಳಿದೆ? ನಮ್ಮಲ್ಲಿ ಹೆಚ್ಚಾಗಿ ವಿದ್ಯಾವಂತರು ಮತ್ತು ಅನುಕೂಲವಂತರು ಮಾತ್ರ ನಿಶಾನಿಷೇದವನ್ನು ಟೀಕಿಸುವವರಾಗಿದೆ. ಯಾವುದನ್ನೂ ಒತ್ತಾಯದಲ್ಲಿ ಜಾರಿಗೆ ತರಕೂಡದೆಂದೂ ಉತ್ಪತ್ತಿಯು ಕಡಿಮೆಯಾಗುತ್ತಿದೆಯೆಂದೂ ಕಳ್ಳಬಟ್ಟಿ ಸಾರಾಯಿ ಮಾರಾಟವು ಹೆಚ್ಚಾಗುತ್ತದೆಂದೂ ಹೇಳುವದು ಇವರಲ್ಲಿ ಸ್ವಾಭಾವಿಕವಾಗಿದೆ. ಇದಕ್ಕೆ ಕಾಂಗ್ರೆಸು ಮುಂದಾಳುಗಳು ಆಗಾಗ್ಗೆ ತಕ್ಕ ಜವಾಬು ಕೊಡುತ್ತಲೇ ಇದ್ದಾರೆ. ಇಡೀ ಜಗತ್ತೇ ಮಹಾ ಪುರುಷರೆಂದು ಹೇಳಿದ ಮಹಾತ್ಮ ಗಾಂಧಿಯವರ ಅಮರವಾಣಿಯೇ ನಿಶಾನಿಷೇದದ ವಿಷಯ ಏನು ಹೇಳಿರುತ್ತಾರೆಂಬುದನ್ನು ನಾವೆಲ್ಲರೂ ತಿಳಿದು ಅದರಂತೆ ವರ್ತಿಸಬೇಕಾಗಿದೆ

ಕಳ್ಳಬಟ್ಟಿ ಸಾರಾಯಿ ಇಳಿಸುವದು ಯಾವಾಗಲೂ ಇಡೀ ಹಿಂದೂದೇಶದಲ್ಲಿ ಮೊದಲೇ ಇದ್ದವೊಂದು ವ್ಯಾಪಾರವಾಗಿದೆ. ಕಳ್ಳತನ, ದರೋಡೆ, ವ್ಯಭಿಚಾರದಂತೆ ಈ ಕಳ್ಳಬಟ್ಟಿ ಸಾರಾಯಿ ಇಳಿಸುವದು ಕೆಲವರ ವೃತ್ತಿಯಾಗಿದೆ. ಆದ್ದರಿಂದ ನಿಶಾನಿಷೇದ ಮಾಡಿದಾಕ್ಷಣ ಕಳ್ಳಬಟ್ಟಿ ಸಾರಾಯಿವು ಹೆಚ್ಚಾಗುತ್ತದೆಂಬುದಕ್ಕೆ ಅರ್ಥವಿಲ್ಲ. ಇದಕ್ಕೆ ಕೆಲವರು ಅಮೇರಿಕಾದಲ್ಲಿ ಮೊದಲು ನಿಶಾನಿಷೇದ ಮಾಡಿ ಜಯಪ್ರದವಾಗಲಿಲ್ಲವೆಂಬ ಸಲಹೆಯನ್ನು ಹೆಚ್ಚಾಗಿ ಕೊಡುತ್ತಾರೆ. ಈ ವಿಷಯ ಅಮೇರಿಕದ ಪ್ರಸಿದ್ಧ ನಿಷೇದ ಸಂಘದ ಕೆಲಸಗಾರರಾದ ಮೆ. ಓಲ್‌ಸನ್ ಎಂಬವರು ಈ ರೀತಿ ಹೇಳಿದ್ದಾರೆ. "ನಮ್ಮಲ್ಲಿ ನಿಶಾನಿಷೇಧವಿದ್ದಾಗ ಇದರಿಂದಲೇ ಕಳ್ಳಬಟ್ಟಿ ಸಾರಾಯಿ ಹೆಚ್ಚಾಗಿ ದೇಶವೇ ಹಾಳಾಯಿತೆಂದೂ ಕೊಲೆ, ಕೊಳ್ಳೆ ದರೋಡೆ ಹೆಚ್ಚಾಯಿತೆಂದೂ ಅನೇಕರು ವಾದಿಸುತ್ತಿದ್ದರು. ಆದರೆ ನಿಶಾನಿಷೇದವನ್ನು ತೆಗೆದು ಹಾಕಿದ ಕೂಡಲೇ ಸರಕಾರದ ಒಂದು ಡಿಸ್ಟಿಲರಿಗೆ ಬದಲಾಗಿ (ಸಾರಾಯಿ ಇಳಿಸುವ ಕಾರ್ಖಾನೆ) ಒಂದು ನೂರಕ್ಕಿಂತಾ ಹೆಚ್ಚಾಗಿ ಕಳ್ಳಬಟ್ಟಿ ಸಾರಾಯಿ ಇಳಿಸುವ ಕಾರ್ಖಾನೆಗಳಾದುವೆಂದೂ ದಿನಂಪ್ರತಿ ಸಾವಿರಾರು ದಸ್ತಗಿರಿಗಳೂ ಕೇಸುಗಳೂ ಆಗುತ್ತಿದ್ದವೆಂದೂ ಹೇಳಿರುತ್ತಾರೆ.

ಆದ್ದರಿಂದ ಕುಡುಕತನವನ್ನು ಹೆಚ್ಚಿಸುವವರ ಮಾತಿಗೆ ಮರುಳಾಗದೆ ನಮ್ಮ ಕಾಂಗ್ರೆಸ್ ಸರಕಾರವು ಕೂಡಲೇ ನಿಶಾನಿಷೇಧವನ್ನು ಸಂಪೂರ್ಣವಾಗಿ ಜಾರಿಗೆ ತರುವರೆಂದು ನಂಬಿದ್ದೇನೆ.

ಕೆ. ಪಿ. ಚೆಂಗಪ್ಪ.

ಚಿಕ್ಕ ಕಥೆಗಳ ಸ್ಪರ್ಧೆ

ದಿ|| ಗೌರಮ್ಮ ಸ್ಮಾರಕ ಸಮಿತಿ

ಮಡಿಕೇರಿ.

ಸುಪ್ರಸಿದ್ಧ ಕತೆಗಾರ್ತಿ ದಿವಂಗತ ಗೌರಮ್ಮ (ಮಿಸೆಸ್ ಬಿ. ಟಿ. ಜಿ. ಕೃಷ್ಣ) ನವರ ಜ್ಞಾಪಕಾರ್ಥವಾಗಿ ಮೇಲಿನ ಸಮಿತಿಯು ಹಿಂದಿನ ವರ್ಷದಂತೆ ಈ ವರ್ಷವೂ ಒಂದು ಕಥಾಸ್ಪರ್ಧೆಯನ್ನೇರ್ಪಡಿಸಿದೆ. ಈ ಸ್ಪರ್ಧೆಗೆ ಕನ್ನಡ ನಾಡಿನ ಎಲ್ಲಾ ಭಾಗಗಳಿಂದ ಕಥೆಗಾರರು ತಮ್ಮ ಕಥೆಗಳನ್ನು ಕಳುಹಿಸಬಹುದು.

ಸ್ಪರ್ಧೆಗಾಗಿ ಮೂರು ಬಹುಮಾನಗಳಿಡಲ್ಪಟ್ಟಿವೆ. ಮೊದಲನೇ ಬಹುಮಾನವು ರೂ. ೨೦, ಎರಡನೇ ಬಹುಮಾನವು ರೂ. ೧೦, ಮೂರನೇ ಬಹುಮಾನವು ರೂ. ೧೦ ಬೆಲೆಯುಳ್ಳ ಕನ್ನಡ ಪುಸ್ತಕಗಳು (ಒಂದು ಬಹುಮಾನ ಸ್ತ್ರೀಯರಿಗಾಗಿ ಮೀಸಲಾಗಿಡಲಾಗಿದೆ).

ಬಹುಮಾನವನ್ನು ಪಡೆದ ಕಥೆಗಳು ಸಮಿತಿಯವರ ಸ್ವತ್ತಾಗುವುದು. ಮೂವರು ಪ್ರಸಿದ್ಧ ಸಾಹಿತಿಗಳಿಂದ ಕೂಡಿದ ಮಂಡಲಿಯೊಂದು ಈ ಕಥೆಗಳನ್ನು ಪರಿಶೀಲಿಸುವುದು.

ಕಥೆಗಳು ಚಿಕ್ಕದಾಗಿದ್ದು ಪೂಲ್ಸ್‌ಕೇಪ್ ಕಾಗದದ ಎಂಟು ಪುಟಗಳನ್ನು ಮೀರಕೂಡದು. ಕಾಗದದ ಒಂದೇ ಪಕ್ಕದಲ್ಲಿ ಬರೆದು ಕಳುಹಿಸಬೇಕು. ಸ್ಪರ್ಧೆಗೆ ಬಂದ ಕಥೆಗಳ ಪ್ರತಿಗಳನ್ನು ಹಿಂದಕ್ಕೆ ಕಳುಹಿಸಲಾಗುವುದಿಲ್ಲ. ಫಲಿತಾಂಶಗಳನ್ನು ಬಹುಮಾನ ಪಡೆದವರಿಗೆ ಮಾತ್ರ ಕಳುಹಿಸಲಾಗುವುದು. ಉತ್ತರ ಬಯಸತಕ್ಕವರು ಪ್ರತ್ಯೇಕ ಸ್ಟಾಂಪುಗಳನ್ನು ಕಳುಹಿಸಬೇಕು.

ಕಥೆಗಳು ಸ್ವತಂತ್ರವಾಗಿದ್ದು ಇದುವರೆಗೆ ಎಲ್ಲೂ ಪ್ರಕಟವಾಗಿರಕೂಡದು. ಪರಿಶೀಲಕರ ಮತ್ತು ಸಮಿತಿಯವರ ತೀರ್ಮಾನವೇ ಕಡೆಯದು. ಸಮಿತಿಯವರ ಅಭಿಪ್ರಾಯದಲ್ಲಿ ಕಥೆಗಳು ಬಹುಮಾನ ಪಡೆಯಲು ಅನರ್ಹವಾಗಿದ್ದಲ್ಲಿ ಬಹುಮಾನ ಕೊಡುವುದನ್ನು ನಿಲ್ಲಿಸಲಾಗುವುದು.

ಕಥೆಗಳು ಸಮಿತಿಯ ಕಛೇರಿಗೆ ೧೯೫೩ನೇ ಜನವರಿ ತಿಂಗಳ ಅಂತ್ಯದೊಳಗಾಗಿ ತಲಪಬೇಕು. ಕಥೆ ಬರೆದ ಕಾಗದದ ಯಾವ ಭಾಗದಲ್ಲೂ ಹೆಸರುಗಳಾಗಲೀ ಗುರುತುಗಳಾಗಲೀ ಇರಕೂಡದು. ಪ್ರತ್ಯೇಕ ಕಾಗದದಲ್ಲಿ ಹೆಸರು ವಿಳಾಸಗಳನ್ನು ಕಳುಹಿಸಬೇಕು. ಹೆಚ್ಚಿನ ಮಾಹಿತಿಗಳನ್ನು ಅಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಗೌರಮ್ಮ ಸ್ಮಾರಕ ಸಮಿತಿ.
C/o ಕಾವೇರಿ ಪ್ರಕಟಣಾಲಯ
ಮಡಿಕೇರಿ, ಕೊಡಗು.

ದಿ ಕೆನರಾ ಬ್ಯಾಂಕಿಂಗ್ ಕೆರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ ಭಾರತ)

ಆರ್ಥಿಕ ಉಳಿತಾಯ ಯೋಜನೆಗಳಲ್ಲಿ "ಕ್ಯುಮುಲೇಟಿವ್ ಡಿಪೋಜಿಟ್" ಯೋಜನೆಯು ಅತಿ ಪರಿಣಾಮಕಾರಿ ಹಾಗೂ ಅನುಕೂಲವಾದುದು. ಯಾವುದಾದರೊಂದು ನಿರ್ದಿಷ್ಟ ಉದ್ದೇಶ ಸಾಧನೆಗೆ, ನಿಯಮಿತ ಕಾಲಕ್ಕೆ ನಿಯಮಿತ ಹಣವನ್ನು ಒಂದು ನಿಯಮಿತ ಅವಧಿಯೊಳಗೆ ಬಡ್ಡಿಯೊಂದಿಗೆ ವಾಪಾಸು ಸಿಗುವಂತೆ ಬ್ಯಾಂಕಿನಲ್ಲಿ ಶೇಖರಿಸಿಡುವುದೇ ಈ ಯೋಜನೆಯ ಮೂಲ ತತ್ವ. ಇದು ಮುಖ್ಯವಾಗಿ ಮಧ್ಯಮ ತರಗತಿಯ ಜನರಿಗೆ ಇಲ್ಲವೆ ನಿಯಮಿತ ಸಂಬಳದ ನೌಕರರಿಗೆ ತಮ್ಮ ಮುದ್ದು ಮಕ್ಕಳ ವಿದ್ಯಾಭ್ಯಾಸ, ಮುಂಜಿ, ಮದುವೆ ಯಾ ಇನ್ನಿತರ ಸದುದ್ದೇಶ ಸಾಧನೆಗಳಿಗೆ ಅತ್ಯನುಕೂಲ ಹಾಗೂ ಅತಿ ಫಲಕಾರೀ ಯೋಜನೆ.

ವಿಶೇಷ ಮಾಹಿತಿಗೆ, ಕೊಡಗು ಸಂಸ್ಥಾನದಲ್ಲಿನ ಈ ಕೆಳಗಣ ನಮ್ಮ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ :

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

THE CANARA BANKING CORPORATION LIMITED.

Estd: 1906] *[H. O, Udipi (S. India)*

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,61,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	16,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಖಾಲ್ತಿ ಠೇವಣಾತಿ ಶೇಕಡ (Current Deposits)	ರೂ.	0-8-0
ಸೇವಿಂಗ್ಸ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	3-4-0
1 ವರುಷದಿಂದ 5 ವರ್ಷಗಳ ವರೆಗೆ	,,	4-4-0
5 ವರುಷ ಮತ್ತು ಮೇಲ್ಪಟ್ಟ ಅವಧಿಗೆ	,,	4-12-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಬೆಳ್ಳಿಯ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ. ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ & ಖಜಾಂಚಿ.

ಮಂಗಳೂರು ಕೊಡಗು ಸಂಘ

ತಾ. ೨೩ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕೊಡಗು ಸಂಘದವರು ಹುತ್ತರಿ ದಿನಾಚರಣೆಯನ್ನು ಆಚರಿಸಿ ೫೨—೫೩ಕ್ಕೆ ಅಧ್ಯಕ್ಷರನ್ನಾಗಿ ಶ್ರೀ ರಮಣಯ್ಯನವರನ್ನೂ ಉಪಾಧ್ಯಕ್ಷರನ್ನಾಗಿ ಶ್ರೀ ಬೊಪ್ಪೇರಿಯಂಡ ಕಾರ್‍ಯಪ್ಪನವರನ್ನೂ ಸ್ಪೋರ್ಟ್ಸ್ ಸಕ್ರೆಟರಿಯವರನ್ನಾಗಿ ಶ್ರೀ ಸೋಮೆಯಂಡ ಬಿ. ಪೂವಯ್ಯನವರನ್ನೂ ಕಾರ್‍ಯದರ್ಶಿಯಾಗಿ ಶ್ರೀ ಎಂ. ಎ. ಬೆಳ್ಯಪ್ಪ, ಉಪ ಕಾರ್‍ಯದರ್ಶಿಯಾಗಿ ಶ್ರೀ ಕೆ. ಎಸ್. ನಾಣಯ್ಯ ಮತ್ತು ಕಮಿಟಿ ಮೆಂಬರುಗಳನ್ನಾಗಿ ಶ್ರೀಗಳಾದ ಕೆ. ಕೆ. ಚಂಗಪ್ಪ, ಎ. ಪಿ. ಪೂವಯ್ಯ, ಶ್ರೀಮತಿ ಮಡಿಕೇರಿಯಂಡ ಸುಬ್ಬಯ್ಯ, ಎ. ಎಂ. ಪೊನ್ನಪ್ಪ ಮತ್ತು ಕಾಳಪ್ಪನವರನ್ನೂ ಟ್ರೆಜರರಾಗಿ ಶ್ರೀ ಕೆ. ಪಿ. ಉತ್ತಯ್ಯನವರನ್ನೂ ಆರಿಸಲಾಯಿತು. ಶ್ರೀಗಳಾದ ಸೋಮೆಯಂಡ ಪೂವಯ್ಯ, ಕೆ. ಎಸ್. ನಾಣಯ್ಯ, ಐ. ಎಸ್. ಕಾಶಿ, ಕೆ. ಎಸ್. ಚಂಗಪ್ಪ ಮತ್ತು ಯಂ. ಬೋಜಣ್ಣ ಇವರುಗಳನ್ನು ಸ್ಪೋರ್ಟ್ಸ್ ಕಮಿಟಿ ಮೆಂಬರುಗಳನ್ನಾಗಿ ಚುನಾಯಿಸಿ ಎಲಿಸನ್ ಫರ್ನಾಂಡೀಸ್ ಹಾಕಿ ಶೀಲ್ಡಿನ ಹಾಕಿ ಪಂದ್ಯಾಟವನ್ನು ಬರುವ ಜನವರಿ ಅಂತ್ಯದಲ್ಲಿ ನಡೆಸುವದಾಗಿ ಏರ್ಪಡಿಸಲಾಯಿತು.

ಹಡಗಿನ ಕಪ್ತಾನ— ಕೆಳಗೆ ಯಾರಲ್ಲಿ?

ಒಂದನೆ ಹುಡುಗ— ರಘು ಸಾರ್.

ಕಪ್ತಾನ— ಏನು ಮಾಡುತ್ತಿರುವೆ?

ಒಂದನೇ ಹುಡುಗ— ಏನೂ ಇಲ್ಲ, ಸಾರ್.

ಕಪ್ತಾನ— ಮಧು ಇರುವನೆ?

ಮಧು— ಹೌದು ಸಾರ್, ಇದ್ದೇನೆ.

ಕಪ್ತಾನ್— ಏನು ಮಾಡುತ್ತಿರುವೆ?

ಮಧು— ರಘುವಿಗೆ ಸಹಾಯ ಮಾಡುತ್ತಿದ್ದೇನೆ.



ಬೇಟೆಗಾರನೂ ಪಕ್ಷಿಗಳೂ.

ದಕ್ಷಿಣ ದೇಶದಲ್ಲಿ ಮನಾನಂದವೆಂಬ ನಗರವಿತ್ತು. ಆ ನಗರದ ಹತ್ತಿರ ಒಂದು ದೊಡ್ಡ ಆಲದ ಮರವಿತ್ತು. ಆ ಮರವು ಬಹು ದೊಡ್ಡದಾಗಿ ಅನೇಕ ಕೊಂಬೆ, ಬೇರುಗಳಿಂದ ಕೂಡಿ ವಿಶಾಲವಾಗಿ ಬೆಳೆದಿತ್ತು. ಆ ಆಲದ ಮರದಲ್ಲಿ ಅನೇಕ ಮೃಗ, ಪಕ್ಷಿಗಳು ಜೀವಿಸುತ್ತಿದ್ದವು. ಯಾಕೆಂದರೆ ಯಾವ ಮರದ ವಿವಿಧ ಭಾಗಗಳು ವಿವಿಧ ಪ್ರಾಣಿ ಪಕ್ಷಿಗಳಿಗೆ ಸಂತೋಷವನ್ನೂ, ಆಶ್ರಯವನ್ನೂ ಕೊಡುವವೋ ಅಂಥಾ ಮರಗಳು ಪೂಜಾರ್ಹವಾದವು. ಆದರಿಂದಲೇ ಆಲದ ಮರವು ಪೂಜಿಸಲ್ಪಡುತ್ತವೆ. ಆ ಮರದ ಕೊಂಬೆಗಳಲ್ಲಿ ಪಕ್ಷಿಗಳು ಜೀವಿಸುತ್ತಿದ್ದರೆ ನೆರಳಿನಲ್ಲಿ ಜಿಂಕೆ ಮೊಲಾದುವು ಆನಂದದಿಂದ ವಿಹರಿಸುತ್ತಿದ್ದವು. ಜೇನು ಹುಳುಗಳು ಮರದಲ್ಲಿ ಗೂಡುಕಟ್ಟಿದ್ದವು. ಕೋತಿಗಳು ಮನೆ ಮಾಡಿಕೊಂಡಿದ್ದವು. ಅದರ ಬುಡವೂ ಕೂಡ ವಿವಿಧ ಪ್ರಾಣಿಗಳಿಗೆ ಆಶ್ರಯವಾಗಿತ್ತು.

ಈ ಆಲದ ಮರದಲ್ಲಿ ಒಂದು ಕಾಗೆಯೂ ಜೀವಿಸುತ್ತಿತ್ತು. ಒಂದು ದಿನ ಬೆಳಿಗ್ಗೆ ಅದು ಹತ್ತಿರದ ಪಟ್ಟಣಕ್ಕೆ ತನ್ನ ಆಹಾರಕ್ಕಾಗಿ ಹೊರಟಿತು. ಹೊರಡುವ ಸಮಯಕ್ಕೆ ಪಕ್ಕದಲ್ಲೇ ಬೇಟೆಗಾರನೊಬ್ಬನು ಆ ಆಲದ ಮರದಲ್ಲಿಯ ಪಕ್ಷಿಗಳನ್ನು ಹಿಡಿಯಲು ಬಲೆ ಒಡ್ಡುತ್ತಿದ್ದುದನ್ನು ಕಂಡಿತು. ಆತನು ಭಯಂಕರ ವ್ಯಕ್ತಿಯಾಗಿದ್ದನು. ಚಪ್ಪಟೆ ಕೈ, ಕಾಲುಗಳುಳ್ಳ ಕುರೂಪಿಯಾದ ಕೆಂಪು ಕಣ್ಣುಗಳ ಆ ಮನುಷ್ಯನು ಬಹು ಕ್ರೂರನಂತೆ ತೋರುತ್ತಿದ್ದನು. ಆತನ ಕೈಯಲ್ಲಿ ಬಲೆ. ಒಂದು ದೊಣ್ಣೆ ಜೊತೆಯಲ್ಲಿ ಬೇಟೆಯ ನಾಯಿಗಳನ್ನು ಕೂಡಿಕೊಂಡಿದ್ದನು. ಹೆಚ್ಚೇಕೆ ಆತನು ನಿಜವಾಗಿಯೂ ಮೃತ್ಯುವಿನ ಪ್ರತಿನಿಧಿಯಂತಿದ್ದನು.

ಕಾಗೆಯು ಆತನನ್ನು ಕಂಡು ಗಾಬರಿಗೊಂಡಿತು. ಅದರ ಮನಸ್ಸಿನಲ್ಲಿ ನಾನಾ ಯೋಚನೆ ಹುಟ್ಟಿತು. ಆ ಮಾರಿಯನ್ನು ಎವೆಯಿಕ್ಕದೆ ನೋಡಿತು. ಕಡೆಗೆ ಆ ಬೇಟೆಗಾರನನ್ನು ಹಿಂಬಾಲಿಸಿತು.

ಬೇಟೆಗಾರನು ಒಂದು ಸ್ಥಳ ಗೊತ್ತುಮಾಡಿ ಅಲ್ಲಿ ಧಾನ್ಯವನ್ನು ಚೆಲ್ಲಿದನು. ಆ ಧಾನ್ಯದ ಮೇಲೆ ತನ್ನ ಬಲೆಯನ್ನು ಹಾಸಿದನು. ಹಾಗೆ ಮಾಡಿ ಹತ್ತಿರದ ಮರದ ಮರೆಯಲ್ಲಿ ಅವಿತುಕೊಂಡನು. ಆದರೆ ಕಾಗೆಯು ಈ ಬೇಟೆಗಾರನ ಹೊಂಚನ್ನು ಎಲ್ಲಾ ಪಕ್ಷಿಗಳಿಗೂ ಹೇಳಿದ ಕಾರಣ ಯಾವ ಪಕ್ಷಿಯೂ ಧಾನ್ಯಗಳಿಗಾಗಿ ಹೊರಗೆ ಬರಲಿಲ್ಲ.

ಅಷ್ಟರಲ್ಲಿ ಪಾರಿವಾಳವೊಂದು ತನ್ನ ಗುಂಪಿನೊಡನೆ ಹಾರುತ್ತಾ ಬಂದು ನೆಲದಲ್ಲಿ ಹರಡಿ ಬಿದ್ದಿರುವ ಧಾನ್ಯವನ್ನು ಕಂಡಿತು. ಕಾಗೆಯು ಆ ಧಾನ್ಯಕ್ಕೆ ಎರಗಿದರೆ ಗಂಡಾಂತರವಿದೆಯೆಂದು ಹೇಳಿದರೂ ಹಸಿವಿನಿಂದ ಬಳಲಿದ ಪಾರಿವಾಳಗಳ ಗುಂಪು ಧಾನ್ಯದ ಮೇಲೆ ಎರಗಿ ಬೇಟೆಗಾರನ ಬಲೆಯಲ್ಲಿ ಸಿಕ್ಕಿದವು.

ಎಷ್ಟೇ ಬುದ್ಧಿವಂತರಾದರೂ ಗಂಡಾಂತರಕ್ಕೆ ಸಿಲುಕದೆ ಇರಲು ಸಾಧ್ಯವಿಲ್ಲ. ದುರಾದೃಷ್ಟ ತಲೆಗೇರಿದಾಗಲೇ ಇಷ್ವಾಕ್ವರ ದಂಪತಿಯನ್ನು ಕದ್ದೊಯ್ಯಲು ರಾವಣನು ತಯಾರಾದುದು. ಆ ಕಾರಣವಾಗಿಯೇ ರಾಮನು ಮಾಯಾ ಮೃಗದಿಂದ ವಂಚಿತನಾದನು. ಯುಧಿಷ್ಠಿರನು ದ್ಯೂತದಲ್ಲಿ ಮಗ್ನನಾದನು, ಅದೃಷ್ಟ ಕೆಡುವಾಗ ಬುದ್ಧಿ ಕೆಡುತ್ತದೆ.

ಬಲೆಯಲ್ಲಿ ಹಲವಾರು ಪಕ್ಷಿಗಳು ಸಿಕ್ಕಿದುದನ್ನು ಕಂಡು ಬೇಟೆಗಾರನು ಸಂತೋಷದಿಂದ ತನ್ನ ದೊಣ್ಣೆಯನ್ನು ಹಿಡಿದು ಓಡಿದನು. ಅದನ್ನು ಕಂಡ ಪಾರಿವಾಳಗಳ ರಾಜನಿಗೆ ಗಂಡಾಂತರದ ಅರಿವಾಯಿತು. ಆತನು ಬುದ್ಧಿಶಾಲಿಯಾಗಿದ್ದನು. ಎಂಥಾ ಗಂಡಾಂತರದಲ್ಲೂ ಒಗ್ಗಟ್ಟಿದ್ದರೆ ಪಾರಾಗಬಹುದೆಂದು ಅದಕ್ಕೆ ತಿಳಿದಿತ್ತು. ಆದ್ದರಿಂದ ಎಲ್ಲಾ ಪಾರಿವಾಳಗಳೂ ಒಂದಾಗಿ ಆ ಬಲೆಯನ್ನು ಎತ್ತಿಕೊಂಡು ಆಕಾಶದಲ್ಲಿ ಹಾರಬೇಕೆಂದು ಆಜ್ಞೆಯಿತ್ತಿತು. ಅದರಂತೆ ಎಲ್ಲಾ ಪಾರಿವಾಳಗಳು ಬಲೆಯನ್ನು ಎತ್ತಿಕೊಂಡು ಆಕಾಶದಲ್ಲಿ ಹಾರಿದವು. ಒಗ್ಗಟ್ಟಿನಲ್ಲಿ ಶಕ್ತಿ ಇದೆ. ಒಗ್ಗಟ್ಟಿದ್ದರೆ ಮೃತ್ಯುವನ್ನೂ ಗೆಲ್ಲಬಹುದೆಂದು ಪಾರಿವಾಳಗಳಿಗೆ ತಿಳಿಯಿತು. ಆಗ ಪಾರಿವಾಳಗಳ ರಾಜನು ತನ್ನ ಜೊತೆಗಾರರನ್ನು ಅವರ ಐಕ್ಯ ಪ್ರಯತ್ನಕ್ಕೆ ವಂದಿಸುತ್ತಾ “ಅನೈಕ್ಯತೆ ಇದ್ದರೆ ಮೃತ್ಯು ನಿಶ್ಚಿತವೆಂಬುದನ್ನು ಗಂಡಬೇರುಂಡ ಪಕ್ಷಿಯಿಂದ ಕಲಿಯಬೇಕು, ಒಂದು ಹೊಟ್ಟೆಯು ಎರಡು ತಲೆಯ ಆ ಪಕ್ಷಿಯು ವಿವಿಧ ಆಹಾರ ತೆಗೆದುಕೊಂಡು ಗಂಡಾಂತರಕ್ಕೀಡಾಯಿತು” ಎನ್ನಲು ಅದು ಹೇಗೆಂದು ಉಳಿದ ಪಕ್ಷಿಗಳು ಕೇಳಿದ ಕಾರಣ ಪಾರಿವಾಳಗಳ ರಾಜನು ಮುಂದಿನ ವಾರ ಗಂಡಭೇರುಂಡ ಪಕ್ಷಿಯ ಕತೆ ಹೇಳುವುದು.

ಮಚ್ಚರ ಪಟ್ಟಿ

ತಮ್ಮನಿಗೆ ಉಪದೇಶ.

ಸೆಂಟು ಪರಿಮಳದಿಂದ
ಮಂಕು ಮಾಡುತಲಿರುವ
ಸೊಂಕು ನಡತೆಯ ಹೊಂದಿ ಕರಬೀಸುತ
ಅಂಕೆಯಿಲ್ಲದ ತೆರದಿ
ಬಿಂಕ ಕಡುಸಿಂಗರದ
ಮಂಕು ಮಾರಿಯ ನೀನು ತರಬಹುದೆ ತಮ್ಮಾ? ॥೧॥

ರೂಪಲಾವಣ್ಯಕ್ಕೆ
ಸ್ನೋ ಪೌಡರನು ಹಚ್ಚಿ
ರೂಪವತಿಯೆಂದು ಹಿರಿಹಿಗ್ಗಿ ಮೆರೆವ
ರೂಪವತಿಯೆಂದವಳ
ಕೈ ಹಿಡಿದೆಯಾದೊಡೆಲೆ
ಕೂಪದಲ್ಲಿ ಬಿದ್ದಂತೆ ತಿಳಿ ನೀನು ತಮ್ಮಾ ॥೨॥

ಗಲ್ಲದಲಿ ಧರಿಸಿರುವ
ಥಳ ಥಳಿಪ ಮಾಲೆಯನು
ಜಲಜ ರೂಪದ ಜಡೆಯ ಬಿಲ್ಲೆಗಳನು
ಕುಲ ಸಿರಿಯ ಆಸೆಯಲಿ
ಛಲ ಬಲವ ಮರೆತು ನೀ
ಒಲುಮೆಯಿಂದೊರೆವರದು ಹಾನಿ ತಮ್ಮಾ ॥೩॥

ಕಷ್ಟದಲಿ ಅಳುಕದಳ
ಸುಖ ದಿನದಿ ಹಿಗ್ಗದಳ
ಅನವರತ ನಗುಮೊಗದ ರೀತಿಯವಳ
ಮನವೊಪ್ಪಿ ಶಿರಬಾಗಿ
ಕರೆತಂದು ಕರಹಿಡಿದು
ಕಮಲಾಕ್ಷ ಭಕುತಿಯಲ್ಲಿ ಬಾಳು ತಮ್ಮಾ ॥೪॥

—ಶ್ರೀ ಬಿ. ಜಿ. ಎಸ್. ಶಾಸ್ತ್ರಿ.

ಶನಿವಾರಸಂತೆಗೆ
‘ಕೊಡಗು’ ಏಜೆಂಟರು,
ಶ್ರೀ ಎಸ್. ಎಸ್. ಸಿದ್ದಪ್ಪನವರು

ನಾಪೋಕ್ಲಿಗೆ
“ಕೊಡಗು” ಪತ್ರಿಕೆಯ ಏಜೆಂಟರು
ಸಹಕಾರಿ ಸ್ಟೋರ್ಸ್ ಮ್ಯಾನೇಜರ್.

॥ ನಗು ಮಲ್ಲಿಗೆ ॥

ಆತ– ನಿನ್ನನ್ನು ನೋಡುವಾಗ ನನಗೆ ಗಣೇಶನ ಜ್ಞಾಪಕವಾಗುತ್ತದೆ.

ಈತ– ಏಕೆ? ನಾನು ಗಣೇಶನನ್ನು ಸ್ವಲ್ಪವೂ ಹೋಲುವದಿಲ್ಲವಲ್ಲಾ!

ಆತ– ನಿನ್ನ ಹಾಗೆಯೇ ಆತನೂ ನನ್ನಿಂದ ರೂ. ೧೦೦ ಸಾಲ ತೆಗೆದುಕೊಂಡಿದ್ದಾನೆ.

* * *

"ನೀನು ನಿನ್ನೆ ತೆಗೆದುಕೊಂಡ ಗಡಿಯಾರ ಚೆನ್ನಾಗಿ ನಡೆಯುತ್ತಿದೆಯೇ?" ರಾಮು ತನ್ನ ಗೆಳೆಯನಾದ ಗೋವಿಂದನನ್ನು ಕೇಳಿದನು.

ಗೋವಿಂದ– ಬಹು ಚೆನ್ನಾಗಿ ನಡೆಯುತ್ತದೆ. ಒಂದು ಗಂಟೆಯನ್ನು ಅದು ೫೦ ನಿಮಿಷಗಳಲ್ಲಿ ಮುಗಿಸುತ್ತದೆ.

* * *

"ಇಂದು ನಾನು ಒಳ್ಳೆಯ ಕೆಲಸವೊಂದನ್ನು ಮಾಡಿದೆ. ಅದರಿಂದ ಕಡಿಮೆ ೨೦೦ ಜನರಾದರೂ ಸಂತೋಷಗೊಂಡು ಹೊಟ್ಟೆ ತುಂಬಾ ನಗಾಡಿದರು" ಚರ್ಚ್ ಗುರುಗಳ ಮುಂದೆ ತನ್ನ ತಪ್ಪುಗಳನ್ನು ಹೇಳಿಕೊಳ್ಳುತ್ತಾ ಪೀಟರನೆಂದ.

"ಏನದು ಒಳ್ಳೆಯ ಕೆಲಸ?" ಪಾದ್ರಿಯು ಕೇಳಿದನು.

"ಗಾಳಿಗೆ ನನ್ನ ಟೊಪ್ಪಿಯು ಹಾರಿ ಹೋಗಲು ಅದನ್ನು ಹಿಂಬಾಲಿಸಿ ಬೀದಿಯಲ್ಲಿ ನಾನು ಓಡಿದೆ." ಪೀಟರನ ಉತ್ತರ.

* * *

ಒಂದು ಹೊಸ ಪುಸ್ತಕದ ವಿಚಾರದಲ್ಲಿ ಇಬ್ಬರಿಗೆ ತುಂಬಾ ಚರ್ಚೆ ನಡೆದಿತ್ತು. ಅದರಲ್ಲಿ ಪುಸ್ತಕ ಬರೆಯುವ ಅಭ್ಯಾಸವಿರುವವನು ಹೇಳಿದನು, "ಇಲ್ಲ ಗೆಳೆಯಾ, ನೀನು ಈ ಪುಸ್ತಕದ ಒಳಿತು ಕೆಡುಕುಗಳನ್ನು ಅಳೆದು ಹೇಳಲಾರೆ. ಏಕೆಂದರೆ ನೀನು ಎಂದೂ ಪುಸ್ತಕ ಬರೆದವನೇ ಅಲ್ಲ."

"ಇಲ್ಲ" ಈತನು ಉತ್ತರಿಸಿದ. "ನಾನು ನನ್ನ ಜೀವನದಲ್ಲಿ ಮೊಟ್ಟೆ ಇಟ್ಟವನೇ ಅಲ್ಲ ಆದರೆ 'ಆಮ್ಲೆಟ್' ಹೇಗಿದೆ ಎಂದು ಹೇಂಟೆಗಿಂಥಾ ನನಗೆ ಹೆಚ್ಚಿನ ಅನುಭವವಿದೆ.

* * *

ಬಸ್ಸು ಕಂಪೆನಿಯ ಡೈರೆಕ್ಟರರು–"ರೈತರೊಬ್ಬರು ಕಂಪೆನಿಯ ಮೇಲೆ ನಷ್ಟಕ್ಕೆ ದಾವೆ ಹಾಕಿದ್ದಾರೆ"

ಮತ್ತೊಬ್ಬರು– ಏನು ಬಸ್ಸು ರೈತನ ದನಗಳನ್ನೆಲ್ಲವನ್ನೂ ಕೊಂದಿತೇ?

ಡೈರೆಕ್ಟರು– ಅಲ್ಲ; ನಮ್ಮ ಬಸ್ಸುಗಳು ಅತೀ ನಿಧಾನವಾಗಿ ಓಡುವದರಿಂದ ಬಸ್ಸಿನಲ್ಲಿಯ ಪ್ರಯಾಣಿಕರು ಯಾವಾಗಲೂ ರಸ್ತೆಯ ಕರೆಯಲ್ಲಿ ಹೋಗುವ ರೈತನ ಹಸುಗಳ ಹಾಲನ್ನು ಕರೆದುಕೊಂಡು ಆತನಿಗೆ ನಷ್ಟಮಾಡುತ್ತಾರಂತೆ!

* * *

ಕಿಟ್ಟು ಅಂಗಡಿಯವನನ್ನು ಕರೆದು "ಅಯ್ಯಾ ಇಡೀ ದಿನ ಬಾಯಲ್ಲಿಟ್ಟು ಆನಂದ ಪಡ ಬಹುದಾದ 'ಲೋಲಿ ಪಪ್ಸ್' ಕೊಡು."

ಅಂಗಡಿಯವನು ಚಿಕ್ಕದೊಂದನ್ನು ಕೊಟ್ಟನು. ಕಿಟ್ಟುವು ಅದನ್ನು ತೆಗೆದುಕೊಂಡು "ಇದೇಕೆ ಚಿಕ್ಕದಾಗಿದೆ. ಹಿಂದಿನವುಗಳು ದೊಡ್ಡದಾಗಿರುತ್ತಿದ್ದವು?"

ಅಂಗಡಿಯವ–ಈಗ ಹಿಂದಿನಂತೆ ಅಲ್ಲ. ಹಗಲುಗಳು ರಾತ್ರಿಗಳಿಗಿಂಥಾ ಚಿಕ್ಕವು.

* * *

ಪಾದ್ರಿ– ನಾನು ಹೇಳಿದಂತೆ ಮಾಡುತ್ತಿಲ್ಲವೆಂದು ಮೇಲಿನ ಗುರುಗಳಿಗೆ ನೀನು ಪುಕಾರು ಕೊಡಬಹುದೇ?

ಶಿಷ್ಯ– ಕೊಡದೆ ಏನು? ಈಗಲೂ ಅದೇ ಮಾತನ್ನು ಹೇಳುತ್ತೇನೆ.

ಪಾದ್ರಿ–ನಾನು ೨೦ ವರ್ಷಗಳಿಂದ ನಿಷ್ಠೆಯಿಂದ ಸೇವೆ ಮಾಡಿದರೂ ಹಾಗೆ ಹೇಳಲು ಕಾರಣವೇನು?

ಶಿಷ್ಯ–ನೀವು ನಿಮ್ಮ ಕೆಲಸಕ್ಕೆ ರಾಜಿನಾಮೆ ಕೊಡುವಿರೆಂದು ಮೂರು ವರ್ಷಗಳಿಂದ ಹೇಳುತಿದ್ದರೂ ಇನ್ನೂ ರಾಜಿನಾಮೆ ಕೊಟ್ಟಿರುವಿರಾ?

* * *

ಕ್ರಮಶಃ ಕಿವುಡನಾಗುತ್ತಿರುವನೊಬ್ಬನಿಗೆ ಕೆಲವೇ ಸಮಯದಲ್ಲಿ ತಾನು ಪೂರ್ಣ ಕಿವುಡನಾಗುವೆನೆಂಬ ಹೆದರಿಕೆ ಹುಟ್ಟಿತ್ತು. ಒಂದು ದಿನ ಪಾರ್ಕಿನ ಬೆಂಚೊಂದರ ಮೇಲೆ ಆತನು ಕೂತಿದ್ದನು. ಅದೇ ಬೆಂಚಿನಲ್ಲಿ ಮತ್ತೊಬ್ಬರು ಕೂತಿದ್ದರು. ಅವರು ಮಾತಾಡುತ್ತಿರುವಂತೆ ತೋರಿದರೂ ನಮ್ಮ ಕಿವುಡನಿಗೆ ಈ ಒಂದೇ ಶಬ್ದ ಕೇಳಿಸಲಿಲ್ಲ ಕೆಲಸಮಯದ ನಂತರ ಇವರು ಹೇಳಿದರು 'ನಾನು ಕಿವುಡನಾಗಿರುವೆನು. ನೀವು ಇಷ್ಟು ಮಾತಾಡಿದರೂ ನನಗೆ ಒಂದು ಶಬ್ದವೂ ಕೇಳಿಸಲಿಲ್ಲ, ಕ್ಷಮಿಸಿ'

ಮತ್ತೊಬ್ಬರು ನಗುತ್ತಾ ಹೇಳಿದರು, 'ನಾನು ಮಾತಾಡುತ್ತಿರಲಿಲ್ಲ. ಎಲೆಅಡಿಕೆ ಜಗಿಯುತಿದ್ದೆ ಅಷ್ಟೆ!

* * *

ರಸ್ತೆಯ ನಿಯಮಗಳಿಗೆ ವಿರುದ್ಧ ಕಾರು ಚಲಾಯಿಸುತ್ತಿದ್ದ ಯುವತಿಯನ್ನು ಪೋಲೀಸನು ತಡೆದು ನಿಲ್ಲಿಸಿ 'ನಾನು ಏಕೆ ಕಾರು ನಿಲ್ಲಿಸಿದೆಯೆಂದು ತಿಳಿಯಿತೆ?' ಎಂದು ಕೇಳಿದನು.

ಯುವತಿಯು ಸುತ್ತು ಮುತ್ತು ನೋಡಿ ನಗುತ್ತಾ, 'ಹೌದು, ನೀನು ಏಕಾಂಗಿಯಾಗಿ ನಿಂತು ಬೇಸರ ಬಂದಿರಬೇಕು'

* * *

ಒಬ್ಬ ಹುಡುಗನು ಸಾಮಾನ್ಯ ನಾಯಿಯೊಂದರೊಡನೆ ಆಡುತಿದ್ದನು. ಆದರೆ ಆ ನಾಯಿಯ ಬಗ್ಗೆ, ಅವನ ಅಭಿಮಾನ ಹೇಳತೀರದು.

ದಾರಿ ಹೋಕರೊಬ್ಬರು ಹುಡುಗನನ್ನು ಕುರಿತು 'ಅದು ಎಂಥಾ ನಾಯಿ?' ಎಂದು ಕೇಳಿದರು.

ಹುಡುಗ–ಅದು ಪೋಲೀಸ್ ನಾಯಿ.

ದಾರಿಹೋಕ-ಹಾಗೆ ಅದು ತೋರುತ್ತಿಲ್ಲವಲ್ಲಾ?

ಹುಡುಗ–ಅದು ಸಿ. ಐ. ಡಿ. ಇಲಾಖೆಯಲ್ಲಿರುವಂಥಾದ್ದು. ಆದ್ದರಿಂದ ಸಮವಸ್ತ್ರವಿಲ್ಲ!

———

ಪುಸ್ತಕ ವಿಮರ್ಶೆ

ಕಂಬನಿಯ ಕುಯಿಲು—– ಲೇಖಕ:–ತ. ರಾ. ಸು., ಪ್ರಕಾಶಕರು ವಿದ್ಯಾನಿಧಿ ಪ್ರಕಾಶನ, ಬೆಂಗಳೂರು, ಪುಟಗಳು ೩೦೮, ಬೆಲೆ ೧–೮–೦.

ಇದೊಂದು ಐತಿಹಾಸಿಕ ಕಾದಂಬರಿ ಗಂಡು ಸಂತಾನವಿಲ್ಲದೆ ನಿಧನರಾದ ಚಿತ್ರದುರ್ಗದ ಪಾಳೆಯಗಾರ ಮದಕರಿನಾಯಕರ ನಂತರ ಸಿಂಹಾಸನಕ್ಕೆ ನಡೆದ ಹೋರಾಟದ ಕಥಾವಸ್ತುವನ್ನು ಲೇಖಕರು ಬಳಸಿಕೊಂಡು ಕಾದಂಬರಿಯೊಂದನ್ನು ಹೊಸೆದಿದ್ದಾರೆ.

ಸವತಿಯರಾದರೂ ಗೌರವ್ವ, ಓಬವ್ವರೊಳಗಿನ ಪ್ರೀತಿ, ಆದರ್ಶ ಸಹೋದರರಾದರೂ ಕಸ್ತೂರಿನಾಯಕ ವೀರಣ್ಣನವರೊಳಗಿನ ಪರಸ್ಪರ ವಿರುದ್ಧ ಸ್ವಾಮಿಭಕ್ತಿ, ಪ್ರೇಮಕ್ಕಿಂಥಲೂ ಕರ್ತವ್ಯವನ್ನು ಮಿಗಿಲಾಗಿ ಕಂಡ ಗಿರಿಜೆ, ಕುಟುಂಬದ ಪ್ರತಿ ನಿಮಿಷವನ್ನೂ ಸುಧಾಮಯವಾಗಿ ಮಾರ್ಪಡಿಸುವ ಗೃಹಿಣಿ ಗಂಗವ್ವ, ಕುಟಿಲ ರಾಜಕೀಯದ ಮೂರ್ತಿರೂಪ ಚಿಕ್ಕಣ್ಣ, ಮತ್ತು ಮುದ್ದಣ್ಣ, ಜ್ಞಾನವೃದ್ಧನಾದ ಭುವನಪ್ಪನಾಯಕ, ಚಿಕ್ಕಮ್ಮನ ಮಾತಿಗೆ ಸಿಂಹಾಸನ ತೊರೆದು ಆಕೆಯ ಇಚ್ಛೆಯ ಓಬಣ್ಣನಿಗೆ ಪಟ್ಟಕಟ್ಟಲು ಸಿದ್ಧನಾದ ತ್ಯಾಗಿ ಲಿಂಗಣ್ಣನಾಯಕ ಹೀಗೆ ಹಲವಾರು ಪಾತ್ರಗಳು ಪುಸ್ತಕವನ್ನು ಓದಿ ಮುಗಿಸಿದ ಮೇಲೆಯೂ ಓದುಗರ ಮನದಲ್ಲಿ ಹಲವು ಸಮಯದ ವರೆಗೆ ಸುಳಿಯುತ್ತಿರುವವರಲ್ಲಿ ಸಂಶಯವಿಲ್ಲ.

ಕನ್ನಡ ಸಾಹಿತ್ಯದೇವಿಯ ಪದಕಮಲದಲ್ಲಿ ಈ ಮೊದಲೇ ಹಂಸಗೀತೆ, ರಕ್ತತರ್ಪಣ, ಬಿಡುಗಡೆಯ ಬೇಡಿ, ನೃಪತುಂಗ ಮೊದಲಾದ ಕಾದಂಬರಿಗಳನ್ನು ಅರ್ಪಿಸಿ ಖ್ಯಾತಿಯನ್ನು ಪಡೆದ ತ. ರಾ. ಸು. ಅವರ ಕಂಬನಿಯ ಕುಯಿಲು ಉತ್ತಮವಾದೊಂದು ಕಾದಂಬರಿ ಎನ್ನಬಹುದು. ಕಾದಂಬರಿಯ ಶೈಲಿ ಚೆನ್ನಾಗಿದೆ. ಅಲ್ಲಲ್ಲಿ ಜಾಣ್ಣುಡಿಗಳಿಂದೊಡಗೂಡಿದ ಭಾಷೆ ಓದುಗನ ಆಸಕ್ತಿಯನ್ನು ಹಿಡಿದಿರಿಸಿ ಕಡೆಯ ವರೆಗೂ ಸಾಗುತ್ತದೆ.

ಕಾದಂಬರಿಯು ಕೇವಲ ಸಮಾಜದಯೂ ಐತಿಹಾಸಿಕ ಘಟನೆಯ ಒಂದು ಚಿತ್ರಣವನ್ನು ದರ್ಪಣವು ತನ್ನ ಮುಂದಿರಿಸಿದ ವಸ್ತುವಿನ ಪ್ರತಿಬಿಂಬವನ್ನು ಚಿತ್ರಿಸುವಂತೆ ಮಾಡುವ ಸಾಧನವೆಂದು ತಿಳಿದು ಆ ಅಳತೆ ಕೋಲಿನಿಂದ ಈ ಕಾದಂಬರಿಯನ್ನು ಅಳೆಯುವದಾದರೆ 'ಕಂಬನಿಯ ಕುಯಿಲು' ತನ್ನ ಪ್ರಯತ್ನದಲ್ಲಿ ಜಯಪ್ರದವಾಗಿದೆಯೆನ್ನಲು ಅಡ್ಡಿಯಿಲ್ಲ. ಆದರೆ ಕಾದಂಬರಿಯಲ್ಲಿ ಚಿತ್ರಿತವಾದ ಪಾತ್ರಗಳು ಓದುಗನಿಗೆ ಒಂದು ಸಂದೇಶವನ್ನು ಕೊಡಬೇಕೆಂಬ ಅಳತೆಗೋಲಿನಿಂದ ಅಳೆದರೆ 'ತ. ರಾ. ಸು.' ರವರ ಈ ಪ್ರಯತ್ನದಲ್ಲಿ ಸಾಫಲ್ಯ ದೊರೆತಿಲ್ಲವೆನ್ನಬೇಕು. ಅವರ ಪಾತ್ರಗಳಲ್ಲಿ ಹಲವು ಜೀವನದಲ್ಲೇ ಮೃತಿಯ ಚಿಹ್ನೆಯನ್ನು ಕೋರುವಂತಿವೆ

ಈ ಮಾತಿಗೆ ಒಂದೆರಡು ಉದಾಹರಣೆಗಳನ್ನು ಎತ್ತಿ ತೋರಿಸದಿದ್ದರೆ ಅಪರಾಧವಾದೀತು. ತನ್ನ ಪತಿಯೊಂದಿಗೆ ಸಹಗಮನಕ್ಕೆ ಸಿದ್ಧಳಾದ ಸಾಧ್ವಿ ಗೌರವ್ವ ನಾಗತಿಯು ಪತಿಯ ಆಶಯದಂತೆ ಓಬಣ್ಣನಿಗೆ ಪಟ್ಟ ಒದಗಿಸುವ ಕಾರಣಕ್ಕಾಗಿ ಜೀವಂತಳಾಗಿ ಉಳಿಯುತ್ತಾಳೆ. ಆಕೆಯೇನು ಧೃತಿ ಇಲ್ಲದ ಪೆದ್ದು ಹೆಂಗಸಲ್ಲ. ಅಂಥಾ ಆದರ್ಶ ಹೆಣ್ಣು "ಹೊಂಡದಲ್ಲಿ ಬಿದ್ದು ಸತ್ತಿತು" ಎಂದು ಗೌರವ್ವನ ಪಾತ್ರ ಚಿತ್ರಣ ಪೂರ್ತಿಗೊಳಿಸಿದ್ದಾಗಲೀ, ತನ್ನ ಪ್ರಭುವಿಗಾಗಿ ಯಮನೊಡನೆಯೂ ಸೆಣಸಬಲ್ಲ ಕಚ್ಚೆದೆಯ ಕಸ್ತೂರಿನಾಯಕ ದೇವಸ್ಥಾನದ ಎದುರು ಕೈಲಾಗದವನಂತೆ 'ಪರಾಕಿರಿ' ಮಾಡಿಕೊಳ್ಳುವದಾಗಲೀ, ಖಡ್ಗಧಾರಿಯಾಗಿ ಅರಮನೆಯತ್ತ ಧಾವಿಸಿದ ಭುವನಪ್ಪನವರು ಕೈಯಲ್ಲಿ ಕತ್ತಿ ಹಿಡಿದೇ ಹೃದಯಸ್ತಂಭನವಾದವರಂತೆ ಕೆಳಗುರುಳಿ ಮಡಿಯುವ ದೃಶ್ಯವಾಗಲೀ ಆದರ್ಶರೂ, ವೀರರೂ, ತಮ್ಮ ಜೀವನಕ್ಕಿಂಥಾ ಗೌರವವನ್ನು ಹೆಚ್ಚೆಂದು ಪರಿಗಣಿಸಿದವರೂ ಎಂದೆನಿಸಿದ ಈ ಪಾತ್ರಗಳಿಗೆ ಯೋಗ್ಯ ಅಂತಿಮವಲ್ಲ.

ಇಂಥಾ ಚರಿತ್ರ ಚಿತ್ರಣದಿಂದ "ಒಳ್ಳೆಯವರಿಗೆ ಕಾಲವಿದ್ದಲ್ಲ" ಎಂಬ ನಾಣ್ಣುಡಿಗೆ ಬೆಂಬಲ ಕೊಟ್ಟಂತಾಗುತ್ತದೆ. ಹೇಗೂ ತ ರಾ ಸು ಅವರ ಕಾದಂಬರಿ ಓದಲು ಯೋಗ್ಯವಾದುದು. ಈ ಕಾದಂಬರಿಯನ್ನು ಪ್ರಕಟಿಸಿದವರಾದ ವಿದ್ಯಾನಿಧಿ ಪ್ರಕಾಶನದವರ ವಿಚಾರ ಒಂದು ಮಾತು ಹೇಳಬೇಕು. ಇಂಗ್ಲಿಷಿನಲ್ಲಿರುವ 'ಪೆಂಗ್ವಿನ್' ಮತ್ತು 'ಪೆಲಿಕನ್' ಪುಸ್ತಕಗಳಂತೆ ಅತೀ ಕಡಿಮೆ ಅಂದರೆ ಪ್ರತಿ ಪುಸ್ತಕಕ್ಕೆರೂಪಾಯಿ ೧–೮–೦ ಬೆಲೆಯಲ್ಲಿ ಉತ್ತಮ ಸಾಹಿತ್ಯವನ್ನು ಒದಗಿಸಲು ಹೊರಟ ಯತ್ನವು ಸ್ತುತ್ಯವಾದುದು. ಸರ್ವರ ನೆರವು ಅವರಿಗೆ ದೊರೆಯಲೆಂದು ಹಾರೈಕೆ.

———

ಐದು ನಿಮಿಷ—ಲೇ: 'ನಿರಂಜನ' ಪುರೋಗಾಮಿ ಪ್ರಕಾಶನ, ಬೆಂಗಳೂರು. ಪುಟ ಸಂಖ್ಯೆ ೧೩೮ ಬೆಲೆ ರೂ. ೧-೦-೦

ಚಿತ್ರಗುಪ್ತ ಪತ್ರಿಕೆಯಲ್ಲಿ "ಓದುಗರೊಡನೆ ಐದು ನಿಮಿಷ" ಎಂಬ ಶೀರ್ಷಿಕೆಯಲ್ಲಿ ನಿರಂಜನರು ಬರೆದ ಲೇಖನಗಳ ಸಂಕಲನವಿದು. ಆಯಾಯ ವಾರಗಳಲ್ಲಿ ದೊರೆತ ವಿವಿಧ ವಿಚಾರಗಳನ್ನು ನಿರಂಜನರು ಮನೋರಂಜಕವಾಗಿ ಬರೆದಿರುವರು. ಬರಗಾಲದಿಂದ ಹಿಡಿದು ಕೃಷ್ಣಂ ಮಧುರಂ ವರೆಗೂ, ಕಲಾವಿಲಾಸಿಗಳಿಂದ ಹಿಡಿದು ಅಗಸ್ಟ್ ೯ರ ವರೆಗೂ ಒಟ್ಟು ೩೨ ಲೇಖನಗಳಿವೆ. ಚಾರ್ಲಿ ಚಾಪ್ಲಿನ್, ಶ್ರೀರಾಮುಲು, ಕಾರ್ಮಿಕ ಸಾಹಿತಿ ಮಾದಯ್ಯ, ಹಿರಣ್ಣಯ್ಯ ಮೊದಲಾದವರ ವಿಚಾರಗಳೂ ಇಲ್ಲಿ ಬಂದಿವೆ. ಒಮ್ಮೆ ಓದಬಹುದಾದ ಪುಸ್ತಕವಿದು.

———

ಕೊರಿಯಾ ಪರಿಸ್ಥಿತಿಯಲ್ಲಿ ಪ್ರಗತಿ ಇಲ್ಲ.

ಕೊರಿಯಾದ ಯುದ್ಧ ಕೈದಿವಿನಿಮಯದ ಕಾರ್ಯವು ಸ್ಥಗಿತವಾದಂತಾಗಿದೆ. ಉತ್ತರ ಕೊರಿಯಾ ಮತ್ತು ಚೀನಿ ಯುದ್ಧ ಕೈದಿಗಳಿಗೆ ತಿಳಿಹೇಳುವದಕ್ಕಾಗಿ ಅವರನ್ನು ಶಿಬಿರಗಳಿಂದ ಪ್ರತ್ಯೇಕ ಸ್ಥಳಕ್ಕೆ ಒಯ್ಯಲಾಗುತ್ತಿತ್ತು. ಆದರೆ ಒಂದು ಶಿಬಿರದಲ್ಲಿಯ ಅರ್ಧ ಜನ ಕೈದಿಗಳಿಗೆ ತಿಳಿಹೇಳುವದಾದ ನಂತರ ಇನ್ನುಳಿದ ಅರ್ಧ ಜನರನ್ನು ತಿಳಿಹೇಳುವ ಸ್ಥಳಕ್ಕೆ ಕರೆದೊಯ್ಯಲು ಭಾರತದ ರಕ್ಷಾ ಸೈನಿಕರು ಹೋದಾಗ ಈ ಕೈದಿಗಳು ಸ್ಥಳಬಿಟ್ಟು ಕದಲಲು ನಿರಾಕರಿಸಿದರು. ಮತ್ತು ಗಲಾಟೆ ಮಾಡಲಾರಂಭಿಸಿದರು. ಪರಿಸ್ಥಿತಿ ಕ್ಷೋಭೆಗೆ ಹೋಗುವಂತೆ ಕಂಡು ಬಂತು. ಒತ್ತಾಯದಿಂದ ತಮ್ಮನ್ನು ಒಯ್ಯಲು ಯತ್ನಿಸಿದರೆ ಶಿಬಿರಗಳನ್ನು ಮುರಿದು ಸಾಮೂಹಿಕವಾಗಿ ಹೊರಬೀಳುವದಾಗಿ ಆ ಕೈದಿಗಳು ಬೆದರಿಕೆ ಹಾಕಿದರು. ಒಂದೂವೇಳೆ ಶಿಬಿರಗಳನ್ನು ಮುರಿದು ಹೊರಬಿದ್ದರೆ ಆವಾಗ ಮದ್ದು ಗುಂಡುಗಳನ್ನುಪಯೋಗಿಸಬೇಕಾಗಬಹುದಾಗಿತ್ತು. ಹಾಗಾಗಿದ್ದರೆ ವಿನಃಕಾರಣ ಪ್ರಾಣಹಾನಿಯೂ ಆಗುತ್ತಿತ್ತು. ಆದನ್ನೆಲ್ಲ ಮನಗಂಡು ರಕ್ಷಾ ಸೈನಿಕರು ಕೈದಿಗಳನ್ನು ಹೊರತರಲು ಒತ್ತಾಯಮಾಡಲಿಲ್ಲ. ಆ ಕೈದಿಗಳಿಗೆ ತಿಳಿಹೇಳುವ ಕಾರ್ಯವು ಪೂರ್ತಿಯಾಗದ ವಿನಃ ಹೊಸ ಕೈದಿಗಳಿಗೆ ತಿಳಿಹೇಳುವ ಕಾರ್ಯವನ್ನಾರಂಭಿಸಲಾರೆವೆಂದು ಉತ್ತರ ಕೊರಿಯದ ತಿಳಿಹೇಳುವ ಅಧಿಕಾರಿಗಳು ಹಟಹಿಡಿದಿದ್ದಾರೆ. ಹೀಗೆ ಆ ಕಾರ್ಯವು ಸ್ಥಗಿತವಾದಂತಾಗಿದೆ. ಈ ಕಾರ್ಯವು ಡಿಸೆಂಬರ್ ತಾ. ೨೩ ರೊಳಗಾಗಿ ಪೂರ್ತಿಯಾಗಬೇಕು ಅಷ್ಟರಲ್ಲಿ ಆಗದಿದ್ದರೆ ಬಂಧನದಲ್ಲಿರುವ ಯುದ್ಧ ಕೈದಿಗಳೆಲ್ಲರ ಬಂಧಮುಕ್ತತೆ ಮಾಡಬೇಕಾಗುವದೆಂದು ಎರಡೂ ಪಕ್ಷಗಳ ನಡುವೆ ಆದ ಒಪ್ಪಂದದ ಕಲಮು ಬಂದಿದೆ. ಹೀಗಾಗಿ ಇದೊಂದು ಹೊಸ ಪ್ರಶ್ನೆ ಈಗ ಮುಂದೆ ಬಂದಿದೆ.

ಇನ್ನು ಕೊರಿಯಾ ಯುದ್ಧದ ಶಾಶ್ವತ ಒಪ್ಪಂದದ ಬಗ್ಗೆ ಚರ್ಚೆ ನಡೆಸಲು ಎರಡೂ ಪಕ್ಷಗಳ ರಾಜಕೀಯ ಸಮಿತಿಯು ಮುಂದಿನ ತಿಂಗಳಲ್ಲಿ ಕೂಡುವದಿದ್ದು ಆ ಸಮಿತಿಯು ಸಭೆ ಸೇರುವ ಸ್ಥಳವನ್ನೂ ಆ ಸಮಿತಿಯಲ್ಲಿ ಎರಡೂ ಪಕ್ಷಗಳ ವತಿಯಿಂದ ಯಾವ ಯಾವ ರಾಷ್ಟ್ರಗಳಿರಬೇಕೆಂಬುದನ್ನೂ ಗೊತ್ತುಪಡಿಸುವದಕ್ಕಾಗಿ ಎರಡು ಉಪಸಮಿತಿಗಳು ನೇಮಿಸಲ್ಪಟ್ಟಿದ್ದು ಆ ಉಪಸಮಿತಿಗಳು ಪಾನ್‌ಮುನ್‌ಜಾನದಲ್ಲಿ ಸಭೆಗೂಡುತ್ತಲಿವೆ. ಪಾನ್‌ಮುನ್‌ಜಾನ್‌ವೇ ಸಭಾಸ್ಥಳವಾಗಬೇಕೆಂದು ಉತ್ತರ ಕೊರಿಯದ ಪ್ರತಿನಿಧಿಗಳ ಸೂಚನೆ ಇದೆ. ಆದರೆ ಪಾನ್‌ಮುನ್‌ಜಾನ್‌ವು ಚಳಿ ಪ್ರದೇಶ, ಸಭೆಗೆ ಬರುವ ಸದಸ್ಯರಿಗೆ ಬಂದುಹೋಗಲು ಬಹಳ ತೊಂದರೆಯಾಗುವದು, ಅಲ್ಲಿ ಅವರಿಗೆ ಕೇವಲ ಸೈನಿಕರ ಆಹಾರ ಮಾತ್ರ ದೊರೆಯುವದು; ಮೇಲಾಗಿ ವಿಪರೀತ ಚಳಿ ಆದುದರಿಂದ ಆ ಸ್ಥಳವು ಸಭೆಗೂಡಲಿಕ್ಕೆ ಅಯೋಗ್ಯವೆಂದು ವಿಶ್ವಸಂಸ್ಥೆಯ ಸೈನ್ಯಗಳ ಪರವಾಗಿ ಮಾತನಾಡಲು ಹೋದ ಅಮೇರಿಕೆಯ ಮಿ. ಆರ್ಥರ್ ಡೀನರು ಆ ಸೂಚನೆಯನ್ನು ನಿರಾಕರಿಸಿದ್ದಾರೆ.

ಇನ್ನು ಈ ಸಭೆಗೆ ಯಾರನ್ನು ಬರಮಾಡಿಕೊಳ್ಳಬೇಕೆಂಬ ಪ್ರಶ್ನೆಯು ೨ನೇ ಉಪಸಮಿತಿಯ ಮುಂದೆ ಬಂದಾಗ ಉತ್ತರ ಕೊರಿಯದ ಪ್ರತಿನಿಧಿಗಳು ರಶಿಯವನ್ನು ತಟಸ್ಥ ರಾಷ್ಟ್ರವೆಂದು ಆಮಂತ್ರಿಸಬೇಕೆಂದು ಸೂಚನೆ ಮಂಡಿಸಿದರು.

ಆ ಸೂಚನೆಯನ್ನು ಅಮೇರಿಕೆಯ ಪ್ರತಿನಿಧಿಯು ತಿರಸ್ಕರಿಸಿದ. ಹೀಗಾಗಿ ಅದೂ ಕೂಡ ಅನಿರ್ಣೀತವಾಗಿಯೇ ಉಳಿದಿದೆ.

ಕೊರಿಯಾದಲ್ಲಿ ಹೀಗೆ ನಡೆದಿರುವಾಗ, ಅತ್ತ ವಿಶ್ವ ಸಂಸ್ಥೆಯ ಸಾಧಾರಣ ಸಭೆಯ ರಾಜಕೀಯ ಸಮಿತಿಯಲ್ಲಿ ರಶಿಯದ ಪ್ರತಿನಿಧಿ ಮಿ ವ್ಹಿಶಿನ್‌ಸ್ಕಿ ಜಾಗತಿಕ ಶಾಂತಿ ಸ್ಥಾಪನೆಗಾಗಿ ಐದು ಅಂಶಗಳ ಒಂದು ಸೂಚನೆ ಮಂಡಿಸಿದ್ದರು. ಆ ಗೊತ್ತುವಳಿಯಲ್ಲಿಯ ಮುಖ್ಯಾಂಶಗಳೆಂದರೆ—

೧. ಅಣುಶಸ್ತ್ರಾಸ್ತ್ರಗಳನ್ನು ಕಟ್ಟುನಿಟ್ಟಾಗಿ ಪ್ರತಿಬಂಧಿಸಲಾಗುವದೆಂದು ಘೋಷಣೆ ಹೊರಡಿಸುವದು.

೨. ಪಂಚ ಮಹಾರಾಷ್ಟ್ರಗಳು ಒಂದು ವರ್ಷದಲ್ಲಿ ತಮ್ಮ ಸೈನ್ಯದಲ್ಲಿ ಮೂರರಲ್ಲೊಂದು ಭಾಗವನ್ನು ಕಡಿತ ಮಾಡುವದು.

೩. ನಾಗರೋತ್ತರ ಸೈನಿಕ ಠಾಣ್ಯಗಳು ಶಾಂತಿಗೆ ಗಂಡಾಂತರವೆಂದು ಒಪ್ಪಿಕೊಳ್ಳುವದು.

೪. ಅಂಥ ಠಾಣ್ಯಗಳನ್ನು ನಿರ್ಮೂಲಗೊಳಿಸುವದು. ಮತ್ತು

೫. ಯುದ್ಧ ಪ್ರಚೋದಕ ಪ್ರಚಾರವನ್ನು ಖಂಡಿಸುವದು.

ಈ ಗೊತ್ತುವಳಿಯನ್ನು ಅಮೇರಿಕಾ ಪ್ರತಿನಿಧಿ ಮಿ. ಹೆನ್ರಿ ಕ್ಯಾಬೊಟ್‌ಲಾಜ್ ಇವರು ಬಲವಾಗಿ ವಿರೋಧಿಸುತ್ತ ಮೊದಲಿನ ನಾಲ್ಕಂಶಗಳನ್ನಂತೂ ಈ ಮೊದಲೇ ನಿಶ್ಶಸ್ತ್ರೀಕರಣದ ಬಗ್ಗೆ ವಿಚಾರ ಮಾತುಕತೆ ನಡೆದಾಗ ಚರ್ಚಿಸಲಾಗಿತ್ತು. ಇದೇ ತರಹದ ಸೂಚನೆಗಳನ್ನು ರಶಿಯವು ಅನೇಕಸಲ ಮಾಡಿತು. ಆದರೆ ಅವೆಲ್ಲವೂ ಅವ್ಯವಹಾರ್ಯವಿರುವದರಿಂದ ಅವುಗಳನ್ನು ಸ್ವೀಕರಿಸುವಂತಿಲ್ಲವೆಂದು ವಿರೋಧಿಸಿದರು.

ಮಿ. ವ್ಹಿಶಿನ್‌ಸ್ಕಿ ಅವರ ಗೊತ್ತುವಳಿಯ ತಿರುಳನ್ನು ನೋಡುವಾಗ ಅದು ಸದಿಚ್ಛೆಯದಾಗಿ ತೋರುತ್ತಿದೆ. ಆದರೆ ರಶಿಯವು ಏನೇ ಹೇಳಿದರೂ ಅದರ ಒಳಗಿನ ಇಂಗಿತ ಏನಿದೆಯೋ ಏನೋ ಎಂಬ ಸಂಶಯವು ಅಮೇರಿಕೆಗೆ ಇರುವದರಿಂದ ರಶಿಯವು ಸೂರ್ಯನು ಪೂರ್ವಕ್ಕೆ ಮೂಡುತ್ತಾನೆ ಎಂದು ಹೇಳಿದರೂ ಕೂಡ ಅದನ್ನು ವಿರೋಧಿಸುವ ಮನೋವೃತ್ತಿ ಅಮೇರಿಕೆಯ ರಾಜಕಾರಣಿಗಳಲ್ಲಿ ಬೆಳೆಯುತ್ತ ಸಾಗಿದೆ. ಈ ಸಂಶಯದ ವಾತಾವರಣದ ಮೂಲಕವಾಗಿಯೇ ಕೊರಿಯಾದಲ್ಲಿ ಮಾತುಕತೆಗಳು ಸ್ಥಗಿತವಾಗಿವೆ. ಈ ವಾತಾವರಣದ ಮೂಲಕವೇ ಯುರೋಪದಲ್ಲಿ ಅನಿಶ್ಚಿತತೆ ಪಸರಿಸಿದೆ. ಈ ವಾತಾವರಣದ ಮೂಲಕವೇ ಜಗತ್ತಿನಲ್ಲಿ ಶಾಂತಿಸ್ಥಾಪನೆಯಾಗದಂತಾಗಿದೆ. ಪರಸ್ಪರರಲ್ಲಿರುವ ಈ ಸಂಶಯದ ನಿರಸನ ಮಾಡುವದು ಇಂಗ್ಲಂಡಕ್ಕಾಗಲಿ, ಬೇರಾವ ಐರೋಪ್ಯ ರಾಷ್ಟ್ರಕ್ಕಾಗಲಿ ಸಾಧ್ಯವಿಲ್ಲ. ಈ ವಾತಾವರಣವು ತಿಳಿಗೊಳ್ಳಲು ಈ ಎರಡು ಬಣಗಳಲ್ಲಿ ತಿಳಿವಳಿಕೆಯನ್ನುಂಟುಮಾಡಲಿಕ್ಕೆ ಪ್ರಭಾವಿಯಾದ ತಟಸ್ಥ ರಾಷ್ಟ್ರಗಳಿಗೆ ಮಾತ್ರ ಸಾಧ್ಯವಿದೆ. ಅಂತೆಯೇ ಭಾರತದಂಥ ಪ್ರಭಾವಶಾಲಿಯಾದ ತಟಸ್ಥ ರಾಷ್ಟ್ರಕ್ಕೆ ಕೊರಿಯಾ ಒಪ್ಪಂದದ ರಾಜಕೀಯ ಸಮಿತಿಯಲ್ಲಿ ಸ್ಥಾನವಿರಬೇಕೆಂದು ಶಾಂತಿಪ್ರಿಯ ರಾಷ್ಟ್ರಗಳು ಕೇಳುತ್ತಿವೆ ಆದರೆ ಸಂಶಯ ಪಿಶಾಚ ಗ್ರಸ್ತ ಅಮೇರಿಕೆಗೆ ಇವರಲ್ಲಿಯೂ ಏನಿರುವದೋ ಎಂಬ ಸಂಶಯವುಂಟಾಗಿರುವದರಿಂದ ಅದು ಭಾರತಕ್ಕೆ ಈ ರಾಜಕೀಯ ಸಮಿತಿಯಲ್ಲಿ ಸ್ಥಾನಕೊಡಲು ನಿರಾಕರಿಸುತ್ತಿದೆ. ಆದರೆ ಸದ್ಯದಲ್ಲಿಯೇ ಬರ್ಮುಡಾದಲ್ಲಿ ಕೂಡಲಿರುವ ಅಮೇರಿಕೆ, ಇಂಗ್ಲೆಂಡು, ಮತ್ತು ಫ್ರಾನ್ಸ್‌ಗಳ ಮುಖ್ಯರ ಪರಿಷತ್ತು ಕೂಡುವದಿದ್ದು ಅಲ್ಲಿ ನುರಿತ ರಾಜಕಾರಣಿಗಳಾದ ಚರ್ಚಿಲರು ಭಾರತಕ್ಕೆ ರಾಜಕೀಯ ಸಮಿತಿಯಲ್ಲಿ ಸ್ಥಾನ ಕೊಡುವಂತೆ ಅಮೇರಿಕೆಯ ಮನವೊಲಿಸುವದು ಸಾಧ್ಯವಾಗಬಹುದು.

ಅದೇ ಮೇರೆಗೆ ಬರ್ಮುಡಾ ಪರಿಷತ್ತಿನಲ್ಲಿ ಪೂರ್ವ ಯೂರೋಪ, ಮಧ್ಯಪ್ರಾಚ್ಯ, ಇಂಡೋಚೀನ, ಮಲಯಾ ಮುಂತಾದ ಪ್ರದೇಶಗಳಲ್ಲಿ ನಡೆದಿರುವ ಘರ್ಷಣೆಯ ಬಗ್ಗೆಯೂ ಚರ್ಚೆಯಾಗಬಹುದಾಗಿರುವದರಿಂದ ಜಾಗತಿಕ ರಾಜಕೀಯ ಘಟನೆಗಳ ದೃಷ್ಟಿಯಿಂದ ಈ ಪರಿಷತ್ತು ಮಹತ್ವದ್ದಾಗಿ ಕಾಣುತ್ತಿದೆ. ಜೈ ಹಿಂದ್

ಪೀರಾಜಪೇಟೆಗೆ

'ಕೊಡಗು' ಏಜೆಂಟರು,

ಶ್ರೀ ಟಿ ಎಸ್. ಗೋವಿಂದರಾಜು

ಸಹಕಾರವೇ ಜೀವನದ ಏಳಿಗೆಯ ಹೆದ್ದಾರಿ,

ಅದರಲ್ಲೂ ವಿಮೆಯಲ್ಲಿ ಸಹಕಾರ ನೆಂದರೆ ಅತ್ಯೋನ್ಯ ಏಳಿಗೆಯು ಮತ್ತು ಭದ್ರತೆಗೆ ತಳಹದಿ.

ದಿ ಬೊಂಬಾಯಿ ಕೋಪರೇಟಿವ್ ಇನ್ಶೂರೆನ್ಸ್

ಹೆಡ್ ಆಫೀಸು:—] ಸೊಸೈಟಿ, ಲಿಮಿಟೆಡ್ [ಬೊಂಬಾಯಿ.

1952 ನೇ ಸಾಲಿಗೆ ರಿವರ್ಸನರಿ ಬೋನಸ್ಸು

ಹೋಲ್ ಲೈಫ್ ಸಾವಿರಕ್ಕೆ 11 ರಂತೆ ಎಂಡೋಮೆಂಟ್ ಸಾವಿರಕ್ಕೆ 9 ರಂತೆ

200 ರಿಂದ 900 ರ ತನಕದ ಪೋಲಿಸಿಗಳು. ಹಳ್ಳಿಗರಿಗೊಂದು ವರ

ಎಲ್ಲಾ ಕಡೆಗಳಲ್ಲಿಯೂ ಪ್ರಭಾವವುಳ್ಳ ಏಜಂಟರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಯನ್ನು ದಕ್ಷಿಣ ಕನ್ನಡ, ಕೊಡಗು ಮತ್ತು ಮೈಸೂರು ಪ್ರಾಂತ್ಯಕ್ಕೆ ಮುಖ್ಯ ಏಜಂಟರಾದ

12-10

ಎಮ್. ಟಿ. ಕೋರ್‌ಡೆಲ್ ಅಂಡ್ ಕೋ., ಹಂಪನಕಟ್ಟೆ, ಮಂಗಳೂರು, ಇವರಿಂದ ಪಡೆಯಿರಿ.

Licence No. 60.
Licenced to Post without Prepayment

ಕ್ಷಯರೋಗದ ವಿರೋಧ ನೀವು ಏಕೆ ಹೋರಾಡಬೇಕು?

ಏಕೆಂದರೆ:—

● ಅದು ಭಯಂಕರವಾದ ಕಾಯಿಲೆ

●●●●● ರಾಷ್ಟ್ರದ ಚೇತನವನ್ನು ಅದು ಸೂರೆಗೊಳ್ಳುತ್ತದೆ

ಅದು ಪ್ರಕೃತಿಯಲ್ಲಿ ಗೋಪ್ಯವಾಗಿರುವ ಕಾಯಿಲೆ

●●●● ಅದು ದೊಡ್ಡವರು, ಚಿಕ್ಕವರೆಂಬ ತಾರತಮ್ಯವಿಲ್ಲದೆ ಎಲ್ಲರಿಗೂ ಅಂಟುವದು.

●●●●● ಅದು ತನ್ನ ಹಿಡಿತಕ್ಕೆ ಬಲಿಯಾಗುವವರನ್ನು ಉಳಿಯಲು ಬಿಡುವುದಿಲ್ಲ

ಜ್ಞಾಪಕವಿಟ್ಟಿರಿ:— ನಿಮ್ಮ ವಂತಿಗೆಯು ಕ್ಷಯ ರೋಗದ ವಿರುದ್ಧದ ಯುದ್ಧಕ್ಕೆ ನೇರವಾದ ಸಹಾಯವೆಂದು

ಟಿ. ಬಿ. ಸೀಲುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಕೊಂಡುಕೊಳ್ಳಿರಿ.

ಒಂದು ಸೀಲಿಗೆ ಒಂದೇ ಆಣೆ ಬೆಲೆ.

ಸೀಲುಗಳು ಕೊಡಗಿನ ಸಿವಿಲ್ ಸರ್ಜನರಲ್ಲಿಯೂ. ಕೊಡಗು ಸಂಸ್ಥಾನದ ಇತರ ಏಜೆನ್ಸಿಗಳಲ್ಲಿಯೂ ದೊರೆಯುತ್ತವೆ.

ಹಿಂದೂದೇಶದ ನಾಲ್ಕನೇ ಟಿ. ಬಿ. ಸೀಲು ಮಾರಾಟ ಚಳವಳ.

ಹೊಸದಿಲ್ಲಿಯಲ್ಲಿರುವ ಅಖಿಲ ಭಾರತ ಕ್ಷಯರೋಗ ಸಂಸ್ಥೆಯವರಿಂದ ನಡೆಸಲ್ಪಡುವಂಥಾದ್ದು.

ಈ ಸ್ಥಳವು ಬೊಂಬಾಯಿಯ ಮೊಫತ್‌ಲಾಲ್ ಗಗಲ್‌ಬಾಯಿ ಮತ್ತು ಕಂಪೆನಿಯವರ ಕೃಪೆಯಿಂದ

* ಟೀಕೆ-ಟಿಪ್ಪಣಿಗಳು *

ಈ ಶಿರ್ಷಿಕೆಯಲ್ಲಿ ಪ್ರತಿ ವಾರ ಟೀಕಾಚಾರ್ಯರು ತಮ್ಮ ಅಭಿಪ್ರಾಯಗಳನ್ನು ಬರೆಯುವರು. ಅವರ ಅಭಿಪ್ರಾಯವೇ ಪತ್ರಿಕೆಯ ಅಭಿಪ್ರಾಯವಾಗಲಾರದಾದರೂ ಅಭಿಪ್ರಾಯ ಸ್ವಾತಂತ್ರ್ಯದ ಈ ಕಾಲದಲ್ಲಿ ಈ ಅವಕಾಶ ಕೊಟ್ಟುದನ್ನು ವಾಚಕರು ಸ್ವಾಗತಿಸುವರೆಂದು ನಂಬಲಾಗಿದೆ.

[ಸಂಪಾದಕ.

ತಾ. ೧೩—೧೧—೫೩ರ ಸಂಚಿಕೆಯಲ್ಲಿ ಶ್ರೀ ಪಿ. ಜಿ. ಐಯ್ಯಪ್ಪನವರು 'ಕಾಫಿಯ ಬೆಲೆ' ಎಂಬ ಶಿರೋನಾಮೆಯಿಂದ ಒಂದು ಲೇಖನವನ್ನು ಕೊಟ್ಟಿರುತ್ತಾರೆ. ಇವರ ಮುಖ್ಯ ಸಾರಾಂಶವೇನೆಂದರೆ— ಕೆಲವು ದಿನಗಳ ಹಿಂದೆ ಸರಕಾರದವರು ಕಾಫಿ ಬೆಳೆಸುವವರಿಗೆ ಮಿತಿ ಇಲ್ಲದೆ ಸಿಕ್ಕುತ್ತಿದ್ದ ಲಾಭವನ್ನು ಕೊಂಚ ಮಟ್ಟಿಗೆ ಕಾಫಿ ಕುಡಿಯುವವರ ಹಿತದೃಷ್ಟಿಯಿಂದ ಕಡಿಮೆ ಮಾಡಿರುತ್ತಾರೆಂಬುದೇ ಆಗಿದೆ.

ಇವರ ಗುರಿಯನ್ನು ಸಾಧಿಸುವ ಉದ್ದೇಶದಿಂದ ಕೊಟ್ಟಿರುವ ಕಾರಣಗಳು ಅತಿ ವಿಚಿತ್ರವಾಗಿವೆ. ಒಂದನೆದಾಗಿ ಬತ್ತ ಬೆಳೆಸುವ ರೈತನ ಕಷ್ಟಗಳು ಕಾಫಿ ಪ್ಲಾಂಟರುಗಳ ಕಷ್ಟಕ್ಕಿಂತ ಕಡಿಮೆ ಎಂಬುದು. ನಿಜಾಂಶವನ್ನು ಪರಿಶೀಲಿಸಿದಲ್ಲಿ ಬತ್ತದ ಬೆಲೆಗೂ ಕಾಫಿ ಬೆಲೆಗೂ ಅರ್ಥಾರ್ಥ ಸಂಬಂಧವಿರುವದಿಲ್ಲ. ಅಲ್ಲದ ಸಕಾಲದ ಮಳೆ ಕಾಫಿ ಪ್ಲಾಂಟರಿಗೆ ಹೇಗೆ ಅಗತ್ಯವೋ ಹಾಗೆಯೇ ರೈತರಿಗೆ ಅಗತ್ಯ. ಇದು ಹೆಚ್ಚು ಕಡಿಮೆಯಾದಲ್ಲಿ ರೈತನ ಒಂದು ವರ್ಷದ ಅನ್ನಕ್ಕೆ ತಾತ್ಸಾರ ಬರುತ್ತದೆ. ಎರಡನೇ ಕಾರಣ. ಕಾಫಿ ಕುಡಿಯುವವನಿಗೆ ಅವನನ್ನು ಎದುರಿನಲ್ಲಿ ಕಾಫಿ ಕಾದು ನಿಂತಿರುತ್ತದೆಂತೆ ನಿಜ. ಕಾಫಿಯೇನೋ ಕಾದು ನಿಂತಿರುತ್ತದೆ. ಅದನ್ನು ಕೊಂಡುಕೊಳ್ಳಲು ದುಡ್ಡು ಮಾತ್ರ ಅವನಲ್ಲಿರುವದಿಲ್ಲ. ಎಲ್ಲರಿಗೂ ತಿಳಿದ ನಮ್ಮ ದೇಶೀಯರ ಉಪಯೋಗಕ್ಕಾಗಿ ಅವೂನತ್ತು ಇಟ್ಟಿದ್ದ ಕಾಫಿ ಖರ್ಚಾಗದೆ ಪರದೇಶದಲ್ಲಿ ಮಾರುವದಕ್ಕೆ ಹುಕುಂ ಕೊಟ್ಟದ್ದಾಗಿರುತ್ತದೆ. ಇದಕ್ಕೆ ಕಾರಣವೇನು? ಕಾಫಿ ಬೆಲೆ ಸಾಮಾನ್ಯ ಜನಗಳ ಅನುಕೂಲಗಳನ್ನು ಮೀರಿದ್ದೇ ಅಲ್ಲವೇ?

ದಕ್ಷಿಣ ಇಂಡಿಯಾದಲ್ಲಿ ಕಾಫಿ ಇಲ್ಲದೆ ಜನಗಳ ಪಥ ನಡೆಯುವದಿಲ್ಲ. ಈ ಅಭ್ಯಾಸವು ಆಬಾಲ ವೃದ್ಧರಿಗೂ ಸಹ ವ್ಯಾಪಿಸಿರುತ್ತದೆ. ಹಸು ಮಕ್ಕಳಿಗೆ ಸಹ ಹಾಲಿನ ಅಭಾವದಿಂದ ಎಷ್ಟೋ ಜನ ಕಾಫಿ ಕುಡಿಸುತ್ತಾರೆ. ಆದ್ದರಿಂದ ಸರಕಾರದವರು ಪ್ಲಾಂಟರುಗಳಿಗೆ ನ್ಯಾಯವಾದ ಲಾಭವನ್ನು ಬಿಟ್ಟುಕೊಟ್ಟು ಹೆಚ್ಚಿಗೆ ಬರುವ ಲಾಭವನ್ನು ಕುಡಿಯುವವರ ಉಪಯೋಗಕ್ಕೆ ಬಿಟ್ಟು ಕೊಡುವ ಏರ್ಪಾಡು ಮಾಡಿದ್ದು ಬಹು ಸಮಂಜಸವಾಗಿದೆ. ಇದನ್ನು ಮೊದಲೇ ಸರಕಾರದವರು ಮಾಡಬೇಕಿತ್ತು.

ಕಡೇದಾಗಿ ಯಾಲಕ್ಕಿ ಮೆಣಸು ಬೆಳೆಯುವವರು ಸ್ವರ್ಗಲೋಕದಲ್ಲಿರುವಂತೆ ಲೇಖಕರು ಬರೆದಿರುತ್ತಾರೆ. ಅವರ ಪಾಡು ಅವರಿಗೇ ಗೊತ್ತು. ಪ್ಲಾಂಟರುಗಳ ಮಟ್ಟಿಗೆ ವಾಡಿಕೆಯಾಗಿ ಅವರು ಯಾಲಕ್ಕಿ ಮೆಣಸು ಬೆಳೆಸುತ್ತಾರೆಂಬುದು ಎಲ್ಲರಿಗೂ ಗೊತ್ತಿದೆ. ಆದ್ದರಿಂದ ಕಾಫಿ ಲಾಭದ ಜೊತೆಗೆ ಯಾಲಕ್ಕಿ ಮತ್ತು ಮೆಣಸಿನ ದುಂದು ಧಾರಣೆ ಪ್ಲಾಂಟರುಗಳಿಗೆ ತುಂಬ ಅನುಕೂಲವಾಗಿರುವದರಿಂದ ಇವರು ಯಾವ ವಿಧದಲ್ಲೂ ಗೋಳಾಡಬೇಕಾದ ಅಗತ್ಯವಿಲ್ಲ.

* * *

ಸಾಮೂಜಿಕ ವಿಕಾಸ ಯೋಜನೆಯ ಮೂಲಕ ಭಾಗಮಂಡಲದಲ್ಲಿ ಭಾಗಮಂಡಲ ಕೋರಂಗಾಲಕ್ಕೆ ದಾಟಲಿಕ್ಕೆ ಕಾವೇರಿ ಹೊಳೆಗೆ ಒಂದು ಕಾಂಕ್ರಿಟ್ ಸೇತುವೆ ಕಟ್ಟಿರುತ್ತಾರೆ. ಇದರ ಅವಸ್ಥೆ ಹೇಳಬೇಕಾದ್ದೆ. ಇಲ್ಲಿ ಸೇತುವೆಯ ಎರಡು ಕಡೆ ದರನ್ನು ದುರಸ್ತು ಮಾಡಿರುವದಿಲ್ಲ. ಗದ್ದೆ ಏರಿಯಿಂದ ಸೇತುವೆಗೆ ಹತ್ತಬೇಕಾದರೆ ಒಂದು ಏಣಿ ಆಗಬೇಕು. ಸದ್ಯಕ್ಕೆ ಎರಡು ಮರ ಜೋಡಿಸಿರುತ್ತಾರೆ. ಈ ತಿರುಪತಿ ಕ್ಷಾಂರದ ಕೆಲಸಕ್ಕೆ ಯಾರು ಜವಾಬ್ದಾರರೋ ಗೊತ್ತಾಗುವುದಿಲ್ಲ. ದಯವಿಟ್ಟು ಮಂತ್ರಿಗಳು ಈ ವಿಷಯದಲ್ಲಿ ಸರಿಯಾದ ಹುಕುಂ ಕೊಟ್ಟು ಈಗಿನ ಅವಲಕ್ಷಣ ಸ್ಥಿತಿಯನ್ನು ಹೋಗಲಾಡಿಸುವರಾಗಿ ನಂಬುತ್ತೇನೆ.

ಇದು ಕಾಂಕ್ರಿಟ್ ಸೇತುವೆಯಂತಿರುವದಲ್ಲಿ ಕಾಂಕಿ ಸಿಸರಿಯಾಗಿ ಸೆಟ್ಟಾಗದೆ ಕಿತ್ತು ಬರುವ ಸ್ಥಿತಿಯಲ್ಲಿದೆ.

* * *

ಅಮೇರಿಕಾದ ಅಧಿಕಾರಿಗಳೊಬ್ಬರು ಅಮೇರಿಕೆಯಲ್ಲಿ ಪೋಲೀಸು ಇಲಾಖೆ ತಕ್ಕಷ್ಟು ಅಧಿಕಾರಿಗಳಿಂದ ಕೂಡಿಲ್ಲವಾಗಿ ಬರೆದಿರುತ್ತಾರೆ. ಒಂದು ಸಾವಿರ ಜನರಿಗೆ ಸರಾಸರಿಯಿ ಮೇರೆ ೧೭೭ ಪೋಲೀಸರು ಇರುತ್ತಾರಂತೆ.

ಇವರ ದೆಸೆಯಿಂದ ೧೯೫೦ರಲ್ಲಿ ಒಂದು ಮಿಲಿಯ ಎಂಟು ನೂರು ಇಪ್ಪತ್ತೆರಡು ಸಾವಿರದ ನೂರ ಅರುವತ್ತು ಮೇಜರು ತಕ್ಸೀರುಗಳು ಅಲ್ಲಿ ನಡೆದಿವೆಯಂತೆ. ಪ್ರತಿ ಎರಡು ಮಿನಿಟುಗಳಿಗೆ ಒಂದು ಕಾರಿನಂತೆ ಕಳವು ನಡೆಯುತ್ತಾ ಇದೆಯಂತೆ.

— ಟೀಕಾಚಾರ್ಯ.

Edited Printed and Published by P. I. BELLIAPPA
at 'Kodagu' P[illegible]

ಕೊಡಗು

ಸ್ವಾತಂತ್ರ್ಯ, ಬಂದಿದ್ದರೂ ಬಿಡುಗಡೆ ಇಲ್ಲವೇ ?

ವಾರ್ಷಿಕ, ಚಂದಾ ರೂ. ೪—೦—೦ ಶುಕ್ರವಾರ

ಸಂಪುಟ ೩೨] — [ಸಂಚಿಕೆ ೨೬ ೧೧-೧೨-೧೯೫೩

ಬಿಡಿ ಪ್ರತಿ 2 ಆಣೆ

KODAGU KANNADA WEEKLY MERCARA

ವಾರದ ಕಥೆ.

ನಿಷ್ಪಕ್ಷಪಾತಿಗೆ ನಿರುದ್ಯೋಗವೇ?

— ಲೇ:-ಕುಮಾರ ಬಿ. ಜಿ. ಕೇಶವರಾವ್. ಕಟ್ಟೆಮಾಡು —

ನಿಶಲನ ಸಂಸಾರ ಬಹು ಚಿಕ್ಕದು ಮನೆಯೊಡೆಯರೋ ಅವಕ್ಕೆ ತಕ್ಕಂತೆ ಇದ್ದಿತು. ಪತ್ನಿ ರಮೆಯು ನಿಶಲನ ಗುಣಕ್ಕೆ ಸರಿಯಾದವಳೇ ಆಗಿದ್ದಳು. ತಕ್ಕಂತೆಯೇ ಏಕ ಮಾತ್ರ ಕಂದ ಗಣೇಶನೂ ಇದ್ದನು.

ಗಣೇಶನು ಚಿಕ್ಕಂದಿನಿಂದಲೂ ಬಲು ಜಾಣ, ಸಾತ್ವಿಕ ಮತ್ತು ನಿರ್ದೋಷಿ. ನಿಶಲನು ಮಗನನ್ನು ಶಾಲೆಗೆ ಕಳುಹಿಸಿ ವಿದ್ಯೆಯನ್ನು ಕೊಡಿಸಿದನು. ನಿರ್ದೋಷಿಯಾದ ಗಣೇಶನು ತನ್ನ ಸಣ್ಣಪ್ರಾಯದ ವಿದ್ಯಾರ್ಜನೆಯಲ್ಲಿಯೇ ಪಕ್ಷಪಾತ ರಹಿತನಂತೆ ವರ್ತಿಸಲು ಅಭ್ಯಸಿಸಿದನು. ಶಾಲೆಯಲ್ಲಿ ನಾನಾ ಜಗಳಗಳು ನಡೆಯುತ್ತಿದ್ದುವು. ಆದರೆ ಈತನು ಅದರಲ್ಲಿ ನ್ಯಾಯವು ಯಾವ ಕಡೆಯಿದೆ ಆ ಕಡೆ ಭಾಗವಹಿಸಿ ಮಾತಾಡುತ್ತಿದ್ದನು. ಅಧ್ಯಾಪಕರಿಗೆ ದೂರು ತಲುಪಿದರೆ ಈತನು ಯಾರ್‍ಯಾರು ಯಾವ ವಿಧದಿಂದ ವರ್ತಿಸಿದರೆಂದು ಹೇಳಿ ನ್ಯಾಯವನ್ನು ಕಡೆಯುವರಿಗೆ ಸಹಾಯವಾಗುವಂತೆ ತನ್ನ ಅಭಿಪ್ರಾಯವೀಯುತ್ತಿದ್ದನು. ಇದರಿಂದ ತನ್ನ ಬಾಲ್ಯದಲ್ಲಿಯೇ ಈತನು ಕೆಲವು ಆಜನ್ಮ ಶತ್ರುಗಳನ್ನು ಪಡೆದನು.

ಒಂದು ಸಾರಿ ತನ್ನ ದಾರಿಯವರಿಗೂ ಇನ್ನೊಂದು ದಾರಿಯವರಿಗೂ ಮಲ್ಲಯುದ್ಧ ನಡೆಯಿತು. ಇದೂ ಕೂಡ ನ್ಯಾಯವಿಮರ್ಶೆಗೆ ಬಂದಿತು. ಈತನು ಭಾಗವಹಿಸದಿದ್ದರೂ ಇದರಲ್ಲಿ ವಿಚಾರ ನಡೆಯುತ್ತ ಈತನ ದೃಷ್ಟಿಯಿಂದ ತನ್ನ ದಾರಿಯವರೇ ತಪ್ಪಿತಸ್ಥರಾಗಿದ್ದರು. ಇದರಲ್ಲಿ ಪಕ್ಷವಿಲ್ಲದೆ ವರ್ತಿಸಿದುದರಿಂದಲೂ, ದೇವರು ಮೆಚ್ಚುವ ರೀತಿ ಮಾತಾಡಿದ ಕಾರಣವೂ ಆತನಿಗೆ ದಾರಿಯಲ್ಲಿ ಗೆಳೆಯರೊಡನೆ ನಡೆಯುವ ಅವಕಾಶವು ಇಲ್ಲವಾಯಿತು. ಅಂದಿನಿಂದ ಗಣೇಶನಿಗೆ ದಾರಿಗರು ವಿರೋಧಿಗಳಾದರು. ದಾರಿಯುದ್ದಕ್ಕೂ ಮೂದಲಿಸುತ್ತಿದ್ದರು. ಹೊಡೆಯಲು ಯತ್ನಿಸುತ್ತಿದ್ದರು. ಆದರೆ ತಪ್ಪು ಒಪ್ಪನ್ನು ಬಾಲಕರ ಅರಿಯದಾದರು. ಈಗಿನ ಪ್ರಪಂಚದ ಧರ್ಮವೇ ಹೀಗೆ. “ತಪ್ಪು ತಪ್ಪೆನಿಯ ಪ ಲೋಕದ ಡೊಂಕ ನೀವೇಕೆ ತಿದ್ದುವಿರಿ” ಎಂದ ಬಸವಣ್ಣನವರ ಮಾತಿನಂತೆ ಮಕ್ಕಳ ವರ್ತನೆಯಿತ್ತು.

ಕಾಲವುರುಳುತ್ತಾ ಬಂದಿತು. ಗಣೇಶನು ಪ್ರೌಢವಿದ್ಯೆಯನ್ನು ನ್ಯಾಯವಾಗಿ ಉನ್ನತಿಯಿಂದಲೇ ಕಳೆದನು. ನಿತ್ಯವಿದ್ಯಾಲಯಕ್ಕೆ ಕಾಲಿಡಲು ನೋಡುತ್ತಿದ್ದನು. ಇತ್ತ ನಿಶಲನು ಮಗನಿಗೆ ಹುದ್ದೆ ಹುಡುಕುವವರಲ್ಲಿ ನಿರತನಾದನು. ಅದೆಷ್ಟೋ ಸರಕಾರಿ ಕಾಚೇರಿಗಳಿಗೆ ಅರ್ಜಿ ಹೋಯಿತು. ನೌಕರಿ ಸಿಗಬೇಕಿದ್ದರೆ ಅಧಿಕಾರಿಗಳನ್ನು ಕುಶಿ ಮಾಡಬೇಕಿತ್ತು. ಮಾನವಿಲ್ಲದೆ ವೈಗ್ರಾಸ್ಯವನ್ನು ಆಯಬೇಕಿತ್ತು! ಅದರಲ್ಲಿಯೂ ಅಧಿಕಾರಿಗಳಿಗೆ ಅರ್ಥ ಸಂಬಂಧಿಸಿದ ಬಳೋಟಿಯನ್ನು ಕೊಟ್ಟವರಿಗೆ ಶೀಘ್ರ ಉದ್ಯೋಗ ಸಿಗುತ್ತಿತ್ತು. ಹಾಗೂ ಹೀಗೂ ಕೆಲವು ದಿನಗಳ ಅಂತರದಲ್ಲಿ ಒಂದು ಸರಕಾರಿ ಗುಮಾಸ್ತ ಕೆಲಸ ಸಿಕ್ಕಿತು. ಪಕ್ಷಪಾತ ರಹಿತ ಗುಣವು ಗಣೇಶನಲ್ಲಿ ಗಣೇಶನ ಹುಟ್ಟು ದಿನದಿಂದಲೇ ನೆಲೆಯುಂಡಿತ್ತು. ಅದು ಇತ್ತಲಾಗಿ ಬೆಳೆದು ಬಲಗೊಂಡಿತ್ತು. ಈ ಕಾರಣದಿಂದ ಆತ ಸಹೋದ್ಯೋಗಿಗಳಿಗೂ, ಮೇಲಧಿಕಾರಿಗಳಿಗೂ ಬಗಲಿನ ಮುಳ್ಳಿನಂತಾದನು. ಒಂದು ಸಂದರ್ಭದಲ್ಲಿ ತನ್ನ ಸಹೋದ್ಯೋಗಿಯೊಬ್ಬನು ಕೇವಲ ಅನ್ಯಾಯದಿಂದ ಅಪರಾಧಿಯನ್ನು ನಿರಪರಾಧಿಯೆಂದು ಮಾಡಲು ಯತ್ನ ಮಾಡಿದನು. ಕಾರಣ ಅಪರಾಧಿಯು ಸಿರಿವಂತ. ಗಣೇಶನು ಇದನ್ನು ನೋಡಿ ಬೇಸರಪಟ್ಟನು. ಅನ್ಯಾಯಕ್ಕೆ ಆಸ್ಪದವಿಲ್ಲವೆಂದು ವಾದಿಸಿ ಪಕ್ಷಪಾತ ಸಹಿಸಬಾರದೆಂದು ಸಹೋದ್ಯೋಗಿಯನ್ನು ಎದುರಿಸಿದನು. ದೂರು ಮೇಲಾಫೀಸರಿಗೆ ಹೋಯಿತು. ಸಹೋದ್ಯೋಗಿಯು ತನ್ನ ಆರ್ಥಿಕ ಬಲದಿಂದ ಮೇಲಧಿಕಾರಿಯನ್ನು ಜೇಬಿನೊಳಗೆ ಹಾಕಿಕೊಂಡನು. ನಿಷ್ಪಕ್ಷಪಾತಿಯಾದ ಗಣೇಶನಿಗೆ ಇದರ ಫಲವಾಗಿ ಉದ್ಯೋಗವಿಲ್ಲದಾಯಿತು!

ಪುನಃ ಉದ್ಯೋಗ ಹುಡುಕಲು ಪ್ರಾರಂಭಿಸಿ ಕೆಲವು ಸಮಯದಲ್ಲಿ ಜಿಲ್ಲಾಬೋರ್ಡ್ ಶಾಲೆಯಲ್ಲಿ ಒಂದು ಅಧ್ಯಾಪಕ ವೃತ್ತಿ ಸಿಕ್ಕಿತು. ಗಣೇಶನು ಮೊದಲಿನ ಹುದ್ದೆಯನ್ನು ಕಳೆದುಕೊಂಡಿದ್ದರೂ ಗುಣವನ್ನು ಕಳೆದುಕೊಂಡಿರಲಿಲ್ಲ. ಶಾಲೆಯಲ್ಲಿಯೂ ಸಹೋದ್ಯೋಗಿಗಳಾದ ಸಹೋದರ ಸಹೋದರಿಯರಲ್ಲಿ ನಿಷ್ಪಕ್ಷಪಾತದಿಂದಲೇ ವರ್ತಿಸುತ್ತಿದ್ದನು. ಹುದ್ದೆಗೆ ಸೇರಿ ಕೆಲವು ಸಮಯಗಳ ವರೆಗೆ ಕೆಲಸ ಮಾಡಿದನು. ನ್ಯಾಯ ವಿಮರ್ಶೆಗಳು ಬರುತ್ತಿದ್ದುವು. ಈತನು ನಿರ್ವಂಚನೆಯಿಂದ ನಿಷ್ಪಕ್ಷಪಾತದಿಂದ ಸರ್ವ ವಿಷಯಗಳನ್ನೂ ಎಲ್ಲರ ಪ್ರತ್ಯಕ್ಷದಲ್ಲಿಯೇ ಹೇಳುತ್ತಿದ್ದನು. ಇದರಿಂದ ಪ್ರತ್ಯಕ್ಷ ಗೆಳೆಯರಾಗಿಯೂ ಮರೆಯಲ್ಲಿ ವಂಚಕರಾಗಿಯೂ ವರ್ತಿಸುವ ವಾದಿಗಳಿಗೆ ನಿರ್ವಾಹವಿಲ್ಲದಾಯಿತು. ಇದರ ಫಲವಾಗಿ ಅವರು ಮೇಲಧಿಕಾರಿಗಳಿಗೆ ಕಾರಣವಿಲ್ಲದ ದೂರನ್ನು ಇತ್ತು ಸೌಕರ್ಯವಿಲ್ಲದ ಸ್ಥಳಕ್ಕೆ ಈತನನ್ನು ವರ್ಗಾಯಿಸಲು ಸಮರ್ಥರಾದರು. ಇದರಿಂದ ಗಣೇಶನು ಸಿಕ್ಕಿದ ಉದ್ಯೋಗ ಬಿಡಬೇಕಾಗಿ ಒಂದು ಪುನಃ ನಿರುದ್ಯೋಗಿಯಾದನು.

ಗಣೇಶನು ಸರಕಾರಿ ನೌಕರನಾಗಿರಲು ಬಯಸಲಿಲ್ಲ. ಬಂಡವಾಳಶಾಹಿಗಳ ಕಾರ್ಖಾನೆಗಳಿಗೆ ಅರ್ಜಿ ಹಾಕಿದನು. ಶೀಘ್ರದಲ್ಲಿಯೇ ಒಂದು ಹುದ್ದೆ ಸಿಕ್ಕಿತು. ತನ್ನ ಸತ್ಯ ವರ್ತನೆ ಗಂಡಾಂತರಕಾರಿ ಎಂಬ ಅರಿವಾಗಲು ಆತನಿಗೆ ಬಹು ದಿನ ಹಿಡಿಯಲಿಲ್ಲ. ಮಿಲ್ ಮಾಲೀಕನು ಮೋಸಗಾರ ಆತನ ಜೀವನವೇ ತಪ್ಪು ಜೀವನ. ತಪ್ಪು ಮಾರಾಟ ಕಡಿಮೆ ಅಳತೆ. ಗಣೇಶನು ಬಂದಂದಿನಿಂದ ಈತನಿಗೆ ತುಂಬಾ ಅಡಚಣೆಯುಂಟಾಯಿತು. ಎರಡು ಮೂರು ಸನ್ನಿವೇಶಗಳಲ್ಲಿ ಗಣೇಶನಿಂದ ಇಚ್ಛಿಸಿದ ಲಾಭ ದೊರೆಯದೆ ಯಜಮಾನನ ಕಣ್ಣಿಗೆ ಬಿದ್ದನು. ಕಡೆಗೆ ಗಣೇಶನನ್ನು ಕೆಲಸದಿಂದ ತೆಗೆದುಹಾಕಲಾಯಿತು. ಗಣೇಶನು ಪುನಃ ನಿರುದ್ಯೋಗಿ! ಬೀದಿ ಬೀದಿಯಲ್ಲಿ ಹುಚ್ಚನಾಗಿ ಗಣೇಶನು ಅಲೆದಾಡಿದನು. ಎಲ್ಲೆಲ್ಲಿಯೂ ಆತನನ್ನು ಆಸಕ್ತರು ದೂರುವವರೇ ಆಗಿದ್ದರು. ಆದರೆ ಆತನ ಗುಣವನ್ನು ಕೆಲವು ಸಾರ್ವಜನಿಕರು ಶ್ಲಾಘಿಸುತ್ತಿದ್ದರು. ಆದರೆ ಪ್ರಯೋಜನವೇನು! ಶ್ಲಾಘನೆಯಿಂದ ಹೊಟ್ಟೆ ತುಂಬಲಾರದಷ್ಟೆ! ಮನದಲ್ಲಿ ಗಣೇಶನು ಬಹುವಾಗಿ ಕೊರಗಿದನು. ಕಾರಣ ಯೋಚಿಸಿದನು. ಅಂತಿಮವಾಗಿ ಕಾರಣವು ಆತನಿಗೆ ತಿಳಿಯಿತು. ಸತ್ಯ ಧರ್ಮ ನಿಷ್ಠೆ ನಿಷ್ಪಕ್ಷಪಾತ ವರ್ತನವೇ ತನ್ನನ್ನು ನಿರುದ್ಯೋಗಿಯನ್ನಾಗಿ ಮಾಡಿತೆಂದು ಮನಗಂಡು ಹಳ್ಳಿಯ ಕೃಷಿಕನಾಗಿ ಜೀವನ ನಡೆಸಲು ಯತ್ನಿಸುತ್ತಿದ್ದಾನೆ.

ಟೆಂಡರು ನೋಟೀಸು.

ಚೆಟ್ಟಳ್ಳಿ ಕಾಫಿ ಪರಿಶೋಧನಾ ಸಬ್ ಸ್ಟೇಶನಿನಲ್ಲಿ (೧) ಲೇಬೋರೇಟರಿಗೆ ಒಂದು ಕಟ್ಟಡ (೨) ಸಿಬ್ಬಂದಿಗಳ ನಿವಾಸಕ್ಕೆ ಒಂದು ಕಟ್ಟಡ (೩) ಮಜೂರರ ನಿವಾಸಕ್ಕೆ ಎರಡು ಕಟ್ಟಡಗಳನ್ನು ಕಟ್ಟಿಸಿಕೊಡಲು ಟೆಂಡರುಗಳನ್ನು ಡಿಸೆಂಬರ್ ತಾ. ೨೧ ನೇ ಸೋಮವಾರದ ವರೆಗೆ ಕಾಫಿ ಪರಿಶೋಧನಾ ಸಬ್ ಸ್ಟೇಶನಿನ ಸುಪರಿಂಟೆಂಡೆಂಟರು ಸ್ವೀಕರಿಸುವರು.

ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ತಾ. ೧೯—೧೨—೫೩ರ ವರೆಗೆ ಪ್ರತಿ ಕಟ್ಟಡದ ಕೆಲಸ ವಿವರಕ್ಕೆ ರೂ. ೧ರಂತೆ ಯಾ ಒಟ್ಟಿಗೆ ರೂ. ೩ (ವಾಪಾಸು ಮಾಡಲಾಗುವದಿಲ್ಲ) ರಂತೆ ಕೆಲಸದ ವಿವರಗಳನ್ನೊಳಗೊಂಡ ಪಟ್ಟಿಯು ದೊರೆಯುವದು.

ಈ ಕಟ್ಟಡಗಳ ಕೆಲಸ ಪೂರ್ತಿಮಾಡಲು ಎಗ್ರಿಮೆಂಟ್ ಆದನಂತರ (ಈ ತಿಂಗಳ ಅಂತ್ಯದೊಳಗೆ ಎಗ್ರಿಮೆಂಟ್ ಮಾಡಲಾಗುವದು) ಮೂರು ತಿಂಗಳ ಅವಧಿ ಕೊಡಲಾಗುವದು. ಕಟ್ಟಡಗಳ ಪ್ಲಾನು ಮತ್ತು ವಿವರಗಳನ್ನು ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಆಫೀಸು ಸಮಯದಲ್ಲಿ ರಜಾದಿನ ಮತ್ತು ಆದಿತ್ಯವಾರಗಳನ್ನು ಬಿಟ್ಟು ಬೇರೆ ದಿನ ನೋಡಬಹುದು.

ಟೆಂಡರುದಾರರು ಟೆಂಡರು ಹಾಕುವ ಮೊದಲು ಕಟ್ಟಡ ಕಟ್ಟುವ ಸ್ಥಳ ಅಜಮಾಯಿಸಿ ಟೆಂಡರು ಕೊಡಬೇಕೆಂದು ಸಲಹೆ ಕೊಡಲಾಗಿದೆ.

ಮೇಲಿನ ಪ್ರತಿಯೊಂದು ಕೆಲಸದ ಟೆಂಡರಿನ ಜೊತೆಯಲ್ಲಿ ರೂ. ೧೦೦ ಆಕತ್ತಿ ಹಣವಿರದ ಯಾವ ಟೆಂಡರನ್ನೂ ಪರ್ಯಾಲೋಚನೆಗೆ ತೆಗೆದುಕೊಳ್ಳಲಾಗುವದಿಲ್ಲ. ಹಣವನ್ನು ನಗದಾಗಿಯಾಗಲೀ ಯಾ ಮೈಸೂರು ಬ್ಯಾಂಕಿನ ಶಾಖೆಯಲ್ಲಿ, ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಯಾ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಮಡಿಕೇರಿ ಶಾಖೆಯಲ್ಲಿ ಇಂಡಿಯಾ ಕಾಫಿ ಬೋರ್ಡಿನ ಜನರಲ್ ಫಂಡಿನ (ಪರಿಶೋಧನಾ) ಲೆಕ್ಕಕ್ಕೆ ಚೆಟ್ಟಳ್ಳಿ ಕಾಫಿ ಪರಿಶೋಧನಾ ಸಬ್ ಸ್ಟೇಶನಿನ ಸುಪರಿಂಟೆಂಡೆಂಟರ ಹೆಸರಿನಲ್ಲಿ ಡಿಪಾಜಿಟ್ಟು ಮಾಡಬೇಕು. ಜಯಶೀಲರಾಗದ ಟೆಂಡರುದಾರರ ಠೇವಣಾತಿಯನ್ನು ಫಲಿತಾಂಶ ತಿಳಿದ ನಂತರ ವಾಪಾಸು ಕೊಡಲಾಗುವದು. ಜಯಶೀಲರಾದವರು ಈ ಹಣವನ್ನು ಭದ್ರತಾ ಠೇವಣಾತಿಯಾಗಿ ಬಿಡಬೇಕಲ್ಲದೆ ಈ ಭದ್ರತಾ ಠೇವಣಾತಿಯು ಪ್ರತಿ ಕಟ್ಟಡಕ್ಕೆ ರೂ. ೫೦೦ಕ್ಕೆ ಮುಟ್ಟುವ ವರೆಗೆ ಪ್ರತಿ ಬಿಲ್ಲಿನಿಂದ ಶೇಕಡ ೨೦ರಂತೆ ಹಣ ವಸೂಲ್ಮಾಡಿ ಡಿಪಾಜಿಟ್ಟು ಮಾಡಲಾಗುವದು. ಈ ಡಿಪಾಜಿಟ್ಟನ್ನು ಕಟ್ಟಡ ಕಟ್ಟಿ ಪೂರ್ತಿಯಾದ ಆರು ತಿಂಗಳ ನಂತರವೇ ಹಿಂದಕ್ಕೆ ಕೊಡಲಾಗುವದೆಂದು ಕಂಟ್ರಾಕ್ಟುದಾರರಿಗೆ ತಿಳಿಸಲಾಗಿದೆ. ಈ ಅವಧಿಯಲ್ಲಿ ತಮ್ಮ ಸ್ವಂತ ಖರ್ಚಿನಿಂದ ಕಂಟ್ರಾಕ್ಟುದಾರರೇ ಇಂಡಿಯಾ ಕಾಫಿ ಬೋರ್ಡಿನ ಪರಿಶೋಧನಾ ಡೈರೆಕ್ಟರರ ಅಥವಾ ಅವರಿಂದ ಅಧಿಕೃತರಾದ ಬೇರೆ ಆಫೀಸರರ ಸೂಚನೆಯಂತೆ ಕಟ್ಟಡದ ನ್ಯೂನತೆ ಮತ್ತು ಮೇಲುಸ್ತುವಾರಿಯನ್ನು ನೋಡಬೇಕು.

ಜಯಶೀಲರಾದ ಕಂಟ್ರಾಕ್ಟುದಾರರು ಈ ಕೆಳಗೆ ಸಹಿ ಮಾಡಿದವರೊಡನೆ ಆ ಬಗ್ಗೆ ನಿಶ್ಚಿತವಾಗಿರುವ ಫಾರ್ಮಿನಲ್ಲಿ ಎಗ್ರಿಮೆಂಟ್ ಮಾಡಿಕೊಡಬೇಕು.

ಯಾವದೇ ಚಾರ್ಜಿಲ್ಲದೆ ಕಟ್ಟಡದ ನಿವೇಶನದಲ್ಲಿ ಕಂಟ್ರಾಕ್ಟುದಾರರಿಗೆ ಪರಿಶೋಧನಾ ಸ್ಟೇಶನಿನ ನೀರು ಸರಬರಾಯಿ ಸರಿಯಾಗಿರುವ ರೀತಿ ನೀರು ಒದಗಿಸಿಕೊಡಲಾಗುವದು

ಕುಮ್ಮು ಮರ, ಸಿಮೆಂಟ್, ಮಾಡಿನ ಮತ್ತು ನೆಲದ ಹಂಚುಗಳು, ಎ. ಸಿ. ಶೀಟುಗಳು, ಜಿ. ಐ. ಶೀಟ್‍ಗಳಿಷ್ಟೂ ಇಲಾಖೆಯವರಿಂದ ಸರಬರಾಯಿ ಮಾಡಲ್ಪಡುವವು.

ಮದ್ರಾಸು ಸ್ಟ್ಯಾಂಡರ್ಡ್ ವಿವರಗಳಿಗನುಗುಣವಾಗಿ ಈ ಕೆಲಸವು ಮಾಡಲ್ಪಡಬೇಕು

ಯಾವುದೇ ಟೆಂಡರನ್ನು ಯಾವುದೇ ಕಾರಣ ಕೊಡದೆ ತಿರಸ್ಕರಿಸುವ ಹಕ್ಕು ಇಂಡಿಯಾ ಕಾಫಿ ಬೋರ್ಡಿನ ಡೈರೆಕ್ಟರಿಗಿರುವದು.

(ಸಹಿ) ಜೇಮ್ಸ್ ಕೊತೆಕೊ,
ಸುಪರಿಂಟೆಂಡೆಂಟ್,
ಕಾಫಿ ಪರಿಶೋಧನಾ ಸಬ್ ಸ್ಟೇಶನ್, ಚೆಟ್ಟಳ್ಳಿ.

ತಾ. ೩—೧೨—೫೩

ಶ್ರೀ ಪಿ. ಐ. ಬೆಳ್ಳಪ್ಪನವರೂ-ಕೊಡಗು ಕಾಂಗ್ರೆಸ್ ಪಾರ್ಟಿಯೂ.

— ಲೇ:—ಶ್ರೀ ಸಿ. ಜಿ. ಪಾಯ್ಯಪ್ಪ, ಮಡಿಕೇರಿ. —

ಕೊಡಗು ಕಾಂಗ್ರೆಸ್ ಪಾರ್ಟಿಯ ಪೂರ್ವ ಚರಿತ್ರೆಯನ್ನು ವರ್ಣಿಸುವದು ಈ ಲೇಖನದ ಪ್ರಕೃತದ ಅಭಿಪ್ರಾಯವಲ್ಲ. ಅದನ್ನು ಬರೆಯಲು ತೊಡಗಿದರೆ, ಆದರಿಂದ ನಾನು ಈ ಬರವಣಿಗೆಯ ಮುಖೇನ ಯಾವ ಕಾರ್ಯ ಸಾಧನೆಯನ್ನು ಮಾಡಲು ಹೊರಟಿರುವೆನೋ ಅದೇ ಅಸಾಧ್ಯವಾದೀತು. ಯಾತಕ್ಕೆಂದರೆ, ಇದ್ದುದನ್ನು ಇದ್ದ ಹಾಗೆ ಹೇಳಿದರೆ, ಅದು ಅನೇಕರಿಗೆ ರುಚಿಸುವುದಿಲ್ಲ. ಅಷ್ಟೇ ಅಲ್ಲ; ನಿಸ್ವಾರ್ಥತೆಯಿಂದ ದೇಶದ ಏಳಿಗೆಯನ್ನೇ ಪ್ರಥಮ ಗುರಿಯಾಗಿಟ್ಟುಕೊಂಡು, ಶಾಂತಿ ಸಮಾಧಾನಗಳನ್ನು ನೆಲೆಗೊಳಿಸಲು ಹೊರಡುವ ಪ್ರತಿಯೊಬ್ಬರೂ, ಆಗಿಹೋದುದನ್ನು ಮರೆತೇ ಕೆಲಸ ಮಾಡಬೇಕು. ತಮ್ಮ ಭಾಗದ ನ್ಯಾಯವನ್ನು ಇತರರ ಮನಸ್ಸಿನಲ್ಲಿ ಬೇರೂರಿಸುವ ದೃಷ್ಟಿಯಿಂದ ಹಳೆ ಪುರಾಣಗಳನ್ನು ಆಗಾಗ್ಗೆ ಪುನರುಕ್ತ ಮಾಡುತ್ತ ಹೋದರೆ ರಾಜಿಯ ಕಾರುಬಾರು ಎಂದೂ ಕೈಗೂಡಲಿಕ್ಕಿಲ್ಲ. ಆದುದರಿಂದ ಈ ವರೆಗೆ ನಡೆದುಹೋದ ಸಂಗತಿಗಳನ್ನಾಗಲೀ ಅಥವಾ ಯಾರು ನಿಜವಾದ ಕಾಂಗ್ರೆಸಿಗರು ಮತ್ತು ಯಾರು ಅಲ್ಲ ಎಂಬುದನ್ನಾಗಲೀ ನಾನು ದೀರ್ಘವಾಗಿ ವಿಮರ್ಶಿಸಲು ಪ್ರಯತ್ನಿಸುವುದಿಲ್ಲ.

ಇಡೀ ಹಿಂದೂಸ್ಥಾನದಲ್ಲಿ ಕಾಂಗ್ರೆಸ್ ಪಾರ್ಟಿಯು ಸ್ವರಾಜ್ಯ ಸ್ಥಾಪನೆಗಾಗಿ ಹೋರಾಡುತಿದ್ದಾಗ್ಯೆ ಕೊಡಗಿನಲ್ಲಿಯೂ ಅನೇಕರು ಸಂಸ್ಥೆಯ ಮೆಂಬರರಾಗಿ ಸ್ವರಾಜ್ಯ ಸಂಗ್ರಾಮದಲ್ಲಿ ಭಾಗಿಗಳಾಗಿದ್ದರು. ಹೀಗೆ ಹೋರಾಡಿದವರಲ್ಲಿ ಯಾರೂ ಭಾರತದ ಇತರ ಭಾಗದ ಕಾಂಗ್ರೆಸಿಗರಿಗೆ ಅವರ ದೇಶ ಭಕ್ತಿಯಲ್ಲಾಗಲೀ ನೀತಿ ನಡವಳಿಕೆಗಳಲ್ಲಾಗಲೀ ಯಾವ ವಿಧದಲ್ಲೂ ಹಿಂದುಳಿದವರಾಗಿರಲಿಲ್ಲ. ಈ ಸಂಗ್ರಾಮದ ಪ್ರತಿಫಲವಾಗಿ ಭಾರತಕ್ಕೆ ಸ್ವಾತಂತ್ರ್ಯ ದೊರಕುವ ಕಾಲಕ್ಕೆ ಕೊಡಗು ಕಾಂಗ್ರೆಸಿಗರಲ್ಲಿ ಕೊಡಗಿನ ಭವಿಷ್ಯವನ್ನು ಕುರಿತಾಗಿ ಎರಡು ಅಭಿಪ್ರಾಯಗಳು ತಲೆದೋರಿದವು. ಒಂದು ಪಾರ್ಟಿಯವರು ಕೊಡಗು ಈ ವರೆಗೆ ಇದ್ದಂತೆಯೇ ಪ್ರತ್ಯೇಕ ಪ್ರಾಂತವಾಗಿದ್ದು, ಇಲ್ಲಿ ಗಾಂಧೀಜಿಯವರ ಧ್ಯೇಯದ ಕಲ್ಪನೆಯ ರಾಮರಾಜ್ಯವನ್ನು ಸ್ಥಾಪಿಸಬೇಕೆಂದೂ ಇನ್ನೊಂದು ಪಾರ್ಟಿಯವರು ಕೊಡಗು ಬಹು ಚಿಕ್ಕ ಪ್ರಾಂತ್ಯವಾದುದರಿಂದ ಇಲ್ಲಿ ಸ್ವತಂತ್ರ ಸರ್ಕಾರವನ್ನು ಸ್ಥಾಪಿಸಿ ನಡೆಸುವದು ಸಾಧ್ಯವಿಲ್ಲದ್ದರಿಂದ ಇದು ಮೈಸೂರು ಅಥವಾ ಮುಂದಕ್ಕೆ ಹುಟ್ಟಬಹುದಾದ ಕರ್ನಾಟಕ ಪ್ರಾಂತದಲ್ಲಿ ವಿಲೀನವಾಗುವದು ಉತ್ತಮವೆಂದೂ ಅಭಿಪ್ರಾಯಪಟ್ಟರು. ಈ ಎರಡು ಅಭಿಪ್ರಾಯಗಳ ಫಲಿತಾಂಶವಾಗಿ ಕೊಡಗು ಕಾಂಗ್ರೆಸ್ ಪಾರ್ಟಿಯಲ್ಲಿ ಒಡಕು ಬಂದು ಕಳೆದ ಚುನಾವಣೆಯ ಸಮಯದಲ್ಲಿ ಎರಡು ಪಾರ್ಟಿಯವರು ಬೇರೆ ಬೇರೆ ಉಮೇದ್ವಾರರನ್ನು ನಿಲ್ಲಿಸಿ ಸ್ಪರ್ಧಿಸಲು ಹೊರಟರು. ಆ ಸಮಯದಲ್ಲಿ ಪಂಡಿತ ನೆಹ್ರೂರವರು ಕೊಡಗಿನ ಭವಿಷ್ಯದ ತೀರ್ಮಾನವು ಈ ಚುನಾವಣೆಯಲ್ಲಿ ನಿರ್ಣಯಿಸಲ್ಪಡುವದು ಆವಶ್ಯವಿಲ್ಲವೆಂದು ಹೇಳಿದ ಮೇರೆ, ಕಾಂಗ್ರೆಸ್ ಪಾರ್ಟಿಯ ಉಮೇದುವಾರರು 'ತಾವು ಚುನಾಯಿತರಾದರೆ ದೇಶದ ಜನರ ಅಭಿಪ್ರಾಯವನ್ನು ಕೇಳದೆ, ದೇಶದ ಭವಿಷ್ಯವನ್ನು ಕುರಿತಾದ ಅಭಿಪ್ರಾಯವನ್ನು ಎಂದೂ ಕೊಡುವುದಿಲ್ಲವೆಂದೂ, ಒಂದು ವೇಳೆ ಕರ್ನಾಟಕ ಕಾಂಗ್ರೆಸ್ ಕಮಿಟಿಯವರು ನಮ್ಮ ಅಭಿಪ್ರಾಯವನ್ನು ಕೊಡಲೇಬೇಕೆಂದು ಬಲಾತ್ಕರಿಸಿದ ಪಕ್ಷದಲ್ಲಿ ನಾವೆಲ್ಲಾ ಒಟ್ಟಾಗಿ, ಎಸೆಂಬ್ಲಿ ಮೆಂಬರುತನಕ್ಕೇ ರಾಜಿನಾಮೆ ಕೊಟ್ಟು ಹೊರಗೆ ಬರುತ್ತೇವೆಂದೂ ಒಂದು ಘೋಷಣೆ ಹೊರಪಡಿಸಿ ಚುನಾವಣೆಯಲ್ಲಿ ಸ್ಪರ್ಧಿಸಿದರು. ಪ್ರತ್ಯೇಕ ಪಾರ್ಟಿ ಉಮೇದುವಾರರೂ ಸಹ ಬರೇ ಈ ಚುನಾವಣೆಯಲ್ಲಿ ಕೊಡಗಿನ ಭವಿಷ್ಯದ ವಿಚಾರ ಜನರ ಅಭಿಪ್ರಾಯವನ್ನು ಅರಿಯುವ ದೃಷ್ಟಿಯಿಂದ ಕಾಂಗ್ರೆಸ್ ಪಾರ್ಟಿಗೆ ತತ್ಕಾಲ ರಾಜಿನಾಮೆ ಕೊಟ್ಟು ಹೊರಗೆ ಬಂದಿದ್ದರೂ ಸಹ ಆ ರಾಜಿನಾಮೆ ಅರ್ಜಿಯಲ್ಲೇ 'ಚುನಾವಣೆ ಮುಗಿದ ಕೂಡಲೇ ತಾವೂ ಸಹ ಕಾಂಗ್ರೆಸಿಗೆ ಪುನಃ ಸೇರುತ್ತೇವೆ' ಎಂದು ಬರಕೊಟ್ಟಿದ್ದುದರಿಂದ ಅವರೂ ಚುನಾವಣೆಯಲ್ಲಿ ಸ್ಪರ್ಧಿಸಿದರು.

ಚುನಾವಣೆಯು ಮುಗಿದ ಕೂಡಲೇ ಇವರು ಇವರ ವಾಗ್ದಾನಕ್ಕನುಗುಣವಾಗಿ ತಾವು ಕಾಂಗ್ರೆಸ್ಸಿಗೆ ಪುನಃ ಬರುತ್ತೇವೆಂದು ಅರ್ಜಿ ಬರಕೊಂಡದ್ದಲ್ಲದೆ ಎಲ್ಲಾ ರೀತಿಯಲ್ಲೂ ಕಾಂಗ್ರೆಸ್ ಸರಕಾರದೊಡನೆ ಈ ವರೆವಿಗೂ ಸಹಕರಿಸಿ ವರ್ತಿಸಿದುದನ್ನು ದೇಶಸ್ಥರು ಕಣ್ಣಾರೆ ಕಾಣುತ್ತಲೂ ಇದ್ದೇವೆ. ಹೀಗಿದ್ದರೂ ಸಹ ಈ ಪಾರ್ಟಿಯವರನ್ನು ಕಾಂಗ್ರೆಸಿಗೆ ಸೇರಿಸಿಕೊಳ್ಳುವ ವಿಷಯದಲ್ಲಿ ಕೊಡಗು ಕಾಂಗ್ರೆಸ್ ಪಾರ್ಟಿಯವರು ಯಾವುದೊಂದು ತೀರ್ಮಾನಕ್ಕೆ ಬರದಿರುವದು ದೇಶದ ಏಳಿಗೆಯನ್ನೇ ಪ್ರಾಮುಖ್ಯವಾಗಿ ಮನಸಿನಲ್ಲಿಟ್ಟು, ರಾಜಕೀಯದಲ್ಲಿ ಸ್ವಲ್ಪಮಟ್ಟಿಗೆ ಭಾಗವಹಿಸುತ್ತಿರುವ ನಮಗೆಲ್ಲಾ ಮಹಾ ದುಃಖವನ್ನುಂಟು ಮಾಡಿದೆ.

ಶ್ರೀ ಪೂಣಚ್ಚನವರೂ ಮತ್ತು ಬೆಳ್ಳಪ್ಪನವರೂ ಇಬ್ಬರೂ ಕಾಂಗ್ರೆಸ್ ಪಕ್ಷದ ಧುರೀಣರು. ಇವರಿಬ್ಬರ ರಾಜಕೀಯ ತತ್ವದಲ್ಲಿ ಒಂದೇ ಒಂದು ವ್ಯತ್ಯಾಸವೆಂದರೆ ಅದು ಕೊಡಗಿನ ಭವಿತವ್ಯವನ್ನು ಕುರಿತಾಗಿ. ಯಾವಾಗ ಶ್ರೀ ಪೂಣಚ್ಚನವರೂ ಅವರ ಹಿಂಬಾಲಕರೂ ಶ್ರೀ ಬೆಳ್ಳಪ್ಪನವರ ತತ್ವಕ್ಕೆ ಎಂದರೆ, ಕೊಡಗನ್ನು ಪ್ರತ್ಯೇಕವಾಗಿಟ್ಟುಕೊಳ್ಳಲು 'ನಾವೂ ಸಹ ಒಪ್ಪುತ್ತೇವೆ' ಎಂಬುದಾಗಿ ಬಹಿರಂಗ ಪತ್ರವನ್ನು ಹೊರಡಿಸಿದರೋ ಆ ಲಾಗಾಯಿತಿನಿಂದ ಇವರೂ ಇವರ ಪಾರ್ಟಿಯವರೂ ಸಹ ಕೊಡಗು ಕಾಂಗ್ರೆಸ್ ಪ್ರತ್ಯೇಕ ಪಾರ್ಟಿಯಲ್ಲಿ ವಿಲೀನರಾದರು. ಅಂದ ಮೇಲೆ ಇವರೀರ್ವರೊಳಗೆ ಇದ್ದ ಒಂದೇ ಒಂದು ಜಟಿಲವಾದ ವ್ಯತ್ಯಾಸವು ಬಗೆ ಹರಿಯಿತೆಂದು ಪುನಃ ಹೇಳಬೇಕಾದ ಅವಶ್ಯವಿಲ್ಲ. ಸ್ಥಿತಿಗತಿಯು ಹೀಗಿದ್ದರೂ ಸಹ ಶ್ರೀ ಬೆಳ್ಳಪ್ಪನವರೂ ಅವರ ಪಾರ್ಟಿಯವರೂ ಕಾಂಗ್ರೆಸಿಗೆ ಸೇರಲು ಅರ್ಜಿ ಬರೆದು ವರ್ಷ ಎರಡಾಗಲಿಕ್ಕಾದರೂ ಸಹ ಆ ಅರ್ಜಿಗೆ ಇನ್ನೂ ಒಂದು ನಿರ್ದಿಷ್ಟವಾದ ನಿರ್ಣಯವನ್ನು ಕೊಡಗು ಕಾಂಗ್ರೆಸ್ ಪಾರ್ಟಿಯವರು ಮಾಡಲಿಲ್ಲವೆಂಬುದು ಶೋಚನೀಯ ಸಂಗತಿಯಾಗಿದೆ. ಯಾತಕ್ಕೆಂದರೆ ದೇಶದ ಬಹುಮುಖದ ಮುಂದುವರಿಯುವಿಕೆಯು ಫಲಭರಿತವಾಗಿ ಸಾಗಬೇಕಾದರೆ ದೇಶದ ಎಲ್ಲಾ ಜನರ ಸಹಕಾರವೂ ಒಮ್ಮನಸ್ಸಿನಿಂದ ಸರಕಾರಕ್ಕಿರಬೇಕಾದುದು ಅತ್ಯಾವಶ್ಯ. ಈ ದೃಷ್ಟಿಯಿಂದಲೇ ಕೆಲವು ತಿಂಗಳುಗಳ ಹಿಂದೆ ನಮ್ಮ ಗೃಹ ಮಂತ್ರಿಯಾದ ಕೈಲಾಸನಾಥ ಕಾಟ್ಜೂರವರು, ಕಮ್ಯುನಿಷ್ಟ್ ಪಾರ್ಟಿಯವರ ಮುಖಂಡರಾದ ಶ್ರೀ ಎ. ಕೆ. ಗೋಪಾಲನ್‌ರವರನ್ನು ಸಂಬೋಧಿಸಿ 'ನೀವು ಪುನಃ ಕಾಂಗ್ರೆಸ್ಸಿಗೆ ಬರುವದಾದರೆ, ನಿಮ್ಮನ್ನು ಎರಡು ಕೈಗಳನ್ನು ಚಾಚಿ ಅಪ್ಪಿಕೊಂಡು ಸ್ವಾಗತಿಸಲು ನಾವು ತಯಾರಿದ್ದೇವೆ' ಎಂಬುದಾಗಿ ಲೋಕಸಭೆಯಲ್ಲಿ ಬಹಿರಂಗವಾಗಿ ಹೇಳಿದ ವಾರ್ತೆಯನ್ನು ನಾವೆಲ್ಲ ನೋಡಿದ್ದೇವೆ. ಮದ್ರಾಸಿನ ಮುಖ್ಯ ಮಂತ್ರಿಯವರಾದ ಶ್ರೀ ರಾಜಗೋಪಾಲಾಚಾರಿಯವರು ಈಗ ಒಂದೆರಡು ವಾರಗಳಿಂದ ಮದ್ರಾಸು ಪ್ರಾಂತ್ಯದ ದಕ್ಷಿಣ ಜಿಲ್ಲೆಗಳಲ್ಲಿ ಪ್ರವಾಸ ಮಾಡುತಿದ್ದಾಗ, ಅಲ್ಲಲ್ಲಿ ಅವರು ಸಾರ್ವಜನಿಕ ಸಭೆಗಳ ಎದುರೂ ಕಾಂಗ್ರೆಸ್ ಕೆಲಸಗಾರರ ಸಭೆಗಳಲ್ಲೂ 'ಕಾಂಗ್ರೆಸಿನ ಶಕ್ತಿಯನ್ನು ನಾವು ಮೊದಲಿದ್ದಂತೆ ಎಲ್ಲಾ ವಿಧದಲ್ಲೂ ಅಭಿವೃದ್ಧಿಗೊಳಿಸಬೇಕು. ಈ ದೃಷ್ಟಿಯಿಂದ ಕಾಂಗ್ರೆಸ್ ಸಂಸ್ಥೆಯಲ್ಲಿ ಒಡಕುಂಟಾಗದಂತೆ ಪ್ರತಿ ಕಾಂಗ್ರೆಸ್ ಕೆಲಸಗಾರನೂ ವರ್ತಿಸಬೇಕಲ್ಲದೆ ಆಗುವಷ್ಟು ಜನರನ್ನು ಕಾಂಗ್ರೆಸ್ ಪಕ್ಷಕ್ಕೆ ಸೇರಿಸಬೇಕೆಂಬುದಾಗಿ ಮಾಡಿನ ಎಷ್ಟೋ ಭಾಷಣಗಳನ್ನು ನಾವು ಓದಿರುತ್ತೇವೆ.

ಅಷ್ಟೇ ಅಲ್ಲ, ಕಳೆದ ಮಹಾ ಚುನಾವಣೆಯಲ್ಲಿ ಕಾಂಗ್ರೆಸಿಗೆ ಎದುರಾಗಿ ಒಂದು ಪ್ರತ್ಯೇಕ ಪಾರ್ಟಿಯನ್ನೇ ನಿರ್ಮಾಣ ಮಾಡಿ, ಸ್ಪರ್ಧಿಸಿದುದೂ ಅಲ್ಲದೆ, ಸಣ್ಣ ಮೆಜಾರಿಟಿಯಿಂದ ಜಯಶೀಲವಾಗಿ ಬಂದ ಕಾಂಗ್ರೆಸ್ ಪಾರ್ಟಿಯ ಮಂತ್ರಿ ಮಂಡಲವನ್ನು ಮುರಿಯಲು ಸತತ ಪ್ರಯತ್ನ ಪಟ್ಟಿದ್ದಲ್ಲದೆ ತಮ್ಮ ಪಾರ್ಟಿಯ ಧ್ಯೇಯಕ್ಕೆ ವಿರೋಧವಾದ ಕಮ್ಯುನಿಸ್ಟ್ ಪಾರ್ಟಿಯ ಮುಖಂಡರೊಡನೆ ಕೈಕಟ್ಟಿ, ಹೇಗಾದರೂ ಕಾಂಗ್ರೆಸ್ ಮಂತ್ರಿಮಂಡಲವನ್ನೂ, ಕಾಂಗ್ರೆಸ್ ಪಾರ್ಟಿಯನ್ನೂ ಮುರಿಯಬೇಕೆಂದೂ ನಾನಾ ರೀತಿಯ ಭಾಷಣಗಳನ್ನೂ, ಪ್ರಯತ್ನಗಳನ್ನೂ ಮಾಡಿದ ಶ್ರೀ ಪ್ರಕಾಶಂರವರನ್ನು ಪ್ರಜಾ ಸೋಷಲಿಸ್ಟ್ ಪಾರ್ಟಿಯಿಂದ ರಾಜಿನಾಮೆ ಕೊಡಿಸಿ, ಏನೊಂದೂ ಶರತ್ತು ಇಲ್ಲದೆ ಅವರನ್ನು ಕಾಂಗ್ರೆಸ್ ಪಾರ್ಟಿಗೆ ಸೇರಿಸಿಕೊಂಡದ್ದಲ್ಲದೆ ಅವರನ್ನು ಮುಖ್ಯ ಮಂತ್ರಿಯನ್ನಾಗಿ ಮಾಡಿದುದನ್ನು ನಾವು ಕಾಣಲಿಲ್ಲವೇ?

ಭಾರತ ಭೂಮಿಯ ಇತರ ಭಾಗಗಳಲ್ಲಿ ಕಾಂಗ್ರೆಸಿಗರು, ಅವರವರ ಪ್ರಾಂತ್ಯಗಳ ಮುಂದುವರಿಕೆಯ ಹಿತದೃಷ್ಟಿಯಿಂದ, ಪಾರ್ಟಿಪಂಗಡಗಳನ್ನು ಮರೆತು ಒಮ್ಮನಸಿನಿಂದ ವಿರೋಧಭಿಪ್ರಾಯದ ಮುಂದಾಳುಗಳನ್ನೂ ಸಹ ಕಾಂಗ್ರೆಸ್ ಪಕ್ಷಕ್ಕೆ ಸ್ವಾಗತಿಸುತ್ತಿರುವುದಲ್ಲದೆ, ಅವರಿಗೆ ಮುಂದಾಳುತನವನ್ನೂ ಸಹ ಕೊಡುತ್ತಿರುವಾಗ್ಯೆ ನಮ್ಮ ಕೊಡಗು ಕಾಂಗ್ರೆಸ್ ಪಕ್ಷದ ಮುಂದಾಳುಗಳು ತಾವೇ ಕಾಂಗ್ರೆಸ್ ಪ್ರತ್ಯೇಕ ಪಕ್ಷದ ತತ್ವ ಒಪ್ಪಿಯೂ ಸಹ ಪ್ರತ್ಯೇಕ ಪಕ್ಷದವರು ಕಾಂಗ್ರೆಸಿಗೆ ಸೇರಲು ಎಡೆ ಕೊಡದಿರುವುದು ನಿಜವಾಗಿಯೂ ಆಶ್ಚರ್ಯಕರ.

ಶ್ರೀ. ಬೆಳ್ಳಪ್ಪನವರೂ ಮತ್ತು ಅವರ ಪಾರ್ಟಿಯವರೂ ಎಲ್ಲರೂ ತಿಳಿದಂತೆ ಕಮ್ಯೂನಿಷ್ಟರಲ್ಲ. ಅಥವಾ ಕಾಂಗ್ರೆಸು ಪಕ್ಷವು ಹಿಂದೂದೇಶಕ್ಕೆ ಸ್ವತಂತ್ರಗಳಿಸಲು ಹೋರಾಡುತ್ತಿದ್ದ ಕಾಲದಲ್ಲಿ ಇವರೇನೂ ಬ್ರಿಟಿಷರ ಪಕ್ಷವಹಿಸಿ, ದೇಶದ ಏಳಿಗೆಗೆ ವಿರೋಧ ಮಾಡಿದಂತ ದೇಶದ್ರೋಹಿಗಳೂ ಅಲ್ಲ. ಅದರ ಮೇಲೂ ಇವರು ಕಾಂಗ್ರೆಸಿಗೆ ವಿರೋಧವಾಗಿ ವರ್ತಿಸಿ, ಕಾಂಗ್ರೆಸಿನಿಂದ ಹೊರತಳ್ಳಲ್ಪಟ್ಟವರೂ ಅಲ್ಲ. ಹೀಗಿರುವಾಗ್ಯೆ, ನಮ್ಮ ಕಾಂಗ್ರೆಸ್ ಮುಂದಾಳುಗಳು, ಇವರನ್ನು ಒಳಗೆ ತೆಗೆದುಕೊಳ್ಳಲು ಇಷ್ಟರ ಮಟ್ಟಿಗೆ ಹಿಮ್ಮೆಟ್ಟುತ್ತಿರುವುದನ್ನು ನೋಡಿದರೆ, ದೇಶದ ಹಿತವನ್ನು ಬಯಸುವ ಯಾವನೊಬ್ಬ ವ್ಯಕ್ತಿಯ ಮನಃಸಲ್ಲಿಯೂ ಇದರಲ್ಲೇನಾದರೂ ಸ್ವಾರ್ಥತೆಯ ಅಂಶವಿರಬಹುದೇ ಎಂಬ ಸಂಶಯವನ್ನು ಹುಟ್ಟಿಸದಿರಲಾರದು.

ಈಗ ಪುನಃ ಕಾಂಗ್ರೆಸಿಗೆ ಸೇರುತ್ತೇವೆಂದು ಅರ್ಜಿ ಮಾಡಿಕೊಂಡವರು ಬರೇ ೫ ಅಥವಾ ೬ ಜನರೆಂದು ಭಾವಿಸಿ, ಅವರನ್ನು ನಮ್ಮ ಮುಂದಾಳುಗಳು ಅಸಡ್ಡೆಯಿಂದ ಕಾಣಬಹುದು. ಅದರೆ ನಿಜಾಂಶವು ಹಾಗಿಲ್ಲ. ಪ್ರತ್ಯೇಕ ಪಕ್ಷದ ಜನರಿಗೆ ಕಳೆದ ಚುನಾವಣೆಯಲ್ಲಿ ಬೆಂಬಲ ಕೊಟ್ಟ ಓಟರರ ಸಂಖ್ಯೆಯು ೫೩,೫೮೪ ಎಂಬದನ್ನು ಇವರು ಮರೆಯಬಾರದು. ಈಗ ಅಧಿಕಾರದಲ್ಲಿರುವ ಪಾರ್ಟಿಗೆ ಒಟ್ಟಾಗಿ ಬೆಂಬಲಕೊಟ್ಟವರ ಸಂಖ್ಯೆಯು ೩೨,೦೫೫. ಅಂದ ಮೇಲೆ ಮತದಾತರಲ್ಲಿ ಐದರಲ್ಲಿ ಎರಡು ಪಾಲಿನಷ್ಟು ಜನರು ಇವರ ಹಿಂಬಾಲಕರಾಗಿದ್ದಾರೆಂಬುವುದನ್ನು ಅಧಿಕಾರದಲ್ಲಿರುವವರು ಖಂಡಿತವಾಗಿಯೂ ಗಮನಿಸಬೇಕಾಗಿದೆ.

ಇವರನ್ನು ಕಾಂಗ್ರೆಸಿಗೆ ಸೇರಿಸಿಕೊಳ್ಳಬೇಕೋ ಯಾ ಬೇಡವೋ ಎಂಬ ಪ್ರಶ್ನೆಯನ್ನು ಆಗುವಷ್ಟು ಬೇಗನೆ ತೀರ್ಮಾನಿಸದಿದ್ದರೆ ಇದರಿಂದ ದೇಶಕ್ಕೆ ಬಹಳ ಹಾನಿ ಇದೆ. ಆದರಲ್ಲೂ, ಈ ಕೆಳಗೆ ನಾನು ಕೊಡುತ್ತಿರುವ ಕಾರಣಗಳಿಂದ, ಈ ಸಮಸ್ಯೆಯನ್ನು ಯಾವ ರೀತಿಯಲ್ಲೂ ಮುಂದಕ್ಕೆ ಇಡದೆ ಒಡನೆಯೇ ಬಗೆಹರಿಸುವುದು ದೇಶದ ಹಿತದೃಷ್ಟಿಯಿಂದ ಬಹು ಒಳ್ಳೆಯದು.

ಒಂದನೇಯದಾಗಿ, ಪ್ರತ್ಯೇಕವಾದಿಗಳ ಮುಂದಾಳುಗಳಿಗೂ, ಅವರ ಅನುಯಾಯಿಗಳಿಗೂ, ಈಗಿನ ಸರಕಾರವು ಕೈಕೊಂಡಿರುವ ಅನೇಕ ಯೋಜನೆಗಳಲ್ಲಿ ಮನಃಪೂರ್ವಕ ಸಹಕರಿಸಿ, ದೇಶದ ಬಹುಮುಖ ಏಳಿಗೆಯನ್ನು ಕೈಗೂಡಿಸಬೇಕೆಂಬ ಮಹತ್ತರವಾದ

ಕಾಂಕ್ಷೆ ಇರುವುದೇ ಅಲ್ಲದೆ, ಇನ್ನೂ ಅನೇಕ ರೀತಿಯ ಸಲಹೆಗಳನ್ನೂ ಸಹ ಸರಕಾರದ ಮುಂದಿಡಬೇಕೆಂಬ ಅಪೇಕ್ಷೆಯೂ ಇದೆ. ಆದರೆ ಈಗಿನ ಅಧಿಕಾರಿ ವರ್ಗದವರು ಅವರನ್ನು ಬಹಿಷ್ಕೃತರಂತೆ ಕಾಣುವುದರಿಂದ, ಇವರ ಕಾರ್ಯ ಕಲಾಪಗಳಲ್ಲಿ ಮನಃಪೂರ್ವಕವಾಗಿ ವರ್ತಿಸಲು, ಅವರವರ ವ್ಯಕ್ತಿತ್ವವೂ ಸ್ವಾಭಿಮಾನವೂ ಅಡ್ಡ ಬರುವಂತಿದೆ. ಕೇವಲ ಸ್ವಾರ್ಥಪರರಾಗಿ, ತಮ್ಮ ವೈಯಕ್ತಿಕ ಮುಂದುವರಿಕೆಯನ್ನು ಮಾತ್ರ ಮುಖ್ಯ ಗುರಿಯಾಗಿಟ್ಟುಕೊಂಡಿರುವ, ಸ್ವಾಭಿಮಾನ ರಹಿತರಾದ ಆದೆಷ್ಟೋ ಮಂದಿ ಮನುಷ್ಯರು, ಅಧಿಕಾರಿ ವರ್ಗದವರ, ಪ್ರೀತಿಯನ್ನು ಹೇಗಾದರೂ ಸಂಪಾದಿಸಿ, ತಮ್ಮ ಕಾರ್ಯಸಾಧನೆಯನು ಕೈಗೂಡಿಸಿಕೊಳ್ಳಬೇಕೆಂಬ ದೃಷ್ಟಿಯಿಂದ ತೋರಿಕೆಯ ಸಹಕಾರವನ್ನು ಬಹಿರಂಗಪಡಿಸಿದರೂ, ದೇಶದ ಪ್ರತಿಯೊಬ್ಬನ ಸಹಕಾರವನ್ನು ಸರಕಾರವು ಆಶಿಸುವುದಾದರೆ, ಈ ತರದ ಪಂಗಡ ಬೇಧವನ್ನು ಒಡನೆ ಕಿತ್ತೊಗೆಯಬೇಕು. ಕಾಂಗ್ರೆಸ್ ಪಾರ್ಟಿ ಮುಂದಾಳುಗಳ ದೃಷ್ಟಿಯಲ್ಲಿ, ದೇಶದ ಮುಂದುವರಿಕೆಯ ಗುರಿಯು ಮಾತ್ರ ಪ್ರಾಮುಖ್ಯವಾಗಿದ್ದು, ತಾವು ಐದು ವರ್ಷ ಅಧಿಕಾರ ನಡೆಸಿ, ಮುಂದಿನ ಚುನಾವಣೆಗೆ ನಿಲ್ಲುವಾಗ, ಬ್ರಿಟಿಷರು ತಮ್ಮ ಪ್ರಭುತ್ವವನ್ನು ಇಲ್ಲಿ ಸ್ಥಾಪಿಸಿ, ಕೆಲವು ವರ್ಷಗಳಲ್ಲೇ ಹೇಗೆ 'ಬ್ರಿಟಿಷರ ಆಳಿಕೆಯಿಂದ ಹಿಂದೂದೇಶಕ್ಕೆ ಉಂಟಾದ ಪ್ರಯೋಜನಗಳು' ಎಂಬ ಒಂದು ಪಟ್ಟಿಯನ್ನು ತಯಾರಿಸಿ ಎಲ್ಲೆಲ್ಲೂ ಬಹಿರಂಗಪಡಿಸುತ್ತಿದ್ದರೋ, ಹಾಗೆಯೇ ಇವರೂ ಪ್ರಚುರಪಡಿಸುವ ಪರಿಸ್ಥಿತಿಯನ್ನು ಕಲ್ಪಿಸಲು ಪ್ರಯತ್ನಪಡಬೇಕು. ಅದಲ್ಲದೆ ಇತರ ಪಾರ್ಟಿಯವರು ಇವರ ಕಾರ್ಯಕಲಾಪಗಳಲ್ಲಿ ಒತ್ತಾಸೆ ನೀಡಲು ಅಡಚಣೆಯಾಗುವಂತ ವಿಷಮ ಸನ್ನಿವೇಶಗಳನ್ನು ಕಲ್ಪಿಸದಂತೆ ಎಚ್ಚರಿಕೆ ತೆಗೆದುಕೊಳ್ಳಬೇಕು. ಅಂತಹ ಸನ್ನಿವೇಶವನ್ನು ಕಲ್ಪಿಸಬೇಕಾದರೆ, ಇವರು ತೆಗೆಯಬೇಕಾದ ಪ್ರಥಮ ಹೆಜ್ಜೆ ಎಂದರೆ, ಎಲ್ಲರನ್ನೂ ಕಾಂಗ್ರೆಸಿಗೆ ಸೇರಿಸುವ ಪ್ರಯತ್ನವೆಂಬುದನ್ನು ಮತ್ತೆ ಹೇಳಬೇಕಾಗಿಲ್ಲ.

ಎರಡನೆಯದಾಗಿ, ಯೂನಿಯನ್ ಸರಕಾರದವರು ಈಗಾಗಲೇ ಭಾಷಾವಾರು ಪ್ರಾಂತ್ಯ ರಚನೆಯ ಸಮಸ್ಯೆಯನ್ನು ಪರಿಶೀಲಿಸಲು ಒಂದು ಹೈಪವರ್ ಕಮಿಷನನ್ನು ನಿರ್ಮಿಸುವುದರಿಂದ, ಅದರ ಎದುರು ಕೊಡಗಿನ ಭವಿತವ್ಯವನ್ನು ಕುರಿತು ರುಜುವಾತುಕೊಡುವ ಸಂದರ್ಭವು ಈಗಾಗಲೇ ಬರುವುದಿದೆ. ಆ ಸಮಯಕ್ಕೆ ನಾವೆಲ್ಲಾ ಏಕಮುಖವಾದ ಅಭಿಪ್ರಾಯವನ್ನು ಕೊಡುವುದು ದೇಶದ ಹಿತದೃಷ್ಟಿಯಿಂದ ಒಳ್ಳೆಯದಾದ ಕಾರಣ, ಕಾಂಗ್ರೆಸಿಗರೊಳಗೆ ಈ ತರದ ಅರ್ಥರಹಿತವಾದ ಒಡಕನ್ನು ಇಟ್ಟುಕೊಳ್ಳುವುದು ಎಂದೂ ಯೋಗ್ಯತೆಯಲ್ಲ ಈಗ ಅಧಿಕಾರದಲ್ಲಿರುವವರು ಚುನಾವಣೆಯ ಕಾಲದಲ್ಲಿ ಓಟರರಿಗೆ ಬಹಿರಂಗವಾಗಿ 'ಕೊಡಗನ್ನು ನಾವು ಪ್ರತ್ಯೇಕ ಇಡಲು ಪ್ರಯತ್ನಪಡುವವರಲ್ಲ, ಬದಲಿಗೆ ಯವನ್ನು ದೇಶಕ್ಕರನ್ನು ಕೇಳದೆ ಮಾಡುವುದಿಲ್ಲ' ಎಂಬುದಾಗಿ ಕೊಟ್ಟ ವಾಗ್ದಾನವನ್ನು ಈಗ ಕಾರ್ಯರೂಪದಲ್ಲಿ ತೋರಿಸಬೇಕಾಗಿದೆ.

ಮೂರನೆಯದಾಗಿ, ಅಧಿಕಾರ ವರ್ಗದಲ್ಲಿರುವವರು ಅವರ ಗುಪ್ತಚಾರರ, ಅಥವಾ ಇನ್ನಿತರ, ಸಲಹೆಕಾರರ ವರದಿ ಪ್ರಕಾರ, ಇವರ ಆಳಿಕೆಯನ್ನು ಕುರಿತು ಎಲ್ಲರಲ್ಲಿಯೂ ತೃಪ್ತಿ ಇದೆ ಎಂಬ ಭಾವನೆಯಿಂದ ವರ್ತಿಸುವುದು ಕೇವಲ ಬುದ್ಧಿವಂತಿಕೆಯ ದಾರಿ ಎಂದು ಹೇಳಲು ಸಾಧ್ಯವಿಲ್ಲ. ಕಾಂಗ್ರೆಸಿಗರೊಳಗೆ ಇರುವ ಈ ಸಣ್ಣ ಒಡಕನ್ನು ವಿಪರೀತವಾಗಿ ಮಾಡಿ, ಅಧಿಕಾರಿಗಳು ಮಾಡುತ್ತಿರುವ ಪ್ರತಿಯೊಂದು ಕೆಲಸಕ್ಕೆ ನಾನಾ ರೀತಿಯ ಪಾರ್ಟಿ ಕಾರಣಗಳನ್ನು ಕಲ್ಪಿಸಿ, ನಿಜಾಂಶದಿಂದ ಓಟರರನ್ನು ಕಾಂಗ್ರೆಸ್ ಸಂಸ್ಥೆಯಿಂದ ಬೇರೆ ಪಾರ್ಟಿಗಳೆಡೆಯು ವ ಪ್ರಯತ್ನಗಳು ಬಿರುಸಾಗಿ ನಡೆಯುತ್ತಿದೆ. ಆದುದರಿಂದ, ದೇಶದ ಏಳಿಗೆಯು ಅಧಿಕಾರದಲ್ಲಿರುವ ಪಾರ್ಟಿಯವರ ಮುಖ್ಯ ಗುರಿಯಾದರೆ, ಕಾಂಗ್ರೆಸಿಗರೊಳಗೆ ಇರುವ ಈ ಅರ್ಥರಹಿತವಾದ ಒಡಕನ್ನು ಆಗುವಷ್ಟು ಬೇಗನೆ ಬಗೆಹರಿಸುವುದು ಒಳ್ಳೆಯದು.

—

ನಾಳೆಯ ರಾಜಭಾಷೆ—

ಹಿಂದಿಯನ್ನು ಕಲಿಯಿರಿ.

ತಾ. ೬—೧೨—೫೦ರಲ್ಲಿ ಮಡಿಕೇರಿಯಲ್ಲಿ ನಡೆದ ಅಖಿಲ ಕೊಡಗು ಹಿಂದೀ ಪ್ರಚಾರಕರ ಸಮ್ಮೇಳನದ ಅಧ್ಯಕ್ಷಸ್ಥಾನ ವಹಿಸಿದ ಅಖಿಲ ಭಾರತ ಹಿಂದೀ ಪರಿಷತ್ ಮತ್ತು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಕಾರ್ಯದರ್ಶಿಗಳಾದ ಶ್ರೀ ಎಂ. ಸತ್ಯನಾರಾಯಣರವರು ಮಾಡಿದ ಭಾಷಣದ ಸಾರಾಂಶ.

ಇಲ್ಲಿಗೆ ಬರುವ ಅವಕಾಶ ಕಲ್ಪಿಸಿಕೊಟ್ಟದಕ್ಕೆ ಚಿರಋಣಿ. ಕೊಡಗನ್ನು ನೋಡಿ ಈ ಸುಂದರ ನಾಡಿಗೆ ಈ ಮೊದಲು ನಾನು ಬರಲಿಲ್ಲವಲ್ಲಾ ಎನಿಸುತ್ತದೆ. ಈಗ ಹಾಡಿದ ವಂದೇ ಮಾತರಂ ಗೀತೆಯಲ್ಲಿ ಹೇಳಿದಂತೆ ಕೊಡಗು "ಸುಜಲಾಂ, ಸುಫಲಾಂ, ಸಸ್ಯಶ್ಯಾಮಲಾಂ ಮತ್ತು ಮಲಯಜಶೀತಲಾಂ' ಆಗಿದೆ. ಇದನ್ನು ಬರೆದ ಕವಿ ಬಂಕಿಮಚಂದ್ರ ಚಟರ್ಜಿಯವರು ಯಾವುದೋ ಸುಂದರ ಕಲ್ಪನೆಯಿಂದ ಇದನ್ನು ಬರೆದಿರಬಹುದು. ಏಕೆಂದರೆ ಹಿಂದೂದೇಶದ ಸಾಧಾರಣ ಎಲ್ಲಾ ಭಾಗಗಳನ್ನ ನಾನು ಸುತ್ತಿ ನೋಡಿರುವೆನು. ಒಂದೊಂದೆಡೆ ಒಂದೊಂದು ಸಂಪತ್ತಿರಬಹುದಾದರೂ ಮೇಲಿನ ಕವಿಕಲ್ಪನೆಯ ಎಲ್ಲಾ ವಿಷಯಗಳು ಒಂದೆಡೆ ತೋರುವ ಭಾಗ ಎಲ್ಲಿಯೂ ಇಲ್ಲ. ಆದರೆ ಕೊಡಗಿನಲ್ಲಿ ಆ ಕವಿಯ ಕಲ್ಪನೆ ಮೂರ್ತೀಭವಿಸಿದಂತಿದೆ. ಕೊಡಗು ತ್ರಿವೇಣಿಯ ನದಿಯಾದ ಕಾವೇರಿಯ ಉಗಮಸ್ಥಾನವಾಗಿ ಸುಜಲಾಂ ಎನ್ನಿಸಿದೆ. ಹಿಂದೂದೇಶದಲ್ಲಿ ಅನೇಕ ನದಿಗಳಿವೆ. ಆದರೆ ಕಾವೇರಿ ನದಿಯಷ್ಟು ಉಪಯುಕ್ತ ನದಿ ಬೇರಿಲ್ಲ. ಅದರ ಪ್ರತಿಯೊಂದು ಬಿಂದು ನೀರೂ ಕೂಡ ಸದುಪಯೋಗವಾಗುತ್ತದೆ. ಆದ್ದರಿಂದಲೇ ಇದರ ಉಲ್ಲೇಖನವು ಉತ್ತರದ ಗಂಗಾನದಿಗಿಂತ ಹಿಂದಿನಿಂದಲೇ ನಮ್ಮ ಪುರಾತನ ಗ್ರಂಥಗಳಲ್ಲಿದೆ.

ನಾನು ವಿಕೇಂದ್ರೀಕೃತ ಆಡಳಿತ ಕ್ರಮದಲ್ಲಿ ಪೂರ್ಣ ವಿಶ್ವಾಸವಿರುವವನು. ಕೊಡಗು ಯಾವುದೋ ಒಂದು ಸುಯೋಗದಿಂದ ಪ್ರತ್ಯೇಕ ಪ್ರಾಂತವಾಗಿ ಉಳಿದಿದ್ದ, ಕೇಂದ್ರ ಸರಕಾರದ ಯಾವುದೇ ಸಹಾಯವಿಲ್ಲದೆ ಅದು ತನ್ನ ಕಾಲಿನ ಮೇಲೆ ನಿಂತು ಜನಹಿತ ಆಡಳಿತ ನಡೆಸುತ್ತಿದೆ ಇಂಥಾ ಚಿಕ್ಕ ಆಡಳಿತ ಘಟಕಗಳು ಸ್ವಾವಲಂಬಿಗಳಾಗಿ ಉಪಯುಕ್ತ ಆಡಳಿತ ನಡೆಸುವದರಿಂದ ಆಡಳಿತವು ದಕ್ಷವೂ, ಹೆಚ್ಚು ಜನಹಿತವೂ ಆಗುವದು. ಕೊಡಗು ಕೇಂದ್ರದಿಂದ ಸಹಾಯ ಪಡೆಯದಿರುವದು ಮಾತ್ರವಲ್ಲ; ಬದಲಾಗಿ ಕೇಂದ್ರಕ್ಕೆ ಆಹಾರ ಮತ್ತಿತರ ವಿಚಾರಗಳಲ್ಲಿ ಸಹಾಯನೀಡುವ ಸ್ಥಿತಿಯಲ್ಲಿದೆಯೆಂದು ತಿಳಿದು ಸಂತೋಷವಾಯಿತು.

ಭೌಗೋಳಿಕ ಮತ್ತು ಜನಸಂಖ್ಯೆಯ ದೃಷ್ಟಿಯಿಂದ ಕೊಡಗು ಚಿಕ್ಕದಾಗಿರಬಹುದು. ಆದರೆ ಒಂದು ದೇಶದ ಘನತೆ, ಹಿರಿಮೆಗಳು ಅದರ ವಿಸ್ತಾರದಲ್ಲಾಗಲೀ, ಜನಸಂಖ್ಯೆಯಲ್ಲಾಗಲೀ ಇಲ್ಲ. ಇಂಗ್ಲೆಂಡು ಚಿಕ್ಕ ದೇಶ ಅದರ ಜನಸಂಖ್ಯೆ ಕೇವಲ ನಾಲ್ಕು ಕೋಟಿ. ಅಂಥಾ ದೇಶವು ಸೂರ್ಯನೇ ಅಸ್ತಮಾನನಾಗದ ಸಾಮ್ರಾಜ್ಯವನ್ನು ಕಟ್ಟಿತ್ತು. ಹಿಂದೂದೇಶದಲ್ಲಿ ಹೆಚ್ಚೆಂದರೆ ೫೦೦೦ ದಷ್ಟು ಬ್ರಿಟಿಷರು ಬಂದು ಇಲ್ಲಿಯ ಮೂವತ್ತೈದು ಕೋಟಿ ಜನರ ಮೇಲೆ ಎರಡು ಶತಮಾನಗಳ ವರೆಗೆ ಶಾಸನ ನಡೆಸಿದರು. ಆದ್ದರಿಂದ ದೇಶದ ವಿಸ್ತಾರ, ಜನಸಂಖ್ಯೆ ಹಿರಿದಲ್ಲ. ದೇಶದ ಜನರು ಎಂಥಾವರು, ಅವರ ಯೋಗ್ಯತೆ ಏನು ಎಂಬುದು ಹಿರಿದು. ಅವರ ಅರ್ಹತೆ, ಹಿರಿಮೆಯ ಮೇಲೆ ದೇಶದ ಹಿರಿಮೆ ಹೊಂದಿಕೊಂಡಿದೆ.

ಈ ದೃಷ್ಟಿಯಿಂದ ಕೊಡಗು ಹಿರಿದಾದ ದೇಶ. ಏಕೆಂದರೆ ಸ್ವತಂತ್ರ ಭಾರತದ ಪ್ರಥಮ ಸೇನಾನಿಯನ್ನು ಒದಗಿಸಿದ ಸಂಸ್ಥಾನವಿದು. ಒಮ್ಮೆ ದಕ್ಷಿಣ ಭಾರತದವರು ಸೈನ್ಯಕ್ಕೆ ಯೋಗ್ಯರಲ್ಲ. ಇಲ್ಲಿಯವರು 'ಮಾರ್ಶಲ್ ರೇಸ್' ಅಲ್ಲ ಎಂಬ ಭಾವನೆ ಪ್ರಚಲಿತವಾಗಿತ್ತು. ದಕ್ಷಿಣದವರು ಕೇವಲ ಮೆದುಳಿನ ಕೆಲಸಕ್ಕೆ ಮಾತ್ರ ಯೋಗ್ಯರು. ಬಂದೂಕ ಉಪಯೋಗಿಸಲು ಅಸಮರ್ಥರು ಎಂಬ ಕಲ್ಪನೆಯಿತ್ತು. ಆದರೆ ಸ್ವಾತಂತ್ರ್ಯ ದೊರೆತ ಒಡನೆಯೇ ದಕ್ಷಿಣದವರು ಲೇಖನಿ ಉಪಯೋಗಿಸುವಷ್ಟೇ ದಕ್ಷತೆಯಿಂದ ಬಂದೂಕನ್ನೂ ಉಪಯೋಗಿಸಲು ಶಕ್ತರು ಎಂಬುದು ಸ್ಥಿರವಾಯಿತು

ಹಿಂದಿಯ ವಿಚಾರದಲ್ಲಿ ದಕ್ಷಿಣದವರಾದ ನಮಗೆ ಸ್ವಲ್ಪ ತೊಡಕಿದೆ. ಅದನ್ನು ಹೊಸದಾಗಿ ಕಲಿಯಬೇಕಿದೆ. ಆದರೆ ಅತಿ ಜಟಿಲವಾದ ಇಂಗ್ಲಿಷನ್ನು ಕಲಿತು ಬ್ರಿಟಿಷರಿಗೇ ತಿರುಮಂತ್ರ ಹೇಳಿದ ದಕ್ಷಿಣದವರು ಹಿಂದಿಯಲ್ಲಿ ಉತ್ತರದವರಿಗೆ ಪಾಠ ಹೇಳುವ ದಿನ ಬೇಗ ಬಂದಿರದೆಂದು ಈಗ ನಡೆದಿರುವ ಕಾರ್ಯಕ್ರಮದಿಂದಲೇ ವಿಧಿತವಾಗುತ್ತದೆ. ಕೊಡಗಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ಆದ ಪ್ರಗತಿ ಪ್ರಶಂಸಾರ್ಹವಾಗಿದೆ. ಇಲ್ಲಿಯ ಸರಕಾರವೂ ಹಿಂದಿಗೆ ಸಾಕಷ್ಟು ಪ್ರೋತ್ಸಾಹ ಕೊಟ್ಟು ಹೈಯರ್ ಎಲಿಮೆಂಟರಿ ಮತ್ತು ಹೈಸ್ಕೂಲುಗಳಲ್ಲಿ ಅದನ್ನು ಖಡ್ಡಾಯವಾಗಿರಿಸಿರುವದು ಸ್ತುತ್ಯವಾಗಿದೆ. ನನ್ನ ಹಳೆಯ ಗೆಳೆಯರಾದ ಕೊಡಗಿನ ಮುಖ್ಯ ಮಂತ್ರಿಯವರು ಇಲ್ಲಿಯ ಹಿಂದೀ ಪ್ರಚಾರ ಸಭೆಯ ಅಧ್ಯಕ್ಷರಾಗಿರುವದು ಶುಭ ಚಿಹ್ನೆಯಾಗಿದೆ.

ಭಾಷೆಯು ಜನಜೀವನದೊಡನೆ ಹೊಂದಿಕೊಂಡು ಬೆಳೆಯಬೇಕು. ಪರಿಶುದ್ಧತೆ, ಮೊದಲಾದ ದೃಷ್ಟಿಯಿಂದ ಭಾಷೆ ಸಂಕುಚಿತ ಗೋಡೆಯೊಳಗೆ ವಿಹರಿಸಲೆತ್ನಿಸಿದರೆ ಅದು ಜೀವಂತಭಾಷೆಯಾಗಿ ಬಹುಕಾಲ ಬಾಳಲಾರದು. ಹಿಂದಿನ ಹಿಂದಿಗೂ ಇಂದಿನದಕ್ಕೂ ಬಹಳ ಅಂತರವಿದೆ ಇಂದಿನದಕ್ಕೂ ನಾಳೆಯದಕ್ಕೂ ಅಂತರವಿರುತ್ತದೆ. ವಿವಿಧ ಪ್ರಾಂತಗಳಲ್ಲೂ ಕೂಡ ಒಂದೇ ಭಾಷೆಯಲ್ಲಿ ಅಂತರ ಬಂದೇ ಬರುತ್ತದೆ. ಹಿಂದಿಯು ನಮ್ಮ ರಾಷ್ಟ್ರ ಭಾಷೆಯಾಗಿದೆ. ಮುಂದಿನ ಹತ್ತು ಹನ್ನೆರಡು ವರ್ಷಗಳ ನಂತರ ಅದು ಇಂಗ್ಲಿಷಿನ ಸ್ಥಾನವನ್ನಾಕ್ರಮಿಸುವದು. ಹಿಂದಿಯು ಪ್ರಾಂತೀಕ ಭಾಷೆಗಳಿಗೆ ವೈರಿಯಲ್ಲ. ಅವುಗಳ ಮೇಲೆ ದಬ್ಬಾಳಿಕೆ ನಡೆಸಲು ಅದು ಇರುವದಲ್ಲ. ಪ್ರಾಂತಗಳಲ್ಲಿ ಅಲ್ಲಲ್ಲಿಯ ಮಾತೃಭಾಷೆಗಳು ಸರ್ವ ಸ್ವತಂತ್ರವಾಗಿರುವವು. ಪ್ರಾಂತಗಳ ಆಡಳಿತ ಭಾಷೆಯೂ ಅದೇ ಆಗಿರುವದು. ಆದರೆ ಅಂತರ್ ಪ್ರಾಂತೀಯ ವ್ಯವಹಾರಗಳಿಗೂ, ಕೇಂದ್ರದ ಆಡಳಿತಕ್ಕೂ, ವಿವಿಧ ಪ್ರಾಂತದ ವಿವಿಧ ಜನತೆಯನ್ನು ಒಂದಾಗಿಸಿ ಅಖಂಡ ಭರತಖಂಡದ ಏಕತೆಯನ್ನು ಸಾಧಿಸುವದಕ್ಕೂ ಭಾಷೆ ಹಿಂದಿಯಾಗುವದು. ಆದ್ದರಿಂದ ಹಿಂದಿಯನ್ನು ಸರ್ವರೂ ಸ್ವಾಗತಿಸಿ, ಅದನ್ನು ಅಭ್ಯಾಸಮಾಡಿ ನಾಡಿನ ಏಳಿಗೆಗೂ, ದೇಶದ ಐಕ್ಯತೆಗೂ ಕಾರಣರಾಗಬೇಕು. ಕೊಡಗು ವಿದ್ಯೆಯಲ್ಲಿ ಹಿಂದೂದೇಶದ ಇತರ ಪ್ರಾಂತಗಳೆಲ್ಲದಕ್ಕೂ ಆದರ್ಶವಾಗಿದೆಯೆಂದು ತಿಳಿದೆನು. ಹಿಂದಿಯ ಬಗ್ಗೆ ಇಲ್ಲಿಯ ಸರಕಾರವೂ, ಜನತೆಯೂ, ಹೆಂಗಳೆಯರೂ ತೋರಿಸುತ್ತಿರುವ ಆಸಕ್ತಿಯಿಂದ ಕೊಡಗು ಹಿಂದಿ ಯಲ್ಲಿಯೂ ಇತರ ಪ್ರಾಂತಗಳಿಗೆ ಆದರ್ಶವಾಗುವದೆಂದು ಭಾವಿಸುತ್ತೇನೆ.

ಇಲ್ಲಿ ಹೆಚ್ಚು ಸಂಖ್ಯೆಯಲ್ಲಿ ಬಂದಿರುವ ಮಹಿಳೆಯರನ್ನು ನೋಡಿ ನನಗೆ ತುಂಬಾ ಸಂತೋಷವಾಗುತ್ತದೆ. ಹಿಂದೂದೇಶದ ಮಹಿಳೆಯರಿಂದಾಗಿಯೇ ನಮ್ಮ ಆರ್ಯ ಸಂಸ್ಕೃತಿ, ಸಂಪ್ರದಾಯಗಳು ಇಂದಿಗೂ ಉಳಿದಿವೆ. ಹೆಂಗಸರು ಬದಲಾವಣೆಗೆ ಬೇಗ ಒಪ್ಪುವವರಲ್ಲ. ಒಮ್ಮೆ ಒಪ್ಪಿದ ನಂತರ ಅದನ್ನು ಬಿಡುವವರಲ್ಲ. ಬ್ರಿಟಿಷರ ಆಡಳಿತ ಕಾಲದಲ್ಲಿ ಗಂಡಸರಾದ ನಾವು ಅವರ ರೀತಿ ನೀತಿಗೆ ಮರುಳಾಗಿ ಹೇಟುಬೂಟುಗಳ ದಾಸರಾಗಿ ನಮ್ಮ ಉಡಿಗೆ ತೊಡಿಗೆ, ಸಂಸ್ಕೃತಿಗಳಿಗೆ ತಿಲಾಂಜಲಿ ಇತ್ತೆವು. ಆದರೆ ನಮ್ಮ ಮಹಿಳಾ ವರ್ಗವು ಅಂಥಾ ಬದಲಾವಣೆಗೆ ಎಡೆಕೊಡದೆ ದೇಶದ ಸಂಸ್ಕೃತಿಯನ್ನು ಉಳಿಸಿದ್ದಾರೆ. ಇಂದು ಅವರು ಹಿಂದಿಯ ಮೇಲೆ ಹೆಚ್ಚು ಆಸಕ್ತಿ ತೋರುತ್ತಿದ್ದಾರೆ. ಇದರಿಂದಲೇ ನಾಳಿನ ಭವಿಷ್ಯ ಭವ್ಯವಾಗುವದರೆಂಬುದರಲ್ಲಿ ಸಂಶಯವಿಲ್ಲ.

—

ಕಣ್ಮರೆಯಾದ 'ಸರ್' ಬೆನಗಲ್ ನರಸಿಂಗರಾಯರು.

ಭಾರತದ ಪ್ರಸಿದ್ಧ ರಾಜಕಾರಿಣಿಗಳ ಲ್ಲೊಬ್ಬರಾದ ಶ್ರೀ ಬೆನಗಲ್ ನರಸಿಂಗ ರಾಯರು ಸ್ವಿಟ್ಜರ್‌ಲೆಂಡಿನ ಝೂರಿಚ್ ಆ ಸ್ಪತ್ರೆಯಲ್ಲಿ ಕಳೆದ ನವಂಬರ್ ೩೦ರಂದು ಬೆಳಿಗ್ಗೆ ೭—೧೫ ಗಂಟೆಗೆ ದೈವಾಧೀನರಾದ ರು. ದೀರ್ಘಕಾಲದ ನರಳುವಿಕೆಯಿಂದ ಬ ಳಲಿದರಾದರೂ ಅಂತ್ಯವು ಶಾಂತಯುತವಾ ಗಿತ್ತು. ಉದರ ಸಂಬಂಧವಾದ ಪೀಡೆ ಯೊಂದೇ ಅವರ ಅವಸಾನಕ್ಕೆ ಕಾರಣವಾ ಯಿತು. ಅವರ ಸಹೋದರರಾದ ಬೆನಗ ಲ್ ರಾಮರಾಯರು ಮತ್ತು ಬೆನಗಲ್ ಶಿ ವರಾಯರು ಅವರ ಮೃತ್ಯುಶಯ್ಯೆಯ ಬಳಿ ಯಿದ್ದರು. ದಿವಂಗತರ ಕಳೇಬರದ ದಹ ನ ಸಂಸ್ಕಾರ ಮರುದಿನ ಸಂಜೆ ಝೂರಿಚಿನ ಸೀಲ್‌ಫೀಲ್ಡ್ ಸ್ಮಶಾನದಲ್ಲಿ ನಡೆಯಿತು.

ಸಂಕ್ಷಿಪ್ತ ಜೀವನ ಚರಿತ್ರೆ

೧೮೮೭ನೇ ಫೆಬ್ರವರಿ ತಾ. ೨೬ರಲ್ಲಿ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಬೆನಗಲ್ ನರ ಸಿಂಗರಾಯರ ಜನನವಾಯಿತು. ಇವರ ಪಿತೃವರಿಗೆ ನಾಲ್ವರು ಗಂಡು ಮಕ್ಕಳು; ನರಸಿಂಗರಾಯರು ಎರಡನೇಯವರು. ಇ ವರ ಅಣ್ಣಂದಿರಾದ ಶ್ರೀ ಬೆನಗಲ್ ಸಂಜೀವರಾ ಯರು ಪ್ರಸಿದ್ಧ ವಿದ್ವಾಂಸರೆಂದು ಖ್ಯಾತಿವೆ ತ್ತವರು; ಬನಾರಸದ ಕ್ವೀನ್ಸ್ ಕಾಲೇಜಿನ ಪ್ರಿನ್ಸಿಪಾಲರಾಗಿದ್ದು ಇತ್ತೀಚೆಗೆ ನಿವೃತ್ತಿ ಹೊಂದಿದರು. ಇನ್ನು ತಮ್ಮಂದಿರಲ್ಲಿ ಶ್ರೀ ಬೆನಗಲ್ ರಾಮರಾಯರು ಪ್ರಸ್ತುತಃ ಭಾ ರತದ ರಿಸರ್ವ್ ಬೇಂಕಿನ ಗವರ್ನರರಾಗಿ ರುವರು. ನಾಲ್ಕು ಮಂದಿ ಸಹೋದರರ ಲ್ಲಿ ಕಿರಿಯರಾದ ಬೆನಗಲ್ ಶಿವರಾಯರು ಪ್ರಸಿದ್ಧ ಪತ್ರಿಕೋದ್ಯಮಿಗಳು ಮಾತ್ರವಲ್ಲ ಭಾರತದ ಪಾರ್ಲಿಮೆಂಟಿನಲ್ಲಿ ಸದಸ್ಯರೂ ಆಗಿರುವರು.

ನರಸಿಂಗರಾಯರ ಉಚ್ಚಶಿಕ್ಷಣ ಮ ದ್ರಾಸಿನ ಪ್ರೆಸಿಡೆನ್ಸಿ ಕಾಲೇಜ್ ಮತ್ತು ಕೇಂಬ್ರಿಜಿನ ಟ್ರಿನಿಟಿ ಕಾಲೇಜ್‌ಗಳಲ್ಲಿ ನಡೆ ಯಿತು. ಮದ್ರಾಸು ವಿಶ್ವವಿದ್ಯಾಲಯಗ ಳಲ್ಲಿ ಇಂಗ್ಲಿಷ್, ಗಣಿತ ಮತ್ತು ಸಂಸ್ಕೃತ ಗಳಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು. ಸರಕಾರದ ವೇತನ ಪಡೆ ದು ಇಂಗ್ಲಾಂಡಿಗೆ ಉಚ್ಚ ಶಿಕ್ಷಣಕ್ಕಾಗಿ ಹೋದಾಗ, ಕೇಂಬ್ರಿಜ್ ವಿಶ್ವವಿದ್ಯಾಲಯ ದಲ್ಲಿ ಪ್ರಥಮ ವರ್ಷದಲ್ಲೇ 'ರ್‍ಯಾಂಗ್ಲರ್' ಪದವಿ ಸಂಪಾದಿಸಿದರು. ೧೯೧೦ರಲ್ಲಿ ಸಿ ವಿಲ್ ಸರ್ವಿಸಿನಲ್ಲಿ ತೇರ್ಗಡೆ ಹೊಂದಿದರು.

೧೯೨೫ ರಿಂದ ೧೯೩೫ ರ ವರೆಗೆ ಅಸ್ಸಾ ಮಿನ ಲೆಜಿಸ್ಲೇಟಿವ್ ಇಲಾಖೆಯ ಕಾರ್ಯ ದರ್ಶಿಗಳಾಗಿದ್ದರು. ಆ ಮೇಲೆ ಕೇಂದ್ರ ಸರಕಾರದ ಲೆಜಿಸ್ಲೇಟಿವ್ ಖಾತೆಯ ಜಂಟಿ ಕಾರ್ಯದರ್ಶಿಗಳಾಗಿ ೧೯೩೫ ರಿಂದ ೧೯೩೯ ರ ವರೆಗೆ ಕೆಲಸ ಮಾಡಿದರು. ಅ ದೇ ವರ್ಷ ಕಲ್ಕತ್ತದ ಹೈಕೋರ್ಟಿನ ನ್ಯಾ ಯಾಧೀಶ ಪದವಿ ಅವರಿಗೆ ದೊರೆಯಿತು. ಜೊತೆಯಲ್ಲೇ ಭಾರತದ ಶಾಸನಗಳನ್ನು 'ರಿವಿಜನ್' ಮಾಡುವ ಉದ್ಯಮಕ್ಕೂ ಇವರ ನ್ನು ನೇಮಿಸಲಾಯಿತು. ೧೯೪೪ ರಲ್ಲಿ ಆಫಿಸಿಯೇಟಿಂಗ್ ರಿಫೋರ್ಮ್ಸ್ ಕಮಿಷನ ರರಾಗಿಯೂ ನೇಮಕ ಹೊಂದಿದರು.

ಅದೇ ವರ್ಷ 'ಸರ್' ಬಿರುದು ಅವರಿ ಗೆ ದೊರೆಯಿತು. ಹಲವಾರು ಕಮಿಷ ನುಗಳಲ್ಲಿಯೂ ವಿಚಾರಣಾ ಸಮಿತಿಗಳಲ್ಲಿ ಯೂ ಸದಸ್ಯರಾಗಿಯೂ ಕೆಲವುಗಳಲ್ಲಿ ಅಧ್ಯಕ್ಷರಾಗಿಯೂ ಕೆಲಸ ಮಾಡಿದರು. ೧೯೪೪ ರಲ್ಲಿ ಅವರು ಕೆಲಸದಿಂದ ನಿವೃತ್ತ ರಾದರು.

ಸ್ವಾತಂತ್ರ್ಯ ನಂತರ.

ಕೆಲಸದಿಂದ ನಿವೃತ್ತರಾದ ಮೇಲೆ ಯೂ ಅವರ ಅಮೂಲ್ಯ ಸೇವೆ ಹಲವಾರು ವಿಧದಲ್ಲಿ ದೇಶಕ್ಕೊದಗಿತ್ತು. ೧೯೪೪—೪೫ ರಲ್ಲಿ ಜಮ್ಮೂ ಮತ್ತು ಕಾಶ್ಮೀರಗಳ ದಿವಾ ನ ಪಟ್ಟ ಅವರಿಗೆ ದೊರಕಿತ್ತು. ೧೯೪೬ ರ ಲ್ಲಿ ಘಟನಾ ಸಮಿತಿಗೆ ಸಲಹೆಗಾರರಾಗಿ ನೇ ಮಿಸಲ್ಪಟ್ಟರು. ೧೯೪೭ ರಲ್ಲಿ ಬರ್ಮದ ರಾ ಜ್ಯಘಟನೆಯನ್ನು ರಚಿಸಲು ಶ್ರೀ ಬೆನೆಗಲ್ ನರ್ಸಿಂಗರಾಯರು ಬರ್ಮಾ ಸರಕಾರಕ್ಕೆ ಸ ಲಹೆಗಾರರಾಗಿದ್ದರು. ೧೯೪೮ ರಲ್ಲಿ ಸಂ ಯುಕ್ತ ರಾಷ್ಟ್ರ ಸಮಿತಿಗೆ ಭಾರತದ ಕಡೆ ಯ ಪ್ರತಿನಿಧಿಯಾಗಿ ಹೋದರು. ೧೯೫೦ ರಲ್ಲಿ ಭದ್ರತಾ ಮಂಡಲದ ಅಧ್ಯಕ್ಷರಾಗಿ ಯೂ ಆರಿಸಲ್ಪಟ್ಟರು. ಸಂಯುಕ್ತ ರಾ ಷ್ಟ್ರ ಸಂಘದ ಅಂತರ್ರಾಷ್ಟ್ರೀಯ ನ್ಯಾಯ ಸ ಮಿತಿಯ ಸದಸ್ಯರಾಗಿಯೂ, ೧೯೪೯—೫೦ ರಲ್ಲಿ ಲೇಕ್ ಸಕ್ಸೆಸ್ಸಿನಲ್ಲಿ ಸಂಯುಕ್ತ ರಾ ಷ್ಟ್ರ ಸಮಿತಿಯಲ್ಲಿ ಭಾರತದ ಖಾಯಂ ಸದ ಸ್ಯರಾಗಿಯೂ ನೇಮಿಸಲ್ಪಟ್ಟರು. ಕೊರಿ ಯಾದಲ್ಲಿ ಯುದ್ಧವಿರಾಮಕ್ಕೆ ಶ್ರೀಯುತ ರು ಪಟ್ಟ ಶ್ರಮವು ಶ್ಲಾಘನೀಯವಾದುದು. ೧೯೫೨ ರಲ್ಲಿ ಹೇಗ್‌ದಲ್ಲಿರುವ ಅಂತರ್ರಾಷ್ಟ್ರೀ ಯ ಕೋರ್ಟಿನ ನ್ಯಾಯಾಧೀಶರಾಗಿ ನೇಮ ಕ ಹೊಂದಿದರು. ಅನಾರೋಗ್ಯದಿಂದ ಸ್ವಿ ಜರ್ಲೆಂಡಿಗೆ ಹೋಗುವ ತನಕ ಅದೇ ಹು ದ್ದೆಯಲ್ಲಿದ್ದರು.

॥ ಎನ್. ಸಿ. ಸಿ. ದಿನಾಚರಣೆ ॥

ಮಡಿಕೇರಿ

ತಾ ೬-೧೨-೫೩ರಲ್ಲಿ ಮಡಿಕೇರಿ ಸೆಂ ಟ್ರಲ್ ಹೈಸ್ಕೂಲಿನ ಎನ್. ಸಿ. ಸಿ. ದಳದ ದಿನಾಚರಣೆಯನ್ನು ಕೊಡಗು ಸರಕಾರದ ಚೀಫ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಮಧ್ಯಾಹ್ನ ೩ ಗಂಟೆಗೆ ಗಾರ್ಡ್ ಆಫ್ ಆನರ್, ಮಾರ್ಚ್‌ಪಾಸ್ಟ್ ನಡೆಯಿತು. ಅನಂತರ ಮೂರು ಟ್ರೂಪ್‌ಗಳ ಪ್ರದರ್ಶನ ನಡೆಯಿತು. ಆ ಮೇಲೆ ಆಟೋಟಗಳ ಸ್ಪ ರ್ಧೆ ನಡೆಯಿತು. ೧೦೦ ಗಜ ಓಟದಲ್ಲಿ ಯಂ. ಯಸ್. ನಾಣಯ್ಯ ಮತ್ತು ಎಂ. ಸಿ. ಮಂಜುನಾಥ, ಹೈ ಜಂಪಿನಲ್ಲಿ ೩ನೇ ಟ್ರೂಪ್, ಒಬ್‌ಸ್ಟೆಕಲ್ ಓಟದಲ್ಲಿ ಶ್ರೀ ಕೆ. ಕೆ. ದೇವಯ್ಯನವರು ಮತ್ತು ಹೆಚ್. ಟಿ. ದೇವಪ್ಪನವರು ಸೈಕಲ್ ಓಟದಲ್ಲಿ ಶ್ರೀ ಕೆ. ಕೆ. ಪೊಣ್ಣಯ್ಯನವರು ಮತ್ತು ಬೆನ್ನಿನ ಮೇಲೆ ಮಕ್ಕಳನ್ನು ಹೊ ತ್ತುಕೊಂಡು ಓಡುವ ಓಟದಲ್ಲಿ ಶ್ರೀ ಎ ಬಿ. ದೇವಯ್ಯನವರು ಬಹುಮಾನಗಳನ್ನು ಪಡೆದರು.

೧೯೫೪ನೇ ಇಸವಿ ಜನವರಿ ೨೬ನೇ ರಿಪಬ್ಲಿಕ್ ದಿನಾಚರಣೆಗೆ ಕೊಡಗಿನಿಂದ ಇ ಬ್ಬರು ಕೆಡೆಟನ್ನು ಕಳುಹಿಸುವರು. ಮ ಡಿಕೇರಿ ಯೂನಿಟ್‌ನಿಂದ ಟ್ರೂಪ್ ಲೀಡ ರ್ ಶ್ರೀ ಎ. ಈ. ಜಂಗಪ್ಪನವರನ್ನು ಕಳು ಹಿಸುವರೆಂದು ವರ್ತಮಾನ.

ವೀರಾಜಪೇಟೆ.

ಇಲ್ಲಿ ಎನ್. ಸಿ. ಸಿ. ದಿನಾಚರಣೆಯು ಕೊಡಗಿನ ಮುಖ್ಯ ಮಂತ್ರಿ ಶ್ರೀ. ಸಿ. ಎಂ. ಪೂಣಚ್ಚನವರ ಅಧ್ಯಕ್ಷತೆಯಲ್ಲಿ ನಡೆಯಿ ತು. ಆ ಸಂದರ್ಭ ಅವರು ಮಾಡಿದ ಭಾ ಷಣದ ಸಾರಾಂಶ ಹೀಗಿದೆ.

ಇಲ್ಲಿಯ ಎನ್. ಸಿ. ಸಿ. ದಳದ ಚಟು ವಟಿಕೆಗಳನ್ನು ನೋಡಿ ತುಂಬಾ ಸಂತೋಷ ವಾಯಿತು. ಎನ್. ಸಿ. ಸಿ. ಕೀರ್ತಿ ಯು ಬರೀ ದಿನಾಚರಣೆಯ ಚಟುವಟಿಕೆ ಯಲ್ಲಿ ಮುಗಿಯಬಾರದು. ಮುಂದೆಯು ಸ ಹ ಸತತವಾಗಿ ನಡೆಯಬೇಕು.

ಹಿಂದಿನ ಕಾಲದಲ್ಲಿಯೂ ಸಹ ಎನ್ ಸಿ. ಸಿ. ದಳವಿತ್ತು. ಆಗ ಧನುರ್ವಿದ್ಯೆ ಕ ಲಿಸುತ್ತಿದ್ದರು. ಆಗಿನ ಕೇಡೆಟ್‌ಗಳು (ಶಿಷ್ಯರು) ಶಿಸ್ತನ್ನು ಕಲಿತುಕೊಂಡು, ದು ಸ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ಪರಿಪಾಲಿಸು ವ ಉಪದೇಶವನ್ನು ದ್ರೋಣಾಚಾರ್ಯ, ವಸಿಷ್ಠ ಮುಂತಾದ ಗುರುಗಳಿಂದ ಪಡೆಯು ತ್ತಿದ್ದರು. ಅದರ ಉಪದೇಶದ ಧರ್ಮ ಸಂಪ್ರದಾಯ ಈಗಲೂ ಮುಂದುವರಿಯು ತ್ತಿದೆ, ಆದರೆ ಹೆಸರು ಮಾತ್ರ ಬೇರೆ.

ಎನ್. ಸಿ ಸಿ. ಯು ಬಹಳ ಉತ್ತ ಮ ಪದ್ಧತಿ ಶಾಲಾ ಕಾಲೇಜುಗಳ ತರುಣ ತರುಣಿಯರಲ್ಲಿ ಶಿಸ್ತಿನ ಜೀವನವನ್ನು ಕಲಿ ಸಿ, ಆರೋಗ್ಯವಂತರಾಗಿ, ದೃಢಕಾಯರಾಗಿ ಬೆಳೆಯುವಂತೆ ಮಾಡುತ್ತಿರುವ ವ್ಯವಸ್ಥೆ ಎನ್. ಸಿ. ಸಿ. ದಳದವರು ಮುಂದೆ ನಿಜ ವಾಗಿಯೂ ಉತ್ತಮ ಪ್ರಜೆಗಳಾಗಿ.ರಾಷ್ಟ್ರೀಯ ಭಾವನೆ ಮತ್ತು ರಕ್ಷಣಾ ಕಾ ರ್ಯ ಎರಡನ್ನೂ ಜೊತೆಯಲ್ಲಿ ಸಾಧಿಸಲು ಅನುಕೂಲವಾಗುವುದು.

ನಮ್ಮ ಪುಟ್ಟ ಪ್ರಾಂತ್ಯದಲ್ಲಿ ಎನ್ ಸಿ. ಸಿ. ಯು ಬಹಳ ಚೆನ್ನಾಗಿ ನಡೆಯುತ್ತಿ ದೆ. ವಾರ್ಷಿಕ ಖರ್ಚು ಈಗ ೬೦,೦೦೦ ಸಾವಿರ ರೂಪಾಯಿಗಳಾಗುತ್ತಿವೆ. ಪ್ರತಿ ಯೊಬ್ಬ ಯುವಕನಿಗೂ ಈ ತರಬೇತಿಯನ್ನು ಕೊಡಬೇಕೆಂದು ನನ್ನ ಆಶೆ. ಆದರೆ ಅದ ರ ಖರ್ಚಿಗೆ ಬೇಕಾಗುವ ಅಪರಿಮಿತ ಹಣ ನಮ್ಮಲ್ಲಿಲ್ಲ. ಮುಂದಿನ ವರ್ಷದಿಂದ ನ ಮ್ಮ ಕಾಲೇಜಿನಲ್ಲಿಯೂ ಸಹ ಎನ್. ಸಿ. ಯ ಹಿರಿಯ ದಳವನ್ನು ತೆರೆಯಲು ಪ ರ್ಯಾಲೋಚಿಸಿದ್ದೇವೆ. ಅದಕ್ಕೆ ವಾರ್ಷಿಕ ಖ ರ್ಚು ೪೦,೦೦೦ ಸಾವಿರ ರೂಪಾಯಿಗಳೆಂ ದು ಅಂದಾಜುಮಾಡಿದ್ದೇವೆ.

ಈ ಶಾಲೆಯ ಒಬ್ಬ ಕೆಡೆಟ್‌ನನ್ನು ಕೊಡಗಿನ ಎನ್. ಸಿ. ಸಿ. ದಳಗಳ ಅತ್ಯು ತ್ತಮ ಕೆಡೆಟ್ ಎಂದು ಆರಿಸಿರುವ ವಿ ಷಯ ಸಂತೋಷವನ್ನುಂಟುಮಾಡುತ್ತದೆ ಮುಖ್ಯೋಪಾಧ್ಯಾಯರು ವರದಿಯಲ್ಲಿ ಈ ವರ್ಷ ಡಿಸೆಂಬರ್ ೨೫ ರಿಂದ ಜನವರಿ ೩ರ ವರೆಗೆ ಮೈಸೂರಿನಲ್ಲಿ ನಡೆಯುವ ವಾರ್ಷಿಕ ಶಿಬಿರದಲ್ಲಿ ತಮ್ಮ ದಳವು ಭಾಗವಹಿಸುವ ದಾಗಿ ತಿಳಿಸಿದರು. ಈ ಎನ್. ಸಿ. ಸಿ ದ ಳವು ದಿನ ದಿನಕ್ಕೆ ಶ್ರೇಯಸ್ಸನ್ನು ಪಡೆ ಯಲಿ.'

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,61,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	16,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಲೆಕ್ಕ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	3-4-0
1 ವರುಷದಿಂದ 5 ವರ್ಷಗಳ ವರೆಗೆ	,,	4-4-0
5 ವರುಷ ಮತ್ತು ಮೇಲ್ಪಟ್ಟ ಅವಧಿಗೆ	,,	4-12-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇರೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ. ಪ್ರೆಸಿಡೆಂಟ್ & ಖಜಾಂಚಿ.

WANTED

An energitic and experienced Field Superintendent for our Plantations. For details and terms of appointment please apply with a self addressed stamped envelope, to:-

C/o. POST BOX No. 18, MERCARA.

ಕೊಡಗು

ತಾರೀಕು ೧೧—೨—೧೯೫೩ನೇ ಶುಕ್ರವಾರ

ನಿ ವೃ ತ್ತ ಅಧಿಕಾರಿಗಳಿಗೆ ಜೀ ವ ದಾ ನ.

ಸರಕಾರಿ ಅಧಿಕಾರಿಗಳು ಮೂವತ್ತು ವರ್ಷಗಳ ಸರಕಾರಿ ಉದ್ಯೋಗ ಮಾಡಿದ್ದರೆ ಅವರ ಇಚ್ಛೆಯಂತೆ ನಿವೃತ್ತರಾಗಬಹುದು. ಐವತ್ತೈದು ವರ್ಷ ವಯಸ್ಸಾದವರು ನಿವೃತ್ತರಾಗಬೇಕೆಂಬ ಖಡ್ಡಾಯವಾದ ಸರಕಾರಿ ನಿಯಮವಿದೆ. ಈ ನಿಯಮಕ್ಕೆ ಕಾರಣವಾದರೂ ಒಬ್ಬ ನೌಕರನು ಐವತ್ತೈದು ವರ್ಷ ಪ್ರಾಯ ದಾಟಿದ ನಂತರ ಶಾರೀರಿಕ ಮತ್ತು ಮಾನಸಿಕ ದೃಷ್ಟಿಯಿಂದ ದಕ್ಷ ರೀತಿಯಲ್ಲಿ ತನ್ನ ಜವಾಬ್ದಾರಿಯನ್ನು ನಿರ್ವಹಿಸಲು ಅಸಮರ್ಥನಾಗುವನೆಂಬುದೇ ಆಗಿದೆ. ದೇಶದ ಎಲ್ಲೆಡೆಯಲ್ಲೂ ಈ ನಿಯಮವು ಅನುಭವದಿಂದ ಬಹು ಯೋಗ್ಯವಾದುದೂ, ಸಮರ್ಪಕವಾದುದೂ ಎಂದು ಕಂಡು ಬಂದಿದೆ. ಇದಕ್ಕೆ ಮೊದಲು ಕೊಡಗಿನಲ್ಲಿ ಮುಖ್ಯವಾಗಿ ಗಜೆಟೆಡ್ ಉದ್ಯೋಗಸ್ಥರಿಗೆ ಅಧಿಕಾರವಧಿಯನ್ನು ಹೆಚ್ಚಿಸಿದ್ದುದಾಗಲೀ ಪುನಹ ಉದ್ಯೋಗ ಕೊಟ್ಟುದಾಗಲೀ ಬಹು ಅಪರೂಪ. ಆದರೆ ಈಗ ಇದು ಒಂದು ರೂಢಿಯಾಗಿ ಬಂದಂತಿದೆ. ಉದಾಹರಣೆಗೆ ಇನ್ನು ಕೆಲವು ಸಮಯದಲ್ಲಿಯೇ ನಿವೃತ್ತರಾಗಬೇಕಿದ್ದ ಕೊಡಗಿನ ಗಜೆಟೆಡ್ ಉದ್ಯೋಗಸ್ಥರೆಲ್ಲರಿಗೂ ಅಧಿಕಾರದ ಜೀವದಾನ ಯಾ ಪುನಃ ನೇಮಕದ ಮಾತು ಕೇಳಿ ಬರುತ್ತಿರುವದು. ತಾನೇ ರೂಪಿಸಿ ಈ ವರೆಗೆ ಯೋಗ್ಯ ರೀತಿಯಲ್ಲಿ ಅನುಸರಿಸಿ, ಉಪಯುಕ್ತವಾದುದೆಂದು ಕಂಡ ನಿಯಮವನ್ನು ತಾನೇ ಮುರಿದು ವರ್ತಿಸುವದಾದರೆ ಸರಕಾರವು ಮಾಡಿದ ನಿಯಮಗಳನ್ನು ಜನರು ಪರಿಪಾಲಿಸಬೇಕೆಂದು ಅಪೇಕ್ಷಿಸುವದಾದರೂ ಹೇಗೆಂದು ನಮಗೆ ಅರ್ಥವಾಗುವದಿಲ್ಲ.

ಕೇಂದ್ರ ಸರಕಾರವು ಯಾವುದೇ ಸರಕಾರಿ ನೌಕರನು ತನ್ನ ೫೫ನೇ ಪ್ರಾಯಕ್ಕೆ ತಲಪಿದೊಡನೆಯೇ ನಿವೃತ್ತನಾಗಬೇಕೆಂದು ವಿಧಿಸಿದ್ದಕ್ಕೆ ಮತ್ತೊಂದು ಕಾರಣವೂ ಇದೆಯೆನ್ನಬಹುದು. ದೇಶದಲ್ಲಿ ವಿದ್ಯಾವಂತರ ಸಂಖ್ಯೆ ದಿನೇದಿನೇ ಏರುತಿದ್ದು ವಿದ್ಯಾವಂತ ನಿರುದ್ಯೋಗಿಗಳು ಹೆಚ್ಚುತ್ತಿರುವ ಕಾಲದಲ್ಲಿ ಈ ನಿರುದ್ಯೋಗವನ್ನು ಸಾಧ್ಯವಾದಷ್ಟು ಕಡಿಮೆಮಾಡುವ ದೃಷ್ಟಿಯಿಂದ ಈ ನಿಯಮವು ಸಹಕಾರಿಯಾದುದಾಗಿದೆ. ಒಂದುವೇಳೆ ಟೆಕ್ನಿಕಲ್ ಪರಿಜ್ಞಾನ ಹೆಚ್ಚುಬೇಕಾದ ಮತ್ತು ಯೋಗ್ಯ ಉಮೇದುವಾರರು ದೊರೆಯದ ಅಪರೂಪ ಸಂದರ್ಭದಲ್ಲಿ ಆರು ತಿಂಗಳೋ ಒಂದು ವರ್ಷವೋ ಅಧಿಕಾರಾವಧಿ ಹೆಚ್ಚಿಸಿದರೆ ಅದರಲ್ಲಿ ಅರ್ಥವಿರಬಹುದು. ಅದು ಬಿಟ್ಟು ದೊಡ್ಡ ಉದ್ಯೋಗಸ್ಥರಿಗೆ ವಿನಾ ಕಾರಣ ಈ ರೀತಿಯ ಜೀವದಾನ ಕೊಡುವದರಿಂದ ದೇಶದ ಯುವಕ ಜನಾಂಗಕ್ಕೆ ವಿಪರೀತ ಅನ್ಯಾಯ ಮಾಡಿದಂತಾಗುತ್ತದೆ.

ಕೊಡಗಿನಲ್ಲಿ ವಿದ್ಯಾವಂತ ಯುವಕರ ಹಾಗೂ ವಿದ್ಯೆ, ದಕ್ಷತೆಗಳಿಗೆ ಸರಿಯಾದ ಉದ್ಯೋಗ ದೊರೆಯದ ಕೆಲಸಗಾರರ ಸಂಖ್ಯೆ ಹೆಚ್ಚಿದೆ. ಹಾಗಿರುವಾಗ ಆಡಳಿತದಲ್ಲಿ ದಕ್ಷತೆ, ಪ್ರಗತಿ ಮತ್ತು ಹೊಸ ರಕ್ತ ಸಂಚಾರವಾಗಬೇಕೆಂದು ಬಯಸುವ ಸರಕಾರವು ಯಾವ ಉದ್ಯೋಗಿಗೂ ಆತನು ಕೆಳದರ್ಜೆಯ ಸೇವಕನಿರಲಿ ಯಾ ಮೇಲ್ದರ್ಜೆಯ ಚೀಫ್ ಕಮಿಷನರಿರಲಿ ನಿಶ್ಚಿತ ಅಧಿಕಾರಾವಧಿಯನ್ನು ಹೆಚ್ಚಿಸುವದು ನ್ಯಾಯವಲ್ಲ. ನಿವೃತ್ತರಾಗಬೇಕಿದ್ದವರನ್ನು ಪುನಹ ಅಧಿಕಾರದಲ್ಲಿರಿಸುವದರಿಂದ ಕೆಳಗಿನ ನೌಕರರಿಗೆ ಪ್ರಮೋಶನ್ ಮತ್ತು ಸಂಬಳ ಬಡ್ತಿ ತಪ್ಪುವ ಕಾರಣ ಅತೃಪ್ತಿಯುಂಟಾಗುವದು ಸ್ವಾಭಾವಿಕ. ಅತೃಪ್ತಿಯಿಂದಿರುವ ನೌಕರ ವರ್ಗದಿಂದ ದಕ್ಷ ಆಡಳಿತ ನಡೆಯುವದು ಅಸಾಧ್ಯವಾಗುವುದು.

ವಾಡಿಕೆಯಾಗಿ ಹೊರಗಿನಿಂದ ಬರುವ ಚೀಫ್ ಕಮಿಷನರುಗಳು ಇಲ್ಲಿ ಮೂರು ವರ್ಷಗಳ ವರೆಗೆ ಅಧಿಕಾರದಲ್ಲಿರುತಿದ್ದರು. ಈಗಿನ ಚೀಫ್ ಕಮಿಷನರು ಕೊಡಗಿಗೆ ಬಂದು ಮೂರು ವರ್ಷಗಳಿಗಿಂತಾ ಹೆಚ್ಚಾಗಿದೆ. ಅಲ್ಲದೆ ಅವರು ಈ ಬರುವ ಜನವರಿಯಲ್ಲಿ ಉದ್ಯೋಗದಿಂದ ನಿವೃತ್ತನಾಗುವೆನೆಂಬ ತಮ್ಮ ಇಚ್ಛೆಯನ್ನು ಹಲವು ಸಾರ್ವಜನಿಕ ಭಾಷಣಗಳಲ್ಲಿ ಪ್ರಕಟಪಡಿಸಿರುವರು. ಮೇಲಿನ ನಿಯಮದಂತೆ ನಿವೃತ್ತರಾಗಬೇಕಾದ ೫೫ ವರ್ಷಗಳ ಪ್ರಾಯವೂ ಅವರಿಗೆ ಬರುವ ಜನವರಿಯಲ್ಲಾಗುವದು ಆದರೂ ಕೂಡ ಇವರ ಅಧಿಕಾರವಧಿಯನ್ನು ಒಂದು ವರ್ಷದ ಮಟ್ಟಿಗೆ ಹೆಚ್ಚಿಸಿರುವ ವರ್ತಮಾನವು ಸೋಜಿಗವಾಗಿದೆ.

ಕೆಲವು ದಕ್ಷ ಉದ್ಯೋಗಿಗಳು ಆಡಳಿತಕ್ಕೆ ಅನಿವಾರ್ಯ, ಅಂಥಾವರ ಅಧಿಕಾರಾವಧಿಯನ್ನು ಹೆಚ್ಚಿಸುವದರಿಂದ ನಾಡಿನ ಹಿತವೇ ಆಗುವದೆಂಬ ಟೊಳ್ಳು ವಾದವನ್ನು ಯಾರೂ ಒಪ್ಪುವಂತಿಲ್ಲ. ಯಾವುದೇ ಒಬ್ಬ ವ್ಯಕ್ತಿ ಇಲ್ಲದೆ ಆಡಳಿತವನ್ನು ನಡೆಸಲಾಗುವದಿಲ್ಲವೆಂಬ ಮಾತಿನಲ್ಲಿ ತಿರುಳಿಲ್ಲ. ಯೋಗ್ಯ ಪ್ರೋತ್ಸಾಹ, ನಿರ್ಬಾಧಕ ಸೇವೆಯ ಅನುಕೂಲತೆ ಕೊಟ್ಟರೆ ಯಾವ ಉದ್ಯೋಗಿಯೂ ತನ್ನ ಜವಾಬ್ದಾರಿಯನ್ನು ಯೋಗ್ಯ ರೀತಿ ನಿರ್ವಹಿಸುವನೆಂಬುದರಲ್ಲಿ ನಮಗೆ ವಿಶ್ವಾಸವಿದೆ.

ನಿವೃತ್ತರಾಗಬೇಕಾದವರ ಅಧಿಕಾರವಧಿಯನ್ನು ಹೆಚ್ಚಿಸಿ ದೇಶದಲ್ಲಿ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುವಂತೆ ಮಾಡುವ ಸರಕಾರದ ಈ ಧೋರಣೆಯನ್ನು ಯುವಕರೂ, ದೇಶಹಿತ ಬಯಸುವವರೂ ವಿರೋಧಿಸಬೇಕು. ವಿದ್ಯಾವಂತ ಯುವಕರಿಗೆ ಆಗುತ್ತಿರುವ ಈ ಅನ್ಯಾಯವನ್ನು ಪ್ರತಿಭಟಿಸಿ ಸರಕಾರವು ಇನ್ನಾದರೂ ನಿವೃತ್ತರಿಗೆ ಜೀವದಾನ ಮಾಡುವ ತನ್ನ ಹಾನಿಕಾರಕ ಪದ್ಧತಿಯನ್ನು ಶಾಶ್ವತವಾಗಿ ನಿಲ್ಲಿಸುವಂತೆ ಮಾಡಬೇಕಾಗಿದೆ.

ವ ರ್ತ ಮಾ ನ

ಮೈಸೂರು ವಿಶ್ವವಿದ್ಯಾಲಯದ ಬಿ. ಎಸ್‌ಸಿ. ಪರೀಕ್ಷೆಯಲ್ಲಿ ವಕ್ಕಲಿಗರ ವಿ. ಸರೋಜಿನಿಯವರೂ, ಬಿ. ಎ. ಪರೀಕ್ಷೆಯಲ್ಲಿ ಶ್ರೀ ಗಿರಿಗೌಡರ ಎನ್. ರಾಮಯ್ಯನವರೂ, ಬಿ. ಈ. ಪರೀಕ್ಷೆಯಲ್ಲಿ ಶ್ರೀ ಪುಲಿಯಂಡ ಯು. ಗಣಪತಿಯವರೂ ತೇರ್ಗಡೆಯಾಗಿರುವರು.

ಹೆಬ್ಬಾಲೆಯಲ್ಲಿ ವಯಸ್ಕರ ಪ್ರೀಯರಿಗೆ ರಾತ್ರಿ ಶಾಲೆಯೊಂದನ್ನು ತಾ. ೩೦ರಲ್ಲಿ ಶ್ರೀ ಜಿ. ಎಂ ಲಿಂಗರಾಜಯ್ಯನವರ ಅಧ್ಯಕ್ಷತೆಯಲ್ಲಿ ತೆರೆಯಲಾಯಿತು. ೧೨ ಮಂದಿ ವಿದ್ಯಾರ್ಥಿನಿಯರಿರುವರು ಶ್ರೀಗಳಾದ ಎಂ ವಿ. ರೆಡ್ಡಿ, ಎಚ್ ಸಿ. ಮೋಹನ್ನ ಪಿ. ಪಿ. ಕಾರ್ಯಪ್ಪ ಮೊದಲಾದವರು ಭಾಷಣಮಾಡಿದರು.

ಕಾನ್‌ಪುರದ ಚೌಕೀರಿಯಲ್ಲಿರುವ ಕೊಡಗರು ತಾ. ೨೭ರಲ್ಲಿ ಹುತ್ತರಿಹಬ್ಬವನ್ನು ವಿಜೃಂಭಣೆಯಿಂದ ನಡೆಸಿದರು. ಆಟೋಟಗಳ ಸ್ಪರ್ಧೆ, ಔತಣವಾದ ನಂತರ ನಡೆದ ಸಭೆಯಲ್ಲಿ ಕೊಡಗನ್ನು ಪ್ರತ್ಯೇಕ ಪ್ರಾಂತವಾಗಿ ಇಟ್ಟುಕೊಳ್ಳುವ ಬಗ್ಗೆ ತಮ್ಮ ಕೈಯಲ್ಲಾದ ಸೇವೆ ಮಾಡುವ ಪ್ರತಿಜ್ಞೆಯನ್ನು ತೆಗೆದುಕೊಂಡರು.

ಕಾರ್ಮಿಕರ ಯೋಗಕ್ಷೇಮವನ್ನು ವಿಚಾರಿಸಲು ಶ್ರೀ ಪಿ. ಕೆ. ಚೆನ್ನಯ್ಯನವರೂ ಕೊಡಗಿನ ಲೇಬರ್ ವೆಲ್‌ಫೇರ್ ಆಫೀಸರೂ ತಾ. ೨ ಮತ್ತು ೩ ರಲ್ಲಿ ಕೊಡಗಿನ ಹಲವು ಹರಿಜನ ಕೇರಿಗಳನ್ನು ಸಂದರ್ಶಿಸಿ, ಅವರಿಗೆ ಬುದ್ಧಿವಾದ ಹೇಳಿ ಅವರ ಅಭಿವೃದ್ಧಿಗೆ ಯೋಗ್ಯ ಸಲಹೆಗಳನ್ನು ಕೊಟ್ಟರು.

ತಾ. ೬ರಲ್ಲಿ ವೀರಾಜಪೇಟೆಗೆ ಬಂದ ಕರ್ನಾಟಕ ಪ್ರಾಂತೀಕ ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ವೀರಾಜಪೇಟೆ ಪುರಸಭೆಯವರು ಏರ್ಪಡಿಸಿದ ಸಮಾಜ ಶಿಕ್ಷಣ ಸಮಾರಂಭದ ಉದ್ಘಾಟನೆ ಮಾಡಿದರು.

ಕೊಡಗಿನ ಆರೋಗ್ಯ ಅಧಿಕಾರಿಗಳಾದ ಶ್ರೀ ಕೋದಂಡ ಕಾರ್ಯಪ್ಪನವರಿಗೆ ಆರು ತಿಂಗಳ ವರೆಗೆ ಅಥವಾ ಪಬ್ಲಿಕ್ ಸರ್ವಿಸ್ ಕಮಿಷನ್‌ರವರು ಬೇರೊಬ್ಬರನ್ನು ನೇಮಿಸುವ ವರೆಗೆ ಅಧಿಕಾರವಧಿಯನ್ನು ಹೆಚ್ಚಿಸಲಾಗಿದೆ.

ಮೋಟಾ ನಾಣ್ಯ ತಯಾರಿಯ ಏರ್ಪಾಡಿನ ಸಂಬಂಧದ ಕೇಸಿನಲ್ಲಿ ನಾಲ್ವರು ಕೊಡಗರು, ನಾಲ್ವರು ತಿರುವಾಂಕೂರಿನವರು, ಮತ್ತೊಬ್ಬ ಮಾಪಿಳ್ಳೆ ಹೀಗೆ ೯ ಜನರ ದಸ್ತಗಿರಿಯಾಗಿದೆಯೆಂದೂ ಇವರಲ್ಲಿ ಕೆಲವರುನ್ನು ತಿರುವಾಂಕೂರು ಮತ್ತು ಬೊಂಬಾಯಿ ಪ್ರಾಂತಗಳಲ್ಲಿ ಹೆಚ್ಚಿನ ತನಿಖೆ ಬಗ್ಗೆ ಪೋಲೀಸಿನವರು ಕರೆದುಕೊಂಡು ಹೋಗಿರುವರೆಂದೂ ವರ್ತಮಾನ.

ನಾಪೋಕ್ಲು ಹೈಸ್ಕೂಲಿನ ಎನ್. ಸಿ. ಸಿ. ದಳದ ದಿನಾಚರಣೆಯು ತಾ. ೬ರಲ್ಲಿ ಕೊಡಗಿನ ಶಾಸನ ಸಭಾಧ್ಯಕ್ಷರಾದ ಶ್ರೀ. ಬಿ. ಎಸ್. ಕುಶಾಲಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ದಿವಂಗತ ಶ್ರೀ. ಸಿ. ಎನ್. ವೆಂಕಪ್ಪಯ್ಯನವರ ಜ್ಞಾಪಕಾರ್ಥವಾಗಿ ಮಡಿಕೇರಿಯಲ್ಲಿ ಒಂದು ಕಾಂಗ್ರೆಸ್ ಭವನವನ್ನು ಕಟ್ಟಲು ನಿಧಿ ಸಂಗ್ರಹಿಸಲು ಸ್ಮಾರಕ ನಿಧಿ ಸಮಿತಿಯ ಅಧ್ಯಕ್ಷರಾದ ಶ್ರೀ. ಜಿ. ಎಂ. ಮಂಜುನಾಥಯ್ಯನವರು ಒಂದು ಅಪೀಲು ಮಾಡಿರುವರು.

ಮಧುರೆಯ ಗಾಂಧಿ ಗ್ರಾಮಕ್ಕೆ ತರಬೇತಿಗೆ ಹೋಗಿದ್ದ ಶ್ರೀ ನಾಯಕಂಡ ಉತ್ತಯ್ಯನವರು ವೀರಾಜಪೇಟೆಯಲ್ಲೂ ಶ್ರೀ ಹೆಚ್. ಎಂ. ಅಪ್ಪಣಮ್ಮಯ್ಯನವರು ಸೋಮವಾರಪೇಟೆಯಲ್ಲೂ, ಶ್ರೀ ಕಾಳನಾಡ ಚಿಟ್ಟಿಯಪ್ಪನವರು ಮಡಿಕೇರಿಯಲ್ಲೂ ಸುಭೆದಾರರ ಕೆಲಸದ ಚಾರ್ಜನ್ನು ತಾ. ೧೫ರಿಂದ ವಹಿಸಿಕೊಳ್ಳುವರು.

ಸೋಮವಾರಪೇಟೆ ಹೈಸ್ಕೂಲ್ ಎನ್. ಸಿ. ಸಿ. ದಳದ ದಿನಾಚರಣೆಯು ಶ್ರೀ. ಎಂ. ಎನ್. ಗುಂಡುರಾಯರ ಅಧ್ಯಕ್ಷತೆಯಲ್ಲಿ ನಡೆಯಿತು.

ನಿವೃತ್ತರಾಗಲಿರುವ ಉದ್ಯೋಗಸ್ಥರಾರಿಗೂ ಅಧಿಕಾರವಧಿಯನ್ನು ಹೆಚ್ಚಿಸುವದಾಗಲೀ, ಪುನಹ ನೇಮಕವಾಗಲೀ ಕೂಡದೆಂದು ಜನತೆಯಲ್ಲಿ ಹಲವರು ಇಂಡಿಯಾ ಸರಕಾರಕ್ಕೆ ಮನವಿ ಮಾಡಿರುವರೆಂದು ತಿಳಿಯಬರುತ್ತದೆ.

THE PULICOTE PLANTATIONS AND INDUSTRIES, LTD.

Registered office:-BHAGAMANDLA

We have the pleasure to announce to our share-holders, Promoters, Friends and Welwishers that we have obtained, the necessary COMMENCEMENT CERTIFICATE from the Registrar of Joint Stock Companies, after collecting the number of shares required as per Articles of Association of the Company. The Directors have commenced the work as per the programme of work chalked out.

P. M. PONNAPPA,
CHAIRMAN.

ಆಕ್ರಮಣಕ್ಕೂ ಬೆಂಬಲವೇ

ಹೊದ್ದೂರು ದೇವರಕಾಡು ಪೈಸಾರಿಯಲ್ಲಿ ೪೦೦ ಘನ ಅಡಿ ಪರಿಮಾಣವಿರುವ ಮಾವಿನ ಮರವೊಂದನ್ನು ಕಡಿಸಿ ಸೌದೆ ಮಾಡಿದ ಸಂಬಂಧವಾಗಿ ತಾರೀಕು ೨೦-೧೧-೫೩ರ 'ಕೊಡಗು' ಪತ್ರಿಕೆಯಲ್ಲಿ ಪ್ರಕಟವಾದ ಪತ್ರಕ್ಕೆ ಉತ್ತರವಾಗಿ ಹೊದ್ದೂರು ಕಬ್ಬಡಕೇರಿ ದವಸ ಭಂಡಾರದ ನಾಲ್ವರು ಕಮಿಟಿಗಳು ಸೇರಿ ತಾರೀಕು ೨-೧೨-೫೩ರ 'ಜನ್ಮಭೂಮಿ' ಪತ್ರಿಕೆಯಲ್ಲಿ ನಿರೀಕ್ಷಕರ ಸಂಶಯಕ್ಕೊಂದು ಜವಾಬು ಎಂಬ ಶಿರೋನಾಮೆಯಲ್ಲಿ ಬಾತ್ಮಿಯೊಂದನ್ನು ಹೊರಡಿಸಿ ಸದ್ರಿ ಮರವು ರಸ್ತೆಗೆ ಬಾಗಿ ಇತ್ತೆಂದೂ ಈ ಮರದ ಮಧ್ಯದಲ್ಲಿ ಕುಂಬು ಆಗಿತ್ತೆಂದೂ ಆ ಕಾರಣ ಈ ಮರವನ್ನು ಕಡಿದದ್ದು ಅನಿವಾರ್ಯವೆಂದೂ ವಾದಿಸಿರುತ್ತಾರೆ. ಈ ಮಹನೀಯರು ಕೇವಲ ಒಬ್ಬ ಪ್ರಭಾವಶಾಲಿ ವ್ಯಕ್ತಿಯಿಂದುಂಟಾದ ತಪ್ಪನ್ನು ಮುಚ್ಚುಮರೆ ಮಾಡಲು ಈ ರೀತಿ ಒಂದು ಸಾಮ್ಯವನ್ನು ಕೊಟ್ಟಿರುವದು ವಿಷಾದಕರ. ಏಕೆಂದರೆ ಒಂದು ಸಂಘದ ಆಡಳಿತವರ್ಗದವರ ಹೆಸರಿನಲ್ಲಿ ಇಂಥ ಒಂದು ಹೇಳಿಕೆಯನ್ನು ಹೊರಡಿಸಿದ್ದಲ್ಲಿ ಜನರು ಅದನ್ನು ನಂಬಿಕೊಳ್ಳುವರೆಂದು ನಂಬಿ ಮರಕಡಿಸಿದ ಪ್ರಭಾವಶಾಲಿ ವ್ಯಕ್ತಿಯೇ ಸಂಘದ ಕಮಿಟಿಗಳನ್ನು ಪ್ರೇರಣೆಯಿಂದ ಈ ರೀತಿ ಬರೆಯಿಸಿರುವರೆಂದು ಬೇರೆ ವಿವರಿಸುವ ಅಗತ್ಯವಿಲ್ಲ.

ಹೊದ್ದೂರು ಕಬ್ಬಡಕೇರಿ ದವಸಭಂಡಾರದವರು ರಸ್ತೆ ಕೆಲ್ಸ ಮಾಡಿಸುವ ಸಂದರ್ಭದಲ್ಲಿ ಅನಿವಾರ್ಯವಾಗಿ ನಾಲ್ಕಾರು ಮರಗಳನ್ನು ಕಡಿಸಿರುತ್ತಾರೆ. ಸದ್ರಿ ಮರವನ್ನು ಗ್ರಾಮದ ಪ್ರಭಾವಶಾಲಿಗಳೊಬ್ಬರು ಸೌದೆಕಡಿಸಿ ಈ ಬಾಪ್ತು ಹದಿನೈದು ಗಾಡಿ ಸೌದೆ ಒಡೆಯಲಾಗಿದೆ ಎಂದು ಅಂದಾಜು ಮಾಡಿ ಅದರ ಬೆಲೆ ಗಾಡಿಗೆ ೮ ಆಣೆಯಂತೆ ಸರಕಾರಕ್ಕೆ ಸಲ್ಲಿಸಿರುವರಂತೆ. ಇತ್ತಲಾಗಿ ಮೇಲೆ ವಿವರಿಸಿದ ಮಾವಿನ ಮರವು ರಸ್ತೆ ಕೆಲಸದ ಸಮಯದಲ್ಲಿ ಕಡಿಸಿದಲ್ಲ ಮತ್ತು ಇದರಲ್ಲಿ ಅಂಕುಡೊಂಕಾಗಲೀ, ಕುಂಬಾಗಲೀ ಆಗಿರಲಿಲ್ಲವೆಂದು ಕಂಡುಹಿಡಿಯಲು ಈಗಲೂ ಸಾಕ್ಷ್ಯವಿದೆ. ಈ ಮರವು ರಸ್ತೆಯಿಂದ ಹದಿನೈದಡಿ ಅಂತರದಲ್ಲಿತ್ತೆಂಬುವದನ್ನು ಸದ್ರಿ ಮರದ ಗುತ್ತಿಯು ಈಗಲೂ ತೋರಿಸುತ್ತದೆ. ಮತ್ತು ಸದ್ರಿ ಮರದ ಮಧ್ಯ ಕುಂಬು ಆಗಿರಲಿಲ್ಲವೆಂಬುವದನ್ನು ಕೂಡ ಯಾರೂ ಬೇಕಾದರೂ ಖುದ್ದಾಗಿ ನೋಡಿ ಅಜಮಾಯಿಸಿಕೊಳ್ಳುವಂತಿದೆ. ಅಲ್ಲದೆ ಸದ್ರಿ ಸ್ಥಳದಲ್ಲಿ ಸದ್ರಿ ಮಾವಿನ ಮರವು ಹುಟ್ಟಿರಲೇ ಇಲ್ಲವೆಂಬಂತೆ ಮಾಡಿತೋರಿಸುವ ಸಾಹಸವೊಂದನ್ನು ಈ ಮಹನೀಯರು ಮಾಡಿದಂತಿದೆ. ಸದ್ರಿ ಮರದ ಗುತ್ತಿಗೂ ಮತ್ತು ಅದರ ಗೆಲ್ಲು ಹೊರಟ ಭಾಗದ ಒಂದು ಲಾಗಿಗೂ ಬೆಂಕಿ ಹಾಕಿ ಸುಟ್ಟು ಬೂದಿ ಮಾಡುವ ಪ್ರಯತ್ನವೊಂದು ನಡೆದು ಅವರಲ್ಲಿ ಇವರು ಜಯಶೀಲರಾಗದ್ದರಿಂದ ಸದ್ರಿ ಮರದ ಗೆಲ್ಲು ಹೊರಟ ಭಾಗದ ಲಾಗುವೊಂದನ್ನು ತಳ್ಳಿ ತಂದು ಮರದ ಗುತ್ತಿಯ ಅತೀ ಸಮೀಪದಲ್ಲಿಟ್ಟಿರುತ್ತಾರೆ. ಇದು ಮರವನ್ನು ಕಾಣೆ ಮಾಡಲಾರದೆ ಅದರ ಪರಿಮಾಣವನ್ನಾದರೂ ಕಡಿಮೆ ಮಾಡಿ ತೋರಿಸಲು ಮಾಡಿದ ಸಾಹಸವಿರಬೇಕೆಂದು ಊಹಿಸಬೇಕಿದೆ. ಈ ರೀತಿಯ ಕುತಂತ್ರಗಳನ್ನು ಮಾಡಿ ಸರಕಾರದ ಮತ್ತು ಜನರ ಕಣ್ಣು ಕಟ್ಟಲು ಈ ಮಹನೀಯರುಗಳು ಯತ್ನಿಸುವದು ವ್ಯಸನಕರ. ಸರಕಾರದ ಅಧಿಕಾರಿಗಳು ತಮ್ಮ ಕರ್ತವ್ಯ ಪಾಲನೆಯನ್ನು ಸಕಾಲದಲ್ಲಿ ಮಾಡಿದ್ದಲ್ಲಿ ಸರಕಾರಕ್ಕೆ ಈ ಮಾವಿನ ಮರದ ಮೂಲಕ ಸರಕಾರಿ ರೇಟಿನಂತೆ ರೂ. ೩೭೫ ಬರಬೇಕಿತ್ತಾದರೂ ಸಾಧಾರಣ ಈಗ ಮರವ್ಯಾಪಾರಿಗಳು ಕೊಳ್ಳುತ್ತಿರುವ ದರದಂತೆ ಕನಿಷ್ಟ ರೂ. ೨೦೦ ಆದರೂ ಬರುತ್ತಿತ್ತು. ಅಲ್ಲದೆ ಸಂಘದವರು ರಸ್ತೆ ಕೆಲ್ಸ ಮಾಡುವಾಗ ಕಡಿಸಿದ ನಾಲ್ಕಾರು ಮರಗಳ ಪೈಕಿ ಒಂದು ಕುರ್ಗ್ ಮಾವು ಮರವೂ ಕೂಡ ಮಾರಾಟಕ್ಕೆ ಯೋಗ್ಯವಾದುದಿದ್ದು ಸುಮಾರು ೧೫೦ ಅಡಿ ಪರಿಮಾಣವಿದ್ದು ಇದರಿಂದಲೂ ಕನಿಷ್ಟ ರೂ. ೭೫ರಷ್ಟಾದರೂ ಬರುತ್ತಿತ್ತು. ಈ ಮಹನೀಯರು ಕೇವಲ ರೂ. ಏಳುವರೆ ಕೊಟ್ಟು ಇಷ್ಟೆಲ್ಲಾ ಬೆಲೆ ಬಾಳುವ ಮರಗಳನ್ನು ಎಷ್ಟು ಸುಲಭವಾಗಿ ಪಡೆದರೆಂಬುದನ್ನು ಇದರಿಂದ ತಿಳಿಯಲು ಸಾಧ್ಯವಿದೆ. ಇದೇ ಕಾಡಿನಿಂದ ಈ ಮೊದಲು ಕೇವಲ ಗದ್ದೆಗೆ ನೆರಳಾಗುವ ಕಾರಣ ಕೇವಲ ಚಿಕ್ಕ ಮರವನ್ನು ಕಡಿದು ಜುಲ್ಮಾನೆ ತೆತ್ತವರಿದ್ದಾರೆ. ಆದರೆ ಇಷ್ಟು ದೊಡ್ಡ ಅಪಹಾರ ನಡೆದಾಗ್ಯೂ ಕೇಳುವವರೇ ಇಲ್ಲವೆಂದಾಗ ಆಶ್ಚರ್ಯವಲ್ಲವೇ?

ಖುದ್ದು ಅಜಮಾಯಿಸಿದವ.

ಜಿಲ್ಲಾ ಕಾಂಗ್ರೆಸ್ ಎಡ್‌ಹಾಕ್ ಸಮಿತಿಯ ಪ್ರೆಸಿಡೆಂಟರಿಗೆ ಒಂದು ಸವಾಲು

ಕರ್ನಾಟಕ ಏಕೀಕರಣದ ಸಾಧ್ಯತೆ ಮತ್ತು ಅವಶ್ಯಕತೆಯನ್ನು ಕೇಂದ್ರದಿಂದ ರಚಿತವಾಗಲ್ಲಿರುವ 'ಫೈಸಲ್' ಸಮಿತಿಯ ಮುಂದಿಡಲು ಶ್ರೀ ನಿಜಲಿಂಗಪ್ಪನವರು ನೇಮಿಸಿದ ಸಮಿತಿಯ ಒಬ್ಬ ಸದಸ್ಯರಾಗಿ ನಿಮ್ಮನ್ನು ಆರಿಸಿರುವರೆಂಬುದನ್ನು ಪತ್ರಿಕೆಯಲ್ಲಿ ಓದಿದೆನು. ನಿಮ್ಮ ಈ ಆಯ್ಕೆಯ ಬಗ್ಗೆ ತುಂಬಾ ಸಂತೋಷವನ್ನೂ, ಅಭಾರ ಮನ್ನಣೆಯನ್ನೂ ವ್ಯಕ್ತಪಡಿಸಿ ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಪ್ರೆಸಿಡೆಂಟರಾದ ನಿಜಲಿಂಗಪ್ಪನವರಿಗೆ ನೀವು ಪತ್ರ ಬರೆದಿರುವಿರೆಂಬುದನ್ನು ತಿಳಿದೆನು. ನೀವು ಹೊತ್ತಿರುವ ಈ ಜವಾಬ್ದಾರಿಯಲ್ಲಿ ಕೊಡಗಿನವರಾದ ನಿಮಗೆ ಕಷ್ಟನಿಷ್ಠುರಗಳಿವೆಯೆಂದು ತಿಳಿದರೂ ಕೊಡಗಿನ ಹಳೇ ಸತ್ಯಾಗ್ರಹಿಗಳಲ್ಲೊಬ್ಬರಾದ ನೀವು ಈ ಜವಾಬ್ದಾರಿಯನ್ನು ಇತ್ತೀಚೆಗೆ ಕಾಂಗ್ರೆಸಿಗೆ ಬಂದವರ ಎಳೆ ಹೆಗಲುಗಳಿಗೆ ಬಿಡದೆ ಅವರನ್ನು ಜನತೆಯ ಎದುರು ನಿಲ್ಲಿಸಲು ಅವಕಾಶ ಕೊಡದೆ ಅವರ ರಕ್ಷಣೆಗೆ ಎದೆ ಕೊಟ್ಟು ನಿಂತದ್ದು ಸತ್ಯ. ನಿಮಗೆ ನನ್ನ ಅಭಿವಂದನೆಗಳಿವೆ.

ಆಂಧ್ರ ಪ್ರಾಂತ ರಚನೆಗೆ ಒಪ್ಪಿ ಅದನ್ನು ಅಸ್ತಿತ್ವಕ್ಕೆ ತಂದ ಕೇಂದ್ರ ಸರಕಾರವು ಭಾಷಾವಾರು ಪ್ರಾಂತ ರಚನೆಯ ತತ್ವಕ್ಕೆ ಒಪ್ಪಿದಂತಾಯಿತೆಂದು ನೀವೂ ಒಪ್ಪುವಿರಲ್ಲವೇ? ಅಂದ ಮೇಲೆ ಕೇಂದ್ರ ಸರಕಾರವು ನೇಮಿಸಲಿರುವ 'ಫೈಸಲ್' ಕಮಿಷನು ಈ ಭಾಷಾವಾರು ಪ್ರಾಂತಗಳನ್ನು ಹೇಗೆ ಹೆಚ್ಚಿನ ಘರ್ಷಣೆ ಬಿಕ್ಕಟ್ಟುಗಳಿಲ್ಲದೆ ಜಾರಿಗೆ ತರಬಹುದೆಂಬುದನ್ನು ಪರಿಶೀಲಿಸಲು ರಚಿತವಾಗುವದೆಂಬುದನ್ನು ನೀವು ಒಪ್ಪುವಿರಲ್ಲವೇ? "ಕರ್ನಾಟಕ ಪ್ರಾಂತರಚನೆಯು ಭಾಷಾವಾರು ತತ್ವದಂತೆ ಆಗುವದು ಆದರೆ ಈಗ ಸಮಯವಲ್ಲ; ಸ್ವಲ್ಪ ತಡೆಯಿರಿ" ಎಂದು ಹೇಳಿದ ವರಿಷ್ಟ ಮುಂದಾಳುಗಳ ಭರವಸೆಯನ್ನೂ ನೀವು ಓದಿರಬೇಕಲ್ಲವೇ? ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಸಮಿತಿಯು ತನ್ನ ಎಲ್ಲಾ ವಿಧಾಯಕ ಹಾಗೂ ರಾಷ್ಟ್ರ ರಚನಾ ಕಾರ್ಯಗಳಿಗೆ ತಿಲಾಂಜಲಿ ಇತ್ತು ಇಂದು ಕೇವಲ ಕರ್ನಾಟಕ ಏಕೀಕರಣದ ಒಂದೇ ಪ್ರಶ್ನೆಯನ್ನು ತನ್ನ ಜೀವದ ಜೀವಾಳವಾಗಿಟ್ಟು ಕೊಂಡು ಅದಕ್ಕಾಗಿ ದುಡಿಯುತ್ತಿದೆಯೆಂದೂ, ಅದರ ಮುಂದಾಳಾದ ಶ್ರೀ ನಿಜಲಿಂಗಪ್ಪನವರಾಗಲೀ ಬೇರೆಯವರಾಗಲೀ ಬಾಯ್ತೆರೆದರೆ ಕೇವಲ ಕರ್ನಾಟಕ ಪ್ರಾಂತ ರಚನೆಯ ಮಾತನ್ನೇ ಆಡುತ್ತಿರುವರೆಂಬುದೂ ನಿಮಗೆ ತಿಳಿದಿದೆಯಲ್ಲವೇ? ಇಂದು ಅವರು ರಚಿಸಿರುವ ನಿಮ್ಮನ್ನೊಳಗೊಂಡ ಸಮಿತಿಯು ಕರ್ನಾಟಕ ಪ್ರಾಂತರಚನೆ ಹೇಗೆ ಆಗಲು ಸಾಧ್ಯವೆಂಬುದನ್ನು ಫೈಸಲ್ ಸಮಿತಿಗೆ ಅರುಹಿ ಪ್ರಾಂತರಚನೆಯ ಮೂಲ ಪೀಠಿಕೆಯನ್ನು ಹಾಕಬೇಕಾಗಿದೆಯೆಂಬುದರ ಅರಿವು ನಿಮಗಿದೆಯಲ್ಲವೇ? ನೀವು ಇಂಥ ಸಮಿತಿಯಲ್ಲಿ ಸದಸ್ಯರಾಗಿರಲು ಒಪ್ಪಿ ನಿಮ್ಮ ನೇಮಕದ ಬಗ್ಗೆ ಅಭಾರ ಮನ್ನಣೆಯ ಪತ್ರ ಬರೆದಿದ್ದರೆ ನೀವು ಕರ್ನಾಟಕ ಏಕೀಕರಣವಾದಿಗಳೆಂದು ನಮ್ಮಂಥಾ ಜನರು ತಿಳಿದು ಕೊಂಡರೆ ಅದು ತಪ್ಪಾಗುವದೇ?

ಕಳೆದ ಚುನಾವಣೆಯ ಕಾಲಕ್ಕೆ ಕೊಡಗಿನ ಭವಿಷ್ಯ ನಿರ್ಣಯದ ಪ್ರಶ್ನೆಯು ಕೊಡಗಿನ ಜನತೆಯಿಂದಲೇ ನಿರ್ಣಯವಾಗಬೇಕೆಂದೂ ಇದಕ್ಕೆ ವ್ಯತಿರಿಕ್ತವಾದರೆ ಕಾಂಗ್ರೆಸ್ ಎಂ. ಎಲ್. ಎ. ಗಳೆಲ್ಲರೂ ತಮ್ಮ ಸ್ಥಾನಗಳಿಗೆ ರಾಜಿನಾಮೆ ಇತ್ತು ಹೊರಬರುವದಾಗಿಯೂ ಮತದಾರರಿಗೆ ನಿಮ್ಮ "ಕಾಂಗ್ರೆಸ್ ಘೋಷಣೆ" ಯಲ್ಲಿ ಭರವಸ ಇತ್ತುದನ್ನು ಪ್ರೆಸಿಡೆಂಟರಾದ ನೀವು ಮರೆತಿರಲಾರಿರಲ್ಲವೇ? ಜನತೆಯ ಅಭಿಮತದಂತೆ ಕೊಡಗಿನ ಭವಿಷ್ಯ ನಿರ್ಣಯವಾಗಬೇಕೆಂದು ಭರವಸೆ ಇತ್ತು, ಪ್ರತ್ಯೇಕ ಪಕ್ಷದವರು ಹೇಳುತ್ತಿದ್ದ ವಾದವನ್ನು ತಮ್ಮದನ್ನಾಗಿ ಮಾಡಿಕೊಂಡು ಪ್ರತ್ಯೇಕ ಪಕ್ಷಕ್ಕೆ ಸೇರಿದ ಕೊಡಗು ಕಾಂಗ್ರೆಸಿನ ಪ್ರೆಸಿಡೆಂಟರಾದ ನೀವು ಇಂದು ಕರ್ನಾಟಕ ಏಕೀಕರಣವಾದಿ ನಿಜಲಿಂಗಪ್ಪನವರ ಸಮಿತಿಯ ಸದಸ್ಯರಾಗಿರುವದು ನೀವಿತ್ತ ಭರವಸೆಗೆ ವಿರುದ್ಧವಾಗಲಿಲ್ಲವೇ? ಕರ್ನಾಟಕ [illegible]ದದ ರಾಜಕೀಯದಲ್ಲಿ ನೀವು ಕಲಹಪ್ರಿಯರ ಕೈಗೊಂಬೆಗಳಾಗಲಿಲ್ಲವೇ ಎಂಬ ಭಯ ನನಗಿದೆ. ದಯವಿಟ್ಟು ಮೇಲಿನ ನನ್ನ ಸಂಶಯಗಳಿಗೆ ಈ ಪತ್ರಿಕೆಯ ಮೂಲಕ ಉತ್ತರ ಬರೆಯಿರಿ. ನಂತರ ನಿಮ್ಮ ಯೋಗಕ್ಷೇಮವನ್ನು ಮತ್ತೊಮ್ಮೆ ವಿಚಾರಿಸಿ ಪತ್ರ ಬರೆಯುವೆನು.

"ನಿಮ್ಮ ಹಿತೈಷಿ"

ಇವುಗಳನ್ನು ತೆಗೆದು ಹಾಕಬೇಕು

ಕೊಡಗನ್ನು ೧೮೩೪ರಲ್ಲಿ ಬ್ರಿಟಿಷರು ಸ್ವಾಧೀನ ಮಾಡಿಕೊಂಡ ಕಾಲದಲ್ಲಿ ನಮ್ಮ ಕೋಟೆಯ ಮುಂದೆ ವೀರಭದ್ರ ಸ್ವಾಮಿಯ ದೇವಾಲಯವಿತ್ತಂತೆ. ಅದನ್ನು ಬ್ರಿಟಿಷರು ಕೂಡಲೇ ಚರ್ಚ್ ಆಗಿ ಮಾಡಿದರಂತೆ. ಈಗಲೂ ಚರ್ಚ್ ಅಲ್ಲಿಯೇ ಇದೆ. ವಾರಕ್ಕೆ ನಾಲ್ಕೈದು ಕ್ರೈಸ್ತರು ಜಪ ಪೂಜೆಗೆ ಅಲ್ಲಿ ಬರುವದು ಕಾಣುವುದಿಲ್ಲ. ಅದೇ ಅಲ್ಲದೆ, ರಾಜಾಸೀಟಿನ ಹತ್ತಿರ ತಮ್ಮ ಸ್ಮಶಾನವನ್ನು ಸಹ ಮಾಡಿಕೊಂಡು ರಾಜಾಸೀಟಿನ ಅಂದಚಂದವನ್ನೇ ಹಾಳು ಮಾಡಿದರು.

ಮದ್ರಾಸಿನಲ್ಲಿ .ರಾಜಾಜಿಯವರು ೧೯೩೭ರಲ್ಲಿ ಮಂತ್ರಿತ್ವವನ್ನು ಒಪ್ಪಿಕೊಂಡ ಕೂಡಲೇ ಪಬ್ಲಿಕ್ ಸ್ಥಳಗಳಲ್ಲಿದ್ದ ಅನೇಕ ಇಂಗ್ಲಿಷ್ ಗವರ್ನರು ಮೊದಲಾದವರ ಪ್ರತಿಮೆಗಳನ್ನು ಮ್ಯೂಸಿಯಮ್ಮಿಗೆ ಸಾಗಿಸಿ ಇಟ್ಟರು. ಕಲ್ಕತ್ತಾದಲ್ಲಿಯೂ ಸಹ ಹೀಗೆ ಮಾಡಿರುತ್ತಾರೆಂದು ತಿಳಿಯುತ್ತೇವೆ. ಇಂಡಿಯಾದ ಅನೇಕ ಕಡೆಗಳಲ್ಲಿ ನಮಗೆ ಸ್ವಾತಂತ್ರ್ಯ ಸಿಕ್ಕಿದ ಕೂಡಲೇ ಮಂತ್ರಿಗಳು ದೇಶಕ್ಕೆ ಮತ್ತು ಜನಕ್ಕೆ ಗೌರವ ಹಾನಿಯನ್ನು ತರುತಿದ್ದ ಬ್ರಿಟಿಷರ ಪ್ರತಿಮೆಯನ್ನು ತೆಗೆದಿದ್ದಾರೆ. ಈ ಕಾರಣದಿಂದ ನಮ್ಮ ಕಾಂಗ್ರೆಸ್ ಸರ್ಕಾರದವರು ಕೋಟೆಯ ಆವರಣದೊಳಗಿರುವ ಇಂಗ್ಲಿಷ್ ಚರ್ಚನ್ನು ಬೇರೆ ಕಡೆಗೆ ಸಾಗಿಸಲು ಕಂಪೆನ್ಸೇಷನ್ ಕೊಟ್ಟು ಅಲ್ಲಿ ನಮಗೊಂದು ಮ್ಯೂಸಿಯಂ ಏತಕ್ಕಾಗಿ ಮಾಡಕೂಡದು? ನಾವು ರಾಜ್ಯ ಆಳುವವರು ಎಂಬ ಭಾವನೆಯಿಂದ ಹಿಂದೂ ದೇವಸ್ಥಾನವನ್ನು ತೆಗೆದು ಹಾಕಿ, ಕ್ರಿಸ್ತ ದೇವಸ್ಥಾನ ಮಾಡಿದ್ದು, ರಾಜಾಸೀಟಿನ ಚಂದವನ್ನು ಸ್ಮಶಾನಮಾಡಿ ಕೆಡಿಸಿದ್ದೂ ಅವರ ಹೆಸರಿಗೆ ಒಳ್ಳೆಯದಲ್ಲ. ಈಗಿನ ಅವರ ಸ್ಮಶಾನವನ್ನು ರಾಜಾಸೀಟಿನಿಂದ ಸ್ವಲ್ಪ ದೂರ ಮೊಣ್ಣೆಯ ಪಶ್ಚಿಮ ಬದಿಗೆ ಯಾಕೆ ಸಾಗಿಸಕೂಡದು?

ಈ ಮೇಲಿನ ಎರಡು ಕೆಲಸಗಳಂತೆಯೇ ಈಚೆಗೆ ರಾಜಾಸೀಟಿಗೆ ಹೋಗುವ ಮೈದಾನದ ಮಧ್ಯ ಭಾಗದಲ್ಲಿ ಮಿಲಿಟರಿಯಲ್ಲಿ ಕೆಲಸ ಮಾಡಿದವರಿಗಾಗಿ (ಎಕ್ಸ್

ಸರ್ವಿಸ್ ಮೆನ್) ಒಂದು ಕಟ್ಟಡವನ್ನು ಕಟ್ಟಿ ಜನರಿಗೆ ನಡೆಯಲು ಮಕ್ಕಳಿಗೆ ಓದಲು ತುಂಬಾ ಅನಾನುಕೂಲ ಮಾಡಿದ್ದಾರೆ. ಇಂಥಾದ್ದನ್ನು ಯಾವ ಸರಕಾರವೂ ಮಂಜೂರು ಮಾಡಲಿಕ್ಕಿಲ್ಲ. ಆ ಕಾಲದಲ್ಲಿ ಮಡಿಕೇರಿಯ ಪುರ ನಿವಾಸಿಗಳು ತಮ್ಮ ಅತೃಪ್ತಿ ಮತ್ತು ವಿರೋಧವನ್ನು ಯಾವ ರೀತಿಯಿಂದಲೂ ತೋರಿಸದಿದ್ದುದಕ್ಕೆ ವ್ಯಸನ ಪಡಬೇಕಾಗಿದೆ. ಪಬ್ಲಿಕ್ ಹಿತವನ್ನು ಕಾದಿಡುವದು ಎಲ್ಲಾ ಸರಕಾರದ ನೀತಿಯಾಗಿರಬೇಕು. ಪಟ್ಟಣದ ಅಂದವನ್ನು ಹಾಳು ಮಾಡುವದಲ್ಲ.

ನಮ್ಮ ಸರಕಾರವು ಮತ್ತು ಪ್ರಜಾ ಪ್ರತಿನಿಧಿಗಳು ಈ ಮೇಲಣ ಸಲಹೆಗೆ ಮನಸ್ಸು ಕೊಡುವರೇ ?

—ಕೆ. ಪಿ. ಚಿಣ್ಣಪ್ಪ.

ಧನಲಕ್ಷ್ಮಿ

ಕೊಡಗಿನ ಅಚ್ಚರಿಯ ಕನ್ಯೆ ಧನಲಕ್ಷ್ಮಿಯ ವಿಚಾರದಲ್ಲಿ ತಾ. ೨೦ರ ಸಂಚಿಕೆಯಲ್ಲಿ ಪ್ರಕಟವಾದ ಬೆಂಗಳೂರಿನ ಡಾಕ್ಟರ್ ರೆಡ್ಡಿಯವರ ಅಭಿಪ್ರಾಯವನ್ನು ಓದಿದೆನು. ಧನಲಕ್ಷ್ಮಿಯು ಗುಟ್ಟಿನಲ್ಲಿ ಆಹಾರ ಸೇವಿಸುತ್ತಿದ್ದಳೆಂದು ಆಕೆಯನ್ನು ನೋಡಿದೊಡನೇ ಡಾಕ್ಟರು ಅಭಿಪ್ರಾಯ ಪಟ್ಟಿರುವರು. ಆಕೆಯ ಈ ಕಥೆಯು ನಿರಾಧಾರವಾದುದು, ಆಸಕ್ತ ಜನರು ಯಾವುದೋ ಕಾರಣಕ್ಕಾಗಿ ಇದನ್ನು ಉತ್ಪ್ರೇಕ್ಷೆ ಮಾಡಿರುವರೆಂದು ಹೇಳಲಾಗುತ್ತಿದೆ. ಆದರೆ ಪರಿಸ್ಥಿತಿಯನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ಪರಿಶೀಲಿಸಿದರೆ ಈ ಊಹೆಗಳಿಗೆ ಕಾರಣವಿಲ್ಲ. ಧನಲಕ್ಷ್ಮಿಯು ಅಬೋಧ ಬಾಲಕಿ. ಆಕೆಗೆ ಪವಾಡಗಳ ಅಚ್ಚರಿಯನ್ನು ಬೀರಿ ಹೆಸರು ಯಾ ಹಣ ಗಳಿಸುವ ಆಸೆ ಇರಲಾರದು. ಆಕೆಯ ತಂದೆಯೂ ಕೂಡ ಲಾಭದ ಆಸೆ ಇಟ್ಟಿರಲಾರರು. ಏಕೆಂದರೆ ನನಗೆ ತಿಳಿದಿರುವಂತೆ ಅವರು ಸಿರಿವಂತರಾಗಿದಿದ್ದರೂ, ಹೊಟ್ಟೆ ಬಟ್ಟೆಗೆ ತೊಂದರೆ ಇರುವವರಲ್ಲ. ಮೇಲಾಗಿ ಇಂಥಾ ಒಂದು ಪವಾಡವು ಡಾಕ್ಟರಿಂದಲೂ ಇತರ ತಜ್ಞರಿಂದಲೂ ಕಠಿಣ ಪರೀಕ್ಷೆಗೆ ಒಳಗಾಗುವದೆಂಬುದೂ ಅವರಿಗೆ ತಿಳಿದಿರಲೇಬೇಕು. ಹಾಗಿರುವಾಗ ಸುಳ್ಳು ಕಥೆಯನ್ನು ಕಟ್ಟುವ ಸಾಧ್ಯತೆ ಇದ್ದಿರಲಾರದು. ಬೆಂಗಳೂರಿನಲ್ಲಿ ಆಕೆ ಊಟ ಮಾಡಿರಬಹುದು. ಆದರೆ ಪುನಹ ಆಕೆ ಊಟ ಮಾಡದೆ ಉಪವಾಸವಿರುವ ವರ್ತಮಾನಗಳನ್ನು ಪತ್ರಿಕೆಗಳಲ್ಲಿ ಓದಿದೆನು. ಅದ್ದರಿಂದ ಆಕೆಯ ಈ ನಿರಾಹಾರ ಜೀವನದ ಕಥೆಯಲ್ಲಿ ಉತ್ಪ್ರೇಕ್ಷೆ ಇರಬಹುದಾದರೂ ಅದು ಸುಳ್ಳೆಂದೂ, ಗುಟ್ಟಿನಲ್ಲಿ ಆಹಾರ ಸೇವಿಸುತ್ತಿದ್ದಳೆಂಬುದೂ ಸರಿಯಲ್ಲ. ಬೆಂಗಳೂರಿನಲ್ಲಿ ಡಾಕ್ಟರು ಪಟ್ಟ ಅಭಿಪ್ರಾಯವು ಕಡೆಯ ಅಭಿಪ್ರಾಯವಾಗಲಾರದು. ಆಕೆಯನ್ನು ಪುನಹ ಪರಿಶೀಲಿಸುವ ಅವಶ್ಯಕತೆ ಇದೆ. ಈಗ ಪ್ರಕಟವಾಗಿರುವ ವರದಿಯಂತೆ ಆಕೆ ಪುನಹ ಉಪವಾಸವಿರುವದರಿಂದ ವೈದ್ಯಕೀಯ ತಜ್ಞರು ಪುನಹ ಆಕೆಯ ಈ ನಿರಶನ ಜೀವನದ ಪರಿಶೀಲನೆಯನ್ನು ಮಾಡುವುದು ಒಳಿತು. 'ಶಂಕರು'



ದ್ವೇಷವನ್ನು ಪ್ರತಿಯೊಬ್ಬನೂ ಬಿಡಬೇಕು. ದ್ವೇಷ ಮಾಡುವವರ ಮಧ್ಯೆ ದ್ವೇಷಿಸದೆ ನಿರ್ವಿಕಾರದಿಂದ ಬದುಕಲು ಕಲಿಯಬೇಕು.

ದುಃಖ, ನೋವುಗಳಿಂದಲೂ ನಾವು ಬಿಡುಗಡೆ ಪಡೆಯಬೇಕು. ದುಃಖಿಸುವವರ ದುಃಖ ಶಮನಕ್ಕೆ ಸಹಾಯಕವಾಗುವಂತೆ ಬದುಕಬೇಕು.

ಆಸೆ, ಮೋಹ, ಕಾಮಗಳನ್ನು ತ್ಯಜಿಸಬೇಕು. ಇವುಗಳಿರುವವರ ಮಧ್ಯೆ ನಿರ್ಲಿಪ್ತರಾಗಿ ಬದುಕಲು ಕಲಿಯಬೇಕು.

ಯಾವುದನ್ನೂ ಸಂಗ್ರಹಿಸಿಡದೆ ಯಾವುದರ ಮೇಲೆಯೂ ನಮ್ಮದೆಂಬ ಮುದ್ರೆಯೊತ್ತದೆ ಜೀವಿಸಬೇಕು. ಈ ಪ್ರಪಂಚವೆಂಬ ಮನೆಯಲ್ಲಿ ಬಾಡಿಗೆಗಿರುವ ನಾವು ಮನೆಯನ್ನು ಬಿಟ್ಟು ತೆರಳಬೇಕಾಗುವದು.

ಜಯದಿಂದ ದ್ವೇಷ ಹುಟ್ಟುತ್ತದೆ, ಏಕೆಂದರೆ ಅಪಜಯ ಪಡೆದವನು ಪ್ರತೀಕಾರಕ್ಕೆ ಹೆಣಗುತ್ತಾನೆ. ಆದ್ದರಿಂದ ಜಯಾಪಜಯಗಳ ಗೊಡವೆ ಇಲ್ಲದೆ ಶಾಂತನಾಗಿ ಜೀವಿಸಬೇಕು.

ಕಾಮಕ್ಕಿಂಥಾ ಮಿಗಿಲಾದ ಬೆಂಕಿ ಇಲ್ಲ. ದ್ವೇಷಕ್ಕಿಂಥಾ ಮಿಗಿಲಾದ ಶತ್ರುವಿಲ್ಲ. ಪಂಚೇಂದ್ರಿಯಗಳ ದಾಸನಾಗಿರುವದಕ್ಕಿಂಥಾ ಮಿಗಿಲಾದ ಗುಲಾಮಗಿರಿಯಿಲ್ಲ. ಮೋಕ್ಷಕ್ಕಿಂಥಾ ಮಿಗಿಲಾದ ಸುಖವಿಲ್ಲ.

ಹಸಿವು ರೋಗಗಳೆಲ್ಲಾ ನಿಕೃಷ್ಟವಾದುವು. ನೀತಿಗೆಡುವದು ಎಲ್ಲಾ ಅಧಃಪತನಗಳಿಗಿಂಥಾ ಕೆಳಗಿನದು. ಆದರೆ ತನ್ನನ್ನು ತಾನರಿಯುವದು ಹಿರಿದರಲ್ಲಿ ಹಿರಿದಾದ ಆನಂದ.

ಆರೋಗ್ಯಕ್ಕಿಂಥಾ ಮಿಗಿಲಾದ ಸಂಪತ್ತಿಲ್ಲ. ತೃಪ್ತಿಗಿಂಥಾ ಮಿಗಿಲಾದ ಧನವಿಲ್ಲ. ವಿಶ್ವಾಸಕ್ಕಿಂಥಾ ಮಿಗಿಲಾದ ಬಂಧುವಿಲ್ಲ. ನಿರ್ವಾಣಕ್ಕಿಂಥಾ ಮಿಗಿಲಾದ ಆನಂದವಿಲ್ಲ.

ಒಬ್ಬಂಟಿಗನಾಗಿ, ಮೌನಧರಿಸಿ ಶಾಂತಿಯಿಂದಿರುವ ಸುಖವನ್ನು ತಿಳಿದವನಿಗೂ, ಪಾಪಗಳಿಂದ ದೂರ ಉಳಿದು ಸ್ಥಿತ ಪ್ರಜ್ಞನಂತೆ ಸರ್ವವನ್ನೂ ನಿರ್ವಿಕಾರದಿಂದ ನೋಡುವವನಿಗೂ ಬಂಧನವಿರದು.

ಆದರ್ಶ ಪುರುಷರನ್ನು ಕಾಣುವದು ಹಿತಕರ. ಅವರೊಡನೆ ಜೀವಿಸುವದು ಆನಂದಕ್ಕೆ ಕಾರಣ. ಅತನನ್ನು ಅನುಸರಿಸಿ ಅತನಂತಾಗಲೆತ್ನಿಸುವದು ಉತ್ತಮೋತ್ತಮ. ಆದ್ದರಿಂದ ಬುದ್ಧಿವಂತನು ತಿಳಿಗೇಡಿಗಳಿಂದ ದೂರ ಉಳಿಯುವನು.

ತಿಳಿಗೇಡಿಯ ಸಹವಾಸ, ಗೆಳೆತನ ಮಾಡುವವನು ದುಃಖಕ್ಕೆ ಈಡಾಗುವನು. ಶತ್ರುವಿನ ಸ್ನೇಹಕ್ಕಿಂಥಾ ತಿಳಿಗೇಡಿ ಹಾಗೂ ನೀತಿ ರಹಿತನ ಸ್ನೇಹವು ಹಾನಿಕರ. ಆದ್ದರಿಂದ ತಿಳಿದವರು ತಿಳಿದವರೊಡನೆಯೇ ಒಡನಾಡುವವರಲ್ಲಿ ಆನಂದ ಪಡೆಯುತ್ತಾರೆ.

ಆಕಾಶದಲ್ಲಿ ಚಂದ್ರನು ಸುತ್ತಿದರೂ ತಾನು ಸುತ್ತಿದ ಮಾರ್ಗದಲ್ಲಿ ತನ್ನ ಕುರುಹಿಲ್ಲದಂತೆ ಚಲಿಸುವಂತೆ, ಮನುಷ್ಯನು ತನ್ನ ಇಹ ಜೀವನದಲ್ಲಿ ನಿರ್ಲಿಪ್ತನಾಗಿ ಜೀವಿಸಿ ಸರ್ವರಿಗೂ ಬೆಳಕೀವ ಶಕ್ತಿಯಾಗಿ ಬಾಳಬೇಕು.

ಹಿಂದುಳಿದ ವರ್ಗದವರ ವಿದ್ಯಾರ್ಥಿ ವೇತನ

ಕೊಡಗಿನಲ್ಲಿರುವ ಹಿಂದುಳಿದ ಪಂಗಡದವರ ಮಕ್ಕಳ ವಿದ್ಯಾ ಪ್ರಗತಿಯ ದೃಷ್ಟಿಯಿಂದ ಕೇಂದ್ರ ಸರಕಾರವು ಹೈಸ್ಕೂಲಿನಲ್ಲಿ ಓದುವ ಹಿಂದುಳಿದ ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಡುವ ಏರ್ಪಾಡು ಮಾಡಿದೆಯೆಂದು ನನಗೆ ತಿಳಿದು ಬಂದಿದೆ. ಈ ವಿದ್ಯಾರ್ಥಿ ವೇತನಗಳು ಹಿಂದುಳಿದ ಪಂಗಡದ ಅತೀ ಬಡವರಾದ ಮಕ್ಕಳಿಗೆ ಕೊಡಲ್ಪಡಬೇಕಿತ್ತು. ಆದರೆ ಇದು ಹಾಗಾಗಿರುವಂತೆ ಕಂಡುಬರುವದಿಲ್ಲ. ಈ ವಿದ್ಯಾರ್ಥಿ ವೇತನಗಳನ್ನು ವಿತರಣೆ ಮಾಡುವವರ ಮೇಲೆ ಪ್ರಭಾವಶಾಲಿ ಹಿಂದುಳಿದ ಪಂಗಡದ ಕೆಲವರ ವರ್ಚಸ್ಸಿದ್ದು ಬಹುತೇಕ ಈ ವಿದ್ಯಾರ್ಥಿ ವೇತನಗಳೆಲ್ಲವೂ ಶ್ರೀಮಂತರಾದ ಹಿಂದುಳಿದ ಪಂಗಡದವರ ಮಕ್ಕಳಿಗೇ ಕೊಡಲ್ಪಟ್ಟಿವೆಯೆಂದು ನನಗೆ ತಿಳಿದು ಬಂದಿದೆ. ಆದ್ದರಿಂದ ಈ ವಿದ್ಯಾರ್ಥಿ ವೇತನಗಳನ್ನು ಯಾರು ಯಾರಿಗೆ ಕೊಡಲಾಗಿದೆಯೆಂದು ಸಂಬಂಧಿಸಿದ ಅಧಿಕಾರಿಗಳು ಸಾರ್ವಜನಿಕರ ಅವಗಾಹನೆಗಾಗಿ ಪ್ರಕಟ ಮಾಡಬೇಕು. ದಳಿತ ವರ್ಗದ ಹೆಸರು ಹೇಳಿಕೊಂಡು ಈ ವರ್ಗಕ್ಕೆ ಸೇರಿದ ಕೆಲವು ಆಸ್ತಿವಂತರೂ ಸ್ಥಿತಿವಂತರೂ ಲಾಭ ಪಡೆಯುತ್ತಿರುವರೆಂಬ ಆರೋಪ ಬಲವಾಗಿದೆ. ಆದ್ದರಿಂದ ಈ ವಿದ್ಯಾರ್ಥಿ ವೇತನಗಳು ಹೇಗೆ ಯಾವ ರೀತಿ ಕೋಲಿನಿಂದ ವಿತರಣೆಯಾದವು ಯಾರಿಗೆ ಕೊಡಲ್ಪಟ್ಟವೆಂಬುದನ್ನು ಶೀಘ್ರ ಪ್ರಕಟಿಸಬೇಕೆಂದು ಈ ಮೂಲಕ ಕೇಳಲಾಗಿದೆ.

'ಹಿಂದುಳಿದ ಪಂಗಡದ ಗರೀಬ'

ಚುನಾವಣಾ ಕ್ಷೇತ್ರಗಳ ಬದಲಾವಣೆ.

ಹೊಸದಾಗಿ ಬದಲಾವಣೆ ಮಾಡಿದ ಮತದಾರ ಕ್ಷೇತ್ರಗಳ ಪಟ್ಟಿಯನ್ನು ಪ್ರಕಟಿಸಿ ಆಕ್ಷೇಪಗಳಿದ್ದರೆ ನವಂಬರ್ ತಾರೀಕು ೨೫ರೊಳಗೆ ತಿಳಿಸಬೇಕೆಂದು ಸರಕಾರದವರು ಪ್ರಕಟಿಸಿದ ಮೇರೆ ಶಾಸನ ಸಭೆಯ ಸದಸ್ಯರಾದ ಶ್ರೀ ಪಿ. ಐ. ಬೆಳ್ಯಪ್ಪನವರು ಈ ಕೆಳಗಿನ ಬದಲಾವಣೆಗಳನ್ನು ಸೂಚಿಸಿದ್ದರು.

(೧) ಬೆಪ್ಪುನಾಡು ಕ್ಷೇತ್ರಕ್ಕೆ ಸೇರಿಸಲ್ಪಟ್ಟಿರುವ ಚೆಂಬೆಬೆಳ್ಳೂರು ದೇವಣಗೇರಿ ಮತ್ತು ಮೈತಡಿ ಗ್ರಾಮಗಳನ್ನು ಎಡೆನಾಲ್ಕನಾಡು ಕ್ಷೇತ್ರಕ್ಕೆ ಸೇರಿಸತಕ್ಕದ್ದು. ಹಾಗೆಯೇ ಸರಿಯಂದಡ, ಚೇಲಾವರ, ಕರಡ, ಪಾಲಂಗಾಲ, ಕೆದಮುಳ್ಳೂರು ಮತ್ತು ಕೊಟ್ಟೋಳಿ ಗ್ರಾಮಗಳನ್ನು ಬೆಪ್ಪುನಾಡು ಕ್ಷೇತ್ರದಿಂದ ತೆಗೆದು ಎಡೆನಾಲ್ಕುನಾಡು ಕ್ಷೇತ್ರಕ್ಕೆ ಸೇರಿಸತಕ್ಕದ್ದು.

(೨) ಮಾಯಮುಡಿ ಗ್ರಾಮವನ್ನು ಬಿಟ್ಟಯತ್ತುನಾಡು ಕ್ಷೇತ್ರದಿಂದ ತೆಗೆದು ಪೊನ್ನಂಪೇಟೆಗೆ ಸೇರಿಸತಕ್ಕದ್ದು ಮತ್ತು ಹೆಬ್ಬಾಲೆ, ನೊಕ್ಯ ಮತ್ತು ಕಲ್ಪಳ ಗ್ರಾಮಗಳನ್ನು ಪೊನ್ನಂಪೇಟೆಯಿಂದ ತೆಗೆದು ಬಿಟ್ಟಯತ್ತು ನಾಡಿಗೆ ಸೇರಿಸತಕ್ಕದ್ದು ಅಲ್ಲದೆ ಹೊಸೂರು ಮಾಲ್ದಾರೆ, ಚೆನ್ನಂಗಿ, ಚೆನ್ನಯನಕೋಟೆ ಮತ್ತು ಬಾಡಗ ಬಾಣಂಗಾಲ ಗ್ರಾಮಗಳನ್ನು ಬಿಟ್ಟಯತ್ತು ನಾಡಿನಿಂದ ತೆಗೆದು ಅಮ್ಮತ್ತಿ ಕ್ಷೇತ್ರಕ್ಕೆ ಸೇರಿಸತಕ್ಕದ್ದು.

(೩) ನಿಟ್ಟೂರು ಮತ್ತು ಹತ್ತುಗಟ್ಟು ನಾಡು ಫಾರೆಸ್ಟುಗಳನ್ನು ಶ್ರೀಮಂಗಲದಿಂದ ಪೊನ್ನಂಪೇಟೆಗೆ ಸೇರಿಸತಕ್ಕದ್ದು.

ಸಾಮಾಜಿಕ ಮತ್ತು ಆರ್ಥಿಕ ಸಂಬಂಧದಲ್ಲಿ ಆಯಾಯ ನಾಡುಗಳಿಗೆ ಸೇರಿದ ಗ್ರಾಮಗಳನ್ನು ಮೇಲೆ ಸೂಚಿಸಿದಂತೆ ಆಯಾಯ ಕ್ಷೇತ್ರಗಳಿಗೆ ಸೇರಿಸುವದು ಯುಕ್ತ ಮತ್ತು ಒಂದು ನಾಡಿನ ಗ್ರಾಮಗಳನ್ನು ತೆಗೆದು ಇನ್ನೊಂದು ನಾಡಿನ ಕ್ಷೇತ್ರಕ್ಕೆ ಸೇರಿಸುವದು ಅಲ್ಲಿಯ ಜನರ ಹಿತದೃಷ್ಟಿಯಿಂದ ಯೋಗ್ಯವಲ್ಲವೆಂಬುದೇ ಈ ಮೇಲಿನ ಬದಲಾವಣೆಗೆ ಕಾರಣಗಳೆಂದು ಸೂಚಿಸಿದ್ದರು. ಅಲ್ಲದೆ ಡಿಲಿಮಿಟೇಶನ್ ಕಮಿಷನ್ ಈ ತಾ. ೨ರಲ್ಲಿ ಬೆಂಗಳೂರಿನಲ್ಲಿ ನಡೆಸಿದ ತಮ್ಮ ಮೀಟಿಂಗಿನಲ್ಲಿ ಶ್ರೀ ಬೆಳ್ಯಪ್ಪನವರು ಹಾಜರಿದ್ದು ತಾವು ಸೂಚಿಸಿರುವ ಬದಲಾವಣೆಗಳನ್ನು ಸಮರ್ಥಿಸಿ ಹೆಚ್ಚಿನ ವಿವರಗಳನ್ನು ಕೊಟ್ಟಿರುವರೆಂದೂ ಈ ಸೂಚನೆಗಳನ್ನು ತಮ್ಮ ಇನ್ನೊಂದು ಮೀಟಿಂಗಿನಲ್ಲಿ ಆಲೋಚಿಸಲಾಗುವದೆಂದು ಕಮಿಷನಿನವರು ಹೇಳಿರುವರೆಂದೂ ತಿಳಿಯಬಂದಿದೆ.

ನಾಪೋಕ್ಲಿಗೆ
"ಕೊಡಗು" ಪತ್ರಿಕೆಯ ಏಜೆಂಟರು
ಸಹಕಾರಿ ಸ್ಟೋರ್ಸ್ ಮೇನೇಜರ್.

ಗಂಡಬೇರುಂಡ ಪಕ್ಷಿಯ ಕತೆ.

ಒಂದು ಕೆರೆಯ ಹತ್ತಿರ ಕೆಲವು ಬೇರುಂಡ ಪಕ್ಷಿಗಳು ವಾಸಿಸು ತ್ತಿದ್ದವು. ಈ ಪಕ್ಷಿಗಳ ಆಕಾರ ವಿಚಿತ್ರವಾಗಿತ್ತು. ಇವುಗಳಿಗೆ ಒಂದೇ ಕುತ್ತಿಗೆಯ ಮೇಲೆ ಎರಡು ತಲೆಗಳು ಇರುತ್ತಿದ್ದವು. ಎರಡು ಬಾಯಿ ತಲೆಗಳಾದರೂ ಹೊಟ್ಟೆ ಒಂದೇ ಆಗಿತ್ತು.

ಇಂಥಾ ಗಂಡಬೇರುಂಡ ಪಕ್ಷಿಯೊಂದು ತಿರುಗಾಡುತ್ತಿದ್ದಾಗ ಅದರ ಒಂದು ತಲೆಯು ಸ್ವಲ್ಪ ಅಮೃತವನ್ನು ಕಂಡಿತು. ಆಗ ಇನ್ನೊಂದು ತಲೆಯು ಆ ಅಮೃತದಲ್ಲಿ ತನಗೂ ಅರ್ಧವನ್ನು ಕೊಡು ಎಂದು ಕೇಳಿತು. ಆದರೆ ಅಮೃತ ದೊರೆತ ತಲೆಯು ಸ್ವಾರ್ಥದಿಂದ ತಾನು ಕೊಡಲಾರೆನೆಂದು ತಿರಸ್ಕರಿಸಿತು. ಇದರಿಂದ ಇನ್ನೊಂದು ತಲೆಯು ಸಿಟ್ಟಿನಿಂದ ಅದಕ್ಕೆ ಬುದ್ಧಿ ಕಲಿಸುವೆನೆಂದು ವಿಷವನ್ನು ತಿಂದುಬಿಟ್ಟಿತು. ಆ ಎರಡು ತಲೆಗಳಿಗೂ ಒಂದೇ ಹೊಟ್ಟೆಯಾದ್ದರಿಂದ ವಿಷದ ಕಾರಣಕ್ಕಾಗಿ ಪಕ್ಷಿಯು ಸತ್ತುಹೋಯಿತು. ಆದ್ದರಿಂದಲೇ ಎರಡು ತಲೆಗಳು ಪರಸ್ಪರ ಜಗಳಾಡಿಕೊಂಡು ಅನೈಕ್ಯತೆಯಿಂದ ವರ್ತಿಸಿದ ಕಾರಣ ಪರಸ್ಪರ ವಿರುದ್ಧದ ಆಹಾರ ತೆಗೆದುಕೊಂಡು ನಾಶವಾದುವೆಂದು ಹೇಳಲಾಗಿದೆ. ಆ ಕಾರಣ ಎಂದೂ ಕೂಡ ಒಗ್ಗಟ್ಟಿನಲ್ಲಿ ಬಲವಿದೆಯೆಂದು ತಿಳಿಯಬೇಕು ಎಂದು ಪಾರಿವಾಳಗಳ ರಾಜನು ಹೇಳಿತು.

ಪಾರಿವಾಳಗಳು ಗಂಡಾಂತರವನ್ನು ಅರಿತು ಬದುಕುವ ಆಸೆಯಿಂದ ಒಗ್ಗಟ್ಟಾಗಿ ಬೇಡನ ಬಲೆಯನ್ನು ಎತ್ತಿಕೊಂಡು ಹೋದವು. ಇದನ್ನು ಕಂಡು ನಿರಾಶನಾದ ಬೇಟೆಯವನು ಆಶ್ಚರ್ಯ ಚಕಿತನಾಗಿ ತನ್ನಲ್ಲೇ ಹೇಳಿಕೊಂಡನು.

'ಈ ರೀತಿ ಎಂದೂ ಆಗಿಲ್ಲ. ಆದರೆ ಆ ಪಕ್ಷಿಗಳೆಲ್ಲಾ ಒಮ್ಮತದಿಂದ ಇರುವ ವರೆಗೆ ನನಗೆ ದೊರಕಲಾರವು. ಆದರೆ ಅವುಗಳೊಳಗೆ ಈ ಐಕ್ಯತೆಯು ಬಹು ಸಮಯ ಇರಲಾರದು. ಅವು ಪರಸ್ಪರ ಹೋರಾಡುವ ಸಮಯ ಬಾರದಿರದು. ಆದ್ದರಿಂದ ಅವು ಇಂದಲ್ಲ ನಾಳೆಯಾದರೂ ನನ್ನ ಕೈಗೆ ಬೀಳದಿರವು ಎಂದು ಯೋಚಿಸಿ ಆ ಪಕ್ಷಿಗಳನ್ನು ಹಿಂಬಾಲಿಸ ತೊಡಗಿದನು.

ಬೇಟೆಗಾರನು ತಮ್ಮನ್ನು ಅನುಸರಿಸುತ್ತಿರುವದನ್ನು ಕಂಡು ಪಾರಿವಾಳಗಳ ರಾಜನು ತನ್ನ ಜೊತೆಯವರಿಗೆ ಹಳ್ಳ, ಬೆಟ್ಟ, ಗುಡ್ಡಗಳ ಮೇಲೆ ಹಾರಿ ಹೋಗಲು ಸೂಚಿಸಿತು. ಅದೇ ರೀತಿ ಅವು ಮಾಡಿದ ಕಾರಣ ಬೇಟೆಗಾರನು ಅವುಗಳನ್ನು ಹಿಂಬಾಲಿಸಲಾರದೆ ಹಿಂತಿರುಗಿದನು.

ಆತನು ಹಿಂತಿರುಗಿದ ಮೇಲೆ ಪಾರಿವಾಳಗಳ ರಾಜನು ತನ್ನ ಗೆಳೆಯನಾದ ಚಿನ್ನ ಎಂಬ ಇಲಿಯ ಬಿಲದ ಹತ್ತಿರ ಬಂದಿತು. ಇಲಿಯನ್ನು ಕರೆದು ತಮ್ಮ ಬಿಡುಗಡೆ ಮಾಡಬೇಕೆಂದು ಕೇಳಿತು. ಜಾಣನಾದ ಇಲಿಯು ಹೊರಗೆ ಬಂದು ತನ್ನ ಮಿತ್ರನಾದ ಪಾರಿವಾಳ ರಾಜನನ್ನು ಬಿಡುಗಡೆ ಮಾಡಲು ಬಲೆಯನ್ನು ಕತ್ತರಿಸತೊಡಗಿತು.

ಆಗ ಪಾರಿವಾಳ ರಾಜನು ತನ್ನ ಗೆಳೆಯನನ್ನು ಕುರಿತು "ನನ್ನನ್ನು ಮೊದಲು ಬಿಡುಗಡೆ ಮಾಡದಿರು. ನನ್ನ ಗೆಳೆಯರನ್ನು ಬಿಡುಗಡೆ ಮಾಡು. ಏಕೆಂದರೆ ಅರಸನಾಗಲೀ ಮುಂದಾಳಾಗಲೀ ತನ್ನ ಪ್ರಜೆ ಯಾ ಅನುಯಾಯಿಗಳ ಹಿತವನ್ನು ಮೊದಲು ಸಾಧಿಸಿ ನಂತರ ತನ್ನ ಹಿತವ ನೋಡಬೇಕು" ಎಂದಿತು.

ಇಲಿಯು ಹಾಗೆಯೇ ಮಾಡಿತು. ಇದನ್ನೆಲ್ಲಾ ಹಿಂಬಾಲಿಸಿ ನೋಡುತ್ತಿದ್ದ ಕಾಗೆಯು ಇಲಿಯ ಮತ್ತು ಪಾರಿವಾಳಗಳ ಬುದ್ಧಿವಂತಿಕೆ ಮತ್ತು ಗೆಳೆತನವನ್ನು ಕಂಡು ಇಲಿಯನ್ನು ತನ್ನ ಗೆಳೆಯನಾಗಿ ಮಾಡಿಕೊಳ್ಳುವ ಉದ್ದೇಶದಿಂದ ಇಲಿಯ ಬಿಲದ ಬಾಯಲ್ಲಿ ಕುಳಿತು ಇಲಿಯನ್ನು ಕೂಗಿತು.

ತನ್ನ ಕುಲಶತ್ರುವಾದ ಕಾಗೆಯನ್ನು ಕಂಡು ಇಲಿಯು ಗಾಬರಿಯಿಂದ ಅಲ್ಲಿಂದ ತೊಲಗುವಂತೆ ಗದರಿಸಿತು. ನಂತರ ಪರಸ್ಪರ ಮಾತುಕತೆಯಾದ ಮೇಲೆ ಕಾಗೆಯು ಘಾತಕಿಯಲ್ಲವೆಂಬುದು ಇಲಿಗೆ ಖಚಿತವಾದ ನಂತರ ಇಬ್ಬರೂ ಗೆಳೆಯರಾದರು.

ಒಂದು ದಿನ ಕಾಗೆಯು ತನ್ನ ಗೆಳೆಯನಾದ ಇಲಿಯಲ್ಲಿಗೆ ಬಂದಾಗ ಅದರ ಮುಖ ಬಾಡಿತ್ತು. ಕಣ್ಣಿನಿಂದ ಕಂಬನಿ ಹರಿಯುತಿತ್ತು. ವಿಚಾರವೇನೆಂದು ಕೇಳಲು ಆ ದೇಶದಲ್ಲಿ ಬರಗಾಲ ಬಂದಿರುವದಾಗಿಯೂ, ತನ್ನಲು ಯಾವ ಆಹಾರವೂ ದೊರೆಯದೆ ತೊಂದರೆಯಾಗಿರುವದಾಗಿಯೂ ಆದ್ದರಿಂದ ಆ ದೇಶವನ್ನು ಬಿಟ್ಟು ತನ್ನ ಗೆಳೆಯನಾದ ನಿಧಾನಿ ಎಂಬ ಆಮೆ ಇರುವ ಪ್ರಾಂತ್ಯಕ್ಕೆ ತಾನು ಹೋಗಲು ನಿಶ್ಚಯಿಸಿರುವದಾಗಿಯೂ ಕಾಗೆಯು ಹೇಳಿತು.

ಇದನ್ನು ಕೇಳಿ ಇಲಿಗೂ ವ್ಯಸನವಾಯಿತು. ತನ್ನ ಪ್ರಾಣ ಸ್ನೇಹಿತನಾಗಿರುವ ಕಾಗೆಯು ಹೋದ ಮೇಲೆ ತನ್ನ ಜೀವನ ನಿರಸವಾಗುವದೆಂದು ನೆನಸಿ ತಾನು ಕಾಗೆಯೊಡನೆ ಹೋಗುವದಾಗಿ ಇಲಿಯು ಹೇಳಿತು. ನಂತರ ಕಾಗೆಯು ಇಲಿಯನ್ನು ತನ್ನ ಬೆನ್ನಿನ ಮೇಲೆ ಕೂರಿಸಿಕೊಂಡು ನಿಧಾನವಾಗಿ ಹಾರುತ್ತಾ ತನ್ನ ಗೆಳೆಯನಾದ ನಿಧಾನಿ ಇರುವ ಕೆರೆಯ ಹತ್ತಿರ ಬಂದಿತು. ಅಲ್ಲಿ ಇಲಿಯನ್ನು ಹತ್ತಿರದ ಬಿಲವೊಂದರಲ್ಲಿ ಇರುವಂತೆ ಹೇಳಿ ತನ್ನ ಗೆಳೆಯನನ್ನು ಕರೆಯಿತು.

ಅನೇಕ ಸಮಯದ ನಂತರ ಬಂದ ಗೆಳೆಯನನ್ನು ನೋಡಿ ಆಮೆಯು ಪ್ರೀತಿಯಿಂದ ಆಲಂಗಿಸಿತು. ನಂತರ ಕಾಗೆಯು ಇಲಿಯ ಪರಿಚಯವನ್ನು ಆಮೆಗೆ ಮಾಡಿಕೊಟ್ಟಿತು. ಆತನ ಗುಣಗಾನಮಾಡಿತು. ಆದರೆ ಇಲಿಯ ಮುಖದಲ್ಲಿ ಹೆಚ್ಚು ಸಂತೋಷವಿರಲಿಲ್ಲ. ಮಿತ್ರರಿಬ್ಬರೂ ಒತ್ತಾಯ ಮಾಡಲು ಇಲಿಯು ತನ್ನ ವ್ಯಸನದ ಕತೆಯನ್ನು ಮುಂದಿನ ವಾರ ಹೇಳುವದು.

ಕಿಟ್ಟುವು ಆಳಲಿಲ್ಲ !

ಕಿಟ್ಟುವು ಬಂದನು ಕ್ಲಾಸಿನ ಒಳಗೆ
ಗಂಟೆಯು ಆಗಿತ್ತು
ಗೋಡೆಯಮೇಗಡೆ ತೂಗಿದ ಗಂಟೆಯು
ಹತ್ತನು ಬಡೆದಿತ್ತು-ಹೇಳಿಗಿಸ
ಹತ್ತನು ಬಡೆದಿತ್ತು—

ಕ್ಲಾಸಿನ ಒಳಗಡೆ ಮಕ್ಕಳ ಕೂಗಿನ
ಗಲಭೆಯು ತುಂಬಿತ್ತು
ಕುರ್ಚಿಯ ಮೇಲಿನ ಮಾಸ್ತರ ಕಣ್ಣಲಿ
ಬೆಂಕಿಯು ಕಿಡಿಯಿತ್ತು-ಕೈಯಲಿ
ಬೆತ್ತದ ಕೋಲಿತ್ತು

ಪಟ ಪಟ ಶಬ್ದದ ಕೋಲಿನ ಆಟವು
ನಡೆಯದೆ ಬಿಡಲಿಲ್ಲ
ಕೈ ಮುಖವೆಲ್ಲವು ಕೆಂಪಡರಿದರು
ಕಿಟ್ಟುವು ಆಳಲಿಲ್ಲ-ದರ್ಪದ
ಹಟವನು ಬಿಡಲಿಲ್ಲ.

— ವಿಶಾ.

ಪ್ರ ಕ ಟ ಣೆ .

ಕೊಡಗು ಮುಜ್ರಾಯಿ ಇಲಾಖೆಗೆ ಸೇರಿದ ಎಡೆನಾಲ್ಕುನಾಡು, ಕಿಗ್ಗಟ್ಟುನಾಡು ತಾಲೂಕುಗಳ ಪರ ಕಮಿಟಿ ಮೆಂಬರಾಗಿದ್ದ ಶ್ರೀ ಶೇಷಪ್ಪಯ್ಯ ಹೆಬ್ಬಾರರವರ ಮೆಂಬರುತನದ ಅವಧಿಯು ಪೂರೈಸಿ ಖಾಲಿಯಾಗಿದೆ. ಸದರಿ ತಾಲ್ಲೂಕು ಪರ ಮೆಂಬರಾಗಲು ಇಚ್ಛಿಸುವವರು ಈ ಬಗ್ಗೆ ಅರ್ಜಿಯನ್ನು ಪ್ರೆಸಿಡೆಂಟ್‌ರವರ ಹೆಸರಿಗೆ ಈ ಡಿಸೆಂಬರ್ ತಾ. ೩೦ರೊಳಗೆ ತಲಪುವಂತೆ ಬರೆದುಕೊಳ್ಳತಕ್ಕದ್ದು. ಮಾಯಿದೆ ದಾಟಿ ಬರುವ ಅರ್ಜಿಯನ್ನು ಅಂಗೀಕರಿಸುವದಿಲ್ಲ. ಅರ್ಜಿದಾರರ ಪರ ಚುನಾವಣೆ ಬಗ್ಗೆ ವೀರಾಜಪೇಟೆ ಗಣಪತಿ ದೇವಸ್ಥಾನದ ಮುಂದುಗಡೆ ಬರುವ ಜನವರಿ ತಾ. ೬ನೇ ಬುಧವಾರ ದಿವಸ ಹಗಲು ೧೨ ಗಂಟೆಯಿಂದ ಸಾಯಂಕಾಲ ೫ ಘಂಟೆಯ ವರೆಗೆ ಓಟು ರಿಕಾರ್ಡ್ ಮಾಡಲಾಗುತ್ತೆ. ಓಟರ ರಿಜಿಸ್ಟರಿನಲ್ಲಿ ಮುಂದಾಗಿ ತಮ್ಮ ಹೆಸರು ರಿಜಿಸ್ಟರು ಮಾಡಿಸಿಕೊಂಡವರು ಓಟು ಮಾಡಬಹುದು.

ಪಿ. ಎ. ಚಂಗಪ್ಪ
ಪ್ರೆಸಿಡೆಂಟ್,
ಕೊಡಗು ಮುಜ್ರಾಯಿ ಇಲಾಖೆ.

ಡಿಸಂಬರ್ ತಿಂಗಳಿನಲ್ಲಿ—

ಜೇನು ಕೃಷಿಕನ ಕರ್ತವ್ಯ

[ಕೊಡಗು ವ್ಯವಸಾಯ ಇಲಾಖೆಯ ಜೇನು ಕೃಷಿ ಶಾಖೆಯಿಂದ]

(೧) ಛತ್ರದ ಹೂವಿನ ಸಮಯದಲ್ಲಿ ಇತರ ಸಜೀವಿ ವನಸ್ಪತಿಗಳು ಹೂಬಿಟ್ಟು ಮಕರಂಧವನ್ನು ಬೀರುವ ಕಾಲಕ್ಕೆ ಜೇನು ನೊಣಗಳು ಎಚ್ಚೆತ್ತು ಪುಷ್ಪರಸ ಮತ್ತು ಪರಾಗವನ್ನು ಉಪಯೋಗಿಸಿ ತನ್ಮೂಲಕ ತನ್ನ ಗೃಹಾಭಿವೃದ್ಧಿಯನ್ನು ಮಾಡಿಕೊಳ್ಳುವವು. ಜೇನು ಪ್ರಪಂಚದಲ್ಲಿ ಪುರೋಭಿವೃದ್ಧಿಯ ಕಡೆ ಪ್ರಥಮ ಸೋಪಾನವನ್ನು ಹಾಕುವದು ಡಿಸೆಂಬರ್ ತಿಂಗಳಲ್ಲಿ. ಈ ಸಮಯದಲ್ಲಿ ಒಂದಾವರ್ತಿ ಗೂಡಿನ ಕೆಳಮಣೆಯನ್ನು ಕುದಿಯುವ ನೀರಿನಿಂದ ಶುದ್ಧೀಕರಿಸಿ ಹತ್ತು ದಿನಗಳ ಪರಿಯಂತ ಗೂಡಿಗೆ ರಾಣಿ ತಡೆ ಗೇಟುಗಳನ್ನು ಹಾಕಿ ಡತಕ್ಕದ್ದು.

(೨) ಗೂಡಿನಲ್ಲಿ ನೊಣಗಳ ಸಂಖ್ಯೆ ಸಾಕಷ್ಟು ಬೆಳೆದಾಗ ಮರಿ ಹಾರಿಸಬೇಕೆಂಬ ಹಂಬಲ ಜೇನು ನೊಣಗಳಲ್ಲಿ ಹುಟ್ಟಿ, ತತ್ಪರಿಣಾಮವಾಗಿ ಗಂಡು ನೊಣಗಳ ಉತ್ಪತ್ತಿಯಾಗಿ, ಹೊಸ ರಾಣಿ ನೊಣಗಳ ಉತ್ಪಾದನೆಗೆ ಸನ್ನಾಹವನ್ನು ಮಾಡುತ್ತಿರುತ್ತವೆ. ಈ ಸಮಯದಲ್ಲಿ ರಾಣಿಯ ತಡೆ ಗೇಟನ್ನು ತೆಗೆದು ಹಾಕಬೇಕು. ಈ ಸಮಯದಲ್ಲಿ ಗೇಟಿದ್ದ ಪಕ್ಷದಲ್ಲಿ ಗಂಡು ನೊಣಗಳ ಮತ್ತು ರಾಣಿ ನೊಣಯೂ ನೊಣಗಳ ಹೊರ ಬರುವದಕ್ಕೆ ಆತಂಕವುಂಟಾಗಿ ಗೂಡಿನ ಅಭಿವೃದ್ಧಿಗೆ ಕುಂದಕವಾಗುತ್ತದೆ.

(೩) ಗಂಡು ನೊಣಗಳ ಉತ್ಪತ್ತಿಯೇ ಗೂಡಿನೊಳಗೆ ಮರಿ ಹಾರಿಸುವ ಯತ್ನ ನಡೆಯುತ್ತಿರುವದರ ಪೂರ್ವ ಚಿಹ್ನೆ. ಪೂರ್ವಭಾವಿಯಾಗಿ ಜೇನು ಕೃಷಿಕನು ಇದನ್ನು ಅರಿತು ರೂಢಿಯಲ್ಲಿರುವ ಪದ್ಧತಿಗನುಸಾರವಾಗಿ ಆ ಗೂಡಿನ ನೊಣಗಳನ್ನು ಎರಡಾಗಿ ವಿಂಗಡಿಸಿ ಹೀಗಾದ ಎರಡು ವಿಭಾಗಗಳನ್ನು ಬೇರೆ ಬೇರೆಯಾಗಿರಿಸಿ ಅವುಗಳ ಅವಶ್ಯಕತೆಗಳನ್ನು ಒದಗಿಸಿ ಕೊಡಬೇಕು. ವಿಭಾಗಿಸಲ್ಪಟ್ಟ ಗೂಡಿನ ನೊಣಗಳು ಎರಡು ಗೂಡಿನಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಕ್ರಮ ಕ್ರಮವಾಗಿ ಅಭಿವೃದ್ಧಿ ಪಥದಲ್ಲಿ ಸರಿಯುತಿದ್ದರೆ ಅವುಗಳನ್ನು ಖಾಯಂ ಆಗಿ ಎರಡು ಗೂಡುಗಳೆಂದೇ ಎಣಿಸಬೇಕು. ಕಾರಣಾಂತರದಿಂದ ಅವುಗಳಲ್ಲಿ ಒಂದು ವಿಭಾಗ ಅಥವಾ ಎರಡು ವಿಭಾಗಗಳು ಪ್ರತ್ಯೇಕ ಪ್ರತ್ಯೇಕವಾಗಿ ಉಳಿಯಲು ಸಾಧ್ಯತೆ ಇಲ್ಲದಿದ್ದಲ್ಲಿ ಆ ಎರಡು ವಿಭಾಗಗಳನ್ನು, ಕ್ರಮಕ್ಕನುಸರಿಸಿ ಮುದಿ ರಾಣಿಯನ್ನು ನಾಶಪಡಿಸಿದ ನಂತರ ಹೊಸ ಪದ್ಧತಿಗನುಸಾರವಾಗಿ ಒಂದುಗೂಡಿಸಬೇಕು. ಹೀಗೆ ಮಾಡುವದರಿಂದ ಈ ಸಮಯದಲ್ಲಿರುವ ನೊಣಗಳ 'ಮರಿ ಹಾರಿಸಬೇಕೆಂಬ ಹಠಮಾರಿತನ' ಮುರಿದಂತಾಗುವದಲ್ಲದೆ ಆ ಗೂಡಿಗೆ ಯವ್ವನದ ರಾಣಿಯನ್ನು ಅಧಿಕೃತವಾಗಿ ಒದಗಿಸಿ ಕೊಟ್ಟಂತಾಗುವುದು. (ಈ ಕೆಲಸಕ್ಕೆ ಜೇನು ಕೃಷಿಕರು ತಮಗೆ ಸಾಕಷ್ಟು ಅನುಭವ ಬರುವ ವರೆಗೆ ಆಯಾಯ ಕೇಂದ್ರಗಳಲ್ಲಿರುವ ಜೇನು ಕೃಷಿ ಗ್ರಾಮ ಸೇವಕರ ಸಹಾಯವನ್ನು ಪಡೆಯಬೇಕು)

(೪) ಈ ವರ್ಷ ಗುರುಕಲು, ಕುರುಚಲು ಗಿಡಗಳು ಹೂಬಿಟ್ಟಿರುವದರಿಂದ ಈ ತಿಂಗಳ ಆದಿಯಲ್ಲಿಯೇ ಹೆಚ್ಚು ಜೇನು ವಸತಿಗಳನ್ನು ಕಾಣಬಹುದು. ಆದುದರಿಂದ ಜೇನು ಮಡಿಕೆಗಳನ್ನಿಡಲು ಎಂದಿನಂತೆ ತಡ ಮಾಡದೆ ಆದಷ್ಟು ಬೇಗನೆ ನೊಣಗಳು ಮರದೆಲೆಗಳಲ್ಲಿ ಮೇಣವನ್ನು ಕಾಯಿಸಿ ಮಡಿಕೆಗಳಿಗೆ ಸವರಿ ನೊಣಗಳು ಬಂದು ತಂಗಬಹುದಾದ ಜಾಗಗಳಲ್ಲಿಡಬೇಕು. ಎರಡನೆ ವಾರದಲ್ಲಿ ಈ ಕೆಲಸವನ್ನು ಮಾಡಿ ಮುಗಿಸುವದು ಉತ್ತಮ.

(೫) ಹೆಚ್ಚು ಜೇನು ವಸತಿಗಳು ಬಂದು ಕೂರುವ ಕಾಡುಗಳ ಅಕ್ಕ ಪಕ್ಕಗಳಲ್ಲಿ ಮೇಲೆಂದಂತೆ ನವೀನ ಜೇನು ಗೂಡುಗಳನ್ನು ಮೇಣ ಕಾಯಿಸಿ ಸವರಿ ಇಟ್ಟರೆ ಜೇನು ಮಡಿಕೆಗೆ ಬರುವಂತೆಯೇ ಪೆಟ್ಟಿಗೆಗೂ ತಾವಾಗಿಯೇ ಬಂದು ಸೇರುವವು. ಈ ಕೆಲಸವನ್ನು ಈ ತಿಂಗಳ ಮೂರನೇ ವಾರದಲ್ಲಿ ಮಾಡಿ ಮುಗಿಸಿದರೆ ಆಗಬಹುದು.

(೬) ಹೋದ ವರ್ಷದ ಜೋಪಾನದಲ್ಲಿ ಉಳಿಸಿಟ್ಟುಕೊಂಡ ಖಾಲಿ ಜೇನೆರಿಗಳನ್ನು ಇಟ್ಟಲ್ಲಿಂದ ಹೊರ ತೆಗೆದು, ಸೂಪರುಗಳಲ್ಲಿ ಜೋಡಿಸಿ, ಎರಡು ಮೂರು ದಿನಗಳ ವರೆಗೆ ಗಾಳಿಯಾಡುವುದಕ್ಕೆ ಬಿಟ್ಟು, ನಂತರ ಅಭಿವೃದ್ಧಿ ಹೊಂದುತ್ತಿರುವ ಗೂಡುಗಳಿಗೆ ಅವುಗಳ ಶಕ್ತಿಗನುಸಾರವಾಗಿ ಹೆಚ್ಚಿನ ಸೂಪರುಗಳನ್ನು ಏರಿಸಬೇಕು.

(೭) ನವೀನ ಗೂಡುಗಳಿಗೆ ಹೊಸದಾಗಿ ವಸತಿಗಳನ್ನು ಕೂರಿಸಲು ಸಹ ಇದೇ ಉತ್ತಮ ಸಮಯ. ಈಗ ಕೂಡಿಸಲು ಸಿಕ್ಕುವ ಒಕ್ಕಲುಗಳು ಚಿಕ್ಕದಾಗಿರುವದರಿಂದ ಗೂಡುಗಳಿಗೆ 'ಒತ್ತರಿಸುವ ಹಲಗೆ'ಗಳನ್ನು ಉಪಯೋಗಿಸಿ ಈಗಿನ ಚಳಿಗಾಲದ ರಾತ್ರೆಯಲ್ಲಿ ಗೂಡಿನೊಳಗೆ ತಕ್ಕ ಶಾಖವನ್ನುಳಿಸಿಕೊಳ್ಳಲು ಸಹಾಯಕವಾಗುವಂತೆ ಮಾಡಬೇಕು.

i ಕೂಡಿಸಲು ಸರಿಯಾದ ಕಾಲ—ಡಿಸೆಂಬರಿನಿಂದ ಮಾರ್ಚಿಯ ವರೆಗೆ.

ii ಕೂರಿಸಲು ಸರಿಯಾದ ಸಮಯ—ದಿನದಲ್ಲಿ—ಅಪರಾಹ್ನ ೩ ಗಂಟೆಯಿಂದ ೬ ಗಂಟೆಯ ವರೆಗೆ.

(೮) ಜೇನನ್ನು ನವೀನ ಗೂಡಿಗೆ ಮೊಟ್ಟ ಮೊದಲು ಕೂಡಿಸಿ, ಕೂರಿಸಲೆತ್ನಿಸುವವರಿಗೆ ಮೊದಲನೆಯ ಎರಡು ಸಲಹೆಗಳು:—

(a) ಸುಲಭವಾಗಿ ಕೂಡಿಸಲಾಗುವ ಹುತ್ತ, ಬಿದ್ದೊಣಗಿದ ಮರದ ಪೊಟರೆ. ಜೇನು ಮಡಕೆ ಮತ್ತಿತರ ಸುಲಭ ಸಾಧ್ಯವಾದ ಸ್ಥಾನಗಳಲ್ಲಿರುವ ಜೇನು ಒಕ್ಕಲುಗಳನ್ನು ಮಾತ್ರ ನವೀನ ಗೂಡಿಗೆ ಕೂಡಿಸಲೆತ್ನಿಸಬೇಕು. ನೊಣಗಳಲ್ಲಿ ತುಂಬಾ ಗಾಬರಿಯುಬ್ಬಿಸಿ, ನೊಣಗಳನ್ನು ಭಯ ಮತ್ತು ಸಿಟ್ಟಿಗೇರಿಸಿ ಬಲಾತ್ಕಾರದಿಂದ ಬದಲಾವಣೆಯನ್ನು ತರುವಂತೆ ಒರಟಾಗಿ ವರ್ತಿಸಿದರೆ ಅವುಗಳು ಗೂಡಿಗೆ ಕೂಡಿದ ರೀತಿಯಲ್ಲಿ ಕಂಡರೂ ಗೂಡಿನಲ್ಲಿ ಖಾಯಂ ಆಗಿ ಕೂತಿರಲಾರವು. ಹೇಗಾದರೂ ಮಾಡಿ ಗೂಡನ್ನು ಬಿಟ್ಟು ತೊಲಗುವದು ಖಂಡಿತ. ಆದುದರಿಂದ ಆಷ್ಟು ಸಣ್ಣಾಗೆ, ಮೆತ್ತಗೆ, ನೊಣಗಳಿಗೆ ಎಲ್ಲಿ ನೋವಾಗಿಬಿಡುತ್ತವೋ ಎಂಬ ಹೆದರಿಕೆಯಿಂದೊಡಗೂಡಿದ ಸಿಗ ವಹಿಸಿ ಆದಷ್ಟು ಸುಲಭ ರೀತಿಯಲ್ಲಿ ಬದಲಾವಣೆಯು ಅರಿವೇ ನೊಣಗಳ ಗೋಚರಕ್ಕೆ ಬಾರದಂತೆ ಅನುಭವದಿಂದ ಹುಟ್ಟಿದ ಕೈಯೋಟದ ಕೈ ಪ್ರಯೋಗ ನಡೆಸಿದರೆ ನೊಣಗಳು ಅತಿ ಸುಲಭದಿಂದ ಗೂಡಿಗೆ ಬಂದು ಸೇರಿಕೊಳ್ಳುವುದಲ್ಲದೆ ಸಂತೋಷದಿಂದಲೋ ಎಂಬಂತೆ ಆನಂದ ಸೂಚಕ ನೃತ್ಯಗಳಿಂದ ನರ್ತಿಸಿ ಗೂಡಿನ ಕೆಲಸಕ್ಕೆ ತಕ್ಷಣವೇ ಶುರುಮಾಡುವವು.

(b) ಸಾಧ್ಯವಾದಷ್ಟು ಸಮಯದ ವರೆಗೆ ಹೊಸದಾಗಿ ಕೂಡಿಸಿದ ನವೀನ ಗೂಡನ್ನು ನೊಣಗಳ ಹಳೆ ಮನೆಯಾದ ಹುತ್ತ ಯಾ ಮರದ ಪೊಟ್ಟರೆಯ ಪಕ್ಕದಲ್ಲೇ ಇಟ್ಟಿರುವುದು ಒಳ್ಳೆಯದು. ಇದರಿಂದ ಸ್ಥಳಾಂತರವಾಗದ ಕಾರಣ ಗೂಡುಗಳ ಬದಲಾವಣೆಯು ಗೋಚರವಾಗದೆ, ಎಂದಿನಂತೆ ತಂತಮ್ಮ ಕೆಲಸದಲ್ಲಿ ನಿರತರಾಗಿರುವವು. ಸ್ಥಳದಾಸೆಯಿಂದ ಗೂಡಿನ ಬದಲಾವಣೆಯ ಕಡೆಗೆ ಮನಸನ್ನು ಹೋಗಬಿಡದು. ಈ ರೀತಿಯಲ್ಲಿ ಹೊಸ ಗೂಡಿನಲ್ಲಿ ಪಳಗಿದ ನಂತರ ಹತ್ತೆಂಟು ದಿನಗಳಲ್ಲಿ ಆ ಗೂಡನ್ನು ಎಲ್ಲಿಗೆ ಬೇಕೋ ಅಲ್ಲಿಗೆ ರಾತ್ರೆ ಹೊತ್ತು ಎಚ್ಚರಿಕೆಯಿಂದ ಸಾಗಿಸಿಟ್ಟು ಹತ್ತು ದಿವಸಗಳಿಗೊಂದಾವರ್ತಿ ಗೂಡನ್ನು ಬಿಚ್ಚಿ ಯೋಗಕ್ಷೇಮವನ್ನು ತಿಳಕೊಂಡ ಪಕ್ಷದಲ್ಲಿ ಆ ಒಕ್ಕಲು ಶಾಶ್ವತವಾಗಿ ಆ ಗೂಡಿನಲ್ಲಿಯೇ ಉಳಿಯುವದು.

ಮಾರಾಟಕ್ಕಿದೆ.

ಕುರ್ಗ್ ಜನರಲ್ ಇಂಡಸ್ಟ್ರೀಸ್ ಕಂಪೆನಿಗೆ ಸೇರಿದ ಒಂದು ದಂಡೇಕರ್ ಅಕ್ಕಿ ಗಿರಣಿ ನಂ ೪, ಒಂದು ೩೦ ಇಂಚಿನ ಡಿಸ್ ಇಂಟಿಗ್ರೇಟರ್, ೦೧೧೭ ಸೈಜಿನ ಎರಡು ಡಿಸ್ ಇಂಟಿಗ್ರೇಟರುಗಳು, ನಂ ೭ ಮತ್ತು ೨ ರ ಎರಡು ಅಕ್ಕಿ ಹಲ್ಲರುಗಳು, ಎರಡು ಹುಡಿಮಾಡುವ ಯಂತ್ರಗಳು, ಎರಡು ಚಿಕ್ಕ ಗ್ರಯಿಂಡರುಗಳು, ೨೫ ಮತ್ತು ೧೦ ಹಾರ್ಸ್‌ಪವರಿನ ಎರಡು ಇಲೆಕ್ಟ್ರಿಕ್ ಮೋಟಾರುಗಳು, ೪೦ ಹಾರ್ಸ್ ಪವರಿನ ಪೀಟರ್ ಫೀಲ್ಡಿಂಗ್ ಆಯಿಲ್ ಇಂಜಿನ್, ಇವುಗಳನ್ನೆಲ್ಲಾ ಅಳವಡಿಸಿದ ವಿಸ್ತಾರವಾದ ಮನೆ, ಫ್ರೇಜರ್‌ಪೇಟೆ, ಮಡಿಕೇರಿ, ಮೈಸೂರು ರಸ್ತೆಯಲ್ಲಿ ಕಾವೇರಿ ನದಿಯ ದಡದಲ್ಲಿ ಈ ಮನೆಗೆ ಒತ್ತಿ ೧೧ ಏಕರೆ ಬಾಗ—ಇವುಗಳನ್ನು ಕೊಂಡುಕೊಂಡು ನಡೆಸುವವರು ತಾ. ೩೧—೧೨—೫೩ ರ ಹೊಳಗೆ ತಮ್ಮ ಕೇಳಿಕೆಯನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಮೇನೇಜಿಂಗ್ ಡೈರೆಕ್ಟರ್ ಕುರ್ಗ್, ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್, ಫ್ರೇಜರ್‌ಪೇಟೆ (ಕೊಡಗು) ಇವರಿಗೆ ಬರೆಯಿರಿ.

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸ್ :— ವೀರಾಜಪೇಟೆ.

ಶಾಖೆ :— ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟಗಳು
2. 12 ನೇ ನಂಬರಿನ ಒಂಟಿ ಹೊಳವಿನ ತೋಟದ ಕೋವಿಗಳು.
3. ಒಂಟಿ ಮತ್ತು ಜೋಡಿ ಹೊಳವಿನ ಕೇಪಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
5. 5/8", 1/2" ಮತ್ತು 3/8" ಕಬ್ಬಿಣದ ಸರಳುಗಳು
6. 2", 1 1/4", 1" 3/4" ಮತ್ತು 1/2" ಕೊಳಾಯಿಗಳು. (G. I. Peps)
7. 1 3/4" × 5/16" ಉಕ್ಕಿನ ಪಟ್ಟಿಗಳು (Spring Steel flats)
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಪಂಪುಗಳು.
9. ಕೋಳಿ ಮತ್ತು ಆನೆ ಮಾರ್ಕಿನ ಸೀಮೆಣ್ಣೆ ಟಿನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೆಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

ವಾರದ ಭವಿಷ್ಯ

ತಾ. ೧೧—೧೨—೫೩ರಿಂದ ೧೭—೧೨—೫೩ರ ವರೆಗೆ.

ಜ್ಯೋತಿಷ್ಯ— ಶ್ರೀ ಬಿ. ವಿ. ಶ್ರೀನಿವಾಸ ಶಾಸ್ತ್ರಿಯವರು.

ಮೇಷ

ದಾನಶೀಲರೆಂದೆನಿಸಿಕೊಳ್ಳಬೇಕೆಂಬ ಅಪೇಕ್ಷೆಯಿಂದ ತಾವು ಈ ವಾರ ಆರ್ಥಿಕ ವಿಚಾರದಲ್ಲಿ ತೊಂದರೆಗೀಡಾಗಬೇಕಾಗುವನು. ಆರೋಗ್ಯ ಸಾಕಷ್ಟಿದ್ದರೂ ವ್ಯಥಾ ಸಂಚಾರದಿಂದಾಗಿ ಮಾನಸಿಕ ಸ್ಥಿತಿಯು ಚೆನ್ನಾಗಿರಲಾರದು. ವ್ಯಾಪಾರೋದ್ಯಮಿಗಳು ಲಾಭವನ್ನಾಲೋಚಿಸಿ ಮಾಡುವ ಕಾರ್ಯಗಳು ನಷ್ಟವನ್ನು ಹಿಂಬಾಲಿಸಿದಂತಾಗುವದು. ತಾ. ೧೬, ೧೭ ನಷ್ಟ, ವ್ಯಥಾ ಸಂಚಾರ.

ವೃಷಭ

ಮನಸ್ಸಿನಲ್ಲಿ ಅನೇಕ ಕಾರ್ಯಗಳು ಮೂಡಿದರೂ ಕಾರ್ಯತಃ ಕಂಡು ಬರುವವುಗಳು ಇಲ್ಲವೆಂದೇ ಹೇಳಬೇಕು. ಆರೋಗ್ಯವು ಸಾಕಷ್ಟಿದ್ದರೂ ಆಲಸ್ಯಭಾವವು ಅಧಿಕವಾಗಿರುವದು. ಕೋರ್ಟು ವ್ಯವಹಾರಗಳಲ್ಲಿ ಧನನಷ್ಟವಾಗಲಿದೆ. ವ್ಯಾಪಾರ ನಿರತರು ನಷ್ಟಕ್ಕೀಡಾಗುವರು. ತಾ. ೧೪, ೧೫, ನಿರುತ್ಸಾಹ, ಧನನಷ್ಟ.

ಮಿಥುನ

ಈ ವಾರ ನಿಮಗೆ ಆರೋಗ್ಯ ದೃಷ್ಟಿಯಲ್ಲಿ ಉತ್ತಮವಿರುವದು. ಆದರೆ ಅಲಂಕಾರವೇ ಗೌರವಕ್ಕೆ ಕಾರಣವೆಂಬ ಭಾವನೆಯು ತಲೆದೋರಿ ಸಂಪದ್ವ್ಯಯವಾಗಿ ಮಾನಸಿಕ ಗತಿಯು ಚೆನ್ನಾಗಿರಲಾರದು. ಕೆಲವೊಮ್ಮೆ ಕಾರ್ಯತತ್ಪರರಾದರೂ ಮಿತ್ರರ ಸಾಹಾಯ್ಯದಿಂದಾಗಿ ಫಲಕಾರಿಯಾಗಲಾರದು. ವ್ಯಾಪಾರ ನಿರತರಿಗೆ ಪ್ರಥಮತಃ ನಷ್ಟ ಚಿಹ್ನೆಗಳು ಕಂಡು ಬಂದರೂ ಕಡೆಗೆ ಉತ್ತಮವಿರುವದು ತಾ. ೧೪, ೧೫ ಮಿತ್ರಭೇಟಿ, ಸಂಚಾರ.

ಕರ್ಕಾಟಕ

ಈ ವಾರ ನಿಮ್ಮ ಆರೋಗ್ಯವು ಸಾಕಷ್ಟಿದ್ದು ಕೈಗೊಂಡ ಕಾರ್ಯಗಳು ಸಾಂಗವಾಗಿ ನೆರವೇರುವವು. ಕಾರ್ಯದಕ್ಷತೆಯಿಂದ ಮೇಲಧಿಕಾರಿಗಳ ಪ್ರೀತಿಗೆ ಪಾತ್ರರಾಗಿ ಮಾನಸಿಕ ನೆಲೆಯು ಶಾಂತಿಯಲ್ಲಿರುವರು. ಕೋರ್ಟು ವ್ಯವಹಾರಗಳು ಅನುಕೂಲವಾಗುವವು. ಸಾಮಾನ್ಯ ಜನರೂ ಕೂಡ ನಿಮ್ಮ ಮಿತ್ರರಾಗಲು ಬಯಸುವರು. ವಿದ್ಯಾರ್ಥಿವೃಂದಕ್ಕೆ ಈ ವಾರವು ಪ್ರಗತಿಪರವಾಗಿರುವದು. ತಾ. ೧೬, ೧೭, ಮಿತ್ರಜನಾನುಕೂಲತೆ, ಸುಖ.

ಸಿಂಹ

ಈ ವಾರ ನೀವು ಕೈಕೊಂಡ ಕಾರ್ಯಗಳು ಉತ್ತಮ ಪರಿಣಾಮಕಾರಿಯಾವವು. ಆರೋಗ್ಯವು ಚೆನ್ನಾಗಿದ್ದು ಮೇಲಧಿಕಾರಿಗಳಿಂದ ಮನ್ನಣೆಯನ್ನು ಹೊಂದುವಿರಿ. ಕುಟುಂಬದ ಅನಾರೋಗ್ಯದಿಂದಾಗಿ ಧನವ್ಯಯವಾದರೂ ಬೇರೊಂದೆಡೆಯಿಂದ ಧನಾಗಮನವಿರುವದು. ವಿದ್ಯಾರ್ಥಿಗಳು ಉತ್ಸಾಹಭರಿತರಾಗುವರು. ತಾ ೧೧, ೧೨ ಮಿತ್ರ ಜನರ ಭೇಟಿ, ಗೌರವ ಪ್ರಾಪ್ತಿ.

ಕನ್ಯಾ

ಆರೋಗ್ಯ ಸೂತ್ರತಃ ಈ ವಾರವು ನಿಮಗೆ ಉತ್ತಮವೆನಿಸಿಕೊಂಡರೂ ಧನವ್ಯಯ, ವ್ಯಥಾ ಸಂಚಾರ ಕಾರ್ಯವಿಘ್ನ ಮೊದಲಾದವುಗಳು ಪದೆ ಪದೆ ಬಂದೊದಗಿ ಮಾನಸಿಕ ಗತಿಯು ಚೆನ್ನಾಗಿರಲಾರದು. ಮಿತ್ರ ಜನರು ನಿಷ್ಕಾರಣವಾಗಿ ವಿರೋಧಿಗಳಾಗುವರು. ವ್ಯಾಪಾರನಿರತರಿಗೆ ನಷ್ಟ ತಾ. ೧೩, ೧೪, ನಷ್ಟ, ಸಂಚಾರ.

ತುಲಾ

ಆರೋಗ್ಯ ಸ್ಥಿತಿಯಲ್ಲಿ ಈ ವಾರವು ನಿಮಗೆ ಉತ್ತಮವಾಗಿರುವದು. ದುಷ್ಟ ಜನರ ಹಾವಳಿಯಿಂದಾಗಿ ಮನಸಿನಲ್ಲಿ ಮೂಡಿದ ಕಾರ್ಯಗಳು ಅಲ್ಲಿಯೆ ಶಿಥಿಲವಾಗುವವು. ಕೋರ್ಟು ವ್ಯವಹಾರಗಳಲ್ಲಿ ಧನ ನಷ್ಟವಾಗಲಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರು ತಮ್ಮ ಕಾರ್ಯಗಳಲ್ಲಿ ಆರಂಭ ಶೂರರೇ ಹೊರತು ಪೂರರಾಗಲಾರರು. ತಾ. ೧೧, ೧೩, ನಷ್ಟ, ಭಯ.

ವೃಶ್ಚಿಕ

ಅನಾಲೋಚಿತ ಸಂಚಾರದಿಂದಾಗಿ ಈ ವಾರ ನಿಮ್ಮ ಶಾರೀರಿಕ ಸ್ಥಿತಿಯು ಚೆನ್ನಾಗಿರಲಾರದು. ನೀವು ಕೈಕೊಂಡ ಕಾರ್ಯಗಳು ಮಿತ್ರಜನಾನುಕೂಲದಿಂದ ಪರಿಣಾಮಕಾರಿಯಾಗುವುದು. ಭಾರ್ಯಾ ಪುತ್ರೋದ್ವಿಗ್ನವಾಗಿ ಧನ ನಷ್ಟವಾದರೂ ಅಂತೆಯೇ ಧನಾಗಮನ ಯೋಗವೂ ಇರುವದು. ವ್ಯಾಪಾರ ನಿರತರು ತಮ್ಮ ಆಶಯವಷ್ಟು ಲಾಭವನ್ನು ಹೊಂದಲಾರರು. ತಾ. ೧೫, ೧೬, ಶುಭವಾರ್ತೆ, ಸುಖ.

ಧನು

ಅಪ್ರಯೋಜನಕರಗಳಾದ ಕಾರ್ಯಗಳಿಗೆ ಕೈಹಾಕಿ ಈ ವಾರ ನೀವು ತುಂಬಾ ತೊಂದರೆಗೀಡಾಗುವಿರಿ. ಅಪಾರ ಹಾನಿಯುಗಳನ್ನು ಸಮಯಕ್ಕೆ ಸರಿಯಾಗಿ ತೆಗೆದುಕೊಳ್ಳಲಸಾಧ್ಯವಾದರೂ ಆರೋಗ್ಯವು ಚೆನ್ನಾಗಿರುವದು. ವಿದ್ಯಾರ್ಥಿ ವಿದ್ಯಾರ್ಥಿನಿಯರು ಕುಕರ್ಮನಿರತರಾಗುವರು ತಾ ೧೬, ೧೭, ನಿದ್ರಾಭಂಗ, ಸಂಚಾರ.

ಮಕರ

ಈ ವಾರ ನಿಮ್ಮ ಶಾರೀರಿಕ ಸ್ಥಿತಿಯು ಚೆನ್ನಾಗಿರುವದು. ಸಾಧಾರಣ ಜನರು ಕೂಡ ನಿಮ್ಮ ವಿಶ್ವಾಸವನ್ನು ಯೋಚಿಸುವರು. ಆರ್ಥಿಕ ಸ್ಥಿತಿಯು ಚೆನ್ನಾಗಿದ್ದು ಕೈಕೊಂಡ ಕಾರ್ಯಗಳು ಜಾಗ್ರತೆಯಾಗಿ ಉತ್ತಮ ಪರಿಣಾಮವುಳ್ಳವುಗಳಾಗುವವು. ಬಂಧು ಮಿತ್ರರ ಶುಭ ವೃತ್ತಾಂತ ಪತ್ರಾಗಮನದಿಂದ ಮಾನಸಿಕ ಆನಂದವು ಇಮ್ಮಡಿಯಾಗುವದು. ತಾ. ೧೬, ೧೭, ಪತ್ರಾಗಮನ, ಸುಖಭೋಜನ.

ಕುಂಭ

ಮಿತ್ರ ಜನರನ್ನು ಸಂತೋಷಿಸುವ ಕಾರಣದಿಂದಾಗಿ ತುಂಬಾ ಶ್ರಮವನ್ನು ವಹಿಸಿಕೊಳ್ಳಬೇಕಾದುದರಿಂದ ಆರೋಗ್ಯ ಮಟ್ಟವು ಹೆಚ್ಚು ಚೆನ್ನಾಗಿರಲಾರದು. ಆರ್ಥಿಕ ವಿಚಾರದಲ್ಲಿ ಕೆಲವೊಮ್ಮೆ ತೊಂದರೆಗೀಡಾದರೂ ಮಿತ್ರರ ಸಹಾಯದಿಂದ ಸುಧಾರಿಸಿಕೊಳ್ಳುವಿರಿ. ವ್ಯಾಪಾರೋದ್ಯಮಿಗಳು ಮನೋನಿಶ್ಚಿತ ಲಾಭವನ್ನು ಹೊಂದಲಾರರು. ತಾ. ೧೪, ೧೫, ಸಂಚಾರ, ಮಿತ್ರಭೇಟಿ.

ಮೀನ

ಪರಸ್ಪರ ವಿರುದ್ಧವಾಗಿರತಕ್ಕ ವಿಷಯಗಳು ತಮ್ಮ ತಲೆಯನ್ನು ಈ ವಾರ ಸುತ್ತುತ್ತಿರುವದರಿಂದ ಮಾನಸಿಕ ಸ್ಥಿತಿಯು ಚೆನ್ನಾಗಿರಲಾರದು. ಆರೋಗ್ಯ ವಿಚಾರತಃ ಉತ್ತಮವಾಗಿದ್ದರೂ ಕುಟುಂಬದ ಅನಾರೋಗ್ಯದಿಂದಲೂ ಮಿತ್ರರ ವಂಚನೆಯಿಂದಲೂ, ಆರ್ಥಿಕ ಸ್ಥಿತಿಯು ಚೆನ್ನಾಗಿರಲಾರದು. ವ್ಯಾಪಾರೋದ್ಯಮಿಗಳು ಮನೋನಿರ್ಣಯ ಲಾಭವನ್ನು ಹೊಂದುವರು. ತಾ. ೧೭ ಮನಃಕ್ಲೇಶ, ಕಲಹ.

ವೀರಾಜಪೇಟೆಗೆ

'ಕೊಡಗು' ಏಜೆಂಟರು,

ಶ್ರೀ ಟಿ ಎಸ್. ಗೋವಿಂದರಾಜು

ಸೋಮವಾರಪೇಟೆಗೆ

'ಕೊಡಗು' ಏಜೆಂಟರು,

ಶ್ರೀ ಕೆ. ಎಂ. ಪೊನ್ನಪ್ಪನವರು

ಸಹಕಾರವೇ ಜೀವನದ ಏಳಿಗೆಯ ಹೆದ್ದಾರಿ,

ಅದರಲ್ಲೂ ವಿಮೆಯಲ್ಲಿ ಸಹಕಾರ ವೆಂದರೆ ಅನ್ಯೋನ್ಯ ಏಳಿಗೆಯು ಮತ್ತು ಭದ್ರತೆಗೆ ತಳಹದಿ.

ದಿ ಬೊಂಬಾಯಿ ಕೋಪರೇಟಿವ್ ಇನ್ಶೂರೆನ್ಸ್ ಸೊಸೈಟಿ, ಲಿಮಿಟೆಡ್

[ಹೆಡ್ ಆಫೀಸು— ಬೊಂಬಾಯಿ]

1952 ನೇ ಸಾಲಿಗೆ ರಿವರ್ಶನರಿ ಬೋನಸ್ಸು

ಹೋಲ್ ಲೈಫ್ ಸಾವಿರಕ್ಕೆ 11 ರಂತೆ

ಎಂಡೋಮೆಂಟ್ ಸಾವಿರಕ್ಕೆ 9 ರಂತೆ

200 ರಿಂದ 900 ರ ತನಕದ ಪೋಲಿಸಿಗಳು, ಹಳ್ಳಿಗರಿಗೋಸ್ಕರ ವರ

ಎಲ್ಲಾ ಕಡೆಗಳಲ್ಲಿಯೂ ಪ್ರಭಾವಶಾಲಿಗಳಾದ ಏಜೆಂಟರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಯನ್ನು ದಕ್ಷಿಣ ಕನ್ನಡ, ಕೊಡಗು ಮತ್ತು ಕ್ಕೆ ಕೂಡ ಪ್ರಾಂತ್ಯಕ್ಕೆ ಮುಖ್ಯ ಏಜಂಟರಾದ

ಎಮ್. ಟಿ. ಕೋರ್ಡೆಲ್ ಅಂಡ್ ಕೋ., ಹಂಪನಕಟ್ಟೆ, ಮಂಗಳೂರು, ಇವರಿಂದ ಪಡೆಯಿರಿ.

12-11

❋ ಟೀಕೆ-ಟಿಪ್ಪಣಿಗಳು ❋

ಇತ್ತೀಚೆಗೆ ವರ್ತಮಾನ ಪತ್ರಿಕೆಗಳು ಕೈಸೇರಿದ ಕೂಡಲೆ ಇಡೀ ಇಂಡಿಯಾ ದೇಶದಲ್ಲಿ ಒಬ್ಬರಲ್ಲದಿದ್ದರ ಒಬ್ಬ ಮಂತ್ರಿಯು ಭತ್ತದ ಬೆಳೆ ಧಾರಾಳವಾಗಿದೆ. ಭತ್ತ ಹೊರಗಿನಿಂದ ತರಿಸಬೇಕಾದಿಲ್ಲ ಎಂಬ ವಿಚಾರ ಮಾತಾಡುವದೇ ಗೋಚರವಾಗುತ್ತೆ. ಆದರೆ ವಾಸ್ತವವಾಗಿ ಸಾಮಾನ್ಯ ಅಂದರೆ ಮಧ್ಯಮ ತರಗತಿಯ ಮತ್ತು ದೇಹಪರಿಶ್ರಮದಿಂದ ಜೀವನಮಾಡುವವರಿಗೆ ಎಷ್ಟರ ಮಟ್ಟಿಗೆ ಉಪಯೋಗವಾಗಿದೆ ಎಂಬ ವಿಷಯದಲ್ಲಿ ಮಾತ್ರ ಯಾವ ಮಂತ್ರಿವರ್ಯರೂ ಉದ್ಗಾರ ತೆಗೆಯುವದಿಲ್ಲ. ಪುಷ್ಟವಾಗಿ ಭತ್ತ ಬೆಳೆಯುವ ನಮ್ಮ ದೇಶದಲ್ಲಿ ಅಕ್ಕಿ ಕೊಂಡುಕೊಳ್ಳುವವರು ರೂಪಾಯಿಗೆ ಮೂರು ಸೇರು ಕೇಸಕ್ಕಿ ತಿಂದು ನರಳಬೇಕಾಗಿದೆ. ಧಾನ್ಯ ವಿಫಲವಾಗಿ ಬೆಳೆದರೂ ಕೊಂಡುಕೊಳ್ಳುವವರ ವರಮಾನ ಬೆಳೆದಿರುವದಿಲ್ಲ. ಆದ್ದರಿಂದ ಧಾರಣೆವಾತಿಯು ಕಮ್ಮಿ ಬೀಳದೆ ಹೋದಲ್ಲು ಜನಗಳು ಸುಗ್ಗಿ ಬೆಳೆಯ ಲಾಭ ಹೊಂದಲಾಗುದಿಲ್ಲ.

ಆಗಾಗ್ಯೆ ಆಹಾರ ಖಾತಾ ಮಂತ್ರಿಗಳು ಹೊಸ ದಹಲಿಯಲ್ಲಿ ಸೇರಿ ಚರ್ಚೆ ನಡಿಸುತ್ತಾರೆ. ಅವರೆ ಕ್ರಯಕ್ಕೆ ಪಡೆದು ಜೀವಿಸುವವರಿಗೆ ಸುಲಭ ದರದಲ್ಲಿ ಅಕ್ಕಿ ದೊರೆಯುವ ವಿಚಾರ ಚರ್ಚೆ ಮಾಡಿದ್ದು ಕಂಡುಬರುವದಿಲ್ಲ. ಪಂಜಾಬು ದೇಶದಲ್ಲಿ ಗೋಧಿಯನ್ನು ಸ್ಥಳದ ನಿವಾಸಿಗಳಿಗೆ ಅತಿ ಕಡಿಮೆ ಬೆಲೆಗೆ ಮಾರಾಟ ಮಾಡುವದು ನಮ್ಮ ಮುಖ್ಯ ಮಂತ್ರಿಗಳಿಗೆ ತಿಳಿದಿರಬಹುದು. ತದ್ರೀತಿ ನಮ್ಮಲ್ಲಿ ತುಂಬಾ ಭತ್ತ ಬೆಳೆಯುವದರಿಂದ ಅಕ್ಕಿಯನ್ನು ಕನಿಷ್ಟ ಪಕ್ಷ ರೂಪಾಯಿಗೆ ನಾಲ್ಕು ಸೇರಿನಂತೆ ಮಾರಲು ಏರ್ಪಾಡು ಮಾಡಿದರೆ ಕೊಂಡುಕೊಳ್ಳುವವರಿಗೆ ಕ್ಷೇಮವುಂಟಾಗುತ್ತೆ. ಆದ್ದರಿಂದ ನಮ್ಮ ಸರ್ಕಾರದವರು ಈ ವಿಷಯಕ್ಕೆ ಕೂಡಲೆ ನಿಗಕೊಡುವದು ಸೂಕ್ತವಾಗಿದೆ. ಇದರಿಂದ ಸರಕಾರಕ್ಕೆ ನಷ್ಟವಾಗಬಹುದು. ಅದನ್ನು ಜನಹಿತದೃಷ್ಟಿಯಿಂದ ಸರಕಾರ ಕಂಡುಕೊಳ್ಳಬೇಕು.

X X X

ಇನ್ನೊಂದು ಮಾತು. ಕೊಡಗಿನಲ್ಲಿ ಶಕ್ಯ ಮಟ್ಟಿಗ ಅನುಕೂಲವಿರುವವರು ಎಲ್ಲರೂ ಭತ್ತ ಕೊಂಡುಕೊಂಡು ಪಾಲಿಸು ಮಾಡಿದ ಅಕ್ಕಿಯನ್ನು ಉಪಯೋಗಿಸುತ್ತಾರೆ. ಎರಡನೇಯದಾಗಿ ಕೊಡಗು ನಿವಾಸಿಗಳಲ್ಲಿ ಗರೀಬರಾದವರು ಕೇಸಕ್ಕಿ ತಿನ್ನುವ ಅಭ್ಯಾಸ ಮಾಡಿರುವದಿಲ್ಲ. ಆದ್ದರಿಂದ ಸರ್ಕಾರದವರು ಅಕ್ಕಿ ಕೊಂಡುಕೊಳ್ಳುವವರಿಗೆ ಕೇಸಕ್ಕಿ ಮಾರುವ ಏರ್ಪಾಡು ಮನ್ನಮಾಡುವದು ಒಳ್ಳೆಯದು. ನಮ್ಮ ಮಂತ್ರಿ ಮತ್ತು ಇತರ ಅಧಿಕಾರಿಗಳು ಮಾತು ಮಾತಿಗೆ ಗಾಂಧೀಜಿಯವರ ಹೆಸರು ಎತ್ತುವದು ಸ್ವಾಭಾವಿಕ. ಗಾಂಧೀಜಿಯವರಲ್ಲಿ ಒಂದು ಮಹತ್ತರವಾದ ಗುಣವಿದ್ದಿತು-ತಾನು ಮಾಡದ ಕೆಲಸವನ್ನು ಇನ್ನೊಬ್ಬರಿಗೆ ಮಾಡಲು ಹೇಳುತ್ತಿದ್ದಿಲ್ಲ. ನಮ್ಮ ಅಧಿಕಾರಿಗಳು ಮತ್ತು ಇತರ ಖಾಸಗಿ ಜನಗಳು ಮನೆಯಲ್ಲಿ ಪಾಲಿಸ್ ಆದ ಅಕ್ಕಿ ಉಪಯೋಗಿಸುತ್ತಾರೆ ಹೊರ್ತು ಕೇಸಕ್ಕಿ ಉಪಯೋಗಿಸುವದಿಲ್ಲ. ಆದ್ದರಿಂದ ಸರಕಾರದವರು ಅಕ್ಕಿ ಕೊಳ್ಳುವ ಪಂಗಡವನ್ನು ಈ ವ್ಯಥೆಗೆ ಗುರಿಮಾಡುವದು ಸರಿಯಲ್ಲ. ಆದ್ದರಿಂದ ಇನ್ನು ಮುಂದೆ ವಾಡಿಕೆಯಾಗಿ ಪಾಲಿಸ್ ಅಕ್ಕಿಯನ್ನು ಮಿಲ್ಲಿನವರು ಸಪ್ಲೈಮಾಡುವಂತೆ ಹುಕುಂ ಮಾಡುವದು ಸಮಂಜಸವಾಗಿದೆ.

X X X

ಈ ವಿಚಾರ ಒಂದು ಕಥೆ ನೆನಪಾಗುತ್ತದೆ. ಒಬ್ಬ ಗಣ್ಯ ಮನುಷ್ಯರು ತಮ್ಮ ಕುಟುಂಬಕ್ಕೆ-ಪಾಲಿಸ್ ಮಾಡುವದರಿಂದ ಅಕ್ಕಿಯಲ್ಲಿನ ವಿಟಮಿನ್ ಹೋಗುತ್ತೆ. ಆರೋಗ್ಯ ಶಾಸ್ತ್ರದ ಪ್ರಕಾರ ಅಕ್ಕಿ ಪಾಲಿಸ್ ಮಾಡಬಾರದು ಮತ್ತು ಅಕ್ಕಿ ತೊಳೆದು ಕಲಗಚ್ಚು ತೆಗೆಯಬಾರದು ಎಂದು ಬೋಧಿಸುತಿಷ್ಟರು. ಗಂಡ ಹೆಂಡತಿಗೆ ಈ ವಾಗ್ವಾದ ನಡಿಯುತ್ತಿದ್ದ ಸಮಯದಲ್ಲಿ ಅವರ ಮಿತ್ರರೊಬ್ಬರು ಮನೆಗೆ ದಯಮಾಡಿಸಿದಾಗ ಈ ಚರ್ಚೆಯು ಅವರಿಗೂ ತಿಳಿಸಿದ್ದಾಯಿತು. ಮನೆ ಯಜಮಾನತಿ ನಾನು ನನ್ನ ಮಕ್ಕಳು ಉಪವಾಸವಾದರೂ ಮಾಡೇವು ಈ ಕೇಸಕ್ಕಿ ತಿನ್ನುವದಿಲ್ಲವೆಂಬದಾಗಿ ಹಟಹಿಡಿದರಂತೆ. ಯಜಮಾನರು ಕೊಂಚ ನಿಷ್ಠುರನಾಗಿ ಆರೋಗ್ಯ ದೃಷ್ಟಿಯಿಂದ ಪಾಲಿಸು ಮಾಡದ ಅಕ್ಕಿ ಉಪಯೋಗಿಸತಕ್ಕದ್ದು ವಿಹಿತವೇದರಂತೆ.

ಯಜಮಾನತಿಯ ಈ ವಾಗ್ವಾದವನ್ನು ಅಲ್ಲಿಗೆ ನಿಕ್ಷಿಸಿ ಮಾರನೆ ದಿನದಿಂದ ಯಜಮಾನರಿಗೆ ಪಾಲಿಸು ಮಾಡದ ಅಕ್ಕಿಯ ಅನ್ನ ತನಗೂ ತನ್ನ ಮಕ್ಕಳಿಗೂ ಪಾಲಿಸು ಮಾಡಿದ ಅಕ್ಕಿ ಅನ್ನ ತಯಾರು ಮಾಡಲು ಆರಂಭಿಸಿದರು. ಪಾಪ ಯಜಮಾನರಿಗೆ ಎರಡು ಮೂರು ದಿವಸದಲ್ಲೇ ಅನ್ನ ತಿನ್ನಲಾಗದೆ ತುಂಬಾ ಬೇಜಾರು ಹಿಡಿದು ಅಂದಿನಿಂದ ಈ ವಿಷಯದಲ್ಲಿ ವಾಗ್ವಾದ ನಡಿಸದೆ ಮೊದಲಿನಂತೆ ವರ್ತಿಸಲು ತೊಡಗಿದರಂತೆ! ಇದರಿಂದ ಸರ್ವರೂ ಬುದ್ಧಿ ಗಲಿಯುವದೊಳ್ಳೆಯದು.

ಟೀಕಾಚಾರ್ಯ.

ಪುಸ್ತಕ ವಿಮರ್ಶೆ.

ಕೊನೆಯ ಗಿರಾಕಿ:—ಲೇ—ನಿರಂಜನ, ಪ್ರಕಾಶಕರು, ಡಿ. ವಿ. ಕೆ ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು. ಪುಟಗಳು ೧೩೭, ಬೆಲೆ ೧—೪—೦.

ಪ್ರಗತಿಶೀಲ ಲೇಖಕರಲ್ಲೊಬ್ಬರಾದ ನಿರಂಜನರ ಹತ್ತು ಕತೆಗಳ ಸಂಗ್ರಹವಿದು. ನಿರಂಜನರು ಭಾವನೆಯ ಮರೀಚಿಕೆಯನ್ನು ರಚಿಸಿ ನೊಂದ ಇಂದಿನ ಜೀವವು ಸಾಕೆಯ ಕನಸಿನ ಕಲ್ಪನೆಯಿಂದ ಇಂದಿನ ಕಷ್ಟವನ್ನು ಮರೆಯುವಂತೆ ಮಾಡುವ ಲೇಖಕರಲ್ಲ. ನಿದ್ರೆ ಬಾರದವನಿಗೆ ನಿದ್ರಾಗುಳಿಗೆಯನ್ನೀಯುವ ಕೃತಕವಾರಿಯ ಆಕಾಶಗಂಗೆಯ ಕನಸುಗಾರ ಲೇಖಕರೂ ಅಲ್ಲ. ಸಮಾಜದ ಚಿತ್ರಗಳನ್ನು ಇದ್ದುದನ್ನು ಇದ್ದಂತೆ ಜನತೆಯ ಮುಂದಿಟ್ಟು ಕರ್ತವ್ಯ ಶೂನ್ಯರಾದವರಿಗೂ ಕರ್ತವ್ಯದ ಅರಿವು ಮಾಡುವ ಸಜೀವ ಲೇಖಕರು ಇವರ ಲೇಖನಿಯಿಂದ ಬಂದ ಈ ಹತ್ತು ಕಿರುಗತೆಗಳ ಸಂಕಲನವು ನಮ್ಮ ನಾಡಿನ ಜನಜೀವನದ ಅರ್ಥಾತ್ ಅಂಥ ಸಮಾಜದ ಕಿರುಕುಳಕ್ಕೆ, ದಯ ರಹಿತ ಆಡಳಿತದ ಕುಟ್ಟು ಪೆಟ್ಟುಗಳಿಗೆ ಬಲಿಯಾದವರ ಚಿತ್ರವನ್ನು ಮಾರ್ಮಿಕವಾಗಿ ಚಿತ್ರಿಸುತ್ತದೆ. ಮಾನ್ಯ, ರಕ್ತ ಸಂಬಂಧಿ, ಬಯಸದ ದೃಷ್ಟಿ ಕೊನೆಯ ಗಿರಾಕಿ ಮೊದಲಾದ ಕಥೆಗಳು ಸುಪ್ತ ಚೇತನವನ್ನು ಬಡಿದೆಬ್ಬಿಸುವಂತಿವೆ. ಸಹಸ್ರಾರು ಕುರುಡರಿಗೆ ನೇತ್ರದಾನ ಮಾಡಿದ ಕೊಡಗಿನವರಿಗೂ ಚಿರಪರಿಚಿತರಾದ ಡಾ. ಮೋಡಿಯವರ ಅನುಭವದ "ಬಯಸದದೃಷ್ಟಿ" ಕಥೆಯು ನಮ್ಮ ಸಮಾಜದ ಪ್ರಾಮುಖ್ಯ ಪ್ರಶ್ನೆಯೊಂದನ್ನು ಮುಂದಿಡುತ್ತದೆ. ನಿರಂಜನರ ಈ ಹತ್ತು ಕತೆಗಳೂ ಓದಲು ಯೋಗ್ಯವಾದುವಿವೆ ಪುಸ್ತಕದ ಮುದ್ರಣವೂ ಚೆನ್ನಾಗಿದೆ.

ಭಾರತದ ಜಾನಪದ ನೃತ್ಯಗಳು:— ಲೇ:— ಕುಮಾರ ವೆಂಕಣ್ಣ. ಪ್ರಕಾಶಕರು ಅರುಣೋದಯ ಲೈಬ್ರೆರಿ, ಅರಳೀಪೇಟೆ, ಬೆಂಗಳೂರು ೨ ಬೆಲೆ ೧-೦-೦

ಕೊಡಗು ಮತ್ತು ಮೈಸೂರು ಸರಕಾರಗಳೂ ಸಂಸ್ಕೃತಿ ಪ್ರಸಾರಕ್ಕಾ, ಜಾನಪದ ಸಾಹಿತ್ಯ ಹಾಗೂ ನೃತ್ಯಗಳಿಗೆ ಪ್ರೋತ್ಸಾಹ ಕೊಡಲು ನಿರ್ಧರಿಸಿ ಅದಕ್ಕಾಗಿ ಪ್ರತ್ಯೇಕ ಶಾಖೆಗಳನ್ನು ತೆರೆದು ಕಾರ್ಯ ಪ್ರವೃತ್ತರಾಗುತ್ತಿರುವ ಈ ಸಂದರ್ಭದಲ್ಲಿ ಭಾರತದ ಜಾನಪದ ನೃತ್ಯಗಳ ಸೂಕ್ತ ವಿವರವನ್ನು ಎಲ್ಲರಿಗೂ ತಿಳಿಯುವ ರೀತಿಯಲ್ಲಿ ಕೊಡುವ ಈ ಚಿಕ್ಕ ಪುಸ್ತಕವು ಸಮಯೋಚಿತವೂ ಸ್ವಾಗತಾರ್ಹವೂ ಆಗಿದೆ. ಜಾನಪದನೃತ್ಯಗಳ ಪರಿಚಯ ಮಾಡಿ ಕೊಡುವ ಗ್ರಂಥಗಳು ಬಲು ಕಡಿಮೆ. ಕನ್ನಡ ಸಾಹಿತ್ಯದಲ್ಲಿ ಇದೇ ಪ್ರಥಮ ಪ್ರಯತ್ನವೆನಾದರೂ ಸಲ್ಲುವದು. ಭಾರತೀಯ ನೃತ್ಯಕಲೆಯ ವಿಚಾರ ಸಾಕಷ್ಟು ಪರಿಜ್ಞಾನವಿರುವ ಈ ಲೇಖಕರು ಈ ಪುಸ್ತಕದಲ್ಲಿ ನೃತ್ಯದ ಬೆಳವಣಿಗೆ, ಪ್ರಕೃತಿಗೂ ಅದಕ್ಕೂ ಇರುವ ಸಂಬಂಧ, ಭಾರತದ ಪ್ರಾಮುಖ್ಯ ನೃತ್ಯಗಳು, ದಕ್ಷಿಣ ಕನ್ನಡದ ಯಕ್ಷಗಾನ, ಮೈಸೂರಿನ ಬಯಲಾಟ, ತಮಿಳುನಾಡಿನ ಭಾಗವತರಾಟ, ಆಂಧ್ರದ ಕೂಚಿಪುಡಿ, ಕೇರಳದ ಕಥಕ್ಕಳಿ, ಶಾಸ್ತ್ರಕ್ಕಳಿ, ಮೋಹಿನಿಆಟಂ, ಓಟಂತುಳ್ಳಲ್ ಮೊದಲಾದ ನೃತ್ಯಗಳ ಪರಿಚಯವನ್ನು ಕೊಟ್ಟಿದ್ದಾರೆ. ಇದೇ ಅಲ್ಲದೆ ಬೀಹಾರ್, ಒರಿಸ್ಸಾ, ಬಂಗಾಳ, ಉತ್ತರ ಪ್ರದೇಶ ಮೊದಲಾದ ಭಾಗಗಳ ನೃತ್ಯ ವೈಶಿಷ್ಟ್ಯವನ್ನು ವಿವರಿಸಿದ್ದಾರೆ. ಕೊಡಗಿನ ನೃತ್ಯದ ವಿಚಾರ ಬರೆಯುತ್ತಾ ಅವರು ಹೀಗೆ ಬರೆದಿರುವರು "ಕನ್ನಡ ನಾಡಿನ ಒಂದು ಭಾಗದಲ್ಲಿ ತಲೆ ಎತ್ತಿನಿಂತ ಕೊಡಗಿನಲ್ಲಿ ಸುಂದರವಾದ ರಾಷ್ಟ್ರೀಯ ಕೂಟ ನೃತ್ಯವಿದೆ ಈ ಕೂಟನೃತ್ಯ ಕಲಾಪೂರ್ಣವಾಗಿದೆಯಾದರೂ ಜನರ ಗಮನವನ್ನು ಸೆಳೆದಿಲ್ಲ"

ದೇಶದ ನೃತ್ಯ, ಸಂಗೀತ ಸಾಹಿತ್ಯಗಳು ಅಳಿದುಹೋಗುತ್ತಿರುವ ಕಾಲದಲ್ಲಿ ಈ ರೀತಿಯ ಪುಸ್ತಕಗಳು ನಿಜಕ್ಕೂ ಇನ್ನೂ ಹೆಚ್ಚಿಚ್ಚಾಗಿ ಪ್ರಕಟವಾಗಿ ಭಾರತದ ರಾಷ್ಟ್ರೀಯ ಸಂಸ್ಕೃತಿಯು ಮತ್ತೊಮ್ಮೆ ಹಿಂದಿನ ಘನತೆ ವೈಭವಗಳಿಂದ ವಿರಾಜಿಸುವಂತೆ ಆಗಬೇಕು. ಈ ಪುಸ್ತಕವು ಈ ದೃಷ್ಟಿಯಿಂದ ಪ್ರೋತ್ಸಾಹಾರ್ಹವಾಗಿದೆ.

— —

ದಿ ಕೆನರಾ ಬ್ಯಾಂಕಿಂಗ್ ಕೆರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ ಉಡುಪಿ (ದ. ಭಾರತ)

ಆರ್ಥಿಕ ಉಳಿತಾಯ ಯೋಜನೆಗಳಲ್ಲಿ "ಕ್ಯುಮುಲೇಟಿವ್ ಡಿಪ್ರೋಜಿಟ್" ಯೋಜನೆಯು ಅತಿ ಪರಿಣಾಮಕಾರಿ ಹಾಗೂ ಅನುಕೂಲವಾದುದು ಯಾವುದಾದರೊಂದು ನಿರ್ದಿಷ್ಟ ಉದ್ದೇಶ ಸಾಧನೆಗೆ, ನಿಯಮಿತ ಕಾಲಕ್ಕೆ ನಿಯಮಿತ ಹಣವನ್ನು ಒಂದು ನಿಯಮಿತ ಅವಧಿಯೊಳಗೆ ಬಡ್ಡಿಯೊಂದಿಗೆ ವಾಪಾಸು ಸಿಗುವಂತೆ ಬ್ಯಾಂಕಿನಲ್ಲಿ ಶೇಖರಿಸಿಡುವುದೇ ಈ ಯೋಜನೆಯ ಮೂಲ ತತ್ವ. ಇದು ಮುಖ್ಯವಾಗಿ ಮಧ್ಯಮ ತರಗತಿಯ ಜನರಿಗೆ ಇಲ್ಲವೆ ನಿಯಮಿತ ಸಂಬಳದ ನೌಕರರಿಗೆ ತಮ್ಮ ಮುದ್ದು ಮಕ್ಕಳ ವಿದ್ಯಾಭ್ಯಾಸ, ಮುಂಜಿ, ಮದುವೆ ಯಾ ಇನ್ನಿತರ ಸದುದ್ದೇಶ ಸಾಧನೆಗಳಿಗೆ ಅತ್ಯನುಕೂಲ ಹಾಗೂ ಅತಿ ಫಲಕಾರೀ ಯೋಜನೆ.

ವಿಶೇಷ ಮಾಹಿತಿಗೆ, ಕೊಡಗು ಸಂಸ್ಥಾನದಲ್ಲಿನ ಈ ಕೆಳಗಣ ನಮ್ಮ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ:

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

THE CANARA BANKING CORPORATION LIMITED.

Estd: 1906] [H. O, Udipi (S. India)

Edited Printed and Published by P. I. BELLIAPPA at 'KODAGU' Press Mercara, for 'Kodagu' Ltd.,

ಕೊಡಗು

ಬಂಡಾಟ ಜೀವನದ ಈ ಕಾಲದಲ್ಲಿ ಹುಟ್ಟಿದ್ದೇಕೆ ?

ವಾರ್ಷಿಕ ಚಂದಾ ರೂ. ೫—೦—೦

ಶುಕ್ರವಾರ

ಸಂಪುಟ ೩೨] — [ಸಂಚಿಕೆ ೨೭

೧೮--೧೨--೧೯೫೩

ಬಿಡಿ ಪ್ರತಿ 2 ಆಣೆ

KODAGU KANNADA WEEKLY MERCARA

"ಕ್ರಿಸ್‌ಮಸ್ ಉಡುಗೊರೆ"

ವಾರದ ಕಥೆ.

ಮೂಲ ಲೇಖಕರು:—ಶ್ರೀ ಜಾನ್‌ಸಲ್ ಮದ್ರಾಸ್.

ಅನುವಾದಕರು:–ಶ್ರೀ ಎಸ್. ಪಾರ್ಥಸಾರಥಿ, ಬಿ. ಎ., ಮೈಸೂರು.

ಆ ದಿನ ಕ್ರಿಸ್‌ಮಸ್ ಹಬ್ಬ. ತಾಯಿ ಮೇರಿಯ ದೇವಾಲಯದಲ್ಲಿ ಪೂಜೆಯ ಸಕಲ ಸಿದ್ಧತೆಗಳೂ ನಡೆಯುತ್ತಿವೆ. ಆ ವೇಳೆಗಾಗಲೇ ಎರಡು ಗಂಟೆಗಳನ್ನು ಬಾರಿಸಿಬಿಟ್ಟಾಯಿತು. ಇನ್ನೊಂದು ಗಂಟೆ ಬಾರಿಸುವದೇ ತಡ ದೇವಾಲಯದಲ್ಲಿ ಭಕ್ತರೆಲ್ಲ ಸೇರಿ ಜಪವನ್ನು ಆರಂಭಿಸುತ್ತಾರೆ. ಆದಕ್ಕಾಗಿ ಜನರೆಲ್ಲಾ ಅವಸರವಸರವಾಗಿ ದೇವಾಲಯದ ಕಡೆ ಹೋಗುತ್ತಿದ್ದಾರೆ. ಆ ದಿನ ಎಲ್ಲ ಬೀದಿಗಳಿಂದಲೂ ಬರುತ್ತಿದ್ದ ಜನ ದೇವಾಲಯದ ಕಡೆ ಹೊರಬಿದ್ದವರೆಂದು ನಿಸ್ಸಂದೇಹವಾಗಿ ಹೇಳಬಹುದು. ಎಂಥಾ ಬಡವನೂ ಸಹ ತನ್ನ ದುಃಖವನ್ನೆಲ್ಲಾ ಮರೆತು ಕ್ಷಣಿಕ ಸುಖವನ್ನು ಹೊಂದುವ ಸುಸಮಯವದು. ಹೀಗಿರುವಾಗ ಧನಿಕರ ಆನಂದವನ್ನು ಹೇಳಬೇಕೇ? ಹೆಚ್ಚೇಕೆ! ಇಡೀ ನಗರವೇ ಆನಂದ ಸಾಗರದಲ್ಲಿ ತೇಲಾಡುತ್ತಿತ್ತು.

ಆದರೆ! ಮೇರಿ ಮಾತ್ರ ತನ್ನ ಕೆನ್ನೆಗಳ ಮೇಲೆ ಕೈಗಳನ್ನಿಟ್ಟು ಏನನ್ನೋ ಯೋಚಿಸುತ್ತಿದ್ದಳು. ದೇವಸ್ಥಾನಕ್ಕೆ ಹೋಗಬೇಕೆಂಬ ಉತ್ಸಾಹವೇ ಅವಳಿಗಿದ್ದಂತೆ ಕಾಣಲಿಲ್ಲ. ಅವಳ ಅಂದಿನ ಸ್ಥಿತಿಯು ಎಂತಹವನ ಕಣ್ಣಿನಲ್ಲೂ ನೀರು ತರುವಂತಿತ್ತು. ಒಳಗಿನಿಂದ ಅವಳ ತಾಯಿ ಅವಳ ಮೌನವನ್ನು ಭೇದಿಸಿ, "ಮೇರಿ! ಇದೇನೇ? ಸುಮ್ಮನೆ ಕುಳಿತುಬಿಟ್ಟೆ? ನೀನು ದೇವಸ್ಥಾನಕ್ಕೆ ಬರುವದಿಲ್ಲವೇ?" ಎಂದು ಕೇಳಿದಳು. ಮೇರಿ ತನ್ನ ದುಃಖವನ್ನು ಸಹಿಸಲಾರದೆ ಬಿಕ್ಕಿ ಬಿಕ್ಕಿ ಅಳತೊಡಗಿದಳು.

"ಮೇರಿ, ಏಕೆ ಅಳುತ್ತೀ? ಏನಾಯಿತೇ! ದೇವಸ್ಥಾನದ ಎರಡು ಗಂಟೆ ಬಾರಿಸಿಬಿಟ್ಟರು. ನೀನು ಬರುವದಿಲ್ಲವೇನೇ?"

"ಅಮ್ಮಾ! ನಾನು ಬರುವದಿಲ್ಲ. ಹಬ್ಬದ ದಿನವೂ ಒಂದು ಹೊಸ ಬಟ್ಟೆಯಿಲ್ಲದೆ, ದೇವಸ್ಥಾನಕ್ಕೆ ಹೇಗೆ ಬರಲಿ ಹೇಳು?"

"ಮೇರಿ! ಅದಕ್ಕೇನು ಮಾಡುವದು ಹೇಳು. ನಮ್ಮ ಸಂಕಟವನ್ನು ಏಸುವಲ್ಲದೆ ಕೇಳುವವರಾರು! ಬಾ ಹೋಗೋಣ"

"ಅಮ್ಮಾ, ನೀನು ಹೋಗು ನಾ ಬರುವದಿಲ್ಲ"

* * * *

ಕಳೆದ ವರ್ಷದ ವರೆವಿಗೂ, ಮೇರಿಯ ತಂದೆಯೂ ಸಹ ಧನಿಕರೇ ಆಗಿದ್ದರು. ತಿರುಚಿನಾಪಳ್ಳಿಯಲ್ಲಿ ಇವರ ಹೆಸರನ್ನು ಕೇಳದವರೇ ಇರಲಿಲ್ಲ. ಅವರೂ, ಅವರ ತಮ್ಮ ಜೇಸೂನಾಥನೂ ಒಟ್ಟಿಗೇ ಇದ್ದರು. ಅಣ್ಣ ತಮ್ಮಂದಿರ ಸಂಸಾರಗಳು ಅನ್ಯೋನ್ಯವಾಗಿಯೇ ಇದ್ದವು. ಮೇರಿ ಚಿಕ್ಕವಳಾಗಿದ್ದಾಗಲೇ ಮಧುರೆಗೆ ಹೋಗಿಬಿಟ್ಟಳು. ಅಲ್ಲಿ ಅವಳ ಸೋದರತ್ತೆ ಇದ್ದಳು ಅವಳಿಗೆ ಮಕ್ಕಳಿರಲಿಲ್ಲ. ಆದ್ದರಿಂದ ಅವಳು ಮೇರಿಯನ್ನು ತನ್ನಲ್ಲಿಯೇ ಇಟ್ಟುಕೊಂಡಿದ್ದಳು. ಅದರಿಂದ ಮೇರಿ ತನ್ನ ಚಿಕ್ಕಪ್ಪ ಚಿಕ್ಕಮ್ಮ, ಅವರ ಮಕ್ಕಳು ಯಾರನ್ನೂ ನೋಡಿರಲಿಲ್ಲ.

ಮೇರಿ ಮಧುರೆಯಲ್ಲಿದ್ದಾಗ ಇದ್ದಕ್ಕಿದ್ದಂತೆ, ತಿರುಚಿನಾಪಳ್ಳಿಯಲ್ಲಿ ಅವಳ ತಂದೆ ಸತ್ತು ಹೋದರು. ಮೇರಿಗೆ ತಂತಿ ಬಂದಿತು. ಆದರೆ! ವಿಧಿ ಮೇರಿಯ ಪಾಲಿಗೆ ವಿರೋಧವಾಗಿತ್ತು! ಏಕೆ? ಮೇರಿ, ತಂತಿಯು ಬಂದ ದಿನ ಊರಿನಲ್ಲಿರಲಿಲ್ಲ. ತನ್ನ ಶಾಲೆಯ ಹುಡುಗಿಯರೊಡನೆ 'ಟ್ರಿಪ್' ಹೋಗಿದ್ದಳು. ಹಿಂತಿರುಗಿ ಬರಲು ಮೂರು ದಿನಗಳಾಯಿತು. ಆನಂದದಿಂದ ಹಿಂದಿರುಗಿದ ಮೇರಿಯ ಹೃದಯವನ್ನು ಸಹಸ್ರ ಪಾಲು ಮಾಡಲು ತಂತಿಯು ಕಾದಿತ್ತು.

ವಿಧಿ ಅಷ್ಟರಿಂದಲೇ ಸುಮ್ಮನಾಗಿರಲಿಲ್ಲ. ಕ್ರೂರ ವಿಧಿಯ ಕಣ್ಣಿಗೆ ಹಸು ಕಂದ ಮೇರಿಯೇ ಬೀಳಬೇಕೆ? ಆದರೆ ಮಾಡುವದೇನು? "ಆಡುವಾ ಮಕ್ಕಳಿಗೆ । ಊಡುವಾ ತಾಯಂತೆ॥ ಮಾಡಿದಾ ಕರ್ಮ ಬಳಿವಿಡಿದು ಪಿಡಿತಂದು । ಊಡುತ್ತಲಿಹುದು॥" ಎಂಬಂತೆ ಪಾಪ! ಮೇರಿಯ ಅದೃಷ್ಟವೋ, ದುರದೃಷ್ಟವೋ, ವಿಧಿಯು ಅವಳನ್ನು ಕಾಡಿಸುತ್ತಿತ್ತು.

ತಾಯಿಯ ಮುಖವನ್ನು ಕಂಡ ಮೇರಿಗೆ ದುಃಖವು ಇಮ್ಮಡಿಸಿತು. ಬಿಕ್ಕಿ ಬಿಕ್ಕಿ ಅತ್ತಳು.

ಮೇರಿಯ ಚಿಕ್ಕಪ್ಪ ಜೇಸು ಸಹವಾಸದೋಷದಿಂದ ಕೆಟ್ಟ ಹಾದಿಗೆ ಬಿದ್ದಿದ್ದ. ಅಣ್ಣ ಸತ್ತ ಮೂರನೇ ದಿನವೇ ಅಣ್ಣನಿಗೆ ಸಂಬಂಧಪಟ್ಟ ಹಣಕಾಸು, ಒಡವೆ ವಸ್ತುಗಳನ್ನೆಲ್ಲಾ ದೋಚಿಕೊಂಡು ಕಣ್ಮರೆಯಾದ. ಪಾಪ, ಮೇರಿಯ ತಾಯಿಯಪಾಲಿಗೆ ಬಿಟ್ಟಿದ್ದು ಅವರಿದ್ದ ಮನೆಮಾತ್ರ. ಆ ಮನೆಯೂ ಕೂಡ ಸಾಲಗಾರರ ಸ್ವತ್ತಾಗಿತ್ತು. ಜೇಸೂನಾಥ ತಲೆ ಮರೆಸಿಕೊಂಡ ಕೆಲವು ದಿನಗಳಲ್ಲಿಯೇ ಸಾಲಗಾರರು ಬಂದು ಮನೆಯನ್ನೂ ಮುತ್ತಿದರು. ಸರಿ ಮೇರಿಯನ್ನೂ ಪತಿ ವಿಹೀನಳಾಗಿದ್ದ ಅವಳ ತಾಯಿಯನ್ನೂ ಕೇಳುವವರಾರು! ಹರಾಜಿನಿಂದ ಸಾಲಗಾರರೂ ತೃಪ್ತರಾದರು. ಮೇರಿ ಮತ್ತು ಅವಳ ತಾಯಿ ಬೀದಿಯ ಪಾಲಾದರು. ಹೀಗೆ ಅನಾಥರಾದ ತಾಯಿ, ಮಗಳು ಜೀವನೋಪಾಯಕ್ಕಾಗಿ ಊರು ಊರು ಅಲೆದು ತಿರುವನಂತಪುರ ಸೇರಿ ಗುಡಿಸಲೊಂದರಲ್ಲಿ ಬಹು ಶ್ರಮದಿಂದ ಜೀವಿಸತೊಡಗಿದರು. ಈ ವೇಳೆಗೆ ಮೇರಿಗೆ ಹನ್ನೆರಡು ವರ್ಷ. ಎಂಟನೆಯ ವರ್ಷದಲ್ಲಿ ತಂದೆಯನ್ನು ಕಳೆದುಕೊಂಡ ಮೇರಿ ಈಗ ಸ್ವಲ್ಪ ಮೈತುಂಬಿಕೊಂಡರೂ ಸಹ ಸುಖವಿಲ್ಲದ ಕಣ್ಣೀರಿನ ಅವಳ ಬಾಳ್ವೆ ಅವಳಿಗೆ ಆನಂದ ಉತ್ಸಾಹಗಳನ್ನು ಕೊಟ್ಟಿರಲಿಲ್ಲ.

ತಾಯಿ ದೇವಾಲಯಕ್ಕೆ ಹೋದನಂತರ ಮೇರಿ ತನ್ನ ಹಿಂದಿನ ನೆನಪುಗಳನ್ನೆಲ್ಲಾ ಮನಸ್ಸಿಗೆ ತಂದುಕೊಂಡು ಬಿಕ್ಕಿ ಬಿಕ್ಕಿ ಅಳುತ್ತಿರುವಾಗ ಅವಳ ಜೊತೆ ಆಡಲಿಕ್ಕೆ ಬರುತ್ತಿದ್ದ ಜಾನ್ ಬಂದ. "ಮೇರಿ! ಮೇರಿ! ನೀನು ದೇವಸ್ಥಾನಕ್ಕೆ ಬರೋದಿಲ್ವೇನೆ? ಆಗಲೇ ಪ್ರಾರ್ಥನೆ ಆರಂಭವಾಗಿದೆ. ಆಂ! ಏಕೆ ಮೇರಿ ಅಳುತ್ತಿರುವೆ. ಹೊಸ ಬಟ್ಟೆ ಇಲ್ಲಾಂತ ತಾನೇ?"

"ಹೌದು ಜಾನ್, ಅಮ್ಮನೂ ಕರದ್ಳು, ನಾಬರೋಲ್ಲ ಅಂದೆ. ಹರಕಲು ಲಂಗ ಹಾಕ್ಕೊಂಡು ಹೇಗೆ ಹೊರಗೆ ಬರಲಿ ಜಾನ್....ನೀನೇ ಹೇಳು?"

"ಅಳಬೇಡಾ ಮೇರಿ, ಇಗೋ, ಇದನ್ನ ತೆಗೋ"

ಜಾನ್ ಕೊಟ್ಟ ಕಾಗದದ ಪಟ್ಣ ಬಿಚ್ಚಿ ನೋಡಿದರೆ ಹೊಸ ಜರಿಲಂಗ!

"ಆಂ! ಜಾನ್ ಈ ಲಂಗ ಯಾರ್‍ದು?"

"ಯಾರ್‍ದೇನು? ನನ್‌ತಂಗೀದು"

"ಅವ್ಳು ಬಯ್ಯೊಲ್ವೆ? ನಂಗೆ ಬೇಡ ಜಾನ್ .... ನಂಗೆ ಬೇಡ"

"ಮೇರಿ ಪರವಾಗಿಲ್ಲ, ನೀ ಹಾಕ್ಕೋ. ನನ್‌ತಂಗೀಗೆ ನಾನ್ ಹೇಳ್ತೀನಿ. ಬೇಗ ಲಂಗ ಹಾಕ್ಕೊಂಡ್ ಬಾ...."

* * * *

ಮೇರಿ ಮತ್ತು ತಾಯಿ ಇಬ್ಬರೂ ದೇವಸ್ಥಾನದಲ್ಲಿ ಭೇಟಿಯಾದರು. ಪೂಜೆ, ಭಜನೆಯೆಲ್ಲಾ ಆದಮೇಲೆ ತಾಯಿ ಮಗಳು ಇಬ್ಬರೂ ಮನೆಗೆ ಹಿಂದಿರುಗುವಾಗ ತಾಯಿ ಕೇಳಿದಳು.

"ಮೇರಿ, ಯಾರು ಕೊಟ್ರು ಈ ಲಂಗ"

"ಅದೇ ಅಮ್ಮಾ, ಅದೋ ಅಲ್ಲಿ ಕಾಣ್ಸುತ್ತಲ್ಲಾ ಅಮ್ಮಾ ದೊಡ್ಡ ಮನೆ"

'ಅದೇ! ನಿನ್ ಜೊತೆ ಆಡೋಕೆ ಬರ್‍ತಾನಲ್ಲ, ಜಾನ್ ಅವ್ನೇ?'

"ಹೌದಮ್ಮಾ! ಅವನ ತಂಗೀದಂತೆ ಈ ಲಂಗ. ನಾ ಬೇಡಾಂದ್ರೂ ಬಲವಂತವಾಗಿ ಕೊಟ್ಟು ಹೊರಟು ಹೋದಾಮ್ಮಾ"

ಅವರು ಮಾತಾಡುತ್ತಾ ಜಾನಿನ ಮನೆಬಾಗಿಲಿಗಾಗಿ ಬಂದರು. ಏನೋ ಶಬ್ದ ಕೇಳಿಸಿದಂತಾಗಿ ಅಲ್ಲೇ ನಿಂತರು. ಮನೆಯೊಳಗಿನಿಂದ ಯಾರೋ ಹೊಡೆಯುವ ಶಬ್ದ ಮತ್ತೆ ಯಾರೋ ಹುಡುಗ ಅಳುವ ಶಬ್ದ ಕೇಳುತ್ತಿತ್ತು. ಯಾರಿರಬಹುದು? ಆತ ಜಾನ್ ಅಲ್ಲದೆ ಮತ್ತಾರು? ಮನೆಯೊಳಗೆ ಅವರು ಆಡುತ್ತಿದ್ದ ಮಾತುಗಳು ಸ್ವಲ್ಪ ಸ್ವಲ್ಪ ಕೇಳಿಸುತಿತ್ತು. "ಹೋಗ್ರೊ ಯಾರೋ ಬಡ ಹುಡುಗಿಯಂತೆ ಜರಿ ಲಂಗಾನ ದಾನಮಾಡಿದನಂತೆ ದಾನಶೂರ ಕರ್ಣ! ಹೋಗಿ ಪುನಃ ಆ ಲಂಗ ತಂದ್ರೆ ಸರಿ, ಇಲ್ದಿದ್ರೆ" ಎನ್ನುತ್ತಾ ಹುಡುಗನ ತಂದೆ ಮಗನ ಕಿವಿಹಿಡಿದು ಹೊಸ್ತಿಲಾಚೆ ಕರೆತಂದರು. ಇದನ್ನು ಕಂಡು ಮೇರಿಯು ಜಾನಿನ ಹತ್ತಿರ ಓಡಿ, "ಜಾನ್, ಜಾನ್ ನಾನು ಮೊದಲೇ ಹೇಳಿಲ್ವೆ ಬೇಡಾಂತ" ಎಂದಳು.

"ಯಾರೇ ನೀನು?" ಎಂದು ಜಾನಿನ ತಂದೆ ಮೇರಿಯನ್ನು ದುರಗುಟ್ಟಿ ನೋಡುತ್ತಿರುವಾಗಲೇ ಎದುರಿಗೆ ಬಂದು ನಿಂತ ಮೇರಿಯ ತಾಯಿಯನ್ನು ನೋಡಿ ಗಾಬರಿಯಿಂದ "ಅರೆ! ಅತ್ತಿಗೆ" ಎಂದು ಬೆಚ್ಚಿ ಬಿದ್ದ.

ಸ್ವಲ್ಪ ಚೇತರಿಸಿಕೊಂಡು "ಅತ್ತಿಗೆ ನನ್ನನ್ನು ಕ್ಷಮಿಸಿ, ನಾನೇ ಜೇಸುನಾಥ, ನಿಮ್ಮ ಮೈದುನ; ನಿಮಗೆ ದ್ರೋಹ ಮಾಡಿದೆ. ಸಹವಾಸ ದೋಷ ನನ್ನನ್ನು ಹಾಗೆ ಮಾಡಿತು. ನನ್ನ ತಪ್ಪನ್ನರಿತೆ, ನಿಮಗಾಗಿ ಹುಡುಕಾಡಿದೆ. ಈ ಹಬ್ಬದ ದಿನ ದೇವರೇ ನಿಮ್ಮನ್ನು ಇಲ್ಲಿಗೆ ಬರಮಾಡಿದ. ಅತ್ತಿಗೆ, ನನ್ನ ತಪ್ಪನ್ನು ಮನ್ನಿಸಿ ನಮ್ಮ ಮನೆಗೆ ಬಂದುಬಿಡಿ. ನೀವಿಲ್ಲಿಗೆ ಬರಬೇಕೆಂದು ಏಸುವಿನ ಇಷ್ಟವಿದ್ದುದರಿಂದಲೇ ಜಾನ್‌ನಿಗೆ ದೇವರು ಈ ಬುದ್ಧಿ ಕೊಟ್ಟ.... ಬನ್ನಿ ಅತ್ತಿಗೆ...." ಎಂದು ಹೇಳಿದ.

"ಆಯಿತು, ವಿಧಿ ನಮ್ಮನ್ನು ಇಷ್ಟು ದಿನ ಪರೀಕ್ಷಿಸಿತು. ಇಲ್ಲಿಗೆ ಪರೀಕ್ಷೆ ಮುಗಿದಿದೆಯೋ ಇಲ್ಲ ಹೊಸ ಪರೀಕ್ಷೆಗೆ ಇದು ಒಂದು ಪೀಠಿಕೆಯೋ ನಾಕಾಣೆ"

"ಹಾಗೆ ಹೇಳಬೇಡಿ ಅತ್ತಿಗೆ. ಏನೋ ನಾನು ನಿಮ್ಮ ದಯೆಯಿಂದ ಅನುಕೂಲದಲ್ಲಿದ್ದೇನೆ. ನೀವಿನ್ನು ತೊಂದರೆ ತೆಗೆದುಕೊಳ್ಳಬೇಕಾಗಿಲ್ಲ. ಇನ್ನು ಮೇರಿ ನನ್ನ ಮಗು ....ಒಳಗೆ ಬನ್ನಿ.... ಆಳನ್ನು ನಿಮ್ಮ ಗುಡಿಸಲಿಗೆ ಕಳುಹಿಸಿ ನಿಮ್ಮ ಸಾಮಾನೆಲ್ಲಾ ತರಿಸುತ್ತೇನೆ"

ಮೇರಿ ಆನಂದದಿಂದ ಚಿಕ್ಕಪ್ಪನಿಗೆ ನಮಸ್ಕರಿಸಿ ಜಾನ್‌ನನ್ನು ತಬ್ಬಿ "ಜಾನ್ ಇದೆಲ್ಲಾ ನಿನ್ನ ಕೆಲಸ. ಬೇರೆಯಾಗಿದ್ದ ನಮ್ಮ ಸಂಸಾರವನ್ನು ಒಂದು ಮಾಡಿದೆ" ಎಂದಳು.

"ಮೇರಿ! ತಂಗಿ! ಅದು ನನ್ನ ಕೆಲಸವಲ್ಲ. ಏಸು ಸ್ವಾಮಿಯನ್ನು ನೀನು ದಿನವೂ ಪೂಜಿಸಿದ್ದರ ಫಲ."

"ಜಾನ್ ನೀನು ಏನೇ ಹೇಳು. ನಿನ್ನ ಉಡುಗೊರೆಯೇ ನಮ್ಮನ್ನು ಒಂದು ಸೇರಿಸಿದ್ದು. ಈ ನಿನ್ನ ಪ್ರೇಮದ ಉಡುಗೊರೆಯನ್ನು ಹಾಳುಮಾಡದೆ ಇಟ್ಟುಕೊಳ್ಳುತ್ತೇನೆ ಜಾನ್" ಎಲ್ಲರೂ ಮನೆಯೊಳಗೆ ಹೋದರು.

ಪ್ರಕಟಣೆ.

ಕೊಡಗಿನ ಮಹಾ ಜನರಲ್ಲಿ ವಿಜ್ಞಾಪನೆ:–

ಮೈಸೂರು ದೇವರಾಜ ಮಾರ್ಕೆಟ್ ಹಿಂಭಾಗದ ಬಿಲ್ಡಿಂಗಿನಲ್ಲಿ ಹೊಸದಾಗಿ ತೆರೆದಿರುವ ಹಣ್ಣುಗಳ ಮಾರಾಟ ಮಂಡಿಯಲ್ಲಿ ಸಕಾಲಕ್ಕೆ ಸರಿಯಾಗಿ ಯಾವ ತೊಂದರೆಯಿಲ್ಲದೆ ಗಿರಾಕಿಗಳಿಗೂ ಮತ್ತು ಮಾಲೀಕರಿಗೂ ನಾವು ಹಣ್ಣುಗಳ ಮಾರಾಟದಲ್ಲಿ ಮನಃಪೂರ್ವಕವಾಗಿ ಸಹಕರಿಸುತ್ತೇವೆ.

ಒಂದಾವರ್ತಿ ಬಂದು ಪರೀಕ್ಷಿಸಿರಿ!

ಟಿ. ನಂಜಪ್ಪ ಅಂಡ್ ವೈ. ಆರ್. ಶ್ರೀಕಂಠಯ್ಯ.

ಹಣ್ಣುಗಳ ವ್ಯಾಪಾರಿಗಳು ಮತ್ತು ಕಮಿಷನ್ ಏಜಂಟರು

ದೇವರಾಜ ಮೊಹಲ್ಲಾ, ಮೈಸೂರು ಸಿಟಿ.

ಕಾಫಿ ವ್ಯವಸಾಯದ ವಿಚಾರದಲ್ಲಿ ಕೆಲವು ವಿಷಯಗಳು.

ಕಾಫಿ ವ್ಯವಸಾಯ ಹಿಂದೂದೇಶದ ಅತೀ ಹಳೆಯದಾದ ಉದ್ಯಮವಾಗಿದೆ. ಹಿಂದೂದೇಶದಲ್ಲಿ ೧೭ನೇ ಶತಮಾನದಲ್ಲೇ ಈ ವ್ಯವಸಾಯ ನಡೆಯುತ್ತಿತ್ತೆಂಬುದಕ್ಕೆ ನಿದರ್ಶನಗಳಿವೆ. ೧೮೩೫ರಿಂದ ಈ ವ್ಯವಸಾಯವು ಒಂದು ವ್ಯವಸ್ಥಿತ ರೀತಿಯಲ್ಲಿ ಪ್ಲಾಂಟೇಶನ್‌ಗಳಲ್ಲಿ ನಡೆಯತೊಡಗಿತು. ಒಂದು ಕಾಲಕ್ಕೆ ಹಿಂದೂದೇಶದಲ್ಲಿ ಮೂರುಲಕ್ಷ ಎಕರೆಗಳಷ್ಟು ವಿಸ್ತೀರ್ಣ ಜಾಗದಲ್ಲಿ ಈ ವ್ಯವಸಾಯ ನಡೆಯುತ್ತಿತ್ತು. ಈ ಕ್ಷೇತ್ರವು ಕಡಿಮೆಯಾಗುತ್ತಾ ೧೯೪೦ರ ಲೆಕ್ಕ ಪ್ರಕಾರ ಹಿಂದೂದೇಶದಲ್ಲಿ ಈ ವ್ಯವಸಾಯವು ೨ ಲಕ್ಷ ಎಕರೆಯಲ್ಲಿ ಮಾತ್ರ ನಡೆಯುತ್ತಿದೆಯೆನ್ನಬಹುದು. ಹೀಗೆ ಈ ವ್ಯವಸಾಯವು ಕಡಿಮೆಯಾಗಲು ಕಾಫಿ ಗಿಡಗಳಿಗೆ ತಗಲುವ ಕ್ರಿಮಿ ಮತ್ತು ಇತರ ರೋಗಗಳೇ ಕಾರಣ.

ಬಿಹಾರ್ ಮತ್ತು ಆಸಾಮ್ ಪ್ರಾಂತದ ಕೆಲವು ಭಾಗಗಳನ್ನು ಬಿಟ್ಟರೆ ಪ್ರಾಮುಖ್ಯವಾಗಿ ದಕ್ಷಿಣ ಹಿಂದೂಸ್ಥಾನದಲ್ಲೇ ಕಾಫಿ ಬೆಳೆಯುವದಾಗಿದೆ ಕಾಫಿ ಗಿಡವು ಬೆಳೆದು ಯೋಗ್ಯ ಫಲ ಕೊಡಲು ಆರು ವರುಷಗಳು ಬೇಕು. ಆದ್ದರಿಂದ ಸಂತೆಯ ಬೇಡಿಕೆಯಂತೆ ಈ ಬೆಳೆಯನ್ನು ಒಂದು ವರ್ಷವೇ ಹೆಚ್ಚಿಸಲಾಗುವದಿಲ್ಲ. ಕಾಫಿ ಗಿಡವು ಅತೀ ಕೋಮಲವಾದುದು. ಅವಕ್ಕೆ ಸರಿಯಾದ ಎಚ್ಚರಿಕೆ, ವ್ಯವಸಾಯವಿಲ್ಲದಿದ್ದರೆ ಅದು ಹೆಚ್ಚು ಕಾಲ ಫಲಕೊಡಲಾರದು.

ಸಿಲೋನ್‌ನಲ್ಲಿಯೂ ಕಾಫಿ ಬೆಳೆಯುತ್ತಿತ್ತು. ಆದರೆ ೮೦ ವರ್ಷಗಳ ಹಿಂದೆ ಅಲ್ಲಿ ಕಾಫಿಗೆ ಒಂದು ರೀತಿಯ ರೋಗ ಹಿಡಿದು ಕಾಫಿಯು ಅಲ್ಲಿ ಸಂಪೂರ್ಣ ನಿರ್ನಾಮವಾಯಿತು. ಕೆಲವು ವರ್ಷಗಳ ಹಿಂದೆ ವೈನಾಡಿನಲ್ಲೂ ಈ ಪರಿಸ್ಥಿತಿ ಒದಗಿತು.

ಇಂದು ಕಾಫಿ ಬೆಳೆಯು ಕ್ರಮಶಃ ವಿಸ್ತಾರಗೊಳ್ಳುತ್ತಿದೆ. ರೋಬಸ್ಟಾ ಕಾಫಿಯು ಅರೇಬಿಕಾ ಕಾಫಿಗಿಂಥಾ ತಾಳಿಕೆಯುಳ್ಳದಾಗಿದೆ. ರೋಗಗಳನ್ನು ಅದು ಎದುರಿಸಬಲ್ಲುದಾಗಿದೆ. ಆದರೆ ಅದರ ಕಾಫಿಯು ಅರೆಬಿಕಾದಷ್ಟು ರುಚಿಕರವಲ್ಲ.

೧೯೪೦ರಲ್ಲಿ ಜರ್ಮನಿಯು ಯೂರೋಪಿನ ಬಹು ಭಾಗವನ್ನು ಆಕ್ರಮಿಸಿಕೊಂಡಾಗ ಹಿಂದೂದೇಶದ ಕಾಫಿಯ ಯೂರೋಪಿನ ತನ್ನ ಪ್ರಾಮುಖ್ಯ ಸಂತೆಗಳನ್ನು ಕಳಕೊಂಡಿತು. ಯುದ್ಧಕ್ಕೆ ಮೊದಲು ಹಿಂದೂದೇಶವು ಯೂರೋಪಿಗೆ ವರ್ಷಕ್ಕೆ ಆರು ಸಾವಿರದಿಂದ ಎಂಟು ಸಾವಿರ ಟನ್ನುಗಳ ವರೆಗೆ ಕಾಫಿಯನ್ನು ರಫ್ತು ಮಾಡುತ್ತಿತ್ತು. ಹೊರದೇಶಗಳಿಗೆ ಕಳುಹಿಸುತ್ತಿದ್ದ ಈ ಕಾಫಿಯು ಭಾರತದಲ್ಲೇ ನಿಂತು ಯೋಗ್ಯ ಬೆಲೆ ದೊರೆಯದಾಗುವ ಪರಿಸ್ಥಿತಿ ಒದಗಿದ ಕಾರಣ ಕಾಫಿ ವ್ಯವಸಾಯಗಾರರ ಹಿತದೃಷ್ಟಿಯಿಂದ ಇಂಡಿಯಾ ಸರಕಾರವು ಇಂಡಿಯನ್ ಕಾಫಿ ಮಾರ್ಕೆಟ್ ಎಕ್ಸ್‌ಪಾನ್ಸನ್ ಬೋರ್ಡನ್ನು ಸ್ಥಾಪಿಸಿತು. ಈ ಬೋರ್ಡಿನವರು ಹಿಂದೂದೇಶದ ಕಾಫಿಯು ಪರದೇಶದ ಸಂತೆಯನ್ನು ನಂಬಿ ಜೀವಿಸುವದಕ್ಕಿಂತಾ ಹಿಂದೂದೇಶದ ಸಂತೆಯನ್ನು ವಶಪಡಿಸಿಕೊಳ್ಳುವ ದೃಷ್ಟಿಯಿಂದ ಪ್ರಚಾರ ಪ್ರಾರಂಭಿಸಿ ಯೋಗ್ಯ ಕೆಲಸ ಮಾಡಿತು.

ಈ ದೃಷ್ಟಿಯಿಂದ ಕಾಫಿ ತೋಟಗಳನ್ನು ರಿಜಿಸ್ಟರು ಮಾಡಿಸಲಾಯಿತು. ಹಿಂದೂದೇಶದ ಸಂತೆಗಳಲ್ಲಿ ಯೋಗ್ಯ ಬೆಲೆಗೆ ಕಾಫಿ ಮಾರಾಟವಾಗುವ ವ್ಯವಸ್ಥೆಮಾಡಿತು ದೇಶದ ಉದ್ದಗಲಕ್ಕೂ ಪ್ರಚಾರ ಕೈಕೊಂಡು ಕಾಫಿ ಅಭ್ಯಾಸವನ್ನು ಜನರಲ್ಲಿ ಹೆಚ್ಚಿಸಿತು. ಅದೇ ಅಲ್ಲದೆ ಪರಿಶೋಧನಾ ಇಲಾಖೆಯೊಂದನ್ನು ತೆರೆದು ವ್ಯವಸಾಯವು ಹೆಚ್ಚು ಶಾಸ್ತ್ರೀಯವೂ, ಲಾಭದಾಯಕವೂ ಆಗುವಂತೆ ಮಾಡಿತು.

ಈ ಬೋರ್ಡಿನ ಪ್ರಯತ್ನದಿಂದ ೧೯೪೦ರಲ್ಲಿ ೨ ಲಕ್ಷ ಎಕರೆಗಳಲ್ಲಿದ್ದ ಈ ವ್ಯವಸಾಯವು ೨,೩೦,೦೦೦ಕ್ಕೆ ಏರಿ ಪ್ರತಿ ವರ್ಷ ೪,೦೦೦ ಎಕರೆಗಳಂತೆ ವಿಸ್ತಾರಗೊಳ್ಳುತ್ತಿದೆ. ಹಿಂದೂದೇಶದೊಳಗೆ ಕಾಫಿಯ ಮಮತೆ ಹೆಚ್ಚಿ ಕುಡಿಯುವವರ ಸಂಖ್ಯೆ ಬೆಳೆಯುತ್ತಿದೆ.

ಕಾಫಿಯು, ಪ್ರಾಮುಖ್ಯವಾಗಿ ಚಿಕ್ಕ ತೋಟಗಾರರ ಕೈಗಾರಿಕೆ. ಹಿಂದೂದೇಶದ ೨೯,೦೦೦ ರಿಜಿಸ್ಟರು ಮಾಡಲ್ಪಟ್ಟ ತೋಟಗಳಲ್ಲಿ ೧೪೦೦ ಮಾತ್ರ ೨೫ ಎಕರೆಗಳಿಗಿಂಥಾ ಹೆಚ್ಚು ವಿಸ್ತಾರದವು. ಉಳಿದವೆಲ್ಲ ಚಿಕ್ಕ ತೋಟಗಾರರದು. ಬೋರ್ಡಿನಲ್ಲಿ ಒಟ್ಟು ೩೦ ಮೆಂಬರುಗಳಿದ್ದಾರೆ. ಇವರಲ್ಲಿ ೧೪ ಜನರು ಕಾಫಿ ತೋಟಗಾರರ ಅಂದರೆ ಬೆಳೆಸುವವರ ಪರ ಸದಸ್ಯರು. ಉಳಿದವರು ಉಪಯೋಗಿಸುವವರ ಪ್ರತಿನಿಧಿಗಳು.

ಹಿಂದೂದೇಶದಲ್ಲಿ ಕಾಫಿ ಬೆಳೆಯು ಇತ್ತೀಚೆಗೆ ಹೆಚ್ಚಾಗಿದ್ದರೂ ಜಗತ್ತಿನ ಕಾಫಿ ಉತ್ಪಾದನೆಯ ನೂರರಲ್ಲಿ ಒಂದು ಭಾಗದಷ್ಟು ಮಾತ್ರ ಹಿಂದೂದೇಶದಲ್ಲಿ ಬೆಳೆಯುತ್ತಿದೆಯೆಂಬುದನ್ನು ಪ್ರತಿಯೊಬ್ಬನೂ ಮನಸ್ಸಿನಲ್ಲಿಡಬೇಕು. ಆದರೂ ಕೂಡ ಯೂರೋಪು ಮತ್ತು ಇಂಗ್ಲೆಂಡಿನ ಸಂತೆಗಳಲ್ಲಿ ಭಾರತೀಯ ಕಾಫಿಯು ತನ್ನದೇ ಸ್ಥಾನಪಡೆದಿದೆ. ಇದಕ್ಕೆ ಕಾರಣವೆಂದರೆ ಅರೇಬಿಕಾ ಕಾಫಿಯ ಉತ್ಕೃಷ್ಟತೆ. ಹಿಂದೂದೇಶದ ಒಟ್ಟು ಕಾಫಿ ಉತ್ಪತ್ತಿ ೨೭,೦೦೦ ಟನ್ನುಗಳು. ಈ ಉತ್ಪತ್ತಿಯನ್ನು ನಲುವತ್ತು ಸಾವಿರಕ್ಕೆ ಏರಿಸುವ ಸಾಧ್ಯತೆ ಹಿಂದೂದೇಶದಲ್ಲಿದೆ. ಈ ವ್ಯವಸಾಯಕ್ಕೆ ಹೆಚ್ಚಿನ ಪ್ರೋತ್ಸಾಹ, ಶಾಸ್ತ್ರೀಯ ವ್ಯವಸಾಯ, ಆಧುನಿಕ ರೀತಿಯ ವಸ್ತು ಸಾಹಿತ್ಯಗಳ ಉಪಯೋಗದಿಂದ ಉತ್ಪತ್ತಿ ಹೆಚ್ಚಿಸಬಹುದಾಗಿದೆ.

ದಕ್ಷಿಣ ಹಿಂದೂಸ್ಥಾನದಲ್ಲೇ ಇನ್ನೂ ಸುಮಾರು ೧,೦೦,೦೦೦ ಎಕರೆಗಳಷ್ಟು ಕಾಫಿ ಬೆಳೆಯಲು ಯೋಗ್ಯವಾದ ಸ್ಥಳವಿದೆ. ೧೯೪೨ರಿಂದ ೫೨ರ ವರೆಗಿನ ೧೦ ವರ್ಷಗಳಲ್ಲಿ ಕಾಫಿ ವ್ಯವಸಾಯವು ಶೇಕಡ ೩೦ರಷ್ಟು ಅಂದರೆ ೫೫,೦೦೦ ಎಕರೆಗಳಷ್ಟು ಹೆಚ್ಚಾಗಿದೆ. ಕಾಫಿ ಉತ್ಪತ್ತಿಯು ಶೇಕಡ ೬೩ರಷ್ಟು ಅಂದರೆ ೧೪,೨೦೦ ಟನ್ನುಗಳಿಂದ ೨೩,೦೦೦ ಟನ್ನುಗಳಷ್ಟು ಏರಿದೆ. ಕಾಫಿ ಕೈಗಾರಿಕೆಯಲ್ಲಿ ಕೆಲಸ ಮಾಡುವ ಜನರ ಸಂಖ್ಯೆಯು ೧,೦೬,೦೦೦ ರಿಂದ ೧,೭೭,೦೦೦ ಅಂದರೆ ಶೇಕಡ ೬೭ರಷ್ಟು ಏರಿದೆ. ಆದ್ದರಿಂದ ಈ ವ್ಯವಸಾಯಕ್ಕೆ ಸರಕಾರದ ಪ್ರೋತ್ಸಾಹ ಸಹಾಯ ಅಗತ್ಯವೆಂಬುದನ್ನು ಪ್ರತ್ಯೇಕ ಹೇಳಬೇಕಾದ ಅಗತ್ಯವಿಲ್ಲ.

ಸಂಗ್ರಾಹಕ:- "(:)"

ಪರಮಜ್ಞಾನ ಸಂಪಾದನೆಯ ಮಾರ್ಗವನ್ನು ಬಿಟ್ಟು ಕ್ಷಣಿಕ ಸುಖದ ಭೋಗಮಾರ್ಗವನ್ನು ಯಾರು ಹಿಡಿಯುವರೋ ಅಂಥಾವರು ತರಗೆಲೆ ಬೆಂಕಿಯಿಂದ ಅಡಿಗೆ ಮಾಡಲೆತ್ನಿಸಿದವರಂತೆ ದುಃಖಕ್ಕೂ ನಿರಾಶೆಗೂ ಈಡಾಗುವರು.

ಸಂತೋಷ ಕೊಡುವ ವಸ್ತುವ ದುಃಖತರುವ ವಸ್ತುವಿನಷ್ಟೇ ತ್ಯಾಜ್ಯ. ಮಮತೆಯವರನ್ನು ನೋಡಲು ಅವರೊಡನಾಡಲು ದೊರೆಯದಿದ್ದರೆ ವ್ಯಥೆಯಾಗುವಂತೆ ಮಮತೆ ಇಲ್ಲದವರೊಡನೆ ಒಡನಾಡಲೂ ವ್ಯಥೆಯಾಗುವದು. ಆದ್ದರಿಂದ ಪ್ರೀತಿಯ ವಸ್ತುವೆಂದೂ ಅತ್ಯಾವಶ್ಯಕವೆಂದೂ ಯಾವುದನ್ನೂ ಗಣಿಸದಿರು.

ಮಮತೆ, ಬೇಕೆಂಬ ಸ್ವಾರ್ಥತೆಗಳು ದುಃಖಕ್ಕೆ ಕಾರಣವಾಗುತ್ತವೆ. ಮಮತೆಯ ವಸ್ತುವಿನ ಕಾರಣವೇ ಭಯವೂ ಉತ್ಪಾದನೆಯಾಗುತ್ತದೆ. ಆದ್ದರಿಂದ ನನ್ನದು, ತನ್ನದು, ಪ್ರೀತಿಯದು, ಮಮತೆಯದು ಎಂದು ತಿಳಿಯದೆ ಸರ್ವವನ್ನೂ ಏಕ ಪ್ರಕಾರ ನೋಡುವವನಿಗೆ ಭಯಶೋಕದು.

ಸ್ವಾರ್ಥ ಪ್ರೇಮದಿಂದ ದುಃಖಭಯಗಳುತ್ಪನ್ನವಾಗುತ್ತವೆ. ಇಂದ್ರಿಯಗಳ ಸಂಬಂಧದಿಂದ ನಿರಾಸೆ, ತಿರಸ್ಕಾರ, ವ್ಯಸನಗಳು ಬರುತ್ತವೆ. ಆದ್ದರಿಂದ ಅಂಗಸುಖದಿಂದ ನಿರ್ಲಿಪ್ತನಾದವನಿಗೆ ದುಃಖವಿಲ್ಲ.

ಆಸೆಯು ದುಃಖಕ್ಕೆ ಕಾರಣ. ಆಸೆಯಿಂದ ಮುಕ್ತನಾದವನಿಗೆ ನಿರಾಸೆಯಿಲ್ಲ. ಯಾರಲ್ಲಿ ನೀತಿ, ಸರಿಯಾದ ದೃಷ್ಟಿ, ಸದ್ಗುಣ, ಸತ್ಯ ವರ್ತನೆಗಳಿವೆಯೋ ಅವರೆ ಸರ್ವ ಮಾನ್ಯರು.

ವಿದೇಶದಲ್ಲಿ ಬಹು ವರ್ಷಗಳಿದ್ದು ಸುರಕ್ಷಿತ ತನ್ನ ದೇಶಕ್ಕೆ ಹಿಂತಿರುಗಿದಾಗ ಆತನ ಬಂಧು, ಸ್ನೇಹಿತರು ಸ್ವಾಗತಿಸುವಂತೆ ಒಳ್ಳೇ ಕೆಲಸ ಮಾಡಿದವರು ಈ ಜಗತ್ತನ್ನು ಬಿಡುವಾಗ ಪರಲೋಕದವರು ಆತನನ್ನು ತಮ್ಮ ಸಂಬಂಧಿಕನಂತೆ ಆದರ ಪ್ರೀತಿ, ವಿಶ್ವಾಸಗಳಿಂದ ಸ್ವಾಗತಿಸಿ ಆಲಿಂಗಿಸುವರು.

COORG FOREST DEPARTMENT

TENDER NOTICE.

Tenders are invited for construction of nine buildings in Murkal Range. Tenders should reach the Conservator's office before 4PM on 5-1-1954. For further particulars apply to the Conservator of Forests, Coorg, Mercara.

COORG FOREST DEPARTMENT

TENDER NOTICE.

Sealed tenders are invited for the transport of about 40,000 cft of timber from the coupes of Nagerhole and about 15,000 cft of timber from the coupes of Murkal Range to the Depot at Murkal. Tenders should reach the office of the Conservator of Forests before 4 PM on 4-1-1954. For further particulars please apply to the Conservator of Forests Coorg, Mercara.

ಜಪಾನಿನಿಂದ ಕಲಿಯಬೇಕಾದ ಪಾಠ. [೧೪]

ಜಪಾನಿನ ರಕ್ಷಕರು-ಅಲ್ಲಿಯ ಮಹಿಳೆಯರು.

— ಮೂಲ ಲೇಖಕ:—ಶ್ರೀ ಚಮನ್‌ಲಾಲ್ —

ಜಗತ್ತಿನ ಮಹಿಳೆಯರಲ್ಲಿ ಜಪಾನಿನ ಹೆಂಗಸರಷ್ಟು ಹೆಚ್ಚು ಕಠಿಣ ಕೆಲಸ ಮಾಡುವವರು ಯಾರೂ ಇಲ್ಲ, ಜಪಾನಿನ ಹೆಂಗಸರು ಇಂಜನೀಯರಿಂಗ್ ಕಾರ್ಖಾನೆಗಳಲ್ಲಿ, ಹೊಟೇಲುಗಳಲ್ಲಿ, ಅಂಗಡಿಗಳಲ್ಲಿ, ವ್ಯವಸಾಯ ಕ್ಷೇತ್ರಗಳಲ್ಲಿ, ಮಿಲ್ಲು, ಕಾರ್ಖಾನೆಗಳಲ್ಲಿ ಪ್ರತಿಯೊಂದು ಕ್ಷೇತ್ರದಲ್ಲಿಯೂ ದುಡಿಯುತ್ತಾರೆ. ಅವರಿಗೆ ಕಷ್ಟ ಕೆಲಸವೆಂಬುವುದಿಲ್ಲ.

ಜಪಾನಿನ ರಾಷ್ಟ್ರೀಯ ಮತ್ತು ಆರ್ಥಿಕ ಪುನರುತ್ಥಾನ ಕಾರ್ಯದಲ್ಲಿ ಹತ್ತು ಮಿಲಿಯ ಮಹಿಳೆಯರು ಸತತ ದುಡಿಯುತ್ತಿದ್ದಾರೆ. ಜಗತ್ತಿನ ಯಾವ ದೇಶದ ಹೆಂಗಸೂ ಕೂಡ ಯಾವುದೇ ದೂರು ಹೇಳದೆ, ಯಾವುದೇ ಹಕ್ಕು ಬಾಧ್ಯತೆಗೆಂದು ಕೂಗಾಡದೆ ಅಷ್ಟು ಕಷ್ಟಪಟ್ಟು ಸ್ವಾರ್ಥ ತ್ಯಾಗದಿಂದ ಕೆಲಸ ಮಾಡುವದಿಲ್ಲ. ಜಪಾನಿನ ಸೋದರಿಯ ತ್ಯಾಗ, ಆತ್ಮಸಮರ್ಪಣೆ, ದುಡಿಮೆಯ ಕೌಶಲ್ಯ ಮತ್ತು ಅವರ ನಗುವದನವನ್ನು ನೋಡಿ ಯಾರಾದರೂ ಆಸೂಯೆಪಡಬೇಕು. ಹಿಂದೂದೇಶ ಮತ್ತಿತರ ದೇಶಗಳಲ್ಲಿ ಸ್ಪರ್ಧೆ ನಡೆಸಿ ಕ್ರಯಕ್ಕೆಕೊಂಡುಕೊಳ್ಳುವ ಸೇಯಿಗೆ ವಸ್ತುಗಳಲ್ಲಿ ಶೇಕಡ ೮೦ರಷ್ಟು ಜಪಾನಿನ ಮಹಿಳೆಯರಿಂದ ತಯಾರಿಸಲ್ಪಟ್ಟಿದ್ದು. ಅದು ಹೋಟೆಲಿರಲಿ, ಸಿನೆಮಾ ಮಂದಿರವಿರಲಿ, ಕಾರ್ಖಾನೆಯಿರಲಿ, ವ್ಯವಸಾಯ ಕ್ಷೇತ್ರವಿರಲಿ ಸರ್ವ ಎಡೆ ಮುಗುಳು ನಗೆಯಿಂದ ಅವರು ದುಡಿಯುತ್ತಿರುತ್ತಾರೆ. ನಿಮಗೆ ಜಪಾನಿನ ಸರ್ವ ವಿಚಾರಗಳನ್ನು ವಿವರಿಸಿ 'ಅರಿಗಾಟೊ' (ವಂದನೆಗಳು) ಎಂಬ ಶಬ್ದದಿಂದ ಬೀಳ್ಕೊಡುವ ಅವರು ಜಪಾನಿನ ಭಾಗ್ಯ ದೇವತೆಗಳು.

ಎಲ್ಲಿ ಯಾವ ಭಾಗದಲ್ಲಿ ನಾನು ಜಪಾನಿನ ಹೆಂಗಸರನ್ನು ಕಂಡಾಗಲೂ ಪೂರ್ವ ರಾಷ್ಟ್ರಗಳ ಸಂಸ್ಕೃತಿಯ ಪ್ರತಿರೂಪಳಾಗಿರುವ ಅವರನ್ನು ಮನಸಾರೆ ವಂದಿಸಿ ಗೌರವಿಸುವೆನು. ಅವರನ್ನು ನೋಡಿದಾಗ ಹಿಂದೂ ದೇಶದ ಆರ್ಶೀಯವಾದ ಸ್ತ್ರೀತ್ವದ ನೆನಪಾಗುತ್ತದೆ. ಶೀಲ, ನಡೆ, ನುಡಿ, ಮಾತೃಪ್ರೀತಿ, ಸೌಮ್ಯತೆ, ಆಕರ್ಷಕತೆಗಳಲ್ಲಿ ಹಿಂದೂದೇಶದ ಮಹಿಳೆಗೂ ಜಪಾನಿನ ಮಹಿಳೆಗೂ ವ್ಯತ್ಯಾಸವಿಲ್ಲ.

'ಪೂರ್ವ ರಾಷ್ಟ್ರಗಳಲ್ಲಿ ಹೆಂಗಸೆಂದರೆ ತ್ಯಾಗದ ಪ್ರತೀಕ. ಗೌರವ, ದಯೆ, ಶೀಲಗಳಿಗೆ ಅವರು ಎತ್ತಿದ ಕೈ. ಆದರೆ ಪಾಶ್ಚಾತ್ಯ ಸಂಸ್ಕೃತಿಯ ಮಹಿಳೆಯರಲ್ಲಿ ಹೆಚ್ಚು ಜನರು ವ್ಯಕ್ತಿಗತ ಲಾಭ, ಸಂಪತ್ತು, ಮೆರಗುಗಳಿಗೆ ಬೆಲೆ ಕಟ್ಟುವವರು. ಜಪಾನಿನ ಹೆಂಗಸಿಗೆ ಪ್ರತ್ಯೇಕ ವ್ಯಕ್ತಿತ್ವವೇನೆಂದು ತಿಳಿದಿಲ್ಲ. ಅವರು ಕುಟುಂಬಕ್ಕಾಗಿ ಶ್ರಮಿಸುತ್ತಾರೆ. ಅದಕ್ಕಾಗಿ ಸರ್ವ ಕಷ್ಟಗಳನ್ನು ಅನುಭವಿಸುತ್ತಾರೆ. ಆವಶ್ಯಬಿದ್ದರೆ ಅದಕ್ಕಾಗಿಯೇ ಪ್ರಾಣ ಬಿಡುತ್ತಾರೆ. ಅವರ ಮಕ್ಕಳ ಮೇಲಿನ ಪ್ರೀತಿ, ಹಿರಿಯರ ಮೇಲಿನ ಗೌರವ, ಪತಿಯ ಮೇಲಿನ ಭಕ್ತಿ ಇಂದಿನ ಯುಗದಲ್ಲಿ ಆಶ್ಚರ್ಯಕರವೆನಿಸುವದು.

ಜಪಾನಿನ ಚರಿತ್ರೆಯನ್ನು ನೋಡಿದರೆ ಹಿಂದೂದೇಶದಂತೆಯೇ ಅನೇಕ ಚಾರಿತ್ರಿಕ ವ್ಯಕ್ತಿಗಳು ಆದರ್ಶರಾಗಿ ಮೆರೆಯುವದನ್ನು ಕಾಣಬಹುದು. ಗಂಡಸರಂತೆಯೇ ಹೆಂಗಸರು ಸಮಾನತೆಯಿಂದ ಯುದ್ಧಕ್ಷೇತ್ರ ಮತ್ತಿತರೆಡೆಗಳಲ್ಲಿಯೂ ಖ್ಯಾತಿ ಪಡೆದದ್ದನ್ನು ನೋಡಬಹುದು. ಭಾರತೀಯ ಚರಿತ್ರೆಯನ್ನೋದಿದ ಯಾರಿಗೆ ಮಹಾರಾಣಿ ಹೋಲ್ಕರ್, ಝಾನ್ಸಿ ರಾಣಿ, ನೂರ್ ಜಹಾನ್, ರಾಜಿಯಾ ಬೇಗಮ್ ಮೊದಲಾದವರ ಹೆಸರು ತಿಳಿದಿಲ್ಲ? ಅದರಂತೆಯೇ ಜಪಾನಿನ ನಾರಾ ಕಾಲದ ಎಂಟು ವಿಖ್ಯಾತ ಅರಸರಲ್ಲಿ ನಾಲ್ಕು ಜನರು ರಾಣಿಯರು. ಚಕ್ರವರ್ತಿನಿ ಕೋಕೆನ್ ಆದರ್ಶ ಆಡಳಿತ ನಡೆಸಿದ ಖ್ಯಾತಿ ಇಂದಿಗೂ ಇದೆ. ರಾಣಿ ಜಿಂಗೂ ಎಂಬವರು ಕೊರಿಯಾವನ್ನು ವಶಪಡಿಸಲು ಸ್ವತಹ ಹೋರಾಡಿದ್ದಾರೆ. ಚರಿತ್ರೆಯಲ್ಲಿ ಒಟ್ಟು ಹತ್ತು ಜನ ಹೆಂಗಸರು ಜಪಾನಿನ ರಾಣಿಯರಾಗಿದ್ದ ನಿದರ್ಶನವಿದೆ. ೧೮೮೯ರಲ್ಲಿ ಯಾವ ಹೆಂಗಸೂ ಜಪಾನಿನ ಸಿಂಹಾಸನವೇರಕೂಡದೆಂದು ಮಾಡಿದ ನಿಯಮದ ನಂತರ ಹೆಂಗಸರು ಅರಸಿಯರಾಗುವ ಅಸು ತಪ್ಪಿತು. ಜಪಾನಿನಲ್ಲಿ ಹೆಂಗಸಿಗೆ ತುಂಬಾ ಗೌರವವಿದೆ. ಮನುವು ಹೇಳಿದಂತೆ "ಎಲ್ಲಿ ಹೆಂಗಸರು ಗೌರವಿಸಲ್ಪಟ್ಟು ಸುಖಿಗಳಾಗಿದ್ದಾರೆಯೋ ಆ ಮನೆಯೇ ಸ್ವರ್ಗ" ವೆಂಬ ಮಾತು ಅಕ್ಷರಶಃ ಜಪಾನಿಗೆ ಅನ್ವಯಿಸುತ್ತದೆ.

ಜಪಾನಿನ ತೋಕುಗಾವಾ ಆಡಳಿತದ ಕಾಲದಲ್ಲಿ ಜಪಾನಿ ಹೆಂಗಸರ ಸ್ಥಿತಿ ಚೆನ್ನಾಗಿರಲಿಲ್ಲ. ನಂತರ ಬಂದ ಮೈಜಿ ಆಡಳಿತದಲ್ಲಿ ಅಂದರೆ ೧೮೭೧ರಲ್ಲಿ ಸರಕಾರಿ ಆಜ್ಞೆ ಪ್ರಕಾರ ಜಪಾನಿನ ಹೆಂಗಸು ಮಕ್ಕಳು ತಮ್ಮ ಪತಿ ಯಾ ಸೆಂಟರಿಸ್ಮರೊಡನೆ ವಿದೇಶಗಳಿಗೆ ಹೋಗಿ ಅಲ್ಲಿಯ ಸ್ಥಿತಿಯನ್ನು ಸ್ವತಹ ನೋಡಬಹುದೆಂದು ಸಾರಲಾಯಿತು. ಅದೇ ವರ್ಷ ಜಪಾನಿನ ಐದು ಚಿಕ್ಕ ಹುಡುಗಿಯರನ್ನು ಜಪಾನಿನ "ರಾಯಭಾರಿ"ಗಳೆಂದು ಅಮೇರಿಕಾಕ್ಕೆ ಜಪಾನಿ ಸರಕಾರವು ಅವರ ಸರ್ವವೆಚ್ಚ ಕೊಟ್ಟು ಕಳುಹಿಸಿತು. ಅಮೇರಿಕಾದ ವಿದ್ಯೆ ರೀತಿನೀತಿಗಳನ್ನು ಅವರು ಕಲಿಯಲೆಂಬುದೇ ಅವರ ಆಶಯವಾಗಿತ್ತು. ಅವರಲ್ಲಿ ಅತೀ ಕಿರಿಯವಳಾದ ಉಮೆಸೂದಾ ಎಂಬ ಏಳು ವರ್ಷದ ಬಾಲಕಿಯು ಅಮೇರಿಕಾದಲ್ಲಿ ವಿದ್ಯೆ ಕಲಿತು ಹಿಂತಿರುಗಿ ಟೋಕಿಯೋದಲ್ಲಿ ಮಹಿಳೆಯರ ಇಂಗ್ಲಿಷ್ ಕಾಲೇಜನ್ನು ಸ್ಥಾಪಿಸಿದಳು. ಜಪಾನಿ ಹೆಂಗಳೆಯರ ಮುನ್ನಡೆಗೆ ಈ ಕಾಲೇಜು ಮುಖ್ಯ ಕೇಂದ್ರವಾಗಿದೆ.

ಜಪಾನಿನಲ್ಲಿ ಬಹು ಪತ್ನಿ ಪದ್ಧತಿಯು ನಿಷೇಧಿಸಲ್ಪಟ್ಟಿದೆ. ಹುಡುಗಿಯ ಅಭಿಪ್ರಾಯಕ್ಕೆ ವಿರುದ್ಧವಾಗಿ ಮದುವೆ ಕೂಡದು. ೨೫ ವರ್ಷಗಳಿಗೆ ಮೀರಿದ ಯುವತಿಯು ತನಗೆ ಇಷ್ಟವಿರುವ ಯಾರನ್ನಾದರೂ ಮದುವೆಯಾಗಬಹುದು. ಹೆಂಗಸರು ತಮ್ಮ ಸ್ವಂತ ಹೆಸರಿನಲ್ಲಿ ಆಸ್ತಿ ಪಡೆಯಬಹುದು. ೧೯೦೮ರಲ್ಲಿ ಮಹಿಳೆಯರ ಪ್ರಥಮ ಸಂಸ್ಥೆಯು ಜಪಾನಿನಲ್ಲಿ ಸ್ಥಾಪಿತವಾಗಿ ಅದರ ಸದಸ್ಯರ ಸಂಖ್ಯೆ ಒಂದು ಮಿಲಿಯವನ್ನು ಮೀರಿತು. ೧೯೦೯ರಲ್ಲಿ ಇಂಥಾ ಸಂಸ್ಥೆಗಳು ಬಹು ಸಂಖ್ಯೆಯಲ್ಲಿ ಸ್ಥಾಪಿತವಾಗಿ ಅವರ ಫೆಡರೇಶನೊಂದಾಗಿ ಅದರ ಸದಸ್ಯರ ಸಂಖ್ಯೆ ಅನೇಕ ಮಿಲಿಯಗಳಷ್ಟಿವೆ. ೧೯೨೦ರಲ್ಲಿ ಸ್ಥಾಪಿತವಾದ ನವೀನ ಹೆಂಗಳೆಯರ ಸಂಘವು ರಾಜಕೀಯದಲ್ಲಿ ಅಭಿರುಚಿ ತೋರ ತೊಡಗಿತು. ಜಪಾನಿನ ಹೆಂಗಳೆಯರು ತಮ್ಮ ಸ್ಥಾನ, ಸಿರಿತನ, ಬಡತನಗಳ ಪರಿವೆಯಿಲ್ಲದೆ ಸಮಾನರಾಗಿ ಕೆಲಸಮಾಡುತ್ತಾರೆ. ಇಂದು ಜಪಾನಿನ ಹೆಂಗಸರು ಗಂಡಸರಷ್ಟೇ ಸ್ವತಂತ್ರರಾಗಿದ್ದಾರೆ. ಜಪಾನಿನ ಪಾರ್ಲಿಮೆಂಟಿನಲ್ಲಿ ಹಲವು ಪ್ರತಿನಿಧಿಗಳಿದ್ದಾರೆ.

ಜಪಾನಿನ ಹೆಂಗಸರು ತಮ್ಮ ಕೈಗಳನ್ನು ತೋರಿಸಕೂಡದೆಂಬುದು ಒಂದು ಕಾಲದ ಪದ್ಧತಿಯಾಗಿತ್ತು. ಕೈಗಳನ್ನು ತೋರಿಸುವದು ಈ ಕಾಲದಲ್ಲಿ ಅನೀತಿಯೆಂದು ಪರಿಗಣಿಸಲ್ಪಡುತ್ತಿತ್ತು. ಅದರ ಕಾರಣವಿಷ್ಟೆ. ಆ ಕಾಲದಲ್ಲಿ ಜಪಾನಿ ಹೆಂಗಸರು ಪಂಜರದ ಗಿಳಿಗಳಂತೆ ಇದ್ದರು. ಅವರು ಕೆಲಸ ಮಾಡುವದು ಅನೀತಿಯೆಂದು ಪರಿಗಣಿಸಲ್ಪಡುತ್ತಿತ್ತು. ಅದಕ್ಕಾಗಿ ಕೈಗಳನ್ನು ಮುಚ್ಚುವ ರೀತಿಯಲ್ಲಿ ಅಂದಿನ ಉಡಿಗೆಯೂ ಇದ್ದಿತು. ಆದರೆ ಅದು ಕ್ರಮಶಃ ಬದಲಾಗುತ್ತಾ ಇಂದು ಜಪಾನಿ ಹೆಂಗಸರು ತಮ್ಮ ಕೈಗಳನ್ನು ಮುಚ್ಚುವದೇ ಇಲ್ಲ. ಹೆಗಲಿನ ವರೆಗೆ ಕೈಯನ್ನು ನಗ್ನರಾಗಿಡುತ್ತಾರೆ. ಯಾರಿಗೂ ಗೋಚರಿಸದೆ ಗುಪ್ತವಾಗಿಡಲ್ಪಟ್ಟ ಕೈಗಳು ಇಂದು ಪೂರ್ಣ ನಗ್ನವಾಗಿ ಸರ್ವ ಕೆಲಸಗಳನ್ನೂ ಮಾಡತೊಡಗಿವೆ. ಈ ಕೈಗಳ ಬಲದಿಂದಾಗಿಯೇ ಜಪಾನು ಇಂದು ಸುಖದಿಂದ ಬಾಳುತ್ತಿದೆ.

ಸಶೇಷ.

---

* ಟೀಕೆ ಟಿಪ್ಪಣಿಗಳು *

ಕಳೆದ ಮಹಾ ಚುನಾವಣೆಯಲ್ಲಿ ಕೊಡಗು ಪ್ರತ್ಯೇಕವಾಗಿರಬೇಕೆಂಬ ವಾದವನ್ನು ಹೂಡಿ ಶ್ರೀ ಪಂದ್ಯಂಡ ಬೆಳ್ಯಪ್ಪನವರೂ ಮತ್ತು ಅವರ ಪಾರ್ಟಿಯೂ ಕಾಂಗ್ರೆಸಿನಿಂದ ಹೊರಗೆ ಬಂದು ಚುನಾವಣೆಯಲ್ಲಿ ಭಾಗವಹಿಸಿದ್ದು ಸರಿಯಷ್ಟೆ. ಕಾಂಗ್ರೆಸಿನಿಂದ ಹೊರಗೆ ಬರಬೇಕಾದರೆ ತಮ್ಮ ಧ್ಯೇಯವನ್ನು ಸ್ಪಷ್ಟವಾಗಿ ಕೇಂದ್ರ ಕಾಂಗ್ರೆಸ್ ಕಮಿಟಿಗೆ ವ್ಯಕ್ತಪಡಿಸಿದ್ದಲ್ಲದೆ; ಸದ್ರಿ ಚುನಾವಣಾ ಫಲಿತಾಂಶ ತಿಳಿದ ನಂತರ ಪುನಃ ಕಾಂಗ್ರೆಸ್ ಸದಸ್ಯತ್ವವನ್ನು ಪಡೆಯುವದಾಗಿ ಸಹ ತಿಳಿಸಿದರು. ಅದೇ ಮೇರೆ ಚುನಾವಣೆ ನಡೆದ ಕೊಂಚ ಕಾಲದ ಮೇಲೆ ಸದ್ರಿ ಪಾರ್ಟಿಯವರು ಕಾಂಗ್ರೆಸ್ ಸದಸ್ಯತ್ವಕ್ಕೆ ಅರ್ಜಿ ಸಹಾ ದಾಖಸ್ತು ಮಾಡಿಕೊಂಡರೂ ವಿಚಾರಣೆ ಬಹು ವಿಳಂಬವಾಗಿ ನಡೆದು ಕಡೆಗೆ ನಾಲ್ಕೈದು ಮಂದಿಯನ್ನು ಕೆಲವು ವರ್ಷಗಳ ವರೆಗೆ 'ಡಿಬಾರು' ಮಾಡಿರುವದು ಸರ್ವರಿಗೂ ವೇದ್ಯವಿದೆ. ಆದರೆ ಕೊಡಗು ಪತ್ರಿಕೆಯ ಕಳೆದ ಸಂಚಿಕೆಯಲ್ಲಿ ಮಹನೀಯರೊಬ್ಬರು ಬಹು ದೀರ್ಘವಾದ ಒಂದು ಲೇಖನವನ್ನು ಪ್ರಕಟಿಸಿರುತ್ತಾರೆ. ಶ್ರೀ ಬೆಳ್ಯಪ್ಪ ಮತ್ತು ಪಾರ್ಟಿಯವರನ್ನು ಕಾಂಗ್ರೆಸಿನೊಳಗೆ ಸೇರಿಸಿಕೊಳ್ಳಲು ಬೇಕಾದಷ್ಟು ಕಾರಣಗಳನ್ನು ಕೊಟ್ಟಿರುತ್ತಾರೆ.

ನ್ಯಾಯವಾಗಿ ನೋಡಿದಲ್ಲೂ ಶ್ರೀ ಬೆಳ್ಯಪ್ಪನವರು ತಮ್ಮ ಧ್ಯೇಯವನ್ನು ನಿರ್ವಂಚನೆಯಿಂದ ಕಾಂಗ್ರೆಸ್ ಮುಖಂಡರಿಗೆ ಮೊದಲೇ ತಿಳಿಸಿದಾಗ್ಯೂ ಅದನ್ನು ನಿರಾಕರಿಸಿ ವಿರೋಧವಾದ ಅಭಿಪ್ರಾಯ ಕೊಟ್ಟಿರುವಾಗ್ಯೆ ಅದನ್ನು ಈಗ ಪುನಃ ಕಾಂಗ್ರೆಸಿಗರು ವಿಮರ್ಶೆಗೆ ತರುವದು ಅಸಂಭವ. ಈ ವಿಚಾರದಲ್ಲಿ ಶ್ರೀ ಪೂಣಚ್ಚನವರು ತಾನೆ ಈಗ ಏನು ಮಾಡಬಲ್ಲರು ಎಂದು ನನಗೆ ತಿಳಿಯುವದಿಲ್ಲ. ಮಾತ್ರವಲ್ಲ, ಈ ವಿಷಯ ಪೂಣಚ್ಚನವರೊಬ್ಬರ ಕೈಯಲ್ಲಿ ಇದ್ದಲ್ಲಿ ಸಮಸ್ಯೆ ಪರಿಹಾರಕ್ಕೆ ಮಾರ್ಗವಿತ್ತು. ಆದರೆ ಇಂದು ಕೊಡಗು ಕಾಂಗ್ರೆಸಿನಲ್ಲಿ ಕಾಂಗ್ರೆಸಿಗಾಗಿ ಯಾವಾಗಲೂ ಒಂದು ಪನಿ ಬೆವರು ಕೂಡ ಸುರಿಸದವರು ಪ್ರಬಲರಾಗಿರುವದರಿಂದ ಈ ತೊಡಕು ಸುಲಭ ಸಾಧ್ಯವಲ್ಲ. ಅವರೆನ್ನು ಅಧಿಕಾರ ಲಾಲಸೆ ಆವರಿಸಿಕೊಂಡಿರುತ್ತೆ.

ನನ್ನ ಮಟ್ಟಿಗೆ ಹೇಳುವದಾದರೆ ಶ್ರೀ ಬೆಳ್ಯಪ್ಪನವರ ಉದ್ದಿಷ್ಟ ದೇಶದ ಏಳಿಗೆ ಈ ಉದ್ದಿಷ್ಟವನ್ನು ನೆರವೇರಿಸಲು ಕಾಂಗ್ರೆಸ್ಸಿಗೆ ಸೇರಿಯೇ ನಡೆಸಬೇಕೆಂಬ ಬಲಾತ್ಕಾರವೇನಿಲ್ಲ. ಕಾಂಗ್ರೆಸಿನ ಹೊರಗಿದ್ದು ಆಡಳಿತದ ಕುಂದು ಕೊರತೆಗಳನ್ನು ನಿಷ್ಪಂಕೆಯಿಂದ ಓಟರುಗಳ ಮತ್ತು ಆಡಳಿತಗಾರರ ಗಮನಕ್ಕೆ ತಂದು ನ್ಯೂನಾತಿರಿಕ್ತಗಳನ್ನು ಸರಿಪಡಿಸುವದರಲ್ಲಿ ಹೆಚ್ಚಿಗೆ ಶ್ರೇಯಸ್ಸು ಇದೆ ಎಂದು ತೋರುತ್ತೆ. ಶಾಸನ ಸಭೆಯಲ್ಲಿ ಶ್ರೀ ಬೆಳ್ಯಪ್ಪನವರ ಪರ ಒಂಭತ್ತು ಜನರಿರುತ್ತಾರೆ. ಇವರೆಲ್ಲರೂ ವಿದ್ಯಾವಂತರು ಮತ್ತು ಮೇಧಾವಿಗಳು ಮತ್ತು ಶಾಸನ ಸಭೆ ಕಾರ್ಯಗಳಲ್ಲಿ ನುರಿತವರು. ಇವರು ಕಾಂಗ್ರೆಸ್ಸಿಗೆ ಸೇರಬೇಕೆಂಬ ಹಂಬಲವನ್ನು ಸದ್ಯಕ್ಕೆ ಬದಿಗಿಟ್ಟು ದೇಶೋದ್ಧಾರಕ್ಕೆ ಪ್ರಯತ್ನ ಪಡುವದು ಒಳ್ಳೆಯದು. ನ್ಯಾಯವಾಗಿ ಪ್ರಜಾಪ್ರಭುತ್ವ ಸಫಲವಾಗಬೇಕಾದರೆ ಶಾಸನ ಸಭೆಯಲ್ಲಿ ತೂಕವುಳ್ಳ

ಪ್ರತಿಪಕ್ಷ ಇದ್ದೇ ತೀರಬೇಕು. ಪಕ್ಷ ಪ್ರತಿ ಪಕ್ಷಗಳ ಘರ್ಷಣೆಯಿಂದ ದೇಶಕ್ಕೆ ಉಂಟಾಗುವಷ್ಟು ಉಪಯೋಗ ಶಾಸನ ಸಭೆಯಲ್ಲಿ ಒಂದೇ ಪಾರ್ಟಿ ಇದ್ದರೆ ಖಂಡಿತಾ ಆಗುವದಿಲ್ಲ. ಈಗಿನ ಪರಿಸ್ಥಿತಿಯನ್ನು ಆಳವಾಗಿ ಪರ್ಯಾಲೋಚಿಸಿದರೆ ಸದ್ಯಕ್ಕೆ ಶ್ರೀ ಬೆಳ್ಯಪ್ಪನವರ ಪಾರ್ಟಿ ಆಲಾಯಿದ ಇರುವದು ದೇಶಕ್ಕೆ ಕ್ಷೇಮವೆಂದು ತೋರುತ್ತದೆ.

ಭಾಷಾವಾರು ಪ್ರಾಂತರಚನೆಯ ಸಮಸ್ಯೆ ಸದ್ಯದಲ್ಲಿ ಪರಿಶೀಲನೆಗೆ ಬರುತ್ತೆ. ಆಗ ಅಫಿಷಿಯಲ್ ಕಾಂಗ್ರೆಸ್ ಪಾರ್ಟಿ ಏನು ಮಾಡುತ್ತದೋ ನೋಡೋಣ. ಅವರ ಅಭಿಪ್ರಾಯ ದೇಶದ ಜನರ ಇಚ್ಛೆಗೆ ಸರಿಯಾಗಿದ್ದಲ್ಲಿ ವಾದ ವಿವಾದಕ್ಕೆ ಮಾರ್ಗವಿರುವದಿಲ್ಲ. ಇಲ್ಲದೆ ಹೋದಲ್ಲಿ ಓಟರುಗಳು ಖಂಡಿತವಾಗಿ ಅವರನ್ನು ವಿಚಾರಿಸಿಕೊಳ್ಳುತ್ತಾರೆ. ಪ್ರಕೃತವಲ್ಲಿ ನಡೆಯುತ್ತಿರುವ ನಾನಾ ದುರ್ವ್ಯಯಗಳನ್ನು ಕೌನ್ಸಿಲಿನಲ್ಲಿ ಇವರು ಕಟುವಾಗಿ ಟೀಕಿಸಿ ದೇಶದ ಉನ್ನತಿಗೆ ಸಂಬಂಧಿಸಿದ ಕಾರ್ಯಗಳನ್ನು ಕೈಕೊಳ್ಳುವದು ಶ್ರೇಯಸ್ಕರವೆಂದು ನನ್ನ ಅಭಿಪ್ರಾಯ. — ಟೀಕಾಚಾರ್ಯ.

ದಿ ವಿಜಯಾ ಬೇಂಕ್ ಲಿ.,

ಮ ಡಿ ಕೇ ರಿ (ಕೊಡಗು)

ಹೆಡ್ ಆಫೀಸ್: ಕದ್ರಿ, ಮಂಗಳೂರು (ದ. ಕ.)

ಏ ಲಂ ನೋ ಟೀ ಸು.

ಈ ಕೆಳಗೆ ಹೆಸರು ಕಾಣಿಸಿದವರು ಮೇಲ್ಕಂಡ ನಮ್ಮ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಸಾಲ ಪಡಕೊಂಡು, ಪಡೆದ ಸಾಲದ ಮೊಬಲಗನ್ನಾಗಲೀ, ಅವುಗಳ ಬಡ್ಡಿಯನ್ನಾಗಲೀ ವ್ಯಾದೆಗೆ ಸರಿಯಾಗಿ ಕೊಡದೆ ಇರುವದರಿಂದ ಸದ್ರಿಯವರಿಗೆ ರಿಜಿಸ್ಟ್ರಿ ನೋಟೀಸುಗಳನ್ನು ಕಳುಹಿಸಿರುವಲ್ಲಿ ಆ ಪೈಕಿ ಕೆಲವರು ನೋಟೀಸು ಪಡೆದು ವ ಬಾಕಿಯವರಿಗೆ ನೋಟೀಸು ಡೆಲಿವರಿ ಸಿಕ್ಕದೆ ಸದ್ರಿ ಸಾಲದ ಅಸಲು, ಬಡ್ಡಿ ವಗೈರೆ ಗಳನ್ನು ಇನ್ನೂ ಬಾಕಿ ಇಟ್ಟುಕೊಂಡಿರುವದರಿಂದ ಅವರು ಈಡಿಟ್ಟ ನಗಗಳನ್ನು ಇದೇ ತಾರೀಕು 26–12–'53ನೇ ಶನಿವಾರ ದಿನ ಹಗಲು 3 ಗಂಟೆ ಸಮಯಕ್ಕೆ ಸರಿಯಾಗಿ ಅಥವಾ ಬೇಂಕಿಗೆ ಯುಕ್ತ ಕಂಡು ಬರುವ ಯಾವುದೇ ಇನ್ನಿತರ ದಿನಗಳಲ್ಲಿ ಪುನಹ ನೋಟೀಸು ಕೊಡದೇನೇ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಏಲಂನಲ್ಲಿ ಸಿಕ್ಕಿದ ಐವೇಜು ಸಾಲದ ಮೊಬಲಗಿಗೆ ಕಡಿಮೆಯಾದಲ್ಲು ಸಂಬಂಧಪಟ್ಟವರಿಂದ ಬೇಂಕಿಗೆ ಬರತಕ್ಕ ಐವೇಜನ್ನು ವಸೂಲು ಮಾಡಲಾದೀತೆಂಬುದನ್ನು ಈ ಮೂಲಕ ತಿಳಿಸೋಣಾಗಿದೆ

ಸಾಲದ ತಾರೀಕು	ಜುವೆಲ್ ಲೋ. ನಂ	ಹೆಸರು ಮತ್ತು ವಿಳಾಸ	ತಾ. 30-9-53ಕ್ಕಾಗುವ ಬಡ್ಡಿ ಸಮೇತ ಸಾಲ
16—3—51	203/51	ಡಿ. ಎಸ್. ರಾಮಚಂದ್ರ ಶೆಟ್ಟಿ, ಶೂರಪ್ಪ ಶೆಟ್ಟರ ಮಗ, ಮರ್ಚೆಂಟ್, ಮಡಿಕೇರಿ	55—8-0
8—8—51	685/51	ಎಂ. ಗೋಪಾಲ ಆಚಾರಿ, ಮಂಜಯ್ಯ ಆಚಾರಿಯವರ ಮಗ, ಚಿನ್ನದ ಕೆಲಸಗಾರ, ಮಡಿಕೇರಿ	41—0-0
20—8—51	724/51	ಮಿಸೆಸ್ ಪಾರ್ವತಮ್ಮ, ಟಿ. ಮಹದೇವ ಶಾಸ್ತ್ರಿಯವರ ಹೆಂಡತಿ. ಮನೆ ನಂ. 91–ಮಹದೇವಪೇಟೆ, ಮಡಿಕೇರಿ	82—0-0
21—8—51	727/51	ಮಿಸೆಸ್ ಉಳುವಾರನ ಅಮ್ಮವ್ವ, ಚಂಗಪ್ಪನವರ ಹೆಂಡತಿ. ಕಾಂತೂರು ಗ್ರಾಮ, ಮೂರ್ನಾಡು.	250—8-0
27-11—51	1044/51	ಡಿ. ಯಸ್. ಹುಸೇನ್, ಶೇಕ್ ದಾವೂದ್‌ರವರ ಮಗ, ಸಿ. ಪಿ. ಡಬ್ಲ್ಯು. ಡಿ. ಆಫೀಸ್, ಮಡಿಕೇರಿ.	26—4-0
8—2—52	111/52	ಶೇಕ್ ಅಹಮ್ಮದ್, ಹಸನೆಯವರ ಮಗ, ಪೊದವಾಡ ಗ್ರಾಮ, ಬೆಟ್ಟಗೇರಿ.	33—2-0
5-11—52	806/52	ಎಸ್. ಟಿ. ನಾಣಯ್ಯ, ತಿಮ್ಮಪ್ಪಯ್ಯನವರ ಮಗ, ವಾಳ್ನೂರು ತೀಕತ್ತೂರು ಗ್ರಾಮ, ಸಿದ್ಧಾಪುರ.	32-13-0
21-11—53	842/52	ಡಬ್ಲ್ಯು. ಸಿ. ದೇವಯ್ಯ, ಚಂಗಪ್ಪನವರ ಮಗ, ಕಾಂತೂರು ಗ್ರಾಮ, ಮೂರ್ನಾಡು.	215-15-0
11—4—53	199'53	ಕೆ. ಪಿ. ಪ್ರೋಕರ್ ಬ್ಯಾರಿ, ಟಿಂಬರ್ ಮರ್ಚೆಂಟ್, ಮಡಿಕೇರಿ.	143—2-0

The Vijaya Bank Ltd.,
MERCARA.
ಮಡಿಕೇರಿ. 16-12-1953

M. SHIVAPPA ALVA.
Agent.

ನಗುಮಲ್ಲಿಗೆ

ಪ್ರಾಣಿ ಸಂಗ್ರಹಾಲಯವನ್ನು ನೋಡಲು ಕೆಲವರು ಹೊರಟಿದ್ದರು. ಅವರಲ್ಲಿ ಒಬ್ಬನು ಬೇರಿಡೆ ಹೋಗುವುದೊಳ್ಳೆಯದೆಂದು ವಾದಿಸುತಿದ್ದನು. ಕಾರಣ ಕೇಳಲು ಆತನು ಹೇಳಿದನು; "ನನ್ನ ಹಿರೀ ಮಗಳು ಕಂಗರು ನಡೆದಂತೆ ನಡೆಯುತ್ತಾಳೆ ಎರಡನೆ ಮಗಳು ಗಿಳಿಯಂತೆ ಮಾತಾಡುತ್ತಾಳೆ. ನನ್ನ ಮಗನು ಕತ್ತೆ ಕಿರುಚಿದಂತೆ ನಗುತ್ತಾನೆ. ನನ್ನ ಹೆಂಡತಿ ಹದ್ದಿನ ಹಾಗೆ ನನ್ನ ಚಲನವಲನಗಳನ್ನು ನಿರೀಕ್ಷಿಸುತ್ತಾಳೆ. ನನ್ನ ಅಡಿಗೆಯವಳು ಕರಡಿಯಂತಿದ್ದಾಳೆ. ನನ್ನ ಅತ್ತೆಯು ಗೊರಿಲ್ಲಾದಂತಿರುವಳು. ಆದ್ದರಿಂದ ಪ್ರಾಣಿ ಸಂಗ್ರಹಾಲಯಕ್ಕೆ ನಾನು ಬರಲಾರೆ"

* * *

ಆಕೆ ಜಡ್ಜನನ್ನು ಕುರಿತು–ಹೆಂಗಸರ ಉಡಿಗೆಯ ಆಧಾರಗಳ ಮೇಲೆ ಅವರ ಗುಣ ನಡತೆಗಳನ್ನು ಹೇಳುವ ನೀವು ಅಲ್ಲಿ ನಿಂತಿರುವ ನನ್ನ ತಂಗಿಯ ವಿಚಾರ ಏನು ಹೇಳುವಿರಿ ?

ಜಡ್ಜ–ಸಾಕಷ್ಟು ಆಧಾರಗಳಿಲ್ಲ!

* * *

ನೀರಿನಲ್ಲಿ ಮುಳುಗುತಿದ್ದ ತನ್ನ ಒಬ್ಬಳೇ ಮಗಳನ್ನು ರಕ್ಷಿಸಿದ ಯುವಕನನ್ನು ನೋಡಿ ತಂದೆಯು, "ಯುವಕಾ, ನಿನ್ನ ಧೈರ್ಯಪೂರಿತ ಸಾಹಸಕ್ಕೆ ನಾನು ಯೋಗ್ಯ ರೀತಿ ವಂದಿಸಲಾರೆ ನನ್ನ ಒಬ್ಬಳೇ ಮಗಳನ್ನು ರಕ್ಷಿಸಿ ನೀನು ನಿನ್ನ ಜೀವವನ್ನು ಗಂಡಾಂತರಕ್ಕೆ ಒಡ್ಡಿದೆ" ಎಂದು ಹೇಳಿದನು.

ಯುವಕ–ಹಾಗೇನೂ ಇಲ್ಲ. ನನಗೆ ಈಗಾಗಲೇ ಮದುವೆಯಾಗಿದೆ!

* * *

ಅಧ್ಯಾಪಕ–ನಿನ್ನ ಶರೀರದಲ್ಲಿ ಒಟ್ಟು ಎಷ್ಟು ಮೂಳೆಗಳಿವೆ ?

ಶಿಷ್ಯ–ಒಂಭೈನೂರು.

ಅಧ್ಯಾಪಕ–ಅದು ನನಗಿರುವದಕ್ಕಿಂಥಾ ಹೆಚ್ಚಾಯಿತು !

ಶಿಷ್ಯ–ಹೌದು ಸಾರ್, ಈ ಮಧ್ಯಾಹ್ನದ ಊಟಕ್ಕೆ ನಮಗೆ ಮೀನಿನ ಸಾರಾದ್ದರಿಂದ ಕೆಲವು ಹೆಚ್ಚಿನ ಮೂಳೆಗಳು ಒಳ ಸೇರಿವೆ.

* * *

ಅಜ್ಜಿಯು ತನ್ನ ಕಿರು ಮಗಳು ಯುವಕನೊಬ್ಬನ ಜೊತೆಯಲ್ಲಿ ಸಿನೆಮಾಕ್ಕೆ ಹೋದುದಕ್ಕಾಗಿ ಆಕೆಯನ್ನು ಬಯ್ಯುತ್ತಾ 'ನನ್ನ ಕಾಲದಲ್ಲಿ ತನ್ನ ಗಂಡನೊಡನೆ ಅಲ್ಲದೆ ಬೇರೆ ಯಾರೊಡನೆಯೂ ಯಾವ ಹೆಂಗಸೂ ಹೋಗುತ್ತಿರಲಿಲ್ಲ'.

ಕಿರುಮಗಳು–ಅಜ್ಜೀ, ಅದಕ್ಕೆ ಸಿಟ್ಟೇಕೆ? ಆತನು ನನ್ನ ಗಂಡಂದಿಯರಲ್ಲಿ ಒಬ್ಬನಾಗಿದ್ದಾನೆ!

* * *

ಆಗ ಮದುವೆಯಾದ ಯುವಕನು ಸಾಯಂಕಾಲ ಕಾಫಿ ಕುಡಿಯುತ್ತಾ ತನ್ನ ಹೆಂಡತಿಯು ತಯಾರಿಸಿದ ಕೇಕನ್ನು ಕುರಿತು, 'ನಿಜವಾಗಿಯೂ ಈ ಕೇಕು ಚೆನ್ನಾಗಿದೆಯೆಂದು ನಾನು ಹೇಳಬೇಕಾಗಿದೆ' ಎಂದು ಹೇಳಿದನು.

ಕೆಲವು ಸಮಯದ ನಂತರ ಆತನ ತಾಯಿಯು ಆತನನ್ನು ಕಂಡು, 'ಮಗೂ, ಆ ಕೇಕು ಚೆನ್ನಾಗಿದೆಯೆಂದು ನೀನು ಹೇಗೆ ಹೇಳಿದೆ ?'

ಮಗ–ನಾನು "ಚೆನ್ನಾಗಿದೆಯೆಂದು ಹೇಳಲಿಲ್ಲ. ಚೆನ್ನಾಗಿದೆಯೆಂದು ಹೇಳಬೇಕಾಗಿದೆ" ಎಂದು ಹೇಳಿದೆನಷ್ಟೆ !

* * *

ಆದಿತ್ಯವಾರ ಚರ್ಚಿನಲ್ಲಿ ಉಪದೇಶ ಮಾಡುತ್ತಿದ್ದ ಪಾದ್ರಿಯು ದಿನವಹಿ ತಪ್ಪುದಾರಿಯಲ್ಲಿ ವರ್ತಿಸುತ್ತಿದ್ದ ರಾಬರ್ಟನನ್ನು ಕುರಿತು ದುಃಖ ಧ್ವನಿಯುಕ್ತ ಹೇಳಿದನು. "ರಾಬರ್ಟ್ ನೀನು ಹೀಗೆ ವರ್ತಿಸಿದರೆ ನಿನ್ನನ್ನು ಸ್ವರ್ಗದಲ್ಲಿ ನನಗೆ ಕಾಣಲು ದೊರೆಯಲಾರದು."

ರಾಬರ್ಟ್:– ಅದು ನಿಜವಾಗಿಯೂ ದುಃಖಕರ. ಹಾಗಾದರೆ ನೀವು ಮಾಡಿದ ಮಹಾ ಅಪರಾಧವೇನು?

* * *

ಸುಂದರಿಯೊಬ್ಬಳು ಸಾಕ್ಷಿ ನುಡಿಯಲು ಕೋರ್ಟಿಗೆ ಬಂದಿದ್ದಳು. ಲಾಯರು ಆಕೆಯನ್ನು ಪ್ರಶ್ನೆ ಕೇಳುತ್ತಾ "ಆ ಸೋಮವಾರ ರಾತ್ರಿ ನೀನು ಎಲ್ಲಿದ್ದೆ?"

ಆಕೆ:– ಕಾರಿನಲ್ಲಿ.

ಲಾಯರು:– ಮಂಗಳವಾರ ರಾತ್ರಿ?

ಆಕೆ:– ಕಾರಿನಲ್ಲಿ.

ಲಾಯರು:– ನಾಳೆ ರಾತ್ರಿ ಎಲ್ಲಿರುವೆ?

ಅಷ್ಟರಲ್ಲಿ ಡಿಫೆನ್ಸ್ ಲಾಯರು ಮುಂದೆ ಬಂದು ಆ ಪ್ರಶ್ನೆ ಕೇಳಲು ಬಿಡಬಾರದೆಂದು ನ್ಯಾಯಾಧೀಶರಲ್ಲಿ ಹೇಳಿ ನಿಷೇಧಿಸಿದನು.

ನ್ಯಾಯಧೀಶರು ಶಾಂತ ಸ್ವರದಿಂದ:– ಏಕೆ ಕೇಳಬಾರದು?

ಡಿಫೆನ್ಸ್ ಲಾಯರು:– ನಾನು ಆಕೆಯನ್ನು ಈ ಮೊದಲೇ ಕೇಳಿರುವೆನು!

* * *

ಅಮೇರಿಕಾದವ ಸ್ಕಾಟ್‌ಲೇಂಡಿನವನನ್ನು ಕುರಿತು, "ಅಮೇರಿಕಾದ ಪ್ರಗತಿಯನ್ನು ಏನು ಹೇಳಲಿ. ಒಂದು ಹಸುವಿನ ಬಾಲವನ್ನು ಕತ್ತರಿಸಿ ಆ ಕತ್ತರಿಸಿದ ಭಾಗಕ್ಕೆ ಔಷಧಿಯೊಂದನ್ನು ಹಚ್ಚಿದರೆ ಒಂದು ವಾರದಲ್ಲಿ ಮತ್ತೊಂದು ಹೊಸ ಬಾಲ ಮೊಳೆಯುವದು ಅಂಥಾ ಔಷಧಿ ಅಲ್ಲಿದೆ" ಎಂದನು.

ಸ್ಕಾಟಲೇಂಡಿನವ:– ಅದೇನು ಮಹಾ, ಸ್ಕಾಟ್‌ಲೇಂಡಿನಲ್ಲಿ ಒಂದು ಹಸುವಿನ ಬಾಲವನ್ನು ಕತ್ತರಿಸಿ ಅಲ್ಲಿಯ ವಿಶೇಷ ಔಷಧಿಯೊಂದನ್ನು ಹಾಕಿದರೆ ಕತ್ತರಿಸಿದ ಬಾಲದಿಂದ ಬೇರೊಂದು ಹಸುವು ಹುಟ್ಟಿ ಬರುವದು!

ಕೊಡಗು

ತಾರೀಕು ೧೮—೧೨—೧೯೫೩ನೇ ಶುಕ್ರವಾರ

ಅಮೇರಿಕಾದ ರಾಜಕೀಯದ ಒಂದು ಮಾದರಿ.

ಅಮೇರಿಕಾದ ಉಪಾಧ್ಯಕ್ಷರಾದ ರಿಚರ್ಡ್ ನಿಕ್ಸನರವರು ತಮ್ಮ ಪತ್ನಿ ಸಮೇತ ಹಿಂದೂ ದೇಶಕ್ಕೆ ಬಂದು ಹಿಂದೂ ದೇಶದ ಹಲವು ಭಾಗಗಳನ್ನು ಸಂದರ್ಶಿಸಿ ಹಲವು ಮುಂದಾಳುಗಳ ಭೇಟಿ ಮಾಡಿದ್ದಲ್ಲದೆ ತಾವು ಮಾಡಿದ ಭಾಷಣಗಳಲ್ಲಿ ಭಾರತದ ಬಗ್ಗೆ ಅಮೇರಿಕಾದ ಧೋರಣೆಯನ್ನು ವ್ಯಕ್ತಪಡಿಸಿದರು. ಭಾರತದ ತಮ್ಮ ಈ ಸಂದರ್ಶನ ಸಮಯದಲ್ಲಿ ಅವರು ಹೇಳಿದ ಮಾತುಗಳಿವು. "ನಾವೂ ನೀವೂ ಒಂದೇ. ಭಾರತವೆಂದರೆ ಇಂದು ಜಾಗೃತಿಕ ಮಹತ್ವದ ರಾಷ್ಟ್ರವಾಗಿದೆ. ನೀವೂ ಕೂಡ ನಮ್ಮಂತೆಯೇ ಸ್ವತಂತ್ರರೂ, ಸುಖ ಶಾಂತಿಯಿಂದ ಜೀವಿಸುವವರೂ ಆಗಬೇಕೆಂದು ನಾವು ಹೃತ್ಪೂರ್ವಕವಾಗಿ ಇಚ್ಛಿಸುತ್ತೇವೆ. ಈ ಇಚ್ಛೆಗೆ ವಿರೋಧವಾದ ಯಾವುದೇ ಕಾರ್ಯವನ್ನು ಅಮೇರಿಕಾವು ಮಾಡುವುದಿಲ್ಲ." ಭಾರತದಲ್ಲಿದ್ದಾಗ ಪ್ರತಿ ಕಡೆಗಳಲ್ಲಿ ಹೀಗೆ ಹೇಳುತ್ತಿದ್ದ ನಿಕ್ಸನರು ಭಾರತದ ಸಂದರ್ಶನದ ನಂತರ ಪಾಕಿಸ್ಥಾನಕ್ಕೆ ಭೇಟಿ ಇತ್ತರು. ಅಲ್ಲಿ ಅವರು ಹೇಳಿದ ಮಾತುಗಳನ್ನು ಪರಿಶೀಲಿಸಿದರೆ ಅಮೇರಿಕಾ ರಾಜಕೀಯದ ಬಣ್ಣ ಬಯಲಾಗದಿರದು. ಅಲ್ಲಿ ಅವರು ಹೇಳಿದ ಮಾತುಗಳಿವು. 'ಪಾಕಿಸ್ಥಾನವನ್ನು ನಾಶಗೊಳಿಸಲು ಯತ್ನಿಸುತ್ತಿರುವ ಶಕ್ತಿಗಳಿಂದ ಪಾಕಿಸ್ಥಾನವನ್ನು ಅಮೇರಿಕಾವು ಕಾಪಾಡುವದು. ಪಾಕಿಸ್ಥಾನ ಮತ್ತು ಅಮೇರಿಕಾಗಳ ಧ್ಯೇಯ ಹಾಗೂ ಆದರ್ಶಗಳು ಒಂದೇ ಆಗಿವೆ. ಪಾಕಿಸ್ಥಾನದ ಜನರ ಬಗ್ಗೆ ನಮ್ಮ ಪ್ರೀತಿ ಆದರಗಳಿವೆ.'

ಹಿಂದೂದೇಶದಲ್ಲಿ ಒಂದು ವಿಧದಲ್ಲಿಯೂ, ಪಾಕಿಸ್ಥಾನದಲ್ಲಿ ಮತ್ತೊಂದು ವಿಧದಲ್ಲಿಯೂ ತಾಳಮೇಳವಿಲ್ಲದ ರೀತಿ ಮಾತಾಡಿದ ಈ ಅಭಿಪ್ರಾಯಗಳನ್ನು ತುಲನೆ ಮಾಡಿದರೆ ಅಮೇರಿಕಾದ ರಾಜಕೀಯದ ಅರಿವಾಗದಿರದು.

ಪಾಕಿಸ್ಥಾನವನ್ನು ನಾಶಮಾಡಲು ಹೊರಟಿರುವವರಾರು? ತನ್ನಷ್ಟಕ್ಕೆ ಶಾಂತಿ ರದೆ ವಿನಾಕಾರಣ ಜಗಳಕ್ಕೆ ಕಾಲುಕೆದರುತ್ತಿರುವ ಪಾಕಿಸ್ಥಾನದ ನೀತಿಗೆ ಅಮೇರಿಕಾದವರ ಈ ರೀತಿಯ ಹೇಳಿಕೆಗಳೇ ಬೆಂಬಲವೆಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು. ಪಾಕಿಸ್ಥಾನದ ನೀತಿಗೆ ಅಮೇರಿಕಾವು ಸಹಾಯ ಮಾಡುವುದೆಂದೂ ಪಾಕಿಸ್ಥಾನದ ಮತ್ತು ಅಮೇರಿಕಾದ ನೀತಿಗಳು ಒಂದೇಯೆಂದೂ ಹೇಳುವದಾದರೆ ಭಾರತವು ಎಚ್ಚರಿಕೆ ವಹಿಸಿ ವರ್ತಿಸಬೇಕಾದ್ದು ಅನಿವಾರ್ಯವಾಗಿದೆ.

ಅಮೇರಿಕಾದ ಈ ರೀತಿಯ ರಾಜಕೀಯದಿಂದ ಅನೇಕ ಸಂಶಯಗಳು ತಲೆದೋರಲು ಕಾರಣವಿದೆ. ಉಗ್ರಸಾಮ್ಯವಾದವನ್ನು ಬಗ್ಗು ಬಡಿಯಲಿಕ್ಕಾಗಿ ಪಾಕಿಸ್ಥಾನದ ಸ್ನೇಹಗಳಿಸಿ ಅಲ್ಲಿ ಸೈನಿಕ ಠಾಣ್ಯಗಳನ್ನು ಪಡೆಯಲು ಅಮೇರಿಕಾವು ಯತ್ನಿಸುತ್ತಿದೆಯೆಂದು ಅವರು ಪ್ರಚಾರ ಮಾಡಿದರೂ ಪಾಕಿಸ್ಥಾನದಲ್ಲಿ ಕಾಲೂರಲು ಅನುದೊರೆತ ಅಮೇರಿಕಾವು ಏಷ್ಯಾದ ರಾಷ್ಟ್ರಗಳಲ್ಲಿ ಪರಸ್ಪರ ಘರ್ಷಣೆ ತಂದು ತನ್ನ ಬೇಳೆ ಬೇಯಿಸಲು ಯತ್ನಿಸದಿರದೆಂಬುದು ಮೇಲೆ ಕೊಟ್ಟ ನಿಕ್ಸನರ ಎರಡು ಅಭಿಪ್ರಾಯಗಳಿಂದಲೇ ಊಹಿಸಬಹುದಾಗಿದೆ.

ಪಾಕಿಸ್ಥಾನವು ಈಗ ಅಡ್ಡದಾರಿಯ ಭ್ರಮೆಯಲ್ಲಿರುವಂತೆ ತೋರುತ್ತಿದೆ. ಆದಕ್ಕಾಗಿಯೇ ಅದು ಅಮೇರಿಕಾದೊಡನೆ ಸೈನಿಕ ಒಪ್ಪಂದಕ್ಕೂ ಅವರಿಗೆ ಸ್ವಾಗತ ನೀಡಲಿಕ್ಕೂ ತಯಾರಾದಂತೆ ತೋರುತ್ತದೆ. ಆದರೆ ಈ ಭ್ರಮನಿರಸನಕ್ಕೆ ಬಹುದಿನ ಬೇಕಿಲ್ಲ. ಏಕೆಂದರೆ ಈಗಾಗಲೇ ಪಾಕಿಸ್ಥಾನದಲ್ಲಿ ಕೆಲವರು ಆ ನೀತಿಗೆ ವಿರೋಧ ಮಾಡುತಿದ್ದಾರೆ. ಮತ್ತೆ ಸುತ್ತು ಮುತ್ತಲಿನ ಅಫಘಾನಿಸ್ಥಾನ ಮುತ್ತಿತರ ರಾಷ್ಟ್ರಗಳೂ ಎಚ್ಚರಿಸತೊಡಗಿವೆ.

ಇಲ್ಲದ ಮಬ್ಬಿಗೆ ಬಿದ್ದ ಪಾಕಿಸ್ಥಾನವು ಅಮೇರಿಕಾದ ಸಖ್ಯದಿಂದ ಹೆಚ್ಚೇನೂ ಸಾಧಿಸದೆಂದೂ ಏಷ್ಯಾ ರಾಷ್ಟ್ರಗಳ ಐಕ್ಯತೆಯಲ್ಲಿಯೇ ಶಾಂತಿ, ಅಭಿವೃದ್ಧಿಗಳ ಮಾರ್ಗವೆಂದೂ ಅರಿಯಲು ಬಹು ದಿನ ಹಿಡಿಯಲಾರದು. ಆಗ ಅಮೇರಿಕಾವು ಅನ್ಯಾಯ ಮಾರ್ಗದಿಂದ ಮಾಡಿದ ಯತ್ನ ಮತ್ತು ತನ್ನ ದುಡ್ಡು ಸದ್ದಿಲ್ಲದೆ ಹೋಯಿತೆಂಬುದನ್ನು ಅರಿಯುವ ದಿನ ಬರುವದು.

ಪಾಕಿಸ್ಥಾನವು ಎಚ್ಚರಿಕೆ ವಹಿಸಬೇಕು. ರಷ್ಯಾ, ಅಮೇರಿಕಾಗಳೆಂಬ ಕಲ್ಲುಗುಂಡುಗಳ ಮಧ್ಯೆ ಮೆಣಸಿನ ಕಾಯಿಯಂತೆ ಸೇರಿಕೊಳ್ಳಲೆತ್ನಿಸಿದರೆ ಅದು ಹುಡಿಯಾಗದೆ ಉಳಿಯದೆಂಬುದನ್ನು ಅಮೇರಿಕಾದ ಅಸ್ಥಿರ ರಾಜನೀತಿಯಿಂದ ತಿಳಿಯಬೇಕಾಗಿದೆ.

ವರ್ತಮಾನ

ತಾರೀಕು ೬ ರಲ್ಲಿ ಪೊನ್ನಂಪೇಟೆ ಹೈಸ್ಕೂಲಿನ ಎನ್. ಸಿ. ಸಿ. ದಿನಾಚರಣೆಯು ಕೊಡಗಿನ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಎನ್. ಆರ್. ಗೋಪಾಲಕೃಷ್ಣರವರ ಅಧ್ಯಕ್ಷತೆಯಲ್ಲಿ ನಡೆಯಿತು. ಅದೇ ಸಾಯಂಕಾಲ ಬಾಲಕರು 'ಬಹದ್ದೂರ್ ಗಂಡು' ಎಂಬ ನಾಟಕ ಮಾಡಿದರು.

ಮಾನವನ ಹಕ್ಕುಗಳ ದಿನಾಚರಣೆಯು ತಾ. ೧೧ ರಲ್ಲಿ ನಾಪೋಕ್ಲು ಹೈಸ್ಕೂಲಿನಲ್ಲಿ ಶ್ರೀ. ಡಿ. ಎನ್. ದೇವಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀಗಳಾದ ಕೆ. ಬಿ ಐಯ್ಯಪ್ಪ, ಪಿ. ಆರ್. ಶಂಕರ್, ಬಿ. ಸಿ. ಐಯ್ಯಪ್ಪ, ಕೆ. ಟಿ. ಮಂದಣ್ಣ ಮೊದಲಾದವರು ಭಾಷಣ ಮಾಡಿದರು.

ಕ್ರಿಸ್‌ಮಸ್ ಹಬ್ಬದ ನಿಮಿತ್ತ ಸಾರಾಯಿ ಕೂಪನ್‌ದಾರರಿಗೆ ಒಂದು ಹೆಚ್ಚಿನ ಕುಪ್ಪಿ ಸಾರಾಯಿ ಕೊಡಲಾಗುವದೆಂದೂ, ಹಾಗೆ ಹೆಚ್ಚಿನ ಕುಪ್ಪಿ ಬೇಕಿರುವವರು ಒಂದಾಣೆ ಸ್ಟಾಂಪಿಟ್ಟು ಬರೆದುಕೊಳ್ಳಬೇಕೆಂದೂ ತಿಳಿಸುತ್ತಾರೆ.

'ಮಾನವನ ಹಕ್ಕು ಬಾಧ್ಯತೆ' ದಿನಾಚರಣೆಯು ವೀರಾಜಪೇಟೆ ಹೈಸ್ಕೂಲಿನಲ್ಲಿ ತಾ. ೧೦ ರಲ್ಲಿ ನಡೆಯಿತು. ಶ್ರೀಗಳಾದ ಪಿ. ಎನ್. ಸುಬ್ಬಯ್ಯ ಬಿ. ಎ. ಅಚ್ಚಯ್ಯ ಮೊದಲಾದವರು ಭಾಷಣ ಮಾಡಿದರು.

ತಿದ್ದುಪಡಿ.

ತಾ. ೧೨ರ ಕೊಡಗು ಪತ್ರಿಕೆಯಲ್ಲಿ ಟೀಕಾಚಾರ್ಯರ ಟೀಕೆ ಟಿಪ್ಪಣಿಯಲ್ಲಿ ಭಾಗಮಂಡಲದ ಹತ್ತಿರದ ಒಂದು ಕಾಲು ಸೇತುವೆಯ ವಿಚಾರದಲ್ಲಿ ಬರೆದಿದ್ದ ಟೀಕೆಯ ಬಗ್ಗೆ ಆ ಕಾಲು ಸೇತುವೆಯನ್ನು ಸಾಮೂಹಿಕ ವಿಕಾಸ ಯೋಜನೆಯ ಆಶ್ರಯದಲ್ಲಿ ಕಟ್ಟಿಸಿದಲ್ಲವೆಂದು ಪ್ರಾಜೆಕ್ಟ್ ಎಕ್ಸಿಕ್ಯೂಟಿವ್ ಆಫೀಸರು ತಿಳಿಸುತ್ತಾರೆ [ಸಂ.

ತಾರೀಕು ೧೧ ರಲ್ಲಿ ವೀರಾಜಪೇಟೆ ಬಾಡಗ ಸರಕಾರಿ ಪ್ರಾಥಮಿಕ ಶಾಲಾ ಆವರಣದಲ್ಲಿ ಶ್ರೀ. ಜೇಂದಂಡ ಸೋಮಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆದು ಶಾಲಾ ಕಟ್ಟಡದ ಬಡಾವಣೆ ಬಗ್ಗೆ ಚರ್ಚೆ ನಡೆದು ಒಂದು ಹೊಸ ಕಟ್ಟಡ ಕಟ್ಟಿಸುವ ಬಗ್ಗೆ ಸರಕಾರಕ್ಕೆ ಮನವಿ ಮಾಡಿಕೊಳ್ಳಲು ತೀರ್ಮಾನಿಲಾಯಿತು.

'ಮಾನವನ ಹಕ್ಕು ಭಾಧ್ಯತೆ' ದಿನಾಚರಣೆಯು ತಾ ೧೧ ರಲ್ಲಿ ಪೊನ್ನಂಪೇಟೆ ಹೈಸ್ಕೂಲಿನಲ್ಲಿ ಶ್ರೀ. ಎಂ. ಎ. ಚಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆದು ಶ್ರೀಗಳಾದ ಎ. ಕೃಷ್ಣಮೂರ್ತಿ, ಕೆ. ಕೆ. ವೀರಪ್ಪ ಮೊದಲಾದವರು ಭಾಷಣ ಮಾಡಿದರು.

ಜಬ್ಬಲ್ ಪುರದಲ್ಲಿರುವ ಕೊಡವರು ನವೆಂಬರ್ ತಾ. ೬ ರಲ್ಲಿ ಶ್ರೀ. ಕೊಂಗೆಟ್ಟಿರ ಚಿಣ್ಣಪ್ಪನವರ ಮನೆಯಲ್ಲಿ ಹುತ್ತರಿ ಹಬ್ಬವನ್ನು ಆಚರಿಸಿದರು. ಈ ವರ್ಷ ಅಲ್ಲಿ ಕೊಡವ ಸಮಾಜವನ್ನು ಸ್ಥಾಪಿಸಿ ಶ್ರೀ. ಕೊಂಗೆಟ್ಟಿರ ಚಿಣ್ಣಪ್ಪನವರನ್ನು ಅಧ್ಯಕ್ಷರಾಗಿಯೂ ಶ್ರೀ. ಪರದಂಡ ಚಂಗಪ್ಪನವರನ್ನು ಸಕ್ರೆಟರಿಯಾಗಿಯೂ ಆರಿಸಲಾಯಿತು.

ಬರುವ ಜನವರಿ ೨೬ ರಲ್ಲಿ ಡೆಲ್ಲಿಯಲ್ಲಿ ನಡೆಯುವ ರಿಪಬ್ಲಿಕ್ ದಿನಾಚರಣೆಯಲ್ಲಿ ಭಾಗವಹಿಸಲು ಕೊಡಗಿನ ಎನ್. ಸಿ. ಸಿ. ದಳದ ಶ್ರೀ ಪಿ ಸಿ. ಮೊಣ್ಣಪ್ಪನವರನ್ನು ಆರಿಸಿರುವರೆಂದು ತಿಳಿಯಲಾಗಿದೆ.

ವೀರಾಜಪೇಟೆಯಲ್ಲಿರುವ ಮೂಲಶಿಕ್ಷಣ ತರಬೇತು ಶಾಲೆಯ ವಾರ್ಷಿಕೋತ್ಸವವು ತಾ. ೫ ರಲ್ಲಿ ಶ್ರೀ. ಬಿ. ಎಸ್. ಕುಶಾಲಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ. ಎಸ್. ಎಸ್. ರಾಮಮೂರ್ತಿಯವರು ವಿವಿಧ ವಸ್ತು ಮತ್ತು ಬೋಧನೋಪಕರಣಗಳ ಪ್ರದರ್ಶನವನ್ನು ತೆರೆದರು. ಶ್ರೀ ಬಿ. ಸೂರ್ಯನಾರಾಯಣರಾಯರು ಭಾಷಣ ಮಾಡಿದರು. ಶಾಲಾ ಸಮಾಜದ ಸಾಂಸ್ಕೃತಿಕ ಮಂತ್ರಿ ಶ್ರೀ. ಬಿ. ಕೆ. ನಾರಾಯಣರಾಯರು ವಂದನಾರ್ಪಣೆ ಮಾಡಿದರು. ತರಬೇತು ಉಪಾಧ್ಯಾಯಿನಿಯರು 'ಪರಿವರ್ತನೆ' ಎಂಬ ನಾಟಕವನ್ನೂ, ಉಪಾಧ್ಯಾಯರು 'ವಂಚಕ' ಎಂಬ ನಾಟಕವನ್ನೂ ಅಭಿನಯಿಸಿದರು. ಶ್ರೀ. ಜೆ. ಗಣೇಶರಾಯರು ಬಹುಮಾನ ವಿತರಣೆ ಮಾಡಿದರು.

ಅಖಿಲ ಭಾರತ ಗ್ರಾಮೋದ್ಯೋಗ ಸಮಿತಿಯ ಜೇನು ವ್ಯವಸಾಯ ಶಾಖೆಯ ಸಂಚಾಲಕರಾದ ಶ್ರೀ ಕೆ. ಕಲ್ಯಾಣಪುರರವರು ಹಿಂದಿನ ವಾರ ಕೊಡಗಿಗೆ ಬಂದು ಮೂರು ನಾಲ್ಕು ದಿನಗಳ ವರೆಗೆ ಭಾಗಮಂಡಲದ ಜೇನು ವ್ಯವಸಾಯ ಕ್ಷೇತ್ರ, ವೀರಾಜಪೇಟೆಯ ಜೇನುಮೇಣ ಸಂಘ ಮೊದಲಾದುವನ್ನು ಪರಿಶೀಲಿಸಿ ಮೇಲಿನ ಸಮಿತಿಯಿಂದ ಕೊಡಲಾಗುವ ಧನ ಸಹಾಯದಿಂದ ಕೊಡಗಿನಲ್ಲಿ ಜೇನು ಸಾಕುವದು ಮತ್ತು ಮಾರಾಟದ ಅಭಿವೃದ್ಧಿಯ ಬಗ್ಗೆ ಸಹಕಾರ ಸಂಘಗಳ ಡೆಪ್ಯೂಟಿ ರಿಜಿಸ್ಟ್ರಾರು, ವ್ಯವಸಾಯ ಅಧಿಕಾರಿ ಮತ್ತು ಜೇನುಮೇಣ ಸಂಘದ ಪ್ರತಿನಿಧಿಗಳೊಡನೆ ಚರ್ಚಿಸಿದರೆಂದು ತಿಳಿಯಬರುತ್ತದೆ.

ನಾಂಗಾಲ ಗ್ರಾಮದ ಬೊಪ್ಪಂಡ ಲೇಟ್ ನಂಜಪ್ಪನವರ ಪತ್ನಿಯವರು ತಮ್ಮ ೯೦ನೇ ವಯಸ್ಸಿನಲ್ಲಿ ತಾ. ೧೫ ರಲ್ಲಿ ಶಿವಾಧೀನರಾದರು.

ಕೊಡಗು ಸರಕಾರದ ಚೀಫ್ ಸೆಕ್ರೆಟರಿಯವರಾದ ಶ್ರೀ ರಾಮಚಂದ್ರರವರು ಈ ತಾ. ೧೦ರ ಬೆಳಿಗ್ಗೆ ತಮ್ಮ ಕಚೇರಿಯಲ್ಲಿ ೭ರಿಂದ ೯ ಗಂಟೆಯ ವರೆಗೆ ಕೆಲಸ ಮಾಡಿ ನಂತರ ಕಾರಿನಲ್ಲಿ ಯಾರಿಗೂ ಹೇಳದೆ ಮಡಿಕೇರಿಯಿಂದ ಹೊರಟು ಹೋದರೆಂದೂ, ವಿಚಾರಿಸಿದ ನಂತರ ಬೆಂಗಳೂರಿನಲ್ಲಿದ್ದಾರೆಂದು ತಿಳಿದು ಬಂತೆಂದೂ ಮೂರನೆ ದಿನ ವಾಪಾಸು ಮಡಿಕೇರಿಗೆ ಬಂದರೆಂದೂ ವರ್ತಮಾನ.

ಈ ವರ್ಷ ಕೊಡಗಿನ ಉಳುವರಿ ಬತ್ತದ ಅಕ್ಕಿಯನ್ನು ಮೈಸೂರಿನವರಿಗೆ ಬೇಡವಾದ್ದರಿಂದ ಮಲಬಾರಿಗೆ ಕಳುಹಿಸುವಂತೆ ಏರ್ಪಾಡಾಗಿದೆಯೆಂದು ವರ್ತಮಾನ.

ಶ್ರೀ ಕಟ್ಟೀರ ಕೆ. ಉತ್ತಯ್ಯನವರು ಮದ್ರಾಸು ವಿಶ್ವವಿದ್ಯಾಲಯದ ಇಲೆಕ್ಟ್ರಿಕ್ ಇಂಜಿನಿಯರಿಂಗ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು.

ಅಮೇರಿಕಾದ ವಿಶ್ವವಿದ್ಯಾಲಯದ ಫೆಲೋಶಿಪ್ ದೊರೆತ ಶ್ರೀ. ಕೊಂಗಂಡ ತಮ್ಮು ಅಚ್ಚಯ್ಯನವರು ಹದಿನೈದು ತಿಂಗಳುಗಳ ತರಬೇತಿಗಾಗಿ ತಾ. ೨೬-೧೧-೫೩ರಲ್ಲಿ ಅಮೇರಿಕಾಕ್ಕೆ ಹೋಗಿರುವರು.

ತಾ. ೪-೧೨-೫೩ ರಲ್ಲಿ ಪೂರ್ವಾಹ್ನ ೧೧ ಗಂಟೆಗೆ ಹುದಿಕೇರಿಯಲ್ಲಿ ಶ್ರೀಮಂಗಲ ನಾಡು ಸಹಕಾರ ಕೂಟದ ಸಂಯೋಜಿತ ಸಂಘಗಳ ಕಾರ್ಯಕರ್ತರ ಮತ್ತು ಗುಮಾಸ್ತರುಗಳ ಪರಿಷತ್ತು ಕೊಡಗು ಸಹಕಾರ ಸಂಘಗಳ ಡೆಪ್ಯೂಟಿ ರಿಜಿಸ್ಟ್ರರವರಾದ ಶ್ರೀ ಜಿ. ಗಿರಿಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮಾನವನ ಹಕ್ಕು ಭಾಧ್ಯತೆಯ ದಿನಾಚರಣೆಯು ಮಡಿಕೇರಿ ಹೈಸ್ಕೂಲಿನಲ್ಲಿ ಶ್ರೀ. ಪಿ ಎ. ಪೂವಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ವಿ. ಎಸ್. ರಾಮಕೃಷ್ಣ, ಎಂ ಪಿ. ಮಂಜುನಾಥ ಮೊದಲಾದವರು ಭಾಷಣ ಮಾಡಿದರು.

ಮಾನವನ ಹಕ್ಕುಬಾಧ್ಯತೆಗಳ ದಿನಾಚರಣೆಯು ಸೋಮವಾರಪೇಟೆ ಹೈಸ್ಕೂಲಿನಲ್ಲಿ ನಡೆಯಿತು. ಶ್ರೀ. ಕೆ. ಶ್ರೀನಿವಾಸನ್ ರವರು ದಿನದ ಮಹತ್ವವನ್ನು ವಿವರಿಸಿದರು.

ಅಖಿಲ ಕೊಡಗು ಉಪಾಧ್ಯಾಯರ ಸಮ್ಮೇಳನವು ಮೈಸೂರು ಜಿಲ್ಲಾ ಬೋರ್ಡು ಪ್ರೆಸಿಡೆಂಟರಾದ ಶ್ರೀ. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಪೊನ್ನಂಪೇಟೆಯಲ್ಲಿ ತಾ. ೨೦ರಲ್ಲಿ ನಡೆಯುವುದು.

ಬೊಂಬಾಯಿ ಕೊಡವ ಸಂಘದವರು ಡಿಸೆಂಬರ್ ೬ ನೇ ತಾರೀಕಿನಲ್ಲಿ ಹುತ್ತರಿ ಹಬ್ಬವನ್ನು ಜೋಗೇಶ್ವರದಲ್ಲಿರುವ ಇಸ್ಮಾಯಿಲ್ ಯೂಸೂಫ್ ಕಾಲೇಜಿನಲ್ಲಿ ಆಚರಿಸಿದರು. ಆಟೋಟಗಳ ಸ್ಪರ್ಧೆಯಲ್ಲಿ ಶ್ರೀ. ಕೂತಂಡ ಕಾಳಯ್ಯನವರು ಚೇಂಪಿಯನ್ ಶಿಪ್ ಕಪ್ ಪಡೆದರು. ಶ್ರೀಮತಿ ಎ. ಕೆ. ಎಸ್. ರಾವ್ ರವರು ಬಹುಮಾನ ವಿತರಣೆ ಮಾಡಿದರು.

ಮೈಸೂರು ನಗರ ಕೊಡಗು ಸಂಘದವರು ತಾ. ೬ರಲ್ಲಿ ಹುತ್ತರಿ ಹಬ್ಬವನ್ನು ಮೋಡರ್ನ್ ಕೆಫೆ ಹಾಲ್‌ನಲ್ಲಿ ಆಚರಿಸಿದರು ಸುಮಾರು ೨೦೦ ಜನರು ಹಾಜರಿದ್ದರು. ಆ ದಿನವೇ ಸಂಘದ ವಾರ್ಷಿಕ ಸಭೆ ನಡೆದು ಶ್ರೀಗಳಾದ ಎಂ. ಸಿ. ತಿಪ್ಪಯ್ಯ (ಪ್ರೆಸಿಡೆಂಟ್) ಬಿ. ಎ. ಕಾವೇರಪ್ಪ (ವೈಸ್ ಪ್ರೆಸಿಡೆಂಟ) ಪಿ. ಕೆ. ಭೀಮಯ್ಯ (ಕಾರ್ಯದರ್ಶಿ) ಎಂ. ಪಿ. ಸುಬ್ಬಯ್ಯ (ಖಜಾಂಚಿ) ಮತ್ತು ಬಿ. ಡಿ. ಐಯ್ಯಂಣ, ಸಿ. ಎ. ಕುಶಾಲಪ್ಪ, ಬಿ. ಜೆ. ನಾಣೈಯ್ಯ, ಮತ್ತು ಕೆ. ಬಿ. ಬಿನ್ನಯ್ಯನವರುಗಳನ್ನು ಕಾರ್ಯಕಾರಿ ಮಂಡಳಿಯಾಗಿ ಆರಿಸಲಾಯಿತು.

ತಾ. ೨೬-೧೧-೫೩ರಲ್ಲಿ ಬಿ. ಎಂ. ಮರಿಬಸಯ್ಯನವರ ಅಧ್ಯಕ್ಷತೆಯಲ್ಲಿ ಸೋಮವಾರಪೇಟೆನಾಡು ಮಸಗೋಡು ಗ್ರಾಮದಲ್ಲಿ ರಾತ್ರಿ ಪಾಠ ಶಾಲೆಯನ್ನು ತೆರೆಯಲಾಯ್ತು. ಶ್ರೀ ಬಿ. ಸಿ. ಸಿದ್ದಲಿಂಗಪ್ಪನವರು ಭಾಷಣ ಮಾಡಿದರು. ೩೩ ಮಂದಿ ವಯಸ್ಕರು ಕಲಿಯುತ್ತಿದ್ದಾರೆ.

ಪೂನಾದಲ್ಲಿರುವ ಕೊಡಗರು ತಾರೀಕು ೬ ರಲ್ಲಿ ಹುತ್ತರಿ ಹಬ್ಬವನ್ನು ಶ್ರೀ. ಮುಕ್ಕಾಟಿರ ಮುತ್ತಣ್ಣನವರ ಭವನದಲ್ಲಿ ಆಚರಿಸಿದರು. ಪೂನಾದಲ್ಲಿರುವ ೬೦ ಕೊಡಗರು ಬಂದಿದ್ದರು. ಕೊಡಗು ಸಂಘದ ವಾರ್ಷಿಕ ಸಭೆಯು ಆ ದಿನ ನಡೆದು ಶ್ರೀ. ಪಾರ್ವಂಗಡ ಬೋಪಯ್ಯನವರನ್ನು ಸಂಘದ ಪ್ರೆಸಿಡೆಂಟರಾಗಿಯೂ, ಕೇಚಿಯಂಡ ದೇವಯ್ಯನವರನ್ನು ಸೆಕ್ರೆಟರಿಯಾಗಿಯೂ, ಶ್ರೀ. ಮಾಚಿಮಾಡ ಐಯ್ಯಣ್ಣನವರನ್ನು ಖಜಾಂಚಿಯಾಗಿಯೂ ಆರಿಸಲಾಯಿತು.

ಹರಿಹರ ವಯಸ್ಕರ ಶಾಲೆಯ ಉತ್ಸವವು ತಾ ೧೨ರಲ್ಲಿ ಶ್ರೀ. ಬಿ. ಸೂರ್ಯನಾರಾಯಣರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಆಟೋಟಗಳ ಸ್ಪರ್ಧೆಯ ನಂತರ ಶ್ರೀ. ಡಿ. ಸುಬ್ಬರಾಯರು ಭಾರತ ವಾಚನ ಮಾಡಿದರು. ವಯಸ್ಕ ವಿದ್ಯಾರ್ಥಿಗಳು 'ಉಡುಪಿನ ಪ್ರಪಂಚ'ವೆಂಬ ನಾಟಕ ಮಾಡಿದರು.

ಮೈಸೂರಿನ ಹೊಸ ಹುದ್ದೆಯನ್ನು ಶ್ರೀ ಪಿ. ಎಂ. ಚಂಗಪ್ಪನವರು ವಹಿಸಿಕೊಳ್ಳಲಿಲ್ಲ

ತಾ. ೫-೮-೫೩ರಲ್ಲಿ ತನ್ನನ್ನು ಮೈಸೂರಿನಲ್ಲಿ ಅಸಿಸ್ಟೆಂಟ್ ರಿಜಿಸ್ಟ್ರಾರಾಗಿ ನೇಮಿಸಿದಾಗ ಅದು ತನ್ನ ಇಷ್ಟರ ವರೆಗಿನ ಹುದ್ದೆಯ ಸ್ಥಾನಮಾನಗಳಿಗೆ ಸರಿಯಾದದ್ದಲ್ಲವೆಂದು ಸದರಿ ಹುದ್ದೆಯ ಚಾರ್ಜು ತೆಗೆದುಕೊಳ್ಳದೆ, ತಾ. ೨೨-೮-೫೩ರ ಗೆಜೆಟ್ ನೋಟಿಫಿಕೇಶನ್ ಮೇರೆ ತಾ. ೧-೮-೫೩ರಿಂದ ಕೊಡಗಿನ ಸಹಕಾರಿ ಸಂಘಗಳ ಖಾಯಂ ಹುದ್ದೆಯನ್ನು ವಜಾ ಮಾಡಿರುವದರಿಂದಲೂ, ಅವರ ಅನಾರೋಗ್ಯದ ದೆಸೆಯಿಂದಲೂ, ಶ್ರೀ ಪಿ. ಎಂ ಚಂಗಪ್ಪನವರು ಸದರಿ ತಾರೀಕಿನಿಂದ ತನ್ನನ್ನು ಹುದ್ದೆಯಿಂದ ನಿವೃತ್ತಿಗೊಳಿಸಬೇಕೆಂದು ಸುಮಾರು ಮೂರು ತಿಂಗಳ ಮೊದಲೇ ಕೊಡಗು ಸರಕಾರಕ್ಕೆ ಬರೆದಿದ್ದರೂ ಇಷ್ಟರ ವರೆಗೆ ಯಾವುದೊಂದು ಜವಾಬು ದೊರೆಯಲಿಲ್ಲವೆಂದೂ, ಕಳೆದ ವಾರ ಅವರನ್ನು ಮೈಸೂರು ಸಹಕಾರ ಎಪೆಕ್ಸ್ ಬ್ಯಾಂಕಿನ ಕಾರ್ಯದರ್ಶಿಯಾಗಿ ನೇಮಿಸಲಾಗುವದೆಂದು ಅವರಿಗೆ ಹುಕುಂ ಬಂದಿತ್ತೆಂದೂ, ಆದರೆ ಅವರಿಗೆ ಈ ಮೊದಲು ಕೊಡಲೆತ್ನಿಸಿದ ಹುದ್ದೆಗೂ ಈಗ ಕೊಡಲ್ಪಡುವ ಹುದ್ದೆಗೂ ಹೆಸರಿನಲ್ಲಿ ಮಾತ್ರ ಬದಲಾವಣೆಯಲ್ಲದೆ ವೇತನ ಮತ್ತು ಸ್ಥಾನಮಾನಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲದ್ದರಿಂದಲೂ ಮತ್ತು ತನ್ನ ಆರೋಗ್ಯವು ಇನ್ನೂ ಉತ್ತಮಗೊಳ್ಳದ್ದರಿಂದಲೂ ತಾನು ಈ ಮೊದಲು ಬರೆದಿದ್ದಂತೆಯೇ ಯಾವದೊಂದೂ ಹುದ್ದೆಯನ್ನು ವಹಿಸಿಕೊಳ್ಳುವುದಿಲ್ಲವೆಂದೂ, ತನ್ನನ್ನು ಬೇಗನೆ ರಿಟಯರ್ ಮಾಡಿಸಬೇಕೆಂದೂ ಪುನಹ ಅವರು ಕೊಡಗು ಸರಕಾರಕ್ಕೆ ಬರೆದಿರುವರಾಗಿ ತಿಳಿಯಬರುತ್ತದೆ. ಅಲ್ಲದೆ ಅವರಿಗೆ ಮೈಸೂರು ಸರಕಾರದ ಕಡಿಮೆ ದರದ ತುಟ್ಟಿಭತ್ಯ ಕೊಡಲಾಗುವುದೆಂದೂ ಮತ್ತು ಅವರ ಸರ್ವಿಸ್ ಮತ್ತು ಸ್ಥಾನದ ಮೇರೆ ಮೈಸೂರು ಸಹಕಾರ ಇಲಾಖೆಯ ಉದ್ಯೋಗಸ್ಥರ ಮೇಲೆ ಅವರಿಗೆ ಪ್ರಮೋಶನ್ ದೊರೆಯುವ ಅವಕಾಶವಿಲ್ಲವೆಂದೂ ಈಗಿನ ಹುಕುಮಿನಲ್ಲಿ ತೋರಿಸಲಾಗಿದೆಯಂತೆ.

ವಿಮಾನ ಅಪಘಾತ.

ತಾ. ೧೨ರ ಮುಂಜಾನೆ ೩-೨೦ಕ್ಕೆ ನಾಗಪುರದ ಸೋನೆಗಾಂವ್ ವಿಮಾನ ನಿಲ್ದಾಣದಿಂದ ಮದರಾಸಿನತ್ತ ಹೊರಟ ಇಂಡಿಯನ್ ಏರ್‌ಲೈನ್ ಪೆಸೆಂಜರ್ ವಿಮಾನವು ಹೊರಟ ಐದು ನಿಮಿಷಗಳಲ್ಲೇ ಅಪಘಡಕ್ಕೆ ತುತ್ತಾಗಿ, ಅದರಲ್ಲಿದ್ದ ಎಲ್ಲ ೧೦ ಪ್ರಯಾಣಿಕರ ಮತ್ತು ನಾಲ್ವರಲ್ಲಿ ಮೂರು ಮಂದಿ ವೈಮಾನಿಕ ಮೃತ್ಯುವಿಗೆ ಕಾರಣವಾಯಿತು. ವಿಮಾನ ನಡೆಸುತ್ತಿದ್ದ ಕೇಪ್ಟನ್ ಕಾರ್ಟನರರು ಮಾತ್ರ ಮೃತ್ಯು ಮುಖದಿಂದ ಪಾರಾದರು. ಈ ವಿಮಾನವು ನಾಗಪುರಕ್ಕೆ ಬರುವ ಇತರ ವಿಮಾನಗಳಿಂದ ಪ್ರಯಾಣಿಕರನ್ನೂ ಟಪ್ಪಾಲನ್ನೂ ತೆಗೆದುಕೊಂಡು ಹೊರಟಿತ್ತು. ನಿಲ್ದಾಣದಿಂದ ೨ ಮೈಲು ದೂರ ಹೋಗುವ ಮೊದಲೇ ಅದು ಜೋವರ್ ಧಾನ್ಯದ ಗದ್ದೆಯಲ್ಲಿ ಉರುಳಿ ಬೆಂಕಿ ತಗಲಿ ಸುಟ್ಟು ಹೋಯಿತು.

ಮೃತಪಟ್ಟ ೧೦ ಮಂದಿ ಪ್ರಯಾಣಿಕರಲ್ಲಿ ಇಂಡಿಯನ್ ನೇಶನಲ್ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿಗಳೂ ಲೋಕ ಸಭಾ ಸದಸ್ಯರೂ ಆದ ಶ್ರೀ ಹರಿಹರನಾಥ ಶಾಸ್ತ್ರಿಗಳೂ ಅ. ಭಾ. ಆಯುರ್ವೇದಿಕ್ ಕಾಂಗ್ರೆಸಿನ ಕೇರಳ ಶಾಖೆಯ ಅಧ್ಯಕರೂ ಮಲಬಾರಿನ ಕೊಟ್ಟಕ್ಕಲದ ಆರ್ಯವೈದ್ಯ ಶಾಲೆಯ ಮೆ.ನೇಜಿಂಗ್ ಟ್ರಸ್ಟಿಯವರೂ ಆದ ಡಾ. ಪಿ. ಎಂ. ವಾರಿಯರರೂ ಮದರಾಸಿನ ಅಶೋಕ ಮೋಟರ್ಸ್ ಲಿಮಿಟೆಡ್‌ನ ಮೆನೇಜಿಂಗ್ ಡೈರೆಕ್ಟರರಾದ ಶ್ರೀ. ರಘುನಂದನ ಶರನ್, ನೆಷನ್ ಸುದ್ದಿ ಸಂಸ್ಥೆಯಲ್ಲಿ ಪತ್ರಿಕಾ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದ ಶ್ರೀ. ಆರ್. ಎಫ್ ಡೇವಿಡ್. ಕಲ್ಕತ್ತದ ಪ್ರಸಿದ್ಧ ಕೈಗಾರಿಕೋದ್ಯಮಿಯ ಮಗ ಶ್ರೀ. ಎಸ್. ಬಿ. ಚೌಧುರಿ, ಮದರಾಸಿನ ಕಸ್ಟಮ್ಸ್ ಕಲೆಕ್ಟರ್ ಶ್ರೀ. ಆರ್. ಕೆ. ಮೈಶ, ಮತ್ತು ಮೂವರು ಈ ವಿಮಾನದಲ್ಲಿ ಪ್ರಯಾಣಿಸುತ್ತಿದ್ದು ಮೃತಪಟ್ಟರು.

Office of the Coorg Provincial
Co-operative Marketing Federation Ltd.,
VIRAJPET.

TENDER NOTICE

The undersigned invites sealed tenders for the clearance of iron and steel materials, agricultural implements, cement, etc., from rail head and sea at Tellicherry and transport of the same to the godowns of the Coorg Provincial Co-operative Marketing Federation both at Virajpet and Mercara.

The rates should be quoted per ton.

The last date for the receipt of tenders will be 30-12-1953.

Further details can be had from the office of the institution.

P. I. BELLIAPPA.
President.

ವಾರ್ತೆಗಳು.

ಒಂದು ವರುಷದ ಹಿಂದೆ ಗೌರಿಶಂಕರ ಶಿಖರವನ್ನೇರಲು ಯತ್ನಿಸಿದ ರಶಿಯನ್ ಪರ್ವತಾರೋಹಿಗಳಲ್ಲಿ ೬ ಜನರು ತಮ್ಮ ಪ್ರಾಣಗಳನ್ನು ಕಳೆದುಕೊಂಡರೆಂದೂ ಅವರ ಶವಗಳು ಕೂಡ ಕಾಣ ಸಿಗಲಿಲ್ಲವೆಂದೂ ಸ್ವೀಡನ್ನಿನ ಪ್ರಸಿದ್ಧ ಪರ್ವತಾರೋಹಿ ಅಂಡರ್ಸ ಬೊಲಿಂಜರ್‌ರವರು 'ಸ್ವೀಡೀಶ್' ಪತ್ರಿಕೆಯ ಪ್ರತಿನಿಧಿಯೊಬ್ಬರು ಭೇಟಿಯಾದಾಗ ತಿಳಿಸಿದರು. ಪೂರ್ವ ಜರ್ಮನಿಯಿಂದ ತಮಗೆ ಈ ಸುದ್ದಿ ಗೊತ್ತಾಯಿತೆಂದೂ ಅವರು ವಿಶದೀಕರಿಸಿದರು.

ಉದಮಲ ಪೇಟೆಯ ವಿಶಾಲಾಕ್ಷಿ ಕಾಲೇಜಿನಲ್ಲಿ ತಾ. ೧೧ರ ರಾತ್ರಿ ಸ್ತ್ರೀಯರ ಸಭೆಯೊಂದರಲ್ಲಿ ಮಾತಾಡುತ್ತಾ ಮದ್ರಾಸಿನ ಮುಖ್ಯ ಮಂತ್ರಿ ಶ್ರೀ ರಾಜಗೋಪಾಲಾಚಾರಿಯವರು "ನಾನು ಹೆಣ್ಣಾಗಿ ಹುಟ್ಟಬೇಕಿತ್ತು" ಎಂದು ಹೇಳಿದರು. "ಭಾರತದಲ್ಲಿ ಸ್ತ್ರೀಯರು ಗಂಡಸರಿಗಿಂತ ಹೆಚ್ಚು ಸೌಕರ್ಯಗಳನ್ನು ಅನುಭವಿಸುತ್ತಾರೆ. ಶಿಕ್ಷಿತೆಯರು ೩೦ ವರ್ಷವಾಗುವದರೊಳಗಾಗಿ ಲಗ್ನ ಮಾಡಿಕೊಳ್ಳಬೇಕು. ಲಗ್ನವನ್ನು ಅದಕ್ಕೂ ಮುಂದಕ್ಕೆ ಹಾಕಿದರೆ ಸುಧಾರಿಸಲು ಬಾರದಷ್ಟು ತಡವಾಗಿ ಹೋದೀತು" ಎಂದು ಅವರು ಹೇಳಿದರು.

ದೇಶವನ್ನು ಭಾಷಾವಾರು ರಾಜ್ಯಗಳನ್ನಾಗಿ ವಿಂಗಡಿಸುವದನ್ನು ಮುಂದೂಡಬೇಕೆನ್ನುವ ಮುಂಬಯಿ ನಗರ ಸಮಿತಿಯು ಸ್ವತಂತ್ರ ಸಮಿತಿಯಾಗಿದೆ. ಮುಂಬಯಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಕೆ. ಪಾಟೀಲರು ಆ ವಿಚಾರ ಮಾತಾಡುತ್ತಾ "ಸದ್ಯದ ಸಮಯ ಅನುಕೂಲವಿಲ್ಲವಾದ್ದರಿಂದಲೇ ಇಡೀ ಭಾಷಾವಾರು ರಾಜ್ಯರಚನೆ ಪ್ರಶ್ನೆಯನ್ನು ಮುಂದೂಡಬೇಕೆನ್ನುವದಕ್ಕೆ ನಾನು ಬೆಂಬಲವೀಯುತ್ತೇನೆ. ಭಾಷಾವಾರು ರಾಜ್ಯರಚನೆಯ ಚಳುವಳಿಗಾರರ ವಿರುದ್ಧ ನನ್ನ ಆಕ್ಷೇಪವೇನೂ ಇಲ್ಲ. ತಮ್ಮದು ನ್ಯಾಯವೆಂದು ಅವರು ಹಾಗೆ ಮಾಡುತ್ತಿರಬಹುದು. ಆದರೆ ಇಂದಿನ ಪ್ರಸಂಗದಲ್ಲಿ ರಾಷ್ಟ್ರದ ಐಕ್ಯಕ್ಕೆ ಹೆಚ್ಚು ಮಹತ್ವ ಕೊಡಬೇಕಾಗಿದೆ" ಎಂದೂ ಅವರು ಹೇಳಿದರು.

ಭಾರತ ಮತ್ತು ಪಾಕಿಸ್ತಾನಗಳ ಪ್ರಧಾನಿಗಳೊಡನೆ ಕಳೆದ ಆಗಸ್ಟ್ ತಿಂಗಳಲ್ಲಿ ದೇಹಲಿಯಲ್ಲಾದ ಒಪ್ಪಂದದನ್ವಯ ಭಾರತ ಸರಕಾರವು ಒಂದು ಸರಕಾರಿ ಸಮಿತಿಯನ್ನು ನೇಮಿಸಿರುತ್ತದೆ ಈ ವಿಚಾರವನ್ನು ಭಾರತದ ಪ್ರಧಾನಿ ಶ್ರೀ ನೆಹರುಗಳು ಪಾಕಿಸ್ಥಾನಕ್ಕೆ ತಿಳಿಸಿರುತ್ತಾರೆ. ಇದರಂತೆಯೇ ಪಾಕಿಸ್ತಾನ ಸರಕಾರವು ಒಂದು ಸಮಿತಿಯನ್ನು ನೇಮಿಸಿದ್ದು ಭಾರತ ಸರಕಾರಕ್ಕೆ ತಿಳಿಸಿರುತ್ತದೆ. ಕಾಶ್ಮೀರದಲ್ಲಿ ಮತಗಣನೆ ನಡೆಸುವ ಮುನ್ನ ತಲೆದೋರುವ ವಿವಿಧ ವಿಷಯಗಳ ನಿರ್ವಹಣೆಗಾಗಿ ಎರಡು ಸರಕಾರಗಳು ಮಿಲಿಟರಿ ಮತ್ತಿತರ ತಜ್ಞರುಳ್ಳ ಸಮಿತಿಗಳನ್ನು ನೇಮಿಸುವದಾಗಿ ಪ್ರಧಾನಿಗಳಿಬ್ಬರು ಒಪ್ಪಿದ್ದರು. ಮತಗಣನಾಧಿಕಾರಿಗಳನ್ನೂ ೧೯೫೪ರ ಏಪ್ರಿಲ್ ಅಂತ್ಯದೊಳಗಾಗಿ ನೇಮಿಸುವದಾಗಿ ಒಪ್ಪಿಕೊಂಡರು.

ಮಡಿಕೇರಿ ಮುನ್ಸಿಪಾಲಿಟಿಯ ನೀರಿನ ಸರಬರಾಜು

ಮಡಿಕೇರಿ ಮುನಿಸಿಪಾಲಿಟಿಯ ಕಾರ್ಯಕ್ರಮಗಳು, ಜನರಿಗಿರುವ ಸೌಕರ್ಯಗಳು ಕಳೆದ ಹತ್ತು ವರ್ಷಗಳಿಂದ ಚೆನ್ನಾಗಿ ನಡೆಯುತ್ತಿವೆ. ಜನರಿಗೆ ಕುಡಿಯುವ ನೀರು, ಸ್ವೈರ್ಮಲ್ಯ ಮತ್ತು ಬೆಳಕನ್ನು ಕೊಡುವುದು ಪೌರಸಭೆಗಳ ಧರ್ಮ. ಸರಕಾರದ ಮುತುವರ್ಜಿಯಿಂದ ಇಲೆಕ್ಟ್ರಿಕ್ ಬೆಳಕು ಎಲ್ಲರಿಗೂ ಒದಗುವ ಸಂಭವ ಕಾಣುತ್ತಿ. ಆದರೆ ಕುಡಿಯುವ ನೀರಿನ ತೊಂದರೆ ಹೆಚ್ಚಾಗಿಯೇ ಇದೆ.

ಇದನ್ನು ನಿವಾರಿಸಲು ಮುನಿಸಿಪಾಲಿಟಿಯವರು ತಕ್ಕ ಕ್ರಮವನ್ನನುಸರಿಸುತ್ತಿರುವದು ಸ್ತೋತ್ರಾರ್ಹ. ಜನರಲ್ ಕಾರ್ಯಪ್ಪನವರು ಧಾರಾಳ ಹೃದಯದಿಂದ ಕೊಟ್ಟ ಜಾಗದಲ್ಲಿ ಈಗಾಗಲೇ ಜಲಾಶಯವನ್ನು ಕಟ್ಟಲು ಪ್ರಾರಂಭಿಸಿರುವದು ಸಂತೋಷದ ವರ್ತಮಾನ. ಆದರೆ ಮುನಿಸಿಪಾಲಿಟಿಯ ಈಗಿನ ಯೋಜನೆ ಪ್ರಕಾರ ಐದು ಸಾವಿರ ಜನರಿಗೆ ದಿನಕ್ಕೆ ತಲೆ ಒಂದರ ಹತ್ತು ಗೇಲನ್ ಮೇರೆ ಐವತ್ತು ಸಾವಿರ ಗೇಲನ್ ನೀರಿಗೆ ಮಾತ್ರ ಟೇಂಕ್ ಕಟ್ಟುತ್ತಾರಂತೆ. ಒಂದು ವೇಳೆ ಟೇಂಕ್ ರಿಪೇರಿಗೆ ಬಂದು ನೀರು ನಿಂತುಹೋದರೆ ಜನರ ಗತಿಯೇನು? ಒಂದು ಲಕ್ಷ ಗೇಲನ್ ನೀರು ಹಿಡಿಯುವ ಎರಡು ಟೇಂಕುಗಳನ್ನು ಎರಡು ಭಾಗಗಳಾಗಿ ಮಾಡಿದರೆ ಒಂದು ಕೊಳದ ನೀರು ನಿಂತರೂ ಇನ್ನೊಂದರ ಅತ್ಯಾವಶ್ಯಕತೆಯಲ್ಲಿ ನೀರನ್ನು ಒದಗಿಸಬಹುದು.

ಅಲ್ಲದೆ ಈ ಕೊಳದ ನೀರನ್ನೆತ್ತುವ ಪಂಪಿನ ಶಕ್ತಿಯು ಒಂದು ದಿನಕ್ಕೆ ಎಂಟು ಗಂಟೆಯ ಕಾಲ ಕೆಲಸ ಮಾಡಿ ಬರೆ ನಲ್ವತ್ತೆಂಟು ಸಾವಿರ ಗೆಲನ್‌ಗೆ ಮಾತ್ರ ಇರುವದಾಗಿ ತಿಳಿಯುತ್ತೇನೆ. ಈ ಪಂಪು ರಿಪೇರಿಗೆ ಬಂದು ನೀರು ನಿಂತುಹೋದರೆ ಗತಿಯೇನು? ಆದ್ದರಿಂದ ಇನ್ನೊಂದು ಪಂಪನ್ನು ಸಹ ಈಗಲೇ ಹಾಕುವಂತೆ ಏರ್ಪಾಡು ಮಾಡುವುದು ಒಳ್ಳೆಯದಲ್ಲವೇ? ಇಷ್ಟು ದೊಡ್ಡ ಕೆಲಸಕ್ಕೆ ಪ್ಲಾನು ಮಾಡಿರುವಾಗ ಬಹಳ ಮುಂದಾಲೋಚನೆಯಿಂದಲೂ, ಸೂಕ್ಷ್ಮ ದೃಷ್ಟಿಯಿಂದಲೂ ಮಾಡುವದು ಒಳ್ಳೆಯದಲ್ಲವೇ? ಮತ್ತು ನೀರು ಸದಾ ಸರಬರಾಜು ಆಗುವಷ್ಟು ಅನುಕೂಲವಿದೆಯೋ ಇಲ್ಲವೋ ಎಂಬುದನ್ನು ಪರಾಂಬರಿಸಿರುವರೋ? ಇನ್ನು ಹತ್ತು ವರ್ಷಗಳೊಳಗೆ ಜನಸಂಖ್ಯೆಯು ಒಂದಕ್ಕೆರಡರಷ್ಟು ಏರಬಹುದು. ಆಗ ಈ ಕೆಲಸವನ್ನು ಪುನಹ ಮಾಡಲಿಕ್ಕಾಗುವದೋ?

ಈ ಕಾರಣದಿಂದ ಪುರಸಭೆಯವರು ಈ ಕೆಲಸವನ್ನು ಮುಂದರಿಸುವಾಗಲೇ ದೀರ್ಘ ದೃಷ್ಟಿಯಿಂದ ಚೆನ್ನಾಗಿ ಮಾಡುವದು ಒಳ್ಳೆಯದು. ನಮ್ಮ ಸರಕಾರವು ಸಹ ಇದನ್ನು ಪರಿಶೀಲಿಸಿ, ಮುನಿಸಿಪಾಲಿಟಿಯಲ್ಲಿ ಹಣವಿಲ್ಲದಿದ್ದರೆ ಬಡ್ಡಿಗೆ ಅವಶ್ಯವಿರುವ ಹಣವನ್ನು ಕೊಟ್ಟು ಮಾಡಿಸುವದು ಒಳ್ಳೆಯದೆಂದೇ ತೋರುತ್ತೆ. ಪುರಸಭೆ ಪ್ರೆಸಿಡೆಂಟ್ ಕಮಿಟಿಯವರು ಮತ್ತು ನಮ್ಮ ಸರಕಾರದವರು ಈ ವಿಷಯಕ್ಕೆ ಮನಸ್ಸು ಕೊಡುವರೇ?

—ಕೆ. ಪಿ. ಚಣ್ಣಪ್ಪ.

ಕಣ್ಣುಮುಚ್ಚಾಲೆ

ಮೊನ್ನೆಯಾಗಿ ಕೊಡಗಿಗೆ ಬಂದಿದ್ದ ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಪ್ರೆಸಿಡೆಂಟರು ಶ್ರೀ ನಿಜಲಿಂಗಪ್ಪ, ಕಾರ್ಯದರ್ಶಿ ಶ್ರೀ ಹಳ್ಳಿಕೇರಿ ಮೊದಲಾದವರು ಕೊಡಗಿನಲ್ಲಿ ನಾಲ್ಕಾರು ದಿನಗಳಿದ್ದರು. ಕೊಡಗಿನಲ್ಲಿ ಅಲ್ಪ ಸ್ವಲ್ಪ ಧನ ಸಂಗ್ರಹವನ್ನೂ ಮಾಡಿದರು. ನನ್ನಲ್ಲಿಗೂ ಬಂದಿದ್ದರು. ನಾನು ಕರ್ನಾಟಕ ಏಕೀಕರಣವಾದಿಯೆಂಬ ನಂಬಿಕೆ ಅವರಿಗಿದೆ. ಕರ್ನಾಟಕ ಏಕೀಕರಣ ಪ್ರಚಾರಕ್ಕಾಗಿ ಧನ ಸಹಾಯಬೇಕೆಂದು ನನ್ನನ್ನು ಕೇಳಿದರು. ನಾನು ನನ್ನಲ್ಲಿ ಹಣವಿಲ್ಲವೆಂದು ಹೇಳಿದ ಕಾರಣ ರೂ. ೧೦ ಆದರೂ ಕೊಡಬೇಕೆಂದು ಒತ್ತಾಯ ಮಾಡಿದರು ಇವರು ಕೆಲವೆಡೆ ಕಾಂಗ್ರೆಸ್ ಸಂಸ್ಥೆಯ ಸಂಘಟನೆಗೆಂದೂ ಹಣ ಸಂಗ್ರಹಿಸಿದ್ದಾರೆಂಬುದು ನನಗೆ ತಿಳಿದಿತ್ತು. ಆದ್ದರಿಂದ ನಾನು ಅವರನ್ನು ಕುರಿತು "ಕರ್ನಾಟಕ ಏಕೀಕರಣ ಸಾಧನೆಗಾಗಿ ಹಣ ಸಂಗ್ರಹಿಸುವದಾದರೆ ಈ ರೀತಿ ಗುಟ್ಟಿನಲ್ಲಿ ಒಳಗೊಳಗೆ ಸಂಗ್ರಹಿಸಲೇಕೆ? ಬಹಿರಂಗ ಸಭೆ ಮಾಡಿ ನಿಧಿಯ ಅವಶ್ಯಕತೆಯನ್ನು ವಿವರಿಸಿದರೆ ಉತ್ತಮವಾಗುವದು. ಧನ ಸಂಗ್ರಹಕ್ಕೂ ಸುಲಭವಾಗುವದು" ಎಂದೆ. ಆದರೆ ಬಹಿರಂಗ ಸಭೆ ಮಾಡಿ ಕರ್ನಾಟಕ ಏಕೀಕರಣದ ಮಾತೆತ್ತಿ ಅದಕ್ಕಾಗಿ ಹಣ ಕೊಡಬೇಕೆಂದು ಕೇಳುವ ನೇರವಾದ ಬುದ್ಧಿ ಅವರಿಗೆ ಹೊಳೆದಂತೆ ನನಗೆ ತೋರಲಿಲ್ಲ. ಆದಕಾರಣ ಏಕೀಕರಣಕ್ಕೆ ವಿರೋಧವಿರುವವರೆಂದು ಕಂಡಲ್ಲಿ ಕಾಂಗ್ರೆಸ್ ಸಂಘಟನೆಗೆಂದೂ, ಏಕೀಕರಣವಾದಿಗಳೆಂದು ಕಂಡಲ್ಲಿ ಕರ್ನಾಟಕ ಏಕೀಕರಣ ಪ್ರಚಾರಕ್ಕೆಂದೂ ಹಣ ಸಂಗ್ರಹಿಸುತ್ತಿದ್ದರು. ಈ ರೀತಿಯ ಒಂದು ನೀತಿ ನನಗೆ ಸರಿತೋರಲಿಲ್ಲ. ಇನ್ನಾದರೂ ಈ ರೀತಿಯ ಕಣ್ಣುಮುಚ್ಚಾಲೆಯ ಧನ ಸಂಗ್ರಹ ನಿಲ್ಲಬೇಕು. ನಾಡಿನ ಜನರೂ ಈ ಬಗ್ಗೆ ಎಚ್ಚರದಿಂದಿರಬೇಕು.

ಚಂದಾ ನಿರಾಕರಿಸಿದವ

ವಿವರಣೆಬೇಕು

ಕಳೆದ ವಾರದ ಪತ್ರಿಕೆಯಲ್ಲಿ ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಲ್ಲಿ ವಿವರಣೆ ಕೇಳುವ ಪತ್ರವೊಂದು ಪ್ರಕಟವಾದುದನ್ನು ನೋಡಿದೆನು. ಮುಂದೆ ರಚಿತವಾಗಲಿರುವ ಹೈಪವರ್ ಕಮಿಷನಿನ ಇದುರು ವಾಗ್ಮೂಲ ಕೊಡಲು ಕರ್ನಾಟಕದ ನಿಜಲಿಂಗಪ್ಪನವರಿಂದ ನೇಮಕವಾಗಿರುವ ಈ ಸಮಿತಿಯ ಜವಾಬ್ದಾರಿ, ಕರ್ತವ್ಯ, ಅವರು ಕಮಿಷನಿನ ಮುಂದಿಡಬೇಕಾದ ವಿಚಾರಗಳ ಬಗ್ಗೆ ಸ್ಪಷ್ಟ ಸೂಚನೆಗಳಿರಬಹುದು. ಏಕೀಕರಣವಾದಿಯಾದ ಕರ್ನಾಟಕ ಪ್ರಾಂತೀಕ ಕಾಂಗ್ರೆಸು ರಚಿಸಿದ ಸಮಿತಿಯು ಏಕೀಕರಣದ ಸಾಧನೆಗಾಗಿ ಹೆಣಗುವದೆಂದು ಅಭಿಪ್ರಾಯಪಡಲು ಅನುವಿದೆಯಾದರೂ ಕೊಡಗಿನ ಸದಸ್ಯರಾದ ಜಿಲ್ಲಾ ಕಾಂಗ್ರೆಸ್ ಪ್ರೆಸಿಡೆಂಟರು ತಮ್ಮ ಜವಾಬ್ದಾರಿ, ತಾವು ಕೊಡಬೇಕಾದ ಅಭಿಪ್ರಾಯ ಎಂಥಾದ್ದು, ದೇಶಿಯರ ಅಭಿಮತವನ್ನು ಹೇಗೆ ತೆಗೆಯುವರು, ದೇಶಿಯರ ಅಭಿಮತ ತೆಗೆಯದೆ ತಮ್ಮ ಸ್ವಂತ ಅಭಿಪ್ರಾಯ ಕೊಡುವರೋ ಎಂಬಿತ್ಯಾದಿ ವಿಚಾರಗಳ ವಿವರವನ್ನು ಕೊಡಗಿನ ಜನತೆಗೆ ಕೊಡಬೇಕಿದೆ. ಕೊಡಗಿನ ಪರ ಸದಸ್ಯರಾಗಿರುವವರು ಈ ವಿಚಾರದಲ್ಲಿ ವಿಸ್ತೃತವಾದ ವಿವರಣೆಯನ್ನು ಜನರ ಮುಂದಿಡುವರೆಂದು ನಾನು ಆಶಿಸುತ್ತೇನೆ.

'ನಿರೀಕ್ಷಕ'

ಅರ್ಥವಿಲ್ಲದ ಜೀವದಾನ.

ಕಳೆದ ವಾರದ ಕೊಡಗು ಪತ್ರಿಕೆಯ ಅಗ್ರಲೇಖನವನ್ನು ಓದಿದೆನು. ಅದು ಕೊಡಗಿನ ಬಹು ಜನರ ಅಭಿಪ್ರಾಯವನ್ನು ಪ್ರತಿಬಿಂಬಿಸುತ್ತದೆಯೆಂದು ಹೇಳಲು ಅಭ್ಯಂತರವಿಲ್ಲ. ನಿವೃತ್ತರಾದವರ ಅಧಿಕಾರಾವಧಿ ಹೆಚ್ಚಿಸುವದು ಅಸಂಗತವೂ, ಅನ್ಯಾಯವೂ ಆಗಿದೆ. ದೇಶದ ಹಿತಬಯಸುವ ಯಾವ ಸರಕಾರವೂ ಹಾಗೆ ಮಾಡದು. ನಮ್ಮ ಕೊಡಗು ಕಾಂಗ್ರೆಸ್ ಸರಕಾರದ ಆಡಳಿತದಲ್ಲಿ ಹಾಗೆ ಮಾಡಲಿಕ್ಕಿಲ್ಲವೆಂದು ನಾನು ಭಾವಿಸಿದ್ದೆ. ಆದರೆ ಹಿಂದೆ ಅಲ್ಲೊಂದು ಇಲ್ಲೊಂದರಂತೆ ನಡೆಯುತ್ತಿದ್ದ ಜೀವದಾನವು ಈಗ ಸಾಮಾನ್ಯವಾಗಿದೆ. ಡಿಸೆಂಬರ್ ೧೨ ರಲ್ಲಿ ನಿವೃತ್ತರಾಗಬೇಕಿದ್ದ ವಿದ್ಯಾಧಿಕಾರಿಗಳ ಅಧಿಕಾರಾವಧಿಯನ್ನು ಏಪ್ರಿಲ್ ಅಂತ್ಯದ ವರೆಗೆ ಮುಂದರಿಸಲಾಗಿದೆ. ಡಿಸೆಂಬರ್ ೨೦ ರಲ್ಲಿ ನಿವೃತ್ತರಾಗಬೇಕಿದ್ದ ಸೋಮವಾರಪೇಟೆ ಹೆಡ್ಮಾಸ್ಟರ ಅವಧಿಯನ್ನು ಏಪ್ರಿಲಿನ ವರೆಗೆ ಮುಂದರಿಸಲಾಗಿದೆ. ಫೆಬ್ರವರಿ ೯ ರಲ್ಲಿ ನಿವೃತ್ತರಾಗಬೇಕಿದ್ದ ಮಡಿಕೇರಿ ಹೈಸ್ಕೂಲ್ ಮುಖ್ಯೋಪಧ್ಯಾಯರ ಅವಧಿಯನ್ನೂ ಏಪ್ರೆಲ್ ಅಂತ್ಯದ ವರೆಗೆ ಮುಂದರಿಸಲಾಗಿದೆ. ಇವೆಲ್ಲವೂ ನಮ್ಮ ಮಂತ್ರಿ ಮಂಡಳದ ಹಿಡಿತದಲ್ಲಿರುವ ಹುದ್ದೆಗಳು. ಮತ್ತೆ ಕೊಡಗು ಆರೋಗ್ಯಾಧಿಕಾರಿಯ ಅವಧಿಯನ್ನು ಆರು ತಿಂಗಳ ವರೆಗೆ ಹೆಚ್ಚಿಸಿರುವರು. ಅವರು ಫೆಬ್ರವರಿಯಲ್ಲಿ ನಿವೃತ್ತರಾಗಬೇಕಿತ್ತು. ಅವರ ಬದಲು ಈಗ ಅ. ಹೆಲ್ತ್ ಆಫೀಸರಾಗಿರುವವರನ್ನು ನೇಮಿಸುವ ವಾರ್ತೆಯೂ ಇತ್ತು. ಆದರೆ ಇತ್ತಲಾಗಿ ಅವರೇ ಇರುವಂತಾಗಿದೆ ಮತ್ತೆ ಚೀಫ್ ಕಮಿಷನರ್ ಬೇಡಿಯವರ ಅಧಿಕಾರಾವಧಿಯೂ ಮುಂದರಿಸಲ್ಪಟ್ಟಿದೆ. ಈ ರೀತಿ ಹಳೆಯ ಜನರೇ ಇರುವಂತೆ ಆರಿಸಿ ಏನೋ ಹೇಗೋ ಆಡಳಿತ ಸಾಗುತ್ತಿರಲೀ ಎಂದು ವರ್ತಿಸುವದರಿಂದ ದೇಶಕ್ಕೆ ಹಾನಿಯಾಗುತ್ತಿದೆ. ಈ ಮುದಿ ಪ್ರಾಯದ, ಹಳೆ ಜನರ ಮೇಲೆ ಈ ಸರಕಾರಕ್ಕೆ ಈ ಮಮತೆ ಏಕೆಂದು ನನಗರ್ಥವಾಗುವುದಿಲ್ಲ. ದೇಶದಲ್ಲಿ ವಿದ್ಯಾವಂತ ಯುವಕರು ಬೇಕಾದಷ್ಟಿರುವಾಗ ಈ ರೀತಿಯ ನೀತಿ ಎಂದಿಗೂ ಖಂಡನೀಯವಾದುದು.

—OBSERVER.

ಆದರ್ಶ ಉಪಾಧ್ಯಾಯರ ಕೂಟ.

ತಾರೀಕು ೧೪–೧೧–೫೩ ನೇ ಶನಿವಾರ, ಶನಿವಾರಸಂತೆ ಕೇಂದ್ರದ ಉಪಾಧ್ಯಾಯರ ಕೂಟವೊಂದು ಆಲೂರು ಸಿದ್ದಾಪುರ ಶಾಲೆಯಲ್ಲಿ ನಡೆಯಿತು. ಈ ಹಿಂದೆ, ಕೊಡ್ಲಿಪೇಟೆ ಶಾಲೆಯಲ್ಲಿ ನಡೆದ ಉಪಾಧ್ಯಾಯರ ಕೂಟದಲ್ಲಿ ಇಂಥಾ ಕೂಟಗಳು ಸೇರುವ ವಿಷಯದಲ್ಲಿ ಚರ್ಚೆ ನಡೆದು ಹಳ್ಳಿಗಳಲ್ಲೂ ಈ ತೆರನಾದ ಕೂಟಗಳು ನಡೆದು ಹಳ್ಳಿಯ ಶಾಲೆಗಳನ್ನು ಬೆಳಕಿಗೆತರಲು ಸಹಾಯಕರಾಗಬೇಕೆಂದು ಆಲೂರು ಸಿದ್ದಾಪುರ ಶಾಲೆಯ ಹೆಡ್‌ಮಾಸ್ತರು ಕೇಳಿಕೊಂಡಿದ್ದ ಮೇರೆ ಮೇಲ್ಕಂಡ ಕೂಟದ ಮೀಟಿಂಗನ್ನು ಆಲೂರು ಸಿದ್ದಾಪುರ ಶಾಲೆಯಲ್ಲಿ ನಡೆಸಲು ಏರ್ಪಾಡಾಗಿತ್ತೆಂದು ತಿಳಿಯುತ್ತೇನೆ.

ಸದರಿ ದಿನ ಶಾಲೆಯ ಮುಂದುಗಡೆ ತಳಿರು ತೋರಣಗಳಿಂದ ಒಂದು ಸುಂದರವಾದ ಚಪ್ಪರವು ಹಾಕಲ್ಪಟ್ಟಿತ್ತು. ಶಾಲೆಯು ಸಹ ತಳಿರು, ತೋರಣ, ಪುಷ್ಪಗಳಿಂದ ಅಲಂಕರಿಸಲ್ಪಟ್ಟಿತ್ತು. ಶಾಲೆಯ ಮುಂದಿದ್ದ ಗ್ರಾಮರಸ್ತೆಯು ನೋಡಲು ಒಂದು ಸೀಮೆಂಟ್ ರಸ್ತೆಯೋಪಾದಿಯಲ್ಲಿತ್ತು. ಶಾಲೆಯ ಮುಂದಿನ ಹೂದೋಟ, ಹಿಂಬದಿಯಲ್ಲಿದ್ದ ತರಕಾರಿ ತೋಟ ಸರ್ವರ ಕಣ್ಮನಗಳನ್ನು ಸೆಳೆಯುತ್ತಿದ್ದವು.. ಬಂದಿದ್ದ ಉಪಾಧ್ಯಾಯರುಗಳು ಸುಂದರವೂ ಸುಸಜ್ಜಿತವೂ ಗಾಂಭೀರ್ಯಯುಕ್ತವಾದ ಈ ನೋಟದಲ್ಲಿ ತಲ್ಲೀನರಾಗಿ ತಮ್ಮ ತಮ್ಮೊಳಗೆ ಮೆಚ್ಚುಗೆಯ ಮಾತಿನ ಮಳೆಯನ್ನು ಸುರಿಸುತ್ತಿದ್ದರು ಹಳ್ಳಿಯಲ್ಲಿ ಆಸಕ್ತಿ ವಹಿಸಿ ಮಾಡಿರುವ ಆಟದ ಮೈದಾನ, ಕೊಳಕ್ಕೆ ಹೋಗುವ ದಾರಿ, ಎಲ್ಲವೂ ಚೆನ್ನಾಗಿತ್ತು. ಈ ಹೋಬಳಿಯ ಉಪಾಧ್ಯಾಯರಲ್ಲದೆ ಊರಿನ ಹಲವು ಮಹನೀಯರುಗಳೂ, ಮಕ್ಕಳ ಪೋಷಕರೂ, ಮತ್ತು ಶಾಲಾ ಕಮಿಟಿಗಳೂ, ಎಲ್ಲರೂ ಆಗಮಿಸಿದ್ದರು.

ಹತ್ತು ಗಂಟೆಗೆ ಮೀಟಿಂಗು ಸುರುವಾಯಿತು. ಶನಿವಾರಸಂತೆ ಶಾಲೆಯ ಹೆಡ್ ಮಾಸ್ಟರು ಅಧ್ಯಕ್ಷತೆ ವಹಿಸಿದ್ದರು. ಅಧ್ಯಾಪಕರೊಬ್ಬರಿಂದ ಭಕ್ತಿಪೂರ್ವಕ, ಪ್ರಾರ್ಥನೆಯು ನಡೆಯಿತು. ನಂತರ ಹಿಂದಿನ ಮೀಟಿಂಗಿನ ವರದಿ ಓದಿ ಒಪ್ಪಲಾಯಿತು. ಸಿದ್ದಾಪುರ ಶಾಲೆಯ ಹೆಡ್‌ಮಾಸ್ತರು ೪ ನೇ ತರಗತಿಯ ಮಕ್ಕಳಿಗೆ ಒಂದು ಮಾದರಿಯ ಪಾಠವನ್ನು ಮಾಡಿದರು. ಇದು ಮನಮೋಹಕವಾಗಿತ್ತು. ಭಾರತ ವಾಚನವೂ, ಸಂಗೀತ ಖಚೇರಿಯೂ, ತಂದೆ ತಾಯಿಗಳ ಸಹಕಾರ ಎಂಬ ವಿಷಯದಲ್ಲಿ ಭಾಷಣವೂ ಸಹ ಮನಮೆಚ್ಚುವಂತಿದ್ದವು.

ಈ ರೀತಿ ಹಳ್ಳಿಗಳಲ್ಲಿ ಅಧ್ಯಾಪಕರೂ ಸಾರ್ವಜನಿಕರೂ ಪರಸ್ಪರ ಕಲೆತು ವರ್ತಿಸುವದರಿಂದ ಹಿತವಿದೆ. ಮುಂದಿನ ನಾಗರಿಕರಾದ ಇಂದಿನ ಮಕ್ಕಳನ್ನು ಸುಧಾರಿತ ನಾಗರಿಕರನ್ನಾಗಿ ರೂಪಿಸುವ ಜವಾಬ್ದಾರಿಯನ್ನು ಅಧ್ಯಾಪಕರೂ ಸಾರ್ವಜನಿಕರೂ ಸಹಕರಿಸಿ ಹೊರಬೇಕು. ಈ ದೃಷ್ಟಿಯಿಂದ ಪ್ರತಿಯೊಬ್ಬ, ಸಮಾಜಸುಧಾರಕನೂ, ರಾಜಕೀಯ ಪಟುವೂ, ಮಕ್ಕಳ ತಂದೆ ತಾಯಿಗಳೂ, ಉಪಾಧ್ಯಾಯರೊಡನೆ ಸಮ್ಮಿಳಿತರಾಗಿ ಸಂಘಟಿಸಿ ಈ ರೀತಿ ಒಮ್ಮತದಿಂದ ದುಡಿದರೆ ವಿದ್ಯಾಪ್ರಗತಿಗೆ ಸಹಾಯವಿತ್ತಂತಾಗುವದು.

ವಿದ್ಯಾಭಿಮಾನಿ.



ಇಲಿಯ ವ್ಯಸನದ ಕಥೆ.

ದಕ್ಷಿಣ ದೇಶದಲ್ಲಿ ಒಂದು ನಗರವಿತ್ತು. ಅದರ ಹತ್ತಿರದಲ್ಲೇ ಒಂದು ಶಿವಾಲಯವಿತ್ತು. ಆ ಶಿವಾಲಯದ ಹತ್ತಿರದ ಗುಹೆಯೊಂದರಲ್ಲಿ ಒಬ್ಬ ಸನ್ಯಾಸಿಯು ಜೀವಿಸುತ್ತಿದ್ದನು. ಆತನು ಭಿಕ್ಷೆಗಾಗಿ ಮನೆ ಮನೆ ತಿರುಗುತ್ತಿದ್ದನು. ಕಾಷಾಯ ವಸ್ತ್ರಧಾರಿಯಾದ ಭಿಕ್ಷುಕನನ್ನು ಕಂಡು ಜನರೆಲ್ಲರೂ ಆತನ ಮೇಲೆ ಕನಿಕರ ಭಕ್ತಿಯನ್ನು ತಳೆದು ಧಾರಾಳವಾಗಿ ಭಿಕ್ಷೆ ಹಾಕುತ್ತಿದ್ದುದರಿಂದ, ಭಿಕ್ಷೆಯಿಂದ ಹಿಂತಿರುಗುವಾಗ ಆತನ ಭಿಕ್ಷಾಪಾತ್ರೆಯು, ಅತಿರುಚಿಕರವಾದ ಭಕ್ಷ್ಯಗಳಿಂದ ತುಂಬಿರುತ್ತಿತ್ತು. ಆತನು ತನ್ನ ಗುಹೆಗೆ ಬಂದು ತನಗೆ ಬೇಕಿರುವಷ್ಟನ್ನು ತಿಂದು ಉಳಿದುದನ್ನು ಮಾರಣೇ ಹೊತ್ತಿಗೆಂದು ಕಟ್ಟಿ ಇಡುತ್ತಿದ್ದನು. ಈ ಉಳುವರಿ ಆಹಾರವನ್ನು ಆತನಿಗೆ ಕಾಣದ ರೀತಿಯಲ್ಲಿ ತಿಂದು ನಾನು ಮತ್ತು ನನ್ನ ಜೊತೆಗಾರರು ಆ ಗುಹೆಯಲ್ಲಿ ಜೀವಿಸುತ್ತಿದ್ದೆವು.

ನಾವು ಆತನು ಸುರಕ್ಷಿತವಾಗಿ ಕಟ್ಟಿಟ್ಟ ಆಹಾರವನ್ನು ಕದ್ದು ತಿನ್ನುತ್ತಿದ್ದುದರಿಂದ ಸನ್ಯಾಸಿಗೆ ನಮ್ಮ ಮೇಲೆ ವಿಪರೀತ ಸಿಟ್ಟಿತ್ತು. ಆದ್ದರಿಂದ ಆತನು ತನ್ನ ಆಹಾರದ ಗಂಟನ್ನು ದಿನಕ್ಕೆ ಒಂದೊಂದು ಸ್ಥಳದಲ್ಲಿ ಇರಿಸುತ್ತಿದ್ದನು. ಆತನು ಎಲ್ಲಿ ಇಟ್ಟರೂ ಅದನ್ನು ಆ ಚಿಕ್ಕ ಗುಹೆಯಲ್ಲಿ ಕಂಡು ಹಿಡಿಯುವದು ನಮಗೆ ಕಷ್ಟವಾಗುತ್ತಿರಲಿಲ್ಲ.

ಒಂದು ದಿನ ಈ ಸನ್ಯಾಸಿಯಲ್ಲಿಗೆ ಒಬ್ಬ ಅತಿಥಿಯು ಬಂದನು. ಆತನು ಮಹಾ ಪವಿತ್ರನಾದ ಯೋಗಿ ಎನಿಸಿದ್ದನು. ಸನ್ಯಾಸಿಯು ಆತನನ್ನು ಆದರದಿಂದ ಸ್ವಾಗತಿಸಿ ಗೌರವಿಸಿ ಆತನ ಶ್ರಮ ಪರಿಹರಿಸಿದನು. ರಾತ್ರೆ ಅವರು ಒಂದೇ ಸ್ಥಳದಲ್ಲಿ ಮಲಗಿ ಪುರಾಣದ ಪವಿತ್ರ ಕತೆಗಳನ್ನೂ, ಧಾರ್ಮಿಕ ವಿಚಾರಗಳನ್ನೂ ಕುರಿತು ಮಾತಾಡುತ್ತಿದ್ದರು. ಆದರೆ ಸನ್ಯಾಸಿಯು ಆ ಮಾತಿನಲ್ಲಿ ಮಗ್ನನಾಗಿರಲಿಲ್ಲ. ಆತನ ಯೋಚನೆಯು ತಾನು ಕಟ್ಟಿರಿಸಿದ್ದ ಆಹಾರದ ಮೇಲೆಯೇ ಇತ್ತು. ನಾವು ಎಲ್ಲಿ ಅದನ್ನು ತಿಂದು ಹಾಕುವೆವೋ ಎಂಬ ಭಯದಿಂದ ಮೇಲೆ ಒಂದು ಗೂಟದಲ್ಲಿ ಆಹಾರದ ಕಟ್ಟನ್ನು ತೂಗ ಹಾಕಿ ಒಂದು ಬಿದಿರಿನ ಕೋಲಿನಿಂದ ಆಗಾಗ್ಗೆ ಅದನ್ನು ಅಲ್ಲಾಡಿಸಿ ಶಬ್ದಮಾಡುತ್ತಿದ್ದನು. ಸನ್ಯಾಸಿಯ ಮನಸ್ಸು ಈ ಅನ್ನದ ಗಂಟಿನ ಮೇಲಿದ್ದುದರಿಂದ ಯೋಗಿಯ ಕತೆಯ ಮೇಲೆ ಏಕಾಗ್ರ ಮನಸ್ಸಿರಲಿಲ್ಲ. ಇದು ಯೋಗಿಗೆ ತಿಳಿದು ಆತನು ಸಿಟ್ಟುಗೊಂಡು ಹೇಳಿದನು. 'ಸನ್ಯಾಸಿ, ನಿನ್ನ ಗೆಳೆತನ ಹೃತ್ಪೂರ್ವಕವಾದುದೆಂದು ನನಗೆ ತೋರುವದಿಲ್ಲ. ನಾನು ಮಾತಾಡಿದರೂ ನೀನು ನಿರ್ಲಕ್ಷ್ಯದಿಂದಿರುವಂತೆ ತೋರುತ್ತದೆ. ಇದು ಮಧ್ಯಾರಾತ್ರೆಯ ಸಮಯವಾದರೂ ನಾನಿಲ್ಲಿರಲಾರೆ. ಏಕೆಂದರೆ 'ಬನ್ನಿ ನಿಮಗೆ ಸ್ವಾಗತವಿದೆ. ಕುಳಿತುಕೊಳ್ಳಿ ವಿಶೇಷವೇನು? ಏಕೆ ಶರೀರ ಕೃಶವಾಗಿದೆ'ಮೊದಲಾದ ಉಪಚಾರ ಮಾಡದವ ಮನೆಯಲ್ಲಿ ಅತಿಥಿಯಾಗಿರುವದು ಕಷ್ಟ. ನೀನು ಈ ಒಂದು ಗುಹೆಯ ಯಜಮಾನನಾಗಿರುವದರಿಂದಲೇ ಇಷ್ಟೊಂದು ಅಹಂಕಾರ ಮತ್ತು ದೊಡ್ಡಸ್ತಿಕೆ ತೋರಿಸುವದರಿಂದ ನೀನು ನಿಜವಾಗಿಯೂ ಸನ್ಯಾಸಿಯಂತೆ ತೋರಿಸಿಕೊಂಡರೂ ನರಕವನ್ನು ಸೇರುವೆ.'

ಇದನ್ನು ಕೇಳಿ ಸನ್ಯಾಸಿಯು ಗಾಬರಿಗೊಂಡು ಯೋಗಿಯನ್ನು ಕುರಿತು, 'ಹಾಗೆ ಮಾತಾಡದಿರಿ. ನಿಮಗಿಂಥಾ ಪ್ರಿಯರಾದ ಗೆಳೆಯರು ನನಗಿಲ್ಲ. ನನ್ನ ಈ ಕರ್ತವ್ಯಚ್ಯುತಿಗೆ ಕಾರಣವನ್ನು ಕೇಳಿ. ನಾನಿಟ್ಟ

ಆಹಾರಕ್ಕಾಗಿ ಇಲಿಗಳು ಹಾರಾಡುತ್ತಿವೆ. ಎಷ್ಟೇ ಮೇಲಿಟ್ಟರೂ ಅವು ಅದನ್ನು ಅಪಹರಿಸುತ್ತವೆ. ಆದ್ದರಿಂದ ಇಲಿಗಳನ್ನು ಓಡಿಸಲು ನಾನು ನನ್ನ ಭಿಕ್ಷಾಪಾತ್ರೆಯನ್ನು ಕೋಲಿನಿಂದ ಅಲುಗಾಡಿಸುತ್ತಿರುವೆನು. ಆ ಇಲಿಯ ಕಾರಣದಿಂದ ನನ್ನ ಮನಸ್ಸು ಚಂಚಲವಾಯಿತು. ಆದ್ದರಿಂದ ಕ್ಷಮಿಸಬೇಕು" ಎಂದು ಬೇಡಿಕೊಂಡನು.

ಯೋಗಿಯು ಈ ಮಾತನ್ನು ಕೇಳಿ 'ನೀನು ಈ ಗುಹೆಯಲ್ಲಿ ಇಲಿಗಳ ಬಿಲವನ್ನು ಕಂಡಿರುವೆಯಾ?' ಎಂದು ಕೇಳಿದನು. ಸನ್ಯಾಸಿಯು ಇಲ್ಲವೆಂದು ಹೇಳಲು ಯೋಗಿಯು ಹೇಳತೊಡಗಿದನು 'ಎಲ್ಲಿ ತನ್ನ ಸಂಪತ್ತಿದೆಯೋ ಅಲ್ಲಿ ಮನುಷ್ಯನು ಪಹರೆ ಇರುವಂತೆ ಇಲಿಯೂ ಆಹಾರ ಪದಾರ್ಥಗಳ ಸಂಗ್ರಹ ಮಾಡಿ ಬಿಲದಲ್ಲಿರಬಹುದು. ಏಕೆಂದರೆ ಸಂಪತ್ತಿನ ವಾಸನೆಯೇ ಪ್ರಾಣಿಯಲ್ಲಿ ತನಗೆ ಬೇಕೆಂಬ ಬಯಕೆಯನ್ನು ಹೆಚ್ಚಿಸುವದು. ಮತ್ತೆ ಸಂಪತ್ತಿನ ಸುಖವು ಆತನ ನೀತಿನಿಯಮವನ್ನು ಅಪಹರಿಸುವದು. ಆದಕ್ಕಾಗಿಯೇ ತಾಯಿ ಶಾಂಡಿಲಿಯು ಹುಡಿಮಾಡಿದ ತನ್ನ ಧಾನ್ಯಕ್ಕೆ ಹುಡಿಮಾಡದ್ದನ್ನು ಬದಲಾಯಿಸಿಕೊಂಡುದಾಗಿದೆಯೆಂದು ಯೋಗಿಯು ಹೇಳಲು ಅದು ಹೇಗೆ ಎಂದು ಸನ್ಯಾಸಿಯು ಕೇಳಿದ್ದರಿಂದ ಯೋಗಿಯು ಮುಂದಿನ ವಾರ ತಾಯಿ ಶಾಂಡಿಲಿಯ ವ್ಯಾಪಾರದ ಕತೆ ಹೇಳುವನು.

ಯಾರು ಮೇಲು ಯಾರು ಕೀಳು?

ಲೇ:–ಕುಮಾರ ಐ. ಎ. ದೇವಯ್ಯ, ವೀರಾಜಪೇಟೆ.

ಯಾರು ಮೇಲು ಕೀಳು ಎಂಬ ವಿಚಾರದಲ್ಲಿ ಒಮ್ಮೆ ಒಬ್ಬ ಸನ್ಯಾಸಿಗೂ ಮತ್ತೊಬ್ಬ ರೈತನಿಗೂ ಬಲವಾದ ಚರ್ಚೆ ನಡೆಯಿತು. 'ನೀನು ಯಾವಾಗಲೂ ಕೆಸರಿನಲ್ಲಿ ಹೊರಳಾಡುವವನು. ನಿನಗೆ ಶುಚಿ ಜೀವನದ ಅರಿವಿಲ್ಲ. ನಿನ್ನ ಮನಸ್ಸೂ ಕೂಡ ಕೆಸರಿನಂತೆ' ಎಂದು ಸನ್ಯಾಸಿಯು ಹೇಳಿದನು.

ಆತನ ಮಾತನ್ನು ಕೇಳಿ ರೈತನು ನಗುತ್ತಾ 'ಸ್ವಲ್ಪ ಆಳವಾಗಿ ಆಲೋಚಿಸಿನೋಡಿ. ಜನರಿಗೆ ನಿಮಗಿಂತಲೂ ಉಪಕಾರಿ ನಾನು. ನೀವು ಬೋಧಿಸುವ ವೇದಾಂತ ಇಲ್ಲದೆ ಮನುಷ್ಯನು ಜೀವಿಸಬಹುದು. ಆದರೆ ನಾನು ಬೆಳೆಸುವ ಧಾನ್ಯವಿಲ್ಲದೆ ನೀವೂ ಕೂಡ ಬದುಕಲಾರಿರಿ. ಆದರೂ ನಾನು ನಿಮಗಿಂಥಾ ದೊಡ್ಡವನೆಂದು ಹೇಳಿಕೊಳ್ಳುವದಿಲ್ಲ. ಏಕೆಂದರೆ ಒಮ್ಮೆ ತಾನು ಮೇಲು ತಾನು ಮೇಲು ಎಂಬುದಾಗಿ ಕೆಸರಿಗೂ ಕಲ್ಲಿಗೂ ಜಗಳ ಪ್ರಾರಂಭವಾಯಿತು. ಆಗ ಕಲ್ಲು ತಾನು ಬಲಯುತನೂ ಶುಭ್ರನೂ, ತಾಳಿಕೆ ಬರುವಂತವನೆಂದೂ, ಕೆಸರು ಯಾರಿಗೂ ಬೇಡವಾದ ವಸ್ತುವೆಂದೂ ಹೇಳಿತು. ಆಗ ಕೆಸರು ಉತ್ತರವಾಗಿ ಕಲ್ಲು ಗಟ್ಟಿ ಇರಬಹುದು. ಆದರೆ ಜಗತ್ತಿನ ಜೀವರಾಶಿಗಳಿಗೆ ಅಗತ್ಯವಾದ ಮರಗಿಡಗಳೂ ಆಹಾರ ಪದಾರ್ಥಗಳೂ ಬೆಳೆಯುವದು ಕೆಸರಿನಿಂದ ಎಂದು ಹೇಳಿತು. ಅದನ್ನೇ ನಿಮಗೆ ನಾನು ಹೇಳುತ್ತಿದ್ದೇನೆ. ಆದ್ದರಿಂದ ಒಂದು ಮೇಲು ಒಂದು ಕೀಳಲ್ಲ. ಮನೆ ಕಟ್ಟುವವನಿಗೆ ಕಲ್ಲು ಮೇಲೆನಿಸಬಹುದು. ಮರಗಿಡಗಳಿಗೆ ಕೆಸರು ಹಿತವಾಗಬಹುದು. ಆದ್ದರಿಂದ ಎರಡೂ ಅವುಗಳ ಮಟ್ಟಿಗೆ ಅವುಗಳ ಸ್ಥಾನದಲ್ಲಿ ಒಳಿತಾದುವು" ಎಂದನು.

ಸನ್ಯಾಸಿಯು ಆ ಮಾತನ್ನು ಕೇಳಿ ಮೆಚ್ಚಿ ರೈತನ ಕೈ ಹಿಡಿದು 'ನೀನು ಪರರನ್ನು ಪೋಷಿಸುವವನಾದರೆ ನಾನು ಮನಸ್ಸಿಗೆ ಶಾಂತಿ ಕೊಡುವವನು. ಆದ್ದರಿಂದ ಒಬ್ಬರು ಒಬ್ಬರಿಗೆ ಮಿಗಿಲಲ್ಲ. ಇಬ್ಬರಿಗೂ ಅವರವರ ಸ್ಥಾನದಲ್ಲಿ ಗೌರವವಿದೆ' ಎಂದನು.

ಸೋಮವಾರಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಕೆ. ಎಂ. ಮೊಗಪ್ಪನವರು

ವೀರಾಜಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಟಿ. ಎಸ್. ಗೋವಿಂದರಾಜು

ವಾರದ ಭವಿಷ್ಯ

ತಾ. ೧೮—೧೨—೫೩ರಿಂದ ೨೪—೧೨—೫೩ರ ವರೆಗೆ.

ಜ್ಯೋತಿಷ್ಯ—ಶ್ರೀ ಬಿ. ಜಿ. ಶ್ರೀನಿವಾಸ ಶಾಸ್ತ್ರಿಯವರು.

ಮೇಷ

ಈ ವಾರ ನಿಮ್ಮ ಆರೋಗ್ಯವು ಚೆನ್ನಾಗಿದ್ದು ವ್ಯವಹಾರಗಳಲ್ಲಿ ಲಾಭ ಸನ್ಮಾನಗಳು ಲಭಿಸಲಿವೆ. ಮಿತ್ರರಿಂದ ವಂಚಿತರಾದರೂ ಸಾಂಪತ್ತಿಕ ಸ್ಥಿತಿಯು ಉತ್ತಮವಿರುವದು. ನೂತನ ಕಾರ್ಯದಲ್ಲಿ ಶ್ರೇಯಸ್ಸು ಲಭಿಸಿ ಮಾನಸಿಕ ನೆಲೆಯು ತೃಪ್ತಿಕರ. ವ್ಯಾಪಾರೋದ್ಯಮಿಗಳಿಗೆ ಈ ವಾರ ಲಾಭದಾಯಕವಾಗಿರಲಾರದು. ವಿದ್ಯಾರ್ಥಿ ವೃಂದವು ಕ್ರೀಡಾಮಗ್ನವಾಗಿರುವದು. ತಾ. ೧೮, ೧೯ ಶುಭ ವಾರ್ತೆ, ಸಂಚಾರ.

ವೃಷಭ

ಆರೋಗ್ಯ ದೃಷ್ಟಿಯಲ್ಲಿ ಈ ವಾರವು ನಿಮಗೆ ಅತ್ಯುತ್ತಮವಾಗಿದ್ದರೂ ಇತರರಲ್ಲಿ ತಾವು ಅಧಿಕ ಪ್ರಸಂಗವನ್ನು ಬಿಟ್ಟು ಸ್ವಕಾರ್ಯಪ್ರವೃತ್ತರಾದರೆ ತುಂಬಾ ಉತ್ತಮ. ಮಿತ್ರರ ಸಂಯೋಗ ಲಾಭದಿಂದ ಕಾರ್ಯಾರಂಭಕ್ಕೆ ಭಂಗ ಬರಲಿದೆ. ಆರ್ಥಿಕ ಸ್ಥಿತಿಯು ಸಾಕಷ್ಟು ಉತ್ತಮವಿರಲಾರದು ವಿದ್ಯಾರ್ಥಿ ವಿದ್ಯಾರ್ಥಿನಿಯರು ಯಶಸ್ಸು ಪಡೆಯುವರು. ತಾ. ೧೮, ೧೯ ಮಿತ್ರ ಭೇಟಿ, ಕಾರ್ಯಭಂಗ.

ಮಿಥುನ

ಈ ವಾರ ನಿಮ್ಮ ಪರಿಸ್ಥಿತಿಯು ಅತಿ ಚಿಂತಾಜನಕವಾಗಿರುವದೆಂದು ತಿಳಿಸಲು ಬಲು ವಿಷಾದ. ಆರೋಗ್ಯವು ಸಾಕಷ್ಟಿಲ್ಲದೆ ಮನೋನಿಶ್ಚಿತ ಕಾರ್ಯಗಳು ಮುಂದಕ್ಕೆ ಸಾಗಲಾರವು. ಕುಟುಂಬದ ಕಲಹ ನಿಮಿತ್ತ ಮನಸಿಗೆ ಶಾಂತಿ ಇರಲಾರದು. ಆರ್ಥಿಕ ವಿಚಾರದಲ್ಲಿ ತೊಂದರೆಗೀಡಾಗಿ ಮಿತ್ರರ ಸಹಾಯವನ್ನು ಕೋರಿದರೂ ಫಲಕಾರಿಯಾಗದು. ವ್ಯಾಪಾರನಿರತರು ನಷ್ಟದಲ್ಲಿ ಬೀಳುವರು. ತಾ. ೨೦ ಖರ್ಚು, ಚಿಂತೆ.

ಕರ್ಕಾಟಕ

ಈ ವಾರ ನಿಮ್ಮ ಆರೋಗ್ಯವು ಚೆನ್ನಾಗಿರಲಾರದು. ಜನರು ನಿಮ್ಮ ಹಿತಚಿಂತಕರೆಂದು ತೋರ್ಪಡಿಸಿ ನಿಮ್ಮನ್ನು ವಂಚಿಸಲಿರುವರು. ಸಾಂಪತ್ತಿಕದಲ್ಲಿ ಉತ್ತಮವಿದ್ದರೂ ಕುಟುಂಬದ ಅನಾರೋಗ್ಯದಿಂದಾಗಿ ತುಂಬಾ ಖರ್ಚಾಗುವವುದು. ಕೋರ್ಟು ವ್ಯವಹಾರಗಳು ಧನ ನಷ್ಟಪ್ರದಗಳಾದರೂ ಅನುಕೂಲವಾಗುವದು. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ದೈಹಿಕ ವಿಚಾರದಲ್ಲಿ ತೊಂದರೆ ಇದ್ದರೂ ಸ್ವವೃತ್ತಿಯಲ್ಲಿ ಪ್ರಗತಿ. ತಾ. ೨೨, ೨೩ ಮನಃಕ್ಲೇಶ, ಖರ್ಚು.

ಸಿಂಹ

ಈ ವಾರ ನಿಮಗೆ ಮಿತ್ರರಿಂದಾಗಿ ಕಿಂಚಿದ್ಧನಾಗಮನ ಯೋಗವಿದೆ. ಆರೋಗ್ಯ ಸ್ಥಿತಿಯು ಚೆನ್ನಾಗಿದ್ದು ಉಚ್ಚ ವರ್ಗದವರಿಂದ ಸನ್ಮಾನಗಳು ಲಭಿಸಲಿದೆ. ಮಿತ್ರಬಂಧು ವರ್ಗದವರ ಶುಭ ಸಂದೇಶ ಪತ್ರಾಗಮನದಿಂದ ಮನಸಿನ ಆನಂದವು ದ್ವಿಗುಣವಾಗುವುದು. ವ್ಯಾಪಾರಾಶ್ರಯಿಗಳಿಗೆಸ್ವ ಕಾರ್ಯಗಳಲ್ಲಿ ಕಂಡುಬರುವ ವಿಘ್ನಗಳು ದೂರವಾಗಿ ಲಾಭ ಚಿಹ್ನೆಯು ಮೂಡುವದು.

ಕನ್ಯಾ

ಈ ವಾರ ನೀವು ಮಿತ್ರ ಸಂಸರ್ಗದಲ್ಲಿ ಇದ್ದು ತಮ್ಮ ಕಾರ್ಯವನ್ನೆ ಮರೆತುಬಿಡುವಿರಿ. ವೃಥಾ ಸಂಚಾರದಿಂದಾಗಿ ಆರ್ಥಿಕದಲ್ಲಿ ಕೆಲವೊಮ್ಮೆ ತೊಂದರೆಗೀಡಾದರೂ ಮಿತ್ರರ ಸಹಾಯದಿಂದ ಚೇತರಿಸಿಕೊಳ್ಳುವಿರಿ. ಆರೋಗ್ಯವು ಸಾಕಷ್ಟಿರಲಾರದು. ವ್ಯಾಪಾರತತ್ಪರರು ಹೆಚ್ಚಿನ ಲಾಭವನ್ನು ಬಯಸಿ ಮಾಡುವ ಕಾರ್ಯವು ನಿರರ್ಥಕವಾಗುವದು, ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಉತ್ತಮ. ತಾ. ೨೩, ೨೪ ಸಂಚಾರ.

ತುಲಾ

"ಸಾಕು ಸಾಕು ಸಂಸಾರ ಸುಖ" ಎಂಬ ಮಾತು ಈ ವಾರ ನಿಮ್ಮ ಬಾಯಿಂದ ಹೊರಡದಿರಲಾರದು. ಆರೋಗ್ಯವು ಸಾಕಷ್ಟಿದ್ದರೂ ಕುಟುಂಬದ ಅನಾರೋಗ್ಯದಿಂದಾಗಿ ಮಾನಸಿಕ ಸ್ಥಿತಿಯು ಚೆನ್ನಾಗಿರದು. ತಾವು ಹಿತರೆಂದು ಭಾವಿಸಿದ ಜನರು ತಮ್ಮ ಕಾರ್ಯಕ್ಕೆ ವಿಘ್ನಗಳನ್ನೆ ತಂದೊಡ್ಡುವರು. ಸಂಪದ್ವಿಚಾರದಲ್ಲಿ ತಾವು ಮಾನವಂತರೆನಿಸಿಕೊಳ್ಳುವದೇ ಬಲು ಕಷ್ಟ ಸಾಧ್ಯ. ವ್ಯಾಪಾರನಿರತರು ನಷ್ಟಕ್ಕೀಡಾಗುವರು. ತಾ. ೧೮, ೧೯ ಸಂಚಾರ, ಖರ್ಚು.

ವೃಶ್ಚಿಕ

ಈ ವಾರ ನೀವು ಕೈಕೊಂಡ ಕಾರ್ಯಗಳು ನಿಶ್ಚಿತಾವಧಿಗಿಂತ ಮೊದಲೇ ಫಲಕಾರಿಗಳಾಗುವವು. ಸಾಮಾನ್ಯ ಜನರೂ ಕೂಡ ನಿಮ್ಮ ಸಹಾಯಕರಾಗುವರು. ಉಚ್ಚ ವರ್ಗದವರಿಂದ ಮನ್ನಣೆಗಳು ಪ್ರಾಪ್ತವಾಗಿ ಮಾನಸಿಕ ಸಂತೋಷವು ಇಮ್ಮಡಿಯಾಗುವದು ಕೋರ್ಟು ವ್ಯವಹಾರಗಳು ಅನುಕೂಲ. ಸಾಂಪತ್ತಿಕ ಸ್ಥಿತಿಯು ತೃಪ್ತಿಕರ. ವಿದ್ಯಾರ್ಥಿ ವಿದ್ಯಾರ್ಥಿನಿಯರು ಉತ್ಸಾಹಭರಿತರಾಗುವರು. ತಾ. ೨೦, ೨೧ ಸುಖ, ಮರ್ಯಾದೆ.

ಧನು

ಈ ವಾರ ನಿಮ್ಮ ಆರೋಗ್ಯವು ಚೆನ್ನಾಗಿರುವದು. ಶತ್ರು ಜನರ ತಂತ್ರಕ್ಕೊಳಗಾಗಿ ಮಾನಸಿಕ ಸ್ಥಿತಿಯು ಚಂಚಲವಾಗುವದು. ಕೆಲವೊಮ್ಮೆ ಆರ್ಥಿಕ ವಿಚಾರದಲ್ಲಿ ತೊಂದರೆಗೀಡಾಗಿ ಮಿತ್ರರ ಸಹಾಯದಿಂದ ಚೇತರಿಸುವಿರಿ. ಕೋರ್ಟು ವ್ಯವಹಾರಗಳು ಅನುಕೂಲವಾಗುವವು. ವ್ಯಾಪಾರನಿರತರಿಗೆ ಪ್ರಥಮತಃ ನಷ್ಟ ಕಂಡುಬಂದರೂ ಕಡೆಗೆ ಲಾಭವನ್ನು ಹೊಂದುವರು. ತಾ. ೧೮ ಖರ್ಚು.

ಮಕರ

ತಾವು ಈ ವಾರ ಸಮಗ್ರ ಬುದ್ಧಿಯನ್ನುಪಯೋಗಿಸಿ ಮಾಡಿದ ಕೆಲಸವಾದರೂ ಅಹಿತರಿಂದಾಗಿ ಅಸಂತೋಷ ಪರಿಣಾಮಕಾರಿಯಾಗುವದು. ಆರೋಗ್ಯವು ಸಾಕಷ್ಟಿದ್ದರೂ, ಕೈಗೊಂಡ ಕಾರ್ಯಕ್ಕೆ ವಿಘ್ನ ಪರಂಪರೆಗಳು ಕಂಡು ಬರುವದರಿಂದ ಮಾನಸಿಕ ಸ್ಥಿತಿಯು ಚಾಂಚಲ್ಯದಿಂದಿರುವದು. ವಿದ್ಯಾರ್ಥಿ ವೃಂದಕ್ಕೆ ಈ ವಾರವು ಚೆನ್ನಾಗಿರಲಾರದು.

ಕುಂಭ

ಈ ವಾರ ನಿಮಗುತ್ತಮವಿದೆಯೆಂದು ತಿಳಿಸಲು ಬಲು ಸಂತೋಷ. ಆರೋಗ್ಯ ಮಟ್ಟವು ಚೆನ್ನಾಗಿದ್ದು ಸಮಾಜದಲ್ಲಿ ಗೌರವ ಪ್ರಾಪ್ತಿಯಾಗುವದು. ಸಾಮಾನ್ಯ ಜನರೂ ಕೂಡ ನಿಮ್ಮ ಮಿತ್ರರಾಗಬಯಸುವರು. ಸಂಪದ್ವಿಷಯದಲ್ಲಿ ತುಸು ಅನಿಷ್ಟವಿದ್ದರೂ ಮಿತ್ರರ ಸಹಾಯದಿಂದ ಸುಧಾರಿಸಿಕೊಳ್ಳುವಿರಿ. ವ್ಯಾಪಾರ ನಿರತರಿಗೆ ಈ ವಾರ ಬಹಳ ಉತ್ತಮ. ತಾ. ೧೮, ೧೯ ಶುಭ ವಾರ್ತೆ, ಲಾಭ.

ಮೀನ

ಈ ವಾರ ನಿಮ್ಮ ದೇಹ ಸ್ಥಿತಿ ಪಿತ್ತ ಪ್ರಕೋಪದಿಂದಾಗಿ ಉತ್ತಮವಿರಲಾರದು. ವ್ಯವಹಾರದಲ್ಲಿ ತೊಡಕು ಮತ್ತು ಇತರರ ನಿಂದೆಗೊಳಗಾಗಿ ಮಾನಸಿಕ ವಿಚಾರದಲ್ಲಿ ಅಶಾಂತಿ ಮೂಡುವದು. ಕೋರ್ಟು ವ್ಯವಹಾರಗಳಲ್ಲಿ ಧನನಷ್ಟವಾಗಲಿದೆ. ವ್ಯಾಪಾರನಿರತರು ಲಾಭದಾಶೆಗೆ ಮಾಡುವ ಕೆಲಸವು ನಷ್ಟವನ್ನು ಹಿಂಬಾಲಿಸಿದಂತಾಗುವದು. ವಿದ್ಯಾರ್ಥಿ ವಿದ್ಯಾರ್ಥಿನಿಯರು ಯಥೇಚ್ಛಾರೋಗರಹಿತರಾದರೂ ಉಚ್ಚವರ್ಗದವರಿಂದ ಪ್ರೀತಿಸಲ್ಪಡುವರು.

ದಿ ಕೆನರಾ ಬ್ಯಾಂಕಿಂಗ್ ಕೆರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ಆರ್ಥಿಕ ಉಳಿತಾಯ ಯೋಜನೆಗಳಲ್ಲಿ "ಕ್ಯುಮುಲೇಟಿವ್ ಡಿಪೋಜಿಟ್" ಯೋಜನೆಯು ಅತಿ ಪರಿಣಾಮಕಾರಿ ಹಾಗೂ ಅನುಕೂಲವಾದುದು. ಯಾವುದಾದರೊಂದು ನಿರ್ದಿಷ್ಟ ಉದ್ದೇಶ ಸಾಧನೆಗೆ, ನಿಯಮಿತ ಕಾಲಕ್ಕೆ ನಿಯಮಿತ ಹಣವನ್ನು ಒಂದು ನಿಯಮಿತ ಅವಧಿಯೊಳಗೆ ಬಡ್ಡಿಯೊಂದಿಗೆ ವಾಪಾಸು ಸಿಗುವಂತೆ ಬ್ಯಾಂಕಿನಲ್ಲಿ ಶೇಖರಿಸಿಡುವುದೇ ಈ ಯೋಜನೆಯ ಮೂಲ ತತ್ವ. ಇದು ಮುಖ್ಯವಾಗಿ ಮಧ್ಯಮ ತರಗತಿಯ ಜನರಿಗೆ ಇಲ್ಲವೆ ನಿಯಮಿತ ಸಂಬಳದ ನೌಕರರಿಗೆ ತಮ್ಮ ಮುದ್ದು ಮಕ್ಕಳ ವಿದ್ಯಾಭ್ಯಾಸ, ಮುಂಜಿ, ಮದುವೆ ಯಾ ಇನ್ನಿತರ ಸದುದ್ದೇಶ ಸಾಧನೆಗಳಿಗೆ ಅತ್ಯನುಕೂಲ ಹಾಗೂ ಅತಿ ಫಲಕಾರೀ ಯೋಜನೆ.

ವಿಶೇಷ ಮಾಹಿತಿಗೆ, ಕೊಡಗು ಸಂಸ್ಥಾನದಲ್ಲಿನ ಈ ಕೆಳಗಣ ನಮ್ಮ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ.

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

THE CANARA BANKING CORPORATION LIMITED.

Estd: 1906] *[H. O, Udipi (S. India)*

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು :—ವೀರಾಜಪೇಟೆ.

ಶಾಖೆ:—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟಗಳು
2. 12 ನೇ ನಂಬರಿನ ಒಂಟಿ ಹೊಳವಿನ ತೋಟದ ಕೋವಿಗಳು.
3. ಒಂಟಿ ಮತ್ತು ಜೋಡಿ ಹೊಳವಿನ ಕೇಪಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
5. ⅝", ½" ಮತ್ತು ⅜" ಕಬ್ಬಿಣದ ಸರಳುಗಳು
6. 2", 1¼", 1" ¾" ಮತ್ತು ⅛" ಕೊಳಾಯಿಗಳು. (G. I. Peps)
7. 1¾" × $\frac{5}{16}$" ಉಕ್ಕಿನ ಪಟ್ಟಿಗಳು (Spring Steel flats)
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಪಂಪುಗಳು.
9. ಕೋತಿ ಮತ್ತು ಆನೆ ಮಾರ್ಕಿನ ಸಿಮೆಂಟ್ ಟಿನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

ಅತಿಮಾನವರ ವಿಶಿಷ್ಟ ದಾರಿ.

— 'ಜೈ ಹಿಂದ್' ಪತ್ರಿಕೆಯಿಂದ —

ಎಲ್ಲರಿಗಿಂತಲೂ ವಿಶೇಷ ರೀತಿಯಿಂದ ಬದುಕಿ, ಕಾರ್ಯಮಾಡಿ ವಿಶಿಷ್ಟ ರೀತಿಯಲ್ಲಿಯೇ ಮಡಿಯುವ ಮಾನವರಿಗೆ ನಾವು ಆದರವನ್ನು ವ್ಯಕ್ತಮಾಡುತ್ತೇವೆ.

ಜಗತ್ತು ಇದು ವರೆಗೆ ಎಷ್ಟೋ ದುಷ್ಟವ್ಯಕ್ತಿಗಳನ್ನೂ ಅನೇಕ ಸುಷ್ಟ ಜನರನ್ನೂ ಕಂಡಿದೆ. ದುಷ್ಟರು ತಮ್ಮದೇ ಆದ ದಾರಿಯಲ್ಲಿ, ಎಲ್ಲರಿಗೂ ಆಶ್ಚರ್ಯವಾಗುವಂತೆ ತಮ್ಮ ದುಷ್ಟತನವನ್ನು ತೋರಿಸಿ ಹೋಗಿದ್ದಾರೆ. ಆ ತರಹದ ದುಷ್ಟತನವು ಸಾಮಾನ್ಯರಿಗೆ ಸಾಧ್ಯವಿಲ್ಲ. ಅಂತೆಯೇ ಆ ದುಷ್ಟ ಜನರು ಚಿರಸ್ಮರಣೀಯರಾಗಿ ಉಳಿದಿದ್ದಾರೆ. ಅಂದವರಲ್ಲಿ ರಾವಣ ಕಂಸ, ಹಿರಣ್ಯಾಕಶಿಪು ಇವರು ಬರುತ್ತಾರೆ, ಐತಿಹಾಸಿಕ ಪುರುಷರೂ ಕೆಲವರು ಈ ವರ್ಗಕ್ಕೆ ಸೇರುತ್ತಾರೆ. ಅವರಲ್ಲಿ ರಾಜಕಾರಣಿಗಳೇ ಬಹಳ. ಇತ್ತೀಚಿನ ಉದಾಹರಣೆಯೆಂದರೆ ಜರ್ಮನಿಯ ಹಿಟ್ಲರನ ಹೆಸರನ್ನು ತೆಗೆದುಕೊಳ್ಳಬಹುದು.

ಅದೇ ಮೇರೆಗೆ ಸಾಧು ಸತ್ಪುರುಷರೂ ತಮ್ಮ ಹೆಸರನ್ನು ಉಳಿಸಿ ಹೋಗಿದ್ದಾರೆ. ಅವರು ಮೇಲೆ ಹೇಳಿದವರ ದಾರಿಗೆ ತೀರ ವಿರುದ್ಧವಾದ, ಅಂದರೆ ಎದುರು ತುದಿಯಲ್ಲಿ ನಿಂತು ತೋರಿಸಿದರು. ಅವರು ಯಾರನ್ನೂ ಹಿಂಸಿಸಲಿಲ್ಲ. ತಮ್ಮ ಸ್ವಂತದ ಆಗು, ಹೋಗು, ಸ್ವಾರ್ಥಗಳನ್ನು ಕೂಡ ತ್ಯಾಗಮಾಡಿ ಮಾನವ ಕೋಟಿಯ ಉದ್ಧಾರಕ್ಕಾಗಿ ಹೆಣಗಿದರು. ಅಂದವರಲ್ಲಿ ಬುದ್ಧ, ಸಾಕ್ರಟೀಸ, ಕ್ರೈಸ್ತ ಮೊದಲಾದವರ ಹೆಸರನ್ನು ತೆಗೆದುಕೊಳ್ಳಬಹುದು. ತೀರ ಇತ್ತೀಚಿನ ಹೆಸರೆಂದರೆ ಮಹಾತ್ಮಾ ಗಾಂಧಿಯವರದು.

ಈ ದುಷ್ಟ ಸುಷ್ಟ ವ್ಯಕ್ತಿಗಳೆರಡನ್ನೂ ನೋಡಿದರೆ ಒಂದೇ ತರಹದ ಆಶ್ಚರ್ಯವು ಆಗದೆ ಇರದು. ಇಬ್ಬರೂ ಅದೇ ತರಹದ ಉಚ್ಚ ತ್ಯಾಗಮಯ ಜೀವನವನ್ನು ಸಾಗಿಸಿದ್ದಾರೆ. ಇಬ್ಬರಿಗೂ ತಮ್ಮ ಜೀವನದ ಪರಿವೆ ಇರುವುದಿಲ್ಲ.

ಸಾಧು ಸಜ್ಜನರಂತೂ ಕಷ್ಟಮಯ ಪರಿಸ್ಥಿತಿಯನ್ನೇ ಸ್ವೀಕರಿಸಿ ಹೊರಟಿರುತ್ತಾರೆ. ಅವರಿಗೆ ಸುಖವು ಲಭಿಸುವುದಿಲ್ಲವೆಂದಲ್ಲ. ಆದರೆ ಅದಕ್ಕೆ ಅವರು ಸುಖವೆಂದು ಅನ್ನುವುದಿಲ್ಲ. ನಾವು ಭೌತಿಕ ಪರಿಸ್ಥಿತಿಯ ಅನುಕೂಲತೆಗೆ ಸುಖವೆನ್ನುತ್ತೇವೆ. ಅದಿದ್ದರೆ ನಮ್ಮ ಮನಸ್ಸು ಸುಖ ಕಾಣುತ್ತದೆ. ಇಲ್ಲದಿದ್ದರೆ ಇಲ್ಲ.

ಅವರದು ಹಾಗಲ್ಲ. ಕೇವಲ ಮಾನಸಿಕ ಸುಖದ ದಾರಿಯಲ್ಲಿ ಅವರು ಹೋಗುತ್ತಿರುತ್ತಾರೆ. ಅದಕ್ಕೆ ಭೌತಿಕ ಅನುಕೂಲತೆಗಳ ಅವಶ್ಯಕತೆ ಇರುವುದಿಲ್ಲ. ತಮ್ಮ ಧ್ಯೇಯ ಸಾಧನೆಯಲ್ಲಿಯೇ ಅವರು ಆನಂದಪಡುತ್ತಿರುತ್ತಾರೆ. ಉಳಿದ ಆನಂದಗಳ ಪರಿವೆ ಅವರಿಗಿರುವುದಿಲ್ಲ.

ದುಷ್ಟರೆಂದು ಕರೆಯಲ್ಪಡುವವರು ಕೂಡ ಧ್ಯೇಯವಾದಿಗಳೇ ಆಗಿರುತ್ತಾರೆ. ಅವರೂ ಒಂದು ಧ್ಯೇಯಸಾಧನೆಗಾಗಿಯೇ ಆ ದುಷ್ಟತನವನ್ನು ಕೈಕೊಂಡಿರುತ್ತಾರೆ. ಅವರ ಮಾರ್ಗವು ಹಿಂಸಾಮಯವಾಗಿರುತ್ತದೆಂದು ಅವರನ್ನು ನಾವು ದುಷ್ಟರೆಂದು ಕರೆಯಬೇಕೇ ಹೊರತು ಅವರ ಧ್ಯೇಯವನ್ನು ನೋಡಿದರೆ ಅವರನ್ನು ಬೇರೆ ರೀತಿಯಲ್ಲಿ ನೋಡಬೇಕಾಗುತ್ತದೆ.

ಕೇವಲ ತನ್ನ ಸ್ವಾರ್ಥಸಾಧನೆಗಾಗಿ ಮಾತ್ರ ಯಾವದೊಂದು ವಿಶಿಷ್ಟ ಉದ್ದೇಶಕ್ಕಾಗಿ ಹಿಂಸಾವೃತ್ತಿಗಳಿಗೆ ಇಳಿದವರ ಮಾತು ಬೇರೆ. ಹಿಟ್ಲರನ ಉದಾಹರಣೆಯನ್ನು ತೆಗೆದುಕೊಂಡರೆ ಅವನಿಗೆ ದುಷ್ಟ ಎಂಬ ವಿಶೇಷಣವನ್ನು ಹಚ್ಚಬೇಕೋ ಬಾರದೋ ಎಂಬ ಬಗ್ಗೆ ಸಂಶಯವುಂಟಾಗುತ್ತದೆ.

ಏಕೆಂದರೆ, ಅವನು ತನ್ನ ದೇಶಕ್ಕಾಗಿ ಆ ಮಾರ್ಗವನ್ನು ಸ್ವೀಕರಿಸಿದ್ದನು. ತನ್ನ ದೇಶವನ್ನು ಇತರರು ರಸಾತಳಕ್ಕೆ ಮೆಟ್ಟುವದಕ್ಕಾಗಿ ಯತ್ನಿಸುತ್ತಿರುವರೆಂದೂ ಅವರನ್ನು ನಾಶಮಾಡಿ ತನ್ನ ದೇಶವನ್ನು ಬೆಳೆಸಬೇಕೆಂದೂ ಅವನು ಹೊರಟನು. ಅವನಲ್ಲಿ ಮತ್ತು ಇತರ ಸಾಮ್ರಾಜ್ಯವಾದಿಗಳಲ್ಲಿ ಏನೂ ಭೇದಮಾಡಲು ಬರುವದಿಲ್ಲ.

ಏನೇ ಇರಲಿ ಈ ಸುಷ್ಟ ದುಷ್ಟವ್ಯಕ್ತಿಗಳಿಬ್ಬರಲ್ಲಿಯೂ ಒಂದು ಆಶ್ಚರ್ಯಕರ ಮನೋವೃತ್ತಿಯು ಕಂಡುಬರುತ್ತದೆ, ಅದರಲ್ಲಿ ಯಶಸ್ಸುಸಿಕ್ಕರೆ ಅಡ್ಡಿಯಿಲ್ಲ. ಇಲ್ಲದಿದ್ದರೂ ಕೂಡ ಇವರಿಬ್ಬರೂ ಅದರ ಬಗ್ಗೆ ಪಶ್ಚಾತ್ತಾಪ ಪಟ್ಟದ್ದು ಕೂಡ ಕಂಡಿಲ್ಲ. ಅಂಥವರನ್ನು ಅತಿಮಾನವರ ಮಾಲಿಕೆಯಲ್ಲಿ ಜಗತ್ತು ಹಾಕಿದೆ.

ಯಾವುದೇ ಕಾರ್ಯವನ್ನು ಮಾಡಿದರೂ ಅವರ ಸ್ವಭಾವ ಮತ್ತು ಅದರಿಂದ ದೊರೆಯಬಹುದಾದ ಫಲಗಳ ಜ್ಞಾನವಿಟ್ಟುಕೊಂಡು ಅದಕ್ಕೆ ಕೈಹಾಕಿದವನ ಯೋಗ್ಯತೆಯು ಸಾಮಾನ್ಯವಾದುದಲ್ಲ. ಆತನು ಮುಂದೆ ಆಗಬಹುದಾದ ಎರಡೂ ತರಹದ ಪರಿಣಾಮಗಳಿಗೆ ಸಿದ್ಧನಿರುತ್ತಾನೆ. ಇಂಥವನ ಯೋಗ್ಯತೆಯು ಎಲ್ಲ ದುಷ್ಟ ಮತ್ತು ಸುಷ್ಟ ಕಾರ್ಯ ಮಾಡುವವರಿಗೆ ಇರುವುದಿಲ್ಲ. ಆ ಮಾರ್ಗದಲ್ಲಿಯ ತುಟ್ಟತುದಿಗೆ ಹೋಗಿ ಮುಟ್ಟಿದ ಅವರು ಆಶ್ಚರ್ಯಕರ ದೃಷ್ಟಿಯಿಂದ ಜನರಿಂದ ನೋಡಲ್ಪಡದೆ ಇರಲಾರರು. ನಡುವೇ ಕೈಬಿಟ್ಟು ಹತಾಶರಾಗುವವರು, ಅವರು ದುಷ್ಟರಿರಲಿ ಅಥವಾ ಸುಷ್ಟರಿರಲಿ ಮಹತ್ವಪಡೆಯದೆ ಹೋಗುವರು.

ಆದ್ದರಿಂದ 'ಅತಿಮಾನವ' ನೆಂಬ ಹೆಸರನ್ನು ಪಡೆಯುವವರು, ಇತರ ಸಾಮಾನ್ಯರಿಗಿಂತ ಹೆಚ್ಚಿನ ಶಕ್ತಿ, ಸಾಮರ್ಥ್ಯ, ದೃಷ್ಟಿ, ಸಿದ್ಧತೆಯುಳ್ಳವರೆಂದು ಹೇಳಬಹುದು. ಅವರೂ ಮನುಷ್ಯರೇ. ಆದರೆ ವಿಶಿಷ್ಟ ಯೋಗ್ಯತೆಯ ಮನುಷ್ಯರು.

ಹಿಟ್ಲರನ ಚರಿತ್ರೆಯನ್ನು ಓದುವವರು ಅವನ ಕೊನೆಯ ದಿವಸದ ಚಿತ್ರವನ್ನು ನೋಡಬೇಕು. ಅಂದರೆ ಅವನ ಯೋಗ್ಯತೆ ಮತ್ತು ಅವನ ದೃಷ್ಟಿಯು ಗೊತ್ತಾಗುತ್ತದೆ.

ರಶಿಯನ್ ಬಾಂಬುಗಳು ಅವನ ವಾಸಸ್ಥಾನದ ತೋಟದಲ್ಲಿಯೇ ಬೀಳಹತ್ತಿದ್ದವು. ಅಲ್ಲಿಂದ ಓಡಿಹೋಗಿ ಇನ್ನೊಂದು ಕಡೆಯಿಂದ ವೈರಿಗಳನ್ನು ಎದುರಿಸಬೇಕೆಂದು ಅವನು ವಿಚಾರಿಸುತ್ತಿದ್ದ. ಆದರೆ 'ನಮ್ಮ ಕೊನೆಯ ದಿನಗಳು ಸಮೀಪಿಸಿದವು' ಎಂದು ಅವನಿಗೆನಿಸುತ್ತಿತ್ತು.

ಆ ಬಗ್ಗೆ ಅವನು ತನ್ನ ಆಪ್ತ ವರ್ತಿಗಳಿಗೆ ಮೇಲಿಂದ ಮೇಲೆ ಹೇಳುತ್ತಿದ್ದ. ದಿನಾಲು ರಾತ್ರಿ ಬಹಳ ಹೊತ್ತಿನ ವರೆಗೆ ತನ್ನ ಸಂಗಡಿಗರೊಂದಿಗೆ ಮುಂದಿನ ಯೋಜನೆಗಳ ಬಗ್ಗೆ ಆಲೋಚಿಸುತ್ತಿದ್ದ. ಒಮ್ಮೊಮ್ಮೆ ಉದ್ರಿಕ್ತವದನನಾಗಿ ಅವನು ಹತ್ತಿರದವರಿಗೆ ತೋರುತ್ತಿದ್ದ. ಹಲ ಕೆಲವು ವೇಳೆ ಶಾಂತಮನಸ್ಕನಾಗಿ ಎಲ್ಲದರ ಬಗ್ಗೆ ನಿಶ್ಚಿತ ಕಾರ್ಯಕ್ರಮ ಗೊತ್ತುಮಾಡಿಕೊಂಡವನಂತೆ ಕಾಣುತ್ತಿದ್ದ.

ಅವನ ಹತ್ತಿರ ಇವಾ ಬ್ರಾನ್ ಎಂಬ ಯುವತಿ ಇದ್ದಳು. ಆರು ವರ್ಷಗಳಿಂದ ಅವಳು ಹಿಟ್ಲರನ ಹತ್ತಿರವೇ ಇದ್ದಳು. ಅವರಿಬ್ಬರಲ್ಲಿ ಪ್ರಣಯ ಸಂಬಂಧವೂ ಇತ್ತು ಮತ್ತು ಇವಾಬ್ರಾನ್ ಇವಳು ಹಿಟ್ಲರನಿಗೆ ಆಪ್ತಾಲೋಚನೆಯಲ್ಲಿ ನೆರವಾಗುತ್ತಿದ್ದಳು. ತನ್ನ ಅಂತರಂಗದ ಮಾತುಗಳನ್ನು ಹಿಟ್ಲರನು ಕೆಲವೇ ನಿಕಟ ವರ್ತಿಗಳಿಗೆ ಹೇಳುತ್ತಿದ್ದನು. ಆ ಜನರಲ್ಲಿ ಇವಾಬ್ರಾನಳೂ ಒಬ್ಬಳಾಗಿದ್ದಳು.

ಇವಾಬ್ರಾನಳು ಒಮ್ಮೆ 'ನಾವು ಇಲ್ಲಿಂದ ಬೇರೆ ಕಡೆಗೆ ಹೋಗುವದು ಬೇಡ. ಅದರಲ್ಲಿ ಯಶಸ್ಸಿನ ಆಶೆಯಿಲ್ಲ. ಇಲ್ಲಿಯೇ ಇದ್ದು, ಅವಶ್ಯಕಂಡರೆ ನಾವು ವೈರಿಗಳ ಕೈಗೆ ಸಿಗದೆ ಇಹಲೋಕವನ್ನೇ ತ್ಯಜಿಸಬೇಕು' ಎಂದು ಹಿಟ್ಲರನಿಗೆ ಹೇಳಿದಳು. ಆ ಮಾತು ಅವನಿಗೆ ಸರಿಯೆನಿಸಿತು. ಅದನ್ನು ಇತರರಿಗೂ ಅವನು ಹೇಳಿದ. ಕೆಲವರಿಗೆ ತಮ್ಮ ಮುಂದಾಳು ಈ ರೀತಿ ಅಂತ್ಯ ಹೊಂದುವುದು ಸರಿಯೆನಿಸಲಿಲ್ಲ. ಹಾಗೆ ಅವರು ಹೇಳಿಯೂ ತೋರಿಸಿದರು. ಆದರೆ ಅವರ ಉಪದೇಶವು ಅವನಿಗೆ ಹಿಡಿಸಲಿಲ್ಲ.

ಇನ್ನು ತಾನು ಜೀವಂತ ಉಳಿದರೆ ವೈರಿಗಳ ಕೈಗೆ ಸಿಗುವುದು ನಿಶ್ಚಿತವೆಂದು ತಿಳಿದಾಗ, ಇವಾಬ್ರಾನಳೊಡನೆ ಹಿಟ್ಲರನ ಲಗ್ನಸಮಾರಂಭವು ನಡೆಯಿತು. ಸುಭೋಜನವಾಯಿತು. ಯಾರು ಸಾಯಲು

ಸಹಕಾರವೇ — ಜೀವನದ ಏಳಿಗೆಯ ಹೆದ್ದಾರಿ,
ಅದರಲ್ಲೂ ವಿಮೆಯಲ್ಲಿ ಸಹಕಾರವೆಂದರ ಅನ್ಯೋನ್ಯ ಏಳಿಗೆಯು ಮತ್ತು ಭದ್ರತೆಗೆ ತಳಹದಿ.

ದಿ ಬೊಂಬಾಯಿ ಕೋಪರೇಟಿವ್ ಇನ್ಶೂರೆನ್ಸ್ ಸೊಸೈಟಿ, ಲಿಮಿಟೆಡ್

ಹೆಡ್ ಆಫೀಸು —] [ಬೊಂಬಾಯಿ,

1952 ನೇ ಸಾಲಿಗೆ ರಿವರ್ಸನರಿ ಬೋನಸ್ಸು
ಹೋಲ ಲೈಫ್ ಸಾವಿರಕ್ಕೆ 11 ರಂತೆ ಎಂಡೋಮೆಂಟ್ ಸಾವಿರಕ್ಕೆ 9 ರಂತೆ

200 ರಿಂದ 900 ರ ತನಕದ ಪೋಲಿಸಿಗಳು. ಹಳ್ಳಿಗರಿಗೊಂದು ವರ

ಎಲ್ಲಾ ಕಡೆಗಳಲ್ಲಿಯೂ ಪ್ರಭಾವವುಳ್ಳ ಏಜಂಟರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಯನ್ನು ದಕ್ಷಿಣ ಕನ್ನಡ, ಕೊಡಗು ಮತ್ತು ಮೈಸೂರು ಪ್ರಾಂತ್ಯಕ್ಕ ಮುಖ್ಯ ಏಜಂಟರಾದ

12–12

ಎಮ್. ಟಿ. ಕೋರ್‌ಡೆಲ್ ಆಂಡ್ ಕೋ., ಹಂಪನಕಟ್ಟೆ, ಮಂಗಳೂರು, ಇವರಿಂದ ಪಡೆಯಿರಿ.

Licence No. 60.
Licenced to Post without Prepayment

Reg. No. M. 1550.
"KODAGU" MERCARA (Coorg)

ಪುಟ ಹನ್ನೆರಡು

ಸಿದ್ಧರಿದ್ದರೋ ಅವರಿಗೆ ವಿಷದ ಕುಪ್ಪಿಗಳನ್ನು ಒದಗಿಸಲಾಗಿತ್ತು. ಅವನದೊಂದು ಪ್ರೀತಿಯ ನಾಯಿಯಿತ್ತು. ಅದರ ಹೆಸರು ಬ್ಲಾಂಡಿ. ಅದನ್ನು ಗುಂಡಿಕ್ಕಿ ಕೊಲ್ಲಿಸಿದನು. ತನ್ನ ನಾಯಿಯು ಕೂಡ ವೈರಿಗಳ ಕೈಗೆ ಬೀಳಬಾರದೆಂದು ಅವನು ಇಚ್ಛಿಸಿದನು

ರಾತ್ರಿ ಎರಡೂವರೆಗೆ ಎದ್ದು ಎಲ್ಲರನ್ನು ಎಬ್ಬಿಸಿದನು. ಎಲ್ಲರ ಕೂಡ ಹಸ್ತಾಂದೋಲ ಮಾಡಿದನು. ಗೋಬೆಲ್ಸ್ಗೋರಿಂಗರೊಡನೆ ಹಸ್ತಾಂದೋಲನೆ ಮಾಡುವಾಗ 'ನನ್ನ ನಂಬಿಗೆಯುವರೇ' ಎಂದನು. ಮುಂದೆ ತನ್ನ ಕೋಣೆಗೆ ಹೋದನು.

ಮುಂದೆ ಸ್ವಲ್ಪ ಹೊತ್ತಿನಲ್ಲಿ ಇವಾಬ್ರಾನಳಿಗೆ ವಿಷ ಕೊಟ್ಟನು. ಅವಳು ಸಾಯುತ್ತಿರುವಾಗ ತಾನು ತನ್ನ ಪಿಸ್ತೂಲನ್ನು ಬಾಯಿಯಲ್ಲಿ ಇಟ್ಟುಕೊಂಡು ಹಾರಿಸಿದನು. ಅದರಿಂದ ಅವನ ತಲೆಯೇ ಹಾರಿಹೋಗಿ ಬಿದ್ದನು.

ಈ ಸಪ್ಪಳವನ್ನು ಕೇಳುತ್ತಲೇ ಅವನ ನಂಬಿಗೆಯ ಸೇವಕರು ಹಿಟ್ಲರನ ಮತ್ತು ಇವಾಳ ದೇಹಗಳನ್ನು ಸುಟ್ಟು ಅವರ ಎಲುಬುಗಳನ್ನು ಕೂಡ ಸುಟ್ಟು ಪುಡಿಮಾಡಬೇಕೆಂದು ಮೊದಲೇ ಗೊತ್ತಾಗಿತ್ತು. ಆ ಮೇರೆಗೆ ಆ ಎರಡೂ ದೇಹಗಳನ್ನು ಹೊರಗೆ ತಂದು ಅವುಗಳ ಮೇಲೆ, ಗ್ಯಾಸೋಲಿನ್ ಎಣ್ಣೆಯಿಂದ ತೊಯ್ಸಲ್ಪಟ್ಟ ಕಾಡ ಪತ್ರಿಗಳನ್ನು ಒಂದರಮೇಲೊಂದು ಹಾಕಿ ಸುಟ್ಟರು ಮತ್ತು ಎಲುವುಗಳನ್ನು ಕುಟ್ಟಿ ಪುಡಿಮಾಡಿ ಎಲ್ಲೆಡೆಗಳಲ್ಲಿ ಚಲ್ಲಿದರು.

ಏನು ಭಯಂಕರ ವ್ಯಾಪಾರವಿದು! ಯಾವ ಸಾಮಾನ್ಯ ಮನುಷ್ಯನು ಈ ರೀತಿ ತನ್ನ ಪ್ರಾಣಗಳನ್ನು ಹೂವಿನಂತೆ ತೂರಬಲ್ಲ? ಇವಾಳ ಯೋಗ್ಯತೆಯೂ ಅಸಾಮಾನ್ಯನೇ ಸರಿ.

ಇಂತಹ ಜನರು ರಾಜ್ಯಗಳನ್ನು ಗೆದೆಯಬಲ್ಲರು, ರಾಜ್ಯಗಳನ್ನು ಕಳೆಯಬಲ್ಲರು. ಎರಡನೆಯವರನ್ನು ಕೊಲ್ಲಬಲ್ಲರು, ತಾವಾದರೂ ಸಾಯಬಲ್ಲರು.

ಏನು ಅಭಿಮಾನ! ವೈರಿಗಳ ಕೈಯಲ್ಲಿ ಸಿಗದೆ ಈ ಲೋಕವನ್ನೇ ಬಿಡಲು ಅವರು ಇಚ್ಛಿಸಿದರು.

ಹಿಟ್ಲರನ ಅಂತ್ಯಕಾಲಕ್ಕೆ ಅಲ್ಲಿಯೇ ಇದ್ದು ಅದೆಲ್ಲವನ್ನೂ ನೋಡಿದ ಮತ್ತು ಅವನು ಹೇಳಿದಂತೆ ನಡೆದುಕೊಂಡ ಕೆಲವರು ಇನ್ನೂ ಅಲ್ಲಲ್ಲಿ ಸಿಗುತ್ತಾರಂತೆ. ಅವರಿಂದ ಕೂಡಿಸಿದ ಸಂಗತಿಗಳ ಮೇಲಿಂದ ಅಮೇರಿಕಾ-ಬ್ರಿಟನ್ನ ಪಕ್ಷದವರು ಈ ಚಿತ್ರವನ್ನು ಕೊಡುತ್ತಿದ್ದಾರೆ.

ಜರ್ಮನಿಯಲ್ಲಿದ್ದ ರಶಿಯನ್ನರು ಈ ಬಗ್ಗೆ ಆಲೋಚಿಸುವುದೇ ಇಲ್ಲವಂತೆ 'ಅವನು ಇರಲಿ ಇಲ್ಲದಿರಲಿ, ಅದರಿಂದ ನಮಗೇನಾಗಬೇಕಾಗಿದೆ?' ಎಂದು ಅವರು ಅನ್ನುತ್ತಿದ್ದಾರಂತೆ.

ಆದರೆ ಅಮೇರಿಕಾ ಪಕ್ಷದವರಿಗೆ ಹಾಗೆನ್ನಲು ಇಚ್ಛೆಯಿಲ್ಲ. 'ಹಿಟ್ಲರನು ಇದ್ದಾನೆ. ಪ್ರಸಂಗದಲ್ಲಿ ಬಂದು ಜರ್ಮನಿಯನ್ನು ಪುನಃ ಅವನು ಉದ್ಧಾರ ಮಾಡುವವನಿದ್ದಾನೆ' ಎಂದು ಪ್ರಚಾರ ಮಾಡುವ ಪಕ್ಷವೂ ಜರ್ಮನಿಯಲ್ಲಿದೆ. ಆ ಜನರ ಪ್ರಚಾರಕ್ಕೆ ಆಸ್ಪದ ಸಿಗಬಾರದೆಂಬ ಉದ್ದೇಶದಿಂದ ಮೇಲಿನ ಚಿತ್ರವನ್ನು ತೋರಿಸಿ ಹಿಟ್ಲರನು ಸತ್ತಿದ್ದಾನೆಂಬ ಮಾತನ್ನು ಪ್ರಸ್ಥಾಪಿಸಲು ಅಮೇರಿಕಾ ಪಕ್ಷವು ಯತ್ನಿಸುತ್ತಿದೆ.

ಹಿಟ್ಲರನು ಸತ್ತಿರಲಿ, ಸಾಯದಿರಲಿ, ಅವನು ತನ್ನ ಕಾರ್ಯವನ್ನು ಮಾಡಿ ಮುಗಿಸಿದ್ದಾನೆ. ಜಗತ್ತಿನಲ್ಲಿಯ ಸಾಮ್ರಾಜ್ಯವಾದಿಗಳ ಸಾಹಸಕ್ಕೆ ಅವನು ಅಳಿಗಾಲವನ್ನುಂಟುಮಾಡಿದನು. ಅಂತೆಯೇ ಇಂದು ಜಗತ್ತು ದಾಸ್ಯದೊಳಗಿಂದ ಹೊರಬೀಳುತ್ತಲಿದೆ.

॥ ಪುಸ್ತಕಗಳ ವಿಮರ್ಶೆ ॥

ಅಪಸ್ವರ:—ಲೇಖಕ "ತ್ರಿವೇಣಿ", ಪ್ರಕಾಶಕರು:-ವಾಹಿನಿ ಪ್ರಕಾಶನ, ಬೆಂಗಳೂರು. ಪುಟ ಸಂಖ್ಯೆ ೨೫೫, ಬೆಲೆ ೧-೮-೦.

ತಂದೆ ತಾಯಿಯರನ್ನು ಶೈಶವದಲ್ಲಿಯೇ ಕಳೆದುಕೊಂಡ ಮೀರ ದೊಡ್ಡಪ್ಪನಲ್ಲಿ ಬೆಳೆಯುತ್ತಾಳೆ. ದೊಡ್ಡಪ್ಪನ ಹಿರಿಯ ಮಗ ಗೋಪಾಲನ ಆದರ್ಶ ವಿದ್ಯಾರ್ಥಿಜೀವನದಿಂದ ಪ್ರಭಾವಿತಳಾಗಿ ಆತನಂತೆಯೇ ಡಾಕ್ಟರಳಾಗಬೇಕೆಂದು ನಿಶ್ಚಯಿಸಿಕೊಂಡು ಪ್ರತಿ ತರಗತಿಯಲ್ಲಿಯೂ ಪ್ರಥಮ ಶ್ರೇಣಿಯಲ್ಲೇ ತೇರ್ಗಡೆಯಾಗುತ್ತಾ ಬರುತ್ತಾಳೆ. ಹೆಚ್ಚು ಸಿರಿತನವಿಲ್ಲದ ಸಂಸಾರಕ್ಕೆ ಹೆಚ್ಚಾಗಿ ಬಂದು ಸೇರಿದ ಮೀರಳ ಆಗಮನದಿಂದಲೂ, ಆಕೆಯ ಕುಶಲತೆಯಿಂದಲೂ ಅಸೂಯೆಗೊಂಡ ದೊಡ್ಡಮ್ಮ ಮೀರಳ ಮದುವೆಯನ್ನು ಆದಷ್ಟು ಬೇಗ ಮಾಡಬೇಕೆಂದು ಒತ್ತಾಯ ಮಾಡುತ್ತಿರುತ್ತಾಳೆ. ಆದರೆ ಹೆಣ್ಣು ಮಕ್ಕಳಿಲ್ಲದ ದೊಡ್ಡಪ್ಪನು ಮೀರಳೇ ತನ್ನ ಮಗಳೆಂದು ನಂಬಿ ಎಲ್ಲ ಅನುಕೂಲತೆಯನ್ನು ಒದಗಿಸಿ ಇಂಟರ್ ಮೀಡಿಯೇಟ್ ಓದಿಸುತ್ತಾನೆ. ಹಳ್ಳಿಯ ಬಾಲಕಿಯಾಗಿದ್ದ ಮೀರ ನಗರದ ಹುಡುಗಿಯಾಗಿ, ಪಾಶ್ಚಾತ್ಯ ಸಾಹಿತ್ಯ ಸಂಸ್ಕೃತಿಯನ್ನು ಅರಗಿಸಿಕೊಂಡು ಸುಧಾರಿಸಿದ ಯುವತಿಯಾಗುತ್ತಾಳೆ ಸಂಸಾರದ ಕೋಟಲೆಗೆ ಸಿಕ್ಕಿ ಮಕ್ಕಳ ಮರಿಗಳ ಬಂಧನದಲ್ಲಿ ಬೀಳದೆ ಡಾಕ್ಟರಳಾಗಿ ಸ್ವತಂತ್ರ ಜೀವನ ನಡೆಸಿ ನಾಡಿಗುಪಕಾರಿಯಾಗಬೇಕೆಂದು ಭಾವಿಸುತ್ತಾಳೆ. ಆದರೆ ಆಶಾಗೋಪುರ ನೆರವೇರಲಿಲ್ಲ. ಹೆಚ್ಚು ಓದಿಸಲು ಚೇತನವಿಲ್ಲದ ದೊಡ್ಡಪ್ಪನ ಒತ್ತಾಯದಂತೆ ಮನಸಿಲ್ಲದಿದ್ದರೂ ಮೀರ ಮದುವೆಗೆ ಒಪ್ಪಬೇಕಾಯಿತು. ಹಳ್ಳಿಯ ಜಮೀನ್ದಾರ ಸುಂದರ, ಸಿರಿವಂತ ಆದರೆ ಆಕೆಯಷ್ಟು ವಿದ್ಯಾವಂತನಲ್ಲದ ಶ್ಯಾಮುವಿನೊಡನೆ ವಿವಾಹವಾಗುತ್ತದೆ. ನಗರದಲ್ಲಿ ಬೆಳೆದು ನಾನಾ ಜೊಂಗನಸುಗಳನ್ನು ಕಟ್ಟಿಕೊಂಡ ಮೀರಾಳಿಗೆ. ಹಳ್ಳಿಯ ವಾತಾವರಣ ಸರಿಹೋಗುವುದಿಲ್ಲ. ಶ್ಯಾಮುವು ಮೀರಾಳನ್ನು ಅನನ್ಯವಾಗಿ ಪ್ರೀತಿಸುತಿದ್ದರೂ ಆಕೆಗಾಗಿ ಏನನ್ನು ಮಾಡಲು ಸಿದ್ಧನಿದ್ದರೂ ಮೀರಾಳು ಮನಸ್ಸು ಮದುವೆಯ ನಂತರವೂ ಮೆಡಿಕಲ್ ಕಾಲೇಜಿನ ಸುತ್ತು ತಿರುಗುತ್ತಿರುತ್ತದೆ. ಕ್ರಮಶಃ ತನ್ನ ಕನಸು ನನಸಾಗುವದಿಲ್ಲವೆಂಬುದನ್ನು ತಿಳಿದ ಮೀರಳ ಗಂಡನ ಆಶಯಕ್ಕೂ, ಹಳ್ಳಿಯ ವಾತಾವರಣಕ್ಕೂ ಹೊಂದಿಕೊಳ್ಳಲು ಯತ್ನಿಸುತ್ತಾಳೆ. ಅವರ ದಾಂಪತ್ಯವು ಸುಖಮಯವಾಗಿ ಪರಸ್ಪರ ಬಾಂಧವ್ಯವು ಹೆಚ್ಚಿ ಸಂಸಾರವು ಸುಖಮಯುವೆನಿಸುತ್ತದೆ. ಮಕ್ಕಳೇ ಬೇಡವೆಂದಿದ್ದ ಮೀರಾಳು ಪ್ರಸವ ಕಾಲಕ್ಕೆ ಶಸ್ತ್ರ ಚಿಕಿತ್ಸೆಯ ಕಾರಣ ಮುಂದೆ ಮಕ್ಕಳನ್ನು ಹೆರಲು ಅಸಮರ್ಥಳಾದರೂ ಹಡೆದ ಸೊಬಗಿನ ಕೂಸು ವೀಣಾಳ ಸಹವಾಸದಲ್ಲಿ ಮಾತೃತನದ ಸವಿಯನ್ನನುಭವಿಸುತ್ತಾಳೆ. ಆದರೆ ವಿಧಿಯ ಆಟದಂತೆ ವೀಣಾಳಿಗೆ ಕಾಯಿಲೆ ಒದಗಿ ಎಷ್ಟೇ ಪ್ರಯತ್ನಪಟ್ಟರೂ ಪ್ರಯೋಜನವಿಲ್ಲದೆ ಆಕೆ ಮೃತ್ಯುವಶಳಾಗುತ್ತಾಳೆ. ಅಂದಿನಿಂದ ಮೀರಳಲ್ಲಿ ಪತಿಯ ಬಗ್ಗೆ ಒಂದು ವಿಧದ ತಿರಸ್ಕಾರ ಉತ್ಪನ್ನವಾಗುತ್ತದೆ. ತಾನು ಡಾಕ್ಟರಾಗಬೇಕೆಂಬ ಇಚ್ಛೆ ಪುನಹ ಜಾಗ್ರತವಾಗುತ್ತದೆ. ತನ್ನ ಹೆಂಡತಿಯು ದಿನೇ ದಿನೇ ಕೃಶಳಾಗುವದನ್ನು ಕಂಡು ಸಹೃದಯದ ಶ್ಯಾಮನು ಆಕೆಯು ವೈದ್ಯಕೀಯ ವ್ಯತ್ತಿಗೆ ಓದಲು ಅನುಮತಿ ಕೊಟ್ಟು ಆಕೆಯ ಸರ್ವ ಖರ್ಚನ್ನೂ ನಿರ್ವಹಿಸುತ್ತಾನೆ.

ಇದಿಷ್ಟು ಅಪಸ್ವರ ಕಾದಂಬರಿಯ ಕಥೆಯ ರೂಪರೇಷೆ. ಕಥಾವಸ್ತು ವಿಸಲ್ಪಾಗಲೀ, ಶೈಲಿಯಲ್ಲಾಗಲೀ ನಾವೀನ್ಯತೆಯೇನೂ ತೋರದಿದ್ದರೂ ಹಳ್ಳಿಯ ಜೀವನದ ಚಿತ್ರವನ್ನು ಶ್ಯಾಮುವಿನ ಪಾತ್ರದಲ್ಲಿ ಚೆನ್ನಾಗಿ ಚಿತ್ರಿಸಲಾಗಿದೆ. ನಗರದ ನೀರು ಕುಡಿದ ಆಧುನಿಕ ತರುಣಿಯು ಹಳ್ಳಿಯ ವಾತಾವರಣದಲ್ಲಿ ನೀರಿನಿಂದ ಹೊರ ತೆಗೆದ ಮೀನಿನಂತೆ ಪಡುವ ಕಷ್ಟವು ಯೋಗ್ಯವಾಗಿ ಚಿತ್ರಿತವಾಗಿದೆ. ಶ್ಯಾಮುವು ಮೀರಳನ್ನು ಕಂಡು ಪ್ರೀತಿಯಿಂದ ಒಲುಮೆಯಿಂದ ಮಾಡಿಕೊಂಡ ಮದುವೆ; ಮೀರಳು ಮದುವೆ ಬೇಡವೆಂದರೂ ಸಂಪ್ರದಾಯ ಹಾಗೂ ಒತ್ತಾಯಕ್ಕಾಗಿ ಒಳಗಾದ ಮದುವೆ ಇಂಥಾ ಸಮರಸವಿಲ್ಲದ ಮದುವೆಯ ಫಲ ಉತ್ತಮವಾಗದೆಂದು ಈ ಕಾದಂಬರಿ ಎತ್ತಿ ಹೇಳುತ್ತದೆ ಗಂಡಸಿನಂತೆಯೇ ಹೆಂಗಸೂ ಕೂಡ ತನ್ನ ಮನಸ್ಸಿಗೆ ಯೋಗ್ಯವೆಂದು ತೋರಿದ ಉದ್ಯಮವನ್ನು ಕೈಕೊಂಡು ಸ್ವತಂತ್ರ ಜೀವನ ನಡೆಸಬೇಕೆಂಬ ಮೀರಳ ಭಾವನೆಗೆ ಈ ಕಾದಂಬರಿಯಲ್ಲಿ ಜಯ ದೊರೆತಿದೆ ಗಂಡು ಹೆಣ್ಣುಗಳು ಪರಸ್ಪರ ಪ್ರೀತಿಸಿ, ಸಮಾನ ಕಲ್ಪನೆಯಿಂದ ಒಂದುಗೂಡಿದ ಮದುವೆಯೇ ಸುಖವನ್ನು ತರುವದೆಂಬುದನ್ನು ಕಾದಂಬರಿಯು ಎತ್ತಿ ಹೇಳುತ್ತದೆ. ಇದು ಎಲ್ಲರೂ ಓದಬಹುದಾದ ಪುಸ್ತಕ.

ವಾಹಿನಿ ಪ್ರಕಾಶನದವರ ಆರನೇ ಕೈಹೊತ್ತಿಗೆಯಿದು. 'ಜನಸಾಮಾನ್ಯರಲ್ಲಿ ಸಾಹಿತ್ಯಾಸಕ್ತಿ ಬೆಳೆಯಬೇಕಾದರೆ ಓದಬೇಕೆನ್ನಿಸಿದ ಪುಸ್ತಕಗಳನ್ನು ಕೊಳ್ಳುವದು ಸುಲಭವಾಗಬೇಕೆಂಬ ಉದ್ದೇಶದಿಂದ ಸುಲಭ ಬೆಲೆಯ ಉತ್ತಮ ಸಾಹಿತ್ಯವನ್ನು ಪ್ರಕಟಿಸುತ್ತಿರುವ ಇವರ ಯತ್ನವು ಪ್ರೋತ್ಸಾಹರ್ಹವಾಗಿದೆ.

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.
[ಸ್ಥಾಪನೆ: 1921]
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,61,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	16,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಶೇಕಡ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	3-4-0
1 ವರುಷದಿಂದ 5 ವರ್ಷಗಳ ವರೆಗೆ	,,	4-4-0
5 ವರುಷ ಮತ್ತು ಮೇಲ್ಪಟ್ಟ ಅವಧಿಗೆ	,,	4-12-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರನಿಟಿ, ವಾರ್ಡನ್ಸ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ.
ಪ್ರೆಸಿಡೆಂಟ್ & ಖಜಾಂಚಿ.

Edited Printed and Published by P. I. BELLIAPPA at 'KODAGU' Press Mercara, for 'Kodagu' Ltd.,

END

'Kodagu'
Kannada Weekly.

upto - 18.12.1953

END